ಮೆ॥ ಡಿ ದೇವರಾಜೇ ಅರಸಿನವರು ಮ್ಯುನಿಸಿಪಲ್ ಕಾನೂನ್‌ನಲ್ಲಿ ಮೂರು ಬದಲಾವಣೆಗಳು ಆಗಬೇಕಾಗಿದೆ ಎಂದು ತಿಳಿಸಿದರು (1) ಸಂಸ್ಥಾನದಲ್ಲಿರುವ ಮ್ಯುನಿಸಿಪಾಲಿಟಿಯವರು ತಮ್ಮ ತಮ್ಮ ಊರಿನ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರ ಅನುಜ್ಞೆಯನ್ನು ಪಡೆದು ಸರ್ಕಾರದಲ್ಲೊ, ಸಂಸ್ಥಾನದ ಪ್ರಜೆಗಳಿಂದಲೋ ಸಾಲತೆಗೆದುಕೊಳ್ಳುವದಕ್ಕೆ ಅವಕಾಶವಾಗಬೇಕು (2) ಬೆಂಗಳೂರಿನಲ್ಲಾಗಲಿ ದಂಡಿನಲ್ಲಾಗಲಿ ಇರುವ ಮಿಲಿಟರಿ ಹುದ್ದೇದಾರರೂ ಪೊಲೀಸ್ ಹುದ್ದೇದಾರರೂ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಸರ್ಕಾರಿ ಕೆಲಸದ ನಿಮಿತ್ತ ಸಂಚರಿಸುವಾಗ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೂ, ದಂಡಿನ ಮ್ಯುನಿಸಿಪಾಲಿಟಿಗೂ ಟೋಲ್‌ಗೇಟಿನಲ್ಲಿ ತೆರಿಗೆ ಕೊಡಬೇಕಾಗಿದೆ ಈ ತೆರಿಗೆಯನ್ನು ಪರಸ್ಪರ ವಜಾಮಾಡುವುದಾಗಿ ಎರಡು ಮ್ಯುನಿಸಿಪಾಲಿಟಿಯವರೂ ಒಪ್ಪಿಕೊಂಡಿದ್ದಾರೆ ಆದರೆ ಹೀಗೆ ವಿನಾಯತಿ ಮಾಡುವುದಕ್ಕೆ ಮ್ಯುನಿಸಿಪಲ್ ಕಾನೂನಿನಲ್ಲಿ ಅವಕಾಶವಿಲ್ಲ ಮತ್ತು ಬೆಂಗಳೂರಿನಲ್ಲಿ ಪೊಲೀಸ್ ನೌಕರರು ಸರ್ಕಾರಿ ಕೆಲಸದ ಜರೂರಾತಿಗಾಗಿ ಇಟ್ಟುಕೊಂಡಿರುವ ಒಂದೊಂದು ಬೈಸಿಕಲ್ಲಿಗೆ ಮ್ಯುನಿಸಿಪಾಲಿಟಿಯ ತೆರಿಗೆ ಮಾಫಿ ಬಿಡುವುದು ಅವಶ್ಯ ಇದಕ್ಕಾಗಿ ಕಾನೂನು ಬದಲಾವಣೆ ಆಗಬೇಕು (3) ಮ್ಯುನಿಸಿಪಲ್ ಸರಹದ್ದಿನೊಳಗಿರುವ ಪ್ರಜೆಗಳು ತಮ್ಮ ಮನೆ ಮಠಾದಿಗಳನ್ನು ಪರಾಧೀನ ಮಾಡಿದಲ್ಲಿ ಆ ಮನೆಗಳ ಕಂದಾಯದ ವಸೂಲಾತಿಗೆ ಅವರು ಒಂದು ವರುಷದೊಳಗಾಗಿ ಅಂಥಾ ಪರಾಧೀನವನ್ನು ಮ್ಯುನಿಸಿಪಾಲಿಟಿಗೆ ಬಿಂಚ ಮೂಲಕ ತಿಳಿಸಬೇಕೆಂದೂ ಇಲ್ಲವಾದರೆ 50 ರೂಪಾಯಿ ತನಕ ಜುಲ್ಮಾನೆ ವಿಧಿಸಲಾಗುತ್ತದೆಂದೂ ಕಾನೂನು ಬದಲಾವಣೆ ಆಗಬೇಕು ಈ ಮೂರು ಬದಲಾವಣೆಗಳನ್ನೂ ಮಾಡಬೇಕೆಂದು ಕೌನ್ಸಿಲರವರು ಸೂಚಿಸಿದರು ಅಡ್ವೊಕೇಟ್ ಮೆ॥ ರಂಗಯ್ಯಂಗಾರ್ರು—ಈಗ ಸೂಚಿಸಿರುವ ಬದಲಾವಣೆಗಳ ನೇ ಆಗಬೇಕಾದದ್ದು ಸಹಜ, ಆದರೆ ಮ್ಯುನಿಸಿಪಲ್ ಬೋರ್ಡುಗಳಿಂದ ಇನ್ನೂ ಕೆಲವು ಬದಲಾವಣೆಗಳು ಆಗಬೇಕಾಗಿದೆ ಎಂದು ಕೆಲವು ಕಾಲದಿಂದಲೂ ಆಗಿತ್ತು ಸರ್ಕಾರಕ್ಕೆ ಶಿಫಾರಸುಗಳು ಕಳುಹಿಸಲ್ಪಟ್ಟಿವೆ ಅವುಗಳನ್ನೆಲ್ಲಾ ಸರ್ಕಾರದವರು ಇನ್ನೂ ಇತ್ಯರ್ಥ ಮಾಡಿಲ್ಲ ಈಗಲಾದರೂ ಆ ಒಹಿಗನ್ನು ಇದರ ಕೂಡ ಪರ್ಯಾಲೋಚಿಸಿ ಮ್ಯುನಿಸಿಪಲ್ ಕಾನೂನ್‌ನಲ್ಲಿ ಆಗಬೇಕಾಗಿರುವ ಎಲ್ಲಾ ಬದಲಾವಣೆಗಳನ್ನೂ ಒಂದೇ ಚರ್ಚೆಯಿಂದ ಗೊತ್ತುಮಾಡುವುದು ಅವಶ್ಯವೆಂದು ಹೇಳಿದರು ದಿವಾನ್‌ರವರು — ಈಗ ಸೂಚಿಸಲ್ಪಟ್ಟಿರುವ ಬದಲಾವಣೆ ಬಹಳ ಅಗತ್ಯವಾಗಿಯೂ ಆತುರವಾಗಿಯೂ ಆಗಬೇಕಾಗಿದೆ ಇದಕ್ಕೆ ಮೆಂಬರುಗಳು ಸಮ್ಮತಿಸಬೇಕೆಂದು ಕೋರುತ್ತೇನೆ ಗವರ್ನ್‌ಮೆಂಟಿನವರು ಉಳಿದ ಬದಲಾವಣೆಗಳನ್ನೆಲ್ಲಾ ಈ ಸಲ ದಸರಾಕ್ಕೆ ಮೊದಲೇ ಚರ್ಚೆಗೆ ತಂದು ಇತ್ಯರ್ಥ ಮಾಡುತ್ತಾರೆ ಎಂದು ತಿಳಿಸಿದರು ಹಾಗೇ ಆಗಬಹುದು ಮೆಂಬರುಗಳೆಲ್ಲಾ ಒಪ್ಪಿಕೊಂಡರು

ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಇನಾಂದಾರರಿಗೆ ತಮ್ಮ ಗ್ರಾಮಗಳಲ್ಲಿ ರೈತರಿಂದ ಆರು ವರುಷಗಳ ಕಂದಾಯದ ಬಾಕಿಯನ್ನು ವಸೂಲ್ಮಾಡಿಕೊಳ್ಳಬಹುದೆಂಬ ಹಕ್ಕನ್ನು ಉಂಟುಮಾಡಿ ಕಾನೂನ್ ಬದಲಾವಣೆ ಮಾಡಿದ್ದದ್ದನ್ನು ಆ ದಿನದ ಮೀಟಿಂಗಿನಲ್ಲಿ ಮೆಂಬರುಗಳು ಒಪ್ಪಿ ಪ್ಯಾಸ್ ಮಾಡಬೇಕಾಗಿದೆ ಎಂದು ಮೆ॥ ಎಚ್ ವಿ ನಂಜುಂಡಯ್ಯನವರು ಸೂಚಿಸಿದರು ಪ್ಲೀಡರ್ ಮೆ॥ ಬಿ ನರಸಿಂಗರಾಯರು ಈ ಕಾನೂನು ಪ್ಯಾಸಾಗುವ ವಿಷಯದಲ್ಲಿ ತಮಗೆ ಅಭಿಮತವಿಲ್ಲವೆಂದು ಆಕ್ಷೇಪ ಮಾಡಿದರು ಅವರು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ — ಈ ಬದಲಾವಣೆಯು ಇನಾಂದಾರರ ಪಕ್ಷ ಒಂದನ್ನೇ ಪರಿಗಣಿಸುತ್ತದೆ ಇದು ಪಕ್ಷಪಾತವಾದ ಬದಲಾವಣೆಯಾಗಿದೆ ಇನಾಂ ಗ್ರಾಮಗಳಲ್ಲಿ ಇನಾಂದಾರರಿಂದ ರೈತರಿಗಾಗುತ್ತಿರುವ ಕಷ್ಟನಷ್ಟಗಳನ್ನೂ ಅದರ ಕೂಡ ಚರ್ಚಿಸಿ ನಿವಾರಣೆ ಮಾಡಿದ್ದರೆ ಚೆನ್ನಾಗಿತ್ತು ಅಂಥಾ ಕಷ್ಟನಷ್ಟಗಳಲ್ಲಿ ಕೆಲವನ್ನು ಸೂಚಿಸಬಹುದು (1) ಇನಾಂ ಗ್ರಾಮಗಳಲ್ಲೂ, ಸುತ್ತುಮುತ್ತಿನ ಸರ್ಕಾರಿ ಜಮೀನುಗಳಲ್ಲೂ ಬೆಳೆಯಾಗದೆ ಇದ್ದು, ಸರ್ಕಾರಿ ಜಮೀನ್‌ಗಳ ಕಂದಾಯ ರಿಮಿಷನ್ ಆದರೂ ಇನಾಂದಾರರು ತಮ್ಮ ರೈತರಿಗೆ ರಿಮಿಷನ್ ಕೊಡುವುದಿಲ್ಲ ರೈತರು ಬೆಳೆ ಆಗದಿದ್ದರೂ ಇನಾಂದಾರರಿಗೆ ಕಂದಾಯ ತೆರಲೇ ಬೇಕಾಗಿದೆ (2) ಸರ್ವೇಸೆಟ್ಲ್‌ಮೆಂಟ್ ಮಾಡಿಸದಲ್ಲದೆ ಕಂದಾಯ ಕೊಡುವುದಿಲ್ಲವೆಂದು ರೈತರು ಇನಾಂದಾರರಿಗೆ ಹೇಳುವುದಕ್ಕೆ ಮಾರ್ಗವಿಲ್ಲ ಇನಾಂದಾರರಾದರೋ ಒಂದು ಗ್ರಾಮಕ್ಕೆ ಹಲವರು ಇರೋಣದರಿಂದ ಎಲ್ಲರೂ ಗೊತ್ತುಪಟ್ಟಲ್ಲದೆ ಸರ್ವೇಸೆಟ್ಲ್ ಆಗುವುದಿಲ್ಲ (3) ಇನಾಮತಿಗಳಲ್ಲಿರುವ ಕೆರೆ ನಾಲೆಗಳನ್ನು ಇನಾಂದಾರರು ಆಗಾಗ್ಗೆ ರಿಪೇರಿಮಾಡಿಸುತಾ ದುರಸ್ತಾದ ಸ್ಥಿತಿಯಲ್ಲಿ ಇಟ್ಟಿರಬೇಕೆಂಬ ನಿರ್ಬಂಧವೇನೂ ಇಲ್ಲ ಆದರೂ ರೈತರೇನೋ ಕಂದಾಯವನ್ನು ಕೊಟ್ಟೇ ತೀರಬೇಕು ಕೆರೆ ಕಟ್ಟೆ ನಾಲೆಗಳು ಕೆಟ್ಟಿರೋಣದರಿಂದ ರೈತರಿಗೆ ಬೆಳೆಯಾಗದೆ ಎಷ್ಟು ನಷ್ಟ ಸಂಭವಿಸುತ್ತಿದೆಯೋ ವಿವರಿಸಲಾಗದು (4) ಇನಾಂದಾರರು ರೈತರಿಂದ ವಸೂಲ್ಮಾಡಿಕೊಳ್ಳುವ ಕಂದಾಯಕ್ಕೆ ಅವರಿಗೆ ಸರಿಯಾದ ರಶೀತಿ ಕೊಡಬೇಕೆಂಬ ವಿಧಿ ಇಲ್ಲದಿರೋಣದರಿಂದ ಅನೇಕವೇಳೆ ಅವರಿಗೆ ಮೋಸಮಾಡುವುದಕ್ಕೆ ಅವಕಾಶವಿದೆ (5) ನಾಲೆ ಕೆಟ್ಟು ಜಮೀನಿನಲ್ಲಿ ಬೆಳೆಯಾಗದೆ ಕಂದಾಯಕ್ಕೆ ದಾವಾ ಆದ ಸಂದರ್ಭದಲ್ಲಿ ಕಂದಾಯ ಕೊಟ್ಟೇ ತೀರಬೇಕೆಂದು ಕೋರ್ಟಿನಲ್ಲಿ ಫೈಸಲಾಗಿದೆ ಇದು ಯಾವ ನ್ಯಾಯ? ಹೀಗೆಲ್ಲಾ ರೈತರಿಗೆ ಕಷ್ಟನಷ್ಟಗಳುಂಟಾಗುತ್ತಿದ್ದರೂ ಇವುಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದವರು ಕಾನೂನ್ ಬದಲಾವಣೆ ಮಾಡುವ ಭಾಗವನ್ನು ಚಿಂತಿಸದೆ ಇನಾಂದಾರರ ಪಕ್ಷವನ್ನು ಮಾತ್ರ ವಹಿಸಿ ಅವರಿಗೆ ಅನುಕೂಲ ಮಾಡಿಕೊಡುವುದರಲ್ಲಿ ಆತುರಪಟ್ಟಿದ್ದಾರೆ ಎಲ್ಲಾ ಸಹಾಯವೂ ಇನಾಂದಾರರಿಗೆ ಉಂಟಲ್ಲದೆ ರೈತರ ಕಷ್ಟಗಳನ್ನು ಪರಿಹರಿಸುವ ಮಾರ್ಗವನ್ನು ಯೋಚಿಸಲ್ಲವಾದಕಾರಣ ಅಂಥಾ ಕಾನೂನಿಗೆ ಸಮ್ಮತಿ ಕೊಡಲಾಗದು ಎಂದು ಹೇಳಿದರು ನಾಲ್ಕು ಮಂದಿ ಮೆಂಬರುಗಳು—ರೈತರಿಗಿರುವ ಕಷ್ಟಗಳನ್ನು ಪರಿಹರಿಸುವುದಕ್ಕೆ ಮೆ॥ ಬಿ ನರಸಿಂಗರಾಯರು ಕಾನೂನ್‌ನಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಪ್ರತ್ಯೇಕವಾಗಿ ಸೂಚಿಸಬಹುದು ಈ ಬದಲಾವಣೆಯು ಈ ಸಭೆಯಲ್ಲಿ ಹಿಂದೆ ಚರ್ಚೆಯಾಗಿ ಈಗ ಪ್ಯಾಸಾಗುವುದಕ್ಕೆ ಸಿದ್ಧವಾಗಿದೆ ಇಂಥಾ ಸಮಯದಲ್ಲಿ ಆಕ್ಷೇಪಣೆಗಳನ್ನು ತರತಕ್ಕದ್ದಲ್ಲ ಎಂದು ತಿಳಿಸಿದರು ಮೆ॥ ರಂಗಯ್ಯಂಗಾರ್ರು ಮೆ॥ ನರಸಿಂಗರಾಯರಂತೆ ಅಭಿಪ್ರಾಯ ಪಟ್ಟರು ಕಡೆಯಲ್ಲಿ 10 ಮಂದಿಯ ಸಮ್ಮತಿಯನ್ನು ಪಡೆದು ಆ ಬದಲಾವಣೆಯು ಪ್ಯಾಸಾಯಿತು

ಮನೆಯ ರಂದಿಗಳನ್ನು ಭಾಗಮಾಡುವ ವಿಚಾರವಾದ ಹೊಸ ಕಾನೂನು ಚರ್ಚೆಯಾಗಿ, ಸಿಲೆಕ್ಟ್ ಕಮಿಟಿಯವರು ಅದರ ಮೇಲೆ ರಿಪೋರ್ಟನ್ನು ಬರೆದಿದ್ದರು ಇದನ್ನು ಅಂಗೀಕರಿಸಿ, ಮುಂದಿನ ಮೀಟಿಂಗಿನಲ್ಲಿ ಪ್ಯಾಸ್ ಮಾಡಬೇಕೆಂದು ಮೆ॥ ಎಚ್ ವಿ ನಂಜುಂಡಯ್ಯನವರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು

ಆ ದಿನದ ಮೀಟಿಂಗು 2 ಗಂಟೆಗೆ ಮುಕ್ತಾಯವಾಯಿತು

ಒಳದೇಶದ ವೃತ್ತಾಂತಗಳು

ಮೇಜರ್ ಪೂಕ್ಸ್ ರವರು ಪತ್ನೀಸಹಿತ ರಾಜಧಾನಿಗೆ ಬಂದು ಕಳೆದ ಶನಿವಾರ ದರ್ಬಾರ್ ಸರ್ಜನ್ ಕೆಲಸದ ಛಾರ್ಜನ್ನು ವಹಿಸಿಕೊಂಡರು ತಾಲ್ಲೂಕ್ ಕಚೇರಿಯ ಹಿಂಭಾಗದಲ್ಲಿರುವ ಡೆಪ್ಯುಟಿ ಕಮೀಷನರ ಬಂಗಲೆಯನ್ನು ಅವರ ವಾಸಕ್ಕೆ ಬಿಟ್ಟುಕೊಟ್ಟಿದ್ದಾರೆ

* * *

ರಾಜಧಾನಿಯಲ್ಲಿರುವ ಅರಸುಗಳ ಬೋರ್ಡಿಂಗ್ ಸ್ಕೂಲಿನಲ್ಲಿ ಈ ಸಲ 11 ಮಂದಿಗೆ 9 ಮಂದಿ ಅರಸುಮಕ್ಕಳು ಲೋವರ್ ಸೆಕಂಡರಿ ಪರೀಕ್ಷೆಯಲ್ಲೂ, ಮಿಷನ್ ಹೈಸ್ಕೂಲಿನಲ್ಲಿ 14 ಮಂದಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿ ಉಪಾಧ್ಯಾಯರುಗಳಿಗೆ ಒಳ್ಳೆಯ ಹೆಸರನ್ನು ತಂದಿರುತ್ತಾರೆ

* * *

ಪರಹಿತ ಚಿಂತಕರಾಗಿದ್ದು ರಾಜಧಾನಿಯಲ್ಲಿ ಕಾಲಗತಿಯನ್ನೈದಿದ ಶಿವಪಾದಸ್ವಾಮಿಗಳು ... ಶೈವವಿರಕ್ತರ ಪಾರ್ಥಿವ ಶರೀರ ದಹನಾದಿಗಳಿಗೆ ಸರ್ದಾರ್ ಗೋಪಾಲರಾಜೆ ಅರಸಿನವರೂ, ದರ್ಬಾರ್ ಭಕ್ಷಿ ಲಿಂಗರಾಜೆ ಅರಸಿನವರೂ, ಬಿಡದಿ ಭಕ್ಷಿ ಮೆ॥ ಮುದ್ದುರಾಜೆ ಅರಸಿನವರೂ, ಲೇಟ್ ಶಿವರಾಂಬಹದ್ದೂರವರ ಕುಟುಂಬದವರೂ ತುಂಬಾ ಸಹಾಯಮಾಡಿದರೆಂದು ತಿಳಿದುಬಂದಿದೆ

* * *

ಇದೇ ಜೂನ್ ತಿಂಗಳ ಪ್ರಾರಂಭದಿಂದ ಶ್ರೀಮನ್‌ಮಹಾರಾಜರವರ ಆಜ್ಞಾನುಸಾರವಾಗಿ ರಾಜಧಾನಿಯಲ್ಲಿ ಪ್ರತಿ ದಿನವೂ ಮಧ್ಯಾಹ್ನ 12 ಗಂಟೆಗೆ ಕೋಟೆ ಕೊತ್ತಲದಿಂದ ಗುಂಡು ಹಾರಿಸುತ್ತಿದ್ದಾರೆ ಇದಲ್ಲದೆ ಮಾಮೂಲಿನಂತೆ ರಾತ್ರಿ 9 ಘಂಟೆಗೂ, ಬೆಳಗಿನ ಝಾಮ 5 ಗಂಟೆಗೂ ಗುಂಡು ಆಗುತ್ತಿರುವವು ನಮ್ಮ ಮಹಾರಾಜರವರ ಆಜ್ಞೆಯಲ್ಲಿ ಇದೊಂದು ಹೊಸ ಏರ್ಪಾಡಾಗಿದೆ

* * *

ಕಳೆದ ವಾರ ಧಾರವಾಡದಲ್ಲಿ ಜರುಗಿದ ಕರ್ಣಾಟಕ ವಿದ್ಯಾವರ್ಧಕ ಸಮಾಜದ ಕೂಟಕ್ಕೆ ಪದ್ಧತಿಯನ್ನನುಸರಿಸಿ ನಮ್ಮ ಸರ್ಕಾರದವರು ಮಹಾರಾಜಾ ಕಾಲೇಜಿನ ಉಪಾಧ್ಯಾಯರಾಗಿಯೂ ಕರ್ಣಾಟಕ ಗ್ರಂಥಮಾಲೆ ಮತ್ತು ವಿದ್ಯಾದಾಯಿನಿ ಮಾಸಪತ್ರಿಕೆಗಳ ಸಂಪಾದಕರಾಗಿಯೂ ಇರುವ ಮ ಬಿ ಸುಬ್ಬರಾವ್, ಬಿ ಎ ಯವರನ್ನೂ ನಂಜನಗೂಡು ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ॥ ಶೇಷಾಚಾರ್ಯರನ್ನೂ ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಟ್ಟಿದ್ದರು

* * *

ಬಹುಕಾಲದಿಂದ ರೋಮನ್ ಕ್ಯಾತೊಲಿಕ್ ಕ್ರೈಸ್ತಮತಾವಲಂಬಿಗಳಾಗಿದ್ದ ಮೆ॥ ಆದಿರಾಜೆ ಅರಸಿನವರು ಹಿಂದಿನ ವಾರ ಕಾಯಿಲೆಯಾಗಿ ರಾಜಧಾನಿಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಮೆ॥ ಡಿ ದೇವರಾಜೆ ಅರಸಿನವರ ಪಡ್ಡಕರಾಗಿದ್ದರು ಆದಿಯಿಂದ ಅವರ ಪತ್ನಿಯೂ, ಒಬ್ಬ ಪುತ್ರನೂ ಒಬ್ಬ ಕುಮಾರಿಯೂ ಮೆ॥ ದೇವರಾಜೆ ಅರಸಿನವರ ಪೋಷಣೆಯಲ್ಲೇ ಇರುತ್ತಾರೆ ಅವರು ಕಾಲವಾದದ್ದರಿಂದ ಹಿಂದೂ ಆಚಾರವನ್ನನುಸರಿಸಿ ಅವರ ಕುಮಾರನಿಂದ ಉತ್ತರಕ್ರಿಯಾದಿಗಳನ್ನು ಮಾಡಿಸಲಾರಂಭವಾಗಿದೆ

* * *

ಕಳೆದ ಬುಧವಾರ ಬೆಳಿಗ್ಗೆ ರಾಜಧಾನಿಯ ದೇವರಾಜ ಮಾರ್ಕೆಟ್ಟಿನ ಬಳಿ ರೆವ್ ಮೆ॥ ಟಿ ಲೂಕಯ್ಯನವರಿಗೆ ಸಿಕ್ಕಿದ 5 ರೂಪಾಯಿನ ಒಂದು ಕರೆನ್ಸಿ ನೋಟನ್ನು ಅವರು ಮಾರ್ಕೆಟ್ಟಿನ ಪೊಲೀಸ್ ಸ್ಟೇಷನ್‌ನವರ ವಶಕ್ಕೆ ಕೊಟ್ಟಿರುತ್ತಾರೆ ಇದಲ್ಲದೆ ಶ್ರೀರಂಗಪಟ್ಟಣದ ಮುನ್‌ಸಿಫ್ ಕೋರ್ಟಿನ ಮುನ್‌ಷಿಯಾದ ಮೆ॥ ಲಿಂಗಯ್ಯನವರ ಕಳೆದ 31 ನೇ ತಾ ಸಾಯಂಕಾಲ ರಾಜಧಾನಿಯ ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ತಮಗೆ ಸಿಕ್ಕಿದ ಎರಡೆಳೆ ಚಿನ್ನದ ಸ್ವರ್ಣ ಗುಂಡುಗಳ ಸರವನ್ನು ಸ್ಟೇಷನ್ ಮಾಸ್ಟರ ವಶಕ್ಕೆ ಕೊಟ್ಟಿರುತ್ತಾರೆ ಅವನ್ನು ಕಳೆದುಕೊಂಡಿರುವವರು ಆಯಾ ಅಧಿಕಾರಿಗಳಿಗೆ ತಿಳಿಸಿ ಕೇಳಿ ಪಡೆಯಬಹುದಾಗಿದೆ

* * *

ಚಕ್ರವರ್ತಿ ಸಾರ್ವಭೌಮರವರ ಜನ್ಮೋತ್ಸವದ ನಿಮಿತ್ತ ಕಳೆದ ಸೋಮವಾರ ಬೆಳಿಗ್ಗೆ ರಾಜಧಾನಿಯಲ್ಲಿ ಕೋಟೆ ಕೊತ್ತಲದಿಂದ 31 ತೋಪುಗಳು ಹಾರಿಸಲ್ಪಟ್ಟವು ಸಾಯಂಕಾಲ ಟೌನ್ ಹಾಲ್ ಸಭಾಮಂದಿರದಲ್ಲಿ ಇಲ್ಲಿನ ಸಂಗೀತ ವಿದ್ಯಾಪ್ರೋತ್ಸಾಹಕ ಸಂಘದವರು ಪಾರ್ಟಿಕಚೇರಿ ನಡಿಸಿದರು ಆಸ್ಥಾನದ ಸಂಗೀತ ವಿದ್ವಾಂಸ ಮಂಡಲಿಯ ಮ॥ ಪಿ ಕೇಶವಯ್ಯನವರ ಕೊಳಲು ವಾದ್ಯವೂ ಮ॥ ಗಣಪತಿ ಅಯ್ಯರ ಪಿಟೀಲು ವಾದ್ಯವೂ, ಮುತ್ತಯ್ಯನವರ ಮೃದಂಗವಾದ್ಯವೂ ಬಹು ಮನೋಹರ ನಡೆದವು ರಾಜಧಾನಿಯ ದೊಡ್ಡ ಮನುಷ್ಯರೂ, ಅಧಿಕಾರಿಗಳೂ ಸಾಮಾನ್ಯ ಪ್ರಜೆಗಳೂ ಬಂಗಿಯ ತುಂಬಾ ಸೇರಿ ಸಂತೋಷಪಟ್ಟು, ಇಂಥಾ ಕೂಟವನ್ನು ಏರ್ಪಡಿಸಿದ ಸಂಘದ ಕಾರ್ಯದರ್ಶಿಗಳನ್ನು ವಂದಿಸಿದರು

* * *

ಜಮೀನ್‌ದಾರರ ಮಕ್ಕಳಾಗಿ, ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಅಥವಾ ಮೆಟ್ರಿಕ್ಯುಲೇಷನ್ ಕ್ಲಾಸಿನ ವರೆಗೆ ಓದಿ ಸ್ವಲ್ಪ ಮಟ್ಟಿಗೆ ಇಂಗ್ಲೀಷು ಕಲಿತಿರುವವರಿಗೆ ತಮ್ಮ ಜಮೀನುಗಳನ್ನು ತಾವೇ ಸ್ವಂತವಾಗಿ ಸಾಗುವಳಿ ಮಾಡುವುದನ್ನು ಕಲಿಸುವುದಕ್ಕೆ ನಮ್ಮ ಸರ್ಕಾರದವರು ಬೆಂಗಳೂರಿನಲ್ಲಿ ಮುಂದಿನ ಜನವರಿಯಿಂದ ಡಾಕ್ಟರ್ ಲೆಸ್ಲಿ ಸಿ ಕೋಲ್ಮನ್‌ರವರ ಮೇಲ್ವಿಚಾರಣೆಗೆ ಒಳಪಟ್ಟ ಒಂದು ವ್ಯವಸಾಯದ ಪಾಠಶಾಲೆಯನ್ನು ಪ್ರಾರಂಭಿಸಿ ನಡಿಸುವವರಾಗಿದ್ದಾರೆ ಈ ಪಾಠಶಾಲೆಯಲ್ಲಿ ವ್ಯವಸಾಯಶಾಸ್ತ್ರ, ರಸಾಯನಶಾಸ್ತ್ರ, ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರ, ಪಶುವೈದ್ಯ ಶಾಸ್ತ್ರಗಳಲ್ಲಿ ಸಾಮಾನ್ಯವಾಗಿ ತಿಳುವಳಿಕೆ ಉಂಟಾಗುವಂತೆ ಎರಡು ವರುಷ ವಿದ್ಯಾಭ್ಯಾಸಮಾಡಿಸುತ್ತಾರೆ ವಿದ್ಯಾರ್ಥಿಗಳು ಹೆಬ್ಬಾಳು ಪರೀಕ್ಷಾ ಕ್ಷೇತ್ರದಲ್ಲಿಯೇ ವಾಸಿಸಬೇಕು ಇವರ ವಾಸಸ್ಥಳಕ್ಕೂ, ಊಟ ಉಪಚಾರಗಳಿಗೂ ತಕ್ಕ ಏರ್ಪಾಡು ಮಾಡಲ್ಪಡುತ್ತದೆ

* * *

ಆಸ್ಥಾನ ವಿದ್ವನ್‌ಮಂಡಲಿಯಲ್ಲಿ ಪ್ರಮುಖರೆನಿಸಿದ್ದ ಧರ್ಮಾಧಿಕಾರಿ ಪಂಡಿತರತ್ನಂ ಸುಂದರ ಶಾಸ್ತ್ರಿಗಳು ಕಳೆದ ಮೇ ತಾ 21 ರಲ್ಲಿ ಕುಂಭಕೋಣಕ್ಕೆ ತಂಜಾವೂರಿನಿಂದ ಬಂದು, ತಾ 23 ನೇ ಗುರುವಾರ ಅವರ ಕುಮಾರರಾದ ಡೆಪ್ಯುಟಿ ಅಮಲ್ದಾರ್ ಮೆ॥ ಸ್ವಾಮಿನಾಥ ಶಾಸ್ತ್ರಿಗಳ ಮನೆಯಲ್ಲಿ ಅನಿರೀಕ್ಷ್ಯವಾಗಿ ಕಾಲಗತಿಯನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಶಾಸ್ತ್ರ ವೇದ ವೇದಾಂತಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಸಂಪಾದಿಸಿ, ಕುಂಭಕೋಣ, ಕಂಚಿ, ತಂಜಾವೂರು, ಅನಂತಶಯನ, ಇತ್ಯಾದಿ ಸ್ಥಳಗಳಲ್ಲಿ ಗಣ್ಯತೆಯನ್ನು ಪಡೆದು ಪ್ರಸಿದ್ಧರಾಗಿದ್ದರು ಇವರನ್ನು ಕೀರ್ತಿಶೇಷರಾದ ಮಹಾರಾಜಾ ಚಾಮರಾಜೇಂದ್ರ ಒಡೆಯರವರು ಮೈಸೂರಿಗೆ ಕರೆಸಿ, ಅರಮನೆಯಲ್ಲಿ ಧರ್ಮಾಧಿಕಾರಿಗಳನ್ನಾಗಿ ನೇಮಿಸಿಕೊಂಡು, ಅವರಿಗೆ "ಪಂಡಿತರತ್ನಂ" ಎಂಬ ಬಿರುದನ್ನು ದಯಪಾಲಿಸಿದ್ದರು ಪ್ರಾಚೀನಶಾಸ್ತ್ರ ಪಂಡಿತರಲ್ಲಿ ವಿಶೇಷ ಗಣ್ಯತೆಯನ್ನು ಪಡೆದಿದ್ದ ಇಂಥಾ ವಿದ್ವಾಂಸರು ಕಾಲವಾದದ್ದು ಬಹಳ ನಷ್ಟವೆಂದು ಹೇಳಬಹುದಾಗಿದೆ

* * *

ನೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯಲ್ಲಿ ಆನೆಕಲ್ಲು ಸಹಿತವಾದ ದೊಡ್ಡ ಮಳೆ ಸುರಿಯಿತು ಕೆಲವು ಕಲ್ಲುಗಳು 2 ತೊಲದಷ್ಟು ಭಾರವಾಗಿದ್ದುವು ಸಾಮಾನ್ಯವಾಗಿ ಗುಂಬಾರದ ಹೆಂಚು ಹೊದ್ದಿಸಿದ ಮನೆಗಳೆಲ್ಲಾ ಈ ಮಳೆಗೆ ಸೋರಿದವು ಅನೇಕ ಮನೆಗಳಿಗೆ ನೀರು ನುಗ್ಗಿ ಅಪಾಯಕಾಲವಾಯಿತು ಹಳ್ಳಗಳಲ್ಲೂ ನಾಲೆಗಳ ಅಕ್ಕಪಕ್ಕಗಳಲ್ಲೂ ಇರುವ ಮನೆಗಳಿಗೆ ಪ್ರವಾಹದಂತೆ ನೀರು ನುಗ್ಗಿ ಬಹಳ ನಷ್ಟಪಡಿಸಿತು ಈ ಸಲ ವರ್ಧಂತಿ ಉತ್ಸವಕ್ಕಾಗಿ ಅರಮನೆಯ ಮೇಲ್ಗಡೆ ಇಟ್ಟಿದ್ದ ಸುಮಾರು 2,000 ವಿದ್ಯುಚ್ಛಕ್ತಿಯ ಸಾಲ ದೀಪಗಳ ಗಾಜಿನ ಬುರುಡೆಗಳಲ್ಲಿ ಕಲ್ಮಳೆಯ ದೆಸೆಯಿಂದ ಹತ್ತಾರು ಒಡೆದುಹೋದವು ಅರಮನೆಯ ಮುಂದೆ ಮೈದಾನಿನಲ್ಲಿ ಕಟ್ಟಿರುವ ಕಂಭಗಳ ಮೇಲೆ ಇಟ್ಟಿರುವ ಕೆಲವು ಗಾಜಿನ ದೀಪದ ಬುರುಡೆಗಳು ಚೂರಾದವು ಬೀದಿಗಳಲ್ಲಿ ಮೈದಾನುಗಳಲ್ಲೂ ಆನೆಕಲ್ಲುಗಳು ಹರಡಿದಂತೆ ಬಿದ್ದಿದ್ದವು ಇಂಥಾ ಬಿರುಸಾದ ಮಳೆಯೂ, ಕಲ್ಮಳೆಯೂ ರಾಜಧಾನಿಯಲ್ಲಿ ಬಹುಕಾಲದಿಂದ ನೋಡಿರಲಿಲ್ಲ

* * *

ಒಬ್ಬ ಬಾತ್ಮೀದಾರರು ಬರೆಯುವುದು —ಕೃಷ್ಣರಾಜನಹಳ್ಳಿ ತಾಲ್ಲೂಕು ಮರಳವಾಡಿ ಹೋಬಳಿ ಮಲ್ಲಿಗೆಮೊಟ್ಟು ಗ್ರಾಮದ ತಗಡೇಗೌಡನ ಮಗ ಲಿಂಗೇಗೌಡನ ಮನೆಯೊಳಗೆ ಶ್ರೀ ವೆಂಕಟರಮಣಯ್ಯನವರ ಬಾಬತು ದನ ಮೆಕೆ ಕೋಣಗಳು ಎಂದು ಕಟ್ಟಿತ್ತು ಸದರಿ ಲಿಂಗೇಗೌಡನ ಬಾಬತು ಒಂದು ಕರು ಮತ್ತು ಹಸುಗಳು ಸಹಾ ಸಾಲಾಗಿ ಗೂಟಗಳಿಗೆ ಕಟ್ಟಿಹಾಕಿ ಇತ್ತು ತಾ 0 ನೇ ಗುರುವಾರ ರಾತ್ರಿ ಸುಮಾರು 2 ಘಂಟೆ ಸಮಯದಲ್ಲಿ ಸಿಡ್ಲು ಬಡಿದು ಆ ಪೈಕಿ ಒಂದು ಕೋಣ ತಕ್ಷಣ ಸತ್ತುಹೋಯಿತು ಲಿಂಗೇಗೌಡ ಬೀದಿ ಬಾಗಿಲ ಒಳ ಮಲಗಿದ್ದ ಪಕ್ಕದ ಪಡಸಾಲೆಯಲ್ಲಿ ಚನ್ನಪ್ಪ, ಚನ್ನೇಗೌಡ ಪೂಜಾರಯ್ಯನ ಮಗ ನಂಜುಂಡೀರ ಸಹಾ ಮಲಗಿದ್ದರು ಯಾರಿಗೂ ಅಪಾಯವೇನೂ ಆಗಲಿಲ್ಲ ಲಿಂಗೇಗೌಡ ಮಲಗಿದ್ದ ಕಾಲಕಡೆಗೆ ಒಂದು ಬೆಕ್ಕಿಗೆ ಹುಡಿ ತಗಲಿ ಅದು ಸತ್ತುಹೋಯಿತು ಬೀದಿ ಬಾಗಿಲ ಹಲಗೆ ಒಡೆದ ಚಕ್ಕೆ ಕೆಳಗೆ ಬಿದ್ದು ಇದೆ ಗೋಡೆ ಮತ್ತು ಮನೆಯ ಗೂಟ ಬಿದ್ದುಹೋಗಿದೆ ಆದರೆ ದೇವರ ದಯದಿಂದ ಮನುಷ್ಯರಿಗೆ ಯಾವ ಅಪಾಯವೂ ಆಗಲಿಲ್ಲ

ಮೈಸೂರು ಗೆಜೆಟ್ ಸಂಗ್ರಹ

ಮುಂದೆ ಹೇಳುವ ಪ್ರೊ॥ ಅ॥ ಕಮಿಷನರುಗಳು ಕನ್ನಡದಲ್ಲಿ ತೇರ್ಗಡೆ ಹೊಂದಿರುತ್ತಾರೆ —ಮೆ॥ ಗಳಾದ ಬಿ ಟಿ ಕೇಶವಯ್ಯಂಗಾರ್ರು, ಎಚ್ ವಿ ರಾಮಸ್ವಾಮಿಯವರು ಟಿ ಜಿ ರಾಮ ಅಯ್ಯರವರು, ಎಸ್ ಅಬ್ದುಲ್ ವಜೀದ್ ಯವರು

ದಾವಣಗೆರೆಯ ಮೆ॥ ಚನ್ನಗಿರಿಸೋಮಣ್ಣನವರ ಸ್ಥಾನಕ್ಕೆ ಚಿಕ್ಕಬಳ್ಳಾಪುರದ ವರ್ತಕ ಮತ್ತು ಸಾಹುಕಾರ್ ಮೆ॥ ಟಿ ಸುಬ್ರಾಯಪ್ಪನವರನ್ನು ಮೈಸೂರು ಸಂಪದಭಿವೃದ್ಧಿಸಮಾಜದ ಮೆಂಬರಾಗಿ ನೇಮಿಸಿದೆ

ಮೆ॥ ಶಿವಸ್ವಾಮಿಯವರನ್ನು ತಲಕಾಡು ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ

ಮೆ॥ ಹನಿಮೆ ಲಚ್ಚಯ್ಯನವರನ್ನು ಮೊಳಕಾಲ್ಮೂರು ತಾಲ್ಲೂಕ್ ಬೋರ್ಡ್ ಮೆಂಬರಾಗಿ ಚುನಾಯಿಸಿದೆ

ಮೆ॥ ಜ ಎಲ್ ಟೆಯಿಲರ್ ಯವರನ್ನು ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿನ ಮೆಂಬರಾಗಿ ನೇಮಿಸಿದೆ

ಕೋಲಾರ್ ಚಿನ್ನದ ಗಣಿಗಳ ಹೆಲ್ತ್ ಆಫೀಸರ್ ಡಾಕ್ಟರ್ ಜೆ ಮರ್ಫಿ ಯವರು ಕನ್ನಡದಲ್ಲಿ ಸಂಭಾಷಣೆ ಮಾಡುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ

ಮೈಸೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ॥ ಎ ವಿ ರಾಮನಾಥನ್ ಯವರಿಗೆ ಜೂನ್ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರಜದಿಂದ ವಾಪಸು ಬಂದಿರುವ ಅ॥ ಕಮಿಷನರ್ ಮೆ॥ ಎ ಮೃತ್ಯುಂಜಯ ಅಯ್ಯರವರನ್ನು ಕೋಲಾರಕ್ಕೆ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗ ಮಾಡಿದೆ

ಪ್ರೊ॥ ಅ॥ ಕಮಿಷನರ್ ಮೆ॥ ಬಿ ಟಿ ಕೇಶವಯ್ಯಂಗಾರ್ರನ್ನು ಕೋಲಾರದಿಂದ ಬೆಂಗಳೂರು ಕಂಟ್ರೋಲರವರ ಆಫೀಸಿಗೆ ವರ್ಗಮಾಡಿದೆ

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಸಿ ರಂಗನಾಥರಾವ್ ಸಾಹೇಬ್ ಯವರನ್ನು ಅ॥ ಕಮಿಷನರ ದರ್ಜೆಯಲ್ಲಿ ಜನವರಿ 13 ರ ಲಾಗಾಯತು 5 ರಿಂದ 4 ನೇ ಕ್ಲಾಸಿಗೆ ಬಡ್ತಿಮಾಡಿದೆ

ಮೈಸೂರು ರೆವಿನ್ಯೂ ಸರ್ವೇ ಇಲಾಖಾ ಅ॥ ಕಮಿಷನರ್ ಮೆ॥ ಟಿ ಧರ್ಮರಾಜ ಚೆಟ್ಟಿಯವರನ್ನು 1911 ನೇ ಡಿಸೆಂಬರ್ ತಾ 1 ರ ಲಾಗಾಯತು 5 ರಿಂದ 4 ನೇ ಕ್ಲಾಸಿಗೆ ಬಡ್ತಿಮಾಡಿದೆ

ಕಾವೇರಿ ಕನಾಲ್ ಡಿವಿಜನ್ ಅ॥ ಇಂಜನಿಯರ್ ಮೆ॥ ಎನ್ ಜಿ ಕೃಷ್ಣ ಅಯ್ಯಂಗಾರ್ರಿಗೆ ಫೆಬ್ರವರಿ ತಾ 3 ರಿಂದ ಮೂರು ತಿಂಗಳು ಹದಿನೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ॥ ಜಿ ಎಸ್ ರಾಮಸ್ವಾಮಿ ಅಯ್ಯಂಗಾರ್ರಿಗೆ ಮೇ ತಾ 28 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಆಲೂರ್ ಸಬ್ ತಾಲ್ಲೂಕ್ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ॥ ಎಸ್ ಸುಂದರರಾಜಯ್ಯಂಗಾರ್ರು ಹಾಸನದ ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು ಪ್ರೆಸಿಡೆಂಟ್ ಮೆ|| ಕೆ ಕೃಷ್ಣ ಐಯರವರು ಅಗ್ರಾಸನವನ್ನು ವಹಿಸಿದ್ದರು ಕಳೆದ ಏಪ್ರಿಲ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದ ಒಟ್ಟು ರೂ 18,971-8 10ಪೈ ಉತ್ಪತ್ತಿ ಆಯಿತು, ರೂ 14,660 1 0 ಖರ್ಚಾಯಿತು ಆ ತಿಂಗಳಲ್ಲಿ ಜನನ 138 ಮರಣ—ಜ್ವರ 19, ಇತರ ಕಾರಣಗಳು 138, ಒಟ್ಟು 157

ಕೋಟೆ ಆವರಣದಲ್ಲಿ ಶೃಂಗಾರ ತೋಟದ ಪೈಕಿ ಮೆ|| ಎ ಸಿ ದೇವರಾಜೇ ಅರಸಿನವರಿಗೆ ಸೇರಿದ ಸುಮಾರು ಅರ್ಧ ಎಕರೆಯ ತೋಟವನ್ನು ಕೊಂಡುಕೊಳ್ಳಬೇಕೆಂದು ಮೆಂಬರುಗಳು ಒಪ್ಪಿಕೊಂಡರು —ಚಟ್ನಹಳ್ಳಿ ಹೆಲ್ತ್ ಕ್ಯಾಂಪಿಗೆ ಉತ್ತರಪಾರ್ಶ್ವದಲ್ಲಿರುವ ಕೀನೀರು ಕಟ್ಟೆಯಲ್ಲಿ ಕೊಳಕು ನೀರು ನಿಂತು ಸುತ್ತುಮುತ್ತಿನ ಪ್ರಜೆಗಳಿಗೆ ಅನಾರೋಗ್ಯವನ್ನುಂಟುಮಾಡುತ್ತದೆಂದೂ, ಅದನ್ನು ಒಡೆದು ಸಂಪೂರ್ಣವಾಗಿ ಮುಚ್ಚಿಬಿಡಬೇಕೆಂದೂ ಹೆಲ್ತ್ ಆಫೀಸರವರು ಶಿಫಾರಸು ಮಾಡಿದರು ಈ ಕಟ್ಟೆಯಲ್ಲಿ ನೀರು ನಿಲ್ಲದಂತೆ ಮಾಡಿದರೆ ಸಾಕೆಂದು ಮೆಂಬರುಗಳು ಇತ್ಯರ್ಥಮಾಡಿದರು —ಯಾವ ಯಾವ ಮೊಹಲ್ಲಿಗಳಲ್ಲಿ ಗೋಶಾಲೆಗಳು ನೀರು ಕುಡಿಯುವುದಕ್ಕೆ ಎಷ್ಟೆಷ್ಟು ನೀರಿನ ತೊಟ್ಟಿಗಳನ್ನು ಕಟ್ಟಿಸಿಕೊಡಬೇಕೆಂದು ಸರ್ಕಾರದವರು ಕೇಳಿದ್ದರು ಆಯಾ ಮೊಹಲ್ಲಾ ಕೌನ್ಸಲರುಗಳು ಅಂಥಾ ಸ್ಥಳಗಳನ್ನು ಕಾಣಿಸಿ ಒಂದೊಂದು ಪಟ್ಟಿಯನ್ನು ಬರೆದುಕೊಡಬೇಕೆಂದು ಇತ್ಯರ್ಥಮಾಡಲಾಯಿತು —ಪಟ್ಟಣದ ಎಲ್ಲೆ ಕಟ್ಟಿನೊಳಗೆ ರೈಲ್ ರಸ್ತೆಗಳು ಹಾಕಿರುವ ಖಾಲಿ ನಿವೇಶನಕ್ಕೆ ಕಂದಾಯ ದಾಖಿಲ್ ಮಾಡಬೇಕೆಂದು ಸ್ಪೆಷಲ್ ಡ್ಯೂಟಿ ಆಮಲ್ದಾರರು ಸೂಚಿಸಿದರು ಇಂಥಾ ಕಂದಾಯವನ್ನು ಬೆಂಗಳೂರು ದಂಡಿನಲ್ಲೂ, ಸಿಟಿಯಲ್ಲೂ ಹಾಕಿ ವಸೂಲ್ಮಾಡುತ್ತಿದ್ದಾರೆಯೇ ಎಂಬದನ್ನು ವಿಚಾರಿಸಿ ತಿಳಿಯಬೇಕೆಂದು ತಗೆದಿಟ್ಟರು —ಕೃಷ್ಣಪ್ಪನವರ ವೈದ್ಯಶಾಲೆಗೆ ಮ್ಯುನಿಸಿಪಾಲಿಟಿಯಿಂದ ಕೊಡುತ್ತಿದ್ದ ಗ್ರಾಂಟನ್ನು ನಿಲ್ಲಿಸಬೇಕೆಂದು ಹಿಂದೆಯೇ ಮೆಂಬರುಗಳು ತೀರ್ಮಾನಮಾಡಿದ್ದರು ಗವರ್ನ್‌ಮೆಂಟಿನವರು ಆ ತೀರ್ಮಾನವನ್ನು ಖಾಯಂಮಾಡಿ, 1910ನೇ ಆಗಸ್ಟ್ ಗುರ್ತಿಯಿಂದ ಗ್ರಾಂಟು ಕೊಡಬೇಕಾದದಿಲ್ಲವೆಂದು ಹುಕುಂ ಕೊಟ್ಟಿದ್ದದ್ದನ್ನು ಮೆಂಬರುಗಳು ರಿಕಾರ್ಡುಮಾಡಿಕೊಂಡರು —ಚಾಮರಾಜ, ಕೃಷ್ಣರಾಜ, ನಜರಬಾದ್ ಮೊಹಲ್ಲಿಗಳಲ್ಲಿ ವಸೂಲಾಗತಕ್ಕದ್ದೆಂದು ಗೊತ್ತಾದ ಮ್ಯುನಿಸಿಪಲ್ ಕಂದಾಯವನ್ನೂ, ಕನ್ಸರ್ವೆನ್ಸಿ ತೆರಿಗೆಯನ್ನೂ (ರೂ 871 6 6ಪೈ) ಕಮಿಷನ್ ಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು —ಜೂನ್ ತಾ 1 ರಿಂದ ಮಾಧ್ಯಮಿಕ ರೂಪವಾದ ಒಂದು ಬಾಲಿಕಾ ಪಾಠಶಾಲೆಯನ್ನು ಕೃಷ್ಣವಿಲಾಸಪುರದಲ್ಲೂ ಒಂದು ಗಂಡುಹುಡುಗರ ಸ್ಕೂಲನ್ನು ಚಟ್ನಹಳ್ಳಿ ಕ್ಯಾಂಪಿನ ಬಳಿಯೂ ಪ್ರಾರಂಭಿಸಬಹುದೆಂದೂ, ಇವೆರಡಕ್ಕೂ ಮಾಹೆಯಾನಾ 118 ರೂಪಾಯಿ ಖರ್ಚುಮಾಡಬಹುದೆಂದೂ ಮೆಂಬರುಗಳು ತೀರ್ಮಾನಮಾಡಿದರು

ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು

ಕಳೆದ ಗುರುವಾರ ಬೆಳಗ್ಗೆ ಮೈಸೂರು ಪಟ್ಟಣದ ಪುರಾಭಿವೃದ್ಧಿ ಸಂಘದ ಮೆಂಬರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು ಚೇರ್ಮನ್ ಮೆ|| ಕೆ ಕೃಷ್ಣ ಐಯರವರು, ವೈಸ್ ಪ್ರೆಸಿಡೆಂಟ್ ಮೆ|| ಎಂ ಜಿ ಕೃಷ್ಣಸ್ವಾಮಿ ರಾಯರವರು, ಇಂಜನಿಯರ್ ಮೆ|| ಡಿಕ್ರೂಸ್ ಯವರು ಹೆಲ್ತ್ ಆಫೀಸರ್ ಮೆ|| ಕರ್ಣಿಯವರು ಮೆ| ಗಳಾದ ಎಂ ಸಿ ರಂಗೈಯಂಗಾರ್ರು, ಎಂ ವೆಂಕಟಕೃಷ್ಣಯ್ಯನವರು, ಮಹಮದ್ ಜಾಫರ್ ಯವರು, ಎಂ ಅನಂತರಾಮಯ್ಯನವರು ಹಾಜರಾಗಿದ್ದರು

ಖಾದರ್ ಮೊಹದೀನ್ ಸಾಹೇಬ್ ಎಂಬಾತನು ತನ್ನ ಮನೆಯನ್ನು ಪೂರಾ ತಗೆದುಕೊಳ್ಳಬೇಕು ಹಾಗಿಲ್ಲದೆ ತನ್ನ ಮನೆಯ ಒಂದು ಭಾಗವನ್ನು ಮಾತ್ರ ಕೊಂಡುಕೊಂಡರೆ ತನಗೆ ನಷ್ಟವಾಗುತ್ತದೆಂದು ಅರ್ಜಿ ಬರೆದುಕೊಂಡಿದ್ದನು ಆತನ ಮನೆಯನ್ನು ಚೇರ್ಮನ್‌ರವರು ಖುದ್ದಾಗಿ ನೋಡಿ ವ್ಯವಸ್ಥೆ ಮಾಡತಕ್ಕದ್ದೆಂದು ತೀರ್ಮಾನವಾಯಿತು —ಅಪ್ಪುಭಟ್ಟರು ಮನೆ ಕಟ್ಟುವುದಕ್ಕೆ ಸಾಲ ಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು ಅವರ ಸಂಬಂಧಿಯಾದ ಅಣ್ಣಮ್ಮನು ಅದಕ್ಕೆ ವಿರೋಧವಾಗಿ ಬರೆದಿದ್ದ ಜವಾಬನ್ನು ಮೆಂಬರುಗಳು ನೋಡಿ ಅವರಿಗೆ ಸಾಲ ಕೊಡಲಾಗದೆಂದು ಅಭಿಪ್ರಾಯಪಟ್ಟರು —ರೈಲ್ವೆ ಸ್ಟೇಷನ್ ರಸ್ತೆಯಲ್ಲಿ ಆರೋಗ್ಯಕರವಾದ ಏರ್ಪಾಡು ನಡೆಯಬೇಕಾಗಿದೆ ಎಂಬ ಹೆಲ್ತ್ ಆಫೀಸರವರು ಬರೆದಿದ್ದ ವಿಚಾರವನ್ನು ಮೆಂಬರುಗಳು ಅಜಮಾಯಿಷಿ ಮಾಡುವುದಕ್ಕೆ ತಗೆದಿಟ್ಟರು —ಲಕ್ಷ್ಮೀಪುರದ ಬಡಾವಣೆಯಲ್ಲಿ ಬಂಗಲೆ ಕಟ್ಟುವ ನಿವೇಶನಗಳನ್ನು ಕೊಂಡುಕೊಂಡಿದ್ದ ರಾಮಾನುಜೈಯಂಗಾರ್ರೂ, ರಾಮಸ್ವಾಮೈಯಂಗಾರ್ರೂ, ಸೀತಾರಾಂ ಮೊದಲಿಯಾರ್ರೂ ಒಂದೊಂದು ನಿವೇಶನದಲ್ಲಿ ಎರಡೆರಡು ಮನೆಗಳನ್ನು ಕಟ್ಟಿಕೊಳ್ಳಬೇಕೆಂದು ಉದ್ದೇಶಪಟ್ಟು ಲೈಸೆನ್ಸ್ ಕೇಳಿದ್ದರು ಒಂದು ನಿವೇಶನದಲ್ಲಿ ಎರಡು ಮನೆಗಳನ್ನು ಕಟ್ಟುವುದಕ್ಕೆ ಅವರಿಗೆ ಲೈಸೆನ್ಸು ಕೊಡಕೂಡದೆಂದು ತೀರ್ಮಾನವಾಯಿತು —ದೊಡ್ಡಕೆರೆ ಏರಿಯ ಮೇಲೆ ಪೋಲೀಸ್ ಸ್ಟೇಷನ್ ಹಿಂಭಾಗದಲ್ಲಿ ಗ್ರಾಮಸಾರವು ಸಾಗಿಹೋಗುವ ದೊಡ್ಡ ಚರಂಡಿಯನ್ನು ಸಿಮೆಂಟ್ ಕಾಂಕ್ರೀಟ್ ಎಂಬ ಗಾರೆಯಿಂದ ಸುಮಾರು 6 000 ರೂಪಾಯಿ ಮುಟ್ಟಿಸಿ ಟ್ರಸ್ಟ್ ಬೋರ್ಡ್ ಇಂಜನಿಯರವರು ಕಟ್ಟಿಸಿದ್ದು ಈಚೆಗೆ ಅದು ದಢ ಕುಸಿದು ಮುರಿದು ಬಿದ್ದುಹೋಯಿತು ಇದನ್ನು ಮತ್ತೆ ಕಟ್ಟಿಸುವುದಕ್ಕೆ ಇಂಜನಿಯರವರು ಅಂದಾಜು ಪಟ್ಟಿಯನ್ನು ತಯಾರ್ಮಾಡಿ ಕೊಟ್ಟರು ಮೆಂಬರುಗಳು ಈ ಅಂದಾಜು ಪಟ್ಟಿಯನ್ನು ಚೀಫ್ ಇಂಜನಿಯರವರಿಗೆ ಕಳುಹಿಸಿ, ಅದರ ವಿಷಯದಲ್ಲಿ ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಗೊತ್ತುಮಾಡಿದರು —ಪಟ್ಟಣದಲ್ಲಿ ಈಗ ಸೇರಿಕೊಂಡಿರುವ ಕನ್ನೇಗೌಡನ ಕೊಪ್ಪಲು, ಪಡುವಾರಹಳ್ಳಿ, ಕುರುಬಾರಹಳ್ಳಿ, ಒಡ್ಡರಪಾಳ್ಯ ಹೊಸ ಒಂಟಿಕೊಪ್ಪಲು, ಈ ಭಾಗಗಳನ್ನು ಆರೋಗ್ಯಕರವಾದ ರೀತಿಯಲ್ಲಿ ಮಾಡಿಡುವುದಕ್ಕೆ ಅಂದಾಜು ಪಟ್ಟಿಗಳನ್ನು ತಯಾರ್ಮಾಡಿಸಿ ಗವರ್ನ್‌ಮೆಂಟಿಗೆ ಕಳುಹಿಸತಕ್ಕದ್ದೆಂದು ಏರ್ಪಾಡಾಗಿದೆ —ಚಾಮರಾಜ ಪೇಟೆಯಲ್ಲಿ ಸೀತಾವಿಲಾಸ್ ಕೋಟಿನ ಹಿಂಭಾಗದಲ್ಲಿ 20 ಅಡಿ ಅಗಲವುಳ್ಳ ಕನ್ಸರ್ವೆನ್ಸಿ ಗಲ್ಲಿಯನ್ನು ಹಾಕುವುದಕ್ಕೆ ಅಲ್ಲಿರುವ 26 ಮನೆಗಳವರಿಂದ ಸ್ಥಳಗಳನ್ನು ಕೊಂಡುಕೊಳ್ಳಬೇಕೆಂದು ಗೊತ್ತಾಯಿತು —ಕೃಷ್ಣರಾಜ ಮೊಹಲ್ಲೆಯಲ್ಲಿ ವ ದ್ಯಯನೆಂಬಾತನು ತನಗೆ ಮನೆ ಕಟ್ಟಿಕೊಳ್ಳುವುದಕ್ಕೆ ಲೈಸೆನ್ಸ್ ಕೊಡಲಿಕ್ಕಾಗದೆ ಹೋದಲ್ಲಿ ತನ್ನ ಮನೆಯನ್ನು ಸರ್ಕಾರಕ್ಕೆ ಕೊಂಡುಕೊಳ್ಳಬೇಕೆಂದು ಬರೆದುಕೊಂಡಿದ್ದ ಅರ್ಜಿಯನ್ನು ಮೆಂಬರುಗಳು ಹೆಲ್ತ್ ಆಫೀಸರವರ ಅಜಮಾಯಿಷಿಗಾಗಿ ತಗೆದಿಟ್ಟರು

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವಗಳು

ಮೂಡಿಗೆರೆ

ಕಳೆದ ತಿಂಗಳು 26 ನೇ ತಾ ನಮ್ಮ ಮಹಾರಾಜರವರ ಜನ್ಮದಿವಸವೆಂಬುದನ್ನು ಪ್ರಕಟಪಡಿಸುವುದಕ್ಕೋ ಎಂಬಂತೆ ಸುಮಾರು ಎರಡು ಘಂಟೆ ಕಾಲ ಸುವೃಷ್ಟಿಯಾಗಿ ಜನಗಳನ್ನೆಲ್ಲಾ ಅತ್ಯಾನಂದಗೊಳಿಸಿತು ಮಳೆ ನಿಂತ ಬಳಿಕ ಜನಗಳೆಲ್ಲರೂ ಸೇರಿ, ನಮ್ಮ ಮಹಾರಾಜರವರ ಜನ್ಮೋತ್ಸವ ಮತ್ತು 24 ನೇ ತಾ ನಡೆಯಬೇಕಾಗಿದ್ದ ಯಂಪೈರ್ ಡೇ ಉತ್ಸವಗಳ ನಿಮಿತ್ತ ಸ್ಕೂಲ್ ಹಿಂಭಾಗದ ಮೈದಾನದಲ್ಲಿ ಸಭೆಯನ್ನು ಮಾಡಿ ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ಪ್ರಕಾಶಗೊಳಿಸಿದರು ಆ ಮೇಲೆ ಸ್ಕೂಲ್ ವಿದ್ಯಾರ್ಥಿಗಳಿಂದ ಆಟಗಳನ್ನಾಡಿಸಿ ಗೆದ್ದವರಿಗೆ ಪಾರಿತೋಷಕವನ್ನು ಕೊಟ್ಟುದಲ್ಲದೆ ಹುಡುಗರಿಗೆಲ್ಲಾ ತಿಂಡಿಯನ್ನು ಹಂಚಿದರು ಬಳಿಕ ನಮ್ಮ ಸಾರ್ವಭೌಮರವರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಮುಗಿಸಿದರು ಆ ದಿವಸ ಮೊದಲ್ಗೊಂಡು ಮಳೆಯು ಆಗಾಗ್ಗೆ ಬರುತ್ತಿರುವದರಿಂದ ಜನಗಳೆಲ್ಲರೂ ಬಹಳ ಹರ್ಷಪಡುತ್ತಾರೆ

ಚಳ್ಳಕರೆ ತಾಲ್ಲೂಕು ದೊಡ್ಡೇರಿ

ಕಳೆದ ಮೇ ತಿಂಗಳು 26 ನೇ ತಾ ಭಾನುವಾರದ ದಿನ ಶ್ರೀಮನ್ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ಯವರ ವರ್ಷವರ್ಧಂತಿ ಉತ್ಸವದ ನಿಮಿತ್ತ ಈ ಗ್ರಾಮದ ಕನ್ನಡ ಸ್ಕೂಲನ್ನು ನಾನಾವಿಧವಾಗಿ ತಳಿರು ತೋರಣಗಳಿಂದ ಅಲಂಕರಿಸಿ ಮ|| ಪ ವೀರಣ್ಣನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ, ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಶೃಂಗಾರ ಪೀಠದಲ್ಲಿ ಮಂಡಿಸಿ ದೈವಭಕ್ತಿ ಮತ್ತು ರಾಜಭಕ್ತಿಗಳ ವಿಷಯವಾದ ಉಪನ್ಯಾಸಗಳು ನಡೆದ ತರುವಾಯ ಜಗದೀಶನು ಶ್ರೀಮನ್ ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಯವರಿಗೂ, ಶ್ರೀಮನ್ ಯುವರಾಜರವರಿಗೂ, ರಾಜಕುಟುಂಬಕ್ಕೂ ಸಹ ದೀರ್ಘಾಯುರಾರೋಗ್ಯಗಳನ್ನು ಸರ್ವದಾ ಕೊಟ್ಟು ಕಾಪಾಡುತ್ತಾ ಬರಲೆಂದು ಕರತಾಡನದ ಮೂಲಕ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದುದಲ್ಲದೆ, ಬಾಲಕರಿಂದ ಆಟಪಾಟ ವಿನೋದೋತ್ಸವಗಳನ್ನೂ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ನಡಿಸಿ, ಗಂಧ ಪುಷ್ಪಾದಿಗಳು ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು

ಚಳ್ಳಕರೆ ತಾಲ್ಲೂಕು ತಳುಕು

ಶ್ರೀಮನ್ ಮೈಸೂರು ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ಯವರ ವರ್ಷವರ್ಧಂತ್ಯುತ್ಸವವನ್ನು ಈ ಸಮ್ಮತು ಶೇಕ್ದಾರ್ ಮ ಕೃಷ್ಣರಾಯರಿಂದ ಬಹಳ ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು ಈ ಗ್ರಾಮದ ಸ್ಕೂಲ್ ಕಮಿಟಿ ಮೆಂಬರುಗಳನ್ನೂ ಮತ್ತು ಮುಖಂಡ ರೈತರುಗಳನ್ನೂ ಬರಮಾಡಿಕೊಂಡು ಎಲ್ಲರಿಗೂ ಪ್ರೋತ್ಸಾಹವಂ ಕೊಟ್ಟು ಎಲ್ಲಾ ದೇವಸ್ಥಾನಗಳಲ್ಲಿಯೂ ಅಭಿಷೇಕ, ಅರ್ಚನೆ ರಾಜಾಶೀರ್ವಾದಗಳನ್ನು ಸಾಂಗವಾಗಿ ಮಾಡಿಸಿದರು ಈ ಗ್ರಾಮದಲ್ಲಿ ಇರುವ ಸರ್ಕಾರಿ ಸ್ಕೂಲನ್ನು ತಳಿರು ತೋರಣಗಳಿಂದಲಂಕರಿಸಿ, ನೇತ್ರಾನಂದಕರವಾದ ಮಂಟಪದಲ್ಲಿ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನಿಟ್ಟು ಎಲ್ಲಾ ಬಾಲಕ ಬಾಲಕಿಯರನ್ನೂ ಬರಮಾಡಿಸಿ ಮ| ಕೃಷ್ಣರಾಯರೇ ಮತ್ತು ಕಮಿಟಿ ಮೆಂಬರರೇ ಮೊದಲಾದ ಮುಖಂಡರನ್ನು ಸ್ಕೂಲ್ ಹೆಡ್ ಮಾಸ್ಟರ್ ನಾರಾಯಣರಾಯರು ಬರಮಾಡಿಕೊಂಡು ಸಂಗೀತ ತಾಳಮೇಳಗಳಿಂದ ಸಭೆಯನ್ನು ನಡಿಸಿ, ದೊಡ್ಡ ಮನುಷ್ಯರಿಗೆಲ್ಲಾ ಗಂಧ ತಾಂಬೂಲಾದಿಗಳನ್ನೂ ಬಾಲಕ ಬಾಲಕಿಯರಿಗೆಲ್ಲಾ ತಿಂಡಿಯನ್ನೂ ಹಂಚಿ ಸಭೆಯನ್ನು ಬರಖಾಸ್ತು ಮಾಡಿದರು ಮ|| ಸಿ ನಾರಾಯಣರಾಯರು ಒಂದು ವಿಜ್ಞಾಪನಾ ಪತ್ರಿಕೆಯನ್ನು ಸಭೆಯಲ್ಲಿ ಓದಿದರು

ಯಡತೊರೆ ತಾಲ್ಲೂಕು ಮಿರ್ಲೆ

ಮಿರ್ಲೆ ಶ್ರೀಕೃಷ್ಣರಾಜೇಂದ್ರ ಪರಸ್ಪರ ಸಹಾಯಕ ಸಂಘದ ಸಂತೋಷಕೂಟವು —26 ನೇ ತಾ ಆದಿತ್ಯವಾರ ನಮ್ಮನ್ನಾಳುತ್ತಾ ಇರುವ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ವರ್ಧಂತಿಯ ಮಹೋತ್ಸವವು ಇದೇ ಗ್ರಾಮದ ಗೌರ್ನಮೆಂಟ್ ಕನ್ನಡ ಸ್ಕೂಲಿನಲ್ಲಿ ಆಚರಿಸಲ್ಪಟ್ಟು ಸಂಘದ ಮೆಂಬರುಗಳಿಂದಲೂ, ಸ್ಕೂಲ್ ಹುಡುಗರಿಂದಲೂ ನಿರೀಕ್ಷಿತವಾಗಿತ್ತು ಶ್ರೀಮನ್ ಮಹಾರಾಜರವರ ಅಮೋಘವಾದ ಭಾವಪಟವು ಶ್ರೀಪೀಠಾಸನದಲ್ಲಿ ಇಡಲ್ಪಟ್ಟು, ಸುತ್ತಲೂ ಘಮಘಮಿಸುವ ಸುವಾಸನಾದ್ರವ್ಯಗಳಿಂದಲೂ, ಪುಷ್ಪಗಳಿಂದಲೂ ಇಡಲ್ಪಟ್ಟು ತುಪ್ಪದ ದೀವಿಗೆಗಳಿಂದ ಪ್ರಕಾಶಮಾನವಾಗಿತ್ತು ಶ್ರೀಮನ್ ಮಹಾರಾಜರವರ ಅಮೋಘವಾದ ಗುಣಕಥನವನ್ನು ಮೆಂಬರುಗಳೂ, ಸ್ಕೂಲ್‌ಬಾಲಕರೂ ಸಹ ಮಾಡಿ, ದಿವ್ಯವಾದ ಶ್ರೀಪೀಠಾಸನದಲ್ಲಿಟ್ಟಿದ್ದ ಶ್ರೀಮನ್ ಮಹಾರಾಜರವರ ಭಾವ ಪಟಕ್ಕೆ ಸಮಸ್ತರೂ ನಜರು ಮುಜರೆಗಳನ್ನು ಮಾಡಿ ಅಮೋಘವಾದ ಮಂಗಳವಾದ್ಯಗಳೊಡನೆ ಜಯಘೋಷಗಳಿಂದ ಮಲ್ಲಿಗೆ ಪುಷ್ಪವನ್ನು ಅರ್ಪಿಸಿದರು ತರುವಾಯ ಹುಡುಗರ ಆಟಪಾಟಗಳೂ, ಸಂಗೀತವೂ ನಡೆದು, ಸಮಸ್ತರಿಗೂ ಗಂಧ ಪುಷ್ಪ ತಾಂಬೂಲಾದಿಗಳೂ, ತಿಂಡಿಯೂ ಹಂಚಲ್ಪಟ್ಟವು ಆ ದಿವಸ ಎಲ್ಲಾ ದೇವಾಲಯಗಳಲ್ಲಿಯೂ ಅಭಿಷೇಕೋತ್ಸವಗಳೂ ಶ್ರೇಯಃಪ್ರಾರ್ಥನೆಗಳೂ ನಡೆದು ಸಭೆಗೆ ಮಂಗಳವಾಯಿತು

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಧರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು "ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಹೊನ್ನಾಳಿ—ನೀವು ಹೇಳುವ ವಿಷಯ ಛಾರ್ಜು ಕೊಟ್ಟು ಪ್ರಕಟಿಸತಕ್ಕದ್ದಾಗಿದೆ

ಪ್ರತ್ಯಕ್ಷದರ್ಶಿ, ಚಿತ್ರದುರ್ಗ—ಈ ವಿಚಾರವನ್ನು ಮೇಲ್ಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಬೇಕು

ಪುಂಗನೂರುಕೋಟೆ ಬೊಂಬ್ಲಾಪುರ, ಮಾಗಡಿ—ಈ ಬಾತ್ಮಿಗಳಲ್ಲಿ ವರ್ತಮಾನಗಳೇನೂ ಕಂಡುಬರುವುದಿಲ್ಲ

ಕಳೆದ ವಾರ ಪ್ರಕಟವಾದ ಮಾಗಡಿ ಕಮಿಟಿಯವರ ಬಾತ್ಮಿಗೆ ಜವಾಬಾಗಿ "ಪ್ರಜಾಭಿಮಾನಿ" ಗಳಿಂದ ಈ ವಾರ ಒಂದು ಬಾತ್ಮಿ ಒರೆದು ಬಂದಿದೆ ಕಾಲ ಮೀರಿ ಬಂದದ್ದರಿಂದ ಇದನ್ನು ಈ ವಾರ ಪ್ರಕಟಿಸಲು ಅವಕಾಶವಾಗಲಿಲ್ಲ

—ಎಡಿ]

ಕರೆಸ್ಪಾಂಡೆನ್ಸ್

ತರೀಕೆರೆ ಸ್ಟೇಷನ್ನಲ್ಲಿ ಟಿಕೇಟಿನ ಕಷ್ಟ

ಅಯ್ಯಾ,

ಮೇ ತಿಂಗಳು 11 ನೇ ತಾ ಸಾಯಂಕಾಲದ ರೈಲಿನಲ್ಲಿ ಶಿವಮೊಗ್ಗೆಗೆ ಪ್ರಯಾಣ ಮಾಡುವದಕ್ಕಾಗಿ ಅನೇಕರು ರೈಲ್ವೆ ಸ್ಟೇಷನ್ ಬಳಿ ಕಾದಿದ್ದರು ರೈಲ್‌ಗಾಡಿ ಪ್ಲಾಟ್‌ಫಾರಂನಲ್ಲಿ ಒಂದು ನಿಂತದ್ದಾಗ್ಯೂ ಟಿಕೆಟ್ ಕೊಡುವದು ಶುರುವಾಗಲಿಲ್ಲ ಕೆಲವು ಪ್ರಯಾಣಿಕರಿಗೆ ಮಾತ್ರ ಟಿಕೆಟ್ ಸಿಕ್ಕಿತು, ಅನೇಕರಿಗೆ ಸಿಕ್ಕಲೇ ಇಲ್ಲ ಕೆಲವರು ಟಿಕೆಟ್ ಚಾರ್ಜನ್ನು ಶಿವಮೊಗ್ಗೆಯಲ್ಲೇ ಕೊಡೋಣವೆಂದು ಗಾಡಿಗೆ ಮುಂಚಿತವಾಗಿಯೇ ಹತ್ತಿ ಕೂತುಕೊಂಡಾಗ್ಯೂ ಡಬ್ಬಲ್ ಚಾರ್ಜು ವಸೂಲ್ಮಾಡಿದರು ರೈಲ್ವೆಯವರು ಹೀಗೆ ಮಾಡಿದ್ದು ಶುದ್ಧ ಅನ್ಯಾಯವಲ್ಲವೇ? ಮುಂಚಿತವಾಗಿಯೇ ಪ್ರಯಾಣಿಕರಿಗೆ ಟಿಕೆಟ್ ಕೊಟ್ಟಿದ್ದರೆ ಯಾವ ತೊಂದರೆಯೂ ಆಗುತ್ತಿರಲಿಲ್ಲ ಇನ್ನು ಮುಂದಾದರೂ ಇಂಥಾ ತೊಂದರೆಗಳಿಗೆ ಪ್ರಯಾಣಿಕರನ್ನು ಗುರಿಮಾಡದಂತೆ ಮೇಲ್ಪಟ್ಟ ಅಧಿಕಾರಿಗಳು ಕ್ರಮಪಡಿಸುವರೆಂದು ನಂಬುತ್ತೇನೆ

ಪ್ರಜಾ ಹಿತಚಿಂತಕ

ಹೊಯಿಸಳ ಕರ್ನಾಟಕರೂ ಮತ್ತು ಲಂಡನ್ ಪಾರ್ಟಿ.

ಅಯ್ಯಾ,

ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿದ್ದ ಮೇಲ್ಕಂಡ ಸಂಗತಿಯನ್ನು ಓದಿದೆನು ರಾಜಧಾನಿಯ ಕೆಲವು ಮಹಾ ಜನರು ಸಂಸ್ಥಾನಾಮುಖೇ ಇರುವ ಸ್ವಜನರನ್ನು ಈ ಸ್ಥಳಕ್ಕೆ ಬರಮಾಡಿಕೊಂಡು ಸಭೆ ನಡಿಸಿದ್ದು ನಿಜ ಈ ಹೊಯಿಸಳ ಕರ್ನಾಟಕರ ಸಭೆಯು ನಿರ್ನಾಮವಾದ್ದಕ್ಕೆ ಸ್ವಾರ್ಥಪರಾಯಣರೂ, ದುರಹಂಕಾರಿಗಳೂ ಆದ ಕೆಲವು ಮೆಂಬರುಗಳಾಗಿದ್ದವರೇ ಹೊರತು ಹೆಚ್ಚು ಹಣ ಕೊಡಲು ವಾಗ್ದಾನಮಾಡಿದ್ದ ಮಹಾಶಯರು ಎಂದಿಗೂ ಕಾರಣರಲ್ಲ ಯಾಕೆಂದರೆ ಇವರು ಇರುವ ತನಕ ಅನೇಕ ದರ್ಮಗಳನ್ನು ಮಾಡುತ್ತಿದ್ದರಲ್ಲದೆ ಸ್ವಜನರನೇಕರಿಗೆ ವಿಶೇಷ ಸಹಾಯಕರಾಗಿದ್ದರು ಅಲ್ಲದೆ ದೇವರಿಗಾಗಿ ಹತ್ತಾರು ಎಕರೆ ಜಮೀನನ್ನು ಉಚಿತಮಾಡಿದಾರೆ ಕುಣಿಯಲಾರದವಳು ನೆಲ ಡೊಂಕೆಂದು ಹೇಳಿದಂತೆ ತಾವು ಕೆಲಸ ಮಾಡಲಾರದೆ ತಪ್ಪನ್ನು ಪರರ ಮೇಲೆ ಆರೋಪಣೆ ಮಾಡುತ್ತಾರೆ ಸ್ವಾರ್ಥತ್ಯಾಗಮಾಡಿ ಸರ್ವರೂ ಕಾರ್ಯಾರಂಭ ಮಾಡಿದ್ದಲ್ಲಿ ಆ ಮಹಾಶಯರು ದ್ವಿಗುಣವಾಗಿಯೇ ಚಂದಾ ಹಣ ಕೊಡುತ್ತಿದ್ದರೆಂದು ಹೇಳಲು ಸಂಶಯವೇನೂ ಇಲ್ಲ

ಲಂಡನ್ ಪಾರ್ಟಿ ಎಂಬ ಮಾತು ಮ|| ಎಸ್ ಸುಬ್ಬಯ್ಯರು ಇಂಗ್ಲೆಂಡ್ ದೇಶದಿಂದ ಬರುವದಕ್ಕಿಂತ ಮುಂಚಿತವಾಗಿಯೇ ಈ ನಮ್ಮ ಹೊಯಿಸಳ ಕರ್ನಾಟಕರ ಗುಂಪಿನಲ್ಲಿ ಉಂಟಾಗಿತ್ತು ಈಗ ಅದು ಸರ್ವವಿದಿತವಾಗಿದೆ ಸರ್ವರೂ ಒಂದಾಗಿ ಸೇರಿಯೇ ಇದಾರೆ ಮೇಲೆ ಕೆಲವರು ಡಂಭಾಚಾರದಿಂದ ಪಂಚಗವ್ಯ ಪ್ರಾಶನ ಮಾಡಿದರಂತೆ ಸಮುದ್ರಯಾಯಿಗಳ ದೋಷಕ್ಕಿಂತಲೂ ಸರ್ವಾಪತ್ಕೃತ್ಯವಾದ ದುರ್ನಡತೆಗಳಲ್ಲಿ ಸುಶಿಕ್ಷಿತರಾದ, ಸದ್ವ್ಯವಹಾರವನ್ನು ಹೊಂದಿರುವ ಬ್ರಾಹ್ಮಣರಿಗೆ ಸಮುದ್ರಯಾನ ಮಾಡಿ ಬಂದು ಸ್ವಜನರು ಸ್ವದೇಶಗಳಿಗೆ ಪರೋಪಕಾರ ಮಾಡುತ್ತಿರುವರ ಸದ್ವ್ಯವಹಾರವು ಸರ್ವಥಾ ದೋಷವೆಂದು ನಂಬಲಾಗುವುದಿಲ್ಲ ಇವುಗಳನ್ನೆಲ್ಲಾ ಪರ್ಯಾಲೋಚಿಸಿ ಹೊಯಿಸಳ ಕರ್ನಾಟಕರು ತಮ್ಮ ಜನರನ್ನು ಅಭಿವೃದ್ಧಿಗೆ ತರಲೆಂದು ಕೋರುತ್ತೇನೆ

ಹೊಯಿಸಳ ಕರ್ನಾಟಕ

ಲಗ್ನವೂ, ನಾಮಧಾರಿಗಳೂ

ಅಯ್ಯಾ,

ಈಗ ಸುಮಾರು ಎರಡು ತಿಂಗಳ ಲಾಗಾಯ್ತು ತೀರ್ಥಹಳ್ಳಿ ತಾಲ್ಲೂಕು ನಾಮಧಾರಿ ಗೌಡರುಗಳ ಲಗ್ನದ ಗಲಾಟೆಯ ವೈಭವವು ವಿಪರೀತವಾಗಿರುತ್ತದೆ ಅದರಲ್ಲೂ ಕೆಲವು ಬದಲಾವಣೆಗಳು ಪೂರ್ವದ ಪದ್ಧತಿಗಿಂತ ಎಷ್ಟೋ ಮೇಲಾಗಿರುತ್ತವೆ ಸ್ತ್ರೀಯರು ಈ ಕಾಲಕ್ಕೆ ತಕ್ಕಂತೆ ಉಡಿಗೆ ತೊಡಿಗೆಗಳನ್ನು [illegible] ಮಟ್ಟಿಗೆ ಬದಲಾಯಿಸಿರುತ್ತಾರೆ ಕಂಡಿತನವು ಪ್ರತಿ ಒಬ್ಬರಲ್ಲಿಯೂ [illegible] ಯನ್ನುಂಟುಮಾಡತಕ್ಕದ್ದಾಗಿರುತ್ತದೆ ಆಯಾಯ ಸೀಮೆಯ ಮುಖಂಡರು ಈ ಬಗ್ಗೆ ತಕ್ಕಂತೆ ನಿಗಾ ಇಟ್ಟುಕೊಳ್ಳುವದು ಬಹಳ ಉತ್ತಮವೇ ಸರಿ

ಮೇ ತಿಂಗಳು ತಾ 17 ರಲ್ಲು ಚಿಕ್ಕಮಗಳೂರು ಮೇಲಿನಮನೆಗೆ [illegible] ವದ ಒಬ್ಬ ದೊಡ್ಡಮನುಷ್ಯರ ಮನೆಗೆ ಮೇಗರವಳ್ಳಿ ಕಡೆಯಿಂದ ಹೊ[illegible]

ಎರಡು ದಿಬ್ಬಣಗಳಲ್ಲಿ ಲಗ್ನದ ಕಾರ್ಯಗಳು ನೆರವೇರಿದ ನಂತರ ಶಾಸ್ತ್ರ ಸಂಬಂಧಕ್ಕೆ ಸರಿಯಾಗಿ ಇವರಿಗೆ ಎಪ್ಪತ್ತೈದು ರೂಪಾಯಿಗಳ ಬದಲಿಗೆ ಹೊಸದಾಗಿ ಎರಡು ನೂರ ಐವತ್ತು ರೂಪಾಯಿ ಕೊಡಬೇಕೆಂದು ಮುಷ್ಕರ ಹಿಡಿದು ವಸೂಲು ಮಾಡಿಕೊಂಡದ್ದಲ್ಲದೆ, ಸೀಮೆಯ ವೆಚ್ಚದ ಹಣಕ್ಕೆ ನಾಲ್ಕು ರೂಪಾಯಿಗೆ ಬದಲು ಎಂಟು ರೂಪಾಯಿ ಕೊಡಬೇಕೆಂದು ಸಹ ವಸೂಲು ಮಾಡಿದ್ದಾಯಿತು ಸದರಿಯವರಿಗೆ ಮಾತ್ರ ಈ ಮೇರೆ ವಸೂಲು ಮಾಡಿಕೊಳ್ಳುವಂತೆ ನಿರೋಧಿಸಲ್ಪಟ್ಟ ಸಂ|| ಪುಷ್ಯಶುದ್ಧ 1 ರಲ್ಲು ತೀರ್ಥಹಳ್ಳಿಯಲ್ಲಿ ಮೀಟಿಂಗ್ ನಡಿಸಿದ್ದ ಮೆಂಬರುಗಳು ತಿಳಿಸಿದ್ದಾರೋ ಏನೋ ಕಾಣೆವು ಇಷ್ಟಲ್ಲಾ ಕೊಟ್ಟರೆ ತಾನೆ ಏನು ಪ್ರಯೋಜನ? ಭಕ್ಷ್ಯ ಭೋಜ್ಯಗಳ ತಿಂಡಿಯಿಂದ ನೂರಾರು ಜನರು ಕರ್ಪೂರದಾರಿಷ್ಟ ಔಷಧಿಯನ್ನು ಕುಡಿಯಬೇಕಾಯಿತು ಮೇಲ್ಕಂಡ ಎರಡು ದಿಬ್ಬಣಗಳಲ್ಲಿ ಒಂದು ಕಡೆಯವರು ಹ್ಯಾಗೂ ಸುಧಾರಿಸಿಕೊಳ್ಳಬಹುದು ಇನ್ನೊಂದು ಕಡೆಯವರು ಮಾತ್ರಾ ಹಣಕೊಟ್ಟು ಸಾವಕಾರಿಗೆ—ನಾವೆರಡು ಜನರಿಗೆ ಮಾಹೆಯಾನಾ ಎಷ್ಟು ವಜಾಮಾಡಿಕೊಳ್ಳುತ್ತೀರಿ ಎಂದು ಕೇಳಬೇಕಾಗುತ್ತದೇನೋ! ಶಿವಾಯಿ ಮೇ ತಾ 23 ರಲ್ಲು ನಡೆದ ಕೊಪ್ಪದ ತಾಲ್ಲೂಕು ಬಂವಳ್‌ಮನೆ ಸಮೀಪದ ಒಂದು ಗ್ರಾಮದ ಒಬ್ಬ ನಾಯ್ಕರಲ್ಲಿ ನಡೆದ ಲಗ್ನದಲ್ಲಿ ಇದಕ್ಕಿಂತಲೂ ವಿಪರೀತವಾದ ಸುಲಿಗೆ ಮಾಡಿದ್ದಲ್ಲದೆ ದಿಬ್ಬಣದವರ್ಯಾರೂ ಮನೆಯೊಳಕ್ಕೆ ಪ್ರವೇಶಿಸಕೂಡದೆಂದು ಹೆಬ್ಬಾಗಿಲಲ್ಲು ಎರಡು ಜನ ಮಹಮ್ಮದೀಯ ಮತದವರನ್ನು ಕಾವಲಾಗಿಟ್ಟಿದ್ದರೆಂದೂ, ಈ ಕಾರಣದಿಂದ ಮುಕ್ಕಾಲು ಭಾಗದ ಜನರು ಊಟವಿಲ್ಲದೆ ವಾಪಸು ಒಂದುಬಿಟ್ಟರೆಂದೂ ಕೇಳುತ್ತೇವೆ ಈ ಮೇರೆ ಒತ್ತಾಯದಿಂದ ತೆಗೆದುಕೊಂಡ ಹಣಕ್ಕೆ ಕನ್ಯಾದಾನವೆಂದೇ? ಅಥವಾ ಕನ್ಯಾವಿಕ್ರಯವೆಂದು ಗ್ರಹಿಸಬೇಕೋ? ಈ ಖಿಲವೆ ನಂಗರೀಕನಿಕ್ಕೆ ಇವರಲ್ಲವೇ ಮೊದಲನೆಯವರು ಎಂಬುವದನ್ನು ವಾಚಕರೇ ಊಹಿಸಿಕೊಳ್ಳಬೇಕಾಗಿ ಪ್ರಾರ್ಥಿಸುವ

ಗಾಡರಲ್ಲಿ ಒಬ್ಬ

ಹಾಸನದ ಪ್ರಕರಣ

ಆರ್ಯ,

ಕಳೆದ ಒಂದೂವರೆ ವರ್ಷದಿಂದಲೂ ಈ ಊರಿಗೆ ಪ್ಲೇಗ್ ಕಾಲರಾ, ಕಾಲರಾ ಪ್ಲೇಗ್, ಈ ರೀತಿ ಒಂದರ ಮೇಲೊಂದು, ಒಂದರ ಹಿಂದೊಂದು ಉಪದ್ರ ಪ್ರಾಪ್ತವಾಗುತ್ತಲೇ ಇವೆ ಹೀಗಾದರೆ ಇಲ್ಲಿನ ಸಮಾಗಳೆಲ್ಲಾ ಅನಾರೋಗ್ಯ ದರಿದ್ರರ ವಿತಾಪಕ್ಕೆ ಬಿಡುಗಡೆ ಎಂದಿಗಾದೀತೋ ದೇಹ ಪೋಷಣೆಗೂ, ಆರೋಗ್ಯಕ್ಕೂ ಅಗತ್ಯವಾದ ಸೌಲಭ್ಯಗಳ ಅನಾನುಕೂಲತೆಯೇ ಈ ವ್ಯಾಧಿ ಕಾರಣವೆಂದು ಧೀರಂಗನಾಗಿ ಎಲ್ಲರೂ ಒಪ್ಪಿಕೊಳ್ಳುವರು ಇದು ನಿಜವೆಂಬುದರಲ್ಲಿ ಸಂದೇಹವಿಲ್ಲ ಎಷ್ಟು ಮಂದಿ ಸ್ತ್ರೀಪುರುಷರು ಪತಿಪತ್ನಿಯರನ್ನೂ, ಎಷ್ಟು ವಿ ಮಕ್ಕಳು ಮಾತಾಪಿತೃಗಳನ್ನೂ, ಇನ್ನೆಷ್ಟು ಮಂದಿ ತಾಯಿತಂದೆಗಳು ತಮ್ಮ ಪ್ರಿಯ ಬಾಲಬಾಲಿಕೆಯರನ್ನೂ ಈ ಪ್ಲೇಗ್ ಮತ್ತು ಕಾಲರಾ ವ್ಯಾಧಿಗಳ ಮೂಲಕ ನೀಗಿಕೊಂಡು ಅನಾಥರಾಗಿ ಜೀವಿಸಬೇಕಾಗಿದೆಯೋ ಯಾರು ತಾನೇ ವರ್ಣಿಸಿ ಹೇಳಬಲ್ಲರು? ಈ ಟೌನ್‌ನಲ್ಲಿ ಸರ್ಕಾರದವರ ಮತ್ತು ಮ್ಯುನಿಸಿಪಾಲಿಟಿಯವರ ಕರ್ತವ್ಯಗಳು ಬಹಳವಾಗಿ ಉಳಿದಿವೆ ಅವುಗಳಲ್ಲಿ ಬಹು ಮುಖ್ಯವಾದ ಎರಡು ಸಂಗತಿಗಳನ್ನು ಇಲ್ಲಿ ಸೂಚಿಸುತ್ತೇನೆ

ಶುದ್ಧವಾದ ಕುಡಿಯುವ ನೀರಿನ ಅವಶ್ಯಕತೆ — ಇಲ್ಲಿಗೆ ಸಮೀಪವಾಗಿರುವ ಯಗಚೀ ನದಿ ದಡದಲ್ಲಿ ಇನ್ಫಿಲ್ಟರೇಷನ್ ಗ್ಯಾಲರಿಯಿಂದು ಎತ್ತರ ಪ್ರದೇಶದ ದೊಡ್ಡ ಕೆರೆಯಿಂದಾಗಿ ಶುದ್ಧವಾದ ನೀರನ್ನು ನಲ್ಲಿಗಳ ಮೂಲಕ ಒದಗಿಸುವುದೇ ಅನುಕೂಲ ಇದು ಬಹಳ ಹಣ ವೆಚ್ಚದ ಕೆಲಸವಾಗಿರುವುದರಿಂದ ಸದ್ಯಕ್ಕೆ ಇಲ್ಲಿನ ಜನಗಳೆಲ್ಲಾ ಕುಡಿಯುವ ನೀರಿಗೆ ಆಧಾರವಾದ ದೇವಗೆರೆಯ ಹೂಳನ್ನು ಎತ್ತಿಸಿ, ಹಳೇ ಗಿಡಗಳನ್ನೂ ಕಡಿಸಿಬಿಟ್ಟು, ಕೆರೆಯನ್ನು ಚೆನ್ನಾಗಿ ಶುಚಿಮಾಡಿಸಿ, ಹೊಸ ನೀರು ಅಲ್ಲಿ ನಿಲ್ಲುವಂತೆ ಬಹುಬೇಗ ಅನುಕೂಲ ಪಡಿಸಬೇಕು ಮತ್ತು ಹಟ್ಟಿನಕೆರೆ, ಗುಂಡಿಗಳಲ್ಲಿ ಯಾರೂ ನೀರನ್ನು ಹೊಲಸು ಮಾಡದಂತೆ ಕಾವಲು ಕೊಡಬೇಕೆಂದು ಕಟ್ಟುಮಾಡಿ, ಸರಿಯಾದ ಮೇರೆ ಪೊಲೀಸು ಕಾವಲನ್ನು ಇಡಬೇಕು

ಮ್ಯುನಿಸಿಪಾಲಿಟಿಯ ಕಾರ್ಯಶ್ರದ್ಧೆ — ಈ ಟೌನ್‌ನಲ್ಲಿರುವ ಇಕ್ಕಟ್ಟು ಗಲ್ಲಿಗಳನ್ನೆಲ್ಲಾ ಒಡಿಸಿ ವಿಸ್ತಾರ ಮಾಡಿಸುವುದಲ್ಲದೆ ಪ್ರತಿ ಒಂದು ಬಾಗಿಲಿನ ಕೆಳಗಿನ ಕಡಿಯೂ, ಬಚ್ಚಲ ರೊಚ್ಚೂ ಬಹುಬೇಗನೆ ಬಹುದೂರಕ್ಕೆ ಸಾಗಿಸುವ ಏರ್ಪಾಡಿರಬೇಕು ಚೆನ್ನಾಗಿ ಮಳೆಗಳು ಬರುವವರೆಗೂ ಚರಂಡಿಗಳನ್ನು ಪ್ರತಿದಿನವೂ ತಪ್ಪದೆ ತೊಳೆಸುತ್ತಿರಬೇಕು ಅಲ್ಲಲ್ಲಿರುವ ಖಾಲೀ ಜಾಗಗಳನ್ನೆಲ್ಲಾ ಪಾರ್ಕು ಮಾಡಿಸಿ ಗಿಡ ಬಳ್ಳಿಗಳಿಂದಲಂಕರಿಸಬೇಕು ಅಲ್ಲಿ ಗಾಡಿಗಳನ್ನು ನಿಲ್ಲಿಸುವುದಕ್ಕಾಗಲಿ, ಎಲ್ಲೆಲ್ಲೂ ಅಡ್ಡಾಡುತ್ತಿರುವ ಪೋಲೀ ದನಗಳು ಗಲೀಜು ಮಾಡುವುದಕ್ಕಾಗಲಿ ಅವಕಾಶ ಕೊಡಕೂಡದು ಪ್ರಯಾಣಿಕರೂ, ದನಗಳನ್ನು ಅವರು ತಪ್ಪುಮಾಡುವವರೂ ಗಾಡಿಗಳನ್ನು ನಿಲ್ಲಿಸಿಕೊಳ್ಳುವುದಕ್ಕೆ ಊರಿಗೆ ಸ್ವಲ್ಪ ದೂರದಲ್ಲಿ ಒಂದು ಬಂಡೀ ತೋಟನ್ನು ಕಟ್ಟಿಸಿಕೊಡಬೇಕು ಇತ್ಯಾದಿ ಮುಖ್ಯ ಮುಖ್ಯ ವಿಷಯಗಳನ್ನು ಇಲ್ಲಿನ ಮ್ಯುನಿಸಿಪಲ್ ಕಮಿಷನರುಗಳೂ ಡೆಪ್ಯುಟಿ ಕಮಿಷನರವರೂ ಕೂಡಲೆ ಚೆನ್ನಾಗಿ ಆಲೋಚಿಸಿ, ಸಾಧ್ಯವಾದವುಗಳನ್ನು ಬೇಗಬೇಗನೆ ನಡೆಸುತ್ತಾ ಬರುವಲ್ಲಿ ಊರಿಗೆ ಕ್ಷೇಮವಾಗುವುದರಲ್ಲಿ ಸಂದೇಹವಿಲ್ಲ

ಜನಹಿತೇಚ್ಛು

[ಈ ಮುಖ್ಯವಾದ ಸ್ಥಿತಿಯನ್ನು ಪ್ರಜಾಪಾಲಕರು ಸಾಧ್ಯವಾದ ಮಟ್ಟಿಗೂ ನಿವಾರಣೆಮಾಡಿಯಾರೆ ಎಂದು ನಿರೀಕ್ಷಿಸುತ್ತೇವೆ —ಎಡಿ.]

ಮೈಸೂರು ಸಿಟಿ ಪ್ರೈಮರಿ ಸ್ಕೂಲುಗಳು

ಅಯ್ಯಾ,

ಮೈಸೂರು ಟೌನ್‌ನಲ್ಲಿರುವ ಕೆಲವು ಪ್ರೈವೇಟ್ ಸ್ಕೂಲುಗಳನ್ನು ಈಗ್ಗೆ ಸುಮಾರು ಇಪ್ಪತ್ತೈದು ವರ್ಷದ ಹಿಂದೆಯೇ ಸಿಟಿ ಮ್ಯುನಿಸಿಪಾಲಿಟಿಯವರು ವಹಿಸಿಕೊಂಡು, ಸದರಿ ಸ್ಕೂಲುಗಳ ಬಡಮಾಸ್ತರುಗಳಿಗೆ ಮಾಹೆಯಾನಾ 1, 3, 6 ರೂಪಾಯಿಯಂತೆ ಗ್ರಾಂಟು ಕೊಡುತ್ತಿದ್ದಾರಷ್ಟೆ ಈಚೆಗೆ ಧಾರಣೆವಾಸಿಗಳು ವರ್ಷೇ ವರ್ಷ ಅಧಿಕವಾಗುತ್ತಲಿರುವುದರಿಂದ ಪಟ್ಟಣವಾಸವಾದ ಈ ಮೈಸೂರಿನಲ್ಲಿ ಯಾವನೊಬ್ಬ ಸಾಮಾನ್ಯ ಗೃಹಸ್ಥನಿಗೂ ದರಿದ್ರಪಕ್ಷ ಹತ್ತು ಹದಿನೈದು ರೂಪಾಯಿಗೆ ಕಡಿಮೆಯಾದರೆ ಸಂಸಾರ ನಡೆಯುವುದೇ ಕಷ್ಟ ಇವರುಗಳಿಗೆ ಮ್ಯುನಿಸಿಪಾಲಿಟಿಯಿಂದ ಹಾಲಿ ಸಲ್ಲುತ್ತಿರುವ ಗ್ರಾಂಟು ದರವೋ ಅಷ್ಟಲ್ಲ ಅದು ಕಾರಣ ಈ ಬಡ ಸ್ಕೂಲ್ ಮಾಸ್ತರುಗಳು ಗ್ರಾಂಟು ರದ್ದಾದ ಲಾಗಾಯಿತು ತಹಲ್ ವರೆಗೂ ತಮ್ಮಗಳ ಗ್ರಾಂಟು ಜಾಸ್ತಿಯಾಗಲಿಲ್ಲವೆಂದು ಯೋಚಿಸುತ್ತಾ, ಆಗಾಗ್ಗೆ ತಮ್ಮ ಇಲಾಖೆಗೂ ಮತ್ತು ಗವರ್ನ್‌ಮೆಂಟಿಗೂ ಅರ್ಜಿ ಮೂಲಕ ಕೃತಪಡಿಸಿಕೊಂಡರು ಈ ವಿಷಯವನ್ನು ಕುರಿತು ಮ್ಯುನಿಸಿಪಾಲಿಟಿಯವರೂ, ಸದರಿ ಸ್ಕೂಲ್‌ಗಳ ಕಮಿಟಿ ಪ್ರೆಸಿಡೆಂಟರವರೂ ಏಕೀಭವಿಸಿ ಗವರ್ನ್‌ಮೆಂಟಿಗೆ ಶಿಫಾರಸು ಮಾಡಿದ್ದರ ಮೇಲೆ ಮ್ಯುನಿಸಿಪಾಲಿಟಿಯವರು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುತ್ತಿದ್ದ ಹಣವನ್ನೆಲ್ಲಾ ಇನ್ನು ಮುಂದೆ ಅಂದರೆ 1912 ನೇ ಜುಲೈ ಲಾಗಾಯಿತು ಪ್ರೈಮರಿ ವಿದ್ಯಾಭ್ಯಾಸಕ್ಕೇನೇ ಉಪಯೋಗಿಸಿಕೊಳ್ಳುವಂತೆ ಆರ್ಡರಾಗಿರುವ ವಿಷಯ ತಮ್ಮ ಪತ್ರಿಕೆಯ ಮೂಲಕವೂ ಸದರೀ ಇಲಾಖೆಯ ಮೂಲಕವೂ ತಿಳಿಯಬರುತ್ತೆ ಈ ಏರ್ಪಾಡಿನಿಂ ಬಹಳ ವರ್ಷಗಳಿಂದಲೂ ಮೊರೆಯಿಡುತ್ತಿದ್ದ ಬಡಮಾಸ್ತರುಗಳ ಕೋರಿಕೆ ಮೇರೆ ಸಹ ಜಮೇಸರಿ ಆದರೆ ಮಾಹೆಯಾನಾ ಕೊಡುವ ಗ್ರಾಂಟಿಗೆ ಬದಲಾಗಿ ವರ್ಷಕ್ಕೊಂದಾವರ್ತಿ ಸ್ಕೂಲ್ ಫಲಿತಾಂಶದ ಮೇರೆಗೆ (ರಿಜಲ್ಟ್ ಗ್ರಾಂಟು) ಸಹಾಯ ದ್ರವ್ಯವನ್ನು ಕೊಡಬಹುದೆಂಬ ಭಿನ್ನಾಭಿಪ್ರಾಯವನ್ನು ಕಮಿಟಿ ಮೆಂಬರುಗಳ ಪೈಕಿ ಯಾರು ಸೂಚಿಸಿದರೋ ಗೊತ್ತಿಲ್ಲ ಯಾವ ಮೆಂಬರು ಈ ಮೇರೆ ಸಲಹೆ ಹೇಳಬಹುದೋ ಅವರು ಪೂರ್ವಾಪರ ಈ ರೀತಿ ಏರ್ಪಾಡಿನಿಂದಾಗುವ ಸಾಧಕ ಬಾಧಕಗಳನ್ನು ಯೋಚಿಸದೆ ದುಡುಕಿದ ವಿಷಯದಲ್ಲಿ ಈ ಬಡಮಾಸ್ತರುಗಳ ಕೊರತೆಯನ್ನು ಅರಿತ ನೋಡಿದರು ಎಷ್ಟು ವ್ಯಥೆ ಪಟ್ಟರೂ ಅಲ್ಪವೇ ಗ್ರಾಂಟು ರದ್ದಾದ ಕಾಲದಲ್ಲಿ ಮ್ಯುನಿಸಿಪಲ್ ಸ್ಕೂಲುಗಳ ಕಮಿಟಿ ಪ್ರೆಸಿಡೆಂಟರಾಗಿದ್ದು ಈಚೆಗೆ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಪದವಿಯನ್ನು ಅಲಂಕರಿಸಿ ಗತಿಸಿದ ಮೆ|| ಜೆ ವಿಯರ್ ಸಾಹೇಬರವರೂ, ಮ್ಯುನಿಸಿಪಲ್ ಸ್ಕೂಲುಗಳ ಇನ್ಸ್‌ಪೆಕ್ಟರಾಗಿದ್ದ ಮೆ|| ಕೃಷ್ಣಮಾಚಾರ್ಯರವರೂ ಈ ರಿಜಲ್ಟ್ ಗ್ರಾಂಟಿನ ವಿಚಾರ ಯೋಚಿಸಿ ಸರಿಬೀಳದ್ದರಿಂದ ಮಾಹೆಯಾನಾ ಗ್ರಾಂಟು ಏರ್ಪಾಡು ಮಾಡಿರುವುದಾಗಿ ಈಗ ತಿಳಿಯಬರುತ್ತೆ ಆದ್ದರಿಂದ ದಯಾಳುವಾದ ಸ್ಕೂಲ್ ಪ್ರೆಸಿಡೆಂಟರವರೂ, ಮ್ಯುನಿಸಿಪಾಲಿಟಿಯವರೂ ಏಕೀಭವಿಸಿ ಈ ಬಡ ಸ್ಕೂಲ್ ಮಾಸ್ತರುಗಳಿಗೆಲ್ಲಾ ಹಾಲಿ ಕೆಲಸದಲ್ಲಿ ನಿಯಮಿತವಾಗಿರುವ ಅವರವರ ಮಾಹೆಯಾನಾ ಗ್ರಾಂಟುಗಳನ್ನು ಜಾಸ್ತಿ ಮಾಡಿಕೊಡಬೇಕಾಗಿ ಬೇಡಿದೇನೆ

ಬಡಮಾಸ್ತರುಗಳ ಹಿತಚಿಂತಕ

ತಾಲ್ಲೂಕು ವರ್ತಮಾನಗಳು

ಸ್ರಿಂಗೇರಿ — ಕಳೆದ ವಾರ ಇಲ್ಲಿ ಒಂದೆರಡು ಹದ ಮಳೆ ಬಂದದ್ದರಿಂದ ಸೊರಗುತ್ತಿದ್ದ ಪೈರಿಗೆ ಸಹಾಯವಾಯಿತು ರೈತರು ಹರ್ಷಮುಖಿಗಳಾಗಿ ಹಲವಾರು ಕೆಲಸಗಳನ್ನು ಪ್ರಾರಂಭಿಸುತ್ತಲಿರುವರು — ಕಳೆದ ತಾ 29 ನೇ ಬುಧವಾರ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರವರು ಇಲ್ಲಿಗೆ ಬಂದಿದ್ದು ಆ ದಿನ ಇಂಗ್ಲಿಷ್ ಸ್ಕೂಲನ್ನೂ, ಮರುದಿನ ಗರಲ್ಸ್ ಸ್ಕೂಲನ್ನೂ ಪರೀಕ್ಷಿಸಿಕೊಂಡು ತೆರಳಿದರು

ಬೀರೂರು. ಕಳೆದ 15-20 ದಿನಗಳಿಂದ ಮಳೆಯ ಸುದ್ದಿಯೇ ಇಲ್ಲ ಆ ಮೊದಲು ಸ್ವಲ್ಪಮಟ್ಟಿಗೆ ಆಗಿತ್ತು ಬಿಸಿಲು ಜಾಸ್ತಿಯಾಗಿದೆ ರೈತರೆಲ್ಲಾ ಮಳೆಯ ನಿರೀಕ್ಷಣೆಯಲ್ಲೇ ಇದ್ದಾರೆ —ಇಲ್ಲಿ ಇದುವರೆಗೂ ರೈಲ್ವೇ ಸ್ಟೇಷನ್ ಮಾಸ್ತರಾಗಿದ್ದ ಮಿ। ವೆಂಕೋಬರಾಯರಿಗೆ ಹೊಸಪೇಟೆಗೆ ವರ್ಗವಾಯಿತು ಇವರು ಪ್ರಯಾಣಿಕರಿಗೂ ಜನಗಳಿಗೂ ಒಳ್ಳೆ ಮಟ್ಟಿಗೆ ಅನುಕೂಲವನ್ನು ಕಲ್ಪಿಸಿಕೊಡುತ್ತಾ ಸಹಕಾರಿಗಳಾಗಿದ್ದರು ಇವರ ಮಿತ್ರಮಂಡಲಿಯವರು ಇವರಿಗೆ ಟೀಪಾರ್ಟಿ ಮುಂತಾದ್ದು ಕೂಡಿ ತಮ್ಮ ಪ್ರೀತಿಯನ್ನು ತೋರ್ಪಡಿಸಿದರು —ಮ್ಯುನಿಸಿಪಾಲಿಟಿಯು ಕಣ್ಣುಮುಚ್ಚಿಗಿದೆ ಕೆಲವು ಬೀದಿಗಳಲ್ಲಿ ಮನೆಗಳ ಬಚ್ಚಲು ನೀರು ಸರಾಗವಾಗಿ ಹರಿದು ಹೋಗಲು ಚರಂಡಿಗಳಿಲ್ಲದಿರುವುದರಿಂದ ಬೀದಿಗಳಲ್ಲಿ ಸಣ್ಣ ಹೊಂಡಗಳಂತೆ ನೀರು ನಿಂತು ತಿರುಗಾಡುವವರಿಗೆ ಬಹಳ ತೊಂದರೆಯಾಗಿದೆ ಇಲಾಖೆಯವರು ಗಮನಿಸಿ ಸರಿಯಾದ ಏರ್ಪಾಡು ಮಾಡುವರೆಂದು ನಂಬುತ್ತೇನೆ —ಗರ್ಲ್ಸ್ ಸ್ಕೂಲ್ ಮುಂತಾದ ಕಟ್ಟಡಗಳನ್ನು ಕಟ್ಟಿಸಿ ಕೊಡುವುದಾಗಿ ವಾಗ್ದಾನ ಮಾಡಿರುವ ಮಹನೀಯರು ಇನ್ನೂ ಪ್ರಾರಂಭಿಸಿಯೇ ಇಲ್ಲ ಆಹಾರ ತೀವ್ರವಾಗಿ ನೆರವೇರುತ್ತಾರೆಂದಾಗಿ ತೋರುತ್ತೇನೆ — ಧಾರಣೆವಾಸಿ ಅಕ್ಕಿ 6-7 ಸೇರಿನಂತೆಯೂ, ರಾಗಿ 16 ಸೇರಿನಂತೆಯೂ ಇದೆ —ಅನಾಥಾಲಯದ ಕಟ್ಟಡವು ಪೂರೈಸುತ್ತಾ ಬಂದಿರುವುದರಿಂದ ಇಷ್ಟರಲ್ಲೇ ಪ್ರಾರಂಭಿಸಲ್ಪಡುವುದೆಂದು ನಂಬುತ್ತೇನೆ

ಕೃಷ್ಣರಾಜಪೇಟೆ ತಾ|| ಸಿಂಧುಗಟ್ಟ.— ಈ ಪ್ರಾಂತ್ಯ 2-3 ಹದ ಮಳೆಯು ಮುಂಗಾರ್ಗೆ ಅನುಕೂಲವಾಗಿ ಆದರೂ ಬಿಸಿಲಿನ ಧಗೆ ಮತ್ತು ಧೂಳಿ ಹೆಚ್ಚಾಗಿದೆ ಧಾರಣೆವಾಸಿಗಳು ಅಧಿಕವಾಗಿರುವವು ಮಳೆಯ ನೀರು ಗ್ರಾಮದ ಸಾರವನ್ನು ಕೆರೆಗೆ ಸೇರಿಸುತ್ತಿರುವುದರಿಂದ ಜನಗಳಿಗೆ ಈಗ ತಿಂಗಳಿಂದಲೂ ಜ್ವರ, ಛಳಿ, ಕೆಮ್ಮು ಮುಂತಾದ ಕಾಯಿಲೆಗಳು ಉಂಟಾಗುತ್ತಿವೆ ಇಲ್ಲಿ ದನಗಳಿಗೆ ಚಪ್ಪೆ ರೋಗವು ಇನ್ನು ನಿಂತಿಲ್ಲ ದನಗಳಿಗೆ ಚಪ್ಪೆ ರೋಗವು ಕೇವಲ ತೊಂದರೆಪಡಿಸುತ್ತಿದ್ದದ್ದು ಕಪ್ಪಿದರೂ ಮುಂಗಾರು ಬೋಳದ ದೆಸೆಯಿಂದ ಸಾಯುವುದು ನಿಂತಿಲ್ಲ —ಇಲ್ಲಿ ಯೂನಿಯನ್ ಬಂದೋಬಸ್ತು ಆದ್ದರಿಂದ ಗ್ರಾಮಪಂಚಾಯಿತಿ ಕೆಲಸಕ್ಕೆ ಮೂರು ಜನ ಧುರೀಣರುಗಳು ನೇಮಕವಾಗಿ ತಿಂಗಳಿಂದಲೂ ತೃಪ್ತಿಕರವಾಗಿ ಪಂಚಾಯಿತಿ ಆಗುತ್ತಿದೆ ಆದರೆ ಜನರ ಮೇಲ್ವಿಚಾರಣೆಯು ಗ್ರಾಮಪಟೇಲರಿಗೆ ವಹಿಸಿರುವುದರಿಂದ ಈ ಗೊಬ್ಬರದ ಉತ್ಪತ್ತಿಯು ಹೆಚ್ಚಾಗುವಿಕೆಗೆ ಕಾರಣವಾಗಿದೆ ಕರುಣದಲ್ಲಿ ಮೆಂಬರುಗಳು ಅನಾದರಣೆಯಾಗಿದ್ದರೂ ಮುಂದಾದರೂ ವೈಸ್ ಪ್ರೆಸಿಡೆಂಟರ ದೃಷ್ಟಿಗೆ ಸಂಪೂರ್ಣ ತಿರಸ್ಕರಿಸಿಯಾರೆಂದು ನಂಬುತ್ತೇನೆ ಊರಿನ ಈಶಾನ್ಯಭಾಗದಲ್ಲಿರುವ ಊರ್ಕೆಯ ಕೊಳವು ಜನಗಳಿಗೆ ಅನುಪಯೋಗವಾಗಿರುವುದರಿಂದ ರೈತರು ಜಾಲಿನ ಗಿಡ, ಬಿದಿರು, ವಾಕ ಮುಂತಾದವುಗಳನ್ನು ಕೊಳೆಯಿಸಲು ಕಾರಣವಾಗಿ ಕೆಟ್ಟವಾಯುವು ಉಂಟಾಗಿ ರೋಗಕ್ಕೆ ಅವಕಾಶವಾಗಿರುತ್ತೆ ನಮ್ಮ ಅಮಲ್ದಾರರು ಈ ಪ್ರಾಂತ್ಯ ಪ್ರವಾಸಮಾಡಿದಾಗ್ಗೆ ಪರಾಂಬರಿಸಿ, ಈ ಕೊಳವನ್ನು ಮುಚ್ಚಿಸಿ ಇದರ ಸಮೀಪ ಗೊಬ್ಬರವನ್ನು ಹಾಕದಂತೆ ನಿರೋಧಪಡಿಸುವುದರ ಮೂಲಕ ಪ್ರಜಾಹಿತಚಿಂತನೆಗೆ ಭಾಜನರಾಗಬೇಕಾಗಿ ಬೇಡುತ್ತೇನೆ

ಆನೇಕಲ್ ತಾ|| ಮೂಮ್ಮಸಂದ್ರ — ಈ ಪ್ರಾಂತ್ಯ ಮಳೆ ಚೆನ್ನಾಗಿ ಬೀಳದೆ ಸಾಕೆಯು ಸಹಿಸಲಸಾಧ್ಯವಾಗಿದೆ ಸಿಹಿನೀರು ಭಾವಿಯಲ್ಲಿ ನೀರು ಮುಗಿಯುತ್ತಾ ಬಂದಿದೆ—ಇಲ್ಲಿ ಸುಮಾರು 9-10 ವರ್ಷಗಳಿಂದಲೂ ಹೊಲೆಯರು ಊರಿನ ಹತ್ತಿರ ಇರುವ ಹೊಲಗೇರಿಯಲ್ಲಿ ಸಂತೆ ದಿನ ಸಂಜೆಗೆ ಎದುರಾಗಿರುವ ಮತ್ತು ಹತ್ತಿರ ಇರುವ ಒಂದು ಸ್ಥಳದಲ್ಲಿ ಸರಿಯಾಗಿ ಮರೆ ಹಾಕದೆ ಗೋಹತ್ಯವಮಾಡುತ್ತಿದ್ದರು ಆದರೆ ಈ ಊರಿನಲ್ಲಿ ಕಟ್ಟುತ್ತಿರುವ ಮಿಷನ್ ಪಾದರಿಗಳಿಗೆ ಅಸ್ತಿಭಾರವನ್ನು ಹಾಕುವದಕ್ಕಾಗಿ ನಮ್ಮ ಅಮಲ್ದಾರ್ ಸ್ವಾಮಿಯವರು ದಯಮಾಡಿಸಿದ್ದಾಗ್ಗೆ ಸದರಿ ವಿಷಯವನ್ನು ಕನಿಷ್ಠ ಮಾಡಿ ದೂರವಾಗಿರುವ ಮತ್ತು ಮರೆಯಾಗಿರುವ ಸ್ಥಳದಲ್ಲಿ ಸದರಿ ಕೆಲಸವನ್ನು ಮಾಡಿಕೊಳ್ಳಬೇಕೆಂದೂ, ತಪ್ಪಿದಲ್ಲಿ ಪ್ರಾಸಿಕ್ಯೂಷನ್ ಮಾಡುವುದಾಗಿಯೂ ಆರ್ಡರು ಮಾಡಿದರು ಅಂದಿನಿಂದ ಈ ಕೃತ್ಯವು ಅಲ್ಲಿ ನಡೆಯದೆ ದೂರ ಪ್ರದೇಶದಲ್ಲಿ ನಡೆಯುವದಾಗಿದೆ ಇದಕ್ಕಾಗಿ ನಮ್ಮ ಅಮಲ್ದಾರ್ ಸ್ವಾಮಿಯವರನ್ನು ಎಷ್ಟು ಕೊಂಡಾಡಿದರೂ ಸಾಲದು — ಇಲ್ಲಿ ಸಂತೆ ಕೂಡುವ ಸ್ಥಳದಲ್ಲಿ ನೆರಳಾಗಿ ಕೆಲವು ಅರಳೀ ಮರಗಳು ಇವೆ ಮೆ|| ಕುಂಬಾರ ರಂಗಪ್ಪನವರು ಒಂದು ದೊಡ್ಡ ಜಗಲಿಯನ್ನು ಮರಗಳ ಸುತ್ತಲೂ ಹಾಕಿಸಿದ್ದಾರೆ ಇದರಿಂದ ಸಂತೆಯ ಜನಗಳಿಗೆ ಕೂಡಲು ಅನುಕೂಲವಾಗಿದೆ — ಈ ಗ್ರಾಮದ ರೋಡುಗಳಲ್ಲಿ ಅಲ್ಲಲ್ಲಿ ರಸ್ತೆಗಳ ರಿಪೇರಿ ಬಗ್ಗೆ ಮಣ್ಣಿನ ಗುಡ್ಡೆಗಳು ಹಾಕಿ ಎರಡು ತಿಂಗಳಾದಾಗ್ಯೂ ಇನ್ನೂ ಅದನ್ನು ಹರಡಲಿಲ್ಲ. ಇದರಿಂದ ಭಂಡಿಗಳು ತಿರುಗುವದಕ್ಕೆ ತುಂಬಾ ತೊಂದರೆಯಾಗಿದೆ ಆದ್ದರಿಂದ ಸರ್ಕಾರದವರು ಕ್ಷಿಪ್ರದಲ್ಲೇ ರಸ್ತೆ ಸರಿಮಾಡಿಸಿ ಬಂಡಿಗಳು ತಿರುಗುವದಕ್ಕೆ ಸರಿಯಾಗಿ ಖುಲಾಸ್ ಮಾಡಿಸಿ ಕೊಡುವರೆಂದು ಪ್ರಾರ್ಥಿಸುತ್ತೇನೆ.

ಹಾಸನ.—ಕಳೆದ ಶುಕ್ರವಾರ (ಮೇ ತಾ 31) ವರೆಗೆ ಈ ಊರಿನಲ್ಲಿ 21 ಕಾಲರಾ ಕೇಸುಗಳಾಗಿ 9 ಮಂದಿ ಸತ್ತರೆಂದು ತಿಳಿದು ಬಂದಿದೆ. ಉಳಿದವರಲ್ಲಿ ಕೆಲವರು ವಾಸಿಯಾಗುತ್ತಾ, ಇನ್ನೂ ಅನೇಕರು ನರಳುತ್ತಾ ಇದ್ದಾರೆ. ಶುಕ್ರವಾರ ಒಂದೇ ದಿನ 7 ಮಂದಿಗೆ ರೋಗ ತಗಲಿತಂತೆ ಸರ್ಕಾರದವರು ತಮ್ಮಿಂದಾದ ಮಟ್ಟಿಗೆ ಪ್ರಯತ್ನಮಾಡಿ ತುಲಸೀ ತೋಟದ ಕೆಳಭಾಗದಲ್ಲಿ ಹೊಸದಾಗಿ ನಾಲ್ಕು ಭಾವಿಗಳನ್ನು ತೆಗಿಸಿದ್ದಾರೆ ಆದರೆ ಇದರ ನೀರು ಬೇರೆ ಬೇರೆ ಭಾಗಗಳಲ್ಲಿರುವ ಸಕಲರಿಗೂ ಅನುಕೂಲಿಸುವದಿಲ್ಲ ಪ್ಲೇಗ್ ಉಪದ್ರವು ಅಜೂಬಾಜು ಗ್ರಾಮಗಳಲ್ಲಿ ಇನ್ನೂ ಇರುವುದಾಗಿ ತಿಳಿಯಬರುತ್ತದೆ. ಮತ್ತು ಈ ಊರಿನ ಉತ್ತರ ಭಾಗದಲ್ಲಿಯೇ ಒಂದು ಮನೆಯಲ್ಲಿ ಇಲಿಗಳು ಬಿದ್ದದ್ದರಿಂದ ಅದನ್ನು ಬಿಟ್ಟಿದ್ದಾರೆ —ಪೋಸ್ಟ್ ಆಫೀಸಿನಲ್ಲಿ ಉದ್ಯೋಗ ಮಾಡುತ್ತಿದ್ದ ಮೆ|| ಪಿಂಟೋ ಎಂಬುವರು ಕಳೆದ ಬುಧವಾರ ಬೆಳಗ್ಗೆ ಆಫೀಸಿಗೆ ಹೋಗಿ ಕೆಲಸ ಮಾಡುತ್ತಿರುವಾಗಲೇ ಆಯಾಸಪಟ್ಟಂತೆ ತೋರಿಬಂದದ್ದರಿಂದ ಮನೆಗೆ ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡು ಕಾಫಿ ಕುಡಿಯುತ್ತಾ ಹಾಗೇ ಪ್ರಾಣಬಿಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಮಂಗಳೂರಿನವರು ಸಜ್ಜನರೂ ಆಗಿದ್ದರು — ಕಳೆದ ಶನಿವಾರ ರಾತ್ರಿ ಆಕಸ್ಮಿಕವಾಗಿ ಬಿರುಗಾಳಿಯೂ ಸಿಂಚೂ ಹುಟ್ಟಿ ಮಳೆ ಆರಂಭಿಸಿ ತಕ್ಕಮಟ್ಟಿಗೆ ಚೆನ್ನಾಗಿ ಸುರಿಯಿತು ಬಾಡಿ ಬತ್ತಿಹೋಗಿದ್ದ ಪೈರುಗಳಿಗೆ ಬಹಳ ಒಳ್ಳೇದಾಗಿ ಚೇತರಿಸಿಕೊಳ್ಳುತ್ತಲಿವೆ ಹೀಗೆಯೇ ಇನ್ನೂ ಮಳೆ ಬಂದು ಕಾಲರಾ ಉಪದ್ರವನ್ನು ಸಂಪೂರ್ಣವಾಗಿ ಅಡಗಿಸುವದೆಂದು ನಿರೀಕ್ಷಿಸಲ್ಪಟ್ಟಿದೆ

ಒಗಲೂರು — ಈ ತಾಲ್ಲೂಕಿನಲ್ಲಿ ಇದುವರೆಗೂ ಮಳೆ ಇಲ್ಲದೆ ವ್ಯವಸಾಯಗಾರರು ವ್ಯಸನಗ್ರಸ್ತರಾಗಿದ್ದಾರೆ.—ಬಿಸಿಲಿನ ತಾಪ ಹೆಚ್ಚಾಗಿಯೂ, ಕಾಲರಾ ರೋಗ ಜೋರಾಗಿಯೂ ಇರುತ್ತೆ ಸೊಕ್ಕೆ, ಯರ್ಲಕಟ್ಟೆ, ಬಂಟ್ನಹಳ್ಳಿ, ಸಿದ್ದಯ್ಯನಕೋಟೆ, ಉರ್ಲಕಟ್ಟೆ, ಬದರಕೆರೆ, ದೊಣೆಹಳ್ಳಿ ಮುಂತಾದ ಗ್ರಾಮಗಳಲ್ಲಿ ಕಾಲರಾ ಉಪದ್ರ ಜಾಸ್ತಿಯಾಗಿರುತ್ತೆ ಮರಣಗಳು ವಿಶೇಷವಾಗಿ ಸಂಭವಿಸಿವೆ ಈ ರೋಗವು ಮನುಷ್ಯನ ದೇಹಕ್ಕೆ ಸೇರಿ ವಾಂತಿಭೇದಿ ಆಗುತ್ತಾ ಊರಿಂದೂರಿಗೆ ಪ್ರಸರಿಸಿ ನೀರಿನಲ್ಲಿ ಸೇರಿ ಈ ಮೂಲಕ ಮನುಷ್ಯರ ಹೊಟ್ಟೆಗೆ ಹೋಗಿ ಮನುಷ್ಯರನ್ನು ಕೊಲ್ಲುತ್ತಿದೆ ಎಂತಲೂ, ನೀರನ್ನು ಚೆನ್ನಾಗಿ ಕಾಯಿಸಿ ಪಾನ ಮಾಡಿದರೆ ರೋಗವು ದೇಹಕ್ಕೆ ಅಂಟಲಾರದೆಂತಲೂ ಇಂಗ್ಲಿಷ್ ವೈದ್ಯರು ಹೇಳುತ್ತಾರೆ ಇದು ಸಹಜವಾಗಿಯೇ ಇರುತ್ತೆ ಒಂದು ಊರಲ್ಲಿ ಈ ರೋಗವು ಕಾಣಿಸಿಕೊಂಡರೆ ಒಡನೆ ಆ ಊರಿನಲ್ಲಿ ಭಾವಿಗೆ ಡಾಕ್ಟರವರು ಔಷಧಿ ಹಾಕಿ ನೀರಿನಲ್ಲಿರುವ ವಿಷಕ್ರಿಮಿಗಳನ್ನು ನಾಶಪಡಿಸುತ್ತಾರೆ ಪುನಹಾ ಈ ರೋಗವು ಆ ಊರಲ್ಲಿ ತಲೆಹಾಕುವದೇ ಇಲ್ಲ ಇದು ಅನುಭವಕ್ಕೆ ಬಂದ ವಿಷಯವಾಗಿದೆ ಈ ಸಾರಿ ಈ ತಾಲ್ಲೂಕಿನ ಗ್ರಾಮಗಳಲ್ಲಿ ಈ ರೋಗ ಬಹಳ ದಿವಸದಿಂದ ನಿಂತು ವಿಶೇಷ ಮರಣಗಳನ್ನುಂಟುಮಾಡಿರುತ್ತೆ ಪ್ರಾರಂಭದಲ್ಲಿ ಡಾಕ್ಟರುಗಳು ರೋಗ ಪರಿಹಾರಕ್ಕೆ ವಿಶೇಷ ಶ್ರದ್ಧೆಯನ್ನು ವಹಿಸಿದಂತೆ ಕಾಣಲಿಲ್ಲ ರೈತಾಪಿ ಪ್ರಜೆಗಳು ನಾಶವಾಗುತ್ತಿರುವದನ್ನು ನೋಡಿ ದಾವಣಗೆರೆ ಸಬ್ ಡಿವಿಜನ್ ಸಾಹೇಬರವರೂ, ಅಮಲ್ದಾರರವರೂ ಗ್ರಾಮಗಳಲ್ಲೆಲ್ಲಾ ಸಂಚಾರಮಾಡಿ, ರೋಗ ಪರಿಹಾರಕ್ಕೆ ತಕ್ಕ ಏರ್ಪಾಡು ಮಾಡಿದ್ದಂತೆ ತಿಳಿಯುತ್ತದೆ ಕಾಲರಾ ಡ್ಯೂಟಿಗಾಗಿ ಇಬ್ಬರು ಡಾಕ್ಟರುಗಳು ನೇಮಕವಾಗಿದ್ದಾರೆ ಇವರು ಶ್ರಮಸಹಿಷ್ಣುಗಳಾಗಿ ಕನಿಕರದಿಂದ ಜಾಗ್ರತೆ ಈ ರೋಗವನ್ನು ನಿರ್ಮೂಲ ಮಾಡುತ್ತಾರೆಂದು ನಂಬಿದೆ.

ಮಳವಳ್ಳಿ.— ಈ ಊರಿನಲ್ಲಿ ಈಗ್ಗೆ ಸುಮಾರು ಒಂದೂವರೆ ತಿಂಗಳ ಹಿಂದೆ ಕುಡಿಯುವ ನೀರಿಗೂ ಸಹ ವಿಪರೀತ ಶ್ರಮವಾಗಿತ್ತು ದೈವಕೃಪೆಯಿಂದ ಈಚೆಗೆ ಕುಡಿಯುವ ನೀರಿಗೆ ಸ್ವಲ್ಪ ಅನುಕೂಲವಾಗಿದೆ ಮುಂಗಾರು ಮಳೆ ಸರಿಯಾಗಿ ನಡೆದಿಲ್ಲ —ಕಳೆದ ತಿಂಗಳು 15 ನೇ ತಾ ಸಾಯಂಕಾಲ ಸು|| 5 ಗಂಟೆ ಸಮಯದಲ್ಲಿ ಈ ಊರಿನ ದೊಡ್ಡ ಹೊಲಗೇರಿ ಹೊಲೇರಿಗೂ, ಮಾದಿಗರಿಗೂ ಸಹ ಪಾನಭೂಮಿಯಲ್ಲಿ ಉಂಟಾದ ಜಗಳದ ಕಾರಣದಿಂದ ಪೇಟೆಯ ಬಳಿ ಮೈಸೂರು ಬೆಂಗಳೂರು ಟ್ರೋಡಿನಲ್ಲಿ ಒಂದು ದೊಂಬಿ ಕಲಹವಾಯಿತು ಈ ದೊಂಬಿಯಲ್ಲಿ ಕಲ್ಲುಮಳೆ ಬಹಳವಾಗಿ ಸುರಿಯುತ್ತಲಿದ್ದ ದೊಣ್ಣೆಗಳ ಏಟುಗಳ ಸದ್ದು ತುಂಬಾ ಕೇಳಬರುತ್ತಿತ್ತು ಈ ದೊಂಬಿಯಲ್ಲಿ ಸುಮಾರು 100-500 ಜನಗಳ ವರೆಗೂ ಇದ್ದರು ಇಂಥಾ ಗಲಾಟೆಯಲ್ಲಿ ಈ ಊರಿನ ಕಸಬಾ ದಫೇದಾರ್ ವೆಂಕಟದಾಸಪ್ಪನವರು ಇಬ್ಬರು ಕಾನ್‌ಸ್ಟೇಬಲ್‌ಗಳ ಅಲ್ಪ ಸಹಾಯದಿಂದ ತಮ್ಮ ಪ್ರಾಣದ ಮೇಲೂ ಆಸೆಯಿಡದೆ ದೊಂಬಿಯಲ್ಲಿ ನುಗ್ಗಿ ಎಲ್ಲರನ್ನೂ ಚದರಿಸಿದರು. ಆ ಸಮಯದಲ್ಲಿ ಕಲ್ಲುಏಟುಗಳಿಂದ ಸದರಿ ದಫೇದಾರರಿಗೆ ತುಂಬಾ ಅಪಾಯವಾಗಬಹುದೆಂದು ನೋಡುತ್ತಿದ್ದ ಜನಗಳು ನಂಬಿದ್ದರು ಆದರೆ ಹಾಗೇನೂ ಆಗಲಿಲ್ಲ. ಗಲಾಟೆ ನಡೆದು ಬಂದ ನಂತರ ರಜದ ಮೇಲೆ ಹೋಗಿದ್ದು ಆಗತಾನೇ ಬಂದ ಇನ್ಸ್‌ಪೆಕ್ಟರವರೂ, ಕಸಬಾ ಜಮಾದಾರ್ರೂ ಆ ಸ್ಥಳಕ್ಕೆ ಬಂದು ವಿಚಾರ ಮಾಡುತ್ತಿದ್ದರಲ್ಲದೆ ಸರ್ಕಾರಿ ರೂಲ್ಸ್ ಸಹ ಜಾರೀ ಮಾಡುವುದರಲ್ಲಿದ್ದರು ಇಂಥಾ ಸಮಯದಲ್ಲಿ ಸಾಹಸ ಮಾಡಿದ ದಫೇದಾರ್ರಿಗೆ ಸರ್ಕಾರದವರು ತಕ್ಕ ಪ್ರೋತ್ಸಾಹ ಕೊಡುವರೆಂದು ನಂಬಿದೆ —ಈ ತಾಲ್ಲೂಕು ಗಾಜನೂರು ಗ್ರಾಮದಲ್ಲಿ ಸುಮಾರು ಈಗ್ಗೆ 5-6 ತಿಂಗಳ ಹಿಂದೆ ನಡೆದ ಒಂದು ಖೂನಿಮೊಕದ್ದಮೆಯು ಈಗ ವಿಚಾರಣೆಗೆ ಬಂದಿದೆ ಎಂದೂ, ಇದುವರೆಗೆ ತಾತ್ಸಾರ ಮಾಡಿದ್ದರಿಂದ ನಿಜವಾದ ಇಂಥಾ ನ್ಯಾಯವು ಕೆಟ್ಟುಹೋಗಬಹುದೆಂದೂ ಕೆಲವರು ಹೇಳುತ್ತಿದ್ದಾರೆ —ತಾ 13 ನೇ ರಾತ್ರಿ

ಈ ಊರಿನ ಕೋಟಿ ಕೃಷ್ಣಭಟ್ಟರ ವೆಂಕಟರಾಮಭಟ್ಟರ ಮನೆಯಲ್ಲಿ ಸುಮಾರು 1,000 ರೂಪಾಯಿ ಬಾಳುವ ಒಡವೆ ಮತ್ತು ಬಟ್ಟೆಗಳು ಕಳುವಾಯಿತು ಪೋಲೀಸಿನವರು ಪತ್ತೆ ಕರರೂದಿನಲ್ಲಿಯೇ ಇದಾರೆ

ದೇವನಹಳ್ಳಿ —ಈ ಊರಿನ ಸೀನೀರಿನ ಕೆರೆ ಬಹಳ ...ರ್ಗಡು ಬಹು ದಿನಗಳಿಂದಲೂ ಇದರಲ್ಲಿ ನಾನಾ ಗಿಡಗಳು ಬೆಳೆದು, ಈ ಸ್ವಲ್ಪ ಕೆರೆ ಅಂಗಳದಲ್ಲಿ ಹುಲ್ಲುಗಾವಲು ಹರಾಜಾಗಿ, ಜಾನುವಾರಗಳನ್ನು ಇದರಲ್ಲಿ ಮೇಯುವದಕ್ಕೆ ಬಿಡುವದರಿಂದ ಸಗಣಿ, ಗಂಜಲ ಮುಂತಾದ ರೊಚ್ಚು ನೀರನ್ನು ಕೆಡಿಸಿ ಊರಿನಲ್ಲಿ ಜನಗಳಿಗೆಲ್ಲಾ ಈಗ ಕಾಯಿಲೆ ಉಂಟುಮಾಡಿದೆ ಈ ಕೆರೆಯೇ ಈ ಗ್ರಾಮದ ಜನಗಳಿಗೆ ಪ್ರಾಣಾಧಾರವಾದ್ದರಿಂದ ಪ್ರಜೆಗಳ ಆರೋಗ್ಯವನ್ನು ಕಾಪಾಡಲು ಸರ್ಕಾರದವರು ಇದನ್ನು ಶುಚಿಯಾಗಿ ಇಡುವ ಏರ್ಪಾಟು ಮಾಡಬೇಕಾದದ್ದು ಅತ್ಯವಶ್ಯಕ ಈಚೆಗೆ ಒಂದೆರಡಾವರ್ತಿ ಒಳ್ಳೇ ಮಳೆ ಬಿದ್ದದ್ದರಿಂದ ಜನಗಳು ಗೆಲುವಾಗಿರುವರು —ಈ ಊರಿನ ಎ ವಿ ಸ್ಕೂಲ್ ರಿಪೇರಿ ಆಗಿ ಸುಮಾರು ವರ್ಷವಾಯಿತು ಈ ಮಧ್ಯೆ ಪ್ಲೇಗ್ ಗಲಾಟೆಗಾಗಿ 4 ೫ ತಿಂಗಳು ಸ್ಕೂಲ್ ಮುಚ್ಚಿತ್ತು ಈಚೆಗೆ ಬಿದ್ದ ಮಳೆ ನೀರು ಯಾವತ್ತು ಕ್ಲಾಸುಗಳಲ್ಲಿಯೇ ಭರ್ತಿಯಾಗಿ ಚಿಕ್ಕ ತರಗತಿಯ ಮಕ್ಕಳು ಕೂಡುವದಕ್ಕೆ ಸಹಾ ಸ್ಥಳವಿಲ್ಲದೆ ಒದ್ದೆ ನೆಲದ ಮೇಲೆ ಕೂತು ಕಾಯಿಲೆ ತಂದುಕೊಳ್ಳಬೇಕಾಗಿದೆ ನೆಲದ ಗಾರೆ ವಿಚಾರ ಹೇಳಬೇಕಾದ್ದೇನು! ಅದರ ಗುರುತೇ ಇಲ್ಲ ಭಾರಿ ಹಣದಿಂದ ರಿಪೇರಿ ಆದ ಸ್ಕೂಲು 7 8 ತಿಂಗಳಲ್ಲೇ ಇಷ್ಟು ಹೀನಸ್ಥಿತಿಗೆ ಬರಬೇಕಾದರೆ ಈ ಕಾಮಗಾರಿಯ ವಿಚಕ್ಷಣೆಯನ್ನು ಏನೆಂದು ಹೇಳಬಹುದು?—ಕಳೆದ 31 ನೇ ತಾ ಶುಕ್ರವಾರ ಇದೇ ಸ್ಕೂಲಿನಲ್ಲಿ ಪ್ರಾತಃಕಾಲ 7 ರಿಂದ 10 ಘಂಟೆ ವರೆಗೆ ಹೆಡ್‌ಮಾಸ್ಟರು ಪಾಠವನ್ನು ಆಡಿಸಿದ ಹಾಗೂ, ದುಡ್ಡು ಕೊಡದ ವಿದ್ಯಾರ್ಥಿಗಳನ್ನು ಸೇರಿಸಲಿಲ್ಲವೆಂದೂ ತಿಳಿದು ಬರುತ್ತೆ ಕ್ಲಾಸ್ ಟೈಂನಲ್ಲಿ ಈ ರೀತಿ ಆಟಕ್ಕೆ ಅವಕಾಶ ಕೊಟ್ಟದ್ದೂ, ದುಡ್ಡು ಕೊಡಬೇಕೆಂತ ಕಡ್ಡಾಯಮಾಡಿದ್ದೂ, ಕೊಡದವರನ್ನು ಸ್ಕೂಲಿನಿಂದ ಆಚೆ ಕಳುಹಿಸಿದ್ದೂ (ಇದು ರಜಾದಿನವಲ್ಲವಾದ್ದರಿಂದ) ಇಂಥಾ ಮನಸ್ಸೀ ಆಡಳಿತಕ್ಕೆ ಇವರು ಯಾವ ಕಾರಣಕ್ಕಾಗಿ ಸ್ಕೂಲ್ ರೂಲಸಿನಿಂದ ವಿನಾಯಿಸಲ್ಪಟ್ಟಿರುತ್ತಾರೆಂಬದು ಇಲಾಖಾ ಅಧಿಕಾರಿಗಳ ನೋಟೀಸಿಗೆ ಬರತಕ್ಕ ಅಂಶವಾಗಿದೆ

ಟಿ. ನರಸೀಪುರ —ಇಲ್ಲಿನ ಗೌ॥ ಎ ವಿ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮೆ॥ ಆರ್ ರಾಮಸ್ವಾಮಯ್ಯಂಗಾರ್ಯರು ಹುಣಸೂರು ಗೌ॥ ಎ ವಿ ಸ್ಕೂಲಿಗೆ ಹೆಡ್ ಮಾಸ್ಟರಾಗಿ ವರ್ಗಾಯಿಸಲ್ಪಟ್ಟರು ಇವರು ಇದೇ ಸ್ಥಳದವರಾಗಿ, ಇದೇ ಸ್ಕೂಲಿನಲ್ಲಿ ಬಹಳ ಕಾಲ ವಿದ್ಯಾರ್ಥಿಗಳಾಗಿದ್ದು, ಐದು ವರುಷಗಳಿಂದ ಈ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು ಸ್ಕೂಲನ್ನು ಅಭಿವೃದ್ಧಿಗೆ ತರಬೇಕೆಂಬುದರಲ್ಲಿ ಇವರು ಪಟ್ಟ ಸಾಹಸವನ್ನು ವರ್ಣಿಸಲು ಅಸಾಧ್ಯವಾಗಿದೆ ವಿರಾಮ ಕಾಲವನ್ನು ಇವರು ಸ್ಕೂಲಿನ ಕ್ಷೇಮಚಿಂತನೆಗೆ ವಿನಿಯೋಗಿಸುತ್ತಿದ್ದರು ಇವರ ಕಾಲದಲ್ಲಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಸಂಖ್ಯೆ ಹೆಚ್ಚಾದುದಲ್ಲದೆ ಸ್ಕೂಲು ಬಹಳ ಮಟ್ಟಿಗೆ ಉಚ್ಛ್ರಾಯಸ್ಥಿತಿಗೆ ತರಲ್ಪಟ್ಟಿತು ಈಗಿನ ಮತ್ತು ಹಿಂದಿನ ವಿದ್ಯಾರ್ಥಿಗಳು ಸೇರಿ ಅವರ ವಿಷಯದಲ್ಲಿ ತಮಗಿರುವ ಮರ್ಯಾದೆಯನ್ನೂ ಕೃತಜ್ಞತೆಯನ್ನೂ ತೋರಿಸುವದಕ್ಕಾಗಿ ಮೇ ತಾ 25 ರಲ್ಲಿ ಊರಿನಲ್ಲಿರುವ ಅಧಿಕಾರಿಗಳು, ಸಾಹುಕಾರರೇ ಮೊದಲಾದ ದೊಡ್ಡ ಮನುಷ್ಯರನ್ನು ಅಲಂಕರಿಸಿದ್ದ ಸ್ಕೂಲ್ ಹಾಲಿನಲ್ಲಿ ಸಾಯಂಕಾಲ ಸಭೆ ಸೇರಿಸಿ, ಮಂಗಳ ವಾದ್ಯಗಳೊಡನೆ ಹೆಡ್ ಮಾಸ್ಟರನ್ನು ಸಭೆಗೆ ಕರತಂದರು ಸಬ್ ರಿಜಿಸ್ಟ್ರಾರ್ ಮೆ॥ ಎಂ ನರಸಿಂಹಯ್ಯಂಗಾರ್, ಬಿ ಎ ಯವರು ಅಗ್ರಾಸನವನ್ನು ವಹಿಸಿದರು ಮೆ॥ ಟಿ ನಾರಾಯಣರಾಯರ ಯಕ್ಷಿಣಿಯೂ, ಮೆ॥ ಎಂ ಪಿ ಸುಬ್ಬಣ್ಣನವರ ಪಿಟೀಲು ವಾದ್ಯವೂ ಆಹ್ಲಾದಕರವಾಗಿದ್ದವು ಬಳಿಕ ಮೆ॥ ಶ್ರೀಕಂಠಶಾಸ್ತ್ರಿಗಳು ಹೆಡ್ ಮಾಸ್ಟರ ಗುಣಕಥನವನ್ನು ಮಾಡಿದರು ಹೆಡ್ ಮಾಸ್ಟರವರು ತಮಗೆ ವಿದ್ಯಾರ್ಥಿಗಳು ಮಾಡಿದ ಮರ್ಯಾದೆಗೂ ಊರಿನವರ ಅಭಿಮಾನಕ್ಕೂ ತಾವು ಬಹಳ ಆನಂದಪಡುವ ವಿಷಯವನ್ನು ಸೂಚಿಸಿ ತಮ್ಮ ವಂದನೆಯನ್ನು ಸಮರ್ಪಿಸಿದರು ಅಗ್ರಾಸನಾಧಿಪತಿಗಳು ಮೆ॥ ರಾಮಸ್ವಾಮಯ್ಯಂಗಾರ್ಯರ ವಿಷಯವಾಗಿಯೂ, ಇಲ್ಲಿಗೆ ಹೆಡ್ ಮಾಸ್ಟರಾಗಿ ಬಂದಿರುವ ಮೆ॥ ಕೃಷ್ಣರಾಯರ ವಿಷಯವಾಗಿಯೂ ಸಭಾರಂಜನೆಯಾಗುವಂತೆ ಕೆಲವು ವಿಷಯಗಳನ್ನು ತಿಳಿಸಿದರು ಶ್ರೀಯಃಪ್ರಾರ್ಥನೆಯಿಂದ ಸಭೆ ಮುಕ್ತಾಯವಾಯಿತು ಇಲ್ಲಿಯ ವಯೋವೃದ್ಧರು ಇಂಥಾ ಸಂತೋಷ ಕೂಟ ಈ ಊರಿನಲ್ಲಿ ನಡೆದದ್ದು ಇದೇ ಪ್ರಥಮವೆಂದೂ, ಇದಕ್ಕೆ ಹೆಡ್ ಮಾಸ್ಟರ ಸುಗುಣವೇ ಕಾರಣವೆಂದೂ ಹೇಳುತ್ತಾರೆ

ಶ್ರೀರಂಗಪಟ್ಟಣ —ಕಳೆದ ಮೇ ಮಾಹೆ ತಾ 22 ನೇ ಬುಧವಾರ ಮಧ್ಯಾಹ್ನ ಆಕಸ್ಮಾತ್ತಾಗಿಯೂ, ಆಶ್ಚರ್ಯಯುಕ್ತವಾಗಿ ಒಂದು ಮೃತಪಟ್ಟ ಹೆಣದ ವಿಚಾರವು ಜನಜನಿತವಾಗಿ, ಸಾಯಂಕಾಲ ಪೋಲೀಸಿನವರ ಹಾಗೂ ಇನ್ಸ್‌ಪೆಕ್ಟರವರ ನೋಟೀಸಿಗೆ ಬಂದ ಕೂಡಲೆ ಇನ್ಸ್‌ಪೆಕ್ಟರ್ ಮೆ॥ ಎಂ ಡಿ ಕೃಷ್ಣಪ್ಪನವರು ಪೊ ಎನವರೊಡನೆ ಆಪವಿಯಿಷಿ ಒಗ್ಗೆ ಹೋಗಿ ನೋಡುವಲ್ಲಿ, ಇಲ್ಲಿನ ಸಂಗಾಮದ್ದಿ ಕಟ್ಟೆಯ ಪಕ್ಕದಲ್ಲಿ ಸುಮಾರು 21—22 ಪ್ರಾಯದ ಯುವತಿಯ ಗಂಪ್ತವಾಗಿ ಬಿದ್ದಿದ್ದಳು ಬಹುತರವಾಗಿ ವಿಚಾರಿಸಲಾಗಿ ಆವಳು ಸ್ಥಳೀಕಳಾಗಿ ತಿಳಿಯಲಿಲ್ಲ ಇನ್ಸ್‌ಪೆಕ್ಟರವರು ಪೋಲೀಸ್ ಪಹರೆ ನಿಲ್ಲಿಸಿ ಮೈಸೂರು ಬೆಂಗಳೂರು ಆದಿ ರಸ್ತೆಯಲ್ಲಿ ತಿರುಗಾಡುವ ಎಲ್ಲಾ ಜನರೂ ಸದರಿ ಹೆಣವನ್ನು ನೋಡಿಯೇ ಮುಂದಕ್ಕೆ ಹೋಗಬೇಕೆಂಬದಾಗಿ ಆಜ್ಞೆಮಾಡಿದರು ಇದರಿಂದ ಸದರಿ ಹೆಂಗಸು ಮೈಸೂರಿನಲ್ಲಿ ಫಲಾನಾ ಸ್ಥಳದಲ್ಲಿ ವಾಸಮಾಡುತ್ತಿದ್ದಳೆಂಬುವದು ಗೊತ್ತಾಯಿತು ಕೂಡಲೇ ಇನ್ಸ್‌ಪೆಕ್ಟರವರು ಮೈಸೂರು ಪೋಲೀಸಿಗೆ ವರ್ತಮಾನ ಕೊಟ್ಟು ಆಕೆಯ ವಾಸಸ್ಥಳ, ವಾರಸುದಾರರು, ಆಕೆಯನ್ನು ಕರೆದುಕೊಂಡು ಹೋದವರು, ಇತ್ಯಾದಿ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕೆ ತಕ್ಕ ಏರ್ಪಾಡುಮಾಡಿ, ಹೆಣವನ್ನು ಮಹಜರು ಮಾಡಿಸಿ, ದಫನ್‌ಗೆ ಒಪ್ಪಿಸಲಾಯಿತು ಬಳಿಕ ತಾ 23 ರಲ್ಲಿ ಇನ್ಸ್‌ಪೆಕ್ಟರವರು ಮೈಸೂರಿಗೆ ತೆರಳಿದರು ಅಷ್ಟರೊಳಗೇ ಮೈಸೂರು ಪೋಲೀಸಿನವರು ಮುತುವರ್ಜಿಯಿಂದ ಸದರಿ ಯುವತಿಯನ್ನು ಕರೆದುಕೊಂಡು ಹೋದವನನ್ನು ಪತ್ತೆಮಾಡಿ ಹಿಡಿದರೆಂತಲೂ, ಫ್ರೆಂಚ್‌ರಾಕ್ಸಿನಿಂದ ಪೊ॥ ಸಬ್॥ ಮೆ॥ ಕೃಷ್ಣಸ್ವಾಮಿ ಐಯಂಗಾರ್ರು ಮೈಸೂರಿಗೆ ದಯಮಾಡಿದರೆಂತಲೂ, ತರುವಾಯ ನಡೆದುದು ವಿಚಾರಣೆಯಲ್ಲಿ ಸದರಿ ಹೆಂಗಸು ಹೊಲೆಯ ಜಾತಿ ನಾಮಿ ಉರುಫ್ ಹನುಮಿ ಎಂತಲೂ, ಅವಳನ್ನು ಮೋಚಿ ವೀರಪ್ಪನೆಂಬವನು ಬಹುಕಾಲದಿಂದ ಇಟ್ಟುಕೊಂಡಿದ್ದನೆಂತಲೂ, ಈಚೆಗೆ ಆವನು ಸ್ವಜಾತಿಯವಳನ್ನು ಮದುವೆ ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದಾಗ್ಗೆ ಸದರಿ ಹನುಮಿಯು ಒಪ್ಪದೆ ತೊಂದರೆಪಡಿಸುತ್ತಿದ್ದದ್ದರಿಂದ ಸದರಿ ವೀರಪ್ಪನೇ ಆವಳನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಮೋಸದಿಂದ ಕರತಂದು ವಿಷವನ್ನು ಕುಡಿಸಿದನಾಗಿ ಒಪ್ಪಿ, ತಾನು ಬಂದ ಮಾರ್ಗ, ಕೊಂದ ಸ್ಥಳ, ವಿಷ ಮಾಡಿದ ಕತ್ತಿ ವಗೈರೆ ಎಲ್ಲಾ ವಿವರವನ್ನೂ ತೋರಿಸಿಯಿತ್ತು ಕೊಟ್ಟಿರುವದಾಗಿಯೂ, ಅವನನ್ನು ಲಾಕಪ್ಪಿನಲ್ಲಿಟ್ಟಿರುವದಾಗಿಯೂ ತಿಳಿದು ಬಂದಿರುತ್ತೆ ಮುಖ್ಯ ನಿರಾಧಾರವಾಗಿದ್ದ ಈ ಖೂನಿಯು ಏನೋ ಬೇವರ್ಸಿ ಎಂದು ಭಾವಿಸದೆ ಬಹು ಚಮತ್ಕಾರವಾಗಿ ಇಷ್ಟು ದೂರ ಶೋಧಪಟ್ಟು ಪತ್ತೆ ಆಗಿರುವದಕ್ಕಾಗಿ ಸರ್ಕಾರದವರನ್ನು ಕೊಂಡಾಡತಕ್ಕದ್ದಾಗಿದೆ

ಚಿತ್ರದುರ್ಗ. —ಆಗಾಗ್ಗೆ ಅಲ್ಪಸ್ವಲ್ಪ ಮಳೆಗಳಾಗುತ್ತಿದ್ದು ನೆನ್ನೆ ರಾತ್ರಿ ಸುಮಾರು ಒಂದು ಹದ ಮಳೆ ಆಯಿತು ಕಾಲರಾ ಈ ಡಿಸ್ಟ್ರಿಕ್ಟಿನಲ್ಲೆಲ್ಲಾ ವ್ಯಾಪಿಸಿ ಮರಣಗಳು ಜಾಸ್ತಿಯಾಗಿಯೇ ಇದೆ ಅದರಲ್ಲೂ ಜಗಲೂರು ತಾಲ್ಲೂಕಿನಲ್ಲಿ ಇದರ ವ್ಯಾಪನೆ ಬಹಳ ಹೆಚ್ಚು ಅಲ್ಲಿನ ಸ್ಥಿತಿ ಖುದ್ದು ನೋಡಿ ಕಾಯಿಲೆ ಇರತಕ್ಕವರಿಗೆ ಅವಶ್ಯಕವಾದ ಅನುಕೂಲಗಳನ್ನುಂಟುಮಾಡಿಕೊಟ್ಟು ಪಾಕೀಜಾ ವಿಷಯ ಸರಿಪಡಿಸಲು ಡೆಪ್ಯುಟಿ ಕಮಿಷನರ್ ಸಾಹೇಬರ ಅಪ್ಪಣೆ ಪ್ರಕಾರ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಬಿ ಬಸವಾರಾಧ್ಯರವರು ಹೊರಟಿದ್ದಾರೆ — ಒಂದು ತಿಂಗಳ ಕೆಳಗೆ ಚಿತ್ರದುರ್ಗಕ್ಕೆ 2 ಮೈಲಿ ಫಾಸಲೆಯಲ್ಲಿರತಕ್ಕ ಕಲ್ಲಹಟ್ಟಿ ಗ್ರಾಮಕ್ಕೆ ಕಾಲರಾ ವ್ಯಾಪಿಸಿ ಏಕದಂ 10 10 ಜನ ಒಡ್ಡರಿಗೆ ತಗಲಿತು ಡೆಪ್ಯುಟಿ ಕಮಿಷನರ್ ಮೆ ಕೆ ಚಾಂಡಿಯವರು ಇನ್ಸ್‌ಪೆಕ್ಟರ್ ಮೆ॥ ಗುಡಿಯಪ್ಪ ವಗೈರೇರ ಸಹಿತ ಆ ಸ್ಥಳಕ್ಕೆ ಹೋಗಿ ಕಾಲರಾ ಆಗಿದ್ದ 10 10 ಜನ ಒಡ್ಡರು ಕಳ್ಳೇಚೀಲಿಯ ಆಶ್ರಯದಲ್ಲಿ ಬಿದ್ದು ಸಂಕಟ ಪಡುತ್ತಿದ್ದವರಿಗೆ ಔಷಧ ಆಹಾರಾದಿಗಳನ್ನು ಕೊಡಿಸಿ ಧೈರ್ಯ ಹೇಳಿ ಆವರ ಪಾನಕ್ಕಾಗಿ ಹಳ್ಳದಲ್ಲಿ ಒಂದು ಚಿಲುಮೆ ತೆಗಿಸಿ ಅದರಲ್ಲಿ ಬಂದ ಶುಭ್ರವಾದ ನೀರನ್ನು ಮೊದಲು ತಾವು ಕುಡಿದು ಅದೇ ನೀರನ್ನೇ ಆ ಒಡ್ಡರು ಕುಡಿಯುವಂತೆ ಕಟ್ಟುಮಾಡಿ ಆವರು ಪೂರ್ವದಲ್ಲಿ ಉಪಯೋಗಿಸುತ್ತಿದ್ದ ಭಾವಿಗೆ ನೀರನ್ನು ಶುದ್ಧಿಮಾಡುವ ಪದಾರ್ಥಗಳನ್ನು ಹಾಕಿ ಸದ್ಯ ಆ ನೀರು ಉಪಯೋಗಿಸದಂತೆ ಬಂದೋಬಸ್ತು ಮಾಡಿ ಕಾಯಿಲೆಯವರ ಕಶ್ಮಲ ಬಟ್ಟೆಗಳನ್ನೆಲ್ಲಾ ತೆಗಿಸಿ ಶುಭ್ರವಾದ ಬಟ್ಟೆಗಳನ್ನು ಕೊಡಿಸಿ ಬಂದರು ಅಲ್ಲಿಂದೀಚೆಗೆ ಆ ಗ್ರಾಮದಲ್ಲಿ ಹೊಸ ಕೇಸುಗಳಾಗಲಿಲ್ಲ ಕಾಯಿಲೆಯಾಗಿದ್ದವರಲ್ಲಿ ಬಹಳ ಜನ ಬದುಕಿಕೊಂಡರು ಇದಲ್ಲದೆ ಹೊರಗಿನಿಂದ ಈ ಕಾಯಿಲೆಯಿಂದ ಚಿತ್ರದುರ್ಗಕ್ಕೆ ಬಂದಿದ್ದ ಇಬ್ಬರು ಸತ್ತರು ತಕ್ಷಣ ಡೆಪ್ಯುಟಿ ಕಮಿಷನರವರು ಖುದ್ದು ನಿಂತು ಅವರ ಬಟ್ಟೆಗಳನ್ನೆಲ್ಲಾ ಸುಡಿಸಿ ಆ ಮನೇಲಿದ್ದವರನ್ನೆಲ್ಲಾ ಒಂದು ವಾರದ ವರೆಗೂ ಬೇರೆ ಮನೇಲಿರುವಂತೆ ಏರ್ಪಡಿಸಿ ಪ್ರತಿ ಒಬ್ಬರೂ ನೀರನ್ನು ಕಾಯಿಸಿ ಕುಡಿಯುವಂತೆ ಎಲ್ಲರಿಗೂ ಎಚ್ಚರಿಸಿ ಸ್ಥಳವಂದಿಗರು ಪಾನಮಾಡತಕ್ಕ ನೀರಿನಲ್ಲಿ ಜನಗಳು ಗಲೀಜು ಮಾಡದಂತೆ ಆ ಸ್ಥಳದಲ್ಲಿ ಉಸ್ತುವಾರಿ ಇಟ್ಟು ತಾವು ಹೆಡ್ ಕ್ವಾರ್ಟರಿನಲ್ಲಿದ್ದಾಗ ಪ್ರತಿನಿತ್ಯವೂ ತಮ್ಮ ಏರ್ಪಾಡು ಸರಿಯಾಗಿ ನಡೆಯುತ್ತೆಯೋ ಇಲ್ಲವೋ ಎಂದು ಖುದ್ದು ನೋಡುತ್ತಿದ್ದರು ಇದರಿಂದ ಕಲ್ಲಹಟ್ಟಿಯಲ್ಲಿ ಈ ವ್ಯಾಧಿ ನಿಂತಿತು, ಚಿತ್ರದುರ್ಗಕ್ಕೂ ವ್ಯಾಪಿಸಲಿಲ್ಲ —ಎಲ್ಲಿ ನೋಡಿದರೂ ಕಣ್ಣುನೋವು, ಉಮ್ಮರಿಕೆ, ಥಳಿಜ್ವರ ಹೆಚ್ಚುತ್ತಾ ಇದೆ ಕಾಲರಾ ಜಾಡ್ಯ ಬಂದ ಹಳ್ಳಿ ಜನಗಳು ಬೇರೆ ಗ್ರಾಮಸ್ಥರನ್ನು ಸೇರಿಸುವದಿಲ್ಲ, ಅದರೂ ಸಂತೆ ವಗೈರೆಗೆ ಬರುವದಿಲ್ಲ — ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಾರಲೆ ಇಸ್ಪೀಟಿನ ಜೂಜಾಟ ಪ್ರಬಲಿಸಿ ಪ್ರಜೆಗಳು ಕೆಟ್ಟುಹೋಗುತ್ತಿದಾರೆ ಇಂಥಾ ಜೂಜಾಡುವ ಜನರ ಮೇಲೆ ಪೋಲೀಸಿನವರು ನಿಗಾ ಇಟ್ಟು ಬಂದೋಬಸ್ತು ಮಾಡಿ, ಜೂಜನ್ನು ನಿಲ್ಲಿಸ್ಯಾರಾಗಿ ನಂಬಿದೇನೆ

ಹೊಳಲ್ಕೆರೆ —ಇಲ್ಲಿ 2—3 ಹದ ಮಳೆ ಆಯಿತು ನೆನ್ನೆ ರಾತ್ರಿಯೂ ಹದ ಮಳೆ ಆಯಿತು ಜನಗಳೆಲ್ಲಾ ಬಿತ್ತನೆ ಕೆಲಸದಲ್ಲಿ ನಿರತರಾಗಿದಾರೆ ಭತ್ತ, ಜೋಳ, ಎಳ್ಳು, ತೊಗರಿ ಮುಂತಾದ ಫಸಲು ಬಿತ್ತುತ್ತಾ ಇದಾರೆ ಈ ಊರಲ್ಲಿ ನೀರಿನ ಕ್ಷಾಮ ಬಹಳವಾಗಿತ್ತು ಹೊಂಡಕ್ಕೆ ನೀರು ಬಂದದ್ದರಿಂದ ಕುಡಿಯುವ ನೀರಿನ ಕಷ್ಟ ತಪ್ಪಿತು ಹೊಂಡದಲ್ಲಿ ಜನಗಳು ಇಳಿದು ಗಲೀಜು ಮಾಡದಂತೆ ಮ್ಯುನಿಸಿಪಲ್ ಬೋರ್ಡಿನವರು ನಿಗಾ ಇಡಿಸಿದರೆ ಪ್ರಜೆಗಳಿಗೆ ಕ್ಷೇಮವಾಗುತ್ತೆ ಕಾಲರಾ ಉಪದ್ರದ ಗಲಾಟೆ ತಾಳ್ಯ, ನಂದಿಹಳ್ಳಿ, ಚಿಕ್ಕಜಾಜೂರು, ಮುತ್ತುಗದೂರು, ಈ ಪ್ರಾಂತ್ಯ ಇರುತ್ತೆ ಸ್ಯಾನಿಟರಿ ಇನ್ಸ್‌ಪೆಕ್ಟರವರು ಮುಖ್ಯವಾಗಿ ಗ್ರಾಮಸಾಕೀಜಾ, ನೀರಿನ ಪರಿಶುದ್ಧತೆ ವಿಷಯದಲ್ಲಿ ತಮ್ಮ ವಿಚಕ್ಷಣೆಯನ್ನೂ, ಬುದ್ಧಿ ಕೌಶಲ್ಯವನ್ನೂ ಉಪಯೋಗಿಸಿದರೆ ಒಳ್ಳೇ ಹೆಸರು ಬರುತ್ತೆ ಈ ಟೌನ್ನಿಗೆ ಕಾಲರಾ ಆದ ಊರಿನವರೂ, ಪ್ಲೇಗ್ ಆದ ಊರಿನವರೂ ಆಮದು ರಫ್ತು ಆಗುತ್ತಲೇ ಇರುತ್ತಾರೆ ಅಂಟು ಜಾಡ್ಯಗಳ ಗ್ರಾಮವಾಸಿಗಳನ್ನು ಈ ಟೌನ್ನಿಗೆ ಬಾರದಂತೆ ಮ್ಯುನಿಸಿಪಲ್ ಬೋರ್ಡಿನವರೂ ಗ್ರಾಮಾಧಿಕಾರಿಗಳೂ ನಿರೋಧಿಸಿದರೆ ಪರೋಪಕಾರವಾಗುತ್ತೆ —ರೈಲ್ವೆ ಸ್ಟೇಷನ್ನಿಂದ ಚಿತ್ರದುರ್ಗಕ್ಕೆ ಹೋಗತಕ್ಕವರಿಗೆ ಇಲ್ಲಿ ಇಳಿಯುವದಕ್ಕೆ ವಸತಿಯಾದ ಸ್ಥಳವಿಲ್ಲ ಆಗಂತುಕರಿಗೆ ಅನ್ನಛತ್ರವಿಲ್ಲ ವಿಶೇಷವಾಗಿ ಪ್ರಯಾಣಿಕರು ಇಳಿಯುವ ಸ್ಥಳವಾಗಿದೆ ಆದ್ದರಿಂದ ರೈಲ್ವೆ ಸ್ಟೇಷನ್ ಬಳಿ ಇರತಕ್ಕ ಅನ್ನಛತ್ರವನ್ನು ಈ ಟೌನಿಗೆ ವರ್ಗಾಯಿಸಿ ಒಂದು ಛತ್ರದ ಮನೆಯನ್ನು ಸ್ಥಾಪಿಸುವದಾದರೆ ಬಹಳ ಅನುಕೂಲವಾಗುತ್ತೆ ದಯಾಳುಗಳಾದ ಸರ್ಕಾರದವರು ಈ ಪ್ರಾರ್ಥನೆಯನ್ನು ಅಂಗೀಕರಿಸಿ ನೆರವೇರಿಸಿದರೆ ಪರಮ ಉಪಕಾರ ಉಂಟಾಗುತ್ತೆ —ದೇವರ ಭಜನೆ ಮತ್ತು ಅನ್ನಶಾಂತಿ ಮುಂತಾದ್ದನ್ನೆಲ್ಲಾ ಗ್ರಾಮದ ಪ್ರಮುಖ ಜನಗಳು ಬಹಳ ಶ್ರದ್ಧೆಯಿಂದ ನೆರವೇರಿಸುತ್ತಾ ಇರುತ್ತಾರೆ ಗ್ರಾಮಕ್ಕೆ ರೋಗಾದಿಗಳ ಭಯ ಶಹರ್‌ವರಿಗೆ ಉಂಟಾಗಿಲ್ಲ — ಬಾಲಕರ ವಿದ್ಯಾಭ್ಯಾಸದ ಕ್ರಮಾನುಸಾರಕ್ಕೆ ಎ ವಿ ಸ್ಕೂಲ್ ಹೆಡ್ ಮಾಸ್ಟರವರು ಬಹಳ ನಿಗಾ ಕೊಡುತ್ತಾ ಇದಾರೆ ಆದರೆ ಬಾಲಕರಿಗೆ ತಾಯಿ ತಂದೆಗಳಲ್ಲಿಯೂ, ಗುರುಹಿರಿಯರಲ್ಲಿಯೂ, ಸರ್ಕಾರದ ನೌಕರರಲ್ಲಿಯೂ ವಿನಯ ಭಕ್ತಿ ವಿಶ್ವಾಸ ತೋರಿಸಬೇಕೆಂಬದನ್ನು ಮೊದಲನೇ ಬೋಧೆಯಾಗಿಟ್ಟುಕೊಂಡರೆ ಬಹಳ ಅನುಕೂಲವಾಗಿರುತ್ತೆ ಬಾಲಕರಿಗೆ ಚಿಕ್ಕಂದಿನ ನಡವಳಿಯೇ ಕೊನೆವರಿಗೆ ಅಭ್ಯಾಸಕ್ಕೆ ಬರುವದರಿಂದ ಹಿರಿಯರಲ್ಲಿ ನಯ ವಿನಯಗಳನ್ನು ತೋರಿಸಬೇಕೆಂಬದೇ ಬಾಲಕರ ಪ್ರಥಮ ಶಿಕ್ಷಣವಾಗಿರುತ್ತೆ ಬಾಲಕರ ಮನೆಯಲ್ಲಿ ಹಿರಿಯರು ವಯಸ್ಸಾದವರಲ್ಲಿ ವಿದ್ಯೆ ಇಲ್ಲದವರಾಗಿರುತ್ತಾರೆ ಈಗಿನ ನಾಗರಿಕತೆಯಂತೆ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳು ತಮ್ಮ ಮನೆಯ ವೃದ್ಧರು ನೆರೆಹೊರೆಯ ವಯಸ್ಕರಾದವರನ್ನು ಲಕ್ಷ್ಯಮಾಡದೆ ತಿರಸ್ಕಾರವಾಗಿ ನೋಡುತ್ತಾರೆ ಇದಕ್ಕೆ ಅವಕಾಶವಾಗದಂತೆ ವಿದ್ಯಾರ್ಥಿಗಳಿಗೆ ಸದ್ಬೋಧೆಯನ್ನು ಮಾಡಿ ಬಾಲಕರನ್ನು ಉತ್ತಮ ಸ್ಥಿತಿಗೆ ತರಬೇಕೆಂಬದೇ ಅವರ ಯತ್ನಕ್ಕೆ ಕಾರಣವಾಗಿದೆ ಇದರ ಜೊತೆಗೆ ಪಠಶಾಲೆಗಳನ್ನು ಚನ್ನಾಗಿ ಮಂಡಿಸುಮಾಡಿಕೊಳ್ಳುವ ಏರ್ಪಾಡು ಇಡಬೇಕೆಂಬ ಪ್ರಾರ್ಥನೆಯಾಗಿರುತ್ತೆ —ಈ ವರ್ಷ ಮೈಸೂರು ದಸರಾ ದರ್ಬಾರಿಗೆ ಹೋಗತಕ್ಕ ಮೆಂಬರರ ಚುನಾವಣೆ ಕಾಲವು ಪ್ರಾಪ್ತವಾಗಿದೆ ಜನಗಳು ಸಭೆಯಲ್ಲಿ ಚನ್ನಾಗಿ ಮಾತನಾಡಿ ಪ್ರಜೆಗಳ ನ್ಯೂನತೆಗಳನ್ನು ಸರ್ಕಾರದವರ ಸನ್ನಿಧಿಯಲ್ಲಿ ಭಕ್ತಿ ವಿಶ್ವಾಸಗಳಿಂದ ಅರಿಕೆ ಮಾಡಿ ಒಳ್ಳೆ ಅನುಜ್ಞೆಯನ್ನು ಪಡಕೊಳ್ಳಲು ಸಮರ್ಥರಾದವರನ್ನು ಚುನಾಯಿಸಿ ಪ್ರತಿಫಲವನ್ನು ಪಡಕೊಳ್ಳಬೇಕೇ ಹೊರತು ಬಂಧುತ್ವ ಅಥವಾ ಸಾಹುಕಾರಿಕೆ ಇತ್ಯಾದಿ ದಾಕ್ಷಿಣ್ಯದಿಂದ ಚುನಾಯಿಸಿ ಪ್ರಯೋಜನವಿಲ್ಲವೆಂತೆ ಮಾಡಿಕೊಳ್ಳಬಾರದೆಂತ ನಂಬಬೇಕಾಗಿದೆ ಹಿಸ್ಸೆದಾರರಿಗೆ ಒಂದು ಬಾಧಕವಿರುತ್ತೆ ಇದು ಮೈಸೂರು ದಸರಾ ಮಹಾಸಭೆಗೆ ದಯಮಾಡಿಸತಕ್ಕ ಮಹನೀಯರು ಸರ್ಕಾರದವರ ಸನ್ನಿಧಿಯಲ್ಲಿ ಅರಿಕೆ ಮಾಡಿ ಆ ಬಾಧಕವನ್ನು ನಿವಾರಣೆ ಮಾಡಬೇಕೆಂತ ಪ್ರಾರ್ಥನೆ ಅದೇನಂದರೆ, ಒಂದು ಜಮೀನಿನ ಹಿಸ್ಸೇದಾರರು ಅನೇಕರು ಇರುತ್ತಾರೆ ಅವರಲ್ಲಿ ಒಬ್ಬನು ಕಂದಾಯ ಕೊಡದೆ ಹೋದರೆ ಆ ಬಾಕಿಗಾಗಿ ಪೂರಾ ನಂಬರು ಜಮೀನು ಈಗಿನ ರೂಲ್ಸು ಪ್ರಕಾರ ಹರಾಜಿಗೆ ಗುರಿಯಾಗುತ್ತೆ ಆದ್ದರಿಂದ ಯಾವ ಹಿಸ್ಸೆ ಕಂದಾಯ ಬಾಕಿಯಾಗುತ್ತೋ ಅವರ ಹಿಸ್ಸೆ ಜಮೀನ್ ಮಾತ್ರ ಹರಾಜಿಗೆ ಗುರಿಯಾಗುವಂತೆ ರೂಲ್ಸು ತಿದ್ದುಪಾಟಿಗೆ ಅಪ್ಪಣೆ ಬೇಡತಕ್ಕದಾಗಿದೆ ಮತ್ತು ಹಿಡುವಳಿ ಜಮೀನುಗಳು ಎಷ್ಟೇ ವಿಸ್ತೀರ್ಣವುಳ್ಳವುಗಳಾಗಿರಲಿ ಪೋಡಿ ಆಗುವದಕ್ಕೆ ಹುಕುಂ ಇಲ್ಲ ಹಿಸ್ಸೇದಾರರು ಪ್ರತ್ಯೇಕ ಕಂದಾಯ ಕೊಡಲು ಅವಕಾಶವಿಲ್ಲ ಇದರಿಂದ ಖಾತೆದಾರನಿಗೂ ಹಿಸ್ಸೇದಾರನಿಗೂ ಕಂದಾಯದ ವಿವಾದ ಪದೇಪದೇ ಉಂಟಾಗುತ್ತಲೇ ಇರುತ್ತೆ ಆದ್ದರಿಂದ ಹಿಡುವಳಿ ಜಮೀನ್ ಪೋಡ್ ಆಗಲಿಕ್ಕೆ ಹುಕುಂ ದಯಪಾಲಿಸಲು ಪ್ರಾರ್ಥಿಸಬೇಕು ಹಿಸ್ಸೇದಾರರು ಸೇಲ್ ರಿಜಿಸ್ಟರ್ ಮಾಡಿಸಿಕೊಂಡರೂ, ಅಥವಾ ತಮ್ಮ ಹಿಸ್ಸೆ ಕಂದಾಯವನ್ನು ಖಾತೆಯಲ್ಲಿ ದಾಖಲ್‌ಮಾಡಿಸಿದರೂ ಸಹಾ ಖಾತೆದಾರನ ಏಕ ಗುಂಟಾಗಿ ಕಂದಾಯ ಸರ್ಕಾರಕ್ಕೆ ಪಾವತಿಯಾಗಿ ಹಿಸ್ಸೇದಾರನಿಗೆ ದಾವಾ ಖರ್ಚು ವಗೈರೆ ನಷ್ಟಕ್ಕೆ ಗುರಿಪಡಿಸಲು ಅವಕಾಶವಿರುತ್ತೆ ಆದಪ್ರಯುಕ್ತ ಹಿಸ್ಸೇದಾರರು ಪ್ರತಿ ಪ್ರತ್ಯೇಕ ಕಂದಾಯ ಕೊಡುವದಕ್ಕೆ ಅನುಕೂಲಿಸುವಂತೆ ಅವರವರ ಖಾತೆಗೆ ಅವರವರ ಕಂದಾಯ ದಾಖಲಾಗಲು ಹುಕುಂ ಆಗುವಂತೆ ಪ್ರಾರ್ಥಿಸಬೇಕು

MELLIN'S FOOD

ಮೆಲ್ಲಿನ್ಸ್ ಆಹಾರವು

ಮಕ್ಕಳಿಗೂ ರೋಗಿಷ್ಠರಿಗೂ

ಶ್ರಮಸೋಕದೆ ತಯಾರಾದದ್ದು; ಬರೀ ಸಸ್ಯಾಹಾರ.

ಮೆಲ್ಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳೆಸುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಕಳುಹಿಸುತ್ತಾರೆ

[66—6] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. I. W Thompson, M.A., Proprietor and Manager, Wesleyan Mission Press, Mysore 6/6/1912

REGISTERED
M. 90

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೨ ನೇ ಇಸವಿ ಜೂನ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೨

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಗಂಡುಗಳ ನೋವು, ಮೈ ಕಾಲು ಸೆಳತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಮಂದಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಹಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಲವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ [98-41]



೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಎಂದೂ ತಪ್ಪದ ಔಷಧವೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಹೋಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೆಟ್ಟ ಮೊದಲನೇ ತೊಳೆಯುಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಔಷಧೋಪಚಾರದ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುತ್ತದೆ

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಇಂಗ್ಲೀಷನ್ನು ಕಲಿಯುವ ಪುಸ್ತಕ! ಇಂಗ್ಲೀಷನ್ನು ಕಲಿಯುವ ಪುಸ್ತಕ!! ಇಂಗ್ಲೀಷನ್ನು ಕಲಿಯುವ ಪುಸ್ತಕ!!

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ. [93-30]

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾಪ್ರವೇಶದಾಯಿನಿ.

ಮೊದಲನೆಯ ಪುಸ್ತಕ	.	ಕ್ರಯ ರೂ. ೧—೮—೦
ಎರಡನೆಯ ಪುಸ್ತಕ	.. ..	ಕ್ರಯ ರೂ ೧—೮—೦
ಮೂರನೆಯ ಪುಸ್ತಕ	.. (ಅಚ್ಚಿನಲ್ಲಿದೆ) ..	ಕ್ರಯ ರೂ ೧—೮—೦

ಅಂಚೆಯ ವೆಚ್ಚವನ್ನು ಗ್ರಾಹಕರೇ ಕೊಡಬೇಕು

ಇವುಗಳಲ್ಲಿ—ಆಂಗ್ಲಭಾಷಾ ವರ್ಣಮಾಲೆಯ A ಇಂದ Z ಜಡ್ ವರೆಗಿನ ಅಕ್ಷರಗಳನ್ನು ಗುರುತು ಹಿಡಿಯುವುದು, ಅಕ್ಷರಗಳನ್ನು ಕೂಡಿಸುವುದು, ಶಬ್ದಸಂಯೋಜನ, ಸಣ್ಣಸಣ್ಣ ವಾಕ್ಯಗಳು, ಚಿಕ್ಕ ಪುಟ್ಟ ಕಥೆಗಳು, ಕ್ಷೇಮಸಮಾಚಾರ ಕಾಗದಗಳು, ಕಂತಿ ವರ್ತಮಾನದ ಮಾದರಿಗಳು, ಗಾದೆಗಳು, ಸಾಂಕೇತಿಕ ಶಬ್ದಗಳು, ಬಗೆಬಗೆಯಾದ ಬೇರೆಬೇರೆ ಅನೇಕ ಸಂಗತಿಗಳಲ್ಲಿ ಒಬ್ಬರಿಂದೊಬ್ಬರು ಪ್ರಶ್ನೋತ್ತರ ರೂಪವಾಗಿ ಮಾತಾಡುವ ಮಾದರಿಗಳು, ಕನ್ನಡದಿಂದ ಇಂಗ್ಲಿಷಿಗೂ—ಇಂಗ್ಲಿಷಿನಿಂದ ಕನ್ನಡಕ್ಕೂ ತರ್ಜುಮೆಮಾಡುವುದು, ವ್ಯಾಕರಣ ಸೂತ್ರಗಳು, ಕನ್ನಡ ಇಂಗ್ಲಿಷ್ ಇಂಗ್ಲಿಷ್ ಕನ್ನಡ ಡಿಕ್ಷನರಿಗಳು, ಮುಂತಾದ ಅನೇಕ ಸಂಗತಿಗಳನ್ನು ಸೇರಿಸಿದೆ. ಇಂಗ್ಲೀಷನ್ನು ಸ್ವಲ್ಪವೂ ತಿಳಿಯದವರು ಸುಲಭವಾಗಿ ತಿಳಿಯುವಂತೆ ಮೊದಲು ಇಂಗ್ಲಿಷು, ನಂತರ ಅದರ ಉಚ್ಚಾರಣೆ ಮತ್ತು ಅರ್ಥಗಳನ್ನು ಕನ್ನಡಕ್ಷರದಲ್ಲಿ ಪ್ರತ್ಯೇಕವಾಗಿ ಬರೆದಿರುವುದರಿಂದ, ಬರೆಯುವುದು—ಓದುವುದು ಮಾತಾಡುವುದನ್ನು ಬೇರೊಬ್ಬರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು, ಅನೇಕರಿಗೆ ಉಪಯೋಗವಾಗಿ ಕೊಳ್ಳುವವರ ಸೌಕರ್ಯಕ್ಕೆ ಪುಸ್ತಕವು ಬೇರೆಬೇರೆ ಮೂರು ಭಾಗಗಳಾಗಿ ಕ್ರಯವೂ ಕಡಮೆ ಇರುವುದರಿಂದ ಈಗಾಗಲೆ ಸಾವಿರಾರು ಪುಸ್ತಕಗಳು ಖರ್ಚಾಗಿ ನಾಲ್ಕನೆಯ ಸಲ ಅಚ್ಚಾಯಿತು. ಕೆಳಗಿನ ವಿಳಾಸಕ್ಕೆ ದಯಮಾಡಿ ನಿಮ್ಮನಿಮ್ಮ ವಿಳಾಸಗಳನ್ನು ಚೆನ್ನಾಗಿ ತಿಳಿಯುವಂತೆ ಇಂತಹ ಪುಸ್ತಕವೇ ಬೇಕೆಂದು ವಿವರವಾಗಿ ಹುಟ್ಟುಕಟ್ಟರದಿಂದ ಬೇಗ ಬರೆಯಬೇಕು!!! ಭಾರತಿ ಸಂಪಂಗಿರಾಮು, ಪ್ರೋಸ್ಟ್—ಹೊಸಕೋಟೆ, ಡಿಸ್ಟ್ರಿಕ್ಟ್—ಬೆಂಗಳೂರು.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ! ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದ್ದಾಗಿರುವುದು. ಕ್ರಯ 8 ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ. ಕ್ರಯ ೬ ಆಣೆ.

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು. ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು. ಕ್ರಯ 2 ಆಣೆ [140-28]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ; ಪಿತ್ತ, ಪಿತ್ತಜ್ವರ; ಅಜೀರ್ಣ, ಅಗ್ನಿಮಾಂದ್ಯ; ಗಾಬರಿ, ಅಶಕ್ತಿ, ಎದೆಯು ಕಲ್ಲಿಸುವುದು, ತಲೆತಿರುಗುವುದು ತಲೆನೋವು; ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುತ್ತದೆ.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು [99-40]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು

ಸಾಹಸಕಥೆಗಳು! ಸಂಪೂರ್ಣಪುಸ್ತಕ!! ೫೨೬ ಪುಟಗಳು!!!

ಕೈಲಾಸದಲ್ಲಿ ನಾರದರು ನಂದಿಕೇಶ್ವರನಿಗೆ ಬೋಧಿಸಿದ

ಸಚಿತ್ರ ವಿಕ್ರಮಾದಿತ್ಯರಾಯನ ಕಥೆಗಳು

[93-1]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ಬಹಳ ಕಡಮೆಮಾಡಿದೆ.


* * *

ನಾಸಿಟಾಲಿನ ಪ್ರಜೆಗಳು ಕಳೆದ ಶುಕ್ರವಾರ ಒಂದು ಮಹಾಜನ ಸಭೆಯನ್ನು ನಡಿಸಿ ಹಿಂದೂ ಯೂನಿವರ್ಸಿಟಿ ಫಂಡಿಗೆ 60,000 ರೂಪಾಯಿ ಚಂದಾ ಕೂಡಿಸಿ ಕೊಡುತ್ತೇವೆಂದು ವಾಗ್ದಾನ ಮಾಡಿದರು. ಈ ಫಂಡನ್ನು ಕೂಡಿಸುವುದಕ್ಕಾಗಿ ನಿಂತಿರುವ ದರ್ಭಾಂಗ ಮಹಾರಾಜರವರು ಕಳೆದ ಶನಿವಾರ ಅಲ್ಲಿಂದ ಅಲಿಘಡಕ್ಕೆ ತೆರಳಿದರು

* * *

ಕಲ್ಲಿಕೋಟೆಯಲ್ಲಿರುವ ಹೈಕೋರ್ಟಿನ ವಕೀಲ್ ಮ|| ಸಿ ಕೃಷ್ಣನ್‌ರವರ ಸಹೋದರನಾದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸಿ. ಸಂಕುನ್ನಿ ಎಂಬಾತನು ಅವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟನು. ಆತನಿಗೆ ಇನ್ನೂ 30 ವರುಷ ವಾಯುನೋವಿನ ಬಾಧೆ ತಡೆಯಲಾರದೆ ಆತ್ಮಹತ್ಯಮಾಡಿಕೊಂಡನೆಂದು ಕಾರಣ ಹೇಳುತ್ತಾರೆ.

* * *

ಸೌ|| ಯಾಮಿನಿ ಸೇನ್ ಎಂಬೊಬ್ಬ ಬಂಗಾಳಿ ಸ್ತ್ರೀಯು ಕಲ್ಕತ್ತಾ ಸರ್ವವಿದ್ಯಾಶಾಲಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಸೀಮೆಗೆ ಹೋಗಿ ಗ್ಲಾಸ್‌ಗೋ ಸರ್ವಕಲಾಶಾಲೆಯಲ್ಲಿ ವೈದ್ಯ ಪರೀಕ್ಷೆಯನ್ನು ಕೊಟ್ಟು ಪ್ಯಾಸಾಗಿರುತ್ತಾಳೆಂದು ತಂತೀವರ್ತಮಾನ ಬಂದಿದೆ ಈ ಪರೀಕ್ಷೆಯಲ್ಲಿ ಹಿಂದುಸ್ಥಾನದ ಸ್ತ್ರೀಯರ್ಯಾರೂ ಇದುವರೆಗೆ ತೇರ್ಗಡೆಯಾಗಿಲ್ಲ.

* * *

ಕಳೆದ 1 ನೇ ತಾ ಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 1,560 ಜನರಿಗೆ ಪ್ಲೇಗ್ ತಗಲಿ, 1,301 ಜನರು ಆ ರೋಗದಲ್ಲಿ ಕಾಲವಾದರು. ಈ ಮರಣ ಸಂಖ್ಯೆಯ ವಿವರ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 88, ಮದರಾಸ್ 9, ಬಂಗಾಳಾ 36, ಬೀಹಾರ್ 170, ಸಂಯುಕ್ತ ಅಧಿಪತ್ಯಗಳು 384, ಪಂಜಾಬ್ 623, ಬರ್ಮಾ 10

ಚಿಟಗಾಂಗ್ ಪಟ್ಟಣದಲ್ಲಿ ಒಂದು ಇನ್ಷೂರೆನ್ಸ್ (ಜೀವವಿಮೆ) ಕಂಪನಿಯವರು ಷೇರುದಾರರಾಗಿಯೂ ನೌಕರರಾಗಿಯೂ ಸೇರಿ ಸಾಮಾನ್ಯ ಪ್ರಜೆಗಳಿಂದ ಚಂದಾ ವಸೂಲ್ಮಾಡಿ ಮೋಸಮಾಡಿದರೆಂದು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು 12 ಮಂದಿ ಅಪರಾಧಿಗಳಿಗೆ ತಲಾ 8 ತಿಂಗಳಿಂದ 12 ತಿಂಗಳ ವರೆಗೆ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

* * *

ಪಂಜಾಬ್ ಅಧಿಪತ್ಯದ ಸರಹದ್ದು ಪ್ರಾಂತ್ಯದ ಪಠಾಣರು ಲಾಹೋರ್ ಪಟ್ಟಣಕ್ಕೆ ಬಂದು ಅಲ್ಲಿನ ಮಕ್ಕಳನ್ನು ಹೊತ್ತುಕೊಂಡು ಹೋಗುತ್ತಾರೆಂದು ಪ್ರಜೆಗಳಲ್ಲಿ ತುಂಬಾ ಗಾಬರಿಯುಂಟಾಗಿದೆ. ಜನರು ತಮ್ಮ ಮಕ್ಕಳನ್ನು ಕಾವಲಿಲ್ಲದೆ ಮನೆಯಿಂದ ಹೊರಕ್ಕೆ ಕಳುಹಿಸುತ್ತಾ ಇಲ್ಲ. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಮೆಯಾಗಿರುತ್ತದೆ.

* * *

ಹಿಂದುಸ್ಥಾನದ ಹತ್ತಿಯು ಬೀಳಾದದ್ದು. ಇದರ ಧಾರಣೆ ಬಹಳ ಹೆಚ್ಚಿರುತ್ತದೆ. ಇದನ್ನು ನೋಡಿ ಬೊಂಬಾಯಿನ ವರ್ತಕರು ಅಮೇರಿಕದಿಂದ 25,000 ಮೂಟೆಗಳ ಹತ್ತಿಯನ್ನು ಜಹಜಿನ ಮೇಲೆ ತರಿಸಿರುತ್ತಾರೆ ಧಾರಣೆಯು ಹೆಚ್ಚಲ್ಲ; ಹತ್ತಿಯೇನೋ ಉತ್ತಮವಾಗಿದೆ ಇನ್ನೂ ಹೆಚ್ಚಾಗಿ ಇದೇ ಹತ್ತಿ ಬರುವುದರಲ್ಲಿದೆ. ಈಗಲಾದರೋ ಹಿಂದುಸ್ಥಾನದ ಹತ್ತಿಯ ಧಾರಣೆ ಇಳಿದಿರುವುದು.

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕೇಚಾರಿನಲ್ಲಿ ದ್ವಾರಬಂದ್ ಎಂಬ ಟೀ ಸೊಪ್ಪಿನ ತೋಟದ ಕೂಲಿ ಆಳುಗಳು ದಂಗೆಯೆದ್ದು ಮಾಲೀಕರ ಮೇಲೆ ಬಿದ್ದು ದಾಂಧಳೆಮಾಡಿದರು ಆ ಪೈಕಿ 23 ಮಂದಿ ಮುಖಂಡ ಆಳುಗಳನ್ನು ಹಿಡಿದು ವಿಚಾರಣೆಮಾಡಿದ್ದರಲ್ಲಿ ಅಪರಾಧ ರುಜುವಾತಾದದ್ದರಿಂದ ಅವರಿಗೆಲ್ಲಾ ತಲಾ 9 ತಿಂಗಳಿಂದ 3 ವರುಷಗಳ ತನಕ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ

* * *

ಅಮೃತಸಾರದಲ್ಲಿ ಪ್ರಜೆಗಳ ಮುಖಂಡರಾಗಿದ್ದ ರಾಯಬಹದೂರ್ ಗಾಂಗಾಮಲ್ ಎಂಬವರು ಕಳೆದ ವಾರ 70 ನೇ ವಯಸ್ಸಿನಲ್ಲಿ ಮೃತಪಟ್ಟರು. ಇವರು ಬಹು ಕಾಲದಿಂದ ಅಲ್ಲಿ ದಿವ್ಯವಾದ ರತ್ನಗಂಬಳಿಗಳನ್ನು ತಯಾರ್ಮಾಡುವ ಕಾರ್ಖಾನೆಯನ್ನಿಟ್ಟು ನಡಿಸುತ್ತಿದ್ದರು ಹಿಂದುಸ್ಥಾನಕ್ಕೆ ದಯಮಾಡಿದ ಕೆಲವು ವೈಸ್‌ರಾಯಿ ಪ್ರಭುಗಳು ಈ ಕಾರ್ಖಾನೆಗೆ ಹೋಗಿ ಅಲ್ಲಿ ನಡೆಯುವ ಕಸಬನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟಿದ್ದಾರೆ.

* * *

ಪೂನಾ ಪಟ್ಟಣದಲ್ಲಿ ಮ|| ಬಾಲಗಂಗಾಧರ ತಿಲಕರವರ ಪತ್ನಿ ಸೌ|| ಸತ್ಯಭಾಮಾ ಬಾಯಿಯವರು ಕಳೆದ ಗುರುವಾರ ಸಮರಾತ್ರಿಯಲ್ಲಿ ಕಾಲವಾದರು. 1908 ನೇ ಜುಲೈ ತಾ 22 ರಲ್ಲಿ ಮ|| ತಿಲಕರವರಿಗೆ ರಾಜದ್ರೋಹದ ನಿಮಿತ್ತ ಆರು ವರುಷಗಳ ಸಜಾ ಆಯಿತೆಂದು ಕೇಳಿದಾರಭ್ಯ ಅವರ ಪತ್ನಿಯವರು ವ್ಯಸನಪಡುತ್ತಾ ಕಾಯಿಲೆ ಬಿದ್ದು ನರಳುತ್ತಿದ್ದರು ಆಕೆಗೆ 50 ವರುಷ ವಯಸ್ಸಾಗಿತ್ತು. ಇಬ್ಬರು ಗಂಡುಮಕ್ಕಳೂ, ಮೂರು ಮಂದಿ ಹೆಣ್ಣುಮಕ್ಕಳೂ ಇರುತ್ತಾರೆ.

* * *

ಕಲ್ಕತ್ತಾ ಪಟ್ಟಣದಲ್ಲಿ ಡಾಕ್ಟರ್ ಸುರೇಶಪ್ರಸಾದ ಸರ್ವಾಧಿಕಾರಿ ಎಂಬುವರು ತಮ್ಮ ಮೋಟಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಟ್ರಾಂ ಗಾಡಿಗೆ ಅಡ್ಡವಾಗಿ ಸಿಕ್ಕಿ ತಮ್ಮ ಮೋಟಾರ್ ಗಾಡಿಯನ್ನು ಮುರಿದುಕೊಂಡರು ತಮಗೆ ಆದ ನಷ್ಟವನ್ನು ಕೊಡಿಸಬೇಕೆಂದು 1,300 ರೂಪಾಯಿಗೆ ಟ್ರಾಂವೇ ಕಂಪನಿಯವರ ಮೇಲೆ ದಾವಾ ಮಾಡಿದ್ದರಲ್ಲಿ ಜಡ್ಜಿಗಳು ಕಂಪನಿಯಿಂದ ಡಾಕ್ಟರಿಗೆ 2,700 ರೂಪಾಯಿ ಡಾಮೇಜನ್ನೂ, ಅವರ ಕೋರ್ಟ್ ಖರ್ಚನ್ನೂ ಕೊಡಿಸಿರುತ್ತಾರೆ.

* * *

ಆಲಿಪುರದ ಸಿಡಿಮದ್ದಿನಗುಂಡಿನ ಮೊಕದ್ದಮೆಯಲ್ಲಿ ಹಿಂದೆ ಇಂದುಭೂಷಣ ರಾಯಿ ಎಂಬ ಅಪರಾಧಿಗೆ ಬಂಕೋಲ್ ಸಜಾ ಆಗಿ ಅವನನ್ನು ಅಂಡಮಾನ್ ದ್ವೀಪಕ್ಕೆ ರವಾನೆ ಮಾಡಿದ್ದರು ಇವನು ಬಂಕೋಲಿನಲ್ಲಿ ಆತ್ಮಹತ್ಯ ಮಾಡಿಕೊಂಡನೆಂದು ತಿಳಿಯಿತು ಅವನ ಬಂಧುಗಳು ಕಾರಣವೇನೆಂದು ಕೇಳಿದ್ದಕ್ಕೆ ಅವನ ಜೊತೆಯ ಬಂದೀವಾನರು ಅವನನ್ನು ಕೊಂದುಹಾಕುತ್ತಾರೆಂಬದಾಗಿ ಭ್ರಾಂತಿಪಟ್ಟು ಅವನು ಆತ್ಮಹತ್ಯ ಮಾಡಿಕೊಂಡನೆಂದು ಸೂಪರಿಂಟೆಂಡೆಂಟರು ಜವಾಬು ಕಳುಹಿಸಿದ್ದಾರೆ

* * *

ಲಾಹೋರ್ ಪಟ್ಟಣದಲ್ಲಿ ಪೋಲೀಸಿನವರು ಒಬ್ಬನನ್ನು ದಸ್ತಗಿರಿ ಮಾಡಿ, ಅವನಿಂದ ಅಪರಾಧದ ರುಜುವಾತು ಹೇಳಬೇಕೆಂದು ಅವನನ್ನು ಹೊಡೆದು ಬಡಿದು ಹಿಂಸೆಮಾಡಿದ್ದರಿಂದ ಅವನು ಸತ್ತುಹೋದನು ಇದು ಮೊಕದ್ದಮೆ ಆಗಿ ಪೋಲೀಸಿನವರಿಗೆ ಸಜಾ ಶಿಕ್ಷೆ ವಿಧಿಸಲ್ಪಟ್ಟಿತು ಮೃತಪಟ್ಟವನ ಹೆಂಡತಿಗೆ ಸರ್ಕಾರದಿಂದ 500 ರೂಪಾಯಿ ಪ್ರತಿಫಲ ದಾಖಲಿಮಾಡಿ, ಪೋಲೀಸ್ ಅಪರಾಧಿಗಳಿಗೆ ವಿಧಿಸಿರುವ ಜುಲ್ಮಾನೆ ಹಣ ವಸೂಲಾದರೆ ಅದನ್ನೂ ಆಕೆಗೆ ಕೊಡುವಂತೆ ಹುಕುಮು ಮಾಡಿದ್ದಾರೆ.

* * *

ಸೂರತ್ತಿನಲ್ಲಿ ವಾಸಮಾಡುತ್ತಿರುವ ಜೆಲ್ಲಾ ನವಾಬರಾದ ನವಾಬ್ ಅಬ್ದುಲ್ ರಸೂಲ್ ಆಲಂ ಖಾನ್‌ರವರೂ, ಇವರ ಸೆಕ್ರೆಟರಿಯಾದ ನಾರಾಯಣದಾಸ ಸುಂದರಜಿಯವರೂ ಕೆಲವು ಕಾಲಕ್ಕೆ ಮುಂಚೆ ಬೊಂಬಾಯಿಗೆ ಬಂದು ದೊಡ್ಡ ಅಂಗಡಿಗಳಲ್ಲಿ 2,831 ರೂಪಾಯಿಗೆ ಮೂರು ಸಾರೋಟುಗಳನ್ನೂ, 932 ರೂಪಾಯಿನ ಮರದ ಸಾಮಾನುಗಳನ್ನೂ, 1,852 ರೂಪಾಯಿನ ನಗಗಳನ್ನೂ 800 ರೂಪಾಯಿನ ಜೀನು ಲಗಾಮು ಮುಂತಾದ ಸಾಮಾನುಗಳನ್ನೂ ಕೊಂಡುಕೊಂಡು, ಅವರಿಗೆಲ್ಲಾ ಮುಂದಿನ ತಾರೀಖು ಹಾಕಿ ಬ್ಯಾಂಕ್ ಛೆಕ್ಕುಗಳನ್ನು ಬರೆದುಕೊಟ್ಟು ಹೋದರು. ಅಂಗಡಿ ವರ್ತಕರು ಆ ತಾರೀಖಿನ ತನಕ ಸುಮ್ಮನಿದ್ದು ಛೆಕ್ಕನ್ನು ಬ್ಯಾಂಕಿಗೆ ತೋರಿಸಿದಾಗ ಬ್ಯಾಂಕಿನವರು ನವಾಬರ ಹಣವೇನೂ ಇಲ್ಲವೆಂದು ಹೇಳಿ ಛೆಕ್ಕನ್ನು ವಾಪಸ್ ಮಾಡಿದರು ಆ ವರ್ತಕರು ಸೂರತ್ತಿಗೆ ಹೋಗಿ ಹಣ ಬರಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟರೂ ಪ್ರಯೋಜನವಾಗದೆ ಹೋದಾಗ ಅವರು ಪೋಲೀಸಿಗೆ ತಿಳಿಸಿಬಿಟ್ಟರು. ಸೂರತ್ತಿನಲ್ಲಿರುವ ಬೇಗಂವಾಡಾ ಎಂಬ ಅರಮನೆಯನ್ನು ಪೋಲೀಸಿನವರು ಪ್ರವೇಶಿಸಿ ಹುಡುಕುವಲ್ಲಿ ನವಾಬರೂ ನಾರಾಯಣದಾಸನೂ ಸಿಕ್ಕದೆ ತಲೆ ತಪ್ಪಿಸಿಕೊಂಡರು ಮರದಸಾಮಾನು, ಗಾಡಿಗಳು, ಕುದುರೆಜೀನು ಮುಂತಾದವುಗಳೆಲ್ಲಾ ಸಿಕ್ಕಿದವು ಈಗ ಅವರಿಬ್ಬರನ್ನೂ ಹಿಡಿಯಬೇಕೆಂದು ಊರೂರುಗಳಿಗೆ ವರ್ತಮಾನ ಕೊಟ್ಟಿದ್ದಾರೆ.

ಇಂಗ್ಲೀಷ್ ಲೆಟರ್ ಲಾಕ್ ಎಂಬ ಅಕ್ಷರಬೀಗಗಳು



ಕಾಸ್ಪೆಟ, ಬೀರುಗಳಿಗೂ, ಹಣದ ಪೆಟ್ಟಿಗೆಗಳಿಗೂ ಉಪಯೋಗ ವಾಚಕವುಗಳು ಈ ಬೀಗಗಳಿಗೆ ಕೈಗಳಿಲ್ಲ. ಬೀಗದ ಮೇಲೆ ಅಚ್ಚಿರುವ ಅಕ್ಷರಗಳನ್ನು ಯೋಚಿಸಿರುವ ಪ್ರಕಾರ ಸೇರಿಸಿ ತಿರುಗಿಸಿದಲ್ಲಿ ತೆಗೆಯಲ್ಪಡುವದು. ಇಲ್ಲದಿದ್ದರೆ ಎಷ್ಟು ವರ್ಷ ಮಾಡಿದರೂ ತೆಗೆಯಲ್ಪಡಲಾರದು. ಪರಸ್ಥಳದ ಪ್ರಯಾಣಿಕರಿಗೆ ಬಹಳ ಉಪಯೋಗವಾದದ್ದು.

ಇದರ ಕ್ರಯ 3 ಸುತ್ತುಳ್ಳದ್ದು ಆಣೆ 7 4 ಸುತ್ತುಳ್ಳದ್ದು ಆಣೆ 9
5 „ ಆಣೆ 11 „ ಆಣೆ 13

ವಿಕ್ಟೋರಿಯಾ ಯನ್ನುವ ಲೀವರು ಘಡಿಯಾರ.

ಬಹಳ ಸ್ವಲ್ಪಕ್ರಯ! ಹೆಚ್ಚು ಬಾಳಿಕೆ!! ಹೊಸದಾಗಿ ಸೀಮೆಯಿಂದ ಬಂದಿದೆ!!

ಬಹಳ ಚಿಕ್ಕದಾಗಿಯೂ ನೋಟಕ್ಕೆ ಅಂದವಾಗಿಯೂ ಇರುವದು ಇದರ ಬೆಲೆ ಸರಪಳಿ ಸಹಿತ, ರೂ. 2—1—0.



ಸ್ನೇಹಿತರುಗಳೇ, ನೀವು ಇದುವರೆಗೂ ಯಷ್ಟೋ ಘಡಿಯಾರಗಳನ್ನು ಖರೀದಿ ಮಾಡಿ ಪರೀಕ್ಷಿಸಿಯೂ ಇರಬಹುದು. ಈ ಚಿತ್ರದಲ್ಲಿ ಕಾಣುವ ವಿಕ್ಟೋರಿಯಾ ಯನ್ನುವ ಚಿಕ್ಕ ಘಡಿಯಾರವು ಹೊಸದಾಗಿ ಸೀಮೆಯಿಂದ ಬಂದಿದೆ ... ಸರಪಳಿ ಸಮೇತ ಯಿದು 2-4-0 ಗೆ ಕೊಡಲ್ಪಡುತ್ತೆ. ... ಪಡಿಸಲಾರದು, ಇದರ ಬೆಲೆ ರೂ 2—4—0

ರೈಲ್ವೇಗಾರ್ಡುಗಳ ಲೀವರು ಟೈಂಪೀಸ್ ಘಡಿಯಾರ

ಅದಕ್ಕೆ 4 ವರುಷ ಗ್ಯಾರಂಟಿ ಕೊಡಲ್ಪಡುತ್ತದೆ.

ಇದರ ಮಾಮೂಲು ಬೆಲೆ ರೂ. 5—0—0 ಯಿಗ ರೂ. 3—0—1 ಕ್ಕೆ ಕೊಡಲ್ಪಡುತ್ತೆ.



ಅಭಿಮಾನಿಗಳೇ! ಯಿ ಘಡಿಯಾರದ ಹೆಸರನ್ನು ಯಾವಾಗ ಲಾದರೂ ಕೇಳಿದ್ದೀರಾ? ಯಿದು ಯಾವ ... ನಿಮ್ಮ ಸ್ವಂತ ... ಯೀ ಘಡಿಯಾರವನ್ನು ಉಪಯೋಗಿಸುವದಲ್ಲದೆ ತಪ್ಪದೆ ಮಿತ್ರರುಗಳಿಗೆಲ್ಲಾ ತೆಗೆದುಕೊಳ್ಳುವಂತೆ ಪ್ರೋತ್ಸಾಹ ಪಡಿಸುವುದರಲ್ಲಿ ಯಾವ ಸಂದೇಹವೂ ಇಲ್ಲಾ. ಅಲ್ಲದೆ ಯಿ ಘಡಿಯಾರವು ಪ್ರತಿ ...

ಪಟ್ಟಣಗಳಲ್ಲಿಯೂ ಯಿರಬೇಕೆಂಬ ಪೂರ್ವೋಕ್ತದಿಂದ ಬೆಲೆಯನ್ನು ತಗ್ಗಿಸಿ ಹಾಕಿರುತ್ತೆ. ಇನ್ನು ಸ್ವಲ್ಪ ದಿನಗಳವರೆಗೆ ಮಾತ್ರ, ಯಿ ಬೆಲೆಗೆ ಕೊಡಲ್ಪಡುತ್ತೆ.

ತ್ವರೆಮಾಡಿ. ತ್ವರೆಮಾಡಿ. ತಡಮಾಡಬೇಡಿ. ತಡಮಾಡಬೇಡಿ.

ಗಂಟೆ ಹೊಡೆಯುವ ಕ್ಯಾರೇಜ್ ಘಡಿಯಾರ.



ಈ ಗಡಿಯಾರಗಳಲ್ಲಿ ಗಂಟೆ ಹೊಡೆಯುವದೂ, ಅಲಾರಂ ಹೊಡೆಯುವದೂ, ... ಯಿದು ಯಾವ ... ದಳದೇಶಕ್ಕೆ ... ಬಹಳ ಕಡಿಮ್ಮೆಯಾಗಿದೆ.

ನಂ. 7 ಘಂಟೆ ಅರ್ಧಘಂಟೆ ಹೊಡೆಯುವದು ರೂ 1 12-0
ನಂ 58 „ ಅಲಾರಂ ರೂ 5- 4-0
ನಂ 6 ಬೇಕಾದಾಗ ಬೇಗ ಕೊಟ್ಟಲ್ಲಿ ಅಲಾರಂ ಬಿಡಲಾಗಿ 1 ನಿಮಿಷ ಕಾಲವಾದ್ಯ ಬಾರಿಸುವದು 6 0-0

ತಮಾಷೆಯಾದ ರಬ್ಬರ್ ಹಾವು.

ಇದು ರಬ್ಬರಿಂದ ತಯಾರಿಸಿದ್ದು ... ನಿಜವಾದ ಹಾವೆಂದು ... ಇದು ಜೀವದ ಪ್ರಾಣಿಯಂತೆಯೇ ಯಿರುವುದು.

ಇದರ ಕ್ರಯ ಆಣೆ 8

ಫೌಂಟನ್ ಪೆನ್ ನಾಗಳು.



ನಾವು ಉಪಯೋಗಿಸುತ್ತಿರುವ ಸ್ಟೀಲ್ ಪೆನ್ನುಗಳನ್ನು ... ಕಷ್ಟವಿಲ್ಲದೆ ... ಬರೆಯಲು ಮನಸ್ಸು ಒಲಿಯುತ್ತೆ.

ಇದರ ಕ್ರಯ ರೂ. 0 - 14 - 0.
ಇಂಕಿ ಬುಡ್ಡಿ 1-ಕ್ಕೆ ರೂ. 0 - 6 - 0.

ಪೆಟ್ಟಿಗೆಯ ಸೇನಾವಿಗೆ ಹಾಕತಕ್ಕ ಉ ಮತ್ತು ಭಂಗಾರದಿಂದ ತಯಾರಿಸಿದ್ದು ಮೆಟ್ಟುಳ್ಳ ೧-ಕ್ಕೆ 1—12—0.

ಮ್ಯಾಜಿಕ್ ಬಾಕ್ಸ್ ಎಂಬ ಮರ್ಮದ ಪೆಟ್ಟಿಗೆ.

ಈ ಪೆಟ್ಟಿಗೆಯು ನಿಕ್ಕಲ್ ಬೆಳ್ಳಿಯಿಂದ ತಯಾರಿಸಿದ್ದು ಇದರ ಪ್ರಕಾರವಾಗಿ ... ವಸ್ತುಗಳನ್ನು ... ಪೆಟ್ಟಿಗೆಯಲ್ಲಿ ಇಟ್ಟು ... ಬಹಳ ಆಶ್ಚರ್ಯಪಡುವರು.

ಇದರ ಕ್ರಯ 1-ಕ್ಕೆ ಆಣೆ 7

ಫೋಟೋಗ್ರಾಫ್ ಉಂಗರಗಳು.

7 ಕಲ್ಲಿನ ಉಂಗರ 1 ಕಲ್ಲಿನ ಉಂಗರ

ಈ ಉಂಗರ ಎಲೆಕ್ಟ್ರಿಕ್ ಭಂಗಾರದಿಂದ ತಯಾರಿಸಿ ... ಕೆಂಪು, ಹಸರ, ಮತ್ತು ... ಇರುತ್ತದೆ.

ಈ ಉಂಗರಗಳ ಪಕ್ಕದಲ್ಲಿ ... ಬಹಳ ಆಶ್ಚರ್ಯವಾಗುವದು.

ಇದರ ಬೆಲೆ 7 ಕಲ್ಲಿನ ಫೋಟೋಗ್ರಾಫ್ ಉಂಗರ 1-ಕ್ಕೆ ಆಣೆ 10
„ 1 ಕಲ್ಲಿನ ಉಂಗರ 1-ಕ್ಕೆ ಆಣೆ 6

ಎಮ್. ಪಿ. ಜಂಟು

ಸುಗಂಧ ಮುಕುತಿ ಪುಡಿ.

ಈ ಹೆಸರು ... ಪ್ರಖ್ಯಾತ ... ವ್ಯಾಧಿಗಳು ... ತಲೆನೋವು, ತಲೆ ತಿರುಗುವಿಕೆ, ... ನಿವಾರಿಸುವ ... ಬಾಗ ...

ಭಂಗಪಟ್ಟು 96 ವಿಧವಾದ ವ್ಯಾಧಿಗಳನ್ನೂ ಮೂಗಿನ ಸಂಬಂಧವಾದ ವ್ಯಾಧಿಗಳನ್ನೂ ... ನಸ್ಯ ಸುಗಂಧಪೂರಿಯು ಒಂದು ಚಿಟಿಕೆಯನ್ನು ಸೇದಿದರೆ ಆ ಪುಡಿ ... ಸುವಾಸನೆ ಯಾಗುವದು.

ಇದನ್ನು ಅನೇಕಮಂದಿ ದೊಡ್ಡ ಮನುಷ್ಯರು ತಮ್ಮ ... ಯಾವ ಕಾಲಕ್ಕೂ ... ನಿದವಾದ ಕೇಡು ಸಂಭವಿಸಲಾರದು.

ಸೀಸಾ 1-ಕ್ಕೆ ಆಣೆ 4 ವಿ ಪಿ ಚಾರ್ಜು ಸೀಸಾ 1-ಕ್ಕೆ ಆಣೆ 3
ಡಜನ್ 1ಕ್ಕೆ ರೂ 2 2 0 ವಿ ಪಿ ಚಾರ್ಜು ಡಜನ್ 1ಕ್ಕೆ ಆಣೆ

ಟ್ರ್ಯಾವಲ ರ್ಸ್ ಟಂ ಬ್ಲ ರು ಗ ಳು.

ಈ ಲೋಟಗಳು ಬಹಳ ಚಿದ ತ್ವರವಾಗಿ ಪರ್ಷಿಯನ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ... ಅಡಕವಾದ ಜೇಬಿನಲ್ಲಿ ಹಾಕಿಕೊಳ್ಳಬಹುದು.

ಇದರ ಬೆಲೆ 1ಕ್ಕೆ ... ರೂ 1 4 0

ಸೇಫ್ಟಿರೇಜರ್ ಯಂದರೆ ಕ್ಷೌರದಕತ್ತಿ.

ಅನೇಕ ಕಡೆಗಳಲ್ಲಿ ನಮ್ಮ ಕ್ಷೌರಿಕರು ಶೆಕ್ಕದೆಯೂ ... ಯಾವುದರಲ್ಲಿ ... ಕ್ಷೌರ ಮಾಡಿಕೊಳ್ಳುವವರಿಗೆ ... ನಮಗೆ ನಾವೇ ... ಸಲಕರಿಸಿ ಪರೀಕ್ಷಿಸಿ ನೋಡಿದರೆ ತಿಳಿಯುವದು.

ಇದರ ಬೆಲೆ 1-ಕ್ಕೆ ರೂ, 1—2—0

ಹೆತ್ತವರೇ ತಮ್ಮ ಸ್ವಂತ ಮಕ್ಕಳನ್ನು ಕಾಪಾಡದ ಇರುವಾಗ ದಯಾಳುಗಳಾದ ಸರ್ಕಾರದವರು ಅವರನ್ನು ಕಾಪಾಡುವುದಕ್ಕೆ ಒಂದು ಕಾನೂನು ಜಾರಿಗೆ ತಂದಿರುವುದನ್ನು ನಾವು ನೋಡಿ ಬಹಳ ಸಂತೋಷಪಡುತ್ತೇವೆ. ಹೆಣ್ಣು ಮಕ್ಕಳನ್ನು ಖಂಡೋಬ ಮೊದಲಾದ ದೇವರುಗಳಿಗೆ ದಾಸಿಯರನ್ನಾಗಿ ಬಿಡುವವರು ಶಿಕ್ಷೆಗೆ ಗುರಿಯಾಗುವರೆಂದು ಇದಕ್ಕೆ ಮುಂಚೆ ಪ್ರಕಟವಾಗಿದೆ. ಇಂತಹ ದೇವರುಗಳು ದೇವರುಗಳೇ ಅಲ್ಲ. ಇವುಗಳೆಲ್ಲಾ ದುಷ್ಟರು ಕಲ್ಪಿಸಿರುವ ಕಾರ್ಯಗಳಾಗಿರುತ್ತವೆ. ಇಂತಹ ಕಾಡು ದೇವರುಗಳ ಆರಾಧನೆ ಎಲ್ಲಾ ನಿರ್ಮೂಲವಾಗುವ ಆ ಒಳ್ಳೆಯ ಕಾಲವು ಬೇಗನೆ ಬಂದು ಪವಿತ್ರನೂ ಸರ್ವರ ಸ್ತೋತ್ರಗಳನ್ನು ಹೊಂದುವುದಕ್ಕೆ ಅರ್ಹನೂ ಆಗಿರುವ ಆ ಒಬ್ಬನೇ ನಿಜದೇವರನ್ನು ಎಲ್ಲರೂ ಆರಾಧನೆಮಾಡುವವರಾಗಲಿ. ಮಕ್ಕಳನ್ನು ಪ್ರೀತಿಸುವವನೂ ವಿಧವೆಗಳ ಸಂರಕ್ಷಕನೂ ಅನಾಥರ ನಾಥನೂ ಆತನೇ ಆಗಿರುತ್ತಾನೆ.

ಒಳದೇಶದ ವೃತ್ತಾಂತಗಳು.

ದಿವಾನ್ ಮೆ|| ಟಿ ಆನಂದರಾವ್, ಸಿ ಐ ಇ. ಯವರು ನೆನ್ನೆ ಮೆಯಿಲ್ ಗಾಡಿಯಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡುವವರಾಗಿದ್ದರು.

* * *

ಗಳೆದ ವಾರ ರಾಜಧಾನಿಯಲ್ಲಿ 2-3 ಹದ ಮಳೆಗಳಾದವು ಮೋಡವಾಡುವುದೂ, ಶೀತಗಾಳಿ ಬೀಸುವುದೂ ಪ್ರಾರಂಭವಾಗಿದೆ ಇದರಿಂದ ಹೊಲಗಳಲ್ಲಿ ಈ ಸಾರಿ ಪ್ರಮಾಣಗಳು ವಿಶೇಷವಾಗಿ ಬರಬಹುದೆಂದು ಊಹಿಸಲ್ಪಟ್ಟಿದೆ.

* * *

ಬೆಂಗಳೂರು ದಂಡಿನ ವರ್ತಕ ಸಂಘದವರು ಕಳೆದ ವಾರ ಸಭೆ ಸೇರಿ ವ್ಯಾಪಾರದ ಸೌಕರ್ಯಕ್ಕಾಗಿ ಸಿಟಿಯಿಂದ ದಂಡಿನ ಸ್ಟೇಷನ್ ತನಕ ರೈಲ್ ರಸ್ತೆಯನ್ನು ಹಾಕಿಸಿಕೊಡಬೇಕೆಂದು ಇಂಡಿಯಾ ಗವರ್ನ್ಮೆಂಟಿಗೆ ಬ್ರಿಟಿಷ್ ರೆಸಿಡೆಂಟರ ಮೂಲಕ ಅರಿಕೆ ಮಾಡಿಕೊಂಡಿದಾರೆ.

* * *

ಕಳೆದ ಸೋಮವಾರ ಮಧ್ಯಾಹ್ನ ಸುಮಾರು 12 ಗಂಟೆಗೆ ಶ್ರೀಮನ್ಮಹಾರಾಜರವರು ಯುವರಾಜರವರ ಸಮೇತ ರಾಜಧಾನಿಯಿಂದ ಮೋಟಾರ್ ಗಾಡಿಗಳ ಮೇಲೆ ನಂಜನಗೂಡು ಮಾರ್ಗವಾಗಿ ನೀಲಗಿರಿಗೆ ದಯಮಾಡಿದರು ಇನ್ನೊಂದು ವಾರದೊಳಗಾಗಿ ಅವರು ವಾಪಸು ಚಿತ್ತೈಸುವವರಾಗಿದಾರೆ.

* * *

ನಮ್ಮ ಮೈಸೂರು ಸೀಮೆಯಲ್ಲೆಲ್ಲಾ ಒಂದೇ ತರದ ಅಳತೆ ಮತ್ತು ತೂಕಗಳ ಕಾನೂನನ್ನು ಬರುವ ಜುಲೈ 1 ನೆಯ ತಾರೀಖಿನ ಲಾಗಾಯ್ತು ಜಾರಿಗೆ ತರಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದದ್ದು ಸರಿಯಷ್ಟೆ. ಈಗ ಸದರಿ ಕಾನೂನನ್ನು ಬರುವ ಅಕ್ಟೋಬರ್ 1 ನೆಯ ತಾರೀಖಿನ ಲಾಗಾಯ್ತು ಜಾರಿಗೆ ತರುವವರಾಗಿದಾರೆ

* * *

ಕಳೆದ ವಾರ ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಛಾಂಪಿಯನ್ ರೀಫ್ ಗಣಿಪ್ರಾಂತ್ಯದಲ್ಲಿ ಭೂಗರ್ಭದೊಳಗಣ ಗಾಳಿಯ ಸಂಚಾರದಿಂದ ಭೂಮಿಯೆಲ್ಲಾ ಬಹಳವಾಗಿ ಅದುರಿತು ಇದರಿಂದ ಅನೇಕ ಕಟ್ಟಡಗಳು ಅದುರಿ ಸ್ವಲ್ಪ ನಷ್ಟಹೊಂದಿದವು ಗಣಿ ಕಂಪನಿಯವರಿಗೆ ತುಂಬಾ ನಷ್ಟವಾಯಿತು. ಆದರೆ ಈ ಅನಾಹುತದಿಂದ ಪ್ರಾಣನಷ್ಟವೇನೂ ಆಗಲಿಲ್ಲವೆಂದು ತಿಳಿದುಬಂದಿದೆ

* * *

ರಾಜಧಾನಿಯಲ್ಲಿ ಮಹಾರಾಜರವರ ವರ್ಧಂತಿ ಕಟ್ಲೆಯ ಸಂಬಂಧದಲ್ಲಿ ನಡೆಯುತ್ತಿದ್ದ ಕುದುರೆ ಜೂಜು, ಸ್ಪೋರ್ಟ್ ಪಂದ್ಯಗಳು ಈ ತಿಂಗಳ ತಾ 25 ನೇ ಮಂಗಳವಾರದಿಂದ ಪ್ರಾರಂಭವಾಗುವವು ಸುಮಾರು 110 ಮಂದಿ ಯೂರೋಪಿಯನ್ ಅತಿಥಿಗಳು ತಾ 24ಕ್ಕೆ ಸ್ಪೆಷಲ್ ರೈಲಿನಲ್ಲಿ ಬಂದು, ಒಂದು ವಾರ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಜುಲೈ ತಾ. 1ರಲ್ಲಿ ವಾಪಸು ತೆರಳುವರು

* * *

ಕಳೆದ ಮೇ ತಾ 24ಕ್ಕೆ ಆಖೈರಾದ ಒಂದು ವಾರದಲ್ಲಿ ಸಂಸ್ಥಾನದಲ್ಲಿ 927 ಜನರಿಗೆ ವಾಂತಿಭೇದಿ ಉಪದ್ರ ತಗಲಿ 514 ಮರಣಗಳಾದವೆಂದೂ, ತಾ. 31ಕ್ಕೆ ಆಖೈರಾದ ಒಂದು ವಾರದಲ್ಲಿ 413 ಜನರಿಗೆ ಈ ರೋಗ ತಗಲಿ 254 ಜನರು ತೀರಿಹೋದರೆಂದೂ ತಿಳಿದು ವಿಷಾದಪಡುತ್ತೇವೆ. ಈ ರೋಗವು ಮೊದಲನೇ ವಾರ 170 ಗ್ರಾಮಗಳಲ್ಲೂ, ಎರಡನೇ ವಾರ 114 ಗ್ರಾಮಗಳಲ್ಲೂ ವ್ಯಾಪನೆಯಾಗಿತ್ತು

* * *

ಜಗನ್ನಾಥ (ಪೂರಿ) ದಲ್ಲಿ ಜುಲೈ ತಾ 10 ರಿಂದ ಶ್ರೀ ವೈಷ್ಣವ ಮಹಾಸಭೆಯೊಂದು ನಡೆಯುವುದು. ಗದಾಧರ ರಾಮಾನುಜದಾಸರೆಂಬ ಮಹಂತರವರು ಸಭೆಯ ಪ್ರೆಸಿಡೆಂಟರಾಗಿಯೂ, ಪಿ ಎಲ್ ದಾಮೋದರ ರಾಮಾನುಜದಾಸರವರು ಸೆಕ್ರೆಟರಿಯಾಗಿಯೂ ನೇಮಕವಾಗಿದಾರೆ. ಛಾಂದಿ ತಲಾಪ್ ಮೈದಾನದಲ್ಲಿ 1,000 ಪ್ರತಿನಿಧಿಗಳು ಕೂಡುವಂಥಾ ಮಂಟಪವೂ, ಆಗರ ಭೋಜನಾದಿಗಳಿಗೆ ಸೌಕರ್ಯಗಳೂ ಏರ್ಪಾಡಾಗುತ್ತಿವೆ

* * *

ಕಳೆದ ಶನಿವಾರ ಸಾಯಂಕಾಲ ಇಲ್ಲಿನ ಕೋಟೆಯೊಳಗೆ ನುಗ್ಗೆಹಳ್ಳಿ ಚೆನ್ನರಾಜೇ ಅರಸಿನವರನ್ನು ಒಂದು ಸರ್ಪ ಕಾಲಿಗೆ ಸುತ್ತಿಕೊಂಡು ಕಡಿಯಿತು. ಅವರಿಗೆ ಜ್ಞಾನತಪ್ಪಿ ಕಾಯಿಸಿದ ಗುಳವನ್ನು ಕಡಿದ ಸ್ಥಳಕ್ಕೆ ಎಷ್ಟು ಒತ್ತಿದರೂ ಪ್ರಜ್ಞೆ ಬರಲಿಲ್ಲ. ಸುಣ್ಣದ ಕೇರಿಯಲ್ಲಿರುವ ಅಬ್ದುಲ್ಲಾ ಸಾಬರನ್ನು ಕರಸಿ ಅವರಿಂದ ಇಲಾಜು ಮಾಡಿಸಿದಾಗ ವಿಷವು ಕಡಿದ ಸ್ಥಳದಿಂದ ಸೋರಿಹೋಗಿ, ಅವರಿಗೆ ಪ್ರಜ್ಞೆಯುಂಟಾಗಿ ಈಗ ಸುಖವಾಗಿದಾರೆಂದು ಕೇಳುತ್ತೇವೆ.

* * *

ಸುಮಾರು ಹದಿನೈದು ತಿಂಗಳ ಹಿಂದೆ ರಾಜಧಾನಿಯ ಕೋಟೆಯಲ್ಲಿರುವ ಮ|| ಮ. ಕೃಷ್ಣಶೆಟ್ಟರ ಬಾಬತು ಬಹು ಬೆಲೆಯುಳ್ಳ ಪಳು ವಜ್ರದ ಕಮಲಗಳು ಕಳುವಾಗಿದ್ದವು ಅವರು ಪೋಲೀಸಿಗೆ ತಿಳಿಸದೆ ತಾವೇ ಅಂದಿನಿಂದ ಗುಮಾನಿ ಇಟ್ಟು ನೋಡುತ್ತಾ ಬಂದರು. ಕಳೆದ ವಾರ ಕಾಳಮ್ಮನಗುಡಿ ಬೀದಿಯಲ್ಲಿ ಚೌರ್ಯಸಿಟ್ಟೆಭಿಕಟ್ಟಿ ಎಂಬಾತನ ಬಳಿಯಲ್ಲಿ ಅವು ಸಿಕ್ಕಿದವೆಂದು ಅವರು ಪತ್ತೆಮಾಡಿ, ಪೋಲೀಸಿಗೆ ತಿಳಿಸಿರುವುದಾಗಿಯೂ, ಇವರು ತನಿಖೆ ಮಾಡುತ್ತಿದಾರೆಂದೂ ಕೇಳುತ್ತೇವೆ.

* * *

ನಮ್ಮ ಮೈಸೂರು ಪ್ರಾಂತ್ಯದ ರೈತಪ್ರಜೆಗಳಲ್ಲಿ ಅಕಸ್ಮಾತ್ ಬೆಂಕಿಯಿಂದ ಮನೆ ಮಠಗಳನ್ನು ಕಳೆದುಕೊಂಡವರಿಗೆ ಪುನಃ ಮನೆಗಳನ್ನು ಕಟ್ಟಿಕೊಳಲು ಅದಕ್ಕೆ ಬೇಕಾದ ಮರದ ಸಾಮಾನುಗಳನ್ನು ಮಾಫಿಯಾಗಿ ಕೊಡಲು ಒಪ್ಪಿರುವುದಾಗಿಯೂ, ಸಾಮಾನುಗಳ ಬೆಲೆಯು 25 ರೂಪಾಯಿಗೆ ಮೀರದೇ ಇದ್ದರೆ ಆಯಾಯ ಸ್ಟೇಟ್ ಫಾರೆಸ್ಟ್ ಕನ್ಸರ್ವೇಟರವರೇ ಕೊಡಬಹುದೆಂತಲೂ, ಅದಕ್ಕೆ ಮೀರಿದ್ದಲ್ಲಿ ಆಯಾಯ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳ ಅನುಮತಿಯನ್ನು ಪಡೆದು ತೆಗೆದುಕೊಳ್ಳಬಹುದೆಂತಲೂ ಸರ್ಕಾರದವರು ಪ್ರಕಟಿಸಿರುತ್ತಾರೆ.

* * *

ನಮ್ಮ ಮೈಸೂರು ಸಂಸ್ಥಾನದ ಯಾವ ನಗರ ಗ್ರಾಮದಲ್ಲಿಯೇ ಆಗಲಿ ಅಂಟುಜಾಡ್ಯದಿಂದ ದನಕರುಗಳು ಸತ್ತುಹೋದರೆ ಅವುಗಳ ಮಾಲೀಕರು ಶವಗಳನ್ನು ಬೀದಿಯಲ್ಲಿ ಎಸೆದುಬಿಡದೆ ಬೆಂಕಿಯಿಂದ ಸುಟ್ಟುಬಿಡಬೇಕೆಂತಲೂ, ಮಾಲೀಕರಿಲ್ಲದೇ ಇದ್ದಲ್ಲಿ ಆಯಾಯ ವಿಲೇಜ್ ಬೋರ್ಡಿನವರೇ ಮಾಡತಕ್ಕದ್ದೆಂತಲೂ, ಮಾಲೀಕರಿದ್ದೂ ಆ ಸಮಯದಲ್ಲಿ ಹಾಜರಿಲ್ಲದೇ ಇದ್ದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಖರ್ಚುಹಾಕಿ ಮಾಡಿಸಿ ಆ ಮೇಲೆ ಖರ್ಚಿನ ಬಾಬತು ಹಣವನ್ನು ಮಾಲೀಕನಿಂದ ವಸೂಲು ಮಾಡಬಹುದೆಂತಲೂ, ಮಾಲೀಕನು ಆ ಸಮಯದಲ್ಲಿ ಹಾಜರಿದ್ದೂ ಸುಟ್ಟುಹಾಕುವುದಕ್ಕೆ ಉದಾಸೀನ ಮಾಡಿದರೆ ಅಂಥಾವನು ಶಿಕ್ಷೆಗೆ ಗುರಿಯಾಗುತ್ತಾನೆಂತಲೂ ನಮ್ಮ ಸರ್ಕಾರದವರು ಪ್ರಕಟಿಸಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ತಾಲ್ಲೂಕು ಹೊಲತಿಹಾಳು, ದೊಂಬ್ರು ಬೈರನಹಳ್ಳಿ, ಮಲ್ಲಿಗೆರೆ, ಹಿರಿಯೂರು ಗ್ರಾಮಗಳಲ್ಲೂ; ಕುಣಿಗಲ್ ತಾಲ್ಲೂಕು ಕುತ್ತದಹಳ್ಳಿ, ತಿಪ್ಟೂರು ತಾಲ್ಲೂಕು ಕಳ್ಳರೆ, ಚನ್ನರಾಯಪಟ್ಟಣ ತಾಲ್ಲೂಕು ಕಮ್ಮಹಳ್ಳಿ ಮತ್ತು ಹುಲ್ಲೇನಹಳ್ಳಿ—ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ.

ಮೈಸೂರ್ ತಾಲ್ಲೂಕ್ ಅಮಲ್ದಾರ್ ಮೆ|| ಮಹಮದ್ ಪೀರ್ ಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿ ಮಾಡಿದೆ.

ಹುಣಸೂರು ರೇಂಜ್ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮೆ|| ಎಂ. ವೆಂಕಟನರಸಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಡಿಸ್ಟ್ರಿಕ್ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮೆ|| ಬಿ. ದಾಸಪ್ಪನವರಿಗೆ ಏಪ್ರಿಲ್ ತಾ. 3 ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಅವರು ರಜದಿಂದ ವಾಪಸು ಬಂದು ಕೆಲಸದ ಛಾರ್ಜನ್ನು ವಹಿಸಿಕೊಳ್ಳಬೇಕೆಂದು ಹುಕುಂ ಕೊಡಲಾಗಿದೆ.

ರಾಯಬಹದೂರ್ ಮೆ|| ಎಂ ಮುತ್ತಣ್ಣನವರು ಮೆ|| ಬಿ. ಹೀರಾಸಿಂಗ್ ಯವರಿಂದ ಫಾರೆಸ್ಟ್ ಕನ್ಸರ್ವೇಟರ್ ಕೆಲಸದ ಛಾರ್ಜನ್ನು ಮೇ ತಾ. 20 ರಲ್ಲಿ ವಹಿಸಿಕೊಂಡಿದಾರೆ.

ವಾರಿಕಣಿವೆ ಡಿವಿಜನ್ ಅ|| ಇಂಜನಿಯರ್ ಮೆ|| ಎಸ್. ರಾಮಸ್ವಾಮಿ ಐಯರವರಿಗೆ ಜೂನ್ ತಾ. 7 ರಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದ ಉತ್ತರ ವಿಭಾಗದಲ್ಲಿ ಕೆಲವು ಕಾಲದಿಂದ ಡೆಂಗ್ಯು (ಡೆಂಕಿಜ್ವರ) ಎಂಬ ಜ್ವರವು ಕಾಣಿಸಿಕೊಂಡಿದೆ. ಅಲ್ಲಿನ ಕೆಲವರು ಜಹಜು ಹಡಗುಗಳಲ್ಲಿ ಕೆಲಸಮಾಡತಕ್ಕವರಾದ್ದರಿಂದ ಇವರ ಮೂಲಕ ಈ ಜ್ವರವು ಇತರ ಕಡೆಗಳಿಗೂ ವ್ಯಾಪನೆಯಾಗಬಹುದೆಂದು ಹೇಳುತ್ತಾರೆ.

* * *

ಲಂಡನ್ ಪಟ್ಟಣದಲ್ಲಿ ಮೆ|| ಸ್ಟ್ರಾಫ಼ೊ ಎಂಬಾತನು ತನ್ನ ಹೆಂಡತಿ ಮತ್ತು ಗಾಯಕವಾಡಿ ಮಹಾರಾಜರವರ ಮೇಲೆ ವಿವಾಹ ಪರಿತ್ಯಾಗದ ವಿಷಯವಾಗಿ ದಾವಾ ಮಾಡಿದ್ದನಷ್ಟೆ. ಈಚೆಗೆ ವಾದಿ ಪ್ರತಿವಾದಿಗಳು ರಾಜೀಮಾಡಿಕೊಂಡು ಮೊಕದ್ದಮೆಯನ್ನು ವಾಪಸು ಪಡೆದರೆಂದು ವರ್ತಮಾನ ಬಂದಿದೆ.

* * *

ನಾನಿಟಾಲಿನ ಪ್ರಜೆಗಳು ಕಳೆದ ಶುಕ್ರವಾರ ಒಂದು ಮಹಾಜನ ಸಭೆಯನ್ನು ನಡಿಸಿ ಹಿಂದೂ ಯೂನಿವರ್ಸಿಟಿ ಫಂಡಿಗೆ 60,000 ರೂಪಾಯಿ ಚಂದಾ ಕೂಡಿಸಿ ಕೊಡುತ್ತೇವೆಂದು ವಾಗ್ದಾನ ಮಾಡಿದರು. ಈ ಫಂಡನ್ನು ಕೂಡಿಸುವುದಕ್ಕಾಗಿ ನಿಂತಿರುವ ದರ್ಭಾಂಗ ಮಹಾರಾಜರವರು ಕಳೆದ ಶನಿವಾರ ಅಲ್ಲಿಂದ ಅಲಿಘಡಕ್ಕೆ ತೆರಳಿದರು

* * *

ಕಲ್ಲಿಕೋಟೆಯಲ್ಲಿರುವ ಹೈಕೋರ್ಟ್ ವಕೀಲ್ ಮೆ|| ಸಿ. ಕೃಷ್ಣನ್‌ರವರ ಸಹೋದರನಾದ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಸಿ. ಸಂಕುನ್ನಿ ಎಂಬಾತನು ಅವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟನು. ಆತನಿಗೆ ಇನ್ನೂ 30 ವರುಷ ವಾಯುರೋಗದ ಬಾಧೆ ತಡೆಯಲಾರದೆ ಆತ್ಮಹತ್ಯಮಾಡಿಕೊಂಡನೆಂದು ಕಾರಣ ಹೇಳುತ್ತಾರೆ.

* * *

ಸೌ|| ಯಾಮಿನಿ ಸೇನ್ ಎಂಬೊಬ್ಬ ಬಂಗಾಳಿ ಸ್ತ್ರೀಯು ಕಲ್ಕತ್ತಾ ಸರ್ವವಿದ್ಯಾಲಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಸೀಮೆಗೆ ಹೋಗಿ ಗ್ಲಾಸ್‌ಗೋ ಸರ್ವಕಲಾಶಾಲೆಯಲ್ಲಿ ವೈದ್ಯ ಪರೀಕ್ಷೆಯನ್ನು ಕೊಟ್ಟು ಪ್ಯಾಸಾಗಿರುತ್ತಾಳೆಂದು ಶುಭವರ್ತಮಾನ ಬಂದಿದೆ ಈ ಪರೀಕ್ಷೆಯಲ್ಲಿ ಹಿಂದುಸ್ಥಾನದ ಸ್ತ್ರೀಯರ್ಯಾರೂ ಇದುವರೆಗೆ ತೇರ್ಗಡೆಯಾಗಿಲ್ಲ

* * *

ಕಳೆದ 1 ನೇ ತಾ. ಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 1,560 ಜನರಿಗೆ ಪ್ಲೇಗ್ ತಗಲಿ, 1,301 ಜನರು ಆ ರೋಗದಲ್ಲಿ ಕಾಲವಾದರು. ಈ ಮರಣ ಸಂಖ್ಯೆಯ ವಿವರ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 88, ಮದರಾಸ್ 9, ಬಂಗಾಳಾ 36, ಬೀಹಾರ್ 176, ಸಂಯುಕ್ತ ಅಧಿಪತ್ಯಗಳು 284, ಪಂಜಾಬ್ 623, ಬರ್ಮಾ 10.

ಚಿಟಗಾಂಗ್ ಪಟ್ಟಣದಲ್ಲಿ ಒಂದು ಇನ್ಷೂರೆನ್ಸ್ (ಜೀವವಿಮೆ) ಕಂಪನಿಯವರು ಷೇರುದಾರರಾಗಿಯೂ ನೌಕರರಾಗಿಯೂ ಸೇರಿ ಸಾಮಾನ್ಯ ಪ್ರಜೆಗಳಿಂದ ಚಂದಾ ವಸೂಲ್ಮಾಡಿ ಮೋಸಮಾಡಿದರೆಂದು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು 12 ಮಂದಿ ಅಪರಾಧಿಗಳಿಗೆ ತಲಾ 8 ತಿಂಗಳಿಂದ 12 ತಿಂಗಳ ವರೆಗೆ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

* * *

ಪಂಜಾಬ್ ಅಧಿಪತ್ಯದ ಸರಹದ್ದು ಪ್ರಾಂತ್ಯದ ಪಠಾಣರು ಲಾಹೋರ್ ಪಟ್ಟಣಕ್ಕೆ ಬಂದು ಅಲ್ಲಿನ ಮಕ್ಕಳನ್ನು ಹೊತ್ತುಕೊಂಡು ಹೋಗುತ್ತಾರೆಂದು ಪ್ರಜೆಗಳಲ್ಲಿ ತುಂಬಾ ಗಾಬರಿಯುಂಟಾಗಿದೆ ಜನರು ತಮ್ಮ ಮಕ್ಕಳನ್ನು ಕಾವಲಿಲ್ಲದೆ ಮನೆಯಿಂದ ಹೊರಕ್ಕೆ ಕಳುಹಿಸುತ್ತಾ ಇಲ್ಲ. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಮೆಯಾಗಿರುತ್ತದೆ.

* * *

ಹಿಂದುಸ್ಥಾನದ ಹತ್ತಿಯು ಬೆಳೆದದ್ದು. ಇದರ ಧಾರಣೆ ಬಹಳ ಹೆಚ್ಚುತ್ತದೆ. ಇದನ್ನು ನೋಡಿ ಬೊಂಬಾಯಿನ ವರ್ತಕರು ಅಮೇರಿಕದಿಂದ 25,000 ಮೂಟೆಗಳ ಹತ್ತಿಯನ್ನು ಜಹಜಿನ ಮೇಲೆ ತರಿಸಿರುತ್ತಾರೆ ಧಾರಣೆಯು ಹೆಚ್ಚಲ್ಲ; ಹತ್ತಿಯೋನೋ ಉತ್ತಮವಾಗಿದೆ ಇನ್ನೂ ಹೆಚ್ಚಾಗಿ ಇದೇ ಹತ್ತಿ ಬರುವುದರಲ್ಲಿದೆ. ಈಗಲಾದರೋ ಹಿಂದುಸ್ಥಾನದ ಹತ್ತಿಯ ಧಾರಣೆ ಇಳಿದಿರುವುದು.

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕೇಚಾರಿನಲ್ಲಿ ದ್ವಾರಬಂದ್ ಎಂಬ ಟೀ ಸೊಪ್ಪಿನ ತೋಟದ ಕೂಲಿ ಆಳುಗಳು ದಂಗೆಯೆದ್ದು ಮಾಲೀಕರ ಮೇಲೆ ಬಿದ್ದು ದಾಂಧಳೆಮಾಡಿದರು. ಆ ಪೈಕಿ 23 ಮಂದಿ ಮುಖಂಡ ಆಳುಗಳನ್ನು ಹಿಡಿದು ವಿಚಾರಣೆಮಾಡಿದ್ದರಲ್ಲಿ ಅಪರಾಧ ರುಜುವಾತಾದದ್ದರಿಂದ ಅವರಿಗೆಲ್ಲಾ ತಲಾ 9 ತಿಂಗಳಿಂದ 3 ವರುಷಗಳ ತನಕ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

* * *

ಅಮೃತಸಾರದಲ್ಲಿ ಪ್ರಜೆಗಳ ಮುಖಂಡರಾಗಿದ್ದ ರಾಯಬಹದೂರ್ ಗಾಂಗರಮಲ್ ಎಂಬವರು ಕಳೆದ ವಾರ 70 ನೇ ವಯಸ್ಸಿನಲ್ಲಿ ಮೃತಪಟ್ಟರು. ಇವರು ಬಹು ಕಾಲದಿಂದ ಅಲ್ಲಿ ದಿವ್ಯವಾದ ರತ್ನಗಂಬಳಿಗಳನ್ನು ತಯಾರ್ಮಾಡುವ ಕಾರ್ಖಾನೆಯನ್ನಿಟ್ಟು ನಡಿಸುತ್ತಿದ್ದರು ಹಿಂದುಸ್ಥಾನಕ್ಕೆ ದಯಮಾಡಿದ ಕೆಲವು ವೈಸ್‌ರಾಯಿ ಪ್ರಭುಗಳು ಈ ಕಾರ್ಖಾನೆಗೆ ಹೋಗಿ ಅಲ್ಲಿ ನಡೆಯುವ ಕೆಲಸವನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟಿದಾರೆ.

* * *

ಪೂನಾ ಪಟ್ಟಣದಲ್ಲಿ ಮ|| ಬಾಲಗಂಗಾಧರ ತಿಲಕರವರ ಪತ್ನಿ ಸೌ|| ಸತ್ಯಭಾಮಾ ಬಾಯಿಯವರು ಕಳೆದ ಗುರುವಾರ ಸಮರಾತ್ರಿಯಲ್ಲಿ ಕಾಲವಾದರು. 1908 ನೇ ಜುಲೈ ತಾ 22 ರಲ್ಲಿ ಮ|| ತಿಲಕರವರಿಗೆ ರಾಜದ್ರೋಹದ ನಿಮಿತ್ತ ಆರು ವರುಷಗಳ ಸಜಾ ಆಯಿತೆಂದು ಕೇಳಿದಾರಭ್ಯ ಅವರ ಪತ್ನಿಯವರು ವ್ಯಸನಪಡುತ್ತಾ ಕಾಯಿಲೆ ಬಿದ್ದು ನರಳುತ್ತಿದ್ದರು ಆಕೆಗೆ 50 ವರುಷ ವಯಸ್ಸಾಗಿತ್ತು. ಇಬ್ಬರು ಗಂಡುಮಕ್ಕಳೂ, ಮೂರು ಮಂದಿ ಹೆಣ್ಣುಮಕ್ಕಳೂ ಇರುತ್ತಾರೆ.

* * *

ಕಲ್ಕತ್ತಾ ಪಟ್ಟಣದಲ್ಲಿ ಡಾಕ್ಟರ್ ಸುರೇಶಪ್ರಸಾದ ಸರ್ವಾಧಿಕಾರಿ ಎಂಬುವರು ತಮ್ಮ ಮೋಟಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ ಟ್ರಾಂ ಗಾಡಿಗೆ ಅಡ್ಡವಾಗಿ ಸಿಕ್ಕಿ ತಮ್ಮ ಮೋಟಾರ್ ಗಾಡಿಯನ್ನು ಮುರಿದುಕೊಂಡರು. ಈಚೆಗೆ ತಮಗಾದ ನಷ್ಟವನ್ನು ಕೊಡಿಸಬೇಕೆಂದು 4,300 ರೂಪಾಯಿಗೆ ಟ್ರಾಂವೇ ಕಂಪನಿಯವರ ಮೇಲೆ ದಾವಾ ಮಾಡಿದ್ದರಲ್ಲಿ ಜಡ್ಜಿಗಳು ಕಂಪನಿಯಿಂದ ಡಾಕ್ಟರಿಗೆ 2,700 ರೂಪಾಯಿ ದಾಖಾಜನ್ನೂ, ಅವರ ಕೋರ್ಟು ಖರ್ಚನ್ನೂ ಕೊಡಿಸಿರುತ್ತಾರೆ.

* * *

ಅಲಿಪುರದ ಸಿಡಿಮದ್ದಿನಗುಂಡಿನ ಮೊಕದ್ದಮೆಯಲ್ಲಿ ಹಿಂದೆ ಇಂದುಭೂಷಣರಾಯಿ ಎಂಬ ಅಪರಾಧಿಗೆ ಬಂಕೋಲ್ ಸಜಾ ಆಗಿ ಅವನನ್ನು ಅಂಡಮಾನ್ ದ್ವೀಪಕ್ಕೆ ರವಾನೆ ಮಾಡಿದ್ದರು ಇವನು ಬಂಕೋಲಿನಲ್ಲಿ ಆತ್ಮಹತ್ಯ ಮಾಡಿಕೊಂಡನೆಂದು ತಿಳಿಯಿತು, ಅವನ ಬಂಧುಗಳು ಕಾರಣವೇನೆಂದು ಕೇಳಿದ್ದಕ್ಕೆ ಅವನ ಜೊತೆಯ ಬಂದೀವಾನರು ಅವನನ್ನು ಕೊಂದುಹಾಕುತ್ತಾರೆಂಬದಾಗಿ ಭ್ರಾಂತಿಪಟ್ಟು ಅವನು ಆತ್ಮಹತ್ಯ ಮಾಡಿಕೊಂಡನೆಂದು ಸೂಪರಿಂಟೆಂಡೆಂಟರು ಜವಾಬು ಕಳುಹಿಸಿದಾರೆ.

* * *

ಲಾಹೋರ್ ಪಟ್ಟಣದಲ್ಲಿ ಪೋಲೀಸಿನವರು ಒಬ್ಬನನ್ನು ದಸ್ತಗಿರಿ ಮಾಡಿ, ಅವನಿಂದ ಅಪರಾಧದ ರುಜುವಾತು ಹೇಳಿಸಬೇಕೆಂದು ಅವನನ್ನು ಹೊಡೆದು ಬಡಿದು ಹಿಂಸೆಮಾಡಿದ್ದರಿಂದ ಅವನು ಸತ್ತುಹೋದನು. ಇದು ಮೊಕದ್ದಮೆ ಆಗಿ ಪೋಲೀಸಿನವರಿಗೆ ಸಜಾ ಶಿಕ್ಷೆ ವಿಧಿಸಲ್ಪಟ್ಟಿತು. ಮೃತಪಟ್ಟವನ ಹೆಂಡತಿಗೆ ಸರ್ಕಾರದಿಂದ 500 ರೂಪಾಯಿ ಪ್ರತಿಫಲ ಪಾವತಿಮಾಡಿ, ಪೋಲೀಸ್ ಅಪರಾಧಿಗಳಿಗೆ ವಿಧಿಸಿರುವ ಜುಲ್ಮಾನೆ ಹಣ ವಸೂಲಾದರೆ ಅದನ್ನೂ ಅವಳಿಗೆ ಕೊಡುವಂತೆ ಹುಕುಮು ಮಾಡಿದಾರೆ

* * *

ಸೂರತ್ತಿನಲ್ಲಿ ವಾಸಮಾಡುತ್ತಿರುವ ಚೆಕ್ಕಾ ನವಾಬರಾದ ನವಾಬ್ ಅಬ್ದುಲ್ ರಸೂಲ್ ಆಲಂ ಖಾನ್‌ರವರೂ, ಇವರ ಸೆಕ್ರೆಟರಿಯಾದ ನಾರಾಯಣದಾಸ್ ಸುಂದರಜಿಯವರೂ ಕೆಲವು ಕಾಲಕ್ಕೆ ಮುಂಚೆ ಬೊಂಬಾಯಿಗೆ ಬಂದು ದೊಡ್ಡ ಅಂಗಡಿಗಳಲ್ಲಿ 2,831 ರೂಪಾಯಿಗೆ ಮೂರು ಸಾರೋಟುಗಳನ್ನೂ, 932 ರೂಪಾಯಿನ ಮರದ ಸಾಮಾನುಗಳನ್ನೂ, 1,862 ರೂಪಾಯಿನ ನಗಗಳನ್ನೂ 800 ರೂಪಾಯಿನ ಜೀನು ಲಗಾಮು ಮುಂತಾದ ಸಾಮಾನುಗಳನ್ನೂ ಕೊಂಡುಕೊಂಡು, ಅವರಿಗೆಲ್ಲಾ ಮುಂದಿನ ತಾರೀಖು ಹಾಕಿ ಬ್ಯಾಂಕ್ ಛೆಕ್ಕುಗಳನ್ನು ಬರೆದುಕೊಟ್ಟು ಹೋದರು. ಅಂಗಡಿ ವರ್ತಕರು ಆ ತಾರೀಖಿನ ತನಕ ಸುಮ್ಮನಿದ್ದು ಛೆಕ್ಕನ್ನು ಬ್ಯಾಂಕಿಗೆ ತೋರಿಸಿದಾಗ ಬ್ಯಾಂಕಿನವರು ನವಾಬರ ಹಣವೇನೂ ಇಲ್ಲವೆಂದು ಹೇಳಿ ಛೆಕ್ಕನ್ನು ವಾಪಸ್ ಮಾಡಿದರು. ಆ ವರ್ತಕರು ಸೂರತ್ತಿಗೆ ಹೋಗಿ ಹಣ ವಸೂಲುಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟರೂ ಪ್ರಯೋಜನವಾಗದೆ ಹೋದಾಗ ಅವರು ಪೋಲೀಸಿಗೆ ತಿಳಿಸಿಬಿಟ್ಟರು. ಸೂರತ್ತಿನಲ್ಲಿರುವ ಬೇಗಂಬಾಗ್ ಎಂಬ ಅರಮನೆಯನ್ನು ಪೋಲೀಸಿನವರು ಪ್ರವೇಶಿಸಿ ಹುಡುಕುವಲ್ಲಿ ನವಾಬರೂ ನಾರಾಯಣದಾಸನೂ ಸಿಕ್ಕದೆ ತಲೆ ತಪ್ಪಿಸಿಕೊಂಡರು. ಮರದಸಾಮಾನು, ಗಾಡಿಗಳು, ಕುದುರೆಜೀನು ಮುಂತಾದವುಗಳೆಲ್ಲಾ ಸಿಕ್ಕಿದವು. ಈಗ ಅವರಿಬ್ಬರನ್ನೂ ಹಿಡಿಯಬೇಕೆಂದು ಊರೂರುಗಳಿಗೆ ವರ್ತಮಾನ ಕೊಟ್ಟಿದಾರೆ.

ಮೈಸೂರು ಸರ್ಕಾರಿ ಹುಕುಮು

ಜಂಟಿ ಪಟ್ಟೆಗಳು

ಜಂಟಿ ಪಟ್ಟೆಗಳನ್ನು ಕೊಡುವ ಪದ್ಧತಿಯನ್ನು ಪುನಃ ಜಾರೀಗೆ ತರಬೇಕೆಂಬ ವಿಚಾರದಲ್ಲಿ ಸರ್ಕಾರದವರು ಕಳೆದ ಮಾರ್ಚಿ ತಿಂಗಳಲ್ಲಿ ಕೊಟ್ಟಿರುವ ಹುಕುಮಿನ ಮುಖ್ಯಾಂಶವೇನೆಂದರೆ—ಪಟ್ಟೆಯು ಗೊತ್ತಾದ ಒಬ್ಬನ ಹೆಸರಿನಲ್ಲಿರುವುದು ಮಾತ್ರ ಅವನ ಹಕ್ಕನ್ನು ದೃಢಪಡಿಸುವುದಿಲ್ಲವೆಂದೂ, ಜಮೀನಿನ ಮೇಲಣ ಇತರರ ಹಕ್ಕಿಗೆ ಅದರಿಂದ ಕುಂದಕ ಬರುವುದಿಲ್ಲವೆಂದೂ ಅನೇಕ ವೇಳೆ ಗೊತ್ತುಮಾಡಲ್ಪಟ್ಟಿದೆ ತನ್ನ ಅನುಮತಿಯಿಲ್ಲದೆ ತನಗೆ ಹಕ್ಕಿರುವ ಜಮೀನನ್ನು ಕಂದಾಯದ ಬಾಕಿಗಾಗಿ ಹರಾಜು ಮಾಡದ ಹಾಗೆ ರಕ್ಷಿಸಿಕೊಳ್ಳಲು ಈಗಿರುವ ನಿಬಂಧನೆಗಳಲ್ಲಿ ಪಾಲುದಾರನಿಗೆ ಅನೇಕವಾದ ಸಾಧನಗಳಿವೆ (ಲ್ಯಾಂಡ್ ರೆವಿನ್ಯೂ ಕೋಡಿನ 77 ಮತ್ತು 78 ನೆಯ ಪ್ರಕರಣಗಳನ್ನೂ, ರೂಲ್ಸಿನ 10 ನೆಯ ನಿಬಂಧನೆಯನ್ನೂ ನೋಡುವುದು) ಮತ್ತು ಜಂಟೀ ಪಟ್ಟೆಗಳನ್ನು ಪುನಃ ಜಾರಿಯಲ್ಲಿ ತರುವುದರಿಂದ ಅವನಿಗೆ ಪ್ರಯೋಜನವಾಗುತ್ತದಿಲ್ಲ ಹಿಸ್ಸೆದಾರರು ಲ್ಯಾಂಡ್ ರೆವಿನ್ಯೂ ರೂಲ್ಸಿನ 75 ನೆಯ ನಿಬಂಧನೆಯ ಪ್ರಕಾರ ತಮ್ಮ ಹೆಸರುಗಳನ್ನು ರೆಜಿಸ್ಟರಿನಲ್ಲಿ ರಿಕಾರ್ಡು ಮಾಡಿಸಬಹುದಾದ ಪ್ರಯುಕ್ತ ಜಂಟಿಪಟ್ಟೆಗಳು ಯಾವ ಕಾರಣಕ್ಕೋಸ್ಕರ ಕೇಳಲ್ಪಟ್ಟಿವೆಯೋ ಅವುಗಳಲ್ಲನೇಕವು ಆ 75 ನೆಯ ನಿಬಂಧನೆಯಲ್ಲಿವೆ, ಇದಲ್ಲದೆ ಅವರು 10 ನೆಯ ನಿಬಂಧನೆಯ ಪ್ರಕಾರ ಯಾವ ಫೀಜನ್ನೂ ಕೊಡದೆ ತಮ್ಮ ಹೆಸರುಗಳನ್ನು ಒಂದು ಸ್ಪೆಷಲ್ ನೋಟೀಸ್ ರೆಜಿಸ್ಟರಿನಲ್ಲಿ ನಮೂದು ಮಾಡಿಸಿಕೊಳ್ಳಬಹುದು ಪ್ರತಿ ಹಿಸ್ಸೆದಾರನೂ ಕೊಡಬೇಕಾದ ಕಂದಾಯವನ್ನು ಗೊತ್ತುಮಾಡಲು ಒಂದು ನಿಯಮವನ್ನು ಗೊತ್ತುಮಾಡದಿದ್ದಲ್ಲಿ, ಮತ್ತು ಕೆಲವು ಹಿಸ್ಸೆದಾರರು ತಮ್ಮ ಭಾಗದ ಕಂದಾಯವನ್ನು ಕೊಡದಿದ್ದಲ್ಲಿ, ಒಳಭಾಗಮಾಡಿ ಹೆಸರುಗಳನ್ನು ಬೇರೆ ಬೇರೆ ಆಗಗೊಡಿಸದಿರುವಾಗಲೂ, ಜಂಟಿಪಟ್ಟೆಗಳು ಸ್ವಲ್ಪವೂ ಉಪಯುಕ್ತವಾಗುವುದಿಲ್ಲ ಅನೇಕ ಕಾರಣಗಳಿಂದ ಇದು ಅನುಚಿತವೆಂದು ಸ್ಪಷ್ಟವಾದದ್ದರಿಂದ ಹಾಲಿ ಇರುವ ನಡವಳಿಕೆಯಲ್ಲಿ ಯಾವ ಬದಲಾವಣೆಗಳನ್ನೂ ಸರ್ಕಾರದವರು ಮಾಡುವಂತೆ ಇಲ್ಲ

ಚಿತ್ರದುರ್ಗ ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘವು

ಕಳೆದ ತಿಂಗಳ ಮೀಟಿಂಗಿನಲ್ಲಿ ಚರ್ಚೆಗೆ ಬಂದ ಅಂಶಗಳಲ್ಲಿ ಮುಖ್ಯವಾದ ಒಂದು ಭಾಗವನ್ನು ಈ ಕೆಳಗೆ ಎಲ್ಲರ ತಿಳುವಳಿಕೆ ಬಗ್ಗೆ ತಂದಿದೆ ಮೈಸೂರು ಸೀನಿಯರ್ ವಿಲ್ಲೇಜ್ ಎಲಿಮೆಂಟರಿ ಸ್ಕೂಲುಗಳ ಅನುಭವಸ್ಥರಾದ ಉಪಾಧ್ಯಾಯರುಗಳು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂಬುವುದನ್ನು ತಿಳಿಸಬೇಕಾಗಿ ಕೇಳಿಕೊಂಡಿದೆ

ಪ್ರಶ್ನೋತ್ತರಗಳು

ಪ್ರಶ್ನೆ —ಒಂದು ಹಳ್ಳಿಯಲ್ಲಿ ಒಬ್ಬರೇ ಮಾಸ್ಟರಿದ್ದು 1 5 ತರಗತಿಗಳನ್ನು ಇಟ್ಟುಕೊಂಡು ಏಕಕಾಲದಲ್ಲಿ ಎಲ್ಲಾ ತರಗತಿಗಳಿಗೂ ತೃಪ್ತಿಕರವಾಗಿ ಕೆಲಸ ಮಾಡಲು ಸಾಧ್ಯವೇ ? ಉತ್ತರ —ಪಾಠಕ್ರಮದ ಪಟ್ಟಿಯಂತೆ ಸಕಾಲದಲ್ಲಿ ಆಯಾ ತರಗತಿಗಳಿಗೆ ಆಯಾ ಪಾಠಗಳನ್ನು ಹೇಳಲು ಸಾಧ್ಯವಿಲ್ಲ

ಪ್ರ —ಈಗ ಉಪಾಧ್ಯಾಯರುಗಳು ಹಳ್ಳಿಗಳಲ್ಲಿ ಅನುಸರಿಸುವ ಕ್ರಮವೇನು ? ಉ —ಯಾವ ಯಾವ ಪಾಠಕ್ಕೆ ಎರಡೆರಡು ತರಗತಿಗಳನ್ನು ಸೇರಿಸಬಹುದೋ ಯೋಚಿಸಿ ಅದಕ್ಕನುಸಾರವಾಗಿ ಪಾಠಕ್ರಮದ ಪಟ್ಟಿ ತಯಾರಿಸಿಕೊಂಡು ಪಾಠ ನಡಿಸುತ್ತಿರುವರು

ಪ್ರ —ಈ ಕ್ರಮದ ಕೆಲಸವು ಸಮರ್ಪಕವಾಗಿ ನಡೆಯುವುದೋ ? ಉ —ಬೋಧನಾ ಕೆಲಸವು ತೃಪ್ತಿಕರವಾಗಿ ನಡೆಯುವುದೆಂದು ಖಂಡಿತವಾಗಿ ಹೇಳಲು ಆಗುವುದಿಲ್ಲ ಮಧ್ಯೆ ಮಧ್ಯೆ ಬಾಲಕರ ಗಲಾಟೆಯನ್ನು ನಿಲ್ಲಿಸಬೇಕಾಗುತ್ತದೆ ಕ್ಲಿಷ್ಟವಾದವನ್ನು ಪಾಠ ನಡೆಯಲು ತೊಂದರೆಯಾಗಿ ಬೇಜಾರಿನಿಂದ ಅದನ್ನ್ಷಕ್ಕೇ ನಿಲ್ಲಿಸಬೇಕಾಗುವುದು ಇನ್ನೂ ನಾನಾ ವಿಧ ಅನಾನುಕೂಲಗಳಿಂದ ಪಾಠಗಳೇ ಇಲ್ಲದೆ ಕುರಿಗಳ ಹಿಂಡಿನಂತೆ ಒಂದು ಮನೆಯಲ್ಲಿ ಕಾದುಕೊಂಡಿರುವ ಸ್ಥಿತಿಗೆ ಬರುವುದು

ಪ್ರ —ಯಾವ ಮಾರ್ಗದಂತೆ ಹೋಗುವುದು ಉತ್ತಮ ? ಉ —ಒಂದು ಮನೆಯಲ್ಲಿ ಅನೇಕಜನ ಬಾಲಕರನ್ನು ಸೇರಿಸಿ ಗಲಾಟೆಯಲ್ಲಿ ಯಾರಿಗೂ ಸರಿಯಾಗಿ ಪಾಠ ನಡೆಯದೆ ಉಪಾಧ್ಯಾಯರಿಗೂ ಬಾಲಕರಿಗೂ ಜುಗುಪ್ಸೆಯನ್ನುಂಟುಮಾಡಿಕೊಳ್ಳುವದಕ್ಕಿಂತ ಪ್ರತಿನಿತ್ಯವೂ 15 ನಿಮಿಷವಾದರೂ ನಿಶ್ಚಿತವಾಗಿ ಪ್ರತಿ ಒಬ್ಬರ ಪಾಠಕ್ಕೆ ಅವಕಾಶವಾಗುವಂತೆ ನೋಡಿಕೊಳ್ಳುವುದು ಉತ್ತಮ

ಪ್ರ —ಬೆಳಗ್ಗೆ ಕೆಲವು ತರಗತಿಗಳನ್ನೂ ಮಧ್ಯಾಹ್ನ ಕೆಲವು ತರಗತಿಗಳನ್ನೂ ಇಟ್ಟು ಪಾಠನಡಿಸುವುದು ಅನುಕೂಲವೋ ಉ —ಉಪಾಧ್ಯಾಯರೊಬ್ಬರೇ ಇರುವ ಭಾಗದಲ್ಲಿ ಈ ರೀತಿ ವಿಂಗಡಿಸಿಕೊಂಡು ಕ್ಲಿಪ್ತವಾಗಿ ಕೆಲಸ ಮಾಡತಕ್ಕದ್ದು ಚೆನ್ನಾಗಿಯೂ ಸಮರ್ಪಕವಾಗಿಯೂ ಇರುವುದು

ಪ್ರ —ಹಳ್ಳಿಗಳಲ್ಲಿ ಈ ಪದ್ಧತಿಯಂತೆ ನಡಿಸಬಾರದೆ ? ಇದಕ್ಕೆ ಪ್ರತಿಬಂಧಕಗಳೇನಾದರೂ ಉಂಟೋ ? ಉ —ಕೆಲವು ಜನಗಳು ಈ ವಿಷಯದಲ್ಲಿ ಕೆಲವು ತಪ್ಪು ಅಭಿಪ್ರಾಯಗಳನ್ನು ಕೊಡಬಹುದು ಆದರೆ ಈ ಪದ್ಧತಿಯ ಪ್ರಯೋಜನವನ್ನು ಕಂಡನಂತರ ತಾವೇ ಸುಮ್ಮನಾಗುತ್ತಾರೆ

ಪ್ರ —ಬೆಳಗಿನ ಹೊತ್ತು ದೊಡ್ಡ ಹುಡುಗರು ಮನೆಯಲ್ಲಿ ನಿಂತು ಏನು ಮಾಡಬೇಕು ? ಉ —ರೈತರು ಸ್ವಲ್ಪ ದೊಡ್ಡ ಹುಡುಗರಿಂದ ಪ್ರಾತಃಕಾಲ ಕಷ್ಟಷ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ ಅವರು ಮನೆ ಕೆಲಸವನ್ನು ಮಾಡಿ ಪಾಠಗಳನ್ನು ಓದಿಕೊಂಡು ಮಧ್ಯಾಹ್ನ 1 ಘಂಟೆಗೆ ಪಾಠಶಾಲೆಗೆ ಹೋಗಬಹುದು ಇದರಿಂದ ಉಪಾಧ್ಯಾಯರಿಗೂ ಬಾಲಕರಿಗೂ ಪ್ರಯೋಜನವುಂಟು

ಪ್ರ —ಚಿಕ್ಕಮಕ್ಕಳು ಮಧ್ಯಾಹ್ನ ಮನೆಯಲ್ಲಿಯೇ ಇರಬಹುದೇ ? ಉ —ಇವರು ಮಧ್ಯಾಹ್ನ 1 ಘಂಟೆಯಿಂದ ಸ್ಕೂಲಿಗೆ ಬರುವಂತೆ ನೇಮಿಸಿದರೆ ಅವರೆಲ್ಲಾ 3 ಘಂಟೆಯೊಳಗಾಗಿ ಸ್ಕೂಲಿಗೆ ಬರುವರು ಉಪಾಧ್ಯಾಯರು ಎಲ್ಲರನ್ನೂ ಸೇರಿಸಿ ಕೊಂಚ ಹೊತ್ತು ಮಗ್ಗಿ, ಬಾಯಿಪಾಠ, ದೇವರ ಪ್ರಾರ್ಥನೆ ಹೇಳಿಸಿ, ಅರ್ಧಘಂಟೆ ನಂತರ ಬೈಲಿನಲ್ಲಿ ಕ್ರಮವಾದ ಕೆಲವು ಆಟಗಳನ್ನು ಆಡುವಂತೆ ಮಾಡಬೇಕು

ನಂಜುಂಡಪ್ಪ, ಸೆಕ್ರೆಟರಿ

ಲಂಡನ್ ಪಟ್ಟಣದಿಂದ ನಮ್ಮ ಬಾತ್ಮಿದಾರರು ಬರೆಯುವುದು

ಇಂಗ್ಲಾಂಡಿನಲ್ಲಿ ಈಗ ಅನಾವೃಷ್ಟಿಯು ಪ್ರಾಪ್ತವಾಗಿದೆ ಕಳೆದ ಏಪ್ರಿಲ್ ತಿಂಗಳಲ್ಲಿ ಲಂಡನ್ ಪಟ್ಟಣದೊಳಗೆ 08 ಮಾತ್ರ ಮಳೆ ಆಯಿತು ಆದಿಯೂ ಹುಲ್ಲು ಹಸುರಾಗಿಯೂ ನೇತ್ರಾನಂದಕರವಾಗಿಯೂ ಇವೆ ಗಿಡ ಮರಗಳು ಎಲೆಗಳನ್ನು ಬಿಡುತ್ತಿರುವವು ಫಲವೃಕ್ಷಗಳಲ್ಲಿ ದಿವ್ಯವಾದ ಹೂವು ಬಿಡುತ್ತಿದೆ ಭೂಪ್ರದೇಶವೆಲ್ಲಾ ಆಹ್ಲಾದಕರವಾಗಿದೆ ಮಳೆ ಆಗಿ ಸೆಕೆ ಹೆಚ್ಚಿರುವುದು

ದೊರೆಯವರು ತಮ್ಮ ಹಡಗಿನ ಸೈನ್ಯವನ್ನು ಹೋಗಿ ನೋಡಿದ್ದು ಒಂದು ವಿಶೇಷವಾದ ಸಂಗತಿ ಹಲವು ವಿಧದಲ್ಲಿ ನಾಶಮಾಡುವಂಥಾ ಸಾಧನಗಳು ಪರಿಷ್ಕರಣಹೊಂದುತ್ತಿರುವವು ನೀರಿನೊಳಗೆ ಮುಳುಗುವಂಥಾ ಸಣ್ಣ ಹಡಗುಗಳು ಅಗೋಚರವಾಗಿ ನೀರಿನ ಕೆಳಗೇ ಹೋಗಿ ಮೇಲಾಗದಲ್ಲಿರಬಹುದಾದ ಬಹು ದೊಡ್ಡ ಯುದ್ಧದ ಜಹಜುಗಳನ್ನು ನಾಶಮಾಡಿಬಿಡಬಲ್ಲವು ಈಗ ವಾಯುಮಂಡಲದಲ್ಲಿ ತಿರುಗಬಲ್ಲಂಥಾ ಹಡಗುಗಳನ್ನು ಕಂಡುಹಿಡಿದು ಕಟ್ಟಲಾರಂಭವಾಗಿದೆ ಈ ಹಡಗುಗಳು ಬೇರೆ ಹಡಗುಗಳಲ್ಲಿ ಇರುವವು ಸಮುದ್ರದ ಮೇಲೆ ಹೋಗುವಾಗ್ಗೆ ಅವು ಅಂತರಿಕ್ಷಕ್ಕೆ ಏರಿಹೋಗಿ ಅಲ್ಲಿಂದ ಶತ್ರುಗಳ ಮೇಲೆ ಗುಂಡಿನ ಮಳೆಗರೆಯುತ್ತವೆ ಕೆಳಗಡೆ ನೀರಿನೊಳಗೂ, ಮೇಲೆ ಆಂತರಿಕ್ಷದಲ್ಲೂ ಹಡಗುಗಳು ಇದ್ದು, ಸುತ್ತಲೂ ಟಾರ್ಪೀಡೋ ಎಂಬ ಹಡಗುಗಳಿದ್ದು ನಡುವೆ ಇರುವ ದೊಡ್ಡ ಜಹಜನ್ನು ಶತ್ರುಗಳ ಕಾಟವಿಲ್ಲದಂತೆ ಕಾಪಾಡುವುದು ಸುಲಭಸಾಧ್ಯವಾಗಿದೆ ಬಹು ಮಂದವಾದ ಮಂಜುಮುಸುಕಿಕೊಂಡಿದ್ದ ಕಾರಣ ದೊರೆಯವರು ಆ ದಿನ ಯುದ್ಧನಾವೆಗಳನ್ನು ತನಿಖೆಮಾಡುವುದರಲ್ಲಿ ಅಲ್ಪಸ್ವಲ್ಪ ಅಡಚಣೆ ಯುಂಟಾಯಿತು ಆದರೂ ದೊರೆಯವರು ಸಣ್ಣ ಹಡಗಿನಲ್ಲಿ ಕುಳಿತು ಸಮುದ್ರದೊಳಗೆ ಇಳಿದು ಹೋಗಿದ್ದರು

ಪಾರ್ಲಿಮೆಂಟ್ ಸಭೆಯಲ್ಲಿ ಐರ್ಲೆಂಡಿಗೆ ಆಳ್ವಿಕೆಯ ಸ್ವಾಧಿಕಾರವನ್ನು ವಹಿಸಬೇಕೆಂಬ ಕಾನೂನಿನ ವಿಚಾರವಾದ ಚರ್ಚೆಯೇ ಮುಖ್ಯವಾದದ್ದಾಗಿದೆ ಈ ವಿಷಯವು ಜನರಲ್ಲಿ ಅಷ್ಟೇನೂ ಉತ್ಸಾಹಕರವಾಗಿಲ್ಲ ಯಾಕೆಂದರೆ ಅದರ ಪೂರ್ವೋತ್ತರವೆಲ್ಲಾ ಬಹಳ ಚೆನ್ನಾಗಿಯೂ ದೀರ್ಘವಾಗಿಯೂ ಚರ್ಚಿಸಲ್ಪಟ್ಟಿರುವುದು ಒಂದು ಪಕ್ಷದವರು ಹೇಳುವುದನ್ನು ಇನ್ನೊಂದು ಪಕ್ಷದವರು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ ಪಾರ್ಲಿಮೆಂಟಿನಲ್ಲಿ ಇದು ಬಹು ದೀರ್ಘವಾಗಿ ಚರ್ಚೆನಡೆದು ಎರಡನೆಯಾವೃತ್ತಿ ಈ ಕಾನೂನು ಪಾಸಾಯಿತು ಎದುರು ಪಕ್ಷದವರಿಗಿಂತಲೂ 101 ಮೆಂಬರುಗಳು ಹೆಚ್ಚಾಗಿ ಅದಕ್ಕೆ ಸಮ್ಮತಿಪಟ್ಟಿರುತ್ತಾರೆ

“ಮೇ ತಿಂಗಳ ಕೂಟಗಳು” ಎಂಬ ಮತಭಕ್ತಿಯನ್ನು ಕುರಿತು ಚರ್ಚಿಸುವಂಥಾ ಮೀಟಿಂಗುಗಳನ್ನು ನಡಿಸುವುದಕ್ಕಾಗಿ ಇತರ ಸ್ಥಳಗಳಿಂದ ಅನೇಕಾನೇಕ ಜನರು ಲಂಡನ್ ಪಟ್ಟಣಕ್ಕೆ ಬಂದಿರುತ್ತಾರೆ ಸಾಮಾನ್ಯ ಜನರು ಮತವಿಚಾರದಲ್ಲಿ ಇಷ್ಟು ಉತ್ಸಾಹಶಾಲಿಗಳಾಗಿರುವುದು ಆಶ್ಚರ್ಯಕರವಾಗಿದೆ ಬ್ರಿಟಿಷ್ ದ್ವೀಪಗಳಲ್ಲಿ ಮಾತ್ರವೇ ಅಲ್ಲ ಹಿಂದೂಸ್ಥಾನ, ಚೀನಾ ಮೊದಲಾದ ದೇಶಾಂತರಗಳಲ್ಲಿ ಕೂಡ ಯೇಸುಕ್ರಿಸ್ತನ ಮತಭಕ್ತಿಯನ್ನು ಪ್ರಚಾರಮಾಡಬೇಕೆಂಬ ವಿಷಯದಲ್ಲಿ ಮಹನೀಯರು ಉಪನ್ಯಾಸಗಳನ್ನು ಮಾಡುವಾಗ್ಗೆ ಸಾವಿರಾರು ಜನರು ಕೂಡಿ ಉತ್ಸಾಹದಿಂದ ಕೇಳುವುದನ್ನು ನೋಡುವುದು ಬಹಳ ಸಂತೋಷವಾಗಿದೆ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದ ಸರ್ ಮ್ಯಾಕ್‌ವರ್ತ್ ಯಂಗ್ ಯವರು ಕೆಲವು ದಿನಗಳ ಹಿಂದೆ ಒಂದು ಸಭೆಯಲ್ಲಿ ಹಿಂದುಸ್ಥಾನಕ್ಕೆ ಕ್ರೈಸ್ತವೇದವು ಪರಮಾವಶ್ಯವಾಗಿದೆ ಎಂದು ಉಪನ್ಯಾಸ ಮಾಡಿದ್ದನ್ನು ನಾನು ಕೇಳಿದೆನು ಗ್ರೇಟ್ ಬ್ರಿಟನ್ನಿನಲ್ಲಿ ಮತಭಕ್ತಿಯು ಕ್ಷೀಣವಾಗುತ್ತಾ ಇಲ್ಲ

ಇಂಗ್ಲಾಂಡಿನಿಂದ ಅಮೇರಿಕಕ್ಕೆ ಪ್ರಯಾಣಮಾಡುತ್ತಿದ್ದ ಟೈಟಾನಿಕ್ ಎಂಬ ದೊಡ್ಡ ಜಹಜು ನಾಶಹೊಂದಿದ ವಿಚಾರವೇ ಈಗ ವಿಶೇಷವಾಗಿ ಎಲ್ಲರ ಬಾಯಿಯಲ್ಲೂ ಇದೆ ಪ್ರತಿಯೊಬ್ಬ ಮನುಷ್ಯನೂ ಆಮಾತನ್ನೇ ಆಡುವನು ಪ್ರತಿ ಒಂದು ವರ್ತಮಾನ ಪತ್ರಿಕೆಯಲ್ಲೂ ಅದರ ವಿವರಣೆಯೇ ತುಂಬಿಹೋಗಿದೆ ಅದು ಮುಳುಗಿ ಇಲ್ಲಿಗೆ ತಿಂಗಳಮೇಲಾಗಿದ್ದರೂ ಅದರ ವೃತ್ತಾಂತವೇ ಪತ್ರಿಕೆಗಳಲ್ಲಿ ಹೆಚ್ಚಾಗಿದೆ ಆ ಜಹಜನ್ನು ತಕ್ಕಮಟ್ಟಿಗೆ ಜಾಗರೂಕತೆಯಿಂದ ನಡಿಸದೆಹೋದದ್ದರಿಂದಲೇ ಅಷ್ಟು ಪ್ರಾಣ ಹಾನಿಗೆ ಕಾರಣವಾಯಿತೆಂದು ಸಾಮಾನ್ಯವಾಗಿ ಎಲ್ಲರೂ ತಿಳಿದಿರುವಂತೆ ಕಾಣುತ್ತದೆ ಇನ್ನು ಮುಂದೆ ಅಂಥಾ ಅಪಘಾತವು ಪ್ರಾಪ್ತವಾಗದಂತೆ ಏರ್ಪಾಡು ಮಾಡಲಾಗುವುದು

“ಕಿನೆಮಕಲರ್” ಎಂಬ ಪ್ರದರ್ಶನವನ್ನು ನೋಡಲು ನಾನು ಕಳೆದ ಬುಧವಾರ ಹೋಗಿದ್ದೆನು ದೊರೆಯವರು ಮಹಾರಾಜ್ಞಿಯವರ ಕೂಡ ಹಿಂದುಸ್ಥಾನಕ್ಕೆ ದಯಮಾಡಿದ್ದಾಗ್ಗೆ ಅಲ್ಲಿ ನಡೆದ ಮಹೋತ್ಸವಗಳನ್ನು ಈ ಪ್ರದರ್ಶನದಲ್ಲಿ ಸಾಕ್ಷಾತ್ತಾಗಿ ನೋಡಿದೆನು ಚಕ್ರವರ್ತಿದಂಪತಿಗಳು ಜಹಜು ಇಳಿದದ್ದು, ಬೊಂಬಾಯಿ ಪಟ್ಟಣದ ರಾಜಬೀದಿಗಳಲ್ಲಿ ಅವರು ಮೆರವಣಿಗೆಯಾಗಿ ಚಿತ್ತೈಸಿದ್ದು, ಸಾವಿರಾರು ಮಕ್ಕಳಿಗೆ ಅವರು ಭೇಟಿ ದಯಪಾಲಿಸಿದ್ದು ಅಲ್ಲಿಂದ ಅವರಿಗೆ ದೆಹಲಿನಗರದಲ್ಲಿ ನಡೆದ ಮಹೋತ್ಸವಗಳು, ಚಕ್ರವರ್ತಿ ದಂಪತಿಗಳು ರಾಜದಿರಸುಗಳನ್ನು ಧರಿಸಿ ಸಿಂಹಾಸನದಲ್ಲಿ ಕುಳಿತು ಅಪೂರ್ವವಾದ ದರ್ಬಾರನ್ನು ನಡಿಸಿದ್ದು, ಸಾಮಂತರಾಜರುಗಳ ಸಮ್ಮೇಳನದ ವೈಖರಿ, ಚಕ್ರವರ್ತಿಯವರು ಸೈನಿಕರ ಕವಾತನ್ನು ನಡಿಸಿದ್ದು, ತರುವಾಯ ಅವರು ಕಲ್ಕತ್ತಾ ಪಟ್ಟಣವನ್ನು ತಲಪಿದ್ದು, ಅಲ್ಲಿ ಅವರೆದುರಿಗೆ ನಡಿಸಿದ ವಿಶೇಷೋತ್ಸವಗಳು, ಮೆರವಣಿಗೆಗಳು, ಲಕ್ಷಾಂತರ ಪ್ರಜೆಗಳು ಸೇರಿ ಮಹಾಪ್ರಭುಗಳ ದರ್ಶನವನ್ನು ಹೊಂದಿ ಜಯಧ್ವನಿಮಾಡಿದ್ದು— ಇವೆಲ್ಲಾ ಹ್ಯಾಗೆ ಸಾಕ್ಷಾತ್ತಾಗಿ ಹಿಂದುಸ್ಥಾನದಲ್ಲಿ ನಡೆದವೋ ಹಾಗೆಯೇ ಈ ಪ್ರದರ್ಶನದಲ್ಲಿ ನೋಡಿ ಆನಂದಪಟ್ಟೆನು ಇಂಥಾ ನೋಟವು ಎಂದಿಗೂ ಮರೆಯತಕ್ಕದ್ದಾಗಿಲ್ಲ

ಬತ್ತದ ವ್ಯವಸಾಯದಲ್ಲಿ ಅಭಿವೃದ್ಧಿಕ್ರಮಗಳು

ರೈತರಿಗೆ ಲಾಭಕರವಾದ ವಿಷಯ.

ಕಳೆದ ಕೆಲವು ವರುಷಗಳಿಂದ ಮದರಾಸ್ ಆಧಿಪತ್ಯದ ವ್ಯವಸಾಯಶಾಲೆಗಳಲ್ಲೆಲ್ಲಾ ಭತ್ತದ ವ್ಯವಸಾಯದ ವಿಷಯದಲ್ಲಿ ಕೆಲವು ಅಜಮಾಯಿಷಿಗಳನ್ನು ನಡಿಸಿ, ಅವುಗಳಲ್ಲಿ ಸದರಿ ವ್ಯವಸಾಯದ ಏಳಿಗೆಗೆ ಸಹಕಾರಿಗಳಾದವುಗಳೆಂದು ಕಂಡುಬಂದವುಗಳನ್ನು ಸರಕಾರದವರು ರೈತರಿಗೆಲ್ಲಾ ಬೋಧನೆಮಾಡಿದರು ಅನೇಕ ರೈತರು ಮೇಲ್ಕಂಡ ಹೊಸ ಕ್ರಮಗಳಿಗೆ ಅನುಸಾರವಾಗಿ ವ್ಯವಸಾಯ ಮಾಡಿದ್ದರಲ್ಲಿ ಅವುಗಳಿಂದ ಬಹಳ ಲಾಭವುಂಟೆಂದು ತಿಳಿದುಬಂದದ್ದರಿಂದ ಈಚೆಗೆ ಅವುಗಳನ್ನು ರೂಢಿಯಲ್ಲಿ ತಂದಿರುತ್ತಾರೆ ಆದಕಾರಣ ಅವುಗಳನ್ನೆಲ್ಲಾ ನಮ್ಮ ಸೀಮೆಯ ರೈತರುಗಳ ತಿಳುವಳಿಕೆ ಬಗ್ಗೆ ಇಲ್ಲಿ ಪ್ರಚುರಪಡಿಸುತ್ತೇವೆ

ಭತ್ತದ ವ್ಯವಸಾಯದಲ್ಲಿ ನಾಟಿಗೆ ಬೇಕಾಗುವ ಪೈರನ್ನು ಬೆಳಸತಕ್ಕದ್ದು ಮೊದಲನೆಯ ಕೆಲಸವಾಗಿದೆ ನಾಟಿಗಾಗಿ ಪೈರನ್ನು ಬೆಳಸತಕ್ಕ ಜಮೀನನ್ನು ಚೆನ್ನಾಗಿ ಉತ್ತು, ಮಟ್ಟ ಹೊಡೆಯುವುದಲ್ಲದೆ ಒಳ್ಳೇ ಹಸನಾದ ಸಗಣಿದ ಗೊಬ್ಬರವನ್ನು, ಪೈರನ್ನು ನಾಟಿಹಾಕುವ ಜಮೀನಿಗೆ ಹಾಕಬಹುದಾದ ಎರಡರಷ್ಟನ್ನು ಹಾಕಬೇಕು ಜಮೀನಿಗೆ ಸುಲಭವಾಗಿ ನೀರುಹಾಯಿಸಲು ತಕ್ಕ ಅನುಕೂಲವಿರಬೇಕಲ್ಲದೆ ನೀರು ಬಸಿದುಹೋಗಲು ಅವಕಾಶವಿರಬೇಕು ಈಗ ರೂಢಿಯಲ್ಲಿರುವಂತೆ ಒಡಿಒಡಿ ಪೈರನ್ನು ನಾಟಿಹಾಕಿದರೆ ಬಿತ್ತನೆಗೆ ಹೆಚ್ಚು ಧಾನ್ಯ ಬೇಕಾಗುವುದು ಆದರೆ ಒಂದೊಂದೇ ಪೈರನ್ನು ನಾಟಿ ಹಾಕುವುದಾದರೆ ಸಾಧಾರಣವಾಗಿ 1 ಗುಂಟೆ ಜಮೀನಿನಲ್ಲಿ 10 ಸೇರು ಬೀಜವನ್ನು ಒಟ್ಟುಹಾಕಿದಲ್ಲಿ ಒಂದು ಎಕರೆ ಜಮೀನಿನ ನಾಟಿಗೆ ಸಾಕಾದಷ್ಟು ಪೈರಾಗುವುದು ನಾಟಿಯಾದನಂತರ ಬೆಳೆಯು ಕಟಾವಿಗೆ ಬರಬೇಕಾದರೆ ಎಷ್ಟು ತಿಂಗಳಾಗುವುದೋ ಅಷ್ಟು ವಾರಗಳ ಕಾಲ ಸಸಿ ಪೈರುಗಳು ನಾಟಿಗೆ ಮುಂಚೆ ಒಟ್ಟುಹೊಯ್ಯಲ್ಪಟ್ಟ ಮಡಿಗಳಲ್ಲಿ ಇರಬೇಕು ಹ್ಯಾಗಂದರೆ ಭತ್ತವು ಐದು ತಿಂಗಳ ಬೆಳೆಯಾದರೆ ಸಸಿಗಳನ್ನು ಐದು ವಾರಗಳ ನಂತರ ನಾಟಿ ಹಾಕಬೇಕು ಒಂದೊಂದೇ ಪೈರನ್ನು ನಾಟಿ ಹಾಕಿದರೆ ನಾಟಿಯಾದ ತರುಣದಲ್ಲಿ ಪೈರುಗಳು ಬಹಳ ವಿರಳವಾಗಿರುವುದರಿಂದ ಕಳೆಗಳು ಬಹಳವಾಗಿ ಬೆಳೆಯುವ ಸಂಭವವುಂಟು ಆದರೆ ಹೀಗೆ ಕಳೆಗಳು ಹೆಚ್ಚಲು ಆಸ್ಪದಕೊಡದಂತೆ ನೋಡಿಕೊಳ್ಳಬೇಕು

ಗೊಬ್ಬರ ಹಾಕತಕ್ಕ ವಿಷಯ ಮುಂದಲು ವಿಚಾರಿಸಿದೆ ಒಂದೊಂದೇ ಪೈರನ್ನು ನಾಟಿ ಹಾಕಿದರೆ ಉತ್ಪತ್ತಿ ಬಹಳ ಜಾಸ್ತಿಯಾಗುವುದು ಅಂದರೆ, ಪೈರುಗಳು ಭೂಮಿಯಿಂದ ಸಸ್ಯಾಹಾರಗಳನ್ನು ಒಹಳವಾಗಿ ತೆಗೆದುಕೊಳ್ಳುವವು ಇಲ್ಲವಾದರೆ ಎರಡು ಮೂರು ವರುಷಗಳಲ್ಲಿ ಜಮೀನು ನಿಸ್ಸಾರವಾಗುತ್ತದೆ

ಈ ದೇಶದಲ್ಲಿ ಸಾಮಾನ್ಯವಾಗಿ ಹಸರು ಸೊಪ್ಪನ್ನೂ, ತರಗೆಲೆಗಳನ್ನೂ ಗೊಬ್ಬರವಾಗಿ ಹಾಕುವುದು ವಾಡಿಕೆ ಆದರೆ ತರಗೆಲೆಗಳಿಗಿಂತಲೂ ಹಸರು ಸೊಪ್ಪುಗಳು ಉತ್ತಮವಾದ ಗೊಬ್ಬರ ಅದರಲ್ಲೂ ಸೊಪ್ಪಿಗಾಗಿ ಕೆಲವು ಪೈರುಗಳನ್ನು, ಯಾವ ಜಮೀನಿಗೆ ಗೊಬ್ಬರವು ಬೇಕಾಗುತ್ತದೊ ಅದೇ ಜಮೀನುಗಳಲ್ಲೇ ಬೆಳೆದು ಅವುಗಳ ಸೊಪ್ಪನ್ನು ಗೊಬ್ಬರವಾಗಿ ಹಾಕುವುದು ಮತ್ತೂ ಉತ್ತಮ ಸೊಪ್ಪಿಗಾಗಿ ಕಾಡುನೀಲಿ, ಅವರೆ, ಹೆಸರು, ಉದ್ದು, ಸೆಣಬು, ಮೊದಲಾದವುಗಳನ್ನು ಬೆಳೆಯುತ್ತಾರೆ ಈ ಗಿಡಗಳಿಗೆ ವಾಯುಮಂಡಲದಲ್ಲಿರುವ ವಾಯುವಿನಿಂದ ಸಸ್ಯಾಹಾರವಾದ ನೈಟ್ರೋಜನ್ ವಾಯುವನ್ನೇ ಜಮೀನಿಗೆ ಸೇರಿಸತಕ್ಕ ಅಪಾರವಾದ ಶಕ್ತಿಯಿದೆ ಹಸರು ಗೊಬ್ಬರವು ಪೈರಿಗೆ ಬೇಕಾದ ಆಹಾರವೆಲ್ಲವನ್ನೂ ಒದಗಿಸಲಾರದು ಆದ್ದರಿಂದ ಇದರ ಜೊತೆಗೆ ಮೂಳೆನ ಗೊಬ್ಬರವೇ ಮೊದಲಾದ ಇತರ ಗೊಬ್ಬರಗಳನ್ನು ಹಾಕಬೇಕು ಮೂಳೆನ ಗೊಬ್ಬರವನ್ನು ಒಂದು ಸಾಲಿನಲ್ಲಿ ಹಾಕಿದರೆ ಮುಂದಲ ಸಾಲಿನಲ್ಲಿ ಗೊಬ್ಬರವನ್ನು ಹಾಕದಿದ್ದಾಗ್ಯೂ ಉತ್ತಮವಾದ ಭತ್ತದ ಫಸಲನ್ನು ಬೆಳೆಯಬಹುದೆಂದು ತಿಳಿದುಬರುತ್ತದೆ ಸೊಪ್ಪಿಲ್ಲದೆ ಮೂಳೆನ ಗೊಬ್ಬರವನ್ನು ಮಾತ್ರ ಹಾಕಿದರೆ ಎಕರೆಗೆ ಸುಮಾರು 3 1 ಮಣದಷ್ಟು ಹಾಕಬೇಕಾಗುವದು

ನಾಟಿ —ಮೇಲೆ ಹೇಳಿದಂತೆ ನಾಟಿಯು ಪೈರನ್ನು ಎಬಿಸಿದರೆ ಸಸಿಗಳು ಆರೋಗ್ಯವಾಗಿರುವುದಲ್ಲದೆ ಅವುಗಳನ್ನು ಒಂಟೊಂಟಿಯಾಗಿ ನಾಟಿಹಾಕುವುದಕ್ಕಾಗಿ ಬೇರೆಬೇರೆಯಾಗಿ ಬಿಡಿಸುವ ಕೆಲಸವೂ ಬಹಳ ಸುಲಭವಾಗುತ್ತದೆ ಸುಮಾರಾಗಿ ಫಲವತ್ತಾಗಿರುವ ಜಮೀನಿನಲ್ಲಿ ಆರಾರು ಅಂಗುಲಗಳ ದೂರಕ್ಕೆ ಒಂದೊಂದು ಪೈರನ್ನು ನಾಟಿಹಾಕಬೇಕು ಅದಕ್ಕಿಂತಲೂ ಕಡಮೆ ಫಲವತ್ತಾದ ಜಮೀನುಗಳಲ್ಲಿ ಇನ್ನೂ ಹತ್ತಿರ ನಾಟಿಹಾಕಬೇಕು ಉತ್ತಮವಾದ ಜಮೀನುಗಳಲ್ಲಿ ಪೈರುಗಳ ಮಧ್ಯ 9 ಅಂಗುಲದಷ್ಟು ಜಾಗಾ ಬಿಟ್ಟಿರಬೇಕು ಪೈರುಗಳ ಮಧ್ಯೆ ಜಾಗಾ ಬಿಟ್ಟು ಒಂದೊಂದನ್ನಾಗಿ ನೆಡುವುದರಿಂದ ಅನೇಕ ಪ್ರಯೋಜನಗಳುಂಟು ಬಿತ್ತನೆಯ ಬೀಜವನ್ನು ಹೆಚ್ಚು ಖರ್ಚುಮಾಡಬೇಕಾಗಿಲ್ಲ ಪೈರನ್ನು ಕಿತ್ತು ನಾಟಿಹಾಕುವುದಕ್ಕೆ ಹೆಚ್ಚು ಕೆಲಸವೂ ಬೇಕಾಗಿಲ್ಲ ಪೈರುಗಳು ರೋಗವಿಲ್ಲದವುಗಳಾಗಿರುವುವಲ್ಲದೆ ನೀರು ಸ್ವಲ್ಪ ಕಡಮೆಯಾದಾಗ್ಯೂ ಒಣಗಿ ನಷ್ಟವಾಗುವುದಿಲ್ಲ ಮತ್ತು ಭತ್ತದ ಕಾಳುಗಳು ಚೆನ್ನಾಗಿ ಪಕ್ವವಾಗಿ ಉತ್ಪತ್ತಿ ಹೆಚ್ಚಾಗುತ್ತದೆ ಇದಕ್ಕೆ ಕಾರಣವೇನಂದರೆ ಪ್ರತಿ ಪೈರಿಗೂ ಬೆಳೆಯುವುದಕ್ಕೆ ಸಾಕಾದಷ್ಟು ಜಾಗವಿರುವುದರಿಂದ ಅದು ಪುಷ್ಟವಾಗಿ ಅನೇಕ ಕವಲುಗಳೊಡನೆ ಬೆಳೆಯುತ್ತದೆ ಕೆಲವು ಪೈರುಗಳಲ್ಲಿ 30 ಅಥವಾ 40 ಕವಲುಗಳು ಒಡೆಯುವುದೂ ಉಂಟು

ಪ್ರತಿ ರೈತನೂ ಬಿತ್ತನೆಯ ಬೀಜಕ್ಕೆ ಹೆಚ್ಚು ಗಮನ ಕೊಡುವುದರಿಂದ ಬಹಳ ಲಾಭವುಂಟು ಪೈರು ಕಟಾವಿಗೆ ಬಂದ ಕಾಲದಲ್ಲಿ ಜಮೀನಿನಲ್ಲೆಲ್ಲಾ ಹುಡುಕಿ ರೋಗವಿಲ್ಲದೆ ಹುಲುಸಾಗಿಯೂ, ಅನೇಕ ಕವಲುಗಳೊಡನೆಯೂ ಬೆಳೆದಿರತಕ್ಕ ಪೈರಿನ ತೆನೆಗಳನ್ನೇ ಕಿತ್ತು ಬೇರೆ ಬಡಿದು, ಆ ಧಾನ್ಯವನ್ನು ಬಿತ್ತನೆಗಾಗಿ ತೆಗೆದಿಟ್ಟುಕೊಳ್ಳಬೇಕು ಈ ಬಿತ್ತನೆ ಬತ್ತವನ್ನು ಚೆನ್ನಾಗಿ ಒಣಗಿಸಿ, ಗುಡಾಣಗಳಲ್ಲಿ ತುಂಬಿ ಇಟ್ಟುಕೊಳ್ಳಬೇಕಲ್ಲದೆ ಇದನ್ನು ಆಗಾಗ್ಗೆ ಆಚೆಗೆ ತೆಗೆದು ಬಿಸಲಿಗೆ ಹಾಕುತ್ತಿರಬೇಕು

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಧರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು “ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೆಬರಿಗೆ, ಮೈಸೂರು” ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ “ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು” ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಈ ಸಲ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಸಂಖ್ಯೆಗಳನ್ನು ಕುರಿತ ಹಲವು ಬಾತ್ಮಿಗಳು ನಮಗೆ ಬಂದಿರುವವು.

ಸ್ಥಳಸಂಕೋಚದಿಂದ ಅದನ್ನು ಪ್ರಕಟಿಸಲು ಆಗಲಿಲ್ಲವಾದರೂ ಅವು ಆಯಾ ಸ್ಕೂಲಿನ ಉಪಾಧ್ಯಾಯರು ಪಡುತ್ತಿರುವ ಶ್ರಮಕ್ಕೆ ಸಾರ್ಥಕವಾಗಿವೆ ಎಂದು ಸಂತೋಷಪಡುತ್ತೇವೆ

ಪ್ರಜಾಹಿತಚಿಂತಕ ಮತ್ತು ದೇಶಬಾಂಧವ, ಬಗಲೂರು — ನೀವು ನಮೂದುಮಾಡುವ ವಿಚಾರ ತನಿಖೆಯಲ್ಲಿದೆ ಎಂದು ಕೇಳುತ್ತೇವೆ ನಿಮ್ಮ ಬಾತ್ಮಿಯನ್ನು ಈಗಲೇ ಪ್ರಕಟಿಸುವುದು ಹಿತಕರವಲ್ಲ

ಯಂಪೈರ್ ಡೇ ಮತ್ತು ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವಗಳ ವಿಚಾರವಾಗಿ ಈ ಸಂಸ್ಥಾನದ ಅನೇಕ ಸ್ಥಳಗಳಲ್ಲಿ ನಡೆದ ಸಂಭ್ರಮ ಕಾರ್ಯಗಳನ್ನು ಕುರಿತ ಬಾತ್ಮಿಗಳು ನಮ್ಮಲ್ಲಿಗೆ ಬಂದಿರುತ್ತವೆ ಕಾಲಾತೀತವಾಗಿ ಬಂದದ್ದರಿಂದ ಇವನ್ನು ಪ್ರಕಟಿಸುವುದು ಸಹಜವಲ್ಲವೆಂದು ನಿಲ್ಲಿಸಬೇಕಾಯಿತು ಬಾತ್ಮಿದಾರರು ಉತ್ಸವಾದಿಗಳು ನಡೆದ ಒಡನೆಯೇ ಬರೆದು ಕಳುಹಿಸುವುದು ಉತ್ತಮವೆಂದು ಸೂಚಿಸುವೆವು

—ಎಡಿಟರ್]

ಕರೆಸ್‌ಪಾಂಡೆನ್ಸ್.

ಮಂಡ್ಯದಲ್ಲಿ ಪೋಸ್ಟ್ ಡಿಲಿವರಿ ಅನುಕೂಲವಾಗಬೇಕು

ಅಯ್ಯಾ,

ಮಂಡ್ಯದಲ್ಲಿ ಪ್ರತಿ ಗುರುವಾರವೂ ಸಂತೆಯಾಗುವದರಿಂದ ಆ ದಿನ ಮಂಡ್ಯದ ತಾಲ್ಲೂಕಿನ ಸುತ್ತುಮುತ್ತಲ ಗ್ರಾಮಗಳವರು ಕೊಳ್ಳುವುದಕ್ಕೂ ಮಾರುವುದಕ್ಕೂ ಬರುತ್ತಾರೆ ವಿಲೇಜ್ ಪೋಸ್ಟ್ ಡಿಲಿವರಿ ಈಗ ಪ್ರತಿ ಸೋಮವಾರ, ಗುರುವಾರ ಆಗುತ್ತಿದೆ ಆದರೆ ಗುರುವಾರ ಮಾತ್ರ ಬೆಂಗಳೂರ್, ಮೈಸೂರ್ ಮೇಲ್ ಟಪ್ಪಾಲ್ ಬಂದನಂತರ ವಿಲೇಜ್ ಪೋಸ್ಟ್ ಡಿಲಿವರಿಯಾದರೆ ಅನೇಕರಿಗೆ ತುಂಬಾ ಅನುಕೂಲತೆಯೂ ಸಂತೋಷವೂ ಉಂಟಾಗುತ್ತದೆ ಯಾತಕ್ಕೆಂದರೆ ಪ್ರತಿ ಬುಧವಾರವೂ ಗುರುವಾರವೂ ಪತ್ರಿಕೆಗಳೂ, ಪಾರ್ಸಲ್‌ಗಳೂ, ಕಾಗದಗಳೂ ಬರುವುದು ಹೆಚ್ಚಾಗಿರುವವು ಆ ದಿನ ವಿಲೇಜ್ ಪತ್ರಿಕೆಗಳ, ಕಾಗದಗಳ, ಪಾರ್ಸಲ್‌ಗಳ ಡಿಲಿವರಿಯಾದರೆ ಪ್ರಜೆಗಳಿಗೂ ಅನುಕೂಲ ಮತ್ತು ಪೋಸ್ಟ್ ಮ್ಯಾನ್‌ಗಳಿಗೂ ಸುಲಭ ಪೋಸ್ಟ್ ಇಲಾಖೆಯವರು ಈ ರೀತಿ ಏರ್ಪಾಡು ಮಾಡಿಕೊಡಬೇಕಾಗಿ ಕೋರುವ

ಮಂಡ್ಯ — ಪ್ರಜಾ ಹಿತಚಿಂತಕ

ಬೆಂಗಳೂರಿನಲ್ಲಿ ಊಟದೆಲೆಗಳು

ಅಯ್ಯಾ,

ಬೆಂಗಳೂರು ಬೀದಿಗಳನ್ನೂ ಪಾಯಿಖಾನೆಗಳನ್ನೂ ಗುಡಿಸುವವರು ಎಂಜಲೆಲೆಗಳನ್ನು ಕೂಡಿ ತೊಳೆದು ಪಾಯಿಖಾನೆ ಸಾಗಿಸಲಿಕ್ಕೆ ಮಾಡಿರುವ ಪೆಟ್ಟಿಗೆಗಳಲ್ಲಿ ಮರೆಯಾಗಿಟ್ಟದ್ದು ಅಂಗಡಿಗಳಿಗೆ ಮಾರುತ್ತಾರೆ ಇದು ಆಚಾರಕ್ಕೆ ವಿರುದ್ಧವಾದುದೂ ಅಲ್ಲದೆ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಿರುವುದು ಆದುದರಿಂದ ಎಲೆಗಳಲ್ಲಿ ಊಟಮಾಡುವವನು ತಾನೇ ಎಲೆಗಳನ್ನು ಹಚ್ಚಿಕೊಳ್ಳಬೇಕು ಇಲ್ಲವೇ ನಂಬಿಕೆಯಾದ ಸ್ಥಳಗಳಲ್ಲಿ ಎಲೆಗಳನ್ನು ಕೊಂಡು ತರಬೇಕು ಇಲ್ಲವೇ ಸುಲಭ ಬೆಲೆಗೆ ದೊರಕುವ ಅಲ್ಯೂಮಿನಿಯಂ ತಟ್ಟೆಗಳನ್ನೂ, ಬಟ್ಟಲುಗಳನ್ನೂ ಉಪಯೋಗಿಸುವುದು ಸರ್ವೋತ್ತಮ ಆಪಸ್ತಂಭ ಧರ್ಮಸೂತ್ರಗಳಲ್ಲಿ ಕಂಚಿನ ಪಾತ್ರೆಗಳಿಗೂ ಅವಕಾಶ ಕೊಟ್ಟಿರುವುದರಿಂದ ತಟ್ಟೆಗಳನ್ನುಪಯೋಗಿಸುವುದರಲ್ಲಿ ದೋಷವೇನೂ ಇಲ್ಲ ಊಟವಾದ ನಂತರ ಎಲೆಗಳನ್ನು ಚೂರುಚೂರಾಗಿ ಹರಿದು ಬಿಸುಟರೆ ಈ ದುಷ್ಟರ ಕೆಲಸಕ್ಕೆ ಅವಕಾಶವಿಲ್ಲದಂತಾಗುವುದು

ಪ್ರತ್ಯಕ್ಷದರ್ಶಿ

ಎಕ್ಕೂರು ಸ್ಕೂಲಿನ ವಿಷಯವು

ಅಯ್ಯಾ,

ಮಾಲೂರು ತಾಲ್ಲೂಕು ಲಕ್ಕೂರಿನಲ್ಲಿ ಒಂದು ಸ್ಕೂಲಿದೆ ಇದು ತಾಲ್ಲೂಕು ಬ್ರಾಂಚ್ ಸ್ಕೂಲಾಗಿದ್ದು ಈಚೆಗೆ ಏ ಏ ಸ್ಕೂಲಾಗಿದೆ ಇದರಷ್ಟು ದೊಡ್ಡ ಸ್ಕೂಲು ತಾಲ್ಲೂಕಿನಲ್ಲಿ ಎಲ್ಲಿಯೂ ಇಲ್ಲವೆಂದು ಹೇಳಬಹುದು ಈ ಊರು ೩00 ಮನೆಗಳುಳ್ಳದಾಗಿಯೂ, 2,000 ಪ್ರಜಾ ಸಂಖ್ಯೆಗೆ ಮೇಲ್ಪಟ್ಟ ಯೂನಿಯನ್ ಉಳ್ಳ ಗ್ರಾಮವಾಗಿಯೂ ಇರುತ್ತೆ ಈಗ ಈ ಸ್ಕೂಲಿನಲ್ಲಿ 4 ಜನ ಮಾಸ್ಟರುಗಳೂ, ಒಬ್ಬ ಜವಾನನೂ, 150 ಜನ ಬಾಲಕರೂ ಇದ್ದು, ಬಾಲಕರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಇದೆ ಆದರೂ ಈ ಸ್ಕೂಲಿಗೆ ಕಟ್ಟಡ ಇಲ್ಲದಿರುವುದು ತುಂಬಾ ಶೋಚನೀಯವಾಗಿದೆ ಸರ್ಕಾರದವರು ಪೇಟೆಯಲ್ಲಿ ಒಂದು ವಾಸದ ಮನೆಗೆ ಸುಮಾರು 20 ವರ್ಷಗಳಿಂದ ತಿಂಗಳಿಗೆ 3 ರೂ ಬಾಡಿಗೆ ಕೊಡುತ್ತಿದ್ದಾರೆ ಈ ಬಾಡಿಗೆಯನ್ನೆಲ್ಲಾ ಒಟ್ಟು ಕೂಡಿಸಿದರೆ ಒಂದು ಹೊಸ ಕಟ್ಟಡವೇ ಕಟ್ಟಬಹುದಾಗಿತ್ತು ಈ ಸ್ಕೂಲಿರುವ ಮನೆಯು ಬಹು ಚಿಕ್ಕಂಥವಾಗಿಯೂ, ಗಾಳಿ ಬೆಳಕಿಗೆ ಅನಾನುಕೂಲವಾಗಿಯೂ ಇರುತ್ತೆ ಮತ್ತು ಪೇಟೆಯಲ್ಲಿ ಯಾವಾದಾದರೂ ಉತ್ಸವ ವಗೈರೆ ನಡೆದರೆ ಬಾಲಕರ ದೃಷ್ಟಿಯು ಅದರ ಮೇಲೆ ಬಿದ್ದು ವಿದ್ಯಾಭ್ಯಾಸಕ್ಕೆ ತುಂಬಾ ಕುಂದಕ ಉಂಟಾಗಿದೆ ಅನೇಕ ಜನ ಆಫೀಸರುಗಳು ಈ ಕಟ್ಟಡವನ್ನು ನೋಡಿ ಬೇರೆ ಹೊಸ ಕಟ್ಟಡ ಅವಶ್ಯಕವೆಂದು ಅಭಿಪ್ರಾಯ ಪಟ್ಟಿರುತ್ತಾರೆ ಸ್ಕೂಲು ಕಟ್ಟಡಕ್ಕೋಸ್ಕರ ಗ್ರಾಮಸ್ಥರು ಎರಡು ವರ್ಷಗಳ ಲಾಗಾಯ್ತಿನಿಂದ ಆ ಇಲಾಖಾ ಅಧಿಕಾರಿಗಳಿಗೆ ಅನೇಕ ಅರ್ಜಿಗಳು ಗುಜರಾಯಿಸಿಕೊಂಡಾಗ್ಯೂ ಇನ್ನೂ ಸರ್ಕಾರದವರ ದಿವ್ಯಚಿತ್ತಕ್ಕೆ ಬರಲಿಲ್ಲ ಇದು ಶಾಲಾಖೈರಾದ್ದರಿಂದ ಅವರು ಈಗಲಾದರೂ ದಯವಿಟ್ಟು ಈ ವರ್ಷದ ಬಜೆಟ್ಟಿನಲ್ಲಿ ಈ ಸ್ಕೂಲಿಗೆ ಸ್ಯಾಂಕ್ಷನ್ ಮಾಡಿಯಾರೆಂದು ಪ್ರಾರ್ಥಿಸುತ್ತೇನೆ

ವಿದ್ಯಾಭಿಮಾನಿ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘವು

ಅಯ್ಯಾ,

ಈ ಸಂಘದ ಮೀಟಿಂಗು ಈ ಜೂನ್ ತಾ 3 ನೇ ಭಾನುವಾರ ಚಿತ್ರದುರ್ಗದ ಏ ವಿ ಸ್ಕೂಲ್ ಕಟ್ಟಡದಲ್ಲಿ ನಡೆಯತಕ್ಕದ್ದೆಂದು ಗೊತ್ತಾಗಿತ್ತು ಕಳೆದ ತಿಂಗಳ ಮೀಟಿಂಗಿನಲ್ಲೇ ಎಲ್ಲಾ ಮೆಂಬರುಗಳಿಗೂ ಹೇಳಿದ್ದರು ಆ ಪ್ರಕಾರ 12-14 ಮೈಲು ದೂರ ಫಾಸಲೆಯ ಸ್ಕೂಲು ಉಪಾಧ್ಯಾಯರುಗಳು ಕೆಲವರು ಬಂದು ಸೇರಿದರು ಮಧ್ಯಾಹ್ನ 3 ಘಂಟೆ ವರೆಗೂ ಏ ವಿ ಸ್ಕೂಲ್ ಬಾಗಿಲನ್ನೇ ತೆರೆಯಲಿಲ್ಲ ಇನ್‌ಛಾರ್ಜ್ ಹೆಡ್ ಮಾಸ್ಟರವರು ತಮ್ಮ ಸ್ಕೂಲಿನಲ್ಲಿ ಮೀಟಿಂಗಿಗಾಗಿ ಸ್ಥಳ ಕೊಡಲಾಗುವುದಿಲ್ಲವೆಂದು ಹಟಹಿಡಿದರು ಮುಂದಿನ ಏರ್ಪಾಡುಗಳಿಗೆ ಅವಕಾಶವಿರಲಿಲ್ಲ ಮಳೆ ಪ್ರಾರಂಭವಾಯಿತು ದೂರ ಫಾಸಲೆಯಿಂದ ಬಂದಿದ್ದ ಉಪಾಧ್ಯಾಯರುಗಳು ಕೇವಲ ಆಯಾಸದಿಂದ ವಿಶ್ರಮಿಸಿಕೊಳ್ಳಲು ಅವಕಾಶವಿಲ್ಲದೆ, ಉದ್ದೇಶಪಟ್ಟು ಬಂದ ಕಾರ್ಯವು ನೆರವೇರದೆ ನಿರಾಶರಾಗಿ ವಾಪಸು ತೆರಳಬೇಕಾಯಿತು ನಮ್ಮ ಇನ್‌ಛಾರ್ಜ್ ಹೆಡ್ ಮಾಸ್ಟರವರು ಬಹಳ ವಿಚಾರಪರರು, ಇವರಿಗೆ ಉಪಾಧ್ಯಾಯರ ವಿಷಯದಲ್ಲಿ ಸ್ವಲ್ಪವೂ ಕನಿಕರ ಉಂಟಾಗದೆ ಹೋದದ್ದಕ್ಕಾಗಿ ಊರಲ್ಲಿ ಅನೇಕರು ಪಶ್ಚಾತ್ತಾಪಪಡುವರು

ಮುಂದಿನ ತಿಂಗಳ ಮೀಟಿಂಗು ಜೂಲೈ ತಾ 7 ರಲ್ಲಿ ನಡೆಯುವುದಾಗಿ ಗೊತ್ತಾಗಿದೆ ಎಂದಿನಂತೆ ಗರ್ಲ್‌ಸ್ಕೂಲು ಕಟ್ಟಡದಲ್ಲಿ ಸೇರುವುದು ಈ ಸಂಘದ ಮೀಟಿಂಗು ಮುಂದಕ್ಕೆ ಯಾವ ವಿಧವಾದ ಅಡಚಣೆಗಳೂ ಇಲ್ಲದೆ ಕ್ರಮವಾಗಿ ನಡೆಯುವುದು ಈ ಭರವಸೆಯ ಮೇಲೆ ಎಲ್ಲಾ ಮೆಂಬರುಗಳೂ ಆ ಕಾಲಕ್ಕೆ ದಯವಿಟ್ಟು ಬರಬೇಕೆಂದು ಕೇಳಿಕೊಂಡಿದಾರೆ

ವೀಣಾ ಬಿಷ್ಟಪ್ಪ,
ಉಪಾಧ್ಯಾಯ ಸಂಘದ ಸೆಕ್ರೆಟರಿ

ಸಂಚಾರದಲ್ಲಿ ತಿಳಿದ ಸಂಗತಿಗಳು.

ಅಯ್ಯಾ,

ರೈಲು ಪ್ರಯಾಣವು ಇಂಪಾಗಿತ್ತು ಸ್ಟೇಷನುಗಳಲ್ಲೆಲ್ಲಾ ಮಳೆ ಬಿದ್ದು ಧೂಳಿಲ್ಲದೆ ಅಲ್ಲಲ್ಲಿ ಹಚ್ಚಗೆ ಹುಲ್ಲು ಬೆಳೆಯುತ್ತಿತ್ತು ಒಬ್ಬನು ಕಾನಾಗಿ ಬಂದನೋ, ಅಕಸ್ಮಾತ್ತೋ, ಗೊತ್ತಿಲ್ಲ, ಆದರೆ ಅವನ ಮೇಲೆ ಬಂಡಿಯು ಹೋಗಿ ಮೃತಪಟ್ಟನು ಇಂಜನು ಡ್ರೈವರು ಎಷ್ಟು ಹುಷಾರಿದ್ದರೂ ಇದನ್ನು ತಡೆಯಲು ಆಗದೆ ಹೋಯಿತು ನಿಜವಾಗಿಯೂ ಅನ್ಯಾಯವೇ ಆಯಿತು ಇಳಿದು ನಿಜಸಂಗತಿಯನ್ನು ವಿಚಾರಿಸಲು ಅನಾನುಕೂಲವಾಯಿತು

ಕಾಡುಗೋಡಿ ಹತ್ತಿರ ಗ್ರಾಮದಲ್ಲಿ ಪೂಜಾರಿ ರಾಮಣ್ಣನೆಂಬುವನು ಇಲ್ಲಿ ಪಾಷಾಣವನ್ನು ಅನ್ನಬೇಯುತ್ತಿರುವ ಮಡಿಕೆಯಲ್ಲಿ ಹಾಕಿದನಂತೆ ಆ ಅನ್ನವನ್ನು ತಿಂದ ಮೂವರೂ ವಾಂತಿಭೇದಿ ಮುಂತಾದ ತೊಂದರೆಯಲ್ಲಿದ್ದ ಸಂಗತಿ ಪೋಲೀಸಿಗೆ ತಿಳಿದು ಆಸ್ಪತ್ರೆಗೆ ಕಳಿಸಲು ತಕ್ಷಣ ಆ ಸಬ್ ಅ. ಸರ್ಜನ್‌ರು ತುಂಬಾ ಮುತುವರ್ಜಿಯಿಂದ ಅವರುಗಳಿಗೆ ಇಲಾಜುಮಾಡಿದರು ಆದರೂ ಒಬ್ಬಳು ಮಾತ್ರ ಮೃತಪಟ್ಟು ಮಿಕ್ಕಿಬ್ಬರೂ ಸೌಖ್ಯವಾಗಿರುತ್ತಾರೆ ಮೃತಪಟ್ಟವಳ ಹೊಟ್ಟೆ ಕರುಳು ಮುಂತಾದ್ದನ್ನು ಕೆಮಿಕಲ್ ಎಗ್ಸಾಮಿನರಿಗೆ ಕಳುಹಿಸಿರುತ್ತಾರೆ ಆ ಪೂಜಾರಿ ರಾಮಣ್ಣನು ರಿಮ್ಯಾಂಡಿನಲ್ಲಿರುತ್ತಾನೆ

ಒಬ್ಬ ವರ್ತಕನು ತನ್ನ ಸಾಲಗಳನ್ನು ತೀರಿಸಲು ಕೊಂಚ ನಿದಾನಮಾಡಿದ ಸಬಬು ಕೆಲವರು ಸೇಟುಗಳು ಜೊಂಬಿಮಾಡಿ ಅವನನ್ನು ಅವಮಾನಕರವಾಗಿ ಪೀಡಿಸಿದ್ದರಿಂದ ಪೋಲೀಸಿಗೆ ರಿಪೋರ್ಟು ಹೋಗಲು ಆ ಸೇಟುಗಳು ಪೋಲೀಸ್ ಸುಪರ್ದಿನಲ್ಲಿರುತ್ತಾರೆ ಆಯಾಯಾರುಗಳಿಗೆ ಸುಗ್ಗಿಯೋ ಸುಗ್ಗಿ

ಸಾಹುಕಾರ ಶೇಷಪ್ಪನ ಹೆಂಡತಿ ತನ್ನ ಇಷ್ಟನನ್ನು ಮನೆಯಲ್ಲಿ ಬಚ್ಚಿಟ್ಟದ್ದನ್ನು ಕಂಡು ದಂಡಿಸಿದ್ದರಿಂದ ಶೇಷಪ್ಪನನ್ನು ಹೊಡೆದು ಇವನ ಹೆಂಡತಿಯು ಓಡಿಹೋದವಳು ಇನ್ನೂ ಪತ್ತೆ ಇಲ್ಲ ಪೋಲೀಸಿನವರು ಹುಡುಕುತ್ತಲಿದಾರೆ ಅಲಸೂರಿನಲ್ಲಿ ಆಕೆ ಸಿಕ್ಕಬಹುದೆಂದು ಹೇಳುತ್ತಾರೆ

ಸಾಲ ಮಾಡಬಾರದೆಂದು ಹಿರಿಯರು ಹೇಳುವರು ಆದರೂ ಸೇಟುಗಳು ಧೈರ್ಯವಾಗಿ ಸಾಲಕೊಡುವಂತೆ ಇನ್ಯಾರೂ ಕೊಡುವದಿಲ್ಲ ನೇಕಡಾ 6 ರೂಪಾಯಿ ಬಡ್ಡಿವರಿಗೂ ಕೊಡುತ್ತಾರೆ ಸಾಲದಲ್ಲಿ ಮುಳುಗಿ ಕೊಡಲು ಅನಾನುಕೂಲವಾದ ಮಂಡಿ ವ್ಯಾಪಾರಸ್ಥರುಗಳ ಪೈಕಿ ಕೆಲವರು ಸೇರಿ ಕಮಿಟಿಮಾಡಿ ಸೇಟುಗಳನ್ನು ತಮ್ಮಗಳನ್ನು ಅವಮಾನಪಡಿಸಬಾರದೆಂದು ಕೇಳಿಕೊಂಡು ತಮತಮ್ಮ ಆಸ್ತಿಗಳನ್ನು ಕೆಲವರಿಗೆ ಈಡುಮಾಡಿ ಕೊಟ್ಟಿರುತ್ತಾರೆ ಆದರೆ ಪರಸ್ಥಳದ ರೈತರು ಇವರುಗಳನ್ನು ನಂಬಿ ಸರಕು ಜಿಕರಿಮಾಡಿ ಆಯಾ ದ್ರವ್ಯವನ್ನು ಹಿಂದಿನಂತೆ ನಂಬಿಕೆಯಾಗಿ ಬಿಟ್ಟು ಹೋಗುತ್ತಲಿರುತ್ತಾರೆ ಅಯ್ಯೋ, ಪಾಪವೆ! ಇವರುಗಳು ಕೆಟ್ಟುಹೋಗುವರಲ್ಲಾ ಇವರುಗಳಿಗೆ ದೇವರು ಬುದ್ಧಿ ಕೊಟ್ಟು ತಮ್ಮ ತಮ್ಮ ಹಣಗಳನ್ನು ಇವರುಗಳ ಮೋಜು ಬಿಡದೆ ವಸೂಲು ಮಾಡಿಕೊಳ್ಳದಿದ್ದರೆ ಅನ್ಯಾಯವಾಗುತ್ತಾರಲ್ಲಾ ಎಂಬ ಸಂಕಟಕ್ಕಾಗಿ ನಾನು ಬರೆದಿರುತ್ತೇನೆ ರೈತರು ಕೊಂಚ ಹುಷಾರಾಗಿ ಇಲ್ಲವಾದರೆ ಕೆಡುವರು ಅವರ ದುಡ್ಡು ಅವರಲ್ಲಿರಲಿ, ಇಂಥಾ ವರ್ತಕರಲ್ಲಿ ಬಿಡಬಾರದು

ದಂಡಿನ ಸಾರಾಯಿ ಅಂಗಡಿಗಳನ್ನು ಪುನಃ ಹರಾಜಿಗಿಟ್ಟಿರು ಹೆಚ್ಚು ದರಖಾಸ್ತು ಆಯಿತು ಕೇಂದಿ ಬಾಬೂನೂ ಇರುತ್ತಾರೆಂಬ ಪುಕಾರು ಇರುತ್ತೆ ಪೈಪೋಟಿಯಲ್ಲಿ ಇಬ್ಬರ ಜಗಳ ಮೂರನೆಯವನಿಗೆ ಲಾಭವೆಂಬಂತೆ ಸರ್ಕಾರಕ್ಕೆ ಲಾಭ ಹೆಚ್ಚಾಗಿ, ಮಾಡಿದವನಿಗೆ ನಷ್ಟವು ಈ ನಷ್ಟದಿಂದ ಸೇಟಾಗಲಿ ಇಲ್ಲವೇ ಇತರ ರೈತನಾಗಲಿ ಕೆಡುತ್ತಾನೆ ಯಾಕೆಂದರೆ ಹೆಚ್ಚು ಮಾಡಿದವನಿಗೆ ನಷ್ಟ ಬರುವುದೆಂದು ತಿಳಿದು ತಾನು ನಷ್ಟಗಾರನಾಗದ ಯೋಚನೆಯೇ ಮಾಡುತ್ತಾನೆ ಆದ್ದರಿಂದ ಬಡರೈತರುಗಳು ಕೆಟ್ಟುಹೋಗದಿರಲು, ನಗದು ಮಾರಾಟಗಳಲ್ಲೇ ಇರಬೇಕೆಂದು ಕೋರುವ

ಹಿತಚಿಂತಕ

ಒಂದು ಪಂಥವು—ಉತ್ತರ

ಅಯ್ಯಾ,

ತಮ್ಮ 31-5-1912 ನೇ ತಾರೀಖಿನ ಪತ್ರಿಕೆಯಲ್ಲಿ ಒಂದು ಪಂಥವು ಎಂಬ ಹೆಡ್ಡಿಂಗ್ ಹಾಕಿ ಗಿರಿಜಾನಂದಸ್ವಾಮಿ ಸರಸ್ವತಿಯವರ —(1) ವಿಗ್ರಹಾರಾಧನೆ ಇದು ವೇದ ವೇದಾಂಗ ಸಂಬಂಧಪಟ್ಟ ಭಗವದಾರಾಧನೆಯಲ್ಲ, (2) ಶರೀರವನ್ನು ಬಿಟ್ಟುಹೋದ ಆತ್ಮಕ್ಕೆ ಶ್ರಾದ್ಧಾದಿಗಳು ಮಾಡೋಣ ನಿಷ್ಪ್ರಯೋಜನವಾದವು (3) ಪಾಪಪರಿಹಾರಾರ್ಥಕ್ಕೆಂತ ಹಿಂದೂಗಳು ಈಗ ಮಾಡುತ್ತಿರತಕ್ಕ ತೀರ್ಥಯಾತ್ರೆಗಳು ಉದ್ದೇಶಕ್ಕೆ ಸಹಕಾರಿಗಳಲ್ಲ ಎಂಬಿವುಗಳನ್ನು ಸ್ಥಿರಪಡಿಸಿ ತಿಳಿಸತಕ್ಕವರಿಗೆ 1,000 ರೂಪಾಯಿ ಪಾರಿತೋಷಕ ಕೊಡುವದಾಗಿ ಪ್ರಕಟಪಡಿಸಿದ್ದಾರೆಂದು ನಮೂದಾಗಿರುತ್ತೆ ಈ ಕರ್ಮಗಳ ವಿಚಾರದಲ್ಲಿ ಇವರು ಪಂಥ ಹಾಕಿದ್ದರಿಂದ ಅವು ನಿಷ್ಪ್ರಯೋಜನವಾದವುಗಳಾಗಿರಬಹುದೆಂದು ಊಹಿಸಬೇಕಾಗಿದೆ ಏತಕ್ಕೆಂದರೆ ಇವರ ಪಂಥವು ಗೆಲ್ಲುವದಾಗಿಲ್ಲದೇ ಇದ್ದ ಪಕ್ಷದಲ್ಲಿ ಇವರು ಒಂದು ಸಾವಿರ ರೂಪಾಯಿ ವೃಥಾ ಕಳೆದುಕೊಳ್ಳಲು ಪ್ರಯತ್ನಪಡುತ್ತಿದ್ದರೇ? ಇಲ್ಲ ಆದರೆ ಈ ಕರ್ಮಗಳು ಸಕಲ ಶಾಸ್ತ್ರಾರ್ಥಗಳನ್ನೂ ತಿಳಿದು ಶ್ರೇಷ್ಠರೆನಿಸಿಕೊಂಡಿದ್ದ ಮಹರ್ಷಿಗಳಿಂದ ಅಂಗೀಕರಿಸಲ್ಪಟ್ಟಿದ್ದವು ಇವುಗಳು ನಿಷ್ಪ್ರಯೋಜನ ಮತ್ತು ನಿಷ್ಕಾರಣವಾದ ಕರ್ಮಗಳಾಗಿದ್ದರೆ ಮನಸ್ಸಾಕ್ಷಿತ್ವವನ್ನುಂಟಾಗಿದ್ದ ಋಷಿಗಳು ಹೇಗೆ ಅಂಗೀಕರಿಸುತ್ತಿದ್ದರೆಂಬ ಶಂಕೆಯು ಬಾಧಿಸುತ್ತಿದೆ ಅಲ್ಲದೆ ಇನ್ನೂ ಕೆಲವು ಕಾರಣಗಳನ್ನು ಯೋಚಿಸುವಲ್ಲಿ ಈ ಕರ್ಮಗಳೆಲ್ಲ ಪ್ರಯೋಜನ ಮತ್ತು ಕಾರಣಯುಕ್ತವಾದವುಗಳೇ ಹೌದೆಂದು ತೋರುತ್ತವೆ

ಈ ಕರ್ಮಗಳನ್ನು ಸಕಾರಣವಾಗಿ ವಿವರಿಸಲು ತಿಳಿದ ಪಂಡಿತಶ್ರೇಷ್ಠರನೇಕರಿದ್ದಾರೆ ಆದರೆ ಅವರು ಪ್ರತಿಷ್ಠೆಯನ್ನು ಹೊಂದಲು ಅಭಿಪ್ರಾಯವಿಲ್ಲದೇನೋ, ಅಥವ "ಸಂತೆಯಲಿ ತತ್ವವನು ಪೇಳ್ವಾತ ಮೂರ್ಖ" ಎಂಬ ಜಾಣ್ನುಡಿಗೆ ಸರಿಯಾಗಿ ಇಂಥಾ ಮಹತ್ತಾದ ವಿಷಯಗಳನ್ನು ತಿಳಿಯಲು ಇಷ್ಟಾನಿಷ್ಟರಾದವರಿಗೆಲ್ಲರಿಗೂ ವಿಶದಪಡಿಸಲು ಇಚ್ಛೆ ಇಲ್ಲದೇನೋ, ಅಥವ ಈ ಘನವಾದ ವಿಷಯಗಳನ್ನು ಪತ್ರಿಕೆಗಳಲ್ಲಿ ಕಾರಣಯುಕ್ತವಾಗಿ ಪ್ರಕಟಿಸಲು ಸ್ಥಳಸಂಕೋಚದಿಂದ ಸಂಕ್ಷೇಪಿಸಿ ಬರೆದರೆ ಪುನಃ ಪ್ರಶ್ನೆಗೆ ಅವಕಾಶವಾಗುತ್ತದೆಂಬ ಯೋಚನೆಯಿಂದಲೋ, ಅಥವ ಅಮೂಲ್ಯವಾದ ಅವರ ಕಾಲವನ್ನು ಶ್ರೇಷ್ಠತರವಾದ ಇತರ ಕಾರ್ಯಗಳಲ್ಲಿ ವಿನಿಯೋಗಿಸಬೇಕೆಂತಲೋ, ಅಥವ ಮತ್ತಾವ ಕಾರಣದಿಂದಲೋ ಈ ಆಕ್ಷೇಪಣೆಗೆ ಸಮಾಧಾನವನ್ನು ಬರೆಯದೆ ಮೌನವನ್ನು ಧರಿಸಿರುವರು

ಗಿರಿಜಾನಂದಸ್ವಾಮಿ ಸರಸ್ವತಿಯವರು ಈ ಕರ್ಮಗಳು ನಿಷ್ಪ್ರಯೋಜನವೆಂದು ಹೇಳುವದು ಜ್ಞಾನಮಾರ್ಗಕ್ಕೋ ಅಥವಾ ಕರ್ಮಮಾರ್ಗಕ್ಕೋ ಸ್ಪಷ್ಟವಾಗುವದಿಲ್ಲ ಜಿತೇಂದ್ರಿಯನಾದ ಜ್ಞಾನಿಗೆ ತೀರ್ಥಯಾತ್ರಾದಿ ಬಾಹ್ಯ ಕರ್ಮಗಳು ಅನಾವಶ್ಯಕವೇ ಸರಿ ಅದು ತಪ್ಪಿ ನಿತ್ಯಾನಿತ್ಯ ವಸ್ತು ವಿವೇಚನೆಯಿಲ್ಲದೆ, ಕರ್ಮಜನಿತವಾದ ದೇಹವೇ ತಾನೆಂಬ ಭಾವನೆಯಿಂದ ಹಿತಾಹಿತ, ಕರ್ಮಾಕರ್ಮ, ಶುಭಾಶುಭ, ಶುದ್ಧಾಶುದ್ಧ, ಪಕ್ಷಾಪಕ್ಷ, ಲಾಭಾಲಾಭ, ಯುಕ್ತಾಯುಕ್ತ, ರಾಗದ್ವೇಷ, ಶೀತೋಷ್ಣಾದಿ ದ್ವಂದ್ವಗಳಿಗೆ ಸಿಕ್ಕಿ ಸುಖದುಃಖಗಳಲ್ಲಿ ಮಗ್ನರಾಗಿರುವವರಿಗೆ ಪ್ರತಿ ಸುಕರ್ಮವೂ ಅತ್ಯಾವಶ್ಯಕವಾಗಿರುವದು ಪ್ರಕೃತ ಸರಸ್ವತಿಯವರು ಆಕ್ಷೇಪಣೆ ಮಾಡಿರುವ 1 ನೇ ವಿಗ್ರಹಾರಾಧನೆ ವಿಚಾರವಾಗಿ ಬ್ರ ಶ್ರೀ ನಂಜುಂಡದೀಕ್ಷಿತರಿಂದ ವಿರಚಿತವಾದ "ವಿಗ್ರಹಾರಾಧನ ಸಮರ್ಥನವು" ಎಂಬ ಪುಸ್ತಕವನ್ನು ಇವರು ದಯವಿಟ್ಟು ನೋಡಿದರೆ ಇದು ವೇದ ಮತ್ತು ವೇದಾಂಗ ಸಮ್ಮತವಾದ ಭಗವದಾರಾಧನೆಯೆಂಬ ವಿಷಯದಲ್ಲಿ ಇವರು ತೃಪ್ತರಾದಾರೆಂಬ ಭರವಸೆ ಇದೆ

ಇವರು ಪಂಥಕ್ಕೋಸ್ಕರ ಒಂದು ಸಾವಿರ ರೂಪಾಯಿ ಖರ್ಚು ಮಾಡುವದಕ್ಕಿಂತ 1 5 ರೂ ಖರ್ಚುಮಾಡಿ ಇಲ್ಲಿಗೆ ಬಂದರೆ ಮುಖ್ಯವಾದ ವಿಚಾರಗಳೆಲ್ಲಾ ಇತ್ಯರ್ಥವಾಗುವದರಲ್ಲಿ ಸಂಶಯವಿಲ್ಲ ಇವರು ಯಾವಾಗ ಬರುವದು ಗೊತ್ತಾದರೆ ಅತ್ಯಾದರಣೆಯಿಂದ ಬರಮಾಡಿಕೊಳ್ಳುವೆವು

ಕೋಟೆ, ಕೋಲಾರ್ — ಎಂ ಎಸ್ ವೆಂಕಟರಾವ್

[ಸ್ಥಳ ಸಂಕೋಚದಿಂದ ಈ ಬಾತ್ಮಿಯಲ್ಲಿ ಕೆಲವು ಭಾಗವನ್ನು ಬಿಟ್ಟುಬಿಡಬೇಕಾಯಿತೆಂದು ತಿಳಿಸಲು ವಿಷಾದವಾಗುತ್ತದೆ —ಎಡಿ]

ದಂಡಿನ ಸರಬರಾಜೂ, ಬಡರೈತರ ಕಷ್ಟನಷ್ಟಗಳೂ

ಅಯ್ಯಾ,

ಕಳೆದ ತಾ 26 ರಲ್ಲಿ ನಡೆದ ನಮ್ಮ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವಕ್ಕೋಸ್ಕರ ಮೈಸೂರಿಗೆ ಹೋಗಿದ್ದ ದಂಡು ವಾಪಸು ಬೆಂಗಳೂರಿಗೆ ಹೋಗುವುದಕ್ಕಾಗಿ ಹೊರಟು ಒಂದು ಇದೇ ತಾ 1 ರಲ್ಲಿ ಮಂಡ್ಯದಲ್ಲಿ ಮೊಕ್ಕಾಂ ಮಾಡಿತು ದಂಡಿಗೆ ಬೇಕಾಗಿದ್ದ ಸಾಮಾನುಗಳನ್ನೆಲ್ಲಾ ಸರಬರಾಜು ಮಾಡಬೇಕ್ಕೆ ಆಜ್ಞೆಯನ್ನು ಹೊಂದಿದ್ದ ಶೇಕ್ದಾರರು ಸಿದ್ಧಪಡಿಸಿಕೊಂಡಿದ್ದಂತೆ ಈ ಕೆಳಗಣ ಕೃತ್ಯಗಳಿಂದ ತಿಳಿದು ಬರುವುದಿಲ್ಲ ಸರ್ಕಾರದವರು ಪ್ರಜೆಗಳಿಗೆ ತೊಂದರೆಯನ್ನು ಕೊಡಕೂಡದೆಂಬ ಘನವಾದ ಉದ್ದೇಶದಿಂದ ದಂಡು ಹೊರಡುವುದಕ್ಕೆ ಮೊದಲೇ ಯಾವ ಯಾವ ತಾಲ್ಲೂಕಿನ ಮೇಲೆ ಅದು ಹೋಗಬೇಕಾಗುತ್ತದೋ ಆಯಾ ತಾಲ್ಲೂಕು ಅಮಲ್ದಾರರುಗಳಿಗೆ ತಿಳಿಸುವುದು ಅಮಲ್ದಾರರು ಶೇಕ್ದಾರ್ರುಗಳಿಗೆ ಬೇಕಾಗುವ ಸಾಮಾನುಗಳನ್ನೆಲ್ಲಾ ಸಿದ್ಧಪಡಿಸಿಕೊಂಡಿದ್ದು ಸರಬರಾಜಾದ ನಂತರ ಮೊಬಲಗಿಗೆ ಬಿಲ್ಲುಮಾಡಿಯೋ, ಅಥವಾ ನಗದಾಗಿಯೋ ತೆಗೆದುಕೊಳ್ಳುವಂತೆ ತಾಕೀತು ಮಾಡುವಂತೆ ಕೇಳುತ್ತೇನೆ ಶೇಕ್ದಾರ್ರುಗಳು ಸಾಮಾನುಗಳನ್ನು (ದಂಡಿಗೆ ಬೇಕಾಗುವ ಕುರಿ, ಕೋಳಿ, ಹುಲ್ಲು, ಸೌದೆ, ಗಾಡಿ, ವಗೈರೆ) ಸಿದ್ಧಪಡಿಸುವುದು ಎಂದರೆ ಕಾವು ಮೊದಲೇ ಖರೀದಿ ಕೊಟ್ಟು ತಂದು ಇಟ್ಟುಕೊಂಡಿರುವುದೋ? ಅಥವ ರೈತರಲ್ಲಿ ಜುಲುಮಿನಿಂದ ವಸೂಲಾಡುವುದೋ? ಈ ಭಾಗ ಮಾತ್ರ ನಿರ್ಧರಿಸುವುದು ಕಷ್ಟವಾಗಿರುತ್ತೆ ದಂಡು ಬಂದಿಳಿದಿದ್ದ ತಾ 1 ರಲ್ಲಿ ದಂಡು ಸರಬರಾಜು ಡ್ಯೂಟಿ ಮೇಲಿದ್ದ ಶೇಕ್ದಾರ್ರು ಹೊಸಗೋನಹಳ್ಳಿ ಚಿಕ್ಕೇಗೌಡನೆಂಬುವನ ಗಾಡಿಯನ್ನು (ರಾಗಿಯ ಹುಲ್ಲು ಹೇರಿಕೊಂಡಿದ್ದ 2 ಗಾಡಿಗಳು) ತಡೆದು ತಮಗೆ ಹುಲ್ಲು ಬೇಕೆಂದೂ, ಕೊಡದಿದ್ದರೆ ಸೆರೆಮಾಡಿ ಬಿಡುತ್ತಾರೆಂದೂ, ಗಾಡಿ ಸಹ ಬಿಡದೆ ಬಿಟ್ಟು ಹಿಡಿಯುತ್ತೇವೆಂದೂ ವಗೈರೆ ಬೆದರಿಸಲು ಸದರಿಯವನು— "ಸ್ವಾಮಿ, ಮನೆಯಲ್ಲಿ ದನಗಳಿಗೆ ಹುಲ್ಲಿಲ್ಲದೆ ಬಹು ಕಷ್ಟ, ಅದಕ್ಕಾಗಿ ಪರಸ್ಥಳದಿಂದ ಹೋಗಿ ತಂದಿರುತ್ತೇನೆ ನೀವು ಹುಲ್ಲು ಲೂಟಿಮಾಡಿಸಿದರೆ ರೈತನು ಕಾಶೀ ತೋಟಕ್ಕೆ ಹೋಗಬೇಕಾಗುತ್ತೆ ದನಗಳೆಲ್ಲಾ ಸಾಯುವಂತಿವೆ ದಯವಿಟ್ಟು ಬಿಡಬೇಕು" ಎಂದು ಆರ್ತಸ್ವರದಿಂದ ಕೇಳಿದಾಗ್ಯೂ ಬಿಡದೆ ಇರುವಲ್ಲಿ, ಸದರಿ ರೈತನು— "ಸ್ವಾಮಿ, ನನಗ ದುಃಖದಿಂದ ಅನ್ನವಿಲ್ಲ, ದಯಮಾಡಿ ಬಿಡಿ ರೈತರನ್ನು ಹೀಗೆ ಕಷ್ಟಪಡಿಸಬಾರದು" ಎಂದು ಎಷ್ಟು ಕೇಳಿದಾಗ್ಯೂ ಕೇಳದೆ— "ನೀನು ಹಸಿದುಕೊಂಡಿದ್ದರೆ " ಎಂದು ದುರ್ವಾಕ್ಯಗಳನ್ನು ಆಡಿದರಂತೆ ಹಾಗೂ ಬಿಡದೆ ಹುಲ್ಲು ಗಾಡಿಗಳನ್ನು ಒಪ್ಪದಿದ್ದರೂ ತಾವು ತಾವೇ ಅಂದಾಜು ಮಾಡಿಕೊಂಡು 8 ರೂಪಾಯಿಗೆ ಖರೀದಿ ಮಾಡಿ 7 ರೂಪಾಯಿ ಕೊಟ್ಟು 1 ರೂಪಾಯಿ ಹುಲ್ಲು ಸಿಕ್ಕಿಯಿಲ್ಲವೆಂದು ಹಿಡಿದುಕೊಂಡರಂತೆ ಇದು ಯಾವ ಧರ್ಮ? ರೈತನು 2 ಬಿತ ಕೊಡುವುದಿಲ್ಲವೆಂದರೂ ಜುಲುಮಿನಿಂದ 8 ರೂಪಾಯಿ ಕ್ರಯಕ್ಕೆ ಎಂದು 7 ರೂಪಾಯಿ ಕೊಡುವುದು? ಸರ್ಕಾರದವರು ಎಲ್ಲಾ ಜನಗಳ ಪ್ರಯೋಜನಾರ್ಥವಾಗಿ "ಲಾ"ಗಳನ್ನು ಮಾಡಿರುತ್ತಾರೆ ಅದರಲ್ಲಿ ಅಕ್ರಮ ನಡೆಗೆ ಶಿಕ್ಷೆ ಸಹ ಉಂಟು ಇಲ್ಲಿನ ಶೇಕ್ದಾರರೇ ಮೊದಲಾದ ನೌಕರರು ಅಕ್ರಮವಾಗಿ ಗಾಡಿಗಳನ್ನು ತಡೆಯುವುದು, ಜುಲುಮಿನಿಂದ ಎಳೆದಾಡುವುದು, ಮತ್ತು ಗ್ರಾಮಾಂತರಗಳಲ್ಲಿ ದಂಡಿನ ಹೆಸರನ್ನು ಹೇಳಿ ರೈತರ ಕೋಳಿ ಕುರಿಗಳನ್ನು ಹಿಡಿಯುವುದು ಯಾವ ನ್ಯಾಯ? ಹಾಗೂ ರೈತರು ತಮ್ಮ ಪ್ರಭುವಿನಲ್ಲಿರತಕ್ಕ ಭಕ್ತಿಯಿಂದ ಸುಮ್ಮನಿದ್ದರು ಇಂಥಾ ನಡವಳಿಕೆಗೆ ಶೇಕ್ದಾರರಿಗೇನಾದರೂ ಅಧಿಕಾರವುಂಟೋ, ಇಲ್ಲವೋ? ತಿಳಿಯಬೇಕು

ಕಷ್ಟವಾಗಿದೆ ರೈತರ ಕಷ್ಟ ನಷ್ಟಗಳನ್ನು ಆ ವೇಳೆ ಪ್ರತ್ಯಕ್ಷ ನೋಡಿದವರು ತಿಳಿಯಬೇಕೇ ವಿನಹ ಲಿಖಿತ ಮೂಲಕ ತಿಳಿಸುವುದು ಎಂದರೆ ಶ್ರಮ ಈ ಭಾಗವನ್ನೆಲ್ಲಾ ನಮ್ಮ ಸರ್ಕಾರದವರು ಪರೀಕ್ಷಿಸಿ ನಿಜಾಂಶವನ್ನು ಕಂಡು ಹಿಡಿದು ಬಂದೋಬಸ್ತು ಮಾಡಿದರೆ ಮೋಸವು ಹೊರಬಿದ್ದು ಧರ್ಮವು ನೆಲೆಯಾಗಿ ನಿಂತು ತನ್ಮೂಲಕ ರೈತರಿಗೆ ಸುಖ ಉಂಟಾಗುವುದರಲ್ಲಿ ಅಭ್ಯಂತರವಿಲ್ಲ

ರೈತಾಭಿಮಾನಿ

ಅಧಿಕಾರಿಗಳಿಂದ ಬಡನೌಕರರಿಗೆ ಹಿಂಸೆ

ಅಯ್ಯಾ,

ಇದೇ ತಿಂಗಳು ಮೊದಲನೇ ತಾರೀಖಿನಲ್ಲಿ ಕೊಪ್ಪದ ಕಡೆ ಕಾಫಿ ಪ್ಲಾಂಟರಾದ ಮ|| ಲೆಸ್ಲೀ ಸಾಹೇಬರೂ ಅವರ ಪತ್ನಿಯವರೂ ಧಾರವಾಡಕ್ಕೆ ಹೋಗುವದಕ್ಕಾಗಿ ತರೀಕೆರೆ ಟ್ರಾವಲರ್ಸ್ ಬಂಗ್ಲೆಯಲ್ಲಿ ಇಳಿದುಕೊಂಡರು 3 ನೇ ತಾ ಮೇಲ್ ಗಾಡಿಯಲ್ಲಿ ಹೋಗುವುದಕ್ಕೆ ಮುಂಚೆ ಅವರು ತಮ್ಮ ಗಡಿಯಾರವು ಕಳುವಾಗಿದೆ ಎಂದು ಮೇಟಿಯ ಮೇಲೂ ನೀರು ತಾಳುವವನ ಮೇಲೂ ಪೋಲೀಸಿಗೆ ಪಿರ್ಯಾದು ಕೊಟ್ಟು ಹೊರಟುಹೋದರು 4 ನೇ ತಾ ಪೋಲೀಸಿನವರು ಈ ಇಬ್ಬರನ್ನು ದಸ್ತಗಿರಿ ಮಾಡಿ, ಒಂದು ವೇಳೆ ತಮ್ಮ ಸಾಮಾನುಗಳ ಪೆಟ್ಟಿಗೆಗಳೊಳಗೆ ಇದ್ದೀತೆಂದು ಮೊಲ್ಕಂಡ ಸಾಹೇಬರಿಗೆ ತಂತೀ ವರ್ತಮಾನ ಕೊಟ್ಟರು ಗಡಿಯಾರ ಸಿಕ್ಕಲಿಲ್ಲವೆಂದು ಅವರಿಂದ ತಂತೀ ಬಂದ ಮೇಲೆ ಪೋಲೀಸಿನವರು ಈ ಇಬ್ಬರನ್ನೂ ಬಿಡದೆ ಹಿಂಸೆಮಾಡುವದಕ್ಕೆ ತೊಡಗಿ, ಆ ದಿನವೆಲ್ಲಾ ಅವರನ್ನು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡರು 5 ನೇ ತಾ ಸಾಯಂಕಾಲ ಗಡಿಯಾರ ಸಿಕ್ಕಿತೆಂದು ಮ|| ಲೆಸ್ಲೀ ಸಾಹೇಬರು ತಂತೀ ಕೊಟ್ಟ ನಂತರ ಅವರನ್ನು ಪೋಲೀಸಿನವರು ಬಿಟ್ಟುಬಿಟ್ಟರು ಆ ಎರಡು ದಿನ ಇವರ ಮತ್ತು ಇವರ ಬಂಧುಗಳ ಗೋಳಾಟವನ್ನು ಇಷ್ಟೆಂದು ಹೇಳಲು ಆಗುವದಿಲ್ಲ ಅಧಿಕಾರಿಗಳು ಬಡನೌಕರರ ಮೇಲೆ ಅಪರಾಧ ಹೊರಿಸುವದಕ್ಕಿಂತ ಮೊದಲು ಚನ್ನಾಗಿ ಯೋಚಿಸಿ, ಪರೀಕ್ಷಿಸಬೇಕಾದದ್ದು ಧರ್ಮವಾಗಿದೆ

ಪ್ರಜಾ ಹಿತಚಿಂತಕ

ತಾಲ್ಲೂಕು ವರ್ತಮಾನಗಳು

ಚಾಮರಾಜನಗರ —ಇಲ್ಲಿ ಒಳ್ಳೇ ಮಳೆ ದಿನವೂ ಆಗುತ್ತಲೇ ಇದೆ ಜೋಳದ ಬೆಳೆ ಚನ್ನಾಗಿದೆ —ಪೋಲೀಸ್ ಇನ್ಸ್‌ಪೆಕ್ಟರ್ ಮ|| ಅಬ್ದುಲ್ ರಜಾಕ್ ಸಾಹೇಬರು ಬೆನ್ನುಪಣೆಯಿಂದ ಈಗ 3 ದಿನಗಳ ಹಿಂದೆ ತೀರಿಹೋದರು ಅವರ ಸಂಸಾರ ಮಕ್ಕಳೆಲ್ಲಾ ಬೆಂಗಳೂರಿನಲ್ಲಿದ್ದರು ಅವರು ಬಹಳ ಒಳ್ಳೆಯವರಾಗಿದ್ದರು ಪೋಲೀಸ್ ಕಾವಲುಗಳನ್ನು ಟೌನಿನಲ್ಲಿ ಬಹಳ ಚನ್ನಾಗಿ ಇಟ್ಟಿದ್ದರು ಅವರ ಅಕಾಲ ಮರಣವು ಅನೇಕರಿಗೆ ವ್ಯಸನಕರವಾಗಿದೆ ಇನ್ನು ಮುಂದೆ ಬರುವವರು ಇದೇ ರೀತಿ ಇರುತ್ತಾರೆಂದು ಪ್ರಜೆಗಳು ನಿರೀಕ್ಷಿಸುವರು —ನಾಲ್ಕು ದಿನಗಳ ಹಿಂದೆ ಚಾಮರಾಜನಗರಕ್ಕೆ ಸ್ವಲ್ಪ ದೂರದಲ್ಲಿ ಒಬ್ಬನಿಗೆ ರೈಲಿನ ಗಾಡಿಗಳು ( ) ಬಿದ್ದು ಸತ್ತುಹೋದನೆಂದು ಲಾಷ್ ಮಹಜರಿಗೆ ಶವವು ಬಂದಿತ್ತು

ಮೂಡಿಗೆರೆ —ಜೂನ್ 6, 7 ದಿವಸಗಳ ರಾತ್ರಿಯು ಸಾಯಂಕಾಲ ಒಂದೊಂದು ಹದ ಮಳೆ ಬೀಳಲು ರೈತರಿಗೂ, ವರ್ತಕರಿಗೂ ತುಂಬಾ ಆನಂದವನ್ನುಂಟುಮಾಡಿತಲ್ಲದೆ ಬಿಸಿಲ ಧಗೆಯನ್ನು ಕಡಮೆ ಮಾಡಿರುತ್ತದೆ ಈಗೀಗ ಜೋನೆಮಳೆ ಹಿಡಿಯುವ ಸೂಚನೆ ತೋರುತ್ತದೆ — ಈ ಊರಿನ ಬ್ರಾಹ್ಮಣ ಶ್ರೇಣಿಯ ಮಧ್ಯದಲ್ಲಿದ್ದ ಬಾವಿಯ ಕಾಮಗಾರಿ ಇನ್ನೂ ಮುಗಿಯಲಿಲ್ಲ ನೀರಿಗೆ ಬಹಳ ತೊಂದರೆಯಾಗಿದೆ ಇದನ್ನು ಯಾವಾಗ ಪೂರೈಸಿ ಅನುಕೂಲಮಾಡಿಕೊಡುತ್ತಾರೋ ತಿಳಿಯದು —ಈ ತಾಲ್ಲೂಕಿಗೆ ಹಾಸನದಿಂದ ವರ್ಗವಾಗಿ ಸ್ವಲ್ಪದಿವಸಗಳ ಕೆಳಗೆ ಬಂದ ಅಸಿಸ್ಟೆಂಟ್ ಸರ್ಜನ್ ಮ|| ಪುಟ್ಟಸ್ವಾಮಿ ಶೆಟ್ಟಿಯವರಿಗೆ ಚನ್ನಪಟ್ಟಣಕ್ಕೆ ವರ್ಗವಾಗಿರತಕ್ಕ ಸಂಗತಿಯನ್ನು ಕೇಳಿ ಬಹಳ ವ್ಯಸನಪಡುತ್ತೇವೆ ಇವರು ನಿಧಾನಿಗಳು, ರೋಗಿಗಳಿಗೆ ಒಳ್ಳೇ ಔಷಧವನ್ನು ಕೊಡುತ್ತಿದ್ದರು —ಇಲ್ಲಿನ ರಾಮಮಂದಿರದಲ್ಲಿ ತ್ರಿಮತಸ್ಥರೂ ಏಕೀಭವಿಸಿ ಭಜನೆ ಮಾಡುತ್ತಿರುವದು ಸ್ತೋತ್ರಾರ್ಹವಾಗಿದೆ

ಮಳವಳ್ಳಿ —ಈ ಸಾರಿ ನಡೆದ ಎಲ್ ಸಿ ಪರೀಕ್ಷೆಯಲ್ಲಿ ಈ ಊರಿನ ಪಂಚಮ ಸ್ಕೂಲಿನಿಂದ 5 ಮಂದಿ 1 ನೇ ಕ್ಲಾಸಿನಲ್ಲೂ, ಇಬ್ಬರು 2 ನೇ ಕ್ಲಾಸಿನಲ್ಲೂ ಪ್ಯಾಸಾದರು —ಕಳೆದ ತಿಂಗಳು 15 ನೇ ತಾ ಹೊಲೆಯರಿಗೂ, ಮಾದಿಗರಿಗೂ ನಡೆದ ಜಗಳದ ವಿಚಾರ ಕಳೆದ ವಾರ ವಿಚಾರಣೆ ಆಗಿ ಕೇಸ್ ವಜಾ ಮಾಡಲಾಯಿತು —ಈ ಊರಿನಲ್ಲಿ ಈಗ ಪ್ಲೇಗ್ ತಲೆದೋರಿದೆ ಎರಡು ತಿಂಗಳ ಹಿಂದೆ ಇಲ್ಲಿ ಇಲಿಗಳು ಸಾಯುತ್ತಾ ಇದ್ದವು ಒಂದೆರಡು ಮರಣಗಳೂ ಆಗಿದ್ದವು ಈಚೆಗೆ ಏನೂ ಇಲ್ಲದೆ ಇದ್ದದರಿಂದ ಜನರು ನಿರ್ಭಯವುಳ್ಳವರಾಗಿದ್ದರು ಆದರೆ ಈಗ ಮತ್ತೆ ಪ್ರಾರಂಭವಾಗಿ ಕಳೆದ ವಾರ 11 ಮರಣಗಳಾದವು ಇನ್ನೂ 23 ಜನರು ಖಾಯಿಲೆಯಾಗಿದ್ದಾರೆ ಈಗ್ಗೆ ಜನಗಳೆಲ್ಲರೂ ಊರು ಸೇರಿ 11 ತಿಂಗಳಾಯಿತು ಪುನಹ ಊರು ಬಿಡಬೇಕಾದ ಸಂದರ್ಭವು ಒದಗಿರುವದರಿಂದ ದುಃಖಕರವಾಗಿದೆ ಕೋಟೆಯಲ್ಲಿರುವ ಕೆಲವರು ಆಗಲೇ ಊರು ಬಿಟ್ಟರು ಉಳಿದವರು ಗುಡಿಸಲಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಳ್ಳುವದರಲ್ಲಿ ಆತುರಪಟ್ಟು ಓಡಾಡುತ್ತಿದ್ದಾರೆ ಹೋದ ವರುಷ ಸರ್ಕಾರದವರು ಗಳ ಮುಂತಾದವುಗಳನ್ನು ತತ್ಕಾಲಕ್ಕೆ ಒದಗಿಸಿಕೊಳ್ಳಲು ಅಸಾಧ್ಯವಾಗಿದ್ದ ಜನಗಳಿಗೆ ತಾವೇ ಬೇಕಾದ ಗಳ ಮುಂತಾದವುಗಳನ್ನು ಕೊಟ್ಟು ಸಹಾಯಮಾಡಿದರು ಸರ್ಕಾರದವರು ಇಂಥಾ ಅನಾನುಕೂಲತೆಯುಳ್ಳವರಿಗೆ ಈ ಸಾರಿಯೂ ತಕ್ಕ ಸಹಾಯ ಮಾಡಿಯಾರೆಂದು ನಂಬುತ್ತೇನೆ

ಶೃಂಗೇರಿ —ಬಿಸಲಿನ ತಾಪವು ಸಹಿಸಲಸಾಧ್ಯವಾಗಿದೆ ಕಾಲರಾ ಕೇಸುಗಳು ಕಸಬಾದಲ್ಲಿ ಆಗಿ ನಾಲ್ಕಾರು ಜನರು ತೀರಿಹೋದರು ಸುತ್ತುಮುತ್ತಲೂ ಇರುವ ಹಳ್ಳಿಗಳಲ್ಲಿ ಕಾಲರಾ ಪ್ರಾರಂಭವಾಗಿದೆ ಜನಗಳು ಗಾಬರಿಯಾಗುತ್ತಲಿದ್ದಾರೆ ರಾಮಭಜನೆ, ಶಕ್ತಿದೇವತಾ ಪ್ರಾರ್ಥನೆಗಳನ್ನು ಮಾಡುತ್ತಾ ಇದ್ದಾರೆ ಮಾರಿಹಬ್ಬ ಮಾಡಬೇಕೆಂಬ ಸುದ್ದಿ ಹುಟ್ಟಿದೆ —ಊರಿನಲ್ಲಿ ಮ್ಯುನಿಸಿಪಾಲಿಟಿಯು ಚನ್ನಾಗಿಲ್ಲ ಈ ಬಗ್ಗೆ ಪ್ರೆಸಿಡೆಂಟರವರು ವಿಚಾರಣೆ ತಗೆದುಕೊಂಡರೆ ಕ್ಷೇಮವಾಗುವದು —ಮಳೆ ಪ್ರಾರಂಭವಾಗುವದಕ್ಕೆ ಮುಂಚೆಯೇ ವರ್ತಕರು ಜೀನಸಿ ಧಾರಣೆ ಹೆಚ್ಚಿಸುತ್ತಲಿದ್ದಾರೆ ಪರಸ್ಥಳದವರು ಜೀವನ ಮಾಡಿಕೊಂಡಿರುವದು ಬಹಳ ಕಷ್ಟ —ಶ್ರೀ ಶಾರದಾಮ್ಮನವರ ದೇವಸ್ಥಾನದ ಕಲ್ಲು ಕಟ್ಟಡದ ಕೆಲಸವು ಬಹಳ ನಿದಾನದಲ್ಲಿ ನಡೆಯುತ್ತಲಿದೆ ಪೂರೈಸಲಿಕ್ಕೆ ಇನ್ನೂ ಒಂದೆರಡು ವರುಷ ಬೇಕಾಗಬಹುದು —ಮೈಸೂರು ಸಂಸ್ಥಾನದ ರಿಟೈರ್ಡ್ ಚೀಫ್ ಜಡ್ಜಿಯವರಾದ ಮ|| ರಾಮಚಂದ್ರಯ್ಯರವರು ಶೃಂಗೇರಿಗೆ ಇವತ್ತೋ ನಾಳೆಯೋ ಬರುವವರಾಗಿದ್ದಾರೆ ಈ ಮಹನೀಯರು ಪೆನ್ಶನ್ ಹೊಂದಿದ ಬಳಿಕ ಗುರು, ದೇವತಾ ಸೇವೆಯಲ್ಲೇ ನಿರತರಾಗಿದ್ದಾರೆ —ಶಿವಮೊಗ್ಗಾ ಹೆಡ್ ಆಫೀಸಿನಿಂದ ಮ|| ಬಾಲಕೃಷ್ಣರಾಯರು ನಮ್ಮಲ್ಲಿಗೆ ಪೋಸ್ಟ್ ಮಾಸ್ಟರ ಕೆಲಸಕ್ಕೆ ಬಂದು ತಿಂಗಳಾಯಿತು ಇವರು ಬಹು ಶಾಂತಿಕರು, ಜನಾನುರಾಗಿಗಳು ಕೆಲಸವನ್ನು ಬಹಳ ಚಟುವಟಿಕೆಯಿಂದ ಮಾಡುತ್ತಾರೆ —ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಇಂಗ್ಲೀಷಿನಲ್ಲಿ ಮೂವರು, ಕನ್ನಡದಲ್ಲಿ ಇಬ್ಬರೂ ಪ್ಯಾಸಾದರು —ಈ ಊರಿನಲ್ಲಿ ಸೋಮವಾರ ಸಂತೆಯಂತ ಆಗಿದೆ ಅಂಗಡಿಗಳಾಗಲಿ, ಜನಗಳಾಗಲಿ ಇಲ್ಲ ಇದು ಒಳ್ಳೇ ಸ್ಥಿತಿಗೆ ಬರಲು ಸ್ಥಳಾಧಿಕಾರಿಗಳು ಸ್ಥಳ ಪರಸ್ಥಳದ ವರ್ತಕರಿಗೆ ಪ್ರೋತ್ಸಾಹ ಪಡಿಸಬೇಕಾಗಿದೆ

ಮಂಡ್ಯ —ಕಳೆದ ಎರಡು ವಾರಗಳಿಂದ ಕೆಲವು ಒಳ್ಳೇ ಮಳೆಗಳಾದವು ರೈತರು ಸಂತೋಷದಿಂದ ತಮ್ಮ ಕೆಲಸವನ್ನು ಮಾಡುತ್ತಲಿದ್ದಾರೆ —ಕಳೆದ ವಾರ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವಕ್ಕಾಗಿ ಮೈಸೂರಿಗೆ ಹೋಗಿದ್ದ ಹುಜೂರು ವಾಪಸ್ ಬೆಂಗಳೂರಿಗೆ ಹೋಗುವ ಉದ್ದೇಶದಿಂದ ತಾ 9 ರಲ್ಲು ಮಂಡ್ಯದಲ್ಲಿ ಮೊಕ್ಕಾಂ ಮಾಡಿತ್ತು ಇದರ ಸರಬರಾಯಿಗೋಸ್ಕರ ಹಳ್ಳಿ ಹಳ್ಳಿಗಳಿಂದಲೂ ಟಗರುಗಳೂ ಕೋಳಿಗಳೂ ಮೊಟ್ಟೆ ಸೌದೆ ಹುಲ್ಲು ತರಲ್ಪಡಬೇಕೆಂಬ ಆಫೀಸರುಗಳ ಕಠಿಣ ಆಜ್ಞೆಗಳು ಬಡಪ್ರಜೆಗಳಿಗೆ ತುಂಬಾ ಸಂಕಟಕರವಾಗಿಯೂ ನಷ್ಟಕರವಾಗಿಯೂ ಇತ್ತು ಖರೀದಿಯ ಅಲ್ಪ ಸ್ವಲ್ಪ ಹಣವನ್ನು ಸಲ್ಲಿಸಿದರೂ ಈ ಕಾಲದಲ್ಲಿ ಅದು ತುಂಬಾ ನಷ್ಟಕರವಾಗಿ ವಸೂಲಿಯವರಿಗೆ ಲಾಭಕರವಾಗಿ ಇತ್ತೆಂದು ಅನೇಕರು ಆಡಿಕೊಳ್ಳುತ್ತಾ ಇದ್ದುದರಿಂದ ಸರ್ಕಾರದವರು ಆಯಾ ಮಾಲೀಕರಿಗೆ ಪೂರ್ಣಮೊಬಲಗನ್ನು ವಾಪತಿ ಮಾಡಿಸ್ಯಾರೆಂದು ಹಾರೈಸುತ್ತೇನೆ —ಇಲ್ಲಿನ ತಾಲ್ಲೂಕ್ ಕಚೇರಿಯಲ್ಲಿ ಹೊಡೆಯುವ ಘಂಟೆಯು ಕೇಳಿಸುವದು ಬಹು ಅಪರೂಪ ಮೊದಲು ಇದ್ದದ್ದನ್ನು ನಾಗಮಂಗಲಕ್ಕೆ ಯಾಕೆ ಕೊಟ್ಟರೋ ಗೊತ್ತಿಲ್ಲ ಈಗಿರುವಂಥಾದ್ದು ಕೂಗುವಿಯ ಚಮಟಿಗೆ ಪೆಟ್ಟಿನಂತೆ ಕೇಳಿಸುವುದರಿಂದ ಅನೇಕರಿಗೆ ಈ ಮೋಡಕಾಲದಲ್ಲಿ ಘಂಟೆಯನ್ನು ತಿಳಿದುಕೊಳ್ಳುವುದು ತುಂಬಾ ಕಷ್ಟ ನಮ್ಮ ಅಮಲ್ದಾರರು ಬೇರೊಂದನ್ನು ತರಿಸಿ ಉಪಕಾರ ಮಾಡ್ಯಾರೆಂದು ನಂಬುತ್ತೇನೆ —ಈ ಊರಿನ ಮ್ಯುನಿಸಿಪಾಲಿಟಿಯು ತಕ್ಕಮಟ್ಟಿಗೆ ಚನ್ನಾಗಿದ್ದರೂ ಬಹಳ ಯೋಚನೆ ಮಾಡಿ ಮತ್ತು ಹಣ ಖರ್ಚುಮಾಡಿ ಮಾಡಿದ ಚರಂಡಿಗಳಲ್ಲಿ ಮಳೆಯ ನೀರೂ ಬಚ್ಚಲ ನೀರೂ ಪ್ರವೇಶಿಸದೆ ಬೇರೆ ಮಾರ್ಗಗಳಲ್ಲಿ ಹೋಗುವುದರಿಂದ ಸ್ಯಾನಿಟೇಷನ್ನಿಗಾಗಲೀ ಅದನ್ನು ಮಾಡಿಸಿದ ಕಂಟ್ರಾಕ್ಟರುಗಳಿಂದಲೂ ಪ್ರಯೋಜನ ಕಡಮೆ ಎಂದು ಗೊತ್ತಾಗುತ್ತದೆ ಆದ್ದರಿಂದ ರಸ್ತೆಗಳನ್ನು ಮಾಡಿಸುವವರೂ ಚರಂಡಿಗಳನ್ನು ಕಟ್ಟಿಸುವವರೂ ಮಳೆಯ ನೀರೂ ಬಚ್ಚಲ ನೀರೂ ಸಲೀಸಾಗಿ ಹರಿದು ಹೋಗುವಂತೆ ತಕ್ಕ ನಿಗಾದಿಂದ ಮಾಡಿಸಿದರೆ ತುಂಬಾ ಮೇಲಾದೀತು —ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ದನಗಳಿಗೆ ಚಪ್ಪೆ ಜಾಡ್ಯವು ಹರಡಿ ಅನೇಕ ಬಡರೈತರಿಗೆ ತುಂಬಾ ನಷ್ಟವಾಗುತ್ತಾ ಇದೆ ಕಳೆದ ತಿಂಗಳು ಮೈಸೂರಿಂದ ಪಶುವೈದ್ಯರಾದ ಮ|| ನರಸಿಂಹಯ್ಯಂಗಾರ್ರವರು ಇಲ್ಲಿಗೆ ಬಂದು 2 ದಿನ ಮೊಕ್ಕಾಂ ಮಾಡಿ ಅನೇಕ ದನಗಳನ್ನು ಔಷಧೋಪಚಾರಗಳಿಂದ ಬದುಕಿಸಿದ್ದು ತುಂಬಾ ಸ್ತೋತ್ರಾರ್ಹವಾಗಿದೆ ಅವರು ಇನ್ನೊಂದು ಸಲ ಇಲ್ಲಿಗೆ ಬಂದು ರೈತರಿಗೆ ಸಹಾಯ ಮಾಡಿಯಾರೆಂದು ನಿರೀಕ್ಷಿಸಲಾಗಿದೆ —ಈ ವರ್ಷ ಇಲ್ಲಿಂದ ಮೈಸೂರ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದವರ ಪೈಕಿ ಎ ವಿ ಸ್ಕೂಲಿನಲ್ಲಿ ಮೂವರೂ, ಕನ್ನಡ ಸ್ಕೂಲಿನಲ್ಲಿ 5 ಮಂದಿಯೂ, ಹಿಂದುಸ್ಥಾನಿ ಗರ್ಲ್ಸ್ ಸ್ಕೂಲಿನಲ್ಲಿ ಒಬ್ಬರೂ ತೇರ್ಗಡೆ ಆಗಿರುವದು ಸಂತೋಷಕರವಾಗಿದೆ —ಈ ಊರಿನ ಬಡಾವಣೆಯು ಯಾವಾಗ ಆಗುತ್ತದೆಂದು ಅನೇಕರು ನಿರೀಕ್ಷಿಸುತ್ತಿದ್ದಾರೆ

ವಿದೇಶ ವೃತ್ತಾಂತಗಳು

ವೆಂಡಿಮಿಯೇರ್ ಎಂಬ ಫ್ರೆಂಚರ ಒಂದು ಹಡಗವು ಒಂದು ಯುದ್ಧದ ಜಹಜಿಗೆ ಬಡಿದು ಒಡೆದುಹೋಗಿ ಅದರಲ್ಲಿದ್ದ 28 ಜನರು ಸಮುದ್ರದ ಪಾಲಾದರು

* * *

ರಷ್ಯಾ ರಾಜ್ಯದವರು 1912 ರಿಂದ 1916 ನೇ ಇಸವಿಯೊಳಗಾಗಿ 75 ಕೋಟಿ ರೂಪಾಯಿ ಖರ್ಚುಮಾಡಿ ಜಹಜುಗಳನ್ನು ಹೊಸದಾಗಿ ಕಟ್ಟಬೇಕೆಂದು ಸ್ಯಾಂಕ್ಷನ್ ಮಾಡಿದ್ದಾರೆ

* * *

ಕಳೆದ ಶನಿವಾರ ಚಕ್ರವರ್ತಿ ಸಾರ್ವಭೌಮರವರು ಲಂಡನ್ ಪಟ್ಟಣದ ಹೈಡ್ ಪಾರ್ಕ್ ಎಂಬ ಉದ್ಯಾನವನದ ವಿಶಾಲವಾದ ಮೈದಾನಿನಲ್ಲಿ 30,000 ಸೈನಿಕರ ಕವಾತನ್ನು ಪರಾಂಬರಿಸಿ ಅವರ ಚಟುವಟಿಕೆಯನ್ನು ನೋಡಿ ಮೆಚ್ಚಿಕೊಂಡರು

* * *

ಟಾಚಿಯನಾ ಎಂಬೊಬ್ಬ ಬೌದ್ಧಸನ್ಯಾಸಿಯು ಮಧ್ಯ ಏಷ್ಯಾ ಪ್ರದೇಶದಲ್ಲಿ ಎರಡು ವರುಷಗಳಿಂದ ದೇಶಾಟನೆ ಮಾಡುತ್ತಿದ್ದು ಅನೇಕ ಪ್ರಾಚೀನ ವಸ್ತು ವಿಶೇಷಗಳನ್ನು ಕಂಡು ಹಿಡಿದು, ಜಪಾನ್ ರಾಜ್ಯಕ್ಕೆ ಸೇರಿದ ಕ್ಯೋಟೋ ಎಂಬ ನಗರಕ್ಕೆ ಈಗತಾನೇ ವಾಪಸು ಬಂದಿರುತ್ತಾನೆ

* * *

ಕ್ಯಾನಡಾ ಎಂಬ ಇಂಗ್ಲೀಷ್ ಸ್ವಾಸ್ಥ್ಯಕ್ಕೆ ಸೇರಿದ ಮಾಂಟ್ರೀಲ್ ಪಟ್ಟಣದಲ್ಲಿ ಕ್ವೈರಿಕ್ ಎಂಬ ನಾಟಕ ಶಾಲೆಯೊಳಗೆ ಕಳೆದ ವಾರ ಬೆಂಕಿ ಬಿದ್ದು, ಆದೇ ಉರಿಯು ಆರಿಸಲಶಕ್ಯವಾಗದೆ ಊರೆಲ್ಲಾ ಹರಡಿಕೊಂಡು ಕೋಬಾಲ್ಟ್ ಎಂಬ ಪಟ್ಟಣವೆಲ್ಲಾ ನಾಶವಾಯಿತೆಂದು ತಂತೀ ವರ್ತಮಾನ ಬಂದಿದೆ

* * *

ಆಸ್ಟ್ರಿಯಾ ರಾಜ್ಯದಲ್ಲಿ ಮುಖ್ಯ ನಗರವಾದ ವಿಯನ್ನಾ ಪಟ್ಟಣದಲ್ಲಿ ಮದ್ದು ಗುಂಡು ತಯಾರಾಗುವ ಒಂದು ಭಾರೀ ಕಾರ್ಖಾನೆಯಲ್ಲಿ ಮದ್ದು ಹತ್ತಿಕೊಂಡು ಬಹಳ ಭಯಂಕರವಾದ ಶಬ್ದದೊಡನೆ ಹಾನಿ ಅನಾಹುತವನ್ನುಂಟುಮಾಡಿತು ಈ ಅಪಘಾತದಲ್ಲಿ 30 ಜನಗಳು ಮೃತಪಟ್ಟರೆಂದೂ, 100 ಜನಗಳ ತನಕ ಗಾಯಪಟ್ಟರೆಂದೂ ವರ್ತಮಾನ ಬಂದಿದೆ

* * *

ಪೂರ್ವ ತುರ್ಕಸ್ಥಾನದಲ್ಲಿ ಚೀನಕ್ಕೆ ಸೇರಿದ ಕ್ಯಾಷ್‌ಗರ್ ಆಧಿಪತ್ಯದಲ್ಲಿ ಪ್ರಜೆಗಳೂ ಸೈನಿಕರೂ ದಂಗೆಯೆದ್ದು ಗಲಭೆಮಾಡುತ್ತಿದ್ದಾರೆ ಕೆಲವು ಅಧಿಕಾರಿಗಳನ್ನು ಕೊಂದುಹಾಕಿದರು ಅಧಿಕಾರಿಗಳು ಕೆಲವು ಊರುಗಳನ್ನು ಬಿಟ್ಟು ತಲೆ ತಪ್ಪಿಸಿಕೊಂಡು ಹೋಗಿದ್ದಾರೆ ದಂಗೆಕೋರರು ಕೆಲವು ಪಟ್ಟಣಗಳನ್ನು ಆಕ್ರಮಿಸಿಕೊಂಡಿರುವಂತೆ ತಂತೀ ವರ್ತಮಾನ ಬಂದಿದೆ

* * *

ಟರ್ಕಿಯವರಿಗೂ ಇಟಲಿಯವರಿಗೂ ಟ್ರಿಪೋಲಿಯಲ್ಲಿ ಕಳೆದ ವಾರ ಒಂದು ದೊಡ್ಡ ಯುದ್ಧವಾಯಿತು ಸೇನೆಗಳು ಕಲೆತು ಕಳೆದ ಶನಿವಾರವೆಲ್ಲಾ ಕಾದಾಡಿದರು ಇಟಲಿಯವರೇ ಜಯಪ್ರದ ಹೊಂದಿದರು ಇವರ ಸೈನ್ಯದಲ್ಲಿ 31 ಮಂದಿ ಕೊಲ್ಲಲ್ಪಟ್ಟರು 211 ಮಂದಿಗೆ ಗಾಯಗಳಾದವು ಟರ್ಕಿಯ ಸೈನಿಕರಲ್ಲಿ 1000 ಜನದ ತನಕ ಮೃತಪಟ್ಟರು ಅನೇಕಾನೇಕರಿಗೆ ಗಾಯಗಳಾಗಿರುತ್ತವೆ

* * *

ಜಪಾನ್ ರಾಜ್ಯದಲ್ಲಿ ಹಿಂದೆ ಮುಖ್ಯಾಧಿಕಾರಸ್ಥನಾಗಿದ್ದ ಕೆಲವು ದೊಡ್ಡ ಮನುಷ್ಯರು ಜೂಲೈ 6 ನೇ ತಾ ಜಪಾನ್ನಿಂದ ದೇಶಾಟನೆಗಾಗಿ ಹೊರಟು ರಷ್ಯಾ, ಜರ್ಮನಿ ಫ್ರಾನ್ಸ್, ಇಂಗ್ಲೆಂಡ್ ಅಮೇರಿಕ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ ಅವರ ಉದ್ದೇಶವು ಬರೀ ದೇಶಾಟನೆ ಎಂದು ಕೆಲವರೂ, ರಾಜಕೀಯ ವಿಚಾರವಾದದ್ದೆಂದು ಇನ್ನು ಕೆಲವರೂ ಹೇಳುತ್ತಿರುವರು

* * *

ಕ್ರೋಷಿಯಾಕ್ಕೆ ಸೇರಿದ ಆಗ್ರಂ ಎಂಬ ಊರಿನಲ್ಲಿ ಕಮಿಷನರ್ ಎಂ ಕುವಾಜ್ ಎಂಬಾತನು ಮೋಟಾರ್ ಗಾಡಿಯಲ್ಲಿ ಹೋಗುತ್ತಿರುವಾಗ ಒಬ್ಬ ವಿದ್ಯಾರ್ಥಿಯು ಆತನನ್ನು ಕೊಲ್ಲಬೇಕೆಂದು ಗುಂಡುಹೊಡೆದನು ಅದು ಆತನಿಗೆ ತಪ್ಪಿ, ಆತನ ಬಳಿ ಇದ್ದ ಒಬ್ಬ ನೌಕರನ ತಲೆಗೆ ಬಡಿಯಿತು ವಿದ್ಯಾರ್ಥಿಯು ಮತ್ತೆ ಗುಂಡುಹೊಡೆದನು ಒಬ್ಬ ಪೋಲೀಸಿನವನು ಮೃತಪಟ್ಟನು ಇನ್ನೊಬ್ಬ ಗಾಯಪಟ್ಟು ಬಿದ್ದನು ಅಷ್ಟರಲ್ಲೇ ಆ ಘಾತುಕನಾದ ವಿದ್ಯಾರ್ಥಿಯನ್ನು ಹಿಡಿದುಕೊಂಡರು

* * *

ಚೀನಾ ರಾಜ್ಯದವರು ವರುಷ ವರುಷ ತಮ್ಮ ರಾಜ್ಯದಲ್ಲಿ ಅಫೀಮಿನ ಬೆಳೆಯನ್ನು ಕಡಮೆಮಾಡಬೇಕೆಂದೂ, ಅಲ್ಲಿನ ಪ್ರಜೆಗಳಿಗೆ ಅಫೀಮಿನ ಸೇವನೆಯನ್ನು ತಪ್ಪಿಸಿಬಿಡಬೇಕೆಂದೂ ಉತ್ಸಾಹಪಟ್ಟು, ಹಿಂದುಸ್ಥಾನದಿಂದ ಅಫೀಮನ್ನು ಪ್ರತಿ ವರುಷವೂ ಹಿಂದಿನ ವರುಷಕ್ಕಿಂತ ಕಡಮೆಯಾಗಿ ಕಳುಹಿಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿಗೆ ತಿಳಿಸಿ ಅವರ ಅನುಮತಿಯನ್ನು ಪಡೆದುಕೊಂಡಿದ್ದಾರೆ ಆದರೆ ಅವರು ತಮ್ಮ ದೇಶದಲ್ಲಿ ಬೆಳೆಯುವ ಅಫೀಮನ್ನು ಮುತುವರ್ಜಿ ವಹಿಸಿ ಕಡಮೆಮಾಡಿಲ್ಲ ಹಿಂದುಸ್ಥಾನದಿಂದ ಷಾಂಘಾಯಿಗೆ ರಫ್ತಾಗುವ ಅಫೀಮು ದಾಸ್ತಾನ್ ನಿಂತು ಅಲ್ಲಿನ ವರ್ತಕರಿಗೆ ಅಪಾರ ನಷ್ಟವನ್ನು ಉಂಟುಮಾಡುತ್ತಿರುವುದು ಮೇ ತಿಂಗಳಿಂದೀಚೆಗೆ ಅವರಿಗೆ ಮೂರು ಕೋಟಿ ರೂಪಾಯಿ ನಷ್ಟವಾಗಿದೆ ಅವರೆಲ್ಲಾ ಇಂಡಿಯಾ ಗವರ್ನ್‌ಮೆಂಟಿಗೂ, ವಿಲಾಯತಿಗೂ ಬರೆದುಕೊಂಡಿದ್ದಾರೆ

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದೆ ಮಾಡಿದೆ. ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಉತ್ತೇಜನ ಕೊಡುವುದು, ಪುಷ್ಟಿಕರವಾದದ್ದು ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಹುಟ್ಟು ಮಾಡುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಪುಗಸಟ್ಟೆ ಕಳುಹಿಸುತ್ತಾರೆ

[೧೮-7] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev E W Thompson, M A, Proprietor and Manager, Wesleyan Mission Press, Mysore 13/6/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಮಾರ್ಚ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೩

ಸಾಲ ಬೇಕಾಗಿದೆ.

ಯಾವ ಪರಾಧೀನವೂ ಇಲ್ಲದ 15,000 ರೂಪಾಯಿ ಬಾಳುವ ಸ್ಥಿರಸ್ವತ್ತಿನ ಮೇಲೆ ಶೇಕಡಾ 8 ಆಣೆ ಬಡ್ಡಿಯಲ್ಲಿ 10,000 ರೂಪಾಯಿ ಸಾಲಬೇಕಾಗಿದೆ ಕೊಡಲು ಇಷ್ಟಪಡುವವರು “ವೃತ್ತಾಂತ ಪತ್ರಿಕೆ” ಮ್ಯಾನೇಜರಿಗೆ ಬರೆದು ಅವರ ಮೂಲಕ ಎಲ್ಲಾ ವಿಷಯವನ್ನೂ ತಿಳಿಯಬಹುದು [100-1]

ವೀರಶೈವಾಶ್ರಮ.

ಬೆಂಗಳೂರಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮತ್ತು ಅಲ್ಲಿಗೆ ವ್ಯಾಪಾರ, ಕೋರ್ಟು ಕಚೇರಿ ಮೊದಲಾದ ಕೆಲಸಗಳಿಗಾಗಿಯೂ, ಸೋಟೆಲ್ಲಾ ಗಿಯೂ ಬರತಕ್ಕ ವೀರಶೈವ ವರ್ತಕರು ದೊಡ್ಡ ಮನುಷ್ಯರು ಮೊದಲಾದವರಿಗೆ ಇಳಿಯುವುದಕ್ಕೂ ಭೋಜನಕ್ಕೂ ತಕ್ಕ ಸ್ಥಳಾನುಕೂಲವಿಲ್ಲದೆ ತೊಂದರೆಯಾಗಿ ರುವುದು ನೋಡಿ ಎಲ್ಲಾ ವ್ಯಾಪಾರಸ್ಥರುಗಳಿಗೂ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ಆಸ್ಪತ್ರೆಗೂ ಬಹು ಸಮೀಪವಾಗಿರುವಂತೆ ಕೋಟೆಯೊಳಗೆ ಪೋಸ್ಟಾಫೀಸ್ ಹತ್ತಿರದಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವೆಂಬ ಹೆಸರಿನಿಂದ ಒಂದು ಭೋಜನ ಶಾಲೆಯನ್ನೇರ್ಪಡಿಸಿ, ಊಟದ ಛಾರ್ಜನ್ನು ಸುಲಭದಲ್ಲಿಟ್ಟಿದೆ ಇಲ್ಲಿ ಸ್ನಾನ ಮಡಿ ಮೊದಲಾದ ಆಚಾರಕ್ಕೂ ದೊಡ್ಡ ಮನುಷ್ಯರುಗಳೂ ಅಧಿಕಾರಿಗಳೂ ಇಳಿಯುವುದಕ್ಕೂ ಅತ್ಯಂತ ಪ್ರಶಸ್ತವಾಗಿದೆ. ಹೆಚ್ಚು ಸಂದರ್ಭವನ್ನು ತಿಳಿಯತಕ್ಕವರು ಈ ಕೆಳಗಿನ ವಿಳಾಸದಾರರಿಗೆ ಬರೆಯತಕ್ಕದ್ದು [95-2]

ಎಸ್. ಕಳ್ಳೆಪ್ಪ,
ಊದುಬತ್ತಿ ಷಾಪ್ ದೊಡ್ಡಪೇಟೆ, ಬೆಂಗಳೂರ್ ಸಿಟಿ.

LOWER SECONDARY EXAMINATION,
1913

ಹಿಂದೂದೇಶದ ಚರಿತ್ರೆ

ಘನ ಇ. ಡಬ್ಲ್ಯು. ಥಾಂಸನ್, ಎಂ. ಎ. ಯವರಿಂದ ರಚಿತವಾದುದು.

ಇಂಡಿಯಾ ದೇಶದ ಚರಿತ್ರೆಯನ್ನು ಓದುವ ಸ್ಕೂಲ್ ಹುಡುಗರಿಗೆ ಉಪಯುಕ್ತವಾದುದು.

ಬಟ್ಟೆ ಬೈಂಡು. ೨೬೦ ಪುಟಗಳುಳ್ಳದು.

ಬಹು ಒಳ್ಳೆಯ ಚಿತ್ರಗಳಿಂದ ರಂಜಿತವಾಗಿದೆ!

ಅಚ್ಚುಹಾಕಿರುವುದು ಬಹು ಸೊಗಸಾಗಿದೆ!

ಕ್ರಯ ೧೨ ಆಣೆ.

ಈ ಪರಿಕ್ಷೆಯ ಪ್ರಶ್ನಪತ್ರಿಕೆಗಳಲ್ಲಿ ಕೇಳುವ ಪ್ರಶ್ನೆಗಳಿಗೆ ಸರಿಯಾದ ಮತ್ತು ಸಂಪೂರ್ಣವಾದ ಉತ್ತರಗಳು ಬೇಕಾದರೆ ಈ ಹಿಂದುದೇಶದ ಚರಿತ್ರೆಯನ್ನು ಬಿಟ್ಟರೆ ಬೇರೊಂದಿಲ್ಲವೇ ಇಲ್ಲ.

ಕ್ರೈಸ್ತವೇದಾಂತಸಾರವು.

[471 ಪುಟಗಳುಳ್ಳದು. ಕ್ಯಾಲಿಕೋ ಬೈಂಡು. ಕ್ರಯ ೧ ರೂ. ೪ ಅ.]

ಕ್ರೈಸ್ತಮತ ತತ್ವಗಳನ್ನು ಬೋಧಿಸುವ ಈ ಉದ್ಗ್ರಂಥವು ಲಂಡನ್ ಮಿಷನ್ ಇಲಾಖೆಯ ಬೋಧಕರಾದ ಘನ ಡಬ್ಲಿಯು ಎಚ್ ಕ್ಯಾಂಬೆಲ್ ಎಂ. ಎ., ಬೀ. ಡೀ. ಯವರಿಂದ ತೆನುಗು ಭಾಷೆಯಲ್ಲಿ ಹೊಸದಾಗಿ ರಚಿಸಲ್ಪಟ್ಟು, ಅದೇ ಇಲಾಖೆಯ ಉಪದೇಶಕರಾದ ಮ|| ರಾ|| ಎಚ್ ಜಿ ಶೀಲಪ್ಪನವರಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿತು ಈ ಪುಸ್ತಕವು ಮತಸಂಬಂಧವಾಗಿ ತಿಳಿಯಬೇಕಾದ ಅಂಶಗಳನ್ನು ಬಹು ಸ್ಪಷ್ಟವಾಗಿಯೂ ಶಾಸ್ತ್ರೀಯವಾಗಿಯೂ ವಿವರಿಸುತ್ತದೆ ಇದು ಕ್ರೈಸ್ತ ಮತಾವಲಂಬಿಗಳಿಗೆ ಮಾತ್ರ ಉಪಯುಕ್ತವೆಂದು ಎಣಿಸದೆ, ಸತ್ಯಮತ ವಿಚಾರಕರಾದವರೆಲ್ಲರಿಗೂ ಇದರಿಂದ ಅಗಣಿತವಾದ ಪ್ರಯೋಜನಗಳುಂಟಾಗುವುದರಿಂದ ಇದನ್ನು ಸಕಲರೂ ತರಿಸಿ ಪಠಿಸಿ ಧ್ಯಾನ ಮಾಡಬೇಕೆಂಬುವುದೇ ನಮ್ಮ ಕೋರಿಕೆಯಾಗಿದೆ [115A-40]

ಈಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ :—

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಕೊಡಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡಿಸ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ತಂಡತಕಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ಕೀರುಗಳ ಹನಾ ಬದಲಾವಣೆಯನ್ನು ಪರಿಹರಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುಡುಕೂಳಿ, ಮಕ್ಕಳ ಏಳವು, ಜ್ವರ, ಸಚ್ಚುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98-48]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈನೀಕರಿಂದು ತೋರಿದಾಗಲೂ ಅತ್ಯಯಕಾರಕವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಕೆ, ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ; ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ; ನಾತೊಂದು ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುತ್ತದು

ಬೆಲೆ ರೂ. 1 ; ಟಪ್ಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜಮೀನು ಕ್ರಯಕ್ಕೆ ದೊರೆಯುತ್ತೆ.

ಯಶತೊರೆ ಕಸಬಾ ಹತ್ತಿರ ಇರುವ ಉತ್ಕೃಷ್ಟವಾದ ಮೂರು ತಾಕು ತರಿ ಜಮೀನು, ಒಂದು ತೋಟ ತರಿ ಈ ಜಮೀನಲ್ಲಿ 30 ಖಂಡಗ ಭತ್ತ ಗುತ್ತಿಗೆ ಬರುತ್ತೆ. ತೋಟದಿಂದ ಸಾಲಿಗೆ 75 ರೂ ಬರುತ್ತೆ ಸ್ವಂತರ ಖುದ್ದು ಮೇಲ್ವಿಚಾರಣೆಯಿಂದ ಇನ್ನೂ ಹೆಚ್ಚು ಉತ್ಪತ್ತಿ ಆಗುವದಕ್ಕೆ ಅನುಮಾನವಿಲ್ಲ ಬೇಕಾದವರು “ವೃತ್ತಾಂತ ಪತ್ರಿಕೆ” ಮ್ಯಾನೇಜರ ಮೂಲಕ “ಸಿ” ಎಂಬುವರಿಂದ ಎಲ್ಲಾ ಅಂಶಗಳನ್ನೂ ತಿಳಿಯಬಹುದು [91-3]

ಒಂದೇ ಕಥೆ! ಅಪೂರ್ವಗ್ರಂಥ!! ೨೧೭ ಪುಟಗಳು!!!

ಪ್ರತಾಪ ಕಂಠೀರವಚರಿತ್ರೆ

ಇದರಲ್ಲಿ (1) “ಧರ್ಮಾತ್ಮರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತಡೆಂದರೆ ಬಂದರೂ ತೊಲಗಿಹೋಗುತ್ತವೆ” ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು; (4) ವನ, ಸರಸ್ಸು, ಜಲಾನಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿಪರೀತ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದರಿಂದೇನು ? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ :—೧ ನೇ ಭಾಗ ೬ ಆಣೆ, ೨ ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಜೇರೆ [5-21]

ನಮ್ಮ ವಿಳಾಸ—ವಿದ್ಯಾಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಕಾರೊನೇಷನ್ ಸಾಬೂನು

ಅಪಾಯವಿಲ್ಲದ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.



ಉರಿ, ಸೆಗೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು.

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ. ೧-೦-೦; ಅಂಚೆ ಹಾಸಲು ಪ್ರತ್ಯೇಕ. ನಮ್ಮ ವಿಳಾಸ—
ಬಿ ಸಿ ಪಾ ಅಂಡ್ ಕಂಪೆನಿ,
೧೭೭ ಚೀನಾಬಜಾರ್ ರೋಡ್,
ಮದ್ರಾಸು.

ಶಾ. ಕ.—ವ್ಯಾಪಾರಿಗಳಿಗೆ ಒಳ್ಳೇ ಕಮೀಷನ್ ದೊರೆಯುವದು. [101-1]

೧೯೧೩ ನೇ ಲೋ|| ಸೆ|| ಕನ್ನಡ ಟೆಕ್ಸ್ಟು ನೋಟ್ಸು

ಕ್ರಯ 4 ಆಣೆ, ನಮ್ಮ ಎಡ್ಯುಕೇಷನಲ್ ವರ್ತಮಾನಪತ್ರಿಕೆಗೆ ಜುಲೈ 15 ರೊಳಗೆ ಚಂದಾದಾರರಾಗತಕ್ಕವರಿಗೆ ಈ ನೋಟ್ಸ್ ಬರುವವಾನ ಚಂದಾ ರೂ 1-4-0 ಕನ್ನಡ 2 ನೇ ರೀಡರಿನ ನೋಟ್ಸ್ 2 ಆಣೆ 3 ನೇದು 1½ ಆಣೆ ವಿಳಾಸ :— ಸಿ ಪುಟ್ಟಯ್ಯ, ಮ್ಯಾನೇಜರು, ಎಡ್ಯುಕೇಷನಲ್ ಆಫೀಸ್, ಚಿಕ್ಕಬಳ್ಳಾಪುರ.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ ! ಕಲ್ಪನಾ ಕೌಶಲವೂ ಘಟನಾವಳಿಯೂ ಬಹು ಮುದ್ದಾಗಿರುವದು ! ಕ್ರಯ 8 ಆಣೆ.

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ. ಕ್ರಯ ೬ ಆಣೆ.

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [139-29]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ? ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬೆಳ್ಳಗಾಗಿಯೋ ಇಳಿಯುವುದು ; ಬಿಡದ ಬಾಯಾರಿಕೆ ; ಬಳಲಿಕೆ ; ಎದೆ ಕಲ್ಲಡಿಸುವುದು , ತಲೆನೋವು ; ಗಾಬರಿ , ಕಣ್ಣುಮೊಬ್ಬು ; ತಲೆ ತಿರುಗುವಿಕೆ ಮೈನೋವು ಕೀಲುನೋವು ; ಮರವು ; ನಿಶ್ಶಕ್ತಿ ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರಜಲೋದರ, ವಾಯು, ಮೈಬಾವು, ಬಹುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [99-41]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



೨—೦—೦ ; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಸುಲಭಕ್ರಯ ! ಪರೀಕ್ಷಿಸಿರಿ !! ಸಂತೋಷಪಡುವಿರಿ !!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗೆ ಬಿಕರಿ !

ರಾಸ್ಕೊಪ್ ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್

ಕ್ರಯ ರೂ. 2-8-0 ಮಾತ್ರ. 5 ವರ್ಷ ಗ್ಯಾರಂಟಿ. ವಿ. ಪಿ. 0-4-0.



ಇದು ಎಂದೂ ಕೆಟ್ಟು ಹೋಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು, ಹಿಂಭಾಗದಲ್ಲಿ ಗ್ಲಾಸ್ ಡೋಮು ಇದ್ದು ನೋಡಲಿಕ್ಕೆ ಬಹು ರಮಣೀಯವಾಗಿದೆ. ಬಹು ಮಜಬೂತಾದ, ದೀರ್ಘಕಾಲ ಬಾಳಿಕೆಗೆ ಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರ. ಬೇರೆ ಕಂಪನಿಯವರು ಇದಕ್ಕಿಂತ ಕಮ್ಮಿ ಬೆಲೆಯ ಘಡಿಯಾರವನ್ನು ರೂ 3-8-0, 4-8-0 ಬೆಲೆಗೆ ಮಾರುತ್ತಾರೆ. ಕಾರಣ ಮೋಸಪಡಬೇಡಿರಿ ! ಕ್ರಯ ರೂ 2-8-0 ವಿ ಪಿ ಚಾರ್ಜು 0-4-0 [17-13]

ವಿಳಾಸ :—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರು ೨೦, ಸಿಂಗಣ್ಣನ ಬೀದಿ, ಜಾರ್ಜು ಟೌನ್,
ಪಾರ್ಕು ಟೌನ್ ಪೋಸ್ಟು, ಮದರಾಸು.

ಗೌರ್ನಮೆಂಟ್ ಸೆಕ್ಯೂರಿಟಿ ಉಳ್ಳ ನ್ಯಾಷನಲ್ ಜೀವ ವಿಮೆ ಮತ್ತು ವಿವಾಹಸಹಾಯಕ ಫಂಡ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್—ವಿಜಯನಗರಂ.

1. ಈ ಕಂಪೆನಿಯು ಡಾಕ್ಟರ್ ಪರೀಕ್ಷೆ ಇಲ್ಲದೆಯೂ 16 ವರುಷ ಲಾಗಾಯತು 50 ವರುಷ ವಯಸ್ಸುಳ್ಳ ಗಂಡಸರ ಮತ್ತು ಹೆಂಗಸರ ಜೀವವನ್ನು ಮತ್ತು ಮುಂದೆ ಬರಬಹುದಾದ ಅಪಾಯಗಳನ್ನು ಇಂಡಿಯಾ ದೇಶದಲ್ಲಿರತಕ್ಕ ಇತರ ಎಲ್ಲಾ ಕಂಪೆನಿಗಳಿಗಿಂತಲೂ ಅತಿ ಸುಲಭವಾದ ದರದ ಮೇಲೂ ಮತ್ತು ಧಾರಾಳವಾದ ನಿಬಂಧನೆಗಳಿಂದಲೂ, ತಿಂಗಳಿಗೆ 8 ಆಣೆ ಮತ್ತು 1 ರೂಪಾಯಿಗಳ ವಿಮೆಯನ್ನು ಮಾಡಿರುತ್ತಾರೆ ಈ ಮೇಲ್ಕಂಡ ವಿಮೆದಾರರು ಕಂಪೆನಿಗೆ 8 ತಿಂಗಳ ವಿಮೆಯನ್ನು ಕಟ್ಟಿದ ನಂತರ ಮೃತಪಟ್ಟವರಾದರೆ ಸದರಿ ವಿಮೆದಾರನನ್ನು ಅವರ ವಾರಸುದಾರರು ಕಂಪೆನಿಯವರಿಗೆ ತಿಳಿಸಿದ ತಕ್ಷಣ ಮೊದಲನೇ ತರಗತಿಯವರಿಗೆ ಒಂದುನೂರು ರೂಪಾಯಿಗಳೂ, ಎರಡನೇ ತರಗತಿಯವರಿಗೆ 10 ರೂಪಾಯಿಗಳೂ, ತಕ್ಷಣ ಅಡ್ವಾನ್ಸಾಗಿ ಕೊಡಲ್ಪಡುತ್ತೆ ಅನಂತರ ಆ ವರುಷದ ಲೆಕ್ಕಗಳು ತನಿಖೆ ಆದ ಮೇಲೆ ಅಂದರೆ ಪ್ರತಿ ವರುಷದ ಫೆಬ್ರವರಿ 8 ನೇ ತಾರೀಖಿನ ತರುವಾಯ ಮೇಲ್ಕಂಡ ವಾರಸುದಾರರಿಗೆ ಅದುವರಿವಿಗೆ ಅಡ್ವಾನ್ಸು ಕೊಟ್ಟಿರುವ ಮೊಬಲಗಲ್ಲದೆ ಲೆಕ್ಕಾಚಾರದ ಪ್ರಕಾರ ಇನ್ನು ಬರತಕ್ಕ ಜಾಸ್ತಿ ಮೊಬಲಗನ್ನೂ ಅವರಿಗೆ ಕೊಡಲ್ಪಡುತ್ತದೆ. ಒಂದು ವೇಳೆ ವಿಮೆದಾರರು 8 ತಿಂಗಳ ಒಳಗಾಗಿ ಮೃತಪಟ್ಟರೆ ಅವರು ಅದುವರಿವಿಗೂ ಕಂಪೆನಿಗೆ ಕೊಟ್ಟಿಂಥಾ ಹಣದಲ್ಲಿ ಖರ್ಚುಗಳು ಜಾತಾ ಮಿಕ್ಕ ಹಣವನ್ನು ಅವರ ವಾರಸುದಾರರಿಗೆ ವಾಪಸ್ ಮಾಡಲ್ಪಡುತ್ತದೆ.

2 ಮದುವೆಯಾಗತಕ್ಕವರಿಗೆ ಫಂಡನ್ನು ಏರ್ಪಡಿಸಿರುತ್ತೆ ಇದಕ್ಕೆ ಸೇರತಕ್ಕ ಚಂದಾದಾರರು ಗಂಡಸರೇ ಆಗಲಿ ಅಥವಾ ಹೆಂಗಸರೇ ಆಗಲಿ ಬಾಲ್ಯದಾರಭ್ಯ 18 ಮತ್ತು 12 ವರುಷಗಳ ವಯಸ್ಸಿನ ವರಿವಿಗೂ ತಿಂಗಳು ಒಂದಕ್ಕೆ ಚಂದಾ ಮೊಬಲಗು ಒಂದು ರೂಪಾಯಿ ಪ್ರಕಾರ ಕನಿಷ್ಠಪಕ್ಷ 8 ತಿಂಗಳಿಗೆ ಕಮ್ಮಿ ಇಲ್ಲದಂತೆ ಕ್ರಮವಾಗಿ ಚಂದಾ ಮೊಬಲಗು ಪಾವತಿ ಮಾಡಿದ ಮೇಲೆ ಸದರಿ ಚಂದಾದಾರರು ಮದುವೆ ಮಾಡಿಕೊಳ್ಳುವ ಕಾಲಕ್ಕೆ ಅವರು ಕೊಟ್ಟಿರತಕ್ಕ ಚಂದಾ ಮೊಬಲಗಿಗೆ 3 ರಷ್ಟಕ್ಕೆ ಕಡಮೆ ಇಲ್ಲದೆಯೂ, 10 ರಷ್ಟಕ್ಕೆ ಜಾಸ್ತಿ ಇಲ್ಲದೆಯೂ ಮೊಬಲಗನ್ನು ಸಹಾಯ ಮಾಡಲ್ಪಡುತ್ತದೆ. [88-3]

ಇಂಗ್ಲಿಷ್ ಮತ್ತು ಕನ್ನಡ ಬಲ್ಲಂಥಾ ಏಜಂಟರು ಬೇಕಾಗಿದೆ ತಪಶೀಲ್ ವಿಷಯಗಳಿಗೆ ಅರ್ಜಿ ಸ್ಟಾಂಪುಸಹಿ ಬರೆದುಕೊಳ್ಳಿ ನಮ್ಮ ವಿಳಾಸ —

ದಿ ಕಾಮರ್ಸ್ ಮ್ಯೂಚುಯಲ್ ಸಿಂಡಿಕೇಟ್, ಚೀಫ್ ಏಜಂಟ್ಸ್, (ಮೈಸೂರು ಮತ್ತು ಕೊಡಗು ಸಂಸ್ಥಾನಗಳ), ಚಿಕ್ಕಪೇಟೆ, ಬೆಂಗಳೂರು ಸಿಟಿ

ರಾಸ್ ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2 4-0 ಮಾತ್ರ, 5 ವರುಷಗಳ ಗ್ಯಾರೆಂಟಿ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒಂದು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೆ ನಡೆಯುತ್ತದೆ ಸಾವಿರಾರು ಗಡಿಯಾರಗಳು ಮಾರಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ. ಈಗಲೇ ಬರೆದು ತರಿಸಿಕೊಳ್ಳಿ. [43-11]

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲೀವರ್ ಚಿಕ್ಕ ಸೈಜು ಕಂಪೆನ್‌ಸೇಟ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5-12-0. ಇದನ್ನು ಜೂನ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಘಂಟೆ ಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.

1 25

ಶೀತದ ಕೆಮ್ಮು, ಗಂಟಲು ಗೂರೆಸ್ಸುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ನಮ್ಮ ಏಜಂಟರಿಗೆ ನೋಟೀಸ್.

ಇದೇ ಜೂನ್ ತಿಂಗಳಿಂದ "ವೃತ್ತಾಂತ ಪತ್ರಿಕೆ"ಯ ಹೊಸ ವರುಷ ಪ್ರಾರಂಭವಾಗಿರುತ್ತದೆ. ನಮ್ಮ ಏಜಂಟರುಗಳು ಕಳೆದ ವರುಷದ ಲೆಕ್ಕಗಳನ್ನೆಲ್ಲಾ ಫೈಸಲುಮಾಡಿ, ಅಪ್ಪೈರಿ ಪಟ್ಟಿಗಳನ್ನು ಕೂಡಲೇ ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಆಗದೆಹೋದರೆ ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು. ಹೊಸದಾಗಿ ಚಂದಾ ಕೂಡತಕ್ಕವರು ಒಂದು ವರುಷದ ಚಂದಾ ೨ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಆ ಬಗ್ಗೆ ಕ್ರಮವಾದ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ತಿಳಿಯಪಡಿಸುತ್ತೇವೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು.

ಜ್ವರಶಂಕರಿ.

114 30

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ಮರಿಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ಒಂದೆರಡು ಬಾರಿ ಸೇವಿಸುವುದರೊಳಗಾಗಿ ತಪ್ಪದೆ ಗುಣಪಡಿಸುವದು. ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ಹಿಮ್ಮೆಟ್ಟಿಸುವುದು. ಬಾಟಲಿಗೆ ೧ ರೂ , ೪ ಬಾಟಲಿಗೆ ೨ ರೂ. ೧೦ ಆಣೆ.

ಪ್ಲಿಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು. ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ. ೮ ಆಣೆ.

ವಾತಮುರಾರಿ—ಇದು ತಲೆನೋವು, ಉಳುಕು, ಬೇಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮಿಸುವುದಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ ; ೪ ಬಾಟಲಿಗೆ ೧ ರೂ. ೬ ಆಣೆ,

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ.—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

WILLIAM & Co, FORT, BOMBAY

ಅಮೃತಾಂಜನ್. (Regd)

35-17

ಎಲ್ಲಾ ಬಾಮುಗಿಂತ್ತಲೂ ಅಂಜನಗಿಂತ್ತಲೂ ಶ್ರೇಷ್ಠವಾದದ್ದು. ಇದರಿಂದ ವಾತ, ಸಂಧಿವಾತ, ಜಬಿಮು, ಘಾಯ, ಉಳುಕು, ತಲೆನೋವು, ಶಿರೋಭಾರ ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವದು. ಬಾಟ್ಲಿ ಒಂದರ ಕಿಮ್ಮತು 0-8 0.

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ; ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1 ಕ್ಕೆ 0-6-0. ದಂತಮಂಜನ 0-2-0. ನೇತ್ರಾಂಜನ 0-1-0. ಸುಂದರಿ ತೈಲ 0-8-0.

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೋ, ಪೋಸ್ಟ್ ಮುಂಬಯಿ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 2 25

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

Always get the Emulsion with this mark—the Fishman—the mark of the "Scott" process!

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖಚಿಹ್ನೆ ತೋರಿಸುವದು

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯು ಮೋಳಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 25

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಸ್ಥಳಗಳಿಗೆಲ್ಲಾ ಹರಡಿದವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾರಕ ಲ್ಲಾ ಬೀಳುವದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ, ೧ ರೂ. ೬ ಆ ; ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ. ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨

ಜರದ ಟೋಪಿಗಳು ೧ ರೂ. ೧೨ ಆ ; ೧ ರೂ. ೮ ಆ , ೧ ರೂ. ೬ ಆ

ಗುಲುಕಿನ ಟೋಪಿಗಳು ೧ ರೂ. ೮ ಆ. , ೧ ರೂ. ೬ ಆ. ;

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಣ್ಣಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

11—5—1912 ರಿಂದ 7—6—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	1	3	20	12
ಕೋಲಾರ ,,	0	0	34	15
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	41	27
ಹಾಸನ ,,	4	2	95	57
ಚಿತ್ರದುರ್ಗ ,,	0	0	101	208
ಕಡೂರ್ ,,	0	0	0	0
ಶಿವಮೊಗ್ಗ ,,	3	2	261	161
ಒಟ್ಟು	10	7	859	480

ಶಾಲಿವಾಹನ ಶಕ ವರುಷಂಗಳು 1835 ನೇ ಪರಿಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮ ಋತೌ ಅಧಿಕ ಆಷಾಢ ಶುದ್ಧ ಸಪ್ತಮಿ ಶುಕ್ರವಾರದಿಂದ ಅಧಿಕ ಆಷಾಢ ಶುದ್ಧ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ ತೇದಿ
21	ಶುಕ್ರ ‡	ಸಪ್ತಮಿ	31-38	ಹು	15-6	8
22	ಶನಿ	ಅಷ್ಟಮಿ	29-11	ಉತ್ತ	12-18	9
23	ಭಾನು †	ನವಮಿ	25-34	ಹಸ್ತ	10-22	10
24	ಸೋಮ §	ದಶಮಿ	23 3	ಚಿ	9-27	11
25	ಮಂಗಳ *	ಏಕಾದಶಿ	21-37	ಸ್ವಾ	9 26	12
26	ಬುಧ ,,	ದ್ವಾದಶಿ	21-27	ವಿಶಾ	11-0	13
27	ಗುರು .	ತ್ರಯೋದಶಿ	22-35	ಅನೂ	13 36	14

‡ ಮಳೆ ನಕ್ಷತ್ರ—ಆರಿದ್ರಾ 1 ನೇ ಪಾದ † ಕಟಕಾಯನಂ § ದಶಮಿ ತಿಥಿ, ಮಳೆ ನಕ್ಷತ್ರ—ಆರಿದ್ರಾ 2 ನೇ ಪಾದ * ಸರ್ವತ್ರ ಏಕಾದಶಿ , ತ್ರಯೋದಶೀ ತಿಥಿ, ಪ್ರದೋಷ ಶೂನ್ಯತಿಥಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೫-೮-೦	೧೫-೮-೦
ಕೆಂಬೂತಿ ಅಕ್ಕಿ ಅವಲ್	೧೬-೮-೦	೧೬-೦-೦
,, ದುಯಂ	೧೬-೦-೦	೧೬-೦-೦
ಜಾವ್ರಾಣಿ ಅಕ್ಕಿ	೧೪ ೦ ೦	೧೪-೦-೦
ಸಣ್ಣಕ್ಕಿ ಅವಲ್	೧೭-೮-೦	೧೭-೮-೦
,, ದುಯಂ	೧೬ ೮ ೦	೧೬-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩-೮-೦	೧೩-೮-೦
,, ದುಯಂ	೧೧-೮-೦	೧೧ ೮-೦
ಮೈಕ್ ರಾಗಿ ಪಲ್ಲಾ ೧ಕ್ಕೆ	೭-೮-೦	೭ ೪-೦
ಕಾರಭ್ರಾಗಿ	೭ ೯ ೦	೭-೦-೦
ಜೋಳ	೮-೦-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೧-೦-೦	೧೩-೦-೦
ಬಿಳೀ ಅವರೆ	೧೦-೦ ೦	೧೦-೦-೦
ಹೆಸರು	೧೩-೦-೦	೧೪ ೦-೦
ಉದ್ದು	೨೪ ೦-೦	೧೫-೦-೦
ಕಡಲೆ	೧೧-೦-೦	೧೧-೦-೦
ಎಳ್ಳು ಸೇ ೧೨೭ ಕ್ಕೆ	೩೪-೮-೦	೩೪ ೦ ೦
ಹುರುಳಿ	೭-೩ ೦	೬-೧೪-೦
ಹವಳು ೧೨೭ ಸೇರಿಗೆ	೧೩ ೮ ೦	೧೩-೦-೦
ಸೀಗೇಕಾಯಿ ಮೂಟ ೧ಕ್ಕೆ	೩-೮-೦	೩-೮-೦
ಮೆಣಸಿನಕಾಯಿ	೩-೪-೦	೩ ೪-೦
,, ದುಯ್ಯಂ	೩-೦-೦	೩-೦-೦
ಬೆಲ್ಲ ದೊಡ್ಡ ಅಚ್ಚು	೫-೮-೦	ಮು ೧-೧೭ ೦
ಒಳ್ಳೆಣ್ಣೆ ಮೂಟ ೧ಕ್ಕೆ	೬-೮-೦	೫ ೮-೦
ಹರಳೆಣ್ಣೆ ,,	೫ ೮ ೦	೪ ೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೪-೦	೯-೦-೦
ಉಪ್ಪು ,,	೫-೮-೦	೫-೮-೦
ಹುಣಸೇ ಹಣ್ಣು	೧-೪-೦	೧ ೬-೦
,, ಹಳೇದು	೧-೦-೦	೧-೩ ೦
ತುಪ್ಪ ಮೂಟ ೧ಕ್ಕೆ	೧೬-೮-೦	೧೫ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೪ ೬-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೫ ೧೩-೦
ಅರಿಶಿನಕಾಯಿ ಮೂಟ ೧ಕ್ಕೆ	೦-೮-೦	೧-೦-೦
ಅಂಟ್ವಾಳದ ಕಾಯಿ ಮೂಟ ೧ಕ್ಕೆ	೦-೧೩-೦	೧ ೮-೦
ಚಿನ್ನ (ಪಾಕ್) ಕೆಂಪು	೧೫-೮-೦	೧೫-೭-೦
,, ,, ಕಸಿಮು	೧೫-೧೪-೬	೧೫ ೧೩ ೦
,, ,, ಗಟ್ಟಿ ತೊಲ ೧ಕ್ಕೆ	೩೪-೩-೦	೩೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೧ ೦-೦	೭೯-೮-೦

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಶುದ್ಧವಾದ ಸಿದ್ಧೌಷಧ ತ್ರಯವು.

ಕಡಿ ಅಥವಾ ಹುಳುಕಡಿ ಔಷಧವು.

ಡಬ್ಬಿ 1ಕ್ಕೆ ರೂ 0-4-0 ಡಬ್ಬಿ 12ಕ್ಕೆ ರೂ 3-8-0

ತಾಮ್ರಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಕೈಕಂಡ ಔಷಧಿಯು ಒಂದು ದಫಾ ಔಷಧಿಯನ್ನು ಹಾಕಿದರೆ ಸಾಕು, ಸಂಪೂರ್ಣ ಗುಣವುಂಟಾಗುವದು ಚರ್ಮದಲ್ಲುಂಟಾಗುವ ಕೊಳೆಯನ್ನು ಹೋಗಲಾಡಿಸಿ ದೇಹವು ಥಳಥಳಿಸುವಹಾಗೆ ಶುದ್ಧಿಯನ್ನು ಮಾಡುವುದು ಈ ಔಷಧಿ ಅಧಿಕ ಸುವಾಸನೆಯಿಂದ ಯುಕ್ತವಾದದ್ದು. ದೇಹಕ್ಕೆ ತಂಪನ್ನುಂಟುಮಾಡುವದು

ವಿರೇಚನ ವಟಿಕ ಅಥವಾ ಭೇದಿ ಮಾತ್ರೆಗಳು.

10 ಮಾತ್ರೆಗಳ ಡಬ್ಬಿ 1ಕ್ಕೆ ರೂ 0-10-0 ಡಬ್ಬಿ 12ಕ್ಕೆ ರೂ 6-0-0.

ವಿರೇಚನವತಿ ಭೇದಿಮಾತ್ರೆಗಳು

ಉದರಸಂಬಂಧವಾದ ವ್ಯಾಧಿಗಳಿಂದಲೂ ಮಲಬಂಧದೋಷದಿಂದಲೂ ಕಷ್ಟಪಡುವವರಿಗೆ ಇದು ಒಂದು ದೊಡ್ಡ ಆಶೀರ್ವಾದರೂಪವಾಗುವದು ದಿನಂಪ್ರತಿ ರಾತ್ರಿ ಮಲಗುವದಕ್ಕೆ ಮುಂಚೆ ಸೇವಿಸಿದರೆ ಹೊಟ್ಟೆಯು ಶುದ್ಧವಾಗುವದು ಎಷ್ಟು ಮಾತ್ರೆಗಳು ಸೇವಿಸಲ್ಪಡುತ್ತವೋ ಅಷ್ಟುಸಲ ಭೇದಿಯಾಗುವದು ಆದುದರಿಂದ ಎಲ್ಲರೂ ಈ ಮಾತ್ರೆಗಳನ್ನು ಬಹಳವಾಗಿ ಅಪೇಕ್ಷಿಸುತ್ತಾರೆ ಮಾತ್ರೆಗಳು ಬಹಳ ಚಿಕ್ಕದಾಗಿರುವದರಿಂದ ಬಹಳ ಸುಲಭವಾಗಿ ಇವುಗಳನ್ನು ನುಂಗಬಹುದು ರಾತ್ರಿ ಮಾತ್ರೆಯನ್ನು ಸೇವಿಸುವದರಿಂದ ರಾತ್ರಿಯೇ ಭೇದಿಯಾಗಲಾರದು [121-11]

ರಾಜವೈದ್ಯ ನಾರಾಯಣಜೀ ಕೇಶವಜೀ,

771, ಜೇನಾ ಬಜಾರ್ ರೋಡ್, ಮದ್ರಾಸು.

ಕೂದಲುಬೆಳೆಯುವ "ಕಮಲಾ" ಎನ್ನುವ ಸುವಾಸನೆ ಯೆಣ್ಣೆ

ಸೀಸೆ 1ಕ್ಕೆ 7 ಆಣೆ ಸೀಸೆ 12ಕ್ಕೆ ರೂ 4-1-0

ಈ ತೈಲವನ್ನು ಪ್ರತಿ ದಿನವೂ ಗಂಡಸರು, ಹೆಂಗಸರು, ಮಕ್ಕಳೂ ತಲೆಗೆ ಹಚ್ಚುತ್ತಾ ಬಂದರೆ ತಲೆನೋವು, ಕೂದಲು ಉದರಿಹೋಗಿರುವಿಕೆ, ಕಣ್ಣುರಿ, ತಲೆಭಾರ, ಶರೀರದಲ್ಲಿರುವ ಉಷ್ಣ, ಮೋಹಕಾರಕ, ಪಿತ್ತಕಾರಕ, ಮುಂತಾಗ ರೋಗಗಳನ್ನು ಗುಣಪಡಿಸಿ, ಕಣ್ಣಿಗೆ ತಂಪನ್ನುಂಟುಮಾಡುತ್ತೆ ಕೂದಲು ಬೆಳೆಯುವದಕ್ಕೆ ಈ "ಕಮಲಾ" ಎಂಬ ಸುವಾಸನೆ ಎಣ್ಣೆಯೇ ಬಹಳ ಮುಖ್ಯವಾದದ್ದು ಎಂದು ಕಂಡುಹಿಡಿಯಲ್ಪಟ್ಟಿರುತ್ತೆ

ವಾಸನೆ ಸ್ನಾನದ ಪುಡಿ.

ಡಬ್ಬಿ 1ಕ್ಕೆ 8 ಆಣೆ ಡಬ್ಬಿ 12ಕ್ಕೆ ರೂ 5-0-0

ಈ ಸ್ನಾನದ ಪುಡಿ ಬೆಸಿಲುಕಾಲಕ್ಕಾಗಿಯೇ ಕಂಡುಹಿಡಿಯಲ್ಪಟ್ಟಿರುತ್ತೆ ಇದನ್ನು ಪ್ರತಿನಿತ್ಯವೂ ಸ್ನಾನಮಾಡುವ ಕಾಲದಲ್ಲಿ ಹಚ್ಚಿಕೊಂಡರೆ ದೇಹದಲ್ಲಿರುವ ಜಿಬ್ಬು ಬೆವರು ವಾಸನೆ ತೆಸವು ಕಜ್ಜಿ ಮೊಡವೆ ಇವೇ ಮೊದಲಾದ ಚರ್ಮವ್ಯಾಧಿಗಳನ್ನು ಹೋಗಲಾಡಿಸಿ ಯಾವಾಗಲೂ ಮೈಯು ವಾಸನೆಯುಳ್ಳದ್ದಾಗಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತೆ ಇದನ್ನು ಎಲ್ಲರೂ ಉಪಯೋಗಿಸಬಹುದು ಬೆಳಗಿನ ಜಾವದಲ್ಲಿ ಇದನ್ನು ಹಚ್ಚಿಕೊಂಡು ತಣ್ಣೀರಿನಲ್ಲಿ ಸ್ನಾನಮಾಡಿದರೆ ಬಹಳ ಒಳ್ಳೇದು

ತಾಂಬೂಲಮಾತ್ರೆ.

ಸೀಸೆ 1ಕ್ಕೆ 12 ಆಣೆ ಸೀಸೆ 12ಕ್ಕೆ ರೂ 8-0-0

ಈ ಮಾತ್ರೆಯನ್ನು ತಾಂಬೂಲವನ್ನು ಮೆಲ್ಲುವಾಗ ಒಂದೊಂದನ್ನು ಹಾಕಿಕೊಳ್ಳುತ್ತಾ ಬಂದ ಪಕ್ಷದಲ್ಲಿ ಬಳಿ ಸೀತಳ ತಲೆಭಾರ ಇವುಗಳನ್ನು ಹೋಗಲಾಡಿಸುವದು ಅಜೀರ್ಣವನ್ನು ಹೋಗಲಾಡಿಸುವುದು ಇದನ್ನು ಗರ್ಭಸ್ತ್ರೀಯರು ಉಪಯೋಗಿಸುತ್ತಾ ಬಂದಲ್ಲಿ ಯಾವ ವ್ಯಾಧಿಯೂ ಇಲ್ಲದೆ ಪ್ರಸವಕಾಲದಲ್ಲಿ ಕಷ್ಟವಿಲ್ಲದೆ ಇರುವುದು ಹುಟ್ಟಿದ ಮಕ್ಕಳಿಗೂ ತಲೆಸುತ್ತು ವಾಯುಸುತ್ತು, ಇವೇ ಮೊದಲಾದ ವ್ಯಾಧಿಗಳನ್ನು ಗುಣಪಡಿಸುತ್ತೆ ಇದು ಬಹಳ ಉಪಯೋಗಕರವಾದದ್ದು [19-1]

ತಾ ಕ —ಏಜಂಟರಿಗೆ ಕೇಕಡಾ 10 ರಂತೆ ಕಮೀಷನ್ ಸಿಕ್ಕುತ್ತೆ

ವಿಳಾಸ — ರಾಮಸ್ವಾಮಿ ಚೆತ್ತಿಯ,

51 ಗರಡಿಲೇನ್, ಪಾರ್ಥಸಾರಥಿ ಗುಡಿ ಬಳಿ,

ತಿರುವಲ್ಲಿಕ್ಕೇಣಿ, ಮದರಾಸು.

ಚಕ್ರವರ್ತಿ ಸಾರ್ವಭೌಮರವರ ವರ್ಧಂತಿ ಕಟ್ಟಿಯ ಬಿರುದುಗಳು

ಈ ಸರ್ವ ಚಕ್ರವರ್ತಿಯವರ ಜನ್ಮೋತ್ಸವದ ನಿಮಿತ್ತ ಈ ರಾಷ್ಟ್ರದ ಬಹು ಮಂದಿ ಮಹನೀಯರಿಗೆ ಪದ್ಧತಿಯ ಪ್ರಕಾರ ಬಿರುದುಗಳು ಕೊಡೋಣಾದವು ಈ ಪೈಕಿ ಕೆಲವನ್ನು ಇಲ್ಲಿ ಪ್ರಕಟಿಸುತ್ತೇವೆ

ಮೇಜರ್ —ಭೂಪಾಲ ಸಂಸ್ಥಾನದ ಬೇಗಂರಾಣಿ ಸಾಹೇಬಾಯವರ ಜ್ಯೇಷ್ಠ ಪುತ್ರರಾದ ನವಾಬ್ ಮಹಮದ್ ನಸರುಲ್ಲಾಖಾನ್‌ರವರಿಗೆ ಇಂಗ್ಲಿಷ್ ಸೈನ್ಯದ ಮೇಜರ್ ಎಂಬ ಬಿರುದು

ಸಿ ಎಸ್ ಐ —ಇಂಡಿಯಾ ಕೌನ್ಸಿಲ್ ಮೆಂಬರು ಮೆ|| ಅಬ್ಬಾಸ್ ಅಲಿ ಬೇಗ್‌ಯವರು. ಭೂಪಾಲ್ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಸೈನ್ಯದ ಆಫೀಸರ್ ಮೇಜರ್ ಸಾಹೆಬ್ ಜಾದಾ ಓಬೆದುಲ್ಲಾಖಾನ್‌ರು, ಮದರಾಸ್ ಕೌನ್ಸಿಲ್ ಮೆಂಬರು ಮೆ|| ಪಿ ಎಸ್ ಶಿವಸ್ವಾಮಿ ಅಯ್ಯರವರು, ಹಿಂದುಸ್ಥಾನದ ಸೆನ್ಸಸ್ ಕಮಿಷನರ್ ಮೆ|| ಇ ಎ ಗೆಯಿಟ್‌ಯವರು, ರಾಜಪುಟಾನಾ ಸಂಸ್ಥಾನಗಳ ಪೈಕಿ ಕೋಟಾ ಸಂಸ್ಥಾನದ ದಿವಾನ್‌ರಾದ ದಿವಾನ್ ಬಹದೂರ್ ಸಿ ರಘುನಾಥದಾಸರವರು

ಸಿ ಐ ಇ —ಮದರಾಸ್ ಪಟ್ಟಣದ ಮ್ಯುನಿಸಿಪಲ್ ಪ್ರೆಸಿಡೆಂಟ್ ಮೆ|| ಪಿ ಎಲ್ ಮೂರ್‌ಯವರು, ಮದರಾಸ್ ವಿದ್ಯಾ ಇಲಾಖೆಯ ಮೆ ಎ ಬಾಟ್ಲೇರ್‌ರವರು ಮೈಸೂರು ಸಂಸ್ಥಾನದ ಮೆ|| ಆರ್ ಎಚ್ ಕ್ಯಾಂಪ್‌ಯವರು ಬೆಂಗಳೂರು ದಂಡಿನ ಮೆ ಅಣ್ಣಾಸ್ವಾಮಿ ಮೊದಲಿಯಾರ್ರು ಲಕ್ಷ್ಮೀಪುರದಲ್ಲಿರುವ ಮೇಬ್ಲಾನದಿ ಮಠದ ಕಾರ್ಯದರ್ಶಿಯು ಮೆ|| ಎ ಜೆ ಪಾರ್ಕರ್‌ರವರು, ಪಂಜಾಬ್ ಕಮಿಷನರ್ ರಾಯಬಹದೂರ್ ಪಂಡಿತ್ ಹರಿಕಿಷನ್‌ರವರು.

ನೈಟ್ ಎಂಬ ಬಿರುದು —ಬೊಂಬಾಯಿ ಪಟ್ಟಣದಲ್ಲಿ ವರ್ತಕರಾಗಿಯೂ ಜವಳಿಗಿದಾರರಾಗಿಯೂ ಇರುವ ಮೆ|| ಜಗಮೋಹನ್‌ದಾಸ್ ವನಜೀವನ್‌ದಾಸ್‌ಯವರು, ಮದರಾಸ್ ಹೈಕೋರ್ಟಿನ ಜಡ್ಜಿಗಳಾದ ಮೆ|| ಜೆ ಇ ಪಿ. ವಾಲಿಸ್‌ಯವರೂ, ಮೆ|| ಸಿ ಶಂಕರನ್ ನಾಯರ್‌ಯವರೂ

ಕೈಸರಿ ಹಿಂದ್ ಚಿನ್ನದ ಬಿರುದು —ಮದರಾಸಿನ ಡಾಕ್ಟರ್ ಟಿ. ಎಂ. ನಾಯರ್‌ಯವರು , ರಾಂಪೂರ ಸಂಸ್ಥಾನದ ಅಬ್ಬಾಸ್ ಸಮದ್ ಖಾನ್‌ರು ; ದೇವಾಸ್ ಸಂಸ್ಥಾನದ ರಾಜಾ ಮಲ್ಹಾರ್‌ರಾವ್ ಬಾಬಾ ಸಾಹೇಬ್ ಪುವಾರ್‌ಯವರು , ರಾಜಕೋಟೆಯಲ್ಲಿರುವ ಬ್ಯಾರಿಸ್ಟರ್ ಮೆ|| ಸೀತಾರಾಂ ನಾರಾಯಣ ಪಂಡಿತರು

ಕೈಸರಿ ಹಿಂದ್ ಬೆಳ್ಳಿಯ ಬಿರುದು .—ಅಜ್ಮೀರದ ಮ್ಯುನಿಸಿಪಲ್ ಕಮಿಷನರ್ ಬಾಬು ಛೇದನ್‌ಲಾಲ್ ಯವರು , ಪೂನಾ ಪಟ್ಟಣದ ಪ್ರೊಫೆಸರ್ ಧೋಂಡೋ ಕೇಶವ ಕಾರ್ವೇಯವರು

ಮಹಾರಾಜಾ —ಬೀರ್ಭೂಮ್‌ನಲ್ಲಿರುವ ಹೇತಾಂಪುರದ ರಾಜರಿಗೆ, ಇವರ ಜೀವಾವಧಿಪರ್ಯಂತ

ರಾಜಾ —ಗೋಂಡಾ ಸೀಮೆಯಲ್ಲಿರುವ ಪೋಂಕಾಪುರದ ರಾಜಾ ರಘುರಾಜ ಸಿಂಗ್‌ಯವರಿಗೆ, ಇವರ ವಂಶಪಾರಂಪರ್ಯವಾಗಿ.

ರಾಜಾ (ಜೀವಾವಧಿ ಪರ್ಯಂತ) —ಬರ್ದ್ವಾನ ಶ್ರೀಜ್ಯೋತಿಪ್ರಸಾದ ಸಿಂಗ್ ದೇವ್ ; ಮಾಲ್ಡಾ ಡಿಸ್ಟ್ರಿಕ್ಟಿನಲ್ಲಿರುವ ಬಾಬು ಸರಥಚಂದ್ರರಾಯಿ ಚೌಧ್ರಿಯವರು , ರಂಗಪುರದ ಡಿಸ್ಟ್ರಿಕ್ಟಿನಲ್ಲಿರುವ ಮಹಾರಾಜ ಕುಮಾರ್ ಗೋಪಾಲ ಲಾಲ್‌ಯವರು , ಆಗ್ರಾ ಡಿಸ್ಟ್ರಿಕ್ಟಿಗೆ ಸೇರಿದ ಕೋಟ್ಲಾದಲ್ಲಿರುವ ಧಾಕೂರ್ ಕುಶಾಲಪಾಲ ಸಿಂಗರವರು

ನವಾಬ್ —ಪ್ರತಾಪಘಡದ ಷೇಕ್ ಅಹಮದ್ ಹುಸ್ಸೇನ್ ಯವರು

ಮಹಾಮಹೋಪಾಧ್ಯಾಯ —ತಂಜಾವೂರಿನ ಬ್ರಹ್ಮಶ್ರೀ ಸುಂದರ ಶಾಸ್ತ್ರಿಗಳು

ಶಾಂಸುಲ್‌ಉಲಾಮಾ —ದೆಹಲಿ ಮೌಲ್ವಿ ಅಬು ಮಹಮದ್ ಅಬ್ದುಲ್ ಹಕ್‌ಯವರು

ವಿದ್ಯಾರತ್ನ.—ಬಹಾರಂಪುರದ ಪಂಡಿತ ಎ ಗೋಪಾಲಾಚಾರ್ರು , ಕಲ್ಕತ್ತೆಯ ಕವಿರಾಜ ಕಾಳಿದಾಸ ವಿದ್ಯಾಭೂಷಣರವರು , ಕಲ್ಕತ್ತೆಯ ಕವಿರಾಜ ಯೋಗೀಂದ್ರನಾಥ ಸೇನರವರೂ

ದಿವಾನ್ ಬಹದೂರ್ —ಮದರಾಸ್ ರೆವಿನ್ಯೂ ಸರ್ವೆ ಇಲಾಖೆಯ ಮೆ|| ಪಿ ಆರ್ ನಾರಾಯಣ ಅಯ್ಯರವರೂ, ಕೊಯಮುತ್ತೂರಿನ ಮೆ|| ಎಸ್ ಎಲ್. ನರಸಿಂಹೈಯನವರು

ರಾಯಿ ಬಹದೂರ್ —ಮದರಾಸ್ ಟ್ರೆಜರಿ ಆಫೀಸಿನ ಮೆ|| ಟಿ ಕುಂದಸ್ವಾಮಿ ಮೊದಲಿಯಾರ್ರು ಕೊಯಮುತ್ತೂರಿನ ಮೆ|| ಎನ್ ಸಿ. ಮಂದ್ರದುಗಾರ್‌ಯವರು, ಕಲ್ಕತ್ತೆಯ ಮೆ|| ಶಿರಿಶಚಂದ್ರ ಸರ್ವಾಧಿಕಾರಿಯವರು, ದುಂರಾವನ್ ಗೌರವ ಮ್ಯಾಜಿಸ್ಟ್ರೇಟ್ [illegible] ಹರಿಪ್ರಸಾದ್ ಸಿಂಗ್‌ರವರು, ಬ್ಯಾರಿಸಾಲ್ ಪ್ಲೀಡರ್ ಮೆ ಪ್ರಮಥನಾಥ ಮುಖರ್ಜಿಯವರು ರಂಗಪುರದ ಮೆ|| ಮೃತ್ಯುಂಜಯ ರಾಯಿ ಚೌಧ್ರಿಯವರು, ಮಥುರೆಯ ರಾಧಾಕೃಷ್ಣರವರು, ಲಕ್ನೋ ಪಟ್ಟಣದ -ಅಡ್ವೊಕೇಟ್- ಎಡಿಟರು ಮೆ|| ಗಂಗಾಪ್ರಸಾದ ವರ್ಮಾರವರು, ದೆಹಲಿ ಗೌರವ ಮ್ಯಾಜಿಸ್ಟ್ರೇಟ್ ಲಾಲಾ ಸುಲ್ತಾನ್‌ಸಿಂಗ್‌ಯವರು ಧಾತಿಯಾ ಸಂಸ್ಥಾನದ ದಿವಾನ್‌ರಾದ ಮೆ|| ಗಂಗಾ ಸಹಾಯರವರು, ಜಯಪುರ ಸಂಸ್ಥಾನದ ವಕೀಲ್ ದುರ್ಗಾ ಪ್ರಸಾದರವರು

ರಾವ್ ಬಹದೂರ್ —ತಿರುಚನಾಪಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಮೆ|| ಕೆ. ಎಸ್ ಗಣಪತಿ ಅಯ್ಯರವರು, ತಿನ್ನವೆಲ್ಲಿ ಗವರ್ನ್‌ಮೆಂಟ್ ಪ್ಲೀಡರ್ ಮೆ|| ಎ ಸುಂದರಶಾಸ್ತ್ರಿಗಳು, ಮದರಾಸ್ ರೆವಿನ್ಯೂ ಸೆಕ್ರೆಟೆರಿಯಾಟ್ ರಜಿಸ್ಟ್ರಾರ್ ಮೆ|| ವಿ ಎ ಅನಂತರಾಮ ಅಯ್ಯರವರು , ಕಲ್ಲಿಕೋಟೆ ಮೆ|| ಪಿ. ಸೋಮಸುಂದರಂ ಚೆಟ್ಟರು , ಕರ್ನೂಲ್ ಮ್ಯುನಿಸಿಪಾಲಿಟಿಯ ಛೇರ್ಮನ್ ಮೆ|| ಎಸ್ ವೆಂಕಟನರಸಿಂಹರಾಯರು , ದೇವಾಸ್ ಸಂಸ್ಥಾನದ ದಿವಾನ್‌ರಾದ ಮೆ|| ಮಾಧವರಾವ್ ವಿನಾಯಕ ಕೀಬೆಯವರು , ರೀವಾ ಸಂಸ್ಥಾನದ ಜುಡಿಷಲ್ ಕಮಿಷನರ್ ಮೆ|| ಕುಮರರಾವ್ ಸಿಂಗ್‌ಯವರು , ಬರೋಡಾ ಸಂಸ್ಥಾನದ ಇಂಗ್ಲಿಷ್ ಆಫೀಸ್ ಮ್ಯಾನೆಜರ್ ಮೆ|| ಲಕ್ಷ್ಮೀಲಾಲ್ ದವಲತ್ ರಾಯಿಯವರು

ರಾಯಿ ಸಾಹೇಬ್ —ಬೇಹಾರ್ ಸಸಾರಾಂ ಮ್ಯುನಿಸಿಪಲ್ ಕಮಿಷನರ್ ಮೆ|| ಅಘೋರಿ ಗಣೇಶ ಪ್ರಸಾದ್, ಮುಲ್ತಾನ್ ಗೌರವ ಮ್ಯಾಜಿಸ್ಟ್ರೇಟ್ ಲಾಲಾ ರಾಮಚಂದ್ ಬಟಾಲಾ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ|| ಲಾಲಾ ದಿವಾಳ್‌ಚಂದ್ ; ಬಿಲಾಸ್‌ಪುರ ಸಂಸ್ಥಾನದ ವಜೀರ್ ಮಿಯಾನ್ ದುರ್ಗಾ ಸಿಂಗ್ ಡೆಹಲಿ ಪ್ಲೀಡರ್ ಲಾಲಾ ವಜೀರ್ ಸಿಂಗ್ , ಷಹಾಪುರ ಸಂಸ್ಥಾನದ ಕಾಂದಾರ್ ಲಾಲಾ ನಾಥುಮಾಲ್ , ಅಬ್ಬೊಟಾಬಾದ್ ಬ್ಯಾರಿಸ್ಟರ್ ಮೆ|| ಪರಮಾನಂದ್ ;

ರಾವ್ ಸಾಹೇಬ್ —ಮದರಾಸ್ ಮೆ|| ಕೆ ಕನ್ನನ್ ಚೆಟ್ಟಿಯಾರ್ ; ತಿರುಪ್ಪೂರ್ ಮೆ|| ವಿಟ್ಠಲದಾಸ್ ನಂದಜಿ ಸೇಟ್ , ಮದರಾಸ್ ಡಿಪ್ಟಿ ಕಲೆಕ್ಟರ್ ಮೆ|| ಪಿ ಸೀತಾರಾವ್ , ಬಾಂದಾ ಹೈಸ್ಕೂಲ್ ಪಂಡಿತ ವಿನಾಯಕರಾವ್ ಬಾಬಾಜಿ

ಕಳೆದ ಗುರುವಾರ ರಾತ್ರಿ ಪೂನೆಯಿಂದ ಬೊಂಬಾಯಿ ಕಡೆಗೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್ ಗಾಡಿಯೊಳಗೆ ಯೂರೋಪ್ಯರ್ನಿಬ್ಬರು ಪ್ರಯಾಣ ಮಾಡುತ್ತಿರುವಲ್ಲಿ ಆ ಪೈಕಿ ಒಬ್ಬನು ಥಟ್ಟನೆ ಎದ್ದು ಗಾಡಿಯ ಸರಪಣಿಯನ್ನು ಎಳೆದನು ಏನೋ ಅಪಾಯ ನಡೆದಿದೆ ಎಂದು ಊಹಿಸಿ ರೈಲ್ ಗಾಡಿಯನ್ನು ನಿಲ್ಲಿಸಿಬಿಟ್ಟರು ಸರಪಣಿ ಎಳೆದವನು ಆ ಕೂಡಲೇ ಗಾಡಿ ಬಿಟ್ಟು ಹೊರಟು ಹೋಗುತ್ತಿದ್ದನು. ಗಾರ್ಡನೂ, ಇನ್ನೊಬ್ಬ ಯೂರೋಪ್ಯನೂ ಹಿಂದಟ್ಟಿ ಹೋಗಿ ಅವನನ್ನು ಹಿಡಿದು ಕೇಳಿದಾಗ ಅವನು ಬುದ್ಧಿಸ್ಥಿಮಿತವಿಲ್ಲದವನಂತೆ ಮಾತನಾಡಿ ಜೋಬಿನಿಂದ ತುಂಬಾ ರೂಪಾಯಿಗಳನ್ನು ತೋರಿಸಿ, ಆ ರೈಲೇ ಗಾಡಿಗೂ ಅದರಲ್ಲಿದ್ದ ಪ್ರಯಾಣಿಕರಿಗೂ ಅಪಾಯವುಂಟೆಂದು ಹೇಳಿ, ತನ್ನ ಕೈಯಲ್ಲಿದ್ದ ರೂಪಾಯಿಗಳನ್ನು ಅವರಿಬ್ಬರಿಗೂ ಕೊಡ-ಹೋದನು ಅವರು ಅದನ್ನು ತಿರಸ್ಕರಿಸಿ, ಅವನನ್ನು ಮತ್ತೆ ಗಾಡಿಗೆ ಕರತರಬೇಕೆಂದು ಎಷ್ಟೋ ಸಾಹಸಪಟ್ಟರೂ ಆವನು ಬಾರದೆ ಕತ್ತಲಲ್ಲೇ ತನ್ನ ದಾರಿ ಹಿಡಿದು ಪಾದಚಾರಿಯಾಗಿ ಹೊರಟುಹೋದನು ಅವರು ಅವನ ಹೆಸರು ವಿಳಾಸಗಳನ್ನು ತೀದುಕೊಂಡು ಬಂದುಬಿಟ್ಟರು

ನಮ್ಮ ಏಜಂಟರಿಗೆ.

"ವೃತ್ತಾಂತ ಪತ್ರಿಕೆ"ಯ ವರುಷವು ಪೂರೈಸಿ ಮೂರು ವಾರಗಳಾಗಿದ್ದರೂ ಕೆಲವು ಏಜಂಟರು ಇನ್ನೂ ಕಳೆದ ವರುಷದ ಲೆಕ್ಕವನ್ನು ಕಳುಹಿಸಲಿಲ್ಲ. ಈ ವಾರದೊಳಗಾಗಿ ಆ ಲೆಕ್ಕಗಳನ್ನು ತಪ್ಪದ ಖಂಡಿತವಾಗಿ ಕಳುಹಿಸಬೇಕೆಂದು ಸೂಚಿಸಿದೆ.

ಮ್ಯಾನೇಜರ್.

ಒಳ್ಳೇ ಕಂಟ್ರಾಕ್ಟರು ಬೇಕಾಗಿದೆ.

ಹೊಳೆನರಸೀಪುರದಲ್ಲಿ ಒಂದು ಕಾರೊನೇಷನ್ ಟೌನ್ ಹಾಲನ್ನು ಸುಮಾರು 4,000 ರೂ. ಅಂದಾಜಿನಲ್ಲಿ ಪ್ಲಾನ್ ಪ್ರಕಾರ ಕಟ್ಟಲು ಅನುಭವವುಳ್ಳ ಒಬ್ಬ ಕಂಟ್ರಾಕ್ಟರು ಬೇಗನೆ ಬೇಕಾಗಿದೆ. ಸಾಮಗ್ರಿಗಳು ಸ್ಥಳದಲ್ಲಿ ಒದಗಿಸಲ್ಪಡುತ್ತವೆ ಹೆಚ್ಚು ಸಂಗತಿಯನ್ನು ಪ್ರೆಸಿಡೆಂಟರಿಗೆ ಬರೆದು ತಿಳಿದುಕೊಳ್ಳತಕ್ಕದ್ದು.

ಆರ್. ತಿರುನಾರಾಯಣೈಯಂಗಾರ್,
[103-1] ಪ್ರೆಸಿಡೆಂಟ್, ಹೊಳೆನರಸೀಪುರ.

1913 ನೇ ಇಸವಿಯ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

ಕ್ರಯ 6 ಆಣೆ 10 ಕ್ಕೆ 1 ಡಿಸ್ಕೌಂಟು. ನಮ್ಮ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [71-7]

2 ನೇ ಪುಸ್ತಕದ ನೋಟ್ಸು 2½ ಆಣೆ. 3 ನೇ ಪುಸ್ತಕದ ನೋಟ್ಸು 1½ ಆಣೆ 4 ನೇ ಪುಸ್ತಕದ ನೋಟ್ಸು 1½ ಆಣೆ 5 ನೇ ಪುಸ್ತಕದ ನೋಟ್ಸು 1 ಆಣೆ ಮೈಸೂರು ಭೂವಿವರಣೆ 1 ಆಣೆ. 3 ನೇ ಕ್ಲಾಸ್ ಭೂವಿವರಣೆ 1½ ಆಣೆ

ಎಲ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು

ಜಾರ್ಜ್ ಸಾರ್ವಭೌಮರ ಚರಿತ್ರೆ.

ಈಗತಾನೆ ಅಚ್ಚಾಗಿ ವಿಕರಿಗೆ ಸಿದ್ಧವಾಗಿದೆ.

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ದೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ, ಅಮೂಲಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ. ಅವರ ಭಾವಚಿತ್ರವೂ ಉಂಟು ಅಂದವಾದ ಮುದ್ರಣ ಸೊಗಸಾದ ಬೈಂಡು ದಿವ್ಯಕಾಗದ ಕ್ರೌನ್ 140 ಪುಟಗಳು. ಕ್ರಯ ಪ್ರತಿ 1 ಕ್ಕೆ 8 ಆಣೆ. ಹಾಸಲು 1 ಆಣೆ [92-3]

ವಿಳಾಸ —ಸಿ. ಎಲ್. ಎಸ್. ಬುಕ್ ಡಿಪ್ಪೊ, ಮೈಸೂರು.

The Mysore Dasara Industrial and Agricultural Exhibition, 1912.

The Exhibition opens on the 14th of October and closes on the 28th.

Competitions in Weaving, Ploughing, Wood carving, Metal work and Pottery making have been arranged.

Women's section, wherein articles manufactured by women on more refined and improved lines, has also been organised.

Opening of a combined Post & Telegraph Office in the Exhibition premises will be arranged.

For further particulars apply to the Secretary, Exhibition, Mysore [103-1]

G. Subbuswamier,
Secretary

ದೇಹಸಂಬಂಧವಾದ ಎಲ್ಲಾ ನೋವಿಗೂ

84-4

ಅಂದರೆ— ಉಳುಕು, ಬೆನ್ನುನೋವು, ಕೀಲು ಇರಿತ, ಕಾಲುಗಳ ಸೆಳತ, ಚಚ್ಚು ನೋವು, ಊತುಕೋವು, ಕತ್ತುನೋವು, ತಲೆನೋವು, ಅರತಲೆನೋವು, ವಾಯು ಸೆಳತ—ಇವೆಲ್ಲ

ಕ್ಲೈಮಂಟರ ಮ್ಯಾಜಿಕ್ ಬಾಂ

ತೈಲವನ್ನು ಉಜ್ಜಿದ ಕೂಡಲೆ ಕಡಮೆಯಾಗಿ, ಹಿತವಾಗಿ, ವಾಸಿಯಾಗುತ್ತವೆ ಇದಕ್ಕೆ ಅನುಮಾನವಿಲ್ಲ. ಇದು ಪರಿಕ್ಷಾರ್ಥವಾದ ಔಷಧವಲ್ಲ. ಅನೇಕ ವರುಷಗಳಿಂದ ಚನ್ನಾಗಿ ಅನುಭವ ಕಂಡಿರುವ ನೋವಿನ ಔಷಧಿಯಾಗಿದೆ.

ನೋವಿನಿಂದ ಜಿಗುಪ್ಸೆಯನ್ನೂ ಮನೋವಿಕಾರವನ್ನೂ ಹೊಂದಿ ನಿದ್ರೆ ತಪ್ಪಿ ಕಾಲವನ್ನು ಗಳಿಸಿಕೊಳ್ಳಬೇಡಿ ನೋವಿನ ದೆಸೆಯಿಂದ ಸುಖಸಂತೋಷಗಳನ್ನು ಕಳಕೊಳ್ಳಬೇಡಿ. ಕ್ಲೈಮಂಟರ ಮ್ಯಾಜಿಕ್ ಬಾಂ ನಿಮ್ಮ ನೋವನ್ನೂ ಬಾಧೆಯನ್ನೂ ಖಂಡಿತವಾಗಿ ವಾಸಿಮಾಡಬಲ್ಲದು

ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆ, ಪೋಸ್ಟೇಜ್ ಪ್ಯಾಕಿಂಗ್ ೪ ಆಣೆ. ಒಂದೇ ಸಲ ೩ ಅಥವಾ ಹೆಚ್ಚು ಬಾಟ್ಲಿ ತರಿಸಿಕೊಂಡರೆ ಪೋಸ್ಟೇಜಾಗಲಿ ಪ್ಯಾಕಿಂಗ್ ಆಗಲಿ ಕೇಳದೆ ಮಾಫಿ ಕಳುಹಿಸುತ್ತೇವೆ.

ಈ ಔಷಧವು ಔಷಧ ಮಾರಾಟಮಾಡುವ ಅಂಗಡಿಗಳಲ್ಲೆಲ್ಲಾ ಸಿಕ್ಕುತ್ತೆ. ಕೆಳಗಿನ ವಿಳಾಸದಾರರಿಂದಲೂ ತರಿಸಿಕೊಳ್ಳಬಹುದು. ವಿಳಾಸಗಳು.—

ಎಸ್. ಪೀಟರ್ಸ್, ೩೭, ವಡಮಲೆಪಿಳ್ಳೆ ಬೀದಿ, ಪುರ್ಸವಾಕಂ, ವೇಪೇರಿ, ಮದರಾಸ್, ಅಥವಾ ಬಿ. ಎಸ್. ಕನ್ನಯ್ಯಶೆಟ್ಟರು, ಹಾರ್ಸ್ ಕ್ಯಾಪ್ ಮ್ಯಾನುಫ್ಯಾಕ್ಚರರ್, ತುಮಕೂರು.

ವೃತ್ತಾಂತ ಪತ್ರಿಕೆ.

ಸನ್ ೧೯೧೨ ನೇ ಇಸವಿ ಜೂನ್ ತಾ. ೨೦ ನೇ ಗುರುವಾರ.

ಮೈಸೂರು ಸಂಪದಭಿವೃದ್ಧಿಯ ಸಮಾಜವು.

1. ವಿದ್ಯಾ ವಿಷಯವಾದ ಸಲಹೆಗಳು.

ಮೈಸೂರು ಸಂಪದಭಿವೃದ್ಧಿ ಸಮಾಜದ ಜನರಲ್ ಮೀಟಿಂಗು ಕಳೆದ ತಿಂಗಳಲ್ಲಿ ನಡೆಯಿತಷ್ಟೆ. ಆಗ ಮೆಂಬರುಗಳು ತೀರ್ಮಾನ ಮಾಡಿದ ವಿಷಯಗಳನ್ನು ಸೆಕ್ರೆಟರಿಯವರು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಈ ಸಮಾಜದವರು ವಿದ್ಯೆ, ವ್ಯವಸಾಯ, ಕಸಬು ಮತ್ತು ವ್ಯಾಪಾರ, ಈ ಮೂರು ಭಾಗಗಳನ್ನೂ ಕುರಿತು ಚರ್ಚಿಸುವುದಕ್ಕೆ ಪ್ರತ್ಯೇಕವಾದ ಮೂರು ಸಬ್ ಕಮಿಟಿಗಳನ್ನು ನೇಮಿಸಿಕೊಂಡಿರುವುದು ಎಲ್ಲರಿಗೂ ತಿಳಿದಿದೆ. ಈ ಸಬ್ ಕಮಿಟಿಗಳ ಮೆಂಬರುಗಳು ಕಳೆದ ವರುಷ ಆಗಾಗ್ಗೆ ಸಭೆ ಸೇರಿ ತಮತಮಗೆ ವಹಿಸಲ್ಪಟ್ಟ ವಿಚಾರಗಳನ್ನು ಕುರಿತು ಆಲೋಚನೆ ಮಾಡಿ ತಮ್ಮ ಅಭಿಮತಗಳನ್ನು ತಿಳಿಸಿದರು. ಜನರಲ್ ಮೀಟಿಂಗಿನಲ್ಲಿ ಅವರ ಅಭಿಮತಗಳನ್ನು ಚರ್ಚೆಮಾಡಿ, ಬಹುಮಂದಿ ಮೆಂಬರುಗಳು ಕೆಲವನ್ನು ಒಪ್ಪಿ ಪ್ಯಾಸ್ ಮಾಡಿರುತ್ತಾರೆ.

ವಿದ್ಯಾಭಿವೃದ್ಧಿಯನ್ನು ಕುರಿತು ಮೆಂಬರುಗಳು ದೀರ್ಘವಾಗಿ ಪರ್ಯಾಲೋಚಿಸಿದರು. ಸುಮಾರು ಅವರ ತೀರ್ಮಾನಗಳಲ್ಲಿ ಅರ್ಧಭಾಗವೆಲ್ಲಾ ಇದಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ ಅದರ ಮುಖ್ಯಾಂಶಗಳೇನೆಂದರೆ—ಗ್ರಾಮಾಂತರಗಳಲ್ಲಿ ಹೊಸದಾಗಿ 1,000 ಪ್ರೈಮರಿ ಪಾಠಶಾಲೆಗಳನ್ನು ಪ್ರಾರಂಭಿಸಬೇಕು. ಈಗಿರುವ 500 ಸ್ಕೂಲುಗಳಿಗೆ ಒಳ್ಳೇ ಮನೆಗಳನ್ನು ಕಟ್ಟಿಸಿ, ಉಪಕರಣಗಳನ್ನು ಒದಗಿಸಿ, ಉಪಾಧ್ಯಾಯರುಗಳನ್ನು ಹೆಚ್ಚಿಸಿಕೊಡಬೇಕು. ಶಿಕ್ಷಣ ಹೊಂದಿದವರನ್ನೇ ಹೆಡ್ ಮಾಸ್ಟರ್ ಕೆಲಸಕ್ಕೆ ನೇಮಿಸಬೇಕು, ಇನ್ನೂ ಉಪಾಧ್ಯಾಯರುಗಳನ್ನು ಹೆಚ್ಚಾಗಿಯೂ, ಚನ್ನಾಗಿಯೂ ತರಬೇತು ಮಾಡಬೇಕು. ಶಿಕ್ಷಣ ಹೊಂದಿರುವವರನ್ನು ಮಾತ್ರ ಇನ್ಸ್‌ಪೆಕ್ಟರ್ ಕೆಲಸಕ್ಕೆ ನೇಮಿಸಬೇಕು; ಈಗಿರುವ ಇನ್ಸ್‌ಪೆಕ್ಟರುಗಳನ್ನು ತರಬೇತು ಮಾಡಬೇಕು.

ಮೈಸೂರು ಮಹಾರಾಣೀ ಕಾಲೇಜಿಗೆ ಸಂಬಂಧಪಟ್ಟಂತೆ ಬಾಲಿಕೆಯರಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಬೇಕು ಮೈಸೂರಿನಲ್ಲೂ, ಬೆಂಗಳೂರಿನಲ್ಲೂ ಬಾಲಿಕೆಯರ ಬೋರ್ಡಿಂಗ್ ಸ್ಕೂಲುಗಳಾಗಬೇಕು. ಹೆಣ್ಣು ಮಕ್ಕಳಿಗೂ ಹೆಂಗಸರಿಗೂ ಅವರವರ ಮನೆಗಳಲ್ಲೇ ವಿದ್ಯಾಭ್ಯಾಸ ನಡೆಯುವಂತೆ ಏರ್ಪಾಡಾಗಬೇಕು. ಇದಕ್ಕೆ ವಿದ್ಯಾವತಿಯರಾದ ಸ್ತ್ರೀಯರೇ ನೇಮಕವಾಗಬೇಕು. ಬಾಲಿಕಾ ಪಾಠಶಾಲೆಗಳನ್ನು ಪರಿಕ್ಷೆಮಾಡುವುದಕ್ಕೂ, ತನಿಖೆಮಾಡುವುದಕ್ಕೂ ಹೆಂಗಸರನ್ನೇ ನೇಮಿಸಬೇಕು.

ಕೀಳುಜಾತಿಯವರನ್ನು ಮುಂದಕ್ಕೆ ತರುವುದಕ್ಕೆ ಸದ್ಯ 30 ಹೊಸ ಸ್ಕೂಲುಗಳನ್ನು ಪ್ರಾರಂಭಿಸಿ, ಇನ್ನೂ 70 ಸ್ಕೂಲುಗಳನ್ನು ಆದಷ್ಟು ತ್ವರ್ಯದಲ್ಲಿ ಇಡಿಸಿಕೊಡಬೇಕು ಸರ್ಕಾರದವರೇ ಈ ಸ್ಕೂಲುಗಳನ್ನು ಕಟ್ಟಿಸಿ, ವಿದ್ಯಾರ್ಥಿಗಳಿಗೆಲ್ಲಾ ಸರ್ಕಾರದ ಖರ್ಚಿನಿಂದಲೇ ಪುಸ್ತಕ ಮೊದಲಾದ ಉಪಕರಣಗಳನ್ನು ಒದಗಿಸಿಕೊಡಬೇಕು. ಯೋಗ್ಯರಾದ ಬಾಲಕರಿಗೆ ತಿಂಗಳಿಗೆ 2 ರೂಪಾಯಿಗೆ ಮೀರದಂತೆ ದ್ರವ್ಯಸಹಾಯವನ್ನೂ ಮಾಡಬೇಕು ಅಭಿವೃದ್ಧಿ ಹೊಂದಬಹುದಾದ ದೊಡ್ಡ ಹುಡುಗರಿಗಾಗಿ ಬೆಂಗಳೂರಿನಲ್ಲಿ ಒಂದು ಬೋರ್ಡಿಂಗ್ ಸ್ಕೂಲನ್ನು ಪ್ರಾರಂಭಿಸಬಹುದು.

ಈಗಿರುವ ಸ್ಕೂಲ್ ರಜಾ ದಿನಗಳನ್ನು ಕಡಮೆಮಾಡಬೇಕು. ಇದಕ್ಕೆ ಸಮಾಜದವರು ಕ್ರೈಸ್ತ, ಹಿಂದೂ, ಮಹಮದೀಯ ಮತ್ತು ಸರ್ಕಾರಿ ರಜಾ ದಿನಗಳಲ್ಲಿ ಕೆಲವನ್ನು ಬಿಡತಕ್ಕದ್ದೆಂದು ಸೂಚಿಸಿದ್ದಾರೆ ಅವಶ್ಯವಾದ ಸ್ಥಳಗಳಲ್ಲಿ ಎಲ್ಲರೂ ವಿದ್ಯೆ ಕಲಿಯಬೇಕೆಂದು ಬಲಾತ್ಕರಿಸುವಂಥಾ ಒಂದು ಕಾನೂನ್ ಪ್ಯಾಸ್ ಮಾಡಬೇಕೆಂದು ಸಮಾಜವು ಗವರ್ನಮೆಂಟನ್ನು ಪ್ರಾರ್ಥಿಸುತ್ತದೆ ಮತ್ತು ಸದ್ಯದಲ್ಲಿ ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕವಾದ ವಿದ್ಯಾನಿಲಯ (ಯೂನಿವರ್ಸಿಟಿ) ವನ್ನು ಸ್ಥಾಪಿಸಿಕೊಳ್ಳುವುದು ಸಾಧ್ಯವಿಲ್ಲವಾದರೂ ಅದು ಕಾಲಕ್ರಮದಲ್ಲಿ ಏರ್ಪಾಡಾಗಲು ಅನುಕೂಲಿಸುವಂತೆ ಮೈಸೂರು ಮತ್ತು ಬೆಂಗಳೂರು ಕಾಲೇಜುಗಳಲ್ಲಿ ಅವಶ್ಯವಾದ ಸನ್ನಾಹಗಳನ್ನು ಮಾಡಿಡಬೇಕು.

ಈಗ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಖರ್ಚುಮಾಡುತ್ತಿರುವುದಕ್ಕಿಂತಲೂ ಹೆಚ್ಚಾಗಿ ಏಳು ಲಕ್ಷ ರೂಪಾಯನ್ನು ಇನ್ನು ಐದು ವರುಷಗಳಲ್ಲಿ ಒದಗಿಸಿಕೊಡಬೇಕಾಗಿದೆ ಎಂದೂ, ಆ ಬಳಿಕ ಪ್ರತಿ ವರುಷವೂ ಎರಡೂಕಾಲು ಲಕ್ಷ ರೂಪಾಯಿನಂತೆ ಕೊಡಬೇಕಾಗಿದೆ ಎಂದೂ ಸಮಾಜದವರು ಶಿಫಾರಸು ಮಾಡುತ್ತಾರೆ.

ಈ ಪೈಕಿ ಅನೇಕ ಸಲಹೆಗಳು ಬಹಳ ಶ್ಲಾಘ್ಯವಾಗಿರುತ್ತವೆಂದು ನಾವು ಸಂತೋಷಪಟ್ಟು ಧಾರಾಳವಾಗಿ ಒಪ್ಪಿಕೊಳ್ಳುತ್ತೇವೆ ಆದರೆ ಇಷ್ಟೆಲ್ಲಾ ನಡೆಯುವ ಬಗೆ ಹ್ಯಾಗೆ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಮೊದಲು ಅಷ್ಟು ಹಣ ಎಲ್ಲಿಂದ ಒದಗಿಸುವುದಕ್ಕಾದೀತು? ಸಂಸ್ಥಾನವನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಮುಂದೆ ಯಾವಯಾವ ಕಾರ್ಯಗಳನ್ನು ಮಾಡಬೇಕಾಗುತ್ತದೆ ಎಂದು ಗವರ್ನಮೆಂಟಿನವರು ಮೊದಲೇ ಚನ್ನಾಗಿ ಯೋಚಿಸಿ ಗೊತ್ತುಮಾಡಿಕೊಳ್ಳಬೇಕಾದದ್ದೇನೋ ಸಹಜವೂ ಅವಶ್ಯಕವೂ ಆಗಿರುತ್ತದೆ. ಇಲ್ಲವಾದರೆ ಕುರುಡನಂತೆ ಯಾವುದು ಏನಾಗುತ್ತೋ, ಪರ್ಯವಸಾನವೇನಾದೀತೋ ಒಂದೂ ತಿಳಿಯಲಾಗುವುದಿಲ್ಲ. ದೇಶೋನ್ನತಿಗೆ ಅವಶ್ಯವಾದ ಕಾರ್ಯಗಳನ್ನು ಮೈಸೂರು ಗವರ್ನಮೆಂಟಿನವರು ಮೊದಲೇ ನಿಷ್ಕರ್ಷೆ ಮಾಡಿಟ್ಟುಕೊಳ್ಳಬೇಕೆಂದು ಒತ್ತಿ ಹೇಳುತ್ತೇವೆ. ಅವುಗಳನ್ನು ಕಾಲಕ್ರಮದಲ್ಲಿ ವಿವೇಕಪೂರ್ವಕವಾಗಿ ರೂಢಿಸಬಹುದಾಗಿದೆ ಅಂಥಾ ಅವಶ್ಯ ಕಾರ್ಯಗಳನ್ನು ಸೂಚಿಸುವುದಕ್ಕಾಗಿಯೇ ಈ ಸಮಾಜವು ಏರ್ಪಾಡಾಗಿದೆ ಎಂದು ನಾವು ನಂಬುತ್ತೇವೆ. ಅದು ಸೂಚಿಸಿರುವಂಥಾ ವಿಚಾರಗಳು ಎಷ್ಟುಮಾತ್ರಕ್ಕೂ ಆಚರಣೆಗೆ ತರತಕ್ಕವುಗಳಾಗಿಲ್ಲವೆಂದಾಗಲಿ, ಅವು ಈಗಲೂ ಇನ್ನಾರುವರುಷಗಳ ವರೆಗೂ ಸಾಧ್ಯವಾಗತಕ್ಕವುಗಳಲ್ಲವೆಂದಾಗಲಿ ಆಕ್ಷೇಪಣೆ ಮಾಡುವುದು ಸಹಜವಲ್ಲ. ಮುಖ್ಯವಿಚಾರವೇನೆಂದರೆ—ಈ ಸಲಹೆಗಳು ವಿವೇಕವಾದವುಗಳೇ? ಅವು ಯೋಗ್ಯವಾಗಿವೆಯೇ? ಈ ಸಂಸ್ಥಾನದ ಶ್ರೇಯಸ್ಸಿಗೆ ಖಂಡಿತವಾಗಿಯೂ ಸಹಕಾರಿಗಳಾಗಿರುವವೇ? ಅವು ಫಲದಾಯಕವಾದವುಗಳೆಂದು ಗೊತ್ತಾಗುವ ಪಕ್ಷಕ್ಕೆ ಗವರ್ನಮೆಂಟಿನವರು ತಾಮಸಮಾಡದೆ ಆ ಪೈಕಿ ಕೆಲವಂಶಗಳನ್ನು ರೂಢಿಸಲು ಕಾರ್ಯಾರಂಭಮಾಡುತ್ತಾರೆಂದು ನಿರೀಕ್ಷಿಸುತ್ತೇವೆ.

ಲಂಡನ್ ಪಟ್ಟಣದಿಂದ ನಮ್ಮ ಖಾತ್ರಿದಾರರು ಬರೆಯುವುದು.

ಇಂಗ್ಲಿಷ್ ಪಾರ್ಲಿಮೆಂಟು ಬರಖಾಸ್ತಾಯಿತು. ಕೆಲವು ಮಂತ್ರಿಗಳು ಮೆಡಿಟರೇನಿಯನ್ ಕಡಲಿಗೆ ಪ್ರಯಾಣಮಾಡಿರುತ್ತಾರೆ. ಇವರು ಅಲ್ಲಿರುವಾಗ್ಗೆ ಲಾರ್ಡ್ ಕಿಚ್ಚನರ್‌ಯವರ ಕೂಡ ಕಲೆತು ಆ ಪ್ರಾಂತ್ಯದಲ್ಲಿರುವ ಇಂಗ್ಲಿಷ್ ಹಡಗಿನ ಸೈನ್ಯ ಸಾಕೋ ಸಾಲದೋ ವಿಚಾರಮಾಡುವರು. ವರ್ತಮಾನ ಪತ್ರಿಕೆಗಳು ಈ ವಿಚಾರವಾಗಿ ನಾನಾ ಊಹಗಳನ್ನು ಪ್ರಕಟಿಸುತ್ತಲಿವೆ. ಆದರೆ ಅಪಾರವಾಗಿ ಹಣವನ್ನು ಖರ್ಚುಮಾಡಿ ಯುದ್ಧದ ಹಡಗುಗಳನ್ನು ಹೊಸಹೊಸದಾಗಿ ಕಟ್ಟಿಸುವ ಆಗತ್ಯವಿಲ್ಲದೇನೇ ಯೂರೋಪ್ ಖಂಡದಲ್ಲೂ, ಪ್ರಪಂಚದ ಎಲ್ಲಾ ಭಾಗಗಳಲ್ಲೂ ನಮ್ಮದು ಸಮಾಧಾನಗಳನ್ನು ನಲಿಗೊಳಿಸಿ ಕಾಪಾಡಿಕೊಂಡು ಬರುವಂಥಾ ಏರ್ಪಾಡುಗಳು ನಡೆಯುವವೆಂದು ನಿರೀಕ್ಷಿಸಲ್ಪಟ್ಟಿದೆ.

ಕೂಲಿಗಾರರವರಲ್ಲಿ ತುಂಬಾ ಕಳವಳವೂ ಅಸಮಾಧಾನವೂ ಪ್ರಾಪ್ತವಾಗಿದೆ. ದರ್ಜಿಯವರು ತಮ್ಮ ಕಸಬನ್ನು ನಡಿಸದೆ ಕೆಲವು ದಿನಗಳಿಂದ ಮುಷ್ಕರಮಾಡಿಕೊಂಡಿದ್ದಾರೆ. ಇದರ ದೆಸೆಯಿಂದ ನಾನು ಹೊಸ ಬಟ್ಟೆಗಳನ್ನು ಕೊಂಡುಕೊಳ್ಳುವುದು ಸಾಧ್ಯವಾಗಲಿಲ್ಲ. ಈಗೀಗ ನೋಡುವಲ್ಲಿ ಈ ಕಷ್ಟಕಾಲವು ಬೇಗನೆ ನಿವಾರಣೆಯಾಗಬಹುದೆಂದು ಕಾಣುತ್ತಿದೆ. ಅತ್ತಲಾಗಿ ಲಂಡನ್ ಪಟ್ಟಣದ ರೇವಿಗೆ ಹಡಗುಗಳಲ್ಲೂ ಹಡಗುಗಳಲ್ಲೂ ರಫ್ತಾಗಿ ಬರುವ ವ್ಯಾಪಾರಸರಕುಗಳನ್ನು ಅವುಗಳಿಂದ ಇಳಿಸಿ ತರುವಂಥಾ ಕೂಲಿಕಾರರೂ, ಗಾಡಿ ಹೊಡೆಯತಕ್ಕ ಕೂಲಿಕಾರರೂ ಕೆಲಸಮಾಡದೆ ನಿಂತುಬಿಟ್ಟರು ಇದನ್ನು ನೋಡಿ ಲಂಡನ್ ಪಟ್ಟಣದಲ್ಲಿ ವಾಸಮಾಡುವಂಥಾ ಪ್ರಜಾಕೋಟಿಗಳಿಗೆ ನಿತ್ಯಗಟ್ಟಲೆಯ ಆಹಾರ ಪದಾರ್ಥಗಳು ಎಲ್ಲಿ ದೊರಕದೆ ಕಷ್ಟ ಸಂಭವಿಸುವುದೋ ಎಂದು ಅನೇಕಾನೇಕರು ಭಯಪಡುತ್ತಿದ್ದರು. ಆದರೆ ಗವರ್ನಮೆಂಟಿನವರು ವಿಶೇಷವಾದ ಸಹಾಯವನ್ನು ಒದಗಿಸಿಕೊಟ್ಟು, ಸಮುದ್ರತೀರಗಳಲ್ಲಾಗಲಿ ಗಾಡಿಯ ಹಾದಿಗಳಲ್ಲಾಗಲಿ ಕೆಲಸಬಿಟ್ಟ ಕೂಲಿಕಾರರಿಂದ ಯಾವ ತೊಂದರೆಯೂ ನಷ್ಟವೂ ಪ್ರಾಪ್ತವಾಗದಂತೆ ಪೋಲೀಸ್ ಬಂದೋಬಸ್ತನ್ನು ಇಟ್ಟಿದ್ದಾರೆ. ಪೋಲೀಸ್ ಸವಾರರು ಹಡಗುಗಳಿಂದ ಪದಾರ್ಥಗಳನ್ನು ಇಳಿಸುವುದು, ಅವರೇ ಗಾಡಿಗೆಗಳಿಗೆ ಭರ್ತಿಮಾಡಿ ತಗೆದುಕೊಂಡು ಹೋಗಿ ಮಾರ್ಕೆಟ್ಟುಗಳಿಗೆ ಕೊಡುವುದು, ಈ ರೀತಿ ಮಾಡುತ್ತಾ ಬಂದಿರುವುದನ್ನು ಪ್ರಜೆಗಳು ನೋಡಿ ಆನಂದಪಡುತ್ತಾರೆ. ಈ ಕೆಲಸಗಳನ್ನು ಮಾಡುವಂಥಾ ಕೂಲಿಕಾರರ ಹೋರಾಟವು ಬಹುಮಟ್ಟಿಗೆ ಭಗ್ನವಾಗಿಹೋದದರಿಂದ ಅವರ ಯಜಮಾನರು ಕೂಡಲೇ ಅದನ್ನು ಸಮಾಧಾನಪಡಿಸುವರೆಂದು ನಿರೀಕ್ಷಿಸಬಹುದಾಗಿದೆ. ಈ ವಿಚಾರವಾಗಿ ಗವರ್ನಮೆಂಟಿನವರು ತನಿಖೆ ನಡಿಸಿರುತ್ತಾರೆ. ಅದರಲ್ಲಿ ಆ ಕೂಲಿಜನರ ಬೇಡಿಕೆಯು ಕಲವು ಭಾಗ ನ್ಯಾಯವಾಗಿದೆ ಎಂದೂ, ಯಜಮಾನರುಗಳು ಅದನ್ನು ನೆರವೇರಿಸಿಕೊಡಬೇಕಾದದ್ದು ಅವಶ್ಯವೆಂದೂ ಹೊರಬಿದ್ದಿದೆ.

ಲಂಡನ್ ಪಟ್ಟಣದಲ್ಲಿ ಎಲ್ಲಾ ತರದ ಪ್ರದರ್ಶನಗಳನ್ನೂ ಅಗಾಧವಾದ ರೀತಿಯಲ್ಲಿ ನಡಿಸಲು ಏರ್ಪಾಡಾಗಿರುತ್ತದೆ. ಮೊನ್ನೆ ನಡೆದ ಒಂದು ಪ್ರದರ್ಶನವು ಪರಮಾಶ್ಚರ್ಯಯುಕ್ತವಾದದ್ದಾಗಿತ್ತು ಅದರಲ್ಲಿ ವೃಕ್ಷಗಳೂ ಗಿಡಗಳೂ ಪ್ರದರ್ಶಿಸಲ್ಪಟ್ಟವು. ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ವರುಷಕ್ಕೊಂದಾವರ್ತಿ ದಿವ್ಯವಾದ ನಾನಾ ಜಾತಿಯ ಫಲವೃಕ್ಷಗಳ ಪ್ರದರ್ಶನವು ನಡೆಯುತ್ತದೆ. ಆದರೂ ಲಂಡನ್ ಪಟ್ಟಣದ ಚಲ್ಸಿ ಉದ್ಯಾನವನದೊಳಗೆ ಈ ಸಲ ಜರುಗಿದಂಥಾ ಅದ್ಭುತವಾದ ಪ್ರದರ್ಶನವು ಹಿಂದೆ ಯಾವಾಗಲೂ ಎಲ್ಲೂ ನಡೆದಿಲ್ಲವೆಂದು ಹೇಳುವರು. ಅಲ್ಲಿಟ್ಟು ತೋರಿಸಿದ ವೃಕ್ಷಗಳ ಮತ್ತು ಗಿಡಗಳ ವೈಖರಿಯು ವಿವರಿಸಲಶಕ್ಯವಾಗಿತ್ತು. ಸುಂದರವೂ ನೇತ್ರಾನಂದಕರವೂ ಆದ ನಾನಾ ಬಗೆಯ ವೃಕ್ಷಗಳನ್ನು ಉದ್ಯಾನಶಾಲಿಗಳಾದ ಅನೇಕ ಸಹಸ್ರ ಜನಗಳು ನೋಡಿ ಆನಂದಪಟ್ಟವರಾದರು. ಬಹು ವಿಶೇಷವಾದ ಆ ನೋಟದ ವೈಖರಿಯನ್ನು ವರ್ಣಿಸುವುದು ಸಾಧ್ಯವಲ್ಲ. ಚಕ್ರವರ್ತಿಯವರೂ ಮಹಾರಾಜ್ಞೀರವರೂ ದಯಮಾಡಿ ಈ ಪ್ರದರ್ಶನವನ್ನು ಸರಾಂಬರಿಸಿ ಸಂತುಷ್ಟರಾದರು

ದೊರೆಯವರೂ ಮಹಾರಾಜ್ಞೀರವರೂ ಪ್ರತಿ ಒಂದು ಒಳ್ಳೇ ಕಾರ್ಯಕ್ಕೂ ಸಹಾಯಮಾಡುವುದರಲ್ಲಿ ಯಾವಾಗಲೂ ಸಿದ್ಧರಾಗಿರುತ್ತಾರೆ; ಇದರಿಂದ ಅವರುಗಳ ಮೇಲೆ ಪ್ರಜೆಗಳಿಗೆ ಅಪರಿಮಿತವಾದ ಭಕ್ತಿವಿಶ್ವಾಸಗಳುಂಟಾಗಿವೆ ಪ್ರಭುದಂಪತಿಗಳು ಕಲವು ವೇಳೆ ಉದ್ಯಾನವನಗಳಲ್ಲಿ ಗಾಳಿಸವಾರಿ ದಯಮಾಡುವರು, ಸಾವಿರಾರು ಪ್ರಜೆಗಳು ಅವರ ಸಂದರುಶನವನ್ನು ಮಾಡಿ ಅವರನ್ನು ಸಂತೋಷಪಡಿಸಿ ತಾವೂ ಆನಂದಪಡುತ್ತಾರೆ. ಲಂಡನ್ ಪಟ್ಟಣದ ಚಲ್ಸಿ ಆಸ್ಪತ್ರೆಗೆ ಪ್ರಭುದಂಪತಿಗಳು ಕಳೆದ ವಾರ ಚಿತ್ತೈಸಿ, ಮುದುಕರಾಗಿಯೂ ಅಶಕ್ತರಾಗಿಯೂ ಇರುವಂಥಾ ಪೆನ್ಷನ್ ಸಿಪಾಯಿಗಳನ್ನು ಪರಾಂಬರಿಸಿ, ಅವರುಗಳ ಯೋಗಕ್ಷೇಮವನ್ನು ವಿಚಾರಿಸಿದರು. ಸ್ವದೇಶವನ್ನು ಕಾಪಾಡುವುದಕ್ಕೋ

ಸ್ವರ ಯುದ್ಧಭೂಮಿಯಲ್ಲಿ ಶತ್ರುಗಳ ಮೇಲೆ ನುಗ್ಗಿ ಕಾದಾಡಿ ಅಂಗಹೀನರಾಗಿ ಬಿದ್ದಿರುವಂಥಾ ಆ ದೇಶವತ್ಸಲರ ವಿಷಯದಲ್ಲಿ ಚಕ್ರವರ್ತಿ ದಂಪತಿಗಳು ವಿಶೇಷವಾದ ಪ್ರೀತಿಯನ್ನೂ ಕನಿಕರವನ್ನೂ ತೋರಿಸಿದರು

ಇಂಗ್ಲಿಷರಿಗೂ ಫ್ರೆಂಚರಿಗೂ ಪರಸ್ಪರ ಪ್ರೀತಿವಿಶ್ವಾಸಗಳನ್ನು ವೃದ್ಧಿಪಡಿಸುವುದಕ್ಕೆ ಒಂದು ನವೀನವಾದ ಮಾರ್ಗವನ್ನು ಹುಡುಕಿದಾರೆ. ಪಾಠಶಾಲೆಗಳಲ್ಲಿ ಓದುತ್ತಿರುವಂಥಾ ಸುಮಾರು ಎಂಟುನೂರು ಮಕ್ಕಳನ್ನು ಲಂಡನ್ ಪಟ್ಟಣದಿಂದ ಪ್ಯಾರಿಸ್ ಪಟ್ಟಣಕ್ಕೆ ಕರೆದುಕೊಂಡು ಹೋಗಿದ್ದರು ಫ್ರೆಂಚ್ ಪ್ರಜೆಗಳು ಈ ಅಪಾರವಾದ ಗಂಡು ಹೆಣ್ಣು ಮಕ್ಕಳ ದಂಡನ್ನು ಬಹು ಪ್ರೀತಿಯಿಂದಲೂ ಸತ್ಕಾರಪೂರ್ವಕವಾಗಿಯೂ ಸಹಿಸಿಕೊಂಡರು ಆ ಮಕ್ಕಳೆಲ್ಲಾ ಅವರ ಆತಿಥ್ಯವನ್ನು ಸ್ವೀಕರಿಸಿ, ಫ್ರಾನ್ಸಿನ ರಾಜಧಾನಿಯಾದ ಆ ಮಹಾನಗರದಲ್ಲಿ ನೋಡತಕ್ಕ ನೋಟಗಳನ್ನು ನೋಡಿ ಪರಮಾನಂದಪಟ್ಟು ಬಂದರು

ಇಂಗ್ಲಾಂಡಿನಲ್ಲಿ ಮತ್ತೆ ಮಳೆ ಬಾರದೆ ಪ್ರಜೆಗಳು ಕಷ್ಟಪಡುತ್ತಿದಾರೆ ಮೇ ತಿಂಗಳು ಬರದಿಂಗಳಾದರೂ ಬಹು ಮನೋಹರವಾಗಿರುತ್ತದೆ ಕಡೆಯಲ್ಲಿ ಮಳೆ ಬಂದೇ ಬಂತು ವ್ಯವಸಾಯಕರು ಆನಂದಪಡುತ್ತಾ ವರ್ಷಗಳಿಗೆ ಸುಸ್ವಾಗಮನವನ್ನು ಬಯಸುತ್ತಿದಾರೆ

ಜ್ಞಾಪಕದಲ್ಲಿಡತಕ್ಕ ಹತ್ತು ವೇದೋಕ್ತಿಗಳು.

1 ನೀವು ಕಳ್ಳತನ ಮಾಡಬೇಡಿರಿ, ಒಬ್ಬರಿಗೊಬ್ಬರು ಸುಳ್ಳು ಹೇಳಿ, ಮೋಸ ಮಾಡಬೇಡಿರಿ

2 ಸುಳ್ಳು ಸುದ್ದಿಯನ್ನು ಎತ್ತಬೇಡ, ಬಲಾತ್ಕಾರದ ಸಾಕ್ಷಿಯಾಗಿರುವತಕ್ಕ ದುಷ್ಟನಿಗೆ ಕೈಜೋಡಿಸಬೇಡ

3 ಲಂಚ ತಕ್ಕೊಳ್ಳಬೇಡ ಯಾಕೆಂದರೆ ಲಂಚವು ದೃಷ್ಟಿಯುಳ್ಳವನನ್ನು ಕುರುಡು ಮಾಡುತ್ತದೆ

ಚಾಡಿಗಾರನಾಗಿ ನಿನ್ನ ಜನರಲ್ಲಿ ನಡೆದುಕೊಳ್ಳಬೇಡ

ಕಳ್ಳತಕ್ಕಡಿ ದೇವರಿಗೆ ಅಸಹ್ಯವಾಗಿದೆ

ಇನ್ನು ವ್ಯರ್ಥವಾದ ಕಾಣಿಕೆಯನ್ನು ತರಬೇಡಿರಿ, ಧೂಪವು ನನಗೆ ಅಸಹ್ಯವಾಗಿದೆ ಅಮವಾಸೆ, ಸಭೆಯ ಕೂಟಗಳನ್ನು ನಾನು ಸಹಿಸೆನು, ತೊಳಕೊಳ್ಳಿರಿ, ನಿರ್ಮಲನಾಡಿಕೊಳ್ಳಿರಿ, ನಿಮ್ಮ ಕ್ರಿಯೆಗಳ ಕೆಟ್ಟತನವನ್ನು ನನ್ನ ಕಣ್ಣುಗಳ ಮುಂದಿನಿಂದ ತೊಲಗಿಸಿರಿ ಕೆಟ್ಟದ್ದನ್ನು ನಿಲ್ಲಿಸಿವಿಡಿರಿ, ಒಳ್ಳೇದನ್ನು ಮಾಡ ಕಲಿತುಕೊಳ್ಳಿರಿ, ನ್ಯಾಯವನ್ನು ಹುಡುಕಿರಿ, ಕುಗ್ಗಿದವನನ್ನು ಆದರಿಸಿರಿ, ದಿಕ್ಕಿಲ್ಲದವರಿಗೆ ನ್ಯಾಯತೀರಿಸಿರಿ ವಿಧವೆಗಳ ವ್ಯಾಜ್ಯವನ್ನು ನಡಿಸಿರಿ (ಎಂದು ದೇವರು ಹೇಳುತ್ತಾನೆ)

7 ಓ ಮನುಷ್ಯನೇ, ಉತ್ತಮವಾದದ್ದನ್ನು ದೇವರು ನಿನಗೆ ತಿಳಿಸಿದ್ದಾನೆ, ಹೌದು ನ್ಯಾಯವನ್ನು ಮಾಡುವದೂ, ಕೃಪೆಯನ್ನು ಪ್ರೀತಿಮಾಡುವದೂ, ನಿನ್ನ ದೇವರ ಸಂಗಡ ವಿನಯವಾಗಿ ನಡಕೊಳ್ಳುವದೂ, ಇದನ್ನೇ ಹೊರತು ದೇವರು ಇನ್ನೇನು ನಿನ್ನಿಂದ ಕೇಳುತ್ತಾನೆ?

8 ದೇವರು ಪಕ್ಷಪಾತಿಯಲ್ಲವೆಂಬುವ ಮಾತು ನಿಶ್ಚಯವೇ ಸರಿ ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಕೆಯಾಗಿದ್ದಾರೆ

9 ಪ್ರತಿಯೊಬ್ಬನ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದೆ ತೀರ್ಪುಮಾಡುವಾತನನ್ನು ನೀವು ತಂದೆಯೆಂದು ಕರೆಯುವವರಾಗಿರಲಾಗಿ, ಈ ಲೋಕದಲ್ಲಿ ನಿಮ್ಮ ಪ್ರವಾಸಕಾಲವನ್ನು ಭಯಭಕ್ತಿಯುಳ್ಳವರಾಗಿ ಕಳೆಯಿರಿ

10 ನೀತಿವಂತರೇ, ದೇವರಲ್ಲಿ ಉತ್ಸಾಹಧ್ವನಿಮಾಡಿರಿ ನೀತಿವಂತರು ಮೊರೆಯಿಡುತ್ತಾರೆ ಆಗ ದೇವರು ಕೇಳಿ ಅವರ ಎಲ್ಲಾ ಇಕ್ಕಟ್ಟುಗಳೊಳಗಿಂದ ಅವರನ್ನು ಬಿಡಿಸುತ್ತಾನೆ

ಒಳದೇಶದ ವೃತ್ತಾಂತಗಳು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಮಾಯಕೊಂಡ ಗ್ರಾಮದಲ್ಲಿ ಒಂದು ಔಷಧ ವೈದ್ಯಶಾಲೆಯನ್ನಿಟ್ಟು ಆದಾಯಮಾಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

* * *

ಶ್ರೀಮನ್ ಮಹಾರಾಜರವರು ನೀಲಗಿರಿಯಿಂದ ಈ ದಿನವೋ ನಾಳೆಯೋ ರಾಜಧಾನಿಗೆ ದಯಮಾಡುವರು ಯುವರಾಜರವರು ನೆನ್ನೆ ಬೆಳಿಗ್ಗೆ ನೀಲಗಿರಿಯಿಂದ ಚಿತ್ತೈಸುವವರಾಗಿದ್ದರು

* * *

ಸರ್ದಾರ್ ಎಂ ಕಾಂತರಾಜೇ ಅರಸಿನವರು ನೆನ್ನೆ ಹುಣಸೂರಿಗೆ ದಯಮಾಡಿ ಅಲ್ಲಿನ ಪ್ರಜೆಗಳ ಪ್ರಾರ್ಥನೆಯಂತೆ ಒಂದು ಪರಸ್ಪರ ಸಹಾಯಕಸಂಘವನ್ನು ಪ್ರಾರಂಭಮಾಡಿ ಬರುವವರಾಗಿದ್ದರು

* * *

ಮೈಸೂರು ಸಂಸ್ಥಾನದಲ್ಲಿ ರೈಲ್ವೆ ಬಿಡಾವಣೆ ಕಾರ್ಯಗಳನ್ನು ನಡಿಸುವುದಕ್ಕೆ ಸರ್ಕಾರದವರು ನೇಮಕಮಾಡಿರುವ ಮೆ॥ ಟಿ ವಿಲ್ ಎಂಬವರು ಬೆಂಗಳೂರಿಗೆ ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ

* * *

ಕೋಲಾರದ ಮುನ್ಸಿಫ್ ಮೆ॥ ಎಂ ನರಸಪ್ಪಯನವರು ಮೂರು ವಾರಗಳ ರಜಾಪಡೆದುಕೊಂಡಿರುವ ಕಾರಣ ಜುಡಿಷಲ್ ಪ್ರೊಬೇಷನರ್ ಮೆ॥ ಎಚ್ ಕೃಷ್ಣಸ್ವಾಮಿಯವರನ್ನು ಮುನ್ಸಿಫ್ ಕೆಲಸಕ್ಕೆ ವರ್ಗಮಾಡಿದಾರೆ

* * *

ಶ್ರೀರಂಗಪಟ್ಟಣದಲ್ಲಿದ್ದ ಅಡ್ವೋಕೇಟ್ ಮೆ॥ ಎಂ ರಾಮಣ್ಣನವರು ಕಳೆದ ಸೋಮವಾರ ಸಾಯಂಕಾಲ ಅಕಸ್ಮಾತ್ತಾಗಿ ಎದೆನೋವಿನಿಂದ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ತುಂಬಾ ಸಭ್ಯರಾಗಿಯೂ, ದೊಡ್ಡ ಸಂಸಾರಿಗಳಾಗಿಯೂ ಇದ್ದರು

* * *

ಶ್ರವಣಬೆಳ್ಗೊಳದ ಯೂನಿಯನ್ ಪಂಚಾಯತಿ ಮೆಂಬರುಗಳ ಅಭಿಮತವನ್ನು ಅಂಗೀಕರಿಸಿ ಸರ್ಕಾರದವರು ಆ ಊರಿನಲ್ಲಿ ಕುರಿಗಳನ್ನು ಕೊಲ್ಲುವುದಕ್ಕಾಗಲಿ, ಮಾಂಸದ ಅಂಗಡಿಗಳನ್ನು ಇಡುವುದಕ್ಕಾಗಲಿ ಅವಕಾಶ ಕೊಡಬೇಕಾದ ಅಗತ್ಯವಿಲ್ಲವೆಂದು ಹುಕುಂ ಕೊಟ್ಟಿದಾರೆ

ಸರ್ ಸ್ಟಾನ್ಲಿ ಇಸ್ಮೆಯವರು ಈ ತಿಂಗಳ ಆಖೈರಿಗೆ ಚೀಫ್ ಜಡ್ಜ್ ಕೆಲಸವನ್ನು ಬಿಟ್ಟುಬಿಡುತ್ತಾರಾದ್ದರಿಂದ ನಮ್ಮ ಸರ್ಕಾರದವರು ಅವರ ಸ್ಥಾನಕ್ಕೆ ನೆಲ್ಲೂರು ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜರಾಗಿರುವ ಮೆ॥ ಇ ಎಚ್ ವಾಲೆಸ್, ಐ ಸಿ ಎಸ್ ಯವರನ್ನು ನೇಮಕಮಾಡಿದಾರೆಂದು ತಿಳಿಯುವುದು

* * *

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್ ಮೆ॥ ಟಿ ಪರಮಶಿವ ಅಯ್ಯರವರ 16 ವರುಷದ ಬಾಲಕನು ತಿನ್ನವೆಲ್ಲಿಯಲ್ಲಿ ನಡೆದ ಮದುವೆಗೆ ಹೋಗಿದ್ದು ತಾಂಬ್ರಪರ್ಣಿ ನದಿಯಲ್ಲಿ ಅಕಸ್ಮಾತ್ತಾಗಿ ಪ್ರಾಣ ಕಳೆದುಕೊಂಡನೆಂದು ಕೇಳಿ ವಿಷಾದಿಸುತ್ತೇವೆ ಈ ಬಾಲಕನು ಬಹಳ ಬುದ್ಧಿವಂತನಾಗಿಯೂ, ಅಭಿವೃದ್ಧಿಗೆ ಬರತಕ್ಕವನಾಗಿಯೂ ಇದ್ದನು

* * *

ನಮ್ಮ ಮಹಾರಾಜರವರ ಮಿಲಿಟರಿ ಸೆಕ್ರಿಟರಿಯಾಗಿರುವ ಲೆಫ್ಟಿನೆಂಟ್ ಕರ್ನಲ್ ಜೋನ್ಸ್‌ಯವರು ಮೂರು ತಿಂಗಳ ಪ್ರಿವಿಲೆಜ್ ರಜಾ ಪಡೆದುಕೊಂಡಿದಾರೆ ಇವರು ಸೀಮೆಗೆ ಹೋದ ಮೇಲೆ ವಾಪಸು ಬರುವವರಾಗಿಲ್ಲ ನಮ್ಮ ಶ್ರೀಮನ್ ಯುವರಾಜರವರೇ ಮುಂದಿನ ಸೆಪ್ಟಂಬರ್ ಲಾಗಾಯತು ಮಹಾರಾಜರವರಿಗೆ ಮಿಲಿಟರಿ ಸೆಕ್ರಿಟರಿಗಳಾಗುತ್ತಾರೆ

* * *

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್‌ನಲ್ಲಿ ಕಳೆದ ತಾ 31ರಲ್ಲಿ 3,000 ರೂಪಾಯಿನ ಬೆಳ್ಳಿ ಇದ್ದ ಒಂದು ರೈಲ್ವೆ ಪಾರ್ಸಲು ಕಳುವಾಯಿತು ಈಚೆಗೆ ಕಳೆದ ಭಾನುವಾರ ರಾತ್ರಿ ಟಿಕೇಟ್ ಮಾರುವ ಕೊಠಡಿಯೊಳಗೆ ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟಿದ್ದ 650 ರೂಪಾಯಿ ಕಳುವಾಗಿರುತ್ತದೆ ಪೋಲೀಸಿನವರು ಈ ವಿಶೇಷವಾದ ಕಳ್ಳತನಗಳನ್ನು ಪತ್ತೆಮಾಡುವುದರಲ್ಲಿ ಆಸಕ್ತರಾಗಿದಾರೆ

* * *

ಈ ತಿಂಗಳು ತಾ 7ಕ್ಕೆ ಆಖೈರಾದ ಒಂದು ವಾರದಲ್ಲಿ ಸಂಸ್ಥಾನಾದ್ಯಂತ 206 ಸ್ಥಳಗಳಲ್ಲಿ ವಾಂತಿಭೇದಿ ಉಪದ್ರವು ವ್ಯಾಪನೆಯಾಗಿತ್ತು 859 ಜನರಿಗೆ ಈ ಉಪದ್ರ ತಗಲಿ 180 ಮರಣಗಳಾಗಿರುತ್ತವೆ ಅದಕ್ಕೆ ಹಿಂದಿನ ವಾರ 1,131 ಜನರಿಗೆ ತಗಲಿದ್ದರಲ್ಲಿ 611 ಜನರು ತೀರಿಹೋದರು ಈ ರೋಗಕ್ಕೆ ಬಹು ಸುಲಭವಾದ ಚಿಕಿತ್ಸೆ ಮುಂತಾದದ್ದನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ

* * *

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಪಿ ಶ್ರೀನಿವಾಸರಾಯರೂ, ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಎಚ್ ಸೀತಾರಾಮಯ್ಯನವರೂ, ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ॥ ಎನ್ ಸುಬ್ಬರಾಯರೂ, ಬೆಂಗಳೂರು ಸರ್ವೇ ಇಲಾಖೆಯ ಅ॥ ಸೂಪರಿಂಟೆಂಡೆಂಟ್ ಮೈ ಶ್ರೀನಿವಾಸ್‌ಯವರೂ ಜೂಲೈ ಪ್ರಾರಂಭದಿಂದ ಪೆನ್ಷನ್ ಪಡೆದು ಕೆಲಸದಿಂದ ನಿವೃತ್ತರಾಗುವರೆಂದು ತಿಳಿದುಬಂದಿದೆ

* * *

ತುಂಕೂರು ಡೆಪ್ಯುಟಿ ಕಮಿಷನರ್‌ರಾಗಿ ನೇಮಿಸಲ್ಪಟ್ಟಿರುವ ಮೆ॥ ಸಿ ಎಸ್ ಬಾಲಸುಂದರಂ ಅಯ್ಯರವರಿಗೆ ಬೆಂಗಳೂರು ಸಿಟಿ ಇನ್ಸ್ಟಿಟ್ಯೂಟಿನಲ್ಲಿ ದೊಡ್ಡ ಮನುಷ್ಯರು ಕಳೆದ ಭಾನುವಾರ ದಿವ್ಯವಾದ ಔತನವನ್ನು ಕೊಡುತ್ತಾ, ಅವರಲ್ಲಿ ತಮಗಿರುವ ಪ್ರೀತಿಗೌರವಗಳನ್ನು ಪ್ರಕಾಶಪಡಿಸಿದರು ಮೆ॥ ಅಯ್ಯರವರು ಸದ್ಗುಣಶೀಲರಾಗಿಯೂ, ಪರಹಿತಚಿಂತಕರಾಗಿಯೂ ಇರೋಣದರಿಂದ ಇವರು ಬೇಗನೆ ತುಂಕೂರಿನ ಪ್ರಜಾ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಳ್ಳುವರೆಂದು ನಂಬುತ್ತೇವೆ

* * *

ಬರೋಡಾ ಮಹಾರಾಜರವರು ಸಂಸಾರ ಸಮೇತ ಮುಂದಿನ ವಾರ ರಾಜಧಾನಿಗೆ ದಯಮಾಡಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವವರಾಗಿದಾರೆ ಇವರು ಇಳುಕೊಳ್ಳುವುದಕ್ಕೆ ಯುವರಾಜರವರು ಚಾಮುಂಡಿ ವಿಹಾರವೆಂಬ ತಮ್ಮ ಭವನವನ್ನು ಬಿಟ್ಟುಕೊಡುವರು ಗಾಯಕವಾಡ ಮಹಾರಾಜರವರು ಮುಂದಿನ ತಿಂಗಳ ಮೊದಲನೆಯ ವಾರ ಬಂಡೀಪುರ ಕಾಕನಕೋಟೆ ಜಂಗಲುಗಳಿಗೆ ಹೋಗಿ 8-10 ದಿನ ಷಿಕಾರಿ ಮಾಡಿಕೊಂಡು ಬರುತ್ತಾರೆಂದು ತಿಳಿದುಬಂದಿದೆ

* * *

ಚಿಕ್ಕಜಾಜೂರ್ ಸ್ಟೇಷನ್‌ನಿಂದ ಚಿತ್ರದುರ್ಗಕ್ಕೆ 21 ಮೈಲಿ ರೈಲ್ ರಸ್ತೆ ಹಾಕಿಸುವುದಕ್ಕೆ ಎಂಟೂವರೆ ಲಕ್ಷ ರೂಪಾಯಿ ಖರ್ಚಾದೀತೆಂದೂ, ಅದರಲ್ಲಿ ಸಾಲೀಯಾನಾ 60,000 ರೂಪಾಯಿ ಉತ್ಪತ್ತಿಯಾಗಿ 35,000 ರೂಪಾಯಿ ಆದಾಯವಾಗಬಹುದೆಂದೂ ಅಂದಾಜು ಆಗಿದೆ ಡೆಪ್ಯುಟಿ ಕಮಿಷನರವರು ಈ ಹಣದಲ್ಲಿ ಕೆಲವು ಭಾಗವನ್ನು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕೊಡಿಸುತ್ತೇವೆಂದು ದಿವಾನರವರಿಗೆ ಬರೆದಿದಾರೆ ಈ ರೈಲ್ ರಸ್ತೆಯ ಸರ್ವೆ ಕೆಲಸ ಮುಂತಾದದ್ದಕ್ಕೆ ಸರ್ಕಾರದಿಂದ 8,000 ರೂಪಾಯಿ ಸ್ಯಾಂಕ್ಷನ್ ಆಗಿದೆ

* * *

ತಾ 21ನೇ ಸೋಮವಾರ ಮಧ್ಯಾಹ್ನ ನಮ್ಮ ಮಹಾರಾಜರವರ ಯೂರೋಪಿಯನ್ ಅತಿಥಿಗಳು ಸ್ಪೆಷಲ್ ರೈಲಿನಲ್ಲಿ ರಾಜಧಾನಿಗೆ ಬರುವರು ಅವರ ಸಂತೋಷಾರ್ಥವಾಗಿ ತಾ 25ನೇ ಮಂಗಳವಾರದಿಂದ ಜೂಲೈ ತಾ 1ರ ವರೆಗೆ ರಾಜಧಾನಿಯ ಚಾಮುಂಡಿಪೆಟ್ಟದ ಮೈದಾನದಲ್ಲಿ ಕುದುರೆ ಜೂಜುಗಳೂ, ಪೋಲೋ ಪಂದ್ಯಗಳೂ ನಡೆಯುವವು ಅವರ ಆತಿಥ್ಯಕ್ಕಾಗಿ ಗವರನ್ಮೆಂಟ್ ಹೌಸ್ ಬಂಗಲೆಯಲ್ಲಿ ದಿವ್ಯವಾದ ಏರ್ಪಾಡುಗಳು ಮಾಡಲ್ಪಟ್ಟಿವೆ ಈ ಸಲ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ಅವರ ಅಡಿಗೆಗಳನ್ನೆಲ್ಲಾ ತಯಾರುಮಾಡುವುದಕ್ಕೆ ನವೀನವಾದ ಒಲೆ ಮೊದಲಾದ ಉಪಕರಣಗಳನ್ನು ಇಡಿಸುತ್ತಿರುವರು. ಈ ಸಲ ಸುಮಾರು 100 ಮಂದಿ ಯೂರೋಪಿಯನ್ ದೊರೆಸಾನಿಗಳೂ ಬರುವವರಾಗಿದಾರೆ

* * *

ಅರಮನೆ ವಿದ್ಯುಚ್ಛಕ್ತಿಯ ಅಧಿಕಾರಿಯಾದ ಮೆ॥ ಆರ್ ಜಿ ಹಾರ್ಡೇಕರ್‌ಯವರು ತಮ್ಮ ಎರಡನೇ ಕುಮಾರಿಯನ್ನು ಕೆಲವು ದಿನಗಳ ಹಿಂದೆ ರಾಜಧಾನಿಯ ಸ್ಟೇಷನ್‌ಮಾಸ್ಟರಾಗಿದ್ದ ಮೆ॥ ಎಡ್ವರ್ಡ್ಸ್‌ಯವರ ಕುಮಾರನಾದ ಈಗ ಬೊಂಬಾಯಿ ಪಟ್ಟಣದ ಪೋಲೀಸ್ ಇಲಾಖೆಯ ನೌಕರನಾಗಿರುವ ಮೆ॥ ಎಚ್ ಎಡ್ವರ್ಡ್ಸ್ ಎಂಬಾತನಿಗೆ ಕೊಟ್ಟು ಮೊನ್ನೆ ಸೋಮವಾರ ಮಧ್ಯಾಹ್ನ ರಾಜಧಾನಿಯಲ್ಲಿ ವಿವಾಹಮಾಡಿದರು ಹೊಸ ಗಂಡು ಹೆಣ್ಣನ್ನು ಅರಮನೆಯ ಜನಾನಿಯವರು ದೇವಸ್ಥಾನದಿಂದ ಕರೆಸಿಕೊಂಡು, ಅವರಿಗೆ ಬೆಲೆಯುಳ್ಳ ಒಡವೆ, ಹಣ್ಣುಹಂಪಲು ಮುಂತಾದವುಗಳನ್ನು ಕೊಟ್ಟರು ನೂತನ ದಂಪತಿಗಳು ಅರಮನೆಯಿಂದ ಡಾಕ್ಟರ ಬಂಗಲೆಗೆ ಬಂದಿಳಿದರು ಅಲ್ಲಿ ಸೇರಿದ್ದ ರಾಜಧಾನಿಯ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರೂ ದಂಪತಿಗಳನ್ನು ಆಶೀರ್ವದಿಸಿದರು ಬಂಧುಗಳೂ, ಇಷ್ಟಮಿತ್ರರೇ ಮೊದಲಾದವರೂ ಗಂಡು ಹೆಣ್ಣಿಗೆ ಉಪಯುಕ್ತವಾದ ಅನೇಕ ಬೆಲೆಯುಳ್ಳ ಪದಾರ್ಥಗಳನ್ನು ಕೊಟ್ಟರು ನೂತನ ದಂಪತಿಗಳು ನೆನ್ನೆ ಬೊಂಬಾಯಿಗೆ ತೆರಳುವವರಾಗಿದ್ದರು

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಮಗಳೂರು, ಕಡೂರು ತಾಲೂಕು ಹಿರಿಯೂರು, ಹರೀಕೆರೆ ತಾಲೂಕು ಕೋರನಹಳ್ಳಿ, ಈ ಸ್ಥಳಗಳಲ್ಲಿ ಅಂಟುಜಾಡ್ಯವಿದೆ ಎಂದು ತಿಳಿಯತಕ್ಕದ್ದು

ಮೆ॥ ಗುಲಾಂ ಮೊಹದೀನ್ ಸಾಬರನ್ನು ಹುಣಸೂರು ಟೌನ್ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ನೇಮಕಮಾಡಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ॥ ಬಿ ಭೀಮರಾಯರಿಗೆ ಕೊಟ್ಟಿದ್ದ ಎರಡು ತಿಂಗಳು ಇಪ್ಪತ್ತು ಮೂರು ದಿನಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದದ್ದರಿಂದ ರದ್ದುಮಾಡಿದೆ

ತುಂಕೂರು ಡಿಸ್ಟ್ರಿಕ್ಟ್ ಅ॥ ಡೆಪ್ಯುಟಿ ಕಮಿಷನರ್ ಮೆ॥ ಎಂ ಶಾಮರಾಯರನ್ನು ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರಾಗಿ ಬದಲಿ ನೇಮಕಮಾಡಿದೆ

ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿ ಮೆ॥ ಸಿ ಎಸ್ ಬಾಲಸುಂದರಂ ಅಯ್ಯರವರನ್ನು ತುಂಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾಗಿ ನೇಮಿಸಿದೆ

ಡಾಕ್ಟರ್ ಲೆಸ್ಲಿ ಸಿ ಕೋಲ್‌ಮನ್‌ರವರಿಂದ ವ್ಯವಸಾಯ ಇಲಾಖೆಯ ಛಾರ್ಜನ್ನು ಮೆ॥ ಎಚ್ ವಿ ಕೃಷ್ಣಯ್ಯನವರು ಮೇ ತಾ 28 ರಲ್ಲಿ ವಹಿಸಿಕೊಂಡಿದಾರೆ

ಮೊಳಕಾಲ್ಮುರು ತಾಲೂಕು ಆಕ್ಟಿಂಗ್ ಅಮಲ್ದಾರ್ ಮೆ॥ ಕೆ ವೇಣುಗೋಪಾಲ ಅಯ್ಯಂಗಾರ್ರಿಗೆ ಏಪ್ರೈಲ್ ತಾ 10 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಇವರ ರಜಾ ಕಾಲದಲ್ಲಿ ಶಿರಸ್ತೇದಾರರು ತಾಲೂಕ್ ಛಾರ್ಜನ್ನು ವಹಿಸಿದ್ದರು

ತಾಲ್ಲೋಕು ವರ್ತಮಾನಗಳು.

ಹೊಳಲ್ಕೆರೆಸಿಕ್ಕಪುರ ——ಇಲ್ಲಿನ ದೊಡ್ಡ ಹೊಲಗೇರಿಯಲ್ಲಿ ಈ ತಿಂಗಳು 4 ರಿಂದ ಕಾಲರಾ ಉಪದ್ರ ಸಂಭವಿಸಿ 30 ಜನರ ಪರಿಯಂತರ ಮೃತರಾದರು ಅಷ್ಟರೊಳಗೆ ಮಳೆ ಬಂದದ್ದರಿಂದ ನಿಂತುಹೋಯಿತು ಈ ಕಾಲದಲ್ಲಿ ಸೋನೆ ಮಳೆ ಬರಬೇಕಾಗಿತ್ತು ಆದರೂ ಸರಿಯಾದ ಮಳೆ ಆಗಲೇ ಇಲ್ಲ ರೈತರು ಕೆಲವು ಕಡೆ ಗದ್ದರಾಗಿ ಪೈರನ್ನು ನೆಟ್ಟಿದಾರೆ ಮಳೆ ಇನ್ನೂ ಬರಬೇಕಾಗಿದೆ ಊರಿನಲ್ಲಿಯೂ ಹಳ್ಳಿಗಳಲ್ಲಿಯೂ ಚಳಿ ಜ್ವರವೂ ಕಣ್ಣು ನೋವೂ ಜಾಸ್ತಿಯಾಗಿದೆ. ಅಕ್ಕಿ ರೂ 1ಕ್ಕೆ 7½-8 ಸೇರು, ರಾಗಿ 15 ಸೇರು ಮಾರಾಟವಾಗುತ್ತ — ನಮ್ಮ ಡಾಕ್ಟರ್ ಮೆ॥ ಟಿ ರಾಮಚಂದ್ರರಾಯರು ಕಾಲರಾ ಇರತಕ್ಕ ಗ್ರಾಮಗಳಲ್ಲಿ ಸಂಚರಿಸಿ ರೋಗಿಗಳನ್ನು ಬಹಳ ಚೆನ್ನಾಗಿ ಉಪಚರಿಸುತ್ತಾರೆ ನಾಗಲಾಪುರ ಗ್ರಾಮಕ್ಕೆ ಹೋಗಿ ಚಳಿ ಜ್ವರದಿಂದ ಬಹುಕಾಲ ಕಷ್ಟಪಡುತ್ತಿದ್ದ 30 35 ಜನರಿಗೆ ಇನ್‌ಜಕ್ಷನ್ ಎಂಬ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಎಲ್ಲರನ್ನೂ ಗುಣಮಾಡಿದ್ದು ಬಹಳ ವಿಶೇಷವಾದದ್ದು ಹಳ್ಳಿ ಜನರಿಗೆ ಈ ಚಿಕಿತ್ಸೆಯ ಮೇಲೆ ನಂಬಿಕೆ ಉಂಟುಮಾಡಿದ್ದು ಸ್ತೋತ್ರಾರ್ಹವಾಗಿದೆ ಸರ್ಕಾರದವರು ಆಸ್ಪತ್ರೆಯ ಡಾಕ್ಟರಿಗೆ ಅಲೋಯನ್ಸು ಕೊಡುವುದಾದರೆ ದೂರವಾದ ಗ್ರಾಮಗಳಲ್ಲೂ ಅವರು ಸಂಚರಿಸಿ ಅನೇಕ ರೋಗಿಗಳಿಗೆ ಉಪಕಾರಮಾಡಬಹುದು ಸರ್ಕಾರದವರ ಈಗಿನ ಉಪಕಾರಕ್ಕಿಂತಲೂ ಇದು ದೊಡ್ಡದಾಗುವುದು ನಮ್ಮ ಅಮಲ್ದಾರರು ಖಾಯಿಲೆಯಾಗಿರುವ ರೋಗಿಗಳಿಗೆ ಉಂಟಾಗುವ ಅನಾನುಕೂಲಗಳನ್ನು ಹೋಗಲಾಡಿಸುವದರಲ್ಲಿ ಬಹುಮುತುವರ್ಜಿ ವಹಿಸಿರುತ್ತಾರೆ —ಮ್ಯುನಿಸಿಪಲ್ ಲಾಂದ್ರಗಳು ಚೆನ್ನಾಗಿ ಉರಿಯುತ್ತವೆ ಕೆಲವು ಕಡೆ ಲಾಂದ್ರಗಳಿಲ್ಲದೆ ಕತ್ತಲಲ್ಲಿ ತಿರುಗಾಡುವ ಜನರು ಡಿಂಕಿಹೊಡೆಯುತ್ತಾರೆ ಅಂಥಾ ಬೀದಿಗಳಲ್ಲಿ ಕಳ್ಳರುಗಳಿಗೆ ಅನುಕೂಲ ಈ ವಿಷಯವನ್ನು ಅನೇಕವೇಳೆ ತಿಳಿಸುತ್ತಾ ಬಂದಾಗ್ಯೂ ಇದುವರಿಗೆ ಜಾರಿಗೆ ಬರಲಿಲ್ಲ ಈಗಲಾದರೂ ದಯಾಳುಗಳಾದ ನಮ್ಮ ಅಮಲ್ದಾರರು ಗಮನಕ್ಕೆ ತಂದು ಈ ಅನಾನುಕೂಲವನ್ನು ಹೋಗಲಾಡಿಸಿದರೆ ಜನರಿಗೆ ಬಹಳ ಉಪಕಾರವಾದೀತು ——ಊರಿನಲ್ಲಿ ಹಂದಿಗಳ ಕಾಟ ಜಾಸ್ತಿಯಾಗಿದೆ ಅವು ಊರೊಳಗೆ ಸಂಚರಿಸದಂತೆ ಸರ್ಕಾರದವರ ಹುಕುಂ ಆದರೆ ಜನರಿಗೆ ಕ್ಷೇಮವಾದೀತು

ಅರಕಲಗೂಡು ——ಈ ಪ್ರಾಂತ್ಯದ ಕೆಲವು ಭಾಗಗಳಲ್ಲಿ ವರ್ಷವೃಷ್ಟಿಯು ಚೆನ್ನಾಗಿದ್ದರೂ ಇನ್ನೂ ಕೆಲವು ಭಾಗಗಳಲ್ಲಿ ಮಳೆಗಳಾಗದೆ ಸಂಕಟವನ್ನುಂಟುಮಾಡಿದೆ ಬಡವರಾದರೋ ತಮ್ಮ ಉದರ ಪೋಷಣೆಗೋಸ್ಕರ ನಾನಾ ಪ್ರಯತ್ನಗಳನ್ನು ಮಾಡುತ್ತಿರುವರು ಕೆಲವೆಡೆಗಳಲ್ಲಿ ವಾಂತಿ ಭೇದಿ ಉಪದ್ರವು ಹುಟ್ಟಿ ಅನೇಕರನ್ನು ಕೊಲ್ಲುತ್ತಿದೆ ಮೂಢಜನರು ತಮ್ಮಲ್ಲಿದ್ದ ಹಣಕಾಸು, ಕೋಳಿ, ಕುರಿ ಇವೇ ಮುಂತಾದವುಗಳನ್ನು ಕಳೆದುಕೊಂಡಿದ್ದರೂ ಆ ಮಾರಿಯು ಇನ್ನೂ ಶಾಂತವಾಗಿಲ್ಲ ಈ ತಾಲೂಕಿಗೆ ಸೇರಿದ ಉಯ್ಯಂಗಾಲ, ಅಣೆನಳ್ಳಿ, ಪುರ, ಹರದೂರು ಹೆಬ್ಬಾಳೆಯ ಹೊಲಗೇರಿ ಇವೇ ಮುಂತಾದ ಇನ್ನೂ ಅನೇಕ ಗ್ರಾಮಗಳಲ್ಲಿ ಈಗೀಗ ಶಾಂತವಾಗುತ್ತಲಿದೆ ಹೆಬ್ಬಾಲೆ ಹೊಲಗೇರಿಯಲ್ಲಿದ್ದಾಗ ನಮ್ಮ ಅಮಲ್ದಾರರೂ, ಡಾಕ್ಟರೂ, ಶೇಕ್ದಾರರೂ ಈ ಊರಿನ ಒಳಕ್ಕೆ ಪ್ರವೇಶಿಸಿ ಹಲವು ರೀತಿಯಾಗಿ ಅವರಿಗೆ ಬುದ್ಧಿ ಹೇಳಿ ಔಷಧಗಳನ್ನು ಕೊಟ್ಟರು ಇವರಲ್ಲಿ ಅಮಲ್ದಾರರು ತಮಗೋಸ್ಕರ ಸ್ವಂತವಾಗಿ ಮಂಗಳೂರಿನಿಂದ ತರಿಸಿದ್ದ ಔಷಧಗಳಲ್ಲಿ ಕೆಲವನ್ನು ಅಲ್ಲಿನ ಉಪಾಧ್ಯಾಯರ ವಶಕ್ಕೆ ಕೊಟ್ಟು ಕೊಡತಕ್ಕ ವಿಧಾನವನ್ನು ತಿಳಿಸಿ ಹೋದರು ಇವರು ಬರುವುದಕ್ಕೆ ಮುಂಚೆಯೇ ಇಬ್ಬರು ಸತ್ತಿದ್ದರು ಪ್ರತ್ಯೇಕವಾಗಿ ತಗಲಿದ 6 ಜನರ ಪೈಕಿ ಒಬ್ಬನು ತೀರಿಹೋದನು ಉಳಿದ 4 ಜನರು ಬದುಕಿಕೊಂಡರು ಇಂಥಾ ಕಷ್ಟಕಾಲದಲ್ಲಿ ಜನರನ್ನು ಧೈರ್ಯಪಡಿಸಿ ಅವರನ್ನು ಔಷಧೋಪಚಾರಗಳಿಂದ ಸತ್ಕರಿಸುವ ಮಹನೀಯರು ಸಿಕ್ಕುವುದು ಅತಿ ದುರ್ಲಭ ——ಊರಿನಲ್ಲಿ ಸಬ್‌ರೆಜಿಸ್ಟ್ರಾರ್, ಅಮಲ್ದಾರ್, ವಂಕಟಸುಬ್ಬಶಾಸ್ತ್ರಿಗಳೂ ಆಗಾಗ್ಗೆ ಒಂದೊಂದು ಕೂಟವನ್ನೇರ್ಪಡಿಸಿ ಜನರಿಗೆ ಭಗವದ್ಗೀತೆಯಲ್ಲಿ ಕೆಲವು ಅಂಶಗಳನ್ನೂ, ನಮ್ಮವರು ಏಳಿಗೆಗೆ ಬರಬೇಕಾಗಿದ್ದರೆ ಯಾವ ಯಾವ ಸಾಧನಗಳನ್ನು ಮಾಡಬೇಕು, ಜನರಲ್ಲಿ ಪರಸ್ಪರ ಮೈತ್ರೀಭಾವವು ಇರಬೇಕು, ಆತ್ಮವಿಚಾರ ಎಂಥದೇ ಮುಂತಾದ ಅನೇಕ ವಿಷಯಗಳಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವುದನ್ನು ಕೇಳಿ ಸಂತೋಷಿಸಬೇಕಾಗಿದೆ ——ಇಲ್ಲಿನ ಕೆರೆಯ ದೊಡ್ಡ ಸೇತುವೆಯನ್ನು ಕಟ್ಟಲು ಉಪಕ್ರಮಿಸಿರುವುದು ಅನುಕೂಲವಾಗಿದೆ ಈ ಕೆರೆಯಲ್ಲಿ ಕೋಟಿಯವರು ನೀರು ಮೊಗೆಯುವ ಕಡೆ ಬಹಳ ಸೊಪ್ಪು ಸೆದೆ ಬೆಳೆದು ಇರುವುದನ್ನು ಹೇಗಾದರೂ ಮಾಡಿ ತೆಗಿಸಿದರೆ ಬಹಳ ಕ್ಷೇಮವಾದೀತು ——ಅಲ್ಲಿನ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯ ಫಲಿತಾಂಶವು ಅಷ್ಟು ತೃಪ್ತಿಕರವಾಗಿಲ್ಲದ್ದರಿಂದ ಜನರು ನಾನಾ ರೀತಿಯಾಗಿ ಮಾತನಾಡಿಕೊಳ್ಳುತ್ತಲಿದಾರೆ

ಕ್ಯಾಂಬೋಡಿಯಾ ಹತ್ತಿ

ಇದನ್ನು ಬೆಳೆಯುವ ಕ್ರಮ

ಈ ಜಾತಿ ಹತ್ತಿಯು ಸ್ವಲ್ಪ ಹೆಚ್ಚು ಕಡಮೆಯಾಗಿ ನಮ್ಮ ಸೀಮೆಯಲ್ಲಿ ಈಗ ಬೆಳೆಯುತ್ತಿರುವ ದೊಡ್ಡ ಹತ್ತಿಯಂತೆಯೇ ಇರುತ್ತದೆ ಗಿಡದ ಆಕಾರವೂ, ಬೆಂಡೆಗಳ ಬಣ್ಣವೂ, ಎಲೆ ಹುವ್ವು ಮುಂತಾದವುಗಳೆಲ್ಲಾ ದೊಡ್ಡ ಹತ್ತಿ ಗಿಡದಂತೆಯೇ ಇರುತ್ತವೆ ದೊಡ್ಡ ಹತ್ತಿಯನ್ನು ಬೆಳೆಯುವಂತೆ ಇದನ್ನು ಕೂಡ ಮುಸ್ಕಿ, ತರಿ, ಬಾಗಾಯ್ತು ಜಮೀನುಗಳಲ್ಲಿಯೂ ಬೆಳೆಯಬಹುದು ದಕ್ಷಿಣ ಮಹಾರಾಷ್ಟ್ರದಲ್ಲಿನ ಎರೇ ಜಮೀನುಗಳಲ್ಲಿ ಮುಸ್ಕಿ ಪೈರಾಗಿಯೇ ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಯುತ್ತಾರೆ ಮದ್ರಾಸ್ ಆಧಿಪತ್ಯದ ದಕ್ಷಿಣ ಪ್ರಾಂತ್ಯಗಳಲ್ಲಿ ಮಾತ್ರ ನೀರಿನ ಆಸರೆಯಿಂದ ಬಾಗಾಯ್ತು ಬೆಳೆಯಂತೆ (ತರಿ ಫಸಲಿನಂತೆ) ಇದನ್ನು ವಿಶೇಷವಾಗಿ ಬೆಳೆಯುತ್ತಾರೆ

ದೊಡ್ಡ ಹತ್ತಿ ಗಿಡದಲ್ಲಾಗುವ ಕಾಯಿಗಳಿಗಿಂತಲೂ ಕ್ಯಾಂಬೋಡಿಯಾ ಗಿಡದ ಕಾಯಿಗಳು ದೊಡ್ಡದಾಗಿರುವವಲ್ಲದೆ ಕೆಲವು ಕಡೆಗಳಲ್ಲಿ ಮಾತ್ರ ದೊಡ್ಡ ಹತ್ತಿ ಕಾಯಿಗಳ ಎರಡರಷ್ಟು ದೊಡ್ಡವಾಗಿರುತ್ತವೆ ಗಾತ್ರದಲ್ಲಿ ದೊಡ್ಡದಾಗಿರುವುದೊಂದೇ ಅಲ್ಲದೆ ಇದರ ಹತ್ತಿಯಲ್ಲಿ ಶೇಕಡ 39 ರಷ್ಟು ಅರಳೆಯೇ ಇರುವದರಿಂದ ದೊಡ್ಡ ಹತ್ತಿಗಿಂತ ಬಹಳ ಉತ್ಕೃಷ್ಟವಾದದ್ದು ಒಂದು ಮಣ ಕ್ಯಾಂಬೋಡಿಯಾ ಹತ್ತಿಯನ್ನು ರಾಟೆಗೆ ಕೊಟ್ಟರೆ 18 ಸೇರು ಅರಳೆ ಬರುವದು

ಕ್ಯಾಂಬೋಡಿಯಾ ಹತ್ತಿಯನ್ನು ಮುಸ್ಕಿ ಪೈರಾಗಿಯೂ, ಬಾಗಾಯ್ತು ಪೈರಾಗಿಯೂ (ತರಿ ಪೈರಾಗಿಯೂ) ಬೆಳೆಯ ಬಹುದಾದರೂ ಫಸಲಿನಲ್ಲಿ ಮಾತ್ರ ವ್ಯತ್ಯಾಸವಾಗುತ್ತೆ ನೀರನ್ನು ಕಟ್ಟಿ ಬಾಗಾಯ್ತು ಬೆಳೆಯಾಗಿ ಮದ್ರಾಸ್ ಸೀಮೆಯಲ್ಲಿ ಇದನ್ನು ಬೆಳೆದಾಗ ಎಕರೆ ಒಂದಕ್ಕೆ 10 ರಿಂದ 80 ಮಣ ಹತ್ತಿಯು ಕೂಡ ಬಂದಿರುತ್ತದೆಂತಲೂ, ದಕ್ಷಿಣ ಮಹಾರಾಷ್ಟ್ರದಲ್ಲಿರುವ ಧಾರವಾಡಪ್ರಾಂತ್ಯದಲ್ಲಿ ಮುಸ್ಕಿ ಪೈರಾಗಿ ಬೆಳೆದಾಗ ಮಳೆಯು ಸಕಾಲದಲ್ಲಿ ಆಗಿ ವ್ಯವಸಾಯವನ್ನು ಚನ್ನಾಗಿ ಮಾಡಿದರೆ ಎಕರೆಗೆ 20 ಮಣ ಹತ್ತಿಯು ಆಗುತ್ತದೆಂತಲೂ ಸರಕಾರಿ ರಿಪೋರ್ಟುಗಳುಂಟು ಕಳೆದ ವರ್ಷ ಕೊಡಗನೂರಲ್ಲಿರುವ ನಮ್ಮ ಸ್ವಂತ ಜಮೀನಿನಲ್ಲಿ ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಮಾಡಿದ್ದೆವು ಆಗ್ಗೆ ಸಕಾಲದಲ್ಲಿ ಮಳೆ ಇಲ್ಲದೆಯೂ, ಕೆರೆಯಲ್ಲಿ ಜಲಾಧಾರವು ಕಡಮೆಯಾಗಿಯೂ ಇದ್ದಾಗ್ಯೂ ಕೂಡ ಎಕರೆ ಒಂದಕ್ಕೆ 20 ಮಣ ಸಿಕ್ಕಿತು

ವ್ಯವಸಾಯದ ಸಂಗತಿಗಳು

ಕ್ಯಾಂಬೋಡಿಯಾ ಹತ್ತಿಯ ಬೇರು ತುಂಬಾ ಆಳಕ್ಕೆ ಹೋಗುತ್ತಾದ್ದರಿಂದ ಜಮೀನನ್ನು ಎಷ್ಟು ಆಳವಾಗಿ ಉತ್ತರೆ ಅಷ್ಟು ಉತ್ತಮ ಅಲ್ಲದೆ ಎಕರೆ ಒಂದಕ್ಕೆ 10 ಗಾಡಿ ಗೊಬ್ಬರಕ್ಕೆ ಕಡಮೆಯಿಲ್ಲದಂತೆ ಹಾಕಿದರೆ ಉತ್ತಮ ಮೈಸೂರು ಸೀಮೆಯಲ್ಲಿ ಹತ್ತಿ ಬೆಳೆಗೆ ಮುಖ್ಯ ಪ್ರಾಂತ್ಯವಾದ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಬೀಳುವ ಮಳೆಯು ಬಹಳ ಸ್ವಲ್ಪವಾದ್ದರಿಂದ ಇದನ್ನು ಮುಸ್ಕಿ ಬೆಳೆಯಾಗಿ ಬೆಳೆಯಬೇಕಾದರೆ ಎರೆಜಮೀನುಗಳಲ್ಲಿ ತಂಪುಳ್ಳುವ ಪ್ರದೇಶಗಳಲ್ಲಿ ಬೆಳೆಯುವದು ಒಳ್ಳೆಯದು ಆದುದರಿಂದ ಬೈಗೆ ಬೇಕಾದಾಗ ಒಂದೆರಡು ಸಲವಾದರೂ ನೀರು ಕಟ್ಟುವದಕ್ಕೆ ಅನುಕೂಲವಿರುವ ಕಡೆಗಳಲ್ಲಿ ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಯುವದು ಬಹಳ ಉತ್ತಮ

ಜೂನ್ ತಿಂಗಳಲ್ಲಿ ರೋಹಿಣಿ, ಮೃಗಶಿರ, ಆರಿದ್ರ ಮಳೆಗಳಲ್ಲಿ ಇದನ್ನು ಬಿತ್ತಬೇಕು ಎಷ್ಟು ಮುಂದಾಗಿ ಬಿತ್ತಬಹುದೋ ಅಷ್ಟು ಉತ್ತಮ ಎಕರೆ ಒಂದಕ್ಕೆ 7 ಪೌಂಡು ಬೀಜದಂತೆಯೂ, ಸಾಲುಗಳ ಮಧ್ಯೆ ಎರಡೂವರೆ ಅಡಿ ಜಾಗವಿರುವಂತೆ ಸಾಲುಗಳನ್ನು ಹೊಡೆದು ಬೀಜವನ್ನು ಬಿತ್ತಬಹುದು ಗಿಡಗಳು ದಟ್ಟವಾಗಿ ಹುಟ್ಟಿದರೆ ಒಂದೂವರೆ ಅಡಿಗೆ ಒಂದು ಗಿಡದಂತೆ ಬಿಟ್ಟು ಹೆಚ್ಚಾದ ಸಸಿಗಳನ್ನೆಲ್ಲಾ ಕಿತ್ತುಹಾಕಬೇಕು ಹತ್ತಿಯ ಗಿಡಗಳು ಹುಟ್ಟಿ ಅವಕ್ಕೆ ಎರಡನೆಯ ಎಲೆಗಳು ಬಂದನಂತರ ಹೊಲದಲ್ಲಿರುವ ಕಳೆಗಳನ್ನೆಲ್ಲಾ ತೆಗೆದು ಹಾಕಲು ಶುರುಮಾಡಬೇಕು ಜಮೀನಿಗೆ ಬಹಳ ಅನುಕೂಲವಾಗಿ ಗೊಬ್ಬರವನ್ನು ಹಾಕಿದ್ದ ಪಕ್ಷದಲ್ಲಿ ಒಂದು ಗಿಡದಿಂದ ಮತ್ತೊಂದಕ್ಕೆ 2½ ಇಂದ 3 ಅಡಿ ಅಂತರವಿರಬಹುದು ಹಾಗೆ ಮಾಡದಿದ್ದರೆ ಗಿಡಗಳೆಲ್ಲಾ ಒಟ್ಟಿಗೆ ಗುಂಪಾಗಿ ಬೆಳೆದು, ಅವುಗಳ ಕೊಂಬೆಗಳು ಬಹಳ ತೆಳುವಾಗುತ್ತವೆಯಾದ್ದರಿಂದ ಅಷ್ಟು ಬಹಳ ದಪ್ಪನಾಗಿರುವ ಹತ್ತಿಯ ಕಾಯಿಗಳ ಭಾರವನ್ನು ತಡೆಯಲಾರವು ಎರಡನೆಯ ಸಲ ಗಿಡಗಳು ನೆಲವನ್ನೆಲ್ಲಾ ಆವರಿಸುವದಕ್ಕೆ ಮುಂಚೆ ಎಡೆಕುಂಟೆಯನ್ನು ಹೊಡೆಯಬೇಕು ತದನಂತರ ಅವು ಕಳೆಗಳನ್ನು ತಡೆ ಮಾಡುವಷ್ಟು ಸಾಲುಗುವ ನೆರಳನ್ನು ಕೊಡುತ್ತವೆ ಅತ್ಯಗತ್ಯವಿದ್ದರೆ ಮಾತ್ರ ನೀರು ಕಟ್ಟಬೇಕು ಹತ್ತಿಯ ಕಾಯಿಗಳು ಬಲಿತು ಒಡೆಯಲು ಪ್ರಾರಂಭವಾದ ಮೇಲೆ ಮೊದಲನೆಯ ಸಲ ಹತ್ತಿಯನ್ನು ಬಿಡಿಸುವಾಗ ಪೂರೈಸುವವರಿವಿಗೂ ನೀರು ಕಟ್ಟಕೂಡದು ಆ ಮೇಲೆ ಎರಡನೆಯ ಸಲ ಎಲೆಗಳೂ, ಹುವ್ವುಗಳೂ ಮತ್ತು ಕಾಯಿಗಳೂ ಬಿಡುವದಕ್ಕೆ ಅನುಕೂಲವಾಗಿ ಫಸಲಿಗೆ ನೀರು ಹಾಯಿಸಬೇಕು ಕಾಯಿಗಳು ಬಹಳ ದಪ್ಪನಾಗಿರುವದರಿಂದ ಅವುಗಳನ್ನು ಬಿಡಿಸುವದು ಬಹಳ ಸುಲಭ, ಅಲ್ಲದೆ ಅವುಗಳು ಬಹಳ ಚೆನ್ನಾಗಿ ಅರಳುತ್ತವೆ

ಕ್ಯಾಂಬೋಡಿಯಾ ಹತ್ತಿಯನ್ನು ನೀರುಕಟ್ಟಿ ಬೆಳೆಯುವಾಗ ಕೆಲವು ಕಡೆಗಳಲ್ಲಿ ಗಿಡಗಳು ಬಹಳ ಎತ್ತರವಾಗಿಯೂ ಎಲೆಗಳನ್ನೇ ಬಹಳವಾಗಿ ಹಿಡಿದುಕೊಂಡು ಬೆಳೆಯುವ ಪ್ರಮೇಯವಿರುವದರಿಂದ ಗಿಡಗಳು ಎರಡು ಮೂರು ಅಡಿ ಎತ್ತರವಾಗಿ ಬೆಳೆದ ಕೂಡಲೇ ಅವುಗಳ ತುದಿಗಳನ್ನೆಲ್ಲಾ ಚಿವುಟಿಹಾಕಬೇಕು

ಕ್ಯಾಂಬೋಡಿಯಾ ಹತ್ತಿಗೆ ಒಳ್ಳೆಯ ಖರೀದಿಯು ಬರಬೇಕಾದರೆ ಇತರ ಜಾತಿಯ ಹತ್ತಿಗಳೊಂದಿಗೆ ಬೆರಕೆಮಾಡಕೂಡದು, ಮತ್ತು ಕ್ಯಾಂಬೋಡಿಯಾ ಅರಳೆಗೆ ಬಾಕಿ ತರಳೆಗಿಂತಲೂ ಹೆಚ್ಚು ಬೆಲೆಯೂ ಬರುತ್ತೆ

ತಾ ಕ — ಜ ಗಿರುವ ಭೂಮಿಯಲ್ಲಿ ಕ್ಯಾಂಬೋಡಿಯಾ ಹತ್ತಿಯನ್ನು ಯಾವಾಗಲೂ ಬಿತ್ತಕೂಡದು

ತಾ 14-6 1912, ಬೃಹಸ್ಪ ತನಸಪ್ಪನವರ,

ದಾವಣಗೆರೆ ಮರ್ಚೆಂಟ್ ಅಂಡ್ ಕಮಿಷನ್ ಏಜೆಂಟ್

ವಾಂತಿಭೇದಿ ಯಾನೆ ಕಾಲರಾ

ಅದರ ಉತ್ಪತ್ತಿಯೂ, ಪ್ರತೀಕಾರವೂ

ಮೈಸೂರು ಸಂಸ್ಥಾನದಲ್ಲಿ ತುಮಕೂರು, ಶಿವಮೊಗ್ಗ ಚಿತ್ರದುರ್ಗ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಿಗೆ ಸೇರಿದ ಅನೇಕ ಗ್ರಾಮಗಳಲ್ಲಿ ಈ ಬಾಯಿಬೇಧಿಯು ವ್ಯಾಪಿಸುತ್ತಾ, ದಿನಂಪ್ರತಿ ನೂರಾರು ಜನಗಳು ಇದಕ್ಕೆ ತುತ್ತಾಗುತ್ತಾ ಇದ್ದಾರೆ ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾದ ಡಾಕ್ಟರ್ ಮುತ್ತುಸ್ವಾಮಿದಾಸರವರು ಆ ಡಿಸ್ಟ್ರಿಕ್ಟಿನ ಹೊಸಕೋಟೆ ತಾಲ್ಲೂಕು ಮೊಗಬಾಳು ಎಂಬ ಗ್ರಾಮದಲ್ಲಿ ಈ ಬಾಯಿಬೇಧಿಯು ತಲೆದೋರಲು ಇವರು ಆ ಸ್ಥಳಕ್ಕೆ ದಯಮಾಡಿಸಿ ಅದರ ನಿವಾರಣೆಗಾಗಿ ನಡಿಸಿದಂಥಾ ಏರ್ಪಾಡುಗಳನ್ನೂ, ಇತರ ಕಡೆಗಳಲ್ಲಿ ಈ ಬಾಯಿಬೇಧಿಯು ವ್ಯಾಪಿಸೀತೆಂಬ ನಿರೀಕ್ಷಣೆಯ ಮೇಲೆ ಡಿಸ್ಟ್ರಿಕ್ಟಿನ ಪ್ರತಿ ಒಂದು ತಾಲ್ಲೂಕಿನಲ್ಲಿ ರಕಕ್ಕ ಹೋಬಳಿಗಳಲ್ಲಿ ಅಲ್ಲಲ್ಲಿ ಇವರು ಮಾಡಿರುವ ಉಪನ್ಯಾಸದ ಸಾರಾಂಶಗಳನ್ನು ಈ ಕೆಳಗೆ ತಿಳಿಸಿರುವೆನು ಈ ವ್ಯಾಧಿಯು ವ್ಯಾಪಿಸಿರತಕ್ಕಂಥಾ ಸ್ಥಳದವರು ಇವರಂತೆ ಆಚರಿಸಿದ್ದೇ ಆದರೆ ಈ ಬಾಯಿಬೇಧಿಯ ಹಾವಳಿಯು ಬಹುಮಟ್ಟಿಗೆ ಕಡಮೆಯಾಗುವುದು ಈ ರೋಗವು ಸಾಂಕ್ರಾಮಿಕ ರೋಗಗಳಲ್ಲಿ ಒಂದಾಗಿರುತ್ತದೆ ಇದು ಒಂದು ಕ್ರಿಮಿಯಿಂದ ಹುಟ್ಟುವ ರೋಗ ಈ ಕ್ರಿಮಿಯು ಕುಡಿಯುವ ನೀರಿನಲ್ಲಿ ಯಾವ ತರದಿಂದಲಾಗಲಿ ಸೇರಿಕೊಂಡದ್ದೇ ಆದರೆ ಇಂಥಾ ನೀರನ್ನು ಕುಡಿದವರಿಗೆಲ್ಲಾ ಈ ಬಾಯಿಬೇಧಿಯು ವ್ಯಾಪಿಸುತ್ತದೆ ಈ ಕ್ರಿಮಿಯು ಅರ್ಧವಿರಾಮ ಚಿಹ್ನೆಯಂತೆ ಸೂಕ್ಷ್ಮವಾದ ಭೂತಕನ್ನಡಿಯಲ್ಲಿ ಕಾಣುವುದು ಹರಿಯುವ ನೀರಿನಲ್ಲಿ ಈ ಕ್ರಿಮಿಯು ಸೇರಿಕೊಂಡದ್ದೇ ಆದರೆ ಈ ನೀರಿನ ದಡದ ಮೇಲಿರತಕ್ಕ ಊರಿನ ಜನಗಳಿಗೆ 18 20 ಮೈಲಿ ಫಾಸಲೆ ವರಿವಿಗೂ ವ್ಯಾಪಿಸುವುದು

ಈ ಬಾಯಿಬೇಧಿಯ ಚಿಹ್ನೆಗಳು — ಈ ಸೋಂಕು ತಗಲಿದ ನೀರು ಕುಡಿದ 24 ಘಂಟೆಗಳೊಳಗಾಗಿ ಭೇದಿಯಾಗುವುದು ಮೊದಲು ಸಾಧಾರಣ ಗಟ್ಟಿಯಾಗಿ ಮಲಹೋಗುವುದು 2ನೇ ಸಾರಿ ಸ್ವಲ್ಪ ತೆಳ್ಳಗೆ ಹೋಗುವುದು ನಂತರ ನೀರು ನೀರಾದಿಯಲ್ಲಿ ಹೋಗುವುದು ಯಾವಾಗ ಈ ರೀತಿಯಲ್ಲಿ ನೀರಿನಂತೆ ಭೇದಿಯಾಗುವದೋ ವಾಂತಿ ಶುರುವಾಗುವುದು ನಂತರ ಪಿತ್ತ ಕಾಣಿಸಿಕೊಳ್ಳುವುದು ತರುವಾಯ ಬರೀ ನೀರು ವಾಂತಿಯಾಗುವುದು ಬೇಧಿ ವಾಂತಿಯು ಈ ರೀತಿಯಲ್ಲಿ ಕಾಣಿಸಿಕೊಂಡ ಕೂಡಲೆ ವ್ಯಾಧಿಗ್ರಸ್ತನು ತಟ್ಟನೆ ಕೈಕಾಲುಗಳೆಲ್ಲಾ ತಣ್ಣಗಾಗಿ ಹೊಟ್ಟೆಯಲ್ಲಿ ಸಂಕಟವಾಗುವುದು ಕೈ ಕಾಲುಗಳು ಸೇದುವುದು ಕಣ್ಣುಗುಡ್ಡೆ ಗುಂಡಿ ಬೀಳುವುದು ಮತ್ತು ಮಾತು ಕುಸಕುಸಾಗಿ ಕಿವಿ ಮುಚ್ಚಿಕೊಂಡು ನಾಡಿ ಬಿದ್ದು ಹೋಗುವುದು ಬಾಯಾರಿಕೆ ವಿಪರೀತವಾಗಿ ಆಗುವುದು ಮತ್ತು ಮೂತ್ರವು ಕಟ್ಟಿಹೋಗುವುದು ಈ ರೀತಿಯಾದಂಥಾವರು 1 ಘಂಟೆಯಿಂದ 24 ಘಂಟೆಗಳೊಳಗಾಗಿ ಮೃತಪಡುವರು ಇವರ ಮಲ, ವಾಂತಿಗಳು ಬಹಳ ಅಪಾಯಕರವಾದದ್ದು ಇವುಗಳ ದೆಸೆಯಿಂದಲೇ ನೀರು ಕೆಟ್ಟುಹೋಗಿ ಅಪಾಯಕ್ಕೆ ಕಾರಣವಾಗುವುದು ಆದ್ದರಿಂದ ಇವು ನೆಲದ ಮೇಲೆ ಬೀಳದಂತೆ ಬಾಯಿಬೇಧಿಗ್ರಸ್ತನ ಸಮೀಪದಲ್ಲಿ ಒಂದು ಮೊರದಲ್ಲಾಗಲಿ, ಒಂದು ಕುಳ್ಳಿಯಲ್ಲಾಗಲಿ ರಾಗಿ, ಅಥವಾ ಭತ್ತದ ಹೊಟ್ಟು, ಇಲ್ಲವೆ ಗರಗಸದ ಧೂಳು ತುಂಬಿಟ್ಟು ಇವರಲ್ಲಿಯೇ ವಾಂತಿಯನ್ನಾಗಲಿ ಭೇದಿಯನ್ನಾಗಲಿ ಮಾಡಿಸಬೇಕು ನಂತರ ಇದನ್ನು ದೂರವಾಗಿ ಸಾಗಿಸಿ ಒಂದು ಗುಣಿಮಾಡಿ ಅದರಲ್ಲಿ ಹಾಕಿ ಸುಡಬೇಕು ಈ ವ್ಯಾಧಿಯು ಮನೆಯಲ್ಲಿ ಒಬ್ಬನಿಗೆ ವ್ಯಾಪಿಸಿದ್ದೇ ಆದರೆ ರೋಗಿಯನ್ನು ಪ್ರತ್ಯೇಕಪಡಿಸಿ ಆತನ ಉಪಯೋಗಕ್ಕೋಸ್ಕರ ಪ್ರತ್ಯೇಕವಾಗಿ ಚಂಬು ಮೊದಲಾದ ಪಾತ್ರೆ ಸಾಮಾನುಗಳನ್ನು ಕೊಡಬೇಕು ಇವರಲ್ಲಿ ಬೇರೆ ಪಾತ್ರೆಗಳಿಂದ ತಂಪಂಥಾ ಗಂಜಿ ನೀರು ಮೊದಲಾದುವನ್ನು ಕೊಯ್ಯಬೇಕು ಎಲ್ಲರೂ ಬಾಯಿಬೇಧಿಯವನಿಗೆ ಉಪಚಾರಮಾಡುವುದಕ್ಕೆ ಹೋಗಬಾರದು ಯಾರನ್ನಾದರೂ ಒಬ್ಬರನ್ನು ನಿಯಮಿಸಬೇಕು ಇವನು ಬಾಯಿಬೇಧಿಯವನನ್ನು ಎತ್ತಿ, ಹಿಡಿದು ಆಹಾರಾದಿಗಳನ್ನು ಕೊಟ್ಟನಂತರ ತನ್ನ ಕೈಯನ್ನು ಸಾಬೂನ್ ಅಥವಾ ಸೀಗೇಕಾಯಿಯಿಂದ ಸಹಿಸಬಹುದಾದಷ್ಟು ಬಿಸಿನೀರಿನಲ್ಲಿ ಚನ್ನಾಗಿ ತೊಳೆದುಕೊಳ್ಳಬೇಕು ವಾಂತಿಭೇದಿಯನ್ನು ನೊಣವು ಮುತ್ತಿಕೊಳ್ಳುವದರಿಂದ ಅವುಗಳ ಕಾಲುಗಳ ಮೂಲಕ ಈ ವ್ಯಾಧಿಗೆ ಸಂಬಂಧಪಟ್ಟ ವಿಷಕ್ರಿಮಿಗಳು ಸೇರಿಕೊಳ್ಳುವವು ಆದ್ದರಿಂದ ಬಾಯಿಬೇಧಿಯವನ ಸಮೀಪದಲ್ಲಿ ಅನ್ನ ಆಹಾರಾದಿಗಳನ್ನಿಟ್ಟು ತಿನ್ನಕೂಡದು — ಬಾಯಿಬೇಧಿಯು ನೀರಿನಿಂದ ವ್ಯಾಪಿಸೋಣದರಿಂದ ಯಾವ ನೀರನ್ನು ಕುಡಿದ ಮಾತ್ರದಿಂದ ಬಾಯಿಬೇಧಿ ವ್ಯಾಪಿಸಿತೋ ಅಂಥಾ ನೀರನ್ನು ಚನ್ನಾಗಿ ಕಾಯಿಸದ ಹೊರತು ಹಾಗೆಯೇ ಕುಡಿಯಕೂಡದು ಒಂದು ಗ್ರಾಮದಲ್ಲಿ ಕುಡಿಯುವ ನೀರಿನ ಭಾವಿ ಒಂದೇ ಇದ್ದರೆ ಸೋಂಕು ತಗಲಿದ ಮನೆಯವರು ಆ ಭಾವಿಯ ನೀರನ್ನು ಬಳಸುವುದಕ್ಕೆ ಬಿಡಬಾರದು ಇಂಥಾ ಭಾವಿಗಳಿಗೆ ಸರ್ಕಾರದವರು ಪರ್ಮ್ಯಾಂಗನೇಟ್ ಆಫ್ ಪೊಟಾಷ್ ಎಂಬ ಉಪ್ಪನ್ನು ಹಾಕುವರು ಹಾಗೆ ಮಾಡಿದರೆ ವಾಂತಿಭೇದಿಯ ಕ್ರಿಮಿಗಳು ನಾಶವಾಗುವವು ನೀರು ಒಂದು ತರಹಾ ನೀಲಿ ರಂಗಾಗುವುದು ಹಾಗೆಯೇ ಕುಡಿಯುವುದರಿಂದ ಜನಗಳಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲ ಈ ಉಪ್ಪನ್ನು ಪಾತ್ರೆಯಲ್ಲಿ ಸ್ವಲ್ಪ ಹೊತ್ತು ಇಟ್ಟಿದ್ದೇ ಆಗಲಿ ಅಥವಾ ಕಾಯಿಸಿದ್ದೇ ಆದರೆ ಮಾಸಿಹೋಗುವುದು ಈ ಉಪ್ಪನ್ನು ಹಾಕಿದ್ದರೂ ಕೂಡ ಹೇಗಾದರೂ ನೀರನ್ನು ಕಾಯಿಸಿ ಕುಡಿಯುವುದು ಉತ್ತಮ ನೀರಿನಲ್ಲಿ ಈ ಉಪ್ಪನ್ನು ಹಾಕುವ ವಿಷಯದಲ್ಲಿ ಯಾವ ಆಕ್ಷೇಪಣೆಯನ್ನೂ ಮಾಡದೆ ಸಂತೋಷದಿಂದಲೂ ನಿರ್ಭಯದಿಂದಲೂ ನಂಬಿಕೆಯಾಗಿಯೂ ಪ್ರೋತ್ಸಾಹಪಡಿಸಬೇಕು ಒಂದು ಗ್ರಾಮಕ್ಕೆ ಕೆರೆಯಿದ್ದು ಅದಕ್ಕೆ ಸೋಂಕು ತಗಲಿದ್ದೇ ಆದರೆ ಆ ಕೆರೆಯ ನೀರನ್ನು ಬಿಟ್ಟು ಕೆರೆ ಅಂಗಳದಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಭಾವಿಗಳನ್ನು ತೋಡಿಸಿ ಅವರಲ್ಲಿ ದ್ರವಿಸುವಂಥಾ ನೀರನ್ನು ಉಪಯೋಗಿಸಬೇಕು ಮತ್ತು ಸೋಂಕು ತಗಲಿದ ಮನೆಯವರಿಗೆಲ್ಲಾ ಪ್ರತ್ಯೇಕವಾದ ಒಂದು ಭಾವಿ ಇರಬೇಕು ಈ ನೀರನ್ನು ಕಾಯಿಸಿಯೇ ಕುಡಿಯಬೇಕು — ಹರಿಯುವ ಕಾಲುವೆಯಾಗಿದ್ದಲ್ಲಿ ಆ ಕಾಲುವೆಯ ಪಕ್ಕದಲ್ಲಿ ಅಲ್ಲಲ್ಲಿ ಸಣ್ಣ ಭಾವಿಗಳನ್ನು ತೋಡಬೇಕು ಹೊಳೆಯಾಗಿದ್ದು, ದಡದ ಹತ್ತಿರ ಮಾತ್ರ ಸ್ವಲ್ಪ ನೀರು ಹರಿಯುತ್ತಿದ್ದಲ್ಲಿ ಆ ನೀರನ್ನು ಉಪಯೋಗಿಸದೆ, ಮರಳಿನ ಅಂಗಳದಲ್ಲಿ ಚಿಲುಮೆಗಳನ್ನು ತೆಗೆದು ಅದರಲ್ಲಿ ದ್ರವಿಸುವಂಥಾ ನೀರನ್ನು ಉಪಯೋಗಿಸಬೇಕು

ವೈದ್ಯೋಪಚಾರ — ಯಾವ ಸ್ಥಳದಲ್ಲಾಗಲಿ ವಾಂತಿಭೇದಿ ಆಗಿ ಮೇಲಿನ ಚಿಹ್ನೆಗಳಿಂದೊಡಗೂಡಿದ್ದಲ್ಲಿ ಈ ವ್ಯಾಧಿಯು ವ್ಯಾಪಿಸಿದೆ ಎಂದು ಊಹಿಸಿ, ಆ ಕೂಡಲೆ ತಕ್ಕ ಇಲಾಜು ಮಾಡಲು ಉಪಕ್ರಮಿಸಬೇಕು ಆಸ್ಪತ್ರೆ ಡಾಕ್ಟರುಗಳು ಬಂದು ನೋಡಿ ಔಷಧಿ ಕೊಡುವುದಕ್ಕೆ ಮೊದಲೇ ಕೆಳಗೆ ಹೇಳುವಂಥಾ ಸುಲಭಸಾಧ್ಯವಾದ ಔಷಧಿಯನ್ನು ಮಾಡಬೇಕು ಅದೇನೆಂದರೆ, ಒಂದು ದೊಡ್ಡ ಈರುಳ್ಳಿ ಗೆಡ್ಡೆಯನ್ನು ಎರಡಾಗಿ ಸೀಳಿ ಮಧ್ಯದಲ್ಲಿ ಮೊಳಕೆಯ ದಂಟನ್ನು ತೆಗೆದು ಅದರ ಸ್ಥಳದಲ್ಲಿ ಒಂದು ಕಡಲೇಕಾಳು ಗಾತ್ರ ಹಸನಾದ ಇಂಗನ್ನೂ, ಒಂದು ಹೆಸರು ಬೇಳೆಯಷ್ಟು ಅಫೀಮನ್ನೂ ಇಟ್ಟು ಆ ಎರಡು ಹೋಳುಗಳನ್ನೂ ಒಂದಾಗಿ ಸೇರಿಸಿ ಕಡ್ಡಿಗೆ ಪೋಣಿಸಿ ಅದನ್ನು ಬೆಂಬೂದಿಯಲ್ಲಿ ಸುಟ್ಟು ಮೇಲಿನ ಸಿಪ್ಪೆ ಮತ್ತು ಕಡ್ಡಿಗಳನ್ನು ತೆಗೆದು ಕಲ್ವತ್ತಿನಲ್ಲಿ ಅರೆದು ಮೂರು ಉಂಡೆ ಮಾಡಿ ಅದನ್ನು ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಒಂದೊಂದು ತೆ[illegible] ಕೊಳ್ಳಬೇಕು ಇದರಲ್ಲಿ ವಾಂತಿಯೂ ಭೇದಿಯೂ ಎರಡೂ ನಿಲ್ಲುವುದು ಒ[illegible] ದಿವಸದಲ್ಲಿ ವಾಂತಿಭೇದಿಯು ನಿಲ್ಲದಿದ್ದರೆ ಮತ್ತೊಂದು ದಿವಸವೂ ಅದೇ ರೀ[illegible] ಲ್ಲಿ ಮಾಡಬೇಕು ಹೆಚ್ಚು ಬಾಯಾರಿಕೆ ಇದ್ದಲ್ಲಿ ಬೆಂಬೂದಿಯಲ್ಲಿ ಸುಟ್ಟ[illegible] ಈರುಳ್ಳಿಗೆಡ್ಡೆಯನ್ನು ಬಾಯಲ್ಲಿಟ್ಟುಕೊಂಡು ಅಗಿಯುತ್ತಿರಬೇಕು ಮು[illegible] ಕಟ್ಟಿಹೋದರೆ ಹಸೀ ಈರುಳ್ಳೀ ಗೆಡ್ಡೆಯ ರಸವನ್ನು ಒಂದು ಒಳ್ಳೆಯ[illegible] ಕುಡಿಸಬೇಕು ಇದರ ಮೇಲೆ ಬಟ್ಟೆಯಲ್ಲಿ ಶೋಧಿಸಿದಂಥಾ ಅಕ್ಕಿ ಗಂ[illegible] ಸ್ವಲ್ಪ ಉಪ್ಪು ಹಾಕಿ ಕುಡಿಸಬೇಕು ಮತ್ತು ಬಿಳಿಯದಾಗಲಿ ಕರೀ ದ್ರಾ[illegible] ಕಡ್ಡೀ ಬಿಡಿಸಿದ ಲಕ್ಕಿಲೇಸೊಪ್ಪನ್ನು ನೀರಿನಲ್ಲಿ ಬಿಸಿಬಿಸಿಯಾಗಿ ಸೊಂಟಕ್ಕೆ [illegible] ಬೇಕು

ಪಥ್ಯ — ಗಟ್ಟಿ ಪದಾರ್ಥಗಳ್ಯಾವನ್ನೂ ಕೊಡಕೂಡದು, ಅಂದರೆ, ರೊ[illegible] ಅನ್ನ, ಹಿಟ್ಟು ಮುಂತಾದವುಗಳು ಅಕ್ಕಿಯ ನುಚ್ಚನ್ನು ಗಂಜೀಮಾಡಿ ಬ[illegible] ಯಲ್ಲಿ ಶೋಧಿಸಿ, ಸಮಭಾಗ ಹಾಲು ಹಾಕಿ ಸ್ವಲ್ಪ ಸಕ್ಕರೆಯನ್ನು ಸೇ[illegible] ಕುಡಿಸಬೇಕು ಮತ್ತೊಂದು ವೇಳೆ ಹಾಲಿಲ್ಲದೆ ಬರೀ ಗಂಜಿಗೆ ಉಪ್ಪು ಹಾ[illegible] ಕುಡಿಸಬೇಕು ಅಂದರೆ ಒಂದು ಸಾರಿ ಹಾಲುಗಂಜಿಯನ್ನೂ, 2 ನೇ ಸಾರಿ ಉ[illegible] ಹಾಕಿದ ಗಂಜಿಯನ್ನೂ ಮೂರು ಘಂಟೆಗೊಂದಾವರ್ತಿ ಕುಡಿಸಬೇಕು ಬಾಯಿ[illegible] ಯಾದವನಿಗೆ ಒಂದು ವಾರದ ವರಿವಿಗೂ ಗಂಜಿ ವಿನಹ ಬೇರೆ ಆಹಾರವನ್ನು ಕೊ[illegible] ಕೂಡದು ಬಾಯಿಬೇಧಿ ವ್ಯಾಪಿಸುತ್ತಿರುವಂಥಾ ಕಾಲದಲ್ಲಿ ಯಾರಿಗಾದರೂ ಒ[illegible] ಕ್ಕಿಂತಲೂ ಹೆಚ್ಚು ಸಲ ಬೇಧಿಯಾದರೆ ಈ ಬಾಯಿಬೇಧಿಯು ಶುರುವಾಯಿತೆ[illegible] ದಾಗಿ ತಿಳಿದು, ಕೂಡಲೆ ಇಲಾಜುಕ್ರಮಗಳನ್ನು ನಡಿಸಬೇಕು ಶುರುವಿನಲ್ಲಿ[illegible] ಹೊಟ್ಟೆಗೆ ಔಷಧಿ ಬಿದ್ದದ್ದೇ ಆದರೆ ಅಂಥಾವನಿಗೆ ಯಾವ ಅಪಾಯವೂ ಸಂ[illegible] ಸುವುದಿಲ್ಲ ಭೇದಿ ವಾಂತಿ ಶುರುವಾಗಿ ಕೈಕಾಲುಗಳು ತಣ್ಣಗಾದನಂ[illegible] ಇಲಾಜು ನಡಿಸಿದರೆ ಬದುಕುವುದು ದುರ್ಲಭ ಬಾಯಿಬೇಧಿಯು ಊರೊಳಗೆ [illegible] ಹಾಕಿದ ಕೂಡಲೆ ಸೋಂಕು ತಗಲಿದವರ ಮನೆಯವರು ಮತ್ತು ಗ್ರಾಮಸ್ಥರೆಲ್ಲ[illegible] ಹಸೀ ಈರುಳ್ಳಿಗೆಡ್ಡೆಯನ್ನು ಊಟದೊಂದಿಗೆ ಸೇವನೆ ಮಾಡಬೇಕು ಮಕ್ಕ[illegible] ಮೊದಲುಗೊಂಡು ವೃದ್ಧರು ಸಹಾ ಇದನ್ನು ಸೇವಿಸಬೇಕು ಬರೀ ಈರುಳ್ಳಿ[illegible] ಯನ್ನು ತಿನ್ನುವ ವಿಷಯದಲ್ಲಿ ಅಸಹ್ಯಪಡುವವರು ಮೊಸರು ಗಟ್ಟಿಗೆ (ಆ ದ[illegible] ಮೊಸರನ್ನು ಬಟ್ಟೆಯಲ್ಲಿ ಕಟ್ಟಿ ನೇತುಹಾಕಿದರೆ ಅದರಲ್ಲಿರುವ ನೀರೆ[illegible] ಬಸಿದುಹೋಗಿ ಒಟ್ಟೆಯಲ್ಲಿ ನಿಲ್ಲುವಂಥಾದ್ದೇ ಮೊಸರು ಗಟ್ಟಿ) ಈರುಳ್ಳಿಯ[illegible] ಸಣ್ಣದಾಗಿ ಹೆಚ್ಚಿ ತಕ್ಕಷ್ಟು ಉಪ್ಪು ಮತ್ತು ಹಸೀ ಮೆಣಸಿನಕಾಯಿ ಕ[illegible] ತಿಂದದ್ದೇ ಆದರೆ ರುಚಿಯಾಗಿರುವುದಲ್ಲದೆ ಅದರ ವಾಸನೆಯೂ ಸಹ ಕಾಣ[illegible] ಹೋಗುವುದು

ದೃಷ್ಟಾಂತ — ಮೇಲೆ ಹೇಳಿದ ಮೊಗಬಾಳು ಗ್ರಾಮದಲ್ಲಿ ಹ[illegible] ಜನಕ್ಕೆ ಬಾಯಿಬೇಧಿ ತಗಲಿ ಐದು ಜನ ಮೃತಪಟ್ಟರು ಮೇಲಿನ ಇಲಾಜ[illegible] ಆಚರಿಸಿದನಂತರ ತಗಲಿದ ಎಂಟು ಜನಗಳ ಪೈಕಿ ಯಾರೂ ಮೃತಪಡಲಿಲ್ಲ[illegible] ಗ್ರಾಮಸ್ಥರೆಲ್ಲರೂ ಬಹಳ ನಂಬಿಕೆಯಿಂದ ನೀರನ್ನು ಕಾಯಿಸಿ ಕುಡಿದದ್ದಲ್ಲ[illegible] ಈರುಳ್ಳಿಗೆಡ್ಡೆಯನ್ನು ಸಕಲರೂ ಸೇವನೆ ಮಾಡಿದ್ದರಿಂದ ಬಾಯಿಬೇಧಿಯು ನಿಂ[illegible] ಹೋಯಿತು ಇದನ್ನೆಲ್ಲಾ ಪ್ರತ್ಯಕ್ಷ ಕಂಡವನಾದ್ದರಿಂದ ಇತರ ಡಿಸ್ಟ್ರಿಕ್ಟು[illegible] ಗಳಲ್ಲಿ ಈ ಬಾಯಿಬೇಧಿಯಿಂದ ವ್ಯಥೆಪಡುವಂಥವರು ಮೇಲೆ ಹೇಳಿದಂಥಾ ಕ್ರ[illegible] ಗಳನ್ನು ಆಚರಿಸಿ ಸೌಖ್ಯವನ್ನು ಪಡೆಯಲಿ ಎಂದು ಹಾರೈಸುವೆನು

ತಾ ಖ — ಈ ವ್ಯಾಧಿಯು ನೀರಿನ ದೆಸೆಯಿಂದ ಹರಡುವದಾದ್ದರಿಂದ ಬಾಯಿಬೇಧಿಯಾದವನು ಬಟ್ಟೆ ಬರೆಗಳನ್ನು ಕುಡಿಯುವ ಕೆರೆಯಲ್ಲಾಗಲಿ, ಯಾವ ಹೊಳೆಯಲ್ಲಾಗಲಿ ತೊಳೆಯದಂತೆ ರೋಗಿಗಳ ಮನೆಗಳಲ್ಲೇ ಒ[illegible] ಡಬ್ಬಾ ಒಳ್ಳೆ ನೀರನ್ನಿಟ್ಟು ಅದರಲ್ಲಿ ಬೇಯಿಸಿ ಒಣಗಿಸಿಕೊಳ್ಳಬೇಕು

ಆ ಸ್ಥಳದವರು ಮಾಡಿದ ದೊಡ್ಡ ಉಪಕಾರವೆಂದು ನೆನಸುವ

ಹಿತಚಿಂತಕ

ವಾರ್ತಾದಾರರಿಗೆ ನೋಟೀಸು

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ವಾರ್ತೆಯನ್ನು ಕಾಗದದ ಎರ[illegible] ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗಾಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋ[illegible] ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬು[illegible] ವಾರಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂ[illegible] ಭರವಸೆ ಕೊಡೆವು ವಾರ್ತೆಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬ[illegible] ಹೇಳುತ್ತೇವೆ

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿ[illegible] ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಸಾವಿನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ವಾರ್ತೆಗಳನ್ನು ಅ[illegible] ಕರು « ರೆವ್ ಇ ಡಬ್ಲ್ಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು » ಎಂ[illegible] ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ « ವೃತ್ತಾಂತ ಪತ್ರಿ[illegible] ಎಡಿಟರ್ ಮೈಸೂರು » ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲ[illegible] ವರೆ ವಾರ್ತೆಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ವಾರ್ತಾದಾರರೆ[illegible] ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಪೋಸ್ಟ್ ಆಫೀಸರ್ — ಈ ವಾರ್ತೆಯಲ್ಲಿ ಪ್ರಕಟನೆಗೆ ಅರ್ಹವಾ[illegible] ವಿಚಾರವೇನೂ ಕಂಡುಬರುವುದಿಲ್ಲ

ಬಿಳಿಗಿರಿರಂಗನಬೆಟ್ಟ, ಹೊಳಲ್ಕೆರೆ, ಹರಳಹಳ್ಳಿ — ಈ ಸ್ಥಳಗಳಿ[illegible] ಬರೆದು ಬಂದಿರುವ ವಾರ್ತೆಗಳಲ್ಲಿ ವರ್ತಮಾನಗಳೇನೂ ಕಂಡುಬರುವುದಿಲ್ಲ

— ಎಡಿ]

ಕರೆಸ್ಪಾಂಡೆನ್ಸ್.

ಸರ್ಕಾರದ ತಾಮಸ ಪ್ರವೃತ್ತಿಯು

ಅಯ್ಯಾ

ನಾನು ನಿಮ್ಮ ಪತ್ರಿಕೆಯನ್ನು ಸಾರ್ವದಾ ಓದತಕ್ಕವನು ಸರ್ಕಾರದ ಮೇಲೆ ಆಕ್ಷೇಪಣೆಯುಳ್ಳ ವಾರ್ತೆಗಳನ್ನು ಯಾರಾದರೂ ಬರೆದರೆ ನೀವು ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೆ ಮೊದಲು ವಾರ್ತಾದಾರರು ಸರ್ಕಾರದ ಆಯಾ ಅಧಿ[illegible]

ನಗೆ ಬರೆದುಕೊಳ್ಳಬೇಕೆಂದು ಸೂಚನೆ ಕೊಡುತ್ತೀರಿ. ಈಗ ನನ್ನ ಅನುಭವ ವನ್ನು ತಿಳಿಸುತ್ತೇನೆ.

ನಾನು 46 ರೂಪಾಯಿ ಕೊಟ್ಟು ಒಂದು ನಿವೇಶನವನ್ನು ಕೊಂಡುಕೊಂಡೆನು. ಇದಕ್ಕೆ ನನಗೆ ಕ್ರಯಪತ್ರವನ್ನು ಬರೆದುಕೊಡಲಿಲ್ಲ. ನಿವೇಶನವನ್ನು ಗುರುತಾದ ಚಕ್ಕುಬಂದಿಹಾಕಿ ವಿಂಗಡಿಸಿಕೊಟ್ಟೂ ಇಲ್ಲ. ಇದರಿಂದ ನಾನು ಮನೆ ಕಟ್ಟುವುದಕ್ಕಾಗಲಿ, ಇತರರಿಗೆ ಬಿಕರಿಮಾಡುವುದಕ್ಕಾಗಲಿ ಅವಕಾಶವಿಲ್ಲದೆ ಇದೆ. ಮೇ ತಾ 30 ನೇ ಪತ್ರಿಕೆಯಲ್ಲಿ ನೀವು ಕೊಂಟಗೆರೆ ಪಟೇಲರಿಗೆ ಹೇಳಿದಂತೆ ಅಷ್ಟುಮಟ್ಟಿಗೆ ಸರ್ಕಾರದಿಂದ ಕಷ್ಟಗಳಿದ್ದರೆ ನಾನು ಯಾಕೆ ಆ ನಿವೇಶನವನ್ನು ಪಡೆಯಬೇಕೆಂದು ಅಪೇಕ್ಷಿಸಬೇಕು ಎಂಬದಾಗಿ ನೀವು ನನಗೂ ಪ್ರಶ್ನೆಹಾಕಬಹುದು. ಮ್ಯುನಿಸಿಪಾಲಿಟಿಯವರು ನನ್ನ ಹಣವನ್ನು ನನಗೆ ವಾಪಸ್ ಕೊಟ್ಟುಬಿಟ್ಟರೆ ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಅವರು ಆ ರೀತಿ ಕೊಡುವವರಾಗಿಲ್ಲ, ಕ್ರಯಪತ್ರವನ್ನೂ ಬರೆದುಕೊಡದೆ ಇದ್ದಾರೆ.

ಅರಸೀಕೆರೆ. ವೆಂಕಟಸುಬ್ಬಯ್ಯ

[ಈ ಬಾತ್ಮೀದಾರರು ಮೇಲ್ಕಂಡ ನಿವೇಶನದ ವಿಷಯದಲ್ಲಿ ಮೇ ತಾ 8 ರಲ್ಲಿ ಅ॥ ಕಮಿಷನರ್‌ರಿಗೆ ಬರೆದುಕೊಂಡಿರುವ ಅರ್ಜಿ ನಕಲನ್ನು ನಮ್ಮಲ್ಲಿಗೆ ಕಳುಹಿಸಿದ್ದಾರೆ. ಅರಸೀಕೆರೆ ಕಳ್ಳಿನಕಟ್ಟೆ ಬಡಾವಣೆಯಲ್ಲಿ ಐದು ವರುಷಗಳ ಹಿಂದೆ ಒಂದು ನಿವೇಶನವನ್ನು ಹರಾಜಿನಲ್ಲಿ 16 ರೂಪಾಯಿಗೆ ಪಡೆದು ಹಣ ಜಮಾ ಮಾಡಿದರು. ನಿವೇಶನವನ್ನು ವಿಂಗಡಿಸಿ ಕೊಡಬೇಕೆಂದೂ, ಕ್ರಯಪತ್ರ ಬರೆದುಕೊಡಬೇಕೆಂದೂ ಆ ಕಾಗದದಲ್ಲಿತ್ತು. ಅಮಲ್ದಾರರನ್ನು ಕೇಳಿ ಕೇಳಿ ಸಾಕಾಗಿದೆ. ಇನ್ನೂ ಇತ್ಯರ್ಥವಾಗಲಿಲ್ಲ. ಇದಲ್ಲದೆ ಇವರ ಮನೆ ಪಕ್ಕದಲ್ಲಿರುವ ನಿವೇಶನವನ್ನು ಅ॥ ಕಮಿಷನರ್‌ರು ಇವರಿಗೆ ಕ್ರಯಕ್ಕೆ ಕೊಟ್ಟರು. ಅದಕ್ಕೆ ಇವರು ಹಣ ಕಟ್ಟಿ ಮೂರು ವರುಷವಾಯಿತು. ಎಷ್ಟುವೇಳೆ ಅರ್ಜಿ ಬರೆದುಕೊಂಡರೂ ಇನ್ನೂ ಇದರ ಕ್ರಯಪತ್ರ ಇವರಿಗೆ ದೊರಕದೆ ಇದೆ.—ಎಡಿ]

ನಾಮಧಾರಿಯವರ ಲಗ್ನದಲ್ಲಿ ಕುಡುಕತನವು.

ಸ್ವಾಮಿ,

ತಾ 6-6-1912 ನೇ ತಮ್ಮ ವೃತ್ತಾಂತ ಪತ್ರಿಕೆ 7 ನೇ ಪೇಜಿನಲ್ಲಿ ಕೊಪ್ಪ ತಾಲ್ಲೂಕು ಬಾವಲಮನೆ ಸಮೀಪ ಒಬ್ಬ ನಾಯಕರಲ್ಲಿ ಮೇ ತಾ 23 ರಲ್ಲಿ ನಡೆದ ಲಗ್ನದಲ್ಲಿ ದಿಬ್ಬಣದವರಿಂದ ಇಬ್ಬಲ್ಲಾಗಿ ಹಣ ತೆಗೆದುಕೊಂಡರೆಂತಲೂ, ದಿಬ್ಬಣದವರ್‍ಯಾರೂ ಮನೆ ಒಳಗೆ ಪ್ರವೇಶಿಸದಂತೆ ಹೆಬ್ಬಾಗಿಲಲ್ಲಿ ಮಹಮದೀಯರ ಕಾವಲಿಟ್ಟದ್ದಾಗಿಯೂ ಪ್ರಕಟಿಸೋಣವಾಗಿದೆ. ಕಡೆ ... ನಾಯಕರಲ್ಲಿ ಮೇ ತಾ 23 ರಲ್ಲಿ ನಡೆದ ಲಗ್ನಕ್ಕೆ ನಾನು ಹೋಗಿದ್ದೆನು. ನಾಯಕರ ಬಂಧುಗಳು ನೆಂಟರು ಸಹ ಹಾಜರಾಗಿದ್ದರು. ಗಂಡಿನವರ ದಿಬ್ಬಣವು ಮೇ 24 ನೇ ರಾತ್ರಿ 9 ಗಂಟೆಗೆ ನಾಯಕರ ಮನೆಗೆ ಬರೋಣಾಯ್ತು. ದಿಬ್ಬಣವು ಬರುವ ಮಾರ್ಗದಲ್ಲಿ ಕಮ್ಮರಡಿ ಎನ್ನುವ ಒಂದು ಊರು ಇದೆ. ಇಲ್ಲಿ ಒಂದು ಸಾರಾಯಿ ಅಂಗಡಿ ಇದೆ. ಸದರಿ ಕಮ್ಮರಡಿಯಲ್ಲಿ ದಿಬ್ಬಣದವರಲ್ಲಿ ಕೆಲವು ಜನರು ಅರ್ಧ ತಾಸಿನವರೆಗೆ ವಿಶ್ರಮಿಸಿಕೊಂಡು, ಸಾರಾಯಿ ಅಂಗಡಿ ವೆಂಕಟನಿಗೆ 18 ರೂಪಾಯಿ ವ್ಯಾಪಾರ ಮಾಡಿ, ಪುನಹ ದಿಬ್ಬಣಕ್ಕೆ ಬಂದು ಸೇರಿಕೊಂಡರು. ದಿಬ್ಬಣವು ನಾಯಕರ ಮನೆ ಮುಂಭಾಗ ಮೈದಾನದಲ್ಲಿ ಬಂದು ನಿಂತಿರುವಾಗ ನಾಯಕರ ಕಡೆಯವರು ಗಂಡಿನ ದಿಬ್ಬಣ ಇದಿರುಗೊಳ್ಳುವದಕ್ಕೆ ಹೋಗಿ ನೋಡುವಲ್ಲಿ ದಿಬ್ಬಣದವರಲ್ಲಿ ಕೆಲವರು ಅಲ್ಲಲ್ಲಿ ಶಯನಮಾಡಿದರು. ಕೆಲವರು ತಲೆತೂಕು ಹಾಕುವರಲ್ಲಿ ಇದ್ದರು. ನಾಯಕರ ಕಡೆಯವರು ಇದನ್ನು ತಿಳಿದು ಆ ಜನರಿಗೆ ಶಕ್ತಿಯನ್ನು ಮನೆಯ ಕಣದಲ್ಲಿ ಮಾಡಿಸಿ ಕೊಟ್ಟಿದ್ದರು. ದಿಬ್ಬಣದವರು ಯಾವ ಸ್ಥಿತಿಯಲ್ಲಿ ಇದ್ದವರೆಲ್ಲರನ್ನೂ ಮರ್ಯಾದೆಯಾಗಿ ಮನೆಗೆ ಕರೆದುಕೊಂಡು ಹೋಗಿ ನಡೆಯಬೇಕಾದ ಪಾದಪ್ರಕ್ಷಾಲನ, ದಾನದಕ್ಷಿಣೆ, ಗಂಧಪುಷ್ಪ ತಾಂಬೂಲಾದಿ ಸಮಸ್ತ ಕಾರ್ಯವೂ ನಡೆದ ನಂತರ ಊಟಕ್ಕೆ ಕರೆದರೂ ದಯಮಾಡಿಸುವಲ್ಲಿ ಕಣದಲ್ಲಿ ಮಲಗಿದ್ದ ಕುಡುಕರನ್ನು ಊಟಕ್ಕೆ ಕರೆಯುವಲ್ಲಿ ಕೆಲವರಿಗೆ ಎಚ್ಚರವಿರಲಿಲ್ಲ. ಕೆಲವರು ಹೆಚ್ಚು ಕಡಿಮೆ ಮಾತನಾಡತೊಡಗಿದರು. ಅನೇಕರು ಸಮಜಾಯಿಸಿ ಹೇಳಿದರೂ ಕೇಳುತ್ತಿರಲಿಲ್ಲ. ಬಾಯಿಗೆ ಬಂದಂತೆ ಮಾತನಾಡತೊಡಗಿದರು. ಆಗ ವಿವೇಕಶಾಲಿಗಳಾದ ಹೊಸೂರು ಹೊ॥ ಮ ಪ ಸುಬ್ಬಣ್ಣಗೌಡರು ಹೇಳಿದರು—ಈ ಜನರಿಗೆ ತಲೆ ಸರಿಯಾಗಿಲ್ಲ. ಇನ್ನು ಇವರಲ್ಲಿ ಯಾರೂ ಮಾತನಾಡುವ ಬೇಕಾಗಿಲ್ಲ. ಇನ್ನು ಒಂದು ಗಂಟೆ ನ ತರ ಊಟಕ್ಕೆ ಕರೆಯಬಹುದು ಎಂದು ಸರ್ವರೂ ಊಟಕ್ಕೆ ದಯಮಾಡಿಸಿದರು. ಪುನಹ ಒಂದು ಗಂಟೆ ಬಿಟ್ಟು ಅವರುಗಳ ದಿಬ್ಬಣದ ಮುಖಂಡರು ಶಿರೂರು ವೆಂಕಪ್ಪಗೌಡರು, ನಳುವಡಿ ದುಗ್ಗಪ್ಪ ಗೌಡರು ಸಹ ಸದರಿ ಜನರನ್ನು ಊಟಕ್ಕೆ ಕರೆಯುವಲ್ಲಿ ಇವರಿಗೆ ಮನಸ್ಸಿಲ್ಲವಾಗಿ ಮಾಡಿದರು. ಆಗ ನಾಯಕರ ಮನೆಯವರು ಹೋಗಿ ಕರೆದಾಗ ಆ ಕುಡುಕರ ಮುಖಂಡರೊಬ್ಬರು ಮಲಗಿದವರು ಎದ್ದುಕೊಂಡು ಕೋಳಿ ಕೂಗಿದಂತೆ ತಮ್ಮ ಮುಂದ ಕೂಗಿ ಅಲ್ಲಿಯೇ ಮಲಗಿಕೊಂಡು, —ಕೋಳಿ ಕೂಗಿತಪ್ಪಾ ನಮಗೆ ದಿನ, ನಾವು ಆದ ಹೊತ್ತು ಊಟ ಮಾಡಕ್ಕಿಲ್ಲ ಎಂದು ಹೇಳಿದಂಡಿಗ ಹಲರ ವಶದಲ್ಲಿ ಡಿಪಾಜಿಟ್ಟಾಗಿದ್ದ ಮತ್ತಷ್ಟು ಸಾರಾಯಿ ತರಿಸಿ ಇವರನ್ನು ಕರೆಯಲಿಕ್ಕೆ ಬಂದವರಿಗೂ ಕೊಡುವ ಏರ್ಪಾಡು ಮಾಡುವಾಗ ಇವರು ತಿರಿಗಿ ಮನೆಗೆ ಬಂದರು. ಈ ಕುಡುಕರ ಸಹವಾಸ ಬೇಡವೆಂದು ಎಲ್ಲರೂ ಸುಮ್ಮಗಾದರು. ಇವರಾದರು ಬೆಳಗಿನ ಜಾವ 5 ಗಂಟೆಗೆ ತಮ್ಮ ದಿಬ್ಬಣದವರಿಗೂ ಗಾಯಗು ಸಹ ಹೇಳದೆ ಹೊರಟುಹೋಗಿದ್ದರು. ಇಷ್ಟೆ ಶಿವಾಯಿ ದಿಬ್ಬಣದ ಎಲ್ಲರ ವಶದಲ್ಲಿ ಇಟ್ಟದ್ದು ಸುಳ್ಳು. ವರೋಧಿಕೃತು ಸಂ॥ ಪುಷ್ಯ ಶು. ೧ ದ ದಿವಸದಲ್ಲಿ ತೀರ್ಥಹಳ್ಳಿಯಲ್ಲಿ ನಮ್ಮ ಜನಾಂಗದವರು ನಡಿಸಿದ ವಿಚಾರಣೆಗೆ ಹಾಜರಿಸಿ ಕುಡುಕರನ್ನು ಸಭೆಗೆ ಬರಮಾಡಿಸಿಲ್ಲ. ಲಗ್ನಕಾಲದಲ್ಲಿ ಗಂಡಿನವರು ತಮ್ಮ ತಮ್ಮ ಸ್ಥಿತಿ ಅರಿತು ಹೆಣ್ಣಿನವರ ಕಡೆ ಹೆಣ್ಣಿಗೆ ಡಾಗೀನು ಮಾಡಿಸುವುದಕ್ಕೆ ಹಣಕೊಡುವದುಂಟು. ಹೆಣ್ಣಿನವರ ಬಲಾತ್ಕಾರವಿಲ್ಲ.

ಒಬ್ಬ ಬಾತ್ಮೀದಾರ.

ಇಂಡಿಯಾ ದೇಶದ ವೃತ್ತಾಂತಗಳು.

ಮುಂಬಾಯಿ ಪಟ್ಟಣದಲ್ಲಿರುವ ಕಪೋಲಬನಿಯಾ ಪಂಗಡಕ್ಕೆ ಸೇರಿದ ಬಡವರಿಗೂ, ನಿರ್ಗತಿಕರಿಗೂ ಪ್ರತ್ಯೇಕವಾದ ಒಂದು ಆಸ್ಪತ್ರೆಯನ್ನು ಇಟ್ಟು ಧರ್ಮಾರ್ಥವಾಗಿ ಚಿಕಿತ್ಸೆಗಳು ನಡೆಯುವಂತೆ ಮಾಡಬೇಕೆಂದು ಆ ಜನರ ಮುಖಂಡರಾದ ಮೆ॥ ತ್ರಿಭುವನದಾಸ್ ವಜೀರ್‌ದಾಸ್ ಎಂಬಾತನು 10,000 ರೂಪಾಯಿ ಕೊಟ್ಟಿದ್ದಾನೆ. ಭಜಕರ್ ಮತ್ತು ವನಮಾಲಿದಾಸ್ ಎಂಬ ವೈದ್ಯರಿಬ್ಬರು ಆ ಜನರಿಗೆ ಧರ್ಮಾರ್ಥವಾಗಿ ಚಿಕಿತ್ಸೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

* * *

ಮಾಲೋಜಾ ಎಂಬ ಜಹಜು 37,53,150 ರೂಪಾಯಿ ಚಿನ್ನವನ್ನು ಹಿಂದುಸ್ಥಾನಕ್ಕೂ, 7,50,000 ರೂಪಾಯಿ ಚಿನ್ನವನ್ನು ಸಿಂಗಪುರಕ್ಕೂ ತರುತ್ತಿದೆ.

* * *

ಬಂಗಾಳಾ ಗವರ್ನ್‌ಮೆಂಟಿನಿಂದ ವರುಷಾಶನವನ್ನು ಪಡೆದು ಕಲ್ಕತ್ತೆಯಲ್ಲಿ ಪ್ರಕಟವಾಗುತ್ತಿದ್ದ "ಸುಲಭ ಸಮಾಚಾರ" ಎಂಬ ಬಂಗಾಳಿ ವಾರ ಪತ್ರಿಕೆಯು ಇದೇ ಜೂನ್ ತಾ 1 ರಿಂದ ನಿಂತುಹೋಯಿತು.

* * *

ನೀಲಗಿರಿ ಬೆಟ್ಟದ ಮೇಲೆ ಬೇಸಗೆಯನ್ನು ಕಳೆಯುತ್ತಿರುವ ಮದರಾಸ್ ಗವರ್ನರವರನ್ನು ಕಳೆದ ವಾರ ಒಂದು ಹುಚ್ಚುನಾಯಿ ಕಡಿಯಿತು. ಆ ಕೂಡಲೆ ಅವರಿಗೆ ಚಿಕಿತ್ಸೆ ಮಾಡಿದ್ದರಿಂದ ಈಗ ಅವರು ಸುಖವಾಗಿರುತ್ತಾರೆ.

* * *

ದೆಹಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಬಟವಾಡೆ ಮಾಡಿರುವ ಮೆಡಲುಗಳನ್ನು ಯಾರಾದರೂ ಕಳೆದುಕೊಂಡರೆ ಐದು ರೂಪಾಯಿ ಕೊಟ್ಟು ಬೇರೊಂದನ್ನು ತರಿಸಿಕೊಳ್ಳುವಂತೆ ಇಂಡಿಯಾ ಗವರ್ನ್‌ಮೆಂಟಿನವರು ಅಪ್ಪಣೆಕೊಟ್ಟಿದ್ದಾರೆ.

* * *

ಅಮೃತಸಾರದಲ್ಲಿ ಸೂರತ್‌ಸಿಂಗ್ ಎಂಬ ಪೋಲೀಸ್ ಇನ್‌ಸ್ಪೆಕ್ಟರು ಒಬ್ಬ ಚಟ್ಟೀಗಾರ ಸ್ತ್ರೀಯ ಮನೆಗೆ ಅಕ್ರಮವಾಗಿ ಪ್ರವೇಶಮಾಡಿದನೆಂದು ರುಜುವಾತಾದದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದರು.

* * *

ಮುಂಬಾಯಿ ಪಟ್ಟಣದಲ್ಲಿ ವಾಂತಿಭೇದಿ ಉಪದ್ರವು ಈಗ ಒಂದೆರಡು ವಾರಗಳಿಂದ ಬಹಳ ಕಠಿಣವಾಗಿದೆ. ಕಳೆದ ಬುಧವಾರ ಒಂದೇ ದಿನ ಈ ರೋಗದಲ್ಲಿ 247 ಮರಣಗಳಾದವು. ಈಚೆಗೆ ದಿನಂ 100 ಜನರಿಗೆ ಕಡಮೆ ಇಲ್ಲದೆ ಮೃತಪಡುತ್ತಿದ್ದಾರೆ.

* * *

ಹಿಂದುಸ್ಥಾನದ ಬೇರೆ ಬೇರೆ ಆಧಿಪತ್ಯಗಳ ಗವರ್ನರುಗಳೂ ಲೆಫ್ಟಿನೆಂಟ್ ಗವರ್ನರುಗಳೂ ಮುಂದಿನ ಜೂಲೈ, ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಸಿಂಲಾ ಪಟ್ಟಣಕ್ಕೆ ಹೋಗಿ ವೈಸ್‌ರಾಯಿಯವರ ಆತಿಥ್ಯದಲ್ಲಿದ್ದು ಬರುತ್ತಾರೆಂದು ಪ್ರಕಟವಾಗಿದೆ.

* * *

ಕಲ್ಕತ್ತಾ ಪಟ್ಟಣದ ಕಾಲೇಜ್ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಕೆಡುಕಾಗಲಿ ಅನಾನುಕೂಲವಾಗಲಿ ಆಗದಂತೆ ಆ ಬೀದಿಯಲ್ಲಿ ಯಾರೂ ಓಲಗ ಬಾಜಾ ವಾದ್ಯಂತ್ರಿಗಳನ್ನು ಮಾಡಿಕೊಂಡು ಮೆರವಣಿಗೆ ಹೋಗಕೂಡದೆಂದು ಪೋಲೀಸ್ ಕಮಿಷನರವರು ಹುಕುಂ ಮಾಡಿದ್ದಾರೆ.

* * *

ಪೋರಬಂದರಿನಿಂದ ಮುಂಬಾಯಿಗೆ ಹೋಗುತ್ತಿದ್ದ ಒಂದು ರೈಲ್ ಗಾಡಿಯು ಕಳೆದ ಬುಧವಾರ ಸಾಯಂಕಾಲ ಕಾಪೇರಿಯಾ ಸ್ಟೇಷನ್ ಸಮೀಪದಲ್ಲಿ ಭಯಂಕರವಾದ ಸುಂಟರಗಾಳಿಗೆ ಸಿಕ್ಕಿ ಬೀಳ್ಕೊಂಡಿತು. ಗಾಡಿಗಳು ಮುರಿದು ರಸ್ತೆ ಹಾಳಾಯಿತಲ್ಲದೆ ಪ್ರಯಾಣಿಕರ್‍ಯಾರಿಗೂ ಪ್ರಾಣ ಹೋಗಲಿಲ್ಲ. ರಸ್ತೆ ಸರಿ ಮಾಡುವುದಕ್ಕೆ ಮೂರು ದಿನ ಹಿಡಿಯಿತು.

* * *

ಮದರಾಸ್ ಗವರ್ನ್‌ಮೆಂಟಿನವರು ಫಾರೆಸ್ಟ್ ಇಲಾಖೆಯ ನೌಕರರುಗಳನ್ನು ತರಪೇತುಮಾಡುವುದಕ್ಕಾಗಿ ಜೂಲೈ ತಾ 1 ರಿಂದ ಕೊಯಮುತ್ತೂರಿನಲ್ಲಿ ಒಂದು ಫಾರೆಸ್ಟ್ ಸ್ಕೂಲನ್ನು ಇಟ್ಟು ನಡಿಸುತ್ತಾರೆ. ಮುಂದಿನ ವರುಷದಿಂದ ಇತರ ಕಡೆಗಳ ವಿದ್ಯಾರ್ಥಿಗಳನ್ನು ಈ ಸ್ಕೂಲಿಗೆ ಸೇರಿಸಿಕೊಳ್ಳುವರೆಂದೂ, ಈ ವರುಷ ಇದು ಸಾಧ್ಯವಿಲ್ಲವೆಂದೂ ತಿಳಿಸಲಾಗಿದೆ.

* * *

ಪಂಜಾಬ್ ಆಧಿಪತ್ಯದಲ್ಲಿ ಸರ್ಕಾರದವರು ಚಲಾವಣೆಗೆ ತಂದಿರುವ ಚಿನ್ನದ ನಾಣ್ಯಗಳು ಎಷ್ಟುಮಟ್ಟಿಗೆ ಚಲಾವಣೆಯಲ್ಲಿವೆ? ಪ್ರಜೆಗಳು ಅವನ್ನು ಎಷ್ಟುಮಟ್ಟಿಗೆ ಬಚ್ಚಿಟ್ಟುಕೊಂಡಿದ್ದಾರೆ? ಅಥವಾ ಕರಗಿಸಿ ಒಡವೆಗಳನ್ನು ಮಾಡಿಕೊಂಡಿದ್ದಾರೆ ಎಂಬ ವಿಚಾರವನ್ನು ತನಿಖೆಮಾಡಿ ರಿಪೋರ್ಟು ಕೊಡಬೇಕೆಂದು ಗವರ್ನ್‌ಮೆಂಟಿನವರು ಒಬ್ಬ ಅಧಿಕಾರಿಯನ್ನು ನೇಮಕಮಾಡಿರುತ್ತಾರೆ.

* * *

ಕರಾಚಿ ಪಟ್ಟಣದಿಂದ 12 ಮೈಲಿ ದೂರದಲ್ಲಿ ಮಾಲೀರ್ ನದಿಯ ಮೇಲೆ ಒಂದು ಭಾರೀ ರೈಲ್ವೆ ಸೇತುವೆ ಇದೆ. ಇದು ಈಗ ಶಿಥಿಲವಾಗಿರುವುದರಿಂದ ಅದರ ಮೇಲೆ ಗಾಡಿಗಳನ್ನು ಬಹಳ ಹುಷಾರಾಗಿಯೂ ನಿಧಾನವಾಗಿಯೂ ಬಿಡತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ. ಇನ್ನು ಕೆಲವು ದಿನಗಳೊಳಗಾಗಿ ಈ ಸೇತುವೆಯನ್ನು ಕಿತ್ತುಹಾಕಿ ಎರಡು ರೈಲುಗಾಡಿಗಳು ಏಕಕಾಲದಲ್ಲಿ ಸಂಚರಿಸುವಂಥಾ ಭಾರೀ ಸೇತುವೆಯನ್ನು 14 ಲಕ್ಷ ರೂಪಾಯಿ ಮುಟ್ಟಿಸಿ ಕಟ್ಟಿಸುವಂತೆ ಏರ್ಪಾಡು ನಡೆದಿರುವುದು.

* * *

ಕರಾಚಿ ಪಟ್ಟಣದಲ್ಲಿ ತಾಂದೋ ಆದಂ ಎಂಬುವನು ತನ್ನ ರೋಗಕ್ಕೆ ಒಬ್ಬ ಹಕೀಮನ ಹೇಳಿಕೆಯಂತೆ ಒಂದು ಹಲ್ವಾ ತಯಾರ್ಮಾಡಿ ಮನೆಯಲ್ಲಿಟ್ಟು ಕೆಲಸದ ಮೇಲೆ ಹೋದನು. ಬೀದಿ ಗುಡಿಸುವವನಿಗೆ ಆ ಲೇಹದಲ್ಲಿ ಕೆಲವು ಭಾಗ ಸಿಕ್ಕಿತು. ಅದನ್ನು ಅವನು ಮನೆಗೆ ತೆಗೆದುಕೊಂಡು ಹೋಗಿ ಹದಿನೇಳು ಜನರು ಅದನ್ನು ತಿಂದುಬಿಟ್ಟದ್ದರಿಂದ ಅವರಿಗೆಲ್ಲಾ ವಿಷಹಾಕಿದಂತಾಗಿ ಎಲ್ಲರೂ ಜ್ಞಾನತಪ್ಪಿ ಬಿದ್ದುಕೊಂಡರು. ಸರ್ಕಾರದವರು ಅವರನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡುತ್ತಿದ್ದಾರೆ. ಮ್ಯಾಜಿಸ್ಟ್ರೇಟರು ಹೋಗಿ ಅವರ ವಾಜ್ಮೂಲಗಳನ್ನು ಬರೆದುಕೊಂಡಿದ್ದಾರೆ.

* * *

ಲಾಹೋರಿನಲ್ಲಿರುವ ಹಿಂದುಸ್ಥಾನದ ಬ್ಯಾಂಕಿಂಗ್ ಮತ್ತು ಇನ್‌ಷೂರೆನ್ಸ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ಗಂಗಾರಾಮವರ್ಮ ಸೆಂಬಾತನು ಕಂಪನಿಯ ಬಾಬತು ಎರಡು ಲಕ್ಷ ರೂಪಾಯನ್ನು ತಿಂದುಹಾಕಿ ತಲೆತಪ್ಪಿಸಿಕೊಂಡು ಸೀಮೆಗೆ ಹೋಗುತ್ತಿದ್ದನು. ಪೋಲೀಸಿನವರು ಉಸ್ತುವಾರಿ ಇಟ್ಟು ಅವನನ್ನು ಏಡನ್ ಪಟ್ಟಣದಲ್ಲಿ ಹಿಡಿದು ಲಾಹೋರಿಗೆ ಕರೆದುತಂದರು. ಎರಡು ಲಕ್ಷ ರೂಪಾಯಿನ ಜಾಮಿನ್ ಕೊಟ್ಟಲ್ಲಿ ಅವನನ್ನು ಜಾಮೀನಿನ ಮೇಲೆ ಬಿಡಬಹುದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೇಳಿದರು. ಆದರೆ ಜಾಮಿನ್ ಕೊಡಲಾರದೆ ಹೋದದ್ದರಿಂದ ಪೋಲೀಸಿನವರ ವಶದಲ್ಲಿ ರಬೇಕಾಗಿದೆ.

* * *

ಕಾಠ್ಯವಾಡ ಪ್ರಾಂತ್ಯಕ್ಕೆ ಸೇರಿದ ಭಾವನಗರ ಸಂಸ್ಥಾನದ 1911-12 ನೇ ಸಾಲಿನ ವಾರ್ಷಿಕ ರಿಪೋರ್ಟು ಪ್ರಕಟವಾಗಿದೆ. ಈ ಸಂಸ್ಥಾನದ ವಿಸ್ತೀರ್ಣ 2,860 ಚದರ ಮೈಲಿ, ಪ್ರಜಾಸಂಖ್ಯೆ 4,41,367. ರಾಜಾದಾಯವು 46,271,00 ರೂಪಾಯಿ. ಇದರಲ್ಲಿ ಇಂಗ್ಲಿಷ್ ಸರ್ಕಾರಕ್ಕೆ 1,28,000 ರೂಪಾಯಿ, ಬರೋಡಾ ಸಂಸ್ಥಾನಕ್ಕೆ 73,580 ರೂಪಾಯಿ, ಜುನಾಘಡ ಸಂಸ್ಥಾನಕ್ಕೆ 22,850 ರೂಪಾಯಿ ಪೊಗದಿಗಳನ್ನು ಪಾವತಿಮಾಡಿ, ಉಳಿದದ್ದನ್ನು ಸಂಸ್ಥಾನದ ಅಭ್ಯುದಯಕ್ಕೆ ವಿನಿಯೋಗಿಸುತ್ತಾರೆ. ಭಾವನಗರದಲ್ಲಿ ಒಂದು ನೂಲಿನ ಕಾರ್ಖಾನೆ ಇದೆ. ಕಳೆದ ವರುಷ 12,67,180 ರೂಪಾಯಿನ ನೂಲೂ, 5,96,409 ರೂಪಾಯಿನ ಬಟ್ಟೆಗಳೂ ಈ ಕಾರ್ಖಾನೆಯಲ್ಲಿ ತಯಾರಾದವು. ಈ ಸಂಸ್ಥಾನದ ಆಸ್ತಿಯಾದ ರೈಲ್ವೆಯಲ್ಲಿ ಖರ್ಚುಗಳೆದು ಕಳೆದ ವರುಷ 8,61,000 ರೂಪಾಯಿ ಲಾಭ ಉತ್ಪತ್ತಿ ಆಗಿದೆ.

* * *

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಆಲೆಂಗಾಡ್ ಎಂಬ ಊರಿನ ಮ್ಯಾಜಿಸ್ಟ್ರೇಟರಾದ ಮೆ॥ ಎಸ್. ಕೆ ಮಹದೇವ ಅಯ್ಯರವರು ಶಂಕರ ನಾರಾಯಣನೆಂಬ ಒಬ್ಬ ಪೋಲೀಸಿನವನಿಗೆ 20 ರೂಪಾಯಿ ಜುಲ್ಮಾನೆ ಹಾಕಿದರು. ಅವನು ತನ್ನ ಸೊಂಟಕ್ಕೆ ಕಟ್ಟಿಕೊಂಡಿದ್ದ ಚರ್ಮದ ನಡುಕಟ್ಟನ್ನು ಬಿಚ್ಚಿ ಎರಡಾಗಿ ಮಡಿಸಿಕೊಂಡು ಮ್ಯಾಜಿಸ್ಟ್ರೇಟರ ನೆತ್ತಿಗೆ ಗುರಿಯಿಟ್ಟು ಹೊಡೆದನು. ಆದರೆ ಆ ಏಟು ಅವರ ನೆತ್ತಿಯ ಮೇಲಿದ್ದ ಪಂಕಾಕ್ಕೆ ತಗಲಿ ಬಿದ್ದುಬಿಟ್ಟಿತು. ಇಬ್ಬರು ಹೋಗಿ ಅವನ ಎರಡು ತೋಳುಗಳನ್ನೂ ಹಿಡಿದುಕೊಂಡರು. ಆದರೂ ಅವನು ಕಾಲಿನಿಂದ ಮ್ಯಾಜಿಸ್ಟ್ರೇಟರನ್ನು ಒದ್ದನು. ಕುರ್ಚಿಯ ಒಂದು ಕಾಲು ಮುರಿದು ಮ್ಯಾಜಿಸ್ಟ್ರೇಟರು ಬೊಬ್ಬೆಹಾಕುತ್ತಾ ಉರುಳಿ ಕೆಳಗೆ ಬಿದ್ದರು. ಆ ದುಷ್ಟನನ್ನು ಕೊಟ್ಟಾಯಂ ಸೆಷನ್ಸ್ ಜಡ್ಜರಾದ ಮೆ॥ ಕೆ. ಶಂಕರಪಿಳ್ಳೆಯವರು ವಿಚಾರಣೆಮಾಡಿ, ಈ ಅಪರಾಧಕ್ಕೆ ಕಾನೂನಿನಲ್ಲಿ ಹೇಳಿರುವಂಥಾ ಪೂರಾ ಶಿಕ್ಷೆಯನ್ನು ಅಂದರೆ ಐದು ವರುಷದ ಕಠಿಣ ಸಜೆಯನ್ನು ವಿಧಿಸುತ್ತಾರೆ.

* * *

ಗುಜರಾತಿನಲ್ಲಿ ಕ್ಷಾಮಬಾಧೆಯನ್ನು ಪರಿಹರಿಸುವುದಕ್ಕೆ ಮುಂಬಾಯಿ ಪಟ್ಟಣದ ಕೆಲವು ಮುಖಂಡಸ್ಥರುಗಳೂ ವರ್ತಕರೂ ಕಾರ್ಖಾನೆಗಳ ಯಜಮಾನರೂ ... ಒಂದು ಫಂಡನ್ನು ಕೂಡಿಸಲಾರಂಭಿಸಿದ್ದಾರೆ. ಅವರು 2 ಆಣೆ ... ಯೊಂದಲೂ ನಷ್ಟಪಡುವದಿಲ್ಲ. ಈ ರೀತಿ ಇದುವರೆಗೆ ಗಿಂತ ಹೆಚ್ಚಾಗಿ ... ಕೋಟಿ ಮುಂಬಾಯಿನ ಸಂಘದಾದ 71,000 ರೂಪಾಯಿ ಕೂಡಿಸಿದೆ. ಇದು ... ಮುಖಿಯಾ ಮೆ॥ ನರೋತ್ತಮದಾಸ್ ಮುರಾರ್ಜಿ ಗೋಕುಲದಾಸ್ ಯವರು ... ರಣೆಯ ಫಂಡನ್ನು ಶಾಶ್ವತವಾಗಿ ಕೂಡಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ. ಆ ಆಧಿಪತ್ಯದಲ್ಲಿ ಇನ್ನುಮುಂದೆ ಕ್ಷಾಮಪ್ರಾಪ್ತವಾದಲ್ಲಿ ಈ ಫಂಡಿನಿಂದ ದ್ರವ್ಯಸಹಾಯವಾಗಿ ಕ್ಷಾಮನಿವಾರಣೆಯಾಗುವಂತೆ ಮಾಡಬೇಕೆಂಬುವುದೇ ಅವರ ಉದ್ದೇಶ. ಸುಭಿಕ್ಷಕಾಲದಲ್ಲಿ ಪ್ರತಿ ವರುಷವೂ ಪ್ರತಿ ಒಬ್ಬ ವರ್ತಕನೂ, ಕಾರ್ಖಾನೆಯವರೂ, ಸಾಮಾನ್ಯ ಪ್ರಜೆಗಳೂ, ಪುಣ್ಯವಂತರೂ ಸ್ವಲ್ಪ ಸ್ವಲ್ಪ ಈ ಫಂಡಿಗೆ ಚಂದಾ ಕೊಡಬೇಕೆಂದು ಏರ್ಪಾಡಾಗಿದೆ. ಈ ಫಂಡಿಗೆ ಚಕ್ರವರ್ತಿ ಸಾರ್ವಭೌಮರವರ ಹೆಸರನ್ನು ಇಡುವರು.

* * *

ವೈಸ್‌ರಾಯಿ ಪದವಿಯಲ್ಲಿದ್ದು ಸೀಮೆಗೆ ತೆರಳಿದ ಲಾರ್ಡ್ ಮಿಂಟೋ ಪ್ರಭುಗಳ ಹೆಸರನ್ನು ಶಾಶ್ವತಪಡಿಸುವುದಕ್ಕೆ ಹಿಂದುಸ್ಥಾನದಲ್ಲಿ 1,32,400 ರೂಪಾಯಿ ಚಂದಾವಸೂಲಾಗಿದೆ. ಇನ್ನೂ 11,260 ರೂಪಾಯಿ ವಾಗ್ದಾನಮಾಡಿರುವವರಿಂದ ಬರಬೇಕು. ಆ ಮಹನೀಯರ ಹೆಸರಿನ ಮೇಲೆ ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಒಂದು ಉದ್ಯಾನವನವನ್ನು ಏರ್ಪಡಿಸಿ, ಅದರೊಳಗೆ ಒಂದು ಜಯಸ್ತಂಭವನ್ನು ಕಟ್ಟಿಸಿ ಅದರ ನಾಲ್ಕು ಮುಖಗಳಲ್ಲೂ ನಾಲ್ಕು ಭಾಷೆಗಳಲ್ಲಿ ಅವರ ಮೂಲಕ ನಡೆದ ಪ್ರಜಾರಂಜಕವಾದ ರಾಜಕೀಯ ಶಿಸ್ತುಗಳನ್ನು ಬರಸಿ ಶಾಶ್ವತಪಡಿಸಬೇಕೆಂದು ಮೊದಲೇ ಗೊತ್ತಾಗಿದೆಯಷ್ಟೆ. ಫಂಡಿನ ಕಮಿಟಿಯವರು ಯಮುನಾ ನದಿಯ ದಡದ ಮೇಲೆ ಗೊತ್ತುಮಾಡಿರುವ ಪ್ರದೇಶವು ಸೈನ್ಯದ ಇಲಾಖೆಗೆ ಸೇರಿದ್ದಾಗಿದೆ. ಅವರು ಅದಕ್ಕೆ ಪ್ರತಿಯಾಗಿ ಬೇರೊಂದು ಸ್ಥಳವನ್ನು ತಮಗೆ ಕೊಡಿಸಬೇಕು, ಇಲ್ಲವಾದರೆ ಅದಕ್ಕೆ ಸಾಲೀಯಾನಾ 680 ರೂಪಾಯಿ ಬಾಡಿಗೆ ಬರುವ ರೀತಿ ಮಾಡಿಕೊಡಬೇಕು ಎಂದು ಕಮಿಟಿಯವರಿಗೆ ತಿಳಿಸಿದರು. ಕಮಿಟಿಯವರು ಈಗ ಈ ವಿಚಾರವನ್ನು ಗವರ್ನ್‌ಮೆಂಟಿಗೆ ಅರಿಕೆಮಾಡಿ ಅವರ ತೀರ್ಮಾನವನ್ನು ನಿರೀಕ್ಷಿಸಿಕೊಂಡಿದ್ದಾರೆ.

* * *

ಹೈದರಾಬಾದ್ ಸಂಸ್ಥಾನದ ನೈಜಾಮರವರ 36 ನೇ ವರುಷದ ವರ್ಧಂತಿ ಉತ್ಸವವನ್ನು ಕಳೆದ ವಾರ ನಡಿಸಿದರು. ಐಶ್ವರ್ಯವಂತರೂ ದೊಡ್ಡಮನುಷ್ಯರೂ ಅನೇಕ ಸಂತೋಷೋತ್ಸವಗಳನ್ನು ಮಾಡಿದರು. ಸಿಕಂದ್ರಾಬಾದಿನ ಉದ್ಯಾನವನದಲ್ಲಿರುವ ಆಸ್ಪೈಸ್ ಹಾಲ್ ಎಂಬ ಬಂಗಲೆಯಲ್ಲಿ ಕಳೆದ ಬುಧವಾರ ರಾತ್ರಿ ಒಂದು ವಿಶೇಷವಾದ ದರ್ಬಾರ್ ಆಯಿತು. ಅನೇಕ ಸಹಸ್ರಪ್ರಜೆಗಳು ಅಲ್ಲಿ ಸೇರಿದ್ದರು. ಬೆಳಗಿನ ಝಾವದ 3 ಗಂಟೆಗೆ ನೈಜಾಮರವರು ಪರಿವಾರಸಮೇತ ಅಲ್ಲಿಗೆ ದಯಮಾಡಿದರು. ಅವರ ಸಾರೋಟನ್ನು ದೊಡ್ಡಮನುಷ್ಯರೇ ಸೇರಿ ಎಳೆದು ತಂದರು. ನೈಜಾಮರವರು ತಮ್ಮ ಇಬ್ಬರು ಕುಮಾರರನ್ನೂ ಉಭಯಪಾರ್ಶ್ವಗಳಲ್ಲೂ ಕೂರಿಸಿಕೊಂಡು, ಸಿಂಹಾಸನದಲ್ಲಿ ಕುಳಿತುಕೊಂಡ ಮೇಲೆ ಪ್ರಜೆಗಳ ಪರವಾದ ಅಡ್ರೆಸ್ಸನ್ನು ಮಂತ್ರಿಯಾದ ಸರ್ ಕೃಷ್ಣಪ್ರಸಾದರವರು ಓದಿ ಒಪ್ಪಿಸಿದರು. ನೈಜಾಮರವರು ಬಹಳ ಸಂತೋಷಪಟ್ಟವರಾಗಿ ಪ್ರಜೆಗಳಿಗೆ ಒಳ್ಳೆಯದನ್ನು ಮಾಡುವುದರಲ್ಲಿ ತಾವು ಸ್ವಲ್ಪವೂ ಆಲಸ್ಯಪಡುವುದಿಲ್ಲವೆಂದು ಭರವಸೆಯನ್ನು ದಯಪಾಲಿಸಿದರು. ಮುಂದಿನ ಸೈನ್ಯಗಳ ಕವಾತು, ಮೊಗಲಾಯಿ ದರ್ಬಾರು, ಔತನ ಮೊದಲಾದವುಗಳೆಲ್ಲಾ ನೆರವೇರಿದವು. ನೈಜಾಮರವರು ಮೊನ್ನೆ ಸೋಮವಾರ ಮುಂಬಾಯಿನಲ್ಲಿ ಹವಿನ್ನೆರಡು ದಿನ ಇದ್ದು ಬರುವುದಕ್ಕಾಗಿ ಹೈದರಾಬಾದಿನಿಂದ ಪ್ರಯಾಣಮಾಡಿದರು.

ಮಾಗಡಿಯ ವಿದ್ಯಮಾನಗಳು

ಅಯ್ಯಾ,—"ವೃತ್ತಾಂತ ಪತ್ರಿಕೆ"ಯ ಮೇ 30 ನೇ ತಾ ಸಂಚಿಕೆಯಲ್ಲಿ ಕಮಿಟಿ ಮೆಂಬರುಗಳು ಕೊಟ್ಟಿರುವ ಜವಾಬ್ ನೋಡಿ ಬಹಳ ಸಂತೋಷವಾಯಿತು. ಈ ಜವಾಬ್ ಅವುಲ್ದಾರ್ರ ಕೇವಲ ದಾಕ್ಷಿಣ್ಯ ದರ್ಶಕ್ಕೆ ಒಳಪಟ್ಟು ಬರೆದದ್ದು" ಹೊರತು ನಿಜಸ್ಥ ಬರೆದಿಲ್ಲ. ತಮ್ಮ 30 ನೇ ತಾ ಪತ್ರಿಕೆಯಲ್ಲಿ ಬರೆದದ್ದು ನಿಜವೋ ಈಗ ಬರೆಯುವದು ನಿಜವೋ ವಾಚಕ ಮಹಾಶಯರೇ ಯೋಚಿಸಿ ನಿರ್ಧರಿಸಲಿ. ಈ ತಾಲ್ಲೂಕಿನಲ್ಲಿ ಹೋದ ವರ್ಷ ಮಳೆ ಸಾಲದೆ ಬೆಳೆ ಕೆಟ್ಟು ಹೋಗಿ ರೈತರು ಹೊಟ್ಟೆಗಿಲ್ಲದೆ ಕಷ್ಟಪಡುತ್ತಾ ಇರುವಾಗ ತಾಲ್ಲೂಕ್ ಅಮಲ್ದಾರ್ರು ಮತ್ತು ಪೋಲೀಸ್ ಇನ್‌ಸ್ಪೆಕ್ಟರು, ಪಬ್ಲಿಕ್‌ವರ್ಕ್ಸ್ ಓವರ್‌ಸಿಯರು, ಟ್ಯಾಂಕ್ ಇನ್‌ಸ್ಪೆಕ್ಟರು ಸೇರಿ ಜನಗಳಿಂದ ಬಲಾತ್ಕಾರವಾಗಿ ಮಾಡಿದ ವಸೂಲ್ ಮಾಡಿದ್ದು ಸುಳ್ಳೋ ಅಲ್ಲವೋ ವಾಚಕರೇ ಊಹಿಸಲು ನಡೆದ ಅನೇಕ ವಿಷಯಗಳಲ್ಲಿ ಕೆಲವನ್ನು ಇಲ್ಲಿ ವಿವರಿಸುತ್ತೇನೆ.

ಮಾಗಡಿ ಕಸಬಾದಲ್ಲಿರುವ ಚೌಕದ ರಂಗಪ್ಪ ಶೆಟ್ಟರನ್ನು ಕಾರೊನೇಷನ್ ಫಂಡಿಗೆ 500 ರೂ ಕೇಳಿದ ಹಾಗೂ, ಕೊಡದೆ ಹೋದದ್ದರಿಂದ ಅವನ ಹೆಂಡತಿ ಕೆರೆ ಕಡೆಗೆ ಹೋಗಿ ನೀರು ಕೊಳ್ಳುವ ಬಟ್ಟೆ ಒಗೆಯುತ್ತಿದ್ದಳೆಂದು ಹಿಡಿದು ಭಾರ್ಗಕಾರದ ಕೋರ್ಟಿನಲ್ಲಿ ನಿಲ್ಲಿಸಿ ಅವಮಾನಪಡಿಸಿ ಶಿಕ್ಷಿಸುವ ಹಾಗೆ ಹೆದರಿಸಿದ ಹಾಗೂ, ಕಾರೊನೇಷನ್ ಕಟ್ಟಡದ ಕಾಂಟ್ರಾಕ್ಟಿನಲ್ಲಿ 300 ರೂ ನಲ್ಲಿ ಕಟ್ಟಡ ಕಟ್ಟಿದ ಭಾಗ ಕಟ್ಟಿಸಿಕೊಡಲು ಮುಚ್ಚಳಿಕೆ ಬರೆಸಿಕೊಂಡು ನಂತರ ಅದೇ ಈ ದರ್ಶಕ್ಕೆ ನಾರ್ಕ್ ಮಾಡಿದೆ ಎಂದು ಆರ್ಡರ್ ಮಾಡಿ ಬಿಟ್ಟಿರುವ ಹಾಗೂ ಹೇಳಿಕೊಳ್ಳುತ್ತಾರಲ್ಲಾ. ಮಾಗಡಿ ಬಳಿ ತಿರುಮಲೆ ಅರ್ಚಕ ಚಕ್ರ ಶ್ರೀನಿವಾಸಾಚಾರಿ ಎಂಬುವನು 60 ರೂ ಕೊಡಲು ಕೊಡದ ಕಾರಣದಿಂದ ಯಾವದೋ ಒಂದು ಹಳೇ ಕೇಸನ್ನು ಬಲವಡಿಸಿ ಮುಖಾಂತರ ವಿಚಾರಣೆಗೆಂದು ಸೋಮವಾರ ಕೋರ್ಟಿಗೆ ಕರೆಸಿಕೊಂಡು ಬಂದವರಿಗೆ ಶಿವನ ಅಜಾಪನಲ್ಲಿಟ್ಟು ತಂತರ ಅಮಲ್ದಾರ್ ಸೋಮವಾರ ಅವನು ಅರುಸ್ಥಾರನ್ನು ಕೇಸ್ ತೀರಿಸಿ ಕಮ್ಮಲ್ಲಿ ಆಡ್ಡಗಾಕು, ಆರ್ಬಿಟ್ರೇಟರ್ ಅಪ್ಪಿಕೇಷನ್ ಕೊಡುತ್ತೇನೆ, ಆರ್ಬಿಟ್ರೇಷನ್ ಕೊಡ ಬೇಕೆಂದು ಕೇಳಿಕೊಂಡರೂ ಅಂಗೀಕರಿಸದೆ ಬ್ಯಾರಿಸ್ಟರ್ ವಿಚಾರಣೆಯಾದ ದರಿಂದ ಕೇಸ್ ಟ್ರ್ಯಾಸ್ಫರ್ ಮಾಡಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಟ್ಟು ಟ್ರ್ಯಾನ್ಸ್‌ಫರ್ ಅಪ್ಲಿಕೇಷನ್ ಹಾಕಿದ್ದಾನೆ.

ಈ ಕಾರೊನೇಷನ್ ಹಾಲ್ ವಿಚಾರದಲ್ಲಿ ತಾಲ್ಲೂಕು ಕಿತನರ ನಡವಳಿಕೆಗಳು ಕೇಳಿ ನಮ್ಮ ತೆಪ್ಪಿ ಕಮಿಷನರ್ ಸಾಹೇಬರಿಗೆ ಬಂದಿರುತ್ತವೆಂಬುದಕ್ಕೆ ಸಂಶಯವಿಲ್ಲ. ಮತ್ತು ಈ ಹಾಲ್ ಏರ್ಪಾಡಿಗೆ ವಿಚಾರದಲ್ಲೇ ಹಾಲ್ ಕಟ್ಟಿಸಿ ಕೊಡಲು ತೀರ್ಮಾನವಾಗಿ ನಂತರ ಕಿಚನ್ ಸಹಾ ಕಟ್ಟಬೇಕೆಂದು ಈ ಸ್ವಯಂ ನೇಮಕವಾಗಿರುವ ಕಮಿಟಿಯವರು ಏರ್ಪಡಿಸಿದ ಕೆಲಸಕ್ಕೆ "ಈ ಹಾರುವದಕ್ಕೆ ಮುಂಚೆ ಗೋಣಿ ಹಾಸಿಕೊಂಡಂತೆ" ಕಾರೊನೇಷನ್ ಹಾಲ್ ಕಟ್ಟಲು ಸಾಮಾನು ಜಮಾಯಿಸಿ ಸುರುಮಾಡಿದ್ದರ ಮೇಲೆ ಡೆಪ್ಯುಟಿ ಕಮಿಷನರು—ಕಿಚನ್ ಕೆಲಸ ನಂತರ, ತಾನು ನೋಡಬೇಕೆಂದು ಹೇಳಿದ್ದೂ ಸಾಲದೆ ಹಿಂದೆ ಕಿಚನ್ ಕೆಲಸ ಸುರುಮಾಡಿದ್ದರ ಮೇಲೆ ಕಿಚನ್ ಕೆಲಸ ನಿಲ್ಲಿಸಬೇಕೆಂದು ನೆರವಿಗೆ ಆರ್ಡರ್ ಕೊಟ್ಟದ್ದರೂ ಲಕ್ಷ್ಯ ಮಾಡದೆ ಕೆಲಸ ಮಾಡುತ್ತಿರುವದಕ್ಕೆ ತಿಳಿಯುತ್ತೆ. ಕೆಲಸ ಕಟ್ಟಿಸ ನಿಲ್ಲಿಸಿ, ನಮ್ಮ ಯಿಕ್ಸ್‌ಪ್ರೆಷನ್ ಕೊಡಿ, ಇಲ್ಲವಾದಲ್ಲಿ ನಮ್ಮ ನಡತೆ ವಿಚಾರ ಗೌರ್ನಮೆಂಟ್ ತಾಳೀಸಿಗೆ ತರಲ್ಪಡುತ್ತದೆಂದೂ, ಮತ್ತು ಸೇವಿಂಗ್ಸ್ ಬ್ಯಾಂಕಿನಲ್ಲಿರುವ ಈ ಮೊಬಲಗು ತಮ್ಮ ಅಪ್ಪಣೆ ಇಲ್ಲದೆ ತೆಗೆಯಕೂಡದೆಂದು ಆರ್ಡರ್ ಮಾಡಿದ್ದರ ಮೇಲಲ್ಲವೇ ಕಮಿಟಿ ಪ್ರೆಸಿಡೆಂಟರಾದ್ದ ಅಮಲ್ದಾರ್ರು ರಾಜಿನಾಮೆ ಕೊಟ್ಟು ಸೆರವಾದದ್ದಕ್ಕೆ ಬೀಳಲಿಲ್ಲವೇ? ಮತ್ತು ಈಚೆಗೆ ಕಮಿಟಿ ಮೆಂಬರುಗಳಲ್ಲಿ ಕೆಲವರಿಂದ ನಮ್ಮನ್ನು ಪ್ರೆಸಿಡೆಂಟರನ್ನಾಗಿ ಆರಿಸಾಯಿ ಎಕೊಳ್ಳಲಿಲ್ಲವೇ?

ಸುಗ್ಗನಹಳ್ಳಿ ಶ್ರೀರಂಗನಾಥ ದೇವರ ಇನಾಂತಿ ಜಮೀನು ಒಬ್ಬ ರೈತನು ಕೇಳಿದಾಗ ಹಿಂದೆಯೇ ಕೊಡತಕ್ಕದೆಂದು ತೀರ್ಮಾನವಾಗಿತ್ತು. ಈಚೆಗೆ ತಾಲ್ಲೂಕು ಶಿರಸ್ತೇದಾರ ಸ್ವಂತಕ್ಕಾಗಿ ಕೊಟ್ಟ ದಾಕ್ಷಿಣ್ಯದ ಮೇಲೆ ಅವನು 100 ರೂ ಬಂದಿಗೆ ಹಾಕಲಿಲ್ಲವೇ? ಮತ್ತು ಇದಕ್ಕೆ ಸ್ವಾಮಿಭಾಗದ ಜಮೀನು ನೋಟ ಬಗ್ಗೆ ಮರೆಸಿ ಕಾಲಾಂತರ ಇನಾಂತಿ ಮಾಡಿದಾಗ ಅವನನ್ನು ವಿಚಾರಣೆ ಮಾಡಲು ಬೇಕಾಗಿ ಅವರನ್ನುಕಂಡಿದ್ದರಿಂದ 10 ರೂ ದಂಡ ತೆಗೆದುಕೊಳ್ಳಲಿಲ್ಲವೇ? ಎಂತೇ ರೀತಿ ಜನಗಳು ಬಹಳವಾಗಿ ಗೋಳಾಡುತ್ತಿದ್ದಾರೆ. ಇಂಥಾ ಅನ್ಯಾಯಗಳೇ ವಿರುದ್ಧ ನ್ಯಾಯಪಕ್ಷ ಪಾತಗಳು ಬಂದು ವಿಚಾರಣೆ ಮಾಡಿದಾಗ ಎಲ್ಲಾ ಗೋಚರ ಗುಟ್ಟುತ್ತ

ಈ ಕಮಿಟಿಗೆ ಜನರಲ್ ಮೀಟಿಂಗು ಇವತ್ತಿನ ವರೆಗೂ ನಡೆಯಲೇ ಇಲ್ಲ. ಕಮಿಟಿಯ ಮೆಂಬರು ಮೆ|| ರಾಮಚಂದ್ರರಾಯರವ, ರಾಮಣ್ಣನವರೂ ಡೆಪ್ಯುಟಿ ಕಮಿಷನರಲ್ಲಿ ಚರ್ಚೆ ಆದಾಗ ಜನರಲ್ ಮೀಟಿಂಗು ಮಾಡಲಿಲ್ಲವೆಂದು ಹೇಳಲಿಲ್ಲವೇ? ರಾಮಚಂದ್ರರಾಯರೇನೋ ಆಯಿರು ತಾವುಣ್ಣನವರು ಪೀಠ್‌ಲೆಕ್ಟ್ ಕೇಳ್ಳಾರಿತ್ತು, ಫಾರಿಸ್ತು ನೆಂದರು, ಧರ್ಮದರ್ಶಿಗಳು, ಶ್ರೀರಂಗನಾಥ ದೇವರ ಘೂಟ 15 ಗಿಪ್ಪು ಕೊಡಬೇಕಾಗಿ ಸಿಲ್ಲಿಸಿದ್ದವರು ಇವರ ಮಕ್ಕಳೇ ಈ ಕಟ್ಟಡದ ಕಂಟ್ರಾಕ್ಟುದಾರರ್ರು. ಸಿದ್ದಲಿಂಗಪ್ಪನೆಂಬವರು ಬಹುಶಃ ಅಮಲ್ದಾರ್ರಿಗೆ ಮನೆ ಕೊಟ್ಟಿರುವ ತಾಲ್ಲೂಕು ಸರಾಫರೋ, ಅಥವಾ ಕೆಂದ ಕಂಟ್ರಾಕ್ಟುದಾರರಾದ ಅಮಲ್ದಾರರು ಮತದವರೋ ಗೊತ್ತಿಲ್ಲ.

ಊರಲ್ಲಿರುವ ಎರಡು ಛತ್ರಗಳೂ, ಊರು ಮಗ್ಗುಲಲ್ಲಿರುವ ಮಂಟಪಗಳೂ ಆಯಾ ಜನಕ್ಕೆ ಉಪಯೋಗಕ್ಕೆ "ಹೊರ್ತು ಅನ್ಯಮತದವರಿಗಾಗಿ ಅಲ್ಲವೆಂಬುದು ಶುದ್ಧ ಸುಳ್ಳು, ಅವುಗಳಲ್ಲಿ ಇಳಿದ ಸರ್ಕಾರದ ನೌಕರರೂ, ಆಫೀಸರೂ, ಇತರ ಜನಗಳೇ ಇದಕ್ಕೆ ಸಾಕ್ಷಿ. ಮತ್ತು ಸ್ವಪ್ರಯೋಜನಕ್ಕೆಂದು ಅವರ ಹೇಳುವ ಮಾತು ತಪ್ಪು. ಧರ್ಮವಾದಿದವರನ್ನು ಈ ರೀತಿ ಅನ್ಯಾಯವಾಗಿ ಅಳ್ಳೇಬಹುದೆ ತಾವಾದಲ್ಲಿ ದೇವರು ಮೆಚ್ಚ್ಯಾನೇ?

ಮಾಗಡಿ ಟವನ್‌ಗೆ ಅರು ಸಾವಿರ ರೂಪಾಯಿನ ಕಟ್ಟಡ ಯಾಕೆ ಅಮ್ಮತ್ತಾರೆ. ಕಾರೊನೇಷನ್ ಹಾಲ್ ಎಂದು ದೊಡ್ಡ ಹೆಸರಿಟ್ಟು ಚಿಕ್ಕದಾದ ಮನೆ ಕಟ್ಟಿದರೆ ಎಷ್ಟು ಗೌರವವಾಗುತ್ತೆ? ಇದಕ್ಕೆ ಊಹಿಸುವವನ್ನು ಕಮಿಟಿ ಮೆಂಬರುಗಳಿಗೆ ತೋರಲಿಲ್ಲ. ಕಿಚನ್‌ಗೆ ಯಾಕೆ 2,000 ರೂಪಾಯಿ? ಟವನ್ ಹಾಲ್ ಯಾಕೆ ಇಲ್ಲಿ ವಿನಿಯೋಗಿಸಬೇಕೋ ತಿಳಿಯದು. ದೊಡ್ಡ ಹೆಸರಿಟ್ಟು ಆ ಹೆಸರಿಗೆ ತಕ್ಕಂತೆ ಕಟ್ಟಿದಿದ್ದಲ್ಲಿ ಇದಕ್ಕೆ ಕಿಚನ್ ಯಾಕೆ ಬೇಕಾಗಿತ್ತು? ಚಿಕ್ಕ ಹಾಲ್ ಕಟ್ಟಿ ಅದರ ಬಳಿ ಕಿಚನ್ ಕಟ್ಟಿದಲ್ಲಿ ಅದಕ್ಕೆ ಕಾರೊನೇಷನ್ ಹಾಲ್ ಎಂದು ಹೇಳುವುದಕ್ಕೆಂತಲೂ ಛತ್ರವೆಂದು ಹೇಳಿದ್ದರೆ ಚೆನ್ನಾಗಿರಲಿಲ್ಲವೇ? ಇದನ್ನು ಕಟ್ಟುವದು ಊರಿಗೆ ದಕ್ಷಿಣದ ಕಡೇ ಭಾಗ. ಅಲ್ಲಿ ಜನಸಂಚಾರವೇ ಇಲ್ಲ. ಕಟ್ಟೇರಿ ಇರುವದರಿಂದ ಸ್ವಲ್ಪ ಜನರು ತಿರುಗುತ್ತಾರೆ. ಕಟ್ಟೇರಿಯೂ ಬೇರೆ ಕಟ್ಟಲು ನಿಶ್ಚಯ ದಿಕ್ಕಿನ ಜಾಗ ಬೇಕಾಗುತ್ತದಾದ ಕಛೇರಿ ಅಲ್ಲಿಗೆ ಹೋದರೆ ಇದರ ಗತಿ ಹೇಳಬೇಕಾದ್ದೇ ಇಲ್ಲ. ಯಾತಕ್ಕೆಂದರೆ ಈಚೇ ಹಗಲು ಹೊತ್ತು ಕಳ್ಳತನಗಳೂ, ದರೋಡೆಗಳೂ ನಡೆಯುತ್ತವೆ. ಎಂದೂ ವತ್ತಿ ಇಲ್ಲ.

ಕಾರೊನೇಷನ್ ಫಂಡಿಗೆ ಮಾಗಡಿ ಕಸಬೆಯಿಂದ 200 ರೂ ಮಾತ್ರ ಬಂದಿರಬಹುದು ಎನ್ನುತ್ತಾರೆ. ಚೌಕದ ರಂಗಪ್ಪಶೆಟ್ಟಿ ಮುಚ್ಚಳಿಕೆ ಬರೆದು ಕೊಟ್ಟಿರುವದು ರೂ 300. ಶಾನಭೋಗರು ಪಟೇಲರುಗಳಿಗಾಗಿ ಕೊಡುವಂತೆ ಹೇಳಿರುವದು ರೂ 30. ಕಮಿಟಿಯವರು ಮರೆತಂತೆ ಕಾಣುತ್ತೆ. ಇನ್ನೂ ಹೀಗೆ ಯಾವ ಕು ಮರೆತಿರುತ್ತಾರೋ ಆ ಪರಿಶೀಲನೆ. ಮಾಗಡಿ ಟವನ್‌ಗೆ ವಿದ್ಯಾಶಾಲೆಯ ಉಪಯೋಗಕ್ಕಾಗಿ ಅನ್ನುತ್ತಾರೆ. ಅಲ್ಲಿ ವಿದ್ಯಾಶಾಲೆಯೂ ಪ್ರಜಾಭಿವಾನಿಗಳೂ ಇದ್ದರೆ ಇಷ್ಟು ಕಾರುಬಾರು ಅವಶ್ಯಕವಲ್ಲ ಎನ್ನುತ್ತಾರೆ. "ಕಮಿಟಿ ಮೆಂಬರುಗಳು ಎಲ್ಲರೂ ಚಂದಾ ಕೊಟ್ಟಿದ್ದಾರೆಯೇ?"

ನಮಗೇನೂ ಕಿಚನ್ ಕಟ್ಟಬಾರದೆಂದಲ್ಲ. ಉದ್ದೇಶಿಸಿದ ಕಾರೊನೇಷನ್ ಹಾಲ್ ಎಂಬ ದೊಡ್ಡ ಹೆಸರಿಟ್ಟಿರುವ ಕಟ್ಟಡ ಮೊದಲು ಪೂರ್ತಿಸಿ ಬಿಡಲಿ, ಬಾಕಿ ಹಣ ಸಾವಿರ ಕಿಚನ್ ಅವರು ಕಟ್ಟಲಿ, ಇನ್ಯಾರಾದರೂ ಕಟ್ಟಲಿ. ಇದಕ್ಕೆ ಚಂದಾ ಕೊಟ್ಟ ಪ್ರತಿಯೊ ಜನರಲ್ ಮೀಟಿಂಗ್ ಮಾಡಿ, ಅದರ ಮೆಂಬರುಗಳನ್ನು ಚುನಾಯಿಸಿ, ಅವರ ಇಚ್ಛೆ ಪ್ರಕಾರವಾಗಿ ಹಾಗೆ ಮಾಡದೆ ಅವರ ಇಚ್ಛೆ ಇಲ್ಲದೆ ಒಬ್ಬ ಅವರ ಇಷ್ಟದಂತೆ ಅನ್ಯಾಯ ಕಮಿಟಿ ಮೆಂಬರುಗಳ ನಾನಾತಂತ ನಡೆಸತಕ್ಕದ್ದೆಂಬುವದೇ ಉದ್ದೇಶ. ಪ್ರೈವೇಟ್ ರಸ್ತಾ ಜಗತಿನ ದ್ರವ್ಯವನ್ನು ಸಮ್ಮಿನಿಯೋಗವಾಡಿದರೆ ನಾಕು ಕಮಿಟಿ ಮೆಂಬರುಗಳ ಇರುವದೆಯೂ ಕೆಯೇ ನಡೆಕಕ್ಕದ್ದು ಧರ್ಮವಲ್ಲವೆಂಬುವದನ್ನು ಒತ್ತಿ ಹೇಳುತ್ತೇನೆ.

ಪ್ರಜಾಭಿಮಾನಿ

ವಿದೇಶದ ವೃತ್ತಾಂತಗಳು

ಮಿಸೆಸ್ ಮಾರ್ಗರೆಟ್ ಜೋನ್ಸ್ ಎಂಬಾಕೆಯು ತನ್ನ ಆಸ್ತಿಯಲ್ಲಿ 2,25,000 ರೂಪಾಯನ್ನು ಬೇಡರಾಜ್ಯದಲ್ಲಿ ಮತೋದ್ಧಾರಕ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾಳೆ.

ಫಾಕ್ಸ್ ಎಂಬಾತನಿಂದ ರಚಿಸಲ್ಪಟ್ಟ ಬುಕ್ ಆಫ್ ಮಾರ್ಟರ್ಸ್ ಎಂಬ ಧರ್ಮದ ಬಳಿ ಇದ್ದ "ರಕ್ತಸಾಕ್ಷಿಗಳು" ಎಂಬ ಪುಸ್ತಕವನ್ನು ಮೆ|| ಪಿಯರ್‌ಪಾಂಟ್ ಮಾರ್ಗನ್ ಎಂಬ ಐಶ್ವರ್ಯವಂತನು ಕಳೆದ ವಾರ 30,000 ರೂಪಾಯಿಗೆ ಕೊಂಡುಕೊಂಡನು.

ಇಂಗ್ಲಾಂಡಿನಲ್ಲಿ ಬ್ರಿಸ್ಟಲ್, ಸೌತ್‌ಹ್ಯಾಂಪ್ಟನ್, ಸ್ಮಿತ್, ಮ್ಯಾಂಚೆಸ್ಟರ್, ಲಂಡನ್ ಎಂಬ ಪಟ್ಟಣಗಳಲ್ಲಿ ಹಡಗುಗಳಿಂದ ವ್ಯಾಪಾರಗಳನ್ನು ಸಾಗಿಸುವಂಥಾ ಕೂಲಿಕಾರರ ಪೈಕಿ ಸ ಮಾರು 25,000 ಜನ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದಾರೆ.

ಯೂರೋಪ್ ಖಂಡದ ರಾಜ್ಯಗಳಲ್ಲಿ ಪರಸ್ಪರ ಸ್ನೇಹವಾತ್ಸಲ್ಯಗಳೇ ಬೇಕೆಂದೂ, ಜನಗಳ ಸಾರಾಟ ಕದನಗಳು ನ್ಯಾಯವಾಗದಂತೆ ಸಂಘಾ ಕೋರ್ಟು ಏರ್ಪಾಡಾಗಬೇಕೆಂದೂ ಉದ್ದೇಶಪಟ್ಟು ಕಾರ್ಯಾರಂಭ ಕೆಂಥಾ ಎಂ ಪಾಸ್ಸಿ ಎಂಬ ಫ್ರೆಂಚ್ ದೊಡ್ಡಮನುಷ್ಯನು ಕಳೆದ| ವಾಗಿರುವನು.

ರಷ್ಯಾರಾಜ್ಯದ ಕಾರ್ಖಾನೆಭಾಗಕ್ಕೆ ಸೇರಿದ ಡಾಕ್ಟರ್ ಮುಸಲ್ಮಾನ ಗಳು ಟರ್ಕಿಯವರ ಮತ್ತು ಮುಸಲ್ಮಾನರ ಶ್ರೇಯೋಭಿವೃದ್ಧಿಯನ್ನು ಬಯಸುವ ಉದ್ದೇಶದಿಂದ ಅವರ್ಯಸಾಧನೆ ಮಾಡುತ್ತಾರೆಂದು ತಿಳಿದು ರಷ್ಯಾ ಗವರ್ನಮೆಂಟವರು ಮಹಮದೀಯರ ಖಾಸಗಿ ಪಾಠಶಾಲೆಗಳನ್ನೆಲ್ಲಾ ಮುಚ್ಚ ಮಾಡಿರುತ್ತಾರೆ.

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಿಂದ ಆಸ್ಟ್ರಿಯಾ ರಾಜಧಾನಿಯಾದ ವಿಯನ್ನಾ ಪಟ್ಟಣಕ್ಕೆ ಐದುಮಂದಿ ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಯಂತ್ರಗಳಲ್ಲಿ ಕುಳಿತು ಹೊರಟಿದ್ದರು. ಆ ಐದುಮಂದಿಯಲ್ಲಿ ಹಾರ್ತ್ ಎಂಬ ಜರ್ಮನಿಯವನೊಬ್ಬನೇ 400 ಮೈಲಿ ದೂರವನ್ನು 336 ನಿಮಿಷಗಳಲ್ಲಿ ಮುಗಿಸಿ ತಲಪಿದನು.

ಇಟಲಿ ಮತ್ತು ಟರ್ಕಿ ಸೈನ್ಯಗಳಿಗೆ ಟ್ರಿಪೊಲಿಯಲ್ಲಿ ಕಳೆದ ವಾರ ಜಾಂಜೋರ್ ಎಂಬ ಸ್ಥಾನದಲ್ಲಿ ನಡೆದ ಯುದ್ಧದಲ್ಲಿ ಬಹು ಕಠಿಣವಾದದ್ದೆಂದೂ, ಟರ್ಕಿಯವರ ಕಡೆ ಸೈನಿಕರು ಅರಬರಾಗಿದ್ದರೆಂದೂ ಇವರು ಸೋತು ಹಿಮ್ಮೆಟ್ಟಿದರೆಂದೂ, ಇವರಲ್ಲಿ 100 ಮಂದಿ ಮೃತಪಟ್ಟು 1,000 ಜನರು ಗಾಯಪಟ್ಟರೆಂದೂ ಇಟಲಿಯ ಸೈನಿಕರಲ್ಲಿ 1,000 ಕ್ಕಿಂತಲೂ ಹೆಚ್ಚಾಗಿಯೇ ಕೊಲ್ಲಲ್ಪಟ್ಟರೆಂದು ಟರ್ಕಿಸ್ಥಾನ್ಯಾಧಿಕಾರಿಯು ಹೇಳುತ್ತಾನೆ.

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಮಿ|| ಪೀಟರ್ ವೈಡನರ್ ಎಂಬ ಕೋಟ್ಯಾಧೀಶ್ವರನು ಅಂಗಹೀನರನ್ನು ಸಂರಕ್ಷಣೆ ಮಾಡುವದಕ್ಕೆ ಒಂದು ಧರ್ಮಶಾಲೆಯನ್ನು ಸ್ಥಾಪಿಸಿರುತ್ತಾನೆ. ಈಚೆಗೆ ಟೈಟಾನಿಕ್ ಎಂಬ ಹಡಗು ಮುಳುಗಿದಾಗ ಅವನ ಕುಮಾರನು ಸಮುದ್ರದ ಪಾಲಾದನು. ಕೋಟ್ಯಾಧೀಶ್ವರನು ತನ್ನ ಕುಮಾರನ ಹೆಸರಿನಲ್ಲಿ ಆ ಧರ್ಮಶಾಲೆಯ ಫಂಡಿಗೆ ಮತ್ತೆ 120 ಲಕ್ಷ ರೂಪಾಯಿ ಕಳುಹಿಸಿರುತ್ತಾನೆಂದು ತಿಳಿದುಬಂದಿದೆ.

ಡಾಕ್ಟರ್ ಬ್ಯಾಪ್‌ಫರ್ಡ್ ಎಂಬ ವೈದ್ಯನೂ, ವೈದ್ಯಮಂಡಲಿಯವರ ನಾರುಹುಣ್ಣಿನ ಚಿಕಿತ್ಸೆಯ ವಿಷಯದಲ್ಲಿ ಡಾಕ್ಟರ್ ರಾಬರ್ಟ್ ಬೆಲ್‌ಯವರ ಹೇಳುವ ವಿಧಾನವನ್ನು ಆಕ್ಷೇಪಣೆಮಾಡಿ ಅವರನ್ನು ಅಲ್ಲಗಳದು ಅವರಿಗೆ ಅ ಮಾನನಾಗುವಂಥಾ ಬರಹವನ್ನು ಆ ಮಂಡಲಿಯ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಡಾ|| ಬೆಲ್‌ಯವರು ಅವರ ಮೇಲೆ ಮಾನನಷ್ಟದ ನಾಶ್ವದ ಹೂಡಿದ್ದು, ಆದರಿಂದ 10,000 ರೂಪಾಯಿ ಸಂಪಾದನವನ್ನು ಪಡೆದಿರುತ್ತಾರೆ.

ಲಂಡನ್ ಪಟ್ಟಣದಲ್ಲಿರುವ ಇಂಡಿಯಾ ಆಫೀಸಿನಲ್ಲಿ ಕಳೆದ 14 ನೇ ತಾ ಶುಕ್ರವಾರ ರಾತ್ರಿ ಚಕ್ರವರ್ತಿಯವರ ವರ್ಧಂತಿ ಉತ್ಸವದ ನಿಮಿತ್ತ ಒಂದು ಕೂಟ ನಡೆಯಿತು. ಪ್ರಭುಗಳ ರಕ್ತಸಂಬಂಧಿಗಳೂ, ಮುಖ್ಯ ಮಂತ್ರಿಗಳೂ, ದೊಡ್ಡಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು. ಆ ಸಮಯದಲ್ಲಿ ಸ್ತ್ರೀಯರಿಗೆ ಓಟು ಕೊಡಬೇಕೆಂದು ಹೋರಾಡುವ ಸ್ತ್ರೀಮಂಡಲಿಗೆ ಸೇರಿದ ಒಬ್ಬ ಸ್ತ್ರೀ ಅತಿಥಿಯು ಇಂಗ್ಲಾಂಡಿನ ಮಂತ್ರಿಶ್ರೇಷ್ಠರಾದ ಮೆ|| ಆಸ್ಕ್ವಿತ್‌ಯವರ ಸಮೀಪಕ್ಕೆ ಹೋಗಿ ಮುಂದೆ ನಿಂತು ಅವರ ತಲೆಯ ಮೇಲೆ ಬೀಸಿನೆಗೆಯಿಂದ ಹೊಡೆದು ಅವರ ಅಂಗಿಯನ್ನು ಎಳೆದು ಗಲಭೆಯನ್ನುಂಟುಮಾಡಿದಳು. ಕೂಡಲೇ ಒಬ್ಬ ಕಾವಲುಗಾರನು ನುಗ್ಗಿ ಆಕೆಯನ್ನು ಹಿಡಿದು ಎಳೆದುಕೊಂಡನು.

ಆಲ್ವಾರ್ ಸಂಸ್ಥಾನದ ಮಹಾರಾಜರವರು ಮಾರ್ಸೇಲ್ಸ್ ಪಟ್ಟಣದಲ್ಲಿ ಹಡಗು ಇಳಿದು ರೈಲುಕಟ್ಟಿ ಪ್ಯಾರಿಸ್ ನಗರಕ್ಕೆ ಪ್ರಯಾಣಮಾಡುತ್ತಿದ್ದು, ಅಲ್ಲಿಯ ಗ್ಯಾರ್ ಸ್ಟೇಷನ್‌ನಲ್ಲಿ ಹೋಗುವಾಗಿ ತನ್ನ ಆಭರಣಗಳಿದ್ದ ಪೆಟ್ಟಿಗೆಯು ಅದೃಶ್ಯವಾಗಿತ್ತು. ಅದರಲ್ಲಿ 3,60,000 ರೂಪಾಯಿನ ನಗಗಳೂ ವಜ್ರಗಳೂ ಇದ್ದವು. ಈ ಸಂಗತಿಯು ಪೋಲೀಸಿಗೆ ತಿಳಿದ ಕೂಡಲೇ ಅವರು 60 ವರುಷದ ಒಬ್ಬ ಮುದುಕನನ್ನು ಪತ್ತೆಗಿ ಮಾಡಿದಾಗ ಅವನ ಬಳಿ ಆ ಒಡವೆಗಳಲ್ಲಿ ಸಿಕ್ಕಿದವು. ಅವನು ಹೋಟೆಲುಗಳಿಗೆ ಪ್ರಯಾಣಸ್ಥರನ್ನು ಕರೆದುಕೊಂಡು ಹೋಗುತ್ತಿದ್ದವನು. ಪ್ರಶ್ನೆಮಾಡಿದಾಗ ಅವನು—ಮಹಾರಾಜರು ಕುಳಿತಿದ್ದ ಗಾಡಿಯು ಹೊರಡುವ ಸಮಯದಲ್ಲಿ ಅದೇ ಇನ್ನೊಂದು ಕಡೆ ದೃಷ್ಟಿಯುಳ್ಳ ವರಾಗಿದ್ದರೆಂದೂ, ಆ ಕ್ಷಣವೇ ತಾನು ಅವರ ಬಳಿ ಇದ್ದ ಪೆಟ್ಟಿಗೆಯನ್ನು ಅಪಹರಿಸಿದೆನೆಂದೂ ಹೇಳಿದನು.

ರಷ್ಯಾ ಚಕ್ರವರ್ತಿಯವರೂ ಅವರ ರಕ್ತಸಂಬಂಧಿಗಳೂ ಮಾಸ್ಕೋ ಪಟ್ಟಣಕ್ಕೆ ಒಂಭತ್ತು ವರುಷದಿಂದ ದಯಮಾಡಿರಲಿಲ್ಲ. ಅವರೆಲ್ಲಾ ಕಳೆದ ವಾರ ಅಲ್ಲಿಗೆ ಪ್ರಯಾಣಮಾಡಿದರು. ಪ್ರಜಾಕೋಟಿಗಳು ಪ್ರಭುಗಳನ್ನು ಅತ್ಯಂತ ಉತ್ಸಾಹದಿಂದಲೂ ಉತ್ಕೃಷ್ಟವೈಭವವಾಗಿಯೂ ಎದುರುಗೊಂಡು ಅವರಿಗೆ ದಿವ್ಯವಾದ ಸತ್ಕಾರಗಳನ್ನು ನಡೆಸಿದರು. ರಾಜ ಬೀದಿಗಳೆಲ್ಲಾ ಅಲಂಕಾರದಿಂದ ಕಳಕಳಿಸುತ್ತಿದ್ದವು. ದೇವಾಲಯಗಳ ಮೇಲೆ ಆನಂದಕಾಹಳವಾದ ಗಂಟೆಗಳನ್ನು ಬಾರಿಸುತ್ತಿದ್ದರು. ಚಕ್ರವರ್ತಿಯವರು ಅಲ್ಲಿಗೆ ದಯಮಾಡುವುದನ್ನು ಕೇಳಿ ಆ ಪಟ್ಟಣದ ಅಂತರಂಗ ಪೋಲೀಸಿನವರು ಪ್ರಭುಗಳಿಗೆ ಯಾವ ಅಪಾಯವೂ ಸಂಭವಿಸದಂತೆ ಬಹು ಕಠಿಣವಾದ ಪ್ರಯತ್ನಗಳನ್ನು ಮಾಡಿ ಪರದೇಶಿಯಂತೆ ಕಾಣಿಸಿದಂಥ ಮಾಡುವುದಕ್ಕಾಗಿ ಬಂದಿದ್ದವರನ್ನು, ದುಷ್ಟ ಸ್ವಭಾವವುಳ್ಳ ಗುಮಾನಿ ಆಸಾಮಿಗಳಾದ ಸ್ವದೇಶಿಗಳನ್ನೂ ಸುಮಾರು 1,700 ಜನರ ವರೆಗೆ ಮೊದಲೇ ಹಿಡಿದು ಬಂಧನದಲ್ಲಿಟ್ಟಿದ್ದರೆಂದೂ, ಚಕ್ರವರ್ತಿಯವರು ಅಲ್ಲಿಗೆ ದಯಮಾಡಿದ ಬಳಿಕ ಅವರನ್ನೆಲ್ಲಾ ಬಿಡುಗಡೆ ಮಾಡಿದರು.

MELLIN'S FOOD

ಮಕ್ಕಳಿಗೂ ರೋಗಿಷ್ಟರಿಗೂ

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರಾದದ್ದು; ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳಸುವುದು. ಕೇಳಿದ ಮಿಜಾಸಕ್ಕೆ ಬರದರ ಮಾದರಿ ಕಳುಹಿಸುತ್ತಾರೆ.

[66—8] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev E W Thompson, M A, Proprietor and Manager, Wesleyan Mission Press, Mysore. 20/6/1912.

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೧೬ ಮೈಸೂರು—ಸನ್ ೧೯೧೩ ನೇ ಇಸವಿ ಜೂನ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೪

ಒಳ್ಳೇ ಕಂಟ್ರಾಕ್ಟರು ಬೇಕಾಗಿದೆ.

ಹೊಳೆನರಸೀಪುರದಲ್ಲಿ ಒಂದು ಕಾರೊನೇಷನ್ ಟವರ್ ಹಾಲನ್ನು ಸುಮಾರು 4,000 ರೂ ಅಂದಾಜಾದಲ್ಲಿ ಪ್ಲಾನ್ ಪ್ರಕಾರ ಕಟ್ಟಲು ಅನುಭವವುಳ್ಳ ಒಬ್ಬ ಕಂಟ್ರಾಕ್ಟರು ಬೇಗನೆ ಬೇಕಾಗಿದೆ ಸಾಮಗ್ರಿಗಳು ಸ್ಥಳದಲ್ಲಿ ಒದಗಿಸಲ್ಪಡುತ್ತವೆ ಹೆಚ್ಚು ಸಂಗತಿಯನ್ನು ಪ್ರೆಸಿಡೆಂಟರಿಗೆ ಬರೆದು ತಿಳಿದುಕೊಳ್ಳತಕ್ಕದ್ದು

ಆರ್ ತಿರುನಾರಾಯಣಯ್ಯಂಗಾರ್

[104 1] ಪ್ರೆಸಿಡೆಂಟ್ ಹೊಳೆನರಸೀಪುರ

ಒಂದೇ ಕಥೆ! ಅಪೂರ್ವಗ್ರಂಥ!! ೩೧೦ ಪುಟಗಳು!!!

ಪ್ರತಾಪ ಕಂಠೀರವ ಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ ಸ್ತ್ರೀಯುಕ್ತಿ ಸಾಹಸ ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು (4) ವನ, ಸರಸ್ಸು ಅರಮನೆ ವರ್ಣನೆಗಳು ( ) ಮನುಷ್ಯಯತ್ನಕ್ಕೆ ವಿನಾದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಳಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [5 5]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ

ನಮ್ಮ ಏಜೆಂಟರಿಗೆ.

'ವೃತ್ತಾಂತ ಪತ್ರಿಕೆ' ಯ ವರುಷವು ಪೂರೈಸಿ ಮೂರು ವಾರಗಳಾಗಿದ್ದರೂ ಕೆಲವು ಏಜೆಂಟರು ಇನ್ನೂ ಕಳೆದ ವರುಷದ ಲೆಕ್ಕವನ್ನು ಕಳುಹಿಸಲಿಲ್ಲ ಈ ವಾರದೊಳಗಾಗಿ ಆ ಲೆಕ್ಕಗಳನ್ನು ತಪ್ಪದೆ ಖಂಡಿತವಾಗಿ ಕಳುಹಿಸಬೇಕೆಂದು ಸೂಚಿಸಿದೆ

ಮ್ಯಾನೇಜರ್

ವೀರಶೈವಾಶ್ರಮ.

ಬೆಂಗಳೂರಿನಲ್ಲಿ ಓದತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮತ್ತು ಅಲ್ಲಿಗೆ ವ್ಯಾಪಾರ ಕೋರ್ಟು ಕಚೇರಿ ಮೊದಲಾದ ಕೆಲಸಗಳಿಗಾಗಿಯೂ, ನೋಟಕ್ಕಾಗಿಯೂ ಬರತಕ್ಕ ವೀರಶೈವ ವರ್ತಕರು ದೊಡ್ಡ ಮನುಷ್ಯರು ಮೊದಲಾದವರಿಗೆ ಇಳಿಯುವುದಕ್ಕೂ ಭೋಜನಕ್ಕೂ ತಕ್ಕ ಸ್ಥಳಾನುಕೂಲವಿಲ್ಲದೆ ತೊಂದರೆಯಾಗಿದ್ದುದರ ಮೇಲೆ ಎಲ್ಲಾ ವ್ಯಾಪಾರಸ್ಥರುಗಳಿಗೂ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ಆಸ್ಪತ್ರೆಗೂ ಬಹು ಸಮೀಪವಾಗಿರುವಂತೆ ಕೋಟೆಯೊಳಗೆ ಪೋಸ್ಟಾಫೀಸ್ ಪಕ್ಕದಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವೆಂಬ ಹೆಸರಿನಿಂದ ಒಂದು ಭೋಜನಶಾಲೆಯನ್ನೇರ್ಪಡಿಸಿ ಊಟದ ಛಾರ್ಜನ್ನು ಸುಲಭದಲ್ಲಿಟ್ಟಿದೆ ಇಲ್ಲಿ ಸ್ನಾನ ಮಡಿ ಮೊದಲಾದ ಆಚಾರಕ್ಕೂ ದೊಡ್ಡ ಮನುಷ್ಯರುಗಳೂ ಅಧಿಕಾರಿಗಳೂ ಇಳಿಯುವುದಕ್ಕೂ ಅತ್ಯಂತ ಪ್ರಶಸ್ತವಾಗಿದೆ ಹೆಚ್ಚು ಸಂದರ್ಭವನ್ನು ತಿಳಿಯತಕ್ಕವರು ಈ ಕೆಳಗಿನ ವಿಳಾಸದಾರರಿಗೆ ಬರೆಯತಕ್ಕದ್ದು [10 3]

ಎಸ್ ಕಳಿಸ್ವ

ಎಂಪಯಂತ್ರಶಾಲೆ, ದೊಡ್ಡಪೇಟೆ, ಬೆಂಗಳೂರು ಸಿಟಿ

ಜ್ವರಶಂಕರಿ

114 40

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ವರಸೆಯುಜ್ವರ ವಿಷಮಜ್ವರಾದಿ ಸರ್ವಜ್ವರಗಳನ್ನೂ ೬ ಬೆರಡು

ಬಾರಿ ಸೇವಿಸುವುದರೊಳಗಾಗಿ ತಪ್ಪದೆ ಗುಣಪಡಿಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ಹಿಮ್ಮೆಟ್ಟಿಸ ಬಹುದು ಬಾಟಲಿಗೆ ೧ ರೂ ೪ ಬಾಟಲಿಗೆ ೩ ರೂ ೧೦ ಆಣೆ

ಪ್ಲಿಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೪ ರೂ ೮ ಆಣೆ

ವಾತಮುರಾರಿ—ಇದು ತಲೆನೋವು ಉಳುಕು ಬೀಸುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮನ ಔಷಧಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ ೪ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ಉಚಿತ ನೋಡಿ

ನಮ್ಮ ವಿಳಾಸ —ಬಿ ಎಸ್ ನಾದ ಮತ್ತು ಕಂಪೆನಿ

ವೆಪೆರಿ ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ ಸಂಧುಗಳ ನೋವು ಮೈ ಕೈ ಜಾಡಿತ (ಭಾರ) ಮೈನಡುಕ, ಶೀತವಾತಗಳ ಬಾಧೆ ಅಜೀರ್ಣ ಅಗ್ನಿಮಾಂದ್ಯ, ಪಲ್ಲುನೋವು ಕೆಮ್ಮಲು, ನೆಗಡಿ, ನಿಶ್ಶಕ್ತಿ ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಮೂಗು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುದೋಷ ಎಳ್ಳೆ ಎಲ್ಲಾ ಜ್ವರ ನೆಚ್ಚು ಜ್ವರ ಶೈತ್ಯಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೆ ರಕ್ಷಣೆ ಯಾಗಿದೆ —೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ರೂಪಾಯಿ ಹತ್ತು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ [98 1]

೨ ವೈಶ್ವಾನರಾಸವ (ಕಾಲರಾ ಔಷಧ)

ಏಳುಂಟಿ (ಕಾಲರಾ), ಶೀತಭೇದಿ ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಬಿಟ್ಟಿತೆಂದು ತಿಳಿದವುಗಳೂ ಆಶ್ಚರ್ಯಕರವಾಗುವಂತೆ ರೋಗದ ಮೇ ಕ ಸ ವೇ ಡ ತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ರೋಗಿಯು ಬ್ಬರಿಸದೆ ಮೂತ್ರವು ಕಟ್ಟಿದ್ದ ಕೆಲವು ಮೊದಲೇ ಬೆಳೆಯುತ್ತೇ ಗುಣವು ತೋರುತ್ತದೆ ಸಮಯದಲ್ಲಿ ಪೇಟಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ ಮತ್ತೊಂದು ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವು ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು

ಬೆಲೆ ರೂ 1 ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಕಾರೊನೇಷನ್ ಸಾಬೂನು

ಆಪಾಯವಿಲ್ಲದ ರೋಮನಾಶಕರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ ನವೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ ೧ ೦ ೦, ಅಂಚೆ ಹಾಸಲು ಪ್ರತ್ಯೇಕ ನಮ್ಮ ವಿಳಾಸ — ಬಿ ಸಿ ಪಾ ಎಂಡ್ ಕಂಪೆನಿ ೧೭೭ ಜೆನರಲ್ ಬಜಾರ್ ರೋಡ್ ಮದ್ರಾಸು.

ಸಾ ಕ —ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು [101 2]

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುತ್ತದೆ

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ನಿದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿರುಸಾಗಿಯೋ ಇಳಿಯುವುದು ಬಿಡದ ಬಾಯಾರಿಕೆ ಬಳಲಿಕೆ ಎದೆ ಕಲ್ಲಿಸುವುದು ತಲೆನೋವು ಗಾಬರಿ ಕಣ್ಣುಮೊಬ್ಬು ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು ನಿಶ್ಶಕ್ತಿ ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಪ್ರಮೇಹದ್ರವ ವಾಯು ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [99 42]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು,



೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೧ —೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦ ಬೊಂಬಾಯಿ —ಇವರಲ್ಲಿ ದೊರೆಯುವುದು

ಇಂಗ್ಲೀಷನ್ನು ಕಲಿಯುವ ಪುಸ್ತಕ ಇಂಗ್ಲೀಷನ್ನು ಕಲಿಯುವ ಪುಸ್ತಕ ಇಂಗ್ಲೀಷನ್ನು ಕಲಿಯುವ ಪುಸ್ತಕ!

THE SELF ENGLISH STUDY.

ದಿ ಸೆಲ್ಫ್ ಇಂಗ್ಲೀಷ್ ಸ್ಟಡಿ [93-31]

ಬೋಧಕರ ಸಹಾಯವಿಲ್ಲದ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶ ದಾಯಿನಿ.

ಮೊದಲನೆಯ ಪುಸ್ತಕ		ಕ್ರಯ ರೂ ೧—೮—೦
ಎರಡನೆಯ ಪುಸ್ತಕ		ಕ್ರಯ ರೂ ೧—೮—೦
ಮೂರನೆಯ ಪುಸ್ತಕ	(ಅಚ್ಚಿನಲ್ಲಿದೆ)	ಕ್ರಯ ರೂ ೧—೮—೦

ಅಂಚೆಯ ವೆಚ್ಚವನ್ನು ಗ್ರಾಹಕರೇ ಕೊಡಬೇಕು

ಇವುಗಳಲ್ಲಿ —ಆಂಗ್ಲಭಾಷಾ ವರ್ಣಮಾಲೆಯ A ಏ ಇಂದ / ಜಡ್ ವರೆಗಿನ ಅಕ್ಷರಗಳನ್ನು ಗುರುತು ಹಿಡಿಯುವುದು, ಅಕ್ಷರಗಳನ್ನು ಕೂಡಿಸುವುದು ಪದಸಂಯೋಜನ ಸಣ್ಣಸಣ್ಣ ವಾಕ್ಯಗಳು ಚಿಕ್ಕ ಪುಟ್ಟ ಕಥೆಗಳು ಕ್ಷೇಮಸಮಾಚಾರ ಕಾಗದಗಳು ತಂತಿ ವರ್ತಮಾನದ ಮಾದರಿಗಳು ಗಾದೆಗಳು, ಸಾಂಕೇತಿಕ ಶಬ್ದಗಳು ಒಬ್ಬನಿಗೊಬ್ಬ ಬೇರೆಬೇರೆ ಅನೇಕ ಸಂಗತಿಗಳಲ್ಲಿ ಒಬ್ಬರಿಂದೊಬ್ಬರು ಪ್ರಶ್ನೋತ್ತರ ರೂಪವಾಗಿ ಮಾತಾಡುವ ಮಾದರಿಗಳು, ಕನ್ನಡದಿಂದ ಇಂಗ್ಲಿಷಿಗೂ—ಇಂಗ್ಲಿಷಿನಿಂದ ಕನ್ನಡಕ್ಕೂ ಭಾಷಾಂತರಮಾಡುವುದು ವ್ಯಾಕರಣ ಸೂತ್ರಗಳು ಕನ್ನಡ ಇಂಗ್ಲಿಷ್—ಇಂಗ್ಲಿಷ್ ಕನ್ನಡ ಡಿಕ್ಷನರಿಗಳು ಮುಂತಾದ ಅನೇಕ ಸಂಗತಿಗಳನ್ನು ಸೇರಿಸಿದೆ ಇಂಗ್ಲೀಷನ್ನು ಸ್ವಲ್ಪವೂ ತಿಳಿಯದವರು ಸುಲಭವಾಗಿ ತಿಳಿಯುವಂ ಮೊದಲು ಇಂಗ್ಲೀಷು, ನಂತರ ಅದರ ಉಚ್ಚಾರಣೆ ಮತ್ತು ಅರ್ಥಗಳನ್ನು ಕನ್ನಡಕ್ಷರದಲ್ಲಿ ಪ್ರತಿ ಶಬ್ದಕ್ಕೂ ಬರೆದಿರುವುದರಿಂದ ಬರೆಯುವುದು—ಓದುವುದು—ಮಾತಾಡುವುದನ್ನು ಬೇರೊಬ್ಬರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು ಅನೇಕರಿಗೆ ಉಪಯೋಗವಾಗಿ ಕೊಳ್ಳುವವರ ಸೌಕರ್ಯಕ್ಕೆ ಪುಸ್ತಕವು ಬೇರೆಬೇರೆ ಮೂರು ಭಾಗಗಳಾಗಿ ಕ್ರಯವೂ ಕಡಮೆ ಇರುವುದರಿಂದ ಈಗಾಗಲೆ ಸಾವಿರಾರು ಪುಸ್ತಕಗಳು ಖರ್ಚಾಗಿ ನಾಲ್ಕನೆಯ ಸಲ ಅಚ್ಚಾಯಿತು ಕೆಳಗಿನ ವಿಳಾಸಕ್ಕೆ ದಯವಿಟ್ಟು ನಿಮ್ಮ ನಿಮ್ಮ ವಿಳಾಸಗಳನ್ನು ಚೆನ್ನಾಗಿ ತಿಳಿಯುವಂತೆ ಇಂಥಾ ಪುಸ್ತಕವೇ ಬೇಕೆಂದು ವಿವರವಾಗಿ ಹುಟ್ಟಕ್ಷರದಿಂದ ಬೇಗ ಬರೆಯಬೇಕು!!!

ಭಾರತಿ ಸೂಪಂಗಿರಾಮು, ಪ್ರೋಸ್ಟು—ಹೊಸಕೋಟೆ, ಡಿಸ್ಟ್ರಿಕ್ಟು—ಬೆಂಗಳೂರು

1913 ನೇ ಇಸವಿಯ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

ಕ್ರಯ 6 ಆಣೆ 10 ಕ್ಕೆ 1 ಡಿಸ್ಕೌಂಟು ನಮ್ಮ ನೋಟ್ಸೇ ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [71-8]

2 ನೇ ಪುಸ್ತಕದ ನೋಟ್ಸು 2½ ಆಣೆ. 3 ನೇ ಪುಸ್ತಕದ ನೋಟ್ಸು 1½ ಆಣೆ 4 ನೇ ಪುಸ್ತಕದ ನೋಟ್ಸು 1½ ಆಣೆ 5 ನೇ ಪುಸ್ತಕದ ನೋಟ್ಸು 1 ಆಣೆ ಮೈಸೂರು ಭೂವಿವರಣೆ 1 ಆಣೆ 2 ನೇ ಕ್ಲಾಸ್ ಭೂವಿವರಣೆ 1½ ಆಣೆ.

ಎಸ್ ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

WILLIAM & Co, FORT, BOMBAY.
ಅಮೃತಾಂಜನ್. (Regd.)

35-18

ಎಲ್ಲಾ ಬಾಮುಗಿಂತ್ಲೂ ಅಂಜನಗಿಂತ್ಲೂ ಶ್ರೇಷ್ಠವಾದದ್ದು. ಇದರಿಂದ ವಾತ, ಸಂಧಿವಾತ, ಜಖಮು, ಘಾಯ, ಉಳುಕು, ತಲೆನೋವು, ಶಿರೋಭಾರ ಮುಂತಾದ ಎಲ್ಲಾ ತರದ ನೋವುಗಳು ಮಾತ್ರೆಯಿಂದ ನಿಲ್ಲುವದು. ಬಾಟ್ಲಿ ಒಂದರ ಕಿಮ್ಮತು 0 8 0.

ಗಜಕರ್ಣದ ಮುಲಾಮು

ಯೆಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಒರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಪ್ಪಿ 1 ಕ್ಕೆ 0 6 0. ದಂತಮಂಜನ 0 2 0 ನೇತ್ರಾಂಜನ 0-1-0. ಸುಂದರಿ ತೈಲ 0 4 0

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ
ಅಮೃತಾಂಜನ ಡಿಪೊ, ಪೋಸ್ಟು ಮುಂಬಯಿ.

LOWER SECONDARY EXAMINATION,
1913

ಹಿಂದೂದೇಶದ ಚರಿತ್ರೆ

ಘನ ಇ. ಡಬ್ಲ್ಯು. ಥಾಂಪ್ಸನ್, ಎಂ. ಎ. ಯವರಿಂದ ರಚಿತವಾದುದು.

ಇಂಡಿಯಾ ದೇಶದ ಚರಿತ್ರೆಯನ್ನು ಓದುವ ಸ್ಕೂಲ್ ಹುಡುಗರಿಗೆ ಉಪಯುಕ್ತವಾದುದು.

ಬಟ್ಟೆ ಬೈಂಡು. ೨೬೦ ಪುಟಗಳುಳ್ಳದು

ಬಹು ಒಳ್ಳೆಯ ಚಿತ್ರಗಳಿಂದ ರಂಜಿತವಾಗಿದೆ!

ಅಚ್ಚುಹಾಕಿರುವುದು ಬಹು ಸೊಗಸಾಗಿದೆ!

ಕ್ರಯ ೧೨ ಅಣೆ.

ಈ ಪರೀಕ್ಷೆಯ ಪ್ರಶ್ನಪತ್ರಿಕೆಗಳಲ್ಲಿ ಕೇಳುವ ಪ್ರಶ್ನೆಗಳಿಗೆ ಸರಿಯಾದ ಮತ್ತು ಸಂಪೂರ್ಣವಾದ ಉತ್ತರಗಳು ಸಿಕ್ಕಬೇಕಾದರೆ ಈ ಹಿಂದೂದೇಶದ ಚರಿತ್ರೆಯನ್ನು ಬಿಟ್ಟರೆ ಬೇರೊಂದಿಲ್ಲವೇ ಇಲ್ಲ

ಕ್ರೈಸ್ತವೇದಾಂತಸಾರವು.

[371 ಪುಟಗಳುಳ್ಳದು. ಕ್ಯಾಲಿಕೋ ಬೈಂಡು. ಕ್ರಯ ೧ ರೂ. ೪ ಅ.]

ಕ್ರೈಸ್ತಮತ ತತ್ವಗಳನ್ನು ಬೋಧಿಸುವ ಈ ಉದ್ಗ್ರಂಥವು ಲಂಡನ್ ಮಿಷನ್ ಶಾಲೆಯ ಬೋಧಕರಾದ ಘನ ಡಬ್ಲ್ಯು. ಎಚ್. ಕ್ಯಾಂಬೆಲ್ ಎಂ. ಎ., ಬೀ. ಡೀ. ಯವರಿಂದ ತೆಲುಗು ಭಾಷೆಯಲ್ಲಿ ಹೊಸದಾಗಿ ರಚಿಸಲ್ಪಟ್ಟು, ಅದೇ ಶಾಲೆಯ ಉಪದೇಶಕರಾದ ಮ|| ರಾ|| ಎಚ್. ಜಿ. ಶೀಲಪ್ಪನವರಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿತು. ಈ ಪುಸ್ತಕವು ಮತಸಂಬಂಧವಾಗಿ ತಿಳಿಯಬೇಕಾದ ಅಂಶಗಳನ್ನು ಬಹು ಸ್ಪಷ್ಟವಾಗಿಯೂ ಶಾಸ್ತ್ರೀಯವಾಗಿಯೂ ವಿವರಿಸುತ್ತದೆ ಇದು ಕ್ರೈಸ್ತ ಮತಾವಲಂಬಿಗಳಿಗೆ ಮಾತ್ರ ಉಪಯುಕ್ತವೆಂದು ಎಣಿಸದೆ, ಸತ್ಯಮತ ವಿಚಾರಕರಾದವರೆಲ್ಲರಿಗೂ ಇದರಿಂದ ಅನೇಕವಾದ ಪ್ರಯೋಜನಗಳುಂಟಾಗುವುದರಿಂದ ಇದನ್ನು ಸಕಲರೂ ತರಿಸಿ ಪರಿಶೀಲನೆ ಮಾಡಬೇಕೆಂಬುವುದೇ ನಮ್ಮ ಕೋರಿಕೆಯಾಗಿದೆ. [1153-41]

ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ:—

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1-26

ಕರುಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 2-26
(ಸ್ಕಾಟ್ಸ್ ಇಮಲ್ಷನ್)

ಎಲ್ಲಾ ಸಮಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು ತುಂಬಾ ರುಚಿಯಾಗಿರುವದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾದುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

Always get the Emulsion with this mark the Fishman —the mark of the "Scott" process!

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧದ ಷಾಪುಗಳಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ನಿಶಾನಿಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಗೌರ್ನಮೆಂಟು ಸೆಕ್ಯೂರಿಟಿ ಉಳ್ಳ ನ್ಯಾಷನಲ್ ಜೀವ ವಿಮೆ ಮತ್ತು ವಿವಾಹಸಹಾಯಕ ಫಂಡ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ್—ವಿಜಯನಗರಂ.

1 ಈ ಕಂಪೆನಿಯು ಡಾಕ್ಟರ್ ಪರೀಕ್ಷೆ ಇಲ್ಲದೆಯೂ 16 ವರುಷ ಮೊದಲುಗೊಂಡು 50 ವರುಷ ವಯಸ್ಸುಳ್ಳ ಗಂಡಸರ ಮತ್ತು ಹೆಂಗಸರ ಜೀವವನ್ನು ಮತ್ತು ಮುಂದೆ ಬರಬಹುದಾದ ಅಪಾಯಗಳನ್ನು ಇಂಡಿಯಾ ದೇಶದಲ್ಲಿರತಕ್ಕ ಇತರ ಎಲ್ಲಾ ಕಂಪೆನಿಗಳಿಗಿಂತಲೂ ಅತಿ ಸುಲಭವಾದ ದರದ ಮೇಲೂ ಮತ್ತು ಧಾರಾಳವಾದ ನಿಬಂಧನೆಗಳಿಂದಲೂ, ತಿಂಗಳಿಗೆ 8 ಆಣೆ ಮತ್ತು 1 ರೂಪಾಯಿಗಳ ವಿಮೆಯನ್ನು ಮಾಡಿರುತ್ತಾರೆ ಈ ಮೇಲ್ಕಂಡ ವಿಮೆದಾರರು ಕಂಪನಿಗೆ 6 ತಿಂಗಳ ವಿಮೆಯನ್ನು ಕಟ್ಟಿದ ನಂತರ ಮೃತಪಟ್ಟವರಾದರೆ ಸದರಿ ವರ್ತಮಾನವನ್ನು ಅವರ ವಾರಸುದಾರರು ಕಂಪನಿಯವರಿಗೆ ತಿಳಿಸಿದ ತಕ್ಷಣ ಮೊದಲನೇ ತರಗತಿಯವರಿಗೆ ಒಂದುನೂರು ರೂಪಾಯಿಗಳೂ, ಎರಡನೇ ತರಗತಿಯವರಿಗೆ 50 ರೂಪಾಯಿಗಳೂ, ತಕ್ಷಣ ಅಡ್ವಾನ್ಸಾಗಿ ಕೊಡಲ್ಪಡುತ್ತೆ ಅನಂತರ ಆ ವರುಷದ ಲೆಕ್ಕಗಳು ತನಿಖೆ ಆದ ಮೇಲೆ ಅವರ ಪ್ರತಿ ವರುಷದ ಫೆಬ್ರವರಿ 8 ನೇ ತಾರೀಖಿನ ತರುವಾಯ ಮೇಲ್ಕಂಡ ವಾರಸುದಾರರಿಗೆ ಅದುವರೆವಿಗೆ ಅಡ್ವಾನ್ಸು ಕೊಟ್ಟಿರುವ ಮೊಬಲಗಲ್ಲದೆ ಶೆಡ್ಯೂಲಿನ ಪ್ರಕಾರ ಇನ್ನು ಬರತಕ್ಕ ಜಾಸ್ತಿ ಮೊಬಲಗನ್ನೂ ಅವರಿಗೆ ಕೊಡಲ್ಪಡುತ್ತವೆ ಒಂದು ವೇಳೆ ವಿಮೇದಾರರು 8 ತಿಂಗಳ ಒಳಗಾಗಿ ಮೃತಪಟ್ಟರೆ ಅವರು ಅದುವರೆವಿಗೂ ಕಂಪೆನಿಗೆ ಕೊಟ್ಟಿಂಥಾ ಹಣದಲ್ಲಿ ಖರ್ಚುಗಳು ಜಾತಾ ಮಿಕ್ಕ ಹಣವನ್ನು ಅವರ ವಾರಸುದಾರರಿಗೆ ವಾಪಸ್ ಮಾಡಲ್ಪಡುತ್ತದೆ

2 ಮದುವೆಯಾಗತಕ್ಕವರಿಗೆ ಫಂಡನ್ನು ಏರ್ಪಡಿಸಿರುತ್ತೆ ಇದಕ್ಕೆ ಸೇರತಕ್ಕ ಚಂದಾದಾರರು ಗಂಡಸರೇ ಆಗಲಿ ಅಥವಾ ಹೆಂಗಸರೇ ಆಗಲಿ ಬಾಲ್ಯದಾರಭ್ಯ 18 ಮತ್ತು 13 ವರುಷಗಳ ವಯಸ್ಸಿನ ವರಿವಿಗೂ ತಿಂಗಳು ಒಂದಕ್ಕೆ ಚಂದಾ ಮೊಬಲಗು ಒಂದು ರೂಪಾಯಿ ಪ್ರಕಾರ ಕನಿಷ್ಠ ಪಕ್ಷ 8 ತಿಂಗಳಿಗೆ ಕಡಿಮೆ ಇಲ್ಲದಂತೆ ಕ್ರಮವಾಗಿ ಚಂದಾ ಮೊಬಲಗು ಪಾವತಿ ಮಾಡಿದ ಮೇಲೆ ಸದರಿ ಚಂದಾದಾರರು ಮದುವೆ ಮಾಡಿಕೊಳ್ಳುವ ಕಾಲಕ್ಕೆ ಅವರು ಕೊಟ್ಟಿರತಕ್ಕ ಚಂದಾ ಮೊಬಲಗಿಗೆ 3 ರಷ್ಟಕ್ಕೆ ಕಡಿಮೆ ಇಲ್ಲದೆಯೂ, 10 ರಷ್ಟಕ್ಕೆ ಜಾಸ್ತಿ ಇಲ್ಲದೆಯೂ ಮೊಬಲಗನ್ನು ಸಹಾಯ ಮಾಡಲ್ಪಡುತ್ತದೆ [95-1]

ಇಂಗ್ಲಿಷ್ ಮತ್ತು ಕನ್ನಡ ಬಲ್ಲಂಥಾ ಏಜಂಟರು ಬೇಕಾಗಿದೆ ತಪಶೀಲ್ ವಿಷಯಗಳಿಗೆ ಅರ್ಧಾಣೆ ಸ್ಟಾಂಪು ಸಹಿ ಬರೆದುಕೊಳ್ಳಿ ನಮ್ಮ ವಿಳಾಸ —

ದಿ ರಾಮರ್ಸ್ ಮ್ಯೂಚುಯಲ್ ಸಿಂಡಿಕೇಟ್, ಚೀಫ್ ಏಜಂಟ್ಸ್, (ಮೈಸೂರು ಮತ್ತು ಕೊಡಗು ಸಂಸ್ಥಾನಗಳ), ಚಿಕ್ಕಪೇಟೆ, ಬೆಂಗಳೂರು ಸಿಟಿ.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಶುದ್ಧವಾದ

ಸಿದ್ಧೌಷಧ ತ್ರಯವು

ಕಡಿ ಅಥವಾ ಹುಳಕಡಿ ಔಷದವು.

ಡಬಿ 1 ಕ್ಕೆ ರೂ 0 1 0 ಡಬಿ 12 ಕ್ಕೆ ರೂ 2-8-0

ಕರಿಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಶ್ರೇಷ್ಠವಾದ ಔಷಧಿಯು ಒಂದು ದಫೆ ಔಷಧಿಯನ್ನು ಹಾಕಿದರೆ ಸಾಕು ಸಂಪೂರ್ಣ ಗುಣವುಂಟಾಗುವದು ಚರ್ಮದಲ್ಲಿ ಬರುವ ಕೊಳೆಯನ್ನು ಹೋಗಲಾಡಿಸಿ ದೇಹವು ಥಳಥಳಿಸುವಹಾಗೆ ಶುದ್ಧಿಯನ್ನು ಮಾಡುವುದು ಈ ಔಷಧಿ ಅನೇಕ ಸುವಾಸನೆಯಿಂದ ಯುಕ್ತವಾದದ್ದು ದೇಹಕ್ಕೆ ತಂಪನ್ನುಂಟುಮಾಡುವದು

ದಂತದಾವನ ಚೂರ್ಣವು.

ಡಬಿ 1 ಕ್ಕೆ ರೂ 0 1 0 ಡಬಿ 12 ಕ್ಕೆ ರೂ 2 8 0

ದಂತ ಮತ್ತು ಹಲ್ಲು ಒಸಡುಗಳಿಗೆ ಸಂಬಂಧಪಟ್ಟ ಸಕಲ ರೋಗಗಳನ್ನೂ ಈ ದಂತಧಾವನ ಚೂರ್ಣವು ನಿವಾರಿಸಿ ಹಲ್ಲುಗಳನ್ನು ಬಲಪಡಿಸಿ ಬಾಯಿಯನ್ನೆಲ್ಲಾ ಸುವಾಸನಾಯುಕ್ತವನ್ನಾಗಿ ಮಾಡುತ್ತದೆ

ವಿರೇಚನವತಿ ಬೇದಿಮಾತ್ರೆಗಳು

ಉದರಸಂಬಂಧವಾದ ರೋಗಗಳಿಂದಲೂ ಮಲಬಂದದಿಂದಲೂ ಕಷ್ಟಪಡುವವರಿಗೆ ಇದು ಒಂದು ದೊಡ್ಡ ಆಶೀರ್ವಾದರೂಪವಾಗುವದು ಪ್ರತಿರಾತ್ರಿ ಮಲಗುವವರಕ್ಕೆ ಮುಂಚಿತವಾಗಿ ಸೇವಿಸಿದರೆ ಹೊಟ್ಟೆಯು ಶುದ್ಧವಾಗುವದು ಎಷ್ಟು ಮಾತ್ರೆಗಳು ಸೇವಿಸಲ್ಪಡುತ್ತವೋ ಅಷ್ಟು ಸಲ ಭೇದಿಯಾಗುವದು ಆದುದರಿಂದ ಎಲ್ಲರೂ ಈ ಮಾತ್ರೆಗಳನ್ನು ಬಹಳವಾಗಿ ಅಪೇಕ್ಷಿಸುತ್ತಾರೆ ಮಾತ್ರೆಗಳು ಬಹಳ ಚಿಕ್ಕದಾಗಿರುವದರಿಂದ ಬಹಳ ಸುಲಭವಾಗಿ ಇವುಗಳನ್ನು ನುಂಗಬಹುದು ರಾತ್ರಿ ಮಾತ್ರೆಯನ್ನು ಸೇವಿಸುವದರಿಂದ ರಾತ್ರಿಯೇ ಭೇದಿಯಾಗಲಾರದು [121 15]

10 ಮಾತ್ರೆಗಳ ಡಬಿ 1 ಕ್ಕೆ ರೂ 0 10 0 ಡಬಿ 12 ಕ್ಕೆ ರೂ 6 0 0

ರಾಜವೈದ್ಯ ನಾರಾಯಣಜೀ ಕೇಶವಜೀ,
771, ಜೇನಾ ಬಜಾರ್ ರೋಡ್, ಮದ್ರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 26

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರಿ ಲಾಭಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೫ ಅ; ೧ ರೂ ೬ ಅ, ೧ ರೂ ೪ ಅ

ಚುಕ್ಕೆಯುಳ್ಳ ಟೋಪಿಗಳು ೨ರೂ ೧-೮, ೨ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಜರಿಯ ಟೋಪಿಗಳು ೧ ರೂ ೧೨ ಅ; ೧ ರೂ ೮ ಅ; ೧ ರೂ ೬ ಅ

ಉಣ್ಣೆಯ ಟೋಪಿಗಳು ೧ ರೂ ೮ ಅ., ೧ ರೂ ೬ ಅ.;

ಕೂಸುಗಳ ಟೋಪಿ, ಪೂರ್ತಿ ಮೋಜೋಡು, ಅರ್ಧ ಮೋಜೋಡು, ಶಾಲು ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ। ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದ್ದಾಗಿರುವುದು। ಕ್ರಯ 8 ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ. ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಳವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [139-30]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ನಮ್ಮ ಏಜಂಟರಿಗೆ ನೋಟೀಸ್.

೧ ನೇ ಜೂನ್ ತಿಂಗಳಿಂದ "ವೃತ್ತಾಂತ ಪತ್ರಿಕೆ"ಯ ಹೊಸ ವರುಷ ಪ್ರಾರಂಭವಾಗಿರುತ್ತದೆ. ನಮ್ಮ ಏಜಂಟರುಗಳು ಕಳೆದ ವರುಷದ ಲೆಕ್ಕಗಳನ್ನೆಲ್ಲಾ ಸ್ಪಷ್ಟಮಾಡಿ, ಅಪ್ಪೈರ್ ಪಟ್ಟಿಗಳನ್ನು ಕೂಡಲೇ ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಇದಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು. ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೨ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಆ ಬಗ್ಗೆ ಕ್ರಮವಾದ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ತಿಳಿಸುತ್ತೇವೆ.

ಮ್ಯಾನೇಜರ್, 'ವೃತ್ತಾಂತ ಪತ್ರಿಕೆ,' ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

815

ಎಂಥಾ ರೋಗವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು ಅರೆತಲೆ, ಕರುಳುರೋಗಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗೂರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಜ್ವರರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ರೋಗವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ನಡೆಯುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

ಕ್ಲೆಮೆಂಟರ ಮ್ಯಾಜಿಕ್ ಬಾಂ ಎಂಬ ಹೆಸರನ್ನು ಮರೆಯಬೇಡ ಇದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಸಾ ಕಿಂಗ್ ಫ್ರೀಸ್ಟೇಜ್ ವಾಪ್ಸಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 37 ವರಮುತಿಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಕೃಷ್ಣಯ್ಯಸೆಟರು, ಜನರಲ್ ಮರ್ಚೆಂಟ್, ತುಮಕೂರು

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2 4 0 ಮಾತ್ರ 5 ವರುಷಗಳ ಗ್ಯಾರೆಂಟಿ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ಸಲ್ಲಾ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ [13-15]

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5-12-0 ಇದನ್ನು ಜೂನ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 10 ಘಂಟೆ ಗೊಂದಾವರ್ತ ಬೇಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ —ಸುಪೀರಿಯರ್ ವಾಚ್ ಕಂಪನಿ,

ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

7—6—1912 ರಿಂದ 14—6—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	8	5	0	0
ಮೈಸೂರು ,,	5	5	16	14
ಕೋಲಾರ್ ,,	0	0	4	15
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	82	39
ಹಾಸನ ,,	0	0	81	48
ಚಿತ್ರದುರ್ಗ ,,	0	0	346	187
ಕಡೂರ್ ,,	11	7	34	17
ಶಿವಮೊಗ್ಗ ,,	7	4	85	62
ಜುಮ್ಲಾ	31	21	648	382

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತ್ ಅಧಿಕ ಆಷಾಢ ಶುದ್ಧ ಚತುರ್ದಶಿ ಶುಕ್ರವಾರದಿಂದ ಅಧಿಕ ಆಷಾಢ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಜೂನ್ ಮತ್ತು ಜುಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ ತೇದಿ
28	ಶುಕ್ರ ‡	ಚತುರ್ದಶಿ	24-19	ಜ್ಯೇ	17-23	15
29	ಶನಿ	ಪೌರ್ಣಮಿ	28-10	ಮೂ	22-15	16
30	ಭಾನು	ಪಾಡ್ಯಮಿ	32-40	ಪೂಷಾ	28-5	17
1	ಸೋಮ §	ಬಿದಿಗೆ	37 29	ಉತ್ತಾ	34-28	18
2	ಮಂಗಳ	ತದಿಗೆ	42-37	ಶ್ರ	41-11	19
3	ಬುಧ †	ಚೌತಿ	46-27	ಧ	46-30	20
4	ಗುರು	ಪಂಚಮಿ	51-10	ಶ್ರ	53-21	21

‡ ಚತುರ್ದಶೀ ತಿಥಿ, ಶ್ರೀರಂಗದಲ್ಲಿ ಜ್ಯೇಷ್ಠಾಭಿಷೇಕ, ಮಳೆ ನಕ್ಷತ್ರ—ಆರಿದ್ರಾ 1 ನೇ ಪಾದ § ಮಳೆ ನಕ್ಷತ್ರ—ಆರಿದ್ರಾ 1 ನೇ ಪಾದ. † ಸಂಕಟಹರ ಚತುರ್ಥಿ

ಪೇಟೆ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫-೮-೦	೧೫-೧೨-೦
ಕೆಂಬೂತಿ ಅಕ್ಕಿ ಅವಲ್	.. ...	೧೬-೮-೦	೧೫-೪-೦
,, ದುಯ್ಯಂ	... ...	೧೬-೦-೦	೧೪-೨-೦
ಬಾಸ್ಮಾಣಿ ಅಕ್ಕಿ	.. ...	೧೫-೦-೦	೧೫-೪-೦
ಸಣ್ಣಕ್ಕಿ ಅವಲ್	..	೧೭-೮-೦	೧೮-೪-೦
,, ದುಯ್ಯಂ	.. ..	೧೬-೮-೦	೧೬-೪-೦
ಸೂಗರೀ ಬೇಳೆ ಪಲ್ಲಾ ೧ಕ್ಕೆ	. ..	೧೨-೮-೦	೧೩-೮-೦
,, ದುಯ್ಯಂ	.. ..	೧೧-೮-೦	೧೨-೬-೦
ಹೈನ್ ರಾಗಿ ಪಲ್ಲಾ ೧ಕ್ಕೆ	..	೭-೮-೦	೭-೨-೦
ಕಾರಿಬ್ರಾಗಿ	.	೭-೪-೦	೬-೯-೦
ಜೋಳ	. . ...	೭-೮-೦	೮-೮-೦
ಹಲಸಂದೆ ಪಲ್ಲಾ ೧ಕ್ಕೆ	.. ...	೧೧-೦-೦	೧೧-೦-೦
ಬೇಳೆ ಅವರೆ	... .	೧೦-೦-೦	೮-೮-೦
ತೊಗರಿ	.. ..	೧೩-೦-೦	೧೧-೦-೦
ಉದ್ದು	.. ..	೧೪-೦-೦	೧೨-೪-೦
ಕಡಲೆ	. ...	೧೧-೦-೦	೧೦-೦-೦
ಎಳ್ಳು ಸೇ ೧೨೭ಕ್ಕೆ	... ...	೨೩-೮-೦	೨೨-೮-೦
ಹುರುಳಿ	. .. ...	೭-೦-೦	೭-೮-೦
ಹರಳು ೧೨೭ ಸೇರಿಗೆ	.. ...	೧೨-೮-೦	೧೨-೦-೦
ಸೀಗೇಕಾಯಿ ಮಣ ೧ಕ್ಕೆ	...	೩-೮-೦	೩-೮-೦
ಮೆಣಸಿನಕಾಯಿ	.. .. ..	೩-೪-೦	೩-೮-೦
,, ದುಯ್ಯಂ	.. ...	೩-೦-೦	೨-೧೨-೦
ಬೆಲ್ಲ ಮೊದ್ದ ಅಚ್ಚು	... ...	೫-೮-೦	ಮು ೧-೧೨-೦
ಒಳ್ಳೆಣ್ಣೆ ಮಣ ೧ಕ್ಕೆ	... ...	೬-೦-೦	೫-೮-೦
ಹರಳೆಣ್ಣೆ ,,	... .	೫-೪-೦	೪-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	.. ...	೬-೪-೦	೯-೦-೦
ಉಪ್ಪು ,,	... ...	೫-೮-೦	೫-೮-೦
ಹುಣಸೇ ಹಣ್ಣು	... .	೧-೪-೦	೧-೬-೦
,, ಹಳೇದು	.. ...	೧-೦-೦	೧-೨-೦
ತುಪ್ಪ ಮಣ ೧ಕ್ಕೆ	... ...	೧೬-೧೨-೦	೧೬-೪-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	... ...	೫-೦-೦	೪-೬-೦
ತೆಂಗಿನಕಾಯಿ ೧೦೦ಕ್ಕೆ	.. ...	೬-೦-೦	೫-೧೪-೦
ಅಳಲೇಕಾಯಿ ಮಣ ೧ಕ್ಕೆ	... ...	೦-೮-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	೦-೧೨-೦	೧-೮-೦
ಚಿನ್ನ (ಪವನ್) ಕೆಂಪು	... ...	೧೫-೮-೦	೧೫-೭-೦
,, ,, ಪಸಿಮೆ	... ...	೧೫-೧೪-೬	೧೫-೧೨-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೩-೦	೨೪-೨-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	... ...	೮೧-೦-೦	೭೯-೮-೦

ತಾಲ್ಲೋಕು ವರ್ತಮಾನಗಳು.

ಹಗ್ಗಡದೇವನಕೋಟೆ.—ಹವಾ ಚನ್ನಾಗಿದೆ. ಗಾಳಿ ಅಧಿಕವಾಗಿ ಬೀಸುತ್ತದೆ ಮಳೆ ಆಗಾಗ್ಗೆ ಹುಯ್ಯುತ್ತಿದೆ. ಯಾವ ಹೊಲದಲ್ಲಿ ನೋಡಿದರೂ ಪೈರುಪಚ್ಚೆಗಳು ಚನ್ನಾಗಿ ಬೆಳದು ನೋಟಕರ ಮನಸ್ಸನ್ನು ಸೆಳೆಯುತ್ತಿವೆ. ಮತ್ತು ಊರಲ್ಲಿ ಸಾಂಕ್ರಾಮಿಕ ಜಾಡ್ಯವು ಇಲ್ಲದಿರುವುದು ತುಂಬಾ ಸಂತೋಷಕರವಾಗಿದೆ. ಆದರೆ ಊರುಮಧ್ಯದಲ್ಲಿ ಮಾತ್ರ ಎಲ್ಲಿನೋಡಿದರೂ ಮರ, ಗಿಡ, ಹುಲ್ಲು ಮೊದಲಾದುವು ಬೆಳದು ದುಷ್ಟಮೃಗಗಳಿಗೆ ಶೌರುಮನೆಯಾಗುತ್ತಿದೆ ಊರಿನಲ್ಲಿರುವ ಲಾಂದ್ರಾಕಂಬಗಳನ್ನು ಎಣಿಕೆಮಾಡಿ ನೋಡಿದರೆ ನಾಲ್ಕಕ್ಕೆ ಕಮ್ಮಿ ಇಲ್ಲ, ಆರಕ್ಕೆ ಜಾಸ್ತಿ ಇಲ್ಲ. ಈ ಕಂಬಗಳಿಗೂ ರಾತ್ರಿವೇಳೆ ದೀಪವನ್ನು ಸರಿಯಾಗಿ ಹಚ್ಚುವುದಿಲ್ಲ ಇದರಿಂದ ರಾತ್ರಿವೇಳೆ ಊರಿನಲ್ಲಿ ತಿರುಗುವ ಪ್ರಜೆಗಳಿಗೆ ತುಂಬಾ ಕಷ್ಟವಾಗಿದೆ. ಮತ್ತು ಊರಿನ ಮೇಲ್ಗಡೆ ವರದರಾಜನಗುಡಿಯು ಪಾಳುಬಿದ್ದು ಅನೇಕ ದುಷ್ಟಮೃಗಗಳು ಈ ಪಾಳು ಪ್ರದೇಶದಲ್ಲಿ ರಾತ್ರಿವೇಳೆ ಬಂದು ಅನೇಕ ಪ್ರಾಣಿಗಳನ್ನು ತಿಂದು ನಷ್ಟಪಡಿಸುವವು ಆದ್ದರಿಂದ ಈ ವಿಷಯದಲ್ಲಿ ನಮ್ಮ ಅಮಲ್ದಾರರು ಇವುಗಳನ್ನು ಸಾಫಪಡಿಸುತ್ತಾರೆಂದು ನಂಬಿದೇನೆ ಅಲ್ಲದೆ ಆ ಗುಡಿ ಬಳಿ ಒಂದು ಲಾಂದ್ರಾಕಂಬವನ್ನು ನೆಡಿಸಬೇಕಾಗಿದೆ. ಇಲ್ಲಿರುವ ಗ॥ ಎ. ವಿ ಸ್ಕೂಲಿನಿಂದ 8 ಜನ ವಿದ್ಯಾರ್ಥಿಗಳು 1912 ನೇ ಏಪ್ರಿಲ್ ತಿಂಗಳಲ್ಲಿ ನಡೆದ ಮೈಸೂರು ಲೋವರ್ ಸೆಕೆಂಡರೀ ಪರೀಕ್ಷೆಗೆ ಹೋಗಿದ್ದರು. ಅವರ ಪೈಕಿ ಮೂರು ಜನ ಇಂಗ್ಲಿಷಿನಲ್ಲೂ, ನಾಲ್ಕು ಜನ ಕನ್ನಡ 1ನೇ ಕ್ಲಾಸಿನಲ್ಲೂ, ಒಬ್ಬನು ಸೆಕೆಂಡ್ ಕ್ಲಾಸಿನಲ್ಲೂ ಪ್ಯಾಸಾಗಿರುತ್ತಾರೆ ಈ ವಿಷಯವು ತುಂಬಾ ಸಂತೋಷಕರವಾದದ್ದಾಗಿದೆ ದವಸ ಧಾರಣೆಗಳ ಖರೀದಿ ಏಕರೀತಿಯಾಗಿದೆ; ಅಂದರೆ ಅಕ್ಕಿ 7-8 ಸೇರು, ರಾಗಿ 20 ಸೇರು, ಬೇಳೆ 6-7 ಸೇರು ಮಾರುತ್ತೆ.

ತಿಪಟೂರು.—ಮುಂಗಾರು ಮಳೆಯಾಗಿ ರೈತರು ಬಿತ್ತನೆ ಕೆಲಸವನ್ನು ಹೊಡಿದಿದ್ದಾರೆ. ಈ ಪ್ರಾಂತ್ಯವೆಲ್ಲಾ ವಿಶೇಷ ನೆಲಗಡ್ಲೆಕಾಯಿನ ಪೈರನ್ನು ಹಾಕಿದ್ದಾರೆ. ಚನ್ನಾಗಿ ಮಳೆ ಆಗಬೇಕು —ರಜಾ ಹೋಗಿದ್ದ ನಮ್ಮ ಅಮಲ್ದಾರ್ ಮ॥ ಬಸವರಾಜೆ ಅರಸಿನವರು ಕೆಲಸದ ಮೇಲೆ ಬಂದರು ಆಕ್ಟಿಂಗ್ ಬಂದಿದ್ದ ಡೆಪ್ಯುಟಿ ಅಮಲ್ದಾರ್ ಮ॥ ಸ್ವಾಮಿನಾಥ ಶಾಸ್ತ್ರಿಗಳ ದಿನದಲ್ಲಿ ವೃತ್ತಾಂತ ಪತ್ರಿಕಾ ಮುಖೇನ ತಿಳಿದು ಕೆರೆ ಬಳಿ ಗಲೀಜು ಮಾಡುತ್ತಿದ್ದ ಜನಗಳಿಗೆ ಕಠಿಣವಾದ ಜುಲ್ಮಾನೆ ವಿಧಿಸಿದರು. ಇದು ಆದೇಶಿನಿಂದ ನಿಂತಿದ್ದದ್ದು ಪುನಃ ಕೆರೆ ಬಳಿ ಗಲೀಜು ಮಾಡುವುದು ಶುರು ಆಗಿದೆ ಈಗಿನ ನಮ್ಮ ಅಮಲ್ದಾರ್ರವರು ಕೂಡ ಕೊಂಚ ನಿಗಾ ತೆಗೆದುಕೊಂಡಲ್ಲಿ ಕೆರೆಯ ಅಂಗಳದಲ್ಲಿ ಜರುಗುವ ಗಲೀಜು, ಟೌನ್‌ನಲ್ಲಿ ಸಣ್ಣಸಣ್ಣ ಗಲ್ಲಿಗಳ ದುರ್ವಾಸನೆ, ಕಡಿಮೆ ಕ್ರಮವಾಗುತ್ತವೆ ಮುಖ್ಯವಾಗಿ ನಮ್ಮ ಅಮಲ್ದಾರ್ರವರು ಟೌನ್ ಸಣ್ಣ ಗಲ್ಲಿಗಳಿಗೆ ಬೇಟಿಕೊಟ್ಟರೆ ಮ್ಯುನಿಸಿಪಾಲಿಟಿ ವಿಚಾರಗಳು ಕ್ರಮಪಡುತ್ತವೆ —ಎಲ್ಲಾ ಊರುಗಳಲ್ಲಿಯೂ ನಡೆದಂತೆ ಈ ಊರಲ್ಲಿಯೂ ಯಂಪೈರ್ ಡೇ ಉತ್ಸವ, ನಮ್ಮ ಶ್ರೀಮನ್ ಮಹಾರಾಜರವರ 29 ನೇ ವರ್ಷದ ವರ್ಧಂತಿ ಉತ್ಸವಗಳು ನೆಡದವು ಆ ಕಾಲದಲ್ಲಿ ತುಮಕೂರಿಂದ ಬಂದಿದ್ದ ಅ ಕ ಮ॥ ಸೈಯದು ತಾಜಪೀರಾನು ಸಾಹೇಬರು, ನಮ್ಮ ಅಮಲ್ದಾರ್ರವರು, ಸ್ಥಳೀಯ ವರ್ತಕರು ಈ ಉತ್ಸವಗಳಲ್ಲಿ ಭಾಗಿಗಳಾಗಿದ್ದರು ಹಿಂದೆ ಈ ಊರಲ್ಲಿ ಸಬ್ ರೆಜಿಸ್ಟ್ರಾರ್ ಮ॥ ಲಕ್ಷ್ಮೀಕಾಂತೈಯಂಗಾರ್ರು ದಿನದಲ್ಲಿ ಕಚೇರಿ ಆವರಣದಲ್ಲಿ ಒಂದು ರೀಡಿಂಗ್ ರೂಂ ಸ್ಥಾಪಿಸಿದ್ದರು ಅದಕ್ಕಾಗಿ ಈ ಸ್ಥಳದ ವರ್ತಕರಿಂದ ಚಂದಾ ಮೊಬಲಗು ಬಹಳವಾಗಿ ವಸೂಲ್ ಮಾಡಿದ್ದರು ಈಗ ಯಾವ ಕಾರಣದಿಂದಲೋ ರೀಡಿಂಗ್ ರೂಮನ್ನು ಮುಚ್ಚಿದ್ದಾರೆ ಹಾಲಿ ಇರುವ ಸಬ್ ರೆಜಿಸ್ಟ್ರಾರ್ರು ರೀಡಿಂಗ್ ರೂಮಿನ ಖಾರ್ಜಿನಲ್ಲಿ ಇದ್ದಾಗ್ಯೂ ಸೇರಿದ್ದ ಮೆಂಬರುಗಳೂ, ರೂಮಿನ ಪತ್ರಿಕೆಗಳೂ, ಅದರಲ್ಲಿದ್ದ ಸಾಮಾನುಗಳೂ ಕಣ್ಣಿಗೆ ಕಾಣಿಸುವದೇ ಇಲ್ಲವೆಂದು ಹೇಳಿಕೊಳ್ಳುತ್ತಿದ್ದಾರೆ ಈ ವಿಚಾರದಲ್ಲಿ ರೂಮಿನ ಸೆಕ್ರಿಟರಿಯವರಾದ ಮ॥ ನಾರಸ್ಸೈಯಂಗಾರ್ರವರು ಇದನ್ನು ಪುನಃ ಕ್ರಮಪಡಿಸಿ ಸ್ಥಾಪಿಸಬೇಕಾಗಿದೆ ಇದನ್ನು ಜಾಗ್ರತೆಯಲ್ಲಿ ಕ್ರಮಪಡಿಸುತ್ತಾರೆಂದು ನಂಬಿದೇವೆ —ಈ ಊರು ವೈಶ್ಯರ ಸೋಲೂರು ಹನುಮಂತಶೆಟ್ರ ಮನೆಯಲ್ಲಿ ಕಳುವು ಆಗಿದ್ದ ಮೊಕದ್ದಮೆ ವಿಚಾರಣೆಯು ಪೂರೈಸಿ ಕಳೆದ ತಾ 4 ರಲ್ಲಿ ಇಲ್ಲಿನ ಅಮಲ್ದಾರ್ರ ಕೋರ್ಟಿನಲ್ಲಿ 1 ನೇ ಅಪರಾಧಿ ವಿಶ್ವಾಸ ಘಾತಕನಾದ ಜೈನಿಗರ ಆದಿರಾಜಪ್ಪನಿಗೆ 6 ತಿಂಗಳ ಕಠಿಣ ಶಿಕ್ಷೆ, 50 ರೂ ಜುಲ್ಮಾನೆ, ಜುಲ್ಮಾನೆ ಕೊಡದೆ ತಪ್ಪಿದಲ್ಲಿ ಪುನಃ 6 ತಿಂಗಳ ಸಾದಾ ಸಜ 2 ನೇ ಅಪರಾಧಿಗೆ 1 ತಿಂಗಳ ಸಜ, 10 ರೂ ಜುಲ್ಮಾನೆ 3 ನೇ ಅಪರಾಧಿಗೆ 1 ತಿಂಗಳ ಸಜ, 10 ರೂ ಜುಲ್ಮಾನೆ 4 ನೇ ಅಪರಾಧಿಗೆ 15 ದಿನ ಸಜ, 5 ರೂ ಜುಲ್ಮಾನೆ, 5 ನೆಯವನನ್ನು ನಿರಪರಾಧಿಯೆಂದು ಬಿಟ್ಟರು ಮುಖ್ಯವಾಗಿ ಈ ಮೊಕದ್ದಮೆ ಪತ್ತೆ ವಿಚಾರದಲ್ಲಿ ಶ್ರಮಪಟ್ಟ ನಮ್ಮ ಪೋಲೀಸ್ ಇನ್ಸ್‌ಪೆಕ್ಟರನ್ನೂ, ದಫೇದಾರರನ್ನೂ ವಂದಿಸಬೇಕಾಗಿದೆ —ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್‌ನಿಂದ 6 ಸಾವಿರ ರೂಪಾಯಿನ ಎರಡು ರೈಲ್ವೇ ಪಾರ್ಸಲ್ ಈ ಊರು ಮಂಡಿ ವರ್ತಕರಾದ ಗ್ರಂಧಿಗೆ ರಾಜಯ್ಯಶೆಟ್ರ ಹೆಸರಿಗೆ ಈ ಊರು ರೈಲ್ವೇ ಸ್ಟೇಷನ್‌ಗೆ ಬರಬೇಕಾಗಿತ್ತು 2 ಪಾರ್ಸಲ್‌ಗಳ ಪೈಕಿ 3 ಸಾವಿರ ರೂಪಾಯಿನ ಒಂದು ಪಾರ್ಸಲ್ ಇಲ್ಲಿನ ಸ್ಟೇಷನ್‌ಗೆ ಬಂದು ಇನ್ನೊಂದು 3 ಸಾವಿರ ರೂಪಾಯಿನ ಪಾರ್ಸಲ್ ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್‌ನಲ್ಲಿ ಕಳುವು ಆಗಿರುತ್ತೆ ಈ ವಿಚಾರದಲ್ಲಿ ರೈಲ್ವೇ ಕಂಪನಿಯವರು ಮುಂದೆ ಯಾವ ರೀತಿ ಮಾಡುತ್ತಾರೋ ನೋಡಬೇಕಾಗಿದೆ —ಈ ಗ್ರಾಮಕ್ಕೆ ಸಮೀಪವಾಗಿರುವ ಕಲ್ಲಕೆರೆ, ಸಾರ್ಥವಳ್ಳಿ, ಆಲೂರು, ಈ ಗ್ರಾಮಗಳಲ್ಲಿ ಪ್ಲೇಗಿನ ಅವಾಂತ್ರದಿಂದ ಜನರು ಊರನ್ನು ಬಿಟ್ಟು ಅರಣ್ಯದಲ್ಲಿ ವಾಸವಾಗಿದ್ದಾರೆ —ಮಳೆ ಇಲ್ಲದೆ ಜನಗಳೆಲ್ಲಾ ಆಕಾಶವನ್ನೇ ನೋಡುತ್ತಿದ್ದಾರೆ. ದಿನಸಿ ಧಾರಣೆ ಚಡಾವಾಗಿದೆ ಅಕ್ಕಿ ರೂಪಾಯಿಗೆ 6¾ ಸೇರು ಇರುತ್ತೆ. ಬಡವರು ಜೀವಿಸುವದು ಕಷ್ಟ.—ಈ ಊರು ಸಮೀಪಗ್ರಾಮವಾದ ಅಡ್ಲಾಪುರದಲ್ಲಿ ಕಾಲರಾ ಉಪದ್ರವು ಕಾಣಿಸಿರುವದಾಗಿ ವರ್ತಮಾನ ಇದನ್ನು ನಮ್ಮ ಅಮಲ್ದಾರರೂ, ಡಾಕ್ಟರವರೂ ವಿಚಾರಿಸಿ ಕೂಡ್ಲೆ ತಕ್ಕ ಏರ್ಪಾಡುಮಾಡಿ ಅದು ಇತರ ಕಡೆಗೆ ಹಬ್ಬದಂತೆ ಮಾಡಬೇಕಾಗಿರುತ್ತೆ. ದುರ್ಭಿಕ್ಷದಲ್ಲಿ ಅಧಿಕಮಾಸ ಬಂದಿರುವದು ನಿಜ. ಇದರ ಜೊತೆಗೆ ಈ ರೋಗವೂ ಜನಗಳನ್ನು ಭೀತಿಗೊಳಿಸುತ್ತಿದೆ ಮೈಸೂರು ಮ॥ ಶಿವಸಂಜಪ್ಪನವರ ಕೇಸು ಅಪೀಲ್ ಮಾಡಿದ್ದರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಕೆಳಕೋರ್ಟಿನ ತೀರ್ಮಾನವನ್ನೇ ಖಾಯಂ ಮಾಡಿ ಜವಾನನನ್ನು ಬಿಟ್ಟುಕೊಡುವಂತೆ ಹುಕುಂ ಪಡೆದಿರುವಂತೆ ಗೊತ್ತಾಗುತ್ತದೆ.

ಜಾರ್ಜ್ ಸಾರ್ವಭೌಮರ ಚರಿತ್ರೆ

[೨೭-೬]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ದೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟ ಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಅಮೂಲ್ಯವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಾವಶ್ಯಕ ಅನೇಕ ಭಾವಚಿತ್ರವೂ ಉಂಟು ಶ್ರೀಮಾನ್ ದಿವಾನರವರ ಪ್ರೋತ್ಸಾಹವನ್ನು ಪಡೆದಿದೆ ಕ್ರಯ ಪ್ರತಿ ೧ಕ್ಕೆ ೯ ಆ ಹಾಸಲು ೧ ಆ

ವಿಳಾಸ —ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರು

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೩ ನೇ ಇಸವಿ ಜೂನ್ ತಾ ೨೬ ನೇ ಗುರುವಾರ

ಮೈಸೂರು ಸಂಪದಭಿವೃದ್ಧಿಯ ಸಮಾಜವು

II ವಿದ್ಯಾ ವಿಷಯವಾದ ಸಲಹೆಗಳು.

ಮೇಲ್ಕಂಡ ಸಮಾಜವು ಈ ಸಂಸ್ಥಾನದಲ್ಲಿ ವಿದ್ಯೆಯನ್ನು ಹರಡುವುದಕ್ಕೆ ಸೂಚಿಸಿರುವ ಸಲಹೆಗಳನ್ನು ಕಳೆದ ವಾರ ಸಂಕ್ಷೇಪವಾಗಿ ತಿಳಿಸಿರುತ್ತೇವೆ ಈ ವಾರ ಈ ಸಲಹೆಗಳ ವಿಷಯದಲ್ಲಿ ನಮ್ಮ ಅಭಿಮತವನ್ನು ಸ್ವಲ್ಪ ಮಟ್ಟಿಗೆ ಟೀಕೆ ಮಾಡಲಪೇಕ್ಷಿಸುತ್ತೇವೆ ಈ ಸಲಹೆಗಳ ಪೂರ್ವಾಪರಗಳನ್ನು ಯೋಚಿಸಿ ನೋಡುವಲ್ಲಿ ಆ ಸಮಾಜದವರು ಈ ಸಂಸ್ಥಾನದಲ್ಲಿ ಪಾಠಶಾಲೆಗಳು ಬಹಳ ಸ್ವಲ್ಪವಾಗಿರುವುದೇ ದೊಡ್ಡ ಕೊರತೆಯಾಗಿದೆ ಎಂದೂ, ಪಾಠಶಾಲೆಗಳ ಸಂಖ್ಯೆಯನ್ನು ತತ್‌ಕ್ಷಣದಲ್ಲೇ ಅಥವಾ ಶೀಘ್ರವಾಗಿಯೇ ವಿಶೇಷವಾಗಿ ಹೆಚ್ಚು ಮಾಡಬೇಕಾದದ್ದು ಬಹು ಅವಶ್ಯವಾಗಿದೆ ಎಂದೂ ಅಭಿಪ್ರಾಯ ಪಟ್ಟಿರುವುದಾಗಿ ತೋರುತ್ತದೆ ಪಾಠಶಾಲೆಗಳನ್ನು ಸಂಸ್ಥಾನದವರೇ ನೇರಳವಾಗಿ ಸ್ಥಾಪಿಸಿಬಿಟ್ಟ ಪಕ್ಷದಲ್ಲಿ ಇಷ್ಟಾರ್ಥವೆಲ್ಲಾ ಕೈಗೂಡುವುದೆಂದು ಯೋಚಿಸಿ, ಇದಕ್ಕೋಸ್ಕರ ಅನುಕೂಲವಾದ ಸ್ಥಳಗಳಲ್ಲಿ ಸರ್ವತ್ರ ಬಲಾತ್ಕರಿಸಿ ವಿದ್ಯೆ ಕಲಿಸುವುದಕ್ಕೆ ಒಂದು ಕಾನೂನ್ ಮಾಡಿ ಜಾರಿಗೆ ತರಬೇಕೆಂದು ಸಮಾಜದವರು ಸಲಹೆ ಕೊಟ್ಟಿರುತ್ತಾರೆ.

ಇದನ್ನು ನೋಡುವಲ್ಲಿ ಅವರು ಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ವಿಶೇಷ ಕುತೂಹಲ ಪಡುತ್ತಿದ್ದಾರೆಂದೂ, ಶಿಕ್ಷಣ ಕ್ರಮವನ್ನು ಉತ್ತಮೋತ್ತಮವಾಗಿ ಮಾಡುವುದಕ್ಕೆ ಅವರು ಅವಶ್ಯವಾದಷ್ಟು ಗಮನವನ್ನು ಕೊಟ್ಟಿಲ್ಲವೆಂದೂ ನಮಗೆ ತೋರುತ್ತಿದೆ ಮೈಸೂರು ಸಂಸ್ಥಾನದಲ್ಲಿ ಇನ್ನೂ ಹೆಚ್ಚಾಗಿ ಸ್ಕೂಲುಗಳು ಆಗಬೇಕಾದದ್ದೇನೋ ಅವಶ್ಯವೇ ಸರಿ, ಆದರೆ ಈಗಿರುವ ಪಾಠಶಾಲೆಗಳಲ್ಲಿ ವಿದ್ಯಾಬೋಧನೆಯ ಕ್ರಮಗಳನ್ನು ಇನ್ನಷ್ಟು ವಿಚಕ್ಷಣೆಯಾಗಿ ನಡೆಯುವಂತೆ ಮಾಡಬೇಕಾದದ್ದು ಅದಕ್ಕಿಂತಲೂ ಅವಶ್ಯವಾಗಿರುತ್ತದೆ ಉಪಾಧ್ಯಾಯರನ್ನು ತರಬೇತು ಮಾಡುವುದಕ್ಕೆ ಇನ್ನೂ ವಿಶೇಷವಾಗಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಮೇಲ್ಕಂಡ ಸಮಾಜದವರು ಸೂಚಿಸಿರುವುದು ನ್ಯಾಯವಾಗಿದೆ ಈಗಿರುವ ನಾರ್ಮಲ್ ಸ್ಕೂಲುಗಳಲ್ಲಿ ಶಿಕ್ಷಣದ ತರಗತಿಗಳನ್ನು ಹೆಚ್ಚಿಸಬೇಕೆಂದೂ, ಇತರ ಕಡೆಗಳಲ್ಲೂ ಅಂಥಾ ಸ್ಕೂಲುಗಳನ್ನು ಹೊಸವಾಗಿ ಇಡಿಸಬೇಕೆಂದೂ ಸಮಾಜವು ಶಿಫಾರಸು ಮಾಡುತ್ತದೆ. ಹೊಸ ಪಾಠಶಾಲೆಗಳನ್ನು ಸಂಸ್ಥಾನವುಳ್ಳ ಪ್ರಾರಂಭಿಸುವುದಕ್ಕೆ ಮುಂಚೆ ಸರ್ಕಾರದವರು ಸಮಾಜದ ಈ ಶಿಫಾರಸನ್ನು ಅನುಮೋದಿಸಿ ದ್ರವ್ಯವನ್ನು ಒದಗಿಸಿ ಶಿಕ್ಷಣದ ಪಾಠಶಾಲೆಗಳನ್ನು ಕ್ರಮಪಡಿಸಿ ಹೆಚ್ಚಿಸಬೇಕಾಗಿದೆ ಈ ಕಾರ್ಯವು ಮೊದಲು ನಡೆಯಬೇಕಾಗಿದೆ ಪ್ರೈಮರಿ ಪಾಠಗಳನ್ನು ಹೇಳುವ ಈಗಿನ ಉಪಾಧ್ಯಾಯರುಗಳಲ್ಲಿ ಎಷ್ಟು ಜನ ಇನ್ನೂ ಅಶಿಕ್ಷಿತರಾಗಿದ್ದಾರೆಂಬುವುದು ತಿಳಿದಿದೆಯೇ? ಲೋಯರ್ ಸಕೆಂಡರಿ ಪರೀಕ್ಷೆಯಲ್ಲಿ ಪ್ಯಾಸ್ ಮಾಡಿದವರನ್ನು ಒಂದು ವರುಷ ನಾರ್ಮಲ್ ಸ್ಕೂಲಿನಲ್ಲಿ ತರಬೇತು ಮಾಡಿದರೆ ಸಾಕೇ? ಅವರಿಗೆ ಸಂಪೂರ್ಣವಾದ ಯೋಗ್ಯತೆಯು ಉಂಟಾಗುವುದೇ? ಪಶ್ಚಿಮ ರಾಜ್ಯಗಳಲ್ಲಿ ಉಪಾಧ್ಯಾಯರಾಗತಕ್ಕವರನ್ನು ಮೂರು ನಾಲ್ಕು ವರುಷ ತರಬೇತು ಮಾಡುತ್ತಾರಲ್ಲ ಪ್ರೈಮರಿ ಸ್ಕೂಲಿನಲ್ಲೂ ಒಂದನೇ ಕ್ಲಾಸಿನಲ್ಲೂ ಮಕ್ಕಳನ್ನು ತರಬೇತು ಮಾಡುವುದಕ್ಕೆ ಎಂಥಾವರಾದರೂ ಆಗಬಹುದೆಂದು ತಿಳಿದಿರುವಂತೆ ಕಾಣುತ್ತದೆ ಆದರೆ ಸಮರ್ಥನೂ ಯೋಗ್ಯತಾ ಸಿದ್ಧಿಯುಳ್ಳವನೂ ಇಂಥಾ ಬಾಲ್ಯ ತರಗತಿಗಳ ಶಿಕ್ಷಣಕ್ಕೆ ಅಗತ್ಯವಾಗಿ ಬೇಕು. ಅವನ ಬುದ್ಧಿಯು ಚುರುಕಾಗಿಯೂ, ಬೋಧನಾ ಕ್ರಮವು ಸ್ವಾರಸ್ಯವಾಗಿಯೂ, ಮಕ್ಕಳು ಅಭಿವೃದ್ಧಿ ಹೊಂದುವುದಕ್ಕೆ ಸಾಧಕವಾಗಿಯೂ ಇರಬೇಕು. ಇಲ್ಲವಾದರೆ ಗಂಡು ಹೆಣ್ಣು ಮಕ್ಕಳು ಮಂದಬುದ್ಧಿಯುಳ್ಳವರಾಗಿಯೂ, ಕೋಳಕರಾಗಿಯೂ, ದುರಭ್ಯಾಸಿಗಳಾಗಿಯೂ ಆಗುತ್ತಾರೆ ಅವರ ವಿದ್ಯಾಭ್ಯಾಸ ಕ್ರಮವೇ ಕೆಟ್ಟುಹೋಗಿ, ಪ್ರವೃದ್ಧಮಾನರಾಗಲು ಅವಕಾಶ ತಪ್ಪಿಹೋಗುತ್ತದೆ ಆ ಕಾರಣ ಈ ಸಂಸ್ಥಾನದಲ್ಲಿ ಮಕ್ಕಳ ಶಿಕ್ಷಕರನ್ನು ತರಬೇತು ಮಾಡುವುದಕ್ಕೇನೇ ಸರ್ಕಾರದವರು ಬಹಳ ದ್ರವ್ಯವನ್ನು ವಿನಿಯೋಗಿಸಬೇಕಾಗಿದೆ ಅಂಥಾ ತರಬೇತಾದ ಶಿಕ್ಷಕರ ಸಂಬಳವನ್ನು ಕಾಲಕ್ರಮದಲ್ಲಿ ಹೆಚ್ಚಿಸುವಂತೆಯೂ, ಅವರ ಸ್ಥಿತಿಗತಿಯು ತೃಪ್ತಿಕರವಾಗುವಂತೆಯೂ ಮಾಡಬೇಕು ಈ ರೀತಿ ಉತ್ತಮತರದ ಉಪಾಧ್ಯಾಯರು ಸಿದ್ಧಮಾಡಲ್ಪಟ್ಟಮೇಲೆ ಹೊಸ ಸ್ಕೂಲುಗಳನ್ನು ಸಂಸ್ಥಾನವು ಹೆಚ್ಚಿಸಿಕೊಳ್ಳುತ್ತಾ ಬರಬಹುದಾಗಿದೆ

ಪ್ರೈಮರಿ ಸ್ಕೂಲುಗಳಲ್ಲಿ ಪಾಠಪ್ರವಚನಾದಿಗಳು (ಕರಿಕ್ಯುಲಂ) ಯಾವ ರೀತಿ ಇರಬೇಕೆಂಬುದನ್ನು ಸಮಾಜದವರು ಪರ್ಯಾಲೋಚಿಸಿದಂತೆ ಅವರ ರಿಪೋರ್ಟಿನಲ್ಲಿ ಕಂಡುಬರುವುದಿಲ್ಲ ಈ ಸಮಾಜದ ಬಹುಮಂದಿ ಮೆಂಬರುಗಳು ಪಾಠಶಾಲಾ ನಡವಳಿಕೆಗಳ ವಿಷಯದಲ್ಲಿ ಪರಿಶ್ರಮವುಳ್ಳವರಾಗಿಲ್ಲವಾದ ಕಾರಣ ಅವರು ಈ ಭಾಗವನ್ನು ವಿದ್ಯಾ ಇಲಾಖೆಯವರ ಆಲೋಚನೆಗೂ ವ್ಯವಹರಣೆಗೂ ಬಿಟ್ಟಿರುವಂತೆ ಕಾಣುತ್ತದೆ ಇಂಡಿಯಾ ಗವರ್ನಮೆಂಟಿನವರು ಈ ಭಾಗವನ್ನು ಈಚೆಗೆ ಬಹಳ ದೀರ್ಘವಾಗಿ ಪರ್ಯಾಲೋಚಿಸಿ ಪಾಠಶಾಲೆಗಳಲ್ಲಿ ಕಲಿಸಬೇಕಾದ ವಿಷಯಗಳಲ್ಲೂ ಬೋಧನಾ ಕ್ರಮಗಳಲ್ಲೂ ಹಲವು ಬದಲಾವಣೆಗಳನ್ನು ರೂಢಿಸಿರುತ್ತಾರೆ ನಮ್ಮ ಪ್ರೈಮರಿ ಪಾಠಶಾಲೆಗಳಲ್ಲಿ ವ್ಯಾಯಾಮವೂ ಮಾಡಿ ಮಕ್ಕಳು ಸ್ವಾಭಾವಿಕ ಬುದ್ಧಿಮತ್ತೆಗಳನ್ನು ಕಲಿತುಕೊಳ್ಳುವಂತೆ ಆಗಬೇಕು ವಿವಿಧ ಅಂಗಗಳೂ ಅವರ ಉಡುಪುಗಳೂ ಕೊಳಕಿಲ್ಲದವುಗಳಾಗಬೇಕು ಆರೋಗ್ಯವರ್ಧಕ ವಿಚಾರಗಳೂ, ಪರಿಶುದ್ಧತೆಯ ಕ್ರಮಗಳೂ ಚಿಕ್ಕಂದಿನಿಂದ ಮಕ್ಕಳಿಗೆ ಅಭ್ಯಾಸವಾಗುವಂತೆ ಮಾಡಬೇಕು ಮಕ್ಕಳಲ್ಲಿ ಉತ್ಸಾಹವನ್ನು ಹುಟ್ಟಿಸಿ ಅವರ ದೃಷ್ಟಿಪಥವನ್ನು ವಿಕಸನಮಾಡಬೇಕಲ್ಲದೆ ವ್ಯವಸಾಯ, ಮತ್ತು ಕೈಗಾರಿಕೆಗಳ ವಿಷಯದಲ್ಲಿ ಅವರ ಬುದ್ಧಿಯು ಚುರುಕಾಗುವಂತೆ ಮಾಡಬೇಕು ಈಗ ಈ ಭಾಗಗಳನ್ನು ಕಲಿಸಬೇಕೆಂದು ಪ್ರಯತ್ನವೇನೋ ನಡೆದಿದೆ, ಆದರೆ ಆದುದರಿಂದ ಆಗುವ ಪ್ರಯೋಜನವು ಇಷ್ಟೇನೂ ತೃಪ್ತಿಕರವಾಗಿಲ್ಲ ಯಾಕೆಂದರೆ ಶಿಕ್ಷಕರಾಗಿರುವವರು ತಕ್ಕಮಟ್ಟಿಗೆ ತಿಳುವಳಿಕೆಯನ್ನೂ ಬುದ್ಧಿಕುಶಲತೆಯನ್ನೂ ಪಡೆದವರಾಗಿಲ್ಲವೆಂದೂ, ಸರಿಯಾದ ಪಾಠಪುಸ್ತಕಗಳೂ ಉಪಕರಣಗಳೂ ಕೊಟ್ಟಿಲ್ಲವೆಂದೂ ನಮಗೆ ತೋರುತ್ತಿದೆ

ಈಗ ದ್ರವ್ಯಾನುಕೂಲ ಹ್ಯಾಗಿದೆ ಎಂದು ವಿಚಾರಮಾಡಿ ನೋಡೋಣ ಈ ಭಾಗದಲ್ಲಿ ಸಮಾಜದವರು ಏನೂ ಹೇಳಿಲ್ಲ ಬಹುಶಾ ಸಮಾಜದವರು ಸಂಸ್ಥಾನವು ಆದಾಯದ ಮೇಲೆ ತೆರಿಗೆ (ಇನ್‌ಕಂ ಟ್ಯಾಕ್ಸ್) ಹಾಕಬೇಕೆಂದು ಸೂಚಿಸಿದ ಪಕ್ಷದಲ್ಲಿ ಇದು ಐಶ್ವರ್ಯವಂತರಿಗೂ ಮೆಂಬರುಗಳಾದ ತಮಗೂ ಅನ್ವಯವಾದೀತೆಂದು ಊಹಿಸಿ ಅದನ್ನು ಸೂಚಿಸದೆ ಬಿಟ್ಟಿರಬಹುದು ಆದರೆ ಅವರು ಹಣ ಉತ್ಪತ್ತಿಯಾಗುವ ಮಾರ್ಗವ್ಯಾವುದನ್ನೂ ತೋರಿಸಿಕೊಡಲಿಲ್ಲ ಈ ರಿಪೋರ್ಟಿನಲ್ಲಿ ಹೇಳಿರುವ ವಿಷಯಗಳೆಲ್ಲಾ ಜಾರಿಗೆ ಬಂದು ನೆರವೇರುವುದಕ್ಕೆ ಇಲಾಖೆಯಾ ಅವರು ಸೂಚಿಸಿರುವ ೨½ ಲಕ್ಷ ರೂಪಾಯಿಗಿಂತಲೂ ಇನ್ನೂ ಹೆಚ್ಚಾಗಿ ಬೇಕಾಗುತ್ತದೆಂದು ನಾವು ತಿಳಿದಿದ್ದೇವೆ ಈ ಹಣವೆಲ್ಲಾ 1,000 ಹೊಸ ಸ್ಕೂಲುಗಳನ್ನು ಇಡುವುದಕ್ಕೇನೇ ಸಾಕಾದೀತೋ ಇಲ್ಲವೋ ಎಂಬಂತಿದೆ ಗವರ್ನಮೆಂಟಿನವರು ಸಂಸ್ಥಾನದ ಪ್ರೈಮರಿ ಸ್ಕೂಲುಗಳಲ್ಲಿ ಫೀಜನ್ನು ವಜಾಮಾಡಿದ್ದು ತಪ್ಪೆಂದು ಆ ಸಮಯದಲ್ಲೇ ಹೇಳಿದೆವು, ಈಗಲೂ ಆ ಮಾತನ್ನೇ ಮತ್ತೆ ಹೇಳುತ್ತೇವೆ ಅದು ಯಾರಿಗೂ ಕಷ್ಟವಾಗಿರಲಿಲ್ಲ, ಯಾರೂ ಅದನ್ನು ಆಕ್ಷೇಪಣೆ ಮಾಡಿರಲಿಲ್ಲ ಈ ಫೀಜಿನಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಸಹಾಯವಾಗುತ್ತಿತ್ತು ವಿದ್ಯೆಯು ಖರ್ಚಿಲ್ಲದೆ ಲಭಿಸತಕ್ಕದ್ದಲ್ಲವೆಂದು ಗ್ರಾಮಸ್ಥರಿಗೂ ಚೆನ್ನಾಗಿ ತಿಳಿದಿತ್ತು ಇದು ನ್ಯಾಯವೂ ಸಹಜವೂ ಆಗಿದೆ ಯಾಕೆಂದರೆ ಖರ್ಚುಮಾಡಬಲ್ಲವರ್ಯಾರೋ ಅವರ ಮಕ್ಕಳೇ ವಿದ್ಯೆಯ ಫಲವನ್ನು ಪಡೆಯುತ್ತಿದ್ದರು. ಪ್ರೈಮರಿ ತರಗತಿಗಳಲ್ಲಿ ಫೀಜನ್ನು ವಜಾ ಮಾಡಬೇಕೆಂಬ ವಿಷಯವು ಬ್ರಿಟಿಷ್ ಇಂಡಿಯದ ಅಧಿಪತ್ಯಗಳಲ್ಲಿ ಚರ್ಚೆಗೆ ಬಂದಾಗ ಅದನ್ನು ಅಗತಕ್ಕದ್ದಲ್ಲವೆಂದು ತಿರಸ್ಕರಿಸಿಬಿಟ್ಟರು, ಯಾಕೆಂದರೆ ಗವರ್ನಮೆಂಟಿನವರು ವಿದ್ಯಾಭಿವೃದ್ಧಿಗೆ ಒದಗುವ ಹಣವು ಕಡಮೆಯಾಗುವುದೆಂದು ಅದನ್ನು ವಜಾಮಾಡದೆಹೋದರು ಈ ಅಭಿಪ್ರಾಯವು ನ್ಯಾಯವಾಗಿದೆ ಅದು ವಿದ್ಯೆಯನ್ನು ಹರಡುವುದಕ್ಕೆ ಪ್ರತಿಬಂಧಕವಾಗುವುದೇ ಹೊರತು ಸಹಾಯವಾಗುವುದಿಲ್ಲ

ಯೂರೋಪ್ ಖಂಡಕ್ಕೆ ಸೇರಿದ ಇಂಗ್ಲೆಂಡು ಮೊದಲಾದ ರಾಜ್ಯಗಳಲ್ಲಿ ಪ್ರಜೆಗಳು ಪ್ರೈಮರಿ ಪಾಠಶಾಲೆಗಳಲ್ಲಿ ಫೀಜು ಕೊಡುವುದಿಲ್ಲವೆಂಬುವುದನ್ನು ನೋಡಿ ಅಲ್ಲೆಲ್ಲಾ ಮಕ್ಕಳಿಗೆ ಸುಮ್ಮನೆ ವಿದ್ಯೆ ಕಲಿಸುತ್ತಾರೆಂದು ಹೇಳುವುದುಂಟು ಇದು ತಪ್ಪಾದ ಅಭಿಪ್ರಾಯ ತಿಳುವಳಿಕೆ ಸಾಲದೆ ಈ ರೀತಿ ಹೇಳುವರು. ಇಂಗ್ಲೆಂಡಿನಲ್ಲಿ ಯಾವ ವಿದ್ಯೆಯನ್ನೂ ಬಿಟ್ಟಿಯಾಗಿ ಕಲಿಸುವುದಿಲ್ಲ ತಂದೆ ತಾಯಿಗಳು ಪ್ರತಿ ತಿಂಗಳಲ್ಲೂ ಸ್ಕೂಲ್ ಫೀಜನ್ನು ತಮ್ಮ ಮಕ್ಕಳ ಮೂಲಕ ಉಪಾಧ್ಯಾಯರಿಗೆ ಕೊಡುವಂತೆ ಕಳುಹಿಸುವುದಿಲ್ಲವಾದರೂ ಪಾಠಶಾಲೆಗಳು ಸರಿಯಾಗಿ ನಡೆಯುವುದಕ್ಕೋಸ್ಕರ ಅವರು ವರುಷೇ ವರುಷ ವಿದ್ಯಾಭ್ಯಾಸದ ಕಂದಾಯವನ್ನು ಸರ್ಕಾರಕ್ಕೆ ಪಾವತಿಮಾಡುತ್ತಾ ಬರಬೇಕಾಗಿದೆ ಇಂಗ್ಲೆಂಡಿನಲ್ಲಿ ಎಲ್ಲರೂ ವಿದ್ಯೆ ಕಲಿಯಬೇಕೆಂಬುವುದು ವಿಧಿಯಾಗಿರೋಣದರಿಂದ ಅಲ್ಲಿನವರು ವಿದ್ಯೆಯ ಕಂದಾಯವನ್ನು ಕೊಡುವುದು ಧರ್ಮವಾಗಿದೆ ಅಲ್ಲಿ ಪ್ರತಿ ಒಬ್ಬರಿಗೂ ತಕ್ಕ ಪಾಠಶಾಲೆಯುಂಟು ಪ್ರತಿ ಒಬ್ಬರೂ ಹೋಗಿ ಕಲಿಯಲೇಬೇಕು ಮೈಸೂರು ಸಂಸ್ಥಾನದಲ್ಲೂ ಎಲ್ಲರಿಗೂ ಎಲ್ಲಾ ಪ್ರದೇಶಗಳಲ್ಲೂ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡದೆ ಎಲ್ಲರಿಂದಲೂ ವಿದ್ಯಾಕಂದಾಯವನ್ನು ಹಾಕಿ ವಸೂಲ್ಮಾಡುವುದು ತರವಲ್ಲ, ಈಗಿರುವ ಕಂದಾಯಗಳೂ ತೆರಿಗೆಗಳೂ ಪಟ್ಟಿಗಳೂ ತಕ್ಕಮಟ್ಟಿಗೆ ಹೆಚ್ಚಾಗಿರುವವು ಕೆಲವು ಕಾಲದವರೆಗೆ ಈ ಸೀಮೆಯಲ್ಲಿ ಪ್ರಜೆಗಳೆಲ್ಲಾ ವಿದ್ಯೆ ಕಲಿಸುವ ಖರ್ಚನ್ನು ಗವರ್ನಮೆಂಟಿನವರು ಮಾಡಿಟ್ಟು ವಹಿಸುತ್ತಾರೆನ್ನುವುದು ಸಾಧ್ಯವಲ್ಲವೆಂದು ಎಲ್ಲರೂ ತಿಳಿದುಕೊಂಡಿರುತ್ತಾರೆ

ನಾವು ತಿಳಿದಿರುವಂತೆಯೇ ಈ ರಿಪೋರ್ಟಿನಲ್ಲೂ ಒಂದು ವಿಷಯ ಸೂಚಿಸಲ್ಪಟ್ಟಿದೆ ಅದೇನೆಂದರೆ, ವಿದ್ಯಾಭಿವೃದ್ಧಿಗೆ ಹಣವನ್ನು ಯಾವ ರೀತಿಯಲ್ಲಿ ಒದಗಿಸಬಹುದೋ ಅದನ್ನು ತೃಪ್ತಿಕರವಾಗಿ ಪರ್ಯಾಲೋಚನೆ ಮಾಡಿ ಇಲ್ಲ ಯಾವುದಾದರೊಂದು ಹೊಸ ಕಂದಾಯವನ್ನು ಹಾಕಿ ಹಣವನ್ನು ಒದಗಿಸುವುದು ಸಾಧ್ಯವಲ್ಲದಿದ್ದರೆ ಸರ್ಕಾರದವರು ಕೆಲವು ಬಾಬುಗಳಿಗೆ ಈಗ ಮಾಡುತ್ತಿರುವ ಖರ್ಚನ್ನು ಕಡಮೆ ಮಾಡಬೇಕಾಗುತ್ತದೆ ಹಾಗಿಲ್ಲದಿದ್ದರೆ ಈ ಸಮಾಜದವರು ಕೊಟ್ಟಿರುವ ಸಲಹೆಗಳು ನಿಷ್ಪ್ರಯೋಜಕಗಳಾಗಿ ಪರಿಣಮಿಸುವವು

ಸುಳ್ಳುಗಾರನ ಮಾನಸಾಂತರವೂ, ಪವಿತ್ರಾತ್ಮನ ಸುಪ್ರೇರಣೆಯೂ

ಯೇಸು ಕ್ರಿಸ್ತನನ್ನು ಅತನ ಶತ್ರುಗಳು ಕೊಂದುಹಾಕುವುದಕ್ಕೆ ಹಿಡಿದ ರಾತ್ರಿ ಆತನು ತಾನು ಲೋಕವನ್ನು ಬಿಟ್ಟು ಹೋಗಬೇಕಾದ ಕಾಲವು ಬಂದೊದಗಿದೆಯೆಂದು ತಿಳಿದು ತನ್ನ ಶಿಷ್ಯರಿಗೆ ಕಡೆಯ ಉಪದೇಶವನ್ನು ಹೇಳಿದನು ಆ ಸಂದರ್ಭದಲ್ಲಿ ಅತನು ಪವಿತ್ರಾತ್ಮನ ವಿಷಯ ವಿಶದವಾಗಿ ತಿಳಿಸುತ್ತಾನೆ "ನಾನು ಈ ಮಾತುಗಳನ್ನು ನಿಮಗೆ ಹೇಳಿದ್ದರಿಂದ ನಿಮ್ಮ ಹೃದಯವು ದುಃಖದಿಂದ ತುಂಬಿದೆ ಆದರೂ ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ ಕೇಳಿ ನಾನು ಹೋಗುವುದು ನಿಮಗೆ ಹಿತಕರವಾಗಿದೆ ಹಾಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ ನಾನು ಹೋದರೆ ಅವನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ ಅತನು ಬಂದು ಪಾಪ ನೀತಿ ನ್ಯಾಯತೀರ್ಪು ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು"

ಪವಿತ್ರಾತ್ಮನು ಅದೃಶ್ಯನಾಗಿರುವುದರಿಂದ ಅತನನ್ನು ನಾವು ನೋಡಲಾರೆವು ಅತನನ್ನು ಮುಟ್ಟಲಾರೆವು ಆದರೂ ಅತನು ಸರ್ವದಾ ಇಯಾಗಿರುತ್ತಾನೆ ನಮ್ಮ ಹೃದಯಗಳಲ್ಲಿ ಸುಪ್ರೇರಣೆ ಕೊಡುವವನು ಅತನೇ ದುಷ್ಪ್ರೇರಣೆಯು ಸಂಗಡಿ ದುರಾತ್ಮನಿಂದ ಹುಟ್ಟುವಂಥಾದ್ದು ಅತನಿಂದ ಬರುವ ಪ್ರೇರಣೆಗಳೆಲ್ಲಾ ಸಂಪೂರ್ಣವಾಗಿ ಒಳ್ಳೆಯವುಗಳೇ ಆಗಿರುತ್ತವೆ ನಾವು ಒಡಂಬಡಿಕೆಯನ್ನು ಉಲ್ಲಂಘಿಸುವಾಗ್ಗೆ ನಮ್ಮ ಮನಸ್ಸಿನಲ್ಲಿ ಕಳವಳವನ್ನು ಹುಟ್ಟಿಸಿ ನಾವು ಮಾಡಿದ ಅಪರಾಧವನ್ನು ಒಪ್ಪಿಕೊಂಡು ಪಶ್ಚಾತ್ತಾಪದಿಂದ ಅದನ್ನು ಬಿಡಬೇಕೆನ್ನುವಂತೆ ನಮ್ಮನ್ನು ಬಲವಾಗಿ ಪ್ರೇರಿಸುವವನು ಅತನೇ ಆ ಪವಿತ್ರಾತ್ಮನಿಂದಲೇ ಪಾಪಿಷ್ಟರಿಗೆ ಅವರ ಪಾಪದ ಅರುಹು ಹುಟ್ಟುತ್ತದೆ ಇಂತಹ ಪವಿತ್ರಾತ್ಮನ ಸುಪ್ರೇರಣೆಯನ್ನು ಹೊಂದಿದ ಒಬ್ಬ ಮನುಷ್ಯನ ವಿಷಯ ಒಂದು ಸಂಗತಿಯನ್ನು ತಿಳಿಸುತ್ತೇವೆ ಇದು ಒಂದು ಕಲ್ಪನಾ ಕಥೆಯಲ್ಲ ಕಳೆದ ವರುಷ ನಿಜವಾಗಿ ನಡೆದುದು

ಮಹಾರಾಷ್ಟ್ರದ ಒಂದು ಊರಿನಲ್ಲಿ ಒಬ್ಬ ಜಮೀನುದಾರಿಣಿ ಇದ್ದನು. ಇವನಲ್ಲಿ ಲೇವಾದೇವಿ ನಡಿಸುವುದು ಮಹಾ ಕಷ್ಟಕರವಾಗಿದ್ದಿತು. ಒಂದು ವರುಷದ ಹಿಂದೆ ಇವನಿಗೆ ಹಣ ಕೊಟ್ಟಿದ್ದ ಒಬ್ಬ ಸಾಹುಕಾರನು ಅವನ ಪತ್ರವನ್ನು ತೆಗೆದುಕೊಂಡು ಬಂದು ಸಾಲವನ್ನು ಫೈಸಲ್ ಮಾಡುವಂತೆ ತಗಾದೆಮಾಡಿದನು. ಆಗ ಆ ಸಾಲಗಾರನು ತನ್ನಲ್ಲಿ ಹಣವಿಲ್ಲವೆಂದೂ ಇದುವರೆಗೂ ಆಗಿರುವ ಅಸಲೂ ಬಡ್ಡಿ ಸಹ ಸೇರಿಸಿ ಒಟ್ಟು ಮಾಡಿ ಅದಕ್ಕೆ ಬೇರೊಂದು ಹೊಸ ಪತ್ರವನ್ನು ಬರೆದುಕೊಡುವುದಾಗಿ ಹೇಳಿದನು. ಅದಕ್ಕೆ ಆ ಸಾಹುಕಾರನು ಒಪ್ಪಿಕೊಳ್ಳಲು ಕೂಡ ಅವನ ಇಷ್ಟದಂತೆ ಇನ್ನೊಂದು ಪತ್ರವನ್ನು ಬರೆಸಿದನು. ಅಷ್ಟರಲ್ಲೇ ಆ ಸಾಲಗಾರನ ಹೆಂಡತಿಯು ಒಂದು ಏನೆಂದು ಕೇಳಲು ನಡೆದ ಸಂಗತಿಯನ್ನೆಲ್ಲಾ ಅವಳಿಗೆ ತಿಳಿಸಿದರು. ಆಗ ಅವಳು ಆ ಪತ್ರವನ್ನು ನನ್ನ ಕೈಗೆ ಕೊಡಿರಿ, ನಾನು ನಿಮ್ಮ ಬಾಕಿಯನ್ನೆಲ್ಲಾ ಕೊಟ್ಟು ತೀರಿಸುತ್ತೇನೆಂದು ಹೇಳಲು ಸಾಹುಕಾರನು ಹೊಸ ಪತ್ರವನ್ನು ಅವಳ ಕೈಗೆ ಕೊಟ್ಟನು. ಅವಳು ಆ ಪತ್ರವನ್ನು ತೆಗೆದುಕೊಂಡು ಹಣ ತರುವುದಕ್ಕೆ ಮನೆಗೆ ಹೋದಳು. ಬರಲೇ ಇಲ್ಲ. ಅವಳ ಗಂಡನು ಸ್ವಲ್ಪ ಹೊತ್ತಿನ ಮೇಲೆ ಅವಳನ್ನು ಕರೆದುಕೊಂಡು ಬರುವವನಂತೆ ಎದ್ದು ಒಂದು ಮನೆಗೆ ಸೇರಿದನು. ಕಡೆಯಲ್ಲಿ ಸಾಹುಕಾರನು ಕಾದು ಕಾದು ಸಾಕಾಗಿ ಅವರ ಮನೆಗೆ ಬಂದು ಕೇಳುವಲ್ಲಿ ನಾವು ನಿನ್ನ ಸಾಲವನ್ನೆಲ್ಲಾ ಕೊಟ್ಟು ನಮ್ಮ ಪತ್ರವನ್ನು ವಾಪಸು ಪಡೆದಿದ್ದೇವೆ. ತಿರುಗಿ ಹಣ ಕೇಳುವುದಕ್ಕೆ ಬಂದಿದ್ದೀಯಾ? ಏನು ಅನ್ಯಾಯ ಮಾಡುತ್ತೀ ಎಂದು ದೊಡ್ಡ ಗಲಾಟೆ ಮಾಡಿದರು. ಆ ಸಾಹುಕಾರನು ಸುಮ್ಮನೆ ಹೊರಟುಹೋಗಿ ತನಗೆ ಮೋಸಮಾಡಿರುವುದಾಗಿ ಅವನ ಮೇಲೆ ದಾವಾಮಾಡಿದನು. ಇದಾಗಿ ಒಂದು ವರುಷವಾದರೂ ಇದರ ವಿಚಾರಣೆಯು ಕೆಲವು ದಿನಗಳ ಹಿಂದೆ ನಡೆಯಿತು. ಈ ಮೊಕದ್ದಮೆಯಲ್ಲಿ ಆ ಸ್ಥಳದಲ್ಲಿ ಅತ್ಯಂತ ಉತ್ತೇಜನ ಸೂಚಕವಾಗಿ ವಿಶೇಷ ಆರಾಧನೆಗಳು ಕ್ರೈಸ್ತರ ದೇವಾಲಯದಲ್ಲಿ ನಡಿಸಲ್ಪಟ್ಟವು. ಆ ಸಾಲಗಾರನೂ ಅವನ ಹೆಂಡತಿಯೂ ಹಾಜರಾಗಿದ್ದರು. ಎಲ್ಲ ದೈವಭಕ್ತರೂ ಎಲ್ಲರೂ ಹೇಳುವುದೇ ಸತ್ಯವೆಂದೂ ಆ ಸಾಹುಕಾರನೇ ದಗಾಕೋರನೆಂದೂ ನಂಬಿದ್ದರು. ಕೇಸು ವಿಚಾರಣೆಯಾಗುವ ಕಾಲದಲ್ಲಿ ಆ ಸಾಲಗಾರನು ಕೋರ್ಟಿನಲ್ಲಿ ನಿಂತು ಒಡ್ಡೆಯವರಿಗೆ ಹೇಳಿದುದೇನೆಂದರೆ ಸ್ವಾಮಿ, ನನಗೆ ಯುಕ್ತವಾಗಿ ತೋರಿದಂತೆ ನನಗೆ ಶಿಕ್ಷೆಯನ್ನು ವಿಧಿಸಿ. ನಾನು ಸುಳ್ಳು ಹೇಳಲಾರೆ. ನಾನು ಆ ಸಾಹುಕಾರನಿಗೆ ಒಂದು ಕಾಸಾದರೂ ಕೊಟ್ಟಿರುವುದಿಲ್ಲ. ಅವನಿಗೆ ಮೋಸಮಾಡಬೇಕೆಂಬ ಉದ್ದೇಶದಿಂದಲೇ ಈ ಉಪಾಯವನ್ನು ಕಲ್ಪಿಸಿದೆನು. ದೇವರು ಈಗ ನನ್ನ ಕಣ್ಣುಗಳನ್ನು ತೆರೆದಿದ್ದಾನೆ. ನಾನು ಇನ್ನು ಮೇಲೆ ಸುಳ್ಳುಗಾರನಾಗಿರಲಾರೆನೆಂದನು. ಇದನ್ನು ಕೇಳಿ ಒಡೆಯರೂ ವಕೀಲರೂ ಕೋರ್ಟಿನಲ್ಲಿದ್ದವರೆಲ್ಲರೂ ವಿಸ್ಮಯಗೊಂಡರು. ಎಂದಾದರೂ ಇಂತಹ ಒಂದೂ ನಡೆದಿರಲಿಲ್ಲ. ಒಡೆಯರು ಅವನ ಸತ್ಯತೆಯನ್ನು ಮೆಚ್ಚಿ ನೀನು ಸಾಹುಕಾರನಿಗೆ ಕೊಡಬೇಕಾದ ಬಾಕಿಯನ್ನು ಕೊಟ್ಟುಬಿಡು ಎಂದು ಹೇಳಿ ಅವನನ್ನು ಕಳುಹಿಸಿಬಿಟ್ಟರು. ಇದನ್ನು ನೋಡಿದವರೆಲ್ಲರಿಗೂ ಪರಮಾಶ್ಚರ್ಯವಾಯಿತು. ಆ ಜಮೀನುದಾರಿಣಿಯು ತನ್ನ ಸಿಟ್ಟಿತಿಯನ್ನು ತಾನು ತಿಳಿದುಕೊಂಡು ಸತ್ಯವನ್ನು ಪ್ರಕಟಮಾಡಿದುದಕ್ಕಾಗಿ ನಾವು ಸಂತೋಷಪಡಬೇಕಾಗಿದೆ. ಇದು ಪವಿತ್ರಾತ್ಮನ ಕೆಲಸವೆಂದು ನಾವು ತಿಳಿದುಕೊಳ್ಳುತ್ತೇವೆ.

ಕೆಲವು ಸಂದರ್ಭಗಳಲ್ಲಿ ಆ ಪವಿತ್ರಾತ್ಮನು ನಮ್ಮಲ್ಲಿ ಹುಟ್ಟಿಸುವ ಮನಃಪ್ರೇರಣೆಯು ಬಹು ಬಲವಾಗಿಯೂ ಭಯಂಕರವಾಗಿಯೂ ಇರುವುದು. ಕಷ್ಟವನ್ನು ಕಷ್ಟವೆಂದೇ ಹೇಳಿ ನಿಂದಿಸುವನಲ್ಲದ ಮನಸ್ಸಾಕ್ಷಿ ಮಾಡಿದ ನಮ್ಮ ಅಂತರ್ಯದ ಸ್ಥಿತಿಗತಿಗಳು ಹಾಗಿರುತ್ತವೋ ಸಹಜವಾಗಿ ಹಾಗೆಯೇ ಅವುಗಳ ಯಥಾಸ್ಥಿತಿಯನ್ನು ನಮಗೆ ಬಿಚ್ಚಿ ಬಯಲು ಪಡಿಸಿ ನಮ್ಮಲ್ಲಿ ಕೇವಲ ನಾಚಿಕೆಯನ್ನೂ ದುಃಖವನ್ನೂ ಹುಟ್ಟಿಸುವರೇ ಹೊರತು ಸುಳ್ಳು ಹೇಳಿ ನಮ್ಮನ್ನು ವಂಚಿಸುವುದೇ ಇಲ್ಲ. ಇಂಥ ಪಶ್ಚಾತ್ತಾಪವೂ ದುಃಖವೂ ಲೋಕದ ಸಕಲ ಭೋಗ ಭಾಗ್ಯಗಳಿಗಿಂತ ಶ್ರೇಷ್ಠವಾದುದು. ನಾವು ಪಾಪಮುಕ್ತರಾಗಿ ಮನಶ್ಶಾಂತಿಯನ್ನು ಹೊಂದುವುದಕ್ಕೆ ಇದೇ ದ್ವಾರವು. ಶ್ರೀ ಪೌಲನು ಕೊರಿಂಥದಲ್ಲಿದ್ದವರಿಗೆ ಹೇಳುವುದೇನೆಂದರೆ— "ನಿಮಗೆ ದುಃಖವಾಯಿತೆಂದು ನಾನು ಸಂತೋಷಪಡದೆ ನೀವು ದುಃಖಪಟ್ಟು ಬೇರೆ ಮನಸ್ಸನ್ನು ಹೊಂದಿದ್ದಕ್ಕಾಗಿ ಸಂತೋಷಪಡುತ್ತೇನೆ. ನೀವು ದೇವರ ಚಿತ್ತಾನುಸಾರವಾಗಿ ದುಃಖಪಟ್ಟದರಿಂದ ನಮ್ಮಿಂದ ಯಾವದರಲ್ಲಿಯೂ ನಷ್ಟಪಡಲಿಲ್ಲವಲ್ಲಾ. ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟುಮಾಡಿ ರಕ್ಷಣೆಗೆ ಕಾರಣವಾಗಿದೆ, ಆ ಮಾನಸಾಂತರದಲ್ಲಿ ಪಶ್ಚಾತ್ತಾಪಕ್ಕೆ ಆಸ್ಪದವಿಲ್ಲ. ಆದರೆ ಲೋಕದವರಿಗಿರುವಂಥಾ ದುಃಖವು ಮರಣವನ್ನುಂಟುಮಾಡುತ್ತದೆ."

ಒಳದೇಶದ ವೃತ್ತಾಂತಗಳು

ದಿವಾನ್ ಮೆ॥ ಟಿ. ಆನಂದರಾಯರವರೂ, ಕೌನ್ಸಿಲರುಗಳೂ, ಚೀಫ್ ಸೆಕ್ರೆಟರಿಯವರೂ ಸದ್ಯ ರಾಜಧಾನಿಯಲ್ಲೇ ಈ ವಾರವೆಲ್ಲಾ ಇರುತ್ತಾರೆಂದು ಕೇಳುವೆವು.

* * *

ಕಳೆದ ಗುರುವಾರ ರಾಜಧಾನಿಯ ಡಿಟೆಕ್ಟಿವ್ ಪೋಲೀಸ್ ಕಾನ್‌ಸ್ಟೆಬಲ್ ದಾಸಪ್ಪನು ಬೀದಿಗೆ ಬಂದಿದ್ದ ಒಂದು ಚಿನ್ನ ಗಡಿಯಾರವನ್ನು ಆಸಾಮಿಯಿಂದ ಕಿತ್ತು ದೇವರಾಜ ಪೋಲೀಸ್ ಸ್ಟೇಷನ್‌ಗೆ ಕೊಟ್ಟಿರುವುದಾಗಿಯೂ, ಕಳೆದುಕೊಂಡಿರುವ ಮಾಲೀಕರು ಅಲ್ಲಿ ಹಾಜರಾಗಿ ಅದನ್ನು ಪಡೆಯಬಹುದೆಂದೂ ಒಬ್ಬ ಶಾಸ್ತ್ರದವರು ತಿಳಿಸುತ್ತಾರೆ.

* * *

ಬರೋಡಾ ಮಹಾರಾಜರವರು ಈ ದಿನ ಸಾಯಂಕಾಲ ನೀಲಗಿರಿಯಿಂದ ನಂಜನಗೂಡು ಮಾರ್ಗವಾಗಿ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡುವರು. ಗೌರವಾರ್ಥವಾದ 21 ತೋಪುಗಳು ಹಾರಿಸಲ್ಪಡುತ್ತವೆ. ಗಾಯಕವಾಡ ಮಹಾರಾಜರವರೂ ಮಹಾರಾಣಿಯವರೂ ಇಲ್ಲಿನ ಯುವರಾಜರವರ ಚಾಮುಂಡಿ ವಿಹಾರವೆಂಬ ಭವನದಲ್ಲೂ, ಅವರ ಪುತ್ರರು ಜಾಕ್ ಬಂಗಲೆಯಲ್ಲೂ, ಅವರ ಪರಿವಾರದವರು ಡಾಕ್ಟರ್ ಬಂಗಲೆಯಲ್ಲೂ ಇಳುಕೊಳ್ಳುತ್ತಾರೆಂದು ತಿಳಿದುಬಂದಿದೆ.

* * *

ಒಬ್ಬ ಬಾತ್ಮಿದಾರರಿಂದ —ಶ್ರೀನಿವಾಸಪುರದ ತಾಲ್ಲೂಕ್ ಏರುಕಾಲೆ ಗ್ರಾಮದಲ್ಲಿ ತಾ 16 ನೇ ರಾತ್ರಿ ಪಟೇಲ ಕೊತ್ತನೂರು ಪಾಪ್ಪಯ್ಯನವರ ಮಕ್ಕಳು ರಾಮಯ್ಯನವರ ಮನೆಗೆ ಕಳ್ಳರು ಕನ್ನಾ ಕೊರೆದು ನುಗ್ಗಿ ಸುಮಾರು 800 ರೂಪಾಯಿನ ಒಡವೆ, ಬಟ್ಟೆ, ನಗದು ಹಣ, ಕಾಗದ ಪತ್ರಗಳನ್ನು ಕಳುವು ಮಾಡಿರುತ್ತಾರೆ. ಕಳ್ಳರಾಗಲಿ, ಮಾಲಾಗಲಿ ಪತ್ತೆ ಇಲ್ಲ. ಪರೋಪಕಾರಿಗಳಾಗಿಯೂ ಉದಾರಿಗಳಾಗಿಯೂ ಇರತಕ್ಕ ಇವರಿಗೆ ಇಂಥಾ ನಷ್ಟ ಸಂಭವಿಸಿದ್ದಕ್ಕಾಗಿ ಬಹಳ ವಿಷಾದಿಸುತ್ತೇವೆ.

* * *

ಶ್ರೀಮನ್ ಮಹಾರಾಜರವರು ರಾಜಧಾನಿಯಲ್ಲಿ ಯೂರೋಪಿಯನ್ ಅತಿಥಿಗಳನ್ನು ಸತ್ಕಾರವಾಡುತ್ತಿದ್ದಾರೆ. ಅವರ ವಿನೋದಕ್ಕಾಗಿ ಕುದುರೆ ಜೂಜುಗಳೂ, ಪೋಲೋ ಪಂದ್ಯಗಳೂ ನಡೆಯುತ್ತಿವೆ. ಈ ದಿನ ರಾತ್ರಿ ಯೂರೋಪಿಯನ್ ಅತಿಥಿಗಳನ್ನೆಲ್ಲಾ ಅರಮನೆಗೆ ಕರೆಸಿಕೊಂಡು, ಸಂಗೀತಾದಿ ವಿನೋದಗಳನ್ನು ನಡಿಸುವರು. ನಾಳೆ ರಾತ್ರಿ ಟೌನ್ ಹಾಲ್ ಮಂದಿರದಲ್ಲಿ ಅವರಿಗೋಸ್ಕರ ನಾಟಕಾದಿಗಳು ಜರುಗುವವು. ವರ್ಧಂತಿ ಕಟ್ಟೆಯ ದೀಪೋತ್ಸವವು ಸೋಮವಾರ ರಾತ್ರಿ ನಡೆದು, ಮರುದಿನ ಅತಿಥಿಗಳೆಲ್ಲಾ ಸ್ವಸ್ಥಳಗಳಿಗೆ ತೆರಳುವರು.

ಮೈಸೂರು ಗೆಜೆಟ್ ಸಂಗ್ರಹ.

ಮಾಲೂರು ತಾಲ್ಲೂಕಿಗೆ ಸೇರಿದ ನರಸಾಪುರದಲ್ಲಿರುವ ಅನ್ನಛತ್ರವನ್ನು ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತಕ್ಕೆ ವಹಿಸಿದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಲ್ಲಿ 24 ಮಂದಿಯೂ, ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಲ್ಲಿ 20 ಮಂದಿಯೂ ಮೆಂಬರುಗಳಿರತಕ್ಕದ್ದೆಂದೂ, ಅರೆವಾಸಿ ಮೆಂಬರುಗಳು ಸರ್ಕಾರದಿಂದ ನೇಮಿಸಲ್ಪಡುವರೆಂದೂ, ಅರೆವಾಸಿ ಮೆಂಬರುಗಳನ್ನು ಪ್ರಜೆಗಳು ಚುನಾವಣೆ ಮಾಡತಕ್ಕದ್ದೆಂದೂ ವಿಧಾಯಕ ಮಾಡಲಾಗಿದೆ.

ಕೋಲಾರದ ಮುನ್‌ಸಿಫ್ ಮೆ॥ ಎಂ. ನರಸಪ್ಪಯ್ಯನವರಿಗೆ ಅರ್ಜಿ ಕಳಿಸಿದ ಮೇರೆ ಜೂನ್ ತಾ 10 ರಿಂದ ಇಪ್ಪತ್ತೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜುಡಿಷಲ್ ಪ್ರೊಬೇಷನರ್ ಮೆ॥ ಎಚ್. ಎಂ. ಕೃಷ್ಣಸ್ವಾಮಿಯವರು ಕೋಲಾರದ ಮುನ್‌ಸಿಫರಾಗಿ ಬದಲಿ ಮಾಡತಕ್ಕದ್ದು.

ಮೇಜರ್ ಟಿ. ಎಚ್. ಫೋಕ್ಸ್, ಐ. ಎಂ. ಎಸ್. ಯವರನ್ನು ದರ್ಬಾರ್ ಸರ್ಜನ್ ಕೆಲಸಕ್ಕೆ ನೇಮಕವಾಡಿದೆ. ಇವರು ಜೂನ್ ತಾ 1 ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ.

ಅ॥ ಸರ್ಜನ್ ಮೆ॥ ಎಂ. ಜಗನ್ನಾಥಂ ಪಿಳ್ಳೆಯವರನ್ನು ಕೋಲಾರ್ ಚಿನ್ನದ ಗಣಿಗಳಿಂದ ಮೈಸೂರು ಜನರಲ್ ಆಸ್ಪತ್ರೆಗೆ ವರ್ಗವಾಡಿದೆ.

ಹಾಸನದ ಡಿಸ್ಟ್ರಿಕ್ಟ್ ಟ್ರೆಜರಿ ಅ॥ ಕಮಿಷನರ್ ಮೆ. ಎಂ. ಶ್ರೀನಿವಾಸಮೂರ್ತಿಯವರು ಮೇ ತಾ 13 ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಅ॥ ಕಮಿಷನರ್ ಮೆ॥ ಎಸ್. ಚಕ್ರಪಾಣಿ ಅಯ್ಯಂಗಾರ್ಯರು ಮೇ ತಾ 13 ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಟ್ರೆ। ಅ॥ ಕಮಿಷನರ್ ಮೆ॥ ಟಿ. ಜಿ. ರಾಮಅಯ್ಯರವರು ಮೇ ತಾ 24 ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಮೈನಿಂಗ್ ಸರ್ವೇಯರ್ ಮೆ॥ ಎ. ಟಿ. ಸ್ಲೇಟರ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ಡಿವಿಷನ್ ಎಗ್ಸಿಕ್ಯುಟಿವ್ ಇಂಜನಿಯರ್ ಮೆ. ಎಚ್. ಡಿ. ರೈಸ್‌ಯವರು ಮೈಸೂರು ರೈಲ್ವೆ ಚೀಫ್ ಇಂಜನಿಯರ ಬಳಿ ಕೆಲಸ ಮಾಡುವಂತೆ ವರ್ಗವಾಡಿದೆ.

ಆ ಇಂಜನಿಯರ್ ಮೆ॥ ವೈ. ಅಶ್ವತ್ಥನಾರಾಯಣರಾಯರು ಬೆಂಗಳೂರು ಡಿವಿಷನ್ ಛಾರ್ಜನ್ನು ವಹಿಸತಕ್ಕದ್ದು.

ಕಾವೇರಿ ತಲಾವ್ ಕಾಮಗಾರಿ ಡಿವಿಷನ್ ಅ॥ ಇಂಜನಿಯರ್ ಮೆ॥ ಎನ್. ರಾಮರಾಯರಿಗೆ ಜೂನ್ ತಾ 1 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ವಾಯವ್ಯ ರೈಲ್ವೆ ಕಂಪನಿ ಸೀನಿಯರ್ ಡೆಪ್ಯುಟಿ ಮ್ಯಾನೇಜರ್ ಮೆ॥ ಇ. ಎ. ಎಸ್. ಬೆಲ್‌ಯವರನ್ನು ಜೂನ್ ತಾ 11 ರಿಂದ ಮೈಸೂರು ರೈಲ್ವೆ ಇಲಾಖೆ ಮುಖ್ಯಾಧಿಕಾರಿಯಾಗಿ ನೇಮಿಸಿದೆ.

ಇಂಡಿಯಾ ದೇಶದ ವೃತ್ತಾಂತಗಳು

ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ಯವರು ಪತ್ನಿ ಪರಿವಾರ ಸಮೇತ ಅಕ್ಟೋಬರ್ ತಿಂಗಳಲ್ಲಿ ಕಾಶ್ಮೀರ ಸಂಸ್ಥಾನಕ್ಕೆ ದಯಮಾಡಬಹುದೆಂದು ಕಾಣುತ್ತದೆ.

* * *

ಸಿಕಂದ್ರಾಬಾದಿನ ಅಬ್ದುಲ್ ಖಾನ್ ಬೀದಿಯಲ್ಲಿರುವ ದಿಂಡಿಗಲ್ ಕೃಷ್ಣಯ್ಯನವರ ಜವಾಹಿರಿ ಅಂಗಡಿಯಲ್ಲಿ ಕಳೆದ ವಾರ 5000 ರೂಪಾಯಿನ ಒಡವೆಗಳು ಹಗಲುಹೊತ್ತಿನಲ್ಲೇ ಕಳುವಾಗಿರುತ್ತವೆ.

* * *

ಸಿಲೋನ್ ದ್ವೀಪದೊಳಗೆ ಒಂದು ಸರ್ವವಸ್ತು ಪ್ರದರ್ಶನವನ್ನು ನಡಿಸುತ್ತಾರೆ. ಹಿಂದುಸ್ಥಾನದ ಕೆಲವರು ತಮ್ಮ ವ್ಯಾಪಾರ ಮುಂತಾದ ಸರಕುಗಳನ್ನು ಅಲ್ಲಿಗೆ ಕಳುಹಿಸಬೇಕೆಂದು ಪ್ರಯತ್ನಪಟ್ಟರು. ಹಿಂದುಸ್ಥಾನದ ವಸ್ತುಗಳ್ಯಾವೂ ಅಲ್ಲಿಗೆ ಬರಕೂಡದೆಂದು ಅವರು ತಡೆದುಬಿಟ್ಟಿರುವುದಾಗಿ ತಿಳಿದುಬಂದಿದೆ.

* * *

ಹೈದರಾಬಾದ್ ಸಂಸ್ಥಾನದ ನೈಜಾಮರವರು ತಮ್ಮ ವರ್ಷ ವರ್ಧಂತಿ ಉತ್ಸವವು ಆದ ಬಳಿಕ ಬೊಂಬಾಯಿಗೆ ಪ್ರಯಾಣಮಾಡಿದರೆಂದು ತಿಳಿಸಿದೆವಷ್ಟೆ. ಆ ಪಟ್ಟಣದಲ್ಲಿ ವಾಂತಿಭೇದಿ ಉಪದ್ರ ಇನ್ನೂ ಶಮನವಾಗಲಿಲ್ಲವೆಂದು ಕೇಳಿ ಅವರು ಬೊಂಬಾಯಿನ ಪ್ರಯಾಣವನ್ನು ನಿಲ್ಲಿಸಿಬಿಟ್ಟರೆಂದು ಪ್ರಕಟವಾಗಿದೆ.

ಅವಂತಿಕಾಪುರ ಸಂಸ್ಥಾನದ ಹೈಕೋರ್ಟ್ ಜಡ್ಜಿಯಾಗಿದ್ದ ಮೆ॥ ಕೆ. ರಾಮಚಂದ್ರರಾಯರು ಹಿಂದಿನ ವಾರ ಕಾಲವಾದರೆಂದು ವರ್ತಮಾನ ಬಂದಿದೆ. ಇವರಿಗೆ ಸುಮಾರು 51 ವರುಷವಾಗಿತ್ತು. ಸುಮಾರು 30 ವರುಷಗಳಿಂದಲೂ ಅವರು ಆ ಸಂಸ್ಥಾನದ ನ್ಯಾಯಸ್ಥಾನಗಳಲ್ಲಿ ಜಡ್ಜಿಯಾಗಿದ್ದು ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಇವರು ಕಾಲವಾದದ್ದು ಆ ಸಂಸ್ಥಾನದ ಸಕಲ ಪ್ರಜೆಗಳಿಗೆಲ್ಲಾ ಬಹಳ ವಿಷಾದವನ್ನುಂಟುಮಾಡಿದೆ.

* * *

ಪೂನಾ ಪಟ್ಟಣಕ್ಕೆ ಇತರ ಕಡೆಗಳಿಂದ ಬಂದು ಹೋಟೇಲು ಮುಂತಾದ ಕಡೆಗಳಲ್ಲಿ ಇದ್ದು ಹೋಗುವಂಥಾ ಜನಗಳ ವಿಷಯದಲ್ಲಿ ನಾನಾ ಇಡಬೇಕೆಂದು ವಿಧಾಯಕವಾಗಿರೋದರಿಂದ ಪೋಲೀಸಿನವರಿಂದ ಅಂಥಾ ಹೋಟೇಲಿನವರು ಲೈಸೆನ್ಸು ಪಡೆದುಕೊಳ್ಳಬೇಕೆಂದು ಕಮಿಷನರು ತಿಳಿಸಿರುತ್ತಾರೆ. ಹೋಟೇಲ್ ಯಜಮಾನರು ಅಲ್ಲಿಗೆ ಬರುವ ಸಮಸ್ತ ಜನಗಳ ಹೆಸರು ವಿಳಾಸಗಳನ್ನು ಒಂದು ರೆಜಿಸ್ಟರ್ ಪುಸ್ತಕದಲ್ಲಿ ಬರೆದಿಟ್ಟು, ಪೋಲೀಸಿನವರ ತನಿಖೆಗೆ ಒಪ್ಪಿಸಬೇಕಾಗಿದೆ.

* * *

ಮದರಾಸ್ ಪಟ್ಟಣದ ಎಗ್ಮೋರ್ ಎಂಬ ಭಾಗದಲ್ಲಿ ಮಿಸ್ ಆರ್. ಎಸ್. ಸುಬ್ಬಲಕ್ಷ್ಮಿ, ಬಿ. ಎ. ಎಂಬಾಕೆಯು ಒಂದು ವಿಧವಾ ನಿಲಯವನ್ನು ಮುಂದಿನ ತಿಂಗಳಿಂದ ಪ್ರಾರಂಭಮಾಡುವವರಾಗಿದ್ದಾರೆ. ಮೈಸೂರಿನಲ್ಲಿರುವ ವಿಧವಾ ಸದನ ದಂತೆಯೇ ಅದನ್ನೂ ಇಟ್ಟು ನಡಿಸಬೇಕೆಂದು ಆಕೆ ಉದ್ದೇಶಪಟ್ಟು ಇರುವುದು ಸ್ತೋತ್ರಾರ್ಹವಾಗಿದೆ. ಆಗಲೇ ಕೆಲವು ವಿಧವೆಯರು ಈ ನಿಲಯಕ್ಕೆ ಸೇರಿ ಇದ್ದು, ಕಸೂತಿ ಮುಂತಾದದ್ದನ್ನು ಕಲಿತುಕೊಳ್ಳಲು ಅನುಕೂಲಪಡುತ್ತಿರುವಂತೆ ತಿಳಿಯುವುದು.

* * *

ಕಲ್ಲಿಕೋಟೆಗೆ ಸೇರಿದ ಮೆಪ್ಪಾಡಿ ಕಾಫಿ ಪ್ಲಾಂಟರಾದ ಮಿ| ಜಿ. ಸಿ. ಸ್ಪೆನ್ಸರ್ ಎಂಬಾತನು ಮೋಟಾರ್ ಬೈಸಿಕಲ್ ಸವಾರಿ ಮಾಡುತ್ತಿದ್ದಾಗ ಎದುರಿಗೆ ಸಿಕ್ಕಿದ ಒಬ್ಬ ಹಿಂದುವಿನ ಹಸುವನ್ನು ಗುಂಡುಹೊಡೆದು ಕೊಂದುಬಿಟ್ಟ ಮೊಕದ್ದಮೆ ಆಯಿತು. ದರ್ಯಾಫ್ತಿಯಲ್ಲಿ ತಕ್ಸೀರು ರುಜುವಾತಾದದ್ದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನಿಗೆ 100 ರೂ ಜುಲ್ಮಾನೆ ಹಾಕಿ, ಆ ಪೈಕಿ 40 ರೂಪಾಯನ್ನು ಹಸುವಿನ ಮಾಲೀಕನಿಗೆ ವಾವತಿ ಆಗಬೇಕೆಂದು ಹುಕುಂ ಮಾಡಿದರು.

* * *

ಕಳೆದ ತಾ 15ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು 811 ಜನರಿಗೆ ಪ್ಲೇಗ್ ತಗುಲಿತು. 677 ಜನರು ಆ ಉಪದ್ರದಲ್ಲಿ ತೀರಿಹೋದರು. ಈಚೆಗೆ ಈ ಉಪದ್ರದ ಹಾವಳಿ ಕಡಮೆಯಾಗುತ್ತಿರುವಂತೆ ಕಾಣುತ್ತದೆ. ಆ ಮರಣಸಂಖ್ಯೆಯ ವಿವರ ಹ್ಯಾಗೆಂದರೆ—ಮದರಾಸ್ ಆಧಿಪತ್ಯ 9, ಬೊಂಬಾಯಿ 12, ಬಂಗಾಳಾ 27, ಬೀಹಾರ್ ಮತ್ತು ಒರಿಸಾ 108, ಸಂಯುಕ್ತ ಆಧಿಪತ್ಯಗಳು 58, ಪಂಜಾಬ್ 316, ಬರ್ಮಾ 32, ಮೈಸೂರು ಸಂಸ್ಥಾನ 21, ರಾಜಪುಟಾನಾ ಸಂಸ್ಥಾನಗಳು 10, ಕಾಶ್ಮೀರ 8.

* * *

ಮಹಮದೀಯರ ವಿದ್ಯಾನಿಲಯದ (ಯೂನಿವರ್ಸಿಟಿ) ಫಂಡಿಗೆ ವಾಗ್ದಾನವಾಗಿರುವ 50 ಲಕ್ಷ ಚಂದಾ ಹಣದ ಪೈಕಿ ಇದುವರೆಗೆ 30 ಲಕ್ಷ ರೂಪಾಯಿ ವಸೂಲಾಗಿದೆ. ಇದರ ಜೊತೆಗೆ ನೈಜಾಮರವರೂ, ಭೂಪಾಲದ ಬೇಗಂ ರಾಣಿ ಸಾಹೇಬಾಯವರೂ ಕೊಡುವುದನ್ನು ಕೂಡಿಸಿದರೆ 45 ಲಕ್ಷ ರೂಪಾಯಿ ಆಗುವುದು. ಈ ಏರ್ಪಾಡಿನ ಮೂಲಕರ್ತರು ಸಹ ಸೇರಿ ಅವಶ್ಯವಾದ ಕಾನೂನನ್ನು ರಚಿಸಿ ಚರ್ಚೆಮಾಡುತ್ತಿದ್ದಾರೆ. ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ಒಂದೆರಡು ತಿಂಗಳೊಳಗಾಗಿ ಆ ಮಸೂದೆ ಕಾನೂನು ಚರ್ಚೆಗೆ ತರಲ್ಪಡಬಹುದೆಂದು ತೋರುತ್ತದೆ.

* * *

ಹಿಮಾಚಲದ ತಪ್ಪಲಲ್ಲಿರುವ ಅಲ್ಮೋರಾ ಡಿಸ್ಟ್ರಿಕ್ಟಿನೊಳಗೆ ಕೆಲವು ಪೂರ್ವ ನಿವಾಸಿಗಳಿದ್ದಾರೆ. ಈ ಜನರಲ್ಲಿ ವಿವಾಹವೂ ಒಂದು ವ್ಯಾಪಾರವಾಗಿಯೇ ಎಣಿಸಲ್ಪಟ್ಟಿದೆ. ಈ ಬೋಸಿಯಾ ಎಂಬ ಜನರಲ್ಲಿ ಗಂಡಿನ ಕಡೆಯವರು ಹೆಣ್ಣಿನ ತಂದೆ ತಾಯಿಗಳಿಗೆ 50 ರಿಂದ 100 ರೂಪಾಯಿ ವರೆಗೆ ಕನ್ಯಾಶುಲ್ಕವನ್ನು ಕೊಡಬೇಕು. ಅವರಲ್ಲಿ ಘೋಷಾಪದ್ಧತಿಯು ಅಷ್ಟು ವಿಶೇಷವಾಗಿಲ್ಲ. ಗಂಡನೇನಾದರೂ ಸತ್ತುಹೋದರೆ ಹೆಂಡತಿಯು ಅವನ ಮನೆ ಬಿಟ್ಟು ಹೋಗದೆ ಅವನ ತಮ್ಮನ ಸ್ವಾಧೀನ ಸಂರಕ್ಷಣೆಗಳಲ್ಲಿರಬೇಕು. ಉತ್ತರಕ್ರಿಯೆಗಳೇನೂ ಮಾಡುವುದಿಲ್ಲ. ಅವರಲ್ಲಿ ಗಂಡು ಮಕ್ಕಳಿಲ್ಲದಿದ್ದರೆ ಆಸ್ತಿಯು ಅಳಿಯನಿಗೆ ಹೋಗುತ್ತದೆ. ಅವನೇ ಮಾವನ ಆಸ್ತಿಗೆ ಹಕ್ಕುದಾರನಾಗುವನು.

* * *

200 ರೂಪಾಯಿಗಿಂತ ಹೆಚ್ಚು ಬೆಲೆ ಬಾಳುವ ಇನ್ಷೂರ್ ಮಾಡಲ್ಪಟ್ಟ ಕಾಗದಗಳನ್ನೂ ಬಾಂಗಿಗಳನ್ನೂ ಅಂಚೆ ಇಲಾಖೆಯವರು ಇಲಾಖೆಯ ಜವಾನರ ಮೂಲಕ ವಿಳಾಸದಾರರಿಗೆ ಕಳುಹಿಸಿಕೊಡಕೂಡದೆಂದೂ, ವಿಳಾಸದಾರರು ಪೋಸ್ಟ್ ಆಫೀಸಿಗೆ ತಾವೇ ಹೋಗಿ ತೆಗೆದುಕೊಂಡು ಬರಬೇಕೆಂದೂ ಒಂದು ರೂಲನ್ನು ಮಾಡಿಕೊಂಡಿದ್ದಾರೆ. ಇದು ತೃಪ್ತಿಕರವಾಗಿರುವಂತೆ ಕಂಡುಬರುವುದಿಲ್ಲ. ವಿಳಾಸದಾರರು ಗ್ರಾಮಾಂತರಗಳಲ್ಲಿರುವುದಾದರೆ ಅವರೇ ಪೋಸ್ಟ್ ಆಫೀಸಿಗೆ ಖುದ್ದಾಗಿ ಹೋಗಬೇಕೆನ್ನುವುದು ಅವರಿಗೆ ಕಷ್ಟವಾಗುತ್ತದೆ. ಈ ವಿಧಿಯು ಯಾವ ರಾಜ್ಯದಲ್ಲೂ ಜಾರಿಯಲ್ಲಿಲ್ಲ. ಸಾಮಾನು ಕಳುಹಿಸುವವನು ಬಾಂಗಿ ಛಾರ್ಜನ್ನು ಕೊಟ್ಟು ರೂಲಿನ ಪ್ರಕಾರ ವಾವತಿ ಮಾಡಿ ವಿಳಾಸ ಬರೆದು ಪೋಸ್ಟಿಗೆ ಹಾಕಿದ ಮೇಲೆ ಅದನ್ನು ವಿಳಾಸದಾರನಿಗೆ ತಲುಪಿಸುವುದು ಪೋಸ್ಟ್ ಇಲಾಖೆಯ ಕರ್ತವ್ಯವಾಯಿತು. ವಿಳಾಸದಾರನೇ ಹೋಗಿ ವಾವತಿ ತೆಗೆದುಕೊಂಡಲ್ಲಿ ಇಲಾಖೆಯವರ ಕರ್ತವ್ಯ ನೆರವೇರಿದ ಹಾಗಾಗಲಿಲ್ಲ.

* * *

ಬೊಂಬಾಯಿ ಆಧಿಪತ್ಯದಲ್ಲಿ ಕೆಲವು ಮ್ಯಾಜಿಸ್ಟ್ರೇಟರು ಗವರ್ನ್‌ಮೆಂಟಿನವರ ಸರ್ಕ್ಯುಲರ್ ಹುಕುಮನ್ನು ಲಕ್ಷ್ಯ ಮಾಡದೆ ಕಳೆದ ವರುಷ ಸಣ್ಣ ವಯಸ್ಸಿನ ಹುಡುಗರಿಗೆ ಚಿಕ್ಕಪುಟ್ಟ ಅಪರಾಧಗಳಿಗಾಗಿ ಸಜಾ ಶಿಕ್ಷೆಯನ್ನು ವಿಧಿಸಿರುವುದು ಪರಮಾಶ್ಚರ್ಯಕರವಾಗಿದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ಅಂಥಾ ಸಂದರ್ಭಗಳಲ್ಲಿ ಯಾಕೆ ಸರಿಯಾಗಿ ಮೇಲ್ತನಿಖೆ ಮಾಡದೆ ಇರುತ್ತಾರೋ ತಿಳಿಯದು. ನೇಟಿವಾಲಿಗೆ ಜಾಮೀನು ಕೊಡಲಾರದೆ ಹೋದರೆಂಬ ಕಾರಣಕ್ಕಾಗಿ ಮ್ಯಾಜಿಸ್ಟ್ರೇಟರು 14 ವಯಸ್ಸಿನೊಳಗಿರುವಂಥಾ ಆರು ಮಂದಿ ಮಕ್ಕಳನ್ನು ಬಂದೀಖಾನೆಗೆ ಕಳುಹಿಸಿದರು. ಕಳುವಿನ ಮಾಲು ತೆಗೆದುಕೊಂಡನೆಂಬ ಅಪರಾಧಕ್ಕಾಗಿ 12 ವರುಷದ ಹುಡುಗನು ಆರು ತಿಂಗಳ ಸಾದಾ ಸಜಾ ಅನುಭವಿಸಿದನು. ಕಳುವು ಮಾಡಿದನೆಂದು 8 ವರುಷದ ಮಗುವನ್ನು ಜೈಲಿಗೆ ಹಾಕಿದರು. ಈ ರೀತಿ ಮಕ್ಕಳನ್ನು ಬಂದೀಖಾನೆಗೆ ಹಾಕುವುದರಿಂದ ಪೋಲೀಸಿನವರಿಗಾಗಲಿ ಮ್ಯಾಜಿಸ್ಟ್ರೇಟರಿಗಾಗಲಿ ಕೀರ್ತಿ ಬರಲಾರದು. ಗವರ್ನ್‌ಮೆಂಟಿನವರು ಪದೇ ಪದೇ ಎಚ್ಚರಿಕೆ ಕೊಡುತ್ತಾ ಬಂದಿದ್ದರೂ ಮ್ಯಾಜಿಸ್ಟ್ರೇಟರು ಗಮನ ಕೊಡದೆ ಇರುವುದು ವ್ಯಸನಕರವಾಗಿದೆ. ಇನ್ನು ಮೇಲೆ 14 ವರುಷದೊಳಗಿನ ಹುಡುಗರಿಗೆ ಸಜಾ ಶಿಕ್ಷೆಯನ್ನಾಗಲಿ, ಜುಲ್ಮಾನೆ ವಸೂಲಾಗದಿದ್ದರೆ ಸಜಾ ಅನುಭವಿಸಬೇಕೆಂದಾಗಲಿ ಮ್ಯಾಜಿಸ್ಟ್ರೇಟರು ಜಡ್ಜ್‌ಮೆಂಟ್ ಬರೆದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಂಥಾ ಮೊಕದ್ದಮೆಗಳ ಕಟ್ಟುಗಳನ್ನು ಸೀದಾ ಗವರ್ನ್‌ಮೆಂಟಿಗೆ ಕಳುಹಿಸಿಕೊಡಬೇಕೆಂದು ಹುಕುಂ ಮಾಡಿದ್ದಾರೆ.

ಪರಸ್ಪರ ಸಹಾಯಕ ಸಂಘಗಳು

ಮೈಸೂರು ಸಂಸ್ಥಾನದಲ್ಲಿ 1905-6 ನೇ ಸಾಲಿನಲ್ಲಿ 5 ಪರಸ್ಪರ ಸಹಾಯ ಸಂಘಗಳು ಮಾತ್ರ ಇದ್ದವು. ಇವುಗಳಲ್ಲಿ ಒಟ್ಟು 383 ಮೆಂಬರುಗಳಿದ್ದರು. ಒಟ್ಟು ಬಂಡವಾಳವು 14,213 ರೂಪಾಯಿ ಆಗಿತ್ತು. ಇಲ್ಲಿಂದೀಚೆಗೆ ಇಂಥಾ ಸಂಘಗಳು ವರುಷೇ ವರುಷ ಹೆಚ್ಚುತ್ತಾ ಬಂದಿವೆ. ಕಳೆದ 1910-11 ಸಾಲಿನ ಅಖೈರಿನಲ್ಲಿ ಸಂಸ್ಥಾನದಲ್ಲಿ ಒಟ್ಟು 111 ಸಂಘಗಳಿದ್ದವು. ಇವುಗಳಲ್ಲಿ 9,043 ಮೆಂಬರುಗಳಿದ್ದರು. ಬಂಡವಾಳವು 4,71,194 ರೂಪಾಯಿಗಳಾಗಿತ್ತು. ಕಳೆದ ಮೇ 17 ನೇ ತಾರೀಖಿನಲ್ಲಿ ಒಟ್ಟು 185 ಸಂಘಗಳಿದ್ದವೆಂದು ತಿಳಿಯಬರುತ್ತೆ. ಈ ಪೈಕಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 31, ಕೋಲಾರದಲ್ಲಿ 10, ತುಮಕೂರಿನಲ್ಲಿ 39, ಮೈಸೂರಿನಲ್ಲಿ 43, ಹಾಸನ 44, ಶಿವಮೊಗ್ಗ 7, ಕಡೂರಿನಲ್ಲಿ 6, ಮತ್ತು ಚಿತ್ರದುರ್ಗದಲ್ಲಿ 5, ಈ ಮೇರೆ ಸಂಘಗಳಿರುತ್ತವೆ. ಈ ಪೈಕಿ 119 ಸಂಘಗಳಲ್ಲಿ ಲೇವಾದೇವಿಯನ್ನು ಮಾತ್ರ ನಡಿಸುತ್ತಾರೆ. ಈ ಸಂಘಗಳಲ್ಲಿ ವ್ಯವಸಾಯಗಾರರಿಗೆ ಬೇಕಾಗುವ ಮುಟ್ಟುಗಳು, ಬಿತ್ತ, ಗೊಬ್ಬರ, ದನಕರುಗಳು, ಗಾಡಿಗಳು, ಇವೇ ಮೊದಲಾದವುಗಳನ್ನು ಕೊಂಡುಕೊಳ್ಳುವುದು, ಕಂದಾಯವನ್ನು ಪಾವತಿಮಾಡುವುದು, ಜಮೀನನ್ನು ಆಬಾದುಮಾಡುವುದು, ಅಥವಾ ಹೊಸ ಜಮೀನುಗಳನ್ನು ಕೊಂಡುಕೊಳ್ಳುವುದು, ಸಣ್ಣಸಣ್ಣ ವ್ಯಾಪಾರ, ಮನೆಕಟ್ಟುವುದು, ಇವೇ ಮೊದಲಾದ ಕೆಲಸಗಳಿಗೆ ಹಣವನ್ನು ಸುಲಭಬಡ್ಡಿಗೆ ಸಾಲವಾಗಿ ಕೊಡುತ್ತಾರೆ. ಸಂಸ್ಥಾನದಲ್ಲಿ ಧಾನ್ಯಗಳ ಬ್ಯಾಂಕುಗಳು 4 ಇವೆ. 1910-11 ನೇ ಸಾಲಿನಲ್ಲಿ ಈ ಬ್ಯಾಂಕುಗಳಲ್ಲಿ ಒಟ್ಟು 214 ಪಲ್ಲಾ ಧಾನ್ಯವು ಮೆಂಬರುಗಳಿಂದ ಜಮಾಯಿಸಲ್ಪಟ್ಟಿತು, ಮತ್ತು 154½ ಪಲ್ಲಾ ಧಾನ್ಯವು ಮೆಂಬರುಗಳಿಗೆ ಸಾಲವಾಗಿ ಕೊಡಲ್ಪಟ್ಟಿತು. ಮುಖ್ಯವಾಗಿ ಇವುಗಳು ವ್ಯಾಪಾರ, ಕೈಗಾರಿಕೆ ಮತ್ತು ಪ್ರಜೆಗಳ ಏಳಿಗೆಗೆ ಸಹಕಾರಿಗಳಾಗಿವೆ. ವರುಷಕ್ಕೆ ಎರಡಾವರ್ತಿ ಈ ಪರಸ್ಪರ ಸಹಾಯ ಸಂಘಗಳ ಲೆಕ್ಕವು ಸರ್ಕಾರದವರಿಂದ ಝಾಡ್ತಿ ಮಾಡಲ್ಪಡುತ್ತದೆ. ಮೂವತ್ತು ಸಂಘಗಳ ಮೇಲ್ವಿಚಾರಣೆಗೆ ಒಬ್ಬೊಬ್ಬ ಸೂಪರ್‌ವೈಜರಂತೆ ಸರ್ಕಾರದವರು ನೇಮಕಮಾಡಿರುತ್ತಾರೆ.

ಇಂಡಿಯಾ ದೇಶದ ರೇಷ್ಮೆ ವ್ಯವಸಾಯ

ಯೂರೋಪಿಯನ್ ಪಂಡಿತರ ಅಭಿಪ್ರಾಯವು

ಇಂಡಿಯಾ ದೇಶದ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕಾದರೆ ಏನು ಮಾಡಬೇಕೆಂಬುವುದನ್ನು ತಿಳಿದುಕೊಳ್ಳುವುದಕ್ಕಾಗಿ ಜನರಲ್ ಬೂತ್ ಟಕರವರು ಕಳೆದ ವರ್ಷ ಯೂರೋಪ್ ಖಂಡದಲ್ಲಿ ರೇಷ್ಮೆ ವ್ಯವಸಾಯ ನಡೆಯುವ ಮುಖ್ಯಸ್ಥಳಗಳಲ್ಲಿ ಸಂಚಾರಮಾಡಿ ಈ ಕೆಳಗೆ ಕಂಡ ವಿಷಯಗಳಿಗೆ ಮುಖ್ಯವಾಗಿ ಗಮನಕೊಟ್ಟರು.

ಮೈಸೂರು ರೇಷ್ಮೆ.—(1) ಈ ರೇಷ್ಮೆಗೆ ಯೂರೋಪ್ ಖಂಡದಲ್ಲಿ ಮಾರಾಟವಿದೆಯೋ? ಮತ್ತು ಇದಕ್ಕೆ ಸರಿಯಾದ ಬೆಲೆ ಸಿಕ್ಕುತ್ತದೆಯೋ? ಹಾಗಿಲ್ಲದಿದ್ದರೆ ಈ ರೇಷ್ಮೆ ವ್ಯವಸಾಯವನ್ನು ಬಿಟ್ಟು ಕಾಶ್ಮೀರದೇಶದಂತೆ ವಿದೇಶಗಳಿಂದ ಗೂಡುಗಳನ್ನು ತರಿಸಿ ಆ ಹುಳುಗಳ ವ್ಯವಸಾಯಮಾಡಬೇಕೋ? ಎಂಬೀ ವಿಷಯಗಳನ್ನು ಕುರಿತು ಚರ್ಚೆಮಾಡುವಲ್ಲಿ ಮೈಸೂರು ರೇಷ್ಮೆಯಲ್ಲಿ ಇತರ ರೇಷ್ಮೆಗಳಲ್ಲಿಲ್ಲದ ಒಂದು ವಿಧವಾದ ಕಾಂತಿಯೂ ಬಲವೂ ಇರುವುದೆಂತಲೂ, ಈ ರೇಷ್ಮೆಯು ಎಷ್ಟು ಉತ್ಪತ್ತಿಯಾದಾಗ್ಯೂ ಯೂರೋಪಿನಲ್ಲಿ ಸುಲಭವಾಗಿ ಖರ್ಚಾಗುವುದೆಂತಲೂ ತಿಳಿದುಬಂತು. ಮೈಸೂರು ರೇಷ್ಮೆಯು ಮಧ್ಯೆ ಮಧ್ಯೆ ಕಿತ್ತುಹೋಗುವುದಿಲ್ಲವೆಂತಲೂ, ಇಂಡಿಯಾ ದೇಶದಿಂದ ಯೂರೋಪ್ ಖಂಡಕ್ಕೆ ರಫ್ತಾಗುತ್ತಿರುವ ರೇಷ್ಮೆಗಳಲ್ಲೆಲ್ಲಾ ಇದು ಉತ್ತಮವಾದದ್ದೆಂತಲೂ, ಯೂರೋಪ್ ಖಂಡದ ಅನೇಕ ದೊಡ್ಡ ದೊಡ್ಡ ಕಾರ್ಖಾನೆಯವರು ಮೈಸೂರು ದೇಶದಲ್ಲಿ ಉತ್ಪತ್ತಿಯಾಗುವಂಥಾ ರೇಷ್ಮೆಯನ್ನೆಲ್ಲಾ ಒಟ್ಟಾಗಿ ಕಂಟ್ರಾಕ್ಟು ತೆಗೆದುಕೊಳ್ಳಲು ಆತುರಪಡುತ್ತಿದ್ದಾರೆಂತಲೂ ತಿಳಿಯಬರುತ್ತದೆ. ಫ್ರಾನ್ಸು, ಇಟಲಿ ಮತ್ತು ಜಪಾನು ಮೊದಲಾದ ದೇಶಗಳಿಂದ ಬಿತ್ತವನ್ನು ತರಿಸಿ ಆ ರೇಷ್ಮೆಯ ವ್ಯವಸಾಯವನ್ನೇ ಬಿಡದೆ ಹೆಚ್ಚು ಅಭಿವೃದ್ಧಿಗೆ ತರಬೇಕೆಂಬುವುದು ಯೂರೋಪಿನ ರೇಷ್ಮೆ ವ್ಯವಸಾಯಗಾರರೆಲ್ಲರ ಅಭಿಮತವಾಗಿದೆ. ಮೈಸೂರು ದೇಶದ ರೇಷ್ಮೆಗೆ ಮತ್ತಾವ ರೇಷ್ಮೆಗೂ ಇಲ್ಲದ ಬಣ್ಣವೂ ಕಾಂತಿಯೂ ಇರುವುದರಿಂದ ಮೋಸಗಾರರು ಇತರ ರೇಷ್ಮೆಯನ್ನು ಮೈಸೂರು ರೇಷ್ಮೆ ಎಂದು ವಂಚನೆ ಮಾಡುವುದಕ್ಕಾಗುವುದಿಲ್ಲ. ಮತ್ತು ಯೂರೋಪ್ ಖಂಡದ ರೇಷ್ಮೆ ವರ್ತಕರು ಸಹ ಈಗ ತಾವು ಕೊಂಡುಕೊಳ್ಳುತ್ತಿರುವ ಕಡಮೆ ದರ್ಜೆಯ ರೇಷ್ಮೆಗೆ ಬದಲಾಗಿ ಇದನ್ನೇ ಕೊಂಡುಕೊಳ್ಳುವರು, ಆದರೆ, ಮೈಸೂರು ರೇಷ್ಮೆಗೆ ಬಹಳ ಮಾರಾಟವಿದೆಯೆಂದು ಹೇಳಬೇಕು. (2) ಹುಳುಗಳನ್ನು ಸಾಕುವುದಕ್ಕೆ ಅತ್ಯುತ್ತಮವಾದ ಮತ್ತು ಬಹಳ ಕಡಮೆ ಖರ್ಚು ತಗಲುವ ಕ್ರಮವನ್ನು ಕುರಿತು ವಿಚಾರಣೆ ಮಾಡಿದ್ದಾಯಿತು. ರೇಷ್ಮೆ ಹುಳುಗಳನ್ನು ಸಾಕಲು ಅವಶ್ಯಕವಾದ ತಟ್ಟೆಗಳೇ ಮೊದಲಾದ ಪದಾರ್ಥಗಳನ್ನು ಒದಗಿಸಿಕೊಳ್ಳಲು ಬಹಳ ಹೆಚ್ಚು ಬಂಡವಾಳವು ಆವಶ್ಯಕವಾಗಿರುವುದರಿಂದ ಇಂಡಿಯಾ ದೇಶದ ಹಳ್ಳಿಗಳಲ್ಲಿ ವಾಸಮಾಡತಕ್ಕವರು ಈ ವ್ಯವಸಾಯವನ್ನು ಕೈಗೊಳ್ಳುವುದಕ್ಕೆ ಬಹಳ ಅಡ್ಡಿಯಾಗಿದೆ. ಜನರಲ್ ಬೂತ್ ಟಕರವರು ವಿಚಾರಮಾಡಿದ್ದರಲ್ಲಿ ಇಟಲಿದೇಶದಲ್ಲಿ ನಾಲ್ಕೈದು ಆಣೆಗಳು ಬಂಡವಾಳವಾಗಿವುಳ್ಳವರೆಲ್ಲರೂ ರೇಷ್ಮೆ ಹುಳುಗಳನ್ನು ಸಾಕಲು ಸಾಧ್ಯವಾದ ಒಂದು ಹೊಸಕ್ರಮವು ಜಾರಿಯಲ್ಲಿರುವುದಾಗಿ ತಿಳಿಯಬಂದಿದೆ. (3) ಉತ್ತಮಜಾತಿಯ ಹಿಪ್ಪಲಿನೇರಳೆಯನ್ನು ಅಜಮಾಯಿಷಿ ಮಾಡಿ ನೋಡಲಾಗಿ ಒಂದೇ ಜಾತಿಯ ಹುಳುಗಳಿಗೆ ಬೇರೆ ಬೇರೆ ತರಹೆಯ ಹಿಪ್ಪಲಿನೇರಳೆ ಸೊಪ್ಪನ್ನು ತಿನ್ನಿಸಿದರೆ ಅವು ಒಂದೇ ತರಹೆಯ ಸೊಪ್ಪನ್ನು ತಿನ್ನುತ್ತಿದ್ದಾಗ್ಗೆ ಕೊಡುವುದಕ್ಕಿಂತ ಎರಡು ಅಥವಾ ಮೂರರಷ್ಟು ರೇಷ್ಮೆಯನ್ನು ಕೊಡುವುವೆಂದು ಗೊತ್ತಾಗಿದೆ.

ಈರೀ ರೇಷ್ಮೆ.—ಈ ಹುಳುಗಳನ್ನು ಯೂರೋಪ್ ಖಂಡದಲ್ಲಿ ಬಹಳ ಹೆಚ್ಚು ಲಾಭ ಬರುವಷ್ಟು ಖರೀದಿಕೊಟ್ಟು ತೆಗೆದುಕೊಳ್ಳುತ್ತಾರೆ. ಹಿಪ್ಪಲಿನೇರಳೆ ಸೊಪ್ಪನ್ನು ತಿನ್ನುವ ರೇಷ್ಮೆ ಹುಳುಗಳ ಬೀಜವನ್ನು ಸ್ಥಳದಿಂದ ಸ್ಥಳಕ್ಕೆ ಕಳುಹಿಸಬೇಕಾದರೆ ಅವುಗಳನ್ನು ಬಹಳ ಶೀತಳವಾಗಿಟ್ಟು ಭರ್ತಿಮಾಡಬೇಕು. ಆದರೆ ಈರೀ ರೇಷ್ಮೆ ಹುಳುಗಳ ಬೀಜವನ್ನು ಹತ್ತಿಯಂತೆ ಬಹಳ ಒತ್ತಾಗಿಟ್ಟು ಭರ್ತಿಮಾಡಬಹುದು. ಈರೀ ರೇಷ್ಮೆಯನ್ನು ನೂಲಬೇಕೇ ಹೊರತು ರಾಟೆಯಾಕಲು ಆಗುವುದಿಲ್ಲ. ನೂಲುವುದಕ್ಕೆ ಯೂರೋಪ್ ದೇಶದಲ್ಲಿರುವಷ್ಟು ಅನುಕೂಲಗಳು ಇಂಡಿಯಾ ದೇಶದಲ್ಲಿರುವುದಿಲ್ಲ. ಆದ್ದರಿಂದ ಸ್ವಲ್ಪ ಕಾಲಾನಂತರ ಇಂಡಿಯಾ ದೇಶದಿಂದ ಯೂರೋಪ್ ಖಂಡಕ್ಕೆ ಈರೀ ರೇಷ್ಮೆಯ ಹುಳುಗಳು ಬಹಳವಾಗಿ ರಫ್ತುಮಾಡಲ್ಪಡುವವೆಂದು ಹೇಳಬಹುದು.

ಲಂಡನ್ ಪಟ್ಟಣದ ಸೌತ್ ಕೆನ್ಸಿಂಗ್‌ಟನ್‌ನಲ್ಲಿರುವ ಇಂಪೀರಿಯಲ್ ಪಾಠಶಾಲೆಗೆ ಮೈಸೂರಿನ ರೇಷ್ಮೆ ಮಾದರಿಗಳನ್ನು ಕಳುಹಿಸಲಾಗಿ ಅಲ್ಲಿನ ಡೈರೆಕ್ಟರವರು ಬರೆದು ತಿಳಿಸಿರುವುದೇನೆಂದರೆ:— ಮಾದರಿಗಾಗಿ ಕಳುಹಿಸಿರುವ ಈ ರೇಷ್ಮೆಯು ಬಹಳ ಕಾಂತಿಯುಳ್ಳದ್ದಾಗಿಯೂ, ಮಂಕಾದ ಹಳದೀ ಬಣ್ಣದ್ದಾಗಿಯೂ, ಬಹಳ ಅಂದವಾಗಿಯೂ, ಮುಟ್ಟಿದರೆ ಬಹಳ ನುಣುಪಾಗಿಯೂ ಇತ್ತು. ಈ ರೇಷ್ಮೆಯನ್ನು ಒಂದು ಮಾದರಿ ಸಾಬೂನಿನ ನೀರಿನಲ್ಲಿ ಹಾಕಿ ಕುದಿಸಲಾಗಿ ಅದು ಬೆಳ್ಳಗೂ, ಬಹಳ ಹೊಳಪುಳ್ಳದ್ದಾಗಿಯೂ ಆಯಿತು. ಈ ರೇಷ್ಮೆಯನ್ನು ರೇಷ್ಮೆಯ ಪರೀಕ್ಷೆಯಲ್ಲಿ ನಿಸ್ಸೀಮರಾದವರ ಬಳಿಗೆ ಕಳುಹಿಸಲಾಗಿ ಇದು ಬಹಳ ಸಮರ್ಪಕವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಬೆಂಗಳೂರಿನಿಂದ ಬಂದಿರತಕ್ಕ ಈ ರೇಷ್ಮೆಯು ಮುಂದೆ ಬಹಳ ಪ್ರಸಿದ್ಧಿಗೆ ಬರತಕ್ಕದ್ದಾಗಿದೆ, ಮತ್ತು ಇದೇ ಮಾದರಿ ಅಥವಾ ಇದಕ್ಕಿಂತಲೂ ಉತ್ತಮವಾದ ರೇಷ್ಮೆಯು ಇಂಗ್ಲೆಂಡಿನಲ್ಲಿ ಬಹಳ ಸುಲಭವಾಗಿ ಮಾರಾಟವಾಗುತ್ತದೆ.

ಮೈಸೂರು ಸರ್ಕಾರದ ಹುಕುಮುಗಳು.

ಬೆಲ್ಲದ ತಯಾರಿಗೆ ಮದರಾಸ್ ಸರ್ಕಾರದ ಸಹಾಯವು

ಕೊಯಮತ್ತೂರಿಗೆ ಸುಮಾರು ಐದು ಮೈಲಿ ದೂರದಲ್ಲಿರುವ ಸಿಂಗಾನೆಲ್ಲೂರು ಗ್ರಾಮದಲ್ಲಿ ಮುಂದಲ ಜೂಲೈ ಲಾಗಾಯ್ತು ಬೆಲ್ಲವನ್ನು ತಯಾರುಮಾಡತಕ್ಕ ಕಾರ್ಖಾನೆಯನ್ನು ಇಡತಕ್ಕದ್ದೆಂದು ಮದರಾಸ್ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ. ಮೇಲ್ಕಂಡ ಕೆಲಸಕ್ಕೆ ೧೦,೦೦೦ ರೂಪಾಯಿ ಖರ್ಚು ಮಾಡಬಹುದೆಂದು ಗೊತ್ತಾಗಿದೆ. ಈ ಕಾರ್ಖಾನೆಯು ಸುತ್ತುಮುತ್ತಾ ಇರುವ ರೈತರು ತಾವು ಬೆಳೆಯುವ ಕಬ್ಬನ್ನು ಕಾರ್ಖಾನೆಗೆ ತಂದುಕೊಟ್ಟಲ್ಲಿ ಅಲ್ಲಿ ಕಬ್ಬನ್ನು ಗಾಣಮಾಡಿ ಹಾಲು ತೆಗೆದು ಬೆಲ್ಲವನ್ನು ತಯಾರುಮಾಡಿ, ಒಟ್ಟು ಬೆಲ್ಲದಲ್ಲಿ ಶೇಕಡ ೨೦ ರಷ್ಟು ಬೆಲ್ಲವನ್ನು ತಯಾರಿಸಿದ ಖರ್ಚಿಗಾಗಿ ತೆಗೆದುಕೊಂಡು ಉಳಿದದ್ದನ್ನು ಮಾಲೀಕರಿಗೆ ಕೊಡತಕ್ಕದ್ದೆಂದು ಏರ್ಪಾಡಾಗಿದೆ.

ಇನಾಮತಿಯ ಉದ್ದೇಶಕ್ಕೆ ಭಂಗಬರುವುದು

ಸಂಸ್ಥಾನದಲ್ಲಿ ಪೂರ್ವಿಕರು ಬೇರೆ ಬೇರೆ ಉದ್ದೇಶವುಳ್ಳ ಕಾರ್ಯಗಳು ನಡೆಯಬೇಕೆಂದು ಇನಾಮತಿಗಳನ್ನು ಬಿಟ್ಟಿದ್ದಾರೆ. ಒಂದಾನೊಂದು ಸಂದರ್ಭದಲ್ಲಿ ದೇವಾದಾಯದ ಇನಾಮತಿಯು ಆ ಧರ್ಮಕ್ಕೆ ಸಂಬಂಧ ಪಡದೆ ಇತರಕ್ಕವನ ಸ್ವಾಧೀನಾನುಭವದಲ್ಲಿದೆ ಎಂದು ಸರ್ಕಾರಕ್ಕೆ ವರದಿ ಆಯಿತು. ಆ ಧರ್ಮಕಾರ್ಯವು ನಡೆಯದೆ ನಿಂತುಹೋಗಿ ಕೆಲವು ವರುಷಗಳಾಗಿದ್ದವು. ಆ ಇನಾಮತಿಯು ಸರ್ಕಾರಕ್ಕೆ ಸೇರಿಹೋಗಬೇಕಾಗಿತ್ತು. ಆದಕಾರಣ ಸಂಸ್ಥಾನದ ಅಮಲ್ದಾರರೂ, ಜಮಾಬಂದಿ ಆಫೀಸರುಗಳೂ ತಮ್ಮ ಸರ್ಕೀಟ್ ಕಾಲಗಳಲ್ಲಿ ಇನಾಮತಿಗಳ ಉದ್ದೇಶವಾದ ಸೇವಾದಿ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಲಿರುವವೇ, ಇನಾಮತಿಗಳನ್ನು ಸನದು ಪಡೆದವರು ಅನುಭವಿಸುತ್ತಾರೆಯೋ ಎಂಬೀ ವಿಚಾರಗಳನ್ನು ತನಿಖೆಮಾಡಿ ೯ ನೇ ಫಾರಂ ರಿಜಿಸ್ಟರುಗಳಲ್ಲಿ ನಮೂದು ಮಾಡುತ್ತಾ, ಮೂಲಕರ್ತರು ಉದ್ದೇಶಪಟ್ಟ ಅಂಥಾ ಕಾರ್ಯಗಳು ನಡೆಯದೆ ಲೋಪವಾಗಿ ಇನಾಮತಿಗಳು ಪರಾಧೀನವಾಗಿದ್ದಲ್ಲಿ ಸರ್ಕಾರಕ್ಕೆ ರಿಪೋರ್ಟು ಮಾಡುತ್ತಾ ಬರಬೇಕು ಎಂಬದಾಗಿ ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾರೆ.

ನಾಗಮಂಗಲ ತಾಲ್ಲೂಕು ಹೊನ್ನುಬೆಟ್ಟದ ಕಾಡು.

ನಾಗಮಂಗಲ ತಾಲ್ಲೂಕಿನಲ್ಲಿ ಹೊನ್ನುಬೆಟ್ಟದ ಕಾಡು 918 ಎಕರೆ 1 ಗುಂಟೆ ಇದೆ. ಇದನ್ನು ಸರಿಯಾಗಿ ಸಂರಕ್ಷಣೆ ಮಾಡತಕ್ಕ ಏರ್ಪಾಡು ಮಾಡಿಲ್ಲವಾಗಿ ಅದರ ಮೇಲಿನಿಂದ ಕಲ್ಲೂ ಮರಳೂ ಮಣ್ಣೂ ಹೊರಳಿ ಬಂದು ಕೂಳೆಕೆರೆಗೆ ಬಿದ್ದು ಕೆರೆಯನ್ನು ನಷ್ಟಪಡಿಸುತ್ತಿವೆ. ಇದನ್ನು ತಪ್ಪಿಸುವುದಕ್ಕೋಸ್ಕರ ಆ ಪೈಕಿ 619 ಎಕರೆ 15 ಗುಂಟೆ ಕಾಡನ್ನು ರೆವಿನ್ಯೂ ಗೋಮಾಳಕ್ಕಾಗಿ ರೈತಪ್ರಜೆಗಳು ಉಸ್ತುವಾರಿ ಇಟ್ಟು ಚೆನ್ನಾಗಿ ಕಾಪಾಡಿಕೊಂಡು ಬರುವಂತೆ ಏರ್ಪಾಡು ಮಾಡಬೇಕೆಂದು ರೆವಿನ್ಯೂ ಕಮಿಷನರವರು ಶಿಫಾರಸು ಮಾಡಿದರು. ಇದರ ಮೇಲೆ ಸರ್ಕಾರದವರು ಅಪ್ಪಣೆ ಕೊಡಿಸಿರುವುದೇನೆಂದರೆ:— ಕುಸ್ನಕಟ್ಟೆ ಮಕ್ಲೀನಹಳ್ಳಿ, ಸಂಕನಹಳ್ಳಿ, ಶ್ರೀರಾಮನಹಳ್ಳಿ ಮುಂತಾದ ಗ್ರಾಮಗಳ ರೈತಪ್ರಜೆಗಳು ಈ ಕಾಡನ್ನು ಗೋಮಾಳವಾಗಿಟ್ಟುಕೊಂಡು, ಅದರಿಂದ ಕೆರೆಗೆ ಯಾವ ಅತಿಬಾಧೆಯೂ ಉಂಟಾಗದಂತೆ ಕಾಪಾಡುತ್ತಾ ಬರಬೇಕು. ಅವರಲ್ಲಿ ಮುಖಂಡರಾದಂಥಾ ರೈತರ ಜವಾಬ್ದಾರಿಗೆ ಅದನ್ನು ವಹಿಸಿ, ಅದರ ಉಪಯೋಗ, ಅದರ ಸಂರಕ್ಷಣೆ ಮುಂತಾದ ವಿಷಯಗಳಲ್ಲಿ ರೆವಿನ್ಯೂ ಕಮಿಷನರವರು ಅವಶ್ಯವಾದ ನಿರ್ಬಂಧಗಳನ್ನು ಕಲ್ಪಿಸಿ, ಈ ಏರ್ಪಾಡು ಒಂದು ವರುಷ ನಡೆದ ಬಳಿಕ ಅದರ ಫಲಾಫಲಗಳನ್ನು ಕುರಿತು ಸರ್ಕಾರಕ್ಕೆ ರಿಪೋರ್ಟು ಮಾಡತಕ್ಕದ್ದು. ರೈತರು ತಾವಾಗಿಯೇ ಆ ಗೋಮಾಳವನ್ನು ತಕ್ಕ ರೀತಿಯಲ್ಲಿ ಕಾಪಾಡದೆ ತಪ್ಪಿದಲ್ಲಿ ಅದನ್ನೆಲ್ಲಾ ಫಾರೆಸ್ಟ್ ರೆಗ್ಯುಲೇಷನ್ನಿನ 30 ನೇ ಸೆಕ್ಷನ್ ಅನುಸರಿಸಿ ಸರ್ಕಾರಕ್ಕೆ ರಿಜರ್ವ್ ಮಾಡಿಕೊಳ್ಳಬೇಕಾಗುವುದು.

ಬೀರೂರು ಶ್ರೀಮಂಜುನಾಥ ಅನಾಥಾಲಯವು

ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಬೀರೂರಿನಲ್ಲಿ ಸಾಹುಕಾರ್ ಖರೀದಿ ಗೋವಿಂದಪ್ಪನವರು 1910 ನೇ ಇಸವಿಯಲ್ಲಿ ಮೇಲ್ಕಂಡ ಅನಾಥಾಲಯವನ್ನು ಸ್ಥಾಪಿಸಿ, ಅದು ಶಾಶ್ವತವಾಗಿ ನಡೆಯುವುದಕ್ಕೆ 10,000 ರೂಪಾಯನ್ನು ಸರ್ಕಾರದ ವಶಕ್ಕೆ ಫಂಡುಕೊಟ್ಟರು. ಈಚೆಗೆ ಅದೇ ಸಾಹುಕಾರರು ಇನ್ನು 10,000 ರೂಪಾಯಿ ಫಂಡುಹಾಕಿದರು. ಈ ಅನಾಥಾಲಯದ ನಡವಳಿಕೆ ವಿಷಯದಲ್ಲಿ ಸರ್ಕಾರದವರು ಹುಕುಂ ಮಾಡಿರುವ ನಿಬಂಧನೆಗಳೇನೆಂದರೆ:—ಈ ಅನಾಥಾಲಯದ ಮೇಲ್ವಿಚಾರಣೆಗೆ ಐದು ಮಂದಿ ಮೆಂಬರುಗಳುಳ್ಳ ಒಂದು ಕಮಿಟಿ ಇರಬೇಕು. ಈ ಕಮಿಟಿಗೆ ಕಡೂರು ತಾಲ್ಲೂಕು ಅಮಲ್ದಾರರು, ಅಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ತರು, ಫಂಡು ಹಾಕಿದವರು ಇಲ್ಲವೇ ಇವರ ಕಾಲಾನಂತರ ಇವರ ವಂಶೀಕರು, ಈ ಮೂರು ಮಂದಿಯೂ ಖಾಯಂ ಮೆಂಬರುಗಳಾಗಿರಬೇಕು. ಸದ್ಯಕ್ಕೆ ಮೆ|| ತಂಗ್ಲಿ ಶ್ರೀನಿವಾಸೈಯಂಗಾರ್ಯ, ಮೆ|| ಖರೀದಿ ಲಿಂಗಪ್ಪನವರೂ ಸೇರಿ ಐದು ಮಂದಿ ಮೆಂಬರುಗಳಾಗಿರತಕ್ಕದ್ದು. ಖಾಲಿ ಬಿದ್ದ ಸ್ಥಾನಕ್ಕೆ ಡೆಪ್ಯುಟಿ ಕಮಿಷನರು ಬೇರೆಯವರನ್ನು ನೇಮಕ ಮಾಡಬೇಕು.—ಈ ಫಂಡಿನ 20,000 ರೂಪಾಯಿ ಬಡ್ಡಿ ಹಣದಿಂದ 16 ವರುಷದೊಳಗಿರುವ ಬ್ರಾಹ್ಮಣ ಮತ್ತು ವೈಶ್ಯ ಅನಾಥ ಬಾಲಕರಿಗೆ ಜೀವನವೂ, ವಿದ್ಯಾಭ್ಯಾಸವೂ ನಡೆಯತಕ್ಕದ್ದು. ಬಾಲಕರ ಚುನಾವಣೆಯೂ, ಅವಿಧೇಯರನ್ನೂ ಅಯೋಗ್ಯರನ್ನೂ ವಜಾಮಾಡುವುದೂ ಕಮಿಟಿಯವರಿಗೆ ಸೇರಿದ್ದಾಗಿದೆ. ಕಮಿಟಿಯವರು ಅನಾಥಾಲಯದ ಲೆಕ್ಕಗಳನ್ನು ಕ್ರಮವಾಗಿ ಇಡಿಸಿ ತಿಂಗಳಿಗೊಂದಾವರ್ತಿ ಸೇರಿ ತನಿಖೆ ಮಾಡಬೇಕು. ಈ ಲೆಕ್ಕಗಳನ್ನು ರೆವಿನ್ಯೂ ಮತ್ತು ವಿದ್ಯಾ ಇಲಾಖೆಯ ಅಧಿಕಾರಿಗಳೂ ತನಿಖೆ ಮಾಡಲು ಅವಕಾಶ ಕೊಡಬೇಕು. ಬೀರೂರಿನ ಸರ್ಕಾರಿ ವೈದ್ಯರೇ ಅನಾಥ ಬಾಲಕರ ಆರೋಗ್ಯಸ್ಥಿತಿಯನ್ನು ನೋಡಿಕೊಳ್ಳಬೇಕಲ್ಲದೆ ಅವಶ್ಯವಾದ ಸಂದರ್ಭಗಳಲ್ಲಿ ಇವರು ಕಮಿಟಿಯವರಿಗೆ ಸಹಾಯಕರಾಗಿರಬೇಕು.

ಕೆರೆಯ ಅಚ್ಚುಕಟ್ಟೂ ನೀರುಸರದಿಯೂ

ಈಚೆಗೆ ಸರ್ಕಾರಿ ನೀರನ್ನು ಅಪ್ಪಣೆ ವಿನಾಯಿತಿ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವುದು ಕ್ರಮವಾಗಿ ಹೆಚ್ಚುತ್ತಾ ಇದೆ. ಈ ರೀತಿಯಲ್ಲಿ ನೀರನ್ನು ಉಪಯೋಗಿಸಿಕೊಳ್ಳುವಂಥಾ ತಪ್ಪಿತಸ್ಥರಿಗೆ ತಕ್ಕಷ್ಟು ಶಿಕ್ಷೆಯನ್ನು ವಿಧಿಸದಿರುವುದೇ ಇದಕ್ಕೆ ಕಾರಣವಾಗಿರಬಹುದೆಂದು ಕಾಣುತ್ತದೆ. ಸಾಧಾರಣವಾಗಿ ಒಂದು ಕೆರೆಯ ನೀರು ಅದರ ಕೆಳಗಿನ ಅಚ್ಚುಕಟ್ಟಿಗೆ ಸರಬರಾಯಿ ಮಾಡಲ್ಪಡತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿರುತ್ತದೆ. ಆದರೆ ಮಳೆ ಬಿದ್ದಾಗಲೆಲ್ಲಾ ಕೆರೆ ಮಣ್ಣು ಕೊಚ್ಚಿಕೊಂಡು ಬಂದು ಕೆರೆಯು ಸ್ವಲ್ಪಸ್ವಲ್ಪವಾಗಿ ಹೂಳು ಬೀಳುವುದರಿಂದ ಕೆರೆಯಲ್ಲಿ ಬರಬರುತ್ತಾ ಕಡಮೆ ನೀರು ನಿಲ್ಲುವುದು. ಇದರಿಂದ ಮೊದಲು ಗೊತ್ತುಮಾಡಲ್ಪಟ್ಟಿರುವ ಅಚ್ಚುಕಟ್ಟಿಗೆ ನೀರು ಸಾಕಾಗಲಾರದೆ ಹೋಗುವುದುಂಟು. ಆದ್ದರಿಂದ ಗೊತ್ತಾದ ಅಚ್ಚುಕಟ್ಟಿನ ಜೊತೆಗೆ ಜಾಸ್ತಿ ಜಮೀನನ್ನು ಸೇರಿಸುತ್ತಿರುವುದು ಬಹಳ ದೊಡ್ಡ ತಪ್ಪೆಂದು ಹೇಳಬೇಕು. ಇನ್ನು ಮುಂದೆ ಸ್ಥಳೀಯ ರೆವಿನ್ಯೂ ಅಧಿಕಾರಿಗಳು, ಸರ್ಕಾರಿ ನೀರನ್ನು ಜನರು ಕಳ್ಳತನದಿಂದ ಉಪಯೋಗಿಸಿಕೊಳ್ಳದಂತೆ ಉಸ್ತುವಾರಿ ನೋಡಿಕೊಳ್ಳಬೇಕಲ್ಲದೆ ತಾವು ಸಹಾ ಮೇಲಿನ ಹುಕ್ಕುಂ ನಿರೀಕ್ಷಣೆಯಿಂದ ಜನರು ನೀರನ್ನು ಉಪಯೋಗಿಸಿಕೊಳ್ಳಲು ಅಪ್ಪಣೆ ಕೊಡಕೂಡದು. ಮತ್ತು ನೀರುಸರದಿಗಾಗಿ ಅರ್ಜಿ ತೆಗೆದುಕೊಳ್ಳುವುದನ್ನು ಸಾಧ್ಯವಾದ ಮಟ್ಟಿಗೂ ಕಡಮೆಮಾಡಬೇಕು. ಖಾಯಂ ಆಗಿ ನೀರುಸರದಿಯನ್ನು ಕೊಡುವುದರಿಂದ ಅಚ್ಚುಕಟ್ಟಿನ ವಿಸ್ತೀರ್ಣವು ಜಾಸ್ತಿಯಾಗುವ ಕಾರಣ ಹಾಗೆ ಖಾಯಂ ನೀರುಸರದಿಯನ್ನು ಕೊಡಲೇ ಕೂಡದು. ವಿಶೇಷವಾಗಿ ಮಳೆಯಾಗಿ ಕೆರೆ ಕೆಳಗಿನ ಅಚ್ಚುಕಟ್ಟಿಗೆ ಅವಶ್ಯವಾಗಿರುವುದಕ್ಕಿಂತಲೂ ಜಾಸ್ತಿಯಾಗಿ ಕೆರೆಯಲ್ಲಿ ನೀರಿರಬಹುದಾದ ವರುಷಗಳಲ್ಲಿ ಹಂಗಾಮಿ ತಾರೀಖು ಒಂದು ವರುಷಕಾಲ ಮಾತ್ರ ನೀರುಸರದಿಯನ್ನು ಕೊಡಬಹುದು. ನ್ಯಾಯವಾದ ಕಾರಣಗಳಿರುವಾಗ್ಗೆ ಚೆನ್ನಾಗಿ ಪರಿಶೀಲಿಸಿ ಒಂದು ಕೆರೆ ಕೆಳಗಿನ ಅಚ್ಚುಕಟ್ಟನ್ನು ಖಾಯಂ ಆಗಿ ಹೆಚ್ಚಿಸಬಹುದು.—ರೆವಿನ್ಯೂ ಕಮಿಷನರ್

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಜಾಗಕೊಡಲಾರೆವು.

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲಿ ಪ್ರಕಟವಾಗುವವೆಂಬ ಧರವಸೆ ಕಡಮೆ. ಬಾತ್ಮಿಗಳು ಕುಂಬಾ ಸಂಕ್ಷೇಪವಾಗಿರಬೇಕೆಂದು [illegible] ಹೇಳುತ್ತೇವೆ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು "ರೆವ್. ಇ. ಡಬ್ಲ್ಯು. ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು. ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು. ಬಾತ್ಮೀದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ.

ಕರೆಸ್ಪಾಂಡೆನ್ಸ್

ಮಠದ ಸರ್ವಾಧಿಕಾರಿಗಳು ಪ್ರತಿನಿಧಿಗಳಾಗಬಹುದೋ?

ಅಯ್ಯಾ,

ಸರ್ಕಾರದಿಂದ ವಿಧಾಯಕವಾಗಿರುವ ಮೈಸೂರು ದಸರಾ ಪ್ರಜಾಪ್ರತಿನಿಧಿ ಸಭೆಗೆ ಮಠದ ಸರ್ವಾಧಿಕಾರಿಗಳು ಮೆಂಬರಾಗಲು ಅರ್ಹರೇ? ಹಳ್ಳಿಗಳಲ್ಲಿ ಸರ್ಕಾರದ ಜಮೀನಿಗೆ 250 ರೂಪಾಯಿಗೆ ಮೇಲ್ಪಟ್ಟು ಕಂದಾಯ, ಅಥವಾ 170 ರೂಪಾಯಿಗೆ ಮೇಲ್ಪಟ್ಟ ಜೋಡಿ ಕೊಡತಕ್ಕವರು ಅರ್ಹರೆಂದು ವಿಧಿಸಿರುತ್ತೆ. ಆದರೆ ಮೇಲ್ಕಂಡ ಮಠಗಳಿಗೂ ಜೋಡೀ ಗ್ರಾಮಗಳು ಇದ್ದು ಅವರು ಜೋಡಿ ಕೊಟ್ಟ ಮಾತ್ರಕ್ಕೇ ಸರ್ವಾಧಿಕಾರಿ ಮೆಂಬರಾಗಬಹುದೇ? ಈ ಸಂಗತಿಯನ್ನು ತಾವಾಗಲಿ, ತಮ್ಮ ವಾಚಕರಾಗಲಿ ಈ ಪತ್ರಿಕೆಯ ಮೂಲಕ ತಿಳಿಸಬೇಕೆಂದು ಕೋರುತ್ತೇನೆ.

ಹಿತೈಷಿ

ಒಬ್ಬ ಜಮೀನ್ದಾರನ ಕಷ್ಟ

ಅಯ್ಯಾ,

ನನಗೆ ಅರಸಿಕೆರೆಯಲ್ಲಿ ಕೆರೆಯ ಕೆಳಗೆ ಜಮೀನು ಇದೆ. ಇದಕ್ಕೆ ನಾನು ಸಾಲ್ ಒಂದಕ್ಕೆ 230 ರೂ. ಕಂದಾಯ ಕೊಡುತ್ತಿದ್ದೇನೆ. ಈ ಕೆರೆಗೆ ನೀರುಗಂಟಿ ಇಲ್ಲ. ತೂಬುಗಳು ಸರಿಯಾಗಿಲ್ಲ, ಜಮೀನಿಗೆ ನೀರು ಹಾಯಿಸುವುದರಲ್ಲಿ ಕ್ರಮವಿಲ್ಲ. ಒಳಗೆರೆಯು ಹೂಳುಬಿದ್ದಿದೆ. ಅದಕ್ಕೆ ನೀರು ಬರುವ ನಾಲೆಗಳು ಕಟ್ಟಿಹೋಗಿವೆ. ಕೆರೆ ತುಂಬುವುದೇ ಇಲ್ಲ. ನನ್ನ ಜಮೀನುಗಳಿಗೆ ಸಾಕಾದಷ್ಟು ನೀರು ಒದಗುವುದಿಲ್ಲ. ನನಗೆ ಪ್ರತಿ ಸಾಲಿನಲ್ಲೂ ಸರಿಯಾದ ಬೆಳೆ ಕೈಸೇರದೆ ಇದ್ದರೂ ಕಂದಾಯ ವಸೂಲ್ ಮಾಡುತ್ತಾರೆ. ನನ್ನ ಜಮೀನಿಗೆ ನೀರು ಸರಬರಾ[illegible]

...ಆಗುವಂತೆ ಚರಂಡಿಯನ್ನು ಮಾಡಿಸಿಕೊಡಬೇಕೆಂದು ಗವರ್ನ್‌ಮೆಂಟಿಗೂ, ...ವಾರ್ನರವರಿಗೂ, ಇತರ ಅಧಿಕಾರಿಗಳಿಗೂ ಕಳೆದ ಆರು ವರುಷಗಳಿಂದ ಅರ್ಜಿ ...ರೆದುಕೊಳ್ಳುತ್ತಾ ಬಂದಿದೇನೆ. ಇದುವರಿಗೂ ಏನೂ ಮಾಡಿಕೊಟ್ಟಿಲ್ಲ. ಅಧಿಕಾರಿಗಳು ಕಂದಾಯ ಕೊಡದಿದ್ದರೆ ಜಮೀನಿಗೆ ರಾಜೀನಾಮೆ ಕೊಡು ಎಂದು ...ತ್ತಾಯ ಮಾಡುತ್ತಾರೆ. ನಾನು ಮದರಾಸಿನವನು, ಈ ಪರದೇಶದಲ್ಲಿ ಈ ರೀತಿ ...ಷ್ಟನಷ್ಟಕ್ಕೆ ಗುರಿಯಾಗಿದೇನೆ. ಈ ಊರಿನಲ್ಲಿ ನನ್ನ ಹಾಗೆ ನಷ್ಟಪಡುತ್ತಿರುವ ...ರು ಹಲವರಿದಾರೆ.

ಪಿ. ಅಪ್ಪುಚೆಟ್ಟಿ.

ತೀರ್ಥಹಳ್ಳಿ ತಾ|| ನಾಮದಾರಿ ಕುಟುಂಬಗಳು

...ಮ್ಯಾ,

ಈ ಬಹುಜನ ಕುಟುಂಬಗಳಲ್ಲಿ ಯಜಮಾನರುಗಳ ಕರ್ತವ್ಯವೇನಂದರೆ, ...ಲವು ಕುಟುಂಬಗಳಲ್ಲಿ ಯಜಮಾನರು 500-600 ರೂಪಾಯಿ ಕಂದಾಯ ...ುವಷ್ಟಕ್ಕೆ ಜಮಾನುಗಳ ಆದಾಯವನ್ನು ಅಪಹರಿಸಿ ಕುಟುಂಬದವರಿಗೆ ವಂಚಿಸಿ ...ಹಣದಲ್ಲಿ ವ್ಯವಸಾಯ, ಸಂಸಾರ ಖರ್ಚು ತೀರಿಸಿಬಿಡುತ್ತಾರೆ. ಮತ್ತು ...ನೆಯವರಿಗೆ ನಾಲ್ಕಾರು ವರ್ಷಗಳಿಗೆ ಕಂಬಳಿ, ಪಂಚೆ ಕೊಟ್ಟು ಕಣ್ಣು ಒರೆಸುತ್ತಾರೆ. 8-10 ವರ್ಷಗಳಿಗೆ ಲಗ್ನ ಮುಂತಾದದ್ದು ಮಾಡುವದೂ ಉಂಟು. ...ಷ್ಟೇ ವಿನಹಾ ಇನ್ನಾವ ಸಾರಾಂಶವೂ ಇಲ್ಲ. ಹೀಗಿರುವಲ್ಲಿ ಸಂಸಾರದವರು ...ದ್ದರೋ ಎಂದು ಕೇಳಬಹುದು. ಅವರು ಸತ್ಯವಂತರೂ, ಒಂದು ವಿಧವಾದ ...ದ್ದರೂ ಇರುವುದುಂಟು. ಹ್ಯಾಗಂದರೆ ಬಹುಕಾಲದಿಂದ ನಡೆದ ಕುಟುಂಬಗಳಿದ್ದರಿಂದ ಕಲಹಗಳು ಸಂಭವಿಸತೆಂಬುವದೇ ಮುಖ್ಯಾಭಿಪ್ರಾಯ. ಇಂಥಾ ...ಷಯಗಳನ್ನು ತಿಳಿದುಕೊಂಡು ದೇವರ ಮೇಲೆ ಭಾರಹಾಕಿ ಕೆಲಸ ಮಾಡತಕ್ಕದ್ದು ಯಜಮಾನರ ಕರ್ತವ್ಯ. ಆದರೆ ವಾಚಕರಾದ ತಮಗೂ ಲೋಕವ್ಯವಹಾರಗಳಲ್ಲಿ ತಿಳಿದಿರಬಹುದೆಂದು ನಂಬುತ್ತೇನೆ. ಈ ವಿಷಯ ಯಜಮಾನರುಗಳಿಗೆ ಸ್ವಲ್ಪ ಕೋಪ ಬರಬಹುದು. ಹೊರತು ಈ ಸಂಸಾರದಲ್ಲಿ ಬಿದ್ದು ನರಳುವ ...ಜಮಾನರ ಕೈಕೆಳಗಿನ ಕುಟುಂಬಿಗಳಿಗೂ ನ್ಯಾಯವ್ಯವಹಾರಿಗಳಿಗೂ ಎಂದಿಗೂ ಕೋಪ ಬರಲಾರದು. ಆದರೆ ಕುಲದೇವರು ಯಜಮಾನರುಗಳಿಗೆ ಒಳ್ಳೇ ಬುದ್ಧಿ ...ಡುವನೆಂದು ಹಾರೈಸುವ

ಸರ್ವಜನ ಹಿತೇಚ್ಛು.

ಒಸ್ಕೂರಿನ ಬಿದ ಮಾನಗಳು

...ಮ್ಯಾ,

ಬನ್ನೂರು ಟಿ. ನರಸೀಪುರದ ತಾಲೂಕಿಗೆ ಸೇರಿ 6-7 ಸಾವಿರ ಪ್ರಜಾಸಂಖ್ಯೆಯುಳ್ಳ ಭಾರಿ ಟವನ್ ಆಗಿರುತ್ತೆ. ಇಲ್ಲಿನ ಮ್ಯುನಿಸಿಪಾಲಿಟಿ ರೆಗ್ಯುಲೇಷನ್ ...ಮ್ಯುನಿಸಿಪಾಲಿಟಿಯಾಗಿ ಗೌರ್ನಮೆಂಟಿನವರು ಮಾಡಿದಾರೆ. ಅದಕ್ಕೆ ತಕ್ಕಂತೆ ...ಲ್ಲಿನ ಮ್ಯುನಿಸಿಪಲ್ ಮೆಂಬರುಗಳು ಮಟ್ಟಿಗೆ ಪ್ರಜೆಗಳ ಸೌಕರ್ಯ ವಿಚಾರ...ಲ್ಲಿ ಸ್ವಲ್ಪವೂ ನಿಗಾ ನೋಡಿಕೊಳ್ಳುವದಿಲ್ಲ. ಬಡಪ್ರಜೆಗಳಿಗಾಗಿ ನ್ಯಾಯ...ದ ಭಾಗಗಳನ್ನು ಚರ್ಚಿಸುವುದೇ ಇಲ್ಲ. ಇಲ್ಲಿನ ಮ್ಯುನಿಸಿಪಾಲಿಟಿಯಿಂದ ...ಶವಾಗಿ ಎಕ್ಸಿಟೆನ್ಷನ್ ಮಾಡುತ್ತೇವೆಂತ ಹೇಳಿ ಪ್ರಜೆಗಳು ಜೀವನ ...ಮಾಡಿಕೊಳ್ಳುತ್ತಿದ್ದ ಜಮೀನ್‌ಗಳನ್ನು ಅವರುಗಳಿಂದ ಬಿಡಿಸಿ 3-4 ಪ್ರದೇಶದಲ್ಲಿ 4 ಸಾವಿರ ರೂಪಾಯಿವರಿಗೆ ಸರ್ಕಾರಕ್ಕೆ ಖರ್ಚು, ಕಂಟ್ರಾಕ್ಟುದಾರರಿಗೆ ...ಯೋಜನವೂ ಆಗುವಂತೆ ಚರಂಡಿ ರಸ್ತೆ ವಗೈರೆ ಮಾಡಿಸಿದರು. 3-4 ವರ್ಷ...ದಾಗ್ಯೂ 2-3 ಸ್ಥಳದಲ್ಲಿಯೂ ಸಹಾ ಒಬ್ಬರೂ 1 ಮನೆಯೂ ಕಟ್ಟಲಿಲ್ಲ. ...ತಾರ ಚನ್ನಾಗಿ ಓದಿ ಸರ್ಕಾರದವರೂ, ನಮ್ಮ ಮೆಂಬರುಗಳೂ ಸರ್ಯಾಗಿ ...ಲೋಚನೆ ಮಾಡಿದ್ದರೆ ಪ್ರಜೆಗಳ ದುಡ್ಡು ಈ ರೀತಿ ಅನಾಯ ವಾಗುತ್ತಿರಲಿಲ್ಲ. ...ಆ ಸ್ಥಳದಲ್ಲಿ ದಳ್ಳಾರಿಗಿಡಗಳು ಬೆಳೆದು ನಿಂತಿವೆ. ಇಲ್ಲಿ ರಸ್ತೆ ವಗೈರೆ ...ದು ಏನೂ ಚನ್ನಾಗಿಲ್ಲ. ಮ್ಯುನಿಸಿಪಾಲಿಟಿ ಬಾಬುಗಳೆಲ್ಲಾ ಪಾಲಕ್ಕೆ ... ಆಗುತ್ತವೆಯೆ. ವಿನಹಾ ಪ್ರಜೆಗಳಿಗೆ ಉಪಯೋಗವಾದ ಕೆಲಸಗಳಾಗುತ್ತಿಲ್ಲ. ಒಬ್ಬ ನಿಂಡ್ ವೈಷನ್‌ ದವರೂ ಇನ್ನೂ ಸರ್ಕಾರದವರು ದಯಪಾಲಿಸಿಲ್ಲ. ಆದ್ದರಿಂದ ಇಂಥಾ ಭಾರಿ ಟವನ್‌ನಲ್ಲಿ ಪ್ರಜೆಗಳಿಗೆ ಬಹಳ ತೊಂದರೆಯಾಗಿದೆ.

ಸತ್ಯವಾದಿ.

[ಕ್ರಿಮಿನಲ್ ಮೊಕದ್ದಮೆಗಳನ್ನು ಅಮಲ್ದಾರರು ಸಿವಿಲ್ ಕೇಸುಗಳಂತೆ ಬಹಳ ದೀರ್ಘಕಾಲ ನಡೆಸೋಣದರಿಂದ ಕಕ್ಷಿಗಾರರಿಗೂ ಸಾಕ್ಷಿಗಳಿಗೂ ಪ್ರವಾಹ...ಲದಲ್ಲಿ ಊರು ಬಿಟ್ಟು ಕೋರ್ಟಿಗೆ ಬರುವುದು ಬಹಳ ಕಷ್ಟವೆಂದೂ, ಕಕ್ಷಿಗಳನ್ನು ಬೇಗ ಮಾಡಬೇಕೆಂದೂ ಈ ಬಾತ್ಮಿದಾರರು ಆಕ್ಷೇಪಣೆಮಾಡುತ್ತಾರೆ. ಈ ವಿಚಾರವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಗಮನಿಸಬೇಕು. ...ಮಪಡಿಸತೆ ಇರಲಾರರು. ಇಲ್ಲದೆ ಅಲ್ಲಿನ ಹೆಣ್ಣು ಮಕ್ಕಳ ಸ್ಕೂಲಿನ ...ಮಬಾರು ಚನ್ನಾಗಿಲ್ಲವೆಂದೂ, ಇದರಿಂದ ಗಂಡು ಹುಡುಗರ ಸ್ಕೂಲೂ ...ುವುದಕ್ಕೆ ಅವಕಾಶವಾಗಿದೆ ಎಂದೂ, ಈ ವಿಚಾರವನ್ನು ಇನ್ಸ್‌ಪೆಕ್ಟರಿಗೆ ...ಮಸ್ತು ರೂಬರೂಬು ಅರಿಕೆಮಾಡಿಕೊಂಡಿದ್ದಾಗ್ಯೂ ಅವರು ಇನ್ನೂ ...ಮಪಡಿಸಲಿಲ್ಲವೆಂದೂ ಈ ಬಾತ್ಮಿದಾರರು ಬರೆಯುವರು. ಈಗ ವಿದ್ಯಾ ಇಲಾಖೆಗೆ ಹೊಸ ಅಧಿಕಾರಿಯು (ಮೆ|| ಎಂ. ರಾಮರಾಯರು) ನೇಮಕವಾಗಿರೋದರಿಂದ ಗ್ರಾಮಸ್ಥರು ಅವರಿಗೆ ಬರೆದುಕೊಂಡರೆ ಅವರ ಪ್ರಾರ್ಥನೆಯು ...ಫಲಕವಾಗಬಹುದೆಂದು ಸೂಚಿಸುತ್ತೇವೆ.— ಎಡಿ.]

ತಾಲ್ಲೋಕು ವರ್ತಮಾನಗಳು

ಹೊಳಲ್ಕೆರೆ.— ಈ ಊರಿಗೆ 5-6 ದಿವಸಗಳಿಂದ ಕಾಲರಾ ಶುರುವಾಗಿ ...ವಕ್ಕೆ ಶಗಲೆ, 2 ಜನ ಮೃತರಾದರು. ಮತ್ಯಾರಿಗೂ ಹೊಸದಾಗಿ ಆಗಿ ಇಲ್ಲ. ...ನ್ನೆ ಮಧ್ಯಾಹ್ನ ಮಳೆ ಬಂದದ್ದರಿಂದ ಬಾಡಿದ್ದ ಪೈರುಗಳಿಗೆಲ್ಲಾ ಉತ್ತಮ...ಯಿತು. ಜನರು ಬೀಜ ಬಿತ್ತುವದರಲ್ಲಿ ಆತುರರಾಗಿದಾರೆ. ಆದರೆ ಕಾಲರಾ ...ದ್ರ ತಲೆದೋರಿ ಜನರಿಗೆ ಅಧೈರ್ಯ ಉಂಟು ಮಾಡಿ ಇದೆ. ದೇವರ...ನೆ, ಅನ್ನಸಂತರ್ಪಣೆ ಕ್ರಮಗಳು ನಡೆ ಜರುಗಬೇಕೆಂತ ಜನರು ಪ್ರಯತ್ನಿಸುತ್ತಾರೆ. ಈ ದಿವಸ ಸಂತೆಗೆ ಆಸ್‌ಪಾಸ್ ಹಳ್ಳಿ ಜನಗಳು ಬಾರದೆ ಮಯಸ್ಥ...ದ ಜಿನಸಿಗಳು ವಿಶೇಷ ಬಂದಿರಲಿಲ್ಲ. ಧಾರಣೆ ಅಕ್ಕಿ 6½ ಸೇರು, ರಾಗಿ ... ಸೇರು, ಈ ರೀತಿ ಇದೆ. ಜನರೆಲ್ಲಾ ನೀರು ಕಾಯಿಸಿ ಕುಡಿಯಬೇಕೆಂತ ...ರದವರು ಬಯಾನಿಸುತ್ತಾ ಇದಾರೆ. ಮೌಢ್ಯದಿಂದ ಯಾರೂ ಅದರಂತೆ ಆಚರಣೆಗೆ ತಂದು ಇಲ್ಲ. ಊರಿಗೆ ದೂರವಾಗಿ ಸಂತೆ ನಡೆಯಬೇಕೆಂತ ಹುಕುಂ ಆದ ಪ್ರಕಾರ ಜಾರಿ ಆಗಿರುತ್ತೆ.— ಇಲ್ಲಿನ ಆಸ್ಪತ್ರೆ ಡಾಕ್ಟರವರು ಮುತುವರ್ಜಿಯಿಂದ ರೋಗಿಗಳಿಗೆ ಚಿಕಿತ್ಸೆ ನಡಿಸುತ್ತಾ ಇದಾರೆ. ಜನಗಳು ಹುಷಾರಿಯಿಂದ ಅನುಪಾನಗಳನ್ನು ಮಾಡುತ್ತಾ ಬಂದರೆ ಕ್ಷೇಮವಾಗುತ್ತೆ.

ಜೈನಕಾಶಿ.— ಶ್ರೀ ನೇಮಿನಾಥ ವಾಚನಾಲಯವನ್ನು ಶ್ರೀಮಾನ್ ಪೋಲೀಸ ಪಾಟೀಲರಾದ ಬಾಬುಗೌಡರವರು ಪ್ರತಿಷ್ಠೆ ಮಾಡಿದರು. ಜ್ಯೇಷ್ಠ ಶುದ್ಧ 11 ಶುಕ್ರವಾರ ಜಿಲ್ಲಾ ಬೆಳಗಾವ ತಾ|| ಅಥಣಿ ಪೈಕಿ ದೊಡ್ಡ ಉಗಾರ್ರ ಗ್ರಾಮವೆಂಬೀ ಸ್ಥಳದ ನಿವಾಸಿಗಳಾದ ಸಮಸ್ತ ಶ್ರಾವಕರು ಧರ್ಮೋತ್ತೇಜನಕ್ಕಾಗಿ ಅನೇಕ ಗ್ರಾಮಗಳಿಗೆ ಮಧ್ಯಸ್ಥಳವಾದ ಉಗಾರ (ಜೈನಕಾಶಿ) ದಲ್ಲಿ ದೊಡ್ಡ ಬಸ್ತಿಯ ಸಮೀಪ ಒಂದು ವಿಶಾಲವಾದ ಪ್ರದೇಶದಲ್ಲಿ ಸುಮಾರು 600 ರೂಪಾಯಿ ಖರ್ಚು ಮುಟ್ಟಿಸಿ, ಮನೋಹರವಾದ ಮೋಲ್ಕಂಡ ವಾಚನಾಲಯವನ್ನು ಕಟ್ಟಿಸಿರತ್ತಾರೆ. ಇದರ ಕವಾಟೋದ್ಘಾಟನದ ಮಹೋತ್ಸವವನ್ನು ನೆರವೇರಿಸಿ ಕೊಡಬೇಕಾಗಿ ಶ್ರೀ ಸಮಸ್ತ ಶ್ರಾವಕರೂ ಪೋಲೀಸಪಾಟೀಲರವರನ್ನು ಕೇಳಿಕೊಂಡಮೇರೆಗೆ ಅವರು ಅನುಮೋದನ ಪಟ್ಟರು. ಕವಾಟೋದ್ಘಾಟನಮಾಡುವ ಕಾಲದಲ್ಲಿ ಅನೇಕ ಜನ ಜೈನರೂ, ಬ್ರಾಹ್ಮಣರೂ ಹಾಜರಾಗಿದ್ದರು. ಎಲ್ಲರೂ ಆನಂದಸೂಚಕವಾದ ಜಯಜಯಕಾರವನ್ನು ಮಾಡಿದರು. ಪಶ್ಚಾತ್ ಮಂಗಳವಾದ್ಯಗಳು ಘೋಷಗರೆದವು. ಎಲ್ಲರೂ ಒಳಕ್ಕೆ ಪ್ರವೇಶಿಸಿ ಸ್ಥಾನಾಸನ್ನರಾದರು. ಮ|| ಶ್ರೀಧರೋಪಾಧ್ಯಾಯರು ಧಾರ್ಮಿಕ ವಿಚಾರವಾಗಿ ಉಪನ್ಯಾಸಮಾಡಿ ಫಲಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿ ಸಾಂಗವಾಗಿ ಸಭೆಯನ್ನು ಪರಿಸಮಾಪ್ತಿ ಮಾಡಿದರು.

ಹೊನ್ನಕೊಪ್ಪೆ ತಾ|| ಮಿರ್ಲೆ.— ಇಲ್ಲಿ 1-2 ಹದ ಮಳೆ ಆಯಿತು. ಊರು ಆರೋಗ್ಯಸ್ಥಿತಿಯಲ್ಲಿದೆ. ಭತ್ತದ ಅಗೆ, ರಾಗಿ ನಾಟ ಸಹಾ ಹಾಕುತ್ತಲಿರುವರು.— ಮಿರ್ಲೆ ಯೂನಿಯನ್ ಮೆಂಬರುಗಳ ಬದಲಾವಣೆ ಆದದ್ದು ತುಂಬಾ ಸಂತೋಷ. ಬಹುದಿನಗಳಿಂದಲೂ ಬದಲಾವಣೆಯೇ ಆಗಿರಲಿಲ್ಲ. ಆಗಾಗ್ಗೆ ಬದಲಾವಣೆಯಾಗುತ್ತಿದ್ದರೆ ಮೆಂಬರುಗಳಿಗೆ ಪ್ರೋತ್ಸಾಹ ಉಂಟು. ಒಬ್ಬರಿಗಿಂತ ಒಬ್ಬರು ಪ್ರಜೋಪಕಾರಿಗಳಾಗಿರಬೇಕೆಂದು ಶ್ರದ್ಧೆ ಹುಟ್ಟಿ ಕೆಲಸಮಾಡಲು ಆರಂಭಿಸುತ್ತಾರೆ. ಗ್ರಾಮದ ಪ್ರಜೆಗಳನ್ನು ಏಕೀಭಾವದಿಂದ ಕಾಣುವ, ತಿಳುವಳಿಕೆಯುಳ್ಳ, ಗ್ರಾಮದ ಉಪಯೋಗಕ್ಕೆ ಆಗಬೇಕಾದ ಸಲಕರಣೆಗಳ ವಿಷಯದಲ್ಲಿ ಚರ್ಚಿಸುವ, ಪ್ರಜೋಪಕಾರಿಗಳಾದ ಮೆಂಬರುಗಳನ್ನು ಗ್ರಾಮಸ್ಥರ ಓಟಿನ ಮೂಲಕ ಚುನಾಯಿಸುವುದರಿಂದ ಪ್ರಜಾ ನೆಮ್ಮದಿಗೆ ಕಾರಣವಾಗುತ್ತೆ. ಇಂಥವರು ಅರ್ಹರು, ಇಂಥವರು ಅರ್ಹರಲ್ಲ ಎಂಬ ವಿಷಯದಲ್ಲಿ ಗ್ರಾಮಸ್ಥರು ಒಪ್ಪುವುದು ಮುಖ್ಯವಾಗಿದೆ. ಈ ಭಾಗದಲ್ಲಿ ನಮ್ಮ ದಯಾಳುಗಳಾದ ಸರ್ಕಾರದವರು ಪ್ರಜೆಗಳ ಮನೋಭಿಪ್ರಾಯಗಳನ್ನು ಚನ್ನಾಗಿ ಪರಿಶೀಲನೆಮಾಡಿ ಮೆಂಬರುಗಳನ್ನು ಚುನಾಯಿಸುತ್ತಾ ಬಂದಪಕ್ಷದಲ್ಲಿ ಗ್ರಾಮದ ಯೂನಿಯನ್ ಕೆಲಸಗಳು ತೃಪ್ತಿಕರವಾಗಿ ನಡೆದು ಪ್ರಜಾ ಆರೋಗ್ಯ ಉಂಟಾಗಲು ಯಾವ ಸಂದೇಹವಿಲ್ಲ.— ಧಾರಣೆವಾಸಿಗಳು ದಿನೇದಿನೇ ಹೆಚ್ಚುತ್ತಲಿವೆ. ನಮ್ಮ ಗ್ರಾಮದ ಎಂ. ಎಸ್. ಸುಬ್ಬರಾಯ ಎಂಬುವರು ಈ ವರ್ಷ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರೆಂಬ ಸಂಗತಿ ತುಂಬಾ ಸಂತೋಷಕರವಾಗಿದೆ. ಇವರು ಮುಂದೆ ಲಾಯರ್ ಪರೀಕ್ಷೆಗೆ ಓದಲು ಬೊಂಬಾಯಿಗೆ ಪ್ರಯಾಣ ಮಾಡುವರು.

ಸಕಲೇಶಪುರ.— ಇಲ್ಲಿ ಮಳೆಗಾಲವು ಪ್ರಾರಂಭವಾಗಿದೆ. ಭತ್ತದ ಧಾರಣೆ ಹೆಚ್ಚಿದೆ.— ಕೂಲಿಕಾರರಿಗೆ ಬೆಳುವನೆಂಬ ಹಲಸಿನ ಹಣ್ಣಿನ ಆಧಾರವೇ ಆಧಾರ. ಇದರಿಂದ ಜ್ವರಾದ್ಯುಪದ್ರವವು ಹೆಚ್ಚಿ ರೋಗಕ್ಕೆ ಕಾರಣವಾಗುವದು. ಈ ವರ್ಷ ಬಹಳ ಮಳೆಯಲ್ಲಿಯೇ ಬೀಜವನ್ನು ಬಿತ್ತಿದ್ದು.— ಇಲ್ಲಿ ಮ|| ಸಾಹುಕಾರ್ ಸೋಮೇಗೌಡರ ಮನೆಯಲ್ಲಿ ಅವರ ಮಗಳ ವಿವಾಹವು ಬಹು ವಿಜೃಂಭಣೆಯಿಂದ ನಡೆಯಿತು. ಈ ಅಂಗವಾಗಿ ಬೆಳ್ಳೂರ್ ಮ|| ದ್ಯಾವಪ್ಪಗೌಡರು ರೀಡಿಂಗ್ ರೂಂ ಕಟ್ಟಿಸುತ್ತಿರುವಂತೆ (ಚಕ್ರವರ್ತಿಗಳ ಪಟ್ಟಾಭಿಷೇಕ ದರ್ಬಾರ ಜ್ಞಾಪಕಾರ್ಥವಾಗಿ) ಇವರೂ ಇಲ್ಲಿನ ಭಜನಾ ಮಂದಿರವನ್ನು ಶಾಶ್ವತವಾಗಿ ನೆಲೆಗೊಳ್ಳುವಂತೆ ಕಟ್ಟಿಸಿಕೊಡುವಂತೆ ಅಮಲ್ದಾರ್ ಮೆ|| ನಾರಾಯಣರಾಯರಲ್ಲಿ ವಾಗ್ದಾನ ನಡಸಿ ಅದರಂತೆ ಚಿಲ್ಲರೆ ರಿಪೇರಿ ಕೆಲಸಗಳನ್ನು ಮಾಡಿಸಿರುವರು. ಮಳೆಗಾಲ ಕಳೆದ ನಂತರ ಭಜನೆ ಮನೆಯನ್ನು ಸರಿಯಾದ ಸರ್ಕಾರದ ಅಂದಾಜಿನಂತೆ ಕಟ್ಟಿಸುವರು. ಇದರಂತೆಯೇ ಮ|| ಸಾಹುಕಾರ್ ಸುಬ್ಬಸೆಟ್ಟರು ಹೇಮಾವತೀ ನದಿಯ ತೀರದಲ್ಲಿ ಸ್ನಾನಘಟ್ಟ ಕಟ್ಟಿಸುವರೆಂಬ ವರ್ತಮಾನ ನಿಶ್ಚಯವಾದಲ್ಲಿ ಅವರ ಕೀರ್ತಿಯು ಮೊಲ್ಕಂಡವರಂತೆಯೇ ಸ್ಥಿರವಾಗಿರುವದರಲ್ಲಿ ಸಂದೇಹವಿಲ್ಲ.— ವೀರಶೈವ ಸ್ಟೂಡೆಂಟ್ಸ್ ಹೋಂ ಸಮಾಚಾರವು ಈಗ ಶಾಂತವಾಗಿದೆ. ಮುಂದೆ ಪ್ರಾರಂಭಿಸಬಹುದು.— ಇಲ್ಲಿ ಎ. ವಿ. ಸ್ಕೂಲ್ ಕಟ್ಟಡಕ್ಕಾಗಿ 5,000 ರೂ ಸರ್ಕಾರದಿಂದ ಸಾಂಕ್ಷನ್ ಆಗಿ ಈ ಕೆಲಸವು ಮುಂದಿನ ವರ್ಷದಲ್ಲಿ ಪೂರೈಸುವದು. ಇಲ್ಲಿ ಪ್ರಾಟೆಸ್ಟೆಂಟ್ ಮತ್ತು ರೋಮನ್ ಕ್ಯಾಥಲಿಕ್ ಚರ್ಚುಗಳಿಗೂ ಸ್ಥಳ ನಿರ್ದೇಶವಾಗಿದೆ. ಆ ಕಟ್ಟಡಗಳೂ ಆಗಬಹುದಾಗಿದೆ.

ಸಂಬಸಗೂಡು.— ಹವಾ ಒಳ್ಳೇ ಸ್ಥಿತಿಯಲ್ಲಿರುತ್ತದೆ. ರಾಗಿ ಜೋಳ ಯುಳ್ಳು ವಗೈರೆ ಪೈರುಗಳು ಚನ್ನಾಗಿರುತ್ತವೆ. ಸುಮಾರು ಒಂದು ವಾರದಿಂದ ಮೋಡವಾಡುತ್ತಲೇ ಇದೆ. ಮಳೆ ಮಾತ್ರ ಆಗಿಲ್ಲ. ಧಾರಣೆವಾಸಿಗಳು ಬಹಳ ಭಯಾವಾಗಿರುತ್ತವೆ.— ಈ ಊರು ಕಪಿಲಾ ನದಿ ದಡದಲ್ಲಿ ಪುರಾತನವಾದ ಮಣಿಕರ್ಣಿಕಾ ಘಟ್ಟದ ಸೋಪಾನದ ಕಲ್ಲುಗಳು ಕುಸಿದು ಜನಗಳು ಸ್ನಾನಪಾನಕ್ಕೆ ಇಳಿಯಲು ಬಹಳ ತೊಂದರೆಯಾಗಿರುವದಲ್ಲದೆ ಇಲ್ಲಿ ನೀರಿನ ಸಮೀಪದಲ್ಲಿರುವ ಕಲ್ಲುಮಂಟಪದಲ್ಲಿ ಆಗಾಗ್ಗೆ ಜನಗಳು ಬಂದು ಅಡಿಗೆ ಮಾಡಿ ಜನಗಳು ಸ್ನಾನಮಾಡಿ ಕುಳಿತುಕೊಳ್ಳುವದಕ್ಕೆ ಅವಕಾಶವಿಲ್ಲದ ಹಾಗೆ ಮಾಡುತ್ತಾರೆ. ಸರ್ಕಾರದವರು ಈ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡುತ್ತಾರೆಂದು ನಂಬುತ್ತೇವೆ.— ಗ್ರಾಮದಲ್ಲಿ ಕಪಿಗಳು ಮನೆಗಳ ಹೆಂಚುಬಗೆದು ಮನೆಯೊಳಗಿನ ಸಾಮಾನುಗಳನ್ನು ಹಾಳುಮಾಡುತ್ತಿರುವದಲ್ಲದೆ ಹೆಂಗಸರು ಮತ್ತು ಮಕ್ಕಳ ಮೇಲೆ ಸಹ ಬೀಳುವವು. ಇದರ ತೊಂದರೆ ಅಷ್ಟಿಷ್ಟೆಂದು ಹೇಳಲು ಆಗುವದಿಲ್ಲ.— ಈ ತಿಂಗಳಲ್ಲಿ ಮ್ಯುನಿಸಿಪಲ್ ಮೆಂಬರುಗಳನ್ನು ಹೊಸದಾಗಿ ಚುನಾವಣೆಮಾಡಲು ಇಷ್ಟವುಳ್ಳವರು ಹೆಸರುಕೊಡಬೇಕೆಂದು ಕೆಲವರಿಗೆ ನೋಟೀಸು ಕೊಟ್ಟಿರುವದು ಸರಿಯಷ್ಟೆ. ಹೀಗೆ ಚುನಾವಣೆಯಾಗುವ ಮೆಂಬರುಗಳಲ್ಲದೆ ಸರ್ಕಾರದಿಂದಲೂ ಕೆಲವರನ್ನು ನೇಮಿಸುತ್ತಾರೆ. ಗ್ರಾಮಸ್ಥರ ಅನುಮತಿಯಂತೆ ಸ್ಥಳವಾಸಿಗಳಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ ಇರುವ ಹೊಸ ಮೆಂಬರುಗಳನ್ನು ಚುನಾಯಿಸಬೇಕಲ್ಲದೆ, ಸರ್ಕಾರದವರು ದೇವಸ್ಥಾನದ ಧರ್ಮದರ್ಶಿಗಳ ಕೆಲಸಕ್ಕೂ ಗ್ರಾಮದವರ ಅನುಮತಿ ಪಡೆದವರನ್ನೇ ಚುನಾಯಿಸಿ ಏಚಕ್ಷಣೆಯನ್ನೂ, ಸಂತೋಷವನ್ನೂ ಉಂಟುಮಾಡಬೇಕೆಂದು ಹಾರೈಸುತ್ತೇವೆ.

ಅರಸೀಕೆರೆ ತಾ|| ಬಾಣಾವಾರ.— ಮಳೆ ಸುತರಾಂ ಇಲ್ಲ. ಬರೀ ಮೋಡವೂ ಶೀತಗಾಳಿಯೂ ಇದೆ. ಮುಂಗಾರು ಸುತರಾಂ ಇಲ್ಲ. ಜನಗಳೆಲ್ಲರೂ ಅಂತರಿಕ್ಷವನ್ನು ನೋಡುತ್ತಾ ಹಾಹಾಕಾರ ಪಡುತ್ತಿದಾರೆ.— ನೀರು ಕೆಟ್ಟರುವಂತೆ ಕಾಣುವುದು. ಇಲ್ಲಿನ ಸಬ್ ಅ|| ಸರ್ಜನ್‌ರವರು ಪೂರ್ಣ ವಿಶ್ವಾಸವಿಟ್ಟು ನೀರು ಮತ್ತು ಜನಗಳ ಆರೋಗ್ಯದ ವಿಷಯದಲ್ಲಿ ತುಂಬಾ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುವರು. ಇವರಿಗೆ ಬದಲಾಗಿ ದಯಮಾಡಿಸಿದ್ದ ಮ|| ಎಸ್. ಕೆ. ವರದೈಯಂಗಾರ್ರು ಸಹ ಊರಿನ ಮತ್ತು ಹೊರಗಿನ ಜನರ ದೇಹಾರೋಗ್ಯಕ್ಕೆ ಗಮನ ಕೊಟ್ಟು ಎಲ್ಲರನ್ನೂ ಪ್ರೀತಿಯಿಂದ ಆದರಿಸಿದರು. ಇವರು ತಮ್ಮ ವಾಯಿದೆ ಮುಗಿಸಿಕೊಂಡು ಹೊರಟಾಗ ಜನರೆಲ್ಲರೂ ಬಹಳವಾಗಿ ಪೇಚಾಡಿಕೊಂಡರು. ಎಲ್ಲರೂ ಸೇರಿ ಇವರಿಗೆ ಮರ್ಯಾದಾರ್ಥವಾದ ಟೀಪಾರ್ಟಿಯನ್ನು ಕೊಟ್ಟು ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿದರು.— ಇಲ್ಲಿನ ಬಾಯಂ ಪೋಸ್ಟ್ ಮಾಸ್ಟರು ಅರಸೀಕೆರೆಗೆ ವರ್ಗವಾಗಿ ಬೇರೆಬ್ಬರು ಬಂದಿರುತ್ತಾರೆ. ಇವರೂ ಹಿಂದಿನವರಂತೆಯೇ ಜನಗಳ ಪ್ರೀತಿ ವಿಶ್ವಾಸಗಳಿಗೆ ತುಂಬಾ ಪಾತ್ರರಾಗುವರೆಂದು ನಂಬುತ್ತೇವೆ.— ಇಲ್ಲಿನ ಊರ ಪಾಠಶಾಲೆ ಹೆಚ್ಚಾಗಿ ಗಮನ ಕೊಟ್ಟರೆ ಅನುಕೂಲ.— ಅಕ್ಕಿ ರೂಪಾಯಿಗೆ 6½ ಸೇರಿಗೆ ಹೆಚ್ಚಾಗಿ ಸಿಕ್ಕದೆ ಬಡಜನಗಳ ಕಷ್ಟ ಹೇಳತೀರದು. ರಾಗಿ ಧಾರಣೆಯೂ ಹೆಚ್ಚಿದೆ.— ಒಂದೆರಡು ವಾರಗಳಿಂದ 2-3 ಮಂದಿ ಕಾಲರಾದಿಂದಲೋ ಅಥವಾ ಮತ್ಯಾವ ಕಾರಣದಿಂದಲೋ ಕಾಲವಾದ್ದರಿಂದ ಈ ಊರಿನ ಜನರೆಲ್ಲರೂ ನೀರು, ಆಹಾರ, ನಿದ್ರೆ ಮುಂತಾದ ಆರೋಗ್ಯದ ವಿಚಾರಗಳಲ್ಲಿ ಗಮನ ಕೊಡುವುದುತ್ತಮ.— ಈ ಸಾರಿ ನಡೆದ ಲೋವರ್ ಸೆಕೆಂಡರೀ ಪರೀಕ್ಷೆಯಲ್ಲಿ ಇಲ್ಲಿನ ಕನ್ನಡಾ ಸ್ಕೂಲಿನಲ್ಲಿ 7 ಕ್ಕೆ 4 ಮಂದಿಯೂ, ಹಿಂದುಸ್ಥಾನಿ ಸ್ಕೂಲಿನಲ್ಲಿ 1 ಕ್ಕೆ 1 ಪಾಸಾಗಿದೆ. ಗರ್ಲ್ಸ್ ಸ್ಕೂಲಿನಲ್ಲಿ ಬಾಲಕಿಯರು ತಕ್ಕಮಟ್ಟಿಗೆ ಸೇರಿರುತ್ತಾರೆ. ತಂದೆತಾಯಿಗಳೆಲ್ಲರೂ ಮಕ್ಕಳನ್ನು ಸ್ಕೂಲುಗಳಿಗೆ ಸೇರಿಸುವ ಪ್ರಯತ್ನವನ್ನು ಮಾಡಬೇಕಾಗಿದೆ.— ಇಲ್ಲಿ ಒಂದು ಕೋಆಪರೇಟಿವ್ ಸೊಸೈಟಿ ಸ್ಥಾಪಿತವಾಗಿರುವುದು ತುಂಬಾ ಸಂತೋಷಕರವಾಗಿದೆ.

ಅರಸೀಕರೆ.— ಈ ಊರಿಗೆ ಸೇರಿದ ಕೆಲಂಗೆರೆ ಎಂಬ ಗ್ರಾಮದ ಒಂದು ತೋಟದಲ್ಲಿ ಒಂದು ಹೆಣವು ಒಂದು ಭಾವಿಯಲ್ಲಿ ಬಿದ್ದಿತ್ತು ಎಂಬ ವರ್ತಮಾನವು ಅರಸೀಕೆರೆ ಪೋಲೀಸ್ ಆಫೀಸಿಗೆ ತಿಳಿದ ಮೇಲೆ ಅಮಲ್ದಾರ್ರೂ, ಪೋಲೀಸ್ ಇನ್ಸ್‌ಪೆಕ್ಟರೂ ಅಲ್ಲಿಗೆ ಹೋಗಿ ಅಡಮಾಯಿಷಿ ಮಾಡಲಾಗಿ, ಹಣವು ಸದರೀ ಗ್ರಾಮದ ಮಣ್ಣು ಒಡ್ಡರ ಜಾತಿ ಹನುಮನೆಂತಲೂ, ಈತನನ್ನು ಈತನ ಸ್ವಂತ ಹೆಂಡತಿಯೇ ತನ್ನ ಮಗ ತಿಮ್ಮ, ತನ್ನ ಅಳಿಯ, ಬೇರೊಬ್ಬ ತಿಮ್ಮನಿಗೂ ದುಷ್ಪ್ರೇರಣೆ ಮಾಡಿ ಕೊಲ್ಲಿಸಿದಳೆಂತಲೂ ತಿಳಿದದ್ದರಿಂದ ಈ ಮೂರು ಜನಗಳನ್ನೂ ದಸ್ತಗಿರಿ ಮಾಡಿ ವಿಚಾರಣೆಮಾಡುತ್ತಿದಾರೆ. ಈ ಕೇಸು ತಾ|| 22 ಕ್ಕೆ ಹೀರಿಂಗ್ ಇರುತ್ತೆ. ಮೃತಪಟ್ಟ ಹನುಮನ ಹೆಂಡತಿ ಸುಮಾರು 40 ವರುಷ ವಯಸುಳ್ಳ ಹನುಮಿ ಎಂಬವಳನ್ನು ಈಕೆಯ ಅಳಿಯ ತಿಮ್ಮನು ರಜಾವ್ ಮಾಡಿಕೊಂಡಿದ್ದ ಹಾಗೂ, ಗಂಡ ಹನುಮನು ಕಂಡು ಹೆಂಡತಿಯನ್ನು ಗದರಿಸಿ ಬುದ್ಧಿಹೇಳಿದ ಹಾಗೂ, ಈಕೆಯು ಇದನ್ನು ಸಹಿಸದೆ ತನ್ನ ಅಳಿಯ, ಮಗ ಇವರಿಗೆ ದುಷ್ಪ್ರೇರಣೆ ಮಾಡಿ ಸದರೀ ತೋಟದಲ್ಲಿ ಹೆಂಡ ಕುಡಿಯಬೇಕು ಬಾ ಎಂಬದಾಗಿ ಕರೆದುಕೊಂಡು ಹೋಗಿ ಅಲ್ಲಿಯೇ ಕೊಲೆಮಾಡಿಬಿಟ್ಟು ಬಸ್ಸಿರೆಂದು ಹೇಳಿ ಅಳಿಯ ಮಗ ಇವರಿಂದ ಈ ಕೃತ್ಯ ನಡಿಸಿದ ಹಾಗೂ ಆಧಾರ ಕೇಳುತ್ತಾರೆ.— ಅರಸೀಕೆರೆ ಸಂತೆಗೆ ಬರುವ ಗಾಡಿಗಳಲ್ಲಿ ಕಳವುಮಾಡುವ ದುಷ್ಟರು ಈ ಪ್ರಾಂತ್ಯ ವಿಶೇಷವಾಗಿರುತ್ತಾರೆಂತಲೂ, ಇವರಿಂದ ಸಂತೆ ವ್ಯಾಪಾರಸ್ಥರಿಗೂ, ಪ್ರಯಾಣಿಕರಿಗೂ ಬಹಳ ಕಷ್ಟನಷ್ಟಗಳು ಸಂಭವಿಸುವವೆಂತಲೂ ಸರ್ವರಿಗೂ ತಿಳಿದೇ ಇದೆ. ಈಚೆಗೆ ಅರಸೀಕೆರೆ ತಾಲ್ಲೂಕು ಹುಲ್ಲೇಕೆರೆ ಬಳಿ ಮೂಟೆ ಕಳುವು ಮಾಡಿದ ಕೊರಮರ ಪೈಕಿ ಮೂರು ಜನ ಕೊರಮರಿಗೂ, ಬಾಣಾವಾರದ ರಸ್ತೆಯಲ್ಲಿ ಅರಸೀಕೆರೆಗೆ ಒಂದೆರಡು ಮೈಲಿ ದೂರದಲ್ಲಿಯೇ ಜವಳಿ ಮೂಟೆ ಕಳುವುಮಾಡಿದ ಮೂರು ಜನ ಕೊರಮರಿಗೂ ತಲಾ ಆರಾರು ತಿಂಗಳು ಸಜಾ ಆಗಿವೆ ಎಂದು ತಿಳಿದುಬರುತ್ತೆ. ಇದರಿಂದ ಇನ್ನು ಮುಂದೆ ಕಳುವು ಕಡಮೆಯಾಗಬಹುದೇನೋ ನೋಡಬೇಕು.

ಚಿತ್ರದುರ್ಗ.— ಬಿಸಲು ಘಾಳಿ ಬಹಳ ಜಾಸ್ತಿ, ಮಳೆಯಿಲ್ಲ. ಈಚೆಗೆ ಸುಮಾರಾಗಿ ಪ್ರತಿ ಮನೆಯಲ್ಲೂ ಚಳಿಜ್ವರ ಶೀತ ರಕ್ತಭೇದಿ ಜಾಸ್ತಿಯಾಗುತ್ತಿದೆ. ಕಾಲರಾ ವಿಷಯ ಹೇಳತಕ್ಕದ್ದಾಗೇ ಇಲ್ಲ. ಇದು ಡಿಸ್ಟ್ರಿಕ್ಟಿನಲ್ಲೆಲ್ಲಾ ವ್ಯಾಪಿಸಿದೆ. ಜನಸಿ ಧಾರಣೆ ದಿನೇದಿನೇ ಹೆಚ್ಚಾಗುತ್ತಲೇ ಇದೆ.— ಈ ಡಿಸ್ಟ್ರಿಕ್ಟಿನಲ್ಲಿ ಖೂನಿಗಳು ಜಾಸ್ತಿಯಾಗಿವೆ. ಈ ವರಿವಿಗೂ ಒಂದಾದರೂ ಪತ್ತೆ ಆಗಲಿಲ್ಲ. ಇಲ್ಲಿ 10 ದಿವಸ ಮಾತ್ರ ಅಕ್ಟಿಂಗ್ ಪೋಲೀಸ್ ಸೂಪರಿಂಟೆಂಟರಾಗಿದ್ದ ಮೆ|| ಬಿ. ಒಸವಾರಾಧ್ಯರವರು ಎಂಬ ಅಧಿಕಾರಿಯು ಕೆಲಸದ ಮೋಕ್ತ ಬಂದದ್ದರಿಂದ ವಾಪಸು ಬೆಂಗಳೂರಿಗೆ ದಯಮಾಡಿದರು.— ಪೆಟಿಸರ ಅ|| ಇನ್ಸ್‌ಪೆಕ್ಟರ್ ಮೆ|| ರಂಗಣ್ಣನವರು ಟಿಪ್ಪೂ ಸುಲ್ತಾನರ ಮಹಲ್‌ನಲ್ಲಿದ್ದ ಮಾವಿನಮರ ಕಡಿಸಿದರೆಂಬ ಮೊಕದ್ದಮೆ ಇನ್ನೂ ಕೋರ್ಟಿಗೆ ಬಂದಿಲ್ಲ. ಅವರ ತಾಪೇದಾರರಾದ ಕಾಂಪೌಂಡರು, ವಾಲಂತ್ರಿ, ಇವರು ಮೆ|| ರಂಗಣ್ಣನವರ ಪ್ರಿಸ್ಕೆಲ್ ತೆಗೆದುಕೊಂಡು ಹೋಗಿ ಚಂದ್ರಮೌಳೇಶ್ವರನ ಹೊಂಡದಲ್ಲಿ ಇಟ್ಟಿದ್ದರೆಂಬ ಕೇಸು ಕೋರ್ಟಿನಲ್ಲಿ ವಿಚಾರಣೆಯಾಗಿ ವಜಾ ಆಯಿತು.— ಈ ಡಿಸ್ಟ್ರಿಕ್ಟು ವಿಶೇಷವಾಗಿ ಹತ್ತಿ ಬೆಳೆಯತಕ್ಕ ಸ್ಥಳ. ಇದುವರಿವಿಗೂ ಹತ್ತಿಯನ್ನು ತಿರುವಿ ಅರಳೆಯನ್ನೂ, ಬೀಜವನ್ನೂ ಪ್ರತ್ಯೇಕ ಮಾಡತಕ್ಕ ಗಿರಣಿ ಯಾನೆ ಮಿಷನ್‌ಗಳೂ, ಅರಳೆಯನ್ನು ಸಿಂಡಿ ಕಟ್ಟತಕ್ಕ ಮಿಷನ್‌ಗಳೂ ದಾವಣಗೆರೆಯಲ್ಲಿ ಮಾತ್ರ ಕೆಲವು ಇದ್ದವು. ಈಚೆಗೆ ನಮ್ಮ ಪೋಲೀಸ್ ಸೂಪರಿಂಟೆಂಡರವರು ದಾವಣಗೆರೆಯಲ್ಲಿ ಇಂಥಾದ್ದೇ ಒಂದು ಮಿಷನ್ ಇಟ್ಟು ಕ್ರಮವಾಗಿ ಕೆಲಸ ನಡಸುತ್ತಾ ಬಂದದ್ದನ್ನು ನೋಡಿ ಇವುಗಳ ವಿಷಯದಲ್ಲಿ ಎಲ್ಲರಿಗೂ ಅಪೇಕ್ಷೆ ಹುಟ್ಟಿದ್ದಲ್ಲದೆ ಚಿತ್ರದುರ್ಗದ ಸಾಹುಕಾರ್ ಮೆ|| ಮೇಗಳಮನೆ ಕಾಡಪ್ಪನವರು ಚಿತ್ರದುರ್ಗದಲ್ಲಿ ಒಂದು ಮಿಷನ್ ಇಡಲು ಪ್ರಯತ್ನಪಡುತ್ತಾ ಇದಾರೆ. ಆದರೆ ಅದಕ್ಕೆ ಬೇಕಾದ ಮನೆ ಕಟ್ಟಲು ವಸತಿಯಾದ ಜಾಗಾ ಹುಡುಕುತ್ತಿರುವರು. ಇದೇ ಸಂದರ್ಭದಲ್ಲಿ ಹಿಂದೆ ನಡೆದಿರತಕ್ಕ ಇನ್ನೊಂದು ಅನಾನುಕೂಲವನ್ನು ಸೂಚಿಸುತ್ತೇನೆ. ಇದೇ ಸಾಹುಕಾರ್ ಮೆ|| ಕಾಡಪ್ಪನವರು ಎಲ್ಲಾ ಕಡೆಗಳಿಂದಲೂ ಬರತಕ್ಕ ಮುಸಾಫರರಿಗೆ ಅನುಕೂಲವಾಗುವಂತೆ ಸಂತೆಪೇಟೆಯಲ್ಲಿ ಒಂದು ಛತ್ರ ಕಟ್ಟಬೇಕೆಂದು ಸಂಕಲ್ಪಿಸಿ ಈಗ್ಗೆ 10 ವರ್ಷದ ಕೆಳಗೇನೇ ಅದಕ್ಕೆ ಬೇಕಾದ

ಸಾಮಾನುಗಳೆಲ್ಲಾ ಇಡಲಾಯಿತ್ತು ಈ ಹರಿವಾಣ ಚಾಚಿ ಸಿಕ್ಕಿಲ್ಲ ಅಪ್ಪಾಯಿತ ಸಾಮಾನುಗಳೆಲ್ಲಾ ಹಲಾಹಲಾಯಿತು ಪ್ರಜಾ ಹಿತಚಿಂತಕರಾದ ನಮ್ಮ ಡೆಪ್ಯುಟಿ ಕಮಿಷನರ್‌ರವರು ಇಂಥಾ ಪರೋಪಕಾರ ಕೆಲಸಗಳಿಗೆ ಕೂಡಲೆ ಚಾಚಿ ಕೊಡಿಸಿ ಅವರಿಗೆ ಪ್ರೋತ್ಸಾಹಪಡಿಸಬೇಕಾಗಿದೆ —ಈ ಊರಿಗೆ ರೈಲ್ ಬರುತ್ತೆಂಬ ಮತ್ತು ಇತರೇ ಕಡೆಯಿಂದ ನೀರು ತಂದು ಸರಬರಾಯಿ ಮಾಡು ತ್ತಾರೆಂಬ ವರ್ತಮಾನಗಳು ಈಗ ಸ್ವಲ್ಪ ಹಿಂದೆ ಬಿದ್ದಿದೆ ಈ ಕೆಲಸಗಳು ಚಾತ್ರತೆಯಾಗಿ ನಡೆದರೆ ಈ ಚಿತ್ರದುರ್ಗವು ಒಳ್ಳೇ ವ್ಯಾಪಾರ ಸ್ಥಳವಾಗಿ ಬೇಗ ಉನ್ನತಸ್ಥಿತಿಗೆ ಬಂದೀತು

ಬೀರೂರು —ಕಳೆದ ಒಂದೆರಡು ವಾರಗಳಿಂದ ಮಳೆಯು ಸುಮಾರಾಗಿ ಆಗಿದೆ, ಇನ್ನೂ ಆಗಬೇಕಾಗಿದೆ ಮೋಡ ಕಟ್ಟಿಕೊಂಡೂ, ಗಾಳಿ ವಿಶೇಷವಾಗಿ ಬೀಸುತ್ತಲೂ ಇದೆ —ಮ್ಯುನಿಸಿಪಾಲಿಟಿಯವರು ನೀರು ಹರಿಯುತ್ತಿದ್ದು ಜನಗಳ ತಿರುಗಾಟಕ್ಕೆ ತೊಂದರೆಯಾಗುತ್ತಿದ್ದ ಕೆಲವು ಬೀದಿಗಳಲ್ಲಿ ಎರಡು ಕಡೆಗಳಲ್ಲಿಯೂ ಕಾಲುವೆಯನ್ನು ತೆಗೆಯಿಸಿ ಜನಗಳ ಸಂಚಾರಕ್ಕೆ ಸ್ವಲ್ಪ ಅನುಕೂಲ ಮಾಡಿರುವರು —ಅಮಲ್ದಾರರೂ, ಅ॥ ಕಮಿಷನರ್‌ರೂ ಬಂದು ಬಾಕಿ ಇರುವ ಕಂದಾಯಗಳನ್ನು ವಸೂಲು ಮಾಡಿಸುತ್ತಿದ್ದಾರೆ ಮದ್ರಾಸು ಅಂಜನೇಯ ಗೋವಿಂದಸ್ವಾಮಿ ನಾಯಕರ ನಾಟಕ ಸಂಘದವರು ಶಿವಮೊಗ್ಗೆಯಿಂದ ಇಲ್ಲಿಗೆ ಬಂದಿರುವರು ಈ ವಾರದಿಂದ ನಾಟಕಗಳನ್ನು ಆಡುವವರಾಗಿದ್ದಾರೆ —ಇಲ್ಲಿಯ ಗರ್ಲ್ಸ್ ಸ್ಕೂಲಿಗೆ ಬಾಲಕಿಯರು ಹೆಚ್ಚಾಗಿ ಬರುತ್ತಿರುವುದರಿಂದ ಈಗಿರುವ ಕಟ್ಟಡವು ಸಾಲದೆ ತೊಂದರೆಯಾಗಿರುತ್ತದೆ ಸದರಿ ಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡುತ್ತದಾಗಿ ವಾಗ್ದಾನ ಮಾಡಿರುವ ಮಹನೀಯರು ಜಾಗ್ರತೆಯಾಗಿ ಕಟ್ಟಿಸಿಕೊಡುವರೆಂದು ನಂಬುತ್ತೇವೆ —ಇಲ್ಲಿ ಪು॥ ತಿರಂಗಿ ಗೋವಿಂದಪ್ಪನವರು ಸ್ಥಾಪಿಸಿರುವ ಅನಾಥಾಲಯದ ಆದಾಯಕ್ಕಾಗಿ ಸರ್ಕಾರದವರು ಅವರಿಂದ 20,000 ರೂಪಾಯನ್ನು ಅಂಗೀಕರಿಸಿ, ಅದರ ಬಡ್ಡಿಯಿಂದ ಸದರಿ ಆಲಯವನ್ನು ನಡಿಸಿ, ಅದರ ಆವರಣಕ್ಕೆ ಒಂದು ಕಮಿಟಿಯನ್ನು ಮಾಡಿ, ತಮ್ಮ ಮೂಲಕ ನಡಿಸಬೇಕೆಂದು ಅಪ್ಪಣೆ ಮಾಡಿರುತ್ತಾರೆ ಸದರಿ ಆಲಯದ ಸ್ಥಾಪಕರು ತಮ್ಮ ನಾಮಾಂಕಿತ ಸದಂತೆ 8 10 ಸಾವಿರ ರೂಪಾಯಿವರೆಗೂ ಖರ್ಚುಮಾಡಿ ಅನಾಥಾಲಯದ ಕಟ್ಟಡವನ್ನು ಕಟ್ಟಿಸಿ ಪೂರೈಸುತ್ತಾ ಬಂದಿರುವರು ಅಲ್ಲದೆ ಇನ್ನೂ 3 ತಿಂಗಳೊಳಗೆ ಅದನ್ನು ಆರಂಭಿಸುವವರಾಗಿದ್ದಾರೆಂದು ತಿಳಿಯುತ್ತದೆ ಆದಲ ಸ್ಥಳ ಕಾಲವು ಸಮೀಪಿಸುತ್ತಿರುವುದರಿಂದ ಮುಖ್ಯವಾಗಿ ಆ ಕಮಿಟಿಯ ಪ್ರೆಸಿಡೆಂಟರು ಮುತುವರ್ಜಿ ವಹಿಸಿ, ಈ ಪರೋಪಕಾರ ಕಾರ್ಯಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವರಾಗಿ ಕೋರುತ್ತೇವೆ —ಅಕ್ಕಿ ರೂಪಾಯಿಗೆ 7 7½ ಸೇರೂ, ರಾಗಿ 18 19 ಸೇರೂ ಮಾರಾಟವಾಗುತ್ತಿದೆ

ಹಾಸನಪಟ್ಟಣ —ಇಲ್ಲಿನ ವೆಸ್ಲಿಯನ್ ಮಿಷನ್ ಬಾಲಕಿಯರ ಸ್ಕೂಲಿನಲ್ಲಿ ಕಳೆದ 18 ನೇ ತಾ ಮಂಗಳವಾರ ಹೆಣ್ಣುಮಕ್ಕಳಿಗೆ ಬಹುಮಾನ ಕೊಡುವ ಏರ್ಪಾಟು ಮಾಡಿತ್ತು ಸ್ಕೂಲನ್ನು ಬಹು ನೇತ್ರಾನಂದಕರವಾಗಿ ಚಿತ್ರಪಟಗಳಿಂದಲೂ, ಹುಪ್ಪಿನ ಗಿಡಗಳಿಂದಲೂ ಕದಳೀ ಸ್ತಂಭಗಳಿಂದಲೂ ಅಲಂಕರಿಸಿದ್ದರು ನಮ್ಮ ಅಮಲ್ದಾರ್ ಮೆ ಕೃಷ್ಣಸಿಂಗ್ ರವರೂ, ಪಾವರ್ತೀಯಮ್ಮನವರೂ, ಡಾಕ್ಟರ್ ಕೊಯಿಲೋ ಪಿಳ್ಳೆಯವರೂ, ಸರ್ಜನ್ ಮೆ॥ ಶ್ರೀಕಂಠಯ್ಯನವರೂ, ಇನ್ನೂ ಕೆಲವು ದೊಡ್ಡ ಮನುಷ್ಯರೂ ಸ್ಕೂಲಿಗೆ ದಯಮಾಡಿಸಿದ್ದರು ಇದೇ ಉದ್ದೇಶಕ್ಕಾಗಿ ಬೆಂಗಳೂರಿನಿಂದ ರೆವ್ ಬ್ರಾಕ್‌ಬ್ಯಾಂಕ್ ಸಾಹೇಬರು ಸಹಾ ಬಂದಿದ್ದರು ಸುಬಾಗಮನವನ್ನು ಬಯಸಿ ಸ್ಕೂಲ್ ಮಕ್ಕಳು ಹಾಡಿದರು ಬಳಿಕ ಸಾ ರತ್ನಮ್ಮನವರು ಸ್ಕೂಲಿನ ರಿಪೋರ್ಟನ್ನೂ, ಪಾವರ್ತೀ ವಿಸಮ್ಮನವರು ಈ ಸ್ಕೂಲಿನ ವಿಷಯ ಪಡುವ ಪ್ರಯಾಸವನ್ನೂ, ಅವರ ಪರೋಪಕಾರದ ವಿಷಯವನ್ನೂ, ಈ ಸ್ಕೂಲಿನ ವಿಷಯ ಹೆಚ್ಚು ಮುತುವರ್ಜಿ ತೆಗೆದುಕೊಳ್ಳುವ ನಮ್ಮ ಅಮಲ್ದಾರರ ವಿಷಯವನ್ನೂ ಕುರಿತು ಬಹು ಸರಳವಾಗಿಯೂ, ಸ್ಪಷ್ಟವಾಗಿಯೂ, ಜನರ ಮನಸ್ಸುಗಳನ್ನು ಆಕರ್ಷಿಸುವಂತೆಯೂ ಓದಿದರು ರಿಪೋರ್ಟು ಓದಿದ ಮೇಲೆ ಬಾಲಕಿಯರು ಹಾಡುಗಳನ್ನು ಹಾಡಿದರು ಅನಂತರ ನಮ್ಮ ಅಮಲ್ದಾರರು ಆಗ್ರಾಸನವನ್ನು ಅಲಂಕರಿಸಿ ಬಾಲಕಿಯರಿಗೆ ಬೊಂಬೆ, ಪುಸ್ತಕ ಮುಂತಾದ ಬಹುಮಾನಗಳನ್ನು ಹಂಚಿಕೊಟ್ಟ ಬಳಿಕ ಬಹು ರಸವತ್ತಾದ ಉಪನ್ಯಾಸವನ್ನು ಇಂಗ್ಲೀಷಿನಲ್ಲೂ, ಕನ್ನಡದಲ್ಲೂ ಮಾಡಿದರು ಹ್ಯಾಗೆಂದರೆ, ನಮ್ಮ ಹಿಂದೂ ದೇಶವು ಮಹಮ್ಮದೀಯರ ಆಳ್ವಿಕೆಯಲ್ಲಿ ವಿದ್ಯಾಭ್ಯಾಸವಿಲ್ಲದೆ ಹೀನಸ್ಥಿತಿಯಲ್ಲಿತ್ತು ಬ್ರಿಟಿಷ್ ಆಳ್ವಿಕೆಯಲ್ಲಿ ಸ್ತ್ರೀವಿದ್ಯಾಭ್ಯಾಸವು ತುಂಬಾ ಉನ್ನತಸ್ಥಿತಿಗೆ ಬಂದದ್ದರಿಂದ ದೇಶದಲ್ಲಿ ನಾಗರೀಕತೆ, ಕುಶಲವಿದ್ಯೆ ಮುಂತಾದ ಪ್ರೌಢ ವಿದ್ಯಾಭ್ಯಾಸವು ವೃದ್ಧಿಯಾಗುತ್ತಾ ಬಂತು ಯೂರೋಪ್ ಖಂಡದ ಲೂಥರ್ ಎಂಬ ಮಹಾ ಪುರುಷನಿಂದ ವಿದ್ಯಾಭ್ಯಾಸವು ಇಂಗ್ಲೆಂಡ್ ದೇಶದಲ್ಲಿ ಹರಡಿದಂತೆ ಈ ನಮ್ಮ ಹಿಂದೂ ದೇಶಕ್ಕೆ ಪಾದ್ರಿಗಳ ಮೂಲಕ ವಿದ್ಯಾಭ್ಯಾಸವು ಏರ್ಪಟ್ಟಿತು ನಮ್ಮ ಮೈಸೂರು ಸೀಮೆಗೆ ಪಾದ್ರಿಗಳು ಬಂದು ವಿದ್ಯಾ ದಾನವನ್ನು ಈ ದೇಶೀಯರಿಗೆ ದಯಪಾಲಿಸಿದ್ದರಿಂದ ನಾವುಗಳು ಅವರನ್ನು ವಿಶೇಷವಾಗಿ ವಂದಿಸಬೇಕಾಗಿದೆ ಪಾದ್ರಿಗಳು ಸ್ಕೂಲುಗಳ ಮೂಲಕವಾಗಿಯೂ, ಆಸ್ಪತ್ರೆಗಳ ಮೂಲಕವಾಗಿಯೂ ಬಹು ಒಳ್ಳೆಯ ಕೆಲಸವನ್ನು ಈ ಮೈಸೂರು ಸೀಮೆಯಲ್ಲಿ ಮಾಡುತ್ತಾ ಇರುವರು ಎಂದು ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದ್ದೂ ಅಲ್ಲದೆ, ಸ್ಕೂಲ್ ಬಾಲಕಿಯರಿಗೆ ತಿಳಿಯುವ ಹಾಗೆ ಸ್ತ್ರೀ ಪಂಡಿತ ಶಿರೋಮಣಿಗಳಾದ ಸರಸ್ವತಿ, ಲೀಲಾವತಿ ಮುಂತಾದವರ ವಿದ್ಯಾ ಕೌಶಲ್ಯವನ್ನು ಪರಿಷ್ಕರಿಸಿದರು ಎಲ್ಲಾ ಜಾತಿಯವರೂ ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ತಿಳಿಸಿದರು ಅನಂತರ ರೆವ್ ಬ್ರಾಕ್‌ಬ್ಯಾಂಕ್ ಸಾಹೇಬರು ಅಮಲ್ದಾರರು ಮಾಡಿದ ಅಮೂಲ್ಯವಾದ ಉಪನ್ಯಾಸಕ್ಕಾಗಿಯೂ, ಪ್ರೀತಿಪೂರ್ವಕವಾಗಿ ಬಂದು ಮಕ್ಕಳಿಗೆ ಬಹುಮಾನ ಕೊಟ್ಟದ್ದಕ್ಕಾಗಿಯೂ, ಅವರಿಗೆ ವಂದನೆಗಳನ್ನು ಸಲ್ಲಿಸಿದರು ಈ ಸ್ಕೂಲ್ ಬಾಲಕಿಯರ ವಿಷಯ ಹೆಚ್ಚು ಚಿಂತಪಡುವ ಪಾವರ್ತೀ ವಿಸಮ್ಮನವರನ್ನೂ ಬಹಳವಾಗಿ ವಂದಿಸಿ, ಅವರು ಇನ್ನೂ ಹೆಚ್ಚಾಗಿ ಈ ಸ್ಕೂಲನ್ನು ಅಭಿವೃದ್ಧಿಸ್ಥಿತಿಗೆ ತರಲು ಪ್ರಯತ್ನಮಾಡುತ್ತಾರೆಂದೂ, ಇನ್ನೂ ದೀರ್ಘಕಾಲ ಈ ಸ್ಥಳದಲ್ಲೇ ಇದ್ದು ಈ ಸ್ಕೂಲನ್ನು ಎಲ್ಲಾ ಭಾಗದಲ್ಲೂ ಉತ್ತಮಸ್ಥಿತಿಗೆ ತರುವದಕ್ಕೆ ತತ್ಪರರಾಗಿದ್ದಾರೆಂದೂ ತಿಳಿಸಿದರು ಬಳಿಕ ದೊಡ್ಡ ಮನುಷ್ಯರಿಗೆಲ್ಲಾ ತಾಂಬೂಲಾದಿಗಳೂ, ಸ್ಕೂಲ್ ಮಕ್ಕಳಿಗೆಲ್ಲಾ ಮಿಠಾಯಿಯೂ ಹಂಚಲಾಯಿತು ರೆವ್ ಬ್ರಾಕ್‌ಬ್ಯಾಂಕ್ ಸಾಹೇಬರು ಇಲ್ಲಿನ ಮಿಷನ್ ಕೆಲಸವನ್ನು ತನಿಖೆಮಾಡಿಕೊಂಡು ಕೊಪ್ಪ ಸ್ಟೇಟಿಗೆ ಅದೇ ದಿನ ತೆರಳಿದರು

ಮಣಾಸೂರು. —ಈ ಊರಲ್ಲಿ ಈಗ್ಗೆ ಕೆಲವು ದಿನಗಳಿಂದ ಪ್ಲೇಗ್ ಜಾಡ್ಯವು ತಲೆದೋರಿ ಇರುತ್ತದೆ ಕೆಲವು ಜನರು ಇದರಿಂದ ಲಯವಾಗಿ ಹೋದರೂ ಇನ್ನೂ ಕೆಲವರು ನರಳುತ್ತಾ ಇದ್ದಾರೆ ಹಲವರು ತಮ್ಮ ಪಂಟರ ಸ್ಥರಿತುವ ಪರ ಊರುಗಳಿಗೆ ಹೊರಟುಹೋದರು ಜನರು ಹೊರಗಡೆ ಜಿದ್ದು ಹಾಕಿಕೊಂಡು ಊರು ಬಿಡುವ ತರದೂದಿನಲ್ಲಿರುತ್ತಾರೆ ಇಂಥಾ ಸಂದರ್ಭಗಳಲ್ಲಿ ರೋಗವನ್ನು ಬಹಿರಂಗ ಪಡಿಸಿ ಇತರರ ನಿವಾಸಿಗಳಿಗೆ ಕ್ಷೇಮವನ್ನು ಬಯಸುವುದಕ್ಕೆ ಬದಲು ಕೆಲವು ಜನರು ಅದನ್ನು ಮರೆಮಾಜ ತಮಗೂ ತಮ್ಮ ನೆರೆಹೊರೆಯವರಿಗೂ ಕೇಡನ್ನೂ ಅನಾರೋಗ್ಯವನ್ನೂ ತಂದುಹಾಕುವವರಾಗಿರುತ್ತಾರೆ ಇದು ಕೇವಲ ಸ್ವಾರ್ಥತ್ವವೂ ಬುದ್ಧಿಹೀನತ್ವವೂ ಆಗಿರುತ್ತದೆ ಸರ್ಕಾರದವರಿಗೆ ಅದನ್ನು ತಿಳಿಯಪಡಿಸಿ ಅವರ ಬೆಂಬಲವಾಗಿ ನಿಂತು ಅವರಿಂದ ಬೇಕಾದ ಸಹಾಯವನ್ನು ಪಡೆದು ಈ ರೋಗವನ್ನು ನಿರ್ಮೂಲೋತ್ಪಾಟನ ಮಾಡುವ ಪ್ರಯತ್ನವನ್ನು ಉಭಯತ್ರರೂ ಮಾಡಿ ಪ್ರಜಾ ಸಾಮಾನ್ಯಕ್ಕೆ ಕ್ಷೇಮವನ್ನು ಹಾರೈಸುವವರಾಗಬೇಕೆಂಬುದೇ ನಮ್ಮ ಕೋರಿಕೆಯಾಗಿದೆ —ಆಗಿಂದಾಗ್ಗೆ ಸ್ವಲ್ಪ ಸೋನೆ ಮಳೆ ಬೀಳುತ್ತಾ ಇದೆ ಇದರ ದೆಸೆಯಿಂದ ಶೀತ ಸಂಬಂಧವಾದ ಕೆಲವು ಸಾಮಾನ್ಯ ಬೇನೆ ಕೆಮ್ಮುಗಳು ಇರುತ್ತವೆ ಧಾರಣೆವಾಸಿಗಳು ಸಾಮಾನ್ಯ ದರಗಳಲ್ಲಿರುತ್ತವೆ ಹೊಲಗಳಲ್ಲಿ ಪಚ್ಚೆ ಪೈರುಗಳು ಕೂಡಿದ ಮಟ್ಟಿಗೆ ಪುಷ್ಕಳವಾಗಿ ಬೆಳೆದು ಕಳಕಳಿಸುತ್ತಾ ಸಂತೋಷವನ್ನು ಉಂಟುಮಾಡುತ್ತಾ ಇವೆ ಇದೇ ಮಾಹೆ 19 ನೇ ತಾ ಬುಧವಾರ ಮೈಸೂರಿನಿಂದ ಮೆ॥ ಕಂಠರಾಜೆ ಅರಸಿನವರು ಬಂದು ಈ ಊರಿನಲ್ಲಿ ಈ ಮೈಸೂರು ಪ್ರಾಂತ್ಯದಲ್ಲಿ ಒಟ್ಟು ಸ್ಥಾಪನೆಯಾಗಿರುವ ಕೋಆಪರೇಟಿವ್ ಸೊಸೈಟಿ ಎಂಬ ರೈತಾಬಿಗಳ ಸಹಾಯಕ ಸಂಘಗಳಲ್ಲಿ 53 ನೇ ಪರಸ್ಪರ ಸಂಘವನ್ನು ಬಹಿರಂಗವಾಗಿ ಪ್ರತಿಷ್ಠೆ ಮಾಡಿದರು ಇದಕ್ಕೆ ಹುಣಸೂರು ಶ್ರೀಲಕ್ಷ್ಮೀ ನರಸಿಂಹಸ್ವಾಮಿ ಕೋಆಪರೇಟಿವ್ ಸೊಸೈಟಿ ಎಂಬ ಹೆಸರಿಟ್ಟಿರುತ್ತಾರೆ ಈ ಕೂಟವು ತಾಲ್ಲೂಕ್ ಪಬ್ಲಿಕ್ ಕಟ್ಟಡದಲ್ಲಿ ಜರುಗಿತು ಇವರ ಬೆಂಬಲಕ್ಕಾಗಿ ಡೆಪ್ಯುಟಿ ಕಮಿಷನರ್‌ರವರೂ, ಅ॥ ಕಮಿಷನರ್‌ರವರೂ ದಯಮಾಡಿದ್ದರು ಈ ಪ್ಲೇಗ್ ಗಲಾಟೆಯ ಕಾಲದಲ್ಲಿ ಇವರ ಆಗಮನವಾದುದರಿಂದ ಜನಗಳಿಗೆ ತುಂಬಾ ಆದರಣೆಯೂ, ಧೈರ್ಯವೂ, ಸಂತೋಷವೂ ಉಂಟಾದವು ಇವರ ಆಗಮನಕ್ಕಾಗಿ ಪ್ರಜೆಗಳು 11 ಕಡೆ ತಳಿರುತೋರಣಗಳಿಂದಲೂ ಕದಳೀ ಸ್ತಂಭಗಳಿಂದಲೂ ಮಂಟಪಗಳನ್ನು ನಿರ್ಮಾಣ ಮಾಡಿ ಅಲ್ಲಲ್ಲಿ ಬಾವುಟಗಳನ್ನು ಕಟ್ಟಿಸಿದ್ದರು ಈ ಕಾರ್ಯ ನಿರ್ವಾಹಕ್ಕಾಗಿ ಮೆಲ್ಲಪಡಿಯನ್ನು ನೇತ್ರಾನಂದಕರವಾಗಿ ಮಾಡಿದ್ದರು ಒಂದು ಕಡೆ ಚಕ್ರವರ್ತಿ ಪ್ರಭುಗಳ ಭಾವಚಿತ್ರಗಳನ್ನೂ ಮತ್ತೊಂದು ಕಡೆ ಶ್ರೀಮನ್ ಮಹಾರಾಜರ ಭಾವಚಿತ್ರಗಳನ್ನೂ ಮನೋರಂಜಕವಾಗಿ ಇರಿಸಿ ಪುಷ್ಪಮಾಲಿಕೆಗಳಿಂದ ಅಲಂಕರಿಸಿದ್ದರು ಎರಡು ಮೂರು ಕಡೆಗಳಲ್ಲಿ ಈ ಮಹಾ ಪುರುಷರ ಚಿರಾರೋಗ್ಯಭಾಗ್ಯವನ್ನು ಬಯಸುವ ಸ್ತುತಿ ತೋರ್ತಿಗಳನ್ನು ಬರೆದಿದ್ದರು ಇವರ ಕಾರ್ಯದರ್ಶಿಗಳಾದ ಗ ದೇಲ್ ಕೋಂಡರೋಗ ಮೆ॥ ಜರಂಬರರಾಯರ ಊರಿನ ಪ ಮ ಮಿರನ್ನೂ ಪಟ್ಟ ವರ್ತಕರನ್ನೂ ಸಭೆ ಸೇರಿದ್ದರು ಸಾಮಾನ್ಯ ಪ್ರಜೆಗಳೂ ಅನೇಕರು ಸಭೆಗೆ ಬಂದಿದ್ದರು ನಮ್ಮ ಅಮಲ್ದಾರರು ಸಭೆಯಲ್ಲಿ ನಿಂತು ಇಂಗ್ಲೀಷಿನಲ್ಲಿ ಕೂಟದ ಉದ್ದೇಶವನ್ನು ವಿವರಿಸಿ ಒಂದು ಅಡ್ರೆಸ್ ಓದಿ ಪ್ರೆಸಿಡೆಂಟರಿಗೆ ಒಪ್ಪಿಸಿದರು ತರುವಾಯ ಶಿರಸ್ತೇದಾರರು ಸಂಸ್ಕೃತ ಶ್ಲೋಕಗಳಲ್ಲಿ ಪ್ರಜಾಪಾಲಕರ ಪ್ರೀತ್ಯತೆಯನ್ನೂ, ಪ್ರಜೆಗಳಿಗೆ ಅವರಿಂದಾಗತಕ್ಕ ಸೌಕರ್ಯಗಳನ್ನೂ ಪ್ರಕಟಪಡಿಸಿ ಕನ್ನಡದಲ್ಲಿ ವಿವರಿಸಿ ಪ್ರೆಸಿಡೆಂಟರಿಗೆ ಒಪ್ಪಿಸಿದರು ತರುವಾಯ ಪ್ರೆಸಿಡೆಂಟರು ಸಭಿಕರನ್ನು ಕುರಿತು ಎಲ್ಲರೂ ತಿಳಿದುಕೊಳ್ಳುವ ರೀತಿಯಲ್ಲಿ ಸ್ವಾರಸ್ಯವೂ ಸುಲಭವೂ ಉಚಿತವಾದ ಮಾತುಗಳನ್ನು ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ತಿಳಿಸಿ ಸಭೆಯನ್ನು ಮತ್ತೂ ಘನಪಡಿಸಿದರೆಂದು ಸರ್ವರೂ ಯೋಚಿಸತಕ್ಕದ್ದಾಗಿದೆ ಅವರ ಉಪಯುಕ್ತವಾದ ಪ್ರೋತ್ಸಾಹಕರವಾದ ಮಾತುಗಳನ್ನು ಕೇಳಿ ಸಾಮಾನ್ಯ ಪ್ರಜೆಗಳೂ ಕೂಡ ಸಂತೋಷಪಟ್ಟರು ತರುವಾಯ ಫೋನೋಗ್ರಾಫ್ ಹಾಡು ಗಾರಿಕೆ ನಡೆಯಿತು ಕಡೆಯಲ್ಲಿ ಪ್ರೆಸಿಡೆಂಟರಿಗೂ, ಇತರರಿಗೂ ಶ್ರೇಷ್ಠವಾದ ಹೂವಾಲಿಕೆಗಳನ್ನು ಹಾಕಿ ತಾಂಬೂಲ ಗಂಧ, ಫಲಾದಿಗಳನ್ನೊಪ್ಪಿಸಿದರು ಈ ಕಾರಿಗಳೂ ಸ್ಥಳೀಯ ಪ್ರಮುಖರೂ ಶೆಟ್ಟಿ ವರ್ತಕರೂ ಇದನ್ನು ನಿರ್ವಿಘ್ನವಾಗಿ ಜರುಗಿಸಿದ್ದು ಬಹು ಸಂತೋಷಪ್ರದವಾಗಿದೆ ಇಲ್ಲಿನ ರೈತ ಪ್ರಜೆಗಳೂ ಇತರರಿಗೂ ಸಹಾಯಕವಾಗುವಂತೆ ಕಾರ್ಯಾರಂಭ ಮಾಡಿರುವುದು ಪ್ರಾಧಾನ್ಯವಾದುದಲ್ಲ, ಇದನ್ನು ಕಡೇ ವರಿವಿಗೂ ನೆರವೇರಿಸಿ ಇದರ ಪ್ರಯೋಜನಗಳು ಸರ್ವರಿಗೂ ಲಭಿಸುವಂತೆ ಮಾಡುವುದಕ್ಕೆ ಎಲ್ಲರೂ ಪ್ರಯಾಸಪಡಬೇಕು

ವಿದೇಶದ ವೃತ್ತಾಂತಗಳು

ಲಂಡನ್ ಪಟ್ಟಣದಲ್ಲಿ ಕೂಲಿಕಾರರ ಹೋರಾಟವು ಕೊನೆಗಂಡಿತೆಂದು ಅವರೆಲ್ಲಾ ಮೊದಲಿನಂತೆ ತಮ್ಮ ತಮ್ಮ ಕೆಲಸಗಳನ್ನು ಮಾಡಲಾರಂಭಿಸಿದರೆಂದೂ ತಂತೀ ವರ್ತಮಾನ ಬಂದಿದೆ

* * *

ರಷ್ಯಾ ಗವರ್ನ್‌ಮೆಂಟಿನವರು ಸಮುದ್ರ ಸೈನ್ಯವನ್ನೂ ಯುದ್ಧದ ಹಡಗುಗಳನ್ನೂ ವೃದ್ಧಿಮಾಡಬೇಕೆಂದು ತೀರ್ಮಾನಮಾಡಿ, ಅದಕ್ಕಾಗಿ ಇನ್ನು ಮುಂದೆ ಐದು ವರುಷಗಳಲ್ಲಿ 150 ಕೋಟಿ ರೂಪಾಯಿ ಖರ್ಚುಮಾಡುವಂತೆ ಸ್ಯಾಂಕ್ಷನ್ ಮಾಡಿದ್ದಾರೆ

* * *

ಇಂಗ್ಲೆಂಡಿನಲ್ಲಿ ಮ್ಯಾಂಚೆಸ್ಟರ್ ಪಟ್ಟಣದಿಂದ ಲೀಡ್ಸ್ ನಗರಕ್ಕೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್ ಗಾಡಿಯು ಕಳೆದ ಶುಕ್ರವಾರ ಕಂಬಿಗಳನ್ನು ಬಿಟ್ಟು ನೆಲದ ಮೇಲೆ ಹರಿದು ಅನಾಹುತವಾಯಿತು ನಾಲ್ವರು ಮೃತಪಟ್ಟರು ಒಬ್ಬನಿಗೆ ಗಾಯವಾಗಿದೆ

* * *

ಆಸ್ಟ್ರೇಲಿಯಾ ಎಂಬ ಇಂಗ್ಲೀಷ್ ಸ್ವಾಸ್ಥ್ಯದಲ್ಲಿ ಪ್ರಜಾವೃದ್ಧಿಯು ತೃಪ್ತಿಕರವಾಗಿಲ್ಲ ಜನನ ಸಂಖ್ಯೆಯು ಬಹಳ ಸ್ವಲ್ಪ ಸರ್ಕಾರದವರು ಬಾಣಂತಿಯರಿಗೂ ಬಾಣಂತಿಯರಿಗೂ ದ್ರವ್ಯಾದಿ ಸಹಾಯಗಳನ್ನು ಒದಗಿಸಿಕೊಡಬೇಕೆಂದು ಒಪ್ಪಿಕೊಂಡಿದ್ದಾರೆ

* * *

ಫ್ರಾನ್ಸಿನಲ್ಲಿ ಸವಾರಿಗಾರರಿಬ್ಬರು ಎರಡು ವಿಮಾನ ಯಂತ್ರಗಳಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದಾಗ ಆ ಎರಡು ಯಂತ್ರಗಳೂ ಡಿಕ್ಕಿ ಹೊಡೆದು 50 ಅಡಿ ಎತ್ತರದಿಂದ ಮುರಿದು ಬಿದ್ದುಬಿಟ್ಟವು ಅವರಿಬ್ಬರಿಗೂ ತತ್‌ಕ್ಷಣವೇ ಪ್ರಾಣಹೋಯಿತು

* * *

ಜರ್ಮನಿಯ ಕೆಲವು ಶಾಸ್ತ್ರಾನ್ವೇಷಕರು 1913 ನೇ ಇಸವಿ ಜೂನ್ ತಿಂಗಳಲ್ಲಿ ಉತ್ತರಧ್ರುವ ಪ್ರಾಂತ್ಯದಲ್ಲಿ ಸಂಚಾರ ಮಾಡುವುದಕ್ಕಾಗಿ ಪ್ರಯಾಣ ಮಾಡುವರೆಂದೂ ಅವರು 11 ವರುಷಗಳ ತನಕ ವಾಪಸು ಬರುವವರಾಗಿಲ್ಲವೆಂದೂ ತಂತೀ ವರ್ತಮಾನ ಬಂದಿದೆ

* * *

ಫ್ರಾನ್ಸಿಗೆ ಸೇರಿದ ಹಾವರ್, ಮಾರ್ಸೇಲ್ಸ್ ಮೊದಲಾದ ರೇವುಪಟ್ಟಣಗಳಲ್ಲಿ ಹಡಗುಗಳೊಳಗೆ ಕೆಲಸ ಮಾಡುವವರು ಕೆಲಸಕ್ಕೆ ಹೋಗದೆ ಸಂಪು ಹೂಡಿರೆ ಸೈನಿಕರು ಹಡಗುಗಳಲ್ಲಿ ನಿಂತು ಅಂತಿ ವಸ್ತುಗಳನ್ನು ಸಾಗಿಸುವುದಕ್ಕೆ ಸಹಾಯ ಮಾಡುತ್ತಿರುವರು ಹಡಗುಗಳ ಸಂಚಾರಕ್ಕೆ ಬಹಳ ಅಡಚಣೆಯುಂಟಾಗಿದೆ

* * *

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯ ಡಿಸ್ಟ್ರಿಕ್ಟಿನಲ್ಲಿ ದಕ್ಷಿಣ ಪೆಸಿಫಿಕ್ ಎಂಬ ರೈಲ್ವೆ ಕಂಪನಿಯವರು ಸರ್ಕಾರದ ನೌಕರರಲ್ಲಿ ಒಳಸಂಚು ನಡಿಸಿ 11 ಕೋಟಿ ರೂಪಾಯಿ ಬಾಳುವ ಆಸ್ತಿಯನ್ನು ಅಕ್ರಮವಾಗಿ ಪಡೆದುಕೊಂಡಿದ್ದಾರೆಂದು ಸಂಯುಕ್ತ ಸಂಸ್ಥಾನಗಳ ಗವರ್ನ್‌ಮೆಂಟಿನವರು ರೈಲ್ವೆ ಕಂಪನಿ ಮೇಲೆ ಫಿರ್ಯಾದು ಮಾಡಿದ್ದಾರೆ

* * *

ಟರ್ಕಿ ಗವರ್ನ್‌ಮೆಂಟಿನವರು ತಮ್ಮ ರಾಜ್ಯದೊಳಗಿರುವಂಥಾ 10,000 ಇಟಲಿ ಪ್ರಜೆಗಳನ್ನು ಅಲ್ಲಿಂದ ಹೊರಡಿಸಿಬಿಡುವವರಾಗಿದ್ದಾರೆ ಇಟಲಿ ಸರ್ಕಾರದವರೂ ಟರ್ಕಿಯೊಳಗಿರುವ ತಮ್ಮ ಪ್ರಜೆಗಳೆಲ್ಲಾ ಅಲ್ಲಿಂದ ಹೊರಟು ಬರಬೇಕೆಂದು ಹುಕುಂ ಕೊಟ್ಟಿರುವರು ಇದನ್ನು ನೋಡಿದರೆ ಆ ಎರಡು ರಾಜ್ಯಗಳಿಗೂ ಹುಟ್ಟಿರುವ ವೈಷಮ್ಯಗಳು ಬೇಗನೆ ಸಮಾಧಾನವಾಗುವಂತೆ ತೋರುವುದಿಲ್ಲ

* * *

ಆಸ್ಟ್ರಿಯಾ ಹಂಗೆರಿ ರಾಜ್ಯಕ್ಕೆ ಸೇರಿದ ಸಾಲ್ಸ್‌ಬರ್ಗ್ ಎಂಬ ಊರಿನಲ್ಲಿ ಜೆಲಾಬಾಪೋ ಎಂಬೊಬ್ಬ ಐಶ್ವರ್ಯವತಿಯು ಒಂದೂವರೆ ಲಕ್ಷ ರೂಪಾಯಿ ಆಸ್ತಿಯನ್ನು ಬಿಟ್ಟು ಕಾಲವಾದಳು ಈಕೆ ಈ ಆಸ್ತಿಯನ್ನೆಲ್ಲಾ ತನ್ನ ಪ್ರೀತಿಪಾತ್ರವಾದ ಒಂದು ಮುದಿ ನಾಯಿಯ ಪೋಷಣೆಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುವಳು ಈಕೆ ಬದುಕಿದ್ದಾಗ ಆ ನಾಯಿಗಾಗಿಯೇ ದಿವ್ಯವಾಗಿ ಶೃಂಗಾರ ಮಾಡಿದ ಒಂದು ಕೊಠಡಿಯನ್ನು ಬಿಟ್ಟು ಅದರೊಳಗೆ ಹೋಗಿನವರನ್ನು ಯಾರನ್ನೂ ಹೋಗಗೊಡಿಸುತ್ತಿರಲಿಲ್ಲ ತಾನೇ ಆ ನಾಯಿಗೆ ಬಹು ಅಪೂರ್ವವಾದ ತಿಂಡಿ ಹಾಕಿ ವಿಶೇಷ ಅಕ್ಕರೆಯಿಂದ ಸಾಕುತ್ತಿದ್ದಳು ಈಗ ಆಕೆಯ ದಾಯಾದ್ಯರು ಆ ವಿಚಿತ್ರವಾದ ಮರಣಶಾಸನವನ್ನು ರದ್ದುಮಾಡಬೇಕೆಂದು ನ್ಯಾಯಾಲಯದಲ್ಲಿ ದಾವಾ ಆರಂಭಿಸಿದ್ದಾರೆ

* * *

ಪೋರ್ಚುಗಲ್ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ವರುಷ ದಿನಗಳಿಂದ ಟ್ರಾಂವೇ ಗಾಡಿಗಳ ನೌಕರರು ಕೆಲಸಕ್ಕೆ ಹೋಗದೆ ಬಹಳ ಕಲಹವುಂಟಾಗಿದೆ ಸರ್ಕಾರದವರು ಸಿಟ್ಟಿನಿಂದ ಈ ಹಟವನ್ನು ಕೊನೆಗಾಣಿಸಬೇಕೆಂದು ಆ ಒಸರ ಮುಖಂಡರನ್ನು ದಸ್ತಗಿರಿ ಮಾಡಿಸಿದರು ಪೋಲೀಸ್ ಮತ್ತು ಸೈನಿಕರ ಉಸ್ತುವಾರಿ ಇಟ್ಟು ಗಾಡಿಗಳನ್ನು ನಡಿಸುತ್ತಿದ್ದಾರೆ ದಾಂಪೆಡ್ರೊ ಎಂಬ ಚೌಕದಲ್ಲಿ ಮೂರು ಎಡಿಮಿದಿ ಸ ಗುಂಡುಗಳು ಹಾರಿದವು ಒಬ್ಬನು ಸತ್ತನು ಇಬ್ಬರಿಗೆ ಗಾಯಗಳಾದವು ಜನರ ಗುಂಪಿನ ಮೇಲೆ ಸೈನಿಕರು ಗುಂಡುಹೊಡೆದರು ಜನರೂ ಸೈನಿಕರ ಮೇಲೆ ಗುಂಡುಹೊಡೆದರು ಇದರಲ್ಲಿ ಹಲವರಿಗೆ ಗಾಯಗಳಾಗಿರುತ್ತವೆ ಸೆನಟರ್ ಕಾಸ್ಟಾ ಎಂಬಾತನು ಪಾರ್ಲಿಮೆಂಟ್ ಸಭಾಮನೆಯಿಂದ ಹೊರಕ್ಕೆ ಬಂದಾಗ ಆತನ ಮೇಲೆ ಕಲ್ಲುಗಳು ಬಿದ್ದವು ಆತನು ಪಿಸ್ತೂಲ್ ಬಾರ್ ಮಾಡಬೇಕಾಯಿತು

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಸುಗಳಿಗೂ ರೋಗಿಷ್ಠರಿಗೂ

ಕ್ಷೇಮಕರವಾಗಿದೆ. ಬಲ ಸಂಪಾದಿಸುತ್ತದೆ.

ಮೆಲಿನ್ಸ್ ಆಹಾರವು ಉತ್ತೇಜನ ಕೊಡುತ್ತದೆ, ಪುಷ್ಟಿಕರವಾದದ್ದು ಇದು ಮಕ್ಕಳಿಗೆ ಆರೋಗ್ಯವನ್ನೂ ದಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಪುಗಸಟ್ಟೆ ಕಳುಹಿಸುತ್ತಾರೆ

[86-9] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev E W Thompson M A, Proprietor and Manager, Wesleyan Mission Press Mysore 27/6/1912

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೨ ನೇ ಇಸವಿ ಜೂಲೈ ತಾರೀಖು ೪ ನೇ ಗುರುವಾರ. ಸಂಚಿಕೆ ೫

ಪುಕ್ಕಟೆ, ನಮೂನೆ, ಬಿಟ್ಟಿ ಸಿಗುತ್ತದೆ.

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಕಾಸವನ್ನು ಹೊಗಳಿದಾರೆ, ಅದು ಸಹಜವಾಗಿಯೂ ಮನಸ್ಸನ್ನು ಸೆಳೆಯುವಂಥಾದ್ದೇ. ಸರಿಯಾದ ಕೂದಲು ಶೋಭೆಯಾಗಲು ಕಾರಣವೇ ಇಲ್ಲ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಅದು ಬೋಳುತಲೆಯಲಿ ಕೂದಲು ಬೆಳೆಸುವುದು ಇದರ ಸ್ವಭಾವವು ಕೂದಲಿನ ಬೇರನ್ನು ಬಲವಾಗಿ ಬೆಳೆಸುವುದಾಗಿದೆ, ತಲೆಯಲ್ಲಿ ತಂಪನ್ನುಂಟುಮಾಡುವುದು ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕೋಮಲವಾಗಿ ಪೋಷಿಸುತ್ತದೆ. ಅದು ಬಹು ಸುಗಂಧಯುಕ್ತವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಗ್ರತೆಯಾಗಿಯೂ ಬೆಳೆಯುವಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇದೆಲ್ಲಾ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಫಲಗಳಾಗಿವೆ. ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುವ ಭಾಗದ ಕೂದಲ ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ನವೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ಸನಿಯಿಲ್ಲದೆ ಕೂದಲು ಉದುರಿಹೋಗುವುದು. ಕಾಮಿನಿಯಾ ಎಣ್ಣೆಯು ಅದಕ್ಕೆ ಅತ್ಯಂತ ಅನುಕೂಲವೂ ಆದ ಆಹಾರ, ಇದನ್ನು ಉಪಯೋಗಿಸಿರಿ.

ಕ್ರಯದ ವರಗಳು 1 ಸೀಸೆಗೆ ರೂ 1, ವಿ ಪಿ ಖರ್ಚು ಬೇರೆ 4 ಆಣೆ ಸೀಸೆಗೆ ರೂ 2 ( ) ವಿ ಪಿ ಖರ್ಚು ಬೇರೆ 7 ಆಣೆ 12 ಸೆಗೆ ರೂ 9 12 0 ವಿ ಪಿ ಖರ್ಚು ಬೇರೆ ರೂ 1 12 0

ಅರ್ಧಾಣೆ ಸ್ಟಾಂಪಿಟ್ಟು ಬರೆದವರಿಗೆ ಒಂದು ದಿನ ಉಪಯೋಗಿಸುವಷ್ಟು ಎಣ್ಣೆಯನ್ನು ಪುಕ್ಕಟೆ ಕಳುಹಿಸುತ್ತೇವೆ

ಸುಗಂಧದ್ರವ್ಯಗಳು

ಕಾಮಿನಿಯಾ (ರೆಜಿಡ್)—ಇದು ಬಹು ಮನೋಹರವಾದ ಸುಗಂಧವಾಸನೆಯ ಅತ್ಯಂತ ಸುವಾಸನೆಯು ಖಂಡಿತವಾಗಿದೆ. ಬಹು ಪ್ರಮಾಣವನ್ನು ಮನವಿಸುವುದೂ ಆಗಿದೆ ಕ್ರಯ ಡ್ರಾಂ ಸೀಸೆಗೆ ರೂ 1-8 0

ಗುಲ್ ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕರು ಹೇಳುತ್ತಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ 1-5 0

ದಿಲ್ ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ಜಾಜಿ ಪುಷ್ಪಗಳ ವಾಸನೆಯುಳ್ಳ ಮನೋಹರವಾದ ಸುಗಂಧ ಡ್ರಾಂ ಸೀಸೆಗೆ ರೂ 1 8 0

ಸ್ಪ್ರಿಂಗ್ ಜ್ಯೂಯಲ್ (ರೆಜಿಡ್)—ವಸಂತ ಋತುವಿನ ಕಳಸದ ಚಂಪಕ ಪುಷ್ಪದ ಅತ್ಯಂತ ಶ್ರೇಷ್ಠವೂ ಮನೋಹರವೂ ಆದ ಸುಗಂಧವೆಂದು ತಿಳಿಯಿರಿ ಕ್ರಯ ಡ್ರಾಂ ಸೀಸೆಗೆ ರೂ 1-8 0 [94 27]

'ಕಾಮಿನಿಯಾ ಸುರಂಗಿ'-ರೂ 1 4-0, 'ಕಾಮಿನಿಯಾ ವನಮಾಲಿ', ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು.
ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಇಂಗ್ಲೀಷನ್ನು ಕಲಿಯುವ ಪುಸ್ತಕ! ಇಂಗ್ಲೀಷನ್ನು ಕಲಿಯುವ ಪುಸ್ತಕ!! ಇಂಗ್ಲೀಷನ್ನು ಕಲಿಯುವ ಪುಸ್ತಕ!!!

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ. [93-32]

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾಪ್ರವೇಶದಾಯಿನಿ.

ಮೊದಲನೆಯ ಪುಸ್ತಕ	...	ಕ್ರಯ ರೂ ೧—೮—೦
ಎರಡನೆಯ ಪುಸ್ತಕ	..	ಕ್ರಯ ರೂ ೧—೮—೦
ಮೂರನೆಯ ಪುಸ್ತಕ	.. (ಅಚ್ಚಿನಲ್ಲಿದೆ)	ಕ್ರಯ ರೂ. ೧—೮—೦

ಅಂಚೆಯ ವೆಚ್ಚವನ್ನು ಗ್ರಾಹಕರೇ ಕೊಡಬೇಕು.

ಇವುಗಳಲ್ಲಿ—ಆಂಗ್ಲ ಭಾಷಾ ವರ್ಣಮಾಲೆಯ A ಇಂದ Z ವರೆಗಿನ ಅಕ್ಷರಗಳನ್ನು ಗುರುತು ಹಿಡಿಯುವುದು, ಅಕ್ಷರಗಳನ್ನು ಕೂಡಿಸುವುದು, ಶಬ್ದ ಉಚ್ಚಾರಣ ಪ್ರಶ್ನೋತ್ತರ ವಾಕ್ಯಗಳು, ಚಿಕ್ಕ ಪುಟ್ಟ ಕಥೆಗಳು, ಕ್ಷೇಮಸಮಾಚಾರ ಕಾಗದಗಳು, ತಂತಿ ವರ್ತಮಾನದ ಮಾದರಿಗಳು, ಗಾದೆಗಳು, ಸಾಂಕೇತಿಕ ಶಬ್ದಗಳು, ಬಳಕೆಯಿಂದ ಬೇರೆಬೇರೆ ಅನೇಕ ಸಂಗತಿಗಳಲ್ಲಿ ಒಬ್ಬರಿಂದೊಬ್ಬರು ಪ್ರಶ್ನೋತ್ತರ ರೂಪವಾಗಿ ಮಾತಾಡುವ ಮಾದರಿಗಳು, ಕನ್ನಡದಿಂದ ಇಂಗ್ಲಿಷಿಗೂ—ಇಂಗ್ಲಿಷಿನಿಂದ ಕನ್ನಡಕ್ಕೂ ತರ್ಜುಮೆಮಾಡುವುದು, ವ್ಯಾಕರಣ ಸೂತ್ರಗಳು, ಕನ್ನಡ ಇಂಗ್ಲಿಷ್—ಇಂಗ್ಲಿಷ್ ಕನ್ನಡ ಡಿಕ್ಷನರಿಗಳು, ಮುಂತಾದ ಅನೇಕ ಸಂಗತಿಗಳನ್ನು ಸೇರಿಸಿವೆ. ಇಂಗ್ಲಿಷನ್ನು ಸ್ವಲ್ಪವೂ ತಿಳಿಯದವರು ಸುಲಭವಾಗಿ ತಿಳಿಯುವಂತೆ ಮೊದಲು ಇಂಗ್ಲಿಷು, ನಂತರ ಅದರ ಉಚ್ಚಾರಣೆ ಮತ್ತು ಅರ್ಥಗಳನ್ನು ಕನ್ನಡಕ್ಷರದಲ್ಲಿ ಪ್ರಕಾರಕ್ಕೆ ಬರೆದಿರುವುದರಿಂದ, ಬರೆಯುವುದು—ಓದುವುದು—ಮಾತಾಡುವುದನ್ನು ಬೇರೊಬ್ಬರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು. ಅನೇಕರಿಗೆ ಉಪಯೋಗವಾಗಿ ಕೊಳ್ಳುವವರ ಸೌಕರ್ಯಕ್ಕೆ ಪುಸ್ತಕವು ಬೇರೆಬೇರೆ ಮೂರು ಭಾಗಗಳಾಗಿ ಕ್ರಯವೂ ಕಡಮೆ ಇರುವುದರಿಂದ ಈಗಾಗಲೆ ಸಾವಿರಾರು ಪುಸ್ತಕಗಳು ಖರ್ಚಾಗಿ ನಾಲ್ಕನೆಯ ಸಲ ಅಚ್ಚಾಗುತ್ತಿದೆ. ಕೆಳಗಿನ ವಿಳಾಸಕ್ಕೆ ದಯವಿಟ್ಟು ನಿಮ್ಮನಿಮ್ಮ ವಿಳಾಸಗಳನ್ನು ಚೆನ್ನಾಗಿ ತಿಳಿಯುವಂತೆ ಇಂತಹ ಪುಸ್ತಕವೇ ಬೇಕೆಂದು ವಿವರವಾಗಿ ಹುಟ್ಟಕ್ಷರದಿಂದ ಬೇಗ ಬರೆಯಬೇಕು. ಭಾರತಿ ಸಂಪಂಗಿರಾಮು, ಪೋಸ್ಟು—ಹೊಸಕೋಟೆ, ಡಿಸ್ಟ್ರಿಕ್ಟು—ಬೆಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕೋಪಯೋಗಿ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ಮಾಡಿರುವುದು. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ವೈ ಕಾಲು ಕೊಡಕ (ಶೀತ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರುಚಿ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ರುಚಿಯೂ ಸುವಾಸನೆಯೂ ಇರುತ್ತದೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಪಡಿಸಿ ವೃದ್ಧಿಪಡಿಸುವುದು. ಸ್ತ್ರೀಯರ ಪ್ರಸೂತಿ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಎಂದಿಗೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —೩೦ ಮಾತ್ರೆಗಳುಳ್ಳ ಕುಪ್ಪಿಗೆ ೨ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98 11]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಅಮೃತಸಮಾನವಾಗಿದೆ. ಕ್ಷಣಮಾತ್ರದಲ್ಲಿ ಗುಣವಾಗುವುದನ್ನು ಕಂಡು ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಹಿತವು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು.

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಿಟ್ಟಿ! ಪುಗಸಟ್ಟೆ! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ರಾಸ್ಕೋಪ್ ಸಿಸ್ಟಂ ಲೀವರ್ ವಾಚನ್ನು ರೂ ೩-೪-೦ಗೆ ಕೊಂಡುಕೊಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು. ಇದರಲ್ಲಿ ಮೋಸ ಸ್ವಲ್ಪವೂ ಇಲ್ಲ.



(೧) ಒಂದು ಸೊಗಸಾದ ಸರಪಣಿ
(೨) ಒಂದು ಹಣದ ಚೀಲ
(೩) ಒಂದು ಚಾಕು
(೪) ಒಂದು ತಮಾಷಿ ಪೆಟ್ಟಿಗೆ
(೫) ಒಂದು ಮಡಿಚುವ ಕತ್ತರಿ
(೬) ಒಂದು ಫೌಂಟೆನ್ ಪೆನ್
(೭) ಒಂದು ಕೈ ಚೌಕ
(೮) ಒಂದು ಜೊತೆ ಕಾಲುಚೀಲ
(೯) ಒಂದು ಸುಂದರವಾದ ಉಂಗುರ
(೧೦) ಒಂದು ಸೊಗಸಾದ ಬೀಸಣಿಗೆ.
(೧೧) ಒಂದು ಸೆಟ್ ಷರಟುಗುಂಡಿ
(೧೨) ಒಂದು ಕತ್ತಿನಪಟ್ಟಿ.

10) 11] ವಿಳಾಸ —ಪಿ ಎ. ರಜಾಕ್ ಅಂಡ್ ಕೋ., ೧೦ ಎಸ್ಪ್ಲೇನೇಡ್ ರೋಡ್, ಮದರಾಸ್.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ। ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ವಿಚಿತ್ರವಾಗಿರುವುದು। ಕ್ರಯ 8 ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [119 31]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ವೀರಶೈವಾಶ್ರಮ.

ಬೆಂಗಳೂರಿನ್ಲ್ಲೋದತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಮತ್ತು ಅಲ್ಲಿಗೆ ವ್ಯಾಪಾರ, ಕೋರ್ಟು ಕಚೇರಿ ಮೊದಲಾದ ಕೆಲಸಗಳಿಗಾಗಿಯೂ, ನೋಟಕ್ಕಾಗಿಯೂ ಬರತಕ್ಕ ವೀರಶೈವ ವರ್ತಕರು ದೊಡ್ಡಮನುಷ್ಯರು ಮೊದಲಾದವರಿಗೆ ಇಳಿಯುವದಕ್ಕೂ ಬಿಡಾರಕ್ಕೂ ತಕ್ಕ ಸ್ಥಳಾನುಕೂಲವಿಲ್ಲದೆ ತೊಂದರೆಯಾಗಿದ್ದುದರ ಮೇಲೆ ಎಲ್ಲಾ ವ್ಯಾಪಾರಸ್ಥರುಗಳಿಗೂ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ಆಸ್ಪತ್ರೆಗೂ ಬಹು ಸಮೀಪವಾಗಿರುವಂತೆ ಕೋಟೆಯೊಳಗೆ ಪೋಸ್ಟಾಫೀಸ್ ಪಕ್ಕದಲ್ಲಿರುವ ವಿಶಾಲವಾದ ಬಂಗಲೆಯಲ್ಲಿ ವೀರಶೈವಾಶ್ರಮವೆಂಬ ಹೆಸರಿನಿಂದ ಒಂದು ಛತ್ರವನ್ನೇರ್ಪಡಿಸಿ, ಊಟದ ಏರ್ಪಾಡನ್ನು ಸುಲಭದಲ್ಲಿಟ್ಟಿದೆ ಇಲ್ಲಿ ಸ್ನಾನ ಮಡಿ ಮೊದಲಾದ ಆಚಾರಕ್ಕೂ ದೊಡ್ಡ ಮನುಷ್ಯರುಗಳೂ ಅಧಿಕಾರಿಗಳೂ ಇಳಿಯುವುದಕ್ಕೂ ಅತ್ಯಂತ ಪ್ರಶಸ್ತವಾಗಿದೆ ಹೆಚ್ಚು ಸಂದರ್ಭವನ್ನು ತಿಳಿಯತಕ್ಕವರು ಈ ಕೆಳಗಿನ ವಿಳಾಸದಾರರಿಗೆ ಬರೆಯತಕ್ಕದ್ದು [95 1]

ಎಸ್ ಕಲ್ಲಪ್ಪ,
ಊದುಬತ್ತಿ ಸಾಪು, ದೊಡ್ಡಪೇಟೆ, ಬೆಂಗಳೂರು ಸಿಟಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

816

ಎಂಥಾ ನೋವಾಗಿದ್ದರೂ ನಾನು ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು ಅದಿಕರಿ ಕಡಿತ ವೊದಲು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ ಉಳುಕು, ಹಲ್ಲುನೋವು, ಗಟ್ಟಿ ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ ..., ಉಳುಕು ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟ್ಸ ವ್ಯಾಜಿಲ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ದೊರೆಯುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪದಾರ್ಥ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ಗುಣವಾಗುತ್ತದೆ

ಕ್ಲೆಮೆಂಟ್ಸ ವ್ಯಾಜಿಲ್ ಬಾಂ ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ, ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ರಾಕ್ಟಿಕಲ್ ಸ್ಪೆಷಲ್ ಮತ್ತು ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 17 ವಡಮಾಲಿಪಿಳ್ಳೆ ಬೀದಿ, ಪುರಶವಾಕಂ, ವೇಪೇರಿ, ಮದರಾಸ್ (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್ ತುಮಕೂರು

ರಾಸ್ಕೋಫ್ ಪೇಟೆಂಟ್ ಲೀವರ್ ಗಡಿಯಾರ
ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ 2 4-0 ಮಾತ್ರ ೬ ವರುಷಗಳ ಗ್ಯಾರೆಂಟಿ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟಿದ್ದು ನೋಡುವವರಿಗೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರ ಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಮಾರಾಟವಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ [13 10]

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಕ್ಕ ಸ್ಕ್ರೂ ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 6 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ, ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5 12-0 ಇದನ್ನು ಜಾಗ್ರತೆ ಆರ್ಡರು ಕೊಡುವವರಿಗೆ ... ಕೊಡುವುದು ಪ್ಯಾಕಿಂಗ್ ಬೇಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ—ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 167, ಮದರಾಸು.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



1 2)

ಬೆನ್ನುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಸಂದುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಸಂದುಗಳು ಸರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದ ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಶುದ್ಧವಾದ ಸಿದ್ಧೌಷಧ ತ್ರಯವು

ಕಡಿ ಅಥವಾ ಹುಳುಕಡಿ ಔಷಧವು

ಡಬ್ಬಿ 1ಕ್ಕೆ ರೂ 0-1 0 ಡಬ್ಬಿ 12ಕ್ಕೆ ರೂ 2 8 0

ಕಡೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಕೈಕಂಡ ಔಷಧಿಯು ಒಂದು ದಫಾ ಔಷಧಿಯನ್ನು ಹಾಕಿದರೆ ಸಾಕು ಸಂಪೂರ್ಣ ಗುಣವುಂಟಾಗುವದು ಚರ್ಮದಲ್ಲುಂಟಾಗುವ ಕೊಳೆಯನ್ನು ಹೋಗಲಾಡಿಸಿ ದೇಹವು ಥಳಥಳಿಸುವಹಾಗೆ ಶುದ್ಧಿಯನ್ನು ಮಾಡುವುದು ಈ ಔಷಧಿ ಅನೇಕ ಸುವಾಸನೆಯಿಂದ ಯುಕ್ತವಾದದ್ದು ದೇಹಕ್ಕೆ ತಂಪನ್ನುಂಟುಮಾಡುವದು

ದಂತಧಾವನ ಚೂರ್ಣವು

ಡಬ್ಬಿ 1ಕ್ಕೆ ರೂ 0 1 0 ಡಬ್ಬಿ 12ಕ್ಕೆ ರೂ 2 8 0

ಹಲ್ಲು ಹಲ್ಲುಸಂದು ಗಂಟಲು ಇವುಗಳಿಗೆ ಸಂಬಂಧಪಟ್ಟ ಸಕಲರೋಗಗಳನ್ನೂ ಈ ದಂತಧಾವನ ಚೂರ್ಣವು ನಿವರ್ತಿಸಿ ಹಲ್ಲುಗಳನ್ನು ಬಲಪಡಿಸಿ ಬಾಯಿಯನ್ನೆಲ್ಲಾ ಸುವಾಸನಾಯುಕ್ತವನ್ನಾಗಿ ಮಾಡುತ್ತದೆ

ವಿರೇಚನವಟಿ ಬೇದಿಮಾತ್ರೆಗಳು

ಉದರಸಂಬಂಧವಾದ ವ್ಯಾಧಿಗಳಿಂದಲೂ ಮಲಬಂಧದಿಂದಲೂ ಕಷ್ಟಪಡುವವರಿಗೆ ಇದು ಒಂದು ದೊಡ್ಡ ಆಶೀರ್ವಾದರೂಪವಾಗುವದು ದಿನಂಪ್ರತಿ ರಾತ್ರಿ ಮಲಗುವದಕ್ಕೆ ಮುಂಚಿತವಾಗಿ ಸೇವಿಸಿದರೆ ಹೊಟ್ಟೆಯು ಶುದ್ಧವಾಗುವದು ಎಷ್ಟು ಮಾತ್ರೆಗಳು ಸೇವಿಸಲ್ಪಡುತ್ತವೋ ಅಷ್ಟು ಸಲ ಭೇದಿಯಾಗುವದು ಆದುದರಿಂದ ಎಲ್ಲರೂ ಈ ಮಾತ್ರೆಗಳನ್ನು ಬಹಳವಾಗಿ ಅಪೇಕ್ಷಿಸುತ್ತಾರೆ ಮಾತ್ರೆಗಳು ಬಹಳ ಚಿಕ್ಕದಾಗಿರುವದರಿಂದ ಬಹಳ ಸುಲಭವಾಗಿ ಇವುಗಳನ್ನು ನುಂಗಬಹುದು ರಾತ್ರಿ ಮಾತ್ರೆಯನ್ನು ಸೇವಿಸುವದರಿಂದ ರಾತ್ರಿಯೇ ಭೇದಿಯಾಗಲಾರದು [121 36]

10 ಮಾತ್ರೆಗಳ ಡಬ್ಬಿ 1ಕ್ಕೆ ರೂ 0 10 0 ಡಬ್ಬಿ 12ಕ್ಕೆ ರೂ 6 0 0

ರಾಜವೈದ್ಯ ನಾರಾಯಣಜೀ ಕೇಶವಜೀ,
771, ಜೇನಾ ಬಜಾರ್ ರೋಡ್, ಮದ್ರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಈಗ ದರ ಬೇಗ ಬರೆದು ತರಿಸಿಕೊಳ್ಳಿ

8 27

ಹಾಸನದ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಅಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಪಾರದಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ... ತಲಾ ನಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ... ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇವಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಪು, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೬ ೧ ರೂ ೬ ೪, ೧ ರೂ ೪ ೪

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ ೧೨ ೪, ೧ ರೂ ೮ ೪ ೧ ರೂ ೬ ೪

ಕುಸುಕಿನ ಟೋಪಿಗಳು ೧ ರೂ ೮ ೪, ೧ ರೂ ೬ ೪

ಹುಡುಗರ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಚ್ಚಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಗೌರ್ನಮೆಂಟ್ ಸೆಕ್ಯೂರಿಟಿ ಉಳ್ಳ ನ್ಯಾಷನಲ್ ಜೀವ ವಿಮೆ ಮತ್ತು ವಿವಾಹಸಹಾಯಕ ಫಂಡ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್—ವಿಜಯನಗರಂ

1 ಈ ಕಂಪೆನಿಯು ಡಾಕ್ಟರ್ ಪರೀಕ್ಷೆ ಇಲ್ಲದೇಯೂ 10 ವರುಷ ಆದಿಯಾಗಿ 60 ವರುಷ ವಯಸ್ಸುಳ್ಳ ಗಂಡಸರ ಮತ್ತು ಹೆಂಗಸರ ಜೀವವನ್ನು ಮುಂದೆ ಬರಬಹುದಾದ ಅಪಾಯಗಳನ್ನು ಇಂಡಿಯಾ ದೇಶದಲ್ಲಿರತಕ್ಕ ಎಲ್ಲಾ ಕಂಪೆನಿಗಳಿಗಿಂತಲೂ ಅತಿ ಸುಲಭವಾದ ದರದ ಮೇಲೂ ಮತ್ತು ಧಾರಾಳವಾದ ನಿಬಂಧನೆಗಳಿಂದಲೂ ತಿಂಗಳಿಗೆ 8 ಆಣೆ ಮತ್ತು 1 ರೂಪಾಯಿಗಳ ವಿಮೆಯನ್ನು ಮಾಡಿರುತ್ತಾರೆ ಈ ಮೊಬಲಗಿನ ವಿಮೆದಾರರು ಕಂಪೆನಿಗೆ ೬ ತಿಂಗಳು ವಿಮೆಯನ್ನು ಕಟ್ಟಿದ ನಂತರ ಮೃತಪಟ್ಟವರಾದರೆ ಸದರಿ ವರ್ತಮಾನವನ್ನು ಅವರ ವಾರಸುದಾರರು ಕಂಪೆನಿಯವರಿಗೆ ತಿಳಿಸಿದ ತಕ್ಷಣ ಮೊದಲನೇ ತರಗತಿಯವರಿಗೆ ಒಂದುನೂರು ರೂಪಾಯಿಗಳೂ, ಎರಡನೇ ತರಗತಿಯವರಿಗೆ 50 ರೂಪಾಯಿಗಳು ತಕ್ಷಣ ಅಡ್ವಾನ್ಸಾಗಿ ಕೊಡಲ್ಪಡುತ್ತೆ ಅನಂತರ ಆ ವರುಷದ ಲೆಕ್ಕಗಳ ತನಿಖೆ ಆದ ಮೇಲೆ ಅಂದರೆ ಪ್ರತಿ ವರುಷದ ಫೆಬ್ರವರಿ 8 ನೇ ತಾರೀಖಿನ ತರುವಾಯ ಮೊಬಲಗಿನ ವಾರಸುದಾರರಿಗೆ ಅದುವರಿವಿಗೆ ಅಡ್ವಾನ್ಸು ಕೊಟ್ಟಿರುವ ಮೊಬಲಗಲ್ಲದೆ ಲೆಕ್ಕಾಚಾರದ ಪ್ರಕಾರ ಇನ್ನು ಬರತಕ್ಕ ಬಾಕಿ ಮೊಬಲಗನ್ನೂ ಅವರಿಗೆ ಕೊಡಲ್ಪಡುತ್ತದೆ ಒಂದು ವೇಳೆ ವಿಮೆದಾರರು ೬ ತಿಂಗಳ ಒಳಗಾಗಿ ಮೃತಪಟ್ಟರೆ ಅವರು ಅದುವರಿವಿಗೂ ಕಂಪೆನಿಗೆ ಕೊಟ್ಟಂಥಾ ಹಣದಲ್ಲಿ ಖರ್ಚುಗಳು ಜಾತಾ ಮಿಕ್ಕ ಹಣವನ್ನು ಅವರ ವಾರಸುದಾರರಿಗೆ ವಾಪಸ್ ಮಾಡಲ್ಪಡುತ್ತದೆ

2 ಮದುವೆಯಾಗತಕ್ಕವರಿಗೆ ಫಂಡನ್ನು ಏರ್ಪಡಿಸಿರುತ್ತೆ ಇದಕ್ಕೆ ಸೇರತಕ್ಕ ಚಂದಾದಾರರು ಗಂಡಸರೇ ಆಗಲಿ ಅಥವಾ ಹೆಂಗಸರೇ ಆಗಲಿ ಬಾಲ್ಯದಾರಭ್ಯ 16 ಮತ್ತು 18 ವರುಷಗಳ ವಯಸ್ಸಿನ ವರಿವಿಗೂ ತಿಂಗಳು ಒಂದಕ್ಕೆ ಚಂದಾ ಮೊಬಲಗು ಒಂದು ರೂಪಾಯಿ ಪ್ರಕಾರ ಕನಿಷ್ಟಪಕ್ಷ 8 ತಿಂಗಳಿಗೆ ಕಡಿಮೆ ಇಲ್ಲದಂತೆ ಕ್ರಮವಾಗಿ ಚಂದಾ ಮೊಬಲಗು ಪಾವತಿ ಮಾಡಿದ ಮೇಲೆ ಸದರಿ ಚಂದಾದಾರರು ಮದುವೆ ಮಾಡಿಕೊಳ್ಳುವ ಕಾಲಕ್ಕೆ ಅವರು ಕೊಟ್ಟಿರತಕ್ಕ ಚಂದಾ ಮೊಬಲಗಿಗೆ 4 ರಷ್ಟಕ್ಕೆ ಕಡಮೆ ಇಲ್ಲದೆಯೂ, 10 ರಷ್ಟಕ್ಕೆ ಜಾಸ್ತಿ ಇಲ್ಲದೆಯೂ ಮೊಬಲಗನ್ನು ಸಹಾಯ ಮಾಡಲ್ಪಡುತ್ತದೆ [85 1]

ಇಂಗ್ಲಿಷ್ ಮತ್ತು ಕನ್ನಡ ಬಲ್ಲಂಥಾ ಏಜಂಟರು ಬೇಕಾಗಿದೆ ತಪಶೀಲ್ ವಿಷಯಗಳಿಗೆ ಅರ್ಜಿ ಸ್ಟಾಂಪು ಸಹಿ ಬರೆದುಕೊಳ್ಳಿ ನಮ್ಮ ವಿಳಾಸ —

ದಿ ಕಾಮರ್ಸ್ ಮ್ಯೂಚುಯಲ್ ಸಿಂಡಿಕೇಟ್, ಚೀಫ್ ಯೇಜಂಟ್ಸ್
(ಮೈಸೂರು ಮತ್ತು ಕೊಡಗು ಸಂಸ್ಥಾನಗಳ), ಚಿಕ್ಕಪೇಟೆ ಬೆಂಗಳೂರು ಸಿಟಿ

ಸ್ಟ ೧೮೭೬ ರಿಂದ ೧೯೧೨ ವರೆಗೆ

ಕಾಲದ ಪರೀಕ್ಷೆ।

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 2 27

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು,
ಸಕಲವಿಧ ಶೀತಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಈ ವಿನಾನುಮಾನವುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರಖಾನೆ,
ಲಂಡನ್, ಇಂಗ್ಲೆಂಡ್

1913 ನೇ ಇಸವಿಯ ಲೋವರ್ ಸೆಕಂಡರಿ ಕನ್ನಡ ಟೆಕ್‌ಸ್ಟ್ ನೋಟ್ಸು.

ಕ್ರಯ 1 ಆಣೆ 10 ಕ್ಕೆ 1 ಡಿಸ್ಕೌಂಟು ನಮ್ಮ ನೋಟ್ಸೇ ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [71 9]

2 ನೇ ಪುಸ್ತಕದ ನೋಟ್ಸು 2½ ಆಣೆ 3 ನೇ ಪುಸ್ತಕದ ನೋಟ್ಸು 1½ ಆಣೆ 4 ನೇ ಪುಸ್ತಕದ ನೋಟ್ಸು 1½ ಆಣೆ 5 ನೇ ಪುಸ್ತಕದ ನೋಟ್ಸು 1 ಆಣೆ ಮೈಸೂರು ಭೂವಿವರಣೆ 1 ಆಣೆ 2 ನೇ ಕ್ಲಾಸ್ ಭೂವಿವರಣೆ 1½ ಆಣೆ

ಎನ್ ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು

WILLIAM & Co, FORT, BOMBAY

ಅಮೃತಾಂಜನ. (Regd)

35 19

ಎಲ್ಲಾ ಮುಲಾಮುಗಳಿಗಿಂತ್ಲೂ ಅಂಜನಗಳಿಗಿಂತ್ಲೂ ಶ್ರೇಷ್ಠವಾದದ್ದು ಇದರಿಂದ ವಾತ ಸಂಧಿವಾತ, ಒಣಿಮು, ಕಾಯ, ಉಳುಕು, ತಲೆನೋವು, ಶಿರೋಭಾರ ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವದು ಬಾಟ್ಲಿ ಒಂದರ ಕಿಮ್ಮತು 0 8 0

ಗಜಕರ್ಣದ ಮುಲಾಮು

ಯೆಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಒರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಪ್ಪಿ 1ಕ್ಕೆ 0 6 0 ದಂತಮಂಜನ 0-2-0 ನೇತ್ರಾಂಜನ 0-2-0 ಸುಂದರಿ ತೈಲ 0 8-0

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಫೋರ್ಟು ಮುಂಬಯಿ.

LOWER SECONDARY EXAMINATION,

1913

ಹಿಂದುದೇಶದ ಚರಿತ್ರೆ

ಘನ ಇ ಡಬ್ಲ್ಯು ಥಾರ್ನ್, ಎಂ ಎ ಯವರಿಂದ ರಚಿತವಾದುದು

ಇಂಡಿಯಾ ದೇಶದ ಚರಿತ್ರೆಯನ್ನು ಓದುವ ಸ್ಕೂಲ್ ಹುಡುಗರಿಗೆ ಉಪಯುಕ್ತವಾದುದು

ಚಿಟ್ಟೆ ಬೈಂಡು ೨೬೦ ಪುಟಗಳುಳ್ಳದು

ಬಹು ಒಳ್ಳೆಯ ಚಿತ್ರಗಳಿಂದ ರಂಜಿತವಾಗಿದೆ!

ಅಚ್ಚುಹಾಕಿರುವುದು ಬಹು ಸೊಗಸಾಗಿದೆ!

ಕ್ರಯ ೧೨ ಆಣೆ

ಈ ಪರೀಕ್ಷೆಯ ಪ್ರಶ್ನಪತ್ರಿಕೆಗಳಲ್ಲಿ ಕೇಳುವ ಪ್ರಶ್ನೆಗಳಿಗೆ ಸರಿಯಾದ ಮತ್ತು ಸಂಪೂರ್ಣವಾದ ಉತ್ತರಗಳು ಕಬೇಕಾದರೆ ಈ ಹಿಂದುದೇಶದ ಚರಿತ್ರೆಯನ್ನು ಬಿಟ್ಟರೆ ಬೇರೊಂದಿಲ್ಲವೇ ಇಲ್ಲ

ಕ್ರೈಸ್ತವೇದಾಂತಸಾರವು.

[171 ಪುಟಗಳುಳ್ಳದು ಕ್ಯಾಲಿಕೋ ಬೈಂಡು ಕ್ರಯ ರೂ ೨ ೦]

ಕ್ರೈಸ್ತಮತ ತತ್ವಗಳನ್ನು ಬೋಧಿಸುವ ಈ ಉದ್ಗ್ರಂಥವು ಲಂಡನ್ ಸಭೆ ಇಲಾಖೆಯ ಬೋಧಕರಾದ ಘನ ಡಬ್ಲಿಯು ಎಚ್ ಕ್ಯಾಂಬೆಲ್ ಎಂ ಎ ಬಿ ಡಿ ಯವರಿಂದ ತೆಲುಗು ಭಾಷೆಯಲ್ಲಿ ಹೊಸದಾಗಿ ರಚಿಸಲ್ಪಟ್ಟು ಅದೇ ಇಲಾಖೆಯ ಉಪದೇಶಕರಾದ ಮ|| ರಾ| ಎಚ್ ಜಿ ಶೀಲಪ್ಪನವರಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿತು ಈ ಪುಸ್ತಕವು ಮತಸಂಬಂಧವಾಗಿ ತಿಳಿಯಬೇಕಾದ ಅಂಶಗಳನ್ನು ಬಹು ಸ್ಪಷ್ಟವಾಗಿಯೂ ಶಾಸ್ತ್ರೀಯವಾಗಿಯೂ ವಿವರಿಸುತ್ತದೆ ಇದು ಕ್ರೈಸ್ತ ಮತಾವಲಂಬಿಗಳಿಗೆ ಮಾತ್ರ ಉಪಯುಕ್ತವಾದುದು ಎನಿಸದೆ, ಸತ್ಯಮತ ವಿಚಾರಕರಾದವರೆಲ್ಲರಿಗೂ ಇದರಿಂದ ಅನೇಕವಾದ ಪ್ರಯೋಜನಗಳುಂಟಾಗುವುದರಿಂದ ಇದನ್ನು ಸಕಲರೂ ಕರಿಸಿ ಪರೀಕ್ಷೆ ಮಾಡಬೇಕೆಂಬುವುದೇ ನಮ್ಮ ಕೋರಿಕೆಯಾಗಿದೆ [115 1-42]

ಈಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ —

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಒಳ್ಳೇ ಕಂಟ್ರಾಕ್ಟರು ಬೇಕಾಗಿದೆ.

ಹೊಳೆನರಸೀಪುರದಲ್ಲಿ ಒಂದು ಕೋಆಪರೇಟಿವ್ ಟವನ್ ಹಾಲನ್ನು ಸುಮಾರು 1000 ರೂ ಅಂದಾಜಿನಲ್ಲಿ ಪ್ಲಾನ್ ಪ್ರಕಾರ ಕಟ್ಟಲು ಅನುಭವವುಳ್ಳ ಒಬ್ಬ ಕಂಟ್ರಾಕ್ಟರು ಬೇಗನೆ ಬೇಕಾಗಿದೆ ಯಾವ ಗ್ರಿಗಳು ಸ್ಥಳದಲ್ಲಿ ಒದಗಿಸಲ್ಪಡುತ್ತವೆ ಹೆಚ್ಚು ಸಂಗತಿಯನ್ನು ಪ್ರೆಸಿಡೆಂಟರಿಗೆ ಬರೆದು ತಿಳಿದುಕೊಳ್ಳತಕ್ಕದ್ದು

ಆರ್ ತಿರುನಾರಾಯಣ್ಯಯಂಗಾರ್,
[101-1] ಪ್ರೆಸಿಡೆಂಟ್, ಹೊಳೆನರಸಿಪುರ

ಜಾರ್ಜ್ ಸಾರ್ವಭೌಮರ ಚರಿತ್ರೆ

[0- 1]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ಡಿಹ್ಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ ಸಂಭಾಷಣೆಗಳನ್ನೂ ಅನುಕ್ರಮವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಜನರಿಗೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ ಅವರ ಛಾಯಾಚಿತ್ರವೂ ಉಂಟು ಶ್ರೀಮನ್ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ ಕ್ರಯ ಪ್ರತಿ 1ಕ್ಕೆ 8 ಆ ಹಾಸಲು 1ಆ

ವಿಳಾಸ —ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಒಂದೇ ಕಥೆ! ಅಪೂರ್ವಗ್ರಂಥ!! ೨೧೭ ಪುಟಗಳು!!!

ಪ್ರತಾಪ ಕಂಠೀರವಚರಿತ್ರೆ

ಇದರಲ್ಲಿ (1) ಧರ್ಮಶಸ್ತ್ರರಿಗೆ ದೈವಸಹಾಯವು ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ಕೊನೆಗೆ ಕೈಗೂಡುತ್ತವೆ ಎಂಬ ನೀತಿ (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ ಸ್ತ್ರೀಯುಕ್ತಿ ಸಾಹಸ ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರಯುಕ್ತವಾಗಿಯೂ ಕೂಡಿದ ಕಥಾ ಸಂದರ್ಭಗಳು (4) ವನ ಪರ್ವತ, ಆರಾಮಾದಿ ವರ್ಣನೆಗಳು (5) ಮನುಷ್ಯಮಾತ್ರಕ್ಕೆ ಬಿಸರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು ಇವು ಕೂಡಿವೆ

ಹೀಗಿರುವದರಿಂದ ಓದುವವರಿಗೆ ಪ್ರಾರಂಭದಿಂದ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದವರಿಗೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [ ] 2]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ ಬೆಂಗಳೂರು ಸಿಟಿ

ಜ್ವರಕಂಕರ

114 41

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ ಪರಿಸೆಯಜ್ವರ ವಿಷಮಜ್ವರಾದಿ ಸರ್ವಜ್ವರಗಳನ್ನೂ ೬ ದೊಡು ಸಾರಿ ಸೇವಿಸುವದರೊಳಗಾಗಿ ತಪ್ಪದೆ ಗುಣಪಡಿಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ಹಿಮ್ಮೆಟ್ಟಿಸುವುದು ಬಾಟಲಿಗೆ ೧ ರೂ ೪ ಬಾಟಲಿಗೆ ೩ ರೂ ೧೦ ಆಣೆ

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೪ ರೂ ೮ ಆಣೆ

ವಾತಮುರಾರಿ—ಇದು ತಲೆನೋವು ಉಳುಕು ಬೇಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮನಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ ೪ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಸ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಕಾರೊನೇಷನ್ ಸಾಬೂನು

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು ಉರಿ ನವೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ ೧ ೦ ೦, ಅಂಚೆ ಹಾಸಲು ಪ್ರತ್ಯೇಕ ನಮ್ಮ ವಿಳಾಸ — ಬಿ ಸಿ ಪಾ ಅಂಡ್ ಕಂಪೆನಿ, ೧೭೭ ಚೇನಾಬಜಾರ್ ರೋಡ್, ಮದ್ರಾಸು

ತಾಕೀತ—ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು [101 1]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—6—1912 ರಿಂದ 21—6—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು	8	5	3	3
ಕೋಲಾರ್ ,,	0	0	70	58
ಕೋಲಾರ್ ಚಿನ್ನದ ಗಣಿಗಳು	4	2	0	0
ತುಂಕೂರು ಡಿಸ್ಟ್ರಿಕ್ಟು	0	0	31	35
ಹಾಸನ ,,	0	0	126	68
ಚಿತ್ರದುರ್ಗ ,,	0	0	237	120
ಕಡೂರ್	0	1	11	13
ಶಿವಮೊಗ್ಗ ,,	[illegible]	5	178	111
ಜುಮ್ಲಾ	17	13	658	417

ಶಾಲಿವಾಹನ ಶಕ ವರುಷಂಗಳು 1835 ನೇ ಪರಿಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮ ಋತು ಅಧಿಕ ಆಷಾಢ ಶುದ್ಧ ಷಷ್ಠಿ ಶುಕ್ರವಾರದಿಂದ ಅಧಿಕ ಆಷಾಢ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ ತೇದಿ
5	ಶುಕ್ರ ‡	ಷಷ್ಠಿ	51 50	ಪೂಫ	57 54	22
6	ಶನಿ	ಸಪ್ತಮಿ	57 13	ಉತ್ತರಾ	60 0	23
7	ಭಾನು	ಅಷ್ಟಮಿ	57-40	ಉತ್ತರಾ	1 -1	24
8	ಸೋಮ §	ನವಮಿ	57	ಹಸ್ತ	3 15	25
9	ಮಂಗಳ	ದಶಮಿ	5 31	ಚಿತ್ರ	1 53	26
10	ಬುಧ †	ಏಕಾದಶಿ	- 14	ಸ್ವಾತಿ	1 10	27
11	ಗುರು *	ದ್ವಾದಶಿ	18 31	ವಿಶಾಖ	3 11	28

‡ ಮಳೆ ನಕ್ಷತ್ರ— ಪುನರ್ವಸು 1 ನೇ ಪಾದ

§ ಮಳೆ ನಕ್ಷತ್ರ—ಪುನರ್ವಸು 2 ನೇ ಪಾದ

† ಸ್ಮಾರ್ತ, ಶ್ರೀ ವೈಷ್ಣವ ಏಕಾದಶಿ

* ಮಾಧ್ವ ಏಕಾದಶಿ, ಹರಿವಾಸರ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	ರೂ	೧೫ ೮-೦	೧೫ ೮ ೦
ಕೆಂಬೂತಿ ಅಕ್ಕಿ ಅವಲ್		೧೬ ೮ ೦	೧೬ ೮ ೦
,, ದುಯಂ		೧೬ ೦ ೦	೧೬ ೦ ೦
ಆಪ್ಪಾಣಿ ಅಕ್ಕಿ		೧೯ ೦ ೦	೧೯ ೦-೦
ಸಣ್ಣಕ್ಕಿ ಅವಲ್		೧೭ ೮ ೦	೧೭ ೮ ೦
,, ದುಯಂ		೧೬ ೮ ೦	೧೬ ೮ ೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೩ ೦ ೦	೧೩ ೮ ೦
,, ದುಯಂ		೧೧ ೦ ೦	೧೧ ೩ ೦
ಕೈಲ್ ರಾಗಿ ಪಲ್ಲ ೧ಕ್ಕೆ		೭ ೮ ೦	೭ ೫ ೦
ಕಾರ್ರಾಗಿ		೭ ೯ ೦	೭ ೪ ೦
ಜೋಳ		೭ ೮ ೦	೮ ೦ ೦
ಹುಲಸಂದೆ ಪಲ್ಲ ೧ಕ್ಕೆ		೧೧ ೦ ೦	೧೧ ೦ ೦
ಬಿಳೀ ಅವರೆ		೧೦ ೦ ೦	೧೦ ೦-೦
ಹೆಸರು		೧೪ ೦ ೦	೧೪ ೮ ೦
ಉದ್ದು		೧೪ ೦ ೦	೧೫ ೦ ೦
ಕಡಲೆ		೧೧ ೦ ೦	೧೧ ೦ ೦
ಎಳ್ಳು ಸೇ ೧೩೭ ಕ್ಕೆ		೩೪ ೮ ೦	೩೪ ೮ ೦
ಹುರುಳಿ		೬ ೧೪ ೦	೭ ೩ ೦
ಹರಳು ೧೩೭ ಸೇರಿಗೆ		೧೨ ೮ ೦	೧೪ ೦ ೦
ಸೀಗೇಕಾಯಿ ಮಣ ೧ಕ್ಕೆ		೪ ೮ ೦	೪ ೮ ೦
ಮೆಣಸಿನಕಾಯಿ		೪ ೪ ೦	೪ ೪ ೦
,, ದುಯಂ		೪ ೦ ೦	೩ ೧೩ ೦
ಬೆಲ್ಲ ದೊಡ್ಡ ಅಚ್ಚು		೫ ೮ ೦	ಮು ೫ ೮ ೦
ಒಳ್ಳೆಣ್ಣೆ ಮಣ ೧ಕ್ಕೆ		೬ ೦ ೦	೬ ೮ ೦
ಹರಳೆಣ್ಣೆ ,,		೫ ೪ ೦	೫ ೮ ೦
ಕೊತ್ತುಂಬರಿ ಪಲ್ಲ ೧ಕ್ಕೆ		೬ ೦ ೦	೬ ೮ ೦
ಉಪ್ಪು ,,		೫ ೮ ೦	೫ ೮ ೦
ಹುಣಸೇ ಹಣ್ಣು		೧ ೪ ೦	೧ ೪ ೦
,, ಹಳೇದು		೧ ೦ ೦	೧ ೩ ೦
ತುಪ್ಪ ಮಣ ೧ಕ್ಕೆ		೧೬ ೮ ೦	೧೭ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೦ ೦	೫ ೦ ೦
ತೆಂಗಿನಕಾಯಿ ೧೦೦ ಕ್ಕೆ		೬ ೦ ೦	೬ ೦ ೦
ಅರಲೇಕಾಯಿ ಮಣ ೧ಕ್ಕೆ		೦ ೮-೦	೧ ೦ ೦
ಅಂಟುವಾಳದ ಕಾಯಿ ಮಣ ೧ಕ್ಕೆ		೦ ೧೩ ೦	೧ ೪ ೦
ಚಿನ್ನ (ಪವನ್) ಕೆಂಪು		೧೫ ೮-೦	೧೫ ೮ ೦
,, ,, ಪಸಿಮೆ		೧೫ ೧೪-೬	೧೫ ೧೪ ೬
,, ,, ಅಚ್ಚು ತೊಲ ೧ಕ್ಕೆ		೩೪ ೪ ೦	೩೪ ೪ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೧ ೦ ೦	೮೧ ೦ ೦

National Insurance and Banking Company Ltd., Amritsar (incorporated under the Indian Companies' Act VI of 1882)

Capital Rs 10 00,000
Funds exceed Rs 12 00,000
Policy holders exceed 75,000

Possesses Guaranteed Government Securities

DEPARTMENTS

Insurance *Banking* *Provident (Life and Marriage)*

NOTICE

It has come to the notice of the undersigned that some unprincipled representatives of the rival Companies, being jealous of the well deserved success of the **National Insurance Banking Company Ltd., Amritsar,** are defaming the same by misrepresenting to the public that it is not a reliable company and so on

The public might be aware of the **Indian Life Assurance Companies' and Provident Societies' Acts 1912** having been passed by the **Government of India** to safeguard the interests of the policy holders According to the **New Insurance Act,** the **Government of India** have got a very **effective control** over **the financial conditions** of all the life assurance companies, unlike before

The public will kindly note that **The National Insurance and Banking Company Ltd., Amritsar,** is in a position to abide by all the provisions of the said Acts and has already given **Security** to the **Government** required **under the Insurance Act.**

In addition to the above, for the kind perusal of the public the **most Impartial and Outspoken Opinion** of the **newspaper world** is laid open in a brief manner

1. A note of congratulation from the "Nagpur and Behar times" dated 4th May, 1912

This shows steady expansion of business on which the shareholders and policy holders are to be congratulated A unique feature of the management of this company is that the policy holders have a voice in the election of one of their number to represent their cause on the Board and to elect an auditor to watch their interests The rates are, in comparison with those of some other companies very low and the funds of the company are invested in **Government Securities** and **Port Trust Debentures** as well as in safe and paying concerns promoting Indian Industries The directors are in a position to abide by the provisions of the **new Insurance Act** The report shows a satisfactory and successful state of affairs of the company and we wish it a continued career of usefulness

"Sound and Sure'

The "phœnix" of Karachi, in its issue of the 15th May, 1912 remarks " The concern has evidently been planned on a sound and sure footing, and is being highly spoken of by all those who have had dealings with it '

All speak highly

The "Alhag" of Sukkur, in its issue of the 16th May, 1912, writes —"The concern on the whole has been working satisfactorily, and all those who have their dealings with it speak highly of it"

Amrita Bazar Patrika, Dated 7th June, 1912

"The satisfactory results attained by this swadeshi concern unmistakably shew that it is managed with due regard to economy, and we congratulate its authorities on its prosperous condition"

Quetta News, Dated 16th May, 1912

"From the Revenue account we find that the net profits after defraying working expenses amount to more than a lakh of rupees, *which speak highly of the management of the Company* The amount of assurances effected has risen from Rs 1,04,313 in 1907 to Rs 24,94,520, in 1911 *The progress is creditable*"

The above are only a few out of the many

So, our old and would-be agents and policyholders will do well if they will kindly let the undersigned know the names of such worthies who are misrepresenting the state of the company to the public, as legal steps will have to be taken against them

Further informations, etc can be had from —

[107-1] **M L NAGANNAH,**
Chief Agent

The Amritsar National Insurance Buildings, Mysore City

ಗೃಹಕೃತ್ಯದ ನೋಟೀಸು

ಹುಣಸೂರು ತಾಲ್ಲೂಕು ಪಿರಿಯಾಪಟ್ಟಣದ ಕೋಟೆಯಲ್ಲಿ ನನ್ನ ೩೦ ವರ್ಷದ ಶೇಕದಾರ್ ಸನ್ಯಾಸಪುರದ ರಾಮಯ್ಯನವರಿಗೆ ಖಾಸಾ ಚಿಕ್ಕಪ್ಪನವರ ಹೆಂಡತಿ ಸುಮಾರು 85 90 ವರ್ಷ ವಯಸ್ಸಿನ ಶೀನವ್ವ ನೆಂಬ ಮುದುಕಿ ಇರುತ್ತಾರೆ ಈಕೆಗೆ ಹೆಣ್ಣು ಅಥವಾ ಗಂಡು ವಾರಸುದಾರರ್‍ಯಾರೂ ಇಲ್ಲ ಈಕೆಯು ಉತ್ತರವಾರಸುದಾರರಾದ ನಮಗೆ ಸೇರಬೇಕಾದ ಆಕೆಯು ಅನುಭವಿಸುತ್ತಿರುವ ಜಮೀನುಗಳನ್ನು ಪರಾಧೀನ ಮಾಡುವ ಪ್ರಯತ್ನದಲ್ಲಿ ಕುಳಿತಾಗಿ ತೋರುತ್ತೆ ಈಕೆಗೆ ಯಾವ ದಾನಿಯೂ ಇರುವುದಿಲ್ಲ ಅಲ್ಲದೆ ನನ್ನ ಅನುಮತಿ ಹೊರತು ಮಾರಲು ಕಾರಣವಿಲ್ಲ ಒಂದು ವೇಳೆ ಯಾರಾದರೂ ನಮಗೆ ಮೋಸಪಡಿಸಲುದ್ದೇಶಿಸಿ ಕ್ರಯ, ಭೋಗ್ಯ, ದಾನ, ಆಧಾರ, ಪರಿವರ್ತನೆ ಮುಂತಾದ್ದನ್ನು ಮಾಡಿಕೊಂಡಲ್ಲಿ ನ್ಯಾಯವಾಗಿ ಊರ್ಜಿತವಾಗಲಾರದು ಅಲ್ಲದೆ ಅವರು ನಷ್ಟಕ್ಕೆ ಗುರಿಯಾಗುವದೂ ಅಲ್ಲದೆ ತಮ್ಮ ಮೊಬಲಗೆಲ್ಲಾ ಕಳೆದುಕೊಳ್ಳಬೇಕಾಗುತ್ತೆಂತ ಈ ಮೂಲಕ ಎಚ್ಚರಿಸಿದೆ ಈ ಸ್ವತ್ತು ನಮ್ಮ ಪಿತಾಮಹಾರ್ಜಿತವಾಗಿ ಬಂದದ್ದಾಗಿರುತ್ತೆ [105 1]

ಎಚ್ ಆರ್ ಪುಟ್ಟಯ್ಯ, ಶೇಕದಾರ್, ಪಿರಿಯಾಪಟ್ಟಣ

ಭಟ್ಟಿ ವಿಕ್ರಮಾದಿತ್ಯರಾಯನ ಕಥೆಗಳು. [101 1]

ಸಾಹಸಕಥೆಗಳು ! ಸಚಿತ್ರ ! 570 ಪುಟಗಳು !!

ಈಗ್ಗೆ 2 ಸಾವಿರ ವರುಷಗಳಲ್ಲಿ ವಿಕ್ರಮಶಕೆ ಕರ್ತನಾಗಿ ಉಜ್ಜಯಿನೀ ನಗರದಲ್ಲಿ ಆಳುತ್ತಿದ್ದ ವಿಕ್ರಮಾದಿತ್ಯರಾಯನ ಸಾಹಸಚರಿತ್ರೆಯು ಈತನು ಚಂದ್ರಶರ್ಮನೆಂಬ ಬ್ರಾಹ್ಮಣನಿಗೆ ಹುಟ್ಟಿ ತಮ್ಮನಾದ ಭಟ್ಟಿಯನ್ನು ಮುಖ್ಯಮಂತ್ರಿಯಾಗಿ ನೇಮಿಸಿಕೊಂಡು ಭೇತಾಳನ ಸಹಾಯದಿಂದ ದೇವಲೋಕ ಪ್ರವೇಶ, ಸಿಂಹಾಸನವಡೆದದ್ದು, ಪಾತಾಳಲೋಕ ಪ್ರವೇಶ, ದಿಗ್ವಿಜಯದಿಂ ಶತ್ರುರಾಜರಂ ಜೈಸಿ ಅವರ ಕನ್ಯೆಯರಂ ವಿವಾಹವಾಗಿ ಅನೇಕ ರಾಕ್ಷಸರಂ ಕೊಂದು ನಂತರ ಸ್ತ್ರೀರಾಜ್ಯಗಳಂ ಹೊಕ್ಕು ಬೇತಾಳನ ಸಹಾಯದಿಂ ಆ ರಾಣಿಯರಂ ವರಿಸಿ ಪರಕಾಯ ಪ್ರವೇಶದಿಂ ಕೃತ್ರಿಮರನ್ನವರಂ ಜೈಸಿ ಸುಗಿಗಳಂ ಉಪದೇಶಗಳಂ ಹೊಂದಿ ತನ್ನ ಪಟ್ಟಣವಂ ಸೇರಿ ಸುಖದಿಂದಿದ್ದನು ದೊಡ್ಡ ನೋಟೀಸಿನಿಂದ ಸರ್ವರಿಗೂ ವಿವರವಾಗಿ ತಿಳಿದಿರುತ್ತದಷ್ಟೆ ಸಂಪೂರ್ಣ ಪುಸ್ತಕವನ್ನು ತರಿಸಿ ಓದಿದರೆ ತಿಳಿಯುತ್ತೆ. ದಪ್ಪ ಕಾಗದ, ಸ್ಫುಟವಾದ ಅಕ್ಷರ, ಒಳ್ಳೆ ಬೈಂಡು ಸಿದ್ಧವಾಗಿದೆ

ಕ್ರಯ ಪ್ರತಿ 1ಕ್ಕೆ 1 8 0 ಅಂಚೆ ಹಾಸಲು 1 ಆಣೆ

ಅನೇಕ ತರಹ ಪುಸ್ತಕಗಳೂ ಸಹ ದೊರೆಯುತ್ತವೆ

ನಮ್ಮ ವಿಳಾಸ —ಎಂ ಆರ್ ವೆಂಕಟಾಚಲಂ ಶೆಟ್ಟಿ,
ಬುಕ್ಕು ಡಿಪೋ, ಚಿಕ್ಕಪೇಟೆ ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

—o—

ಸಂ ೧೯೧೨ನೇ ಇಸವಿ ಜೂಲೈ ತಾ. ೪ ನೇ ಗುರುವಾರ

ಮೈಸೂರು ಸಂಪದಭಿವೃದ್ಧಿಯ ಸಮಾಜವು

III ಕಸಬನ್ನು ವೃದ್ಧಿಮಾಡುವ ಸಲಹೆಗಳು

ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಯ ಸಮಾಜದವರು ಸೂಚಿಸಿರುವ ಸಲಹೆಗಳ ಪೈಕಿ ವಿದ್ಯಾಭಿವೃದ್ಧಿಗೆ ಸಂಬಂಧಪಟ್ಟ ಸಲಹೆಗಳ ವಿಷಯ ಹಿಂದು ಮೊದಲು ತಿಳಿಸಿರುವೆವಷ್ಟೆ. ಹಾಗೆ ವ್ಯವಸಾಯವನ್ನು ಅಭಿವೃದ್ಧಿಮಾಡುವುದಕ್ಕೆ ಅವರು ಸೂಚಿಸಿರುವ ಸಲಹೆಗಳನ್ನು ತಿಳಿಸಬೇಕಾಗಿರುತ್ತದೆ ಪ್ರತಿ ಒಂದು ಹೋಬಳಿಯಲ್ಲೂ ನಿದರ್ಶನಾರ್ಥವಾದ ವ್ಯವಸಾಯ ಫಾರಮನ್ನು ಪ್ರಾರಂಭಮಾಡಿ ವ್ಯವಸಾಯವನ್ನು ಶಾಸ್ತ್ರವತ್ತಾಗಿ ಕಲಿತು ಬಂದಿರುವಂಥಾ ಉಪಾಧ್ಯಾಯರುಗಳನ್ನು ಅವುಗಳ ಮೇಲ್ವಿಚಾರಣೆಗೆ ನೇಮಿಸಬೇಕೆಂದೂ, ಬೆಂಗಳೂರಲ್ಲಿ ಒಂದು ವ್ಯವಸಾಯ ಶಿಕ್ಷಣಾಗಾರವನ್ನು ಕಲ್ಪಿಸಬೇಕೆಂದೂ, ಇದು ಆಗುವ ವರೆಗೂ ಮೈಸೂರಿನಲ್ಲಿರುವ ವ್ಯವಸಾಯಶಾಲೆಯನ್ನು ವೃದ್ಧಿಮಾಡಿ ಅದರಲ್ಲಿ ಕಡೇ ಪಕ್ಷ 12 ಮಂದಿ ರೈತರ ಮಕ್ಕಳನ್ನಿಟ್ಟು ತರಪೇತುಮಾಡಬೇಕೆಂದೂ, ಈಗ ಸರ್ಕಾರಿ ನೌಕರಿಯಲ್ಲಿ 30 ರೂಪಾಯಿನೊಳಗೆ ಸಂಬಳ ಪಡೆಯುತ್ತಿರುವಂಥಾ ಕೆಲವು ಯೌವನಸ್ಥರಿಗೆ ವೇತನ ಕೊಟ್ಟು ಬೆಂಗಳೂರು ತಾತಾ ರೇಷ್ಮೆ ಫಾರಮಿಗೆ ಕಳುಹಿಸಿ ಅಲ್ಲಿ ತರಪೇತಾದ ಮೇಲೆ ಅವರನ್ನು ಸಂಸ್ಥಾನದಾದ್ಯಂತ ರೇಷ್ಮೆ ತಯಾರಾಗುವ ಸ್ಥಳಗಳಲ್ಲಿ ನೇಮಿಸಿ ಆ ಕಸಬನ್ನು ಅಭಿವೃದ್ಧಿಗೆ ತರತಕ್ಕ ವಿಧಾನಗಳನ್ನು ಅವರಿಂದ ಜನರಿಗೆ ಸಾಕ್ಷಾತ್ತಾಗಿ ತೋರಿಸಿ ಕಲಿಸಿಕೊಡುವಂತೆ ಮಾಡಬೇಕೆಂದೂ, ಪೂರ್ವಕಾಲದಲ್ಲಿ ನಮ್ಮ ಸೀಮೆಯೊಳಗೆ ಕೈಯಿಂದಲೇ ತಯಾರಾಗುತ್ತಿದ್ದಂಥಾ ಕಾಗದವನ್ನು ಮತ್ತೆ ಮಾಡಿಸಲಾರಂಭಿಸಬೇಕೆಂದೂ, ಔಷಧಾದಿಗಳನ್ನೂ ಬಣ್ಣಗಳನ್ನೂ ಬಟ್ಟಿದ್ರಾವಕಗಳೇ ಮೊದಲಾದವುಗಳನ್ನೂ ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಸ್ಥಾಪಿಸತಕ್ಕ ಭಾಗವನ್ನು ಯೋಚಿಸತಕ್ಕದ್ದಾಗಿದೆ ಎಂದೂ, ಮೈಸೂರ್ ಬ್ಯಾಂಕ್ ಎಂಬ ಒಂದು ನಿಧಿಯನ್ನು ಪ್ರಾರಂಭಮಾಡಬೇಕೆಂದೂ ಮೇಲ್ಕಂಡ ಸಮಾಜದವರು ಸಲಹೆ ಕೊಟ್ಟಿರುತ್ತಾರೆ

ಈ ಸಲಹೆಗಳ ಪೈಕಿ ಒಳ್ಳೆಯ ವ್ಯವಸಾಯಶಿಕ್ಷಣ ಶಾಲೆಯೊಂದನ್ನು ಪ್ರಾರಂಭಿಸಬೇಕನ್ನುವುದೇ ಉತ್ತಮೋತ್ತಮವಾದದ್ದೆಂದೂ ಅದು ವಿಶೇಷ ಫಲಕಾರಿಯಾದದ್ದಾಗಿದೆ ಎಂದೂ ನಮಗೆ ತೋರುತ್ತದೆ ಈಗ ಈ ಸೀಮೆಯಲ್ಲಿ ಅಂಥಾ ಪಾಠಶಾಲೆ ಇರುವುದಿಲ್ಲ ಸರ್ಕಾರದವರು ಮುಂದಿನ ವರುಷದಿಂದ ಅದನ್ನು ಪ್ರಾರಂಭಿಸಿ ನಡಿಸುವವರಾಗಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ ಅದರಲ್ಲಿ ನೇಮಕವಾಗುವ ಶಿಕ್ಷಕರೆಲ್ಲಾ ವ್ಯವಸಾಯ ಶಾಸ್ತ್ರದಲ್ಲಿ ಪ್ರವೀಣರಾಗಿರಬೇಕು, ಅವರು ರೈತಪ್ರಜೆಗಳ ಮಕ್ಕಳನ್ನು ಸೇರಳವಾಗಿಯೂ ವಿಶೇಷ ಬುದ್ಧಿವಂತರನ್ನಾಗಿಯೂ ತರಪೇತುಮಾಡತಕ್ಕಷ್ಟು ಸಮರ್ಥರಾಗಿರಬೇಕು ಇಂಥಾ ಶಾಲೆ ಬಹಳ ಹಣ ಬೇಕಾಗುವುದರಿಂದ ಅದನ್ನು ಒದಗಿಸಬಹುದಾದ ಮಾರ್ಗವನ್ನು ಮಾತ್ರ ಈ ಸಮಾಜದವರು ಸೂಚಿಸಿರುವುದಿಲ್ಲ.

ಉಳಿದ ಸಲಹೆಗಳ ಪೈಕಿ ಕೆಲವು ನಿರರ್ಥಕವಾದವುಗಳೆಂದು ನಮಗೆ ತೋರುತ್ತಿವೆ ಸರ್ಕಾರಿ ನೌಕರಿಯಲ್ಲಿರುವ ಬರವಣಿಗೆಯವರನ್ನು ಬದಲಾಯಿಸಿ ಒಂದೆರಡು ವರುಷ ತರಪೇತು ಮಾಡಿದ ಮಾತ್ರಕ್ಕೇ ಅವರಿಂದ ಈ ಸಂಸ್ಥಾನದ ರೇಷ್ಮೆ ಕಸಬನ್ನು ವೃದ್ಧಿ ಮಾಡುವುದು ಎಷ್ಟುಮಟ್ಟಿಗೆ ಸಾಧ್ಯವೋ ನಮಗೆ ತಿಳಿಯದು. ಇಂಥವರು ರೇಷ್ಮೆ ತಯಾರುಮಾಡುವವರಿಗೂ ನೂಲುವವರಿಗೂ ಆ ಕಸಬನ್ನು ಚನ್ನಾಗಿಯೂ ಫಲಕಾರಿಯಾಗಿಯೂ ಹೇಳಿಕೊಡಲು ಸಮರ್ಥರಾಗಬಲ್ಲರೇ ? ಈ ಸೀಮೆಯ ಪ್ರಜೆಗಳೂ ಮೈಸೂರು ಗವರ್ನ್‌ಮೆಂಟಿನವರೂ ತಿಳಿಯಬೇಕಾದ ವಿಷಯ ಒಂದುಂಟು ಒಸಗೆಳು ಮನಸ್ಸಿಟ್ಟು ಕೆಲಸ ಮಾಡತಕ್ಕವರಾಗದಿದ್ದರೆ ಯಾವ ಕಸಬೂ ವೃದ್ಧಿಯಾಗುವುದಿಲ್ಲ. ಅವರು ಅನೇಕ ವರುಷಗಳ ಕಾಲ ಮುತುವರ್ಜಿ ವಹಿಸಿ ಶ್ರಮಪಟ್ಟು ಕಸಬನ್ನು ಸಾಂಗವಾಗಿ ಕಲಿಯುವಂಥವರಾಗಬೇಕು ಪೂರ್ವಕಾಲದಲ್ಲಿ ಕೈಯಿಂದ ಮಾಡುತ್ತಿದ್ದಂಥಾ ಕಾಗದವನ್ನು ಈಗ ತಯಾರುಮಾಡಿದರೆ ಅದನ್ನು ಕೊಂಡುಕೊಳ್ಳುವವರ್‍ಯಾರು ತಿಳಿಯದು. ಹಿಂದೆ ಆಗುತ್ತಿದ್ದ ಕಾಗದವು ದಪ್ಪ, ಒರಟು [illegible] ಯಂತ್ರಗಳಲ್ಲಿ ತಯಾರಾಗು ಕಾಗದಕ್ಕಿಂತ [illegible] ತಯಾರುಮಾಡುವ [illegible] ಬರಲಾರದ ಹೋಗುವುದು [illegible] ಕೈಯಿಂದ ತಯಾರಾಗುವ ಕಾಗದವನ್ನು ಕೊಂಡು ಉಪಯೋಗಿಸುವುದೇನಿಲ್ಲ [illegible] ಆ ಕಾಗದವು [illegible]. [illegible] ಇರಬೇಕಾದಂಥಾ ವಿಷಯಗಳನ್ನು [illegible] ಕಾಗದವನ್ನು ಉಪಯೋಗಿಸುತ್ತಾರೆ ಹಿಂದುಸ್ಥಾನದಲ್ಲಿ ಕಾಗದ ತಯಾರಾಗುವುದಕ್ಕೆ ಅಷ್ಟೇನೂ [illegible] ಅನುಕೂಲಗಳಿಲ್ಲ ಅದಕ್ಕೆ ಬೇಕಾಗಿರುವ [illegible] ಸೀರು [illegible] ಈ ಸೀಮೆಯಲ್ಲಿ ಸಿಕ್ಕುವುದಿಲ್ಲ ಯಂತ್ರಗಳನ್ನಿಟ್ಟು [illegible] ಕಾಗದವನ್ನು ಮಾಡತಕ್ಕದ್ದು ಸಾಧ್ಯವೇ ಎಂಬುವುದನ್ನು ಇಂಡಿಯಾ ಗವರ್ನ್‌ಮೆಂಟಿನವರು ತಿಳಿದವರ ಮೂಲಕ [illegible] ಕ್ಯಯಿಂದ ಕಾಗದ [illegible] ಯಾವ ಸಂಬಂಧವೂ ಇರುವುದಿಲ್ಲ

ಈ ಸಮಾಜದಲ್ಲಿ [illegible] ಆಶ್ಚರ್ಯಕರವಾಗಿರು [illegible] ಈ ಸಮಾಜವು ಒಂದು ವರುಷದಲ್ಲಿ 63 000 ರೂಪಾಯಿ [illegible], ಇದರಲ್ಲಿ ಬಹುಭಾಗ ಪ್ರಯೋಜನ ಕರತಕ್ಕದ್ದಾಗಿಲ್ಲ ಕೆಲವು [illegible] ನಮ್ಮ ಮಾತ್ರ [illegible] ಪುಸ್ತಕಗಳನ್ನೂ ಒಂದು [illegible] ಕೊಂಡುಕೊಂಡಿರುವರು, [illegible] ಸಮಾಜದ [illegible] ಪ್ರಯಾಣದ [illegible] 1912 13 ನೇ ಸಾಲಿನಲ್ಲಿ [illegible] 17,100 ರೂಪಾಯಿ ಬೇಕಾಗುವುದೆಂದೂ, ಈ ಪೈಕಿ 1,000 ರೂಪಾಯಿ ಮಾತ್ರ [illegible] ತಿಳಿಸಿರುವುದು [illegible] ಉಳಿದ ಹಣ [illegible] ಪ್ರಯಾಣದ [illegible] ಉಪಯೋಗವಾಗುವುದು [illegible] ಮಾತ್ರವಾದ [illegible] ವಿಷಯದಲ್ಲಿ [illegible] ಸಲಹೆಗಳನ್ನು [illegible] ಪ್ರಯೋಜನವಾದೀತು?

ಈ ಸಮಾಜದ ಕಾರ್ಯಗಳಿಗಾಗಿ ಎಷ್ಟು ಹಣ ಖರ್ಚಾಗುತ್ತಿದೆ ಎಂಬ ವಿಷಯದಲ್ಲಿ ಗವರ್ನ್‌ಮೆಂಟಿನವರು ಸರಿಯಾಗಿ ತಿಳಿಸಿರುವುದಿಲ್ಲ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿರುವುದೋ ಅದೆಲ್ಲಾ ರಿಪೋರ್ಟಿನಲ್ಲಿ ಕಾಣಿಸಿದ್ದರೆ ಚನ್ನಾಗಿತ್ತು ಪ್ರಜೆಗಳಿಗೆ ತಿಳಿಸಿರುವ ಭಾಗದಲ್ಲಿ ಇದೊಂದೂ ಚನ್ನಾಗಿ ಗೊತ್ತಾಗುವುದಿಲ್ಲ ಈ ಸಂಸ್ಥಾನದಲ್ಲಿ ವಿದ್ಯೆ, ವ್ಯವಸಾಯ, ಕೈಗಾರಿಕೆಗಳನ್ನು ಅಭಿವೃದ್ಧಿಮಾಡುವುದಕ್ಕೆ ಸರ್ಕಾರದವರು ಸಂಬಳಗಾರರನ್ನೂ [illegible] ಕೂಡಿಸಿ ಸಮಾಜವನ್ನು ಕಲ್ಪಿಸಿದ್ದು ಬಹಳ ಒಳ್ಳೆಯದು, ಈ ಸಮಾಜದಿಂದ ಆಗುವ ಫಲ ಪ್ರಯೋಜನಾದಿಗಳನ್ನು ತಿಳಿದು ಹೇಳುವುದಕ್ಕೆ ಇನ್ನೂ ಅವಕಾಶವು ಸರಿ [illegible] ನಡೆದಿರುವ ಕಾರ್ಯಗಳನ್ನು ನೋಡಲಾಗಿ ಇದುವರೆಗೆ ತಕ್ಕಷ್ಟು ಪ್ರತಿಫಲ ಈ ಸಮಾಜದಿಂದ ಆಗಲಿಲ್ಲವೆಂದೂ, ಹಣ ಖರ್ಚಾದ ಮಾರ್ಗಗಳು ಸರಿಯಾಗಿ ತೋರಬಟ್ಟಿಲ್ಲವೆಂದೂ ಹೇಳಬೇಕಾಗಿದೆ

ದೆವ್ವಗಳ ರಾಜ್ಯವಿಸ್ತಾರ.

ನಮ್ಮ ಭಾರತೀಯರಲ್ಲಿ ದೆವ್ವಗಳನ್ನು ಪೂಜಿಸುವುದು ಅಪರೂಪವಲ್ಲ ದೆವ್ವಗಳನ್ನಲ್ಲದೆ ಬೇರೆ ಯಾವ ದೇವತೆಗಳನ್ನು ಪೂಜಿಸದಿರುವ ಕೆಲವು ಜಾತಿಯವರು ನಮ್ಮ ದೇಶದಲ್ಲಿ ಇರುತ್ತಾರೆ ದೊಡ್ಡ ಮರಗಳಾಗಿಯೂ ಪುರಾತನ ಕಾಲದ ಮನೆಗಳಾಗಿಯೂ ಇರುವ ಸ್ಥಳಗಳಲ್ಲಿ ದೆವ್ವಗಳು ವಾಸಮಾಡುತ್ತಿರುವವೆಂದು ನಂಬಿರುವರು ತಮ್ಮ ಹೊಲ ತೋಟ, ಗದ್ದೆಗಳ ಪೈರು ಕೆಟ್ಟುಹೋದರೆ ಅಥವಾ ದನ ಕರುಗಳಿಗೆ ಏನಾದರೂ ಅಂಟುಜಾಡ್ಯಗಳು ಪ್ರಾಪ್ತವಾದರೆ ಅಥವಾ ತಮಗೂ ತಮ್ಮವರಿಗೂ ರೋಗಾದ್ಯುಪದ್ರಗಳು ಬಂದೊದಗಿದರೆ ಯಾವುದೋ

ಒಂದು ದೆವ್ವವು ತಮ್ಮನ್ನು ಈ ಪ್ರಕಾರ ಕಾಡಿಸುತ್ತಾ ಇದೆಯೆಂದು ನಂಬುವರು. ಇಂತಹ ಸಂದರ್ಭಗಳಲ್ಲಿ ದೆವ್ವ ಬಿಡಿಸುವವರ ಹತ್ತಿರಕ್ಕೆ ಹೋಗಿ ತಮ್ಮನ್ನು ಕಾಡಿಸುತ್ತಿರುವ ದೆವ್ವವು ಯಾವುದೆಂದೂ ಈ ಕಾಟವನ್ನು ನೀಗಿಸಿಕೊಳ್ಳಬೇಕಾದರೆ ಏನುಕೊಡಬೇಕೆಂದೂ ವಿಚಾರಿಸುವರು. ಅಯ್ಯೋ, ಈ ಬಡ ಜನರಲ್ಲಿ ಮೌಢ್ಯವು ಎಷ್ಟಾಗಿ ತುಂಬಿಕೊಂಡಿದೆ! ದೆವ್ವ ಬಿಡಿಸುವವರು ಎಷ್ಟಾಗಿ ಇವರಿಗೆ ಮೋಸವನ್ನುಂಟುಮಾಡುತ್ತಾ ಬರುತ್ತಾರೆ! ದೆವ್ವಹಿಡಿದ ಹೆಂಗಸರಿಗೂ ಮಕ್ಕಳಿಗೂ ಇವರು ಕೊಡುವ ಚಿತ್ರಹಿಂಸೆಯನ್ನು ಯಾರು ನೋಡಿ ಸಹಿಸಾರು? ಈ ಜನರು ಹೊರಗೆ ತಿರುಗಾಡುವಾಗಲೆಲ್ಲಾ ದೆವ್ವಗಳ ಭಯದಿಂದ ಅವರ ಮನಸ್ಸು ತಲ್ಲಣಪಡುತ್ತಿರುವುದು. ತಮಗೆ ಆದಾಯ ನಷ್ಟಗಳನ್ನುಂಟುಮಾಡುವುದಕ್ಕೂ ತಮ್ಮ ಪ್ರಾಣವನ್ನು ತೆಗೆಯುವುದಕ್ಕೂ ಅದನ್ನು ಉಳಿಸುವುದಕ್ಕೂ ದೆವ್ವಗಳಿಗೆ ಪೂರ್ಣ ಶಕ್ತಿಯುಂಟೆಂದು ನಂಬಿರುವರು.

ಒಂದು ದಿನ ರಾತ್ರಿಯಲ್ಲಿ ಮದ್ರಾಸಿಗೆ ಸಮೀಪವಾಗಿರುವ ಒಂದು ಊರಿನ ಬೀದಿಯಲ್ಲಿ ಒಬ್ಬ ಕ್ರೈಸ್ತಪಾದ್ರಿ ದೊರೆಯವರು ಹೋಗುತ್ತಾ ಮುಂದೆ ದೊಂದಿಗಳ ಬೆಳಕನ್ನೂ ಜನಗಳ ದೊಡ್ಡ ಗುಂಪು ಸೇರಿಕೊಂಡು ಗದ್ದಲಮಾಡುತ್ತಿದ್ದುದನ್ನೂ ಕಂಡರು. ಆ ಜನರ ಗುಂಪು ನಡುದಾರಿಯಲ್ಲಿಯೇ ನಿಂತಿದ್ದುದರಿಂದ ಅವರ ಮಧ್ಯದಲ್ಲಿಯೇ ಹಾದು ಹೋಗುತ್ತಿರುವಾಗ ತಮ್ಮ ಮುಂದೆ ಮೂರ್ಛೆಬಂದಂತೆ ನೆಲದ ಮೇಲೆ ಬಿದ್ದಿದ್ದ ಒಬ್ಬ ಬಡ ಹೆಂಗಸನ್ನೂ ಅವಳ ಎದುರಿನಲ್ಲಿ ದೆವ್ವ ಬಿಡಿಸುವುದಕ್ಕಾಗಿ ನಿಂತಿದ್ದ ಒಬ್ಬ ಪೂಜಾರಿಯನ್ನೂ ನೋಡಿದರು. ಆ ಗುಂಪಿನವರಲ್ಲಿ ಯಾರೋ ಒಬ್ಬನು ಪಾದ್ರಿಸಾಹೇಬರು ನೋಡಲಿ ಬಿಡಿ, ಬರುವ ವಾರದಲ್ಲಿ ಅವರು ಇವರ ವಿಷಯ ಒಂದು ಉಪನ್ಯಾಸ ಮಾಡುವರು ಎಂದು ಕೂಗಿದನು. ಆಗ ಆ ಪಾದ್ರಿ ದೊರೆಯು—ಇಲ್ಲ ಇಲ್ಲ. ನಾನು ಬರುವ ವಾರದವರೆಗೂ ಕಾಯುವುದಿಲ್ಲ. ನಾನು ಈಗಲೇ ಅವರ ವಿಷಯ ಮಾತಾಡುತ್ತೇನೆಂದು ಉತ್ತರ ಕೊಟ್ಟರು. ಆ ಮೇಲೆ ಅವರು ನಾನು ನಿಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ. ನೀವು ಅದಕ್ಕೆ ಉತ್ತರ ಕೊಡಬೇಕು. ಕ್ರೈಸ್ತರಿಗೆ ದೆವ್ವ ಹಿಡಿಯದಿರುವುದಕ್ಕೂ ನಿಮ್ಮ ಜನಗಳಿಗೆ ಮಾತ್ರ ದೆವ್ವ ಹಿಡಿಯುವುದಕ್ಕೂ ಕಾರಣವೇನು? ಕ್ರೈಸ್ತನು ದೆವ್ವಗಳಿಗೆ ಹೆದರುವುದೇ ಇಲ್ಲ. ಒಬ್ಬನು ಹಿಂದೆ ದೆವ್ವವನ್ನು ಪೂಜಿಸುತ್ತಿದ್ದವನಾದರೂ ಅವನು ಕ್ರೈಸ್ತನಾದ ಮೇಲೆ ದೆವ್ವಕ್ಕೆ ಭಯಪಡುವುದನ್ನು ಬಿಟ್ಟುಬಿಡುತ್ತಾನೆ. ಆ ದೆವ್ವವು ಅವನನ್ನು ಕಾಡಿಸುವುದೇ ಇಲ್ಲ. ಇದಕ್ಕೆ ಕಾರಣವೇನು? ಹೇಳಿರಿ ಎಂದು ಕೇಳಿದರು.

ಕೂಡಲೆ ಆ ಗುಂಪಿನಲ್ಲಿ ಮತ್ತೊಬ್ಬನು ನಿಮ್ಮ ಜನಗಳಿಗೆ ದೆವ್ವಗಳ ಕಾಟವಿಲ್ಲದಿರುವುದಕ್ಕೆ ಕಾರಣವೇನೆಂದರೆ ನಿಮ್ಮ ಯೇಸುಸ್ವಾಮಿಗೆ ದೆವ್ವಗಳ ಮೇಲೆ ಅಧಿಕಾರವಿದೆ. ಅವನು ತನ್ನನ್ನು ನಂಬಿದವರನ್ನು ಅವುಗಳ ಕಾಟದಿಂದ ತಪ್ಪಿಸಲು ಶಕ್ತನಾಗಿದ್ದಾನೆಂದು ಹೇಳಿದನು.

ಅವನು ಹೇಳಿದ ಮಾತು ಸತ್ಯವಾದುದು. ದೆವ್ವಹಿಡಿಯುವುದು ಎಂದರೆ ಪ್ರತಿಯೊಂದು ಸಂದರ್ಭಗಳಲ್ಲಿಯೂ ಏನೆಂದು ವಿವರಿಸಿ ಹೇಳುವುದು ಸುಲಭಸಾಧ್ಯವಲ್ಲ. ಅನೇಕ ಸಂದರ್ಭಗಳಲ್ಲಿ ಅದು ಬರೀ ಬುದ್ಧಿಭ್ರಮಣೆಯೇ ಹೊರತು ಬೇರೆ ಏನೂ ಅಲ್ಲ. ನಮ್ಮನ್ನು ಕಾಡಿಸುವ ದೆವ್ವಗಳು ಸಹಜವಾಗಿಯೂ ಇರುತ್ತವೆಂಬುವುದು ಸುಳ್ಳು. ಮೂಢರು ದೆವ್ವಗಳಿವೆ ಎಂದು ನಂಬಿರುವುದರಿಂದ ಅವರ ಮನಸ್ಸಿನ ಕಳವಳವೇ ಅವರನ್ನು ಹಾಗೆ ಪೀಡಿಸುತ್ತದೆ. ಒಂದುವೇಳೆ ದೆವ್ವಗಳಿರುವುದೂ ಅವುಗಳು ಮನುಷ್ಯರನ್ನು ಕಾಡಿಸುವುದೂ ನಿಜವಾಗಿದ್ದರೂ ಕ್ರಿಸ್ತನು ಅವುಗಳಿಗಿಂತಲೂ ಹೆಚ್ಚು ಶಕ್ತನಾಗಿದ್ದಾನೆ. ಆತನು ತನ್ನ ಶಿಷ್ಯರಿಗೆ ಹೇಳುವುದೇನೆಂದರೆ - ಮನಶ್ಶಾಂತಿಯನ್ನು ನಿಮಗೆ ಕೊಡುತ್ತೇನೆ. ಲೋಕವು ಅಂಥಾ ಶಾಂತಿಯನ್ನು ಕೊಡಲಾರದು ಮತ್ತು ಅದನ್ನು ತೆಗೆಯಲಾರದು.

ದೇವರು ಒಬ್ಬನೇ, ಆತನೇ ಸರ್ವರ ಒಡೆಯನೂ ಪರಿಪಾಲಕನೂ ಆಗಿದ್ದಾನೆ ಎಂಬ ಈ ತಿಳುವಳಿಕೆಯನ್ನು ಕ್ರಿಸ್ತನು ನಮಗೆ ಕೊಟ್ಟಿರುತ್ತಾನೆ. ಆತನು ತಂದೆಯಾದ ದೇವರು ನೀತಿಯೂ ಅನಂತ ಪ್ರೀತಿಸಾಗರನೂ ಆಗಿರುತ್ತಾನೆ. ಆತನ ಕೃಪಾಶ್ರಿತರಾದ ನಾವು ದೆವ್ವಗಳಿಗೆ ಏಕೆ ಭಯಪಡಬೇಕು? - ನೀವು ದೆವ್ವಗಳನ್ನು ಬಿಡಿಸುವುದಕ್ಕೆ ಶಕ್ತರಾಗುವಿರಿ - ಎಂದು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ ಮಾತು ಸತ್ಯವಾದುದು. ಯೇಸು ಕ್ರಿಸ್ತನು ಘೋಷಿತನಾಗುವ ಕಡೆಗಳಲ್ಲೆಲ್ಲಾ ದೆವ್ವಗಳ ರಾಜ್ಯವು ಬಯಲಾಗುವುದು. ಜನರು ದೆವ್ವಗಳಿಗೆ ಭಯಪಡದೆಯೂ ಅವುಗಳನ್ನು ಆರಾಧಿಸದೆಯೂ ಇರುವ ಕಾಲವು ಈ ನಮ್ಮ ಭರತಖಂಡಕ್ಕೂ ಬರುವುದೆಂದು ನಂಬಿದ್ದೇವೆ.

ಒಳದೇಶದ ವೃತ್ತಾಂತಗಳು.

ದಿವಾನರವರೂ, ಕೌನ್ಸಿಲರುಗಳೂ ಪರಿವಾರ ಸಮೇತ ಮೊನ್ನೆಯೂ ಕೈಯೂ ರಾಜಧಾನಿಯಿಂದ ಬೆಂಗಳೂರಿಗೆ ವಾಪಸು ತೆರಳಿದರು.

* * *

ಈ ತಿಂಗಳ 11 ನೇ ತಾ. ನಂದೆ ನುಂಡ್ಯದಲ್ಲಿ ಗಿರಿಜಾಕಲ್ಯಾಣೋತ್ಸವವೂ ಮಹಾರಾವಣೆಗಳೂ ಜರುಗುವವೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

* * *

ರಾಜಧಾನಿಯ ಸಂಗೀತ ಸಮಾಜದವರು ಮುಂದಿನ ಭಾನುವಾರ ಸಾಯಂಕಾಲ ಸಂಗೀತ ವಿದ್ವಾನ್ ಮ|| ಬಿ ಕೃಷ್ಣಪ್ಪನವರ ಹಾಡುಗಾರಿಕೆಯನ್ನು ಟೌನ್ ಹಾಲ್ ಮಂದಿರದಲ್ಲಿ ನಡಿಸುವವರಾಗಿದಾರೆ.

* * *

ಬರೋಡಾ ಸಂಸ್ಥಾನದ ಮಹಾರಾಜರವರು ಮೊನ್ನೆ ದಿನ ನಮ್ಮ ಚೀಫ್ ಇಂಜಿನಿಯರವರ ಕೂಡ ದಯಮಾಡಿ ಕನ್ನಂಬಾಡಿ ಕಟ್ಟೆಯ ಕಾಮಗಾರಿಯನ್ನು ನೋಡಿ ಬಂದು, ನೆನ್ನೆ ಬೆಂಗಳೂರಿಗೆ ದಯಮಾಡುವವರಾಗಿದ್ದರು.

* * *

ನಗರ್ ತಾಲ್ಲೂಕು ಲಕ್ಷ್ಮೀಪುರದ ಹೋಬಳಿ ಬ್ರಾಹ್ಮಣ ತುರುವೆ ಗ್ರಾಮದ ಒಳಗೆ ಕಳೆದ ಮಾರ್ಚಿ ಪ್ರಾರಂಭದಲ್ಲಿ 518 ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ದೊರೆತು, ವಾಲೀಕರು ಇಂಥಾವರೆಂದು ಗೊತ್ತಾಗದೆ ಸರ್ಕಾರದಲ್ಲಿ ಇಟ್ಟುಕೊಂಡಿದಾರೆ.

* * *

ಒಬ್ಬ ಬಾತ್ಮೀದಾರರಿಂದ —ಅಗ್ನಿಹೋತ್ರ ನರಸಿಂಹಶಾಸ್ತ್ರಿಗಳವರು ತ್ಯಾಮುಂಡ್ಲದಲ್ಲಿ ಸೋಮಯಾಗ ಮಾಡಿದ್ದರಿಂದ ಇವರ ಹೆಸರನ್ನು ಬದಲಾಯಿಸಿ ಇವರ ಸೋಮಯಾಜಿಗಳೆಂದು ವಾಡಿಕೆಯಲ್ಲಿರುವಂತೆ ಅಪ್ಪಣೆ ಆಗಬೇಕೆಂದು ವಿದ್ಯಾಭ್ಯಾಸದ ಇಲಾಖಾ ಮುಖ್ಯಾಧಿಕಾರಿಗಳ ಶಿಫಾರಸಿನಂತೆ ಮೈಸೂರು ಗವರ್ನಮೆಂಟಿನಲ್ಲಿ ಮುಂದಕ್ಕೆ ಬ್ರ|| ನರಸಿಂಹ ಸೋಮಯಾಜಿಗಳೆಂದು ಅಪ್ಪಣೆಯಾಗಿರುತ್ತೆ.

* * *

ಪ್ಲೇಗ್ ಉಪದ್ರವು ಈ ಸಂಸ್ಥಾನಕ್ಕೆ ಸೇರಿದ 233 ಗ್ರಾಮ ಊರುಗಳಲ್ಲಿ ಇನ್ನೂ ಇದ್ದೇ ಇದೆ. ಜೂನ್ ತಾ 14ಕ್ಕೆ ಅಯ್ಯಿರಾದ ವಾರದಲ್ಲಿ ಈ ಉಪದ್ರವು 618 ಜನರಿಗೆ ತಗಲಿ 382 ಮರಣಗಳಾದವೆಂದೂ, ತಾ 21ಕ್ಕೆ ಅಯ್ಯಿರಾದ ವಾರದಲ್ಲಿ 658 ಜನರಿಗೆ ತಗಲಿ 417 ಜನರು ತೀರಿಹೋದರೆಂದೂ ಸರ್ಕಾರದ ವರದಿಯು ಹೇಳುವುದನ್ನು ನೋಡಿದರೆ ಈ ಉಪದ್ರವು ಉಲ್ಬಣವಾಗಿಯೇ ಇದೆ ಎಂದು ಗೊತ್ತಾಗುವುದು. ಸರ್ಕಾರದವರು ಗ್ರಾಮಾಂತರಗಳಲ್ಲಿ ಜನಗಳಿಗೆ ಒಳ್ಳೇ ಕುಡಿಯುವ ನೀರಿನ ಭಾವಿಗಳನ್ನು ಹೇರಳವಾಗಿ ಶೀಘ್ರದಿಂದ ಒದಗಿಸಿ ಕೊಡಬೇಕಾಗಿದೆ.

ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ತೂಕ ಮತ್ತು ಅಳತೆಗಳ ಕಾನೂನು ಮುಂದಿನ ಅಕ್ಟೋಬರ್ ಲಾಗಾಯತು ಜಾರಿಯಲ್ಲಿ ಬರುವುದಷ್ಟೆ. ಇದಕ್ಕೋಸ್ಕರ ಸರಿಯಾದ ಅಳತೆ ಸೇರು ಮುಂತಾದವುಗಳನ್ನೂ, ತೂಕದ ಬಟ್ಟುಗಳನ್ನೂ ಯರಕ ಹೊಯಿದು ತಯಾರುಮಾಡಿಕೊಡಬೇಕೆಂದು ಸರ್ಕಾರದವರು ಖಾಯಿಸ್ ಮಾಡಿಸಿದಾರೆ. ಕಬ್ಬಿಣ ಕೆಲಸದ ಕಾರ್ಖಾನೆದಾರರಿಗೆ ಇದು ಒಳ್ಳೇ ಸಮಯ. ಅಳತೆಗಳು ಪ್ರತಿ ಒಂದೂ 7,000ವೂ, ತೂಕದ ಬಟ್ಟುಗಳು ಪ್ರತಿ ಒಂದೂ 9,000ವೂ ಸರ್ಕಾರಕ್ಕೆ ಬೇಕಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಮಗಳೂರು, ಕಡೂರು, ತರೀಕೆರೆ; ಹಾಸನ ತಾಲ್ಲೂಕು ಬಳ್ಳಕೆರೆ, ಆಲೂರ್ ಸಬ್ ತಾಲ್ಲೂಕು ಕೊಗರನಹಳ್ಳಿ, ಮಳವಳ್ಳಿ, ಹುಣಸೂರು—ಈ ಸ್ಥಳಗಳು ಅಂಟುಜಾಡ್ಯವಿರತಕ್ಕ ಪ್ರದೇಶವೆಂದು ತಿಳಿಯತಕ್ಕದ್ದು.

ಸಾಹುಕಾರ್ ಮತ್ತು ಜವಾನ್‌ದಾರ್ ಮ|| ಯಾಗ್ಯೆಯ ಕೃಷ್ಣಪ್ಪನವರನ್ನು ಸಾಗರದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಕಮಾಡಿದೆ.

ಮ|| ರೇವಣ್ಣನವರನ್ನು ತುಂಕೂರು ತಾಲ್ಲೂಕು ಬೆಳ್ಳಾವಿ ಯೂನಿಯನ್ ಪಂಚಾಯತಿ ಮೆಂಬರಾಗಿ ನೇಮಕಮಾಡಿದೆ.

ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್ ಮ|| ವೈ ನರಸಿಂಗರಾಯರಿಗೆ ಶಿವಮೊಗ್ಗ ಖಜಾನೆ ಛಾರ್ಜಿನಿಂದ ಬಿಡುಗಡೆಯಾದ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರೆವಿನ್ಯೂ ಹೆಡ್ ಮುನಷಿ ಮ|| ಎಸ್. ನಾರಾಯಣರಾಯರೇ ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್ರಾಗಿ ಬದಲಿ ನೋಡತಕ್ಕದ್ದು.

ಗೇಂ ಪ್ರಿಸರ್ವ್ ಆಫೀಸರ್ ಮ|| ಎಂ. ಮುತ್ತಯ್ಯನವರು ರಜದಿಂದ ಮೇ ತಾ 13 ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ.

ಬೆಂಗಳೂರು ಸರ್ಕಲ್ ಸ್ಕೂಲ್ ಇನ್ಸ್‌ಪೆಕ್ಟರ್ ಮ|| ಟಿ. ಆರ್. ವೆಂಕಟಸಾಮಿ ನಾಯ್ಡುಯವರಿಗೆ ಮೇ ತಾ 6 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮ|| ಬಿ. ದಾಸಪ್ಪನವರು ಅವರ ಕೆಲಸವನ್ನು ಬದಲಿ ನೋಡತಕ್ಕದ್ದು.

ಮ|| ಸೀತಾರಾಮಯ್ಯನವರು ಕೆಲಸದಿಂದ ನಿವೃತ್ತರಾದ ಸಬಬು ಮ|| ಸಿ ಆರ್. ನಾರಾಯಣಸಾಮಿ ಮೊದಲಿಯಾರ್ರನ್ನು ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ವರ್ಗಮಾಡಿದೆ.

ಮ|| ಪಿ ಶ್ರೀನಿವಾಸರಾಯರು ಕೆಲಸದಿಂದ ನಿವೃತ್ತರಾದ ಸಬಬು ಮ|| ಕೆ ಮೈಲಾರಿರಾಯರನ್ನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೆಲಸಕ್ಕೆ ವರ್ಗಮಾಡಿದೆ.

ಅ|| ಕಮಿಷನರ್ ಮ|| ಎಸ್. ಪಿ. ರಾಜಗೋಪಾಲಾಚಾರಿಯವರನ್ನು ಹಾಸನದಿಂದ ರೆವಿನ್ಯೂ ಜನರಲ್ ಸೆಕ್ರೆಟೇರಿಯಟ್ಟಿಗೆ ವರ್ಗಮಾಡಿದೆ.

ಮ|| ಸಿ ಮುಟ್ಟಿಯನವರನ್ನು ತುಂಕೂರಿನಿಂದ ಸಕಲೇಶಪುರದ ಸಬ್ ಡಿವಿಜನ್ ಛಾರ್ಜಗೂ, ಮ|| ಎ. ಕೃಷ್ಣಸ್ವಾಮಿಯ್ಯಂಗಾರ್ರನ್ನು ಫ್ರೆಂಚ್ ರಾಕ್ಸಿನಿಂದ ಮಧುಗಿರಿ ಸಬ್ ಡಿವಿಜನ್ ಛಾರ್ಜಗೂ, ಮ|| ಎಸ್ ಅಬ್ದುಲ್ ವಜೀದ್‌ಯವರನ್ನು ಫ್ರೆಂಚ್‌ರಾಕ್ಸ್ ಪೋಲೀಸ್ ಛಾರ್ಜಿಗೂ, ಮ|| ಎನ್ ರಾಮರಾಯರನ್ನು ಶಿವಮೊಗ್ಗೆಯಿಂದ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಛಾರ್ಜಗೂ ವರ್ಗಮಾಡಿದೆ.

ಮ|| ಎ ವಿ ರಾಮನಾಥನ್‌ಯವರನ್ನು ಮೈಸೂರಿನಿಂದ ಶಿವಮೊಗ್ಗಾ ಸಬ್ ಡಿವಿಜನ್ ಛಾರ್ಜಗೂ, ಮ|| ಟಿ ಜಿ ರಾಮ ಅಯ್ಯರವರನ್ನು ಚಿತ್ರದುರ್ಗದಿಂದ ಮೈಸೂರಿಗೂ, ಮ|| ಬಿ ಎಸ್ ರಾಜೋಜಿರಾಯರನ್ನು ಮೈಸೂರು ಪೋಲೀಸ್ ಇಲಾಖೆಯಿಂದ ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿಯೂ (ಮ|| ಎನ್ ಸುಬ್ಬರಾಯರು ಕೆಲಸದಿಂದ ನಿವೃತ್ತರಾಗುವ ಸಬಬು), ಮ|| ಸಿ. ದೇವರಾಜೆ ಅರಸಿನವರನ್ನು ತುಂಕೂರಿನಿಂದ ಮೈಸೂರು ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ವರ್ಗಮಾಡಿದೆ.

ಅ|| ಸರ್ಜನ್ ಮ|| ಟಿ ಎಸ್ ಸಿದ್ದಪ್ಪನವರನ್ನು ಕನ್ನಂಬಾಡಿಯಿಂದ ಮೂಡಿಗೆರೆಗೂ, ಮ|| ಸಿ ಕುಪ್ಪುಸಾಮಿ ಪಿಳ್ಳೆಯವರನ್ನು ಮೂಡಿಗೆರೆಯಿಂದ ಕನ್ನಂಬಾಡಿಗೂ ವರ್ಗಮಾಡಿದೆ.

ಮ|| ಎಂ ರಾಮರಾಯರಿಂದ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು ತುಂಕೂರು ಡಿಸ್ಟ್ರಿಕ್ಟಿನ ಛಾರ್ಜನ್ನು ಜೂನ್ ತಾ 18 ರಲ್ಲಿ ವಹಿಸಿಕೊಂಡರು.

ಗವರ್ನ್‌ಮೆಂಟ್ ಅ|| ಸೆಕ್ರೆಟರಿ ಮ|| ಎನ್. ಪಿ ಸುಬ್ರಹ್ಮಣ್ಯ ಅಯ್ಯರವರಿಗೆ ಜೂನ್ ತಾ 10ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕನ್ನಂಬಾಡಿ ಕಲಾವ್ ಡಿವಿಜನ್ ಅ|| ಇಂಜಿನಿಯರ್ ಮ|| ಎನ್ ಜಿ ಕೃಷ್ಣ ಅಯ್ಯಂಗಾರ್ರಿಗೆ ಫೆಬ್ರವರಿ ತಾ 3ರಿಂದ ಒಂದು ತಿಂಗಳು ಹನ್ನೊಂದು ದಿನಗಳ ಪ್ರಿವಿಲೆಜ್ ರಜವನ್ನೂ, ಅದರ ಜೊತೆಗೆ ನಾಲ್ಕು ತಿಂಗಳು ಹತ್ತೊಂಭತ್ತು ದಿನಗಳ ಕಾಯಿಲೆ ರಜವನ್ನೂ ಕೊಟ್ಟಿದೆ.

ಜೂನ್ ತಾ. 11ರ ಲಾಗಾಯತು ರೈಲ್ವೆ ಬಡಾವಣೆಯ ಇಲಾಖೆಯು ಹೊಸದಾಗಿ ಸ್ಥಾಪಿಸಿಟ್ಟು, ಮ|| ಇ ಎ ಎಸ್. ಬೆಲ್‌ಯವರನ್ನು ಇಂಜಿನಿಯರ್ ಇನ್ ಚೀಫರಾಗಿ ನೇಮಿಸಿದೆ.

ಹುಣಸೂರು ತಾಲ್ಲೂಕು ಅಮಲ್ದಾರ್ ಮ|| ಆರ್ ಎ ನರಸಿಂಹ ಅಯ್ಯಂಗಾರ್ರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮ|| ಕೆ. ನಾಗೇಶ ಶಾಸ್ತ್ರಿಯವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಚಳ್ಳಕೆರೆ ತಾಲ್ಲೂಕು ಅಮಲ್ದಾರ್ ಮ|| ಕೆ ಹನುಮಂತರಾಯರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮ|| ಸಿ ನಾರಾಯಣರಾಯರಿಗೆ ಜೂನ್ ತಾ 6ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮ|| ಎಸ್ ವೆಂಕಟಾಚಲಯ್ಯನವರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ವಿಶೇಷ ಪತ್ರಿಕೆ-ಜೂನ್ ತಾ. 29.

ಶ್ರೀಮನ್ ಮಹಾರಾಜರವರು ಅಪ್ಪಣೆ ದಯಪಾಲಿಸಿರುವುದೇನೆಂದರೆ—(1) ಸರ್ ಸ್ಟಾನ್ಲಿ ಇಸ್ಮೆ, ಕೆ. ಸಿ ಎಸ್ ಐ ಯವರಿಗೆ ಕೆಲಸದಿಂದ ನಿವೃತ್ತರಾಗುವುದಕ್ಕೆ ಅನುಜ್ಞೆಯನ್ನಿತ್ತಿರುವ ಕಾರಣ ರಾವ್ ಬಹದ್ದೂರ್ ಮ|| ಪಿ. ಎಸ್ ಕೃಷ್ಣರಾಯರನ್ನು ಚೀಫ್ ಕೋರ್ಟಿನ ಚೀಫ್ ಜಡ್ಜರನ್ನಾಗಿ ನೇಮಿಸಿದೆ. (2) ಮ|| ಕೆ ಎಸ್. ಚಂದ್ರಶೇಖರ ಅಯ್ಯರವರನ್ನು ಚೀಫ್ ಕೋರ್ಟಿನ ಜಡ್ಜಿಯಾಗಿ ನೇಮಕಮಾಡಿದೆ. (3) ಮ|| ಇ ಎಚ್. ವಾಲ್ಲಿಸ್, ಎಂ. ಎ, ಐ ಸಿ ಎಸ್. ಯವರನ್ನು ಚೀಫ್ ಕೋರ್ಟಿನ ಜಡ್ಜಿಯಾಗಿ ನೇಮಿಸಲಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಲಾಹೋರ್ ಪಟ್ಟಣದಲ್ಲಿರುವ ಪಂಜಾಬ್ ಯೂನಿವರ್ಸಿಟಿ ಪಂಡಿತೋತ್ತಮನಾದ ತಾರಾಚಂದ್‌ರಾಯಿ ಎಂಬಾತನು ಯೂರೋಪ್ ಖಂಡದಲ್ಲಿ ಸಂಸ್ಕೃತ ವಿದ್ಯೆಯನ್ನು ಶಾಸ್ತ್ರವತ್ತಾಗಿ ಕಲಿತು ಬರುವಂತೆ ಗವರ್ನ್‌ಮೆಂಟಿನವರು ಆತನಿಗೆ ಸರ್ಕಾರದ ವೇತನವನ್ನು ಸ್ಯಾಂಕ್ಷನ್ ಮಾಡಿದಾರೆ.

ಬೊಂಬಾಯಿ ಪಟ್ಟಣದ ಟ್ಯಾಕ್ಸಿಕ್ಯಾಬ್ ಕಂಪನಿಯ ಮ್ಯಾನೇಜರ್ ಮ|| ದೇವಿಯರ್ ಯವರು ಮೋಟಾರ್ ಗಾಡಿಯನ್ನು ಬಹಳ ವೇಗವಾಗಿ ಓಡಿಸಿಕೊಂಡು ಹೋದರೆಂದೂ, ಇದರಿಂದ ಅದು ಒಂದು ಗಾಡಿಗೆ ಢಿಕ್ಕಾ ಹೊಡೆಯಿತೆಂದೂ ಮೊಕದ್ದಮೆ ಹುಟ್ಟಿ ಕಳೆದ ವಾರ ಅವರಿಗೆ 200 ರೂಪಾಯಿ ಜುಲ್ಮಾನೆ ವಿಧಿಸಲಾಯಿತು.

* * *

ತಾ. 31ಕ್ಕೆ ಅಯ್ಯಿರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 496 ಜನರಿಗೆ ಪ್ಲೇಗ್ ತಗಲಿ, 480 ಮರಣಗಳಾದವು. ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ 62, ಮದರಾಸ್ ಅಧಿಪತ್ಯದ್ದು 1, ಬಂಗಾಳಾ 38, ಬೀಹಾರ್ ಮತ್ತು ಒರಿಸಾ 62, ಸಂಯುಕ್ತ ಅಧಿಪತ್ಯಗಳು 36, ಪಂಜಾಬ್ 283, ಬರ್ಮಾ 15, ಮೈಸೂರು ಸಂಸ್ಥಾನ 13.

* * *

ತಾ. 15 ಕ್ಕೆ ಅಯ್ಯಿರಾದ ಒಂದು ವಾರದಲ್ಲಿ ಬೊಂಬಾಯಿ ಪಟ್ಟಣದಲ್ಲಿ 518 ಜನರಿಗೆ ಕಾಲರಾ ಉಪದ್ರ ತಗಲಿತು; 428 ಮರಣಗಳಾಗಿರುತ್ತವೆ. ಎಲ್ಲಾ ಕಾರಣಗಳಿಂದಲೂ ಆ ವಾರ 1,232 ಜನರು ಕಾಲವಾದರು; ಅಂದರೆ ಹಿಂದಿನ ವಾರಕ್ಕಿಂತ 589 ಮರಣಗಳು ಹೆಚ್ಚಾಯಿತು. ಪ್ಲೇಗಿನಲ್ಲಿ 27 ಜನರೂ, ಸಿಡುಬಿನಲ್ಲಿ 21 ಜನರೂ ಆ ವಾರ ತೀರಿಹೋದರು.

* * *

ಬೊಂಬಾಯಿ ಅಧಿಪತ್ಯದಲ್ಲಿ ಕ್ಷಾಮಬಾಧೆಯು ಇನ್ನೂ ನಿವಾರಣೆಯಾಗಲಿಲ್ಲ. ಪಂಚಮಹಲ್ ಮತ್ತು ಕಚ್ಛವಾಡ ಪ್ರಾಂತ್ಯಗಳಲ್ಲಿ ಪ್ರಜೆಗಳೂ ಗೋಕಾಯಿಗಳೂ ಸಂಕಟಕ್ಕೆ ಗುರಿಯಾಗಿದಾರೆ. ಕಳೆದ ತಾ. 15 ಕ್ಕೆ ಅಯ್ಯಿರಾದ ಒಂದು ವಾರದಲ್ಲಿ ಒಟ್ಟು 1,19,526 ಜನರು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ, ಅಂದರೆ ಹಿಂದಿನ ವಾರಕ್ಕಿಂತ 8,230 ಜನರು ಜಾಸ್ತಿಯಾದರು.

* * *

ಕರಾಚಿ ಡಿಸ್ಟ್ರಿಕ್ಟಿಗೆ ಸೇರಿದ ಬಡಾ ಎಂಬ ಗ್ರಾಮದಲ್ಲಿ ಐದು ಮಂದಿ ಮಹಮದೀಯರು ಒಬ್ಬ ಹಿಂದೂ ಸಾಹುಕಾರನ ಮನೆಗೆ ನುಗ್ಗಿ ದರೋಡೆ ನಡಿಸಿದರೆಂದು ಮೊಕದ್ದಮೆ ಆಯಿತು. ಸಿಂಧು ದೇಶದ ಕಮಿಷನರವರು ಈ ಮೊಕದ್ದಮೆಯನ್ನು ದರ್ಯಾಪ್ತಿಮಾಡಿ, ಅಪರಾಧಿಗಳ ಪೈಕಿ ಮೂವರಿಗೆ ತಲಾ ಏಳೇಳು ವರುಷ ಕಠಿಣ ಸಜಾ ವಿಧಿಸಿ, ಇನ್ನಿಬ್ಬರನ್ನು ಖುಲಾಸ್ ಮಾಡಿಸಿದರು.

* * *

ವಿಲಾಯತಿಯಿಂದ ಹಿಂದುಸ್ಥಾನಕ್ಕೂ, ಇಲ್ಲಿಂದ ವಿಲಾಯತಿಗೂ ವರ್ತಮಾನ ಪತ್ರಿಕೆಗಳಿಗೆ ಕಳಿಸಿ ತರಿಸಿಕೊಳ್ಳುವ ತಂತೀ ವರ್ತಮಾನಗಳಿಗೆ ಪ್ರತಿ ಒಂದು ಮಾತಿಗೂ ನಾಲ್ಕು ಆಣೆಯಂತೆ ಛಾರ್ಜಿನ ದರವನ್ನು ಇಡಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ಒಪ್ಪಿಕೊಂಡಿದಾರೆ. ಇದು ಸ್ಯಾಂಕ್ಷನ್ ಆಗಿ ಜಾರಿಗೆ ಬಂದರೆ ಬಹಳ ಅನುಕೂಲವಾದೀತಲ್ಲದೆ ಸರ್ಕಾರಕ್ಕೆ ಉತ್ಪತ್ತಿಯೂ ಜಾಸ್ತಿಯಾದೀತೆನ್ನುವುದಕ್ಕೆ ಸಂದೇಹವಿಲ್ಲ.

* * *

ಬೊಂಬಾಯಿ ಪಟ್ಟಣದ ಶ್ರೀಮಂತರಲ್ಲಿ ಅಗ್ರಗಣ್ಯರಾಗಿಯೂ ವಿಶೇಷ ಧರ್ಮಕಾರ್ಯಗಳನ್ನು ಮಾಡಿದವರಾಗಿಯೂ ಇರುವ ಮ|| ರತನ್ ಜೆ ಟಾಟಾ ಎಂಬ ದೊಡ್ಡ ಮನುಷ್ಯರು ಲೋಕದಲ್ಲಿ ಬಡತನವನ್ನು ನೀಗಿಸಬಹುದಾದ ಮಾರ್ಗಗಳನ್ನು ಪರಿಶೋಧನೆಯಿಂದ ಕಂಡು ಹಿಡಿಯಬೇಕೆಂದು ಕುತೂಹಲಪಟ್ಟು, ಲಂಡನ್ ಪಟ್ಟಣದ ಯೂನಿವರ್ಸಿಟಿ ವಿದ್ಯಾನಿಲಯಕ್ಕೆ ಪ್ರತಿವರುಷವೂ 21,000 ರೂಪಾಯಿಯಂತೆ ಚಂದಾ ಕೊಡುವುದಾಗಿ ವಾಗ್ದಾನಮಾಡಿ, ಆ ವಿಚಾರವನ್ನು ಪರಿಶೋಧನೆ ಮಾಡುವಂಥಾ ಪಂಡಿತರಿಗೆ ಅದನ್ನು ಕೊಡಬೇಕೆಂದು ತಿಳಿಸಿದಾರೆ. ಆ ವಿದ್ಯಾನಿಲಯದ ಪ್ರಮುಖರು ಈ ವಾಗ್ದಾನವನ್ನು ಅಂಗೀಕರಿಸಿ, ಈ ಮಹನೀಯರನ್ನು ಯಥಾಕ್ರಮವಾಗಿಯೂ, ಸಂತೋಷದಿಂದಲೂ ವಂದಿಸಿರುತ್ತಾರೆ.

* * *

ಪೂರ್ವದಿಗ್ದೇಶಗಳಲ್ಲಿ ಕುಷ್ಠರೋಗಿಗಳ ಚಿಕಿತ್ಸಾಪಾಲನೆಗಳಿಗಾಗಿ ಏರ್ಪಟ್ಟ ಪರೋಪಕಾರಕ ಸಂಘದವರು 37 ನೇ ವಾರ್ಷಿಕ ರಿಪೋರ್ಟನ್ನು ಪ್ರಕಟಮಾಡಿದಾರೆ. ಈ ಸಂಘದವರು 50 ನಿಲಯಗಳನ್ನು ಇಟ್ಟು ನಡಿಸುತ್ತಾರೆ. 4,000 ಕುಷ್ಠರೋಗಿಗಳೂ, ಸುಮಾರು 530 ಮಂದಿ ಅವರ ರಕ್ತಸಂಬಂಧಿಗಳೂ ಆ ನಿಲಯಗಳಲ್ಲಿ ಸಂರಕ್ಷಣೆಯನ್ನು ಹೊಂದುವರು. ಈ ಪೈಕಿ ಹಿಂದುಸ್ಥಾನದಲ್ಲೇ 3,500 ಜನ ರೋಗಿಗಳೂ, ಇವರ 150 ಮಂದಿ ಮಕ್ಕಳೂ ಇರುತ್ತಾರೆ. ಚಾಲ್ತಿ ವರುಷದಲ್ಲಿ ಈ ಸಂಘದವರು ಇನ್ನೆರಡು ನಿಲಯಗಳನ್ನು ಈ ರಾಷ್ಟ್ರದಲ್ಲಿ ಪ್ರಾರಂಭಮಾಡುವರೆಂದು ತಿಳಿಯುತ್ತದೆ. ಕೋರಿಯಾ, ಅರೇಬಿಯಾ, ಪರ್ಷಿಯಾ ಮುಂತಾದ ಕಡೆಗಳಲ್ಲೂ ಈ ಸಂಘದ ಕಾರ್ಯಗಳು ನಡೆಯುತ್ತಿರುವವು. ಪರೋಪಕಾರಿಗಳು ಅವರಿಗೆ ದ್ರವ್ಯಾದಿಗಳನ್ನು ಒದಗಿಸಿ ಕೊಟ್ಟು ಸಹಾಯ ಮಾಡಬೇಕಾಗಿದೆ.

* * *

ಗುಜರಾತ್ ಪ್ರಾಂತ್ಯದಲ್ಲಿ ಕ್ಷಾಮ ಪ್ರಾಪ್ತವಾಗಿದೆಯಷ್ಟೆ. ನಡಿಯಾಡಿನಲ್ಲಿ ಹಿಂದೂ ನಿರಾಶ್ರಿತ ಫಂಡು ಏರ್ಪಾಟಾಗಿದೆ. ಇದರ ಸುಮಾರು 36 ಶಾಖೆಗಳನ್ನು ಆ ಪ್ರದೇಶಗಳಲ್ಲಿ ಮಾಡಿದಾರೆ. ಹಿಂದೂ ಮಧ್ಯಸ್ಥ ಸಂಸಾರಗಳಿಗೆ ಸೇರಿದ ಕ್ಷಾಮಪೀಡಿತರಾದ ಪ್ರಜೆಗಳಿಗೆ ಈ ಫಂಡಿನಿಂದ ಅಂತರಂಗವಾದ ಸಹಾಯವನ್ನು ಮಾಡುವರು. ಧಾನ್ಯ, ಬಟ್ಟೆ, ಔಷಧಾದಿಗಳನ್ನು ಗೋಪ್ಯವಾಗಿ ಒದಗಿಸಿ ಅವರ ಬರವನ್ನು ನೀಗಿಸುತ್ತಾರಲ್ಲದೆ ಕ್ಷಾಮಪೀಡಿತರ ಮಕ್ಕಳಿಗೆ ವಿದ್ಯಾದಾನ ಮಾಡುತ್ತಾರೆ. ಆ ಪ್ರಾಂತ್ಯದಲ್ಲಿರುವ ಪ್ರಜಾ ಮುಖಂಡರು ಸೇರಿ ಈ ಫಂಡನ್ನು ಪ್ರಾರಂಭಿಸಿ ನಡಿಸಿಕೊಂಡು ಬರುತ್ತಿರುವರು. ಈ ಫಂಡಿನಿಂದ ಅನೇಕ ಮಾನಸ್ಥ ಕುಟುಂಬಗಳ ಜೀವನಾದಿಗಳು ನಡೆಯುತ್ತಿವೆ ಎಂದೂ, ಇಂಥಾ ಫಂಡಿಗೆ ಕರುಣಾರಸ ಪೂರಿತರಾದ ಜನರೆಲ್ಲಾ ದ್ರವ್ಯಸಹಾಯಮಾಡಿ ಕೀರ್ತಿಪಡೆಯಬೇಕೆಂದೂ ಫಂಡಿನ ಸೆಕ್ರೆಟರಿಗಳಾದ ಛಂದುಲಾಲ್ ನಂದಲಾಲ್ ದೇಸಾಯಿಯವರೂ, ಮುಲ್‌ಜಿಭಾಯಿ ಎಚ್ ಕಾಕರ್ವಾಲಾಯವರೂ ಪ್ರಾರ್ಥಿಸಿಕೇಳಿಕೊಂಡಿದಾರೆ.

* * *

ಸುಂದರವಾದ ಹಕ್ಕಿಪಕ್ಷಿಗಳನ್ನು ಕೊಂದು ಅವುಗಳ ಗರಿಗಳನ್ನು ತೆತ್ತು ಅಂಥಾ ಪಕ್ಷಿಗಳ ಹುಟ್ಟನ್ನೇ ತೊಡೆದುಬಿಡುತ್ತಾರೆಂದು ಇಂಡಿಯಾ ಗವರ್ನ್‌ಮೆಂಟಿನವರು ಒಂದು ಕಾನೂನ್ ಮಾಡಿದಾರಷ್ಟೆ. ಈ ಗರಿಗಳನ್ನು ಶೀಮೆಗೆ ರವಾನೆ ಮಾಡಿದರೆ ಬಹು ಮಂದಿ ವರ್ತಕರು ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳುವರು. ಅವನ್ನು ಆ ಪ್ರಾಂತ್ಯದ ಸ್ತ್ರೀಯರುಗಳ ಮೇಲುಹೊದಿಕೆ ಮತ್ತು ಟೋಪಿಗಳಿಗೆ ಸೇರಿಸಿ ಹೊಲಿದು ಬಿಕರಿಮಾಡಿ ಲಾಭಸಂಪಾದನೆ ಮಾಡುತ್ತಾರೆ. ಇಂಗ್ಲಾಂಡಿನಲ್ಲಿ ಮಹಾರಾಜ್ಞೀಯವರು ಈ ರೀತಿ ಸ್ತ್ರೀ ಮಂಡಲಿಯವರು ಅಲಂಕಾರಕ್ಕಾಗಿ ಹಕ್ಕಿ ಪಕ್ಷಿಗಳ ಗರಿಗಳನ್ನು ಉಪಯೋಗಿಸುವುದು ತರವಲ್ಲವೆಂದು ಅಪ್ಪಣೆ ಕೊಡಿಸಿರುವುದಲ್ಲದೆ ತಾವು ಯಾವಾಗಲೂ ಗರಿಗಳನ್ನುಳ್ಳ ಉಡುಪುಗಳನ್ನು ಹಾಕಿಕೊಳ್ಳದೆ ಇರುತ್ತಾರೆ. ಯೂರೋಪಿನ ಒಂದು ವರ್ತಕ ಸಂಘದವರು ಬರ್ಮಾ ಅಧಿಪತ್ಯದಲ್ಲಿ 800 ರೂಪಾಯಿ ಬಾಳುವಷ್ಟು ಛತ್ತದ ಹಕ್ಕಿ ಗರಿಗಳನ್ನು ಕಳೆದ ವಾರ ಕೂಡಿಸಿ ಭಾಂಗಿಮಾಡಿ ರೇಷ್ಮೆ ಮೂಟೆ ಎಂದು ಸುಳ್ಳು ಹೇಳಿ ಜರ್ಮನಿಯ ಒಬ್ಬ ದೊಡ್ಡ ಮನುಷ್ಯನಿಗೆ ರವಾನೆ ಮಾಡಿದರು. ಪೋಸ್ಟ್ ಆಫೀಸಿನವರು ಅದನ್ನು ಅನುಮಾನದ ಮೇಲೆ ಒಡೆದು ನೋಡುವಲ್ಲಿ ಹಕ್ಕಿಯ ಗರಿಗಳೆಂದು ಗೊತ್ತಾಯಿತು. ಆ ಕಂಪನಿಯವರ ಮೇಲೆ ಮೊಕದ್ದಮೆ ಮಾಡಿದ್ದರಲ್ಲಿ ಕಲೆಕ್ಟರವರು ಅವರಿಗೆ ಕಳೆದ ವಾರ 15,000 ರೂಪಾಯಿ ಜುಲ್ಮಾನೆ ವಿಧಿಸಿದರು.

ಔತಣದ ಕೂಟವು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಹುಕಾಲದಿಂದ ಎಕ್ಸೈಜ್ ಇಲಾಖೆಯ ಮುಖ್ಯ ಹುದ್ದೇದಾರರಾದ ಅಸಿಸ್ಟೆಂಟ್ ಕಮಿಷನರ್ ಮ|| ಎಚ್ ಸೀತಾರಾಮೈಯನವರು ವಯೋಧಿಕ್ಯದ ದೆಸೆಯಿಂದ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಪೆನ್‌ಷನ್ ಮೇಲೆ ನಿವೃತ್ತರಾದರು ಅವರ ಇಲಾಖಾ ನೌಕರ ಮಾನೇಜರುಗಳು ಸೇರಿ ಕಳೆದ ಭಾನುವಾರ ಅವರನ್ನು ಇಲ್ಲಿನ ಸದ್ವಿದ್ಯಾ ಪಾಠಶಾಲೆಗೆ ಕರೆಸಿಕೊಂಡು, ದಿವ್ಯವಾದ ಔತಣವನ್ನು ಮಾಡಿದರು ಆಗ್ಗೆ ಅವರ ಸ್ನೇಹಿತ ಮಂಡಲಿಯವರನ್ನೂ ಇತರ ದೊಡ್ಡ ಮನುಷ್ಯರನ್ನೂ ಕರೆಸಿದ್ದರು ಮಧ್ಯಾಹ್ನ ಎಲ್ಲರೂ ಅವರ ಕೂಡ ಕುಳಿತು ರುಚಿ ರುಚಿಯಾದ ಭಕ್ಷ್ಯ ಭೋಜ್ಯಗಳನ್ನು ಊಟಮಾಡಿದರು ಭೋಜನಾ ನಂತರ ದಾಸರಿಂದ ಹರಿಕಥೆ ಮಾಡಿಸಿದರು ಆಸ್ಥಾನ ಸಂಗೀತ ವಿದ್ವಾನ್ ವೈಣಿಕ ಶಿಖಾಮಣಿ ಶೇಷಣ್ಣನವರ ದಿವ್ಯವಾದ ವೀಣಾಗಾನವೂ, ಜಲತರಂಗೂ ಬೆಳೆದವು ಮ|| ಅಂಬಳೆ ಅಣ್ಣೈಯ ಪಂಡಿತರವರು ಇಲಾಖಾ ನೌಕರ ಮಾನೇಜರುಗಳ ಪರವಾಗಿ ಮ|| ಸೀತಾರಾಮೈಯನವರ ಗುಣಕಥನವನ್ನು ಸಂಕ್ಷೇಪವಾಗಿ ಮಾಡುತ್ತಿರುವ ಸಮಯಕ್ಕೆ ಸರಿಯಾಗಿ ಅವರ ಸ್ಥಾನಕ್ಕೆ ವರ್ಗಪಟ್ಟಿರುವ ಮ|| ಸಿ ಆರ್ ನಾರಾಯಣಸಾಮಿ ಮೊದಲಿಯಾರ್ರು ಈ ಸಂತೋಷ ಕೂಟಕ್ಕೆ ಬಂದುದನ್ನು ನೋಡಿ ಅವರನ್ನು ಕುರಿತು—ಮ|| ಸೀತಾರಾಮೈಯವರು ಈ ಡಿಸ್ಟ್ರಿಕ್ಟಿನಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದರೆಂಬುವುದು ಈಗ ನಡೆದ ಈ ವಿಶೇಷೋತ್ಸವದಿಂದ ಸ್ಪಷ್ಟವಾಗುತ್ತದೆ ಇದನ್ನು ನೋಡಿ ನೀವು ಕೂಡ ಅವರಂತೆಯೇ ನಡವಳಿಕೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಾ ನೌಕರ ಮಾನೇಜರುಗಳ ಮತ್ತು ಜನಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಬೇಕೆಂದು ಕೋರುತ್ತೇನೆ ಎಂಬದಾಗಿ ಹೇಳಿದರು ಮ|| ಸೀತಾರಾಮೈಯನವರೂ ಅವರೂ ಅದರಾತಿಶಯದಿಂದ ಸಭಿಕರನ್ನೆಲ್ಲಾ ವಂದಿಸಿ ತೆರಳಿದರು ಸೂಪರ್ ವೈಸರ್ ಮ ಪಿ ಎಸ್ ಅನಂತರಾಯರೂ ಇಲಾಖಾ ನೌಕರ ಮಾನೇಜರುಗಳೂ ಸೇರಿ ಆ ದಿನದ ಎಲ್ಲಾ ಸಂತೋಷ ಕಾರ್ಯಗಳನ್ನೂ ವಿತರಣೆಯಿಂದ ತೃಪ್ತಿಕರವಾಗಿಯೂ ನೆರವೇರಿಸಿರುತ್ತಾರೆ

ವ್ಯಾಪಾರ ವಿದ್ಯೆಗೆ ಪ್ರೋತ್ಸಾಹವು

ಬೊಂಬಾಯಿ ವರ್ತಕಮಂಡಲಿಯ ದ್ರವ್ಯಸಹಾಯವು

ಬೊಂಬಾಯಿ ಪಟ್ಟಣದಲ್ಲಿ ವ್ಯಾಪಾರ ವಿದ್ಯೆಯನ್ನು ಕ್ರಮವಾಗಿ ಕಲಿಸಿ ತರಪೇತು ಮಾಡುವುದಕ್ಕೆ ಅಲ್ಲಿನ ವರ್ತಕಮಂಡಲಿಯವರು ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡರು ನಮ್ಮ ದೇಶದ ವರ್ತಕರಿಗೆ ಈಗಿನ ಕಾಲದ ವ್ಯಾಪಾರ ಲಕ್ಷಣಗಳನ್ನು ತಿಳಿದುಕೊಳ್ಳುವುದಕ್ಕೆ ಹಿಂದುಸ್ಥಾನದಲ್ಲಿ ಅವಕಾಶವೇನೂ ಕಲ್ಪನೆಯಾಗಿಲ್ಲ ಇಂಡಿಯಾ ಗವರ್ನ್‌ಮೆಂಟಿನವರು ಈ ಭಾಗವನ್ನು ಪರ್ಯಾಲೋಚನೆ ಮಾಡುತ್ತಿದಾರೆ ಬೊಂಬಾಯಿನಲ್ಲಿ ಅಂಥಾ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವುದು ಅವಶ್ಯವೆಂದು ಗವರ್ನ್‌ಮೆಂಟಿನವರು ಕಂಡು, ವರ್ತಕಮಂಡಲಿಯವರು ಅದಕ್ಕೆ ಎಷ್ಟು ಮಟ್ಟಿಗೆ ದ್ರವ್ಯ ಸಹಾಯ ಮಾಡಬಹುದೆಂದು ವಿಚಾರಿಸಿದ್ದರಲ್ಲಿ ಮುಂದೆ ಹೇಳುವ ವರ್ತಕರು ಬಹು ಸಂತೋಷದಿಂದ ಪ್ರತ್ಯುತ್ತರವನ್ನು ಕೊಟ್ಟು ಚಂದಾ ಒದಗಿಸುವುದಾಗಿ ವಾಗ್ದಾನ ಮಾಡಿದಾರೆ ಅದರ ವಿವರ ಹ್ಯಾಗಂದರೆ—

ಸರ್ ಜಗಮೋಹನ್ ದಾಸ್ ವ್ರಂದಾವನ್‌ದಾಸ್‌ಯವರು—2,50,000 ರೂಪಾಯಿ ನಾಡಿಯಾ ದರ್ಮಪಂಡಿನ ಕಮಿಟಿಯವರು ವರುಷಕ್ಕೆ 1,800 ರೂಪಾಯಿನಂತೆ ಸರ್ ಚಿನೂಭಾಯಿ ಮಾಧವಲಾಲ್‌ಯವರು—1,00,000 ರೂಪಾಯಿ, ಬೊಂಬಾಯಿ ವರ್ತಕ ಸಂಘದವರು ವರುಷಕ್ಕೆ 1,500 ರೂಪಾಯಿನಂತೆ, ಕಾರ್ಖಾನೆಗಳ ಸಂಘದವರು ಪ್ರತಿ ವರುಷವೂ 1,000 ರೂಪಾಯಿನ ತೆ ಬೊಂಬಾಯಿನ ದೇಶೀಯ ವರ್ತಕಸಂಘದವರು ಪ್ರತಿ ವರುಷವೂ 1,000 ರೂಪಾಯಿ ಬೊಂಬಾಯಿನ ದೇಶೀಯ ಚೀಟಾ ಜವಳಿ ವರ್ತಕಸಂಘದವರು ಪ್ರತಿ ವರುಷವೂ 1,000 ರೂಪಾಯಿ ಅಹಮದಾಬಾದಿನ ಕಾರ್ಖಾನೆಗಳ ಸಂಘದವರು ಪ್ರತಿ ವರುಷವೂ 1,000 ರೂಪಾಯಿ ಈ ಪ್ರಕಾರ ದ್ರವ್ಯಸಹಾಯಮಾಡುವುದಾಗಿ ಇವರುಗಳು ವಾಗ್ದಾನಮಾಡಿದಾರೆ

ಇದನ್ನೆಲ್ಲಾ ಕೂಡಿಸಿ ನೋಡಿದರೆ ವರುಷಕ್ಕೆ ಈ ಚಂದಾ ಮೂಲಕ 21,000 ರೂಪಾಯಿ ಉತ್ಪತ್ತಿಯಾಗುವುದೆಂದು ಗೊತ್ತಾಯಿತು ಇದಕ್ಕೆ ಬೊಂಬಾಯಿ ಸರ್ಕಾರದವರು ಖಜಾನೆಯಿಂದ ಪ್ರತಿ ವರುಷವೂ 15,000 ರೂಪಾಯಿ ಗ್ರಾಂಟು ಕೊಡುವಂತೆ ಒಪ್ಪಿಗೆ ಕೊಟ್ಟಿದಾರೆ ಈ ಅವಶ್ಯವಾದ ವಿದ್ಯಾಶಾಲೆಯನ್ನು ಸರ್ಕಾರದವರು ಮುಂದಿನ ವರುಷದಿಂದ ಪ್ರಾರಂಭಿಸಿ ನಡಿಸಬೇಕೆಂದು ನಿಶ್ಚಯಮಾಡಿ, ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಸಿದ್ಧಮಾಡಿಕೊಳ್ಳುವ ವಿಷಯದಲ್ಲಿ ಕಾಗದಪತ್ರಗಳನ್ನು ನಡಿಸುತ್ತಿದಾರೆ ಇದರಿಂದ ಬೊಂಬಾಯಿಗೆ ಮಾತ್ರವೇ ಅಲ್ಲ, ಹಿಂದುಸ್ಥಾನಕ್ಕೆಲ್ಲಾ ಕಸಬು ಮತ್ತು ವ್ಯಾಪಾರಗಳು ಅಭಿವೃದ್ಧಿಯಾಗುವುದಕ್ಕೆ ಬಹಳ ಸಹಾಯವಾದೀತೆನ್ನುವುದಕ್ಕೆ ಸಂಶಯವಿಲ್ಲ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಮಂದಿರದಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ವಿಚಾರಗಳನ್ನು ನಡಿಸಿದರು ಕಳೆದ ಮೇ ತಿಂಗಳ ಮ್ಯುನಿಸಿಪಲ್ ಜಮಾ ಖರ್ಚಿನ ಲೆಕ್ಕಗಳು ಓದಲ್ಪಟ್ಟಲ್ಲಿ ರೂ 19,153-9-1 ಪೈ ಜಮಾ ಆಯಿತು, ರೂ 9,769-4 ಪೈ ಖರ್ಚಾಯಿತು ಜನನ 107, ಮರಣ—ಜ್ವರ 12, ಇತರ ಕಾರಣಗಳು 111, ಜುಮ್ಲಾ 123 ಮ್ಯುನಿಸಿಪಲ್ ಲೆಕ್ಕಗಳೆಲ್ಲಾ ಸರಿಯಾಗಿವೆ ಎಂದು ಆಡಿಟರುಗಳು ರಿಪೋರ್ಟು ಬರೆದಿದ್ದರು.

ವೀರಣ್ಣನ ಬ್ಲಾಕ್ ಭಾಗದಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನೂ, ಚಟ್ಟಹಳ್ಳಿ ಕ್ಯಾಂಪಿನ ಬಳಿ ಒಂದು ಗಂಡು ಹುಡುಗರ ಸ್ಕೂಲನ್ನೂ ಇಟ್ಟು ನಡಿಸುವುದಕ್ಕೆ ಅವಶ್ಯವಾದ ಉಪಾಧ್ಯಾಯಿನಿಯರನ್ನೂ ಉಪಾಧ್ಯಾಯರನ್ನೂ ನೇಮಿಸಬಹುದೆಂದೂ, ಸ್ಕೂಲ್ ಮನೆಯ ಬಾಡಿಗೆಗೆ 25 ರೂ ಖರ್ಚುಮಾಡಬಹುದೆಂದೂ ಮೆಂಬರುಗಳು ಒಪ್ಪಿಕೊಂಡರು —ಅಂಗಡಿಗಳಿಂದ ನೀರಿನ ತೆರಿಗೆಯನ್ನು ಬೆಂಗಳೂರಿನಲ್ಲಿ ಸೂಚಿಸಿರುವಂತೆ ಶೇಕಡಾ ಒಂದು ರೂಪಾಯಿ ಪ್ರಕಾರ ಹಾಕಬಹುದೆಂದು ಮೆಂಬರುಗಳು ಶಿಫಾರಸು ಮಾಡಿರುತ್ತಾರೆ —ರಾಜಧಾನಿಯಲ್ಲಿ ವಿದ್ಯುಚ್ಛಕ್ತಿಯ ದೀಪಗಳಿಗಾಗಿ ಮ್ಯುನಿಸಿಪಾಲಿಟಿಯವರು ವರುಷಕ್ಕೆ 12,000 ರೂಪಾಯಿ ಕೊಡಬಹುದೆಂದೂ, ಅದಕ್ಕೆ 1,000 ದೀಪಗಳನ್ನು ಇಟ್ಟುಕೊಡಬೇಕೆಂದೂ, ಇನ್ನೂ ಹೆಚ್ಚು ಹಣ ಕೊಡಲು ಸಾಧ್ಯವಿಲ್ಲವೆಂದೂ ಮೆಂಬರುಗಳು ಅಭಿಪ್ರಾಯಪಟ್ಟರು —ಕೃಷ್ಣರಾಜ ಮೊಹಲ್ಲಾ ಉಡಿಯಾರ್ಟನಲ್ಲಿ 1,100 ರೂಪಾಯಿ ಅಂದಾಜಿನಷ್ಟಕ್ಕೆ ಒಂದು ಸ್ಕೂಲ್ ಮನೆಯನ್ನು ಕಟ್ಟಬೇಕೆಂದು ತೀರ್ಮಾನವಾಯಿತು —ಟ್ರೆಸ್ಟ್ ಬೋರ್ಡ್ ಆಫೀಸಿನ ನೌಕರರಲ್ಲಿ ಕೆಲವರು ತಮ್ಮ ಬೈಸಿಕಲ್‌ಗೆ ಮ್ಯುನಿಸಿಪಲ್ ಕಂದಾಯವನ್ನು ವಜಾಮಾಡಿಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು ಮೆಂಬರುಗಳು ಆ ರೀತಿ ವಜಾ ಮಾಡಬಹುದೆಂದು ಒಪ್ಪಿಕೊಂಡರು —ಒಂಟಿಕೊಪ್ಪಲ ರಸ್ತೆಯ ಉತ್ತರದ ಕಡೆಯ ಗಾಡಿಗಳ ಸಂಚಾರಕ್ಕೆ ಬಹಳ ಅನುಕೂಲವಾಗಿರೋಣದರಿಂದ ಆ ರಸ್ತೆಯನ್ನು ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರಿಗೆ ಅವರ ಹೊಸ ಬಂಗಲೆಯ ಆವರಣದೊಳಕ್ಕೆ ಸೇರಿಸಿಕೊಳ್ಳುವುದಕ್ಕೆ ಬಿಕರಿಮಾಡುವುದು ಸರಿಯಲ್ಲವೆಂದು ಮೆಂಬರುಗಳು ತೀರ್ಮಾನಮಾಡಿದರು

ಅಂಟಿ ಬಸ್ತುಗಳನ್ನು ಮೈಸೂರಿನಿಂದ ಮಡಕೇರಿಗೆ ಸಾಗಿಸುವುದಕ್ಕಾಗಿ ಮ|| ರಾಜಾಜಿಯವರು ಇಟ್ಟುಕೊಂಡಿರುವ ಗಾಡಿ ಕುದುರೆಗಳಿಗೂ ಮ್ಯುನಿಸಿಪಲ್ ತೆರಿಗೆ ಹಾಕಿ ವಸೂಲ್ಮಾಡಬೇಕೆಂದೂ, ವಿನಾಯತಿ ಮಾಡಬೇಕಾದದ್ದಿಲ್ಲವೆಂದೂ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದದ್ದನ್ನು ಮೆಂಬರುಗಳು ರಿಕಾರ್ಡು ಮಾಡಿಕೊಂಡರು —ವಸೂಲಾಗತಕ್ಕದಲ್ಲವೆಂದು ಹಿಂದೆ ತೀರ್ಮಾನವಾಗಿದ್ದ ಸುಮಾರು 2,100 ರೂಪಾಯಿ ಉಳ್ಳ ಮುನಿಸಿಪಲ್ ಕಂದಾಯದ ಬಾಕಿಯನ್ನು ರಿಮಿಷನ್ ಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು ಮೆಂಬರುಗಳು ಇನ್ನೊಂದು ರಿಮಿಷನ್ ಬಾಬಿನ ಪಟ್ಟಿಯನ್ನು ತನಿಖೆ ಮಾಡಿ 1,000 ಚಿಲ್ಲರೆ ರೂಪಾಯಿ ವಸೂಲಾಗತಕ್ಕದ್ದವೆಂದು ಶಿಫಾರಸು ಮಾಡಿದರು —ಡಿಸಿನ್‌ಫೆಕ್ಟರ್ ಜವಾನರಿಗೆ 120 ರೂಪಾಯಿ ಖರ್ಚು ಮಾಡಿ ದಿರಸು ಮಾಡಿಸಿಕೊಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ ಗವರ್ನ್‌ಮೆಂಟ್ ಹೌಸಿನ ಕಮಾನಿ ದರ್ವಾಜಾಕ್ಕೆ ಉತ್ತರ ಭಾಗದಲ್ಲಿರುವ ಖಾಲಿ ನಿವೇಶನವನ್ನು ಬಂಗಲೆ ಕಟ್ಟುವುದಕ್ಕೆ ಹರಾಜು ಮೂಲಕ ಬಿಕರಿಮಾಡಬಹುದೆಂದು ಸರ್ಕಾರದವರು ಒಪ್ಪಿಕೊಂಡಿದಾರೆ —ಮ|| ಕೆಂಪರಾಮಾಪಂಡಿತರವರು ಅಶಕ್ತರಾಗಿರೋಣದರಿಂದ ಅವರನ್ನು ಕೆಲಸ ಬಿಡಿಸಿ, ಡಾಕ್ಟರ್ ಎಸ್ ವೆಂಕೋಬರಾಯರನ್ನು ಕರ್ನಾಟಕ ವೈದ್ಯರನ್ನಾಗಿ ನೇಮಕಮಾಡಬಹುದೆಂದು ಸಿವಿಲ್ ಸರ್ಜನ್‌ರವರು ಶಿಫಾರಸು ಮಾಡಿದ್ದರು ಮೆಂಬರುಗಳು ಈ ವಿಚಾರವನ್ನು ಚರ್ಚಿಸಿ ಮ ವೆಂಕೋಬರಾಯರ ಯೋಗ್ಯತಾದಿಗಳನ್ನು ಬೋರ್ಡಿಗೆ ತಿಳಿಸಬೇಕೆಂದೂ, ಇನ್ನೊಬ್ಬ ಪಂಡಿತರು ನೇಮಕವಾಗುವ ತನಕ ಮ|| ಕೆಂಪರಾಮಾಪಂಡಿತರೇ ಕೆಲಸ ನೋಡುತ್ತಿರಬಹುದೆಂದೂ ತೀರ್ಮಾನಮಾಡಿದರು —ಮೊಹತರ್ಫಾ ಕಂದಾಯಗಳನ್ನು ವಸೂಲ್ಮಾಡುವುದಕ್ಕೆ ನೇಮಕವಾಗಿರುವ ಹೆಚ್ಚು ಸಿಬ್ಬಂದಿಯನ್ನು ಇನ್ನೂ ಆರು ತಿಂಗಳ ಕಾಲ ಇಟ್ಟಿರಬಹುದೆಂಬ ಅಮಲ್ದಾರ್ರ ಶಿಫಾರಸನ್ನು ಅನುಮೋದಿಸಿದರು —ಟರ್ಷನ್ ಆಸ್ಪತ್ರೆಯ ಬಳಿ ವೈದ್ಯ ಮಾಡುವ ಯುನಾನಿ ಹಕೀಮರಿಂದ ಅನೇಕ ರೋಗಿಗಳಿಗೆ ಗುಣವಾಗುತ್ತಿರುವುದರಿಂದಲೂ, ಅವರ ವೈದ್ಯ ಸಾಮರ್ಥ್ಯವು ಜನಜನಿತವಾಗುತ್ತಿರುವುದರಿಂದಲೂ ಅವರಿಗೆ ಮ್ಯುನಿಸಿಪಾಲಿಟಿಯಿಂದ ಸಹಾಯ ದ್ರವ್ಯವನ್ನು ಮಾಹೆಯಾನಾ ಇನ್ನೂ ಹತ್ತು ರೂಪಾಯಿ ಜಾಸ್ತಿಮಾಡಿಕೊಡಬೇಕೆಂದು ಮೆಂಬರುಗಳು ಶಿಫಾರಸು ಮಾಡಿದರು ಈ ವಿಚಾರವನ್ನು ಹೆಲ್ತ್ ಆಫೀಸರವರ ಅಭಿಪ್ರಾಯಕ್ಕೆ ವಹಿಸಿ ರಿಪೋರ್ಟು ತರಿಸಿಕೊಂಡು ಇತ್ಯರ್ಥ ಮಾಡೋಣವೆಂದು ಗೊತ್ತಾಯಿತು —ಟೋಲ್ ಗೇಟುಗಳ ಹರಾಜಿನಿಂದ ಈ ಸಾಲಿನಲ್ಲಿ ಹಿಂದಿನ ಸಾಲಿಗಿಂತ 1,500 ರೂ ತನಕ ಮ್ಯುನಿಸಿಪಾಲಿಟಿಗೆ ಕಮ್ಮಿ ಉತ್ಪತ್ತಿಯಾಗುವುದೆಂದು ತಿಳಿದದ್ದರಿಂದ ಮೆಂಬರುಗಳು ಆ ರೀತಿ ಒಪ್ಪಿಕೊಳ್ಳಬೇಕಾಯಿತು —ಗಾಯಕಸಾಬರು ಕೊಲ್ಲುವ ಪ್ರಾಣಿಗಳಿಗೆ ತಲಾ 2 ಆಣೆಯಿಂದ 6 ಆಣೆಗೆ ರುಸುಂ ಜಾಸ್ತಿ ಮಾಡಿರುವ ವಿಷಯದಲ್ಲಿ ಅವರೆಲ್ಲಾ ಅರ್ಜಿ ಬರೆದುಕೊಂಡು, ಆ ದರವನ್ನು ಕಮ್ಮಿಮಾಡಬೇಕೆಂದು ಕೇಳಿಕೊಂಡಿದ್ದರು ಮೆಂಬರುಗಳು ಆ ರೀತಿ ಕಮ್ಮಿಮಾಡಲಾಗದೆಂದು ತೀರ್ಮಾನಮಾಡಿರುತ್ತಾರೆ

ನಾಟಕ ಪ್ರದರ್ಶನವು

ಯೂರೋಪ್ಯಿಯನ್ ಅತಿಥಿಗಳ ಸತ್ಕಾರವು

ಕಳೆದ ವಾರ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರು ತಮ್ಮ ವರ್ಧಂತಿ ಕಟ್ಟಳೆಯ ನಿಮಿತ್ತ ಯೂರೋಪ್ಯಿಯನ್ ಅತಿಥಿಗಳಿಗೆ ನಾನಾ ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರು ಕುದುರೆಗಳ ಜೂಜುಗಳು ನಡೆದು ಗೆದ್ದ ಕುದುರೆ ಮಾಲೀಕರಿಗೆ ದ್ರವ್ಯರೂಪವಾದ ಬಹುಮಾನಗಳನ್ನು ಕೊಡಿಸಿದರು ಈ ಪೈಕಿ ನಮ್ಮ ಮಹಾರಾಜರವರ, ಕರ್ನಲ್ ಜೆ ದೇಸರಾಜೆ ಅರಸಿನವರ ಮತ್ತು ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರ ಜೂಜಿನ ಕುದುರೆಗಳೂ ಗೆದ್ದು ಕೆಲವು ಬಹುಮಾನಗಳನ್ನು ಸಂಪಾದಿಸಿಕೊಂಡವು ಎರಡನೆಯದಾಗಿ ಪೋಲೋ ಎಂಬ ಕುದುರೆ ಮೇಲೆ ಕುಳಿತು ಆಡುವ ಪಂದ್ಯ ನಡಿಯಿತು ಇದರಲ್ಲಿ ಹತ್ತು ಕ್ಲಬ್ಬಿನವರು ಸೇರಿ ಹೋರಾಡಿದರು ಈ ಪಂದ್ಯದ ಅಟ್ಕಿನ್ ಆಟವು ಮೊನ್ನೆ ಸೋಮವಾರ ನಡೆದು, ಗೆದ್ದವರಿಗೆ ಬಹು ಬೆಲೆಯುಳ್ಳ ಮತ್ತು ದಿವ್ಯವಾದ ಚಿತ್ರ ಕೆಲಸ ಮಾಡಿದ ಬೆಳ್ಳಿಯ ಬಟ್ಟಲುಗಳನ್ನು ಕೊಟ್ಟರು ಯೂರೋಪ್ಯಿಯನ್ ಸರದಾರರಿಗೂ ದೊರೆಸಾನಿಗಳಿಗೂ ಹರ್ಷಯುಕ್ತವಾದ ಹಲವು ವಿನೋದಕರವಾದ ಪಂದ್ಯಗಳನ್ನಿಟ್ಟು ಆಡಿಸಿ ಗೆದ್ದವರಿಗೆ ಉಪಯುಕ್ತವಾದ ಪದಾರ್ಥಗಳನ್ನು ಬಹುಮಾನ ಕೊಟ್ಟರು ಮತ್ತು ಕುದುರೆಗಳನ್ನು ಜಾತಿವಾರಾಗಿ ವಿಂಗಡಿಸಿ ಪ್ರದರ್ಶನಮಾಡಿದ್ದರಲ್ಲಿ ಅತ್ಯುತ್ತಮವಾಗಿ ಸಾಕಿ ಬೆಳಸಿದ್ದವುಗಳಿಗೆ ಬಹುಮಾನಗಳು ದೊರಕಿದವು ಮೋಟಾರ್ ಗಾಡಿಗಳ ವಿಚಿತ್ರವಾದ ಪಂದ್ಯಗಳು ಜರುಗಿ, ಅನೇಕ ಆಹ್ಲಾದಕರವಾದ ತಮಾಷಿ ಆಟಗಳು ನಡೆದು, ಬಹುಮಾನಗಳು ಕೊಡಲಾದವು ಈ ವಿನೋದಗಳನ್ನು ಮೈದಾನುಗಳಲ್ಲಿ ನಡಿಸಿದ್ದರಿಂದ ಪುರಜನರೂ, ಅಧಿಕಾರಿಗಳೂ, ರಾಜಬಂಧುಗಳೂ ಸಾವಿರಗಟ್ಟಲೆ ಸೇರಿ ನೋಡಿ ಆನಂದಪಟ್ಟರು ಸ್ಕೂಲ್ ಮಕ್ಕಳು ಆಟಗಳನ್ನು ನೋಡಿ ಬರಲೆಂದು ಒಂದು ವಾರದಿಂದ ಪ್ರತಿ ದಿನವೂ ಮಧ್ಯಾಹ್ನದ ಹೊತ್ತು ಸ್ಕೂಲುಗಳಿಗೆಲ್ಲಾ ರಜಾ ಕೊಡುತ್ತಿದ್ದರು

ಯೂರೋಪ್ಯಿಯನ್ ಅತಿಥಿಗಳನ್ನೆಲ್ಲಾ ಒಂದು ದಿನ ರಾತ್ರಿ ಶ್ರೀಮನ್ಮಹಾರಾಜರವರು ಅರಮನೆಗೆ ಕರೆಸಿಕೊಂಡು, ದಿವ್ಯವಾದ ಸಂಗೀತದ ಕಚೇರಿ ನಡಿಸಿ ಆನಂದಪಡಿಸಿದರು ಅರಮನೆಯ ಶಿಖರಗಳ ಮೇಲ್ಗಡೆ ಸಾಲುಸಾಲಾಗಿ ಸಾವಿರಾರು ವಿದ್ಯುಚ್ಛಕ್ತಿಯ ದೀಪಗಳು ನೇತ್ರಾನಂದಕರವಾಗಿಯೂ ಆಹ್ಲಾದಯುಕ್ತವಾಗಿಯೂ ಇದ್ದವು ಗವರ್ನ್‌ಮೆಂಟ್ ಹೌಸ್ ಬಂಗಲೆಯೊಳಗೂ, ಸುತ್ತಣ ಮೈದಾನಿನಲ್ಲಿ ಹಾಕಿಸಿರುವ ಡೇರಾಗಳೊಳಗೂ ಯೂರೋಪ್ಯಿಯನ್ ಅತಿಥಿಗಳು ತಂಗಿದ್ದರು ಪ್ರತಿ ದಿನವೂ ಮೂರು ನಾಲ್ಕಾವರ್ತಿ ಅವರುಗಳಿಗೆಲ್ಲಾ ದಿವ್ಯವಾದ ಭಕ್ಷ್ಯಭೋಜ್ಯಗಳೊಡನೆ ಕೂಡಿದ ಭೋಜನಾದಿಗಳು ನಡೆಯುತ್ತಿದ್ದವು ಈ ಸಲ ಅವರಿಗೆ ಒದಗಿಸಿದ ಅಡಿಗೆಯನ್ನೆಲ್ಲಾ ವಿದ್ಯುಚ್ಛಕ್ತಿಯಿಂದಲೇ ಮಾಡಿಸಿದರು ಇದೊಂದು ಅಪೂರ್ವವಾದ ವಿಷಯ ಅದಕ್ಕೆ ಉಪಯೋಗಿಸಿದ ಒಲೆಗಳೂ ಉಪಕರಣಗಳೂ ಬಹಳ ನಾಜೂಕಾಗಿಯೂ ಬೆಲೆಯುಳ್ಳವುಗಳಾಗಿಯೂ ನವೀನವಾಗಿಯೂ ಇರುತ್ತವೆ ಬೆಂಕಿಯಾಗಲಿ ಸೌದೆಯಾಗಲಿ ಸ್ವಲ್ಪವೂ ಅಗತ್ಯವಿಲ್ಲ ಅಡಿಗೆಮಾಡಿದ ಪಾತ್ರೆಗಳು ಸ್ವಲ್ಪವೂ ಕಪ್ಪಾಗುವುದಿಲ್ಲ ಬೇಯಿಸಬೇಕಾದ ಪದಾರ್ಥಗಳನ್ನು ಮುಚ್ಚಳವಿರುವ ಪಾತ್ರೆಗಳಲ್ಲಿ ಹಾಕಿ ಆ ಒಲೆಯ ಮೇಲಿಟ್ಟು ವಿದ್ಯುಚ್ಛಕ್ತಿಯ ಸಂತೀ ಕೀಲನ್ನು ತಿರುಗಿಸಿಬಿಟ್ಟು, ಗಡಿಯಾರ ಇಟ್ಟುಕೊಂಡು ಗೊತ್ತಾದಷ್ಟು ನಿಮಿಷ ನೋಡುತ್ತಿರುವಷ್ಟರಲ್ಲಿ ಆ ಪದಾರ್ಥವು ಪಕ್ವವಾಗುತ್ತವೆ ಈ ವಿಚಿತ್ರವನ್ನು ನೋಡಲು ಆಶ್ಚರ್ಯವಾಗುವುದು ಅದೃಶ್ಯವಾದ ಈ ಶಕ್ತಿಯನ್ನು ಮನುಷ್ಯನ ಸಕಲ ಕಾರ್ಯಗಳಿಗೂ ಪ್ರಯೋಗಮಾಡಿಕೊಳ್ಳುತ್ತಿರುವುದು ಈ ನವನಾಗರಿಕ ಕಾಲದ ಒಂದು ಲಕ್ಷಣವಾಗಿರುತ್ತದೆ

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಸಂಸಾರಸಮೇತ ರಾಜಧಾನಿಗೆ ಚಿತ್ತೈಸಿ ಕಳೆದ ವಾರ ನಡೆದ ವಿನೋದಾದಿಗಳಲ್ಲಿ ಬೆರತು ಸಂತೋಷಪಟ್ಟರು ನಮ್ಮ ಮಹಾರಾಜರವರು ಅವರಿಗೆ ರಾಜಯೋಗ್ಯವಾದ ಆತಿಥ್ಯಗಳನ್ನೂ ಸೌಕರ್ಯಗಳನ್ನೂ ಮಾಡಿಸಿದ್ದರು

ಕಳೆದ ಶನಿವಾರ ರಾತ್ರಿ ಇಲ್ಲಿನ ಟೌನ್ ಹಾಲ್ ಮಂದಿರದಲ್ಲಿ ಮೇಲ್ಕಂಡ ಅತಿಥಿಗಳಿಗೆಲ್ಲಾ ಒಂದು ದಿವ್ಯವಾದ ವಿನೋದವು ಏರ್ಪಾಡಾಗಿ ಬಹು ಶ್ಲಾಘ್ಯವಾಗಿಯೂ ಸಂತೋಷಪ್ರದವಾಗಿಯೂ ನೆರವೇರಿತು ಟೌನ್ ಹಾಲ್ ಸಭಾಮಂದಿರವನ್ನು ಒಳಗೂ ಹೊರಪಾರ್ಶ್ವದಲ್ಲೂ ಅರಮನೆಯ ಇಲಾಖೆಯವರೂ ಮ್ಯುನಿಸಿಪಾಲಿಟಿಯವರೂ ಕಳಕಳಿಸುವಂತೆ ಬಗೆಬಗೆಯ ಅಲಂಕಾರ ಮಾಡಿದ್ದರು ರಾತ್ರಿ 10 ಗಂಟೆಗೆ ಬರೋಡಾ ಮಹಾರಾಜರವರನ್ನೂ ಅವರ ಕುಮಾರರು ಕುಮಾರಿಕರನ್ನೂ ನಮ್ಮ ಯುವರಾಜರವರು ತಮ್ಮ ಕೂಡ ಮೋಟಾರ್‌ಗಾಡಿಯಲ್ಲಿ ಕರತಂದು ದಿವ್ಯವಾದ ಸೋಫಾಗಳಲ್ಲಿ ಮಂಡಿಸಿದರು ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಿಯನ್ ಅತಿಥಿಗಳ ಮೋಟಾರ್‌ಗಾಡಿಗಳಲ್ಲೂ ಸಾರೋಟುಗಳಲ್ಲೂ ದಯಮಾಡಿ ಶ್ರೀಷ್ಠಾಸನಗಳನ್ನು ಅಲಂಕರಿಸಿದರು ಮುಖ್ಯರಾದ ರಾಜಬಂಧುಗಳೂ, ಕೆಲವು ಅಧಿಕಾರಿಗಳೂ ಹಾಜರಾಗಿದ್ದರು ಸುತ್ತಲೂ ಮೇಲ್ಗಡೆಯ ಬಾಲಾಖಾನೆಗಳಲ್ಲಿ ಕಿನ್ಖಾಪಿನ ಪರದೆಗಳ ಹಿಂದೆ ಅರಮನೆಯ ಜನಾನಿಯವರೂ, ಬರೋಡಾ ಸಂಸ್ಥಾನದ ರಾಣೀವಾಸದವರೂ ದಯಮಾಡಿದ್ದರು ಇಂಥಾ ದಿವ್ಯವಾದ ಸಭೆಯನ್ನು ನಮ್ಮ ಮಹಾರಾಜರವರ ಪೋಷ್ಯವರ್ಗಕ್ಕೆ ಸೇರಿ ಸರ್ದಾರ್ ಎಂ ಗೋಪಾಲರಾಜೆ ಅರಸಿನವರ ಏಚಕ್ಷಣೆಯಾದ ಮೇಲ್ವಿಚಾರಣೆಗೆ ಒಳಪಟ್ಟ ನಾಟಕಮಂಡಲಿಯವರು "ಶಶಿರೇಖಾ ಪರಿಣಯ" ಮತ್ತು "ಯುಕ್ತಾಂಗದ ಚರಿತ್ರೆ" ಗಳಲ್ಲಿ ಬಹಳ ಸ್ವಾರಸ್ಯವಾದ ಭಾಗಗಳನ್ನು ಅಭಿನಯಮಾಡಿ ತೋರಿಸಿ ಆನಂದಪಡಿಸಿದರು ಈ ನಾಟಕಭಾಗಗಳಲ್ಲಿ ಕಂಪನಿಯವರು ಮಾಡಿ ತೋರಿಸಿದ ಸೀನರಿ, ನೃತ್ಯ, ನಕಲಿ, ಅಭಿನಯಾದಿಗಳೆಲ್ಲಾ ಬಹು ಆಹ್ಲಾದಕರಗಳಾಗಿದ್ದವು ನೋಟಕರೆಲ್ಲಾ ಅತ್ಯಾನಂದ ಹೊಂದಿ ಸರ್ದಾರ್ ಗೋಪಾಲರಾಜೆ ಅರಸಿನವರನ್ನು ಸಾದರದಿಂದ ವಂದಿಸಿ ತೆರಳಿದರು

ಯೂರೋಪ್ಯಿಯನ್ ಅತಿಥಿಗಳೆಲ್ಲಾ ಮೊನ್ನೆಯೂ ನೆನ್ನೆಯೂ ರಾಜಧಾನಿಯನ್ನು ಬಿಟ್ಟು ಸ್ವಸ್ಥಳಗಳಿಗೆ ಪ್ರಯಾಣ ಮಾಡಿದರು ಒಂದು ವಾರದಿಂದ ಪ್ರಜೆಗಳು ಈ ವಿನೋದಾದಿಗಳನ್ನು ನೋಡುವುದರಲ್ಲಿ ಉತ್ಸಾಹಪಟ್ಟರು ಕಳೆದ ವಾರವೆಲ್ಲಾ ರಾಜಬೀದಿಗಳಲ್ಲಿ ಯೂರೋಪ್ಯಿಯನ್ನರ ಮೋಟಾರ್ ಮತ್ತು ಸಾರೋಟುಗಳ ಸಂಚಾರವು ತುಂಬಿ ಪಟ್ಟಣವನ್ನು ಕಳೆತುಂಬುವಂತೆ ಮಾಡಿತ್ತು

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆಯತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾಕೊಡಲಾರೆವು

ತ್ವರಿತಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು "ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಕಳೆದ 21ನೇ ತಾ ನಿಂದ 25ರ ವರೆಗೆ ನಂಜನಗೂಡಿನಲ್ಲಿ ಗಿರಿಜಾಕಲ್ಯಾಣೋತ್ಸವವು ಬಹಳ ಚನ್ನಾಗಿ ನಡೆಯಿತೆಂದೂ, ಕೆಲವು ದಿನ ದೇವಸ್ಥಾನದಲ್ಲಿ ಸಮಾರಾಧನೆಗಳು ಕಾಲಕ್ಕೆ ಸರಿಯಾಗಿಯೂ ಏತನೆಯಿಂದಲೂ ನಡೆಯದೆ ಹೋಯಿತೆಂದೂ, ಇನ್ನು ಕೆಲವು ದಿನ ಅಲ್ಲಿನ ಮುಖಂಡರು ಕೆಲವರು ನಿಂತು ಸಮಾರಾಧನೆಯನ್ನು ತೃಪ್ತಿಕರವಾಗಿ ನಡಿಸಿದರೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ

"ಪತ್ರಗಳನ್ನು ರೆಜಿಸ್ಟರ್ ಮಾಡಿಸುವಂಥವರಿಗೆ ಕೆಲವು ಜಾಸ್ತಿ ಖರ್ಚುಗಳೂ ತೊಂದರೆಗಳೂ ಉಂಟೆಂತ ಅನೇಕರು ಹೇಳುತ್ತಾರೆ ಮುಂದೆ ಇಂಥಾ ತೊಂದರೆಗಳೂ ನಷ್ಟಗಳೂ ಉಂಟಾಗದ ಹಾಗೆ ಸರ್ಕಾರದವರು ಗಮನಕೊಡುವರೆಂತ ನಿರೀಕ್ಷಿಸಬಹುದಾಗಿದೆ" ಎಂಬೀ ರೀತಿ ಒಂದು ತಾಲ್ಲೂಕ್ ಹೆಡ್‌ಕ್ವಾರ್ಟರಿನಿಂದ ನಮ್ಮ ಬಾತ್ಮಿದಾರರು ಬರೆಯುತ್ತಾರೆ ಇಂಥಾ ಯೋಗ್ಯ ಆದ ಆಕ್ಷೇ

ಪಣೆ ಮಾಡುವುದು ಸಹಜವಲ್ಲ. ವಿಷಯಗಳನ್ನು ಚನ್ನಾಗಿ ನಿರ್ದೇಶವಾಡದೆ ಕ್ಷಣಿಕವಾದ ಕಾಲದಲ್ಲಿ ರುಜುವಾತು ಬರತಕ್ಕಂಥಾ ಖಂಡಿತವಾದ ಸಡಿವಳಿಕೆಗಳನ್ನು ಬಾತ್ಮಿದಾರರು ಬರೆಯಬೇಕು. ಹಾಗೆ ರುಜುವಾತು ಒದಗಿಸಲಾರದೆ ಹೋಗುವಂಥಾ ಆಕ್ಷೇಪಣೆಗಳನ್ನು ಮಾಡುವುದು ಸರಿಯಲ್ಲವೆಂದು ಸೂಚಿಸುತ್ತೇವೆ.

"ರೈತರ ಹಿತಚಿಂತಕ" ಎಂಬ ಬಾತ್ಮಿದಾರರು ತುಂಕೂರು ಡಿಸ್ಟ್ರಿಕ್ಟು ತುರುವೇಕೆರೆ ಸಮ್ಮತು, ಮಲ್ಲಾಘಟ್ಟದ ಅಮಾನಿಕೆರೆ ದಕ್ಷಿಣ ನಾಲಾ ಅಸರಾ ಜಮೀನ್ದಾರರಾದ ಹೊಸಹಳ್ಳಿ ಗ್ರಾಮದ ರೈತರಿಗೆ ನಾಲಾ ಮಣೇಗಾರರು ನಾಲೆಯ ನೀರನ್ನು ಕೊಡದೆ ಅ|| ಕವಿಷನರ್ರವರ ಅಪ್ಪಣೆ ಅಲಕ್ಷ್ಯಮಾಡಿರುತ್ತಾರೆಂದೂ, ಜಮೀನುಗಳಲ್ಲಿ ಭತ್ತದ ಪೈರು ಹಾಳಾಗುತ್ತಿದೆ ಎಂದೂ ಬರೆಯುತ್ತಾರೆ. ಆ ರೈತರು ಆ ಅಧಿಕಾರಿಗೆ ಅರ್ಜಿ ಬರೆದುಕೊಂಡಿರುವಂತೆ ತಿಳಿಯುವುದು. ಅವರು ಈ ವಿಷಯವನ್ನು ತನಿಖೆಮಾಡಿ ಕ್ರಮಪಡಿಸಬೇಕೇ ಹೊರತು ಇಂಥಾ ಅರ್ಜಿಗಳನ್ನು ನಾವು ಪ್ರಕಟಿಸಲು ನಮಗೆ ಇಷ್ಟವಿಲ್ಲ. ಆ ಅಧಿಕಾರಿಯು ಯಾವ ರೀತಿ ಆ ರೈತರ ಕಷ್ಟ ನಷ್ಟಗಳನ್ನು ಪರಿಹರಿಸುವರೋ ನೋಡುವವು.

—ಎಡಿ.]

ಕರೆಸ್‌ಪಾಂಡೆನ್ಸ್.

ತಂದೆಯು ಸಿಕ್ಕಿ ಇಲ್ಲ.

ಅಯ್ಯಾ,

ಶಿವಮೊಗ್ಗಾ ಹೆಡ್ ಪೋಸ್ಟಾಫೀಸಿನಲ್ಲಿರುವ ಪೋಸ್ಟ್ ಮೇನ್ ಬಿ ಸಿದ್ದಪ್ಪನು ಪ್ರಾರ್ಥಿಸುವುದೇನೆಂದರೆ—ನನ್ನ ತಂದೆ ಬಿ ನರಸಿಂಗಪ್ಪನು ನನ್ನನ್ನು 1907 ನೇ ಇಸವಿ ಯಲ್ಲಿ ಬಿಟ್ಟವನು ಇಷ್ಟರ ವರೆಗೂ ಎಲ್ಲಿರುತ್ತಾನೆಂಬ ಸಮಾಚಾರವು ಯಾರಿಗೂ ಗೊತ್ತಿಲ್ಲ. ಅವನನ್ನು ಕಾಣದೆ ಸುಮಾರು ಐದು ವರ್ಷಗಳು ಕಳೆದವು. ಎಷ್ಟೋ ವಿಚಾರಿಸಿ ಪ್ರಯತ್ನಿಸಿದಾಗ್ಯೂ ಅವನಿರುವ ಸ್ಥಳ ಗೊತ್ತಾಗಲಿಲ್ಲ. ಇದನ್ನು ಓದುವವರಲ್ಲಿ ನನ್ನ ತಂದೆಯ ಗುರುತು ಬಲ್ಲವರು ಆತನು ಯಾವ ಸ್ಥಳದಲ್ಲಿರುತ್ತಾನೆಯೆಂದು ತಿಳಿಸಬೇಕಾಗಿ ಬೇಡಿಕೊಳ್ಳುತ್ತೇನೆ.

ಬಿ. ಸಿದ್ದಪ್ಪ.

ಪ್ರಕೃತಮಾರ್ಗದ ನಾಟಕವನ್ನೇ ಅಭಿನಯಿಸಬೇಕು

ಅಯ್ಯಾ,

ಶ್ರೀರಂಗಪಟ್ಟಣದ ತಾ. ಗಂಜಾಂ ಗವರ್ನ್ಮೆಂಟ್ ಕನ್ನಡ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ. ಎಂ. ಕೃಷ್ಣಪ್ಪನವರು "ಪ್ರಬೋಧಚಂದ್ರೋದಯ"ವೆಂಬ ನಾಟಕವನ್ನು ಕನ್ನಡಿಸಿ ನಮ್ಮ ಮಹಾಪ್ರಭುಗಳಾದ ಘನವನ್ನು ಹೊಂದಿದ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದೂರ್, ಜಿ. ಸಿ. ಎಸ್. ಐ ರವರ ಮಹಾಸನ್ನಿಧಾನಕ್ಕೆ ಸಮರ್ಪಿಸಿದರು. ಬಳಿಕ ಮಹಾಸನ್ನಿಧಾನದಿಂದ ಈ ಪುಸ್ತಕವನ್ನು ತಮಗೆ ಡೆಡಿಕೇಟ್ ಮಾಡಬಹುದೆಂದೂ, ಅದನ್ನು ಕ್ರಮೇಣ ಅಚ್ಚಿಸುವುದಾಗಿಯೂ ಗ್ರಂಥಕರ್ತರಿಗೆ ಅಪ್ಪಣೆಯು ದಯಪಾಲಿಸಲ್ಪಟ್ಟಿರುವುದು. ಈ ಗ್ರಂಥದ ವಿಷಯದಲ್ಲಿ ವೃತ್ತಾಂತ ಪತ್ರಿಕೆಯ ಎಡಿಟರಾದ ತಾವು 1911ನೇ ಜನವರಿ ತಾ. 12 ನೆಯ ಪತ್ರಿಕೆಯಲ್ಲಿ ರಿವ್ಯೂಮಾಡಿರುವುದಕ್ಕೆ ಸರಿಯಾಗಿ ಇದನ್ನು ಮದರಾಸ್ ಯೂನಿವರ್ಸಿಟಿಯವರು ಬಿ. ಎ. ಪರೀಕ್ಷೆಯ ಕನ್ನಡ ಬ್ರ್ಯಾಂಚಿಗೆ ಒಂದು ಟೆಕ್ಸ್ಟ್ ಬುಕ್ಕನ್ನಾಗಿ ನಿಯಮಿಸಿರುವರು. ಹೀಗಿರುವಲ್ಲಿ ನಮ್ಮ ಮಹಾಪ್ರಭುಗಳ ಅಜ್ಞೆಯಂತೆ ಅರಮನೆಯ ನಾಟಕ ಸಂಘದವರು ಮೇಲೆ ಕಂಡ ನಾಟಕವನ್ನು ಸ್ಟೇಜಿಗೆ ತರುವುದಕ್ಕಾಗಿ ಅಭ್ಯಾಸಮಾಡುತ್ತಿರಬಹುದೆಂದೂ, ಕೂಡಲೇ ಸ್ಟೇಜಿಗೆ ತಂದಾರೆಂದೂ ಹಾರೈಸುವೆವು. ಕೇವಲ ಶೃಂಗಾರ ನಾಟಕಗಳನ್ನೇ ಅಭಿನಯಿಸುವುದಕ್ಕಿಂತಲೂ ನೀತಿಬೋಧಕಗಳೂ, ವಿವೇಕಮಾರ್ಗ ಪ್ರದರ್ಶಕಗಳೂ ಆದ ಹಳೆಯ ಮತ್ತು ಹೊಸ ನಾಟಕಗಳನ್ನು ಅರಮನೆಯ ನಾಟಕ ಕಂಪೆನಿಯ ಮೇಲ್ವಿಚಾರಣಾಕರ್ತರಾದ ಸರ್ದಾರ್ ಎಂ. ಗೋಪಾಲರಾಜೇ ಅರಸರವರು ಆಡಿಸಿ ಇತರರ ಪ್ರತಿಷ್ಠೆಯನ್ನು ಪಡೆಯುವರೆಂದು ಪ್ರಾರ್ಥಿಸುವೆನು.

ನಿಷ್ಪಕ್ಷಪಾತಿ.

ಮ|| ಎಂ ಎಸ್ ವೆಂಕಟರಾವ್ ಎಂಬುವರಿಗೆ ಸದುತ್ತರ.

ಅಯ್ಯಾ,

1912 ನೇ ಜೂನ್ 13 ನೇ ತಾ. ತಮ್ಮ ಪತ್ರಿಕೆಯೊಳಗೆ ಸ್ವಾಮಿ ದಯಾನಂದ ಸರಸ್ವತಿಯವರ 1,000 ರೂಪಾಯಿಗಳ ಪಂಥಕ್ಕೆ ಉತ್ತರವೆಂದು ಮ|| ಎಂ. ಎಸ್. ವೆಂಕಟರಾವ್ ಎಂಬುವರು ಒರೆದಿರುವುದನ್ನು ವಾಚಕರು ನೋಡಿದ್ದಾಯಿತು. ವಿಗ್ರಹಾರಾಧನೆ, ಮೃತಕಶ್ರಾದ್ಧ ಮೊದಲಾದವು ಋಷಿಗಳು ಅಂಗೀಕರಿಸುತ್ತಿದ್ದರೆಂಬ ಶಂಕೆ ಅವರನ್ನು ಬಾಧಿಸುತ್ತದಂತೆ. ಅವು ವೇದೋಕ್ತವೆಂದು ವಿವರಿಸಲು ಪಂಡಿತರನೇಕರಿರುವರಂತೆ. ಅವರಿಗೆ ಸಿದ್ಧಾಂತಮಾಡುವ ಶಕ್ತಿ ಇಷ್ಟವಿಲ್ಲವಂತೆ. ಇದು ಸಂತೆಯಲ್ಲಿ ತತ್ವವಿಚಾರಮಾಡುವ ರೀತಿಯಂತೆ. ಅವು ವ್ಯರ್ಥವಂತೆ. ಜ್ಞಾನಿಗಳಿಗೆ ಮೂರ್ತಿಪೂಜೆ ಬೇಕಿಲ್ಲವಂತೆ. ಅಜ್ಞಾನಿಗಳಿಗೆ ಬೇಕಂತೆ. ಬ್ರ|| ಶ್ರೀ ನಂಜುಂಡದೀಕ್ಷಿತರ "ವಿಗ್ರಹಾರಾಧನ ಸಮರ್ಥನೆ" ಎಂಬ ಪುಸ್ತಕವು ನೋಡಬೇಕಂತೆ. ಇಲ್ಲವೆ 1-5 ರೂ ಖರ್ಚುಮಾಡಿ ಮೈಸೂರಿಗೆ ಬರಬೇಕಂತೆ. ವೇದವೇದಾಂಗೋಕ್ತವಾದ ವಿಗ್ರಹಾರಾಧನೆ ಜ್ಞಾನಿಗಳಿಗೆ ಬೇಕಿಲ್ಲವಂತೆ. ಮ|| ವೆಂಕಟರಾಯರು ನನ್ನ ಸದುತ್ತರ ನೋಡಿ ದಯಮಾಡಿ ಹಾಗೇ ಮಾಡಲಿ.

ಋಗ್ಯಜುರ್ವೇದಾದಿ ಭಾಷ್ಯಕಾರರಾದ ಶ್ರೀ ದಯಾನಂದ ಮಹರ್ಷಿಗಳಿಂದ ರಚಿತವಾದ ಸತ್ಯಾರ್ಥಪ್ರಕಾಶದ 11 ನೇ ಸಮುಲ್ಲಾಸವು, ವೇದಪ್ರಕಾಶ ಪ್ರಕಾಶಿಪರೂ ಸಾಮವೇದ ಭಾಷ್ಯಕಾರರೂ ಆದ ಶ್ರೀ ತುಳಸೀರಾಮಸ್ವಾಮಿಯವರೂ ರಚಿಸಿದ "ಮೂರ್ತಿಪೂಜಾ ಖಂಡನ", ಮಹಾಶಯ ಭೀಮಸೇನಶರ್ಮರ ಸಮೀಕ್ಷಕವಾದ "ಆರ್ಯಸಿದ್ಧಾಂತ" ಮೊದಲಾದ ಗ್ರಂಥಗಳನ್ನು ತಾವು ನೋಡಿದರೆ ವಿಗ್ರಹಾರಾಧಕರು ನಾಸ್ತಿಕರೆಂದು ತಿಳಿಯುವುದು, ಅಥವಾ ತಾವು ಇನಿಟ್ಟು ನಮ್ಮ ವಾಚಕಮಂದಿರಕ್ಕೆ ಬಂದು ಸುದರ್ಶಿನೀ ಪತ್ರಿಕೆಯಲ್ಲಿ ಮುದ್ರಿತವಾಗುತ್ತಿರುವ ಪ್ರಸ್ತಾವಣವೆಂಬ ಗ್ರಂಥದಲ್ಲಿ "ವಿಗ್ರಹಾರಾಧನೆ ಮೃತಕಶ್ರಾದ್ಧಾದಿ ತರಂಗಗಳು", "ಬ್ರಾಹ್ಮಣಸೂರ್ಯೋದಯವು" ಮತ್ತು ಬ್ರ|| ಶ್ರೀ ... ಬಹದ್ದೂರು ಕೆಂದುಕೂರು ವೀರೇಶಲಿಂಗಮುಪಂತುಲುಯವರು ಬರೆದ "ವಿಗ್ರಹಾರಾಧನವು" ಎಂಬ ಗ್ರಂಥಗಳನ್ನು ನೋಡಿದರೆ ಮೂರ್ತಿಪೂಜೆ, ಮೃತಕಶ್ರಾದ್ಧ ಯುಕ್ತವೆಂದು ಹೇಳುವ ನಿಮ್ಮ ಮತವು ವೇದ ವಿರೋಧವೆಂಬದಾಗಿ ಸಿದ್ಧಾಂತವೆಂದು ತಿಳಿದುಕೊಂಡು ತೃಪ್ತರಾಗುವಿರೆಂಬ ಭರವಸೆ ಇದೆ.

ಶ್ರೀ ಶಾರದಾವಿಲಾಸ, ಧರ್ಮವಾಚಕಮಂದಿರಂ. — ಡಿ. ಶೇಷಗಿರಿರಾವ್, ಸೆಕ್ರೆಟರಿ, ನಂದಿ, ಕೋಲಾರ್.

ಯಡತೊರೆ ತಾ|| ಮಿರ್ಲೆ ಪ್ರಜೆಗಳ ಸಂತಾಪ.

ಅಯ್ಯಾ,

ನಮ್ಮ ತಾಲ್ಲೂಕಿನ ಪೈಕಿ ಮೂರು ಹೋಬಳಿಗಳನ್ನು ಮಾತ್ರ ಹೊಳೇನರಸೀಪುರದ ಮುನಸೀಫ್ ಕೋರ್ಟಿಗೆ ಸೇರಿಸಿ ಇರುವುದಾಗಿ ವದಂತಿ ಇದೆ. ಇದರಿಂದ ಉಂಟಾಗುವ ಕಷ್ಟನಷ್ಟಗಳನ್ನು ವಿವರಿಸಲು ಅಸದಳವು. ಆದಾಗ್ಯೂ ಸನ್ನಿಧಿಯಲ್ಲಿ ಕೊಂಚ ಭಾಗವನ್ನು ಬಿನ್ನೈಸುತ್ತೇನೆ.

ಹೊಳೇ ನರಸೀಪುರಕ್ಕೆ ಅಡೀಷನಲ್ ಮುನಸೀಫ್ ಕೋರ್ಟನ್ನು ವರ್ಗಾಯಿಸಕೂಡದು. ಹಾಗೆ ವರ್ಗಾಯಿಸಬೇಕೆಂದು ಅಭಿಪ್ರಾಯವಿದ್ದ ಪಕ್ಷ ಸಾಲಿಗ್ರಾಮದ ಹೋಬಳಿ, ಮಿರ್ಲೆ ಹೋಬಳಿ, ಈ ಎರಡನ್ನು ಮಾತ್ರ ಮೈಸೂರಿಗೆ ಸೇರಿಸಬೇಕು. ಆ ಭಾಗವೂ ಅಭಿಪ್ರಾಯವಿಲ್ಲದೆ ಇದ್ದರೆ ಹಾಲಿ ಇರುವಂತೆಯೇ ಇಟ್ಟು ಕಾಪಾಡಬೇಕು. ಹಿಂದೆ ಇದೇ ವಿಷಯದಲ್ಲಿ ಬಹು ಕಾಲ ಚರ್ಚೆ ನಡೆದು, ನಂತರ ಬಡವರ ಅಹವಾಲ್ ಚಿತ್ತಕ್ಕೆ ತಂದುಕೊಂಡು ಮೈಸೂರಿಗೆ ವರ್ಗಾಯಿಸೋಣವಾಯಿತು. ಹೊಳೇ ನರಸೀಪುರದಲ್ಲಿ ವಾದಿಗಾಗಲಿ, ಪ್ರತಿವಾದಿಗಾಗಲಿ, ಸಾಕ್ಷಿಗಾರರಿಗಾಗಲಿ ಯಾವ ವಿಧವಾದ ಸೌಕರ್ಯವೂ ಇಲ್ಲ. ಹೊಟ್ಟೆಗೆ ಇಲ್ಲದೆ ತಾಪತ್ರಯ ಮತ್ತು ಕಷ್ಟ ಪರಂಪರೆಗಳನ್ನು ಹೊಂದಿ, ಅದಕ್ಕಾಗಿಯೇ ಗಾಡಿ ಮಾಡಿ ದುಬಾರಿ ಗಾಡೀ ಬಾಡಿಗೆ ತೆತ್ತು ದಾರಿಯಲ್ಲಿ ಕಳ್ಳಕಾಕರ ಅವಾಂತ್ರದಿಂದ ಕೆಡುವುದು ಒಂದಲ್ಲದೆ ಮತ್ಯಾವ ಸೌಕರ್ಯವೂ ಇಲ್ಲ. ಮೈಸೂರಿನಲ್ಲಿ ಎಲ್ಲಾ ವಿಧದಲ್ಲಿಯೂ ಸೌಖ್ಯವುಂಟು. ಹ್ಯಾಗೆಂದರೆ, ಬಹುಶಃ ಮುಕ್ಕಾಲು ಪಾಲು ಜನರು ಜರಾಯಿತು ಕಸಬಿನಿಂದ ಜೀವನ ಮಾಡತಕ್ಕವರಾಗಿದ್ದಾರೆ. ಆರಂಬಕ್ಕೆ ಬೇಕಾದ ಸಾಮಾನುಗಳೂ, ಭತ್ತ ವಿನಹಾ ಉಳಿದ ಕಿರಾಣಿ ಜಿನಸುಗಳೂ ಪ್ರತಿ ದಿನವೂ ಮೈಸೂರಿಂದ ತಂದು ಜೀವನ ಮಾಡಬೇಕಾಗಿದೆ. ಸಾರ್ವದಾ ದಿನಸಿ ಗಾಡಿಗಳು ಇಲ್ಲಿಂದ ಹೊರಡುವುದರಿಂದ ಪ್ರಯಾಣದ ಗಾಡಿಬಾಡಿಗೆ ಕಮ್ಮಿ. ಆಹಾರಕ್ಕೆ ಬೇಕ ಮತ್ತು ಬೇಯದ ಪದಾರ್ಥಗಳು ಅವರವರ ಯೋಗ್ಯತಾನುಸಾರವಾಗಿ ದೊರೆತು, ಎಲ್ಲಾ ಕೋರ್ಟುಗಳೂ ಒಂದೇ ಕಡೆ ಇರುವುದರಿಂದ ಅವರವರಿಗೆ ಉಂಟಾಗಿರುವ ಕಷ್ಟಪರಂಪರೆಗಳನ್ನು ಸರ್ಕಾರಕ್ಕೆ ಬಿನ್ನೈಸಿಕೊಳ್ಳಲು ಬಹಳ ಅನುಕೂಲವಾಗಿರುತ್ತೆ. ಆದುದರಿಂದ ಕೋರ್ಟು ವರ್ಗಾಯಿಸುವುದರಲ್ಲಿ ಕಷ್ಟನಷ್ಟಗಳು ಉಂಟು. ಬಡಬಗ್ಗರು ಕೆಡಲು ಕಾರಣವಾಗಿರುತ್ತೆ. ನಿವ್ಯಕ್ಕೆ ಮೈಸೂರು ವಾಣ್ಯಸ್ಥಾನವಾಗಿದೆ. ವಿದ್ಯಾವಂತರಲ್ಲಿ ಕಲೆತು ಮಾತನಾಡುವುದರಿಂದ ನೀತಿಬುದ್ಧಿಯು ಮಲಿನವಾಗಿ, ಸುಬುದ್ಧಿಯು ಸಂಪಾದನೆಯಾಗಲು ಯಾವ ಸಂದೇಹವೂ ಇಲ್ಲ. ವಿದ್ಯಾವಂತರುಗಳನ್ನು ಆಗಾಗ್ಗೆ ನೋಡುತ್ತಲೂ, ಅವರೊಡನೆ ಮಾತನಾಡುತ್ತಲೂ ಇರುವುದರಿಂದ ನಮಗೂ ಕೂಡ ನಮ್ಮ ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸಬೇಕೆಂಬ ಕುತೂಹಲವುಂಟಾಗಿದೆ. ಹಳ್ಳಿಗಳಲ್ಲಿರತಕ್ಕವರು ಕೂಡ ವಿದ್ಯಾವಂತರಾಗಲು ಪ್ರಯತ್ನಪಡುತ್ತಾರೆ. ಈಚೀಚೆಗೆ ಹಳ್ಳಿಯಲ್ಲೂ ಕೂಡ ರೈತರೆಷ್ಟೋ ವಿದ್ಯಾವಂತರಾಗಿಯೂ, ನಾಗರೀಕತೆ ಪಡೆದವರಾಗಿಯೂ ಇದ್ದಾರೆ. ಆದುದರಿಂದ ಮೈಸೂರು ಸಂಚಾರವು ಬಹಳ ಉತ್ತಮ. ಮುಖ್ಯವಾಗಿ ಸರ್ಕಾರದವರು ಸಕಲ ಭಾಗಗಳಲ್ಲೂ ನಮ್ಮಗಳಿಗೆ ಅತ್ಯುತ್ತಮವಾಗಿರುವ ಮೈಸೂರಲ್ಲೇ ಕೋರ್ಟು ಇಟ್ಟು ಕಾಪಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಪ್ರಜಾಹಿತೈಷಿ, ಮಿರ್ಲೆ.

ಲಗ್ನವೂ ನಾಮಧಾರಿಗಳೂ.

ಅಯ್ಯಾ,

ವೃತ್ತಾಂತ ಪತ್ರಿಕೆಯ ತಾ. 6 ನೇ ಜೂನ್ 1912 ರಲ್ಲಿ "ಲಗ್ನವೂ ನಾಮಧಾರಿಗಳೂ" ಎಂಬ ವಿಷಯವನ್ನು ಉದ್ದೇಶಿಸಿ ಆ ನಾಮಧೇಯ ಗೌಡರೊಬ್ಬರು ಬರಸಿರುವುದು ವಾಚಕಮಹಾಶಯರ ಹೃದಯಂಗಮವಾಗಿರಬಹುದಷ್ಟೆ. ಈ ವಿಷಯದಲ್ಲಿ ಪುರಾತನ ಧರ್ಮಾಭಿಮಾನಿಯಾದ ನನ್ನ ಅಭಿಪ್ರಾಯವೇನೆಂದರೆ, ಮೇಲ್ಕಂಡ ಅನಾಮಧೇಯಗೌಡರು ತೀರ್ಥಹಳ್ಳಿ ತಾಲ್ಲೂಕು ಚಕ್ಕೋಡು ಗ್ರಾಮದಲ್ಲಿ ನಡೆದ ಎರಡು ಲಗ್ನಗಳೂ ಪೂರ್ವ ಪದ್ಧತಿಗೆ ವಿರೋಧವಾಗಿ ನಡೆದವೆಂದು ಅಭಿಪ್ರಾಯಪಟ್ಟದ್ದು ಅಷ್ಟು ಸಮಂಜಸವಾಗಿ ತೋರುವದಿಲ್ಲ. ಈ ಲಗ್ನಕಾಲದಲ್ಲಿ ಪೂರ್ವ ಪದ್ಧತಿಗೆ ವಿರೋಧವಾಗಿ ನಡೆದದ್ದು ಮೂರು ವಿಷಯಗಳೆಂದು ಆಕ್ಷೇಪಿಸುವ ಆ ನಾಮಧೇಯ ಗೌಡರ ಆಕ್ಷೇಪಣೆಗೆ ಉತ್ತರ ಹೇಳಲು ಸುಲಭಸಾಧ್ಯವಾಗಿದೆ.

(1) ಪೂರ್ವದಲ್ಲಿ ಇವರಲ್ಲಿ ತೊಡಸೆಟ್ಟಿಯಲ್ಲಿ ಧರಿಸಿದ ಉಡಿಗೆಯು ಕಡಸೆಟ್ಟಿಯಲ್ಲಿ ಬಿಡತಕ್ಕ ಪದ್ಧತಿ ಇತ್ತು. ಈಗ ಆ ರೀತಿಯಾದ ಉಡಿಗೆಯು ಬದಲಾಯಿಸಲ್ಪಟ್ಟದೆ. ನವನಾಗರೀಕರಾಗುವುದಕ್ಕೆ ಇದು ಒಂದು ಕಾರಣ. (2) ಲಗ್ನಕಾಲದಲ್ಲಿ ಮದ್ಯಪಾನವು ಪೂರಾ ನಿರಾಕರಿಸಲ್ಪಟ್ಟಿದೆ. ಇದರಿಂದ ಬ್ರಾಹ್ಮಣ ಮಹನೀಯರೇ ಮೊದಲಾದ ದೊಡ್ಡ ಮನುಷ್ಯರೂ ಬಂದು ಲಗ್ನವಾಡಿಸಿ, ಆಶೀರ್ವದಿಸಲು ತುಂಬಾ ಅನುಕೂಲವೆಂದು ನಿಲ್ಲಿಸಲ್ಪಟ್ಟಿದೆ. ನವನಾಗರೀಕರಾಗಲು ಇದು ಎರಡನೆಯ ಕಾರಣ. (3) ಲಗ್ನ ಮಹೋತ್ಸವಕಾಲದಲ್ಲಿ ಪ್ರಾಣಿಹಿಂಸೆ ಮಾಡಿ ಮಾಂಸಾಹಾರ ಮಾಡುವುದು ಮುಂದಿನ ಶ್ರೇಯಸ್ಸಿಗೆ ಹಾನಿಕರವೆಂದು ನಿಲ್ಲಿಸಲ್ಪಟ್ಟಿದೆ. ಮೇಲೆ ಹೇಳತಕ್ಕ ವಿಷಯಕ್ಕೆ ಇದೂ ಒಂದು ಕಾರಣವಾಗಿದೆ.

ಈ ಮೇಲಿನ ಮೂರು ವಿಷಯಗಳೂ ಪೂರ್ವ ಪದ್ಧತಿಗೆ ವಿರೋಧವೆಂದು ನವನಾಗರೀಕರ ಅಭಿಪ್ರಾಯವಲ್ಲ. ಶಾಸ್ತ್ರೋಕ್ತವಾಗಿ ಲಗ್ನಕಾಲದಲ್ಲಿ ತೆಗೆದುಕೊಳ್ಳತಕ್ಕ 75 ರೂಪಾಯಿಗೆ ಬದಲಾಗಿ 250 ರೂಪಾಯಿ ತೆಗೆದುಕೊಂಡದ್ದು ಆಕ್ಷೇಪಕರವೆಂದು ಭಾವಿಸಲ್ಪಟ್ಟದ್ದು ಅಷ್ಟು ಸಮಂಜಸವಾಗಿ ಕಾಣುವದಿಲ್ಲ. ಹೀಗೆ ತೆಗೆದುಕೊಳ್ಳತಕ್ಕ ದ್ರವ್ಯಕ್ಕೆ ಪುರಾತನವಾದ ನಾಮಧೇಯವೇನೆಂದರೆ ಕಡವೆಚ್ಚ—ಸಮಾಸ = ಕಡದಿಂದ + ವೆಚ್ಚ, ಅರ್ಥ-ಕಡಕೊಟ್ಟಕ್ಕೆ ಯಾವುದಾದರೂ ಪದಾರ್ಥವನ್ನು ತೆಗೆದುಕೊಂಡು ನಿಷ್ಕೃಷ್ಟಿಯಿಂದ ಅವಧಿಯಿಲ್ಲದೆ ವಾಪಸು ಮಾಡುವುದೆಂದೂ ಅರ್ಥವಾಗುತ್ತೆ. ಹೀಗೆ ಅರ್ಥವಾಗುವುದರಿಂದಲೇ ಹೆಣ್ಣಿನವರು ಹಣ ತೆಗೆದುಕೊಂಡು ನಂತರ ಗಂಡಿನವರಿಗೆ ಹಣ ವಾಪಸು ಮಾಡುವ ಪದ್ಧತಿ ಇರುವುದರಿಂದ ಎಷ್ಟು ಹಣ ತೆಗೆದುಕೊಂಡರೂ ವಾಪಸು ಕೊಡುವ ಪದ್ಧತಿ ಇರುವುದರಿಂದ ಹೆಚ್ಚಿಗೆ 250 ರೂಪಾಯಿ ತೆಗೆದುಕೊಂಡರೆಂದು ಆಕ್ಷೇಪಿಸುವುದು ಸರಿಯಾಗಿ ಕಾಣುವುದಿಲ್ಲ. ಇದು ಕನ್ಯಾ ವಿಕ್ರಯ ದ್ರವ್ಯವಲ್ಲವೆಂಬುವುದು ಮೇಲಿನ ಕಡವೆಚ್ಚ ಎಂಬ ಮಾತಿನಿಂದಲೇ ಅರ್ಥವಾಗುತ್ತೆ. ಹೀಗೆ ಕಡವೆಚ್ಚವಾಗಿ 250 ರೂಪಾಯಿ ಕೊಟ್ಟು ದಿಬ್ಬಣದವರಲ್ಲಿ ಒಬ್ಬರು ಸುದಾರಿಸಿಕೊಳ್ಳಬಹುದೆಂತಲೂ, ಇನ್ನೊಬ್ಬರು ಮಾತ್ರ ಸಾಲ ಕೊಟ್ಟ ಸಾಹುಕಾರರ ಮನೆಗೆ ಹೋಗಿ—ಮಾಹೆಯಾನಾ ನಮ್ಮ ಇಬ್ಬರಿಂದ ಏನು ವಸೂಲ್ ಕಟ್ಟಿಕೊಳ್ಳುತ್ತೀರೆಂತ ಕೇಳಬೇಕಾಗುತ್ತದೋ ಏನು ಎಂದು ಮುಂತಾಗಿ ಪೇಪರಿನಲ್ಲಿ ಬರಸಿದ್ದರಷ್ಟೆ. ಪೂರ್ವ ಪದ್ಧತಿಯು ಎಲ್ಲರಲ್ಲಿಯೂ ಕಡವೆಚ್ಚ ಎಂಬದಾಗಿ ಕಂಡುಬರುತ್ತೆ. ಆ ಕಡವು ಕೈಲಾಸ ಕಡವಾಗಿಯೂ, ವೆಚ್ಚವು ದುರ್ವೆಚ್ಚವಾಗಿಯೂ ಕಾಣಬಂದಿದ್ದರೆ ಬರೆಯುವವರ ಗೌರವಕ್ಕೆ ಕಮ್ಮಿಯಾದ ಮಾತುಗಳನ್ನು ಪೇಪರಿನಲ್ಲಿ ಬರಿಸಬಹುದಾಗಿತ್ತು.

ಪುರಾತನ ಧರ್ಮಾಭಿಮಾನಿ.

II

ಅಯ್ಯಾ,

ಜೂನ್ ತಾ. 20 ನೇ ತಮ್ಮ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವ ಕೊಪ್ಪದ ತಾಲ್ಲೂಕು ಜಾವಲ್‌ಮನೇ ಸವಿಪದ ಒಬ್ಬರು ನಾಯ್ಕರಲ್ಲಿ ಮೇ ತಾ. 29 ರಲ್ಲಿ ನಡೆದ ಲಗ್ನದಲ್ಲಿ ಗಂಡಿನ ಕಡೆಯಿಂದ ಬಂದ ದಿಬ್ಬಣದಲ್ಲಿ ಅನೇಕ ಜನರು ಕುಡಿಕತನದಿಂದ ತೂಗಡಿಸುತ್ತಿದ್ದರೆಂದೂ, ಸದರಿ ಲಗ್ನಕ್ಕೆ ನಾನು ಸಹ ಹೋಗಿದ್ದೆನೆಂದೂ ಬಾತ್ಮಿದಾರರಲ್ಲೊಬ್ಬರು ಸೂಚಿಸಿರುವ ವಿಷಯವು ಬಹಳ ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿರುತ್ತದೆ. ಆದರೆ ಚಿಂತೆಯಿಲ್ಲ. ಸದರಿ ಲಗ್ನಕ್ಕೆ ನಮ್ಮ ಮನೆಯಿಂದ ನನ್ನ ಸಹೋದರರಲ್ಲೊಬ್ಬನು ಸಹಾ ಹೋಗಿದ್ದನು. ಈ ಕಾಲದಲ್ಲಿ ಕೆಲವು ಮಟ್ಟಿಗೆ ನಾಗರೀಕತನಕ್ಕೆ ತಿರುಗಿರುವ ನಾಮ ಧಾರಿಗಳಾದ ನಾವುಗಳು ಶುಭಸಂತೋಷಕಾರ್ಯಗಳಿಗೆ ಹೋಗುವಾಗ್ಗೆ ಈ ಮೇರೆ ದುಡ್ಡು ಖರ್ಚುಮಾಡಿಕೊಂಡು ದೊಡ್ಡ ಮರ್ಯಾದೆಯನ್ನು ಪಡೆಯಬೇಕೆಂಬ ಉದ್ದೇಶದಿಂದ ಹೋಗುವದೇನೋ ಕಾಣೆವು.

ಗೌಡರಲ್ಲಿ ಒಬ್ಬ.

[ಈ ವಿಷಯವಾಗಿ ಇನ್ನು ಮುಂದೆ ಬರುವ ಬಾತ್ಮಿಗಳನ್ನು ಪ್ರಕಟಿಸಲಾರೆವು. ಮಲೆನಾಡಿನ ನಾಮಧಾರಿ ಜನಗಳು ದಿನಕ್ರಮೇಣ ನಾಗರಿಕರಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆಂದೂ, ಅವರ ಮುಖಂಡರು ಆ ಜನದಲ್ಲಿರುವ ದುಷ್ಟವಾದ ಪೂರ್ವಪದ್ಧತಿಗಳನ್ನು ತೊಡೆದುಬಿಡಲು ಸಾಹಸಪಡುತ್ತಿದ್ದಾರೆಂದೂ ಓದಲು ಸಂತೋಷವಾಗುತ್ತದೆ. ಈ ಭಾಗದಲ್ಲಿ ನಾಮಧಾರಿಗಳ ಸಾಹಸಪ್ರಯತ್ನಗಳೆಲ್ಲಾ ಬೇಗಬೇಗನೆ ಕೈಗೂಡುತ್ತಾ ಬರಲೆಂದು ಹಾರೈಸುವೆವು.—ಎಡಿ.]

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಈ ಪ್ರದೇಶದಲ್ಲಿ ಈಚೆಗೆ ಕೊಂಚ ಅನುಕೂಲವಾದ ಮಳೆ ಬಿತ್ತು. ರೈತರೆಲ್ಲ ಹೊಲಗಳನ್ನು ಉತ್ತು ಬಿತ್ತುತ್ತಿದ್ದಾರೆ. ಧಾರಣೆ ವಾಸಿಗಳು ಮಾತ್ರ ದಿನೇ ದಿನೇ ಹೆಚ್ಚುತ್ತಲಿವೆ. ವಿಶೇಷವಾದ ಛಳಿ ಬೀಸುತ್ತಲಿದೆ. ಹವಾ ಬದಲಾವಣೆಯಿಂದಲೋ ಅಥವಾ ನೀರಿನ ದೋಷದಿಂದಲೋ ಊರಿನಲ್ಲೆಲ್ಲಾ ಅಮಶಂಕೆ, ಛಳಿ ಜ್ವರ ವಿಶೇಷವಾಗಿ ಹರಡಿ ಜನಗಳು ಬಹಳ ತೊಂದರೆ ಪಡುತ್ತಿದ್ದಾರೆ.—ಪೇಟೆಯಲ್ಲಿಯೂ ಮತ್ತು ಸಂತೆಯಲ್ಲಿಯೂ ಕುಕು-ಚ ಮತ್ತು ಸೀಮೆಕಡ್ಲೆಕಾಯಿಯ ಎಣ್ಣೆಗಳಿಂದ ತಯಾರು ಮಾಡಿದ ಮಕ್ಕಳ್ಳು ತಿನ್ನತಕ್ಕ ಪದಾರ್ಥಗಳನ್ನು ಮಾರುತ್ತಾರೆ. ಇವುಗಳನ್ನು ಅನೇಕ ಮಕ್ಕಳು ತಿಂದು ರೋಗಗ್ರಸ್ತರಾಗಿ ನರಳುವರು. ನಮ್ಮ ಸ್ಯಾನಿಟರಿ ಇನ್ಸ್ಪೆಕ್ಟರವರಾಗಲಿ ಅಥವಾ ಡಾಕ್ಟರವರಾಗಲಿ ಈ ವಿಚಾರವನ್ನು ಯಾಕೆ ಗಮನಕ್ಕೆ ತೆಗೆದುಕೊಳ್ಳಬಾರದೋ ತಿಳಿಯದು. ನಮ್ಮ ಅಮಲ್ದಾರರಾದರೂ ಈ ವಿಷಯವಾಗಿ ತಕ್ಕ ಏರ್ಪಾಡು ಮಾಡಿಯಾರೆಂದು ನಂಬಿದೇನೆ.—ನಮ್ಮ ಪೋಲೀಸ್ ಇನ್ಸ್ಪೆಕ್ಟರವರು ಊರಿನಲ್ಲಿ ಪ್ಲೇಗ್ ಗಲಾಟೆ ಆಗಿದ್ದಾಗ್ಗೆ ಹಿಡ್ಡಿಗೆ ಹೋಗಿದ್ದವರು ಪ್ಲೇಗು ನಿಂತು ಸುಮಾರು 6-7 ತಿಂಗಳಾದರೂ ಊರಿನೊಳಕ್ಕೆ ಬಂದಿರಲಿಲ್ಲ. ಊರಿನಲ್ಲಿ 3-4 ಕಳ್ಳತನಗಳು ನಡೆದ ಮೇಲೆ ಊರಿನೊಳಕ್ಕೆ ಬಂದಿರುವರು. ಪೋಲೀಸ್ ಕಾನ್ಸ್ಟೇಬಲರು 5 6 ಮಂದಿ ಬೇರೇ ಕೆಲಸದಲ್ಲಿದ್ದಂತೆ ತಿಳಿಯುತ್ತದೆ. ಜಮೇದಾರರೂ, ದಫೇದಾರರೂ ಎಷ್ಟು ಮುತುವರ್ಜಿ ವಹಿಸಿ ಕೆಲಸ ಮಾಡಿಯಾರು. ಇನ್ಸ್ಪೆಕ್ಟರವರು ಊರಿನಲ್ಲಿ ಗಸ್ತು ಬಂದುದೇ ಪ್ರಜೆಗಳು ಕಂಡರಿಯರು. ಪೋಲೀಸ್ ಏರ್ಪಾಡು ಈ ರೀತಿಯಾದರೆ ಪ್ರಜೆಗಳ ಗತಿ ಏನಾಗಬೇಕೋ ತಿಳಿಯದು.—ತಾ. 27 ರಲ್ಲಿ ರೆವ್. ಸ್ಟೀವಲ್ ಧೊರೆ ಧೊರಸಾನಿಯವರು ಇಲ್ಲಿನ ಪಂಚಮಸ್ಕೂಲಿಗೆ ದಯಮಾಡಿಸಿದ್ದರು. ಸ್ಕೂಲಿನ ನೆರೆಹೊರೆಯ ದೊಡ್ಡ ಮನುಷ್ಯರು ಸಹ ಸ್ಕೂಲಿನಲ್ಲಿ ಸೇರಿದ್ದರು. ದೊರೆಯವರು ವಿದ್ಯಾಭ್ಯಾಸ ವಿಷಯವಾಗಿ ಹುಡುಗರಿಗೆ ಬುದ್ಧಿವಾದವನ್ನು ಹೇಳಿದ ಮೇಲೆ ಹುಡುಗರಿಗೆ ಉಡುಪು, ಬಹುಮಾನ, ಫಲಾಹಾರಾದಿಗಳೂ ಸಭೆಯವರಿಗೆ ಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟವು.

ದೊಡ್ಡಬಳ್ಳಾಪುರ.—ಮುಂಗಾರು ಮಳೆ ಸಾಕಾದಷ್ಟು ಸುರಿದು ಕೆರೆಗಳಿಗೆ ತಕ್ಕಮಟ್ಟಿಗೂ ನೀರು ಬಂದು ಭೂಮಿಯೆಲ್ಲಾ ಹಸುರಾಗಿ, ಸಾಯಲಾಗಿದ್ದ ದನಗಳಿಗೆ ತುಂಬಾ ಅನುಕೂಲವಾಯಿತು. ಸಿಡಿಲುಗಳು ಕೆಲವೆಡೆಗಳಲ್ಲಿ ಬಿದ್ದು ಕೆಲವು ದನಗಳೂ ಮರಗಳೂ ನಾಶವಾದವು.—ಈ ಸಾರಿ ನಡೆದ ಲೋ. ಸೆ. ಪರೀಕ್ಷೆಯಲ್ಲಿ ಕನ್ನಡದಲ್ಲಿ 8 ಮಂದಿ, ಇಂಗ್ಲಿಷಿನಲ್ಲಿ 7 ಮಂದಿ ಹಿಂದುಸ್ಥಾನಿಯಲ್ಲಿ 1 ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ.—ಈ ಊರಲ್ಲಿ ಕಳೆದ ವರ್ಷ 6 ತಿಂಗಳು ಮಟ್ಟಿಗೂ ಪ್ಲೇಗ್ ನಿಮಿತ್ತ ಸರಿಯಾಗಿ ಪಾಠಶಾಲೆಗಳು ಕೆಲಸ ಮಾಡಲಾಗದಿದ್ದರೂ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಚನ್ನಾಗಿ ಕಷ್ಟಪಟ್ಟು ಕೆಲಸ ಮಾಡಿರುವದರಿಂದ ಫಲಿತಾಂಶವು ತೃಪ್ತಿಕರವಾಗಿದೆ. ಆದರೆ ಇಂಡಸ್ಟ್ರಿಯಲ್ ಸ್ಕೂಲಲ್ಲಿ ಒಳ್ಳೇ ಅಭಿವೃದ್ಧಿ ಆಗದೆ ಇರುವದು ವ್ಯಸನಕರವಾಗಿದೆ.—ವೆಸ್ಲಿಯನ್ ಮಿಷನ್ ಇಲಾಖೆಗೆ ಹೊಸದಾಗಿ ಸೇರಿರುವ ಮಿಸ್ ಎಮರಿಯವರಿಂದ ಕೊಡಲ್ಪಟ್ಟ ಬಂಗ್ಲೆಯಲ್ಲಿ ಮೇರಿ ಬಾಯಿಯವರು ಒಂದು ವಿಧವಾ ನಿಲಯವನ್ನು ನಡಿಸುತ್ತಾ ಇದ್ದಾರೆ. ಧೇರ್ ವುಡ್ ರೆವ್. ರೀಸ್ ಬೋಧಕರು ಕಳೆದ ವಾರ ಬಂದು ಮಿಷನ್ ಕೆಲಸಗಳನ್ನೂ ಪಾಠಶಾಲೆಗಳನ್ನೂ ತನಿಖೆ ಮಾಡಿ ಸಂತೋಷಪಟ್ಟರು.—ಅಮಲ್ದಾರಿಯನ್ನು ಬದಲಿ ನೋಡುತ್ತಿದ್ದ ದೇವನಹಳ್ಳಿ ಶಿರಸ್ತೇದಾರ್ ಮ|| ನರಸಿಂಹನಾಯಕರವರು ಬಹು ಶ್ರೇಷ್ಠವಾದ ರೀತಿಯಲ್ಲಿ ಪ್ರಜಾನುರಾಗಕ್ಕೆ ಪಾತ್ರರಾಗಿದ್ದದ್ದು ಮಾತ್ರ

ದಲ್ಲಿ ಅಮಲ್ದಾರ್ ಕೆಲಸಕ್ಕೆ ಪೂರ್ಣಯೋಗ್ಯತೆ ಉಳ್ಳವರೆಂತ ತೋರ್ಪಡಿಸಿಕೊಂಡರು ಇವರು ಒಳ್ಳೇ ಬಾಳ್ಯಗಾರ್ ವಂಶಕ್ಕೆ ಸೇರಿದವರಾಗಿರುತ್ತಾರೆ — ನಮ್ಮ ಖಾಯಂ ಅಮಲ್ದಾರ್ ಮೆ॥ ಕೃಷ್ಣ ಅರಸಿನವರು ಪುನಹಾ ಕೆಲಸದ ಮೇಲೆ ಬಂದು ಚಾರ್ಜು ವಹಿಸಿಕೊಂಡರು —ಸಾಹುಕಾರ್ ಆಲಂಪಲ್ಲಿ ವೆಂಕಟಾಚಲಶೆಟ್ಟರವರು ಹೊಸದಾಗಿ ಕಟ್ಟಿಸಿರುವ ಥಿಯೊಸಾಫಿಕಲ್ ಮಂದಿರದಲ್ಲಿ ಕಾಲಪಾಟನಿಂದ ಬಂದಿರುವ ವೆಂಕಟಕೃಷ್ಣ ಘನಪಾಠಿಗಳು ಮಂಗಳವಾರ ರಾತ್ರಿ ಬ್ರಾಹ್ಮಣರ, ವೈಶ್ಯರ ಮತ್ತು ಇತರ ಸಭಿಕರ ಮುಂದೆ ವೇದಘೋಷದಿಂದ ತಮ್ಮ ಪಾಂಡಿತ್ಯವನ್ನು ಪ್ರಕಾಶಗೊಳಿಸಿ ಒಹುಮಾನವನ್ನು ಸಂತೋಷ ಪಡಿಸಿದರು —ನಮ್ಮ ಡಾಕ್ಟರವರು ಈ ತಿಂಗಳ ಅಂತ್ಯದಲ್ಲಿ ಪೆನ್ಷನ್ ಮೇಲೆ ನಿವೃತ್ತಿ ಪಡೆಯುವರು ಇವರ ಸ್ಥಳಕ್ಕೆ ಅನುಭವಸ್ಥರಾದ ವೈದ್ಯರು ಬರುವರೆಂತ ನಿರೀಕ್ಷಿಸುತ್ತೇವೆ —ಮ್ಯುನಿಸಿಪಲ್ ಲಾಂದ್ರಗಳ ಬೆಳಕು ಅನೇಕ ಕಡೆ ಸುತರಾಂ ಚನ್ನಾಗಿಲ್ಲ ಇದು ಎಣ್ಣೆಯ ದೋಷವೋ ಅಥವಾ ಇನ್ಯಾವ ಕಾರಣವೋ ತಿಳಿಯದು —ಊರೊಳಗೆ ಕೆಲವರು ಸೀಬಣ್ಣದ ಕಾಖಾನೆ ಇಟ್ಟು ಆ ಕೊಳಕು ನೀರನ್ನು ಚರಂಡಿಗಳಿಗೆ ಬಿಡುತ್ತಾರೆ ಅದರ ನಾತ ತುಂಬಾ ಕೆಟ್ಟದ್ದಾಗಿದೆ

ಅರಸಿಕೆರೆ —ಇದುವರೆಗೂ ಮಳೆ ಸುತರಾಂ ಇರಲಿಲ್ಲ ಈ ದಿವಸ ಸ್ವಲ್ಪ ಮಟ್ಟಿಗೆ ಮಳೆ ಬಂದು ಜನಗಳನ್ನು ಪ್ರೋತ್ಸಾಹಪಡಿಸಿರುತ್ತೆ — ನಮ್ಮ ರೆವಿನ್ಯೂ ಸಬ್ ಡಿವಿಜನ್ ಆಫೀಸರ್ ಮೆ| ಎಸ್ ಎನ್ ಅಪ್ಪಣ್ಣಯ್ಯಂಗಾರ್ಯರು ನೆನ್ನೆ ದಿವಸ ತಾಲ್ಲೂಕ್ ಜಮಾಬಂದಿಯನ್ನು ತೀರಿಸಿಕೊಂಡು ಹಾಸನಕ್ಕೆ ವಾಪಸು ಹೊರಟಿರುತ್ತಾರೆ ಇವರು ಇಲ್ಲಿನ ರೀಡಿಂಗ್ ರೂಮಿಗೆ ನಲವತ್ತು ರೂಪಾಯಿ ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡುವದಾಗಿ ವಾಗ್ದಾನಮಾಡಿರುತ್ತಾರೆ —ಮೆ ಎಂ ಚೌಡಯ್ಯನವರು ಇಲ್ಲಿನ ಕಾರೊನೇಷನ್ ಶಾಲೆಗೆ ಸಂಬಂಧಪಟ್ಟ ಒಂದು ದೊಡ್ಡ ಭಾವಿಯ ಕೆಲಸವನ್ನು ಬಹಳ ಮುತುವರ್ಜಿಯಿಂದ ಇವರೇ ಖುದ್ದು ನಿಂತು ನಡಿಸುತ್ತಾ ಇದ್ದಾರೆ ತಾಲ್ಲೂಕಾ ಮೆಳವಾಗ್ದಾನಮಾಡಿದ್ದ ಇತರ ಕಾರೊನೇಷನ್ ಮುಸಾಫರ್‌ಖಾನೆಗಳು ಮತ್ತು ಸ್ಕೂಲುಗಳು ಇನ್ನೂ ಪ್ರಾರಂಭಿಸಿದ ಹಾಗೆ ಕಾಣುವದಿಲ್ಲ ಈ ವಿಷಯದಲ್ಲಿ ನಮ್ಮ ತಾಲ್ಲೂಕ್ ಅಮಲ್ದಾರ್ರು ಮುತುವರ್ಜಿ ತೆಗೆದುಕೊಳ್ಳುವರೆಂದು ನಂಬಿದೇವೆ —ಇಲ್ಲಿನ ಸ್ಯಾನಿಟರಿ ಇನ್ಸ್‌ಪೆಕ್ಟರ್ ಮೆ| ನಾರಾಯಣಸಾಮಿ ನಾಯ್ಡುಯವರನ್ನು ಇಲ್ಲಿಂದ ಕೂಡಲೆ ವರ್ಗಾಯಿಸಬೇಕೆಂದು ಮೇಲ್ಪಟ್ಟ ಆಫೀಸರುಗಳಿಗೆ ಈ ಟವನ್ ದೊಡ್ಡ ಮನುಷ್ಯರು ಅರ್ಜಿಗಳನ್ನು ಗುಜರಾಯಿಸಿಕೊಂಡಿರುತ್ತಾರೆಂದು ವರ್ತಮಾನವಿದೆ

ಚಿತ್ರದುರ್ಗ —ಡೆಪ್ಯುಟಿ ಕಮಿಷನರ್ ಮ॥ ಕೆ ಚಾಂಡೀ ಸಾಹೇಬರಿಗೆ ಪುತ್ರೋತ್ಸವವಾಗಿ ೩ ತಿಂಗಳಾಯಿತು ಆ ಶಿಶುವಿಗೆ ಕಳೆದ ಭಾನುವಾರ ನಾಮಕರಣವೂ, ಬ್ಯಾಪ್ಟಿಜಂ ಸಹ ನಡೆದವು ಬೆಂಗಳೂರಿಂದ ರೆವ್ ಬ್ರಾಕ್‌ಬ್ಯಾಂಕ್ ಸಾಹೇಬರು ಬಂದು ಪ್ರಥಮತಃ ಜ್ಞಾನಸ್ನಾನವನ್ನು ಕೊಟ್ಟನಂತರ ಆ ಶಿಶುವಿಗೆ ಥಾಮಸ್ ಚಾಂಡಿ ಎಂಬ ನಾಮಕರಣಮಾಡಿದರು ಆ ದಿನ ಪಂಚಮರಿಗೂ, ಇತರೇ ಭಕ್ತರಿಗೂ ಮೇರೀ ಮಹಾರಾಜ್ಞೀ ಪಂಚಮಸ್ಕೂಲಿನ ವಿದ್ಯಾರ್ಥಿಗಳಿಗೂ ಸಮಾರು ೫೦೦ ಜನರಿಗೆ ಆರ್ಥರ್ ಸ್ಟುಡೆಂಟ್ಸ್ ಹೋಮಿನ ಕಾಂಪೌಂಡಿನಲ್ಲಿ ಸುಭೋಜನ ಮಾಡಿಸಿದರು ಒಳಕೆ ಬಾಕೀ ಕೋಮುಗಳ ಮಕ್ಕಳಿಗೆಲ್ಲಾ ಹೆಚ್ಚು ದ್ರವ್ಯ ವ್ಯಯಮಾಡಿ ಫಲಾಹಾರಗಳನ್ನೇರ್ಪಡಿಸಿದ್ದರು ಸಾಯಂಕಾಲ ೪ ಘಂಟೆಗೆ ನೂರಾರು ಜನ ದೊಡ್ಡ ಮನುಷ್ಯರು ಯೋಗ್ಯತಾನುಸಾರ ವಿನೋದ ಆಹಾರವನ್ನು ತೆಗೆದುಕೊಂಡರು ಅನಂತರ ದೊಡ್ಡ ಸಭೆ ನಡೆದು ಅದರಲ್ಲಿ ಗಾನ ಮುಂತಾದ ವಿನೋದಗಳು ನಡೆದವು ಆ ಕಾಲದಲ್ಲಿ ಸಭಿಕರ ಅನುಮತಿಯಿಂದ ಅಡ್ವೊಕೇಟ್ ಮೆ| ಚನ್ನಕೇಶವಯ್ಯನವರು ಮೆ ಚಾಂಡಿ ಸಾಹೇಬರಿಗೂ ಅವರ ಸಂತತಿಗೂ ಜಗತ್ಕರ್ತನು ಸಮಸ್ತ ಸೌಖ್ಯವೂ ಕೊಟ್ಟು ರಕ್ಷಿಸಬೇಕೆಂದು ಪ್ರಾರ್ಥಿಸಿದರು ಸಾಯಂಕಾಲ ಹೈಸ್ಕೂಲಿನಲ್ಲಿ ರೆವ್ ಬ್ರಾಕ್‌ಬ್ಯಾಂಕ್‌ರವರು ಇಂಗ್ಲೀಷ್ ಸರ್ವೀಸನ್ನು ನಡಿಸಿದರು ಆ ಸ್ಥಳದಲ್ಲಿ ವಿದ್ಯಾವಂತರಾದ ಎಲ್ಲಾ ದೊಡ್ಡ ಮನುಷ್ಯರೂ, ವಿದ್ಯಾರ್ಥಿಗಳೂ ಸೇರಿದ್ದರು ಆ ಕಾಲದಲ್ಲಿ ರೆವ್ ಸಾಹೇಬರು ಬೋಧಿಸಿದ ಸತ್ಯವಾಗ್ಮಿ ಸ್ಪಷ್ಟ ಪ್ರಾಶವಾದ ನಡವಳಿಕೆ, ಏಕೋದೇವಾರಾಧನೆ, ಇವು ಸಣ್ಣ ಮಕ್ಕಳ ಹೃದಯದಲ್ಲಿ ಸಹಾ ಹೊಕ್ಕು ಎಲ್ಲರನ್ನೂ ಸತ್ಯಮಾರ್ಗಕ್ಕೆ ಎಳೆಯುವಂತೆ ಇತ್ತು ಅತ್ತಲಾಗಿ ಮೆ ಚಾಂಡಿಯವರ ಕುಟುಂಬ ಶ್ರೀಮತಿ ಅನ್ನಮ್ಮನವರು ತಮ್ಮ ಬಂಗಲೆ ಬಳಿ ಆ ದಿನ ಪ್ರಾತಃಕಾಲದಿಂದ ರಾತ್ರಿ ೮ ಘಂಟೆವರೆಗೂ ಬಡವರಿಗೆ ದಾನಮಾಡುವದು, ತಮ್ಮಲ್ಲಿ ಊಟ ಮಾಡತಕ್ಕವರಿಗೆ ಭೋಜನಮಾಡಿಸುವದು, ಹಿಂದೂ ಮತದ ಸುವಾಸಿನಿಯರನ್ನು ಕರಸಿಕೊಂಡು ಅವರೂ ದೀರ್ಘ ಸಂತೋಷೋತ್ಸವಗಳನ್ನು ನಡಿಸುವದು, ಈ ಕೆಲಸಗಳನ್ನು ಮಾಡುತ್ತಿದ್ದರು ಇದಲ್ಲದೆ ಈ ಟವನ್‌ನಲ್ಲಿ ಈ ದಿನ ಎಲ್ಲಿ ನೋಡಿದರೂ ಪ್ರಜೆಗಳಲ್ಲಿ ಈ ವಿಷಯವಾದ ಸಂತೋಷವಾರ್ತೆಗಳೇ ಕೇಳುತ್ತಿತ್ತು — ಇಲ್ಲಿ ಮಳೆ ಕಡಮೆ ಕೆಲವು ಕಡೆ ಬಿತ್ತಿದ ಬೀಜಗಳು ಈಗತಾನೇ ಚಿಕ್ಕ ಸಸಿಗಳಾಗುತ್ತಿವೆ ಧಾನ್ಯಾದಿಗಳ ಧಾರಣೆ ಬಹಳ ಏರಿಹೋಗಿದೆ ಬಡವರು ಜೀವನಮಾಡುವುದು ಕಷ್ಟ ಕಾಲರಾ ಗಲಾಟೆ ಸ್ವಲ್ಪ ಶಮನವಾಗುತ್ತಿದೆ ಈ ಊರ ಹತ್ತಿರ ದೊಡ್ಡದಾದ ಗುಡ್ಡದ ಸಾಲು ಇದ್ದು, ದನಗಳು ಮೇಯುವುದಕ್ಕೆ ಸ್ಥಳವಿಲ್ಲದೆ ಫಾರೆಸ್ಟು ಇಲಾಖೆಯವರು ಎಲ್ಲಾ ಭಾಗವನ್ನೂ ಆಕ್ರಮಿಸಿಕೊಂಡದ್ದರಿಂದ ದನಗಳಿಗೆ ಬಹಳ ತೊಂದರೆಯಾಗಿದೆ ಮೊನ್ನೆ ದಿನ ದನಗಳು ಒಂದೆರಡು ಗೊಲ್ಲನು— ಫಾರೆಸ್ಟು ಆಫೀಸರಿಂದ ನಮಗೆ ಹೊಡೆತಗಳು ಬೀಳುತ್ತಿದೆ ಇನ್ನು ಮೇಲೆ ಈ ಊರು ದನಗಳನ್ನು ಕಾಯುವುದಿಲ್ಲ ಎಲ್ಲಾ ದನಗಳೂ ಸೇರಿ ಗುಡ್ಡದ ಒಂದು ಭಾಗವನ್ನಾದರೂ ಬಿಡಿಸಿ ಕೊಡಬಾರದೇ ಎಂದು ಎಲ್ಲರಲ್ಲಿಯೂ ಹೇಳಿಕೊಳ್ಳುತ್ತಿದ್ದನು ಈ ವಿಚಾರದಲ್ಲಿ ಸರ್ಕಾರದವರು ಅನುಕೂಲಪಡಿಸಿಕೊಟ್ಟರೆ ಮೂಗುಪ್ರಾಣಿಗಳು ಬದುಕಿಕೊಳ್ಳುವವು

ಫ್ರೇಜರ್‌ಪೇಟೆ —ಸುಮಾರು ೨ ೩ ವಾರಗಳಿಂದ ಈ ಪ್ರಾಂತ್ಯ ಸರಿಯಾದ ಮಳೆ ಬರಲಿಲ್ಲ ಸದ್ಯ ಫಸಲಿಗೆ ಬಂದಿರುವ ಬೆಳೆದ ಪೈರಿಗೆ ಮಳೆ ಅವಶ್ಯವಾಗಿದೆ ರೈತರು ಜಮೀನುಗಳನ್ನು ಸಿದ್ಧಮಾಡಿಕೊಂಡು, ಮುಂದಿನ ರಾಗಿ ಬಿತ್ತನೆಗೆ ಆಕಾಶವನ್ನೇ ನೋಡುತ್ತಿರುವರು — ಈ ಊರಿನ ಕೆಲವು ಕಡೆ ಭಾವಿಗಳಲ್ಲಿ ನೀರಿಗೆ ಅಭಾವವಾಗಿದೆ ಜನರು ನೀರಿಗೆ ಬಹು ಕಷ್ಟಪಡುತ್ತಾರೆ ಕೆರೆಯ ನೀರು ದಿನ ದಿನಕ್ಕೂ ಇಳಿಯುತ್ತಾ, ಬೆಸ್ತರ ದೆಸೆಯಿಂದ ಬುರುದೆಯಾಗುತ್ತಾ ಬಂದಿರುತ್ತೆ ಜನರು ಆ ನೀರನ್ನು ಉಪಯೋಗಿಸುವದರಿಂದ ಅನಾರೋಗ್ಯಕ್ಕೆ ಹೇತುವಾಗಿರುತ್ತೆ ಸದ್ಯ ಇಲ್ಲಿನ ವೈಸ್ ಪ್ರೆಸಿಡೆಂಟರೂ ಮ್ಯುನಿಸಿಪಲ್ ಮೆಂಬರುಗಳೂ ನಿಗಾ ಕೊಟ್ಟು, ಜನರು ಬಳಸುತ್ತಾ ಇರುವ ಈ ಕೆರೆಯ ನೀರಿನ ಭಾಗಗಳಲ್ಲಿರುವ ಕಚ್ಚಡಾ ಮತ್ತು ಕೊಳಕನ್ನು ತೆಗೆಸಿ ಆ ಪ್ರಾಂತ್ಯ ವಿನಾಸುಗಾರರ ಅಮಾನತ್ತಿಗೆ ಕಟ್ಟಿ ಮಾಡಿ ನೀರನ್ನು ಶುದ್ಧಮಾಡಿದರೆ ಹೊರತು ಪ್ರಜೆಗಳಿಗೆ ಆರೋಗ್ಯ ಲಭಿಸುವಂತೆ ತೋರುವದಿಲ್ಲ — ಇಲ್ಲಿನ ಸ್ಯಾನಿಟರಿ ಬಾಬುಗಳ ನಿಗಾವಣೆ ಕಡಮೆ ಎಂದು ತೋರುತ್ತೆ ಈ ವಿಚಾರದಲ್ಲಿ ಜನರು ನಾನಾ ರೀತಿ ಮಾತನಾಡಿಕೊಳ್ಳುತ್ತಾರೆ ಮುಖ್ಯವಾಗಿ ಯಾವ ಯಾವ ಬಾಬುಗಳ ಕೆಲಸಗಳು ಯಾವ ಯಾವ ಮೇಸ್ತ್ರಿಗಳಿಂದ ಆಗಬೇಕೋ ಅವರುಗಳಿಗೆ ತಕ್ಕ ಸಿಬ್ಬಂದಿಯನ್ನೂ ಸಹಾಯಕರನ್ನೂ ಅನುಕೂಲಪಡಿಸದೇ ಇಲಾಖೆಗೆ ಅವಕಾಶವಿರುವದಿಲ್ಲ ಈ ವಿಚಾರಗಳಿಗೆ ನಮ್ಮ ಅಮಲ್ದಾರರು ಗಮನ ಕೊಡ್ಬೇಕೆಂದು ಕೋರುತ್ತೇವೆ —ಇಲ್ಲಿ ಸುಮಾರು ೨ ವರ್ಷಗಳಿಂದಲೂ ಪ್ರೊಸಸ ಛಾರ್ಜಿನಲ್ಲಿದ್ದು ಕೆಲಸ ಮಾಡಿ ಪ್ರಜೆಗಳಲ್ಲಿ ಅನುರಾಗಿಗಳಾಗಿದ್ದ ಮೆ| ಕೃಷ್ಣಸ್ವಾಮಿ ಅಯ್ಯಂಗಾರ್ರವರು ಇಲ್ಲಿಂದ ವರ್ಗವಾಗಿ ಮಧುಗಿರಿಗೆ ಸಬ್ ಡಿವಿಜನ್ ಆಫೀಸರಾಗಿ ದಯಮಾಡಿಸಿದಾಗ ಹೋಗುವುದು ಇಂಥಾ ಸಾಧುಗಳ ದರ್ಶನ ಇಂಗಿತಜ್ಞರಿಂದ ಪರೋಪಕಾರಗಳನ್ನು ಕಳೆದುಕೊಳ್ಳುವದು ಬಹು ಜನರಿಗೆ ದುಃಖಕರವಾಗಿದೆ ದಿನ ಧಾನ್ಯ ದಿನದಿನಕ್ಕೆ ಏರುತ್ತಾ ಇದೆ ರಾಗಿ ರೂಪಾಯಿಗೆ ೧೧ ೧೨ ಸೇ ಅಕ್ಕಿ ೬ ೭ ಸೇರು ಮಾರುತ್ತಾರೆ ಇದರಲ್ಲದೆ ಈ ಊರಿನ ಸಂತೆಯಲ್ಲಿ ನಡೆಯುವ ಅನ್ಯಾಯಗಳನ್ನು ನಾವು ಎಲ್ಲಿಯೂ ಕೇಳಲಿಲ್ಲ ಕಡಮೆ ತೂಕ ಸೇರುಗಳು ಸಾಂದ್ರಕ್ಕೆ ಅಂತ ಲಕ್ಷದಲ್ಲೂ ಹೆಚ್ಚು ಕಡಮೆ ಮಾಡುದು ರೂಢಿಗೆ ಬಂದಿರುತ್ತೆ ಇದರಿಂದ ಸಂತೆಯ ದಿನ ಇಲ್ಲಿ ಎಷ್ಟೋ ಗಲಾಟೆಗಳು ನಡೆಯುತ್ತಾ ಇವೆ ಸಂತೆ ಬಾಯಲ್ಲಿ ನೊಂದವರೂ ಈ ಅನ್ಯಾಯವು ಟೌನಿನಲ್ಲಾ ಅಳೆಯುವಾಗಲೇ ೧ ಕ್ಕೆ ೩ ಕ್ಕೆ ಅಂತ ಎಳೆಸಿದರೆ ಎಡವು ಬಹುಕಾಲದಿಂದ ಇವರನ್ನು ವಿಚಾರಿಸಿ ದಂಡಿಸುವವರು ದಿಕ್ಕೇ ಇಲ್ಲ ಎಂಬ ವದಂತಿ ಇದೆ ನಮ್ಮ ಸ್ಥಳೀಕ ಅಧಿಕಾರಿಗಳು ಇಂಥಾ ವಿಚಾರಗಳಿಗೆ ನಿಗಾ ಕೊಟ್ಟು ಒಡನೆಯೆ ಸುಧಾರಿಸಬೇಕಾಗಿ ತುಂಬಾ ಅವಲಂಬಿಕೆಯಿಂದ ಕೋರುತ್ತೇವೆ ಈ ಊರಿನ ಬಹು ಭಾಗಗಳಲ್ಲಿ ವಿಶೇಷವಾಗಿ ಬೆಳೆದಿರತಕ್ಕ ವಾಂತಿಭೇದಿಯು ಹೊದೆಗಳಲ್ಲಿ ಈಗ ಸ್ವಲ್ಪ ಭಾಗವನ್ನು ಮಾತ್ರ ಕತ್ತರಿಸಿ ನಾಶಪಡಿಸಿರುತ್ತಾರೆ ಇನ್ನೂ ಬಹು ಭಾಗ ಉಳಿದಿರುತ್ತೆ ಮುಖ್ಯ ಮಾರ್ಗದ ಪಕ್ಕಗಳಲ್ಲಿ ಈ ಗಿಡಗಳು ಇರುವದರಿಂದ ವಿಷಜಂತುಗಳ ಕಾಟಕ್ಕೆ ಜನರು ಒಳಪಡತಕ್ಕದಾಗಿ ಅಂಜುತ್ತಾ ಅಂಗಲಾಚುತ್ತಾ ಇರುವರು ರಸ್ತೆಗಳಲ್ಲಿ ತಿರುಗಾಟ, ಆಗಾಗ್ಗೆ ಮಕ್ಕಳು ಮರಿಗಳಿಗೆ ಅಪಾಯಕರವಾದ ಕತ್ತಿಗೆ ಹಾವುಗಳ ಆಟೆಂಬವೇ ಇದ್ದಹಾಗಿದೆ ಅಧಿಕಾರಿಗಳ ಗಮನಕ್ಕೆ ಬೀಳದಿರುವುದಕ್ಕೆ ಕಾರಣವೇನೋ ತಿಳಿಯದು ಊರಿನಲ್ಲಿ ಕಣ್ಣುನೋವು ಚಳಿ ಜ್ವರಗಳು ಸುಮಾರಾಗಿದೆ

ವಿದೇಶದ ವೃತ್ತಾಂತಗಳು

ಅಮೇರಿಕಕ್ಕೆ ಸೇರಿದ ಇಲಿನಾಯಿಸ್ ಡಿಸ್ಟ್ರಿಕ್ಟಿನಲ್ಲಿ ಮಿಸ್ ಕ್ಲಾರ್ಕ್ ಎಂಬಾಕೆಯು ವಿಮಾನಯಂತ್ರದಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದಾಗ ಅದು ಬಂದು ಮರಕ್ಕೆ ಬಡಿದು ತಟಗೆಗಾಗಿ ಬಿದ್ದು ಆಕೆಯನ್ನು ಕೊಂದು ಬಿಟ್ಟಿತು

* * *

ಸ್ವೀಡನ್ ರಾಜ್ಯದಲ್ಲಿ ಒಂದು ಎಕ್ಸ್‌ಪ್ರೆಸ್ ರೈಲ್‌ಗಾಡಿಯು ಇನ್ನೊಂದು ರೈಲ್‌ಗಾಡಿಗೆ ಕಳೆದ ವಾರ ಡಿಕ್ಕಿ ಹೊಡೆದು ಅನಾಹುತವಾಗಿ ೨೫ ಜನರು ಮೃತಪಟ್ಟರು ಹಲವರಿಗೆ ಗಾಯಗಳಾಗಿವೆ

* * *

ಜಪ್ಪೆಲಿನ್ ಎಂಬ ಜರ್ಮನಿಯು ತಯಾರುಮಾಡಿದ ವಿಮಾನಯಂತ್ರದಲ್ಲಿ ಇಪ್ಪತ್ತೈದು ಪ್ರಯಾಣಿಕರು ಕುಳಿತುಕೊಂಡು ಹನ್ನೆರಡು ಗಂಟೆಹೊತ್ತು ಜರ್ಮನಿಗೆ ಸೇರಿದ ಡಸೆಲ್‌ಡಾರ್ಫಿನಿಂದ ಹಾಂಬರ್ಗಿಗೆ ಸಂಚಾರ ಮಾಡಿಕೊಂಡು ಹೋಗಿ ಇಳಿದರು

* * *

ಇಂಗ್ಲಾಂಡಿನಲ್ಲಿ ಹೆಂಗಸರಿಗೆ ವೋಟ್ ಮಾಡುವ ಹಕ್ಕನ್ನು ಕೊಡಬೇಕೆಂದು ಹೊಡೆದಾಡುತ್ತಿರುವ ಮುಖಂಡ ಸ್ತ್ರೀಯರು ನಾನಾ ಅನರ್ಥಗಳನ್ನು ನಡಿಸಿದ್ದರಿಂದ ಅವರನ್ನು ಬಂದೀಖಾನೆಗೆ ಹಾಕಿಸಿದರು ಈ ಸ್ತ್ರೀಬಂದೀವಾನರು ಜೈಲಿನಲ್ಲಿ ಹಟದಿಂದ ಆಹಾರ ತೆಗೆದುಕೊಳ್ಳದೆ ಇದ್ದದ್ದರಿಂದ ವೈದ್ಯರ ಶಿಫಾರಸಿನ ಮೇಲೆ ಅಂಥಾ ಸುಮಾರು ೨೦ ಮಂದಿಯನ್ನು ಬಂದೀಖಾನೆಯಿಂದ ಖುಲಾಸ ಮಾಡಿಸಿರುತ್ತಾರೆ

* * *

ಚೀನಾ ಪ್ರಜಾಪ್ರಭುತ್ವದ ಮಂತ್ರಿ ಸಭೆಯಲ್ಲಿ ಇದ್ದವರು ಮಂತ್ರಿಗಳ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟು ಅಕಸ್ಮಾತ್ತಾಗಿ ಹೊರಟುಹೋದರು ಅವರಿಗೆ ಅಧಿಕಾರಿಗಳೂ ಮುಖಂಡರೂ ಎಷ್ಟು ಪ್ರತಿಯೇ ಹೇಳಿದರೂ ಹಿಂದಿರುಗಿ ಬಾರದೆಹೋದರು ಸೈನಿಕರ ಅತ್ಯಾಚಾರಗಳು ಹೆಚ್ಚಾದವು ಅವರಿಗೆ ಸಂಬಳ ಕೊಡುವುದಕ್ಕೋಸ್ಕರ ಮಂತ್ರಿ ಸಭೆಯವರು ೫೦ ಲಕ್ಷ ದ್ರವ್ಯವನ್ನು ಪರರಾಜ್ಯಗಳಿಂದ ಸಾಲವಾಗಿ ತರಿಸಿಕೊಂಡಿದ್ದಾರೆ

* * *

ಉತ್ತರ ಆಫ್ರಿಕದಲ್ಲಿ ಟರ್ಕಿಯವರಿಗೂ ಇಟೆಲಿಯವರಿಗೂ ಕಳೆದ ವಾರ ಟುಕಮೆಸ್ ಎಂಬ ಸ್ಥಳದಲ್ಲಿ ಒಂದು ಭಯಂಕರವಾದ ಯುದ್ಧ ನಡೆಯಿತು ಬೆಳಗಿನ ಝಾಮದಲ್ಲೇ ಇಟೆಲಿ ಸೈನಿಕರು ಶತ್ರುಗಳ ಸಮೀಪ ಸಾಗಿ ಹೋಗಿ ೧೦೦೦ ಟರ್ಕಿ ಸೈನಿಕರನ್ನು ಬಲಿ ಮೃತ್ಯುವಿಗೆ ಹಾಕಿದರು ಈ ಯುದ್ಧದಲ್ಲಿ ೬೦೦ ಜನ ಟರ್ಕಿಯವರು ಮಡಿದು ಹೋದರು ಇಟೆಲಿಯವರು ಉಳಿದವರನ್ನು ಅವರ ಸ್ಥಾನದಿಂದ ಹೊರಡಿಸಿಬಿಟ್ಟರು ಅಲ್ಲಿಂದ ಮುಂದೆ ಇಟೆಲಿಯವರು ಟರ್ಕಿ ಸೈನ್ಯದ ಮುನ್ನಾಣವನ್ನು ನಾಶಮಾಡಿದರು ಇಟೆಲಿಯವರ ಕಡೆ ೨೯ ಮಂದಿ ಕೊಲ್ಲಲ್ಪಟ್ಟರು ೧೧೨ ಮಂದಿಗೆ ಗಾಯಗಳಾದವು

* * *

ಚೀನಾದವರನ್ನು ಟಿಬೆಟ್ಟಿನಿಂದ ಓಡಿಸಬೇಕೆಂದು ಲಾಮಾ ಎಂಬ ಗುರುಪಕ್ಷದವರು ಕೆಲವು ಕಾಲದಿಂದ ಸಾಹಸಪಡುತ್ತಿದ್ದರು ಆಗಾಗ್ಗೆ ಚೀನಿಯರಿಗೂ ಟಿಬೆಟನರಿಗೂ ಕದನಗಳು ನಡೆಯುತ್ತಾ ಬಂದಿರುವವು ದಳಾಯಿ ಲಾಮ ಎಂಬ ಟಿಬೆಟ್ಟಿನ ಮಹಾಗುರುವು ಇದುವರೆಗೂ ಡಾರ್ಜಿಲಿಂಗಿನಲ್ಲಿ ಇಂಗ್ಲೀಷರ ಆಶ್ರಯದಲ್ಲಿದ್ದು ಈಗ ಅಲ್ಲಿಂದ ವಾಪಸು ತಮ್ಮ ರಾಜಧಾನಿಯಾದ ಲ್ಹಾಸಾ ಪಟ್ಟಣಕ್ಕೆ ಹೋಗುತ್ತಿರುವರು ಕಳೆದ ವಾರ ಆ ರಾಜಧಾನಿಯಲ್ಲಿ ಟಿಬೆಟರಿಗೂ ಚೀನಾ ಸೈನಿಕರಿಗೂ ಬಹು ಕಠಿಣವಾದ ಯುದ್ಧ ನಡೆದು ಟಿಬೆಟರಿಗೆ ಜಯವಾಯಿತು ನೂರಾರು ಮಂದಿ ಟಿಬೆಟರು ಸತ್ತರು ಚೀನಿಯರಲ್ಲಿ ಸುಮಾರು ೪೦೦ ಮಂದಿ ಲಾಮಾಗಳೂ ಇತರರೂ ಗಾಯಹೊಂದಿದರು ಚೀನಿಯರು ಉಳಿದ ಟಿಬೆಟರನ್ನೆಲ್ಲಾ ಕೈಸೆರೆ ಹಿಡಿದುಕೊಂಡಿದ್ದಾರೆ

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನಿನಗೆ ಯಾವ ರೋಗ ಉಂಟಾಗಿರಲಿ—'ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೋ ?' ಎಂದು ನಿನ್ನನ್ನು ನೀನೇ ಕೇಳಿಕೊ ಹಾಗೆ ಆಗದಿದ್ದರೆ ಡೋನರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಲಭವಾಗಿ ಮಲಪ್ರವೃತ್ತಿಯಾಗಿ ನಿನಗೆ



(ಗುಳಿಗೆ ಬುಡ್ಡಿ ಪರಿಮಾಣ)

ಸ್ವಸ್ಥವಾಗುವದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವದು ಈ ವಿಷವೇ ಪ್ರಬಲವಾದ ರೋಗಗಳೊಳಗೆ ಅರ್ಧರಷ್ಟಕ್ಕೆ ಮುಖ್ಯ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದು ಇದರಿಂದ ತಿಳಿಯಬರುವುದು ತಲೆನೋವು, ಪಿತ್ತಕೋಶದ ರೋಗ, ಪಿತ್ತದ ರೋಗ, ಅಗ್ನಿಮಾಂದ್ಯ, ಗಾಳಿ ಅಜೀರ್ಣ ಮುಂತಾದವು ... ಒಟ್ಟು ಬಿಟ್ಟರೆ ರಕ್ತವು ಕೆಟ್ಟು ... [illegible]

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಡಿಯಾರದ ಹಾಗೆ ಸರಿಯಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಡಿಸಿ ಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅವೆಲ್ಲಾ ರೋಗಗಳನ್ನೂ ಹಿತವಾಗಿ ಮೃದುವಾಗಿ, ತಪ್ಪದೆ ಬೇಗ ನಿವಾರಣೆ ಮಾಡಿ ಆರೋಗ್ಯವನ್ನುಂಟುಮಾಡುವವು [99 43

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು ಅಥವಾ ಡೋನ್ ಪಿ ಒ ಬಾಕ್ಸ್ ೩೦, ಬೊಂಬಾಯಿ — ಇವರಲ್ಲಿ ದೊರೆಯುವವು

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರಾದದ್ದು; ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳಸುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಕಳುಹಿಸುತ್ತಾರೆ

[66–10] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev L W Thompson M A Proprietor and Manager Wesleyan Mission Press Mysore 1/7/1912

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು — ಕ್ರಯ ೧ ದುಡ್ಡು.

ಸಂಪುಟ ೬ — ಕ್ರಿಸ್ತಶಕ ೧೯೧೨ ನೇ ಇಸವಿ ಜೂಲೈ ತಾರೀಖು ೧೧ ನೇ ಗುರುವಾರ. — ಸಂಚಿಕೆ ೬

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ... ಕೆಮ್ಮಲು, ನೆಗಡಿ, ... ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ... ಅಹಾರವನ್ನು ... ಜೀರ್ಣಗೊಳಿಸಿ, ... ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ... ಮಕ್ಕಳ ... ಜ್ವರ, ... ಜ್ವರ, ... ಗುಣಪಡಿಸುತ್ತದೆ. ... ಒಳ್ಳೇ ಶಕ್ತಿವರ್ಧಕವಾಗಿದೆ —... ಮಾತ್ರೆಗಳುಳ್ಳ ... [98-15]

ವೈಶ್ವಾನರಾಸವ (ಕಾಲರಾ ಔಷಧ).

... ಈ ವೈಶ್ವಾನರಾಸವವು ಸಂಜೀವನವಾಗಿದೆ ... ಹೊಟ್ಟೆಯುಬ್ಬರಿಸದೆ, ... ಸಮಯದಲ್ಲಿ ... ಒಂದೇ ಒಂದು ಬುದ್ಧಿಯು ... ಗುಣಪಡಿಸುವ ಸಿದ್ಧಾಮೃತ ಇದೊಂದೇ ...

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಇಂಗ್ಲೀಷನ್ನು ಕಲಿಯುವ ಪುಸ್ತಕ ... ಇಂಗ್ಲೀಷನ್ನು ಕಲಿಯುವ ಪುಸ್ತಕ ... ಇಂಗ್ಲೀಷನ್ನು ಕಲಿಯುವ ಪುಸ್ತಕ

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ [91-11]

ಬೋಧಕರ ಸಹಾಯವಿಲ್ಲದ ತಾವಾಗಿ ಇಂಗ್ಲೀಷನ್ನು ಕಲಿಯುವ

ಇಂಗ್ಲಿಷಾ ಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ		ಕ್ರಯ ರೂ ೧—೮—೦
ಎರಡನೆಯ ಪುಸ್ತಕ		ಕ್ರಯ ರೂ ೧—೮—೦
ಮೂರನೆಯ ಪುಸ್ತಕ	(ಅಚ್ಚಿನಲ್ಲಿದೆ)	ಕ್ರಯ ರೂ. ೧—೮—೦

ಅಂಚೆಯ ವೆಚ್ಚವನ್ನು ಗ್ರಾಹಕರೇ ಕೊಡಬೇಕು

ಇವುಗಳಲ್ಲಿ —ಆಂಗ್ಲಭಾಷಾ ವರ್ಣಮಾಲೆಯ ಎ ಇಂದ ಜಡ್ ವರೆಗಿನ ಅಕ್ಷರಗಳನ್ನು ಗುರುತು ಹಿಡಿಯುವುದು, ಅಕ್ಷರಗಳನ್ನು ಕೂಡಿಸುವುದು, ಶಬ್ದಸಂಯೋಜನ, ... ವಾಕ್ಯಗಳು, ಚಿಕ್ಕ ಪುಟ್ಟ ಕಥೆಗಳು ... ಕಾಗದಗಳು, ಈಗಿನ ವರ್ತಮಾನದ ಮಾದರಿಗಳು, ಗಾದೆಗಳು, ಸಾಂಕೇತಿಕ ಶಬ್ದಗಳು ... ಅನೇಕ ಸಂಗತಿಗಳಲ್ಲಿ ... ಪ್ರಶ್ನೋತ್ತರ ರೂಪವಾಗಿ ಮಾತಾಡುವ ಮಾದರಿಗಳು, ಕನ್ನಡದಿಂದ ಇಂಗ್ಲೀಷು—ಇಂಗ್ಲೀಷಿನಿಂದ ಕನ್ನಡಕ್ಕೂ ತರ್ಜುಮೆಮಾಡುವುದು, ವ್ಯಾಕರಣ ಸೂತ್ರಗಳು, ಕನ್ನಡ ಇಂಗ್ಲಿಷ್—ಇಂಗ್ಲಿಷ್ ಕನ್ನಡ ಡಿಕ್ಷನರಿಗಳು, ಮುಂತಾದ ಅನೇಕ ಸಂಗತಿಗಳನ್ನು ಸೇರಿಸಿದೆ ... ಇಂಗ್ಲೀಷು, ನಂತರ ಅದರ ಉಚ್ಚಾರಣೆ ಮತ್ತು ಅರ್ಥಗಳನ್ನು ಕನ್ನಡಕ್ಷರದಲ್ಲಿ ಪ್ರತಿ ವಾಕ್ಯಕ್ಕೂ ಬರೆದಿರುವುದರಿಂದ ... ಬೇರೊಬ್ಬರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು. ಅನೇಕರಿಗೆ ಉಪಯೋಗವಾಗಿ ... ಈಗಾಗಲೆ ಸಾವಿರಾರು ಪುಸ್ತಕಗಳು ಬಿಕರಿಯಾಗಿ ... ಚೆನ್ನಾಗಿ ತಿಳಿಯುವಂತೆ ಇಂತಹ ಪುಸ್ತಕವೇ ಬೇಕೆಂದು ... ಬೇಗ ಬರೆಯಬೇಕು.

ಭಾರತಿ ಸೋಮಸಂಗಿರಾಮ, ಪೋಸ್ಟು—ಹೊಸಕೋಟೆ, ಡಿಸ್ಟ್ರಿಕ್ಟು—ಬೆಂಗಳೂರು.

ಗೃಹಕೃತ್ಯದ ನೋಟಿಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ —... ರಾಮಾದೀಕ್ಷಿತರ ಮಕ್ಕಳು ... ವೆಂಕಟಸುಬ್ರಹ್ಮಣ್ಯಯ್ಯನ ... ಸರ್ವೆ ನಂಬರ್ 155 ಎಕರೆ 3 ಗುಂಟೆ ... ಸರ್ವೆ ನಂಬರ್ 256, ಎಕರೆ 1, ಗುಂಟೆ 3 ... ಸರ್ವೆ ನಂಬರ್ 257, ಎಕರೆ 1, ಗುಂಟೆ 1, ... ದಕ್ಷಿಣಕ್ಕೆ ದಾಸ ... ಉತ್ತರಕ್ಕೆ ರಾಮದೀಕ್ಷಿತರ ಮನೆ—ಈ ಮಧ್ಯೆ ಇರುವ ಹೆಂಚಿನ ಮನೆ ... ಇದಕ್ಕೆ ಸೇರಿದ ಹಿತ್ತಲು ... ಈ ಮೂಲಕ ಎಚ್ಚರಿಕೆ ...

ತಾ 4-7-12 — ಕೆ. ಆರ್. ಸುಬ್ರಹ್ಮಣ್ಯಯ್ಯ,

[107-1] ಹೆಡ್ ಮಾಸ್ಟರ್, ಎ. ವಿ. ಸ್ಕೂಲ್, ...

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸುವವರೆಗೂ ... ಆರೋಗ್ಯವಾಗಿರುವುದು ... ದೌರ್ಬಲ್ಯದಿಂದ ... ವ್ಯಾಧಿಯಿಂದಲೋ ಮೂತ್ರಕೋಶವು ಈ ಕಾರ್ಯವನ್ನು ಮಾಡಲಾರದೆ ಹೋದರೆ ... ರೋಗವುಂಟಾಗುವುದು

... ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —... ಇರುವುದು, ... ಬಾಯಾರಿಕೆ, ... ತಲೆನೋವು ... ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ... ಉಂಟಾಗುವುವು

... ಗುಳಿಗೆಗಳು ಮೂತ್ರಕೋಶವನ್ನು ... ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ... ಆರೋಗ್ಯವನ್ನು ... ಮಾಡುವವು. [99-44]

... ಮೂತ್ರಕೋಶವು ಆರೋಗ್ಯವಾಗಿರಬೇಕು ... ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೧ ೮—೦ ಔಷಧಗಳನ್ನು ಮಾರುವವರೆಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಓ. ಬಾಕ್ಸ್ ೨೦, ಬೊಂಬಾಯಿ,—ಇವರಲ್ಲಿ ದೊರೆಯುವುದು

೧೯೧೨ ನೆಯ ಎಗ್ಜಾಮಿನರ್ ಮಾಸಪುಸ್ತಕ.

ಪರೀಕ್ಷೆಗೆ ... ಅವಶ್ಯಕವಾದ ಈ ಮಾಸಪುಸ್ತಕಕ್ಕೆ ಜುಲೈ 31 ರೊಳಗೆ ಚಂದಾದಾರರಿಗೆ ... ಸಂಖ್ಯೆ ರೂ 1-4-0 ... ನೋಟ್ಸ್ 1 ಆಣೆ ... ನೋಟ್ಸ್ 2 ಆಣೆ ... 1½ ಆ ... ಸಿ. ಪುಟ್ಟಯ್ಯ, ಮ್ಯಾನೇಜರು, ಎಗ್ಜಾಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಪುಕ್ಕಟೆ, ಸುಮ್ಮನೆ, ಬಿಟ್ಟಿ ಸಿಗುತ್ತದೆ.

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ... ಹೊಗಳಿದ್ದಾರೆ, ಅದು ... ಮನಸ್ಸನ್ನು ಸೆಳೆಯುವಂಥಾದ್ದೇ ಸರಿ. ಅವರ ಕೂದಲು ... ಕಾಮಿನಿಯಾ ಎಣ್ಣೆಯನ್ನು



ಉಪಯೋಗಿಸಿ. ಅದು ... ಯಲ್ಲಿ ಕೂದಲು ಬೆಳೆಸುವುದು ಇದರ ಸ್ವಭಾವವು ಕೂದಲಿನ ... ತಲೆಯಲ್ಲಿ ... ಕಾಮಿನಿಯಾ ಎಣ್ಣೆಯು ... ಬಹು ಸೊಂಪಾಗಿ ಬೆಳೆಯುವುದಲ್ಲದೆ ... ಅನೇಕ ... ಕೂದಲು ಉದುರಿಹೋಗುವುದು. ಕಾಮಿನಿಯಾ ಎಣ್ಣೆಯ ಅದಕ್ಕೆ ... ಆಹಾರ, ಇದನ್ನು ಉಪಯೋಗಿಸಿ ನೋಡಿ

ಕ್ರಯದ ದರಗಳು 1 ಸೀಸೆಗೆ ರೂ 1 ವಿ. ಪಿ. ಛಾರ್ಜು ಬೇರೆ 4 ಆಣೆ. 3 ಸೀಸೆಗೆ ರೂ 2-10-0, ವಿ. ಪಿ. ಛಾರ್ಜ್ ಬೇರೆ 7 ಆಣೆ 12 ಸೀಸೆಗೆ ರೂ 9 12-0 ವಿ. ಪಿ. ಛಾರ್ಜು ಬೇರೆ ರೂ 1 12-0

ಅರ್ಧಾಣೆ ಸ್ಟ್ಯಾಂಪಿಟ್ಟು ಬರೆದವರಿಗೆ ಒಂದು ದಿನ ಉಪಯೋಗಿಸುವಷ್ಟು ಎಣ್ಣೆಯನ್ನು ಪುಕ್ಕಟೆ ಕಳುಹಿಸುತ್ತೇವೆ.

ಸುಗಂಧದ್ರವ್ಯಗಳು

ಕಾಮಿನಿಯಾ (ರೆಜಿಷ್)—ಇದು ಬಹು ಮನೋಹರವಾದ ಸುಗಂಧ ... ಕ್ರಯ ಡ್ರಾಂ ಸೀಸೆಗೆ ರೂ 1-8-0

ಗುಲ್-ಷಾನ್ (ರೆಜಿಷ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ... ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ 1 ಶಿ-0.

ದಿಲ್ ಬಹಾರ್ (ರೆಜಿಷ್)—... ಪುಷ್ಪಗಳಿಂದ ... ಸುಗಂಧ ಡ್ರಾಂ ಸೀಸೆಗೆ ರೂ 1-8-0

ಸ್ಪ್ರಿಗ್ ಜ್ಯುಯಿಲ್ (ರೆಜಿಷ್)—... ಸುಗಂಧವೇ ಇದೆಂದು ತಿಳಿಯಿರಿ. ಕ್ರಯ ಡ್ರಾಂ ಸೀಸೆಗೆ ರೂ 1-8-0 [01-23]

"ಕಾಮಿನಿಯಾ ಸುರಂಗಿ"-ರೂ 1-4-0 "ಕಾಮಿನಿಯಾ ... ರೂ 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲಿ ಬರೆಯಬೇಕು,

ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ। ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದ್ದಾಗಿರುವುವು। ಕ್ರಯ 8 ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲನೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [1-39 12]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಜಾರ್ಜ್ ಸಾರ್ವಭೌಮರ ಚರಿತ್ರೆ

[93-6]

ಈ ಪುಸ್ತಕವು ಚಕ್ರವರ್ತಿಯವರ ಜೀವನಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನು ಲಂಡನ್ ಮತ್ತು ಡೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಅವೂ ಅತ್ಯಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ ಅನೇಕ ಛಾಯಾಚಿತ್ರವೂ ಉಂಟು ಶ್ರೀಮನ್ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ ಕ್ರಯ ಪ್ರತಿ 1ಕ್ಕೆ ೫ ಆ ಹಾಸಲು 1ಆ

ವಿಳಾಸ—ಸಿ. ಎಲ್ ಎಸ್ ಬುಕ್ ಡಿಪ್ರೊ, ಮೈಸೂರು

ಒಂದೇ ಸಲ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು (4) ವನ, ಸರಸ್ಸು, ಆರಾಮಾದಿ ವರ್ಣನೆ (5) ಮನುಷ್ಯಯತ್ನಕ್ಕೆ ವಿನಾ ದೈವಿಕ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೆ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [37]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ

ಜ್ವರಶಂಕರಿ

11-42

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ನರಿಸಿಯಜ್ವರ ವಿಷಮಜ್ವರಾದಿ ಸರ್ವಜ್ವರಗಳನ್ನೂ ೬ ದಿವಸ ಎರಡು ಸೇವಿಸುವದರೊಳಗಾಗಿ ತಪ್ಪದೆ ಗುಣಪಡಿಸುವದು, ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಜ್ವರವನ್ನು ಕೂಡಾ ನಿಮ್ಮಟ್ಟಿಸುವದು ಬಾಟಲಿಗೆ ೧ ರೂ, ೪ ಬಾಟಲಿಗೆ ೨ ರೂ ೧೦ ಆಣೆ

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ

ವಾತಮುರಾರಿ—ಇದು ಕಟಿನೋವು, ಉಳುಕು, ಬೀಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮಿಸುವುದಕ್ಕೂ ಸಹಾಯಕವಾಗಿದೆ ಬಾಟಲಿಗೆ ೨ ಆಣೆ ೧ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್. ನಾಥ ಮತ್ತು ಕಂಪೆನಿ, ವೆಪೇರಿ, ಮದರಾಸ್

ಕಾರ್‍ಒನೇಷನ್ ಸಾಬೂನು

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ನವೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು.

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ ೧ ೦-೦, ಅಂಚೇ ಹಾಸಲು ಪ್ರತ್ಯೇಕ ನಮ್ಮ ವಿಳಾಸ— ಬಿ ಸಿ ಷಾ ಅಂಡ್ ಕಂಪೆನಿ, ೧೭೭ ಜೀನಾಬಜಾರ್ ರೋಡ್, ಮದ್ರಾಸು

ತಾ ಕ.—ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು. [101 4]

CHAMBERLAIN'S COUGH REMEDY.

ಚೇಂಬರ್ಲೈನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

1-28

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ದುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವೆಲ್ಲಕ್ಕೂ ಈ ಔಷಧವು ಬಾಗಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷದದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ

ಈ ಔಷಧವು ವನಸ್ಪತಿಗಳ ತಯಾರು

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಸೀಸೆಗೆ ೨ ರೂಪಾಯಿ

ಗೌರ್ನಮೆಂಟ್ ಸೆಕ್ಯೂರಿಟಿ ಉಳ್ಳ ನ್ಯಾಷನಲ್ ಜೀವ ವಿಮೆ ಮತ್ತು ವಿವಾಹಸಹಾಯಕ ಫಂಡ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸ್—ವಿಜಯನಗರಂ

1 ಈ ಕಂಪೆನಿಯು ಡಾಕ್ಟರ್ ಪರೀಕ್ಷೆ ಇಲ್ಲದೇಯೂ 16 ವರುಷ ಲಾಗಾಯತು 50 ವರ್ಷ ವಯಸ್ಸುಳ್ಳ ಗಂಡಸರ ಮತ್ತು ಹೆಂಗಸರ ಜೀವವನ್ನು ಮತ್ತು ಮುಂದೆ ಬರಬಹುದಾದ ಅಪಾಯಗಳನ್ನು ಇಂಡಿಯಾ ದೇಶದಲ್ಲಿ ರತಕ್ಕ ಇತರ ಎಲ್ಲಾ ಕಂಪೆನಿಗಳಿಗಿಂತಲೂ ಅತಿ ಸುಲಭವಾದ ದರದ ಮೇಲೂ ಮತ್ತು ಧಾರಾಳವಾದ ನಿಬಂಧನೆಗಳಿಂದಲೂ, ತಿಂಗಳಿಗೆ 8 ಆಣೆ ಮತ್ತು 1 ರೂಪಾಯಿಗಳ ವಿಮೆಯನ್ನು ಮಾಡಿರುತ್ತಾರೆ ಈ ಮೇಲ್ಕಂಡ ವಿಮೆದಾರರು ಕಂಪೆನಿಗೆ 8 ತಿಂಗಳ ವಿಮೆಯನ್ನು ಕಟ್ಟಿದ ನಂತರ ಮೃತಪಟ್ಟವರಾದರೆ ಅದರ ವರ್ತಮಾನವನ್ನು ಅವರ ವಾರಸುದಾರರು ಕಂಪೆನಿಯವರಿಗೆ ತಿಳಿಸಿದ ತಕ್ಷಣ ಮೊದಲನೇ ತರಗತಿಯವರಿಗೆ ಒಂದುನೂರು ರೂಪಾಯಿಗಳೂ, ಎರಡನೇ ತರಗತಿಯವರಿಗೆ 10 ರೂಪಾಯಿಗಳೂ, ತಕ್ಷಣ ಅಡ್ವಾನ್ಸಾಗಿ ಕೊಡಲ್ಪಡುತ್ತ ಅನಂತರ ಆ ವರುಷದ ಲೆಕ್ಕಗಳು ತನಿಖೆ ಆದ ಮೇಲೆ ಅಂದರೆ ಪ್ರತಿ ವರುಷದ ಫೆಬ್ರವರಿ 8 ನೇ ತಾರೀಖಿನ ತರುವಾಯ ಮೇಲ್ಕಂಡ ವಾರಸುದಾರರಿಗೆ ಅದುವರಿವಿಗೆ ಅಡ್ವಾನ್ಸು ಕೊಟ್ಟಿರುವ ಮೊಬಲಗಲ್ಲದೆ ಲೆಕ್ಕಾಚಾರದ ಪ್ರಕಾರ ಇನ್ನು ಬರತಕ್ಕ ಜಾಸ್ತಿ ಮೊಬಲಗನ್ನೂ ಅವರಿಗೆ ಕೊಡಲ್ಪಡುತ್ತದೆ ಒಂದು ವೇಳೆ ವಿಮೆದಾರರು ೪ ತಿಂಗಳ ಒಳಗಾಗಿ ಮೃತಪಟ್ಟರೆ ಅವರ ಅದುವರಿವಿಗೂ ಕಂಪೆನಿಗೆ ಕಟ್ಟಿದಂಥಾ ಹಣದಲ್ಲಿ ಖರ್ಚುಗಳು ಹೊರತು ಬಾಕಿ ಹಣವನ್ನು ಅವರ ವಾರಸುದಾರರಿಗೆ ವಾಪಸ್ ಮಾಡಲ್ಪಡುತ್ತದೆ

2 ಮದುವೆಯಾಗತಕ್ಕವರಿಗೆ ಫಂಡನ್ನು ಏರ್ಪಡಿಸಿರುತ್ತೆ ಇದಕ್ಕೆ ಸೇರತಕ್ಕ ಚಂದಾದಾರರು ಗಂಡಸರೇ ಆಗಲಿ ಅಥವಾ ಹೆಂಗಸರೇ ಆಗಲಿ ಬಾಲ್ಯದಾರಭ್ಯ 18 ಮತ್ತು 12 ವರುಷಗಳ ವಯಸ್ಸಿನ ವರವಿಗೂ ತಿಂಗಳು ಒಂದಕ್ಕೆ ಚಂದಾ ಮೊಬಲಗು ಒಂದು ರೂಪಾಯಿ ಪ್ರಕಾರ ಕನಿಷ್ಠಪಕ್ಷ 8 ತಿಂಗಳಿಗೆ ಕಮ್ಮಿ ಇಲ್ಲದಂತೆ ಕ್ರಮವಾಗಿ ಚಂದಾ ಮೊಬಲಗು ಪಾವತಿ ಮಾಡಿದ ಮೇಲೆ ಸದರಿ ಚಂದಾದಾರರು ಮದುವೆ ಮಾಡಿಕೊಳ್ಳುವ ಕಾಲಕ್ಕೆ ಅವರು ಕೊಟ್ಟಿರತಕ್ಕ ಚಂದಾ ಮೊಬಲಗಿಗೆ 3 ರಷ್ಟಕ್ಕೆ ಕಡಮೆ ಇಲ್ಲದೆಯೂ, 10 ರಷ್ಟಕ್ಕೆ ಜಾಸ್ತಿ ಇಲ್ಲದೆಯೂ ಮೊಬಲಗನ್ನು ಸಹಾಯ ಮಾಡಲ್ಪಡುತ್ತದೆ [89-6]

ಇಂಗ್ಲಿಷ್ ಮತ್ತು ಕನ್ನಡ ಬಲ್ಲಂಥಾ ಏಜಂಟರು ಬೇಕಾಗಿದೆ ತಪಶೀಲ್ ವಿಷಯಗಳಿಗೆ ಅರ್ಧಾಣೆ ಸ್ಟಾಂಪು ೨ ಬರೆದುಕೊಳ್ಳಿ ನಮ್ಮ ವಿಳಾಸ — ದಿ ಕಾಮರ್ಸ್ ಮ್ಯೂಚುಯಲ್ ಸಿಂಡಿಕೇಟ್, ಚೀಫ್ ಯೇಜಂಟ್ಸ್, (ಮೈಸೂರು ಮತ್ತು ಕೊಡಗು ಸಂಸ್ಥಾನಗಳ), ಚಿಕ್ಕಪೇಟೆ, ಬೆಂಗಳೂರು ಸಿಟಿ

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವಾಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 2-28

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷದಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

1913 ನೇ ಇಸವಿಯ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸ್.

ಕ್ರಯ ೬ ಆಣೆ 10 ಕ್ಕೆ 1 ಡಿಸ್ಕೌಂಟು ನಮ್ಮ ನೋಟ್ಸೇ ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [71 10]

2 ನೇ ಪುಸ್ತಕದ ನೋಟ್ಸು 21 ಆಣೆ 3 ನೇ ಪುಸ್ತಕದ ನೋಟ್ಸು 11 ಆಣೆ 1 ನೇ ಪುಸ್ತಕದ ನೋಟ್ಸು 1 ಆಣೆ 5 ನೇ ಪುಸ್ತಕದ ನೋಟ್ಸು 4 ಆಣೆ ಮೈಸೂರು ಭೂವಿವರಣೆ 1 ಆಣೆ 2 ನೇ ಕ್ಲಾಸ್ ಭೂವಿವರಣೆ 11 ಆಣೆ

ಎಲ್ ಬಿ ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

81 7

ಎಂದಾ ರೋಗವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರೆತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ವಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗೂರೆನ್ನುವುದು, ಕೆಮ್ಮುಗಳು ಶೀತ ನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅವನು ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧವ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನ ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ವಿ ಪಿ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಎಜೆಂಟ್ ವಿಳಾಸಗಳು (1) ಎನ್ ಪೀಟರ್ಸ್, 1 ವಡಮಲಿಸಿಳ್ಳ ಬೀದಿ ಪುರಸವಾಕಂ, ವೇಪೇರಿ, ಮದರಾಸ್ (2) ಜೆ ಎಸ್ ಕನ್ನಯ್ಯಶೆಟ್ಟರು ಜನರಲ್ ಮರ್ಚೆಂಟ್, ತುಮಕೂರು

WILLIAM & Co, FORT, BOMBAY.

ಅಮೃತಾಂಜನ್. (Regd

35-20

ಎಲ್ಲಾ ಬಾಮುಗಿಂತ್ತಲೂ ಅಂಜನಗಿಂತ್ತಲೂ ಶ್ರೇಷ್ಠವಾದದ್ದು ಇದರಿಂದ ವಾತ, ಸಂಧಿವಾತ, ಜಖಮು, ಗಾಯ, ಉಳುಕು,

ತಲೆನೋವು, ಶಿರೋಭಾರ ಮುಂತಾದ ಎಲ್ಲಾ ತರದ ನೋವುಗಳು ಶೀಘ್ರದಲ್ಲಿಯೇ ಸಿಲ್ಲುವದು ಬಾಟ್ಲಿ ಒಂದರ ಕಿಮ್ಮತ್ತು ೦ 8 ೦

ಗಜಕರ್ಣದ ಮುಲಾಮು

ಯಂದಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಕುವದರೊಳಗಾಗಿ ನಿಶ್ಚಯವಾಗಿ ಹೋಗುವದು ಇದರಿಂದ ಉರಿ ಒರುವದಿಲ್ಲ, ಜಖಮು ಆಗುವದಿಲ್ಲ ಡಬ್ಬಿ 1ಕ್ಕೆ 0-6-0 ದಂತಮಂಜನ 0-4-0 ನೇತ್ರಾಂಜನ 0-1-0 ಸುಂದರಿ ತೈಲ 0-8-0

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಪೋಸ್ಟ್ ಮುಂಬೈ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—6—1912 ರಿಂದ 28—6—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	2	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	1	5	8	4
ಕೋಲಾರ್ ,,	0	0	18	10
ಕೋಲಾರ್ ಚಿನ್ನದ ಗಣಿಗಳು	0	1	6	0
ತುಮಕೂರು ಡಿಸ್ಟ್ರಿಕ್ಟು	0	0	12	19
ಹಾಸನ ,,	6	4	18	15
ಚಿತ್ರದುರ್ಗ ,,	0	0	210	115
ಕಡೂರ್ ,,	5	0	1	0
ಶಿವಮೊಗ್ಗ ,,	0	0	78	49
ಜುಮಲ್ಲಾ	16	10	376	212

ಶಾಲಿವಾಹನ ಶಕ ವರುಷಂಗಳು 1836 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತು ಅಧಿಕ ಆಷಾಢ ಬಹುಳ ತ್ರಯೋದಶಿ ಶುಕ್ರವಾರದಿಂದ ನಿಜಾಷಾಢ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ 1912 ನೇ ಜೂಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಅರ್ಕರ ಡಿಗ್ರಿ
12	ಶುಕ್ರ	ತ್ರಯೋದಶಿ	11-42	ರೋ	1-30	29
13	ಶನಿ	ಚತುರ್ದಶಿ	38-18	ಮೃ	55-26	30
14	ಭಾನು *	ಅಮಾವಾಸ್ಯೆ	32-29	ಪು	51-15	31
15	ಸೋಮ §	ಪಾಡ್ಯಮಿ	26-13	ಪು	17-1	1
16	ಮಂಗಳ ‡	ಬಿದಿಗೆ	20-52	ಪ್ಲ	12-12	2
17	ಬುಧ †	ತದಿಗೆ	14-44	ಮ	18-16	3
18	ಗುರು	ಚೌತಿ	8-25	ಹು	35-16	4

ಪ್ರದೋಷ, ಮಾಸಶಿವರಾತ್ರಿ, ಮಳೆ ನಕ್ಷತ್ರ—ಪುನರ್ವಸು 3 ನೇ ಪಾದ * ಸರ್ವತ್ರ ಅಮಾವಾಸ್ಯೆ § ಪ್ರಥಮಾ ತಿಥಿ, ದಕ್ಷಿಣಾಯನ ಪುಣ್ಯಕಾಲ, ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ, ಸಾಬಾನ್ ಚಂ ೧, ಮಳೆ ನಕ್ಷತ್ರ—ಪುನರ್ವಸು 4 ನೇ ಪಾದ ‡ ಸಿದ್ಧಿವಿನಾಯಕ † ಚತುರ್ಥೀ ತಿಥಿ, ಶ್ರೀ ದೇವರಾಜ ಅರಸಿನವರ ಕುಮಾರರ ವರ್ಧಂತಿ.

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ ರೂ	೧೪-೫-೦	೧೫-೮-೦
ಕೆಂಬತ್ತ ಅಕ್ಕಿ ಅವಲ್	೧೬-೮-೦	೧೬-೮-೦
,, ದುಯಂ	೧೬-೦-೦	೧೬-೨-೦
ಬಾಸ್ಮಾನಿ ಅಕ್ಕಿ	೧೫-೦-೦	೧೭-೦-೦
ಸಣ್ಣಕ್ಕಿ ಅವಲ್	೧೭-೮-೦	೧೭-೮-೦
,, ದುಯಂ	೧೬-೮-೦	೧೬-೮-೦
ಕಡಲೇ ಬೇಳೆ ಪಲ್ಲಾ ೧ಕ್ಕೆ	೧೨-೦-೦	೧೨-೮-೦
,, ದುಯಂ	೧೧-೨-೦	೧೧-೮-೦
ಹೈಕ್ ರಾಗಿ ಪಲ್ಲಾ ೧ಕ್ಕೆ	೭-೧೨-೦	೭-೮-೦
ಶಾವಿಗ್ರಿ	೭-೪-೦	೭-೪-೦
ಜೋಳ	೭-೮-೦	೮-೦-೦
ಹುಲಸಂದೆ ಪಲ್ಲಾ ೧ಕ್ಕೆ	೧೨-೦-೦	೧೧-೦-೦
ಬೇಳೆ ಅವರೆ	೧೦-೮-೦	೧೦-೦-೦
ಹೆಸರು	೧೩-೦-೦	೧೪-೮-೦
ಉದ್ದು	೧೭-೦-೦	೧೫-೦-೦
ಕಡಲೆ	೧೧-೦-೦	೧೧-೦-೦
ಎಣ್ಣೆ ಸೇ ೧೨೭ ಕ್ಕೆ	೨೩-೮-೦	೨೪-೮-೦
ಹುರುಳಿ	೬-೧೪-೦	೭-೨-೦
ತುಪ್ಪ ೧೨೭ ಸೇರಿಗೆ	೧೨-೮-೦	೧೩-೦-೦
ತೆಂಗಿನಕಾಯಿ ಮಣ ೧ಕ್ಕೆ	೩-೮-೦	೩-೮-೦
ಮೆಣಸಿನಕಾಯಿ	೩-೪-೦	೩-೪-೦
,, ದುಯಂ	೩-೦-೦	೧೨-೮-೦
ಬೆಲ್ಲ ದೊಡ್ಡ ಅಚ್ಚು	೫-೮-೦	ಮ ೫-೮-೦
ಒಣಗಿದ ಮಣ ೧ಕ್ಕೆ	೬-೮-೦	೬-೮-೦
ಹುರುಳಿ ,,	೫-೪-೦	೫-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೦-೦	೬-೮-೦
ಉಪ್ಪು ,,	೫-೮-೦	೫-೮-೦
ಹುಣಸೇ ಹಣ್ಣು	೧-೪-೦	೧-೪-೦
,, ಹಳೇದು	೧-೦-೦	೧-೨-೦
ಉಪ್ಪು ಮಣ ೧ಕ್ಕೆ	೧೬-೮-೦	೧೭-೦-೦
ಗೇಮೊಯೊಕ್ಕ ಪಟ್ಟಿ ೧ಕ್ಕೆ	೫-೦-೦	೫-೨-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೬-೦-೦
ಅರಳೇಕಾಯಿ ಮಣ ೧ಕ್ಕೆ	೦-೮-೦	೧-೦-೦
ಅಡಿಕ್ಕೆಳದ ಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-[illegible]
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೧-೦-೦	೮೧-೦-೦

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಶುದ್ಧವಾದ ಸಿದ್ಧೌಷದ ತ್ರಯವು.

ಕಡಿ ಅದವಾ ಹುಳಕಡಿ ಔಷಧವು.

ಡಬ್ಬಿ 1ಕ್ಕೆ ರೂ. 0-1-0 ಡಬ್ಬಿ 12ಕ್ಕೆ ರೂ 2 8-0

ಕರೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಕೈಕಂಡ ಔಷಧಿಯು ಒಂದೇ ದಫಾ ಔಷಧಿಯನ್ನು ಹಾಕಿದರೆ ಸಾಕು; ಸಂಪೂರ್ಣ ಗುಣವುಂಟಾಗುವದು ಚರ್ಮದಲ್ಲುಂಟಾಗುವ ಕೊಳೆಯನ್ನು ಹೋಗಲಾಡಿಸಿ ದೇಹವು ಥಳಥಳಿಸುವಹಾಗೆ ಶುದ್ಧಿಯನ್ನು ಮಾಡುವುದು ಈ ಔಷಧಿ ಅಧಿಕ ಸುವಾಸನೆಯಿಂದ ಯುಕ್ತವಾದದ್ದು ದೇಹಕ್ಕೆ ತಂಪನ್ನುಂಟುಮಾಡುವದು

ವಿರೇಚನವತಿ ಭೇದಿಮಾತ್ರೆಗಳು.

10 ಮಾತ್ರೆಗಳ ಡಬ್ಬಿ 1ಕ್ಕೆ ರೂ 0-10-0 ಡಬ್ಬಿ 12ಕ್ಕೆ ರೂ 6-0-0

ಉದರಸಂಬಂಧವಾದ ವ್ಯಾಧಿಗಳಿಂದಲೂ ಮಲಬಂಧದಿಂದಲೂ ಕಷ್ಟಪಡುವವರಿಗೆ ಇದು ಒಂದು ದೊಡ್ಡ ಆಶೀರ್ವಾದರೂಪವಾಗುವದು ದಿನಂಪ್ರತಿ ರಾತ್ರಿ ಮಲಗುವದಕ್ಕೆ ಮುಂಚಿತವಾಗಿ ಸೇವಿಸಿದರೆ ಹೊಟ್ಟೆಯು ಶುದ್ಧವಾಗುವದು ಎಷ್ಟು ಮಾತ್ರೆಗಳು ಸೇವಿಸಲ್ಪಡುತ್ತವೋ ಅಷ್ಟು ಸಲ ಭೇದಿಯಾಗುವದು. ಆದುದರಿಂದ ಎಲ್ಲರೂ ಈ ಮಾತ್ರೆಗಳನ್ನು ಬಹಳವಾಗಿ ಅಪೇಕ್ಷಿಸುತ್ತಾರೆ. ಮಾತ್ರೆಗಳು ಬಹಳ ಚಿಕ್ಕದಾಗಿರುವದರಿಂದ ಬಹಳ ಸುಲಭವಾಗಿ ಇವುಗಳನ್ನು ನುಂಗಬಹುದು ರಾತ್ರಿ ಮಾತ್ರೆಯನ್ನು ಸೇವಿಸುವದರಿಂದ ರಾತ್ರಿಯೇ ಭೇದಿಯಾಗಲಾರದು [121-37]

ರಾಜವೈದ್ಯ ನಾರಾಯಣಜೀ ಕೇಶವಜೀ,

771, ಜೇನಾ ಬಜಾರ್ ರೋಡ್, ಮದ್ರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಿಲ್ಲದರೆ ಬೇಗ ಬರೆದು ತರಿಸಿಕೊಳ್ಳಿ. 8-28

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳು ಜನರಿಂದ ಬೇಡದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಹಾರ ಪಲ್ಲಾ ಪೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ; ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ಹೆಚ್ಚು ಚುಕ್ಕೆಯುಳ್ಳ ಟೋಪಿಗಳು ರೂ ೨

ಜರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ, ೧ ರೂ ೬ ಆ

ಗುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ ;

ಕೂಸುಗಳ ಟೋಪಿ, ಪೂರ್ತಿ ಮೋಜಾಗಳು, ಅರ್ಧ ಮೋಜಾಗಳು, ಕೈಚೀಲ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂತವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ತಾಲ್ಲೋಕು ವರ್ತಮಾನಗಳು.

ಹಾಸನ ಈಗ್ಗೆ 15 ದಿವಸದ ಲಾಗಾಯ್ತು ಈ ಊರಲ್ಲಿ ಕಾಲರಾ ಗಲಾಟೆ ಏನೂ ಇಲ್ಲ ಮಳೆ ಇಲ್ಲದೆ ಪೈರೆಲ್ಲಾ ಒಣಗಿಹೋಗುತ್ತಲಿವೆ ರೈತರೆಲ್ಲಾ ಆಕಾಶವನ್ನೇ ನೋಡುತ್ತಾ ಇದ್ದಾರೆ ಈ ಊರಿನಲ್ಲಿ ಕುಡಿಯುವ ನೀರಿಗೆ ಬಹಳ ಅನಾನುಕೂಲವಾಗಿರುತ್ತೆ ದೇವಗೆರೆ ನೀರನ್ನು ಕುಡಿಯಲು ಗವರ್ನಮೆಂಟಿನವರು ಅಪ್ಪಣೆಮಾಡಿದರೆ ತುಂಬಾ ಅನುಕೂಲ ಇಲ್ಲಿನ ಸ್ಯಾನಿಟೇಷನ್ ವಿಚಾರದಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರು ಸ್ವಲ್ಪ ಗಮನಕೊಟ್ಟರೆ ಅನುಕೂಲ —ಇಲ್ಲಿನ ಮ್ಯುನಿಸಿಪಲ್ ಮೆಂಬರು ಶ್ರೀ ಕೋಟಿ ಸರಾಫ ಧರಪ್ಪನವರಿಗೆ ಸುಮಾರು 70 ವರುಷದ ವಯಸ್ಸಿನಲ್ಲಿ ಪುತ್ರೋತ್ಸವವಾಯಿತು ಸಂತೋಷಾರ್ಥವಾಗಿ ಈ ಮಗುವಿನ ನಾಮಕರಣದ ದಿವಸ ಇಲ್ಲಿನ ಸ್ಕೂಲುಗಳ ಬಾಲಕ ಬಾಲಿಕೆಯರಿಗೆ ಮಿಠಾಯಿ ವಿನಿಯೋಗಮಾಡುವುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇನೆ

ಬೇಲೂರು —ಈ ಊರು ಬಾಬಾಪರ್ವತದಲ್ಲಿರುವ ದೊಡ್ಡ ಚರಂಡಿಗಳಲ್ಲಿ ಕೊಳಕು ನಿಂತು, ಮಳೆಯ ನೀರಿನಿಂದ ಕೊಳೆತು ದುರ್ವಾಸನೆಯಾಗಿದೆ ಪಕ್ಕದಲ್ಲಿರುವ ಮನೆಯವರ ಆರೋಗ್ಯಕ್ಕೆ ಕುಂದಕವಾಗಿದೆ ಗಲ್ಲಿಗಳಲ್ಲಿ ರೊಚ್ಚು ಜಾಸ್ತಿಯಾಗಿದೆ ಇದೆ ಮ್ಯುನಿಸಿಪಲ್ ಏರ್ಪಾಡುಗಳು ಕ್ರಮವಾಗಿಯೂ ವಿಚಾರಣೆಯಿಂದಲೂ ನಡೆಯುವುದಿಲ್ಲ ಅಮಲ್ದಾರರು ಬೇಗನೆ ಗಮನಕೊಟ್ಟು ಪಟ್ಟಣವನ್ನು ಆರೋಗ್ಯಕರವಾಗಿ ಮಾಡಬೇಕಾಗಿದೆ. ಕಚೇರಿ ಗುಮಾಸ್ತರಿಗೆ ಇನ್ನ್ಯಾವ ಕೆಲಸ ಕಾರ್ಯಗಳೂ ಸೇವಕವಾಗದಂತೆ ನೋಡಿಕೊಳ್ಳಬೇಕಾದದ್ದು ಅವಶ್ಯ. ಮಳೆಗಾಲ ಪ್ರಾರಂಭವಾಯಿತು. ಅಲ್ಲಲ್ಲಿ ಇಲಿ ಸತ್ತವೆಂಬ ಸುದ್ದಿ ಹುಟ್ಟಿ ಜನರನ್ನು ಗಾಬರಿಪಡಿಸುತ್ತಿದೆ.—ಪೋಲೀಸಿನವರು ದರ್ಬಾರಿಟ್ಟು ತಮ್ಮ ಕರ್ತವ್ಯವನ್ನು ನಡಿಸಿ ದೂಡಾಟಿ, ಪಕೀರರ ಮೋಸ ಮುಂತಾದದ್ದನ್ನು ಅಡಗಿಸಬೇಕಾಗಿದೆ —ಈ ಊರಿನ ಪ್ರಸಿದ್ಧ ದೇವಸ್ಥಾನವನ್ನು ನೋಡಲು ಅನೇಕರು ಬರೋದರಿಂದ ಸರ್ಕಾರಿ ಛತ್ರದ ಜೊತೆಗೆ ಕಾಫಿ ಪ್ಲಾಂಟರ್ ಮೆ|| ತಿಮ್ಮಯ್ಯನವರು ಒಂದು ದೊಡ್ಡ ಛತ್ರವನ್ನು ಕಟ್ಟಿಸಿಕೊಟ್ಟಿದ್ದಾರೆ ಕಳೆದ ತಿಂಗಳಿನಿಂದ ಅಲ್ಲಿ ಬಾಯಂ ಆಗಿ ಕೆಲವು ವಿದ್ಯಾರ್ಥಿಗಳಿಗೆ ಅನ್ನ ಹಾಕುವುದಲ್ಲದೆ ಆಗಂತುಕರಾದ ಅತಿಥಿಗಳಿಗೂ ಧರ್ಮಾರ್ಥವಾಗಿ ಅನ್ನ ಹಾಕಲು ಅವರು ಮಾಡಿರುವ ಏರ್ಪಾಡು ಶ್ಲಾಘ್ಯವಾಗಿದೆ

ಸಕಲೇಶಪುರ.—ಇಲ್ಲಿ ಕಳೆದ ಒಂದು ವಾರದಿಂದ ಮಳೆಯು ಬಹಳ ಕಡಮೆಯಾಗಿದೆ. ಮಲೆನಾಡಿನಲ್ಲಿ ಈ ರೀತಿ ಜೂನ್ ತಿಂಗಳಲ್ಲಿ ಮಳೆ ಕಡಮೆಯಾದದ್ದು ಬಹಳ ಅಪರೂಪ. ಇದನ್ನು ನೋಡುವಲ್ಲಿ ಬೆಳೆಗೆ ಬಹು ತೊಂದರೆಯಾಗುವಂತೆ ತೋರುತ್ತೆ ಇಲ್ಲಿನ ಸಬ್ ಡಿವಿಜನ್ ಸಾಹೇಬರು ಮ|| ಸಿ. ರಾಜಗೋಪಾಲಾಚಾರ್ಲುಯವರಿಗೆ ವರ್ಗವಾಗಿದೆ ಇವರಿಗೆ ಬದಲು ಮೆ|| ಮಾಚಯ್ಯನವರು ಬರುತ್ತಾರೆ ವರ್ಗಪಟ್ಟ ಸಬ್ ಡಿವಿಜನ್ ಆಫೀಸರವರಿಗೆ ಮೆ|| ಸಿ ನಾರಾಯಣರಾಯರಲ್ಲಿ ಒಂದು ಭಾರಿ ಔತನವು ನಡೆಯಿತು. ಮ|| ಮಾಳಶೀಕಾಳಪ್ಪನವರ ಮನೆಯಲ್ಲೂ ಹಾಗೆಯೇ ಸಾಹೇಬರಿಗೆ ಔತನವಾಯಿತು ಈ ಸಾಹೇಬರವರು ಜನಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿ ಪ್ರಜಾರಂಜಕರಾಗಿದ್ದವರು ಇವರು ಹಲವು ಕಾಲ ಇಲ್ಲಿಯೇ ಇರಬೇಕೆಂಬ ಬಯಕೆಯು ಜನಗಳಿಗಿದ್ದರೂ ಸರ್ಕಾರಿ ಹುಕುಂನಂತೆ ನಡೆಯಬೇಕಾದ ಪ್ರಯುಕ್ತ ನಮ್ಮೆಲ್ಲರನ್ನಗಲಿ ವರ್ಗಪಟ್ಟ ಸ್ಥಳಕ್ಕೆ ಹೊರಡುವರು —ಇಲ್ಲಿನ ಎ. ವಿ ಸ್ಕೂಲಿನಲ್ಲಿ ಈ ವರ್ಷ ಇಂಗ್ಲಿಷ್ ಪರೀಕ್ಷೆಯಲ್ಲಿ 8 ಕ್ಕೆ 2 ಜನರೂ, ಕನ್ನಡದಲ್ಲಿ 8 ಕ್ಕೆ 6 ಜನರೂ ಪ್ಯಾಸಾಗಿರುವರು.—ನಮ್ಮ ಡಾಕ್ಟರ್ ಫರ್ನಾಂಡಿಸ್ ಸಾಹೇಬರವರು ಬಡವರಾಧಾರಿಗಳು ಹಳ್ಳಿಯ ಜನಗಳು ತಾವಾಗಿ ಬಂದು ತೋರಿಸುವುದು ಎಂದು ಹೇಳಿ ಜ್ವರಾದಿ ಬಾಧೆಗಳಿಗೆ ಇಂಜಕ್ಷನ್ ಮಾಡಿಸಿಕೊಂಡು ಹೋಗುವರು ಪೂರ್ವದಲ್ಲಿ ಆಸ್ಪತ್ರೆಗೆ ಜನಗಳು ಬರುವುದಕ್ಕೆ ಹೆದರುತ್ತಿದ್ದರು ಈಗ ಸರ್ವ ಸಾಮಾನ್ಯವಾಗಿ ಡಾಕ್ಟರಿಗೆ ಪುರಸತ್ತು ಕೊಡದೆ ಔಷಧಕ್ಕೆ ಜನಗಳು ಬರುವರು ಹೊಸ ಆಸ್ಪತ್ರೆಯ ಕಟ್ಟಡವು ಇನ್ನು 2 ತಿಂಗಳಲ್ಲಿ ಮುಗಿಯಬಹುದು —ಈ ವರ್ಷ ಹೇಮಾವತಿ ನದಿಯಲ್ಲಿ ಒಂದು ಸಾರಿಯೂ ಪ್ರವಾಹ ಬಂದಿಲ್ಲ ದನಗಳಿಗೆ ಮೇವು ಚೆನ್ನಾಗಿದೆ ಅಕ್ಕಿ 6-7 ಸೇರು ಸಿಕ್ಕುತ್ತೆ —ಇಲ್ಲಿನ ಮ್ಯುನಿಸಿಪಾಲಿಟಿಯ ಬಹು ಚೆನ್ನಾಗಿದೆ ರಾತ್ರಿ ಹೊತ್ತು ದೀಪಗಳು ಕ್ರಮವರಿತು ಉರಿಯುತ್ತವೆ —ಕೆಲವು ತೋಟಗಳಲ್ಲಿ ಆನೆಗಳ ಸಂಚಾರವು ಪ್ರಬಲವಾಗಿದೆ —ಶಾನುಭೋಗರ ಗುಂಪು ತಂಡತಂಡವಾಗಿ ಹುಜೂರ್ ಜಮಾಬಂದಿ ಲೆಕ್ಕಕ್ಕಾಗಿ ಇಳಿದಿದೆ —ಏಲಕ್ಕಿ, ಕಾಫಿ ಗಿಡಗಳನ್ನು ಸಾಲುಸಾಲಾಗಿ ಹೊತ್ತುಕೊಂಡು ತೋಟಗಳಿಗೆ ಹೋಗುವ ಕೂಲಿಗಳ ಗುಂಪು ರಸ್ತೆಯಲ್ಲಿ ಎಲ್ಲಿ ನೋಡಿದರೂ ಸಿಕ್ಕುತ್ತದೆ ಮಳೆಗಾಲವಾದದ್ದರಿಂದ ಗದ್ದೆಗಳಲ್ಲಿ ನಾಟಿ ಕೆಲಸ ನಡೆಯುವದು ಇಲ್ಲಿನ ವ್ಯಾಪಾರಿಗಳಲ್ಲಿ ಅನ್ಯೋನ್ಯ ಬಾವವಿಲ್ಲದೆ ಅಸಲು ಬಿಟ್ಟು ಮಾರುವ ಪದ್ಧತಿಯೂ ಉಂಟು —ಇಲ್ಲಿ ಒಬ್ಬ ಭಟ್ಟರು ಮನೆಯಲ್ಲಿ ತಮ್ಮ ಮಗನಿಗೆ ಕಾಫೀ ಪುಡಿಯನ್ನು ಅಂಗಡಿಯಲ್ಲಿ ತರುವಂತೆ ಹೇಳಿದಾಗ ಆ ಹುಡುಗನು ಕಾಫಿ ಪುಡಿಗೆ ಬದಲಾಗಿ ನಸ್ಯದ ಪುಡಿಯನ್ನು ತಂದನು. ಅದನ್ನು ಹಾಕಿ ಆ ಹುಡುಗನ ತಾಯಿಯು ಕಾಫಿಕಾಯಿಸಿ ಕೊಟ್ಟಳು ಭಟ್ಟರೂ ಮಕ್ಕಳೂ ಈ ನಸ್ಯದ ಕಾಫಿಯನ್ನು ಕುಡಿದು ಓಕರಿಸುತ್ತಿದ್ದಾಗ ನೋಡಿದವರಿಗೆ ವಿಷಾದವೂ ನಗುವೂ ಏಕಕಾಲದಲ್ಲಿ ಉಂಟಾಯಿತು.

ಕ್ಲೋಸ್‌ಪೇಟೆ.—ಈ ಊರಿನ ಹವಾ ಸ್ವಲ್ಪ ಬದಲಾವಣೆ ಆಗಿದೆ. ಇಲ್ಲಿನ ಶೆಟ್ಟಿಹಳ್ಳಿಯಲ್ಲಿ ಪ್ಲೇಗ್ ದೆಸೆಯಿಂದ ಒಂದೆರಡು ಮರಣಗಳು ಆದವು. ಊರಿನ ಅನೇಕ ಕಡೆ ಜನರು ಕಣ್ಣುನೋವಿನಿಂದ ಬಾಧೆ ಪಡುತ್ತಾರೆ ನಮ್ಮ ಡಾಕ್ಟರವರು ಮುತುವರ್ಜಿಯಿಂದ ಜನರಿಗೆ ತಕ್ಕ ಇಲಾಜ್ ಮಾಡುತ್ತಾ ಇರುವದಲ್ಲದೆ ಚನ್ನಪಟ್ಟಣದಿಂದ ಪ್ರತಿ ಗುರುವಾರವೂ ಜನಾನಾ ಮಿಷನ್ ಡಾಕ್ಟರವರೂ, ಮಿಸ್ ಹೂವರ್‌ಯವರೂ ಬಂದು ಇಲ್ಲಿನ ಎ. ವಿ ಸ್ಕೂಲಿನಲ್ಲಿ ಔಷಧಗಳನ್ನು ಕೊಡುತ್ತಾ ಇರುವದು ಊರಿನ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗಿದೆ —ಇಲ್ಲಿನ ಸ್ಯಾನಿಟೇಷನ್ ಬಾಬುಗಳ ನಿಗಾವಣೆ ಕಡಮೆ ಎಂದು ತೋರುತ್ತೆ ಮ್ಯುನಿಸಿಪಲ್ ಲಾಂದ್ರಗಳ ವಿಷಯ ತುಂಬಾ ನಿಗಾ ಕೊಡಬೇಕೆಂದು ಕಾಣುತ್ತೆ ರಾತ್ರಿಕಾಲದಲ್ಲಿ ಪ್ರಯಾಣಿಕರು ದಾರಿಕಾಣದೆ ಕತ್ತಲನ್ನು ಎಡವಿ ಮುಗ್ಗರಿಸಿ ಬಿದ್ದು ಗಾಯಪಡಿಸಿಕೊಳ್ಳುತ್ತಾರೆ ಹೋದ ವಾರ ಒಬ್ಬರು ರೈಲ್ವೆ ಸ್ಟೇಷನ್ ರೋಡಿನಲ್ಲಿ ಬೆಳಕಿಲ್ಲದ ದೆಸೆಯಿಂದ ಬಿದ್ದು ಗಾಯಪಡಿಸಿಕೊಂಡರು. ಇಲ್ಲಿನ ಸೇತುವೆ ಮೇಲೂ ಉಪದೇಶಿಗಳ ಮನೆ ಮುಂದೆಯೂ ಹಾಕಿರುವ ಗ್ಯಾಸ್ ಲಾಂದ್ರಗಳು ಅಲಂಕಾರಕ್ಕಾಗಿ ನಿಲ್ಲಿಸಿರುವಂತೆ ಕಾಣುತ್ತೆ. ಮುಖ್ಯವಾಗಿ ಯಾವ ಯಾವ ಬಾಬುಗಳ ಕೆಲಸಗಳು ಯಾವ ಯಾವ ಮೊಟ್ಟೇಸರರಿಂದ ಆಗಬೇಕೋ ಅವರುಗಳಿಗೆ ತಕ್ಕ ಸಿಬ್ಬಂದಿಯನ್ನೂ ಸಹಾಯಕರನ್ನೂ ಅನುಕೂಲಪಡಿಸಿದಲ್ಲಿ ಅಲಕ್ಷ್ಯಕ್ಕೆ ಅವಕಾಶವಿಲ್ಲ ಈ ವಿಚಾರಗಳಿಗೆ ನಮ್ಮ ಅಮಲ್ದಾರ್ರವರು ಗಮನಕೊಟ್ಟು ಸರಿಪಡಿಸುತ್ತಾರೆಂದು ನಂಬುತ್ತೇವೆ —ಹೋದ ವಾರ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರೂ, ಸೀನಿಯರ್ ಸರ್ಜನರವರೂ ಈ ಊರಿಗೆ ದಯಮಾಡಿಸಿದ್ದರು ಸ್ಥಳೀಯ ಅಧಿಕಾರಿಗಳೂ, ಮ್ಯುನಿಸಿಪಲ್ ಮೆಂಬರುಗಳೂ ಅವರೊಡನೆ ಮುಖ್ಯವಾದ ಬೀದಿಗಳನ್ನೂ ಸ್ಥಳಗಳನ್ನೂ ಇನ್ಸ್‌ಪೆಕ್ಷನ್ ಮಾಡಿದರು. ಸೀನಿಯರ್ ಸರ್ಜನರವರು ಇಲ್ಲಿನ ಆಸ್ಪತ್ರೆ ಕೆಲಸಗಳನ್ನು ತನಿಖೆಮಾಡಿ ಸಂತೋಷಪಟ್ಟು ಬೆಂಗಳೂರಿಗೆ ತೆರಳಿದರು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಒಂದೆರಡು ದಿನಗಳಿದ್ದು ಇಲ್ಲಿನ ಸಬ್ ಡಿವಿಜನ್ ಆಫೀಸಿನ ಕೆಲಸ ಕಾರ್ಯಗಳನ್ನೂ ಕೋರ್ಟಿನ ಲೆಕ್ಕಪತ್ರಗಳನ್ನೂ ತನಿಖೆ ಮಾಡಿಕೊಂಡು ತೆರಳಿದರು. ಇಲ್ಲಿ ಡೆಪ್ಯುಟಿ ಅಮಲ್ದಾರರಾಗಿದ್ದು ಪ್ರಜೆಗಳಲ್ಲಿ ಅನುರಾಗಿಗಳಾಗಿದ್ದ ಮೆ|| ಶ್ಯಾಮರಾಯರನ್ನು ಬೆಂಗಳೂರಿಗೆ ವರ್ಗಾಯಿಸಿದಾರೆ ಈಚೆಗೆ ಮಾಗಡಿಯಲ್ಲಿದ್ದ ಮೆ|| ಲಿಂಗಣ್ಣಯ್ಯನವರು ಇಲ್ಲಿಗೆ ಬಂದು ಕೆಲಸದ ಚಾರ್ಜನ್ನು ವಹಿಸಿಕೊಂಡರು.—ದಿನಸಿ ಧಾರಣೆ ದಿನದಿನಕ್ಕೆ ಏರುತ್ತಾ ಇದೆ ರಾಗಿ ರೂಪಾಯಿಗೆ 13-14 ಸೇರು, ಅಕ್ಕಿ 5½-6 ಸೇರು ಮಾರುತ್ತಾರೆ. ಬಡಬಗ್ಗರ ಜೀವನೋಪಾಯ ತುಂಬಾ ಕಷ್ಟವಾಗಿದೆ. ಕೆಲವು ದಿನ ಸರ್ಕಸ್ ಆಟದವರು ಈ ಊರಿಗೆ ಬಂದು ಇಲ್ಲಿನ ಸಬ್ ಡಿವಿಜನ್ ಆಫೀಸಿನ ಮುಂಭಾಗದಲ್ಲಿ ಆಟವನ್ನೂ ಸಾಧಕಗಳನ್ನೂ ತೋರಿಸಿದರು ಮಳೆ ಸರಿಯಾಗಿ ಬರಲಿಲ್ಲ ರೈತರು ತಮ್ಮ ಜಮೀನುಗಳನ್ನು ಸಿದ್ಧಪಡಿಸಿಕೊಂಡು ಮುಂದಿನ ರಾಗಿ ಬಿತ್ತನೆಗೆ ಆಕಾಶವನ್ನೇ ನೋಡುತ್ತಾ ಇರುವರು. ಇಲ್ಲಿನ ಗೌ|| ಕನ್ನಡ ಬಾಯ್ಸ್‌ಸ್ಕೂಲಿನಲ್ಲಿ 16 ಜನಕ್ಕೆ 13 ಹುಡುಗರೂ, ಮಿಷನ್ ಸ್ಕೂಲಿನಲ್ಲಿ 3 ಕ್ಕೆ 2 ಹುಡುಗರೂ ಪ್ಯಾಸ್ ಆದರು.

ಗರ್ಭಿಣೀಶಿಶುಸಂರಕ್ಷಣಾ.

MIDWIFERY—ಕನ್ನಡ ಮಿಡ್‌ವೈಫರಿ ಸ್ತ್ರೀಯರಿಗೂ, ಮಿಡ್‌ವೈಫ್ ಪರೀಕ್ಷೆಗೆ ಓದುವವರಿಗೂ ಪ್ರಯೋಜನವಾದದ್ದು. ಕ್ರಯ ೧೨ ಆಣೆ [10-18]

ವಿಳಾಸ:—ಡಾಕ್ಟರ್ ಶ್ರೀನಿವಾಸೈಯ್ಯಂಗಾರ್, ಮೈಸೂರು.

ಭಟ್ಟಿ ವಿಕ್ರಮಾದಿತ್ಯರಾಯನ ಕಥೆಗಳು. [101-2]

ಸಾಹಸಕಥೆಗಳು ! ಚಿತ್ರ !! 376 ಪುಟಗಳು !!!

ಈಗ್ಗೆ ೨ ಸಾವಿರ ವರುಷಗಳಲ್ಲಿ ವಿಕ್ರಮಾರ್ಕಶಕೆಗೆ ಕಾರಣನಾಗಿ ಉಜ್ಜಯಿನೀ ನಗರದಲ್ಲಿ ಆಳುತ್ತಿದ್ದ ವಿಕ್ರಮಾದಿತ್ಯರಾಯನ ಸಾಹಸಚರಿತ್ರೆಯು. ಈತನು ಚಂದ್ರಶರ್ಮನೆಂಬ ಬ್ರಾಹ್ಮಣನಿಗೆ ಹುಟ್ಟಿ ತಮ್ಮನಾದ ಭಟ್ಟಿಯನ್ನು ಮುಖ್ಯಮಂತ್ರಿಯಾಗಿ [illegible] ದೇವಲೋಕ ಪ್ರವೇಶ, ಸಿಂಹಾಸನ [illegible], ಪಾತಾಳಲೋಕ ಪ್ರವೇಶ, ದಿಗ್ವಿಜಯ [illegible] ರಾಜನ ಮೈಕೆ ಅವನ ಕನ್ಯೆಯನ್ನು ವಿವಾಹ [illegible], ಸಂಕರಸ್ತ್ರೀರಾಜ್ಯಗಳಿಂದ [illegible] ಪರಕಾಯ ಪ್ರವೇಶದಿಂದ [illegible] ಮೊದಲಾದ ಕಥೆಗಳು ಬಹಳ ಸ್ವಾರಸ್ಯವಾಗಿ ವಿವರವಾಗಿ ಬರೆಯಲ್ಪಟ್ಟಿವೆ. [illegible] ಓದಿದರೆ ತಿಳಿಯುತ್ತೆ. ದಪ್ಪಕಾಗದ, [illegible] ಸಿದ್ಧವಾಗಿದೆ.

ಕ್ರಯ ಪ್ರತಿ 1ಕ್ಕೆ 1 ೪ ೦ ಟಪಾಲು ಹಾಸಲು 1 ಆಣೆ.

ಅನೇಕ ತರಹ ಪುಸ್ತಕಗಳೂ ಸಹ ದೊರೆಯುತ್ತವೆ.

ನಮ್ಮ ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಹನೀಯರೇ, ಇದನ್ನು ಓದಿನೋಡಿ.

ನಮ್ಮ ಉದ್ದೇಶ—ಸ್ವಲ್ಪ ಲಾಭ, ಹೆಚ್ಚು ಬಿಕರಿ.

[105-1]

ವಿಶೇಷವಾಗಿ ಯಾಕೆ ಹೆಚ್ಚು ಮಿಚರ್ ? ನಮ್ಮ " ದರ್ಬಾರ್ ಲೀವರ್ ವಾಚ್ " ಕೊಂಡುಕೊಳ್ಳಿ. ಇದು ಗಟ್ಟಿಯಾದದ್ದು, ಬಾಳಿಕೆ ಬರುವಂಥಾದ್ದು. ಈತನಕ ಸೇವೆಯಿಂದ ಬಂದಿದೆ, ಅನೇಕರು ಒಪ್ಪಾಯ ಮಾಡಿದ್ದರಿಂದ ಬಹಳ ಹರಡಿದೆ. ಕ್ರಯ ರೂ ೩ 12-0 ಮಾತ್ರ, ಸುಂದರವಾದ ಸರಪಣಿ ಮತ್ತು ಉತ್ತರವುಳ್ಳ [illegible] 7 ವರುಷ ಜವಾಬ್ದಾರಿ. ಹಾಸಲು ಬೇರೆ.

ನಮ್ಮ ವಿಳಾಸ:—ಪಿ. ಎ. ರಜಾಕ್ ಕಂಪನಿ, ಎಸ್ಪ್ಲನೇಡ್, ಮದರಾಸ್.

ವೃತ್ತಾಂತ ಪತ್ರಿಕೆ.

ಮೈಸೂರು ೧೯೧೨ನೇ ಇಸವಿ ಜೂಲೈ ೧೧ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ರೈಲ್ವೆ ಬಡಾವಣೆಯು

ಮೈಸೂರು ಸಂಸ್ಥಾನದಲ್ಲಿ ರೈಲ್ವೆ ಬಡಾವಣೆಯನ್ನು ನೋಡಿಕೊಳ್ಳುವುದಕ್ಕೆ ಶ್ರೀಮನ್ಮಹಾರಾಜರವರು ಪ್ರತ್ಯೇಕವಾದ ಒಂದು ಇಲಾಖೆಯನ್ನು ನಿರ್ಮಾಣಮಾಡಿ, ಅಂಥಾ ಕೆಲಸದಲ್ಲಿ ಪರಿಶ್ರಮವಿರುವಂಥಾ ಮಿ॥ ಬೆಲ್ ಎಂಬ ಅಧಿಕಾರಿಯನ್ನು ಕರಸಿ ನೇಮಕಮಾಡಿಕೊಂಡಿರುವುದನ್ನು ನೋಡಿ ನಾವು ಬಹಳಾ ಸಂತೋಷಪಡುತ್ತೇವೆ. ಮೈಸೂರು ಗವರ್ನ್‌ಮೆಂಟಿನವರು ಸದ್ಯದಲ್ಲಿ ಎರಡು ರೈಲ್ವೆಗಳನ್ನು ಬಡಾವಣೆ ಮಾಡುವವರಾಗಿರುವಂತೆ ಕಾಣುತ್ತದೆ. ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ರೈಲು ಹಾಕುವುದು ಮೊದಲನೆಯದು; ಅದೇನೂ ಬಹಳ ದೂರವಾದ ರಸ್ತೆಯಲ್ಲ; ಈಗಿರುವ ರೈಲ್ ರಸ್ತೆಯನ್ನು ಸ್ವಲ್ಪ ದೂರ ಮಾತ್ರ ಬಡಾಯಿಸತಕ್ಕದ್ದಾಗಿದೆ. ಅರಸಿಕೆರೆಯಿಂದ ಹಾಸನದ ಮುಖಾಂತರ ರೈಲ್ ರಸ್ತೆ ಹಾಕಿ ಮೈಸೂರಿಗೆ ತಂದು ಸೇರಿಸುವುದೇ ಎರಡನೆಯದಾಗಿದೆ; ಇದು ದೊಡ್ಡ ಕಾರ್ಯವೆಂದು ಹೇಳಬಹುದು. ಈ ರಸ್ತೆಯು ಸುಮಾರು ನೂರು ಮೈಲಿ ದೂರಕ್ಕಿಂತ ಹೆಚ್ಚಾಗಿರುತ್ತೆಂದು ಕಾಣುತ್ತದೆ.

ಈ ಮೈಸೂರು ಅರಸಿಕೆರೆ ರೈಲ್ ರಸ್ತೆಯನ್ನು ಮಾಡಬೇಕೆಂಬ ಯೋಚನೆ ಹುಟ್ಟಿ ಇಪ್ಪತ್ತು ಸಂವತ್ಸರಗಳು ಕಳೆದು ಹೋದವು. ಈ ರಸ್ತೆಗಾಗಿ ಸರ್ಕಾರದವರು ಹಣ ಖರ್ಚು ಮಾಡಿ ಸರ್ವೇ ಕೆಲಸಗಳನ್ನು ಮಾಡಿಸಿರುತ್ತಾರೆ; ಆದರೂ ರಸ್ತೆ ಮಾಡಿಸುವ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ. ಶಿವಮೊಗ್ಗಾ ಬ್ರಾಂಚ್ ಲೈನನ್ನು ಕಟ್ಟಿದಂದಿನಿಂದ ಈಚೆಗೆ ಗವರ್ನ್‌ಮೆಂಟಿನವರು ಈ ಸಂಸ್ಥಾನದಲ್ಲಿ ರೈಲ್ ರಸ್ತೆಯನ್ನು ಬಡಾವಣೆ ಮಾಡಿಯೇ ಇಲ್ಲ. ಬೇರೆ ದೊಡ್ಡ ತಲಾವುಗಳನ್ನು ಪ್ರಾರಂಭ ಮಾಡಿದರು. ಮಾರೀಕಣಿವೆ, ಕನ್ನಂಬಾಡಿ ಮುಂತಾದ ಭಾರೀ ನೀರಾವರಿ ಕಾಮಗಾರಿಗೆ ಗಮನ ಕೊಟ್ಟಿರುತ್ತಾರಲ್ಲದೆ ರೈಲ್ವೆ ಬಡಾವಣೆಗೆ ಒಂದು ಕಾಸನ್ನೂ ಖರ್ಚು ಮಾಡಲಿಲ್ಲ. ಗವರ್ನ್‌ಮೆಂಟಿನವರು ರೈಲ್ ರಸ್ತೆಗಳಿಗಿಂತ ನೀರಾವರಿಗಳು ಅವಶ್ಯವಾಗಿವೆ ಎಂದೂ, ಇವು ಹೆಚ್ಚು ಲಾಭ ತರತಕ್ಕವುಗಳೆಂದೂ ಯೋಚಿಸಿಕೊಂಡಿರಬಹುದು. ಹ್ಯಾಗಾದರೂ ಆಗಲಿ ರೈಲ್ ರಸ್ತೆಗಳನ್ನು ಬಡಾವಣೆ ಮಾಡುವುದು ಈಗ ಅಗತ್ಯವಾಗಿದೆ ಎಂದು ನಾವು ನಂಬುತ್ತೇವೆ.

ಕೋಲಾರದ ತನಕ ಬಡಾವಣೆಮಾಡುವ ರೈಲ್ ರಸ್ತೆಯ ವಿಷಯದಲ್ಲಿ ನಾವು ಹೆಚ್ಚೇನೂ ಹೇಳಬೇಕಾದ ಅವಶ್ಯವಿಲ್ಲ. ಈ ರಸ್ತೆಯು ಬಹು ಮುಖ್ಯವಾದ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೆ ಹೋಗುವುದು. ಅರಸಿಕೆರೆ ಮೈಸೂರು ರಸ್ತೆಯಾದರೋ ಬಹು ವಿಶೇಷವಾದದ್ದು. ಇದು ಇನ್ನೂ ದೊಡ್ಡ ಬಡಾವಣೆಯಾಗುವುದಕ್ಕೆ ಕಾರಣವಾಗುತಕ್ಕದ್ದು. ಈ ರೈಲ್ ರಸ್ತೆಯು ತಯಾರಾದರೆ ಕೂಡಲೇ ನಂಜನಗೂಡಿನಿಂದ ಈರೋಡಿಗೂ ರಸ್ತೆ ಹಾಕಲು ಅವಶ್ಯ ಬಿದ್ದೀತು. ನಂಜನಗೂಡು ಈರೋಡಿನ ರಸ್ತೆಯು ಸಿದ್ಧವಾಗುವ ಪಕ್ಷದಲ್ಲಿ ಬೊಂಬಾಯಿ ಪೂನಾ, ಪಶ್ಚಿಮಕರಾವಳಿ ಪ್ರಾಂತ್ಯಗಳ ಆಮದು ರಫ್ತೆಲ್ಲಾ ನೆಟ್ಟಗೆ ಮೈಸೂರಿನ ಮೇಲೆ ಹಾಯ್ದು ಹೋಗುವಂತಾದೀತು. ಈಗ ಈ ಆಮದು ರಫ್ತೆಲ್ಲಾ ಬೆಂಗಳೂರು ಮದರಾಸ್ ಪಟ್ಟಣಗಳನ್ನು ಬಳಸಿಕೊಂಡು ಹೋಗಬೇಕಾಗಿದೆ. ಮೈಸೂರಿನಿಂದ ಪಶ್ಚಿಮ ಸಮುದ್ರತೀರಕ್ಕೆ ಹೋಗಿಬರಲು ಈಗಿರುವ ಸುತ್ತೆಲ್ಲಾ ತಪ್ಪಿ ಬಹಳ ಸಮೀಪವಾಗುತ್ತದೆ. ಇದಲ್ಲದೆ ನಮ್ಮ ಸೀಮೆಯ ಮಲೆನಾಡಿನಲ್ಲಿ ಬೆಳೆಯುವ ಧಾನ್ಯಾದಿಗಳಿಗೆ ಒಳ್ಳೇ ಗಿರಾಕಿ ಸಿಕ್ಕಿ ಬೇಗಬೇಗನೆ ಬಿಕರಿಯಾಗುವುದಕ್ಕೂ, ವ್ಯವಸಾಯಾದಿಗಳು ಅಭಿವೃದ್ಧಿಯಾಗುವುದಕ್ಕೂ ತುಂಬಾ ಪ್ರೋತ್ಸಾಹವಾಗುವುದು. ಇಷ್ಟೇ ಅಲ್ಲ, ಈ ರೈಲ್ ರಸ್ತೆಯ ನೆರವಿನಿಂದ ನಮ್ಮ ದೇಶದ ವ್ಯಾಪಾರವು ತುಂಬಾ ಅಭಿವೃದ್ಧಿಯಾಗುತ್ತದೆ.

ರಾಜಧಾನಿಯಾದ ಮೈಸೂರು ಪಟ್ಟಣವು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿ ಹೊಂದಬೇಕಾದರೆ ರೈಲ್ ರಸ್ತೆಯ ಸಂಬಂಧವು ಇನ್ನೂ ಹೆಚ್ಚ ಬೇಕು. ಈಗಲಾದರೋ ಮೈಸೂರು ಪಟ್ಟಣವು ರೈಲ್ ರಸ್ತೆಯಲ್ಲಿ ಕಡೆಯ ಸ್ಟೇಷನ್ ಆಗಿರುತ್ತದೆ, ಇಲ್ಲಿಂದ ರಸ್ತೆಯು ದೂರವಾಗಿ ಹೋಗುತ್ತಾ ಇಲ್ಲ. ಈ ಪ್ರಾಂತ್ಯದ ಸರಕುಗಳು ದೂರ ಹೋಗಲು ಅವಕಾಶವಿಲ್ಲದೆ ವರ್ತಕರಿಗೂ ಕಾರಿಗಾರರಿಗೂ ತಕ್ಕ ಪ್ರತಿಫಲ ದೊರಕದೆ ಇದೆ. ಉತ್ತರ ದೇಶಕ್ಕಾಗಲಿ ದಕ್ಷಿಣ ದೇಶಕ್ಕಾಗಲಿ ನೆಟ್ಟನೆಯ ರಸ್ತೆಯಿಲ್ಲ, ಈಗ ಬಳಸು ಹೆಚ್ಚಾಗಿದೆ. ರಾಜಧಾನಿಯಲ್ಲಾದರೋ ಅರಮನೆಯ ನೌಕರಿ ಮುಂತಾದ್ದರಿಂದಲೇ ಕಾಲುಪಾಲು ಪ್ರಜೆಗಳ ಜೀವನ ನಡೆಯುತ್ತಿದೆ; ಬಹು ಜನರು ಸೇರಿ ಮಾಡುವಂಥಾ ಕಸಬುಗಳ ಕಾರ್ಖಾನೆಗಳ್ಯಾವವೂ ಇರುವುದಿಲ್ಲ. ಅದಕಾರಣ ಮೈಸೂರು ಪಟ್ಟಣವು ಮೂಲೆ ತಾಣದಲ್ಲಿ ಸೇರಿಕೊಂಡಂತಿದೆ.

ಅರಸಿಕೆರೆಯಿಂದ ಮೈಸೂರಿಗೂ, ಅನಂತರ ಮೈಸೂರಿನಿಂದ ನಂಜನಗೂಡು ಮುಖಾಂತರ ಈರೋಡಿಗೂ ರೈಲ್ ರಸ್ತೆಗಳು ಬಡಾವಣೆ ಮಾಡಿದ ಪಕ್ಷದಲ್ಲಿ ಮೈಸೂರು ಪಟ್ಟಣವು ತುಂಬಾ ಪ್ರಾಮುಖ್ಯಕ್ಕೆ ಬಂದೀತು; ಆಮದು ರಫ್ತಿಗೆ ಇದು ಮಧ್ಯಸ್ಥಾನವಾಗುವುದು. ಉತ್ತರ ದೇಶಕ್ಕೂ ದಕ್ಷಿಣ ದೇಶಕ್ಕೂ ಪಶ್ಚಿಮ ತೀರದಿಂದ ನೇರವಾದ ರಸ್ತೆಯಾಗುತ್ತದೆ. ಆಗ್ಗೆ ವ್ಯಾಪಾರ ಹೆಚ್ಚುವುದಕ್ಕೂ, ಕಸಬುಗಳು ವೃದ್ಧಿಯಾಗುವುದಕ್ಕೂ ವಿಶೇಷವಾದ ಅನುಕೂಲತೆಗಳು ಕಂಡುಬರುತ್ತವೆನ್ನುವುದಕ್ಕೆ ಸಂಶಯವಿಲ್ಲ.

ಸೋಜಿಗವನ್ನು ಹುಟ್ಟಿಸುವ ಏಳು ವಿಷಯಗಳು.

ಈ ಲೋಕದಲ್ಲಿ ಬಹಳ ಆಶ್ಚರ್ಯಕರವಾದ ಕಟ್ಟಡಗಳು ಏಳು ಉಂಟೆಂದು ವಾಡಿಕೆಯಾಗಿ ಹೇಳುವದುಂಟು. ಈ ಏಳು ಕಟ್ಟಡಗಳು ಗಾತ್ರದಲ್ಲಿ ಅಥವಾ ಚಿತ್ತಾರದಲ್ಲಿ ಯಾ ಅವುಗಳ ನಿರ್ಮಾಣದಲ್ಲಿ ಕಂಡುಬರುವ ಯುಕ್ತಿ ಚಮತ್ಕಾರಗಳಲ್ಲಿ ಉಳಿದ ಸಕಲ ಕಟ್ಟಡಗಳಿಗಿಂತ ವಿಶೇಷವೆನಿಸಿಕೊಂಡಿವೆ. ಆದರೂ ಇವು ಅಮಾನುಷವಾದ ಕಾರ್ಯಗಳಲ್ಲ. ಯಾಕೆಂದರೆ ಇವುಗಳೆಲ್ಲಾ ಮನುಷ್ಯರಿಂದಲೇ ನಿರ್ಮಾಣವಾದುವು. ಆದರೆ ಅವುಗಳನ್ನು ಹೇಗೆ ಕಟ್ಟಿದರೋ ಅವರ ಸಾಮರ್ಥ್ಯವೂ ಬುದ್ಧಿಯೂ ಎಷ್ಟರ ಮಟ್ಟಿನದೋ ಎಂದು ಸಾಧಾರಣ ಜನಗಳು ಸೋಜಿಗದಿಂದ ಅವುಗಳನ್ನು ಪರೀಕ್ಷಿಸುತ್ತ ಬಂದದ್ದಾರೆ. ಇವುಗಳಲ್ಲಿ ಒಂದೆರಡು ಮೃತಪಟ್ಟ ಅರಸುಗಳ ಗೋರಿಗಳ ಮೇಲೆ ಅವರ ಜ್ಞಾಪಕಾರ್ಥವಾಗಿ ಕಟ್ಟಿದ ಗೋಪುರಗಳಾಗಿವೆ. ಒಂದೆರಡು ಆಯಾ ಸ್ಥಳಗಳಲ್ಲಿ ದೇವರೆಂದು ಪ್ರಸಿದ್ಧಿಯನ್ನು ಹೊಂದಿ ಆರಾಧನಾರ್ಹರಾಗಿದ್ದವರ ಗುಡಿಗಳು. ಇನ್ನೊಂದು ಅದ್ಭುತಾಕಾರವಾದ ವಿಗ್ರಹ. ಇವುಗಳೆಲ್ಲವನ್ನು ಕುರಿತು ಇಲ್ಲಿ ವಿಸ್ತಾರವಾಗಿ ಪ್ರಸ್ತಾಪ ಮಾಡುವದು ಅಗತ್ಯವಿಲ್ಲ. ಆದರೆ ಅವು ಆಶ್ಚರ್ಯವನ್ನು ಹುಟ್ಟಿಸತಕ್ಕವುಗಳೆಂದು ತೋರಿಸುವದಕ್ಕೆ ಒಂದೆರಡನ್ನು ಕುರಿತು ಸಂಕ್ಷೇಪವಾಗಿ ಇಲ್ಲಿ ಸೂಚಿಸುತ್ತೇವೆ.

ಆಫ್ರಿಕಾ ಖಂಡದ ಉತ್ತರ ದಿಕ್ಕಿನಲ್ಲಿ ಈಜಿಪ್ಟ್ ಎಂಬ ಲೋಕಪ್ರಖ್ಯಾತವಾದ ದೇಶವಿದೆಯಷ್ಟೆ. ಈ ದೇಶದ ಪೂರ್ವನಿವಾಸಿಗಳು ನಾಗರಿಕತೆಯಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಜನಗಳಾಗಿದ್ದರು. ಈ ದೇಶದ ರಾಜಧಾನಿಯಾಗಿ ಮೆರೆಯುತ್ತಿದ್ದ ಕೈರೋ ಎಂಬ ನಗರಿಯ ಸಮೀಪದಲ್ಲಿ ಮನುಷ್ಯರ ಊಹೆಗೆ ಅತ್ಯಂತ ಆಶ್ಚರ್ಯವನ್ನುಂಟುಮಾಡುವ ಕೆಲವು ಕಟ್ಟಡಗಳಿವೆ. ಇವುಗಳನ್ನು "ಪಿರಮಿಡು" ಗಳೆಂದು ಕರೆಯುತ್ತಾರೆ. ಇವುಗಳ ಪೈಕಿ ಅತ್ಯಂತ ಉನ್ನತವಾದುದು ನಾನೂರ ಐವತ್ತು ಅಡಿಗಳಷ್ಟು ಎತ್ತರವಾಗಿಯೂ ಏಳುನೂರು ಚಿಕರೆಯಷ್ಟು ವಿಸ್ತಾರವಾದ ಭೂಮಿಯನ್ನು ಆಕ್ರಮಿಸಿಕೊಂಡು ನಿಂತಿರುವದಾಗಿಯೂ ಇದೆ. ಲೋಕದಲ್ಲಿ ಇದಕ್ಕಿಂತ ಎತ್ತರವಾದ ಮತ್ತು ವಿಸ್ತಾರವಾದ ಕಟ್ಟಡವು ಇನ್ನಾವುದೂ ಇಲ್ಲವೆಂದು ಸಂದೇಹವಿಲ್ಲದೆ ಹೇಳಬಹುದು.

ಮೆಡಿಟರೇನಿಯನ್ ಸಮುದ್ರದಲ್ಲಿ ರೋಡ್ಸ್ ಎಂಬ ದ್ವೀಪದ ಹತ್ತಿರ ಹಡಗುಗಳು ಒಂದು ನಿಲ್ಲತಕ್ಕ ಒಂದು ರೇವು ಇದೆ. ಈ ರೇವನ್ನು ಸೇರುವದಕ್ಕೆ ಒಂದು ಬಾಗಿಲನ್ನು ದಾಟಿ ಒಳಕ್ಕೆ ಬರಬೇಕಾಗಿದೆ. ಆ ದ್ವಾರದ ಉಭಯ ಪಾರ್ಶ್ವಗಳಲ್ಲಿರುವ ಕಂಬಗಳ ಮೇಲೆ ಪಾದವನ್ನೂರಿ ಒಂದು ಉಗ್ರವಾದ ವಿಗ್ರಹವು ನಿಂತಿತ್ತು. ಈ ಮೂರ್ತಿಯು ಸಹ ಸುಮಾರು 100 ಅಡಿಗಳ ಉನ್ನತವಾಗಿ ಇತ್ತಂತೆ. ಮತ್ತು ಈ ಮೂರ್ತಿಯ ಕಾಲುಗಳ ನಡುವೆ ದೊಡ್ಡ ಹಡಗುಗಳು ನುಸಿದು ಹೋಗಿ ರೇವನ್ನು ಸೇರಬೇಕಾಗಿತ್ತು. ಹಾಗಿದ್ದರೆ ಆ ವಿಗ್ರಹದ ವಿಸ್ತಾರತ್ವವು ಎಷ್ಟು ಎಂದು ವಾಚಕರು ಸುಲಭವಾಗಿ ಊಹಿಸಿಕೊಳ್ಳಬಹುದು. ಹೀಗೆಯೇ ಉಳಿದವು ಕಟ್ಟಡಗಳು ಯಾವುದಾದರೂ ಒಂದು ವಿಧದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ.

ಆದರೆ ಈ ಏಳು ವಿಷಯಗಳಿಗಿಂತಲೂ ಆಶ್ಚರ್ಯವನ್ನು ಹುಟ್ಟಿಸುವ ಇನ್ನೊಂದು ವಿಷಯವುಂಟು. ಈ ಆಶ್ಚರ್ಯವನ್ನು ಕುರಿತು ಸುವಾರ್ತೆಗಳಲ್ಲಿ ತಿಳಿಸುರುವದು ಹೇಗಂದರೆ— ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ಈ ವರೆಗೂ ಪ್ರಸ್ತಾಪಿಸಿದ ಪಿರಮಿಡ್ ಮತ್ತು ಕೊಲಾಸಸ್ ಎಂಬ ಪ್ರತಿಮೆ ಮುಂತಾದವುಗಳು ಮನುಷ್ಯರ ಶಕ್ತಿ ಬುದ್ಧಿಗಳನ್ನು ಪ್ರಕಟಮಾಡುವವುಗಳಾಗಿದ್ದರೂ ಅವುಗಳಿಂದ ಯಾವ ಮನುಷ್ಯನಿಗಾದರೂ ನಿರಂತರವಾದ ಪ್ರಯೋಜನವಿಲ್ಲ. ಇವು ಆಗಲೆ ಕಾಲಗತಿಗೆ ಸಿಕ್ಕಿ ಗಾಳಿ ಮಳೆಗಳಿಂದ ಶಿಥಿಲವಾಗಿ ಹೋಗುತ್ತಿವೆ. ಇನ್ನೂ ಕೆಲವು ವರುಷಗಳಲ್ಲಿ ಅವು ತೀರ ಇಲ್ಲದೇನೇ ಹೋಗಬಹುದು. ಅವು ಹೋದರೆ ಯಾರಿಗೂ ಚಿಂತೆಯೂ ನಷ್ಟವೂ ಸಂಭವಿಸದು. ಆದರೆ ದೇವರು ಲೋಕವನ್ನು ಪ್ರೀತಿಮಾಡಿದ್ದು ಅತ್ಯಂತ ಆಶ್ಚರ್ಯಕರವಾಗಿಯೂ ಎಲ್ಲಕ್ಕಿಂತ ಮಾನವರಿಗೆ ಅತ್ಯಂತ ಪ್ರಯೋಜನಕರವಾಗಿಯೂ ಇದೆ. ಆತನು ಈ ಲೋಕವನ್ನು ಪ್ರೀತಿಸದಿದ್ದರೆ ನಮ್ಮ ಸ್ಥಿತಿ ಏನು? ಸ್ವಲ್ಪ ಯೋಚಿಸಿ. ಪ್ರೀತಿಮಾಡದ ವಸ್ತುಗಳನ್ನು ಪ್ರಾಣಿಗಳನ್ನು ಯಾರಾದರೂ ಕಾಪಾಡುತ್ತಾರೋ? ಅವುಗಳ ವಿಷಯ ಚಿಂತಿಸುತ್ತಾರೋ? ಇಲ್ಲವಷ್ಟೆ. ದೇವರು ನಮ್ಮನ್ನು ಪ್ರೀತಿಮಾಡದಿದ್ದರೆ ನಮ್ಮ ಗತಿ ಏನಾಗುವದು? ನಮ್ಮನ್ನು ಪರಾಮರಿಸುವ ಚಿಂತೆಯನ್ನೂ ಭಾರವನ್ನೂ ವಿಸರ್ಜಿಸುವನಲ್ಲವೇ? ಈ ಭೂಮಂಡಲದ ಮೇಲೆ ಒಂದು ನಿಮಿಷ ಗಾಳಿ ಬೀಸದಿದ್ದರೆ ಮನುಷ್ಯನು ಮೊದಲ್ಗೊಂಡು ಸಕಲ ಪ್ರಾಣಿ ಕೋಟಿಗಳು ಮೃತಿಯನ್ನು ಹೊಂದುವವು. ಒಂದು ದಿನ ಸೂರ್ಯೋದಯವಾಗದಿದ್ದರೆ ನಮ್ಮ ಗತಿಯೇನು? ಮಳೆ ಒಂದು ಭೂಮಿಯನ್ನು ತಂಪಿಸಿ ನೀರು ಸರಬರಾಜಿಯಾಗುವದು ದೇವರ ಉಚಿತವಾದ ಪ್ರೀತಿಯಿಂದಲ್ಲವೆ? ಭೂಮಿಯು ಬೆಳೆಯನ್ನು ಕೊಟ್ಟು ಮನುಷ್ಯರಿಗೂ ಸಕಲ ಜೀವರಾಶಿಗಳಿಗೂ ದಿನಂಪ್ರತಿಯೂ ಆಹಾರವನ್ನೊದಗಿಸುವದು ಯಾರ ಕೆಲಸ? ದೇವರು ಲೋಕವನ್ನು ಪ್ರೀತಿಸಿ ಈ ಪ್ರಕಾರ ಕಾಪಾಡುತ್ತಿರುವದು ಆಶ್ಚರ್ಯವಲ್ಲವೆ? ಆತನು ನಮ್ಮಿಂದಲಾದರೂ ಇನ್ನಾರಿಂದಲಾದರೂ ಪ್ರತಿಯಾಗಿ ಏನೂ ಅಪೇಕ್ಷಿಸದೆ ಒಂದು ದಿನವಲ್ಲ, ಸಾವಿರಾರು ವರುಷಗಳು ಹೀಗೆ ಮಾಡುತ್ತ ಬಂದಿರುವದು ಅತ್ಯಂತ ಆಶ್ಚರ್ಯವಲ್ಲವೇ!

ಮತ್ತು ಒಬ್ಬರಿಗೂ ಉಪಕಾರಸ್ಮರಣೆ, ಕೃತಜ್ಞತೆಯುಳ್ಳವರಿಗೂ ತೋರಿಸಿದ ಪ್ರೀತಿಗೆ ಪ್ರತಿಯಾಗಿ ಪ್ರೀತಿ ತೋರಿಸುವವರಿಗೂ ನಾವು ಪ್ರೀತಿಯನ್ನು ತೋರಿಸುವದು ಸಹಜ, ಸುಲಭ. ದೇವರು ಪರಿಶುದ್ಧರನ್ನು, ನೀತಿವಂತರನ್ನು, ಸುಜ್ಞಾನದ ಸತ್ಯವನ್ನು ನುಡಿಯುವವರನ್ನು ಮಾತ್ರ ಈ ಲೋಕದಲ್ಲಿ ಒಂದುಕಡೆ ಇಟ್ಟು ತನ್ನ ಉಪಕಾರಗಳಿಂದ ಅವರನ್ನು ಕಾಪಾಡುತ್ತಿದ್ದರೆ, ಅದು ಒಂದು ವೇಳೆ ನ್ಯಾಯವಾಗಿದೆಯೆಂದು ಅನ್ನಬಹುದು. ಆದರೆ

ಲೋಕವು ಕೃತಘ್ನತೆಯೂ ಉಪಕಾರಸ್ಮರಣೆಯೂ ಇಲ್ಲದ ಜನಗಳಿಂದ ತುಂಬಿಯಿದೆ. ದೇವರ ಪ್ರೀತಿಗೆ ಪ್ರತಿಯಾಗಿ ಪ್ರೀತಿಯನ್ನು ಆತನಿಗೆ ಎಲ್ಲರೂ ಸಲ್ಲಿಸುತ್ತಾರೋ? ಉಪಕಾರ ಸ್ಮರಣೆಯೂ ಪ್ರೀತಿಯೂ ಇಲ್ಲದವರಾಗಿರುವದಲ್ಲದೆ ಉಪಕಾರಕ್ಕೆ ಪ್ರತಿಯಾಗಿ ಅಪಕಾರವನ್ನೆಣಿಸಿ ಪ್ರೀತಿಗೆ ಬದಲಾಗಿ ಹಗೆಯನ್ನು ಸಾಧಿಸುವ ಪಾಪಿಗಳಿಂದ ಈ ಲೋಕವು ತುಂಬಿದೆ. ಸುಳ್ಳು ಹೇಳಿ, ವಂಚನೆಮಾಡಿ, ಅಹಂಕಾರದಿಂದ ಮೆರೆದು, ಸ್ವಾರ್ಥ, ಲೋಭ, ಜಗಳಗಂಟಿಗತನ, ಕ್ಷುದ್ರ, ಮತ್ಸರ, ವಿಷಯಾಭಿಲಾಷೆ, ಹಾದರ ಮುಂತಾದ ಹೇಯವಾದ ಪಾಪಗಳನ್ನು ಮಾಡಿರುವ ಸ್ವಾಮಿದ್ರೋಹಿಗಳುಳ್ಳ ಲೋಕವಲ್ಲವೇ ಇದು? ಇಂಥವರನ್ನು ಪ್ರೀತಿಸುವದು ಸುಲಭವಲ್ಲ. ಪ್ರಯತ್ನಪೂರ್ವಕವಾದುದು, ಕಷ್ಟಕರವಾದುದು. ಆದರೂ ಆತನು ನೀತಿವಂತರ ಮೇಲೆಯೂ ದುರ್ನೀತಿವಂತರ ಮೇಲೆಯೂ ತನ್ನ ಸೂರ್ಯನನ್ನು ಮೂಡುವಂತೆ ಮಾಡುತ್ತಾನೆ. ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ದೇವರು ಮಳೆಸುರಿಸುತ್ತಾನೆ. ಯಾಕೆ ಇದನ್ನೆಲ್ಲಾ ಆತನು ಮಾಡುತ್ತಿದ್ದಾನೆ? ಕೇಳಿರಿ. ಆತನು ತಾನೇ ಎಲ್ಲರಿಗೂ ಜೀವನ, ಶ್ವಾಸ ಮುಂತಾದ್ದೆಲ್ಲವನ್ನೂ ಕೊಡುವವನಾಗಿರಲಾಗಿ ಕೊರತೆಯಿದ್ದವನಂತೆ ಮನುಷ್ಯರ ಕೈಗಳಿಂದ ಏನಾದರೂ ಬಯಸುವದಿಲ್ಲ. ಆದರೆ ಮನುಷ್ಯರಲ್ಲಿ ಪ್ರತಿಯೊಂದು ಜಾತಿಯವರು ಹ್ಯಾಗಾದರೂ ದೇವರನ್ನು ತಡಕಾಡಿ ಕಂಡುಕೊಂಡೇವೆಂದು ಯೋಚಿಸಿ ತನ್ನನ್ನು ಹುಡುಕಲಿ ಎಂದು ಹೀಗೆ ಮಾಡುತ್ತಾ ಬಂದಿದ್ದಾನೆ. ಆತನು ನಮ್ಮಲ್ಲಿ ಒಬ್ಬನಿಗಾದರೂ ದೂರವಾದವನಲ್ಲ. ಯಾಕಂದರೆ ನಾವು ಆತನಲ್ಲಿಯೇ ಜೀವಿಸುತ್ತೇವೆ, ಚಲಿಸುತ್ತೇವೆ, ವಾಸಿಸುತ್ತೇವೆ. ಇದಕ್ಕಿಂತ ಆಶ್ಚರ್ಯಕರವಾದದ್ದೇನಾದರೂ?

ಆದರೆ ಆತನ ಉಪಕಾರಗಳಲ್ಲಿ ಶಿರೋಮಣಿಯೂ ಕಿರೀಟಪ್ರಾಯವೂ ಆದದ್ದು ಆತನು ತನ್ನ ಒಬ್ಬನೇ ಮಗನನ್ನು ಕೊಟ್ಟದ್ದು. ನಾವೆಲ್ಲರೂ ಈ ಲೋಕದಲ್ಲಿರುವ ಸಕಲ ಅಮೂಲ್ಯವಾದ ವಸ್ತುಗಳಿಗಿಂತ ನಮ್ಮ ಮಕ್ಕಳನ್ನು ಪ್ರೀತಿಸುತ್ತೇವಷ್ಟೆ. ನಮ್ಮ ಮಕ್ಕಳು ನಮ್ಮ ಪ್ರಾಣಕ್ಕಿಂತ ನಮಗೆ ಪ್ರೀತಿಪಾತ್ರರು. ಆದರೆ ದೇವರೇ ಈ ಪ್ರೀತಿಯನ್ನು ನಮ್ಮೊಳಗಿಟ್ಟವನು. ಯಾಕಂದರೆ ಆತನು ಪ್ರೀತಿಗೆ ಮೂಲನು. ಹಾಗಾದರೆ ಆತನು ತನ್ನ ಒಬ್ಬನೇ ಮಗನನ್ನು ಎಷ್ಟು ಪ್ರೀತಿಸುತ್ತಾನೋ ಅದರ ಆಳತೆಯನ್ನು ಯಾರು ಬಲ್ಲರು? ಆ ಮಗನು ಅನಾದಿ ಪುತ್ರನು, ಪಾಪರಹಿತನು. ದೇವರು ಆತನನ್ನು ನೋಡಿ "ಈತನೇ ನನ್ನ ಪ್ರಿಯ ಕುಮಾರನು. ನಾನು ಈತನನ್ನು ಮೆಚ್ಚಿದ್ದೇನೆ" ಎಂದು ಐದಿಯುವಷ್ಟು ಪರಿಶುದ್ಧನು. ಇಂಥಾ ತನ್ನ ಮಗನನ್ನು ಲೋಕಕ್ಕೆ ಕೊಟ್ಟುಬಿಟ್ಟ ಪ್ರೀತಿಯನ್ನು ತಿಳಿಯುವದು ಹೇಗೆ? ವರ್ಣಿಸುವದು ಹೇಗೆ? ಪಾಠಕರೇ, ದೇವರು ಯಾತಕ್ಕಾಗಿ ಇಂಥಾ ತನ್ನ ಮಗನನ್ನು ಕೊಟ್ಟಿರುವನು? ಯೋಚಿಸಿ ನೋಡಿರಿ.

ಬೇರೆ ದೇಶದ ವೃತ್ತಾಂತಗಳು.

ಸಂಸ್ಥಾನಾವಳಿ ಕಾಂತಿಭೇದಿ ಉಪದ್ರವು ಇನ್ನೂ ಪ್ರಬಲವಾಗಿಯೇ ಇದೆ. ಕಳೆದ ಜೂನ್ ತಾ|| 28 ಕ್ಕೆ ಆಖೈರಾದ ಒಂದು ವಾರದಲ್ಲಿ 113 ಗ್ರಾಮಗಳೊಳಗೆ ಈ ಉಪದ್ರವು 375 ಜನರಿಗೆ ತಗಲಿ, 212 ಮರಣಗಳಾದವೆಂದು ತಿಳಿದುಬಂದಿರುವುದು.

* * *

ಮೈಸೂರು ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಮೊದಲನೇ ವಾರ್ಷಿಕ ಸಮಾಜವು ಕಳೆದ ವರುಷ ರಾಜಧಾನಿಯಲ್ಲಿ ನಡೆದಂತೆ ಈ ವರುಷವು ನವರಾತ್ರಿ ಹಬ್ಬದ ಕಾಲದಲ್ಲಿ ರಾಜಧಾನಿಯಲ್ಲಿ ನಡಿಸಬೇಕೆಂದು ರಿಜಿಸ್ಟ್ರಾರ್ರವರು ಏರ್ಪಾಡು ಮಾಡುತ್ತಿದ್ದಾರೆ.

* * *

ಬೆಂಗಳೂರಿನಿಂದ ಆನೆಕಲ್ ಮೇಲೆ ಹೊಸೂರಿಗೆ ರೈಲ್ ರಸ್ತೆ ಹಾಕುವ ವಿಚಾರದಲ್ಲಿ ರೈಲ್ವೆ ಇಲಾಖೆಯ ಹೊಸ ಇಂಜಿನಿಯರವರ ಅಭಿಪ್ರಾಯವನ್ನು ತಿಳಿದು ಮುಂದಿನ ಯೋಚನೆ ಮಾಡೋಣವೆಂದು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗೊತ್ತುಮಾಡಿದ್ದಾರೆ.

* * *

ಮೈಸೂರು ಗವರ್ನ್ಮೆಂಟಿನವರು ಈ ಸೀಮೆಯಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರತಕ್ಕ ಭಾಗದಲ್ಲಿ ಸಲಕರಣೆಗಳಾಗುವಂಥಾ ಸಲಹೆಗಳನ್ನು ತಿಳಿಸಿ ಮಾರ್ಗಗಳನ್ನು ಸೂಚಿಸುವದಕ್ಕೋಸ್ಕರ ಮಿ ಎ ಚಾಟರ್ಟನ್ ಎಂಬ ಅಧಿಕಾರಿಯನ್ನು ಈ ತಿಂಗಳ ಪ್ರಾರಂಭದಿಂದ ನೇಮಕಮಾಡಿರುತ್ತಾರೆ.

* * *

ರಾಜಧಾನಿಯ ಟೌನ್ ಹಾಲ್ ಬಂಗಲೆಯ ಹಿಂಭಾಗದಲ್ಲಿ ಜೋಡಿ ಪಾಕಿಯಿಂದು ಬಹಿರಂಗವಾಗಿ ಜೂಜಾಟವನ್ನು ನಡಿಸುತ್ತಿದ್ದಾರೆ. ಈ ನೋಸಕರವಾದ ಆಟಕ್ಕೆ ಮ್ಯಾಜಿಸ್ಟ್ರೇಟರು ಹ್ಯಾಗೆ ಲೈಸನ್ಸು ಕೊಟ್ಟರೋ, ಪೊಲೀಸಿನವರು ಇದನ್ನು ಯಾಕೆ ನಿಲ್ಲಿಸುವ ಇಚ್ಛೆಯೇ ತಿಳಿಯದೆ ವ್ಯಸನಪಡುತ್ತೇವೆ.

* * *

ಶಿವಸಮುದ್ರದ ಜಹಗೀರಿಯಲ್ಲಿರುವ ಖನಿಜಗಳ ಮೇಲೆ ಆ ಜಹಗೀರುದಾರರಿಗೆ ಹಕ್ಕು ಉಂಟೇ ಇಲ್ಲವೇ ಎಂಬ ವಿಚಾರವು ಸರ್ವೆ ಸೂಪರಿಂಟೆಂಡೆಂಟ್ ಖಾನ್ ಬಹದೂರ್ ಮೆ|| ಡಿ ರಾಮರಾಯರ ಬಳಿ ಚರ್ಚೆಯಾಗುತ್ತಿದೆ. ಡಿವಾನ್ ಸಾಹೇಬ್ ಮೆ|| ಎಲ್ ಎ ಗೋವಿಂದರಾಘವೈಯರವರು ಜಹಗೀರುದಾರರ ಪರವಾಗಿ ಕಳೆದ ವಾರ ವಾದಿಸಿದರು.

* * *

ಶ್ರೀ ವ್ಯಾಸರಾಯ ಮಠದ ಕೆಲವು ಮುಖ್ಯವಾದ ಕಾಗದ ಪತ್ರಗಳಿದ್ದ ಒಂದು ಗಂಟು ಮದರಾಸ್ ಪಟ್ಟಣದ ಎಗ್ಮೋರ್ ಸ್ಟೇಷನ್‌ನಲ್ಲಿ ಕಳುವಾಯಿತು. ಮಠದ ಏಜೆಂಟರು ರೈಲ್ವೆ ಕಂಪನಿಯವರ ಮೇಲೆ ನಷ್ಟವನ್ನು ಕೊಡಬೇಕೆಂದು ಮಾಡುವವರಾಗಿದ್ದಾರೆ. ಈ ಕಳುವಿಗೆ ಕಂಪನಿಯವರು ಜವಾಬ್ದಾರರಲ್ಲವೆಂದು ಜವಾಬು ಕೊಟ್ಟಿರುವುದಾಗಿ ತಿಳಿದುಬಂದಿದೆ.

* * *

ಸರ್ಕಾರದವರು ಶಿವಮೊಗ್ಗಾ ತಾಲ್ಲೂಕಿನ ಹೊಸ ಸರ್ವೆಸೆಟ್ಲ್ಮೆಂಟನ್ನು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಹೊಸ ದರಗಳು 1913-14 ನೇ ಸಾಲಿನಿಂದ ಜಾರಿಗೆ ತರಲ್ಪಡುವವು. ಹೊಸ ಖುಷ್ಕಿದರವು ಶೇಕಡ 11 ರಂತೆಯೂ, ತರಿದರವು 8 ರಂತೆಯೂ ಜಾಸ್ತಿಮಾಡಿ, ಬಾಗಾಯತಿನ ದರವನ್ನು 30 ರಂತೆ ಇಳಿಸಿದ್ದಾರೆ. ಇದರಂತೆ ಒಟ್ಟು ಜಮಾಬಂದಿಯಲ್ಲಿ 8,675 ರೂಪಾಯಿ ಕಂದಾಯ ಹೆಚ್ಚಾಗಿರುತ್ತದೆ.

* * *

ಒಬ್ಬ ಬಾತ್ಮೀದಾರರಿಂದ—ಟಿ. ನರಸೀಪುರದ ತಾಲ್ಲೂಕಿಗೆ ಸೇರಿದ ತಲಕಾಡಿನಲ್ಲಿದ್ದ ಮುಜಮಾಡಿ ಇನಾಂದಾರ್ ಕೋಟೆ ಕನ್ಯಾದಾನಂ ನರಸಿಂಹ ತಾತಾಚಾರ್ಯರೆಂಬ ಆರಮನೆ ವಿದ್ವಾಂಸರು 64 ನೇ ವಯಸ್ಸಿನಲ್ಲಿ ಕಾಲವಾದುದಕ್ಕಾಗಿ ತುಂಬಾ ವಿಷಾದಿಸುತ್ತೇವೆ. ಇವರ ಕುಮಾರರು ಶ್ರೀನಿವಾಸ ತಾತಾಚಾರ್ಯರೆಂಬವರು ವಿದ್ವಾಂಸರಾಗಿಯೂ, ತಮ್ಮ ಯಜಮಾನರ ಯಶಸ್ಸನ್ನು ಕಾಪಾಡತಕ್ಕವರಾಗಿಯೂ ಇರುತ್ತಾರೆ.

* * *

ಒಬ್ಬ ಬಾತ್ಮೀದಾರರು ಬರೆಯುವುದು —ಶ್ರೀ ಪಂಪಾಹೇಮಕೂಟ ಗಾಯತ್ರೀ ಪೀಠಾಧಿಪತಿ ಶ್ರೀ ಶ್ರೀಕಂಠಸ್ವಾಮಿ ದೇವಾಂಗ ಜಗದ್ಗುರುಗಳವರು ಚಿಕ್ಕವಯಸ್ಸಿನಲ್ಲಿ ಅಂದರೆ ಜನ್ಮಕಾಲದ 14 ನೇ ವರುಷ ಅದೇ ಅಧಿಕಾಷಾಢ ಶುದ್ಧ 3 ಸೋಮವಾರ ವಿಷಮ ಜ್ವರದಿಂದ ಶಿವಾಧೀನರಾದರೆಂಬುವುದನ್ನು ತಿಳಿಸಲಿಕ್ಕೆ ತುಂಬಾ ವಿಷಾದ ಪಡುತ್ತೇವೆ. ಇವರ ಅಕಾಲಿಕ ಮರಣದಿಂದ ಸಮಸ್ತ ದೇವಾಂಗ ಮತದವರಿಗೆ ಆದ ದುಃಖವು ವರ್ಣಿಸಲಸಾಧ್ಯವಾಗಿರುತ್ತದೆ. ಮುಂದೆ ಇವರ ಪೀಠಕ್ಕೆ ಪಟ್ಟವನ್ನು ಆರಿಸುವ ಬಗ್ಗೆ ದೇವಾಂಗ ಧರ್ಮಪ್ರಸಾರಕ ಸಮಾಜದ ಕಮಿಟಿಯವರು ಕಳೆದ ತಾ. 30 ರಲ್ಲಿ ಸದರಿ ಪಂಪಾಹೇಮಕೂಟ ಗಾಯತ್ರೀ ಮಠದಲ್ಲಿ ಸೇರಿ ಸರ್ವ ದೇವಾಂಗದ ಗುರುವರ್ಗದವರಿಗೂ ಶಿಷ್ಯವರ್ಗದವರಿಗೂ ಪ್ರಕಟನ ಪತ್ರಿಕೆಗಳನ್ನು ಕಳುಹಿಸುವಂತೆ ಗೊತ್ತುಮಾಡಿದ್ದಾರೆ.

* * *

ಮೈಸೂರು ಸರ್ಕಾರದವರು ಈ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಒಂದೇ ತರದ ಅಳತೆಗಳನ್ನೂ ತೂಕಗಳನ್ನೂ ಚಲಾವಣೆಯಲ್ಲಿ ಇಡಬೇಕೆಂದು ಒಂದು ಕಾನೂನ್ ಏರ್ಪಡಿಸಿದ್ದಾರಷ್ಟೆ. ಈ ಕಾನೂನನ್ನು ಕನ್ನಡದಲ್ಲಿ ರಚಿಸಿ ಸಂಸ್ಥಾನಾವಳಿ ಮುಖಂಡ ವರ್ತಕರಿಗಲ್ಲಾ ಹಂಚಿಸಿರುತ್ತಾರಲ್ಲದೆ ಬೇಕಾದವರಿಗೆ ಒಂದಾಣೆ ಕ್ರಯವಿಟ್ಟು ವಿಕ್ರಯಮಾಡುವಂತೆ ಏರ್ಪಾಡುಮಾಡಿದ್ದಾರೆ. ಈ ಕಾನೂನು ಮುಂದಿನ ಅಕ್ಟೋಬರಿನಲ್ಲಿ ಜಾರಿಗೆ ಬರುತ್ತದೆ. ಅಷ್ಟರೊಳಗೆ ವರ್ತಕರೆಲ್ಲಾ ಈ ನಿಬಂಧನೆಗಳನ್ನು ಓದಿಕೊಂಡು ಚನ್ನಾಗಿ ಮಂದಟ್ಟು ಮಾಡಿಕೊಂಡಿರಬೇಕಾದದ್ದು ಬಹಳ ಅವಶ್ಯ. ಅಕ್ಟೋಬರ್ ತಿಂಗಳ ತಾರೀಖಿಗೆ ಈ ನಿಬಂಧನೆಗಳಿಗೆ ಅನುಸಾರವಾದ ಅಳತೆಗಳನ್ನೂ ತೂಕದ ಬಟ್ಟುಗಳನ್ನೂ ವರ್ತಕರು ಉಪಯೋಗಿಸಬೇಕಾಗುತ್ತದೆ. ಅಷ್ಟರೊಳಗೆ ವರ್ತಕರಿಗೆ ಬೇಕಾಗುವ ಸರಿಯಾದ ಅಳತೆಗಳನ್ನೂ ತೂಕಗಳನ್ನೂ ಸರ್ಕಾರದವರು ಒದಗಿಸುತ್ತಾರೆ. ಇಲ್ಲಿಗೆ ಹಳ್ಳಿಗಾಡುಗಳಲ್ಲೂ ಸಂತೆಗಳಲ್ಲೂ ವರ್ತಕರು ಮೋಸಮಾಡುತ್ತಾರೆಂಬ ದೂರು ಕೊನೆಗಾಣುವುದೆಂದು ನಂಬುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಮೆ|| ಸಯ್ಯದ್ ಬುರ್ಹಾನ್ ಸಾಹೇಬರನ್ನು ಹಿರಿಯೂರು ಟವುನ್ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ.

ನಂಜನಗೂಡು ತಾಲ್ಲೂಕು ಚಾಮಲಾಪುರದಲ್ಲಿ 1311 ನೇ ಸರ್ವೆ ನಂಬರ್ ಜಮೀನು ಸರ್ಕಾರಕ್ಕೆ ಬೇಕಾಗಿದೆ ಎಂಬ ಇಸ್ತಿಹಾರವನ್ನು ರದ್ದುಮಾಡಿದೆ.

ಮೈಸೂರು ಮಹಾರಾಣಿಯವರ ಆಸ್ಪತ್ರೆಯಲ್ಲಿ ದಾದಿಯಾಗಿರುವ ರಷೇಲ್ ಅಂತೋನಿಯಮ್ಮ ಎಂಬ ಹೆಸರನ್ನು ಬೆಂಗಳೂರು ಪ್ರಸವ ಆಸ್ಪತ್ರೆಯ ರಷೇಲ್ ಅನಂತಮ್ಮ ಎಂದು ತಿಳಿಯತಕ್ಕದ್ದು.

ಚಿಕ್ಕಬಳ್ಳಾಪುರದ ಮುನ್ಸಿಫ್ ಮೆ|| ಟಿ ವೆಂಕೋಬರಾಯರಿಗೆ ಅಪೀಲ್ ಆಗಬಹುದಾದ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲಿಷಿನಲ್ಲಿ ಸ್ವಹಸ್ತ ಬರೆದುಕೊಳ್ಳುವ ಅಧಿಕಾರ ವಹಿಸಿದೆ.

ನಂಜನಗೂಡು ಸಬ್ ಡಿವಿಜನ್ ಆಫೀಸರ್ ಮೆ|| ಎನ್ ಸುಬ್ಬರಾಯರಿಗೆ ಜೂನ್ ತಾ. 11 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಆ ಕಾಲದಲ್ಲಿ ಡೆಪ್ಯುಟಿ ಕಮಿಷನರ್‌ರವರೇ ಆ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅ|| ಕಮಿಷನರ್ ಮೆ|| ಎನ್ ಮಾಧವರಾಯರು ರಜದಿಂದ ಬಂದು ಜೂನ್ ತಾ 1 ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಶಿವಮೊಗ್ಗಾ ಸಬ್ ಡಿವಿಜನ್ ಅ|| ಕಮಿಷನರ್ ಮೆ|| ಎನ್ ರಾಮರಾಯರು ರಜದಿಂದ ಬಂದು ಮೇ ತಾ 31 ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ಮೆ|| ಆರ್ ಸುಂದರರಾಯರಿಗೆ ಜೂಲೈ ತಾ 9 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುರುವೇಕೆರೆ ಸಬ್ ತಾಲ್ಲೂಕಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಟಿ. ಸ್ವಾಮಿನಾಥ ಶಾಸ್ತ್ರಿಯವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್ದಾರರಾಗಿಯೂ, ಮೆ|| ಎನ್ ಸುಬ್ಬರಾಯರು ತುರುವೇಕೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ.

ರೆವಿನ್ಯೂ ಸರ್ವೆ ಇಲಾಖಾ ಅ|| ಕಮಿಷನರ್ ಮೆ|| ಸಿ ರಾಜಗೋಪಾಲಾಚಾರ್ಯರವರಿಗೆ ಏಪ್ರಿಲ್ ತಾ 27 ರಿಂದ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಗುಬ್ಬಿ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ ಎಂ. ರಾಮರಾಯರಿಗೆ ಜೂಲೈ ತಾ 2 ರಿಂದ ಎರಡು ತಿಂಗಳು ಇಪ್ಪತ್ತೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಬೇಷನರ್ ಮೆ|| ಬಿ ಮೊಹಿದೀನ್ ಷರೀಫ್‌ಯವರು ಗುಬ್ಬಿ ತಾಲ್ಲೂಕಿನ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸ್ ಅಸಿಸ್ಟೆಂಟರಾದ ಮೆ|| ಎಂ ಲಕ್ಷ್ಮಣಶಾಸ್ತ್ರಿಯವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟ ಪ್ರಕಾರ ರದ್ದುಮಾಡಿದೆ.

ಮೈಸೂರು ಸಿಟಿ ಹೆಲ್ತ್ ಆಫೀಸರ್ ಮೆ|| ಎ ಎಲ್. ಮೊಂಕರ್‌ಯವರಿಗೆ ಕೊಟ್ಟಿರುವ ರಜವನ್ನು ಜೂಲೈ ತಾ. 31ರ ವರೆಗೆ ಜಾಸ್ತಿಮಾಡಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಆನರರಿ ಅ|| ಸರ್ಜನ್ ಮೆ|| ಡಿ. ಬಸಪ್ಪನವರಿಗೆ ಏಪ್ರಿಲ್ ತಾ. 28ರಿಂದ ಹನ್ನೊಂದು ದಿನಗಳ ಮತ್ತು ಮೇ ತಾ 13 ರಿಂದ ಇಪ್ಪತ್ತೆರಡು ದಿನಗಳ ಕಾಯಿಲೇ ರಜಾ ಕೊಟ್ಟಿತ್ತು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾದ ಮೆ|| ಪಿ. ಪಲ್ಲುಯವರಿಗೆ ಕೊಟ್ಟಿರುವ ಎಂಟು ತಿಂಗಳು ಇಪ್ಪತ್ತೈದು ದಿನಗಳ ರಜದ ಜೊತೆಗೆ ಇನ್ನಾರು ತಿಂಗಳ ಫರ್ಲೋ ರಜಾ ಕೊಟ್ಟಿದೆ.

ಜನರಲ್ ರೆವಿನ್ಯೂ ಸೆಕ್ರೆಟರಿ ಆಫೀಸ್ ಅ. ರಿಜಿಸ್ಟ್ರಾರ್ ಮೆ|| ಬಿ. ನಾರಾಯಣಸ್ವಾಮಿ ಅಯ್ಯಂಗಾರ್ರಿಗೆ ಜೂಲೈ ತಾ 3ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜನರಲ್ ರೆವಿನ್ಯೂ ಸೆಕ್ರೆಟರಿ ಆಫೀಸ್ ಅ|| ಸೂಪರಿಂಟೆಂಡೆಂಟ್ ಮೆ|| ಟಿ ಕೆ ಸೋಮೇಶ್ವರ ಅಯ್ಯರವರನ್ನು ಹೊಸಕೋಟೆ ತಾಲ್ಲೂಕ್ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಅ|| ಸರ್ಜನ್ ಮೆ|| ಕೆ ಅನಂತರಾಮೈಯಂಗಾರ್ರನ್ನು ಬೆಂಗಳೂರು ಸಿಟಿ ಬಸವನಗುಡಿ ಆಸ್ಪತ್ರೆಯ ಛಾರ್ಜಿಗೆ ವರ್ಗಮಾಡಿದೆ.

ಮೆ|| ಎಂ. ರಾಮರಾಯರವರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಕೆಲಸದ ಛಾರ್ಜನ್ನು ಜೂನ್ ತಾ. 19ರಲ್ಲಿ ವಹಿಸಿಕೊಂಡಿದ್ದಾರೆ.

ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳಕೊಡಲಾರೆವು.

ಪ್ರಕಟಿಸುವುದಕ್ಕೆ ಬರತಕ್ಕ ಬಾತ್ಮೀಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮೀಗಳು ಅದೇ ವಾರದಲ್ಲಿ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮೀಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮೀಗಳನ್ನು ಅನೇಕರು "ರೆವ್ ಇ ಡಬ್ಲ್ಯೂ ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು. ಇಲ್ಲವಾದರೆ ಬಾತ್ಮೀಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು. ಬಾತ್ಮೀದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃಪೆಪಡಿಸುತ್ತೇವೆ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಎಂ ಎಸ್ ಮ ಮರಳವಾಡಿ —ಈ ವಿಚಾರವನ್ನು ಕುರಿತ ಬಾತ್ಮಿಯನ್ನು ಪ್ರಕಟಿಸಲಾರೆವು.

ಅರೂಡಿ, ದೊಡ್ಡಬಳ್ಳಾಪುರ.—ಈ ಬಾತ್ಮಿಯಲ್ಲಿ ಸರ್ವ [illegible] ಕಂಡುಬರುವುದಿಲ್ಲ.

ಸರ್ವಾಧಿಕಾರಿ, ಚಾಮರಾಜನಗರ—ನಿಮ್ಮ ಬಾತ್ಮಿಯಲ್ಲಿ ಕಂಡ ಆಕ್ಷೇಪಗಳ ವಿಷಯವಾದ ಚರ್ಚೆಯನ್ನು ಪ್ರಕಟಿಸುವುದರಿಂದ ಪ್ರಯೋಜನವೇನೂ ಆಗುವುದಿಲ್ಲ. ಇಂಥಾ ಪಾರ್ಟಿ ವಿಚಾರಗಳಿಗೆ ನಮ್ಮ ಪತ್ರಿಕೆಯಲ್ಲಿ [illegible] ಕೊಡಲಾರದು.

ಸಕಲೇಶಪುರದ ಸ್ಕೂಲಿನ ನಡವಳಿಕೆ ವಿಷಯದಲ್ಲಿ ಬಾತ್ಮಿ [illegible] ಮೊದಲು ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಿಗೂ, ವಿದ್ಯಾ ಇಲಾಖೆಗೂ ಅರ್ಜಿ ಬರೆದುಕೊಳ್ಳಬೇಕು. ಅವರು ತನಿಖೆಮಾಡಿ, ಲೋಪದೋಷಗಳನ್ನು ಪರಿಹರಿಸುತ್ತಾರೆಂದು ನಿರೀಕ್ಷಿಸುತ್ತೇವೆ.

—ಎಡಿ.]

ಕರೆಸ್‌ಪಾಂಡೆನ್ಸ್.

ಶೃಂಗೇರಿ ಜಹಗೀರ್ ಅಧಿಕಾರ.

ಅಯ್ಯಾ,

ಈ ಶೃಂಗೇರಿ ಜಹಗೀರ್ ಆಡಳಿತಗಳನ್ನು ನೋಡಲು ಗವರ್ನ್ಮೆಂಟಿನವರು ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಕಮಾಡಿದ್ದರು. ಈಚೆಗೆ ಆ ಅಧಿಕಾರವು ತೆಗೆಯಲ್ಪಟ್ಟಂತೆ ತಿಳಿಯುತ್ತೆ. ಹಿಂದಿನ ಅಡ್ಮಿನಿಸ್ಟ್ರೇಟರ ಕಾಲದಲ್ಲಿ ಕೆಲಸಗಳು ಕ್ಲುಪ್ತವಾಗಿಯೂ ಸಮರ್ಪಕವಾಗಿಯೂ ನಡೆಯುತ್ತಿದ್ದವು. ಮಠದ ಆಡಳಿತ ನೋಡುವದಕ್ಕೂ, ಈಗಿನ ಪಟ್ಟಾಭಿಷಕ್ತರಾದ ಶ್ರೀ ಗುರುಗಳಿಗೆ ಹಿತಚಿಂತಕರಾಗಿ ಸರಿಯಾದ ಸಲಹೆ ಕೊಟ್ಟು ಸಂಸ್ಥಾನವನ್ನು ಅಭಿವೃದ್ಧಿಗೆ ತರುವದಕ್ಕೂ ಮರೆನಾಡಾದ ಈ ಶೃಂಗೇರಿಯ ಜನಗಳ ಹಿತಚಿಂತನೆಗೂ ಸರ್ಕಾರದವರು ಪುನಹಾ ನಿಷ್ಪಕ್ಷಪಾತಿಗಳಾದ ಒಬ್ಬ ಸರ್ಕಾರಿ ಅಧಿಕಾರಿಯನ್ನು ನೇಮಿಸುವದು ಯುಕ್ತವೆಂತ ತಿಳಿಯಬರುತ್ತೆ. ಈಗ ಗವರ್ನ್ಮೆಂಟಿನವರು ಮಾಡುವ ಆದಾಯವ್ಯಯಗಳನ್ನು ಕೇಳುವವರಿಲ್ಲದ ಲೆಕ್ಕಗಳು ತಯಾರಾಗುತ್ತಿವೆ. ಗವರ್ನ್ಮೆಂಟಿನವರು ಮೊದಲಿನಂತೆಯೇ ಈ ಮಠದ ಎಲ್ಲಾ ಲೆಕ್ಕಗಳನ್ನೂ ಚನ್ನಾಗಿ ಪರಾಂಬರಿಸಿ ಸ್ಯಾಂಕ್ಷನ್ ವಗೈರೆಗಳನ್ನು ಕ್ರಮವಾಗಿ ಮಾಡುವರೆಂದು ನಂಬಿದೇವೆ.

ಮಲೆಭಾಗ ನಿ.

ಬೆಲ್ಲದ ತಯಾರಿ

ಮುಖ್ಯವಾಗಿ ತಿಳಿಯಬೇಕಾದ ವಿಷಯಗಳು.

ಕೊಯ್ಯುವಾಗ ಕಬ್ಬು ಚೆನ್ನಾಗಿ ಪಕ್ವಕ್ಕೆ ಬಂದಿರಬೇಕು ಅದು ಎಳೆದಾಗಿಯೂ, ಮಿತಿವಿರಿ ಬಲಿತದ್ದಾಗಿಯೂ ಇರಕೂಡದು ಕಟ್ಟಿಗೆಯ ಖರ್ಚನ್ನು ತಗ್ಗಿಸುವದಕ್ಕಾಗಿ ಯೋಗ್ಯವಾದ ಒಲೆಯನ್ನು ಕಟ್ಟಬೇಕು ಕಬ್ಬಿನಿಂದ ಸಾಧ್ಯವಾದಷ್ಟು ಹೆಚ್ಚು ರಸವನ್ನು ಹಿಂಡುವದಕ್ಕಾಗಿ ಯೋಗ್ಯವಾದ ಗಾಣವನ್ನು ಉಪಯೋಗಿಸಬೇಕು ಸ್ವಲ್ಪ ಕಾಲದೊಳಗೆ ಯಾ ಸ್ವಲ್ಪ ಕಟ್ಟಿಗೆಯ ಖರ್ಚಿನೊಳಗೆ ರಸವನ್ನು ಕುದಿಸಕೊಡುವ ಹಾಗೆ ಒಂದು ಯುಕ್ತವಾದ ಕೊಪ್ಪರಿಗೆ (ಕಡಾಯಿ) ಯನ್ನು ಉಪಯೋಗಿಸಬೇಕು ಕೊಯ್ಯಲ್ಪಟ್ಟ ಕಬ್ಬನ್ನು ಗಾಣಕ್ಕೆ ಕೊಡದೆ ಬಹಳ ಕಾಲ ಇಟ್ಟುಕೊಂಡಿರಕೂಡದು ಕಬ್ಬಿನ ರಸವನ್ನು ಹಿಂಡಿದ ಒಡನೆಯೇ ಸಾವಕಾಶವಾದದೆ ಕುದಿಸಬೇಕು ರಸದಲ್ಲಿರುವ ಹುಳಿ ಪದಾರ್ಥವನ್ನು ಕಮ್ಮಿ ಮಾಡುವದಕ್ಕಾಗಿ ಕುದಿಸುವದಕ್ಕೆ ಮುಂಚೆ ತಕ್ಕಷ್ಟು ಸುಣ್ಣವನ್ನು ಬೆರಸಬೇಕು ಮೇಲಕ್ಕೆ ತೇಲುವ ಎಲ್ಲಾ ನೊರೆಯನ್ನೂ ಜಾಗ್ರತೆಯಿಂದ ತೆಗೆಯಬೇಕು ರಸವನ್ನು ಕುದಿಸುವದಕ್ಕೆ ಬಹಳ ಜೋರಾದ ಬೆಂಕಿಯನ್ನು ಹಾಕದೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಕೊಪ್ಪರಿಗೆಯನ್ನು ಒಲೆಯಿಂದ ತಕ್ಕ ಕಾಲದಲ್ಲಿ ತೆಗೆಯಬೇಕು ಬೆಲ್ಲವನ್ನು ಕೂಡಲೇ ಮಾರಲಿಕ್ಕೆ ಅನುಕೂಲವಿಲ್ಲದ ಪಕ್ಷದಲ್ಲಿ ಅದನ್ನು ಕಬಿನ ಒಣ ಎಲೆಗಳಲ್ಲಿ ಕಟ್ಟಿಗೆ ಕಟ್ಟಿ ಜೋಪಾನಮಾಡಿಡಬೇಕು

ವಿಮಾನ ಯಂತ್ರಗಳು

ಪ್ರಸಿದ್ಧ ಕಾರ್ಗಾರರ ಅಕಾಲ ಮರಣವು

ಜರ್ಮನಿ ರಾಜ್ಯಕ್ಕೆ ಸೇರಿದ ಮುಲಾಸ್ಟ್ ಪಟ್ಟಣದಲ್ಲಿ ಹರ್ ಷಾಲ್ಟ್ ಎಂಬ ಕಾರ್ಗಾರನು ತನ್ನ ವಿಮಾನ ಯಂತ್ರದಲ್ಲಿ ಕೂತು ಅಂತರಿಕ್ಷದಲ್ಲಿ 800 ಅಡಿಯ ಮೇಲೆ ಸಂಚಾರ ಮಾಡುತ್ತಿರುವಾಗ ಆಯತಪ್ಪಿ ಅಲ್ಲಿಂದ ಬಿದ್ದು ಶೀಘ್ರವಾಗಿ ಸತ್ತಿದ್ದಾನೆ

ಜರ್ಮನಿಯ ಕಾರ್ಗಾರರಲ್ಲಿ ಅಗ್ರಗಣ್ಯನಾದ ಬೆನೋ ಕೊಯಿನಗ್ ಎಂಬಾತನು ವಿಮಾನದಲ್ಲಿ ಸಂಚಾರ ಮಾಡಿಕೊಂಡು ಬಂದು ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಇಳಿಯುವ ಸಂದರ್ಭದಲ್ಲಿ ವಿಮಾನವು ಯಾವುದಕ್ಕೋ ಬಡಿದು ಅವನನ್ನು ಕೆಡವಿ ಕೊಂದುಬಿಟ್ಟಿತು

ಜರ್ಮನಿಗೆ ಸೇರಿದ ಡಸಲ್‌ಡಾರ್ಫಿನಲ್ಲಿ ಸಾಚೆನ್ ಎಂಬ ವಿಮಾನಯಂತ್ರವನ್ನು ಕಟ್ಟಿಹಾಕಿದ್ದರು ಬಿರುಗಾಳಿಯು ಅದಕ್ಕೆ ಬಡಿದು ಬಹು ರಭಸದಿಂದ ಅದು ಓಡ್ಹಾಡುತ್ತಿದ್ದಾಗ ಅದನ್ನು ಹಿಡಿದು ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟ ಮೂವತ್ತು ಮಂದಿ ಸೋಜರುಗಳು ಗಾಯಪಟ್ಟರು

ಲಂಡನ್ ಪಟ್ಟಣದಲ್ಲಿ ಕ್ಯಾಪ್ಟನ್ ತೆಂಪ್ಲರ್ ಎಂಬಾತನೂ, ಸಾರ್ಜಂಟ್ ಮೇಜರ್ ವಿಲ್ಸನ್ ಎಂಬಾತನೂ ವಿಮಾನಯಂತ್ರದಲ್ಲಿ ಒಟ್ಟಾಗಿ ಕೂತು ಅಂತರಿಕ್ಷದಲ್ಲಿ ಸಂಚಾರಮಾಡುತ್ತಿದ್ದಾಗ ಆ ಯಂತ್ರಕ್ಕೆ ಅಪಾಯ ಸಂಭವಿಸಿ 600 ಅಡಿ ಎತ್ತರದಿಂದ ಬಿದ್ದು ಅದರೊಳಗಿದ್ದವರಿಬ್ಬರೂ ಅಕಾಲ ಮರಣವನ್ನು ಹೊಂದಿದರು

ಅಮೇರಿಕದಲ್ಲಿ ವಿಮಾನ ಸಂಚಾರದಲ್ಲಿ ಪ್ರಸಿದ್ಧಳಾಗಿದ್ದ ಮಿಸ್ ಹ್ಯಾರಿಯಟ್ ಕ್ವಿಂಬಿ ಎಂಬಾಕೆಯು ತನ್ನ ಕೂಡ ಒಬ್ಬ ಪ್ರಯಾಣಸ್ಥನನ್ನು ಕೂಡಿಕೊಂಡು ಡಾಚೆಸ್ಟರ್ ಬೇ ಎಂಬ ಸಮುದ್ರ ಕೊಲ್ಲಿಯನ್ನು ದಾಟಿ ಹೋಗುತ್ತಿರುವಾಗ 1000 ಅಡಿ ಎತ್ತರದಿಂದ 5 ಅಡಿ ಆಳವುಳ್ಳ ನೀರಿನಲ್ಲಿ ಬಿದ್ದು ಅವರಿಬ್ಬರೂ ಮೃತಪಟ್ಟರು

ಅಮೇರಿಕಕ್ಕೆ ಸೇರಿದ ಅಟ್ಲಾಂಟಿಕ್ ಸಿಟಿ ಎಂಬ ಪಟ್ಟಣದಲ್ಲಿ ಮೆ ವಾನಮರ್ ಎಂಬೊಬ್ಬ ಕಾರ್ಗಾರನು ವಿಮಾನಯಂತ್ರದಲ್ಲಿ ಕೂತು, ತನ್ನ ಕೂಡ ಐಲುಮಂದಿ ಪ್ರಯಾಣಿಕರನ್ನು ಕೂರಿಸಿಕೊಂಡು, ಅಟ್ಲಾಂಟಿಕ್ ಮಹಾಸಾಗರವನ್ನು ದಾಟುವುದಕ್ಕಾಗಿ ಅಂತರಿಕ್ಷಕ್ಕೆ ಹಾರಿ ಅರ್ಧಮೈಲಿದೂರ ಆಕಾಶದಲ್ಲಿ ಹೋಗುವಷ್ಟರೊಳಗೆ ಆ ಆಕಾಶಬುಟ್ಟಿಯು ಮಹಾ ಶಬ್ದದೊಡನೆ ಹಾರಿ ಒಡೆದು ಕಳಚಿ ಬಿದ್ದುಬಿಟ್ಟಿತು ಆ ಕಾರ್ಗಾರನೂ ಅವನ ಸಂಗಡಿದ್ದ ಐಲುಮಂದಿಯೂ ಅರ್ಧಮೈಲಿ ಎತ್ತರದಿಂದ ಬಿದ್ದು ಮೃತಪಟ್ಟರು ಈ ದುಃಖಕರವಾದ ನೋಟವನ್ನು 1000 ಜನರು ನಿಂತು ನೋಡಿ ಮರುಗಿದರು ಮೊದಲು ಉರಿ ೨ ಜ್ವಾಲೆಗಳ ದೆಸೆಯಿಂದ ಏನೊಂದೂ ಕಾಣಲಿಲ್ಲ ಸ್ವಲ್ಪ ಹೊತ್ತಿನ ಮೇಲೆ ಆ ಯಂತ್ರದ ಒಡೆದ ಚೂರುಗಳು ನೆಲದ ಮೇಲೆ ಬಿದ್ದಾಗ ಗೊತ್ತಾಯಿತು

ರೇಷ್ಮೆ ವ್ಯವಸಾಯ

ಇದನ್ನು ಅಭಿವೃದ್ಧಿಮಾಡುವ ಕ್ರಮಗಳು

ರೇಷ್ಮೆ ವ್ಯವಸಾಯದಲ್ಲಿ ಅನುಭವಸ್ಥರಾದ ಕೆಲವು ಜನರನ್ನು ಕೂಡಲೆ ಚೆನ್ನಾಗಿ ತರಪೇತು ಮಾಡಬೇಕಾದದ್ದು ಆವಶ್ಯಕ ಈ ಉದ್ದೇಶದಿಂದಲೇ ರೇಷ್ಮೆ ವ್ಯವಸಾಯದ ಫಾರಂಗಳು ಸ್ಥಾಪಿಸಲ್ಪಟ್ಟಿರುವವು ಈ ಫಾರಂಗಳಲ್ಲಿ ಆಸೇಕರಿಗೆ ಸಾಧಾರಣವಾದ ಕೈಗೆಲಸದಲ್ಲಿ ಬಹಳ ಜಾಗ್ರತೆಯಾಗಿ ಕಲಿವಳಿಕೆಯನ್ನುಂಟುಮಾಡುವುದು ಸುಲಭವಾಗಿದೆ ಹೆಚ್ಚು ವಿದ್ಯಾಭ್ಯಾಸ ಮಾಡಿರುವವರನ್ನು ಈ ಕಸಬಿನಲ್ಲಿ ನಿಪುಣರನ್ನಾಗಿ ಮಾಡುವುದಕ್ಕೆ ಪ್ರಯತ್ನಪಡುವುದಕ್ಕಿಂತಲೂ ಈ ಕಸಬಿನಲ್ಲಿಯೇ ನಿರತರಾಗಿದ್ದು ಇದನ್ನೇ ಮುಖ್ಯ ಜೀವನೋಪಾಯವಾಗಿಟ್ಟುಕೊಂಡಿರುವವರನ್ನು ತರಪೇತು ಮಾಡಬೇಕಾದದ್ದು ಹೆಚ್ಚು ಅವಶ್ಯಕವಾಗಿದೆ ಇಂಥವರು ಸಂಸಾರಿಗಳಾಗಿರುವುದರಿಂದ ಇವರು ತರಪೇತಾಗುತ್ತಿರುವ ಕಾಲದಲ್ಲಿ ಇವರುಗಳಿಗೆ ಸಂಬಳ ಅಥವಾ ವೇತನಗಳನ್ನು ಕೊಡುವುದರ ಮೂಲಕ ಇವರುಗಳನ್ನು ಪ್ರೋತ್ಸಾಹಗೊಳಿಸಬೇಕು ಈ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಲು ಇಚ್ಛೆಯುಳ್ಳ ಪ್ರತಿ ಡಿಸ್ಟ್ರಿಕ್ಟಿನವರೂ ಇದಕ್ಕೆ ತಗಲುವ ಖರ್ಚನ್ನು ಕೊಟ್ಟು ಕೆಲವು ಜನರನ್ನು ತರಪೇತುಮಾಡಿಸಬೇಕು ಹುಳುಗಳನ್ನು ಸಾಕುವುದು ಮತ್ತು ಹಿಪ್ಪುನೇರಳೆಯ ಸೊಪ್ಪನ್ನು ಬೆಳೆಯುವುದು, ಇವೆರಡು ವಿಷಯಗಳನ್ನು ಮಾತ್ರ ಕಲಿಯಬೇಕಾದರೆ ಸ್ವಲ್ಪ ಕಾಲ ತರಪೇತಾದರೆ ಸಾಕಾಗಿರುತ್ತೆ ಆದರೆ ರಾಟೆ ಕೆಲಸವನ್ನೂ ಕಲಿಯಬೇಕಾದರೆ ಹೆಚ್ಚು ಕಾಲ ಬೇಕಾಗುವುದು

ಬಂಗಾಳಾದೇಶದಲ್ಲಿ ಬಿತ್ತನೆಗೆ ಹಸನಾದ ಬೀಜಗಳನ್ನು ಆಜಮಾಯಿಷಿ ಮಾಡಿ ರೋಗವಿಲ್ಲದವುಗಳನ್ನೇ ಜನರಿಗೆ ಸರಬರಾಯಿ ಮಾಡಲು ಕೆಲವು ಕೋಠಿಗಳು ಸ್ಥಾಪಿಸಲ್ಪಟ್ಟಿವೆ ರೋಗವಿಲ್ಲದ ಬೀಜವನ್ನು ಉಪಯೋಗಿಸುವುದರಿಂದ ಒಳ್ಳೇ ಬೆಳೆಯಾಗಿ ಹೆಚ್ಚು ಲಾಭ ದೊರೆಯುತ್ತದೆ ರೇಷ್ಮೆ ವ್ಯವಸಾಯಗಾರರು ರೋಗವಿಲ್ಲದ ಬೀಜಗಳನ್ನು ಉಪಯೋಗಿಸುವುದರಲ್ಲಿ ಪ್ರಯೋಜನವುಂಟೆಂದು ಬಹಳ ಬೇಗ ತಿಳಿದುಗೊಳ್ಳುತ್ತಾರೆ

ಕಾಶ್ಮೀರದೇಶದ ಸರ್ಕಾರದವರನ್ನು ಬಿಟ್ಟರೆ ಬಂಗಾಳಾ ಸರ್ಕಾರದವರು ಈ ಕೈಗಾರಿಕೆಗೆ ಬಹಳ ಉದಾರವಾಗಿ ಪ್ರೋತ್ಸಾಹಕೊಡುತ್ತಿರುವರು ಈ ಸರ್ಕಾರದವರು ವರುಷಕ್ಕೆ ರೇಷ್ಮೆ ವ್ಯವಸಾಯಗಾರರಿಗೋಸ್ಕರ 10,000 ರೂಪಾಯಿಗಳ ವರಿವಿಗೂ ಖರ್ಚುಮಾಡುವಂತೆ ತೋರುತ್ತದೆ ಈ ಕೈಗಾರಿಕೆಯು ಸದ್ಯಕ್ಕೆ ದೇಶಗಳಲ್ಲೆಲ್ಲಾ ಇದನ್ನು ಬಹಳ ಅಭಿವೃದ್ಧಿಗೆ ತರುವುದು ಸರ್ಕಾರದವರ ಕರ್ತವ್ಯವಾಗಿದೆ ಅದು ಸರ್ಕಾರದವರ ಸಹಾಯವಿಲ್ಲದೆ ತನಗೆ ತಾನೇ ಸ್ಥಾಪಿತವಾಗಿ ಅಭಿವೃದ್ಧಿಗೆ ಬರುವುದೆಂದು ಖಂಡಿತವಾಗಿ ಹೇಳಲಾಗುವುದಿಲ್ಲ ಈ ಕೈಗಾರಿಕೆಯಲ್ಲಿ ನಿರತರಾಗಿರುವ ಸಾಹುಕಾರಿ ಜನರಿಗೆ ಸರ್ಕಾರದವರು ಉದಾರವಾಗಿ ಸಹಾಯಮಾಡಬೇಕು ಹಾಗೆ ಸಾಹುಕಾರೀ ಜನರು ಇದಕ್ಕೆ ಗಮನಕೊಡದಿದ್ದರೆ ಸರಕಾರದವರು ತಾವೇ ತಕ್ಕಷ್ಟು ದುಡ್ಡು ಮುಟ್ಟಿಸಿ ಇದನ್ನು ಸ್ಥಾಪನೆಮಾಡಬೇಕು ಇವರು ಖರ್ಚುಮಾಡಿದ ಮೊಬಲಗು ಅತ್ಯಲ್ಪಕಾಲದಲ್ಲಿಯೇ ಇವರಿಗೆ ವರಮಾನರೂಪವಾಗಿ ಬರುವುದು

ಚೈನಾದೇಶದಲ್ಲಿ ಈ ಕೈಗಾರಿಕೆಯು ಬಹಳ ಕಾಲಕ್ಕೆ ಮುಂಚೆ ಅಲ್ಲಿ ಆಳುತ್ತಿದ್ದ ಚಕ್ರವರ್ತಿನಿ ಮಹಾರಾಜ್ಞಿಯವರಿಂದ ಸ್ಥಾಪಿಸಲ್ಪಟ್ಟಿತು ಅಲ್ಲಿನವರು ಈಗಲೂ ಆಕೆಯನ್ನು ಬಹಳ ದೊಡ್ಡ ಜನೋಪಕಾರಿಯೆಂದು ಕೊಂಡಾಡುತ್ತಾರೆ ಜರ್ಮನ್‌ದೇಶಸ್ಥರೂ ಈ ವಿಷಯದಲ್ಲಿ ಚೈನಾದವರನ್ನು ಹಿಂಬಾಲಿಸುತ್ತಿದ್ದಾರೆ ಇದಕ್ಕಾಗಿ ಆ ಸರ್ಕಾರದವರು ಎಷ್ಟು ಖರ್ಚು ತಗಲಿದರೂ ಹಿಂಜರಿಯದೆ ವೆಚ್ಚಮಾಡುವರು ಸದ್ಯದಲ್ಲಿ ಇದರಿಂದ ಬರತಕ್ಕ ವರಮಾನವು ರಾಜಾದಾಯದ ಮುಖ್ಯಭಾಗಗಳಲ್ಲೊಂದಾಗಿದೆ ಹ್ಯಾಗಂದರೆ, ಜಪಾನಿನವರು ಕೊರಿಯಾದಲ್ಲಿ ಈ ಕೈಗಾರಿಕೆಯನ್ನು ಸ್ಥಾಪಿಸುವದಕ್ಕಾಗಿ ವ್ಯಾಂಚೂರಿಯಾದಿಂದ 10,00,000 ಗೂಡುಗಳನ್ನು ತರಿಸಿರುವುದಲ್ಲದೆ 1,000 ಜನ ಚೈನಾದೇಶದ ರೇಷ್ಮೆ ವ್ಯವಸಾಯಗಾರರಲ್ಲಿ ನಿಸ್ಸೀಮರಾದವರು ಕೆಲಸಕ್ಕೆ ಬೇಕೆಂದು ಕೇಳುತ್ತಾರೆ ಯುರೋಪ್ ದೇಶದ ಹವವು ಈ ರೇಷ್ಮೆಯ ವ್ಯವಸಾಯಕ್ಕೆ ಬಹಳ ಪ್ರತಿಕೂಲವಾದಾಗ್ಯೂ ಅಲ್ಲಿನ ಚಕ್ರವರ್ತಿಗಳು ಲಕ್ಷ್ಯಮಾಡದೆ ವಿಶೇಷ ಹಣವನ್ನು ಖರ್ಚುಮಾಡಿ ಅಲ್ಲಿ ಈ ಕೈಗಾರಿಕೆಯನ್ನು ಸ್ಥಾಪಿಸಿದಾರೆ

ಈ ವಿಷಯದಲ್ಲಿ ಈಗಿನಂತೆ ಇತರ ದೇಶಗಳನ್ನು ಹಿಂಬಾಲಿಸುವುದಕ್ಕೆ ಬದಲಾಗಿ ಇಂಡಿಯಾ ದೇಶವು ತಾನೇ ಇತರರಿಗೆ ದಾರಿತೋರಿಸುತ್ತಾ ಮುಂಭಾಗದಲ್ಲಿ ಹೋಗುವುದು ಬಹಳ ಸುಲಭ ಆದರೆ ಹೀಗೆ ಆಗಬೇಕಾದರೆ ಸರ್ಕಾರದವರು ಸ್ವಲ್ಪವೂ ಹಿಂಜರಿಯದೆ ಆವಶ್ಯಕವಾದಷ್ಟು ದುಡ್ಡನ್ನು ವ್ಯಯಮಾಡಿ ಇದರಲ್ಲಿ ಕೈಹಾಕಿರುವ ಇತರ ಸಾಹುಕಾರಿ ಜನಗಳಿಗೂ ವಿಶೇಷ ಪ್ರೋತ್ಸಾಹಪಡಿಸಬೇಕಾದದ್ದು ಅತ್ಯವಶ್ಯಕವಾಗಿದೆ

ಎರಡು ನೀರಾವರಿ ಕಾಮಗಾರಿಗಳು

ಶೋಲಾಪುರದ ನಾಲೆ

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಶೋಲಾಪುರ ಡಿಸ್ಟ್ರಿಕ್ಟಿನಲ್ಲಿ ದುಷ್ಕಾಲದ ದೆಸೆಯಿಂದ ಆಗಾಗ್ಗೆ ಪ್ರಜೆಗಳು ಕ್ಷಾಮಪೀಡಿತರಾಗುತ್ತಾರೆ ಇದನ್ನು ನಿವಾರಣೆ ಮಾಡುವುದಕ್ಕಾಗಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ನೀರಾನಾಲಾ ಕಾಮಗಾರಿಯನ್ನು ಮಾಡಿಸಬೇಕೆಂದು ಈಗತಾನೇ ಸ್ಯಾಂಕ್ಷನ್ ಮಾಡಿರುವರು ಇದಕ್ಕೆ 2,57,73,000 ರೂಪಾಯಿ ಖರ್ಚಾಗುವುದೆಂದು ಅಂದಾಜಾಗಿದೆ ಈ ನಾಲೆಯಿಂದ 1,90,000 ಎಕರೆ ಜಮೀನು ಆ ಡಿಸ್ಟ್ರಿಕ್ಟಿನಲ್ಲಿ ತರೀ ವ್ಯವಸಾಯಕ್ಕೆ ಬರುವುದೆಂದು ಹೇಳುತ್ತಾರೆ

ಪಂಜಾಬ್ ಕಾಲುವೆ

ಪಂಜಾಬ್ ಅಧಿಪತ್ಯದಲ್ಲಿ ಹರಿಯುವ ಪಂಚನದಿಗಳ ಪೈಕಿ ಜೀಲಂ ಮತ್ತು ಚೀನಾಬ್ ನದಿಗಳಲ್ಲಿ ಪ್ರವಾಹ ಕಾಲದಲ್ಲಿ ಬರುವ ಹೆಚ್ಚು ನೀರನ್ನು ನಾಲೆಗಳ ಮೂಲಕ ಸಾಗಿಸಿ ಅಪಾರವಾದ ಬೀಗಾರು ಪ್ರದೇಶವನ್ನು ವ್ಯವಸಾಯಕ್ಕೆ ಬರುವಂತೆ ಮಾಡಿದಾರೆ ಕೆಲವು ವಾರಗಳ ಹಿಂದೆ ಈ ನಾಲಾ ಕಾಮಗಾರಿಗಳೆಲ್ಲಾ ಪೂರೈಸಿ ವೈಸ್‌ರಾಯ ಲಾರ್ಡ್ ಹಾರ್ಡಿಂಜ್ ಪ್ರಭುಗಳು ಅದನ್ನು ಪ್ರತಿಷ್ಠೆ ಮಾಡಿದರು ಈ ನಾಲೆಯು ಪ್ರಪಂಚದ ನೀರಾವರಿ ಕಾಮಗಾರಿಗಳಲ್ಲಿ ಬಹಳ ದೊಡ್ಡದೆಂದು ಹೇಳಲು ಸಂದೇಹವಿಲ್ಲ ದೊಡ್ಡ ನಾಲೆಯು ತೊಂಬತ್ತೊಂದು ಮೈಲಿ ಉದ್ದವಾಗಿಯೂ, ಅದರ ಒಂದು ಕೋಳುನಾಲೆಯು ಒಂದು ಸಾವಿರದ ನೂರು ಮೈಲಿ ಉದ್ದವಾಗಿಯೂ ಇರುತ್ತವೆ ನಾಲೆ ಪ್ರಾರಂಭ ಮಾಡಿರುವ ಕಡೆಯಲ್ಲಿ ಚೀನಾಬ್ ನದಿಯ ನಾಲೆಯು 220 ಅಡಿ ಪಾತ್ರ ವಿಸ್ತಾರವುಳ್ಳದ್ದಾಗಿಯೂ, ನೀರು 11 ಅಡಿ ಆಳವಾಗಿಯೂ ಇರುವುದು ಈ ನಾಲೆಯಿಂದ ಬರುವ ನೀರನ್ನು 12,35,000 ಎಕರೆ ಜಮೀನಿಗೆ ಹಾಯಿಸಿ ವ್ಯವಸಾಯ ಮಾಡಬಹುದಾಗಿದೆ ಈಗ ಅಲ್ಲಿರುವ ಜಮೀನುಗಳನ್ನೆಲ್ಲಾ ಇಪ್ಪತ್ತೈದು ಎಕರೆಗೆ ಒಂದರಂತೆ ಚೌಕಗಳನ್ನಾಗಿ ವಿಂಗಡಿಸಿದಾರೆ ಇನ್ನು ಮುಂದೆ ನೀರಿನ ಇಲಾಖೆಯವರು ಈ ಪ್ರತಿ ಒಂದು ಚೌಕವನ್ನೂ ಒಂದೊಂದು ಎಕರೆಯುಳ್ಳಂಥಾ ಸಣ್ಣ ಚೌಕದ ಜಮೀನಾಗಿ ಭಾಗ ಮಾಡುವರು ಅದರಿಂದ ಆ ಜಮೀನುಗಳಿಗೆ ನೀರನ್ನು ಹಾಯಿಸುವುದಕ್ಕೂ ಕಂದಾಯ ದಾಖಲಾಮಾಡುವುದಕ್ಕೂ ಬಹಳ ಅನುಕೂಲವಾಗುತ್ತದೆ ಇದಲ್ಲದೆ ಪಂಜಾಬ್ ಸೀಮೆಯ ಇತರ ಭಾಗಗಳಲ್ಲೂ ಗವರ್ನಮೆಂಟಿನವರು ಇನ್ನೂ ಕೆಲವು ಭಾರಿ ನಾಲೆಗಳನ್ನು ಹಿಂದೆಯೇ ತೋಡಿಸಿ ನೀರು ಸರಬರಾಯಿ ಮಾಡುತ್ತಿದಾರೆ ಆ ಪ್ರಾಂತ್ಯದಲ್ಲಿ ಪ್ರಜಾ ಸಂಖ್ಯೆಯು ಹೆಚ್ಚಿರುವಷ್ಟು ಇನ್ಯಾವ ವಿಭಾಗದಲ್ಲೂ ಇಲ್ಲ ಅದರಲ್ಲೂ ಕ್ರೈಸ್ತ ಪ್ರಜೆಗಳೇ ಅಲ್ಲಿ ಅಪಾರವಾಗಿ ಹೆಚ್ಚಿರುತ್ತಾರೆ ಇತರ ಪ್ರದೇಶಗಳಲ್ಲಿರುವ ಈ ಜನಗಳು ಅಲ್ಲಿನ ಅನುಕೂಲಗಳನ್ನು ತಿಳಿದು ಆಗಾಗ್ಗೆ ಹೋಗಿ ನೆಲಸುತ್ತಿರುವರು ಈ ನಾಲೆಗಳನ್ನು ಹಾಕಿ ಜಮೀನನ್ನು ವ್ಯವಸಾಯಕ್ಕೆ ತಂದದ್ದರಿಂದ ಸರ್ಕಾರದ ಉತ್ಪತ್ತಿಯು ಬಹಳವಾಗಿ ಹೆಚ್ಚಿರುವುದೆಂದು ಹೇಳಬೇಕಾಗಿಲ್ಲ ಇದಲ್ಲದೆ ಈ ಭಾರೀ ನಾಲೆಗೆ ಬೇಕಾದ ಕಬ್ಬಿಣದ ದೊಡ್ಡ ದೊಡ್ಡ ಬಾಗಿಲು ಮುಂತಾದವುಗಳನ್ನೆಲ್ಲಾ ಸೀಮೆಯಿಂದ ತರಿಸುವುದನ್ನು ಬಿಟ್ಟು ಅಮೃತಸಾರ ಪಟ್ಟಣದ ಕಾರ್ಖಾನೆಯಲ್ಲೇ ತಯಾರುಮಾಡಿಸಿರುವುದನ್ನು ನೋಡುವಾಗ ವ್ಯವಸಾಯದ ಜೊತೆಗೆ ಈ ದೇಶದ ಕಸಬೂ ಅಭಿವೃದ್ಧಿಯಾಗುತ್ತಿದೆ ಎಂದು ತಿಳಿದು ಸಂತೋಷಿಸಬೇಕಾಗಿದೆ ಪ್ರತಿಷ್ಠೆ ಮಾಡುವಾಗ್ಗೆ ವೈಸ್‌ರಾಯರವರು ಇಂಜನಿಯರುಗಳ ಸಾಹಸ ಕಾರ್ಯಗಳನ್ನು ವಿವರಿಸಿ ಅವರನ್ನು ಕೊಂಡಾಡಿದರು “ಬೀಗಾರಾದ ಭೂಪ್ರದೇಶವನ್ನು ಆಳಕಳಿಸುವ ಉದ್ಯಾನವನವಾಗಿ ಮಾಡಿದ್ದೀರಿ ಅಲ್ಲಿ ರೈತರು ಸ್ವಂತ ಕೆಯಿಂದ ಕಷ್ಟಪಟ್ಟು ವ್ಯವಸಾಯಮಾಡಿ ಫಲವನ್ನು ಹೊಂದಿ ಸುಖದಿಂದಿರುವದಾಗಿದೆ ಕ್ಷಾಮವೆಂಬ ರಾಕ್ಷಸನ ಭೀತಿಯು ಈ ಪ್ರಾಂತ್ಯದಲ್ಲಿ ತಪ್ಪಿಹೋಗಿರುವದು ಈ ಸಂದರ್ಭದಲ್ಲಿ ನಾನು ನಿಮಗೆ ಎರಡು ವಿಷಯಗಳನ್ನು ಮುಖ್ಯವಾಗಿ ತಿಳಿಸಬೇಕೆಂದು ಕುತೂಹಲಪಡುತ್ತೇನೆ ಈ ನಾಲೆಗಳಲ್ಲಿ ಹರಿಯುವ ಅಪಾರ ನೀರನ್ನು ವಿಶೇಷವಾಗಿ ಉಪಯೋಗ ಮಾಡಿಕೊಳ್ಳಬಾರದು ಹಾಗೆ ಮಾಡಿದ ಪಕ್ಷದಲ್ಲಿ ರೈತರ ಗ್ರಾಮನಿವೇಶನಗಳೂ, ಮನೆ ಮಠಾದಿಗಳೂ ಶೀತವೇರಿ ಅನಾರೋಗ್ಯಕರವಾಗುತ್ತದೆ ಎರಡನೆಯದಾಗಿ ಪಂಜಾಬಿ ಜನರಾದ ನೀವು ಈ ವ್ಯವಸಾಯದಲ್ಲಿ ಬಿದ್ದು ಸುಖಜೀವಿಗಳಾಗಬಾರದು ನಿಮ್ಮ ವಂಶವು ಬಹು ಪರಾಕ್ರಮವುಳ್ಳದ್ದಾಗಿದೆ ದೇಹವನ್ನು ದಂಡಿಸುವುದರಲ್ಲಿ ನಿಮ್ಮ ಹಿರಿಯರು ಹೆಸರು ಪಡೆದ್ದರು ನೀವುಗಳೂ ಅವರಂತೆಯೇ ಕಾಯಕಷ್ಟವನ್ನು ಮಾಡುವುದಕ್ಕೆ ಹಿಂಜರಿಯದೆ ಸರ್ವದಾ ಉದ್ಯೋಗಿಗಳಾಗಿರಬೇಕು ಇದರಿಂದ ನಿಮ್ಮ ದೇಹವು ಗಟ್ಟಿಯಾಗುವುದು, ನೀವು ಬಹಳ ಕಾಲ ಬದುಕುವಿರಿ, ನಿಮ್ಮ ನಡವಳಿಕೆಯೂ ಜೀವನವೂ ನಿರ್ಮಲವಾಗುವವು” ಎಂಬದಾಗಿ ವೈಸ್‌ರಾಯರವರು ಅಪ್ಪಣೆ ಕೊಡಿಸಿದರು

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ತಿಂಗಳ ಆಖೈರಿನಲ್ಲಿ ಹಿಂದೂಸ್ಥಾನದೊಳಗೆ 61 ಕೋಟಿಯೂ 190 ಲಕ್ಷ ರೂಪಾಯಿನ ಕರೆನ್ಸಿ ನೋಟುಗಳು ಚಲಾವಣೆಯಲ್ಲಿದ್ದವೆಂದು ತಿಳಿದು ಬಂದಿದೆ

* * *

ವೈಸ್‌ರಾಯ ಪ್ರಭುಗಳು ಈ ತಿಂಗಳಲ್ಲಿ ಸಿಮ್ಲಾದಿಂದ ದೆಹಲಿ ಪಟ್ಟಣಕ್ಕೆ ದಯಮಾಡಿ, ಹೊಸ ರಾಜಧಾನಿ ರಚನೆಯಾಗುವ ಕ್ರಮ ಮುಂತಾದದ್ದನ್ನು ಪರೀಕ್ಷಿಸಿಕೊಂಡು ತೆರಳುವರು

* * *

ಸಂಯುಕ್ತ ಅಧಿಪತ್ಯಗಳ ಗವರ್ನಮೆಂಟಿನವರು ರಾಯಬಹದೂರ್ ಕನ್ಹಯಾಲಾಲ್‌ಯವರನ್ನು ಅಯೋಧ್ಯಾ ಡಿವಿಜನ್ನಿನ ಜ ಡಿಸಲ್ ಕಮಿಷನರಾಗಿ ನೇಮಕ ಮಾಡುವವರಾಗಿದಾರೆ

* * *

ದೆಹಲಿ ದರ್ಬಾರಿನ ಉದ್ದಿಶ್ಯ ಚಕ್ರವರ್ತಿ ಸಾರ್ವಭೌಮರವರು ಹಿಂದುಸ್ಥಾನಕ್ಕೆ ಚಿತ್ತೈಸಿದ್ದ ಕಾಲದಲ್ಲಿ ಈ ಸೀಮೆಯ ಒಂದು ರೈಲ್ ಕಂಪನಿಯ ಉತ್ಪತ್ತಿಯು 10 ಲಕ್ಷ ರೂಪಾಯಿ ಜಾಸ್ತಿ ಆಯಿತೆಂದು ಪ್ರಕಟವಾಗಿದೆ

* * *

ಲಾಹೋರ್ ಪಟ್ಟಣದಲ್ಲಿ ತುಲ್ಸಾಸಿಂಗ್ ಎಂಬೊಬ್ಬ ಪೋಲೀಸನನು ಹಾಬಿಬ್ ಅಲಿ ಖಾನ್ ಎಂಬ ಪೋಲೀಸ್ ಇನ್ಸ್ಪೆಕ್ಟರನ್ನು ಕೊಂದು ಹಾಕಿದ್ದರಿಂದ ಅವನನ್ನು ಮ್ಯಾಜಿಸ್ಟ್ರೇಟರು ಸೆಷನ್ ವಿಚಾರಣೆಗೆ ಗುಂಪಡಿಸಿದಾರೆ

* * *

ರಂಗೂನ್ ಪಟ್ಟಣದಲ್ಲಿರುವ ಸರ್ಕಾರಿ ಹುಚ್ಚರ ಆಸ್ಪತ್ರೆಯಲ್ಲಿ ವಾಂತಿಭೇದಿ ಉಪದ್ರ ಪ್ರಾರಂಭವಾಗಿ 32 ಮಂದಿ ಹುಚ್ಚರಿಗೆ ತಗಲಿ, 16 ಮಂದಿ ಮೃತಪಟ್ಟರು ಪಟ್ಟಣದಲ್ಲೂ ಒಂದೆರಡು ಜನರಿಗೆ ಈ ಉಪದ್ರ ತಗಲಿತು

* * *

ಹಿಮಾಚಲದ ತಪ್ಪಲಲ್ಲಿರುವ ಡಾರ್ಜಿಲಿಂಗ್ ಪ್ರಾಂತ್ಯದಲ್ಲಿ ಮಳೆ ಅಪಾರವಾಗಿ ಸುರಿದು ಬೆಟ್ಟಗುಡ್ಡಗಳು ಕಳಚಿ ಬಿದ್ದುಬಿಟ್ಟವೆಂದೂ, ರಸ್ತೆ ಕೆಲಸ ಮಾಡುತ್ತಿದ್ದ ಇಬ್ಬರು ಕೂಲಿಗಳು ಸಿಕ್ಕಿ ಮೃತಪಟ್ಟರೆಂದೂ ತಿಳಿದುಬಂದಿದೆ

* * *

ಕಲ್ಕತ್ತಾ ಪಟ್ಟಣದಲ್ಲೂ ಬಂಗಾಳಾ ಅಧಿಪತ್ಯದ ಮುಖ್ಯಮುಖ್ಯ ಪಟ್ಟಣಗಳಲ್ಲೂ ಸ್ವದೇಶೀ ಪದಾರ್ಥಗಳನ್ನೇ ಪ್ರೋತ್ಸಾಹಪಡಿಸುವುದಕ್ಕಾಗಿ ಮುಖಂಡ ಪ್ರಜೆಗಳು ಹಲವು ಸಂತೆಗಳನ್ನು ನಡಸಬೇಕೆಂದು ಏರ್ಪಾಡು ಮಾಡುತ್ತಿದಾರೆ

* * *

ಸಿಲೋನ್ (ಲಂಕಾ) ದ್ವೀಪದ ಮುಖ್ಯಪಟ್ಟಣವಾದ ಕೊಲಂಬೋ ನಗರದಲ್ಲಿ ಭಿಕ್ಷುಕರ ಕಾಟವನ್ನು ತಪ್ಪಿಸುವುದಕ್ಕಾಗಿ ಅವರನ್ನೆಲ್ಲಾ ಒಂದು ಪ್ರತ್ಯೇಕವಾದ ಅನಾಥಶಾಲೆಯಲ್ಲಿಟ್ಟು ಸಂರಕ್ಷಣೆಮಾಡಬೇಕೆಂದು ಸರ್ಕಾರದವರು ಪ್ರಯತ್ನಪಡುತ್ತಿದಾರೆ

* * *

ಕರಾಚಿ ಪಟ್ಟಣದಲ್ಲಿ ಸೀಮೆಯಿಂದ ಜಹಜುಗಳಲ್ಲಿ ಬಂದಿಳಿಯುವ ಸರಕುಗಳ ಮೇಲೆ ಸುಂಕವನ್ನು ವಸೂಲುಮಾಡುವುದಕ್ಕಾಗಿ ಒಂದು ವಿಶಾಲವಾದ ಸುಂಕದ ಕಟ್ಟೆಯನ್ನು ಅಲಂಕಾರವಾಗಿ ಕಟ್ಟುವುದಕ್ಕೆ ಸ್ಯಾಂಕ್ಷನ್ ಆಗಿದೆ ಇದಕ್ಕೆ ಏಳು ಲಕ್ಷ ರೂಪಾಯಿ ಖರ್ಚಾಗುವುದು

* * *

ಹಿಂದೂಸ್ಥಾನದಲ್ಲಿ ಇಂಗ್ಲಿಷ್ ಪ್ರಭುತ್ವವನ್ನು ಸ್ಥಾಪಿಸುವುದರಲ್ಲಿ ಸಾಹಸಪಟ್ಟ ಪುರಾತನ ಮಹನೀಯರ ಪೈಕಿ ಲಾರ್ಡ್ ಕ್ಲೈವ್ ಎಂಬಾತನೂ ಒಬ್ಬನಾಗಿರುತ್ತಾನೆ ಈತನ ಹೆಸರನ್ನು ಶಾಶ್ವತಪಡಿಸುವ ಕಾರ್ಯ ಇದು ವರೆಗೆ ನಡೆದಿರಲಿಲ್ಲ ಆತನ ಲೋಹ ಪ್ರತಿಮೆಯು ಸೀಮೆಯಿಂದ ಈಗ ತಯಾರಾಗಿ ಕಲ್ಕತ್ತೆಗೆ ಬಂದಿರುತ್ತದೆ

* * *

ಬರ್ಮಾ ಅಧಿಪತ್ಯದ ಥಿಬಾ ದೊರೆಯನ್ನೂ ರಾಣಿಯನ್ನೂ ಗವರ್ನಮೆಂಟಿನವರು ರತ್ನಗಿರಿಯಲ್ಲಿ ತಂದಿಟ್ಟುಕೊಂಡು ಪಾಲಿಸುತ್ತಿದಾರಷ್ಟೆ ಕಳೆದ ವಾರ ರಾಣಿಯು ಕಾಲವಾದದ್ದರಿಂದ ಆಕೆಯ ಶವವನ್ನು ಸಂಸ್ಕಾರಮಾಡುವುದಕ್ಕೆ ಅಲ್ಲಿಂದ ಬರ್ಮಾದಲ್ಲಿರುವ ರಂಗೂನ್ ಪಟ್ಟಣಕ್ಕೆ ಹಡಗಿನ ಮೇಲೆ ಕಳುಹಿಸಿರುತ್ತಾರೆ

* * *

ವಿಲಾಯತಿಯ ಕೆಲವು ಭಾಗಗಳಲ್ಲಿ ಗೋಕಾಯಿಲೆಗೆ ಕಾಲುಬಾಯಿ ಜ್ವರವು ವ್ಯಾಪ್ತವಾಗಿ ಹರಡುತ್ತಿರುವುದರಿಂದ ಅಲ್ಲಿನ ಕೆಲವು ದೊಡ್ಡ ಮನುಷ್ಯರು ಹಿಂದುಸ್ಥಾನದಲ್ಲಿ ಸಂಚಾರ ಮಾಡಿ ಇಲ್ಲಿ ಆ ರೋಗದ ಲಕ್ಷಣ, ಪರಿಹಾರಗಳನ್ನು ಸಾಕ್ಷಾತ್ತಾಗಿ ನೋಡಿ ತಿಳಿದುಕೊಂಡು ಹೋಗುವುದಕ್ಕಾಗಿ ಈ ವರುಷ ಆಖೈರಿನಲ್ಲಿ ಬರುವವರಾಗಿದಾರೆ

* * *

ಮದರಾಸ್ ಸರ್ಕಾರದವರು ಅನ್ಯದೇಶಗಳಿಂದ ವಿಶೇಷ ಹುಲುಸಾದ ಮತ್ತು ಲಾಭಕರವಾದ ಕಬ್ಬಿನ ಬೀಜಗಳನ್ನು ತರಿಸಿ ಕೊಯಮುತ್ತೂರು ಪರೀಕ್ಷಾ

ಮಿನಲ್ಲಿ ಹಾಕಿ ಬೆಳೆವಾಗಿ ರೈತಪ್ರಜೆಗಳಿಗೆ ತೋರಿಸಿಕೊಡಬೇಕೆಂದು ಏರ್ಪಾಡು ಮಾಡಿರುತ್ತಾರೆ ಇದಕ್ಕಾಗಿಯೇ ಒಬ್ಬ ವ್ಯವಸಾಯ ಶಾಸ್ತ್ರಜ್ಞನನ್ನು ಹೊಸದಾಗಿ ನೇಮಕಮಾಡಿ ಅವರು ಮಾಡುವ ಖರ್ಚಿಗೆ ಎರಡೂಕಾಲು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ

* * *

ಕಲ್ಕತ್ತೆಯಲ್ಲಿರುವ ದೇವಪ್ರಸಾದ ಸರ್ವಾಧಿಕಾರಿ ಎಂಬ ಪಂಡಿತನಿಗೆ ಆ ಬರ್ಲಿನ್ ನಗರದ ಪಂಡಿತ ಮಂಡಲಿಯವರಿಂದಲೂ, ಸೇಂಟ್ ಆಂಡ್ರ್ಯೂಸ್ ವಿದ್ಯಾನಿಲಯದ ಪಂಡಿತ ಶ್ರೇಷ್ಠರಿಂದಲೂ «ಧರ್ಮಶಾಸ್ತ್ರಪಂಡಿತ» ಎಂಬ ಬಿರುದು ಬಂದಿರುತ್ತದೆ ಡರ್ಹಂ ವಿದ್ಯಾನಿಲಯದವರು ಡಾಕ್ಟರ್ ಪಿ ಸಿ ರಾಯಿ ಎಂಬ ಬಂಗಾಳಾ ಪಂಡಿತನಿಗೆ ಶಾಸ್ತ್ರಶೋಧನೆಯಲ್ಲಿ ಪಂಡಿತನೆಂಬ ಬಿರುದನ್ನು ಕೊಟ್ಟಿರುತ್ತಾರೆ

* * *

ಲಾಹೋರಿನಲ್ಲೂ ಆಗ್ರಾಪಟ್ಟಣದಲ್ಲೂ ಕಳೆದ ವಾರ ಸಹಿಸಲಶಕ್ಯವಾದಷ್ಟು ಸೆಕೆ ಕಾಣಿಸಿಕೊಂಡು, ಬಿಸಿ ಬಿಸಿಯಾದ ಗಾಳಿಯು ಬೀಸಿ ಪ್ರಜೆಗಳನ್ನು ತಲ್ಲಣಪಡಿಸಿತು ಹೀಗೆ ಹವಾ ಬದಲಾಯಿಸಿದ್ದು ಅಪೂರ್ವವೆಂದು ಹೇಳುತ್ತಾರೆ ಈ ಸೆಕೆಯ ತಾಪವನ್ನು ತಡೆಯಲಾರದೆ ಆಗ್ರಾಪಟ್ಟಣದಲ್ಲಿ ಮೂರು ಮಂದಿ ಯೂರೋಪ್ಯನ್ನರು ತೀರಿಹೋದರು ಕೆಲವು ಹಿಂದೂ ಜನರೂ ಕಾಲವಾದರೆಂದು ತಿಳಿದುಬಂದಿದೆ

* * *

ಈಗ ನೀಲಗಿರಿ ಬೆಟ್ಟದ ಮೇಲಿರುವ ಮದರಾಸ್ ಗವರ್ನರವರು ಆಗಸ್ಟ ತಿಂಗಳು ೯ ನೇ ತಾ ಮಂಗಳವಾರ ಅಲ್ಲಿಂದ ಹೊರಟು ಮರುದಿನ ಮದರಾಸಿಗೆ ದಯಮಾಡಿ ತಾ ೩ ಕ್ಕೆ ವಾಲ್ಟೇರ್ ಪಟ್ಟಣವನ್ನು ತಲಪಿ, ೧೪ ದಿನ ಅಲ್ಲಿನ ವಿದ್ಯಮಾನಗಳನ್ನು ತನಿಖೆ ಮಾಡಿಕೊಂಡು, ಅಲ್ಲಿಂದ ಕಾಕಿನಾಡಾಕ್ಕೆ ಚಿತ್ತೈಸಿ ಆ ಪ್ರಾಂತ್ಯದಲ್ಲೂ ೧೪ ದಿನ ಸಂಚರಿಸಿ ತಾ ೧೪ ಕ್ಕೆ ಮದರಾಸಿಗೆ ತಲಪಿ, ಮರುದಿನ ನೀಲಗಿರಿಯನ್ನು ಸೇರುವವರಾಗಿದ್ದಾರೆ

* * *

ಕಳೆದ ೨೧ ನೇ ತಾರೀಖಿಗೆ ಆಖೈರಾದ ವಾರದಲ್ಲಿ ಹಿಂದೂಸ್ಥಾನದೊಳಗೆ ೫17 ಜನರಿಗೆ ಪ್ಲೇಗ್ ತಗಲಿತು ೨೬1 ಜನರು ಆ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ವಿವರ ಹ್ಯಾಗೆಂದರೆ—ಬೊಂಬಾಯಿ ಅಧಿಪತ್ಯ 19, ಬಂಗಾಳಾ ೧ ಬೀಹಾರ್ ಮತ್ತು ಒರಿಸಾ ೫0, ಸಂಯುಕ್ತ ಅಧಿಪತ್ಯಗಳು 20, ಪಂಜಾಬ್ ೫6, ಬರ್ಮಾ 17, ಮೈಸೂರು ಸಂಸ್ಥಾನ 1೩ ಈ ರೀತಿ ಈ ಉಪದ್ರದ ಹಾವಳಿಯು ವಾರ ವಾರಕ್ಕೆ ಕಡಮೆಯಾಗುತ್ತಿರುವುದು

* * *

ಕರಾಚಿ ಪಟ್ಟಣದಲ್ಲಿ ಐಶ್ವರ್ಯವತಿಯೂ ದೊಡ್ಡ ಮನೆತನಸ್ಥಳೂ ಆದ ಒಬ್ಬ ಸಿಂಧಿ ಸ್ತ್ರೀಯು ತನ್ನ ಅತ್ತೆಯ ಕೂಡ ಜಗಳವಾಡಿಕೊಂಡು ಹೋಗಿ ತನ್ನ ಕೊಠಡಿಯ ಬಾಗಿಲು ಹಾಕಿಕೊಂಡು ಮೈಗೆಲ್ಲಾ ಸೀಮೆಯೆಣ್ಣೆಯನ್ನು ಬಳಿದುಕೊಂಡು ದೀಪಹಚ್ಚಿ ಉರಿಯುತ್ತಿರುವಾಗ ತಾಪವನ್ನು ತಡೆಯಲಾರದೆ ಅರಚಿಕೊಂಡಳು ಜನರು ಹೋಗಿ ಬಾಗಿಲನ್ನು ಒಡೆದು ನೋಡುವಾಗ್ಗೆ ಆಕೆಗೆ ಪ್ರಜ್ಞೆ ತಪ್ಪಿ ಹೋಗಿತ್ತು ಇಲಾಜು ಮಾಡಿದರೂ ಪ್ರಯೋಜನವಾಗದೆ ಆಕೆ ಸತ್ತುಹೋದಳು

* * *

ಬೀಹಾರ ಪ್ರಾಂತ್ಯಕ್ಕೆ ಸೇರಿ ಗಂಗಾ ನದಿಯ ದಡದ ಮೇಲಿರುವ ದಿನಪುರವೆಂಬ ದಂಡುಸ್ಥಳದಲ್ಲಿ ಆರು ಮಂದಿ ಸೋಜರುಗಳು ಎರಡು ನಾಯಿಗಳ ಕೂಡ ದೋಣಿಯಲ್ಲಿ ಕುಳಿತು ಬರುತ್ತಿರುವಾಗ್ಗೆ ಆ ನಾಯಿಗಳು ಜಗಳವಾಡುತ್ತಿದ್ದವು ಸೋಜರುಗಳು ಆ ನಾಯಿಗಳನ್ನು ಬೇರೆ ಬೇರೆ ಎಳೆಕೊಳ್ಳುವುದಕ್ಕೆ ಹೋದಾಗ ದೋಣಿಯು ಹೆಚ್ಚು ಕಡಮೆಯಾಗಿ ಮಗುಚಿಕೊಂಡಿತು ನಾಲ್ವರು ಸೋಜರುಗಳು ಈಜಿ ಬದುಕಿಕೊಂಡರು ಇನ್ನಿಬ್ಬರು ಮಾತ್ರ ನದಿಯಲ್ಲಿ ನೀರು ಕುಡಿದು ಮೃತಪಟ್ಟರು

* * *

ಕಲ್ಕತ್ತಾ ಪಟ್ಟಣದ ಬಜಾರುಗಳಲ್ಲಿ ಕಳೆದ ಏಪ್ರಿಲ್ ತಿಂಗಳಿಂದಲೂ ಹತ್ತು ರೂಪಾಯಿನ ಕಳ್ಳನೋಟುಗಳು ಅನೇಕವಾಗಿ ಚಲಾವಣೆಯಲ್ಲಿರುತ್ತವೆ ಅವನ್ನು ನೋಡಿದರೆ ಯಾರಿಗೂ ಸ್ವಲ್ಪವೂ ಅನುಮಾನ ಕಂಡುಬರುವ ಹಾಗಿಲ್ಲ ಎಲ್ಲಾ ಬಾಗಗಳೂ ಸಾಚಾ ನೋಟಿನ ಹಾಗೇ ಇರುವವು ಈ ಮೋಸವನ್ನು ಖಜಾನಾ ಇಲಾಖೆಯವರು ಕಂಡುಹಿಡಿದು, ಪೋಲೀಸಿಗೆ ತಿಳಿಸಿದ್ದರ ಮೇಲೆ ಆ ಬಾಬಾಯಿತು ಪತ್ತೆ ತರದೂದು ನಡೆಯುತ್ತಿರುವುದು ಇದುವರೆಗೆ ಆ ಮೋಸಗಾರರ ಸುಳುವೇ ಗೊತ್ತಾಗದೆ ಇದೆ

* * *

ಹಿಂದೂಸ್ಥಾನದ ಹೊಸ ರಾಜಧಾನಿಯಾಗುವ ದೆಹಲಿ ಪಟ್ಟಣದಲ್ಲಿ ಅನೇಕಾನೇಕ ಸರ್ಕಾರಿ ಕಟ್ಟಡಗಳು ಇಷ್ಟರಲ್ಲೇ ಕಟ್ಟಲಾರಂಭವಾಗುವವು ಹಲವು ಕಟ್ಟಡಗಳನ್ನು ಹಿಂದೂಸ್ಥಾನದ ಶಿಲ್ಪಶಾಸ್ತ್ರ ಕ್ರಮಾನುಸಾರವಾಗಿ ರಚನೆ ಮಾಡಬೇಕೆಂಬುವುದು ಇಂಡಿಯಾ ಗವರ್ನ್‌ಮೆಂಟಿನವರ ಅಭಿಮತವಾಗಿರುತ್ತದೆ ಆದಕಾರಣ ಹಿಂದೂಸ್ಥಾನದ ಶಿಲ್ಪಶಾಸ್ತ್ರಾನುಗುಣ್ಯವಾದ ನಕ್ಷೆ (ಪ್ಲಾನ್) ಗಳನ್ನು ಬರೆದುಕೊಡುವವರಿಗೆ ಒಂದೊಂದಕ್ಕೆ ಎರಡು ಸಾವಿರ ರೂಪಾಯಿ ತನಕ ಬಹುಮಾನ ಸಿಕ್ಕೀತೆಂದು ಪ್ರಕಟವಾಗಿದೆ

* * *

ಇಂಗ್ಲಿಷರ ಹಡಗುಗಳನ್ನು ಜರ್ಮಾನವರು ತಮ್ಮ ರಾಜ್ಯದ ತೀರಗಳಲ್ಲಿ ವ್ಯಾಪಾರಾರ್ಥವಾಗಿ ಸಂಚರಿಸದಂತೆ ಪ್ರತಿಬಂಧಿಸುತ್ತಾರೆಂದೂ, ಜರ್ಮಾನವರ ವ್ಯಾಪಾರದ ಹಡಗುಗಳನ್ನು ಹಿಂದೂಸ್ಥಾನದ ಸಮುದ್ರ ತೀರಗಳಲ್ಲಿ ಸಂಚರಿಸುವದಕ್ಕೆ ಅವಕಾಶ ಕೊಟ್ಟಿದಾರೆಂದೂ ಸರ್ ಜಾನ್ ರೀಸ್ ಎಂಬ ಮೆಂಬರು ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ತಿಳಿಸಿ ಇದಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಿದಕ್ಕೆ ಸರ್ಕಾರದವರು ಈ ವಿಚಾರವನ್ನು ಪರ್ಯಾಲೋಚನೆ ಮಾಡುತ್ತಿರುವುದಾಗಿ ಮಿ|| ಆಕ್ಲೆಂಡ್‌ಯವರು ಉತ್ತರ ಕೊಟ್ಟಿದಾರೆ

* * *

ಹಿಂದೂಸ್ಥಾನದ ಸ್ಯಾಂಡೋ ಎಂದು ಪ್ರಖ್ಯಾತಿಹೊಂದಿರುವ ಪ್ರೊಫೆಸರ್ ರಾಮಮೂರ್ತಿಯು ಇದು ವರೆಗೆ ಪರರಾಜ್ಯಗಳಲ್ಲಿ ಸಂಚಾರ ಮಾಡುತ್ತಿದ್ದು ಕಳೆದ ವಾರ ಮದರಾಸಿಗೆ ಬಂದು ತಮ್ಮ ಸಾಮರ್ಥ್ಯಾದಿಗಳನ್ನು ಅಲ್ಲಿನ ಪ್ರಜೆಗಳಿಗೆ ಪ್ರದರ್ಶನಮಾಡುತ್ತಿದ್ದಾರೆ ಕೆಮರಾನ್ ಎಂಬ ಕಾನ್ಪುರದ ಪೈಲ್ವಾನನು ರಾಮಮೂರ್ತಿಯವರ ಕಡೆಯ ಅಸ್ತ್ರಾಫ್ ಎಂಬ ಜಟ್ಟಿಯ ಮೇಲೆ ಕಾಳಗ ಮಾಡುವುದಾಗಿ ಒಪ್ಪಿಕೊಂಡಿದ್ದಾನೆ ಅವನು ಗೆದ್ದರೆ ರಾಮಮೂರ್ತಿಯವರು ಅವನಿಗೆ 100 ರೂಪಾಯಿ ಇನಾಂ ಕೊಡುವಂತೆ ವಾಗ್ದಾನಮಾಡಿರುವರು

* * *

ಬೊಂಬಾಯಿನಿಂದ ಹದಿನೈದು ಮೈಲಿ ದೂರದಲ್ಲಿರುವ ವರಸೋವಾದಲ್ಲಿ ಕಳೆದ ವಾರ ನಾಲ್ವರು ಪಾರ್ಸಿ ಹುಡುಗರು ಸಮುದ್ರದಲ್ಲಿ ಸ್ನಾನಮಾಡುತ್ತಿರುವಾಗ ಅಲೆ ಬಡಿದು ಮೂವರು ಸಮುದ್ರದ ಪಾಲಾದರು ಇನ್ನೊಬ್ಬನು ಗಾಬರಿಯಿಂದ ಸ್ವಲ್ಪ ಹೊತ್ತು ಬಚ್ಚಿಟ್ಟುಕೊಂಡಿದ್ದು, ಬಲವಂತವಾಗಿ ಕೇಳಿದಾಗ ಅಳುತ್ತಾ ಆ ಮೂರು ಮಂದಿಯೂ ಸಮುದ್ರದಲ್ಲಿ ಮುಳುಗಿ ಸತ್ತುಹೋದರೆಂದು ನಡೆದ ವೃತ್ತಾಂತವನ್ನೆಲ್ಲಾ ವಿವರಿಸಿದನು ಮರುದಿನ ಆ ಹುಡುಗರ ಶವಗಳು ಅಲೆಯಿಂದ ಬಡಿದು ತೀರಕ್ಕೆ ಬಂದುಬಿದ್ದಿದ್ದು ಸಿಕ್ಕಿದವು

* * *

ಕಲ್ಕತ್ತಾ ಪಟ್ಟಣದಲ್ಲಿ ಹೈಕೋರ್ಟು ಸ್ಥಾಪನೆಯಾಗಿ 50 ಸಂವತ್ಸರಗಳಾದದ್ದರಿಂದ ಈ ಅರ್ಧಶತಮಾನೋತ್ಸವವನ್ನು ಚೀಫ್ ಜಡ್ಜಿ ರಾದ ಸರ್ ಲಾರೆನ್ಸ್ ಜಂಕಿನ್ಸ್‌ಯವರು ತಮ್ಮ ಬಂಗಲೆಯಲ್ಲಿ ಕಳೆದ ವಾರ ನಡಿಸಿದರು ಕಲ್ಕತ್ತೆಯಲ್ಲೂ ಸುತ್ತುಮುತ್ತಿನ ಪ್ರಾಂತ್ಯಗಳಲ್ಲೂ ಇರುವ ಜಡ್ಜಿಗಳೂ ವಕೀಲರೂ ಇತರ ದೊಡ್ಡಮನುಷ್ಯರೂ ಸುಮಾರು ೩50 ಜನಗಳವರೆಗೆ ಸೇರಿ ದಿವ್ಯವಾದ ವಿಜಯೋತ್ಸವವನ್ನು ಆಗ ಮಾಡಿದರು ಇಂಗ್ಲಿಷ್ ಪ್ರಭುತ್ವವು ನ್ಯಾಯಸ್ಥಾನಗಳಲ್ಲಿ ನಿಷ್ಪಕ್ಷಪಾತವಾದ ತೀರ್ಮಾನಗಳನ್ನು ಮಾಡುತ್ತಿರುವುದರಿಂದಲೇ ಚಿರಾಯುವಾಗಿಯೂ ಅಭಿವೃದ್ಧಿಹೊಂದುತ್ತಲೂ ಇದೆ ಎಂದು ಆ ಮಹನೀಯರೆಲ್ಲಾ ಅನುಮೋದಪಟ್ಟರು

* * *

ಕಳೆದ ವಾರ ಬಂಗಾಳಾ ಗವರ್ನರವರು ಡಾರ್ಜಿಲಿಂಗ್ ಪಟ್ಟಣದಿಂದ ಕಲ್ಕತ್ತೆಗೆ ರೈಲಿನಲ್ಲಿ ದಯಮಾಡುತ್ತಿದ್ದಾಗ ಅವರಿದ್ದ ರೈಲ್ ಗಾಡಿಯನ್ನು ಕೆಡವಿ ಅನಾಹುತವನ್ನುಂಟುಮಾಡಬೇಕೆಂದೋ ಇನ್ಯಾವ ಕಾರಣಕ್ಕಾಗಿಯೋ ಆ ರೈಲ್ ರಸ್ತೆಗೆ ಅಡ್ಡಲಾಗಿ ಬಂಡೆಗಳನ್ನು ತಂದು ಹಾಕಿದ್ದರು ದೇವರ ದಯದಿಂದ ಗಾಡಿ ನಡಿಸುವವನು ದೂರದಿಂದ ಅದನ್ನು ನೋಡಿ ಸಿಲ್ಲಿಸಿ, ಆ ಅಡಚಣೆಯನ್ನು ತಪ್ಪಿಸಿದನು ಪೋಲೀಸಿನವರಿಗೆ ಈ ವಿಚಾರ ತಿಳಿದಾಗ ಅವರು ಆ ಪ್ರಾಂತ್ಯ ಹೋಗಿ ಅಲ್ಲಿ ಸಿಕ್ಕಿದ ಮೂರು ಮಂದಿ ಹಿಂದುಗಳನ್ನೂ ಇಬ್ಬರು ಮಹಮದೀಯರನ್ನೂ ದಸ್ತಗಿರಿ ಮಾಡಿ, ಆ ಹುಡುಗರ ನಡವಳಿಕೆಯನ್ನು ವಿಚಾರಿಸುತ್ತಿದಾರೆ ಈಚೆಗೆ ಅವರನ್ನು ಬಂಧನದಿಂದ ಖುಲಾಸ್ ಮಾಡಿದ್ದರೂ ಅವರ ಮೇಲೆ ಇನ್ನೂ ಅನುಮಾನ ಪರಿಚ್ಛೇದವಾಗಲಿಲ್ಲ

* * *

ಲಾಹೋರ್ ಪಟ್ಟಣದಲ್ಲಿ ಒಬ್ಬ ಪಠಾಣ್ ಕಳ್ಳನು ರೈಲ್ವೆ ಪ್ರಯಾಣಸ್ಥರ ಜೇಬಿಗೆ ಕೈಹಾಕಿ ಶೋಧಿಸುತ್ತಿದ್ದದ್ದನ್ನು ವಾಹಿ ಎಂಬ ರೈಲ್ವೆ ಪೋಲೀಸಿನವನು ಕಂಡು ಅವನನ್ನು ಹಿಡಿಯಬೇಕೆಂದು ಅಟ್ಟಿಕೊಂಡು ಹೋಗಿ ಕೈಲಿದ್ದ ದೊಣ್ಣೆಯಿಂದ ಕಳ್ಳನ ತಲೆಯ ಮೇಲೆ ಹೊಡೆದನು ಪಠಾಣನು ತಿರುಗಿಕೊಂಡು ದೊಡ್ಡ ಚಾಕುವಿನಿಂದ ಪೋಲೀಸಿನವನನ್ನು ಬಲವಾಗಿ ತಿವಿದು ಘೋರ ಗಾಯ ಮಾಡಿದನು ಪೋಲೀಸಿನವನು ತನ್ನ ಪ್ರಾಣ ಹೋಗುತ್ತಿದ್ದರೂ ಲಕ್ಷ್ಯಮಾಡದೆ ಆ ಕಳ್ಳನನ್ನು ಬಿಡದೆ ಬಲವಾಗಿ ಹಿಡಿದು ಎಟ್ಟನು ಅಷ್ಟರೊಳಗೇ ಇತರರು ಹೋಗಿ ಕಳ್ಳನನ್ನು ಹಿಡಿದುಕೊಂಡರು ಆ ಪೋಲೀಸಿನವನನ್ನು ಹೊತ್ತುಕೊಂಡು ಹೋಗಿ ಆಸ್ಪತ್ರೆಯಲ್ಲಿಟ್ಟು ಉಪಚಾರ ಮಾಡಿದರೂ ಪ್ರಯೋಜನವಾಗಲಿಲ್ಲ ಅವನು ಸತ್ತುಹೋದನು ಕಳ್ಳನನ್ನು ಹಿಡಿಯುವುದರಲ್ಲಿ ತನ್ನ ಪ್ರಾಣವನ್ನೇ ಕಳೆದುಕೊಂಡ ಈ ಪೋಲೀಸಿನವನ ಕರ್ತವ್ಯ ಪರಿಜ್ಞಾನವು ಸ್ತೋತ್ರಾರ್ಹವಾಗಿದೆ

* * *

ಬಂಗಾಳಾ ಸರ್ಕಾರದಲ್ಲಿ ರಾಮಸದಾಮುಖರ್ಜಿ ಎಂಬಾತನು ಪೋಲೀಸ್ ಇಲಾಖೆಯಲ್ಲಿ ಹೆಡ್ ಕಾನ್‌ಸ್ಟೇಬಲ್ ಕೆಲಸದಿಂದ ಪೋಲೀಸ್ ಸೂಪರಿನ್‌ಟೆಂಡೆಂಟ್ ಕೆಲಸಕ್ಕೆ ಹತ್ತಿ ಇಪ್ಪತ್ತೊಂಭತ್ತು ವರುಷ ಬಹಳ ಒಳ್ಳೆ ಸರ್ವಿಸ್ ಮಾಡಿ ಈಗ ತಾನೇ ಪೆನ್‌ಷನ್ ಪಡೆದನು ಈತನ ಕಾರ್ಯದಕ್ಷತೆಯನ್ನೂ ಸಾಮರ್ಥ್ಯವನ್ನೂ ಮೆಚ್ಚಿಕೊಂಡು ಬಂಗಾಳಾ ಗವರ್ನ್‌ಮೆಂಟಿನವರು ಆತನಿಗೆ ವರುಷಕ್ಕೆ ೨೧೩೫ ರೂಪಾಯಿ ಹುಟ್ಟುವಳಿ ಆಗುವಂಥಾ ಮೂರು ಗ್ರಾಮಗಳನ್ನು ಜಹಗೀರಿ ದಯಪಾಲಿಸಿ ಅದನ್ನು ಆತನು ಅನುಭವಿಸುತ್ತಾ ಬರತಕ್ಕದ್ದೆಂದೂ, ಆತನ ತರುವಾಯ ಆತನ ಮಕ್ಕಳು ಅರೆವಾಸಿ ಜೋಡಿಕೊಟ್ಟು ಅನುಭವಿಸತಕ್ಕದ್ದೆಂದೂ ಹುಕುಂ ಕೊಟ್ಟಿರುತ್ತಾರೆ ಇದಲ್ಲದೆ ಆತನಿಗೆ ರಾಯಿ ಬಹದೂರ್ ಎಂಬ ಬಿರುದನ್ನೂ ದಯಪಾಲಿಸಿರುವರು ಬಂಗಾಳಾದಲ್ಲಿ ರಾಜದ್ರೋಹಕರವಾದ ಕೂಟಗಳನ್ನು ಅಣಗಿಸಿ ಅರಾಜಕ ಕೃತ್ಯಗಳನ್ನು ಪ್ರಾರಂಭದಲ್ಲೇ ಪತ್ತೆಮಾಡುವುದರಲ್ಲಿ ಈ ಅಧಿಕಾರಿಯು ವಿಶೇಷ ಸಾಹಸ ಪ್ರಯತ್ನಗಳನ್ನು ಮಾಡಿದ್ದೇ ಇದಕ್ಕೆ ಕಾರಣವೆಂದು ಸರ್ಕಾರದವರು ತಿಳಿಸಿದಾರೆ

* * *

ಕಾರ್ಖಾನೆಗಳಲ್ಲಿ ಜನರಿಂದ ಕೆಲಸ ಮಾಡಿಸಿಕೊಳ್ಳುವ ವಿಚಾರದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಹೊಸ ಕಾನೂನನ್ನು ಮಾಡಿದಾರೆ ಈ ಕಾನೂನನ್ನು ಕಳೆದ ವಾರ ಬಂಗಾಳಾ ಕಾರ್ಖಾನೆಗಳಲ್ಲಿ ಜಾರಿಗೆ ತರಲಾಯಿತು ಇದುವರೆಗೆ ಕಾರ್ಖಾನೆಗಳಲ್ಲಿ ಯಜಮಾನರುಗಳು ಬೆಳಗ್ಗೆ 6 ಗಂಟೆಯಿಂದ ಸಾಯಂಕಾಲ 6 ಗಂಟೆಯ ತನಕ ಜನಗಳಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು ಹೊಸ ಕಾನೂನ್ ಪ್ರಕಾರ ಅವರು ಮಧ್ಯಾಹ್ನ ಸ್ವಲ್ಪ ಹೊತ್ತು ವಿರಾಮ ಕೊಡಬೇಕಾಗಿದೆ ಇದು ಕೂಲಿಯವರಿಗೆ ತೃಪ್ತಿಕರವಾಗಿಲ್ಲ ಕೆಲಸದ ಹೊತ್ತು ಕಡಮೆಯಾದದ್ದರಿಂದ ಕೂಲೀದರಗಳೂ ಸ್ವಲ್ಪ ಕಡಮೆಯಾಗಿರುತ್ತವೆ ಇದನ್ನು ನೋಡಿ ಕೂಲಿಜನಗಳು ಮೊದಲಿನಂತೆ ಕೆಲಸ ಮಾಡಬೇಕು, ಇಲ್ಲವೇ ಕೂಲೀದರವನ್ನು ಕಡಮೆ ಮಾಡಕೂಡದು ಎಂಬದಾಗಿ ಹೇಳಿದರು ಮ್ಯಾನೇಜರುಗಳು ಇದಕ್ಕೆ ಒಪ್ಪಲಿಲ್ಲ ಪರಿಣಾಮವೇನಾಯಿತೆಂದರೆ—೧೧ ಕಾರ್ಖಾನೆಗಳಲ್ಲಿ ಸುಮಾರು 6,000 ಕೂಲೀ ಜನಗಳು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು ಕೆಲಸ ನಡೆಯದ್ದರಿಂದ ಕಾರ್ಖಾನೆಗಳು ಮುಚ್ಚಿಹೋಗಿವೆ ಆದರೆ ಈ ಹೋರಾಟವು ಇಷ್ಟರೊಳಗೇ ಪರಿಹಾರವಾದೀತೆಂದು ಹೇಳುತ್ತಾರೆ

* * *

ಬಂಗಾಳಾ ಗವರ್ನರಾಗಿ ದಯಮಾಡಿರುವ ಲಾರ್ಡ್ ಕಾರ್ಮೈಕೇಲ್‌ಯವರು ಪ್ರಾಚೀನಕಾಲದ ದೊರೆಗಳ ನಡವಳಿಕೆಯನ್ನಿಟ್ಟುಕೊಂಡಿರುವಂತೆ ಕಂಡುಬರುತ್ತದೆ ಅವರು ಪರಿವಾರವನ್ನೆಲ್ಲಾ ಬಿಟ್ಟು ಒಬ್ಬಂಟಿಗರಾಗಿ ಬಂಗಲೆಯಿಂದ ಹೊರಟು ಮಾರ್ಕೆಟ್ಟು, ಸ್ಕೂಲು, ಅಂಗಡಿ, ಸಾವು, ಸಭೆಮನೆ, ಆಸ್ಪತ್ರೆ ಮುಂತಾದ ಕಡೆಗಳಿಗೆ ಸಾಮಾನ್ಯ ಪ್ರಜೆಯಂತೆ ಹೋಗಿ ಧಾರಣೆ ಕೇಳುವುದು, ತರಕಾರಿ ಕೊಂಡುಕೊಂಡು ತಮ್ಮ ಕೈ ವಸ್ತ್ರದಲ್ಲಿ ಕಟ್ಟಿ ಸ್ವಲ್ಪದೂರ ಹಿಡಿದುಕೊಂಡು ಎರಚಿಬಿಡುವುದು, ಸ್ಕೂಲ್ ಸಮಾಜಗಳಲ್ಲಿ ನಡೆಯುವ ವಿಷಯಗಳನ್ನು ಪರೀಕ್ಷಿಸುವುದು, ಮೂರನೇ ತರಗತಿಯ ರೈಲ್‌ಗಾಡಿಯಲ್ಲಿ ಪ್ರಯಾಣಮಾಡುವುದು, ಆಸ್ಪತ್ರೆಯೊಳಗಿರುವ ರೋಗಿಗಳ ಬಳಿ ಕುಳಿತು ಅವರ ಯೋಗಕ್ಷೇಮಾದಿಗಳನ್ನು ವಿಚಾರಿಸುವುದು, ಹೀಗೆಲ್ಲಾ ಮಾಡುತ್ತಿದಾರೆ ಕೋರ್ಟು ಕಚೇರಿಗಳಿಗೆ ತಿಳಿಸದೇನೆ ಹೋಗಿ ಅಲ್ಲಲ್ಲಿ ನಡೆಯುವ ಕಾರುಬಾರುಗಳನ್ನು ಅವಲೋಕಿಸಿ ಮಾಡಿ ಬರುತ್ತಾರೆ ಈ ರೀತಿಯಾಗಿ ಅವರು ವರ್ತಿಸುತ್ತಿರುವುದರಿಂದ ಕಲ್ಕತ್ತಾ ಪಟ್ಟಣವೇ ಮೊದಲಾದ ಸ್ಥಳಗಳಲ್ಲಿ ಅಧಿಕಾರಿಗಳೆಲ್ಲರಿಗೂ ಬಹಳ ಚಟುವಟಿಕೆಯುಂಟಾಗಿದೆ ಎಂದೂ, ಎಲ್ಲಾ ಕಡೆಗಳಲ್ಲೂ ಕೆಲಸಗಳು ಕ್ರಮವಾಗಿಯೂ ದಕ್ಷವಾಗಿಯೂ ನಡೆಯುವವೆಂದೂ ಅಲ್ಲಿನ ಸಂಜೀವನಿ ಎಂಬ ಪತ್ರಿಕೆಯು ತಿಳಿಸುತ್ತದೆ

ತಾಲ್ಲೋಕು ವರ್ತಮಾನಗಳು

ಫ್ರೆಂಚ್‌ರಾಕ್ಸ್ —ಮೂರು ದಿನಗಳಿಂದ ಮೋಡಗಳಾಡುತ್ತಾ ಇವೆ ಆದರೂ ಮಳೆ ಇಲ್ಲ ಜೋಳದ ಪೈರು ಒಣಗಲು ಉಪಕ್ರಮಿಸಿರುವದಲ್ಲದೆ ಭಾವಿಗಳಲ್ಲಿ ನೀರೂ ಇಲ್ಲದೆ ಕೆಲವು ಭಾಗದ ಜನರಿಗೆ ನೀರಿನ ಕಷ್ಟ ತುಂಬಾ ಇರುತ್ತೆ —ಇಲ್ಲಿನ ಸಬ್ ಡಿವಿಜನ್ ಆಫೀಸರ್ ಮ|| ಎನ್ ಕೃಷ್ಣರಾಯರಿಗೆ ಇಲ್ಲಿಂದ ಕನ್ನಂಬಾಡಿಗೂ, ಪೊ ಸೂ ಮ|| ಎ ಕೃಷ್ಣಸ್ವಾಮಿ ಐಯಂಗಾರ್ರಿಗೆ ಮದ್ದೂರಿಗೂ ವರ್ಗವಾಗಲು, ಇಲ್ಲಿನ ಸರ್ಕಾರಿ ನೌಕರರೂ, ವರ್ತಕ ಮಂಡಲಿಯವರೂ ಅಲ್ಲದೆ ಪುರಪ್ರಮುಖ ವರ್ಗದವರೂ ಸೇರಿ ಅವರುಗಳಲ್ಲಿ ತಮಗಳಿಗಿದ್ದ ಭಕ್ತಿ ವಿಶ್ವಾಸಗಳನ್ನು ತೋರಿಸುವದಕ್ಕೆ ಕಳೆದ ತಾ ೬ ನೇ ಶನಿವಾರದ ಸಾಯಂಕಾಲ ಇಲ್ಲಿನ ಕಚೇರಿಯ ಒಂದು ಹಾಲಿನಲ್ಲಿ ಒಂದು ಉತ್ಸಾಹ ಸಭೆಯನ್ನು ನಡಿಸಿದರು ಸರ್ಕಾರಿ ಮತ್ತು ಇತರೇ ಅಧಿಕಾರಿಗಳೂ ವರ್ತಕ ಸಾಹುಕಾರರೇ ಮೊದಲಾಗಿ ಬಹು ಜನರಿಂದ ಸಭೆಯು ಅಲಂಕರಿಸಲ್ಪಟ್ಟಿತ್ತು ಮೈಸೂರಿನಿಂದ ಬರಮಾಡಿಸಿಕೊಂಡ ಒಬ್ಬ ಸಂಗೀತಗಾರರು ಕೊಳಲು ಗಾನವನ್ನು ಬಹು ಸ್ವಾರಸ್ಯವಾಗಿ ನುಡಿಸಿ, ಸುಮಾರು ಒಂದುವರೆ ಘಂಟೆಯ ಕಾಲ ಸಭೆಯನ್ನು ಸಂತೋಷಪಡಿಸಿದರು ತದನಂತರ ಹಿರೋಡೆ ರಾಜ ಸಾಬರು ಸಭಾಪಕ್ಷವನ್ನು ವಹಿಸಿ, ವರ್ಗಪಟ್ಟ ಅಧಿಕಾರಿಗಳ ಗುಣಕಥನವನ್ನು ಮಾಡಿ ಅವರುಗಳಿಗೆ ಆಯುರಾರೋಗ್ಯವನ್ನೂ ಭಗವದನುಗ್ರಹವನ್ನೂ ಬಯಸಿದರು ತರುವಾಯ ಹೊಸದಾಗಿ ಇಲ್ಲಿಗೆ ಬಂದಿರುವ ಪೊ ಸೂ ಮ ಎಸ್ ಅಬ್ದುಲ್ ವಹೀದ್ ಯವರಿಗೂ, ಉಳಿದ ಆಫೀಸರಿಗೂ, ಸಭೆಗೂ ಗಂಧ ಪುಷ್ಪ ತಾಂಬೂಲಗಳು ಹಂಚಲಾಯಿತು ಶ್ರೀಮನ್ ಮಹಾರಾಜರವರಿಗೂ, ಮ|| ಎನ್ ಕೃಷ್ಣರಾಯರಿಗೂ, ಮ|| ಕೃಷ್ಣಸ್ವಾಮಿ ಐಯಂಗಾರ್ರಿಗೂ ಸಭೆಯೆಲ್ಲಾ ಏಕಧ್ವನಿಯಿಂದ ವಂದನೆ ಮಾಡಿ ಸಭೆಯನ್ನು ಬರಖಾಸ್ತು ಮಾಡಲಾಯಿತು —ಫ್ರೆಂಚ್‌ರಾಕ್ಸ್ ಹೋಬಳಿ ಹಿರೇಹಳ್ಳಿಯಲ್ಲಿ ಈ ವರುಷ ಮಳೆ ಬಾರದೆ ಕೆರೆ ಭಾವಿಗಳಲ್ಲಿ ನೀರಿಲ್ಲದೆ ಜನರಿಗೆ ತುಂಬಾ ಪೇಚಾಟವಾಗಿದೆ ರೈತರ ಕೆಲವರ ಎಲೆ ತೋಟಗಳಲ್ಲಿರುವ ಭಾವಿಗಳಲ್ಲಿ ನೀರಿದ್ದರೂ ಅವರು ಸ್ವಾರ್ಥಪರರಾಗಿರುವರು ಇತರರು ನೀರಿಗೆ ಹೋದರೆ ಮನಸ್ಸಿಗೆ ಬಂದಂತೆ ಮಾತನಾಡಿ ಅವಮಾನ ಪಡಿಸುತ್ತಲಿರುವರು ಈ ಅಸಂದರ್ಭ ಕಾಲದಲ್ಲಿ ಸರ್ಕಾರದ ಕಡೆಯಿಂದ ಒಂದು ಭಾವಿ ತೋಡಿಸಿಕೊಟ್ಟರೆ ಬಹು ಜನರಿಗೆ ಉಪಯೋಗವಾಗಿ, ಈ ಉಪಕಾರವು ಚಿರಕಾಲ ಸ್ಮರಣೆಯಲ್ಲಿರುವುದು

ಚಿಕ್ಕಬಳ್ಳಾಪುರ —ಇಲ್ಲಿನ ಲಂಡನ್ ಮಿಷನ್ ಸಭೆಯ ಸಹಾಯಕ ಬೋಧಕರಾಗಿದ್ದ ಘನ ಕೆ ಭದ್ರಪ್ಪನವರಿಗೆ ಬೆಂಗಳೂರಿಗೆ ವರ್ಗವಾದದ್ದರಿಂದ ಇಲ್ಲಿನ ಜನಗಳಿಗೆ ಮುಖ್ಯವಾಗಿ ಇಲ್ಲಿನ ಕ್ರೈಸ್ತರಿಗೆ ಬಹಳ ವ್ಯಸನವಾಗಿರುತ್ತದೆ ಇದೇ ಜೂಲೈ ೧ ನೇ ಸೋಮವಾರ ಬೆಳಗ್ಗೆ ಇಲ್ಲಿನ ಕ್ರೈಸ್ತರು ಘನ ಭದ್ರಪ್ಪನವರಿಗೆ ಅಡ್ರೆಸ್ ಒಪ್ಪಿಸುವದಕ್ಕಾಗಿ ಒಂದು ಕೂಟವನ್ನು ಏರ್ಪಡಿಸಿದರು ಅದೇ ದಿನ ಬೆಳಗ್ಗೆ ಇಲ್ಲಿ ನಡಿಸಲ್ಪಟ್ಟ ಚರ್ಚ್ ಮೀಟಿಂಗಿಗಾಗಿ ಮಂಚೇನಹಳ್ಳಿ, ದೇವನಹಳ್ಳಿ, ವಡಿಗೇನಹಳ್ಳಿ, ಪಾತಪಾಳ್ಯ ಮುಂತಾದ ಸ್ಥಳಗಳಿಂದ ಬಂದಿದ್ದ ಉಪದೇಶಿಗಳೂ, ಉಪಾಧ್ಯಾಯರುಗಳೂ ಈ ಕೂಟದಲ್ಲಿ ಭಾಗಿಗಳಾಗಿದ್ದರು ಉಪದೇಶಿಗಳಾದ ಲೂಕಯ್ಯನವರು ಕೂಟವನ್ನು ನಡಿಸಿದರು ದೇವರು ತನ್ನ ಭಕ್ತರನ್ನು ಯಾವಾಗಲೂ ಕಾಯುತ್ತಾನೆ ಎಂಬ ಸಂಗೀತವನ್ನು ಹಾಡಿದನಂತರ ಉಪದೇಶಿಗಳಾದ ಲೂಕಯ್ಯನವರು ಪ್ರಾರ್ಥನೆ ಮಾಡಿದರು ಘನ ಭದ್ರಪ್ಪನವರಿಗೂ, ಇವರ ಕುಟುಂಬ ಶ್ರೀ ರತ್ನಮ್ಮನವರಿಗೂ, ಈಗ ಅವರ ಸ್ಥಾನಕ್ಕೆ ಮಾಲೂರಿನಿಂದ ವರ್ಗವಾಗಿ ಬಂದಿರುವ ಮ| ನಾರಾಯಣಪ್ಪನವರಿಗೂ, ಇವರ ಸೌಭಾಗ್ಯವತಿಯವರಿಗೂ ಹೂವಿನ ಹಾರಗಳನ್ನು ಹಾಕಿದನಂತರ ಮ ಎಲ್ಲೀಸಯ್ಯನವರು ಅಡ್ರೆಸ್ಸನ್ನು ಓದಿದರು ಓದುತ್ತಿರುವಾಗ ಸಕಾಲಗಳಲ್ಲಿ ಘನ ಸ್ಟೋವೆಲ್ ದೊರೆಯವರು ಆತ್ಮೀಕ ಬೋಧನೆಯನ್ನೀಯುವ ೬ ಒಳ್ಳೇ ಪುಸ್ತಕಗಳನ್ನು ಘನ ಭದ್ರಪ್ಪನವರಿಗೂ, ಶ್ರೀ|| ಸುಂದರಮ್ಮನವರು ಒಂದು ಜೊತೆ ಬೆಳ್ಳಿ ಬಳೆಗಳನ್ನು ಶ್ರೀ|| ರತ್ನಮ್ಮನವರಿಗೂ ಸಭಿಕರ ಹೆಸರಿನಲ್ಲಿ ಒಪ್ಪಿಸಿದರು ತರುವಾಯ ಘನ ಭದ್ರಪ್ಪನವರೂ ಮ ನಾರಾಯಣಪ್ಪನವರೂ ಸಮಯೋಚಿತವಾದ ಉಪನ್ಯಾಸಗಳನ್ನು ಮಾಡಿ ಸಭೆಯವರನ್ನು ಆದರಿಸಿ ವಂದಿಸಿ ಪ್ರಾರ್ಥನೆ ಮಾಡಿದರು ತರುವಾಯ ಮ ಪಿ ನಾರಾಯಣಪ್ಪನವರೂ, ಮ ಸುಬ್ಬಪ್ಪನವರೂ, ಮ|| ವಾಡ್ರಾಕಯ್ಯನವರೂ, ಘನ ಸ್ಟೋವೆಲ್ ದೊರೆ ದೊರೆಸಾನಿಗಳಿಗೆ ಪುಷ್ಪ ಹಾರಗಳನ್ನು ಒಪ್ಪಿಸಿ, ಸಭೆಯಲ್ಲಿದ್ದ ಸರ್ವರಿಗೂ ಗಂಧ ಪುಷ್ಪ ತಾಂಬೂಲಾದಿಗಳನ್ನು ಹಂಚಿದರು ಅದೇ ಸಾಯಂಕಾಲ ಘನ ಭದ್ರಪ್ಪನವರು ತಮ್ಮ ಮನೆಯಲ್ಲಿ ಸಹೋದರರಿಗೆಲ್ಲ ಟೀ ಪಾರ್ಟಿ ಮಾಡಿ ಇಷ್ಟಕರವಾದ ಪದಾರ್ಥಗಳಿಂದ ತೃಪ್ತಿಪಡಿಸಿ, ಎಲ್ಲರಿಂದ ಆದರಪೂರ್ವಕವಾದ ಅಪ್ಪಣೆಯನ್ನು ಪಡೆದರು ಇದೇ ತಿಂಗಳ 12 ರಲ್ಲಿ ಘನ ಭದ್ರಪ್ಪನವರು ಕುಟುಂಬ ಸಮೇತ ಬೆಂಗಳೂರಿಗೆ ತೆರಳುವವರಾಗಿದಾರೆ

ಸೊರಬ —ಈ ತಾಲ್ಲೋಕಿನಲ್ಲಿ ಬೀಜ ಬಿತ್ತಿದ ಒಂದು ತಿಂಗಳ ವರೆಗೂ ಮಳೆ ಬೀಳಲಿಲ್ಲ ಈಗ ಸುಮಾರು 1೦ ದಿನಗಳಿಂದ ಸಾಧಾರಣ ಮಳೆ ಬರುತ್ತಾ ಇದೆ ಇನ್ನೂ ಮಳೆ ಹಿಡಿದಿರುವದಿಲ್ಲ ಅಕ್ಕಿ ರೂಪಾಯಿಗೆ 7 ಸೇರು, ರಾಗಿ 16 ಸೇರು ಜೀನಸುಗಳ ಧಾರಣೆ ಜಾಸ್ತಿಯಾಗುತ್ತಲೇ ಇರುವುದರಿಂದ ಬಡವರಿಗೂ ರೈತರಿಗೂ ಸಹಾ ಬಹು ತೊಂದರೆಯಾಗಿರುತ್ತೆ ಈಗ ಹಿಡಿದಿರುವ ಸಣ್ಣ ಮಳೆಯಿಂದ ರಸ್ತೆಯೆಲ್ಲಾ ಕೆಸರಾಗಿ ಅಲ್ಲಲ್ಲಿ ಕೊರಕಲುಗಳಿಂದಲೂ, ಕಸದ ಗುಡ್ಡೆಗಳಿಂದಲೂ, ಎಂಜಲೆಲೆಗಳಿಂದಲೂ, ರಸ್ತೆಯ ಪಕ್ಕದಲ್ಲಿಯೇ ಜನಗಳು ಮಾಡುವ ಹೇಸಿಕೆಯಿಂದಲೂ ಓಡಾಡುವ ಜನರಿಗೆ ಬಹು ಅಸಹ್ಯವನ್ನುಂಟುಮಾಡುತ್ತಿದೆ —ಇದುವರೆಗೂ ಹಗಲುಹೊತ್ತು ಕಾಣುತ್ತಿದ್ದ ಲಾಂದ್ರಾ ಕಂಬಗಳು ಇರೇ ಜಾಸ್ತಿ ಗುರ್ತಿಲಾಗಾಯ್ತು ರಾತ್ರಿಯಲ್ಲಿಯೂ ಸ್ವಲ್ಪ ಹೊತ್ತಿನವರೆಗೆ ಕಾಣುವು

ದಕ್ಕಿಕೊಂಡಿವೆ. ಈ ವಿಷಯಗಳಲ್ಲಿ ನಮ್ಮ ಅಮಲ್ದಾರ್ರವರು ತಕ್ಕ ಸಹಾಯ ತೆಗೆದುಕೊಳ್ಳುತ್ತಾ ಇದಾರೆ —ಇಲ್ಲಿಯ ಎ ವಿ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮಿ॥ ಕೆ ಅಪ್ಪರಾಯರವರು ಕಳೆದ ಜೂನ್ ಆಖೈರಿನಲ್ಲಿ ತಮ್ಮ ಕೆಲಸದಿಂದ ನಿವೃತ್ತರಾದರು. ಇವರು ಇದೇ ಸ್ಕೂಲಿನಲ್ಲಿ ಈಗ ಇಪ್ಪತ್ತೈದು ವರುಷಗಳಿಂದ ಅಸಿಸ್ಟೆಂಟ್ ಮಾಸ್ಟರಾಗಿಯೂ ಅನಂತರ ಹೆಡ್ ಮಾಸ್ಟರಾಗಿಯೂ ಇದ್ದರು ಇಲ್ಲಿಗೆ ಇವರು ಬಂದಾಗ್ಗೆ ಇದು ಕನ್ನಡ ತಾಲೂಕು ಬ್ರಾಂಚ್ ಸ್ಕೂಲ್ ಆಗಿತ್ತು ಇವರ ಸಾಹಸದಿಂದಲೂ ಶ್ರದ್ಧೆಯಿಂದಲೂ ಎ ವಿ ಸ್ಕೂಲ್ ಆಯಿತು ಸಬ್ಕಲೆಕ್ಟರ ಒಂದು ಹೊಸ ಕಟ್ಟಡವನ್ನು ಕೂಡ ಮಾಡಿಸಿದರು ಇವರು ಬಹು ಉದಾರಿಗಳು, ಸತ್ಯಸಂಧರು ಮತ್ತು ಕೆಲಸದಲ್ಲಿ ಬಹು ಶ್ರದ್ಧೆಯುಳ್ಳವರು ಇಂಥಾ ಮಹನೀಯರನ್ನು ಇಲ್ಲಿಯ ಅ॥ ಮಾಸ್ಟರುಗಳು ಇದೇ ತಾ ೩ರಲ್ಲಿ ಸ್ಕೂಲಿಗೆ ಬರಮಾಡಿಕೊಂಡು ಊರಿನ ದೊಡ್ಡದೊಡ್ಡ ಅಧಿಕಾರಿಗಳನ್ನೂ ಮರ್ಚೆಂಟ್ ಗುಂಟರುಗಳನ್ನೂ ಸೆಟ್ಟಿ ಸಾಹುಕಾರರನ್ನೂ ಸಹಾ ಸೇರಿಸಿ ಸಭೆ ನಡಿಸಿದರು. ಮೊದಲು ಬಾಲಕರಿಂದ ಶ್ರೀಮದಿಂದಿಯಾ ಚಕ್ರವರ್ತಿಯವರ ಮತ್ತು ಶ್ರೀಚಾಮರಾಜೇಂದ್ರರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು ನಂತರ ಅ॥ ವಿ॥ ಶ್ರೀನಿವಾಸರಾಯರು ಸ್ಕೂಲ್ ರಿಪೋರ್ಟನ್ನು ಓದಿದರು ರೆ॥ ಗು॥ ಶ್ರೀನಿವಾಸರಾಯರು ಇಂಗ್ಲೀಷಿನಲ್ಲಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ರೇಂಜರ್ ಮಿ॥ ವಾಸುದೇವರಾಯರೂ ಎ॥ ಇ॥ ಮಿ॥ ಆನಂದರಾಯರವರೂ ಇವರ ಗುಣ ಕಥನವನ್ನು ಮಾಡಿದರು. ನಂತರ ಸಭಿಕರಿಗೆ ಕರ್ಣಾನಂದವಾಗುವಂತೆ ಸಂಗೀತ, ಲಂಪಸ್ಯ, ಮಂಗಳಾಚರಣೆಗಳು ನಡೆದ ಮೇಲೆ ಸಭೆಯಲ್ಲಿ ಹಾರ ಹುರಿಯು ಗಂಧ ತಾಂಬೂಲ ಸಹಾ ಹಂಚಿ ಮಿ॥ ಟಿ ಅಪ್ಪರಾಯರವರಿಗೆ ಮಾಸ್ತರುಗಳಿಂದಲೂ, ಅವರಿಂದ ಅಭಿವೃದ್ಧಿ ಹೊಂದಿದ ವಿದ್ಯಾರ್ಥಿಗಳಿಂದಲೂ ಉಡುಗೊರೆಯಾಗಿ, ಒಂದು ಶಾಲು, ಒಂದು ಬೆಳ್ಳಿಯ ಬಟ್ಟಲೂ ಸಹಾ ಕೊಡಲ್ಪಟ್ಟಿತು ಕಡೆಗೆ ಮಿ॥ ಟಿ ಅಪ್ಪರಾಯರು ಸಭಿಕರಿಗೆ ವಂದನೆಯನ್ನು ಅರ್ಪಿಸಿದರು ಬಾಲಕರಿಂದ ತಾವು ಹಂಚಲ್ಪಟ್ಟ ಸಿಹಿಯನ್ನು ಬರಹಿಸುತ್ತಾ, ಅವರನ್ನು ಬಹು ವಿಜೃಂಭಣೆಯಿಂದ ಮನೆಯ ತನಕ ಸಾಗಕಳುಹಿಸಿದರು ಇಂಥಾ ಮಹನೀಯರಿಗೆ ಪರಮಾತ್ಮನು ಬಹುಕಾಲ ಆರೋಗ್ಯಾದಿಗಳನ್ನಿತ್ತು ವಿಶ್ರಾಂತಿಸುಖವನ್ನು ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸುತ್ತೇವೆ ಮುಂದೆ ಇವರ ಸ್ಥಾನಕ್ಕೆ ಬರುವ ಹೆಡ್ ಮಾಸ್ಟರವರೂ ಕೂಡ ಇವರ ಮೇಲ್ಪಂಗ್ತಿಯನ್ನನುಸರಿಸಿ ಕೀರ್ತಿ ಪಡೆಯುವರೆಂದು ಆಶಿಸುತ್ತೇವೆ ಇಲ್ಲಿಯ ಆಸ್ಪತ್ರೆ ವಿಷಯದಲ್ಲಿ ಜನಗಳು ಬಹು ಉದಾಸೀನರಾಗಿದಾರೆ ಈ ತಾಲೂಕಿಗೆ ಅಕ್ಟಿಂಗಾಗಿ ಶಿರಸ್ತೇದಾರ್ ಮಿ॥ ಮಾಧವರಾಯರವರು ಬಂದು ಬಹು ಸ್ವಲ್ಪ ದಿನಗಳಾದಾಗ್ಯೂ ಬಹು ಚಟುವಟಿಕೆಯಿಂದ ಕೆಲಸ ಮಾಡುತ್ತಿರುವುದರಿಂದ ಜನಗಳ ಪ್ರೀತಿಗೆ ಪಾತ್ರರಾಗಿದಾರೆ ಇವರು ಈ ಊರಿನಲ್ಲಿ ರೀಡಿಂಗ್ ರೂಂ ಏರ್ಪಡಿಸಬೇಕೆಂದು ಪ್ರಯತ್ನಪಡುತ್ತಿರುವುದಾಗಿ ಕೇಳುತ್ತೇವೆ ಇವರ ಪ್ರಯತ್ನವು ನೆರವೇರಿದಲ್ಲಿ ಪುರಾಭಿವೃದ್ಧಿಯಾಗುವುದಕ್ಕೆ ಮಾರ್ಗವಾಗುವುದೆಂದು ಕೋರಲ್ಪಟ್ಟಿದೆ.

ವಿಶೇಷ ವೃತ್ತಾಂತಗಳು

ಅಮೇರಿಕಕ್ಕೆ ಸೇರಿದ ಕಾನೆಕ್ಟಿಕಟ್ ಎಂಬ ಸ್ಟೇಷನ್ನಲ್ಲಿ ಜನಗಳು ಭರ್ತಿಯಾಗಿದ್ದ ಒಂದು ರೈಲ್ ಗಾಡಿಯು ನಿಂತಿತ್ತು ಒಂದು ಎಕ್ಸ್‌ಪ್ರೆಸ್ ಗಾಡಿಯು ಬಹು ವೇಗವಾಗಿ ಹೋಗಿ ಅದರ ಹಿಂಬಗಕ್ಕೆ ಬಡಿದು ಅನಾಹುತವಾಯಿತು. ನಾಲ್ವತ್ತು ಜನರು ಮೃತಪಟ್ಟರು ಐವತ್ತು ಮಂದಿಗೆ ಗಾಯಗಳಾದವು

* * *

ಮಿ ೨ ರಬ್ಬಿಯು ಹರ್ಟಲ ಎಂಬ ಕಾರೀಗಾರನು ಒಂದೇ ರೈಲ್ ಕಂಬಿಯ ಮೇಲೆ ಬಹು ವೇಗವಾಗಿ ಹೋಗುವಂಥಾ ಗಾಡಿಗಳನ್ನು ರಚಿಸುವುದಾಗಿ ಲಂಡನ್ ಪಟ್ಟಣದಲ್ಲಿ ಹೇಳಿದನು ಸ್ವಿಸ್ ಎಂಬ ಊರಿನಿಂದ ಮಾಂಟೆ ಕಾರ್ಲೊ ತನಕ ಮೊದಲು ಆ ರೈಲನ್ನು ಹಾಕುವನು ಇದು ಮುಂದಿನ ವರುಷದ ಅಂತ್ಯದೊಳಗೆ ಪೂರ್ತಿ ಸಿದ್ಧವಾಗುವದು ಈ ರೈಲ್ ಕಂಬಿಯ ಮೇಲೆ ಗಾಡಿಗಳು ಗಂಟೆಗೆ ೧೦೦ರಿಂದ ೧೫೦ ಮೈಲಿಯ ಪ್ರಕಾರ ಓಡುವವಂತೆ

* * *

ಹಾಂಕಾಂಗ್ ಪಟ್ಟಣದಲ್ಲಿ ಗವರ್ನರಾಗಿರುವ ಸರ ಫ್ರಾನ್ಸಿಸ್ ಮೇಯವರು ಕಳೆದ ವಾರ ಇಂಗ್ಲೀಷ ಸೈನ್ಯದ ಜನರನ್ನು ಸಹಾ ಬಳಸಿ ಒಂದು ಕಾರ್ಟನ್ನು ಮೇಲೆ ಕುಳಿತುಕೊಂಡರು ಒಬ್ಬ ಚೀನೀಯವನು ಗವರ್ನರ ಬಳಿಗೆ ಓಡಿಹೋಗಿ ಅವರಿಗೆ ಗುರಿಯಿಟ್ಟು ಒಂದು ಗುಂಡು ಹೊಡೆದನು ಗುಂಡು ಅವರಿಗೆ ತಗಲದೆ ಪಕ್ಕದಲ್ಲಿದ್ದ ಒಬ್ಬ ಸಾರ್ಜೆಂಟು ಕೂಡಲೇ ನುಗ್ಗಿ ಅವನನ್ನು ಹಿಡಿದು ಕಟ್ಟಿಹಾಕಿಸಿಕೊಂಡನು ಇಂಗ್ಲೀಷ್ ಜನರ ಮೇಲಣ ದ್ವೇಷದ ದೆಸೆಯಿಂದ ಅವನು ಈ ಅತ್ಯಾಚಾರ ನಡಿಸಿದನೆಂದು ಹೇಳುತ್ತಾರೆ

ಈಜಿಪ್ಟ್ (ಮಿಸರ) ರಾಜ್ಯದಲ್ಲಿ ಸುಲ್ತಾನರಾದ ಖೆಡೈವ್ ರಾಜರನ್ನೂ, ರಾಜ್ಯಭಾರವನ್ನು ನಡೆಸುತ್ತಿರುವ ಲಾರ್ಡ್ ಕಿಚನರ್‌ಯವರನ್ನೂ, ಪ್ರಧಾನ ಮಂತ್ರಿಯನ್ನೂ ಕೊಂದುಬಿಡಬೇಕೆಂದು ಸ್ವದೇಶೀ ಮಹಮದೀಯರು ಭಯಂಕರ ದುಷ್ಟ ಯೋಜನೆಯ, ಈಜಿಪ್ಟಿನಲ್ಲೆಲ್ಲಾ ಈ ಮರ್ಮ ಸಂಘಗಳು ಇರುವಂತೆಯೂ ತಿಳಿದು ಬಂದಿದೆ ಸರ್ಕಾರದವರು ಆರಾಬಿ ಗುಂಪಿನವರಲ್ಲಿ ನಾಲ್ಕು ಜನರನ್ನು ದಸ್ತಗಿರಿ ಮಾಡಿದಹಾಗೂ, ಅವರ ಬಳಿಯಲ್ಲಿ ಬಹು ದುಷ್ಟವಾದ ಹಲವು ಕಾಗದ ಪತ್ರಗಳು ಸಿಕ್ಕಿರುವಂತೆಯೂ ಪ್ರಕಟವಾಗಿದೆ ಲಾರ್ಡ್ ಕಿಚ್ನರ್‌ಯವರು ಕಳೆದ ವಾರ ಈಜಿಪ್ಟಿನಿಂದ ಲಂಡನ್ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿರುತ್ತಾರೆ

* * *

ಲಂಡನ್ ಪಟ್ಟಣದ ಬಂದರ್ ಆರೋಗ್ಯ ವೈದ್ಯರಾದ ಡಾ॥ ಹರ್ಬರ್ಟ್ ವಿಲ್ಲಿಯಂಸ್ ಎಂಬವರು ಸಮುದ್ರತೀರದಲ್ಲಿ ಸಾಮಾನ್ ಭರ್ತಿಯಾಗಿರುವಂಥಾ ಭಾರೀ ಉಗ್ರಾಣ ಮನೆಗಳನ್ನೆಲ್ಲಾ ಹುಡುಕಿಸಿದ್ದರಲ್ಲಿ ಸಿಕ್ಕಿದ ೧,೫೭೦ ಇಲಿಗಳನ್ನು ಪರೀಕ್ಷೆ ಮಾಡಿದರು ಆ ಪೈಕಿ ಒಂದೇ ಒಂದು ಇಲಿಯು ಪ್ಲೇಗ್ ಕ್ರಿಮಿ ಪೀಡಿತವಾಗಿತ್ತೆಂದು ತಿಳಿದು ಬಂದಿದೆ ಕಳೆದ ವರುಷ ಲಂಡನ್ ಪಟ್ಟಣಕ್ಕೆ ಇತರ ಪ್ರಾಂತ್ಯಗಳಿಂದ ಹೋಗಿ ತಲಪಿದ ಯಾವ ಜಹಜಿನಲ್ಲಾಗಲಿ ಹಡಗಿನಲ್ಲಾಗಲಿ ಪ್ಲೇಗಿನ ಸುಳಿಯು ಕಾಣಲಿಲ್ಲವೆಂದು ಪ್ರಕಟಮಾಡಿದಾರೆ ೧೯೦೧ ನೇ ಫೆಬ್ರವರಿ ಲಾಗಾಯಿತು ಆ ರೇವಿನ ಉಗ್ರಾಣಗಳನ್ನು ಶೋಧನೆಮಾಡುತ್ತಾ ಬಂದದ್ದರಲ್ಲಿ ಇದುವರೆಗೆ ಸಿಕ್ಕಿದ ೧,೫೧೫,೨೫೨ ಇಲಿಗಳನ್ನು ಕೊಂದು ಹಾಕಿರುವರು

* * *

ಜರ್ಮನ ರಾಜ್ಯದ ವರ್ತಕನಾದ ಹಿಂಕೆಲ್ ಎಂಬ ಐಶ್ವರ್ಯವಂತನು ರಷ್ಯಾರಾಜ್ಯಕ್ಕೆ ಸೇರಿದ ಮಾಸ್ಕೋ ಪಟ್ಟಣದಲ್ಲಿ ವಾಸಮಾಡಿಕೊಂಡು ವ್ಯಾಪಾರ ನಡಿಸುತ್ತಾ ಇದ್ದನು ಈತನು ಕಾಲವಾಗಿ, ತನ್ನ ಆಸ್ತಿಯಲ್ಲಿ ೭೫ ಲಕ್ಷ ರೂಪಾಯನ್ನು ತನ್ನ ಬಳಿ ಕೆಲಸಮಾಡುತ್ತಿದ್ದ ನೌಕರರುಗಳಿಗೆಲ್ಲಾ ಹಂಚಿಕೊಡಬೇಕೆಂದು ಮರಣಶಾಸನವನ್ನು ಬರೆದಿಟ್ಟಿದಾನೆ ಅವರೆಲ್ಲಾ ತಮ್ಮ ತಮ್ಮ ಪಾಲಿನ ಇನಾಮನ್ನು ತೆಗೆದುಕೊಳ್ಳದೆ ಮೃತನು ನಡಿಸುತ್ತಿದ್ದ ವ್ಯಾಪಾರವನ್ನೇ ಅಭಿವೃದ್ಧಿ ಮಾಡುವುದಕ್ಕೆ ಕೊಟ್ಟು, ತಮ್ಮ ಪೈಕಿ ಒಂದು ಮರ್ಕೆಂಟೈಲ್ ಸಹಾಯಕ ಸಂಘವನ್ನು ಸ್ಥಾಪಿಸಿಕೊಂಡಿದಾರೆ ಈ ವ್ಯಾಪಾರದಲ್ಲಿ ಹುಟ್ಟುವ ಆಗುವ ಲಾಭದಿಂದ ಮೃತನು ನಡಿಸುತ್ತಿದ್ದ ಧರ್ಮಕಾರ್ಯಗಳನ್ನೆಲ್ಲಾ ಈ ಸಂಘದವರು ನಡಿಸಿಕೊಂಡು ಬರುವುದಕ್ಕೆ ನಿಶ್ಚಯಿಸಿಕೊಂಡಿದಾರೆ

* * *

ಜರ್ಮನ ರಾಜ್ಯಾಂಗವಾದ ಬೇಡನ್ ಎಂಬ ಆಧಿಪತ್ಯದಲ್ಲಿ ಕಾನ್ಸ್‌ಟನ್ಸ್ ಎಂಬ ದೊಡ್ಡ ಕೆರೆ ಇದೆ ಐಶ್ವರ್ಯವಂತನಾದ ಒಬ್ಬ ಜರ್ಮನಿಯವನು ಈಚೆಗೆ ಈ ಕೆರೆಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನು ಸುಂಕದ ಕಟ್ಟೆಯ ಅಧಿಕಾರಿಗೆ ಆ ಕೆರೆಯಲ್ಲಿ ಒಂದು ಸೀಸೆ ಸಿಕ್ಕಿತು ಅದನ್ನು ಒಡೆದು ನೋಡಿದಾಗ ಒಂದು ಕಾಗದವೂ ೬ ೨೫೦ ರೂಪಾಯಿನ ಕರೆನ್ಸಿ ನೋಟುಗಳೂ ಇದ್ದು ಸಿಕ್ಕಿದವು ಆ ಕಾಗದವನ್ನು ಓದಿ ನೋಡುವಲ್ಲಿ ಮೇಲ್ಕಂಡ ಆತ್ಮಹತ್ಯ ಮಾಡಿಕೊಂಡ ಐಶ್ವರ್ಯವಂತನು — ಈ ಸೀಸೆಯನ್ನು ಕಂಡು ಒಡೆದವನಿಗೆ ೭೫೦ ರೂಪಾಯೂ, ತನ್ನ ಶವವನ್ನು ಕಂಡುಹಿಡಿದವನಿಗೆ ೧,೫೦೦ ರೂಪಾಯೂ ಬಹುಮಾನ ಕೊಡಬೇಕು ಎಂದು ಬರೆದಿದ್ದನು ಈಗ ಬೆಸ್ತರನೇಕರು ಆತನ ಶವವನ್ನು ಹುಡುಕುವುದಕ್ಕಾಗಿ ಆ ಕೆರೆಯ ಬಳಿಯ ಮೇಲೆ ಕಾದಿರುತ್ತಾರೆ

* * *

ಅಮೇರಿಕಕ್ಕೆ ಸೇರಿದ ಸಸ್ಕಾಟ್ಚವಾನ್ ಡಿಸ್ಟ್ರಿಕ್ಟಿನಲ್ಲಿ ರೆಜಿನಾ ಎಂಬ ಪಟ್ಟಣವು ಮೂರು ನಿಮಿಷಗಳಲ್ಲಿ ನಾಶವಾಯಿತು ಅಪಾರವಾದ ಮಳೆಯೂ ಸುಂಟರಗಾಳಿಯೂ ಪ್ರಾಪ್ತವಾದ್ದರಿಂದ ೫೦೦ ದೊಡ್ಡ ಬಂಗಲೆಗಳು ಮುರಿದು ಬಿದ್ದವು ಒಂದು ಯಂತ್ರವು ಮುರಿದು ಗೋದಾಮುಗಳು ಭರ್ತಿಯಾಗಿದ್ದ ಒಂದು ರೈಲ್ ಗಾಡಿಯನ್ನು ಕೆಡವಿ, ಗೋದಾಮುಗಳನ್ನು ಕೊಂದುಬಿಟ್ಟಿತು ನೂರಾರು ಜನರು ಪ್ರಾಣ ಕಳೆದುಕೊಂಡರು, ೧೦೦ ಜನಗಳಿಗೆ ಸಾವಿರ ಗಾಯಗಳಾಗಿವೆ ಪಟ್ಟಣದಲ್ಲಿ ವಿಶೇಷವಾಗಿ ವ್ಯಾಪಾರವು ನಡೆಯುತ್ತಿದ್ದ ಭಾಗವೆ ಹಾಳಾದದ್ದರಿಂದ ಸುಮಾರು ೩೨೦೦,೦೦೦ ರೂಪಾಯಿನ ಆಸ್ತಿಗಳು ನಷ್ಟವಾಗಿದೆ ಈಗ ಆ ಪಟ್ಟಣವನ್ನು ಮತ್ತೆ ಕಟ್ಟಬೇಕೆಂದು ಸಾಹಸಪಡುತ್ತಿದಾರೆ ತಾವೂ, ಅನೇಕಾನೇಕರು ಅದಕ್ಕೆ ಬೇಕಾದಷ್ಟು ದ್ರವ್ಯವನ್ನು ಒದಗಿಸುತ್ತಿದಾಗಿ ವಾಗ್ದಾನ ಮಾಡಿದಾರೆಂದೂ ಸುದ್ದಿ ಸಿಕ್ಕಿರುವುದು ಬಂದಿದೆ.

* * *

ಪ್ರಪಂಚದ ಜಹಜುಗಳಲ್ಲೆಲ್ಲಾ ಅತ್ಯಂತ ದೊಡ್ಡದೆನಿಸಿದ್ದ ಟೈಟಾನಿಕ್ ಜಹಜು ಅಟ್ಲಾಂಟಿಕ್ ಮಹಾ ಸಾಗರದಲ್ಲಿ ಮೊದಲನೆಯಸಲ ಪ್ರಯಾಣವಾಗುತ್ತಿದ್ದು ಹಿಮಗುಂಡೆಗಳಿಗೆ ಬಡಿದು ಒಡೆದುಹೋಗಿ ಅನೇಕ ಮಹನೀಯರನ್ನು ಅಕಾಲಮರಣಕ್ಕೆ ಈಡುಮಾಡಿ ಲೋಕದಲ್ಲೆಲ್ಲಾ ಅಪಾರವಾದ ಸಂತಾಪವನ್ನು ಉಂಟುಮಾಡಿತಷ್ಟೆ ಇನ್ನುಮುಂದೆ ಅಂಥಾ ಭಾರೀ ಗಾತ್ರದ ಜಹಜುಗಳನ್ನು ಕಟ್ಟುವದೇ ಈ ಅನಾಹುತದ ಬಳಿಕ ಕೆಟ್ಟಿದೆ ಈ ಹಿಂದಿನ ಪ್ರಶಸ್ತ ಕಾರೀಗಾರರಲ್ಲಿ ಎರಡು ಜಹಜುಗಳನ್ನು ಕಟ್ಟುವುದಕ್ಕೆ ಅಂದಿನ ಏರ್ಪಾಟುಗಳನ್ನು ಬಿಟ್ಟು ಬದಲಾಯಿಸಿ ಹ್ಯಾಂಬರ್ಗ ಜರ್ಮನ ರಾಜ್ಯಕ್ಕೆ ಸೇರಿದ ಕಾರೀಗಾರರಲ್ಲಿ ಇಂಪರೇಟರ್ ಅಮೇರಿಕಾ ಎಂಬ ಜಹಜುಗಳ ಕೆಲಸವು ಮುಗಿದು ಫ್ರಾನ್ಸ್ ಎಂಬ ತೇಲಾಡುವ ಸಿಟಿ ಎಂಬ ಒಂದು ಅಗಾಧವಾದ ಜಹಜನ್ನು ಸಜ್ಜುಮಾಡುತ್ತಿದಾರೆ ಇದು ಟೈಟಾನಿಕ್ ಜಹಜಿಗಿಂತ ಬಹಳ ದೊಡ್ಡದಾಗಿರುವುದು, ಇದೇ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಿ ಅಮೇರಿಕಾಕ್ಕೆ ಹೋಗಿ ಬರುವದಕ್ಕಾದ್ದಾಗಿಯೂ ಇದೆ ಈ ಹೊಸ ಜಹಜಿಗೆ ಮೂರು ಕೋಟಿ ರೂಪಾಯಿ ಖರ್ಚಾಗುತ್ತದೆ ಇದು ೯೦೧ ಅಡಿ ಉದ್ದವುಳ್ಳದ್ದು ಗಂಟೆಗೆ ೨೩ ಮೈಲಿಯಂತೆ ಸಮುದ್ರದ ಮೇಲೆ ಪ್ರಯಾಣಮಾಡಬಲ್ಲದು ಅಲ್ಲದೆ ಹಾರ್ಲೆಂಡ್ ವುಲ್ಫ್ ಎಂಬ ಇಂಗ್ಲಿಷ್ ಕಂಪೆನಿಯವರು ಅಕ್ವಿಟೇನಿಯಾ ಎಂಬ ಭಾರೀ ಜಹಜನ್ನೂ, ವೈಟ್ ಸ್ಟಾರ್ ಎಂಬ ಇಂಗ್ಲಿಷ್ ಕಂಪೆನಿಯವರು ಬ್ರಿಟಾನಿಕ್ ಎಂಬ ಜಹಜನ್ನೂ ಈಗ ತಯಾರುಮಾಡುತ್ತಿದಾರೆ ಇವೆರಡೂ ಮೇಲ್ಕಂಡ ಟೈಟಾನಿಕ್ ಜಹಜಿಗಿಂತ ಎಷ್ಟೋ ದೊಡ್ಡದಾಗಿರುವವು

ಜೂಲೈ ತಾ. ೧೧ರ ವರೆಗೆ ಬೆಲೆ ಕಡಮೆಮಾಡಿದೆ



ಜರ್ಮನ್ ಸಿದ್ಧ ಪ್ರಕೃತಿಯ ಜೇಬು ದೀಪ
ಒಳ್ಳೇದು ಬಾಳಿಕೆ ಬರುವುದು ಬಹಳ ಅಗ್ಗವಾಗಿದೆ

ಮೊದಲಿನ ಕ್ರಯ ರೂ ೨-೧೨-೦, ಈಗ ಕ್ರಯ ರೂ ೨-೧-೦ ಈ ದೀಪವನ್ನು ಜೇಬಿನಲ್ಲಿಟ್ಟುಕೊಂಡು ಹೋದ ಸ್ಥಳಕ್ಕೆ, ಒಂದ ಸ್ಥಾನಕ್ಕೆ ಹಿಂದಿರು ಬೇಟಿಗೆ ಕೊಂಡು ಬೇಕಾದ ಕಡೆ ಬೇಕಾದ ಕಾಲದಲ್ಲಿ ದೀಪ ಹೊತ್ತಿಸಬಹುದು ಎಲ್ಲಾ ಕೆಲಸಗಳಿಗೂ ಎಲ್ಲರಿಗೂ ಬಹಳ ಅವಶ್ಯವಾದುದು.

ಹೆಂಗಸರ ಬಿಳಿ ಕಡಗ (ಬ್ರೇಸ್‌ಲೆಟ್)

ಮೊದಲಿನ ಕ್ರಯ ರೂ ೧-೯-೦, ಈಗಿನ ಕ್ರಯ ರೂ ೩-೯-೦ ಎಷ್ಟು ವರುಷಗಳಾದರೂ ಮಾಸಿ ಹೋಗುವದಿಲ್ಲ ಚಿಕ್ಕದು ದೊಡ್ಡದು ಮಾಡಿಕೊಳ್ಳಬಹುದು [109-1]

ವಿಳಾಸ - ರಾಮಸ್ವಾಮಿ ಭಟ್ಟರು, ೫೧ ಗರಡಿಸ್ಟ್ರೀಟ್, ಪಾರ್ಥಸಾರಥಿ ಕೋಯಿಲ್ ಬಳಿ, ಟ್ರಿಪ್ಲಿಕೇನ್, ಮದರಾಸ್

ನಾಜೂಕಾದ ವಾಚ್ ಒಮ್ಮೆ ನೋಡಿ ಪರೀಕ್ಷಿಸಿ

ಜಂಟಲ್‌ಮೆನ್ ಪಾಕೆಟ್ ವಾಚ್
ಇದರ ಕ್ರಯ ರೂ 4 4-0 ಮಾತ್ರ
ಐದು ವರುಷಗಳ ಗ್ಯಾರೆಂಟಿ



ಇದು ಶುದ್ಧವಾದ ನಿಕಲ್ ಸಿಲ್ವರ್ ಬೆಳ್ಳಿಯಿಂದ ತಯಾರಾದದು ನೋಡುವುದಕ್ಕೆ ಬಹು ರಮಣೀಯವಾಗಿರುತ್ತೆ ಈಗಿನದಕ್ಕಿಂತ ಹೊಸದಾಗಿ ತರಿಸಿರುತ್ತೇವೆ ಸುನಿಯಾದ ಮಿನಿಟ್ ಮತ್ತು ಸೆಕೆಂಡು ಮುಳ್ಳುಗಳುಳ್ಳದು ಇದಕ್ಕೆ ವಿಶೇಷವಾದ ಬಹುಮಾನ ಸಿಗುವ ನಗದು ಬಹು ಕ್ರಮವಾದ ಸರಿಯಾದ ಕಾಲ ತೋರಿಸತಕ್ಕದ್ದು ಅನೇಕ ವರ್ಷ ಬರಲು ಬಾಳಿಕೆ ಬರುವಂಥಾದು ನಾಜೂಕಾದ ಮತ್ತು ಪ್ರಾಕ್ಟಿಯಾದ ವಾಚು ತಾಜಾ ಕೆಲಂ —ಪತಿ ಒಂದು ವಾಚ್ ಸಂಗದ ಎರಡೂ ಸಪ್ಪಾಗರ, ನಾಜೂಕಾದ ಮತ್ತು ಸುಂದರವಾದ ಗಡಿಯಾರದ ಚೈನ್ ಬಹುಮಾನವಾಗಿ ರವಾನಿಸಲ್ಪಡುತ್ತೆ

ಜಂಟಲ್‌ಮೆನ್ ಸಿಲ್ವರ್ ವಾಚ್.
ಇದರ ಕ್ರಯ ರೂ 8 8-0 ಮಾತ್ರ
ಹತ್ತು ವರುಷಗಳ ಗ್ಯಾರೆಂಟಿ.



ಇದು ಶುದ್ಧವಾದ ಬೆಳ್ಳಿ ಡಬ್ಬಿ ಮುಚ್ಚಳಗಳುಳ್ಳದು ಮುಚ್ಚಳದ ಹಿಂಭಾಗದಲ್ಲಿ ಚಿತ್ರ ಬರೆದ ನಕಾಸಿ ಕೆಲಸ ಮಾಡಿರುತ್ತೆ, ಬಹು ಗಟ್ಟಿಯಾದದು ಸರಿಯಾಗಿ ಉಪಯೋಗಿಸುತ್ತಾ ಬಂದರೆ ೨೦ ವರುಷಗಳ ಮೇಲ್ಪಟ್ಟು ಬಾಳಿಕೆ ಬರುವುದರಲ್ಲಿ ಸಂದೇಹವಿಲ್ಲ ಸಿಲ್ವರ್ ವ್ಯತ್ಯಾಸವಿಲ್ಲದಂತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ನಾವು ಇವರ ವಿಷಯವಾಗಿ ಹೆಚ್ಚು ಗರ್ವ ಮಾಡಿಗಳೂ ಮತ್ತು ಅಡ್ವರ್ಟೈಸ್ ಪ್ರಕಟನೆಗಳೂ ಹೇಳುವುದು ಅನವಶ್ಯಕ ಗಡಿಯಾರವೇ ಶಿಫಾರಸು ಮಾಡುತ್ತದೆ. [110-1]

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ —ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ ನಂ. 7, ಹೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

MELLIN'S FOOD

ಮೆಲ್ಲಿನ್ಸ್ ಆಹಾರವು
ಶಿಶುಗಳಿಗೂ ರೋಗಿಷ್ಠರಿಗೂ
ಶ್ರೇಷ್ಠವಾದ ಆಹಾರ.

ಕೈಸೋಕದ ಮಾಡಿದೆ. ಬರ್ಲಿ ಸರ್ಜ್ಯೋರ.

ಮೆಲ್ಲಿನ್ಸ್ ಆಹಾರವು ಉತ್ತಮವಾದ ಜೀರ್ಣಿಸಲು ಸುಲಭವಾದ ಪುಷ್ಟಿಕರವಾದ ದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಪುಸ್ತಕವನ್ನು ಕಳುಹಿಸುತ್ತಾರೆ.

[68-11] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thompson M.A., Proprietor and Manager, Wesleyan Mission Press Mysore 11/7/1912

REGISTERED M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು   ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು   ಕ್ರಯ ೧ ದುಡ್ಡು.

ಸಂಪುಟ ೨೬   ಮೈಸೂರು—ಸರ್ ೧೯೧೩ ನೇ ಇಸವಿ ಜೂಲೈ ತಾರೀಖು ೧೮ ನೇ ಗುರುವಾರ.   ಸಂಚಿಕೆ ೭

ಪುಕ್ಕಟೆ, ಸುಮ್ಮನೆ, ಬಿಟ್ಟಿ ಸಿಗುತ್ತದೆ.

ಪುಷ್ಕಳವಾದ ಕೂದಲು.

ಪ್ರಾಚೀನಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಕಾಸವನ್ನು ಹೊಗಳಿದರೆ ಅದು ನಿಜವಾಗಿಯೂ ಮನಸ್ಸನ್ನು ಸೆಳೆಯುವಂಥದ್ದೇ. ಸರಿ ಅವರ ಕೂದಲು ಕೊರತೆಯಾಗಲು ಕಾರಣವೇ ಇಲ್ಲ. ಕಾಮಿನಿಯಾ ಎಣ್ಣೆಯನ್ನು

ಉಪಯೋಗಿಸಿ. ಅದು ಬೋಳುತಲೆಯಲ್ಲಿ ಕೂದಲು ಬೆಳೆಸುವುದು. ಇದರ ಸ್ವಭಾವವು ಕೂದಲಿನ ಬೇರನ್ನು ತನಿವಾಡಿ ಬೆಳೆಸುವುದಾಗಿದೆ, ತಲೆಯಲ್ಲಿ ತಂಪನ್ನುಂಟುಮಾಡುವುದು. ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕುಮಾರವಾಗಿ ಪೋಷಣೆಮಾಡುತ್ತದೆ. ಅದು ಬಹು ಸುಗಂಧಮಯವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಸ್ತಿಯಾಗಿಯೂ ಬೆಳೆಯುವಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇವೆಲ್ಲ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಸಲಿಗೆಯಾಗಿವೆ.

ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುವ ಭಾಗದ ಕೂದಲ ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ಸಿಪೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ತನಿಯಿಲ್ಲದೆ ಕೂದಲು ಉದುರಿಹೋಗುತ್ತಿದೆ. ಕಾಮಿನಿಯಾ ಎಣ್ಣೆಯೇ ಅದಕ್ಕೆ ಅಗತ್ಯವಾದ ಆಹಾರ, ಇದನ್ನು ಉಪಯೋಗಿಸಿ ನೋಡಿ.

ಕ್ರಯದ ದರಗಳು 1 ಸೀಸೆಗೆ ರೂ 1, ವಿ ಪಿ ಪೋಸ್ಟೇಜ್ ಬೇರೆ 4 ಆಣೆ 3 ಸೀಸೆಗೆ ರೂ 2 1 0 ವಿ ಪಿ ಪೋಸ್ಟೇಜ್ ಬೇರೆ 7 ಆಣೆ 12 ಸೀಸೆಗೆ ರೂ 9 12 0 ವಿ ಪಿ ಪೋಸ್ಟೇಜ್ ಬೇರೆ ರೂ 1 12 0

ಅರ್ಧ ಆಣೆ ಸ್ಟ್ಯಾಂಪಿಟ್ಟು ಬರೆದವರಿಗೆ ಒಂದು ದಿನ ಉಪಯೋಗಿಸುವಷ್ಟು ಎಣ್ಣೆಯನ್ನು ಪುಕ್ಕಟೆ ಕಳುಹಿಸುತ್ತೇವೆ.

ಸುಗಂಧದ್ರವ್ಯಗಳು

ಕಾಮಿನಿಯಾ (ರೆಜಿಡ್) ಇದು ಬಹು ಮನೋಹರವಾದ ಸುಗಂಧ ಕೇದಾಗೆಯ ಅತ್ಯಂತ ಸುವಾಸನೆಯು ಖಂಡಿತವಾಗಿದೆ. ಬಹು ಪ್ರಖ್ಯಾತವು ಘಮಘಮಿಸುವುದಾಗಿದೆ. ಕ್ರಯ ಡ್ರಾಂ ಸೀಸೆಗೆ ರೂ 1-8-0



ಗುಲ್ ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತಂತ್ಯ ಶ್ರೇಷ್ಠವಾದದ್ದು ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ 1-8-0

ದಿಲ್ ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ಜಾಜಿ ಪುಷ್ಪಗಳಿಂದ ತಯಾರಿಸಿದ ಮನೋಘವಾದ ಸುಗಂಧ. ಡ್ರಾಂ ಸೀಸೆಗೆ ರೂ 1 8 0

ಸ್ಪ್ರಿಂಗ್ ಜ್ಯೂಯಲ್ (ರೆಜಿಡ್)—ವಸಂತ ಋತುವಿನ ಕಳೆ ಕೆಳಸುವ ಚಂಪಕಾ ಪುಷ್ಪದ ಅತ್ಯಂತ ಶ್ರೇಷ್ಠವೂ ಮನೋಹರವೂ ಆದ ಸುಗಂಧವೇ ಇದೆಂದು ತಿಳಿಯಿರಿ. ಕ್ರಯ ಡ್ರಾಂ ಸೀಸೆಗೆ ರೂ 1-8-0 [91-29]

ಕಾಮಿನಿಯಾ ಸುತಂಗಿ ರೂ 1 4 0, "ಕಾಮಿನಿಯಾ ಪೌಡರ್" ರೂ 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು. ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

1913 ನೇ ಇಸವಿಯ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

ಕ್ರಯ 6 ಆಣೆ 10 ಕ್ಕೆ 1 ಡಿಸ್ಕೌಂಟು ನಮ್ಮ ನೋಟ್ಸೇ ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [71-11]

2 ನೇ ಪುಸ್ತಕದ ನೋಟ್ಸು 3½ ಆಣೆ 3 ನೇ ಪುಸ್ತಕದ ನೋಟ್ಸು 1½ ಆಣೆ 4 ನೇ ಪುಸ್ತಕದ ನೋಟ್ಸು 1 ಆಣೆ 5 ನೇ ಪುಸ್ತಕದ ನೋಟ್ಸು 1 ಆಣೆ ಮೈಸೂರು ಭೂವಿವರಣೆ 1 ಆಣೆ 2 ನೇ ಕ್ಲಾಸ್ ಭೂವಿವರಣೆ 1½ ಆಣೆ

ಎನ್ ಆರ್ ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು

ಜಾರ್ಜ್ ಸಾರ್ವಭೌಮರ ಚರಿತ್ರೆ

[92-7]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ದೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಆಮೂಲಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ. ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ. ಅವರ ಛಾಯಾಚಿತ್ರವೂ ಉಂಟು. ಶ್ರೀಮನ್ ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ. ಕ್ರಯ ಪ್ರತಿ 1ಕ್ಕೆ 8 ಆ ಹಾಸಲು 1ಆ

ವಿಳಾಸ—ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಡೋಂಗರೆ ಇವರ ಬಾಲಾಮೃತ.

[115-1]

ಸಣ್ಣ ಮಕ್ಕಳಿಗೆ ಡೋಂಗರೇ ಇವರ ಬಾಲಾಮೃತವು ಬಹಳೇ ಗುಣ ಉಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಇಕ್ಕರ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಎಲುಬುಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ನಾಶವು ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ; ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯನ್ನಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸಹಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಲವು, ಜ್ವರ, ನಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98-46]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ   ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಇಂಗ್ಲೀಷನ್ನು ಕಲಿಯುವ ಪುಸ್ತಕ!   ಇಂಗ್ಲೀಷನ್ನು ಕಲಿಯುವ ಪುಸ್ತಕ!!   ಇಂಗ್ಲೀಷನ್ನು ಕಲಿಯುವ ಪುಸ್ತಕ!!!

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ. [93-11]

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ	.. ...	.	ಕ್ರಯ ರೂ ೧—೮—೦
ಎರಡನೆಯ ಪುಸ್ತಕ	.. ..		ಕ್ರಯ ರೂ ೧—೮—೦
ಮೂರನೆಯ ಪುಸ್ತಕ	... (ಅಚ್ಚಿನಲ್ಲಿದೆ)	.	ಕ್ರಯ ರೂ ೧—೮—೦

ಅಂಚೆಯ ವೆಚ್ಚವನ್ನು ಗ್ರಾಹಕರೇ ಕೊಡಬೇಕು.

ಇವುಗಳಲ್ಲಿ—ಆಂಗ್ಲಭಾಷಾ ವರ್ಣಮಾಲೆಯ A ಏ ಇಂದ Z ಜಡ್ ವರೆಗಿನ ಅಕ್ಷರಗಳನ್ನು ಗುರುತು ಹಿಡಿಯುವುದು, ಅಕ್ಷರಗಳನ್ನು ಕೂಡಿಸುವುದು, ಶಬ್ದಸಂಯೋಜನ, ಸಣ್ಣಸಣ್ಣ ವಾಕ್ಯಗಳು, ಚಿಕ್ಕ ಪುಟ್ಟಕಥೆಗಳು, ಕ್ಷೇಮಸಮಾಚಾರ ಕಾಗದಗಳು, ತಂತಿ ವರ್ತಮಾನದ ಮಾದರಿಗಳು, ಗಾದೆಗಳು, ಸಾಂಕೇತಿಕ ಶಬ್ದಗಳು, ಬಗೆಬಗೆಯಾದ ಬೇರೆಬೇರೆ ಅನೇಕ ಸಂಗತಿಗಳಲ್ಲಿ ಒಬ್ಬರಿಂದೊಬ್ಬರು ಪ್ರಶ್ನೋತ್ತರ ರೂಪವಾಗಿ ಮಾತಾಡುವ ಮಾದರಿಗಳು, ಕನ್ನಡದಿಂದ ಇಂಗ್ಲಿಷಿಗೂ—ಇಂಗ್ಲಿಷಿನಿಂದ ಕನ್ನಡಕ್ಕೂ ತರ್ಜುಮೆಮಾಡುವುದು, ವ್ಯಾಕರಣ ಸೂತ್ರಗಳು, ಕನ್ನಡ ಇಂಗ್ಲಿಷ್—ಇಂಗ್ಲಿಷ್ ಕನ್ನಡ ಡಿಕ್ಷನರಿಗಳು, ಮುಂತಾದ ಅನೇಕ ಸಂಗತಿಗಳನ್ನು ಸೇರಿಸಿದೆ. ಇಂಗ್ಲಿಷನ್ನು ಸ್ವಲ್ಪವೂ ತಿಳಿಯದವರು ಸುಲಭವಾಗಿ ತಿಳಿಯುವಂತೆ ಮೊದಲು ಇಂಗ್ಲಿಷು, ನಂತರ ಅದರ ಉಚ್ಚಾರಣೆ ಮತ್ತು ಅರ್ಥಗಳನ್ನು ಕನ್ನಡಾಕ್ಷರದಲ್ಲಿ ಪ್ರತಿಯೊಂದಕ್ಕೂ ಬರೆದಿರುವುದರಿಂದ, ಬರೆಯುವುದು—ಓದುವುದು—ಮಾತಾಡುವುದನ್ನು ಬೇರೊಬ್ಬರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು. ಅನೇಕರಿಗೆ ಉಪಯೋಗವಾಗಿ ಕೊಳ್ಳುವವರ ಸೌಕರ್ಯಕ್ಕೆ ಪುಸ್ತಕವು ಬೇರೆಬೇರೆ ಮೂರು ಭಾಗಗಳಾಗಿ ಕ್ರಯವೂ ಕಡಮೆ ಇರುವುದರಿಂದ ಈಗಾಗಲೆ ಸಾವಿರಾರು ಪುಸ್ತಕಗಳು ಖರ್ಚಾಗಿ ನಾಲ್ಕನೆಯ ಸಲ ಅಚ್ಚಾಯಿತು. ಕೆಳಗಿನ ವಿಳಾಸಕ್ಕೆ ದಯವಿಟ್ಟು ನಿಮ್ಮ ನಿಮ್ಮ ವಿಳಾಸಗಳನ್ನು ಚೆನ್ನಾಗಿ ತಿಳಿಯುವಂತೆ ಇಂತಹ ಪುಸ್ತಕವೇ ಬೇಕೆಂದು ವಿವರವಾಗಿ ಹುಟ್ಟಕ್ಷರದಿಂದ ಬೇಗ ಬರೆಯಬೇಕು!!!

ಭಾರತಿ ಸಂಪಂಗಿರಾಮು, ಪ್ರೋಪ್ರೈಟರ್—ಹೊಸಕೋಟೆ, ಡಿಸ್ಟ್ರಿಕ್ಟ್—ಬೆಂಗಳೂರು.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ (2) ಸ್ತ್ರೀಧರ್ಮ, ಸ್ತ್ರೀಬುದ್ಧಿ ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀಂದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನೇ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [5 28]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ

ಜ್ವರಶಂಕರಿ.

114 41

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ಪಾಳಿಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ಒಂದೆರಡು

ಬಾರಿ ಸೇವಿಸುವದರೊಳಗಾಗಿ ತಪ್ಪದೆ ಗುಣಪಡಿಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಜ್ವರ ಭದಲ್ಲಿಯೇ ಕೊಟ್ಟರೆ ಪ್ಲೇಗ್ ಜ್ವರವನ್ನು ಕೂಡಾ ಹಿಮ್ಮೆಟ್ಟಿಸುವದು ಬಾಟಲಿಗೆ ೧ ರೂ, ೩ ಬಾಟಲಿಗೆ ೨ ರೂ ೧೦ ಆಣೆ

ಪ್ಲಿಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ

ವಾತಮುರಾರಿ —ಇದು ತಲೆನೋವು ಉಳುಕು, ಬೀಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮನ ವಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ ೩ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ -ಬಿ ಎಸ್ ನಾಥ ಮತ್ತು ಕಂಪೆನಿ,

ವೆಪೇರಿ, ಮದರಾಸ್

ಕಾರೊನೇಷನ್ ಸಾಬೂನ್

ಅಪಾಯವಿಲ್ಲದ ರೋಮನಾಶಕ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೧೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ ನವೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ ೧ ೦ ೦, ಅಂಚೆ ಹಾಸಲು ಪ್ರತ್ಯೇಕ ನಮ್ಮ ವಿಳಾಸ — ಬಿ ಸಿ ಷಾ ಅಂಡ್ ಕಂಪೆನಿ, ೧೭೭ ಚೀನಾಬಜಾರ್ ರೋಡ್, ಮದ್ರಾಸು.

ತಾ ಕ —ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು [101]

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಶುದ್ಧವಾದ

ಸಿದ್ಧೌಷಧ ತ್ರಯವು

ಕಡಿ ಅಥವಾ ಹುಳಕಡಿ ಔಷಧವು

ಡಬ್ಬಿ 1ಕ್ಕೆ ರೂ 0 1 0 ಡಬ್ಬಿ 12ಕ್ಕೆ ರೂ 2 8 0

ಕರೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಕೈಕಂಡ ಔಷಧಿಯು ಒಂದು ದಫಾ ಔಷಧಿಯನ್ನು ಹಾಕಿದರೆ ಸಾಕು ಸಂಪೂರ್ಣ ಗುಣವುಂಟಾಗುವದು ಚರ್ಮದಲ್ಲುಂಟಾಗುವ ಕೊಳೆಯನ್ನು ಹೋಗಲಾಡಿಸಿ ದೇಹವು ಥಳಥಳಿಸುವಹಾಗೆ ಶುದ್ಧಿಯನ್ನು ಮಾಡುವುದು ಈ ಔಷಧಿ ಅಧಿಕ ಸುವಾಸನೆಯಿಂದ ಯುಕ್ತವಾದದ್ದು ದೇಹಕ್ಕೆ ತಂಪನ್ನುಂಟುಮಾಡುವದು

ವಿರೇಚನವತಿ ಬೇದಿಮಾತ್ರೆಗಳು

10 ಮಾತ್ರೆಗಳ ಡಬ್ಬಿ 1ಕ್ಕೆ ರೂ 0 10 0 ಡಬ್ಬಿ 12ಕ್ಕೆ ರೂ 6 0 0

ಉದರಸಂಬಂಧವಾದ ವ್ಯಾಧಿಗಳಿಂದಲೂ ಮಲಬಂಧದಿಂದಲೂ ಕಷ್ಟಪಡುವವರಿಗೆ ಇದು ಒಂದು ದೊಡ್ಡ ಆಶೀರ್ವಾದರೂಪವಾಗುವದು ದಿನಂಪ್ರತಿ ರಾತ್ರಿ ಮಲಗುವದಕ್ಕೆ ಮುಂಚಿತವಾಗಿ ಸೇವಿಸಿದರೆ ಹೊಟ್ಟೆಯು ಶುದ್ಧವಾಗುವದು ಎಷ್ಟು ಮಾತ್ರೆಗಳು ಸೇವಿಸಲ್ಪಡುತ್ತವೋ ಅಷ್ಟು ಸಲ ಭೇದಿಯಾಗುವದು ಆದುದರಿಂದ ಎಲ್ಲರೂ ಈ ಮಾತ್ರೆಗಳನ್ನು ಬಹಳವಾಗಿ ಅಪೇಕ್ಷಿಸುತ್ತಾರೆ ಮಾತ್ರೆಗಳು ಬಹಳ ಚಿಕ್ಕದಾಗಿರುವದರಿಂದ ಬಹಳ ಸುಲಭವಾಗಿ ಇವುಗಳನ್ನು ನುಂಗಬಹುದು ರಾತ್ರಿ ಮಾತ್ರೆಯನ್ನು ಸೇವಿಸುವದರಿಂದ ರಾತ್ರಿಯೇ ಭೇದಿಯಾಗಲಾರದು [121 18]

ರಾಜವೈದ್ಯ ನಾರಾಯಣಜೀ ಕೇಶವಜೀ,

771, ಚೇನಾ ಬಜಾರ್ ರೋಡ್, ಮದ್ರಾಸು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1 29



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬಹು ಕೆಡಿಸುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲಿಯೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 2 29

(ಸ್ಕಾಟ್ಸ್ ಇಮಲ್ಷನ್)

ಪಟ್ಟು ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ, ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

Always get the Emulsion with this mark the Fishman —the mark of the "Scott" process"

ಆಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲತ್ವಾಗಗೊಳಿಸಿ ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 29

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ಶಿಲ್ಕು ಸಿಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಬಂದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೦ ೧ ರೂ ೬ ೦, ೧ ರೂ ೪ ೦

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜರದ ಟೋಪಿಗಳು ೧ ರೂ ೧೨ ೦ ೧ ರೂ ೮ ೦ ೧ ರೂ ೬ ೦

ಉಸುಕಿನ ಟೋಪಿಗಳು ೧ ರೂ ೮ ೦, ೧ ರೂ ೬ ೦,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

WILLIAM & Co, FORT BOMBAY

ಅಮೃತಾಂಜನ್. (Regd.)

35-21

ಎಲ್ಲಾ ಬಾಮುಗಿಂತಲೂ ಅಂಜನಗಿಂತಲೂ ಶ್ರೇಷ್ಠವಾದದ್ದು ಇದರಿಂದ ವಾತ, ಸಂಧಿವಾತ, ಜುಮು, ಛಾಯ, ಉಳುಕು,

ತಲೆನೋವು, ಶಿರೋಭಾರ ಮುಂತಾದ ಎಲ್ಲಾ ತರದ ನೋವುಗಳು ಮಾತ್ರೆಯಿಂದ ನಿಲ್ಲುವದು ಬಾಟ್ಲಿ ಒಂದರ ಕಿಮ್ಮತು ೦ ೪ ೦

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಒರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ ಡಬ್ಬಿ 1ಕ್ಕೆ 0 4 0 ದಂತಮಂಜನ 0-2-0 ನೇತ್ರಾಂಜನ 0-1-0 ಸುಂದರ ತೈಲ 0 4 0

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಫೋರ್ಟ್ ಮುಂಬಯಿ.

ಗೌರ್ನಮೆಂಟ್ ಸೆಕ್ಯೂರಿಟಿ ಉಳ್ಳ ನ್ಯಾಷನಲ್ ಜೀವ ವಿಮೆ ಮತ್ತು ವಿವಾಹಸಹಾಯಕ ಫಂಡ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ವಿಜಯನಗರಂ

1 ಈ ಕಂಪೆನಿಯು ಡಾಕ್ಟರ್ ಪರೀಕ್ಷೆ ಇಲ್ಲದೆಯೂ 16 ವರುಷ ಮೊದಲುಗೊಂಡು 50 ವರುಷ ವಯಸ್ಸುಳ್ಳ ಗಂಡಸರ ಮತ್ತು ಹೆಂಗಸರ ಜೀವವನ್ನು ಮತ್ತು ಮುಂದೆ ಬರಬಹುದಾದ ಅಪಾಯಗಳನ್ನು ಇಂಡಿಯಾ ದೇಶದಲ್ಲಿರತಕ್ಕ ಇತರ ಎಲ್ಲಾ ಕಂಪೆನಿಗಳಿಗಿಂತಲೂ ಅತಿ ಸುಲಭವಾದ ದರದ ಮೇಲೂ ಮತ್ತು ಧಾರಾಳವಾದ ನಿಬಂಧನೆಗಳಿಂದಲೂ ತಿಂಗಳಿಗೆ 8 ಆಣೆ ಮತ್ತು 1 ರೂಪಾಯಿಗಳ ವಿಮೆಯನ್ನು ಮಾಡಿರುತ್ತಾರೆ ಈ ಮೇಲ್ಕಂಡ ವಿಮೆದಾರರು ಕಂಪೆನಿಗೆ ೬ ತಿಂಗಳ ವಿಮೆಯನ್ನು ಕಟ್ಟಿದ ನಂತರ ಮೃತಪಟ್ಟವರಾದರೆ ಸದರಿ ವರ್ತಮಾನವನ್ನು ಅವರ ವಾರಸುದಾರರು ಕಂಪೆನಿಯವರಿಗೆ ತಿಳಿಸಿದ ತಕ್ಷಣ ಮೊದಲನೇ ತರಗತಿಯವರಿಗೆ ಒಂದುನೂರು ರೂಪಾಯಿಗಳೂ, ಎರಡನೇ ತರಗತಿಯವರಿಗೆ 10 ರೂಪಾಯಿಗಳೂ, ಕಳ್ಳದೆ ಆದಾಗ ಕೊಡಲ್ಪಡುತ್ತೆ ಅನಂತರ ಆ ವರುಷದ ಲೆಕ್ಕಗಳು ತನಿಖೆ ಆದ ಮೇಲೆ ಅಂದರೆ ಪ್ರತಿ ವರುಷದ ಫೆಬ್ರವರಿ 8 ನೇ ತಾರೀಖಿನ ತರುವಾಯ ಮೇಲ್ಕಂಡ ವಾರಸುದಾರರಿಗೆ ಅದುವರೆಗೆ ಅದಾ ಆಗಿರುವ ಮೊಬಲಗಲ್ಲದೆ ಲೆಕ್ಕಾಚಾರದ ಪ್ರಕಾರ ಇನ್ನು ಬರತಕ್ಕ ಜಾಸ್ತಿ ಮೊಬಲಗನ್ನೂ ಅವರಿಗೆ ಕೊಡಲ್ಪಡುತ್ತವೆ ಒಂದು ವೇಳೆ ವಿಮೆದಾರರು 8 ತಿಂಗಳ ಒಳಗಾಗಿ ಮೃತಪಟ್ಟರೆ ಅವರು ಅದುವರೆವಿಗೂ ಕಂಪೆನಿಗೆ ಕೊಟ್ಟಂಥಾ ಹಣದಲ್ಲಿ ಖರ್ಚುಗಳು ಹೋಗಿ ಬಾಕಿ ಹಣವನ್ನು ಅವರ ವಾರಸುದಾರರಿಗೆ ವಾಪಸ್ ಮಾಡಲ್ಪಡುತ್ತದೆ

2 ಮದುವೆಯ ಸಹಾಯಕ ಫಂಡನ್ನು ಏರ್ಪಡಿಸಿರುತ್ತೆ ಇದಕ್ಕೆ ಸೇರತಕ್ಕ ಚಂದಾದಾರರು ಗಂಡಸರೇ ಆಗಲಿ ಅಥವಾ ಹೆಂಗಸರೇ ಆಗಲಿ ಬಾಲ್ಯದಾರಭ್ಯ 18 ಮತ್ತು 12 ವರುಷಗಳ ವಯಸ್ಸಿನ ವರೆವಿಗೂ ತಿಂಗಳು ಒಂದಕ್ಕೆ ಚಂದಾ ಮೊಬಲಗು ಒಂದು ರೂಪಾಯಿ ಪ್ರಕಾರ ಕನಿಷ್ಠ ಪಕ್ಷ 4 ತಿಂಗಳಿಗೆ ತಪ್ಪು ಇಲ್ಲದೆ ಕ್ರಮವಾಗಿ ಚಂದಾ ಮೊಬಲಗು ಪಾವತಿ ಮಾಡಿದ ಮೇಲೆ ಸದರಿ ಚಂದಾದಾರರು ಮದುವೆ ಮಾಡಿಕೊಳ್ಳುವ ಕಾಲಕ್ಕೆ ಅವರು ಕೊಟ್ಟಿರತಕ್ಕ ಚಂದಾ ಮೊಬಲಗಿಗೆ 1 ರಷ್ಟಕ್ಕೆ ಕಡಮೆ ಇಲ್ಲದೆಯೂ, 10 ರಷ್ಟಕ್ಕೆ ಜಾಸ್ತಿ ಇಲ್ಲದೆಯೂ ಮೊಬಲಗನ್ನು ಸಹಾಯ ಮಾಡಲ್ಪಡುತ್ತದೆ [98 7]

ಇಂಗ್ಲಿಷ್ ಮತ್ತು ಕನ್ನಡ ಬಲ್ಲಂಥಾ ಏಜಂಟರು ಬೇಕಾಗಿದೆ ತಪಶೀಲ್ ವಿಷಯಗಳಿಗೆ ಅರ್ಧಾಣೆ ಸ್ಟಾಂಪುಸಹಿ ಬರೆದುಕೊಳ್ಳಿ ನಮ್ಮ ವಿಳಾಸ —

ದಿ ಕಾಮರ್ಸ್ ಮ್ಯೂಚುಯಲ್ ಸಿಂಡಿಕೇಟ್, ಚೀಫ್ ಏಜಂಟ್ಸ್, (ಮೈಸೂರು ಮತ್ತು ಕೊಡಗು ಸಂಸ್ಥಾನಗಳು), ಚಿಕ್ಕಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

29—6—1912 ರಿಂದ 5—7—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	1	0	0
ಬೆಂಗಳೂರು ಡಿಸ್ಟ್ರಿಕ್ಟು	1	1	0	0
ಮೈಸೂರು ,,	3	5	8	4
ಕೋಲಾರ್ ,,	0	0	11	8
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	58	32
ಹಾಸನ ,,	11	7	11	10
ಚಿತ್ರದುರ್ಗ ,,	0	0	139	79
ಕಡೂರ್ ,,	6	1	0	0
ಶಿವಮೊಗ್ಗ ,,	2	1	100	75
ಒಟ್ಟು	23	19	327	208

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ನಿಜ ಆಷಾಢ ಶುದ್ಧ ಪಂಚಮಿ ಶುಕ್ರವಾರದಿಂದ ನಿಜ ಆಷಾಢ ಶುದ್ಧ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶಕಾರ್ಬ ಮಾಸ ತೇದಿ
19	ಶುಕ್ರ *	ಪಂಚಮಿ	2 14	ಉತ್ತರೆ ಫ	55 51	5
20	ಶನಿ	ಸಪ್ತಮಿ	51 9	ಹಸ್ತ	30 5	6
21	ಭಾನು	ಅಷ್ಟಮಿ	51-29	ಚಿತ್ತ	28 51	7
22	ಸೋಮ §	ನವಮಿ	49 55	ಸ್ವಾತಿ	25-18	8
23	ಮಂಗಳ	ದಶಮಿ	19-31	ವಿಶಾ	20 47	9
24	ಬುಧ †	ಏಕಾದಶಿ	50-38	ಅನೂ	12-8	10
25	ಗುರು ‡	ದ್ವಾದಶಿ	53-0	ಜ್ಯೇ	45-19	11

* ಆಷಾಢಶುಕ್ರವಾರ, ಮಳೆ ನಕ್ಷತ್ರ—ಪುಷ್ಯ 1 ನೇ ಪಾದ

§ ಮಳೆ ನಕ್ಷತ್ರ—ಪುಷ್ಯ 2 ನೇ ಪಾದ

† ಸರ್ವತ್ರ ಪ್ರಥಮ ಏಕಾದಶಿ

‡ ಶಯನದ್ವಾದಶಿ

ಪೇಟೇ ಧಾರಣೆ

ವಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೪-೦	೧೫-೮-೦
ಸಂಬಾರ ಅಕ್ಕಿ ಅವಲ್	೧೬-೧೨-೦	೧೬-೮-೦
,, ದುಯ್ಯಂ	೧೬-೪-೦	೧೬-೦-೦
ಬಾಪ್ರ್ಯಾಣಿ ಅಕ್ಕಿ	೧೫-೧೨-೦	೧೪-೦-೦
ಸಣ್ಣಕ್ಕಿ ಅವಲ್	೧೮-೦-೦	೧೭-೮-೦
,, ದುಯ್ಯಂ	೧೭-೮-೦	೧೬-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೧-೮-೦	೧೨-೮-೦
,, ದುಯ್ಯಂ	೧೧-೦-೦	೧೧-೮-೦
ಹೈಣ್ ರಾಗಿ ಪಲ್ಲಾ ೧ಕ್ಕೆ	೭-೧೨-೦	೭-೮-೦
ಕಾರ್ರಾಗಿ	೭-೪-೦	೭-೪-೦
ಜೋಳ	೭-೮-೦	೮-೦-೦
ಹುಲಸಂದೆ ಪಲ್ಲಾ ೧ಕ್ಕೆ	೧೨-೦-೦	೧೧-೦-೦
ಬಿಳೀ ಅವರೆ	೧೧-೦-೦	೧೦-೦-೦
ಹೆಸರು	೧೩-೦-೦	೧೪-೮-೦
ಉದ್ದು	೧೪-೦-೦	೧೫-೦-೦
ಕಡಲೆ	೧೧-೦-೦	೧೧-೦-೦
ಎಳ್ಳು ಸೇ ೧೨೭ ಕ್ಕೆ	೨೩-೮-೦	೨೪-೮-೦
ಹುರುಳಿ	[illegible]	೭-೨-೦
ಹರಳು ೧೨೭ ಸೇರಿಗೆ	೧೨-೮-೦	೧೩-೦-೦
ತೆಂಗಿನಕಾಯಿ ಮಣ ೧ಕ್ಕೆ	೩-೮-೦	೩-೮-೦
ಮೆಣಸಿನಕಾಯಿ	೩-೪-೦	೩-೪-೦
,, ದುಯ್ಯಂ	೩-೦-೦	೧೨-೧೦-೦
ಬಿಟ್ಟೆ ದೊಡ್ಡ ಅಚ್ಚು	೫-೮-೦	೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೮-೦	೬-೮-೦
ಹರಳೆಣ್ಣೆ ,,	೫-೮-೦	೫-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೦-೦	೬-೮-೦
ಉಪ್ಪು ,,	೫-೮-೦	೫-೮-೦
ಹುಣಸೇ ಹಣ್ಣು	೧-೪-೦	೧-೪-೦
,, ಹಳೇದು	೧-೦-೦	೧-೨-೦
ಬೆಲ್ಲ ಮಣ ೧ಕ್ಕೆ	೧೭-೦-೦	೧೭-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೫-೨-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೬-೦-೦
ಅಡಕೇಕಾಯಿ ಮಣ ೧ಕ್ಕೆ	೦-೮-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪವನ್) ಒಂದು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೧-೦-೦	೮೧-೦-೦

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ। ಕಲ್ಪನಾ ಕೌಶಲವೂ ಘಟನಾವಳಿಯೂ ಬಹು ಮುದ್ದಾಗಿರುವುದು। ಕ್ರಯ 8 ಆಣೆ.

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [109-33]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

818

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರೆತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆವೆಚ್ಚ 4 ಆಣೆ 4 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲಿಪಿಳ್ಳೆ ಬೀದಿ, ಪುಶೀವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಭಟ್ಟಿವಿಕ್ರಮಾದಿತ್ಯರಾಯನ ಕಥೆಗಳು. [101 3]

ಸಾಹಸಕಥೆಗಳು। ಸಚಿತ್ರ। 576 ಪುಟಗಳು।।

ಈಗ್ಗೆ 2 ಸಾವಿರ ವರುಷಗಳಲ್ಲಿ ವಿಕ್ರಮಶಕೆಗೆ ಕಾರಣನಾಗಿ ಉಜ್ಜಯಿನೀ ನಗರದಲಿ ಆಳುತ್ತಿದ್ದ ವಿಕ್ರಮಾದಿತ್ಯರಾಯನ ಸಾಹಸಚರಿತ್ರೆಯು ಈತನು ಚಂದ್ರವರ್ಮನೆಂಬ ಬ್ರಾಹ್ಮಣನಿಗೆ ಹುಟ್ಟಿ ತಮ್ಮನಾದ ಭಟ್ಟಿಯನ್ನು ಮುಖ್ಯ ಮಂತ್ರಿಯನ್ನಾಗಿ ನೇಮಿಸಿಕೊಂಡು ಭೇತಾಳನ ಸಹಾಯದಿಂದ ದೇವಲೋಕ ಪ್ರವೇಶ, ಸಿಂಹಾಸನಪಡೆವುದು, ಪಾತಾಳಲೋಕ ಪ್ರವೇಶ, ದಿಗ್ವಿಜಯದಿಂ ಶತ್ರುರಾಜರಂ ಜೈಸಿ ಅವರ ಕನ್ಯೆಯರಂ ವಿವಾಹವಾಗಿ ಅನೇಕ ರಾಕ್ಷಸರಂ ಕೊಂದು, ನಂತರ ಸ್ವರ್ಣಶೃಂಗರಂ ಮೊಕ್ಕು ಬೇತಾಳನ ಸಹಾಯದಿಂ ಆ ರಾಣಿಯರಂ ವರಿಸಿ ಪರಕಾಯ ಪ್ರವೇಶದಿಂ ಕೃತ್ರಿಮರಕ್ಕಸರಂ ಜೈಸಿ ಋಷಿಗಳಿಂ ಉಪದೇಶಗಳಂ ಹೊಂದಿ ತನ್ನ ಪಟ್ಟಣವಂ ಸೇರಿ ಸುಖದಿಂದಿದ್ದನು ದೊಡ್ಡ ನೋಟೀಸಿನಿಂದ ಸರ್ವರಿಗೂ ವಿವರವಾಗಿ ತಿಳಿದಿರುತ್ತೆಯಷ್ಟೆ ಸಂಪೂರ್ಣ ಪುಸ್ತಕವನ್ನು ತರಿಸಿ ಓದಿದರೆ ತಿಳಿಯುತ್ತೆ ದಪ್ಪ ಕಾಗದ, ಸ್ಪುಟವಾದ ಅಕ್ಷರ, ಸೊಗಸಾದ ಬೈಂಡು ಸಿದ್ಧವಾಗಿದೆ

ಕ್ರಯ ಪ್ರತಿ 1ಕ್ಕೆ 1-8-0 ಟಪಾಲು ಹಾಸಲು 4 ಆಣೆ.

ಅನೇಕ ತರಹ ಪುಸ್ತಕಗಳೂ ಸಹ ದೊರೆಯುತ್ತವೆ.

ನಮ್ಮ ವಿಳಾಸ: ಎಂ ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ ಚಿಕ್ಕಪೇಟೆ ಬೆಂಗಳೂರು ಸಿಟಿ.

ಕನ್ಯಾವರ ಸಮ್ಮೇಳನ ಸಮಾಜ.

ಬೆಳಕವಾಡಿ, ಮಳವಳ್ಳಿ ತಾಲ್ಲೂಕು, ಮೈಸೂರು ಡಿಸ್ಟ್ರಿಕ್ಟು

ಮಹನೀಯರೇ,—ಲೋಕದಲ್ಲಿ ವರಗಳನ್ನೂ, ಕನ್ಯೆಯರನ್ನೂ ಅಪೇಕ್ಷಿಸತಕ್ಕವರು ಅನೇಕರಿರುವರು ಇವರುಗಳ ಅಪೇಕ್ಷೆಯು ದೂರವಾದ ಸ್ಥಳಗಳಲ್ಲಿರುವುದರಿಂದ ಪರಸ್ಪರ ವರ ದೊರಕಲಿಲ್ಲ ಕನ್ಯಾ ದೊರಕಲಿಲ್ಲವೆಂದು ಚಿಂತಿಸಿ ಸಾಕಾಗಿ ಹುಡುಕುವುದಕ್ಕೆ ಹೊರಟು ದಾರಿಗೆ ಮೊದಲಾದ ಖರ್ಚಿಗೆ ವ್ಯಯಮಾಡಿ, ಇದು ನಕ್ಷತ್ರಾನುಕೂಲವಿಲ್ಲವೆಂತಲೂ, ಅದು ವಂಶಾಮ್ಯವಿಲ್ಲವೆಂತಲೂ ಊರೂರಿಗೆ ಹೋಗಿ, ಅಲೆದಲೆದು ಕೊನೆಗೆ ದೊರಕಿದ ಯಾವುದೋ ಒಂದು ಸಂಬಂಧವನ್ನು ಬೆಳಸುವರು ಈ ದಂಪತಿಗಳು ಸಂಸಾರ ಸುಖವನ್ನನುಭವಿಸುವಾಗ ವಿದ್ಯಾ, ವಿನಯ, ಗುಣ, ರೂಪು, ಇವುಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿ ಅವರಿಗೆ ಪ್ರಪಂಚಸುಖವು ನರಕಯಾತನೆಯಾಗಿ ಪರಿಣಮಿಸಬಹುದು ಇಂತಹ ತೊಂದರೆಗಳನ್ನು ಯತ್ಕಿಂಚಿತ್ತಾದರೂ ಪರಿಹರಿಸಲು ಈ ಕೆಳಗಿನ ಏರ್ಪಾಡು ಮಾಡಲ್ಪಟ್ಟಿರುತ್ತೆ —ವರ ಮತ್ತು ಕನ್ಯೆಯರನ್ನು ಅಪೇಕ್ಷಿಸತಕ್ಕವರು ಅಪ್ಲಿಕೇಷನ್ ಫೀಜು ವರನಿಗೆ ನಾಲ್ಕು ಆಣೆ ಕನ್ಯೆಗೆ ಎಂಟು ಆಣೆ ಮೇರೆ ಮನಿಯಾರ್ಡರಿನೊಡನೆ ಈ ಕೆಳಗಿನ ವಿಳಾಸಕ್ಕೆ ಇವರಡಿ ಕಂಡ ಸೂಚನೆಯಂತೆ ಅಪ್ಲಿಕೇಷನ್ ಮಾಡಿಕೊಳ್ಳತಕ್ಕದ್ದು ಇಂಥ ಅಪ್ಲಿಕೇಷನ್‌ಗಳನ್ನು ಕ್ರಮವಾಗಿ ರೆಜಿಸ್ಟರ್ ಮಾಡಿಕೊಳ್ಳಲ್ಪಡುತ್ತೆ —ಪ್ರತಿ ಪುಷ್ಯ ಶುದ್ಧ ಪಾಡ್ಯ ಮತ್ತು ವೈಶಾಖ ಶುದ್ಧ ಪೌರ್ಣಮಿ ದಿವಸ ನಮ್ಮ ರೆಜಿಸ್ಟರಿನಲ್ಲಿ ದಾಖಲಾಗಿರುವ ಕನ್ಯ ಮತ್ತು ವರಗಳ ಲಿಸ್ಟನ್ನು ತಯಾರುಮಾಡಿ ಪ್ರತಿಯೊಬ್ಬರೂ ಅಪೇಕ್ಷಿಸಿರುವ ಮೇರೆ ಲಿಸ್ಟನ್ನು ಅವರವರಿಗೆ ಕಳುಹಿಸಲ್ಪಡುತ್ತೆ ಅದರಲ್ಲಿ ಅವರವರಿಗೆ ಅನುಕೂಲವಾದ ಕನ್ಯಾ ಮತ್ತು ವರಗಳನ್ನು ಸ್ವೀಕರಿಸಲು ಏರ್ಪಾಡು ಮಾಡಿಕೊಳ್ಳಬಹುದು ಎಲ್ಲಾ ಮತದವರ ಅಪ್ಲಿಕೇಷನ್‌ಗಳೂ ಅಂಗೀಕರಿಸಲ್ಪಡುತ್ತವೆ

[111 1] ಬಿ ವಿಶ್ವೇಶ್ವರೈಯ್ಯ, ಸೆಕ್ರಟರಿ.

ಅಪ್ಲಿಕೇಷನ್ ಫಾರಂ —(1) ಕನ್ಯ ಅಥವ ವರನ ಹೆಸರು, (2) ವಯಸ್ಸು (ತಿಳಿದಿದ್ದರೆ ಹುಟ್ಟಿದ ಸಂವತ್ಸರ, ತಿಂಗಳು, ತಿಥಿ, ಗಳಿಗೆ), (3) ಮತ, (4) ಮತಭೇದ, (5) ಒಳಭೇದ, (6) ಗೋತ್ರ, (7) ಜನನನಕ್ಷತ್ರ, ಪಾದ, (8) ಎಷ್ಟನೇ ಮದುವೆ (9) ಪಡೆದಿರುವ ವಿದ್ಯಾಶಕ್ತಿ, (10) ತಂದೆ ಅಥವಾ ಪೋಷಕರ ಹೆಸರು, (11) ತಂದೆ ಅಥವಾ ಪೋಷಕರ ಕಸಬು, (12) ಸಂಪೂರ್ಣವಾದ ವಿಳಾಸ ತಂದೆ, ಪೋಷಕರ, ಕನ್ಯ ಅಥವಾ ವರನ ರುಜು.

ಇಸ್ತಿಹಾರು.

ತುಮಕೂರು ಮುನ್ಸಿಫ್ ಕೋರ್ಟು.

1910—1911 ನೇ ಇಸವಿ ಒರಿಜಿನಲ್ ನಂಬರು 904.

ವಾದಿ. ಪ್ರತಿವಾದಿ:

ಶೆಟ್ ನಾರಾಯಣರಾವ್ ಬ್ಯಾ ವೆಂಕಟನಾರಣಪ್ಪ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದಲ್ಲಿ ಇರುವ ಜ್ಯೋತಿರ್ಮಹೇಶ್ವರ ದೇವರ ಪುದುವಟ್ಟಿನ ಹಣದ ಪೈಕಿ ಒಂದು ನೂರು ರೂಪಾಯಿ ಪ್ರತಿವಾದಿಯು ಸಾಲಾ ಪಡೆದು ಇರುವದರಿಂದ 173 4—0 ರೂಪಾಯಿಗಳನ್ನು ಪ್ರತಿವಾದಿಯಿಂದ ಬರಮಾಡಿಕೊಳ್ಳಲು ಮೇಲ್ಕಂಡ ವಾದಿಯು ದಾವಾ ತಂದು ಇರುತ್ತಾರೆ. ಆದ್ದರಿಂದ ಸದರಿ ಜ್ಯೋತಿರ್ಮಹೇಶ್ವರ ದೇವರ ಭಕ್ತರ ಪೈಕಿ ಯಾರೇ ಆಗಲಿ ವಾದಿಗಳಾಗಿಯೂ ಮತ್ತು ಆಕ್ಷೇಪಗಾರರಾಗಿಯೂ ಸೇರತಕ್ಕವರು 1912 ನೇ ಇಸವಿ ಜೂಲೈ 31 ನೇ ತಾರೀಖು ದಿನ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿರತಕ್ಕದ್ದು ತಾ 10—7 1912.

ಎಸ್. ಕೃಷ್ಣರಾವ್, ಬಿ ಎ., ಬಿ. ಎಲ್.,

[112-1] ಮುನ್ಸಿಫರು.

ಗೃಹಕೃತ್ಯದ ನೋಟೀಸು.

ಚಾಮರಾಜನಗರದ ತಾಲ್ಲೂಕು ರಾಮಸಮುದ್ರದಲ್ಲಿರುವ ಶಿವಭಕ್ತ ಕೆಂಪನಂಜೈಯನ ಮಗ ಚಿಕ್ಕಮಾದೈಯನ ಹೆಂಡತಿ ಬಸಮ್ಮನು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ರಾಮಸಮುದ್ರದಲ್ಲಿರುವ ರಾಚಮ್ಮನ ಸಿದ್ದೈಯನೆಂಬುವನು ನನ್ನ ಗಂಡನಿಗೆ ದತ್ತುಮಗನಾಗಿದಾನೆ ನನ್ನ ಗಂಡನು ಈಗ್ಗೆ ಸುಮಾರು 4 ವರುಷದಲ್ಲಿ ಫೌತಿ ಆದ ಬಾಗಾಯ್ತು ಸದರಿ ದತ್ತುಮಗನು ಗೃಹಕೃತ್ಯದಲ್ಲಿ ಉದಾಸೀನನಾಗಿ ಬದುಕು ಬಾಳು ನೋಡದೆ ಪುಂಡುಜನರ ದುಸ್ಸಹವಾಸದಲ್ಲಿ ಬಿದ್ದು ನಿಷ್ಕಾರಣವಾಗಿ ಕುಟುಂಬದ ಪ್ರಯೋಜನಕ್ಕೆ ಇಲ್ಲದೆ ಸಾಲ ಸೋಲಗಳನ್ನು ಮಾಡಿ ಆಸ್ತಿಗಳನ್ನು ಖಿಲಕ್ ಮಾಡತಕ್ಕವನಾಗಿ ಇದಾನೆ ಸದರಿ ಚಿಕ್ಕಮಾದೈಯ ಜೀವಂತನಾಗಿದ್ದಾಗ್ಗ ತನ್ನ ಕುಟುಂಬದ ವಿಶಿಷ್ಟ ಆಸ್ತಿಗಳನ್ನೂ ತನ್ನ ಮೊಮ್ಮಕ್ಕಳಾದ ಮೈನರು ಸುಬ್ಬಣ್ಣ, ದ್ಯಾವಣ್ಣ, ಇವರ ಹೆಸರಿಗೆ ಪಟ್ಟೀ ಮಾಡಿಸಿರುತ್ತಾನೆ ಕುಟುಂಬದ ಆಡಳಿತವನ್ನು ನಾನು ನಡಿಸುತ್ತಾ ಇದೇನೆ ಗೃಹಕೃತ್ಯಕ್ಕಾಗಲಿ, ಮೈನರ್ ಮಕ್ಕಳ ಪೋಷಣೆ ಮತ್ತು ಉಪಯೋಗಕ್ಕಾಗಲಿ ಯಾವ ಸಾಲ ಸೋಲಾ ಮಾಡಬೇಕಾದ ಅವಶ್ಯಕತೆಯೂ ಇರುವದಿಲ್ಲ ಇದುವರೆಗೆ ಕುಟುಂಬಕ್ಕೆ ಯಾವ ಸಾಲವೂ ಇರುವದಿಲ್ಲ ಮೈನರ್ ಮಕ್ಕಳ ಹೆಸರಿನಲ್ಲಿರುವ ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ಕ್ರಯ ಆಧಾರ ಭೋಗ್ಯ ಮುಂತಾದದ್ದು ಮಾಡಿಕೊಂಡು ಯಾರಾದರೂ ಸದರಿ ಸಿದ್ದೈಯನಿಗೆ ಹಣಕೊಟ್ಟಲ್ಲಿ ಸದರಿ ಆಸ್ತಿಗಳು ಅಂಥಾ ಪರಾಧೀನಕ್ಕೆ ಬದ್ಧಪಡತಕ್ಕದ್ದಲ್ಲವಾಗಿ ಈ ಮೂಲಕ ಎಚ್ಚರಿಸಿದೆ

† ಈ ಗುರುತಿನ ರುಜು ಸುಬ್ಬಣ್ಣ, ದ್ಯಾವಣ್ಣ,

[113-1] ಇವರ ಗಾರ್ಡಿಯನ್ ಬಸಮ್ಮ ಹಾಕಿದ್ದು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಲ್ಲಿ ಥಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬೇಗಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲಿಸುವುದು, ತಲೆನೋವು, ಗಾಬರಿ, ಕಣ್ಣುನೋವು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [99-15]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರಿಸುವುವು.



೨—೦—೦; ಅಥವಾ ೬ ಬುಡ್ಡಿಗಳಿಗೆ ರೂ, ೧೦—೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦ ಬೊಂಬಾಯಿ.—ಇವರಲ್ಲಿ ದೊರೆಯುವುದು

ಹಿಂದುಸ್ಥಾನದವರಲ್ಲಿರುವ ಮೋಚರೇ ಪಟ್ಟಣಕ್ಕೆ ಹೋಗಿ ಇದ್ದಾಗ ಅವರ ಒಳ ಇದ್ದ ಸರಕನ್ನು ಪರಿಶೋಧನೆಮಾಡಿದರು ಚಿತ್ರದ ಪಕ್ಷಿ ಎಂಬ ಪಕ್ಷಿಗಳ ಗರಿಗಳನ್ನು ಅವರು ಒಂದು ದಿಂಬಾಗಿ ಕಟ್ಟಿ ತೆಗೆದುಕೊಂಡು ಹೋಗಿದ್ದರು. ಅದು ಸುಮಾರು 6,000 ರೂಪಾಯಿ ಬೆಲೆಯಾಗಬಹುದು ಈ ಬಂದಿಟ್ಟರನ್ನು ಹಿಡಿದು ದಯಾಳ್ಪಿಗೆ ಗುರಿಮಾಡಿದಾರೆ.

ಆಯುರ್ವೇದ ಭೈಷಜ್ಯಮಂದಿರಂ, ಶ್ರೀ ಶೃಂಗೇರಿ

ಸವಾನಂದ ಭೈರವರಸ—೪ ವಿಧ ಜ್ವರ, 1 2 3 1 ದಿನಕ್ಕೆ ಬರುವ ಜ್ವರ 13 ಸನ್ನಿಪಾತ ವಿಷಮಾದಿ ಸಕಲ ಜ್ವರ ಕೆಮ್ಮು ಉಬ್ಬಸ, ಕ್ಷಯ, ಚಳಿ, ವಾಂತಿ ಆಮಶಂಕೆ, ಅತಿಸಾರ, ಇವನ್ನು ನಿರ್ಮೂಲ ಮಾಡುತ್ತೆ ಜೀರ್ಣಶಕ್ತಿಕಾರಿ, ಅಂಜನವಾಗಿ ಉಪಯೋಗಿಸಬಹುದು. ಮಲೆನಾಡಿನ ಜ್ವರಕ್ಕೆಲ್ಲಾ ಸಂಜೀವಿನಿ ಷ್ಟೇಗಿನ ಜ್ವರಕ್ಕೆಲ್ಲಾ ಬರುತ್ತೆ ಅಪಥ್ಯ ಮಾಡಿದವರ ಹಿಂತಿರುಗುವದಿಲ್ಲ ಸಿಕ್ಕಿ ಲ್ಪಾಡ ಮಾಡುವದಿಲ್ಲ ಪ್ರತಿ ಕುಟುಂಬದಲ್ಲಿಯೂ ಇಟ್ಟಿರಬೇಕಾದ ಔಷಧ ಮಳೆ ಗಾಲದ ಕೆಲಸಗಾರರಿಗೆ ಬೇಕಾದದ್ದು ಈ ಒಂದು ಔಷಧ ಪರೀಕ್ಷಿಸಿದರೆ ಹಿಂದೂ ಔಷಧದ ಯೋಗ್ಯತೆ ತಿಳಿಯುತ್ತೆ ವಿಶೇಷ ನಾತೇನ... ಎಲ್ಲಾ ಜ್ವರವನ್ನೂ ನಿಶ್ಶೇಷ ಮಾಡುತ್ತೆ ೫೦ ಮಾತ್ರೆ 1 ರೂ ಅಶ್ವಗಂಧಾದಿ ಲೇಹ ಪಿತ್ತ ಉಷ್ಣಾದಿಯನ್ನು ಹರಿಸಿ, ಪುಷ್ಟಿ ಕೊಡುತ್ತೆ ಬಾತ್ಲಿಯಾದದ್ದು ಸೇರಿಗೆ 2 ರೂ ಅಂಚೆ ವೆಚ್ಚ ಬೇರೆ

ನಮ್ಮ ವಿಳಾಸ—ಆಯುರ್ವೇದ ಭಿಷಕ್ಶಾಸ್ತ್ರದ ಕೆ ಶೇಷಶಾಸ್ತ್ರೀ, ಶೃಂಗೇರಿ

ವೃತ್ತಾಂತ ಪತ್ರಿಕೆ.

—o—

ಶಕ ೧೮೩೪ ನೇ ಇಸವಿ ಜೂಲೈ ತಾ. ೧೮ ನೇ ಗುರುವಾರ

ಐಶ್ವರ್ಯವೂ ಕೈಗಾರಿಕೆಗಳೂ

ಇಂಡಿಯಾ ಗವರ್ನ್‌ಮೆಂಟಿನವರು ಹಿಂದುಸ್ಥಾನದ ಕಳೆದ ವರುಷದ ಆಮದುರಫ್ತಿನ ಲೆಕ್ಕಗಳನ್ನು ಈಗತಾನೇ ಪ್ರಕಟಿ ಮಾಡಿರುತ್ತಾರೆ ಈ ಲೆಕ್ಕಗಳನ್ನು ನೋಡುವಲ್ಲಿ ಕಳೆದ ವರುಷ ಹಿಂದುಸ್ಥಾನಕ್ಕೆ ಅನ್ಯದೇಶಗಳಿಂದ ೧೯೨ ಕೋಟಿ ರೂಪಾಯಿನ ಸರಕುಗಳು ಆಮದಾಗಿರುತ್ತವೆಂದೂ, ಹಿಂದುಸ್ಥಾನದಿಂದ ಪರದೇಶಗಳಿಗೆ ೨೨೧ ಕೋಟಿ ರೂಪಾಯಿನ ಸರಕುಗಳು ಸಾಗಿಹೋಗಿರುತ್ತವೆಂದೂ ಗೊತ್ತಾಗುತ್ತದೆ ಅಂದರೆ ಹಿಂದುಸ್ಥಾನದ ವ್ಯಾಪಾರವು ೧೯೧೦ನೇ ವರುಷಕ್ಕಿಂತ ೩೯ ಕೋಟಿ ರೂಪಾಯಿನಷ್ಟು ಹೆಚ್ಚಿರುತ್ತದೆ ಇದನ್ನು ನೋಡುವಲ್ಲಿ ಈ ದೇಶದ ಐಶ್ವರ್ಯವು ವರುಷೇ ವರುಷ ವೃದ್ಧಿಹೊಂದುತ್ತಾ ಬಂದಿದೆ ಎಂದು ಗೊತ್ತಾಗುವುದು ಈಚೀಚೆಗೆ ಪಂಜಾಬ್ ಅಧಿಪತ್ಯದಲ್ಲೇ ಐಶ್ವರ್ಯವು ಬೇಗಬೇಗನೆ ಹೆಚ್ಚುವರವಾಗುತ್ತಿರಬೇಕೆಂದು ಕಾಣುತ್ತದೆ ಆ ಪ್ರದೇಶವೆಲ್ಲಾ ಕೆಲವು ಸಂವತ್ಸರಗಳ ಹಿಂದೆ ಏನೊಂದೂ ಬೆಳೆಯಲಾರದಂಥಾ ಬೆಂಗಾರು ಭೂಮಿಯಾಗಿತ್ತು ಈಚೆಗೆ ಗವರ್ನ್‌ಮೆಂಟಿನವರು ಅಗಾಧವಾದ ಅನೇಕ ನೀರಾವರಿ ಕಾಮಗಾರಿಗಳನ್ನು ಮಾಡಿಸಿ ನಾಲೆಗಳ ಮೂಲಕ ನೀರನ್ನು ಒದಗಿಸಿದ್ದರಿಂದ ಎಲ್ಲಿ ನೋಡಿದರೂ ಗೋಧಿಯ ಬೆಳೆಯೇ ಅಪಾರವಾಗಿ ಕಂಗೊಳಿಸುತ್ತಿದೆ ಈ ದಿವಸದಲ್ಲಿ ರೈತನು ತನ್ನ ಜೀವನಕ್ಕೆ ಬೇಕಾಗುವಷ್ಟನ್ನು ಇಟ್ಟುಕೊಂಡು ಮಿಕ್ಕು ಬೆಳೆಯನ್ನೆಲ್ಲಾ ಬಹಳ ಲಾಭಕರವಾಗಿ ವಿಕ್ರಯ ಮಾಡುತ್ತಾನೆ ಈ ಗೋಧಿಯು ಪ್ರತಿ ವರುಷವೂ ಹೇರಳವಾಗಿ ಯೂರೋಪಿಗೆ ಹಡಗುಗಳಲ್ಲಿ ಸಾಗಿಹೋಗುತ್ತದೆ ಚಿನ್ನವು ಕೇವಲ ವರುಷಗಳಿಂದ ಬಹಳ ಹೆಚ್ಚಾಗಿ ಪಂಜಾಬಿಗೆ ಬಂದು ಸೇರುವರವಾಗುತ್ತಿರುವುದು ರೈತಪ್ರಜೆಗಳು ಪ್ರತಿ ವರುಷದಲ್ಲೂ ಲಕ್ಷಾಂತರ ರೂಪಾಯಿನ ಚಿನ್ನವನ್ನು ಕೊಂಡಿಟ್ಟುಕೊಳ್ಳುತ್ತಿದಾರೆ ಈ ಧನವು ಸಂಸಾರ ಮಕ್ಕಳ ಆಭರಣಗಳಾಗಿ ಪರಿಣಮಿಸಿದೆ, ಇದಲ್ಲದೆ ಅಲ್ಲಿನ ರೈತನು ಬೆಳ್ಳಿಯ ನಾಣ್ಯಗಳನ್ನು ಬಿಟ್ಟು ಚಿನ್ನದ ಸವರಿನ್‌ಗಳನ್ನು ಕೂಡಿಸಿಡುತ್ತಾ ಬಂದಿದ್ದಾನೆ

ಧನವನ್ನು ಈ ರೀತಿ ನಾಣ್ಯರೂಪದಲ್ಲೂ ಒಡವೆಗಳಾಗಿಯೂ ಕೂಡಿಸಿಟ್ಟುಕೊಳ್ಳುವುದು ಮರ್ಖ್ಯಾಸವಲ್ಲದೆ ಅದು ಎಷ್ಟುಮಾತ್ರಕ್ಕೂ ಶ್ರೇಯಸ್ಕರವಾದದ್ದಲ್ಲ ಈಗ ಹಿಂದುಸ್ಥಾನದಲ್ಲಿ ಕ್ಷೀಣವಾಗುತ್ತಿರುವ ಪ್ರಾಚೀನಕಾಲದ ಕಸಬುಗಳನ್ನು ಅಭಿವೃದ್ಧಿ ಮಾಡುವುದಕ್ಕೂ, ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಿ ಹೆಚ್ಚಿಸುವುದಕ್ಕೂ, ಈ ರಾಷ್ಟ್ರದ ನಾನಾ ಭಾಗಗಳಲ್ಲಿ ರೈಲ್ ರಸ್ತೆಗಳನ್ನು ಹಾಕುವುದಕ್ಕೂ, ನೀರಾವರಿ ಕಾಮಗಾರಿಗಳನ್ನು ವೃದ್ಧಿಪಡಿಸಿ ವ್ಯವಸಾಯವನ್ನು ಹೇರಳವಾಗಿ ಹೆಚ್ಚಿಸುವುದಕ್ಕೂ ಧನವು ಬಹಳ ಅವಶ್ಯವಾಗಿ ಬೇಕಾಗಿರುತ್ತದೆ. ಇಂಡಿಯಾ ಗವರ್ನ್‌ಮೆಂಟಿನವರು ಇಂಥಾ ಶ್ರೇಯೋಭಿವೃದ್ಧಿಯ ಕಾರ್ಯಗಳಿಗೆ ಯೂರೋಪ್ ಖಂಡದಲ್ಲಿ ಸಾಲಮಾಡಿ ಧನವನ್ನು ತಂದೊದಗಿಸುತ್ತಿದಾರೆ ಇದಕ್ಕೆಲ್ಲಾ ಬಡ್ಡಿಯನ್ನು ತೆರಬೇಕಾಗಿದೆ. ಈಗ ಈ ರಾಷ್ಟ್ರದ ಆಮದಿಗಿಂತಲೂ ರಫ್ತೇ ಹೆಚ್ಚಾಗುವುದಕ್ಕೆ ಈ ಬಡ್ಡಿಯೇ ಕಾರಣವಾಗಿದೆ ಬಡ್ಡಿ ಹಣಕ್ಕಾಗಿ ದವಸಧಾನ್ಯಗಳನ್ನು ಹೆಚ್ಚಾಗಿ ರಫ್ತು ಮಾಡುತ್ತಿರುವರು

ಅನ್ಯದೇಶಕ್ಕೆ ಹೀಗೆ ಬಡ್ಡಿಯನ್ನು ತೆರುವುದರಿಂದ ಈ ಸೀಮೆಯು ಕ್ಷೀಣಗತಿಗೆ ಬಂದುಬಿಟ್ಟಿತೆಂದು ಹೇಳುವ ಮಾತು ಸಮಂಜಸವಾದದ್ದಲ್ಲ ಸಾಲಮಾಡಿ ತಂದ ಕೋಟ್ಯಾಂತರ ದ್ರವ್ಯದಿಂದ ಈ ರಾಷ್ಟ್ರದ ಉತ್ಪತ್ತಿಯು ಬಹುಮಟ್ಟಿಗೆ ವೃದ್ಧಿ ಹೊಂದಿರುತ್ತದೆ ಆದರಿಂದ ಈ ಸೀಮೆಗೆ ಅಪಾರವಾದ ಆದಾಯವಾಗುತ್ತಾ, ಅದರಲ್ಲಿ ಬಹಳ ಅಲ್ಪ ಭಾಗವನ್ನು ಮಾತ್ರ ಬಡ್ಡಿಯ ರೂಪದಲ್ಲಿ ಕಳುಹಿಸುವರು ಆದರೂ ಹಿಂದುಸ್ಥಾನಕ್ಕೆ ಬೇಕಾಗುವಂಥಾ ಸಾಲದ ಹಣವನ್ನು ಅನ್ಯದೇಶದಿಂದ ತರುವುದಕ್ಕಿಂತಲೂ ಈ ದೇಶದ ಪ್ರಜೆಗಳೇ ಒದಗಿಸಿಕೊಡುವ ಹಾಗಾದರೆ ಎಷ್ಟೋ ಕ್ಷೇಮವಾದೀತು ಹಿಂದುಸ್ಥಾನವನ್ನು ಅಭಿವೃದ್ಧಿ ಮಾಡುವುದಕ್ಕೆ ಇಂಡಿಯಾ ಗವರ್ನ್‌ಮೆಂಟಿನವರಿಗೂ ಕಸಬುದಾರಿ ಕಾರ್ಖಾನೆಗಳಿಗೂ ಬೇಕಾಗುವ ಮೂಲಧನವನ್ನೆಲ್ಲಾ ಹಿಂದುಸ್ಥಾನದವರೇ ಸೇರಿ ಒದಗಿಸುವ ಪಕ್ಷದಲ್ಲಿ ಅದರ ಬಡ್ಡಿಯೂ ಅನ್ಯದೇಶಗಳಿಗೆ ಹೋಗದೆ ಇಲ್ಲೇ ವಿನಿಯೋಗವಾದೀತು ಹಿಂದುಸ್ಥಾನದಲ್ಲಿ ಧನವಿಲ್ಲವೆಂದು ಹೇಳಲಾರೆವು ಪ್ರಜೆಗಳು ಬಹಳ ಹಣವನ್ನು ನಗದಾಗಿಯೋ ಒಡವೆಗಳ ರೂಪದಲ್ಲೋ ಕೂಡಿಸಿಟ್ಟುಕೊಂಡು ಕೊಳೆಯಿಸುತ್ತಿದಾರೆ ಇದಕ್ಕೆ ಅವರಿಗೆ ಒಂದು ಕಾಸೂ ಪ್ರತಿಫಲ ಬರುವುದಿಲ್ಲ. ಇಂಥಾ ಧನವನ್ನು ಅವರೆಲ್ಲಾ ಹೊರಕ್ಕೆ ತಂದು ಚಲಾವಣೆಯಲ್ಲಿಟ್ಟ ಪಕ್ಷದಲ್ಲಿ ಅಪಾರವಾದ ಪ್ರಯೋಜನವಾದೀತು

ಇತ್ತಲಾಗಿ, ಮೈಸೂರು ಸಂಪದಭಿವೃದ್ಧಿ ಸಮಾಜದವರು ಈ ಸೀಮೆಯಲ್ಲಿ ಮೈಸೂರ್ ಬ್ಯಾಂಕ್ ಎಂಬ ನಿಧಿಯನ್ನು ಸ್ಥಾಪಿಸಿ ನಡಿಸಬೇಕೆಂದು ಗವರ್ನ್‌ಮೆಂಟಿಗೆ ಶಿಫಾರಸು ಮಾಡಿದಾರೆ ಇಂಥಾ ಬ್ಯಾಂಕು ಹುಟ್ಟಿ ಶಾಶ್ವತವಾಗಿಯೂ ಸುರಕ್ಷಿತವಾಗಿಯೂ ನಡೆಯಬೇಕಾದರೆ ಮುಖ್ಯವಾದ ಎರಡು ವಿಷಯಗಳು ನಿಶ್ಚಿತವಾಗಬೇಕು :

(೧) ಬ್ಯಾಂಕಿನ ಡೈರೆಕ್ಟರುಗಳು ಬಹಳ ನಿಪುಣರಾಗಿರಬೇಕು ಬ್ಯಾಂಕಿನ ಧನವನ್ನು ಯಾವ ಕಸಬುಗಳಿಗೆ ವಿನಿಯೋಗಿಸಿದರೆ ಲಾಭಕರವಾಗುವುದೆಂದೂ, ಯಾವ ರೀತಿ ಕಾರ್ಯಗಳನ್ನು ನಡಿಸಬೇಕೆಂದೂ ಚೆನ್ನಾಗಿ ತಿಳಿದವರಾಗಬೇಕು

(೨) ಹಣವನ್ನು ನಿಷ್ಪ್ರಯೋಜಕವಾಗಿ ಇಟ್ಟುಕೊಳ್ಳುವುದರಿಂದ ಕೇಡಲ್ಲದೆ ಎಷ್ಟು ಮಾತ್ರವೂ ಒಳ್ಳೆಯದಲ್ಲವೆಂಬ ಅಂಶವನ್ನು ಹಣಗಾರರು ನಿಶ್ಚಿತವಾಗಿ ತಿಳಿಯುವವರಾಗಬೇಕು

ಈಗಿನ ಸ್ಥಿತಿಗತಿಯನ್ನು ನೋಡಲಾಗಿ ಅಂಥಾ ಬ್ಯಾಂಕನ್ನು ಸ್ಥಾಪಿಸುವ ಕಾಲವು ನಮ್ಮ ಸೀಮೆಯಲ್ಲಿ ಇನ್ನೂ ಪ್ರಾಪ್ತವಾಗಿಲ್ಲವೆಂದು ನಮಗೆ ತೋರುತ್ತದೆ ಪ್ರಜೆಗಳು ಕೇಟುರಿಸಬಹುದಾದ ದ್ರವ್ಯವನ್ನು ಈಗಿರುವ ಸೇವಿಂಗ್ಸ್ ಬ್ಯಾಂಕುಗಳೇ ಸ್ವಲ್ಪ ಮಟ್ಟಿಗೆ ಸೆಳೆದುಕೊಳ್ಳುತ್ತಿರುವವು. ಆದರೆ ಈ ಬ್ಯಾಂಕಿನ ಬಡ್ಡಿಯ ದರವು ಬಹಳ ಅಲ್ಪವಾಗಿರುತ್ತದೆ ನಾವು ಮೇಲೆ ಸೂಚಿಸಿರುವ ಮೊದಲನೇ ಭಾಗವು ನಿಶ್ಚಿತವಾಗುವ ವರೆಗೆ ಮೈಸೂರಿನಲ್ಲಿ ಕೂಡಿಸುವ ಧನವು ಸುರಕ್ಷಿತವಾಗಿ ಹೆಚ್ಚಾದ ಲಾಭವನ್ನು ಉತ್ಪತ್ತಿ ಮಾಡಲಾರದೆಂದು ನಮಗೆ ತೋರುವುದು.

ಇಂಗ್ಲೆಂಡಿನ ವಿಷಯಗಳು

ಲಂಡನ್ ಪಟ್ಟಣದ ನಮ್ಮ ಬಾತ್ಮಿದಾರರಿಂದ

ಯಾರೇ ಆಗಲಿ ಲಂಡನ್ ಪಟ್ಟಣದಲ್ಲಿ ಇದ್ದುಕೊಂಡು ತಮ್ಮ ಕಾಲವನ್ನೆಲ್ಲಾ ಅಲ್ಲಿ ನಡೆಯುವ ನಾನಾ ಪ್ರದರ್ಶನಗಳನ್ನೂ, ಉತ್ಸಾಹಕರವಾದ ಸ್ಥಳಗಳನ್ನೂ, ವಾರ್ಷಿಕ ಇಲ್ಲವೇ ನೈಮಿತ್ತಿಕ ಪಂಡಿತ ಸಮಾಜಗಳನ್ನೂ, ಕಲಾಕೌಶಲ ಕೋಣೆಗಳನ್ನೂ, ಭಕ್ತಿಪ್ರದಾನ ಸಭೆಗಳನ್ನೂ ಹೋಗಿ ನೋಡಿಕೊಂಡು ಬರುವುದರಲ್ಲೇ ಕಳೆಯಬಹುದಾಗಿದೆ. ಅವುಗಳಲ್ಲೆಲ್ಲಾ ರಾಯಲ್ ಅಕ್ಯಾಡಮಿ ಸಮಾಜದವರು ಪ್ರತಿ ವರುಷವೂ ನಡಿಸುವಂಥಾ ನೇತ್ರಾನಂದಕರವಾದ ಪ್ರದರ್ಶನವನ್ನು ವಿಶೇಷವಾಗಿ ಪ್ರಜೆಗಳು ಹೋಗಿ ನೋಡಿ ಬರುತ್ತಾರೆ. ಆಯಾ ವರುಷದಲ್ಲಿ ಪ್ರಸಿದ್ಧ ಚಿತ್ರಗಾರರು ರಚಿಸಿದ ಸರ್ವಶ್ರೇಷ್ಠವಾದ ಚಿತ್ರಪಟಗಳನ್ನೂ, ನಿಪುಣರಾದ ಶಿಲ್ಪಿಗಳಿಂದ ಕೆತ್ತಿ ತಯಾರಾದ ... ಉತ್ತಮೋತ್ತಮವಾದ ಪ್ರತಿಮೆ ಮುಂತಾದವುಗಳನ್ನೂ ಒಂದು ಕಡೆ ಇಟ್ಟು ಪ್ರದರ್ಶನ ಮಾಡುತ್ತಾರೆ

ಒಂದಾನೊಂದು ದಿನ ನಾನು ಆ ಪ್ರದರ್ಶನ ಶಾಲೆಗೆ ಹೋಗಿ ಅಲ್ಲಿಟ್ಟಿದ್ದ ತಸ್ವೀರುಗಳನ್ನೂ ಪ್ರತಿಮೆ ಮುಂತಾದವುಗಳನ್ನೂ ನೋಡುತ್ತಾ ಬಂದೆನು ಅವುಗಳಲ್ಲೆಲ್ಲಾ ವೆಸ್ಟ್‌ಮಿನಿಸ್ಟರ್ ಅಬೆ ಎಂಬ ರಾಜದೇವಾಲಯದಲ್ಲಿ ನಡೆದ ಚಕ್ರವರ್ತಿ ದಂಪತಿಗಳ ಕಿರೀಟ ಧಾರಣೆಯ ಉತ್ಸವವನ್ನು ಚಿತ್ರಿಸಿರುವ ತಸ್ವೀರು ಬಹಳ ದೊಡ್ಡದಾಗಿತ್ತು. ಜೀವಂತರಾಗಿರುವ ಅಷ್ಟೊಂದು ಮನುಷ್ಯರ ಮುಖಭಾವಗಳನ್ನು ಸಾಕ್ಷಾತ್ತಾಗಿ ನೋಡಿದಂತೆ ತಸ್ವೀರಿನಲ್ಲಿ ಚಿತ್ರಿಸಿ ತೋರಿಸುವುದೇನೂ ಸಾಮಾನ್ಯವಲ್ಲ ಆದರೂ ಅಂಥಾ ಕಷ್ಟ ಕಾರ್ಯವನ್ನು ಆ ಚಿತ್ರಗಾರನು ಬಹಳ ಸಾರ್ಥಕವಾಗಿ ನೆರವೇರಿಸಿರುತ್ತಾನೆ ಆ ತಸ್ವೀರನ್ನು ನೋಡಿದಲ್ಲಿ ಆ ಅಸಮಾನವಾದ ಮನುಷ್ಯರ ಕೂಟದಲ್ಲಿ ಯಾರ್ಯಾರು ಎಲ್ಲೆಲ್ಲಿದ್ದರೆಂಬುದನ್ನು ಅವರ ಚಹರೆಗಳಿಂದ ಬಹು ಸುಲಭವಾಗಿ ತಿಳಿದುಕೊಳ್ಳಬಹುದು ಈ ... ವಾದ ತಸ್ವೀರಿನ ಉಭಯ ಪಾರ್ಶ್ವಗಳಲ್ಲೂ ಚಾರ್ಜ್ ಸಾರ್ವಭೌಮರವರೂ, ಮೇರಿ ಮಹಾರಾಜ್ಞೀಯವರೂ ಕಳೆಕಳೆಸುವಂತೆ ಕಂಗೊಳಿಸುತ್ತಿದಾರೆ

ಇದಕ್ಕಿಂತಲೂ ಹಿಂದುಸ್ಥಾನಕ್ಕೆ ಸಂಬಂಧಪಟ್ಟ ತಸ್ವೀರುಗಳನ್ನೂ ಪ್ರತಿಮೆಗಳನ್ನೂ ನೋಡುವುದರಲ್ಲಿ ನನಗೆ ವಿಶೇಷ ಕುತೂಹಲವುಂಟಾಯಿತು ಮೈಸೂರು ಸಂಸ್ಥಾನದ ಲೇಟ್ ಮಹಾರಾಜಾ ಚಾಮರಾಜೇಂದ್ರ ಒಡೆಯರವರ ಚಿತ್ರಪ್ರತಿಮೆಯು ... ನನ್ನ ಕಣ್ಣಿಗೆ ಬಿದ್ದಿತು ಇದನ್ನು ಶ್ವೇತಶಿಲೆಯಲ್ಲಿ (ಮಾರ್ಬಲ್) ತಯಾರುಮಾಡಿದಾರೆ ಬಹುಕಾಲದಿನ್ನೇ ಮೈಸೂರು ಪಟ್ಟಣದ ಕರ್ಜನ್ ಪಾರ್ಕಿನೊಳಗೆ ಕೋಟೆಯ ಎದುರು ಭಾಗದಲ್ಲಿ ನಿಲ್ಲಿಸುತ್ತಾರೆಂದು ಕಾಣುವುದು ಹಿಂದೆ ಒಂದಾವರ್ತಿ ಇದೇ ರಾಯಲ್ ಅಕಾಡಮಿ ಸಮಾಜದವರು ಪ್ರದರ್ಶನಮಾಡಿದ್ದ ಮಹಾರಾಜರವರು ಅಶ್ವಾರೂಢರಾಗಿದ್ದಂತೆಯ ರಕ ಹೂಯಿದ್ದ ಲೋಹಪ್ರತಿಮೆಯನ್ನು ನೋಡಿದ್ದೆನು ಆಗ ನಾನು ವೃತ್ತಾಂತ ಪತ್ರಿಕೆಗೆ ಆ ಪ್ರತಿಮೆಯು ಲೇಟ್ ಮಹಾರಾಜರವರ ಮುಖಭಾವವನ್ನು ಸಮರ್ಪಕವಾಗಿ ನಿದರ್ಶನಮಾಡುವುದಾಗಿಲ್ಲವೆಂದು ಬರೆದಿದ್ದೆನು ಆಗಲೂ ಈ ಬಳಿ ಶಿಲ್ಪ ಪ್ರತಿಮೆಯು ಆ ಪ್ರಭುವಿನ ಚಹರೆಯನ್ನು ಅನುಸರಿಸಿಲ್ಲವೆಂದು ಹೇಳಬೇಕಾಗಿದೆ. ಆ ಮಹಾರಾಜರನ್ನು ನೋಡಿಬಲ್ಲವರು ಈ ಪ್ರತಿಮೆಯನ್ನು ಅವರ ಲಕ್ಷಣವುಳ್ಳದ್ದಾಗಿದೆ ಎಂದು ಒಪ್ಪಿಕೊಳ್ಳುವಂತಿಲ್ಲ ಇದನ್ನು ಮಿ|| ಡಬ್ಲ್ಯು ಆರ್ ಕೊಲ್ಟನ್ ಎಂಬ ಪ್ರಸಿದ್ಧ ಶಿಲ್ಪಿಯು ಕೆತ್ತಿ ರಚಿಸಿರುತ್ತಾನೆ ಆತನಿಗೆ ದೊರಕಿದ ಆದಾರದ ಮೇಲೆ ಬಹಳ ಕೌಶಲವನ್ನು ಪ್ರಯೋಗಿಸಿ ತುಂಬಾ ಶ್ರಮಪಟ್ಟು ಈ ಪ್ರತಿಮೆಯನ್ನು ತಯಾರುಮಾಡಿರುವನು ಆದರೂ ಎಲ್ಲಿಯು ... ಕುಂದುಮತಿಯುಳ್ಳವನಾಗಿದ್ದಾಗ್ಯೂ ಅವನು ನೋಡಿ ಕಾಣದ ಪುರುಷರ ಲಕ್ಷಣವನ್ನು ಸಾಕಾರವಾಗಿ ಕೆತ್ತಿ ... ವುದು ಅಸಾಧ್ಯವೆಂದು ಹೇಳಬಹುದು ಈ ಪ್ರತಿಮೆಯು ಬಹು ನೇತ್ರಾನಂದಕರವಾಗಿದೆ, ಇದು ಮೈಸೂರು ಪಟ್ಟಣಕ್ಕೆ ಒಂದು ಅಲಂಕಾರವಾಗಿದ್ದೀತೆನ್ನುವುದಕ್ಕೆ ಸಂಶಯವಿಲ್ಲ. ಲೇಟ್ ಮಹಾರಾಜರವರ ಮುಖಭಾವವು ಈ ಪ್ರತಿಮೆಯಲ್ಲಿ ಇನ್ನೂ ಸಮರ್ಪಕವಾಗಿ ಗೋಚರವಾಗುವ ಹಾಗಿದ್ದರೆ ಬಹಳ ಚೆನ್ನಾಗಿತ್ತೆಂದು ಆಸೆಪಡುತ್ತೇನೆ

ಸುಮಾರು ... ವರುಷ ವೈಸ್‌ರಾಯಿ ಪದವಿಯಲ್ಲಿದ್ದು ಹಿಂದುಸ್ಥಾನವನ್ನು ಪರಿಪಾಲಿಸಿದ ಲಾರ್ಡ್ ಕರ್ಜನ್ ರವರ ಪ್ರತಿಮೆಯನ್ನು ಮಾಡಿಸಿಟ್ಟು ಅವರ ಹೆಸರನ್ನು ಶಾಶ್ವತಗೊಳಿಸಬೇಕೆಂದು ... ದಾಗಿದೆಯಷ್ಟೆ ಆ ಪ್ರಭುವಿನ ಲಕ್ಷಣವುಳ್ಳ ಒಂದು ಮಾದರಿಯನ್ನು ಈ ಪ್ರದರ್ಶನದಲ್ಲಿ ನೋಡಿದೆನು, ಅದೇನೂ ಅಷ್ಟು ಚೆನ್ನಾಗಿರುವಂತೆ ನನಗೆ ಕಂಡುಬರಲಿಲ್ಲ ಅದರ ಪಕ್ಕಗಳಲ್ಲಿ ಎರಡು ಫಲಕಗಳನ್ನು ನೋಡಿದೆನು ಒಂದರಲ್ಲಿ ಲಾರ್ಡ್ ಕರ್ಜನ್ ರವರು ಪುರಾತನಕಾಲದ ಬಂಗಾರ ... ವಾದ ಕಟ್ಟಡಗಳನ್ನು ಸಂರಕ್ಷಣಮಾಡುತ್ತಿರುವ ಹಾಗೂ, ಎರಡನೆಯದರಲ್ಲಿ ವಾಯವ್ಯ ಸರಹದ್ದು ಪ್ರಾಂತದ ... ವಂಶೀಕರು ನಿಂತುಕೊಂಡು ಗ್ರೇಟ್ ಬ್ರಿಟನ್ ರಾಜ್ಯದ ವಿಷಯದಲ್ಲಿ ತಮ್ಮ ಜಯಭಕ್ತಿಗಳನ್ನು ಪ್ರದರ್ಶನಮಾಡುತ್ತಿರುವ ಹಾಗೂ ಚಿತ್ರ ... ಇವೆರಡೂ ... ಸ್ವಾರಸ್ಯವಾಗಿಯೂ ಸ್ವತಂತ್ರವಾಗಿ ತೋರದಂತೆಯೂ ಇರುವವು

ಮದನಲಾಲ್ ಢಿಂಗ್ರಾ ಎಂಬ ಪಂಜಾಬಿನ ... ಲಂಡನ್ ಪಟ್ಟಣದಲ್ಲಿ ಸರ್ ಕರ್ಜನ್ ವೈಲಿ ಎಂಬ ಸರದಾರರನ್ನು ಕ್ರೂರತನದಿಂದ ಕೊಂದುಹಾಕಿದ ಸಮಯದಲ್ಲಿ ಲಾಲ್‌ಕಾಕಾ ಎಂಬೊಬ್ಬ ಪಾರ್ಸಿ ಡಾಕ್ಟರು ಸಾಹಸದಿಂದ ಆ ದುಷ್ಟನನ್ನು ಹಿಡಿದಾಗ ಆತನಿಗೂ ಗುಂಡೇಟು ಬಿದ್ದು ಮೃತನಾದ್ದನಷ್ಟೆ ... ಉಪಕಾರ ಮಾಡುವುದರಲ್ಲಿ ಹೀಗೆ ತನ್ನ ಪ್ರಾಣವನ್ನೇ ತೆತ್ತುಬಿಟ್ಟ ಡಾಕ್ಟರ್ ಲಾಲ್‌ಕಾಕಾ ಎಂಬಾತನ ಪ್ರತಿಮೆಯನ್ನು ಬೊಂಬಾಯಿನ ... ಆಸ್ಪತ್ರೆಯೊಳಗೆ ಇಡಬೇಕೆಂದು ಗೊತ್ತಾಗಿದೆ ಈ ಪ್ರತಿಮೆಯು ತಯಾರಾಗಿರುವುದನ್ನು ನಾನು ಈ ಪ್ರದರ್ಶನದಲ್ಲಿ ನೋಡಿದೆನು ಅಂಥಾ ಪರಾಕ್ರಮಶಾಲಿಯ ಪ್ರತಿಮೆಯನ್ನು ಬೊಂಬಾಯಿ ಆಸ್ಪತ್ರೆಯಲ್ಲಿರೋದರಿಂದ ಅದರಂತೆ ಎಷ್ಟರನ್ನು ದುಷ್ಕರ ಕೃತ್ಯದಿಂದ ... ಸಂರಕ್ಷಣ ಮಾಡಲು ಅನೇಕರು ಕಲಿಯಬಹುದಾಗಿದೆ

ಹಿಂದುಸ್ಥಾನದಲ್ಲಿ ರಾಜಧಾನಿಯನ್ನು ಕಲ್ಕತ್ತೆಯಿಂದ ದೆಹಲಿ ಪಟ್ಟಣಕ್ಕೆ ವರ್ಗಮಾಡಿದ ವಿಷಯದಲ್ಲಿ ಇಂಗ್ಲೆಂಡಿನೊಳಗೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ ಈ ನಿಮಿತ್ತವಾಗಿ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯೊಳಗೆ ಮೆಂಬರುಗಳು ಚರ್ಚೆ ನಡಿಸಿದರು ಆದರೂ ಚಕ್ರವರ್ತಿ ಸಾರ್ವಭೌಮರವರ ಅನುಜ್ಞೆಯಾಗಿರೋಣದರಿಂದ ಈ ಚರ್ಚೆಯಿಂದ ಪ್ರಯೋಜನವೇನೂ ಇಲ್ಲ ಲಾರ್ಡ್ ಕರ್ಜನ್ ರವರೂ, ಲಾರ್ಡ್ ಮಿಂಟೋರವರೂ ಬಹು ಗಂಭೀರ ಅಭಿಪ್ರಾಯವನ್ನು ಆ ಸಭೆ ಮನೆಯಲ್ಲಿ ಸೂಚಿಸಿ, ಈ ರಾಜಧಾನಿಯ ಬದಲಾವಣೆಯನ್ನು ಆಕ್ಷೇಪಣ ಮಾಡಿದರು ಲಂಡನ್ ಪಟ್ಟಣದಲ್ಲಿರುವ ಅನೇಕರು ನನ್ನನ್ನು ಸಂಧಿಸಿ, ನನ್ನ ಅಭಿಮತವೇನೆಂದು ಕೇಳುವರಾದರು ಇದನ್ನು ನೋಡುವಲ್ಲಿ ಹಿಂದುಸ್ಥಾನದ ಶ್ರೇಯೋಭಿವೃದ್ಧಿಯ ವಿಷಯದಲ್ಲಿ ಅನೇಕಾನೇಕರು ಮನಸ್ಸು ಕೊಟ್ಟು ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಕುತೂಹಲ ಪಡಲಾರಂಭಿಸಿದಾರೆಂದು ಗೊತ್ತಾಗುವುದು ಆದರೆ ಹಿಂದುಸ್ಥಾನದ ವಿದ್ಯಮಾನಗಳನ್ನು ಸಮರ್ಪಕವಾಗಿ ಶೋಧಿಸಿ ತಿಳಿದಿರುವಂಥಾ ಮನುಷ್ಯರು ಸಿಕ್ಕುವುದು ದುರ್ಲಭವಾಗಿದೆ

ಮೈಸೂರು ಸಂಸ್ಥಾನದಲ್ಲಿ ಬಹು ಕಾಲದ ಹಿಂದೆ ಇದ್ದು ವಾಪಸು ಬಂದಿರುವ ಅನೇಕ ದೊಡ್ಡ ಮನುಷ್ಯರನ್ನು ನಾನು ನೋಡಿ

ಸಂತೋಷಪಟ್ಟೆನು ಆಗರೆಲ್ಲಾ ಆ ಸೀಮೆಯ ಮೇಲೆ ವಿಶೇಷ ದಾದ ಪ್ರೀತಿಯನ್ನಿಟ್ಟು ಕೊಂಡಿದಾರೆ, ಅವರು ತಮಗೆ ತುಂಬಾ ದಗಳಿರುವ ಸ್ಥಳಗಳಿಗೆ ಮತ್ತೊಮ್ಮೆ ಹೋಗಬೇಕೆಂದು ಕುತೂ ಹಲಪಡುವರು ಅವರ ಸಂಗಡ ಮಾತನಾಡುವಲ್ಲಿ ನಾನು— ಈಗ ಅನೇಕ ಊರುಗಳು ತುಂಬಾ ಬದಲಾವಣೆ ಹೊಂದಿವೆ ಯೆಂದೂ, ಕೆಲವನ್ನು ಅಭಿವೃದ್ಧಿ ಮಾಡುತ್ತಿದಾರೆಂದೂ, ಈಗ ಅವರು ಬಂದು ನೋಡಿದರೆ ಅವುಗಳ ಗುರುತೇ ಸಿಕ್ಕುವ ದಾಗಿಲ್ಲವೆಂದೂ, ರೈಲ್ವೆಗಳೂ ವಿದ್ಯುಚ್ಛಕ್ತಿಯೂ ದೊಡ್ಡ ಪಟ್ಟ ಣಗಳಲ್ಲಿ ನಾನಾ ಬದಲಾವಣೆಗಳನ್ನುಂಟುಮಾಡಿವೆ ಎಂದೂ ಅವ ರಿಗೆ ಹೇಳುತ್ತಿದ್ದೆನು

ದೇವರ ಪ್ರಾರ್ಥನೆಯ ವಿಷಯ ಜನರು ಮಾಡುವ ಎರಡು ಆಕ್ಷೇಪಣೆಗಳು

ಮನುಷ್ಯನು ಪರಾಧೀನನಾಗಿರುವುದಕ್ಕಾಗಿ ಉಂಟುಮಾಡ ಲ್ಪಟ್ಟವನೇ ಹೊರತು ಸರ್ವ ಸ್ವತಂತ್ರನಾಗಿರುವುದಕ್ಕಲ್ಲ ಯಾರು ತಮ್ಮ ವಿಷಯದಲ್ಲಿ ನಾವು ಪರಾಧೀನರಲ್ಲ, ಸರ್ವ ಸ್ವತಂತ್ರರೆಂದು ನಂಬಿಕೊಂಡು ನಡೆಯುತ್ತಾರೋ ಅಂಥವರು ತಾವು ಇರಬೇಕಾದಷ್ಟು ಉತ್ತಮರಾಗಿರಲಾರರು ಮನುಷ್ಯರು ದೇವರೊಂದಿಗೆ ಪರಸ್ಪರ ಅನ್ಯೋನ್ಯ ಭಾವವನ್ನು ಹೊಂದಿದವರಾ ಗಬೇಕು ಇದಕ್ಕಾಗಿಯೇ ಅವರು ಸೃಷ್ಟಿಸಲ್ಪಟ್ಟಿರುತ್ತಾರೆ ಅವರಿಗೆ ದೇವರೊಂದಿಗೆ ಏಕೀಭವಿಸಿರುವುದರ ಮೂಲಕವಾಗಿ ಅವರು ಶಕ್ತಿಯನ್ನೂ ಜ್ಞಾನವನ್ನೂ ಒಳ್ಳೇತನವನ್ನೂ ಹೊಂದು ತ್ತಾರೆ ದೇವರೊಂದಿಗೆ ಅನ್ಯೋನ್ಯವಾಗಿರುವುದೇ ಪ್ರಾರ್ಥನೆ, ಅಂದರೆ ನಮ್ಮ ಕೊರತೆಗಳನ್ನೆಲ್ಲಾ ಆತನಲ್ಲಿ ಹೇಳಿಕೊಳ್ಳುವುದು, ನಮ್ಮ ಸರ್ವ ಅಪರಾಧಗಳನ್ನೂ ಆತನ ಮುಂದೆ ಅರಿಕೆಮಾಡು ವುದು, ನಮ್ಮಲ್ಲಿ ಹುಟ್ಟುವ ದುರಾಶೆಗಳನ್ನು ನಿಗ್ರಹಿಸುವುದಕ್ಕೂ ನಾವು ಸಾತ್ವಿಕರಾಗಿ ನಡೆಯುವುದಕ್ಕೂ ನಮಗೆ ಸಹಾಯ ಬೇಕೆಂದು ವಿಸ್ತಾರವಾಗಿ ವಿಜ್ಞಾಪನೆ ಮಾಡಿಕೊಳ್ಳುವುದು ಮುಂತಾದವುಗಳೇ

ಕೆಲವರು ಹೀಗೆ ಆಕ್ಷೇಪಿಸಬಹುದು— "ದೇವರು ಸರ್ವಜ್ಞ ನಾಗಿರುತ್ತಾನೆ ಆತನಿಗೆ ಅಗೋಚರವಾದ ಕಾರ್ಯವು ಒಂದಾ ದರೂ ಇರುವುದಿಲ್ಲ ಸರ್ವವೂ ಆತನ ಮುಂದೆ ಕರತಲಾ ಮಲಕದಂತೆ ಬಯಲಾಗಿರುವಲ್ಲಿ ನಮ್ಮ ಸ್ಥಿತಿಗತಿ ಬಹಾ ಧಾನಗಳನ್ನು ಆತನಿಗೆ ಹೇಳಬೇಕಾದ ಅಗತ್ಯವೇನಿರುತ್ತದೆ ? ನಾವು ಬಾಯಿ ತೆರೆಯುವುದಕ್ಕಿಂತ ಮುಂಚೆಯೇ ಸರ್ವವೂ ಆತನಿಗೆ ಸಿದ್ಧವಾಗಿಯೇ ಇರುವುದಿಲ್ಲವೇ ಹೀಗಿರುವಲ್ಲಿ ನಾವು ಏಕೆ ಪ್ರಾರ್ಥನೆ ಮಾಡಬೇಕು ? ಇದರಿಂದ ನಮಗೇನು ಫಲ ದೊರ ಕುತ್ತದೆ?" ಎಂಬುವುದೇ ದೇವರು ಸರ್ವಜ್ಞನೆಂಬುವುದು ಸತ್ಯ ವಾದುದು ನಮ್ಮ ಸ್ಥಿತಿಗತಿಗಳ ವರ್ತಮಾನಗಳನ್ನು ಆತನಿಗೆ ತಿಳಿಯ ಪಡಿಸಬೇಕೆಂಬ ಉದ್ದೇಶದಿಂದ ಪ್ರಾರ್ಥನೆ ಮಾಡುವುದು ಅನಾವ ಶ್ಯಕವೇ ಸರಿ ಆದರೂ ನಾವು ಆತನ ಸಂಗಡ ಅನ್ಯೋನ್ಯರಾಗಿರ ಬೇಕೆಂಬುವುದು ಆತನ ಚಿತ್ತವಾಗಿರುತ್ತದೆ ಯಾರಾದರೂ ದೇವ ರನ್ನು ಯಾವುದಾದರೂ ಒಂದು ವರವನ್ನು ಬೇಡಬೇಕೆಂದು ಅಪೇಕ್ಷಿ ಸಿದ್ದಲ್ಲಿ ಅಂಥವರು ಅದನ್ನು ಆತನಲ್ಲಿ ಬೇಡಿಕೊಳ್ಳಬೇಕೆಂಬುವುದು ದೇವರ ಮನಸ್ಸಿನ ಒಂದು ನಿಯಮವಾಗಿರುತ್ತದೆ ನಾವು ಬೇಡಿದ ಹೊರತು ದೇವರ ಅತ್ಯುತ್ತಮವಾದ ವರಗಳು ನಮಗೆ ಲಭ್ಯವಾಗವು ಆತನ ಅಪಾರವಾದ ದಾನಗಳನ್ನು ಪಡೆದಾಗ ನಾವು ಕೃತಜ್ಞತಾಸ್ತುತಿಯನ್ನು ಮಾಡದೆ ಹೋದರೆ ಆತನ ವರಪ್ರಸಾದವು ನಮಗೆ ದೊರೆಯುವುದಿಲ್ಲ ನಮ್ಮ ತಂದೆಯಾಗಿರುವ ದೇವರೂ ಆತನ ಮಕ್ಕಳಾಗಿರುವ ನಾವೂ ಪರಸ್ಪರ ಸಂಭಾಷಣೆಯನ್ನು ಮಾಡುವುದಕ್ಕೆ ಪ್ರಾರ್ಥನೆಯು ಒಂದು ಮಾರ್ಗವಾಗಿದೆ ಈ ಆಕ್ಷೇಪಣೆಗೆ ಕ್ರಿಸ್ತನು ಕೊಡುವ ಉತ್ತರವೇನೆಂದರೆ "ಪ್ರಾರ್ಥನೆ ಮಾಡುವಾಗ ಅನ್ಯಜನರು ಹೇಳಿದ್ದನ್ನೇ ಸುಮ್ಮ ಸುಮ್ಮನೆ ಹೇಳಬೇಡಿ ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ ಇದರಿಂದ ನೀವು ಅವರ ಹಾಗೆ ಇರಬೇಡಿರಿ ನೀವು ನಿಮ್ಮ ತಂದೆಯನ್ನು ಬೇಡಿಕೊ ಳ್ಳುವುದಕ್ಕಿಂತ ಮುಂಚೆಯೇ, ನಿಮಗೆ ಏನೇನು ಅಗತ್ಯವೆಂಬು ದು ಆತನಿಗೆ ತಿಳಿದದೆ"

ಪ್ರಾರ್ಥನೆಯ ವಿಷಯ ಬೇರೆ ಕೆಲವರು "ದೇವರು ನಿಶ್ಚಲನಾಗಿರನಲ್ಲವೇ ? ಆತನು ಮನುಷ್ಯರಾದ ನಮ್ಮ ವಿಷಯ ಪಕ್ಷಪಾತ ತೋರಿಸುವುದಿಲ್ಲವೇ ? ನಾವು ಬೇಡಿದರೂ ಬೇಡದೆ ಇದ್ದರೂ ಆತನು ನಮಗೆ ಬೇಕಾಗಿರುವವುಗಳನ್ನೆಲ್ಲಾ ದಯಪಾಲಿಸುತ್ತಾ ನಲ್ಲವೇ ? ಹೀಗಿರುವಲ್ಲಿ ಪ್ರಾರ್ಥಿಸುವುದರಿಂದ ಫಲವೇನು ?" ಎಂದು ಆಕ್ಷೇಪಿಸಬಹುದು ಮೊದಲಿನ ಆಕ್ಷೇಪಣೆಗೆ ಉತ್ತರ ಹೇಳಿದಂತೆಯೇ ಇದಕ್ಕೂ ಹೇಳಬೇಕಾಗುತ್ತದೆ ಸರ್ವ ಜ್ಞನಾಗಿರುವಾತನಿಗೆ ನಾವು ಏನಾದರೂ ತಿಳಿಸಬೇಕಾದುದು ಇದೆ ಅನಾವಶ್ಯಕವೋ ಹಾಗೆಯೇ ಪ್ರೀತಿಸಾಗರನಲ್ಲಿ ನಮಗೆ ದಯೆತೋರು ಮನಸ್ಸನ್ನು ಹುಟ್ಟಿಸುವುದು ಅನಾವಶ್ಯಕವು

ದೇವರು ಸರ್ವ ಕಾಲಗಳಲ್ಲಿಯೂ ನಮಗೆ ಸಹಾಯ ಮಾಡಲು ಚಿತ್ತವುಳ್ಳವನಾಗಿರುತ್ತಾನೆ ದೇವರನ್ನು ಕೃಪಾ ಪೂರ್ಣನನ್ನಾಗಿ ಮಾಡುವುದಕ್ಕೆ ನಾವು ಕಷ್ಟಪಡಬೇಕಾಗಿಲ್ಲ ಈ ವಿಷಯದಲ್ಲಿ ಯೇಸುಕ್ರಿಸ್ತನು ಹೇಳಿರುವುದೇನೆಂದರೆ — ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಟ್ಟಾನೇ ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ, ಪರಲೋಕದಲ್ಲಿ ರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೇ ವರಗಳನ್ನು ಕೊಡುವನಲ್ಲವೇ ?"

ಪ್ರಾರ್ಥನೆಯು ಆತ್ಮಿಕ ಸಾಧನೆಯಾಗಿದೆ ಇದರಲ್ಲಿ ನಮ್ಮ ಆತ್ಮವು ದೇವರ ಸಾಮೀಪ್ಯವನ್ನು ಸೇರಿ ಆತನೊಂದಿಗೆ ಸಂಭಾ ಷಿಸುವ ಪರಮಾನಂದವನ್ನು ಹೊಂದಿ, ಆತನು ಪವಿತ್ರನಾಗಿರು ವಂತೆಯೇ ಅದೂ ಪವಿತ್ರತ್ವದಲ್ಲಿ ಬೆಳೆಯುತ್ತದೆ. ಪ್ರಾರ್ಥನೆಯು ಪರಮಮಿತ್ರನ ಸಲ್ಲಾಪವಾಗಿದೆ ಅದು ಮನಸ್ಸಿನಲ್ಲಿರುವ ಸಂದೇಹವನ್ನೂ ಭಯವನ್ನೂ ದುಃಖವನ್ನೂ ಹೋಗಲಾಡಿಸಿ ಮನಶ್ಶಾಂತಿಯನ್ನೂ ಧೈರ್ಯವನ್ನೂ ಆನಂದವನ್ನೂ ಹುಟ್ಟಿಸು ತ್ತದೆ ನಾವು ಪವಿತ್ರನಾದ ದೇವರ ಸಾಮೀಪ್ಯ ಸೇರಿದ್ದರೆ ದುರಿಚ್ಛೆಗಳು ನಮ್ಮನ್ನು ಕಾಡಿಸುವುದಿಲ್ಲ, ಲೋಕದ ಆಶಾಪಾಶ ಗಳೆಲ್ಲಾ ಬಿಟ್ಟು ಹೋಗುವುವು, ದೇವರಿಂದ ನಮಗೆ ಸಿಕ್ಕುವ ಪವಿತ್ರತ್ವವೂ ಒಳ್ಳೇತನವೂ ನಮ್ಮ ಹೃದಯದಲ್ಲಿ ತುಂಬಿ ತುಳುಕು ವುವು ಪ್ರಾರ್ಥನೆಯ ಸತ್ಫಲವು ಇದೇ

ಒಳದೇಶದ ವೃತ್ತಾಂತಗಳು.

ಕಳೆದ ವಾರದಿಂದ ರಾಜಧಾನಿಯಲ್ಲಿ ಮೋಡ ಕವಿದುಕೊಂಡು ಶೀತ ಗಾಳಿ ಬೀಸುತ್ತಿದೆ ಆಗಾಗ್ಗೆ ತುಂತುರು ಮಳೆಯೂ ಸುರಿಯುವುದು

* * *

ಶ್ರೀಮನ್ ಮಹಾರಾಜರವರು ನಾಳೆಯೋ ನಾಡಿದ್ದೋ ಪರಿವಾರ ಸಮೇತ ಮೋಟಾರಿನಲ್ಲಿ ಬೆಂಗಳೂರಿಗೆ ಚಿತ್ತೈಸುವವರಾಗಿದಾರೆಂದು ಕೇಳುತ್ತೇವೆ

* * *

ಕಳೆದ ಮೂರು ವರುಷಗಳಿಂದ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ "ಮೈಸೂರ್ ಟೈಂಸ್" ಎಂಬ ಇಂಗ್ಲಿಷ್ ಪತ್ರಿಕೆಯು ವಾಚಕರ ಪ್ರೋತ್ಸಾಹ ವಿಲ್ಲದೆ ನಿಂತುಹೋಯಿತೆಂದು ತಿಳಿದು ವಿಷಾದಪಡುತ್ತೇವೆ

* * *

ಮೈಸೂರು ಸಂಗೀತ ಸಮಾಜದವರು ಕಳೆದ ಶನಿವಾರ ಕೊಳಲು ಎನ್ ರಾಮ ಅಯ್ಯಂಗಾರಿಗೂ ಮೃದಂಗದ ಮುತ್ತುಸ್ವಾಮಿದೇವರಿಗೂ ಅವರ ವಿದ್ಯಾ ಪ್ರವೀಣತೆಯನ್ನು ಮೆಚ್ಚಿ ಭಂಗಾರದ ಮೆಡಲುಗಳನ್ನು ಕೊಟ್ಟಿದ್ದಾರೆ

* * *

ಜರ್ಮನಿಗೆ ಹೋಗಿ ಸಂಸ್ಕೃತ ವಿದ್ಯಾ ಪಾಂಡಿತ್ಯವನ್ನು ಸಂಪಾದಿಸಿಕೊಂ ಡು ಬಂದಿರುವ ಡಾಕ್ಟರ್ ವೆಂಕಟಸುಬ್ಬಯ್ಯನವರು ಕಾಶೀ ಪಟ್ಟಣದ ಸೆಂಟ್ರ ಲ್ ಹಿಂದೂ ಕಾಲೇಜಿನಲ್ಲಿ ಬೋಧನಾ ಕೆಲಸವನ್ನು ಒಪ್ಪಿಕೊಂಡು ಅಲ್ಲಿಗೆ ಪ್ರಯಾಣವಾದರೆಂದು ಕೇಳುತ್ತೇವೆ

* * *

ರಾಜಧಾನಿಯ ಭಕ್ಷಿ ನರಸಪ್ಪನವರ ಛತ್ರದ ಬಳಿ ನಡೆಯುತ್ತಿದ್ದ ಬಳಂಗ್ ಆಟದ ವಿಷಯದಲ್ಲಿ ಒಬ್ಬ ಬಾತ್ಮೀದಾರರು ಪಡುವ ಅಭಿಪ್ರಾಯವನ್ನು ಇನ್ನೊಂದು ಕಡೆ ಓದಬಹುದು ನೆನ್ನೆಮೊನ್ನೆಯಿಂದ ಈ ಜೂಜಾಟವು ಅಲ್ಲಿ ನಿಂತುಹೋಗಿದೆ ಎಂದು ತಿಳಿದು ಸಂತೋಷಪಡುತ್ತೇವೆ

* * *

ರಾಜಧಾನಿಯಲ್ಲಿ ಬೆಣ್ಣೆಹರದನಹಳ್ಳಿ ನಾಲೆ ಬೆಸೆಯಿಂದ ಕೃಷ್ಣರಾಜ ಮೊಹ ಲ್ಲಿಗೆ ಬಹಳ ಕಷ್ಟನಷ್ಟಗಳುಂಟಾಗುತ್ತಿರುವುದರಿಂದ ಆ ನಾಲೆಯ ನೀರನ್ನೇ ಬಲ ವಾದ ಕಲ್ಲು ಬಚ್ಚಲುಕಟ್ಟಿ ತಿರುಗಿಸುವುದಕ್ಕೆ 26,000 ಚಿಲ್ಲರೆ ರೂಪಾಯನ್ನು ಮಂಜೂರುಮಾಡುವುದೇ ಆನ ಕೂಲವೂ ಅವಶ್ಯವೂ ಆಗಿದೆ ಎಂದು ಸ್ಯಾನಿಟರಿ ಬೋರ್ಡಿನವರು ಒಪ್ಪಿ ಗವರ್ನ್‌ಮೆಂಟಿಗೆ ಶಿಫಾರಸು ಮಾಡಿರುತ್ತಾರೆ

* * *

ಕಳೆದ ಗುರುವಾರ ರಾಜಧಾನಿಯ ಪೋಲೋ ಮೈದಾನದಲ್ಲಿ ಶ್ರೀಮನ್ ಯುವರಾಜರವರು ಕುದುರೆ ಸವಾರಿ ಮಾಡುತ್ತಿದ್ದಾಗ ಆಯತಪ್ಪಿ ಆಕಸ್ಮಾತ್ತಾಗಿ ಕೆಳಗೆ ಬಿದ್ದುಬಿಟ್ಟರು ಶ್ರೀಮನ್ ಮಹಾರಾಜರವರು ಕೂಡಲೇ ಅವರನ್ನು ಮೋಟಾರ್ ಗಾಡಿಯಲ್ಲಿ ಕರೆದುಕೊಂಡು ಹೋಗಿ ಚಾಮುಂಡಿ ವಿಹಾರಕ್ಕೆ ಬಿಟ್ಟು, ದರ್ಬಾರ್ ಸರ್ಜನ್‌ರವರಿಂದ ಚಿಕಿತ್ಸೆ ಮಾಡಿಸಿದರು ಯುವರಾಜ ರವರು ಮರುದಿನದಿಂದ ಚೇತರಿಸಿಕೊಳ್ಳುತ್ತಾ ಬಂದು, ಈಗ ಆರೋಗ್ಯವಾಗಿದಾರೆ ಗಾಯಗಳೇನೂ ಆಗಲಿಲ್ಲ

* * *

ಸುಮಾರು 20 ವರುಷದ ಪಾಲಿನಮಾಣಿಕ್ ಎಂಬ ಜಟ್ಟಿಯು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ತನ್ನ ವಿಶೇಷವಾದ ಕಾಯಶಕ್ತಿಯನ್ನು ಪ್ರದರ್ಶ ನಮಾಡಿ ತೋರಿಸಿದನು ಆತ ಮಾಡುವ ಸಾಧನೆಗಳು ಬಹು ಅದ್ಭುತವಾಗಿರು ತ್ತವೆ ಭಾರವಾದ ಗಾಡಿಗಳನ್ನೂ ರೋಲರ್ ಕಲ್ಲನ್ನೂ, ಕಲ್ಲು ಚಪ್ಪಡಿಯ ನ್ನೂ ತನ್ನ ಎದೆಯ ಮೇಲೆ ಎಳೆಸಿಕೊಳ್ಳುವನು ವೇಗವಾಗಿ ಓಡುವ ಮೋಟಾರ್ ಗಾಡಿಯನ್ನು ಹಿಡಿದು ನಿಲ್ಲಿಸುತ್ತಾನೆ ಈ ವಯಸ್ಸಿನಲ್ಲಿ ಇವನು ಮಾಡಿ ತೋರಿ ಸಿದ ಸಾಮರ್ಥ್ಯವನ್ನು ನೋಡಿ ಅನೇಕಾನೇಕರು ಆಶ್ಚರ್ಯಪಡುವರು

* * *

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತೀರ್ಮಾನವಾಗಿರುವ ವಿಷಯಗಳೇ ನೆಂದರೆ—ಶ್ರೀರಂಗಪಟ್ಟಣದಿಂದ ಚನ್ನರಾಯಪಟ್ಟಣಕ್ಕೆ ಹೋಗಿಬರುವ ರಸ್ತೆ ಯಲ್ಲಿ ಕಟ್ಟೆಯ ಉಭಯಪಾರ್ಶ್ವಗಳಿಗೂ ಅಬ್ಬಿಗದ ಕಟಕಟೆಗಳನ್ನು ಹಾಕಿಸ ಬೇಕು ಕೃಷ್ಣರಾಜಪೇಟೆ ಕೂಡ್ಲುಕುಪ್ಪೆ ರಸ್ತೆಯಲ್ಲಿ ಸುಮಾರು 2,000 ರೂಪಾಯಿ ಮಂಜೂರುಮಾಡಿ ಮೂರು ಕವಾನುಗಳುಳ್ಳ ಒಂದು ಸೇತುವೆ ಕಟ್ಟಿಸ ಬೇಕು ಮೇಲುಕೋಟೆಯ ಆಸ್ಪತ್ರೆ ಖರ್ಚಿನಲ್ಲಿ ಮೂರನೇ ಎರಡು ಭಾಗ ವನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಬಹುದು ಪಂಚಮರ ವಿದ್ಯಾಭ್ಯಾಸಕ್ಕೆ ಸಹಾಯಮಾಡಲು ಫಂಡಿನಲ್ಲಿ ಹಣವಿಲ್ಲ

ಮೈಸೂರು ಗೆಜೆಟ್ ಸಂಗ್ರಹ

ಹುಣಸೂರು ತಾಲ್ಲೂಕು ಬೆಟ್ಟದಪಟ್ಟದಲ್ಲಿ ಪ್ಲೇಗ್ ಉಪದ್ರವಿದೆ ಎಂದೂ, ಚನ್ನರಾಯಪಟ್ಟಣ ತಾಲ್ಲೂಕು ಆನೆಕೆರೆ ಮತ್ತು ಹೆಗ್ಗಡಕೆರೆ ಗ್ರಾಮ ಗಳಲ್ಲಿ ಅಂಟುಜಾಡ್ಯವಿಲ್ಲವೆಂದೂ ತಿಳಿಯತಕ್ಕದ್ದು

ಅರಸಿಕೆರೆ ತಾಲ್ಲೂಕು ಅಮರಗಿರಿ ತಿರುಪತಿಯ ಶ್ರೀವೆಂಕಟರಮಣಸ್ವಾಮಿ ರಥೋತ್ಸವಕ್ಕೆ ಅಂಟುಜಾಡ್ಯವಿರತಕ್ಕ ಪ್ರದೇಶಗಳಿಂದ ಯಾರನ್ನೂ ಬಿಡುವುದಿಲ್ಲ ವೆಂದು ತಿಳಿಸಿದೆ

ಕೃಷ್ಣರಾಜಪೇಟೆ ಡೆಪ್ಯುಟಿ ಅಮಲ್ದಾರರಾಗಿ ಬದಲಿ ನೋಡುತ್ತಿದ್ದ ಸಬ್ ರಿಜಿ ಸ್ಟ್ರಾರ್ ಮೆ|| ಎ ರಾಮರಾಯರನ್ನು ಬೆಂಗಳೂರು ಸಬ್ ರಿಜಿಸ್ಟ್ರಾರಾಗಿ ವರ್ಗಮಾಡಿದೆ

ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಕ್ಟಿಂಗ್ ಸೀನಿಯರ್ ಅ|| ಕಮಿಷ ನರ್ ಮೆ|| ಎಲ್ ಕೃಷ್ಣರಾಯರನ್ನು ಕನ್ನಂಬಾಡಿಯ ಬಳಿ ಹೊಸ ಕಾವೇರಿ ತಲಾವಿಗಾಗಿ ಜಮೀನುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕಾಗಿ ನೇಮಕ ಮಾಡಿದೆ

ಮದ್ದೂರು ಸಬ್ ಡಿವಿಜನ್‌ಗೆ ವರ್ಗಪಟ್ಟಿರುವ ಅ|| ಕಮಿಷನರ್ ಮೆ|| ಎ ಕೃಷ್ಣಸ್ವಾಮಯ್ಯಂಗಾರ್ರಿಗೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಕಾನಕಾನಹಳ್ಳಿ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಸಿ ಶ್ರೀನಿವಾಸ ರಾಯರಿಗೆ ಫಾರೆಸ್ಟ್ ರೆಗ್ಯುಲೇಷನ್‌ಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಓದಿದು ಇತ್ಯರ್ಥಮಾಡುವ ಅಧಿಕಾರ ಕೊಟ್ಟಿದೆ

ಮೆ|| ಸಿ ಇ ಸೂರ್ಯನಾರಾಯಣರಾಯರನ್ನು 1911 ನೇ ನವಂಬರ್ ತಾ 1 ರಿಂದ ಟ್ರೈನಿಂಗ್ ಅಸಿಸ್ಟೆಂಟ್ ಕೆಲಸದಲ್ಲಿ ಖಾಯಂ ಮಾಡಿದೆ

ಮೆ|| ಎ ಛಾಟರ್ಟನ್‌ರವರನ್ನು ಮೈಸೂರು ಸಂಪದಭಿವೃದ್ಧಿ ಸಮಾಜ ದಲ್ಲಿ ಕಸಬು ಮತ್ತು ವ್ಯಾಪಾರಾಭಿವೃದ್ಧಿಗೆ ಸ್ಪೆಷಲ್ ಆಫೀಸರಾಗಿ ನೇಮಿಸಿದೆ - ಸಂಸ್ಥಾನದ ಇರಾಖಾ ಮೊಖ್ತೇಸರರೂ, ಡೆಪ್ಯುಟಿ ಕಮಿಷನರುಗಳೂ, ಪ್ರಜೆಗಳ ಮುಖಂಡರೂ ಅವರ ಅನುಭವದಿಂದ ಸಹಾಯ ಪಡೆದು ಕೆಲಸ ನಡಿಸಬೇಕೆಂದು ಸೂಚಿಸಲಾಗಿದೆ

ಹಿಂದುಸ್ಥಾನದ ಈಗಿನ ಸ್ಥಿತಿಗತಿಯು.

ಈ ಇಂಡಿಯಾ ಚಕ್ರಾಧಿಪತ್ಯವು ಧರ್ಮಪ್ರಭುಗಳೂ ರಾಜತಂತ್ರವಿಶಾರದ ರೂ ನಾಗರಿಕ ಶಿರೋಮಣಿಗಳೂ ಆದ ಬ್ರಿಟಿಷ್ ಸಾರ್ವಭೌಮರ ಆಳಿಕೆಗೂ ಉತ್ತಮ ಶಿಕ್ಷಣಕ್ಕೂ ಒಳಪಟ್ಟು ನೂರಾರು ವರ್ಷಗಳಾದರೂ ನಮ್ಮವರು ಮಾತ್ರ ತಕ್ಕಷ್ಟು ಅಭಿವೃದ್ಧಿಗೆ ಬಾರದಿರುವುದು ಸಂತಾಪಕರವಾಗಿದೆ ಇದಕ್ಕೆ ನಮ್ಮವರ ತಪ್ಪೇ ಕಾರಣವೆನ್ನಬಹುದು

೧ ಇಲ್ಲಿ ನಮಗೆ ಏಳಿಗೆಯುಂಟಾಗದಿರುವುದಕ್ಕೆ ಇಲ್ಲಿನ ಜಾತಿ ಪದ್ಧತಿ ಗಳು ಕಾರಣವೆಂದು ಈ ಕಾಲದ ವಿದ್ಯಾವಂತರಲ್ಲಿ ಕೆಲವರು ಅಭಿಪ್ರಾಯಪಡು ವರು ಈಗಿನ ಲೋಕವ್ಯವಹಾರವನ್ನು ಚೆನ್ನಾಗಿ ತಿಳಿಯದ ಪೂರ್ವಿಕರಲ್ಲಿ ಕೆಲ ವರು ಅವರನ್ನು ದೂಷಿಸುವರು ಹೀಗೆ ಇವರಿಬ್ಬರೂ ಭಿನ್ನಾಭಿಪ್ರಾಯಗಳಿಂದ ವೈಮನಸ್ಯವನ್ನು ಹೊಂದದೆ, ಸೌಹಾರ್ದದಿಂದ ಕಲೆತು ಶಾಸ್ತ್ರವಿರೋಧವಿಲ್ಲದಂತೆ ಜಾತಿಮತಗಳ ಕಟ್ಟನ್ನು ಕಾಲಾನುಸಾರವಾಗಿ ಸ್ವಲ್ಪಮಟ್ಟಿಗೆ ಸಡಿಲಮಾಡಿಕೊಂ ಡರೆ ದೇಶಕ್ಕೆ ಮೇಲಾದೀತು । ಆದರೆ ಈಗಿನ ಕೆಲವು ಜಪಾನರಂತೆ ಪೂರ್ಣವಾಗಿ ಜಾತಿಯನ್ನೇ ಅಥವಾ ಮತವನ್ನೇ ಬಿಟ್ಟುಬಿಡುವುದಾಗಲಿ, ಅಥವಾ ನಮ್ಮಲ್ಲಿ ಈಗ ಅವಿಚಾರವಾಗಿ ನಡೆಯುತ್ತಿರುವ ಅಶಾಸ್ತ್ರೀಯಗಳಾದ ಕೆಲವು ಮಠದ ಪದ್ಧತಿಗಳನ್ನು ಅನುಸರಿಸಲೇಬೇಕೆಂಬುದಾಗಲಿ ಸಮಂಜಸವಾಗಲಾರದು

೨ ನಮ್ಮಲ್ಲಿರುವ ಮತ್ತೊಂದು ಕೆಟ್ಟ ಚಾಳಿಯು ಆಲಸ್ಯ ಇದು ಮೇಲ್ತರಗತಿಯವರಿಂದ ಕೀಳ್ತರಗತಿಯವರ ವರೆಗೂ ರೂಢಮೂಲವಾಗಿದೆ ಎಲ್ಲರೂ ಇದ್ದದ್ದರಲ್ಲೇ ತೃಪ್ತರಾಗಿ ಕೆಲಸಕ್ಕೆ ಬಾರದ ವೈರಾಗ್ಯವನ್ನು ಹೇಳು ತ್ತಿರುವರೇ ಹೊರತು ತಾವು ಇನ್ನೂ ಮುಂದಕ್ಕೆ ಬರಬೇಕೆಂಬ ಕೋರಿಕೆಯನ್ನೇ ಇಟ್ಟುಕೊಂಡಿಲ್ಲ ಅಥವಾ ಹಾಗೆ ಇಷ್ಟಪಟ್ಟರೂ ಅದನ್ನು ಸಾಧಿಸುವುದಕ್ಕೋ ಸ್ಕರ ಮೈಬಗ್ಗಿ ಕೆಲಸಮಾಡುವುದಿಲ್ಲ

೩ ನಮ್ಮ ಧನಿಕರಲ್ಲಿ ಕೆಲವರು ತಮ್ಮ ಹಣವನ್ನು ಭೂಮಿಯಲ್ಲಿ ಹೂತಿಡುವರು, ಮತ್ತೆ ಕೆಲವರು ಅದನ್ನು ಲೇವಾದೇವಿಯಲ್ಲಿ ಹಾಕುವರು ಆದರೂ ಇವರು ಹಣವನ್ನು ಕೊಟ್ಟು ಬಡವರನ್ನು ಉದ್ಧಾರಮಾಡುವರೆಂದು ಹೇಳಲಾಗದು ಯಾಕೆಂದರೆ—ಇಂಥವರು ಒಂದಕ್ಕೆರಡು ಬಡ್ಡಿಯನ್ನು ಬಡ್ಡಿಗೆ ಬಡ್ಡಿಯನ್ನು ಹೇರಿ ಅವರ ಮನೆಮಠಗಳನ್ನು ಹಾಳುಮಾಡುವರು ಪಾಪಭೀತ ರಾದ ಹಣಗಾರರು ತಮ್ಮ ದ್ರವ್ಯವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿ ಅಲ್ಪ ಬಡ್ಡಿಯಿಂದಲೇ ತೃಪ್ತರಾಗುವರು ಈಚೆಗೆ ಹೊರದೇಶದ ಯಂತ್ರಗಳಲ್ಲಿ ನಾಜೂಕಾಗಿ ತಯಾರಾದ ವಸ್ತುಗಳು ಸುಲಭಬೆಲೆಯಲ್ಲಿ ದೊರೆಯುತ್ತಿರುವುದ ರಿಂದ ನಮ್ಮ ನೆಯ್ಗೆಯವರೇ ಮುಂತಾದ ಕೈಗಾರಿಕೆಯವರು ತಮ್ಮ ಕಸುಬಿಗೆ ಪ್ರೋತ್ಸಾಹವಿಲ್ಲದೆ ಪ್ರಾಣಬಿಡುತ್ತಿರುವರು ಇದನ್ನು ಕಣ್ಣಾರ ನೋಡಿದರೂ ನಮ್ಮ ಧನಿಕರು ತಟಸ್ಥರಾಗಿರುವರು ಹೀಗಿರುವಲ್ಲಿ ಕೈಗಾರಿಕೆ ಹೆಚ್ಚುವುದು ಹೇಗೆ ? ಇಲ್ಲಿನ ಗಣಿಗಳು, ರೈಲ್ವೆ, ಇವೆಲ್ಲ ಕಂಡವರ ಬಂಡವಾಳದಿಂದ ನಡೆಯು ತ್ತಿವೆ ಹೋಗಲಿ ಈಗಲೂ ನಮ್ಮ ಸಾಹುಕಾರರೆಲ್ಲ ಒಗ್ಗಟ್ಟಾಗಿ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ ತಾವೂ ಲಾಭಪಡೆಯುತ್ತ ಸಾವಿರಾರು ಜನ ಕೆಲಸ ಗಾರರಿಗೂ ಜೀವನವನ್ನು ಕಲ್ಪಿಸುತ್ತ ಬಂದರೆ ಎಷ್ಟು ಮೇಲಾದೀತು ಆದರೆ ಇದಕ್ಕೆ ನಮ್ಮಲ್ಲಿ ಪರಸ್ಪರ ನಂಬಿಕೆಯೇ ಇಲ್ಲ ಜಪಾನರ ಬ್ಯಾಂಕುಗಳ ಆಡಳಿತವನ್ನು ನೋಡಿ ನಡೆಯಬಾರದೆ ?

೪ ನಮ್ಮವರು ಎಷ್ಟು ಬುದ್ಧಿಶಾಲಿಗಳೂ, ವಿದ್ಯಾವಂತರೂ—ಕಡೆಗೆ ಕೇಂ ಬ್ರಿಜ್ ಮುಂತಾದ ಯೂನಿವರ್ಸಿಟಿಗಳಲ್ಲಿ ಸರ್ವೋತ್ತಮರಾಗಿ ತೇರಿದವರೂ— ಆದಾಗ್ಯೂ ಇವರ ಬುದ್ಧಿಶಕ್ತಿಗಳೆಲ್ಲ ಅಷ್ಟರಲ್ಲಿಯೇ ಕೊನೆಗಾಣುವವೇ ವಿನಾ ಯಾವ ಹೊಸ ಅಂಶಗಳನ್ನೂ ಕಂಡುಹಿಡಿಯಲಾರವು ನಮ್ಮವರು ಜಪಾನರಂತೆ ಹೊಸ ಅಂಶಗಳನ್ನು ಕಂಡುಹಿಡಿಯುವುದೆಂದಿಗೋ?

೫ ವಿದ್ಯಾಭ್ಯಾಸ ವಿಚಾರದಲ್ಲಿ ಇಂಡಿಯಾಕ್ಕೂ ಜಪಾನಿಗೂ ಅಜಗಜಾಂ ತರವುಂಟೆಂಬುದನ್ನು ವಿವರಿಸಬೇಕಾಗಿರುವುದಿಲ್ಲ ನಮ್ಮಲ್ಲಿ ವಿದ್ಯಾವಂತರೇ ವಿರಳ ಅವಿದ್ಯಾವಂತರು ನಮ್ಮಲ್ಲಿ ತಾವೇ ಕೀಳೆಂದು ಭಾವಿಸಿಕೊಳ್ಳುತ್ತಲೂ, ವಿದ್ಯಾವಂತರಾದ ಕೆಲವರಿಂದ ಕಿರುಕುಳವನ್ನು ಅನುಭವಿಸುತ್ತಲೂ ಇದ್ದಾರೆ ಇಂತಹರಿಗೆ ನಿರ್ಬಂಧಬಂದಲಾದರೂ ವಿದ್ಯೆ ಕಲಿಸಿದರೆ ಸ್ವಲ್ಪಮಟ್ಟಿಗೆ ಫಲವಾ ದೀತು ಈ ಪದ್ಧತಿಯು ಬರೋಡಾದಲ್ಲಿ ಈಗ ಆಚರಣೆಯಲ್ಲಿದೆ ಒಂದಾ ನೊಂದು ಕಾಲದಲ್ಲಿ ಪ್ರಪಂಚದಲ್ಲೆಲ್ಲಾ ನಾಗರಿಕ ಶಿರೋಮಣಿಗಳೆನಿಸಿಕೊಂಡಿದ್ದ ಆರ್ಯರ ವಂಶದಲ್ಲಿ ಅವತರಿಸಿರುವ ನಾವು ಈಗ ನಮ್ಮ ಆರ್ಯಭಾಷೆಯನ್ನು ಕೂಡ ಇತರರಿಂದ ಭಿಕ್ಷೆಬೇಡಿ ತಿಳಿಯಬೇಕಾಗಿ ಬಂದಿದೆ ಹೇಗೆಂದರೆ— ಸಂಸ್ಕೃತ ಭಾಷೆಗೂ ಅದರ ಗ್ರಂಥಗಳಿಗೂ ಈ ನಮ್ಮ ಭರತಖಂಡವೇ ಜನ್ಮ ಸ್ಥಾನವೆಂಬುದು ಯಾವ ಜನಾಂಗದವರಿಗೂ ತಿಳಿಯದ ಅಂಶವಾಗಿಲ್ಲ ಹೀಗಿದ್ದ ರೂ ಈಗ ನಾವು ಈ ಭಾಷೆಯನ್ನು ಸರಿಯಾಗಿ ಅಭ್ಯಾಸಮಾಡುವುದಕ್ಕೂ ಹೆಚ್ಚು ಅಂಶಗಳನ್ನು ತಿಳಿಯುವುದಕ್ಕೂ ಜರ್ಮನಿ ದೇಶಕ್ಕೆ ಹೋಗಬೇಕಾಗಿ ಬಂದಿದೆ ಈ ವಿಷಯದಲ್ಲಿ ಇಂಡಿಯಾವನ್ನೂ ಪಾಶ್ಚಾತ್ಯ ದೇಶಗಳನ್ನೂ ಚೀನಾ ಜಪಾನ್ ರಾಜ್ಯಗಳಿಗೆ ಹೋಲಿಸಬಹುದು ಯಾಕೆಂದರೆ—ಪೂರ್ವದಲ್ಲಿ ಜಪಾ ನರು ತಮ್ಮ ನಾಗರಿಕತೆ, ವಿದ್ಯೆ, ಕೈಗಾರಿಕೆ ಮುಂತಾದುವನ್ನೆಲ್ಲ ಚೀನರಿಂದಲೇ ಕಲಿತುಕೊಂಡರು ಈಗಲಾದರೋ ಚೀನರು ಅದೇ ವಿಷಯಗಳನ್ನು ಜಪಾನ ರಿಂದ ಕೇಳಿಸಿಕೊಳ್ಳಬೇಕಾಗಿದೆ ಇದರಿಂದ ಇಂಡಿಯಾ ಚೀನಾ ರಾಜ್ಯಗಳ ಅಲಸಿಕೆಯೂ, ಪಾಶ್ಚಾತ್ಯ ಮತ್ತು ಜಪಾನ್ ರಾಜ್ಯಗಳ ಚಟುವಟಿಕೆಯೂ ಚೆನ್ನಾಗಿ ವ್ಯಕ್ತಪಡುವವು

೬ ನಮ್ಮ ವಿಶದ ವಿದ್ಯಾವಂತರು ತಾವೆಷ್ಟು ದೊಡ್ಡ ಜಮೀನ್ದಾರರಾಗಿ ದ್ದರೂ ಉತ್ತಮಕ್ರಮದಲ್ಲಿ ತಮ್ಮ ಭೂಮಿಯನ್ನು ವ್ಯವಸಾಯಮಾಡಿಸಲೊಲ್ಲದೆ ನೌಕರಿಗಳಿಗೆ ಹೋರಾಡುವರು ವಿದ್ಯಾವಂತರೇ ಅಂತಹ ಕಿರು ಪಾಟು ಮಾಡ ದಿದ್ದರೆ ಇನ್ನು ನಿರಕ್ಷರ ಕುಕ್ಷಿಯಾದ ರೈತನು ಯಾವ ಬದಲಾವಣೆಯನ್ನು ತಾನೇ ಮಾಡಿಕೊಳ್ಳಬಲ್ಲನು ? ನಮ್ಮ ರೈತರು ಈಗ್ಗೆ ೨೦೦ ವರ್ಷಗಳಿಗೆ ಮುಂಚೆ ಯಾವ ನೇಗಿಲನ್ನು ಉಪಯೋಗಿಸಿ ಬೇಸಾಯಮಾಡುತ್ತಿದ್ದರೋ ಈಗಲೂ ಸ್ವಲ್ಪವೂ ಬದಲಾವಣೆಯಿಲ್ಲದೆ ಅದರಿಂದಲೇ ಉಳುತ್ತಿರುವರು ರೈತರೆಲ್ಲ ವಿದ್ಯೆಯ ಬೆಲೆಯನ್ನೂ ವಿದ್ಯಾವಂತರು ಕೃಷಿಯ ಯೋಗ್ಯತೆಯನ್ನೂ ತಿಳಿದು ಸಮಂಜಸವಾಗಿ ನಡೆದರೆ ಆಗ್ಗೆ ನಮ್ಮ ದರಿದ್ರ್ಯವು ತೊಲಗೀತು

ಸಂಗ್ರಹ

ಚಿತ್ರದುರ್ಗ ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘವು.

ಜೂಲೈ ತಿಂಗಳ ಮೀಟಿಂಗು

ಈ ಸಂಘದ ಮೆಂಬರುಗಳು ತಿಂಗಳುಕಟ್ಟಳೆಯ ಮೀಟಿಂಗನ್ನು ಈ ತಿಂಗಳು 7 ನೇ ತಾ ಭಾನುವಾರ ಮಧ್ಯಾಹ್ನ ಗರ್ಲ್ಸ್ ಸ್ಕೂಲ್ ಹಾಲಿನಲ್ಲಿ ನಡಿಸಿದರು ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ತಿರುಮಲಾಚಾರ್ಯರವರು, ಹೈಸ್ಕೂಲ್ ಅ ಮಾ ಮ|| ಲಕ್ಷ್ಮೀಪತಯ್ಯನವರು, ಶ್ರೀಧರ ಮೂರ್ತಿರಾಯರವರು ದಯಮಾಡಿಸಿದ್ದರು ವಿಲೇಜು ಸ್ಕೂಲುಗಳಿಂದ 22 ಜನಗಳೂ, ಗ್ರ್ಯಾಂಟ್ ಸ್ಕೂಲುಗಳಿಂದ 4 ಜನಗಳೂ, ಎ ವಿ ಸ್ಕೂಲುಗಳಿಂದ 6 ಜನಗಳೂ, ವಾಲಂಟಿಯರುಗಳು 4 ಜನಗಳೂ ಎಲ್ಲಾ ಒಟ್ಟು 36 ಜನ ಮೆಂಬರುಗಳು ಸೇರಿದ್ದರು

ಪ್ರೆಸಿಡೆಂಟರವರ ಅಪ್ಪಣೆ ಪ್ರಕಾರ ಕೆಲಸಗಳಿಗೆ ಪ್ರಾರಂಭವಾಯಿತು ಕೂಡಲೆ ಎಲ್ಲರೂ ನಿಂತುಕೊಂಡಾಗ ಒಬ್ಬ ಉಪಾಧ್ಯಾಯರು ಪಿಟೀಲು ಮೂಲಕ ದೇವರ ಸ್ತೋತ್ರವನ್ನು ಮಾಡಿದರು ಇದೇ 1912-1913 ನೇ ವರ್ಷದ ಮೊದಲನೇ ಮೀಟಿಂಗು ಎಂದು ತಿಳಿಸಲ್ಪಟ್ಟಿತು

ಸುಮಾರು 15 ಜನ ಬಾಲಕರುಳ್ಳ ಕನ್ನಡ ಬಿ ತರಗತಿಗೆ ಗಣಿತಸಾರವನ್ನು ಮ|| ವೆಂಕಟಾಚಲಯ್ಯನವರು ಬೋಧಿಸಿದರು ತರುವಾಯ ಅವರ ಬೋಧನಾಕ್ರಮದ ವಿಷಯದಲ್ಲಿ ಕೊಂಚ ಚರ್ಚೆ ಆಕ್ಷೇಪಣೆ ಮತ್ತು ಸಮಾಧಾನಗಳು (ಕ್ರಿಟಿಸಿಜಂ) ನಡೆದು ಕೆಲವು ಅಂಶಗಳನ್ನು ತೀರ್ಮಾನ ಮಾಡಿದರು

1911-1912 ನೇ ವರ್ಷದ ವಾರ್ಷಿಕೋತ್ಸವವನ್ನು ಅಕ್ಟೋಬರ್ ತಿಂಗಳಲ್ಲಿ ನಡಿಸಬೇಕೆಂತಲೂ, ಎಲ್ಲಾ ಬ್ರ್ಯಾಂಚ್ ಸಂಘಗಳಿಂದ ಬರತಕ್ಕ ಉಪಾಧ್ಯಾಯರುಗಳನ್ನೂ ಕರೆಸಿಕೊಂಡು ಬೋಧನಾಕ್ರಮದಲ್ಲಿ ಕೆಲವಂಶಗಳನ್ನು ಗೊತ್ತುಮಾಡಬೇಕಾಗಿದೆ ಎಂದೂ ತಿಳಿಯಪಡಿಸಿದರು ಹೈಸ್ಕೂಲ್ ಮಾಸ್ಟರುಗಳೆಲ್ಲರೂ ಇನ್ನು ಮುಂದಕ್ಕೆ ಸಹಾಯ ಮಾಡುವದಾಗಿ ಒಪ್ಪಿಕೊಂಡಿರುತ್ತಾರೆ

ಮುಂದಿನ ತಿಂಗಳಲ್ಲಿ ನಡಿಸಬೇಕಾದ ಕೆಲಸಗಳು —ಪ್ರಾಕ್ಟಿಕಲ್ ಕ್ಲಾಸಿನಲ್ಲಿ ಭೂವಿವರಣೆ ಸಾರವನ್ನು ಬೋಧಿಸುವುದು ಈ ವಿಷಯದಲ್ಲಿ ಹೈಸ್ಕೂಲ್ ಅ ಮಾ ಮ ಶ್ರೀಧರ ಮೂರ್ತಿರಾಯರವರು ಉಪನ್ಯಾಸ ಕೊಡುವುದಾಗಿ ಒಪ್ಪಿರುತ್ತಾರೆ ಮುಂದಿನ ಮೀಟಿಂಗು ಆಗಸ್ಟ್ 4 ನೇ ತಾ ಭಾನುವಾರ ನಡೆಯುವುದರಿಂದ ಎಲ್ಲಾ ಮೆಂಬರುಗಳೂ ದಯಮಾಡಿಸಬೇಕೆಂದು ಕೇಳಿಕೊಂಡಿವೆ

ವೀಣಾ ಭಿಷ್ಟಪ್ಪ,
ಉಪಾಧ್ಯಾಯ ಸಂಘದ ಸೆಕ್ರೆಟರಿ

ಹೈದರಾಬಾದ್ ಸಂಸ್ಥಾನವು

ಹೊಸ ವಿಜಾರರವರು ನೇಮಕವಾದದ್ದು.

ಹೈದರಾಬಾದ್ ಸಂಸ್ಥಾನದಲ್ಲಿ ಮಹಾರಾಜಾ ಸರ್ ಕಿಶನ್ ಪ್ರಸಾದ್ ಬಹದೂರ್ ಯವರು ಕಳೆದ ಹನ್ನೆರಡು ವರುಷಗಳಿಂದ ಪ್ರಧಾನ ಮಂತ್ರಿಗಳಾಗಿದ್ದು ಆ ಸೀಮೆಯ ಆಳಿಕೆಯಲ್ಲಿ ಅನೇಕ ಹೊಸ ಶಿಸ್ತುಗಳನ್ನು ರೂಢಿಸಿ ಹೆಸರುವಾಸಿಗೆ ಬಂದಿದ್ದಾರೆ ಕಳೆದ ವಾರ ನೈಜಾಮರವರು ಒಂದು ಇಸ್ತಿಹಾರ್‌ನಾಮೆಯನ್ನು ಪ್ರಕಟಿಸಿ, ಅವರನ್ನು ಕೆಲಸದಿಂದ ನಿವೃತ್ತಿಮಾಡಿ, ಅವರ ಸ್ಥಾನಕ್ಕೆ ನವಾಬ್ ಸಾಲಾರ್ ಜಂಗ್ ಬಹದೂರ್ ಯವರನ್ನು ನೇಮಕ ಮಾಡಿಕೊಂಡರು ಅದರ ಮುಖ್ಯಾಭಿಪ್ರಾಯವೇನೆಂದರೆ—

ಮಹಾರಾಜಾ ಸರ್ ಕಿಶನ್ ಪ್ರಸಾದ್ ಬಹದೂರ್ ಯವರು ಆರು ತಿಂಗಳ ರಜಾ ಅಪೇಕ್ಷಿಸಿರುವುದರಿಂದ ಅವರಿಗೆ ಈ ರಜವನ್ನು ಕೊಡಲಾಗಿದೆ ಈ ರಜಾ ಕಾಲದಲ್ಲಿ ಅವರು ಪೇಷ್ಕಾರರಾಗಿರತಕ್ಕದ್ದು ಸದ್ಯದಲ್ಲಿ ಮೂರು ವರುಷಗಳ ತನಕ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ ನವಾಬ್ ಸಾಲಾರ್ ಜಂಗ್ ಬಹದೂರ್ ಯವರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿದೆ ಈ ಭಾರಿ ಉದ್ಯೋಗವನ್ನು ಅವರು ಚಟುವಟಿಕೆಯಿಂದ ನಡೆಸುವುದಕ್ಕೆ ಸಹಾಯವಾಗುವಂತೆ ನವಾಬ್ ಇಮದ್-ಉಲ್-ಮುಲ್ಕ್, ಸಿ ಎಸ್ ಐ ಯವರನ್ನು ಅವರಿಗೆ ಅಸಿಸ್ಟೆಂಟಾಗಿ ನೇಮಕಮಾಡಿದೆ ಇನ್ನು ಮುಂದೆ ನವಾಬ್ ಸಾಲಾರ್ ಜಂಗ್ ಬಹದೂರ್ ಯವರು ಕೊಡುವ ಎಲ್ಲಾ ಹುಕುಮುಗಳನ್ನೂ ಸಕಲ ಪ್ರಜೆಗಳೂ, ಸರದಾರರೂ, ಜಹಗೀರುದಾರರೂ, ಅಧಿಕಾರಿಗಳೂ ವಿಧೇಯಿಸಿ ನಡೆದುಕೊಳ್ಳತಕ್ಕದ್ದು

ಹೊಸ ಮಂತ್ರಿಪದವಿಗೆ ಬಂದಿರುವವರು ಇನ್ನೂ ಚಿಕ್ಕ ವಯಸ್ಸಿನವರು ಇವರ ಪಿತ್ರಾರ್ಜಿತ ಆಸ್ತಿಯಲ್ಲಿ ವರುಷಕ್ಕೆ 12 ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತಿರೋಣವರಿಂದ ಸಂಬಳಕ್ಕಾಗಿ ಅವರು ಆ ಪದವಿಯನ್ನು ಪಡೆಯಲಿಲ್ಲವೆಂದು ಹೇಳಬಹುದು ಇದಲ್ಲದೆ ಇವರು ಹೈದರಾಬಾದ್ ಸಂಸ್ಥಾನವನ್ನು ಹಿಂದೆ ಬಹಳ ವಿಚಕ್ಷಣೆಯಿಂದ ಆಳಿ ಅಭಿವೃದ್ಧಿಗೆ ತಂದು ವಿಶೇಷವಾದ ಕೀರ್ತಿಯನ್ನು ಪಡೆದಿರುವ ಸರ್ ಸಾಲಾರ್ ಜಂಗ್ ಬಹದ್ದೂರ್‌ರವರ ಮೊಮ್ಮಕ್ಕಳಾಗಿದ್ದಾರೆ ಕಳೆದ ವಾರ ನೈಜಾಮರವರು ನವಾಬ್ ಸಾಲಾರ್ ಜಂಗರನ್ನು ಅರಮನೆಗೆ ಕರೆಸಿಕೊಂಡು ದರ್ಬಾರಿನಲ್ಲಿ ಅವರಿಗೆ ಮಂತ್ರಿಪದವಿಯನ್ನು ವಹಿಸಿದರು ನವಾಬ್ ಸಾಲಾರ್ ಜಂಗರವರು ಪದ್ಧತಿಯ ಪ್ರಕಾರ 1,001 ಚಿನ್ನದ ಅಷ್ರಫಿಗಳನ್ನು ನೈಜಾಮರವರಿಗೆ ನಜರು ಒಪ್ಪಿಸಿದರು ಇವರು ವಯಸ್ಸಿನಲ್ಲಿ ಚಿಕ್ಕವರಾದರೂ ವಿಶೇಷ ಗುಣವಂತರಾದ್ದರಿಂದಲೂ, ಪ್ರಜೆಗಳಲ್ಲೂ ಅಧಿಕಾರಿಗಳಲ್ಲೂ ತುಂಬಾ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದಾರೆಂದೂ ತಿಳಿದು ಬರುತ್ತದೆ ಮಂತ್ರಿ ಪದವಿಯಲ್ಲಿ ಇವರಿಗೆ ಸಹಾಯಕರಾಗಿ ನೇಮಕವಾಗಿರುವ ನವಾಬ್ ಇಮದ್-ಉಲ್ ಮುಲ್ಕ್ ಬಹದೂರ್‌ಯವರು ಒಳ್ಳೆ ಸಮರ್ಥರೆಂಬ ಹೆಸರು ಪಡೆದಿದ್ದಾರೆ ಇವರ ಯೋಗ್ಯತಾ ಸಿದ್ಧಿಯನ್ನು ನೋಡಿ ಕೆಲವು ಕಾಲಕ್ಕೆ ಮುಂಚೆ ಚಕ್ರವರ್ತಿ ಸಾರ್ವಭೌಮರವರು ಇವರನ್ನು ಸೀಮೆಗೆ ಕರೆಸಿಕೊಂಡು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಯ ಮೆಂಬರಾಗಿ ನೇಮಕ ಮಾಡಿದ್ದರು ಇವರೇ ಸೈಯದ್ ಹುಸೇನ್ ಬಿಲ್‌ಗ್ರಾಮಿ ಎಂಬ ಅಧ್ಯ ಹೆಸರುಳ್ಳವರು ಸೀಮೆಯಲ್ಲಿದ್ದಾಗ ಇವರ ದೇಹಸ್ಥಿತಿಯು ಸರಿಯಾಗಿರಲಿಲ್ಲವಾದದ್ದರಿಂದ ಅವರು ಆ ಮೆಂಬರ ಕೆಲಸವನ್ನು ಬಿಟ್ಟು ಹಿಂದುಸ್ಥಾನಕ್ಕೆ ಬಂದುಬಿಟ್ಟರು ಈ ರೀತಿ ಹೈದರಾಬಾದಿನ ಮಂತ್ರಿಸ್ಥಾನವು ಬದಲಾವಣೆಯಾಗಿರುವುದರಿಂದ ಆ ಸಂಸ್ಥಾನದ ಅಭಿವೃದ್ಧಿಯು ಇನ್ನು ಮುಂದೆಯೂ ತೃಪ್ತಿಕರವಾಗಿ ಸ್ಥಿರಪಟ್ಟು ಏಳಿಗೆ ಹೊಂದಲು ಅವಕಾಶವಾಯಿತೆಂದು ನಿರೀಕ್ಷಿಸಬಹುದಾಗಿದೆ

ಗತಿಸಿದ ಮೆ|| ಬಿ ಎಂ. ಮಲಬಾರಿಯವರು

ಪರೋಪಕಾರಿಗಳಾಗಿಯೂ ಪ್ರಸಿದ್ಧ ಪತ್ರಿಕಾಕರ್ತರಾಗಿಯೂ ಇದ್ದ ಮೆ|| ಬೆಹ್ರಾಂಜಿ ಎಂ ಮಲಬಾರಿ ಎಂಬ ಪಾರ್ಸಿ ಮಹನೀಯರು ಕಳೆದ ಗುರುವಾರ ರಾತ್ರಿ ಸಿಮ್ಲಾ ಪಟ್ಟಣದಲ್ಲಿ ಊಟಮಾಡಿದ ಮೇಲೆ ಸುಮಾರು 10 ಘಂಟೆಯಲ್ಲಿ ಎದೆ ನೋವಿನಿಂದ ಅಕಸ್ಮಾತ್ತಾಗಿ ಕಾಲವಾದರೆಂದು ತಿಳಿಸಲು ದುಃಖಪಡುತ್ತೇವೆ ಈ ದುಃಖವು ಹಿಂದುಸ್ಥಾನದಲ್ಲೆಲ್ಲಾ ಹರಡಿಕೊಂಡಿದೆ ಎನ್ನುವುದಕ್ಕೆ ಸಂಶಯವಿಲ್ಲ ಅವರಿಗೆ ಅವಸಾನಕಾಲದಲ್ಲಿ ಇನ್ನೂ 59 ವರುಷ ವಯಸ್ಸಾಗಿತ್ತು. ಹಿಂದುಸ್ಥಾನದಲ್ಲಿ ಪರಹಿತ ಚಿಂತಕರೆಂಬ ಹೆಸರುವಾಸಿಯನ್ನು ಪಡೆದು ಅದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡತಕ್ಕವರು ಅತಿವಿರಳರಾಗಿದ್ದಾರೆ ಇಂಥಾ ಮಹನೀಯರಲ್ಲಿ ಮೆ|| ಮಲಬಾರಿಯವರು ಅಗ್ರಗಣ್ಯರೆನಿಸಿದ್ದರು ಈ ರಾಷ್ಟ್ರದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳನ್ನು ಪ್ರಜಾಹಿತಕರವಾಗಿಯೂ, ದೇಶಾಭ್ಯುದಯಕರವಾಗಿಯೂ ಮಾಡಬೇಕೆಂದು ಅವರು ತಮ್ಮ ತನು ಮನ ಧನಗಳನ್ನು ಬಹು ಧಾರಾಳವಾಗಿ ವಿನಿಯೋಗಿಸಿ ಕೀರ್ತಿಶೇಷರಾದರು ಮೆ|| ಮಲಬಾರಿಯವರು ಬಹು ಬಡತನದ ಸಂಸಾರದಲ್ಲಿ ಹುಟ್ಟಿದವರು ಇವರ ತಂದೆಯು ಬರೋಡಾ ಸಂಸ್ಥಾನದಲ್ಲಿ ಒಬ್ಬ ಸಾಮಾನ್ಯ ಗುಮಾಸ್ತೆ ಕೆಲಸದಲ್ಲಿದ್ದರು ಆದಕಾರಣ ಚಿಕ್ಕಂದಿನಲ್ಲಿ ಮೆ|| ಮಲಬಾರಿಯವರು ದಾರಿದ್ರ್ಯಕ್ಕೆ ಸಿಕ್ಕಿ ಬಹಳ ಕಷ್ಟಪಟ್ಟು ಮುಂದಕ್ಕೆ ಬಂದರು ಗುಜರಾತಿಯಲ್ಲಿ ಅವರು ಬರೆದ ಗ್ರಂಥಗಳು ಬಹು ಪ್ರಚಾರಂಜಕವಾಗಿದ್ದವು ವರ್ತಮಾನ ಪತ್ರಿಕೆಗಳನ್ನು ನಡಸುವುದರಲ್ಲಿ ಅವರು ಅಸಾಧಾರಣವಾದ ಶಕ್ತಿ ಸಾಮರ್ಥ್ಯ ಬುದ್ಧಿಕೌಶಲತೆಗಳನ್ನು ಪ್ರಕಾಶಪಡಿಸಿ, ಸರ್ಕಾರದವರ ಮೆಚ್ಚಿಕೆಯನ್ನೂ ಪ್ರಜೆಗಳ ಪ್ರೀತಿಯನ್ನೂ ಸಂಪಾದಿಸಿ ಕೊಂಡರು ಬಂಗಾಳಾ ಪ್ರಾಂತ್ಯದಲ್ಲಿ ಹೆಣ್ಣುಮಕ್ಕಳು ಋತುಮತಿಯರಾಗುವುದಕ್ಕೆ ಮೊದಲೇ ಗಂಡನಮನೆಯಲ್ಲಿರಬೇಕೆಂಬ ಆಚರಣೆ ಇದ್ದದ್ದರಿಂದ ಹೆಣ್ಣುಮಕ್ಕಳಿಗೆ ವಿವರಿಸಲಶಕ್ಯವಾದ ಕಾಯಕಷ್ಟಗಳು ಸಂಭವಿಸುತ್ತಿದ್ದವು ಇದನ್ನು ತಪ್ಪಿಸುವುದಕ್ಕೆ ಮೆ. ಮಲಬಾರಿಯವರು ಬಹಳ ಸಾಹಸಪಟ್ಟು ಒಂದು ಕಾನೂನ್ ಆಗುವಂತೆ ಮಾಡಿದರು ಬಾಲ್ಯವಿವಾಹ, ವಿಧವೆಯರ ಕಷ್ಟ, ಸ್ತ್ರೀವಿದ್ಯಾಭ್ಯಾಸ, ಈ ಮೊದಲಾದ ವಿಚಾರಗಳಲ್ಲಿ ಅವರು ಬಹಳ ಚಿಂತೆಯನ್ನುಪಟ್ಟು, ಅವನ್ನು ಕಡಮೆ ಮಾಡಬೇಕೆಂದು ಇಪ್ಪತ್ತು ವರುಷಗಳಿಂದಲೂ ಕಾರ್ಯಸಾಧನೆ ಮಾಡುತ್ತಾ ಬಂದರು ಇವರ ಯಶಸ್ಸು ಯೂರೋಪ್ ಖಂಡಕ್ಕೂ ವ್ಯಾಪಿಸಿಯಾಗಿ ಅಲ್ಲಿರುವ ಅನೇಕ ಮಹನೀಯರು ಇವರನ್ನು ಪ್ರೋತ್ಸಾಹಪಡಿಸುತ್ತಾ ಇದ್ದರು ಬೊಂಬಾಯಿನಲ್ಲಿರುವ ಸೇವಾಸದನವನ್ನು ಇವರೇ ಸ್ಥಾಪನೆ ಮಾಡಿದವರು ಕ್ಷಯರೋಗಪೀಡಿತರನ್ನು ಪ್ರತ್ಯೇಕವಾಗಿಟ್ಟು ಚಿಕಿತ್ಸೆ ಮಾಡುವುದಕ್ಕಾಗಿ ಮೆ ಮಲಬಾರಿಯವರು ಬಹಳ ಸಾಹಸಪಟ್ಟು ಒಂದು ಆಸ್ಪತ್ರೆಯನ್ನು ಪ್ರಾರಂಭಿಸಿದರು ಇವರ ಪರೋಪಕಾರ ಬುದ್ಧಿಯನ್ನೂ ಕಾರ್ಯಗಳನ್ನೂ ನೋಡಿ ಇಂಡಿಯಾ ಗವರ್ನ್‌ಮೆಂಟಿನವರು ಇವರಿಗೆ ಬಿರುದುಗಳನ್ನು ಕೊಡಬೇಕೆಂದು ಕುತೂಹಲಪಟ್ಟಾಗ ಇವರು ಬಿರುದುಗಳೇನೂ ತಮಗೆ ಅವಶ್ಯವಿಲ್ಲವೆಂದು ಅರಿಕೆ ಮಾಡಿಬಿಟ್ಟರು ಇಂಥಾ ಪರೋಪಕಾರಿಯು ಅಕಾಲ ಮರಣವನ್ನು ಹೊಂದಿದ್ದು ಹಿಂದುಸ್ಥಾನಕ್ಕೆ ವಿಶೇಷ ನಷ್ಟವಾಗಿದೆ

ಕಳೆದ ಶುಕ್ರವಾರ ಸಾಯಂಕಾಲ ಅವರ ಕಳೇಬರವನ್ನು ಸಿಮ್ಲಾ ಪಟ್ಟಣದಲ್ಲಿ ಬಹು ಆಡಂಬರದಿಂದಲೂ, ಸಗೌರವವಾಗಿಯೂ ಸಾಗಿಸಿ ಸಂಸ್ಕಾರ ಮಾಡಿದರು ಬಹುಮಂದಿ ಪಾರ್ಸಿ ಸ್ತ್ರೀಪುರುಷರು, ಲೆಫ್ಟಿನೆಂಟ್ ಗವರ್ನರವರು, ಇವರ ಪತ್ನಿಯವರು, ಮೆ|| ಅಲಿ ಇಮಾಂರವರು, ಮೆ, ಮೆಕ್ಲಾಗನ್ ಸಾಹೇಬರು, ರಾಜಾ ಹರನಾಮಸಿಂಗರವರು, ಪಂಡಿತ ಮದನಮೋಹನ ಮಾಲವ್ಯರವರು, ಸರ್ದಾರ್ ಸುಂದರ ಸಿಂಗರವರು, ಸರ್ದಾರ್ ಜೋಗೀಂದ್ರ ಸಿಂಗರವರು, ಇನ್ನೂ ಬಹುಮಂದಿ ಮಹನೀಯರು ಶವದ ಕೂಡ ಹೋಗಿ ಬಂದರು ವೈಸ್‌ರಾಯಿಯವರೂ, ಸರ್ವಸೇನಾಪತಿಗಳೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದ್ದರು ಬಹುಮಂದಿ ದೊಡ್ಡ ಮನುಷ್ಯರು ಅತ್ಯಂತ ಶ್ರೇಷ್ಠವಾದ ಪುಷ್ಪಮಾಲಿಕೆಗಳನ್ನು ಕಳುಹಿಸಿದ್ದರು ಗ್ವಾಲಿಯರ್, ಬಿಕ್ಯಾನಿರ್ ಮೊದಲಾದ ದೇಶೀಯ ಮಹಾರಾಜರುಗಳೂ, ರಾಜರುಗಳೂ ಪುಷ್ಪಮಾಲಿಕೆಗಳನ್ನು ಕಳುಹಿಸಿ, ಅವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು

ನಮ್ಮ ಪುಸ್ತಕ ಭಂಡಾರವು

"ನೇಷ್ವ ನಾರಾಯಣರಾವ್"

ಈ ಸಣ್ಣ ಪುಸ್ತಕದಲ್ಲಿ ಮಾಗಡಿಯ ಮ|| ಎಂ ಟಿ ವಲ್ಲಿಭೈಯಂಗಾರ್ಯರು ಪೇಶ್ವೆ ನಾರಾಯಣರಾಯನ ಚರಿತ್ರೆಯನ್ನು ಸಂಕ್ಷೇಪವಾಗಿ ಬರೆದು ಇರುತ್ತಾರೆ ಅದೇ ಸಂದರ್ಭದಲ್ಲಿ ಮಹಾರಾಷ್ಟ್ರ ಸಾಮ್ರಾಜ್ಯದ ಪೂರ್ವ ವೃತ್ತಾಂತವೂ ಸ್ವಲ್ಪ ಮಟ್ಟಿಗೆ ವಿವರಿಸುವದು ಓದುವುದಕ್ಕೆ ಬಹಳ ಸ್ವಾರಸ್ಯವಾದ ಕಥೆ 4 ಆಣೆ ಬೆಲೆಯುಳ್ಳ ಈ ಪುಸ್ತಕವನ್ನು ಗ್ರಂಥಕರ್ತರಿಂದ ತರಿಸಿಕೊಳ್ಳಬಹುದಾಗಿದೆ

"ಆರ್ಯಮಹಿಳಾ —ರಾಜಪುತ್ರಿಯರ ಚರಿತ್ರೆ"

ಹಿಂದುಸ್ಥಾನದ ಪೂರ್ವಚರಿತ್ರೆಗಳಲ್ಲಿ ಬಹುಮಂದಿ ರಾಜಸ್ತ್ರೀಯರು ನಾನಾ ಪರಾಕ್ರಮಯುಕ್ತವಾದ ಕಾರ್ಯಗಳನು ಮಾಡಿ ಹೆಸರುವಾಸಿಗೆ ಬಂದಿರುತ್ತಾರೆ ಅಂಥವರ ಪೈಕಿ ಸಂಯುಕ್ತ, ಮೀರಾಬಾಯಿ, ಪದ್ಮಿನಿ, ದುರ್ಗಾವತಿ, ತಾರಾಬಾಯಿ, ರಾಣಿಭವಾನಿ, ಝಾನ್ಸಿಲಕ್ಷ್ಮೀಬಾಯಿ ಎಂಬೀ ಆರು ಮಂದಿ ಮಹಿಳೆಯರ ಚರಿತ್ರೆಗಳನ್ನು ಮೈಸೂರಿನಲ್ಲಿರುವ ಮ|| ಆನಂದವಟ್ಟಿ ರಾಮರಾಯರು ರಚಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿದ್ದಾರೆ ಸಚ್ಚರಿತ್ರರ ವರ್ತನೆಗಳನ್ನು ಓದಿ ಮನನಮಾಡುವುದರಲ್ಲಿ ಯಾರಿಗೂ ಫಲವುಂಟು ಸ್ತ್ರೀಯರು ಇಂಥಾ ಆರ್ಯಭಗಿನಿಯರ ಚರಿತ್ರೆಗಳನ್ನು ಓದುತ್ತಾ ಬರಬೇಕೆಂಬುವುದನ್ನು ಈ ಪುಸ್ತಕವು ಪ್ರೋತ್ಸಾಹಪಡಿಸುತ್ತದೆ ಇದರ ಕ್ರಯ 5 ಆಣೆ

"ವ್ಯಾಪಾರ ಧರ್ಮಸೂಚಿಕೆ"

ವ್ಯಾಪಾರ ಧರ್ಮವನ್ನು ಕಲಿಸಿಕೊಡುವ ಪಾಠಶಾಲೆಗಳು ನಮ್ಮ ಸೀಮೆಯಲ್ಲಿ ಇರುವುದಿಲ್ಲ ಇದು ಪರಿಪೂರ್ಣವಾಗಿ ಕಲಿಸಿಕೊಡುವಂಥಾ ವಿದ್ಯೆಯೂ ಅಲ್ಲ ಆದರೂ ವ್ಯಾಪಾರದಲ್ಲಿ ಅನೇಕಾನೇಕರು ಬಿದ್ದು ಅದರ ಒಳಗುಟ್ಟುಗಳನ್ನು ಅನುಭವ ಪೂರ್ವಕವಾಗಿ ತಿಳಿದು ತಲೆಯೆತ್ತಿಕೊಂಡು ಮಹದೈಶ್ವರ್ಯವಂತರಾಗಿದ್ದಾರೆ ಇನ್ನೂ ಅನೇಕರು ತಲೆಯೆತ್ತಲಾರದೆ ಮುಳುಗಿಹೋಗಿದ್ದಾರೆ ವ್ಯಾಪಾರದ ಕಸುಬಿಗೂ ಇತರ ಕಸಬುಗಳಂತೆ ಸತ್ಯತೆಯೂ, ನಂಬಿಕೆಯೂ, ... ಮನಸ್ಸೂ, ಕಾರ್ಯಸಾಧನೆಯೂ ಬೇಕೇ ಬೇಕು ಇವು ಇಲ್ಲದೇನೇ ... ಜನರು ನಮ್ಮ ದೇಶದಲ್ಲಿ ವ್ಯಾಪಾರ ಮಾಡುತ್ತಾ ಐಶ್ವರ್ಯವಂತರಾಗಿಲ್ಲ ಎಂ... ಕೇಳಬಹುದು ಇದಕ್ಕೆ ಅದು ವ್ಯಾಪಾರವಲ್ಲವೆಂದೂ, ಮೋಸ ದ್ರೋಹ ... ಹಿಂಸೆ ಎಂದೂ ಹೇಳಬೇಕಾಗಿದೆ ಈ ಪ್ರಕಾರವಾಗಿ ಆರ್ಜಿಸಿದ ಧನವು ಸಾರ್ಥ... ಹೊಂದಲಾರದೆಂದು ನಾವು ಹೇಳಬೇಕಾಗಿಲ್ಲ ತಕ್ಕಮಟ್ಟಿಗೆ ವಿದ್ಯೆ ವಿನಯ... ಗಳನ್ನು ಕಲಿತು ದೇಶಾಟನೆಯಿಂದ ಸ್ಥಳಾಂತರಗಳ ವ್ಯಾಪಾರ ಲಕ್ಷಣವನ್ನು ... ಶೀಲನೆ ಮಾಡಿಕೊಳ್ಳಬೇಕು ದೀರ್ಘವಾದ ಅನುಭವವೂ ಅವಶ್ಯ ಬೆಂಗಳೂ... ಪ್ಯಾಮಿಲಿ ಕಂಪನಿಯ ಮ್ಯಾನೇಜರು ಮ|| ಎಚ್ ವೆಂಕಟರಮಣಯ್ಯನವ... 15 16 ವರುಷಗಳ ಅನುಭವವನ್ನು ಪಡೆದು ಮೇಲ್ಕಂಡ ಪುಸ್ತಕವನ್ನು ... ನಮ್ಮ ದೇಶದ ಕನ್ನಡಿಗರಿಗಾಗಿ ಪ್ರಕಟಿಸಿದ್ದಾರೆ ಕ್ರಯ 6 ಆಣೆ ಉಳ್ಳ ... ಪುಸ್ತಕವನ್ನು ಓದುವುದರಿಂದ ವ್ಯಾಪಾರ ಲಕ್ಷಣವನ್ನು ಕೆಲವು ಮಟ್ಟಿಗೆ ತಿಳಿ... ಕೊಳ್ಳಬಹುದಾಗಿದೆ ಎಂದು ಸೂಚಿಸುತ್ತೇವೆ

"ಕರ್ಣಾಟಕ ಜೈಮಿನಿಭಾರತವು"

ಮೈಸೂರು ಶ್ರೀ ವಾಣೀವಿಲಾಸ ಬುಕ್ ಡಿಪೋ ಪ್ರೊಪ್ರೈಟರಾದ ಮ|| ... ಎ ವೆಂಕಟಾಚಲಂ ಶೆಟ್ಟರವರು ಮೈಸೂರು ಶ್ರೀನಿವಾಸ ಪ್ರೆಸ್ಸಿನಲ್ಲಿ ಈ ಕಾ... ಗ್ರಂಥವನ್ನು ಬಹು ಅಂದವಾಗಿಯೂ, ಸ್ಫುಟವಾಗಿಯೂ, ದೊಡ್ಡ ಅಕ್ಷ...ರಗಳಿಂದಲೂ ಅಚ್ಚು ಮಾಡಿಸಿರುತ್ತಾರೆ ಜೈಮಿನಿ ಭಾರತದ ಪೂರ್ವೋತ್ತರವನ್ನು ನಾವು ವಿವರಿಸಬೇಕಾದ ಅವಶ್ಯ ಕಾಣುವುದಿಲ್ಲ, ಇದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುವಂಥಾ ಪ್ರೌಢ ಗ್ರಂಥವು ಇದರ ಉಪೋದ್ಘಾತದಲ್ಲಿ ಮೈಸೂ... ಮಹಾರಾಜಾ ಕಾಲೇಜಿನ ಕರ್ಣಾಟಕ ಸೀನಿಯರ್ ಪಂಡಿತರಾಗಿಯೂ, ಕರ್ಣಾ...ಟಕ ಸೀಮೆಯಲ್ಲೆಲ್ಲಾ ಸುಪ್ರಸಿದ್ಧರಾಗಿಯೂ ಇರುವ ಮ|| ಪಿ ಆರ್ ... ಬಸವಶಾಸ್ತ್ರಿಗಳವರು— ಸುಮಾರು ಆರು ಕರ್ಣಾಟಕ ಜೈಮಿನಿ ಭಾ...ರತದ ವಾಲೆಗರಿಗಳ ಆಧಾರದಿಂದಲೂ, ಸಂಸ್ಕೃತ ಜೈಮಿನಿ ಭಾರತದ ಆಧಾ...ರದಿಂದಲೂ, ಕವಿಯಾಶಯವನ್ನನುಸರಿಸಬೇಕೆಂಬ ತಾತ್ಪರ್ಯದಿಂದಲೂ ವಿಧ...ತಿಯಾಗಿ ಶಬ್ದ-ಅರ್ಥ ವಾಕ್ಯದೋಷಗಳಿಲ್ಲದಂತೆ ಶೋಧಿಸಿರುವದರಿಂದ ಸ... ಗ್ರಂಥರಚನೆಗಿಂತಲೂ ಶ್ರಮವುಂಟಾದಾಗ್ಯೂ ಶೋಧಿತವಾಗಿರುವ ಈ ಕರ್ಣಾಟ... ಜೈಮಿನಿ ಭಾರತವು" ಎಂದು ಬರೆಯುತ್ತಾರೆ ಇದಕ್ಕಾಗಿ ಅವರು ಮೈಸೂ... ಓರಿಯಂಟಲ್ ಲೈಬ್ರರಿಯಲ್ಲಿರುವ ತಾಳಪತ್ರದ ಐದು ಪುಸ್ತಕಗಳನ್ನೂ ಕ... ಕಾಗದದ ಒಂದು ಪ್ರತಿಯನ್ನೂ, ಮುದ್ರಿತವಾದ ಒಂದು ಸಂಸ್ಕೃತದ ಜೈಮಿ... ಭಾರತದ ಪುಸ್ತಕವನ್ನೂ, ಬೇರೆರಡು ಕರ್ಣಾಟಕ ಜೈಮಿನಿ ಭಾರತದ ವಾಲೆ...ಗಳನ್ನೂ, ಮತ್ತೊಂದು ಜೈಮಿನಿ ಭಾರತ ಪುಸ್ತಕವನ್ನೂ ಪ್ರಥಮ ಮುದ್ರಿ... ಪುಸ್ತಕವೊಂದನ್ನೂ, 1901 ರಲ್ಲಿ ಮುದ್ರಿತವಾದ ಪುಸ್ತಕವೊಂದನ್ನೂ ಇ... ಕೊಂಡು ನಮ್ಮ ಮುಂದಿರುವ ನೂತನ ಪ್ರತಿಯನ್ನೂ ರಚಿಸಿರುತ್ತಾರೆ. ದದ್ದರಿಂ... ಇದು ಸರ್ವಶ್ಲಾಘ್ಯವಾಗಿದೆ ಎಂದು ಸೂಚಿಸುತ್ತೇವೆ ಇದಾ ಪುಸ್ತಕ... ರೂ 1 8 0 ಬೆಲೆ ಇಟ್ಟಿರುವುದೇನೂ ಹೆಚ್ಚಲ್ಲ ಇದರಲ್ಲಿ ಕವಿಯ ಸಂಕ್ಷೇ... ಚರಿತ್ರೆಯೂ, ಆಯಾ ಪುಟದಲ್ಲಿ ಪಾಠಾಂತರಗಳೂ ಕೊಡಲ್ಪಟ್ಟಿವೆ

"ಸ್ತ್ರೀ ಸಂಸ್ಕಾರ ಪ್ರಕಾಶಿಕ"

ಇದೊಂದು ಪ್ರಬಲವಾದ ಹೊಸ ಪುಸ್ತಕ ಹಿಂದುಜನಗಳಲ್ಲಿ ಸ್ತ್ರೀ...ರನ್ನು ಮೌಢ್ಯದಲ್ಲಿಟ್ಟುಕೊಂಡಿದ್ದಾರೆಂಬುದನ್ನು ಇದು ಹೊರಪಡಿಸಿ, ಸ್ತ್ರೀಯ...ರಿಗೂ ವಯೋನುಗುಣ್ಯವಾದ ವಿದ್ಯಾದಿ ಸಂಸ್ಕಾರಗಳನ್ನು ಮಾಡಿಸಿ, ಅವರನ್ನು ಉ... ಮುಕ್ತಿಗೆ ತಂದಿಡಬೇಕೆಂದು ಶ್ರುತಿಸ್ಮೃತಿಗಳ ಪ್ರಮಾಣಸಹಿತವಾಗಿ ಹೇಳುತ್ತ... ಚಿತ್ರದುರ್ಗದ ಹೈಸ್ಕೂಲ್ ಹೆಡ್ ಮಾಸ್ಟರು ಮೆ||-ರಾ ರಘುನಾಥರಾಯ... ಪ್ರಮಾಣಸಹಿತವಾಗಿ ಈ ಪುಸ್ತಕವನ್ನು ಕನ್ನಡದಲ್ಲಿ ರಚಿಸುವುದಕ್ಕೆ ಮೂ... ವರುಷ ಶ್ರಮಪಟ್ಟಿದ್ದಾರೆ ಪುರುಷರಿಗೆ ಯೋಗ್ಯ ಪ್ರಾಯೇ ಸ್ತ್ರೀಯರಿಗೂ... ಯಾ ವಯಸ್ಸಿನಲ್ಲಿ ಉಪನಯನಾದಿ ಸಂಸ್ಕಾರಗಳನ್ನು ಮಾಡಿಸಬೇಕೆಂದು ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ಅವರಿಗೆ ಸಂಸಾರದ ಹಮ್ಮಿಕಸವೇನೂ ... ಕೊಡದೆಂದೂ, ತದನಂತರ ವಿವಾಹಾದಿಗಳನ್ನು ಮಾಡತಕ್ಕದ್ದೆಂದೂ ಮ| ರಘುನಾಥರಾಯರು ಸಿದ್ಧಾಂತಮಾಡಿ ತೋರಿಸಿದ್ದಾರೆ ಈ ವಿಚಾರದಲ್ಲಿ ಈಗಿನ ದ್ವೈ... ಅದ್ವೈತ, ವಿಶಿಷ್ಟಾದ್ವೈತ ಮತಪತಿಗಳೂ, ವೈದಿಕ ವಿದ್ವಾಂಸರೂ ವೇದಾದಿ ವ...ಗಳಿಗೆ ಅಪಾರ್ಥಗಳನ್ನು ಮಾಡಿಕೊಂಡು ಸ್ತ್ರೀಯರನ್ನು ಮೌಢ್ಯಾಚಾರಾದಿಗಳ... ಮುಳುಗಿಸಿರುತ್ತಾರೆಂಬುವುದೇ ಮ| ರಘುನಾಥರಾಯರ ಅಭಿಮತವಾಗಿದೆ ದು... ವೂ ಅನಾನುಕೂಲವೂ ಆಗಿರುವಂಥಾ ಆಚಾರವ್ಯವಹಾರಗಳನ್ನು ಎತ್ತಿಹಾ... ಕಾಲಾನುಗುಣ್ಯವಾಗಿ ಸಮಯಾಚಾರಗಳನ್ನು ಕ್ರಮಪಡಿಸಿಕೊಳ್ಳುತ್ತಾ ಬರಬೇಕ... ದ್ದೇನೋ ಅವಶ್ಯಕವೂ ಅಪೇಕ್ಷಣೀಯವೂ ಆಗಿವೆ ಆದರೆ ಹಾಗೆ ಎತ್ತಿಹಾ... ವಲ್ಲಿ ಕಟುನೋಕ್ತಿಗಳನ್ನು ಪ್ರಯೋಗಮಾಡುವುದರಿಂದ ಸಾಮಾನ್ಯವಾಗಿ ಉದ್ದೇ...ಶವು ಸಫಲವಾಗದೇ ಹೋಗುತ್ತದೆ ಮ ರಘುನಾಥರಾಯರು ಹಿಂದೂ ಸಮಾ...ಚಾರಗಳನ್ನು ಪರಿಷ್ಕರಿಸಬೇಕೆಂಬ ವಿಷಯದಲ್ಲಿ ಖಂಡಿತವಾದಿಗಳಾಗಿದ್ದಾರೆ... ನಾವು ಸಂತೋಷಪಡುತ್ತೇವೆ ಈ ಪುಸ್ತಕವು ಹಿಂದೂ ವೈದಿಕ ಲೌಕಿಕಮುಖ...ಯವರನ್ನು ಈ ವಿಚಾರದಲ್ಲಿ ಯೋಚನಾಪರರನ್ನಾಗಿಯೂ, ಸಮಾಜ ಸಂಸ್ಕ...ರ ದುರೀಣರನ್ನಾಗಿಯೂ ಮಾಡಲು ಸಹಾಯಕವಾಗಲೆಂದು ಹಾರೈಸುತ್ತೇವೆ ಈ ಪುಸ್ತಕವು ಪ್ರಕಟವಾದ ಈಚೆಗೆ ವೈದಿಕ ಲೌಕಿಕರನೇಕರು ಮ|| ರಘುನಾಥ...ಯರ ಅಭಿಮತವನ್ನು ಒಪ್ಪಿಕೊಂಡೂ, ಇನ್ನೂ ಅನೇಕರು ಒಪ್ಪಿಕೊಳ್ಳದೇ ಚರ್ಚೆಮಾಡುತ್ತಿದ್ದಾರೆ ಈ ಪುಸ್ತಕವು ಬೆಂಗಳೂರು ಎರಿಷ ಪ್ರೆಸ್ಸಿನ...ಲ್ಲಿ ಚೆನ್ನಾಗಿ ಅಚ್ಚುಮಾಡಲ್ಪಟ್ಟು, ರೂ 1 1 0 ಗೆ ಬಿಕರಿಯಾಗುತ್ತದೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರ... ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆ... ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎ... ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋ... ವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ... ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ...

...ಥವನೆ ಕರವು ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಕೇಳುತ್ತೇವೆ

ಸಾವಿನ್ನಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು ರೆವ್ ಇ ಡಬ್ಲ್ಯು ಥಾಂಪ್ಸನ್ ಸಾಹೇಬರಿಗೆ ಮೈಸೂರು ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ...ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಅಸುಭವಸ್ಥ, ಶ್ರೀರಂಗಪಟ್ಟಣ —ನಿಮ್ಮ ಆಕ್ಷೇಪಣೆಯನ್ನು ಮೊದಲು ...ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗೆ ಬರೆದುಕೊಳ್ಳಬೇಕು

ನಿಜ, ಬೆಂಗಳೂರು —ನೀವು ಹೇಳುವ ಮೊಕದ್ದಮೆ ಇನ್ನೂ ವಿಚಾರಣೆಯಲ್ಲಿದೆ ಅದು ಇತ್ಯರ್ಥವಾಗುವುದಕ್ಕೆ ಮುಂಚೆ ನಿಮ್ಮ ಬಾತ್ಮಿಯನ್ನು ಪ್ರಕ...ಟಿಸಲಾಗದು

ತಪ್ಪು ತಿದ್ದುವದು —ಕಳೆದ ವಾರದ ವೃತ್ತಾಂತ ಪತ್ರಿಕೆಯ "ಚಿಕ್ಕ...ಳ್ಳಿದ ತಾಲ್ಲೂಕು ವರ್ತಮಾನದಲ್ಲಿ ಲೂಕಯ್ಯನವರು ಎಂಬದಕ್ಕೆ ಬದ...ಲಾಗಿ ಉಪದೇಶಿಗಳಾದ ಮ| ವಿಾಕಯ್ಯನವರು ಎಂದು ಓದಿಕೊಳ್ಳಬೇಕು

ವೆಂಕಟರಾಮಪ್ಪ, ಚನ್ನಪಟ್ಟಣ ಮತ್ತು ಎಂ ಎಸ್ ವೆಂಕಟರಾವ್ ...ಲಾರ —ನೀವುಗಳು ನಿಮ್ಮ ಆಕ್ಷೇಪಣೆಗಳನ್ನು ಡಿ ಶೇಷಗಿರಿರಾವ್, ನಂದಿ ...ವಿಳಾಸದಾರರಿಗೆ ನೇರಾ ಬರೆದು ತಿಳಿಸಿ ಅವರ ಸಮಾಧಾನಗಳನ್ನು ತಿಳಿದು...ಕೊಳ್ಳತಕ್ಕದ್ದು ಈ ವಿಚಾರದ ಬಾತ್ಮಿಗಳಿಗೆ ನಾವು ಅವಕಾಶಕೊಡಲಾರೆವೆಂದು ...ಪಾದಿಸುತ್ತೇವೆ

...ತೀರ್ಥಹಳ್ಳಿ ತಾಲ್ಲೂಕು ಮೇಗರವಳ್ಳಿಯಲ್ಲಿ ಕಳೆದ ಮೇ ತಾ 28 ರಲ್ಲಿ ...ಕಾರದವರು ಒಂದು ಆಸ್ಪತ್ರೆಯನ್ನು ಸ್ಥಾಪಿಸಿದರು ಆ ದಿವಸ ಶಿರಸ್ತೇದಾ...ರು, ಶೇಕದಾರರು ಮ ಮೇಗರವಳ್ಳಿ ಸಾ| ಅಪ್ಪುಭಟ್ಟರು ಶೇಷಭಟ್ಟರು, ...ಮೇಗರವಳ್ಳಿ ರಾಮಪ್ಪಹೆಗ್ಗಡೇರು, ಕೊಳಿಗೆ ಸಿದ್ದಪ್ಪ ಗೌಡರು ಬಿದರಹಳ್ಳಿ ...ಪ್ಪಗೌಡರು, ಈ ಮೊದಲಾದ ದೊಡ್ಡ ಮನುಷ್ಯರು ಸಭೆ ಸೇರಿ ಪ್ರಾರಂಭೋ...ತ್ಸವವನ್ನು ನಡಿಸಿ, ಮೈಸೂರು ಸರ್ಕಾರದ ದಯಾರಸವನ್ನು ಕೊಂಡಾಡಿ, ಸಭಿ...ಕರಿಗೆಲ್ಲಾ ಸಕ್ಕರೆ ಫಲ ಪುಷ್ಪಾದಿಗಳನ್ನು ಹಂಚಿ ಸಭೆಯನ್ನು ಮುಕ್ತಾಯ...ಮಾಡಿದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ

ಹುಣಸೂರು ತಾಲ್ಲೂಕು ಗೋರಹಳ್ಳಿಯಲ್ಲಿರುವ ಬಿ ಚೆಲುವಾಚಾರಿ ಮಗ...ನ್ನಾಚಾರಿಯು ಬರೆಯುವದೇನಂದರೆ- ಈಗ್ಗೆ ಒಂದೂವರೆ ವರುಷದಲ್ಲಿ ...ರೋಯಿಲೆ ಬಂದು ಆ ಲಾಗಾಯ್ತು ಮಾತನಾಡುವದಕ್ಕೆ ನಾಲಿಗೆ ನಿಂತುಹೋಗಿ ...ಹುಣಸೂರು ಚವುದ್ರಿ ದಾಸಪ್ಪನವರ ಮನೆಯಲ್ಲಿ ಇದ್ದುಕೊಂಡಿದ್ದೆನು ...ಒಂದು ದಿವಸ ಮೊಲ್ಕಂಡ ಚವುದ್ರಿ ದಾಸಪ್ಪನವರು ದೇವರ ಪೂಜೆ ಮಾಡುವಾಗ್ಗೆ ನನ್ನ ವಿಚಾರ ನಾಲಿಗೆ ಬಂತು ಮಾತನಾಡುವಂತೆ ಮಾಡಬೇಕೆಂದು ದೇವರನ್ನು ಪ್ರಾರ್ಥಿಸಿ ಆ ದಿನ ಸಾಯಂಕಾಲ ಮಲಗಿಕೊಂಡು ನಿದ್ದೆ ಹೋಗುವ ಸಮಯ ...ರಾತ್ರಿ ಸುಮಾರು 12 1 ಘಂಟೆ ಸಮಯದಲ್ಲಿ ದೊಡ್ಡರಂತೆ 4 6 ಜನ ನನ್ನನ್ನು ಬೆಂಕಿಯೊಳಗೆ ಹಾಕುತ್ತೇನೆಂತ ಎತ್ತಿಕೊಂಡು ಹೋಗುವ ಸಮಯ...ದಲ್ಲಿ ಭಯದಿಂದ ಬಾಯಿ ಬಡಿದುಕೊಳ್ಳಲು ಮಾತನಾಡುವದಕ್ಕೆ ನಾಲಿಗೆ ಸಲೀಸು ಬರುತ್ತೆಂದು ದೇವರನ್ನು ಕೊಂಡಾಡುತ್ತೇನೆ

—ಎಡಿ।

ಕರೆಸ್ಪಾಂಡೆನ್ಸ್

ಮಲೆನಾಡಿನ ಮಲೇರಿಯಾ ಜ್ವರವು

ಅಯ್ಯಾ,

ಇಲ್ಲಿ ಮಳೆಗಾಲವು ಪ್ರಾರಂಭವಾದ ಕೂಡಲೆ ರೈತರ ಕೆಲಸ ಪ್ರಾರಂಭವಾಗುತ್ತದೆ ಆಗ ದುಡಿದು ಕಷ್ಟಪಟ್ಟರೆ ಮುಂದೆ ಜೀವನಕ್ಕೆ ಆಧಾರವಾಗುತ್ತದೆ ...ಥಾ ಕೆಲಸ ಕಾಲದಲ್ಲಿ ಮಲೇರಿಯಾ ಜ್ವರವೆಂಬ ವೈರಿಯು ಪೀಡಿಸುತ್ತದೆ ...ದು ಮನೆಯಲ್ಲಿ ನಾಲ್ಕು ಜನರಿದ್ದರೆ ಮೂರು ಜನರು ಜ್ವರದಿಂದ ನರಳುತ್ತಿ...ರುವರು ಇವಕ್ಕೆ ತಕ್ಕ ಪ್ರತೀಕಾರವನ್ನು ಇದುವರೆಗೆ ಅನೇಕರು ಮಾಡುತ್ತಿ...ದ್ದಾರೆ ಹೀಗೆ ಪ್ರಯತ್ನ ಪಡತಕ್ಕವರಲ್ಲಿ ತೀರ್ಥಹಳ್ಳಿ ಜ್ವರಾರಿ ಕಂಪನಿಯ...ವರು ಬಹಳ ಮೇಲಾದವರು ಇವರ ಜ್ವರದ ಗುಳಿಗೆಗಳು ನಮ್ಮ ಮಲೆನಾಡಿನ ...ಕ ಜನರ ಪ್ರಾಣವನ್ನು ಉಳಿಸುತ್ತದೆ ನಾನು ಸದರಿಯವರಲ್ಲಿಂದ ತರಿ...ಸಿ ನೂರಾರು ಜನರಿಗೆ ಕೊಟ್ಟದ್ದರಲ್ಲಿ ನೇಕಡ ಒಂದು ನೂರಿನಂತೆ ಎಲ್ಲರೂ ...ಪಟ್ಟಿದ್ದಾರೆ ಶಿವಾಯಿ ಈಗಲೂ ನನಗೆ ಸದರಿ ಔಷಧಿಯ ವಿ ಪಿ ಗಳು ...ತ್ತಲೇ ಇವೆ ಸದರಿ ಮಾತ್ರೆಗಳಿಗೆ ಸದರಿ ಕಂಪನಿಯವರು ಇನ್ನು ಮುಂದೆ ...ಪ್ರಾಣ ಸಂಜೀವಿನಿ ಎಂಬ ಹೆಸರನ್ನು ಇಡಿದರೆ ಉತ್ತಮವೆಂದು ಯೋಚಿಸು...ತ್ತೇನೆ ಇದು ನಮ್ಮ ದೇಶದ ಪ್ರತಿಯೊಂದು ಗೃಹಕೃತ್ಯದಲ್ಲೂ ಇರಲು ...ಯೋಗ್ಯವಾದದ್ದು ಬಾಟ್ಲಿಗೆ ಒಂದು ರೂಪಾಯಿ ಮಾತ್ರ ಬೇಕಾದವರು ...ಜ್ವರಾರಿ ಕಂಪನಿ ತೀರ್ಥಹಳ್ಳಿ, ಇವರಲ್ಲಿಗೆ ಬರೆದು ತರಿಸಿಕೊಳ್ಳಬಹುದು ...ಲೋಕೋಪಕಾರವಾದ ವಿಷಯ ವಾದ್ದರಿಂದ ಈ ಮೂಲಕ ಪ್ರಾರ್ಥಿಸುತ್ತೇನೆ

ಕೆ ಟಿ ದೇವಪ್ಪಗೌಡ

ಬೆಂಗಳೂರು ಮುನ್ಸಿಫ್ ಕೋರ್ಟು

ಅಯ್ಯಾ,

ಈ ಕೋರ್ಟು ಪ್ರಜೆಗಳಿಗಾಗಿ ಇರುವಂತೆ ಈ ಕೋರ್ಟಿನ ನೌಕರರು ...ಚಿಸಿರುವಂತೆ ಕಾಣುವದಿಲ್ಲ ಕಕ್ಷಿಗಾರರೂ, ಲಾಯರುಗಳೂ ಅನೇಕ ...ಯಗಳನ್ನು ನೌಕರರಿಂದ ತಿಳಿಯಬೇಕಾಗುತ್ತೆ ಅಸಲ್, ಸ್ಮಾಲ್‌ಕಾಸು ...ದ್ದಮೆಗಳ ಕಾಜು ಲಿಸ್ಟುಗಳನ್ನು ಮಾತ್ರ ತಯಾರು ಮಾಡುತ್ತಾರೆ ಜಾರಿ ...ಪರುಗಳ ಕಾಜು ಲಿಸ್ಟುಗಳನ್ನು ಬರೆಯುವುದೇ ಇಲ್ಲ ಇವುಗಳ ಹಿಯರಿಂ...ಗ್ಗಳನ್ನಾಗಲಿ, ನಂಬರುಗಳನ್ನಾಗಲಿ ಕೇಳಿದರೆ ಮುನಿಸಿಗಳಿಗೆ ಆಗ್ರಹ ಬರುತ್ತೆ ...ಟೋ ನಂಬರಲ್ಲ ಕೆಲಸ ಮಾಡಿಕೊಳ್ಳಬೇಕಾದರೆ ಒಹಳವಾಗಿ ಅನುಸರಿಸ ...ಇಲ್ಲವಾದರೆ ಎಷ್ಟು ಹೊತ್ತು ಕಾದರೂ ಕೆಲಸವಾಗುವದಿಲ್ಲ ಇದೇ ...ಯಾವ ಗುಮಾಸ್ತೆಯೇ ಆಗಲಿ ಚನ್ನಾಗಿ ಅನುಸರಿಸಿದ ಹೊರತು ಕೆಲಸವಾಗುವದಿಲ್ಲ ಕೋರ್ಟು ನೌಕರರಲ್ಲಿ ಎರಡು ಪಾರ್ಟಿಯಾಗಿದೆ ಉಭಯ ಪಾರ್ಟಿಗಳವರೂ ಜಗಳವಾಡಿಕೊಂಡು ಇವರುಗಳ ಕಾರುಬಾರನ್ನು ಕುರಿತು ಮುನ್ಸಿಫ್ ಸಾಹೇಬರವರಿಗೆ ತಿಳಿಸಿದರೂ ಅವರು ಎಲ್ಲಾರ ವಿಷಯದಲ್ಲೂ ಬಹಳ ದಯಾಳುಗಳಾಗಿದಾರೆ ಇದಲ್ಲದೆ ನೌಕರರ ವಿಷಯದಲ್ಲಿ ಕೆಲವು ಜನ ಲಾಯರುಗಳೇ ಭಯಭೀತಿಯಿಂದ ಸ್ವಲ್ಪ ಸ್ವಲ್ಪವಾಗಿ ಸಹಿಸಿದಾರೆ ಇವ್ಯಾದರೂ ತಮ್ಮಗಳಿಗೇನೂ ಕೆಡುಕಾಗಲಿಲ್ಲವೆಂದು ಯೋಚಿಸಿ ಹೇಳಿದವರ ವಿಷಯದಲ್ಲಿ ಉದಾಸೀನ ಭಾವವನ್ನು ವಹಿಸಿರುವದರಿಂದ ಲಾಯರುಗಳು ಕೂಡ ಕಂಡದ್ದನ್ನು ಹೇಳಲು ಭಯಪಡುತ್ತಾರೆ ಈ ನೌಕರರುಗಳು ಮುನ್ಸಿಫ್ ಸಾಹೇಬರವರ ರೂಬರೂಬು ವಿನಯಭಾವವನ್ನು ತೋರಿಸಿ ಕೆಲಸ ಮಾಡಿದರೆ ಸಾಕು ಕಕ್ಷಿಗಾರರಿಗೂ, ಲಾಯರುಗಳಿಗೂ ಎಂಥಾ ತೊಂದರೆ ಮಾಡಿದರೆ ತಾನೇ ಕೇಳುವವರು ಯಾರು ಎಂದು ಯೋಚಿಸಿರುವಂತೆ ಕಾಣುತ್ತೆ ಆದ್ದರಿಂದ ಈ ಕೋರ್ಟಿನ ನೌಕರರನ್ನು ಬೇರೆ ಸ್ಥಳಗಳಿಗೆ ವರ್ಗಾಯಿಸಿದರೆ ಬಹಳ ಉತ್ತಮ

ಸತ್ಯವಾದಿ

ರಾಜಧಾನಿಯಲ್ಲಿ ಬಳಂಗ್ ಆಟ

ಅಯ್ಯಾ,

ಈಗ ಸುಮಾರು ದಿವಸಗಳಿಂದ ಯಾರೊ ಒಬ್ಬ ಬಳಂಗ್ ಆಟದವನು ಛತ್ರಿ ನರಸಪ್ಪನವರ ಛತ್ರದ ಬಳಿ ಚಪ್ಪರ ಹಾಕಿಕೊಂಡು ಆಟವಾಡುತ್ತಿದ್ದಾನೆ ನಮ್ಮ ಊರಿನ ಹುಡುಗರೂ ದೊಡ್ಡವರೂ ಅನೇಕರು ಈ ಆಟಕ್ಕೆ ಹೋಗಿ ಬಹಳ ದ್ರವ್ಯ ಹಾಳುಮಾಡಿಕೊಳ್ಳುತ್ತಿದ್ದಾರೆ ಈ ಆಟದ ಚಕ್ರವು ಸುತ್ತುತ್ತಿರುವಾಗ ಯಾರಾದರೂ ಬಂದೂಕಿನಿಂದ ಮೊಳೆಯನ್ನು ಹೊಡೆಯಬಹುದೆಂದು ಆಟದವನು ಹೇಳಿದ ಮಾತ್ರಕ್ಕೇ ಯಾವ ಮೋಸವೂ ಇಲ್ಲವೆಂದು ನಂಬಿ ಅನೇಕರು ಮೋಸ ಹೋಗುತ್ತಿದ್ದಾರೆ ಇದರಲ್ಲಿ ಕಾಸಿಟ್ಟು ಆಡುವವರು ಮೋಸಹೋಗುವದು ಹ್ಯಾಗೆಂದರೆ—1ನೇ ಮನೆಯಲ್ಲಿ ಒಬನು 1 ಕಾಸು ಇಟ್ಟಿರುತ್ತಾನೆಂದು ತಿಳಿಯೋಣ ಈ ಮನೆಗೆ ಬಂದೂಕಿನಿಂದ ಹೊಡೆದ ಮೊಳೆಯು ಚುಚ್ಚಿದ ಹೊರತು ಕಾಸಿಟ್ಟವನಿಗೆ 6 ಕಾಸು ಸಿಕ್ಕುವದಿಲ್ಲ ಅಂದರೆ ಕಾಸಿಟ್ಟವನು ಗೆಲ್ಲಬೇಕಾದರೆ ಒಂದೇ ಛಾನ್ಸು ಸೋಲಬೇಕಾದರೆ 5 ಛಾನ್ಸು ಅಂದರೆ ಕಾಸಿಟ್ಟವನು ಗೆಲ್ಲಲು ಒಂದು ಛಾನ್ಸಾದರೆ ಆಟದವನು ಗೆಲ್ಲಲು 5 ಛಾನ್ಸು ಉಂಟು ಆದ್ದರಿಂದ ಕಾಸಿಟ್ಟವನು ಕಳೆದುಕೊಳ್ಳಲು ಹೆಚ್ಚಾದ ಸೌಲಭ್ಯವಿದೆ ಇದಕ್ಕೆ ಬದಲಾಗಿ ಕಾಸಿಟ್ಟವನು ಹ್ಯಾಗೆ ಒಂದೇ ಛಾನ್ಸನ್ನು ಪಡೆದಿದ್ದಾನೋ ಹಾಗೇ ಆಟದವನೂ ಒಂದೇ ಛಾನ್ಸು ಪಡೆದು ಆಡುವ ಪಕ್ಷಕ್ಕೆ ಉಭಯತ್ರರಿಗೂ ಏಕರೀತಿ ಛಾನ್ಸು ಉಂಟಾಗುತ್ತದೆ ಆಗ ಸೋಲೂ, ಗೆಲುವೂ ಸಮವಾಗುವದು ಆಟಗಾರನಿಗೆ ಯಾವಾಗಲೂ ಫಾಯಿದೆಯೇ ಹೊರತು ಲುಕ್ಸಾನೇ ಇಲ್ಲ ಕಾಸಿಟ್ಟು ಆಡುವವರಿಗೆ ಲುಕ್ಸಾನೇ ಹೊರತು ಫಾಯಿದೆ ಇಲ್ಲ 6 ಜನರು 6 ಮನೆಗೂ ಒಬ್ಬೊಬ್ಬರಾಗಿ ಒಂದು ಕಾಸಿನಂತೆ ಇಡುತ್ತಾರೆ ಮೊಳೆಯು 1 ನೇ ಮನೆಗೆ ತಾಗಿದರೆ ಎಲ್ಲಾ ಕಾಸನ್ನೂ ತೆಗೆದು 1 ನೇ ಮನೆಯಲ್ಲಿಟ್ಟವನಿಗೆ ಕೊಡುತ್ತಾನೆಯೇ ಹೊರತು ತನ್ನ ಸ್ವಂತದಿಂದ ಏನೂ ಕೊಡಬೇಕಾಗಿಲ್ಲ ಮೊಳೆಯು 5 ನೇ ಮನೆಗೆ ತಾಗಿದರೆ 5 ಕಾಸು ಮಾತ್ರ 1 ನೇ ಮನೆಗೆ ತಾಗಿದರೆ 1 ಕಾಸು, 2 ನೇ ಮನೆಗೆ ತಾಗಿದರೆ 2 ಕಾಸು, ಹೀಗೆ ಕೊಡುವುದರಿಂದ 1 2 3 ಕಾಸು ಆಟದವನಿಗೆ ಉಳಿದಂತಾಯಿತೇ ಹೊರತು ಲುಕ್ಸಾನು ಇಲ್ಲ

ಈಗ ದವಸಧಾನ್ಯಗಳು ಬಹಳ ತಗ್ಗಾಗಿ ಬಡಬಗ್ಗರು ಜೀವಿಸುವದೇ ಕಷ್ಟವಾಗಿದೆ ಈ ಸಾರಿ ಮಳೆಯು ನಿಂತುಹೋಗಿ ಕ್ಷಾಮವು ತಲೆದೋರುವಂತಿದೆ ಆಪತ್ಕಾಲಕ್ಕೆಂದು ತ ದೆತಾಯಿಗಳು ಬಚ್ಚಿಟ್ಟ ದುಡ್ಡುಕಾಸನ್ನು ಹುಡುಗರು ಕದ್ದು, ಈ ಕೆಟ್ಟ ಆಟದಲ್ಲಿ ಕಳೆಯುತ್ತಿದ್ದಾರೆ ಕೆಲವು ವೇಳೆ ನಗನಾಣ್ಯಗಳನ್ನು ಕದ್ದು ಮಾರುವುದೂ ಉಂಟು ಈ ಆಟದಿಂದ ಹುಡುಗರ ಬುದ್ಧಿಯು ಮುಂದೆ ನಾನಾ ವಿಧವಾದ ಸುಳ್ಳು, ಕಳ್ಳತನ, ಮೋಸ ಇವುಗಳಿಗೆ ಮುಕ್ಕಿಸಲು ಅವಕಾಶವಾಗಿದೆ ಸರ್ಕಾರದವರು ಇಂಥಾ ಅನ್ಯಾಯವಾದ ಮೋಸಕ್ಕೆ ಲೈಸನ್ಸು ಕೊಟ್ಟು ಅವಕಾಶವನ್ನುಂಟುಮಾಡಿರುವುದು ತುಂಬಾ ಆಶ್ಚರ್ಯ ಆಟವು ಇಂಥಾ ಅನ್ಯಾಯವಾದದ್ದೆಂದು ತಿಳಿದೂ ತಿಳಿಯದಂತೆ ಇರುವುದು ಯಾಕೆಯೋ ಕಾಣೆನು ಇದು ಪ್ರಜಾ ಹಿತಚಿಂತನೆ ಎಂದು ಹೇಳಬಹುದೆ ? ತಾಯಿತಂದೆಗಳಾದರೂ ತಮ್ಮ ಮಕ್ಕಳು ಇಂಥಾ ಆಟಕ್ಕೆ ಹೋಗದಂತೆ ಸರಿಯಾದ ಉಸ್ತುವಾರಿಯಲ್ಲಿಟ್ಟಿರಬೇಕೆಂದು ಕೋರುತ್ತೇನೆ

ಒಬ್ಬ ಪುರವಾಸಿ

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ — ಈ ಊರಿನಲ್ಲಿ ಮಳೆ ಇಲ್ಲದೆ ಜೋಳದ ಪೈರು ಆಗುವುದಿಲ್ಲವೆ ದೂ ರಾಗಿ ಎಷ್ಟೆಸ ಸಹ ಆಗುತ್ತದೋ ಇಲ್ಲವೋ ಎಂದೂ ಜನರೆಲ್ಲಾ ಹಾಹಾಕಾರ ಪಡುತ್ತಾ ಇದಾರೆ ಮೊನ್ನೆ ಒಂದಾವರ್ತಿ ಕೆಲವು ಹನಿಗಳು ಬಿದ್ದು ನಿಂತುಹೋಯಿತು —ಕೆಲವು ದಿನಗಳ ಹಿಂದೆ ಥಿಯಾಸಾಫಿಕಲ ಸೊಸೈಟಿಗೆ ಸೇರಿದವರ ಪೈಕಿ ಒಬ್ಬರು ಬಂದು 3 4 ದಿನ ಗೌರ್ನಮೆಂಟ್ ಸ್ಕೂಲಿನಲ್ಲಿ ಭಕ್ತಿ ಮತ್ತು ಸ್ವಾರ್ಥ ಪರಾರ್ಥ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸಗಳನ್ನು ತಕ್ಕಮಟ್ಟಿಗೆ ಮಾಡಿದರು ಇಲ್ಲಿನ ದೇವಸ್ಥಾನದ ಪಾರುಪತ್ಯವರು ಸದುತ್ತರವನ್ನು ಕೊಟ್ಟರು —ಪೋಲೀಸ್ ಇನ್ಸ್‌ಪೆಕ್ಟರವರು, [illegible]ಗಿ ಬಂದಿದಾರೆ ಇವರು ಮಾಜಿ ಇನ್ಸ್‌ಪೆಕ್ಟರ್ ಅಬ್ದುಲ್ ರಜಾಕ್ ರವರಿಗಿಂತಲೂ ಒಳ್ಳೇ ಹೆಸರು ಪಡೆಯುವರೆಂದು ನಂಬುತ್ತೇನೆ — ಅಮಲ್ದಾರರು ಮೊದಲುಗೊಂಡು ಇಲ್ಲಿರುವ ಸಬ್ ರಿಜಿಸ್ಟ್ರಾರ್ ಮತ್ತು ಡಾಕ್ಟರ್ ಮುಂತಾದವರು ತಮ್ಮ ತಮ್ಮ ಕೆಲಸಗಳನ್ನು ಮುತುವರ್ಜಿಯಿಂದಲೂ ಸಕಾಲದಲ್ಲಿಯೂ ಮಾಡುತ್ತಿರುವದರಿಂದ ತುಂಬಾ ಉಪಕಾರವಾಗಿದೆ —ಮೊನ್ನೆ ದಿನ ಎಂ ಪಿ ಲಕ್ಷಿಂಗಾಚಾರ್ಯರವರು ಬಂದು ಗೌರ್ನಮೆಂಟ್ ಸ್ಕೂಲಿನಲ್ಲಿ ಆಶ್ಚರ್ಯಕರವಾದ ಯಕ್ಷಿಣಿ ವಿದ್ಯವನ್ನು ತೋರಿಸಿ ಪ್ರಜೆಗಳನ್ನು ತುಂಬಾ ಆನಂದಪಡಿಸಿದರು ಈ ನೋಟಕ್ಕೆ ನಂಜನಗೂಡು ಸಬ್ ಡಿವಿಜನ್ ಸಾಹೇಬರವರೂ, ಅಮಲ್ದಾರರೆ ಮುಖ್ಯವಾದ ಅಧಿಕಾರಿಗಳೂ ಇತರ ದೊಡ್ಡ ಮನುಷ್ಯರೂ, ಆರ್ಥ ವಿಚಿಗೆ ಸ್ಕೂಲ್ ಹುಡುಗರೂ ತುಂಬಿದ್ದರು

ಮಳವಳ್ಳಿ — ಈಗ್ಗೆ 1 ದಿವಸಗಳಿಂದೀಚೆಗೆ ಈ ಊರಿನಲ್ಲಿ ಹೊಸದಾಗಿ ಪ್ಲೇಗ್ ಬಾಯಿಲೆ ಆಗಿರಲಿಲ್ಲ ಮೊನ್ನೆ ಮಾತ್ರ ಒಬ್ಬರಿಗೆ ತಗಲಿ ಮೃತಪಟ್ಟರು ಸಾಧ್ಯವಾದ ಮಟ್ಟಿಗೂ ಹೊರಕೋಟೆ, ಒಳಕೋಟೆ ಜನರೆಲ್ಲರೂ ಊರು ಬಿಟ್ಟಿರುವರು ಬ್ರಾಹ್ಮಣರ ಪೈಕಿ ಊರು ಬಿಟ್ಟವರಲ್ಲಿ ಕೆಲವು ಜನ ಅಧಿಕಾರಸ್ಥರು 1-1½ ಮೈಲಿ ಖಾಸಲಿ ಗ್ರಾಮಗಳಿಗೆ ಸೇರಿರುವರು ಆ ಗ್ರಾಮಗಳಲ್ಲಿ 1 2 ಸೇದುವ ಭಾವಿಗಳಿದ್ದು ಭಾವಿಗಳಲ್ಲೂ ನೀರು ಸಿಕ್ಕದೆ ಜನಗಳು ತೊಂದರೆಪಡುತ್ತಿದ್ದರು ಈಗ ಈ ಅಧಿಕಾರಸ್ಥರು ಹೋಗಿರುವದರಿಂದ ಆ ಜನಗಳಿಗೆ ನೀರಿಗೇ ತೊಂದರೆಯಾಗಿರುತ್ತದೆ ಈಗ ಸೇರಿರುವ ಅಧಿಕಾರಿಗಳಾದರೂ ಸ್ವಲ್ಪ ಸ್ವಲ್ಪ ಚಂದಾ ಹಾಕಿ ಭಾವಿಗಳನ್ನು ಆಳ ಮಾಡಿಸಿ ಅಲ್ಲಿನ ಜನಗಳಿಗೂ ಅನುಕೂಲಪಡಿಸಿ ತಾವೂ ಸುಖವನ್ನೂ ಧರ್ಮವನ್ನೂ ಹೊಂದಬೇಕಾಗಿದೆ — ಕಳೆದ ಸಾರಿ ಊರು ಬಿಟ್ಟದ್ದಾಗ ಬಹಳ ಮುತುವರ್ಜಿ ವಹಿಸಿ ಪೋಲೀಸ್ ಕಾವಲಿಟ್ಟಿದ್ದರೂ ಬಿಟ್ಟಿದ್ದ ಮನೆಗಳಲ್ಲಿ ಕಳವು ಆಗುತ್ತಿತ್ತು ಈಗಲಾದರೋ ಪೋಲೀಸ್ ಆಫೀಸರುಗಳು ಗ್ರಾಮಾಂತರಗಳಲ್ಲಿದ್ದರೂ ಊರಿನ ಉಸ್ತುವಾರಿಯನ್ನು ದರ್ಪದಿಂದ ನೋಡಿಕೊಳ್ಳುವಂತೆ ಏರ್ಪಾಡು ಮಾಡುವರೆಂದು ನಂಬುತ್ತೇನೆ — ಊರಿನಲ್ಲಿ ಈಚೆಗೆ ಮಳೆ ಇಲ್ಲ ಅಪರೂಪವಾಗಿ ತುಂತುರು ಮಳೆಯಾಗುತ್ತಿರುವುದು ಇದರಿಂದ ಏನೂ ಉಪಯೋಗವಿಲ್ಲ ಮುಂಗಾರಿನ ಪೈರೆಲ್ಲಾ ಒಣಗುತ್ತಿದೆ ಸೇದುವ ಭಾವಿಗಳಲ್ಲೂ ನೀರು ಬತ್ತಿಹೋಗುತ್ತಿದೆ ಕುಡಿಯುವ ನೀರಿಗೆ ತೊಂದರೆ ಬರುವುದೇನೋ ಎಂದು ಎಲ್ಲರಿಗೂ ಯೋಚನೆಯಾಗಿದೆ —ಈ ಊರಿನ ಎ ವಿ ಸ್ಕೂಲ್ ಮತ್ತು ಪಂಚಮ ಸ್ಕೂಲ್ ಲೋವರ್ ಸೆಕಂಡರಿ ಪರೀಕ್ಷೆ ಫಲಿತಾಂಶವು ಉತ್ತಮವಾಗಿ ಬಂದಿರುವುದು ಆದರೆ ಈ ಸಂಟರಿಗೆ ಬಂದಿದ್ದ ಚೀಫ್ ಸೂಪರಿಂಟೆಂಡರವರಿಗೆ ಎ ವಿ ಸ್ಕೂಲ್ ಹೆಡ್ ಮಾಸ್ಟರವರು ಪರೀಕ್ಷಾ ಕಾಲದಲ್ಲಿ ಕಾಪಿಮಾಡಿಸಲು ಏರ್ಪಾಡು ಮಾಡಿದಂತೆ ಹೆಸರಿಲ್ಲದ ಕಾಗದಗಳು ಬಂದಿದ್ದು ಪತ್ತೆ ತರದೂದಿಗಾಗಿ ಒಂದನ್ನು ಅವರು ಪೋಲೀಸಿಗೆ ಹಾಕಿರುತ್ತಾರೆ

ತುಮಕೂರು —ಈ ಊರಲ್ಲಿ ಒಂದು ವಾರದಿಂದ ಈಚೆಗೆ ಸುಮಾರು 3 4 ಹದ ಮಳೆಯಾಗಿದೆ ಹಿಂದೆ ಸಕಾಲದಲ್ಲಿ ಮಳೆ ನಡೆಯದೆ ಹೋದದ್ದರಿಂದ ವ್ಯವಸಾಯವು ತೃಪ್ತಿಕರವಾಗಿಲ್ಲ —ಈ ಡಿಸ್ಟ್ರಿಕ್ಟಿಗೆ ಹೊಸದಾಗಿ ದಯಮಾಡಿಸಿರುವ ಡೆಪ್ಯುಟಿ ಕಮಿಷನರ್ ಸಾಹೇಬರವರು ಮ್ಯುನಿಸಿಪಾಲಿಟಿಯ ನ್ಯೂನತೆಗಳಿಗೆ ಗಮನವನ್ನು ಕೊಟ್ಟು ಸರಿಪಡಿಸುತ್ತಲಿದಾರೆ —ಈ ಊರಿನ ಪಶ್ಚಿಮ ದಿಕ್ಕಿನ ಬಡಾವಣೆ ಅಂದರೆ ಹೊಸ ಅಗ್ರಹಾರಕ್ಕೆ ಸಂಬಂಧಪಟ್ಟ ಸುಮಾರು 4 ಎಕರೆಯಷ್ಟು ಭೂಮಿಯು ಇನ್ನೂ ಪಾಳು ಬಿದ್ದೇ ಇದೆ ಇದರಲ್ಲಿ ಸರ್ಕಾರದವರು 1,500 ರೂಪಾಯಿ ವೆರಿವಿಗೂ ಖರ್ಚುಮಾಡಿ ಒಂದು ಸೀನೀರು ಭಾವಿಯನ್ನು ತೋಡಿಸಿದಾರೆ ಈ ಜಮೀನಿಗೆ ಕೆರೆ ತುಂಬಿದಾಗ ಕಾಲ್ವೆಗಳ ಮೂಲಕ ಸಲೀಸಾಗಿ ನೀರು ಹರಿಯುತ್ತೆ ಈ ಅನುಕೂಲಗಳನ್ನು ನೋಡಿ ಈ ಸ್ಥಳದಲ್ಲಿ ಒಂದು ಉದ್ಯಾನವನವನ್ನು ಮಾಡಬೇಕೆಂದು ಹಿಂದಿನ ಡೆಪ್ಯುಟಿ ಕಮಿಷನರುಗಳು ಉದ್ದೇಶಿಸಿ ಇದ್ದರು ಆದರೂ ಇದುವರಿವಿಗೆ ಏನೂ ಮಾಡಲಿಲ್ಲ ದಯಾಳುಗಳಾದ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರಾದರೂ ಈ ಕೆಲಸವನ್ನು ನೆರವೇರಿಸಿ ಶಾಶ್ವತವಾದ ಕೀರ್ತಿಯನ್ನು ಪಡೆಯುವರೆಂದು ಪ್ರಜೆಗಳು ಹಾರೈಸುತ್ತಿದ್ದಾರೆ —ಈ ಅಗ್ರಹಾರಕ್ಕೂ, ಚಿಕ್ಕಮಕ್ಕಳ ಪಾಠಶಾಲೆಗಳಿಗೂ, ಆಸ್ಪತ್ರೆಗೂ ಬಹಳ ದೂರವಿರೋಣದರಿಂದಲೂ, ಮಕ್ಕಳು ದೊಡ್ಡವರ ಸಹಾಯವಿಲ್ಲದೆ ಹೋಗಿಬರುವದು ಅಸಾಧ್ಯವಾದದ್ದರಿಂದಲೂ ಈ ಅಗ್ರಹಾರದ ಬಳಿ ಒಂದು ಸ್ಕೂಲನ್ನೂ, ಒಂದು ಸಣ್ಣ ಆಸ್ಪತ್ರೆಯನ್ನೂ ಇಡತಕ್ಕದ್ದು ಅತ್ಯವಶ್ಯಕವಾಗಿದೆ —ಈ ಊರಲ್ಲಿ ಈಗ ಹೊಸದಾಗಿ ರಸ್ತೆಗಳಿಗೆ ಜಲ್ಲಿ ಹಾಕಿ ರಿಪೇರಿ ಮಾಡಿದ್ದಾರೆ ಕಲ್ಲುಗಳ ಮೇಲೆ ಸಾಕಾದಷ್ಟು ಮಣ್ಣು ಹಾಕಿ ದಮ್ಮಸು ಮಾಡಿಲ್ಲ ಇದರಿಂದ ಬಹಳ ಜನಗಳಿಗೆ ಅನಾನುಕೂಲ ಜಾಗ್ರತೆ ಸರಿಪಡಿಸಿದರೆ ಉತ್ತಮ

ದೊಡ್ಡಬಾಣಾವಾರ —ಈ ಊರಿನಲ್ಲಿ ಮಳೆ ತಕ್ಕಮಟ್ಟಿಗೆ ಆಗುತ್ತಿದೆ ರೈತರು ತಮ್ಮ ಕೆಲಸ ಕಾರ್ಯಗಳನ್ನು ಉತ್ಸಾಹದಿಂದ ಮಾಡುತ್ತಾ ಇರುವರು ದಿನಸಿ ಧಾರಣೆ ರೂಪಾಯಿಗೆ ಅಕ್ಕಿ 6 6½ ಸೇರು, ರಾಗಿ 15 16 ಸೇರು ಸಿಕ್ಕುವುದರಿಂದ ಬಡವರಿಗೆ ತುಂಬಾ ಕಷ್ಟಕರವಾಗಿದೆ —ಈ ಊರಿನಲ್ಲಿ ಮ್ಯುನಿಸಿಪಾಲಿಟಿಯು ಬಹಳ ಕಡಮೆಯಾಗಿರುವುದು ರಾತ್ರಿವೇಳೆ ಬೀದಿಗಳಲ್ಲಿ ಹುಡುಕಿದರೂ ಬೆಳಕಿನ ಸುಳಿವೇ ಕಾಣುವುದಿಲ್ಲ ಹೊರಗೆ ಹೊರಡುವುದಕ್ಕೆ ಭಯವಾಗುವುದು ಸರಕಾರದವರು ಈ ಊರಿನ ಜನಗಳ ಮೇಲೆ ಕರುಣವಿಟ್ಟು ರಾತ್ರಿ ಲಾಂದ್ರಾ ದೀಪಗಳನ್ನು ಇಡಿಸುವಂತೆ ಬಯಸುತ್ತೇವೆ ಅಲ್ಲದೆ ಈ ಊರಿನ ಕಚರಾ ಸಾಗಿಸುವದಕ್ಕೆ ಹೆಚ್ಚಾಗಿ ಗಮನ ಕೊಟ್ಟರೆ ತುಂಬಾ ಉಪಕಾರವಾಗುವುದು ಚರಂಡಿಗಳಲ್ಲಿ ಮಲೇ ನೀರು ಸರಿಯಾಗಿ ಹರಿದುಹೋಗುವಂತೆ ಏರ್ಪಾಡು ಮಾಡಬೇಕಾಗಿದೆ ನಮ್ಮ ಅಮಲ್ದಾರರು ಈ ಊರಿನ ಕಡೆಗೆ ಆಗಾಗ್ಗೆ ಬಂದು ಮ್ಯುನಿಸಿಪಾಲಿಟಿ ವಿಷಯಗಳನ್ನು ತುಂಬಾ ಗಮನಕ್ಕೆ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ —ವಿಶೇಷವಾಗಿ ಧರ್ಮಕಾರ್ಯಾಸಕ್ತರಾಗಿ ಪ್ರವರ್ತಿಸುತ್ತಿರುವ ಮ| ಬೇಳೂರು ಖರೀದಿ ಲಿಂಗಪ್ಪಸೆಟ್ಟರವರು ಈ ಊರಿಗೆ ದಯಮಾಡಿಸಿರುವ ವಿಚಾರವನ್ನು ಇಲ್ಲಿನ ಗೌವರ್ನಮೆಂಟ್ ಕನಡಾ ಸ್ಕೂಲ್ ಹೆಡ್ ಮಾಸ್ಟರು ತಿಳಿದು ಅವರನ್ನು ತಮ್ಮ ಸ್ಕೂಲಿಗೆ ಕರೆದುತಂದರು ಅವರು ಎಲ್ಲಾ ತರಗತಿಗಳ ಬಾಲಕರನ್ನೂ ನೋಡಿ ಅವರಲ್ಲಿ ದರಿದ್ರರಾಗಿರತಕ್ಕ ಬಾಲಕರನ್ನು ತಮ್ಮಲ್ಲಿಗೆ ಕರೆಸಿಕೊಂಡು ಅತಃಕರಣಪಟ್ಟು ಅವರಿಗೆಲ್ಲಾ ತಕ್ಕವಷ್ಟಿಗೆ ಅನುಕೂಲಮಾಡಿಕೊಡಬೇಕೆಂದು ಪುಸ್ತಕ ಟೋಪಿ ಅಂಗಿ, ಇವಕ್ಕೆ ಹಣವನ್ನು ಹೆಡ್ ಮಾಸ್ಟರ ವಶಕ್ಕೆ ಕೊಟ್ಟು ದಯಮಾಡಿದರು ಹೆಡ್ ಮಾಸ್ಟರವರು ಈ ಊರಿನ ದೊಡ್ಡ ಮನುಷ್ಯರನ್ನು ಸೇರಿಸಿ ಸಭ್ಯರಲ್ಲೇ ಅವರ ಇಷ್ಟವನ್ನು ನೆರವೇರಿಸುವರು ಪ್ರತಿ ಸಂವತ್ಸರವೂ ಕಡೂರಿನಲ್ಲಿ ಪರೀಕ್ಷಾ ಕಾಲದಲ್ಲಿ ನೂರಾರು ಮಂದಿ ಪರೀಕ್ಷಕ ಬಾಲಕರಿಗೆ ಅನ್ನದಾನಗಳನ್ನು ಕೊಡಿ ; ಅವರ ವಿದ್ಯಾಭಿವೃದ್ಧಿಗೆ ತಕ್ಕ ಹಿತವಚನಗಳನ್ನು ಹೇಳುವುದು ಇವರಿಗೆ ಸ್ವಾಭಾವಿಕವಾಗಿದೆ ಇವರು ಶ್ರೀ ಪರಮೇಶ್ವರನ ಪ್ರೀತ್ಯರ್ಥವಾಗಿ ಇಂಥಾ ಧರ್ಮಕಾರ್ಯಗಳನ್ನು ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ

ಕ್ಲೋಸ್‌ಪೇಟೆ —ಈ ಊರಿನಲ್ಲಿ ಸುಮಾರು ಒಂದು ವಾರದ ಊಗಾಯಿತು ನೆಲ ಕವಿದುಕೊಂಡಿತ್ತು ನೋಡೆ ಮಳೆಯೇ ಹೊರತು ಭೂಮಿಗೆ ಹದವಾಗಲಿಲ್ಲ ರೈತರು ಬೀಜ ಬಿತ್ತುವದಕ್ಕಾಗಿ ನೆಲವನ್ನು ಹಸನು ಮಾಡಿಕೊಂಡು, ಹದವಾದ ಮಳೆಗೋಸ್ಕರ ಬಹಳ ಆತುರದಿಂದ ಎದುರು ನೋಡುತ್ತಿದ್ದರು ಒಳ್ಳೇ ಮಳೆಯು ಕಳೆದ ತಾ 12ನೇ ಶುಕ್ರವಾರ ಬಿದ್ದದ್ದರಿಂದ ರೈತರೆಲ್ಲರೂ ಹರ್ಷಚಿತ್ತರಾಗಿದ್ದಾರೆ —ಇಲ್ಲಿನ ಹವಾ ಕೊಂಚಮಟ್ಟಿಗೆ ಬದಲಾವಣೆ ಆಗಿರುತ್ತೆ ಬೆಳಗಿನವೇಳೆ ಛಳಿ, ತಣ್ಣಗೆ ಗಾಳಿ ಬೀಸುವದು ಜನರು ಅಲ್ಲಲ್ಲಿ ಕೆಮ್ಮು ನೆಗಡಿ ಕಣ್ಣುನೋವು ಉಪದ್ರಗಳಿಂದ ಬಾಧೆಪಡುತ್ತಿದಾರೆ ಅಲ್ಲದೆ ಊರಿನಲ್ಲಿ ಪ್ಲೇಗ್ ರೋಗವು ಪುನಃ ಕಾಣಿಸಿಕೊಳ್ಳುವ ಹಾಗಿತ್ತು ಸೆಟ್ಟಿಹಳ್ಳಿಯಲ್ಲಿ ಈಗ್ಗೆ ಸ್ವಲ್ಪ ದಿನಗಳ ಹಿಂದೆ ಕೆಲವರ ಮನೆಗಳಲ್ಲಿ ಇಲಿ ಬಿದ್ದ ಹಾಗೂ ಅವರು ಮನೆಗಳನ್ನು ಬಿಟ್ಟು ಬೇರೆ ಹೋದ ಹಾಗೂ ವರ್ತಮಾನ

ಇಷ್ಟೇ ಸಾಲದೆ ಒಂದು ಮನೆಯಲ್ಲಿ 2-3 ಕೇಸುಗಳಾದವು ಆದರೆ ಅಲ್ಲಿಂದ ಮುಂದೆ ಪ್ರಬಲವಾಗಲಿಲ್ಲ ಇಂಥಾ ಮಳೆಗಾಲದಲ್ಲಿ ಈ ಸಾಂಕ್ರಾಮಿಕ ಜಾಡ್ಯವು ಪ್ರಬಲಿಸಿದರೆ ಜನಗಳಿಗೆ ಉಂಟಾಗಬಹುದಾದ ಕಷ್ಟವು ಇಷ್ಟೆಂದು ಹೇಳಲು ಸಾಧ್ಯವಿಲ್ಲ —ಇಲ್ಲಿನ ಮ್ಯುನಿಸಿಪಲ್ ವಿಚಾರಣೆಯು ತಕ್ಕಮಟ್ಟಿಗೆ ಇರುತ್ತೆ. ಮೋಟಾರ್ ಗಾಡಿಗಳೂ ಮತ್ತು ದೊಡ್ಡ ಮನುಷ್ಯರೂ ತಿರುಗಾಡುವ ರಸ್ತೆಗಳು ಚೊಕ್ಕಟವಾಗಿಯೂ, ರಾತ್ರಿ ವೇಳೆ ಬೆಳಕಾಗಿಯೂ ಇರುತ್ತವೆಯೇ ಹೊರತು ಪೇಟೆ ಬೀದಿಗಳ ಅವಸ್ಥೆಯನ್ನು ಹೇಳಬೇಕಾದದ್ದಿಲ್ಲ ಈ ವಿಷಯದಲ್ಲಿ ಇಲ್ಲಿನ ಅಧಿಕಾರಿಗಳು ಸರಿಯಾದ ಗಮನ ಕೊಟ್ಟಾರೆಂದು ನಂಬುತ್ತೇವೆ —ಇಲ್ಲಿನ ಸ್ಟೇಷನ್ ಮಾಸ್ಟರಾದ ಮೆ|| ಕೇಶವರಾಯರು ಗುಬ್ಬಿಗೆ ವರ್ಗ ಮಾಡಲ್ಪಟ್ಟಿರು ಇವರು ದೊಡ್ಡ ಸಂಸಾರಿಗಳಾಗಿಯೂ, ಗುಣಶಾಲಿಗಳಾಗಿಯೂ ಇದ್ದು ಇಲ್ಲಿನ ಜನರ ಅನುರಾಗಕ್ಕೆ ಪಾತ್ರರಾಗಿದ್ದರು ಇವರಿಂದ ಪರಸ್ಥಳದಿಂದ ರೈಲ್ ಹತ್ತುವದಕ್ಕಾಗಿ ಬರುತ್ತಿದ್ದ ಪ್ರಯಾಣಿಕರಿಗೆ ಉಂಟಾಗುತ್ತಿದ್ದ ಸೌಕರ್ಯವನ್ನು ಹೇಳಲಸಾಧ್ಯವಾಗಿತ್ತು ಕಳೆದ ಸೋಮವಾರ 8ನೇ ತಾ ಇಲ್ಲಿನ ದೊಡ್ಡ ಮನುಷ್ಯರೆಲ್ಲಾ ಸೇರಿ ಅವರಿಗೂ ತಮಗೂ ಇದ್ದ ಅನುರಾಗವನ್ನು ತೋರ್ಪಡಿಸುವದಕ್ಕಾಗಿ ಅವರಿಗೆ ಸಾಹುಕಾರ್ ನಲ್ಲಯ್ಯನವರ ಧರ್ಮ ಛತ್ರದಲ್ಲಿ ಒಂದು ಭಾರಿ ಔತಣವನ್ನು ಮಾಡಿದರು ಊಟ ಉಪಚಾರಗಳಾದ ಮೇಲೆ ಎಲ್ಲರೂ ವಿನೋದವಾಗಿ ಕುಳಿತು ಪುಷ್ಪ, ತಾಂಬೂಲಾದಿಗಳನ್ನು ಸ್ವೀಕರಿಸಿ ಅನಂತರ ಅವರವರ ವಾಸಸ್ಥಾನಗಳನ್ನು ಕುರಿತು ತೆರಳಿದರು ಮೆ ಕೇಶವರಾಯರವರು ನೆನ್ನೆ ಮಂಗಳವಾರ ಗುಬ್ಬಿಗೆ ಪ್ರಯಾಣ ಬೆಳಸಿದರು

ಮಂಚೇನಹಳ್ಳಿ ಈ ಪ್ರಾಂತ್ಯ ರೋಗಾದಿಗಳ ಭಯವೇನೂ ಇಲ್ಲ ಮಳೆಯು ಬರಲಿಲ್ಲವೆಂದು ಸರ್ವರೂ ಚಿಂತೆಪಡುತ್ತಿದ್ದರು ಪುನರ್ವಸು ಮಳೆಯು ತಕ್ಕ ಕ್ರಮದಿಂದ ಪ್ರತಿದಿನವೂ ಬರುವುದರಿಂದ ಸರ್ವರೂ ಹರ್ಷಪೂರಿತರಾಗಿದ್ದಾರೆ ಹೊಲಗಳ ಬಿತ್ತನೇ ಕೆಲಸವು ತೀರಿದೆ ಕೆರೆಗೂ ನೀರು ಬರವುದಕ್ಕೆ ಪ್ರಾರಂಭವಾಗಿದೆ ದವಸ ಧಾನ್ಯಾದಿಗಳ ಧಾಣೆಯು ಮಾತ್ರ ಕಡಮೆಯಾಗಲಿಲ್ಲ ಇದೇ ಮಾಹೆ 8ನೇ ಸೋಮವಾರ ಘನ ಸ್ಟೀವೆಲ್ ಧೊರೆ, ಧೊರೆಸಾನಿಯವರೂ, ಸಹಾಯ ಬೋಧಕರಾದ ಘನ ಭದ್ರಪ್ಪನವರೂ, ಈಗ ಇವರ ಸ್ಥಾನಕ್ಕೆ ವರ್ಗವಾಗಿ ಬಂದಿರುವ ಮೆ ನಾರಾಯಣಪ್ಪನವರೂ ಸಹಾ ಈ ಊರಿಗೆ ದಯಮಾಡಿಸಿದರು 12| ಘಂಟೆಗೆ ಸರಿಯಾಗಿ ಕದಿರು ಪುಷ್ಪ ಲತಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ಲಾರ್ಡ್ ಮಿಷನ್ ಗರ್ಲ್ಸ್ ಸ್ಕೂಲಿಗೆ ಬಾಲಕಿಯರಿಗೆ ಬಹುಮಾನ ಕೊಡುವುದಕ್ಕಾಗಿ ಬರುವಾಗ ಅದು ವರೆಗೂ ನಿರ್ಮಲವಾಗಿದ್ದ ಆಕಾಶವು ಘಳ್ಳನೆ ಮೋಡವೇರಿ ಮಳೆ ಸುರಿದು ಶುಭಸೂಚನೆಯನ್ನುಂಟುಮಾಡಿ ಎಲ್ಲರನ್ನೂ ಹರ್ಷಗೊಳಿಸಿತು ಸ್ಕೂಲ್ ಕಟ್ಟಡವು ಬಾಲಕಿಯರಿಂದಲೂ, ಇತರ ಪ್ರಾಮುಖ್ಯ ಗೃಹಸ್ಥರಿಂದಲೂ ಸ್ಥಳ ಸಾಲದಂತೆ ತುಂಬಿದ್ದಲ್ಲದೆ ಅನೇಕ ಜನಗಳು ಕಿಟಕಿ ಬಾಗಿಲುಗಳಲ್ಲಿ ಕಿಕ್ಕಿರಿಸುವಂತೆ ನಿಂತುಕೊಂಡಿದ್ದರು ಬಾಲಕಿಯರು ದೇವರ ಪ್ರಾರ್ಥನೆ ಕೀರ್ತನೆಯನ್ನು ಹಾಡಿದನಂತರ ಘನ ಭದ್ರಪ್ಪನವರು ಪ್ರಾರ್ಥನೆ ಮಾಡಿದರು ಘನ ಸ್ಟೀವೆಲ್ ಧೊರೆಯವರು ಬಹುಮಾನಗಳನ್ನು ಹೊಂದುವುದಕ್ಕೆ ಅರ್ಹರಾಗಿರುತ್ತೀರೋ ಎಂಬ ಪ್ರಶ್ನೆಯಿಂದ ಕೆಲವು ಮಾತುಗಳನ್ನು ಹೇಳಿದರು ತರುವಾಯ 61 ಬಾಲಕಿಯರಿಗೆ ತರಗತಿಗಳ ಮೇರೆ ಸುಂದರವಾದ ಇಂಗ್ಲೀಷ್ ಬೊಂಬೆಗಳನ್ನೂ, ಬಡವರಿಗೆ ಉಡುಪುಗಳನ್ನೂ ಧೊರೆಸಾನಿಯವರೇ ಸ್ವಹಸ್ತದಿಂದ ದಯಪಾಲಿಸಿದರು ಬಾಲಕಿಯರು ಇನ್ನೊಂದು ಕೀರ್ತನೆಯನ್ನು ಹಾಡಿದನಂತರ ಇಲ್ಲಿನ ಇಂಗ್ಲೀಷ್ ಸ್ಕೂಲ್ ಹೆಡ್ ಮಾಸ್ಟರ್ ಮ|| ವಿರಲಮೂರ್ತಾಚಾರ್ಯರು ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಮಿಷನರಿಗಳೂ ಮತ್ತು ಮಿಷನ್ ಕೆಲಸದವರೂ ಪಡುವ ಕಷ್ಟ ಸಾಹಸಗಳನ್ನು ಕುರಿತೂ, ಮಿಷನ್ ಸಂಘದವರ ಉದಾರತ್ವವನ್ನು ಕುರಿತೂ ಸಾಕ್ಷೇಪವಾಗಿ ಇಂಗ್ಲೀಷ್ ಭಾಷೆಯಲ್ಲಿ ಸ್ತೋತ್ರ ಮಾಡಿದ್ದಕ್ಕೆ ಘನ ಸ್ಟೀವೆಲ್ ಧೊರೆಯವರು ಇಂಗ್ಲೀಷಿನಲ್ಲಿಯೇ ಉತ್ತರವನ್ನು ಕೊಟ್ಟರು ತರುವಾಯ ಮೆ ಭದ್ರಪ್ಪನವರೂ, ಮೆ|| ನಾರಾಯಣಪ್ಪನವರೂ ಕಾಲೋಚಿತವಾದ ಕೆಲವು ಮಾತುಗಳನ್ನು ಹೇಳಿದನಂತರ ಸರ್ವರಿಗೂ ಪನ್ನೀರು ಚಿಮುಕಿಸಿ ದೊಡ್ಡ ಮನುಷ್ಯರಿಗೆಲ್ಲಾ ಪುಷ್ಪ ಹಾರಗಳನ್ನು ಹಾಕಿ ಸರ್ವರಿಗೂ ಗಂಧ ಪುಷ್ಪ ವಿಳೆಯ ತಾಂಬೂಲಾದಿಗಳನ್ನು ಹಂಚೋಣವಾಯಿತು ಕಡೆಗೆ ಘನ ಸ್ಟೀವೆಲ್ ಧೊರೆಯವರು ಧೊರೆಸಾನಿಯವರನ್ನೂ ಓದುವ ಜನಗಳ ಸಮೇತ ಬಾಲಕಿಯರನ್ನೂ ಮಾಸ್ಟರುಗಳನ್ನೂ ಸ್ಕೂಲಿನ ಮುಂಭಾಗದಲ್ಲಿ ನಿಲ್ಲಿಸಿ ತಸ್ವೀರನ್ನು ತೆಗೆದರು ತರುವಾಯ ಹರ್ಷ ಚಿತ್ತದಿಂದ ನೋಡುತ್ತಿದ್ದ ಸಮೂಹವೆಲ್ಲವೂ ಸಂತೋಷ ಭರಿತರಾಗಿ ಸ್ವಗೃಹಗಳಿಗೆ ತೆರಳಿದರು ತರುವಾಯ ಘನ ಸ್ಟೀವೆಲ್ ಧೊರೆಯವರು ಮೆ|| ವಿರಲಮೂರ್ತಾಚಾರ್ಯರ ಅಪೇಕ್ಷೆಯಂತೆ ಇಂಗ್ಲೀಷ್ ಸ್ಕೂಲಿಗೆ ದಯಮಾಡಿಸಿ ಅಲ್ಲಿನ ವಿದ್ಯಾರ್ಥಿಗಳನ್ನು ಸ್ವಲ್ಪ ಪರೀಕ್ಷಿಸಿ ನೋಡಿ ಸಂತೋಷಪಟ್ಟರು ಅದೇ ದಿನ ಸಾಯಂಕಾಲ ಅವರೆಲ್ಲರೂ ಚಿಕ್ಕಬಳ್ಳಾಪುರಕ್ಕೆ ತೆರಳಿದರು.

ಮಂಡ್ಯ —ಮಳೆ ಬಹಳ ಕಡಮೆ ಧಾರಣೆವಾಸಿಗಳು ಕು ಬಾ ಭಾರವಾಗಿದೆ ಅಕ್ಕಿ ರೂ 1ಕ್ಕೆ 6½ ಸೇರು, ರಾಗಿ 12½ 13½ ಸೇರು ಮ ರಿಟವಾಗುವುದರಿಂದಲೂ, ಜಾನುವಾರುಗಳಿಗೆ ಬೇಕಾಗುವ ಹುಲ್ಲೂ ನೀರೂ ಸಹ ಸರಿಯಾಗಿ ದೊರಕದೆ ಇರುವುದರಿಂದಲೂ ಜನಗಳ ಅಲೆದಾಟವನ್ನು ಅನೇಕರು ನೋಡಿ ಧಾರಾ ಈಶ್ವರ ಸಂವತ್ಸರದ ಬಂಗಾಳವನ್ನು ಜ್ಞಾಪಕಮಾಡಿಕೊಳ್ಳುವಂತಾಗಿದೆ ಸಂತೆಯಲ್ಲಿ ನಡೆಯುವ ಮೋಸ, ಅನ್ಯಾಯ, ಜಗಳ, ಮುಂತಾದ್ದನ್ನು ಕೇಳುವವರೇ ಇಲ್ಲವೆಂದೂ, ಪೋಲೀಸ್ ಉಸ್ತುವಾರಿ ಇದ್ದರೂ ನೆಪಮಾತ್ರಕ್ಕೆ ಇದೆಯೆಂದೂ, ಸಂತೆಯಲ್ಲಿ ನಡೆಯುತಕ್ಕ ಜಗಳ ಮುಂತಾದ ತೊಂದರೆಗಳನ್ನು ಬಿಡಿಸುತ್ತಾರೆಯೇ ಹೊರತು ಅವರ ಮೇಲೆ ಛಾರ್ಜ್ ತರುವದಿಲ್ಲವಾದ್ದರಿಂದ ಇತರರು ನೋಡಿ ಯಾವ ಭೀತಿಯನ್ನೂ ಇಟ್ಟುಕೊಂಡಿರುವದಿಲ್ಲವೆಂದೂ ಹೇಳುತ್ತಾರೆ ಯಾಕಂದರೆ ಮಂಡ್ಯದ ತಾಲ್ಲೂಕಿನಲ್ಲಿರುವ ಹೆಚ್ಚುಮಂದಿ ಪೋಲೀಸಿನವರು ಈ ಸ್ಥಳದವರಾಗಿಯೇ ಆಗಿರುವುದರಿಂದ ತಪ್ಪುಮಾಡತಕ್ಕ ತಮ್ಮ ಪರಿಚಯಸ್ಥರನ್ನು ಶಿಕ್ಷೆಗೆ ಗುರಿಪಡಿಸುವುದಕ್ಕೆ ಹಿಂದೆಗೆಯುವವರಾಗಿದ್ದಾರೆ ಈ ವಿಷಯದಲ್ಲಿ ಪೋಲೀಸ್ ಆಫೀಸರು ತಕ್ಕ ಏರ್ಪಾಡು ಮಾಡುವರೆಂದು ಹಾರೈಸಲಾಗಿದೆ ಕಳೆದ ಗುರುವಾರ ಇಲ್ಲಿನ ಸಂತೆಯಲ್ಲಿ ಜವಳಿ ವ್ಯಾಪಾರ ಮಾಡುತ್ತಿದ್ದ ಒಂದು ಅಂಗಡಿಗೆ ಅಮಲ್ದಾರರು ಅಕಸ್ಮಾತ್ ಪ್ರವೇಶಿಸಿ ಸುಂಕದ ರಸೀತಿಯು ಬೇರೆ ಇದ್ದ ಸರಕುಗಳು ಕಳ್ಳತನದಲ್ಲಿ ಮಾರಾಟವಾಗುತ್ತಿದ್ದದ್ದನ್ನು ಕಂಡು ಹಿಡಿದು ಆ ಇಲಾಖೆಯ ಅಧಿಕಾರಿಗೆ ತಕ್ಕ ಎಚ್ಚರಿಕೆಯನ್ನು ಕೊಟ್ಟಂತೆಯೇ ಇತರ ದವಸ ಧಾನ್ಯ ಹಣ್ಣು ಹಂಪಲು ಮುಂತಾದ ಅಂಗಡಿಗಳಿಗೆ ಆಗಿಂದಾಗ್ಗೆ ಹೋಗಿ ಅಜಮಾಯಿಸಿ ಮಾಡುತ್ತಿದ್ದರೆ ಮೋಸಮಾಡುವಂಥಾ ವ್ಯಾಪಾರಗಾರರಿಗೆ ತಕ್ಕ ಭಯವು ಇರುವುದು ಗೋಲಕವೆಂಬ ಕಾಣಿಕೆಯನ್ನು ಬಲಾತ್ಕಾರವಾಗಿ ವಸೂಲ್ ಮಾಡುವ ವಿಷಯಕ್ಕೆ ದೇವಸ್ಥಾನದ ಅಭಿಮಾನಕರ್ತರು ಬಡಬಗ್ಗರ ವಿಷಯದಲ್ಲಿ ಉದಾರತ್ವವನ್ನು ತೋರಿಸಿದರೆ ಉಪಕಾರ ಸ್ಮರಣೆಗೆ ಅವಕಾಶವುಂಟು —ಕಳೆದ ತಿಂಗಳ 10 ನೇ ತಾ ಭಾನುವಾರ ಯಾವಳೋ ಒಬ್ಬ ಪುಣ್ಯಾತಗಿತ್ತಿಯು ಮಗುವನ್ನು ಹೆತ್ತು ಇಲ್ಲಿನ ನಾಯಿಹಳ್ಳನೆಂಬಲ್ಲಿ ಮಲಗಿಸಿ ಬಿಟ್ಟು ಹೋಗಿಬಿಟ್ಟಿದ್ದಳು ಇಷ್ಟರಲ್ಲೇ ಪತ್ತೆ ಆಗಬಹುದು ಕಳೆದ ಗುರುವಾರ ನಂಜನಗೂಡಿನಿಂದ ಬೆಂಗಳೂರು ಕಡೆಗೆ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಬಳ್ಳಾರಿ ಒಕ್ಕಲಿಗನೊಬ್ಬನು ಅಕಸ್ಮಾತ್ ಮೂರ್ಛೆ ಹೊಂದಿದವನಾಗಿ ಸತ್ತುಹೋಗಿದ್ದದ್ದನ್ನು ರೈಲ್ವೆ ಅಧಿಕಾರಿಗಳು ಕಂಡು ಮೇಲಕ್ಕೆ ತಿಳಿಸಿದ ಮೇರೆಗೆ ವೈದ್ಯಕೀಯ ಅಧಿಕಾರಿಗಳು ಬಂದು ಮಹಜರು ಮಾಡಿಸಿ ದಫನ್ ಮಾಡಿದರು —ಊರಲ್ಲಿ ಸ್ಯಾನಿಟೇಷನ್ ಏರ್ಪಾಡು ತಕ್ಕ ಮಟ್ಟಿಗೆ ಇದ್ದರೂ ವಿಪಾಟಂಗಗಳಲ್ಲಿ ತಿಳಿದುಬರುವ ವಿಷಯಕ್ಕಿಂತಲೂ ಟೌನ್ ಗಸ್ತು ಮೂಲಕ ತಿಳಿದು ವಿಷಯಗಳನ್ನು ಚರ್ಚಿಸುವುದು ಉತ್ತಮವೆಂದು ತೋರುತ್ತದೆ — ಪ್ರಜಾ ಹಿತೈಷಿಗಳಾದ ಮ|| ಮರ್ದನಸಿಂಗರವರು ಅರಸೀಕೆರೆಗೆ ವರ್ಗವಾದ್ದರಿಂದ ಇಲ್ಲಿನ ರೀಡಿಂಗ್ ರೂಮಿನವರು ಅವರ ಪ್ರೋತ್ಸಾಹವನ್ನು ಮೆಚ್ಚಿ ತಕ್ಕ ಸನ್ಮಾನದಿಂದ ಕಳುಹಿಸಿಕೊಟ್ಟರು —ಇಲ್ಲಿನ ಆಸ್ಪತ್ರೆಗೆ ಬಾಯಿಲೆಯವರು ಬರುವುದರಲ್ಲಿ ಯಾವ ಭಯವನ್ನೂ ಇಟ್ಟುಕೊಳ್ಳದೆ ಇಲಾಜನ್ನೂ ಔಷಧವನ್ನೂ ಹೊಂದುತ್ತಿರುವುದನ್ನು ನೋಡಿದರೆ ಬೇರೆಬೇರೆ ಗ್ರಾಮಗಳವರು ಇದನ್ನು ಆಶ್ರಯ ಹೊಂದುವುದಲ್ಲದೆ ಅವರ ಸಹನ ಶೀಲತ್ವವನ್ನು ಕುರಿತು ಯೋಚಿಸಿ ರೋಗಿಗಳ ಮನೆಗಳಿಗೆ ಆಗಾಗ್ಗೆ ಭೇಟಿಕೊಡುತ್ತಿರುವುದು ಮತ್ತೂ ಸಂತೋಷಕರವಾಗಿದೆ ಬಹಳ ಕಾಲವು ಏನೇನೋ ಹೆಚ್ಚುತ್ತಲಿದೆ ಸಾ|| ಅಮ್ಮಣಪ್ಪನವರೂ, ಸಂಗಪ್ಪನವರೂ, ಭರಣಪ್ಪನವರೂ, ಕರೀಂಸಾಬರೂ, ನಾಗೇಂದ್ರಯ್ಯನವರೂ, ವೆಂಕಟಶಾಮಶೆಟ್ಟಿ ಮುಂತಾದವರೂ ತಮ್ಮ ಧಾರಾಳ ಮನಸ್ಸನ್ನು ಈ ಕ್ಷಾಮಕಾಲದಲ್ಲಿ ತೋರಿಸಿ ಕೀರ್ತಿ ಪಡೆಯುವರೆಂದು ಹಾರೈಸುವೆನು

ಇಂಡಿಯಾ ದೇಶದ ವೃತ್ತಾಂತಗಳು.

ಮೈಸೂರು ಎಂಬ ಹಡಗು ಹಿಂದುಸ್ಥಾನಕ್ಕೆ 11,25,000 ರೂಪಾಯಿನ ಚಿನ್ನವನ್ನು ತೆಗೆದುಕೊಂಡು ಬರುತ್ತಿದೆ

* * *

ದಿವಾನ್ ಬಹದೂರ್ ಎಲ್ ಎ ಗೋವಿಂದರಾಘವ ಅಯ್ಯರವರಿಗೆ ಮದರಾಸ್ ಗವರ್ನ್‌ಮೆಂಟಿನವರು ಗವರ್ನ್‌ಮೆಂಟ್ ಪ್ಲೀಡರ್ ಕೆಲಸವನ್ನು ಬದಲಿಯಾಗಿ ದಯಪಾಲಿಸಿರುತ್ತಾರೆ

* * *

ಕಳೆದ 6 ನೇ ತಾರೀಖಿಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆಲ್ಲಾ 388 ಜನರಿಗೆ ಪ್ಲೇಗ್ ತಗಲಿ, 266 ಜನರು ಆ ಉಪದ್ರದಲ್ಲಿ ತೀರಿಹೋದರು ಈ ಮರಣಗಳ ಹಂಚಿಕೆ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 80, ಮದರಾಸ್ ಅಧಿಪತ್ಯ 9, ಬಂಗಾಳಾ 10, ಬೇಹಾರ್ ಮತ್ತು ಒರಿಸಾ 26, ಸಂಯುಕ್ತ ಅಧಿಪತ್ಯಗಳು 1, ಪಂಜಾಬ್ 53, ಬರ್ಮಾ 65, ಮೈಸೂರು ಸಂಸ್ಥಾನ 22, ಈ ರೀತಿ ಮರಣಗಳಾಗಿವೆ

* * *

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ "ಹಿಂದೂ ಪೇಟ್ರಿಯಟ್" ಎಂಬ ವರ್ತಮಾನ ಪತ್ರಿಕೆಯ ಎಡಿಟರಾದ ರಾಯ ಬಹದೂರ್ ಶಿರೀಶಚಂದ್ರ ಸರ್ವಾಧಿಕಾರಿಯವರು ಕಳೆದ ಗುರುವಾರ ಕಾಲವಾದರು

* * *

ಮದರಾಸ್ ಗವರ್ನ್‌ಮೆಂಟಿನವರು ಆ ಅಧಿಪತ್ಯದ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮ್ಯುನಿಸಿಪಲ್ ಕೌನ್ಸಿಲ್‌ಗಳಿಗೆ 1912-13ನೇ ವರುಷದಲ್ಲಿ ಪ್ರತ್ಯೇಕವಾದ ಕಾರ್ಯಗಳನ್ನು ಮಾಡಿಸುವುದಕ್ಕಾಗಿ 22,68,000 ರೂಪಾಯಿ ಗ್ರಾಂಟನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

* * *

ಪೂರ್ವ ಬಂಗಾಳಾ ಅಧಿಪತ್ಯಕ್ಕೆ ಸೇರಿದ ನಾರಾಯಣಗಂಜ್ ಡಿಸ್ಟ್ರಿಕ್ಟಿನಲ್ಲಿ ರೀಯೋನಿ ಎಂಬ ಗ್ರಾಮಕ್ಕೆ ಆಗಂತುಕ ವಾಣಿಗರಾದ ಕಳ್ಳರು ಸುಮಾರು 20,000 ರೂಪಾಯಿನ ನಗ ನಾಣ್ಯಗಳನ್ನು ದೋಚಿಕೊಂಡು ಹೋದರು ಅವರು ದೊಡ್ಡ ಮನುಷ್ಯರಂತೆ ಉಡುಪುಗಳನ್ನು ಹಾಕಿಕೊಂಡಿದ್ದರೆಂದೂ, ಪಿಸ್ತೂಲು ಕತ್ತಿಗಳನ್ನು ಹಿಡಿದಿದ್ದರೆಂದೂ ತಿಳಿದು ಬಂದಿದೆ

* * *

ಈಗ ಪೂನಾ ಪಟ್ಟಣದಲ್ಲಿ ನಾನಾ ಸಂತೋಷ ಕೂಟಗಳು ನಡೆಯುತ್ತಿವೆ ಇವುಗಳಲ್ಲಿ ಬೆರೆದು ಸಂತೋಷಪಡುವುದಕ್ಕಾಗಿ ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು, ಇದಾರ್ ಸಂಸ್ಥಾನದ ಮಹಾರಾಜರವರು, ಕಚ್ ಸಂಸ್ಥಾನದ ಮಹಾರಾಜರವರು, ಮನವಾದರ್ ಸಂಸ್ಥಾನದ ನವಾಬ ಸಾಹೇಬರವರು, ಪಾಟಿಯಾಲಾ ಸಂಸ್ಥಾನದ ಕುಮಾರ್ ಸಾಹೇಬರವರು, ಮೊದಲಾದ ಬಹುಮಂದಿ ಮಹನೀಯರು ಅಲ್ಲಿಗೆ ಹೋಗಿ ಬೊಂಬಾಯಿ ಗವರ್ನರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ

* * *

ಪುರಿ (ಜಗನ್ನಾಥ) ಪಟ್ಟಣದಲ್ಲಿ ಬಹು ಅಪೂರ್ವವಾದ ಜಾತ್ರೆ ಉತ್ಸವಾದಿಗಳು ನಡೆಯಲಾರಂಭವಾಗಿವೆ ಈಗ ಸುಮಾರು ಮೂರು ಲಕ್ಷ ಯಾತ್ರಿಕರು ಸೇರಿರುತ್ತಾರೆ ಈ ಯಾತ್ರಿಕರಿಗೋಸ್ಕರ ರೈಲ್ವೆ ಕಂಪನಿಯವರು ದಿನಕ್ಕೆ 18-20 ರಂತೆ ಸ್ಪೆಷಲ್ ಗಾಡಿಗಳನ್ನು ಬಿಟ್ಟರು ಉತ್ಸವವಾದ ಬಳಿಕ ವೈಷ್ಣವಮಂಡಲಿಯವರು ಒಂದು ಮಹಾಸಭೆಯನ್ನು ಮಾಡುವರು ಇದಕ್ಕೆ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ವೈಷ್ಣವ ಪಂಗಡದ ಪಂಡಿತರೂ, ಮಹಾರಾಜರುಗಳೂ, ಪ್ರಜಾಪ್ರಮುಖರೂ ಸಾವಿರಾರು ಜನ ಹೋಗಿರುತ್ತಾರೆ

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಲೋಹಟ್ ನೌಲ್ಪಿ ಬಜಾರಿನಲ್ಲಿ ಒಂದು ವಿಚಿತ್ರವಾದ ಗಲಭೆ ನಡೆಯಿತೆಂತೆ ಕಲ್ಕತ್ತೆಯ ಪತ್ರಿಕೆಗಳು ತಿಳಿಸುತ್ತವೆ ಸ್ವಾಮಿ ದಯಾನಂದ ಎಂಬ ಸನ್ಯಾಸಿಯು ಇತರ ಸನ್ಯಾಸಿಗಳ ಕೂಡ ನಗರ ಸಂಕೀರ್ತನೆ ಮಾಡಿದ್ದನ್ನು ಹಾದಿ ತಪ್ಪಿ ಮುತ್ತಿನ ಪ್ರಜೆಗಳಿಗೆ ತೊಂದರೆ ಪಡಿದ್ದರಿಂದ ಸಬ್ ಡಿವಿಜನ್ ಆಫೀಸರು ಅವರಿಗೆಲ್ಲಾ ಜುಲ್ಮಾನೆ ಹಾಕಿದರು ಈಚೆಗೆ ಈ ಸನ್ಯಾಸಿಗಳು ಒಬ್ಬ ಹುಡುಗನನ್ನು ಅಪಹರಿಸಿದರೆಂದು ಅವರ ಮೇಲೆ ಅಪವಾದ ಹುಟ್ಟಿತು ಪೋಲೀಸ್ ಸೂಪರಿಂಟೆಂಡೆಂಟರು ಆಶ್ರಮಕ್ಕೆ ಹೋದಾಗ ಸನ್ಯಾಸಿಗಳೆಲ್ಲಾ ಅವರಿಗೆ ಅವಕಾಶಕೊಡದೆ ಓಡಿಸಿಬಿಟ್ಟರು ಬಳಿಕ 25 ಜನ ಮಿಲಿಟರಿ ಪೋಲೀಸಿನವರು ಆಶ್ರಮಕ್ಕೆ ಹೋದರು ಸುಮಾರು 100 ಸನ್ಯಾಸಿಗಳು ಏಕವಾಗಿ ಬಂದು ಅವರ ಮೇಲೆ ಬಿದ್ದು ಕಾದಾಡಿದರು ಕಡೆಗೆ ಪೋಲೀಸಿನವರು ಕೆಲವು ಮುಖಂಡ ಸನ್ಯಾಸಿಗಳನ್ನು ಹಿಡಿದುತಂದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಪಡಿಸಿದ್ದಾರೆ

* * *

ಹಿಂದೂ ಯೂನಿವರ್ಸಿಟಿ (ಸರ್ವವಿದ್ಯಾನಿಲಯ) ಫಂಡಿಗೆ ಜ ದೋಧಪುರ ಮಹಾರಾಜರವರು 5 ಲಕ್ಷ ರೂಪಾಯಿಯನ್ನೂ, ಗ್ವಾಲಿಯರ್ ಮಹಾರಾಜರವರು 6 ಲಕ್ಷ ರೂಪಾಯಿಯನ್ನೂ ಕೊಡ ಮಾಡಿದ್ದಾರೆ ಈ ಪ್ರಕಾರ ಗ್ವಾಲಿಯರ್, ಇಂದೋರ್ ಕಾಶ್ಮೀರ ಸಂಸ್ಥಾನಗಳಿಂದ 11 ಲಕ್ಷ ರೂಪಾಯಿ ಶೇಖರವಾಯಿತು ಈ ವಿದ್ಯಾನಿಲಯದ ಏರ್ಪಾಟಿನ ವಿಚಾರವನ್ನು ದರ್ಭಾಂಗ ಮಹಾರಾಜರವರೂ, ಪಂಡಿತ ಮದನಮೋಹನ ಮಾಳವೀಯರವರೂ ನಾಲ್ಕಾರು ಪಟ್ಟಣದಲ್ಲಿ ಚರ್ಚಿಸುತ್ತಿದ್ದರು ಇವರು ಇದೇ ಉದ್ದೇಶದಿಂದ ಅಂಬಾಲಾ, ಶಾರಣಪುರ, ಹರಿದ್ವಾರ ಲಖ್ನೋ ಮುಂತಾದ ಪಟ್ಟಣಗಳಿಗೆ ಹೋಗಿ ಚಂದಾ ಕೂಡಿಸುವವರಾಗಿದ್ದಾರೆ ಇದುವರೆಗೆ ಈ ಫಂಡಿಗೆ 65 ಲಕ್ಷ ರೂಪಾಯಿ ವಾಗ್ದಾನವಾಗಿ 7 ಲಕ್ಷ ರೂಪಾಯಿ ವಸೂಲಾಗಿದೆ ಇದಲ್ಲದೆ ಕಾಶ್ಮೀರ ಮತ್ತು ಬಿಕಾನೀರ್ ಸಂಸ್ಥಾನಗಳ ಪ್ರಭುಗಳು 12,000 ರೂಪಾಯಿನಂತೆ ವರುಷಾಸನವನ್ನು ಕೊಡುವುದಾಗಿ ಒಪ್ಪಿಕೊಂಡಿದ್ದಾರೆ ಈ ಉದ್ದೇಶದ ಮೂಲಧನವು 50 ಲಕ್ಷ ರೂಪಾಯಿ ಕೂಡಿಸಿ ಬ್ಯಾಂಕಿನಲ್ಲಿ ಹಾಕಿ ತೋರಿಸಿದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಈ ವಿದ್ಯಾನಿಲಯದ ನಿಬಂಧನೆಗಳನ್ನು ಸ್ಯಾಂಕ್ಷನ್ ಮಾಡುವರು

* * *

ಪುಂಗನೂರಿಗೂ ಮದನಪಲ್ಲಿಗೂ ನಡುವೆ ಒಂದು ವಿಚಿತ್ರವಾದ ದರೋಡೆ ನಡೆಯಿತು ಆ ಸುತ್ತಿನಲ್ಲಿರುವ ಕಟ್ಟಪರೆ ಎಂಬ ಗ್ರಾಮದಲ್ಲಿ ಒಬ್ಬಾನೊಬ್ಬ ಗಣ್ಯ ಪುರುಷನು ಪುಂಗನೂರಿನ ಒಬ್ಬ ಹಣಗಾರನ ಬಳಿ ಕೆಲವು ನಗಗಳನ್ನು ಅಡ ಹಾಕಿ ಸಾಲ ತೆಗೆದುಕೊಂಡನು ವಾಯಿದೆ ಕಳೆದು ತಗಾದೆ ಬಂದಾಗ ಅವನು ತನ್ನ ಒಡವೆಗಳನ್ನು ಬಿಡಿಸಿಕೊಂಡು ಸಾಲವು ತೀರಿಸುತ್ತೇನೆಂದು ಹೇಳಿದ್ದರ ಮೇಲೆ ಅವನೂ ಹಣಗಾರನೂ ಆ ನಗಗಳ ಸಮೇತ ಒಂದು ಗಾಡಿಯಲ್ಲಿ ಕುಳಿತು ಮದನಪಲ್ಲಿಗೆ ಹೋಗುತ್ತಿದ್ದರು ಜಂಗಲಿನಲ್ಲಿ ಕಳ್ಳರು ಬಿದ್ದು ಸಾಹುಕಾರನನ್ನು ಹೊಡೆದು ಒಡವೆಗಳನ್ನೆಲ್ಲಾ ಕಿತ್ತುಕೊಂಡು ಹೋದರು ಸಾಹುಕಾರನು ಊರಿಗೆ ಹೋಗಿ ಕಳ್ಳರು ತನ್ನನ್ನು ಮಾತ್ರ ಹೊಡೆದು ಸಾಲಗಾರನನ್ನು ಬಿಟ್ಟಿದ್ದರಿಂದ ಅವನೂ ಕಳ್ಳರಿಗೆ ಜತೆಯಾಗಿ ಬೇಕೆಂದು ಜಗಳಮಾಡಿ ತನಗೆ ಸಲ್ಲಬೇಕಾಗುವ ಹಣಕ್ಕೆ ಅವನು ಬೇರೆ ಪತ್ರ ಬರೆದುಕೊಡದಿದ್ದರೆ ದಾವಾ ಹಾಕುವದಾಗಿ ಹೇಳಿದನು ಕೆಲವು ಜನರು ಸೇರಿ ಸಾಹುಕಾರನನ್ನು ಸಮಾಧಾನಮಾಡಿ ಸಾಲಗಾರನಿಂದ ಅವನಿಗೆ ಪತ್ರ ಬರೆಸಿಕೊಟ್ಟರು ಈ ಪತ್ರವನ್ನು ರೆಜಿಸ್ಟರ್ ಮಾಡುವುದಕ್ಕೆ ಹೋದ ವೇಳೆಯಲ್ಲಿ ಸಾಲಗಾರನು ಉಪಾಯದಿಂದ ಹೊರಟು ಬಂದು ಸಮೀಪದಲ್ಲಿದ್ದ ತಹಶೀಲ್ದಾರರ ಕೋರ್ಟಿಗೆ ಹೋಗಿ ಅವರ ಮುಂದೆ ಸಾಹುಕಾರನ ಮೇಲೆ ದೂರು ಹೇಳಿಕೊಂಡನು ಅವನು ಪೋಲೀಸಿಗೆ ಒಪ್ಪಿಸಿದರು ಇದರ ನಿಜಸ್ಥಿತಿಯನ್ನು ಅವರು ತನಿಖೆಮಾಡುತ್ತಿದ್ದಾರೆ ಇಂಥಾ ಭಯಂಕರವಾದ ಕಳ್ಳತನಗಳೂ ದರೋಡೆಗಳೂ ಆ ಪ್ರಾಂತ್ಯ ನಡೆಯುತ್ತಿರುವುದಾಗಿ ತಿಳಿದು ಬಂದಿದೆ

MELLIN'S FOOD

ಮಕ್ಕಳಿಗೂ ರೋಗಿಷ್ಟರಿಗೂ

ಮೆಲಿನ್ಸ್ ಆಹಾರವು

ಕೈಸೂಕದ ತಂಗೂರಾದದ್ದು; ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳೆಸುವುದು. ಕೇಳಿದರೆ ಮಾದರಿ ಕಳುಹಿಸುತ್ತಾರೆ

[68—12] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thompson, M.A., Proprietor and Manager, Wesleyan Mission Press, Mysore. 18/7/1912

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು — ಕ್ರಯ ೧ ದುಡ್ಡು

ಸಂಪುಟ ೨೬ — ಮೈಸೂರು—ಸನ್ ೧೯೧೩ ನೇ ಇಸವಿ ಜೂಲೈ ತಾರೀಖು ೨೪ ನೇ ಗುರುವಾರ. — ಸಂಚಿಕೆ ೮

ಜಾರ್ಜ್ ಸಾರ್ವಭೌಮರ ಚರಿತ್ರೆ

[12 4]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ ಲಂಡನ್ ಮತ್ತು ಡೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಒಬ ಧಪಟ್ಟ ಸಮಸ್ತ ವಿಚಾರಗಳನ್ನೂ ಸಂಭಾಷಣೆಗಳನ್ನೂ ಆಮೂಲಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ. ರಾಜಭಕ್ತಿಯುಳ್ಳ ಸಕಲ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ. ಅವರ ಭಾವಚಿತ್ರವೂ ಉಂಟು. ಶ್ರೀ [illegible] ರಾಜರವರ ಪ್ರೋತ್ಸಾಹವನ್ನೂ ಪಡೆದಿದೆ. ಕ್ರಯ ಪ್ರತಿ 1ಕ್ಕೆ 8 ಆ. ಅಂಚೆ ಕಾಸಲು 1ಆ.

ವಿಳಾಸ ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರು

1913 ನೇ ಇಸವಿಯ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸು.

ಕ್ರಯ 10 ಆಣೆ 1ಕ್ಕೆ 1 ಡಿಸ್ಕೌಂಟು. ನಮ್ಮ ನೋಟ್ಸೇ ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ. [71 12]

2 ನೇ ಪುಸ್ತಕದ ನೋಟ್ಸು 1 ಆಣೆ 3 ನೇ ಪುಸ್ತಕದ ನೋಟ್ಸು 1½ ಆಣೆ 4 ನೇ ಪುಸ್ತಕದ ನೋಟ್ಸು 1 ಆಣೆ 5 ನೇ ಪುಸ್ತಕದ ನೋಟ್ಸು 1 ಆಣೆ ಮೈಸೂರು ಭೂವಿವರಣೆ 1 ಆಣೆ 3 ನೇ ಕ್ಲಾಸ್ ಭೂವಿವರಣೆ 1½ ಆಣೆ.

ಎಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು

ಡೋಂಗರೆ ಇವರ ಬಾಲಾಮೃತ.

[115 2]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣಕಾರಿಯಾಗಿಯೂ ಅದು ಮಧುರ (ಸವಿ) ಇದ್ದದರಿಂದ ಮಕ್ಕಳು ಬಹಳ ಸಂತೋಷದಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಇಕ್ಕಟ್ಟಿಯಾಗಿ ಹೊಟ್ಟೆಯು ದೊಡ್ಡದಾಗಿರೋಣ ಅಸ್ಥಿಗಳು ಕಟ್ಟುಯಂತೆ ಇರೋಣ, ಹಳೆ ಕೆಮ್ಮು ಮುಂತಾದವುಗಳ ಉಪಶಮನ ರೋಗಗಳು ನಾಶವಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ ಟಪಾಲು ಖರ್ಚು ೩ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳಿಂದ ಮಾಡಿದೆ. [illegible] ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಿಕಾರ, ಬಿಕ್ಕಳಿಕೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ತಿಂದ ಕೂಡಲೆ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ಪುಷ್ಟಿಪಡಿಸುತ್ತದೆ. ಸ್ತ್ರೀಯರ ಹೆರಿಗೆಶೂಲೆ, ಮಕ್ಕಳ ಎಳವು, ಜ್ವರ, ಸಚ್ಚು ಜ್ವರ, ಕೈರತ್ನಗಳನ್ನು ಗುಣಪಡಿಸುತ್ತದೆ. ಇವನ್ನು ಸೇವಿಸುತ್ತಿರುವವರು ಎಂದಿಗೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ — ೨೦ ಮಾತ್ರೆಗಳುಳ್ಳ ಕಡ್ಡಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98 17]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿ, ಭೇದಿ, ಕಾಲರಾ, ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಷಾರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಮುಖ್ಯವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟಿದ ಕೂಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ. ಒಂದೇ ಒಂದು ಬುದ್ದಿಯು ಮನೆಯಲ್ಲಿದ್ದರೆ ಮತ್ತೊಂದು ವಿಧಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ — ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಇಂಗ್ಲೀಷನ್ನು ಕಲಿಯುವ ಪುಸ್ತಕ। ಇಂಗ್ಲೀಷನ್ನು ಕಲಿಯುವ ಪುಸ್ತಕ। ಇಂಗ್ಲೀಷನ್ನು ಕಲಿಯುವ ಪುಸ್ತಕ।

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ [93 30]

ಬೋಧಕರ ಸಹಾಯವಿಲ್ಲದ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾಪ್ರವೇಶದಾಯಿನಿ.

ಮೊದಲನೆಯ ಪುಸ್ತಕ		ಕ್ರಯ ರೂ ೧—೮—೦
ಎರಡನೆಯ ಪುಸ್ತಕ		ಕ್ರಯ ರೂ ೧—೮—೦
ಮೂರನೆಯ ಪುಸ್ತಕ	(ಅಚ್ಚಿನಲ್ಲಿದೆ)	ಕ್ರಯ ರೂ. ೧—೮—೦

ಅಂಚೆಯ ವೆಚ್ಚವನ್ನು ಗ್ರಾಹಕರೇ ಕೊಡಬೇಕು

ಇವುಗಳಲ್ಲಿ —ಆಂಗ್ಲಭಾಷಾ ವರ್ಣಮಾಲೆಯ A ಏ ಇಂದ Z ಜಡ್ ವರೆಗಿನ ಅಕ್ಷರಗಳನ್ನು ಗುರುತು ಹಿಡಿಯುವುದು, ಅಕ್ಷರಗಳನ್ನು ಕೂಡಿಸುವುದು, ಸಂಯೋಜನ ಸಣ್ಣಸಣ್ಣ ವಾಕ್ಯಗಳು, ಚಿಕ್ಕ ಪುಟ್ಟಕಥೆಗಳು, ಕ್ಷೇಮಸಮಾಚಾರ ಕಾಗದಗಳು, ತಂತಿ ವರ್ತಮಾನದ ಮಾದರಿಗಳು, ಗಾದೆಗಳು, ಸಾಂಕೇತಿಕ ಶಬ್ದಗಳು, ಬಗೆಬಗೆಯಾದ ಬೇರೆಬೇರೆ ಅನೇಕ ಸಂಗತಿಗಳಲ್ಲಿ ಒಬ್ಬರಿಂದೊಬ್ಬರು ಪ್ರಶ್ನೋತ್ತರ ರೂಪವಾಗಿ ಮಾತಾಡುವ ಮಾದರಿಗಳು, ಕನ್ನಡದಿಂದ ಇಂಗ್ಲಿಷಿಗೂ—ಇಂಗ್ಲಿಷಿನಿಂದ ಕನ್ನಡಕ್ಕೂ ತರ್ಜುಮೆಮಾಡುವುದು, ವ್ಯಾಕರಣ ಸೂತ್ರಗಳು, ಕನ್ನಡ ಇಂಗ್ಲಿಷ್ — ಇಂಗ್ಲಿಷ್ ಕನ್ನಡ ಡಿಕ್ಷನರಿಗಳು, ಮುಂತಾದ ಅನೇಕ ಸಂಗತಿಗಳನ್ನು ಸೇರಿಸಿ ಇಂಗ್ಲೀಷನ್ನು ಸ್ವಲ್ಪವೂ ತಿಳಿಯದವರು ಸುಲಭವಾಗಿ ತಿಳಿಯುವಂತೆ ಮೊದಲು ಇಂಗ್ಲಿಷು, ನಂತರ ಅದರ ಉಚ್ಚಾರಣೆ ಮತ್ತು ಅರ್ಥಗಳನ್ನು ಕನ್ನಡಕ್ಷರದಲ್ಲಿ ಪ್ರತಿಯೊಂದಕ್ಕೂ ಬರೆದಿರುವುದರಿಂದ ಬರೆಯುವುದು —ಓದುವುದು—ಮಾತಾಡುವುದನ್ನು ಬೇರೊಬ್ಬರ ಸಹಾಯವಿಲ್ಲದೆ ಸುಲಭವಾಗಿ ಕಲಿಯಬಹುದು. ಅನೇಕರಿಗೆ ಉಪಯೋಗವಾಗಿ ಕೊಳ್ಳುವವರ ಸೌಕರ್ಯಕ್ಕೆ ಪುಸ್ತಕವು ಬೇರೆಬೇರೆ ಮೂರು ಭಾಗಗಳಾಗಿ ಕ್ರಯವೂ ಕಡಮೆ ಇರುವುದರಿಂದ ಈಗಾಗಲೆ ಸಾವಿರಾರು ಪುಸ್ತಕಗಳು ಖರ್ಚಾಗಿ ನಾಲ್ಕನೆಯ ಸಲ ಅಚ್ಚಾಯ್ತು. ಕೆಳಗಿನ ವಿಳಾಸಕ್ಕೆ ದಯವಿಟ್ಟು ನಿಮ್ಮನಿಮ್ಮ ವಿಳಾಸಗಳನ್ನು ಚೆನ್ನಾಗಿ ತಿಳಿಯುವಂತೆ ಇಂತಹ ಪುಸ್ತಕವೇ ಬೇಕೆಂದು ವಿವರವಾಗಿ ಹುಟ್ಟಿಸ್ಪರದಿಂದ ಬೇಗ ಬರೆಯಬೇಕು!!! ಭಾರತಿ ಸಂಪಂಗಿರಾಮ, ಪೋಸ್ಟು—ಹೊಸಕೋಟೆ, ಡಿಸ್ಟ್ರಿಕ್ಟು—ಬೆಂಗಳೂರು

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೆಳಗಿನ ಪದಾರ್ಥಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳ

ಇವು ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವು. ಆದರೆ ಎಷ್ಟು ಸ್ತ್ರೀಯರಿಗೆ ಈ ಸುಂದರವಾದ ಮತ್ತು ನಿಬಿಡವಾದ ಕೇಶ ಇದೆ? ಕೇಶಪುಂಜವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಷಿಮೆಯ ಹಾಗೆ ಮೃದುವಾಗಿ ಚಕಚಕಿಸುತ್ತಿರಬೇಕು. ಅದಲ್ಲದೆ ತುರುಬನ್ನು ಯಾವ ಆಕೃತಿಯಲ್ಲಾದರೂ ಕಟ್ಟುವಂತೆ ಅವು ನೀಳವಾಗಿಯೂ ಪುಷ್ಕಳವಾಗಿಯೂ ಇರಬೇಕು.

“ಕಾಮಿನಿಯಾ ತೈಲವು.”

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ರೀತಿಯಲ್ಲಿ ಉಪಯೋಗಿಸಿದರೆ ಪುರಾತನ ಕಾಲದ ಸುಂದರವಾದ ಕೇಶದಾಮ ಎಂತಹ ಮಹತ್ವ ಕೊಡಲ್ಪಟ್ಟಿತೋ ಆ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ— ಇದು ಕೂದಲುಗಳನ್ನು ಚಂದಗೈಯುವ ಸರ್ವ ತೈಲಗಳಲ್ಲಿ ಮೊದಲನೆಯದಾಗಿರುತ್ತದೆ. ಅತ್ಯುತ್ಕೃಷ್ಟವಾದ ಕೂದಲಿನ [illegible] ಕಾಮಿನಿಯಾ ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು. ಇದರಿಂದ ಕೂದಲುಗಳು ಪುಷ್ಟವಾಗಿ ಬೆಳೆಯುತ್ತವೆ. ಅಂದರೆ ಈ [illegible] ಕ್ಕೆ ಬಂದಿರುವ ವಿವಿಧ ಆಕೃತಿಗಳ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಲ ಬಣ್ಣದಿ ಹೊಂದುವವು, ಬೇಗನೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಇದರ ಬೆಲೆ 1 ಸೀಸೆಗೆ ರೂ 1 0 0 ಅ ಚೆಯ ವೆಚ್ಚ 0 4 0 ಬೇರೆ ತೆರಬೇಕು. 3 ಸೀಸೆಗಳಿಗೆ ರೂ 2 10 0 ಅ ಚೆಯ ವೆಚ್ಚ 0 7 0.

ನಮೂನೆಯು ಬೇಕಾದವರು ಒಂದು ಅರ್ಧಾಣೆಯ ಟಿಕೆಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

25 7 11 ಮೆ ಎ ಡಿ ಮಾಧವಸಿಂಗ್ ರುಕ್ಮಣಿವಿಲಾಸ ಮನ್ನಾರಗುಡಿ- ತಾವು ಕಳುಹಿಸಿಕೊಟ್ಟ ಕಾಮಿನಿಯಾ ಓಯಿಲ್ ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1 7 11 ಮೆ|| ಸಿ ಆರ್ ನಾಯುಡು ಪ ವ ಡಿ ಟೀಚ (ಬರ್ಮಾ)- ನನ್ನ ವಿವರು [illegible] ತೈಲ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವವರಿಂದ ಕೂಡಲೇ 6 ಸೀಸೆಗಳನ್ನು ತ್ವರಿತದ ವಿ ಪಿ ಮೂಲಕ ರವಾನಿಸತಕ್ಕದ್ದು [91 30]

ಸುಗಂಧದ್ರವ್ಯಗಳು

ಗುಲ್ ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದು ಅತ್ಯಂತ ಶ್ರೇಷ್ಠವಾದದ್ದು ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರೀಕ್ಷಕ ಪಂಡಿತರು ಹೇಳಿದಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ದ್ರಾಂ ಸೀಸೆಗೆ ರೂ 1 8 0

ದಿಲ್ ಬಹಾರ್ (ರಜಿಡ್)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳ ದ ತಯಾರಿಸಿದ ಅವೂ ರ್ವವಾದ ಸುಗಂಧ. ದ್ರಾಂ ಸೀಸೆಗೆ ರೂ 1 8 0

ಕಾಮಿನಿಯಾ ಸುಗಂಧ ರೂ 1 4 0 ‘ಕಾಮಿನಿಯಾಮಾಲತಿ’ ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ಸೋಟ್ — ನಮಗೆ ಎಲ್ಲಾ ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು. ನಮ್ಮ ವಿಳಾಸ

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸೀದ್, ಬೊಂಬಾಯಿ.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) “ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ಕೊಲಗಿಹೋಗುತ್ತವೆ” ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು (೫) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು ? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ — ೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [೬ 29]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ

CHAMBERLAIN'S PAIN BALM.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು

1 30



ಚಿನ್ನೆಲುವಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಮಂಡಿಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಠೀವಿಯಾಗಿ ಕಳೆಯುವ ಬಾಧೆ, ಮಂಡಿಗಳ್ಳಿ ಇರುವುದು. ವಿಶ್ರಾಂತಿ ಕೊಡದೆ ಇರುವುದು, ಸದ್ದಿಹತ್ತದೆ ಇರುವುದು—ಇದೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಜ್ವರಶಂಕರಿ

114 44

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ ಪರಿಸೆಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ಓಡಿಸಿದು ಎಂದಿ ನಿಲ್ಲಿಸುವದರೊಳಗಾಗಿ ತಪ್ಪದೆ ಗುಣಪಡಿಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾತಃ ಛದಲ್ಲಿಯೇ ಕೆಟ್ಟಿರೆ ಪ್ಲೀಗ್ ಜ್ವರವನ್ನು ಕೂಡಾ ನಿಲ್ಲಿಸುವದು ಬಾಟಲಿಗೆ ೧ ರೂ ೪ ಬಾಟಲಿಗೆ ೨ ರೂ ೧೧ ಆಣೆ

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗೆಡ್ಡೆಯನ್ನು ಪರಿಹಾರ ಮಾಡಿಕವಾಗಿ ಗುಣಪಡಿಸುವುದು ನೂರಾರು ಜನರು ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ

ವಾತಮುರಾರಿ—ಇದು ತಲೆನೋವು, ಉಳುಕು ಬಿಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ ರದಮಿಸುವುದಕ್ಕೂ ಸಹಾಯಕವಾಗಿದೆ ಬ ಟಲಿಗೆ ೪ ಆಣೆ ೩ ಬ ಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ಓದಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ

ವೆಪೇರಿ ಮದರಾಸ್

ಕಾರೊನೇಷನ್ ಸಾಬೂನು

ಉಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೧೦ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ನೆಗೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ ೧ ೦ ೦ ಅಂಚೆ ಹಾಸಲು ಪ್ರತ್ಯೇಕ ನಮ್ಮ ವಿಳಾಸ —ಬಿ ಸಿ ಮಾ ಅಂಡ್ ಕಂಪೆನಿ, ೧೨೭ ಜೀನಾಬಜಾರ್ ರೋಡ್, ಮದ್ರಾಸು

ತಾ ಕ—ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು [101 6]

ಚಂದ್ರಕಾಂತಿ ತೈಲ

ಸೀಸೆ 1ಕ್ಕೆ 0 8 0 ಆರು ಸೀಸೆಗಳನ್ನು ತರಿಸಿಕೊಳ್ಳುವವರಿಗೆ 1 ಸೀಸೆ ಇನಾಮು ಡಿಸೆಂಬರ್ ತಿಂಗಳ ಆಖೈರ್ ಒಳಗಾಗಿ ಮೇಲಿನ ಅರ್ಧ ಕ್ರಯಕ್ಕೆ ಕೊಡಲ್ಪಡುತ್ತ ನಂತರ ಪೂರ್ವದ ಕ್ರಯ 0 1 0 ಗೆ ಕಮ್ಮಿಯಾಗಿ ಕೊಡುವದಿಲ್ಲ ಬೇಕಾದವರು ಬರೆದು ತರಿಸಿಕೊಳ್ಳಬಹುದು ಇದು ಅದ್ಭುತವಾದ ಸುವಾಸನೆಯುಳ್ಳದ್ದು

ಇದನ್ನು ತಲೆಗೆ ಸವರಿಕೊಳ್ಳುವದರಿಂದ ಮನಸ್ಸಿಗೆ ಆನಂದವನ್ನೂ ಉತ್ಸಾಹವನ್ನೂ ಉಂಟುಮಾಡುತ್ತ ನರೆಕೂದಲು ಕಪ್ಪಾಗುತ್ತ ಕೂದಲು ಹೇರಳವಾಗಿ ಬೆಳೆಯುತ್ತ ಇದನ್ನು ಪ್ರತಿನಿತ್ಯವೂ ತಲೆಗೆ ಸವರಿಕೊಳ್ಳುತ್ತ ಬಂದರೆ ತಲೆ ತಿರುಗಾಟವನ್ನೂ ಬಾಳೆಶವನ್ನೂ ಹೋಗಲಾಡಿಸುತ್ತ

ಮೇಲಾದ 6 ಜೇಬು ಗಡಿಯಾರಗಳನ್ನು ಬಹುಮಾನವಾಗಿ ಕೊಡಲ್ಪಡುತ್ತ ಮೇಲೆ ಹೇಳಿದ ಪ್ರಸಿದ್ಧಿಯನ್ನು ಪಡೆದ ಚಂದ್ರಕಾಂತಿ ತೈಲವನ್ನು ತರಿಸಿಕೊಳ್ಳುವವರ ಹೆಸರುಗಳನ್ನು ಪ್ರತಿ ತಿಂಗಳ ಆಖೈರನಲ್ಲಿ ಚೀಟಿ ಹಾಕಿ ಸೇರಿಸಿ ಆ ಚೀಟಿ ಹೆಸರುಗಳಲ್ಲಿ ಮೇಲೆ ಹೇಳಿದ ಗಡಿಯಾರಗಳು ಯಾರ ಯಾರ ಹೆಸರಿಗೆ ಬರುತ್ತವೆಯೋ ಅವರವರ ಹೆಸರುಗಳಿಗೆ ಹೆಸರಿಗೊಂಡು ಗಡಿಯಾರವನ್ನು ಬಹು ಮಾನವಾಗಿ ಬಾಂಗಿ ಮೂಲಕ ಕಳುಹಿಸುತ್ತೇವೆ ಅವಕಾಶ ಗಡಿಯಾರ ಬಹುಮಾ ಕೇಳುವವರು ತಿಂಗಳು ಆಖೈರು ಒಳಗಾಗಿ ಚಾಸ್ತಿ ದರಖಾಸ್ತು ಕಳುಹಿಸಿ [117 1]

ವಿಳಾಸ—ಎ. ಅಬಾಜೀ ಅಂಡ್ ಕೋ,

ತಿರುವಲ್ಲಕೇಣಿ, ಮದರಾಸು

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ ಕಲ್ಪನಾ ಕೌಶಲವೂ ಘಟನಾವಳಿಯೂ ಬಹು ಮುದ್ದಾಗಿರುವುದು ಕ್ರಯ ೯ ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [13 31]

ನಮ್ಮ ವಿಳಾಸ- ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

“ವಾಸಿಮಾಡಿಕೊಳ್ಳುತ್ತೇನೆಂದು ಹೇಳು”

8( )

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರೆತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಬಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಗೆ ಮೋಸವಾದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

“ಕ್ಲೆಮೆಂಟರ ಮ್ಯಾಜಿಕ್ ಬಾಂ” ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ಪಡಮಟಪಿಳ್ಳೆ ಬೀದಿ ಪುರಸವಾಕಂ, ವೆಪೇರಿ, ಮದರಾಸ್ (2) ಬಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

WILLIAM & Co, FORT, BOMBAY

ಅಮೃತಾಂಜನ. (Regd)

35 22

ಎಲ್ಲಾ ಬಾಮುಗಳಿಗಿಂತಲೂ ಅಂಜನಗಳಿಗಿಂತಲೂ ಶ್ರೇಷ್ಠವಾದದ್ದು ಇದರಿಂದ ವಾತ ಸಂಧಿವಾತ, ಜಖಮು, ಗಾಯ, ಉಳುಕು, ತಲೆನೋವು, ಶಿರೋಭಾರ ಮುಂತಾದ ಎಲ್ಲಾ ತರದ ನೋವುಗಳು ಶಾತ್ತಿಯಿಂದ ನಿಲ್ಲುವದು ಬಾಟ್ಲಿ ಒಂದರ ಕಿಮ್ಮತು 0 8-0

ಗಜಕರ್ಣದ ಮುಲಾಮು ಯಂತಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಒರುವದಿಲ್ಲ, ಜಖಮವು ಆಗುವದಿಲ್ಲ ಡಬ್ಬಿ 1ಕ್ಕೆ 0-6-0 ದಂತಮಂಜನ 0-3-0 ನೇತ್ರಾಂಜನ 0-1-0 ಸುಂದರಿ ತೈಲ 0-8-0

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಪೋರ್ಟ್ ಮುಂಬಯಿ.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ಶೀಘ್ರವೇ ಶಿಥಿಲವಾಗಿ ಬಾಧೆಗಳನ್ನು ಪಟ್ಟುಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸರಿಯಾದ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION

(ಸ್ಕಾಟ್ಸ್ ಇಮಲ್ಷನ್) 2 30

ಎಂಬ ಔಷಧವು ಮಕ್ಕಳ ಸಮಸ್ತ ಅಂಗಗಳನ್ನೂ ಎಲುಬು ಬೆಳೆಸುವ ದಾಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವಿಸಿದ ಮಕ್ಕಳು ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್

ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಮಾನುಮನುಷ್ಯ ಇರುವ ಈ ಔಷಧದ ಗುರುತು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೋ!

1 30

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು!

ಹಾಸನದ ಟೋಪಿಗಳ ಸಮಾನ ಉಂಟೇ!

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಈ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಹಾಗೆ ಅಲ್ಲಾ ಟೀಕಾದದ್ದು ಅದೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಹಾಗೆ ಬಲ್ಲಾ ನೆಟ್ಟಗೆ ಬಿರಾಯಿತ್ತಿಯಿಂದಲೇ ಬರುವವು (೨) ಟೋಪಿಗಳನ್ನು ಹಾಕಿ ೧ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಲ್ಲದೆ ಸುವರಿಗೆ ಒಳ ೧ರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗತ್ಯವಾದದ್ದೂ ಚನ್ನಾಗಿಲ್ಲದೆ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಹಾದ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೧ ರೂ ೬ ಆ , ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಹಾದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೪

ಉಣ್ಣೆತಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕಿಶ್ತಿಗಳ ಟೋಪಿ, ಪೂರ್ತಿ ಮೇಹೋದು, ಅರ್ಧ ಮೇಹೋದು, ಜಾಕೆಟ್ಟು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂತವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

5—7—1912 ರಿಂದ 12—7—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	17	10	1	1
ಕೋಲಾರ್ ,,	0	0	7	1
ಕೋಲಾರ್ ಚಿನ್ನದ ಗಣಿಗಳು	3	2	0	0
ತುಂಕೂರು ಡಿಸ್ಟ್ರಿಕ್ಟು	2	2	25	11
ಹಾಸನ ,,	13	7	0	0
ಚಿತ್ರದುರ್ಗ ,,	0	0	125	66
ಕಡೂರ್ ,,	7	1	0	0
ಶಿವಮೊಗ್ಗ ,,	15	9	65	18
ಜುಮ್ಲಾ	57	30	223	113

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ನಿಜ ಆಷಾಢ ಶುದ್ಧ ತ್ರಯೋದಶಿ ಶುಕ್ರವಾರದಿಂದ ನಿಜ ಆಷಾಢ ಬಹುಳ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಜೂಲೈ ಮತ್ತು ಆಗಸ್ಟ್

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಕರ್ಣಾಟ ಮಾಸ ತೇದಿ
26	ಶುಕ್ರ *	ತ್ರಯೋದಶಿ	56-24	ಮೂ	10-20	12
27	ಶನಿ	ಚತುರ್ದಶಿ	60-0	ಪೂಷಾ	15-58	13
28	ಭಾನು	ಚತುರ್ದಶಿ	1-1	ಉಷಾ	52-18	14
29	ಸೋಮ §	ಪೌರ್ಣಮಿ	5-35	ಶ್ರ	59-9	15
30	ಮಂಗಳ	ಪಾಡ್ಯಮಿ	10-39	ಧ	60-0	16
31	ಬುಧ †	ಬಿದಿಗೆ	15-19	ಧ	5-21	17
1	ಗುರು ‡	ತದಿಗೆ	19-58	ಶ	11-17	18

* ಅತಿರುಕ್ತನಾರ, ಪ್ರದೋಷ, ಮಳೆ ನಕ್ಷತ್ರ—ಪುಷ್ಯ 3 ನೇ ಪಾದ ಶ್ರಾವಣ ಬೃಹಸ್ಪತಿವಾರ ವ್ರತ § ವ್ಯಾಸಪೂರ್ಣಿಮಾ, ಮಳೆ ನಕ್ಷತ್ರ—ಪುಷ್ಯ 4 ನೇ ಪಾದ † ಮೇಲುಕೋಟೆಯಲ್ಲಿ ಮಹಾಭಿಷೇಕ ಮತ್ತು ಕಲ್ಯಾಣೋತ್ಸವ, ‡ ಚತುರ್ಥೀ ತಿಥಿ, ಸಂಕಟಹರಚತುರ್ಥೀ, ಪಡಿಸಂಪ್ರಾಂ ವರಕು

ಪೇಟೆ ಧಾರಣೆ

ವಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೪-೦	೧೫-೮-೦
ಕೆಂಪುಕತ ಅಕ್ಕಿ ಅವಲ್	..	೧೬-೧೨-೦	೧೬-೮-೦
,, ಮಧ್ಯಮ	.. ..	೧೬-೨-೦	೧೬-೦-೦
ಬಾಡ್ಯಾಣಿ ಅಕ್ಕಿ	. ..	೧೫-೧೨-೦	೧೭-೦-೦
ಕಸ್ತ್ರಿ ಅವಲ್	.. ..	೧೩-೦-೦	೧೭-೮-೦
,, ಮಧ್ಯಮ	..	೧೭-೮-೦	೧೬-೮-೦
ಕೆಂಗಿರೀ ಭೋಳ ಪಲ್ಲಾ ೧ಕ್ಕೆ	.. .	೧೨-೦-೦	೧೨-೮-೦
,, ಮಧ್ಯಮ	. .	೧೧-೦-೦	೧೧-೮-೦
ಕೈಲ್ ರಾಗಿ ಪಲ್ಲಾ ೧ಕ್ಕೆ	.	೭-೧೨-೦	೭-೩-೦
ಕಾಬ್ರಾಗಿ	. .	೭-೪-೦	೭-೪-೦
ಜೋಳ	. .	೮-೦-೦	೮-೦-೦
ಅಲಸಂದೆ ಪಲ್ಲಾ ೧ಕ್ಕೆ	. ..	೧೨-೦-೦	೧೧-೦-೦
ಬೀ ಅವರೆ	.. .	೧೧-೦-೦	೧೦-೦-೦
ಹೆಸರು	.. .. .	೧೪-೦-೦	೧೪-೮-೦
ಉದ್ದು	. ... ..	೨೪-೦-೦	೧೫-೦-೦
ಕಡಲೆ	. .. ..	೧೧-೮-೦	೧೧-೦-೦
ಎಳ್ಳು ಸೇ ೨೩೭ ಕ್ಕೆ	.. ..	೨೪-೦-೦	೨೪-೮-೦
ಹುರುಳಿ	. .. ..	೭-೨-೦	೭-೩-೦
ಹರಳು ೧೨೭ ಸೇರಿಗೆ	... ...	೧೩-೪-೦	೧೩-೦-೦
ಸೀಗೆಕಾಯಿ ಮಣ ೧ಕ್ಕೆ	.. ..	೩-೮-೦	೩-೮-೦
ಸೋಪಿನಕಾಯಿ	.. .. ..	೩-೪-೦	೩-೪-೦
,, ಮಧ್ಯಮ	.. ..	೩-೦-೦	೨-೮-೦
ಬೆಲ್ಲ ಮೊದಲ್ನ ಅಚ್ಚು	.. ..	೫-೮-೦	ಮ ೫-೮-೦
ಒಳ್ಳೆ ಮಣ ೧ಕ್ಕೆ	.. ..	೬-೧೨-೦	೬-೮-೦
ಅರಿಶಿಣ ,,	.. .. ..	೫-೮-೦	೫-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	.. ..	೬-೦-೦	೬-೮-೦
ಉಪ್ಪು ,,	.. ..	೫-೮-೦	೫-೮-೦
ಹುಣಸೇ ಹಣ್ಣು	.. ..	೧-೪-೦	೧-೪-೦
,, ಹಳೇದು	.. ..	೧-೦-೦	೧-೨-೦
ತುಪ್ಪ ಮಣ ೧ಕ್ಕೆ	.. ...	೧೮-೦-೦	೧೭-೮-೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	. ..	೫-೦-೦	೫-೦-೦
ತೆಂಗಿನಕಾಯಿ ೧೦೦ ಕ್ಕೆ	.. ...	೬-೦-೦	೬-೦-೦
ಅಡಕೆಕಾಯಿ ಮಣ ೧ಕ್ಕೆ	.. ...	೦-೮-೦	೧-೦-೦
ಅಂಟುವಾಳದ ಕಾಯಿ ಮಣ ೧ಕ್ಕೆ	...	೦-೧೨-೦	೧-೮-೦
ಹತ್ತಿ (ಬೀಜ) ಕೆಂಪು	... ...	೧೫-೮-೦	೧೫-೮-೦
,, ,, ಪಸಿಮೆ	... ...	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	...	೨೪-೩-೦	೨೪-೩-೦
ರೇ ಗಟ್ಟಿ ತೊಲ ೧೦೦ ಕ್ಕೆ	... ...	೮೧-೦-೦	೮೧-೦-೦

ಆಯುರ್ ಭೈಷಜ್ಯಮಂದಿರ, ಶ್ರೀ ಶೃಂಗೇರಿ.

ನವಾನಂದ ಭೈರವರಸ—8 ವಿಧ ಜ್ವರ, 1 2 3 4 ದಿನಕ್ಕೆ ಬರುವ ಜ್ವರ, 13 ಸನ್ನಿಪಾತ ವಿಷಮಾದಿ ಸಕಲ ಜ್ವರ, ಕೆಮ್ಮು, ಉಬ್ಬಸ, ಕ್ಷಯ ಗುಲ್ಮ, ಭೇದಿ, ಆಮಶಂಕೆ, ಅತಿಸಾರ, ಇವನ್ನು ಜಯಿಸಲ ಮಾಡುತ್ತೆ. ಜೀರ್ಣಶಕ್ತಿಕಾರಿ, ಅಂಜನವಾಗಿ ಉಪಯೋಗಿಸಬಹುದು ಮಲೆನಾಡಿನ ಜ್ವರಕ್ಕೆಲ್ಲಾ ಸಂಜೀವಿನಿ. ಪ್ಲೇಗಿನ ಜ್ವರಕ್ಕೆಲ್ಲಾ ಬರುತ್ತೆ. ಅಪಥ್ಯ ಮಾಡಿದರೂ ಹಿಂತಿರುಗುವದಿಲ್ಲ ಪಿತ್ತೋಲ್ಬಣ ಮಾಡುವದಿಲ್ಲ. ಪ್ರತಿ ಕುಟುಂಬದಲ್ಲಿಯೂ ಇರಬೇಕಾದ ಔಷಧ. ಮಳೆಗಾಲದ ಕೆಲಸಗಾರರಿಗೆ ಬೇಕಾದದ್ದು ಈ ಒಂದು ಔಷಧ ಪರೀಕ್ಷಿಸಿದರೆ ಹಿಂದೂ ಔಷಧದ ಯೋಗ್ಯತೆ ತಿಳಿಯುತ್ತೆ. ವಿಶೇಷ ಮಾತೇನು? ಎಲ್ಲಾ ಜ್ವರವನ್ನೂ ನಿಶ್ಶೇಷ ಮಾಡುತ್ತೆ 60 ಮಾತ್ರೆ 1 ರೂ. ಅಶ್ವಗಂಧಾದಿ ಲೇಹ-ಪಿತ್ತ ಉಷ್ಣಾದಿಯನ್ನು ಹರಿಸಿ, ಪುಷ್ಟಿಕೊಡುತ್ತೆ ಖ್ಯಾತಿಯಾದದ್ದು ಸೇರಿಗೆ 2 ರೂ ಅಂಚೆ ವೆಚ್ಚ ಬೇರೆ. [116-2] ನಮ್ಮ ವಿಳಾಸ—ಆಯುರ್ ಭಿಷಕ್ಪಾದ ಕೆ ಶೇಷಶಾಸ್ತ್ರೀ, ಶೃಂಗೇರಿ

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಕಡಿ ಅದವಾ ಹುಳಕಡಿ ಔಷಧವು.

ಡಬ್ಬಿ 1 ಕ್ಕೆ ರೂ 0-14 ಡಬ್ಬಿ 12 ಕ್ಕೆ ರೂ. 2-8-0.

ಶರೀರದ ಕೆಂಪುಕಡಿ ... ಸಕಲ ... ಔಷಧಿಯು ಚರ್ಮದಲ್ಲಿ ಉಂಟಾಗುವ ಕೊಳೆಯನ್ನು ಹೋಗಲಾಡಿಸಿ ಒಂದೇ ದಫಾ ಹಾಕುವದರಿಂದ ದೇಹವು ಥಳಥಳಿಸುವ ಹಾಗೆ ಶುದ್ಧಿಯನ್ನು ಮಾಡುವದು. ಇದು ಸುವಾಸನೆಯು ದೇಹಕ್ಕೆ ತಂಪು ಉಂಟುಮಾಡುವದು

ಉಷ್ಣಮರ್ಜಿ ಚೂರ್ಣವು

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1-0-0

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಿಂತು ನೀರು ಧಾರಾಳವಾಗಿ ಇಳಿಯುವದರಿಂದ ವಿಸರ್ಜನೆಯ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0-10 ಡಬ್ಬಿ 12 ಕ್ಕೆ ರೂ 4-8-0.

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು ಹಲ್ಲುಗಳನ್ನು ಸ್ವಚ್ಛ ಮಾಡುವದು [121-39]

ರಾಜವೈದ್ಯ ನಾರಾಯಣಜೀ ಕೇಶವಜೀ,

771, ಜೇನಾ ಬಜಾರ್ ರೋಡ್, ಮದ್ರಾಸು.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ರೋಗವುಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಶೌಚಪ್ರವೃತ್ತಿಯಾಗುತ್ತದೆಯೋ ? " ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಶೌಚಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು, ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ; ಪಿತ್ತ , ಪಿತ್ತಜ್ವರ , ಅಜೀರ್ಣ ; ಅಗ್ನಿಮಾಂದ್ಯ , ಗಾಬರಿ ; ಅಶಕ್ತಿ , ಎದೆಯು ಕಲ್ಲಣಿಸುವದು , ತಲೆತಿರುಗುವುದು ; ತಲೆನೋವು ; ಹೊಟ್ಟೆಯುಬ್ಬರ ; ಹುಳಿತೇಗಿನ ಹೊಟ್ಟೆನೋವು , ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು,

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [99-46]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ ಡೋನ್ಸ್, ಪಿ ಒ. ಬಾಕ್ಸ್ ೨೦, ಬೊಂಬಾಯಿ.—ಇವರಲ್ಲಿ ದೊರೆಯುವುವು

ವಿದೇಶದ ವೃತ್ತಾಂತಗಳು.

ಇಂಗ್ಲೀಷ್ ರಾಜ್ಯಭಾಗದ ಎಲ್ಲಾ ಪ್ರಾಂತ್ಯಗಳಿಂದಲೂ ಸರ್ವ ವಸ್ತುಗಳನ್ನು ತರಿಸಿ ಲಂಡನ್ ಪಟ್ಟಣದಲ್ಲಿಟ್ಟು 1915 ನೇ ಇಸವಿಯಲ್ಲಿ ಪ್ರದರ್ಶನ ಮಾಡಬೇಕೆಂದು ತೀರ್ಮಾನವಾಗಿದೆ

* * *

ಕಳೆದ ವಾರ ಪಿದಿ ಅಲಿ ಎಂಬ ಸ್ಥಳದಲ್ಲಿ ಇಟಲಿಯವರಿಗೂ ಟರ್ಕಿಯವರಿಗೂ ಒಂದು ಯುದ್ಧ ನಡೆಯಿತು ಇಟಲಿಯವರ ಕಡೆ 16 ಮಂದಿ ಕೊಲೆಯಾದರೆಂದೂ, 73 ಜನರಿಗೆ ಗಾಯಗಳಾದವೆಂದೂ ತಿಳಿಯುತ್ತದೆ. ಅತ್ತಲಾಗಿ ಟರ್ಕಿಯವರಲ್ಲಿ ನೂರಾರು ಜನರು ಯುದ್ಧ ಭೂಮಿಯಲ್ಲಿ ಮಡಿದು ಬಿದ್ದಿದ್ದರಂತೆ

* * *

ಜಪಾನ್ ರಾಜ್ಯದ ಚಕ್ರವರ್ತಿ ಮಿಕ್ಯಾಡೋಯವರು ಬಹಳ ಕಾಯಿಲೆಯಾಗಿದಾರೆಂದೂ, ಬದುಕುವುದು ಕಷ್ಟವಾಗಿದೆ ಎಂದೂ, ಅವರಿಗೆ ಕಳೆದ ಶುಕ್ರವಾರದ ದಿನ ಜ್ಞಾನವೇ ಇರಲಿಲ್ಲವೆಂದೂ ತಂತೀವರ್ತಮಾನ ಬಂದಿದೆ.

* * *

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಒಂದು ಎಕ್ಸ್‌ಪ್ರೆಸ್ ರೈಲ್ ಗಾಡಿಯು ಅತಿವೇಗವಾಗಿ ಬರುತ್ತಿದ್ದ ಒಂದು ಮೆಯಿಲ್ ಗಾಡಿಗೆ ಬಡಿದು ಅನಾಹುತವಾದದ್ದರಲ್ಲಿ ಹದಿಮೂರು ಮಂದಿ ಪ್ರಾಣಕಳೆದುಕೊಂಡರು ; ಅನೇಕ ಜನರಿಗೆ ಗಾಯಗಳಾಗಿರುತ್ತವೆ.

* * *

ಇಂಗ್ಲಾಂಡಿನಲ್ಲಿ ಅಂತರಿಕ್ಷದಲ್ಲಿ ಸಂಚರಿಸಲು ಅನುಕೂಲಿಸುವಂಥಾ ವಿಮಾನಯಂತ್ರಗಳನ್ನು ಸ್ವಸ್ವಕ್ಕೆ ಮಾಡಿಸಿಕೊಡಬೇಕೆಂದು ಪ್ರಜೆಗಳಿಂದಲ್ಲೆಲ್ಲಾ 12 ಆಣೆಯಂತೆ ಚಂದಾ ಕೂಡಿಸಿ ಒಂದು ಫಂಡು ಏರ್ಪಡಿಸಲಾರಂಭಿಸಿದಾರೆ. ಯುದ್ಧಕಾಲಗಳಲ್ಲಿ ಈ ಯಂತ್ರಗಳು ಉಪಯೋಗವಾಗುವಂತೆ ಸಿದ್ಧವಾಗಿರಬೇಕೆಂಬುವುದೇ ಈ ಇಂಗ್ಲಿಷ್ ವಿಮಾನ ಯಂತ್ರ ಪ್ರೋತ್ಸಾಹಕ ಮಂಡಲಿಯವರ ಉದ್ದೇಶವು

* * *

ಹಿಂದುಸ್ಥಾನದಲ್ಲಿ ಈಗಿರುವ ವೈಸ್‌ರಾಯಿ ಪದವಿಯ ಅಧಿಕಾರವನ್ನು ತೆಗೆದುಹಾಕಿ, ಇಂಗ್ಲಿಷ್ ರಾಜಮನೆತನದವರೊಬ್ಬರನ್ನು ಚಕ್ರವರ್ತಿಯವರ ಪ್ರತಿನಿಧಿಯಾಗಿ ಕಳುಹಿಸಿ, ಇವರ ಸಹಾಯಕ್ಕೆ ಒಬ್ಬ ದಿವಾನ್‌ರನ್ನು ನೇಮಕ ಮಾಡುವುದು ಒಳ್ಳೆಯದೆಂದು ಮೆ॥ ಹಾರಾಲ್ಡ್ ಕಾಕ್ಸ್ ಎಂಬಾತನು ಸಲಹೆ ಕೊಟ್ಟಿರುತ್ತಾನೆ ಈ ಸಲಹೆಯು ಎಷ್ಟುಮಟ್ಟಿಗೆ ಸಹಜವೂ ಸಾರ್ಥಕವೂ ಆದದ್ದೋ ನಮಗೆ ತಿಳಿಯದು

* * *

ಲಂಡನ್ ಪಟ್ಟಣಕ್ಕೆ ಹೋಗಿರುವ ಹಿಂದೂದೇಶ ಹಿತೈಷಿಗಳಾದ ಮೆ॥ ಗೋಖಲೆಯವರು ಇಂಗ್ಲಿಷ್ ಪಾರ್ಲಿಮೆಂಟಿನ ಕೆಲವು ಮೆಂಬರುಗಳ ಕೂಡ ಇಂಡಿಯಾ ಸ್ಟೇಟ್ ಸೆಕ್ರೆಟರಿ ಲಾರ್ಡ್ ಕ್ರೂಯವರ ಬಳಿಗೆ ಕಳೆದ ಗುರುವಾರ ಹೋಗಿ, ಹಿಂದುಸ್ಥಾನದಲ್ಲಿ ಮದ್ಯಪಾನವನ್ನು ಕಡಮೆಮಾಡಬೇಕೆಂಬ ಉದ್ದೇಶದಿಂದ ಎಕ್ಸೈಸ್ ಇಲಾಖೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಟ್ಟು ರಕ್ಷಿಸಬೇಕೆಂದು ಅರಿಕೆಮಾಡಿದರು ಆಗ ನಡೆದ ಚರ್ಚೆಯು ಇಷ್ಟು ಬೇಗನೆ ಹೊರಪಡುವ ಹಾಗೆ ಕಾಣುವುದಿಲ್ಲ

* * *

ಅಮೇರಿಕಾ ದೇಶದಲ್ಲಿ ಸುಮಾರು ಎರಡು ಕೋಟಿ ರೂಪಾಯಿ ಬಂಡವಾಳವನ್ನು ಹಾಕಿ ಮುಸುಕಿನಜೋಳದ ಕಡ್ಡಿಯಿಂದ ಸಕ್ಕರೆಯನ್ನು ತಯಾರುಮಾಡುವ ಕಾರ್ಖಾನೆಯನ್ನಿಟ್ಟಿರುತ್ತಾರೆ ಮುಸುಕಿನ ಜೋಳದ ಪೈರಿನಲ್ಲಿ ತೆನೆಯಾಗಿ ಕಾಳಿನಲ್ಲಿ ಹಾಲು ತುಂಬುವುದಕ್ಕೆ ಪ್ರಾರಂಭವಾದೊಡನೆಯೇ ತೆನೆಗಳನ್ನೆಲ್ಲಾ ಕತ್ತರಿಸಿ ಹಾಕಿದರೆ ಕಡ್ಡಿಗಳಲ್ಲಿ ಸಕ್ಕರೆ ಅಂಶವು ಹೆಚ್ಚಾಗಿ ಕೂಡಿಕೊಳ್ಳುತ್ತದೆಯಂತೆ ಕಡ್ಡಿಯನ್ನು ಗಾಣಮಾಡಿ ಹಾಲನ್ನು ತೆಗೆದನಂತರ ಹಿಂಡಿಯನ್ನು ಒಂದು ತರಹಾ ತಿರುಳಿನಂತೆ ಮಾಡಿ, ಅದರಿಂದ ಕಾಗದವನ್ನು ತಯಾರು ಮಾಡುತ್ತಾರೆ, ಇಲ್ಲವೇ ದನಗಳಿಗೆ ಮೇವಾಗಿ ಉಪಯೋಗಿಸುತ್ತಾರೆ

* * *

ಹಿಂದುಸ್ಥಾನದ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯ ಮೆಂಬರಸ್ಥಾನವನ್ನೈದಿದ ಮೆ॥ ಗೋಖಲೆಯವರು ಈಗ ವಿಲಾಯಿತಿಯಲ್ಲಿರುತ್ತಾರಷ್ಟೆ ಲಂಡನ್ ಪಟ್ಟಣದಲ್ಲಿರುವ ಈ ರಾಷ್ಟ್ರದ ಹಿತೈಷಿಗಳು ಅವರಿಗೆ ಕಳೆದ ವಾರ ಔತನ ಮಾಡಿದರು ಆ ಸಭೆಯಲ್ಲಿ ಸರ್ ಮಂಚರ್ಜಿ ಭೌನಗರಿಯವರು ಅಧ್ಯಕ್ಷತೆಯನ್ನು ವಹಿಸಿ, ಮೆ॥ ಗೋಖಲೆಯವರ ದೇಶವಾತ್ಸಲ್ಯವನ್ನೂ ಉತ್ಸಾಹವನ್ನೂ ಜಾತಕ ಸಾಮರ್ಥ್ಯಾದಿಗಳನ್ನೂ ಸಚ್ಚರಿತ್ರೆಯನ್ನೂ ವಿವರಿಸಿ ಸಭಿಕರ ಪರವಾಗಿ ಅವರನ್ನು ವಂದಿಸಿದರು ಆ ಸಮಯದಲ್ಲಿ ಅವರು—ಮೆ॥ ಗೋಖಲೆಯವರು ಇಷ್ಟರಲ್ಲೇ ದಕ್ಷಿಣ ಆಫ್ರಿಕಕ್ಕೆ ಹೋಗಿ ಹಿಂದುಸ್ಥಾನದ ಜನಗಳ ವಿಷಯದಲ್ಲಿ ದಕ್ಷಿಣ ಆಫ್ರಿಕಾ ಗವರ್ನ್‌ಮೆಂಟಿನವರು ಮಾಡುತ್ತಿರುವ ಪಕ್ಷಪಾತವನ್ನು ಕುರಿತು ಅಲ್ಲಿನ ಅಧಿಕಾರಿಗಳ ಕೂಡ ಕಲೆತು ಮಾತುಕತೆ ನಡೆಸಿ, ಅವರ ಅಭಿಮತವನ್ನು ತಿಳಿದು ಬರುವವರಾಗಿದಾರೆ ಎಂದು ಸಭೆಯಲ್ಲಿ ತಿಳಿಸಿದರು.

* * *

ದಕ್ಷಿಣ ಅಮೇರಿಕದ ಪಶ್ಚಿಮ ತೀರದಲ್ಲಿರುವ ಪೆರೂ ರಾಜ್ಯದೊಳಗೆ ರಬ್ಬರ್ ತೋಟಗಳು ಅನೇಕವಾಗಿರುತ್ತವೆ ಸರ್ ರೋಜರ್ ಕೇಸ್ಮೆಂಟ್ ಎಂಬಾತನು ಆ ಪ್ರಾಂತ್ಯ ಸಂಚಾರಮಾಡಿ, ರಬ್ಬರ್ ತೋಟಗಳಲ್ಲಿ ನಡೆಯುವ ಕ್ರೂರಕೃತ್ಯಗಳನ್ನು ಪ್ರಕಟಿಸಿರುತ್ತಾನೆ ಈ ವೃತ್ತಾಂತವನ್ನು ಓದಲು ಕಣ್ಣೀರು ಬರುವುದು ತೋಟಗಳಲ್ಲಿ ಯಜಮಾನರು ಕೂಲಿ ಆಳುಗಳನ್ನು—ಚಿಕ್ಕವರು, ದೊಡ್ಡವರು, ಗಂಡಸರು, ಹೆಂಗಸರು ಎಂಬ ಭೇದ ನೋಡದೆ ಚಕ್ಕಳದ ಚಾವಟಿಗಳಿಂದ ಹೊಡೆಯುವರು ಅವರ ಕಿವಿ, ಕೈ, ಕಾಲುಗಳನ್ನು ಕತ್ತರಿಸಿ ಹಾಕುತ್ತಾರೆ. ಗಂಡಸರನ್ನೂ ಹೆಂಗಸರನ್ನೂ ಕೆರೊಸಿನ್ ಎಣ್ಣೆ ಸುರಿದು ದೀಪ ಹಚ್ಚಿ ಸುಟ್ಟುಹಾಕುತ್ತಾರೆ ಅಲ್ಲಿ ನಡೆಯುವ ಕ್ರೂರಕೃತ್ಯಗಳು ಮನುಷ್ಯ ಮಾತ್ರದವರಿಂದ ನೋಡಲಾಗದು. ಈ ಕೂಲಿಕಾರರ ಪೈಕಿ ಹಲವರು ಇಂಗ್ಲಿಷ್ ಸಾಮ್ರಾಜ್ಯದ ಪ್ರಜೆಗಳೆಂದು ತಿಳಿದು ಬಂದಿರುವುದರಿಂದ ಇಂಗ್ಲಿಷ್ ಸರ್ಕಾರದವರು ಈ ವಿಚಾರವನ್ನು ಕ್ರಮವಾಗಿ ತನಿಖೆ ಮಾಡಿ, ತಕ್ಕ ಪರಿಹಾರವನ್ನು ಕಲ್ಪಿಸದೆ ಇರಲಾರರೆಂದು ನಂಬಬಹುದು ಇಂಗ್ಲಾಂಡಿನ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆ ಮನೆಯಲ್ಲಿ ಮೆಂಬರುಗಳು ಈ ವಿಚಾರವನ್ನು ಕುರಿತು ಸರ್ಕಾರದವರನ್ನು ನಾನಾ ಪ್ರಶ್ನೆಗಳನ್ನು ಕೇಳಿದರು ಅವರಿಗೆ ಜವಾಬಾಗಿ ಮೆ॥ ಆಕ್ಲೆಂಡ್ ಯವರು ತಿಳಿಸಿದ್ದೇನೆಂದರೆ—ಆ ಕ್ರೂರಕೃತ್ಯಗಳನ್ನು ನಡಿಸತಕ್ಕವರು ಇಂಗ್ಲಿಷರಲ್ಲ. ಆದರೂ ಅಮೇರಿಕದ ಸರ್ಕಾರದವರ ಕೂಡ ಇಂಗ್ಲಿಷ್ ಸರ್ಕಾರದವರು ಕಲೆತು, ಆ ಕ್ರೂರಕೃತ್ಯಗಳನ್ನು ಅಡಗಿಸುವುದಕ್ಕೆ ಪ್ರಯಾಸಪಡದೆ ಇರಲಾರರು. ಆಗಲೇ ಅಮೇರಿಕದ ಸರ್ಕಾರದ ಪಕ್ಷದಲ್ಲಿ ಮೆ॥ ಎ. ಫುಲ್ಲರ್ ಎಂಬ ಏಜಂಟನು ಪೆರೂ ದೇಶಕ್ಕೆ ಹೋಗುತ್ತಿದಾನೆ. ಅಂಥಾ ಕ್ರೂರಾತ್ಮಗಳನ್ನು ತಕ್ಕ ರೀತಿಯಲ್ಲಿ ಶಿಕ್ಷಿಸುವಂಥಾ ಅಧಿಕಾರವನ್ನು ಆತನಿಗೆ ಅಮೇರಿಕದವರು ವಹಿಸುತ್ತಾರೆ

ಕಾರೂನೇಷನ್ ರೋಮನಾಶಿನಿ ಸಾಬೂನು

ಮೈಸೂರು ಮಾರ್ಕೆಟ್ ಗಡಿಯಾರದ ಬಳಿ ಕೈಮಿಸ್ಟ್ರಿ ಮಾಣಿಕ್ಯಂ ಅವರ ಷಾಪಿನಲ್ಲಿ ಕೂದಲನ್ನು ನಾಶಮಾಡುವಂಥಾ ಕಾರೊನೇಷನ್ ಸಾಬೂನು ಎರಂಗೆ ಉಪ್ಪಿದೆ ಬೇಗ ಕೊಂಡುಕೊಳ್ಳಿ, ಮುಗಿದು ಹೋದೀತು ಕ್ರಯ 1 ಬಿಲ್ಲೆಗೆ 6 ಆಣೆ, 3 ಇರುವ ಪೆಟ್ಟಿಗೆಗೆ 1 ರೂಪಾಯಿ [119-1]

ಗೃಹಕೃತ್ಯದ ನೋಟೀಸು

ಆನೇಕಲ್ ತಾಲ್ಲೂಕು ಕಸಬಾ ಹೋಬಳಿ ಕಾವಲಿ ಹೊಸಹಳ್ಳಿ ಗ್ರಾಮದಲ್ಲಿ ಇರುವ ರಡ್ಡಿಗರ ಸಂಜೀವೈಯನ ಮಗ ಇಪ್ಪತ್ತೈದು ವರುಷ ವಯಸ್ಸಿನ ಚಿಕ್ಕಸಂಜೀವೈಯನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—

ನನ್ನ ತಂದೆ ಮೋಲ್ಕಂಡ ಸಂಜೀವೈಯನಿಗೆ ಇಬ್ಬರು ಹೆಂಡತಿಯರು ಹಿರೀ ಹೆಂಡತಿಗೆ ಚಿಕ್ಕ ಸಂಜೀವೈಯನಾದ ನಾನೊಬ್ಬನೇ ಮಗನು ಕಿರೀ ಹೆಂಡತಿಗೆ ಗಂಡು ಮಕ್ಕಳು ಇಲ್ಲ ಈಗ ನನ್ನ ತಂದೆಯು ನನ್ನ ಬಲತಾಯಿಯ ಮತ್ತು ಇತರರ ದುರ್ಬೋಧನೆಗೆ ಒಳಪಟ್ಟು ನನಗೆ ಮೋಸಮಾಡಬೇಕೆಂಬ ಇರಾದೆಯಿಂದ ನಮ್ಮ ಪಿತ್ರಾರ್ಜಿತವಾದ ಮತ್ತು ನಾನೂ ನನ್ನ ತಂದೆಯೂ ಸಹ ಕಷ್ಟಪಟ್ಟು ಸಂಪಾದಿಸಿದ ಸೊತ್ತುಗಳನ್ನು ಪರಭಾರೆ ಮಾಡಬೇಕೆಂಬದಾಗಿರುವಂತೆ ತಿಳಿಯ ಬರುತ್ತೆ ನನ್ನ ಅನುಮತಿಯಿಲ್ಲದೆ ನನ್ನ ತಂದೆಯು ಆ ರೀತಿ ಮಾಡಿದರೆ ಯಾರೂ ಅವುಗಳನ್ನು ಕ್ರಯ ಭೋಗ್ಯ ಆಧಾರ ವಗೈರೆ ಯಾವ ವಿಧವಾಗಿ ಪಡೆದುಕೊಂಡಾಗ್ಯೂ ಅದು ಊರ್ಜಿತವಾಗುವುದಿಲ್ಲ ಮತ್ತು ಹಾಗೆ ಪಡೆದುಕೊಂಡವರು ನನ್ನ ಎಲ್ಲಾ ಲುಕ್ಸಾನಿಗೂ ಗುರಿಯಾಗಿರಬೇಕಾಗಿರುತ್ತೆಂದು ಈ ಮೂಲಕ ಎಲ್ಲರಿಗೂ ಎಚ್ಚರಿಸಿ ಇದೆನೆ [118-1]

ತಾ 21-6-12 ಈ ನೋಟೀಸು ಗುರುತು ಚಿಕ್ಕಸಂಜೀವೈಯನ ರುಜು

ಕಾರನೇಷನ್ ವಾಚ್ ರೂ 1-15-0.

ನಮ್ಮ ಕಂಪನಿಯ ಹೆಸರು ಪ್ರಖ್ಯಾತಿಯಾಗಲೆಂದು ಇಷ್ಟು ಸುಲಭ ಕ್ರಯಕ್ಕೆ ಡಿಸೆಂಬರ್ ವರೆಗೆ ಮಾತ್ರ ಕೊಡುತ್ತೇವೆ ಇಂಥಾ ವಾಚು ಇಷ್ಟು ಸುಲಭ ಕ್ರಯಕ್ಕೆ ಯಾರೂ ವಿಕ್ರಯಿಸಲೂ ಇಲ್ಲ ಎಲ್ಲೂ ಸಿಕ್ಕುವದೂ ಇಲ್ಲ ಮುಚ್ಚಳದ ಯಂತ್ರ್ಯೋಪಕರಣ ಉಳ್ಳದ್ದು, ವರುಷ ಗ್ಯಾರಂಟಿ ಪತ್ರವೂ ಇದೆ, ಬೇಗನೆ ತರಿಸಿಕೊಳ್ಳಿ

ರೋಮನಾಶಿನಿ—ಕ್ರಯ ೯ ಆಣೆ

ಕೂದಲು ಬೇಡದ ಸ್ಥಳದಲ್ಲಿ ಈ ಪುಡಿಯನ್ನು ಸವರಿದರೆ ನಿಮಿಷದಲ್ಲಿ ಕೂದಲು ಉದುರಿಹೋಗುತ್ತೆ ಆದ್ದರಿಂದ ಚರ್ಮಕ್ಕೆ ಯಾವ ಹಾನಿಯೂ ಉಂಟಾಗದು [97-2]

ವಿಳಾಸ— ಮಾನೇಜರ್, ಕ್ರಾನೇಷನ್ ಏಜೆಂಟ್ ಕೋ ನಂ 1, ಪೊಮ್ಮೈಯನ ವೀಧಿ, ಆನೆಗವುನಿ ಸಮೀಪ, ಮದರಾಸು

ಭಟ್ಟಿ ವಿಕ್ರಮಾದಿತ್ಯರಾಯನ ಕಥೆಗಳು. [101-1]

ಸಾಹಸಕಥೆಗಳು ಸಚಿತ್ರ 576 ಪುಟಗಳು

ಈಗ್ಗೆ 2 ಸಾವಿರ ವರುಷಗಳಲ್ಲಿ ವಿಕ್ರಮ ಶಕಕರ್ತೆಗೆ ಕಾರಣನಾಗಿ ಉಜ್ಜಯಿನೀ ನಗರದಲ್ಲಿ ಆಳುತ್ತಿದ್ದ ವಿಕ್ರಮಾದಿತ್ಯರಾಯನ ಸಾಹಸಚರಿತ್ರೆಯು ಈತನು ಚಂದ್ರಶರ್ಮನೆಂಬ ಬ್ರಾಹ್ಮಣನಿಗೆ ಹುಟ್ಟಿ ತಮ್ಮನಾದ ಭಟ್ಟಿಯನ್ನು ಮುಖ್ಯಮಂತ್ರಿಯಾಗಿ ನೇಮಿಸಿಕೊಂಡು ಭೇತಾಳನ ಸಹಾಯದಿಂದ ದೇವಲೋಕ ಪ್ರವೇಶ, ಸಿಂಹಾಸನಪಡೆದದ್ದು, ಪಾತಾಳಲೋಕ ಪ್ರವೇಶ ದಿಗ್ವಿಜಯದಿಂ ಶತ್ರುರಾಜರಂ ಜೈಸಿ ಅವರ ಕನ್ಯೆಯರಂ ವಿವಾಹವಾಗಿ ಆನೇಕ ರಾಕ್ಷಸರಂ ಕೊಂದು ನಂತರ ಸ್ತ್ರೀರಾಜ್ಯಗಳಂ ಹೊಕ್ಕು ಭೇತಾಳನ ಸಹಾಯದಿಂ ಆ ರಾಣಿಯರಂ ವರಿಸಿ ಪರಕಾಯ ಪ್ರವೇಶದಿಂ ಕೃತ್ರಿಮಶತ್ರುವಂ ಜೈಸಿ ಋಷಿಗಳಿಂ ಉಪದೇಶಗಳಂ ಹೊಂದಿ ತನ್ನ ಪಟ್ಟಣವಂ ಸೇರಿ ಸುಖದಿಂದಿದ್ದನು ದೊಡ್ಡ ನೋಟೀಸಿನಿಂದ ಸರ್ವರಿಗೂ ವಿವರವಾಗಿ ತಿಳಿದಿರುತ್ತೆಯಷ್ಟೆ ಸಂಪೂರ್ಣ ಪುಸ್ತಕವನ್ನು ತರಿಸಿ ಓದಿದರೆ ತಿಳಿಯುತ್ತೆ ದಪ್ಪ ಕಾಗದ, ಸ್ಫುಟವಾದ ಅಕ್ಷರ, ಸೊಗಸಾದ ಬೈಂಡು ಸಿದ್ಧವಾಗಿದೆ

ಕ್ರಯ ಪ್ರತಿ 1ಕ್ಕೆ 1-8-0 ಟಪಾಲು ಹಾಸಲು 1 ಆಣೆ

ಅನೇಕ ತರಹ ಪುಸ್ತಕಗಳೂ ಸಹ ದೊರೆಯುತ್ತವೆ

ನಮ್ಮ ವಿಳಾಸ—ಎಂ ಆರ್ ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪೋ, ಚಿಕ್ಕಪೇಟೆ ಬೆಂಗಳೂರು ಸಿಟಿ

ಸುಲಭ ಕ್ರಯದ ಮಾಲುಗಳು ಬೇಗ ತರಿಸಿಕೊಳ್ಳಿ

ಸುಂದರವಾದ ಜೇಬು ಗಡಿಯಾರ ಬೆಲೆ ರೂ 2-8-0 — ರೈಲ್ವೆ ಷೇಪ್, ಸ್ವಿಸ್‌ಮೇಡ್, ಲಿವರ್ ಪೇಟೆಂಟ್, ಹತ್ತು ವರುಷಗಳಾದಾಗ್ಯೂ ಕೆಡದೆ ನಡೆಯುವ ಪೋರ್ಸಲೀನ್ ಡಯಲ್, ಥಳಕು ಸೇರದ ಬೆಳ್ಳಿಯ ಬಣ್ಣದ ಮುಚ್ಚಳವುಳ್ಳ, ಸಮಗ್ರಯಂತ್ರೋಪಕರಣ ಯುಕ್ತವಾದ ಈ ಅಂದವಾದ ಆಕಾರದ ಗಡಿಯಾರದ ಮೊದಲಿನ ಕ್ರಯ ರೂ 8 ಮುಂದಿನ ಆಗಸ್ಟು ಆಖೈರ್ ವರೆಗ ಉತ್ತರವುಳ್ಳ, ಸರಪಣಿ, ಅಂದವಾದ ಪೆಟ್ಟಿಗೆ ಸಹಿತ ರೂ 2-8-0ಕ್ಕೆ ಕೊಡುವೆವು ಕೂಡಲೆ ಬರೆಯಿರಿ

ಬುಲ್ಸೀಸ್! ಬ್ಲಾಂಕೆಟ್! ಬನಾತು! ಬೆಲೆ! ರೂ 6, 5, 4 — ಥಳಿಗೆ ಬಿಟ್ಟಗೂ, ಹೊದೆಯುವುದಕ್ಕೆ ಮೆತ್ತಗೂ ಇದೆ ಶುದ್ಧ ಉಣ್ಣೆಯದು ಬುಲ್ಸೀಸ್ ಉದ್ದ 80, ಅಗಲ 18 ಅಂಗುಲ ಕ್ರಯ 1 ನೆಯ ನಂ ರೂ 6, 2 ನೆಯ ನಂ ರೂ 4 [120-1]

ಪ್ರಸಿದ್ಧ ಮಧುರೆಯ ಸೀರೆ ಬೆಲೆ ರೂ 3½, 4½, 8 — ರಂಗು ಕೆಡದ ಗಟ್ಟಿ ಬಣ್ಣ, 17 ಮೊಳದುದ್ದ, ಕೆಂಪು, ಕರಿಯ ಬಣ್ಣಗಳಲ್ಲಿ ಸಾದಾ ಅಥವಾ ಬಿಳಿ ಚುಕ್ಕೆಗಳುಳ್ಳವು ಕ್ರಯ ರೂ 3-1-0, ಪೋಟೊ ಜರತಾರಿಯವು ರೂ 5-4-0, ಸಾದಾ ಜರತಾರಿಯವು ರೂಪಾಯಿ 8.

ನಮ್ಮ ವಿಳಾಸ—ವೆಂಕಟಾಚಲಂ ಕಂಪೆನಿ, ಪೈರೋಡ್, ವೇಪೆರಿ, ಮದ್ರಾಸು

ವೃತ್ತಾಂತ ಪತ್ರಿಕೆ

ಸನ್ ೧೯೧೨ ನೇ ಇಸವಿ ಜೂಲೈ ತಾ ೨೫ ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿರುವ ಜಹಗೀರಿಗಳ ಆಡಳಿತದ ಸ್ಥಿತಿಗತಿಯು

ಶೃಂಗೇರಿ ಜಹಗೀರಿಯ ಆಡಳಿತದ ವಿಷಯದಲ್ಲಿ ಈ ಪತ್ರಿಕೆಯ ಇನ್ನೊಂದು ಕಡೆ ಎರಡು ವಾರ್ತೆಗಳು ಪ್ರಕಟವಾಗಿರುತ್ತವೆ ಈ ಜಹಗೀರಿಯನ್ನು ರೂಢಿಸುವ ವಿಷಯದಲ್ಲಿ ಯಾರು ಯೋಗ್ಯರು ಯಾರು ಸಮರ್ಥರು, ಯಾರನ್ನು ಏಜಂಟರಾಗಿ ಮಾಡಬೇಕು, ಯಾವ ಸರ್ಕಾರಿ ಅಧಿಕಾರಿಯನ್ನು ನೇಮಿಸಬೇಕು ಎಂಬೀ ವಿಚಾರಗಳನ್ನು ಕುರಿತು ಚರ್ಚಿಸಲು ನಾವು ಪ್ರವೇಶ ಮಾಡಬೇಕೆಂದು ಅಭಿಲಾಷೆ ಪಡುವುದಿಲ್ಲ ಈ ವಿಚಾರವನ್ನು ಸರ್ಕಾರದವರ ಇತ್ಯರ್ಥಕ್ಕೆ ಬಿಟ್ಟಿರುತ್ತೇವೆ ಮದರಾಸ್ ಅಧಿಪತ್ಯದಲ್ಲಿ ದೇವಸ್ಥಾನ ಮತ್ತು ಮಠಗಳ ಆಡಳಿತಗಳು ತೃಪ್ತಿಕರವಾಗಿಲ್ಲವೆಂದೂ ಅವುಗಳ ಮೇಲ್ವಿಚಾರಣೆಯನ್ನು ಸರ್ಕಾರದವರೇ ವಹಿಸಿಕೊಂಡು ಸಾರ್ವಜನಿಕವಾಗಿಯೂ ವಿತರಣೆಯಿಂದಲೂ ನಡಿಸುತ್ತಾ ಬರಬೇಕೆಂದೂ ಆನೇಕ ಸಲ ಪ್ರಜೆಗಳು ಮದರಾಸ್ ಗವರ್ನ್‌ಮೆಂಟಿಗೆ ಅರ್ಜಿಗಳನ್ನು ಕೊಡುತ್ತಾ ಬಂದಿರುವುದು ಎಲ್ಲರಿಗೂ ತಿಳಿದಿರುತ್ತದೆ ಬ್ರಿಟಿಷ್ ಗವರ್ನ್‌ಮೆಂಟಿನವರು ಹಿಂದೂ ಛತ್ರ ಮಠ ದೇವಸ್ಥಾನಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡು ರೂಢಿಸುವುದು ಸಾಧ್ಯವಲ್ಲ ಮತ್ತು ಅದು ಅವರಿಗೆ ಇಷ್ಟವೂ ಇಲ್ಲ ಆದರೂ ಗವರ್ನ್‌ಮೆಂಟಿನವರು ಇಂಥಾ ಪಬ್ಲಿಕ್ ಧರ್ಮಗಳನ್ನು ರೂಢಿಸುವುದಕ್ಕೆ ಕಮಿಟಿಗಳನ್ನು ಮಾಡಿ ಯೋಗ್ಯರಾದ ಮುಖಂಡ ಪ್ರಜೆಗಳನ್ನು ಮೆಂಬರುಗಳಾಗಿ ನೇಮಿಸಿರುತ್ತಾರೆ ಈ ಕಮಿಟಿಯವರು ಆಯಾ ಧರ್ಮದ ಜಮಾ ಖರ್ಚನ್ನು ಪ್ರತಿ ವರುಷವೂ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ವಿಧಾಯಕವಾಗಿದೆ ಹೀಗೆಯೇ ಶೃಂಗೇರಿ ಮಠದ ಆಡಳಿತವನ್ನೂ ಸ್ವಾಮಿಗಳು ಸ್ವತಂತ್ರಿಸಿ ನೋಡಿಕೊಳ್ಳಲು ಸಮರ್ಥರಾಗುವ ತನಕ ಎಲ್ಲಾ ಭಾಗಗಳಲ್ಲೂ ತೃಪ್ತಿಕರವಾಗಿ ರೂಢಿಸುವುದಕ್ಕೆ ಮೈಸೂರು ಗವರ್ನ್‌ಮೆಂಟಿನವರು ಸರ್ವಸಮ್ಮತವಾದ ಏರ್ಪಾಡನ್ನು ಮಾಡದೆ ಇರಲಾರರೆಂದು ನಂಬುತ್ತೇವೆ

ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿರುವ ಬೇರೆ ಬೇರೆ ಜಹಗೀರಿಗಳ ಆಡಳಿತ ಮತ್ತು ಅಲ್ಲಿನ ಪ್ರಜೆಗಳ ಸ್ಥಿತಿಗತಿಯನ್ನು ಕುರಿತು ಪ್ರಸ್ತಾಪಮಾಡಲು ಕುತೂಹಲಪಡುವೆವು ಶೃಂಗೇರಿಗೆ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಶಿಷ್ಯಮಂಡಲಿಯವರು ಕಪ್ಪಕಾಣಿಕೆಗಳನ್ನು ಒಪ್ಪಿಸುತ್ತಾರೆ, ಈ ಮಠದ ಆನೇಕ ಮಾನ್ಯಗಳಿಂದ ಬಹಳ ವರಮಾನ ಬರುತ್ತಿದೆ ಆದಕಾರಣ ಮಠದ ಆಡಳಿತಗಳನ್ನು ಮಾತ್ರ ಸರಿಯಾಗಿ ನೋಡಿಕೊಂಡು ನಡಿಸುತ್ತಾ ಬರುವುದೇ ಸಾಲದು, ಆ ಮಠಕ್ಕೆ ಸೇರಿದ ಗ್ರಾಮ ಭೂಮಿಗಳಲ್ಲಿರುವಂಥಾ ಸಾವಿರಾರು ಪ್ರಜೆಗಳ ಸ್ಥಿತಿಗತಿಯನ್ನೂ ಚಿಂತಿಸಿ ಇಟ್ಟು ಕ್ರಮಪಡಿಸಿ ಆಳುತ್ತಾ ಬರಬೇಕಾಗಿದೆ ಮಠದ ಮೇಲ್ವಿಚಾರಕರು ಯೋಗ್ಯರೂ ಸಮರ್ಥರೂ ಪ್ರಜಾಹಿತ ಚಿಂತಕರೂ ಆಗಿದ್ದ ಹೊರತು ಅಂಥಾ ಪ್ರಜೆಗಳು ಅಭಿವೃದ್ಧಿಗೆ ಬರಲಾರರು ಮೈಸೂರು ಅಥವಾ ಮದರಾಸ್ ಸರ್ಕಾರದವರು ತಮ್ಮ ಪ್ರಜೆಗಳನ್ನು ಯಾವ ರೀತಿ ಕಾನೂನುಗಳಿಗನುಸಾರವಾಗಿ ಪರಿಪಾಲನೆ ಮಾಡುತ್ತಾರೋ ಹಾಗೆಯೇ ಈ ಜಹಗೀರಿಯ ಪ್ರಜೆಗಳ ಪರಿಪಾಲನೆಯೂ ನಡೆಯುತ್ತಾ ಬರಬೇಕಾಗಿದೆ ಮೈಸೂರು ಸೀಮೆಯಲ್ಲಿ ಶೃಂಗೇರಿಯಲ್ಲದೆ ಇತರ ದೊಡ್ಡ ಜಹಗೀರುಗಳೂ ಇರುತ್ತವೆ ತಿವಸಮುದ್ರವು ಒಂದು, ಯಳಂದೂರು ಅದಕ್ಕಿಂತಲೂ ವಿಶೇಷವಾದದ್ದು. ಈ ಜಹಗೀರಿಗಳಲ್ಲಿರುವಂಥಾ ಪ್ರಜೆಗಳ ಪಾಡೇನು? ಅವರನ್ನು ಹ್ಯಾಗೆ ಪರಿಪಾಲಿಸುತ್ತಿದ್ದಾರೆ? ನ್ಯಾಯವಿಮರ್ಶೆ ಹ್ಯಾಗೆ ನಡೆಯುತ್ತಿದೆ? ರಸ್ತೆಗಳು, ಸ್ಕೂಲುಗಳು, ಆಸ್ಪತ್ರೆಗಳು ಏರ್ಪಾಟಾಗಿವೆಯೇ? ಇವುಗಳ ಸ್ಥಿತಿಗತಿ ಹ್ಯಾಗಿದೆ? ಜಹಗೀರಿಗೆ ಸೇರಿದ ಗ್ರಾಮ ಊರುಗಳ ಪ್ರಜಾ ಆರೋಗ್ಯಾಭಿವೃದ್ಧಿಗೆ ಯಾವ ಯಾವ ಕಾರ್ಯಗಳು ನಡೆಯುತ್ತಿರುವವು? ಕೆರೆ ಕಟ್ಟೆ ಕೊಳಗಳು ಒಳ್ಳೇ ಸ್ಥಿತಿಯಲ್ಲಿರುವವೇ? ಜನರಿಗೂ ಗೋಕಾಯಿಗಳಿಗೂ ತೃಣ ಜಲ ಕಾಷ್ಟಗಳು ಸಮೃದ್ಧಿಯಾಗಿರುವವೇ? ವ್ಯವಸಾಯ, ಕಸಬು ಮುಂತಾದವುಗಳನ್ನು ಅಭಿವೃದ್ಧಿಮಾಡುವುದಕ್ಕೆ ಯಾವ ತರದ ಪ್ರಯತ್ನಗಳು ನಡೆದಿರುವವು? ಪ್ರಜೆಗಳಲ್ಲಿ ತಿಳುವಳಿಕೆಯೂ ನಾಗರಿಕವೂ ಹೆಚ್ಚುವಂಥಾ ಕಾರ್ಯಗಳು ರೂಢಿಸಲ್ಪಡುತ್ತಿರುವವೇ? ಈ ರೀತಿಯಾದ ಪ್ರಶ್ನೆಗಳನ್ನು ಇಟ್ಟುಕೊಂಡು ಜಹಗೀರಿಯು ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಪ್ರತಿ ಒಂದರ ಸ್ಥಿತಿಗತಿಯನ್ನೂ ಪರಿಶೀಲನೆ ಮಾಡಿ ನೋಡಬೇಕಾಗಿದೆ

ದಿವಾನ್ ಪೂರ್ಣೈಯನವರ ಶ್ರೇಷ್ಠವಾದ ಸರ್ವೀಸನ್ನು ಬ್ರಿಟಿಷ್ ಗವರ್ನ್‌ಮೆಂಟಿನವರು ಮೆಚ್ಚಿ ಸಂತೋಷಪಟ್ಟು ಅವರಿಗೆ ಯಳಂದೂರು ಜಹಗೀರಿಯನ್ನು ದಯಪಾಲಿಸಿದರಷ್ಟೆ, ಅವರು ಆ ಜಹಗೀರಿಯ ರೈತಪ್ರಜೆಗಳಿಂದ ದ್ರವ್ಯವನ್ನು ಸೆಳೆದುಕೊಂಡು ಬ್ಯಾಂಕುಗಳಲ್ಲಿ ಕೂಡಿಸಿಟ್ಟುಕೊಳ್ಳುತ್ತಾ ಬರಲೆಂಬುವುದು ಗವರ್ನ್‌ಮೆಂಟಿನವರ ಉದ್ದೇಶವಲ್ಲ ಅವರು ಅದನ್ನು ಎಲ್ಲಾ ವಿಷಯಗಳಲ್ಲೂ ಪ್ರಜಾಹಿತಚಿಂತನೆಯಿಂದ ರೂಢಿಸಿ ಉತ್ತಮೋತ್ತಮವಾದ ಸ್ಥಿತಿಯಲ್ಲಿಟ್ಟುಕೊಂಡು ಬದುಕಲಿ ಎಂಬುವುದೇ ಗವರ್ನ್‌ಮೆಂಟಿನವರ ಆಶಯವಾಗಿದೆ ಇಂಗ್ಲಾಂಡಿನಲ್ಲಿ ಯಶೋವಂತರಾದ ಜಮೀನ್‌ದಾರರಿರುತ್ತಾರೆ ಇವರು ತಮ್ಮ ಜಮೀನ್‌ದಾರಿಯನ್ನು ಬಹು ಉತ್ಸಾಹದಿಂದಲೂ ಪ್ರೀತಿ ಪೂರ್ವಕವಾಗಿಯೂ ರೂಢಿಸುವರು ಜಮೀನ್‌ದಾರಿಯಲ್ಲೇ ಅವರು ವಾಸಮಾಡಿಕೊಂಡು ತಮ್ಮ ಪ್ರಜೆಗಳ ಮಧ್ಯೆ ಇರುತ್ತಾರೆ ಪ್ರಜೆಗಳು ಮಾಡಿಕೊಂಡಿರುವ ನಾನಾ ಕಾರ್ಯಗಳಲ್ಲಿ ತಾವೂ ಬೆರದು ಅವರ ಕೂಡ ಸಂತೋಷಪಡುವರು ಜಮೀನ್‌ದಾರರ ಮನೆಯ ಹೆಂಗಸರೂ ಮಕ್ಕಳೂ ಜಮೀನ್‌ದಾರಿಯೊಳಗಿರುವಂಥಾ ಮನೆಗಳಿಗೆ ಹೋಗಿ ಬರುತ್ತಾ ಕಾಯಿಲೆಯಾದವರನ್ನು ಉಪಚರಿಸುತ್ತಾ ಬಡಬಗ್ಗರಿಗೆ ಕರುಣೆಯಿಂದ ಸಹಾಯ ಮಾಡುತ್ತಾ ಬರುತ್ತಾರೆ ಜಮೀನ್‌ದಾರನಾದರೋ ತನ್ನ ಗ್ರಾಮವು ಸಕಲ ಭಾಗಗಳಲ್ಲೂ ಶ್ರೇಷ್ಠತೆಯನ್ನು ಹೊಂದಿ ಎಲ್ಲರಿಂದಲೂ ಹೊಗಳಿಸಿಕೊಳ್ಳುವಂತೆ ಮಾಡಿಟ್ಟುಕೊಳ್ಳುವುದರಲ್ಲಿ ಸಾಹಸಪಡುತ್ತಾನೆ ಜಮೀನ್‌ದಾರಿಯಲ್ಲಿರುವ ದೇವಾಲಯವು ನೇತ್ರಾನಂದಕರವಾಗಿಯೂ ಪಾಠಶಾಲೆಯು ಉತ್ತಮೋತ್ತಮವಾಗಿಯೂ, ಮನೆಗಳು ಆರೋಗ್ಯಕರವಾಗಿಯೂ ಸುಂದರವಾಗಿಯೂ ಇರುವಂತೆ ಮಾಡಿಕೊಳ್ಳುತ್ತಾನೆ ಇಷ್ಟೇ ಅಲ್ಲ. ತನ್ನ ಜಮೀನುಗಳನ್ನೂ ತೋಟಗಳನ್ನೂ ನವೀನ ವ್ಯವಸಾಯ ಕ್ರಮಗಳನ್ನಿಟ್ಟು ರೂಢಿಸಿ ಬಹು ಶ್ರೇಷ್ಠವಾದ ಬೆಳೆಗಳನ್ನು ಬೆಳೆಯುವನು ಮತ್ತು ತನ್ನ ಜಮೀನ್‌ದಾರಿಯಲ್ಲಿ ಶ್ರೇಷ್ಠವಾದ ಗೋಕಾಯಿಗಳನ್ನು ಸಾಕಿ ಬೆಳೆಸಿ ಪ್ರದರ್ಶನಗಳಿಗೆ ಕಳುಹಿಸಿ ಬಹುಮಾನಗಳನ್ನು ಸಂಪಾದಿಸಿಕೊಂಡು ಹೊಗಳಿಸಿಕೊಳ್ಳುತ್ತಾನೆ ಇಂಥಾ ಜಮೀನ್‌ದಾರರ ಸಹಾಯದಿಂದಲೇ ಇಂಗ್ಲಾಂಡಿನಲ್ಲಿ ವ್ಯವಸಾಯವೂ, ವಿದ್ಯಾಭ್ಯಾಸವೂ, ಪ್ರಜಾ ಆರೋಗ್ಯ ಕಾರ್ಯಗಳೂ ಅಭಿವೃದ್ಧಿಗೆ ಬಂದಿರುತ್ತವೆ ಚಕ್ರವರ್ತಿ ಸಾರ್ವಭೌಮರವರೂ ಈ ರೀತಿಯಾಗಿ ಜಮೀನ್‌ದಾರರಾಗಿರುತ್ತಾರೆ ಸ್ಯಾಂಡ್ರಿಂಗ್ಹಾಂ ಎಂಬುವುದೇ ಅವರ ಸ್ವಂತಪಲ್ಲೆವು ಇದು ನೇತ್ರಾನಂದಕರವಾದ ಉದ್ಯಾನವನಭೂಮಿಯಲ್ಲಿರುವುದು ಅದರಲ್ಲಿರುವ ಪ್ರತಿ ಒಬ್ಬ ಮನುಷ್ಯನನ್ನೂ ದೊರೆಯವರು ಚನ್ನಾಗಿ ಬಲ್ಲರು ಅಲ್ಲಿ ಬೆಳೆಯುವ ಫಲಪುಷ್ಪಾದಿಗಳನ್ನೂ ಸಾಕುವ ಗೋಕಾಯಿಗಳನ್ನೂ ಸಾರ್ವಭೌಮರವರು ವಾರ್ಷಿಕ ಪ್ರದರ್ಶನಗಳಿಗೆ ಕಳುಹಿಸುತ್ತಾರೆ ಅವರ ಉತ್ಕೃಷ್ಟವಾದ ಕುದುರೆ, ಹಸು ಮೊದಲಾದವುಗಳಿಗೆ ಅನೇಕವಾಗಿ ಬಹುಮಾನಗಳು ದೊರಕಿರುವವು

ಇತ್ತಲಾಗಿ ನಮ್ಮ ಯಳಂದೂರು ಜಹಗೀರಿಯ ಸ್ಥಿತಿಗತಿ ಹ್ಯಾಗಿದೆ ಎಂದು ಹೇಳೋಣ? ಜಹಗೀರುದಾರರು ಅದನ್ನು ಅಲಕ್ಷ್ಯದಿಂದ ಕಾಣುತ್ತಿರುವರು ಅಲ್ಲಿನ ಪ್ರಜೆಗಳ ಅಭಿವೃದ್ಧಿಯ ವಿಷಯದಲ್ಲಿ ಅವರು ಸ್ವಲ್ಪ ಮಾತ್ರವೂ ಗಮನಕೊಡುತ್ತಿರುವಂತೆ ತಿಳಿಯುವುದಿಲ್ಲ ಜಹಗೀರಿಯನ್ನೆಲ್ಲಾ ಸುತ್ತಿ ನೋಡಿದರೂ ಒಂದು ಒಳ್ಳೆಯ ಕಟ್ಟಡ ಕಣ್ಣಿಗೆ ಬೀಳುವುದಿಲ್ಲ ಪ್ರಜೆಗಳ ಆರೋಗ್ಯವನ್ನು ಕಾಪಾಡಿ ವೃದ್ಧಿಪಡಿಸುವಂಥಾ ಉತ್ಸಾಹವಾಗಲಿ ಕಾರ್ಯಗಳಾಗಲಿ ಯಾವುದೊಂದೂ ಗೋಚರವಾಗಲಾರದು ರಸ್ತೆ ಕೆರೆ ಕಟ್ಟೆಗಳಾದರೋ ಬಹಳ ಶೋಚನೀಯವಾಗಿ ಕೆಟ್ಟುಹೋಗಿರುತ್ತವೆ ಈ ಜಹಗೀರಿನ ಹಕ್ಕುದಾರಿಯನ್ನು ಸರ್ಕಾರದವರು ಇಷ್ಟರಲ್ಲೇ ಇತ್ಯರ್ಥಮಾಡುವವರಾಗಿದ್ದಾರೆ ಅದು ಯಾರಿಗಾದರೂ ಲಭಿಸಲಿ ಹಕ್ಕುದಾರರಾಗಿ ಬರತಕ್ಕವರು ಪರಹಿತಚಿಂತಕರಾಗಿ ದೀರ್ಘಕಾಲ ಜಹಗೀರಿಯನ್ನು ಅನುಭೋಗಿಸಲೆಂದು ಹಾರೈಸುತ್ತೇವೆ ಹಕ್ಕುದಾರರು ಜಹಗೀರಿಯ ಪ್ರಜೆಗಳ ಪ್ರೀತಿ ವಿಶ್ವಾಸ

ಳಿಗೂ ಸನ್ಮಾನಕ್ಕೂ ಪಾತ್ರರಾಗುವಂತೆ ಅದನ್ನು ರೂಢಿಸುತ್ತಾ ಬರಬೇಕೆಂದೂ ಪ್ರಜೆಗಳಿಗೆ ಎಲ್ಲಾ ಭಾಗದಲ್ಲೂ ಉಪಕಾರ ಮಾಡಿ ಯಶಸ್ಸು ಪಡೆಯಬೇಕೆಂದೂ ಕುತೂಹಲ ಪೂರ್ವಕವಾಗಿ ನಿರೀಕ್ಷಿಸುತ್ತೇವೆ ಹ್ಯಾಗೂ ರೈತ ಪ್ರಜೆಗಳಿಂದ ಕೂಡಿಸುವ ದ್ರವ್ಯವು ರೈತರ ಶ್ರೇಯೋಭಿವೃದ್ಧಿಗೆ ವಿನಿಯೋಗವಾಗಬೇಕೆಂಬುವುದೇ ರಾಜಧರ್ಮದ ಒಂದು ಮುಖ್ಯಾಂಶವಾಗಿದೆ

ಪತ್ತಿ ಧಾರಣೆಯ ಮೇಲೆ ಜೂಜಾಟ

ಕಲ್ಕತ್ತ ಪಟ್ಟಣದಲ್ಲಿ ಈಚೆಗೆ ಒಂದು ನೂತನವಾದ ಜೂಜಾಟವು ಹುಟ್ಟಿರುತ್ತದೆ ಜಿನಸಿಗಳ ಜಮಾವಣೆಯೂ ಗಿರಾಕಿಯೂ ಹೆಚ್ಚು ಕಡಿಮೆಯಾದ ಹಾಗೆಲ್ಲಾ ಅವುಗಳ ಧಾರಣೆಗಳು ಏರುತ್ತಲೂ ಇಳಿಯುತ್ತಲೂ ಇವೆ ಎಂಬುವುದು ಸರ್ವರಿಗೂ ತಿಳಿದೇ ಇರುವುದಷ್ಟೆ ಪತ್ತಿ ವ್ಯಾಪಾರದಲ್ಲಿಯೂ ಹೀಗೆಯೇ ಇರುತ್ತದೆ ಅಲ್ಲಿ ವ್ಯಾಪಾರಿಗಳೂ ... ಪತ್ತಿ ... ಪಟ್ಟಣಗಳಲ್ಲಿ ಪತ್ತಿ ಧಾರಣೆಯು ... ಎಂಬುವುದು ಪ್ರತಿ ದಿನದಲ್ಲಿಯೂ ಹಿಂದು ದೇಶದಲ್ಲಿರುವ ಪತ್ತಿ, ... ಇವುಗಳ ವ್ಯಾಪಾರಿಗಳಿಗೂ ದಲ್ಲಾಳಿಗಳಿಗೂ ತಂತಿವರ್ತಮಾನವು ಬರುತ್ತದೆ ಮುಂದೆ ಈ ಧಾರಣೆಗಳ ... ಸಂಭವವು ... ಇದರ ಮೇಲೆ ಒಂದರ ಧಾರಣೆಯು ಏರುತ್ತದೆಯೋ ಇಳಿಯುತ್ತದೆಯೋ ... ಅಥವಾ ಇಳಿದರೆ ... ವ್ಯಾಪಾರಿಗಳೂ ... ಜೂಜಾಡುವುದಕ್ಕೆ ಪ್ರಾರಂಭಿಸಿದ್ದಾರೆ ... ಜೂಜಾಡುವವರುಗಳಾಗಿ ಕೆಲವು ಮಾರ್ವಾಡಿಗಳು ... ಅಂತರಂಗವಾದ ಒಂದು ಸ್ಥಳವನ್ನು ಏರ್ಪಡಿಸಿಕೊಟ್ಟಿದ್ದರು ಅನೇಕ ಜನರು ... ಅಲ್ಲಿಗೆ ಹೋಗಿ ... ತಮ್ಮ ಹಣವನ್ನು ಕಳೆದುಕೊಂಡು ಕೆಟ್ಟು ಹೋಗುತ್ತಿದ್ದಾರೆ ... ಸಮಾಚಾರವನ್ನು ತಿಳಿಸುವವರು ತಮ್ಮಿಂದ ... ಹಣವನ್ನು ಕಟ್ಟಿಕೊಂಡಿರುವವರನ್ನು ಮೋಸಮಾಡುವುದು ... ಧಾರಣೆಗಳು ಒಂದುಕ್ಕೊಂದು ಸ್ವಲ್ಪ ಹೆಚ್ಚಿಗಾದರೂ ... ಸಮಾಚಾರವನ್ನು ತಿಳಿಸುವವರು ಉಪಾಯಾಂತರದಿಂದ ... ಕಡಿಮೆಯಾಗಿರುವ ಒಂದು ಊನ ಧಾರಣೆಯನ್ನು ... ಅನುಕೂಲವಾಗಿರುವ ಇನ್ನೊಂದು ಊನ ಧಾರಣೆಯನ್ನು ... ಅಥವಾ ಒಂದು ... ಸಮಾಚಾರವನ್ನು ಬಿಟ್ಟು ಬೇರೊಂದು ... ಸಮಾಚಾರವನ್ನು ಪ್ರಕಟ ಮಾಡುವುದು

ಇಂತಹ ಜೂಜಾಟವು ಬಹಳವಾಗಿ ಹಬ್ಬಿ ತುಂಬಾ ಅನರ್ಥಕ್ಕೆ ಕಾರಣವಾಗುತ್ತಿದ್ದುದರಿಂದ ಕಲ್ಕತ್ತೆಯ ಪೋಲೀಸ್ ಇಲಾಖೆಯವರು ಈ ವಿಷಯಕ್ಕೆ ಗಮನಕೊಡಬೇಕಾಗಿ ಬಂದಿತು ಇವರು ಒಬ್ಬ ಮಾರ್ವಾಡಿಯನ್ನು ಹಿಡಿದು ಅವನು ತನ್ನ ... ಗೃಹದಲ್ಲಿ ಇಂತಹ ಜೂಜಾಡುವವರಿಗೆ ಸ್ಥಳಕೊಟ್ಟಿರುತ್ತಾನೆಂದು ... ಮಾಡಿದ್ದರ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡಿಸಿ ಅವನಿಗೆ ಶಿಕ್ಷೆಯನ್ನು ವಿಧಿಸಿದರು ಆದರೆ ... ಹೈಕೋರ್ಟಿನಲ್ಲಿ ... ಮಾಡಿದನು ... ಅನೇಕ ಮಾರ್ವಾಡಿಗಳು ... ಪಟ್ಟಣದಲ್ಲಿರುವ ಕಾಳಿಕಾ ದೇವಸ್ಥಾನಕ್ಕೆ ಹೋಗಿ, ತಾಯೀ, ನೀನು ನಮ್ಮ ... ಇರುವ ಈ ವಿಪತ್ತಿನಿಂದ ... ಪಾರುಮಾಡಿಕೊಟ್ಟರೆ ... ಕಾಣಿಕೆಗಳನ್ನು ತಂದು ನಿನ್ನ ಪಾದಕ್ಕೆ ಒಪ್ಪಿಸುತ್ತೇವೆಂದು ಪ್ರಾರ್ಥಿಸಿ ಹರಕೆಗಳನ್ನು ಕಟ್ಟಿಕೊಂಡರು ಹೈಕೋರ್ಟು ... ಪತ್ತಿ ಧಾರಣೆಯ ಮೇಲೆ ನಡೆಯುತ್ತಿರುವ ಈ ಜೂಜಾಟವು ಕಟ್ಟದೂ ಹಾನಿಕರವೂ ಆಗಿದೆ ಎಂಬುವುದರಲ್ಲಿ ಅನುಮಾನವೇನೂ ಇರುವುದಿಲ್ಲ ... ಇದು ಒಂದು ನೂತನವಾದ ಜೂಜಾಟವಾಗಿದೆ ಹಿಂದು ದೇಶದ ... ಮಾಡಿದವರ ಮನಸ್ಸಿಗೆ ಇದರ ಯೋಚನೆಯು ಹುಟ್ಟಲಿಲ್ಲ ಆದುದರಿಂದ ಇಂತವರನ್ನು ದಂಡಿಸುವುದಕ್ಕೆ ಸನಲ್ ಕೋಡಿನಲ್ಲಿ ಯಾವ ಸೆಕ್ಷನಾದರೂ ಇರುವುದಿಲ್ಲ ಇವುಗಳಾಗಿ ಒಂದು ಹೊಸ ಶಾಸನವು ... ಬೇಕಾಗಿದ ಎಂದು ಹೇಳಿ ... ಮಾಡಿಬಿಟ್ಟರು ಕರುಣಾಯ ... ಅವನ ... ಮಾರ್ವಾಡಿಗಳೂ ತಮ್ಮ ಕಾರ್ಯವು ಜಯವಾದುದಕ್ಕಾಗಿ ಕಾಳಿಕಾ ದೇವಸ್ಥಾನಕ್ಕೆ ಹೋಗಿ ತಮ್ಮ ಹರಕೆಗಳನ್ನು ಸಲ್ಲಿಸಿ ... ಸತ್ಪುರುಷರೆಲ್ಲರಿಗೂ ಇದು ವಿಷಾದವನ್ನು ಹುಟ್ಟಿಸತಕ್ಕ ಸಂಗತಿಯಲ್ಲವೇ ಕಾಳಿಯು ಕೊಲೆಗಾತರ ದೇವತೆ ಎಂಬುವುದನ್ನು ನಾವು ಒಲ್ಲೆವು ಈಗ ಜೂಜಾಡುವವರು ಅವಳನ್ನು ತಮ್ಮ ಇಷ್ಟದೇವತೆಯನ್ನಾಗಿ ಮಾಡಿಕೊಂಡಿರುವುದು ಕಂಡುಬರುತ್ತದೆ

ಇದರಿಂದ ಎರಡು ಸತ್ಯಾಂಶಗಳು ಕಂಡುಬರುತ್ತವೆ—

ಕಾಳಿಯೂ ಇವಳಿಗೆ ಸಮಾನವಾದ ಬೇರೆ ದೇವತೆಗಳೂ ಮನುಷ್ಯರ ದುಷ್ಟಬುದ್ಧಿಯಿಂದ ಕಲ್ಪಿತವಾದವುಗಳಾಗಿರುತ್ತವೆ ಎಂಬುವುದು ಮೊದಲನೆಯದು ಇಂತಹ ದೇವರುಗಳಾಗಲಿ ದೇವತೆಗಳಾಗಲಿ ಸಹಜವಾಗಿ ಇರುವುದಿಲ್ಲ ಇವು ದುಷ್ಟರ ಬರೀ ಭ್ರಮಕಲ್ಪಿತಗಳೇ ಆಗಿರುತ್ತವೆ

ಈ ಕೆಳಗಿನ ಸತ್ಯವೇದದ ವಚನವು ಕಾಳಿಕಾ ದೇವತೆಯನ್ನು ಪೂಜಿಸುವ ಜೂಜಾಡುವವನಿಗೆ ಸಲ್ಲತಕ್ಕುದಲ್ಲವೇ?

"ದುಷ್ಟನಿಗೆ ದೇವರು ಹೇಳುವುದೇನೆಂದರೆ —ನಿನ್ನ ಬಾಯಿಯನ್ನು ಕೇಡಿನಲ್ಲಿ ಸೇರಿಸುತ್ತಿ, ನಿನ್ನ ನಾಲಿಗೆಯು ಮೋಸವನ್ನು ಜೋಡಿಸುತ್ತದೆ, ನಾನು ನಿನ್ನ ಹಾಗೆ ಇದ್ದೇ ಇದ್ದೇನೆಂದು ನೆನೆಸಿದಿ"

ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು ಲಯವಿಲ್ಲದ ದೇವರ ಪ್ರಭಾವವನ್ನು ಬಿಟ್ಟು, ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ರೂಪವನ್ನು ಮಾಡಿಕೊಂಡರು"

ಮನುಷ್ಯರ ದುಷ್ಟಬುದ್ಧಿಯಿಂದ ಕಲ್ಪಿತವಾದ ಇಂತಹ ದೇವತೆಗಳನ್ನು ಪೂಜಿಸುವುದರಿಂದ ಲೋಕದಲ್ಲಿ ಅಧರ್ಮವು ಕಡಮೆಯಾಗುವುದಕ್ಕೆ ಬದಲಾಗಿ ಅದು ಜೀರ್ಣೋದ್ಧಾರವಾಗುತ್ತದೆಂಬುವುದು ಇದರಿಂದ ಕಂಡುಬರುವ ಎರಡನೆಯ ಸತ್ಯಾಂಶವಾಗಿದೆ ಕಾಳಿಕಾ ದೇವಿಯ ಧ್ಯಾನವೂ ಅವಳ ಪೂಜೆಯೂ ಜೂಜಾಡುವವನಿಗೆ ದುರಾಶೆ, ಮೋಸ, ಅನ್ಯಾಯ ಈ ಕಾರ್ಯಗಳಲ್ಲಿ ಕೇವಲ ನಾಚಿಕೆಯನ್ನು ಹುಟ್ಟಿಸೀತೆ? ಎಂದಿಗೂ ಹುಟ್ಟಿಸಲಾರದು ಇದಕ್ಕೆ ಬದಲಾಗಿ ಈ ದೇವತೆಯು ತನ್ನ ಪಕ್ಷವನ್ನು ವಹಿಸಿ ತನಗೆ ಸಹಾಯ ಮಾಡುವುದಲ್ಲದೆ ತನ್ನ ಕಾರ್ಯದಲ್ಲಿ ಅವಳೂ ಸಂತೋಷಪಡುವಳೆಂದು ಭಾವಿಸಿಕೊಂಡಿರುವನು ಆದುದರಿಂದ ಕೆಟ್ಟಕಾರ್ಯವನ್ನು ಮಾಡುವುದಕ್ಕೆ ಅಂಥವನಿಗೆ ಮತ್ತಷ್ಟು ಧೈರ್ಯವಾಗುವುದು ಮತ್ತು ಇಂತಹ ದೇವತೆಯೂ ಅದಕ್ಕೆ ಸೇರಿದ ಎಲ್ಲಾ ಗಣಗಳೂ ಲೋಕದಲ್ಲಿ ಅಧರ್ಮವು ಹಬ್ಬುವುದಕ್ಕೆ ಉಪಕರಣಗಳಾಗಿರುತ್ತವೆ

ವಾಚಕನೇ ನೀನು ನಿನ್ನ ಮನಸ್ಸಿಗೆ ನನ್ನ "ಮನಸ್ಸೇ ನೀನು ಈ ರೀತಿ ಹೋಗಬೇಡ ದುಷ್ಟದೇವರುಗಳ ಸಂಗಡಲೂ ಅನ್ಯಾಯವನ್ನು ಮಾಡುವವರ ಸಂಗಡಲೂ ಸ್ನೇಹವಹಿಸಬೇಡ ಪವಿತ್ರನಾದ ದೇವರನ್ನು ನಿನ್ನ ಆಶ್ರಯಸ್ಥಾನವನ್ನಾಗಿ ಮಾಡಿಕೋ ಅತನು ನಿನಗೆ ಜ್ಞಾನವನ್ನೂ ಮನಶ್ಶಾಂತಿಯನ್ನೂ ನಿತ್ಯಭಾಗ್ಯವನ್ನೂ ದಯಪಾಲಿಸುವನು" ಎಂದು ಹೇಳಿಕೊಳ್ಳಬಾರದೇ?

ಒಳದೇಶದ ವೃತ್ತಾಂತಗಳು

ಪ್ಲೇಗ್ ... ಉಪದ್ರವು ಸಂಸ್ಥಾನದಲ್ಲಿ ಇನ್ನೂ 19 ಸ್ಥಳಗಳಲ್ಲಿ ಇದ್ದು, ಕಳೆದ 12 ನೇ ತಾ ಗೆ ಆಖೈರಾದ ವಾರದಲ್ಲಿ 223 ಜನರಿಗೆ ತಗಲಿ, 133 ಮರಣಗಳಾದವೆಂದು ತಿಳಿದುಬಂದಿದೆ

* * *

ರಾಜಧಾನಿಯ ಟೌನ್ ಹಾಲ್ ಹಿಂಭಾಗದಲ್ಲಿ ನಡೆಯುತ್ತಿದ್ದ ಬಳೆಂಗ್ ಎಂಬ ಜೂಜಾಟವನ್ನು ಟೌನ್ ಮ್ಯಾಜಿಸ್ಟ್ರೇಟರು ಖುದ್ದಾಗಿ ಹೋಗಿ, ಲೈಸೆನ್ಸನ್ನು ಕಿತ್ತುಕೊಂಡು ನಿಲ್ಲಿಸಿದರೆಂದು ತಿಳಿದು ಸಂತೋಷಪಡುತ್ತೇವೆ

* * *

ಕಳೆದ ಎರಡು ವಾರಗಳಿಂದ ರಾಜಧಾನಿಯಲ್ಲಿ ಮೋಡ ಹಾಕಿಕೊಂಡೇ ಇದೆ ಆಗಾಗ್ಗೆ ತುಂತುರು ಮಳೆ ಸುರಿಯುವುದು ಶೀತ ಗಾಳಿಯು ಬಿರುಸಾಗಿ ಬೀಸುತ್ತಾ ಜುಗುಪ್ಸೆಯನ್ನುಂಟುಮಾಡಿ ಶೈತ್ಯರೋಗಗಳಿಗೆ ಆಕರವಾಗಿದೆ

* * *

ಸೀರಾ ತಾಲ್ಲೂಕು ತಾವರೆಕೆರೆಯಲ್ಲಿ ಸ್ಕೂಲ್ ಕಟ್ಟಡಕ್ಕೆ 13ನೇ ಸರ್ವೆ ನಂಬರ್ ಜಮೀನಿನಲ್ಲಿ ಒಂದು ಎಕರೆ ಇಪ್ಪತ್ತು ಗುಂಟೆ ಜಮೀನು ಬೇಕೆಂದು ಸರ್ಕಾರದವರು ಮೊದಲು ಪ್ರಕಟಿಸಿದ್ದು ಈಗ ಅದು ಆಗತ್ಯವಿಲ್ಲವೆಂದು ತಿಳಿಸಿದಾರೆ

* * *

ಶ್ರೀಮನ್ ಯುವರಾಜರವರೂ ಮಹಾಮಾತೃಶ್ರೀಯವರೂ ಅರಮನೆಯ ರಾಣಿವಾಸದವರೂ ಈ ವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವವರಾಗಿದಾರೆ ಅವರೆಲ್ಲಾ ನವರಾತ್ರಿ ಹಬ್ಬದ ತನಕ ವಾಪಸು ಬರುವವರಾಗಿಲ್ಲವೆಂದು ಕೇಳುವೆವು

* * *

ಕಳೆದ ಶನಿವಾರ ಸಾಯಂಕಾಲ 4 ಗಂಟೆಗೆ ಶ್ರೀಮನ್ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ದಯಮಾಡಿ, ಸಾಯಂಕಾಲ 11 ಗಂಟೆಗೆ ಬೆಂಗಳೂರನ್ನು ಸುರಕ್ಷಿತವಾಗಿ ತಲುಪಿದರು ಗೌರವಾರ್ಥವಾದ 21 ಗುಂಡುಗಳು ಹಾರಿಸಲ್ಪಟ್ಟವು

* * *

ಸರ್ಕಾರದವರು ಶ್ರೀರಂಗಪಟ್ಟಣದಲ್ಲಿರುವ ಮುನ್ಸಿಫ್ ಕೋರ್ಟನ್ನು ಅಲ್ಲಿಂದ ತೆಗೆದುಬಿಡುತ್ತಾರೆಂಬ ವರ್ತಮಾನವು ನಿರಾಧಾರವಾದದ್ದೆಂದು ತಿಳಿದುಬಂದಿದೆ ಅದನ್ನೂ ಅಲ್ಲಿಂದ ವರ್ಗಮಾಡಿದ ಪಕ್ಷದಲ್ಲಿ ಶ್ರೀರಂಗಪಟ್ಟಣವೂ ಗಂಜಾಮುವೂ ಇನ್ನೂ ಹೀನಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ

* * *

ಮೈಸೂರು ಸಂಪದಭಿವೃದ್ಧಿ ಸಮಾಜದ ಉದ್ದೇಶ ಕಾರ್ಯಗಳನ್ನು ನಡಿಸುವುದಕ್ಕೆ ಸರ್ಕಾರದವರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಎ ರಂಗನಾಥರಾವ್ ಸಾಹೆಬರನ್ನೂ, ಮೈಸೂರು ಸಿಟಿ ಸ್ಕೂಲ್ಸ್ ಇಲಾಖಾ ಸೂಪರಿಂಟೆಂಡೆಂಟ್ ಮೆ॥ ಬಿ ... ಆಚಾರ್ಯರನ್ನೂ ವರ್ಗಮಾಡಿರುತ್ತಾರೆ ಇದರಿಂದ ಮೆ॥ ಬಿ ವೆಂಕೋಬರಾಯರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾಗಿಯೂ, ಮೆ॥ ಎಂ ಹಸನ್ ಅಲಿಯವರು ಬೆಂಗಳೂರು ಡಿಸ್ಟ್ರಿಕ್ಟ್ ಏಜೆನ್ಸಿಯ ಆಫೀಸರಾಗಿಯೂ ನೇಮಕವಾದರು

ಇಂಡಿಯಾ ದೇಶದ ವೃತ್ತಾಂತಗಳು

ಹಿಂದುಸ್ಥಾನದಲ್ಲಿ 1901 ರಿಂದ 1911 ನೇ ಇಸವಿ ಅಖೈರ್ ವರೆಗೆ 11 ವರುಷಗಳಲ್ಲಿ ಪ್ಲೇಗ್ ಉಪದ್ರವದಲ್ಲಿ 72,50,000 ಪ್ರಜೆಗಳು ಕಾಲವಾಗಿರುತ್ತಾರೆಂದು ಪ್ರಕಟವಾಗಿದೆ

* * *

ಕಲ್ಕತ್ತಾ ಪಟ್ಟಣದ ಬಳಿ ಇರುವ ಬಾಲಿ ನಾರಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ,000 ಕೂಲಿ ಜನಗಳು ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ಇರುವುದರಿಂದ ಕಾರ್ಖಾನೆಯ ಬಾಗಿಲು ಮುಚ್ಚಬೇಕಾಯಿತು

* * *

ಮದರಾಸ್ ಪಟ್ಟಣದ ಬಳಿ ರಾಯಪುರದಲ್ಲಿರುವ ನೇಯ್ಗೆ ಕಾರ್ಖಾನೆಯೊಳಗೆ ಕೂಲಿಯವರು ಹಟ ಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದಾರೆ ಕೆಲಸ ಬಿಟ್ಟವರು 600 ಜನರೆಂದೂ, 150 ಮಂದಿ ಮಾತ್ರ ಉಳಿದು ಕೆಲಸ ಮಾಡುತ್ತಿದಾರೆಂದೂ ತಿಳಿಯಬಂದಿದೆ

ಕರಾಚಿ ಪಟ್ಟಣದಲ್ಲಿ ಅರಸಿನ ಜ್ವರವೆಂಬ ರೋಗವು ಪ್ರಬಲವಾಗಿ, ಅದು ಒಂದು ತರಹಾ ಸೊಳ್ಳೆ ಕಡಿಯೋಣದರಿಂದ ಬರುತ್ತದೆಂದು ಗೊತ್ತುಮಾಡಲಾಗಿದೆ ಇದನ್ನು ಪರಿಶೋಧನೆ ಮಾಡುವುದಕ್ಕೆ ಬೊಂಬಾಯಿ ಗವರ್ನ್‌ಮೆಂಟಿನವರು ಕೆಲವು ವೈದ್ಯರನ್ನು ಆ ಪಟ್ಟಣಕ್ಕೆ ಕಳುಹಿಸುವವರಾಗಿದಾರೆ

* * *

ಅಫ್ಘಾನಿಸ್ಥಾನದ ಅಮೀರರವರು ಖೋಸ್ಟ್ ಎಂಬ ಡಿಸ್ಟ್ರಿಕ್ಟಿನಲ್ಲಿ ಗವರ್ನರಾಗಿದ್ದ ಮಹಮುದ್ ಅಕ್ಬರ್ ಖಾನ್ ಎಂಬವರನ್ನು ಕಂಪರಾಹಾಕಿ ಕೆಲಸದಿಂದ ವಜಾಮಾಡಿಬಿಟ್ಟು, ಸಾಘಾ ಸಿದೋಸ್ ಮಹಮದ್ ಖಾನ್ ಎಂಬವರನ್ನು ಗವರ್ನರಾಗಿ ನೇಮಿಸಿರುತ್ತಾರೆ

* * *

ಮಕ್ಕಾಮದೀನಾ ಎಂಬ ಮಹಮದೀಯ ಯಾತ್ರಾಸ್ಥಾನಗಳಿಗೆ ಮುಸಲ್ಮಾನ ಯಾತ್ರಿಕರನ್ನು ಕರೆದುಕೊಂಡು ಹೋಗುವುದಕ್ಕೆ ಮುಂದಿನ ಆಗಸ್ಟ್ ಆರಂಭವಾಯಿತು ನೊವೆಂಬರ್ ತಿಂಗಳ ತನಕ ಹದಿನೈದು ಜಹಜುಗಳು ಕರಾಚಿ ಪಟ್ಟಣದಿಂದ ಹೊರಡುವಂತೆ ಸರ್ಕಾರದವರು ಏರ್ಪಾಡುಮಾಡಿದಾರೆ

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸಾಮಿಗೋಪಾಲ್ ಸ್ಟೇಷನ್ ಬಳಿ ಎರಡು ರೈಲ್ ಗಾಡಿಗಳು ಕಳೆದ ಬುಧವಾರ ಬೆಳಿಗ್ಗೆ ಎದುರುಬದುರಾಗಿ ಬಂದು ಬಡಿದಾಡಿ ಅನಾಹುತವಾಯಿತು ಪ್ರಯಾಣಿಕರಲ್ಲಿ 20 ಮಂದಿಗೆ ಗಾಯಗಳಾದವೆಂದೂ, ರೈಲ್ವೆ ಗಾಡಿಗಳು ಒಡೆದು ತುಂಬಾ ನಷ್ಟವಾಯಿತೆಂದೂ ತಂತೀ ವರ್ತಮಾನ ಬಂದಿದೆ

* * *

ಐದನೇ ಜಾರ್ಜ್ ಮಹಾಪ್ರಭುಗಳ ಮುಖಭಾವವುಳ್ಳ ಸ್ಟಾಂಪುಗಳನ್ನು ಈಚೆಗೆ ಇಂಡಿಯಾ ಸರ್ಕಾರದವರು ಪ್ರಕಟ ಮಾಡಿದ್ದರಷ್ಟೆ ಈ ಮುಖಚರ್ಯೆಯಲ್ಲಿ ಏನೋ ವಿಲಕ್ಷಣವಿದೆ ಎಂದು ಕಂಡುಬಂದದ್ದರಿಂದ ಆ ಸ್ಟಾಂಪುಗಳನ್ನೂ ರೂಪಾಯಿಗಳನ್ನೂ ಸರ್ಕಾರದವರು ಚಲಾವಣೆಯಿಂದ ವಾಪಸು ತೆಗೆದುಕೊಂಡು, ಈಗ ಹೊಸ ನಕ್ಷೆಯ ಸ್ಟಾಂಪುಗಳನ್ನೂ ರೂಪಾಯಿಗಳನ್ನೂ ತಯಾರುಮಾಡಿಸಿ ಚಲಾವಣೆಗೆ ತರುವವರಾಗಿದಾರೆ

* * *

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವದ ಹಾವಳಿಯು ಬೇಗಬೇಗನೆ ಕಡಮೆಯಾಗುತ್ತಿದೆ ಕಳೆದ ತಾ 13 ಕ್ಕೆ ಆಖೈರಾದ ವಾರದಲ್ಲಿ ಒಟ್ಟು 277 ಜನರಿಗೆ ಈ ಉಪದ್ರ ತಗಲಿ 201 ಜನರು ತೀರಿಹೋದರು ಇವರ ಹಂಚಿಕೆ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 72, ಮದರಾಸ್ 23, ಬಂಗಾಳಾ 7, ಬೀಹಾರ್ ಮತ್ತು ಒರಿಸ್ಸಾ 3, ಸಂಯುಕ್ತ ಅಧಿಪತ್ಯಗಳು 3, ಪಂಜಾಬ್ 11, ಬರ್ಮಾ 51, ಮೈಸೂರು ಸಂಸ್ಥಾನ 31, ಈ ರೀತಿ ಮರಣಗಳಾಗಿರುತ್ತವೆ

* * *

ಗಯಾ ಪಟ್ಟಣದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಮೆ॥ ಪಟಲೀಯವರು ಕಳೆದ ಬುಧವಾರ ಮಧ್ಯಾಹ್ನ ತಮ್ಮ ಬಂಗಲೆಯ ಅಂತರಂಗ ಕೊಠಡಿಯಲ್ಲಿ ಕುರ್ಚಿಯ ಮೇಲೆ ಕುಳಿತು ಪಿಸ್ತೂಲಿನಿಂದ ಹೊಡೆದು ಆತ್ಮಹತ್ಯ ಮಾಡಿಕೊಂಡರು ಮಧ್ಯಾಹ್ನ 3 ಗಂಟೆಗೆ ಬಂದ ಟೆಲಿಗ್ರಾಮನ್ನು ಜವಾನನು ಸಾಹೇಬರಿಗೆ ಕೊಡುವುದಕ್ಕಾಗಿ ಒಳಗೆಹೋಗಿ ನೋಡುವಲ್ಲಿ ಅವರು ಆತ್ಮಹತ್ಯಮಾಡಿಕೊಂಡಿದ್ದದ್ದು ಗೊತ್ತಾಯಿತು ಈ ಸ್ವಘಾತಕ್ಕೆ ಕಾರಣವೇನೆಂಬುವುದು ಹೊರಪಡಲಿಲ್ಲ

* * *

1909 10 ನೇ ಸಾಲಿನಲ್ಲಿ ಹಿಂದುಸ್ಥಾನಕ್ಕೆ ಸೀಮೆಯಿಂದ 17,00,000 ರೂಪಾಯಿನ ಮೋಟಾರ್ ಗಾಡಿಗಳು ರಫ್ತಾಗಿ ಬಂದವು ಅದರ ಮುಂದಿನ ವರುಷ 73,20,000 ರೂಪಾಯಿನ ಮೋಟಾರ್ ಗಾಡಿಗಳು ಹಿಂದುಸ್ಥಾನಕ್ಕೆ ಬಂದವು. 1911 12 ನೇ ವರುಷದಲ್ಲಿ ಬಂದ ಮೋಟಾರ್ ಗಾಡಿಗಳ ಬೆಲೆಯು 100,30,000 ರೂಪಾಯೆಂದು ತಿಳಿಯುತ್ತದೆ ಇದನ್ನು ನೋಡಲಾಗಿ ಹಿಂದುಸ್ಥಾನದಲ್ಲಿ ಈ ಮೋಟಾರ್ ಗಾಡಿಗಳನ್ನು ಕೊಂಡುಕೊಳ್ಳುವವರ ಸಂಖ್ಯೆಯು ವರುಷೇವರುಷ ಹೆಚ್ಚುತ್ತಾ ಬಂದಿದೆ ಎಂದು ಗೊತ್ತಾಗುವುದು

* * *

ಆಟ್ಟೋಕ್ ಪಟ್ಟಣದ ಡಿಸ್ಟ್ರಿಕ್ಟ್ ಜಡ್ಜರಾದ ಮೆ॥ ಲಾಲಾ ಸಾಹಿದಾಂ ಎಂಬವರು ನೂರ್ ಮಹಮ್ಮದ್ ಎಂಬಾತನ ಕಡೆಯಿಂದ ಒಂದು ಕಾಬೂಲೀ ಧೂಸಾವನ್ನೂ, 3,000 ರೂಪಾಯನ್ನೂ ರುಷುವತ್ತು ತೆಗೆದುಕೊಂಡರೆಂದು ... ಪ್ರದೇಶ ವಕೀಲಮಂಡಲಿಯವರು ಅರ್ಜಿ ಬರೆದುಕೊಂಡರು ಪಂಜಾಬ್ ಲೆಫ್ಟಿನೆಂಟ್ ಗವರ್ನರವರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡುವುದಕ್ಕೆ ಮೂರು ಮಂದಿ ಯೂರೋಪಿಯನ್ ಜಡ್ಜಿಗಳನ್ನು ನೇಮಕ ಮಾಡಿದಾರೆ ಮೊಕದ್ದಮೆಯು ಆಗಸ್ಟ್ ... ರಿಂದ ವಿಚಾರಣೆಗೆ ಪ್ರಾರಂಭವಾಗುವುದು

* * *

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಹಿಂದುಸ್ಥಾನವನ್ನಾಳುವುದರಲ್ಲಿ ಸೆಕ್ರೆಟರಿಯಾಗಿರುವ ಮೆ॥ ಮಾಂಟೇಗ್‌ಯವರು ಆಕ್ಟೋಬರ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ದಯಮಾಡಿ, ನಾಲ್ಕಾರು ವಾರಗಳ ತನಕ ಈ ರಾಷ್ಟ್ರದ ಮುಖ್ಯಭಾಗಗಳಲ್ಲಿ ಸಂಚಾರ ಮಾಡಿ, ವೈಸ್‌ರಾಯರವರ ಮಂತ್ರಾಲೋಚನಾ ಸಭೆಯಲ್ಲಿ ವಿಷಯಗಳು ಚರ್ಚೆಯಾಗುವ ರೀತಿಯನ್ನೂ, ಈ ರಾಷ್ಟ್ರದ ಸಾರ್ವಜನ್ಯ ರಾಜಕೀಯ ಏರ್ಪಾಡುಗಳನ್ನೂ, ಪ್ರಜೆಗಳ ಇಂಗಿತ ಸ್ಥಿತಿಗತಿ ಮುಂತಾದವುಗಳನ್ನೂ ಕಣ್ಣಾರ ನೋಡಿ ತಿಳಿದುಕೊಂಡು ಸೀಮೆಗೆ ದಯಮಾಡುವರೆಂದು ಪ್ರಕಟವಾಗಿದೆ

* * *

ಮಚಲೀಬಂದರಿನಲ್ಲಿ (ಮಸೂಲಿಪಟ್ಟಂ) ಒಬ್ಬ ಬ್ರಾಹ್ಮಣನು ತನ್ನ ಮಾವನ ಮೇಲೆ ಅವನಿಂದ 2,000 ರೂಪಾಯಿನ ಒಡವೆಗಳು ಬರಬೇಕೆಂದು ದಾವಾ ಮಾಡಿದನು ನ್ಯಾಯಾಧಿಪತಿಯು ಗಂಡಿನ ಕಡೆಯವರು 600 ರೂಪಾಯಿಗಳನ್ನು ಮಾತ್ರ ಇಟ್ಟಿದ್ದರೆಂದು ಗೊತ್ತುಮಾಡಿ, ಮಾವನು 600 ರೂಪಾಯಿ ಸಮೇತ ತನ್ನ ಮಗಳನ್ನು ಅಳಿಯನ ಮನೆಗೆ ಕಳುಹಿಸುವಂತೆ ಡಿಕ್ರಿಕೊಟ್ಟರು ಆ ಹೆಣ್ಣು ಅದೇ ರೀತಿ ಗಂಡನ ಮನೆಗೆ ಹೋದಾಗ್ಯೂ ಅವಳನ್ನು ಅವಳ ಗಂಡ, ಅತ್ತೆ ಮಾವಂದಿರು, ಮತ್ತು ವೈದ್ಯ, ಇವರೆಲ್ಲಾ ಹಿಂಸೆ ಮಾಡುತ್ತಾ, 3,000 ರೂಪಾಯಿನ ನಗಗಳು ಇಟ್ಟಿದ್ದಂತೆ ಸಾಕ್ಷಿ ನುಡಿಯಬೇಕೆಂದು ಪ್ರೇರೇಪಿಸುತ್ತಾ ಬಂದು, ಒಂದು ದಿನ ಆ ಹುಡುಗಿಯನ್ನು ಒಂದು ಕೊಠಡಿಯೊಳಗೆ ಸೇರಿಸಿಕೊಂಡು ಅವಳ ಮೈಮೇಲೆಲ್ಲಾ ಬರೆಗಳನ್ನು ಹಾಕಿ ಗೋಳಾಡಿಸಿದರು ಇದು ಪ್ರಕಟವಾಯಿತು ಪೋಲೀಸಿನವರು ಅವರನ್ನೆಲ್ಲಾ ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡು, ಆ ಹುಡುಗಿಯನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡಿಸುತ್ತಿದಾರೆ ಅವಳು ಬದುಕುವುದು ದುಸ್ತರವಾಗಿದೆ

ಮದರಾಸಿನ ವೈ. ಎಂ. ಸಿ. ಎ. ಸಂಘವು.

ಈ ಸಂಘದ ಆತಿಥ್ಯಕೂಟವು

ಮೇಲ್ಕಂಡ ಸಂಘದ ಶಾಖೆಗಳಲ್ಲಿ ಮದರಾಸು ರಾಯಪುರಂ ಮೆಡಿಕಲ್ ಸ್ಕೂಲಿನ ಶಾಖೆಯು ಒಂದಾಗಿದೆ ಮೈಸೂರು ಸರ್ಕಾರದವರು ಈ ಸ್ಕೂಲಿಗೆ ಪ್ರತಿ ವರ್ಷವೂ 10-12 ಜನ ವಿದ್ಯಾರ್ಥಿಗಳಿಗೆ ಸಬ್ ಅಸಿಸ್ಟೆಂಟ್ ಸರ್ಜನ್ರಾಗುವದಕ್ಕೋಸ್ಕರ ವೇತನವನ್ನು ಕೊಟ್ಟು ಓದುವುದಕ್ಕೆ ಕಳುಹಿಸುತ್ತಾರೆ ಇಲ್ಲಿ ನಾಲ್ಕು ವರ್ಷ ಓದಬೇಕು ಈ ವರುಷ ಓದುವದಕ್ಕೆ ನಾನಾ ದೇಶಗಳಿಂದ ಬಂದ ಮೊದಲನೇ ವರುಷದ ಹುಡುಗರನ್ನೆಲ್ಲಾ ಈ ಸಂಘದ ಮೆಂಬರುಗಳು ಬಹಳ ಆದರದಿಂದ ಬರಮಾಡಿಕೊಂಡು ಅವರಿಗೆ ಮದರಾಸು ಎಸ್ಪ್ಲನೇಡ್‌ನಲ್ಲಿರುವ ವೈ ಎಂ ಸಿ ಎ ಕಟ್ಟಡದಲ್ಲಿ ಇದೇ ತಿಂಗಳು 20 ನೇ ತಾ. ಶನಿವಾರ ಸಾಯಂಕಾಲ ಔತನವನ್ನು ಕೊಟ್ಟರು ಕಾಫಿ, ಟಿ, ರೊಟ್ಟಿ, ಚಾಕೊಲೇಟ್ ಮುಂತಾದ್ದನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಹಂಚಿದರು ಸದರಿ ಸ್ಕೂಲಿನ ಸೂಪರಿಂಟೆಂಡೆಂಟರಾದ ಕ್ಯಾಪ್ಟನ್ ಹರ್ಷ, ಐ ಎಂ ಎಸ್ ರವರು ಆಗ್ರಾಸನವನ್ನು ವಹಿಸಿದ್ದರು ಹಾರ್ಮೋನಿಯಂ ಮೇಳ ಕೆಲವರು ಗಾನಮಾಡಿ ಎಲ್ಲರಿಗೂ ಕರ್ಣಾನಂದವನ್ನುಂಟುಮಾಡಿದರು ಸಭಾ ಕಾರ್ಯವನ್ನು ವಹಿಸಿದ್ದ ಮೆ|| ಮರ್ಟನ್ ಎಂಬುವರು—ನಾವು ನಮ್ಮ ಅಭಿವೃದ್ಧಿಗೋಸ್ಕರ ಮಾಡಬೇಕಾದ ಕಾರ್ಯಗಳನ್ನು ಬಹಳ ಮೃದುವಚನದಿಂದ ವ್ಯಕ್ತಪಡಿಸಿದರು ಈ ಔಷಧ ವಿದ್ಯೆಯನ್ನು ಓದುವವರು ಪರಸ್ಪರ ಸಹಾಯಕರಾಗಿಯೂ, ಕರುಣೆ ಪ್ರೀತಿ ದಯೆಯುಳ್ಳವರಾಗಿಯೂ ಇರಬೇಕೆನ್ನುವುದು ಅವರು ಒತ್ತಿ ಹೇಳಿದ ಅಂಶಗಳಲ್ಲಿ ಒಂದು ಪರ ಊರುಗಳಿಂದ ಓದುವದಕ್ಕೆ ಬಂದ ವಿದ್ಯಾರ್ಥಿಗಳ ವಿಷಯದಲ್ಲಿ ಯಾವ ಅನುಕೂಲತೆಯನ್ನು ಬೇಕಾದರೂ ಈ ಸಂಘದವರು ತಮ್ಮ ಕೈಲಾದ ಮಟ್ಟಿಗೂ ಒದಗಿಸಿಕೊಡುವುದಕ್ಕೆ ಸಿದ್ಧರಾಗಿದೇವೆಂದು ವ್ಯಕ್ತಪಡಿಸಿದರು ತರುವಾಯ ಮೆ|| ಮಾಥೆ, ಬಿ ಎ, ಬಿ ಎಲ್ ರವರು ಹಾಸ್ಯ ರಸಭರಿತವಾದ ಉಪನ್ಯಾಸವನ್ನು ಕೊಟ್ಟರು ಈ ಔಷಧ ವಿದ್ಯೆ ಓದುವದಕ್ಕೆ ಪ್ರವೇಶ ಮಾಡಿದಂಥಾ ವಿದ್ಯಾರ್ಥಿಗಳಿಗೆ ಇವರ ಬುದ್ಧಿವಾದವು ಬಹಳ ಉಪಯೋಗಕರವಾಗಿರುವುದು ನಂತರ ಸೂಪರಿಂಟೆಂಡೆಂಟರವರು ಎದ್ದು ತಮ್ಮ ವಿದ್ಯಾರ್ಥಿಗಳಿಗೆಲ್ಲರಿಗೂ ಈ ಸಂಘದವರು ತಮ್ಮಷ್ಟಕ್ಕೆ ತಾವೇ ಕೈಚಾಚಿ ಕೊಡುತ್ತೇವೆನ್ನುವ ಸಹಾಯವನ್ನು ಸದ್ವಿನಿಯೋಗಪಡಿಸಿ, ತಾವು ಇಲ್ಲಿಗೆ ಯಾತಕ್ಕೋಸ್ಕರ ಬಂದರೋ ಆ ತಮ್ಮ ಕೆಲಸವನ್ನು ಸಾಂಗೋಪಾಂಗವಾಗಿ ನೆರವೇರಿಸಿಕೊಂಡು, ತಮ್ಮ ತಮ್ಮ ದೇಶಗಳಿಗೆ ಹೋಗಿ, ಪರೋಪಕಾರಿಗಳಾಗಿ ಸೌಖ್ಯದಿಂದ ಬಾಳಿರೆಂದು ಹೇಳಲು ಸಭೆಯು ಮುಕ್ತಾಯವಾಯಿತು ಇವಕ್ಕೆ ಜ್ಞಾಪಕಾರ್ಥ ' ಅಂದರೆ 15 ದಿನದ ಕೆಳಗೆ ಸದರಿ ಸಂಘದವರು ಪ್ರತಿ ಒಬ್ಬ ವಿದ್ಯಾರ್ಥಿಗೂ ಒಂದೊಂದು ಪಾಕೆಟ್ ಡೈರಿಯನ್ನು ಉಚಿತವಾಗಿ ಕೊಟ್ಟರು ಇಂಥಾ ದಯಾರಸ ಪೂರ್ಣವಾದ ಔದಾರ್ಯಕ್ಕಾಗಿ ಈ ಸಂಘದ ಮೆಂಬರುಗಳನ್ನು ತಮ್ಮ ಪತ್ರಿಕೆಯ ದ್ವಾರ ಮೊದಲನೇ ವರುಷದ ಹುಡುಗರ ಪರವಾಗಿ ವಂದಿಸುತ್ತೇನೆ

ಎಂ ವೆಂಕಟರಾವು

ವಿದ್ಯಾಸಕ್ತಿಯುಳ್ಳ ವಿಧವೆಯರ ಕಷ್ಟ.

ಅಯ್ಯಾ,—ಕಳೆದ ಯಕನಾಮಿಕ್ ಕಾನ್ಫರೆನ್ಸ್ ಅಂದರೆ ಎಚ್ಚರದಿಂದ ವಿಚಾರಮಾಡುವ ಗೋಷ್ಠಿಯಲ್ಲಿ ಬಾಲಕ ಬಾಲಿಕೆಯರ ಪಾಠಶಾಲೆಗಳನ್ನು ಹೆಚ್ಚಿಸಬೇಕೆಂದು ತೀರ್ಮಾನವಾಗಿರುವದಲ್ಲದೆ ವಿದ್ಯಾಸಕ್ತಿಯುಳ್ಳ ವಿಧವೆಯರ ವಿಷಯದಲ್ಲಿ ಕೂಡ ಸರಿಯಾದ ಏರ್ಪಾಡನ್ನು ಮಾಡಬೇಕೆಂದು ತೀರ್ಮಾನವಾಗಿರುವದು ಸರಿಯಷ್ಟೆ ನಮ್ಮ ಸೀಮೆಯಲ್ಲಿ ವಿಧವೆಯರು ವಿದ್ಯಾಭ್ಯಾಸ ಮಾಡಬೇಕೆಂದು ಅಪೇಕ್ಷಿಸಿ ತಂದೆತಾಯಿಗಳಿಗೆ ತಿಳಿಸಿದ ಒಡನೆಯೇ ಅವರು ಆಕೆಯನ್ನು ಕುರಿತು—ನೀನು ಮುಸರೆ ತೊಳೆಯುವದನ್ನು ಬಿಟ್ಟು ವಿದ್ಯೆ ಕಲಿತು ಅಧಿಕಾರ ಮಾಡಬೇಕೇ ' ಸುಮ್ಮನಿರು ಅನ್ನುವರು ಇವರು ತಮ್ಮ ಗಂಡನ ಮನೆಯಿಂದ ತಮ್ಮ ಜೀವನಕ್ಕಾಗಿ ದುಡ್ಡು ಕಾಸು ತಂದು ಇಟ್ಟುಕೊಂಡಿದ್ದರೆ ಬಡವರಾದ ಅಣ್ಣತಮ್ಮಂದಿರೂ, ತಂದೆತಾಯಿಗಳೂ ಒಳ್ಳೇ ಮಾತಿನಿಂದ ತೆಗೆದುಕೊಂಡು ತಮ್ಮ ತಲೆ ತಾಪತ್ರಯಗಳಿಗೆ ಉಪಯೋಗಿಸಿಕೊಂಡು ಮನೆ ಬಾಗಿಲಿಗೆ ಹಾಕಿಕೊಳ್ಳುವರು ಎಷ್ಟು ದಿವಸವಾದರೂ ಇವರುಗಳಿಗೆ ದುಡ್ಡು ವಾಪಸು ಬರುವದಿಲ್ಲ ಕೊನೆಗೆ ಮನೆಯವರ ಬಳಿ ವ್ಯಾಜ್ಯವಾಡಿ ಎಲ್ಲಿತ ಅಸಮಾಧಾನಕ್ಕೆ ಗುರಿಯಾಗಿ ದಿಕ್ಕುತೋಚದೆ ಕಷ್ಟಪಡುತ್ತಾರೆ. ವಿದ್ಯೆಯನ್ನು ಕಲಿತು ವಿವೇಕಿಗಳಾಗಿಯೂ, ಸುಶೀಲೆಯರಾಗಿಯೂ ಇದ್ದುಕೊಂಡು, ಸರ್ಕಾರದ ನೌಕರಿಯಿಂದ ಜೀವಿಸುತ್ತಾ ಇರುವವರನ್ನು ನೋಡಿ ತಾವುಗಳು ಅವರಂತೆಯೇ ಆಗಬೇಕೆಂದು ಪ್ರಯತ್ನಪಟ್ಟಲ್ಲಿ ಮನೆಯವರೆಲ್ಲರೂ ಅವರುಗಳನ್ನು ಹೀಯಾಳಿಸುವದಲ್ಲದೆ ನೆರೆಹೊರೆಯವರು ಕೂಡ ದೂಷಿಸುವರು ಇಂಥಾವರಿಗೆ ಯಾರು ದಿಕ್ಕು ? ಸರ್ಕಾರದವರು, ಇಲ್ಲವೇ ಮಿಷನ್ ಸಂಘದವರು ಪ್ರಾರಂಭದಲ್ಲಿ ಮಿಷನ್ನವರು ಇವರುಗಳಿಗೆ 3 ಅಥವಾ 4 ರೂಪಾಯಿ ಕೊಡುತ್ತಾರೆ ಇದರಲ್ಲಿ ಮನೆ ಬಾಡಿಗೆಯನ್ನು ಕೊಟ್ಟು ಜೀವನ ಮಾಡಿಕೊಂಡು ಓದುವದಕ್ಕೆ ಬೇಕಾದ ಸಾಧನಗಳನ್ನು ಸಂಪಾದಿಸಿಕೊಳ್ಳಬೇಕು. ಇದು ಎಷ್ಟರಮಟ್ಟಿಗೆ ಸಾಧ್ಯ ? ಮಿಷನ್ ಸಂಘದವರು ಎಷ್ಟು ತಾನೇ ಸಹಾಯವನ್ನು ಮಾಡಿಯಾರು ? ಇವರು ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಸ್ಕೂಲುಗಳನ್ನು ಇಟ್ಟು ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ ಅನ್ಯ ದೇಶೀಯರಿಗೆ ಇವರು ಇಷ್ಟರ ಮಟ್ಟಿಗೆ ಮಾಡುವ ಸಹಾಯ ಹೆಚ್ಚಲ್ಲವೇ ? ವಿದ್ಯಾರ್ಥಿನಿಯರಿಗೆ ಮಿಷನ್ ಸಂಘದವರು ಕೊಡುವ ವೇತನದ ಜೊತೆಗೆ ಸರ್ಕಾರದವರೂ 3-4 ರೂಪಾಯಿ ಕೊಡಿಸಿಕೊಟ್ಟರೆ ಸಲೀಸಾಗಿ ಜೀವನ ಮಾಡಿಕೊಂಡು ನಿರಾತಂಕವಾಗಿ ವಿದ್ಯಾ ವ್ಯಾಸಂಗ ಮಾಡಿ ಜಾಗ್ರತೆಯಾಗಿ ಅಭಿವೃದ್ಧಿಗೆ ಬರುವರು. ಇಂಥಾ ಏರ್ಪಾಡನ್ನು ಮಾಡುವಂತೆ ಪ್ರಜಾಪ್ರತಿನಿಧಿ ಸಂಘದಲ್ಲಿ ಚರ್ಚಿಸಿ ಜಾರಿಗೆ ಬರುವಂತೆ ಮಾಡಿಯಾಗಲಿ ಅಥವಾ ಮಿಷನ್ ಸಂಘದವರೇ ಸರ್ಕಾರಕ್ಕೆ ತಿಳಿಸಿ ಕೊಡಿಸುವದರ ಮೂಲಕವಾಗಲಿ ಬಡ ವಿಧವೆಗಳ ಕಷ್ಟನಿವಾರಣೆಯನ್ನು ಮಾಡಿದರೆ ಸಾವಿರಾರು ವಿಧವೆಯರು ಧೈರ್ಯವನ್ನು ಅವಲಂಬಿಸಿ ವಿದ್ಯಾವತಿಯರಾಗಿಯೂ, ಸುಶೀಲೆಯರಾಗಿಯೂ, ಸುಚ್ಚರಿತ್ರೆಯುಳ್ಳವರಾಗಿಯೂ ಇದ್ದುಕೊಂಡು ಬಾಕಿ ಹೆಂಗಸು ಘುಳ್ಳೀಗೆ ದೇವದೂತಿಯರಂತೆ ಬುದ್ಧಿ ಹೇಳುತ್ತಾ ದೇಶೋನ್ನತಿಗೆ ಸಹಾಯ ಮಾಡುವರು.

ಹಿತೈಷಿ.

ಮೈಸೂರು ವೀರಶೈವಾಭಿವೃದ್ಧಿಯು.

ಜನರಲ್ ಕಮಿಟಿಯ ಸ್ಪೆಷಲ್ ಮೀಟಿಂಗು

ಸನ್ 1912ನೇ ಜೂನ್ ತಾ 11ನೇ ಶುಕ್ರವಾರ ಬೆಂಗಳೂರು ಕೋಟೆ ಪೋಸ್ಟ್ ಆಫೀಸ್ ಪಕ್ಕದಲ್ಲಿರುವ ಮೆ|| ಅಪ್ಪಾವು ಮೊದಲಿಯಾರ್ರವರ ಬಂಗಲೆಯಲ್ಲಿ ಸ್ಥಾಪಿತವಾಗಿರುವ " ವೀರಶೈವಾಶ್ರಮ " ದಲ್ಲಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಜನರಲ್ ಕಮಿಟಿಯ ಸ್ಪೆಷಲ್ ಮೀಟಿಂಗು ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಮೆ|| ಕೆ ಪಿ ಪುಟ್ಟಣ್ಣಸೆಟ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು ಸ್ಥಳ ಪರಸ್ಥಳಗಳಿಂದ ಅನೇಕ ದೊಡ್ಡ ಮನುಷ್ಯರು ಸೇರಿದ್ದರು ಈ ಮೀಟಿಂಗಿನಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಸ್ಟೂಡೆಂಟ್ಸ್ ಹೋಮನ್ನು ಏರ್ಪಾಡು ಮಾಡುವ ಭಾಗದಲ್ಲಿ ಕೆಳಗೆ ಕಂಡ ಮೇರೆ ನಿರ್ಧಾರಗಳು ಪ್ಯಾಸಾದವು

(1) ಶ್ರೀಮಾನ್ ಅತ್ತಿಬೆಲೆ ತಿಪ್ಪಬಸಪ್ಪನವರು ವಾಗ್ದಾನಮಾಡಿರುವ " ಸ್ಟೂಡೆಂಟ್ಸ್ ಹೋಂ " ಕಟ್ಟಡವು ತಯಾರಾಗುವ ಪರ್ಯಂತರ ವೀರಶೈವ ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ ಮ|| ಕಡ್ಲೆಪ್ಪನವರು ಕೋಟೆಯಲ್ಲಿ ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಂಡು ವೀರಶೈವಾಶ್ರಮವನ್ನು ಹಂಗಾಮಿಯಾಗಿ ವೀರಶೈವ ಸ್ಟೂಡೆಂಟ್ಸ್ ಹೋಂ ಆಗಿ ಏರ್ಪಡಿಸಿಕೊಳ್ಳತಕ್ಕದ್ದು (2) ತತ್ಕಾಲಕ್ಕೆ ಪ್ರತಿಯೊಬ್ಬ ವೀರಶೈವ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ರೂ 7 ಅ 0 ದರದ ಮೇರೆಗೆ ಹಂಗಾಮಿಯಾಗಿ ಮೊಕರರು ಮಾಡಿರುತ್ತೆ (3) ಈಗ ವೀರಶೈವಾಶ್ರಮದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಕಡಮೆಯಾಗಿ, ಸದರಿ ಆಶ್ರಮದಲ್ಲಿ ನಷ್ಟವಾಗಬಹುದಾದ್ದರಿಂದ ಇದಕ್ಕಾಗಿ ಫಂಡಿನಿಂದ ಈ ವರ್ಷದ ಮಟ್ಟಿಗೆ 100 ರೂಪಾಯಿ ಸಹಾಯಾರ್ಥವಾಗಿ ಕೊಡಬೇಕೆಂದು ನಿರ್ಧರಿಸಲ್ಪಟ್ಟಿತು (4) ಸ್ಟೂಡೆಂಟ್ಸ್ ಹೋಮನ್ನು ಕಟ್ಟಿಕೊಡುತ್ತೇವೆಂದು ಉದಾರಾಭಿಪ್ರಾಯವನ್ನು ಕೊಟ್ಟಿರುವ ಶ್ರೀಮಾನ್ ಅತ್ತಿಬೆಲೆ ತಿಪ್ಪಬಸಪ್ಪನವರನ್ನು ಹಂಗಾಮಿಯಾಗಿ ಏರ್ಪಾಡಾಗಿರುವ ಕಟ್ಟಡದ ಬಾಡಿಗೆಯನ್ನಾಗಲಿ, ಅಥವಾ ಸದರಿ ಕಟ್ಟಡವನ್ನು ಭೋಗ್ಯಮಾಡಿಕೊಂಡು ಬೇರೆ ಸ್ಟೂಡೆಂಟ್ಸ್ ಹೋಂ ತಯಾರಾಗುವವರಿಗೆ ಇದನ್ನು ಬಾಡಿಗೆಯಿಲ್ಲದೆ ಕಮಿಟಿಯವರ ಸುಪರ್ದಿಗಾಗಲಿ ಕೊಡಬೇಕೆಂದು ಅವರ ಅಭಿಪ್ರಾಯವನ್ನು ಕೇಳಬೇಕೆಂದು ನಿರ್ಧರಿಸಲ್ಪಟ್ಟಿತು (5) ಈ ವೀರಶೈವಾಶ್ರಮದ ಮೇಲ್ವಿಚಾರಣೆಗೆ ಒಂದು ಕಮಿಟಿ ಏರ್ಪಾಡಾಗಿ ಸದರಿ ಕಮಿಟಿಗೆ ವೀರಶೈವಾಶ್ರಮದ ರೂಲಸು ವಗೈರೆ ಮಾಡತಕ್ಕ ಬಗ್ಗೆ, ಕಮಿಟಿಯಲ್ಲಿ ಖಾಲಿಯಾದ ಮೆಂಬರುಗಳಿಗೆ ಬದಲಾಗಿ ಹೊಸದಾಗಿ ಚುನಾಯಿಸುವದಕ್ಕೂ, ಚರ್ಚಿಸುವದಕ್ಕೂ ಸಹಾ ಈ ಕೆಳಗೆ ಕಂಡ ಕಮಿಟಿಗೆ ಅಧಿಕಾರಕೊಟ್ಟು ಈ ಕೆಳಗೆ ಕಂಡಂತೆ ಮೆಂಬರುಗಳು ಚುನಾಯಿಸಲ್ಪಟ್ಟರು ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಮೆ|| ಕೆ ಪಿ ಪುಟ್ಟಣ್ಣಸೆಟ್ಟರು (ಪ್ರೆಸಿಡೆಂಟ್), ಯಜಮಾನ್ ಮೆ| ಬಸಪ್ಪನವರು (ವೈಸ್ ಪ್ರೆಸಿಡೆಂಟ್) ಅಡ್ವೊಕೇಟ್ ಮೆ ಎಚ್ ಕೆ ವೀರಬಸವಯ್ಯನವರು (ಸೆಕ್ರೆಟರಿ), ಮೆ ಎಸ್ ಕಡ್ಲೆಪ್ಪನವರು (ಮ್ಯಾನೇಜರ್) ಮೆಂಬರುಗಳು—ಮೆ ಗಳಾದ ಅತ್ತಿಬೆಲೆ ತಿಪ್ಪಬಸಪ್ಪನವರು, ಸೆಟ್ರ ವೀರಭದ್ರಸೆಟ್ಟರು, ಗ್ರಂದಿಗೆ ಅಂಗಡಿ ಪಾಪಣ್ಣನವರು, ಗ್ರಂದಿಗೆ ಅಂಗಡಿ ವೀರಭದ್ರಪ್ಪನವರು, ಸೀಗಿಗದ್ದೆ ಕಂ ಶಿವಪ್ಪನವರು, ಚಿಟ್ಟಹಳ್ಳಿ ಬಸಣ್ಣನವರು, ಜಿ ವಾಂತ ವೀರಪ್ಪನವರು, ಡಾಕ್ಟರ್ ಬಿ ನಂಜಪ್ಪನವರು, ಕೆ ಸಿದ್ದರಾಮಪ್ಪನವರು, ಜಿ ಕೆ ರುದ್ರಯ್ಯನವರು

ಮ ಎಸ್ ಕಡ್ಲೆಪ್ಪನವರು ಈ " ವೀರಶೈವಾಶ್ರಮ " ವನ್ನು ಸ್ಥಾಪಿಸುವದಕ್ಕಾಗಿ ಮುಂಚಿನಿಂದಲೂ ಎಂತು ಬಹಳ ಶ್ರಮ ವಹಿಸಿದ್ದಕ್ಕಾಗಿ ಜನರಲ್ ಕಮಿಟಿಯವರು ತಮ್ಮ ಆಭಾರವನ್ನು ಅವರಿಗೆ ಸೂಚಿಸಿದರು ನಂತರ ಮೀಟಿಂಗು ಬರಖಾಸ್ತಾಯಿತು.

ಎಚ್ ಕೆ ವೀರಬಸವಯ್ಯ,
ಆನರರಿ ಸೆಕ್ರೆಟರಿ

ಮಧುರೆಯ ಮ್ಯುನಿಸಿಪಾಲಿಟಿಯು.

ಮದರಾಸ್ ಗವರ್ನ್‌ಮೆಂಟಿನವರ ಆಕ್ಷೇಪಣೆಗಳು.

ಮದರಾಸ್ ಗವರ್ನ್‌ಮೆಂಟಿನವರು ಮಧುರೆಯ ಮ್ಯುನಿಸಿಪಾಲಿಟಿಯ ಕಾರುಕರ್ದಿಗಳನ್ನು ಪರಾಂಬರಿಸಿ ಬಹು ಕಠಿಣವಾಗಿ ಆಕ್ಷೇಪಣೆ ಮಾಡಿದ್ದಾರೆ ಈ ಆಕ್ಷೇಪಣೆ ಹುಟ್ಟಲು ಕಾರಣವೇನಾಯಿತೆಂದರೆ—ಆ ಮ್ಯುನಿಸಿಪಾಲಿಟಿಯ ಬೋರ್ಡ್ ಮೆಂಬರುಗಳು ಎರಡು ವರುಷಗಳ ಕೆಳಗೆ ಮೆ|| ಕೆ ವಿ ರಾಮಾಚಾರ್ಯರನ್ನು ಛೇರ್ಮನ್ ಆಗಿ ಚುನಾಯಿಸಿದರು ಗವರ್ನ್‌ಮೆಂಟ್ ಸ್ಯಾಂಕ್ಷನ್ ಆದಪ್ರಕಾರ ಇವರು ಎರಡು ವರುಷ ಸಂಬಳ ತೆಗೆದುಕೊಂಡು ಛೇರ್ಮನ್ ಆಗಿ ಕೆಲಸ ಮಾಡಿದರು ಈ ಕೆಲಸದ ಅವಧಿಯು 1912 ನೇ ಏಪ್ರಿಲ್ 26 ಕ್ಕೆ ಮುಗಿದುಹೋಯಿತು ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳು ಮೇ ತಾ 25 ರಲ್ಲಿ ಮೀಟಿಂಗ್ ಮಾಡಿ, ಮತ್ತೆ ಮೆ|| ಕೆ ವಿ ರಾಮಾಚಾರ್ಯರನ್ನೇ ಛೇರ್ಮನ್ ಆಗಿ ಚುನಾಯಿಸಿ, ಇದನ್ನು ಸ್ಯಾಂಕ್ಷನ್ ಮಾಡಬೇಕೆಂದು ಗವರ್ನ್‌ಮೆಂಟಿಗೆ ಬರೆದುಕೊಂಡರು ಮದರಾಸ್ ಗವರ್ನ್‌ಮೆಂಟಿನವರು ಈ ಚುನಾವಣೆಯನ್ನು ಒಪ್ಪಲಾಗದೆಂದು ತಿರಸ್ಕಾರ ಮಾಡಿ, ಹುಕುಂ ಕೊಟ್ಟಿರುವ ಅಭಿಪ್ರಾಯವೇನೆಂದರೆ—

1909-10 ನೇ ಸಾಲಿನ ಮ್ಯುನಿಸಿಪಲ್ ಕಾರುಬಾರುಗಳ ವಾರ್ಷಿಕ ರಿಪೋರ್ಟನ್ನು ಗವರ್ನ್‌ಮೆಂಟಿನವರು ವಿಮರ್ಶೆ ಮಾಡುವಲ್ಲಿ ಮ್ಯುನಿಸಿಪಾಲಿಟಿಯ ಕಾರ್ಯಗಳು ಎಲ್ಲಾ ವಿಭಾಗಗಳಲ್ಲೂ ಹಿಂದೆ ಬಿದ್ದು ಕೆಟ್ಟುಹೋಗಿವೆ ಎಂದು ಕಲೆಕ್ಟರವರು ಪಟ್ಟ ಅಭಿಪ್ರಾಯವನ್ನು ಅನುಮೋದಿಸಿ, ಅವು ತೃಪ್ತಿಕರವಾಗಿಲ್ಲವೆಂದು ಹೇಳಿರುತ್ತಾರೆ ಮ್ಯುನಿಸಿಪಲ್ ಆಫೀಸಿನ ಜಮಾಖರ್ಚು ಪುಸ್ತಕಗಳನ್ನು ತನಿಖೆಮಾಡಿ ನೋಡಿದಲ್ಲಿ ಲೆಕ್ಕಗಳು ಬಹಳ ಹೇರುಪೇರಾಗಿರುವಂತೆ ಗೊತ್ತಾಯಿತು ಈಚೆಗೆ 1910-11 ನೇ ಸಾಲಿನ ಮ್ಯುನಿಸಿಪಲ್ ಲೆಕ್ಕಗಳು ತನಿಖೆ ಮಾಡಿಟ್ಟ ರಿಪೋರ್ಟು ಬಂದಿವೆ. ಈ ರಿಪೋರ್ಟು ನೋಡಿದರೆ ಲೆಕ್ಕಗಳಲ್ಲಿ ಕಂಡುಬಂದಿರುವ ಲೋಪದೋಷಗಳು ಹಿಂದಿನ ಸಾಲಿನ ಲೆಕ್ಕಗಳಲ್ಲಿರುವುದಕ್ಕಿಂತ ಶೇಕಡಾ 100 ರಷ್ಟು ಹೆಚ್ಚಾಗಿವೆಯೇ ಹೊರತು ಕಡಮೆಯಾಗಲಿಲ್ಲ. ಲೆಕ್ಕಗಳನ್ನು ತನಿಖೆಮಾಡಿದ ಅಕೌಂಟೆಂಟ್ ಜನರಲ್‌ರವರು ಅಭಿಪ್ರಾಯ ಪಟ್ಟಿರುವುದೇನೆಂದರೆ—

" ಲೆಕ್ಕಗಳನ್ನು ತನಿಖೆ ಮಾಡುವುದರಲ್ಲಿ ನನಗೆ ವಿಶೇಷವಾದ ಉತ್ಸಾಹವೂ ಅನುಭವವೂ ಉಂಟು ತೃಪ್ತಿಕರವಾಗಿಲ್ಲದಂಥಾ ಮ್ಯುನಿಸಿಪಲ್ ಲೆಕ್ಕಗಳನ್ನು ನಾನು ಇದುವರೆಗೆ ಅದೆಷ್ಟೋ ನೋಡಿರುತ್ತೇನೆ ಇಷ್ಟು ಅವ್ಯವಸ್ಥೆಯಾಗಿ ಇಟ್ಟಿರುವ ಲೆಕ್ಕಗಳನ್ನು ನಾನು ಇದುವರೆಗೆ ನೋಡಿಲ್ಲವೆನು ಲೆಕ್ಕಗಳನ್ನು ಮನಸ್ಸಿಗೆ ತೋರಿದಂತೆಲ್ಲಾ ಸ್ವಲ್ಪವಾದರೂ ಯೋಚನೆ ಇಲ್ಲದೆ ಸಿಕ್ಕಾಬಟ್ಟೆ ಬರೆದಿಟ್ಟಿದ್ದಾರೆ ಸರ್ಕಾರದವರು ಮಾಡಿಟ್ಟಿರುವ ರೂಲುಸುಗಳನ್ನೆಲ್ಲಾ ಅಲಕ್ಷ್ಯಭಾವದಿಂದ ಉಲ್ಲಂಘಿಸಿ ಬಿಟ್ಟಿದ್ದಾರೆ. "

ಈಚೆಗೆ 1911-12 ನೇ ಸಾಲಿನಲ್ಲಿ ಮ್ಯುನಿಸಿಪಾಲಿಟಿಯ ಕಾರುಬಾರುಗಳು ಅಕ್ರಮವಾಗಿಯೂ, ಸಾವಕಾಶವಾಗಿಯೂ, ದೋಷದೋಷಸಹಿತವಾಗಿಯೂ ಇ... ವನೆಂದು ಗವರ್ನ್‌ಮೆಂಟಿಗೆ ಆಗಾಗ್ಗೆ ರಿಪೋರ್ಟು ಬರುತ್ತಲೇ ಇತ್ತು. ಮ್ಯುನಿಸಿಪಾಲಿಟಿಯ ಕೆಲಸ ಕಾರ್ಯಗಳು ಬಂಬರುತ್ತ ಕ್ಷೀಣಗತಿಗೆ ಬರುತ್ತಿವೆ ಎಂಬುವುದಕ್ಕೆ ಅನೇಕ ಕಾರಣಗಳೂ ದೃಷ್ಟಾಂತಗಳೂ ಕಂಡುಬಂದಿವೆ ಈ ಅಮಾನಕರವಾದ ಸ್ಥಿತಿಗೆ ಛೇರ್ಮನ್ ಮೆ|| ಕೆ ವಿ ರಾಮಾಚಾರ್ಯರೇ ಜವಾಬ್ದಾರರೆಂದು ಹೇಳಬೇಕಾಗಿದೆ ಆದಕಾರಣ ಅವರೇ ಮತ್ತೆ ಮ್ಯುನಿಸಿಪಲ್ ಛೇರ್ಮನ್ ಆಗಿ ಇರುವ ಭಾಗವನ್ನು ಗವರ್ನ್‌ಮೆಂಟಿನವರು ಒಪ್ಪಿಕೊಳ್ಳುವದು ಅಸಾಧ್ಯ ಬೋರ್ಡ್ ಮೆಂಬರುಗಳ ಶಿಫಾರಸನ್ನು ತಿರಸ್ಕಾರ ಮಾಡಲಾಗಿದೆ ಮೆಂಬರುಗಳು ಅವರನ್ನು ಬಿಟ್ಟು ಬೇರೊಬ್ಬರನ್ನು ಚುನಾವಣೆ ಮಾಡಿ ಗವರ್ನ್‌ಮೆಂಟಿಗೆ ಶಿಫಾರಸು ಮಾಡತಕ್ಕದ್ದು

ರೈತರು ತಿಳಿಯಬೇಕಾದ ವಿಷಯಗಳು

ಸುಮಾರು 2½ ಔನ್ಸು ಸೈಟ್ರಿಕ್ ಆಸಿಡ್ಡನ್ನು ಒಂದು ಗ್ಯಾಲನ್ ನೀರಿನಲ್ಲಿ ಬೆರಸಿ ದಿನಕ್ಕೆ ಎರಡು ಅಥವಾ ಮೂರು ಬಟ್ಟಲ ಪ್ರಮಾಣದಷ್ಟನ್ನು ಕಾಲು ಮತ್ತು ಬಾಯಿ ಜ್ವರದಿಂದ ಪೀಡಿತವಾದ ದನಗಳಿಗೆ ಕುಡಿಸಿದರೆ ರೋಗವು ಹೊಂಚು ಹಬ್ಬದಿರುವುದಲ್ಲದೆ ರೋಗವು ಒಂದು ವಾರದೊಳಗೆ ಗುಣವಾಗುವುದು ರೋಗ ತಗಲಿದ ದನದ ಕಾಲಿನ ಗೊರಸುಗಳನ್ನು ತೊಳೆದು, ಟಾರನ್ನು ಸವರಬೇಕು ಅಲ್ಲದೆ ಹಾಲು ಕರೆಯುವುದಕ್ಕೆ ಮೊದಲೂ ಮತ್ತು ನಂತರದಲ್ಲೂ ಕೆಚ್ಚಲನ್ನು ಮೂರು ಗ್ಯಾಲನ್ ನೀರಿಗೆ 2½ ಔನ್ಸು ಸೈಟ್ರಿಕ್ ಆಸಿಡ್ಡನ್ನು ಬೆರಸಿ ಆ ನೀರಿನಿಂದ ತೊಳೆಯಬೇಕು

* * *

ಸಿಂಧಿ ನೇಗಿಲುಗಳು ಸ್ವಲ್ಪ ಹೆಚ್ಚು ಕಡಮೆ ನಮ್ಮ ಸೀಮೆಯ ನೇಗಿಲುಗಳಂತೆಯೇ ಇವೆ ಈ ನೇಗಿಲುಗಳು ಉಸುಬು ಭೂಮಿಗಳಲ್ಲಿ ಬಹಳ ಉಪಯೋಗಕರವಾದವುಗಳೆಂದು ತಿಳಿಯಬರುತ್ತದೆ ಇವುಗಳ ಅಗಲವಾದ ಗುಳಗಳು ಗರಿಕೆಗಳನ್ನು ನಿರ್ಮೂಲಮಾಡುತ್ತವೆ ಜಮೀನಿನಲ್ಲಿ ಸ್ವಲ್ಪ ತೇವವಿದ್ದರೆ ಎರಡು ಮೂರಾವರ್ತಿ ಉಳುವುದರಿಂದ ಒಂದು ಅಡಿ ಆಳದಷ್ಟು ಉಳಬಹುದು ಈ ನೇಗಿಲು ಒಂದಕ್ಕೆ ರೂ 5 ಕ್ರಯವಾಗುವುದು ಅಪೇಕ್ಷೆಯುಳ್ಳವರು ದಕ್ಷಿಣ ಆರ್ಕಾಟು ಜಿಲ್ಲಾ ಪಾಲೂರು ಫಾರಂ ಮ್ಯಾನೇಜರವರಿಗೆ ಬರೆದು ತರಿಸಿಕೊಳ್ಳಬಹುದು

* * *

ಅಜಮಾಯಿಷಿ ತರೀಖು ಕೆಲಸ ಮಾಡಿಸುವುದಕ್ಕಾಗಿ ಕೋಲಾರ ಮತ್ತು ತುಮಕೂರು ಡೆಪ್ಯುಟಿ ಕಮೀಷನರವರುಗಳಿಗೆ ಒಂದೊಂದು ಅಮೇರಿಕಾ ಡಿಸ್ಕ್ ನೇಗಿಲನ್ನೂ ಬೆಂಗಳೂರು, ಹಾಸನ ಮತ್ತು ಶಿವಮೊಗ್ಗ ಡೆಪ್ಯುಟಿ ಕಮಿಷನರುಗಳಿಗೆ ಒಂದೊಂದು ಕೋಲಾರದ ಮಿಸನ್ನನ ನೇಗಿಲನ್ನೂ ರೆವಿನ್ಯೂ ಕಮಿಷನರವರ ಆಫೀಸಿನಿಂದ ಕಳುಹಿಸಿ ಕೊಟ್ಟಿರುತ್ತಾರೆ ಅಲ್ಲದೆ ಹಸರು ಗೊಬ್ಬರಕ್ಕೆ ಪೈರಾದ ಕಾಡುನೀಲಿ ಗಿಡದ ಬೀಜವನ್ನು ಕೋಲಾರದ ಡೆಪ್ಯುಟಿ ಕಮಿಷನರಿಗೂ, ಬಿತ್ತನೆಗಾಗಿ ಅರಿಸಿನ ಗೆಡ್ಡೆಗಳನ್ನು ಕಡೂರು ಡೆಪ್ಯುಟಿ ಕಮಿಷನರಿಗೆ ಕಳುಹಿಸಿ ಕೊಟ್ಟಿರುತ್ತವೆ ಮೇಲ್ಕಂಡ ನೇಗಿಲುಗಳಿಂದ ಕೆಲಸ ಮಾಡಿ ಅಜಮಾಯಿಷಿ ಮಾಡಲು ಅಪೇಕ್ಷೆಯುಳ್ಳವರೆಲ್ಲರೂ, ಮತ್ತು ನೀಲಿ ಮತ್ತು ಅರಿಸಿನವನ್ನು ಬೆಳೆಯಲಿಚ್ಛಿಸುವವರೂ ಆಯಾ ಡೆಪ್ಯುಟಿ ಕಮಿಷನರುಗಳಿಗೆ ಅರ್ಜಿ ಬರೆದುಕೊಳ್ಳಬಹುದು.

* * *

ಗೆಣಸನ್ನು ಕಿತ್ತಕೂಡಲೆ ಮಾರಿದರೆ ಅದಕ್ಕೆ ಸರಿಯಾದ ಬೆಲೆ ಸಿಕ್ಕದೆ ಹೋಗಬಹುದು ಅವುಗಳನ್ನು ಕೆಡದಂತೆ ಇಟ್ಟಿದ್ದು ಬೆಲೆ ಹೆಚ್ಚು ಸಿಕ್ಕುವಾಗ ಮಾರುವುದು ಲಾಭಕರವಾಗಿದೆ ಆದರೆ ಗೆಣಸನ್ನು ಹೆಚ್ಚು ದಿನ ಇಡಬೇಕಾದರೆ ಅದು ಚೆನ್ನಾಗಿ ಬಲಿತಿರಬೇಕು ಗೆಣಸನ್ನು ಕಿತ್ತು ಗಾಳಿಗೆ ತಗಲದಂತೆ ಇಟ್ಟಲ್ಲಿ ಗೆಣಸಿನಿಂದ ಬೆಳ್ಳಗಿರುವ ಹಾಲು ಬಂದರೆ ಅದು ಚೆನ್ನಾಗಿ ಬಲಿತಿರುವುದೆಂದು ತಿಳಿದುಕೊಳ್ಳತಕ್ಕದ್ದು ಹಾಗೆ ಗೆಣಸು ಬಲಿಯದೆ ಎಳಸಾಗಿದ್ದರೆ ಅದು ಕಪ್ಪಾಗುವುದು ಬಲಿತ ಗೆಣಸುಗಳನ್ನು ಕಿತ್ತು ಚೆನ್ನಾಗಿ ಗಾಳಿಯಾಡುವ ಒಂದು ಕೊಠಡಿಯ ನೆಲಕ್ಕೆಲ್ಲಾ ಒಣಗಿದ ಮರಳನ್ನು ಹರವಿ ಮರಳಿನ ಮೇಲೆ ಗೆಣಸನ್ನು ಸಾಲಾಗಿ ಒಂದು ವರಿಸೆಯನ್ನಿಟ್ಟು, ಅವುಗಳು ಪೂರ್ತಿಯಾಗಿ ಮುಚ್ಚುವಂತೆ ಮರಳನ್ನು ಹರವಬೇಕು ಇದರ ಮೇಲೆ ಮತ್ತೊಂದು ವರಿಸೆಯನ್ನು ಜೋಡಿಸಬೇಕು ಹೀಗೆ ಎಷ್ಟು ವರಿಸೆಗಳನ್ನಾದರೂ ಇಡಬಹುದು ಅಂತೂ ಗೆಣಸುಗಳು ಪೂರ್ತಿಯಾಗಿ ಮುಚ್ಚುವಂತೆ ಮರಳನ್ನು ಹರವಬೇಕು ಹೀಗೆ ಮಾಡಿದರೆ ಗೆಣಸುಗಳು ಕೆಲವು ದಿನಗಳ ವರಿವಿಗೂ ಕೆಡದೆ ಇರುವವು

* * *

ಕರೆಯುವ ಹಸುಗಳಿಗೆ ಅವಶ್ಯಕವಾದದ್ದಕ್ಕಿಂತಲೂ ಕಡಮೆ ಮೇವನ್ನು ಹಾಕುವುದರಿಂದ ಎಷ್ಟು ಕೆಡಕಾಗುವುದೋ ಮಿತಿಮೀರಿದಷ್ಟು ಮೇವು ಹಾಕುವುದರಿಂದಲೂ ಅಷ್ಟೇ ಕೆಡಕಾಗುವುದು ಮಿತಿಮೀರಿದಷ್ಟು ಮೇವು ಹಾಕಿದ ದನಗಳಲ್ಲಿ ಕೊಬ್ಬಿನ ಅಂಶವು ವೃದ್ಧಿಯಾಗುವುದಲ್ಲದೆ ಹಾಲು ಕಡಮೆಯಾಗುತ್ತದೆ ಆದರೆ ಯಾವ ಹಸುವಿಗೆ ಎಷ್ಟು ಮೇವು ಆವಶ್ಯಕವೆಂಬುದನ್ನು ಅನುಭವದಿಂದ ತಿಳಿದುಕೊಳ್ಳಬೇಕಾಗುತ್ತದೆ ಸಾಮಾನ್ಯವಾಗಿ ಒಳ್ಳೇ ಹಾಲು ಕರೆಯತಕ್ಕ ಹಸುಗಳು ಬಡಕಲಾಗಿಯೇ ಇರುವವು. ಮತ್ತು ಇವು ಕರೆಯುತ್ತಿರುವಾಗ್ಗೆ ಇವುಗಳ ಪಾರ್ಶ್ವಗಳು ಬತ್ತಿಕೊಂಡೇ ಇರುವವು —ಎಮ್ಮೆಗಳನ್ನು ಸಾಕತಕ್ಕ ಕೆಲವರು ಕೊಂಡುಕೊಳ್ಳುವವರಿಗೆ ಮೋಸಮಾಡುವುದಕ್ಕೋಸ್ಕರ ಎಮ್ಮೆಗಳಿಗೆ ಕೆಲವು ದಿನಗಳ ಕಾಲ ಉದ್ದನ್ನು ತಿನ್ನಿಸುತ್ತಾರೆ. ಇದರಿಂದ ಎಮ್ಮೆ ಹಾಲು ವಾಡಿಕೆಯಾಗಿ ಕೊಡುತ್ತಿದ್ದುದರ ಎರಡರಷ್ಟು ಹೆಚ್ಚುವುದೇನೋ ನಿಜ ಆದರೆ ಇದು ಬಹಳ ಸ್ವಲ್ಪ ಕಾಲ ಮಾತ್ರ. ಹಿಂಡಿ ಮತ್ತು ಹತ್ತಿಬೀಜವು ಸುಲಭವಾಗಿ ಸಿಕ್ಕತಕ್ಕ ಮತ್ತು ದನಗಳ ಆರೋಗ್ಯವನ್ನೂ ಹಾಲನ್ನೂ ಹೆಚ್ಚಿಸತಕ್ಕ ತಿಂಡಿಗಳಾಗಿವೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತೇವೆ

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು "ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಪೌನಾಳ್ ಕಂಪನಿ, ಬೆಂಗಳೂರು —ಈ ಬಾತ್ಮಿಗೆ ಛಾಜಾ ಕೊಟ್ಟಲ್ಲದೆ ಪ್ರಕಟಿಸಲಾಗದು

ಮುಕ್ತಿ ಹೊಂದಿದ ದೇವಾಂಗಗುರು ಶ್ರೀ ಶ್ರೀಕಂಠ ಸ್ವಾಮಿಗಳ ವಿಷಯದಲ್ಲಿ ಅವರ ಜೊತೆಗಾರರಾಗಿದ್ದವರೊಬ್ಬರು ಸಂತಾಪಯುಕ್ತರಾಗಿ ಅವರ ಸದ್ಗುಣಾದಿಗಳನ್ನು ವಿವರಿಸಿ ಬರೆದಿರುತ್ತಾರೆ ಸ್ಥಳಸಂಕೋಚದಿಂದ ಇದನ್ನು ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುವೆವು

ಮಲೆನಾಡಿನ ಸಾಹುಕಾರರ ವಿಷಯವನ್ನು ಕುರಿತು ದೈತೀಭವಾನಿ ಎಂಬ ಬಾತ್ಮಿದಾರರು ೭ ಛತ್ತು ಪದ್ಯಗಳನ್ನು ರಚಿಸಿ ಪ್ರಕಟನೆಗಾಗಿ ನಮ್ಮಲ್ಲಿಗೆ ಕಳುಹಿಸುತ್ತಾರೆ ಇದನ್ನು ಪ್ರಕಟ ಮಾಡುವುದರಿಂದ ಯಾವ ಫಲವೂ ಕಾಣುವುದಿಲ್ಲ ಯಥಾರ್ಥವಾಗಿಯೂ ಪ್ರಜಾವತ್ಸಲರಾಗಿದ್ದರೆ ಅವರನ್ನು ಉದ್ಧಾರ ಮಾಡುವುದರಲ್ಲಿ ಸಂತೋಷಪಡತಕ್ಕವರು ಅವರಿಗೆ ವಿವೇಕ ಹೇಳಿ ಅವರಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಕಲ್ಪಿಸಿಕೊಟ್ಟು ಅವರು ಸಾಹುಕಾರರ ಕೈಗೆ ಸಿಕ್ಕಿನ ಬುದ್ಧಿಯನ್ನು ತಪ್ಪಿಸಬೇಕು ಇಂಥಾ ಪರೋಪಕಾರಕಾರ್ಯಗಳಿಗೆ ಕೈಹಾಕದೆ ಪರಗಾರರ ದೋಷಕತ್ವಗಳನ್ನು ವಿವರಿಸುವುದರಲ್ಲಿ ಸಾರ್ಥಕವೇನೋ ತಿಳಿಯಲಾಗದು

ಎಡಿ]

ಕರೆಸ್ಪಾಂಡೆನ್ಸ್

ತುಮಕೂರು ಮುನ್ಸೀಫ್ ಕೋರ್ಟು

ಅಯ್ಯಾ,

ಕಳೆದ ವಾರ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಂತೆ ಚಾರಿ ನಂಬರುಗಳ ಕಾಸ್ ಲೀಸ್ಟನ್ನು ಕಡಿಮೆ ಮಾಡುವುದಿಲ್ಲವೆಂಬುವ ಮಾತು ಅನ್ಯಾಯವು ಆದರೆ ಹಿಯರಿಂಗ್ ಆದ ನೋಟದ ಮೊಗಳ ಲೀಸ್ಟನ್ನು ಹೆಚು ಕೆಲಸದ ದೆಸೆಯಿಂದ ಬರೆಯುತ್ತಿರಲಿಲ್ಲವಾದರೂ ಈಚೆಗೆ ಹೊಸದಾಗಿ ಪುಸ್ತಕವನ್ನು ಕಟ್ಟಿ ಬರೆಯಲು ಉಪಕ್ರಮಿಸುವವರಾಗಿದ್ದಾರೆ ಇದು ಅನಾವಶ್ಯಕವಾದ ಕೆಲಸ ಹಾಗಂದರೆ ಒಂದು ಸಾರಿ ನೋಟದ ಮೊಯು ಫೈಲಿಗೆ ಬಂದನಂತರ ಆಯಾ ನೋಟದ ಮೊಯು ಲಾಯರುಗಳಿಗಾಗಲಿ ಕಕ್ಷಿಗಾರರಿಗಾಗಲಿ ಮುಂದಿನ ಹಿಯರಿಂಗ್ ಗೊತ್ತಾಗುವುದು ಈ ಕೋರ್ಟು ಸಾಧಾರಣವಾದ ಕೋರ್ಟುಗಳಲ್ಲಿ ಒಂದಲ್ಲ ಪ್ರತಿದಿನವೂ ಅನೇಕ ದಾವಾಗಳೂ ಚಾರಿ ಅರ್ಜಿಗಳೂ ದಾಖಲಾಗುತ್ತಲೇ ಇರುತ್ತವೆ ನೋಟದ ಮೊಗಳು ಬಹು ಸಾವಕಾಶದಿಂದ ತೀರ್ಮಾನವಾಗುತ್ತಿರುತ್ತವೆಂದೂ ಮತ್ತೊಂದು ಹೊಸ ಕೋರ್ಟು ಅವಶ್ಯಕವಾಗಿದೆ ಎಂದೂ ಅನೇಕ ಸಾರಿ ಹಿಂದೆ ತಮ್ಮ ಪತ್ರಿಕೆಯ ಮೂಲಕ ಪ್ರಕಟಮಾಡಲಾಗಿದೆ ಪ್ರತಿದಿನವೂ ಹೊಸ ನೋಟದ ಮೊಗಳ ಮೊದಲನೇ ಹಿಯರಿಂಗುಗಳು ಪೂರೈಸುವಾಗ್ಗೆ ೨ ೩ ಗಂಟೆಯಾಗುತ್ತೆ ಅನಂತರ ೧ ೨ ನೋಟದ ಮೊಗಳನ್ನು ವಿಚಾರಣೆ ಮಾಡುವಾಗ್ಗೆ ಕಾಲವು ಪೂರ್ಣವಾಗುತ್ತೆ ಆದ್ದರಿಂದ ಮುನ್ಸೀಫರು ಮೊದಲುಗೊಂಡು ಈ ಕೋರ್ಟಿನ ಪ್ರತಿ ಗುಮಾಸ್ತೆಯರಿಗೂ ವಿಶೇಷವಾಗಿ ಕೆಲಸವಿರುತ್ತೆ ರಜಾ ದಿನಗಳಲ್ಲೆಲ್ಲಾ ಗುಮಾಸ್ತರು ಬಂದು ಕೆಲಸ ಮಾಡುತ್ತಾರಾದರೂ ಕೆಲಸವು ಪೂರೈಸುವಹಾಗಿಲ್ಲ ಇಂಥಾದ್ದರಲ್ಲಿ ಅಲ್ಪ ದಾವೆಗಳನ್ನೆಲ್ಲಾ ಕಟ್ಟಬೇಕೆಂದರೆ ಇತರ ಕೆಲಸಗಳೇನಾಗಬೇಕು? ಇದನ್ನು ಸತ್ಯವಾದಿಯವರು ಯೋಚಿಸಲಿ, ಬಡ ಗುಮಾಸ್ತರ ಮೇಲೆ ಇಲ್ಲದ ದೋಷಾರೋಪಣೆಯನ್ನು ಮಾಡಿ, ಅವರನ್ನು ವ್ಯಸನಕ್ಕೆ ಗುರಿಮಾಡಿದ್ದಕ್ಕಾಗಿ ತುಂಬಾ ವಿಷಾದಿಸುತ್ತೇನೆ ಲಾಯರುಗಳು ಗುಮಾಸ್ತೆಯರಿಗೆ ಮಯಕಡುತ್ತಾರೆಂದು ಹೇಳುತ್ತಾರೆ ಹಾಗೆ ಅವರು ನ್ಯಾಯವಲ್ಲದ್ದಕ್ಕೆ ಮಯಪಡತಕ್ಕವರು ನಿಜವಾದ ಲಾಯರುಗಳೇ ಎಂದು ಸಂಶಯಪಡುತ್ತೇನೆ

ಈ ಕೋರ್ಟಿನ ಕಟ್ಟಡವು ಬದಲಾವಣೆಯಾಗುತ್ತಿದೆ ಆದರೂ ಕೋರ್ಟಿನ ಬಾರ್ ಮೊದಲಿನದಕ್ಕಿಂತ ಕಡಮೆಯಾದ್ದರಿಂದ ಕಕ್ಷಿಗಾರರು ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲದಂತಾಯಿತೆಂದು ವ್ಯಸನಪಡಬೇಕಾಗಿದೆ

ಪ್ರತ್ಯಕ್ಷದರ್ಶಿ

ಶೃಂಗೇರಿ ಮಠದ ಜಹಗೀರ್ ವಿಚಾರ

ಅಯ್ಯಾ,

ಈ ಶೃಂಗೇರಿ ಜಹಗೀರ್ ಅಧಿಕಾರದ ವಿಚಾರವಾಗಿ ಕಳೆದ ವಾರ ಪ್ರಕಟವಾಗಿತ್ತಷ್ಟೆ ಈಗ ಲೆಕ್ಕಗಳು ಮೇಲಕ್ಕೆ ಕಳುಹಿಸಲ್ಪಟ್ಟಂತೆ ತಿಳಿಯುತ್ತೆ ಅದರಲ್ಲಿ ಆಯಾ ಜಮಾ ಖರ್ಚು ಮುಂತಾದದ್ದನ್ನು ವಿವರವಾಗಿ ತಿಳಿಸಲಿಲ್ಲವಾಗಿಯೂ, ಒಟ್ಟು ಈ ಜಹಗೀರಿನ ಜಮಾ ಖರ್ಚು ಮಾತ್ರ ಮೊಗಂ ಆಗಿ ತಿಳಿಸಿರುವದಾಗಿಯೂ ತಿಳಿಯಬರುತ್ತೆ ಈಗಿನ ಶ್ರೀಗುರುಗಳು ಪ್ರಾಪ್ತ ವಯಸ್ಕರೆಂದರೆ 19 ವರ್ಷ ಪೂರ್ಣವಾಗಿರುವದರಿಂದ ಅವರೇ ನೋಡುವ ಅಭಿಪ್ರಾಯವಾಗಿ ಈ ರೀತಿ ಕೊಟ್ಟಿರುತ್ತಾರೆಂತ ಹೇಳುತ್ತಾರೆ ಈ ಶೃಂಗೇರಿ ಜಹಗೀರಲ್ಲದೆ ಮಠಕ್ಕೆ ಅನೇಕ ಕಡೆ ಗ್ರಾಮಗಳಿಂದ ಉತ್ಪತ್ತಿ ಇರುತ್ತೆ ಈ ಲೆಕ್ಕವನ್ನೇ ಕೊಟ್ಟಿಲ್ಲವೆಂತ ಹೇಳುತ್ತಾರೆ ಈ ಅಧಿಕಾರಿಗಳೇ ಮುಕ್ತರಾದ ಶ್ರೀಗುರುಗಳ ಕಾಲದಲ್ಲಿ ಅವರಿಗೆ ಅನೇಕ ವಿಷಯಗಳು ತಿಳಿಯದಂತೆಯೂ, ತಮ್ಮ ಮನಸ್ಸಿಗೆ ಬಂದಂತೆ ಏರ್ಪಾಡುಗಳು ಮಾಡಿಬಿಟ್ಟರು ಅನೇಕ ಜನಗಳಿಗೆ ಅಸಮಾಧಾನವಾಗಲು ಶ್ರೀಗುರುಗಳು ಕಾರಣವಲ್ಲ ಈ ವಿಷಯಗಳು ಮೈಸೂರು ಅನೇಕ ಪ್ರಜೆಗಳು ಬಲ್ಲರು ತಮ್ಮ ಕಿವಿಗೂ ಕರ್ಣಾಕರ್ಣಿಕನಾಗಿ ತಿಳಿದಿರಬಹುದು ಮುಕ್ತರಾದ ಶ್ರೀಗುರುಗಳ ಕಾಲದಲ್ಲಿ ಮಠಕ್ಕೆ ಎಷ್ಟು ಆದಾಯವಾಗಿದೆ? ಎಷ್ಟು ವ್ಯಯವಾಗಿರಬಹುದು? ಎಂಬುದು ತಮಗೂ ತಿಳಿಯದಿರುವದಿಲ್ಲ ಈ ವಿಚಾರ ಬೇಕಾಗಿಲ್ಲ ಪ್ರಸ್ತುತ ಈಗಿನ ಶ್ರೀಗುರುಗಳವರು ವಿದ್ಯಾವಂತರು, ಅಷ್ಟೇ ಹೊರತು ಮಠದ ಯಾವ ತಿಳುವಳಿಕೆಯೂ ಇಲ್ಲ, ಲೋಕದ ಅನುಭವವೂ ಇಲ್ಲ ಈಗಲೂ ಇವರ ಅಧಿಕಾರದ ಗೋಜಿಗೆ ಹೋಗದೆ ವಿದ್ಯಾವ್ಯಾಸಂಗದಲ್ಲಿದ್ದಾರೆ ಲೋಕದ ನಡವಳಿಕೆ, ಜನಗಳ ಸ್ವಭಾವ ತಿಳಿಯದೆ ಎಷ್ಟು ವಿದ್ಯಾವಂತರಾದರೂ ಜನೋಪಕಾರನಾಗುವದಿಲ್ಲ ಈಗಿನ ಅಧಿಕಾರಿಗಳೇ ಸ್ವತಂತ್ರವಾಗಿದ್ದಲ್ಲಿ ಬಹಳ ವಿಷಯಗಳು ಅವಿವೇಕವಾಗುತ್ತೆ ಇದು ಬರೆದು ಸಾಧ್ಯವಲ್ಲ ಗೌರ್ನಮೆಂಟಿನವರು ಎಲ್ಲಾ ಶ್ರೀಮಠದ ಜಮಾಖರ್ಚು ಲೆಕ್ಕಗಳನ್ನು ಪರಾಂಬರಿಕೆಗೆ ತಂದು ಯುಕ್ತಾಯುಕ್ತ ಪರಿಶೀಲನೆಯಿಂದ ಸ್ಯಾಂಕ್ಷನ್ ಮಾಡಿ, ಡೆಪ್ಯುಟಿ ಕಮಿಷನರವರ ವಿಚಾರಣೆಗೆ ಒಳಪಡಿಸಲಿ, ಒಬ್ಬಾನೊಬ್ಬ ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡುವದಾಗಲಿ ಮಾಡಿ, ಮಠದ ಆಡಳಿತಗಳನ್ನು ಕ್ರಮಪಡಿಸಿ ಶ್ರೀಗುರುಗಳು ತಕ್ಕಮಟ್ಟಿಗೆ ಅನುಭವಸ್ಥರಾದೊಡನೆ ಅವರ ವಶಕ್ಕೆ ಆಡಳಿತ ಕೊಟ್ಟರೆ ಜನಗಳಿಗೆ ತುಂಬಾ ಉಪಕಾರವಾಗುತ್ತೆ

ಮಠಾಭಿಮಾನಿ

II

ಅಯ್ಯಾ,

ಈ ವಿಚಾರದಲ್ಲಿ ಕಳೆದ ವಾರ ಮಠ ಭಿಮಾನಿಗಳೊಬ್ಬರು ಬರೆದಿರುವ ಲೇಖನವನ್ನು ನೋಡಿದೆನು ಹಿಂದೆ ಸ್ವಾಮಿಗಳವರು ಸಂಚಾರ ಹೊರಡುವ ಸಮಯದಲ್ಲಿ ಏಜಂಟರಾದಿಯಾಗಿ ಸಮಸ್ತ ಪರಿವಾರವೂ ಹೊರಡುವುದು ಆವಶ್ಯಕವಾಗಿದ್ದರಿಂದ ಅವರ ಗೈರ್‌ಹಾಜರಿಯಲ್ಲಿ ಮಠದ ಆಡಳಿತಗಳನ್ನು ನೋಡಿಕೊಳ್ಳಲಿಕ್ಕೆ ಏಜಂಟರ ಇಷ್ಟಪ್ರಕಾರ ಸರ್ಕಾರದವರು ಒಬ್ಬರು ಅಸಿಸ್ಟೆಂಟರನ್ನು ಶ್ರೀಗುರುಗಳವರ ಠಾವೆಯಲ್ಲಿಟ್ಟಿದ್ದರು ಇವರ ಸಮಸ್ತ ಕಾರುಬಾರುಗಳನ್ನೂ ಏಜಂಟರ ಮಾತಿನಂತೆ ಸಮರ್ಪಕವಾಗಿ ನೋಡಿಕೊಳ್ಳುತ್ತಿದ್ದರು ಏಜಂಟರವರು ಸ್ವಾಮಿಗಳ ಸಂಚಾರವನ್ನು ಪೂರ್ತಿಮಾಡಿಸಿ, ಊರಿಗೆ ಕರೆತಂದಾಗ ಅವರ ಆವಶ್ಯಕತೆ ಇಲ್ಲದೇ ಹೋದದ್ದರಿಂದ ಅವರು ವಾಪಸು ಸರ್ಕಾರದವರಿಂದ ಕರೆಸಿಕೊಳ್ಳಲ್ಪಟ್ಟರು ಅಲ್ಲಿಂದ ಎಂದಿನಂತೆ ಏಜಂಟರವರೇ ಜಹಗೀರಿಯ ಕಾರುಬಾರುಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ ಸ್ವಾಮಿಗಳು ಚಿಕ್ಕವಯಸ್ಸಿನವರಾದಾಗ್ಯೂ ಬಾಲ್ಯವನ್ನು ಕಳೆದವರಾಗಿರುವರು ಸಮಸ್ತ ವೈದಿಕ, ಲೌಕಿಕಗಳಲ್ಲಿ ಸರ್ವತೋಮುಖವಾದ ಪ್ರತಿಭೆಯನ್ನು ಹೊಂದಿರುವರು ಇಂಗ್ಲೀಷನ್ನೂ ಬಲ್ಲರು ಬಹು ದಿವಸದಿಂದಲೂ ಅಂದರೆ ತಮ್ಮ ಬಾಲ್ಯದಾರಭ್ಯ ಶೃಂಗೇರಿಯಲ್ಲೇ ಹುಟ್ಟಿ ಬೆಳೆದು, ಗತಿಸಿದ ಸ್ವಾಮಿಗಳಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದು ಮಠದ ಆಡಳಿತಗಳನ್ನು ಪೂರ್ವಾಶ್ರಮದಲ್ಲಿ ಚೆನ್ನಾಗಿ ಪರಿಚಯಮಾಡಿಕೊಂಡಿದ್ದಾರೆ ಸ್ವಾಮಿಗಳವರಿಗೆ ಇವರಲ್ಲಿ ಅಭಿಮಾನವು ಸಂಪೂರ್ಣವಾಗಿತ್ತಲ್ಲದೆ ಮುಂದಿನ ಪಟ್ಟಕ್ಕೆ ಇವರಲ್ಲಿದ್ದ ಅರ್ಹತೆಯನ್ನು ಸಹ ಕೆಲವು ಸಂದರ್ಭಗಳಲ್ಲಿ ಹೊರಪಡಿಸಿದ್ದರು ಇಂಥಾ ಮಹಾನುಭಾವರಿಗೆ ಯುಕ್ತಸಲಹೆಗಳನ್ನು ಕೊಡಲು ಮತ್ತೆ ಶ್ರೀಕಂಠಶಾಸ್ತ್ರಿಗಳಲ್ಲದೆ ಬೇರೆ ಯಾರೂ ದೊರಕಲಾರರು ಇಪ್ಪತ್ತು ವರುಷಗಳಿಂದಲೂ ಮುಕ್ತಿಹೊಂದಿದ ಸ್ವಾಮಿಗಳ ಅನುವರ್ತಿಗಳಾಗಿ, ಉತ್ತಮಗುಣಸಂಪನ್ನರಾದ ಅವರಿಗೆ ಜಹಗೀರಿಯ ಆಡಳಿತದಲ್ಲಿ ಇರುವ ಪರಿಶ್ರಮವು ಯಾರಿಗೂ ಇಲ್ಲ ವೈದಿಕ ಲೌಕಿಕ ವ್ಯವಹಾರದಲ್ಲಿ ಸಂಪೂರ್ಣ ತಿಳುವಳಿಕೆಯನ್ನುಳ್ಳ ಇವರನ್ನೇ ಮುಂದೆಯೂ ತಮ್ಮ ಏಜಂಟರಾಗಿರಬೇಕೆಂದು ಈಗಿನ ಸ್ವಾಮಿಗಳು ನಿಯಮಿಸಿಕೊಂಡಿರುವಾಗ ಇತರರು ಈ ಪದವಿಗೆ ಹೇಗೆ ಅರ್ಹತೆಯನ್ನು ಪಡೆಯುವರೋ ನಾನು ಕಾಣೆ ಮಲೆನಾಡಿನ ಪ್ರಜೆಗಳನ್ನು ಸರ್ವವಿಧದಲ್ಲೂ ಮುಂದಕ್ಕೆ ತರುವ ಭಾಗದಲ್ಲಿ, ಅದರಲ್ಲೂ ತಮ್ಮ ಜಹಗೀರಿಯ ಜನರ ಶ್ರೇಯೋಭಿವೃದ್ಧಿಯಲ್ಲಿ ಇವರು ಸದಾ ನಿರತರಾಗಿರುತ್ತಾರೆಂಬುವುದಕ್ಕೆ ನನ್ನಲ್ಲಿ ಎಷ್ಟೋ ದೃಷ್ಟಾಂತಗಳಿವೆ ಸರ್ಕಾರದವರು ತೀರಾ ಈ ಮಠದಲ್ಲಿ ಪ್ರವೇಶಮಾಡುತ್ತಾ ಬಂದಲ್ಲಿ ಮಠದ ಗೌರವವು ಕಡಮೆಯಾಗಿ, ಜಗದ್ಗುರುಗಳ ಅವಿಲಾಸಗಳಿಗೂ, ಧರ್ಮಕಾರ್ಯಗಳಿಗೂ ವಿರುದ್ಧಬಂದು ಕೆಟ್ಟಹೆಸರಿಗೆ ಕಾರಣವಾಗಿರುವುದು ಈ ಗುರುಪೀಠವು ನಮ್ಮ ಸರ್ಕಾರಕ್ಕೆ ಮಾತ್ರ ಸೇರಿದ್ದಲ್ಲ ಜಗದ್ಗುರು ನಾಮಾಂಕಿತವು ನಮ್ಮ ಸರ್ಕಾರದ ಮಾತ್ರದಿಂದ ಕೊಡಲ್ಪಡಲಿಲ್ಲ ಜಗದ್ಗುರು ನಾಮಾಂಕಿತವೂ ಡಲು ಆಸೇತು ಹಿಮಾಚಲ ಪರ್ಯಂತದ ಶಿಷ್ಯರಾದ ಮಹಾರಾಜರಿಗೂ ಗೌರವವನ್ನಿಟ್ಟಿರುವ ಮಹಾರಾಜರಿಗೂ, ಶಿಷ್ಯಕೋಟಿಗಳಿಗೂ ಹಕ್ಕಿರುವುದೇ ವಿನಹ ಮತ್ತಾವ ವಿಧವಾಗಿ ನಿರ್ಬಂಧಪಡಿಸಲೂ ಯಾವ ಸರ್ಕಾರಕ್ಕೂ ನಿಮಿತ್ತವಿರುವುದಿಲ್ಲ ಹೀಗಿರಲು ವೃಥಾ ಸರ್ಕಾರದವರು ಏಕೆ ಪ್ರವೇಶಮಾಡಬೇಕು? ಪಾಲಿಸಿಗಳೇನು? ಇವುಗಳನ್ನು ನಾನು ಸ್ವಾನುಭವದಿಂದ ಎರೆದಿರುವೆನಾಗಿ ತಮ್ಮ ಬಾತ್ಮಿದಾರರು ಸಾವಧಾನವಾಗಿ ಯೋಚಿಸಲಿ

ರಾಮಕೃಷ್ಣ ಚೆಟ್ಟಿ

ತಾಲ್ಲೋಕು ವರ್ತಮಾನಗಳು

ಕೊಳ್ಳೇಗಾಲ. —ಈ ಊರಿನಲ್ಲಿ ಮಳೆ ಇಲ್ಲದೆ ನೀರಿಗೆ ಬಹಳ ತೊಂದರೆ ಆಗಿದೆ ಧಾರಣವಾಸಗಳೆಲ್ಲಾ ದಿನೇದಿನೇ ಹೆಚ್ಚುತ್ತಾ ಇದೆ —ಈ ಊರಿನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ಟವನ್ ಹಾಲ್ ಕಟ್ಟಡದಲ್ಲಿ ಮ ಎಂ ಪಿ ಅಳಸಿಂಗ್ರಾಚಾರ್ಯರವರು ತಮ್ಮ ಆಶ್ಚರ್ಯಕರವಾದ ಯಕ್ಷಿಣೀವಿದ್ಯವನ್ನು ಪ್ರದರ್ಶಿಸಿದರು ಇಲ್ಲಿನ ಮ। ಕಲೆಕ್ಟರವರೂ, ತಹಶೀಲ್ದಾರರೇ ಮುಂತಾದ ಅಧಿಕಾರಿಗಳೂ, ಬೋರ್ಡುಮೆಂಬರುಗಳು ಸಹ ದಯಮಾಡಿದ್ದರು ಇವರು ಚಿಕ್ಕವಯಸ್ಸಿನವರಾದರೂ ಇವರ ಶ್ಲಾಘನೀಯವಾದ ಬುದ್ಧಿ ಕೌಶಲ್ಯವೂ, ಹಸ್ತಕೌಶಲ್ಯವೂ ನೋಡಿ ಸರ್ವರೂ ಅತ್ಯಂತ ಆಶ್ಚರ್ಯವೂ, ಆನಂದವೂ ಪಟ್ಟರು

ಚಿಕ್ಕಮಗಳೂರು ತಾ॥ ಮೋಳವಾಳು —ಇಲ್ಲಿ ಮಳೆ ಚೆನ್ನಾಗಿ ಬಂದು ಇರುತ್ತೆ ರೈತರೆಲ್ಲರೂ ನಾಟಿ ಹಾಕುವ ಕೆಲಸವನ್ನು ಮಾಡುತ್ತಾ ಇದ್ದಾರೆ —ಈ ಸ್ವಲ್ಪ ದಿನಗಳ ಹಿಂದೆ ದುಷ್ಕರ್ಮಿಗಳೋ ಮ ಉಸ್ಮಾನ್ ಸಾಬರವರ ಕಾಫಿ ತೋಟದಲ್ಲಿ ಸುಮಾರು 500 ಗಿಡಗಳನ್ನು ಕತ್ತರಿಸಿಯಿದ್ದರು —ಇಲ್ಲಿ ಈ ವರೆಗೆ ಪೋಸ್ಟು ಮಾಸ್ಟರಾಗಿದ್ದ ಮ॥ ಎಸ್ ಆರ್ ದೇವಯ್ಯ ಇವರು ಬೇರೆ ಕಡೆ ಹೊರಟುಹೋದರು ಇವರು ಸರ್ವರಲ್ಲಿಯೂ ಮೈತ್ರೀ ಭಾವದಲ್ಲಿ ಇದ್ದು ಕೆಲಸಗಳನ್ನು ಏನೊಂದೂ ಅಡಚಣೆ ಇಲ್ಲದಂತೆ ಮಾಡುತ್ತಿದ್ದರು ಇವರಿಗೆ ಮ। ಅಲ್ಬರ್ಡ್, ಮ॥ ಲಿಂಕನ್, ಮ। ಮೆಸ್ಸನ್, ಇವರೇ ಮುಂತಾದ ಕಾಫಿ ಪ್ಲಾಂಟರುಗಳು ಒಳ್ಳೇ ಸರ್ಟಿಫಿಕೇಟು ಕೊಟ್ಟಿರುತ್ತಾರೆ

ಚನ್ನರಾಯಪಟ್ಟಣ —ಈಚೆಗೆ ಒಂದೆರಡು ವಾರಗಳಿಂದ ಇಲ್ಲಿ ಮೋಡ ಹಾಕಿಕೊಂಡು ಆಗಾಗ್ಗೆ ಸೋನೆ ಮಳೆ ಬೀಳುತ್ತಲಿತ್ತು ಆದರೆ ಕಳೆದ ಶುಕ್ರವಾರ ರಾತ್ರಿ ಒಳ್ಳೆ ಹದವಾದ ಮಳೆ ಬಂದು ರೈತಾಬಿ ಜನರಿಗೆಲ್ಲಾ ಸಂತೋಷವನ್ನುಂಟುಮಾಡಿತು ಊರಿನಲ್ಲಿಯೂ ಗ್ರಾಮಾಂತರಗಳಲ್ಲಿಯೂ ರಾಗಿಯನ್ನು ಬಿತ್ತುತ್ತಾ ಇರುತ್ತಾರೆ ದವಸ ಧಾನ್ಯಗಳ ಧಾರಣೆ ಇನ್ನೂ ಇಳಿತರಕ್ಕೆ ಬಂದಿಲ್ಲ ಗಾಳಿ ವಿಪರೀತ, ಛಳಿ ಅಧಿಕವಾಗಿದೆ ಊರಿನ ಹವಾ ಇನ್ನೂ ಉತ್ತಮಸ್ಥಿತಿಗೆ ಬಂದಿಲ್ಲ ಅನೇಕ ಜನರು ಛಳಿ ಜ್ವರ, ಕಜ್ಜಿ ನೋವು ಮುಂತಾದವುಗಳಿಂದ ಹಿಂಸೆ ಪಡುತ್ತಿದ್ದಾರೆ —ಇಲ್ಲಿಗೆ 8 ಮೈಲಿ ದೂರದಲ್ಲಿರುವ ಬಾಗೂರು ಗ್ರಾಮದಲ್ಲಿ ಎರಡು ವಾರಗಳಿಂದ ಪ್ಲೇಗ್ ವ್ಯಾಧಿಯು ಪ್ರಾರಂಭವಾಗಿರುತ್ತದೆ ಈ ವರಿವಿಗೂ ೫ ೬ ಜನರು ತೀರಿಹೋದರು ಇಲ್ಲಿನ ಡಾಕ್ಟರವರು ಆ ಗ್ರಾಮಕ್ಕೆ ದಯಮಾಡಿಸಿ, ಕಾಯಿಲೆಯವರನ್ನು ಪರೀಕ್ಷಿಸಿ, ಗ್ರಾಮಸ್ಥರನ್ನು ಬೇಗನೆ ಊರು ಬಿಟ್ಟುಬಿಡುವ ಹಾಗೆ ತಿಳಿಸಿ ಬಂದರು —ಈ ಊರಿನಲ್ಲಿ ಪರೇಲಾ ಜೂಜಾ ಎಂಬ ಆಟವು ಕಸಾಬರ ಅಂಗಡಿಯ ಬಳಿ ಮಧ್ಯಾಹ್ನ ಕಾಲದಲ್ಲಿ ಕುರುಕರು, ಈಡಿಗರು, ಗೌಡರು ಮುಂತಾದವರು ಬಹಳವಾಗಿ ಆಡುತ್ತಾ ಹಣವನ್ನು ನಷ್ಟಪಡಿಸಿಕೊಳ್ಳುತ್ತಾರೆ ನಮ್ಮ ಪೋಲೀಸ್ ಇನ್ಸ್‌ಪೆಕ್ಟರವರು ಗಮನಕ್ಕೆ ತಂದುಕೊಂಡು ಗ್ಯಾಂಬಲಿಂಗ್ ಆಕ್ಟನ್ನು ಜಾರಿಗೆ ತರುವ ಹಾಗೆ ಈ ಆಟವನ್ನು ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಾರೆಂದು ನಂಬುತ್ತೇವೆ

ನಾಗಮಂಗಲದ ತಾ॥ ಬೆಳ್ಳೂರು — ಈ ಪ್ರಾಂತ್ಯ ಮುಂಗಾರು ಮಳೆ ಸುಮಾರಾಗಿ ಆಗಿ ಎಳ್ಳಿನ ಪಸಲು ಬಹಳ ಚೆನ್ನಾಗಿದೆ ಜನಗಳೆಲ್ಲಾ ಖುಷ್ಕಿ ಜಮೀನಿಗೆ ಬೀಜ ಬಿತ್ತುತ್ತಿದ್ದಾರೆ ದೊಡ್ಡದಾದ ದಾಸನ ಕೆರೆಗೆ ನೀರು ಬಾರದಿರುವದು ಹೈನ್ ಪಸಲಿಗೆ ಅಡ್ಡಿಯಾಯಿತು —ಗ್ರಾಮದಲ್ಲಿ ವ್ಯಾಪಾರಗಾರರು ದಿನೇ ದಿನೇ ಹೆಚ್ಚುತ್ತಿವೆ ಚನ್ನರಾಯಪಟ್ಟಣದ ಮ ವೆಂಕಟರಾಮಯ್ಯನವರು ಕಳೆದ ತಿಂಗಳಲ್ಲಿ ಕಡೆ (?) ಕಾರ್ಖಾನೆಯನ್ನು ಇಟ್ಟಿರುತ್ತಾರೆ ಸಾಹುಕಾರ್ ಮ॥ ಪದ್ಮರಾಜಯ್ಯನವರು ನೂಲಿಗೆ ವಿಧವಿಧ ಬಣ್ಣ ಹಾಕುವ ಒಂದು ಕಂಪನಿಯನ್ನು ಮಾಡಿಕೊಂಡಿದ್ದಾರೆ ಇವರು ಲಾಭದ ಮೇಲೆ ವಿಶೇಷ ದೃಷ್ಟಿಯಿಡದೆ ವ್ಯಾಪಾರ ಮಾಡುತ್ತಿರುವದರಿಂದ ಮಂಡಿಯಿಂದ ಬಡಜನರಿಗೆ ತುಂಬಾ ಉಪಯೋಗವಾಗಿದೆ ಕಳೆದ ವಾಹೆಯಲ್ಲಿ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರೂ, ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರವರೂ ಇಲ್ಲಿಗೆ ದಯಮಾಡಿ ಎಲ್ಲಾ ಸ್ಕೂಲುಗಳನ್ನೂ ನೋಡಿ ಸಂತೋಷಪಟ್ಟು ಚತ್ತೆ ಸಿದರು ಪ್ಲೇಗ ಗಲಾಟೆಯಿಂದ ಬಾಯ್ಸ್ ಸ್ಕೂಲು ಮುಚ್ಚಿ ವಿಶೇಷ ಹುಡುಗರು ಪರೀಕ್ಷೆಗೆ ಹೋಗಲು ಯತ್ನವಾಗದೆ ಹೋಗಿದ್ದ ಇಬ್ಬರಲ್ಲಿ ಒಬ್ಬನು ೧ ನೇ ಕ್ಲಾಸಿನಲ್ಲಿ ಒಬ್ಬನು ೨ ನೆ ಕ್ಲಾಸಿನಲ್ಲೂ ತೇರ್ಗಡೆಯಾದರು ಪ್ರತಿ ವರ್ಷವೂ ಈ ಸ್ಕೂಲಿನಲ್ಲಿ ಫಸ್ಟ್ ಕ್ಲಾಸಿನಲ್ಲಿ ತೇರ್ಗಡೆಯಾಗುವದು ತುಂಬಾ ಸಂತೋಷ —ಇಲ್ಲಿನ ಸ್ಕೂಲ್ ಹೆಡ್ ಮಾಸ್ಟರ್ ಮ ಎಸ್ ರಾಮಣ್ಣನವರು ಇಲ್ಲಿನ ಉಪಾಧ್ಯಾಯರುಗಳನ್ನೆಲ್ಲಾ ಕೂಡಿಸಿ ಬೆಳ್ಳೂರು ಉಪಾಧ್ಯಾಯ ಸಂಘವನ್ನು ಮಾಡಿಕೊಂಡು ಆಗಾಗ ವಿದ್ಯಾವಿಷಯವಾಗಿ ಉಪನ್ಯಾಸ ನಡಿಸುತ್ತಿದ್ದಾರೆ ಇದರ ಪ್ರಾರಂಭವು ಕಳೆದ ಮಾಹೆ ತಾ 10 ರಲ್ಲಿ ನಡೆಯಿತು ಈ ಮಾಹೆ ತಾ 15 ರಲ್ಲಿ ಅಮಲ್ದಾರ್ ಹಜರತ್ ಶೇಕ್ ಅಬ್ದುಲ್ಲಾ ಸಾಹೇಬರವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು ಅಕ್ಷರಾಭ್ಯಾಸ ವಿಷಯವಾಗಿ ಉಪನ್ಯಾಸವಾಯಿತು ಅಧ್ಯಕ್ಷರು ಈ ಸಂಘಕ್ಕೆ ಪದೇ ಪದೇ ದಯಮಾಡುವುದಾಗಿಯೂ, ಇದರಿಂದ ಬಹಳ ಪ್ರಯೋಜನವುಂಟೆಂದೂ ಅಪ್ಪಣೆ ಕೊಡಿಸಿದರು

ದೊಡ್ಡಬಳ್ಳಾಪುರ ಕಳೆದ ಭಾನುವಾರ ಈ ಊರಲ್ಲಿರುವ ಮ॥ ಸಾಹುಕಾರ್ ಮತ್ತು ಮ್ಯುನಿಸಿಪಲ್ ಮೆಂಬರ್ ಕೂಟಗೆರೆ ಚಂದ್ರಶೇಖರಯ್ಯನವರು ತಮ್ಮ ವಿವಾಹದ ಸಂತೋಷಾರ್ಥವಾಗಿ ಈ ಊರು ತಾಲ್ಲೋಕು ಉದ್ಯೋಗಸ್ಥರಿಗೆಲ್ಲಾ ಸರ್ಕಲ್ ನಂಜಪ್ಪನವರ ತೋಟದಲ್ಲಿ ಬಹು ಶ್ರೇಷ್ಠವಾದ ಔತಣ ಮಾಡಿದರು ಬೆಂಗಳೂರಿನಿಂದ ಬಂದಿದ್ದ ಅಡಿಗೆಯವರು ನಾನಾ ವಿಧವಾದ ಭಕ್ಷ್ಯ ಭೋಜ್ಯಗಳನ್ನು ಬಹು ಚನ್ನಾಗಿ ಸಿದ್ಧಪಡಿಸಿದರು ಮಧ್ಯಾಹ್ನದಿಂದ ರಾತ್ರಿ ೯ ಘಂಟೆ ವರಿವಿಗೂ ನಾನಾ ವಿಧವಾದ ಸಂಗೀತ ಸಂತೋಷ ಆಟಗಳಿಂದಲೂ, ಅತಿ ವಿಜೃಂಭಣೆಯಿಂದಲೂ ಮ ಚಂದ್ರಶೇಖರಯ್ಯನವರು ಅತಿಥಿಗಳನ್ನು ಪೂರ್ಣ ತೃಪ್ತಿಕರವಾಗಿ ಸಂತೋಷಪಡಿಸಿದರು ಅಮಲ್ದಾರ್ರವರೂ, ಇತರ ಕೆಲವು ಆಫೀಸರುಗಳೂ ದಯಮಾಡಿಸಿದ್ದರು —ಈಗ ಹೊಸದಾಗಿ ಆಸ್ಪತ್ರೆ ಕೆಲಸಕ್ಕೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ವರ್ಗವಾಗಿ ಬಂದಿರುವ ಸಬ್ ಅ। ಸರ್ಜನ್ ರಾಮಸ್ವಾಮಯ್ಯಂಗಾರ್ರ್ಯರು ಬಹು ಮುತುವರ್ಜಿಯಿಂದ ಔಷಧಿಗಳನ್ನು ಕೊಡುತ್ತಿರುವದರಿಂದ ಸರಾಸರಿ ೫೦-100 ಮಂದಿವರಿಗೂ ದಿನಾಲೂ ಆಸ್ಪತ್ರೆಗೆ ಜನರು ಬರಲು ಪ್ರಾರಂಭಿಸಿರುತ್ತಾರೆ ಕಳೆದ ಎರಡು ವರ್ಷಗಳಿಂದಲೂ ಇಲ್ಲಿದ್ದು ರಿಟೈರ್ ಆದ ಮ॥ ಅಬ್ದುಲ್ ಅಜೀಜ್‌ರವರು ಕೆಲಸದಿಂದ ನಿವೃತ್ತರಾದರು ಇವರನ್ನು ಸಾಗಕಳುಹಿಸಲಿಕ್ಕೂ, ಹೊಸದಾಗಿ ಬಂದಿರುವ ಮ॥ ರಾಮಸ್ವಾಮಯ್ಯಂಗಾರ್ರನ್ನು ಅಂಗೀಕರಿಸಲಿಕ್ಕೂ ಅಮಲ್ದಾರ್ರು ಅಗ್ರಾಸನ ವಹಿಸಿದ ಒಂದು ಸಭೆಯು ಕಳೆದ ಶನಿವಾರ ೬ ನೇ ತಾ ಕೂಡಿತ್ತು ಸಾಯಂಕಾಲ ೫ ಗಂಟೆಯಿಂದ ೯ ಗಂಟೆ ವರೆಗೂ ಸಂಗೀತ ಸಾಹಿತ್ಯಗಳು ನಡೆದ ಮೇಲೆ ಮ॥ ಅಬ್ದುಲ್ ಅಜೀಜ್ ರವರಿಗೆ ದೀರ್ಘಾಯುಷ್ಯವನ್ನು ಕೋರಿ ಸಭಿಕರು ಸಂತೋಷದೊಡನೆ ಅವರನ್ನು ತಾಂಬೂಲ ಕೊಟ್ಟು ಕಳುಹಿಸಿದರು ಅವರು ಇಲ್ಲಿದ್ದ ೩। ವರ್ಷ ಕಾಲದಲ್ಲಿ ದೊಡ್ಡಬಳ್ಳಾಪುರದಲ್ಲಿ ಹೆಚ್ಚಾಗಿ ವ್ಯಾಧಿಗಳಿಲ್ಲದ್ದರಿಂದ ಆಸ್ಪತ್ರೆಗೆ ಬರುತ್ತಿರುವವರ ಸಂಖ್ಯೆ ತೀರಾ ಕಮ್ಮಿಯಾಗಿತ್ತು —ಮಳೆಯು ಸಕಾಲಕ್ಕೆ ಚನ್ನಾಗಿ ಬರುತ್ತಿರುವದರಿಂದ ಪೈರುಗಳೆಲ್ಲಾ ಚನ್ನಾಗಿವೆ ಕೆರೆಕಟ್ಟೆಗಳೆಲ್ಲಾ ಸುಮಾರಾಗಿ ತುಂಬಿವೆ —ಇಲ್ಲಿನ ಕ್ರೈಸ್ತರಲ್ಲಿ ಇಂಡಸ್ಟ್ರಿಯಲ್ ರಾಟೆ ವೀವಿಂಗ್ ಟೀಚರ್ ಮ॥ ಸೆಲ್ವನಾಯಗಂ ಚಿನ್ನಯ್ಯನವರ ಮದುವೆಯು ವೆಸ್ಲಿಯನ್ ಮಿಷನ್ ಹಾಲ್‌ನಲ್ಲಿ ನಡೆಯಿತು ಕಳೆದ 10 ನೇ ತಾ ಸಾಯಂಕಾಲ ಬೆಂಗಳೂರು ಬೋಧಕರಾದ ರೆವ್ ಎ. ಡೇವಿಡ್‌ಯವರು ಬಂದು ಮದುವೆಯನ್ನು ನಡಿಸಿದರು ವಧುವು ಕಡಲೂರಿನದು. ಈ ಮದುವೆಗೆ ಈ ಊರಿನ ಎಲ್ಲಾ ದೊಡ್ಡ ಮನುಷ್ಯರೂ ದಯಮಾಡಿಸಿ ವಧೂವರರನ್ನು ಆಶೀರ್ವದಿಸಿದರು ಮದುವೆ ಮೆರವಣಿಗೆಯು ವಿಜೃಂಭಣೆಯಾಗಿ ನಡೆ

ಯಿತು —ಮುಂದಣ ಭಾನುವಾರ ಇಲ್ಲಿನ ಸ್ಟ್ಯಾಂಪ್ ವೆಂಡರ್ ಮತ್ತು ಸರಾಫ್ ಮ|| ನಂಜಪ್ಪನವರು ತಮ್ಮ ತೋಟದಲ್ಲಿ ಸರ್ಕಾರಿ ಉದ್ಯೋಗಸ್ಥರಿಗೆಲ್ಲಾ ವನಭೋಜನ ಏರ್ಪಾಡು ಮಾಡಿರುವದಾಗಿ ತಿಳಿಯಬಂದಿದೆ

ಆನೇಕಲ್ ತಾ|| ದೊಮ್ಮಸಂದ್ರ — ಈ ಗ್ರಾಮದ ಮಿಷನ್ ಸ್ಕೂಲುಗಳ ಮ್ಯಾನೇಜರವರಾದ ರೆವ್ ವಿಲ್ಕಿನ್ಸ್ ದೊರೆಯವರು ಇದೇ ತಿಂಗಳು 10 ನೆಯ ತಾ ಬುಧವಾರ ಇಲ್ಲಿನ ಮಿಷನ್ ಸ್ಕೂಲ್ ಗಂಡು ಹೆಣ್ಣುಮಕ್ಕಳಿಗೆ ಆಟ ಪಾಟಗಳನ್ನಾಡಿಸಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು ಈ ಬಹುಮಾನಗಳಿಗಾಗಿ ಇಲ್ಲಿನ ಹೆಡ್ ಮಾಸ್ಟರವರು ಗ್ರಾಮಸ್ಥರಿಂದ ವಸೂಲ್ಮಾಡಿದ ಚಂದಾ ಹಣದಿಂದ ಬಾಲಕರಿಗೆ ಪ್ರಯೋಜನಕರವಾದ ಬುಕ್ಕುಗಳೂ, ಬರವಣಿಗೆಯ ಸಾಮಾನುಗಳೂ ಕೊಡಲ್ಪಟ್ಟವು 11 ನೇ ತಾ ಗುರುವಾರ ಇದುವರಿವಿಗೂ ಬಾಲಕರ ವಿದ್ಯಾಭ್ಯಾಸಕ್ಕೆ ನಡೆಯುತ್ತಿದ್ದ ಕಟ್ಟಡವು ಬಾಲಕಿಯರ ವ್ಯಾಸಂಗಕ್ಕೆ ಬಿಡಲ್ಪಟ್ಟು ಆ ದಿನ ಅವರಿಗೆ ಬಹುಮಾನಗಳು ಹಂಚಲ್ಪಟ್ಟವು — ಏಪ್ರಿಲ್ ತಿಂಗಳಲ್ಲಿ ಅಮುಲ್ದಾರ್ರು ಪ್ರಾರಂಭಮಾಡಿದ ಕಟ್ಟಡವು ಪೂರ್ತಿಯಾಗಿ ಈ ತಿಂಗಳ 12 ನೇ ತಾ ಶುಕ್ರವಾರ ತೆರೆಯಲ್ಪಟ್ಟಿತು ಆ ದಿನ ಪ್ರಾತಃಕಾಲ ಹೊಸ ಕಟ್ಟಡದ ಮುಂಭಾಗವು ನಾನಾ ವಿಧವಾಗಿ ಅಲಂಕರಿಸಲ್ಪಟ್ಟು ಬಾಲಕ ಬಾಲಕಿಯರು ತಂಡತಂಡಗಳಾಗಿ ನಿಲ್ಲಿಸಲ್ಪಟ್ಟಿದ್ದರು ಪುರನಿವಾಸಿಗಳೂ ದೊಡ್ಡ ಮನುಷ್ಯರೂ ಕಟ್ಟಡದ ಮುಂಭಾಗದಲ್ಲಿ ಸೇರಿದ್ದರು 8 ಗಂಟೆಗೆ ರೆವ್ ವಿಲ್ಕಿನ್ಸ್ ದೊರೆಯವರು ಪತ್ನಿಪುತ್ರರೊಡನೆ ದಯಮಾಡಿದರು ಬಾಲಕರ ಸುಸ್ವಾಗಮನದ ಹಾಡು, ದೇವರ ಪ್ರಾರ್ಥನೆ ಆದನಂತರ ದೊರೆಯವರು ಸಮಯೋಚಿತವಾಗಿ ಸ್ವಾರಸ್ಯವಾದ ಒಂದು ಸಣ್ಣ ಭಾಷಣವನ್ನು ಮಾಡಿ ಬಾಗಿಲನ್ನು ತೆರೆಯಬೇಕೆಂದು ಪ್ರಾರ್ಥಿಸಿದಂತೆ ದೊರೆಸಾನಿಯವರು ತಮ್ಮ ಪುತ್ರರೊಂದಿಗೆ ಬಾಗಿಲನ್ನು ತೆರೆದು, ಮೊದಲು ಒಳಗೆ ಪ್ರವೇಶ ಮಾಡಿದರು ನಂತರ ದೊರೆಯವರೂ, ಬಾಲಕ ಬಾಲಕಿಯರೂ, ಮಹನೀಯರುಗಳೂ ಒಳಕ್ಕೆ ಪ್ರವೇಶಿಸಿ ಉಚಿತಾಸನಗಳಲ್ಲಿ ಕುಳಿತುಕೊಂಡರು ಬಾಲಕರ ಸಂಭಾಷಣೆಗಳು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ನಡಿಸಲ್ಪಟ್ಟವು ಹೆಡ್ ಮಾಸ್ಟರು ಸ್ಕೂಲ್ ರಿಪೋರ್ಟನ್ನೂ, ಇಲ್ಲಿನ ಪೋಸ್ಟ್ ಮಾಸ್ಟರು ಮಿಷನ್ ಸಂಘದವರು ಈ ಗ್ರಾಮದಲ್ಲಿ 30 ವರ್ಷಗಳಿಂದ ಮಾಡಿರುವ ಕಾರ್ಯಗಳ ವಿಷಯವಾಗಿ ಒಂದು ಅಡ್ರೆಸ್ಸನ್ನೂ ಓದಿದನಂತರ ಪ್ಯಾಸಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳೂ, ಎಲ್ಲಾ ಬಾಲಕ ಬಾಲಕಿಯರಿಗೆ ಮಿಠಾಯಿಯೂ, ಸಭೆಯವರಿಗೆ ಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟು ಸಭೆಯು ಮುಕ್ತಾಯವಾಯ್ತು ಬಹುಮಾನಗಳ ಹಂಚಿಕೆಯ ಕಾಲದಲ್ಲಿ ಸರ್ಜಾಪುರದ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ ಸಬಾಪತಿ ಅಯ್ಯರವರು ಕೆಲವು ಪುಸ್ತಕಗಳನ್ನೂ ಎರಡು ಭೂಪಟಗಳನ್ನೂ ಈ ಶಾಲೆಯಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕರಿಗೆ ಬಹುಮಾನ ಮಾಡಿದ್ದಲ್ಲದೆ, ಪ್ರತಿ ವರ್ಷವೂ ಇದೇ ರೀತಿ ನಡಿಸುವುದಾಗಿ ವಾಗ್ದಾನ ಮಾಡಿರುತ್ತಾರೆ ಇದಕ್ಕಾಗಿ ಇವರನ್ನು ಕೊಂಡಾಡತಕ್ಕದ್ದಾಗಿದೆ

ಹಾಸನ —ಕಳೆದ ಶುಕ್ರವಾರದಿಂದಲು ಇಲ್ಲಿ ಹಿಡಿದ ಮಳೆ ಬಿಟ್ಟಿಲ್ಲ ಗಾಳಿಯ ಹೊಡೆತ ಹೇಳತೀರದು ಧಾನ್ಯಗಳ ಧಾರಣೆಯಂತೂ ಬಹುವಾಗಿ ಏರಿಹೋಗಿದೆ ಬಡವರ ಜೀವನ ಬಹುಕಷ್ಟ —ಯಾರ ಬಾಯಿಯಲ್ಲಿ ನೋಡಿದರೂ ರೈಲ್ವೆಯು ಇಲ್ಲಿಗೆ ಬೇಗನೇ ಬರುವಂತಿದೆ ಎಂಬ ಮಾತೇ ಆಗಿದೆ ರೈಲ್ವೆ ಇಲಾಖೆಯ ಮೊತ್ತೀಸರರಿಬ್ಬರು ಇಲ್ಲಿಗೆ ಒಂದು ಎಲ್ಲವನ್ನೂ ನೋಡಿಕೊಂಡು ಹೋದರು ಈ ರೈಲ್ವೆ ಏರ್ಪಾಡು ಬೇಗನೇ ಆದರೆ ಈ ಊರು ಒಳ್ಳೇ ಅಭಿವೃದ್ಧಿಗೆ ಬರಬಹುದು —ಕುಡಿಯುವ ನೀರಿನ ಕಷ್ಟ ತಪ್ಪಲೇ ಇಲ್ಲ ಮಳೆ ಬರುತ್ತಿರುವುದರಿಂದ ಇನ್ನು ಕೆಲವು ತಿಂಗಳು ಕಾಲ ಅನುಕೂಲವಾಗಿರಬಹುದಾದರೂ ಅನಂತರ ಕಷ್ಟದೆಸೆಯೇ ಎಂದು ಹೇಳಬೇಕಾಗಿದೆ ಈ ವಿಷಯವು ನಮ್ಮ ಸರ್ಕಾರದವರ ಗಮನಕ್ಕೆ ಇನ್ನೂ ಬಾರದಿರುವುದು ಯಾಕೋ ತಿಳಿಯಲಿಲ್ಲ — ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೂ, ಇಂಜನಿಯರ್ ಇಲಾಖೆಯಲ್ಲಿ ಕೆಲವು ಅಧಿಕಾರಿಗಳಿಗೂ ವರ್ಗವಾಗುವ ತೆ ವರ್ತಮಾನವಿದೆ ಒಂದೇ ಸ್ಥಳದಲ್ಲಿ ಬಹುಕಾಲ ಇರುವ ಅಧಿಕಾರಿಗಳನ್ನು ಬದಲಾಯಿಸುವಂತೆ ಮಾಡಿರುವ ನಮ್ಮ ಸರ್ಕಾರದವರ ಉದ್ದೇಶವು ಸರ್ವಸಮ್ಮತವಾದದ್ದು ಆದರೆ ಇಲ್ಲಿನ ಹೈಸ್ಕೂಲ್ ಹೆಡ್ ಮಾಸ್ಟರ ವರ್ಗದ ವಿಷಯದಲ್ಲಿ ಇಲ್ಲಿನ ಪ್ರಜೆಗಳೆಲ್ಲರೂ ಕೆಲವು ಸರ್ತಿ ಕೇಳಿಕೊಂಡರೂ ಸರ್ಕಾರದವರ ಗಮನಕ್ಕೆ ಬಾರದಿರುವುದು ಆಶ್ಚರ್ಯವೆಂದು ಹೇಳಬೇಕಾಗಿದೆ —ಅನೇಕ ಸ್ಥಳಗಳಲ್ಲಿ ಚಕ್ರವರ್ತಿಯವರ ಕಾರೊನೇಷನ್ ಜ್ಞಾಪಕಾರ್ಥವಾದ ಕಟ್ಟಡಗಳು ಮೊದಲು ಏರ್ಪಾಡಾದ ಪ್ರಕಾರ ತಯಾರಾಗುತ್ತಲಿವೆ ಎಂಬುದನ್ನು ಪತ್ರಿಕೆಗಳಲ್ಲಿ ನೋಡುತ್ತೇವೆ ಆದರೆ ಈ ಸ್ಥಳದಲ್ಲಿ ಮಾತ್ರ ಇನ್ನೂ ಈ ಕೆಲಸಕ್ಕೆ ಪ್ರಾರಂಭವೇ ಆಗಿಲ್ಲ ಈ ವಿಷಯದಲ್ಲಿ ಯಾಕೆ ಉದಾಸೀನವಾಗಿದೆಯೋ ತಿಳಿಯದೆ ಇದೆ —ಉತ್ತರಾಭಿವೃದ್ಧಿಯಲ್ಲಿರುವ ಪ್ರಜೆಗಳಿಗೆ ಆಸ್ಪತ್ರೆಯು ಸುಮಾರು ಒಂದು ಮೈಲ್ ದೂರವಾಗುತ್ತದೆ ಅಷ್ಟುದೂರ ಹೋಗಿಬರುವುದು ಕಷ್ಟ ಮತ್ತು ಈ ಉತ್ತರಾಭಿವೃದ್ಧಿಯ ಪೂರ್ವಭಾಗದಲ್ಲಿರುವ ಮೈದಾನ ಪ್ರದೇಶದಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿರುವವರಿಗೆ ಮನೇ ಕಟ್ಟಿಕೊಳ್ಳಲು ಸೈಟುಗಳನ್ನು ವಿಂಗಡಿಸಿಕೊಡಬೇಕೆಂದು ಮ್ಯುನಿಸಿಪಲ್ ಮೀಟಿಂಗಿನಲ್ಲಿ ತೀರ್ಮಾನವಾಗಿ ಒಂದು ವರ್ಷ ಕಳೆದು ಹೋಗಿದ್ದರೂ ಇನ್ನೂ ಆ ರೀತಿ ಜಾರಿಗೆ ಬಾರದಿರುವುದನ್ನು ನಮ್ಮ ಡೆಪ್ಯುಟಿ ಕಮಿಷನರವರು ವಿಚಾರಿಸಬೇಕು — ಇಲ್ಲಿನ ಮಿಷನ್ ಬಾಲಿಕಾ ಅನಾಥಾಲಯದಲ್ಲಿ ಪ್ರತ್ಯೇಕವಾಗಿ ಪ್ರೌಢವಾದ ಹೊಲಿಗೇ ಕೆಲಸವನ್ನು ಕಲಿಸುವುದಕ್ಕಾಗಿ ಒಂದು ಹೊಸ ತರಗತಿಯನ್ನು ಈ ಜುಲೈ ಪ್ರಾರಂಭದಿಂದಲೂ ಏರ್ಪಡಿಸಿರುತ್ತಾರೆ

ಫ್ರೆಂಚ್ ರಾಕ್ಸ್ —ಒಂದು ವಾರದಿಂದಲೂ ಮೋಡಗಳಾಡುತ್ತಾ ಆಗಾಗ್ಗೆ ಅಲ್ಪಸ್ವಲ್ಪ ತುಂತುರು ಮಳೆ ಬೀಳುವದೇ ಹೊರ್ತು ದೊಡ್ಡ ಮಳೆ ಇಲ್ಲವೇ ಇಲ್ಲ ತಂಗಾಳಿ ವಿಶೇಷವಾಗಿ ಬೀಸುತ್ತಾ ಇದೆ ರೈತರು ರಾಗಿ, ನವಣೆಗಳನ್ನು ಬಿತ್ತುತ್ತ ಬರುವರು ಕೆರೆಯ ನೀರು ಬಹು ಸ್ವಲ್ಪವೇ ಇರುವದರಿಂದ ಅನೇಕರು ಭತ್ತ ಹಾಕಲು ಹಿಂದುಮುಂದು ನೋಡುತ್ತಾರೆ —ಊರಿನ ಕೆಲವು ಭಾವಿಗಳಲ್ಲಿ ನೀರಿಲ್ಲದೆ ಕಷ್ಟವಾಗಿರುತ್ತೆ ಕೆರೆಯ ನೀರನ್ನು ಉಪಯೋಗಿಸುವ ಜನರಿಗೆ ತುಂಬಾ ಕಷ್ಟ ಕೆರೆಯಲ್ಲಿ ಕೆಸರು ಕಟ್ಟಾಗಿದೆ ಜನರು ನಡುವಿನ ಆಳದವರೆಗೂ ಇಳಿದುಹೋದ ಹೊರ್ತು ಸುಮಾರಾದ ನೀರು ಸಿಕ್ಕುವದು ಕಷ್ಟ ಇನ್ನೂ ಕೊಂಚಕಾಲ ಅದೇ ನೀರನ್ನು ಕುಡಿಯುತ್ತಾ ಬಂದಲ್ಲಿ ರೋಗಾದಿಗಳಿಗೆ ಆಸ್ಪದವಾದೀತು ಜನರು ಭಾವಿಯ ನೀರನ್ನೇ ಉಪಯೋಗಿಸುವದು ಉತ್ತಮ — ಇಲ್ಲಿನ ಮಿಷನ್ ಇಂಗ್ಲಿಷ್ ಸ್ಕೂಲ್ ಹೆಡ್ ಮಾಸ್ಟರು ಮ|| ಆನಂದಾಳ್ವಾರವರು ಕಳೆದ ಎಂಟು ವರುಷಗಳಿಂದಲೂ ಇಲ್ಲಿ ಕೆಲಸಮಾಡಿ ಪ್ರಜಾನುರಾಗಿಗಳಾಗಿದ್ದರು ಅನೇಕ ಹುಡುಗರು ಇವರ ಶಿಕ್ಷೆಯಲ್ಲಿದ್ದು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು ಅವರು ಮಿಷನ್ ಇಲಾಖೆಯಲ್ಲಿ ನಂಬಿಗಸ್ಥರಾಗಿಯೂ ಆಸಕ್ತಿಯಿಂದಲೂ ಇದ್ದುದರಿಂದ ಇಲ್ಲಿಂದ ಮೈಸೂರು ಮಿಷನ್ ಹೈಸ್ಕೂಲಿಗೆ ವರ್ಗವಾಗಿ ಹೋದರು ಕಳೆದ ತಾ 1[illegible] ನೇ ಮಂಗಳವಾರ ಸ್ಕೂಲ್ ವಿದ್ಯಾರ್ಥಿಗಳೆಲ್ಲಾ ಸೇರಿ ಒಂದು ಟೀಪಾರ್ಟಿ ನಡಿಸಿ, ಮ ಆನಂದಾಳ್ವರರನ್ನು ಗುರುಭಕ್ತಿ ವಿಶ್ವಾಸ ಪೂರ್ವಕವಾಗಿ ಮರ್ಯಾದೆ ಮಾಡಿ ಕಳುಹಿಸಿ ಕೊಟ್ಟರು —ಕಳೆದ ಗುರುವಾರದ ಸಂತೆಯಲ್ಲಿ ಇಲ್ಲಿನ ನಮ್ಮ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರವರೂ ಸಬ್ ಇನ್ಸ್ಪೆಕ್ಟರವರೂ ವ್ಯಾಪಾರಿಗಳನ್ನು ಅಜಮಾಯಿಷಿ ಮಾಡಿ ಒಬ್ಬಿಬ್ಬರನ್ನು ಕಮ್ಮಿ ಸೇರುಗಳ ಸಹಿತ ಹಿಡಿದು ವಿಚಾರಣೆಗೆ ಗುರಿಮಾಡಿರುವದು ತುಂಬಾ ಸಂತೋಷವಾಗಿದೆ ಆಗಾಗ್ಗೆ ಇವರುಗಳ ನಿಗಾವಣೆಯಿದ್ದರೆ ಮೋಸಕೃತ್ಯಗಳು ನಿವೃತ್ತಿಯಾದಾವೆಂದು ನಂಬುತ್ತೇವೆ — ಈ ತಾಲ್ಲೋಕಿನಲ್ಲಿದ್ದ ಉತ್ತಮಾಧಿಕಾರಿಗಳು ವರ್ಗವಾಗಿ ಹೋದರಲ್ಲಾ ಎಂಬುವುದೇ ಪ್ರಸ್ತಾಪವಾಗಿದೆ ಇಲ್ಲಿದ್ದ ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ಮ ಜಾನ್ ಪಾಪೈಯನವರಿಗೆ ಆನೇಕಲ್ಲಿಗೂ ಅಲ್ಲಿನವರಿಗೆ ಇಲ್ಲಿಗೂ ವರ್ಗವಾಗಿ, ಮ|| ಪಾಪೈಯನವರು ಇಲ್ಲಿಂದ ಪ್ರಯಾಣ ಮಾಡಿದರು —ಇಲ್ಲಿಗೆ ನಾಲ್ಕು ಮೈಲಿ ದೂರವಾದ ತೊಣ್ಣೂರು ಗ್ರಾಮದ ಬಳಿ ಇರುವ ಮೋತಿತಲಾವು ಎಂಬ ಕೆರೆಯಲ್ಲಿ ಒಂದು ಸ್ತ್ರೀ ಶವವು ತೇಲುತ್ತಾ ಇದ್ದು, ಇಲ್ಲಿನ ಅಮಲ್ದಾರರಿಂದ ಮಹಜರು ಮಾಡಲ್ಪಟ್ಟಂತೆಯೂ, ಡಾಕ್ಟರ ಅಜಮಾಯಿಷಿಯಾದಂತೆಯೂ, ಆ ಸ್ತ್ರೀಯು ಹಾಗೆ ಸಾಯಲು ಕಾರಣಾದಿಗಳೇನೂ ತಿಳಿದುಬರಲಿಲ್ಲವೆಂದೂ ಕೇಳಿ ಆಶ್ಚರ್ಯವಾಗುವದು

ಯಡತೊರೆ ತಾ|| ಮಿರ್ಲೆ —ಒಬ್ಬಾನೊಬ್ಬ ಮುಸಲ್ಮಾನ ಪ್ರಜೆಯು ತಾನು ಚಾಮರಾಜನಗರದ ಒಬ್ಬ ದೊಡ್ಡ ಮನುಷ್ಯನ ಮಗನೆಂದೂ, ತನ್ನ ತಾಯಿಗೆ ಅನೇಕ ದಿನಗಳಿಂದ ವಾಯಿಲೆ ಇತ್ತೆಂದೂ, ಸದರೀ ವಾಯಿಲೆಯು ಎಲ್ಲಿಲ್ಲಿ ಹೋದರೂ ಗುಣವಾಗಲಿಲ್ಲವೆಂದೂ, ಚಾಮರಾಜನಗರದ ಜ್ಯೋತಿಷ್ಯರ ಸಹಾಯದಿಂದ ಸಾಲಿಗ್ರಾಮಕ್ಕೆ ತನ್ನ ತಾಯಿಗೆ ಔಷಧಿ ಕೊಡಿಸುವ ಬಗ್ಗೆ ಕರೆದುಕೊಂಡು ಬಂದು ಇದೇನೆಂದೂ, ಅಲ್ಲಿಯೂ ಕೂಡಾ ವಾಯಿಲೆಯು ಗುಣವಾಗದೆ ವಾಪಸು ಕರೆದುಕೊಂಡು ಹೋಗುತ್ತಿದ್ದಾಗ ಗಂಧನಹಳ್ಳಿಗೆ ಸೇರಿದ ಮುಸಲ್ಮಾನರ ಕೊಪ್ಪಲು ಸಮೀಪದಲ್ಲಿ ತನ್ನ ತಾಯಿ ದೈವಾಧೀನಳಾದಳೆಂದೂ, ಆಕೆಯನ್ನು ಮುಸಲ್ಮಾನ ಪದ್ಧತಿ ಪ್ರಕಾರ ದಫನ್ ಮಾಡಬೇಕೆಂದೂ ಈ ಗ್ರಾಮಕ್ಕೆ ಸಮೀಪವಾದ ಸಾಲಿಗ್ರಾಮಕ್ಕೆ ಹೋಗಿ ಚಾಮರಾಜನಗರದಿಂದ ವರ್ಗವಾಗಿ ಹಾಲಿ ಮಿರ್ಲೆ ಹೋಬಳಿ ಶೇಕದಾರರಾಗಿರುವ ಸರ್ದಾರ್ ಮಿಯಾ ಸಾಹೇಬ್ ಎಂಬುವರನ್ನು ಶವಸಂಸ್ಕಾರಾರ್ಥವಾಗಿ ಕೆಲವು ರೂಪಾಯಿ ಯಾಚನೆ ಮಾಡಿದ್ದಲ್ಲದೆ, ಸದರೀ ಶೇಕದಾರ್ರು ತಮ್ಮ ಜಾತಿಯ ಶವ ಬಿದ್ದಿದೆ ಇದಕ್ಕಾಗಿ ತುಂಬಾ ಸಹಾಯ ಮಾಡಬೇಕೆಂದು ಬಟ್ಟೆ ಬರೆಗಾಗಿ ಕೆಲವು ರೂಪಾಯಿ ತಾವೂ ಕೊಟ್ಟು ಅಲ್ಲಿರುವ ಮುಸಲ್ಮಾನ ದೊಡ್ಡ ಮನುಷ್ಯರಿಂದಲೂ ಕೊಡಿಸಿ ಬಟ್ಟೆಗಳನ್ನು ತೆಗೆದುಕೊಂಡು ಬರುವಂತೆ ಸದರೀ ಮನುಷ್ಯನಿಗೆ ಹೇಳಿಕಳುಹಿಸಿದರು ಆ ಮನುಷ್ಯನು ಅದರಂತೆ ಮಾಡದೆ ಅಲ್ಲಿಂದ ಗಂಧನಹಳ್ಳಿ ಸಮೀಪದ ಮುಸಲ್ಮಾನ ಕೊಪ್ಪಲಿಗೆ ಬಂದು ಸಾಲಿಗ್ರಾಮದಲ್ಲಿ ತನ್ನ ತಾಯಿ ಸತ್ತಿರುವಳೆಂದೂ, ಆಕೆಯ ಸಂಸ್ಕಾರಕ್ಕಾಗಿ ಕೆಲವು ಮೊಬಲಗನ್ನು ಸಹಾಯ ಮಾಡಬೇಕೆಂದೂ ಅಲ್ಲಿಯ ದೊಡ್ಡ ಮನುಷ್ಯರನ್ನು ಯಾಚಿಸಲು ಅಲ್ಲಿ ಮುಸಲ್ಮಾನ ದೊಡ್ಡ ಮನುಷ್ಯರು ಕೆಲವು ಮೊಬಲಗನ್ನು ಸಹಾಯ ಮಾಡಿದರು ಅನಂತರ ಸದರಿ ಶೇಕದಾರ್ರವರು ಪರಸ್ಥಳದಿಂದ ಬಂದಿರುವ ಮನುಷ್ಯನು ತುಂಬಾ ತೊಂದರೆ ಪಡುತ್ತಿದ್ದಾನೆಂದು ಯೋಚಿಸಿ ತಾವು ವಾಸವಾಗಿರುವ [illegible] ಗ್ರಾಮದಿಂದ ಕೆಲವು ಸಹಾಯಕರನ್ನು ಅಲ್ಲಿಗೆ ಕಳುಹಿಸಲು ಅಲ್ಲಿ ಈ ಕೃತ್ಯ ನಡೆದಿರುವುದು ಸುಳ್ಳಾಗಿತ್ತು ಆ ಗ್ರಾಮದ ಮುಸಲ್ಮಾನ ದೊಡ್ಡ ಮನುಷ್ಯರು ತಾವೂ ಶವಸಂಸ್ಕಾರಕ್ಕಾಗಿ ಕೆಲವು ಮೊಬಲಗನ್ನು ಕೊಟ್ಟೆವೆಂದು ತಿಳಿಸಿದರು ಇಂಥಾ ಸುಳ್ಳುಹೇಳಿ ದುಡ್ಡು ಸಂಪಾದನೆಗೆ ಈ ಮುಸಲ್ಮಾನನು ಬಂದದ್ದಕ್ಕಾಗಿ ಇಲ್ಲಿಯ ಮುಸಲ್ಮಾನ ಪ್ರಜೆಗಳೆಲ್ಲಾ ತುಂಬಾ ಸಂತಾಪಪಡುತ್ತಿದ್ದಾರೆ —ಇಲ್ಲಿ ಮಳೆ ಸುತರಾಂ ಇಲ್ಲ ರಾಗಿ ಪಸಲೆಲ್ಲಾ ಒಣಗುತ್ತಾ ಇದೆ ಗದ್ದೆಯ [illegible] ಕೆಲಸಗಳು ಜರುಗುತ್ತಲಿದೆ —ಗೌರ್ನಮೆಂಟ್ ಕನ್ನಡಾ ಸ್ಕೂಲಿನಲ್ಲಿ ಕೆಲವು ರಿಕಾರ್ಡು ಕಳುವಾಗಿ ಇರುವುದಾಗಿಯೂ, ಜಮಾದಾರ್ರು ಬಂದು ತನಿಖೆ ಮಾಡುತ್ತಲಿರುವುದಾಗಿಯೂ ತಿಳಿಯ ಬರುತ್ತದೆ

ಮೊಳಕಾಲ್ಮೂರು ತಾ|| ಕೋಣಸಾಗರ —ಇಲ್ಲಿ ಅಲ್ಪಮಳೆ ಆಯಿತಾದರೂ ರೈತರಿಗೆ ಯಾವ ಪ್ರಯೋಜನವೂ ಉಂಟಾಗಲಿಲ್ಲ ಈ ಸುಮಾರು 6-7 ಸಂವತ್ಸರಗಳಿಂದಲೂ ಈ ಗ್ರಾಮಕ್ಕೆ ಸಂತುಷ್ಟಿಯಾಗಿ ಮಳೆ ಆಗದೆ ತಲಾವಿಗೆ ನೀರು ಬಾರದಿರುವುದರಿಂದ ತರೀ ಫಸಲು [illegible] ಆಗಲೇ ಇಲ್ಲ ಈ ವರ್ಷವಾದರೋ ಕಪಿಲೆ ಭಾವಿಗಳಲ್ಲಿ ನೀರು ಬಹು ಮಟ್ಟಿಗೂ ಅಭಾವವಾಗಿರುವುದರಿಂದ ಬಾಗಾಯಿತು ಫಸಲು ಸಹ ಬೆಳೆಯುವುದೇ ಕಷ್ಟವಾಗಿದೆ ಖುಷ್ಕಿ ಜಮೀನುಗಳ ಉಳುವ ಮತ್ತು ಬಿತ್ತನೆಯ ಕೆಲಸವು ಕೆಲಭಾಗ ನಡೆದಿರುತ್ತೆ ಪ್ರಕೃತ ಮಳೆ ಬಾರದಿರುವುದೊಂದೇ ಪ್ರತಿಕೂಲ ಮೋಡಗಳೇನೋ ಕಾಣಿಸಿಕೊಂಡು ಮಾಯವಾಗುತ್ತವೆ —ಈ ಗ್ರಾಮದಲ್ಲಿ ನಾಲ್ಕಾರು ಸೇದುವ ಭಾವಿಗಳಿರುತ್ತವೆ ಕೆಲವು ಜನಗಳು ಸಂ 1 2 ಭಾವಿಗಳನ್ನು ದುರಸ್ತು ಮಾಡಿಸಿದ್ದರಿಂದ ಕೊಂಚಮಟ್ಟಿಗೆ ನೀರು ದೊರೆಯುತ್ತಲಿದೆ ಉಳಿದ ಭಾವಿಗಳಲ್ಲಿ ನೀರಿಲ್ಲ ಗವರ್ನಮೆಂಟಿನವರು ಸ್ವಲ್ಪಮಟ್ಟಿಗೆ ತಗಾ[illegible] ನೀರನ್ನು [illegible] ಕೊಟ್ಟರೆ ಅನುಕೂಲ —ಗತವರ್ಷ ಪ್ರಜೆಗಳು ಪ್ಲೇಗಿನ ದೆಸೆಯಿಂದ ಗ್ರಾಮವನ್ನು ಬಿಟ್ಟು ಕೆಲಕಾಯುವುಗಳಿಲ್ಲದೆ ಅಷ್ಟಿಷ್ಟು ಸಂಚಿತ ಕಾಳನ್ನು ಕೂತು ತಿಂದದ್ದರಿಂದಲೂ, ಜಮೀನುಗಳಲ್ಲಿ ತಕ್ಕಷ್ಟು ಪಸಲು ಆಗದೆಹೋದ್ದರಿಂದಲೂ ಯಾವ ವಿಧವಾದ ಆದಾಯವಿಲ್ಲದೆ ವಿವಿಧ ಕಷ್ಟಗಳನ್ನು ಅನುಭವಿಸಿದರು. ವರ್ಷವೂ ವೃಷ್ಟಿಯಿಲ್ಲದೆ ಧಾರಣೆಮುಂಗಳು ಏರಿಹೋಗಿವೆ ಬಡಬಗ್ಗರು ಇಷ್ಟು ತುಟ್ಟಿ ಧಾನ್ಯವನ್ನು ಕೊಂಡು ತಿನ್ನಲು ಚೈತನ್ಯವಿಲ್ಲದೆ ಅಹನ್ಯಹನಿ ಕಾಲಕ್ಷೇಪನೆ ಮಾಡಬೇಕಾಗಿದೆ —ಕಾಲ್ನಡಿಗಳ ಕಷ್ಟವಂತು ಹೇಳತೀರದು ಕಾವಲುಗಳಲ್ಲಿ ಸರಿಯಾಗಿ ಮೇವು ದೊರೆಯುವುದೇ ಪ್ರಯಾಸ ಈ ವರ್ಷವಾದರೂ ಸದಯಾಳು ಗವರ್ನಮೆಂಟಿನವರು ಜಮೀನ್ ಕಂದಾಯವನ್ನು ರಿಮಿಷನ್ ಮಾಡುವರೆಂಬ ಭರವಸೆ ಇತ್ತು ಆದರೆ ಇದು ಆಗದೆಹೋಯಿತು ಮುಂದಾದರೂ ಮುಖ್ಯಾಧಿಕಾರಿಗಳು ಇತ್ತ ಕಡೆ ಗಮನಿಸಿ ರಿಮಿಷನ್ ಮೂಲಕ ರಿಯಾಯಿತಿಯನ್ನುಂಟುಮಾಡುವರೆಂದು ಆಶಿಸುತ್ತೇವೆ —ಗ್ರಾಮಪಂಚಾಯಿತಿ ಸ್ಥಿತಿಯು ಪ್ರಕಾಶವಾಗಿಲ್ಲ ಸಂದುಗೊಂದುಗಳಲ್ಲಿ ಕಸ ಕಲ್ಲು ತುಂಬಿಕೊಂಡಿರುತ್ತದೆ ಮು[illegible]ದ್ಧಿಯನ್ನೂ ದೀಪದಕಂಬಗಳನ್ನೂ [illegible] ನೋಡುವದೇ ಅಪರೂಪವಾಗಿದೆ ಇದು ಯೂನಿಯನ್ ಗ್ರಾಮವಾದಾಗ್ಯೂ ಇಷ್ಟು [illegible]ವಸ್ಥೆಯಾಗಿರುವುದಕ್ಕೆ ವಿಷಾದಪಡಬೇಕಾಗಿದೆ —ಈ ಗ್ರಾಮದ ಸುತ್ತಮುತ್ತ ಪಾಪಾಸುಕಳ್ಳಿಯು ಹೆಚ್ಚಾಗಿ ವ್ಯಾಪಿಸಿಕೊಂಡಿರುತ್ತದೆ ಇದನ್ನು ತೆಗೆಸತಕ್ಕ ವಿಷಯ ಇದುವರೆಗೊಂದು ಏರ್ಪಾಡೂ ನಡೆದಿರುವುದಿಲ್ಲ ಇದು ಹರಡಿ[illegible]ಯು ತುಂಬಾ ಅನರ್ಥಕಾರಿಯಾದದ್ದರಿಂದ ಇದನ್ನು ಈಗಲೇ ಸಾಧ್ಯವಾದ ಮಟ್ಟಿಗೂ ತೆಗೆದುಹಾಕಿಸುವದು ಉತ್ತಮ —ಈ ಗ್ರಾಮದಲ್ಲಿ ಇಸ್ಪೀಟಿನ ಆಟ ಉಪಟಳವು ಜೋರಾಗಿದೆ ಅಂಥಾ ಆಟಗಾರರನ್ನು ಅಲ್ಲಲ್ಲಿ ಹಿಡಿದು ದಂಡನೆಗುರಿಪಡಿಸಿದರೆ ಕ್ಷೇಮವಾದೀತು —ಈ ಗ್ರಾಮದ ಸ್ಕೂಲು ವಿದ್ಯಾಭಿವೃದ್ಧಿ ಸ್ಥಿತಿಯು ತಕ್ಕಮಟ್ಟಿಗೆ ತೃಪ್ತಿಕರವಾಗಿದೆ ಆದರೂ ಒಬ್ಬ ಹೆಡ್ ಮಾಸ್ಟರು ಅವಶ್ಯಕವಾಗಿದೆ ಹಾಲಿ ಇರುವ ಒಬ್ಬ ಮಾಸ್ಟರಿಂದ ಕೆಲಸವು ನಿರ್ವಾಹವಾಗುವದಿಲ್ಲ ಸ್ಕೂಲು ಕಟ್ಟಡವು ಹೊಸದಾಗಿ ಕಟ್ಟಲ್ಪಟ್ಟು ವಿಶಾಲವಾಗಿಯೂ, [illegible]ದಾಗಿಯೂ ಇರುತ್ತಿದ್ದರೂ ಕೆಲಸದ ವಿಷಯ ಅಷ್ಟು ನಾಜೋಕಾಗಿಲ್ಲ ಗವರ್ನಮೆಂಟಿನವರು ವಿಮರ್ಶಿಸಿ ಸರಿಪಡಿಸತಕ್ಕದ್ದಿರುತ್ತದೆ ಹಾಲಿ ಸ್ಕೂಲಿಗೆ 50 ಬಾಲಕರು ಬರುತ್ತಾರೆ ಸ್ಕೂಲಿಗೆ ಇನ್ನೂ ಹೆಚ್ಚು ಉಪಕರಣಗಳನ್ನು ಗವರ್ನಮೆಂಟವರು ಹವಣಿಸಿಕೊಟ್ಟರೆ ಮೇಲಾದೀತು

ಕೊಪೇಕನಾಲಿನ ಹತ್ತಿರ ಇರುವ ಅಮ್ಮಯ್ಯನಾಯಕನೂರಿನಲ್ಲಿ ಗ್ರಾಮ ಮುನ್ಸಿಫನು ಪ್ರಯಾಣದ್ದರನ್ನು ಹಿಂಸೆಪಡಿಸಿ ಇಬ್ಬರಿಂದ 150 ರೂಪಾಯಿ ರುಷುವತ್ತು ವಸೂಲ್ಮಾಡಿಕೊಂಡದ್ದು ರುಜುವಾತಾಯಿತು ನೀಲಕೋಟೆಯ ಸಬ್ ಮ್ಯಾಜಿಸ್ಟ್ರೇಟರು ಆ ಗ್ರಾಮಮುನ್ಸಿಫನಿಗೆ ಒಂದು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು ಅವನು ಅಪೀಲ್ ಮಾಡಿದಾಗ ಡಿಂಡಿಗಲ್ಲಿನ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟನು ಕೆಳಕೋರ್ಟಿನಲ್ಲಿ ಆಗಿದ್ದ ಶಿಕ್ಷೆಯನ್ನು ಖಾಯಂಮಾಡಿ ಇದು ಅವನ ಅಪರಾಧಕ್ಕೆ ತಕ್ಕಷ್ಟು ಶಿಕ್ಷೆಯಲ್ಲವೆಂದೂ, ಅದನ್ನು ಹೆಚ್ಚಿಸುವದು ಅವಶ್ಯವೆಂದೂ ಶಿಫಾರಸು ಮಾಡಿದಾರೆ

* * *

ಕಳೆದ ಮೇ ಮತ್ತು ಜೂನ್ ತಿಂಗಳಲ್ಲಿ ಬಂಗಾಳಾ, ಮದರಾಸ್, ಬೊಂಬಾಯಿ ಮತ್ತು ಬರ್ಮಾ ಅಧಿಪತ್ಯಗಳಲ್ಲಿ 1,2[illegible],77,000 ಮಣಗಳ ಉಪ್ಪನ್ನು ಪ್ರಜೆಗಳು ಕೊಂಡುಕೊಂಡಿರುತ್ತಾರೆ, ಅಂದರೆ ಹೋದ ವರುಷದ ಬಿಕರಿಗಿಂತ 1,76,000 ಮಣಗಳಷ್ಟು ಹೆಚ್ಚಾಯಿತು ಇದರಿಂದ ಸರ್ಕಾರಕ್ಕೆ 1,26,11,[illegible] ರೂಪಾಯಿ ಉತ್ಪತ್ತಿಯಾಯಿತು, ಅಂದರೆ ಹೋದ ಸಾಲಿಗಿಂತ 2,31,[illegible] ರೂಪಾಯಿ ಹೆಚ್ಚು. ಹಿಂದುಸ್ಥಾನದ ಬೇರೆ ಬೇರೆ ಅಧಿಪತ್ಯಗಳಲ್ಲಿ ಉಪ್ಪಿನ ಧಾರಣೆಯು ಬೇರೆ ಬೇರೆಯಾಗಿತ್ತೆಂದೂ, ಬರ್ಮಾ ಅಧಿಪತ್ಯದಲ್ಲಿ ಮಾತ್ರ ಯಾವಾಗಲೂ ಇದ್ದಂತೆ ಮಣಕ್ಕೆ ಒಂದು ರೂಪಾಯಿ ಇತ್ತೆಂದೂ ತಿಳಿದು ಬಂದಿದೆ

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಟರಿಗೂ

ಕೈಸೋಕದೆ ಮಾಡಿದೆ. ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಉತ್ತೇಜನ ಕೊಡುವುದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಪುಗಸಟ್ಟೆ ಕಳುಹಿಸುತ್ತಾರೆ.

[66—13] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

Printed and Published by the Rev. F. W. Thompson, M.A., Proprietor and Manager, Wesleyan Mission Press, Mysore. 25/7/1912.

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೩ ನೇ ಇಸವಿ ಆಗಸ್ಟ್ ತಾರೀಖು ೧ ನೇ ಗುರುವಾರ. ಸಂಚಿಕೆ ೯

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು'

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ ಆದರೆ ಎಷ್ಟು ಸ್ತ್ರೀಯರಿಗೆ ಈ ಸೌಂದರ್ಯವಾದ ಮತ್ತು ನಿಬಿಡವಾದ ಕೇಶರಾಶಿ ಇದೇ. ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಷಿಮೆಯಂತೆ ಮೃದುವಾಗಿ ಚಕಚಕಿಸುತ್ತಿರಬೇಕು, ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಲಾದರೂ ಕಟ್ಟುವಂತೆ ಅವು ಸಮೃದ್ಧಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಪ್ರಸಿದ್ಧವಾದ ಕೇಶಮುಕ್ತ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಶೀಘ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ— ಇದು, ಕೂದಲುಗಳನ್ನು ಚಂದಗೊಳಿಸುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು ಕೂದಲುಗಳು ಬೇಗನೆ ಬೆಳೆ ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಿನ ಪದ್ಧತಿಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ನಿಷ್ಕಲವಾಗುತ್ತವೆ, ನಯವಾಗುತ್ತವೆ ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ಪಟ್ಟಾಗಿ ಬೆಳೆಯುತ್ತವೆ

ಕ್ರಯ—ಒಂದು ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು
ಮೂರು ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದಾದರೆ ಒಂದು ಆಧ್ಯಾಣೆಯ ಚೀಟನ್ನು ಕಳುಹಿಸಿ

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

29-11 ನೆ ... "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ... ಎಲ್ಲಾ ... ಇದು ... ಹೊಂದಿದೆ ... "ಕಾಮಿನಿಯಾ ಓಯಿಲ್" ... ಎಂದು ನನ್ನ ಅಭಿಪ್ರಾಯವಿರುವದು

1-7-11 ... (ಬರ್ಮಾ)- ... ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡ ... ವ್ಯಾಪಕ್ಕೆ ಒಪ್ಪಿದ್ದೇವೆ [94-31]

ಸುಗಂಧದ್ರವ್ಯಗಳು

ಗುಲ್ ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರೀಕ್ಷಕ ಪಂಡಿತರು ಹೇಳಿದ್ದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ದ್ರಾಂ ಸೀಸೆಗೆ ರೂ 1-8-0.

ಬಿಲ್ ಬಹಾರ್ (ರಿಜಿಡ್.)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅಪೂರ್ವವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

"ಕಾಮಿನಿಯಾ ಸುರಂಗಿ"-ರೂ 1-4-0 "ಕಾಮಿನಿಯಾಮಾಲತಿ"-ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟೀ—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು, ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್ಜಿದ್, ಬೊಂಬಾಯಿ.

1913 ನೇ ಇಸವಿಯ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸ್.

ಕ್ರಮ 6 ಆಣೆ 10 ಕ್ಕೆ 1 ಡಿಸ್ಕೌಂಟು ನಮ್ಮ ನೋಟ್ಸೇ ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [71-13]

2 ನೇ ಪುಸ್ತಕದ ನೋಟ್ಸು 1 ಆಣೆ 3 ನೇ ಪುಸ್ತಕದ ನೋಟ್ಸು 1½ ಆಣೆ 4 ನೇ ಪುಸ್ತಕದ ನೋಟ್ಸು 1 ಆಣೆ 5 ನೇ ಪುಸ್ತಕದ ನೋಟ್ಸು 1 ಆಣೆ ಮೈಸೂರು ಭೂವಿವರಣೆ 1 ಆಣೆ 2 ನೇ ಕ್ಲಾಸ್ ಭೂವಿವರಣೆ 1½ ಆಣೆ

ಎಚ್ ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧಗ್ರಂಥಾಲಯ, ಮೈಸೂರು.

ಜಾರ್ಜ್ ಸಾರ್ವಭೌಮರ ಚರಿತ್ರೆ

[92-9]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ದೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟ ಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಆಮೂಲಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯ ಬೇಕಾದುದು ಪರಮಾವಶ್ಯಕ. ಅವರ ಛಾಯಾಚಿತ್ರವೂ ಉಂಟು ಶ್ರೀಮನ್ ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ ಕ್ರಯ ಪ್ರತಿ 1ಕ್ಕೆ 8 ಆ ಹಾಸಲು 1ಆ.

ವಿಳಾಸ —ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಡೋಂಗರೆ ಇವರ ಬಾಲಾಮೃತ.

[115-3]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣ ಉಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕಟ್ಟ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ ಎಲುಬುಗಳು ಕಡ್ಡಿಯಂತೆ ಇರೋಣ ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಸಹಿತ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಹಿಂದುಗಳ ನೋವು, ಮೈಕೈ ನೋವು (ಕೀಲುಬೇನೆ), ಮೈನಡುಕ, ಶೀತವಾತಗಳ ಬಾಧೆ ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ... ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ... ಸುವಾಸನೆಯುಳ್ಳದ್ದಾಗಿರುತ್ತದೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ರಕ್ತವರ್ಧಕವಾಗಿದೆ —೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98-48]

೨ ವೈಶ್ವಾನರಾಸವ (ಕಾಲರಾ ಔಷಧ).

... ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ... ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ಮನೆಯಲ್ಲಿದ್ದರೆ ... ಆಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಿಟ್ಟಿ! ಗಿಸಟ್ಟಿ! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ದರ್ಬಾರ್ ಲೀವರ್ ವಾಚನ್ನು ರೂ ೩-೪-೦ ಗೆ ಕೊಂಡುಕೊಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು ಇದರಲ್ಲಿ ಮೋಸ ಸ್ವಲ್ಪವೂ ಇಲ್ಲ.



(೧) ಒಂದು ಸೊಗಸಾದ ಸರಪಣಿ.
(೨) ಒಂದು ಹೊದ ಜೇಬು.
(೩) ಒಂದು ಚಾಕು
(೪) ಒಂದು ತಮಾಷಿ ಪೆಟ್ಟಿಗೆ
(೫) ಒಂದು ಮಡಿಚುವ ಕತ್ತರಿ
(೬) ಒಂದು ಫೌಂಟೇನ್ ಪೆನ್
(೭) ಒಂದು ಕೈ ಚೀಲ.
(೮) ಒಂದು ಜೊತೆ ಕಾಲುಚೀಲ
(೯) ಒಂದು ಸುಂದರವಾದ ಉಂಗುರ.
(೧೦) ಒಂದು ಸೊಗಸಾದ ಬೀಸಣಿಗೆ.
(೧೧) ಒಂದು ಸೆಟ್ ಷರಟುಗುಂಡಿ.
(೧೨) ಒಂದು ಕತ್ತಿ ಸಹಿತ.

109-12] ವಿಳಾಸ —ಪಿ. ಎ. ರಜಾಕ್ ಅಂಡ್ ಕೋ., ೧೦ ಎಸ್ಪ್ಲೇನೇಡ್ ರೋಡ್, ಮದರಾಸ್.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ; (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು; (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿಯತಕ್ಕಂಥ ಸುಲಭವಾದ ಶೈಲಿ; (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು.

ಕ್ರಯ.—೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ. ಒಟ್ಟು ಪ್ರತಿಗೆ ೧ ರೂ. ಟಪಾಲು ಹಾಸಲು ಬೇರೆ [5-30]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಹೊಸದು! ಹೊಸದು!! ಹೊಸದು!!!

ಹಿತ್ತಾಳೆ ಮೊಂಬತ್ತಿಯ ದೀವಿಗೆ.



ಬೆಲೆ ಸುಲಭವು ಬಹುಕಾಲವಿರುತ್ತೆ ಬಹಳ ಮುಖ್ಯವು ಇದರ ಮೇಲನ್ನು ಓದಿ ತಿಳಿಯುವುದಕ್ಕಿಂತಲೂ ನೋಡಿ ತಿಳಿಯುವುದು ಲೇಸು ಅಡಿಗಾಲಲ್ಲಿ ಮುಚ್ಚಳ ಇಲ್ಲ ಎಲ್ಲಾ ಒಂದೇ ಎರಕ ಎಷ್ಟು ದಿನ ಬಳಸುತ್ತಿದ್ದರೂ ಕಡೆಗಾಲಕ್ಕೂ ಬೆಲೆಯುಂಟು ಒಳಗಿನ ಕಂಬಿಯು ಬಿಲ್ಲು ಮುರಿಯುತಾದ್ದು ಒಂದು ವರುಷ ಗ್ಯಾರಂಟು ಮನೆಯ ಪಾತ್ರೆಗಳಂತೆ ಚೆನ್ನಾಗಿ ಶುದ್ಧಿ ಮಾಡಿಕೊಳ್ಳಬಹುದು ಆನ ಮಾರ್ಕಿದ್ದದ್ದಕ್ಕೆ ಬೆಲೆ ಮೇಲಣ ಗ್ಲಾಸಿನೊಡನೆ ರೂ 1-12-0 ಪ್ರಯಾಣಿಕರಿಗೆ ಸುಲಭವಾಗಿ ತೊಂಡುಹೋಗಲು ಅನುಕೂಲವಾಗಿ ಬೇರೆಬೇರೆ ತೆಗೆಯತಕ್ಕ ಸ್ಟಾಂಡಿಗೆ ಬೆಲೆ ರೂಪಾಯಿ 2-12-0 ವಿ ಪಿ ಪೋಸ್ಟು ಹಾಸಲು ಬೇರೆ. [121-1]

ನಮ್ಮ ವಿಳಾಸ-ಸಿ ದೇವಾ ಅಂಡ್ ಕೊ,
17 ಚೆನ್ನತಂಬಿ ಮೊದಲಿ ಬೀದಿ,
ಮೌಂಟು ರೋಡು, ಮದ್ರಾಸ್

ಜ್ವರಶಂಕರಿ.

114 45

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ವಿಷಮಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ಒಂದೆರಡು ಬಾರಿ ಸೇವಿಸುವದರೊಳಗಾಗಿ ತಪ್ಪದೆ ಗುಣಪಡಿಸುವದು ಚಿಕ್ಕಮಕ್ಕಳೂ ನಿರ್ಭಯವಾಗಿ ಸೇವಿಸಬಹುದು, ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ಹಿಮ್ಮೆಟ್ಟಿಸುವುದು,

ಬಾಟಲಿಗೆ ೧ ರೂ., ೩ ಬಾಟಲಿಗೆ ೨ ರೂ. ೧೨ ಆಣೆ.

ಪ್ಲೀಹೋದರಾರಿ.—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ. ೮ ಆಣೆ.

ವಾತಮುರಾರಿ.—ಇದು ಕಟಿಸೋವು, ಉಳುಕು, ಬೀಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು, ಜ್ವರಶಮಿಸುವುದಕ್ಕೂ ಸಹಾಯಕವಾಗಿದೆ. ಬಾಟಲಿಗೆ ೮ ಆಣೆ.; ೩ ಬಾಟಲಿಗೆ ೧ ರೂ. ೬ ಆಣೆ.

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ—ಬಿ. ಎಮ್ ನಾಥ ಮತ್ತು ಕಂಪೆನಿ,
ವೆಪೇರಿ, ಮದರಾಸ್.

ಕಾರ್ಬೊನೇಟ್ ಸಾಬೂನ್

ಅಪಾಯವಿಲ್ಲದ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ನಗೆ ಮುಂತಾದ ಬಾಧೆಗಳಿಲ್ಲವು. ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು.

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ. ೧ ೦ ೦; ಅಂಚೇ ಹಾಸಲು ಪ್ರತ್ಯೇಕ ನಮ್ಮ ವಿಳಾಸ:—
ಬಿ. ಸಿ. ಷಾ ಅಂಡ್ ಕಂಪೆನಿ,
೧೭೭ ಚೀನಾಬಜಾರ್ ರೋಡ್,
ಮದ್ರಾಸು.

ತಾ. ಕ.—ವ್ಯಾಪಾರಿಗಳಿಗೆ ಒಳ್ಳೇ ಕಮೀಷನ್ ದೊರೆಯುವದು. [101-7]

CHAMBERLAIN'S COUGH REMEDY.

ಚೇಂಬರ್ಲೈನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.



1 31

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣವಾಗಿಯಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಬೇಗನೆ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದಾರೆಂದು ಕಂಡ ಕೂಡಲೇ

SCOTT'S EMULSION. 3 31

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

Always get the Emulsion with this mark—the Fishman—the mark of the "Scott" process)

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿತ್ತ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ವಿನಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 31

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಅಂಗಡಿಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ವಾರ್ತೆಯೆಲ್ಲಾ ಬೇಕಾದಷ್ಟು ಅವೇ ಹಾಸನದ ಟೋಪಿಗಳೆಂದು ಎಲ್ಲರಿಗೆ ತೋರುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾಬತ್ತೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ಎಂದು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮; ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ, ೧ ರೂ ೬ ಆ

ಕಾಸುತಿನ ಟೋಪಿಗಳು ೧ ರೂ. ೮ ಆ., ೧ ರೂ ೬ ಆ,

ಹುಡುಗರ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ, ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!

ತಾರಾಸುಂದರಿ ಇದು ಅನಂಗಸುಂದರಿಯ ಉಪಸಂಹಾರ ಕೌತುಕವಾದ ಘಟನಾವಳಿಯೂ ಬೇರೆ ಮುದ್ರಾಗಿರುವುದು ಕ್ರಯ ೮ ಆ

ಕುಮುದಿನಿ ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯು ಕ್ರಯ ೬ ಆಣೆ

ಸತೀರೋಹಿಣಿ ಸ್ತ್ರೀಯರೆಲ್ಲರೂ ಇದನ್ನೋದಬೇಕು ಇಷ್ಟು ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ ೨ ಆಣೆ [139-35]

ನಮ್ಮ ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 10

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರೆತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟಿದವಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗೂರೆನ್ನುವುದು, ಕೆಮ್ಮುಗಳು ಶೀತ ನೆಗಡಿ, ಸ್ನಾಯುರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದದ್ದು ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನ ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಭಾರಿಯಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ವಿಂಟರ್, 3 ವಡಮಲೆಸಿಲ್ವ ಬೀದಿ ಪುರಸವಾಕಂ, ವೇಪೇರಿ, ಮದರಾಸ್. (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

WILLIAM & Co, FORT, BOMBAY.

ಅಮೃತಾಂಜನ್, (Regd.)

35-23

ಎಲ್ಲಾ ಬಾಯಿಗಿಂತ್ತಲೂ ಅಂಜನಗಿಂತ್ತಲೂ ಶ್ರೇಷ್ಠವಾದದ್ದು ಇದರಿಂದ ವಾತ, ಸಂಧಿವಾತ, ಜಖಮು, ಘಾಯ, ಉಳುಕು, ತಲೆನೋವು, ಎದೆನೋವು ಮುಂತಾದ ಎಲ್ಲಾ ವಿಧದ ನೋವುಗಳು ಮೊದಲಾದವು ... ಬಾಟ್ಲಿ ಒಂದರ ... ರೂ ೦ ೮ ೦.

ಮುಲಾಮ ... ಗಜಕರ್ಣವಾಗ್, ... ಮೂರು ಸಾರಿ ... ವದರೊಳಗಾಗಿ ... ವಾಗಿ ಹೋಗುವುದು ... ಇದರಿಂದ ... ಉರುವದಿಲ್ಲ, ... ಕಷ್ಟಾಗುವದಿಲ್ಲ. ಡಬ್ಬಿ 1ಕ್ಕೆ ೦-೬-೦. ದಂತಮಂಜನ ... ನೇತ್ರಾಂಜನ ೦ ೬-೦. ಸುಂದರಿ ತೈಲ ೦ ೮-೦

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿ

ಅಮೃತಾಂಜನ ಡಿಪೊ, ಪೋಸ್ಟು ...

ಸುಲಭ ಕ್ರಯದ ಮಾಲುಗಳು. ಬೇಗ ತರಿಸಿಕೊಳ್ಳಿ.

ಸುಂದರವಾದ ಜೇಬು ಗಡಿಯಾರ. ಬೆಲೆ ರೂ. ೨ ೪ ೦.—ಸ್ಟೀಲ್ ಕೇಸ್, ಸ್ಕ್ರೂ ಮೋಡ್, ಲಿವರ್ ಪೇಟೆಂಟ್, ಹತ್ತು ವರುಷಗಳಾದರೂ ಕೆಡದೆ ನಡೆಯುವ, ಬೋಲ್ಡ್ ಡಯಲ್, ಧೂಳು ಸೇರದ ಬೆಳ್ಳಿಯ ಬಣ್ಣದ ಮುಚ್ಚಳಗಳುಳ್ಳ, ನವೀನ ಯಂತ್ರೋಪಕರಣ ಯುಕ್ತವಾದ ಈ ಅಂದವಾದ ಆಕಾರದ ಗಡಿಯಾರದ ಮೊದಲಿನ ಕ್ರಯ ರೂ 8 ಮುಂದಿನ ಆಗಸ್ಟ್ ತಿಂಗಳ್ ವರಗೆ ಉತ್ತರವುಯು, ಸರಪಣಿ, ಅಂದವಾದ ಪೆಟ್ಟಿಗೆ ಸಹಿತ ರೂ. ೨ ೪ ೦ ಕ್ಕೆ ಕೊಡುವೆವು ಕೂಡಲೆ ಬರೆಯಿರಿ

ಬುಸ್ಸೇಸ್ ಬ್ಲಾಂಕೆಟ್ ಜನಾತು ಬೆಲೆ ರೂ. ೧; ೨; ೪. ಚಳಿಗೆ ಬೆಚ್ಚಗೂ, ಹೊದೆಯುವುದಕ್ಕೆ ಮೆತ್ತಗೂ ಇದೆ ಶುದ್ಧ ಉಣ್ಣೆಯದು. ಬುಸ್ಸೇಸ್ ಉದ್ದ 80, ಅಗಲ 18 ಅಂಗುಲ ಕ್ರಯ 1 ನೆಯ ನಂ. ರೂ. ೬, ೨ ನೆಯ ನಂ ರೂ ೪ [120-2]

ಪ್ರಸಿದ್ಧ ಮಧುರೆಯ ಸೀರೆ. ಬೆಲೆ ರೂ. ೩|; ೨|, ೪—ರಂಗು ಕೆಡದ ಗಟ್ಟಿ ಬಣ್ಣ, 17 ಮೊಳದುದ್ದ, ಕೆಂಪು, ಕರಿಯ ಬಣ್ಣಗಳಲ್ಲಿ ಸಾದಾ ಅಥವಾ ಬಿಳಿ ಚುಕ್ಕೆಗಳುಳ್ಳವು ಕ್ರಯ ರೂ 3-1-0; ಮೋಟಾ ಜರತಾರಿಯವು ರೂ 5-1-0, ಸಾದಾ ಜರತಾರಿಯವು ರೂಪಾಯಿ 8,

ನಮ್ಮ ವಿಳಾಸ.—ವೆಂಕಟಾಚಲಂ ಕಂಪೆನಿ,

ಪ್ಯೆಕ್ರಾಫ್ಟ್, ವೇಪರಿ, ಮದ್ರಾಸು.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

The Company works in accordance with the Indian Life Assurance Companies and Provident Societies Acts 1912 and has also given double the initial security to the Government as required under the Insurance Act 1912.

How is it that the National of Amritsar, has become so popular throughout India?

Because, it has got almost all the attractive schemes which any other Life Office or Provident Society in India has got and also new and novel ones besides issues policies at most favourable rates and on most liberal conditions and distributes relief in thousands every quarter on account of marriages and deaths.

122 1

WANTED

Active and honest District Superintendents and Taluk Agents for every unrepresented district and taluk of the Mysore Province and Coorg on both salary and commission. The post is permanent and our agents are entitled to pension. None but those who can spare whole time, who reside in district or taluk head-quarters and who are well versed in English need apply.

For further particulars and prospectuses, please apply with one anna stamp and your previous experience in the line to

M. L. NAGANNAH,

Chief Agent,

The Amritsar National Insurance Buildings, Mysore.

ವಾಸ್ಕೋಫ್ ಸಿಸ್ಟಂ ಲೀವರ್ ಗಡಿಯಾರ.

ನವ ಕ್ರಮ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2 4 0 ಮಾತ್ರ 5 ವರುಷಗಳ ಗ್ಯಾರೆಂಟಿ.

ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು ಮತ್ತು ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸವಾರಿಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗುತ್ತಿವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಬಾಕ್ಕಿಯಾದ ಗಡಿ ಕೂಡಲೆ ಬರೆದು ತರಿಸಿಕೊಳ್ಳಿ [11-17]

ಮುಖ್ಯವಾಗಿ ಗಮನಿಸಿ ಓದಿರಿ.

ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರಕ್ಕೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ. 5-12-0 ಇದನ್ನು ಆಗಸ್ಟ್ ಅಖೈರೊಳಗಾಗಿ ತರಿಸಿದರೆ 40 ಘಂಟೆ ಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸೊಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ—ಸುಪೀರಿಯರ್ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಕಡಿ ಅಥವಾ ಹುಳುಕಡಿ ಔಷಧವು

ಡಬ್ಬಿ 1 ಕ್ಕೆ ರೂ. 0-1-0. ಡಬ್ಬಿ 12 ಕ್ಕೆ ರೂ 2-8-0

ಕರೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಕೈಕಂಡ ಔಷಧಿಯು ಚರ್ಮದಲ್ಲಿ ಉಂಟಾಗುವ ಕೊಳೆಯನ್ನು ಹೋಗಲಾಡಿಸಿ ಒಂದೇ ದಫಾ ಹಾಕುವದರಿಂದ ದೇಹವು ಥಳಥಳಿಸುವ ಹಾಗೆ ಶುದ್ಧಿಯನ್ನು ಮಾಡುವದು. ಇದು ಸುವಾಸನೆಯೂ ದೇಹಕ್ಕೆ ತಂಪು ಉಂಟುಮಾಡುವದು.

ಉಷ್ಣಮರ್ಜಿ ಚೂರ್ಣವು

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ. 1-0-0.

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಿಂತು ನೀರು ಧಾರಾಳವಾಗಿ ಇಳಿಯುವದರಿಂದ ಪಿತ್ತಪ್ರಮೇಹ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣ ಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು.

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0-1-0. ಡಬ್ಬಿ 12 ಕ್ಕೆ ರೂ 2-8-0.

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು. ಹಲ್ಲುಗಳನ್ನು ಸ್ವಚ್ಛ ಮಾಡುವದು. [121-40]

ರಾಜವೈದ್ಯ ನಾರಾಯಣಜೀ ಕೇಶವಜೀ,

771, ಚೆನ್ನಾ ಬಜಾರ್ ರೋಡ್, ಮದ್ರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರಿಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು ಕೀಲುನೋವು, ಮರವು, ಸಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉದುಮೂತ್ರ, ಮೂತ್ರಕೋಶದ ಕ್ಷಯಿಸಿಹೋಗುವುದು. ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [99-47]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



೨—೦ ೦; ಅಥವಾ ೬ ಬುಡ್ಡಿಗಳಿಗೆ ರೂ. ೧೦-೮—೦ ಔಷಧಗಳನ್ನು ಮಾರುವವರೆಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ ಒ ಬಾಕ್ಸ್ ೭೦, ಬೊಂಬಾಯಿ —ಇವರಲ್ಲಿ ದೊರೆಯುವುದು

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮ ಋತೌ ನಿಜ ಆಷಾಢ ಬಹುಳ ಚೌತಿ ಶುಕ್ರವಾರದಿಂದ ನಿಜ ಆಷಾಢ ಬಹುಳ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಆಗಸ್ಟ್

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಕರ್ಕಾಟಕ ಮಾಸ ತೇದಿ
2	ಶುಕ್ರ *	ಚೌತಿ	23-19	ಪೂಭಾ	16-17	19
3	ಶನಿ	ಪಂಚಮಿ	25-14	ಉ ಭಾ	20-8	20
4	ಭಾನು ,,	ಷಷ್ಠಿ	26-19	ರೆ	22-52	21
5	ಸೋಮ §	ಸಪ್ತಮಿ	25 56	ಅ	24-14	22
6	ಮಂಗಳ ,,	ಅಷ್ಟಮಿ	24-16	ಭ	24-25	23
7	ಬುಧ †	ನವಮಿ	21-27	ಕೃ	23-31	24
8	ಗುರು ‡	ದಶಮಿ	17-18	ರೋ	21-33	25

* ಪೂರ್ಣತಿಥಿ, ಆಡಿಶುಕ್ರವಾರ, ಮಳೆ ನಕ್ಷತ್ರ—ಆಶ್ಲೇಷ 1 ನೇ ಪಾದ. ಪಂಚಮೀ ತಿಥಿ, ಟೀಕಾಚಾರ್ಯರ ಪುಣ್ಯದಿನ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ ,, ಚಾಮುಂಡೇಶ್ವರೀ ಜನ್ಮೋತ್ಸವ § ಮಳೆ ನಕ್ಷತ್ರ—ಆಶ್ಲೇಷ 2 ನೇ ಪಾದ ,, ಅಷ್ಟಮೀ ತಿಥಿ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ರಥ † ತಿಥಿದ್ವಯಂ ‡ ಪಾತಾಭಾವ, ಏಕಾದಶೀ ತಿಥಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—7—1912 ರಿಂದ 19—7—1912 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	2	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	39	32	0	0
ಕೋಲಾರ್ ,,	0	0	4	5
ಕೋಲಾರ್ ಚಿನ್ನದ ಗಣಿಗಳು	4	2	0	0
ತುಂಕೂರು ಡಿಸ್ಟ್ರಿಕ್ಟು	0	0	22	14
ಹಾಸನ ,,	3	0	10	5
ಚಿತ್ರದುರ್ಗ ,,	0	C	54	29
ಕಡೂರ್ ,,	3	1	0	0
ಶಿವಮೊಗ್ಗ ,,	17	11	42	36
ಜುಮ್ಲಾ	69	48	132	89

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೮-೦	೧೫-೮-೦
ಕೆಂಬೂತಿ ಅಕ್ಕಿ ಅವಲ್	೧೬-೦-೦	೧೬-೮-೦
,, ದುಯಂ	೧೬-೪-೦	೧೬-೦-೦
ದಾಪ್ರಾಣಿ ಅಕ್ಕಿ	೧೫-೧೨-೦	೧೪-೦-೦
ಸಣ್ಣಕ್ಕಿ ಅವಲ್	೧೮-೦-೦	೧೭-೮-೦
,, ದುಯಂ ...	೧೭-೮-೦	೧೬-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ ..	೧೨-೮-೦	೧೨ ೮ ೦
,, ದುಯಂ	೧೨ ೦-೦	೧೧-೮-೦
ತೃಣ ರಾಗಿ ಪಲ್ಲಾ ೧ಕ್ಕೆ ...	೭-೧೨-೦	೭-೮-೦
ಕಾರಾಗಿ .. .	೭-೪-೦	೭-೪-೦
ಜೋಳ	೮ ೦ ೦	೮-೦-೦
ಹುಲಸಂದೆ ಪಲ್ಲಾ ೧ಕ್ಕೆ	೧೨-೮-೦	೧೧-೦-೦
ಬಿಳೀ ಅವರೆ ..	೧೧-೦-೦	೧೦-೦-೦
ಹೆಸರು ..	೧೩-೦-೦	೧೪-೮-೦
ಉದ್ದು . . .	೧೪-೦-೦	೧೫-೦-೦
ಕಡಲೆ . ..	೧೧-೮-೦	೧೧-೦-೦
ಎಳ್ಳು ಸೇ ೧೨೭ ಕ್ಕೆ ..	೨೪ ೦-೦	೨೪-೮-೦
ಹುರುಳಿ ..	೭-೨-೦	೭-೨-೦
ತರಳು ೧೨೭ ಸೇರಿಗೆ ..	೧೩-೪-೦	೧೩-೦-೦
ಸೀಗೇಕಾಯಿ ಮಣ ೧ಕ್ಕೆ ..	೩-೮-೦	೩-೮-೦
ಮೆಣಸಿನಕಾಯಿ . ..	೩-೪-೦	೩-೪-೦
,, ದುಯಂ	೩ ೦-೦	೨-೮ ೦
ಬೆಲ್ಲ ದೊಡ್ಡ ಅಚ್ಚು	೫-೮-೦	ಮ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೮-೦	೬-೮-೦
ಹರಳೆಣ್ಣೆ ,,	೫-೮-೦	೫ ೮-೦
ಕೊತ್ತಂಬರಿ ಪಲ್ಲಾ ೧ಕ್ಕೆ	೬-೦-೦	೬ ೮ ೦
ಉಪ್ಪು ,, .	೬ ೦-೦	೫-೮-೦
ಹುಣಸೇ ಹಣ್ಣು	೧-೪-೦	೧ ೪-೦
,, ಹಳೇದು ..	೧-೦-೦	೧-೨-೦
ತುಪ್ಪ ಮಣ ೧ಕ್ಕೆ ..	೧೭-೦-೦	೧೭-೮-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫-೦-೦	೫-೦-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೬ ೦-೦
ಅಳಲೇಕಾಯಿ ಮಣ ೧ಕ್ಕೆ	೦-೮-೦	೧-೦-೦
ಆಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೧ ೮-೦
ಚಿನ್ನ (ಪವನ್) ಕೆಂಪು ..	೧೫-೮-೦	೧೫-೮-೦
,, ,, ಹಸಿವು .	೧೫-೧೪-೬	೧೫ ೧೪ ೬
,, ,, ಗಟ್ಟಿ ತೊಲ ೧ಕ್ಕೆ ..	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೮೧-೦-೦	೮೧-೦-೦

ತಾಲ್ಲೋಕು ವರ್ತಮಾನಗಳು.

ನಂಜನಗೂಡು.—ಒಂದು ವಾರದಿಂದಲೂ ಸೂರ್ಯರಶ್ಮಿಯೇ ಇಲ್ಲ ಸದಾ ತುಂತುರು ಮಳೆಯು ಬರುತ್ತಲೇ ಇರುತ್ತದೆ ಕಪಿಲಾ ಹೊಳೆಯು ಪೂರ್ಣಪ್ರವಾಹ ಬಂದು ಜೋನಿತೋಪಿನಲ್ಲೆಲ್ಲಾ ಹರಿಯುತ್ತಾ ಇದೆ ತ್ಯಾವದಿಂದ ಮನೆಗಳ ಗೋಡೆಗಳು ಬೀಳುತ್ತಾ ಇದೆ ಅನೇಕ ಕೈತೋಟಗಳು ಫಲ ಕಾಲದಲ್ಲಿ ನೀರಿನಿಂದ ಮುಳುಗಿ ಹೋಗಿ ತೋಟಗಾರರು ಬಹಳ ಲುಕ್ಸಾನು ಹೊಂದಿ ಇದಾರೆ. ಇಲ್ಲಿ ಜಾನುವಾರುಗಳು ಸರಿಯಾಗಿ ಮೇಯುವುದಕ್ಕೆ ಇಲ್ಲದೆ ಬಹಳ ತೊಂದರೆಪಡುತ್ತಾ ಇರುವವು.—ಈ ಊರಿನಲ್ಲಿರುವ ಅರಕಲಗೂಡು ಸೀತಾರಾಮಶೆಟ್ಟರ ಧರ್ಮಛತ್ರಕ್ಕೆ ತಾಲ್ಲೂಕ್ ಕಚೇರಿಗೆ ನಾಲ್ದುಸಡೆ ಲೆಕ್ಕಕ್ಕಾಗಿ ಬಂದಿದ್ದ ಕೆಲವು ಗ್ರಾಮಭೋಗರುಗಳು ಶಾನಭೋಗರು ಮೊದಲಾದ ರೈತರನ್ನು ಜಮಾಯಿಸಿಕೊಂಡು ಪರಸ್ಥಳಂಗಳಿಗೆ ತಿರುಗಾಡುವದಕ್ಕೂ ಸಹ ಅವಕಾಶವಿಲ್ಲದಂತೆ ಗಲಭೆಮಾಡುತ್ತಿದ್ದರು

ತಿಬಟೂರು.—ಈ ಊರಿನಲ್ಲಿ 1-5 ದಿವಸಗಳಿಂದಲೂ ಹಿಡಿದಿರುವ ಝುಡಿ ಮಳೆಯು ಬಿಡಲೇ ಇಲ್ಲ ಹೀಗೆ ಸೂರ್ಯನ ಮುಖವೇ ಇಲ್ಲವಾಗಿರುತ್ತೆ.—ಇಲ್ಲಿ ಮ್ಯುನಿಸಿಪಾಲಿಟಿಯು ಸರಿಯಾಗಿ ಇಲ್ಲ. ಊರಿನ ಯಾವ ಭಾಗಗಳಲ್ಲಿ ನೋಡಿದರೂ ಕಸವು ತುಂಬಿರುವುದೂ ಅಲ್ಲದೆ ಕೆಲವೆಡೆಗಳಲ್ಲಿ ವಾಸನೆಯೂ ಹುಟ್ಟಲಿಕ್ಕೆ ಪ್ರಾರಂಭವಾಗಿರುತ್ತೆ. ರಸ್ತೆಗಳಂತೂ ಹೇಳತೀರದು. ರಾತ್ರಿಯ ಹೊತ್ತು ಮ್ಯುನಿಸಿಪಾಲಿಟಿಯವರು ಲಾಂದ್ರಗಳನ್ನು ಹಚ್ಚದಿರುವುದರಿಂದ ದಾರಿಯಲ್ಲಿ ಸಂಚಾರ ಮಾಡುವ ಪ್ರಜೆಗಳು ಒಬ್ಬರಮೇಲೊಬ್ಬರು ಬೀಳುವುದೂ ಅಲ್ಲದೆ ಕತ್ತೆಗಳಾಗಲಿ ಕುದುರೆಗಳಾಗಲಿ ಇದ್ದರೆ ಅವುಗಳ ಮೇಲೆ ಜನರು ಬಿದ್ದು ಅನಾಹುತಗಳು ಉಂಟಾಗಲು ಕಾರಣವಾಗುತ್ತೆ ಈ ವಿಚಾರಗಳಿಗೆ ನಮ್ಮ ಅಮಲ್ದಾರ್ ಮೆ|| ಬಸವರಾಜೆ ಅರಸಿನವರೂ ಸ್ಯಾನಿಟರಿ ಇನ್ಸ್‌ಪೆಕ್ಟರವರೂ ತುಂಬಾ ನಿಗಾ ಇಡುವರೆಂತ ನಂಬಿರುತ್ತೇನೆ.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪ ಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವವಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವವಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [5-30]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಹೊಸದು! ಹೊಸದು! ಹೊಸದು!

ಹಿತ್ತಾಳೆ ಮೋಂಬತ್ತಿಯ ದೀವಿಗೆ



ಬೆಲೆ ಸುಲಭವು ಬಹುಕಾಲವಿರುತ್ತ ಬಹಳ ಮುಖ್ಯವು ಇದರ ಮೇಲನ್ನು ಓದಿ ತಿಳಿಯುವುದಕ್ಕಿಂತಲೂ ನೋಡಿ ತಿಳಿಯುವುದು ಲೇಸು ಅಡಿಗಾಲಲ್ಲಿ ಮಣ್ಣೆ ಇಲ್ಲ ಎಲ್ಲಾ ಒಂದೇ ಎರಕ ಎಷ್ಟು ದಿನ ಬಳಸುತ್ತಿದ್ದರೂ ಕೆಡಗಾಲಕ್ಕೆ ಬೆಲೆಯುಂಟು ಒಳಗಿನ ಕಂಬಿಯು ಬಲ್ಲು ಮಜಬೂತಾದ್ದು ಒಂದು ವರುಷ ಗ್ಯಾರಂಟಿ ಮನೆಯ ಪಾತ್ರೆಗಳಂತೆ ಚೆನ್ನಾಗಿ ಶುದ್ಧಿ ಮಾಡಿಕೊಳ್ಳಬಹುದು ಒನೆ ಮಾರ್ಕಿನದ್ದಕ್ಕೆ ಬೆಲೆ ಮೇಲಣ ಗ್ಲಾಸಿನೊಡನೆ ರೂ 1 12 0 ಪ್ರಯಾಣಿಕರಿಗೆ ಸುಲಭವಾಗಿ ತೊಂಡುಹೋಗಲು ಅನುಕೂಲವಾಗಿ ಚಿಂತಿಬೇರೆ ತೆಗೆಯಲ್ಪಡುವ ಸ್ಟಾಂಡಿಗೆ ಬೆಲೆ ರೂಪಾಯಿ 2 12 0 ವಿ ಪಿ ಪೋಸ್ಟು ಹಾಸಲು ಬೇರೆ [121 1]

ನಮ್ಮ ವಿಳಾಸ ಸಿ ದೇವಾ ಅಂಡ್ ಕೊ

17 ಚೆನ್ನತಂಬಿ ಮೊದಲಿ ಬೀದಿ,

ಮೌಂಟು ರೋಡು ಮದ್ರಾಸ್

ಜ್ವರಶಂಕರಿ

114 41

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ ಮರಿಸೆಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ೨ ದೆರಡು

ಬಾರಿ ಸೇವಿಸುವದರೊಳಗಾಗಿ ತಪ್ಪದೆ ಗುಣಪಡಿಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಕ್ಷಯಿನ ಜ್ವರವನ್ನು ಕೂಡಾ ಹಿಮ್ಮೆಟ್ಟಿಸುವುದು ಬಾಟಲಿಗೆ ೧ ರೂ ೪ ಬಾಟಲಿಗೆ ೨ ರೂ ೧೨ ಆಣೆ

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೪ ರೂ ೮ ಆಣೆ

ವಾತಮುರಾರಿ—ಇದು ತಲೆನೋವು ಉಳುಕು, ಬೇನೆಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರವಿಮುಖವುದಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ ೪ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ಓದಿ ನೋಡಿರಿ

ನಮ್ಮ ವಿಳಾಸ—ಬಿ ಎನ್ ನಾಥ ಮತ್ತು ಕಂಪೆನಿ,

ವೆಪೇರಿ, ಮದರಾಸ್.

ಕಾರ್ಒನೇಷನ್ ಸಾಬೂನ್

ಅಪಾಯವಿಲ್ಲದ ರೋಮಸುಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ನೆಗೆ ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು

ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ ೧ ೦ ೦, ಅಂಚೇ ಹಾಸಲು ಪ್ರತ್ಯೇಕ ನಮ್ಮ ವಿಳಾಸ—ಬಿ ಸಿ ಷಾ ಅಂಡ್ ಕಂಪೆನಿ, ೧೭೭ ಚೀನಾಬಜಾರ್ ರೋಡ್, ಮದ್ರಾಸು.

ತಾ ಕ—ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು [101 7]

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು



1 31

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ ಗಂಟಲನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕೆಡಮೆಯುಳ್ಳವರಾಗಿದಾರೆಂದು ಕಂಡ ಕೂಡಲೇ

SCOTT'S EMULSION. 2 31

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

Always [illegible] the Emulsion with the [illegible] the Fishman—the mark of the "Scott" process

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು

ಅದು ಸಂತೋಷವೂ ಆನಂದವೂ ಪಡುವವಾಗಿ ಆಹಾರದ ರುಚಿ ಹೊಂದಿ ಸುಖ ಚಿತ್ತ ತೋರಿಸುವದು

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 31

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ವಾರಸ್ದಾರರೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರಿಗೂ ತೋರಿಸಿಕೊಂಡು ಮಾರಿಕೊಳ್ಳುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಟ್ಟೆ ಕೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದು [illegible] ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಆಗ ವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೮ ೧ ರೂ ೬ ೮, ೧ ರೂ ೪ ೮

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜರಿಯ ಟೋಪಿಗಳು ೧ ರೂ ೧೨ ೮ ೧ ರೂ ೮ ೮ ೧ ರೂ ೬ ೮

ಅಚ್ಚುಕಿನ ಟೋಪಿಗಳು ೧ ರೂ ೮ ೮, ೧ ರೂ ೬ ೮

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಗವಸು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ, ಕಾರಖಾನೆ, ಹಾಸನ

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ ಕಲ್ಪನಾ ಕೌಶಲವೂ ಘಟನಾವಳಿಯೂ ಬಹು ಮುದ್ದಾಗಿರುವುದು! ಕ್ರಯ ೫ ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [111 35]

ನಮ್ಮ ವಿಳಾಸ ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

81 10

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು ಅರೆತಲೆ ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ ಉಬ್ಬಸ ಹಲ್ಲುನೋವು ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಶ್ವಾಸರೋಗ, ಜಜ್ಜು ಉಳುಕು, ಚಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಗನುಸಾರವಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ಕೃಷ್ಟವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಸಾ ಕಿಂಗ್ ಪ್ಯಾಕೇಜ್ ಮಾಸಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 87 ವಡಮಲೆಸಿಳ್ಳಿ ಬೀದಿ, ವೃಸಿಕವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಕನ್ನಯ್ಯಶೆಟ್ಟಿ ರು, ಜನರಲ್ ಮರ್ಚೆಂಟ್, ತುಮಕೂರು

WILLIAM & Co, FORT, BOMBAY

ಅಮೃತಾಂಜನ್. (Regd.)

35 23

ಎಲ್ಲಾ ಪಾಮುಗಿಂತ್ತಲೂ ಅಂಜನಗಿಂತ್ತಲೂ ಶ್ರೇಷ್ಠವಾದದ್ದು ಇದರಿಂದ ವಾತ ಸಂಧಿವಾತ ಜಬಮು, ಗಾಯ, ಉಳುಕು,

ತಲೆನೋವು, ಶಿರೋರೋಗ ಮುಂತಾದ ಎಲ್ಲಾ ರೂಪದ ನೋವುಗಳು ಯತ್ನದಿಂದ ನಿಲ್ಲುವವು ಬಾಟ್ಲಿ ಒಂದರ ಕ್ರಯ 0 8 0 [illegible]

ಗಜಕರ್ಣ, ಮುಲಾಮು ಮುಂಡಾ ಕಡಿಗೆ ಒಳ್ಳೇದು ಮೂರು ನಾಲು ಸಲ ಹಚ್ಚುವದರೊಳಗಾಗಿ ವಾಸಿಯಾಗಿ ಹೋಗುವದು ಇದರಿಂದ ಉರಿ ಬರುವದಿಲ್ಲ, ಕಪ್ಪಾಗುವದಿಲ್ಲ ಡಬ್ಬಿ 1 ಕ್ಕೆ 0-6-0 ದಂತಮಂಜನ [illegible]

ನೇತ್ರಾಂಜನ 0-1-0 ಸುಂದರಿ ತೈಲ 0 8-0

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿ

ಅಮೃತಾಂಜನ ಡಿಪೋ, ಪೋಸ್ಟು ವ

ಸುಲಭ ಕ್ರಯದ ಮಾಲುಗಳು. ಬೇಗ ತರಿಸಿಕೊಳ್ಳಿ.

ಸುಂದರವಾದ ಜೇಬು ಗಡಿಯಾರಂ ಬೆಲೆ ರೂ 2 8 0.—ಕೈಲ್ಸ್ ಪೇಟ್, ಸ್ವಿಸ್‌ಮೇಡ್, ಲಿವರ್ ಪೇಟೆಂಟ್, ಹತ್ತು ವರುಷಗಳಾದರೂ ಕೆಡದೆ ನಡೆಯುವ, ಬೋಲ್ಡ್ ಡಯಲ್, ಧೂಳು ಸೇರದ ಬೆಳ್ಳಿಯ ಬಣ್ಣದ ಮುಚ್ಚಳಗಳುಳ್ಳ, ಸಮಗ್ರಯಂತ್ರೋಪಕರಣ ಯುಕ್ತವಾದ ಈ ಅಂದವಾದ ಆಕಾರದ ಗಡಿಯಾರದ ಮೊದಲಿನ ಕ್ರಯ ರೂ 8 ಮುಂದಿನ ಆಗಸ್ಟು ಆಖೈರ್ ವರೆಗೆ ಉತ್ತರವುಳ್ಳ, ಸರಪಣಿ, ಅಂದವಾದ ಪೆಟ್ಟಿಗೆ ಸಹಿತ ರೂ 2 8 0ಕ್ಕೆ ಕೊಡುವೆವು ಕೂಡಲೆ ಬರೆಯಿಂ

ಬುಸ್ಸೀಸ್ ! ಬ್ಲಾಂಕೆಟ್ ! ಬನಾತು ! ಬೆರೆ ! ರೂ 6, 5 4 ಛಳಿಗೆ ಬೆಚ್ಚಗೂ, ಹೊದೆಯುವುದಕ್ಕೆ ಮೆತ್ತಗೂ ಇದೆ ಶುದ್ಧ ಉಣ್ಣೆಯದು ಬುಸ್ಸೀಸ್ ಉದ್ದ 80, ಅಗಲ 18 ಅಂಗುಲ ಕ್ರಯ 1 ನೆಯ ನಂ ರೂ 6 2 ನೆಯ ನಂ ರೂ 4 [120-2]

ಪ್ರಸಿದ್ಧ ಮಧುರೆಯ ಸೀರೆ. ಬೆಲೆ ರೂ 3¼, 5¼, 8 —ರಂಗು ಕೆಡದ ಗಟ್ಟಿ ಬಣ್ಣ, 17 ಮೊಳದುದ್ದ, ಕೆಂಪು, ಕರಿಯ ಬಣ್ಣಗಳಲ್ಲಿ ಸಾದಾ ಅಥವಾ ಬಿಳಿ ಚುಕ್ಕೆಗಳುಳ್ಳವು ಕ್ರಯ ರೂ 3 4-0 ಮೋಟಾ ಜರಿಯವು ರೂ 5-4 0 ಸಾದಾ ಜರ್ತಾರಿಯವು ರೂಪಾಯಿ 8.

ನಮ್ಮ ವಿಳಾಸ —ವೆಂಕಟಾಚಲಂ ಕಂಪನಿ,
ಪೈಕ್ರೋಫ್ಟ್, ಪೇಟೆ, ಮದ್ರಾಸು.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs	10,00,000
Subscribed Capital Exceeds	,,	9,00 000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

The Company works in accordance with the Indian Life Assurance Companies and Provident Societies Acts 1912 and has also given double the initial security to the Government as required under the Insurance Act 1912

How is it that the National of Amritsar has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides issues policies at most favourable rates and on most liberal conditions and distributes relief in thousands every quarter on account of maturings and deaths [22 1]

WANTED

Active and honest District Superintendents and Taluk Agents for every unrepresented District and taluk of the Mysore Province and Coorg on both salary and commission. The posts are permanent and our agents are entitled to pension. None but those who can spare whole time who reside in district or taluk head quarters and who are well versed in English need apply

For further particulars and prospectuses please apply with one anna stamp and your previous experience in the line to

M. J. NAGANNAH,

Chief Agent,

The Amritsar National Insurance Buildings Mysore

ರಾಸ್‌ಕೋಪ್ ಸಿಸ್ಟಂ ಲಿವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2 4 0 ಮಾತ್ರ 5 ವರುಷಗಳ ಗ್ಯಾರೆಂಟಿ



ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನಡಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕಾರ್ಯ ಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಪ್ರಯಾಣ ಮಾಡಿದಾಗ್ಯೂ ನಿಲ್ಲದೆ ನಡೆಯುತ್ತೆ ಸಾವಿರಗಟ್ಲೆ ಗಡಿಯಾರಗಳು ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮಾತ್ರಿಯಾದ ಗಡಿ ಕೊತ್ತೆ ಬರೆದು ತರಿಸಿಕೊಳ್ಳಿ [13-17]

ಮುಖ್ಯವಾಗಿ ಗಮನಿಸಿ ಓದಿರಿ

ಬಹುಮಾನ ಸಹಿತ ಗಡಿಯಾರ

ಈ ಪತ್ರಿಕೆಯಲ್ಲಿ ಕಂಡ ರೀತಿ ವಾಚ ಕೀಲೆಸ್ ಲಿವರ್ ಚಿಕ್ಕ ಸ್ಯೆಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5-12-0 ಇದನ್ನು ಆಗಸ್ಟ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಘಂಟೆ ಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸ್ ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಸುಪೀರಿಯರ್ ವಾಚ್ ಕಂಪನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಕಡಿ ಅಥವಾ ಹುಳಕಡಿ ಔಷಧವು

ಡಬ್ಬಿ 1 ಕ್ಕೆ ರೂ. 0-4 0 ಡಬ್ಬಿ 12 ಕ್ಕೆ ರೂ 2 8-0

ಕರೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಕೈಕಂಡ ಔಷಧಿಯು ಚರ್ಮದಲ್ಲಿ ಉಂಟಾಗುವ ಕೊಳೆಯನ್ನು ಹೋಗಲಾಡಿಸಿ ಒಂದೇ ದಫಾ ಹಾಕುವದರಿಂದ ದೇಹವು ಥಳಥಳಿಸುವ ಹಾಗೆ ಶುದ್ಧಿಯನ್ನು ಮಾಡುವದು ಇದು ಸುವಾಸನೆಯು ದೇಹಕ್ಕೆ ತಂಪು ಉಂಟುಮಾಡುವದು

ಉಷ್ಣಮರ್ಜಿ ಚೂರ್ಣವು

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1 0 0

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಂಜು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ರಮೇಣ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0-4 0 ಡಬ್ಬಿ 12 ಕ್ಕೆ ರೂ 2-8 0

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಿಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು ಹಲ್ಲುಗಳನ್ನು ಸ್ವಚ್ಛ ಮಾಡುವದು [121-40]

ರಾಜವೈದ್ಯ ನಾರಾಯಣಜೀ ಕೇಶವಜೀ,
771, ಚೇನಾ ಬಜಾರ್ ರೋಡ್, ಮದ್ರಾಸು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ನಿಶ್ಚಯತಃ ಶರೀರಕ್ಕೇ ರೋಗವುಂಟಾಗುವದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದ ಬಾಯಾರಿಕೆ, ಬಳಲಿಕೆ, ಎದೆ ಕಲ್ಲೆನಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶದ ಕಲ್ಲುಗಳು ಕಾಣಿಸಿಕೊಳ್ಳುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [99-47]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦ ೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ನಿಜ ಆಷಾಢ ಬಹುಳ ಚೌತಿ ಶುಕ್ರವಾರದಿಂದ ನಿಜ ಆಷಾಢ ಬಹುಳ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕಾಟಕ ಮಾಸ ತೇದಿ
2	ಶುಕ್ರ *	ಚೌತಿ	23 10	ಪೂಭಾ	16-17	19
3	ಶನಿ	ಪಂಚಮಿ	25-14	ಉತ್ತಭಾ	20-8	20
4	ಭಾನು ,,	ಷಷ್ಠಿ	26 19	ರೆ	22 52	21
5	ಸೋಮ §	ಸಪ್ತಮಿ	25 56	ಅಶ್ವಿ	24-14	22
6	ಮಂಗಳ ,,	ಅಷ್ಟಮಿ	33-16	ಭ	24-25	23
7	ಬುಧ †	ನವಮಿ	21 27	ಕೃ	23-31	24
8	ಗುರು ‡	ದಶಮಿ	17-18	ರೋ	21-33	25

* ಶೂನ್ಯತಿಥಿ, ಆಡಿಶುಕ್ರವಾರ, ಮಳೆ ನಕ್ಷತ್ರ—ಆಶ್ಲೇಷ 1 ನೇ ಪಾದ ,, ಪಂಚಮೀ ತಿಥಿ, ಟೀಕಾಚಾರ್ಯರ ಪುಣ್ಯದಿನ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ ,, ಚಾಮುಂಡೇಶ್ವರೀ ಜನ್ಮೋತ್ಸವ § ಮಳೆ ನಕ್ಷತ್ರ—ಆಶ್ಲೇಷ 2 ನೇ ಪಾದ ,, ಅಷ್ಟಮೀ ತಿಥಿ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ರಥ † ತಿಥಿದ್ವಯಂ ‡ ಪಾತಾಭಾವ, ಏಕಾದಶೀ ತಿಥಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—7—1912 ರಿಂದ್ಲ 19—7—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	4	2	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	39	32	0	0
ಕೋಲಾರ್ ,,	0	0	4	5
ಕೋಲಾರ್ ಚಿನ್ನದ ಗಣಿಗಳು	4	2	0	0
ತುಂಕೂರು ಡಿಸ್ಟ್ರಿಕ್ಟು	0	0	22	14
ಹಾಸನ ,,	3	0	10	5
ಚಿತ್ರದುರ್ಗ ,,	0	0	54	30
ಕಡೂರ್ ,,	3	1	0	0
ಶಿವಮೊಗ್ಗ ,,	17	11	42	36
ಜುಮ್ಲಾ	69	48	132	89

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೮-೦	೧೫-೮-೦
ಕೆಂಬೂತಿ ಅಕ್ಕಿ ಅವಲ್	೧೭-೦-೦	೧೬-೮-೦
,, ದುಯಂ	೧೬-೪-೦	೧೬-೨-೦
ಅಪ್ರಾಣಿ ಅಕ್ಕಿ	೧೫-೧೨-೦	೧೪-೦-೦
ಸಣ್ಣಕ್ಕಿ ಅವಲ್	೧೮-೦-೦	೧೭-೮-೦
,, ದುಯಂ	೧೭-೮-೦	೧೬-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೨-೮-೦	೧೨-೮-೦
,, ದುಯಂ	೧೨-೦-೦	೧೧-೮-೦
ಕೈರ್ ರಾಗಿ ಪಲ್ಲಾ ೧ಕ್ಕೆ	೭-೧೨-೦	೬-೮-೦
ಕಾರಾಗಿ	೬-೪-೦	೬-೪-೦
ಜೋಳ	೮-೦-೦	೮-೦-೦
ಹುಲಸಂದೆ ಪಲ್ಲಾ ೧ಕ್ಕೆ	೧೨-೮-೦	೧೧-೦-೦
ಬೇಳೇ ಅವರೆ	೧೧-೦-೦	೧೦-೦-೦
ಹೆಸರು	೧೪-೦-೦	೧೪-೮-೦
ಉದ್ದು	೧೪-೦-೦	೧೫-೦-೦
ಕಡಲೆ	೧೧-೮-೦	೧೧-೦-೦
ಎಳ್ಳು ಸೇ ೧೨೭ ಕ್ಕೆ	೨೪-೦-೦	೨೪-೮-೦
ಹುರುಳಿ	೬-೨-೦	೭-೨-೦
ಹರಳು ೧೨೭ ಸೇರಿಗೆ	೧೩-೪-೦	೧೩-೦-೦
ಸೀಗೇಕಾಯಿ ಮಣ ೧ಕ್ಕೆ	೩-೮-೦	೩-೮-೦
ಮೆಣಸಿನಕಾಯಿ	೩-೬-೦	೩-೪-೦
,, ದುಯಂ	೩-೦-೦	೨-೮-೦
ಬೆಲ್ಲ ದೊಡ್ಡ ಅಚ್ಚು	೫-೮-೦	೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೮-೦	೬-೮-೦
ಹರಳೆಣ್ಣೆ ,,	೫-೮-೦	೫-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೦-೦	೬-೮-೦
ಉಪ್ಪು ,,	೬-೦-೦	೫-೮-೦
ಹುಣಿಸೇ ಹಣ್ಣು	೧-೪-೦	೧-೪-೦
,, ಹಳೇದು	೧-೦-೦	೧-೨-೦
ತುಪ್ಪ ಮಣ ೧ಕ್ಕೆ	೧೭-೦-೦	೧೭-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೫-೦-೦
ತೆಂಗಿನಕಾಯಿ ೧೦೦ ಕ್ಕೆ	೫-೦-೦	೬-೦-೦
ಅರಳೀಕಾಯಿ ಮಣ ೧ಕ್ಕೆ	೦-೮-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೧-೦-೦	೮೧-೦-೦

ತಾಲ್ಲೋಕು ವರ್ತಮಾನಗಳು

ನಂಜನಗೂಡು.—ಒಂದು ವಾರದಿಂದಲೂ ಸೂರ್ಯರಶ್ಮಿಯೇ ಇಲ್ಲ ಸದಾ ತುಂತುರು ಮಳೆಯು ಬರುತ್ತಲೇ ಇರುತ್ತದೆ ಕಪಿಲಾ ಹೊಳೆಯು ಪೂರ್ಣಪ್ರವಾಹ ಬಂದು ಚೀಣಿಗಲ್ಲಿನಿಂದ ಸ್ವಲ್ಪ ಹರಿಯುತ್ತಾ ಇದೆ ತಾವದಿಂದ ಮನೆಗಳ ಗೋಡೆಗಳು ಬೀಳುತ್ತಾ ಇದೆ ಅನೇಕ ಕೈತೋಟಗಳು ಫಲಕಾಲದಲ್ಲಿ ನೀರಿನಿಂದ ಮುಳುಗಿ ಹೋಗಿ ತೋಟಗಾರರು ಬಹಳ ಲುಕ್ಸಾನು ಹೊಂದಿ ಇದಾರೆ ಇಲ್ಲಿ ಜಾನುವಾರುಗಳು ಸರಿಯಾಗಿ ಮೇಯುವುದಕ್ಕೆ ಇಲ್ಲದೆ ಬಹಳ ತೊಂದರೆಪಡುತ್ತಾ ಇರುವವು —ಈ ಊರಿನಲ್ಲಿರುವ ಅರಕಲಗೂಡು ಸೀತಾರಾಮಶೆಟ್ಟರ ಧರ್ಮಛತ್ರಕ್ಕೆ ತಾಲ್ಲೂಕ್ ಕಚೇರಿಗೆ ಸಾಲ್‌ದ್ಯಾದ ಲೆಕ್ಕ ಕ್ಕಾಗಿ ಬಂದಿದ್ದ ಕೆಲವು ಗ್ರಾಮಭೋಗದಾರರುಗಳು ಶ್ಯಾನುಭೋಗರುಗಳು ಕುಳವಾಡಿಗಳೇ ಮೊದಲಾದ ರೈತರನ್ನು ಜಮಾಯಿಸಿಕೊಂಡು ಪರಸ್ಥಳೀಯರಿಗೆ ತಿರುಗಾಡುವದಕ್ಕೂ ಸಹ ಅವಕಾಶವಿಲ್ಲದಂತೆ ಗಲಭೆಮಾಡುತ್ತಿದ್ದರು

ತಿಬಟೂರು.—ಈ ಊರಿನಲ್ಲಿ 15 ದಿವಸಗಳಿಂದಲೂ ಹಿಡಿದಿರುವ ಝಡಿ ಮಳೆಯು ಬಿಡಲೇ ಇಲ್ಲ ಹೀಗೆ ಸೂರ್ಯನ ಮುಖವೇ ಇಲ್ಲವಾಗಿರುತ್ತೆ —ಇಲ್ಲಿ ಮ್ಯುನಿಸಿಪಾಲಿಟಿಯು ಸರಿಯಾಗಿ ಇಲ್ಲ ಊರಿನ ಯಾವ ಭಾಗಗಳಲ್ಲಿ ನೋಡಿದರೂ ಕಸವು ತುಂಬಿರುವುದೂ ಅಲ್ಲದೆ ಕೆಲವೆಡೆಗಳಲ್ಲಿ ವಾಸನೆಯೂ ಹುಟ್ಟಲಿಕ್ಕೆ ಪ್ರಾರಂಭವಾಗಿರುತ್ತೆ ರಸ್ತೆಗಳಂತೂ ಹೇಳತೀರದು. ರಾತ್ರಿಯ ಹೊತ್ತು ಮ್ಯುನಿಸಿಪಾಲಿಟಿಯವರು ಲಾಂದ್ರಗಳನ್ನು ಹಚ್ಚದಿರುವುದರಿಂದ ದಾರಿಯಲ್ಲಿ ಸಂಚಾರ ಮಾಡುವ ಪ್ರಜೆಗಳು ಒಬ್ಬರಮೇಲೊಬ್ಬರು ಬೀಳುವುದೂ ಅಲ್ಲದೆ ಕತ್ತೆಗಳಾಗಲಿ ಕುದುರೆಗಳಾಗಲಿ ಇದ್ದರೆ ಅವುಗಳ ಮೇಲೆ ಜನರು ಬಿದ್ದು ಅನಾಹುತಗಳು ಉಂಟಾಗಲು ಕಾರಣವಾಗುತ್ತೆ ಈ ವಿಚಾರಗಳಿಗೆ ನಮ್ಮ ಅಮಲ್ದಾರ್ ಮೆ|| ಬಸವರಾಜೆ ಅರಸಿನವರೂ ಸ್ಯಾನಿಟರಿ ಇನ್ಸ್‌ಪೆಕ್ಟರವರೂ ತುಂಬಾ ನಿಗಾ ಇಡುವರೆಂತ ನಂಬಿರುತ್ತೇವೆ.

ಬೀರೂರು ಶ್ರೀ ಮಂಜುನಾಥ ಅನಾಥಾಲಯವು

ಶಿವಾಜಿ ಶಕದ ೨೩೬ರಲ್ಲಿ ಸ್ಥಾಪಿಸಲ್ಪಟ್ಟಿದ್ದ ಈ ಆಲಯವು ಈ ಪರೀಧಾವಿ ಸಂ॥ ಶ್ರಾವಣ ಮಾಸದಲ್ಲಿ ಪುನಃ ಪ್ರಾರಂಭಿಸಲ್ಪಡುವುದರಿಂದ ಇಲ್ಲಿಗೆ ಸೇರಬೇಕೆನ್ನುವ ಬಾಲಕರು ಅನಾಥರೆಂಬುವುದಕ್ಕೆ ತಕ್ಕ ಯೋಗ್ಯತಾಪತ್ರಗಳೊಡನೆ ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳಬೇಕಾಗಿ ಅಪೇಕ್ಷಿಸಲ್ಪಟ್ಟಿದೆ [124 1]

ತಾ 29 7 1912, ಬೀರೂರು — ಮರೀದಿ ಗೋವಿಂದಪ್ಪ, ಅನಾಥಾಲಯದ ಸ್ಥಾಪಕ

ಸೇಟರ ಲೇವಾದೇವಿ ನೋಟೀಸ್

ಮೈಸೂರು ಲಷ್ಕರ್ ಮೊಹಲ್ಲಾ ಕೈಶ್ವಿ ರೋಡಿನಲ್ಲಿರುವ ಮುಲ್ತಾನಿ ಸಾ॥ ಚಂದನಮಲ್ ಶೇಟ್ಟು ಕನ್ನೈಯ್ಯಾಲಾಲ್ ಶೇಟ್ಟು ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನಮ್ಮಲ್ಲಿ ಗುಮಾಸ್ತೆಯಾಗಿ ಇದ್ದ ಮೋಪರಾಜು ಶೇಟು ಎಂಬುವರಿಗೂ ನಮಗೂ ಲೆಕ್ಕಾಚಾರ ಫೈಸಲ್ ಆಗದೇ ಇರುವ ಸಬಬು ನಮ್ಮಲ್ಲಿ ಲೇವಾದೇವಿ ಮಾಡಿರತಕ್ಕವರು ಯಾರೇ ಆಗಲಿ ನಮಗೆ ಸಲ್ಲಬೇಕಾದ ಹಣವನ್ನು ಮಿಟೋ ಮೋಪರಾಜು ಶೇಟರಿಗೆ ಪಾವತಿ ಮಾಡಕೂಡದು ಹಾಗೆ ಪಾವತಿ ಮಾಡಿದರೆ ನಾವು ಜವಾಬುದಾರರಾಗುವುದಿಲ್ಲ ಮತ್ತು ಅಂಥಾ ಮೊಬಲಗನ್ನು ಮೈಸೂರು ಲಷ್ಕರ್ ಮೊಹಲ್ಲಾ ಲಕ್ಷ್ಮಿನಾ ಮಾರ್ಕೆಟ್ ಗಲ್ಲಿಯಲ್ಲಿರುವ ಮುಲ್ತಾನಿ ಸಾ॥ ಛಬಿಲ್‌ದಾಸು ಶೇಟು ನಾನುಮುಲ್ ಶೇಟು ಹಸ್ತ ಧ್ಯಾಮರ್‌ದಾಸು ಶೇಟರಿಗೆ ಪಾವತಿಮಾಡಿ ರಶೀದಿ ಪಡೆಯತಕ್ಕದ್ದು [123 1]

1 7 1912 — ಚಂದನಮಲ್ ಕನ್ನೈಯ್ಯಾಲಾಲ್ ಶೇಟ್ಟು

ಜರ್ಮನಿಯ ವಿದ್ಯುತ್ ಕಿಸೆ ದೀಪ

1912 ನೇ ವರುಷದ ಹೊಸ ರೂಪ ಕ್ರಯ ರೂ 3 1 0

ಈ ಬೆಳಕನ್ನು ಜರ್ಮನಿಯವರು ಹೊಸದಾಗಿ ಕಂಡುಹಿಡಿದು, ಹಿಂದೂಸ್ಥಾನಕ್ಕೆ ಬಂದಿದೆ ಬೇಬಿನಲ್ಲಿಟ್ಟುಕೊಂಡಿದ್ದು ಬೇಕಾದ ಕಡೆ ದೀಪದ ಕಡ್ಡಿ ಇಲ್ಲದೆ ದೀಪ ಹಚ್ಚಿಕೊಳ್ಳಬಹುದು ಎಲ್ಲಾ ಕೆಲಸಗಳಿಗೂ ಎಲ್ಲರಿಗೂ ಬಹಳ ಅವಶ್ಯವೂ ಅನುಕೂಲವೂ ಆದಂಥಾ ದೀಪ ಇದೇ



ಸಂಸಾರದ ರಬ್ಬರ್ ಸ್ಟಾಂಪು ಸೆಟ್ಟು 1ಕ್ಕೆ ರೂಪಾಯಿ 2

ಪಾಲೀಷ್‌ಮರದ ಪೆಟ್ಟಿಗೆಯಲ್ಲಿ ರಬ್ಬರ್ ಅಕ್ಷರ ರಾಯಿ, ಮೆತ್ತೆ, ಕೆ, ಮುಂತಾದ್ದೆಲ್ಲಾ ಇದೆ ಇದರಿಂದ ಬೇಕಾದ ಮಾತನ್ನು ಬೇಗಬೇಗನೆ ಬದಲಿಸಿ ರಬ್ಬರ್ ಸ್ಟಾಂಪ್ ಮಾಡಿಕೊಳ್ಳಬಹುದು ಸಕಲರಿಗೂ ಅನೇಕ ಕಾರ್ಯಗಳಿಗೆ ಇದು ತುಂಬಾ ಉಪಯೋಗಕ್ಕೆ ಬರುತ್ತೆ [125 1]

ಕೂದಲು ನಾಶಮಾಡುವ "ಸುಲ್ತಾನ್" ಸಾಬೂನು

ಒಂದು ಬಿಲ್ಲೆಗೆ ೪ ಆಣೆ 3 ಬಿಲ್ಲೆ ಪೆಟ್ಟಿಗೆ ರೂ 1 ವಿ ಪಿ 1 ಆಣೆ

ಈ ಸಾಬೂನನ್ನು ಒಂದು ವಶೀ ಸವರಿದರೆ ಕೂದಲು ಹೋಗುತ್ತೆ ಕಲೆ ನಿಲ್ಲುವುದಿಲ್ಲ ನೋವಾಗುವುದಿಲ್ಲ ಚರ್ಮದ ರೋಗಗಳನ್ನು ಕಾಪಾಡುವ ಪ್ರಸಿದ್ಧ ಸಾಬೂನು ಇದೊಂದೇ ಎಲ್ಲಾ ಕಥೆಗಳಲ್ಲೂ ಇದೆ ಟಿಕು ಬೇಕು ಕೇಳಿದ 10ಕ್ಕೆ ಕೆಟಲಾಗ್ ಕಳುಹಿಸಲಾಗುತ್ತೆ ನಮ್ಮ ವಿಳಾಸ—

ರಾಮಸ್ವಾಮಿ ಬತ್ತಡು, 11 ಗಂಡಿಪೇಟೆ ಟಪ್ಪಿಕೇನ್, ಮದರಾಸ್

ವೃತ್ತಾಂತ ಪತ್ರಿಕೆ

೦——

ಈ ೧೯೧೨ನೇ ಇಸವಿ ಆಗಸ್ಟ್ ತಾ ೧ನೇ ಗುರುವಾರ

ಮೈಸೂರು ರೆವಿನ್ಯೂ ಇಲಾಖೆಯ ರಿಪ್ರೋರ್ಟು

ಕಳೆದ ೧೯೧೧ನೇ ಜೂನ್ ೩೦ಕ್ಕೆ ಅಖೈರಾದ ಸಾಲಿನ ರಿಪ್ರೋರ್ಟನ್ನು ರೆವಿನ್ಯೂ ಕಮಿಷನರವರು ಅದೇ ಸೆಪ್ಟಂಬರ್ ಅಖೈರಿನಲ್ಲಿ ಕಳುಹಿಸಿದರು ಸರ್ಕಾರದವರು ಅದನ್ನು ಓದಿ ೧೯೧೨ನೇ ಮೇ ತಾ ೨೯ರಲ್ಲಿ ತಮ್ಮ ಅಭಿಮತವನು ಪ್ರಕಟಮಾಡಿದಾರೆ ಈ ರಿಪ್ರೋರ್ಟು ಒಂಭತ್ತು ತಿಂಗಳ ವರೆಗೆ ಸರ್ಕಾರದ ರಿಕಾರ್ಡಿನಲ್ಲಿ ಬಿದ್ದಿರಲು ಕಾರಣವೇನೋ ನಮಗೆ ತಿಳಿಯದು ಡಿಸ್ಟ್ರಿಕ್ಟುಗಳಿಂದಲೂ, ಇಲಾಖೆಗಳಿಂದಲೂ ರಿಪ್ರೋರ್ಟುಗಳು ಕಾಲಮೀರಿ ತಲುಪಿದರೆ ಸರ್ಕಾರದವರು ಅವರನ್ನು ಕಾರಣವೇನೆಂದು ಕೇಳುತ್ತಾರೆ ಸರ್ಕಾರದವರು ಈ ರೀತಿ ಸಾವಕಾಶಮಾಡಿದರೆ ಅವರನ್ನು ಯಾರು ಕೇಳಬೇಕೋ ಗೊತ್ತಾಗುವುದಿಲ್ಲ

ಮೇಲ್ಕಂಡ ಸಾಲ್ ಅಖೈರ್ ವರೆಗೂ ಮೆ॥ ರಂಗಸ್ವಾಮಿ ಅಯ್ಯಂಗಾರ್ಯರೇ ರೆವಿನ್ಯೂ ಕಮಿಷನರಾಗಿದ್ದರು. ಎಲ್ಲಾ ಪ್ರದೇಶಗಳಲ್ಲೂ ಆ ಸಾಲಿನಲ್ಲಿ ವರ್ಷಾಕಾಲವು ತೃಪ್ತಿಕರವಾಗಿ ನಡೆದದ್ದರಿಂದ ಪೈರುಪಚ್ಚೆಗಳು ಹುಲುಸಾಗಿ ಬೆಳೆದವೆಂದು ಹೇಳಿದರೂ ೧೯೦೯-೧೦ನೇ ಸಾಲಿಗಿಂತ ಭತ್ತ ಮತ್ತು ರಾಗಿಯ ಫಸಲು ಕಡಮೆಯಾಗಿದೆ ಧಾರಣೆಮಾಸಿಗಳು ಸುಸ್ಥಾನಾಮಳೆ ಇಳಿದಿರುತ್ತವೆ ಕೂಲಿಕಾರರ ಕಂಬಳವು ಹೆಚ್ಚದೆ ಒಂದೇ ಸಮನಾಗಿರುವುದರಿಂದ ಬಡಬಗ್ಗರ ಜೀವನ ನಡೆಯುವುದು ಕ್ರಮವಾಗಿದೆ ಜಮೀನುಗಳು ವ್ಯವಸಾಯಗಾರರಿಂದ ಇತರರಿಗೆ ಹೋದದ್ದು ಕಡಮೆ ಎಂದೂ, ರೈತರು ತಕಾವಿ ಸಾಲಗಳನ್ನು ಪಡೆಯುವುದರಲ್ಲಿ ಆತುರರಾಗಿರಲಿಲ್ಲವೆಂದೂ, ಆದಕಾರಣ ರೈತ ಪ್ರಜೆಗಳು ಸಂತುಷ್ಟರಾಗಿ ಅಭಿವೃದ್ಧಿ ಹೊಂದುತ್ತಿದಾರೆಂದೂ ಈ ರಿಪ್ರೋರ್ಟಿನ ತಿಳಿಸುತ್ತದೆ ಈ ಸಾಲಿನಲ್ಲಿ ೬೧,೬೨೬ ಎಕರೆ ಜಮೀನು ಹೆಚ್ಚಾಗಿ ವ್ಯವಸಾಯಕ್ಕೆ ಬಂದು, ಜಮಾ ಕಂದಾಯವು ೬೪ ೨೦೧ ರೂಪಾಯಿ ಜಾಸ್ತಿಯಾಯಿತು ಶಿವಮೊಗ್ಗಾ ಡಿಸ್ಟ್ರಿಕ್ಟಿನೊಳಗೆ ರೈತರು ಹಿಂದಿನ ಸಾಲಿನಲ್ಲಿ ೩೧,೫೦೦ ಎಕರೆ ಜಮೀನನ್ನೂ, ಕಳೆದ ಸಾಲಿನಲ್ಲಿ ೩೯೬೦ ಎಕರೆ ಜಮೀನನ್ನೂ ರಾಜೀನಾಮೆಕೊಟ್ಟು ಬಿಟ್ಟುಬಿಟ್ಟರು

ಡಿಸ್ಟ್ರಿಕ್ಟುಗಳಲ್ಲಿ ಮೇಲ್ಪಟ್ಟ ಹುದ್ದೆದಾರರುಗಳು ತಮ್ಮ ಕರ್ತವ್ಯವನ್ನು ಮಾಡುತ್ತಾ ಇಲ್ಲವೆಂಬುವುದಕ್ಕೆ ಈ ರಿಪ್ರೋರ್ಟಿನಲ್ಲಿ ಹಲವು ದೃಷ್ಟಾಂತಗಳು ಕಂಡುಬರುತ್ತವೆ ಕಳೆದ ಸಾಲಿನಲ್ಲಿ ಬೆಂಗಳೂರು ಚಿಕ್ಕಮಗಳೂರು, ಮೂಡಿಗೆರೆ ಚಳ್ಳಕೆರೆ, ದಾವಣಗೆರೆ ಜಗಲೂರು ಹೊಸದುರ್ಗ, ಈ ಸ್ಥಳಗಳಲ್ಲಿರುವ ಖಜಾನೆಗಳನ್ನು ಒಬ್ಬನಾದರೂ ಯಾವರೂ ತನಿಖೆ ಮಾಡಲಿಲ್ಲವೆಂದು ಗವರ್ನಮೆಂಟಿನವರು ವಿಷಾದಪಡುವುದನ್ನು ನೋಡಿ, ಗವರ್ನಮೆಂಟಿನ ದರ್ಪವು ನಡೆಯುವಾಗುತ್ತಿದೆಯಲ್ಲಾ ಎಂದು ವ್ಯಸನಪಡಬೇಕಾಗಿದೆ ಹಾಸನದ ಡೆಪ್ಯುಟಿ ಕಮಿಷನರವರ ಎರಡು ವರುಷಗಳಲ್ಲಿ ಒಂದು ಜಮಾಬಂದಿ ರಿಪ್ರೋರ್ಟನ್ನಾದರೂ ಬರೆದಿಲ್ಲವೆಂದು ರೆವಿನ್ಯೂ ಕಮಿಷನರವರು ಹೇಳುತ್ತಾರೆ ಹೀಗೆ ಉಪೇಕ್ಷೆ ಮಾಡಲು ಕಾರಣವೇನೆಂದು ಗವರ್ನಮೆಂಟಿನವರು ಕೂಡ ಪ್ರಶ್ನೆ ಕೇಳುವರು ದರಖಾಸ್ತುಗಳನ್ನು ಬೇಗಬೇಗ ವ್ಯವಸ್ಥೆ ಮಾಡುವುದಿಲ್ಲ ೨೦,೯೩೪ ದರಖಾಸ್ತುಗಳ ಪೈಕಿ ಆ ಸಾಲಿನಲ್ಲಿ ೧೧,೬೯೯ ಮಾತ್ರ ವ್ಯವಸ್ಥೆಯಾಗಿರುವವು ಹೀಗೆ ೮೯೦೦ ದರಖಾಸ್ತುಗಳು ಇತ್ಯರ್ಥವಾಗದೆ ಹೋಗಲು ಅಧಿಕಾರಿಗಳ ಅಲಕ್ಷ್ಯವೇ ಕಾರಣವಾಗಿರಬೇಕು ನಮಗೆ ಡೆಪ್ಯುಟಿ ಕಮಿಷನರುಗಳೂ ಸಬ್ ಡಿವಿಜನ್ ಆಫೀಸರುಗಳೂ ಇನ್ನಾವ ಕಾರಣಗಳನ್ನು ಹೇಳುವರೋ ತಿಳಿಯುವುದಿಲ್ಲ

ರೈತರಿಗೆ ಜಮೀನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ತಕಾವಿ ಸಾಲಗಳನ್ನು ಕೊಡುವುದರಲ್ಲೂ ಕೊಟ್ಟಿರುವ ಸಾಲಗಳನ್ನು ವಸೂಲ್ಮಾಡುವುದರಲ್ಲೂ ಡಿಸ್ಟ್ರಿಕ್ಟ್ ಆಫೀಸರುಗಳು ಉದಾಸೀನವಾಗಿ ಮುಂತಾದ ಮೊಸಲಿಲ್ಲವೆಂದು ಗವರ್ನಮೆಂಟಿನವರೇ ದುಃಖಪಟ್ಟು ಹೇಳುತ್ತಾರೆ ಇಂಥಾ ಶ್ರದ್ಧಾರಹಿತರಾದ ಅಧಿಕಾರಿಗಳಿದ್ದರೆ ವ್ಯವಸಾಯವು ಹ್ಯಾಗೆ ಅಭಿವೃದ್ಧಿ ಹೊಂದುವುದೋ ನಮಗೆ ತಿಳಿಯದು ಬೌಂಡರಿ ಮಾರ್ಕುಗಳ ಬಜವಾಯಿಸುವಿಕೆಯೂ ಉಪೇಕ್ಷೆ ಮಾಡಲ್ಪಟ್ಟಿದೆ ಎಂದೂ, ಅದು ಕ್ರಮವಾಗಿ ನಡೆಯುವುದಕ್ಕೆ ರೂಲ್ಸು ಬದಲಾವಣೆ ಆಗಬೇಕಾಗಿದ್ದಲ್ಲಿ ತಿಳಿಸಬೇಕೆಂದೂ ಸರ್ಕಾರದವರು ರೆವಿನ್ಯೂ ಕಮಿಷನರನ್ನು ಕೇಳಿದಾರೆ

ಡೆಪ್ಯುಟಿ ಕಮಿಷನರುಗಳೂ ಸಬ್ ಡಿವಿಜನ್ ಆಫೀಸರುಗಳೂ ತಮ್ಮ ಅಧಿಕಾರಕ್ಕೊಳಪಟ್ಟ ಪ್ರದೇಶಗಳಲ್ಲಿ ಆಗಾಗ್ಗೆ ಸಂಚಾರ ಮಾಡುತ್ತಿದ್ದರೆ ಪ್ರಜೆಗಳ ಕಷ್ಟಸುಖಗಳೂ ಇಂಗಿತಾಭಿಪ್ರಾಯಗಳೂ ಗೊತ್ತಾಗಿ ಬೇಗನೆ ಪರಿಹಾರವಾಗುವುದಕ್ಕೂ, ಕೆಳಗಿನ ನೌಕರರ ಕಾರುಬಾರುಗಳು ಪ್ರಜಾಹಿತಕರವಾಗಿ ಪರಿಣಮಿಸುವುದಕ್ಕೂ ಅವಕಾಶವಾಗುತ್ತದೆ ಇದಕ್ಕಾಗಿಯೇ ಪ್ರತಿ ಒಬ್ಬ ಅಧಿಕಾರಿಯೂ ಇಷ್ಟಿಷ್ಟು ದಿನವಾದರೂ ಸಂಚಾರ ಮಾಡಬೇಕೆಂದು ಸರ್ಕಾರದವರು ಕಡ್ಡಾಯವಾಗಿ ವಿಧಿಸಿರುತ್ತಾರೆ ಆ ಅಧಿಕಾರಿಗಳು ಆ ರೀತಿ ಸಂಚಾರ ಮಾಡಲಿಲ್ಲವೆಂದು ಈ ರಿಪೋರ್ಟಿನಿಂದ ಗೊತ್ತಾಗುವುದು ಬೆಂಗಳೂರು, ತುಂಕೂರು ಮತ್ತು ಹಾಸನದ ಡೆಪ್ಯುಟಿ ಕಮಿಷನರುಗಳಾಗಲಿ, ಅಸಿಸ್ಟೆಂಟ್ ಕಮಿಷನರುಗಳ ಪೈಕಿ ಯಾರೇ ಅಗಲಿ ವಿಧಾಯಕವಾಗಿರುವಷ್ಟು ದಿನಗಳಾದರೂ ಸರ್ಕೀಟು ಹೋಗಿಬರಲಿಲ್ಲವೆಂದು ಗವರ್ನಮೆಂಟಿನವರು ವ್ಯಸನಪಡುತ್ತಿದಾರೆ

ಚಕ್ರವರ್ತಿ ದಂಪತಿಗಳಿಗೆ ಬಡ ಪ್ರಜೆಗಳ ಮೇಲಿರುವ ಅಂತಃಕರಣ

ನಮ್ಮ ಚಕ್ರವರ್ತಿ ಸಾರ್ವಭೌಮರೂ ಮಹಾರಾಜ್ಞಿಯವರೂ ಇಂಗ್ಲಾಂಡ್ ಸೀಮೆಯ ಉತ್ತರ ಭಾಗದ ದೇಶಸಂಚಾರಮಾಡುತ್ತಾ ಅಲ್ಲಿರುವ ಮುಖ್ಯವಾದ ಕಲ್ಲಿದ್ದಲಿನ ಗಣಿಗಳನ್ನೂ ಕಬ್ಬಿಣದ ಮತ್ತು ಗಾಜಿನ ಸಾಮಾನುಗಳನ್ನು ಮಾಡುವ ಭಾರಿ ಭಾರಿ ಕಾರ್ಖಾನೆಗಳನ್ನೂ ನೋಡಿಕೊಂಡು ಬರುತ್ತಿರುವುದಾಗಿ ಅಲ್ಲಿಂದ ಈ ವಾರ ಬಂದಿರುವ ವರ್ತಮಾನ ಪತ್ರಿಕೆಗಳ ಮೂಲಕವಾಗಿ ತಿಳಿದುಬರುತ್ತದೆ ಈ ಪ್ರಯಾಣದಲ್ಲಿ ಚಕ್ರವರ್ತಿ ದಂಪತಿಗಳು ಕೆಲವು ಪರಿವಾರದವರನ್ನು ಮಾತ್ರ ತಮ್ಮ ಜೊತೆಯಲ್ಲಿ ಕರೆದುಕೊಂಡು, ಕೂಲಿನಾಲಿ ಮಾಡಿ ಕಾಲಕ್ಷೇಪ ಮಾಡುತ್ತಿರುವ ಬಡ ಜನಗಳ ಮಧ್ಯೆ ಹೋಗಿ, ಅವರು ಹೇಗೆ ಜೀವನ ಮಾಡುತ್ತಿರುತ್ತಾರೆ? ಯಾವ ಯಾವ ಕೆಲಸಗಳನ್ನು ಹೇಗೆ ಹೇಗೆ ಮಾಡುತ್ತಿರುತ್ತಾರೆ? ಎಂಬೀ ವಿಷಯಗಳನ್ನು ತಾವೇ ಖುದ್ದಾಗಿ ನೋಡಿಕೊಂಡು ಬರುವ ಉದ್ದೇಶದಿಂದ ಸಂಚಾರಮಾಡುವವರಾಗಿದ್ದರು ಒಂದು ದಿನ ಚಕ್ರವರ್ತಿಯವರು ಸುಮಾರು ಒಂದು ಸಾವಿರ ಅಡಿ ಆಳವಾಗಿರುವ ಒಂದು ಕಲ್ಲಿದ್ದಲಿನ ಗಣಿಯೊಳಗೆ ಇಳಿದು ಅದರೊಳಗೆ ಕೆಲಸ ಮಾಡುತ್ತಿದ್ದ ಒಬ್ಬ ಕೂಲಿ ಆಳಿನ ಕೈಯಲ್ಲಿದ್ದ ಒಂದು ಪಿಕಾಸಿಯನ್ನು ತಮ್ಮ ಕೋಮಲವಾದ ಕೈಯಲ್ಲಿ ತೆಗೆದುಕೊಂಡು, ಸ್ವಲ್ಪ ಕಲ್ಲಿದ್ದಲನ್ನು ತಾವೇ ಅಗಿದು, ತರುವಾಯ ಆ ಬಡ ಕೂಲಿ ಜನರೊಂದಿಗೆ ಅವರ ಕೆಲಸದ ವಿಷಯ ವಿನೋದವಾಗಿ ಸ್ವಲ್ಪ ಹೊತ್ತು ಸಂಭಾಷಣೆ ಮಾಡಿದರು ತರುವಾಯ ಚಕ್ರವರ್ತಿಯವರು ಅಲ್ಲಿಂದ ಹೊರಟು ಮಹಾರಾಜ್ಞಿಯವರೊಡಗೂಡಿ ಸಕಲ ವಿಧವಾದ ಗಾಜಿನ ಸಾಮಾನುಗಳನ್ನು ಮಾಡುವ ಒಂದು ಕಾರ್ಖಾನೆಗೆ ದಯಮಾಡಿಸಿದಾಗ ಆ ಕಾರ್ಖಾನೆಯವರು ಗಾಜಿನ ನೇತ್ರಾನಂದಕರವಾದ ಒಂದು ಹಂಸಪಕ್ಷಿಯನ್ನು ಮಾಡಿ ಮಹಾರಾಜ್ಞಿಯವರಿಗೆ ಬಹುಮಾನವಾಗಿ ಕೊಟ್ಟರು ತರುವಾಯ ಅವರುಗಳು ಮುಖ್ಯವಾಗಿ ಕಲ್ಲಿದ್ದಲಿನ ಗಣಿಗಳಲ್ಲಿ ಕೆಲಸ ಮಾಡುವವರೇ ವಾಸವಾಗಿರುವ ಒಂದು ಹಳ್ಳಿಗೆ ಬಂದರು ಆ ಗ್ರಾಮವು ಆರೋಗ್ಯಭಾಗ್ಯಕ್ಕೆ ಅನುಕೂಲವಾದ ಮನೆಗಳಿಂದಲೂ ಜನಗಳ ವಿಹಾರಕ್ಕೆ ಯೋಗ್ಯವಾದ ಉದ್ಯಾನವನಗಳು ರೀಡಿಂಗ್ ರೂಮ್ ಕ್ಲಬ್‌ಗಳು ಇವೇ ಮೊದಲಾದ ಸಕಲ ಸೌಕರ್ಯಗಳಿಂದಲೂ ಕೂಡಿ ಮೆರೆಯುತ್ತಿದೆ ಆ ಹಳ್ಳಿಯಲ್ಲಿ ಒಬ್ಬ ಹೆಂಗಸು ತನ್ನ ಮಗುವನ್ನು ಎತ್ತಿಕೊಂಡು ಚಕ್ರವರ್ತಿ ದಂಪತಿಗಳು ಆ ಮಾರ್ಗವಾಗಿ ಹೋಗುವುದನ್ನು ನೋಡುವುದಕ್ಕೆ ತನ್ನ ಮನೆಯ ಬಾಗಿಲಲ್ಲಿ ನಿಂತಿದ್ದಳು ಅವರುಗಳು ಕೂತಿದ್ದ ಮೋಟಾರ್ ಗಾಡಿಯು ಅವಳ ಮನೆಯ ಮುಂದೆ ಬಂದ ಕೂಡಲೆ ಥಟ್ಟನೆ ನಿಂತಿತು ಚಕ್ರವರ್ತಿಯವರೂ ಮಹಾರಾಜ್ಞಿಯವರೂ ಗಾಡಿಯಿಂದ ಇಳಿದು ಆ ಹೆಂಗಸಿಗೆ ನಾವು ನಿನ್ನ ಮನೆಯೊಳಗೆ ಬಂದು ಸ್ವಲ್ಪ ಹೊತ್ತು ಕೂತುಕೊಳ್ಳಬಹುದೋ? ಎಂದು ಕೇಳಿದರು ಆಗ ಆ ಹೆಂಗಸಿಗೆ ಎಷ್ಟು ಧೈರ್ಯವೂ ಆನಂದವೂ ಉಂಟಾಗಿರಬೇಕೆಂದು ವಾಚಕರೇ ಊಹಿಸಿಕೊಳ್ಳಬೇಕು ತರುವಾಯ ಅವರುಗಳು ಒಳಗೆ ದಯಮಾಡಿಸಿದರು ಮಹಾರಾಜ್ಞಿಯವರು ಮನೆಯೊಳಗೆ ಸುತ್ತಲೂ ಪರೀಕ್ಷಿಸಿ ಅದು ಚೊಕ್ಕಟವಾಗಿಯೂ ಸಾಮಾನುಗಳೆಲ್ಲಾ ಅದರದರ ಸ್ಥಾನದಲ್ಲಿ ಕ್ರಮವಾಗಿಯೂ ಇದ್ದುದನ್ನು ನೋಡಿ ಸಂತೋಷಪಟ್ಟು ಆ ಗೃಹಿಣಿಯನ್ನು ಸ್ತೋತ್ರಮಾಡಿದರು ಬೇರೊಂದು ಗ್ರಾಮದಲ್ಲಿ ಚಕ್ರವರ್ತಿ ದಂಪತಿಗಳು ಒಬ್ಬ ಗಣಿಯವನ ಮನೆಯಲ್ಲಿ ಹೊಕ್ಕು, ಸ್ವಲ್ಪ ಹೊತ್ತು ಕೂತುಕೊಂಡು ಮಾತನಾಡಿ, ಮನೆ ಯಜಮಾನಿ ಕೊಟ್ಟ ಸ್ವಲ್ಪ ಟೀಯನ್ನು ಬಹು ಪ್ರೀತಿಯಿಂದ ಸ್ವೀಕರಿಸಿ ಪಾನಮಾಡಿ ಮುಂದೆ ಪ್ರಯಾಣ ಬೆಳೆಸಿದರು

ಅದೇ ದಿನದಲ್ಲಿ ಆ ಡಿಸ್ಟ್ರಿಕ್ಟಿನಲ್ಲಿರುವ ಒಂದು ಗಣಿಯಲ್ಲಿ ಭಯಂಕರವಾದ ಒಂದು ಅಪಾಯಕರ ಸಂಭವಿಸಿತು ಒಂದು ಸ್ಫೋಟದ ವಿಷದ ಯವಾಯುವು ಆ ಗಣಿಗಳಲ್ಲೇ ಹುಟ್ಟಿ, ಹತ್ತಿಕೊಂಡು ಸಿಡಿದುದರ ದೆಸೆಯಿಂದ ಮಹಾರವದಿಂದ ಸಿಡಿಯಿತು ಈ ಅಪಘಾತದಲ್ಲಿ ಇಪ್ಪತ್ತು ಪ್ರಾಣಗಳು ಹತವಾದುವು ಕೂಡಲೇ ಸಮೀಪದಲ್ಲಿದ್ದ ಅನೇಕ ಗಣಿಯ ಕೆಲಸದವರೂ ಸರಕಾರದವರೂ ಈ ಅಪಾಯಕ್ಕೆ ಸಿಕ್ಕಿ ಇನ್ನೂ ಜೀವಿತರಾಗಿದ್ದವರ ಪ್ರಾಣಗಳನ್ನು ಸಂರಕ್ಷಣೆಮಾಡುವುದಕ್ಕಾಗಿ ನುಗ್ಗಿ ಹೋದರು ಆಗ ತಿರಿಗಿ ಎರಡನೇ ಬಾರಿ ಅಪಾಯಕರ ಸಂಭವಿಸಿದುದರಿಂದ ಇತರರ ಪ್ರಾಣಸಂರಕ್ಷಣೆ ಮಾಡುವುದಕ್ಕೆ ಹೋದವರು ತಾವೇ ತಮ್ಮ ಪ್ರಾಣಗಳನ್ನು ಕೊಡಬೇಕಾಗಿ ಬಂದಿತು ಈ ಎರಡನೇ ಅಪಘಾತದಲ್ಲಿ ಇನ್ನೂ ಐವತ್ತು ಮಂದಿ ಮೃತಪಟ್ಟರು ಇವರಲ್ಲಿ ಗಣಿಗಳ ಮುಖ್ಯ ಇನ್ಸ್‌ಪೆಕ್ಟರವರು ಒಬ್ಬರಾಗಿದ್ದರು ಇವರು ಹಿಂದೆ ನಮ್ಮ ಇಂಡಿಯ ಗವರ್ನಮೆಂಟ್ ಸರ್ವೀಸಿನಲ್ಲಿದ್ದವರು ಈ ದುಃಖಕರವಾದ ವಾರ್ತೆಯು ಚಕ್ರವರ್ತಿ ದಂಪತಿಗಳಿಗೆ ಮುಟ್ಟಿದಾಗ್ಗೆ ಅವರುಗಳು ಆ ದಿನವೆಲ್ಲಾ ಹೊತ್ತಾರೆಯಿಂದ ಸಾಯಂಕಾಲದ ವರೆಗೂ ಬೇರೆ ಬೇರೆ ಕಡೆ ಸಂಚಾರಮಾಡಿ ಬಹಳವಾಗಿ ಬಳಲಿದ್ದವರಾದಾಗ್ಯೂ ಕೂಡಲೆ ತಮ್ಮ ಮೋಟಾರ್ ಗಾಡಿಯನ್ನು ನಡೆಸುವವನಿಗೆ ಆ ಗಣಿಯ ಹತ್ತಿರಕ್ಕೆ ಹೋಗಬೇಕೆಂದು ಅಪ್ಪಣೆಕೊಟ್ಟು ತಾವುಗಳು ಅದರಲ್ಲಿ ಕೂತುಕೊಂಡು ದಯಮಾಡಿದರು ಅವರುಗಳು ಅಲ್ಲಿಗೆ ಸೇರಿದಾಗ ಗಂಡಂದಿರ ಹೆಣಕ್ಕಾಗಿ ಹೆಂಡತಿಯರೂ ತಂದೆಗಳ ಶವಕ್ಕಾಗಿ ಮಕ್ಕಳೂ ತಮ್ಮ ಅಣ್ಣತಮ್ಮಂದಿರ ದೇಹಕ್ಕಾಗಿ ಅವರ ಸಹೋದರಿಗಳೂ ಗೋಳಾಡುತ್ತಾ ಕಾದಿರುವ ದೊಡ್ಡ ಗುಂಪನ್ನು ಕಂಡರು ಇವರ ಗೋಳಾಟಗಳನ್ನು ನೋಡಿ ಮಹಾರಾಜ್ಞಿಯವರು ಅವರ ದುಃಖದಲ್ಲಿ ಭಾಗಿಗಳಾಗಿ ಕಂಬನಿಗಳನ್ನು ಸುರಿಸಿದರು ಚಕ್ರವರ್ತಿಯವರು ಆದರದಿಂದ ಅವರ ಸಂಗಡ ಮಾತಾಡಿ ತಮ್ಮ ಸಂತಾಪವನ್ನು ಪ್ರಕಾಶಪಡಿಸಿದರು

ಚಕ್ರವರ್ತಿಗಳೂ ಮಹಾರಾಜ್ಞಿಯವರೂ ಆಗಿರುವಂಥ ಈ ಮಹಾತ್ಮರುಗಳಿಗೆ ಮನುಷ್ಯರು ಕೋರುವ ಲೌಕಿಕದ ಸಕಲ ಭೋಗಭಾಗ್ಯಗಳೂ ಅಪಾರವಾಗಿರತಕ್ಕವಷ್ಟೆ ಇಂಥ ಮಹನೀಯರುಗಳು ಆ ಬಡ ಕೂಲಿನಾಲಿ ಜನಗಳ ಕೆಲಸ ಕಾರ್ಯಗಳ ವಿಷಯ ಏಕೆ ಚಿಂತಿಸಬೇಕು? ಅವರ ದುಃಖಗಳಲ್ಲಿ ಇವರು ಏಕೆ ಭಾಗಿಗಳಾಗಬೇಕು? ಈ ಪ್ರಶ್ನೆಗೆ ಉತ್ತರವನ್ನು ಹೇಳುವುದು ಕಷ್ಟವಲ್ಲ ಅದೇನೆಂದರೆ ಚಕ್ರವರ್ತಿಯವರೂ ಮಹಾರಾಜ್ಞಿಯವರೂ ರಾಜಾಧಿರಾಜನಾದ ಪರಮಗುರುವಿನ ಶಿಷ್ಯವರ್ಗಕ್ಕೆ ಸೇರಿದವರೇ ಆಗಿರುತ್ತಾರೆ ಆ ಪರಮಗುರುವು ಅಷ್ಟು ಮಹಿಮಾಸ್ವರೂಪನಾಗಿದ್ದರೂ ಕೂಡ ತಾನು ಆನನ್ನು ನಿತ್ಯವಾಗಿ ಅನುಭವಿಸುವುದಕ್ಕೆ ಬದಲಾಗಿ ತನ್ನನ್ನೇ ತಗಿಸಿಕೊಂಡು ದಾಸನ ರೂಪವನ್ನು ಧರಿಸಿಕೊಂಡನು ಆತನು ತನ್ನ ಶಿಷ್ಯರಿಗೆ ಬೋಧಿಸಿದ್ದೇನೆಂದರೆ — ಜನಗಳನ್ನಾಳುವವರೆನ್ನಿಸಿಕೊಳ್ಳುವವರು ಅವರ ಮೇಲೆ ಅಹಂಕಾರದಿಂದ ಧೊರೆತನಮಾಡುತ್ತಾರೆ, ಮತ್ತು ಅವರೊಳಗೆ ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡಸುತ್ತಾರೆ ಎಂದು ನೀವು ಬಲ್ಲಿರಷ್ಟೆ ಆದರೆ ನಿಮ್ಮೊಳಗೆ ಹಾಗಿರಬಾರದು ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು ನಿಮ್ಮಲ್ಲಿ ಮೊದಲನೆಯವನಾಗಿರಬೇಕೆಂದಿರುವವನು ಎಲ್ಲರ ಆಳಾಗಿರಬೇಕು ಮನುಷ್ಯಕುಮಾರನಾದ ನಾನು ಸಹ ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ಸ್ವಪ್ರಾಣವನ್ನು ಈಡುಕೊಡುವದಕ್ಕೂ ಬಂದೆನು" ಎಂಬುವುದೇ

ಒಳದೇಶದ ವೃತ್ತಾಂತಗಳು

ಕಳೆದ ಸೋಮವಾರ ಹಗಲು 11 ಗಂಟೆ ಸಮಯದಲ್ಲಿ ರಾಜಧಾನಿಯ ಭೂಮಿಯು ಗುಡುಗಿ ಸಣ್ಣನಾಗಿ ನಡುಗಿತು

*
* *

ನಾಳೆ ಶನಿವಾರ ಮಧ್ಯಾಹ್ನ 1½ ಗಂಟೆಗೆ ಬೆಂಗಳೂರು ಲಾಲ್ ಬಾಗ್ ಉದ್ಯಾನವನದಲ್ಲಿ ಫಲಪುಷ್ಪಗಳ ಪ್ರದರ್ಶನವು ಜರುಗುವುದಾಗಿದೆ

ರಾಜಧಾನಿಯ ಮ್ಯುನಿಸಿಪಲ್ ಕಮಿಷನರುಗಳ ಚುನಾವಣೆಯು ಈ ತಿಂಗಳಲ್ಲಿ 19, 20, 21, 22 ನೇ ತಾರೀಖುಗಳಲ್ಲಿ ನಡೆಯತಕ್ಕದ್ದೆಂದು ಗೊತ್ತುಮಾಡಿದಾರೆ

* * *

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಪೋಲೀಸ್ ಕಾನ್‌ಸ್ಟೆಬಲ್ ನಾಗೇಶರಾಯನು ಪ್ರಾಂತಿಬೇದಿ ರೋಗತಗಲಿದ ಒಬ್ಬ ಹೆಂಗಸನ್ನು ಬಹಳ ಸಾಹಸಪಟ್ಟು ಪಾಸಮಾಡಿದ್ದರಿಂದ ಆತನಿಗೆ 20 ರೂಪಾಯಿನ ಒಂದು ಚಿನ್ನದ ಮೆಡಲನ್ನು ಬಹುಮಾನಕೊಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

* * *

ಹೊಸಕೋಟೆಯ ಅಮಲ್ದಾರರಾಗಿದ್ದು ಈಗತಾನೇ ಪೆನ್‌ಷನ್ ಮೇಲೆ ನಿವೃತ್ತರಾದ ಮೆ|| ವಿ ಎನ್ ಗುರುರಾಯರಿಗೆ ಅಲ್ಲಿನ ಪ್ರಜೆಗಳು ಮೂರು ದಿನ ವಿಶೇಷವಾದ ಆತಿಥ್ಯಗಳನ್ನು ಮಾಡಿ, ಹಲವು ವಿಧದಲ್ಲಿ ತಮ್ಮ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ

* * *

ಶ್ರೀಯುವರಾಜರವರು ಕಳೆದ ಸೋಮವಾರ ಮಧ್ಯಾಹ್ನ 3½ ಗಂಟೆಗೆ ರಾಜಧಾನಿಯಿಂದ ಮೋಟಾರ್ ಗಾಡಿಯಲ್ಲಿ ಬೆಂಗಳೂರನ್ನು ಕುರಿತು ಪ್ರಯಾಣಮಾಡಿದರು ಶನಿವಾರ ರಾತ್ರಿ ಸ್ಪೆಷಲ್ ರೈಲಿನಲ್ಲಿ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ, ಅರಮನೆಯ ರಾಣೀವಾಸದವರೂ ರಾಜಧಾನಿಯಿಂದ ಬೆಂಗಳೂರಿಗೆ ತೆರಳುವವರಾಗಿದಾರೆ

* * *

ಕಳೆದ ವಾರ ಶ್ರೀರಂಗಪಟ್ಟಣದಲ್ಲಿ 14 ಅಡಿಯ ತನಕ ಪ್ರವಾಹ ಬಂದಿತ್ತು ಕಬ್ಬಿಣದ ಸೇತುವೆಯ ಮೇಲೆ ಕುಳಿತಿದ್ದ ಒಬ್ಬ ವ್ಯಾಪಾರಸ್ಥನು ಗಾಳಿಯಿಂದ ಬಡಿಸಲ್ಪಟ್ಟು ಹೊಳೆಗೆ ಬಿದ್ದು ಕೊಚ್ಚಿಕೊಂಡು ಹೋದನೆಂದು ತಿಳಿದುಬಂದಿದೆ ನಂಜನಗೂಡಿನಲ್ಲೂ ಕಪಿಲಾ ಹೊಳೆಯು ಈ ಸಲ ವಿಶೇಷವಾಗಿ ಬಂದಿದ್ದು, ಇಳಿಯುತ್ತಾ ಇದೆ

* * *

ಕಳೆದ ಶನಿವಾರದಿಂದ ಬೆಂಗಳೂರಿನಲ್ಲಿ ಪ್ರಾರಂಭವಾಗಿ ನಡೆದ ದಕ್ಷಿಣ ಹಿಂದುಸ್ಥಾನದ ಮಹಮದೀಯರ ಮಹಾ ಸಭೆಯಲ್ಲಿ ನಮ್ಮ ಮಹಾರಾಜರವರಿಗೆ ಅರಿಕೆಮಾಡಿಕೊಳ್ಳಬೇಕೆಂದು ತೀರ್ಮಾನವಾಗಿರುವ ಮುಖ್ಯ ವಿಷಯಗಳೇನೆಂದರೆ—(1) ಗ್ರಾಮಾಂತರಗಳಲ್ಲಿರುವ ಮಹಮದೀಯರ ಸ್ಕೂಲುಗಳಿಗೆ ಒಳ್ಳೇ ಕಟ್ಟಡಗಳನ್ನು ಕಲ್ಪಿಸಿಕೊಡಬೇಕು (2) ಮಹಮದೀಯರು ನಡಿಸುತ್ತಿರುವ ರಾತ್ರಿ ಪಾಠಶಾಲೆಗಳನ್ನು ಹೆಚ್ಚಿಸಿ ಅವುಗಳಿಗೆ ಹೆಚ್ಚಾದ ಗ್ರಾಂಟನ್ನು ಕೊಡಿಸಬೇಕು (3) ಹಿಂದೂ ನೌಕರರಿಗೆ ಕೊಡುವಂತೆ ಮಹಮದೀಯ ನೌಕರರಿಗೂ ವೇತನಗಳನ್ನು ಕೊಡಿಸಬೇಕು (4) ಮಹಮದೀಯ ಬಾಲಕರು ಹೆಚ್ಚಾಗಿ ಓದುತ್ತಿರುವಂಥಾ ಸರ್ಕಾರಿ ಸ್ಕೂಲುಗಳಲ್ಲಿ ಅವರಿಗೆ ಪ್ರತ್ಯೇಕವಾದ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿಕೊಡಬೇಕು (5) ಸರ್ಕಾರಿ ಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ಫಾರ್ಸಿ ಮತ್ತು ಉರುದು ಭಾಷೆಗಳನ್ನು ಕಲಿಸುವುದಕ್ಕೆ ಉಪಾಧ್ಯಾಯರನ್ನು ನೇಮಕಮಾಡಬೇಕು

ಮೈಸೂರು ಗೆಜೆಟ್ ಸಂಗ್ರಹ

ಬೌರಿಂಗ್‌ಪೇಟೆ ತಾಲ್ಲೂಕು ಗೋಣಿಮಾಕಲಹಳ್ಳಿಯಲ್ಲೂ, ಚಿಕ್ಕಮಗಳೂರು ತಾಲ್ಲೂಕು ಕಬ್ಬಿಕೆರೆಯಲ್ಲೂ ಅಂಟು ಜಾಡ್ಯವಿದೆ ಎಂದು ತಿಳಿಯುವುದು

ಮೆ|| ತುಪ್ಪದ ಮಲ್ಲಪ್ಪನವರನ್ನು ಚಳ್ಳಕೆರೆ ತಾಲ್ಲೂಕ್ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮೆ ಮಹಮದ್ ಅಬ್ದುಲ್ಲಾ ಶರೀಫ್‌ಯವರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ — ಹೊಳಲ್ಕೆರೆ ಅಮಲ್ದಾರ್ ಮೆ ಅಬ್ದುಲ್ ಕರೀಂಯವರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ಬದಲಿ ನೋಡತಕ್ಕದ್ದು

ಚಿತ್ರದುರ್ಗದ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ ಆರ್ ರಘುನಾಥರಾಯರಿಗೆ ಜೂನ್ ತಾ 12 ರಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಮೈಸೂರು ಇನ್‌ಫೆಂಟ್ರಿ 2 ನೇ ಬಟಾಲಿಯನ್ ಕಮಿಷನ್ ರ್‍ಯಾಂಕಿಯಲ್ಲಿ ಮೆ|| ಸೈಯದ್ ಅಬ್ದುಲ್ ಹಾಮಿದ್ ಯವರನ್ನು ಕಾಮಂಡಾಂಟರಾಗಿಯೂ, ಮೆ|| ಬಾಲರಾಂ ಯವರನ್ನು ಸುಬೇದಾರ್ ಮೇಜರಾಗಿಯೂ ಬಡ್ತಿಮಾಡಲಾಗಿದೆ

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ — ಮೆ| ಎಂ ಎಸ್ ಹಯಗ್ರೀವರಾಯರನ್ನು ಹೊನ್ನಾಳಿಯಿಂದ ಶಿವಮೊಗ್ಗೆಗೆ, ಮೆ|| ಬಿ ಎಚ್ ಡಾಂಗರೆಯವರನ್ನು ಶಿವಮೊಗ್ಗೆಯಿಂದ ತಿಪ್ಪಟೂರಿಗೆ, ಮೆ|| ಕೆ ಕೇಶವಾಚಾರ್ಯರನ್ನು ತಿಪ್ಪಟೂರಿನಿಂದ ಹೊನ್ನಾಳಿಗೆ

ಇನ್‌ಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ —ಮೆ| ಎನ್ ಜಿ ಕೃಷ್ಣಯ್ಯಂಗಾರ್ರನ್ನು ಕಾವೇರಿ ತಲಾಪ್ ಡಿವಿಜನ್‌ನಿಂದ ಚಿತ್ರದುರ್ಗಕ್ಕೆ, ಮೆ ಎಚ್ ಆರ್ ವೆಂಕಟಸುಬ್ಬರಾಯರನ್ನು ಚಿತ್ರದುರ್ಗದಿಂದ ನೀರಿನ ಇಲಾಖೆ ಮತ್ತು ಷ್ಟೋರಿಗೆ, ಮೆ|| ಇ ರಾಮಸ್ವಾಮಿ ಅಯ್ಯರನ್ನು ಮಾರಿಕಣಿವೆಯಿಂದ ಕೋಲಾರಕ್ಕೆ ಮೆ|| ಎ ಲಕ್ಷ್ಮಣರಾಯರನ್ನು ಕೋಲಾರದಿಂದ ಉತ್ತರ ಸರ್ಕಲ್ ಸೂ|| ಇನ್‌ಜನಿಯರವರ ಆಫೀಸಿಗೆ

ಇಂಡಿಯಾ ದೇಶದ ವೃತ್ತಾಂತಗಳು.

ಮಾಲ್ವಾ ಎಂಬ ಜಹಜು 16,50,000 ರೂಪಾಯಿನ ಭಂಗಾರವನ್ನು ಹಿಂದುಸ್ಥಾನಕ್ಕೆ ತರುತ್ತಿದೆ

* * *

ಮದರಾಸ್ ಆಧಿಪತ್ಯಕ್ಕೆ ಗವರ್ನರಾಗಿ ನೇಮಿಸಲ್ಪಟ್ಟಿರುವ ಲಾರ್ಡ್ ಪೆಂಟ್‌ಲೆಂಡ್ ಯವರು ಪತ್ನಿ ಸಹಿತ ಸೆಪ್ಟಂಬರ್ ತಾ 28 ರಲ್ಲಿ ಲಂಡನ್ ಪಟ್ಟಣದಿಂದ ಹೊರಟು ಬರುವವರಾಗಿದಾರೆಂದು ವರ್ತಮಾನ ಬಂದಿದೆ

* * *

ಈ ವರುಷದ ಅಂತ್ಯ ಭಾಗದಲ್ಲಿ ನಡೆಯುವ ಹಿಂದುಸ್ಥಾನದ ಸಾರ್ವಜನಿಕ ಸಮಾಜಕ್ಕೆ ಮೆ| ಗೋಪಾಲಕೃಷ್ಣ ಗೋಖಲೆಯವರನ್ನು ಪ್ರೆಸಿಡೆಂಟಾಗಿ ನೇಮಿಸಿಕೊಳ್ಳಬೇಕೆಂದು ರಿಸಪ್ಷನ್ ಕಮಿಟಿಯವರು ಗೊತ್ತುಮಾಡಿದಾರೆ

* * *

ಸಿಮ್ಲಾ ಪಟ್ಟಣದ ಮಾಲ್ ಎಂಬ ಚೌಕದಲ್ಲಿರುವ ಭಾರೀ ವರ್ತಕರ ಸಂಘದ ಮಂದಿರಕ್ಕೆ ಕಳೆದ ವಾರ ಕಳ್ಳರು ಬಿದ್ದು ನಗದು 500 ರೂಪಾಯನ್ನೂ, 12,000 ರೂಪಾಯಿನ ಪ್ರಾಮಿಸರಿ ಪತ್ರಗಳನ್ನೂ ಕದ್ದುಕೊಂಡು ಹೋದರು

ಹಿಂದುಸ್ಥಾನದ ಪರಸ್ಪರ ಸಹಾಯಕ ಸಂಘಗಳ ರಜಿಸ್ಟ್ರಾರುಗಳ ಸಭೆಯು ಈ ಸಲ ನವೆಂಬರ್ ತಿಂಗಳಲ್ಲಿ ನಾಗಪುರದಲ್ಲಿ ನಡೆಯುವುದೆಂದು ಪ್ರಕಟವಾಗಿತ್ತು ಈಗ ಇದು ತಪ್ಪಿ ಸಿಮ್ಲಾ ಪಟ್ಟಣದಲ್ಲಿ ಜರುಗುವುದೆಂದು ತಿಳಿದು ಬಂದಿದೆ

* * *

ಬಂಗಾಳಾ ಗವರ್ನರವರು ತಾ 1 ರಲ್ಲಿ ಕಲ್ಕತ್ತೆಗೆ ಬರುತ್ತಿದ್ದಾಗ ಸೂಕ್ನಾ ಸ್ಟೇಷನ್‌ನಲ್ಲಿ ರೈಲ್ ಗಾಡಿಯನ್ನು ಕೆಡವಿ ಅವರಿಗೆ ಅಪಾಯವನ್ನುಂಟುಮಾಡಬೇಕೆಂದು ಪ್ರಯತ್ನಪಟ್ಟವರನ್ನು ಹಿಡಿದುಕೊಡುವವರಿಗೆ 250 ರೂಪಾಯಿ ಬಹುಮಾನ ಕೊಡುತ್ತೇವೆಂದು ಡಾರ್ಜಿಲಿಂಗ್ ಪೋಲೀಸಿನವರು ಪ್ರಕಟಿಸಿದಾರೆ

* * *

ಹುಚ್ಚುನಾಯಿ ಕಡಿದವರಿಗೆ ಚಿಕಿತ್ಸೆ ನಡೆಸುವ ಕಸೌಲಿ ಪಟ್ಟಣದ ಆಸ್ಪತ್ರೆಗೆ 1911 ನೇ ಇಸವಿಯಲ್ಲಿ 3,268 ಮಂದಿ ಹೋಗಿ ಚಿಕಿತ್ಸೆ ಮಾಡಿಸಿಕೊಂಡರು ಈ ಪೈಕಿ 12 ಮಂದಿ ಹಿಂದುಸ್ಥಾನದವರೂ, ಒಬ್ಬ ಯೂರೋಪ್ಯನ್‌ನೂ ಹುಚ್ಚು ರೋಗ ಕಾಲವಾದರು ಉಳಿದವರಿಗೆಲ್ಲಾ ಚಿಕಿತ್ಸೆಯಿಂದ ವಾಸಿಯಾಯಿತು

* * *

ಸಿಂಧು ನದಿಯ ದಡದ ಮೇಲಿದ್ದು ಆಗಾಗ್ಗೆ ಪ್ರವಾಹದ ದೆಸೆಯಿಂದ ನಷ್ಟ ಸಂಭವಿಸುತ್ತಿದ್ದ ಡೇರಾ ಘಾಜಿ ಖಾನ್ ಎಂಬ ಪಟ್ಟಣವನ್ನು ಸರ್ಕಾರದವರು ಬಿಟ್ಟುಬಿಟ್ಟು ಬೇರೆ ಸುರಕ್ಷಿತವಾದ ಸ್ಥಳದಲ್ಲಿ ಕಟ್ಟಿಕೊಂಡರಷ್ಟೆ ಈ ಹೊಸ ಸ್ಥಳಕ್ಕೂ ಅದೇ ಹೆಸರನ್ನಿಟ್ಟಿದಾರೆ ಹಳೇ ಪಟ್ಟಣವನ್ನು ಡ್ರಾಮನ್ ಎಂಬ ಗ್ರಾಮಕ್ಕೆ ಸೇರಿಸಿಬಿಟ್ಟರು

* * *

ಕಳೆದ 20 ನೇ ತಾರೀಖಿಗೆ ಆಖೈರಾದ ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಒಟ್ಟು 337 ಜನರಿಗೆ ಪ್ಲೇಗ್ ತಗಲಿ, 271 ಮಂದಿ ಕಾಲವಾಗಿದಾರೆ ಈ ಮರಣ ಸಂಖ್ಯೆಯ ವಿವರ ಹ್ಯಾಗಂದರೆ—ಬೊಂಬಾಯಿ ಆಧಿಪತ್ಯ 91, ಮದರಾಸ್ 23, ಬಂಗಾಳಾ 7, ಬೇಹಾರ್ ಮತ್ತು ಒರಿಸಾ 6, ಸಂಯುಕ್ತ ಆಧಿಪತ್ಯಗಳು 9, ಪಂಜಾಬ್ 3, ಬರ್ಮಾ 67, ಮೈಸೂರು ಸಂಸ್ಥಾನ 49

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಸಿಯಾಲ್ಕೋಟೆ ಮ್ಯುನಿಸಿಪಾಲಿಟಿಯಲ್ಲಿ ಹಣವನ್ನು ತಿಂದುಹಾಕಿದರೆಂದು ತಿಳಿದುಬಂದದ್ದರಿಂದ ಸರ್ಕಾರದವರು ತನಿಖೆ ಮಾಡಿಸಿ ಸೆಕ್ರೆಟರಿಯಾಗಿದ್ದ ಮಿರ್ಜಾ ಬದ್ರುದೀನ್, ಬಿ ಎ ಯವರನ್ನು ಆಕ್ಟಿಂಗ್ ಸೂಪರಿಂಟೆಂಡೆಂಟ್ ಸಯ್ಯದ್ ನಸೀರ್ ಹೈದರ್ ಯವರನ್ನೂ, ಇನ್‌ಸ್ಪೆಕ್ಟರ್ ಪಸೀಲ್ ಇಲಾಹಿಯವರನ್ನೂ ಕೆಲಸದಿಂದ ವಜಾ ಮಾಡಿಸಿರುತ್ತಾರೆ

* * *

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಫೆರೋಜ್‌ಪುರ ಡಿಸ್ಟ್ರಿಕ್ಟಿನ ಜಮೀನ್‌ದಾರರಿಗೆ ಹಿತಕರವಾದ ಯಾವುದಾದರೊಂದು ಕಾರ್ಯವನ್ನು ಮಾಡಬೇಕೆಂದು ಅಲ್ಲಿ ಬಹು ಕಾಲ ನೌಕರಿಮಾಡಿದ ಮೆ| ಇ ಎ ಫ್ರಾನ್ಸಿಸ್ ಎಂಬಾತನು ತನ್ನ ಆಸ್ತಿಯಲ್ಲಿ 5,000 ರೂಪಾಯಿ ತೆಗೆದಿಟ್ಟಿದಾನೆ ಈ ಮೂಲಧನದಿಂದ ಅಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಇಟ್ಟು ನಡಿಸಬೇಕೆಂದು ಏರ್ಪಾಡು ಮಾಡುತ್ತಿದಾರೆ

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಪೂರ್ಣಿಯಾ ಡಿಸ್ಟ್ರಿಕ್ಟಿನ ಒಂದು ಜಿಲ್ಲಾ ಸ್ಕೂಲಿನಲ್ಲಿ ಓದುತ್ತಿದ್ದ ದ್ವಾರಕಾ ಎಂಬ ಹುಡುಗನು ದರ್ಭಾಂಗ ಜಮೀನ್‌ದಾರಿಯ ಮ್ಯಾನೇಜರಾದ ಮೆ| ವಿಲ್ಲಿಯಂಸ್ ಎಂಬವರನ್ನು ರಸ್ತೆಯಲ್ಲಿ ಕಂಡಾಗ ಅವರಿಗೆ “ಸಲಾಂ” ಮಾಡಲಿಲ್ಲವೆಂತಲೂ, ಸಾಹೆಬರು ಕೋಪಿಸಿಕೊಂಡು ಆ ಹುಡುಗನನ್ನು ಸ್ಕೂಲಿನ ತನಕ ಹಿಂದಟ್ಟಿ ಹೋಗಿ ಕ್ಲಾಸಿನಲ್ಲಿ ಉಪಾಧ್ಯಾಯರ ಎದುರಿಗೆ ಅವನನ್ನು ಹೊಡೆದರೆಂದು ಆ ಹುಡುಗನ ತಂದೆಯು ಫಿರ್ಯಾದು ಮಾಡಿದಾನೆ

* * *

ಕಲ್ಕತ್ತಾ ಪಟ್ಟಣಕ್ಕೆ ಮೆ| ಜೆ ಸಿ ಬಿ ಸ್ಮಿತ್ ಎಂಬೊಬ್ಬ ಜರ್ಮನಿಯವನು ಹಾಂಕಾಂಗ್ ಪಟ್ಟಣದಿಂದ ಒಂದು ಪೆಟ್ಟಿಗೆಯನ್ನು ತರಿಸಿದನು ಅದರ ಮೇಲ್ಭಾಗದಲ್ಲಿ ಧಾನ್ಯದ ಹಿಟ್ಟು ಎಂಬದಾಗಿ ಬರೆದಿತ್ತು ಪೋಲೀಸಿನವರು ಸುಂಕದ ಕಟ್ಟೆಯಲ್ಲಿ ಅನುಮಾನ ಪಟ್ಟು ಆ ಪೆಟ್ಟಿಗೆಯನ್ನು ಒಡೆದು ಅಜಮಾಯಿಷಿ ಮಾಡಿದಾಗ ಕೋಕೈನ್ ಎಂಬ ಮದ್ದು ಪದಾರ್ಥವು ಅದರಲ್ಲಿ ಭರ್ತಿಯಾಗಿತ್ತು ಆ ಪದಾರ್ಥವು 1,050 ರೂಪಾಯಿ ಕ್ರಯವಾಗ ಬಹುದು ಆದದ್ದರಿಂದ ಸರ್ಕಾರದವರು ಆತನನ್ನು ದಸ್ತಗಿರಿ ಮಾಡಿ ಕೋರ್ಟಿಗೆ ಕಳುಹಿಸಿದರು

* * *

ಹೌರಾ ಪಟ್ಟಣಕ್ಕೆ 4 ಮೈಲಿ ದೂರದಲ್ಲಿರುವ ಲಿಲೂವಾ ಎಂಬ ಗ್ರಾಮದಲ್ಲಿ ಕಳೆದ ಗುರುವಾರ ರಾತ್ರಿ ಆಯುಧಪಾಣಿಗಳಾದ ಪಂಚು ಕಳ್ಳರು ನುಗ್ಗಿ ಒಂದು ಮನೆಯನ್ನು ಕೊಳ್ಳೆ ಹೊಡೆಯುತ್ತಿದ್ದರು ಈ 20 ಮಂದಿ ಕಳ್ಳರೂ ಮುಖವಾಡಗಳನ್ನು ಹಾಕಿಕೊಂಡು ವೇಷ ಮರೆಸಿಕೊಂಡಿದ್ದರು ಈ ಸಂಗತಿಯನ್ನು ಕೇಳಿ ಗ್ರಾಮಸ್ಥರೆಲ್ಲಾ ಸೇರಿ ಕಳ್ಳರನ್ನು ಹಿಡಿಯುವುದಕ್ಕೆ ಹೋಗಿ ಅವರ ಮೇಲೆ ಬಿದ್ದು ಕಾದಾಡಿದರು ಕಳ್ಳರು ಅವರ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಓಡಿದರು ಒಬ್ಬನಿಗೆ ಗುಂಡೇಟು ತಗಲಿ ಸತ್ತು ಬಿದ್ದನು ಇವನು ಕಳ್ಳನೋ, ಗ್ರಾಮಸ್ಥನೋ ಗೊತ್ತಾಗದೆ, ಫೋಟೋ ತೆಗೆದುಕೊಂಡು ಶವವನ್ನು ದಫನ್ ಮಾಡಿ ತನಿಖೆ ನಡಿಸುತ್ತಿದಾರೆ

* * *

ಲಕ್ನೋ ಪಟ್ಟಣದ ಕೈಸರ್‌ಬಾಗ್ ಬರದಾರಿ ಎಂಬ ಸ್ಥಳದಲ್ಲಿ ಕಳೆದ ವಾರ ಒಂದು ಮಹಾ ಜನ ಸಭೆ ನಡೆಯಿತು ಸುಮಾರು 5,000 ಪ್ರಜೆಗಳು ಸೇರಿದ್ದರು ರಾಯ್ ಶ್ರೀರಾಮ್ ಬಹದೂರ್‌ಯವರು ಅಗ್ರಾಸನವನ್ನು ವಹಿಸಿದ್ದರು ದರ್ಭಾಂಗ ಮಹಾರಾಜರವರೂ, ಪಂಡಿತ ಮದನಮೋಹನ ಮಾಲವ್ಯರವರೂ ಹಿಂದೂ ವಿದ್ಯಾನಿಲಯದ ಸ್ಥಾಪನೆಗಾಗಿ ದ್ರವ್ಯ ಸಹಾಯ ಮಾಡಬೇಕೆಂದು ಸಭಿಕರನ್ನು ಕೇಳಿದ್ದಲ್ಲದೆ ಅದರಿಂದಾಗುವ ಫಲ ಪ್ರಯೋಜನಾದಿಗಳನ್ನು ಕುರಿತು ಭಾಷಣ ಮಾಡಿದರು ಮಹಮೂದಾಬಾದಿನ ರಾಜರವರು 10,000 ರೂಪಾಯಿ ಕೊಡುವುದಾಗಿ ತಿಳಿಸಿದರು ಇತರ ದೊಡ್ಡ ಮನುಷ್ಯರು ಹಾಕಿದ ಚಂದಾ 10,000 ರೂಪಾಯಿ ವರೆಗೆ ಆಯಿತು ಲಕ್ನೋ ಪಟ್ಟಣ ಒಂದರಲ್ಲೇ 1,80,000 ರೂಪಾಯಿ ವಾಗ್ದಾನವಾಗಿದೆ

* * *

ರಾಮಲಾಲನೆಂಬ ಕಕ್ಷಿಗಾರನೂ, ಬಾಬೂ ಶ್ಯಾಮಚರಣನೆಂಬ ವಕೀಲನೂ, ಜವ್ವಾಸಾಹಿ ಎಂಬ ಆ ವಕೀಲನ ಜವಾನನೂ ಸೇರಿಕೊಂಡು ಒಂದು ಮೊಕದ್ದಮೆಯಲ್ಲಿ ಕೋರ್ಟಿನ ಗುಮಾಸ್ತೆಗೆ ಆಸೆಹುಟ್ಟಿಸಿ ಮೊಕದ್ದಮೆಯ ಕಟ್ಟಿನಲ್ಲಿದ್ದ ರಿಕಾರ್ಡನ್ನು ತಿದ್ದಿಸಿಬಿಟ್ಟರೆಂದು ಮೊಕದ್ದಮೆ ಬಂದು, ಶಹಜಹಾನ್‌ಪುರದ ಸೆಷನ್ಸ್ ಜಡ್ಜರು ರಾಮಲಾಲನಿಗೆ ಒಂದು ದಿನ ಸಾದಾ ಸಜ, 3,000 ರೂಪಾಯಿ ಜುಲ್ಮಾನೆಯನ್ನೂ, ವಕೀಲನಿಗೆ ಒಂದು ದಿನ ಸಾದಾ ಸಜ, 500 ರೂಪಾಯಿ ಜುಲ್ಮಾನೆಯನ್ನೂ, ಜವಾನನಿಗೆ ಒಂದು ದಿನ ಸಾದಾ ಸಜವನ್ನೂ ವಿಧಿಸಿದರು ಗವರ್ನ್‌ಮೆಂಟಿನವರು ಈ ಅಪರಾಧಿಗಳಿಗಾದ ಶಿಕ್ಷೆಯು ಸಾಲದೆಂದು ಅಲಹಾಬಾದ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿದರು ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ವಿದ್ಯಮಾನಗಳನ್ನು ಪರಿಶೋಧನೆ ಮಾಡಿ ಮೇಲ್ಕಂಡ ಶಿಕ್ಷೆಯನ್ನು ಜಾಸ್ತಿಮಾಡಿರುತ್ತಾರೆ ಹ್ಯಾಗಂದರೆ, ರಾಮಲಾಲನಿಗೆ ಎರಡು ವರುಷ ಕಠಿಣ ಸಜ 5,000 ರೂಪಾಯಿ ಜುಲ್ಮಾನೆಯೂ, ಬಾಬೂ ಶ್ಯಾಮಚರಣನೆಂಬ ವಕೀಲನಿಗೆ ಎರಡು ವರುಷ ಕಠಿಣ ಸಜ, 500 ರೂಪಾಯಿ ಜುಲ್ಮಾನೆಯೂ, ಜವ್ವಾಸಾಹಿ ಎಂಬ ಜವಾನನಿಗೆ ಒಂದು ವರುಷ ಕಠಿಣ ಸಜವೂ ವಿಧಿಸಲ್ಪಟ್ಟಿದೆ

* * *

ಸಿಲ್‌ಹಟ್ಟಿನ ಮೌಲ್ವಿ ಬಜಾರಿನಲ್ಲಿ ನಡೆದ ಸನ್ಯಾಸಿಗಳ ಗೊಂದಳದಲ್ಲಿ ಪೋಲೀಸಿನವರ ಗುಂಡೇಟು ಬಿದ್ದ ಮೆ|| ಮಹೇಂದ್ರನಾಥ ದೇವ ಉರುಫ್ ಅರುಣಾಚಲ ಆಶ್ರಮದ ಋಷಿ ಯೋಗಾನಂದರವರು ಆಸ್ಪತ್ರೆಯಲ್ಲಿ ಸತ್ತುಹೋದರು ಇನ್ನೈದು ಮಂದಿ ಸನ್ಯಾಸಿಗಳು ಚಿಕಿತ್ಸೆ ಹೊಂದುತ್ತಿದಾರೆ ಈ ಸನ್ಯಾಸಿಗಳ ಜೊತೆಯಲ್ಲಿ ಹಿಡಿದ ಬಹು ಮಂದಿ ದೊಡ್ಡ ಮನೆತನದ ಬಂಗಾಳಿ ಸ್ತ್ರೀಯರನ್ನು ಸರ್ಕಾರದವರು ಬಿಟ್ಟುಬಿಟ್ಟರು ಬಹು ಮಂದಿ ವಿದ್ಯಾವಂತರಾದ ಮತ್ತು ದೊಡ್ಡ ವಂಶೀಕರ ಪ್ರಾಯಸಮರ್ಥರು ಈ ಆಶ್ರಮದಲ್ಲಿ ಸನ್ಯಾಸಿಗಳಾಗಿ ಸೇರಿಕೊಂಡಿದ್ದರೆಂದು ತಿಳಿಯುವುದು ಈ ಸನ್ಯಾಸಿಗಳು ಒಬ್ಬ ಹುಡುಗನನ್ನು ಅಪಹರಿಸಿಕೊಂಡು ಹೋಗಿದ್ದರೆಂಬ ಮೊಕದ್ದಮೆಯನ್ನು ವಿಚಾರಣೆ ಮಾಡ ಬಾಗ ಅವರು ಆ ಹುಡುಗನನ್ನು ಕೋರ್ಟಿಗೆ ಹಾಜರು ಮಾಡಿದರು ಅವನಿಗೆ 19 ವರುಷವಾಗಿತ್ತೆಂದು ಗೊತ್ತಾಯಿತು ಅಪರಾಧಿಗಳಾದ 15 ಸನ್ಯಾಸಿಗಳ ಬಂಧುಗಳು ಅವರ ಬಳಿಗೆ ಹೋಗಿ ಕೇಳಿದಾಗ ಅವರು ತಮ್ಮ ಕಡೆ ವಕೀಲರು ಅವಶ್ಯವಿಲ್ಲವೆಂದು ತಿರಸ್ಕರಿಸಿಬಿಟ್ಟರೆಂದು ತಿಳಿದು ಬಂದಿದೆ ಮತ್ತು ಆಸ್ಪತ್ರೆಯಲ್ಲಿ ಕಾಲವಾದ ಮೇಲ್ಕಂಡ ಸನ್ಯಾಸಿಯು ಕೆಲವು ಶ್ರೇಷ್ಠವಾದ ಪುಸ್ತಕಗಳನ್ನು ಬರೆದು ಪ್ರಕಟಿಸಿ ಆ ಪ್ರಾಂತ್ಯದಲ್ಲೆಲ್ಲಾ ಹೆಸರುಪಡೆದವನಾಗಿದ್ದನು

* * *

[illegible]ನ್ನಾಥ (ಪುರಿ) ದಲ್ಲಿ ಕಳೆದ ವಾರ ಹಿಂದುಸ್ಥಾನದ ಸರ್ವವೈಷ್ಣವ ಮಹಾ ಸಭೆಯು ನಾಲ್ಕು ದಿನಗಳು ನಡೆಯಿತು ಕಂಚಿಯ ಪ್ರತಿವಾದಿ ಭಯಂಕರ ಅ[illegible]ಚಾರ್ಯರವರು ಮಹಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು ಪ್ರತಿನಿಧಿಗಳು 2,000 ಕ್ಕಿಂತಲೂ ಹೆಚ್ಚಾಗಿಯೂ, ಆಗಂತುಕರು 3,000 ಮಂದಿಯೂ ಸಭೆಯನ್ನಲಂಕರಿಸಿದರು ವಿದ್ಯಾನಿಧಿ ಪಂಡಿತ ಘನದತ್ತಶಾಸ್ತ್ರಿಗಳು ಮಹಾ ಸಭೆಯಲ್ಲಿ ಬಹು ಸ್ವಾರಸ್ಯಯುಕ್ತವಾದ ಉಪನ್ಯಾಸಗಳನ್ನು ಮಾಡಿದರು ಕಲ್ಕತ್ತಾ ಪಟ್ಟಣದ ಹೈಕೋರ್ಟಿನ ಜಡ್ಜರಾದ ಮೆ ಫ಼ಡ್‌ರಾಫ್‌ಯವರೂ, ಪೂರಿನಗರದ ಮ್ಯಾಜಿಸ್ಟ್ರೇಟರಾದ ಮೆ ರಾಮವಲ್ಲಭ ಮಿಸ್ರರವರೂ ಸಭೆಯನ್ನಲಂಕರಿಸಿದ್ದರು ಮಹಾ ಸಭೆಯಲ್ಲಿ ಶ್ರೀ ವೈಷ್ಣವ ಮಹಾ ವಿದ್ಯಾಲಯವನ್ನು ಪೂರೀ ಪಟ್ಟಣದಲ್ಲಿ ಮುಂದಿನ ಆಶ್ವೀಜಮಾಸದಿಂದ ಪ್ರಾರಂಭಿಸಿ ನಡಿಸಬೇಕೆಂದು ತೀರ್ಮಾನವಾಯಿತು ಇದರ ಮೂಲಧನಕ್ಕೆ ಸಭಿಕರಲ್ಲಿ ಕೆಲವರು 800 ರೂಪಾಯಿ ದಾನಮಾಡಿದರು, ಅನೇಕರು ಚಂದಾ ಕಳುಹಿಸುವುದಾಗಿ ವಾಗ್ದಾನಮಾಡಿದರು ಈ ಮಹಾ ಸಭೆಯ ಕಾರ್ಯಗಳನ್ನು ಪ್ರಕಟಮಾಡಲು “ವೈದಿಕ ಸರ್ವಸ್ವ” ಎಂಬ ವಾರ ಪತ್ರಿಕೆಯನ್ನು ಪ್ರಚಾರಮಾಡುವಂತೆ ತೀರ್ಮಾನವಾಯಿತು ಬಹು ಮಂದಿ ರಾಜರುಗಳೂ, ಮಹನೀಯರುಗಳೂ ಈ ಸಭೆಯ ಕಾರ್ಯಗಳನ್ನು ಹೊಗಳಿ ಕಾಗದಗಳನ್ನು ಬರೆದು ಇದ್ದರು

* * *

ಬಂಗಾಳಾದಲ್ಲಿ ಹೆಣ್ಣಿನ ಕಡೆಯವರು ಮದುವೆಯಲ್ಲಿ ಗಂಡಿಗೆ ವರದಕ್ಷಿಣೆಯನ್ನು ಕೊಟ್ಟಲ್ಲದೆ ವಿವಾಹವಾಗುವುದು ಬಹಳ ಕಷ್ಟ ಈ ದುಷ್ಪದ್ಧತಿಯನ್ನು ನಿಲ್ಲಿಸಬೇಕೆಂದೂ, ಇನ್ನು ಮುಂದೆ ಬ್ರಹ್ಮಚಾರಿಗಳು ವರದಕ್ಷಿಣೆಯನ್ನು ತೆಗೆದುಕೊಳ್ಳಕೂಡದೆಂದೂ ಒಂದು ಹೊಸ ಸಂಘವು ಏರ್ಪಾಡಾಗಿ, ಬ್ರಹ್ಮಚಾರಿಗಳೇ ಈ ಸಂಘಕ್ಕೆ ಮೆಂಬರಾಗಿ ಸೇರಿಕೊಂಡಿದಾರೆ ಈ ಬ್ರಹ್ಮಚಾರಿಗಳ ಪೈಕಿ ಪ್ರಬೋಧ ಕುಮಾರಬೋಸು ಎಂಬ ವೈದ್ಯನಿಗೆ ಅವನ ತಂದೆತಾಯಿಗಳು ಹೆಣ್ಣನ್ನು ಗೊತ್ತುಮಾಡಿ ಹೆಣ್ಣಿನ ತಂದೆಯಿಂದ 900 ರೂಪಾಯಿ ವರದಕ್ಷಿಣೆಯನ್ನು ತೆಗೆದುಕೊಂಡು ಲಗ್ನವನ್ನು ಗೊತ್ತುಮಾಡಿದರು ಲಗ್ನವಾಗುವ ಸಮಯದಲ್ಲಿ ಆ ವರನು ತನ್ನ ತಂದೆತಾಯಿಗಳನ್ನು ಕರೆದು ಆ 900 ರೂಪಾಯನ್ನು ಹೆಣ್ಣಿನ ತಂದೆಗೆ ವಾಪಸ್ ಕೊಟ್ಟಲ್ಲದೆ ತಾನು ಲಗ್ನಕ್ಕೆ ಬರುವುದಿಲ್ಲವೆಂದು ಹೇಳಿ ಹಟ ಹಿಡಿದನು ಅವರು ಕಡೆಗೆ ಹಣವನ್ನು ಕಳುಹಿಸಬಿಟ್ಟರೂ ಹೆಣ್ಣಿನ ತಂದೆಯು ಅದನ್ನು ವಾಪಸು ತೆಗೆದುಕೊಳ್ಳದೆ ಬಹಳ ತೊಂದರೆ ಪಡಿಸಿದನು ಅದನ್ನು ವಾಪಸು ತೆಗೆದುಕೊಂಡಲ್ಲದೆ ತಾನು ಮದುವೆಗೆ ಬರುವುದಿಲ್ಲವೆಂದು ವರನು ಹೇಳಿದ್ದನ್ನು ನೋಡಿ, ತೆಗೆದುಕೊಳ್ಳಲೇ ಬೇಕಾಯಿತು ಆಗ ವಿವಾಹವು ಸುಲಲಿತವಾಗಿ ಜರುಗಿತು ಇಂಥಾ ಮೇಲ್ಪಂಕ್ತಿಯನ್ನು ಹಿಂದುಸ್ಥಾನದ ವಿದ್ಯಾರ್ಥಿಗಳಾದ ಯೌವನಸ್ಥರಿಗೆ ಆತನು ಹಾಕಿಕೊಟ್ಟಿರುವುದಕ್ಕಾಗಿ ಸಕಲರೂ ಆತನನ್ನು ಕೊಂಡಾಡತಕ್ಕದ್ದಾಗಿದೆ

* * *

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದ್ರಾಬಾದ್ ಪಟ್ಟಣದಲ್ಲಿ ಬೀದಿಗುಡಿಸುವ ಹೆಂಗಸು ಏನೋ ಅಪರಾಧ ನಡಿಸಿದ್ದರಿಂದ ಮ್ಯಾಜಿಸ್ಟ್ರೇಟರು ಅವಳಿಗೆ ಎಂಟು ದಿನಗಳ ಸಜಾ ವಿಧಿಸಿದರು ಆ ಪಟ್ಟಣದಲ್ಲಿ ಬೀದಿ ಗುಡಿಸುವವರೆಲ್ಲಾ ಗುಂಪಾಗಿ ಮ್ಯುನಿಸಿಪಲ್ ಆಫೀಸಿಗೆ ಹೋಗಿ ಆ ಹೆಂಗಸನ್ನು ಜೈಲಿನಿಂದ ಬಿಡಿಸಿಕೊಡಬೇಕೆಂದು ಕೇಳಿಕೊಂಡರು ಶಿಕ್ಷೆ ವಿಧಿಸಿದ ಮ್ಯಾಜಿಸ್ಟ್ರೇಟರಿಗೂ ಕೂಡ ಅವಳನ್ನು ಬಿಡಿಸುವ ಅಧಿಕಾರವಿಲ್ಲವೆಂದು ಹೇಳಿದಾಗ ಅವರೆಲ್ಲ ಅಲ್ಲಿಂದ ಗುಂಪಾಗಿ ಹೋಗಿ ಬ್ರಿಟಿಷ್ ರೆಸಿಡೆಂಟರಿಗೆ ಅರಿಕೆ ಮಾಡಿಕೊಂಡರು “ನೀವು ನಿಮ್ಮ ಕೆಲಸದ ಮೇಲೆ ಹೋಗಿ, ನಮ್ಮ ಮನವಿಯನ್ನು ತನಿಖೆ ಮಾಡುತ್ತೇವೆ” ಎಂದು ರೆಸಿಡೆಂಟರು ಹೇಳಿಬಿಟ್ಟರು ಅಷ್ಟರಲ್ಲೇ ಯಾರೂ ಬೀದಿ ಗುಡಿಸಲಿಲ್ಲವೆಂದು ಸರ್ಕಾರದವರು ಕೇಳಿ ಪೋಲೀಸಿಗೆ ತಿಳಿಸಿದರು ಪೋಲೀಸಿನವರು ಅವರನ್ನೆಲ್ಲಾ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಿಡಿದುಕೊಂಡು ಹೋದರು ಅವರಲ್ಲಿ ಮುಖಂಡರಾಗಿದ್ದ ನಾಲ್ಕು ಮಂದಿಯನ್ನು ಹಿಡಿದಿಟ್ಟುಕೊಂಡು ಉಳಿದವರನ್ನು ಬಿಟ್ಟುಬಿಟ್ಟರು ಆ ನಾಲ್ವರನ್ನೂ ಜೈಲಿಗೆ ಕಳುಹಿಸದೆ ಬಿಟ್ಟುಬಿಡಬೇಕೆಂದೂ, ಇಲ್ಲವಾದರೆ ಯಾರೂ ಅಲ್ಲಿಂದ ಹೋಗುವುದಿಲ್ಲವೆಂದೂ ಹಟ ಹಿಡಿದು ನಿಂತುಬಿಟ್ಟರು ಮ್ಯಾಜಿಸ್ಟ್ರೇಟರು ಅವರಿಗೆ 5 ನಿಮಿಷ ಅವಕಾಶ ಕೊಟ್ಟು, ಸುಮ್ಮನೆ ಹೋಗಿ ಎಂದು ಹೇಳಿದಾಗ್ಯೂ ಅವರ್‍ಯಾರೂ ಆ ಮಾತನ್ನು ಲಕ್ಷ್ಯಮಾಡದೆ ಹೋದರು ಆಗ ಮ್ಯಾಜಿಸ್ಟ್ರೇಟರು ಆ 75 ಮಂದಿ ಗುಡಿಸುವವರಿಗೂ ಯೋಗ್ಯತಾನುಸಾರ ಎಂಟು ದಿನದ ಒಗಾಯಿತು ಎರಡು ತಿಂಗಳ ವರೆಗೆ ಕಠಿಣ ಸಜಾ ವಿಧಿಸಿದರು

ಆರೋಗ್ಯಜನಕವಾದ ನೀರು

ಗ್ರಾಮಸ್ಥರಿಗೆ ಮಾಡಿದ ಹಿತೋಪದೇಶವು

ಬೆಂಗಳೂರ್ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಡಾಕ್ಟರ್ ಪಿ ಮುತ್ತುಸ್ವಾಮಿದಾಸ್‌ರವರು ಇದೇ ತಿಂಗಳು ತಾ 23ನೇ ಮಂಗಳವಾರ ಯಲಹಂಕವೆಂಬೀ ಸ್ಥಳೀಯ ಸರ್ಕಾರಿ ವೈದ್ಯಾಲಯದ ಪರೀಕ್ಷಾರ್ಥವಾಗಿ ಈ ಗ್ರಾಮಕ್ಕೆ ದಯಮಾಡಿಸಿದರು ಅದನ್ನು ಕೇಳಿದ ಸ್ಥಳೀಯ ಮುಖಂಡರು ಸರ್ಕಾರಿ ಬಂಗ್ಲೆಯಲ್ಲಿ ಅವರ ಸಂದರ್ಶನವನ್ನು ಮಾಡಿ ಬಂದರು ಡಾಕ್ಟರವರು ಬುಧವಾರ ಸಾಯಂಕಾಲ ಪೂರ್ವಭಾವಿಯಾಗಿಯೇ ಅಲಂಕರಿಸಲ್ಪಟ್ಟಿದ್ದ ಇಲ್ಲಿಯ ಎ ವಿ ಸ್ಕೂಲ್ ಹಾಲ್‌ನಲ್ಲಿ ಒಳ್ಳೆಯ ನೀರಿಗೂ, ಕೆಟ್ಟ ನೀರಿಗೂ ಇರುವ ಪರಸ್ಪರ ತಾರತಮ್ಯಗಳ ಮತ್ತು ಅವುಗಳ ಗುಣದೋಷಗಳ ವಿಚಾರವಾಗಿ ಕೇವಲ ಜನೋಪಯೋಗಕರವಾದ ಒಂದು ಉಪನ್ಯಾಸವನ್ನು ಕನ್ನಡದಲ್ಲಿ ಬಹಳ ಸ್ವಾರಸ್ಯವಾಗಿ ಮಾಡಿದರು ಈ ಸ್ಥಳೀಯ ಮುಖಂಡರೂ, ಶೆಟ್ಟಿ ವರ್ತಕರೂ, ಸ್ಕೂಲ್ ಮಾಸ್ಟರುಗಳೂ, ವಿದ್ಯಾರ್ಥಿಗಳೇ ಆದಿಯಾಗಿ ಅನೇಕ ರೈತಾಪಿ ಜನಗಳೂ ಸುಮಾರು 300 400 ಜನರವರೆಗೆ ತಂಡತಂಡವಾಗಿ ಬಂದು ಉಪನ್ಯಾಸಕರ ಅತ್ಯದ್ಭುತ ಭಾಷಣವನ್ನು ಸಾದರಪೂರ್ವಕವಾಗಿಯೂ, ಕುತೂಹಲಯುಕ್ತರಾಗಿಯೂ ಕೇಳಿದರು ಡಾಕ್ಟರವರ ಅಪ್ಪಣೆ ಪ್ರಕಾರ ಸಬ್ ಅ॥ ಸರ್ಜನ್‌ರವರು ಮಳೆಯ ನೀರು, ಭಾವಿಯ ನೀರು, ಕೆರೆಯ ಒಂದು ನೀರು—ಈ ಮೂರು ವಿಧ ನೀರ ಗಳನ್ನೂ ಬೇರೆ ಬೇರೆ ಗಾಜಿನ ಸೀಸಾಯಿಗಳಲ್ಲಿ ತೀಖರಿಸಿ ಸಿದ್ಧಪಡಿಸಿದರು ಉಪನ್ಯಾಸಕರು ನೀರು ಶಾಸ್ತ್ರೀಯವಾಗಿಯೂ ಕೇವಲ ಪರಿಶುದ್ಧವಾದ ವಸ್ತುವೆಂಬುವುದನ್ನು ಸಮರ್ಥಿಸಲು ಪುರಾಣಗಳಿಂದಲೂ, ವೇದದಿಂದಲೂ ಪೂಜ್ಯರಾದ ಪುರಾತನ ತಪಸ್ವಿಗಳ ಅನುಭವಪೂರ್ವಕವಾದ ವಚನಗಳಿಂದಲೂ, ದೃಷ್ಟಾಂತರಗಳನ್ನು ಕರತಲಾಮಲಕವಾಗಿ ವಿವರಿಸಿದ್ದನ್ನು ನೋಡಿದರೆ ಅವರಿಗೆ ವೇದಗಳಲ್ಲಿಯೂ, ಹಿಂದೂ ಶಾಸ್ತ್ರಗಳಲ್ಲಿಯೂ ಇರುವ ಸರ್ವತೋಮುಖವಾದ ಪಾಂಡಿತ್ಯವು ಗೋಚರವಾಗುವುದು ಅನಂತರ ಉಪನ್ಯಾಸಕರು—ಕಲ್ಮಲಯುಕ್ತವಾದ ನೀರನ್ನು ಶೋಧಿಸುವುದಕ್ಕಿರುವ ಬೇರೆ ಬೇರೆ ಮಾರ್ಗಗಳನ್ನು ಪ್ರತ್ಯಕ್ಷ ನಿದರ್ಶನರೂಪವಾಗಿ ತೋರಿಸಿದ್ದರಿಂದ ಸಭಿಕರಿಗೆಲ್ಲಾ ತುಂಬಾ ಪ್ರಯೋಜನವಾಯಿತು ತರುವಾಯ ಅವರು ಸಾಂಕ್ರಾಮಿಕ ರೋಗಗಳ ವಿಚಾರದಲ್ಲಿಯೂ, ಅವುಗಳಲ್ಲೂ ಮುಖ್ಯವಾಗಿ ಅತ್ಯಂತ ಭಯಂಕರವಾದ ವಾಂತಿಭೇದಿ ರೋಗದ ವಿಚಾರದಲ್ಲಿ ಬಹಳ ಹೊತ್ತು ವಿಶದನಾಡಿದರು ಅಂತೂ ಡಾ॥ ಮುತ್ತುಸ್ವಾಮಿದಾಸ್‌ರವರು ಈ ರೀತಿ ಪರೋಪಕಾರ ಮಾಡುವುದರಲ್ಲಿಯೇ ಬದ್ಧಕಂಕಣರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು

ಉಪನ್ಯಾಸವು ಕೊನೆಗಂಡ ಮೇಲೆ ಇಲ್ಲಿಯ ಎ ವಿ ಸ್ಕೂಲ್ ಇಂಗ್ಲಿಷ್ ಅ। ಮಾಸ್ಟರ್ ಮ ವೈ ಕೃಷ್ಣಪ್ಪನವರು ಡಾಕ್ಟರವರ ಅದ್ಭುತ ಭಾಷಣದ ಪ್ರಯೋಜನಾಂಶಗಳನ್ನು ಸಭಿಕರಿಗೆ ವಿವರಿಸಿ, ಅವರಿಗೆ ಪ್ರಜೆಗಳಲ್ಲಿರುವ ಅನಿರ್ವಚನೀಯವಾದ ಅನುರಾಗವನ್ನೂ, ಅವರ ವಿವಿಧ ದಯಾಪೂರಿತವಾದ ನಡವಳಿಕೆಗಳನ್ನೂ ದೃಷ್ಟಾಂತಗಳ ಮೂಲಕ ವ್ಯಕ್ತಪಡಿಸಿ, ಅವರ ವಿಷಯದಲ್ಲಿ ಪ್ರಜೆಗಳು ಅತಿಶಯವಾದ ಭಯ ಭಕ್ತಿ ವಿಶ್ವಾಸಗಳನ್ನುಳ್ಳವರಾಗಿರಬೇಕೆಂದು ಸೂಚಿಸಿದ್ದಲ್ಲದೆ, ಅವರು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗವಾಗಿ ಬಂದಾರಭ್ಯ ಪ್ರಜೆಗಳಿಗೆ ನಾನಾ ವಿಧಗಳಲ್ಲಿ ಮೇಲನ್ನುಂಟುಮಾಡಬೇಕೆಂಬ ನಿಷ್ಕಪಟವಾದ ಪ್ರೀತಿಯಿಂದ ಅವರು ಪಡುತ್ತಿರುವ ಸಾಹಸ ಪ್ರಯತ್ನಗಳನ್ನು ಬಹು ಸ್ವಾರಸ್ಯವಾಗಿ ವಿವರಿಸಿ, ಪ್ರಜೆಗಳ ಪರವಾಗಿ ಉಪನ್ಯಾಸಕರನ್ನು ಕಾಲೋಚಿತವಾಗಿ ವಂದಿಸಿದರು ಉಪನ್ಯಾಸಕರಿಗೆ ಹಾರ ಒಪ್ಪಿಸಲ್ಪಟ್ಟ ತರುವಾಯ ಸ್ವಲ್ಪ ಹೊತ್ತು ಸುಶ್ರಾವ್ಯವಾದ ಹಾಡಿಕೆಯಾಯಿತು ಕೊನೆಗೆ ರಾತ್ರಿ 9 ಗಂಟೆಗೆ ಸಭೆಯು ಮುಕ್ತಾಯವಾಯಿತು

ಪ್ರತ್ಯಕ್ಷದರ್ಶಿ

ಒಬ್ಬಾನೊಬ್ಬ ಪ್ರಮುಖ ವೀರಶೈವರು

ಚಕ್ರವರ್ತಿಯವರು ದಯಪಾಲಿಸಿದ ಬಿರುದು

ಬೊಂಬಾಯಿ ಅಧಿಪತ್ಯದ ದಕ್ಷಿಣ ಡಿಸ್ಟ್ರಿಕ್ಟುಗಳ ಕಮಿಷನರ್‌ರವರಾದ ಮ॥ ಡಬ್ಲಿಯು ಡಿ ಷೆಪರ್ಡ್‌ಯವರು ಬೊಂಬಾಯಿ ಗವರ್ನರವರ ಆಜ್ಞಾನುಸಾರವಾಗಿ ಬೆಳಗಾವಿಯಲ್ಲಿ ಈ ತಿಂಗಳ ಮೊದಲನೇ ವಾರ ಒಂದು ಮಹಾಸಭೆಯನ್ನು ನಡಿಸಿ ರಾವ್ ಬಹದೂರ್ ರುದ್ರಗೌಡ ಚನ್ನವೀರಗೌಡ ಆರಟಾಳರೆಂಬ ವೀರಶೈವ ದೊಡ್ಡ ಮನುಷ್ಯರಿಗೆ ಚಕ್ರವರ್ತಿಯವರಿಂದ ದಯಪಾಲಿಸಲ್ಪಟ್ಟ “ಇಂಪೀರಿಯಲ್ ಸರ್ವಿಸ್ ಆರ್ಡರ್” ಎಂಬ ಪ್ರಶಸ್ತವಾದ ಬಿರುದನ್ನು ಒಪ್ಪಿಸಿದರು ಆ ಮಹಾ ಸಭೆಯಲ್ಲಿ ಕಮಿಷನರವರು ಮ॥ ಆರಟಾಳರವರ ಸಂಕ್ಷೇಪ ಜೀವ ಚರಿತ್ರೆಯನ್ನು ವಿವರಿಸಿ ಕೊಂಡಾಡಿದರು ಕಮಿಷನರ್‌ರವರು ಅಪ್ಪಣೆ ಕೊಡಿಸಿದ್ದೇನೆಂದರೆ—

“ರಾವ್ ಬಹದ್ದೂರ್ ಆರಟಾಳರವರು ಈಗ 60 ನೆಯ ವಯಸ್ಸಿನವರಾಗಿರುವರು ಇವರು ಬಹುಶಃ 40 ವರ್ಷಗಳ ಕಾಲ ಸರ್ಕಾರದುದ್ಯೋಗವನ್ನು ಮಾಡಿರುವರು ಇವರು ಮೊದಲು ಒಂದೆರಡು ವರ್ಷಗಳು ಆರಟಾಳಗ್ರಾಮದ ಪಟೇಲರಾಗಿದ್ದ ನಂತರ 1875 ನೆಯ ವರ್ಷದಲ್ಲಿ ಧಾರವಾಡದ ಕಲೆಕ್ಟರಾಫೀಸಿನಲ್ಲಿ ಸರ್ಕಾರದುದ್ಯೋಗಕ್ಕೆ ಸೇರಿ ಕ್ರಮೇಣ ಕಲೆಕ್ಟರ ಚಿಟ್ನೀಸ್ ಕೆಲಸವನ್ನು ಪಡೆದುಕೊಂಡರು ತರುವಾಯ ಕೆನರಾ ಜಿಲ್ಲಾ ಕಲೆಕ್ಟರ “ದಫ್ತರ್‌ದಾರಿಯ” ಕೆಲಸಕ್ಕೆ ಸೇರಿದರು ಬಳಿಕ ದಕ್ಷಿಣಭಾಗದ ಕಮಿಷನರಿಗೆ “ನೇಟೀವ್ ಅಸಿಸ್ಟೆಂಟ್” ರಾಗಿದ್ದು, ಡೆಪ್ಯುಟಿ ಕಲೆಕ್ಟರಾದರು ಅದೇ ಕೆಲಸದ ಮೇಲೆ ಬಿಜಾಪುರದ ಡಿಸ್ಟ್ರಿಕ್ಟಿನಲ್ಲಿ 6 ವರ್ಷಗಳ ಕಾಲವಿದ್ದು 1896-97 ರಲ್ಲಿ ಪ್ರಾಪ್ತವಾಗಿದ್ದ ಭಯಂಕರವಾದ ಕ್ಷಾಮಪೀಡಾವಸ್ಥೆಯ ಕೆಲಸದಲ್ಲಿ ವಿಶೇಷ ಸಾಹಸವನ್ನು ತೋರಿಸಿದರು ಇವರು ಈ ಎಲ್ಲ ತಮ್ಮ ಉದ್ಯೋಗವನ್ನು ಅತ್ಯಂತ ತೃಪ್ತಿಕರವಾಗಿಯೂ, ದಕ್ಷತೆಯಿಂದಲೂ ನೆರವೇರಿಸಿದರು ಇವರು ಸರ್ಕಾರದ ಕೆಲಸಕ್ಕೆ ಸೇರಿದಂದಿನಿಂದ ಇದುವರೆಗೂ ಬಹು ಶ್ರಮಪಡಬೇಕಾಯಿತು ಸರ್ಕಾರದ ಉದ್ಯೋಗಸ್ಥಾನಗಳನ್ನೆಲ್ಲಾ ತಮ್ಮೊಂದು ವರ್ಗದವರೇ ಆಕ್ರಮಿಸಿಕೊಂಡಿದ್ದ ಚತುರ್ಕರಾಗಿದ್ದ ಬ್ರಾಹ್ಮಣರ ಮಧ್ಯದಲ್ಲಿ ಲಿಂಗಾಯತರಲ್ಲೊಬ್ಬರೇ ಒಬ್ಬರಾದ ಇವರು ಇಂಥ ದೊಡ್ಡ ಪದವಿಗೇರುವುದು ಸುಲಭವಾಗಿರಲಿಲ್ಲ ಆದುದರಿಂದ ಇವರು ಈ ಪದವಿಯನ್ನು ಸಂಪಾದಿಸಿದುದು ಇವರ ಸಾಮರ್ಥ್ಯಕ್ಕೆ ನಿದರ್ಶಕವಾಗಿದೆ ಈ ರಾವ್ ಬಹದ್ದೂರ್‌ರವರು ತಮ್ಮ ಉದ್ಯೋಗದ ಪ್ರಸಕ್ತಿಯಲ್ಲಿ ಗ್ರಾಮಾಧಿಕಾರಿಗಳಲ್ಲೂ, ತಮ್ಮ ಕೈಕೆಳಗಿನ ಉದ್ಯೋಗಿಗಳಲ್ಲೂ ಆಚರಣೆಯಲ್ಲಿದ್ದ ಲಂಚತೆಗೆದುಕೊಳ್ಳುವ ಕೆಟ್ಟಪದ್ಧತಿಯನ್ನು ತಪ್ಪಿಸುವುದಕ್ಕಾಗಿ ಬಹಳ ಶ್ರಮಪಟ್ಟರು ಬಹುಕಾಲದಿಂದನುಸರಿಸಿ ಬಂದಿದ್ದ ಆ ನೀಚಪದ್ಧತಿಯನ್ನು ತಪ್ಪಿಸಲು ಇವರು ಮಾಡಿದ ಸಾಹಸವು ಇವರಿಗೆ ಕೀರ್ತಿಪ್ರದವಾಗಿದೆ ರಾವ್ ಬಹದ್ದೂರ್ ಆರಟಾಳರವರು ತಮ್ಮ ಸತ್ಯಸಂಧತಾಗುಣ ವಿಷಯದಲ್ಲಿ ಮಾತ್ರವೇ ಅಲ್ಲದೆ ರಾಜನಿಷ್ಠಾ ತತ್ಪರತೆಯ ವಿಷಯದಲ್ಲಿಯೂ ಪ್ರಖ್ಯಾತರಾದವರು ಇವರ ಅಸಾಧಾರಣ ರಾಜಭಕ್ತಿಯೂ, ಉದ್ಯೋಗನಿರ್ವಹಣ ಕ್ರಮವೂ ಚಿಕ್ಕ ವಯಸ್ಸಿನ ಲಿಂಗಾಯತರೆಲ್ಲರಿಗೂ ಅನುಕರಣೀಯವಾದುವುಗಳು ಇವರ ಮೇಲುಪಂಕ್ತಿಯನ್ನು ಅನುಸರಿಸಿ ನಡೆಯತಕ್ಕ ಯುವಕರು ಇನ್ನು ಕೆಲವರಾದರೂ ಲಿಂಗಾಯತರಲ್ಲಿ ಉಂಟಾದರೆ ಅವರ ಮತಕ್ಕೆ ಕೀರ್ತಿಪ್ರತಿಷ್ಠೆಗಳುಂಟಾಗಲು ಅವಕಾಶವಾಗುವುದು.”

ಹೊಸೂರು ಲಂಡನ್ ಮಿಷನ್ ಹಾಲಿನ ಪ್ರತಿಷ್ಠೆಯು.

ಇದೇ ತಿಂಗಳು 21 ನೇ ತಾ ಮಿಷನ್ ಹಾಲಿನ ಮುಂಭಾಗದಲ್ಲಿ ಒಂದು ಚಪ್ಪರವು ಬಾವುಟಾಗಳಿಂದ ಅಲಂಕರಿಸಲ್ಪಟ್ಟಿತ್ತು ಸಾಯಂಕಾಲ 7 ಗಂಟೆಗೆ ಸರ್ಕಾರಿ ಉದ್ಯೋಗಸ್ಥರೂ, ಊರಿನ ದೊಡ್ಡ ಮನುಷ್ಯರೂ ಬಂದರು ಸರಿಯಾಗಿ 7½ ಗಂಟೆಗೆ ರೆವ್ ವಿಲ್ಕಿನ್ಸ್ ಧೊರೆಯವರು ಪತ್ನಿಪುತ್ರರು ಪ್ರಮಿಶಮ್ಮನವರು ಬಂದರು ಅವರು ಬಂದ ಕೂಡಲೆ ಈ ಊರಿನ ಸಬ್ ಕಲೆಕ್ಟರ್ ಮ ಬರನ್, ಐ ಸಿ ಎಸ್ ಸಾಹೇಬರವರು ಸಂಸಾರ ಸಮೇತರಾಗಿ ಮೋಟಾರ್‌ಕಾರಿನಲ್ಲಿ ಬಂದರು ಅವರು ಬಂದ ಕೂಡಲೆ ವಿಲ್ಕಿನ್ಸ್ ಧೊರೆಯವರು ಧೊರೆಸಾನಿಯವರು ಪ್ರಮಿಶಮ್ಮನವರು ತಕ್ಕ ಮರ್ಯಾದೆಯಿಂದ ಎದುರುಗೊಳ್ಳುವ ವೇಳೆಯಲ್ಲಿ ಶುಭಸೂಚನೆಗಳ ಮಧ್ಯದಲ್ಲಿ ಕಾರ್ಯವು ಪ್ರಾರಂಭವಾಯಿತು ಸ್ಥಳದ ಉಪದೇಶಿಯರಾದ ಜಿ ಆನಂದಪ್ಪನವರು ಸತ್ಯವೇದವನ್ನು ಪಾರಾಯಣ ಮಾಡಿದರು ಕೂಡಲೆ ಸ್ಥಳಿಕ ಉಪದೇಶಿಯರಾದ ಬಿ ನರಸಯ್ಯನವರು ಎಲ್ಲರಿಗೂ ತಿಳಿಯುವಂತೆ ತೆಲುಗು ಭಾಷೆಯಲ್ಲಿ ದೇವರ ಪ್ರಾರ್ಥನೆ ಮಾಡಿದರು ವಿಲ್ಕಿನ್ಸ್ ಧೊರೆಯವರು ಕನ್ನಡ ಭಾಷೆಯಲ್ಲಿ ಈ ಕಟ್ಟಡದ ಮುಖ್ಯ ಉದ್ದೇಶವನ್ನು ಕುರಿತು ಸಂಕ್ಷೇಪವಾಗಿ ತಿಳಿಸಿದ ನಂತರ ಕಲೆಕ್ಟರ್ ಮ ಬರನ್ ಸಾಹೇಬರವರು ಬಾಗಿಲನ್ನು ತೆರೆದು ಮೊದಲು ಪ್ರವೇಶ ಮಾಡಿದರು ಅವರ ಹಿಂದೆ ವಿಲ್ಕಿನ್ಸ್ ಧೊರೆಯವರು ದೊರಸಾನಿಯವರು ಪ್ರಮಿಶಮ್ಮನವರು ಪ್ರವೇಶಿಸಿದ ನಂತರ ಎಲ್ಲಾ ದೊಡ್ಡ ಮನುಷ್ಯರೂ ಸಭಿಕರೂ ಪ್ರವೇಶಿಸಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು ಕಟ್ಟಡವು ತುಂಬಿ ತುಳುಕುತ್ತಿರುವ ಸಮಯದಲ್ಲಿ ಬೆಂಗಳೂರು ಸಭೆಯ ಬೋಧಕರಾದ ಜಾನ ಬಿಷಪ್ಪನವರು ಕನ್ನಡ ಭಾಷೆಯಲ್ಲಿ ಮಾತನಾಡತೊಡಗಿದರು ಇವರ ಮಾತುಗಳ ಮುಖ್ಯ ಉದ್ದೇಶವೇನೆಂದರೆ—ಪ್ರಥಮದಲ್ಲಿ ಮಿಷನರಿಗಳು ಈ ದೇಶಕ್ಕೆ ಬಂದು ಸ್ಕೂಲುಗಳನ್ನೂ ಅನಾಥಶಾಲೆಗಳನ್ನೂ ವಿಧವೆಯರ ಶಾಲೆಗಳನ್ನೂ ಸ್ಥಾಪಿಸಿ, ಸತ್ಯವನ್ನು ಪ್ರಚುರ ಮಾಡುತ್ತಿರುವ ಪ್ರಯತ್ನಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ವಿವರಿಸಿದರು ಅನಂತರ ವಿಲ್ಕಿನ್ಸ್ ಧೊರೆಯವರು ಹತ್ತು ವರುಷಗಳಿಂದ ಜನರ ಮಧ್ಯದಲ್ಲಿ ಮಾಡಿದ ಪರೋಪಕಾರ ಕಾರ್ಯವನ್ನು ಕುರಿತು ಹೇಳಿ ಇಂಥಾ ಕಟ್ಟಡವು ಕಟ್ಟಲ್ಪಡುವುದಕ್ಕೆ ಆವರ ಮಾತೃ ಸಭೆಯವರಾದ ಬಾರನ್ ಸೊತ್ ಸಭೆಯೇ ಮುಖ್ಯಕಾರಣವೆಂದು ತಿಳಿಸಿ, ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು

ಅನಂತರ ವಿಲ್ಕಿನ್ಸ್ ಧೊರೆಯವರು ಇಂಗ್ಲೀಷ್ ಭಾಷೆಯಲ್ಲಿ ಇದಕ್ಕೆ ಹಣವನ್ನು ಸಹಾಯ ಮಾಡಿದ ಬಾರನ್‌ಮೊತ್ ಸಭೆಗೆ ಒಂದು ಟೆಲಿಗ್ರಾಮನ್ನು ಕಳುಹಿಸಿದರು ಆ ಮೇಲೆ ಇಂಗ್ಲಿಷ್ ಭಾಷೆಯಲ್ಲಿಯೇ ಮಾತನಾಡತೊಡಗಿದರು ಅವರ ಮಾತುಗಳ ಮುಖ್ಯ ಅಂಶಗಳೇನೆಂದರೆ—ಇದು ದೇವರ ರಾಜ್ಯವನ್ನು ಪ್ರಚುರಿಸುವುದಕ್ಕೆ ಕಟ್ಟಲ್ಪಟ್ಟಿದೆ ಭಾನುವಾರ ಆರಾಧನೆಗಳು ಮತ್ತು ವಾರದ ಮಧ್ಯದಲ್ಲಿ ಒಳ್ಳೆ ಉಪನ್ಯಾಸಗಳು ಮಾಡಲ್ಪಡುತ್ತವೆ ಪ್ರತಿ ದಿವಸ 4 ಗಂಟೆಯಿಂದ ರಾತ್ರಿ 8 ಗಂಟೆಯವರೆಗೂ ತೆರೆಯಲ್ಪಟ್ಟು ಎಲ್ಲರೂ ತಮಗೆ ಅನುಕೂಲವಾದ ಭಾಷೆಯಲ್ಲಿ ಓದುವಂತೆ ಬೇರೆ ಬೇರೆ ಪುಸ್ತಕಗಳು, ಪೇಪರುಗಳ ವಿಷಯದಲ್ಲಿ ಸಂಕ್ಷೇಪವಾಗಿ ಮಾತನಾಡಿದರು ಎಲ್ಲಾ ನೀತಿಗೆ ಸಂಬಂಧಪಟ್ಟ ಕಾರ್ಯಕ್ಕಾಗಿ ಇದನ್ನು ಇತರರ ಉಪಯೋಗಕ್ಕಾಗಿ ಕೊಡಲ್ಪಡುವುದೆಂದು ತಿಳಿಸಿದರು ಅನಂತರ ಅಗ್ರಾಸನರಾದ ಮ। ಬರನ್ ಸಾಹೇಬರವರು ತಮ್ಮ ಸಭಾಷೆಯಲ್ಲಿ ಈ ಕಟ್ಟಡವು ಬಹಳ ಬೇಗ ಕಟ್ಟಲ್ಪಟ್ಟರೂ ಬಲವುಳ್ಳದ್ದಾಗಿದೆ ಎಂತಲೂ, ಈ ಕಟ್ಟಡವು ಅನೇಕರಿಗೆ ಉಪಯೋಗವಾಗಿದೆ ಎಂತಲೂ, ವಿಲ್ಕಿನ್ಸ್ ಧೊರೆಯವರು ಮಾಡಬೇಕಾದ ಎಲ್ಲಾ ಕಾರ್ಯಗಳನ್ನೂ ಮಾಡಿದ್ದಾರೆಂತಲೂ, ಇದನ್ನು ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಉಪಯೋಗಿಸಿಕೊಳ್ಳುವುದು ಜನರ ಮೇಲೆ ಬಿದ್ದ ಭಾರವೆಂತಲೂ ತಿಳಿಸಿದರು ಅನಂತರ ಆನೆಕಲ್ಲು ಉಪದೇಶಿಯವರಾದ ಪಾಲ್‌ದಾನಿಯೇಲ್‌ಯವರು ಅಗ್ರಾಸನರವರಿಗೆ ಇಂಗ್ಲೀಷ್ ಭಾಷೆಯಲ್ಲಿ ವಂದನೆಗಳನ್ನು ಸಲ್ಲಿಸಿದ ಬಳಿಕ ಈ ಕಟ್ಟಡದ ಉದ್ದೇಶವನ್ನು ಕುರಿತು ಕೆಲವು ನಿಮಿಷಗಳು ವಿವರಿಸಿದರು ಅನಂತರ ರಿಟೈರ್ಡ್ ತಹಶೀಲ್ದಾರರಾದ ಮ। ಸೂರಪ್ಪಾಚಾರಿಯವರು ಇದಕ್ಕೆ ಹಣಸಹಾಯ ಮಾಡಿದವರಿಗೂ, ರೆವ್ ವಿಲ್ಕಿನ್ಸ್ ಧೊರೆಯವರಿಗೂ, ಅಗ್ರಾಸನರಿಗೂ ವಂದನೆಗಳನ್ನು ಸಲ್ಲಿಸಿದರು

ಕಡೆಯಲ್ಲಿ ಬಿ ನರಸಯ್ಯನವರೂ, ಜಿ ಆನಂದಪ್ಪನವರೂ ದೊಡ್ಡ ಮನುಷ್ಯರಿಗೆ ಹೂವಿನಾಲೆಗಳನ್ನು ಹಾಕಿ ಸರ್ವರಿಗೂ ತಾಂಬೂಲ ಹಂಚಿ ಪನ್ನೀರು ಚಿಮುಕಿಸಿದ ಮೇಲೆ ಸಭೆಯು ಮುಕ್ತಾಯವಾಯಿತು ಅದೇ ದಿನ ರಾತ್ರಿ 7½ ಗಂಟೆಗೆ ರೆವ್. ವಿಲ್ಕಿನ್ಸ್ ಧೊರೆಯವರು ಲಂಡನ್ ದೇಶದಲ್ಲಿರುವ ಭಾರೀ ಕಟ್ಟಡಗಳನ್ನು ಛಾಯಾಪಟಗಳ ಮುಖಾಂತರ ತೋರಿಸಿ, ಇಂಗ್ಲಿಷ್ ಭಾಷೆಯಲ್ಲಿ ಎಲ್ಲರ ಮನಸ್ಸಿಗೂ ಹರ್ಷವುಂಟಾಗುವಂತೆ ಉಪನ್ಯಾಸಮಾಡಿದರು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಶನಿವಾರ ಬೆಳಗ್ಗೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಜೂನ್ ತಿಂಗಳ ಕಚೇರಿಯ ಮೀಟಿಂಗನ್ನು ನಡಸಿದರು ಪ್ರೆಸಿಡೆಂಟ್ ಮ। ಕೃಷ್ಣ ಅಯ್ಯರವರು ಅಗ್ರಾಸನವನ್ನು ವಹಿಸಿದ್ದರು ಕಳೆದ ಜೂನ್ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿಸಿ ಪ್ಯಾಸ್ ಮಾಡಿದರು ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ಒಟ್ಟು ರೂ 21,055-9-2 ಪೈ ಜಮಾ ಆಯಿತು, ರೂ 23,075-1-7 ಪೈ ಖರ್ಚಾಗಿದೆ ಆ ತಿಂಗಳಲ್ಲಿ ಜನನ 185 ಮರಣ—ಪ್ಲೇಗ್ 1, ಜ್ವರ [illegible] ಇತರ ಕಾರಣಗಳು 127, ಒಟ್ಟು 141 ಎಂದು ಗೊತ್ತಾಯಿತು ಇಷ್ಟು [illegible] ಗಳ ಜನನ ಮರಣ ಲೆಕ್ಕಗಳ ಪೈಕಿ ಕಳೆದ ತಿಂಗಳೊಂದರಲ್ಲೇ ಜನನ ಸಂಖ್ಯೆಯು ಮರಣ ಸಂಖ್ಯೆಗಿಂತ ಹೆಚ್ಚಾಗಿದೆ ಎಂದು ಮೆಂಬರುಗಳು ಹೇಳಿ [illegible] ಸಂತೋಷಪಟ್ಟರು

ಪೆರ್ಷನ್ ಸ್ಯಾನಿಟರಿ ಇನ್ಸ್‌ಪೆಕ್ಟರ್ ಮ॥ ಗೋವಿಂದರಾಜ ನಾಯ್ಡುರವರ ಮನೆಯಲ್ಲಿ ಮೂರು ಮಕ್ಕಳಿಗೆ ಸಿಡುಬು ಹಾಕಿಸಿದ್ದರಲ್ಲಿ ಒಂದು ಮಗುವು ತೀರಿಹೋಯಿತು ಇದಕ್ಕೆ ಕಾರಣವೇನೆಂದು ಮ॥ ನರಸಿಂಹಸ್ವಾಮಿಗಳು ಕೇಳಿದರು ಈ ಮರಣಕ್ಕೆ ಸಿಡುಬು ಹಾಕಿದ್ದು ಕಾರಣವಾಗಿಲ್ಲವೆಂದೂ, ಇತರ ಕಾರಣದಿಂದ ಮಗು ತೀರಿಹೋಗಿರಬಹುದೆಂದೂ ಹೆಲ್ತ್ ಆಫೀಸರವರು ಜವಾಬು ಕೊಟ್ಟರು

ಮ್ಯುನಿಸಿಪಲ್ ಕಂದಾಯದ ವಸೂಲಾತಿಯು ತೃಪ್ತಿಕರವಾಗಿಲ್ಲವೆಂದು ಇದುವರೆಗೆ 15,000 ರೂಪಾಯಿನಷ್ಟು ಕಂದಾಯ ರಿಮಿಷನ್ ಆಗಿರುತ್ತದೆಂದು ಬಾಕಿ ಸಾಲಿನಿಂದಲಾದರೂ ಮುತುವರ್ಜಿ ವಹಿಸಿ ಕಂದಾಯಗಳನ್ನು ಬೇಗ ವಸೂಲುಮಾಡಿಸಬೇಕೆಂದೂ ಕೆಲವು ಮೆಂಬರುಗಳು ಸೂಚಿಸಿದರು —ರಾಜಧಾನಿಯ ಬೇರೆ ಬೇರೆ ಮೊಹಲ್ಲೆಗಳಲ್ಲಿ ಒಟ್ಟು 5 ದೊಡ್ಡಿಗಳಿರುತ್ತವೆ ಅವುಗಳ ತೊಂಡು ದನಗಳನ್ನು ಕೂಡಿದರೆ ಮುತ್ಸದ್ದಿಗಳು ಆ ಮೂಗು ಪ್ರಾಣಿಗಳಿಗೆ ಸರಿಯಾಗಿ ಹುಲ್ಲು ಹಾಕುವುದಿಲ್ಲವೆಂದೂ, ಒಳ್ಳೇ ಕುಡಿಯುವ ನೀರನ್ನು ಕೂಡಾ ತೊಟ್ಟಿಗಳಲ್ಲಿ ಹಾಕಿರುವುದಿಲ್ಲವೆಂದೂ, ನಲ್ಲಿಗಳನ್ನು ಸಾಧ್ಯವಾದಮಟ್ಟಿಗೆ ಆ ದೊಡ್ಡಿಗಳೊಳಕ್ಕೂ ಹಾಕಿಸಿ ಒಳ್ಳೇ ಕುಡಿಯುವ ನೀರನ್ನು ಒದಗಿಸಿದರೆ ಅನುಕೂಲವೆಂದೂ ಕೆಲವು ಮೆಂಬರುಗಳು ಸೂಚಿಸಿದರು ಕೆಲವು ವೇಳೆ ಮುತ್ಸದ್ದಿಗಳ ಅಶ್ರದ್ಧೆಯನ್ನು ನೋಡಿ ಸ್ಥಳಾಂತರಕ್ಕೆ ಒದಲಾಯಿಸಿಯೂ ಜುಲ್ಮಾನೆ ವಿಧಿಸಿಯೂ ಆಗಿವೆಯಾದರೂ ದೊಡ್ಡಿಗಳಲ್ಲಿ ತೃಪ್ತಿಕರವಾಗಿ ಕೆಲಸ ನಡೆಯುತ್ತಾ ಇಲ್ಲವೆಂದು ವೈಸ್ ಪ್ರೆಸಿಡೆಂಟರು ತಿಳಿಸಿ, ಮುತ್ಸದ್ದಿಗಳಿಗೆ ಬಾಡಿಗೆ ಖರ್ಚಿಗೋಸ್ಕರ ತಿಂಗಳಿಗೆ 1 ರೂಪಾಯಿನಂತೆ ಅಡ್ವಾನ್ಸು ಕೊಡುವುದು ಒಳ್ಳೇದೆಂದು ಸೂಚಿಸಿದರು ಮೆಂಬರುಗಳು ಆ ರೀತಿ ಕೊಡಬಹುದೆಂದು ಒಪ್ಪಿಕೊಂಡರು ಇವಲ್ಲದ ದೊಡ್ಡಿಗಳಲ್ಲಿ ಇನ್ನೊಂದು ಅಕ್ರಮಕಾರ್ಯ ನಡೆಯುತ್ತಿದೆಂದು ಮ ವೆಂಕಟಾಚಾರ್ಯರು ತಮ್ಮ ಆಡಿಟ್ ರಿಪೋರ್ಟಿನಲ್ಲಿ ಕಾಣಿಸಿದ್ದರು ತೊಂಡು ದನಗಳನ್ನು ಬಿಡಿಸಿಕೊಂಡು ಹೋಗುವಾಗ ಮುತ್ಸದ್ದಿಗಳು ಮಾಲೀಕರಿಂದ ದಿನಕ್ಕೆ 1 ಪೈ ನಂತೆ ನೀರಿನ ತೆರಿಗೆಯನ್ನು ಪ್ರತಿ ದನಕ್ಕೆ ವಸೂಲುಮಾಡುತ್ತಾ ಬಂದಿದ್ದಾರೆ ಈ ಹಣವು ಮ್ಯುನಿಸಿಪಾಲಿಟಿಗೆ ಜಮಾ ಆಗಿದೆ ಮೂಗು ಪ್ರಾಣಿಗಳಿಗೂ ನೀರಿನ ತೆರಿಗೆಯನ್ನು ಮಾಮೂಲ್ ಎಂಬ ಹೆಸರಿನ ವಸೂಲುಮಾಡುವುದು ಅಕ್ರಮವೆಂದು ಮೆಂಬರುಗಳು ಅಭಿಪ್ರಾಯಪಟ್ಟದ್ದರಿಂದ ವೈಸ್ ಪ್ರೆಸಿಡೆಂಟರು ಇನ್ನುಮುಂದೆ ಅದನ್ನು ನಿಲ್ಲಿಸಿಬಿಡುವುದಾಗಿ ಹೇಳಿದರು

ಈ ಸಲದ ಪ್ರತಿನಿಧಿ ಸಭೆಗೆ ಮ್ಯುನಿಸಿಪಲ್ ಮೆಂಬರುಗಳನ್ನು ಚುನಾಯಿಸಬೇಕೆಂದು ಸರ್ಕಾರದಿಂದ ಹುಕುಂ ಬಂದಿತ್ತು ಮುಂದಿನ ತಿಂಗಳಲ್ಲಿ ಹೊಸದಾಗಿ ಮ್ಯುನಿಸಿಪಲ್ ಕಮಿಷನರುಗಳ ಚುನಾವಣೆ ನಡೆಯುವುದರಿಂದ ಆ ವಿಚಾರವನ್ನು ಇನ್ನೊಂದು ತಿಂಗಳ ಮೀಟಿಂಗಿಗೆ ತೆಗೆದಿಡಬೇಕೆಂದು ಗೊತ್ತುಮಾಡಿದರು —ಪಟ್ಟಣದಲ್ಲಿ ರೂ 963-10-5 ಪೈ ಮ್ಯುನಿಸಿಪಲ್ ತೆರಿಗೆ ವಸೂಲಾಗತಕ್ಕದ್ದಲ್ಲವೆಂದು ಮೆಂಬರುಗಳು ಶಿಫಾರಸು ಮಾಡಿದ್ದನ್ನು ಒಪ್ಪಿ ರಿಮಿಷನ್ ಮಾಡಿದೆ ಎಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

ಮೈಸೂರು ಥಿಯೊಸಾಫಿಕಲ್ ಸೊಸೈಟಿಯು (ದೈವಜ್ಞಾನ ಸಮಾಜವು) ಪ್ರೆಸಿಡೆಂಟರು ಕಳೆದ 1910 ನೇ ಇಸವಿಯಿಂದ ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರ್ ಕಟ್ಟಡದ ಮೇಲೆ ಬಗರು ಬಾಡಿಗೆಯಿಂದ ಸೊಸೈಟಿ ನಡೆಯುತ್ತಾ ಬಂದಿದೆ ಎಂದೂ, ಈಗ ಈ ಸಮಾಜಕ್ಕಾಗಿ ಪ್ರತ್ಯೇಕವಾದ ಒಂದು ಕಟ್ಟಡವನ್ನು ಕಟ್ಟಿಕೊಳ್ಳಬೇಕಾಗಿರೋದರಿಂದ ಸುಬ್ರಾಯನ ಕಟ್ಟೆಯ ಪೂರ್ವಭಾಗದಲ್ಲಿರುವ ಖಾಲಿ ನಿವೇಶನವನ್ನು ಮುಫತ್ತಾಗಿ ಕೊಡಿಸಿಕೊಡಬೇಕೆಂದೂ ಅರ್ಜಿ ಬರೆದುಕೊಂಡಿದ್ದಾರೆ ಮ್ಯುನಿಸಿಪಾಲಿಟಿಯವರು ಒಪ್ಪುವ ಷರತ್ತಿಗೆ ಒಳಪಟ್ಟು ಕಟ್ಟಡವನ್ನು ಕಟ್ಟಿಕೊಳ್ಳುವುದಕ್ಕೆ ಒಪ್ಪಿದರೆ ಅವರಿಗೆ ಆ ಸ್ಥಳವನ್ನು ಪ್ರೆಸಿಡೆಂಟರು ಮುಫತ್ತಾಗಿ ಕೊಡಬಹುದೆಂದು ಮೆಂಬರುಗಳು ಅಭಿಪ್ರಾಯಪಟ್ಟರು

ಮ್ಯುನಿಸಿಪಲ್ ಇಂಜನಿಯರಾಗಿದ್ದ ಮ। ವೆಂಕಟಸುಬ್ಬರಾಯರನ್ನು ಸರ್ಕಾರದವರು ಇಂಜನಿಯರ್ ಇಲಾಖೆಗೆ ನೇಮಕ ಮಾಡಿ ಕರೆದುಕೊಂಡದ್ದರಿಂದ ಮ್ಯುನಿಸಿಪಲ್ ಮೆಂಬರುಗಳು ಆ ಕೆಲಸಕ್ಕೆ ಅನುಭವಶಾಲಿಗಳಾಗಿಯೂ ಸರ್ವೀಸುದಾರರಾಗಿಯೂ ಇರುವ ಮ ಅಪ್ಲಾಚಾರ್ಯರನ್ನು ನೇಮಿಸಿಕೊಂಡು ಗವರ್ನಮೆಂಟಿಗೆ ರಿಪೋರ್ಟು ಮಾಡಿದ್ದರು ಮತ್ತು ಮ್ಯಾನೇಜಿಂಗ್ ಕಮಿಟಿಯವರು ಅವರಿಗೆ 100+20 ರೂಪಾಯಿ ಸಂಬಳ ಕೊಡಬಹುದೆಂದು ತೀರ್ಮಾನವನ್ನೂ ಮಾಡಿದ್ದರು ಈಚೆಗೆ ಗವರ್ನಮೆಂಟಿನವರು ಒಂದು ಹುಕುಂ ಕಳುಹಿ ಮ ವೆಂಕಟಸುಬ್ರಾಯರು ಮಾಡಿದ 5 ವರುಷದ ಮ್ಯುನಿಸಿಪಲ್ ಸರ್ವೀಸನ್ನು ಪೆನ್ಷನ್ ಸರ್ವೀಸ್ಸಿಗೆ ಸೇರಿಸಿಕೊಳ್ಳಲಾಗುವುದಿಲ್ಲವೆಂದೂ, ಮ॥ ಅಪ್ಲಾಚಾರ್ಯರನ್ನು ಆ ಕೆಲಸಕ್ಕೆ ನೇಮಿಸಿರುವುದು ತಮಗೆ ಅಭಿಮತವಾಗಿಲ್ಲವಾದ್ದರಿಂದ ಇಂಜನಿಯರ್ ಇಲಾಖೆಯ ಒಬ್ಬ ನೌಕರನನ್ನು ಕೆಲಸಕ್ಕೆ ನೇಮಿಸಿ ರಿಪೋರ್ಟು ಮಾಡಬೇಕೆಂದೂ ತಿಳಿಸಿದರು ಮೆಂಬರುಗಳು ಈ ಅನಿರೀಕ್ಷ್ಯವಾದ ಹುಕುಮನ್ನು ಓದಿಸಿ ಕೇಳಿ, ಎಲ್ಲರೂ ಏಕವಾಕ್ಯತೆಯಿಂದ ಮ॥ ಅಪ್ಲಾಚಾರ್ಯರನ್ನೇ ಸದ್ಯಕ್ಕೆ ಒಂದು ವರುಷದವರೆಗಾದರೂ ನೇಮಿಸಿಕೊಳ್ಳುವಂತೆ ಅಪ್ಪಣೆ ಕೊಡಬೇಕೆಂದು ಯಾಚಿಸುವಂತೆ ಅಭಿಪ್ರಾಯ ಪಟ್ಟರು ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಆ ರೀತಿ ಗವರ್ನಮೆಂಟಿಗೆ ಬರೆಯುವುದಾಗಿ ಒಪ್ಪಿಕೊಂಡರು —ಮ್ಯುನಿಸಿಪಲ್ ಆಫೀಸಿಗೆ 100 ರೂಪಾಯಿನೊಳಗಾಗಿ ಒಂದು ಟೈಪ್ ರೈಟಿಂಗ್ ಮೆಷೀನನ್ನು ಕೊಂಡು ತರಿಸಿಕೊಳ್ಳಬಹುದೆಂದು ಒಪ್ಪಲಾಯಿತು —ಮ್ಯುನಿಸಿಪಲ್ ಸ್ಕೂಲುಗಳ ಕಮಿಟಿ ಗುಮಾಸ್ತೆಯ ಸಂಬಳವನ್ನು 9 ರಿಂದ 12 ರೂಪಾಯಿಗೆ ಬಡ್ತಿಮಾಡಬಹುದೆಂದೂ, ಒಬ್ಬ ಜವಾನನನ್ನು ದೈನಾತಿಗೆ ಕೊಡಬಹುದೆಂದೂ ತೀರ್ಮಾನವಾಯಿತು

ರಾಜಧಾನಿಯಲ್ಲಿ ಕುಡಿಯುವ ನೀರಿನ ವಿಷಯದಲ್ಲಿ ಪ್ರಜೆಗಳಿಗೆ ರಿಯಾಯತಿ ದರಗಳನ್ನು ಮಾಡಿಕೊಟ್ಟಿದ್ದಕ್ಕಾಗಿ ಸರ್ಕಾರದವರನ್ನು ವಂದಿಸಬೇಕೆಂತಲೂ, ಒಂದು ಕೈಯಿಂದ ಕೊಡುವ ಧರ್ಮವನ್ನು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವ ರೀತಿಯಲ್ಲಿ ನೀರಿನ ಅಳತೆ ಯಂತ್ರಗಳಿಗೆ ಪ್ರಜೆಗಳಿಂದ ತಿಂಗಳಿಗೆ 1 ಆಣೆ ಬಾಡಿಗೆ ವಸೂಲುಮಾಡಬೇಕೆಂದು ಮಾಡಿರುವ ರೂಲನ್ನು ಸರ್ಕಾರದವರು ರದ್ದು ಮಾಡಬೇಕೆಂದು ಕೇಳಿಕೊಳ್ಳತಕ್ಕದ್ದೆಂದೂ ಮೆಂಬರುಗಳು ವಿ

ವಾಕ್ಯತೆಯಿಂದ ತಿಳಿಸಿದರು.—ಈರನಗೆರೆಯ ಬಳಿ ಇದ್ದ ಕ್ವಾರ್ಟರ್ ಚತ್ರವನ್ನು ಸರ್ಕಾರದವರು ಮಿಲಿಟರಿ ಇಲಾಖೆಗೆ ತೆಗೆದುಕೊಂಡು ಮ್ಯುನಿಸಿಪಾಲಿಟಿಗೆ 4,700 ರೂಪಾಯಿ ಪ್ರತಿಫಲ ಕೊಟ್ಟು, ಇನ್ನೊಂದು ಕಡೆ ಆ ಹಣದಲ್ಲಿ ಒಂದು ಚತ್ರವನ್ನು ಕಟ್ಟಬೇಕೆಂದು ತಿಳಿಸಿದ್ದರು ಮ್ಯುನಿಸಿಪಾಲಿಟಿಯವರು ಜೀವಣ್ಣರಾಯನ ಕಟ್ಟೆಗೆ ಪೂರ್ವಕ್ಕೂ ಆಸ್ಪತ್ರೆಗೆ ಪಶ್ಚಿಮಕ್ಕೂ ಇರುವ ತ್ರಿಕೋಣಾಕಾರದ ಮೈದಾನದಲ್ಲಿ ಒಂದು ಚತ್ರವನ್ನು ಕಟ್ಟಬೇಕೆಂದು ಗೊತ್ತುಮಾಡಿ ಸ್ಯಾಂಕ್ಷನ್ ಬಗ್ಗೆ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿದರು ಮಿಲಿಟರಿ ಇಲಾಖೆಯವರು ಆ ನಿವೇಶನದಲ್ಲಿ ಲಾಗಾಯತಿನಿಂದ ಕುದುರೆಗಳನ್ನು ತಿರುಗಿಸುವುದೇ ಮೊದಲಾದ ಕೆಲಸಗಳನ್ನು ಮಾಡಿಕೊಳ್ಳುತ್ತಿರುವುದರಿಂದ ಅದನ್ನು ಚತ್ರ ಕಟ್ಟುವುದಕ್ಕೆ ಕೊಡಲಾಗದೆಂದು ಬರೆದು ತಿಳಿಸಿದರು. ಚೀಫ್ ಇಂಜನಿಯರವರು ಅಂದಾಜು ಪಟ್ಟಿಗಳಲ್ಲಿ ಬದಲಾವಣೆ ಮಾಡಿ, ಚತ್ರ ಕಟ್ಟುವುದಕ್ಕೆ 6,700 ರೂಪಾಯಿ ಖರ್ಚಾಗುವುದೆಂದು ತಿಳಿಸಿದರು ಈ ವಿಚಾರಗಳನ್ನೆಲ್ಲಾ ಮೆಂಬರುಗಳು ಪರ್ಯಾಲೋಚಿಸಿ ಈ ಚತ್ರ ಕಟ್ಟುವ ವಿಚಾರವನ್ನು ಇನ್ನೂ ಕೆಲವು ಕಾಲದ ವರೆಗೆ ಗೊತ್ತುಮಾಡಬೇಕಾದದ್ದಿಲ್ಲವೆಂದು ಅಭಿಪ್ರಾಯಪಟ್ಟರು

ಮಾರ್ಕೆಟ್ಟಿನಲ್ಲಿ ಇಟ್ಟಿರುವ ಸರ್ಕಾರಿ ಕರ್ಣಾಟಕ ಆಸ್ಪತ್ರೆಯ ಪಂಡಿತರಾದ ಮ|| ಕೆಂಪರಾಮಪಂಡಿತರಿಗೆ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ ಎಂದೂ, ಈ ಆಸ್ಪತ್ರೆಯಲ್ಲಿ ವೈದ್ಯರಾಗಿರುವುದಕ್ಕೂ, ಆಯುರ್ವೇದ ವಿದ್ಯಾಶಾಲೆಯಲ್ಲಿ ಶಿಕ್ಷಣವನ್ನು ಮಾಡುವುದಕ್ಕೂ ಮ|| ಕೆಂಪರಾಮಪಂಡಿತರಿಗೆ ಬದಲಾಗಿ ಮ|| ಎಸ್ ವೆಂಕೋಬರಾಯರನ್ನು ನೇಮಿಸಿಕೊಳ್ಳಬಹುದೆಂದು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮ|| ಇ ಎಸ್ ಕೃಷ್ಣಸ್ವಾಮಿ ಅಯ್ಯರವರು ಶಿಫಾರಸು ಮಾಡಿದ್ದರು ಮ|| ಎಸ್ ವೆಂಕೋಬರಾಯರು ತಮಗಿರುವ ಯೋಗ್ಯತಾಶಕ್ತಿಯನ್ನು ವಿವರಿಸಿ ವೇದ, ವೇದಾಂಗ, ಸಾಹಿತ್ಯ, ವೈದ್ಯಶಾಸ್ತ್ರ ಧರ್ಮಶಾಸ್ತ್ರಾದಿಗಳನ್ನೆಲ್ಲಾ ಓದಿಕೊಂಡಿರುವುದಾಗಿ ಆ ಗ್ರಂಥಗಳ ಹೆಸರುಗಳನ್ನು ವಿವರಿಸಿ ಅರ್ಜಿ ಬರೆದುಕೊಂಡಿದ್ದರು ಮೆಂಬರುಗಳು ಅವರ ಯೋಗ್ಯತಾಶಕ್ತಿಯು ಅತ್ಯಂತ ಅಮೋಘವಾದದ್ದಾಗಿದೆ ಎಂದೂ, ಆದರೆ ಅಂಥಾ ಪಂಡಿತರಿಗೆ ಈಗ ಸರ್ಕಾರದಲ್ಲಿ ಸಲ್ಲುತ್ತಿರುವಷ್ಟು ಸಂಬಳವನ್ನು ಕೊಡಲು ಮ್ಯುನಿಸಿಪಾಲಿಟಿಗೆ ಚೈತನ್ಯ ಸಾಲದೆಂದೂ, ಸರ್ಕಾರದವರು ಅವರ ಸರ್ವೀಸನ್ನು ಉಚಿತವಾಗಿ ಮ್ಯುನಿಸಿಪಾಲಿಟಿಗೆ ಕೊಡುವುದಾದರೆ ಬಹಳ ಕೃತಜ್ಞರಾಗಿರುವೆವೆಂದೂ, ಮ್ಯುನಿಸಿಪಾಲಿಟಿಯವರು ಅವರನ್ನು ಆಸ್ಪತ್ರೆಯಲ್ಲಿ ಮೇಲ್ವಿಚಾರಣೆ ಕೆಲಸಕ್ಕೆ ಇಟ್ಟುಕೊಂಡು ಬೇರೊಬ್ಬ ಕರ್ಣಾಟಕ ವೈದ್ಯರನ್ನು ಮ|| ಕೆಂಪರಾಮಪಂಡಿತರ ಸ್ಥಾನಕ್ಕೆ ನೇಮಕ ಮಾಡಿಕೊಳ್ಳುವೆವೆಂದೂ ಸರ್ಕಾರಕ್ಕೆ ಅರಿಕೆ ಮಾಡಬೇಕೆಂದು ತೀರ್ಮಾನ ಮಾಡಿದರು —ಸೀತಾವಿಲಾಸ ಅಗ್ರಹಾರದ ಪೂರ್ವದಿಕ್ಕಿನಲ್ಲಿರುವ ಖಾಲಿ ನಿವೇಶನದಲ್ಲಿ ಆಸ್ಪತ್ರೆ ಕಟ್ಟಕೂಡದೆಂದೂ, ದೇವಸ್ಥಾನ ಕಟ್ಟುವುದಕ್ಕೆ ಕೊಡಬೇಕೆಂದೂ ಆ ಸುತ್ತುಮುತ್ತಿನ ನಿವಾಸಿಗಳು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡಿದ್ದರು ಮ್ಯುನಿಸಿಪಾಲಿಟಿಯವರು ಈ ವಿಚಾರವನ್ನು ಚರ್ಚಿಸಿ, ಮರಿಮಲ್ಲಪ್ಪನವರ ಧರ್ಮಸಂಡಿನಲ್ಲಿ ದೇವಸ್ಥಾನ ಕಟ್ಟುವುದಕ್ಕೆಂದು ತೆಗೆದಿಟ್ಟಿರುವ 1,700 ರೂಪಾಯನ್ನು ಆ ಸ್ಥಳದಲ್ಲಿ ದೇವಸ್ಥಾನ ಕಟ್ಟುವುದಕ್ಕೆ ವಿನಿಯೋಗಿಸಬೇಕೆಂದೂ, ಆಸ್ಪತ್ರೆಯನ್ನು ಅಲ್ಲಿ ಕಟ್ಟಲಾಗದೆಂದೂ ಒಪ್ಪಿಕೊಂಡರು —ದೇವರಾಜ ಮೊಹಲ್ಲಾದಲ್ಲಿರುವ ಹೊಸಪಂಡಿತ ಶಾಮರಾಯರೂ, ಲಷ್ಕರ್ ಮೊಹಲ್ಲಾದಲ್ಲಿರುವ ಹಕೀಂ ಅಲ್ಲಿ ಪೀರ್ ಸಾಬರೂ ಮ್ಯುನಿಸಿಪಾಲಿಟಿಯಿಂದ ತಮ್ಮ ಆಸ್ಪತ್ರೆಗೆ ಮಾಸಾಶನವನ್ನು ಕೊಡಿಸಬೇಕೆಂದು ಅರ್ಜಿ ಬರೆದುಕೊಂಡಿದ್ದರು ಹೆಲ್ತ್ ಆಫೀಸರವರು ಆ ಎರಡು ಆಸ್ಪತ್ರೆಗಳನ್ನೂ ಪರೀಕ್ಷಿಸಿ ಮಾಡಿ, ಮ್ಯುನಿಸಿಪಾಲಿಟಿಯು ಹಣವನ್ನು ಈ ರೀತಿ ಗ್ರ್ಯಾಂಟು ಕೊಡುವುದಕ್ಕಿಂತಲೂ ಊರಿನ ಸ್ಯಾನಿಟೇಷನ್ ಅಭಿವೃದ್ಧಿ ಮಾಡುವುದಕ್ಕೂ ಮತ್ತೂ ಅತ್ಯವಶ್ಯವಾಗಿ ಮಾಡುವುದಕ್ಕೂ ವಿನಿಯೋಗಿಸುವುದು ಸಹಜವಾಗಿದೆ ಎಂದು ಅಭಿಪ್ರಾಯಪಟ್ಟಿದ್ದರ ಮೇಲೆ ಆ ಎರಡು ಅರ್ಜಿಗಳನ್ನೂ ನಿರಾಕರಿಸಬೇಕೆಂದು ಮೆಂಬರುಗಳು ಇತ್ಯರ್ಥ ಮಾಡಿದರು

ಕುಕ್ಕರಹಳ್ಳಿ ಕೆರೆಯ ನೀರನ್ನು ವ್ಯವಸಾಯಕ್ಕೆ ವಿನಿಯೋಗಿಸಬಹುದೇ ಎಂದು ಡೆಪ್ಯುಟಿ ಕಮಿಷನರು ಕೇಳಿದ್ದರು ಪಟ್ಟಣದ ಬಳಿ ವ್ಯವಸಾಯ ನಡೆಯುವುದು ಆರೋಗ್ಯಕ್ಕೆ ಕುಂದಕವೆಂದು ಕಂಡುಬಂದದ್ದರಿಂದ ಆ ನೀರನ್ನು ವ್ಯವಸಾಯಕ್ಕೆ ಕೊಡಬೇಕಾದದ್ದಿಲ್ಲವೆಂದು ತೀರ್ಮಾನವಾಯಿತು —ಹೆಲ್ತ್ ಆಫೀಸರಿಗೆ ಕೆಲವು ಪುಸ್ತಕಗಳನ್ನು ಕೊಂಡು ತರಿಸಿಕೊಳ್ಳುವುದಕ್ಕೆ ಮೆಂಬರುಗಳು 33-1-0 ಯನ್ನು ಖರ್ಚು ಮಾಡಬಹುದೆಂದು ಒಪ್ಪಿಕೊಂಡರು —ಮಂಡಿಯಲ್ಲಿರುವ ಹಿಂದುಸ್ಥಾನಿ ರಾತ್ರಿಪಾಠಶಾಲೆಗೆ ಮ್ಯುನಿಸಿಪಾಲಿಟಿಯಿಂದ ತಿಂಗಳಿಗೆ ರೂಪಾಯಿನಂತೆ ಗ್ರ್ಯಾಂಟು ಕೊಡತಕ್ಕದ್ದೆಂದು ಮೆಂಬರುಗಳು ಸ್ಯಾಂಕ್ಷನ್ ಮಾಡಿದಾರೆ

ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರಮೊದಲಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ನಿಯಮ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ನಾವಶ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು ರೆವ್ ಇ ಡಬ್ಲ್ಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮೀದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃಪೆಪಡಿಸುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಸಾಮಧಾರಿಗಳ ಲಗ್ನ ವಿಚಾರ—ಇದನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಕೆ ಜಿ ಎಸ್, ಕಡೂರು—ಈ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಪಡುತ್ತೇವೆ.

ನಿಷ್ಪಕ್ಷಪಾತಿ, ತುಮಕೂರು—ಇದನ್ನು ಪ್ರಕಟಿಸುವುದರಲ್ಲಿ ಪ್ರಯೋಜನವೇನೂ ಕಾಣುವುದಿಲ್ಲ.

ಅಪ್ಪೂರಾಯರು—ಪದಗಳಿಗಿಂತ ವರ್ತಮಾನಗಳನ್ನು ಪ್ರಕಟಿಸುವುದರಲ್ಲಿ ನಮಗೆ ಅಭಿಲಾಷೆ ಹೆಚ್ಚು

ಕಳೆದ ವಾರ ಫ್ರೆಂಚ್‌ರಾಕ್ಸ್ ವರ್ತಮಾನದಲ್ಲಿ ಅಲ್ಲಿಂದ ಅನೆಕಲ್ಲಿಗೆ ವರ್ಗವಟ್ಟು ಹೋದ ಮ|| ಜಾನ್ ಪಾಪ್ಯೆಯನವರೆಂಬುವದಕ್ಕೆ ಬದಲಾಗಿ ಮ|| ಪಾಪ್ಪೆಯನಾಯ್ಡು ಎಂಬದಾಗಿ ಓದಿ ಕೊಳ್ಳಬೇಕಾಗಿದೆ.

—ಎಡಿ]

ಕರೆಸ್‌ಪಾಂಡೆನ್ಸ್.

ವ್ಯಾಕ್ಸಿನೇಟರುಗಳ ವಿಜ್ಞಾಪನೆ.

ಅಯ್ಯಾ,

ವ್ಯಾಕ್ಸಿನೇಟರುಗಳು ಮಾಹೆಯಾನಾ ಪ್ರೋಗ್ರಾಮಿನಂತೆ ಅನೇಕ ಗ್ರಾಮಗಳನ್ನು ಸುತ್ತಿ, ಹಳ್ಳಿಗಾಡುಗಳಲ್ಲಿರತಕ್ಕ ರೈತಾಪಿಗಳಿಗೆ ತಿಳುವಳಿಕೆಯನ್ನು ಹೇಳಿ ಪ್ರೋತ್ಸಾಹಪಡಿಸಿ ದೇವಿಯನ್ನು ಹಾಕಿಕೊಂಡು ಬಂದು ಪುನಃ ಅದೇ ತಿಂಗಳಿನಲ್ಲಿಯೇ ಫಲಿತಾಂಶವನ್ನು ಅಜಮಾಯಿಷಿ ಮಾಡಲು ಪ್ರತಿ ಗ್ರಾಮಕ್ಕೂ ಹೋಗಬೇಕು ದಿನ 1 ಕ್ಕೆ 10-15 ಮೈಲಿಗಳು ಗಸ್ತುಮಾಡಬೇಕಾಗಿ ಬರುವುದು ಅಂತು ತುಂಬಾ ಶ್ರಮಪಟ್ಟು ಕೆಲಸ ಮಾಡಬೇಕಾಗಿರುತ್ತದೆ. ಇಂಥಾವರಿಗೆ ಬಹುಕಾಲದಿಂದಲೂ ಪ್ರಮೋಷನ್ ಕೊಡದೆ ಇರುವುದು ವ್ಯಾಕ್ಸಿನೇಟರುಗಳ ದುರಾದೃಷ್ಟವೆಂದು ಹೇಳಬೇಕಾಗಿದೆ. ಇವರಿಗೆ ಕುದುರೆ ಅಲೋಯನ್ಸ್ ಸಹ ಕೊಟ್ಟಿರುವುದಿಲ್ಲ. ಈ ವಿಚಾರಗಳನ್ನೆಲ್ಲಾ ಮೇಲ್ಪಟ್ಟ ಅಧಿಕಾರಿಗಳು ಘನವುಳ್ಳ ಚಿತ್ತದಲ್ಲಿ ತಂದು ಬಡನೌಕರರನ್ನು ಕಾಪಾಡುವರೆಂದು ನಂಬಿದೇನೆ ಈ ಸಲ ದಸರಾ ಸಿಟಿಂಗಿನಲ್ಲಾದರೂ ಯಾರಾದರು ಮೆಂಬರುಗಳು ಈ ವಿಚಾರವನ್ನು ಚರ್ಚಿಸಿ ತೀರ್ಮಾನಿಸುವರೆಂದು ನಿರೀಕ್ಷಿಸಿವೆ

ಜಿ. ಎಲ್

ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜೂ, ಅದರ ಅಧ್ಯಕ್ಷರೂ.

ಅಯ್ಯಾ,

ಮೇಲ್ಕಂಡ ವಿದ್ಯಾಶಾಲೆಗೆ ಕಳೆದ 6-7 ವರ್ಷಗಳು ಅಧ್ಯಕ್ಷರಾಗಿದ್ದ ಬ್ರಹ್ಮಶ್ರೀ ಧರ್ಮಾಧಿಕಾರಿಗಳಾದ ನರಸಿಂಹ ರಾಮಾನುಜಾಚಾರ್ಯರವರು ಈ ತಿಂಗಳಿನಿಂದ ಪೆನ್ಷನ್ ಪಡೆದು ವಿಶ್ರಾಂತಿ ಸುಖವನ್ನು ಅನುಭವಿಸುತ್ತಲಿರುತ್ತಾರೆ. ಅಧ್ಯಕ್ಷರಾಗಿದ್ದ ಶ್ರೀ ಆಚಾರ್ಯರು ನಮ್ಮ ದೇಶದ ವಿದ್ವಾಂಸರುಗಳಲ್ಲಿ ಪ್ರಮುಖರೂ, ವಿಶೇಷ ವಿದ್ಯಾವಂತರೂ ಅಲ್ಲದೆ ಬಹು ಭಾಷೆಗಳನ್ನು ಬಲ್ಲವರಾಗಿಯೂ ಇರುತ್ತಾರೆ ವಿದ್ಯಾಭಿವೃದ್ಧಿಯಲ್ಲಿ ಬದ್ಧದೃಷ್ಟಿಯುಳ್ಳ ಇವರಿಗೆ ಇಂದೋರ್ ಮಹಾರಾಜರು ಬಹುವರ್ಷಗಳು ತಮ್ಮ ಸಂಸ್ಥಾನದ ಸಂಸ್ಕೃತ ಡೈರೆಕ್ಟರ್ ಪದವಿಯನ್ನು ದಯಪಾಲಿಸಿದ್ದರು ನಮ್ಮ ಸಂಸ್ಥಾನದಲ್ಲಿ ವಿಶೇಷ ಗಣ್ಯವಾದ ದರ್ಮಾಧಿಕಾರವೂ, ದರ್ಬಾರಿನಲ್ಲಿ ಖಾಸಾಹಾರದ ಮರ್ಯಾದೆಯೂ ಇವರಿಗೆ ಲಭಿಸಿರುತ್ತವೆ ಗಾಯಕ್ವಾಡ್ ಮಹಾರಾಜರು ಇವರನ್ನು ಕರೆಸಿಕೊಂಡು ಸಂಸ್ಕೃತ ವಿಷಯಗಳನ್ನು ಪರ್ಯಾಲೋಚಿಸಿರುತ್ತಾರೆ ಉತ್ತರ ಹಿಂದುಸ್ಥಾನದ ಪ್ರಸಿದ್ಧಗಳಾದ ರಾಜಾಸ್ಥಾನಗಳಲ್ಲಿ ಇವರಿಗೆ ಹೆಚ್ಚು ಗೌರವವು ಉಂಟಾಗಿರುತ್ತದೆ ಅನೇಕ ಇಂಗ್ಲೀಷ್ ಸರ್ದಾರರೂ, ವಿದ್ವಾಂಸರೂ, ಮಹಾರಾಜರೂ ಸಹ ಶ್ರೇಷ್ಠತರವಾದ ಅಭಿನಂದನ ಪತ್ರಿಕೆಗಳನ್ನು ಇವರಿಗೆ ಕೊಟ್ಟಿರುತ್ತಾರೆ ಇವರ ಕಾಲದಲ್ಲಿ ವಿದ್ಯಾಶಾಲೆಯು ಸರ್ವತೋಮುಖವಾಗಿ ಅಭಿವೃದ್ಧಿಗೆ ಬಂದಿರುತ್ತದೆ. ಇಂತಹ ಸಾಧುಗಳೂ, ಸಜ್ಜನರೂ, ಸಚ್ಚರಿತ್ರರೂ ಆದ ಇವರು ಇನ್ನೂ ಬಹು ಕಾಲ ಅಧ್ಯಕ್ಷರಾಗಿದ್ದಲ್ಲಿ ಪಾಠಶಾಲೆಯು ತಾರವಾ ನಿವಾಸ ಸ್ಥಾನವಾಗಿಯೇ ಆದೀತೆಂದು ಹೇಳಬಹುದು ಇವರಿಗೆ ವಿಶ್ರಾಂತ ಕಾಲದಲ್ಲಿ ಆಯುರಾರೋಗ್ಯಗಳು ಲಭಿಸಲೆಂದು ಪ್ರಾರ್ಥಿಸುತ್ತೇವೆ ಅಲ್ಲದೆ ಇವರ ಹೆಸರನ್ನು ಆ ಸಂಸ್ಕೃತ ಪಾಠಶಾಲೆಯಲ್ಲಿ ಶಾಶ್ವತಗೊಳಿಸತಕ್ಕ ಭಾಗವನ್ನು ವಿದ್ವಾಂಸರುಗಳೂ, ವಿದ್ಯಾರ್ಥಿಗಳೂ ಯೋಚಿಸತಕ್ಕದ್ದಾಗಿದೆ ಇಂತಹ ಪಂಡಿತೋತ್ತಮರನ್ನು ರಾಜಧಾನಿಯ ಸಂಸ್ಕೃತ ಕಾಲೇಜಿಗೆ ಅಧ್ಯಕ್ಷರನ್ನಾಗಿ ಮಾಡಿ ವಿಶೇಷ ಯಶಸ್ಸನ್ನು ಶ್ರೀಮನ್ ಮಹಾರಾಜರು ಪಡೆಯಲೆಂದು ಹಾರೈಸುತ್ತೇನೆ

ಗುಣಗ್ರಾಹಿ.

ಶ್ರೀನಿವಾಸಪುರ ತಾಲ್ಲೂಕು ಪ್ರಜೆಗಳ ಮತ್ತು ಗೋಕಾಯಿಗಳ ಕಷ್ಟ.

ಅಯ್ಯಾ,

ಈಗ 2-3 ಸಂವತ್ಸರಗಳಿಂದ ಸರಿಯಾದ ಮಳೆ ಬೆಳೆಗಳು ಆಗದೆ ಪೈರುಪಚ್ಚೆ ಏನು ಉಂಟಾದೆ ಇರುವದರಿಂದ ಧಾರಣೆವಾಸಿಗಳು ಜಡಾವಾಗಿ, ಅಕ್ಕಿ ರೂಪಾಯಿಗೆ 5½ 6 ಸೇರಿನ ಮೇರಿಗೂ, ರಾಗಿ 11½-12 ಸೇರಿನ ಮೇರಿಗೂ ಮಾರುವದರಿಂದ ಬಡಜನಗಳು ಬಹಳ ತೊಂದರೆಪಡುವವರಾಗಿದಾರೆ ಕೂಲಿ ಮಾಡಿ ಜೀವನ ಮಾಡಬೇಕೆಂದರೆ ಕೂಲಿಗೆ ಕರೆಯುವವರೇ ಅಪರೂಪವಾಗಿರುವದರಿಂದ ಅನೇಕರು ಅಡವಿಯ ಗ್ಯಾದು ಸೊಪ್ಪನ್ನು ತಂದು ಸುಮಾರಾಗಿ ಬೇಯಿಸಿ ಒಣಗಿಸಿ ಪುಡಿಮಾಡಿ ಅದರ ಜೊತೆಗೆ ಸ್ವಲ್ಪ ರಾಗಿ ಹಿಟ್ಟನ್ನು ಬೆರಸಿ ಹಿಟ್ಟುಮಾಡಿ ತಿನ್ನುತ್ತಾರೆ ಇನ್ನು ಕೆಲವರು ಕತ್ತಾಳಿ, ನಸೆ, ಗೋಟಿ, ಈ ಮೊದಲಾದ ಗಡ್ಡೆಗಳಿಂದ ಜೀವನ ಮಾಡುತ್ತಿದಾರೆ. ಈಗ ಇವು ಸಹ ಸಿಕ್ಕುವುದು ಕಷ್ಟವಾಗಿದೆ ಎಂದು ಹೇಳುತ್ತಾರೆ ಇದಂತೂ ಇರಲಿ ಈಗ ಮಳೆಗಾಲವಾದಾಗ್ಯೂ ಗೋಕಾಯಿಗಳನ್ನು ನೋಡುವಾಗ್ಗೆ ಅನೇಕ ಸ್ಥಳಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲದೆಯೂ ಹುಲ್ಲಿಲ್ಲದೆಯೂ ಕೃಶವಾಗುತ್ತಾ ಇರುವುದರಿಂದ ಜನಗಳು ಅವುಗಳನ್ನು ಬದುಕಿಸಿಕೊಳ್ಳುವುದಕ್ಕಾಗಿ ಕಠಿಣಪ್ರಯತ್ನಗಳನ್ನು ಮಾಡುತ್ತಾ, ಅಶ್ವತ್ಥ, ಗೋಣಿ, ಬೇವು ಮೊದಲಾದ ಮರಗಳ ಸೊಪ್ಪನ್ನು ತಂದು ಹಾಕಿ ಇದುವರಿಗೂ ಕಾಪಾಡಿಕೊಂಡೆವೆಂದೂ, ಇನ್ನು ಮುಂದೆ ಇದು ಸಹ ಸಿಕ್ಕುವುದು ಕಷ್ಟವಾಗಿದೆ ಎಂದೂ ತಾಪಪಡುತ್ತಾ ಸಂಕಟದಿಂದ ಹೇಳುತ್ತಾರೆ ಕೆಲವು ದಿನಗಳಿಂದ ಮಳೆ ಬಿದ್ದು ನೆಲ ಹಸುರಾಗಿ ಕಾಣುತ್ತೆ ಆದಾಗ್ಯೂ ಬಾಯಿಗೆ ಹುಲ್ಲು ಸಿಕ್ಕುವುದಿಲ್ಲ ಬೇರೆ ಕಡೆಗಳಲ್ಲಿ ಮಳೆ ಬಿದ್ದು ಇಲ್ಲಿ ಮಳೆ ಬೀಳದೆ ಇರುವುದು ನೋಡಿ ಜನಗಳು ಬಹಳ ಘಾಬರಿಪಡುತ್ತಾ ಇದಾರೆ ದಯಾಳುಗಳಾದ ಸರ್ಕಾರದವರು ಬಡಪ್ರಜೆಗಳ ಕಷ್ಟ ನಿವಾರಣೆ ಬಗ್ಗೆ ಏನು ಮಾಡತಕ್ಕವರಾಗಿದ್ದಾರೋ ನೋಡಬೇಕಾಗಿದೆ.

ಇದೇ ಮಾಹೆ ತಾ 23 ರಲ್ಲಿ ಡೆಪ್ಯುಟಿ ಕಮಿಷನ್ ಸಾಹೇಬರವರ ಸವಾರಿಯು ಟ್ರಾವಲರ್ಸ್ ಬಂಗಲೆಗೆ ಚಿತ್ತೈಸಿತು ಸಂಜೆ 5 ಗಂಟೆ ಸಮಯದಲ್ಲಿ ಅವರ ಪತ್ನಿಯವರು ಇಲ್ಲಿನ ಹುಡುಗಿಯರ ಪಾಠಶಾಲೆಗೂ, ಆಸ್ಪತ್ರೆ ಮತ್ತು ಕಚೇರಿಗೂ ದಯಮಾಡಿ ಪರಾಂಬರಿಸಿಕೊಂಡು ಮಾರನೇ ದಿನ ಬೆಳಗ್ಗೆ ರಾಯಲ್ಪಾಡಿನ ಕಡೆಗೆ ಡೆಪ್ಯುಟಿ ಕಮಿಷನರವರ ಸಂಗಡ ಚಿತ್ತೈಸಿದರು. ಇಲ್ಲಿನ ಕಾಲಸ್ಥಿತಿ ಮತ್ತು ಬೆಳೆಗಳ ಕಷ್ಟ ಖುದ್ದು ಪರಾಂಬರಿಸಿ ಏನುಮಾಡತಕ್ಕವರಾಗಿದ್ದಾರೋ ನೋಡಬೇಕಾಗಿ ಚಿಂತಿಸುವ ಪ್ರಜೆಗಳ

ಹಿತಚಿಂತಕ.

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈಗ್ಗೆ 10 ದಿವಸದಿಂದ ಸೂರ್ಯ ರಶ್ಮಿಯೇ ಇಲ್ಲದಂತೆ ಮೋಡ ಮುಚ್ಚಿಕೊಂಡು ಆಗಾಗ್ಗೆ ಸ್ವಲ್ಪ ಸ್ವಲ್ಪ ಝುಡಿಮಳೆ ಬರುತ್ತಾ ಶೀತ ಗಾಳಿ ಬೀಸುತ್ತಿರುವುದರಿಂದ ಊರಲ್ಲಿ ಶೀತ ಜಾಸ್ತಿಯಾಗಿ ಅದರ ಬಾಧೆ ಪ್ರತಿ ಒಬ್ಬರೂ ಅನುಭವಿಸುತ್ತಿದಾರೆ. ಭಾವಿಗಳಿಗೂ ಕೆರೆಗಳಿಗೂ ನೀರು ಮಾತ್ರ ಬರಲಿಲ್ಲ ಕೆಲವು ಕಾಲದಿಂದ ಈ ಡಿಸ್ಟ್ರಿಕ್ಟಿನ ಪ್ರಜೆಗಳಿಗೆ ಕಾಲರಾ, ಅದು ಶಮನವಾದರೆ ಪ್ಲೇಗು, ಅದು ಸ್ವಲ್ಪ ಸಮಾಧಾನಕ್ಕೆ ಬಂದರೆ ಶೀತಸಂಬಂಧವಾದ ಜ್ವರಗಳು, ಇವುಗಳ ತೊಂದರೆ ಇದ್ದೇ ಇರುತ್ತೆ ಪುನಹಾ ದಾವಣಗೆರೇಲಿ ಪ್ಲೇಗು ಬರತಕ್ಕ ಸೂಚನೆಗಳು ಕಾಣುತ್ತಾ ಇದೆ. ಜಿನಿಸಿ ಧಾರಣೆಗಳು ಬಹಳ ತುಟ್ಟಿಯಾಗಿರುತ್ತಾ ಅದರಿಂದ ಬಡಜನಗಳು ಬಹಳ ಕಷ್ಟದೆಶೆಯಲ್ಲಿದಾರೆ. ಆದರೆ ನಮ್ಮ ಡೆಪ್ಯುಟಿ ಕಮಿಷನರ್ ಮ ಕೆ ಚಾಂಡಿ ಸಾಹೇಬರವರು ಯಾವ ಸ್ಥಳದಲ್ಲಾಗಲಿ ಪ್ರಜೆಗಳಿಗೆ ಕಷ್ಟವಿದೆ ಎಂತ ತಿಳಿಸಿದರೆ ಆ ಸ್ಥಳಕ್ಕೆ ತಾವೇ ಖುದ್ದು ಹೋಗಿ ಅವರನ್ನು ಸಂಧಿಸಿ ಅವರಿಗೆ ಅನುಕೂಲ ಪಡಿಸುತ್ತಿದಾರೆ. ಇವರು ಈ ಡಿಸ್ಟ್ರಿಕ್ಟಿಗೆ ಬಂದಾಗಿನಿಂದ ಸರ್ವಸಮತೆಯಿಂದ ಸಮಯಕ್ಕೆ ದಗಿದ ಉಮೇದುವಾರರಿಗೆ ಸರ್ಕಾರದ ಕೆಲಸ ಕೊಡತಕ್ಕದ್ದು, ನೀರಿಗೆ ಕಷ್ಟಪಡತಕ್ಕ ಬೇಗಾರಿ ಜನಗಳಿಗೆ ಪ್ರತ್ಯೇಕವಾಗಿ ಭಾವಿಗಳನ್ನು ಮಾಡಿಸಿ ಕೊಡತಕ್ಕದ್ದು ಪ್ರತಿ ಸ್ಥಳದಲ್ಲೂ ಪ್ರಜೆಗಳು ಗಿಡಗಳನ್ನು ಹಾಕಿ ಅಭಿವೃದ್ಧಿ ಪಡಿಸಲಿಕ್ಕೆ ಅವರಿಗೆ ಪ್ರೋತ್ಸಾಹ ಕೊಡತಕ್ಕದ್ದು ಕಷ್ಟಪಡತಕ್ಕ ಬಡ ಜನಗಳಿಗೆ ತಮ್ಮ ಸ್ವಂತ ಖರ್ಚಿನಿಂದ ಸಹಾಯ ಮಾಡತಕ್ಕದ್ದು, ಪ್ರಜೆಗಳಿಗೆ ಆರೋಗ್ಯ ವಿಚಾರಗಳನ್ನು ಬೋಧಿಸಿ ಆದರಂತೆ ನಡೆಯಲು ಏರ್ಪಾಡು ಮಾಡತಕ್ಕದ್ದು, ಈ ಕೆಲಸಗಳನ್ನು ಮಾಡುತ್ತಿರುವುದರಿಂದ ಪ್ರಜೆಗಳಿಗೆಲ್ಲಾ ಸಂತೋಷ ಉಂಟಾಗಿದೆ ಈ ಡಿಸ್ಟ್ರಿಕ್ಟಿನಲ್ಲಿ ಅ|| ಕಮಿಷನರ್ ಆಗಿದ್ದ ಮ|| ಟಿ. ಪಿ ರಾಮ ಅಯ್ಯರವರಿಗೆ ಮೈಸೂರಿಗೆ ವರ್ಗವಾಯಿತು ಈಗ್ಗೆ 10 ದಿವಸದ ಕೆಳಗೆ ಸರ್ವೀಸ್ ಜಡ್ಜರು ಇಲ್ಲಿಗೆ ಬಂದು ಸೆಷನ್ಸ್ ಪೂರೈಸಿಕೊಂಡು ವಾಪಸು ದಯಮಾಡಿದರು.

ದೇವನಹಳ್ಳಿ.—ಇಲ್ಲಿ 10-15 ದಿನಗಳಿಂದಲೂ ಸೋನೆಮಳೆ ಬೀಳುತ್ತಿತ್ತು ಈಚೆಗೆ ಕೊಂಚ ಕಮ್ಮಿಯಾಗಿದೆ. ವಿಶೇಷವಾದ ಶೀತಗಾಳಿಯು ಬೀಸುತ್ತಾ ರೋಗಾದಿ ಉಪದ್ರಗಳಿಗೆ ಕಾರಣವಾಗಿದೆ ಮಳೆಯು ಸುವ್ಯಸ್ಥಿಯಾಗಿ ನಡಿಸಿದ್ದರಿಂದ ರಾಗಿ ಮೊದಲಾದ ಬೆಳೆಗಳೆಲ್ಲಾ ಬಹಳ ಚೆನ್ನಾಗಿವೆ ಆದರೆ ಪೇಟೆ ಧಾರಣೆ ಮಾತ್ರ ಇಳಿಯಲಿಲ್ಲ ಅಕ್ಕಿ ರೂಪಾಯಿಗೆ 5½-6 ಸೇರಿನಂತೆಯೂ, ರಾಗಿ 12-13 ಸೇರಿನಂತೆಯೂ ಮಾರುತ್ತಲಿದೆ. ಬಡಬಗ್ಗರ ಜೀವನ ನಡೆಯುವುದೇ ಬಹಳ ಕಷ್ಟವಾಗಿದೆ.—ಊರಿನಲ್ಲಿ ಸಾಕ್ಷೀಜಾ ವಗ್ಗೈರೆ ಬಹಳ ಚೆನ್ನಾಗಿದೆ ನಮ್ಮ ಅಮಲ್ದಾರ್ರವರು ಆಗಾಗ್ಗೆ ಊರನೊಳಕ್ಕೆ ಗಸ್ತು ಬಂದು ಮ್ಯುನಿಸಿಪಾಲಿಟಿ ವಿಚಾರಗಳನ್ನು ಖುದ್ದು ಪರಾಂಬರಿಕೆಯಿಂದ ಸರಿಪಡಿಸುತ್ತಿರುವರು 15 ದಿನಗಳ ಕೆಳಗೆ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರು ಇಲ್ಲಿಗೆ ಬಂದಿದ್ದು ಒಳ್ಳೇ ನೀರು ಕೆರೆ ಮತ್ತು ಭಾವಿಗಳು ಮತ್ತು ಊರಿನ ಸ್ಯಾನಿಟೇಷನ್ ವಿಚಾರಗಳನ್ನು ಇನ್‌ಸ್ಪೆಕ್ಷನ್ ಮಾಡಿ, ಕೆರೆಯಲ್ಲಿರತಕ್ಕ ಪಾಚಿಯೂ, ನೀರಿನಲ್ಲಿ ಯಾವ ವಿಧವಾದ ಕಶ್ಮಲವೂ ಬೀಳದಂತೆ ಶುದ್ಧವಾಗಿಟ್ಟುಕೊಂಡಿರುವುದೆಂದೂ, ಅದರಲ್ಲಿ ಬೆಳೆಯತಕ್ಕ ಸಣ್ಣ ಗಿಡಗಳು ವಗ್ಗೈರೆಯನ್ನು ತೆಗಿಸಿಹಾಕಬೇಕೆಂದೂ ಹೇಳಿದರು ಇವರು ಮತ್ತು ನಮ್ಮ ಅಮಲ್ದಾರ್ರವರು ಊರಿನಲ್ಲಿ ಸಂಚಾರ ಬಂದಿದ್ದಾಗ್ಗೆ ಊರಿನ ಪೂರ್ವದಿಕ್ಕಿನಲ್ಲಿರತಕ್ಕ ಸೀಗೇಬೇಲಿಯನ್ನು ಹೊಡಸಿಹಾಕುವಂತೆಯೂ ಮತ್ತು ಆಸ್ಪತ್ರೆ ಒಳ್ಳೇ ನೀರಿನ ಭಾವಿ ಹತ್ತಿರದಲ್ಲೂ, ಇನ್ನು ಊರಿನಲ್ಲಿ ಅಲ್ಲಲ್ಲಿ ಇರತಕ್ಕ ಹಳ್ಳಗಳನ್ನು ಮುಚ್ಚಿಸುವಂತೆಯೂ ನಮ್ಮ ಅಮಲ್ದಾರ್ರವರಿಗೆ ತಿಳಿಸಿರುವದಾಗಿ ಕೇಳುತ್ತೇನೆ. ಇದಲ್ಲದೆ ಕಚೇರಿಯಿಂದ ಆಸ್ಪತ್ರೆವರೆಗೂ ಊರಿನ ಪಕ್ಕ ಒಂದು ರಸ್ತೆಯನ್ನು ಮಾಡಿಸುವುದು ಒಳ್ಳೆಯದೆಂದು ಅಭಿಪ್ರಾಯ ಪಟ್ಟಿರುವರು ನಮ್ಮ ಅಮಲ್ದಾರ್ರವರು ಈ ವಿಚಾರಗಳನ್ನು ಗಮನಕ್ಕೆ ತಂದುಕೊಂಡು ಆಸ್ಪತ್ರೆ ಹತ್ತಿರ ಇರುವ ಹಳ್ಳಗಳನ್ನು ಮುಚ್ಚಿಸುತ್ತಿರುವರು ಇದಕ್ಕಾಗಿ ಅವರನ್ನು ವಂದಿಸುತ್ತೇನೆ.

ತುಮಕೂರು. —ಈ ಊರಿನಲ್ಲಿ ಸುಮಾರು 10-15 ದಿನಗಳಿಂದಲೂ ಜೋರಾಗಿ ತಂಗಾಳಿ ಬೀಸುತ್ತಾ ಸೋನೆ ಮಳೆ ಪ್ರಾರಂಭವಾಗಿ ಸೂರ್ಯರಶ್ಮಿಯೇ ಕಾಣುವುದಿಲ್ಲ ಕೆರೆಗೆ ಮಾತ್ರ ನೀರು ಬರಲಿಲ್ಲ ದಿನ್ನೆ ಫಸಲಿನ ಕಿರಾಣಿ ಪೈರುಗಳು ಸೋನೆ ಮಳೆಯಿಂದ ಅಭಿವೃದ್ಧಿಗೆ ಬರಲು ಅವಕಾಶವಿಲ್ಲದೆ ರೈತರೆಲ್ಲರೂ ವ್ಯಸನ ಭರಿತರಾಗಿರುತ್ತಾರೆ ಕಿಕ್ಕೇರಿಯಲ್ಲಿರುವ ಸಣ್ಣ ಗಲ್ಲಿಗಳ ಪೈಕಿ ಲಾಂದ್ರಗಳನ್ನು ಸರಿಯಾಗಿ ಹಚ್ಚುವುದು ಅಪರೂಪವಾಗಿದೆ ಕೊಂಚ ದಿನ ಹಚ್ಚಿ, ಕೊಂಚ ದಿನ ಹಚ್ಚದೆ ಬಿಡುವುದರಿಂದ ಈ ಸೋನೆಯ ಮಳೆಯಿಂದ ರಾತ್ರಿ ಕಾಲದಲ್ಲಿ ಸಣ್ಣ ಗಲ್ಲಿಗಳಲ್ಲಿ ತಿರುಗಾಡುವುದು ಜನಗಳಿಗೆ ತುಂಬಾ ತೊಂದರೆಯಾಗಿದೆ ಇದನ್ನು ವಿಚಾರಿಸುವವರು ಯಾರೂ ಇಲ್ಲದಂತೆ ಕಾಣುತ್ತೆ ಮೊದಲಿದ್ದ ಕಂಟ್ರ್ಯಾಕ್ಟುದಾರ್ ಮ|| ಅಕ್ಬರ್ ಖಾನ್ರ ಕಾಲದಲ್ಲಿ ಈ ರೀತಿ ಲಾಂದ್ರಗಳು ಉರಿಯುತ್ತಿರಲಿಲ್ಲ ಇವರು ಆಗಾಗ್ಗೆ ಗಲ್ಲಿಗಳ ಮೇಲೆ ಬಂದು ಅಜುಬಾಜು ಜನಗಳನ್ನು ವಿಚಾರಿಸಿ ಸರಿಪಡಿಸುತ್ತಿದ್ದರು. ಇವರು ಲಾಂದ್ರ ಹಚ್ಚುವ ಕಂಟ್ರ್ಯಾಕ್ಟನ್ನು ಬಹಳ ದಿನಗಳಿಂದ ಮಾಡಿಕೊಂಡಿದ್ದರು.—ಹೊರಪೇಟೆಯಲ್ಲಿ ತರಕಾರಿಮಾರುವವರು ಹೆಂಗಸರೇ ಆಗಿರುವ ಕಾರಣ ಮಳೆಗೋಸ್ಕರ ಮಂಕರಿಗಳನ್ನು ಬಿಟ್ಟು ಚಿಲ್ಲರೆ ಅಂಗಡಿಗಳಲ್ಲಿ ಹೋಗಿ ನಿಂತರೆ ದನಕರುಗಳು ಮಂಕರಿಗಳಲ್ಲಿರತಕ್ಕ ತರಕಾರಿಯನ್ನು ತಿಂದು ಬಿಡುತ್ತವೆ ಮಳೆಗಾಲದಲ್ಲಿ ತರಕಾರಿಯನ್ನು ಕಳೆದುಕೊಳ್ಳುವ ತೊಂದರೆ, ಬಿಸಿಲು ಕಾಲದಲ್ಲಿ ತರಕಾರಿ

ಯನ್ನು ಒಣಗಿಸುವುದಲ್ಲದೆ ತಾವೂ ಕೂಡ ಅದರ ಜೊತೆಗೆ ಒಣಗುತ್ತಾರೆ ಇವರು ಈ ರೀತಿ ವ್ಯಥೆ ಪಡುವುದನ್ನು ನೋಡಲಿದ್ದ ಅ|| ಕಮಿಷನರ್ ಮೆ|| ಬಸವಾರಾಧ್ಯರವರು ನೋಡಿ ಕನಿಕರಪಟ್ಟು ಟಿಟೋ ಸ್ಥಳದಲ್ಲಿ ಚಿಕ್ಕ ಮಾರ್ಕೆಟ್ಟನ್ನು ಕಟ್ಟಿಸುವುದಕ್ಕೆ ಏರ್ಪಡಿಸಿದ್ದರು. ಅಲ್ಲದೆ ಕಿಕ್ಕೇರಿಯಲ್ಲಿರುವ ಎರಡು ಸಣ್ಣ ಗಲ್ಲಿಗಳಲ್ಲಿ ತಿರುಗಾಡುವುದಕ್ಕೂ, ಕಟರಾ ಗಾಡಿ ತಿರುಗಾಡುವುದಕ್ಕೂ ಬಹಳ ಅಡಚಣೆಯಾಗಿರುವುದನ್ನು ನೋಡಿ, ಟಿಟೋ ಸಣ್ಣ ಗಲ್ಲಿಗಳನ್ನು ದೊಡ್ಡ ರಸ್ತೆ ಮಾಡುವುದಕ್ಕೆ ಅಳತೆ ಸಹ ಮಾಡಿಸಿದ್ದರು ಅಷ್ಟರಲ್ಲಿಯೇ ಅವರಿಗೆ ವರ್ಗವಾಯಿತು ಈ ರಸ್ತೆಯ ವಿಷಯವಾಗಿ ಮೊದಲಿದ್ದ ಡೆಪ್ಯುಟಿ ಕಮಿಷನರ್ ಮೆ|| ಕೆ ಎಸ್ ದೊರೆಸಾಮಿ ಅಯ್ಯರವರ ಕಾಲದಲ್ಲಿ ಏರ್ಪಾಟಾಗಿ ಆ ಕಾಲದಿಂದ ಈ ತಹಲ್ ವರಿವಿಗೂ ರಸ್ತೆ ಆಗುವುದರಲ್ಲೇ ಇದೆ ಈಗ ಹೊಸದಾಗಿ ಬಂದಿರುವ ಡೆಪ್ಯುಟಿ ಕಮಿಷನರ್‌ರವರು ಮತ್ತು ಅ|| ಕಮಿಷನರ್ ಸಾಹೇಬರವರು ಸಹ ರೂಬರೂಬು ಪರಾಂಬರಿಸಿ, ಟಿಟೋ ರಸ್ತೆಯ ವಿಷಯವಾಗಿಯೂ, ಮಾರ್ಕೆಟ್ಟಿನ ವಿಷಯವಾಗಿಯೂ ಸರಿಪಡಿಸಿ ಪ್ರಜೆಗಳ ತೊಂದರೆಯನ್ನು ಶೀಘ್ರದಲ್ಲಿಯೇ ತಪ್ಪಿಸ್ಯಾರೆಂದು ಪ್ರಜೆಗಳೆಲ್ಲರೂ ಹಾರೈಸುತ್ತಾರೆ

ಬೀರೂರು — ಈಚೆಗೆ 8 10 ದಿನಗಳಿಂದ ಚೆನ್ನಾಗಿ ಮಳೆಯಾಗುತ್ತಾ ಬಿತ್ತನೆಗೆ ಅವಕಾಶವಾಗಿದೆ ಚಳಿಯೂ ಗಾಳಿಯೂ ಸ್ವಲ್ಪ ಹೆಚ್ಚಾಗಿ, ಹವಾ ಬದಲಾಯಿಸಿದೆ ದಿನಸಿ ಧಾರಣೆ ಅಕ್ಕಿ 6-7 ಸೇರು, ರಾಗಿ 16-17 ಸೇರು ಮಾರುತ್ತಿದೆ — ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರಾದ ಮೆ|| ಎ ಸುಬ್ರಹ್ಮಣ್ಯ ಅಯ್ಯರವರೂ, ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರಾದ ಮ ಸುಬ್ಬರಾಯರವರೂ, ಅಮಲ್ದಾರ್ ಮ|| ಎ ರಾಜಾರಾಯರೂ ಇಲ್ಲಿಗೆ ತಾ 25 ಕ್ಕೆ ದಯಮಾಡಿಸಿದರು ವರ್ಷ ವರ್ಷವೂ ಪ್ಲೇಗಿನಿಂದ ಈ ಊರಲ್ಲಿ ಜನಗಳು ಬಹಳ ಕಷ್ಟ ನಷ್ಟ ಹೊಂದುತ್ತಿರುವುದನ್ನು ತಿಳಿದು, ಅದು ಬಾರದಿರುವುದಕ್ಕೆ ಸರಿಯಾದ ಏರ್ಪಾಡುಗಳನ್ನು ಸೂಚಿಸುವುದು ಯುಕ್ತವೆಂದು ತಾ 26 ನೆಯ ಶುಕ್ರವಾರ ಎ ವಿ ಸ್ಕೂಲಿನಲ್ಲಿ ಒಂದು ಮೀಟಿಂಗ್ ನಡಿಸಿದರು ಮ್ಯುನಿಸಿಪಲ್ ಮೆಂಬರುಗಳೂ, ಇತರ ದೊಡ್ಡ ಮನುಷ್ಯರೂ ಇಲ್ಲಿನ ದರ್ಮಛತ್ರದ ಮ|| ಆ ರಾಮರಾಯರೂ, ಉಪಾಧ್ಯಾಯರುಗಳೂ, ಸರ್ಕಾರಿ ಉದ್ಯೋಗಸ್ಥರೂ ಸೇರಿದ್ದರು ಡೆಪ್ಯುಟಿ ಕಮಿಷನರ್‌ರು ಅಗ್ರಾಸನವನ್ನು ವಹಿಸಿದರು ಮ| ಸುಬ್ಬರಾಯರು ಪ್ಲೇಗ್ ರೋಗದ ಉತ್ಪತ್ತಿ ಕ್ರಮ, ಅದು ಬಾರದ ಹಾಗೆ ಮಾಡಿಕೊಳ್ಳುವ ವಿಷಯದಲ್ಲಿಯೂ, ಬಂದ ಮೇಲೆ ನಡೆದುಕೊಳ್ಳುವ ವಿಷಯವಾಗಿಯೂ, ಇನಾಕ್ಯುಲೇಷನ್ ವಿಷಯದಲ್ಲಿ ಜನಗಳ ಮೂಢಾಭಿಪ್ರಾಯ, ಅದರಿಂದ ಉಂಟಾಗುವ ಪ್ರಯೋಜನಾಂತ ಮುಂತಾದವುಗಳನ್ನೆಲ್ಲಾ ಸ್ವಾನುಭವಪೂರ್ವಕವಾಗಿ ವಿವರಿಸಿ ಸಾರಸ್ಯವಾದ ಉಪನ್ಯಾಸ ಮಾಡಿದರು ತರುವಾಯ ಅಮಲ್ದಾರರೂ, ಡಾಕ್ಟರ್ ನಂಜುಂಡಯ್ಯನವರೂ ಅದನ್ನೇ ಪುಷ್ಟೀಕರಿಸಿ ಮಾತನಾಡಿದರು ಅನಂತರ ಅಗ್ರಾಸನಾಸೀನರಿಗೆ ವಂದನೆಗಳು ಅರ್ಪಿಸಲ್ಪಟ್ಟು ಸಭೆಯು ವಿರಾಮಹೊಂದಿತು — ಆ ಮೇಲೆ ಡೆಪ್ಯುಟಿ ಕಮಿಷನರ್‌ರವರು ಅನಾಥಾಲಯದ ಸ್ಥಾಪಕರಾದ ಮ| ಬಿರೀದಿ ಗೋವಿಂದಪ್ಪನವರ ಕೋರಿಕೆಯಂತೆ ದಯಮಾಡಿ ಆ ಕಟ್ಟಡವನ್ನು ನೋಡಿ ಸಂತೋಷಪಟ್ಟು ತೆರಳಿದರು ಅಧಿಕಾರಿಗಳು ಈ ರೀತಿ ಪ್ರಜೆಗಳ ಕಷ್ಟ ನಷ್ಟಗಳನ್ನು ವಿಚಾರಿಸಿ ವಿವೇಕ ಹೇಳುವುದು ಸ್ತೋತ್ರಾರ್ಹವಾಗಿದೆ ಕಾರೊನೇಷನ್ ರೀಡಿಂಗ್ ರೂಂ ಪ್ರಾರಂಭವೇ ಇಲ್ಲ ಕಟ್ಟಡ ಕೂಡ ಆಗಿಲ್ಲ ಇತರ ಕಟ್ಟಡಗಳನ್ನು ಕಟ್ಟಿಸಿ ಕೊಡುವ ಮಹನೀಯರು ಯಾವಾಗ ಮಾಡಿಸುವರೋ ತಿಳಿಯದು ಮಳೆಗಾಲ ಕಳೆದ ಮೇಲಾದರೂ ಆರಂಭಿಸಿ ಅನುಕೂಲ ಮಾಡಿಕೊಡಬೇಕಾಗಿ ಕೋರುತ್ತೇನೆ

ಚಿಕ್ಕಮಗಳೂರು — ಈಗ 2 ವಾರಗಳಿಂದ ಸೋನೆ ಮಳೆ ಹಿಡಿದು ಹಗಲು ರಾತ್ರಿ ಸುರಿಯುತ್ತಲೇ ಇದೆ ಕೆರೆ ಕುಂಟೆಗಳೆಲ್ಲಾ ಭರ್ತಿಯಾಗಿವೆ ಗಾಳಿಯ ರಭಸವಂತೂ ಹೇಳುವುದಕ್ಕೇ ತೀರದು ಇದರಿಂದ ಅನೇಕ ಬಡಬಗ್ಗರ ಮನೆಗಳಿಗೆ ಅಪಾಯ ಸಂಭವಿಸಿರುವುದು ಮಳೆಯಿಂದ ಸಂತೆ ವ್ಯಾಪಾರಕ್ಕೆ ತುಂಬಾ ಅಡಚಣೆಯುಂಟಾಗಿದೆ ಧಾರಣೆ ನಾಗರೀಕತೂ ಇನ್ನೂ ಕಡಮೆಯಾಗಲಿಲ್ಲ ಅಕ್ಕಿ 5½-6 ಸೇರು, ರಾಗಿ 16 ಸೇರು ಮಾರುತ್ತಾರೆ — ಇಲ್ಲಿನ ಎಗ್ಸಿಕ್ಯುಟಿವ್ ಇಂಜನಿಯರ್ ಮೆ ಎನ್ ರಾಮರಾಯರನ್ನು ಸರ್ಕಾರದವರು ಚಿತ್ರದುರ್ಗಕ್ಕೆ ವರ್ಗಮಾಡಿರುತ್ತಾರೆ ಅವರಿಗೆ ಬದಲಾಗಿ ಶಿವಮೊಗ್ಗೆಯಿಂದ ಮ್ಯಾಕ್ಸ್‌ವೆಲ್ ಸಾಹೇಬರು ಬರುತ್ತಾರೆಂಬ ವದಂತಿ ಇದೆ — ಇಲ್ಲಿನ ಪಾರ್ಕಿನಲ್ಲಿ ಕಟ್ಟುತ್ತಿರುವ "ಯುವರಾಜ ಮೆಮೋರಿಯಲ್ ಹಾಲ್" ಎಂಬ ಭವನವು ಇಂಜನಿಯರ್ ಇಲಾಖೆಯವರ ಮೆಹನತ್ತಿನಿಂದ ಮುಗಿಯುತ್ತಾ ಬಂದಿದೆ ಕಟ್ಟಡವೇನೋ ಸುಂದರವಾಗಿಯೂ ವಿಶಾಲವಾಗಿಯೂ ಇದ್ದರೂ ಸಮರ್ಪಕವಾಗಿಲ್ಲ ಅದರ ಮುಂಬಾಗಿಲೂ ಪಕ್ಕದ ಪಡಸಾಲೆಗೆ ಹಾಕಿರುವ ಕಂಭಗಳೂ ಅದರ ಪ್ರಮಾಣಕ್ಕೆ ಬಹಳ ಚಿಕ್ಕದಾಗಿ, ಕಟ್ಟಡದ ಸೌಂದರ್ಯವೇ ಕೆಡುವ ಹಾಗಾಯಿತು ಹತ್ತೂ ಜನಗಳ ಸಂತೋಷ ಸಲ್ಲಾಪಗಳಿಗೆ ಆಕರವಾಗಿರಬೇಕಾದ ಕಟ್ಟಡವನ್ನು ಕಾರಾಗೃಹವೋ ಎಂಬಂತೆ ಕಿಟಕಿಗಳಿಗೆಲ್ಲಾ ಕಬ್ಬಿಣದ ಸಲಾಕಿಗಳನ್ನು ಹಾಕಿ ಭದ್ರಪಡಿಸಿರುವುದು ಯಾಕೋ ತಿಳಿಯಲಿಲ್ಲ — ಸೋನೆ ಮಳೆಯ ದೆಸೆಯಿಂದ ಎಲ್ಲಿ ನೋಡಿದರೂ ನೆಗಡಿ, ಕೆಮ್ಮು, ಗಂಟಲುನೋವು, ಜ್ವರ ಪ್ರಬಲವಾಗಿ, ಆಸ್ಪತ್ರೆಗೆ ಹೋಗುವ ರೋಗಿಗಳ ಸಂಖ್ಯೆ ಹೆಚ್ಚುತ್ತಾ ಇದೆ — ನಮ್ಮ ಡೆಪ್ಯುಟಿ ಕಮಿಷನರ್ ಮೆ, ಸುಬ್ರಹ್ಮಣ್ಯ ಅಯ್ಯರವರು ಇಂಥಾ ಮಳೆಗಾಲದಲ್ಲೂ ಪ್ರಜೆಗಳ ಹಿತಚಿಂತನೆಯನ್ನು ಕೋರಿ ಡಿಸ್ಟ್ರಿಕ್ಟಿನ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸುತ್ತಾ ಬಂದಿದಾರೆ ಹೀಗೆ ವಿಶೇಷ ಮುತುವರ್ಜಿ ವಹಿಸಿ ಕೆಲಸ ಮಾಡುವವರು ವಿರಳ — ಈಗ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿರುವ ಡಾಕ್ಟರ್ ಡೇವಿಡ್ ಸಾಹೇಬರು ಎಲ್ಲಾ ಪ್ಲಾಂಟರುಗಳ ಪ್ರೀತಿಗೂ ಪಾತ್ರರಾಗಿದಾರೆ ಇದಲ್ಲದೆ ಇವರು ಸ್ವದೇಶಿಯರ ಹಿತಚಿಂತನೆಯನ್ನು ಕೋರುತ್ತಾ, ಅವರಲ್ಲಿ ಕೇವಲ ಬಡಬಗ್ಗರಾದವರಿಗೆ ತಂದೆಯೋಪಾದಿಯಲ್ಲಿದ್ದುಕೊಂಡು, ಅವರ ರೋಗ ನಿವಾರಣೆಗಾಗಿ ತಮ್ಮ ಸ್ವಂತ ಲ್ಯಾಗನರ್ಸಿಂದ ಔಷಧಿಗಳನ್ನು ತರಿಸಿ ಜನರನ್ನು ಉಪಚರಿಸುತ್ತಾ ಬಂದಿದಾರೆ — ಇಲ್ಲಿ ಒಬ್ಬ ಸಾಹುಕಾರರು ಇಲ್ಲಿಂದ ಕಡೂರಿಗೆ ಮೋಟರ್ ಸರ್ವಿಸ್ ಇಡುತ್ತಾರೆಂದೂ, ಪ್ರಯಾಣಿಕರ ಚಾರ್ಜು ತಲೆಗೆ 1½ ರೂಪಾಯಿ ಗೊತ್ತುಮಾಡಿರುತ್ತಾರೆಂದೂ, ಕೆಲವು ದಿನಗಳ ನಂತರ ಮೆಯಿಲ್ ಸಾಗಿಸುವುದನ್ನೂ ವಹಿಸಿಕೊಳ್ಳುತ್ತಾರೆಂದೂ, ಇವರ ಒಂದು ಮೋಟರ್ ಗಾಡಿಯು ಬೆಂಗಳೂರಿನಲ್ಲಿ ಈಗ ಇದೆಯೆಂದೂ ವರ್ತಮಾನ ಕೇಳುತ್ತೇವೆ ಇದು ನಿಜವಾಗಿರುವ ಪಕ್ಷಕ್ಕೆ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗುತ್ತದೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ

ಸೊರಬ — ಈಗ ಸುಮಾರು 15 ದಿನಗಳಿಂದ ಮಳೆ ಹಿಡಿದಿದೆ ಈಗಿನ ಪೈರಿಗೆ ಕರ್ಕಷ್ಟ ಧಾರಣೆಯಾದರೂ, ದಿನಸುಗಳ ಧಾರಣೆ ಮಾತ್ರ ಇಳಿಯದೆ ಇರುವುದರಿಂದ ಬಡವರಿಗೆ ತುಂಬಾ ತೊಂದರೆಯಾಗಿರುತ್ತೆ ಮ್ಯುನಿಸಿಪಲ್ ಲಾಂದ್ರಗಳನ್ನು ಬೆಳದಿಂಗಳ ದಿನಗಳಲ್ಲಿ ಹಚ್ಚುವಂತೆ ಕಾಣಲಿಲ್ಲ ಮಳೆಗಾಲದಲ್ಲಿ ಮೋಡ ಕವಿದುಕೊಂಡು ಬೆಳದಿಂಗಳೂ ಕೂಡ ಕರಿದಿಂಗಳಂತೆ ಇರುವುದರಿಂದ ಎಲ್ಲಾ ರಾತ್ರಿಗಳಲ್ಲೂ ದೀಪವನ್ನು ಹಚ್ಚುವಂತೆ ಮಾಡಿದರೆ ಕತ್ತಲಲ್ಲಿ ತಿರುಗುವವರಿಗೆ ಉಪಕಾರವಾದೀತು ಮ್ಯುನಿಸಿಪಲ್ ಲೋಡುಗಾಲಿಗಳಿಗೆ ಹೊಸದಾಗಿ ಕಟರಾ ಸಾಗಿಸುವುದಕ್ಕೆ ಗಾಡಿ ಮಾಡಿಸಿಕೊಟ್ಟಾಗ್ಯೂ ದಿನವೂ ಎಲ್ಲಾ ಬೀದಿಗಳ ಕಸವನ್ನು ಸರಿಯಾಗಿ ಗುಡಿಸುವುದಿಲ್ಲ ಈ ಬೀದಿಗಳಲ್ಲಿ ಅಲ್ಲಲ್ಲಿ ಕಸ ಕುಪ್ಪೆಗಳು ನಡುಬೀದಿಯಲ್ಲಿಯೇ ಕಾಣುತ್ತವೆ ನೀರು ಹರಿಯುವ ಚರಂಡಿಗಳು ಒಂದೂ ಸರಿಯಾಗಿಲ್ಲ ರಸ್ತೆಗಳ ವಿಷಯವ ತಾ ಹೇಳತೀರದು ಇದಲ್ಲದೆ ಉಪ್ಪಾರ ಕೇರಿಯಲ್ಲಿ ತೆಗೆಸಿದ ಸರಕಾರಿ ಭಾವಿಯು ಪೂರೈಸುವುದರೊಳಗೇ ಬಿದ್ದು ಹೋಗಿ 1 1 ವರುಷವಾದಾಗ್ಯೂ ಅದರ ಕಾಮಗಾರಿ ನಡೆದಿಲ್ಲ, ಅಥವಾ ಮುಚ್ಚಿಸಿಯೂ ಇಲ್ಲ ಇದು ರಸ್ತೆಯ ಪಕ್ಕದಲ್ಲೇ ಇರುವುದರಿಂದ ಮಣ್ಣಿನ ರಾಶಿಯಿಂದಲೂ ಕಲ್ಲುಗಳಿಂದಲೂ ತಿರುಗುವವರಿಗೆ ಅಟಕವಾಗಿದ್ದರೂ ಯಾರೂ ಗಮನಕ್ಕೆ ತಂದುಕೊಳ್ಳದೆ ಇರುವುದು ಶೋಚನೀಯವಾಗಿದೆ — ಇಲ್ಲಿಯ ಆಸ್ಪತ್ರೆ ವಿಷಯಕ್ಕೆ ಸರಕಾರದವರು ಸ್ವಲ್ಪ ಗಮನ ಕೊಟ್ಟಂತೆ ಕಾಣುತ್ತೆ ಡಾಕ್ಟರವರ ವಾಸಕ್ಕೆ ಆಸ್ಪತ್ರೆಯ ಕಂಪೌಂಡಿನಲ್ಲೇ ಒಂದು ಹೊಸ ಕಟ್ಟಡವು ತಯಾರಾಗುತ್ತಿದೆ ಇದರಿಂದ ಡಾಕ್ಟರವರು ಯಾವಾಗಲೂ ಆಸ್ಪತ್ರೆ ಹತ್ತಿರವೇ ಇರುವುದರಿಂದ ರೋಗಿಗಳಿಗೆ ಬಹಳ ಅನುಕೂಲವಾಗಬಹುದು ಆದರೆ ಸರಕಾರದವರು ಡಾಕ್ಟರವರಿಗೆ ಅನುಕೂಲಮಾಡಿಕೊಟ್ಟಂತೆ ಡಾಕ್ಟರವರು ಪ್ರಜೆಗಳಿಗೂ ಅವರ ರೋಗವನ್ನು ಸರಿಯಾಗಿ ವಿಚಾರಿಸಿ ತಕ್ಕ ಔಷಧವನ್ನು ಕೊಟ್ಟು ಎಷ್ಟು ಬಡವರಾದಾಗ್ಯೂ ಅವರನ್ನು ಉದಾಸೀನವಾಗಿ ಕಾಣದೆ ತಮ್ಮ ಉಪಕಾರವನ್ನು ತೋರಿಸಿದಲ್ಲಿ ಅವರಿಗೆ ಜನಗಳು ಕೃತಜ್ಞರಾಗಿರುವರು ಇಲ್ಲಿಂದ ಸಾಗರಕ್ಕೆ ಪ್ರಯಾಣ ಮಾಡುವ ರಸ್ತೆಯು ತುಂಬಾ ಅಮದು ರಸ್ತೆ ಉಳ್ಳದಾಗಿಯೂ ಎಂಥಾ ಮಳೆಗಾಲದಲ್ಲಿಯೂ (ಅಲ್ಲಿ ಮುನ್ಸಿಫ್ ಕೋರ್ಟು ಇರುವುದರಿಂದ) ಜನಗಳು ತಿರುಗಾಡಲೇ ಬೇಕಾಗಿರುವುದರಿಂದಲೂ ಯಾವಾಗಲೂ ದೊಡ್ಡ ದೊಡ್ಡ ಆಫೀಸರುಗಳು ತಿರುಗಾಡತಕ್ಕದ್ದಾಗಿಯೂ ಇದ್ದರೂ ಆ ರಸ್ತೆಗೆ ಉಂಟಾಗಿರುವ ದುರವಸ್ಥೆಯನ್ನು ನೋಡಿದರೆ ಇಂಜನಿಯರ್ ಇಲಾಖೆಗೆ ಕುಂದಕವನ್ನುಂಟುಮಾಡುತ್ತಿದೆ ಎಂಥಾ ದೊಡ್ಡ ಎತ್ತಿನ ಗಾಡಿಗಳೂ ಸಹಾ ಸರಿಯಾದ ಕಾಲಕ್ಕೆ ತಲಪುತ್ತವೆಂಬ ಭರವಸೆ ಕಡಮೆ ಜನಗಳು ತಿರುಗಾಡುವುದೇ ಕಷ್ಟತರವಾಗಿರುವಲ್ಲಿ ಸಾಧಾರಣ ಗಾಡಿಗಳು ಹ್ಯಾಗೆ ತಿರುಗಾಡುವವು ? ರಸ್ತೆಯ ಉದ್ದಕ್ಕೂ ವಿಪರೀತವಾದ ಕೆಸರೂ ಕೊರಕಲುಗಳೂ ತುಂಬಿಹೋಗಿದೆ ಇಂಜನಿಯರ್ ಇಲಾಖೆಯವರು ಇದಕ್ಕೆ ಗಮನ ಕೊಟ್ಟು ಜಾಗ್ರತೆ ಸರಿಪಡಿಸಿದರೆ ತುಂಬಾ ಉಪಕಾರವಾದೀತು — ಈಗ 1 5 ವರುಷಗಳಿಂದಲೂ ಈ ತಾಲ್ಲೂಕಿನಲ್ಲಿ ಆನೆಗಳ ಕಾಟ ವಿಪರೀತವಾಗಿದೆ ಈಚೀಚೆಗೆ ಆನೆಗಳು 1-2 ಜನರನ್ನೂ, 1 ಎತ್ತನ್ನೂ ಕೊಂದು ಹಾಕಿದವೆಂದು ತಿಳಿಯುತ್ತದೆ ಇದರಿಂದ ಉಂಟಾಗುವ ಪೈರಿನ ನಷ್ಟವು ಅನುಭವಿಸುವ ರೈತರಿಗೇ ಗೊತ್ತು ಇದನ್ನು ನಿಲ್ಲಿಸಬೇಕೆಂದು ಆನೆಗಳನ್ನು ಹಿಡಿಯುವ ಕೆಡ್ಡಾ ತಯಾರಿಗಾಗಿ ಚೀಫ್ ಕಮಿಷನರ್‌ರವರು ಬರುವರೆಂಬ ವದಂತಿ ಇದೆ ಈ ಕೆಲಸವು ಎಷ್ಟು ಜಾಗ್ರತೆ ಪೂರೈಸುವುದೋ ಅಷ್ಟು ಸರಕಾರಕ್ಕೆ ಆದಾಯವೆಂದು ಹೇಳಬಹುದು — ಈ ಊರಿಗೆ ಆಕ್ಟಿಂಗಾಗಿ ಬಂದಿದ್ದ ಶಿರಸ್ತೇದಾರ್ ಮೆ|| ವಾಸುದೇವರಾಯರು ಸ್ಥಾಪಿಸಿದ ರೀಡಿಂಗ್ ರೂಂ ಈಗಾಗಲೇ ಹೀನಸ್ಥಿತಿಗೆ ಬಂದಿರುವುದು ತುಂಬಾ ವಿಷಾದಕರವಾಗಿದೆ ಈಗ ಹೊಸದಾಗಿ ಬರುವ ಶಿರಸ್ತೇದಾರ್ರವರು ಇದನ್ನು ಅಭಿವೃದ್ಧಿಗೆ ತರಬೇಕೆಂದು ಕೋರಲ್ಪಟ್ಟಿದೆ

ಅಪಾರ ಮಳೆಯಿಂದಾದ ನಷ್ಟವು

ರೈಲ್ ರಸ್ತೆಗಳು ಎರಡು ಕಡೆ ಹಾಳಾಯಿತು

ಬೊಂಬಾಯಿ ಅಧಿಪತ್ಯದ ಅನೇಕ ಭಾಗಗಳಲ್ಲಿ ಮಳೆಗಳಾಗದ ಕ್ಷಾಮಪ್ರಾಪ್ತವಾಗಿ ಪ್ರಜೆಗಳು ಕಷ್ಟನಷ್ಟಗಳಿಗೆ ಗುರಿಯಾಗಿದ್ದು, ಮಳೆ ಆದೀತೇ ಎಂದು ವಿಶೇಷವಾಗಿ ಪರಿತಾಪಪಡುತ್ತಿದ್ದರು ಕಳೆದ 19 ನೇ ತಾರೀಖಿನಿಂದ ಆ ಪ್ರಾಂತ್ಯಗಳಲ್ಲಿ ಅಪಾರವಾದ ಮಳೆ ಸುರಿದು ಜನಗಳ ಹಾಹಾಕಾರವನ್ನು ಸರ್ಕಾರದವರ ವ್ಯಾಕುಲವನ್ನೂ ಒಹು ಮಟ್ಟಿಗೆ ಕಡಮೆ ಮಾಡಿದ್ದಲ್ಲದೆ ಕೆಲವು ಕಡೆ ವಿಶೇಷ ನಷ್ಟವನ್ನೂ ಉಂಟುಮಾಡಿರುತ್ತದೆ ಹ್ಯಾಗೆಂದರೆ ಬೊಂಬಾಯಿನಿಂದ ರೈಲಿನಲ್ಲಿ ಪೂನಾ ಪಟ್ಟಣಕ್ಕೆ ಬರುವಾಗ್ಗೆ ಕರ್ಜತ್ ಎಂಬ ಸ್ಟೇಷನ್ನಲ್ಲಿ ರೈಲ್ ಗಾಡಿಗೆ ಹಿಂದೆಯೂ ಒಂದು ಇಂಜನ್ನನ್ನು ಜಂಟಿಸುವುದು ಪದ್ಧತಿ ಯಾಕೆಂದರೆ ಅಲ್ಲಿಂದ ಮುಂದಕ್ಕೆ ಗಾಡಿಗಳು ಲೋನೋಲಾ ತನಕ ಇರುವ ಘಾಟಿಯನ್ನು ಹತ್ತಬೇಕಾಗಿದೆ ಮುಂದಿನ ಇಂಜನ್ನು ಗಾಡಿಗಳನ್ನು ಮುಂದಕ್ಕೆ ಎಳೆಯುವುದು, ಹಿಂದಿನ ಇಂಜನ್ನು ಗಾಡಿಗಳನ್ನು ತಳ್ಳುವುದು ಕರ್ಜತ್ ಸ್ಟೇಷನ್ನಿಂದ ಮುಂದಕ್ಕೆ ಹತ್ತಿ ಬರುವಾಗ ರೈಲ್ ಕಂಪನಿಯವರು ಉದ್ದಕ್ಕೂ ಒಂದು ಚಾರಿ ಏರಿಯನ್ನು ಮಣ್ಣಿನಲ್ಲಿ ಕಟ್ಟಿ, ಕಣಿವೆಗಳಲ್ಲಿ ಹರಿದು ಬರುವ ನೀರನ್ನೆಲ್ಲಾ ಏರಿಯೊಳಗೆ ತಡೆದು ದೊಡ್ಡ ಕೆರೆಯಾಗಿ ಮಾಡಿದಾರೆ ಈ ಕೆರೆಯ ನೀರನ್ನು ಅವಶ್ಯವಾದಾಗ ಇಂಜನ್‌ಗಳಿಗೆ ಭರ್ತಿ ಮಾಡಿಕೊಳ್ಳಬೇಕೆಂಬುವುದೇ ಅವರ ಉದ್ದೇಶವು ಈ ಕೆರೆಯ ಕಾಮಗಾರಿಯೆಲ್ಲಾ ಮುಗಿದು ಒಂದೆರಡು ದಿನಗಳು ಮಾತ್ರ ಆಗಿತ್ತು ಕಂಪನಿಯವರು ಅಲ್ಲಿಂದ ನಲ್ಲಿಗಳನ್ನು ಹಾಕಿ, ನೀರು ಸಾಗಿಸಿಕೊಂಡು ಹೋಗುವ ಏರ್ಪಾಡು ಮಾಡುತ್ತಿದ್ದರು ತಾ 19 ನೆ ಶುಕ್ರವಾರ ರಾತ್ರಿ ಮಳೆ ಹಿಡಿದು ಹತ್ತು ಅಂಗುಲ ಪ್ರಮಾಣದಷ್ಟು ಸುರಿಯಿತು ಇದರಿಂದ ಸುತ್ತುಮುತ್ತಿನ ಪ್ರಾಂತ್ಯಗಳ ನೀರೆಲ್ಲಾ ಆ ಕೆರೆಯೊಳಕ್ಕೆ ನುಗ್ಗಿ ಬಂದು, ಎರಡು ಮೈಲಿಯಷ್ಟು ವಿಸ್ತಾರವಾಗಿಯೂ, ಮೂವತ್ತು ಅಡಿಯಷ್ಟು ಆಳವಾಗಿ ನಿಂತುಬಿಟ್ಟಿತು ಈ ಹೊಸ ನೀರಿನ ರಭಸವು ಬಹಳವಾಗಿ ಹೆಚ್ಚಿ ಏರಿಯ ಮೇಲೆ ಹೋಗಿ ಹಿಂದೆ ಇದ್ದ ರೈಲ್ ರಸ್ತೆಯನ್ನೆಲ್ಲಾ ಒಂದು ಕಡೆ ಸುಮಾರು ಒಂದು ಮೈಲಿ ಉದ್ದವನ್ನೂ, ಇನ್ನೊಂದು ಕಡೆ 60-70 ಗಜಗಳಷ್ಟು ಉದ್ದವನ್ನೂ ಕೊಚ್ಚಿಬಿಟ್ಟಿದ್ದಲ್ಲದೆ ಅಲ್ಲಿದ್ದ ಟೆಲಿಗ್ರಾಫ್ ತಂತೀ ಕಂಭಗಳನ್ನೂ ಕಿತ್ತು ಹೊಡೆದುಕೊಂಡು ಹೋಯಿತು ತಂತಿಗಳು ಕಿತ್ತುಹೋದವು ಭಾರೀ ಮರಗಳು ಬುಡಸಹಿತ ಕಿತ್ತು ಪ್ರವಾಹದಲ್ಲಿ ಕೊಚ್ಚಿ ಹೋದವು ರೈಲ್ ಕಂಬಿಗಳ ಕೆಳಗಿದ್ದ ಮಣ್ಣೆಲ್ಲಾ ಕೊರಕಲು ಬಿದ್ದು ಹೊಡೆದುಕೊಂಡು ಹೋದ ಕಾರಣ ಕಂಬಿಗಳು ಅಂತರಾಳದಲ್ಲಿ ನಿಂತುಕೊಂಡವು ರೈಲ್ ಗಾಡಿಗಳ ಸಂಚಾರಕ್ಕೆ ವಿಶೇಷ ಅಡ್ಡಿಯಾಯಿತು ಮಾರನೇ ದಿನ ರೈಲ್ವೆ ನೌಕರರು ಪ್ರವಾಹ ಸ್ವಲ್ಪ ಮಟ್ಟಿಗೆ ಇಳಿಯುವುದನ್ನೇ ಕಾದಿದ್ದು ಬಹಳ ಸಾಹಸಪಟ್ಟು ಒಂದು ತಂತಿಯನ್ನು ಮರ ಎತ್ತಿ ಕಟ್ಟಿ, ಅದರ ಮೂಲಕ ಅಲ್ಲಿ ನಡೆದ ಅನಾಹುತವನ್ನು ವಿವರಿಸಿ ಸಹಾಯ ಮಾಡಬೇಕೆಂದು ವರ್ತಮಾನ ಕಳುಹಿಸಿದರು ಈ ಸಮಾಚಾರವು ಬೊಂಬಾಯಿಗೆ ತಲುಪಿದ ಒಡನೆಯೇ ಸ್ಪೆಷಲ್ ರೈಲಿನಲ್ಲಿ ಕೆಲವು ಗಂಟೆಗಳೊಳಗಾಗಿ ಕಂಪನಿಯವರು 700 ಜನ ಕೂಲಿ ಆಳುಗಳನ್ನೂ ಸಾಮಾನುಗಳನ್ನೂ ಆಹಾರ ಪದಾರ್ಥಗಳ ಸಮೇತ ಅಪಾಯ ಸಂಭವಿಸಿದ ಸ್ಥಳಕ್ಕೆ ಕಳುಹಿಸಿದರು ಮಾರನೇ ದಿನ ಇನ್ನೊಂದು ಸ್ಪೆಷಲ್ ರೈಲಿನಲ್ಲಿ 800 ಮಂದಿ ಕೂಲಿ ಜನಗಳು ಹೋಗಿ ಇಳಿದರು ಇವರೆಲ್ಲಾ ಸೇರಿಕೊಂಡು ಆ ಪ್ರವಾಹದ ನೀರನ್ನು ಇತರ ಕಡೆಗಳಿಗೆ ಸಾಗಿಸುವುದರಲ್ಲೂ, ರೈಲ್ ರಸ್ತೆಯನ್ನು ಪುನಃ ಪ್ರಾರಂಭ ಹಾಕಿ ಸರಿಮಾಡ ಪ್ರಯತ್ನದಲ್ಲಿ ಉದ್ಯುಕ್ತರಾಗಿದಾರೆ ರಾತ್ರಿ ಹೊತ್ತು ಅಪಾರ ಬೆಳಕನ್ನು ಕೊಡುವ ಭಾರಿ ದೀಪಗಳನ್ನಿಟ್ಟುಕೊಂಡು ಬಹು ಆತುರವಾಗಿ ಹಗಲಿರುಳು ಕೆಲಸ ಮಾಡುತ್ತಿರುವರು

ಒಂದು ರೈಲ್ ಗಾಡಿ ನಿಧಾನವಾಗಿ ಹೋಗಬಹುದಾದಂತೆ ಮಾರ್ಗವು ಸಿದ್ಧಪಡಿಸುತ್ತಿರುವರು ಬೊಂಬಾಯಿನಿಂದ ಪ್ರತಿದಿನವೂ ಮದರಾಸಿಗೆ ಬರುವ ರೈಲ್ ಗಾಡಿಯು ಈಗ ಇನ್ನೂರು ಮೈಲಿ ದೂರ ಸುತ್ತಿಕೊಂಡು ಮನ್ಮಾಡ್-ಧೋಂಡ್ ಲೈನ್ ಮೂಲಕ ಬರುತ್ತದೆ ಈ ಅನಾಹುತದಿಂದ ಪ್ರಾಣನಷ್ಟವೇನೂ ಆಗಲಿಲ್ಲವೆಂದು ಸಂತೋಷಪಡುವೆವು

ಅತ್ತಲಾಗಿ ಈ ಮಳೆಯ ದೆಸೆಯಿಂದ ಇತರ ಕಡೆಗಳಲ್ಲೂ ಪ್ರವಾಹದ ಕಷ್ಟನಷ್ಟಗಳು ಸಂಭವಿಸಿದವು ತಪತಿ ನದಿಯ ಕಣಿವೆಯಲ್ಲೂ ಪಾಂಡೆಸಿನ್ ರೈಲ್ ರಸ್ತೆಯು ಕಿತ್ತುಹೋಯಿತು ಮತ್ತು ಇಗತ್ಪುರಿ ಪಾಟಿನಲ್ಲಿ ಬಹಳ ದೂರ ರೈಲ್ ರಸ್ತೆಗೆ ಅಪಾಯ ಸಂಭವಿಸಿರುತ್ತದೆ ಬೊಂಬಾಯಿ ಪಟ್ಟಣದಲ್ಲಿ ವಿಕ್ಟೋರಿಯಾ ಡಕ್ ಎಂಬ ಜಹಜು ನಿಲ್ಲುವ ರೇವನ್ನು ಕಟ್ಟುತ್ತಿದ್ದರು ಈ ಕಟ್ಟಡದ ಕೆಲಸವು ನಿಂತುಹೋಗಿದೆ ಪ್ರವಾಹದ ನೀರು ಅದರೊಳಗೆ ನುಗ್ಗಿ 7 ೮ ಅಡಿ ಪ್ರಮಾಣದ ವರೆಗೂ ನಿಂತು ಅಲ್ಲಿ ಕೆಲಸಮಾಡುವುದಕ್ಕಾಗಿ ಇಟ್ಟುಕೊಂಡಿದ್ದ ದೋಣಿಗಳನ್ನೂ ಯಂತ್ರಗಳೇ ಮುಂತಾದವುಗಳನ್ನೂ ಮುಳುಗಿಸಿಬಿಟ್ಟಿರುವುದು ಈ ಕಟ್ಟಡದ ಸುತ್ತಲೂ ಹಾಕಿದ್ದ ಕಬ್ಬಿಣದ ಕಟಕಿಗಳು ನೀರಿನಲ್ಲಿ ಮುಳುಗಿ ಹೋಗಿರುವವು ಪೂನಾ ಪಟ್ಟಣದಲ್ಲೂ ಪ್ರವಾಹದಿಂದ ಬಹಳ ನಷ್ಟಸಂಭವಿಸಿರುವಂತೆ ಸಮಾಚಾರ ಬಂದಿದೆ ಅಲ್ಲಿ ಹರಿಯುವ ಮೂಠಾ, ಮುಲ್ಲಾ ಎಂಬ ಹೊಳೆಗಳಲ್ಲಿ 15 ಅಡಿಯಷ್ಟು ಪ್ರವಾಹ ಬಂದು ದಡಗಳ ಮೇಲೆ ಹೋಗಿ ರೈಲ್ವೆ ಬ್ರಿಡ್ಜಿಯ ತನಕ ಹರಡಿಕೊಂಡಿತು ಇದಲ್ಲದೆ ಪೂನಾ ಪಟ್ಟಣದೊಳಕ್ಕೆ ನೀರು ನುಗ್ಗಿ ತಗ್ಗಿನಲ್ಲಿರುವ ಪ್ರದೇಶಗಳೆಲ್ಲಾ ವ್ಯಾಪಿಸಿತು ಹೋಲ್ಕರ್ ಸೇತುವೆಯ ಮೇಲೆ ಕೈಪಿಡಿಯು ಸ್ವಲ್ಪ ದೂರ ಮುರಿದು ಹೋಯಿತು ಟೆಲಿಗ್ರಾಫ್ ತಂತೀ ಕಂಬಗಳು ಬಿದ್ದು ಕೊಚ್ಚಿ ಹೋದವು ಅನೇಕ ಬಡಬಗ್ಗರ ಮನೆಗಳು ಬಿದ್ದು ಹೋದವು ಕೋಟೆ ತುಡಿಕೆಗಳೂ ಉದ್ಯಾನವನಗಳೂ ನೀರು ನಿಂತು ಹಾಳಾಗುತ್ತಿವೆ ಪೂನಾ ಪಟ್ಟಣದಲ್ಲಿ ಎರಡು ದಿವಸಗಳಲ್ಲಿ ಏಳು ಅಂಗುಲ ಪ್ರಮಾಣದಷ್ಟು ಮಳೆ ಸುರಿಯಿತು ಈಚೆಗೂ ಮಳೆ ಬರುತ್ತಿದ್ದರೂ ಅಷ್ಟು ಜೋರಾಗಿಲ್ಲ

ತಾ 29 ನೇ ಭಾನುವಾರ ಸಾಯಂಕಾಲ 7 ಗಂಟೆಗೆ ವಿಶೇಷವಾದ ಮಳೆಯ ದೆಸೆಯಿಂದ ಬೊಂಬಾಯಿ ಪಟ್ಟಣದ ಪರೇಲ್ ಮೊಹಲ್ಲಾ ಲಾಲ್‌ಬಾಗಿನಲ್ಲಿ ಮೂರು ಅಂತಸ್ತಿನ ದೊಡ್ಡಮನೆಯು ಅಕಸ್ಮಾತ್ತಾಗಿ ಕುಸಿದು ಬಿದ್ದು ಕೆಡಿತು ಕಾರ್ಖಾನೆಗಳಲ್ಲಿ ಕೂಲಿಮಾಡುವ 200 300 ಬಡಜನಗಳು ಅದರಲ್ಲಿ ವಾಸಮಾಡುತ್ತಿದ್ದರು 12 ಜನರು ಕಟ್ಟಡದೊಳಗೆ ಸಿಕ್ಕಿಹೋದರೆಂದೂ, ಇನ್ನೈಕೆ 5 ಮಂದಿಯನ್ನು ಹೊರಕ್ಕೆ ತೆಗೆದು ಆಸ್ಪತ್ರೆಗೆ ಸಾಗಿಸಿದರೆಂದೂ ತಂತಿ ವರ್ತಮಾನ ಬಂದಿದೆ

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು

ಶ್ಯಸೋಕದೆ ತಯಾರಾದದ್ದು; ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳಸುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಕಳುಹಿಸುತ್ತಾರೆ

[66-14] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev L. W Thompson M A, Proprietor and Manager, Wesleyan Mission Press Mysore 1/8/1912

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು — ಕ್ರಯ ೧ ದುಡ್ಡು.

ಸಂಪುಟ ೨೬ — ಮೈಸೂರು—ಸ: ೧೯೧೨ ನೇ ಇಸವಿ ಅಗಸ್ಟು ತಾರೀಖು ೮ ನೇ ಗುರುವಾರ. — ಸಂಚಿಕೆ ೧೦

ಡೋಂಗರೆ ಇವರ ಬಾಲಾಮೃತ.

[115-4]

ಸಣ್ಣ ಮಕ್ಕಳಿಗೆ ಡೋಂಗರೇ ಇವರ ಬಾಲಾಮೃತವು ಬಹಳ ಗುಣ ಉಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕಟ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ ಎಲುಬುಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಸಾಫು ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ ಟಪಾಲ ಖರ್ಚು ೩ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹೊಸ ಧಸ್ಮ ಚಿನ್ನದ ರೇಖು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ... ಪದಾರ್ಥಗಳ ... ತಯಾರಿ ... ಕೆಮ್ಮು, ಸುಮುಗಳ ನೋವು ... (ಧನುರ್ವಾತ), ... ಶೀತ ... ಅಜೀರ್ಣ ... ಅನೇಕ ರೋಗಗಳಿಗೆ ಕೊಟ್ಟರೆ ... ಉಪಯೋಗಿಸುತ್ತಿದ್ದರೆ ಬಹಳ ... ಸುವಾಸನೆಯಾಗಿರುತ್ತಾರೆ ... [98 1]

೨ ವೈಶ್ವಾನರಾಸವ (ಕಾಲರಾ ಔಷಧ)

... ಈ ವೈಶ್ವಾನರಾಸವವು ... ಹೊಟ್ಟೆಯುಬ್ಬರ ... ಬಾಟ್ಲು ... ಸಿದ್ಧಾಮೃತ ...

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ — ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಜಾರ್ಜ್ ಸಾರ್ವಭೌಮರ ಚರಿತ್ರೆ

[12 1]

ಈ ಪುಸ್ತಕವು ಚಕ್ರವರ್ತಿಗಳವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ... ಕ್ರಯ ಪ್ರತಿ 1ಕ್ಕೆ ೫ ಆ ಹಾಸಲು 1ಆ

ವಿಳಾಸ ಸಿ ಎಲ್ ಎಸ್ ಬುಕ್ ಡಿಪೊ ಮೈಸೂರು

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ— ಇದು ಅನಂಗಸುಂದರಿಯ ಉಪಸಂಹಾರ ... ಕ್ರಯ 8 ಆಣೆ

ಕುಮುದಿನಿ— ಬಂಗಾಳಿಯಿಂದ ಕನ್ನಡಿಸಿದ ... ಕ್ರಯ ೬ ಆಣೆ

ಸತೀರೋಹಿಣಿ— ಸ್ತ್ರೀಯರೆಲ್ಲರೂ ಇದನ್ನೋದಬೇಕು ... ಕ್ರಯ 2 ಆಣೆ [139-36]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

8111

ಎಂದು ... ವಾಯು ... ಹಲ್ಲುನೋವು ... ಗಾರೆಪ್ಪವುದು, ಕೆಮ್ಮುಗಳು, ... ಉಳುಕು, ಛಳುಕು ... ಈ ವೊದಲಿಂದ ಎಲ್ಲಾ ತರದ ನೋವನ್ನೂ ನಾನು ... ಸಂತೋಷವಾಗಿ ಕೆಲಸ ಮಾಡುತ್ತೇನೆಂದು ... ಅಂಗಡಿಗೆ ಹೋಗಿ ಕ್ಲೆಮೆಂಟ್ಸ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ... ಈ ಯುಕ್ತಿಯೋಜಿತ ... ಔಷಧವು 12 ಆಣೆಗೆ ಸಿಕ್ಕುತ್ತದೆ ... ಉತ್ತಮೋತ್ತಮವಾದ ... ಲಕ್ಷಾಂತರ ಜನರು ... ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

ಕ್ಲೆಮೆಂಟರ ಮ್ಯಾಜಿಕ್ ಬಾಂ ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ... ವ್ಯಾಪಾರಸ್ಥರಿಗೆ ... ಡಿಸ್ಕೌಂಟು ಸಿಗುತ್ತದೆ ವಿಳಾಸಗಳು —(1) ಎಸ್ ಪೀಟರ್ಸ್, 17 ... (2) ಜಿ ಎಸ್ ... ಜನರಲ್ ಮರ್ಚೆಂಟ್ ...

ಒಂದೇ ಕದ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪ ಕಂಠೀರವ ಚರಿತ್ರೆ

ಇದರಲ್ಲಿ (1) ... ಉಂಟಾಗುವದರಿಂದ ... ಎಂಬ ನೀತಿ, (2) ... ಸ್ತ್ರೀಬುದ್ಧಿ ... (3) ... ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ... ವರ್ಣನೆಗಳು (5) ಮನುಷ್ಯಯನ್ನಕ್ಕೆ ... (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ... (7) ... ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ... ಭಾಗಗಳು ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [5 31]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

೧೯೧೩ ನೇ ಎಗ್ಜಾಮಿನರ್ ಮಾಸಪುಸ್ತಕ

ಪರೀಕ್ಷಾ ಹುಡುಗರಿಗೆ ಅಗತ್ಯವಾದ ಈ ಮಾಸಪುಸ್ತಕಕ್ಕೆ ಆಗಸ್ಟ್ 31 ರೊಳಗೆ ... ಚಂದಾ ರೂ 1-1 0 ... ಸೋಟ್ 11 ಆ ... ಎಗ್ಜಾಮಿನರ್ ಆಫೀಸ್ ಚಿಕ್ಕಬಳ್ಳಾಪುರ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೆಳಗಿನ ಪಟ್ಟಿಗಳನ್ನು ಓದಿ ... ನಿಮ್ಮ ಹಣವನ್ನೂ ... ನಮೂನೆಯು ಪ್ರತ್ಯೇಕವಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

... ಅಲಂಕಾರವಾಗಿದೆ ಆದರೆ ... ನುಣುಪಾಗಿಯೂ ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ಲೆಕ್ಕವಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ... ಕೂದಲುಗಳು ...

ಕಾಮಿನಿಯಾ ತೈಲ—

... ಕೂದಲುಗಳನ್ನು ... ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ... ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ

ಇದರ ಬೆಲೆ 1 ... 100 ಅಂಚೆಯ ವೆಚ್ಚ 0 4-0 ಬೇರೆ ತೆರಬೇಕು, ... 100 ಅಂಚೆಯ ವೆಚ್ಚ 0-7-0

... ಅಭಿಪ್ರಾಯಪತ್ರಗಳಿಂದ ಕೆಲವನ್ನು ... —

28 7-11 ... ರುಕ್ಮಿಣಿವಿಲಾಸ, ... "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ... ಪ್ರಥಮ ಶ್ರೇಣಿಯನ್ನು ಹೊಂದಿದೆ ಮತ್ತು ಇದಕ್ಕೆ ಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7 11 ... (ಬರ್ಮಾ)- ನನ್ನ ಮಿತ್ರರು ಕಾಮಿನಿಯಾ ತೈಲ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ... 6 ಶೀಸೆಗಳನ್ನು ... ರವಾನಿಸತಕ್ಕದ್ದು [94-32]

ಸುಗಂಧದ್ರವ್ಯಗಳು

ಗುಲ್ ಷಾನ್ (ರೆಜಿಡ್)— ... ಅತ್ತರುಗಳಲ್ಲೆಲ್ಲಾ ಇದೇ ಅತಂತ್ಯ ಶ್ರೇಷ್ಠವಾದದ್ದು ... ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ... ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯುಳ್ಳದ್ದು ಕ್ರಯ ದ್ರಾಂ ಸೀಸೆಗೆ ರೂ 1 8 0

ದಿಲ್ ಬಹಾರ್ (ರಜಿಡ್)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ... ಸುಗಂಧ ಡ್ರಾಂ ಸೀಸೆಗೆ ರೂ 1-8-0.

"ಕಾಮಿನಿಯಾ ..." ರೂ 1 4 0, "ಕಾಮಿನಿಯಾಮಾಲತಿ" ರೂ 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಜ್ವರಶಂಕರಿ

114-40

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ಮರಿಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ೩ ದೊಡ್ಡು

ಬಾರಿ ಸೇವಿಸುವುದರೊಳಗಾಗಿ ತಪ್ಪದೆ ಗುಣಪಡಿಸುವದು. ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು. ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ನಿವೃತ್ತಿಸಬಹುದು. ಬಾಟಲಿಗೆ ೧ ರೂ , ೩ ಬಾಟಲಿಗೆ ೨ ರೂ. ೧೧ ಆಣೆ.

ಪ್ಲಿಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ.

ವಾತಮುರಾರಿ— ಇದು ತಲೆನೋವು, ಉಳುಕು, ಬೀಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು. ಜ್ವರಶಮಿಸುವುದಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ., ೩ ಬಾಟಲಿಗೆ ೧ ರೂ. ೬ ಆಣೆ.

ನಮ್ಮ ದೊಡ್ಡ ಕ್ಯಾಟಲಾಗು ಓದಿ ನೋಡಿರಿ.

ನಮ್ಮ ವಿಳಾಸ:—ಬಿ ಎಮ್ ನಾಥ ಮತ್ತು ಕಂಪೆನಿ,
ವೆಪೇರಿ, ಮದರಾಸ್.

ಕಾರ್ನೇಷನ್ ಸಾಬೂನ್

ಅಪಾಯವಿಲ್ಲದ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ

ರೋಮವು ಮಾಯವಾಗುವದು ಉರಿ, ನಂಜು ಮುಂತಾದ ಬಾಧೆಗಳಿಲ್ಲವು ಒಂದು ಸಲ ಉಪಯೋಗಿಸಿದರೆ ಗೊತ್ತಾಗುವದು ಮೂರು ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ರೂ. ೧-೦-೦, ಅಂಚೆ ಹಾಸಲು ಪ್ರತ್ಯೇಕ ನಮ್ಮ ವಿಳಾಸ — ಬಿ ಸಿ ಷಾ ಅಂಡ್ ಕಂಪೆನಿ, ೧೭೭ ಜನರಲ್ ಬಜಾರ್ ರೋಡ್, ಮದ್ರಾಸು.

ತಾ ಕ—ವ್ಯಾಪಾರಿಗಳಿಗೆ ಒಳ್ಳೇ ಕಮಿಷನ್ ದೊರೆಯುವದು [101-5]

ಸುಲಭ ಕ್ರಯದ ಮಾಲುಗಳು ಬೇಗ ತರಿಸಿಕೊಳ್ಳಿ.

ಸುಂದರವಾದ ಜೇಬು ಗಡಿಯಾರ ಬೆಲೆ ರೂ ೨-೩-೦.

ಕ್ಲಿಪ್ ಪೇಪ್, ಸ್ಕ್ರಾಪ್‌ಮೆಂಟ್, ಲಿವರ್ ಪೇಟೆಂಟ್, ಹತ್ತು ವರುಷಗಳವರೂ ಕೆಡದೆ ನಡೆಯುವ, ಬೋಲ್ಡ್ ಡಯಲ್, ಘಂಟೆ ಸೇರದ ಬಲ್ಮಿಯ ಒಳ್ಳೆದ ಮುಚ್ಚಳಗಳುಳ್ಳ, ಸಮಗ್ರಯಂತ್ರಾವಿಕಲದ ಯುಕ್ತವಾದ ಈ ಅಂದವಾದ ಆಕಾರದ ಗಡಿಯಾರದ ಮೊದಲಿನ ಕ್ರಯ. ರೂ 8 ಮುಂದಿನ ಆಗಸ್ಟು ಆಖೈರ್ ವರೆಗೆ ಉತ್ತರಮುಖಿ, ಸರಪಣಿ, ಅಂದವಾದ ಪೆಟ್ಟಿಗೆ ಸಹಿತ ರೂ 2-9-0 ಕ್ಕೆ ಕೊಡುವೆವು

ಬುಬ್ಬೀಸ್ ! ಬ್ಲಾಂಕೆಟ್ ! ಬನಾತು ! ಬೆಲೆ ! ರೂ. 6, 5, 4. ಛಳಿಗೆ ಬೆಚ್ಚಗೂ, ಹೊದೆಯುವುದಕ್ಕೆ ಮೆತ್ತಗೂ ಇದೆ ಶುದ್ಧ ಉಣ್ಣೆಯದು ಬುಬ್ಬೀಸ್ ಉದ್ದ 80, ಅಗಲ 18 ಅಂಗುಲ ಕ್ರಯ 1 ನಂ ರೂ 6, 2 ನಂ ರೂ 1 [120-3]

ಪ್ರಸಿದ್ಧ ಮಧುರೆಯ ಸೀರೆ. ಬೆಲೆ ರೂ 3½, 5½; 8 —ರಂಗು ಕೆಡದ ಗಟ್ಟಿ ಬಣ್ಣ, 17 ಮೊಳದುದ್ದ, ಕೆಂಪು, ಕರಿಯ ಬಣ್ಣಗಳಲ್ಲಿ ಸಾದಾ ಅಥವಾ ಬೇ ಚುಕ್ಕೆಗಳುಳ್ಳವು ಕ್ರಯ ರೂ 3-1-0 , ಪೋಟಾ ಜರತಾರಿಯವು ರೂ 5-1-0 , ಸಾದಾ ಜರತಾರಿಯವು ರೂಪಾಯಿ 8.

ನಮ್ಮ ವಿಳಾಸ —ವೆಂಕಟಾಚಲಂ ಕಂಪೆನಿ,
ಪೈಕ್ರಾಫ್ಟ್, ವೇಪೇರಿ, ಮದ್ರಾಸು.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಕಡಿ ಅಥವಾ ಹುಳುಕಡಿ ಔಷಧವು

ಡಬ್ಬಿ 1 ಕ್ಕೆ ರೂ. 0-4-0. ಡಬ್ಬಿ 12 ಕ್ಕೆ ರೂ 2-8-0

ಕರೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಶ್ರೇಷ್ಠವಾದ ಔಷಧಿಯು ಚರ್ಮದಲ್ಲಿ ಉಂಟಾಗುವ ಕೊಳೆಯನ್ನು ಹೋಗಲಾಡಿಸಿ ಒಂದೇ ದಫಾ ಹಾಕುವದರಿಂದ ದೇಹವು ಥಳಥಳಿಸುವ ಹಾಗೆ ಶುದ್ಧಿಯನ್ನು ಮಾಡುವದು ಇದು ಸುವಾಸನೆಯು ದೇಹಕ್ಕೆ ತಂಪು ಉಂಟುಮಾಡುವದು

ಉಷ್ಣಮರ್ಜ ಚೂರ್ಣವು

10 ತೊಲೆ ಔಷಧವುಳ್ಳ ಡಬ್ಬಿ 1 ಕ್ಕೆ ರೂ 1-0-0

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ಶಾಂತಿಯಾಗಿ ನೀರು ಧಾರಾಳವಾಗಿ ಇಳಿಯುವದರಿಂದ ವಿಶೇಷರೋಗ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0-1-0. ಡಬ್ಬಿ 12 ಕ್ಕೆ ರೂ 2-8-0.

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವಾರಣೆ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಿಲ ಬೀಳದಂತೆಯೂ ಗಟ್ಟಿಯಾಗಿಯೂ ನಿಂತಿರುವವು. ಹಲ್ಲುಗಳನ್ನು ಸ್ವಚ್ಛಮಾಡುವದು [121-11]

ರಾಜವೈದ್ಯ ನಾರಾಯಣಜೀ ಕೇಶವಜೀ,
771, ಜನರಲ್ ಬಜಾರ್ ರೋಡ್, ಮದ್ರಾಸು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1 32



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀತಜ್ವರ ರೋಗ, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಸರಮ್ಯೌಗ್ಯಯುಕ್ತವಾದ ಔಷಧವು ಜನರನ್ನು ಬಹಳ ಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

WILLIAM & Co, FORT, BOMBAY

ಅಮೃತಾಂಜನ್. (Regd.)

35-24

ತಲೆನೋವು, ಒತ್ತು ಕೂತಿರ ವಾತ, ಸಂಧಿವಾತ ಶರೀರನೋವು, ಸೊಂಟನೋವು ಎದೆ ಕಟ್ಟು, ಗಂಟುನೋವು, ಸಾಯ, ಉಳುಕು

ಮುಂತಾದವುಗಳು ಅಮೃತಾಂಜನದ ಲೇಪನ ಒಂದೆ ರಾತ್ರಿ ಯಾಗಿಗುಣವಾಗುವದು ಎಲ್ಲೆಲ್ಲೂ ಪ್ರಖ್ಯಾತಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1 ಕ್ಕೆ 0-8-0

ಗಜಕರ್ಣದ ಮುಲಾಮು.

ಮೊಂಡಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ; ಚರ್ಮವು ಕಪ್ಪಾಗುವದಿಲ್ಲ ಡಬ್ಬಿ 1 ಕ್ಕೆ 0-6-0 ದಂತಮಂಜನ 1ಕ್ಕೆ ನೇತ್ರಾಂಜನ 1ಕ್ಕೆ. ಸುಂದರಿ ತೈಲ 8ಆಣೆ.

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೊ, ಫೋರ್ಟ್ಸ್ ಮುಂಬಯಿ.

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ ರೂ 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದ್ದಲ್ಲದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತ ಒಂದು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ [13-18]

ಮುಖ್ಯವಾಗಿ ಗಮನಿಸಿ ಓದಿರಿ

೧. ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲೀವರ್ ಚಿಕ್ಕ ಸೈಜು ಕೆಂಪು ಸೆಟ್ಟಿಂಗ್ ಬ್ಯಾಲೆನ್ಸು. ಒಡು ಬಲವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5-12-0. ಇದನ್ನು ಆಗಸ್ಟ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಘಂಟೆ ಗಂಟೆಯವರೆಗೆ ಬೇಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ:—ಸುಪೀರಿಯರ್ ವಾಚ್ ಕಂಪನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು.

BENEFIT YOURSELF AND BENEFIT OTHERS

The National Insurance and Banking Company Ltd., Amritsar.

Authorised Capital	Rs	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indian Life Assurance Companies'** and **Provident Societies' Acts 1912** and has also given **double the initial security** to the **Government** as required under the **Insurance Act 1912.**

How is it that the **National, of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides issues policies at most favourable rates and on most liberal conditions, and distributes relief in thousands every quarter on account of **marriages and deaths**

122-2

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time, who reside in district or taluk head quarters and who are well versed in English need apply

For further particulars and prospectuses, please apply with **one anna stamp** and your previous experience in the line to —

M. L. NAGANNAH,
Chief Agent,
The Amritsar National Insurance Buildings, Mysore.

ಮಕ್ಕಳ ಹಿತಕಾರಿ

ಎಂದು

SCOTT'S EMULSION 2-32

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹರಸುತ್ತಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಡುವುದು , ಆರೋಗ್ಯವಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

Always get the Emulsion with this mark—the Fisherman —the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕ್ರೈಸ್ತೋಕದೆ ತಯಾರಾದದ್ದು

ಎಲ್ಲಾ ಔಷಧವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 32

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಮಾದರಿಯೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾರ್ಡರ್ ಕೆಲಸವೆಲ್ಲಾ ಸಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ಬಹಳ ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ಮಾದರಿಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿಪು, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜರಿಯ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಹೂಕುಸುರಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಹುಡುಗರ ಟೋಪಿ, ಫುಲ್ ಮೇಜೋಡು, ಅರ್ಧ ಮೇಜೋಡು, ಕೈಚೀಲ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರಿಗೂ ಶರೀರವು ಆರೋಗ್ಯವಾಗಿರುವುದು, ದೌರ್ಬಲ್ಯದಿಂದಲೇ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಆಯಾ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನು ನೋವು, ನಿದ್ದೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದ ಬಾಯಾರಿಕೆ ; ಬಳಲಿಕೆ ; ಎದೆ ಕಲ್ಲಿಸುವುದು, ತಲೆನೋವು ; ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ ; ಮೈನೋವು ಕೀಲುನೋವು, ಮರವೆ, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸಂಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [೯೧-48]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



೨—೧೦-೦, ಅಥವಾ ೬ ಬುಡ್ಡಿಗಳಿಗೆ ರೂ. ೧೦ ೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುತ್ತವೆ. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ ಇವರಲ್ಲಿ ದೊರೆಯುವುದು

ಮೈಸೂರು ಸಂಸ್ಥಾನದಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—7—1912 ರಿಂದ 19—7—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3	2	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	30	32	0	0
ಕೋಲಾರ್ ,,	0	0	1	5
ಕೋಲಾರ್ ಚಿನ್ನದ ಗಣಿಗಳು.	1	2	0	0
ತುಮಕೂರು ಡಿಸ್ಟ್ರಿಕ್ಟು	0	0	22	11
ಹಾಸನ ,,	3	0	10	1
ಚಿತ್ರದುರ್ಗ ,,	0	0	51	29
ಕಡೂರ್ ,,	3	1	0	0
ಶಿವಮೊಗ್ಗ ,,	17	11	12	36
ಜುಮ್ಲಾ	69	48	132	80

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಋತೌ ನಿಜ ಆಷಾಢ ಬಹುಳ ಏಕಾದಶಿ ಶುಕ್ರವಾರದಿಂದ ಶ್ರಾವಣ ಶುದ್ಧ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಆಗಸ್ಟ್.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಆಷಾಢ ಮಾಸ ತೇದಿ
9	ಶುಕ್ರ *	ಏಕಾದಶಿ	12-57	ಮೃ	18-45	26
10	ಶನಿ .	ದ್ವಾದಶಿ	7 17	ಪ್ರ	15 19	27
11	ಭಾನು ,,	ತ್ರಯೋದಶಿ	1-18	ಪುನ	51 3	28
12	ಸೋಮ §	ಅಮಾವಾಸ್ಯೆ	19-31	ಪು	7-17	29
13	ಮಂಗಳ ,,	ಪಾಡ್ಯಮಿ	13-28	ಶ್ಲೇ	3 6	30
14	ಬುಧ †	ಬಿದಿಗೆ	37-59	ಮ	55-11	31
15	ಗುರು ‡	ತದಿಗೆ	32-21	ಉತ್ತಾ	52-2	32

* ಅದಿಶುಕ್ರವಾರ, ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ಆಶ್ಲೇಷ 3 ನೇ ಪಾದ ,, ಶನಿಪ್ರದೋಷ ;, ಮಾಸಶಿವರಾತ್ರಿ § ಸರ್ವತ್ರ ಭೀಮಾಮಾವಾಸ್ಯೆ, ದರ್ಶ, ಜ್ಯೋತಿಸ್ತಂಭವ್ರತ, ಮಳೆ ನಕ್ಷತ್ರ—ಆಶ್ಲೇಷ 4 ನೇ ಪಾದ ,, ಮಂಗಳಗೌರೀವ್ರತ † ರಂಜಾನ್ ಚಂದ್ 1 ‡ ಸಂಪದ್ಗೌರೀವ್ರತ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೮-೦	೧೬-೦-೦
ಕೆಂಬತ್ತಿ ಅಕ್ಕಿ ಅವಲ್	... ..	೧೭-೮-೦	೧೬-೮-೦
,, ದುಯಂ	... ...	೧೬-೮-೦	೧೭-೮-೦
ಬೆಂಪ್ರಾಗ ಅಕ್ಕಿ	... ...	೧೬-೪-೦	೧೬-೦-೦
ಗಜ್ಜಕ್ಕಿ ಅವಲ್	.. .	೧೮-೦-೦	೧೮-೦-೦
,, ದುಯಂ	.. ..	೧೭-೮-೦	೧೬-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	... ...	೧೪-೪-೦	೧೩-೮-೦
,, ದುಯಂ	.. .	೧೩-೮-೦	೧೧-೮-೦
ಕೈಕ್ ರಾಗಿ ಪಲ್ಲಾ ೧ಕ್ಕೆ	. ..	೭-೧೩-೦	೭-೫-೦
ಸಾರ್ವ್ಯಾಗಿ	... .	೭-೪-೦	೭-೪-೦
ಜೋಳ	... .	೮-೮-೦	೮-೦-೦
ಹಲಸಂದೆ ಪಲ್ಲಾ ೧ಕ್ಕೆ	... .	೧೩-೮-೦	೧೧-೦-೦
ಬಿಳೀ ಅವರೆ	... .	೧೧-೦-೦	೧೦-೦-೦
ಹೆಸರು	... .	೧೪-೦-೦	೧೪-೮-೦
ಉದ್ದು	... ...	೧೪-೦-೦	೧೫-೦-೦
ಕಡಲೆ	... ...	೧೧-೮-೦	೧೧-೦-೦
ಎಳ್ಳು ಸೇ ೧೨೭ಕ್ಕೆ	.. ..	೩೪-೦-೦	೩೪-೮-೦
ಹುರುಳಿ	... .	೭-೦-೦	೭-೩-೦
ಹರಳು ೧೨೭ ಸೇರಿಗೆ	... ...	೧೯-೦-೦	೧೯-೦-೦
ಒಣಮೆಣಸಿನಕಾಯಿ ಮಣ ೧ಕ್ಕೆ	... .	೩-೮-೦	೩-೮-೦
ಮೆಣಸಿನಕಾಯಿ	. ... ..	೩-೪-೦	೩-೪-೦
,, ದುಯಂ	.. ...	೩-೦-೦	೨-೮-೦
ಬೆಲ್ಲ ದೊಡ್ಡ ಅಚ್ಚು	... ...	೫-೮-೦	ಮ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	... ..	೬-೮-೦	೬-೮-೦
ಹರಳೆಣ್ಣೆ ,,	... .	೫-೮-೦	೫-೮-೦
ಕೊಬ್ಬರಿ ಪಲ್ಲಾ ೧ಕ್ಕೆ	... ..	೬-೦-೦	೬-೮-೦
ಉಪ್ಪು ,,	... ...	೬-೪-೦	೫-೮-೦
ಹುಣಸೇ ಹಣ್ಣು	... ...	೧-೪-೦	೧-೪-೦
,, ಹಳೇದು	... ...	೧-೨-೦	೧-೩-೦
ತುಪ್ಪ ಮಣ ೧ಕ್ಕೆ	... ..	೧೮-೦-೦	೧೭-೦-೦
ನೀಮಯಣ್ಣೆ ಹಿಟ್ಟು ೧ಕ್ಕೆ	... ..	೫-೦-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	... ...	೫-೨-೦	೬-೦-೦
ಅಳಲೇಕಾಯಿ ಮಣ ೧ಕ್ಕೆ	.. .	೨-೮-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೩-೦	೧-೮-೦
ಚಿನ್ನ (ಪವನ್) ಕೆಂಪು	.. .	೧೫-೮-೦	೧೫-೮-೦
,, ,, ಪಸಿಮೆ	.. ..	೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	. .	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೦-೦

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಹೊಸ ಮೆಂಬರುಗಳ ಚುನಾವಣೆಯು.

ರಾಜಧಾನಿಯ ಪ್ರಜೆಗಳು ಈ ಕೆಳಗೆ ಕಂಡ ವಿವರಣೆಗಳ ಪ್ರಕಾರ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಗಳನ್ನು ನಡಿಸತಕ್ಕದ್ದೆಂದು ವಿಧಾಯಕವಾಗಿರುತ್ತದೆ

ಇದೇ ಆಗಸ್ಟ್ 19 ನೇ ತಾ ಸೋಮವಾರ ಸೆಂಟ್ರಲ್ ಪೋಲೀಸ್ ಸ್ಟೇಷನ್ ಕಟ್ಟಡದಲ್ಲಿ ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ಲಷ್ಕರ್ ಮೊಹಲ್ಲಾ ಮೆಂಬರ ಚುನಾವಣೆಯೂ, ಮಧ್ಯಾಹ್ನ 4 ರಿಂದ 6 ಗಂಟೆವರೆಗೆ ಮಂಡಿ ಮೊಹಲ್ಲಾ ಮೆಂಬರ ಚುನಾವಣೆಯೂ ಜರುಗುವವು

ತಾ 20 ನೇ ಮಂಗಳವಾರ ಬೊಮ್ಮಯ್ಯನವರ ಛತ್ರದಲ್ಲಿ ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ದೇವರಾಜ ಮೊಹಲ್ಲಾ ಮೆಂಬರ ಚುನಾವಣೆಯೂ, ಮಧ್ಯಾಹ್ನ 4 ರಿಂದ 6 ಗಂಟೆವರೆಗೆ ಕೃಷ್ಣರಾಜ ಮೊಹಲ್ಲಾ ಮೆಂಬರ ಚುನಾವಣೆಯೂ ನಡೆಯುವವು

ತಾ 21 ನೇ ಬುಧವಾರ ಮರಿಮಲ್ಲಪ್ಪನವರ ಸ್ಕೂಲ್ ಕಟ್ಟಡದಲ್ಲಿ ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ಚಾಮರಾಜ ಮೊಹಲ್ಲಾ ಮೆಂಬರ ಚುನಾವಣೆಯೂ, ಸಾಯಂಕಾಲ 4 ರಿಂದ 6 ಗಂಟೆವರೆಗೆ ನಜರಬಾದು ಪೋಲೀಸ್ ಸ್ಟೇಷನ್ ಕಟ್ಟಡದಲ್ಲಿ ನಜರಬಾದು ಮೊಹಲ್ಲಾ ಮೆಂಬರ ಚುನಾವಣೆಯೂ ನಡೆಯುವವು.

ತಾ 22 ನೇ ಗುರುವಾರ ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ಟೌನ್ ಹಾಲ್ ಬಂಗಲೆಯಲ್ಲಿ ಕಿಲ್ಲೆ ಮೊಹಲ್ಲಾ ಮೆಂಬರ ಚುನಾವಣೆ ನಡೆಯುತ್ತದೆ.

ಈ ಚುನಾವಣೆಗಳು ನಡೆಯುವಾಗ್ಗೆ ವೈಸ್ ಪ್ರೆಸಿಡೆಂಟ್ ಮೆ|| ಎಂ. ಜಿ. ಕೃಷ್ಣಸ್ವಾಮಿರಾಯರು ಖುದ್ದಾಗಿ ಹಾಜರಾಗಿರುತ್ತಾರೆ

ಕಾವೇರಿ ಪ್ರವಾಹದ ರಿಲೀಫ್ ಫಂಡು.

ಇಪ್ಪತ್ತೆಂಟನೆಯ ಚಂದಾ ಪಟ್ಟಿ.

ತುಮಕೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು . ರೂ. 250-0-0

ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರ ಮೂಲಕ—ಸೂ|| ಮಹಮದ್ ಓಬಿದುಲ್ಲಾ ಸಾಹೇಬರು ರೂ. 5, ಇನ್|| ಡಿ. ರಘೋತ್ತಮರಾಯರು ರೂ. 3, ಬೀರೂರು? ಸ. ಇನ್|| ಎಚ್ ಗರುಡಾಚಾರ್ರು ರೂ. 3, ಮೂಡಿಗೆರೆ ಇನ್|| ಬಾಲ್ ಸಾಹೇಬರು ರೂ 2, ಹೆ|| ಇನ್|| ಎಚ್ ಶ್ರೀನಿವಾಸಯ್ಯಂಗಾರ್ರು ರೂ 1, ಚಿಕ್ಕಮಗಳೂರು ಇನ್|| ಫಕ್ರುದ್ದೀನ್ ಸಾಹೇಬರು ರೂ. 1; ಜುಮ್ಲಾ ... ,, 15 0-0

ಚನ್ನಗಿರಿ ತಾಲ್ಲೂಕು ಅಮಲ್ದಾರ್ರ ಮೂಲಕ—ಪರಶುರಾಮಪುರದ ಹೋ|| ಕೋಲ್‌ಕಾರ್ ಪಟೇಲ್ ವೀರಪ್ಪನವರು ರೂ. 1, ಡಿಟೋ ಶ್ಯಾ|| ನಂಜಪ್ಪನವರು ರೂ 1, ಚಿಲ್ಲರೆ ವಸೂಲಾದದ್ದು ರೂ 8; ಜುಮ್ಲಾ (ಮ ಕ ಜಾತಾ) . ,, 9-11-0

ಮಳವಳ್ಳಿ ತಾಲ್ಲೂಕು ಅಮಲ್ದಾರ್ರ ಮೂಲಕ . ,, 0-12-3

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರು . . ,, 3,000-0-0

ಫ್ರೆಂಚ್‌ರಾಕ್ಸ್ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರವರ ಮೂಲಕ—ಗುಲಾಂ ಅಲ್ಲಿ ಷರೀಫ್ ಸಾಹೇಬರು ರೂ 3, ಪಿ ಭುಜಂಗರಾಯರು ರೂ 1, ಗೋವಿಂದರಾಜು ಪಿಳ್ಳೆಯವರು ರೂ. 1, ಜುಮ್ಲಾ (ಮ ಕ ಜಾತಾ) ... ,, 4-15-0

ಮೊದಲು ಜಮಾ ಬಂದಿರುವ ಮೊಬಲಗು ರೂ 12,719-6-8

ಜುಮ್ಲಾ ರೂಪಾಯಿ 16,029-15-11

ತಾ. 5-8-1912, ಮೈಸೂರು

ಎಂ. ಜಿ ಕೃಷ್ಣಸ್ವಾಮಿರಾವ್, ಫಂಡಿನ ಸೆಕ್ರೆಟರಿ ಮತ್ತು ಟ್ರೆಷರರ್

ಕೊಪ್ಪದ ಸ್ಕೂಲ್ ಬಹುಮಾನ ಸಭೆಯು.

ಕಳೆದ ಜೂಲೈ ತಾ 28 ನೇ ಭಾನುವಾರ ಮಧ್ಯಾಹ್ನ 3 ಘಂಟೆಗೆ ಕೊಪ್ಪದ ಸ್ಕೂಲ್ ಕಟ್ಟಡದಲ್ಲಿ ಗ್ರಾಮದ ದೊಡ್ಡ ಮನುಷ್ಯರೂ, ತಾಲ್ಲೂಕ್ ಆಫೀಸರುಗಳೂ, ಸಾಹುಕಾರರೂ ಸಹ ಸ್ಕೂಲ್ ಹೆಡ್ ಮಾಸ್ಟರ ಪ್ರಾರ್ಥನೆ ಮೇರೆ ಸಭೆ ಸೇರಿದ್ದರು ಸುಮಾರು 15 20 ದಿನಗಳಿಂದಲೂ, ಸ್ಕೂಲ್ ಕಟ್ಟಡವನ್ನು ಅತಿ ವಿಜೃಂಭಣೆಯಿಂದ ಅಲಂಕರಿಸಿದ್ದರು ಸ್ಕೂಲಿನ ಒಂದು ಭಾಗದಲ್ಲಿ ಬಹು ಸುಂದರವಾಗಿಯೂ, ಚಮತ್ಕಾರವಾಗಿಯೂ, ಚಿತ್ರಕರವಾಗಿಯೂ ಇರುವ ಒಂದು ಮಂಟಪವು ಮ|| ವೆಂಕಣ್ಣನವರಿಂದ ಬಹು ಸಾಹಸದಿಂದಲೂ, ಅತ್ಯುತ್ಸಾಹದಿಂದಲೂ ಕಟ್ಟಲ್ಪಟ್ಟಿದ್ದಿತು ಇಂಥಾ ಚಿತ್ರಕೆಲಸಗಳು ಈ ಮಲೆನಾಡಿನಲ್ಲಿ ನಡೆಯುವುದು ಅಪೂರ್ವವೆಂದು ನಿಸ್ಸಂದೇಹವಾಗಿ ಹೇಳಬಹುದು ಬಾಕಿ ಕಟ್ಟಡದ ಎಲ್ಲಾ ಭಾಗಗಳೂ ಅನೇಕ ತಸ್ವೀರುಗಳಿಂದಲೂ, ಲತೆಗಳಿಂದಲೂ, ಅತಿಮನೋಹರವಾಗಿ ಅಲಂಕರಿಸಲ್ಪಟ್ಟಿದ್ದುವು ಸ್ಕೂಲಿನ ಮುಂಭಾಗದಲ್ಲಿ ಕದಳಿ ಸ್ತಂಭಗಳನ್ನೂ, ತಳಿರು ತೋರಣಗಳನ್ನೂ, ಸ್ವಾಗತವನ್ನು ಸೂಚಕವಾದ ಅಕ್ಷರಗಳನ್ನೂ ಕೆತ್ತಿದ್ದರು ಹೆಡ್ ಮಾಸ್ಟರವರ ಕೋರಿಕೆಯಂತೆ ತಾಲ್ಲೂಕ್ ಅಮಲ್ದಾರ್ ಮೆ|| ಬಿ ಭೀಮರಾಯರು ಅಗ್ರಾಸನವನ್ನು ವಹಿಸಿದರು ಅನಂತರ ಬಾಲಕರು ಮೊದಲು ಗಣಪತಿಯನ್ನೂ, ಅನಂತರ ಸರಸ್ವತಿಯನ್ನೂ, ಆ ಮೇಲೆ ಪರಮಾತ್ಮನನ್ನೂ ಭಕ್ತಿಯಿಂದ ಮನೋಹರವಾಗಿ ಸ್ತುತಿಸಿದರು ಬಳಿಕ ಸ್ಕೂಲ್ ರಿಪೋರ್ಟನ್ನು ಹೆಡ್ ಮಾಸ್ತರು ಮ|| ಕೆ ಗಣೇಶ ಜೋಯಿಸರು ಓದಿದ ತರುವಾಯ ಸ್ಕೂಲ್ ಬಾಲಕರು ನೀತಿ ಮತ್ತು ಜ್ಞಾನ, ರಾಮಾಯಣ ನಾಟಕದ ಮೂರನೇ ಅಂಕವನ್ನು ಸರಿಯಾದ ಹಾವ, ಭಾವ, ವಿಲಾಸಗಳಿಂದ ಸಭಿಕರೆಲ್ಲರೂ ಆಶ್ಚರ್ಯ ಪಡುವಂತೆ ಅದರಲ್ಲಿನ ನೀತಿಗಳನ್ನು ದೃಷ್ಟಾಂತ ಪೂರ್ವಕ ಅಭಿನಯಿಸಿದರು ಸುಮಾರು 4-5 ವರ್ಷದ ಬಾಲಕರು ಗೋವಿನಕಥೆ ಎಂಬ ಪದ್ಯಗಳನ್ನು ಹೇಳಿ, ಅದರಲ್ಲಿನ ಸತ್ಯವನ್ನು ಸಭಾ ಜನಗಳಿಗೆ ಬಹು ತಮಾಷೆಯಾಗಿ ಅಭಿನಯಿಸಿ ತೋರಿಸಿದರು ಇದರ ಆನಂದವನ್ನು ಸಭಿಕರು ಹೊಂದಿದರು ನಮ್ಮ ಅಮಲ್ದಾರ್ ಮೆ|| ಬಿ ಭೀಮರಾಯರವರು ಮತ್ತು ಹೆಡ್ ಗುಮಾಸ್ತೆ ಮ, ಶ್ರೀನಿವಾಸರಾಯರೂ—ಈ ಮಲೆನಾಡು ಸ್ಕೂಲಿನಲ್ಲಿ ಇಷ್ಟು ಚಿಕ್ಕವಯಸ್ಸಿನ ಬಾಲಕರು ಧೈರ್ಯವಾಗಿ ನೀತಿಗಳನ್ನು ಸಭಿಕರೆಲ್ಲರಿಗೂ ಆತ್ಮಾನಂದ ಉಂಟಾಗುವಂತೆ ಅಭಿನಯಿಸಿ ತೋರಿಸಿದ್ದಕ್ಕಾಗಿಯೂ, ಪ್ರಾರಂಭದಲ್ಲಿ ಲಕ್ಷ್ಮಣನ ಪಾರ್ಟ್ ಮಾಡಿ ಕೊನೆಗೆ ರಾಮಾಯಣವನ್ನೆಲ್ಲಾ ಸಾಂಗವಾಗಿ ಸಭಿಕರ ಮುಂದೆ ಹೇಳಿದ ಸುಮಾರು 12 ವರ್ಷದ ಬಾಲಕನ ಧೈರ್ಯಕ್ಕಾಗಿಯೂ ಬಹು ಸಂತೋಷಪಟ್ಟು ಈ ಸ್ಕೂಲಿನ ಅಭಿವೃದ್ಧಿಸ್ಥಿತಿ ವಿಷಯದಲ್ಲಿ ಹಾಲೀ ಹೆಡ್ ಮಾಸ್ತರು ಪಡುತ್ತಿರುವ ಶ್ರಮ ಮತ್ತು ಮಾಡುತ್ತಿರುವ ಮೆಹನತ್ತಿನ ವಿಚಾರದಲ್ಲಿ ಎಲ್ಲರೂ ತುಂಬಾ ಆಶ್ಚರ್ಯಪಡಬೇಕಾಗಿದೆ ಇವರು ಬಂದಲಾಗಾಯ್ತು ಪ್ರತಿ ವರ್ಷವೂ ಬಾಲಕರುಗಳನ್ನು ಪರೀಕ್ಷೆಗೆ ಕಳುಹಿಸಿ ಪ್ಯಾಸ್ ಮಾಡಿಕೊಳ್ಳುತ್ತಾ ಬಂದಿರುವುದೂ, ಕಳೆದ ವರ್ಷ ಪರೀಕ್ಷೆಗೆ ಕಳುಹಿಸಿದ ಮೂವರೂ ಪ್ಯಾಸಾಗಿರುವುದೂ ಸಹ ಇವರ ಮೆಹನತ್ತಿಗೆ ಸಾರ್ಥಕವಾಗಿದೆ ಎಂಬುದನ್ನು ಸೂಚಿಸುವ ಉಪನ್ಯಾಸಗಳನ್ನು ಬಹು ಸ್ವಾರಸ್ಯವಾಗಿ ಮಾಡಿದ ನಂತರ ಈ ಕಾರ್ಯಕ್ಕೆ ಪ್ರೋತ್ಸಾಹಕರಾದ ನಮ್ಮ ಡಾಕ್ಟರ್ ಓ ರಂಗಸ್ವಾಮಿ ಮೊದಲಿಯಾರವರ ಪ್ರಯತ್ನದಿಂದ ಸಂಪಾದಿಸಿದ ಫಂಡಿನಿಂದ ತರಿಸಿದ್ದ ಪುಸ್ತಕಗಳನ್ನು ಪ್ಯಾಸಾದ ಬಾಲಕರುಗಳಲ್ಲದೆ ಎಲ್ಲರಿಗೂ ಒಂದೊಂದು ಪುಸ್ತಕದಂತೆ ಕೊಡಲ್ಪಟ್ಟು ಬಾಲಕರುಗಳಿಗೆಲ್ಲರಿಗೂ ಅತ್ಯಾನಂದವನ್ನುಂಟುಮಾಡಿದರು ಬಾಲಕರು ಸಂಧ್ಯಾವರ್ಣನೆ, ಚನ್ನವರ್ಣನೆ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಹಾಡಿದರು 6 ಘಂಟೆಗೆ ಸಭೆಯು ಮುಕ್ತಾಯವಾಯಿತು. ಆ ದಿನ ಸಂತೆಯಾದ್ದರಿಂದ ತಾ 29 ನೇ ಸೋಮವಾರ ಮಧ್ಯಾಹ್ನ ಪ್ರಜೆಗಳಿಗೋಸ್ಕರ ಉಪಸಭೆಯೊಂದು ಏರ್ಪಟ್ಟು ಡಿ ಪಿ ಡಬ್ಲ್ಯು ಸಬ್ ಡಿವಿಜನ್ ಆಫೀಸರೇ ಮೊದಲಾಗಿ ಸುಮಾರು ನೂರಾರು ಜನಗಳ ಮೇಲ್ಪಟ್ಟು ಸಭೆ ಸೇರಿ, ಬಾಲಕರ ಆಟಪಾಟಗಳನ್ನು ಪರೀಕ್ಷಿಸಿ ಅತ್ಯಾನಂದಭರಿತರಾಗಿ ತೆರಳಿದರು

ಸಿಕ್ಕಿದರೆ ಬಹುಮಾನ ದೊರಕುವುದು.

ಮೈಸೂರಿಗೂ ಶ್ರೀರಂಗಪಟ್ಟಣಕ್ಕೂ ನಡುವ ಮೋಟಾರ್ ಬೈಸಿಕಲ್ಲಿನ ಒಂದು ಲ್ಯಾಂಪು ಕಳೆದ ತಾ 31 ನೇ ಬುಧವಾರ ದಾರಿಯಲ್ಲಿ ಕಳಚಿ ಬಿದ್ದು ಹೋಯಿತು ಇದನ್ನು ಪತ್ತೆಮಾಡಿ ಈ ಪತ್ರಿಕೆ ಆಫೀಸ್ ಮ್ಯಾನೇಜರಿಗೆ ತಂದು ಕೊಡುವವರಿಗೆ ಒಳ್ಳೇ ಬಹುಮಾನ ಕೊಡಲ್ಪಡುವುದು [137 1]

ಬೀರೂರು ಶ್ರೀ ಮಂಜುನಾಥ ಅನಾಥಾಲಯವು.

ಕಾರಣಾಂತರದಿಂದ ನಿಲ್ಲಿಸಲ್ಪಟ್ಟಿದ್ದ ಈ ಆಲಯವು ಈ ವರೆ ಶ್ರಾವಣ ಮಾಸದಲ್ಲಿ ಪುನಹ ಪ್ರಾರಂಭಿಸಲ್ಪಡುವುದರಿಂದ ಇಲ್ಲಿಗೆ ಸೇರಲಪೇಕ್ಷಿಸುವ ಬಾಲಕರು ಅನಾಥರೆಂಬುವುದಕ್ಕೆ ತಕ್ಕ ಯೋಗ್ಯತಾಪತ್ರಗಳೊಡನೆ ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳಬೇಕೆಂದು ಅಪೇಕ್ಷಿಸಲ್ಪಟ್ಟಿದೆ [121-2]

ತಾ 29 7 1912, ಎಂ ವಿ ಗೋವಿಂದಪ್ಪ,

ಬೀರೂರು ಅನಾಥಾಲಯದ ಸ್ಥಾಪಕ

ವೃತ್ತಾಂತ ಪತ್ರಿಕೆ.

ಶಕ ೧೯೧೨ ನೇ ಇಸವಿ ಆಗಸ್ಟ್ ತಾ ೮ ನೇ ಗುರುವಾರ

ಕಾಲಸ್ಥಿತಿಯೂ ಧಾರಣೆವಾಸಿಗಳೂ.

ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಬರುತ್ತಿರುವ ಸಮಾಚಾರಗಳನ್ನು ನೋಡುವಲ್ಲಿ ಈ ವರುಷ ಮಳೆಯು ಸಾವಕಾಶವಾಗಿ ಸಾಗಿದರೂ, ಬೆಳೆಗಳು ತಕ್ಕ ಮಟ್ಟಿಗೆ ಚೆನ್ನಾಗಿರುವವೆಂದೂ ಗೊತ್ತಾಗುತ್ತದೆ ಮೈಸೂರು ಸಂಸ್ಥಾನದಲ್ಲಿ ಕೆಲವು ಕಡೆ ಸುವೃಷ್ಟಿಯಾಗಿದೆ ಇನ್ನೂ ಕೆಲವು ಸ್ಥಳಗಳಲ್ಲಿ ಸರಿಯಾದಷ್ಟು ಮಳೆ ಆಗಿರುವುದಿಲ್ಲ ಕೆರೆ ಕಟ್ಟೆಗಳಿಗೆ ನೀರು ಬಂದಿಲ್ಲ ಹೊಲದ ಪೈರು ಈ ಸಲ ಅನೇಕ ಕಡೆ ಚನ್ನಾಗಿ ಆಗಲಿಲ್ಲವೆಂದು ತಿಳಿದುಬರುತ್ತದೆ.

ಈ ವರುಷದ ಕಾಲಸ್ಥಿತಿಯು ಸಮಾಧಾನವಾಗಿದ್ದರೂ, ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲೂ ಎರಡು ವರುಷಗಳಿಂದಲೂ ಮಳೆ ಬೆಳೆಗಳು ಚನ್ನಾಗಿಯೇ ಆಗಿದ್ದರೂ ಆಹಾರ ಧಾನ್ಯಗಳ ಬೆಲೆಯು ಹೆಚ್ಚಾಗಿರುತ್ತದೆ ಇತರ ಕಡೆಗಳಿಗಿಂತಲೂ ಮೈಸೂರು ಸೀಮೆಯಲ್ಲಿ ಧಾರಣೆವಾಸಿಗಳು ಬಹಳ ಹೆಚ್ಚಾಗಿರುವಂತೆ ಕಾಣುವುದು ಈ ರೀತಿ ಧಾರಣೆ ಹೆಚ್ಚಿರುವುದು ಹಿಂದುಸ್ಥಾನದಲ್ಲಿ ಮಾತ್ರವೇ ಅಲ್ಲ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಒಂದೇ ಸಮವಾಗಿರುತ್ತದೆ ಇದಕ್ಕೆ ಚಿನ್ನ ಬೆಳ್ಳಿ ಮೊದಲಾದ ಶ್ರೇಷ್ಠ ಲೋಹಗಳು ಈಚೆಗೆ ಬಹಳ ಹೆಚ್ಚಾಗಿ ಉತ್ಪತ್ತಿಯಾಗುತ್ತಿರುವುದು ಒಂದು ಕಾರಣವಾಗಿದೆ. ಚಿನ್ನವು ಹೇರಳವಾಗಿ ಉತ್ಪತ್ತಿಯಾಗೋಣವರಿಂದ ಅದರ ಬೆಲೆಯು ಮೊದಲಿಗಿಂತ ಕಡಮೆಯಾಗಿರುವುದು ಭಂಗಾರದ ನಾಣ್ಯವನ್ನು ಕೊಟ್ಟರೆ ಮೊದಲು ಸಿಕ್ಕುತ್ತಿದ್ದಷ್ಟು ಹೆಚ್ಚು ಸರಕು ಈಗ ಸಿಕ್ಕುವುದಿಲ್ಲ.

ನಾಣ್ಯದ ಬೆಲೆಯು ಈ ರೀತಿ ಕಡಮೆಯಾಗಿರೋಣದರಿಂದ ಸಂಬಳಗಾರರಿಗೂ, ಕೂಲಿಮಾಡಿಸ ಜನಗಳಿಗೂ, ಇತರರಿಗೂ ಜೀವನಾದಿಗಳು ನಡೆಯುವುದು ಕಷ್ಟವಾಗಿದೆ. ಸಂಬಳವೂ ಕೂಲಿಯೂ ಹೆಚ್ಚಾಗದೆ ಹೋದಪಕ್ಷದಲ್ಲಿ ಅವರ ಜೀವನವು ಬಹಳ ಕಾರ್ಪಣ್ಯವಾದೀತು ಯಾಕಂದರೆ ಸಂಸಾರಕ್ಕೆ ಬೇಕಾಗುವಷ್ಟು ಧಾನ್ಯಾದಿಗಳನ್ನು ಅವರು ತಂದುಕೊಳ್ಳಲು ಅವರಿಗೆ ದೊರಕುವ ಸಂಬಳವು ಸಾಲದೆ ಹೋಗುತ್ತದೆ ಗವರ್ನಮೆಂಟಿನವರು ಧಾನ್ಯವನ್ನು ಯಾರೂ ರಫ್ತು ಮಾಡದಂತೆ ಹುಕುಂ ಕೊಟ್ಟು ತಡೆಯಬೇಕೆಂದೂ, ಇದು ಸಾಧ್ಯವಿಲ್ಲವಾದರೆ ಹಾಗೆ ರಫ್ತಾಗುವಂಥಾ ಧಾನ್ಯದ ಮೇಲೆ ಒಂದು ಸುಂಕವನ್ನು ಹಾಕಬೇಕೆಂದೂ ಕೆಲವರು ಸೂಚಿಸುತ್ತಾರೆ. ಸರ್ಕಾರದವರು ಆ ರೀತಿ ಮಾಡಿದ ಪಕ್ಷದಲ್ಲಿ ಹಿಂದುಸ್ಥಾನದೊಳಗೆ ಧಾನ್ಯಗಳು ಹೆಚ್ಚಾಗಿ ನಿಲ್ಲುವುದಕ್ಕೂ, ಬೆಲೆ ಕಡಮೆಯಾಗುವುದಕ್ಕೂ ಅವಕಾಶವಾಗುತ್ತದೆ ಧಾನ್ಯವನ್ನು ಕೊಂಡು ತಿನ್ನುವವರು ಅನುಕೂಲಪಡುತ್ತಾರೆ, ಆದರೆ ಅಪಾರವಾಗಿ ಗೋಧಿಯನ್ನು ಬೆಳೆಯತಕ್ಕ ಪಂಜಾಬ್ ರೈತರೂ, ಭತ್ತವನ್ನು ಬೆಳೆಯುವ ಮದರಾಸ್ ರೈತರೂ, ಸಾಮಾನ್ಯವಾಗಿ ಎಲ್ಲಾ ಧಾನ್ಯಗಳನ್ನೂ ಕೊಂಡುಮಾರುವ ವರ್ತಕರೂ ತಮಗೆ ನಷ್ಟವಾಗುತ್ತದೆಂದು ಆಕ್ಷೇಪಣೆ ಮಾಡುವರು ಇದರಿಂದ ಒಂದು ಭಾಗದ ಜನರಿಗೆ ಕಷ್ಟನಷ್ಟಗಳೂ, ಇನ್ನೊಂದು ಭಾಗದವರಿಗೆ ಅನುಕೂಲವೂ ಆಗುವುದು ಗವರ್ನಮೆಂಟಿನವರು ಎಷ್ಟೇ ರಾಜನೀತಿಯನ್ನು ಬಲ್ಲವರಾಗಿದ್ದರೂ ಈ ಸಂದರ್ಭದಲ್ಲಿ ಹ್ಯಾಗೆ ವರ್ತಿಸಬೇಕೋ ಅವರಿಗೂ ಗೊತ್ತಾಗುವುದು ಪ್ರಯಾಸವಾಗಿದೆ. ಇಂಡಿಯಾ ಗವರ್ನಮೆಂಟಿನವರು ಈ ಧಾರಣೆವಾಸಿಗಳ ಪೂರ್ವೋತ್ತರವನ್ನು ಎಲ್ಲಾ ಪ್ರಾಂತ್ಯಗಳಲ್ಲೂ ಸಂಚರಿಸಿ ತನಿಖೆ ಮಾಡಿ ಗೊತ್ತುಮಾಡುವುದಕ್ಕೋಸ್ಕರ ಒಂದು ಪಂಚಾಯತಿಯನ್ನು ನೇಮಕ ಮಾಡಿರುತ್ತಾರೆ. ಈ ಪಂಚಾಯತಿಯ ಮೆಂಬರುಗಳು ತಮ್ಮ ಅಭಿಮತವನ್ನು ಬರೆದು ಕೊಡುವರು. ಆಗ್ಗ ಈ ಧಾರಣೆವಾಸಿಗಳ ನಡವಳಿಕೆಯೂ, ಪರಿಹಾರಗಳೂ ಗೊತ್ತಾಗಬಹುದು

ಸದ್ಯದಲ್ಲಿ ಧಾರಣೆವಾಸಿಗಳು ಇಳಿಯುವ ತನಕ ಮೈಸೂರು ಗವರ್ನಮೆಂಟಿನವರು ಒಟ್ಟೊಟ್ಟಾಗಿ ದವಸಗಳನ್ನು ಕೊಂಡು ತರಿಸಿ, ಅಂಗಡಿಗಳನ್ನಿಡಿಸಿ ಸಾಮಾನ್ಯ ಪ್ರಜೆಗಳಿಗೆಲ್ಲಾ ಅಗ್ಗವಾಗ ಬಿಕರಿಮಾಡಿ, ಅವರ ಈಗಿನ ಕಷ್ಟವನ್ನು ನಿವಾರಣೆಮಾಡಬೇಕೆಂದೂ, ಇದು ಸಾಧ್ಯವಾಗದೆ ಹೋದರೆ ಗವರ್ನಮೆಂಟಿನವರು ಭಾರೀ ವರ್ತಕರನ್ನು ಪ್ರೋತ್ಸಾಹಪಡಿಸಿ ಅವರಿಂದ ಅಂಗಡಿಗಳನ್ನು ಇಡಿಸಬೇಕೆಂದೂ ಅನೇಕರು ಅಭಿಪ್ರಾಯಪಡುತ್ತಿದ್ದಾರೆ ಈಗಿನ ಧಾರಣೆವಾಸಿಗಳು ಕ್ಷಾಮಕಾಲದ ಧಾರಣೆಗೆ ಸರಿಸಮಾನವಾಗಿರುತ್ತವೆ

ಹಿಂದುಮತ ತತ್ವದ ವಿಷಯ ಸರ್ ಚಂದ್ರವರ್ಕರವರು ಪ್ರಕಟಿಸಿರುವ ಅಭಿಪ್ರಾಯ

ಸರ್ ಜಿ ಜಿ ಚಂದ್ರವರ್ಕರವರು ಬೊಂಬಾಯಿ ಹೈಕೋರ್ಟಿನಲ್ಲಿ ಜಡ್ಜಿಯವರಾಗಿಯೂ ಬೊಂಬಾಯಿ ಅಧಿಪತ್ಯದಲ್ಲೆಲ್ಲಾ ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವ ಪುರುಷರುಗಳಲ್ಲಿ ಒಬ್ಬರಾಗಿಯೂ ಇರುತ್ತಾರೆ ಕೆಲವು ದಿನಗಳ ಹಿಂದೆ ಅವರು ಮತವಿಷಯವಾಗಿ ಎರಡು ಮೂರು ಚೀಟಿಗಳನ್ನು ಬರೆದು ಪ್ರಕಟಿಸಿರುತ್ತಾರೆ ಅವುಗಳಲ್ಲಿ ಒಂದಾದ "ಹಿಂದುಮತತತ್ವ" ಎಂಬ ವಿಷಯದ ಮೇಲೆ ಅವರು ಪ್ರಕಟಿಸಿರುವ ಚೀಟಿಯ ಮುಖ್ಯಾಭಿಪ್ರಾಯವನ್ನು ನಮ್ಮ ವಾಚಕ ಮಹಾಶಯರ ತಿಳುವಳಿಕೆ ಬಗ್ಗೆ ಇದರಲ್ಲಿ ತಿಳಿಸುತ್ತೇವೆ ಅವರು ಹೇಳಿರುವುದೇನೆಂದರೆ—ಯಾವ ಯಾವ ಜನಾಂಗಗಳು ನವನಾಗರೀಕತೆಯಲ್ಲಿ ಮುಂದು ಮುಂದಕ್ಕೆ ಬಂದಿರುತ್ತಾರೆಯೋ ಅವರು ಇತರರನ್ನು ಪ್ರೀತಿಸುವುದೇ ಪರಮಧರ್ಮವೆಂದು ತಿಳಿದುಕೊಳ್ಳುತ್ತಾ ಬರುವವರಾಗಿದ್ದಾರೆ ಈ ಧರ್ಮೋಪದೇಶವನ್ನು ಮಾಡುವುದಕ್ಕಾಗಿಯೇ ಯೇಸು ಕ್ರಿಸ್ತನು ತನ್ನ ಪ್ರಾಣದಾನ ಮಾಡಿದನು ಆತನ ಮರಣವು ಮಾನವರ ಮೇಲೆ ಆತನಿಗೆ ಎಷ್ಟು ಅಪಾರವಾದ ಪ್ರೇಮವಿತ್ತೆಂಬುವುದನ್ನು ಪ್ರಕಾಶಪಡಿಸುವುದಾಗಿದೆ "ನಿನ್ನ ಪರಮ ಒಡೆಯನಾದ ದೇವರನ್ನು ನಿನ್ನ ಪೂರ್ಣಮನಸ್ಸಿನಿಂದ ಪ್ರೀತಿಮಾಡು ಮತ್ತು ನೀನು ನಿನ್ನನ್ನು ಪ್ರೀತಿಸಿಕೊಳ್ಳುವಂತೆಯೇ ನಿನ್ನ ನೆರೆಯವನನ್ನು ಪ್ರೀತಿಸು" ಎಂಬ ಈ ಎರಡು ಧರ್ಮಗಳು ಯೇಸು ಕ್ರಿಸ್ತನು ಉಪದೇಶಮಾಡಿದವುಗಳಾಗಿರುತ್ತವೆ

ಜಸ್ಟಿಸ್ ಚಂದ್ರವರ್ಕರವರು ಇನ್ನೂ ಹೇಳುವುದೇನೆಂದರೆ—ಹಿಂದು ಪವಿತ್ರ ಗ್ರಂಥಗಳಲ್ಲಿಯೂ ಇಂಥ ಧರ್ಮೋಪದೇಶವುಗಳು ಇಲ್ಲದೇ ಇಲ್ಲ ದೃಷ್ಟಾಂತವಾಗಿ ಭಗವದ್ಗೀತೆಯನ್ನು ನೋಡಿದರೆ ಅದರಲ್ಲಿ ಜ್ಞಾನಮಾರ್ಗದಲ್ಲಿ ನಡೆಯುವುದು ದೇವರಿಗೆ ಎಷ್ಟು ಮೆಚ್ಚಿಕೆಯಾದುದೋ ಅದಕ್ಕಿಂತ ಪ್ರೀತಿಪೂರ್ವಕವಾದ ಸೇವೆಮಾಡುವುದು ಹೆಚ್ಚು ಮೆಚ್ಚಿಕೆಯಾದುದೆಂದು ಹೇಳಿರುತ್ತದೆ ಮತ್ತು ಭಕ್ತಿಯ ಶ್ರೇಷ್ಠತೆಯು ಅದರಲ್ಲಿ ಕಂಡುಬರುತ್ತದೆ ಮೂರು ವಿಧವಾದ ಭಕ್ತರು ಇದ್ದಾರೆಂದು ಹಿಂದುಗಳು ಹೇಳುವುದುಂಟು—(1) ಇತರರನ್ನು ಸಂಪೂರ್ಣವಾಗಿ ಮರೆತು ದೇವರ ಮೇಲೆ ತಮ್ಮ ಧ್ಯಾನಪರಾಯಣರಾಗಿರುವವರು, (2) ದೇವರನ್ನು ಪ್ರೀತಿಸುತ್ತಲೂ ತಮ್ಮ ನೆರೆಹೊರೆಯವರಿಗೆ ಉಪಕಾರ ಮಾಡುತ್ತಲೂ ಇರುವವರು (3) ದೇವರನ್ನು ಪ್ರೀತಿಸುವುದಕ್ಕೆ ಪ್ರಯತ್ನಪಡುತ್ತಿದ್ದರೂ ತಮ್ಮ ನೆರೆಹೊರೆಯವರನ್ನು ಪ್ರೀತಿಸಲಾರದೆ ಇರುವವರು ಈ ಮೂರು ವಿಧವಾದ ಭಕ್ತರಲ್ಲಿ ಎರಡನೆಯ ತರದವರೇ ಅತ್ಯುತ್ತಮರು

ಹಿಂದುಗಳು ಚಾಂಡಾಲರೇ ಮುಂತಾದ ಕೀಳು ಜಾತಿಯ ಜನಗಳನ್ನು ಕೂಡ ಉಪೇಕ್ಷೆ ಮಾಡದೆ ಅವರಲ್ಲಿ ಶಿವಗಳೂ ಪೂಜ್ಯರೂ ಆಗಿರುವವರಿಗೆ ಉಚಿತವಾದ ಸನ್ಮಾನಗಳನ್ನು ಸಲ್ಲಿಸುವಂತೆ ಭಗವದ್ಗೀತೆಯು ಈ ಬೋಧನೆಯು ಉಪದೇಶಿಸಲ್ಪಟ್ಟಿತು ಆದರೆ ಆಕಟೋ ನಿಕೃಷ್ಟವಾದ ಆರಾಧನೆಗಳೂ ನೇಮನಿಷ್ಠೆಗಳೂ ಆಚಾರಕ್ಕೆ ಬಂದು ಈ ಧರ್ಮೋಪದೇಶವನ್ನು ಅಡಗಿಸಿ ಬಿಟ್ಟವೆ ಅನೇಕರಿಗೆ ಅದು ಜ್ಞಾಪಕವಾದರೂ ಇರುವುದಿಲ್ಲ ಹೀಗಿರುವುದರಿಂದ ಅದು ಒಡವೂ ಮೂಢರೂ ತಿರಸ್ಕರಿಸಲ್ಪಟ್ಟವರೂ ಆಗಿರುವವರಿಗೆ ಸಹಾಯ ಮಾಡಿ ಅವರನ್ನು ಉತ್ತಮಸ್ಥಿತಿಗೆ ತಂದಿರುವುದಿಲ್ಲ ಈ ಕೆಲಸವನ್ನು ಕ್ರೈಸ್ತ ಮತವು ಹಿಂದಿನ ಕಾಲದಲ್ಲಿ ಮಾತ್ರವೇ ಅಲ್ಲ ಈಗಲೂ ಕೂಡ ಈ ನಮ್ಮ ಭರತಖಂಡದಲ್ಲಿಯೂ ಮಾಡುತ್ತಾ ಇದೆ ಎಂದು ಜಸ್ಟಿಸ್ ಚಂದ್ರವರ್ಕರವರು ತಿಳಿಸುತ್ತಾರೆ

ಕ್ರೈಸ್ತಮತದಲ್ಲಿ ಅಡಗಿ … ಪ್ರೀತಿಗೆ ಅನರ್ಹರಾಗಿರುವವರನ್ನೂ … ಬಲಪಡಿಸುತ್ತಾ ಇರುವುದು ಏನು? ಅದೇನಂದರೆ—ತಾವು ಕಡುಪಾಪಿಗಳಾಗಿದ್ದರೂ ಕೂಡ ಕ್ರಿಸ್ತನು ತಮ್ಮನ್ನು ಅಪಾರವಾಗಿ ಪ್ರೀತಿಮಾಡಿದ್ದಾನೆಂಬ ಆತನ ಅಮೋಘವಾದ ಪ್ರೀತಿಯ ಸ್ಮರಣೆಯೇ ಕ್ರಿಸ್ತನು ಅವರಿಗಾಗಿ ತನ್ನ ಪ್ರಾಣದಾನ ಮಾಡುವಷ್ಟು ಅವರನ್ನು ಪ್ರೀತಿಸಿರಲಾಗಿ ಅವರು ಇತರರನ್ನು ತಿರಸ್ಕಾರಮಾಡುವುದು ಅಥವಾ ಹಿಂಸಿಸುವುದು ಹೇಗೆ? ಪರೋಪಕಾರಮಾಡುವುದರಲ್ಲಿ ಕ್ರೈಸ್ತರಿಗೆ ಎಷ್ಟೇ ವಿಘ್ನಗಳು ಬಂದರೂ ಅವರು ಬಿಡದೆ ಸಾಧಿಸುತ್ತಿರುವುದಕ್ಕೆ ಕಾರಣವೇನು? ಕ್ರಿಸ್ತನು ಪ್ರಕಾಶಪಡಿಸಿದ ಆತನ ಸಹನೆ, ಧೈರ್ಯ ಇವುಗಳೇ ಕ್ರಿಸ್ತನನ್ನು ದೂಷಿಸಿದರು, ಕ್ರೂರವಾಗಿ ಹಿಂಸಿಸಿದರು, ಕಡೆಗೆ ಕೊಂದೇ ಹಾಕಿಬಿಟ್ಟರು, ಆದರೆ ಆತನು ನಿಷ್ಕಾರಣವಾಗಿ ದೂಷಿಸಲ್ಪಟ್ಟಾಗಲೂ ಮರಣ ಸಂಕಟದಲ್ಲಿದ್ದಾಗಲೂ ಕೂಡ ಧೈರ್ಯಗೆಡಲಿಲ್ಲ ಏಕೆಂದರೆ ಪರಲೋಕ ರಾಜ್ಯವು ನೀತಿಯ ರಾಜ್ಯವಾಗಿರುವುದರಿಂದ ಅದು ವಿಳಂಬಿತವಾಗಿಯೂ ಭೂಲೋಕದಲ್ಲಿ ಸ್ಥಾಪನೆಯಾಗುವುದೆಂದು ಆತನು ಸ್ಪಷ್ಟವಾಗಿ ತಿಳಿದಿದ್ದನು ಕ್ರಿಸ್ತನು ತನ್ನ ಶಿಷ್ಯರಿಗೆ ತನ್ನಲ್ಲಿದ್ದ ಧೈರ್ಯವನ್ನೇ ಕೊಡುತ್ತಾ ಇರುತ್ತಾನೆ ಎಂಬುವುದೇ

ಒಂದು ದಿನ ಒಬ್ಬ ಹಿಂದುವು ಕ್ರೈಸ್ತಮತವನ್ನು ಅವಲಂಬಿಸಿದ್ದ ಒಬ್ಬ ಹೊಲೆಯನನ್ನು ಕಂಡು—ನಿಮ್ಮ ಯೇಸು ಕ್ರಿಸ್ತನು ದೇವರಾಗಿದ್ದನೆಂದು ಹೇಗೆ ಹೇಳುತ್ತಿ? ಅವನು ದೇವರಾಗಿದ್ದರೆ ಅಷ್ಟು ಕ್ರೂರವಾದ ಮತ್ತು ಅವಮಾನಕರವಾದ ಮರಣವನ್ನು ಹೊಂದುತ್ತಿದ್ದನೇ? ಎಂದು ಕೇಳಿದರು ಅದಕ್ಕೆ ಆ ಹೊಲೆಯನು ಆತನು ಅಂಥ ಮರಣವನ್ನು ಹೊಂದಿದುದರಿಂದಲೇ ದೇವರಾಗಿದ್ದಾನೆಂದು ಉತ್ತರ ಕೊಟ್ಟನು

ಪ್ರಾಣ … ಚಂದ್ರವರ್ಕರವರ ಅಭಿಪ್ರಾಯವು ಇದೇ ಆಗಿರುತ್ತದೆ ದೇವರು ಪ್ರೀತಿಸ್ವರೂಪನಾಗಿದ್ದಾನೆಂಬುವುದನ್ನು ಸರ್ವ ಲೋಕಕ್ಕೂ ಪ್ರಕಾಶಪಡಿಸುವುದಕ್ಕೆ ಕ್ರಿಸ್ತನ ಮರಣವು ಒಂದು ದೃಷ್ಟಾಂತವಾಗಿಯೂ ಬಲವಾದ ಆಧಾರವಾಗಿಯೂ ಇರುವುದು ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಅದು ನಮಗೆ … ಕೊಡುವುದಾಗಿದೆಯೆಂದೂ ಅವರು ತಿಳಿದವರಾಗಿರುತ್ತಾರೆ

ಸತ್ಯವೇದದಲ್ಲಿ ಒಬ್ಬ ಭಾಗವಾಗಿರುವ ಶ್ರೀ ಯೋಹಾನನು ಬರೆದ ಪತ್ರಿಕೆಯಲ್ಲಿ ಏನೆಂದರೆ — ಪ್ರಿಯರೇ, ದೇವರು ನಮ್ಮನ್ನು ಹೀಗೆ ಪ್ರೀತಿಸಿದಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ ಎಂಬುವುದೇ

ಒಳದೇಶದ ವೃತ್ತಾಂತಗಳು

ಶಿವಮೊಗ್ಗೆಯಲ್ಲಿ ಅಡ್ವೊಕೇಟರಾಗಿರುವ ಮಿ॥ ಎಸ್ ಸೀತಾರಾಮಯ್ಯನವರನ್ನು ಸರ್ಕಾರದವರು ಮ್ಯುನಿಸಿಪಾಲಿಟಿಯ ಸಭೆಯ ಮೆಂಬರಾಗಿ ನೇಮಕ ಮಾಡಿಕೊಂಡಿದಾರೆ

ಶ್ರೀಮತ್ ಮಹಾರಾಜರವರು ಕಳೆದ ಶನಿವಾರ ಬೆಳಿಗ್ಗೆ ೧೦ ಗಂಟೆಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿ ಎರಡು ದಿನ ಇದ್ದು ಸೋಮವಾರ ಪ್ರಾತಃಕಾಲ ವಾಪಸು ಚಿತ್ತೈಸಿದರು

ಮಹಾರಾಜರವರ ತಾಯಿಯವರೂ ಅರಮನೆಯ ಜನಾನಾದವರೂ ಕಳೆದ ಶನಿವಾರ ರಾತ್ರಿ ಬೆಂಗಳೂರಿಗೆ ಪ್ರಯಾಣ ಮಾಡುವುದನ್ನು ನಿಲ್ಲಿಸಿಬಿಟ್ಟು ಈ ದಿನ ಅಲ್ಲಿಗೆ ಚಿತ್ತೈಸುವವರಾಗಿದಾರೆಂದು ಕೇಳುತ್ತೇವೆ

ರಾಜಧಾನಿಯ ಟ್ರಸ್ಟ್ ಬೋರ್ಡಿನ ಇಂಜನಿಯರಾಗಿದ್ದ ಮಿ॥ ಡಿಕ್ರೂಜ್ ಯವರು ವರ್ಗವಾಗಿ ಬೆಂಗಳೂರಿಗೆ ತೆರಳಿದರು ಮಿ॥ ವೈ ಅಪ್ಪಯ್ಯನಾರಾಯಣರಾಯರು ಕಳೆದ ವಾರ ಬಂದು ಆ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ

ರೈಲ್ವೆ ಸರ್ವೆ ಮಾಡುವುದಕ್ಕೋಸ್ಕರ ಶ್ರೀರಂಗಪಟ್ಟಣಕ್ಕೂ ಕೊಳ್ಳೇಗಾಲಕ್ಕೂ ನಡುವೆ ಇರುವ ಪ್ರದೇಶವನ್ನೂ ಮೈಸೂರಿಗೂ ಚಾಮರಾಜನಗರಕ್ಕೂ ಮಧ್ಯೆ ಇರುವ ಪ್ರದೇಶವನ್ನೂ ಸರ್ಕಾರದವರು ಕೈಗೆ ತೆಗೆದುಕೊಳ್ಳುವರೆಂದು ತಿಳಿಸಿದಾರೆ

ನಮ್ಮ ಮಹಾರಾಜರವರ ಆ ಸೆಕ್ರೆಟರಿಯವರಾದ ಮಿ॥ ಆಗಾ ಮಿರ್ಜಾ ಇಸ್ಪಹಾನಿಯವರು ಕಳೆದ ವಾರ ಒಂದು ದಿನ ಸಂಜೆ ರಾತ್ರಿಯಲ್ಲಿ ಬೆಂಗಳೂರು ದಂಡಿನಲ್ಲಿ ದೀಪವಿಲ್ಲದೆ ಮೋಟಾರ್ ಬೈಸಿಕಲ್ ಮೇಲೆ ಹೋಗುತ್ತಿದ್ದದ್ದನ್ನು ಪೋಲೀಸಿನವರು ಕಂಡು, ಅವರ ಮೇಲೆ ಮೊಕದ್ದಮೆ ಮಾಡಿದರು ಮ್ಯಾಜಿಸ್ಟ್ರೇಟರು ಅವರಿಗೆ ೫ ರೂಪಾಯಿ ಜುಲ್ಮಾನೆ ಹಾಕಿದರೆಂದು ಪ್ರಕಟವಾಗಿದೆ

ರಜದ ಮೇಲಿದ್ದ ಮಿ॥ ವಿ ಎಲ್ ವೆಂಕಟರವರು ಬಂದು ರಾಜಧಾನಿಯ ಹೆಲ್ತ್ ಆಫೀಸಿನ ಛಾರ್ಜನ್ನು ಮಿ॥ ಕರ್ಣಿಯವರಿಂದ ವಹಿಸಿಕೊಂಡಿದಾರೆ ಹೆಲ್ತ್ ಆಫೀಸಿನ ನೌಕರರುಗಳೂ ಸ್ನೇಹಿತರೂ ಮಿ॥ ಕರ್ಣಿಯವರಿಗೆ ಔತಣವನ್ನು ಮಾಡಿ, ಮೊನ್ನೆ ರಾತ್ರಿ ಅವರನ್ನು ಶಿವಮೊಗ್ಗೆಗೆ ಸಾಗ ಕಳುಹಿಸಿದರು ಮಿ॥ ಕರ್ಣಿಯವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾಗಿ ನೇಮಿಸಲ್ಪಟ್ಟಿದಾರಷ್ಟೆ ಸರ್ಕಾರದವರು ಇವರನ್ನು ಬೆಂಗಳೂರಿನಲ್ಲಿರುವ ಸ್ಯಾನಿಟರಿ ಸ್ಕೂಲಿನ ಬೋಧಕರಾಗಿ ನೇಮಿಸಬಹುದೆಂದು ವರ್ತಮಾನವಿದೆ

ಕುಣಿಗಲ್ ತಾಲೂಕಿನಲ್ಲಿ ರೇಸ್ಕುದುರೆಗಳಿಗೆ ಏನೋ ರೋಗ ಪ್ರಾಪ್ತವಾಗಿದೆ ಎಂದು ಸರ್ಕಾರದವರು ತಿಳಿದು ಬೆಂಗಳೂರು ತಾತಾ ರೇಸ್ಫಾರ್ಮಿನಿಂದ ಮಿ॥ ಇ ಜಾಕ್ಸನ್ ಯವರನ್ನು ಅಜಮಾಯಿಷಿ ಮಾಡುವಂತೆ ಕಳುಹಿಸಿಕೊಟ್ಟರು ಅವರು ಬಿಟ್ಟೊಡುಕೆಂಪನಹಳ್ಳಿಗೆ ಹೋಗಿ ರೇಸ್ಕುದುರೆಗಳನ್ನು ನೋಡಿದ್ದರಲ್ಲಿ ರೇಸ್ ವ್ಯವಸಾಯಗಾರರು ಮೊಟ್ಟೆಗಳನ್ನು ಬಹಳ ದೂರವಾಗಿ ಇಡದೆ ಹೋದದ್ದರಿಂದಲೂ, ರೋಗ ತಗಲಿದ ಹಿಪ್ಪನೇರಳೇ ಸೊಪ್ಪನ್ನು ಹುಳುಗಳಿಗೆ ಹಾಕಿದ್ದರಿಂದಲೂ ರೋಗ ಬಂತೆಂದು ಗೊತ್ತಾದದ್ದರಿಂದ ಈ ವಿಷಯವಾಗಿ ಅವರು ಸರಿಯಾದ ತಿಳುವಳಿಕೆಯನ್ನು ಕೊಟ್ಟು ಬಂದರು

ಬೆಂಗಳೂರು ಸಿಟಿಯಲ್ಲಿ ಸಾಳ್ಯೆಯಾ ಮಹಮದ್ ಸೇಟರು ಪಟಾಸ್ ಎಂಬ ಮದ್ದಿನ ಬಾಣವನ್ನು ಅಂಗಡಿಯಲ್ಲಿಟ್ಟು ಬಿಕರಿ ಮಾಡುತ್ತಿದ್ದರು ಇದು ಕಾನೂನಿಗೆ ವಿರೋಧವಾದದ್ದೆಂದು ಪೋಲೀಸಿನವರು ಮೊಕದ್ದಮೆ ಮಾಡಿದಾಗ ಸಿಟಿ ಮ್ಯಾಜಿಸ್ಟ್ರೇಟರು ಬಾಣವನ್ನು ಬಿಕರಿ ಮಾಡುವುದು ಅಪರಾಧವಾಗಲಾರದೆಂದು ಮೊಕದ್ದಮೆಯನ್ನು ವಜಾ ಮಾಡಿಬಿಟ್ಟರು ಛೀಫ್ ಕೋರ್ಟಿನಲ್ಲಿ ಈ ಮೊಕದ್ದಮೆ ಅಪೀಲಾಯಿತು ಮಿ॥ ಜಸ್ಟಿಸ್ ವಾಲಿಸ್ ರವರು ಅದು ಅಪರಾಧವಾಗುತ್ತದೆಂದು ತೀರ್ಮಾನಮಾಡಿ, ಆ ಸೇಟರಿಗೆ ಒಂದು ರೂಪಾಯಿ ಜುಲ್ಮಾನೆ ತಪ್ಪಿದರೆ ಒಂದು ವಾರ ಸಾದಾ ಸಜ ಎಂಬ ಶಿಕ್ಷೆಯನ್ನು ವಿಧಿಸಿದರು

ಮೈಸೂರು ಗೆಜೆಟ್ ಸಂಗ್ರಹ

ನಂಜನಗೂಡು ತಾಲ್ಲೂಕು ದೇವನೂರು, ಹಗಡೂರು, ದೊಡ್ಡಕವಲಂದೆ, ಈ ಗ್ರಾಮಗಳಲ್ಲಿ ಅಂಟುಜಾಡ್ಯವಿದೆ ಎಂದು ತಿಳಿಯತಕ್ಕದ್ದು

ಮೈಸೂರಿನಲ್ಲಿರುವ ಪ್ರಿನ್ಸ್ ಗುಲಾಂ ಮಹಮದ್ ಧರ್ಮಫಂಡಿನ ಕಮಿಟಿಗೆ ಪೆನ್ಷನ್ ಪೋಲೀಸ್ ಇನ್ಸ್ಪೆಕ್ಟರ್ ಮೆ॥ ವಲಿ ಅಹಮದ್ ಸಾಹೇಬರನ್ನು ಮೆಂಬರಾಗಿ ನೇಮಕ ಮಾಡಿದೆ.

ಮೆ॥ ಚಿಕ್ಕ ಗಂಗಶೆಟ್ಟರನ್ನು ಕುಲೀಸ್‌ಪೇಟೆ ತಾಲ್ಲೂಕು ಬೋರ್ಡಿನ ಮೆಂಬರಾಗಿ ನೇಮಿಸಿದೆ

ದೊಡ್ಡಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮೆ॥ ಎ. ಕೃಷ್ಣ ಅರಸಿನವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಹದಿಮೂರು ದಿನ ಜಾಸ್ತಿಮಾಡಿದೆ

ಗವರ್ನಮೆಂಟ್ ನೇತ್ರ ವೈದ್ಯರಾದ ಡಾ॥ ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರಿಗೆ ಜೂನ್ ತಾ 1 ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ॥ ಸರ್ಜನ್ ಮೆ॥ ಎಸ್ ನಾರಾಯಣರಾಯರು ನೇತ್ರವೈದ್ಯ ಆಸ್ಪತ್ರೆಯ ಛಾರ್ಜನ್ನು ವಹಿಸತಕ್ಕದ್ದು.

ಮೈಸೂರು ಮಹಾರಾಜಾ ಕಾಲೇಜ್ ಇಂಗ್ಲಿಷ್ ಪಂಡಿತರಾದ ಮೆ|| ಆರ್ ...ಕೊಂಬ್ ಯವರಿಗೆ 1912 ನೇ ವರುಷದ ದೀರ್ಘ ರಜಾದ ಜೊತೆಗೆ ಎರಡು ...ಗಳ ಕಾಯಲೆ ರಜಾ ಕೊಟ್ಟಿದೆ

ಚೀಫ್ ಅಬ್ಸರ್ವರ್ ಮೆ|| ಎನ್ ವೆಂಕಟೇಶ ಅಯ್ಯಂಗಾರ್ರಿಗೆ ಕೊಟ್ಟಿ...ವ ಹದಿನೈದು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಹತ್ತುದಿನ ಜಾಸ್ತಿ ...ಡಿದೆ

ಮಹಾರಾಜರವರ ಮಿಲಿಟರಿ ಸೆಕ್ರೆಟರಿ ಲೆಫ್ಟಿನೆಂಟ್ ಕರ್ನಲ್ ಆರ್ ಜ ...ರ್ಸ್‌ಯವರಿಗೆ ಮೂರು ತಿಂಗಳ ಪ್ರಿವಿಲೇಜ್ ರಜವನ್ನೂ, ಐದು ತಿಂಗಳ ...ಬಳವಿಲ್ಲದ ರಜವನ್ನೂ ಸೆಪ್ಟಂಬರ್ ತಾ 1 ರಿಂದ ಅಥವಾ ಅವರು ಉಪ ...ಯೋಗಿಸಿಕೊಳ್ಳುವ ತಾರೀಖಿನಿಂದ ಕೊಟ್ಟಿದೆ

ಕುಲೀಸ್‌ಪೇಟೆ ಡೆಪ್ಟಿ ಅಮಲ್ದಾರ್ ಮೆ|| ಬಿ ಲಿಂಗೈನವರನ್ನು ಹೊಳಲ್ಕೆರೆ ...ಲ್ಲೂಕು ಅಮಲ್ದಾರಿಗೂ, ಬೆಂಗಳೂರು ಸಬ್ ರೆಜಿಸ್ಟ್ರಾರ್ ಮೆ|| ಎ ರಾಮ ...ಯರನ್ನು ಕುಲೀಸ್‌ಪೇಟೆಯ ಡೆಪ್ಟಿ ಅಮಲ್ದಾರಿಗೂ ಬದಲಿ ನೇಮಕವಾಗಿದೆ

ಕಂಟ್ರೋಲರವರ ಆಫೀಸ್ ಅ|| ಎಗ್ಸಾಮಿನರ್ ಮೆ|| ಎಂ ಎ ರಂಗಾ ...ಚಾರ್ಯರನ್ನು ಹಂಗಾಮಿಯಾಗಿ ಅ|| ಕಂಟ್ರೋಲರಾಗಿ ನೇಮಕವಾಡಿದೆ

ಮೆ|| ಟಿ ಸ್ವಾಮಿನಾಥಶಾಸ್ತ್ರಿಯವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ...ಮಲ್ದಾರರಾಗಿರುವ ತನಕ ಅವರು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾ...ರವನ್ನು ವಹಿಸತಕ್ಕದ್ದು

ಆಕ್ಟಿಂಗ್ ಅಮಲ್ದಾರ್ ಮೆ|| ಜ ಎಸ್ ರಾಮಸ್ವಾಮಿ ಅಯ್ಯಂಗಾ...ರ್ ಹಾಸನದಿಂದ ಅರಕಲಗೂಡಿಗೂ, ಅಮಲ್ದಾರ್ ಮೆ|| ವಿ ಎಸ್ ರಾಜ ...ಗೋಪಾಲಾಚಾರ್ಯರನ್ನು ಅರಕಲಗೂಡಿನಿಂದ ಹಾಸನಕ್ಕೂ ವರ್ಗವಾಡಿದೆ

ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ...ಆಗಿದೆ — ಅ ಇಂಜನಿಯರ್ ಮೆ|| ಎ ಪುಟ್ಟಸ್ವಾಮೈಯನವರು ಹಾಸನ ...ದ ರೈಲ್ವೆ ಬದಾವಣೆ ಇಲಾಖೆಗೆ ಅ ಇಂಜನಿಯರ್ ಮೆ|| ಕೆ ವಿ ದೇಶಿ ...ಕಾಚಾರ್ಯರು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಿಂದ ಬೆಂಗಳೂರು ಡಿವಿ...ಜನ್‌ಗೆ, ಅ|| ಇಂಜನಿಯರ್ ಮೆ|| ಎಂ ಎ ಶ್ರೀನಿವಾಸಚಾರ್ರು ಅರಮನೆ ...ಡಿವಿಜನ್‌ನಿಂದ ವಾಟರ್ ಸಪ್ಲೈ ಮತ್ತು ಸ್ಟೋರ್ಸ್‌ಗೆ ಸಬ್ ಅ|| ಇಂಜನಿ...ಯರ್ ಮೆ|| ವೈ ಎಸ್ ಕೇಶವರಾಯರು ಮೈಸೂರು ಡಿವಿಜನ್‌ನಿಂದ ಅರ...ಮನೆ ಡಿವಿಜನ್‌ಗೆ ಸೂಪರವೈಸರ್ ಮೆ|| ಎಂ ಜಿ ಶಿಂಗ್ರಾಚಾರ್ರು ಸ್ಯಾನಿಟರಿ ...ಡಿವಿಜನ್‌ನಿಂದ ಬೆಂಗಳೂರು ಡಿವಿಜನ್‌ಗೆ

ತಾಲ್ಲೂಕು ವರ್ತಮಾನ

ಶ್ರೀಕರೆ — ಸರಿಯಾದ ಕಾಲಕ್ಕೆ ಮಳೆ ಬಾರದೆ ಹೋದದ್ದರಿಂದ ರೈತರು ...ದಿನವೂ ಆಕಾಶವನ್ನು ನೋಡುತ್ತಾ ನಿಟ್ಟುಸಿರು ಬಿಡುತ್ತಾ ಇದ್ದರು ...ತಿಂಗಳಲ್ಲಿ ಒಂದೆರಡು ಹದ ಮಳೆಯಾದದ್ದರಿಂದ ಕೆಲವರು ಬಹು ...ರವಾಗಿ ತಮ್ಮ ಹೊಲಗಳನ್ನೂ ಗದ್ದೆಗಳನ್ನೂ ಹಸನು ಮಾಡಿಕೊಂಡು ...ಬಿತ್ತುವದಕ್ಕಾಗಿ ಇನ್ನೊಂದು ಮಳೆಯನ್ನು ಕಾದಿದ್ದು ಮಳೆ ಬಿದ್ದ... ಬೀಜಗಳನ್ನು ಬಿತ್ತಿ ಬಿಟ್ಟರು ಮತ್ತೆ ಕೆಲವರು ತಮ್ಮ ಜಮೀನುಗಳನ್ನು ...ದೆ ಖಾಲಿ ಮಾಡಿ ಬಿಟ್ಟರು ಜುಲೈ ತಾ 1 ಕ್ಕೆ ಶುರುವಾದ ಮಳೆ ಈ ...ಯಂತವೂ ಬಿಡದೆ ಪ್ರತಿ ದಿನವೂ ಸುರಿಯುತ್ತಾ ಬಂದು, ಮಧ್ಯೆ ಒಂದೆರಡು ...ಸ್ವಲ್ಪ ಹೊಳವು ಕೊಟ್ಟದ್ದರಿಂದ ಬೀಜಗಳನ್ನು ಬಿತ್ತದೆ ಇದ್ದ ರೈತರು ...ಯನ್ನು ಬಹು ಅವಸರವಾಗಿ ಬಿತ್ತಿದ್ದರಿಂದ ಮಳೆಯು ಅಪಾರವಾಗಿ ಸುರಿದು ...ಕೊಚ್ಚಿ ಹೋಯಿತು ಇನ್ನೂ ಕೆಲವು ಜಮೀನುಗಳು ಹಾಗೆಯೇ ...ಬಿದ್ದಿರುತ್ತವೆ ಛತ್ರದ ಪೈರು ಉತ್ತಮ ಸ್ಥಿತಿಯಲ್ಲಿದೆ ಎಲ್ಲಾ ಕೆರೆ ...ಗಳು ತುಂಬಿ ಕೋಡಿ ಬೀಳುತ್ತಾ ಇವೆ ಊರಿನಲ್ಲಿ ಅನೇಕ ಮನೆಗಳ ...ಗೋಡೆಗಳು ಬಿದ್ದು ಹೋದವು ಮತ್ತು ಇನ್ನೂ ಬೀಳುವದರಲ್ಲಿಯೇ ಇವೆ ...ಗಳ ಗ್ರಾವಲ್ ಮಣ್ಣು ಕೊಚ್ಚಿ ಹೋಗಿ, ಕಲ್ಲುಗಳು ಕಾಣುತ್ತವೆ ಹೀಗಿ...ದ್ದರೂ ಧಾರಣೆವಾಸಿ ಇನ್ನೂ ಇಳಿತರವಾಗಲಿಲ್ಲ ಅಕ್ಕಿ 6½ ... ಸೇರು, ...ಗೆ 16 ಸೇರು ಹುರುಳಿ 12 ಸೇರು, ಈ ಪ್ರಕಾರ ಮಾರಾಟವಾಗುತ್ತಾ... — ತರೀಕೆರೆಗೆ 6 ಮೈಲಿ ದೂರದಲ್ಲಿರುವ ಸಿದ್ದಾಪುರ ಬಳಿ ಚಿನ್ನದ ಗಣಿ ...ಕೆ ನಡೆಯುತ್ತಾ ಇವೆ ಇದೇ ತಿಂಗಳು 1ನೇ ತಾರೀಖು ಗಣಿಯೊಳಗೆ ಬ್ಲಾಸ್ಟ್ ...ಮಾಡುವಾಗ್ಗೆ ಮೂರು ಜನಗಳಿಗೆ ಪೂರಾ ಪೆಟ್ಟು ಆಗಿ ಅವರನ್ನು ಅದೇ ದಿನ ಇಲ್ಲಿನ ...ಸ್ಪತ್ರೆಗೆ ತೆಗೆದುಕೊಂಡು ಬಂದರು ಡಾಕ್ಟರವರು ಮಾಡಬೇಕಾದ ಇಲಾಜ್ ...ನ್ನು ಮಾಡಿದ ಮೇಲೆ ಅದೇ ದಿನ ಸಾಯಂಕಾಲ ಅವರನ್ನು ಶಿವಮೊಗ್ಗೆ ಆಸ್ಪ...ತ್ರೆಗೆ ರವಾನಿಸಿದರು ಗಣಿಗಳಲ್ಲಿ ಬ್ಲಾಸ್ಟ್ ಮಾಡುವಾಗ್ಗೆ ಬಹು ಎಚ್ಚರಿಕೆಯಾಗಿ ...ದ್ದರೆ ಅಪಾಯ ಸಂಭವಿಸುತ್ತದೆಂಬುವುದರಲ್ಲಿ ಯಾವ ಸಂದೇಹವಿಲ್ಲ ಈ ವಿಷ...ಯದಲ್ಲಿ ಗಣಿ ಸೂಪರಿಂಟೆಂಡೆಂಟರುಗಳು ತುಂಬಾ ನಿಗಾ ಕೊಡಬೇಕಾಗಿದೆ ...ನ ಡಾಕ್ಟರು ಎಲ್ ಗುರುರಾಯರು ಬೇರೂರಿಗೆ ವರ್ಗವಾಗಿ ಹೋಗುತ್ತಾ... ವರ್ತಮಾನ ಕೇಳುತ್ತೇನೆ ಇವರು ಇಲ್ಲಿ 7 ವರುಷಗಳಿಂದಲೂ ಇದ್ದು ...ಕ ರೋಗಿಗಳನ್ನು ಗುಣಮಾಡಿರುವದಲ್ಲದೆ, ವಿಶೇಷವಾಗಿ ಪ್ಲೇಗ್ ರೋಗವು ...ಊರಿಗೂ ಸುತ್ತುಮುತ್ತು ಇರುವ ಗ್ರಾಮಗಳಿಗೂ ಬಂದಿದ್ದಾಗ್ಗೆ ಇನಾಕ್ಯುಲೇ...ಷನ್ ಮಾಡಿ, ಅನೇಕ ಪ್ರಾಣಗಳನ್ನು ಉಳಿಸಿದ್ದು ಎಷ್ಟೋ ಶ್ಲಾಘ್ಯವಾದದ್ದು ...ವಾಗಲೂ ತಮ್ಮ ಕೆಲಸದಲ್ಲಿ ಬಹು ಕೃಪಾಸ್ತರಾಗಿರುತ್ತಾರೆ ಇಂಥವರನ್ನು ...ಊರಿನ ನಿವಾಸಿಗಳು ಕಳೆಕೊಳ್ಳುವದು ತುಂಬಾ ವ್ಯಸನ

ಜಪಾನ್ ಚಕ್ರವರ್ತಿಯವರ ಮರಣವು

ಜಪಾನ್ ಚಕ್ರಾಧಿಪತ್ಯದ ದೊರೆಯವರಾಗಿದ್ದ ಮುತ್ಸುಹಿತೋ ಪ್ರಭು ...ಕೆಲವು ಕಾಲದಿಂದ ಮೂತ್ರ ರೋಗವನ್ನನುಭವಿಸುತ್ತಿದ್ದು ಕಳೆದ ಸೋಮ...ವಾರ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ ಅವಸಾನ ಕಾಲದಲ್ಲಿ ...ಚಕ್ರವರ್ತಿಯವರಿಗೆ 60 ವರುಷವಾಗಿತ್ತು ಇವರು ಕಳೆದ 1867 ನೇ ಇಸವಿ ...ನ ತಿಂಗಳಲ್ಲಿ ರಾಜ್ಯಾಧಿಕಾರವನ್ನು ವಹಿಸಿಕೊಂಡು, 44 ವರುಷ ರಾಜ್ಯ...ವನ್ನು ಮಾಡಿ, ಲೋಕದಲ್ಲೆಲ್ಲಾ ಅದ್ವಿತೀಯನಾದ ಕೀರ್ತಿಯನ್ನು ಸಂಪಾ...ದಿಸಿಕೊಂಡರು ಹೀಗೆ ಒಬ್ಬ ದೊರೆಯ ಆಳ್ವಿಕೆಯ ಕಾಲದಲ್ಲೇ ಪ್ರಪಂಚದಲ್ಲಿ ...ಜಪಾನ್ ರಾಜ್ಯದಂತೆ ಪ್ರಖ್ಯಾತಿಗೆ ಬಂದದ್ದು ಇನ್ಯಾವ ರಾಜ್ಯವೂ ಇಲ್ಲವೆಂದು ...ಹೇಳಬಹುದು ಈ ಚಕ್ರವರ್ತಿಯ ಪ್ರಭುತ್ವವು ಪ್ರಾರಂಭವಾದ ಮೇಲೆ 1871 ...ನೇ ಇಸವಿಯಲ್ಲಿ ಜಪಾನ್ ರಾಜ್ಯದೊಳಗಿದ್ದ ಪಾಳ್ಯಗಾರರ ಅಧಿಕಾರವನ್ನೆಲ್ಲಾ ...ಕಡಿಮೆಗೊಳಿಸಿದರು ಪರದೇಶೀಯರ ಮೇಲೆ ಜಪಾನೀಯರಿಗೆ ಇದ್ದ ದ್ವೇಷಾಸೂಯೆಗಳನ್ನು ಅಡಗಿಸಿ, 1868 ನೇ ಇಸವಿಯಲ್ಲಿ ಪರರಾಜ್ಯಗಳ ರಾಯಭಾರಿಗಳನ್ನು ಕರೆಸಿಕೊಂಡು ಒಂದು ಸಭೆಯನ್ನು ಮಾಡಿ, ಅವರುದುರಪ್ಪುಗಳಿಗೆ ಯಾವ ಅಡ್ಡಿಯೂ ಇಲ್ಲದಂತೆ ಏರ್ಪಾಡು ಮಾಡಿಕೊಂಡರು ಜಪಾನ್ ಪ್ರಜೆಗಳಲ್ಲಿ ಹಲವರು ಅನ್ಯರಾಜ್ಯಗಳಿಗೆ ಹೋಗಿ ವಿದ್ಯಾದಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಂಡು ಬಂದು, ಚಕ್ರವರ್ತಿಯವರ ಬೆಂಬಲವನ್ನೂ ಪ್ರೋತ್ಸಾಹವನ್ನೂ ಪಡೆದು ಜಪಾನ್ ರಾಜ್ಯವನ್ನು ಅಭಿವೃದ್ಧಿಗೆ ತಂದರು ರಾಜ್ಯದಲ್ಲಿ ವಿದ್ಯೆಯೂ ಕೈಗಾರಿಕೆಗಳೂ ತರಂಗತರಂಗಗಳಾಗಿ ಹರಡಿ ಹಬ್ಬಿದವು ದೇಶೋನ್ನತಿಯ ಕಾರ್ಯಗಳು ಯಾವವು ನಡೆದರೂ ಪ್ರತಿ ಒಂದಕ್ಕೂ ಚಕ್ರವರ್ತಿಯವರು ಮುಂದಾಳುಗಳಾಗಿ ನಿಂತು ಪ್ರೋತ್ಸಾಹ ಪಡಿಸುತ್ತಾ ಬಂದರು ವಿದ್ಯೆ, ವ್ಯವಸಾಯ, ಕೈಗಾರಿಕೆಗಳು ಹರಡಿಕೊಂಡಹಾಗೆಲ್ಲಾ ಪ್ರಜೆಗಳಲ್ಲಿ ಮೌಢ್ಯವು ಕ್ಷೀಣವಾಗಿ, ವ್ಯಾಪಾರವೂ ಸಂಪಾದನೆಗಳೂ ವೃದ್ಧಿಯಾದವು ಫಾರ್ಮೋಸಾ ದ್ವೀಪದ ಸಮುದ್ರ ಚೋರರು ಜಪಾನ್ ಹಡಗುಗಳನ್ನು ಹಾಳುಮಾಡಿದ್ದರಿಂದ ಚೀನೆಯವರು ಆ ದ್ವೀಪದ ದುಷ್ಟರನ್ನು ತಕ್ಕಹಾಗೆ ಶಿಕ್ಷಿಸಲಾರದೆ ಹೋದರು ಆಗ ಅಂದರೆ 1874 ನೇ ಇಸವಿಯಲ್ಲಿ ಜಪಾನ್‌ನವರು ಫಾರ್ಮೋಸಾ ದ್ವೀಪವನ್ನು ಸ್ವಾಧೀನ ಮಾಡಿಕೊಂಡರು ಅಲ್ಲಿಂದ ಇಪ್ಪತ್ತು ವರುಷಗಳಾದ ಬಳಿಕ ಜಪಾನ್‌ನವರಿಗೂ ಚೀನೆಯವರಿಗೂ ಯುದ್ಧ ನಡೆಯಿತು ಆಗ ಜಪಾನ್ ಸೈನಿಕರನ್ನು ಈ ಚಕ್ರವರ್ತಿಯವರೇ ಮುಂದಾಗಿ ತಾವೇ ಮಾಡುತ್ತಾ ಪ್ರೋತ್ಸಾಹ ಪಡಿಸಿದರು ಸೈನಿಕರು ಜಯಶೀಲರಾಗಿ ತಮ್ಮ ರಾಜ್ಯಕ್ಕೂ ಚಕ್ರವರ್ತಿಗೂ ಕೀರ್ತಿಯನ್ನು ತಂದರು ಅವರ ದೇಶವಾತ್ಸಲ್ಯವೂ, ಅವರ ರಾಜಭಕ್ತಿಯೂ ಸ್ತೋತ್ರಾರ್ಹಗಳಾದವು ಅಲ್ಲಿಂದೀಚೆಗೆ ಜಪಾನ್‌ನವರಿಗೂ ರಷ್ಯಾದವರಿಗೂ ಯುದ್ಧಗಳು ನಡೆದಾಗಲೂ ಚಕ್ರವರ್ತಿಯವರು ತಮ್ಮ ಸೈನಿಕರನ್ನು ಬಹು ಪ್ರೀತಿಯಿಂದ ಕಂಡು ಅವರ ಕಸರತ್ತುಗಳನ್ನು ಪರಾಂಬರಿಸಿ ಸಂತೋಷಪಟ್ಟು ಅವರಿಗೆ ಪರಾಕ್ರಮಶಾಲಿಗಳೂ ಜಯಶೀಲರೂ ಆಗಲು ಉತ್ತೇಜನವನ್ನೂ ಉಲ್ಲಾಸವನ್ನೂ ಕೊಡುವುದರು ಈ ಯುದ್ಧದಿಂದ ಪೂರ್ವದಿಕ್ಕಿನ ಸೀಮೆಯ ಸೈನಿಕರು ಯೂರೋಪಿಯನ್ ಸೈನಿಕರನ್ನು ಎದುರಿಸಿ ಕಾದಾಡಿ ಗೆಲ್ಲಲು ಸಮರ್ಥರಾಗಿದ್ದಾರೆಂಬುವದನ್ನು ಜಪಾನ್‌ನವರು ಪ್ರಪಂಚಕ್ಕೆಲ್ಲಾ ಪ್ರಕಾಶ ಪಡಿಸಿದರು ಈ ಚಕ್ರವರ್ತಿಯವರ ಆಳ್ವಿಕೆಯಲ್ಲಿ ರಾಜ್ಯವು ಎಲ್ಲಾ ವಿಷಯಗಳಲ್ಲೂ ಬಹುಬೇಗನೆ ಉಚ್ಚ್ರಾಯಸ್ಥಿತಿಗೆ ಬಂತು ಚಕ್ರವರ್ತಿಯವರ ಸಹಾಯಕ್ಕೆ ಅನ್ಯದೇಶಗಳಲ್ಲಿ ವಿದ್ಯಾಭ್ಯಾಸಮಾಡಿ ಬಂದ ಜಪಾನಿನ ಹಲವು ಮಹನೀಯರು ಬೆಂಬಲವಾಗಿ ನಿಂತು, ದೇಶೋನ್ನತಿಗೆ ಹಿತಕರವಾದ ಏರ್ಪಾಡುಗಳನ್ನೆಲ್ಲಾ ಸೂಚಿಸುತ್ತಲೂ, ಮನಃಪೂರ್ವಕವಾಗಿಯೂ ಉತ್ಸಾಹದಿಂದಲೂ ಕಾರ್ಯಗಳನ್ನು ನಡಿಸುತ್ತಲೂ ಬಂದರು

ಗತಿಸಿದ ಚಕ್ರವರ್ತಿಯವರು ಪಶ್ಚಿಮ ರಾಜ್ಯಗಳ ರಾಜನೀತಿಯನ್ನು ಜಪಾನ್‌ನಲ್ಲಿ ರೂಢಿಗೆ ತಂದು, ಪಾರ್ಲಿಮೆಂಟ್ ಸಭೆ ಮನೆಗಳನ್ನೂ, ಮಂತ್ರಿಸಾಮಾಜಿಕರ ಕೂಟಗಳನ್ನೂ ಏರ್ಪಾಡು ಮಾಡಿಕೊಂಡು, ಬಹುಪ್ರಜಾ ಸಮ್ಮತವಾದ ಕಾರ್ಯಗಳನ್ನು ನಡಿಸುತ್ತಾ ಬಂದರು ಜಪಾನ್ ರಾಜ್ಯವು ಇಷ್ಟು ಅಭಿವೃದ್ಧಿಗೆ ಬರಲು ಇನ್ನೊಂದು ವಿಶೇಷವಾದ ಕಾರಣವಿತ್ತು ಸಕಲ ಪ್ರಜೆಗಳೂ ಸ್ವಾರ್ಥವನ್ನು ತ್ಯಜಿಸಿ ಪರಸ್ಪರ ನಂಬಿಕೆ ಪ್ರೀತಿ ವಿಶ್ವಾಸಗಳನ್ನು ಇಟ್ಟುಕೊಂಡು ಆಳುವವರ ಅಪ್ಪಣೆಗಳನ್ನು ಭಕ್ತಿಶ್ರದ್ಧೆಗಳನ್ನಿಟ್ಟು ನೆರವೇರಿಸುವಂಥಾ ಅದ್ವಿತೀಯವಾದ ದೇಶವಾತ್ಸಲ್ಯವನ್ನೂ ರಾಜಭಕ್ತಿಯನ್ನೂ ಪಡೆದವರಾಗಿರುತ್ತಾರೆ ಈ ಚಕ್ರವರ್ತಿಯವರ ಕಾಲದಲ್ಲಿ ಅಂದರೆ 1876 ರಿಂದ 1884 ನೇ ಇಸವಿಯೊಳಗೆ ಮೂರಾವರ್ತಿ ಪ್ರಜೆಗಳು ದಂಗೆಯೆದ್ದು ಅವರನ್ನು ಸಿಂಹಾಸನದಿಂದ ತಳ್ಳಿಬಿಡಬೇಕೆಂದು ಪ್ರಯತ್ನ ಮಾಡಿದರು ಆದರೆ ಸೈನಿಕರ ರಾಜಭಕ್ತಿ ಪರಾಕ್ರಮಗಳಿಂದ ಈ ಪ್ರತಿ ಒಂದು ದಂಗೆಯೂ ಅಡಗಿಸಲ್ಪಟ್ಟಿತು

ಈಗತಾನೇ ಕಾಲವಾದ ಮುತ್ಸುಹಿತೋ ಚಕ್ರವರ್ತಿಯವರು ಸ್ವತಃ ಕವಿಯಾಗಿ ಕೆಲವು ಗ್ರಂಥಗಳನ್ನು ಬರೆದಿರುತ್ತಾರೆ ಕುಶಲವಿದ್ಯೆಗಳಲ್ಲಿ ಅವರಿಗೆ ವಿಶೇಷವಾದ ಅಭಿರುಚಿ ಇತ್ತು ಸಂಸಾರದಲ್ಲಿ ಅವರು ಸಂತೋಷವುಳ್ಳವರಾಗಿದ್ದರು ಇವರಿಗೆ ಕೆಲವು ಹೆಣ್ಣುಮಕ್ಕಳೂ, ಒಬ್ಬ ಕುಮಾರನೂ ಇರುತ್ತಾರೆ ಯುವರಾಜರಾಗಿದ್ದ ಅವರ ಕುಮಾರರಾದ ಯೋಷಿಹಿತೋ ಎಂಬವರು 1879 ನೇ ಇಸವಿಯಲ್ಲಿ ಜನಿಸಿ 1900 ನೇ ಇಸವಿಯಲ್ಲಿ ವಿವಾಹ ಮಾಡಿಕೊಂಡಿರುತ್ತಾರೆ ಈಗ ಇವರೇ ಜಪಾನ್ ರಾಜ್ಯದ ಚಕ್ರವರ್ತಿಯಾಗಿ ಅಭಿಷೇಕವಾಗಿರುವರು

ಇಂಡಿಯಾ ದೇಶದ ವೃತ್ತಾಂತಗಳು,

ಧರ್ಮಪುರದಲ್ಲಿ ಕ್ಷಯರೋಗ ಪೀಡಿತರಿಗಾಗಿ ಇಟ್ಟು ನಡಿಸುತ್ತಿರುವ ಆಸ್ಪತ್ರೆಯ ಪಂಡಿಗೆ ಹೆಸರಿಲ್ಲದ ಒಬ್ಬ ಪುಣ್ಯಾತ್ಮರು ವೈಸ್‌ರಾಯಿಯವರಿಗೆ 51,000 ರೂಪಾಯಿ ಕಳುಹಿಸಿದಾರೆ

* * *

ಕೊಯಮುತ್ತೂರು ಮೊಹರಂ ದಂಗೆ ಮೊಕದ್ದಮೆಯಲ್ಲಿ ಮದರಾಸ್ ಹೈಕೋರ್ಟ್ ಜಡ್ಜಿಗಳು 14 ಮಂದಿ ಅಪರಾಧಿಗಳಿಗೆ ತಲಾ ಎರಡೆರಡು ವರುಷದಂತೆ ಕಠಿಣ ಸಜಾ ವಿಧಿಸಿರುತ್ತಾರೆ

* * *

ಮದರಾಸಿನಿಂದ ರೇಣುಗುಂಟೆ ವರೆಗೆ 100 ಮೈಲಿ ದೂರ ರೈಲ್ ರಸ್ತೆ ಹಾಕುವುದಕ್ಕೆ ಸರ್ವೆ ಮಾಡಿಸಬೇಕೆಂದು ರೈಲ್ವೆ ಬೋರ್ಡಿನವರು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರಿಗೆ ಅಪ್ಪಣೆಕೊಟ್ಟಿದಾರೆ

* * *

ಕಲ್ಕತ್ತಾ ಹೈಕೋರ್ಟಿನ ಜಡ್ಜಿಯಾದ ಮೆ|| ಬೀಚ್‌ಕ್ರಾಫ್ಟ್‌ಯವರನ್ನೂ ಇವರ ಪತ್ನಿಯವರನ್ನೂ ಅವರು ಸಾಕುತ್ತಿದ್ದ ನಾಯಿ ಕಚ್ಚಿದ್ದರಿಂದ ಅವರಿಬ್ಬರೂ ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಕಸೌಲಿ ಆಸ್ಪತ್ರೆಗೆ ತೆರಳಿದರು

* * *

ಬೊಂಬಾಯಿ ಅಧಿಪತ್ಯದ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್‌ಯವರು ಈ ವರುಷದ ಅಂತ್ಯಭಾಗದಲ್ಲಿ ಸೀಮೆಗೆ ಹೊರಟು ಹೋಗುವವರಾಗಿರೋದರಿಂದ ಅವರ ಸ್ಥಾನಕ್ಕೆ ಲಾರ್ಡ್ ಚೆಲಂಸ್‌ಫರ್ಡ್‌ಯವರು ನೇಮಕವಾಗುತ್ತಾರೆಂದು ವರ್ತಮಾನವಿದೆ

* * *

ತಿರುವಾಂಕೂರು (ಅನಂತಶಯನ) ದಿವಾನ್‌ರಾದ ಮೆ|| ರಾಜಗೋಪಾಲಾಚಾರ್ಯರು ಇನ್ನು 3 ತಿಂಗಳಿಗೆ ಆ ಕೆಲಸ ಬಿಟ್ಟುಬಿಡುತ್ತಾರೆಂದೂ, ನೆಲ್ಲೂರಿನ ಕಲೆಕ್ಟರಾಗಿರುವ ಮೆ|| ರಾಮಚಂದ್ರರಾಯರು ದಿವಾನ್‌ರಾಗಿ ನೇಮಕವಾಗಬಹುದೆಂದೂ ವರ್ತಮಾನವಿದೆ

"ಸಿಂಧು ಗೆಜೆಟ್" ಎಂಬ ವರ್ತಮಾನ ಪತ್ರಿಕೆಯನ್ನು ನಡಿಸುತ್ತಿದ್ದ ಮಿಸೆಸ್ ಟೇಟ್ ಎಂಬ ಸ್ತ್ರೀಯು ಕಳೆದ ವಾರ ಕಾಲವಾದಳು ಈಕೆ ವಿದ್ಯೆಯಲ್ಲೂ ಪರಹಿತ ಚಿಂತನೆಯಲ್ಲೂ ಸಾಮರ್ಥ್ಯದಲ್ಲೂ ಆ ಪ್ರಾಂತ್ಯದಲ್ಲೆಲ್ಲಾ ತುಂಬಾ ಹೆಸರುವಾಸಿಯನ್ನು ಪಡೆದಿದ್ದಳು

* * *

ನೇಪಾಳ ಸಂಸ್ಥಾನದ ಮಂತ್ರಿಶ್ರೇಷ್ಠರಾದ ಮಹಾರಾಜಾ ಸರ್ ಚಂದ್ರಸಂಷೇರ್‌ಜಂಗ್ ಬಹದೂರ್ ರಾಣಾರವರು 1909 ನೇ ಇಸವಿಯಲ್ಲಿ 6,300 ಸಂಸ್ಕೃತ ಪ್ರಾಚೀನ ಗ್ರಂಥಗಳನ್ನು ಪರಿಶೋಧನೆಗಾಗಿ ಸೀಮೆಗೆ ಕಳುಹಿಸಿದ್ದರು ಈಗ 70 ತಾಳೇ ಪುಸ್ತಕಗಳನ್ನು ಕಳುಹಿಸಿರುತ್ತಾರೆ

* * *

ಸಿಂಧು ಹೈದರಾಬಾದಿನಲ್ಲಿ ಗೌರವ ಮ್ಯಾಜಿಸ್ಟ್ರೇಟರಾಗಿರುವ ರಾವ್ ಬಹದೂರ್ ದಿವಾನ್ ಜಗತ್‌ರಾಯ ಮೂಲ್‌ಚಂದ್‌ಯವರನ್ನು ಒಬ್ಬ ಹುಡುಗನು ಕೊಲ್ಲಬೇಕೆಂದು ಪ್ರಯತ್ನಪಟ್ಟನು ಅವನು ಚಾಕುವಿನಿಂದ ಅವರನ್ನು ನಾಲ್ಕೈದು ಸಲ ತಿವಿದು ಗಾಯಮಾಡಿದನು ಅವರಿಗೆ ಪ್ರಾಣಾಪಾಯವಾಗಿಲ್ಲ ಆ ಹುಡುಗನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು

* * *

ಸಿಂಧುದೇಶದ ಮಹಮದೀಯ ವಿದ್ಯಾರ್ಥಿಗಳಿಗೆ ಅನ್ಯದೇಶಗಳಿಗೆ ಹೋಗಿ ವಿದ್ಯಾದಿ ವಿಶೇಷ ಸಾಮರ್ಥ್ಯವನ್ನು ಸಂಪಾದಿಸಿಕೊಂಡು ಬರುವುದಕ್ಕೋಸ್ಕರ ಒಂದು ಫಂಡನ್ನು ಇಟ್ಟಿದಾರೆ ಅದರಲ್ಲಿ 60,000 ರೂಪಾಯಿ ಶೇಖರವಾಗಿರುತ್ತದೆ ಖೈರ್‌ಪುರದ ನವಾಬರವರು ತಮ್ಮ ತಂದೆಯವರ ಹೆಸರಿನಲ್ಲಿ ಈ ಫಂಡನ್ನು ಪ್ರಾರಂಭಿಸಿದಾರೆ ವಿದ್ಯಾರ್ಥಿಗಳಿಗೆ ಈ ಫಂಡಿನಿಂದ ವರುಷಕ್ಕೆ 210 ರಿಂದ 300 ರೂಪಾಯಿ ತನಕ ವೇತನಗಳನ್ನು ಕೊಡುವರು

* * *

ಕೃಷ್ಣಾನದಿಯಲ್ಲಿ ವಿಶೇಷ ಪ್ರವಾಹ ಬಂದು ತಾದಪಲ್ಲಿ ಎಂಬ ಊರಿನ ಹತ್ತಿರ ಕೆಲವು ಗ್ರಾಮಗಳು ಸಂಪೂರ್ಣವಾಗಿ ಕೊಚ್ಚಿಹೋದವೆಂದೂ, ಹಲವರು ನೀರಿನ ಪಾಲಾದರೆಂಬ ಭೀತಿಯುಂಟಾಗಿದೆ ಎಂದೂ ಒಬ್ಬ ಬಾತಿದಾರರು ಬಾಪಟ್ಲಾ ಎಂಬ ಊರಿನಿಂದ ಬರೆದಿದಾರೆ ಕೃಷ್ಣಾ ಡಿಸ್ಟ್ರಿಕ್ಟಿನಲ್ಲಿ ಈ ಸಲ ಅಣೆಕಟ್ಟಿನ ಮೇಲೆ 14 ಅಂಗುಲ ನೀರು ಹರಿಯುತ್ತಿರುವಂತೆ ಗೊತ್ತಾಗಿರುವುದರಿಂದ ಮೇಲ್ಕಂಡಂಥಾ ಅನಾಹುತ ಸಂಭವಿಸುವುದೇನೂ ಹೆಚ್ಚಲ್ಲವೆಂದು ಹೇಳಬಹುದಾಗಿದೆ.

* * *

ಅಟೋಕ್ ಪಟ್ಟಣದಲ್ಲಿ ಗಾಯನಸಿಂಗ್ ಮತ್ತು ಜೋಧಾರಾಂ ಎಂಬಿಬ್ಬರು ಪೋಲೀಸಿನವರು ಒಬ್ಬನನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡು ದುಡ್ಡು ವಸೂಲ್ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟದ್ದು ಸಾಕ್ಷಿಗಳ ಮೂಲಕ ರುಜುವಾತಾದ ಕಾರಣ ಜಡ್ಜಿಯವರು ಅವರಿಬ್ಬರಿಗೂ ತಲಾ ನಾಲ್ಕು ತಿಂಗಳಂತೆ ಕಠಿಣ ಸಜಾ ವಿಧಿಸಿ, ಮೊದಲನೇ ಅಪರಾಧಿಗೆ 100 ರೂಪಾಯಿ ಜುಲ್ಮಾನೆಯನ್ನೂ ಹಾಕಿ, ಇದರಲ್ಲಿ ಅರ್ಧವನ್ನು ಫಿರ್ಯಾದಿಗೆ ಪಾವತಿ ಮಾಡಬೇಕೆಂದು ತೀರ್ಮಾನ ಮಾಡಿದರು

* * *

ಚಕ್ರವರ್ತಿ ಸಾರ್ವಭೌಮರವರು ಲಂಡನ್ ಪಟ್ಟಣದ ವಿಂಡ್ಸರ್ ಕ್ಯಾಸಲ್ ಎಂಬ ರಾಜಭವನದ ಉದ್ಯಾನವನದಲ್ಲಿ ಕಳೆದ ಜುಲೈ ತಾ 18ರಲ್ಲಿ ಒಂದು "ಗಾರ್ಡನ್ ಪಾರ್ಟಿ" ಮಾಡಿಸಿದರು 10,000 ಮಹನೀಯರಿಗೆ ಔತನ ಕೊಟ್ಟಿದ್ದರ ಪೈಕಿ 7,000 ಮಂದಿಗೆ ಕಡಮೆಯಿಲ್ಲದೆ ಹಾಜರಾಗಿದ್ದರು ಅವರ ಮಧ್ಯೆ ಹಿಂದುಸ್ಥಾನದ ದೇಶೀಯ ರಾಜರುಗಳ ಪೈಕಿ ಮುಂದೆ ಹೇಳುವವರೂ ಇದ್ದರು — ಅಲ್ವಾರ್ ಮಹಾರಾಜರು, ಧೋಲ್‌ಪುರದ ಮಹಾರಾಜರು, ಝಾಲಾವರದ ಮಹಾರಾಜಾರಾಣಾರವರು, ನವಾ ನಗರದ ಮಹಾರಾಜರು, ಪುದುಕೋಟೆಯ ರಾಜರು, ಲಿಂಬ್ಡಿ ಠಾಕೂರ್ ಸಾಹೇಬರು

* * *

ಉತ್ತರ ಮಲಬಾರಿನಲ್ಲಿ ಪ್ರಜೆಗಳು ಚಕ್ರವರ್ತಿಯವರ ಕಾರೊನೇಷನ್ ಉತ್ಸವವನ್ನು ಮಾಡಿಕೊಂಡು ಟೆಲ್ಲಿಚೆರಿಯಿಂದ ಕನ್ನಾನೂರಿಗೆ ಹೋಗುತ್ತಿದ್ದಾಗ ಈ ಮೆರವಣಿಗೆಯನ್ನು ಮಾಪಿಳ್ಳೆಗಳು ತಮ್ಮ ಮಸೀದಿಯ ಮುಂದೆ ಬರಕೂಡದೆಂದು ತಡೆದರು ಸರ್ಕಾರದವರು 30 ಮಾಪಿಳ್ಳೆಗಳನ್ನು ಹಿಡಿದು ಮೊಕದ್ದಮೆ ಮಾಡಿದರು ಮ್ಯಾಜಿಸ್ಟ್ರೇಟರು ಕಳೆದ ವಾರ ಆ 30 ಮಂದಿಗೂ ಶಿಕ್ಷೆಯನ್ನು ವಿಧಿಸಿರುತ್ತಾರೆ ಹತ್ತು ಮಂದಿಗೆ ತಲಾ 6 ತಿಂಗಳ ಕಠಿಣ ಸಜ 50 ರೂಪಾಯಿ ಜುಲ್ಮಾನೆ ಆಯಿತು 20 ಮಂದಿಗೆ ತಲಾ ಒಂದು ವರುಷ ಕಠಿಣ ಸಜ, 100 ರೂಪಾಯಿ ಜುಲ್ಮಾನೆ ಆಯಿತು ಮೂರು ಮಂದಿಗೆ ನೇಕಚಾಲಿನ ಜಾಮೀನು ಕೊಡಬೇಕೆಂದು ಹುಕುಂ ಕೊಟ್ಟರು

* * *

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಪಂಚಮಹಲ್ ಮತ್ತು ಕಚ್ಛವಾಡ ಪ್ರಾಂತ್ಯಗಳಲ್ಲಿ ಕ್ಷಾಮವು ಇನ್ನೂ ನಿವಾರಣೆಯಾಗಲಿಲ್ಲ ರಿಲೀಫ್ ಕೆಲಸಗಳನ್ನು ಮಾಡುತ್ತಿರುವ ಪ್ರಜೆಗಳ ಆರೋಗ್ಯವು ಚನ್ನಾಗಿದೆ ಎಲ್ಲರಿಗೂ ರಿಲೀಫ್ ಕೆಲಸಗಳು ದೊರಕಿಸಲಾಗಿದೆ ಸರ್ಕಾರದವರು ತಕ್ಕಾವಿ ಸಾಲಗಳನ್ನು ರೈತಪ್ರಜೆಗಳಿಗೆ ಹಂಚಿಕೊಡುತ್ತಿದಾರೆ ಜುಲೈ ತಾ 27 ಕ್ಕೆ ಅಖೈರಾದ ವಾರದಲ್ಲಿ ರಿಲೀಫ್ ಕಾಮಗಾರಿಗಳಲ್ಲಿದ್ದ ಜನಗಳ ಸಂಖ್ಯೆ ಎಷ್ಟೆಂದರೆ — ಪಂಚಮಹಲ್‌ಗಳಲ್ಲಿ ರಿಲೀಫ್ ಕೆಲಸಗಳ ಮೇಲೆ 19,115 ಜನರು, ಧರ್ಮದ ಅನ್ನಛತ್ರಗಳಲ್ಲಿ 37,179 ಜನರು ಕಚ್ಛವಾಡದಲ್ಲಿ ರಿಲೀಫ್ ಕಾಮಗಾರಿಗಳ ಮೇಲೆ 2,818 ಜನರಿದ್ದರೂ ಅನೇಕರು ವ್ಯವಸಾಯವನ್ನು ಕುರಿತು ಹೊರಟು ಹೋಗುತ್ತಿದಾರೆ ಅಹಮದಾಬಾದ, ಕೈರಾ, ಬ್ರೋಚ್, ಕರ್ನಾಟಕ, ಈ ಪ್ರದೇಶಗಳಲ್ಲಿ 17,108 ಪ್ರಜೆಗಳು ಸರ್ಕಾರದವರ ಅನ್ನಛತ್ರಗಳಲ್ಲಿರುತ್ತಾರೆ ಕಚ್ಛವಾಡ, ಪಾಲನ್‌ಪುರ, ಮಾಹಿಕಾಂತ ರೇವಾಕಾಂತ, ಜಾತ್, ಈ ದೇಶೀಯ ಸಂಸ್ಥಾನಗಳಲ್ಲಿ ರಿಲೀಫ್ ಕಾಮಗಾರಿ ಮಾಡುತ್ತಾ 500 ಜನರೂ, ಧರ್ಮಛತ್ರಗಳಲ್ಲಿ 5,111 ಜನರೂ ಹೊಟ್ಟೆ ಹೊರಕೊಳ್ಳುತ್ತಿರುವರು

* * *

ಹಿಂದುಸ್ಥಾನದಲ್ಲಿ ಎಕ್ಸೈಸ್ ಇಲಾಖೆಯ ಬಡಾವಣೆಯಿಂದ ಕುಡುಕತನವು ಹರಡಿಕೊಂಡು ನಾನಾ ಅನರ್ಥಗಳಿಗೆ ಕಾರಣವಾಗುತ್ತಿದೆ ಎಂದೂ, ಅದನ್ನು ಪ್ರಜಾಹಿತಕರವಾಗಿ ರೂಢಿಸಬೇಕೆಂದೂ ಹಿಂದುಸ್ಥಾನದ ಕೆಲವು ಹಿತೈಷಿಗಳು ಲಂಡನ್ ಪಟ್ಟಣದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಅರಿಕೆ ಮಾಡಿಕೊಂಡರು ಆಗ ಹೋಗಿದ್ದ ಮಹನೀಯರು ಯಾರೆಂದರೆ — ಪಾರ್ಲಿಮೆಂಟ್ ಮೆಂಬರಾದ ಸರ್ ಎಚ್ ರಾಬರ್ಟ್ಸ್‌ಯವರು, ಲಾರ್ಡ್ ಕಿನ್ನೇರ್ಡ್‌ಯವರು, ಸರ್ ವಿಲ್ಯಂ ವೆಡ್ಡರ್‌ಬರ್ನ್‌ರವರು, ಪಾರ್ಲಿಮೆಂಟ್ ಮೆಂಬರಾದ ಮೆ|| ಟಿ ಆರ್ ಫರ್ನೆಸ್ ಯವರು, ಮೆ|| ಟಿ ಸಿ ಟೈಲರ್ ಯವರು, ಮೆ|| ಜ ಕೆ ಗೋಖಲೆಯವರು, ಮೆ|| ದೇವಪ್ರಸಾದ ಸರ್ವಾಧಿಕಾರಿಯವರು, ರೆವ್ ಎಚ್ ಆಂಡ್ರಸನ್‌ರವರು ಇವರು ಸೆಕ್ರೆಟರಿಯವರಿಗೆ ಅರಿಕೆ ಮಾಡಿಕೊಂಡ ಬಾಬುಗಳ್ಯಾವವೆಂದರೆ — ಮದ್ಯಗಳನ್ನು ಬಿಕರೀಮಾಡಲು ಕೊಡುವ ಲೈಸೆನ್ಸುಗಳನ್ನು ಕಡಮೆ ಮಾಡಬೇಕು ಮದ್ಯದ ಅಂಗಡಿಗಳನ್ನು ತೆರೆದಿರತಕ್ಕ ಕಾಲವನ್ನು ನಿರ್ಧಾರಕ ಮಾಡಬೇಕು ಹೊಸ ಅಂಗಡಿಗಳನ್ನು ಇಡುವ ವಿಷಯದಲ್ಲಿ ಪ್ರಜೆಗಳ ಮುಖಂಡರ ಅಭಿಮತವನ್ನು ತೆಗೆದುಕೊಳ್ಳಬೇಕು ದುಕಾನುಗಳ ಹರಾಜನ್ನು ನಿಲ್ಲಿಸಿಬಿಡಬೇಕು ಲೈಸೆನ್ಸ್ ಕೊಡುವ ಅಧಿಕಾರವನ್ನು ರವಿನ್ಯೂ ಇಲಾಖೆಗೆ ತಪ್ಪಿಸಿಬಿಡಬೇಕು ಎಂಬೀ ವಿಚಾರಗಳನ್ನು ತಿಳಿಸಿ ಕೇಳಿಕೊಂಡದ್ದಕ್ಕೆ ಸೆಕ್ರೆಟರಿಯವರು ಇಂಡಿಯಾ ಗವರ್ನ್‌ಮೆಂಟಿನವರ ಕೂಡ ಯೋಚಿಸಿ ತೀರ್ಮಾನ ಮಾಡುವುದಾಗಿ ಅಪ್ಪಣೆ ಕೊಟ್ಟರು

ವಿಚಿತ್ರವಾದ ಬಾರುಕೋಲು

ಸಾಲ್ಟ್ ಬುಷ್ ಬಿಲ್ ಎಂಬುವನು ಆಸ್ಟ್ರೇಲಿಯಾ ದ್ವೀಪದ ಪುರವಾಸಿಯಾಗಿ ಸ್ವಲ್ಪಕಾಲದೀಚೆಗೆ ಇಂಗ್ಲಾಂಡಿಗೆ ಹೋಗಿ ತನ್ನ ಬಾರುಕೋಲಿನ ಕಸರತ್ತನ್ನು ಪ್ರದರ್ಶನಮಾಡಿ ಎಲ್ಲರನ್ನೂ ಭ್ರಮೆಗೊಳಿಸಲು ಈ ವಾರ್ತೆ ಚಾರ್ಜ್ ರಾವರ್ ಭೂಮರವರಿಗೂ ವ್ಯಾಪಿಸಿ, ಈತನ ಕಸರತ್ತನ್ನು ಕಣ್ಣಾರ ಪರಾಂಬರಿಸಬೇಕೆಂದು ಬಕ್ಕಿಂಗ್ಹಾಮ್ ರಾಜಭವನಕ್ಕೆ ಕರಸಲ್ಪಟ್ಟನು ರಾಜರು ಈತನ ಚಮತ್ಕಾರ ವಿದ್ಯೆಯನ್ನೂ ಹಸ್ತಲಾಘವನ್ನೂ ನೋಡಿ, ಈತನ ವಿದ್ಯೆಗೆ ಮೆಚ್ಚಿ ಈತನಿಗೆ ವಿಶೇಷ ತರವಾದ ಬಹುಮಾನಗಳನ್ನು ದಯಪಾಲಿಸಿದರೆಂದು ಕೇಳುತ್ತೇವೆ ಈತನು ತನ್ನ ವಿಚಿತ್ರವಾದ ಆಯುಧದಿಂದ ತನ್ನ ಶರೀರವನ್ನು ಹೊಡೆಯುವ ಶತ್ರುಸಂಹಾರ, ಸ್ವಶರೀರ ರಕ್ಷಣಾರ್ಥವಾದ ಸಾಧಕಗಳನ್ನು ಮಾಡುವುದಲ್ಲದೆ ಘೋರವೂ ಪೂರ್ವಕವಾದ ಕಾರ್ಯಗಳನ್ನು ಸಹಾ ಮಾಡಬಲ್ಲವನಾಗಿರುತ್ತಾನೆ ಈತನು ತನ್ನ ಬಾರುಕೋಲಿನಿಂದ 20 ಅಡಿಗಳ ದೂರದಲ್ಲಿರುವ ಕುದುರೆಯ ಕಿವಿಯಲ್ಲಿ ಗುಲುಗುಲು ಮಾಡುವ ಒಂದು ನೊಣವನ್ನು ಕುದುರೆಗೆ ಏನೂ ಬಾಧಕವಿಲ್ಲದೆ ಓಡಿಸುವದಕ್ಕೂ, ಅದರ ಕೊನೆಯಿಂದ ಒಂದು ಮರದ ಮೇಲೆ ತನ್ನ ಹೆಸರನ್ನು ಲಿಖಿತಮಾಡುವದಕ್ಕೂ ಏನೇನೂ ನೋವಾಗದ ಹಾಗೆ ಒಬ್ಬ ಸ್ತ್ರೀಯ ಕುತ್ತಿಗೆಯಲ್ಲಿ ಆಗಲಿ, ಇಲ್ಲವೇ ಮುಂಗೈಯಲ್ಲಿ ಆಗಲಿ ಒಂದು ಕೈ ವಸ್ತ್ರವನ್ನು ಕಟ್ಟುವದಕ್ಕೂ, ಇಲ್ಲವೇ ಸೀಸೆಯ ತಲೆ ಎಗರಿಹೋಗುವ ಹಾಗೆ ಮಾಡುವದಕ್ಕೂ ಸಾಮರ್ಥ್ಯವುಳ್ಳವನು ಈತನು ಮಾಡುವ ಎಲ್ಲಾ ಕಸರತ್ತುಗಳನ್ನೂ ವಿವರಿಸುವದು ಕಷ್ಟತರವಾದದ್ದು ಇಷ್ಟೇನು ಈತನು ತನ್ನ ಬಾರುಕೋಲಿನಿಂದ ತನಗಿಷ್ಟವಾದ ಯಾವ ಕೆಲಸವನ್ನಾದರೂ ಮಾಡಬಲ್ಲವನು ಹೀಗೆ ಮಾಡುವದರಲ್ಲಿ ಹಸ್ತಲಾಘವವು ಎಷ್ಟು ಅವಶ್ಯವೋ ಕಣ್ಣಿನ ಕೆಲಸವೂ ಸಹಾ ಅಷ್ಟು ಅವಶ್ಯವಾದದ್ದು ಹೀಗೆ ಮಾಡುವದರಲ್ಲಿ ಸ್ವಲ್ಪ ಹೆಚ್ಚು ಕಡಮೆಯಾದರೆ ಒಬ್ಬ ಮನುಷ್ಯನು ಸಾಯುವವರಿಗೂ ಊನವಾಗುವಷ್ಟು ಕೇಡನ್ನು ಮಾಡಬಲ್ಲನು ಇಂಥಾ ವಿಚಿತ್ರವಾದ ಬಾರುಕೋಲು ನಮ್ಮ ದೇಶದಲ್ಲಿ ಇಲ್ಲ ಇದರ ಬಾರು ಸರ್ವಸಾಧಾರಣವಾಗಿ 25 ಅಡಿಗಳಷ್ಟು ಉದ್ದವೂ, ಅದರ ಗುಣಿಯ ಉದ್ದ 2 ಇಲ್ಲವೇ 3 ಅಡಿಗಳಷ್ಟು ಗಿಡ್ಡವಾಗಿಯೂ ಇರುತ್ತದೆ

ಇಂಥಾದ್ದನ್ನು ನಮ್ಮ ದೇಶಸ್ಥರು ಅಭ್ಯಾಸಮಾಡಿದ್ದೇ ಆದರೆ ಪುಂಡುಕಳ್ಳರ ಹಾವಳಿಯಿಂದ ತಪ್ಪಿಸಿಕೊಳ್ಳುವದಕ್ಕೆ ಎಷ್ಟೋ ಸಹಾಯಕಾರಿಯಾಗಿರುವದಲ್ಲವೇ ?

ವೈ ಎಸ್

ತುಮಕೂರು ಕೋಆಪರೇಟಿವ್ ಸೊಸೈಟಿ

ಜನರಲ್ ಮೀಟಿಂಗು

ತುಮಕೂರು ಕೋ ಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು ಕಳೆದ ತಿಂಗಳು 21 ನೇ ತಾ ಭಾನುವಾರ ಎ ವಿ ಸ್ಕೂಲ್ ಕಟ್ಟಡದಲ್ಲಿ ನಡೆಸಲ್ಪಟ್ಟಿತು ಈ ಮೀಟಿಂಗಿಗೆ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್ ಮ॥ ಎಂ ಎ ನಾರಣ್ಣಯ್ಯಂಗಾರ್ಯರವರು ದಯಮಾಡಿ ಅಗ್ರಾಸನವನ್ನು ವಹಿಸಿದರು ಮೆಂಬರುಗಳು ಸುಮಾರು [illegible]0 ಜನಗಳೂ, ಮೆಂಬರುಗಳಲ್ಲದ ಇತರ ಅನೇಕ ದೊಡ್ಡ ಮನುಷ್ಯರುಗಳೂ ಮೀಟಿಂಗಿಗೆ ದಯಮಾಡಿದ್ದರು ಬಂದ ಮೆಂಬರುಗಳಿಗೂ ಮತ್ತು ಇತರ ದೊಡ್ಡ ಮನುಷ್ಯರುಗಳಿಗೂ ಸಹ ಮಧ್ಯಾಹ್ನ 3 ಘಂಟೆ ಲಾಗಾಯ್ತು 4 ಘಂಟೆ ವರೆಗೆ ಫಲಾಹಾರ ಮತ್ತು ಕಾಫಿ ಸಹ ವಿನಿಯೋಗಿಸಲ್ಪಟ್ಟು, ಅನಂತರ ಮೀಟಿಂಗಿಗೆ ಶುರು ಮಾಡಲಾಯ್ತು ರೂಲ್ಸಿನಲ್ಲಿ ಅನೇಕ ಬದಲಾವಣೆಗಳು ಚರ್ಚಿಸಲ್ಪಟ್ಟು ಮೆಂಬರುಗಳಿಗೆ ಅನುಕೂಲವಾಗುವಂತೆ ಬದಲಾವಣೆ ಮಾಡಲ್ಪಟ್ಟಿತು ಇವುಗಳ ಪೈಕಿ (1) ಸಾಲ 1,000 ರೂಪಾಯಿ ವರೆಗೆ ಕೊಡುವಂತೆ ಹೆಚ್ಚಿಸಲ್ಪಟ್ಟು ಬಡ್ಡಿ ರೂ 7 8 0 ನಿಷ್ಕರ್ಷೆ ಮಾಡಲಾಯ್ತು (2) ಮೆಂಬರುಗಳು ತೆಗೆದುಕೊಳ್ಳುವ ಷೇರು 2[illegible]ರಿಂದ 30 ಕ್ಕೆ ಹೆಚ್ಚಿಸಲ್ಪಟ್ಟಿತು (3) ಕಂತು ಸಾಲಗಳ ಬಡ್ಡಿ ರೂ 7 8 0 ಗೆ ಬದಲಾಗಿ [illegible] ರೂಪಾಯಿಗೆ ಕಮ್ಮಿ ಮಾಡಲಾಯ್ತು (4) ಫಿಕ್ಸೆಡ್ ಡಿಪಾಜಿಟ್ಟುಗಳನ್ನು 2 ವರ್ಷಗಳ ವರಿಗೆ 6 ರೂಪಾಯಿ ಬಡ್ಡಿ ಮೇರೆ ತೆಗೆದುಕೊಳ್ಳುವಂತೆ ನಿಷ್ಕರ್ಷಿಸಲಾಯ್ತು (5) ಕರೆಂಟ್ ಡಿಪಾಜಿಟ್ಟು ತೆಗೆದುಕೊಳ್ಳುವದನ್ನು 500 ರೂಪಾಯಿಗೆ ಹೆಚ್ಚಿಸಲ್ಪಟ್ಟಿತು ಇನ್ನೂ ಅನೇಕ ಬದಲಾವಣೆಗಳು ಮಾಡಲ್ಪಟ್ಟಿರುತ್ತೆ

ಸೊಸೈಟಿಯ ಬ್ಯಾಲೆನ್ಸ್ ಷೀಟು ನೋಡಿದ್ದರಲ್ಲಿ, ಸೊಸೈಟಿಯ ಅಭಿವೃದ್ಧಿಸ್ಥಿತಿಯು ಅಷ್ಟಿಷ್ಟೆಂದು ಹೇಳಲಾಗದು ಷೇರು ಮೊಬಲಗು 19 0[illegible] ರೂ ವರೆಗೆ ಬಂದಿರುತ್ತೆ ಡಿಪಾಜಿಟ್ಟು, ಕರೆಂಟ್, ಫಿಕ್ಸೆಡ್ ಡಿಪಾಜಿಟ್ಟು ಸಹ [illegible],000 ರೂಪಾಯಿ ವರೆಗೆ ಬಂದಿರುತ್ತೆ ಬಡ್ಡಿ 3,000 ರೂಪಾಯಿ ಮೇಲೆ ಹುಟ್ಟುವಳಿ ಆಗಿರುತ್ತೆ ರಿಜರ್ವ್ ಫಂಡು 2,000 ರೂಪಾಯಿ ವರೆಗೆ ಜಮಾ ಆಗಿರುತ್ತೆ ಈ ಸೊಸೈಟಿಯು ವ್ಯಾಪಾರಸ್ಥರಿಗೂ, ಕೆಲವು ರೈತರಿಗೂ, ಕೆಲವು ಕೈಗಾರಿಕೆಗಾರರಿಗೂ ತುಂಬಾ ಸಹಾಯವಾಗಿರುತ್ತೆ ಈ ಸಾಲಿನಲ್ಲಿ ಶೇಕಡ 6 ರೂಪಾಯಿ ಮೇರೆ ಬಡ್ಡಿ ಹಂಚಬೇಕೆಂದು ತೀರ್ಮಾನವಾಗಿರುತ್ತೆ ಸೊಸೈಟಿಯು ಇನ್ನೂ ಹೆಚ್ಚು ಅಭಿವೃದ್ಧಿಗೆ ಬರಲೆಂದು ಹಾರೈಸುತ್ತೇವೆ

ಮೀಟಿಂಗು ನೆರವೇರಿದನಂತರ ರೆಜಿಸ್ಟ್ರಾರ್ರವರು ಸೊಸೈಟಿಯು ಅಭಿವೃದ್ಧಿಸ್ಥಿತಿಯಲ್ಲಿರುವ ಸಂಗತಿಗೂ, ಇನ್ನೂ ಹೆಚ್ಚು ಅಭಿವೃದ್ಧಿಗೆ ಬರುವದಕ್ಕೆ ತಕ್ಕ ಸಲಹೆಗಳನ್ನೂ ಮತ್ತು ಸೆಂಟ್ರಲ್ ಬ್ಯಾಂಕು ಏರ್ಪಾಡಾಗತಕ್ಕ ಬಗ್ಗೂ ಸಹ ಒಂದು ಉಪನ್ಯಾಸವನ್ನು ಮಾಡಿದರು ಶ್ರೀಮನ್ ಮಹಾರಾಜಾ ಸಾಹೇಬರವರಿಗೆ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲಿ ಎಂಬದಾಗಿ ಪ್ರಾರ್ಥನೆಯನ್ನು ಮಾಡಿದನಂತರ ಮೀಟಿಂಗು ಬರಖಾಸ್ತು ಮಾಡಲ್ಪಟ್ಟಿತು ಸೆಕ್ರೆಟರಿ ಮ॥ ಆರ್ ರಾಮರಾಯರವರು ತುಂಬಾ ಮೆಹನತ್ತಿನಿಂದ ಕೆಲಸಗಳನ್ನು ನಡಿಸಿರುತ್ತಾರೆ ಅವರ ಖಾಯಿಲೆ ವಿಷಯವಾಗಿ ತುಂಬಾ ವಿಷಾದವಾಗಿದೆ ಜಾಗ್ರತೆ ಗುಣವಾಗಲಿ ಎಂಬದಾಗಿ ಹಾರೈಸುತ್ತೇವೆ ಹಾಲಿ ಮ॥ ಸಿ ಡಿ ರಾಮಸ್ವಾಮಯ್ಯನವರು ಕೆಲಸ ನಡಿಸುತ್ತಾ ಇದ್ದಾರೆ

ಜನಾಭಿಮಾನಿ

ವ್ಯವಸಾಯ ವಿಚಾರಗಳು

ಹತ್ತೀಬೀಜದ ಎಣ್ಣೆಯು

ಈಚೆಗೆ ಪ್ರಪಂಚದಲ್ಲಿ ತಯಾರಾಗುವ ಹತ್ತೀಬೀಜದ ಎಣ್ಣೆಯಲ್ಲಿ ಶೇಕಡ [illegible]ರಷ್ಟು, ಜನಗಳ ಆಹಾರಕ್ಕಾಗಿ ಉಪಯೋಗಿಸಲ್ಪಡುತ್ತಿರುವುದಂತೆ ಯುರೋಪ್ ದೇಶದಲ್ಲಿ ಹಂದಿಯ ತುಪ್ಪವನ್ನು ತಿನ್ನುವುದಕ್ಕೂ, ಪದಾರ್ಥಗಳನ್ನು ಹುರಿಯುವುದಕ್ಕೂ ಉಪಯೋಗಿಸುತ್ತಿದ್ದವರನೇಕರು ಅದಕ್ಕೆ ಬದಲಾಗಿ ಹತ್ತೀಬೀಜದ ಎಣ್ಣೆಯನ್ನು ಉಪಯೋಗಿಸುತ್ತಾರೆ ಶುದ್ಧಿಮಾಡಿದ ಹತ್ತೀಬೀಜದ ಎಣ್ಣೆಯು ಸುಲಭವಾಗಿ ಅರಗತಕ್ಕದ್ದಾಗಿಯೂ ರುಚಿಯಾಗಿಯೂ, ಪುಷ್ಟಿಕರವಾಗಿಯೂ, ವಿಷಪದಾರ್ಥಗಳ್ಯಾವುದನ್ನೂ ಒಳಗೊಂಡಿಲ್ಲದ್ದಾಗಿಯೂ ಇರುವುದೆಂದು ತಿಳಿಯಬರುತ್ತದೆ ಈ ಎಣ್ಣೆಯು ಈಗ ರಾಜಧಾನಿಯಲ್ಲಿ ಬಳಕೆಗೆ ಬಂದಿದೆ

ರಾಗಿಪೈರಿಗೆ ನೀರುಕಟ್ಟುವುದು

ರಾಗಿಯ ಪೈರಿಗೆ ನೀರುಕಟ್ಟಿದ ತರುಣದಲ್ಲಿಯೇ ದೊಡ್ಡ ಮಳೆಯಾದರೆ ಪೈರುಗಳು ಕೆಂಪಾಗಿ ಕರಟಿ ಬೀಳುವವು ಜಮೀನಿನಲ್ಲಿ ಅವಶ್ಯಕವಾದುದಕ್ಕಿಂತಲೂ ಜಾಸ್ತಿಕಾಲ ಹೆಚ್ಚು ತೇವವು ನಿಲ್ಲುವುದೇ ಇದಕ್ಕೆ ಕಾರಣವೆಂದು ಹೇಳಬೇಕು ಹೆಚ್ಚು ತೇವವು ನಿಲ್ಲುವುದರಿಂದ ಬೇರುಗಳು ಪೈರಿಗೆ ಆಹಾರವನ್ನು ಒದಗಿಸುವ ಶಕ್ತಿಯನ್ನು ಕಳೆದುಕೊಳ್ಳುವವು ಆದರೆ ರಾಗಿಯನ್ನು ಮಟ್ಟಸವಾದ ಮಡಿಗಳಲ್ಲಿ ಎರಚುವುದಕ್ಕೆ ಬದಲಾಗಿ ಜಮೀನಿನಲ್ಲಿ ಸಣ್ಣನಾದ ದಿಂಡು (ತವರಿ) ಗಳನ್ನು ಕಟ್ಟಿ, ಅದರ ಎರಡು ಕಡೆಗಳಲ್ಲಿಯೂ ನೇಗಿಲಿನಿಂದ ಸಾಲು ಮಾಡಿ ಅಲ್ಲಿ ರಾಗಿಯ ಪೈರನ್ನು ನೆಟ್ಟಿದ್ದೇ ಆದರೆ ಸಸಿ ಚನ್ನಾಗಿ ಹರಿದು ಗಿಡಗಳು ಆರೋಗ್ಯವಾಗಿರುವವು ಕಳೆದ ಐದು ಸಾಲುಗಳಲ್ಲಿಯೂ ಮೈಸೂರು ವ್ಯವಸಾಯದ ಇಲಾಖೆಯವರು ಮೇಲ್ಕಂಡ ರೀತಿಯಲ್ಲಿ ತವರಿಗಳನ್ನು ಕಟ್ಟಿ ಅವುಗಳ ಪಕ್ಕಗಳಲ್ಲಿ ಪೈರನ್ನು ನೆಟ್ಟು ವ್ಯವಸಾಯ ಮಾಡಿ ನೋಡಿದ್ದರಲ್ಲಿ ಈ ಕ್ರಮವು ಮಡಿಗಳಲ್ಲಿ ರಾಗಿಯನ್ನು ಎರಚಿ ಬೆಳೆಮಾಡುವುದಕ್ಕಿಂತ ಹೆಚ್ಚು ಲಾಭಕರವೆಂದು ಕಂಡುಬಂದಿರುತ್ತದೆ

ಒಳ್ಳೇ ಬೀಜವನ್ನು ಬಿತ್ತುವುದರ ಉಪಯೋಗಗಳು

ಬೆಳೆಯು ಚನ್ನಾಗಿ ಆಗಬೇಕಾದರೆ ಜಮೀನು ಹಸನಾಗಿರುವುದೇ ಕಾರಣವೆಂತಲೂ, ಹಾಗೆ ಜಮೀನು ಫಲವತ್ತಾಗಿಲ್ಲದಿದ್ದರೆ ಒಳ್ಳೇ ಬೆಳೆಯು ಸಿಕ್ಕುವುದಿಲ್ಲವೆಂತಲೂ, ಜಮೀನು ಹಸನಾಗಿದ್ದರೆ ಎಂಥಾ ಬೀಜವನ್ನು ಬಿತ್ತಿದಾಗ್ಯೂ ಒಳ್ಳೇ ಬೆಳೆಯು ಸಿಕ್ಕುವುದೆಂತಲೂ ಕೆಲವರು ಹೇಳುತ್ತಾರೆ ಜಮೀನು ಉತ್ಕೃಷ್ಟವಾಗಿದ್ದರೆ ಬೆಳೆಯು ಚನ್ನಾಗಿ ಆಗುವ ಸಂಭವವುಂಟೆಂಬುದೇನೋ ನಿಜ ಆದರೆ ಒಳ್ಳೇ ಬೀಜವನ್ನು ಆರಿಸಿ ಬಿತ್ತತಕ್ಕವನಿಗೆ ಫಲವತ್ತಾದ ಹೊಲವಿದ್ದಾಗ್ಯೂ ಒಳ್ಳೇ ಬೀಜವನ್ನು ಸೆದಬೇ ಇರತಕ್ಕವನಿಗಿಂತಲೂ ಉತ್ತಮವಾದ ಬೆಳೆಯು ಸಿಕ್ಕುವ ಸಂಭವವು ಜಾಸ್ತಿಯಾಗಿರುತ್ತದೆ

ಮಾದರಿಯ ಬೀಜಗಳಲ್ಲಿ ಕೆಳಗೆ ಕಂಡ ಎರಡೂ ಅಥವಾ ಒಂದು ವಿವರವಾದ ಗುಣವಾದರೂ ಇರಬೇಕು —(1) ಮಾದರಿ ಬೀಜದ ಪ್ರತಿ ಕಾಳೂ ಚನ್ನಾಗಿಯೂ ರೋಗವಿಲ್ಲದ್ದಾಗಿಯೂ, ಚನ್ನಾಗಿ ಪಕ್ವವಾಗಿ ಪುಷ್ಟಿಯಾಗಿಯೂ ಚನ್ನಾಗಿ ಮೊಳೆಯತಕ್ಕದ್ದಾಗಿಯೂ ಇರಬೇಕು (2) ಮಾದರಿ ಬೀಜದ ಪ್ರತಿ ಕಾಳೂ ಚನ್ನಾಗಿ ಬೆಳೆಯತಕ್ಕ ರೋಗಕ್ಕೆ ಆಸ್ಪದ ಕೊಡದಿರತಕ್ಕ ಮತ್ತು ಒಳ್ಳೇ ಫಲಕೊಡತಕ್ಕ ಒಂದೇ ಜಾತಿಯವುಗಳಾಗಿರಬೇಕು ಮೊದಲನೇ ಲಕ್ಷಣಗಳಿರುವ ಬೀಜವನ್ನು ಬಿತ್ತಿದರೆ ಪೈರುಗಳು ಸಮನಾಗಿ ಆಗಬಹುದಾದ್ದರಿಂದ ಬಿತ್ತನೆಗೆ ಕೀಳುಜಾತಿಯ ಬೀಜವು ಎಷ್ಟು ಬೇಕಾಗುತ್ತದೋ ಅಷ್ಟು ಬೇಕಾಗುವುದಿಲ್ಲ ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಭತ್ತದ ಬೀಜವರಿಯು ಬಹಳ ಹೆಚ್ಚಾಗಿದೆ ಇದಕ್ಕೆ ಕಾರಣವೇನಂದರೆ, ಬಿತ್ತನೆಯ ಬೀಜದಲ್ಲಿ ಪಕ್ವವಾಗಿಲ್ಲದ ಮತ್ತು ಒಡೆದು ಹೋದ ಬೀಜಗಳು ಅತಿಯಾಗಿರುವವು ಇಂಥಾ ಬೀಜಗಳು ಮೊಳೆಯುವ ಸಂಭವವೇ ಇಲ್ಲ ಮತ್ತು ಹಾಗೆ ಮೊಳೆತಾಗ್ಯೂ ಪೈರು ಬಹಳ ಬಲಹೀನವಾಗಿರುವುದು

ಬಿತ್ತನೆಯ ಬೀಜಗಳಲ್ಲಿ ಮೇಲೆ ಹೇಳಲ್ಪಟ್ಟ ಎರಡು ವಿಧವಾದ ಲಕ್ಷಣಗಳೂ ಇದ್ದರೆ ಉತ್ಪತ್ತಿಯು ಬಹಳ ಜಾಸ್ತಿಯಾಗುವ ಸಂಭವವು ಹೇಗೆ ಸಂಸ್ಥಾನದಲ್ಲಿ ಬಿತ್ತನೆಯ ಬೀಜಗಳು ಅನೇಕ ತರಹೆ ಬೀಜಗಳಿಂದ ಮಿಶ್ರವಾದವುಗಳು ಇದರಿಂದ ಫಸಲು ಬಹಳ ಕಡಮೆಯಾಗುವುದು ಹ್ಯಾಗೆಂದರೆ, ಮದರಾಸ್ ಬದಿಪಕ್ಕದ ಬಳ್ಳಾರಿ ಮತ್ತು ಕಡಪಾ ಡಿಸ್ಟ್ರಿಕ್ಟುಗಳಲ್ಲಿ ಬಿತ್ತಲ್ಪಡುವ ಹತ್ತಿಯು ಕೆಂಪು ಮತ್ತು ಬಿಳೀ ಹತ್ತಿ ಇವೆರಡು ಬಗೆಯ ಗಿಡಗಳಿಂದ ಮಿಶ್ರವಾದವುಗಳು ಈ ಮಿಶ್ರವಾದ ಹತ್ತಿಗೆ ಶುದ್ಧ ಬಿಳೀ ಹತ್ತಿಗೆ ಆಗುವ ಬೆಲೆಯು ದೊರೆಯುವುದಿಲ್ಲ ಮುಖ್ಯವಾಗಿ ಅನೇಕ ರಕಂ ಬೀಜಗಳನ್ನು ಮಿಶ್ರಮಾಡಿ ಬಿತ್ತನೆ ಮಾಡಿದ ಪೈರುಗಳ ಉತ್ಪತ್ತಿಗೆ ಶುದ್ಧವಾದ ಬಿತ್ತದ ಪೈರಿನ ಉತ್ಪತ್ತಿಗೆ ದೊರೆಯತಕ್ಕ ಬೆಲೆ ದೊರೆಯುವುದಿಲ್ಲ ಆದ್ದರಿಂದ ಪ್ರತಿ ರೈತನೂ ಶುದ್ಧವಾದ, ಮಿಶ್ರವಿಲ್ಲದ ಬೀಜವನ್ನೇ ಉಪಯೋಗಿಸಬೇಕು ಬಿತ್ತನೆಯ ಬೀಜವನ್ನು ಕೊಂಡುಕೊಳ್ಳುವುದಾದರೆ ಪಕ್ವವಾಗಿರುವ ಮತ್ತು ಒಡೆದುಹೋದ ಕಾಳುಗಳಿಲ್ಲದವುಗಳನ್ನೇ ಕೊಳ್ಳಬೇಕು ಅಲ್ಲದೆ ಸ್ವಂತವಾಗಿ ಬೀಜವನ್ನು ಇಡುವುದಾದರೆ ಉತ್ತಮವಾದ ಗಿಡಗಳಿಂದ ಧಾನ್ಯವನ್ನು ಬೇರೆಯಾಗಿ ಬಡಿದು ಬೀಜವನ್ನೆಲ್ಲಾ ಚನ್ನಾಗಿ ಆರಿಸಿ, ಕೀಳುತರದ ಬೀಜಗಳನ್ನೆಲ್ಲಾ ತೆಗೆದು ಹಾಕಬೇಕು ಹೀಗೆ ಮಾಡುವುದರಿಂದ ಬಿತ್ತನೆಗೆ ಹೆಚ್ಚು ಬೀಜವನ್ನು ಉಪಯೋಗಿಸಬೇಕಾದ ಆವಶ್ಯಕವಿಲ್ಲದಿರುವುದಲ್ಲದೆ ಉತ್ಪತ್ತಿಯೂ ಸಹ ಚನ್ನಾಗಿ ಆಗಿ ಒಳ್ಳೇ ಲಾಭ ದೊರೆಯುವುದು

ಮುಂದಿನ ಸಾಲಿನ ಬಿತ್ತನೆಗಾಗಿ ಬೀಜವನ್ನು ತೆಗೆದಿಡುವವರೆಲ್ಲರೂ ಕೆಳಗೆ ನಮೂದಿಸಿರುವ ಸಂಗತಿಗಳಿಗೆ ಗಮನ ಕೊಡತಕ್ಕದ್ದು —ಜೊಳ್ಳಿಲ್ಲವೂ ಸಂಪೂರ್ಣವಾಗಿಹೋಗುವಂತೆ ಬೀಜಗಳನ್ನು ಚನ್ನಾಗಿ ತೂರಬೇಕು (ಕೇರಬೇಕು) ಚನ್ನಾಗಿ ಬಲಿಯದ ಬಿತ್ತಗಳಿಂದ ಆದ ಪೈರಿನ ಕಾಳೂ, ಹುಳುಗಳಿಂದ ಮುತ್ತಲ್ಪಟ್ಟ ಪೈರಿನ ಕಾಳೂ ಜಳ್ಳಾಗಿರುವವು ಗಟ್ಟಿಯಾದ ಬೀಜಗಳನ್ನು ಬೇರೆಮಾಡಿ ಬಿಸಲಿನಲ್ಲಿ ಚನ್ನಾಗಿ ಒಣಗಿಸಬೇಕು ಎರಡು ವಾರಗಳ ನಂತರ ಪುನಃ ಒಣಗಿಸಬೇಕು ಎರಡನೇ ಆವರ್ತಿ ಒಣಗಿಸಿದ ತರುವಾಯ ಹುಳುಗಳೇನಾದರೂ ಇವೆಯೇ ಎಂದು ಚನ್ನಾಗಿ ಪರೀಕ್ಷಿಸಿ ನೋಡಬೇಕು ಹಾಗೆ ಹುಳುಗಳಿದ್ದರೆ ಮತ್ತೊಂದಾವರ್ತಿ ಒಣಗಿಸಬೇಕಾಗುವುದು ಅನಂತರ ಬೀಜದ ಕಾಳುಗಳನ್ನು, ಗುಡಾಣಗಳ ಕೆಳಕ್ಕೆ ಸ್ವಲ್ಪ ಬೂದಿ ಹಾಕಿ [illegible] ಮೇಲೆ ಒಣಗಿದ ಬೇವಿನ ಎಲೆಗಳನ್ನು ಮುಚ್ಚಬೇಕು

ಮೈಸೂರು ಸಂಸ್ಥಾನದ ಮ್ಯುನಿಸಿಪಾಲಿಟಿಗಳ

ವಾರ್ಷಿಕ ರಿಪೋರ್ಟು

ಮೈಸೂರು ಸೀಮೆಯಲ್ಲಿರುವ ಮ್ಯುನಿಸಿಪಾಲಿಟಿಗಳ 1910 11 ನೇ ಸಾಲಿನ ರಿಪೋರ್ಟುಗಳನ್ನು ಕಳೆದ 1912 ನೇ ಮೇ ತಾ 19 ರಲ್ಲಿ ಪರಾಂಬರಿಸಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಪ್ರಕಟಮಾಡಿದ್ದಾರೆ ಈ ರಿಪೋರ್ಟುಗಳು ಸಾಲ್ ಆಖೈರಾದ ಮೂರು ನಾಲ್ಕು ತಿಂಗಳೊಳಗಾಗಿ ಪ್ರಕಟವಾಗಬೇಕು ಇದು ತಪ್ಪಿ 8 10 ತಿಂಗಳು ಕಳೆದ ಮೇಲೆ ಅವು ಪ್ರಕಟವಾದವು ಇದನ್ನು ನೋಡಲಾಗಿ ಮೈಸೂರು ಸರ್ಕಾರದ ಚಕ್ರಗಳು ಬಹು ನಿಧಾನವಾಗಿ ಚಲಿಸುತ್ತವೆ ಎಂದು ಗೊತ್ತಾಗುವುದು ಈ ರಿಪೋರ್ಟಿನಲ್ಲಿ ಮ್ಯುನಿಸಿಪಾಲಿಟಿಗಳು ಕಳೆದ ವರುಷ ನಡೆಸುವ ಕಾರ್ಯಗಳನ್ನು ಓದಿಕೊಳ್ಳಬಹುದು ಪೈಕಿ ಮುಖ್ಯ ಭಾಗಗಳನ್ನು ಇಲ್ಲಿ ವಾಚಕರ ತಿಳುವಳಿಕೆಗಾಗಿ ಉದ್ಧರಿಸುತ್ತೇವೆ

ಕಳೆದ 1910 11ನೇ ಸಾಲಿನಲ್ಲಿ ಮೈಸೂರು ಸೀಮೆಯಲ್ಲಿ 99 ಮ್ಯುನಿಸಿಪಾಲಿಟಿಗಳಿದ್ದವು ಮ್ಯುನಿಸಿಪಲ್ ಟವುನ್‌ಗಳಲ್ಲಿ 1901ನೇ ಸೆನ್ಸಸ್ ಪ್ರಕಾರ ಇದ್ದ [illegible] ಪ್ರಜಾ ಸಂಖ್ಯೆಯು 1911ನೇ ಸೆನ್ಸಸ್ ಪ್ರಕಾರ [illegible] ಕ್ಕೆ ಏರಿತು ಈ ಸಲ ಚನ್ನಪಟ್ಟಣ, ಕುಣಿಗಲ್, ನೆಲಮಂಗಲ ಕೋಲಾರ, ಮುಳಬಾಗಿಲು, ತುಂಕೂರು ಸಕಲೇಶಪುರ, ಹೊನ್ನಾಳಿ, ತರೀಕೆರೆಗಳಲ್ಲಿ ಸೆನ್ಸಸ್ ಲೆಕ್ಕಗಳನ್ನು ಬರೆಯುವಾಗ್ಗೆ ಪ್ಲೇಗ್ ಉಪದ್ರವು ಪ್ರಬಲವಾಗಿದ್ದ ಕಾರಣ ಪ್ರಜಾ ಸಂಖ್ಯೆ ಕಡಮೆಯಾಗಿ ಕಂಡಿತು ಆದರೆ ಶಿವಮೊಗ್ಗೆಯಲ್ಲಿ ಶೇಕಡ 110ರಂತೆಯೂ, ಟಿ ನರಸೀಪುರದಲ್ಲಿ [illegible] ಯೂ ಪ್ರಜೆಗಳು ಹೆಚ್ಚಿದಾರೆ ತುಂಕೂರಿನಲ್ಲಿ ಸೆನ್ಸಸ್ ಲೆಕ್ಕಗಳನ್ನು [illegible] ಸರಿಯಾಗಲಿಲ್ಲವೆಂದು ಡೆಪ್ಯುಟಿ ಕಮಿಷನರ್‌ರವರು ಚಾಲ್ತಿ ಸಾಲಿನಲ್ಲಿ [illegible] ಗಾರಮಾಡಿಸಿದರು ಈ 99 ಮ್ಯುನಿಸಿಪಾಲಿಟಿಗಳಲ್ಲಿ 37 ಮ್ಯುನಿಸಿಪಾಲಿಟಿಗಳು ರೆಗ್ಯುಲೇಷನ್ ಪ್ರಕಾರವೂ 62 ಮ್ಯುನಿಸಿಪಾಲಿಟಿಗಳು ಬೋರ್ಡುಗಳಾಗಿಯೂ ಇರುತ್ತವೆ ಈ ಮ್ಯುನಿಸಿಪಾಲಿಟಿಗಳಲ್ಲೆಲ್ಲಾ ಒಟ್ಟು 1,016 ಮೆಂಬರುಗಳಿದ್ದರು ಈ ಪೈಕಿ 122 ಮಂದಿ ಚುನಾವಣೆಮಾಡಲ್ಪಟ್ಟವರು, 538 ಮಂದಿ ಸರ್ಕಾರದಿಂದ ನೇಮಕವಾದ ಜನೋದ್ಯೋಗದವರು ಮೆಂಬರುಗಳು 166 ಸರ್ಕಾರದ ನೌಕರರು —12 ಮ್ಯುನಿಸಿಪಾಲಿಟಿಗಳಲ್ಲಿ ಮೆಂಬರುಗಳು [illegible] ತಿಂಗಳಿಗೊಂದಾವರ್ತಿ ಸೇರಿ ಮೀಟಿಂಗನ್ನು ನಡಿಸಿದರು ಉಳಿದ ಮ್ಯುನಿಸಿಪಾಲಿಟಿಗಳಲ್ಲಿ ಮೆಂಬರುಗಳು ಹಾಜರಾಗದೆ ಮೀಟಿಂಗುಗಳನ್ನು ನಿಲ್ಲಿಸಬೇಕಾಯಿತು ಅನೇಕ ಮ್ಯುನಿಸಿಪಾಲಿಟಿಗಳಲ್ಲಿ ಬೇರೋದ್ಯೋಗದ ಮೆಂಬರುಗಳೇ ಹೆಚ್ಚು ಮೀಟಿಂಗಿಗೆ ಹಾಜರಾದರು ಅರಸೀಕೆರೆ, ಸಕಲೇಶಪುರ, ಬೇಲೂರು, ಸಾಗರ, ಮಾಗಡಿ, ಬೌರಿಂಗ್‌ಪೇಟೆ, ಗುಂಡ್ಲುಪೇಟೆ ತೀರ್ಥಹಳ್ಳಿ, ಮುದ್ದಿಗೆರೆ ಈ ಮ್ಯುನಿಸಿಪಾಲಿಟಿಗಳಲ್ಲಿ ಸರ್ಕಾರಿ ಮೆಂಬರುಗಳೇ ಹೆಚ್ಚು ಮೀಟಿಂಗುಗಳಿಗೆ ಹಾಜರಾಗುತ್ತಿದ್ದರು ಪೆರಿಯಾಪಟಣ, ಸರ್ಜಾಪುರ ಮ್ಯುನಿಸಿಪಾಲಿಟಿಗಳಲ್ಲಿ ಮೀಟಿಂಗುಗಳಿಗೆ ಸರ್ಕಾರಿ ಮೆಂಬರುಗಳ ಹಾಜರಾತಿಯೇ ಯಾರಿಗೂ ತೃಪ್ತಿಕರವಾಗಿಲ್ಲ ಶಿಕಾರಿಪುರದ ಮ್ಯುನಿಸಿಪಾಲಿಟಿಗೆ ಜನರಿಂದ ಮೆಂಬರುಗಳನ್ನು ಚುನಾವಣೆ ಮಾಡಿಸಿದ ಕ್ರಮವು ರೂಲಿಗೆ ಅನುಸಾರವಾಗಿಲ್ಲವಾದಕಾರಣ ಸರ್ಕಾರದವರೇ ನಾಲ್ವರು ಮೆಂಬರುಗಳನ್ನು ನೇಮಿಸಬೇಕಾಯಿತು ಚನ್ನಪಟ್ಟಣದಲ್ಲಾದರೋ ಟವುನ್ ಹದ್ದುಬಸ್ತನ್ನು [illegible] ಮಾಡುವುದಕ್ಕಿಂತ ಮೊದಲೇ ಮೆಂಬರುಗಳ ಚುನಾವಣೆಯನ್ನು ನಡಿಸಿದ ಕಾರಣ ಸರ್ಕಾರದವರು ಆ ಚುನಾವಣೆಯನ್ನು ರದ್ದು ಮಾಡಿಬಿಟ್ಟರು

ಮ್ಯುನಿಸಿಪಲ್ ಆದಾಯದ ಬಾಬುಗಳಾಗಲಿ, ದರಗಳಾಗಲಿ ಹೇಳತಕ್ಕ ವ್ಯತ್ಯಾಸವಾಗಲಿಲ್ಲ ಕೆಳಗೆ ಕಂಡ ಮ್ಯುನಿಸಿಪಾಲಿಟಿಗಳಲ್ಲಿ ವಸೂಲು ಮತ್ತು ಬಾಕಿ ಬಿದ್ದಿರುವ ತೆರಿಗೆ ಹಣಗಳು ಎಷ್ಟೆಂದರೆ—

ಮ್ಯುನಿಸಿಪಾಲಿಟಿ	1910 11ನೇ ಸಾಲಿನ ಬಾಬತು	ಗುದಸ್ತಾ ಸಾಲುಗಳ ಬಾಬತು	ಬಾಕಿ
ಬೆಂಗಳೂರು ಸಿಟಿ	ರೂ [illegible]	ರೂ 21 0[illegible]8	ರೂ [illegible]
ಮೈಸೂರು ಸಿಟಿ	27 28[illegible]	„ 20 [illegible]	„ [illegible]
ಶಿವಮೊಗ್ಗ	„ [illegible]750	„ 1 [illegible]	„ [illegible]
ದಾವಣಗೆರೆ	7 1[illegible]	„ 1 387	„ [illegible]
ಚಿಕ್ಕಮಗಳೂರು	„ [illegible]000	2 [illegible]	„ [illegible]
ತುಮಕೂರು	1 [illegible]	„ 2 [illegible]7	„ [illegible]
ಶ್ರೀರಂಗಪಟ್ಟಣ	[illegible]	[illegible]	„ [illegible]
ಕೋಲಾರ	2 12	„ 2,113	„ [illegible]
ಚನ್ನಪಟ್ಟಣ	„ [illegible]371	[illegible]	[illegible]
ಚಿಕ್ಕಬಳ್ಳಾಪುರ	[illegible]71	1 [illegible]	„ [illegible]
ಬೇಲೂರು	2,[illegible]7	1,1[illegible]	„ [illegible]
ಚಾಮರಾಜನಗರ	2 [illegible]	1 [illegible]	„ [illegible]
ಬೌರಿಂಗ್‌ಪೇಟೆ	2 [illegible]75	„ 1 [illegible]	„ [illegible]
ನಂಜನಗೂಡು	„ [illegible]12	„ 1 0[illegible]	[illegible]
ಹುಣಸೂರು	„ 1 [illegible]	„ [illegible]	„ [illegible]
ಗುಂಡ್ಲುಪೇಟೆ	„ [illegible]	„ [illegible]	„ [illegible]
ಅರಸೀಕೆರೆ	„ [illegible]	„ [illegible]	„ [illegible]

ಮ್ಯುನಿಸಿಪಾಲಿಟಿಗಳ ಪೈಕಿ ಬೆಂಗಳೂರು ಸಿಟಿಯೋ ಪ್ರತಿ ಒಬ್ಬರ ಮೇಲೆಯೂ ರೂ 2 [illegible] 1 ಪೈನಂತೆಯೂ, ಮೈಸೂರು ಸಿಟಿಯಲ್ಲಿ ರೂ 2 [illegible] ಯಂತೆಯೂ ಟಿ ನರಸೀಪುರದಲ್ಲಿ ರೂ 0 3 4 ಪೈನಂತೆಯೂ, ಹಾಸನ ಡಿಸ್ಟ್ರಿಕ್ಟ್ ಆಲೂರಿನಲ್ಲಿ ರೂ [illegible] 1 ಪೈನಂತೆಯೂ ಮ್ಯುನಿಸಿಪಲ್ ಕೊಟ್ಟಂತಾಗುವುದು ಎಲ್ಲಾ ಮ್ಯುನಿಸಿಪಾಲಿಟಿಗಳ ಆದಾಯ ವ್ಯಯಗಳು ಎಷ್ಟೆಂದರೆ—

ಸಾಲು	ಜಮಾ	ಖರ್ಚು
1909 10	ರೂ [illegible]	ರೂ [illegible]
1910 11	[illegible],[illegible]47	„ 7,19,[illegible]

37 ಮ್ಯುನಿಸಿಪಾಲಿಟಿಗಳಲ್ಲಿ ಆದಾಯಕ್ಕಿಂತಲೂ ಹೆಚ್ಚಾಗಿ ಖರ್ಚಾಗಿರುತ್ತಾರೆ ಕೃಷ್ಣರಾಜನಹಳ್ಳಿ, ಬಾಗೇಪಲ್ಲಿ, ಪಾವಗಡ, ಚಿತ್ರದುರ್ಗ ಮ್ಯುನಿಸಿಪಾಲಿಟಿಗಳ ಫಂಡಿನಲ್ಲಿ ಒಂದೂ ಕಾಸೂ ಇಲ್ಲ ಸಾಲಮಾಡಿ ತಂದ ಹಣವನ್ನು ಖರ್ಚುಮಾಡಿರುವರು ಟಿ ನರಸೀಪುರ, ಅಲೂರು ಮೊದಲಾದ ಕಂಪಿನಿಗಳಲ್ಲಿ ಆಕ್ಟ್ರಾಯಿ ಬಾಕೀ ಇಲ್ಲ ಮ್ಯುನಿಸಿಪಲ್ ತೆರಿಗೆ ವಸೂಲಿಗಾಗಿ 19 ಸಂದರ್ಭಗಳಲ್ಲಿ ಮಾತ್ರ ಜಪ್ತಿ ಮಾಡಲ್ಪಟ್ಟ ಮಾಲುಗಳನ್ನು ಹರಾಜು ಹಾಕಬೇಕಾಯಿತು ಪ್ರೊಫೆಸ್ ಟ್ಯಾಕ್ಸ್ ಬಡ್ಡಿಯೂ ಈ ಸಾಲಿನಲ್ಲಿ [illegible] ರೂಪಾಯಿ ವಸೂಲಾಗಿದೆ —ಮದ್ದಗಿರಿ, ಕೊರಟಗೆರೆ, ಪಾವಗಡ ಮ್ಯುನಿಸಿಪಾಲಿಟಿಗಳ ಫಂಡು ತೃಪ್ತಿಕರವಾಗಿಲ್ಲದ್ದರಿಂದ ರಾತ್ರಿ ಹೊತ್ತು ದೀಪ ಹಚ್ಚುವುದನ್ನು ನಿಲ್ಲಿಸಲಾಯಿತು ಶಿವಮೊಗ್ಗ ಮ್ಯುನಿಸಿಪಾಲಿಟಿಯಲ್ಲಿ ದೀಪ ಹಚ್ಚುವ

ಪ ತೃಪ್ತಿಕರವಾಗಿ ಕೆಲಸಮಾಡದೆ ಹೋದಕಾರಣ 1910 ನೇ ಡಿಸೆಂಬರ್ ಗಾಯಿತು ಅಮಾನಿಯಾಗಿ ಹಚ್ಚುತ್ತಿದ್ದಾರೆ ಕೋಲಾರ್ ಡಿಸ್ಟ್ರಿಕ್ಟಿನ ್ಯನಿಸಿಪಾಲಿಟಿಗಳಲ್ಲಿ ಸರಿಯಾಗಿ ದೀಪ ಹಚ್ಚಲಿಲ್ಲವೆಂದು ಕಂಟ್ರಾಕ್ಟರುಗಳಿಂ 51 ರೂಪಾಯಿ ಜುಲ್ಮಾನೆ ವಸೂಲಾಗಿದೆ — ಹುಚ್ಚುನಾಯಿ, ಹಾವು ಮುಂ ದವುಗಳನ್ನು ಕೊಂದದ್ದಕ್ಕೆ 1910 11 ನೇ ಸಾಲಿನಲ್ಲಿ 640 ರೂಪಾಯಿ ಬಹುಮಾನ ಕೊಡಲಾಯಿತು ಈ ವರುಷ ಹಾವು ಮೊದಲಾದ ದುಷ್ಟಜಂತು ಕಡಿದು 19 ಜನರು ತೀರಿಹೋದರು — ಮುಳಬಾಗಲ್ ಟವನ್ನಿಗೆ ಒಳ್ಳೇ ಯುವ ನೀರನ್ನು ಒದಗಿಸುವುದಕ್ಕೆ 10,000 ರೂಪಾಯಿ ಖರ್ಚಾಗುವ ಮಗಾರಿ ಪಟ್ಟಿಯೂ ಪ್ಲಾನೂ ತಯಾರಾಗಿವೆ ಹರಿಹರದಲ್ಲಿ ತುಂಗಭದ್ರಾ ಯಿಂದ ದಾವಣಗೆರೆಗೆ ಕುಡಿಯುವ ನೀರನ್ನು ತಂದು ಸರಬರಾಯಿ ಮಾಡತಕ್ಕ ದು ತೀರ್ಮಾನವಾಗಿದೆ ಇದಕ್ಕೆ ಸುಮಾರು 1,30,000 ರೂಪಾಯಿ ರ್ಚಾಗಬಹುದು

ಪಾವಗಡ ಟವನ್ನಲ್ಲಿ ಹಣವಿಲ್ಲದ ಕಾರಣ ಇದ್ದ ಮೂರು ಮಂದಿ ಗುಡಿ ವರನ್ನೂ ವಜಾಮಾಡಬೇಕಾಯಿತು ಆದರೆ ವೈಸ್ ಪ್ರೆಸಿಡೆಂಟರು ಸ್ಥಳೀಯ ಷ್ಟ ಮನುಷ್ಯರ ಸಹಾಯದಿಂದ ಬೀದಿ ಗುಡಿಸುವ ಏರ್ಪಾಡು ಇಡಿಸಿದ್ದಾರೆ ಗಳೂರು ಸಿಟಿಯಲ್ಲಿ ಹೆಲ್ತ್ ಇಲಾಖೆಯವರು 312 ಜನರ ಮೇಲೆ ಫಿರ್ಯಾದು ಮಾಡಿದರು 480 ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ ಶಿವಮೊಗ್ಗ, ವಣಗೆರೂರು, ತರೀಕೆರೆ, ದಾವಣಗೆರೆ ಮ್ಯುನಿಸಿಪಾಲಿಟಿಗಳಲ್ಲಿ ಆರೋ ಗ್ಯಗಳಿಗೆ ವಿರೋಧವಾಗಿ ನಡೆಸಿದರೆಂದು 32 ಜನರ ಮೇಲೆ ಫಿರ್ಯಾದು ದ್ದರಲ್ಲಿ 20 ಮಂದಿಗೆ ಶಿಕ್ಷೆಯಾಯಿತು ಗ್ರಾಮಪಾಕೀಜಾ ರೂಲಿಸಿಗೆ ಧವಾಗಿ ನಡೆದರೆಂದು 48 ಜನರ ಮೇಲೆ ಮೊಕದ್ದಮೆ ಬಂದದ್ದರಲ್ಲಿ 31 ಗೆ 73 ರೂಪಾಯಿ ಜುಲ್ಮಾನೆ ವಿಧಿಸಿದೆ ಕೋಲಾರ, ಬೌರಿಂಗ್‌ಪೇಟೆ, ಕಾನುಗ, ಮುಳಬಾಗಲು ಮ್ಯುನಿಸಿಪಾಲಿಟಿಗಳಲ್ಲಿ ಪಾಪಾಸುಕಳ್ಳಿಯನ್ನು ವಾಗಿ ಕಡಿಸಿರುತ್ತಾರೆ

61 ಆಸ್ಪತ್ರೆಗಳ ಖರ್ಚಿಗೆ ಮ್ಯುನಿಸಿಪಾಲಿಟಿಗಳು 27,718 ರೂಪಾಯಿ ಕೊಟ್ಟಿದವು ಈ ಆಸ್ಪತ್ರೆಗಳಲ್ಲಿ 6,11 711 ಜನರು ಚಿಕಿತ್ಸೆ ಮಾಡಿಸಿ ಕೊಂಡಿದ್ದಾರೆ ಹೊಸದುರ್ಗದ ಆಸ್ಪತ್ರೆಯಲ್ಲಿ 1909 10ನೇ ಸಾಲಿನಲ್ಲಿ ರೋಗಿ ಸಂಖ್ಯೆ 6,757 ಇದ್ದದ್ದು 1910 11ನೇ ಸಾಲಿನಲ್ಲಿ 11,196ಕ್ಕೆ ಹೆಚ್ಚಿ ಆ ಊರಿನಲ್ಲಿ ಪ್ರಜಾ ಆರೋಗ್ಯವು ತೃಪ್ತಿಕರವಾಗಿಲ್ಲವೆಂದು ಡೆಪ್ಯುಟಿ ಕಮೀಷನರು ತಿಳಿಸುತ್ತಾರೆ ಹೀಗೆ ಒಂದು ಮುಸಪದ್ಲೀ ಕಾಯಿಲೆಯವರ ಮೂವರನ್ನು ಹೆಚ್ಚಾಗಲು ಕಾರಣವೇನೆಂದು ವಿಚಾರಿಸಿ ಗೊತ್ತುಮಾಡು ಅವಶ್ಯವಾಗಿದೆ — ಸೂಲಗಿತ್ತಿಯರ ಸಂಬಳ ಮುಂತಾದದ್ದಕ್ಕೆ ಮ್ಯುನಿಸಿಪಾ ಲಿಟಿ 8 790 ರೂಪಾಯಿ ಸಹಾಯ ಮಾಡಿದವು 60 ಮಂದಿ ಸೂಲಗಿತ್ತಿ 6 396 ಹೆರಿಗೆಗಳನ್ನು ನಡಿಸಿರುವರು ಮೈಸೂರು ಮಹಾರಾಣೀ ಆಸ್ಪತ್ರೆ ಯಲ್ಲಿ 383 ಹೆರಿಗೆಗಳು ನಡೆದಿರುವವು ಬೆಂಗಳೂರು ಚಾಮರಾಜಪೇಟೆ, ಣಗೆರೆ, ಸಾಗರ, ದೊಡ್ಡಬಳ್ಳಾಪುರ ಕುಲೀಸ್‌ಪೇಟೆ, ಆನೆಕಲ್, ಕೋಲಾರ ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಲು ಚಿಕ್ಕಬಳ್ಳಾಪುರ, ಈ ಸ್ಥಳ ಸೂಲಗಿತ್ತಿಯರು 100ಕ್ಕಿಂತಲೂ ಹೆಚ್ಚಾಗಿ ಹೆರಿಗೆಗಳನ್ನು ನಡಿಸಿರು ನ್ಯಾಮತಿಯಲ್ಲಿ ಸೂಲಗಿತ್ತಿಯು ನೇಮಕವಾಗಿಲ್ಲದಿದ್ದರೂ ಈ ಬಾಬಿ ಮ್ಯುನಿಸಿಪಾಲಿಟಿಯವರು 65 ರೂಪಾಯಿ ಖರ್ಚಾಗಿದೆ ಎಂದು ತಿಳಿದಿದೆ — ಸಂಸ್ಥಾನದಲ್ಲಿ 15 ಯುನಾನಿ ಮತ್ತು ಆಯುರ್ವೇದ ಆಸ್ಪತ್ರೆಗಳಿದ್ದವು ಗಳಿಗೆ 1,613 ರೂಪಾಯಿ ಖರ್ಚಾಗಿದೆ — ಮ್ಯುನಿಸಿಪಲ್ ಟವನ್‌ಗಳಲ್ಲಿ ಸಿಡುಬಿನಿಂದ 13 ಜನರೂ, ಪ್ಲೇಗಿನಿಂದ 1,616 ಜನರೂ ಕಾಲವಾದರು — ಜಿನ ಉಪದ್ರವದ 128 ಮರಣಗಳಾದವು 11,113 ಮಂದಿಗೆ ಸಿಡುಬು ಹಾಕಲಾಯಿತು — ಸಂಸ್ಥಾನದಲ್ಲಿ ಮ್ಯುನಿಸಿಪಾಲಿಟಿಗಳಲ್ಲಿ 21,296 ಜನನ 15,623 ಮರಣಗಳೂ ಆದವು ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು ಗಳಲ್ಲಿ ಮರಣಸಂಖ್ಯೆಯು ಪ್ಲೇಗ್ ಉಪದ್ರವ ನಿಮಿತ್ತ ಬಹಳ ಹೆಚ್ಚಾಗಿ ಮೈಸೂರು ಪಟ್ಟಣದಲ್ಲಿ ಹಿಂದಿನ ವರುಷ ಪ್ಲೇಗಿನಿಂದ 1,391 ಮರಣ ವು 1910 11 ಸಾಲಿನಲ್ಲಿ 82 ಮಂದಿ ಮಾತ್ರ ಈ ಉಪದ್ರವದಲ್ಲಿ ತೀರಿ ಗಿದ್ದಾರೆ — ಸಂಸ್ಥಾನದಲ್ಲಿ ಮ್ಯುನಿಸಿಪಾಲಿಟಿಗಳಲ್ಲಿ ವಿದ್ಯಾಭಿವೃದ್ಧಿಗಾಗಿ ನಿಸಿಪಲ್ ಹಣದಿಂದ 12,207 ರೂಪಾಯಿ ಖರ್ಚಾಗಿರುವುದು

ಬೇರೋಜುಗಾರರಾದ ಮೆಂಬರುಗಳು ಮ್ಯುನಿಸಿಪಲ್ ಕಾರ್ಯಗಳನ್ನು ನಿರ್ವಹಿಸುವದರಲ್ಲಿ ಚಟುವಟಿಕೆಯನ್ನೂ ಮುತುವರ್ಜಿಯನ್ನೂ ಪ್ರಕಾಶಪಡಿಸುತ್ತಿ ದ್ದೂ, ಸರ್ಕಾರಿ ಅಧಿಕಾರಿಗಳಿಗೆ ಸಹಾಯ ಮಾಡುತ್ತಿದ್ದಾರೆಂದೂ ಗವರ್ನ್ ಮೆಂಟಿನವರು ಸಂತೋಷಪಟ್ಟು ಅವರನ್ನು ವಂದಿಸುತ್ತಾರೆ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರ ಕೆಲಸವನ್ನು ನಡಿಸುವುದಕ್ಕೆ ಬೇರೋಜುಗಾರರಾದವೊಡ್ಡ ಮನುಷ್ಯರನ್ನು ನೇಮಿಸಿ ಪರೀಕ್ಷೆ ಸಬೇಕೆಂದೂ, ಯೋಗ್ಯತೆಯನ್ನು ಪಡೆದಿರುವ ವಿದ್ಯಾವಂತರು ಧಾರಾಳವಾಗಿ ಸಿಕ್ಕುತ್ತಾರೆಂದೂ ಶಿಫಾರಸು ಮಾಡಿದ್ದಾರೆ ಯಾವ ಯಾವ ಮ್ಯುನಿಸಿಪಾಲಿಟಿಗ ಳಿಗೆ ಅಂಥಾ ಬೇರೋಜುಗಾರ ವೈಸ್ ಪ್ರೆಸಿಡೆಂಟರನ್ನು ನೇಮಿಸಬಹುದೋ, ಆ ಕೆಲಸವನ್ನು ನಿರ್ವಹಿಸಲು ಯಾರು ಒಪ್ಪಿಕೊಳ್ಳುವರೋ, ಈ ವಿಚಾರದಲ್ಲಿ ಗವ ರ್ನ್‌ಮೆಂಟಿಗೆ ಪ್ರತ್ಯೇಕವಾಗಿ ಬರೆಯಬೇಕೆಂದು ಸರ್ಕಾರದವರು ಸೂಚಿಸಿ — ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಮ್ಯುನಿಸಿಪಾಲಿಟಿಗಳಲ್ಲಿ ವೈಸ್ ಪ್ರೆಸಿ ಡೆಂಟರಾಗಿರುವ ಅಮಲ್ದಾರರುಗಳು ತೆರಿಗೆಗಳ ವಸೂಲಾತಿ ವಿಷಯದಲ್ಲೂ, ಜಾ ಹಿತಕರವಾದ ಕಾರ್ಯಗಳನ್ನು ನಡಿಸುವ ವಿಷಯದಲ್ಲೂ ತೃಪ್ತಿಕರವಾ ದ ಸಾಹಸ ಪ್ರಯತ್ನಗಳನ್ನು ಮಾಡಲಿಲ್ಲವೆಂದು ಗವರ್ನ್‌ಮೆಂಟಿಗೆ ರಿಪೋ ರ್ಟಾಗಿರುತ್ತದೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ವರು ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸಿಗಾಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧ ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಸಾವಜನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಆನೇಕರು "ರೆವ್ ಇ ಡಬ್ಲ್ಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾ ದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಎಚ್ ಸಂಪತ್ಕೈಯಂಗಾರ್, ಬಾಣಾವಾರ — ಈ ಬಾತ್ಮಿಗೆ ರುಜುವಾತ ಕೊಟ್ಟಲ್ಲದೆ ಪ್ರಕಟಿಸಲಾಗದು

ವೆಂಕಟರಾಯರು, ನಂಜನಗೂಡು — ನೀವು ಹೇಳುವ ಸಂಗತಿಯನ್ನು ಮಠಾಧಿಪತಿಗಳಿಗೆ ತಿಳಿಸುವುದು ಉತ್ತಮ

ದೇವನಹಳ್ಳಿ ಸ್ಕೂಲ್ ವಿಷಯವಾದ ಬಾತ್ಮಿಯನ್ನು ಪ್ರಕಟಿಸಲಾರೆವು ಬಾತ್ಮಿದಾರರು ಮೊದಲು ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದುಕೊಳ್ಳಬೇಕು

ಮದರಾಸಿನ ಮುನಿಸ್ವಾಮಿನಾಯುಡು ಕಂಪನಿಯವರು ಹತ್ತಿಕಡಕು ಕಳುಹಿ ಸುವುದಾಗಿ ರಾಗಿಮುದ್ದನಹಳ್ಳಿಯ ಎಂ ದೊಡ್ಡವಾರೈಯನವರಿಂದ ರೂಪಾ ಯಿ ತರಿಸಿಕೊಂಡು ಮೋಸಮಾಡಿರುವುದಾಗಿ ಇವರು ಬರೆಯುತ್ತಾರೆ

ದಾವಣಗೆರೆಯಲ್ಲಿ ಕಳೆದ ಜಾ 30 ನೇ ರಾತ್ರಿ 12 ಗಂಟೆ ವೇಳೆಯಲ್ಲಿ ಪೋಲೀಸಿನವರು ಆ ಊರಿನ 5 6 ಜನರನ್ನೂ, ಕಂಡಗಲ್ಲಿನ 5-6 ಜನರನ್ನೂ ಜೂಜಾಡುತ್ತಿದ್ದರೆಂದು ಹಿಡಿದು, ಪೇಟೆಯಲ್ಲಿ 5 6 ಜನ ಪಂಚಾಯಿತರನ್ನು ಕರೆಸಿ ಮಹಜರು ಮಾಡಿಸಿ, ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಬೆಳಿಗ್ಗೆ 10 ಗಂಟೆವರೆಗೆ ಇಟ್ಟುಕೊಂಡಿದ್ದು ಬಿಟ್ಟುಬಿಟ್ಟರೆಂದೂ, ಸರ್ಕಾರದವರು ಈ ರೀತಿ ಬಿಟ್ಟುಬಿಟ್ಟದ್ದು ತರವಲ್ಲವೆಂದೂ ಒಬ್ಬ ಬಾತ್ಮಿದಾರರು ಬರೆದು ಆಕ್ಷೇಪಣೆಮಾ ಡುತ್ತಾರೆ ಅಮಲ್ದಾರರು ಇದರ ಪೂರ್ವೋತ್ತರವನ್ನು ತನಿಖೆಮಾಡಿ ಪ್ರಜೆಗಳಿಗೆ ನೆಮ್ಮದಿಯನ್ನುಂಟುಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ

ನಾಗಮಂಗಲದ ತಾಲ್ಲೂಕು ಹೊಣಕೆರೆ ಹೋಬಳಿ ಚಿಣ್ಯ ಎಂಬ ಗ್ರಾಮ ದಲ್ಲಿ 1000 ಪ್ರಜೆಗಳಿದ್ದಾರೆಂದೂ ಅದನ್ನು ಯೂನಿಯನ್ ಮಾಡಿಕೊಟ್ಟು, ಅಲ್ಲಿ ಒಂದು ವೈದ್ಯಶಾಲೆಯನ್ನು ಇಡಿಸಿಕೊಡಬೇಕೆಂದು ಗ್ರಾಮಸ್ಥರು ಮೂರು ನಾಲ್ಕು ವರುಷಗಳಿಂದ ಅರ್ಜಿಗಳನ್ನು ತಾಲ್ಲೂಕಿಗೂ, ಸಬ್ ಡಿವಿಜನ್ನಿಗೂ, ಡಿಸ್ಟ್ರಿಕ್ಟಿಗೂ ಬರೆದುಕೊಳ್ಳುತ್ತಿದ್ದೇವೆಂದೂ, ಇನ್ನೂ ಇವೆರಡೂ ಸ್ಯಾಂಕ್ಷನ್ ಆಗಿಲ್ಲವೆಂದೂ, ಆ ಗ್ರಾಮದಲ್ಲಿ ರೋಗಿಗಳಿಗೆ ಔಷಧಾದಿಗಳು ದೊರಕದೆ ಬಹಳ ಕಷ್ಟಪಡುತ್ತಿದ್ದಾರೆಂದೂ ಕೆಲವರು ರುಜುಮಾಡಿದ ಒಂದು ಬಾತ್ಮಿಯು ನಮ್ಮಲ್ಲಿಗೆ ಪ್ರಕಟಿಸಲಾಗಿ ಬಂದಿದೆ ಸರ್ಕಾರದವರು ಈ ವಿಚಾರವನ್ನು ತನಿಖೆಮಾಡಿ ಜಾಗ್ರ ತೆಯಲ್ಲೀ ಗ್ರಾಮಸ್ಥರ ಇಷ್ಟವನ್ನು ನೆರವೇರಿಸಿಕೊಟ್ಟಾರೆಂದು ನಂಬಿ ನಿರೀಕ್ಷಿ ಸುತ್ತೇವೆ

—ಎಡಿ

ಕರೆಸ್ಪಾಂಡೆನ್ಸ್

ಸರ್ಕಾರದಿಂದ ಬಹುಮಾನ ಬಂದಿದ

ಅಯ್ಯಾ,

ತಿಪ್ಟೂರು ತಾಲ್ಲೂಕು ಮಾರನಗೆರೆಯಲ್ಲಿ ಈಗ್ಗೆ ಸುಮಾರು ಎರಡೂವರೆ ವರುಷಗಳ ಹಿಂದೆ ನಡೆದಿದ್ದ ಪುಟ್ಟಸಿದ್ಧನೆಂಬುವನ ಕೊಲೆ ಮೊಕದ್ದಮೆಯಲ್ಲಿ ಮೆಹನತ್ತು ಮಾಡಿದ್ದಕ್ಕಾಗಿ ಮ॥ ಪಟೇಲ್ ಚನ್ನೇಗೌಡರಿಗೂ, ಮ॥ ಪಟಾಪಟಿ ಚನ್ನೇಗೌಡರಿಗೂ ನಮ್ಮ ಮೈಸೂರು ಸರ್ಕಾರದವರು ದಯಪಾಲಿಸಿದ್ದ ಬಹುಮಾ ನದ ಬೆಳ್ಳಿ ಬಿರುದುಗಳು ಎರಡನ್ನು ತುಂಕೂರು ಡಿಸ್ಟ್ರಿಕ್ಟು ಪೋಲೀಸ್ ಸೂಪ ರಿಂಟ್ ಸಾಹೇಬರವರು ಜೂಲೈ ಮಾಹೆ 21 ನೇ ತಾರೀಖಿನಲ್ಲಿ ದಯಪಾಲಿಸಿರು ತ್ತಾರೆಂದು ಕೇಳಲು ಸಂತೋಷಿಸುತ್ತೇವೆ ಈ ರೀತಿ ನಮ್ಮ ಸರ್ಕಾರದವರು ಬಹುಮಾನವನ್ನು ದಯಪಾಲಿಸುವದರಿಂದ ಎಲ್ಲಾ ಗ್ರಾಮಗಳ ಪಟೇಲರುಗಳೂ, ಗ್ರಾಮವಾಸಿಗಳೂ ಸರ್ಕಾರಿ ಕೆಲಸದಲ್ಲಿ ಮುತುವರ್ಜಿ ವಹಿಸುವಂತೆ ಪ್ರೋತ್ಸಾ ಹವಾಗುತ್ತದೆಂದು ನಂಬಿದ್ದೇನೆ ಮತ್ತು ಈ ಗ್ರಾಮದಲ್ಲಿ ಹತ್ತು ವರ್ಷಗಳಿಂದ ಎರಡು ಕಕ್ಷಿಗಳಾಗಿ ಇತ್ತು ಈ ಕಕ್ಷಿಗಳ ಮುಖಂಡರಾದ ಮೇಲ್ಕಂಡ ಮ॥ ಪಟೇಲ್ ಚನ್ನೇಗೌಡರೂ, ಮ॥ ಪಟಾಪಟಿ ಚನ್ನೇಗೌಡರೂ ಐಕಮತ್ಯದಲ್ಲಿರು ವಂತೆ ಈ ಗ್ರಾಮದ ಎಲ್ಲಾ ಮಹಾಜನಗಳೂ ಏಕೀಭವಿಸಿ ಐಕಮತ್ಯದಿಂದ ನಡೆ ಯುತ್ತಾರೆಂದು ನಂಬುವ

ಸತ್ಯ ಸನಿಷ್ಠೆಯ

ರೈಲ್ವೇಮೋಸ.

ಅಯ್ಯಾ,

ಮೈಸೂರು ದೇಶದಲ್ಲಿ ನಡೆದ ಒಂದು ಅನ್ಯಾಯವನ್ನು ಸ್ವಲ್ಪ ವಿವರಿಸು ತ್ತೇನೆ ದಯವಿಟ್ಟು ಪ್ರಚುರಪಡಿಸಬೇಕೆಂದು ಬೇಡುತ್ತೇನೆ ನಾವು ಆರು ಮಂದಿ ಉಡಪಿಯಿಂದ ಕಾಶಿಯಾತ್ರೆಗೆ ಹೋಗುವ ಉದ್ದಿಶ್ಯ ಶಿವಮೊಗ್ಗ ಸ್ಟೇಷನ್ ಗೆ ಬಂದು ಶಿವಮೊಗ್ಗ ಸ್ಟೇಷನ್ನಲ್ಲಿ ಟಿಕೆಟ್ ಕೊಡತಕ್ಕಂಥಾ ಬುಕಿಂಗ್ ಕ್ಲಾರ್ಕರವರನ್ನು ವಿಚಾರಿಸಿದಲ್ಲಿ ಶಿವಮೊಗ್ಗೆಯಿಂದ ಅಲಹಾಬಾದಿನವರೆಗೆ ರೂ 16 11 9 ಆಗುತ್ತೆಂದು ಹೇಳಿದರು ಅದೇ ಪ್ರಕಾರ ನಾವುಗಳು ಆರು ಟಿಕೆಟ್ ಗಳಿಗೆ ರೂ 101 8 6 ನಾಲ್ಕು ಜನಗಳ ಸಮಕ್ಷಮ ಕೊಟ್ಟೆವು ಬುಕಿಂಗ್ ಕ್ಲಾರ್ಕರವರು ನಮಗೆ 6 ಟಿಕೆಟ್‌ಗಳನ್ನು ಕೊಟ್ಟರು ಆ ಟಿಕೆಟ್ ಮೇಲ್ಭಾ ಗದಲ್ಲಿ ರೂ 16 11 9 ಎಂದು ಬರೆದು ನಮ್ಮಗಳಿಗೆ ಕೊಟ್ಟರು ಕೆಲವು ಹೊತ್ತಿನ ಮೇಲೆ ಟಿಕೆಟ್‌ಗಳನ್ನು ಪುನಃ ತೆಗೆದುಕೊಂಡು ಹಿಂಭಾಗದಲ್ಲಿ ರೂ 14 10 9 ಎಂದು ಬರೆದು, ರೂ 16 11 9 ಯನ್ನು ಶಾಯಿಯಿಂದ ಅಳಿಸಿ ಬಿಟ್ಟಿರುತ್ತಾರೆ ಮತ್ತೆ ನಮಗೆ ವಾಪಸು ಕೊಡತಕ್ಕ ರೂ 11 8 0 ಯನ್ನು ವಾಪಸು ಕೊಡದೆ ಮೋಸಮಾಡಿ ಇದ್ದಾರೆ ಈ ವಿಷಯವಾಗಿ ಡಿ ಟ್ರಾಫಿಕ್ ಮ್ಯಾನೇಜರ್‌ರವರಿಗೂ ಮತ್ತು ಜನರಲ್ ಟ್ರಾಫಿಕ್ ಮ್ಯಾನೇಜರವರಿಗೂ ರಿಪೋ ರ್ಟ್ ಮಾಡಿಯಿರುತ್ತೇವೆ ಇದುವರಿಗೂ ಜವಾಬೇ ಇಲ್ಲ.

ಬ್ರೋಡ್‌ಗಂಜ್, ಜಬ್ಬಲ್ಪುರ — ರಾಮಕೃಷ್ಣಭಟ್ಟ

ಮೆಂಬರುಗಳ ಚುನಾವಣೆಯು

ಅಯ್ಯಾ,

ಅಕ್ಟೋಬರ್ ತಿಂಗಳಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗ ಳನ್ನು ಚುನಾಯಿಸುವ ಕಾಲವು ಈಗಲೇ ಎಂದು ತಿಳಿಯಬರುತ್ತದೆ ಪ್ರತಿ ತಾಲ್ಲೋಕಿನಲ್ಲೂ ಅಮಲ್ದಾರರೂ ಒಂದು ಸಭೆ ಮಾಡಿ ಮೆಂಬರುಗಳನ್ನು ಚುನಾಯಿಸುತ್ತಾರೆ ಅದೇ ರೀತಿಯಾಗಿ ತರೀಕೆರೆಯಲ್ಲಿ ಅಮಲ್ದಾರರಾದ ಮ॥ ಸುಬ್ಬರಾಯರು ಇದೇ ತಿಂಗಳು 1 ನೇ ತಾ ಒಂದು ಮೀಟಿಂಗು ಮಾಡಿ ಮೆಂಬ ರುಗಳನ್ನು ಚುನಾಯಿಸಿದರು ಸಾಧಾರಣವಾಗಿ ಎಲ್ಲಾ ತಾಲ್ಲೋಕುಗಳಲ್ಲೂ ಭಾರಿ ಕಂದಾಯ ಕೊಡುವಂಥವರನ್ನೂ, ಹಣಗಾರರನ್ನೂ ಮೆಂಬರಾಗಿ ಚುನಾ ಯಿಸುವದು ಪದ್ಧತಿಯಾಗಿದೆ ಆದರೆ ತಾನು ವಾಸಮಾಡುವ ಪಟ್ಟಣವನ್ನೂ, ಜನರನ್ನೂ, ತನ್ನ ಸುತ್ತ ಮುತ್ತ ಇರುವ ಗ್ರಾಮಸ್ಥರನ್ನೂ ಉತ್ತಮ ಸ್ಥಿತಿಗೆ ತರಬೇಕಾದರೆ ಯಾವ್ಯಾವ ದಾರಿಗಳಿವೆ ಎಂದು ಯಾರು ಹುಡುಕುತ್ತಾರೆಯೋ ಮತ್ತು ಅಂಥಾ ದಾರಿಗಳನ್ನು ಹುಡುಕಿ ಉತ್ತಮ ಸ್ಥಿತಿಗೆ ತರುವದಕ್ಕೆ ಯಾರು ಪ್ರಯಾಸ ಪಡುತ್ತಾರೆಯೋ ಅಂಥವರನ್ನು ಮೆಂಬರುಗಳಾಗಿ ಚುನಾಯಿಸಿದರೆ ಎಷ್ಟೋ ಪ್ರಯೋಜನವಾಗುವದು ಈ ವಿಷಯದಲ್ಲಿ ಸರ್ಕಾರದವರು ದೀರ್ಘಾ ಲೋಚನೆ ಮಾಡುವರೆಂದು ನಂಬುತ್ತೇನೆ

ಪ್ರಜಾ ಹಿತಚಿಂತಕ

ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜೂ, ಅದರ ಅಧ್ಯಕ್ಷರೂ — ಜವಾಬು

ಅಯ್ಯಾ,

ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ "ಗುಣಗ್ರಾಹಿಗಳು" ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಅದರ ಅಧ್ಯಕ್ಷರಾದ ಬ್ರಂ॥ ಧರ್ಮಾಧಿಕಾರಿಗಳಾದ ನವೀನಂ ರಾಮಾನುಜಾಚಾರ್ಯರವರು 1-7 ವರುಷಗ ಳಿಂದ ಆ ಕೆಲಸದಲ್ಲಿದ್ದುಕೊಂಡು ಈಗತಾನೇ ವಿಶ್ರಾಂತಿ ಸುಖವನ್ನು ಅನುಭವಿ ಸುತ್ತಿರುವರು ಎಂದು ಬರೆದಿರುವದು ಸರಿಯಷ್ಟೆ ಇವರು "ಗುಣಗ್ರಾಹಿಗಳು" ಸೂಚಿಸಿರುವಂತೆ ಸಕಲ ಗುಣಗಳುಳ್ಳವರೇ ಆಗಿರುತ್ತಾರೆ ಅದರಲ್ಲಿ ಸಂಶಯ ವಿಲ್ಲ ಈ ಸಂಸ್ಕೃತ ಪಾಠಶಾಲೆಯು ಇಲ್ಲಿಗೆ ಸ್ಥಾಪಿತವಾಗಿ 25 ವರುಷಗಳಾದ ಮೇಲಿಂದ ಈ ಪಾಠಶಾಲೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳೆಷ್ಟು ಮಂದಿ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು? ಇವರ ಅಧ್ಯಕ್ಷತೆಯಲ್ಲಿ ಇವರು ಹೆಚ್ಚಾಗಿ ಮಾಡಿರುವದೇನು? ಇವರು ಪೂರ್ವದ ಅಧ್ಯಕ್ಷರಿಗಿಂತಲೂ ವಿದ್ಯಾರ್ಥಿ ಗಳ ಅಭಿವೃದ್ಧಿ ವಿಚಾರದಲ್ಲಾಗಲಿ, ಅಥವಾ ವ್ಯಾಸಂಗ ವಿಚಾರದಲ್ಲಾಗಲಿ ಹೆಚ್ಚಾಗಿ ಮೆಹನತ್ತು ಮಾಡಿರುವಲ್ಲಿ ಆ ಸಂಸ್ಕೃತ ಕಾಲೇಜಿನ ಪಂಡಿತರೂ ಮತ್ತು ವಿದ್ಯಾರ್ಥಿಗಳೂ ಈ ಪಂಡಿತೋತ್ತಮರ ಹೆಸರನ್ನು ಶಾಶ್ವತಪಡಿಸುವ ಆಲೋಚನೆ ಮಾಡಬಹುದು ಮಹಾನುಭಾವರಾದ ಶ್ರೀಮನ್ ಮಹಾರಾಜಾ ಸರ್ಕಾರದವರು ನಮ್ಮ ವೈದಿಕ ವಿದ್ಯೆಯಲ್ಲಿ ಬಹಳ ಶ್ರದ್ಧೆಯನ್ನು ವಹಿಸಿ ಈಗ ಸುಮಾರು 25 ವರುಷಗಳಿಂದಲೂ ವರ್ಷಕ್ಕೆ ಸುಮಾರು 3,600 ರೂಪಾಯಿನಂತೆ ಖರ್ಚುಮಾಡಿ ಪ್ರೋತ್ಸಾಹಿಸಿದಾಗ್ಯೂ, ಸರಾಸರಿ ನೋಡಿದರೆ 1 2 ವಿದ್ಯಾರ್ಥಿಗ ಳಾದರೂ ವಿದ್ವತ್ಪರೀಕ್ಷೆಯಲ್ಲಿ ಯಾವ ಶಾಸ್ತ್ರದಲ್ಲಿಯೇ ಆಗಲಿ ಪ್ಯಾಸಾಗಿ ಬಂ ದಂತೆ ಕಾಣಿಸಲಿಲ್ಲ ಹಾಗೂ ಪ್ಯಾಸಾಗಿದ್ದರೂ 2 3 ಮಂದಿ ಆಗಿರಬಹುದು. 25 ವರುಷಗಳಿಗೆ 2 3 ಜನ ಪ್ಯಾಸಾದರೆ ಈ ಕಾಲೇಜು ಅಭಿವೃದ್ಧಿಸ್ಥಿತಿಯಲ್ಲಿ ಬಂದಿರುವದೂ, ಶಾರದಾ ನಿವಾಸಸ್ಥಾನವಾಗಿ ಇವರ ಕಾಲದಲ್ಲಿ ವಿದ್ಯೆಯು ಸರ್ವ ತೋಮುಖವಾಗಿ ಪ್ರವಹಿಸಿರುವದೂ ಸೂಚಿಸುತ್ತ ನಮ್ಮ ಕುಲವಿದ್ಯೆಯಾದ ವೇದಶಾಸ್ತ್ರಾದಿಗಳು ನಮ್ಮ ಜನಗಳ ಅನೈಕ್ಯಮತ್ಯದಿಂದ ಒಬ್ಬರನ್ನೊಬ್ಬರು ಸ್ತೋತ್ರಮಾಡುವದರಲ್ಲಿ ಪರ್ಯವಸಾನ ಹೊಂದಿ ಮೂಲೆಗೆ ಬೀಳುವದಕ್ಕೆ ಹೇತುವಾಗಿ ಪರಿಣಮಿಸುವದಕ್ಕೆ ಬಹಳ ಚಿಂತಿಸುವೆನು

ಬೆಂಗಳೂರು — ಯಥಾರ್ಥವಾದಿ

ನಾಲೂರಿಗ ದೊರಕಿದ್ದ ವೈಭವವು.

ಅಯ್ಯಾ,

ಶಿವಮೊಗ್ಗಾ ಘನಪಾದ್ರಿಗಳಿಂದ ಎ ಇ ಸ್ಪೆಟಿಂಗೇಲ್ ಧೊರೆಯವರು ಮಲೆನಾಡಿನ ಮಳೆಯನ್ನು ನೋಡುವ ಉದ್ದಿಶ್ಯದಿಂದ ಕಳೆದ ಜೂಲೈ ತಾ 1 ರಲ್ಲಿ ಈ ನಾಲೂರಿಗೆ ದಯಮಾಡಿಸಿದರು ಧೊರೆಯವರು ದಯಮಾಡಿಸಿದ ಪ್ರಾರಂಭ ದಲ್ಲಿ ಇಲ್ಲಿ ಮಳೆಯು ತಕ್ಕಮಟ್ಟಿಗೆ ಇತ್ತು ನಂತರ ಪುನರ್ವಸು ಮಳೆಯ ತರುವಾಯ ಶುರುವಾದ ಪುಷ್ಯ ಮಳೆಯ ಆರ್ಭಟವು ಹೇಳತೀರದ್ದಾಗಿತ್ತು ಈ ವಿಪರೀತವಾದ ಮಳೆಯಲ್ಲೂ ಸಹ ಧೊರೆಯವರು ಸ್ವಲ್ಪವೂ ಲಕ್ಷ್ಯವಿಡದೆ ಸಂಚರಿಸಿದ್ದಲ್ಲದೆ ಶೃಂಗೇರಿ ಪ್ರಾಂತ್ಯಕ್ಕೆ ಸಹಾ ಹೋಗಿಬಂದರು ಧೊರೆಯ ವರು ಬಂದಿರುವ ಸುದ್ದಿಯಾಗಾಯಿತು ಇಲ್ಲಿ ಸುತ್ತಮುತ್ತ ಗ್ರಾಮಗಳಿಂದ ಒಡ ತಕ್ಕವರಲ್ಲಿ ಕೆಲವರು ಜ್ವರಪೀಡಿತರು ಮತ್ತು ನಾನಾ ತರಹೆಯ ಖಾಯಿಲೆಯವರು ಒಬ್ಬೊಬ್ಬರಾಗಿ ಬಂದು ಔಷಧಿ ಕೇಳಲು ಉಪಕ್ರಮಿಸಿದರು ಆಗ ಧೊರೆಯವರು ತಮ್ಮ ಸ್ವಂತ ಮಂಡಿಗದ್ದೆಯ ಆಸ್ಪತ್ರೆಯಿಂದ ಪ್ರತಿ ದಿವಸದ ಟಪಾಲಿನಲ್ಲಿಯೂ ತರತರವಾದ ಔಷಧಿಯನ್ನು ತರಿಸಿ ಧರ್ಮಾರ್ಥವಾಗಿ ಕೊಟ್ಟಿದ್ದರಲ್ಲಿ ಸುಮಾರು ನೂರಾರು ಜನರು ಗುಣಪಟ್ಟಿರುತ್ತಾರೆ ಶಿವಾಯಿ ಈಗಲೂ ಇಲ್ಲಿ ಸದರಿ ಧೊರೆ ಯವರು ಮಾಡಿರತಕ್ಕ ಉಪಕಾರವನ್ನು ಜನರು ಸ್ಮರಿಸುತ್ತಲೇ ಇದ್ದಾರೆ ಶಿವಾ ಯಿ ಇತ್ತಕಡೆ ಸುತ್ತುಮುತ್ತಲಿರುವ ಆಸ್ಪತ್ರೆಗಳಲ್ಲಿ ಕವಿವಾಸದಿಂದ ಜಾಬು ಕಡೆ ನೋಡುವ ಡಾಕ್ಟರಿಗಿಂತ ಈ ನಮ್ಮ ಧೊರೆಯವರ ಅನುಭವವು ಎಷ್ಟೋ ಮೇಲಾಗಿರುತ್ತದೆ ಮತ್ತು ನಾಲೂರಲ್ಲಿ ಇರುವ ಒಬ್ಬ ಕುರುಡನಿಗೆ ಧೊರೆ ಯವರು ಇಲ್ಲಿಂದ ಹೊರಡುವ ಪರಿಯಂತ್ರವೂ ಪ್ರತಿ ದಿವಸ ಎರಡಾಣೆಯಂತೆ ಕೊಟ್ಟಿದ್ದಲ್ಲದೆ ಕಡೆಗೆ ಒಂದು ರೂಪಾಯಿ ಇನಾಮು ಸಹಾ ಕೊಟ್ಟಿರುತ್ತಾರೆ ಮತ್ತು ನಂಟೂರು ಗ್ರಾಮಕ್ಕೆ ಒಂದು ಮಿಷನ್ ಸ್ಕೂಲನ್ನು ಕೊಡಿಸಬೇಕಾಗಿ ಎನ್ ಎಸ್ ತಮ್ಮಣ್ಣ ಹೆಗ್ಗಡೆಯವರು ಕೇಳಿಕೊಂಡದ್ದಕ್ಕೆ ಕೊಡುವದಾಗಿ ವಾಗ್ದಾನಕೊಟ್ಟಿರು ನಂತರ ಧೊರೆಯವರು ಇಲ್ಲಿಂದ ಜೂಲೈ ತಾ 26 ಕ್ಕೆ ಶಿವಮೊಗ್ಗಾಕ್ಕೆ ಪ್ರಯಾಣ ಬೆಳಸಿದರು ಆ ಕಾಲದಲ್ಲಿ ಮಳೆ ಜೋರಾಗಿ ಕೆಲವು ಕಡೆ ರಸ್ತೆಯ ಮೇಲೆ ನೀರು ಬಂದದ್ದರಿಂದ ಪ್ರಯಾಣವು ಸ್ವಲ್ಪಮಟ್ಟಿಗೆ ಪ್ರಯಾ ಸವಿತ್ತೆಂದು ನೆನಸುತ್ತೇನೆ ಈ ಧೊರೆ ಸದಾ ಕಾಲದಲ್ಲೂ ಈ ಮಲೆನಾಡು ಪ್ರಾಂತ್ಯದ ಮೇಲೆ ಮಿಷನರಿಗಳವರು ಇಟ್ಟಿರುವ ಪ್ರೀತಿಯು ಸ್ತೋತ್ರಾರ್ಹ ವಾಗಿದೆ ಇದಕ್ಕೆ ತಕ್ಕಂತೆ ಈ ಕೇವಲ ಮಲೆನಾಡಾದ ನಾಲೂರಿಗೆ ಒಂದು

ಹೊಸ ಆಸ್ಪತ್ರೆಯನ್ನು ಇಡಿಸಿಕೊಡಬೇಕಾಗಿ ಈ ತಾಲೂಕು ಗ್ರಾಮಸ್ಥರು ಈ ಮುಂಚೆ ಬರೆದುಕೊಂಡ ಅರ್ಜಿಯಂತೆ ನಡಿಸಿಕೊಡಬೇಕಾಗಿ ಪ್ರಾರ್ಥಿಸುವ

ಕೆ ಬಿ ದೇವಪ್ಪಗೌಡ

ಕೋಲಾರದಲ್ಲಿ ಒಬ್ಬ "ಸಾಧು" ಎಂಬ ಜಟಾಯುಗೆಳು

ಅಯ್ಯಾ,

ಕಳೆದ ತಿಂಗಳಲ್ಲಿ ಈ ಊರಿಗೆ ಒಬ್ಬ ಸಾಧು ಬಂದಿದ್ದನು ಆತನು ಬೀದಿಗಳಲ್ಲಿ ಹೊರಟು ತನ್ನ ಮಹಾತ್ಮೆಯನ್ನು ತೋರ್ಪಡಿಸುವದಕ್ಕಾಗಿ ಸಿಕ್ಕಿದ ಕಡೆ ಮಲಭಕ್ಷಣೆ ನಡಿಸಿ, ಚರಂಡಿಗಳಲ್ಲಿನ ನೀರನ್ನು ಕುಡಿದು ಬೀದಿಗಳಲ್ಲಿ ದುಡ್ಡನ್ನು ಚೆಲ್ಲುತ್ತಿದ್ದನಂತೆ ಆದ್ದರಿಂದ ಆತನು ಹೊರಗೆ ಹೊರಟರೆ ನೂರಾರು ಜನ ಆತನನ್ನು ಹಿಂಬಾಲಿಸಿ ಹೋಗುತ್ತಿದ್ದರು ಈ ಪೈಕಿ ಸ್ವಲ್ಪ ತಾಂಬ್ರದ ನಾಣ್ಯ, ಕೆಲವು ದೊಡ್ಡಾಣೆ ಮತ್ತು ಪಾವಲಿಗಳನ್ನು ತನ್ನ ಹಸ್ತದಿಂದ ನೆಲಕ್ಕೆ ಚೆಲ್ಲಿದ್ದನ್ನು ನಾನು ನೋಡಿದೇನೆ ಈತನು ಯಾರೋ ಒಬ್ಬ ಮಹನೀಯ ಮೂರ್ತಿಯೆಂದು ತಂಡೋಪತಂಡವಾಗಿ ಜನರು ಈತನ ಸಂದರ್ಶನಕ್ಕೆ ಈತನು ಇಳಿದಿದ್ದ ಕೋರ್ಟು ಉಸ್ತಾದ್ ನಾಯರ ಛತ್ರಕ್ಕೆ ಹೋಗುತ್ತಿದ್ದರು ದನವಂತರಾಗಿ ಬುದ್ಧಿವಂತರೆನಿಸಿಕೊಂಡಿರುವವರ ಪೈಕಿ ಕೆಲವರು ಈತನ ಸೇವಾವೃತ್ತಿಗೆ ನಿಂತು ಕೆಲವು ವಿಚಿತ್ರವಾದ ಕ್ರಿಯೆಗಳನ್ನು ಕಲಿಯಬೇಕೆಂತಲೂ, ದಹಾದಿ ಇತರ ಪ್ರಯೋಜನಗಳನ್ನು ಹೊಂದಬೇಕೆಂತಲೂ ಆಶೆಪಟ್ಟು, ಆ ಸಾಧುವಿಗೆ ಬೇಕಾದ ಕೀರು, ಹಾಲು, ಕಾಫಿ, ದಪ್ಪಳ, ಸೂಂಡಿಗೆ, ಬಂಗಿ ಇವೇ ಮುಂತಾದ ಸಲಕರಣೆಗಳನ್ನು ಯಥೇಷ್ಟವಾಗಿ ಕೊಟ್ಟು ತೃಪ್ತಿಗೊಳಿಸುತ್ತಲೂ ಆತನ ಸವಿನುಡಿಗಳಿಂದ ತೃಪ್ತಿಗೊಳ್ಳುತ್ತಲೂ, ತಮ್ಮ ಭಕ್ತಿ ವಿಶ್ವಾಸಗಳನ್ನು ತೋರಪಡಿಸುತ್ತಿದ್ದರು ಈತನು ಇಲ್ಲಿಗೆ ಬಂದ 14 ದಿನಗಳು ವರೆಗೆ ಸುಮ್ಮನಿದ್ದು, ಅನಂತರ ಎಲ್ಲರಿಗೂ ಯಂತ್ರಕಟ್ಟುತ್ತೇನೆ 1 ರೂಪಾಯಿ ಕೊಡಿ, 1 ರೂಪಾಯಿ ಕೊಡಿ ಎಂತಲೂ, ಕೆಲವರಿಗೆ ಮೂಲಿಕೆಗಳನ್ನು ತೋರಿಸುತ್ತೇನೆಂತಲೂ ಅವರವರಿಗೆ ತಕ್ಕಹಾಗೆ ಹೇಳುವದು ಹಾಮೋನಿಯಂ ಬಾರಿಸಿ ಆನಂದಗೊಳಿಸುವದು, ಮಲಭಕ್ಷಣೆ ಮಾಡಿ ಮಹಾತ್ಮೆಯನ್ನು ತೋರಿಸುವದು, ದುಡ್ಡು ಎರಚಿ ಉದಾರತ್ವವನ್ನು ಪ್ರದರ್ಶನ ಮಾಡುವದು, ಈ ಪ್ರಕಾರ ನಾನಾ ವಿಧವಾಗಿ ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿ ಜನಗಳನ್ನು ತನ್ನ ವಶವಾಡಿಕೊಂಡನು ಈತನು 6 7 ದಿನಗಳ ವರೆಗೆ ಇಲ್ಲಿದ್ದದ್ದು ಇಷ್ಟರೊಳಗೇ ಈ ಊರಿನಲ್ಲಿ ಕಾಲರಾ ವ್ಯಾಪ್ತವಾಗಿ ದಿನೇ ದಿನೇ ಪ್ರಬಲವಾಗುತ್ತಾ ಬಂತು ಒಂದಿಷ್ಟು ಸಾಧು ಘಾಬರಿಯಾಗಿ ತಾ 10 ರಲ್ಲಿ ಹೊರಟು ಹೋದನು ಈ ಸಾಧುವು ಇಲ್ಲಿಂದ ಎಲ್ಲಿಗೆ ಹೋದನೋ ಯಾರ್ಯಾರನ್ನು ಮೋಸಗೊಳಿಸುತ್ತಾನೋ ಎಂಬ ಭೀತಿಯು ಇಲ್ಲಿನ ಜನರಿಗೆ ಉಂಟಾಗಿರುತ್ತೆ ಯೋಚಿಸದೆ ಅನೇಕರು ಮೌಢ್ಯದಲ್ಲಿ ಬಿದ್ದು ಮೋಸ ಹೋಗುತ್ತಾರೆ ಸಾಧುವು ಸ್ಮರಿಸದ ನಾಣ್ಯಕ್ಕೆ ಹಣ ಬರುವ ಹಾಗಿದ್ದರೆ ತನ್ನ ಅಹಾರಕ್ಕೂ ಭಂಗಿಸೊಪ್ಪಿಗೂ ಇತರರನ್ನೇಕೆ ಕೇಳುವದು? ಮಲಭಕ್ಷಣೆ ಮಾಡುವವನಿಗೆ ಒಳ್ಳೇ ಆಹಾರಗಳೇತಕ್ಕೆ ಅಜಿವಾನ ವಿಚಾರಣೆ ಸಂಗೀತ ಕೇಳಿಗಳೇತಕ್ಕೆ? ಇವುಗಳನ್ನೆಲ್ಲಾ ಯೋಚಿಸಿ ಉದರನಿಮಿತ್ತಂ ಬಹುಕೃತ ವೇಷಃ ಎಂಬಂತೆ ಬರುವ ವೇಷಧಾರಿಗಳ ಚಮತ್ಕೃತಿಗಳಿಗೆ ಒಳಗಾಗದೆ ಸರ್ವರೂ ಜಾಗರೂಕತೆಯಿಂದಿರಬೇಕಾಗಿ ಕೋರುತ್ತೇನೆ ಈ ಸಾಧು ಶ್ರೀವೈಷ್ಣವ ಬ್ರಾಹ್ಮಣನಂತೆ ಈತನ ಸ್ಥಳ ಉಬ್ಬಲಕುಂಟೆ ಅಗ್ರಹಾರವಂತೆ

ಇಲ್ಲಿ ಕಾಲರಾ ವ್ಯಾಪ್ತವಾದ್ದರಿಂದ ಕೆಲವರು ಇತರ ಸ್ಥಳಗಳಿಗೆ ಹೋಗುತ್ತಾರೆ ಇದರಿಂದ ಸುಖಿನಾಗಿರುವ ನಮ್ಮ ಬ್ರಾಹ್ಮತರಿಗೆ ಸೇರಿದವರಿಗೂ ಕೂಡ ರೋಗವ್ಯಾಪಿಸಿ ಅವರ ನಿಮ್ಮಿತ್ತ ಗಳ ಹೆಚ್ಚಾಗುತ್ತದೆ ಆದ್ದರಿಂದ ಈ ರೋಗವನ್ನು ಇತರ ಸ್ಥಳಗಳಿಗೆ ಬಾಗ ಹರಡುವದರಲ್ಲಿ ಭ್ರಾಂತವಾತ್ಸಲ್ಯವನ್ನು ತೋರಿಸದೆ ಸರ್ವರೂ ಅವರವರ ಸ್ಥಳಗಳಲ್ಲಿಯೇ ಜಾಗರೂಕತೆಯಿಂದ ಇರಬೇಕು ನಮ್ಮ ಡಿ ಸ್ಯಾನಿಟರಿ ಆಫೀಸರ್ ಮ ಸಾಮ್ಯುಯಲ್ ಸಾಹೇಬರವರೂ, ಟೌನ್ ಸ್ಯಾನಿಟರಿ ಇನ್ಸ್‌ಪೆಕ್ಟರವರೂ ಬಹಳ ಮುತುವರ್ಜಿಯಾಗಿ ಸಾಹಸ ಮಾಡುತ್ತಿರುವದರಿಂದ ಈ ವ್ಯಾಧಿಯು ಇಷ್ಟರಲ್ಲಿಯೇ ನಿಂತುಹೋಗಬಹುದೆಂಬ ನಂಬಿಕೆ ಸಂಪೂರ್ಣವಾಗಿದೆ

ಎಂ ಎಸ್ ವಿ

ಶೃಂಗೇರಿ ಮಠದ ಒಡಗೀರಾ ವಿಚಾರ

ಅಯ್ಯಾ,

ಕಳೆದ ವಾರ ರಾಮಕೃಷ್ಣ ಜಟ್ಟಿಗಳೆಂಬೊಬ್ಬರು ಈ ವಿಚಾರವಾಗಿ ಬರೆದಿರುವ ಲೇಖನವನ್ನು ನೋಡಿ ಆಶ್ಚರ್ಯವಾಯಿತು ಈಗಿನ ಶ್ರೀ ಗುರುಗಳು ಪೂರ್ವಾಶ್ರಮದಲ್ಲಿ ಗತಿಸಿದ ಶ್ರೀ ಗುರುಗಳಲ್ಲಿ ವಿದ್ಯಾಭ್ಯಾಸವಾಡುತ್ತಿದ್ದು ಮಠದ ಎಲ್ಲಾ ಆಡಳಿತವನ್ನೂ ಪರಿಚಯ ಮಾಡಿಕೊಂಡಿದ್ದರೆಂದು ಬರೆಯುತ್ತಾರೆ. ಮುಕ್ತರಾಗಿರುವ ಶ್ರೀ ಗುರುಗಳು ಈಗ್ಗೆ ಒಂದು ವರ್ಷದ ಮುಂಚೆ 15 ವರ್ಷಗಳು ಸಂಚಾರದಲ್ಲಿದ್ದರು ಈಗ ಪಟ್ಟಾಭಿಷಿಕ್ತರಾದ ಶ್ರೀ ಗುರುಗಳು ಒಂದೆ ವರ್ಷದಿಂದಲೂ ಊರಿನಲ್ಲಿರಲಿಲ್ಲ ಈ ಸಂಗತಿಯು ಸರ್ವರಿಗೂ ತಿಳಿದಿದೆ ಈ ಶ್ರೀ ಗುರುಗಳಾಗಿರುವವರು ತಮ್ಮ 11ನೇ ವರ್ಷದೊಳಗೆ ಪೂರ್ವಾಶ್ರಮದಲ್ಲಿ ವಿಶಿಷ್ಟ ಅನುಭವವನ್ನೂ ಹೊಂದಿರಬೇಕಾಯಿತು ಮಠದ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಇವರ ವಿದ್ಯಾಚಾತುರ್ಯವೂ ಸುಶೀಲವೂ ಶ್ರೀ ಗುರುಗಳಿಗೆ ಕೇಳಬರುತ್ತಿತ್ತು ಇವರಲ್ಲಿ ಅಭಿಮಾನವಿಟ್ಟು ಮುಂದಿನ ಅರ್ಹತೆಯನ್ನು ತಿಳಿಸುತ್ತಿದ್ದರು ಇವರೂ ಆ ಅಭಿಮಾನಕ್ಕೆ ತಕ್ಕವರೆನ್ನುವದರಲ್ಲಿ ಸಂಶಯವಿರಲಿಲ್ಲ ಆಗ ಊರಿನಲ್ಲಿರಲಿಲ್ಲವಾಗಿ ಕೈವಶೀರಿತು ಈಗಿನ ಶ್ರೀಗಳವರೂ ತಮ್ಮ ವಯಸ್ಸಿಗೆ ಮೀರಿ ವಿದ್ಯೆಯನ್ನು ಸಂಪಾದಿಸಿದ್ದಾರೆ ಆದರೆ ಮಠದ ಇಹಗಿರ್ ಆಡಳಿತಗಳು ಹೇಗೆ ತಿಳಿದಾವು? ಈಗಿರುವ ಅಧಿಕಾರಿಗಳು ಪೂರ್ವದಿಂದಲೂ ಸಮರ್ಪಕವಾಗಿ ಮಿತವಾಗಿ ನಡೆದುಬರುತ್ತಿದ್ದವುಗಳನ್ನು ಬದಲಾವಣೆ ಮಾಡಿದರು ಒಂದು ಕ್ಲುಪ್ತವಾದ ನಿಬಂಧನೆಯನ್ನು ಮಾಡದೆ ಇಚ್ಛಾನುಸಾರವಾಗಿ ಆಡಳಿತವನ್ನು ನಡಿಸುತ್ತಾ ಬಂದರು ಅನೇಕ ಸಾರಿ ಬಜೆಟ್ಟು ತಯಾರಾಗುವದಲ್ಲದೆ ತಕ್ಕಂತೆ ಖರ್ಚು ನಡೆಯುವದು ಅಪರೂಪ ಸ್ವಜಾತಿಯಲ್ಲಿ ಅಬಿಮಾನ ವಿಚಾರವಿಲ್ಲದ ಫೈಸಲು ಆಡಳಿತವು ಈ ಸ್ಥಿತಿಯಾಗಿ ಲಗಾಮಿಲ್ಲದೇ ಕುದುರೆಯ ಸವಾರಿಮಾಡುವ ಹಾಗಿದೆ ಇವರ ಅಧಿಕಾರವು ಮೈಸೂರು ಅನೇಕ ಪ್ರಜೆಗಳಿಗೆ ಅಸಮಾಧಾನವಾಯಿತು ಅನೇಕ ವಿಷಯಗಳಲ್ಲಿ ಅನುಭವವುಳ್ಳವರಾದರೂ ಎಲ್ಲಾ ಆಡಳಿತವನ್ನೂ ಸಮರ್ಪಕವಾಗಿ ನಡಿಸಲಾರರು ನಮ್ಮ ಸರ್ಕಾರದವರು ಮದರಾಸ್ ಪ್ರೆಸಿಡೆನ್ಸಿ ಭಾಗದಲ್ಲಿರುವ ಹಾಗೆ ಮೆಂಬರುಗಳನ್ನು ನೇಮಕಮಾಡುವದಾಗಲಿ, ಅಭಿವೃದ್ಧಿಗೆ ಬರುವ ಇನ್ಯಾವ ಏರ್ಪಾಡನ್ನಾಗಲಿ ಮಾಡಿ ಆಡಳಿತವನ್ನು ಕ್ರಮಪಡಿಸಿ ಶ್ರೀ ಗುರುಗಳು ತಕ್ಕವಟ್ಟಿಗೆ ಅನುಭವಶಾಲಿಗಳಾದೊಡನೆ ಕೊಟ್ಟರೆ ಎಲ್ಲವೂ ವಿಶೇಷವಾಗಿ ನಡೆಯುತ್ತೆ ಸಕಲ ಮರ್ಯಾದೆಗಳನ್ನೂ ನಡಿಸಿಕೊಡುತ್ತಿರುವ ದಯಾಳುಗಳಾದ ನಮ್ಮ ಸರ್ಕಾರದವರು ಪ್ರವೇಶಮಾಡಿದರೆ ಇರುವ ಲೋಪಗಳು ತಿದ್ದಿ ಮಠದ ಗೌರವವು ಇಮ್ಮಡಿಯಾಗಬಹುದಲ್ಲದೆ ಎಂದಿಗೂ ಕುಂದಕವಾಗುವದಿಲ್ಲ ಮ್ಯಾನೇಜರಾಗಿ ಕೆಲಸ ಮಾಡುವ ಯಥೇಷ್ಟವಾಗಿ ಹಣ ಸಂಪಾದಿಸುವವರ ಧರ್ಮಕ್ಕೆ ಲೋಪಬಂದೀತೇ ವಿನಹಾ ಮಠದ ಧರ್ಮಕ್ಕೆ ಎಂದಿಗೂ ಲೋಪವಿಲ್ಲ ಈ ಅನುಭವವು ಇಂಡಿಯಾ ದೇಶದವರಿಗೆ ಅನುಭವಕ್ಕೆ ಬಂದಿದೆ ಈ ಮಠವು ಈ ದೇಶವನ್ನಾಳುವ ಪ್ರಭುಗಳಿಂದಲೇ ಪೋಷಿಸಲ್ಪಡುತ್ತಾ ಬಂದಿದೆ ಒಂದು ವೇಳೆ ವಿಜಯನಗರ ಸಂಸ್ಥಾನದ ಅರಸುಗಳಿಂದಲೂ, ಒಂದು ವೇಳೆ ನಗರದ ಸಂಸ್ಥಾನದ ಅರಸರುಗಳಿಂದಲೂ ಪೋಷಿಸಲ್ಪಡುತ್ತಿದ್ದಿತೆಂತಲೂ, ಪರಮ ಭಕ್ತರಾದ ಆ ಅರಸರುಗಳ ಸನ್ನದು ಜಾರಿಯಲ್ಲಿದ್ದಿತೆಂತಲೂ ತಿಳಿಯಬರುತ್ತೆ ಈಚೆಗೆ ಶ್ರೀ ಮೈಸೂರು ಸಂಸ್ಥಾನದ ಪ್ರಭುಗಳಿಂದ ಪೋಷಿಸಲ್ಪಡುತ್ತಿದೆ ದರ್ಮಾದಾಯಗಳಿಗಾಗಿ ಪ್ರತಿ ವರ್ಷವೂ 500 ರೂ ಗಳೂ, ವರ್ಷಂಪ್ರತಿ ದಸರಾ ಖರ್ಚಿಗೆ 1,000 ರೂ ಗಳೂ ಈ ಸರ್ಕಾರದವರೇ ನಡಿಸುತ್ತಿದ್ದಾರೆ ಸಂಚಾರದ ಕಾಲದಲ್ಲಿ ತಕ್ಕ ರಹದಾರಿ ಮರ್ಯಾದೆಗಳು ನಡೆಯುತ್ತಿವೆ ಈ ಮಠದ ಮುಖ್ಯ ಶಿಷ್ಯರಾದ ನಮ್ಮನ್ನಾಳುವ ಶ್ರೀಮನ್ಮಹಾರಾಜರ್ ಮಹಾರಾಜ ಎಂದರೂ ಅರಿಯದ ಈ ಮಠವನ್ನು ಅಭಿವೃದ್ಧಿಪಡಿಸುವವರು ಗೌರ್ನಮೆಂಟಿನವರೇ ಹೊರತು ಬೇರೆ ಜಗದ್ಗುರು ಎಂದರೇ ಕೇವಲ ಸ್ಥಿರವಾಗಿದೆ ಒಂದೆ ಸಲದಿಂದಲೂ ಈ ಬಾಬ್ತಿದರರು ಹೊಸ ಅನುಭವವನ್ನು ಹೊಂದಿರಬೇಕು ಪೂರ್ವದ ಅಧಿಕಾರಿಗಳನ್ನೂ ಮಠವನ್ನು ದೋಚಿ ಈಗಿರುವ ಅಧಿಕಾರಿಗಳನ್ನು ಕೆಲ ವಾರ ಇದರ ಪತ್ರಿಕೆಯಲ್ಲಿ ಪ್ರಕಟಿಸಿರುವದು ನೋಡಿದರೆ ಈ ಅಧಿಕಾರಿಗಳ ಪ್ರಯೋಜಕತ್ವಕ್ಕೆ ಸಿಕ್ಕಿರಬೇಕೆಂದು ತೋರುತ್ತೆ ಇಂಡಿಯಾ ದೇಶದ ಎಲ್ಲಾ ರಾಜಸಂಸ್ಥಾನಗಳ ಜಹಗೀರ್ ಗಳೂ ಬ್ರಿಟಿಷ್ ಗೌರ್ನಮೆಂಟಿನವರಿಂದ ಕೊಡಲ್ಪಟ್ಟ ಜನರಲ್ ಒಂದು ಜಹಗೀರು ಇತರ ಮರ್ಯಾದೆಗಳೂ ನಮ್ಮ ಸಂಸ್ಥಾನಗಳಲ್ಲಿ ನಡೆಯಬಹುದೆಂದು ಸ್ಪಷ್ಟ ತಿಳಿದಿದ್ದರೆ ಎಂದಿಗೂ ಹೀಗೆ ಬರೆಯುತ್ತಿರಲಿಲ್ಲ ಯೋಗ್ಯರಾದ ಮಠದ ಆಡಳಿತ ವಿಶೇಷವಾಗಿ ನಡೆಯಲು ಸರ್ಕಾರದವರ ಏರ್ಪಾಡನ್ನು ಶೀಘ್ರದಲ್ಲಿಯೇ ನಮ್ಮ ಸರ್ಕಾರದವರು ಮಾಡುವರೆಂದು ನಿರೀಕ್ಷಿಸುತ್ತೇನೆ

ಮಠಾಭಿಮಾನಿ

ತಾಲ್ಲೋಕು ವರ್ತಮಾನಗಳು.

ತಿಪ್ಪಟೂರು — ಈ ತಾಲ್ಲೂಕು ನಾಡ್ಲಿ ಸೋಬಳ ದೇವನಾನಹಳ್ಳಿ ವಂಟನಲ್ಲಿ ಸುಸ್ತು ಸುತ್ತಲು 1 3 ಗಾವುದದ ಒಳಗಾಗಿ ಈಗ್ಗೆ ಸುಮಾರು 10 15 ವರ್ಷಗಳ ಲಾಗಾಯ್ತು ಕಳ್ಳರ ಹಾವಳಿ ಇಲ್ಲದೆ ಇತ್ತು ಕಳ್ಳತನವಾಯಿತೆಂಬ ಸಮಾಚಾರವೇ ಕೇಳುತ್ತಿರಲಿಲ್ಲ ಈ ರೀತಿ ಇರುವಲ್ಲಿ ಈಗ್ಗೆ 15 ದಿನಗಳ ಕೆಳಗೆ ಈ ಒಂಟಿನ ಪೈಕಿ ಯರನಾಗೇನಹಳ್ಳಿ ಗ್ರಾಮದಲ್ಲಿ ರಿಷ್ಟಪ್ಪನವರ ಸಣ್ಣಯಪ್ಪ ಎಂಬುವರ ಮನೆಯಲ್ಲಿ ಕಳ್ಳರು ಕನ್ನ ಹಾಕಿ ನಗದು 500 ರೂಪಾಯಿಗಳು, ಭಂಗಾರ 100-500 ರೂಪಾಯಿನದು, ಭಂಗಾರ ಬೆಳ್ಳಿ ವಡವೆ 100 ರೂಪಾಯಿನದು, ಅಂತು 1000 ಚಿಲ್ಲರೆ ರೂಪಾಯಿಗಳು ಹೋಗಿರುತ್ತೆ ಈ ವಿಷಯವಾಗಿ ಈಗ ಗಾಮದಲ್ಲಿರುವ ಪಟೇಲರೂ ಪೋಲೀಸಿನವರೂ ಶ್ರಿಯಾಶಗಾ ಕೊಟ್ಟು ಪತ್ತೆಮಾಡುತ್ತಾರಾಗಿ ನಿರೀಕ್ಷಿಸಲ್ಪಟ್ಟಿದೆ —ಹಿಂದೂಪುರ ತಾಲೂಕು ಲೇಪಾಕ್ಷಿ ಎಂಬ ಗ್ರಾಮದಲ್ಲಿ ಈಗ ಕಾಲರಾ ವ್ಯಾಧಿ 8 ದಿನಗಳಿಂದ ದಿನೇ ದಿನೇ ಕಮ್ಮಿಯಲ್ಲಿಯೇ ಇರುತ್ತೆ — ತಿಪ್ಪಟೂರು ತಾಲ್ಲೂಕು ಅಮಲ್ದಾರರವರು ಇಲ್ಲಿಗೆ ಬಂದು 3 ವರ್ಷವಾಯ್ತು ಅವರು ಈ ತಾಲ್ಲೂಕಿಗೆ ಬಂದಲಾಗಾಯ್ತು ಬಹಳ ಜನಕ್ಕೆ ಉಪಕಾರಿಯಾಗಿ ಉಪಕಾರವನ್ನು ಹೊಂದಿ ಬಹಳ ಪ್ರಖ್ಯಾತಿಗೆ ಬಂದವರಾಗಿದ್ದರು ಇವರ ವರ್ಗದ ಸಂಗತಿ ತಿಳಿದು ಬಹಳ ವ್ಯಸನಪಡುತ್ತಿದ್ದೇವೆ ಈಗ ಹೊಸದಾಗಿ ಬರುವ ಅಮಲ್ದಾರ್ ಸ್ವಾಮಿಯವರು ಇವರಂತೆಯೇ ದಯಾಳುಗಳಾಗಿ ಇರುತ್ತಾರೆಂದು ಕೋರುತ್ತಾ ಇರುತ್ತೇವೆ

ಮೂಡಬಾಗಾವಾರ — ಈ ಸಾರಿಯೂ ನಡೆದ ಅಮರಗಿರಿ ತಿರುಪತಿ ರಥೋತ್ಸವಕ್ಕೆ ಅನೇಕ ಮಂದಿ ಹೋಗಿದ್ದರು ಮಳೆ ಚನ್ನಾಗಿ ಆಗದಿದ್ದ ಮೋಡವಾಡುತ್ತಿರುತ್ತಿದು ಹೆಚ್ಚಾಗಿದೆ ಅಕ್ಕಿ 5½ 6 ಸೇರು ಆಗಿ ಬಡಜನಗಳು ಹಾಹಾಕಾರವನ್ನುಂಟುಮಾಡಿದೆ ಊರಿನ ಮುನಿಸಿಯಲ್ ವಿಚಾರ ಸರಿಯಾಗಿಲ್ಲದಿರುವುದು ತಿರುಗಾಡುವ ಜನ, ಗಾಡಿಗಳಿಗೆ ಅನಾನುಕೂಲವಾಗಿದೆ ಬಡಜನರಿಗೆ ಸರ್ಕಾರದವರು ಈ ಕಾಲದಲ್ಲಿ ಸಹಾಯ ಮಾಡದಿದ್ದರೆ ಅವರ ಜೀವನ ಹೇಗೆ ನಡೆಯಬೇಕು ಸರ್ವಿಸ್ ಆಗಿರುವ ಬಡ ಮನುಷ್ಯರುಗಳ ಸಂಕಟ ಹೇಳತೀರದಾಗಿದೆ ಮ, ಬೀರೂರು ಪಿರೀಡಿ ಸಂಗಪ್ಪನವರು ಇಲ್ಲಿನ ಕನ್ನಡ ಸ್ಕೂಲಿಗೆ ಬಂದು ಬಾಲಕರನ್ನು ಪರೀಕ್ಷಿಸಿ ಸಂತೋಷಪಟ್ಟು ರಿಕ್ತಬಾಲಕರು ಪುಸ್ತಕ ವಗೈರೆಗಳಿಗೆ ಮೊಬಲಗನ್ನು ಕೊಟ್ಟಿದ್ದರಷ್ಟೆ ತಾ 6 ರಲ್ಲಿ ಆ ರಿಕ್ತಬಾಲಿಗೆ ಪುಸ್ತಕ, ಬಟ್ಟೆ, ಸ್ಲೇಟು ಮುಂತಾದದ್ದನ್ನು ತರಿಸಿ ಬಾಲಕರಿಗೆ ಬಹುಮಾನದ ಪೂರ್ವಕವಾಗಿ ಕೊಟ್ಟು, ಮ|| ರಂಗಪ್ಪನವರ ಧರ್ಮಪತ್ನಿಯಾದ ಮನಸ್ವಿನಿ ಹೆಸ್ ಮನುಷ್ಯರು ಕೊಂಡಾಡಿದರು ನಷ್ಟಪುತ್ರರ ಜಾ ಸಕಾರ್ಥವಾಗಿ ಪ್ರತಿವರ್ಷವೂ ಇವರು ಹೋದ ಕಡೆಯಲ್ಲೂ, ಇರುವ ಕಡೆಯಲ್ಲೂ ಈ ಉಪಕಾರವನ್ನು ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ — ಕೋಆಪರೇಟಿವ್ ಸೊಸೈಟಿ ಕೆಲಸಕ್ಕೆ ಇನ್ನೂ ಹೆಚ್ಚಾಗಿ ಪ್ರೋತ್ಸಾಹಕೊಟ್ಟರೆ ಅಭಿವೃದ್ಧಿಗೆ ಬರುತ್ತೆ

ಅನೇಕಲ್ಲು — ಕಳೆದ ಜೂಲೈ ತಾ 15 ನೇ ಸೋಮವಾರ ರೆವ್ ವಿಲ್ಕಿನ್ಸ್ ಸಾಹೇಬರವರು ಪತ್ನಿಪುತ್ರರೊಡನೆ ಈ ಊರಿಗೆ ದಯಮಾಡಿಸಿದರು 16 ನೇ ತಾ ಮಂಗಳವಾರ ಲಂಡನ್ ಮಿಷನ್ ಎ ವಿ ಸ್ಕೂಲ್ ಬಾಲಕರಿಗೂ, ತಾ 18 ನೇ ಗುರುವಾರ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಿಕೆಯರಿಗೂ, 19 ನೇ ತಾ ಶುಕ್ರವಾರ ಮಿಷನ್ ಪಂಚಮ ಸ್ಕೂಲ್ ಬಾಲಕ ಬಾಲಿಕೆಯರಿಗೂ ಸಾಂವತ್ಸರಿಕ ಬಹುಮಾನಗಳು ಕೊಡಲ್ಪಟ್ಟವು ಎ ವಿ ಸ್ಕೂಲ್ ಬಾಲಕರಿಗೆ ಬಹುಮಾನಗಳನ್ನು ಹಂಚುವಲ್ಲಿ ಅಮಲ್ದಾರ್ ಮ ವಿ ಸುಬ್ಬರಾವ್‌ರಾಯರವರೂ, ಗರ್ಲ್ಸ್ ಸ್ಕೂಲ್ ಬಾಲಿಕೆಯರಿಗೆ ಬಹುಮಾನ ಕೊಡುವಾಗ ಸಬ್ ರಿಜಿಸ್ಟ್ರಾರ್ ಮ ಎಸ್ ರಾಮಸ್ವಾಮಯ್ಯ ಗಾರ್ಯವರೂ ಪಂಚಮ ಸ್ಕೂಲಿಗೆ ಬಹುಮಾನ ಕೊಡುವ ವೇಳೆಯಲ್ಲಿ ರೆವ್ ಜ ವಿಲ್ಕಿನ್ಸ್ ಸಾಹೇಬರವರೂ ಅಗ್ರಾಸನವನ್ನಲಂಕರಿಸಿ ಸಕಲ ಕಾರ್ಯಗಳನ್ನೂ ನೆರವೇರಿಸಿದರು ಈ ಸಮಯದಲ್ಲಿ ರೆವ್ ಜ ವಿಲ್ಕಿನ್ಸ್ ಸಾಹೇಬರವರ ಪತ್ನಿಯವರೂ ಬೆಂಗಳೂರು ಗರ್ಲ್ಸ್ ಹೈ ಸ್ಕೂಲ್ ಪ್ರಿನ್ಸಿಪಲ್ ರಾದ ಮಿಸ್ ... ಅವರೂ, ಗ್ರಾಮಸ್ಥರಾದ ದೊಡ್ಡ ಮನುಷ್ಯರೂ ಸರ್ಕಾರಿ ಉದ್ಯೋಗಸ್ಥರೂ ಸಭೆಯನ್ನಲಂಕರಿಸಿದ್ದರು ಉಭಯ ಸ್ಕೂಲ್‌ಗಳಲ್ಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಮಾಡಿದ ಹಸ್ತಕೌಶಲ್ಯಕಾರ್ಯಗಳಿಂದಲೂ ಪ್ರಶ್ನೋತ್ತರ ಸಂವಾದಗಳಿಂದಲೂ ಸರ್ವರೂ ಆನಂದಭರಿತರಾಗಿ ಪುಷ್ಪಹಾರಗಳಿಂದಲಂಕರಿಸಲ್ಪಟ್ಟು ಹೊರಟರು — ಈ ಅನೇಕಲ್ ಕಸಬೆಯಲ್ಲಿ ಶ್ರೀ ಲಕ್ಷ್ಮೀನಿವಾಸ ಕೋಆಪರೇಟಿವ್ ಸೊಸೈಟಿ ಎಂಬ ಒಂದು ಅನ್ಯೋನ್ಯ ಸಹಾಯ ಸಂಘವು ಸ್ಥಾಪಿಸಲ್ಪಟ್ಟು 19.. ನೇ ಇಸವಿ ಜೂನ್ ಆಖೈರಿಗೆ ಒಂದು ವರ್ಷವಾದ್ದರಿಂದ ಪ್ರಥಮ ವಾರ್ಷಿಕ ಜನರಲ್ ಮೀಟಿಂಗು ಗವರ್ನ್‌ಮೆಂಟ್ ಸ್ಕೂಲ್ ಹಾಲಿನಲ್ಲಿ ಕಳೆದ ಮೇ 28 ನೇ ತಾ ಭಾನುವಾರ ನಡಿಸಲ್ಪಟ್ಟಿತು ಅಮಲ್ದಾರ್ ಮ ವಿ ಸುಬ್ಬರಾಯರವರು ಅಗ್ರಾಸನವನ್ನಲಂಕರಿಸಿದ್ದರು ಬೆಂಗಳೂರಿನಿಂದ ಕೋಆಪರೇಟಿವ್ ಸೊಸೈಟಿಗಳ ಇನ್ಸ್‌ಪೆಕ್ಟರವರಾದ ಮ ಸುಬ್ಬರಾಯರವರೂ ಸಭೆಯು ಅನೇಕ ಮೆಂಬರುಗಳೂ ದಯಮಾಡಿಸಿದ್ದರು ಸೊಸೈಟಿಯ ಸೆಕ್ರೆಟರಿಯವರಿಂದ ಕಳೆದ ಸಾಲಿನ ಆದಾಯವ್ಯಯಗಳೂ ಲಾಭನಷ್ಟಗಳೂ ತಿಳಿಸಲ್ಪಟ್ಟ ತರುವಾಯ ಸೊಸೈಟಿಯ ಇನ್ಸ್‌ಪೆಕ್ಟರವರು ಸೊಸೈಟಿಯಿಂದ ದೊರಕುವ ಉಪಯೋಗವನ್ನು ಕುರಿತು ಬಹಳ ಚನ್ನಾಗಿ ಹೇಳಿದ ವಿಷಯಗಳನ್ನು ಎಲ್ಲಾ ಮೆಂಬರುಗಳೂ ಅವಧಾನದಿಂದಾಲಿಸಿ ದೃಢಚಿತ್ತರಾಗಿ ತಮ್ಮ ಮನಸ್ಸಿನಲ್ಲಿದ್ದ ಕಳವಳಗಳನ್ನೆಲ್ಲಾ ನಿವಾರಿಸಿಕೊಳಿಸಿ ಆರಂಭಿಸಿದ ಕಾರ್ಯವು ಬಿಡದೆ ನಡೆಯುತ್ತಾ ಬರಬೇಕೆಂದು ಏಕಕಂಠ್ಯವಾಗಿ ಒಪ್ಪಿ ಸರ್ವರೂ ಪುಷ್ಪ ತಾಂಬೂಲದೊಂದಿಗೆ ತೆರಳಿದರು ಈ ಸಂಘಕ್ಕೆ ಮೆಂಬರುಗಳಾಗಲು ಸಂಶಯಾಸ್ಪದರಾಗಿದ್ದ ಅನೇಕ ಜನರು ತಮ್ಮ ಸಂದೇಹವನ್ನು ತ್ಯಜಿಸಿ ಈ ಸಂಘಕ್ಕೆ ಹೊಸ ಮೆಂಬರುಗಳಾಗಿ ಅತ್ಯಂತ ಕುತೂಹಲವುಳ್ಳವರಾಗಿ ಬರುತ್ತಿದ್ದಾರೆ — ಈ ತಾಲ್ಲೂಕಿನಲ್ಲಿ ಶಿರಸ್ತೇದಾರಾಗಿದ್ದ ಮ|| ಲಕ್ಷ್ಮಣರಾಯರು ಈ ಊರಿಗೆ ದಯಮಾಡಿಸಿ ಸುಮಾರು 7 ವರ್ಷಗಳಾದವು ಇವರು ಇಷ್ಟುಕಾಲವೂ ಒಂದೇ ಸ್ಥಳದಲ್ಲಿದ್ದಾಗ್ಯೂ ಸರ್ಕಾರಿ ಕಾರ್ಯದಲ್ಲಿ ಬಹಳ ಉತ್ಸಾಹವುಳ್ಳವರಾಗಿ ನಿಷ್ಪಕ್ಷಪಾತದಿಂದ ಕೆಲಸಗಳನ್ನು ನಡಿಸುತ್ತಾ, ಸರ್ವಜನ ಸಮ್ಮತರಾಗಿ ಇದ್ದ ಕಾರಣ ಇವರು ಈ ತಿಂಗಳು ಮಾಹೆ 30 ನೇ ತಾ ಸೋಮವಾರ ಪ್ರೆಂಚರಾಕ್ಸಿಗೆ ವರ್ಗವಾಗಿ ಹೊರಟುಹೋದದ್ದು ದಸೆಯಿಂದ ಸರ್ವರೂ ವಿಷಾದಿಸುತ್ತಲಿದ್ದಾರೆ ಜನರಿಗೆ ಇವರಲ್ಲಿರತಕ್ಕ ವಿಶ್ವಾಸವನ್ನು ಹೊರಪಡಿಸಲು ಒಂದು ಭಂಗಾರದ ಮೆಡಲ್ ಕೊಡಬೇಕೆಂಬ ಇಚ್ಛೆಯಿಂದ ಈ ಕಾರ್ಯವನ್ನು ನೆರವೇರಿಸಲು ಆರ್ಡರ್ ಪಡೆಯಬೇಕೆಂದು ಮೈಸೂರು ಗೌರ್ನಮೆಂಟಿಗೆ ಒಂದು ಅರ್ಜಿಯನ್ನು ಗುಜರಾಯಿಸಿಕೊಂಡಿರುತ್ತಾರೆ

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕ್ರೈಸೋಕೃತ ಮಾಡಿದ ಬರೀ ಸಸ್ಯಾಹಾರ.

ಮೆಲ್ಲಿನ್ಸ್ ಆಹಾರವು ಶಕ್ತಿ ಜಸ ಕೊಡುವುದು, ಪುಷ್ಟಿಕರವಾದದ್ದು ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಪುಗಸಟ್ಟೆ ಕಳುಹಿಸುತ್ತಾರೆ

[15-5] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev E. W Thompson M A Proprietor and Manager, Wesleyan Mission Press Mysore 8/8/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೨ ನೇ ಇಸವಿ ಆಗಸ್ಟ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೧೧

ಸಿಕ್ಕಿದರೆ ಬಹುಮಾನ ದೊರಕುವುದು

ಮೈಸೂರಿಗೂ ಶ್ರೀರಂಗಪಟ್ಟಣಕ್ಕೂ ನಡುವೆ ಮೋಟಾರ್ ಬೈಸಿಕಲ್ಲಿನ ... ಕಳೆದ ತಾ 31 ನೇ ಬುಧವಾರ ದಾರಿಯಲ್ಲಿ ಕಳೆದು ಬಿದ್ದು ... ಇದನ್ನು ಪತ್ತೆ ಮಾಡಿ ಈ ಪತ್ರಿಕೆ ಆಫೀಸ್ ಮ್ಯಾನೇಜರಿಗೆ ತಂದು ... ತಕ್ಕ ಬಹುಮಾನ ಸಿಕ್ಕುತ್ತದೆ [127-3]

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

... ಎಣ್ಣೆಗಳನ್ನು ಉಪಯೋಗಿಸಿ ನಮ್ಮ ಹಣವನ್ನೂ ವೇಳೆಯನ್ನೂ ... ಮಾಡಿಕೊಳ್ಳದಿರಿ

ಸನೂನೆಯು ಪ್ರಕೃತಿಯಾಗಿ ಕೊಡಲ್ಪಡುವದು '

... ವಾದ ಕೇಶರಾಶಿಯು' ಅಂದವಾದ ಕೂದಲುಗಳು!!

... ಸೌಭಾಗ್ಯವಾಯುವಾದ ಆಲಂಕಾರವಾಗಿದ ... ಸ್ತ್ರೀಯರಿಗೆ ... ದಟ್ಟವಾದ ಮತ್ತು ನಿಬಿಡವಾದ ಕೇಶರಾಶಿ ... ಮಬರಬೇಕಾದರೆ ಅವು ರೇಶಿಮೆಯಂತೆ ... ಥಳಥಳಿಸುತಿರಬೇಕು ಅದಲ್ಲದೆ ತಲೆಯನ್ನು ಯಾವ ಆಕೃತಿಯಿಂದ ... ಅವು ... ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ರೀತಿಯಿಂದ ಉಪಯೋಗಿಸಿದರೆ ... ಕೇಶದ ಮತ್ತೆ ... ಕೇದಲ್ಪಟ್ಟಿದ ... ಉತ್ತಮ ... ಕೂದಲುಗಳು ... ಬೆಳೆಯುವವು

ಕಾಮಿನಿಯಾ ತೈಲ—

ಇದು, ಕೂದಲುಗಳನ್ನು ಚಂದಗೊಳಿಸುವ ... ತೈಲಗಳಲ್ಲಿ ಮೊದಲನೆಯದು ... ಉತ್ಕೃಷ್ಟವಾದ ಕೂದಲುಗಳು ... ಪ್ರತಿಯೊಬ್ಬ ಸ್ತ್ರೀ ... ಈ ಕಾಮಿನಿಯಾ ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ... ದಟ್ಟವಾಗುತ್ತವೆ ಆದರೆ ಈಗ ... ಕಾಲದಲ್ಲಿ ... ಬಂದಿರುವ ವಿವಿಧ ಆಕೃತಿಗಳ ... ಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ಪುಷ್ಕಳವಾಗುತ್ತವೆ ನಯವಾಗುತ್ತವೆ ಥಳಥಳಿಸುತ್ತವೆ, ಮತ್ತು ಸಬಿದ ... ಬಣ್ಣದಿಂದೊಡಗೂಡಿ ... ಹರಿದು ಬಿದ್ದುಹೋಗದೆ ಬೆಳೆಯುತ್ತವೆ

... 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0 4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7 0

... ಬೇಕೆಂದಾದರೆ ಒಂದು ಆರ್ಡರ್‌ನ ಚೀಟನ್ನು ಕಳುಹಿಸಿರಿ ... ತೈಲದ ಕುರಿತು ಹಲವು ಮಹನೀಯರು ಬರದ ಪ್ರಮಾಣ ... ಕೆಲವನ್ನು ಇಲ್ಲಿ ಕೊಡುವೆವು —

... 7 11 ಮ ಬಿ ಡಿ ಮಾಧವಸಿಂಗ್, ರುಕ್ಮಿಣಿವಿಲಾ, ಮನ್ನಾರ ಗ ... 'ಕಾಮಿನಿಯಾ ಓಯಲ್' ಅತ್ಯಂತ ಉತ್ಕೃಷ್ಟವಾಗಿ ... ಸಿಕ್ಕುವ ಎಲ್ಲಾ ... ಗಳಲ್ಲಿ ಇದು ಪ್ರಥಮ ಶ್ರೇಣಿಯನ್ನು ಹೊಂ ... ಇದಕ್ಕೆ ಸರಿಸಮಾನವಾದ ಹೇಯರ್ ಓಯಿಲ್ ಬೇರೆ ಇಲ್ಲ ಎಂದು ... ತಿಳಿಸಿರುವರು

17 11 ... ಟಾಟಿಬ, (ಬರ್ಮಾ)- ... ತೈಲ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ... ಕೂಡ ... ಸೀಸೆಗಳನ್ನು ತ್ವರಿತದಿಂದ ವಿ ಪಿ ಮೂಲಕ ... [94 33]

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ... ವಾದದ್ದು ... ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ... ಹೇಳಿದಂತೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮವಾದ ಸುವಾಸನೆಯುಳ್ಳದ್ದು ಕ್ರಯ ದ್ರಾಂ ಸೀಸೆಗೆ ರೂ 1-8 0

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಜಾಜಿ ... ಅಪೇಕ್ಷಿತವಾದ ಸುಗಂಧ ದ್ರಾಂ ಸೀಸೆಗೆ ರೂ 1 8-0

'ಕಾಮಿನಿಯಾ ಕಸ್ತೂರಿ' ರೂ 1-4 0 'ಕಾಮಿನಿಯಾ ಮಾಲತಿ' ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು

—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಶರಸ್ಥರವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
” ” ೬ ” ”	” ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ... ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ಪ್ರಕಟನ, ನೋಟೀಸುಗಳ ದರಗಳು.

"ವೃತ್ತಾಂತ ಪತ್ರಿಕೆ"ಯಲ್ಲಿ ಐದು ಸಂಚಿಕೆಗೆ ಮೀರದ ಪ್ರಕಟನೆ ಅಥವಾ ನೋಟೀಸುಗೆ ಒಂದು ಸಾರಿಗೆ ಒಂದು ರೂಪಾಯಿ ಛಾರ್ಜು ಬೀಳುವುದು, ಅಂದರೆ ... ಒಂದು ಅಂಗುಲದ ಪ್ರಮಾಣದ ಸ್ಥಳಕ್ಕೂ ಒಂದು ಸಲಕ್ಕೆ ಒಂದು ರೂಪಾಯಿಯಂತೆ ಕೊಡಬೇಕು ಹೆಚ್ಚು ಸ್ಥಳವನ್ನು ಅಪೇಕ್ಷಿಸುವವರು ಕಂಟ್ರಾಕ್ಟು ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

1911 ನೆ ಲೋ॥ ಸೆ॥ ಕ॥ ಟಿ। ನೋಟ್ಸು ಸ್ವಲ್ಪ ಉಳಿದಿದೆ

ಸಮ್ಮಿಂದ ಒಟ್ಟಾಗಿ ಕೊಂಡುಕೊಂಡವರು ಕಡನು ಬೆಲೆಗೆ ಮಾರುತ್ತಿರುವದರಿಂದ ನಾನು ಇದರ ಬೆಲೆಯನ್ನು 5 ಆಣೆಯಿಂದ 3 ಆ 3 ಕಾಸಿಗೆ ಇಳಿಸಿದ್ದೇನೆ ಡಿಸ್ಕೌಂಟು 10 ಕ್ಕೆ 1 ರಂತೆ ಕುಮಾರೋದಯ—ವಚನಕಾವ್ಯ, ಕಾಳಿದಾಸನ ಕುಮಾರ ಸಂಭವಕ್ಕೆ ಕನ್ನಡ ತರ್ಜುಮೆ ಕ್ರಯ 10 ಆ ವಿಳಾಸ-ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈಸ್ಕೂಲ್, ಚಿಕ್ಕಬಳ್ಳಾಪುರ.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದ್ದಾಗಿರುವುದು ಕ್ರಯ 8 ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [139 37]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

WILLIAM & Co, FORT, BOMBAY

ಅಮೃತಾಂಜನ್. (Regd)



ಇಲ್ಲಿ ಪರೀಕ್ಷೆ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ ತಲೇನೋವು ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಪಡುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-8-0

ಗಜಕರ್ಣದ ಮುಲಾಮು.

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಕುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವ ಕಪ್ಪಾಗುವದಿಲ್ಲ ಡಬ್ಬಿ 1ಕ್ಕೆ 0-6-0

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ ಸುಂದರಿ ... 8 ಆಣೆ [15 20]

ದಯಿವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೊ, ಫೋರ್ಟ್ ಮುಂಬಯಿ.

ಡೋಂಗರೆ ಇವರ ಬಾಲಾಮೃತ.

[115-5]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣ ಉಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕಟ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ನಾಶವು ಇಲ್ಲದಂತಾಗುತ್ತವ. ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ, ಟಪಾಲ್ ಖರ್ಚು ೬ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕೈ ಉರಿ, ಕೂಡಿಕ (ಛರ್ದಿ), ಮೈನಡುಕ, ಶೀತವಿಕಾರಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹೆಚ್ಚು ಬಲವನ್ನು ಸಂಪಾದಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎರವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98-50]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ ಸಮಯದಲ್ಲಿ ಸಹಾಯವಾಗಲೆಂದು ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ ಮತ್ತೊಂದು ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು

ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜ್ವರಶಂಕರಿ

114 47

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ಪರಿಸೆಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ೬ ದಿವಸ

ಬಾರಿ ಸೇವಿಸುವುದರೊಳಗಾಗಿ ಶಮನ ಗುಣಪಡಿ ಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ನಿವೃತ್ತಿಪಡಿಸುವುದು ಬಾಟಲಿಗೆ ೧ ರೂ, ೩ ಬಾಟಲಿಗೆ ೨ ರೂ ೧೦ ಆಣೆ

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯುನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ

ವಾತಮುರಾರಿ—ಇದು ಕಟಿನೋವು, ಉಳುಕು ಬೇನೆಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮಿಸುವುದಕ್ಕೂ ಸಹಾಯಕ ವಾಗಿದೆ ಬಾಟಲಿಗೆ ೮ ಆಣೆ, ೩ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪೆನಿ,

ವೆಪೇರಿ, ಮದರಾಸ್.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



1 33

ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಪಿಂಡಗಳಲ್ಲಿ ಹುಟ್ಟುವ ನೋವು, ಕಟಿನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕೆಳೆಯುವ ಬಾಧೆ ಪಿಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಒಂದೇ ಕದ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪ ಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಟರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ ಸ್ತ್ರೀಯುಕ್ತಿ ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿನಾದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು ? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ—೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [5-3?]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ

ಇತ್ತನೋಡಿ!	ನೋಟೀಸು	ಇತ್ತನೋಡಿ!
"ಇನಾಮು"	ಒಳ್ಳೇ ಸಮಯವು!!!	"ಇನಾಮು"
ಬರ್ಮಾ ಟ್ರಂಪೀಸು ಕ್ರಯ ರೂ 1 8 0	ಆಗಸ್ಟು 31 ನೇ ತಾರೀಖು ವರಿಗು	ರಾಸುಕೋಪು ಜೋಬು ಗಡಿಯಾರ ಕ್ರಯ ರೂ 2 4 0

ನಮ್ಮಲ್ಲಿರುವ ೬ ರಾಯಿಪ್ಪ, ಸೋಪ್ಪು, ಬುರಿ—ಊ ಇಲ್ಲದ

ರೋಮಸಂಹಾರಿ

ಕಾರ್ಬೊನೇಟ್ ಸಾಬೂನು

1 ಇರುವ ಪೆಟ್ಟಿಗೆ 1 ಕ್ಕೆ ಕ್ರಯ ರೂ 1 0 0 ಉಳ್ಳ 2 ಪೆಟ್ಟಿಗೆಗಳು ಕೊಳ್ಳುವವರಿಗೆ ಮೇಲೆ ಕಂಡಿರುವ 1 ನಂಬರು ಬರ್ಮಾ ಟ್ರಂಪೀಸು ಇನಾಂ ಕೊಡುವೆವು [101 9]

3 ಪೆಟ್ಟಿಗೆಗಳು ಕೊಳ್ಳುವವರಿಗೆ ಮೇಲೆ ಕಂಡಿರುವ 2 ನಂಬರು ರಾಸುಕೋಪು ಜೋಬುಗಡಿಯಾರವನ್ನು ಇನಾಂ ಕೊಡುವೆವು

ಅಂಚೆ ಹಾಸಲು ಪ್ರತ್ಯೇಕ

ಒಳ್ಳೇ ಸಮಯವು! ಬಿಡಬೇಡಿ!! ತಕ್ಷಣ ಬರೆಯಿರಿ!!!

ನಮ್ಮ ವಿಳಾಸ—ಬಿ ಸಿ ಷಾ ಅಂಡ್ ಕಂಪೆನಿ,

೧೩೩ ಚೀನಾ ಬಜಾರ್ ರೋಡ್, ಮದ್ರಾಸು

ರೈಲ್ವೆ ರೆಗ್ಯುಲೇಟರ್ ಗಡಿಯಾರಗಳು ರೂ 2 8-0

1 ಸುಂದರವಾದ ಭಾರು ಗಡಿಯಾರ, ರೈಲ್ವೆ ಷೇಪ್, ಸ್ವಿಸ್‌ಮೇಡ್, ಲಿವರ್, ಪೇಟೆಂಟ್, ಹತ್ತು ವರುಷಗಳಾದರೂ ಕೆಡದೆ

ನಡೆಯುವ ಬೋಲ್ಡ್ ಡಯಲ್, ಧೂಳು ಸೇರದ ಮುಚ್ಚಳಗಳುಳ್ಳ ಸಮಗ್ರಯಂತ್ರೋಪಕರಣ ಯುಕ್ತವಾದ ಈ ಅಂದವಾದ ಆಕಾರದ ಗಡಿಯಾರದ ಮೊದಲಿನ ಕ್ರಯ ರೂ ೪ ಇದೇ ಆಗಸ್ಟು ಅಖೈರ್‌ವರೆಗೆ ಉತ್ತರವಾಯಿ, ಸರಪಣಿ, ಅಂದವಾದ ಪೆಟ್ಟಿಗೆ ಸಹಿತ ಕ್ರಯ ರೂ 2 8 0 ಕ್ಕೆ ಕೊಡಲ್ಪಡುತ್ತೆ

2 ಬೀ ಕ್ವಾಲಿಟಿ ಗಡಿಯಾರ ಮೇಲಿನ ನಮೂನೆಯದೇ ಸರಪಣಿ, ಉತ್ತರವಾಯಿ ಇಲ್ಲದೆ ಕ್ರಯ ರೂ 2 3 0

3 ಬೀ ಟ್ರಂಪೀಸು 2 ಇಂಚಿನ ಡಯಲ್ ಕ್ರಯ ರೂ 2 ಅಲಾರಂ ನಿಯಾದ್ದು ಕ್ರಯ ರೂ 2 8 0

4 ರೋಲ್ಡುಗೋಲ್ಡು ಅಂದವಾದ ಗಡಿಯಾರದ ಸರಪಣಿ 1 ಕ್ಕೆ ಕ್ರಯ ರೂ 3 0 0

5 ವೃಂದಾವನ ಸೀರೆ ಬೆಲೆ ರೂ 3½ 5½ 8 ರಂಗು ಕೆಡದ ಗಟ್ಟಿ ಬಣ್ಣ, 17 ಮೊಳದುದ್ದ, ಕೆಂಪು, ಕರಿಯ ಬಣ್ಣಗಳಲ್ಲಿ ಸಾದಾ ಅಥವಾ ಬೇರೆ ಬುಟ್ಟೆಗಳುಳ್ಳವು ಕ್ರಯ ರೂ 3 1 0 ಜರತಾರಿಯವು ರೂ 6 1 0 ಸಾದಾ ಜರತಾರಿಯವು ರೂ ೪ [120 1]

ನಮ್ಮ ವಿಳಾಸ—ವೆಂಕಟಾಚಲಂ ಕಂಪೆನಿ,

ವೈ ರೋಡ್, ವೇಪೇರಿ, ಮದ್ರಾಸು

BENEFIT YOURSELF AND BENEFIT OTHERS

The National Insurance and Banking Company Ltd, Amritsar

Authorised Capital	Rs	10,00,000
Subscribed Capital Exceeds	"	9,00,000
Paid up " "	"	1,00,000
Funds Exceed	"	12,00,000
Policy-holders "		75,000

This Company works in accordance with **the Indian Life Assurance Companies' and Provident Societies' Acts 1912** and has also given **double the initial security** to the **Government** as required under the **Insurance Act 1912**

How is it that the **National, of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides issues policies at most favourable rates and on most liberal conditions, and distributes relief in thousands every quarter on account of **marriages and deaths**

122

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission** The post is permanent and our agents are entitled to **pension** None but those who can spare whole time who reside in district or taluk head quarters and who are well versed in English need apply

For further particulars and prospectuses please apply with **one anna stamp** and your previous experience in the line to—

M L NAGANNAH,

Chief Agent,

The Amritsar National Insurance Buildings, Mysore

ಸನ್ ೧೮೭೬ ರಿಂದ ೧೯೧೨ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 2-33

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ—

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು,

ಸಕಲವಿಧ ಶೈತ್ಯಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇವಲ್ಲದೆ ಕಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು

ಕಡಿ ಅಥವಾ ಹುಳಕಡಿ ಔಷದವು

ಡಬ್ಬಿ 1 ಕ್ಕೆ ರೂ 0 1 0 ಡಬ್ಬಿ 12 ಕ್ಕೆ ರೂ 2 8 0

ಕಿರೀಕಡಿ ಕೆಂಪುಕಡಿ ಮೊದಲಾದ ಸಕಲ ಕಡಿಗಳಿಗೂ ಇದು ಶ್ರೇಷ್ಠ ಔಷಧಿಯು ಚರ್ಮದಲ್ಲಿ ಉಂಟಾಗುವ ಕೊಳೆಯನ್ನು ಹೋಗಲಾಡಿಸಿ ಒಂದೆ ದಫಾ ಹಾಕುವದರಿಂದ ದೇಹವು ಥಳಥಳಿಸುವ ಹಾಗೆ ಶುದ್ಧಿಯನ್ನು ಮಾಡುವದು ಇದು ಸುವಾಸನೆಯು ದೇಹಕ್ಕೆ ತಂಪು ಉಂಟುಮಾಡುವದು

ಉಷ್ಣಮರ್ಜಿ ಚೂರ್ಣವು

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1 0 0

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಿಂತು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ರಮೇಣ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲಿ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು

ಡಬ್ಬಿ 1 ಕ್ಕೆ ಕ್ರಯ ರೂ 0 1 0 ಡಬ್ಬಿ 12 ಕ್ಕೆ ರೂ 2 8 0

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಿಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು ಹಲ್ಲುಗಳನ್ನು ಸ್ವಚ್ಛಮಾಡುವದು [121 12]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಚೀನಾ ಬಜಾರ್ ರೋಡ್, ಮದ್ರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 33

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾಖಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ತಲೆಗೆ ನೆಟ್ಟಗೆ ವಿಶಾಲವಾಗಿಯೇ ಬರುವವು (೨) ಟೋಪಿಗಳನ್ನು ಬಹಳ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಒಹಳ ಹಿತವಾದವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಿಂದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೪ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಹೆಂಗಸರ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

41 12

ಎಷ್ಟು ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರಕಲೆ, ತಲೆನೋವುಗಳು ಬೀಳು ಗಾಯದಿಂದ ಹುಟ್ಟುವ ಬಾಧೆ ಗಳು, ಉಳುಕು, ಹಲ್ಲುನೋವು, ಗಟ್ಟಿ ಗಾರೆನ್ನುವುದು, ಕೆಮ್ಮುಗಳು, ಊತ, ಶ್ವಾಸರೋಗ, ಜಜ್ಜು, ಉರುಕು ಭಂಗ, ಚೇಳು ಕಡಿದ ಬಾಧೆ, ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೊ. ಸಮೀಪದಲ್ಲಿ ರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟಿ ಮ್ಯಾಜಿಕ್ ಬಾಂ ಒಂದು ಬುಡ್ಡಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ಬೇಡ, ಅದನ್ನೇ ಕೊಡೆಂದು ಕೇಳಿ ತೆಗೆದುಕೊ. ಈ ಯುಕ್ತಿಯನ್ನುಪಯೋಗಿಸುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಉಪಯೋಗಿಸಿದ್ದಾರೆ. ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

ಕ್ಲೆಮೆಂಟಿ ಮ್ಯಾಜಿಕ್ ಬಾಂ ಎಂಬ ಹೆಸರನ್ನು ಮರೆಯಬೇಡಿ. ವಿಕ್ರಯ ಬಾಟ್ಲಿಗೆ 12 ಆಣೆ ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು —(1) ಎಸ್ ಪೀಟರ್ಸ್, 17 ಮಲ್ಲಯ್ಯ ಬೀದಿ, ಪುರಶವಾಕಂ, ಮೇಸ್ಟಿ, ಮದರಾಸ್ (2) ಜಿ ಎಸ್ ಕೃಷ್ಣಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಪ್ರಯಾಣಮಾಡಿದಾಗ್ಯೂ ನಿಲ್ಲದೆ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಮಾತ್ರವಾದ ಗಡಿಯಾರ ಬೇಕಾದ ಕೂಡಲೆ ಬರೆದು ತರಿಸಿಕೊಳ್ಳಿ [13 10]

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲೀವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ ೨ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5 1 0 ಇದನ್ನು ಆಗಸ್ಟ್ ಆಖೈರಿನೊಳಗಾಗಿ ತರಿಸಿಕೊಳ್ಳುವರಿಗೆ 10 ರೂಪಾಯಿ ಗೊಂದಾವರ್ತಿ ಬೆಳ್ಳಿ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಸುಪೀರಿಯರ್ ವಾಚ್ ಕಂಪನಿ,

ಪೋಸ್ಟ್ ಬಾಕ್ಸ್ ನಂ 167, ಮದರಾಸು.

ನಿನಗೆ ಸ್ವಸ್ಥವಿಲ್ಲವೋ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ —ಎಂದರೆ, ನನಗೆ ಯಾವ ನೋವೇ ಇಲ್ಲದಿರುವಾಗ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿನ್ನನ್ನು ನೀನೇ ಕೇಳಿಕೊ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು.

(ಇದು ಸರಿಯಾದ ಪರಿಮಾಣ)

ಮಲಬಂಧವೆಂಬುದರ ಅರ್ಥವೇನೆಂದರೆ ಮಲಾಶಯದಿಂದ ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುತ್ತವೆಂಬುದನ್ನು ನೀವು ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಳಿ, ಅಶಕ್ತಿ, ಎದೆಯುರಿ, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹಾಳೆಕೆಟ್ಟನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿವೆ. ಗಂಡಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ವಿಷವನ್ನು ಕೋಮಲವಾದ ವಿಧಾನದಿಂದ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಜನಕಾಂಗವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗಗಳ ವ್ಯಾಪಾರಗಳನ್ನು ಸರಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [99 49]

ಬೆಲೆ ೮ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೨೦ ಮಾತ್ರೆಗಳು, ೮ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಿಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ ಡೋನ್ಸ್ ಮಾರ್ಕ್, ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

3—7—1912 ರಿಂದ —8—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	)	3	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	22	11	0	0
ಮೈಸೂರು ,,	8	6	0	0
ಕೋಲಾರ್ ,,	1	6	33	25
ಕೋಲಾರ್ ಚಿನ್ನದ ಗಣಿಗಳು	1	3	0	0
ತುಮಕೂರು ಡಿಸ್ಟ್ರಿಕ್ಟ್	20	7	0	0
ಹಾಸನ ,	1	7	1	0
ಚಿತ್ರದುರ್ಗ ,,	0	0	73	16
ಕಡೂರ್ ,,	5	1	0	0
ಶಿವಮೊಗ್ಗ ,	2	7	36	27
ಜುಮ್ಲಾ	72	54	143	98

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಶ್ರಾವಣ ಶುದ್ಧ ಚೌತಿ ಶುಕ್ರವಾರದಿಂದ ಶ್ರಾವಣ ಶುದ್ಧ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿದ್ಧ ವಾಸ ಕೇದಿ
16	ಶುಕ್ರ *	ಚೌತಿ	28 20	ಹಸ್ತ	19-37	1
17	ಶನಿ	ಪಂಚಮಿ	24-21	ಚಿತ್ತ	48 24	2
18	ಭಾನು	ಷಷ್ಠಿ	21 28	ಸ್ವಾತಿ	47 45	3
19	ಸೋಮ §	ಸಪ್ತಮಿ	19 12	ವಿಶಾ	48-26	4
20	ಮಂಗಳ ,,	ಅಷ್ಟಮಿ	19-38	ಅನೂ	50 26	5
21	ಬುಧ †	ನವಮಿ	20 16	ಜ್ಯೇ	53 41	6
22	ಗುರು ‡	ದಶಮಿ	22 18	ಮೂ	58 3	7

* ನಾಗರಚತುರ್ಥಿ, ಮಳೆ ನಕ್ಷತ್ರ—ಮಖೆ 1 ನೇ ಪಾದ ಪಂಚಮೀ ತಿಥಿ, ಗರುಡಪಂಚಮಿ, ಶ್ರಾವಣಶನಿವಾರ , ತಿಥಿದ್ವಯಂ § ಅಷ್ಟಮೀ ತಿಥಿ, ಮಳೆ ನಕ್ಷತ್ರ—ಮಖೆ 2 ನೇ ಪಾದ ,, ನವಮೀ ತಿಥಿ, ಮಂಗಳಗೌರೀ ವ್ರತಂ † ಶೂನ್ಯತಿಥಿ ‡ ದಶಮೀ ತಿಥಿ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭-೦ ೦	೧೬-೨ ೦
ಕಂಬೂತಿ ಅಕ್ಕಿ ಅವಲ್	.. .	೧೭ ೮ ೦	೧೬ ೮ ೦
,, ದುಯಂ	.	೧೬-೮-೦	೧೭-೮ ೦
ದಾಪ್ರಾಣಿ ಅಕ್ಕಿ	.	೧೬-೪-೦	೧೬-೦ ೦
ಸಣ್ಣಕ್ಕಿ ಅವಲ್		೧೮ ೦-೦	೧೮-೦-೦
,, ದುಯಂ		೧೭-೮ ೦	೧೬ ೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	.	೧೪-೮-೦	೧೩ ೮-೦
,, ದುಯಂ	. ..	೧೩-೧೩ ೦	೧೧ ೮ ೦
ಮೈಸೂರ್ ರಾಗಿ ಪಲ್ಲಾ ೧ಕ್ಕೆ		೭-೧೩ ೦	೭ ೮ ೦
ಕಾರಾಗಿ		೭ ೪ ೦	೭-೪ ೦
ಜೋಳ		೮ ೮-೦	೮-೦-೦
ಹುಲಸಂದೆ ಪಲ್ಲಾ ೧ಕ್ಕೆ		೧೪ ೦-೦	೧೧-೦-೦
ಬಿಳೀ ಅವರೆ	. .	೧೧-೦ ೦	೧೦-೦-೦
ಹೆಸರು	.	೧೪ ೦ ೦	೧೪ ೮-೦
ಉದ್ದು	. ..	೧೫ ೦ ೦	೧೫ ೦-೦
ಕಡಲೆ		೧೨-೦ ೦	೧೧ ೦ ೦
ಎಳ್ಳು ಸೇ ೧೨೭ಕ್ಕೆ	..	೨೪ ೦-೦	೨೪ ೮ ೦
ಹುರುಳಿ	.	೭-೨ ೦	೭-೨ ೦
ಹರಳು ೧೨೭ ಸೇರಿಗೆ		೧೪-೦-೦	೧೪ ೦ ೦
ಕೊಬ್ಬರಿ ಕಾಯಿ ಮಣ ೧ಕ್ಕೆ		೩ ೮-೦	೩ ೮ ೦
ಮೆಣಸಿನಕಾಯಿ		೩ ೮-೦	೩ ೪ ೦
,, ದುಯಂ		೩ ೦-೦	೨ ೮ ೦
ಬೆಲ್ಲ ದೊಡ್ಡ ಅಚ್ಚು		೫ ೮ ೦	ಮ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ		೬ ೮ ೦	೬ ೮ ೦
ಹರಳೆಣ್ಣೆ ,,		೬-೦ ೦	೫-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬-೨ ೦	೬ ೮ ೦
ಉಪ್ಪು ,,		೬ ೦ ೦	೫-೮ ೦
ಹುಣಸೇ ಹಣ್ಣು	..	೧-೪-೦	೧ ೪-೦
,, ಹಳೇದು		೧ ೦-೦	೧ ೨ ೦
ತುಪ್ಪ ಮಣ ೧ಕ್ಕೆ	..	೧೮ ೦ ೦	೧೭ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೦ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ		೫-೮-೦	೬ ೦ ೦
ಅರಲೇಕಾಯಿ ಮಣ ೧ಕ್ಕೆ		೦-೮-೦	೧ ೦ ೦
ಅಂಟುವಾಳದ ಕಾಯಿ ಮಣ ೧ಕ್ಕೆ	.	೦ ೧೨ ೦	೧ ೮ ೦
ಚಿನ್ನ (ಸವರನ್) ತೊಲ	. ...	೧೫ ೮ ೦	೧೫ ೮ ೦
,, ,, ಪವನು	. .	೧೫ ೧೪ ೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩ ೦	೨೪-೩ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧ ೦-೦

ಬಹುಮಾನ ವಿನಿಯೋಗವು.

ತುಮಕೂರು ಆರ್ಯಬಾಲಿಕಾ ಪಾಠಶಾಲಾ

ತುಮಕೂರು ಪೇಟೆ ಗೌರ್ನಮೆಂಟ್ ಆರ್ಯಬಾಲಿಕಾ ಪಾಠಶಾಲಾ ವಿದ್ಯಾರ್ಥಿನಿಯರಿಗೆ ಚಾಲ್ತಿ ಆಗಸ್ಟು ಮಾಹೆ 1 ನೇ ತಾ ಪ್ರಾತಃಕಾಲ ಬಹುಮಾನಗಳು ಕೊಡಲ್ಪಟ್ಟುವು. ಪಾಠಶಾಲಾ ಮಂದಿರವು ವಿಚಿತ್ರವಾಗಿ ಶೃಂಗರಿಸಲ್ಪಟ್ಟಿತ್ತು. ಡೆಪ್ಯುಟಿ ಕಮಿಷನರ್ ಮ|| ಸಿ ಎಸ್ ಬಾಲಸುಂದರಂ ಅಯ್ಯರವರು ಅಗ್ರಾಸನಾಸೀನರಾಗಿದ್ದರು. ಸಮಸ್ತ ಇಲಾಖೆಗಳ ಅಧಿಕಾರಿಗಳೂ, ಲಾಯರುಗಳೂ, ಪುರಪ್ರಮುಖರೂ ಸಭಾಸದರಾಗಿದ್ದರು. ಪ್ರೇಕ್ಷಕರು ಅಂತರ್ಬಹಿರ್ಭಾಗಗಳಲ್ಲಿ ತಂಡೋಪತಂಡವಾಗಿ ನೆರೆದಿದ್ದರು. ವಿದ್ಯಾರ್ಥಿನಿಯರು ಭಕ್ತಿಯುಕ್ತವಾದ ದೇವತಾ ಸ್ತೋತ್ರಗಳಿಂದಲೂ, ನವರಸಭರಿತವಾದ ಪದ್ಯಗಳಿಂದಲೂ, ಮೃದುಮಧುರ ಸಂವಾದಗಳಿಂದಲೂ, ಕಿಂಡರಗಾರ್ಟನಿನ ಗೀತಾನುಕರಣಗಳಿಂದಲೂ, ಸುಶ್ರಾವ್ಯವಾದ ಗಾಯನಗಳಿಂದಲೂ ಸಭಿಕರನ್ನು ಬಹುವಾಗಿ ಸಂತೃಪ್ತಿಪಡಿಸಿದರು. ಆ ಮೇಲೆ ಸ್ಕೂಲ್ ರಿಪೋರ್ಟು ಓದಲಾಯಿತು. ಬಳಿಕ ಅಗ್ರಾಸನಾಧಿಪತಿಗಳು ತತ್ಸಂದರ್ಭಾನುಸಾರವಾಗಿ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ತರುವಾಯ ಇವರ ಕುಮಾರಿಯರು ತಮ್ಮ ಹಸ್ತದ್ವಯಗಳಿಂದ ಎಲ್ಲಾ ಬಾಲಕಿಯರಿಗೂ ವಿವಿಧ ಬಹುಮಾನ ಪದಾರ್ಥಗಳನ್ನು ಹಂಚಿದರು. ಕಡೆಗೆ ಮಂಗಳಗಾನಗಳಿಂದ ಸಭೆಯು ಉಪಸಂಹರಿಸಲ್ಪಟ್ಟು, ಸಭಿಕರು ಗಂಧ ಪುಷ್ಪ ತಾಂಬೂಲಗಳಿಂದಲೂ, ಬಾಲಕಿಯರು ವಿವಿಧ ಫಲಾಹಾರ ಸಾಮಗ್ರಿಗಳಿಂದಲೂ ತೃಪ್ತರಾಗಿ ಜಯನಿನದ ಪೂರ್ವಕವಾದ ಕರತಾಡನಗಳಿಂದ ಬಿಜಯಂಗೈಯ್ದರು. ಈ ಬಹುಮಾನೋತ್ಸವವು ಸಿವಿಲ್ ಸರ್ಜನ್ ಮ|| ಟಿ ಎಸ್ ನಂಜಪ್ಪನವರ ಅತ್ಯಧಿಕ ಪ್ರೋತ್ಸಾಹದಿಂದ ಅತಿವಿಜೃಂಭಣೆಯಾಗಿ ಜರುಗಿತು

ವಿದ್ಯಾಭಿಮಾನಿ

ವೈದ್ಯವಿದ್ಯಾ ವ್ಯಾಸಂಗಕ್ಕೆ ಪ್ರೋತ್ಸಾಹವು

ದೊಡ್ಡಬಳ್ಳಾಪುರದಲ್ಲಿ ನಡೆದ ಒಂದು ಕೂಟವು

ಈ ಪಟ್ಟಣದಲ್ಲಿ ಶ್ರೀಯುತಸ್ವಾಮಿಗಳನೇಕರಿರುವರು. ಕ್ರಿಯಾಪರ್ಯವಸಾನದಲ್ಲಿ ಅದನ್ನು ತೋರಿಸುವವರತಿವಿರಳ. ಈಗಲೀ ಯಾಧುನಿಕ ಲೋಕಹಿತಂಕರ ಪ್ರವರ್ತಕರಲ್ಲಿ ಈ ನಗರದಲ್ಲಿ ಒಬ್ಬರು ಗಣ್ಯರಾಗಿರುವರು. ಮುಂದಣ ಮಹತ್ಕಾರ್ಯಕ್ಕೆ ಮೇಲುಪಂಕ್ತಿಯನ್ನು ಹಾಕಲು ಇಲ್ಲಿನ ಹೆಡ್ ಮಾಸ್ಟರ್ ಮ|| ಕೋಂಗಾಡಿಯಪ್ಪನವರ ಸೋದರರಾದ ಮ ಡಿ ಎಸ್ ಪುಟ್ಟಣ್ಣನವರು ಬಹು ದಿನಗಳಿಂದ ವೈದ್ಯವಿದ್ಯೆಯಲ್ಲಿ ಎಂ ಬಿ ಸಿ ಯಂ ಪರೀಕ್ಷೆಯಲ್ಲಿ ವ್ಯಾಸಂಗಿಗಳಾಗಿ ಅವರಲ್ಲಿ ತೇರ್ಗಡೆ ಹೊಂದದಿರಲು ಅದನ್ನು ಅತಿಶಯವಾಗಿ ಅಭ್ಯಾಸಮಾಡಿ ಉತ್ತೀರ್ಣರಾಗಲು ವಿಲಾಯತಿಗೆ ಪ್ರಯಾಣಮಾಡುವರು. ಇವರು ದೇವಾಂಗ ಕುಲಕ್ಕೆ ಸೇರಿದವರು. ಈ ಊರಲ್ಲಿ ಈ ಜಾತಿಯವರನೇಕರಿರುವರು. ಆದರೂ ಇವರಂತೆ ಬಿ ಎ ಪರೀಕ್ಷೆಯನ್ನು ಕೊಟ್ಟವರಾರೂ ಇಲ್ಲವಾದದ್ದರಿಂದ ಈ ಪುಟ್ಟಣ್ಣನವರು ಈ ಕೂಟದಲ್ಲಿ ಪ್ರಶಂಸಾರ್ಹರಾಗಿರುತ್ತಾರೆ. ಇವರು ತಮ್ಮ ದೇಶಕ್ಕೂ, ಕೂಟಕ್ಕೂ ಕೀರ್ತಿಯನ್ನು ಸಂಪಾದಿಸಲು ಪ್ರಯತ್ನಿಸಿರುವುದು ಅತ್ಯಂತ ಶ್ಲಾಘನೀಯವಾದುದು. ಸರಿ. ಈಗಲೀ ಪುಟ್ಟಣ್ಣನವರು ತಮ್ಮ ಜನ್ಮಭೂಮಿಗೆ ಗುಣವಂತನಾದ ಪುತ್ರನಾಗಬಯಸಿದ ಮಹತ್ಕಾರ್ಯದಲ್ಲಿ ಇವರಿಗೆ ಜಯವೂ, ಯಶವೂ, ಆರೋಗ್ಯ ಸುಖ ಸಂಪದವೂ ಉಂಟಾಗಲೆಂದು ಹಿತಾಶಂಸೆಯನ್ನು ಮಾಡಲು ಈ ಊರಿನ ಮಹಾಜನರೆಲ್ಲರೂ ಒಂದು ದೊಡ್ಡ ಸಭೆಯನ್ನು ಸೇರಿಸಿದರು. ಸುಮಾರು 2,000 ಜನರು ನೆರೆದಿದ್ದರು. ಇಲ್ಲಿನ ಅಮಲ್ದಾರ್ ಮ ಕೃಷ್ಣ ಅರಸಿನವರು ಸಭಾಧ್ಯಕ್ಷ ಪದವಿಯನ್ನಲಂಕರಿಸಿದರು. ಈ ಪಟ್ಟಣದ ಸಾಹುಕಾರರು, ಸರ್ಕಾರೀ ಉದ್ಯೋಗಸ್ಥರು, ಇತರ ಮಹನೀಯರು ಸಭಾಸ್ತಾರರಾಗಿದ್ದರು. ಸಬ್ ರೆಜಿಸ್ಟ್ರಾರ್ ಮ ರಾಮಸ್ವಾಮಿಯಂಗಾರ್ಯರವರು ಮತ್ತು ಸಾಹುಕಾರ್ ಚಂದ್ರಶೇಖರಪ್ಪನವರು, ಅ|| ನಂಜುಂಡಪ್ಪನವರು ಸಭಾ ಕಾರ್ಯನಿರ್ವಾಹಕರಾಗಿ ನಿಂತರು. ಮ|| ಪುಟ್ಟಣ್ಣನವರಿಗೂ ಇವರ ಮಿತ್ರ ಮಂಡಲಿಗೂ ಉಪಹಾರಗಳು ಸಮರ್ಪಿಸಲ್ಪಟ್ಟುವು. ಸಭಾಧ್ಯಕ್ಷರಾದ ಮ|| ಕೃಷ್ಣ ಅರಸಿನವರು ಹೃದಯಂಗಮವಾದ ಒಂದು ಉಪನ್ಯಾಸವನ್ನು ಮಾಡಿ ಸಮುದ್ರಯಾನವು ನಿಷಿದ್ಧವಲ್ಲವೆಂಬುವುದನ್ನು ವಿಶದೀಕರಿಸಿದನಂತರ ಪುಟ್ಟಣ್ಣನವರಿಗೆ ತಮ್ಮ ಸಂಕಲ್ಪ ಸಿದ್ಧಿಯಾಗಲೆಂದು ಅತ್ಯಂತ ಹಿತವನ್ನು ಆಶಂಸಿಸಿದರು. ಆನಂತರದಲ್ಲಿ ವಿದ್ವಾನ್ ವೆಂಕಟಾಚಲಯ್ಯರವರು ಸಮುದ್ರಯಾನ ವಿಷಯವು ಅದ್ಯತನ ಕಾಲ ದೇಶ ವರ್ತಮಾನಗಳಲ್ಲಿ ಚರ್ಚಿಸಲ್ಪಡುವ ವಿಷಯವಲ್ಲವೆಂಬುದನ್ನು ಉದಾಹರಿಸಿ ಸಮುದ್ರಯಾನ ಸ್ವೀಕಾರದಿಂದ ಉಂಟಾಗತಕ್ಕ ಮಹತ್ಫಲಗಳನ್ನು ತೋರಿಸಿ ದೇವಾಂಗಪಟ್ಟ ಧರ್ಮವನ್ನು ಪುಟ್ಟಣ್ಣನವರಲ್ಲಿ ಅನ್ವರ್ಥವಾಗಿ ಸಭ್ಯರ ಪಕ್ಷವಾಗಿ ಪುಟ್ಟಣ್ಣನವರಿಗೆ ಮಂಗಳಾಶಾಸನವನ್ನು ಮಾಡಿದರು. ಥಿಯೊಸಾಫಿಕಲ್ ಸೊಸೈಟಿ ಪ್ರೆಸಿಡೆಂಟ್ ಮ ವೆಂಕಟನಾರಾಯಣ ಶೆಟ್ಟರವರು ತದರ್ಥವನ್ನು ದೃಢೀಕರಿಸಿದರು. ವೇ ವೆಂಕಟದಾಸಶಾಸ್ತ್ರಿಗಳು ಪ್ರಕೃತೋಚಿತ ಸಂದರ್ಭಗರ್ಭಿತವಾಗಿ ಆಶೀರ್ವಾದ ಮಾಡಿದರು. ದಾನಪ್ಪಶೆಟ್ಟರವರೂ ಪ್ರಶಂಸಿಸಿದರು. ಮ|| ಷೇಕ್ ಅಹಮದ್ ರವರು ಎಸಲ್ಲಿನ ಸಕ್ಷವಾಗಿ ಪುಟ್ಟಣ್ಣನವರಿಗೆ ಜಯವಾಗಲೆಂದು ಪ್ರಾರ್ಥಿಸಿದರು.

ಮ|| ಪುಟ್ಟಣ್ಣನವರು ತಮ್ಮ ಸೋದರರಾದ ತೋಂಗಾಡಿಯಪ್ಪನವರಂತೆಯೇ ವಿನೀತರು, ಗುಣವಂತರು, ಜನಾನುರಾಗಪಾತ್ರಭೂತರು. ದೇವಾಂಗದವರಲ್ಲಿ ಇವರೊಬ್ಬರೇ ಪ್ರಥಮತಃ ಇಂಗ್ಲೆಂಡಿಗೆ ವಿದ್ಯಾರ್ಥಿಗಳು. ಸಮಸ್ತ ದೇವಾಂಗ ಕೂಟದವರು ಪುಟ್ಟಣ್ಣನವರು ವಿಲಾಯಿತಿಗೆ ಪ್ರಯಾಣವಾದುದು ತಮಗೆ ಸಮ್ಮತವೆಂದು ತಮ್ಮ ಆದರೋತ್ಕಂಠತೆಯನ್ನು ತೋರಿಸಿ ಸವ್ಯವಹಾರಕ್ಕೆ ತಾವುಗಳೆಲ್ಲರೂ ಅಗ್ರೇಸರರೆಂದು ನಿರ್ಣಯಿಸಿದ ಬಗೆಯು ಸ್ತೋತ್ರಾರ್ಹವಾದುದು. ಬೆಂಗಳೂರಿನಲ್ಲಿರುವ ಸಾಹುಕಾರ್, ಮ್ಯುನಿಸಿಪಲ್ ಕಮಿಷನರ್ ಮತ್ತು ಬೆಂಚ್ ಮ್ಯಾಜಿಸ್ಟ್ರೇಟರಾದ ಮ|| ಡಿ ಆದೆಪ್ಪನವರು ಇವರಿಗೆ ಮಾಡಿಕೊಟ್ಟ ಸಹಾಯ ಸಂಪದವು ಚಿರಸ್ಮರಣೀಯವಾದುದು. ಮ|| ಡಿ ಎಸ್ ಪುಟ್ಟಣ್ಣನವರಿಂದ ದೊಡ್ಡಬಳ್ಳಾಪುರಕ್ಕೆ ವಿಪುಲವಾದ ಕೀರ್ತಿಯುಂಟಾಯಿತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಸ್ಥಾನಿಕ

[ಈ ವಿಚಾರವಾಗಿ ಬೆಂಗಳೂರಿನಿಂದ ನಮಗೆ ಬರೆದು ಬಂದಿರುವ ಟಿಪ್ಪಣಿಯನ್ನು ಸ್ಥಳಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ವಿಷಾದಪಡುತ್ತೇವೆ —ಎಡಿ]

ಜಾರ್ಜ್ ಸಾರ್ವಭೌಮರ ಚರಿತ್ರೆ

[93-11]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ಡೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಆಮೂಲಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ. ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ. ಅವರ ಭಾವಚಿತ್ರವೂ ಉಂಟು. ಶ್ರೀಮನ್ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ. ಕ್ರಯ ಪ್ರತಿ 1ಕ್ಕೆ 8 ಆ. ಹಾಸಲು 1ಆ

ವಿಳಾಸ—ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

ವೃತ್ತಾಂತ ಪತ್ರಿಕೆ.

ಶಕೆ ೧೯೧೨ ನೇ ಇಸವಿ ಅಗಸ್ಟ್ ತಾ ೧೫ ನೇ ಗುರುವಾರ

ಚಿಕ್ಕಬಳ್ಳಾಪುರದಲ್ಲಿ ಪೊಲೀಸಿನವರ ಮೇಲೆ ಬಂದಿರುವ ಆಕ್ಷೇಪಣೆಯು.

ಕೋಲಾರ್ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರವೆಂಬ ತಾಲ್ಲೂಕ್ ಹೆಡ್ ಕ್ವಾರ್ಟರಿನಲ್ಲಿ ನಡೆದಿರುವ ಒಂದು ಘೋರವಾದ ಕೃತ್ಯದ ವೃತ್ತಾಂತವನ್ನು ಒಬ್ಬ ಬಾತ್ಮಿದಾರರು ನಮ್ಮಲ್ಲಿಗೆ ಬರೆದು ಕಳುಹಿಸಿರುವರು. ಅದನ್ನು ಕೆಳಗೆ ಪ್ರಕಟ ಮಾಡಿರುತ್ತೇವೆ. ಚಿಕ್ಕಬಳ್ಳಾಪುರದ ಪೊಲೀಸ್ ಇನ್ಸ್‌ಪೆಕ್ಟರೂ, ಕಾನ್‌ಸ್ಟೇಬಲ್‌ಗಳೂ ಅಗಸರ ಪಾಪೈಯನೆಂಬ ಮನುಷ್ಯನನ್ನು ಒಂದು ಕಳುವಿನ ಮೊಕದ್ದಮೆಯಲ್ಲಿ ದಸ್ತಗಿರಿಮಾಡಿ ಬಹು ಕ್ರೂರತರವಾಗಿ ಹಿಂಸೆಪಡಿಸಿದರೆಂದು ಅವನು ತನ್ನ ವಾಜ್ಮೂಲದಲ್ಲಿ ಹೇಳಿರುತ್ತಾನೆ. ಈ ಸುದ್ದಿಯನ್ನು ಕೇಳಿ ಕೋಲಾರದ ಡಿಪ್ಟಿ ಕಮಿಷನರವರು ಚಿಕ್ಕಬಳ್ಳಾಪುರಕ್ಕೆ ಹೋಗಿ ಕಳೆದ ವಾರ ತನಿಖೆ ಮಾಡಿದರೆಂದೂ, ಪೊಲೀಸಿನವರು ಆ ವಿಚಾರವೇನೂ ತಮಗೆ ತಿಳಿಯದೆಂದು ಹೇಳಿಬಿಟ್ಟರೆಂದೂ, ಈ ಕ್ರೂರತರವಾದ ಹಿಂಸೆಯ ವಿಚಾರವನ್ನು ಚೆನ್ನಾಗಿ ತನಿಖೆ ಮಾಡುವುದಕ್ಕೋಸ್ಕರ ಆ ಪೊಲೀಸಿನವರನ್ನು ಚಿಕ್ಕಬಳ್ಳಾಪುರದಿಂದ ಬೇರೆ ಕಡೆಗೆ ವರ್ಗಮಾಡಿರುತ್ತಾರೆಂದೂ ತಿಳಿದುಬರುತ್ತದೆ.

ಈ ಮೊಕದ್ದಮೆಯ ವಿಷಯದಲ್ಲಿ ನಾವು ಈಗ ಇನ್ನೇನೂ ಹೆಚ್ಚಾಗಿ ಹೇಳುವುದಿಲ್ಲ. ಗವರ್ನಮೆಂಟಿನವರು ಈ ಕೃತ್ಯದ ಪೂರ್ವೋತ್ತರವನ್ನೆಲ್ಲಾ ಕೂಲಂಕಷವಾಗಿಯೂ, ಬಹಿರಂಗವಾಗಿಯೂ ತನಿಖೆ ಮಾಡಿಸುತ್ತಾರೆಂದು ನಂಬಿ ನಿರೀಕ್ಷಿಸುತ್ತೇವೆ. ಹೀಗೆ ಬಹಿರಂಗವಲ್ಲಿ ವಿಚಾರಣೆ ನಡೆಯುವುದು ಪ್ರಜೆಗಳ ಸುಕ್ಷೇಮಕ್ಕೂ, ಪೊಲೀಸ್ ಸಿಬ್ಬಂದಿಯ ಕ್ರಮಕ್ಕೂ, ಅವರ ಒಳ್ಳೆ ಯಶಸ್ಸಿಗೂ ಬಹಳ ಅವಶ್ಯವೆಂದು ನಾವು ನಂಬುತ್ತೇವೆ.

ಈ ಕೃತ್ಯದ ವಿಷಯದಲ್ಲಿ ನಮ್ಮ ಬಾತ್ಮಿದಾರರು ಬರೆದಿರುವುದೇನೆಂದರೆ—

ಅಯ್ಯಾ,—ಕಳೆದ ತಿಂಗಳಲ್ಲಿ ಈ ಊರಿನಲ್ಲಿ ಕೆಲವು ಭಾರೀ ಕಳ್ಳತನಗಳು ನಡೆದವು. ಸಬ್ ಡಿವಿಜನ್ ಸಾಹೇಬರ ಮನೆಯಲ್ಲೂ ಸುಮಾರು 10-12 ರೂಪಾಯಿ ಬಟ್ಟೆಬರೆಗಳು ಕಳುವಾದವು. ಆ ರಾತ್ರಿ ಸಬ್ ಡಿವಿಜನ್ ಸಾಹೇಬರ ಮನೆಯವರು ನಾಟಕ ನೋಡುವದಕ್ಕೆ ಹೋಗಿದ್ದರಂತೆ. ಮಾರಣೇ ದಿನ ಬೆಳಗ್ಗೆ ಪೊಲೀಸಿನವರು ಪಾಪಿದ ಬಟ್ಟೆಯವರನ್ನು ಲಾಕಪ್ಪಿಗೆ ತಳ್ಳಲಿಕ್ಕೆ ಶುರು ಮಾಡಿದರು. ಅವರಲ್ಲಿ ಸಬ್ ಡಿವಿಜನ್ ಸಾಹೇಬರ ಜವಾನ ಅಗಸರ ಪಾಪೈಯನೆಂಬುವನು ಒಬ್ಬನು. ಇವನು ಸರ್ಕಾರಿ ನೌಕರಿಯಲ್ಲಿ ಇಪ್ಪತ್ತು ವರುಷ ಸರ್ವಿಸ್‌ದಾರನು. ಇವನನ್ನು ಹಗಲು ವೇಳೆ ಪೊಲೀಸ್ ಸ್ಟೇಷನ್ನಲ್ಲಿ ಪೊಲೀಸ್ ಇನ್ಸ್‌ಪೆಕ್ಟರವರು ನಿಂತುಕೊಂಡು ಹೊಡಿಸಿದರಂತೆ. ರಾತ್ರಿಯಲ್ಲಿಯೂ ಸಹ ಪೊಲೀಸಿನವರು ಇವನನ್ನು ಹಿಂಸೆ ಪಡಿಸಿದರಂತೆ. ಇವನು ಸುಮಾರು 10-12 ದಿನಗಳು ಲಾಕಪ್ಪಿನಲ್ಲಿ ಇದ್ದ ಹಾಗೆ ತಿಳಿದುಬರುತ್ತದೆ. ಇವನು ಬದುಕುವದು ಅನುಮಾನವೆಂದು ತಿಳಿದುಬಂದ ಮೇಲೆ ಸ್ವಜನರನ್ನು ಕರೆಯಿಸಿ ಕಳುಹಿಸಿದರು. ಸ್ವಜನರು ಅವನಿಗೆ ಆಸ್ಪತ್ರೆಯಲ್ಲಿ ಇಲಾಜು ಮಾಡಿಸಿದರು. ಆಗ ಅವನಿಗೆ ಕಣ್ಣು ದೃಷ್ಟಿಯೂ ಕೇಳುವಿಕೆಯೂ ಮಾತನಾಡುವುದೂ ನಿಂತು ಹೋಗಿ ಸನ್ನೆಗಳಿಂದ ತನ್ನ ಬಾಧೆಗಳನ್ನು ತೋರಿಸುತ್ತಾ ಇದ್ದನು, ಮತ್ತು ರಕ್ತ ಕಾರುತ್ತಿದ್ದನು. ಒಂದು ಕೈ ಒಂದು ಕಾಲು ಸ್ವಾಧೀನ ತಪ್ಪಿದ್ದವು. ಸೀನಿಯರ್ ಸರ್ಜನ್ ಸಾಹೇಬರವರು ಅದೇ ಕಾಲದಲ್ಲಿ ಈ ಊರಿಗೆ ದಯಮಾಡಿಸಿದ್ದರು. ಇವನ ಸಂಕಟಕರವಾದ ಸ್ಥಿತಿಯನ್ನು ಇವರು ಕೇಳಿ ಮನಸ್ಸು ಕರಗಿ ಈತನ ಮನೆಗೆ ದಯಮಾಡಿಸಿ ಬಹಳ ಪ್ರೀತಿಯಿಂದ ಅವನ ಕಷ್ಟಗಳನ್ನು ತಿಳಿದುಕೊಂಡು ಒಳ್ಳೇ ಆಹಾರವನ್ನು ಕೊಡುವದಕ್ಕೋಸ್ಕರ ಉದಾರಗುಣದಿಂದ ಹಣ ಸಹಾಯ ಮಾಡಿದರು. ಅಲ್ಲದೆ ಈ ಊರ ಲಾಯರುಗಳೂ, ದೊಡ್ಡ ಮನುಷ್ಯರೂ ಈತನ ಮನೆಗೆ ಹೋಗಿ ಅನೇಕ ಸಹಾಯಗಳನ್ನು ಮಾಡುತ್ತಿರುತ್ತಾರೆ. ಈ ಉಪಕಾರಗಳನ್ನು ಹೊಂದುವದಕ್ಕೆ ಈತನ ಯೋಗ್ಯತೆಯೇ ಕಾರಣವೆಂದು ತೋರುತ್ತದೆ. ಇಲ್ಲಿನ ಮಿಷನರಿಗಳಾದ ರೆವ್ ಸ್ಟೀವೆಲ್ ಸಾಹೇಬರವರೂ, ಇಲ್ಲಿನ ಸಹಾಯಕ ಬೋಧಕರಾದ ರೆವ್ ನಾರಣಪ್ಪನವರೂ ಆಗಾಗ್ಗೆ ಈತನ ಮನೆಗೆ ಹೋಗಿ ನೋಡುತ್ತಾ ಇದ್ದರು. ಕಳೆದ 2 ನೇ ತಾ ಬೆಳಗ್ಗೆ ಈ ದೊಡ್ಡ ಮನುಷ್ಯರೂ, ಅಮಲ್ದಾರ್ರವರೂ, ಲಾಯರುಗಳೂ, ಇನ್ನು ಕೆಲವರೂ ಈತನ ಮನೆಗೆ ಹೋಗಿದ್ದಾಗ್ಗೆ, ಇಷ್ಟು ದಿನಗಳೂ ಮಾತಾಡಲಾರದೆ ಸನ್ನೆಗಳಿಂದ ತನ್ನ ಬಾಧೆಗಳನ್ನು ತೋರಿಸುತ್ತಿದ್ದವನು ಆಗ ಮಾತಾಡಿ ತನ್ನ ಸ್ವಂತ ಬಾಯಿಯಿಂದ ಅಮಲ್ದಾರ್ರಲ್ಲಿ ಬರೆಸಿದ ವಾಜ್ಮೂಲದ ಮುಖ್ಯ ಸಾರಾಂಶವೇನೆಂದರೆ—ನನ್ನನ್ನು ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಒಳಗೆ ಸೇರಿಸಿಕೊಂಡು ಇನ್ಸ್‌ಪೆಕ್ಟರವರು ಮೊದಲು ನನ್ನನ್ನು ಗುದ್ದಿದರು. ಆ ಮೇಲೆ ನನ್ನನ್ನು ಪೊಲೀಸಿನವರ ವಶಕ್ಕೆ ಒಪ್ಪಿಸಿದರು. ಅವರು ನನಗೆ ಹಿಂಸೆಕೊಡುವಾಗ ಇವರು ಬಾಗಿಲಲ್ಲಿ ನಿಂತುಕೊಂಡು ಇತರರು ಯಾರೂ ಬಾರದಂತೆ ಕಾವಲಾಗಿದ್ದರು. ರಾತ್ರಿ ವೇಳೆಯಲ್ಲಿ ಕೊಟ್ಟ ಹಿಂಸೆಗಳಿಂದ ನನ್ನ ಬಾಯಿಯಿಂದ ರಕ್ತ ಬರುತ್ತಿತ್ತು. ಅದನ್ನು ದಫೇದಾರರಿಗೆ ತಿಳಿಸಿದ್ದಕ್ಕೆ ಬಂದು ಮಾತುಗಳಿಂದ ಮಾತಾಡಿ ಹಿಂಸೆ ಪಡಿಸಿದರು. ನನ್ನ ಮಗಳು ನನಗೆ ಅನ್ನ ತಂದಾಗ ನನ್ನ ಹಿಂಸೆಗಳನ್ನು ಅಳು ನೋಡದ ಹಾಗೆ ಅಳೆಯನ್ನು ಓಡಿಸುತ್ತಿದ್ದರು. ಇನ್ನೊಂದು ರಾತ್ರಿ ನನ್ನನ್ನು ಲಾಕಪ್ ಸ್ಟೇಷನ್ನಿಂದ ಟೌನ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು. ಅಲ್ಲಿ ನನ್ನ ಎರಡು ಕೈಗಳನ್ನೂ ಹಿಂಗಟ್ಟು ಕಟ್ಟಿದರು, ಕಾಲುಗಳನ್ನೂ ಕಟ್ಟಿದರು. ಆ ಮೇಲೆ ಅಂಗತನವಾಗಿ ಮಲಗಿಸಿ ತುಳಿದರು, ಮತ್ತು ನನ್ನ ಹೊಟ್ಟೆಯ ಮೇಲೆ ಮರಳು ಹಾಕಿ ಅದರಲ್ಲಿ ಕುಂಬಾರ ಹುಳುಗಳನ್ನು ಬಿಟ್ಟು ತೆಂಗಿನ ಚಿಪ್ಪು ಮುಚ್ಚಿ ಕಟ್ಟಿದರು. ಇನ್ನೂ ಬಹಳವಾಗಿ ಹಿಂಸೆಗಳನ್ನು ಕೊಟ್ಟರು. ಈ ರೀತಿಯಾಗಿ ಈತನ ಹೇಳಿಕೆ ಇನ್ನೂ ಬಹಳವಿದೆ. ಅದೆಲ್ಲವನ್ನೂ ಬರೆಯಲು ಸಾಧ್ಯವಲ್ಲವೆಂದು ಸಂಕ್ಷೇಪಿಸಿದೇನೆ.

ಕೀರ್ತಿಶೇಷರಾದ ಜಪಾನ್ ಚಕ್ರವರ್ತಿಯವರು

ದಿವಂಗತರಾದ ಜಪಾನ್ ಚಕ್ರವರ್ತಿಯವರು ಲೋಕದಲ್ಲೆಲ್ಲಾ ಮಹಾ ಪ್ರಸಿದ್ಧಿಯನ್ನು ಪಡೆದಿರುವ ದೊರೆಗಳಲ್ಲಿ ಒಬ್ಬರಾಗಿದ್ದರು. ಅವರ ಕಾಲದಲ್ಲಿ ಹಿಂದೆ ಬಿದ್ದಿದ್ದ ಜಪಾನ್ ರಾಜ್ಯವು ಕ್ರಮೇಣ ಏಳ್ಗೆಯನ್ನು ಹೊಂದುತ್ತಾ ಲೋಕದಲ್ಲೆಲ್ಲಾ ಅತ್ಯುನ್ನತ ಸ್ಥಾನವನ್ನು ಹೊಂದಿರುವ ರಾಜ್ಯಗಳಲ್ಲಿ ಒಂದೂ ಒಂದಾಗಿದೆ ಅನ್ನಿಸಿಕೊಳ್ಳುವಷ್ಟು ಪ್ರವರ್ಧಮಾನಕ್ಕೆ ಬಂದಿತು. ಇವರು 1852 ರಲ್ಲಿ ಹುಟ್ಟಿ ಹದಿನೈದನೆಯ ಪ್ರಾಯದಲ್ಲಿ ಸಿಂಹಾಸನಕ್ಕೆ ಬಂದರು. 1852 ನೆಯ ವರುಷದ ವರಗೂ ಜಪಾನ್ ರಾಜ್ಯದವರು ಲೋಕದ ಬೇರೆ ಬೇರೆ ಜನಾಂಗಗಳವರೊಂದಿಗೆ ಹೊಕ್ಕು ಬಳಕೆ ಮಾಡದೆ ಪ್ರತ್ಯೇಕರಾಗಿಯೇ ಇರುತ್ತಿದ್ದರು. ಆದರೆ ಆ ವರುಷದಲ್ಲಿ ಅವರು ಪ್ರಿಟಿಸರ ನಾಯಕ ಮುಖಾಂತರ ರಾಜ್ಯದೊಂದಿಗೆ ಒಂದು ಕರಾರು ಮಾಡಿಕೊಂಡುದರಿಂದ ಪರದೇಶಗಳವರೊಂದಿಗೆ ವ್ಯಾಪಾರ ನಡಿಸುವುದಕ್ಕೆ ಮಾರ್ಗವಾಯಿತು. ಕಳೆದ ಐವತ್ತು ವರುಷಗಳಲ್ಲಿ ಜಪಾನ್ ರಾಜ್ಯವು ಒಂದ ನೂತನ ಸುಧಾರಣೆಯನ್ನು ಹೊಂದಿರುತ್ತದೆ! ವಿದ್ಯಾರ್ಥಿಗಳೂ ಮಹನೀಯರುಗಳೂ ಯೂರೋಪು ಮತ್ತು ಅಮೇರಿಕ ಖಂಡಗಳಿಗೆ ಹೋಗಿ ಅನ್ಯದೇಶಗಳಲ್ಲಿರುವ ಕಾನೂನುಗಳು, ರಾಜ್ಯಪರಿಪಾಲನಾ ಕ್ರಮ, ಶಾಸ್ತ್ರವಿದ್ಯೆ, ವಿಧಿಶಾಸ್ತ್ರ, ಕೈಗಾರಿಕೆ, ಇವೇ ಮುಂತಾದವುಗಳನ್ನು ಕಲಿತುಕೊಂಡು ಬಂದು ಜಪಾನ್ ರಾಜ್ಯವನ್ನು ಒಂದು ಹೊಸದಾದ ಉತ್ತಮ ಸ್ಥಿತಿಗೆ ತಂದಿರುತ್ತಾರೆ. ರಾಜ್ಯವು ಇಷ್ಟರಮಟ್ಟಿಗೆ ಅಭಿವೃದ್ಧಿಸ್ಥಿತಿಗೆ ಬರುವಂತೆ ಪ್ರಜೆಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಜ್ಞಾನದಿಂದಲೂ ಧೈರ್ಯದಿಂದಲೂ ಆಳರಸನ್ನು ನಡಿಸುತ್ತಾ ಬಂದವರು ಚಕ್ರವರ್ತಿಯವರೇ ಆಗಿದ್ದರು.

ಪೂರ್ವದಲ್ಲಿ ಜಪಾನರು ತಮ್ಮ ಚಕ್ರವರ್ತಿಯನ್ನೇ ಸಾಕ್ಷಾತ್ ದೇವರೆಂದು ಪೂಜಿಸುವವರಾಗಿದ್ದರು. ಆದರೆ ಈಗ ಜನಗಳಿಗೆ ತಿಳುವಳಿಕೆ ಹುಟ್ಟಿ ಚಕ್ರವರ್ತಿಯು ಎಷ್ಟೇ ಹೊಡ್ಡವನಾದರೂ ಮನುಷ್ಯಮಾತ್ರದವನೇ ಆಗಿರುತ್ತಾನೆಂದೂ ಜಗತ್ಕರ್ತನಿಗೆ ಮಾತ್ರ ಸಲ್ಲತಕ್ಕ ಆರಾಧನೆಯನ್ನು ಮನುಷ್ಯನಿಗೆ ಸಲ್ಲಿಸುವುದು ಕೇವಲ ಮೂಢಭಕ್ತಿಯೇ ಆಗಿದೆಯೆಂದೂ ಮನಗಂಡುಕೊಂಡಿರುತ್ತಾರೆ.

ಜಪಾನ್ ಚಕ್ರವರ್ತಿಯವರಿಗೆ ಬಡಪ್ರಜೆಗಳಲ್ಲಿ ಎಷ್ಟು ಪ್ರೇಮವಿತ್ತೆಂದು ಈ ಕೆಳಗಿನ ಸಂಗತಿಯಿಂದ ತಿಳಿದುಬರುತ್ತದೆ. ರಷ್ಯದವರೊಂದಿಗೆ ಇವರು ಮಾಡಿದ ಯುದ್ಧವು ಮುಗಿದ ಕೂಡಲೆ ತಮಗುಂಟಾದ ಜಯೋತ್ಸವವನ್ನು ಪ್ರಕಾಶಪಡಿಸುವುದಕ್ಕೆ ತಮ್ಮ ಪೂರ್ವೀಕರು ವಾಸವಾಗಿದ್ದ ಒಂದು ಪಟ್ಟಣಕ್ಕೆ ದಯಮಾಡಿಸಿದರು. ಆ ಪಟ್ಟಣದಲ್ಲಾದರೋ ಚಕ್ರವರ್ತಿಯವರ ಬಿಡಾರಕ್ಕೆ ಯೋಗ್ಯವಾದ ಮಂದಿರವು ಒಂದಾದರೂ ಇರಲೇ ಇಲ್ಲ. ಅದರಲ್ಲಿದ್ದ ಅತ್ಯುತ್ತಮವಾದ ಮನೆಗಳೂ ಕೂಡ ಇವರ ವಾಸಕ್ಕೆ ಕೇವಲ ಅನರ್ಹವಾದವುಗಳೇ ಆಗಿದ್ದುವು. ಬೀದಿಯ ಮಗ್ಗುಲಲ್ಲಿ ಅಂಗಡಿ ಸಾಲಿನಲ್ಲಿ ಬಡವ್ಯಾಪಾರಿಗಳು ವಾಸಮಾಡುತ್ತಿದ್ದ ಒಂದು ಚಿಕ್ಕ ಮನೆಯನ್ನು ಚಕ್ರವರ್ತಿಯವರು ತಾವೇ ಸಂತೋಷಪೂರ್ವಕವಾಗಿ ಆರಿಸಿಕೊಂಡು ಅಲ್ಲಿದ್ದರು.

ಅವರ ಅಧಿಕಾರಿಗಳಲ್ಲಿ ಒಬ್ಬರು ಅವರ ಬಳಿಗೆ ಬಂದು— ದೊರೆಗಳೇ, ಇದು ತಮ್ಮ ಯೋಗ್ಯತೆಗೆ ಕೇವಲ ಅಗೌರವವಾದುದು. ಒಂದುವೇಳೆ ತಮ್ಮಂಥ ಚಕ್ರವರ್ತಿಗಳು ಈ ಮನೆಯಲ್ಲೇ ಇರುವುದಕ್ಕೆ ಅಪೇಕ್ಷೆಪಟ್ಟಲ್ಲಿ ಇಲ್ಲಿರುವ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟು ಈ ಕೀಳು ಜನಗಳೆಲ್ಲರೂ ಇಲ್ಲಿಂದ ಹೊರಡಿಸಲ್ಪಡಬೇಕು ಎಂದು ಬಹು ತವಕದಿಂದ ಹೇಳಿದರು.

ಅದಕ್ಕೆ ಚಕ್ರವರ್ತಿಯವರು—ನನ್ನ ಪ್ರಜೆಗಳಲ್ಲಿ ಅತ್ಯಂತ ಬಡವರಾಗಿರುವವರ ಜೊತೆಯಲ್ಲಿ ನಾನು ಕೆಲವು ದಿನಗಳನ್ನು ಕಳೆಯಬೇಕು. ಇವರಲ್ಲಿ ಒಬ್ಬರಾದರೂ ಈ ಸ್ಥಳವನ್ನು ಬಿಟ್ಟು ದೂರ ಹೋಗುವುದಾದರೂ, ತಮ್ಮ ತಮ್ಮ ಜೀವನೋಪಾಯದ ಉದ್ಯೋಗಗಳನ್ನು ನಿಲ್ಲಿಸುವುದಾದರೂ ನನಗೆ ಸ್ವಲ್ಪವೂ ಇಷ್ಟವಿಲ್ಲ. ಇದು ಎಂದಿಗೂ ಆಗಲೇ ಬಾರದು. ನಾನು ಇಲ್ಲಿ ಇಲ್ಲದಿದ್ದರೆ ಹೇಗೋ ಹಾಗೆಯೇ ಸಕಲವೂ ಕ್ರಮವಾಗಿ ನಡೆಯುತ್ತಲೇ ಇರಬೇಕೆಂದು ಅಪ್ಪಣೆ ಕೊಡಿಸಿದರು.

ಟರ್ಕಿಯಲ್ಲಿ ಪ್ರಾಪ್ತವಾದ ಭೂಕಂಪವು

ಚೊರ್ಲುದಲ್ಲಿ ಬೆಂಕಿಯ ಅನಾಹುತವು.

ಯೂರೋಪ್ ಖಂಡದಲ್ಲಿ ಟರ್ಕಿ ರಾಜ್ಯದೊಳಗಿರುವ ಏಡ್ರಿಯಾನೋಪಲ್ ರೈಲ್ ಮಾರ್ಗದಲ್ಲಿ ಚೊರ್ಲು ಎಂಬ ಪಟ್ಟಣವಿದೆ. ಅಲ್ಲಿ ಭೂಕಂಪದಿಂದ ಒಂದು ಮನೆಯೊಳಗೆ ದೀಪದ ಕಂಬವು ಅಲ್ಲಾಡಿಬಿದ್ದು, ಆ ದೀಪದಿಂದ ಮನೆ ಹತ್ತಿಕೊಂಡು ಉರಿದು ಹೋಯಿತು. ಈ ಬೆಂಕಿಯ ಜ್ವಾಲೆಗಳು ಬಹು ಶೀಘ್ರದಿಂದ ಸುತ್ತುಮುತ್ತಲೂ ವ್ಯಾಪಿಸಿಕೊಂಡು ಮುನ್ನೂರು ಮನೆಗಳು ನಾಶಹೊಂದಿರುತ್ತವೆ.

ಹಲವು ಗ್ರಾಮಗಳು ನಾಶವಾದವು

ಮಾರ್ಮೊರಾ ಸಮುದ್ರ ತೀರದಲ್ಲಿ ಪ್ರಾಪ್ತವಾದ ಭೂಕಂಪವು ಅತ್ಯಂತ ಕಠಿಣವಾಗಿತ್ತು. ಡಾರ್ಡನಲ್ಸ್ ಪ್ರಾಂತ್ಯದಲ್ಲಿ ಟೆಲಿಗ್ರಾಫ್ ತಂತೀ ಕಂಬಗಳು ಮುರಿದು ಬಿದ್ದುಹೋದವು. ತಂತಿಗಳ ಸಹಾಯವಿಲ್ಲದೆ ವರ್ತಮಾನ ಕಳುಹಿಸುವ ನವೀನ ಉಪಾಯದಿಂದ ಗ್ರೀಕ್ ಉಪರಾಯಭಾರಿಯು ಹಲವು ಗ್ರಾಮಗಳು ಹಾಳಾಗಿರುವವೆಂದೂ ಅನೇಕ ಪ್ರಜೆಗಳು ಲಯವಾಗಿದರೆಂದೂ ತಿಳಿಸಿದಾರೆ. ಆ ಸಮುದ್ರದಲ್ಲಿ ಸಂಚಾರ ಮಾಡಿಕೊಂಡು ಬಂದ ಹಡಗಿನವರು ಆ ಪ್ರಾಂತ್ಯದಲ್ಲಿ ಅಪಾರವಾದ ಕಷ್ಟನಷ್ಟಗಳು ಪ್ರಾಪ್ತವಾಗಿರುವಂತೆ ಹೇಳುತ್ತಾರೆ. ನಾಶಹೊಂದಿದ ಗ್ರಾಮಗಳ ಪೈಕಿ ಎರಡು ಗ್ರಾಮಗಳು ಸಂಪೂರ್ಣವಾಗಿ ಸುಟ್ಟುಹೋದವೆಂದೂ, ಪ್ರಜೆಗಳೆಲ್ಲಾ ನೆರಳಿಲ್ಲದೆ ಆಹಾರವಿಲ್ಲದೆ ಸಂಕಟಪಡುತ್ತಿದಾರೆಂದೂ ತಿಳಿಯುವುದು. ಇವರ ಸಹಾಯಕ್ಕಾಗಿ ಎರಡು ಹಡಗುಗಳು ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗಿರುತ್ತವೆ.

ಎರಡನೇ ಸಲ ಭೂಕಂಪವಾದದ್ದು

ರಾಜಧಾನಿಯಾದ ಕಾನ್‌ಸ್ಟಂಟಿನೋಪಲ್ಲಿಗೂ ಏಡ್ರಿಯಾನೋಪಲ್ಲಿಗೂ ನಡುವೆ ಇರುವ ಪ್ರದೇಶದಲ್ಲೆಲ್ಲಾ ತಾ 10 ನೇ ಶನಿವಾರ ಮತ್ತೆ ಭೂಮಿಯು ಅರ್ಧ ನಿಮಿಷದ ತನಕ ಕಂಪಿಸಿತು. ಗ್ಯಾಲಿಪೊಲಿ ಎಂಬಲ್ಲಿ ನಾಕಿನಲ್ಲಾಗಿ ಎಲ್ಲಾ ಕಟ್ಟಡಗಳೂ ಅಲುಗಿ ಬಿರುಕುಬಿಟ್ಟು ಕೆಟ್ಟುಹೋದವು. ಗಾನೋಸ್ ಮತ್ತು ಮೈರಾ ಎಂಬ ಸಮುದ್ರ ತೀರ ಪಟ್ಟಣಗಳಲ್ಲಿ ದೀಪದ ಕಟ್ಟಡಗಳು ಅಪ್ಪಳಿಸಿ ಹಾಳಾದವು. ಸಮೀಪದ ಗ್ರಾಮಗಳು ಹತ್ತಿ ಉರಿಯುತ್ತಾ ಇವೆ. ಡಾರ್ಡನಲ್ಸ್‌ನಲ್ಲಿ ಇರುವ ಹಡಗುಗಳ ನೌಕರರು ಪಟ್ಟಣಕ್ಕೆ ಶತ್ರುಗಳು ಗುಂಡುಗಳನ್ನು ಹೊಡೆದವರೇನೋ ಎಂದು ಭ್ರಮಿಸಿದರು. ಆ ಪ್ರಾಂತ್ಯದಿಂದ ಓಡಿಬಂದವನು ಹೋರಾಗ್ರಾಮದಲ್ಲಿ 80 ಮಂದಿ ಮೃತಪಟ್ಟರೆಂದೂ, 100 ಜನರು ಗಾಯಪಟ್ಟರೆಂದೂ ಮೈರಿಯೋಫಿಟೋದಲ್ಲಿ 300 ಜನರು ಸತ್ತುಹೋಗಿ 600 ಮಂದಿಗೆ ಏಟು ಆಗಿದೆ ಎಂದೂ, ಈ ಎರಡನೇ ಗ್ರಾಮ ನಾಶವಾಯಿತೆಂದೂ ಹಲವು ಗ್ರಾಮಗಳು ಹತ್ತಿ ಉರಿಯುತ್ತಿವೆ ಎಂದೂ, ಎರಡು ಊರುಗಳು ಆಮೂಲಾಗ್ರವಾಗಿ ಮುಳುಗಿಹೋದವೆಂದೂ ಹೇಳುತ್ತಾರೆ.

ಮೃತಪಟ್ಟವರ ಸಂಖ್ಯೆ

ಪ್ಯಾರಿಸ್, ತಾ 11 ನೇ ಬಾನುವಾರ—ಈ ಭೂಕಂಪದಲ್ಲಿ 1,000 ಪ್ರಜೆಗಳು ಮೃತಪಟ್ಟರೆಂದೂ, 5 6 ಸಾವಿರ ಪ್ರಜೆಗಳು ಗಾಯಪಟ್ಟರೆಂದೂ ಕಾನ್‌ಸ್ಟಂಟಿನೋಪಲ್ ಪತ್ರಿಕೆಗಳು ತಿಳಿಸುವವು.

ಕಾನ್‌ಸ್ಟಂಟಿನೋಪಲ್, ತಾ 12 ನೇ ಸೋಮವಾರ—ಇದುವರೆಗೆ ಸಿಕ್ಕಿದುಬಂದಿರುವ ವರ್ತಮಾನಗಳಿಂದ ಭೂಕಂಪ ಪ್ರಾಪ್ತವಾದ ಪ್ರದೇಶದಲ್ಲಿ ಮೃತಪಟ್ಟವರೂ ಗಾಯಪಟ್ಟವರೂ 1,500 ಜನರೆಂದು ಊಹಿಸಲಾಗಿದೆ. ಸ್ಮರ್ನಾ ಪಟ್ಟಣಕ್ಕೂ ಈ ಭೂಕಂಪವು ವ್ಯಾಪಿಸಿತು, ಆದರೆ ನಷ್ಟವೇನೂ ಆಗಲಿಲ್ಲ.

ಏಡ್ರಿಯಾನೋಪಲ್‌ನಲ್ಲಿ ಆದ ನಷ್ಟಗಳು

ಏಡ್ರಿಯಾನೋಪಲ್ ವಿಲಾಯತಿನಲ್ಲೆಲ್ಲಾ 15,000 ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡು ಸಂಕಟಪಡುತ್ತಿದಾರೆ. ಅಲ್ಲಿಂದ ಗಾಯಪಟ್ಟು ಬಂದ 1,000 ಪ್ರಜೆಗಳನ್ನು ರಾಜಧಾನಿಯ ಆಸ್ಪತ್ರೆಯಲ್ಲಿಟ್ಟು ಸಂರಕ್ಷಿಸುತ್ತಿರುವರು. ಏಡ್ರಿಯಾನೋಪಲ್ ಪಟ್ಟಣದಲ್ಲೇ 20 ಮಸೀದಿಗಳೂ, ಅನೇಕ ಭಾರೀ ಕಟ್ಟಡಗಳೂ ಹಾಳಾದವು.

ಒಳದೇಶದ ವೃತ್ತಾಂತಗಳು

ಬೆಂಗಳೂರು ಸಿಟಿಯಲ್ಲಿ 100 ವರುಷ ತುಂಬಿದ ಒಬ್ಬ ಹಿಂದೂ ಹೆಂಗಸೂ 105 ವರುಷ ತುಂಬಿದ ಒಬ್ಬ ಮಹಮ್ಮದೀಯ ಹೆಂಗಸೂ ಕಳೆದ ವಾರ ಕಾಲವಾದರೆಂದು ತಿಳಿದುಬಂದಿದೆ.

* * *

ಅರಸೀಕೆರೆ ತಾಲ್ಲೂಕಿನಲ್ಲಿ ಹುಟ್ಟಿದ ಸಿವಿಲ್ ಮೊಕದ್ದಮೆಗಳು ಇನ್ನು ಮುಂದೆ ಶಿವಮೊಗ್ಗಾ ಮುನ್‌ಸಿಫ್ ಕೋರ್ಟಿನಲ್ಲಿ ದಾಖಲಾಗ ತಕ್ಕವೆಂದು ಚೀಫ್ ಕೋರ್ಟಿನವರು ಅಪ್ಪಣೆ ಕೊಟ್ಟಿದಾರೆ.

* * *

ಪಾಳ್ಯೇಗಾರ್ ವಂಗಡದ ವಿದ್ಯಾರ್ಥಿಗಳಿಗಾಗಿ ಬೆಂಗಳೂರು ಡೆಪ್ಟಿ ಕಮಿಷನರಾದ ಮೆ॥ ಕುಮಾರಸ್ವಾಮಿ ನಾಯಕರವರು ಮುಂದಾಳಾಗಿ ನಿಂತು ಬೆಂಗಳೂರಿನಲ್ಲಿ ಒಂದು ಬೋರ್ಡಿಂಗ್ ಸ್ಕೂಲನ್ನು ಇಡಿಸುತ್ತಾರೆಂದು ಕೇಳುತ್ತೇವೆ.

* * *

ಬೆಂಗಳೂರು ದಂಡಿನಲ್ಲಿ ದೊರಸಾಮಿ ಎಂಬೊಬ್ಬನು ತನ್ನ ಹೆಂಡತಿಯನ್ನು ಮೂರು ದಿನ ಒಂದು ಕೊರಡಿಯಲ್ಲಿಟ್ಟುಕೊಂಡು ಹಿಂಸೆಪಡಿಸಿದ್ದಲ್ಲದೆ ಇನ್ನು ಮೂರು ಜನರ ಸಹಾಯ ಪಡೆದು ಅವಳ ತಲೆ ಕೂದಲನ್ನು ಕತ್ತರಿಸಿ ಹಾಕಿದನೆಂದು ಮೊಕದ್ದಮೆ ಬಂದಿದೆ. ಇದು ಮುಂದಿನ ಸೋಮವಾರ ವಿಚಾರಣೆಯಾಗುವುದು.

* * *

ಮೈಸೂರು ಸರ್ಕಾರದ ರೈಲ್ವೆ ಇಂಜನಿಯರವರು ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೂ, ಬೌರಿಂಗ್‌ಪೇಟೆಯಿಂದ ಕೋಲಾರಕ್ಕೂ ರೈಲ್ ಹಾಕುವುದನ್ನು ಒಪ್ಪಿಕೊಂಡಿದಾರೆ. ಮೈಸೂರು ಹಾಸನದ ರೈಲ್ ವಿಷಯದಲ್ಲಿ ಅವರು ಶ್ರೀರಂಗಪಟ್ಟಣದಿಂದ ರಸ್ತೆ ಒಡೆಯುವಂತೆ ಮಾಡುವುದು ಅನುಕೂಲವೆಂದೂ, ಅರಸೀಕೆರೆಯಿಂದ ಹಾಸನಕ್ಕೆ ರೈಲು ಹಾಕುವುದು ಲಾಭಕರವೆಂದೂ ತಿಳಿಸಿರುವಂತೆ ಪ್ರಕಟವಾಗಿದೆ.

ಶ್ರೀಮನ್ಮಹಾರಾಜರವರು ಮೊನ್ನೆ ಮಂಗಳವಾರದ ದಿನ ಬೆಂಗಳೂರು ...ನಲ್ಲಿ ಘನಪ್ರಭುಗಳ ಮಧ್ಯೆ ದಯಮಾಡಿ, ವೈ ಎಂ ಸಿ ಎ ಎಂಬ ...ವನಸ್ಥರ ಸಂಘದ ಹೊಸ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರೆಂದೂ, ...ಟಿಷ್ ರೆಸಿಡೆಂಟರೂ ಅಲ್ಲಿ ಹಾಜರಾಗಿದ್ದರೆಂದೂ ತಿಳಿದುಬಂದಿದೆ

* * *

ಕೋಲಾರ್ ಚಿನ್ನದ ಗಣಿಗಳ ಪೊಲೀಸ್ ಸಿಬ್ಬಂದಿಗೆ ಸರ್ಕಾರದವರು ...ಪ್ಪು 1 ಮಂದಿ ಹೆಡ್ ಕಾನ್ಸ್ಟೇಬಲ್‌ಗಳನ್ನೂ, 10 ಮಂದಿ ಕಾನ್ಸ್ಟೇಬಲ್ ...ಳನ್ನು ನೇಮಿಸುವುದಕ್ಕೆ ವರುಷಕ್ಕೆ 8,280 ರೂಪಾಯಿ ಖರ್ಚನ್ನೂ, ಅವ ...ಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ 21,200 ರೂಪಾಯನ್ನೂ ಸ್ಯಾಂಕ್ಷನ್ ...ಮಾಡಿದಾರೆ

* * *

ಬೆಂಗಳೂರಿನಲ್ಲಿ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಸೇರಿ ಆಯುರ್ವೇದ ...ಷ್ಪೇಷನ್ ಎಂಬ ಸಭೆಯನ್ನು ಕಲ್ಪಿಸಿಕೊಂಡು, ಚಂದಾಹಣ ಕೂಡಿಸುತ್ತಿ ...ದೆ ಈ ಹಣದ ಬಡ್ಡಿಯಿಂದ ಆಯುರ್ವೇದಧರ್ಮಗಳನ್ನು ಕುರಿತು ಉಪನ್ಯಾಸಗ ...ನ್ನು ಮಾಡುವಂಥಾ ಸ್ಥಳ ಪಂಡಿತರುಗಳ ಪಂಡಿತರಿಗೆ ಬಹುಮಾನ ಕೊಡಬೇ ...ಕು ತೀರ್ಮಾನ ಮಾಡಿರುತ್ತಾರೆ

* * *

ಸರ್ಕಾರದವರು ಕೊಪ್ಪ ತಾಲ್ಲೂಕಿನಲ್ಲಿ ರೈತರಿಗೆ ಲೈಸೆನ್ಸು ಕೊಡುವ ...ಕಾರವನ್ನು ಅಲ್ಲಿನ ಫಾರೆಸ್ಟರಿಗೆ ತಪ್ಪಿಸಿ ಕೆಳಗೆ ಹೇಳುವವರಿಗೆ ವಹಿಸಿರು ...ತ್ತಾರೆ — ಮ|| ಗಳಾದ ಕೆಗ್ಗದ ಶ್ಯಾನುಭೋಗ ವೆಂಕಟಾಚಲೈಯನವರು, ಹರಿ ...ಹರಪುರದ ಶ್ಯಾ ಮಂಜಪ್ಪನವರು, ಬುಗ್ಗಂಡೆ ಶ್ಯಾ ಗುಮಾಸ್ತೆ ಸುಬ್ಬರಾ ...ವು, ಕೊಪ್ಪದ ಶ್ಯಾ ನಂಜುಂಡೈಯನವರು

* * *

ಬೆಂಗಳೂರು ಸಿಟಿಯಲ್ಲೂ ದಂಡಿನಲ್ಲೂ ವಿದ್ಯುಚ್ಛಕ್ತಿಯ ಸಹಾಯದಿಂದ ...ನಡೆಯುವಂಥಾ ಟ್ರಾಂಗಾಡಿಗಳನ್ನು ಇಡಿಸಬೇಕೆಂದು ಮೈಸೂರು ಸರ್ಕಾರದ ...ವು ತೀರ್ಮಾನ ಮಾಡಿದಾರಷ್ಟೆ ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯು ...ಕಳೆದ ವಾರ ಈ ಏರ್ಪಾಡನ್ನು ಒಪ್ಪಿಕೊಂಡರು ಇದಕ್ಕಾಗಿ ನಮ್ಮ ಸರ್ಕಾ ...ರವರು ಸುಮಾರು ಆರು ಲಕ್ಷ ರೂಪಾಯಿ ಖರ್ಚುಮಾಡುವವರಾಗಿದಾರೆ

* * *

ಬೆಂಗಳೂರು ದಂಡಿಗೆ ಸೇರಿದ ಕ್ಲೀವ್‌ಲೆಂಡ್ ಟೌನ್ ಎಂಬ ಮೊಹಲ್ಲೆಯಲ್ಲಿ ...ದು ಮನೆಯೊಳಗೆ 7 ಜನ ಗಂಡಸರೂ, ಇಬ್ಬರು ಹೆಂಗಸರೂ, ಒಬ್ಬ ಹುಡು ...ಗ ಸೇರಿ ಜೂಜಾಡುತ್ತಿದ್ದರೆಂದು ಮೊಕದ್ದಮೆ ಬಂದದ್ದನ್ನು ಮ್ಯಾಜಿಸ್ಟ್ರೇ ...ಟು ವಿಚಾರಣೆಮಾಡಿ ಹೆಂಗಸರನ್ನು ಖುಲಾಸ್ ಮಾಡಿ, ಆ ಮನೆಯ ಮಾಲೀಕ ...ನೂ ಇತರರಿಗೂ ಜುಲ್ಮಾನೆ ಹಾಕಿ, ಈ ಜುಲ್ಮಾನೆ ಹಣದಲ್ಲಿ ಅರ್ಧವನ್ನು ...ಹಿಡಿಸಿದವರಿಗೂ, ಅವರಿಗೆ ವರ್ತಮಾನ ತಿಳಿಸಿದವರಿಗೂ ಬಹುಮಾನವಾಗಿ ...ಕೊಡಬೇಕೆಂದು ತೀರ್ಮಾನಿಸಿರುತ್ತಾರೆ

* * *

ಬೆಂಗಳೂರು ಟಿ ಮ್ಯುನಿಸಿಪಲ್ ಮೆಂಬರುಗಳು ಓಟುಗಳನ್ನು ಹಾಕಿ ...ಪ್ರಸಿದ್ಧ ಉಸ್ಮಾನ್ ಖಾನ್‌ರನ್ನೂ, ರಾಮಚಂದ್ರಪ್ಪನವರನ್ನೂ, ಆದೆಪ್ಪನವ ...ರನ್ನೂ, ಹನುಮಂತಪ್ಪನವರನ್ನೂ ಈ ಸಲ ಪ್ರತಿನಿಧಿ ಸಭೆಯ ಮೆಂಬರಾಗಿ ...ಆರಿಸಿದಾರೆ ಆ ಮ್ಯುನಿಸಿಪಾಲಿಟಿಗೆ ಹೊಸ ಮೆಂಬರುಗಳ ಚುನಾವಣೆಯು ...ಬರುವ ತಿಂಗಳಲ್ಲಿ ನಡೆಯುತ್ತದಾಗಿದೆ ಈ ಚುನಾವಣೆಯಲ್ಲಿ ಮೇಲ್ಕಂಡ ...ರು ಮ್ಯುನಿಸಿಪಲ್ ಮೆಂಬರುಗಳಾಗದೆ ತಪ್ಪಿಹೋದರೆ ಇವರು ಪ್ರಜಾಪ್ರತಿನಿಧಿ ...ಸಭೆಗೆ ಮ್ಯುನಿಸಿಪಾಲಿಟಿಯ ಪ್ರತಿನಿಧಿಗಳಾಗಿ ಹೋಗುವುದು ಹ್ಯಾಗೋ ತಿಳಿ ...ಯುವದಿಲ್ಲ ಈ ಹೊಸ ಚುನಾವಣೆಯಾದ ಬಳಿಕ ಮೆಂಬರುಗಳನ್ನು ಗೊತ್ತು ...ಮಾಡಿದ್ದರೆ ಚೆನ್ನಾಗಿತ್ತೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ

* * *

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ರೈತಪ್ರಜೆಗಳ ಜಮೀನುಗಳನ್ನು ಹಾಳು ...ಮಾಡುತ್ತಿರುವ ಆನೆಗಳನ್ನು ಹಿಡಿಯುವುದಕ್ಕೆ ಬೇಳಂದೂರು ಕಾಡಿನ ಹುಲಿಯು ...ರ ಮಂಡಿಕಟ್ಟೆಯಲ್ಲೂ, ಚಂದ್ರಗುತ್ತಿ ಕಾಡಿನಲ್ಲಿ ಓರೆಗುಡ್ಡಕ್ಕೆ ನಗರ ...ಕ್ಕೂ ನಡುವೆಯೂ ಆನೆಗಳ ಖೆಡ್ಡಾವನ್ನು ಪ್ರಾರಂಭಿಸಬೇಕೆಂದು ಡೆಪ್ಯುಟಿ ...ಕಮಿಷನರ್‌ರವರು 10,000 ರೂಪಾಯಿನ ಅಂದಾಜಾ ಪಟ್ಟಿಯನ್ನು ತಯಾ ...ರುಮಾಡಿ ಸರ್ಕಾರಕ್ಕೆ ಕಳುಹಿಸಿದರು ಫಾರೆಸ್ಟ್ ಕನ್ಸರ್ವೇಟರವರು ಈ ...ಕ್ಕಾ ಕಾರ್ಯಗಳಿಗೆ 30 ರಿಂದ 11 ಸಾವಿರ ರೂಪಾಯಿ ವರೆಗೆ ಖರ್ಚಾಗ ...ಬಹುದೆಂದು ಸೂಚಿಸಿದರು ಗವರ್ನ್‌ಮೆಂಟಿನವರು ಸದ್ಯಕ್ಕೆ ಡೆಪ್ಯುಟಿ ಕಮಿಷನರ್‌ರ ...ವರ ಅಂದಾಜಾ ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿ, ಖೆಡ್ಡಾ ಕೆಲಸಗಳನ್ನು ...ಕೂಡಲೇ ಪ್ರಾರಂಭಿಸಬೇಕೆಂದು ಅಪ್ಪಣೆ ಕೊಡಿಸಿದಾರೆ

* * *

ಕೋಲಾರ್ ಚಿನ್ನದ ಗಣಿಗಳ ಆಸ್ಪತ್ರೆಯಲ್ಲಿ ಪ್ಲೇಗ್ ರೋಗಿಗಳಿಗೆ ...ಷೆ ಮಾಡುತ್ತಿದ್ದು, 1910 ನೇ ನವಂಬರ್ ತಾ 7 ರಲ್ಲಿ ಪ್ಲೇಗಿನಿಂದ ...ರಾದ ಆಸ್ಪತ್ರೆ ಅಸಿಸ್ಟೆಂಟ್ ಮೆ|| ಎಂ ಬಿ ಮರಿಯಪ್ಪಪಿಳ್ಳೆಯವರ ...ಸಂಸಾರಕ್ಕೆ ಜೀವನ ನಡೆಯುವುದಕ್ಕೋಸ್ಕರ ಮೈಸೂರು ಸರ್ಕಾರದವರು ಅವರ ...ಮಗನಾದ ಜೋಸೆಫ್ ರತ್ನವೇಲು ಎಂಬವನಿಗೆ 1910 ನೇ ನವಂಬರ್ ತಾ ...ರಿಂದ ಹನ್ನೆರಡು ವರುಷಗಳ ತನಕ ತಿಂಗಳಿಗೆ 15 ರೂಪಾಯಿನಂತೆ ಪೆನ್ಷನ್ ...ಕೊಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿದಾರೆ ತನ್ನ ಕರ್ತವ್ಯವನ್ನು ಮಾಡುವುದ ...ರಲ್ಲಿ ಪ್ರಾಣವನ್ನು ತೆತ್ತುಬಿಟ್ಟ ಈ ನೌಕರನ ವಿಷಯದಲ್ಲಿ ಸರ್ಕಾರದವರು ...ತೋರಿಸಿದ ದಯಾರಸವು ಸ್ತೋತ್ರಾರ್ಹವಾಗಿಯೂ, ನೌಕರರು ಸಾಮಾನ್ಯವಾಗಿ ...ಕರ್ತವ್ಯಧುರೀಣರಾಗುವಂತೆ ಪ್ರೋತ್ಸಾಹಕರವಾಗಿಯೂ ಇರುತ್ತದೆ

* * *

ಮುಳಬಾಗಲು ತಾಲ್ಲೂಕಿಗೆ ಸೇರಿದ ಸುಣ್ಣಂಗೂರಿನ ಮ|| ಅ ವೆಂಕಟರ ...ಮಣಪ್ಪನವರು ಬರೆಯುವುದು — ಇಲ್ಲಿ ಕೆಲವು ಪುರುಷರಿಗೂ, ಸ್ತ್ರೀಯರಿಗೂ ...ಒಂದು ವಿಧ ವ್ಯಾಧಿ ಬರುತ್ತದೆ ಅದರ ಚಿಹ್ನೆ ಹ್ಯಾಗಂದರೆ ಚೆನ್ನಾಗಿಯೂ, ಆರೋ ...ಗ್ಯವಾಗಿಯೂ ಇರುವಂತೆಯೇ ಇರುವದು ವ್ಯಾಧಿ ಹುಟ್ಟುವಾಗ ಇದ್ದ ...ಕ್ಕಿದ್ದಹಾಗೆ ಥಕ್ಕನೆ ಒಂದು ಕೂಗು ಕೂಗುವದು ಒಂದು ವಿಧವಾದ ದೃಷ್ಟಿ ...ಯಿಂದ ಮೇಲೆ ನೋಡುತ್ತ ಬಿದ್ದುಬಿಡುವದು, ಪ್ರಜ್ಞೆ ಇರುವದಿಲ್ಲ ಕೈಕಾಲುಗಳು ಝಾಡಿ ...ಸುವದು ಬಾಯಲ್ಲಿ ಜೊಲ್ಲು ಸೋರುವದು ಈ ರೀತಿ ಆಗಿ ½, ¼ ಗಂಟೆ ...ಯವರೆಗೆ ಹೀಗೆ ಇದ್ದು ಅನಂತರ ಚನ್ನಾಗಿಯೇ ಆಗುವದು ಇದು ಕೆಲವರಿಗೆ 1, 2, 3 ಸಂವತ್ಸರಕ್ಕೆ ಒಂದು ದಫಾದಂತೆಯೂ, ಕೆಲವರಿಗೆ 1, 2, 3, 4 ತಿಂಗಳಿಗೆ ಒಂದಾವರ್ತಿಯೂ ಬರುತ್ತೆ ಇದು ಮೂರ್ಛೆ ವ್ಯಾಧಿ ಎಂದು ಕೆಲವರೂ, ಹಿಸ್ಟೀರಿಯಾ ಎಂದು ಕೆಲವರೂ ಹೇಳುತ್ತಾರೆ ಎಷ್ಟು ಔಷಧಗಳು ಕೊಡಿಸಿದರೂ ಗುಣವಿಲ್ಲ ಮಹನೀಯರ್ಯಾರಾದರೂ ನೋಡಿ ಇಂಥಾ ರೋಗ, ಇಂಥಾ ಚಿಕಿತ್ಸೆ ಮಾಡಿದರೆ ನಿವಾರಣೆ ಆಗುತ್ತೆಂದು ತಿಳಿಸ್ಯಾರೆಂದು ನಂಬಿ ಬರೆದು ಇದ್ದೇನೆ "

ಮೈಸೂರು ಗೆಜೆಟ್ ಸಂಗ್ರಹ

ಮ|| ಬಾಳೆನಂಜಪ್ಪನವರನ್ನು ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದ ಯೂನಿಯನ್ ಪಂಚಾಯತಿ ಮೆಂಬರಾಗಿ ನೇಮಿಸಿದೆ

ಮ|| ಅಕ್ಕಸಾಲೆ ಭದ್ರಪ್ಪನವರನ್ನು ಇನ್ನೈದು ವರುಷ ಹಿರಿಯೂರು ಟವನ್ ಮ್ಯುನಿಸಿಪಲ್ ಮೆಂಬರಾಗಿ ನೇಮಿಸಿದೆ

ಮ|| ಸಿ ಬಿ ರಾಮರಾಯರು ಸರ್ವೆ ಕೆಲಸವನ್ನು ಕಲಿಯುವಾಗ್ಗೆ ಮ|| ಜಿ ಸಂತಾನಂ ಅಯ್ಯಂಗಾರರ್ರು, ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಬೆಂಗಳೂರು ತಾಲ್ಲೂಕು ಅಮಲ್ದಾರ್ ಮೆ ಎ ಹೇಸ್‌ಯವರನ್ನು ಅ|| ಕಮಿಷನರಾಗಿ ಬಡ್ತಿಮಾಡಿ, ತುಂಕೂರು ಡಿಸ್ಟ್ರಿಕ್ ಪೋಲೀಸ್ ಸೂಪರಿಂಟೆಂಡೆಂಟ್ ಕೆಲಸಕ್ಕೆ ವರ್ಗಮಾಡಿದೆ

ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್ ಮೆ|| ವೈ ನರಸಿಂಗರಾಯರನ್ನು ಬೆಂಗಳೂರು ತಾಲ್ಲೂಕಿಗೆ ವರ್ಗಮಾಡಿದೆ

ಎಕ್ಸೈಸ್ ಆಫೀಸರ್ ಮೆ|| ಜಿ ಹನುಮಂತರಾಯರು ಮದ್ದಗಿರಿ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಕಾಲದಲ್ಲಿ ಅವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಮುಳಬಾಗಲ ತಾಲ್ಲೂಕು ಅಮಲ್ದಾರ್ ಮೆ|| ವಿ ಎಸ್ ವಾಸುದೇವರಾಯರಿಗೂ, ಶ್ರೀನಿವಾಸಪುರದ ತಾಲ್ಲೂಕು ಅಮಲ್ದಾರ್ ಮ|| ಸಿ ಲಕ್ಷ್ಮಣರಾಯರಿಗೂ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಮುಂದೆ ಹೇಳುವ ಸಬ್ ರೆಜಿಸ್ಟ್ರಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ — ಮೆ|| ಗಳಾದ ಎನ್ ಟಿ ವರಸುಂದರೈಯಂಗಾರರು ಚನ್ನಪಟ್ಟಣದಿಂದ ಅರಕಲಗೂಡಿಗೆ ಬಿ ಆನಂದರಾಯರು ಕುಣಿಗಲಿನಿಂದ ಕಡೂರಿಗೆ ಜಿ ಶ್ರೀಕಂಠರಾಯರು ನಂಜನಗೂಡಿನಿಂದ ಮೈಸೂರಿಗೆ, ಎಚ್ ವೈ ವಾಯುನಾಚಾರ್ರು ಒಕ್ಕಲಿಗನಹಳ್ಳಿಯಿಂದ ನಂಜನಗೂಡಿಗೆ, ಎಂ ವೆಂಕಟಾಚಾರ್ರಿಯಂಗಾರ್ರು ಕಡೂರಿನಿಂದ ಶಿಡ್ಲಘಟ್ಟಕ್ಕೆ, ಟಿ ರಾಮಸ್ವಾಮ್ಯಯಂಗಾರ್ರು ಶಿಡ್ಲಘಟ್ಟದಿಂದ ಗುಂಡ್ಲುಪೇಟೆಗೆ, ಕೆ ವೆಂಕಟಾಚಾರ್ರು ಅರಕಲಗೂಡಿನಿಂದ ಚಿಕ್ಕನಾಯಕನಹಳ್ಳಿಗೆ, ಎಲ್ ಕೃಷ್ಣರಾಯರು ಮೈಸೂರಿನಿಂದ ಬೇಲೂರಿಗೆ, ಎ ಟಿ ಪುಟ್ಟಣ್ಣನವರು ಗುಂಡ್ಲುಪೇಟೆಯಿಂದ ಕೃಷ್ಣರಾಜಪೇಟೆಗೆ, ಎ ಶ್ರೀನಿವಾಸಮೂರ್ತಿಯವರು ಬೇಲೂರಿನಿಂದ ಯಡತೊರೆಗೆ ಎಸ್ ವೆಂಕಟರಂಗೈಯಂಗಾರ್ರು ಕೃಷ್ಣರಾಜಪೇಟೆಯಿಂದ ಕುಣಿಗಲಿಗೆ, ಸುಬ್ಬರಾವ್ ಎ ಬಾಪಟ್‌ಯವರು ಯಡತೊರೆಯಿಂದ ಚನ್ನಪಟ್ಟಣಕ್ಕೆ

ತಾಲ್ಲೋಕು ವರ್ತಮಾನಗಳು.

ಹಾಸನ — ಈ ಪ್ರಾಂತ್ಯದಲ್ಲಿ ಮಳೆ ಸಮೃದ್ಧಿಯಾಗಿ ಆಗಿದೆ ಈಗ 4 6 ದಿನದಿಂದ ಬಿಸಿಲು ಕಾಯುತ್ತಲೂ, ಅನಂತರ 3 4 ದಿನ ಮಳೆ ಬರುತ್ತಲೂ ಇರುವದು ಗದ್ದೆ, ಹೊಲಗಳು ಬಹು ಚೆನ್ನಾಗಿವೆ ಸಕಾಲದಲ್ಲಿ ಮಳೆ ಬಾರದ ಕಾರಣ ಕೆಲವು ಕಡೆ ಮಾತ್ರ ಹೊಲದ ಪೈರು ಸ್ವಲ್ಪ ಕಮ್ಮಿಯಾಯಿತು ಧಾನ್ಯ ವಾಸಿಗಳು ಮಾತ್ರ ಯಥಾಸ್ಥಿತಿಯಲ್ಲಿಯೇ ಇದ್ದು ಕಷ್ಟವಾಗಿದೆ — ಇಲ್ಲಿನ ಮ್ಯುನಿಸಿಪಾಲಿಟಿಯ ಚಟುವಟಿಕೆಯು ಇನ್ನೂ ಸರಿಯಾಗಲಿಲ್ಲ — ಈ ತಾಲ್ಲೂಕು ಅಮಲ್ದಾರ್ ಮ|| ರಾಮಸ್ವಾಮ್ಯಯಂಗಾರ್ರಿಗೆ ಅರಕಲಗೂಡಿಗೂ, ಅಲ್ಲಿನ ಅಮಲ್ದಾರ್ ಮ|| ರಾಜಗೋಪಾಲಚಾರ್ರಿಗೆ ಈ ತಾಲ್ಲೂಕಿಗೂ ವರ್ಗವಾಗಿದೆ ಮೊದಲನೆಯವರು ಈ ತಾಲ್ಲೂಕಿನ ಪ್ರಜೆಗಳಲ್ಲಿ ಬಹು ಒಳ್ಳೇ ಅಭಿಮಾನಶಾಲಿಗಳಾಗಿದ್ದರು ಈಗ ಬರುವವರೂ ಅವರ ಮೇಲುಪದ್ಧತಿಯನ್ನೇ ಅನುಸರಿಸಿದರೆ ಕೀರ್ತಿಶಾಲಿಗಳಾಗುವರು — ಇದುವರೆಗೂ ಅರಸೀಕೆರೆಯಿಂದ ಈ ಊರಿಗೆ ಕೇವಲ ತ್ವರ್ಯವಾಗಿ ರೈಲ್ ಹಾಕುವರೆಂಬ ವದಂತಿಯು ಎಲ್ಲೆಲ್ಲಿಯೂ ಹರಡಿಕೊಂಡಿತ್ತು ಈಚೆಗೆ ಶ್ರೀರಂಗಪಟ್ಟಣದಿಂದ ಕೊಣನೂರಿಗೆ ರೈಲ್ ಹಾಕುವರೆಂದು ಪ್ರಕಟವಾಗಿರುವುದನ್ನು ಕೇಳಿ ಈ ಪ್ರಾಂತ್ಯದ ನಿವಾಸಿಗಳೆಲ್ಲರೂ ವ್ಯಸನಪಡುತ್ತಿದಾರೆ ಹೇಗಾದರೂ ಡಿಸ್ಟ್ರಿಕ್ಟಿನ ಮುಖ್ಯಪಟ್ಟಣವಾದ ಈ ಹಾಸನಕ್ಕೆ ಬಹು ತ್ವರ್ಯವಾಗಿ ರೈಲ್ ಹಾಕುವರೆಂದು ಈ ಪ್ರಾಂತ್ಯದ ನಿವಾಸಿಗಳೆಲ್ಲರೂ ಬಹು ಆಶೆಯಿಂದ ನಿರೀಕ್ಷಿಸಿಕೊಂಡಿದಾರೆ ಈಗ್ಗೆ 20 ವರ್ಷಗಳಿಂದಲೂ ಮೈಸೂರಿನಿಂದ ಈ ಊರು ಮಾರ್ಗವಾಗಿ ಅರಸೀಕೆರೆಗೆ ರೈಲ್ ಮಾರ್ಗವನ್ನು ಕೂಡಿಸುವುದರಿಂದ ಪ್ರಜೆಗಳಿಗೆ ತುಂಬಾ ಅನುಕೂಲವೂ, ಸರ್ಕಾರಕ್ಕೆ ವಿಶೇಷ ಲಾಭಕರವೂ ಆಗುವುದೆಂದು ಅನುಭವಶಾಲಿಗಳಾದ ಅನೇಕಾನೇಕ ಅಧಿಕಾರಿಗಳೂ, ವಿವೇಕಶಾಲಿಗಳಾದ ಮಹಾಜನಗಳೂ ಅಭಿಪ್ರಾಯಪಡುತ್ತಿದ್ದುದನ್ನು ನಮ್ಮ ಸರ್ಕಾರದವರು ಒಪ್ಪಿಕೊಂಡಿದ್ದು ಈಗ ಬೇರೆ ಯೋಚನೆ ಮಾಡಿರುವುದನ್ನು ಕೇಳಿ ಎಲ್ಲರೂ ಬಹು ವಿಷಾದಪಡುವರು — ಇಂಗ್ಲಾಂಡ್ ಸೀಮೆಯಲ್ಲಿ ಘನತೆಯನ್ನು ಹೊಂದಿ 16 ವರ್ಷಗಳಿಂದಲೂ ಸ್ತ್ರೀ ಸಮಾಜಕ್ಕೆ ಮುಖ್ಯಾಧಿಕಾರಿಯಾಗಿದ್ದು, ಕೇವಲ ಪರಾರ್ಥೈಕ ಪರಾಯಣೆಯರಾಗಿ ಪ್ರಪಂಚದ ನಾನಾ ಭಾಗಗಳಲ್ಲಿಯೂ ತಮ್ಮ ಪರೋಪಕಾರಶಕ್ತತೆಯನ್ನು ವಿವಿಧ ರೀತಿಯಲ್ಲಿ ನೆಲೆಗೊಳಿಸಿರುವ ಘನ ವೈಸ್‌ಮನ್ ಧೊರೆಸಾನಿಯವರು ಪರಲೋಕಗತರಾದ ಸಂಗತಿಯನ್ನು ಪ್ರಸ್ತಾಪಿಸಿ ರೆವ್ ಎಚ್ ಸ್ಪೆನ್ಸರ್ ಬೋದಕರವರು ಕಳೆದ ಭಾನುವಾರ 11 ನೆ ತಾ ಪ್ರಾತಃಕಾಲ ಮಿಷನ್ ದೇವಾಲಯದಲ್ಲಿ ಆ ಧೊರೆಸಾನಿಯವರ ಪೋಷಣೆಗೆ ನಾನಾ ರೀತಿಯಲ್ಲಿ ಬಾಧ್ಯಪಟ್ಟವರಾದ ಇಲ್ಲಿನ ಕ್ರೈಸ್ತ ಸಭಾ ಸ್ತ್ರೀಯರಿಗೆಲ್ಲಾ ಅವರ ಗುಣಕಥನರೂಪವಾದ ಪ್ರಸಂಗಗಳನ್ನು ನಡಿಸಿದರು ಇದನ್ನು ಕೇಳಿದವರೆಲ್ಲರೂ ಆಕೆಯ ಮಾದರಿಯನ್ನು ಅನುಸರಿಸುವಂತೆಯೇ ಬಹು ವಿಶೇಷವಾದ ಸುಪ್ರೇರಣೆಯನ್ನು ಹೊಂದಿದರೆನ್ನುವುದರಲ್ಲಿ ಸಂದೇಹವಿಲ್ಲ

ಚಿಕ್ಕಮಗಳೂರು — ಈಗ 3 4 ದಿನಗಳಿಂದ ಮಳೆ ಬಾರದೆ ಆಕಾಶವು ನಿರ್ಮಲವಾಗಿ ಬಿಸಿಲು ಕಾಯುತ್ತಾ ಇದೆ ಹವಾ ಆರೋಗ್ಯವಾಗಿ ಜನಗಳಿಗೆ ಹರ್ಷವನ್ನುಂಟುಮಾಡಿದೆ — ಕಳೆದ ಸೋಮವಾರದಿಂದ ಇಲ್ಲಿನ ಮೋಟಾರ್ ಸರ್ವಿಸ್ ಕಂಪನಿಯವರು ಪ್ಯಾಸೆಂಜರ್ ಮೋಟಾರ್ ಗಾಡಿಗಳನ್ನು ಕಡೂರಿಗೆ ಬಿಡಲು ಉಪಕ್ರಮಿಸಿದಾರೆ ಕಳೆದ ಭಾನುವಾರ ಸಾಯಂಕಾಲ ಮೇಲ್ಕಂಡ ಕಂಪನಿಯವರು ಆರಂಭ ಕೂಟವನ್ನು ಬಹು ಆಡಂಬರದಿಂದ ನೆರವೇರಿಸಿದರು 5 ಗಂಟೆಗೆ ಸರಿಯಾಗಿ ಚಿಕ್ಕಮಗಳೂರಿನ ಮಹಾಜನಗಳ ಸಭೆಯನ್ನು ಸೇರಿಸಿ ಅಲ್ಲಿಗೆ ಡೆಪ್ಯುಟಿ ಕಮಿಷನರ್ ಮ|| ಸುಬ್ರಹ್ಮಣ್ಯ ಅಯ್ಯರವರನ್ನೂ ಸೆಷನ್ಸ್ ಜಡ್ಜ್ ಮೆ|| ಹಂಜಾಹುಸ್ಸೇನ್ ಸಾಹೇಬರನ್ನೂ ಇತರ ಸರಕಾರಿ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಬರಮಾಡಿಕೊಂಡು ಅವರ ಮೂಲಕ ಈ ಪ್ರತಿಷ್ಠಾ ಕಾರ್ಯವನ್ನು ಜರುಗಿಸಿದರು ಈ ಕಂಪೆನಿಯವರು ಇಲ್ಲಿನ ಅಂಜುಮನ್ ಇಸ್ಲಾಮಿಯಾ ಕ್ಲಬ್ಬಿಗೆ ಸೇರಿದವರಾಗಿದಾರೆ — ಈ ಸಂಘವು ಮೆ|| ಹಂಜಾಹುಸ್ಸೇನ್ ಸಾಹೇಬರ ಮತ್ತು ಇತರ ಮಹಮ್ಮದೀಯ ದೊಡ್ಡ ಮನುಷ್ಯರ ವಿಚಾರಣೆಯಿಂದ ಪ್ರಾರಂಭವಾಗಿ ಈಗ್ಗೆ ಮೂರು ವರುಷಗಳಾದವು ಈ ಕ್ಲಬ್ಬಿನವರು ಮುಸಲ್ಮಾನರ ಉಪಯೋಗಾರ್ಥವಾಗಿ ಒಂದು ರೀಡಿಂಗ್ ರೂಮನ್ನೂ ಒಂದು ನೈಟ್ ಸ್ಕೂಲನ್ನೂ ಸ್ಥಾಪಿಸಿರುವುದಲ್ಲದೆ ಈ ಕ್ಲಬ್ಬನ್ನು ಪುಷ್ಟೀಕರಿಸುವ ಬಗ್ಗೆ ಈಚೆಗೆ ಒಂದು ಸೋಡಾ ವಾಟರ್ ಕಾರ್ಖಾನೆಯನ್ನೂ ಏರ್ಪಡಿಸಿದಾರೆ ಈ ವರೆಗೂ ಇಸ್ಲಾಮಿಯಾ ಕ್ಲಬ್ ಅಭಿವೃದ್ಧಿಸ್ಥಿತಿಯನ್ನೈದಿರುವುದರಿಂದ ಜನೋಪಯೋಗವಾದ ಮತ್ತೊಂದು ಸಾಹಸಕಾರ್ಯಕ್ಕೆ ಕೈಹಾಕಲು ಪ್ರಯತ್ನಿಸಿದಾರೆ ಮೇಲ್ಕಂಡ ವಿಷಯಗಳನ್ನು ಕುರಿತ ರಿಪೋರ್ಟನ್ನು ಇಸ್ಲಾಮಿಯಾ ಕ್ಲಬ್ಬಿನ ಮೆಂಬರುಗಳಲ್ಲಿ ಮೂವರು ಉರ್ದು ಭಾಷೆಯಲ್ಲಿಯೂ ಮತ್ತೊಬ್ಬರು ಇಂಗ್ಲಿಷ್ ಭಾಷೆಯಲ್ಲಿಯೂ ಓದಿದರು ಇದಾದ ಮೇಲೆ ಮೆಂಬರುಗಳು ತಮ್ಮ ಕ್ಲಬ್ಬಿನ ಪರವಾಗಿ ಅಗ್ರಾಸನವನ್ನು ವಹಿಸಿದ್ದ ಡೆಪ್ಯುಟಿ ಕಮಿಷನರ್ ಸಾಹೇಬರನ್ನೂ ಇತರ ದೊಡ್ಡ ಮನುಷ್ಯರನ್ನೂ ವಂದಿಸಿದರು ಅನಂತರ ಅಗ್ರಾಸನರು ಕ್ಲಬ್ಬಿನ ಮೆಂಬರುಗಳಿಗೆ ಪ್ರೋತ್ಸಾಹವನ್ನುಂಟುಮಾಡತಕ್ಕ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು ಈ ಭಾಷಣದ ಮುಖ್ಯಾಭಿಪ್ರಾಯವೇನಂದರೆ — ಮೆಂಬರುಗಳು ನನ್ನನ್ನು ಮೋಟಾರ್ ಸರ್ವಿಸ್ ಕಂಪೆನಿಗೆ ಮುಖ್ಯ ಪೋಷಕರಾಗಿರಬೇಕೆಂದು ಕೇಳಿಕೊಂಡಿದಾರೆ ನನ್ನ ಪಾಲನೆಯಲ್ಲಿ ಇದು ಏಳಿಗೆ ಹೊಂದುವುದಕ್ಕಿಂತಲೂ ಈ ಊರಿನ ಪ್ರಜೆಗಳ ಪಾಲನೆಯಿಂದ ವೃದ್ಧಿಯಾಗುವುದೆಂಬುದರಲ್ಲಿ ಸಂದೇಹವಿಲ್ಲ ಇಂಥಾ ಜನೋಪಯೋಗವಾದ ಕಾರ್ಯದಲ್ಲಿ ಸ್ವದೇಶೀಯರಾದ ಮಹಮ್ಮದೀಯ ಮಂಡಲಿಯವರು ಪ್ರವರ್ತಿಸಿರುವುದು ತುಂಬಾ ಶ್ಲಾಘನೀಯವಾದದ್ದು ಈ ಚಿಕ್ಕಮಂಗಳೂರಿಗೆ ಬ್ರಾಂಚ್ ರೈಲ್ವೆ ಹಾಕಬೇಕೆಂಬ ಆಲೋಚನೆಯು ಬಹುಕಾಲದಿಂದಲೂ ನಡೆಯುತ್ತಾ ಇದೆ ಆ ಆಲೋಚನೆಯು ಸಿದ್ಧಿಗೆ ಬರುವುದು ಇನ್ನೂ ತಡವಾದರೂ ಅಷ್ಟರವರೆಗೆ ಪ್ರಯಾಣದ ಸೌಲಭ್ಯಕ್ಕಾಗಿ ತಕ್ಕ ಏರ್ಪಾಡು ಮಾಡುವುದು ಆವಶ್ಯಕವೇ ಆಗಿದೆ ಈಗ ಜಾರಿಯಲ್ಲಿರುವ ಟಾಂಗಾ ಮತ್ತು ಜಟ್ಕಾ ಸರ್ವಿಸ್ಸಿನಿಂದ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗಿದೆ ಇದರ ಜೊತೆಗೆ ಒಂದು ಮೋಟಾರ್ ಸರ್ವಿಸ್ ಇಡುವುದರಿಂದ ಮತ್ತಷ್ಟು ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ ಇಸ್ಲಾಮಿಯಾ ಕ್ಲಬ್ಬಿನವರು ಕನಿಷ್ಟಪಕ್ಷ ಇಲ್ಲಿಗೆ ರೈಲು ಬರುವವರಿಗೂ ಇದನ್ನು ಕ್ರಮವಾಗಿ ನಡಿಸುವರೆಂದು ನಂಬುತ್ತೇನೆ ಒಂದು ಕಾರ್ಯವನ್ನು ಪ್ರಾರಂಭಿಸುವುದೇನೂ ದೊಡ್ಡದಲ್ಲ, ಆದರೆ ಅದನ್ನು ಸ್ಥಿರವಾಗಿ ನಡಿಸುವುದೇ ಪ್ರಾಮುಖ್ಯವಾದ ಅಂಶವಾಗಿದೆ ಈ ಅಂಜುಮನ್ ಇಸ್ಲಾಮಿಯಾ ಕ್ಲಬ್ಬು ಎಲ್ಲಾ ಭಾಗಗಳಲ್ಲಿಯೂ ವೃದ್ಧಿಗೆ ಬರಲೆಂದು ಹಾರೈಸುತ್ತೇನೆ ಎಂಬುವುದೇ ಇದಾದ ಮೇಲೆ ಅಗ್ರಾಸನರಿಗೂ ಹಜರತ್ ಹಂಜಾಹುಸ್ಸೇನ್ ಸಾಹೇಬರಿಗೂ ಹಾರಾ ತುರಾಯಿ ಲಾವೆಂಡರ್ ಪನ್ನೀರುಗಳನ್ನು ಸಮರ್ಪಿಸಿದ ಮೇಲೆ ಇತರ ದೊಡ್ಡ ಮನುಷ್ಯರಿಗೆಲ್ಲಾ ಫಲ ಪುಷ್ಪ ಲಾವೆಂಡರ್ ಪನ್ನೀರುಗಳು ಹಂಚಲ್ಪಟ್ಟವು ಎಲ್ಲರೂ ಫಲಪುಷ್ಪಾದಿಗಳನ್ನು ಸ್ವೀಕರಿಸಿ ಮೋಟಾರ್ ಸರ್ವಿಸ್ ಕಂಪನಿಗೆ ಶ್ರೇಯಸ್ಸುಂಟಾಗಲೆಂದು ಹಾರೈಸಿದರು ಅನಂತರ ಜೋಯಿಸರ ಹೇಳಿಕೆಯಂತೆ ರಾಹುಕಾಲವನ್ನು ಕಳೆದ ಕೊಂಡು ಶುಭಲಗ್ನದಲ್ಲಿ ಅಂದರೆ 6 ಗಂಟೆಗೆ ಸರಿಯಾಗಿ ಕಂಪನಿಯವರು ತಾವು ತರಿಸಿರುವ ಎರಡು ಮೋಟಾರ್ ಗಾಡಿಗಳಲ್ಲಿ ಡೆಪ್ಯುಟಿ ಕಮಿಷನರ್ ಮುಂತಾದ ದೊಡ್ಡ ಮನುಷ್ಯರನ್ನು ಕುಳ್ಳಿರಿಸಿ ಊರೊಳಗೆಲ್ಲಾ ಸವಾರಿ ಮಾಡಿಸಿದರು ಈ ನೂತನ ಕಂಪೆನಿಯು ಶೀಘ್ರವಾಗಿ ವೃದ್ಧಿಗೆ ಬರಲೆಂದು ಹಾರೈಸುವವರಾಗಿರುತ್ತೇವೆ — ಸೆಷನ್ಸ್ ಜಡ್ಜ್ ಮೆ|| ಹಂಜಾಹುಸ್ಸೇನ್ ಸಾಹೇಬರು ಕಳೆದ ವಾರ ಇಲ್ಲಿಗೆ ದಯಮಾಡಿ ನಾಲ್ಕಾರು ಸೆಷನ್ಸ್ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತಾ ಇದಾರೆ ಕೆಲವು ಮೊಕದ್ದಮೆಗಳನ್ನು ಆಗಲೇ ವಿಚಾರಣೆಮಾಡಿ ತೀರ್ಪು ಕೊಟ್ಟದ್ದಾಯಿತು — ಇಲ್ಲಿನ ತಾಲ್ಲೂಕ್ ಕಚೇರಿಯಲ್ಲಿ ಅಮಲ್ದಾರರು ಮಧ್ಯಾಹ್ನ 2 3 ಗಂಟೆಗೆ ಮೊಕದ್ದಮೆಗಳನ್ನು ವಿಚಾರಣೆಮಾಡುವುದಕ್ಕೆ ಹಿಡಿದು ರಾತ್ರಿ 9 10 ಗಂಟೆಯ ವರೆಗೂ ಕಚೇರಿಯನ್ನಿಟ್ಟಿರುತ್ತಾರೆಂತಲೂ, ಇದರಿಂದ ಕಚೇರಿಗೆ ಹೋಗುವ ಜನಗಳಿಗೆ ತುಂಬಾ ಅನಾನುಕೂಲವಾಗಿದೆಯೆಂತಲೂ ಜನರು ಮಾತನಾಡಿಕೊಳ್ಳುತ್ತಾರೆ ವಿಚಾರಣೆಗೆ ಹೋಗತಕ್ಕವರು ಈ ಮಳೆಗಾಲದಲ್ಲಿ ಹೊರಗೆ ನಿಂತಿರಬೇಕೆಂದರೆ ಕೇವಲ ಅನಾನುಕೂಲವೇ ಸರಿ ನಮ್ಮ ಅಮಲ್ದಾರರು ಇದನ್ನು ಯೋಚಿಸಿ ಪ್ರಜೆಗಳಿಗೆ ಅನುಕೂಲವಾಗತಕ್ಕರೀತಿ ಏರ್ಪಾಡು ಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ

ವೇಲ್ಸ್ ದೇಶಕ್ಕೆ ಸೇರಿದ ಮೋರಿಸ್ಟನ್ ಎಂಬ ಊರಿನ ಪೋಸ್ಟ್ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದ 17 ವರುಷದ ಡೆವಿಡ್ ಮಾರ್ಗನ್ ಎಂಬವನು ಪಿಂಚಿಣಿದಾರರಿಗೆ ಸೇರತಕ್ಕ ಹಣವನ್ನು ತಿಂದುಹಾಕುತ್ತಿದ್ದನೆಂದು ಮೊಕದ್ದಮೆ ಆಯಿತು ಜಡ್ಜಿಯು ವಿಚಾರಿಸಿ ಅಪರಾಧಿಗೆ ಶಿಕ್ಷೆಯನ್ನು ವಿಧಿಸದೆ ಇದ್ದ ವೇಳೆಯಲ್ಲಿ — ಈ ಅಪರಾಧಿಗೆ ಪೋಸ್ಟ್ ಇಲಾಖೆಯವರು ವಾರಕ್ಕೆ ರೂ 3 12 0 ಯಂತೆ ಸಂಬಳ ಕೊಡುತ್ತಾರೆ ಇಷ್ಟು ಸಣ್ಣ ವಯಸ್ಸಿನವರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದೂ, ಇಷ್ಟು ಸ್ವಲ್ಪ ಸಂಬಳ ಕೊಡುವುದೂ ಸಹಜವಾಗಿಲ್ಲ ಇದರಿಂದ ಪೋಸ್ಟ್ ಇಲಾಖೆಯ ಕೆಲಸಗಳು ಕೆಡುವವು ಎಂದು ಬರೆದಿರುತ್ತಾರೆ

* * *

ಈಜಿಪ್ಟಿನಲ್ಲಿ ಪರಮಾಶ್ಚರ್ಯಕರವಾದ ಎರಡು ಸಂಗತಿಗಳು ಕೋರ್ಟಿನ ವಿಚಾರಣೆಯಲ್ಲಿ ಹೊರಪಟ್ಟಿರುತ್ತವೆ ಮಹಮುದ್ ಆಗಾ ಎಂಬಾತನ ಮಗಳು 1792 ನೇ ಇಸವಿಯಲ್ಲಿ ಹುಟ್ಟಿ ಈಗ ಅವಳಿಗೆ 120 ವರುಷ ತುಂಬಿದೆ ಎಂದು ಗೊತ್ತಾಯಿತು ಈಕೆ ಒಂದು ಶತಮಾನದ ಹಿಂದೆ ನಡೆದ ವೃತ್ತಾಂತಗಳನ್ನು ಬಹಳ ಚನ್ನಾಗಿ ವಿವರಿಸಿ ಹೇಳುತ್ತಾಳೆ ಇನ್ನೊಂದು ವಿಷಯವೇನೆಂದರೆ, ಗಡ್ಡ ನರೆತಿದ್ದ ಒಬ್ಬ ಮಹಮದೀಯನನ್ನು ಪೋಲೀಸಿನವರು ಹಿಡಿದು ಅವನು ಉಪ್ಪಿನ ಕಾಯಿ ಕದ್ದನೆಂದು ಮೊಕದ್ದಮೆ ತಂದರು ಮ್ಯಾಜಿಸ್ಟ್ರೇಟರು ಬಹಳ ದೀರ್ಘವಾಗಿ ವಿಚಾರಿಸಿ ಮಹಮ್ಮದೀಯ ಅಪರಾಧಿಗೆ 112 ವರುಷ ತುಂಬಿದೆ ಎಂದು ಸಾಕ್ಷಿಗಳಿಂದ ರುಜುವಾತು ಬಂದದ್ದನ್ನು ನೋಡಿ ಆಶ್ಚರ್ಯಪಟ್ಟರು ಇಂಥವನನ್ನು ಸರಿಯಾಗಿ ನೋಡಿಕೊಳ್ಳುವವರು ಯಾರಾದರೂ ಇದ್ದಾರೆಯೇ ಎಂದು ವಿಚಾರಿಸಿದ್ದರಲ್ಲಿ ಅವನ ರಕ್ತಸಂಬಂಧಿಗಳೆಲ್ಲಾ ಮೃತಪಟ್ಟರೆಂದೂ, ಅವನ ತಾಯಿ ಒಬ್ಬಳು ಮಾತ್ರ ಬದುಕಿದ್ದಾಳೆಂದೂ ಮ್ಯಾಜಿಸ್ಟ್ರೇಟರು ತಿಳಿದು ಇನ್ನೂ ಆಶ್ಚರ್ಯಪಟ್ಟರು

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಹೊಸ ಮೆಂಬರುಗಳ ಚುನಾವಣೆಯು

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಹೊಸ ಮೆಂಬರುಗಳ ಚುನಾವಣೆಯು ತಾ 19 ನೇ ಸೋಮವಾರದಿಂದ ಪ್ರಾರಂಭವಾಗುವುದು ಆಯಾ ಮೊಹಲ್ಲೆಯಲ್ಲಿ ಮೆಂಬರಾಗಲು ಇಷ್ಟಪಟ್ಟು ಅರ್ಜಿ ಬರೆದುಕೊಂಡಿರುವ ದೊಡ್ಡ ಮನುಷ್ಯರುಗಳು ಯಾರೆಂದರೆ—

ಲಷ್ಕರ್ ಮೊಹಲ್ಲಾ —(1) ಮೆ|| ರಹಿಮತುಲ್ಲಾ ಅಹಮದ್ ಸೇಟರವರು, (2) ಮ|| ಎಂ ಅನಂತರಾಜೈಯನವರು, (3) ಮ ಎಚ್ ಕಟ್ವಾಜಿ ರಾಯರು

ಮಂಡಿಮೊಹಲ್ಲಾ —ಮ ಮಾದಪ್ಪನವರು

ದೇವರಾಜ ಮೊಹಲ್ಲಾ —(1) ಮ|| ಎಂ ಸಿ ರಂಗೈಯಂಗಾರ್ರು, (2) ಮ| ಎ ಸುಬ್ಬಣ್ಣನವರು, (3) ಮ| ಬಸವೈಯನವರು, (4) ಮ|| ಜಿ ಕೆ ನರಸಿಂಹೈಯನವರು

ಕೃಷ್ಣರಾಜಮೊಹಲ್ಲಾ —(1) ಮ ಎಚ್ ತ್ರೀಕಂಠೈಯನವರು, (2) ಮ ಎಂ ಎಲ್ ವಾಸುದೇವೈಯನವರು

ಚಾಮರಾಜಮೊಹಲ್ಲಾ —ಮ| ಎಂ ವೆಂಕಟಕೃಷ್ಣೈಯನವರು

ನಜರಬಾದುಮೊಹಲ್ಲಾ —ಮ| ಎ ತಿರುವೆಂಗಡ ಮೊದಲಿಯಾರ್ರು

ಕಿಲ್ಲೆಮೊಹಲ್ಲಾ —(1) ಮ|| ಎಂ ನರಸಿಂಹಸ್ವಾಮಿಯವರು, (2) ಮ|| ಜಹಗೀರುದಾರ್ ಮಾದಪ್ಪನವರು, (3) ಮ ಕೃಷ್ಣಸ್ವಾಜ ಅರಸಿನವರು, ಮ|| ಟಿ ಎಂ ಸಿದ್ದಪ್ಪನವರು

ವೈಶ್ಯ ವಿದ್ಯಾರ್ಥಿಗಳ ಸಂತೋಷ ಕೂಟವು

ಬೆಂಗಳೂರಿನಲ್ಲಿ ನಡೆದದ್ದು.

ಬೆಂಗಳೂರು ಸಿಟಿ ದೊಡ್ಡ ಪೇಟೆಯಲ್ಲಿರುವ ಧರ್ಮಕರ್ತರಾದ ಮ|| ಬೆಂಡಿಲಸಲ್ಲಿ ವೆಂಕಟಮುನಯ್ಯ ಶೆಟ್ಟರವರ ಧರ್ಮಛತ್ರದಲ್ಲಿ ಓದಿಕೊಂಡು ಇರತಕ್ಕ ವೈಶ್ಯ ಬಡವಿದ್ಯಾರ್ಥಿಗಳು ಈ ತಿಂಗಳು 1 ನೇ ತಾ ಭಾನುವಾರದ ದಿವಸ ಫೌಂಡರ್ಸ್ ಡೇ ಎಂಬ ಸಂಭ್ರಮವಾದ ಕಾರ್ಯವನ್ನು ಸಂತೋಷದಿಂದ ಮಾಡುವ ಉದ್ದೇಶವಾಗಿ ರಿಟೈರ್ಡು ಡೆಪ್ಯುಟಿ ಕಮಿಷನರ್ ಮ|| ಎಂ ಚಂಗೈಯಶೆಟ್ಟರನ್ನು ಸಭಾಧ್ಯಕ್ಷರನ್ನಾಗಿ ಮಾಡಿ ಸಾಧಾರಣವಾಗಿ ವರ್ತಕಮಂಡಲಿಯವರನ್ನೂ, ಇತರ ಜನಗಳನ್ನೂ ಆಹ್ವಾನ ಪತ್ರಿಕೆಗಳ ಮೂಲಕ ಬರಮಾಡಿಕೊಂಡಿದ್ದರು ಪುಷ್ಪಗಳಿಂದಲೂ, ತೋರಣಗಳಿಂದಲೂ ಅಲಂಕೃತವಾಗಿದ್ದ ಈ ಧರ್ಮಛತ್ರದ ಪಡಸಾಲೆಯಲ್ಲಿ ಸಾಲುಸಾಲಾಗಿ ಹಾಕಿದ್ದ ಕುರ್ಚಿಗಳ ಮೇಲೆ ಈ ಊರಿನ ಮುಖ್ಯಸ್ಥರಾದ ಘನವಂತರು ಬೆಂಚ್ ಮ್ಯಾಜಿಸ್ಟ್ರೇಟ್ ಮ ಡಿ ಆದೆಪ್ಪನವರು ಮ ಶಂಕರಶೆಟ್ರು, ಮ ಗಳಾದ ಬೂದನಗಿರಿ ಚಿನ್ನಸ್ವಾಮಿಶೆಟ್ರು, ಆಲಂಪಲ್ಲಿ ಚಿನ್ನ ಆದಿ ನಾರಾಯಣಶೆಟ್ರು, ಇವರ ಸಹೋದರರು, ಸುಬ್ರಾಯಪ್ಪನವರು, ಪಿ ಅಶ್ವತ್ಥೈಯಶೆಟ್ರು, ಕೋಟಿಸುಬ್ಬೈಯಶೆಟ್ರು, ಹೇಮಾ ಆಂಜನೇಯಶೆಟ್ರು, ಸಂಪಂಗಿ ರಾಮಶೆಟ್ರು, ಫೋಲೀಟ ವೆಂಕಟಪತ್ಯಯಶೆಟ್ರು, ಇನ್ನೂ ವೈಶ್ಯವರ್ತಕರೂ, ವಿದ್ಯಾರ್ಥಿಗಳ ಸಮೂಹವೂ ಸಹ ನೆರೆದಿದ್ದರು

ವಿದ್ಯಾರ್ಥಿಗಳ ಸಮೂಹವು ಮ|| ಚಂಗೈಯ ಶೆಟ್ಟರನ್ನು ಸಕಾಲಕ್ಕೆ ಬರಮಾಡಿಕೊಂಡು ವಂದನೆಗಳ ಮೂಲಕ ಉಚಿತವಾದ ಪೀಠವನ್ನು ಅಲಂಕರಿಸುವಂತೆ ಕೇಳಿಕೊಂಡರು ಅನಂತರ ತಮ್ಮ ಸ್ಥಾನವನ್ನು ಅವರು ಸ್ವೀಕರಿಸಿದರು ಶ್ರೀರಂಗಸೆಟ್ರು ದೇವತಾ ಪ್ರಾರ್ಥನೆಯನ್ನು ಮಾಡಿದರು ಈ ಧರ್ಮಛತ್ರದ ವಿಷಯವಾಗಿ ಕೆಲವು ಹಾಸ್ಯಾಸ್ಪದವಾದ ಸಂಭಾಷಣೆಯು ಚಂದ್ರಸೆಟ್ಟಿ ಮತ್ತು ವೆಂಕಟಾಚಲಶೆಟ್ಟಿಯವರಿಂದ ರಸಭರಿತವಾಗಿ ಸಭಾಧ್ಯಕ್ಷರಿಗೂ, ಸಭಿಕರಿಗೂ ಆನಂದಗೊಳಿಸುವಂತೆ ನಡಿಯಿತು ತೆಲುಗಿನಲ್ಲಿ ವಿದ್ಯಾವಿಷಯವಾಗಿಯೂ, ನಡವಳಿಕೆಗಳ ಮತ್ತು ಧರ್ಮಕೆಲಸಗಳ ವಿಷಯವಾಗಿಯೂ ಒಂದು ಉಪನ್ಯಾಸವು ನಾರಾಯಣಶೆಟ್ಟರಿಂದ ಓದಲ್ಪಟ್ಟಿತು ಕನ್ನಡದಲ್ಲಿ ವಿದ್ಯಾವಿಷಯವಾಗಿ ಸಭಿಕರಿಗೆ ಆನಂದವಾಗುವಂತೆ ಸೂರಸೆಟ್ಟಿಯವರಿಂದ ಒಂದು ಉಪನ್ಯಾಸವು ಓದಲ್ಪಟ್ಟಿತು

ಮ|| ನಾರಾಯಣಮೂರ್ತಿ, ಬಿ ಎ ಇವರಿಂದ ತೆಲುಗಿನಲ್ಲಿ ಸಮುದ್ರಯಾನವನ್ನು ಮಾಡಬಹುದೆಂದು ಉದಾಹರಿಸಿಯೂ ಮತ್ತು ಅಂಥಾ ಸಮುದ್ರಯಾನ ಮಾಡಿ ಪರದೇಶಕ್ಕೆ ಹೋಗಿ ನಾನಾ ತರಹವಾದ ಕುಶಲವಿದ್ಯೆಗಳನ್ನು ಕಲಿತು ಬಂದಂಥವರನ್ನು ಜಾತಿಭ್ರಷ್ಟರನ್ನಾಗಿ ಮಾಡದೆ ಪ್ರಾಯಶ್ಚಿತ್ತ ಮೊದಲಾದ ಕರ್ಮಗಳೊಡನೆ ಅವರನ್ನು ಶುದ್ಧಮಾಡಿ ಪಂಗಡಕ್ಕೆ ಸೇರಿಸುವುದು ಒಳ್ಳೆಯದೆಂದೂ, ಈ ನಮ್ಮ ವೈಶ್ಯಮಂಡಲಿಯು ವಿದ್ಯಾವಿಷಯದಲ್ಲಿ ಹಿಮ್ಮೆಟ್ಟಿದ್ದಕ್ಕೆ ಕಾರಣವೂ, ಅದನ್ನು ಸರಿಯಾಗಿ ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಮಾಡಬೇಕಾದ ಕಾರ್ಯಗಳೂ, ಧರ್ಮಕೆಲಸಗಳು ಯಾವ ರೀತಿಮಾಡಬೇಕೆಂಬುದೂ, ಮತ್ತು ಪರಸ್ಥಳದಿಂದ ಓದುವುದಕ್ಕೆ ಬಂದ ವೈಶ್ಯವಿದ್ಯಾರ್ಥಿಗಳಿಗೆ ಈ ಊರಿನಲ್ಲಿ ಸರಿಯಾದ ಪ್ರೋತ್ಸಾಹಗಳು ತಮ್ಮ ವೈಶ್ಯರಿಂದ ಲೇಶಮಾತ್ರವೂ ಇಲ್ಲವೆಂದೂ, ಇದಕ್ಕೆ ಸರಿಯಾದ ಏರ್ಪಾಡುಮಾಡಿ, ಬಂದಂಥವರಿಗೆ ಪ್ರೋತ್ಸಾಹ, ಧೈರ್ಯ, ಸಹಾಯ ವಗೈರೆಗಳಿಂದ ಅನುಕೂಲಪಡಿಸಬೇಕೆಂಬುದೂ, ಈ ಧರ್ಮಛತ್ರದ ವಿಷಯವಾಗಿ ಕೆಲವು ಸಂಗತಿಗಳೂ ಸಹ ರಸಭರಿತವಾಗಿ ಸಭಿಕರಿಗೆ ಆನಂದಗೊಳಿಸುವಂತೆ ಓದಲ್ಪಟ್ಟಿತು

ಇವೆಲ್ಲಾ ನಡೆದ ನಂತರ ಸಭಾಧ್ಯಕ್ಷರು ಈ ವೈಶ್ಯಬಾಲಕರೆಲ್ಲರೂ ಈ ರೀತಿ ಉಪನ್ಯಾಸಗಳು, ವಿಚಿತ್ರವಾದ ಕೆಲಸಗಳು ಸಹ ಮಾಡಿದ್ದು ನೋಡಿ ಬಹು ಸಂತೋಷಪಟ್ಟು ಎಮ್ಮ ನಾಡಿನಲ್ಲಿ ಸಹ ಇಂಥಾ ವಿದ್ಯಾರ್ಥಿಗಳು ಇರುತ್ತಾರೆಂದು ಎಣಿಸಿ ಸಂತೋಷಪಟ್ಟು, ಒದವರಾದ ಹುಡುಗರಿಗೆ ಯಾವ ರೀತಿ ಸಹಾಯ ಮಾಡಬೇಕೆಂಬುವುದು, ಆ ವಿದ್ಯಾರ್ಥಿಗಳು ಸಹ ಕೊಟ್ಟ ಧರ್ಮವನ್ನು ಯಾವ ರೀತಿ ಅರ್ಜಿಸಬೇಕೆಂಬುವುದು ಈ ಮುಂದೆ ವಿದ್ಯಾರ್ಥಿಗಳ ವಿಷಯದಲ್ಲಿ ಅನುಕೂಲಗಳು ಹ್ಯಾಗೆ, ಯಾವ ರೀತಿ ಮಾಡುವುದು ಎಂಬುದು ಅಲ್ಲದೆ ಇದೇ ಧರ್ಮಛತ್ರದ ಕಟ್ಟಡವನ್ನು ಬದಲಾಯಿಸಿ ಬೇರೆ ಇದಕ್ಕಾಗಿ ವಾಸ್ತವವಾದ ಒಂದು ಹೊಸ ಕಟ್ಟಡವನ್ನು ಕಟ್ಟಿಸಿ ಕೊಡುವುದೆಂದೂ ಹೇಳಿದರು

ಧರ್ಮಕರ್ತರಾದ ಮ| ವೆಂಕಟಮುನೈಯಶೆಟ್ರು ಬೇರೆ ಹೊಸ ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನಮಾಡಿದರು ಇದನ್ನು ಸಭಿಕರೆಲ್ಲರೂ ಕೇಳಿ ಸಂತೋಷಪಟ್ಟು ಅವರನ್ನು ವಂದಿಸಿದರು ಬಾಲಕರೆಲ್ಲರೂ ಒಟ್ಟಾಗಿ ತಮ್ಮನ್ನು ಕಾಪಾಡಿದ ಮ|| ವೆಂಕಟಮುನೈಯ ಶೆಟ್ಟರಿಗೂ, ತಮ್ಮ ಇಷ್ಟದಂತೆ ದಯಮಾಡಿ ಬಂದ ಸಭಾಧ್ಯಕ್ಷರಿಗೂ, ಸಭಿಕರಿಗೂ ಸಹ ತಮ್ಮ ವಂದನೆಗಳನ್ನು ಕೀರ್ತನೆಗಳ ಮೂಲಕ ಅರ್ಪಿಸಿದರು ನಂತರ ಹೂವು, ಗಂಧ, ತಾಂಬೂಲಗಳು ಹಂಚಲ್ಪಟ್ಟವು ಆ ದಿವಸ ಬಾಲಕರು ಸುದಿವಸವೆಂದು ಭಾವಿಸಿಕೊಂಡರು

ಎ ಎಸ್ ಎಚ್

ಅಂಡಮಾನ್ ದ್ವೀಪಗಳೂ ರಾಜಕೀಯ ಖೈದಿಗಳೂ

ಗವರ್ನಮೆಂಟಿನ ಮೇಲೆ ಹೊರಿಸಲ್ಪಟ್ಟ ಅಪವಾದಗಳು

ಕಳೆದ 1913 ನೇ ಜೂನ್ ತಾ 14 ನೇ ತಾರೀಖಿನ “ಬಂಗಾಳಿ” ಎಂಬ ವರ್ತಮಾನ ಪತ್ರಿಕೆಯಲ್ಲಿ ಹಿಂದುಸ್ಥಾನದಲ್ಲಿ ಹುಟ್ಟಿದ ರಾಜದ್ರೋಹದ ಮೊಕದ್ದಮೆಗಳಲ್ಲಿ ಶಿಕ್ಷೆ ವಿಧಿಸಲ್ಪಟ್ಟಿರುವ ಖೈದಿಗಳನ್ನು ಇಂಡಿಯಾ ಗವರ್ನಮೆಂಟಿನವರು ಅಂಡಮಾನ್ ದ್ವೀಪಗಳಿಗೆ ಕಳುಹಿಸಿ, ಅಲ್ಲಿ ಅವರಿಂದ ಬಹು ಕಠಿಣತರವಾದ ಕೆಲಸಗಳನ್ನು ಮಾಡಿಸುತ್ತಾರೆಂದೂ, ಇಂಥಾ ಕಷ್ಟ ಕೆಲಸಗಳನ್ನು ಮಾಡಲಾರದೆ ಇಂದು ಭೂಷಣರಾಯ ಎಂಬ ಖೈದಿಯು ಆತ್ಮಹತ್ಯ ಮಾಡಿಕೊಂಡನೆಂದೂ ಪ್ರಕಟಿಸಲಾಯಿತು ಈ ಪತ್ರಿಕೆಯನ್ನು ಗವರ್ನಮೆಂಟಿನವರು ತರಿಸಿಕೊಂಡು ನೋಡುವಲ್ಲಿ ಗವರ್ನಮೆಂಟಿನವರ ಮೇಲೆ ಐದು ತರದ ದೂರುಗಳು ಕಂಡುಬಂದವು ಅವು ಯಾವವೆಂದರೆ—(1) ಬಂದೀಖಾನೆಯಲ್ಲಿ ಕಷ್ಟ ಕೆಲಸವನ್ನು ಮಾಡಲಾರದೆ ಜುಗುಪ್ಸೆ ಹೊಂದಿ ಇಂದುಭೂಷಣನು ಆತ್ಮಹತ್ಯ ಮಾಡಿಕೊಂಡನು (2) ಕಳೆದ ಏಪ್ರೆಲ್ ತಾ 28 ರಲ್ಲಿ ಅಂದರೆ ಅವನು ಆತ್ಮಹತ್ಯ ಮಾಡಿಕೊಳ್ಳುವುದಕ್ಕಿಂತ ಸ್ವಲ್ಪ ಹೊತ್ತಿಗೆ ಮುಂಚೆ ಜೈಲ್ ಅಧಿಕಾರಿಯನ್ನು ಕಂಡು ಆತನ ಕೂಡ ತನ್ನ ಕಷ್ಟವನ್ನು ಹೇಳಿಕೊಂಡು ಬೇರೆ ಯಾವುದಾದರೊಂದು ಕೆಲಸವನ್ನು ತನಗೆ ಕೊಡುವಂತೆ ಮಾಡಿಕೊಳ್ಳಬೇಕೆಂದು ಆ ಅಧಿಕಾರಿಗೆ ಹೇಳಿ ಕಳುಹಿಸಿದನು ನಾರಿನ ಪಟ್ಟೆಯಿಂದ ಹಗ್ಗವನ್ನು ಬಿಡಿಸುವ ಕೆಲಸ ಅವನಿಗೆ ನೇಮಕವಾಗಿತ್ತು ಇದನ್ನು ಬಿಡಿಸಿ ಅವನ ಕೈಬೆರಳುಗಳು ಊದಿಕೊಂಡು ಊಟ ನಿದ್ರೆಗಳು ರುಚಿಸದಂತೆ ಬಾಧೆಯುಂಟಾಗಿತ್ತು ತನ್ನ ಕೈಯನ್ನು ತೋರಿಸಿ, ಆಸ್ಪತ್ರೆಯಲ್ಲಿದ್ದು ವಾಸಿಮಾಡಿಕೊಂಡು ಬರುತ್ತೇನೆಂದು ಅಪ್ಪಣೆ ಕೇಳಿದನು (3) ಜೈಲ್ ಅಧಿಕಾರಿಯು ಕೋಪಿಸಿಕೊಂಡು ಅವನನ್ನು ವಾಚಾಮಗೋಚರವಾಗಿ ಬೈದು, ಜೈಲ್ ಡಾಕ್ಟರ ಬಳಿಗೆ ಕಳುಹಿಸದೆ, ಮರುದಿನದಿಂದ ಅವನನ್ನು ಎಣ್ಣೆ ಕಾರ್ಖಾನೆಯಲ್ಲಿ ಕೆಲಸಕ್ಕೆ ಹಾಕಬೇಕೆಂದು ಹುಕುಂ ಕೊಟ್ಟನು ಅದಕ್ಕೆ ಇಂದುಭೂಷಣನು—ಆ ಕೆಲಸಕ್ಕೆ ಹಾಕಿದರೆ ತಾನು ಸತ್ತುಹೋಗುತ್ತೇನೆಂದು ಜವಾಬು ಕೊಟ್ಟಾಗ ಜೈಲ್ ಅಧಿಕಾರಿಯು ಅವನನ್ನು ಬೈದು ಕಳುಹಿಸಿಬಿಟ್ಟನು ಮರುದಿನ ಬೆಳಗಾಗುವಾಗ್ಗೆ ಅವನ ಶವವು ಕೊಠಡಿಯಲ್ಲಿ ನೇತಾಡುತ್ತಿತ್ತು (4) ಬೆಳಗಿನ ಝಾಮದ 1 ಗಂಟೆಯಲ್ಲಿ ಈ ಆತ್ಮಹತ್ಯದ ಸುದ್ದಿಯನ್ನು ವೈದ್ಯನಿಗೆ ತಿಳಿಸಿದರೂ ಆ ಅಧಿಕಾರಿಯು ಬೆಳಗ್ಗೆ 8 ಗಂಟೆಗೆ ಮುಂಚೆ ಅಲ್ಲಿಗೆ ಬಾರದೆ ಹೋದನು, (5) ಹೋಟಿಲಾಲ್ ಎಂಬ ಇನ್ನೊಬ್ಬ ಖೈದಿಯು ಇಂದುಭೂಷಣನು ಆತ್ಮಹತ್ಯ ಮಾಡಿಕೊಂಡ ವಿಷಯವನ್ನು ವೈದ್ಯನಿಗೆ ಅರಿಕೆ ಮಾಡಿದಾಗ ಕೋಪದಿಂದ ಅವನನ್ನು ಎಣ್ಣೆ ಕಾರ್ಖಾನೆಯಲ್ಲಿ ಕೆಲಸಕ್ಕೆ ಹಾಕಿದರು ಈ ಪ್ರಕಾರ ಮೇಲ್ಕಂಡ ಪತ್ರಿಕೆಯು ಸರಕಾರದವರ ಮೇಲೆ ದೂರುಗಳನ್ನು ಪ್ರಕಟಿಸಿತು

ಇಂಡಿಯಾ ಗವರ್ನಮೆಂಟಿನವರು ತಿಳಿಸಿರುವ ಸಮಾಧಾನವು

ಇಂಡಿಯಾ ಗವರ್ನಮೆಂಟಿನವರು ಈ ಆಕ್ಷೇಪಣೆಗಳ ಪೂರ್ವೋತ್ತರವನ್ನೆಲ್ಲಾ ಸಾಂಗವಾಗಿ ವಿಚಾರಮಾಡಿ, ಯಥಾರ್ಥವಾಗಿ ನಡೆದಿರುವ ವಿದ್ಯಮಾನಗಳನ್ನು ಪ್ರಕಟಿಸುವಂತೆ ಅಪ್ಪಣೆಕೊಟ್ಟಿರುತ್ತಾರೆ ಈ ಸಮಾಧಾನದ ಮುಖ್ಯಾಂಶಗಳೇನೆಂದರೆ—ಇಂದು ಭೂಷಣನಿಗೆ ಮಾಣಿಕ್ಯತೋಲಾ ಸಿಡಿಮದ್ದಿನ ಗುಂಡಿನ ಮೊಕದ್ದಮೆಯಲ್ಲಿ ಶಿಕ್ಷೆವಿಧಿಸಲಾಯಿತು ಚಂದ್ರನಗರದ ಮೇಯರ್‌ಯವರು ಸಂಸಾರಸಹಿತ ಕೊಠಡಿಯಲ್ಲಿ ಕುಳಿತಿದ್ದಾಗ ಸಿಡಿಮದ್ದಿನ ಗುಂಡನ್ನು ಎಸೆದದ್ದುಂಟೆಂದು ಇಂದುಭೂಷಣನು ಹೇಳಿ ಒಪ್ಪಿಕೊಂಡನು ಇವನು ರಾಜದ್ರೋಹಿಗಳ ಪಿತೂರಿ ಗುಂಪಿನಲ್ಲಿ ಮುಖಂಡನಾಗಿದ್ದನೆಂದು ತಿಳಿದು ಬಂದಕಾರಣ ಅವನಿಗೆ 1909 ನೇ ಡಿಸೆಂಬರ್ ತಿಂಗಳಲ್ಲಿ ಹತ್ತು ವರುಷಗಳ ಬಂಧೋಲ್ ಶಿಕ್ಷೆ ವಿಧಿಸಿ, ಅಂಡಮಾನ್ ದ್ವೀಪಗಳಿಗೆ ಕಳುಹಲ್ಪಟ್ಟನು 1910 ನೇ ಇಸವಿಯಲ್ಲಿ ಅವನು ಬರೆದ ಒಂದು ಕಾಗದವು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಯಿತು ಆಗ ಅವನು ಬಹಳ ಚೆನ್ನಾಗಿದ್ದಹಾಗೂ, ಜೈಲ್ ಅಧಿಕಾರಿಗಳು ತನ್ನ ವಿಷಯದಲ್ಲಿ ತುಂಬಾ ಪ್ರೀತಿಯನ್ನು ತೋರಿಸುತ್ತಿದ್ದಾರೆಂತಲೂ, ಅವರು ತನಗೆ ಕೊಟ್ಟಿರುವ ಶಿಕ್ಷಾರೂಪವಾದ ಕೆಲಸವು ಸುಲಭವಾದದ್ದೆಂತಲೂ ತಿಳಿಸಿರುತ್ತಾನೆ ಇವನು ಏಪ್ರೆಲ್ ತಾ 29 ರಲ್ಲಿ ತನ್ನ ಕೊಠಡಿಯೊಳಗೆ ಬೆಳಗಿನ ಝಾಮದಲ್ಲಿ ಆತ್ಮಹತ್ಯಮಾಡಿಕೊಂಡನು ಡೆಪ್ಯುಟಿ ಸೂಪರಿಂಟೆಂಡೆಂಟರು ಲಾಷ್ ಮಹಜರು ನಡಿಸಿದಾಗ ಮೃತನಿಗೆ ಬುದ್ಧಿ ಸ್ಥಿಮಿತವಾಗಿರಲಿಲ್ಲವೆಂದೂ, ತನ್ನ ಜೊತೆಗಾರರಾದ ಇಬ್ಬರು ಖೈದಿಗಳು ತನ್ನನ್ನು ಕೊಲ್ಲುತ್ತಾರೆಂಬ ಹೆದರಿಕೆ ಹುಟ್ಟಿ ಆತ್ಮಹತ್ಯಮಾಡಿಕೊಂಡನೆಂದೂ, ಆ ಅವನ ಶರೀರಧರ್ಮವು ಚೆನ್ನಾಗಿರಲಿಲ್ಲವೆಂದೂ, ಬಹಳ ಖಿನ್ನವಾದ ಮನಸ್ಸುಳ್ಳವನಾಗಿದ್ದನೆಂದೂ ಗೊತ್ತಾಯಿತು ಅವನಿಗೆ ಸಹಿಸಲಾರದಷ್ಟು ಕಷ್ಟ ಕೆಲಸವನ್ನು ಕೊಟ್ಟಿದ್ದರೆಂದಾಗಲಿ, ಅನ್ಯಾಯ ವಿಧದಲ್ಲೂ ಕಷ್ಟಪಡಿಸಿದರೆಂದಾಗಲಿ ಆ ವಿಷಯದಲ್ಲಿ ಎಳ್ಳಷ್ಟು ಬರಲಿಲ್ಲ ಮೇಲ್ಕಂಡ 1, 2 ನೇ ಆಕ್ಷೇಪಣೆಗಳಲ್ಲಿ ಸ್ವಲ್ಪವೂ ನಿಜವಿಲ್ಲ 4 ನೇ ಆಕ್ಷೇಪಣೆಯ ವಿಷಯದಲ್ಲಿ ಡಾಕ್ಟರು ಆ ರಾತ್ರಿ ಒಬ್ಬ ರೋಗಿಯ ದೆಸೆಯಿಂದ ನೋಡುವ ಕೆಲಸದಲ್ಲಿದ್ದು ಆ ರೋಗಿಯನ್ನು ಬಿಟ್ಟು ಹೋಗುವಂತಿರಲಿಲ್ಲ ಇನ್ನೊಬ್ಬ ವೈದ್ಯರು ಕೂಡಲೇ ಬೇಲಿಗೆ ಹೋಗಿ ಹಗ್ಗವನ್ನು ಕುಯ್ದು ಕೆಳಗೆ ಇಳಿಸಿಕೊಂಡು ಶವದ ಶ್ವಾಸಕೋಶಕ್ಕೆ ಉಸಿರು ತುಂಬಿ ಪ್ರಾಣವಿದೆಯೋ ಎಂಬುದನ್ನು ಪರೀಕ್ಷಿಸಿದರು ಇಂದು ಭೂಷಣನು ಮೃತಪಟ್ಟಿದ್ದನು ... ಆಕ್ಷೇಪಣೆಯ ವಿಷಯ ... ಸಿಡಿಮದ್ದಿನ ... ನಡೆಯುವ ಖೈದಿಗಳ ... ಹೋಟಿಲಾಲ್ ಎಂಬ ಖೈದಿಯು ಇಂದು ಭೂಷಣನನ್ನು ಜೈಲ ಅಧಿಕಾರಿಯು ಕ್ರೂರತನದಿಂದ ಹಿಂಸಿಸಿ ಗುಂಡಿಕ್ಕಿಸಿದರೆಂದು ಸೂಪರಿಂಟೆಂಡೆಂಟರಿಗೆ ... ಹೇಳಿದನು ತನಿಖೆ ಮಾಡಿದಾಗ ಆ ದೂರನ್ನು ಅವನು ರುಜು ಮಾಡಲಾರದೆ ಹೋದನು ಅಧಿಕಾರಿಯು ಅವನಿಗೆ ತಕ್ಕಹಾಗೆ ಶಿಕ್ಷೆ ವಿಧಿಸಿದರು

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವು ಧರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಪುನಃ ಹೇಳುತ್ತೇವೆ

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು “ರೆವ್ ಡಬ್ಲ್ಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು” ಎಂಬ ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ “ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು” ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲದಿದ್ದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮೀದಾರರು ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ದೇವನಹಳ್ಳಿ ನಿವಾಸಿ, ಬೂದುಗುಪ್ಪೆ ಚಂದಿಬದಾರ್ —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಪಡುತ್ತೇವೆ

ಎಂ ಎಸ್ ವೆಂಕಟರಾವ್, ಕೋಲಾರ —ನಿಮ್ಮ ಪ್ರಶ್ನೆಗಳು ಅನಾವಶ್ಯವೂ ದೀರ್ಘವೂ ಆದ ಚರ್ಚೆಗಳಿಗೆ ಕಾರಣವಾಗುವುದರಿಂದ ಅವನ್ನು ಪ್ರಕಟಿಸಲಾರೆವು

—ಎಡಿ]

ಕರೆಸ್ಪಾಂಡೆನ್ಸ್

ದಸರಾ ಸಭೆಯಲ್ಲಿ ಒಬ್ಬ ಪಟೇಲರ ಬಿನ್ನಹಗಳು.

ಅಯ್ಯಾ,

ಈ ಸಲ ದಸರಾ ಮಹೋತ್ಸವಕ್ಕೆ ಹೋಗತಕ್ಕ ಮೆಂಬರ ಗಳು ಪಟೇಲರುಗಳ ವಿಷಯದಲ್ಲಿ ಕೆಳಗೆ ಕಂಡ ಸಂಗತಿಗಳನ್ನು ಚರ್ಚಿಸಬೇಕಾಗಿ ತಿಳಿಸುತ್ತೇನೆ (1) ಪಟೇಲರ ಪೋಟಿಗೆಯನ್ನು ಹಚ್ಚಿಸಿ ತಿಂಗಳುಗಟ್ಟಲೆ ಸಂಬಳ ಕೊಡಬೇಕೆಂತಲೂ (2) ಕಂದಾಯದ ಹಣಗಳನ್ನು ಹಿಂದು ಹಾಕದ ಹಾಗೆ ಆಯಾ ತಿಂಗಳು ವಸೂಲ್ ಆಗಿದ್ದ ಮೊಬಲಗನ್ನು ಅಮಲ್ದಾರ್ರು ಮತ್ತು ಶೇಕ್ದಾರ್ರು ಝಡತಿ ಮಾಡಿ ತಾವೆ ಹಣವನ್ನು ಸರ್ಕಾರಕ್ಕೆ ಇರಸಾಲ್ ಮಾಡಬೇಕೆಂತಲೂ, (3) ಪ್ರತಿ ಒಬ್ಬ ಪಟೇಲರ ಮಕ್ಕಳಿಗೂ ಆಯಾ ಡಿಸ್ಟ್ರಿಕ್ಟುಗಳಲ್ಲಿ ಸ್ಕೂಲುಗಳನ್ನು ಏರ್ಪಡಿಸಿ ಅವರಿಗೆ ಒಂದೊಂದು ವರ್ಷ ಟ್ರೈನಿಂಗ್ ಮಾಡಿಸಬೇಕೆಂತಲೂ, (4) ಅಲ್ಲದೆ ಈ ಪಟೇಲರಿಗೆ ರಜೆಗಳು ಗೊತ್ತಿಲ್ಲವಾದ್ದರಿಂದ ಒಂದೊಂದು ರಜೆಯನ್ನೂ ವರ್ಷಕ್ಕೆ ಒಂದಾವರ್ತಿ ಕೊಂಚ ಸಾದಿಲ್‌ವಾರನ್ನೂ ಕೊಡತಕ್ಕದೆಂತಲೂ ಚರ್ಚಿಸಬೇಕೆಂದು ಕೋರುತ್ತೇನೆ

ಒಬ್ಬ ಪಟೇಲ

ಜಮೀನು ವಿಷಯ ತಿಳಿಯಬೇಕು

ಅಯ್ಯಾ,

ಟಿ ನರಸೀಪುರದ ತಾಲೂಕು ತಲಕಾಡಿನ ದಕ್ಷಿಣ ದಿಕ್ಕಿನಲ್ಲಿನ ಕಾವೇರಿ ದಲ್ಲಿ ಕೆತ್ತಾರೆ ಮಾಳವೆಂಬ ಹೆಸರಿನ ಸುಮಾರು ಇಪ್ಪತ್ತು ಎಕರೆ ತರೀ ಜಮೀನು ಈ ಗ್ರಾಮಕ್ಕೆ ಸೇರಿದೆ ಇದು ನದಿಮಟ್ಟಕ್ಕೆ ಸುಮಾರು 3 1 ಅಡಿ ಎತ್ತರ ಮಾತ್ರ ಇರುವದರಿಂದ ನದಿಯಲ್ಲಿ ಅಲ್ಪಸ್ವಲ್ಪ ಪ್ರವಾಹ ಬಂದರೂ ಈ ಜಮೀನ ಮೇಲೆ ನೀರು ಬಂದು ತುಂಬಿ ಕುಳಿತುಕೊಳ್ಳುತ್ತೆ ಈ ಕಾರಣದಿಂದ ... ಆಷಾಢ ಮಾಸದಲ್ಲಿಯೇ ಕಟ್ಟು ಭತ್ತ ಮತ್ತೆ ಬೇರೆ ವಿಧವಾದ ಸಾಗುವಳಿಗೂ ಅವಕಾಶವೇ ಇಲ್ಲ ಒಂದೆ ಈ ಪೈರುಗಳನ್ನು ಎಷ್ಟು ಸಾರಿ ಹಾಕಿ, ನೀರಿನ ... ತದಿಂದ ಫಸಲು ಕೈಸೇರದೆ, ಸಾಗುವಳಿ ಖರ್ಚು, ಇದರ ಮೇಲೆ ಸರ್ಕಾರ ಕಂದಾಯ ಸಹಾ ತೆತ್ತು ತೆತ್ತು, ಈ ಜಮೀನ್‌ಗಳಿಂದ ಬಹಳ ನಷ್ಟ ಪಡುತ್ತಿದೇವೆ ಈ ತಾಲೂಕಿನಲ್ಲಿ ನನಗೂ ಸುಮಾರು 3 ಎಕರೆ ಜಮೀನು ಇದೆ ನಷ್ಟ ಬರು ಲಾಗಾಯ್ತು ಜನವರಿ 10 ನೇ ತಾರೀಖಿನ ವರೆಗೆ ಸುಮಾರು 2 3 ತಿಂಗಳು ನೀರಿಲ್ಲದಲ್ಲಿ ನೀರು ನಿಲ್ಲುವದರಿಂದ ಈ ಜಮೀನ್‌ನಲ್ಲಿ 3 ತಿಂಗಳುಗಳಲ್ಲಿ ಬೆಳೆಯುವಂಥಾ ಬೆಳ್ಳುಳ್ಳಿ ಈರುಳ್ಳಿ ವ್ಯವಸಾಯವನ್ನು ನವೀನ ಕ್ರಮದಲ್ಲಿ ವ್ಯವಸಾಯ ಮಾಡಲು ನನಗೂ, ನನ್ನ ನೆರೆಹೊರೆಯವರಿಗೂ ಗೊತ್ತಿಲ್ಲದೆ ಇದೆ ಈ ಪತ್ರಿಕೆ ಸಹಾಯದಿಂದಲಾದರೂ ಆದರ ನವೀನಕ್ರಮದ ವ್ಯವಸಾಯವನ್ನು ದಯವಿಟ್ಟು ತಿಳಿಸಿದರೆ ನಾನೂ ನನ್ನ ಬಾಂಧವರೂ ಸಹಾ ಮಾಡಿ ತಮ್ಮನ್ನು ನೆನೆಯುತ್ತೇವೆ ಇದು ಒಂದು ಎಕರೆ ಜಮೀನಿಗೆ ಬಿತ್ತನೆ ಎಷ್ಟು? ಉತ್ಪತ್ತಿ ಎಷ್ಟು? ವ್ಯವಸಾಯದ ಕ್ರಮ ಹೇಗೆ? ಈ ಮೂರು ವಿಷಯಗಳನ್ನೂ ತಿಳಿಸಿ ಕೊಡಬೇಕಾಗಿ ಕೋರುವ ತಮ್ಮ ವಿಧೇಯ

ತಲಕಾಡು ಕುನ್ನೇಗೌಡ್ರ ಅಳಿಯ ರುದ್ರೇಗೌಡ

[ಮೈಸೂರು ಸರ್ಕಾರದ ವ್ಯವಸಾಯಶಾಸ್ತ್ರ ಇಲಾಖೆಯವರೂ, ಸದರಿ ವ್ಯವಸಾಯಾಭಿವೃದ್ಧಿಯಲ್ಲಿ ತಿಳುವಳಿಕೆಯುಳ್ಳ ಅನುಭವದಾರರೂ ಮೇಲ್ಕಂಡ ಬಾತ್ಮೀದಾರರಿಗೆ ತಿಳುವಳಿಕೆ ಕೊಟ್ಟು ಸಹಾಯ ಮಾಡತ್ತಾರೆಂದು ನಂಬುತ್ತೇವೆ —ಎಡಿ]

ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಚುನಾವಣೆಯಲ್ಲಿ ರೂಲಿಸು ವಿದ್ಯುಕ್ತವಾಗಬೇಕಾದ ವಿಷಯ

ಅಯ್ಯಾ,

ಹೆಗ್ಗಡದೇವನಕೋಟೆ ತಾಲೂಕು ಕಚೇರಿಯಲ್ಲಿ ಈ ಆಗಸ್ಟ್ ... ತಾ ಭಾನುವಾರ ದಸರಾ ಪ್ರಜಾಪ್ರತಿನಿಧಿಸಭೆಗೆ ವೋಟರುಗಳ ಮೂಲಕ ಮೆಂಬರುಗಳ ಚುನಾವಣೇ ಕೆಲಸ ನಡಿಯಿತು ವೋಟನ್ನು ಕೊಡಲು ಬಂದವರು ಸುಮಾರು 70 ಮಂದಿ ಸೇರಿ ಇದ್ದರು ಈ ಪೈಕಿ ಎಲೆಕ್ಷನ್‌ಗೆ ...

ಇದುವರೆಗೂ ಹದಿನೈದು ಜನರವರೆಗೆ ಇದ್ದರು ಈ 16 ಜನರಲ್ಲಿ ಈಗ್ಗೆ 9 ವರುಷಗಳಿಂದ ಮೆಂಬರಾಗಿ ಹೋಗುತ್ತಾ ಇದ್ದ ಮ|| ಎಂ ಸುಬ್ಬರಾಯರು ಮತ್ತು ಹೊಸಬರಾದ ಈ ತಾಲ್ಲೂಕಿನಲ್ಲಿ ವಿಶೇಷ ಲೇವಾದೇವಿ ನಡಿಸುತ್ತಾ ಶ್ರೀಮಂತರಾಗಿಯೂ ಇರುವ ಮೆ ಜನ್ನಹಳ್ಳಿ ಸೈದ್ ರಹಿಮಾನ್ ಸಾಹೇಬು ಸಹ ಒಂದಾಗಿ ತಮ್ಮಗಳ ದಾಕ್ಷಿಣ್ಯಕ್ಕೆ ಒಳಪಟ್ಟವರಿಗೆಲ್ಲಾ ಅಂತರಂಗವಾಗಿ ಬೋಧಿಸಿ ತಮ್ಮಗಳಿಗೇನೇ ಜಾಸ್ತಿ ವೋಟುಗಳು ಬರಮಾಡಿಕೊಂಡದ್ದರಿಂದ ಈ ಸಾರಿ ಈ ಇಬ್ಬರಿಗೆ ಮೆಂಬರ್ ಕೆಲಸಕ್ಕೆ ತಾಲ್ಲೂಕು ಅಮಲ್ದಾರ್ರವರು ಬರೆದು ಇರುತ್ತಾರೆ

ಕಳೆದ 9 ವರುಷಗಳಿಂದಲೂ ಡಿಟೋ ಸಭೆಗೆ ಹೋಗುತ್ತಾ ಇರುವ ಮ|| ಎಂ ಸುಬ್ಬರಾಯರಿಂದ ಪ್ರಜೆಗಳಿಗೆ ಯಾವದೊಂದು ಸೌಲಭ್ಯವೂ ಆದಂತೆ ಕಾಣುವದಿಲ್ಲ ಮೆ|| ಮತ್ತು ಸೈದ್ ರಹಿಮಾನ್ ಸಾಹೇಬರೆಂಬವರು ವಾಕ್ಶೂರರಾಗಿಯೂ ಇರುವದಿಲ್ಲ ಇದರಿಂದ ಕೆಲವರಿಗೆ ಅಸಮಾಧಾನ ಉಂಟಾಗಿರುತ್ತೆ ಆದ್ದರಿಂದ ಮೂರು ವರುಷಗಳಿಗೆ ಒಂದಾವರ್ತಿ ವೋಟುಸು ತೆಗೆಯುವಾಗ್ಗೆ ಮೊದಲು ಮೆಂಬರಾಗಿ ಇದ್ದವರಲ್ಲದೆ ಇತರರು ಮೆಂಬರು ತನಕ್ಕೆ ಉಮೇದ್ ಇದ್ದಲ್ಲಿ ಮೊದಲಿನ ಮೆಂಬರುಗಳಿಗೆ ವೋಟುಸು ಕೊಡಕೂಡದೆಂದು ರೂಲು ಬದಲಾವಣೆ ಆಗಬೇಕಾಗಿ ಇರುತ್ತೆ ಈ ಭಾಗವನ್ನು ಕುರಿತು ಪ್ರತಿನಿಧಿ ಮಹಾಜನ ಸಭೆಗೂ ತಿಳಿಸಿ ಇದೇನೆ ತಾವೂ ಸಹಾ ದಯವಿಟ್ಟು ತಮ್ಮ ಅಭಿಪ್ರಾಯದೊಡನೆ ತಮ್ಮ ಪತ್ರಿಕಾ ಮೂಲಕ ಗವರ್ನ್ಮೆಂಟಿನವರ ಗಮನಕ್ಕೆ ತರಬೇಕಾಗಿ ಪ್ರಾರ್ಥಿಸುತ್ತೇನೆ

ಬಿ ಚಂದ್ರಶೇಖರಯ್ಯ,
ಪೆನ್ಷನ್ ಫಾರೆಸ್ಟ್ ರೇಂಜ್ ಆಫೀಸರ್

ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜೂ,
ಇದರ ಅಧ್ಯಕ್ಷರೂ

ಸ್ವಾಮಿ,

ತಮ್ಮ ಈ ತಿಂಗಳು 1 ಮತ್ತು 8 ನೇ ತಾ ಪತ್ರಿಕೆಗಳಲ್ಲಿ ಮೇಲ್ಕಂಡ ವಿಷಯವಾಗಿ ಪ್ರಕಟಿಸಿದ್ದ ಬಾತ್ಮಿಗಳನ್ನು ಓದಿದೆವು ಈ ಅಧ್ಯಕ್ಷರ ವಿಚಾರದಲ್ಲಿ ಪ್ರಜೆಗಳ ಅಭಿಪ್ರಾಯವೇನಿರುವುದೆಂಬುದನ್ನು ವಿಜ್ಞಾಪಿಸುತ್ತೇನೆ ಕಳೆದ ಜೂಲೈ ತಾ 11 ರಲ್ಲಿ ಬೆಂಗಳೂರಿನ ಶಂಕರನ ಠಕ್ಕೆ ಹೋಗಿದ್ದೆನು ಇಲ್ಲಿನ ಮಹಾ ಜನಗಳೂ ಈಗಿನ ಅಧ್ಯಕ್ಷರೂ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಸಹ ಪರಮಪವಿತ್ರವಾದ ಆ ಶಂಕರಮಠಕ್ಕೆ ವೇ|| ರಾಮಾನುಜಾಚಾರ್ಯರನ್ನು ಬರಮಾಡಿಕೊಂಡು ತಮ್ಮ ಭಕ್ತಿ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು ಆಗ್ಗೆ ಸಾವಿರಾರು ಲೌಕಿಕ ವೈದಿಕರು ಸೇರಿದ್ದರು ಲೌಕಿಕ ದೊಡ್ಡಮನುಷ್ಯರ ಪರವಾಗಿ ಮ|| ಗೋವಿಂದರಾಯರೂ ರಾಮಯ್ಯನವರೂ, ಮ ವೆಂಕಟರಮಣಯ್ಯನವರೂ, ವೈದಿಕ ಮಹಾಜನರ ಪರವಾಗಿ ಬ್ರಂ ಶ್ರೀ ಕಾವ್ಯಾಲಂಕಾರ ಭೂಷಿತರಾದ ವಿಶ್ವೇಶ್ವರ ಶಾಸ್ತ್ರಿಗಳೂ, ವೇದಾಂತ ವಿಶಾರದರಾದ ಗೌ ವೆಂಕಟರಮಣಾಚಾರ್ಯರೂ, ನ್ಯಾಯ ಶಾಸ್ತ್ರ ಪಂಡಿತರಾದ ಸುಗ್ಗೇಹಳ್ಳಿ ತಿರುಮಲಾಚಾರ್ಯರೇ ಮುಂತಾದವರೂ ವೇ ಆಚಾರ್ಯರ ಗುಣಕಥನವನ್ನು ಮಾಡಿ ವಿಶ್ವಾಸವನ್ನು ತೋರ್ಪಡಿಸಿದರು

ಆದರಪೂರ್ವಕವಾಗಿ ನಡೆದ ಇಂತಹ ಮಹಾಸಭೆಯ ಮರ್ಯಾದೆಯಿಂದಲೂ, ಇವರ ವಿದ್ವತ್ತಿನಿಂದಲೂ ಅಸಾಧಾರಣ ಕಾರ್ಯನಿರ್ವಾಹಕರೆಂದು ವ್ಯಕ್ತವಾಗುತ್ತೆ ಕೆಲವು ವರ್ಷಗಳಿಂದಲೂ ನಮ್ಮ ಬೆಂಗಳೂರು ಪಾಠಶಾಲೆಯಲ್ಲಿ ಓದಿ ಪ್ರಖ್ಯಾತರಾದ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಕೊಟ್ಟು ಬಹು ಕೀರ್ತಿಯನ್ನು ಹೊಂದಿರುತ್ತಾರೆ ವೇ|| ರಾಮಾನುಜಾಚಾರ್ಯರು ಇಂಡೋರ್ ಮುಂತಾದ ವಿದ್ಯಾ ಇಲಾಖೆಯಲ್ಲಿ ಪ್ರಾಶಸ್ತ್ಯವನ್ನು ಪಡೆದು ಬಂದಿರುವ ಇಂತಹವರಿಗೆ ಇಲ್ಲಿನ ಪಾಠಶಾಲಾಧ್ಯಕ್ಷತೆಯು ದೊರೆತಾಗ್ಗೆ ವಿಶೇಷ ಮಹತ್ತಿನಿಂದ ಕೆಲಸವನ್ನು ಮಾಡಿಯೇ ಇರುತ್ತಾರೆಂದು ಹೇಳಬಹುದಾಗಿದೆ

ಇವರ ಸಹಜಗುಣಕ್ಕೆ ಮತ್ಸರವೇನೂ ಇರುವದಿಲ್ಲ ಲೋಕಾನುಭವಶಾಲಿಗಳಾಗಿಯೂ, ಲೌಕಿಕ ವೈದಿಕ ಎರಡರಲ್ಲಿ ಪರಿಪೂರ್ಣವರಾಗಿಯೂ ಇರುವ ಇಂಥಾ ಮನುಷ್ಯರು ದೊರೆಯುವುದು ದುರ್ಲಭ ಗುಣಾಢ್ಯರಾದುದರಿಂದ ಇಂತಹ ಯೋಗ್ಯತಾವ ವಿದ್ವನ್ಮಂಡಲಿಗೆ ವೇ|| ನವೀನಂ ರಾಮಾನುಜಾಚಾರ್ಯರು ಬಹಳ ಪ್ರಿಯರಾಗಿ ಇರುತ್ತಾರೆ

ವಿದ್ಯಾರ್ಥಿಯ

ಮಾಗಡಿಯ ವಿದ್ಯಮಾನಗಳು

ಸ್ವಾಮಿ,

ಈ ವರ್ಷದ ಆದಿಯಿಂದಲೂ ಈ ತಾಲ್ಲೂಕಿನಲ್ಲಿ ಮಳೆ ಆಗಿ ಇಲ್ಲ ಅದರಲ್ಲಿ ಈ ಊರಲ್ಲಿ ಸುತರಾಂ ಮಳೆ ಆಗಿಲ್ಲ ಕೆರೆ ಕಟ್ಟೆಗಳೆಲ್ಲಾ ಬತ್ತಿ ಹೋಗಿವೆ ಜೋಳದ ಪೈರು ಒಣಗಿ ಹೋಯಿತು ಇನ್ನೂ ರಾಗಿಯನ್ನು ಬತ್ತದ ಫಸಲನ್ನು ಬೆಳೆಯಲು ಕೆರೆಗಳಲ್ಲಿ ನೀರೇ ಇಲ್ಲ ಕುಡಿಯುವದಕ್ಕೆ ನೀರಿನ ತೊಂದರೆಯನ್ನು ಅಷ್ಟಿಷ್ಟೆಂದು ಹೇಳಲು ಆಗುವದಿಲ್ಲ ಕಟುಕರ ಕೆರೆಗೆ ಕಟ್ಟಡಕ್ಕೆ 900 ರೂಪಾಯಿ ಮ್ಯುನಿಸಿಪಾಲಿಟಿಯಿಂದ ಸ್ಯಾಂಕ್ಷನ್ ಆಗಿದೆ ಇದರ ಬದಲು ಇದೇ ಹಣವನ್ನು ಕುಡಿಯುವ ನೀರಿನ ಕಟ್ಟೆಗೆ ಉಪಯೋಗಿಸುವ ಕಾಮಗಾರಿ ಮಾಡಿದರೆ ಬಹು ಉಪಕಾರವಾದೀತು —ಈ ಊರಲ್ಲಿ 2 3 ತಿಂಗಳಿಂದಲೂ ಜನಗಳು ಪ್ಲೇಗಿನ ದೆಸೆಯಿಂದ ಗುಡಿಸಲುಗಳಲ್ಲಿ ವಾಸಮಾಡುತ್ತಾರೆ ಪ್ಲೇಗ್ ಇನ್ನೂ ನಿಂತಿಲ್ಲ ಗುಡಿಸಲುಗಳಲ್ಲೇ ಜನರು ಸಾಯುತ್ತಿದ್ದಾರೆ ಊರಿನೊಳಗೆ ಜನರು ತಿರುಗಾಡುತ್ತಾ ದನ ಕುರಿಗಳನ್ನು ಮೇಯಿಸುತ್ತಾ ಇರುತ್ತಾರೆ ಹೀಗಿರುವಲ್ಲಿ ಊರಿನೊಳಗೆ ಕಳ್ಳತನವಾಗುವದಕ್ಕೆ ಅಡ್ಡಿಯೇನೂ ಇಲ್ಲ ಅಲ್ಲದೆ ಪ್ಲೇಗಿನ ಅಂಟು ಹೇಗೆ ಕಡಮೆಯಾಗುವದು?—ಈ ಊರಿನ ವೈದ್ಯರವರು ಪ್ಲೇಗ್ ರೋಗಿಗಳ ವಿಷಯದಲ್ಲಿ ಅಷ್ಟೇನೂ ಹಿತಚಿಂತಕರಾಗಿರುವದಿಲ್ಲ ಪ್ಲೇಗ್ ಕಾಯಿಲೆಯವರಿಗೆ ಅವರಲ್ಲಿ ಔಷಧ ದೊರಕುವುದು ದುರ್ಲಭವಾಗಿದೆ ಅಂಥವರ ಮನೆಯವರು ಆಸ್ಪತ್ರೆ ಕಾಂಪೌಂಡಿನಿಂದ ಹೊರಗೇ ನಿಲ್ಲಬೇಕಾಗಿದೆ ಇದರಿಂದ ಜನಗಳಿಗೆ ಪ್ಲೇಗಿನ ಭೀತಿಯು ಎಷ್ಟಿದೆ ಎಂದು ಹೇಳಲು ಆಗುವದಿಲ್ಲ —ಅಲ್ಲದೆ ಈ ಊರಿನಲ್ಲಿ ಪೊಲೀಸ್ ಏರ್ಪಾಡು ಸರಿಯಾಗಿಲ್ಲ ಇರತಕ್ಕ ಕಾನ್ಸ್ಟೇಬಲ್‌ಗಳು ಬೇರೆ ಬೇರೆ ಕೆಲಸಕ್ಕೆ ನೇಮಕವಾಗಿರುತ್ತಾರೆ ಊರಿಗೆ ಮತ್ತು ಗುಡಿಸಲುಗಳ ಬೀಟು ಇಲ್ಲವೇ ಇಲ್ಲ ಆದುದರಿಂದ ಕಳ್ಳರಿಗೆ ಭಯ ಕಡಮೆ ಈ ಮಾಹೆ ತಾ 9 ನೇ ಶುಕ್ರವಾರ ರಾತ್ರಿ ಸುಮಾರು 1 ಘಂಟೆ ಸಮಯದಲ್ಲಿ ಸಂತೆ ಮಾಳದ ಎದುರಿಗೆ ಇರುವ ಹೋಟೆಲ್ ತಿಮ್ಮಯ್ಯನವರ ಗುಡಿಸಲಿಗೆ ಕಳ್ಳರು ಕನ್ನಾ ಹಾಕಿದರು ಅಲ್ಲಿನ ಜನರು ಎಚ್ಚರವಾಗಿರಲು ಓಡಿಹೋದರು ಅನಂತರ ಸುಮಾರು 1½ ಘಂಟೆ ಸಮಯದಲ್ಲಿ ಕೊನೆ ಕೋಡಿ ಬಳಿ ಇರುವ ಗುಡಿಸಲ ಬಳಿಗೆ ಹೋಗಿ ಕಂಟ್ರಾಕ್ಟರ್ ನರಸಿಂಹಯ್ಯನವರ ಗುಡಿಸಲಿಗೆ ಕನ್ನ ಹಾಕಿ ಸುಮಾರು 700-800 ರೂಪಾಯಿ ನಗನಾಣ್ಯಗಳನ್ನೂ, ಬಟ್ಟೆಬರೆಗಳನ್ನೂ ಸಾಗಿಸಿಕೊಂಡು ಹೋದರು ಅದೇ ರಾತ್ರಿ ಬಸ್ತಿಪುರು ರಸ್ತೆ ಪಕ್ಕದಲ್ಲಿರುವ ಗುಡಿಸಲುಗಳ ಬಳಿಗೆ ಹೋಗಿ ಅಲ್ಲಿ ಕನ್ನ ಹಾಕುತ್ತಿರಲು, ಅಲ್ಲಿನ ಜನರು ಎಚ್ಚರವಾಗಿ ಗದ್ದಲ ಮಾಡಲು ಓಡಿಹೋದರು ಇದನ್ನು ನೋಡಿದರೆ ಒಂದೇ ಗುಂಪಿನವರು ಮೇಲ್ಕಂಡ ಮೂರು ಸ್ಥಳಗಳಲ್ಲಿಯೂ ನುಗ್ಗಿದ್ದರೆಂದು ಕಾಣಬರುತ್ತೆ ಆದಾಗ್ಯೂ ಇವರಿಗೆ ಯಾವುದಾದರೂ ಒಂದು ವಿಧವಾಗಿ ಅಡಚಣೆ ಅಥವಾ ಭಯ ಉಂಟಾಗದೆ ಇದ್ದುದಕ್ಕೆ ಪೋಲೀಸಿನವರ ಗಸ್ತು ಇಲ್ಲದಿದ್ದುದೇ ಕಾರಣ ಇದೂ ಅಲ್ಲದೆ ಈಗ್ಗೆ 3-4 ತಿಂಗಳ ಕೆಳಗೆ ಊರಲ್ಲಿ ವೆಂಕಟರಾಮ ಭಟ್ಟರ ಮನೆಗೆ ಕಳ್ಳರು ನುಗ್ಗಿ ಸುಮಾರು 1,000 ರೂಪಾಯಿ ನಗನಾಣ್ಯಗಳನ್ನು ದೋಚಿಕೊಂಡು ಹೋದರು ಇದಕ್ಕೆ ಮುಂಚೆ ಇದೇ ಊರಲ್ಲಿ ಇನ್ನೂ ಅನೇಕ ಕಳ್ಳತನಗಳಾಗಿದ್ದವು ಇವುಗಳಲ್ಲಿ ಯಾವದೂ ಇನ್ನೂ ಪತ್ತೆ ಆಗಿಲ್ಲ

ಈ ಸಾರಿ ಆಗುವ ಪ್ರತಿನಿಧಿ ಸಭೆಗೆ ಇಬ್ಬರು ಮೆಂಬರುಗಳು ಈ ತಾಲ್ಲೂಕಿನಲ್ಲಿ ಚುನಾವಣೆ ಮಾಡಲ್ಪಟ್ಟರು 100 ರೂ ಮೇಲೆ ಕಂದಾಯ ಕೊಡತಕ್ಕವರನ್ನು ಎಲೆಕ್ಷನ್ ಲಿಸ್ಟಿಗೆ ಸೇರಿಸಬೇಕೆಂದೂ, 50 ರೂ ಮೇಲೆ 100 ರೂ ಒಳಗೆ ಕಂದಾಯ ಕೊಡತಕ್ಕವರನ್ನು ಓಟ್ ಲಿಸ್ಟಿಗೆ ಸೇರಿಸಬೇಕೆಂದೂ ರೂಲ್ಸ್ ಇದೆ ಈ ತಾಲ್ಲೂಕಿನಲ್ಲಿ ಕಸಬೆಗೆ ಆಗಲಿ, ಪೂರ ತಾಲ್ಲೂಕಿಗೆ ಆಗಲಿ ಒಂದೇ ಖಾತೆಗೆ 100 ರೂ ಮೇಲೆ ಕಂದಾಯ ಕೊಡುವ ಕೆಲವರನ್ನು ಓಟ್ ಲಿಸ್ಟಿಗೆ ಸೇರಿಸಿ, ಮತ್ತೆ ಕೆಲವರನ್ನು ಯಾವ ಲಿಸ್ಟಿಗೂ ಸೇರಿಸದೆ ಇರುತ್ತಾರೆ ಅಲ್ಲದೆ 50 ರೂ ಗಿಂತ ಕಡಮೆ ಕಂದಾಯ ಕೊಡತಕ್ಕವರನ್ನು ಎಲೆಕ್ಷನ್ ಲಿಸ್ಟಿಗೆ ಸೇರಿಸಿದಾರೆ ಅಲ್ಲದೆ ಈ ಊರಲ್ಲಿ ವಾಸವಾಗಿರುವ ಗುಂಡಪ್ಪಯ್ಯನೆಂಬವರು ಸರ್ಕಾರಕ್ಕೆ 300 ರೂ ಮೇಲೆ ಕಂದಾಯ ಕೊಡುತ್ತಾರಲ್ಲದೆ ಈ ತಾಲ್ಲೂಕಿನಲ್ಲೇ ಬೋಳಿ ಗ್ರಾಮಕ್ಕೆ 100 ರೂ ಕಂದಾಯ ಕೊಡುತ್ತಾರೆ ಇಂಥವರನ್ನು ಓಟ್ ಲಿಸ್ಟಿಗೆ ಸೇರಿಸಿರುವದು ಯಾಕೋ ತಿಳಿಯಲಿಲ್ಲ ಈ ಸಾರಿ 50 ರೂ ಗಿಂತ ಕಡಮೆ ಕಂದಾಯ ಕೊಡುವ ಒಬ್ಬರನ್ನು ಮೆಂಬರಾಗಿ ಚುನಾವಣೆ ಮಾಡಿದಾರೆ ಸರ್ಕಾರದವರು ಯೋಚಿಸಿ ಇದು ನ್ಯಾಯಕ್ಕೆ ವಿರುದ್ಧವಾಗಿದ್ದರೆ ತಕ್ಕ ಏರ್ಪಾಡು ಮಾಡುತ್ತಾರೆಂದು ನಂಬಲ್ಪಟ್ಟಿದೆ ಅಲ್ಲದೆ ಈ ಸಾರಿ ಚುನಾಯಿಸಲ್ಪಟ್ಟಿರುವ ಮೆಂಬರುಗಳ ಖಾತೆಗೆ ನಿಜವಾಗಿಯೂ ಎಷ್ಟು ಕಂದಾಯ ಸಲ್ಲುತ್ತದೋ ಪುನಃ ತಾಲ್ಲೂಕಿನಿಂದ ತರಿಸಿಕೊಂಡು ಅರ್ಹರಾದವರನ್ನು ಚುನಾವಣೆ ಮಾಡಲು ಏರ್ಪಾಡು ಮಾಡುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

ಜನೋಪಕಾರಿ

ತಾಲ್ಲೋಕು ವರ್ತಮಾನಗಳು

ಮಾಗಡಿ —ಈಗ ಸುಮಾರು 3 4 ದಿನಗಳಿಂದ ಮಳೆಯು ಸ್ವಲ್ಪ ತಗಿದೆ ಬೆಳೆಗಳು ಹುಲುಸಾಗಿ ಬೆಳೆದಿವೆ ಆರ್ತನೆ ಮುಂತಾದ ಕೆಲಸಗಳು ನಡೆಯುತ್ತಲಿವೆ ಆದಾಗ್ಯೂ ದಿನಸಿ ಧಾರಣೆಗಳು ಚಡಾವಾಗುತ್ತಲೇ ಇವೆ ಬಡಬಗ್ಗರು ಜೀವಿಸುವುದು ಕಷ್ಟವಾಗಿದೆ —ಇಲ್ಲಿ ಈಚೆಗೆ ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿದಾರೆ ಒಳ್ಳೇ ಸ್ಥಿತಿಯಲ್ಲಿ ನಡೆಯುತ್ತಿದೆ ಇದರಿಂದ ಗ್ರಾಮವಾಸಿಗಳಿಗೆ ತುಂಬಾ ಅನುಕೂಲವಾಗಿದೆ —ಇಲ್ಲಿ ವೈಶ್ಯಮಂಡಲಿಯವರು ಮೂರು ತಿಂಗಳ ಹಿಂದೆ ಒಂದು ವಾಚಕಶಾಲೆಯನ್ನು ಸ್ಥಾಪಿಸಿದ್ದರು ಇದು ದೀನಸ್ಥಿತಿಯಲ್ಲಿರುವುದರಿಂದ ಸಾಹುಕಾರರಾದ ವೈಶ್ಯರು ಈ ವಾಚಕಾಲಯಕ್ಕೆ ತಕ್ಕ ದ್ರವ್ಯ ಸಹಾಯ ಮಾಡಿ ಉಚ್ಛ್ರಾಯಸ್ಥಿತಿಗೆ ತರುವರೆಂದು ನಂಬಿದೇನೆ ಮತ್ತು ಈ ವಾಚಕಾಲಯದಲ್ಲಿ ಒಂದು ಪುಸ್ತಕ ಭಂಡಾರವನ್ನು ಸಹಾ ಇಡಿಸಬೇಕೆಂದು ಪ್ರಾರ್ಥಿಸುತ್ತೇನೆ

ಗೋರೀಪಾಳ್ಯ ತಾ|| ಹಾಲಿಗಾನಹಳ್ಳಿ — ಈಚೆಗೆ ಸ್ವಲ್ಪ ಮಳೆ ಬಿದ್ದದ್ದರಿಂದ ಕೀರಾ ಒಣಗಿ ಹೋಗಿದ್ದ ಪೈರುಗಳೆಲ್ಲಾ ಹಸರು ಒಣ್ಣಕ್ಕೆ ತಿರುಗುವಷ್ಟರಲ್ಲಿಯೇ ಪುನಃ ಮಳೆಯು ಬಾರದೆ ಇರುವದರಿಂದ ರೈತರೆಲ್ಲಾ ಆಕಾಶವನ್ನೇ ನೋಡುತ್ತಿದಾರೆ — ಈ ಗ್ರಾಮದಲ್ಲಿ ಬಡಬಗ್ಗರ ಜೀವನವಾಗುವುದು ತುಂಬಾ ಪ್ರಯಾಸವಾಗಿರುತ್ತೆ ದುಡ್ಡು ಕೈಯಲ್ಲಿದ್ದರೂ ದವಸ ಧಾನ್ಯಗಳು ಸಿಕ್ಕುವುದು ಬಹಳ ಕಷ್ಟವಾಗಿರುತ್ತೆ ದವಸ ಧಾನ್ಯಗಳು ಕೊಡತಕ್ಕವರೇ ಇಲ್ಲ ಹಿಂದೂಪುರ ಸಂತೆಯೊಂದಿದ್ದರೆ ದವಸಕ್ಕೇನೂ ಅಷ್ಟು ತೊಂದರೆ ಇರುತ್ತಿರಲಿಲ್ಲ ಆ ಊರಿಗೂ ಕಲರಾ ಪ್ರಾಪ್ತವಾಗಿರುತ್ತೆ ಇಂಥಾದ್ದರಲ್ಲಿ ಬಡವರ ಕಷ್ಟ ಹೇಳಲಿಕ್ಕಾಗದು ಇದೇ ತಿಂಗಳು ತಾ 7 ನೇ ಬುಧವಾರ ರಾತ್ರಿ ದೊಡ್ಡ ಬೊಮ್ಮಲಾಟದವರು ನಾಟಕವನ್ನು ಆಡುತ್ತಿರುವಾಗ ಕಳ್ಳರು ಊರಿನೊಳಕ್ಕೆ ಬಂದು ಬಹಳ ಗಲಭೆ ಮಾಡಿದರೇ ಹೊರತು ಯಾವ ಮನೆಯಲ್ಲೂ ಕಳುವಾಗಲಿಲ್ಲ —ನಮ್ಮ ಹೊಸ ಪಟೇಲ್ ವಸಂತೇಗೌಡರೂ, ಶಾ ವೆಂಕಟಕೃಷ್ಣಪ್ಪನವರೂ ಏಕೀಭವಿಸಿ ಕೆಲಸವನ್ನು ಬಹಳ ಮುತುವರ್ಜಿಯಿಂದ ಮಾಡುತ್ತಲಿದಾರೆ —ಇಲ್ಲಿಗೆ ಹೊಸದಾಗಿ ಬಂದಿರುವ ಸ್ಕೂಲ್ ಮಾಸ್ಟರ್ ಎಂ ಪಕೀರಪ್ಪನವರು ಸ್ಕೂಲನ್ನು ಅಭಿವೃದ್ಧಿಗೆ ತರಬೇಕೆಂಬುದರಲ್ಲಿ ಸಾಹಸಪಡುತ್ತಾ ವಿರಾಮಕಾಲವನ್ನೂ ಸ್ಕೂಲಿನ ಕ್ಷೇಮಚಿಂತನೆಗೆ ಉಪಯೋಗಿಸುತ್ತಾರೆ ಮೊದಲಿಗಿಂತ ಹುಡುಗರ ಸಂಖ್ಯೆಯು ಬಹಳ ಜಾಸ್ತಿಯಾಗಿರುತ್ತೆ

ಯಡತೊರೆ ತಾ|| ಮಿರ್ಲೆ — ಬಹಳ ಶೀತವಾದ ಗಾಳಿಯು ಬೀಸುತ್ತಾ ಇದೆ ಭೂಮಿಗೆ ಹದವಾದ ಮಳೆ ಆಗಲಿಲ್ಲ ತರಿ ಜಮೀನಿನ ನಾಟಿ ಕೆಲಸಗಳು ಪೂರೈಸುತ್ತಾ ಬಂತು — ಎಂಜಿನಿಯರ್ ಕೆಲಸಗಳು ತಕ್ಕಮಟ್ಟಿಗೆ ತೃಪ್ತಿಕರವಾಗಿವೆ ಗ್ರಾಮ ಮಧ್ಯೆ ಯೂರಿಯಲ್ ತಿಪ್ಪೆಗಳು ಬಿದ್ದು ಇವೆ ಇವನ್ನು ಕೂಡಲೆ ನಿವೃತ್ತಿ ಮಾಡುವುದಕ್ಕೆ ಸಿಗಾರ್ಕೊಟ್ಟಾರೆಂದು ನಂಬಿದೇವೆ — ಈ ಗ್ರಾಮದ ಗೌರ್ನಮೆಂಟ್ ಕನ್ನಡಾ ಸ್ಕೂಲಿನಲ್ಲಿ ಕೆಲವು ರಿಕಾರ್ಡು ವಗೈರೆ ಕಳುವಾಗಿದ್ದ ವಿಚಾರದಲ್ಲಿ ದಫೇದಾರ್ರು ಬಂದು ಸ್ಕೂಲ್ ಮಾಸ್ತರುಗಳನ್ನೂ ಜವಾನನನ್ನೂ ಸ್ಕೂಲ್ ಕಮಿಟಿ ಮೆಂಬರುಗಳ ರೂಬರೂನಲ್ಲಿ ತನಿಖೆ ಮಾಡಿದರು ಇನ್ನೂ ಇದರ ಫಲಿತಾಂಶ ಗೊತ್ತಾಗಲಿಲ್ಲ — ಈ ಗ್ರಾಮವು ಒತ್ತುವರಿ ಆಗುವ ಬಗ್ಗೆ ಚಾಮರಾಜ ನಾಲಾ ಮೇಲ್ಭಾಗದಲ್ಲಿರುವ ಹೊಲವನ್ನು ಸರ್ಕಾರದವರು ಚುನಾಯಿಸಿದರು ಈ ಜಮೀನು ಬಿಡಿಸಿಕೊಟ್ಟು ಮನೆ ಕಟ್ಟಿಕೊಳ್ಳುವ ಬಗ್ಗೆ ಸರ್ಕಾರದವರು ಇನ್ನೂ ಅವಕಾಶ ಕೊಡದೆ ಇರುವದರಿಂದ ವಾಸಮಾಡುವುದಕ್ಕೆ ಮನೆ ಇಲ್ಲದೆ ತೊಂದರೆ ಪಡುತ್ತಲಿರುವರು ಅಲ್ಲದೆ ಈ ವಿಚಾರದಲ್ಲಿ ಮೇಲೆ ಮನೆ ಕಟ್ಟುವುದಕ್ಕಾಗಿ ಜಾಗಾ ಕೊಡಿಸಿಕೊಡಬೇಕೆಂದು ಸುಮಾರು 10 50 ಜನಗಳು ಜಾಗಕ್ಕಾಗಿ ಅರ್ಜಿ ಕೊಟ್ಟು ಮೊಬಲಗು ಸಹಾ ಕಟ್ಟಿ 3 4 ವರ್ಷಗಳು ಆಯಿತು ಈಗಲೂ ದರ್ಖಾಸ್ತುಗಳಾದ ಸರ್ಕಾರದವರು ಕೂಡಲೆ ಜಮೀನು ಬಿಡಿಸಿಕೊಟ್ಟು ಅನುಕೂಲಪಡಿಸಿಕೊಡುತ್ತಾರೆಂದು ಪ್ರಾರ್ಥನೆ —ಧಾರಣೆವಾಸಿಗಳು ದಿನೇದಿನೇ ಹೆಚ್ಚುತ್ತಾ ಇವೆ ಈ ವಾರ ಸಂತೆಯಲ್ಲಿ ಅಕ್ಕಿ ರೂಪಾಯಿಗೆ 7 ಸೇರು, ರಾಗಿ 12 ಸೇರು ಮಾರಿದರು

ಪಾವಗಡ —ಈ ತಾಲ್ಲೂಕಿನಲ್ಲಿ ಮಳೆಯೂ ಇಲ್ಲ ಬೆಳೆಯೂ ಇಲ್ಲ ಕುಡಿಯಲು ನೀರು ಸಿಕ್ಕುವುದು ದುರ್ಲಭ ಕ್ಷಾಮವು ತಲೆದೋರಿದಂತೆ ಕಾಣುತ್ತೆ ರೂಪಾಯಿಗೆ 5 ಸೇರು ಅಕ್ಕಿ, 10 ಸೇರು ರಾಗಿ ಕೊಡುತ್ತಾರೆ ಬಡ ಜನರು ಜೀವಿಸಲು ಬಹಳ ಕಷ್ಟಕರವಾಗಿರುತ್ತೆ —ಕಾಲರಾ ಜಾಡ್ಯವು ಈ ತಾಲ್ಲೂಕಿನ ಸುತ್ತಲಿರುವ ಮಡಕಶಿರಾ, ಹಿಂದೂಪುರಗಳಲ್ಲಿ ಬಹಳವಾಗಿರುವುದಲ್ಲದೆ ಈ ತಾಲ್ಲೂಕಿನ ಚಿಕ್ಕಹಳ್ಳಿ ಎಂಬ ಗ್ರಾಮದಲ್ಲಿ ಮಾತ್ರ ಇರುತ್ತೆ ಸದ್ಯಕ್ಕೆ ಒಂದು ಹದ ಮಳೆ ಬಂದರೆ ಚೆನ್ನಾಗಿದ್ದೀತು ಜನಗಳೆಲ್ಲರೂ ಆಕಾಶವನ್ನೇ ನೋಡುತ್ತಿರುತ್ತಾರೆ ದನಗಳ ಮೇವಿನ ವಿಚಾರ ಹೇಳುವ ಹಾಗೆಯೇ ಇಲ್ಲ ಸುತ್ತು ಮುತ್ತಲು ಇರುವ ಪ್ರದೇಶಗಳಿಗಿಂತಲೂ ಈ ಊರೇ ವಾಸಿಯಾಗಿ ತೋರುತ್ತೆ ಊರಿನ ಜನಗಳಿಗೆಲ್ಲಾ ಒಂದೇ ಭಾವಿಯಾಗಿರುವುದರಿಂದ ಜನಗಳ ಮಧ್ಯೆ ನೀರು ಸಿಕ್ಕುವುದು ಕಷ್ಟವೇ ಹೊರ್ತು ಭಾವಿಯಲ್ಲಿ ನೀರು ಪುಷ್ಕಳವಾಗಿರುತ್ತೆ ಈ ಭಾವಿ ಸಮೀಪದಲ್ಲಿ ನೀರಿಗಾಗಿ ಹಡಾಹುಡಿ ವ್ಯಾಜ್ಯವಾಗಿ ಮುಷ್ಟಿಯುದ್ಧಗಳು ನಡೆದಾಗ್ಯೂ ವಿಚಾರಿಸುವವರೇ ಇಲ್ಲ ಬೆಳಗಿನ ಜಾವ 3 ಗಂಟೆ ಲಾಗಾಯ್ತು ರಾತ್ರಿ 12 ಗಂಟೆವರೆಗೂ ಪಂಚಾಯಿತಿಯಾಗಿರುತ್ತೆ ನೀರಿನ ವಿಚಾರ ಬಹಳ ಶೋಚನೀಯವಾಗಿದೆ ಸರ್ಕಾರದವರು ಇದಕ್ಕೆ ತಕ್ಕ ಏರ್ಪಾಡು ಮಾಡುವರೆಂದು ನಂಬಿರುತ್ತೇವೆ —ಅಲ್ಲಲ್ಲಿ ಕಳ್ಳತನಗಳಿಗೆ ಪ್ರಾರಂಭವಾಗಿರುತ್ತೆ ಈ ಟೌನ್‌ನಲ್ಲಿ ಸರ್ಕಾರದ ಮ್ಯುನಿಸಿಪಾಲಿಟಿ ಇಲ್ಲದೆ ಇದ್ದರೂ ಅಮಲ್ದಾರ್ ಮೆ|| ವೆಂಕಟಸಾಮಿ ಅಯ್ಯರವರು ಈ ಊರಿನ ದೊಡ್ಡ ಮನುಷ್ಯರೊಡನೆ ಯೋಚನೆಮಾಡಿ ಇದಕ್ಕೆ ಮುಖಂಡರಾಗಿ ಸಂತು ಮ್ಯುನಿಸಿಪಾಲಿಟಿಯನ್ನು ಜರುಗಿಸುತ್ತಾ ಇದಾರೆ ಇದೂ ಅಲ್ಲದೆ ಅಮಲ್ದಾರ್ರವರು ರೀಡಿಂಗ್ ರೂಂ ಒಂದನ್ನು ಸ್ಥಾಪಿಸಿ ಅದನ್ನು ಅಭಿವೃದ್ಧಿಗೆ ತರುತ್ತಾ ಇದಾರೆ ಇವರು ಬಹಳ ಒಳ್ಳೆಯವರು

ಕಡೂರು —ಮಳೆ ಧಂಡಾಗಿ ಬಂದಿದೆ ರೈತರು ಬಹಳ ಹರುಷದಿಂದ ಬಿತ್ತನೆ ಕೆಲಸದಲ್ಲಿ ಆಸಕ್ತರಾಗಿರುವರು —ತಾ 10 ರಲ್ಲಿ ದಸರಾ ಮೀಟಿಂಗು ನಡಿಯಿತು ಈ ದಫಾ ದಸರಾಕ್ಕೆ ಈ ತಾಲ್ಲೂಕಿನಿಂದ ಮ| ಹಂಗ್ಲಿ ನರಸಿಂಹಯ್ಯಂಗಾರ್ರವರು, ಬೀರೂರು ಪತ್ರೇ ವೀರಯ್ಯನವರು, ಮಿರೀಧಿ ಲಿಂಗಯ್ಯನವರು ಹೋಗುವಂತೆ ವೋಟುಗಳು ಬಂದದ್ದು ಸಂತೋಷಪ್ರದವಾಗಿದೆ ಈ ಮಹನೀಯರು ಕಡೂರು ಗ್ರಾಮದವರಿಗೆ ಗೋಮಾಳವಿಲ್ಲದೆ ಪಡುತ್ತಿರುವ ತೊಂದರೆಯನ್ನು ಘನವಾದ ಸರ್ಕಾರದಲ್ಲಿ ಪ್ರಶಂಸಿಸಬೇಕಾಗಿದೆ — ಈ ಕಡೂರು ಟೌನ್ ಪೇಟೆವಾಸಿಗಳಿಗೆ ನೀರಿನ ಅನಾನುಕೂಲ ಹೇಳತೀರದು ನಲ್ಲಿಗಳು ಒಂದೂ ಸರಿಯಾಗಿಲ್ಲ ಸ್ಯಾನಿಟರಿ ಇನ್ಸ್ಪೆಕ್ಟರಿಗೆ ಬೀರೂರು ಹೆಡ್ ಕ್ವಾರ್ಟರಾಗಿರುವದರಿಂದ ಅಲ್ಲಿನ ಕೆಲಸವೇ ಅವರಿಗೆ ಸಾಕಾಗಿರುತ್ತೆ ಇಂಥಾದ್ದರಲ್ಲಿ ಈ ಟೌನ್ ಅನಾನುಕೂಲ ಹ್ಯಾಗೆ ಸರಿಯಾದೀತು? ಇದಕ್ಕೆ ಮುಖ್ಯವಾಗಿ ನಿಗಾ ಕೊಡತಕ್ಕದ್ದು ಆವಶ್ಯಕ —ಈ ಟೌನ್ ಆಕ್ಟ್ರಾಯಿ ವಸೂಲಿ ಶಿಬ್ಬಂದಿ ಸಾಲದ್ದರಿಂದ ಹಾಸಲು ತೀರುವಳಿ ಆಗತಕ್ಕ ಸಾಮಾನುಗಳನ್ನು ವರ್ತಕರು ವಂಚನೆಯಿಂದ ತೆಗೆದುಕೊಂಡು ಒರುತ್ತಾರೆ ಮೊನ್ನೆ ಹೊನ್ನಯಶೆಟ್ಟಿ ಎಂಬವನು 10 ಮಣ ಬೆಲ್ಲವನ್ನು ಹಾಸಲು ತೀರುವಳಿ ಮಾಡದೆ ತುಂಬಿಕೊಂಡದ್ದು ಹ್ಯಾಗೋ ಪತ್ತೆ ಆಗಿ ನಂತರ 5 ರೂಪಾಯಿ ವಸೂಲಾಯಿತು ಈ ರೀತಿ ಅನೇಕ ನಡೆಯುತ್ತೆ ಇದಕ್ಕೆ ಮೆಂಬರುಗಳು ನಿಗಾ ಕೊಡತಕ್ಕದ್ದು ಆವಶ್ಯಕ ಆದರೆ ಇವರು ವ್ಯಾಪಾರಗಾರರೇ ಆದ್ದರಿಂದ ಹುಟ್ಟುವಳಿ ಹೆಚ್ಚುಕಮ್ಮಿ ವಿಚಾರ ಚರ್ಚಿಸಿದರೆ ತಮಗೇ ಅನಾನುಕೂಲವಾಗಬಹುದೆಂದು ತಟಸ್ಥರಾಗಿರುವಂತೆ ಕಾಣುತ್ತದೆ ಈ ಟೌನ್‌ನಲ್ಲಿ ಹಾಲಿ ಇರತಕ್ಕ ಮೆಂಬರುಗಳ ಅವಧಿ ಕಳೆದಿದರೂ ಪುನಃ ಇವರುಗಳೇ ಇರತಕ್ಕದೆಂದು ತೀರ್ಮಾನಿಸಿಕೊಂಡಿರುವಂತೆ ಕೇಳುತ್ತೇನೆ ಈ ಸ್ಥಾನಕ್ಕೆ ಅರ್ಹರಾದವರು ಅನೇಕರಿರುತ್ತಾ ಈ ರೀತಿ ಮಾಡಿದ್ದು ಯಾಕೋ ತಿಳಿಯಲಿಲ್ಲ

ದೊಡ್ಡಬಳ್ಳಾಪುರ —ಪೈರುಗಳ ಸ್ಥಿತಿ ಚನ್ನಾಗಿದೆ ಪ್ರಜಾ ಆರೋಗ್ಯ ಸುಮಾರಾಗಿದೆ ಇಲ್ಲಿಗೆ 4 ಮೈಲಿ ದೂರದಲ್ಲಿರುವ ಭೈರಸಂದ್ರವೆಂಬ ಗ್ರಾಮದಲ್ಲಿ 7 ಜನರಿಗೆ ಪ್ಲೇಗ್ ತಗಲಿ ಆಗಲೇ 5 ಮಂದಿ ತೀರಿಹೋದರು ಕಳೆದ 4 ವರ್ಷಗಳಿಂದಲೂ ಈ ಗ್ರಾಮಕ್ಕೆ ಪ್ಲೇಗ್ ಬಂದಿರಲಿಲ್ಲವಂತೆ —ಈ ಊರಲ್ಲಿದ್ದ ಪೋಲೀಸ್ ಇನ್ಸ್ಪೆಕ್ಟರ್ ಮೆ|| ಹಾಮಿದ್ ಹುಸೇನ್‌ಯವರು ಗೌರಿಬಿದನೂರಿಗೂ, ಜಮೇದಾರ್ ದೇವರಭಟ್ಟರು ಆನೇಕಲ್ಲಿಗೂ ವರ್ಗವಾಗಿ ಹೋದರು ಮುಂದೆ ಬರತಕ್ಕವರು ಪೂರ್ವದಲ್ಲಿದ್ದ ಇನ್ಸ್ಪೆಕ್ಟರ್ ಮೆ ಸಿರಾಜುದ್ದೀನ್ ಸಾಹೇಬರಂತೆ ಪ್ರಜಾಪಾಲಕರಾಗಿಯೂ ಸತ್ಯಸಂಧರಾಗಿಯೂ ಇದ್ದು ಇಲ್ಲಿ ನಡೆಯುವ ಜೂಜು, ಕಳ್ಳತನ ಮುಂತಾದ ದುಷ್ಕೃತ್ಯಗಳನ್ನು ಅಡಗಿಸಿ ಪ್ರಜಾರಂಜಕರಾಗಿರುವರೆಂದು ನಿರೀಕ್ಷಿಸಲ್ಪಟ್ಟಿದೆ —ಕೆಲವು ವಾರಗಳ ಹಿಂದೆ ಅಗ್ರಹಾರವೆಂಬ ಗ್ರಾಮದಲ್ಲಿ ಒಬ್ಬ ಹುಡುಗಿಯನ್ನು ಬಲಾತ್ಕಾರದಿಂದ ಮತ್ತೊಬ್ಬನಿಗೆ ಮದುವೆ ಮಾಡಿದಂತೆಯೂ, ಮಧುರೆ ಗ್ರಾಮದಲ್ಲಿ ಪಟೇಲನ ಆಳು ಒಬ್ಬ ಮಾದಿಗನು ಅಕಸ್ಮಾತ್ ಮೃತಪಟ್ಟಂತೆಯೂ ವದಂತಿ ಇತ್ತು ಈಚೆಗೆ ಅವುಗಳ ಪರಿಣಾಮವೇನೂ ತಿಳಿಯಲಿಲ್ಲ —ಈ ತಿಂಗಳು 3 ನೆ ತಾ ನಡೆದ ಮೀಟಿಂಗಿನಲ್ಲಿ ಮ| ಗಳಾದ ದಿವಾನ್ ಶೆಟ್ಟಿ, ತೂಬಗೆರೆ ಸಾ ಚಂದ್ರಶೇಖರಯ್ಯನವರೂ, ಆಲಂಪಲ್ಲಿ ಆದಿನಾರಾಯಣಶೆಟ್ಟರೂ ಈ ತಾಲ್ಲೂಕಿನಿಂದ ದಸರಾ ಪ್ರತಿನಿಧಿ ಮೆಂಬರುಗಳಾಗಿ ಚುನಾಯಿಸಲ್ಪಟ್ಟರೆಂತಲೂ, ಮ್ಯುನಿಸಿಪಾಲಿಟಿಯವರು ಮ|| ರಾ ಆಲಂಪಲ್ಲಿ ವೆಂಕಟನಾರಾಯಣಶೆಟ್ಟರನ್ನು ಆರಿಸಿ ಪ್ರತಿನಿಧಿಗಳಾಗಿ ಕಳುಹಿಸುವಂತೆಯೂ ತಿಳಿಯಲಾಗಿದೆ —ಈ ಊರು ಹಿಂದೂಸ್ಥಾನಿ ಗರ್ಲ್ಸ್ ಸ್ಕೂಲಿಗೆ ಹೊಲಿಗೆ ಕಸೂತಿ ಕಲಿಸುವದಕ್ಕೆ ಒಬ್ಬ ಮಿಸ್ಟ್ರೆಸ್ ಹೊಸದಾಗಿ ಮಂಜೂರಾಗಿದೆ ಈ ಕೆಲಸಕ್ಕೆ ಲಾಯಖಾದವರು ಇನ್ನೂ ಸಿಕ್ಕಿರುವದಿಲ್ಲ —ಈ ಊರಿಗೆ ಎಕ್ಸೈಸ್ ಸೂಪರ್‌ವೈಜರವರು ಹೊಸದಾಗಿ ಶ್ರೀರಂಗಪಟ್ಟಣದಿಂದ ವರ್ಗವಾಗಿ ಬಂದಿರುತ್ತಾರೆ ಇವರು ಅನಾರೋಗ್ಯದ ನಿಮಿತ್ತ ಇಲ್ಲಿಗೆ ವರ್ಗವಾಗಿರುವದಾಗಿ ತಿಳಿಯುವುದು

ತೀರ್ಥಹಳ್ಳಿ —ಈ ತಾಲ್ಲೋಕಿನಲ್ಲಿ ಕೆಲವು ಭಾಗದಲ್ಲಿ ತಾ 18 19 ರ ಲಾಗಾಯ್ತು ಘನ ಮಳೆಯು ವಿಪರೀತವಾಗಿ ಸುರಿಯುತ್ತಾ ಶರಾವತಿ ನದಿಯು ಹೆಚ್ಚಾದ ಪ್ರವಾಹದಿಂದ ತುಂಬಿ ಕೆಲವು ಭಾಗ ತರಿ ಜಮೀನುಗಳು ಯಾವತ್ತೂ ಫಸಲು ಮುಳುಗಿಕೊಂಡು ಜಮೀನೇ ಇಲ್ಲದ ತೆ ಏಕಪ್ರಕಾರ ಸಮುದ್ರದಂತೆ ಇರುತ್ತೆ ಅಲ್ಲದೆ ಸರಿ ಸಸಿಲು ಇಷ್ಟಿರುವದು ಯ ಮತ್ತು ನೀರಿನಿಂದ ಕೊಳೆತು ನಾಶವಾಗಿರುವದರಿಂದ ಮುಂದೆ ಜೀವನಮಾಡುವ ರೀತಿ ಹ್ಯಾಗೋ

ಸರಕಾರಿ ಕಂದಾಯ ಕೊಡುವದಕ್ಕೆ ಸಾಲ ಮಾಡಬೇಕಲ್ಲದೆ ಬಾಗೂ ಮುಂದೆ ಸಾಲ ತೀರಿಸಲು ಹಾದಿಯೇನೆಂಬುವದಾಗಿ ಈ ನದಿ ಸಮೀಪದ ರೈತರುಗಳಂತು ವ್ಯಸನಪಡುವದು ನೋಡಿ ಸೈರಿಸಲು ಸಾಧ್ಯವಾಗಲಾರದ್ದಾಗಿದೆ ಪಾಪ ಮುಂದೆ ಈ ರೈತರು ಹ್ಯಾಗೆ ಜೀವನ ಮಾಡುತ್ತಾರೋ ಶ್ರೀ ದೇವರಿಗೇ ಗೋಚರ ಆದರೆ ಇನ್ನಾದರೂ ಆಶ್ಲೇಷಾ ಮಳೆಯು ಸಮಾಧಾನವಾಗದೆ ಹೋದರೆ ಈ ರೈತರೆಲ್ಲಾ ಮುಂದೆ ದೇಶಾಟನೆ ಹೊರಡುವದಕ್ಕೆ ಸ್ವಲ್ಪವೂ ಅನುಮಾನವಿಲ್ಲವಾಗಿದೆ — ಈ ತಾಲ್ಲೋಕಿನ ಆಗುಂಬೆ ಸಮೀಪ ನಂಟೂರುಗ್ರಾಮದಲ್ಲಿ ಒಬ್ಬ ಹೆಗ್ಗಡೆಯು ಈಗ ಸುಮಾರು ಜೂಲೈ ತಾ 16 ರಲ್ಲಿ ದೊಡ್ಡ ಖೂನಿ ನಡಿಸಿರುವದಾಗಿ ತಿಳಿಯಬಂದಿದೆ ಸುಮಾರು 10 ವರುಷ ಪ್ರಾಯದ ಒಬ್ಬ ಹೆಂಗಸು ಒಂದು, 16 18 ವರುಷದ ಪ್ರಾಯದ ಆಳ ಮಗಳು ಒಂದು, 8 10 ವರುಷ ಪ್ರಾಯದ ಇನ್ನೊಂದು ಮಗು, ಈ ರೀತಿ ಮೂರು ಶ್ರವಗಳು ಆತನ ಮನೆ ಸಮೀಪದ ತೋಟದಲ್ಲಿ 7-8 ಗಜ ಎತ್ತರ ನೀರು ತುಂಬಿದ ಕೆರೆಯಲ್ಲಿ ಎರಡನೆ ಸಣ್ಣ ಹುಡುಗಿ ಮಾತ್ರ ತೇಲುತ್ತಾ ಇದ್ದುದನ್ನು ತಾ 18 ರಲ್ಲಿ ಊರಿನವರು ಯಾರೋ ಕಂಡು ಆ ಹೆಗ್ಗಡೇಗೆ ತಿಳಿಸುವಲ್ಲಿ ಗಲಾಟೆ ಆಯಿತೆಂದು ಅಡಿಯಿಂದ ಗಣೆ ಹಾಕಿಸಿ ಮೇಲಕ್ಕೆ ಬಂದ ಈ ಎರಡು ಶ್ರವಗಳ ಸಮೇತ ತೆಗಸಿ ಜಡಕ್ಕೆ ಹಾಕಿಸಿದ್ದಲ್ಲದೆ ಕೂಡ್ಲೆ ತಾಲ್ಲೋಕಿನ ಇನ್‌ಸ್ಪೆಕ್ಟರು, ಡಾಕ್ಟರು, ಜಮಾದಾರ್ ಸಹ ತಾ 19 ಕ್ಕೆ ಬಂದು ಆತನ ಹೇಳಿಕೆ ತೆಗೆದುಕೊಂಡು ಹೋಗಿರುತ್ತಾರೆ ಅಮಲ್ದಾರರು ಸಹ ಬಂದು ಹೇಳಿಕೆ ಮತ್ತು ಮಹಜರು ನಡಿಸಿ ಹೋಗಿರುತ್ತಾರೆ

ಚಿತ್ರದುರ್ಗ —ಆಶ್ಲೇಷಾ ಮಳೆ ಹುಟ್ಟಿದ ಲಾಗಾಯಿತು ಅದಕ್ಕೆ ಮೊದಲು 15 ದಿವಸ ಮೋಡ ಮುಚ್ಚಿಕೊಂಡು ಝಡಿಮಳೆ ಬರುತ್ತಿದ್ದದ್ದು ನಿಂತು, ಬಿಸಿಲು, ಮೋಡ, ಝಡಿಮಳೆ ಇವು ಬಿಟ್ಟು ಬಿಟ್ಟು ಬರುತ್ತಾ ಹೋಗುತ್ತಾ ಇದೆ ಆದರೆ ಕೆರೆಗಳಿಗೆ ಮಾತ್ರ ನೀರು ಬರಲಿಲ್ಲ ನೀರಿನ ಕ್ಷಾಮ ಬಂದೀತೆಂಬ ಭಯ ಪ್ರಜೆಗಳಿಗೆ ತಪ್ಪಿ ಇಲ್ಲ ರೈತಾಪಿ ಜನಗಳು ಮುಂಗಾರು ಬೆಳೆಗಳ ವ್ಯವಸಾಯದಲ್ಲಿ ನಿರತರಾಗಿದ್ದಾರೆ ಜನಸಿ ಧಾರಣೆ ದಿನೇ ದಿನೇ ಏರುತ್ತಾ ಇದೆಯೇ ಹೊರ್ತು ಅಗ್ಗವಾಗಿ ಬಡವರು ಸೌಖ್ಯವಾಗಿ ಜೀವಿಸತಕ್ಕ ಕಾಲಬಂದಿಲ್ಲ —ಈ ತಿಂಗಳು 7 ನೇ ತಾ ರಾತ್ರಿ ಚಿತ್ರದುರ್ಗಕ್ಕೆ 7 ಮೈಲಿ ಫಾಸಲೆ ಇರತಕ್ಕ ಪಂಡ್ರಹಳ್ಳಿಯಲ್ಲಿ ಮುರಿಗಪ್ಪನೆಂಬ ವರ್ತಕನ ಮನೆಯಲ್ಲಿ ಆತನ ಬಾಕೀದಾರರಾದ 3 ಜನಗಳು ಆ ವರ್ತಕನನ್ನೂ ಆತನ ಹೆಂಡತಿಯನ್ನೂ ಸಹಾ ಕೊಂದುಹಾಕಿದರು ಖೂನಿಯಾದವರು ಗಾಯತಕ್ಕ ಕಾಲದಲ್ಲಿ ಕೂಗಿಕೊಂಡ ಶಬ್ದ ಅಕ್ಕಪಕ್ಕದ ಮನೆಯವರಾದ ಸಾಹುಕಾರ್ ನಂಜುಂಡಪ್ಪ ವಗೈರೇರು ಕೇಳಿ ಖೂನಿಯಾದವನ ಮನೆ ಸುತ್ತಲೂ ಘೇರಾಯಿಸಿಕೊಂಡದ್ದರಿಂದ ಖೂನೀ ಮಾಡಿದವರು ಓಡಿಹೋಗಲಾರದೆ ಮನೇಲಿ ಸಿಕ್ಕಿಬಿದ್ದರು ಖೂನಿಯಾದ ವರ್ತಕನಿಗೆ 21 ವರುಷ ವಯಸ್ಸು ಆತನ ಹೆಂಡತಿಗೆ 19 ವರುಷವಿದ್ದೀತು — ಈಗ್ಗೆ 20 ದಿವಸದ ಒಳಗೆ ಚಿತ್ರದುರ್ಗದ ಸಾಹುಕಾರ್ ಕಂಚಪ್ಪನವರು ಹಳ್ಳಿಯವರಿಂದ ಹಲ್ಲುಮುರಿಯುವ ಹಾಗೆ ಹೊಡಿಸಿಕೊಂಡು ಬಂದರು ಈ ವಿಷಯವು ಪೋಲೀಸಿನವರ ವಿಚಾರಣೆಯಲ್ಲಿದೆ ಇದಲ್ಲದೆ ನೆನ್ನೆಯಿಂದ ಯಾರಬಾಯಲ್ಲಿ ಕೇಳಿದರೂ ಸತ್ಯವಂತನಾದ ಒಬ್ಬ ಜಗಲೂರು ಸಾಹುಕಾರರನ್ನು (ಈತನ ಹೆಸರು ಹೇಳಲಿಕ್ಕೆ ನನಗೆ ಇಷ್ಟವಿಲ್ಲ ಈ ವರ್ತಮಾನ ಸುಳ್ಳಾಗಲೆಂದು ಹಾರೈಸುತ್ತೇನೆ) ಯಾರೋ ಹೊಡೆದಿದ್ದಾರೆಂಬ ವದಂತಿಯನ್ನು ಕೇಳಿ ಅನೇಕರು ಜಗಲೂರಿಗೆ ಹೋಗಿದ್ದಾರೆ ಖೂನಿಗಳೆಂಬುವುದು ಈ ಡಿಸ್ಟ್ರಿಕ್ಟಿನಲ್ಲಿ ಬಹು ಸಾಧಾರಣವಾಯಿತು ಪೋಲೀಸ್ ದರ್ಪ, ಅವರು ಪ್ರಜಾರಕ್ಷಣೆಗಾಗಿ ಉಪಕ್ರಮ ಮಾಡಬೇಕಾದ (ತಪ್ಪಿತಗಳು ನಡೆಯದಂತೆ ಮಾಡತಕ್ಕ) ಮುಂಜಾಗ್ರತೆ ಯನ್ನು ಪ್ರಯತ್ನ, ನಿಜಕ್ಕೂ ಬಹಳ ಸಡಿಲವಾದಂತೆ ಕಾಣುತ್ತದೆ —ಚಿತ್ರದುರ್ಗದಲ್ಲಿ ಸ್ಥಾಪಿಸಲ್ಪಟ್ಟಿರತಕ್ಕ ಶ್ರೀನಗರ್ ಮೇರಿ ಮಹಾರಾಜ್ಞಿ ಪಂಚಮಾ ಸ್ಕೂಲು ಬಹಳ ಚನ್ನಾಗಿ ನಡೆಯುತ್ತಾ ಇದೆ ಆದರೆ ಇದಕ್ಕೂ ಇದರ ಉತ್ಪತ್ತಿಗೆ ಕಾರಣವಾದ ಆರ್ಯನ್ ಸ್ಟೂಡೆಂಟ್ಸ್ ಹೋಂ ಎಂಬ ವಿದ್ಯಾರ್ಥಿಗಳಲ್ಲಿ ಜಾತಿಭೇದವನ್ನೆಣಿಸದ ಅನಾಥಾಲಯಕ್ಕೂ ಈ ವರೆವಿಗೂ ಗವರ್ನ್‌ಮೆಂಟ್ ಸಹಾಯ ಸಿಕ್ಕಿಲ್ಲವೆಂದು ಚಿಂತೆಪಡಬೇಕಾಗಿದೆ

ಕೊರಟಗೆರೆ —ಇಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಆಗಿ ಕೆರೆ ಕಟ್ಟೆಗಳಿಗೆ ಅಲ್ಪಸ್ವಲ್ಪ ನೀರು ಬಂದಿರುತ್ತೆ ಕಬ್ಬು, ರಾಗಿ, ಭತ್ತ, ಈ ಬೆಳೆಗಳು ಬಹು ಕವುಟ್ಟಿಗೆ ಅನುಕೂಲವಾಗಿವೆ —ಇಲ್ಲಿ ಮ್ಯುನಿಸಿಪಾಲಿಟಿ ಬಹಳ ಶೋಚನೀಯವಾಗಿದೆ ಕೆಲವು ಬೀದಿಗಳಲ್ಲಿ ಕಟರಾ ಚೆನ್ನಾಗಿ ಗುಡಿಸುವುದೇ ಇಲ್ಲ ಲಾಂದ್ರಗಳ ಲಾಂಛನವಂತು ಇಲ್ಲವೇ ಇಲ್ಲ ಇದರಿಂದ ರಾತ್ರಿವೇಳೆ ತಿರುಗಲು ಬಹು ತೊಂದರೆಯಾಗಿದೆ ಮ್ಯುನಿಸಿಪಲ್ ಮೆಂಬರುಗಳು ಮತ್ತು ಅಮಲ್ದಾರ್ರವರು ಸಹ ಗಮನಕ್ಕೆ ತಂದು ಸರಿಯಾದ ಸ್ಥಿತಿಯಲ್ಲಿ ಇಡಿಸುವರೆಂದು ನಂಬುತ್ತೇನೆ — ಇಲ್ಲಿನ ಫಾರೆಸ್ಟ್ ಲೈಸೆನ್ಸ್ ವೆಂಡರು ತೀರಿಹೋದ್ದರಿಂದ ಪ್ರಜೆಗಳಿಗೆ ಲೈಸೆನ್ಸು ಕೊಡುವವರು ಯಾರೂ ಇಲ್ಲದೆ ಬಹಳ ತೊಂದರೆಯಾಗಿದೆ ನಮ್ಮ ಫಾರೆಸ್ಟ್ ಅಸಿಸ್ಟೆಂಟರು ದಯಮಾಡಿ ಇಲ್ಲೇ ಸ್ಥಳವಂದಿಗರಾಗಿಯೂ ಜವಾನ್‌ದಾರರಾಗಿಯೂ ಹಿಂದೆ ಬರಲಿ ನೋಡಿದವರಾಗಿಯೂ ಇರುವ ಶಿವರಾಮೈಯನವರಿಗೆ ವೆಂಡರ್ ಕೆಲಸ ಕೊಟ್ಟರೆ ಬಹಳ ಉಪಕಾರವಾಗುವುದು —ಟವನ್ ಪೋಲೀಸ್ ಇನ್‌ಸ್ಪೆಕ್ಟರ್ ಮ॥ ಎಸ್ ನರಸಿಂಹಯ್ಯನವರಿಗೆ ಬೇರೆ ಕಡೆಗೆ ವರ್ಗವಾಗಿದ್ದ ವದಂತಿ ತಪ್ಪಿ ಪುನಹ ಇಲ್ಲಿಯೇ ಇರುವಂತೆ ಆರ್ಡರ್ ಬಂದಿತು ಇವರು ಇಲ್ಲಿಗೆ ಬಂದು ಕೊಂಚದಿನಗಳೇ ಆದರೂ ಎಲ್ಲರ ವಿಶ್ವಾಸಕ್ಕೂ ಪಾತ್ರರಾಗಿ ಊರಿನಲ್ಲಿ ಕಳ್ಳಕಾಕರ ಭಯವಿಲ್ಲದಂತೆಯೂ, ಜೂಜಾಟಗಳು ನಡೆಯದಂತೆಯೂ ಸರಿಯಾದ ವಿಚಾರಣೆ ಇಟ್ಟು ಬಹಳ ದರ್ಪದಿಂದ ಕೆಲಸ ನಡಿಸುತ್ತಾ ಇದ್ದಾರೆ —ಪೊನ್ನೆ ಪೆನಗೊಂಡಾ ತಾಲ್ಲೂಕು ಲಕ್ಕ್ಷನುಪಲ್ಲಿ ಎಂಬ ಗ್ರಾಮದಿಂದ ಒಬ್ಬ ಕುಂಬಾರ್‍ರವನು ಒಕ್ಕಲಿಗರ ಹೆಂಗಸನ್ನು ಆಭರಣ ಸಮೇತ ಅಪಹರಿಸಿಕೊಂಡು ಇಲ್ಲಿ ತನಗೆ ಬಂಧುವಾಗಿದ್ದ ಕುಂಬಾರ್‍ರ ಈರಬೈಯ ಎಂಬವನ ಮನೆಯಲ್ಲಿಯೂ, ಕೆಲವು ದಿವಸಗಳ ನಂತರ ಇನ್ನೊಂದು ಮನೆಯಲ್ಲಿಯೂ ವಾಸಮಾಡಿಕೊಂಡು ಇದ್ದನು ಈ ಸಂಗತಿಯು ಯಾರೊಬ್ಬರಿಗೂ ತಿಳಿಯದು ಅಲ್ಲದೆ ಆ ಹೆಂಗಸಿನ ಕಡೆಯವರು ಪೋಲೀಸಿಗೆ ತಿಳಿಸಿರಲಿಲ್ಲ ಇಂಥಾದ್ದನ್ನು ಇಲ್ಲಿನ ಪ್ರಿಲ್ ಇನ್‌ಸ್ಪೆಕ್ಟರ್ ಮ॥ ಹಾಫೀಸ್ ಖಾನ್ ಎಂಬವರು ನಾರಾಯಣ ರಾಜು ಸಹ ಪತ್ತೇ ಮಾಡಿ ಇನ್‌ಸ್ಪೆಕ್ಟರಿಗೆ ತಿಳಿಸಿ ಪೆನಗೊಂಡೆಗೆ ಯಾದಿ ಬರಸಿದರು ಆ ಕೂಡ್ಲೆ ಅಲ್ಲಿಂದ ಆ ಹೆಂಗಸಿನ ವಾರಸ್‌ದಾರ್‍ರು ಒಂದು, ಈಕೆಯು ನಮ್ಮ ಮನೆಯವಳೆಂತಲೂ ಕೊಂಚ ಹಣವನ್ನೂ ಒಡವೆಯನ್ನೂ ಅಪಹರಿಸಿಕೊಂಡು ಬಂದಿರುವರೆಂತಲೂ ಹೇಳಲು, ಇನ್‌ಸ್ಪೆಕ್ಟರು ಈರಬೈಯನೆಂಬುವನ ಮನೆಗೆ ಪಂಚಾಯಿತರ ಸಮೇತ ಹೋಗಿ ಅಜಮಾಯಿಷಿ ಮಾಡುವಲ್ಲಿ ಕೊಂಚ ಮಾಲುಗಳು ಪತ್ತೆ ಆದವು ಅನಂತರ ಅವರನ್ನು ದಸ್ತಗಿರಿ ಮಾಡಿ ಪೆನಗೊಂಡೆಗೆ ಕಳುಹಿಸಿರುತ್ತಾರೆ —1 2 ತಿಂಗಳ ಹಿಂದೆ ಮಡಕಸಿರಾ ತಾಲ್ಲೂಕಿನಿಂದ ಎಲ್ಲಿಗೋ ಹೋಗುತ್ತಿದ್ದ ಒಬ್ಬ ಪಿಂಜಾರ್‍ರವನನ್ನೂ, ಇವನು ಅಪಹರಿಸಿಕೊಂಡು ಬಂದಿದ್ದ ಒಬ್ಬ ಲಿಂಗಾಯಿತರ ಹೆಂಗಸನ್ನೂ ಇಲ್ಲಿನ ಪೋಲೀಸ್ ನೌಕರರು ಕಂಡು ಹಿಡಿದು ಅವರಿಗೆ ಶಿಕ್ಷೆಯನ್ನು ಮಾಡಿಸಿದರು ಇದಲ್ಲದೆ ಪೋಲೀಸ್ ನೌಕರರು ಪಕ್ಷಪಾತವಿಲ್ಲದೆ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರುವುದರಿಂದ ಯಾವದೊಂದು ಪುಂಡಿಗೂ ಅವಕಾಶವಿಲ್ಲದಂತಾಗಿದೆ —ಈ ಸಲ ದಸರಾ ಮಹೋತ್ಸವಕ್ಕೆ ಪ್ರತಿ ಒಂದು ತಾಲ್ಲೂಕಿನಿಂದಲೂ ಒಬೊಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸಬೇಕೆಂದು ಆರ್ಡರ್ ಬಂದಿರುತ್ತೆ ಅದರಂತೆ ಈ ನಮ್ಮ ತಾಲ್ಲೂಕಿನಿಂದ ಇನ್ನೂ ಯಾರನ್ನೂ ಚುನಾಯಿಸಲಿಲ್ಲವೆಂತ ಕಂಡ ಬರುತ್ತೆ ಈ ಕಸಬಾ ಟವನ್‌ನಲ್ಲಿಯೇ ಬಹಳ ದಿವಸಗಳಿಂದಲೂ ಇದ್ದು ವಿದ್ಯಾವಂತರಾಗಿಯೂ ಬರಿ ಸಂಸಾರಿಗಳಾಗಿಯೂ ಇರುವರನ್ನು ನಮ್ಮ ಅಮಲ್ದಾರ್‍ರು ನೋಡಿ ಚುನಾಯಿಸಿದರೆ ಅನುಕೂಲವಾಗಿರುತ್ತೆ

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು

ಆಗಸ್ಟು ತಿಂಗಳ ಮೀಟಿಂಗು

ಈ ಸಂಘದ ಮೆಂಬರುಗಳು ತಾ 1 ನೇ ಭಾನುವಾರ ಮಧ್ಯಾಹ್ನ 4 ಘಂಟೆಗೆ ಚಿತ್ರದುರ್ಗದ ಗರ್ಲ್ಸ್ ಸ್ಕೂಲಿನಲ್ಲಿ ಸೇರಿದ್ದರು ಆ ದಿನದ ಸಭೆಗೆ ಹೆಡ್ಮಾಸ್ಟರು ಆ॥ ಮಾಸ್ಟರ್ ಮ॥ ಲಕ್ಷ್ಮೀಪತ್ಯಯನವರು ದಯಮಾಡಿ ಅಗ್ರಾಸನಾಧಿಪತ್ಯವನ್ನು ವಹಿಸಿದರು ದೇವರ ಪ್ರಾರ್ಥನೆ ನಡೆದು ಸಭೆಯು ಪ್ರಾರಂಭವಾಯಿತು ಕಳೆದ ತಿಂಗಳ ಅಂಶಗಳನ್ನು ರಿಕಾರ್ಡು ಮಾಡಿದರು ಸೆಕ್ರಟರಿಯವರು ಮುಂದಿನ ಕಾರ್ಯಗಳನ್ನು ತಿಳಿಸಿದರು ಮ ಮಲ್ಲಿಕಾರ್ಜುನಪ್ಪನವರು ಭೂಭಾಗದಲ್ಲಿರುವ ಪರ್ವತ, ನದಿ ಇವುಗಳ ವಿಚಾರವಾಗಿ ಕನ್ನಡ 2 ನೇ ತರಗತಿಗೆ ವಿವರಣೆಯಿಂದ ಬೋಧಿಸಲು ಉದ್ಯುಕ್ತರಾದರು ಇವರ ಬೋಧನೆಯಿಂದ ತಿಳಿದ ಅಂಶಗಳು— (1), ಎತ್ತರವಾದ ಸ್ಥಳಕ್ಕೂ, ತಗ್ಗಾದ ಸ್ಥಳಕ್ಕೂ ಇರುವ ಶೀತೋಷ್ಣಗಳ ವ್ಯತ್ಯಾಸ (2) ಮಳೆಮೋಡಗಳು, ಇವುಗಳ ಆದ ಕಾರಣ (3) ನದಿಗಳುಂಟಾಗುವ ವಿಧಾನ ಇವರ ಈ ಬೋಧನೆಯು ಉಪಕರಣಗಳ ಮೂಲಕವಾಗಿ ಜಾಗ್ರತೆ ಮನಸ್ಸಿಗೆ ನಾಟುವಂತಿತ್ತು ಆದರೆ ಬೋಧನಾಪ್ರಶ್ನೆಗಳನ್ನು ಹಾಕಲಿಲ್ಲವೆಂಬುವದು ಒಂದು ಕೊರತೆಯೆಂದು ಕೆಲವರು ಚರ್ಚಿಸಿದರು

ತರುವಾಯ ಮ॥ ಲಕ್ಷ್ಮೀಪತ್ಯಯನವರು ಗುರುಭಕ್ತಿ ಎಂಬ ಅಂಶವನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಮಾಡಿದರು ಅದರಲ್ಲಿ ಗುರು ಅಥವಾ ಉಪಾಧ್ಯಾಯರ ಕರ್ತವ್ಯವು ಬಹಳ ಜವಾಬ್ದಾರಿಯಾದದ್ದು, ದೇಶಾಭಿವೃದ್ಧಿಯು ಉಪಾಧ್ಯಾಯರಿಂದಲೇ ಆಗತಕ್ಕದ್ದು ಎಂಬ ಅಂಶಗಳನ್ನು ಎಲ್ಲರೂ ತಿಳಿಯಲವಕಾಶವಾಯಿತು

ಮುಂದಿನ ತಿಂಗಳ ಮೀಟಿಂಗು ಸೆಪ್ಟಂಬರ್ 1 ನೇ ತಾ ಭಾನುವಾರ ನಡೆಯುವದಾಗಿಯೂ, ಆ ದಿನ ನಡಿಸತಕ್ಕ ಅಂಶಗಳನ್ನು ಗೊತ್ತುಮಾಡಿ ಮೀಟಿಂಗನ್ನು ಮುಕ್ತಾಯಮಾಡಿದರು

ವೀರಾ ಭದ್ರಪ್ಪ,
ಉಪಾಧ್ಯಾಯಸಂಘದ ಸೆಕ್ರೆಟರಿ

ವಿದೇಶದ ವೃತ್ತಾಂತಗಳು

ಇಂಗ್ಲಾಂಡಿಗೆ ಸೇರಿದ ಬ್ರಿಟನ್ ಪಟ್ಟಣದಲ್ಲಿ 100 ವರುಷಗಳಿಗೆ ಮೇಲ್ಪಟ್ಟಂಥಾ ಐದು ಮಂದಿ ಇರುತ್ತಾರೆ ಈ ಪೈಕಿ ಮೆ॥ ಹೇಲ್ ಎಂಬ ಬ್ಯಾರಿಸ್ಟರಿಗೆ ಕಳೆದ ಏಪ್ರಲ್ ತಿಂಗಳಿಗೆ 101 ವರುಷ ತುಂಬಿತು

ಜರ್ಮನಿ ರಾಜ್ಯಕ್ಕೆ ಸೇರಿದ ಲೋಥರಿಂಜನ್ ಎಂಬ ಕಲ್ಲಿದ್ದಲ ಗಣಿಯಲ್ಲಿ ಅನಾಹುತ ಸಂಭವಿಸಿ ಕೂಲೀಜನರಲ್ಲಿ 103 ಜನಗಳು ಮೃತಪಟ್ಟರು ಚಕ್ರವರ್ತಿಯವರು ಅಧಿಕಾರಿಗಳ ಸಮೇತ ಅಲ್ಲಿಗೆ ದಯಮಾಡಿ ತುಂಬಾ ಕಷ್ಟಪಟ್ಟು, ಮೃತಪಟ್ಟವರ ಸಂಸಾರಗಳಿಗೆ ದ್ರವ್ಯಸಹಾಯಮಾಡಿ ಬಂದರು

ಇಂಗ್ಲಾಂಡಿನಲ್ಲಿ ಎಸ್ಸೆಕ್ಸ್ ಡಿಸ್ಟ್ರಿಕ್ಟಿಗೆ ಸೇರಿದ ಫೆಡ್‌ಫರ್ಡ್ ಎಂಬ ಊರಿನಲ್ಲಿ ಆಲ್‌ಫ್ರೆಡ್ ಹಾಲ್ ಎಂಬೊಬ್ಬ ಸೌದೆ ಮಾರುವವನ ಹೆಂಡತಿಯು ಏಕಕಾಲದಲ್ಲಿ ಮೂರು ಮಕ್ಕಳನ್ನು ಹೆತ್ತಳೆಂದು ಚಕ್ರವರ್ತಿಯವರಿಗೆ ವರ್ದಿಯಾದದ್ದರಿಂದ ಪ್ರಭುಗಳು ಆ ಹೆಂಗಸಿಗೆ ಕೆಲವು ದ್ರವ್ಯವನ್ನು ಬಹುಮಾನವಾಗಿ ಕಳುಹಿಸಿಕೊಟ್ಟರು

ಇಟಲೀ ರಾಜ್ಯದಲ್ಲಿ ಪಿಯಡ್‌ಮಾಂಟ್ ಡಿಸ್ಟ್ರಿಕ್ಟಿಗೆ ಸೇರಿದ ಏಸ್ಟೀ ಎಂಬ ಪಟ್ಟಣದಲ್ಲಿ ಈ ವರುಷ ಆಕ್ಟೋಬರ್ ಮತ್ತು ನವಂಬರ್ ತಿಂಗಳಲ್ಲಿ ಅತ್ಯಂತ ಮಹಾ ಪ್ರದರ್ಶನವನ್ನು ನಡಿಸುತ್ತಾರೆ ಪ್ರಪಂಚದ ಎಲ್ಲಾ ಪ್ರದೇಶಗಳಲ್ಲೂ ಬೆಳೆಯುವ ನಾನಾ ಬಗೆಯ ಫಲಗಳನ್ನು ಈ ಪ್ರದರ್ಶನಕ್ಕೆ ಕಳುಹಿಸಬಹುದೆಂದು ತಿಳಿಸಲಾಗಿದೆ

ರಷ್ಯಾ ಚಕ್ರಾಧಿಪತ್ಯಕ್ಕೆ ಸೇರಿದ ಪಿಟ್ರೋವಸ್ಕಿ ಎಂಬ ದ್ವೀಪದಲ್ಲಿ ಬೆಂಕಿಬಿದ್ದು ಬಹಳ ದೊಡ್ಡ ನಾಗುವಾನ ಕಾರ್ಖಾನೆಯು ಉರಿದುಹೋಯಿತು ಉರಿಯು ಅಲ್ಲಿಂದ ಸುತ್ತುಮುತ್ತಲೂ ಹರಡಿಕೊಂಡು ಐವತ್ತು ಒಂದೇ ಕಟ್ಟಡಗಳನ್ನೂ ಕಾರ್ಖಾನೆಗಳನ್ನೂ ನಾಶಮಾಡಿತು ಪೀಟರ್ ದಿ ಗ್ರೇಟ್ ಎಂಬ ಪೂರ್ವ ದೊರೆಯ ರಾಜಭವನವು ಕೂಡ ಉರಿದು ಬಿದ್ದುಹೋಯಿತು

ಇಂಗ್ಲಾಂಡಿನ ಉತ್ತರ ಪ್ರದೇಶಗಳಲ್ಲಿ ಹಿಂದಿನ ವಾರ ಅಪಾರವಾದ ಮಳೆಗಳು ಸುರಿದವು ನದಿ ಹೊಳೆಗಳಲ್ಲಿ ಬಹಳ ಪ್ರವಾಹಗಳು ಬಂದು ಸ್ಕಾಟ್ಲೆಂಡಿನ ಪಶ್ಚಿಮ ಭಾಗಗಳಲ್ಲೂ ವಿಲಾಯಿತಿನ ಎಲ್ಲಾ ಪ್ರದೇಶಗಳಲ್ಲೂ ವಿಶೇಷವಾಗಿ ನಷ್ಟವನ್ನುಂಟುಮಾಡಿವೆ ಅನೇಕ ಗ್ರಾಮಗಳು ಕೊಚ್ಚಿಹೋದವು ಜಮೀನುಗಳಲ್ಲಿ ಬೆಳೆದಿದ್ದ ಪಸಲೂ ಹಾಳಾದವು ಇಂಗ್ಲಾಂಡಿನಲ್ಲಿ 17 ಜನರು ಸ್ನಾನಾದಿಗಳನ್ನು ಮಾಡುತ್ತಿದ್ದಾಗ ಕೊಚ್ಚಿಹೋದರು

ಇಟಲಿ ರಾಜ್ಯದ ಯುದ್ಧದ ಇಲಾಖೆಯ ಮಂತ್ರಿಯು ಟ್ರಿಪೋಲಿಯಲ್ಲಿ ಇಟಲಿ ಟರ್ಕಿ ರಾಜ್ಯಗಳಿಗೆ ನಡೆಯುತ್ತಿರುವ ಯುದ್ಧದಲ್ಲಿ ಇಟಲಿಯ ಸೈನಿಕರು ನಷ್ಟಪಟ್ಟಿರುವ ಲೆಕ್ಕಗಳನ್ನು ಪ್ರಕಟಿಸಿದ್ದಾರೆ ಇದುವರೆಗೆ ಇಟಲಿಯವರು 1 711 ಜನ ಟರ್ಕಿ ಸೈನಿಕರನ್ನು ಕೈಸೆರೆಹಿಡಿದು, ಇಟಲಿಗೆ ಕರೆದುಕೊಂಡು ಹೋಗಿ ...

ಅಮೆರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ಕೊಳಕಾದ ಹಳೇ ಕರೆನ್ಸಿ ನೋಟುಗಳನ್ನು ಚೊಕ್ಕಟವಾಗಿ ತೊಳೆದು ಹೊಸದಾಗಿ ಮಾಡುವಂಥ ಒಂದು ಯಂತ್ರವನ್ನು ಕಂಡುಹಿಡಿದಿದ್ದಾರೆ ಇದರಿಂದ ಸರಕಾರದವರು ಆಗಾಗ್ಗೆ ಹಳೇ ನೋಟುಗಳನ್ನು ತೆಗೆದುಹಾಕಿ ಹೊಸ ನೋಟುಗಳನ್ನು ಚಲಾವಣೆಗೆ ಕೊಡುವುದು ತಪ್ಪಿ, ಸರಕಾರಕ್ಕೆ 16 ಲಕ್ಷ ರೂಪಾಯಿ ಆದಾಯವಾಗುವುದೆಂದೂ, ಈ ಯಂತ್ರವು ದಿನಕ್ಕೆ 25,000 ಕರೆನ್ಸಿ ನೋಟುಗಳನ್ನು ತೊಳೆದು ಕೊಡಬಲ್ಲದೆಂದೂ ತಿಳಿದುಬರುತ್ತದೆ

ವಿಲಾಯಿತಿಗೆ ಸೇರಿದ ಕೋವೆಂಟ್ರಿ ಪಟ್ಟಣದಲ್ಲಿ ಗಂಡನನ್ನು ಬಿಟ್ಟು ಪ್ರತ್ಯೇಕವಾಗಿದ್ದ ಲೀನಾ ಕಿಮ್ಮಂಡ್ ಎಂಬ ಯುವತಿಯನ್ನು ಮಿಸೆಸ್ ಕೇಕ್ ಎಂಬುವಳು ಆರ್ಥರ್ ಅಸ್ಟಿನ್ ಎಂಬ ಡಾಕ್ಟರ ಬಳಿಗೆ ಕರೆದುಕೊಂಡು ಹೋಗಿ ಡಾಕ್ಟರಿಂದ ಆ ಯುವತಿಗೆ ಕಾನೂನಿಗೆ ವಿರೋಧವಾದ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿದಳು ಆ ಯುವತಿಯು ಆ ಚಿಕಿತ್ಸೆಯಿಂದ ಮೃತಪಟ್ಟಳು 50 ವಯಸ್ಸಿನ ಆ ಡಾಕ್ಟರಿಗೆ ಏಳು ವರುಷ ಕಠಿಣ ಸಜಾವೂ, ಮಿಸೆಸ್ ಕೇಕ್ ಎಂಬುವಳಿಗೆ ಆರು ತಿಂಗಳ ಸಜಾವೂ ವಿಧಿಸಲ್ಪಟ್ಟಿದೆ

ವಿಲಾಯಿತಿಗೆ ಸೇರಿದ ಆಕ್ಸ್‌ಫರ್ಡ್ ಡಿಸ್ಟ್ರಿಕ್ಟಿನಲ್ಲಿ ಬ್ಯಾನ್‌ಬರಿ ಮ್ಯುನಿಸಿಪಾಲಿಟಿಯವರು ಗ್ರಾಮಾಂತರವನ್ನು ಚೆರ್ವೆಲ್ ಎಂಬ ಹೊಳೆಗೆ ಬಿಟ್ಟದ್ದರಿಂದ ಮೂರು ಮೈಲಿ ಕೆಳಗೆ ಅದೇ ನದಿಯ ದಡದಲ್ಲಿ ವಾಸಮಾಡುವವರಿಗೆ ಆರೋಗ್ಯಕ್ಕೆ ಕೆಡುಕುಂಟಾಯಿತೆಂದು ನೊಂದು ತಿಳಿದುಬಂದಿತು ಪಿಡಿಯವರು ನ್ಯಾಯಸ್ಥಾನದಲ್ಲಿ ದಿನ ದಯಾರ್ಜಿ ಮಾಡಿ ಸ್ಟೀವನ್ ಸನ್ ಎಂಬಾತನಿಗೂ ಜಾನ್ ಫ್ರೆಡ್ರಿಕ್ ಸ್ಟೋಕ್ಸ್ ಎಂಬಾತನಿಗೂ 2,250 ಪೌ ನಷ್ಟಪರಿಹಾರವನ್ನು ಆ ಮ್ಯುನಿಸಿಪಾಲಿಟಿಯಿಂದ ಕೊಡಿಸಿರುತ್ತಾರೆ

ಚೀನಾ ಪ್ರಜಾ ಪ್ರಭುತ್ವದಲ್ಲಿ ಅಫೀಮಿನ ಸೇವನೆಯನ್ನು ಕಡಮೆ ಮಾಡಬೇಕೆಂದು ಸರಕಾರದವರು ಸಾಹಸ ಪಡುತ್ತಿದ್ದಾರೆ ಅಫೀಮು ಬೆಳೆ ಮಾಡುವವರನ್ನು ಸ್ವಲ್ಪ ಪತ್ತೆಮಾಡಿ ನಾಶಪಡಿಸಬೇಕೆಂದು ಹೂನಾನ್ ಡಿಸ್ಟ್ರಿಕ್ಟಿನಲ್ಲಿ ಅಧಿಕಾರಿಗಳು ಪ್ರಯತ್ನಪಟ್ಟಾಗ ಅಲ್ಲಿನ ಪ್ರಜೆಗಳು ಅಧಿಕಾರಿಗಳ ಮೇಲೆ ತಿರುಗಿ ಹೊಡೆದು ಕೊಂದುಹಾಕಿದರು ಮೋಸದಿಂದ ಗುಟ್ಟಾಗಿ ಅಫೀಮು ಊರಿಗೆ ಸಾಗಿಸುತ್ತಿದ್ದಾರೆ ಅಫೀಮನ್ನು ಸೇದುವುದಕ್ಕಾಗಿ ಮಾಡಿಕೊಂಡಿದ್ದ ಗಳನ್ನು ಸರಕಾರದವರು ಒಂದು ಕಡೆಯಿಂದ ಮುಚ್ಚಿಸುತ್ತಾ ಬಂದರೆ ಪ್ರಜೆಗಳು ಎದುರುಕಟ್ಟಿನಿಂದ ಗಿರಂತು ಮತ್ತೆ ಪ್ರಾರಂಭ ಮಾಡುತ್ತಿರುವರು

MELLIN'S FOOD

ಮೆಲ್ಲಿನ್ಸ್ ಆಹಾರವು

ಮಕ್ಕಳಿಗೂ ರೋಗಿಷ್ಟರಿಗೂ

ಕೈಸೋಕದೆ ತಯಾರಾದದ್ದು; ಬರೀ ಸಸ್ಯಾಹಾರ.

ಮೆಲ್ಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳೆಸುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಕಳುಹಿಸುತ್ತಾರೆ

[66—1] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev E W Thompson, M A Proprietor and Manager, Wesleyan Mission Press, Mysore 15/8/1912

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೨ ನೇ ಇಸವಿ ಅಗಸ್ಟ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೧೨

WILLIAM & Co, FORT, BOMBAY.

ಅಮೃತಾಂಜನ. (Regd.)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲು ನೋವು, ಘಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-8-0.

ಗಜಕರ್ಣದ ಮುಲಾಮು.

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಡಬ್ಬಿ 1ಕ್ಕೆ 0-6-0.

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ. ಸುಂದರಿ ತೈಲ 8 ಆಣೆ. [35-26]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೋ, ಪೋಸ್ಟು ಮುಂಬಯಿ.

ಡೋಂಗರೆ ಇವರ ಬಾಲಾಮೃತ.

[115-6]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣ ಉಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕಟ ಇರೋಣ, ಹೊಟ್ಟೆಯು ದೊಡ್ಡದಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ನಾಶ್ವ ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ : ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಭೇದ್ಯಂ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಕೊಡಕ (ಭಾರ), ಮೈಸಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೆಟ್ಟಿರ ಮುಂದವಾಗಿ ಗುಣಪಡಿಸುತ್ತದೆ ಹಾಲಿನೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಲವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪೀ ವರೆಗೆ ಪೋಸ್ಟೇಜು ೪ ಆಣೆ [98-51]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕ್ಷಿಪ್ರವಾಗಿ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ವೇದ್ಯರಿಲ್ಲದ ಒಂದೇ ಒಂದು ಬುದ್ಧಿಯು ಮತ್ತಾವ ವಿಷದೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವದು ಬೆಲೆ ರೂ 1, ಟಪ್ಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು.

ಬಿಟ್ಟಿ! ಫ್ರೀ ಗಿಫ್ಟ್! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ದರ್ಬಾರ್ ಲೀವರ್ ವಾಚನ್ನು ರೂ. ೩-೪-೦ಗೆ ಕೊಂಡುಕೊಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು. ಇವರಲ್ಲಿ ಮೋಸ ಸ್ವಲ್ಪವೂ ಇಲ್ಲ.



(೧) ಒಂದು ಸೊಗಸಾದ ಸರಪಣಿ.
(೨) ಒಂದು ಹಾದ ಚೀಲ.
(೩) ಒಂದು ಚಾಕು.
(೪) ಒಂದು ತಮಾಷಿ ಪೆಟ್ಟಿಗೆ.
(೫) ಒಂದು ಮಡಿಚುವ ಕತ್ತರಿ.
(೬) ಒಂದು ಫೌಂಟೆನ್ ಪೆನ್.
(೭) ಒಂದು ಕೈ ಚೀಲ.
(೮) ಒಂದು ಜೋಡು ಕಾಲುಚೀಲ.
(೯) ಒಂದು ಸುಂದರವಾದ ಉಂಗುರ.
(೧೦) ಒಂದು ಸೊಗಸಾದ ಬೀಸಣಿಗೆ.
(೧೧) ಒಂದು ಸೆಟ್ ಪರಟುಗುಂಡಿ.
(೧೨) ಒಂದು ಕರವಸ್ತ್ರ.

[5-1] ವಿಳಾಸ —ಪಿ. ಎ. ರಜಾಕ್ ಅಂಡ್ ಕೋ, ೧೦ ಎಸ್‌ಪ್ಲೇನೇಡ್ ರೋಡ್, ಮದರಾಸ್.

ಸಿಕ್ಕಿದರೆ ಬಹುಮಾನ ದೊರಕುವುದು.

ಮೈಸೂರಿಗೂ ಶ್ರೀರಂಗಪಟ್ಟಣಕ್ಕೂ ನಡುವೆ ಮೋಟಾರ್ ಕ್ಯಾರಿಯರ್‌ನಿಂದ ಒಂದು ಲ್ಯಾಂಪು ಕಳೆದ ತಾ. 31 ನೇ ಬುಧವಾರ ದಾರಿಯಲ್ಲಿ ಕಳಚಿ ಬಿದ್ದು ಹೋಯಿತು. ಇದನ್ನು ಪತ್ತೆಮಾಡಿ ಈ ಪತ್ರಿಕೆ ಆಫೀಸ್ ಮ್ಯಾನೇಜರಿಗೆ ತಂದು ಕೊಡುವವರಿಗೆ ಒಳ್ಳೇ ಬಹುಮಾನ ಸಿಕ್ಕುತ್ತದೆ. [127-3]

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಕೂದಲುಗಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಇದೆ ! ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಸ್ವಲ್ಪದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೊಳಿಸುವ ಸರ್ವ ತೈಲಗಳಲ್ಲಿ ಮೊದಲನೆಯದು, ಮತ್ತು ಅತ್ಯುತ್ಕೃಷ್ಟವು. ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲವ ಕುರಿತು ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28-7-11. ಮೆ ಬಿ. ಡಿ ಮಾಧವಸಿಂಗ್, ರುಕ್ಮಿಣಿವಿಲಾಸ, ಮನ್ನಾರಗುಡಿ-ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7 11 ಮೆ|| ಸಿ ಆರ್ ನಾಯುಡು ಪ. ವ. ಡಿ. ಓವರ್ಸಿಯರ್, (ಬರ್ಮಾ)-ನನ್ನ ಮಿತ್ರರು "ಕಾಮಿನಿಯಾ" ತೈಲ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೇ 6 ಸೀಸೆಗಳನ್ನು ತ್ವರಿತದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು. [94-34]

ಸುಗಂಧದ್ರವ್ಯಗಳು

ಗುಲ್ ವಾನ್ (ರೆಜಿಡ್.)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತಿಶ್ರೇಷ್ಠವಾದದ್ದು. ಮಹಾ ಸುಗಂಧಪೂರ್ಣವಾದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ. 1-8-0.

ದಿಲ್ ಬಹಾರ್ (ರೆಜಿಡ್.)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0.

'ಕಾಮಿನಿಯಾ ಸುವಂಗಿ'-ರೂ. 1-4-0, "ಕಾಮಿನಿಯಾ ಪಾವಡರ್"-ರೂ. 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು.

ನಮ್ಮ ವಿಳಾಸ.—

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84-13

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರೆತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಶ್ವಾಸರೋಗ, ಚಳು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೊಂ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿನಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಸಂಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ನಿಶ್ಚಯವಾಗಿ ಗುಣವಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ವಸೂಲಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು — (1) ಎಸ್ ಪೀಟರ್ಸ್, 37 ವರಮುತಿಪಿಳ್ಳೆ ಬೀದಿ, ಪುರಸವಾಕಂ, ಪೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

CHAMBERLAIN'S COUGH REMEDY.

ಚೇಂಬರ್ಲೈನ್ಯವರು ಕಂಡುಹಿಡಿದ ಕೆಮ್ಮಿನ ಔಷಧವು.

134

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಸುಲಭವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷದದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕ್ರಯವಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00 000
Policy-holders ,,		75,000

This Company works in accordance with the **Indian Life Assurance Companies' and Provident Societies' Acts 1912** and has also given **double the initial security** *to the* **Government** as required under the **Insurance Act 1912.**

How is it that the **National, of Amritsar,** has become very popular throughout India?

Because, it has got almost all the attractive schemes which any other Life Office or Provident Society in India has got and also new and novel ones besides. Issues policies at most favourable rates and on most liberal conditions and distributes whole thousands every quarter on account of **marriages and deaths**

122 1

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time, who reside in district or taluk head quarters and who are well versed in English need apply.

For further particulars and prospectuses, please apply with **one anna stamp** and your previous experience in the line to —

M. L. NAGANNAH,

Chief Agent.

The Amritsar National Insurance Buildings, Mysore.

ರಾಸ್ಕೋಪ್ ಸಿಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಿಲ್ಪಟ್ಟದ್ದು ನೋಡುವವರಿಗೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒಂಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರವನಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ. ಕೂಡಲೇ ಬರೆದು ತರಿಸಿಕೊಳ್ಳಿ. [13-20]

ಮುಖ್ಯವಾಗಿ ಗಮನಿಸಿ ಓದಿರಿ

೧. ಬಹುಮಾನ ಸಹಿತ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ರೀಡಿ ವಾಚ್ ಲೇಡೀಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 6 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5-12-0 ಇದನ್ನು ಆಗಸ್ಟ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಘಂಟೆ ಗೊಂದಾವತಿ ಬೇಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ:—ಸುಪೀರಿಯರ್ ವಾಚ್ ಕಂಪನಿ,

ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ; ಕಲ್ಪನಾ ಕೌಶಲವೂ ಘಟನಾವಳಿಯೂ ಬಹು ಮುದ್ದಾಗಿರುವುದು; ಕ್ರಯ ೬ ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 3 ಆಣೆ [139-3]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಗೃಹಕೃತ್ಯದ ನೋಟೀಸ್.

ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಹೋಬಳಿ ಚಾಮ ಲಾಪುರ ಗ್ರಾಮದಲ್ಲಿರುವ ಆರವತ್ತೊಕ್ಕಲು ಶೆಟ್ಟಿಗಳ ಚಾಮಶೆಟ್ಟಿ ಮಕ್ಕಳಾದ 1 ನೇ ಅಪ್ಪಾಜಿಶೆಟ್ಟಿ, 2 ನೇ ಪುಟ್ಟಸ್ವಾಮಿಶೆಟ್ಟಿ ಸಹ ಸರ್ವರಿಗೂ ತಿಳಿಯಪಡಿಸುವದೇನೆಂದರೆ—ಚಾಮಲಾಪುರ ಗ್ರಾಮದಲ್ಲೂ ಬೇರೆ ಕಡೆಯೂ ನಮ್ಮಗಳ ಪಿತ್ರಾರ್ಜಿತ ಸ್ಥಿರಚರ ಆಸ್ತಿಗಳನ್ನು ನಮ್ಮ ತಂದೆ ಚಾಮಶೆಟ್ಟಿ ನಮಗೆ ಮೋಸಮಾಡಬೇಕೆಂಬ ಇರಾದೆಯಿಂದ ಪರಾಧೀನ ಮಾಡುವದರಲ್ಲಿದಾರೆ ಅವರಿಗೆ 80 ವರುಷ ವಯಸ್ಸಾಗಿ, 23 ವರುಷದಿಂದ ಬುದ್ಧಿಸ್ವಾಧೀನವಾಗಿಲ್ಲ ನಮ್ಮಗಳ ಸಮ್ಮತಿಯಿಲ್ಲದೆ ಅವರಿಂದ ಯಾರೇ ಆಗಲಿ ಆ ಸೊತ್ತುಗಳನ್ನು ಕ್ರಯ ಆಧಾರ ಭೋಗ್ಯ ವಗೈರೆ ಪಡೆದುಕೊಂಡರೆ ಸ್ಥಿರವಾಗಲಾರದು ಮತ್ತು ತೆಗೆದುಕೊಂಡವರು ನಮ್ಮಗಳ ನಷ್ಟಗಳಿಗೆ ಗುರಿಯಾಗಬೇಕಾಗುತ್ತೆಂದು ಈ ಮೂಲಕ ಎಚ್ಚರಿಸಿದೆ [129-1]

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 34

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನ?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂಶ್ಚಯವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ಬಾರದ ಲಾಭ ಬೀಳುವದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಾಂಡಲ್ಲಾ ನೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನವೀನ ನಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಒಳ ಅನ್ನಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಚಿರಳೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ. ೬ ಆ ; ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ ; ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨

ಬಾವದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ., ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕಿತ್ತಾನಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಗಡಿಯಾರಗಳನ್ನು ವಾಪಸ್ ಪಡೆಯುವದು.

ಬೆಂಗಳೂರು ದೊಡ್ಡಪೇಟೆಯಲ್ಲಿ ಗಡಿಯಾರದ ರಿಪೇರಿ ಮಾಡುತ್ತಿದ್ದ ನನ್ನ ಗಂಡ ನಾರಾಯಣರಾವ್ ಎಂಬ ಕಾಲವಾದರು ಇವರಲ್ಲಿ ರಿಪೇರಿ ಬಗೆ ಗಡಿಯಾರ ವಗೈರೆ ಕೊಟ್ಟಂತಹವರು 1912 ನೇ ಸೆಪ್ಟಂಬರ್ ತಾ 20 ರೊಳಗೆ ತಮ್ಮ ಗಡಿಯಾರದ ನಂಬರು ವಗೈರೆ ಸರಿಯಾದ ದಾಖಲೆಸಹ ತಾವು ಕೊಡಮಾಡಬೇಕಾದ ರಿಪೇರಿ ವಗೈರೆ ಮೊಬಲಗು ಪಾವತಿಯಿಂದ ತಮ್ಮಗಳ ವಾಪಸ್ಸು ಪಡೆಯಬೇಕು ಈ ವಾಯಿದೆ ಗತಿಸಿದ ಒಳಗೆ ನಾನು ಯಾವ ಗಡಿಯಾರಗಳಿಗೂ ಯಾರಿಗೂ ಯಾವ ರೀತಿಯಲ್ಲೂ ಜವಾಬ್ದಾರಳಾಗುವದಿಲ್ಲ [119-2]

ಬೆಂಗಳೂರು ತಿರುಮಲೆ ಅಂಬಾಬಾಯಿಯಮ್ಮ,

ಲಷ್ಕರ್ ಜಮಾಲ್ ಮರದ ಬೀದಿ ಮೈಸೂರು

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಉಷ್ಣಮಾರ್ಜನ ಚೂರ್ಣವು

(10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1-0-0)

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಂಜು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ಕೆಮೇಣ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲಿ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು

ಡಬ್ಬಿ 1 ಕ್ಕೆ ಕ್ರಯ ರೂ 0-1-0 ಡಬ್ಬಿ 12 ಕ್ಕೆ ರೂ 2-8-0.

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಿಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು ಹಲ್ಲುಗಳನ್ನು ಸ್ವಚ್ಛ ಮಾಡುವದು [121-13]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಜೇನಾ ಬಜಾರ್ ರೋಡ್, ಮದ್ರಾಸ್.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು.

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 2-34

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

Always get the Emulsion with this mark—the Fishman—the mark of the "Scott" process!

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತೆ.

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ

ಈ ನಾಮವುಳ್ಳ ಇರುವ ಔಷದವನ್ನೇ ಕೊಂಡುಕೊಳ್ಳಿ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್ ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ADVERTISEMENT

The Government of India invite architects and others residing in India to submit competitive designs for residences to be erected at Delhi.

The designs will be judged by a Committee, assisted by the Consulting Architect to the Government of India acting as assessor.

Premiums aggregating Rs. 19,600 are offered for the successful designs subject to the conditions of competition.

Applications for copies of the conditions of competition and particulars should be addressed in writing to the Consulting Architect to the Government of India.

All applications must be accompanied by a Post office order for Re. 1 for which an acknowledged receipt will be given. The amount will be refunded to every competitor who submits a bona fide design.

Designs will be received up to noon on Saturday the 7th day of December 1912.

By Order,

Gorton Castle, Simla, 27th July 1912.

P. Hawkins,
Under Secy. to the Govt. of India,
Public Works Dept.

B. Ramaswamiah

130] For offg. Secretary to Government

ವೃತ್ತಾಂತ ಪತ್ರಿಕೆ.
—— ೦ ——
ಶ್ರೀ ೧೯೧೩ ನೇ ಇಸವಿ ಆಗಸ್ಟ್ ತಾ ೨೨ ನೇ ಗುರುವಾರ

ಶೇಖರವಾದ ಹಣವನ್ನು ಖರ್ಚು ಮಾಡುವುದು

ಮೈಸೂರು ಸಂಸ್ಥಾನದ ಖಜಾನಾ ಭಕ್ಷಿಯವರಾದ ಮ॥ ಚಕ್ರವರ್ತಿಯವರು ಈಗತಾನೇ ಪ್ರಕಟ ಮಾಡಿರುವ ೧೯೧೨—೧೩ ನೇ ಸಾಲಿನ ಜಮಾ ಖರ್ಚಿನ ಅಂದಾಜು ಪಟ್ಟಿಗಳಿಂದ ಮುಖ್ಯವಾದ ಅಂಶಗಳನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ ಸದ್ಯದಲ್ಲಿ ಮೈಸೂರು ಗವರ್ನಮೆಂಟಿನವರು ಸೂಚಿಸುವ ಕೆಲವು ಮುಖ್ಯ ವಿಚಾರಗಳನ್ನು ಕುರಿತು ಪ್ರಸ್ತಾಪಮಾಡಬೇಕೆಂದಿದ್ದೇವೆ ಸಂಸ್ಥಾನದ ಕಂಟ್ರೋಲರವರು ಕಳೆದ ಮೂರು ಸಂವತ್ಸರಗಳೂ ಸುಭಿಕ್ಷವಾಗಿದ್ದವೆಂದೂ, ಈ ಮೂರು ಸಾಲುಗಳಲ್ಲೂ ೨೧, ೨೪, ೧೪ ಲಕ್ಷ ರೂಪಾಯಿನಂತೆ ಒಟ್ಟು ೫೯ ಲಕ್ಷ ರೂಪಾಯಿಗಳು ಖರ್ಚು ಕಳೆದು ಉಳಿಕೆಯಾಗಿದೆ ಎಂದೂ ತಿಳಿಸುತ್ತಾರೆ

ಆದರೆ ಇದೆಲ್ಲಾ ಸಂಸ್ಥಾನದ ಸಾಮಾನ್ಯ ಹುಟ್ಟುವಳಿ ಬಾಬುಗಳಿಂದ ಬಂದ ಆದಾಯವಲ್ಲ ಕಳೆದ ೧೯೦೮—೦೯ ನೇ ಸಾಲಿನ ಹುಟ್ಟುವಳಿಯೂ ಖರ್ಚೂ ಒಂದಕ್ಕೊಂದು ಸರಿಹೋಗಿರುತ್ತದೆ ಕಳೆದ ನಾಲ್ಕು ಸಾಲುಗಳಲ್ಲಿ ಗಣಿಗಳ ರಾಜಾದಾಯವೂ ಶಿವಸಮುದ್ರದ ವಿದ್ಯುಚ್ಛಕ್ತಿಯ ವಿಕ್ರಯದ ಉತ್ಪತ್ತಿಯೂ ೯೦ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿರುವುದು ಇವೆರಡು ಬಾಬುಗಳೂ ಬಂದೇ ಆಗಿರೋದರಿಂದ ಕಳೆದ ನಾಲ್ಕು ವರುಷಗಳಲ್ಲೂ ಶೇಖರವಾಗಿರುವ ಹಣವೆಲ್ಲಾ ಸುಮಾರಾಗಿ ಈ ಒಂದು ಬಾಬಿನದೇ ಎಂದು ಹೇಳಬಹುದು ಕೋಲಾರದ ಚಿನ್ನದ ಗಣಿಗಳಲ್ಲಿ ಕೆಲಸ ನಿಂತುಹೋದರೆ ಈ ವಿದ್ಯುಚ್ಛಕ್ತಿಯ ವಿಕ್ರಯವೂ ಕಡಮೆಯಾಗುತ್ತದೆ ಶಿವಸಮುದ್ರದ ಲಾಭವೆಲ್ಲಾ ಕೋಲಾರ ಚಿನ್ನದ ಗಣಿಗಳಿಂದ ಆಗಬೇಕು ಈ ಬಾಬಿನ ಲಾಭವು ಇಲ್ಲದಹೋಗಿದ್ದರೆ ಮೈಸೂರು ಸಂಸ್ಥಾನದ ರಾಜಾದಾಯದಲ್ಲಿ ಈಗ ಶೇಖರವಾಗಿರುವ ೫೯ ಲಕ್ಷ ರೂಪಾಯಿಗೆ ಪ್ರತಿಯಾಗಿ ಗವರ್ನಮೆಂಟಿಗೆ ೩೮ ಲಕ್ಷ ರೂಪಾಯಿ ನಷ್ಟವಾಗುತ್ತಿತ್ತು ಆದಕಾರಣ ಗವರ್ನಮೆಂಟಿನವರು ಈಗಿರುವ ಕಂದಾಯಕರಗಳನ್ನು ಕಡಮೆ ಮಾಡುವುದಾಗಲಿ, ವಜಾ ಮಾಡುವುದಾಗಲಿ ನ್ಯಾಯವಲ್ಲವೆಂದೂ, ಸಿಬ್ಬಂದಿ ಖರ್ಚನ್ನು ಹೆಚ್ಚಿಸುವುದಾಗಲಿ, ಫಲಕಾರಿಗಳಲ್ಲದ ಬಾಬುಗಳಿಗೆ ಹಣವನ್ನು ಖರ್ಚುಮಾಡುವುದಾಗಲಿ ಸಹಜವಲ್ಲವೆಂದೂ ಅಭಿಪ್ರಾಯಪಟ್ಟಿದಾರೆ

ಆದರೂ ಶೇಖರವಾಗಿರುವ ದ್ರವ್ಯವನ್ನು ಉಪಯೋಗ ಮಾಡದೆ ಹಾಗೇ ಇಟ್ಟುಕೊಂಡಿರುವುದು ವಿವೇಕವೆನಿಸಲಾರದು ಈ ಹಣವನ್ನು ಸುರಕ್ಷಿತವಾದ ಯಾವುದಾದರೊಂದು ಬ್ಯಾಂಕಿನಲ್ಲಿಟ್ಟರೆ ಅದರಿಂದ ಶೇಕಡಾ ವರುಷಕ್ಕೆ ೩ ಅಥವಾ ೪ ರಂತೆ ಬಡ್ಡಿ ಉತ್ಪತ್ತಿಯಾಗಬಹುದು ಆದಕಾರಣ ಮೈಸೂರು ಗವರ್ನಮೆಂಟಿನವರು ಈ ದ್ರವ್ಯವನ್ನು ಹಾಗೆ ಇಟ್ಟುಕೊಳ್ಳದೆ ಕಾಲಾನುಕಾಲದಲ್ಲಿ ತುಂಬಾ ಪ್ರಯೋಜನವಾಗುವಂಥಾ ದೊಡ್ಡ ಕೆಲಸಗಳಿಗೆ ವಿನಿಯೋಗಿಸಬೇಕೆಂದು ತೀರ್ಮಾನ ಮಾಡಿದಾರೆ ಚಾಲ್ತಿ ಸಾಲಿನಲ್ಲಿ ನಾಲ್ಕು ಭಾರೀ ಕಾಮಗಾರಿಗಳಿಗೆ ಹಣವನ್ನು ಹಂಚಿಕೊಟ್ಟಿರುವರು, ಅಂದರೆ ಕನ್ನಂಬಾಡಿ ತಲಾವಿಗೆ ೨೦ ಲಕ್ಷ, ಅರಸೀಕೆರೆ—ಮೈಸೂರು ರೈಲ್ವೆಗೆ ೧೦ ಲಕ್ಷ ಬೆಂಗಳೂರು ಟ್ರಾಂವೇ ನಿರ್ಮಾಣಕ್ಕೆ ೭ ಲಕ್ಷ, ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ೬ ಲಕ್ಷ, ಈ ರೀತಿ ೪೩ ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿದಾರೆ ಇವೆಲ್ಲಾ ವಿಶೇಷವಾಗಿ ಲಾಭವನ್ನು ತರತಕ್ಕವುಗಳೆಂದೂ, ಸಂಸ್ಥಾನದ ಹುಟ್ಟುವಳಿಯನ್ನು ಹೆಚ್ಚು ಮಾಡತಕ್ಕವುಗಳೆಂದೂ ಎಣಿಸಲ್ಪಟ್ಟಿವೆ. ಕನ್ನಂಬಾಡಿ ತಲಾವಿನ ದೆಸೆಯಿಂದ ಇನ್ನೂ ೭೫,೦೦೦ ಎಕರೆ ಜಮೀನು ತರೀ ವ್ಯವಸಾಯಕ್ಕೆ ಬರುವುದು, ಮತ್ತು ಈಗಿರುವ ನಾಲೆಗಳಿಗೆಲ್ಲಾ ಸಂಪೂರ್ಣವಾಗಿ ನೀರು ಒದಗುವಂತಾಗುವುದು ಹೊಸ ರೈಲ್ ರಸ್ತೆಯಿಂದ ವಿಶೇಷ ಲಾಭ ಸಂಪಾದನೆಯಾದೀತೆಂದೂ, ಮೈಸೂರಿನ ಆಮದುರಫ್ತು ಹೆಚ್ಚಾದೀತೆಂದೂ ಹೇಳಬಹುದಾಗಿದೆ ಬೆಂಗಳೂರಿನಲ್ಲಿ ಹಾಕುವ ಟ್ರಾಂ ಗಾಡಿಗಳ ನಿರ್ಮಾಣದಿಂದಲೂ ಲಾಭ ಕಂಡುಬಂದೀತೆಂದು ಸರ್ಕಾರದವರು ಮಾಡಿರುವ ಲೆಕ್ಕಾಚಾರದಿಂದ ಕಾಣುತ್ತದೆ ಈಗ ಚಿನ್ನದ ಗಣಿಗಳಿಂದ ಆಗುವ ಹುಟ್ಟುವಳಿಯ ಜೊತೆಗೆ ಮೇಲ್ಕಂಡಂತೆ ಮೂರು ಹೊಸ ಬಾಬುಗಳಲ್ಲಿಯೂ ಉತ್ಪತ್ತಿ ಕಂಡುಬಂದೀತು, ಅಂದರೆ ಫಸಲು ಹೆಚ್ಚುವುದು, ರೈಲ್ವೆ ಉತ್ಪತ್ತಿ, ಟ್ರಾಂ ಗಾಡಿಗಳ ನಿರ್ಮಾಣದ ಉತ್ಪತ್ತಿ ಅದರೂ ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚು ಮಾಡುವುದು ಚಿನ್ನದ ಗಣಿಗಳಲ್ಲಿ ಕೆಲಸ ನಡೆಯುವ ತನಕ ಸಾರ್ಥಕವಾಗಿದ್ದೀತೆಂದು ನಮಗೆ ತೋರುತ್ತದೆ

ಇನ್ನು ಮುಂದೆ ದೊಡ್ಡ ಕಸಬುದಾರಿ ಕಾರ್ಖಾನೆಗಳ್ಯಾವೂ ಇಲ್ಲದ್ದೇನೂ, ವಿದ್ಯುಚ್ಛಕ್ತಿಯ ಖರ್ಚಿಗೆ ಅವಕಾಶವಿಲ್ಲದೇನೂ ಹೋಗುವ ಕಾಲ ಒದಗಬಹುದು ಆದಕಾರಣ ಗಣಿಗಳಲ್ಲಿ ಚಿನ್ನ ದೊರಕುವುದು ತಪ್ಪಿ ಕೆಲಸ ನಿಂತುಹೋದಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಕೆಲಸ ನಡಿಸುವಂಥಾ ಭಾರೀ ಕಸಬುದಾರಿ ಕಾರ್ಖಾನೆಗಳನ್ನು ನಿರ್ಮಾಣ ಮಾಡಲು ಈಗಲೇ ಹುಡುಕಿ ಗೊತ್ತುಮಾಡಿರುವುದು ಅವಶ್ಯ ಮ॥ ಚಾಟರ್ಟನ್ ರವರ ಕಾರ್ಯಸಾಧನೆಯೂ, ಸಂಪದಭಿವೃದ್ಧಿ ಸಮಾಜದವರ ಪರ್ಯಾಲೋಚನೆಗಳೂ ಈ ಭಾಗವನ್ನು ಸಾರ್ಥಕಪಡಿಸತಕ್ಕವುಗಳಾಗಿವೆ ಇವರು ನಡಿಸುವ ಕಾರ್ಯಗಳಿಗೋಸ್ಕರಲೇ ಸರ್ಕಾರದವರು ಈ ವರುಷ ೧,೪೬,೦೦೦ ರೂಪಾಯಿ ಕೊಟ್ಟಿರುತ್ತಾರೆ

ಗವರ್ನಮೆಂಟಿನವರು ಈ ಸಂಸ್ಥಾನದಲ್ಲಿ ವಿದ್ಯೆಯನ್ನು ಹರಡುವುದಕ್ಕಾಗಿ ಬಹಳ ಹೆಚ್ಚು ಹಣವನ್ನು ಅಂದರೆ ೧೦॥ ಲಕ್ಷ ರೂಪಾಯನ್ನು ತೆಗೆದಿಟ್ಟಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ ಇಷ್ಟು ಹಣವನ್ನು ಹಿಂದೆ ಯಾವ ವರುಷದಲ್ಲೂ ವಿನಿಯೋಗಿಸಿಲ್ಲ ಇದರಲ್ಲಿ ಕೆಲವು ಭಾಗ ಬೆಂಗಳೂರು ಸೆಂಟ್ರಲ್ ಕಾಲೆಜ್ಜಿನ ಬದಲಾವಣೆ ಕಾಮಗಾರಿಗೆ ಹೋಗುವುದು ಗ್ರಾಮಾಂತರಗಳಲ್ಲಿ ಸ್ಕೂಲುಗಳನ್ನು ಕಟ್ಟುವುದಕ್ಕೆ ೧ ಲಕ್ಷವೂ, ಕಸಬುದಾರ ಶಿಕ್ಷಣವನ್ನು ಕ್ರಮಪಡಿಸುವುದಕ್ಕೆ ೬೦,೦೦೦ ರೂಪಾಯೂ ಕೊಡಲಾಗಿದೆ

ಚಾಲ್ತಿ ಸಾಲಿನ ಈ ಬಡ್ಜೆಟ್ಟು ಬಹು ಸ್ವಾರಸ್ಯವಾದದ್ದು ಇದನ್ನು ಓದಲು ತುಂಬಾ ಸಂತೋಷವಾಗುತ್ತದೆ ಇದು ಸಂಸ್ಥಾನವನ್ನು ಅಭಿವೃದ್ಧಿಗೆ ತರುವುದಕ್ಕೆ ಸಹಕಾರಿಯಾದದ್ದೆಂದು ನಮಗೆ ತೋರುವುದು ಮೈಸೂರು ಗವರ್ನಮೆಂಟಿನವರ ಇಂಥಾ ಶ್ರೇಯಸ್ಕರವಾದ ಉದ್ದೇಶಗಳು ಸಂಪೂರ್ಣವಾಗಿ ನೆರವೇರಬೇಕೆಂದೂ, ಸಂಸ್ಥಾನವು ಸುಭಿಕ್ಷವು ನೆಲೆಗೊಂಡು ಅವರು ನಿರೀಕ್ಷಿಸಿರುವುದಕ್ಕಿಂತಲೂ ಹುಟ್ಟುವಳಿಯು ಹೆಚ್ಚಾಗಲೆಂದೂ ಹಾರೈಸುತ್ತೇವೆ

ಪಾಪದ ಫಲ

ಪಾಪ ಮಾಡುವುದರಿಂದುಂಟಾಗುವ ಕೇಡೇನೆಂಬ ಪ್ರಶ್ನೆಗೆ ಅನೇಕರು ಅನೇಕ ವಿಧವಾದ ಉತ್ತರಗಳನ್ನು ಕೊಡಬಹುದು ಕೆಲವರು ನಮ್ಮ ದೇಹಗಳಿಗೆ ಪ್ರಾಪ್ತವಾಗುವ ರೋಗಾದ್ಯುಪದ್ರವಗಳು ಪಾಪದ ಫಲಗಳೇ ಆಗಿರುತ್ತವೆಂದು ಹೇಳುವರು ಅವರು ಹೇಳುವದು ನಿಜ ಏಕೆಂದರೆ ನಾವು ಮಾಡುವ ಕೆಲವು ಪಾಪಗಳ ದೆಸೆಯಿಂದ ನಮ್ಮ ದೇಹವನ್ನು ಕಷ್ಟಕ್ಕೆ ಗುರಿಮಾಡುತ್ತೇವೆ ದೃಷ್ಟಾಂತವಾಗಿ ಒಬ್ಬ ಮದ್ಯಪಾನಿಯು ತಾನು ಸಾಧಿಸುತ್ತಾ ಬಂದಿರುವ ಆ ದುರಭ್ಯಾಸಕ್ಕೆ ಸೆರೆ ಬಿದ್ದವನಂತೆ ಇರುತ್ತಾನೆ ಕುಡಿಯಬೇಕೆಂಬ ದುರಿಚ್ಛೆಯು ಅವನಲ್ಲಿ ಹುಟ್ಟುವಾಗ ಅದನ್ನು ಅಣಗಿಸುವುದಕ್ಕೆ ಕೇವಲ ಅಶಕ್ತನಾಗಿ ಅದಕ್ಕೆ ಒಳಬಿದ್ದು ಅದರ ನಷ್ಟವನ್ನು ಅನುಭವಿಸುತ್ತಾನೆ ಬೇರೆ ಕೆಲವರು ಪಾಪದ ದೆಸೆಯಿಂದ ನಾಚಿಕೆಯೂ ಅಪಮಾನವೂ ಪ್ರಾಪ್ತವಾಗುತ್ತವೆಂದು ಹೇಳುವರು ಇದು ಸಹ ನಿಜವಾದುದು ಏಕೆಂದರೆ ಸುಳ್ಳುಗಾರನೂ ಕಳ್ಳನೂ ತಮ್ಮ ಒಳ್ಳೆಯ ಹೆಸರನ್ನು ಕಳೆದುಕೊಂಡು ಜೈಲಿಗೆ ಹೋಗಿ ನೀಚರಾದ ಖೈದಿಗಳ ಜೊತೆಯಲ್ಲಿರಬೇಕಾಗುವುದು ಪಾಪಕ್ಕೆ ಬರತಕ್ಕ ಪ್ರತಿಫಲವು ಮತ್ತೊಂದಿರುವುದು ಅದು ಮೇಲೆ ಹೇಳಿರುವವುಗಳಿಗಿಂತ ಅಧಿಕ ಭಯಂಕರವಾದುದು ಅದರ ವಿಷಯ ಜನಗಳು ಸಾಧಾರಣವಾಗಿ ಅಲಕ್ಷ್ಯಭಾವದಿಂದಿರುತ್ತಾರೆ ಅದು ಯಾವುದೆಂದರೆ— ದೇವರ ಅನ್ಯೋನ್ಯತೆಯನ್ನು ಕಳೆದುಕೊಳ್ಳುವುದೇ ಆಗಿರುತ್ತದೆ

ದೇವರು ಅದೃಶ್ಯನು, ಆತನನ್ನು ಸ್ಪರ್ಶಿಸಲಾರೆವು ಆದರೂ ನಮ್ಮ ಕೈಕಾಲುಗಳಿಗಿಂತ ಆತನು ನಮಗೆ ಸಮೀಪಸ್ಥನಾಗಿರುತ್ತಾನೆ. ಆತನು ನಮ್ಮ ಆತ್ಮದಲ್ಲೇ ಇರುತ್ತಾನೆ ನಮ್ಮಲ್ಲಿ ಒಳ್ಳೆಯ ಉದ್ದೇಶಗಳನ್ನೂ ಪ್ರಯತ್ನಗಳನ್ನೂ ಹುಟ್ಟಿಸಿ ನಮ್ಮನ್ನು ನಡಿಸುತ್ತಿರುವವನು ಆತನೇ ಅಧರ್ಮವನ್ನು ಬಿಟ್ಟು ಸದ್ಧರ್ಮವನ್ನು ಕೈಕೊಳ್ಳಬೇಕೆಂದು ನಮ್ಮನ್ನು ಪ್ರೇರಿಸುತ್ತಿರುವವನೂ ಆತನೇ ನಾವು ಸಹಜವಾಗಿ ದೇವರೊಂದಿಗೆ ಅನ್ಯೋನ್ಯತೆಯನ್ನು ಹೊಂದಿದವರಾಗಿ ನಡೆದುಕೊಳ್ಳಬಹುದು ಭಕ್ತನು ಆತನನ್ನು ನೀನು ನಮ್ಮ ತಂದೆಯೆಂದು ಹೇಳಬಲ್ಲನು ದೇವರು ತನ್ನ ಭಕ್ತನನ್ನು ನೋಡಿ ನೀನು ನನ್ನ ಮಗನೆಂದು ಹೇಳಬಹುದು

ಹಾಗಾದರೆ ಪಾಪದಿಂದ ಬರುವ ನಷ್ಟವೇನು? ಏನೆಂದರೆ ಅದು ದೇವರಿಗೂ ನಮಗೂ ಇರುವ ಪರಸ್ಪರ ಅನ್ಯೋನ್ಯತೆಗೆ ಭಂಗವನ್ನುಂಟುಮಾಡುತ್ತದೆ ಕೆಟ್ಟದ್ದನ್ನು ಕೆಟ್ಟದ್ದೆಂದು ತಿಳಿದವರೂ ಅದನ್ನೇ ಮಾಡಲಪೇಕ್ಷಿಸುವವನಲ್ಲಿ ದೇವರನ್ನರಿಯುವ ಶಕ್ತಿಯು ಕುಂದಿಹೋಗುವುದು ಅವನ ಮನೋನೇತ್ರವು ಮಾಂದ್ಯವಾಗುವುದು ಇವನಿಗೆ ದೇವರಲ್ಲಿ ನಂಬಿಕೆಯಾಗಲಿ ಪ್ರೀತಿಯಾಗಲಿ ಇರುವುದಿಲ್ಲ ಅದಕ್ಕೆ ಬದಲಾಗಿ ಅವನಲ್ಲಿ ಲೋಕದ ಮೇಲಣ ಆಶೆಯು ಹೆಚ್ಚಾಗುವುದು. ಐಹಿಕ ವ್ಯಾಪಾರದಲ್ಲಿ ತನಗೆ ಆದಾಯವಾಗುವುದರಲ್ಲೇ ಹೊರತು ಇವನಿಗೆ ಬೇರೊಂದರಲ್ಲಿ ಸಂತೋಷವಿರುವುದಿಲ್ಲ ಇವನು ಕೆಟ್ಟಕಡೆಗೆ ದೇವರು ಎಲ್ಲಿದ್ದಾನೆ ಆತನು ಇದ್ದಾನೆಂಬುವುದಕ್ಕೆ ಆಧಾರವೇನು? ಆತನು ನನಗೆ ಕಾಣುವುದಿಲ್ಲ ನಾನು ಆತನನ್ನು ತಿಳಿದುಕೊಳ್ಳಲಾರೆನು ಆದುದರಿಂದ ದೇವರೇ ಇಲ್ಲವೆಂದು ಹೇಳಬಹುದು ಇಂಥವನು ದುರಭ್ಯಾಸಗಳಿಂದಲೂ ಅಜ್ಞಾನದಿಂದಲೂ ಬಿಗಿಯಾಗಿ ಬಂಧಿಸಲ್ಪಟ್ಟಿರುತ್ತಾನೆ

ದೇವರ ಸಂಗಡ ಅನ್ಯೋನ್ಯವಾಗಿರುವುದನ್ನೂ ಆತನನ್ನು ತಿಳಿಯುವ ಜ್ಞಾನವನ್ನೂ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವ ಮನಸ್ಸನ್ನೂ ಕಳೆದುಕೊಳ್ಳುವುದು ಪಾಪಕ್ಕೆ ಬರತಕ್ಕ ಶಿಕ್ಷೆಗಳಲ್ಲಿ ಅತ್ಯಂತ ಭಯಂಕರವಾದುದಲ್ಲವೇ ಇದರ ಮುಂದೆ ದೇಹಕ್ಕೆ ಪ್ರಾಪ್ತವಾಗುವ ರೋಗ, ಕಷ್ಟ, ಅವಮಾನ, ಸಜಾ ಶಿಕ್ಷೆ ಮುಂತಾದವುಗಳು ಕೇವಲ ಅಲ್ಪವೆಂದೇ ಕಂಡುಬರುವುದಿಲ್ಲವೇ

ಯೇಸುಕ್ರಿಸ್ತನು ಹೇಳಿದ ಕೆಟ್ಟ ಮಗನ ಸಾಮ್ಯದಲ್ಲಿ ಪಾಪದ ಸ್ವಭಾವದ ಗುಣ ಕಂಡು ಬರುತ್ತದೆ ಆ ಮಗನು ತನ್ನಲ್ಲಿ ಹುಟ್ಟಿದ ದುರ್ಗುಣಗಳಿಂದ ಪ್ರೇರಿತನಾಗಿ ತಂದೆಯ ಮನೆಯನ್ನು ಬಿಟ್ಟನು ಅದರಂತೆಯೇ ಪಾಪವನ್ನು ಪ್ರೀತಿಸುವವನು ದೇವರಿಂದ ವಿಯೋಗವಾಗುವನು ಮತ್ತು ಆ ಕೆಟ್ಟ ಮಗನು ಕೇವಲ ಅಶುದ್ಧನಾಗಿಯೂ ಹಂದಿಗಳನ್ನು ಕಾಯುವವನಾಗಿಯೂ ಇಂತಿರಲು ಎಂದಾಗ ತಂದೆಯ ಮನೆಯಲ್ಲಿ ವಾಸಮಾಡುವುದಕ್ಕೆ ಅಯೋಗ್ಯನಾಗಿದ್ದನು ಅದರಂತೆ ಪಾಪದ ಬೀಡಿನಲ್ಲಿ ಹೊರಳಾಡುವವರು ಕೇವಲ ಅಶುದ್ಧರಾಗುವರು ದೇವರ ಅನ್ಯೋನ್ಯತೆಯ ಸುಖವನ್ನು ಅನುಭವಿಸಲಾರರು

ಒಳದೇಶದ ವೃತ್ತಾಂತಗಳು

ಹುಚ್ಚುನಾಯಿ ಕಡಿದವರಿಗೆ ಕೂನೂರಿನಲ್ಲಿ ಚಿಕಿತ್ಸೆ ನಡೆಯುವ ಭಾಗದಲ್ಲಿ ಅರಮನೆಯ ಕಂಟ್ರೋಲರವರು ಸರ್ಟಿಫಿಕೇಟನ್ನು ಕೊಡಬಹುದೆಂದು ಮೈಸೂರು ಸರ್ಕಾರದವರು ಅಪ್ಪಣೆಕೊಡಿಸಿದಾರೆ

* * *

ಕಳೆದ ಸೋಮವಾರ ಬೆಳಿಗ್ಗೆ ಸುಮಾರು 10½ ಗಂಟೆಗೆ ಮಹಾಸ್ವಾಮಿಯವರೂ ಮಹಾರಾಣಿಯವರೂ ಪರಿವಾರ ಸಮೇತ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿದರು ಗೌರವಾರ್ಥವಾದ 21 ತೋಫುಗಳು ಹಾರಿಸಲ್ಪಟ್ಟವು

* * *

ಮೈಸೂರು ಗವರ್ನಮೆಂಟಿನವರು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಪ್ರತ್ಯೇಕವಾಗಿ ಬೇರೊಂದು ಪರೀಕ್ಷೆಯನ್ನಿಟ್ಟು, ಇದರ ರೂಲಸನ್ನು ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಮಾಡಿರುತ್ತಾರೆ ಈ ಹೊಸ ನಿರ್ಮಾಣದ ಮೊದಲನೇ ಪರೀಕ್ಷೆಯು 1913 ನೇ ಮಾರ್ಚಿ ತಿಂಗಳಲ್ಲಿ ನಡೆಯತಕ್ಕದೆಂದು ನಿರ್ಧಾರವಾಗಿದೆ

* * *

ಮೈಸೂರು ಗವರ್ನಮೆಂಟಿನವರು ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಮ್ಯುನಿಸಿಪಲ್ ಪ್ರೆಸಿಡೆಂಟ್ ಕೆಲಸಕ್ಕೆ ಬೇರೋಜುಗಾರರಾದ ದೊಡ್ಡಮನುಷ್ಯರನ್ನು ನೇಮಕ ಮಾಡುವವರಾಗಿದಾರೆಂದು ಕೇಳುತ್ತೇವೆ ಬೆಂಗಳೂರಿಗೆ ಮ॥ ಕೆ ಪಿ ಪುಟ್ಟಣ್ಣ ಚೆಟ್ಟಿರವರೂ, ಮೈಸೂರಿಗೆ ಮ॥ ವೈ ಶ್ರೀನಿವಾಸರಾಯರೂ ನೇಮಕವಾಗುವರೆಂದು ವರ್ತಮಾನವಿದೆ

* * *

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಕೌನ್ಸಿಲರುಗಳ ಚುನಾವಣೆಯು ಮುಂದಿನ ಸೆಪ್ಟಂಬರ್ 1 ನೇ ತಾ ನಿಂದ ಪ್ರಾರಂಭವಾಗುತ್ತದೆ ಒಂಭತ್ತು ಮೊಹಲ್ಲೆಗಳಲ್ಲೂ ದಿನ ಬಿಟ್ಟು ದಿನದಂತೆ ಚುನಾವಣೆ ನಡೆಯುವುದು ಆ ಕಾಲದಲ್ಲಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ॥ ಬಿ ಎಸ್ ರಾಘೋಜಿರಾಯರು ಹಾಜರಿದ್ದು ಪ್ರಜೆಗಳ ಓಟುಗಳನ್ನು ಕೊಡಿಸುತ್ತಾರೆ

* * *

ಈ ಸೀಮೆಯ ವಕ್ಕಲಿಗ ಮತದ ಎರಡನೇ ಮಹಾ ಸಭೆಯು ಸೆಪ್ಟಂಬರ್ ತಾ ೨೧ ನೇ ಸೋಮವಾರ ಹೊಸದುರ್ಗ ತಾಲ್ಲೂಕು ಬೂದಿಹಾಳ್ ಸಮ್ಮುಖ ಗವಿ ರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯುವಂತೆ ನಿರ್ಬಂಧವಾಗಿದೆ ಈ ಸಭೆಯ ಖರ್ಚನ್ನೆಲ್ಲಾ ಮ॥ ನಾಡಿಗ ಸಿದ್ಧರಾಮಪ್ಪನವರು ವಹಿಸಿಕೊಂಡಿದಾರೆ ಎಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ

* * *

ಮುಂದೆ ಹೇಳುವ ತಾಲ್ಲೂಕು ಶಿರಸ್ತೇದಾರರುಗಳ ವರ್ಗಾವರ್ಗಿಯ ಹುಕುಂ ಆಗಿದೆ —ಮ॥ ಗಳಾದ ಕೃಷ್ಣಸ್ವಾಮಿ ಅಯ್ಯರವರು ಶಿವಮೊಗ್ಗದಿಂದ ಹಿರಿಯೂರಿಗೆ, ಎಂ ವೆಂಕಟರಾಯರು ದಾವಣಗೆರೆಯಿಂದ ಕೊಪ್ಪಕ್ಕೆ, ಎಲ್ ನರಸಿಂಹಯ್ಯಂಗಾರ್ಯರು ಕೊಪ್ಪದಿಂದ ಅರಸೀಕೆರೆಗೆ, ಎ ಕೆ ರಾಮಸ್ವಾಮಯ್ಯಂಗಾರ್ಯರು ಅರಸೀಕೆರೆಯಿಂದ ದಾವಣಗೆರೆಗೆ, ತಿಲ್ಲನಾಯಗಂ ಮೊದಲಿಯಾರ್ಯರು ಹಿರಿಯೂರಿನಿಂದ ಶಿವಮೊಗ್ಗೆಗೆ

* * *

ಡಿಲ್ಲಿ ಪಟ್ಟಣದಲ್ಲಿ ಹೊಸ ರಾಜಧಾನಿಯನ್ನು ಕಟ್ಟುವ ವಿಷಯಕ್ಕೆ ವಾಸದ ಮನೆಗಳನ್ನು ಕಟ್ಟುವುದಕ್ಕೆ ಹಿಂದುಸ್ಥಾನದ ಎಲ್ಲಾ ಭಾಗಗಳಿಂದ ಒಳ್ಳೇ ನಕ್ಷೆಗಳನ್ನು ಕಾರೀಗಾರರಿಂದ ಬರೆದು ತರಿಸಿಕೊಂಡು, ಉತ್ತಮವಾದವುಗಳಿಗೆ ಬಹುಮಾನ ಕೊಡುವುದಾಗಿ ಇಂಡಿಯಾ ಗವರ್ನಮೆಂಟಿನವರು ಪ್ರ

ಪತ್ರಿಕೆಗಳನ್ನು ವಾಚಕರು ಇನ್ನೊಂದು ಕಡೆ ಓದಬಹುದು. ನಮ್ಮ ದೇಶದಲ್ಲಿ ಉತ್ತಮವಾದ ನಕ್ಷೆಗಳನ್ನು ಬರೆಯತಕ್ಕವರು ಈ ಸಂಧ್ಯದಲ್ಲಿ ಬಹುಮಾನವನ್ನು ಪಡೆದಾರೆಂದು ಹಾರೈಸುತ್ತೇವೆ

• • •

ಒಳ್ಳೇ ತರಹಾ ವ್ಯವಸಾಯದ ಮುಟ್ಟುಗಳನ್ನು ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯವರು ಬೆಂಗಳೂರಿನಲ್ಲಿ ತರಿಸಿಟ್ಟು, ಅಪೇಕ್ಷೆ ಪಟ್ಟವರಿಗೆ ಕೊಡುತ್ತಾರೆ ರೈತರು ಅವಶ್ಯವಿರುವ ಮುಟ್ಟುಗಳನ್ನು ತರಿಸಿಕೊಡುವಂತೆ ತಾಲ್ಲೂಕಿನ ಅಮಲ್ದಾರ್ರಿಗೆ ಅರ್ಜಿ ಬರೆದುಕೊಂಡರೆ ದೊರಕುತ್ತವೆ. ಅರ್ಜಿಗಳನ್ನು 2-3 ತಿಂಗಳಿಗೆ ಮುಂಚೆ ಬರೆದರೆ ಇಲಾಖೆಯವರು ಒಳ್ಳೇ ಮುಟ್ಟುಗಳನ್ನು ತರಿಸಲು ಸಹಾಯವಾದೀತೆಂದು ಆ ಇಲಾಖೆಯ ಮುಖ್ಯಾಧಿಕಾರಿಯಾದ ಮೆ|| ಎಚ್ ವಿ ಕೃಷ್ಣಯ್ಯನವರು ಪ್ರಕಟಮಾಡಿದಾರೆ.

• • •

ಲೇಟ್ ಪಿ ಎನ್ ಪೂರ್ಣಯ್ಯನವರ ಕುಮಾರರಾದ ಮೆ|| ನರಸಿಂಗರಾವ್ ಪೂರ್ಣಯ್ಯನವರು ಯಳಂದೂರು ಜಹಗೀರುದಾರರಾಗಿ, ಅದರ ಉತ್ಪನ್ನದಲ್ಲಿ ವರುಷಕ್ಕೆ 6,000 ರೂಪಾಯಿನಂತೆ ತೆಗೆದುಕೊಳ್ಳುವಂತೆಯೂ, ಜಹಗೀರುದಾರ್ ಸರ್ ಪಿ. ಎನ್. ಕೃಷ್ಣಮೂರ್ತಿಯವರ ಪತ್ನೀರವರಿಗೆ ವರುಷಕ್ಕೆ 10,000 ರೂಪಾಯಿನಂತೆ ಪಾವತಿ ಮಾಡತಕ್ಕದ್ದೆಂದೂ, ಲೇಟ್ ದಿವಾನರವರಿಗೆ ಪಾವತಿ ಆಗದೆ ಉಳಿದಿರುವ ಅವರ ಬಾಬತ್ತು 33,666 ರೂಪಾಯಿ ಅವರ ವಾರಸುದಾರರಾದ ಕೃಷ್ಣಮೂರ್ತಿಯವರಿಗೆ ಸಲ್ಲತಕ್ಕದ್ದೆಂದೂ ಮೈಸೂರು ಸರ್ಕಾರದವರು ಇತ್ಯರ್ಥ ಮಾಡಿದ್ದಾರೆ ಇನ್ನುಮುಂದೆ ಯಳಂದೂರು ಜಹಗೀರಿಯು ಎಲ್ಲಾ ಭಾಗಗಳಲ್ಲಿಯೂ ಅಭಿವೃದ್ಧಿಗೆ ಬರಲು ತಕ್ಕ ಏರ್ಪಾಡುಗಳು ನಡೆಯುವವೆಂದು ನಿರೀಕ್ಷಿಸಲಾಗಿದೆ

• • •

ಸಂಸ್ಥಾನದ ವ್ಯವಸಾಯ ಇಲಾಖೆಯ ಅ|| ಕೆಮಿಸ್ಟರಾದ ಮೆ|| ಎ. ಕೆ ಯಜ್ಞನಾರಾಯಣ ಅಯ್ಯರ್, ಎಂ ಎ ಯವರು ಯೂರೋಪ್, ಅಮೇರಿಕಾ ಮೊದಲಾದ ದೇಶಗಳಲ್ಲಿ ಕಳೆದ ಮೂರು ವರ್ಷಗಳ ಕಾಲ ವ್ಯವಸಾಯಕ್ಕೆ ಸಂಬಂಧಪಟ್ಟ ವಿದ್ಯಾಭ್ಯಾಸವನ್ನು ಮಾಡಿ ಕೆಲವು ದಿನಗಳ ಕೆಳಗೆ ಹಿಂತಿರುಗಿ ಬಂದಿದ್ದಾರೆ ಇವರು ತಾವು ಸಂಚಾರಮಾಡಿದ ದೇಶಗಳಲ್ಲಿನ ವ್ಯವಸಾಯದ ಸ್ಥಿತಿಯನ್ನು ಕುರಿತು ಕೆಲವು ಉಪನ್ಯಾಸಗಳನ್ನು ಕೊಡುವವರಾಗಿದಾರೆ. ಇವರು ಪ್ರಕೃತ ಯೂರೋಪ್ ಮತ್ತು ಅಮೇರಿಕಾ ದೇಶಗಳ ವ್ಯವಸಾಯ ಸ್ಥಿತಿಯನ್ನು ಕುರಿತು ಕಳೆದ ಜುಲೈ ತಾ 24 ರಲ್ಲಿ ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲ್ ಹಾಲಿನಲ್ಲಿ ಮೊದಲನೇ ಉಪನ್ಯಾಸವನ್ನು ಮಾಡಿದರು ಸಂಸ್ಥಾನದ ಅಭಿವೃದ್ಧಿ ಸಮಾಜದ ವ್ಯಾಪಾರ ಮತ್ತು ಕೈಗಾರಿಕೆ ಕಮಿಟಿಯ ಸ್ಪೆಷಲ್ ಆಫೀಸರಾದ ಮೆ|| ಪಿ ಬಾಟರ್‌ಟನ್‌ರವರು ಸಭಾಧ್ಯಕ್ಷರಾಗಿದ್ದರು. ಉಪನ್ಯಾಸಕರು ಯೂರೋಪ್ ಮತ್ತು ಅಮೇರಿಕಾ ದೇಶದಲ್ಲಿ ವ್ಯವಸಾಯವು ಶಾಸ್ತ್ರೀಯವಾಗಿ ನಡೆಯುವುದೆಂದೂ, ಅದು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದೆಯೆಂದೂ ಅಷ್ಟು ಇಲ್ಲದೆ ಅಲ್ಲಿನ ರೈತರುಗಳು ವಿದ್ಯಾವಂತರಾಗಿರುವರು, ವ್ಯವಸಾಯ ಸಂಬಂಧವಾದ ಕೆಲಸಗಳಲ್ಲಿ ಯಂತ್ರಗಳನ್ನು ಬಹಳವಾಗಿ ಉಪಯೋಗಿಸುವರು, ದನಕರುಗಳ ಪಾಲನೆಯಿಂದಲೇ ಬಹಳ ಲಾಭವನ್ನು ಸಂಪಾದಿಸುವರು ಎಂದು ತಿಳಿಸಿದರು. ಸಭಾಧ್ಯಕ್ಷರು ಇಂಡಿಯಾ ದೇಶದ ರೈತರೂ ಯೂರೋಪ್ ದೇಶದ ರೈತರುಗಳ ಒದುಬಗೆಗಳನ್ನು ಕಲಿತುಕೊಂಡು, ಅವರು ಅನುಸರಿಸುತ್ತಿರುವ ಕ್ರಮಗಳನ್ನು ಇಲ್ಲಿಯೂ ಆಚರಣೆಗೆ ತರುವುದು ಇಲ್ಲಿನವರ ಏಳಿಗೆಗೆ ಕಾರಣವಾಗುವುದೆಂದು ಹೇಳಿ ಸಭೆಯನ್ನು ಮುಕ್ತಾಯಮಾಡಿದರು

ಇಂಡಿಯಾ ದೇಶದ ವೃತ್ತಾಂತಗಳು.

ಇಂಡಿಯಾ ಗವರ್ನ್‌ಮೆಂಟಿನವರು ಹಾಲಿ ಸಾಲಿನಲ್ಲಿ ಹಿಂದೂಸ್ಥಾನದೊಳಗೆ ನೈರ್ಮಲ್ಯ ಏರ್ಪಾಡಿನ ಕಾಮಗಾರಿಗಳಿಗೆ ಒಂದೂವರೆ ಕೋಟಿ ರೂಪಾಯನ್ನು ಕೊಡುವವರಾಗಿದಾರೆ

• • •

ಮೈ ಸೌತ್ ವೇಲ್ಸ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಗವರ್ನರಾಗಿರುವ ಲಾರ್ಡ್ ಚಲಂಸ್‌ಫರ್ಡ್‌ಯವರು ಬೊಂಬಾಯಿ ಗವರ್ನರ್ ಕೆಲಸವನ್ನು ಒಪ್ಪಿಕೊಳ್ಳಲು ದಯಮಾಡುವವರಾಗಿದಾರೆಂದು ವರ್ತಮಾನವಿದೆ.

• • •

ಹಿಂದೂ ಯೂನಿವರ್ಸಿಟಿ ಎಂಬ ವಿಧ್ಯಾನಿಲಯದ ಫಂಡಿಗೆ ವಾಗ್ದಾನವಾಗಿ ಬಂದಿರತಕ್ಕ ಹಣದ ಪೈಕಿ 8,86,000 ರೂಪಾಯಿ ವಸೂಲಾಗಿದೆಯೆಂದೂ, ಇದಕ್ಕಾಗಿ 13,800 ರೂಪಾಯಿ ಖರ್ಚಾಗಿದೆ ಎಂದೂ ತಿಳಿದುಬರುತ್ತದೆ.

• • •

ಡಾರ್ಜಲಿಂಗ್ ಪಟ್ಟಣದ ಹತ್ತಿರ ಒಂದು ಬಟ್ಟೆ ತಯಾರಿ ಕಾರ್ಖಾನೆಯ ಮಾಲೀಕನ ಮಗನೂ, ಅವನ ಮೂವರು ಸಹಾಯಕರೂ ಬಹು ಕ್ರೂರವಾಗಿ ಕೊಲೆಮಾಡಿ ಹಾಕಲ್ಪಟ್ಟಿದ್ದರು. ಇದರ ಪೂರ್ವೋತ್ತರವೇನೋ ಇನ್ನೂ ಪತ್ತೆಯಾಗಿಲ್ಲ

• • •

ಟೈಫಾಯ್ಡ್ ಎಂಬ ಜ್ವರವು ಈಗ ಕಲ್ಕತ್ತೆಯಿಂದ ಡಾರ್ಜಲಿಂಗ್ ಪಟ್ಟಣಕ್ಕೆ ವ್ಯಾಪಿಸಿರುತ್ತದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈ ಜ್ವರದ ರೋಗಿಗಳು ವಿಶೇಷವಾಗಿದ್ದಾರೆ. ಯೂರೋಪಿಯನ್ನರಲ್ಲೂ ಹಲವರಿಗೆ ಈ ಜ್ವರ ಬಂದಿರುವುದು

ಪಂಜಾಬ್ ಗವರ್ನ್‌ಮೆಂಟಿನವರು ಖಿಯರ್‌ವಾಲಿ ಎಂಬಲ್ಲಿ ಪ್ರಕಟವಾಗುವ ಪಂಜಾಬ್ ಅಡ್ವೊಕೇಟ್ ಎಂಬ ವರ್ತಮಾನ ಪತ್ರಿಕಾ ಕರ್ತರಿಂದ 3000 ರೂಪಾಯಿ ಠೇವಣಿ ಬಂದಹೊರತು ಆ ಪತ್ರಿಕೆಯನ್ನು ಹೊರಡಿಸಕೂಡದು ಎಂದು ಹುಕುಂ ಕೊಟ್ಟದಾರೆ

• • •

ಕಲ್ಕತ್ತಾ ಪಟ್ಟಣದಲ್ಲಿರುವ ಸಿಕ್ ಜನಗಳ ಮುಖಂಡರು ಕಳೆದ ವಾರ ಒಂದು ಸಭೆಯನ್ನು ನಡಿಸಿ, ತಮ್ಮ ಜನರ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕಾಗಿ ಒಂದು ಪಾಠಶಾಲೆಯನ್ನೂ, ಒಂದು ಗಂಡುಹುಡುಗರ ಪಾಠಶಾಲೆಯನ್ನೂ ಒಂದು ಧರ್ಮಶಾಲೆಯನ್ನೂ ಸ್ಥಾಪಿಸಿ ನಡಿಸಬೇಕೆಂದು ತೀರ್ಮಾನ ಮಾಡಿದರು.

ಸಂಯುಕ್ತ ಅಧಿಪತ್ಯಗಳಲ್ಲಿ ಲೇಟ್ ಎಡ್ವರ್ಡ್ ಚಕ್ರವರ್ತಿಯವರ ಹೆಸರಿನ ಮೇಲೆ ಕಟ್ಟುವ ಕ್ಷಯರೋಗ ಚಿಕಿತ್ಸೆಯ ಆಸ್ಪತ್ರೆಯ ಕಾಮಗಾರಿಗಳೆಲ್ಲಾ ಮುಂದಿನ ಮಾರ್ಚಿ ಆಖೈರಿಗೆ ಮುಗಿಯುವವೆಂದೂ, ಆ ಬಳಿಕ ಅದು ಪ್ರತಿಷ್ಠೆಯಾಗುವುದೆಂದೂ ಪ್ರಕಟವಾಗಿದೆ

• • •

ಸಿಂಧೂ ನದಿಯ ದಡದ ಮೇಲಿರುವ ಡಿರಾಘಾಜಿಖಾನ್ ಎಂಬ ಪಟ್ಟಣವು ಪ್ರವಾಹಗಳ ದೆಸೆಯಿಂದ ಮುಳುಗಿಹೋಗಿ, ಬೇರೆ ಸ್ಥಳದಲ್ಲಿ ಹೊಸ ಪಟ್ಟಣವನ್ನು ಕಟ್ಟಿರೋಣದರಿಂದ ಆ ನಾಶವಾದ ಪಟ್ಟಣಕ್ಕೆ ಸರ್ಕಾರದವರು ಸಾಲಕೊಟ್ಟದ್ದ ಎರಡು ಲಕ್ಷ ರೂಪಾಯನ್ನು ರಿಮಿಷನ್ ಮಾಡಬೇಕಾಯಿತು

• • •

ಅನಂತಪುರದ ಹತ್ತಿರ ಇರುವ ಪುತ್ತನ್‌ಕೋಟೆ ಎಂಬ ಬೆಟ್ಟದ ತಪ್ಪಲಲ್ಲಿ ಒಂದು ತರಹಾ ಮಣ್ಣನ್ನು ಅಗೆಯುತ್ತಿದ್ದಾಗ ಮಣ್ಣಿನ ದೊಡ್ಡ ಗಡ್ಡೆಯು ಕಳಚಿ ಜನರ ಮೇಲೆ ಬಿದ್ದಿತು. ಐದು ಮಂದಿ ಹೆಂಗಸರು ಅದರ ಕೆಳಗೆ ಸಿಕ್ಕಿ ಸತ್ತುಹೋದರು. ಗಾಯ ಪಟ್ಟದ್ದ ಮೂರು ಜನರನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸುತ್ತಿದಾರೆ.

• • •

ಪೆಷಾವರಿನ ಬಳಿ ಕೋಟಾ ಎಂಬ ಸ್ಥಳದಲ್ಲಿ ಒಂದು ದೊಂಬಿ ಕಲಹವಾಗಿ ಆರು ಮಂದಿ ಕೊಲ್ಲಲ್ಪಟ್ಟರು ಈ ಮೊಕದ್ದಮೆಯಲ್ಲಿ ಪೋಲೀಸಿನವರು ಐದ್ದ ಜನರನ್ನು ಹಿಡಿದು ಮೊಕದ್ದಮೆ ತಂದರು. ರುಜುವಾತು ತೃಪ್ತಿಕರವಾಗಿಲುವೆಂದೂ, ಮೊಕದ್ದಮೆಯ ರಚನೆಯೇ ಸರಿಯಾಗಿಲ್ಲವೆಂದೂ ಹೇಳಿ ಜಡ್ಜಿಗಳು ಅಪರಾಧಿಗಳನ್ನೆಲ್ಲಾ ಖುಲಾಸ್ ಮಾಡಿರುತ್ತಾರೆ

• • •

ಬೊಂಬಾಯಿನಲ್ಲಿರುವ ಶ್ರೀ ಜೀವದಯಾ ಜ್ಞಾನ ಪ್ರಸಾರಕ ಸಮಾಜದ ಕಮಿಟಿಯವರು ಮಾಂಸಾಹಾರವನ್ನು ತ್ಯಜಿಸಿ ಧಾನ್ಯಾದಿ ಕಾಯಿಪಲ್ಯಗಳ ಆಹಾರವನ್ನು ಭೋಜನ ಮಾಡೋಣದರಲ್ಲಿ ಉಂಟಾಗುವ ಫಲ ಪ್ರಯೋಜನಾದಿಗಳನ್ನು ವಿವರಿಸಿ ಬರೆದುಕೊಡುವ ಉಪನ್ಯಾಸಗಳಿಗೆ 500 ರೂಪಾಯಿನ ಹತ್ತು ಬಹುಮಾನಗಳನ್ನು ಕೊಡುವುದಾಗಿ ಪ್ರಕಟಮಾಡಿರುತ್ತಾರೆ

• • •

ಪೂರ್ವ ಬಂಗಾಳಾಕ್ಕೆ ಸೇರಿದ ಸೀತಾಖಂಡದಲ್ಲಿ ಯತೀಂದ್ರಭಾನ್ ಎಂಬ ಮಹಂತರನ್ನು ಕಳೆದ 6 ನೇ ತಾ ಮಂಗಳವಾರ ರಾತ್ರಿ ಮಠದೊಳಗೆ ಯಾರೋ ಗುಂಡಿನಿಂದ ಹೊಡೆದು ಕೊಂದುಹಾಕಿದರು ಪೋಲೀಸ್ ಅಧಿಕಾರಿಗಳು ಇದರ ಪೂರ್ವೋತ್ತರವನ್ನು ತನಿಖೆ ಮಾಡುತ್ತಿದಾರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆ ಮಠದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವರು.

• • •

ರಾಮೇಶ್ವರದಿಂದ ಆಚೆಗೆ ಸಿಲೋನ್ ದ್ವೀಪಕ್ಕೆ 1913 ನೇ ಜುಲೈನಿಂದ ದೋಣಿಗಳನ್ನು ಬಿಡುವಂತೆ ಏರ್ಪಾಡಾಗುವುದು ಧನುಷ್ಕೋಟಿಯಿಂದ ತಲೈಮನ್ನಾರ್ ವರೆಗೆ ಈ ದೋಣಿಯನ್ನು ಬಿಡುವರು ಅಲ್ಲಿಂದಾಚೆಗೆ ಆಡಮ್ಸ್ ಬ್ರಿಡ್ಜ್ ಎಂಬ ಸೇತುವೆಯ ಮೇಲೆ ರೈಲ್ ಕಂಬಿಗಳನ್ನು ಹಾಕುವುದು ಸಾಧ್ಯವೇ ಎಂಬ ಅಂಶವನ್ನು ಆಜಮಾಯಿಷಿ ಮಾಡಬೇಕೆಂದು ಹುಕುಂ ಕೊಡಲಾಗಿದೆ

• • •

ಕಳೆದ ತಾ. 10 ನೇ ಶನಿವಾರಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 613 ಜನರಿಗೆ ಪ್ಲೇಗ್ ತಗಲಿತು , 145 ಜನರು ಈ ಉಪದ್ರದಲ್ಲಿ ಕಾಲವಾದರು ಈ ಮರಣ ಸಂಖ್ಯೆಯು ಹಂಚಿಕೆ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 202, ಮದರಾಸ್ ಅಧಿಪತ್ಯ 19, ಬಂಗಾಳಾ 5, ಬೀಹಾರ್ ಮತ್ತು ಒರಿಸಾ 6, ಸಂಯುಕ್ತ ಅಧಿಪತ್ಯಗಳು 28, ಪಂಜಾಬ್ 1, ಬರ್ಮಾ 57, ಮೈಸೂರು ಸಂಸ್ಥಾನ 97

• • •

ಕಲ್ಕತ್ತಾ ಪಟ್ಟಣದಲ್ಲಿ ಮೋಟಾರ್ ಕಂಪನಿಯವರ ಮೋಟಾರ್ ಗಾಡಿಯೊಳಗೆ ಮೆ ಷಾ ಎಂಬ ಸಾಹೇಬರು ಸಂಚಾರಮಾಡುವಾಗ್ಗೆ ಗಾಡಿ ನಡಿಸುವವನ ಅಜಾಗ್ರತೆಯಿಂದ ಆ ಸಾಹೇಬರಿಗೆ ಜಖಂ ಆಯಿತು. ಇದಕ್ಕಾಗಿ ಅವರು ಕಂಪನಿಯವರಿಂದ 50,000 ರೂಪಾಯಿ ಡಾಮಾಜು ಕೊಡಿಸಬೇಕೆಂದು ದಾವಾ ಮಾಡಿದರು. ಜಡ್ಜಿಯವರು ಮೊಕದ್ದಮೆ ರುಜುವಾತಾದದ್ದರಿಂದ ವಾದಿಗೆ 16,000 ರೂಪಾಯಿ ಡಾಮಾಜನ್ನು ಕಂಪನಿಯಿಂದ ಕೊಡಿಸಿರುತ್ತಾರೆ

• • •

ಕಳೆದ ತಾ 11 ನೇ ಬಾನುವಾರ ರಾತ್ರಿ ಸುಮಾರು 10 ಗಂಟೆಯಲ್ಲಿ ಪಿಷಾವರ್ ಪಟ್ಟಣದೊಳಗೆ ಭೂಮಿಯಿಂದ 1,000 ಅಡಿ ಎತ್ತರದಲ್ಲಿ ಒಂದು ವಿಶೇಷವಾದ ನಕ್ಷತ್ರವು ಹಾರಿಹೋಯಿತು ಅದರ ಬಾಲವು ಭೂಮಿಯ ಮೇಲೆ 100 ಗಜದ ವರಿಗೆ ವ್ಯಾಪಿಸಿಕೊಂಡಿತ್ತು 10 ಸೆಕೆಂಡುಗಳ ತನಕ ಆ ನಕ್ಷತ್ರದ ಪ್ರಕಾಶವು ಬಹು ವಿಶೇಷವಾಗಿತ್ತು. ಪ್ರಜೆಗಳು ಇದನ್ನು ನೋಡಿ ಬಹಳ ಆಶ್ಚರ್ಯವನ್ನೂ ಗಾಬರಿಯನ್ನೂ ಪಟ್ಟರೆಂದು ತಂತೀವರ್ತಮಾನ ಬಂದಿದೆ.

• • •

ಅನಂತಪುರದ ಸಂಸ್ಥಾನದ ಮಹಾರಾಜರವರು ಕ್ವಿಲಾನ್‌ನಿಂದ ಅನಂತಪುರಕ್ಕೆ ರೈಲ್‌ರಸ್ತೆ ಹಾಕಿಸಬೇಕೆಂದು ಏರ್ಪಾಡುಮಾಡಿದರು ಇಂಡಿಯಾ ಗವರ್ನ್‌ಮೆಂಟಿನವರು ಇದನ್ನು ಸ್ಯಾಂಕ್ಷನ್ ಮಾಡಿರುತ್ತಾರೆ ಅಲ್ಲಿಂದಲ್ಲಿಗೆ 42 ಮೈಲಿ ಆಗುವುದು ಇದರ ಕಾಮಗಾರಿಗೆ 28 ಲಕ್ಷ ರೂಪಾಯಿ ಖರ್ಚಾಗುತ್ತದೆ. ಮಧ್ಯೆ ಐದು ಸ್ಟೇಷನ್‌ಗಳನ್ನು ಕಲ್ಪಿಸಿರುತ್ತಾರೆದೂ, ಈ ಕಾಮಗಾರಿಯು ಕೂಡಲೇ ಪ್ರಾರಂಭವಾಗಿ ಎರಡು ವರುಷಗಳೊಳಗೆ ಪೂರೈಸತ್ತದೆಂದೂ ತಿಳಿದುಬರುತ್ತದೆ

ಮೈಸೂರು ಸಂಸ್ಥಾನದ ಬಜೆಟ್ಟು.

1912-13 ನೇ ಸಾಲಿನ ಅಂದಾಜಾ ಜಮಾಖರ್ಚುಗಳು.

ಮೈಸೂರು ಸರ್ಕಾರದ ಖಜಾನಾ ಭಕ್ಷಿಯವರಾದ ಮೆ|| ಜಿ. ಎಸ್. ಚಕ್ರವರ್ತಿಯವರು 1910-11 ನೇ ಸಾಲಿನ ಹುಟ್ಟುವಳಿ ಖರ್ಚುಗಳನ್ನೂ, 1911-12 ನೇ ಸಾಲಿನ ಅಂದಾಜಾ ಪಟ್ಟಿಗಳನ್ನೂ , 1911-12 ನೇ ಸಾಲಿನ ಬಡ್ಜೆಟ್ಟನ್ನೂ ಕಳೆದ ವಾರ ಪ್ರಕಟಮಾಡಿರುತ್ತಾರೆ. ಈ ಪೈಕಿ ಎರಡು ಸಾಲುಗಳ ಲೆಕ್ಕಗಳನ್ನು ಕೆಳಗೆ ಎತ್ತಿ ಪ್ರಕಟಿಸಿರುವೆವು

ಜಮಾ ಬಾಬುಗಳು.

ಬಾಬುಗಳು.		1910-11 ನೇ ಸಾಲಿನ ಹುಟ್ಟುವಳಿ		1912-13 ನೇ ಸಾಲಿನ ಅಂದಾಜಾ.
ಜಮೀನ್ ಕಂದಾಯ	...	1,06,78,688	...	1,01,50,000
ಫಾರೆಸ್ಟ್	...	20,93,460	...	18,63,000
ಎಕ್ಸೈಸ್	...	41,99,240	...	42,00,000
ತೆರಿಗೆಗಳು	...	2,86,455	...	2,85,000
ಸ್ಟಾಂಪುಗಳು	...	8,25,652	...	8,15,000
ರೆಜಿಸ್ಟ್ರೇಷನ್	...	1,02,680	...	1,00,000
ಗಣಿಗಳ ರಾಜಾದಾಯ, ಗುತ್ತಿಗೆಗಳು	...	18,13,858	...	17,56,000
ಬಡ್ಡಿ	..	1,50,909	...	3,57,000
ಲಾಭ ಅಥವಾ ನಷ್ಟ	...	6,47,905	...	11,50,000
ಕೋರ್ಟುಗಳು	...	44,112	...	44,000
ಬಂದೀಖಾನೆಗಳು	...	24,694	...	21,000
ಪೋಲೀಸ್	...	21,837	...	22,000
ವಿದ್ಯಾಭ್ಯಾಸ	...	1,32,610	...	1,33,000
ವೈದ್ಯ	...	1,17,284	...	1,21,000
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	...	59,248	...	72,000
ಪೆನ್ಷನ್‌ಗಾಗಿ ಜಮೆ	...	2,735	...	2,000
ಸಾದಿಲ್ವಾರ್ ಮತ್ತು ಛಾಪಾಖಾನೆ	...	17,235	...	9,000
ಚಿಲ್ಲರೆ ಬಾಬುಗಳು	...	2,08,107	...	1,19,000
ಸೈನ್ಯ ಮತ್ತು ಕಾಮಗಾರಿಗಳು	...	70,114	...	61,000
ರೈಲ್ವೆ ಹುಟ್ಟುವಳಿ ಲೆಕ್ಕ	...	10,58,807	...	11,14,000
ಮರಾಮತ್ ಕಾಮಗಾರಿಗಳು	..	1,44,375	...	3,31,000
ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡು	...	15,99,179	...	16,20,000
ಜುಮ್ಲಾ ಹುಟ್ಟುವಳಿ ರೂ.		2,16,73,315	..	2,14,60,000

ಖರ್ಚು ಬಾಬುಗಳು.

ಬಾಬುಗಳು		1910-11 ನೇ ಸಾಲಿನ ಖರ್ಚು.		1912-13 ನೇ ಸಾಲಿನ ಅಂದಾಜಾ
ವಾಪಸ್ ಜಮಾ	...	2,11,121	...	2,42,000
ಜಮೀನ್ ಕಂದಾಯ	...	19,18,980	...	19,30,000
ಫಾರೆಸ್ಟ್	...	6,92,975	...	7,11,000
ಎಕ್ಸೈಸ್	...	3,36,703	...	3,42,000
ಸ್ಟಾಂಪುಗಳು	...	38,293	...	60,000
ರೆಜಿಸ್ಟ್ರೇಷನ್	...	82,955	...	85,000
ಗಣಿಗಳ ಹುಟ್ಟುವಳಿ ಖರ್ಚು	...	2,14,920	..	2,31,000
ಸಾಧಾರಣ ಸಾಲದ ಬಡ್ಡಿ	...	71,194	...	85,000
ಇತರ ಸಾಲದ ಬಡ್ಡಿ	...	3,08,377	...	3,06,000
ಲಾಭ ಅಥವಾ ನಷ್ಟ	...	6,528	...	3,000
ಅರಮನೆ	...	23,10,000	..	23,10,000
ಮೇಲ್ವಿಚಾರಣೆಯ ಸಿಬ್ಬಂದಿ	...	7,86,102	...	9,06,000
ಲಾ ಕೋರ್ಟುಗಳು	...	7,53,083	...	7,77,000
ಬಂದೀಖಾನೆಗಳು	...	1,77,748	...	1,51,000
ಪೋಲೀಸ್	..	9,14,326	..	9,52,000
ವಿದ್ಯಾಭ್ಯಾಸ	...	10,53,098	...	14,47,000
ಮುಜರಾಯಿ	...	3,55,007	...	3,60,000
ವೈದ್ಯ	...	7,29,515	...	8,38,000
ಶಾಸ್ತ್ರೀಯ ಮತ್ತು ಚಿಲ್ಲರೆ ಇಲಾಖೆಗಳು	..	2,01,914	...	3,72,000
ಅಲೋಯನ್ಸು ಮುಂತಾದದ್ದು	...	81,321	...	85,000
ಪೆನ್ಷನ್	...	7,11,382	...	7,35,000
ಸಾದಿಲ್ವಾರ್ ಮತ್ತು ಛಾಪಾಖಾನೆ	...	2,23,344	...	2,01,000
ಚಿಲ್ಲರೆ ಬಾಬುಗಳು	...	4,73,280	...	2,22,000
ಸೈನ್ಯ	...	13,31,614	...	14,21 000
ಪೊಗದಿ	...	35,00,000	...	35,00,000
ಮಿಲ್ಟೇರಿ ಕಾಮಗಾರಿಗಳು	...	29,813	...	53,000
ಸಾಲ ಕಡಮೆಮಾಡುವುದು	...	3,33,333	...	3,33,000
ರೈಲ್ವೆ ಹುಟ್ಟುವಳಿ ಖರ್ಚು	...	7,17,280	...	7,20,000
ಚಿಲ್ಲರೆ ರೈಲ್ವೆ ಖರ್ಚು	...		...	22,000
ನೀರಾವರಿ-ಭಾರಿ ಕಾಮಗಾರಿಗಳು	...	2,96,458	...	25,82,000
,, ಸಣ್ಣ ,,	...	1,10,402	...	2,03,000
ಸಿವಿಲ್ ಕಟ್ಟಡಗಳು	...	20,51,605	...	21,62,000
ರೈಲ್ ರಸ್ತೆ ಹಾಕುವುದು	...	1,44,027	...	13,25,000
ಬೆಂಗಳೂರು ವಿದ್ಯುಚ್ಛಕ್ತಿಯ ಟ್ರಾಂಗಾಡಿಗಳ ಏರ್ಪಾಡಿಗೆ...			...	7,00,000
ವಿದ್ಯುಚ್ಛಕ್ತಿ ಇಲಾಖೆ-ಹುಟ್ಟುವಳಿ ಖರ್ಚು	...	6,29,505	...	7,12,000
,, ಹೊಸ ಏರ್ಪಾಡಿಗೆ...		32,860	...	6,86,000
ಜುಮ್ಲಾ ಖರ್ಚು ರೂ.		2,22,70,758	...	2,79,06,000

ಮೈಸೂರು ಸಂಸ್ಥಾನದ ಬಡ್ಜೆಟ್ಟು.

1912-13 ನೇ ಸಾಲಿನಲ್ಲಿ ನಡೆಯುವ ಕಾಮಗಾರಿಗಳು

ಮೈಸೂರು ಗವರ್ನ್‌ಮೆಂಟಿನವರು 1912-13ನೇ ಸಾಲಿನ ಆದಾಯ ವ್ಯಯಗಳ ಅಂದಾಜು ಪಟ್ಟಿಗಳನ್ನು ಈಗತಾನೇ ಪ್ರಕಟಮಾಡಿರುತ್ತಾರೆ ಈ ಪಟ್ಟಿಗಳನ್ನು ಓದಿನೋಡುವಲ್ಲಿ ಗವರ್ನ್‌ಮೆಂಟಿನವರು ಮುಂದೆ ಹೇಳುವ ಕಾಮಗಾರಿಗಳಿಗಾಗಿ ಚಾಲ್ತಿಸಾಲಿನ ವರಮಾನದಲ್ಲಿ ಹಣವನ್ನು ಖರ್ಚುಮಾಡುವವರಾಗಿರುವಂತೆ ಗೊತ್ತಾಗುತ್ತದೆ ಈ ಕಾಮಗಾರಿಗಳೂ ಇವುಗಳಿಗೆ ಸ್ಯಾಂಕ್ಷನ್ ಆಗಿರುವ ಮೊಬಲಗೂ ಎಷ್ಟೆಂದರೆ —

	ಕೆಲಸಗಳು		ಸ್ಯಾಂಕ್ಷನ್ ಆಗಿರುವ ಹಣ
1	ಮಾರಿಕಣಿವೆ ತಲಾವ್	ರೂ	38,000
2	ಮುಂದಗೆರೆ ನಾಲಾ ದುರಸ್ತಿಗೆ	,,	6,000
3	ಹೇಮಗಿರಿ ನಾಲಾ ದುರಸ್ತಿಗೆ	,,	6,000
4	ಶ್ರೀರಾಮದೇವರ ಅಣೆ ದಕ್ಷಿಣನಾಲಾ ದುರಸ್ತಿಗೆ	,,	20,000
5	ಕಾರ್ಕಾಸನಹಳ್ಳಿ ತಾಲ್ಲೂಕಿನಲ್ಲಿ ಮರಳವಾಡಿ ಹೊಳೆಗೆ ಅಡ್ಡವಾಗಿ ಒಂದು ಕೆರೆಯನ್ನು ಕಲ್ಪಿಸುವುದು	,,	15,000
6	ಹುಣಸೂರು ತಾಲ್ಲೂಕಿನಲ್ಲಿ ವಡ್ಡಿಹೊಳೆಗೆ ಅಡ್ಡವಾಗಿ ಒಂದು ಕೆರೆಯನ್ನು ಕಲ್ಪಿಸುವುದು	,,	20,000
7	ನೌಲಂಗದಲ್ಲಿ ಹೊಸಕೆರೆ ಕಟ್ಟುವುದು	,,	5,000
8	ತರೀಕೆರೆ ಕಣಿವೆಯಲ್ಲಿ ಕೆರೆಗಳಿಗೆ ನೀರು ಬರುವಂತೆ ಮಾಡುವುದು	,,	10,000
9	ಶಿಡ್ಲಘಟ್ಟದಲ್ಲಿ ಹೊಸ ತಾಲ್ಲೂಕ್ ಕಚೇರಿ ಕಟ್ಟಡ	,,	5,000
10	ಹೊನ್ನಾಳಿಯಲ್ಲಿ ,, ,, ,,	,,	15,000
11	ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕೆಮಿಕಲ್ ಲ್ಯಾಬೊರೆಟರಿ ಕಟ್ಟುವುದು	,,	50,000
12	ಮೈಸೂರಿನಲ್ಲಿ ಚಾಮರಾಜೇಂದ್ರ ಕಸಬುಗಳ ಕಾರ್ಖಾನೆ ಕಟ್ಟಡಕ್ಕೆ	,,	10,000
13	ಬೆಂಗಳೂರು ಕೋಟೆಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟರ ಆಫೀಸ್ ಕಟ್ಟಡಕ್ಕೆ	,,	15,000
14	ಉರಿಗಾಂನಲ್ಲಿ ಪೊಲೀಸಿನವರಿಗೆ ಲೈನ್ ಕಟ್ಟಡಗಳು	,,	9,500
15	ಬೆಂಗಳೂರಿನಲ್ಲಿ ನೇತ್ರವೈದ್ಯದ ಆಸ್ಪತ್ರೆ ಕಟ್ಟಡ	,,	11,000
16	ರಾಬರ್ಟ್‌ಸನ್ ಪೇಟೆಯಲ್ಲಿ ಹೊಸದಾಗಿ ಒಂದು ಪ್ರಸೂವ ಆಸ್ಪತ್ರೆಯನ್ನು ಸ್ಥಾಪಿಸುವುದಕ್ಕೆ ಕಾರೊನೇಷನ್ ಕಟ್ಟಡದಲ್ಲಿ ಬದಲಾವಣೆ ಕಾಮಗಾರಿಗೆ	,,	10,000
17	ಮೈಸೂರಿನಲ್ಲಿರುವ ಜನರಲ್ ಆಸ್ಪತ್ರೆಯ ಬದಲಾವಣೆಗೆ	,,	30,000
18	ವಾಟರ್ ಸಪ್ಲೈ ಡಿವಿಜನ್ ಕಾರ್ಖಾನೆಗಳ ಬದಲಾವಣೆಗೆ	,,	7,000
19	ಮೈಸೂರಿನಲ್ಲಿ ಅರಮನೆ ಕಟ್ಟುವುದಕ್ಕೆ	,,	70,000
20	ಮೈಸೂರಿನಲ್ಲಿ ಅರಮನೆಗೆ ಎರಡು ಹೊಸ ಬ್ಲಾಕುಗಳನ್ನು ಕಟ್ಟುವುದು	,,	2,00,000
21	ಬೆಂಗಳೂರು ಸಿಟಿ ಮಲ್ಲೇಶ್ವರದ ಬಡಾವಣೆಗೆ	,,	20,000
22	ಮೈಸೂರು ಸಿಟಿ ನೀರಿನ ಯಂತ್ರೋಪಕರಣಗಳಿಗೆ	,,	50,000
23	ಬೆಂಗಳೂರು ಸಿಟಿ ಬಸವನಗುಡಿ ಬಡಾವಣೆಗೆ	,,	18,000
24	ಮೈಸೂರಿನಲ್ಲಿ ಲೇಟ್ ಮಹಾರಾಜರವರ ಶಿಲಾ ಪ್ರತಿಮೆಯ ಮೇಲಾವರಣ ಕಾಮಗಾರಿಗೆ	,,	15,000
25	ಶಿವಮೊಗ್ಗೆಯಲ್ಲಿ ಹೊಸ ಸಂಟ್ರಲ್ ಕೋರಿ ಕಟ್ಟುವುದಕ್ಕೆ	,,	3,000
26	ಬೆಂಗಳೂರು ಚಾಮರಾಜೇಂದ್ರ ನೀರಿನ ಕಾರ್ಖಾನೆಯ ಬಡಾವಣೆಗೆ ಜಮೀನುಗಳ ಕಾಂಪೆನ್ಸೇಷನ್‌ಗಾಗಿ	,,	1,000
27	ಕನ್ನಂಬಾಡಿ ತಲಾವ್ ಕಾಮಗಾರಿಗೆ	,,	20,00,000
28	ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯ ಟ್ರಾಂವೇ ಏರ್ಪಾಡಿಗೆ	,,	7,00,000
29	ಸಂಸ್ಥಾನದಲ್ಲಿ ಈಗಿರುವ ಸ್ಕೂಲುಗಳನ್ನು ಒಳ್ಳೇ ಸ್ಥಿತಿಗೆ ತಂದಿಡುವುದಕ್ಕೂ, ಹೊಸ ಸ್ಕೂಲುಗಳನ್ನು ಸ್ಥಾಪಿಸುವುದಕ್ಕೂ	,,	1,00,000
30	ಸಂಸ್ಥಾನದ ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಕಟ್ಟುವುದಕ್ಕೆ	,,	1,50,000
31	ಮೈಸೂರಿನಲ್ಲಿರುವ ಚಾಮರಾಜೇಂದ್ರ ಕಸಬುದಾರಿ ಕಾರ್ಖಾನೆಯಲ್ಲಿ ಕಸಬು ಕಲಿಸುವುದನ್ನು ಆರಂಭಿಸುವುದಕ್ಕೂ, ಸಂಸ್ಥಾನದಲ್ಲಿ ಇರುವ ಕಸಬುದಾರಿ ಸ್ಕೂಲುಗಳಿಗೂ	,,	60,000
32	ಬೆಂಗಳೂರಿನಲ್ಲೂ ಮೈಸೂರಿನಲ್ಲೂ ವಿದ್ಯುಚ್ಛಕ್ತಿಯನ್ನು ಸಾಗಿಸಿಕೊಂಡು ಹೋಗುವ ತಂತಿಗಳಿಗೆ ಸಿಡಿಲು ಎರಗದಂತೆ ಮಾಡುವ ಉಪಾಯಕ್ಕೆ	,,	17,000
33	ಬೆಂಗಳೂರು ಸಿಟಿ, ದಂಡು ಮತ್ತು ಮೈಸೂರು, ಈ ಮೂರು ಸ್ಥಳಗಳಲ್ಲೂ ಹೆಚ್ಚು ವಿದ್ಯುಚ್ಛಕ್ತಿಯ ದೀಪಗಳನ್ನು ಇರಿಸುವ ಕಾಮಗಾರಿಗೆ	,,	18,000
34	ಶಿವಸಮುದ್ರದಲ್ಲಿ ಕೂಲಿಗಳ ವಾಸದ ಮನೆ ಕಾಮಗಾರಿಗೆ	,,	17,000
35	ವಿದ್ಯುಚ್ಛಕ್ತಿಯ ಚೀಫ್ ಇನ್ಸ್‌ಪೆಕ್ಟರ ಮತ್ತು ಟೆಲಿಫೋನ್ ಗುಮಾಸ್ತೆಯರ ಮನೆಗಳ ಕಾಮಗಾರಿಗೆ	,,	3,000
36	ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯ ಚೀಫ್ ಇಂಜಿನಿಯರ್ ಆಫೀಸ್ ಬದಲಾವಣೆ ಮುಂತಾದ ಕಾಮಗಾರಿಗಳಿಗೆ	,,	11,000
37	ಶ್ರೀರಂಗಪಟ್ಟಣದ ಆರೋಗ್ಯವರ್ಧಕ ಕಾರ್ಯಗಳಿಗೆ	,,	5,000
38	ಬೆಂಗಳೂರಿನಲ್ಲಿ ಮಾಡುವ ಲೇಟ್ ಚಕ್ರವರ್ತಿಯವರ ಮೆಮೋರಿಯಲ್ ಕಾರ್ಯಕ್ಕೆ	,,	10,000
39	ಬಾರ್-ಸಿಪಾಯಿಗಳ ಬಂದೂಕುಗಳನ್ನು ತರಿಸುವುದಕ್ಕೆ	,,	16,400

ಕಬ್ಬಿಗೆ ಗೆಜ್ಜಲು ಹಿಡಿಯುವುದು

ಕೆಲವು ಜಮೀನುಗಳಲ್ಲಿ ಕಬ್ಬಿನ ಪೈರುಗಳಿಗೆ ಗೆಜ್ಜಲು ಮುತ್ತುವುದುಂಟು ಈ ಕಾಟವನ್ನು ತಪ್ಪಿಸಲು ಕೆಲವು ಸೂಚನೆಗಳು ಕೆಳಗೆ ಕೊಡಲ್ಪಟ್ಟಿವೆ —ಕೆಲವು ಕಡೆಗಳಲ್ಲಿ ಜಮೀನನ್ನು ಮುಂದಾಗಿ ಸಾಲುಹೊಡೆದು ಮಣ್ಣನ್ನು ಬಿಸಿಲಿನಲ್ಲಿ ಚನ್ನಾಗಿ ಒಣಗಿಸುವರು ಜಮೀನಿನಲ್ಲಿರುವ ಒಣಗಿದ ಎಲೆಗಳು, ಕಸ, ಇವೇ ಮೊದಲಾದವುಗಳನ್ನು ಸ್ವಲ್ಪವೂ ಬಿಡದಂತೆ ಬೆರಣಿಯನ್ನು ಹಾಕಿ ಚನ್ನಾಗಿ ಸುಟ್ಟುಬಿಡುವರು ಕಬ್ಬಿನ ಬೀಜವನ್ನು ನೆಡುವಾಗ್ಗೆ ಬೀಜದ ಮೇಲೆಲ್ಲಾ ಬೂದಿಯನ್ನು ಎರಚುವುದಲ್ಲದೆ ಪೈರಿನ ಸುತ್ತಮುತ್ತಲಿರುವ ಮಣ್ಣಿನ ಮೇಲೂ ಬೂದಿಯನ್ನು ಹಾಕಿ ಚನ್ನಾಗಿ ಬೆರಸಬೇಕು ಎಳೆದಾದ ಕಬ್ಬಿನ ಪೈರಿಗೆ ಗೆಜ್ಜಲು ಮುತ್ತಿದರೆ ಮೇಲೆ ಹೇಳಿದ ರೀತಿಯಲ್ಲಿ ಬೂದಿಯನ್ನು ಎರಚಬೇಕು —ಹಸಿ ಮೀನನ್ನು ಗೊಬ್ಬರವಾಗಿ ಉಪಯೋಗಿಸಿದರೆ ಗೆಜ್ಜಲು ಮುತ್ತುವುದಿಲ್ಲವೆಂದು ಹೇಳುತ್ತಾರೆ ಆದರೆ ಈ ಗೊಬ್ಬರವನ್ನು ಹಾಕಿದರೆ, ಗೊಬ್ಬರವು ಪೂರ್ತಿಯಾಗಿ ಕೊಳೆಯುವ ವರಿವಿಗೂ ಪೈರನ್ನು ಕಾಯಬೇಕಾಗುತ್ತದೆ ಇಲ್ಲವಾದರೆ ಕಾಗೆ, ನಾಯಿ, ನರಿ ಮೊದಲಾದವುಗಳು ಪೈರನ್ನು ನಷ್ಟಪಡಿಸುವವು ಕಬ್ಬಿನ ಪೈರು ಬೇರು ಬಿಡುತ್ತಿರುವ ಕಾಲದಲ್ಲಿ ಗೆಜ್ಜಲು ಮುತ್ತತಕ್ಕ ಸಂಭವವು ಜಾಸ್ತಿಯಾಗಿರುವುದರಿಂದ ಬೀಜಗಳನ್ನು ನೆಟ್ಟು ಒಂದು ತಿಂಗಳ ಕಾಲ ಒಬ್ಬ ಮನುಷ್ಯನು ಪ್ರತಿ ನಿತ್ಯವೂ ಜಮೀನಿನಲ್ಲೆಲ್ಲಾ ಹುಡುಕಿ ಗೆಜ್ಜಲು ಕಂಡಲ್ಲಿ ಅದನ್ನು ಕುಳಿದು ಅಂದಾ ಜಾಗದ ಮೇಲೆ ಬೂದಿಯನ್ನು ಎರಚಬೇಕು ಹೀಗೆ ಮಾಡುವದರಿಂದ ಕ್ರಮೇಣ ಗೆಜ್ಜಲು ಇಲ್ಲದಂತಾಗುವುದು ಗೆಜ್ಜಲು ಮುತ್ತಿದಂಥಾ ಕಬ್ಬಿನ ಬೀಜ (ತುಂಡು) ಗಳು ಮೊಳೆಯುವುದಿಲ್ಲವಾದ್ದರಿಂದ ಅಂಥಾವುಗಳನ್ನು ಕಿತ್ತು ಬದಲು ನೆಡಲು ಕೆಲವು ಚಿಗುರೊಡೆದ ಬೀಜದ ತುಂಡುಗಳನ್ನು ಯಾವಾಗಲೂ ಇಟ್ಟುಕೊಂಡಿರುವುದು ಉತ್ತಮ

ಬಹುಮಾನ ವಿನಿಯೋಗವು

ಶ್ರೀನಿವಾಸಪುರದ ಸ್ಕೂಲಿನಲ್ಲಿ ನಡೆದ ಸಭೆಯು.

ಇದೇ ಮಾಹೆಯ ೧೦ನೇ ಮಧ್ಯಾಹ್ನ 3½ ಗಂಟೆಯಲ್ಲಿ ಇಲ್ಲಿನ ಎ ವಿ ಸ್ಕೂಲ್ ಬಾಲಕರಿಗೆ ಬಹುಮಾನ ಪುಸ್ತಕಗಳನ್ನು ಹಂಚುವುದಕ್ಕೂ, ಇದೇ ಸ್ಕೂಲಿನಲ್ಲಿ ಸ್ಥಾಪಿತವಾಗಿರುವ ಬಾಲವಿವೇಕವರ್ಧಿನಿ ಎಂಬ ಸಮಾಜದ ದ್ವಿತೀಯ ವಾರ್ಷಿಕ ಮಹೋತ್ಸವವನ್ನು ನಡಿಸುವುದಕ್ಕೂ ಸ್ಕೂಲ್ ಹಾಲಿನಲ್ಲಿ ಸಭೆಯು ಸೇರಿಸಲ್ಪಟ್ಟಿತ್ತು ಈ ಸಭೆಗೆ ಮೈಸೂರು ಸೀಮೆಯ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ವರಾದ ಮಿ ಪಿ ಎಸ್ ಅಚ್ಯುತರಾಯರವರೂ, ಅಮಲ್ದಾರ್ ಮಿ ಸಿ ಲಕ್ಷ್ಮೀನಾರಾಯಣರವರೂ, ಶಿರಸ್ತೇದಾರ್ ಮಿ ಕೆ ಶ್ರೀನಿವಾಸಯ್ಯಂಗಾರ್ಯರೂ, ಆಸ್ಪತ್ರೆ ಡಾಕ್ಟರು ಮಿ ಮಹಮ್ಮದ್ ಹುಸೇನ್ ಸಾಹೇಬರೂ, ಪೊಲೀಸ್ ಇನ್ಸ್‌ಪೆಕ್ಟರ್ ಮಿ ಲಕ್ಷ್ಮಯ್ಯನವರೂ ಫಾರೆಸ್ಟ್ ರೇಂಜರ್ ಮಿ ರಂಗನಾಥಯ್ಯನವರೂ, ತಾಲ್ಲೂಕ್ ಆಫೀಸಿನ ಇತರ ಉದ್ಯೋಗಸ್ಥರೂ, ಮ್ಯುನಿಸಿಪಲ್ ಮೆಂಬರುಗಳೂ, ಗ್ರಾಮದ ಲೌಕಿಕ, ವೈದಿಕ ಮಹನೀಯರುಗಳೂ, ಎಲ್ಲಾ ಸ್ಕೂಲ್ ಮಾಸ್ಟರುಗಳೂ, ಬಾಲಕ, ಬಾಲಕಿಯರೂ ದಯಮಾಡಿ ಸಭಾಸ್ಥಾನವನ್ನಲಂಕರಿಸಿದ್ದರು ಸಭಿಕರ ಮತ್ತು ಸ್ಕೂಲ್ ಮಾಸ್ಟರುಗಳ ಪ್ರಾರ್ಥನೆಯಂತೆ ಮಿ ಪಿ ಎಸ್ ಅಚ್ಯುತರಾಯರವರು ಅಗ್ರಾಸನಾಧಿಪತ್ಯವನ್ನಂಗೀಕರಿಸಿದರು ಸಭಿಕರೆಲ್ಲರೂ ಸ್ಕೂಲ್ ಕಾಂಪೌಂಡಿನಲ್ಲಿ ಬಾಲಕರಿಂದ ಮಾಡಿಸಲ್ಪಟ್ಟ ಡ್ರಿಲ್ಲನ್ನು ಪರಾಂಬರಿಸಿ, ಪೇಪರ್ ಸ್ಲಾಯ್ಡ್ ಕ್ಲಾಸಿಗೆ ದಯಮಾಡಿ ಬಾಲಕರು ಪ್ರದರ್ಶಿಸಿದ ಮಾದರಿಗಳನ್ನು ಆದರದಿಂದ ನೋಡಿ, ಸರ್ವರೂ ಸಭಾಸ್ಥಾನಕ್ಕೆ ಚಿತ್ತೈಸಿದ ಮೇಲೆ ಸಭಾಧ್ಯಕ್ಷರು ತಮ್ಮ ಸ್ಥಾನವನ್ನಲಂಕರಿಸಿ ಆ ದಿವಸದ ಸಭೆಯ ಮುಖ್ಯೋದ್ದೇಶವನ್ನು ಸರ್ವರಿಗೂ ಹೃದಯಂಗಮವಾಗುವಂತೆ ನಿರವಪಡಿಸಿದರು ಬಳಿಕ ಪ್ರೋಗ್ರಾಮಿನಲ್ಲಿ ಕಂಡಂತೆ ದೇವರ ಪ್ರಾರ್ಥನೆಯೂ, ಇಂಗ್ಲಿಷ್ ರೆಸಿಟೇಷನ್ ಮತ್ತು ಡಯಲಾಗುಗಳೂ, ಕನ್ನಡ ಸಂಭಾಷಣೆಗಳೂ ಸಭಿಕರ ಮನೋರಂಜಕವಾಗುವಂತೆ ನಡೆದ ಮೇಲೆ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮಿ ಎನ್ ರಾಮಶಾಸ್ತ್ರಿಗಳು ಸ್ಕೂಲ್ ರಿಪೋರ್ಟನ್ನೂ, ಸೆಕ್ರೆಟರಿ ಎಂ ಆರ್ ನಾರಾಯಣರಾವ್ ಎಂಬ ವಿದ್ಯಾರ್ಥಿಯು ಸಮಾಜದ ವಾರ್ಷಿಕ ರಿಪೋರ್ಟನ್ನೂ ಓದಿದರು.

ಅನಂತರ ಸಭಾಧ್ಯಕ್ಷರು ಬಾಲಕರಿಗೆ ಸ್ವಹಸ್ತದಿಂದ ಬಹುಮಾನ ಪುಸ್ತಕಗಳನ್ನು ದಯಪಾಲಿಸಿ, ಸ್ಕೂಲಿನ ಅಭಿವೃದ್ಧಿಸ್ಥಿತಿಯನ್ನೂ, ಮಾಸ್ಟರುಗಳು ಏಕೀಭವಿಸಿ ಕಷ್ಟಪಟ್ಟು ಕೆಲಸ ಮಾಡುತ್ತಿರುವ ಸಂಗತಿಯನ್ನೂ ವಿವರಿಸಿ, ಸ್ಕೂಲ್ ಬಾಲಕರ ಏಳಿಗೆಗಾಗಿ ಏರ್ಪಡಿಸಿರುವ ಬಾಲ ವಿವೇಕವರ್ಧಿನಿ ಸಭೆಯನ್ನು ತುಂಬಾ ಪ್ರಶಂಸಿಸಿದ್ದಲ್ಲದೆ ಈ ಸಭೆಯ ಪುರೋಭಿವೃದ್ಧಿಗಾಗಿ 5 ರೂಪಾಯಿ ಸಮಾಜದ ಮೂಲಧನಕ್ಕೆ ದಯಪಾಲಿಸಿ, ಅಸೋಸಿಯೇಷನ್ ಚಂದಾರಕ್ಕೆ 10 ರೂಪಾಯಿ ಪುಸ್ತಕಗಳನ್ನು ಕಳುಹಿಸಿಕೊಡುವುದಾಗಿ ವಾಗ್ದಾನ ಮಾಡಿ ಈ ಸಭೆಗೆ ತಮ್ಮ ಉದಾರಾಶ್ರಯವನ್ನು ದಯಪಾಲಿಸಿದರು ತರುವಾಯ ಶ್ರೀಮದಿಂಡಿಯಾ ಚಕ್ರವರ್ತಿಗಳವರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ, ಮಂಗಳಗಾನವೂ ಸ್ಕೂಲ್ ಬಾಲಕರಿಂದ ಆಚರಿಸಲ್ಪಟ್ಟ ಮೇಲೆ ವಿದ್ಯಾಭಿವೃದ್ಧಿಯಲ್ಲಿ ಬದ್ಧಾದರರಾಗಿಯೂ, ಉದಾರಮನಸ್ಕರಾಗಿಯೂ ಇರುವ ಸಭಾಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ಸಭೆಯು ಮುಕ್ತಾಯ ಮಾಡಲ್ಪಟ್ಟಿತು ನಂತರ ಸಭಾಸದರೆಲ್ಲರೂ ಪುಷ್ಪ ಹಾರಾದಿಗಳಿಂದಲಂಕೃತರಾಗಿ ತೆರಳಿದರು

ವಿದ್ಯಾಭಿವೃದ್ಧಿಯ ವಿಷಯದಲ್ಲಿಯೂ, ಬಾಲಕರ ನಡೆನುಡಿಗಳನ್ನು ತಿದ್ದುಪಡಿಮಾಡುವ ಸಮಾಜಗಳ ವಿಷಯದಲ್ಲಿಯೂ ಮಿ ಪಿ ಎಸ್ ಅಚ್ಯುತರಾಯರವರಿಗೆ ಎಷ್ಟುಮಟ್ಟಿನ ಅಭಿರುಚಿ ಇರುವುದೆಂಬುದನ್ನು ಈ ಮಹನೀಯರ ಔದಾರ್ಯವೂ, ಅಪಾರವಾದ ತಮ್ಮ ರಾಜಕೀಯ ಕಾರ್ಯಗಳಲ್ಲಿ ಈ ಸಭಾಧ್ಯಕ್ಷತೆಯೊಂದನ್ನು ಪ್ರಾಮುಖ್ಯವಾಗಿ ಪರಿಗಣಿಸಿದ ಇವರ ಸೌಜನ್ಯವೂ ವ್ಯಕ್ತಪಡಿಸುತ್ತಲಿರುವುದು ಈ ಮಹನೀಯರಂತೆ ಸರ್ವರೂ ವಿದ್ಯಾಪಕ್ಷಪಾತಿಗಳಾದಲ್ಲಿ ವಿದ್ಯೆಯು ದಿನೇ ದಿನೇ ವೃದ್ಧಿಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ.

ಎಸ್. ಟಿ ಎಸ್

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರ ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋ ವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬು ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಕರು « ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು » ಎಂ ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ « ವೃತ್ತಾಂತ ಪ ಎಡಿಟರ್, ಮೈಸೂರು » ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲ ದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವು ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಜಗಲೂರಿನಲ್ಲಿ ಒಬ್ಬ ಸಾಹುಕಾರರು ಖೂನಿಯಾದರೆಂದು ಚಿತ್ರದುರ್ಗದ ಕಳೆದ ವಾರ ಹುಟ್ಟಿದ್ದ ವರ್ತಮಾನವು ನಿಜವಲ್ಲವೆಂದು ಅಲ್ಲಿನ ಬಾತ್ಮಿದಾ ತಿಳಿಸುತ್ತಾರೆ

ಪಾವಗಡದ ಎ ವಿ ಸ್ಕೂಲಿನ ವಿಚಾರವಾಗಿಯೂ, ಆಸ್ಪತ್ರೆಯ ವಿಷ ವಾಗಿಯೂ ಒಬ್ಬ ಬಾತ್ಮಿದಾರರು ಕೆಲವು ಆಕ್ಷೇಪಣೆಗಳನ್ನು ಬರೆದಿರುತ್ತಾ ನಾವು ಮೊದಲೇ ಇವನ್ನು ಪ್ರಕಟಮಾಡಲಾರೆವು ಸ್ಥಳದ ಮುಖಂಡ ಪ್ರಜೆ ತಮಗಿರುವ ಕಷ್ಟ ಅನಾನುಕೂಲಗಳನ್ನು ಆಯಾ ಇಲಾಖಾ ಮುಖ್ಯಾಧಿಕಾ ಳಿಗೆ ವಿವರಿಸಿ ತಿಳಿಸಬೇಕು ಪರಿಹಾರವೇನೂ ಆಗದಿದ್ದರೆ ಪತ್ರಿಕೆಗಳಲ್ಲಿ ಪ್ರಕಟ ದೋಣದರಿಂದ ಫಲವಾಗಬಹುದು ಆಯಾ ಸ್ಥಳದಲ್ಲಿ ಮುಖಂಡರಾಗಿ ಮಾತುಬಲರಾಗಿಯೂ ಇರುವವರು ಸ್ವಾರ್ಥವನ್ನು ಬಿಟ್ಟು ಪರಪ್ರಜೆಗಳ ವನ್ನು ಹುಡುಕಿಮಾಡಲು ಧೈರ್ಯಾಸಕ್ತಿಗಳನ್ನು ಪಡೆದರೆ ಎಲ್ಲಾ ಕೂಲವಾದೀತೆನ್ನುವುದಕ್ಕೆ ಸಂಶಯವಿಲ್ಲ

ಸುಮಾರು 30 ವಯಸ್ಸಿನ ಕೆಂಪಗಿರುವ ಒಬ್ಬ ವೈಷ್ಣವ ಬ್ರಾಹ್ಮ ಕೆಲವು ದಿನಗಳ ಹಿಂದೆ ಮೈಸೂರಿಗೆ ಬಂದು ಕೆಳವರಲ್ಲಿ ತಾನು ತಿಪಟೂ ಮಿಷನ್ ಬಾಲಿಕಾ ಪಾಠಶಾಲೆಯ ಹೆಡ್ ಮಾಸ್ಟರೆಂದೂ, ತನ್ನ ಹೆಸರು ಶ್ರೀ ರಾಯ ಬಿನ್ ಶ್ರೀನಿವಾಸರಾಯ ಎಂದೂ ಹೇಳುತ್ತಾ ಕೆಲವು ದಿನ ಕಾಲಯಾ ನಡಿಸಿ, ಆಕಸ್ಮಿಕವಾಗಿ ತಲೆ ತಪ್ಪಿಸಿಕೊಂಡು ಹೋದವನು ಕಳೆದ ವಾರ ಪಟ್ಟಣದಲ್ಲಿ ಕಾಣಿಸಿಕೊಂಡು ಅಲ್ಲಿನ ಅಮಲ್ದಾರರೇ ಮುಂತಾದವರಲ್ಲಿ ಮೇ ಕರವಾದ ಮಾತುಗಳನ್ನು ಹೇಳಿ, ಹೆಡ್ ಮಾಸ್ಟರು ಸುಬ್ಬರಾಯಪ್ಪನವರ ಯಲ್ಲಿ 5-6 ದಿನ ಊಟಮಾಡಿಕೊಂಡಿದ್ದು, ತಾನೇ ಅಲ್ಲಿನ ಗರ್ಲ್ಸ್ ಹೆಡ್ ಮಾಸ್ಟರೆಂದು ನಟಿಸಿ, ತನ್ನ ರಜಾವಿನ ಕಾಲ ಕಳೆದ ಸಿಕ್ಕದೊ ಹೆಡ್ ಮಾಸ್ಟರ ಕೆಲಸಕ್ಕೆ ಬೆಂಗಳೂರಿಂದ ಹುಕುಂ ತರುತ್ತೇನೆಂದು ಹೇಳಿ ರಿಯಾದಂತೆ ತಿಳಿದುಬರುತ್ತದೆ ಈ ಮನುಷ್ಯನು ಮೋಸಗಾರನಾಗಿ ಕಾ ದರಿಂದ ವಾಚಕರು ಎಚ್ಚರಿಕೆಯಿಂದಿದ್ದು ಕಂಡರೆ ಅವನ ವಿಷಯದಲ್ಲಿ ಪೊ ಸಿಗೆ ರಿಪೋರ್ಟು ಮಾಡುವುದು ಆವಶ್ಯಕವೆಂದು ಸೂಚಿಸುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್.

[illegible] ಕಷ್ಟವು

ಅಯ್ಯಾ,

ಈ ಗ್ರಾಮದಲ್ಲಿ ಸುಮಾರು ಎರಡೂವರೆ ಸಾವಿರ ಪ್ರಜೆಗಳೂ, ಸುಮಾ ಮೂರೂವರೆ ಸಾವಿರ ಜಾನುವಾರುಗಳೂ ಉಂಟು ಈ ವರುಷದ ಅನಾ ಯಿಂದ ನಮ್ಮ ಗ್ರಾಮಕ್ಕೆಲ್ಲಾ ಒಳಾಧಾರವಾಗಿದ್ದ ಗ್ರಾಮದ ಕುಂಟೆ ಒಣಗಿ ಹೋಗಲು, ಈಗ ಪ್ರಜೆಗಳಾದ ನಮಗೂ, ನಮ್ಮ ಜಾನುವಾರುಗಳಿ ಇರುವ ನೀರಿನ ಅನಾನುಕೂಲತೆಯನ್ನು ಹೇಳತೀರದು ಊರು ಮನೆ, ತೋ ದ ಭಾವಿಗಳಲ್ಲಿ ಅಲ್ಪಸ್ವಲ್ಪ ಜಲವಿದ್ದರೂ, ಸ್ವಂತವಾದವರಿಗೇನೇ ಸಾ ರಿಂದ ಅನುಕೂಲವಿಲ್ಲದ ಬಹು ಭಾಗದ ಜನರು ನೀರಿಗಾಗಿ ಪೇಚಾಡುವ ಜಾನುವಾರುಗಳು ನೀರಿಲ್ಲದೆ ಅಥವಾ ಬುರುದೆ ನೀರನ್ನು ಕುಡಿದು ಸಾ ತ್ತಿರುವವು ಈ ನಮ್ಮ ಕಷ್ಟವನ್ನು ಅರ್ಜಿಗಳ ಮೂಲಕವೂ ಮುಖತಾ ಯಿಂದಲೂ ತಾಲ್ಲೂಕು ಅಧಿಕಾರಿಗಳಿಗೆ ನಿವೇದಿಸಿಕೊಂಡು ಇರುತ್ತೇವೆ ಗಿನ ನಮ್ಮ ಈ ಕಷ್ಟನಷ್ಟಗಳು ಅಧಿಕಾರಿಗಳಿಗೆಲ್ಲಾ ಮನಮುಟ್ಟಿ, ತಮ್ಮ ನಮ್ಮನ್ನು ಆಳುವ ಸ್ವಾಮಿಗಳು ದಯವಿಟ್ಟು ಶೀಘ್ರದಲ್ಲೇ ನಮ್ಮ ಗ್ರಾಮ ಅನುಕೂಲವಾದ ಭಾವಿಯನ್ನು ನಿರ್ಮಿಸಿ ಕೊಟ್ಟು, ನಮ್ಮನ್ನೂ ನಮ್ಮ ಜಾ ವಾರುಗಳನ್ನೂ ಕಾಪಾಡುವರೆಂದು ತುಂಬಾ ಆತುರದಿಂದ ನಿರೀಕ್ಷಿಸುತ್ತೇವೆ

ರೈತರು

ಕೊಪ್ಪ ತಾಲ್ಲೂಕು ಭಂಡಿಗಡಿ ಸ್ಕೂಲು

ಅಯ್ಯಾ,

ಈ ಊರಿನಲ್ಲಿ ಒಂದು ಸ್ಕೂಲ್ 1901 ನೇ ವರ್ಷ ಸ್ಥಾಪಿತವಾಯಿ 1909 ನೇ ಇಸವಿಯಲ್ಲಿ ಮಿ ಇಮಾಮ್ ಸಾಹೇಬರೆಂಬ ದೊಡ್ಡ ಮನುಷ್ಯ ಮುಂದಾಳಾಗಿ ನಿಂತು ಚಂದಾ ಹಣದ ಮೂಲಕ ಒಂದು ಯೋಗ್ಯವಾದ ಡವನ್ನು ಕಟ್ಟಿಸಿದರು ಈ ಕಟ್ಟಡಕ್ಕೆ ಸುಮಾರು 1,600 ರೂಪಾಯಿ ಯಿತು ಚಂದಾದಾರರ ವಾಗ್ದಾನದ ಪ್ರಕಾರ ಹಣ ವಸೂಲಾಗಿದೆ, ಕ್ಕೆಯಿಂದ ಸುಮಾರು 800 ರೂಪಾಯಿ ಬಿದ್ದಿರುತ್ತೆ ಚಂದಾ ಹಣ ನಿರೀಕ್ಷಣೆ ಇಲ್ಲದೆ ಕೆಲಸ ನಡಿಸಿದ್ದಕ್ಕಾಗಿ ಇವರನ್ನು ಎಷ್ಟು ಹೊಗ ತೀರದು ಸದರಿ ಹಣಕ್ಕಾಗಿ ಕೆಲವು ಚಂದಾದಾರರನ್ನು ತಗಾದೆ ಮಾ ತಾವು ಕೊಡುವುದಿಲ್ಲವಾಗಿ ನಿರಾಕರಿಸಿದರಂತೆ ಇದೇನನ್ಯಾಯ! ಆ ಮ್ಮ ಸಾಹೇಬರು 3-4 ದಾವಾ ನಡಿಸಿ ಡಿಕ್ರಿ ಕೂಡಾ ಪಡೆದಿರುತ್ತಾ ಇಂಥಾ ಧರ್ಮಕಾರ್ಯಕ್ಕೆ ವಾಗ್ದಾನ ಮಾಡಿ ನಿರಾಕರಿಸುವುದು ಯಾವ ಇನ್ನಾದರೂ ಉದಾರಿಗಳಾದ ಚಂದಾದಾರರು ಸದರಿ ಮ್ಮ ಸಾಹೇಬರವರಿಗೆ ತಮ್ಮ ಚಂದಾ ಮೊಬಲಗನ್ನು ಪಾವತಿ ಮಾಡಿ ಇನ್ನೂ ನಡೆಯಬೇಕಾ

...ವೃದ್ಧಿಗೆ ಮನೆಯೇ ಮೊದಲಾದ ಕಾಮಗಾರಿಗಳಿಗೆ ಸದರಿಯವರಿಗೆ ಉತ್ತೇಜನ ...ವಾಗಿ ಸಲ್ಲಿಸುತ್ತೇನೆ. ಮತ್ತು ಈಗ್ಗೆ ಸುಮಾರು ೫ ವರ್ಷಗಳ ...ಯಾಯ್ತು 50-55 ಜನ ಬಾಲಕರಿಂದ ತುಂಬಿರುವ ಈ ಸ್ಕೂಲಿಗೆ ಈ ವರ್ಷ ...ವಾಗಿ ಇನ್‌ಸ್ಪೆಕ್ಟರು ಮಾಸ್ಟರು ಮೊಕರರರು ಆಗಿರುತ್ತಾರಾಗಿ ತಿಳಿಸಲು ...ಪಡುತ್ತೇನೆ.

ಹಿತವಾದಿ.

ಹಾಸನದ ಗೋರೂರು ದೋಣೆಕಡುವು.

ಸ್ವಾಮಿ,

ಈ ಊರು ದೋಣೆಕಡುವು ೫ ವರ್ಷಕ್ಕೆ 3,151 ರೂಪಾಯಿ ಗುತ್ತಿಗೆಗೆ ...ದೆ. ಸರ್ಕಾರದವರ ಅಭಿಪ್ರಾಯವು ಪ್ರಯಾಣಿಕರಿಗೆ ಸುಖಕರವಾಗಿರಬೇಕೆಂಬುದೂ, ಅಧವಾ ಸರ್ಕಾರಕ್ಕೆ ಮುಖ್ಯವಲ್ಲವೆಂತಲೂ, ರೂಲ್ಸು ಪ್ರಕಾರ ...ತೆಗೆದುಕೊಂಡು ಪ್ರಯಾಣಿಕರನ್ನು ಸಕಾಯಿಸದೆ ಪ್ರತಿ ಬಾಬಿಗೂ ...ಫೋಯಿಲ್ ರಸೀದಿಗಳನ್ನು ಕೊಡಬೇಕೆಂತಲೂ ತಾಲ್ಲೂಕು ಅಮ ...ದಾರವರು ಹರಾಜು ಕಾಲದಲ್ಲಿ ಸಾರ್ವತ್ರಿಕ ಓದಿ ಹೇಳಿ ಅಪ್ಪಣೆ ಕೊಡಿಸಿ ...ದು. ಹಾಲಿ ನಡೆಯುತ್ತಿರುವ ಕಡುವಿನಲ್ಲಿ ಪದ್ಧತಿ ಹ್ಯಾಗಂದರೆ— ವಸೂಲಿ ...ವರು 3-4 ಜನ ಇವರು ಇಸಂ 1 ಕ್ಕೆ 1 ಆಣೆ ಆಗಾಯ್ತು. 1 ಆಣೆ ...ದ, ಗಾಡಿ ಒಂದಕ್ಕೆ ೯ ಆಣೆ ಆಗಾಯ್ತು 12 ಆಣೆ ವರಿವಿಗೂ ವಸೂಲು ಮಾಡುತ್ತಾರೆ. ಈ ಭಾಗದಲ್ಲಿ ತಿಳುವಳಿಕೆ ನೋಟೀಸ್ ಜಾರಿಯಲ್ಲಿಲ್ಲ. ಅಮ ...ದಾರರು ರಸೀದಿಯನ್ನು ಜಾರಿಯಲ್ಲಿ ತರಬೇಕೆಂದು ಅಪ್ಪಣೆ ಕೊಡಿಸಿದ್ದೇ ...ಯು ಆ ರೀತಿ ನಡೆಯುತ್ತಿದೆಯೋ ಎಂಬ ಅಂಶವನ್ನು ಗಮನಕ್ಕೆ ತಂದು ...ದಿರುವುದು ವ್ಯಸನಕರವಾಗಿದೆ. ಕೆಲವರು ತಮಗೆ ಕಡುವಿನಲ್ಲಿ ಉಂಟಾದ ...ಕಷ್ಟಗಳನ್ನು ಕುರಿತು ಮೇಲ್ಪಟ್ಟ ಆಫೀಸರಿಗೆ ಅರಿಕೆ ಮಾಡಿಕೊಂಡರೂ ...ದು ಗಮನಿಸದೆ ಇರುವದು ತುಂಬಾ ಶೋಚನೀಯವಾಗಿರುತ್ತದೆ. ಇನ್ನು ...ವರೂ ಮೇಲ್ಪಟ್ಟ ಆಫೀಸರ ದೃಷ್ಟಿಯು ಮನಸ್ಸು ದುಷ್ಟ ವಸೂಲ್ದಾರು ...ದ ಕಂಟ್ರಾಕ್ಟರ ಮೇಲೆ ಬೀಳುವುದರ ಮೂಲಕ ಪ್ರಯಾಣಿಕರ ತೊಂದ ...ರು ತಪ್ಪಬಹುದಾಗಿ ನಿರೀಕ್ಷಿಸುತ್ತೇನೆ.

ಈ ಊರಿನಲ್ಲಿ ಇಸ್ಪೀಟ್ ಪರೇಲ್ ಎಂಬುವ ಜೂಜಾಟವು ವಿರಾಮವಿಲ್ಲದೆ ...ಗಲು ರಾತ್ರಿ ನಡೆಯುತ್ತಾ ಇದೆ. ಇದರಿಂದ ಕನ್ನಾ ಕಳವು ಮೊದಲಾದದ್ದು ...ಸ್ವಚ್ಛವಾಗಿ ನಡೆಯುವದರಲ್ಲಿ ಸಂದೇಹವೇ ಇಲ್ಲ. ಸರ್ಕಾರದವರ ...ಸ್ತು ಕೊಂಚ ಕನಿಕರ ಮೊಯನಾಗಿರಬಹುದು. ಮುಂದೆ ಈ ದುಷ್ಕೃತದವರನ್ನು ...ದು ತಕ್ಕ ಬಂದೋಬಸ್ತು ಮಾಡಿಸುತ್ತಾರಾಗಿ ನಂಬುವ

ಹಿತಚಿಂತಕ.

ಚಾಮರಾಜನಗರದಲ್ಲಿ ಜೂಜಾಟವೂ ಕಳುವುಗಳೂ.

ಸ್ವಾಮಿ,

ಬೆಳಸು—ಈ ತಾಲ್ಲೋಕಿನಲ್ಲಿ ಮಳೆ ಇಲ್ಲದೆ ಕ್ಷಾಮ ಪ್ರಾಪ್ತವಾಗಿದೆ. ...ಬೋಗಗಳು ಆದುವು. ಇನ್ನೇಯೋ ಜೋರಾಗ ಮಳೆ ಇಲ್ಲವೇ ಇಲ್ಲ. ಕೆರೆ ...ಲ್ಲಿ ನೀರೇ ಇಲ್ಲ. ತುಂಬಾ ನೀರಿದ್ದ ಭಾವಿಗಳು ಸಹ ಬತ್ತಿಹೋಗುತ್ತಾ ...ವೆ. ಜೋಳದ ಬೆಳೆ ಕೆಲವು ಕಡೆ ಸುತರಾಂ ಆಗಲೇ ಇಲ್ಲ. ಕೆಲವು ಜಂಪು ...ಮೂಗಳಲ್ಲಿ ಸುಮಾರಾಗಿ ಆಗಿದೆ. ರಾಗಿ ಪೈರಿನ್ ಇದುವರಿಗೂ ಆಗಲೇ ...ಲ್ಲ. ಅದಿವ್ಯಾಮಳೆಯಲ್ಲಿ ಬಿತ್ತಿದವರ ಬೀಜವೇ ನಷ್ಟವಾಯಿತು. ರೂಪಾಯಿಗೆ ...ಸೇರು ಅಕ್ಕಿ, 14 ಸೇರು ರಾಗಿ ಮಾರುತ್ತೆ. ಇನ್ನುಮೇಲೆ ಇನ್ನೂ ಕಷ್ಟ ...ಬರುತ್ತದೆಂದು ನಿರೀಕ್ಷಿಸುತ್ತಾ ಇದ್ದಾರೆ. ಬಡಬಗ್ಗರ ಗೋಳು ಪ್ರಬಲವಾಗಿದೆ. ...ಕಳ್ಳತನಗಳು ಪ್ರಾರಂಭವಾಗಿವೆ.

ಜೂಜು, ಓರುಜನ ಆಟ—ಈ ಆಟವನ್ನು ನಾನು ನೋಡಿದೆನು. ಇದ ...ನೆಬದಳ ಜನರು ಕೆಟ್ಟುಹೋಗುತ್ತಾ ಇದ್ದಾರೆ. ಇಲ್ಲಿಗೆ ಸುಮಾರು ೬ ಮೈಲಿ ದೂರ ...ಅಳ್ಳಿ, ಮುಳ್ಳಳ್ಳಿ ಎಂಬ ಊರುಗಳಿವೆ. ಅಲ್ಲಿ ಈ ಜೂಜು ನಡೆಯು ...ದೆ. ಮಧ್ಯಾಹ್ನ ೨ ಘಂಟೆಗೆ ಪ್ರಾರಂಭಿಸಿ ಸಾಯಂಕಾಲ ೯ ಘಂಟೆವರಿಗೂ ನಡೆಯುತ್ತದೆ. ಸುತ್ತುಮುತ್ತಲಿನ ಹಳ್ಳಿಗಳವರೂ, ನಂಜನಗೂಡು, ಮೈಸೂರಿನವರೂ ಸಾವಿರಾರು ರೂಪಾಯಿಗಳನ್ನು ಕಟ್ಟಿಕೊಂಡು ಬರುತ್ತಾರಂತೆ. ಈ ಆಟದ ...ಒಬ್ಬನ ಕೈಯಲ್ಲಿ ಒಂದು ಬೋಕಿ ಬಿಲ್ಲೆ ಇರುತ್ತೆ. ಇದರ ಮೇಲೆ ...ದು ಕಾಸಿನ ಬಿಲ್ಲೆಗಳು ಇಟ್ಟಿರುತ್ತವೆ. ಇವನು ಇವೆರಡನ್ನೂ ಮೇಲಕ್ಕೆ ...ಸೆದ ಎರಡು ಬಿಲ್ಲೆಗಳೂ ತಲೆಗಳೇ ಬಿದ್ದರೆ ಗೆಲ್ಲುವದು, ಎರಡು ಬಿಲ್ಲೆಗಳೂ ...ಹುಗಳು ಬಿದ್ದರೆ ಸೋತರು. ಒಂದು ತಲೆ ಒಂದು ಅಕ್ಷರ ಬಿದ್ದರೆ ಆಟವಾ ...ಲ್ಲ; ತಿರಿಗಿ ಹಾಕಬೇಕು. ಈ ಬಿಲ್ಲೆಗಳನ್ನು ಹಾಕುವವನ ಸುತ್ತಲೂ ಬಹಳ ...ದಿ ದಂಡು ಕಟ್ಟುವವರು ಕೂತಿರುತ್ತಾರೆ. ಈ ಬಿಲ್ಲೆಗಳನ್ನು ಎಸೆಯುವವನೇ ...ಸ್ವರ ಹಣವನ್ನು ಶೇಖರ ಮಾಡಬೇಕಾಗಿದೆ. ಇವನಲ್ಲಿ ಎಷ್ಟು ಹಣವಿದೆ ...ಅಂದರೆ ನೂರೋ ಇನ್ನೂರೋ ಎಷ್ಟೋ, ತನ್ನ ಬಳಿ ಇರುವದನ್ನು ...ಇಟ್ಟುಕೊಂಡು ತನ್ನ ಸುತ್ತಲೂ ಇರುವವರಿಗೆ 10, 20, 50, 100, ಈ ರೀತಿ ...ಕ್ಕೆ ಕಟ್ಟಿರಿ ಅನ್ನುತ್ತಾನೆ. ಆಗ ಸುತ್ತಲೂ ಇರುವವರೂ ಸೋಲುತ್ತೆಂದು ...ಟ್ಟುವವರು ಕೆಲವರು, ಗೆಲ್ಲುತ್ತೆಂದು ಕಟ್ಟುವವರು ಕೆಲವರು. ಗೆದ್ದರೆ ...ಕ್ಕೆಂದು ಹೇಳಿದವರ ರೂಪಾಯಿಗಳನ್ನು ಇವನು ಬಾಚಿಕೊಂಡು ಗೆಲ್ಲ ...ದು ಕಟ್ಟಿದ್ದವರು ಎಷ್ಟೋ ಅದನ್ನು ಅವರವರಿಗೆ ಇವನು ಕೊಡಬೇಕು. ...ಈ ಪಕ್ಷವಲ್ಲದೆ ಬೇರೆ ನೂರಾರು ಜನರು ಸುತ್ತುಮುತ್ತಲೂ ಗೆಲುವು, ...ಸೋಲುಗಳಿಗೆ ತಾವುತಾವೇ ಬಾಜಿ ಹಣಗಳನ್ನು ಕಟ್ಟಿಕೊಂಡಿರುತ್ತಾರೆ. ಈ ...ಸೋಲೂ ಗೆಲುವೂ ಆದ ಕೂಡಲೆ ಇತ್ತ ಕಡೆ ಇವರಿವರು ತೀರ್ಮಾನಿಸಿಕೊಳ್ಳುತ್ತಾರೆ. ಇದು ಮೇಲ್ಪಂಕ್ತಿ. ಇದರಲ್ಲಿ ಈ ಬಿಲ್ಲೆಗಳನ್ನು ...ಎಸೆಯುವವನು ಒಂದೊಂದು ವೇಳೆ ಚಮತ್ಕಾರ ಮಾಡಿ ಈ ೨ ಕಾಸಿನ ಬಿಲ್ಲೆಗಳನ್ನು ಯಾರಿಗೂ ತಿಳಿಯದ ಹಾಗೆ ಸುಮಾರಾಗಿ ತಪ್ಪು ಮಾಡಿದ್ದು ಪದೇಪದೇ ...ಗೊತ್ತಾದರೆ ಈ ಮೋಸವನ್ನು ಕಂಡುಹಿಡಿದು ಜಗಳಗಳು ಪ್ರಾರಂಭಿಸುತ್ತವೆ. ...ಕೂಗಾಟಗಳೂ, ಮಾರಾಮಾರಿಗಳೂ, ಸೂರೆಗಳೂ ನಡೆಯುತ್ತವೆ.

ಈ ಜೂಜಾಟದಿಂದ ಅನೇಕರು ಹಾಳಾಗುತ್ತಾ ಇದ್ದಾರೆ. ನಾನಾ ವಿಧವಾದ ...ಕಳವುಗಳು ಜರುಗುತ್ತಾ ಇವೆ. ಕೆಲಸಕಾರ್ಯಗಳ ಮೇಲೆ ಗಮನವಿಲ್ಲದೆ ...ದೊಡ್ಡವರ ವಾಕ್ಯವನ್ನು ಗಣ್ಯಗೆ ತಾರದೆ ತುಂಬಾ ಅನ್ಯಾಯಕರ ...ದೆ. ಮನೆಗಳಲ್ಲಿ ಹೆಂಡತಿಯರ, ಅಕ್ಕತಂಗಿಯರ, ಮಕ್ಕಳ ಒಡವೆ ವಸ್ತು ...ಗಳು, ಕಾಳುಗಳೂ, ಸೀರೆಗಳೂ, ಪಾತ್ರೆಗಳೂ ಕಳುವಾಗುತ್ತಾ ಇವೆ. ...ಹಳ್ಳಿಗಳಲ್ಲಿ ಕಳ್ಳತನಗಳು ಪ್ರಬಲವಾಗಿವೆ. ಮೊನ್ನೆ ದಿನ ಕೊಳ್ಳೇಗಾಲದ ವ್ಯಾಪಾರಿ ಬರುತ್ತಿದ್ದರೆ ಅವನನ್ನು ಹೊಡೆದು 300 ರೂಪಾಯಿ ಕಿತ್ತುಕೊಂಡರೆಂತೂ, ಅವನು ಯಾವ ರಿಪೋರ್ಟೂ ಮಾಡದೇ ನೆಟ್ಟಗೆ ತನ್ನ ಊರಿಗೆ ಹೊರಟುಹೋದನೆಂದೂ ಹೇಳುತ್ತಾರೆ. -1 ಜನರು ಬಂದು ತಮ್ಮ ತಮ್ಮ ಮನೆಗಳಲ್ಲಿ ಇಂಥಿಂಥಾ ವಸ್ತುಗಳು ಕಳುವಾದವೆಂದು ಹೇಳಿದರು. ಮೊನ್ನೆ ಒಬ್ಬನು ಒಂದು ಕುದುರೆಯನ್ನು ಕದ್ದಿದ್ದನು. ಪೋಲೀಸಿನವರು ಹಿಡಿದಿದ್ದಾರೆ. ಕೆಲವು ದಿನಗಳ ಹಿಂದೆ ಕಾಫಿ ತೋಟದ ಮೆ|| ಮಾರಿಸ್ ಸಾಹೇಬರ ಬಾಬತು 1,000 ರೂಪಾಯಿನ ನೋಟುಗಳನ್ನು ಅಂಚೆಯ ಆಳು ನಗರಕ್ಕೆ ತರುತ್ತಿರುವಾಗ್ಗೆ ಅವನನ್ನು ಹಗಲುಹೊತ್ತೇ ದಾರಿಯಲ್ಲಿ ಹೊಡೆದು ಕಿತ್ತುಕೊಂಡು ಹೋದರು. ಅವರು ಸಿಕ್ಕಿದರೋ ಇಲ್ಲವೋ ಇಳಿಯಲಿಲ್ಲ. ಇನ್ನೂ ಅನೇಕ ಅನಾಹುತಗಳೂ, ಕೊಲೆಗಳೂ ನಡೆಯುವದರಲ್ಲಿಯೂ, ಅನೇಕ ಸಂಸಾರಗಳು ಹಾಳಾಗುವದರಲ್ಲಿಯೂ ಏನೂ ಸಂದೇಹವಿಲ್ಲ. ಒಬ್ಬನು 200-300 ರೂಪಾಯಿ ಗೆದ್ದು ತೆಗೆದುಕೊಂಡು ಹೋಗುವಾಗ ಮಾರ್ಗದಲ್ಲಿ ಅವನನ್ನು ಅಡ್ಡಗಟ್ಟಿ ಹೊಡೆದು ಕಿತ್ತುಕೊಳ್ಳಲು ಏನೂ ಅಡ್ಡಿಯಿಲ್ಲ. ಪಾಲುಗಳೂ, ರೇಷ್ಮೆವಸ್ತ್ರಗಳೂ ಸುಲಭವಾಗಿ ಕೊಂಡುಕೊಳ್ಳುವವರಿಗೆ ಅದೇ ಸ್ಥಳ. ಒಂದು ಮಧ್ಯಾಹ್ನಕ್ಕೆ ಆ ಸ್ಥಳದಲ್ಲಿ 30-40 ರೂಪಾಯಿನ ತಿಂಡಿ ಪದಾರ್ಥಗಳು ಬಿಕರಿಯಾಗುವಲ್ಲಿ ಅಲ್ಲಿ ಕೂಡುವ ಜನವೆಷ್ಟೆಂದು ವಾಚಕರೇ ಊಹಿಸಬಹುದು. ಸರ್ಕಾರದವರು ಒಬ್ಬಿಬ್ಬರು ಪೋಲೀಸಿನವರನ್ನು ಕಳುಹಿಸಿದರೆ ಸಾಲದು. ಅವರು ಕೈಬೆಚ್ಚಗೆ ಮಾಡಿಕೊಂಡು ಬರಬಹುದು. ಆಫೀಸರುಗಳು ನೆಟ್ಟಗೆ ಸಿಬ್ಬಂದಿ ಸಮೇತ ಅಲ್ಲಿಗೆ ದಯಮಾಡಿಸಿ ಅವರನ್ನು ಹಿಡಿದು ತಂದು ಶಿಕ್ಷೆ ಮಾಡಿದರೆ ಮಹದುಪಕಾರವಾದೀತು, ಅಥವಾ ಆಯಾ ಪಟೇಲರು ಹಿಡಿದುತರುವಂತೆ ಅವರಿಗೆ ಅಧಿಕಾರ ಕೊಟ್ಟರೆ ಅವರು ಹಿಡಿತರುತ್ತಾರೆ. ನಮ್ಮ ಅಮಲ್ದಾರರವರೂ, ಇನ್‌ಸ್ಪೆಕ್ಟರ್, ಜಮೀನ್ದಾರರುಗಳೂ ಸಾಹಸಿಗಳೂ, ನೆಮ್ಮದಿಯನ್ನು ಕಾಪಾಡುವವರೂ ಆಗಿರುವದರಿಂದ ಈ ರೀತಿ ಬಂದೋಬಸ್ತು ಮಾಡಿಸಿ ಆ ಗುಂಪನ್ನು ಇನ್ನುಮುಂದೆ ಎಂದೆಂದಿಗೂ ಸೇರದಂತೆ ಚದರಿಸುವರೆಂದು ನಂಬಿದ್ದೇನೆ. ಈ ಅನ್ಯಾಯವನ್ನು ನೋಡಿಯೂ, ಕೇಳಿಯೂ ನನಗೆ ತುಂಬಾ ಸಂಕಟವಾಗಿ ಬರೆದಿರುತ್ತೇನೆ. ಕೆಲವು ಹೆಂಗಸರು "ಮನೆ ಮಾರಿದನಲ್ಲಾ" ಎಂದೂ, "ಈ ಆಟದ ಮನೆ ಹಾಳಾಗಲಿ" ಎಂದೂ ಪ್ರಲಾಪಿಸುವದನ್ನು ಕೇಳಿದೆನು.

ಪ್ರತ್ಯಕ್ಷದರ್ಶಿ.

ತಾಲ್ಲೋಕು ವರ್ತಮಾನಗಳು.

ಅರಸೀಕೆರೆ ತಾ|| ಕಲ್ಲುಗುಂಡಿ.—ಈ ಗ್ರಾಮದಲ್ಲಿ ವಿಶೇಷ ಮಳೆ ಬಂದು ಪೈರೆಲ್ಲಾ ಕೇವಲ ತುಂಬಾ ಚೆನ್ನಾಗಿಯಲ್ಲಿದೆ—ಈ ಗ್ರಾಮದಿಂದ ಕಡೂರಿಗೆ ಸಂತೆಗೆ ಹೋಗತಕ್ಕ ದಾರಿ ತೋಟದಲ್ಲಿ ಒಂದು ಸೀನೀರಿನ ಭಾವಿಯು ಪ್ರಯಾಣಿಕರು ದಾಹವನ್ನು ಹಿಂಗಿಸಿಕೊಳ್ಳಲು ತುಂಬಾ ಅನುಕೂಲವಾಗಿತ್ತು. ಭಾವಿಯ ಮಾಲೀಕರು ಪಟೇಲ್ ಮಲ್ಲೇಗೌಡರು ಎಳನೀರಿನ ಮೊಟ್ಟೆಗಳನ್ನು ಹಾಕಿ ನೀರನ್ನು ಕುಡಿಯಲು ಅನುಕೂಲವಿಲ್ಲದಂತೆ ಮಾಡಿರುವುದು ತುಂಬಾ ಶೋಚನೀಯವಾಗಿದೆ. ಈಗಲಾದರೂ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಾರೆಂತ ನಂಬಿದೆ.—ಈ ತಾಲ್ಲೂಕಿನಲ್ಲಿ ಕಳೆದ 1 ನೇ ತಾ ದಸರಾ ಅಸೆಂಬ್ಲಿಗೆ ಹೋಗತಕ್ಕ ಮೆಂಬರುಗಳ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ದೊಡ್ಡಮೇಟಿಕುರ್ಕೆ ಜಮೀನ್ದಾರ್ ಮು|| ಎಂ. ಎಚ್. ಹರಿಯಣ್ಣನವರನ್ನು ಮೆಂಬರಾಗಿ ಚುನಾಯಿಸಿದುದು ಪ್ರಜೆಗಳಿಗೆ ಬಹಳ ಸಂತೋಷವನ್ನುಂಟುಮಾಡಿದೆ.—ಈ ಗ್ರಾಮಕ್ಕೆ ಸಮೀಪವಾದ ಕಬ್ಬಳಿಯಲ್ಲಿ ಎಂಬ ಗ್ರಾಮದಲ್ಲಿ ಒಂದು ಪರಸ್ಪರಸಹಾಯಕ ಸಂಘವು ಏರ್ಪಟ್ಟಿರುವುದು ಸ್ತೋತ್ರಾರ್ಹವಾದದ್ದು. ಈ ಸಂಘದ ಸೆಕ್ರೆಟರಿಗಳಾದ ಶ್ರೀ ಲಕ್ಷ್ಮೀನಾರಾಯಣರು ತುಂಬಾ ಮುತುವರ್ಜಿ ವಹಿಸಿ ಸಂಘವನ್ನು ಅಭಿವೃದ್ಧಿಗೆ ತರುತ್ತಿದ್ದಾರೆ.

ಸ್ವಂತರಾತ್ರಿ.—ನಾಲ್ಕೈದು ವಾರಗಳಿಂದ ಈ ಪ್ರಾಂತ್ಯ ಮಳೆ ಇಲ್ಲ. ಬಿಸಿಲು ಜೋರಾಗಿದೆ. ಗಾಳಿಯು ಬಹಳ. ಎರಡು ವಾರಗಳ ಕೆಳಗೆ ಮಳೆ ಮೋಡಗಳಾಡುವದೂ ಗುಡುಗು ಬೀಳುವದೂ ನೋಡಿ ಮಳೆ ನಿರೀಕ್ಷಣೆಯಿಂದ ರೈತರು ರಾಗಿ ಅವರೆ ಬಿತ್ತಿದರು. ಇದುವರೆಗೆ ಮಳೆ ಇಲ್ಲದೆ, ಹುಟ್ಟಿದ ಪೈರೆಲ್ಲಾ ಒಣಗುವ ಗತಿಯಾಯಿತು.—ಕೆರೆಯ ನೀರೆಲ್ಲಾ ಇಂಗುತ್ತಾ ಬಂದು ಅರೇಳು ಅಡಿಯಷ್ಟು ಉಳಿದಿರುತ್ತೆ. ಗದ್ದೆಗಳಿಗೆ ನೀರು ಬಿಡುವದಾದರೆ ಒಂದೆರಡು ವಾರಕ್ಕೆ ನೀರು ಸಾಕಾಗಲಾರದೆಂದು ಹೇಳುವರು.—ಕೆಳ ಪೇಟೆಯ ಜನರಿಗೆ ಈ ಕೆರೆಯ ನೀರೂ, ಮೇಲ್ಪೇಟೆಯ ಜನರಿಗೆ ಹಾಸನದ ಭಾವಿ ನೀರೂ ಆಧಾರವಾಗಿರುತ್ತೆ. ಕೆರೆಯ ನೀರಾದರೋ ಸ್ವಲ್ಪ ಸಂಕೋಚದಿಂದ ದನಗಳಿಂದಲೂ, ಹಕ್ಕಿ ಪಕ್ಷಿ ದನಕರುಗಳಿಂದಲೂ ಕಡುತ್ತಿದೆ. ಸಾಲದ್ದಕ್ಕೆ ರಾತ್ರಿಯೆಲ್ಲಾ ವಿಸ್ತರ ಹಾವಳಿಯಿಂದ ನೀರು ಮೋರಿಯುವ ಭಾಗದಲ್ಲಾ ಕೇರಾಗಿ ಪ್ರಜೆಗಳ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಆದರೂ ಮ್ಯುನಿಸಿಪಾಲಿಟಿಯು ತನಿಖೆ ಇಲ್ಲದ್ದು ವ್ಯಸನಕರವಾಗಿದೆ. ಸ್ಯಾನಿಟರಿ ಇನ್‌ಸ್ಪೆಕ್ಟರ ನಿಗಾವಣೆಯಿಂದ ಕೆರೆಯ ಆ ನೀರನ್ನು ಕುಡಿಯದೆ ಇರುವುದೇ ಪ್ರಜೆಗಳಿಗೆ ಕ್ಷೇಮ. ಈ ನೀರು ಬಿಟ್ಟರೆ ಬಡ ಜನರಿಗೆ ಜಲಾಶ್ರಯವಿಲ್ಲ. ಊರು ಬೀದಿಗಳಲ್ಲಿ ಜಲವಿಲ್ಲದೆ ಜನರು ಅಲ್ಲಲ್ಲಿನ ಬಾವಿಗಳಿಗೆ ಹೋಗಿ, ಮಾನಹೀನ ಪಶುಗಳನ್ನೂ ಕೇಳಬೇಕಾಗಿದೆ. ಮೇಲ್ಪೇಟೆಯವರಿಗೆ ಅನ್ಯಾಯವಾಗಿದ್ದು ಪಾಳಿನ ... ಒಣಗಿಹೋಗಿದೆ. ಸರ್ಕಾರದವರು ಹೊಸದಾಗಿ ತೆಗಿಸಿ ಅರ್ಧಾಂತರವಾಗಿ ಬಿಟ್ಟಿರುವ ಭಾವಿಯಲ್ಲಿನ ಹೂಳನ್ನು ತೆಗಿಸಿದರೆ ಸ್ವಲ್ಪ ಜಲಾಶ್ರಯವಾಗಬಹುದು. ಊರಿನ ತೆಂಕಣ ಭಾಗದಲ್ಲಿ ಸರ್ಕಾರದವರು ಮೊನ್ನೆ ತಾನೇ ತೆಗಿಸಿಕೊಟ್ಟ ಭಾವಿಯಿಂದ ಪೇಟೆಹಳ್ಳಿಯ ಮೊದಲಾದವರಿಗೆ ಅನುಕೂಲವೂ ಕ್ಷೇಮವೂ ಆಗಿರುವುದು ತುಂಬಾ ಸಂತೋಷವಾಗಿದೆ. ಅದರಂತೆ ಕೆಳಪೇಟೆ ಮೇಲ್ಪೇಟೆಯ ಪ್ರಜೆಗಳಿಗೂ ಅನುಕೂಲವಾದ ಒಂದೆರಡು ಜಲಾಶ್ರಯಗಳನ್ನು ನಿರ್ಮಿಸಿಕೊಟ್ಟಲ್ಲಿ ಮಹದುಪಕಾರವಾದೀತು.

ನಾಗಮಂಗಲ.—ಈ ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಬಿತ್ತಿದ ಪೈರೆಲ್ಲಾ ಒಣಗುತ್ತಿದೆ. ಕೆರೆಗಳಲ್ಲಿ ನೀರಿಲ್ಲ. ದನಗಳಿಗೆ ಮೇವೂ ನೀರೂ ಇಲ್ಲದೆ ಬಹಳ ತೊಂದರೆಯಾಗಿದೆ. ದಿನಸಿ ಧಾರಣೆ ದಿನೇ ದಿನೇ ಧಡಾರಾಗುತ್ತಿದೆ. ಬಡಜನಗಳ ಜೀವನವು ಬಹಳ ಶೋಚನೀಯವಾಗಿದೆ. ರಾಗಿ ರೂಪಾಯಿಗೆ 14 ಸೇರೂ, ಅಕ್ಕಿ 7½ ಸೇರೂ ಮಾರುತ್ತೆ.—ಈ ತಾಲ್ಲೂಕು ಚಿಕ್ಕದ ಗ್ರಾಮಸ್ಥರು ತಮ್ಮ ಗ್ರಾಮಕ್ಕೆ ಸರ್ಕಾರದವರು ಒಂದು ಸ್ಕೂಲ್ ಮನೆ ನಿರ್ಮಾಣಮಾಡಿಸಿಕೊಡಬೇಕೆಂದೂ, ಹಾಲಿ ಸ್ಕೂಲ್ ನಡೆಯುವ ಕಲ್ಲುಮಂಟಪವು ಸ್ಕೂಲಿನ ಅಭಿವೃದ್ಧಿಗೆ ಕುಂದಕವೆಂದೂ, ಈ ಕಟ್ಟಡಕ್ಕಾಗಿ ರೈತರಿಂದ ವಸೂಲಾಗಿರುವ 150 ರೂಪಾಯಿ ಸರ್ಕಾರಕ್ಕೆ ಕೊಡುತ್ತೇವೆಂದೂ, ಈ ಹಣಗಳನ್ನು ತಾಲ್ಲೂಕು ಟ್ರೆಜರಿಗೆ ಸ್ಕೂಲ್ ಮನೆಗೋಸ್ಕರ ಡಿಪಾಜಿಟ್ಟು ತೆಗೆದುಕೊಳ್ಳಲು ಅಮಲ್ದಾರರವರಿಗೆ ಯಾದಿ ಬರಸಬೇಕೆಂದೂ ವಿದ್ಯಾಭ್ಯಾಸದ ಇಲಾಖಾ ಆಫೀಸರವರ ಸನ್ನಿಧಿಗೆ ಸ್ಕೂಲ್ ಮೆಂಬರುಗಳು ರಿಕಾರ್ಡು ನಡಿಸಲಾಗಿ, ಡೆಪ್ಯುಟಿ ಇನ್‌ಸ್ಪೆಕ್ಟರವರು ಅಮಲ್ದಾರರಿಗೆ ಹಣ ಡಿಪಾಜಿಟ್ಟು ತೆಗೆದುಕೊಳ್ಳಲು ಯಾದಿ ಬರೆಸಿ ಆ ಬಗ್ಗೆ ಸ್ಕೂಲ್ ಮೆಂಬರುಗಳಿಗೆ ತಿಳುವಳಿಕೆ ಕೊಟ್ಟಾಗ್ಯೂ ಟ್ರೆಜರಿಗೆ ಹಣ ಇರಸಾಲ್ಮಾಡದೆ ತಟಸ್ಥರಾಗಿದ್ದಾರೆ. ಈಗಲಾದರೂ ದಯವಿಟ್ಟು ಜಾಗ್ರತೆ ರೈತರಿಂದ ವಸೂಲಾದ ಹಣ ಟ್ರೆಜರಿಗೆ ಇರಸಾಲ್ಮಾಡಿ ಸ್ಕೂಲ್ ಮನೆ ತಯಾರ್ಮಾಡಿಸಿಕೊಂಡು ತಮ್ಮ ಗ್ರಾಮದ ಸ್ಕೂಲ್ ಅಭಿವೃದ್ಧಿಗೆ ತಂದುಕೊಂಡಾರೆಂತ ನಂಬಿದೇನೆ.— ಚಿಕ್ಕದಲ್ಲಿ 1,062 ಪ್ರಜಾಸಂಖ್ಯೆ ಇದೆ. ಈ ಗ್ರಾಮವನ್ನು ಯೂನಿಯನ್ ಮಾಡಿಕೊಟ್ಟು ಒಂದು ನೇಟೀವ್ ಆಸ್ಪತ್ರೆ ಕಲ್ಪಿಸಿಕೊಡಬೇಕೆಂದು ಗ್ರಾಮಸ್ಥರು ಗೌರ್ನಮೆಂಟಿನವರನ್ನು ನಾಲ್ಕು ವರುಷದಿಂದ ಕೇಳಿಕೊಂಡಾಗ್ಯೂ ಗ್ರಾಮಸ್ಥರ ಕೋರಿಕೆ ನೆರವೇರಲಿಲ್ಲ. ಗೌರ್ನಮೆಂಟಿನವರು ಇನ್ನಾದರೂ ನೆರವೇರಿಸಿ ಕೊಟ್ಟಾರೆಂತ ನಂಬಿದೇನೆ. ರಸ್ತೆಗೂ, ಚಿಕ್ಕಕ್ಕೂ ಎರಡು ಫರ್ಲಾಂಗ್ ದೂರ ಇದೆ. ಗ್ರಾಮದಿಂದ ಹೈರೋಡಿಗೆ ರಸ್ತೆ ಸರಿ ಇಲ್ಲದ್ದರಿಂದ ಆಫೀಸರುಗಳು ಸುಲಭವಾಗಿ ಗ್ರಾಮಕ್ಕೆ ಬಂದು ಹೋಗುವದಕ್ಕೂ, ಭರ್ತಿ ಗಾಡಿಗಳ ಸಂಚಾರಕ್ಕೂ, ಪ್ರಯಾಣಿಕರಿಗೂ ಬಹಳ ತೊಂದರೆ. ಈ ಗ್ರಾಮದಲ್ಲಿ ಸಂತೆ ನಡೆಯುತ್ತೆ. ಯೂನಿಯನ್ ಆಗುವದರಿಂದ ಈ ಕೊರತೆಗಳೆಲ್ಲಾ ನಿವಾರಣೆಯಾಗುವವೆಂತ ನಂಬಿದೇನೆ.

ಹೊಸಹಳ್ಳಿ.—ಇಲ್ಲಿನ ಅಮಲ್ದಾರ್ ಮೆ|| ಎಂ. ಎಸ್. ಹಯಗ್ರೀವರಾಯರಿಗೆ ವರ್ಗವಾದ ವರ್ತಮಾನವು ಹುಟ್ಟಿದಂದಿನಿಂದ ಅವರು ಪ್ರಯಾಣ ಮಾಡಿದ ತಾ 7 ರ ವರಿವಿಗೂ ತಪ್ಪದೆ ಪ್ರತಿದಿನವೂ ಅವರಿಗೆ ಒಬ್ಬೊಬ್ಬರ ಮನೆಯ ಭೋಜನವು ನಡೆಯುತ್ತಿತ್ತು. ಕೆಲವು ಗ್ರಾಮಾಂತರಗಳಲ್ಲಿಯೂ ಕೂಡ ಔತಣಗಳನ್ನು ಮಾಡಿಸಿದರು. ಇಷ್ಟೇ ಅಲ್ಲದೆ ನೌಕರರೂ, ಇತರ ಮುಖ್ಯಸ್ಥ ಜನಗಳೂ ಸೇರಿ ಕಳೆದ ತಾ 1 ನೇ ಭಾನುವಾರ ಇಲ್ಲಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಇವರಿಗಾಗಿ ಒಂದು ಭಾರಿ ಔತಣವನ್ನು ಮಾಡಿಸಿದರು. ಮಧ್ಯಾಹ್ನ ಹರಿಕಥೆಯಾದನಂತರ ಮೆ|| ಹಯಗ್ರೀವರಾಯರು ಈ ತಾಲ್ಲೋಕಿನಲ್ಲಿದ್ದ ಕಳೆದ 3½ ವರ್ಷದಲ್ಲಿ ಇವರಿಂದ ಜನಗಳಿಗೆ ಉಂಟಾದ ಮಹದುಪಕಾರವನ್ನೂ ಇವರ ಅಳ್ತಿಕೆಯ ವಿಚಕ್ಷಣೆಯನ್ನೂ ಕುರಿತು ಶಿರಸ್ತೇದಾರ್ ಮೆ|| ಎ. ವಿ. ರಂಗಾದ್ರ್ಯಯ್ಯಂಗಾರ್ರವರು ಒಂದು ಅಡ್ರಸ್ಸನ್ನು ಓದಿದರು. ಅಮಲ್ದಾರರವರು ಈ ತಾಲ್ಲೋಕು ಪ್ರಜೆಗಳಲ್ಲಿ ತಮಗಿರತಕ್ಕ ವಿಶ್ವಾಸವನ್ನು ಸಂತೋಷಪೂರ್ವಕವಾದ ಕೆಲವು ಮಾತುಗಳಿಂದ ವ್ಯಕ್ತಪಡಿಸಿದ ತರುವಾಯ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟಿತು. ರಾತ್ರಿ ಬಾಣ ಬಿರುಸು ವಾಳಮೇಳಗಳೊಂದಿಗೆ ನೀಲಕಂಠೇಶ್ವರಸ್ವಾಮಿ ದೇವರ ಉತ್ಸವದ ಕೂಡ ಊರಿನಲ್ಲೆಲ್ಲಾ ಮೆರವಣಿಗೆಯೂ, ಸತ್ರದಲ್ಲಿ ಮನೋಹರವಾದ ಪಾಂಡುವಿಜಯವೆಂಬ ನಾಟಕವೂ ಬಹು ವಿಜೃಂಭಣೆಯಿಂದ ನಡೆದವು. ನಾಟಕಾನಂತರದಲ್ಲಿ ಸಂಘದವರು ಅಮಲ್ದಾರರವರ ಗುಣಕಥನವನ್ನು ಮಾಡಿದರು. ಈ ಪ್ರಾಂತ್ಯ ಪಂಜುಗಳಿಂದ ಉಂಟಾಗಿದ್ದ ಭೀತಿಯ ನಿವಾರಣೆಗಾಗಿ ಇವರು ಏರ್ಪಡಿಸಿದ್ದ ಗಸ್ತಿನ ನಿಬಂಧನೆಯು ಜನಗಳ ನೆಮ್ಮದಿಗೆ ಬಹಳ ಅನುಕೂಲವಾಗಿತ್ತು. ಅಧಿಕಾರಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಪಟ್ಟ ಕಾಲದಲ್ಲಿ ಈ ರೀತಿ ನಡೆಯತಕ್ಕದ್ದು ಪದ್ಧತಿಯಾಗಿರುತ್ತೆಂದು ಎಣಿಸಬಾರದು. ನಿಜವಾಗಿಯೂ ಇವರ ಶಕ್ತಿಯೂ, ಪ್ರಜಾವಾತ್ಸಲ್ಯವೂ, ಗುಣವೂ ಸ್ತೋತ್ರಾರ್ಹವಾಗಿರುತ್ತವೆ. ಇವರು ಪ್ರಯಾಣಮಾಡಿದ ತಾ 7 ನೇ ರಾತ್ರಿ ತಾಳಮೇಳಗಳೊಡನೆ ಬಹಳ ಮಂದಿ ಬಹುದೂರ ಇವರ ಕೂಡ ಹೋಗಿ ತಮ್ಮ ಭಕ್ತಿವಿಶ್ವಾಸಗಳನ್ನು ತೋರ್ಪಡಿಸಿ ಅಪ್ಪಣೆಪಡೆದು ಅವರನ್ನಗಲಿದ ವ್ಯಸನದೊಡನೆ ಹಿಂತಿರುಗಿ ಬಂದರು. ಈಗಲೂ ಎಲ್ಲಿ ನೋಡಿದರೂ ಜನಗಳಲ್ಲಿ ಆ ಅಮಲ್ದಾರರದೇ ಪ್ರಸ್ತಾಪ. ಹಾಲಿ ಇಲ್ಲಿಗೆ ವರ್ಗಪಟ್ಟು ಬಂದಿರುವ ಅಮಲ್ದಾರರವರು ಇದೇ ರೀತಿ ಜನಗಳ ವಿಶ್ವಾಸಕ್ಕೆ ಪಾತ್ರರಾದಾರೆಂದು ನಿರೀಕ್ಷಿಸುತ್ತೇವೆ.

ಅನೇಕಲ್ ತಾ|| ದೊಮ್ಮಸಂದ್ರ.—ಈ ಪ್ರಾಂತ್ಯ ಮಳೆ ಇಲ್ಲದೆ ರೈತರು ಬಹಳ ತಹತಹಪಡುತ್ತಿದ್ದರು. ನೆನ್ನೆ ಶನಿವಾರದ ರಾತ್ರಿ ಅರ್ಧ ಹದ ಮಳೆ ಬಂದು ರೈತರಿಗೆ ತುಂಬಾ ಸಂತೋಷವಾಗಿ ಮುಂದೆ ಮಳೆ ಕ್ರಮವಾಗಿ ನಡೆಯುವದೆಂಬ ಧೈರ್ಯದಿಂದ ಹೊಲಗಳನ್ನು ಬಿತ್ತುವದರಲ್ಲಿದ್ದಾರೆ.—ನಮ್ಮ ಸರ್ಕಾರದವರು ಸಂಸ್ಥಾನದ ಮಳೆ ರೈಲ್ ಕಂಪನಿಯಿಂದ ದೊಡ್ಡ ಸ್ಥಳಗಳನ್ನು ಕೂಡಿಸಬೇಕೆಂದು ಉದ್ಯುಕ್ತಪಟ್ಟು ಪ್ರಾರಂಭದಲ್ಲಿ ಅತಿ ಅವಶ್ಯಕವಾದ ಸ್ಥಳಗಳಿಗೆ ರೈಲು ಹಾಕಿ ನಂತರ ಮಿಕ್ಕ ಸ್ಥಳಗಳ ವಿಷಯ ಆಲೋಚನೆ ಮಾಡುವವರಾಗಿದ್ದಾರೆಂಬುವದು ಸರ್ವರಿಗೂ ವಿದಿತವಾಗಿದೆ. ಪ್ರಕೃತ ಹೊಸೂರು ಜೋಳೂರಿಗೆ ಸಂಘಿಸುವ ರೈಲ್ ರಸ್ತೆಯು ಆನೇಕಲ್ ಡಿಸ್ಟ್ರಿಕ್ಟುಗಳ ಮಾರ್ಗವಾಗಿ ಹೋಗುವಂತೆ ಆಲೋಚನೆಯಲ್ಲಿದೆ ಎಂದು ಹೇಳುತ್ತಾರೆ. ಹೀಗೆ ಮಾಡುವುದಕ್ಕೆ ಬದಲು ಈ ರೈಲ್ ರಸ್ತೆಯು ಅತ್ತಿಬೆಲೆ, ಚಂದಾಪುರ ಮಡಿವಾಳಗಳ ಮಾರ್ಗವಾಗಿ ಹೋಗುವುದಾದರೆ ಬಹಳ ಪ್ರಯೋಜನವಾಗಿ ಕಂಡುಬರುತ್ತೆ. ಅತ್ತಿಬೆಲೆ ಗ್ರಾಮವು ಆನೇಕಲ್ ಸರ್ಜಾಪುರ, ದೊಮ್ಮಸಂದ್ರ, ಚಂದಾಪುರ, ಬಿದರುಗುಪ್ಪೆ, ಈ ಪ್ರಾಂತ್ಯದಲ್ಲಿರುವ ಅತಿ ಮುಖ್ಯ ಗ್ರಾಮಗಳಿಗೆಲ್ಲಾ ಮಧ್ಯಸ್ಥವಾಗಿರುವುದರಿಂದಲೂ, ರೈಲ್ ಇಲ್ಲದೇನೇ ಅನೇಕ ವ್ಯಾಪಾರಸ್ಥರು ಈ ಮಾರ್ಗವಾಗಿ ಬಹಳ ಕಷ್ಟದಿಂದ ತಮ್ಮ ಸರಕುಗಳನ್ನು ಈ ಪ್ರಾಂತ್ಯದ ಇತರ ಸ್ಥಳಗಳಿಗೆ ಸಾಗಿಸುತ್ತಿರುವುದರಿಂದಲೂ ಪ್ರತಿ ರಾತ್ರಿಯೂ ಈ ಗ್ರಾಮದ ಬಳಿ ಪ್ರಯಾಣದ ಮತ್ತು ಸರಕು ಚರ್ಯೆಯಾಗಿರುವ ಎತ್ತಾರು ಭಂಡಿಗಳು ತಂಗಿ ಮುಂದಕ್ಕೆ ಮಾರನೇ ಬೆಳಗ್ಗೆ ಸಾಗಿಹೋಗುತ್ತಿರುವುದರಿಂದಲೂ ಈ ಅತ್ತಿಬೆಲೆ ಮಾರ್ಗವಾಗಿ ರೈಲ್ವೆ ಸ್ಟೇಷನ್ ಆಗುವುದರಿಂದ ವ್ಯಾಪಾರಸ್ಥರಿಗೂ, ಪ್ರಯಾಣಿಕರಿಗೂ ತುಂಬಾ ಅನುಕೂಲವಾಗುವಂತೆ ಕಾಣುತ್ತದೆ. ಈ ಪ್ರಾಂತ್ಯದಲ್ಲಿ ಮಂಗಳವಾರ ಮೊದಲುಗೊಂಡು ಸೋಮವಾರದವರಿವಿಗೂ ತಪ್ಪದೆ ಅಕ್ಕಪಕ್ಕದ ಗ್ರಾಮಗಳಲ್ಲಿ ಸಂತೆ ಕೂಡಿ ವ್ಯಾಪಾರಗಳಿಗೆ ಸರಕು ಬರುತ್ತಾ ಇರುವುದಲ್ಲದೆ ಚಂದಾಪುರ, ಮಡಿವಾಳ, ಅತ್ತಿಬೆಲೆ, ಈ ಸಂತೆಗಳು ತುಂಬಾ ಪ್ರಾಮುಖ್ಯವಾದ ಸಂತೆಗಳಾಗಿಯೂ, ಇದರಿಂದ ಅನೇಕ ಬಡ ರೈತರು ಜೀವನೋಪಾಯಗಳನ್ನು ಕಲ್ಪಿಸಿಕೊಂಡು ವ್ಯಾಪಾರಾದಿಗಳಲ್ಲಿ ನಿರತರಾಗಿದ್ದಾರೆ. ಇದರ ಮೇಲೆ ರೈಲ್ ಮಾರ್ಗವೂ ಹೊಸೂರಿನಿಂದ ಅತ್ತಿಬೆಲೆ, ಮಡಿವಾಳ ಮಾರ್ಗವಾಗಿ ಬೀಳುವುದಾದರೆ ಮತ್ತಷ್ಟು ಪ್ರಜಾ ಸೌಕರ್ಯಕ್ಕೆ ಕಾರಣವಾಗುತ್ತೆಯಾಗಿ ನಮ್ಮ ಸರ್ಕಾರದವರು ಇದರ ವಿಷಯ ಗಮನಿಸಿ ಅನುಕೂಲವಾದ ಏರ್ಪಾಡು ಮಾಡಿ ಪ್ರಜೆಗಳಿಗೆ ಸೌಕರ್ಯವನ್ನು ಒದಗಿಸಿಕೊಟ್ಟಾರೆಂದು ನಿರೀಕ್ಷಿಸುವೆವು.

ತಿಪಟೂರು.—ತಾ. 11 ನೇ ಸೋಮವಾರ ಒಂದು ಹದ ಮಳೆಯಾಯಿತು. ತಾ 9 ನೇ ಶುಕ್ರವಾರ ಸಾಯಂಕಾಲ 5½ ಘಂಟೆಗೆ ತುಂಕೂರು ಡಿಪ್ಟಿ ಕಮಿಷನರ್ ಮೆ॥ ಸಿ ಎಸ್ ಬಾಲಸುಂದರಂ ಅಯ್ಯರವರು ಇಲ್ಲಿಗೆ ದಯಮಾಡಿ ಮ॥ ಸಾಹುಕಾರ್ ತಿಂಗ್ರಿ ನಂಜಪ್ಪನವರೂ, ಕೊಟ್ಟೂರಪ್ಪನವರೂ ಹಾಕಿಸಿದ್ದ ಚಪ್ಪರಗಳಲ್ಲಿ ಘನತರ ಮರ್ಯಾದೆಯನ್ನು ಸ್ವೀಕರಿಸಿ ಟ್ರಾವಲರ್ಸ್ ಬಂಗಲೆಯಲ್ಲಿ ಇಳುಕೊಂಡರು ತಾ 10 ನೇ ಶನಿವಾರ ಬೆಳಿಗ್ಗೆ ಸ್ಕೂಲ್ ವಗೈರೆಗಳನ್ನು ನೋಡಿಕೊಂಡು ಮಧ್ಯಾಹ್ನ ಸಂತೆಯಲ್ಲಿ ಅಳತೆ ಸೇರು ವಗೈರೆಗಳನ್ನು ಇನ್ಸ್ಪೆಕ್ಟ್ ಮಾಡಿಕೊಂಡು ಬಂದರು. ತಾ 11 ನೇ ಭಾನುವಾರ ಮೆ॥ ತಿಂಗ್ರಿನಂಜಪ್ಪನವರ ಆರ್ಯಬಾಲಿಕಾ ಪಾಠಶಾಲೆಗೆ ಮಧ್ಯಾಹ್ನ ಸುಮಾರು 3 ಘಂಟೆಗೆ ದಯಮಾಡಿ ಬಹುಮಾನಗಳನ್ನು ಕೊಟ್ಟರು ಸ್ಕೂಲ್ ಮ್ಯಾನೇಜರವರ ಮುತುವರ್ಜಿಯಿಂದ ಕಟ್ಟಡವು ಬಹಳ ಸೊಗಸಾಗಿ ಅಲಂಕರಿಸಿತ್ತು ಡೆಪ್ಟಿ ಕಮಿಷನರವರು ದಯಮಾಡಿ ಸಭಾಧ್ಯಕ್ಷರಾಗಿ ಕುಳಿತುಕೊಂಡ ನಂತರ ಬಾಲಿಕೆಯರಿಂದ ದೇವ ಸ್ತೋತ್ರವು ಹಾಡಲ್ಪಟ್ಟಿತು ಅನಂತರ ಹೆಡ್ ಮಾಸ್ಟರವರು ಸ್ಕೂಲ್ ರಿಪೋರ್ಟು ಓದಿದರು ಸಣ್ಣ ಬಾಲಿಕೆಯರಿಬ್ಬರು ಸಭಿಕರಿಗೆ ಬಹಳ ಸಂತೋಷವುಂಟಾಗುವಂತೆ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಶ್ಲಾಘನೀಯವಾಗಿ ಸಂಭಾಷಿಸಿದರು. ನಂತರ ನಮ್ಮ ಮಹಾರಾಜರವರ ಶ್ರೇಯಃ ಪ್ರಾರ್ಥನೆಯು ಹಾಡಲ್ಪಟ್ಟಿತು ಸಭಾಧ್ಯಕ್ಷರೂ ಸಹ ಸ್ತ್ರೀವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾಸ ಮಾಡಿದರು ಸಭಾಧ್ಯಕ್ಷರಿಗೆ ಹಾರ ತುರಾಯಿಗಳೂ ಸಭಿಕರಿಗೆ ಹೂವು ಗಂಧ ಕೊಡಲ್ಪಟ್ಟಿತು. ಸಾಹೇಬರವರು ಮ್ಯಾನೇಜರವರಿಂದ ಬಾಲಿಕೆಯರಿಗೆಲ್ಲಾ ಸಿದ್ಧಪಡಿಸಿ ಇಟ್ಟಿದ್ದ ಬೊಂಬೆ, ವಸ್ತ್ರಗಳನ್ನು ಬಹುಮಾನವಾಗಿ ಕೊಟ್ಟರು ಆ ವೇಳೆ ಸಾಹೇಬರವರ ಸವಾರಿಯು ಎ ವಿ ಸ್ಕೂಲಿಗೆ ದಯಮಾಡಿಸಲು ಅಲ್ಲಿಯೂ ಇಂಗ್ಲಿಷ್ ಸ್ಕೂಲ್ ವಗೈರೆಗಳಿಂದ ಹುಡುಗರು ಆನಂದಪಡಿಸಿದರು ಹೆಡ್ ಮಾಸ್ಟರು ಮೆ॥ ಸುಬ್ರಹ್ಮಣ್ಯ ಅಯ್ಯರವರು ಸ್ಕೂಲ್ ರಿಪೋರ್ಟನ್ನು ಓದಿದ ನಂತರ ಸಭಾ ಅಧ್ಯಕ್ಷರು ಇಂಗ್ಲಿಷಿನಲ್ಲಿ ಉಪನ್ಯಾಸ ಮಾಡಿದರು ಆ ವೇಳೆ ಸರ್ವರಿಗೂ ಗಂಧ ಪುಷ್ಪ ಕೊಡಲ್ಪಟ್ಟು ಮಂಗಳಾರತಿಯಾಯಿತು ನಂತರ ಸಾಹೇಬರು ಬಂಗಲೆಗೆ ದಯಮಾಡಿ, ಮಾರುದಿನ ಬೆಳಿಗ್ಗೆ ನೊಣವಿನಕೆರೆ ಮಾರ್ಗವಾಗಿ ಚಿತ್ತೈಸಿದರು.

ತಾ ಮುಗೊಂಡ್ಲು.—ಹಸ್ತೆಯ ಮಳೆಯು ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ಆಗಿ ನಂತರ ನಿಂತುಹೋಯಿತು ಹಳ್ಳಕೊಳ್ಳಗಳು ಬಂದಿದ್ದ ಪೈರುಗಳು ಒಣಗುತ್ತಾ ಇವೆ ಕೆರೆಗೆ ಮಾತ್ರ ನೀರು ಬಂದಿಲ್ಲ ಯಾವ ರೋಗಾದಿಗಳೂ ಇಲ್ಲ ಧಾರಣೆಯಾಗಿ ಅಕ್ಕಿ ರೂಪಾಯಿಗೆ 6 ಸೇರನಂತೆಯೂ, ರಾಗಿ 17 ಸೇರನಂತೆಯೂ ಮಾರುತ್ತದೆ ಕೋಟೆಯಲ್ಲಿ ನಾಲು ಮನೆಗಳೇ ಹೆಚ್ಚು ವಾಸವಿರುವ ಕೆಲವರಿಗೆ ನೀರಿನ ತೊಂದರೆಯೂ, ಕಳ್ಳರ ಕಾಟವೂ ಹೆಚ್ಚಾಗಿದೆ ಮ್ಯುನಿಸಿಪಾಲಿಟಿಯು ನಮ್ಮ ಡಾಕ್ಟರ್ ಸಾಹೇಬರು ಚಾವಡಿಗಳ ಮೂಲಕ ಕಚಡಾ ತಿಪ್ಪೆಗಳು ಇಲ್ಲದಂತೆ ಶುಚಿ ಮಾಡಲ್ಪಡುತ್ತದೆ.—ಪೋಸ್ಟಿನ ಕೆಲಸವು ಚೆನ್ನಾಗಿ ನಡೆಯುವುದರಿಂದ ಕ್ರಮೋಷನ್ ಕೊಡುತ್ತೇವೆಂದು ಹೇಳಿ ಆಫೀಸನ್ನು ಗ್ರಾಮದ ಉತ್ತಮಮಧ್ಯದಲ್ಲೇ ಇಟ್ಟುವಂತೆ ಮೇಲಿನ ಅಧಿಕಾರಿಗಳು ಅಪ್ಪಣೆ ಕೊಟ್ಟು ಹೋದರು.—ಈ ವರ್ಷ ನಡೆದ ಲೋ ಸೆ ಪರೀಕ್ಷೆಯಲ್ಲಿ ಇಂಗ್ಲಿಷಿನಲ್ಲಿ 4 ಕ್ಕೆ 2, ಸಂಸ್ಕೃತದಲ್ಲಿ 4 ಕ್ಕೆ 1 ತೇರ್ಗಡೆ ಹೊಂದಿರುವುದರಿಂದ ಮಾಸ್ತರುಗಳು ಚೆನ್ನಾಗಿ ಕೆಲಸ ಮಾಡುವಂತೆ ತೋರುತ್ತೆ.—ದಯಾಳುಗಳಾದ ಗವರ್ನ್‌ಮೆಂಟಿನವರು ತ್ಯಾಮುಗೊಂಡ್ಲಿನಿಂದ ದೊಡ್ಡಬೆಲೆಯ ರೈಲ್ವೆ ಸ್ಟೇಷನ್ನಿಗೆ ಬಂದು ರಸ್ತೆಯನ್ನೂ, ಬಿದಲೂರು ಕೊಳಕೆರೆಯ ಕಾಮಗಾರಿಯನ್ನೂ ಮಾಡಿಸುತ್ತಾರೆ ನಡುವಂದವೆ ಸೂಪರ್‌ವೈಸರು ತಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಾ ಮೇಲಿನ ಅಧಿಕಾರಿಗಳಿಗೆ ನಂಬಿಕೆಯುಳ್ಳವರಾಗಿರುತ್ತಾರೆ ಆದರೆ ಕಳೆದ ತಿಂಗಳು ಎ ಎಸ್ ಎಮ್ ಯವರು ಒಂದು ಮೇಲ್ ಟ್ರೈನ್, ಎರಡು ಗೂಡ್ಸ್ ಅಕ್ರಮವಾಗಿ ನಿಲ್ಲಿಸಿದ್ದರಿಂದ ಮೇಲಿನ ಅಧಿಕಾರಿಗಳು ಅವರನ್ನು ಕಮ್ಮಿ ಸಂಬಳ ಮೇಲೆ ಬೆಂಗಳೂರಿಗೆ ಸಿಗ್ನಲರ್ ಕೆಲಸಕ್ಕೆ ಸದ್ಯಕ್ಕೆ ವರ್ಗಮಾಡಿರುತ್ತಾರೆ.—ಚಿತ್ರದುರ್ಗದ ಉಪಾಧ್ಯಾಯರ ಸಂಘದ ಸೆಕ್ರೆಟರಿ ಮ॥ ವೀರಭದ್ರಪ್ಪನವರು ತಮ್ಮ ಸಂಘದಲ್ಲಿ ನಡೆದ ಪ್ರತಿಯೊಂದು ಉಪನ್ಯಾಸವನ್ನೂ ಕ್ರಮವಾಗಿ ಪತ್ರಿಕೆ ಮೂಲಕ ತಿಳಿಸಿದರೆ ಆ ಸ್ಥಳಕ್ಕೆ ಬರಲು ಅನನುಕೂಲವಾದ ಉಪಾಧ್ಯಾಯರು ಅದನ್ನು ಓದಿ ಸಂತೋಷ ಹೊಂದುವರು [ಉಪನ್ಯಾಸಗಳಿಗೆ ಈ ಪತ್ರಿಕೆಯಲ್ಲಿ ಸ್ಥಳ ಸಿಕ್ಕಲಾರದೆಂದು ವಿಷಾದಿಸುತ್ತೇವೆ.—ಎಡಿ] ದಸರಾ ಏಜಂಟಿಗೆ ಒಳ್ಳೆಯ ಅನುಭವಶಾಲಿಗಳಾಗಿಯೂ, ಬುದ್ಧಿವಂತರಾಗಿಯೂ, ಜನೋಪಕಾರಿಗಳಾಗಿಯೂ ಇರುವಂಥಾವರನ್ನು ಅಧಿಕಾರಿಗಳು ಚುನಾಯಿಸಿಕೊಂಡರೆ ಒಳ್ಳೆಯದು.—ಈ ಊರಿನಲ್ಲಿ ಸಂತೆಯೂ, ಶಾಲಗಿತ್ತಿಯೂ ಇಲ್ಲದಿರುವುದರಿಂದ ಜನಗಳಿಗೆ ತುಂಬಾ ತೊಂದರೆಯಾಗಿದೆ. ದಯವಿಟ್ಟು ನಮ್ಮ ಗವರ್ನ್‌ಮೆಂಟಿನವರು ಈ ಎರಡು ತೊಂದರೆಗಳನ್ನೂ ಕ್ರಮಪಡಿಸಿ ಕೊಟ್ಟರೆ ಪ್ರಜೆಗಳಿಗೆ ತುಂಬಾ ಅನುಕೂಲವಾದೀತು.

ಕುಲೀನ್ಸ್‌ಪೇಟೆ.—ಕಳೆದ ವಾರ ಈ ಊರಿನ ಕಸಬಾ ಶ್ಯಾನುಭೋಗರ ಅಣ್ಣನವರಾದ ಗಂಗಾಧರರಾಯರ ಮಕ್ಕಳು ಮ॥ ಶ್ರೀನಿವಾಸರಾಯರ ಮನೆಯಲ್ಲಿ 11 ನೇ ತಾ ರಾತ್ರಿ ಒಂದು ಭಾರಿ ಕಳವಾಯಿತು ನಗದು ಸುಮಾರು 90 ರೂಪಾಯಿ, 3 ಭಾರಿ ಶೀರೆಗಳು, ಕೆಲವು ಭಂಗಾರದ ಆಭರಣಗಳು, ಒಟ್ಟು ಸುಮಾರು 600-700 ರೂಪಾಯಿ, ಇಷ್ಟೆಲ್ಲಾ ಚೋರಿ ಆಗಿದೆ ಮತ್ತು ಅದೇ ರಾತ್ರಿ ಛಿಕ್ಕ ಕಳಾದ ವೆಂಕಮ್ಮನೆಂಬಾಕೆಯು ಮನೆಯಲ್ಲಿ ಯಾಚನೆ ಮಾಡಿ ಇಟ್ಟಿದ್ದ 2 ಸೇರು ಅಕ್ಕಿ, ½ ಸೇರು ಬೇಳೆ, 2 ಅಚ್ಚು ಬೆಲ್ಲ, ಕೆಲವು ದುಡ್ಡು ಸಹಾ ಪುಣ್ಯಾತ್ಮರು ಚೋರಿಮಾಡಿದರು ಕೆಲವು ದಿವಸಗಳಿಂದಲೂ ಈ ಊರಿನಲ್ಲಿ ಕೆಲವು ಪೋಕರಿಯರು ರಾತ್ರಿವೇಳೆ ಮನೆ ಬಾಗಿಲನ್ನು ತಟ್ಟುವುದು, ಜನರು ಭಯಪಡುವಂತೆ ಶಬ್ದ ಮಾಡುವುದು, ಈ ರೀತಿ ಮಾಡುತ್ತಾ ಇದ್ದಾರೆಂದು ವದಂತಿ ಇದೆ ಮೊನ್ನೆ 3 ರಾತ್ರಿಗಳಲ್ಲೂ ಇಲ್ಲಿನ ಉಪದೇಶಿಗಳ ಮನೆ ಬಾಗಿಲನ್ನು ತಟ್ಟಿ, ಶಬ್ದ ಮಾಡಿ ಪರಾರಿಯಾದರು ಈ ಮನೆ ಮುಂದೆಯೇ ದೀಪ ಉರಿಯುತ್ತಾ, ಇಂಥಾ ಬೆಳಕಿರುವ ದೊಡ್ಡ ಬೀದಿಯಲ್ಲಿ ಸ್ಥಳದಲ್ಲಿ ಈ ರೀತಿ ನಡೆದರೆ ಬೆಳಕು ಇಲ್ಲದ ಸ್ಥಳಗಳಲ್ಲಿ ಈ ತುಂಟರ ಕಾಟ ಇನ್ನೆಷ್ಟರಮಟ್ಟಿಗೆ ಇರಬಹುದೋ ಈ ವಿಷಯದಲ್ಲಿ ನಮ್ಮ ಪೋಲೀಸ್ ಇನ್ಸ್ಪೆಕ್ಟರವರು ನಿಗಾ ಕೊಟ್ಟು, ಆಗಾಗ್ಗೆ ರಾತ್ರಿ ಕಾಲದಲ್ಲಿ ಟವನ್ ಗಸ್ತು ಇಡಿಸುತ್ತಾರೆಂದು ನಿರೀಕ್ಷಿಸುತ್ತೇವೆ ಚನ್ನಪಟ್ಟಣದಿಂದ ಹೋದ ವಾರ ಔಷಧ ಕೊಡಲು ಬಂದಿದ್ದಾಗ ಮಿಸ್ಸ್ ಡಾಕ್ಟರವರು ಇಲ್ಲಿ ತಮ್ಮ ಸುಮಾರು 80 ರೂಪಾಯಿ ಬಾಳುವ ಭಂಗಾರದ ಫೌಂಟೆನ್ ಪೇನಿಯನ್ನು ಕಳೆದುಕೊಂಡು, ಕೂಡಲೇ ಇಲ್ಲಿನ ಪೋಲೀಸ್ ಇನ್ಸ್ಪೆಕ್ಟರವರಿಗೆ ರಿಪೋರ್ಟು ಕೊಟ್ಟಿದ್ದಾಯಿತು ಅದು ಇನ್ನೂ ಪತ್ತೆ ಆಗಲಿಲ್ಲ ಈ ಊರಿಗೆ ಸೇರಿದ ಸೆಟ್ಟಿಹಳ್ಳಿಯಲ್ಲಿ ಸುಮಾರು 2 ವಾರಗಳಿಂದ ಪ್ಲೇಗ್ ರೋಗ ಪ್ರಾರಂಭವಾಗಿ 5-6 ಮರಣಗಳಾದವು. ಈ ವಾರ ಕಾಯಿಸೊಪ್ಪು ಬೀದಿಯಲ್ಲಿ 20 ವರುಷದ ಒಬ್ಬ ಯೌವನಸ್ಥನು ಸತ್ತುಹೋದನು ಸೆನ್ನೆಯಿಂದ ಕುಂಬಾರ ಬೀದಿ, ಅಕ್ಕಸಾಲಿಗರ ಬೀದಿಗಳಲ್ಲಿ 4 ಜನರಿಗೆ ರೋಗ ತಗಲಿದೆ ಇಲಿಗಳು ಸಾಯುತ್ತಾ ಇವೆ. ರೋಗವು ಊರನ್ನೆಲ್ಲಾ ವ್ಯಾಪಿಸುತ್ತೋ ಎಂಬ ಭೀತಿ ಜನರಲ್ಲಿ ತುಂಬಿದೆ ಈ ಪ್ಲೇಗಿನ ಜೊತೆಯಲ್ಲಿ ಕ್ಷಾಮವೂ ತಲೆದೋರಿದೆ ಮಳೆ ಇಲ್ಲ. ಪೈರೆಲ್ಲಾ ಒಣಗಿಹೋಗುತ್ತಾ ಇದೆ ಬಡಜನರುಗಳ ಕಷ್ಟ ಹೇಳತೀರದು. ರೈತರು ಮಳೆಗೋಸ್ಕರ ಆಕಾಶವನ್ನೇ ನೋಡುತ್ತಾ ಇದ್ದಾರೆ ರಾಗಿ ರೂಪಾಯಿಗೆ 11-12 ಸೇರು, ಅಕ್ಕಿ 5¼ 5½ ಸೇರು ಮಾರುತ್ತಾರೆ ಇತರ ದಿನಸಿಗಳ ಧಾರಣೆಯೂ ಹೆಚ್ಚಿದೆ ಬಡಬಗ್ಗರ ಕಷ್ಟ ಅಷ್ಟಿಷ್ಟೆಂದು ಹೇಳಲಾಗದು

ಅರಕಲಗೂಡು.—ಈ ಕಡೆ ಹಿಡಿದಿದ್ದ ಸೋನೆಮಳೆಯ ದೆಸೆಯಿಂದ ಗಿಡ್ಡರಾಗಿ ಪೈರೆಲ್ಲವೂ ತೆನೆಯಾಗಿ ಕೆಲವು ಕಡೆ ಹಣ್ಣಾಗುವುದಕ್ಕೆ ಉಪಕ್ರಮಿಸಿದೆ ಇನ್ನೂ ಮಳೆಯು ಬರತಕ್ಕ ಸಂಭವವಿರುವುದರಿಂದ ಹೈನ್ ರಾಗಿ ಬೆಳೆಯು ಸಹ ಅನುಕೂಲಸ್ಥಿತಿಯನ್ನೈದಬಹುದು ರೈತರು ಗದ್ದೆಗೆ ಭತ್ತದ ನಾಟಿಯನ್ನು ಹಾಕುವುದರಲ್ಲಿ ಮಗ್ನರಾಗಿರುವರು.—ಬೆಳೆಯು ಉತ್ತಮಸ್ಥಿತಿಯಲ್ಲಿದ್ದರೂ ದವಸದ ಧಾರಣೆಯು ಮಾತ್ರ ಇನ್ನೂ ಇಳಿತರವಾಗಿಲ್ಲ ಹವಾ ಕ್ಷೇಮಕರವಾಗಿದ್ದರೂ, ಹಿತಕರವಾಗಿದೆ.—ಕಳೆದ ವಾರ ಥಿಯೊಸಾಫಿಕಲ್ ಸೊಸೈಟಿಯ ಉಪನ್ಯಾಸಕರಾದ ಮ॥ ನರಹರಿಶಾಸ್ತ್ರಿಗಳು ಇಲ್ಲಿಗೆ ದಯಮಾಡಿ ಮನಶ್ಶಕ್ತಿ ಮತ್ತು ಸಾವಿತ್ರಿಕಥೆ ಇವುಗಳಿಂದ ಜನರಲ್ಲಿ ಅನೇಕ ಸುಪ್ರೇರಣೆಯನ್ನು ಹುಟ್ಟಿಸಿ, ನರಸೀಪುರಕ್ಕೆ ಹೊರಟರು.—ಇದೇ ಸಮಯದಲ್ಲಿ ಹಾಸನಕ್ಕೆ ವರ್ಗವಾದ ಅಮಲ್ದಾರ್ ಮೆ॥ ರಾಜಗೋಪಾಲಾಚಾರ್ರಿಗೆ ಕಚೇರಿ ನೌಕರರೂ, ಸ್ಕೂಲು ಮಾಸ್ತರರೂ, ಪೇಟೆ ನಿವಾಸಿಗಳೂ ಆದಿಯಾಗಿ ಇನ್ನೂ ಅನೇಕರು ತಂತಮ್ಮ ಯೋಗ್ಯತಾನುಸಾರ ತಕ್ಕ ಮರ್ಯಾದೆಯನ್ನು ಮಾಡಿ ತಂತಮ್ಮ ಪ್ರೀತಿಯನ್ನು ಈ ರೀತಿಯಾಗಿ ತೋರ್ಪಡಿಸಿದರು ಇದೇ ಸಮಯದಲ್ಲಿ ಸುಮಾರು 21 ವರ್ಷಗಳಿಂದ ಪರಸ್ಪರ ವೈಷಮ್ಯವನ್ನವಲಂಬಿಸಿ, ಮೌನ ವ್ರತವನ್ನಾಚರಿಸುತ್ತಿದ್ದ ವೈಶ್ಯರ ಎರಡು ಪಂಗಡಗಳು ನಮ್ಮ ಅಮಲ್ದಾರರ ಮತ್ತು ಮ॥ ನರಹರಿ ಶಾಸ್ತ್ರಿಗಳ ಪ್ರೇರಣೆಯಿಂದ ಪರಸ್ಪರ ಮೈತ್ರೀಭಾವವನ್ನು ಅವಲಂಬಿಸುವಂತೆ ಮಾಡಿ ಪರಸ್ಪರ ವೀಳೆಯವನ್ನು ಕೊಡಿಸಿದ್ದು ಶ್ಲಾಘನೀಯವಾಗಿದೆ ಇದು ಸ್ಥಿರವಾಗಿ ನಡೆಯುವುದೇ ಎಂಬ ವಿಷಯದಲ್ಲಿ ಕೆಲವರು ಅನುಮಾನಪಡುತ್ತಿರುವರು. ವೈಶ್ಯರ ಗುರುಗಳು ಇಲ್ಲಿಗೆ ದಯಮಾಡಿಸಿ, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಒಂದು ಸಭೆಯನ್ನೇರ್ಪಡಿಸಿ, ಅನೇಕ ಸುಗುಣಾಲಂಕೃತ ಪೂರಿತವಾದ ಉಪನ್ಯಾಸಗಳಿಂದ ತಮ್ಮ ಶಿಷ್ಯರ ಕರ್ತವ್ಯಗಳನ್ನು ಬೋಧಿಸಿ ಆಶೀರ್ವಚನಗಳನಿತ್ತು, ವೈಶ್ಯರ ಮಹಾಸಭೆಗೆ ಒಂದು ಉಪಾಂಗವನ್ನೇರ್ಪಡಿಸಿ ತೆರಳಿದರು.—ಈ ಅಮಲ್ದಾರರ ಕಾಲದಲ್ಲಿ ಪ್ರಜಾನುಕೂಲಕ್ಕೆ ತಕ್ಕಂಥಾ ಏರ್ಪಾಡುಗಳನ್ನು ಮಾಡುವುದರಲ್ಲಿ ಯಾವ ಚ್ಯುತಿಯೂ ಇರಲಿಲ್ಲವೆಂದು ಧಾರಾಳವಾಗಿ ಹೇಳುವುದರಲ್ಲಿ ಯಾವ ಸಂಶಯವಿಲ್ಲ ಯಾಕಂದರೆ ಇವರಿಂದ ಸ್ಥಾಪಿತವಾದ ಭಜನೆಮನೆ, ಕೊಳ, ರೀಡಿಂಗ್ ರೂಂ, ಇವು ಇವರನ್ನು ಮರೆಯದಂತೆ ಮಾಡಿರುವಷ್ಟೇ ಕೋಡಿಯ ಹತ್ತಿರ ಒಂದು ಪುಷ್ಕರಣಿಯನ್ನು ಕಟ್ಟಬೇಕೆಂದಾಗಿ ಇದ್ದ ಯೋಚನೆಯು ವರ್ಗದ ದೆಸೆಯಿಂದ ಆಗದಿದ್ದರೂ ಮುಂದೆ ಬರುವವರು ಇದನ್ನು ನಿರ್ಮಿಸಿ ನಮ್ಮನ್ನು ಕಾಪಾಡುವರೆಂಬ ನಿರೀಕ್ಷೆಯುಂಟು ಇಂಥವರು ವರ್ಗವಾದದ್ದಕ್ಕೆ ಈ ಊರಿನ ನಿವಾಸಿಗಳು ಅಧಿಕವಾಗಿ ವ್ಯಸನಪಡುವರು ಕ್ಷಣಿಕವಾದ ಅಧಿಕಾರದಲ್ಲಿದ್ದಾಗ್ಗೆ ತಮ್ಮನ್ನು ಬಂದು ಆಶ್ರಯಿಸುವ ಬಡವರ ವಿಷಯದಲ್ಲಿ ತಮ್ಮ ಕೈಲಾದ ಮಟ್ಟಿಗೂ ಸಹಾಯ ಮಾಡುವುದರಲ್ಲಿ ಇವರೊಬ್ಬರೆಂದು ಧಾರಾಳವಾಗಿ ಹೇಳಬಹುದು

ಮೈಸೂರು ಗೆಜೆಟ್ ಸಂಗ್ರಹ

ಸರ್ ಪಿ. ಎನ್ ಕೃಷ್ಣಮೂರ್ತಿ, ಕೆ ಸಿ. ಐ ಇ ಯವರು ಕಾಲಾರಭ್ಯ ಅಂದರೆ 1911 ನೇ ಡಿಸೆಂಬರ್ ತಾ 10 ರಿಂದ ಮೆ॥ ನರಸಿಂಗರಾವ್ ಪೂರ್ಣಯ್ಯನವರು ಯಳಂದೂರು ಜಹಗೀರುದಾರರಾಗಿ ಶೀಮಾರ್ನ ಮಾಡಲಾಗಿದೆ

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಡ್ಡ ಕಾರ್ಯಗಳು ನಡೆಯೋಣ, ಸಾಗರ, ಸೊರಬ, ಶಿಕಾರಿಪುರ, ಶಿವಮೊಗ್ಗ, ಕುಂಸಿ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟುಗಳಲ್ಲೂ, ಆಜೂಬಾಜೂ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲೂ ಯಾರೂ ಯಾವ ಕಾರಣಕ್ಕಾಗಿಯೂ ಶಿಕಾರಿ ಮಾಡಕೂಡದು, ಮತ್ತು ಡೈನಮೈಟು ಪ್ರಯೋಗಿಸಿ ಮೀನು ಹಿಡಿಯಕೂಡದು

ಶಿವಮೊಗ್ಗ ಮುನ್ಸಿಫ್ ಮೆ॥ ಎಂ ಎಲ್ ಶ್ರೀಕಂಠೇಶಗೌಡರಿಗೆ ಆಗಸ್ಟ್ ತಾ 4 ರಿಂದ ಅರ್ಧಸಂಬಳದ ಮೇಲೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪ್ರೊ॥ ಸಬ್ ರೆಜಿಸ್ಟ್ರಾರ್ ಮೆ॥ ಎಂ ಸುಬ್ಬಣ್ಣನವರನ್ನು 4 ನೇ ಕ್ಲಾಸ್ ಸಬ್ ರೆಜಿಸ್ಟ್ರಾರಾಗಿ ನೇಮಿಸಿ, ಮುಳಬಾಗಲಿಗೆ ವರ್ಗಮಾಡಿದೆ.

ಮುಂದೆ ಹೇಳುವ ನೇಮಕಗಳನ್ನು 1912 ನೇ ಜೂಲೈ ತಾ 1 ರಿಂದ ಹುಕುಂ ಮಾಡಿದೆ.—(1) ಮೆ॥ ಕೆ. ಎಸ್ ದೊರಸ್ವಾಮಿ ಅಯ್ಯರವರನ್ನು ರೆವಿನ್ಯೂ ಕಮಿಷನರಾಗಿಯೂ, (2) ಮೆ॥ ಎಂ ಕಾಂತರಾಜ ಅರಸಿನವರನ್ನು ಎಕ್ಸೈಸ್ ಕಮಿಷನರಾಗಿಯೂ ಖಾಯಂ ಮಾಡಿದೆ (3) ರಜಾ ಮೇಲೆ ಸೀಮೆಗೆ ಹೋಗಿರುವ ಮೆ॥ ಎಚ್ ಎಚ್ ಸ್ಟಾಕ್ಲಿಯವರನ್ನು ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರಾಗಿ ನೇಮಕ ಮಾಡಿದೆ, (4) ಇವರು ವಾಪಸು ಬರುವತನಕ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ ಮೆ॥ ಸಿ ಶ್ರೀಕಂಠೇಶ್ವರ ಅಯ್ಯರವರು ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಅಸಿ ಕಮಿಷನರ ಮೆ॥ ಎಂ ಹರ್ ಅಲಿಯವರನ್ನು 1911 ನೇ ಜೂಲೈ ತಾ 11 ರಿಂದ 1 ನೇ ಕ್ಲಾಸಿಗೆ ಬಡ್ತಿ ಮಾಡಿದೆ

ಸ್ಪೆಷಲ್ ಡ್ಯೂಟಿ ಸೀನಿಯರ್ ಅ ಕಮಿಷನರ್ ಮೆ॥ ಎಲ್ ಕೃಷ್ಣಯ್ಯಂಗೆ ಡೆಪ್ಟಿ ಕಮಿಷನರ ಅಧಿಕಾರ ವಹಿಸಿದೆ, ಕನ್ನಂಬಾಡಿಯಲ್ಲಿ ಕಟ್ಟುವ ತಲಾವಿನ ಕಾಮಗಾರಿಗೆ ಅವಶ್ಯವಾಗುವ ಜಮೀನುಗಳನ್ನು ಇವರು ಸರ್ಕಾರಕ್ಕೆ ತೆಗೆದುಕೊಳ್ಳತಕ್ಕದ್ದು

ಕಾವೇರಿ ತಲಾವ್ ಕಾಮಗಾರಿ ಡಿವಿಜನ್ ಅ, ಇಂಜನಿಯರ್ ಮೆ॥ ಕೆ ಅರುಣಾಚಲ ಅಯ್ಯರವರಿಗೆ ಆಗಸ್ಟ್ ತಾ 28 ರಿಂದ ಹದಿನೈದು ದಿನ ಪ್ರಿವಿಲೇಜ್ ರಜಾ ಕೊಟ್ಟಿದೆ

ಮುಂದೆ ಹೇಳುವ ಡೈಪ್ಲಿಸ್ಪೇಷನ್ ಗಳಲ್ಲಿರುವ ಕಟ್ಟಡಗಳಿಗಾಗಿ ಕೈಸಿ ಕಂಪನಿಯವರು ಆಯಾ ಸ್ಥಳದ ಮ್ಯುನಿಸಿಪಾಲಿಟಿಗೆ ಕಂದಾಯ, ತೆರಿಗೆಗಳನ್ನು ಪಾವತಿಮಾಡತಕ್ಕದ್ದು ಕೆಂಗೇರಿ, ಬಿಡದಿ, ಕುಲೀನ್ಸ್‌ಪೇಟೆ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್, ಮೈಸೂರು, ನಂಜನಗೂಡು, ನಂಜನಗೂಡು ಟವನ್, ತರೀಕೆರೆ, ಬೆಂಕಿಪುರ, ಶಿವಮೊಗ್ಗೆ ಮೈಸೂರಿನಲ್ಲಿ ನೀರಿನ ತೆರಿಗೆಯನ್ನೂ, ದೀಪದ ತೆರಿಗೆಯನ್ನೂ, ಶಿವಮೊಗ್ಗೆಯಲ್ಲಿ ನೀರಿನ ತೆರಿಗೆಯನ್ನೂ ಹಸ ಪಾವತಿಮಾಡತಕ್ಕದ್ದು

ದರ್ಭಾಂಗ ಮಹಾರಾಜರವರ ಜಮೀನ್‌ದಾರಿ ಮ್ಯಾನೇಜರಾದ ಮೆ॥ ಜೆ. ವಿಲ್ಲಿಯಂಸ್‌ಯವರು ಪೂರ್ಣಿಯಾ ಪಟ್ಟಣದಲ್ಲಿ ಒಬ್ಬ ಬಂಗಾಳಿ ಹುಡುಗನು ತಮಗೆ ಸಲಾಂ ಮಾಡಲಿಲ್ಲವೆಂದು ಕೋಪಿಸಿಕೊಂಡು ಅವನನ್ನು ಮನೆಗೆ ಓಡಿಸಿಕೊಂಡು ಹೋಗಿ, ಉಪಾಧ್ಯಾಯರ ಎದುರಿಗೆ ಆ 12 ವರುಷದ ಹುಡುಗನನ್ನು ಹೊಡೆದರೆಂದು ಮೊಕದ್ದಮೆ ಆಗಿತ್ತಷ್ಟೆ ಈ ಮೊಕದ್ದಮೆಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದಯಾಳುವಾಗಿ ಅಪರಾಧಿಗೆ 10 ರೂಪಾಯಿ ಜುಲ್ಮಾನೆ ವಿಧಿಸಿದರು

* * *

ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಮಥುರಾಸಿಂಗ್ ಎಂಬೊಬ್ಬ ಐಶ್ವರ್ಯವಂತನನ್ನು ಮೂರು ಜನ ಬೀದಿಯಲ್ಲಿ ಚಾಕುವಿನಿಂದ ತಿವಿದು ಗಾಯಮಾಡಿದರು ಅವನು ಸಮೀಪದಲ್ಲಿದ್ದ ಕೋರ್ಟಿಗೆ ಓಡಿಹೋದನು ಕ್ರೂರಾತ್ಮರು ಅವನನ್ನು ಅಲ್ಲಿಗೂ ಓಡಿಸಿಕೊಂಡು ಹೋಗಿ ಇನ್ನೂ ಹೊಡೆದು ಕೊಂದುಹಾಕಿದರು ಆ ಮೂರು ಜನರನ್ನೂ ಪೋಲೀಸಿನವರು ದಸ್ತಗಿರಿಮಾಡಿ, ಇನ್ನೊಬ್ಬನಿಗಾಗಿ ತಲಾಷ್ ಮಾಡುತ್ತಿದ್ದಾರೆ ಪೋಲೀಸ್ ಕೋರ್ಟಿನೊಳಗೇ ಇಂಥಾ ಭಯಂಕರವಾದ ಕೊಲೆ ನಡೆದದ್ದು ಪರಮಾಶ್ಚರ್ಯವನ್ನುಂಟುಮಾಡಿದೆ

ಜಾರ್ಜ್ ಸಾರ್ವಭೌಮರ ಚರಿತ್ರೆ

[12-13]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ಡಿಲ್ಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಅತಿ ಲಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ ಅವರ ಭಾವಚಿತ್ರವೂ ಉಂಟು ಶ್ರೀಮನ್ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ ಕ್ರಯ ಪ್ರತಿ 1 ಕ್ಕೆ 8 ಆ ಅಂಚೆ ಹಾಸಲು ...

ವಿಳಾಸ -ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕಿದ ಮಾಡಿದೆ. ಒಳ್ಳೇ ಸತ್ವಾಹಾರ.

ಮೆಲ್ಲಿನ್ಸ್ ಆಹಾರವು ಉತ್ತೇಜನ ಕೊಡುವುದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುಪುಷ್ಟಿಯನ್ನೂ ಕೊಟ್ಟು ಕಾಪಾಡುವುದು. ಕಳಗಿನ ವಿಳಾಸಕ್ಕೆ ಬರೆದರೆ ಮಾದರಿ ಪುಸ್ತಕ ಕಳುಹಿಸುತ್ತಾರೆ

[16-17] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. F. W. Thompson M.A., Proprietor and Manager, Wesleyan Mission Press Mysore. 22/8/1912.

REGTEISRED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು — ಕ್ರಯ ೧ ದುಡ್ಡು

ಸಂಪುಟ ೨೬ — ಮೈಸೂರು—ಸನ್ ೧೯೧೩ ನೇ ಇಸವಿ ಅಗಸ್ಟ್ ತಾರೀಖು ೨೮ ನೇ ಗುರುವಾರ. — ಸಂಚಿಕೆ ೧೩

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ ಇದು ಅನಂಗಸುಂದರಿಯ ಉಪಸಂಹಾರ। ಕಲ್ಪನಾ ಕೌಶಲ್ಯ ಘಟನಾವಳಿಯೂ ಬಲು ಮುದ್ದಾಗಿರುವುದು। ಕ್ರಯ 8 ಆಣೆ

ಕುಮುದಿನಿ ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀರೋಹಿಣಿ — ಸ್ತ್ರೀಯರೆಲ್ಲರೂ ಇದನ್ನೋದಬೇಕು [illegible] ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಡುವರು ಕ್ರಯ ೨ ಆಣೆ [1391]

ನಮ್ಮ ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಹೊಳೇನರಸೀಪುರದ ಮುನ್ಸೀಫ್ ಕೋರ್ಟು.

ಸನ್ 1911 1912 ನೇ ಇಸವಿ ಒರಿಜಿನಲ್ ನಂಬರ್ 45

ವಾದಿ — ಹೊಳೇನರಸೀಪುರದ ದೇವಾಂಗದ ಜನಗಳ ಕುಲದೇವರಾದ ಶ್ರೀ [illegible] ದೇವಸ್ಥಾನದ ಶೆಟ್ಟಿ [illegible] ಹೊಳೇನರಸೀಪುರದ [illegible] ಚನ್ನಶೆಟ್ಟಿ

ಪ್ರತಿವಾದಿ ಹೊಳೇನರಸೀಪುರದ [illegible] ಕೋಟೆ ಹೋಬಳಿ [illegible] ದೇವಾಂಗದ ಚನ್ನಶೆಟ್ಟಿ ಉರುಫ್ ದೊಡ್ಡ [illegible] ಗ್ರಾಮದಲ್ಲಿರುವ ಲಕ್ಕೇಗೌಡನ [illegible]

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಹೊಳೇನರಸೀಪುರದ ಕಸಬಾದಲ್ಲಿರುವ ಶ್ರೀ ರಾಮೇಶ್ವರ [illegible] ದೇವಸ್ಥಾನದ ಪರವಿಂದ ವಾದಿಗಳು 12 ೨ 1907 ರ ಮುಚ್ಚಳಿಕೆ [illegible] ಆಧಾರದ ಮೇಲೆ ತೆಗೆದುಕೊಂಡಿರುವ ಅಸಲ್ [illegible] (ರೂ 11 [illegible]) ಒಂದುನೂರು ಮೂವತ್ತೈದು ರೂಪಾಯಿಗಳು [illegible] ಸದರಿ ದೇವಸ್ಥಾನಕ್ಕೆ [illegible] ರಿಂದ [illegible] ಮೇಲ್ಕಂಡ [illegible] ದಾವಾ ದಾಖಲ್ ಮಾಡಿ [illegible] ಸದರಿ [illegible] ಮತ್ತ್ಯಾರಾದರೂ [illegible] ತಕರಾರ್ ದಾರರಾಗಲೀ ಇದ್ದ [illegible] 1912 ನೇ ಇಸವಿ [illegible] 11 ಘಂಟೆಗೆ ಹಾಜರಾಗಿ ತಿಳಿಸತಕ್ಕದ್ದು ಇರುತ್ತೆ [illegible] ಕ್ರಮಪ್ರಕಾರ [illegible] [1321]

ತಾರೀಖು 1[illegible] ನೇ [illegible] 1912 ನೇ ಇಸವಿ

N K Srinivasa Rao

ಮುನ್ಸೀಫ್ ಹೊಳೇನರಸೀಪುರ

[illegible] ಫ್ಯಾಂಟಿನವರು ಖಾತಿಯಾದವು

[1311]

ಮೊದಲಿನ ಬೆಲೆ ರೂ 5 8 0 ಈಗಿನ ಬೆಲೆ ರೂ 3 8 0

ಈ ನಮ್ಮ [illegible] ಗಡಿಯಾರವು [illegible] ಕಾಲವನ್ನು [illegible] ಈ ಕೇಳು ಕೊಟ್ಟಿರುತ್ತೆ ಈ [illegible] ಇದರ



ಅಂಗಾಂಗಗಳೂ ಬಹಳ ಬಲವಾದ ಮತ್ತು ಮಜಬೂತಾದ [illegible] ಈ ಘಡಿಯಾರವನ್ನು [illegible] ಉಪಯೋಗಿಸಬಹುದು ಈ ಘಡಿಯಾರವನ್ನು ತೆಗೆಯುವವರು [illegible] ಈ ಚಿತ್ರದಲ್ಲಿ [illegible] ತೋರಿಸಿರುವದನ್ನು [illegible] ತೆಗೆದರೆ, ಅವರು [illegible] ಅವರೂ ತೆಗೆಯುವಂತೆ [illegible] ಬರಿಯ [illegible] ಈ ಕಮ್ಮಿ ಬೆಲೆಗೆ ಇನ್ನು [illegible] ದಿನಗಳು ಮಾತ್ರ ಕೊಡಲಾಗುತ್ತೆ ಈ ಘಡಿಯಾರವನ್ನು ತೆಗೆಯುವವರಿಗೆ ಒಂದು ರೋಲ್ಡ್ ಗೋಲ್ಡ್ ಸರಪಣಿಯನ್ನು ಇನಾಮಾಗಿ ಕೊಡಲ್ಪಡುತ್ತೆ

[illegible] ವಾಚ್ ಕಂಪನಿ, ಪೋಸ್ಟ್ ಬಾಕ್ಸ್ 170, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ ಅಡ್ವಾನ್ಸು	ರೂ ೧—೦—೦
ಪತ್ರ ಕಳುಹುವವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
" " " " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಳುಹುವಾಗಲೂ ತಮಗೆ ಬರುತ್ತ ಇರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ಪ್ರಕಟನ, ನೋಟೀಸುಗಳ ದರಗಳು

"ವೃತ್ತಾಂತ ಪತ್ರಿಕೆ" ಯಲ್ಲಿ ಐದು ಪಂಕ್ತಿಗೆ ಮೀರದ ಪ್ರಕಟನೆ ಅಥವಾ ನೋಟೀಸಿಗೆ ಒಂದು ವಾರಕ್ಕೆ ಒಂದು ರೂಪಾಯಿ ಛಾರ್ಜು ಬೀಳುವುದು, ಅಂದರೆ ಪ್ರತಿ ಒಂದು ಅಂಗುಲದ ಪ್ರಮಾಣದ ಸ್ಥಳಕ್ಕೆ ಒಂದು ಸಲಕ್ಕೆ ಒಂದು ರೂಪಾಯಿಯಂತೆ ಕೊಡಬೇಕು ಹೆಚ್ಚು ಸ್ಥಳವನ್ನು ಅಪೇಕ್ಷಿಸುವವರು ಕಂಟ್ರಾಕ್ಟು ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

50 ರೂಪಾಯಿ ಬಹುಮಾನ ಸಿಕ್ಕುತ್ತೆ

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟ್ 1911-12 ನೇ ಜಾರಿ ನಂ 890ನೇ ವ್ಯಾಜ್ಯದಲ್ಲಿ ರೂ 101 2-7ಕ್ಕೆ ೨ನೇ ಪ್ರತಿವಾದಿ [illegible] ಸದರಿ ತಾ|| ಚಲುವೆ [illegible] ಕೊಪ್ಪಲಿನಲ್ಲಿ ವಾಸವಾಗಿರುವ [illegible] ದೊಡ್ಡ ಬೋರೇಗೌಡರ ಮಕ್ಕಳು ಮ|| ತಮ್ಮಯ್ಯಗೌಡ ಯಾನೆ ವೆಂಕಟರಮಣಗೌಡ ಎಂಬವರಿಂದ ತಾ 9 ೨-1912 ವರೆಗೆ ಬರಬೇಕಾದ ಡಿಕ್ರಿ ಮೊಬಲಗಿಗಾಗಿ ಕಳೆದ ೪ ವರುಷದ ಲಾಗಾಯ್ತು ಅನೇಕ ಸಲ ಆಸಾಮಿ ದಸ್ತಗಿರಿಗೆ ವಾರಂಟು ಕೊಡಿಸಿದಾಗ್ಯೂ ಮೊಬಲಗು ಪಾವತಿ ಮಾಡದೇ ಇರೂ, ರೂಬರೂ ಕೋರ್ಟಿಗೆ ಬಂದು ಮನವಿ ಮಾಡದೇಲೂ ವಾರಂಟಿಗೆ ಸಿಕ್ಕದೆ ಅಮೀನರ ರೂಬರೂ ಆಸಾಮಿಯು [illegible] ಹಳ್ಳ ಕೊಡಿಸಲು ಮುಚ್ಚಿ [illegible] ನೋಡದೆ [illegible] ಡಿಕ್ರಿ [illegible] ಫರಾರಿ ಆಗಿರುತ್ತಾರೆಂತಲೂ ತಿಳಿಯಬಂದಿರುತ್ತಾಗಿ ಮುಂದಿನ [illegible] ಅಥವಾ ಗೊತ್ತಾದ ಒಂದು [illegible] ಒಳಗಾಗಿ ಆಸಾಮಿಯನ್ನು ದಸ್ತಗಿರಿ ಆಗುವಂತೆ ಮಾಡಿ ಕೋರ್ಟಿನ ರೂಬರೂ ಹಾಜರ್ ಮಾಡುವ ಯಾರಿಗೇ ಆಗಲಿ 50 ರೂಪಾಯಿ ಬಹುಮಾನವನ್ನು [illegible] ಕೋರ್ಟಿನ ರೂಬರೂ ಪಾವತಿ ಮಾಡುತ್ತೇನೆ ಈಗೆ ಸಹಾಯ ಮಾಡುವ ಜನರು ತಮ್ಮ ಹೆಸರನ್ನು ಶ್ರೀರಂಗಪಟ್ಟಣದಲ್ಲಿರುವ [illegible] ಮ|| ಸಿ ವೆಂಕಟರಾಮಯ್ಯರವರಿಗಾಗಲಿ, ನನಗಾಗಲಿ ಎರಡು ವಾರಗಳ ಮುಂಚೆ ತಿಳಿಸಿದಲ್ಲಿ ಸಾಕಾಗಿರುತ್ತೆ.

ಹಳ್ಳದಕೇರಿ ಮೈಸೂರು, [1331] ಬಿ ವಾಸುದೇವರಾವ್,

14-8 1913 ರಿಟೈರ್ಡ್ "ಮಲ್ಬಾರ್" ಅಸ್ಸಿನಿ ಮತ್ತು ಡಿಕ್ರಿದಾರ್

WILLIAM & Co, FORT, BOMBAY

ಅಮೃತಾಂಜನ. (Regd)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟಿದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-9-0

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಕುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ ಡಬ್ಬಿ 1ಕ್ಕೆ 0-6-0

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ ಸುಂಧುತೈಲ 8 ಆಣೆ [3527]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೊ. ಪೋಸ್ಟ್ ಮುಂಬಯಿ.

ಡೋಂಗರೆ ಇವರ ಬಾಲಾಮೃತ.

[1157]

ಸಣ್ಣ ಹುಡುಗರಿಗೆ ಡೋಂಗರೇ ಇವರ ಬಾಲಾಮೃತವು ಬಹಳ ಗುಣ ಉಳ್ಳದ್ದು ಇದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕಟ್ಟ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ ಎಲುಬುಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಸ್ವಲ್ಪ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೦ ಆಣೆ, ಟಪಾಲ್ ಖರ್ಚು ೭ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ್, ಮುಂಬಯಿ.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕೋಪಕಾರಕ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ [illegible] ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ [illegible] (ಭಾರ), [illegible] ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ [illegible] ರೋಗಗಳಿಗೆ ಕೊಟ್ಟರೆ [illegible] ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹು ಹೊತ್ತು ಸುವಾಸನೆಯಾಗಿರುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, [illegible] ಶರೀರವನ್ನು ಸಂಪಾದಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುತುರೋಗ, ಮಕ್ಕಳ [illegible], ಸ್ವರ ನಷ್ಟ, ಜ್ವರ, ಕೃತಕ್ಷ್ಯಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ [illegible] —[illegible] ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ [illegible] ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ [9962]

೨ ವೈಶ್ವಾನರಾಸವ (ಕಾಲರಾ ಔಷಧ)

[illegible] (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು [illegible] ರೋಗದ ಮೇಲೆ ಕೆಲಸ ಮಾಡುತ್ತದೆ [illegible] ಮೂಳವು ಕಟ್ಟಿದ ಕೂಡಲೆ ಮೊದಲನೇ ವೇಳೆಯಲ್ಲೇ ಗುಣವು ಕಾಣುತ್ತದೆ ಸಮಯದಲ್ಲಿ [illegible] ಒಂದು ಬುಡ್ಡಿಯು ನಿಮ್ಮಲ್ಲಿರಲಿ। ವೈದ್ಯರು [illegible] ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಔಷಧ।

ಅನುಪಾನ ಪತ್ರವು ಔಷಧದೊಡನೆ ಇರುವದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ — ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜ್ವರಶಂಕರಿ.

114-49

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ಪರಿಸೆಯುಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ೩-೪ ದಿವಸ

ಬಾಂ ಸೇವಿಸುವುದರೊಳಗಾಗಿ ತಪ್ಪದೆ ಗುಣಪಡಿಸುವದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ಹಿಮ್ಮೆಟ್ಟಿಸುವುದು ಬಾಟಲಿಗೆ ೧ ರೂ., ೩ ಬಾಟಲಿಗೆ ೨ ರೂ ೧೦ ಆಣೆ.

ಪ್ಲಿಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು ನೂರಾರು ಜನರು ಕುಡಿಸಿ ಗುಣಹೊಂದಿರುವರು, ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ

ವಾತಮುರಾರಿ—ಇದು ಚಳಿನೋವು, ಉಳುಕು, ಬೀಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರಶಮಿಸುವುದಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ, ೩ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 35

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ನಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ಗುಣಮಾಡುತ್ತದೆ ಈ ಪದಾರ್ಥ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿರೋಧವಿಲ್ಲದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವವರಿಗೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ—೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ ಟಪಾಲು ಹಾಸಲು ಬೇರೆ [5 34]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ

ಇತ್ತನೋಡಿ! ನೋಟೀಸು ಇತ್ತನೋಡಿ!

"ಇನಾಮು" ಒಳ್ಳೇ ಸಮಯವು!!! "ಇನಾಮು"

ಅಗಸ್ಟು 31ನೇ ತಾರೀಖು ವರಿಗು



ಬರ್ಲಾಟೈಂಪೀಸು ಕ್ರಯ ರೂ 1-8-0 ರಾಸುಕೋಪ್ ಜೋಬು ಗಡಿಯಾರ ಕ್ರಯ ರೂ 2-4-0 ನಮ್ಮಲ್ಲಿರುವ ಅಪಾಯವೂ ನೋವೂ, ಉರಿಯೂ ಇಲ್ಲದ ರೋಮಸಂಹಾರಿ

ಕಾರೋನೇಷನ್ ಸಾಬೂನು

3 ಇರುವ ಪೆಟ್ಟಿಗೆ 1 ಕ್ಕೆ ಕ್ರಯ ರೂ 1-0-0 ಉಳ್ಳ 3 ಪೆಟ್ಟಿಗೆಗಳು ಕೊಳ್ಳುವವರಿಗೆ ಮೇಲೆ ಕಂಡಿರುವ 1 ನಂಬರು ಬರ್ಲಾ ಟೈಂಪೀಸು ಇನಾಂ ಕೊಡುವೆವು [101-11]

3 ಪೆಟ್ಟಿಗೆಗಳು ಕೊಳ್ಳುವವರಿಗೆ ಮೇಲೆ ಕಂಡಿರುವ 2 ನಂಬರು ರಾಸುಕೋಪು ಜೋಬುಗಡಿಯಾರವನ್ನು ಇನಾಂ ಕೊಡುವೆವು

ಅಂಚೆ ಹಾಸಲು ಪ್ರತ್ಯೇಕ

ಒಳ್ಳೇ ಸಮಯವು! ಬಿಡಬೇಡಿ!! ತಕ್ಷಣ ಬರೆಯಿರಿ!!!

ನಮ್ಮ ವಿಳಾಸ—ಬಿ ಸಿ ಷಾ ಅಂಡ್ ಕಂಪೆನಿ,
೧೭೭ ಜೇನಾ ಬಜಾರ್ ರೋಡ್, ಮದ್ರಾಸು

ಇದೇ ಅಗಸ್ಟು ಆಖೈರ್ ವರೆಗೆ ಮಾತ್ರವೇ!

1 ರೈಲ್ವೆ ರೆಗ್ಯುಲೇಟರ್ ಲಿವರ್ ಗಡಿಯಾರಗಳು ರೂ 2-5-0 ಈ ನಕ್ಷೆಯಲ್ಲಿ ಕಾಣಿಸಿರುವ ರೈಲ್ವೆ ಷೇಪ್, ಲಿವರ್, ಸ್ವಿಸ್ ಮೇಡ್, ಜೇಬು ಗಡಿಯಾರ, ಹತ್ತು ವರುಷಗಳಾದರೂ ಕೆಡದೆ ನಡೆಯುತ್ತೆ ಚಿಕ್ಕ ಸೈಜನದಾಗಿಯೂ, ನಿಕಲ್ ಕೇಸೂ ಉತ್ತಮ ಯಂತ್ರೋಪಕರಣಗಳೂ ಉಳ್ಳದು ಇದರ ಪೂರ್ವದ ಕ್ರಯ ರೂ 8 ಕೆಲವು ದಿನಗಳವರೆಗೆ ಮಾತ್ರ ಉತ್ತರಮುಖಿ, ಸರಪಣಿ, ಪೆಟ್ಟಿಗೆ ಸಹಿತ ಕ್ರಯ ರೂ 2-5-0



2 ಬಿ ಕ್ವಾಲಿಟಿ ಗಡಿಯಾರ ಮೇಲಿನ ನಮೂನೆಯದೇ ಸರಪಣಿ ಇಲ್ಲದೆ ಕ್ರಯ ರೂ 2-3-0

3 ಬಿ ಟೈಂ ಪೀಸುಗಳು ರೂ 2, ಅಲಾರಾಮುಳ್ಳದ್ದು ರೂ 2-8-0.

4 ಅಸಲ್ ಬೆಳ್ಳಿ ಗಡಿಯಾರದ ಸರಪಣಿ 1 ಕ್ಕೆ ರೂ 2

5 ಪ್ರಸಿದ್ಧ ಮಧುರೆಯ ಸೀರೆ ಕ್ರಯ ರೂ 3-4-0

ರಂಗು ಕೆಡದ ಗಟ್ಟಿ ಬಣ್ಣದ ಕೆಂಪು ಅಥವಾ ಕಪ್ಪು ಬಣ್ಣಗಳಲ್ಲಿ ಬಿಳಿಯ ಚುಕ್ಕೆಗಳುಳ್ಳ 17 ಮೊಳವುದ್ದದ ಸೀರೆ 1 ಕ್ಕೆ ಕ್ರಯ ರೂ 3-4-0.

6 ಮುಂಬೈ ಅಂಚಿನ 8 ಮೊಳದ ಪಂಚೆ ಜೊತೆಗೆ ರೂ 3 7 ಮೊಳದ ಜೊತೆ ರೂ 2-8-0 [120-6]

ನಮ್ಮ ವಿಳಾಸ—ವೆಂಕಟಾಚಲಂ ಕಂಪೆನಿ,
ಹೈ ರೋಡ್, ವೇಪೇರಿ, ಮದ್ರಾಸು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 2-35

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

3 34

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದ ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾರಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೇರಾದದ್ದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೪ ಆ, ೧ ರೂ ೬ ಆ, ೧ ರೂ ೮ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮; ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಉಣ್ಣೆಕಸೂತಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಚಿತ್ರದ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ
ಚಿನ್ನದ ಪದಕವು ದೊರಕಿಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೈಮಳನ್ನೂ ಹಾಳು ಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿವೆ ಆದರೆ ಎಷ್ಟು ಸ್ತ್ರೀಯರಿಗೆ ಹಾಗೆ ಸುಂದರವಾದ ಮತ್ತು ನಿಬಿಡವಾದ ಕೇಶವಿದೆ ಇವೆ ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೃದುವಾಗಿ ಬೆಳಬೆಳಸುತ್ತಿರಬೇಕು, ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕಾಣಲ್ಪಟ್ಟಿರೆಯೋ ಅಂಥಾ ಮಹತ್ವಕ್ಕೆ ಉಚಿತವಾದ ಚೆಂದವಾದ ಕೂದಲುಗಳು ಶೀಘ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ—ಇದು ಕೂದಲುಗಳನ್ನು ಚಂದಗೊಳಿಸುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯಳು ಈ ಕಾಮಿನಿಯಾ ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ಮೃದುವಾಗುತ್ತವೆ ಆದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ ಬಳಬಳಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ವಿಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತರಬೇಕು. 3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28-7-11 ಮಿ ಬಿ ಡಿ ಮಾಧವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7-11 ಮೆ|| ಸಿ ಆರ್ ನಾಯುಡು ಪ ವ ಡಿ ಟೀಚರ್, (ಬರ್ಮಾ) ನನ್ನ ಮಿತ್ರರು "ಕಾಮಿನಿಯಾ" ತೈಲ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರೆಯಿಂದ ವಿ ಪಿ ಮೂಲಕ ರವಾನಿಸತಕ್ಕದ್ದು [94-35]

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದ್ದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಅತ್ಯುತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0.

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಜಾತಿ ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0.

"ಕಾಮಿನಿಯಾ ಸುರಂಗಿ"-ರೂ 1-4-0 "ಕಾಮಿನಿಯಾ ಮಾಲತಿ"-ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು.

ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,
ಜುಮ್ಮಾಮಸೀದಿ, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—8—1913 ರಿಂದ 16—8—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು.	ತಗಲಿದ್ದು.	ಸತ್ತದ್ದು
ಬೆಂಗಳೂರು ಪಟ್ಟಣ	13	10	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	27	23	0	0
ಮೈಸೂರು ,,	0	0	0	0
ಕೋಲಾರ್ ,,	4	2	18	11
ಕೋಲಾರ್ ಚಿನ್ನದ ಗಣಿಗಳು	4	2	0	0
ತುಮಕೂರು ಡಿಸ್ಟ್ರಿಕ್ಟು	62	41	0	0
ಹಾಸನ ,,	20	7	0	0
ಚಿತ್ರದುರ್ಗ ,,	0	0	75	28
ಕಡೂರ್ ,,	1	1	0	0
ಶಿವಮೊಗ್ಗ ,,	28	11	0	0
ಒಟ್ಟು	159	97	93	39

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೆ ವರ್ಷಋತೌ ಶ್ರಾವಣ ಬಹುಳ ತದಿಗೆ ಶುಕ್ರವಾರದಿಂದ ಶ್ರಾವಣ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಆಗಸ್ಟ್ ಮತ್ತು ಸೆಪ್ಟಂಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ ತೇದಿ
30	ಶುಕ್ರ *	ತದಿಗೆ	55 51	ಉ. ಭಾ	38-47	15
31	ಶನಿ	ಚೌತಿ	56-11	ರೇ	41-19	16
1	ಭಾನು	ಪಂಚಮಿ	56-41	ಅ	43 30	17
2	ಸೋಮ §	ಷಷ್ಠಿ	55 18	ಭ	42-57	18
3	ಮಂಗಳ ‡	ಸಪ್ತಮಿ	52 35	ಕೃ	43 15	19
4	ಬುಧ †	ಅಷ್ಟಮಿ	48-45	ರೋ	41-26	20
5	ಗುರು ,,	ನವಮಿ	43-55	ಮೃ	38 53	21

* ಮಳೆ ನಕ್ಷತ್ರ—ಹುಬ್ಬ 1 ನೇ ಪಾದ ಶ್ರಾವಣಶನಿವಾರ, ಸಂಕಟಹರ ಚತುರ್ಥಿ § ಶ್ರೀ ಪ್ರಸನ್ನಕೃಷ್ಣಸ್ವಾಮಿ ರಥ, ಮಳೆ ನಕ್ಷತ್ರ—ಹುಬ್ಬ 2 ನೇ ಪಾದ ‡ ಮಂಗಳಗೌರೀವ್ರತ † ಜನ್ಮಾಷ್ಟಮಿ, ಇಂದ್ರಸಾವರ್ಣಿಮನ್ವಾದಿ, ದಶಫಲವ್ರತ, ಸರ್ವತ್ರ ಶ್ರೀ ಕೃಷ್ಣಜಯಂತಿ. ,, ಶಿಕ್ಯೋತ್ಸವ, ಮಳೆ ನಕ್ಷತ್ರ—ಹುಬ್ಬ 3 ನೇ ಪಾದ

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ ರೂ	೧೭-೦-೦	೧೬-೦-೦
ಕಂಬದ ಅಕ್ಕಿ ಅವಲ್	೧೭ ೮ ೦	೧೬ ೦-೦
,, ದುಯಂ	೧೭-೦-೦	೧೬-೦-೦
ಬಾಣ್ಯದ ಅಕ್ಕಿ	೧೭-೦-೦	೧೬-೦-೦
ಕೆಸ್ತ್ಕೆ ಅವಲ್	೧೪ ೦-೦	೧೪-೦-೦
,, ದುಯಂ	೧೭-೮ ೦	೧೬-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೩-೮-೦	೧೩ ೮-೦
,, ದುಯಂ	೧೩-೧೩-೦	೧೧ ೮ ೦
ಕೈರ್ ರಾಗಿ ಪಲ್ಲಾ ೧ಕ್ಕೆ	೭-೧೩-೦	೭-೫-೦
ಇದ್ರಾಗಿ	೭ ೪-೦	೭-೪-೦
ಜೋಳ	೭-೮-೦	೮-೦-೦
ಹುರುಳಿ ಪಲ್ಲಾ ೧ಕ್ಕೆ	೧೩-೧೩ ೦	೧೧-೦-೦
ಚೀನಿ ಅವರೆ	೧೧ ೦ ೦	೧೦-೦ ೦
ಹೆಸರು	೧೪ ೦ ೦	೧೩ ೮-೦
ಉದ್ದು	೧೬ ೦-೦	೧೫-೦ ೦
ಕಡಲೆ	೧೩-೦ ೦	೧೧-೦ ೦
ತುಪ್ಪ ಸೇ ೧೨೭ ಕ್ಕೆ	೩೩ ೦-೦	೨೪ ೮-೦
ಬೆಲ್ಲ	೭ ೩ ೦	೭ ೮ ೦
ಎಣ್ಣೆ ೧೨೭ ಸೇರಿಗೆ	೧೪-೦-೦	೧೪ ೦-೦
ಹುಣಸೇಕಾಯಿ ಮಣ ೧ಕ್ಕೆ	೪-೩-೦	೩ ೮ ೦
ಮೆಣಸಿನಕಾಯಿ	೩ ೮-೦	೩-೪-೦
,, ದುಯಂ	೩ ೦-೦	೨ ೮ ೦
ಪಿ. ನಂಬ್ರ ಅಚ್ಚು	೫ ೮ ೦	೫೬-೦-೦
ಒಗ್ಗೆ ಮಣ ೧ಕ್ಕೆ	೬ ೪-೦	೬ ೮-೦
ಉಪ್ಪು	೬-೦-೦	೫-೮ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೬-೦-೦	೬-೮ ೦
ಅಕ್ಕಿ ,,	೬-೨-೦	೫-೮-೦
ಹೊಸೇ ಹುಲ್ಲು	೧-೪-೦	೧-೪-೦
,, ಹಳೇದು	೧ ೦-೦	೧-೩-೦
ಕಜ್ಜ ಮಣ ೧ಕ್ಕೆ	೧೮-೮-೦	೧೭-೦-೦
ಕಡುಬಿನ್ನ ಬಟ್ಟೆ ೧ಕ್ಕೆ	೫-೦-೦	೫-೦-೦
ತೆಂಗಿನಕಾಯಿ ೧೦೦ ಕ್ಕೆ	೬-೦-೦	೬-೦-೦
ಕಡಲೇಕಾಯಿ ಮಣ ೧ಕ್ಕೆ	೦-೮-೦	೧-೦-೦
ಉಪ್ಪಿನ ಕಾಯಿ ಮಣ ೧ಕ್ಕೆ	೦-೧೩-೦	೧-೮-೦
ಹತ್ತಿ (ರೂಯಿ) ಕಂಡು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫ ೧೪-೬
,, ,, ಹುಲ್ಲು ಕೊಲ ೧ಕ್ಕೆ	೨೪-೩-೦	೨೪-೩-೦
ಹಣ್ಣು ಕೊಲ ೧೦೦ ಕ್ಕೆ	೮೧-೦-೦	೮೧-೦-೦

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

84-14

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರೆತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಶ್ವಾಸರೋಗ, ಜಜ್ಜು, ಊತಗಳು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಪ್ಲೆವೆಂಟಿರ ಮ್ಯಾಜಿಕ್ ಬಾಂ ಒಂದು ಬಾಟ್ಲ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತಗೆದುಕೋ ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿನಗೂ ಖಂಡಿತವಾಗಿ ಗುಣಿಯಾಗುತ್ತದೆ

" ಪ್ಲೆವೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್, (2) ಜೆ ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indian Life Assurance Companies'** and **Provident Societies' Acts 1912** and has also given **double the initial security to the Government** as required under the **Insurance Act 1912**

How is it that the **National, of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions and distributes relief in thousands every quarter on account of **marriages and deaths.**

122-1

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time who reside in district or taluk head quarters and who are well versed in English need apply

For further particulars and prospectuses, please apply with **one anna stamp** and your previous experience in the line to—

M. L NAGANNAH,

Chief Agent,

The Amritsar National Insurance Buildings, Mysore.

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2–4–0 ಮಾತ್ರ 5 ವರುಷಗಳ ಗ್ಯಾರೆಂಟಿ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ [13-21]

ಮುಖ್ಯವಾಗಿ ಗಮನಿಸಿ ಓದಿ

೧ ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ. 5 12-0 ಇದನ್ನು ಆಗಸ್ಟ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಫೂಟಿ ಹೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಜಾರ್ಜ್ ಸಾರ್ವಭೌಮರ ಚರಿತ್ರೆ

[92-13]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ದೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಅವಿಚ್ಛಿನ್ನವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ ಅವರ ಭಾವಚಿತ್ರವೂ ಉಂಟು ಶ್ರೀಮನ್ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ. ಕ್ರಯ ಪ್ರತಿ 1ಕ್ಕೆ 8 ಆ ಹಾಸಲು 1ಆ.

ವಿಳಾಸ —ಸಿ. ಎಲ್. ಎಸ್. ಬುಕ್ ಡಿಪೊ, ಮೈಸೂರು.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಉಷ್ಣಮರ್ದ ಚೂರ್ಣವು

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1-0-0.

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಿಂತು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ರಮೇಣ ರೋಗವು ಕಮ್ಮಿಯಾಗುತ್ತಾ ಒಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು

ಡಬ್ಬಿ 1 ಕ್ಕೆ ಕ್ರಯ ರೂ 0 4-0 ಡಬ್ಬಿ 12 ಕ್ಕೆ ರೂ 2-8-0

ಈ ಹಲ್ಲುಪುಡಿ ಹಲ್ಲು ನೋವು ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಿಲದೆ ದೃಢವಾಗಿಯೂ ಗಟ್ಟಿಯಾಗಿಯೂ ನಿಂತಿರುವವು, ಹಲ್ಲುಗಳನ್ನು ಸ್ವಚ್ಛ ಮಾಡುವದು [121-44]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಜೇನಾ ಬಜಾರ್ ರೋಡ್, ಮದ್ರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗಪ್ರಾಪ್ತವಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಹಲ್ಲಣಿಸುವುದು, ತಲೆನೋವು, ಗಾಬರಿ ಕಣ್ಣುಮೊಬ್ಬು, ತಲೆ ತಿರುಗುವಿಕೆ; ಮೈನೋವು ಕೀಲುನೋವು, ಮರವು, ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳಿಂದ ಸಂದೇಹಿಸಲುಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [99-51]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುತ್ತವೆ.



೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮದುರಾ ಜಿಲ್ಲೆಯಲ್ಲಿ ತಿರುಮಾಯಂ ಎಂಬ ಊರಿನಿಂದ ಕನಡಿಕಾತ್ ಎಂಬ ಊರಿಗೆ ಅಂಚೆಯವನು ಅಂಚೆಯ ಟಪ್ಪಾಲುಗಳನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ಅಂದರೆ ಕಳೆದ ತಾ ೫ ನೇ ಗುರುವಾರ ರಾತ್ರಿ 10 ಮಂದಿ ಕಳ್ಳರು ಅವನನ್ನು ಹಡೆದು ಹೊಡೆದು ಅವನ ಬಳಿ ಇದ್ದ ಟಪ್ಪಾಲುಗಳನ್ನು ಕಿತ್ತುಕೊಂಡು ಅದರಲ್ಲಿದ್ದ 20,000 ರೂಪಾಯಿನ ಮಾಲುಗಳನ್ನು ಅಪಹರಿಸಿದರೆಂತಲೂ, ಮರುದಿನ ಪೊಲೀಸ್ ಮತ್ತು ಅಂಚೆ ಇಲಾಖೆಯವರು ಹೋಗಿ ಅಲ್ಲಿ ವಾಯಿಸಿ ಮಾಡಿದಾಗ ಅಲ್ಲಿ ಕೆಲವು ಮಾಲುಗಳು ಸಿಕ್ಕಿದವೆಂತಲೂ ವರ್ತಮಾನ ಬಂದಿದೆ.

ಬರ್ಮಾ ಅಧಿಪತ್ಯದಲ್ಲಿರುವ ಬೆಸ್ಸೀನ್ ಪಟ್ಟಣದೊಳಗೆ ಪ್ರಸಿದ್ಧವಾದ ಒಂದು ಬೌದ್ಧ ದೇವಸ್ಥಾನದ ಶಿಖರದಲ್ಲಿದ್ದ ಸುಮಾರು 10,000 ರೂಪಾಯಿನ ಒಂದು ವಜ್ರವೂ ಇನ್ನು ಕೆಲವು ಆಭರಣಗಳೂ ಕಳೆದ ವಾರ ಕಳುವಾಗಿರುತ್ತವೆ ಅದೆಲ್ಲಾ ಒಟ್ಟು ಒಂದು ಲಕ್ಷ ರೂಪಾಯಿಗಿಂತ ಹೆಚ್ಚಾಗಬಹುದು ಈ ಒಡವೆಗಳನ್ನು ದೇವಾಲಯದ ಮೇಲೆ 200 ಅಡಿ ಎತ್ತರದಲ್ಲಿರುವ ಶಿಖರದಲ್ಲಿ ಮೆಟ್ಟಿಸಿದ್ದರು ಪೋಲೀಸಿನವರು ಕಳ್ಳರನ್ನು ಹಿಡಿಯುವ ತಪಧೂಪ ಮಾಡುತ್ತಿದ್ದಾರೆ ಸುಮಾರು ಐದು ವರುಷಗಳ ಕೆಳಗೆ ಅದೇ ವಜ್ರವನ್ನು ಆ ದೇವಾಲಯದ ಒಬ್ಬ ಕಾವಲುಗಾರನು ಕದ್ದು ಹಿಂದುಸ್ಥಾನಕ್ಕೆ ತಂದು, ಮಧ್ಯ ಹಿಂದುಸ್ಥಾನದ ಒಂದು ಪಟ್ಟಣದಲ್ಲಿ ಅದನ್ನು ಅಲ್ಪ ಕ್ರಯಕ್ಕೆ ವಿಕ್ರಯ ಮಾಡುತ್ತಿದ್ದು ಸಿಕ್ಕಿಬಿದ್ದು ಶಿಕ್ಷಿಸಲ್ಪಟ್ಟನು ಆ ವಜ್ರವನ್ನು ಮತ್ತೆ ತೆಗೆದುಕೊಂಡು ಹೋಗಿ ಅದೇ ಸ್ಥಳದಲ್ಲಿಟ್ಟು ಅಲಂಕಾರ ಮಾಡಿದ್ದರು.

READY FOR SALE

Exhaustive Notes on 'Tanglewood Tales' prescribed for the Lower Secondary Examination, 1913, by Mr Y Nanjundiah, Headmaster, Hindu Boys' School, Mysore. Price 4 annas

Apply to —H VENKATARAMIAH,
[134 1] Vidyanidhi Book Depot, Mysore

ವೃತ್ತಾಂತ ಪತ್ರಿಕೆ.

೧೯೧೩ ನೇ ಇಸವಿ ಆಗಸ್ಟ್ ತಾ ೨೯ ನೇ ಗುರುವಾರ

ಟರ್ಕಿರಾಜ್ಯದ ಕಷ್ಟನಷ್ಟಗಳು

ಟರ್ಕಿ ರಾಜ್ಯಕ್ಕೆ ಸೇರಿದ ಕೆಲವು ಭಾಗಗಳಲ್ಲಿ ಈಚೆಗೆ ವಿಶೇಷವಾದ ಕಷ್ಟನಷ್ಟಗಳು ಪ್ರಾಪ್ತವಾಗಿರುತ್ತವೆ ಮೊದಲನೆ ಟ್ರಿಪೋಲಿಯಲ್ಲಿ ಟರ್ಕಿಯವರಿಗೂ ಇಟಲಿಯವರಿಗೂ ಯುದ್ಧಕಾರ್ಯಗಳು ನಡೆಯುತ್ತಲೇ ಇರುವವು ಇಟಲಿಯವರ ಹಡಗುಗಳು ಸಮುದ್ರಮಾರ್ಗಗಳನ್ನು ಆಕ್ರಮಿಸಿಕೊಂಡು, ಟ್ರಿಪೋಲಿಯಲ್ಲಿ ಕಷ್ಟ ಕಟಿದಾಟಗಳಿಗೆ ಸಿಕ್ಕಿರುವಂಥಾ ಅರಬ್ಬು ಮತ್ತು ಟರ್ಕಿ ಜನಗಳಿಗೆ ಬೆಂಬಲವಾಗಿ ಟರ್ಕಿಯಿಂದ ಹೊಸ ಸೈನ್ಯಗಳನ್ನು ಕಳುಹಿಸದಂತೆ ಅಡಚಣೆಯನ್ನು ಕಲ್ಪಿಸಿರುತ್ತವೆ ಮತ್ತು ಟರ್ಕಿಯವರಿಗೆ ಸೇರಿದ್ದ ಅನೇಕ ದ್ವೀಪಗಳನ್ನು ಇಟಲಿಯವರು ಆಕ್ರಮಿಸಿಕೊಂಡು ಸಮುದ್ರತೀರ ಪಟ್ಟಣಗಳಿಗೆ ಮುತ್ತಿಗೆ ಹಾಕುತ್ತಿದ್ದಾರೆ ಮತ್ತು ಟ್ರಿಪೋಲಿಯ ಸುತ್ತುಮುತ್ತಲೂ ಇರುವ ಪ್ರದೇಶವು ಕ್ರಮಕ್ರಮವಾಗಿ ಇಟಲಿಯವರ ಪಾಲಾಗುತ್ತಿವೆ ಈಚೆಗೆ ಅವರವರಿಗೆ ಕರಾರು ಮಾಡಿಸಿ ಈ ದೀರ್ಘವಾದ ಯುದ್ಧವನ್ನು ಮುಕ್ತಾಯಕ್ಕೆ ತರಬೇಕೆಂದು ಕೆಲವು ಮಹನೀಯರು ಪ್ರಯತ್ನಪಡುತ್ತಿರುವುದನ್ನು ನೋಡಿ ಸಂತೋಷಪಡುತ್ತೇವೆ

ಯೂರೋಪ್ ಖಂಡದೊಳಗೆ ಟರ್ಕಿಗೆ ಸೇರಿದ ಬೇರೆ ಬೇರೆ ಅಧಿಪತ್ಯಗಳಲ್ಲಿ ಒಳಗೆ ಕಲಹಗಳೂ ಕಟಿದಾಟಗಳೂ ಉಂಟಾಗಿರುವವು ಆ ಅಧಿಪತ್ಯಗಳ ಪ್ರಜೆಗಳು ಬೇರೆ ಬೇರೆ ಜನಾಂಗಕ್ಕೆ ಸೇರಿದವರು ಇವರಲ್ಲಿ ಪೂರ್ವಕಾಲದಿಂದ ರಾಜ್ಯದ ಅಧಿಕಾರವನ್ನು ನಡೆಸುತ್ತಿರುವಂಥಾ ಟರ್ಕಿಯವರೂ ಒಂದು ಜನಾಂಗವಾಗಿದ್ದಾರೆ ಕೆಲವು ವರುಷಗಳ ಹಿಂದೆ ಈ ಟರ್ಕಿ ಜನರ ಶಿಫಾರಂ ಕಮಿಟಿಯವರು ಸ್ವಕೀಯರ ಬೆಂಬಲವನ್ನು ಸಂಪಾದಿಸಿಕೊಂಡು ಆ ಕಾಲದ ಸುಲ್ತಾನರನ್ನು ರಾಜ್ಯದಿಂದ ಹೊರಡಿಸಿಬಿಟ್ಟು ನೂತನ ರಾಜ್ಯಭಾರಕ್ರಮಗಳನ್ನು ಏರ್ಪಡಿಸಿದಾಗ್ಗೆ ಇನ್ನು ಮುಂದೆ ಟರ್ಕಿ ರಾಜ್ಯದಲ್ಲಿ ಸಮ್ಮತಿಯೂ ಸಮಾಧಾನವೂ ನೆಲೆಗೊಂಡು ಅಭಿವೃದ್ಧಿಗೆ ಬರಬಹುದೆಂದು ಕಾಣುತ್ತಿತ್ತು ಆದರೆ ಈ ನಿರೀಕ್ಷೆಯು ಸಾರ್ಥಕವಾಗಲಿಲ್ಲ ಆ ಕಮಿಟಿಯವರು ಪಾರ್ಲಿಮೆಂಟನ್ನು ನಿರ್ಮಿಸಿ ಮಂತ್ರಿಗಳು ರಾಜ್ಯಭಾರವನ್ನು ನಿರ್ವಹಿಸುತ್ತಾ ಬಂದಿದ್ದರೂ ಇವರು ಸುಮ್ಮನಿರಲಿಲ್ಲ, ಮಂತ್ರಿಗಳ ಮೇಲೂ ಪಾರ್ಲಿಮೆಂಟಿನ ಮೇಲೂ ತಮ್ಮ ಅಧಿಕಾರವನ್ನು ನಡೆಸುತ್ತಾ ಬಂದಿದ್ದಾರೆ ರಾಜಕೀಯ ವಿಚಾರಗಳಲ್ಲಿ ಪ್ರತಿಕಕ್ಷಿಗಳಾದವರು ಕೊಲ್ಲಲ್ಪಟ್ಟರು ಸಕಲ ಪ್ರಜೆಗಳನ್ನೂ ಜಾತಿಕುಲಗೋತ್ರಗಳ ಪಕ್ಷಪಾತವಿಲ್ಲದೆ ನ್ಯಾಯವಾಗಿಯೂ ಧರ್ಮದಿಂದಲೂ ಪರಿಪಾಲನೆಮಾಡುವುದು ತಪ್ಪಿ ಹೋಗಿ ಪಕ್ಷಪಾತವೂ ಅನ್ಯಾಯವೂ ಕಷ್ಟನಷ್ಟಗಳೂ ಹೆಚ್ಚುತ್ತಿರುವವು ಮ್ಯಾಸಿಡೋನಿಯಾದಲ್ಲಿ ಕ್ರೈಸ್ತ ಪ್ರಜೆಗಳಿಂದ ಬಂದೂಕು ಕತ್ತಿ ಮುಂತಾದ ಆಯುಧಗಳನ್ನು ಕಿತ್ತುಕೊಂಡರು ಅನೇಕ ಕ್ರೂರ ಹಿಂಸೆಗಳನ್ನು ನಡಿಸಿ ಪ್ರಪಂಚಕ್ಕೆ ಹೊರಪಡದಂತೆ ಮರೆಮಾಡಿದರು ಅತ್ತಲಾಗಿ ಅಲ್ಬೇನಿಯಾದಲ್ಲಿರುವ ಪ್ರಜೆಗಳು ಬೇರೆ ಜನಾಂಗದ ಮಹಮ್ಮದೀಯರಾದದ್ದರಿಂದ ಅವರ ಆಯುಧಗಳನ್ನು ಕಿತ್ತುಕೊಂಡು ಅವರ ಸ್ವಕೀಯವಾದ ಕ್ರಮಗಳನ್ನು ಬದಲಾಯಿಸಲು ಹೊರಟಾಗ ಆ ಜನಗಳು ದಂಗೆಯನ್ನೆಬ್ಬಿಸಿದಾರೆ ಈ ದಂಗೆಯು ಇನ್ನೂ ಶಮನವಾಗಲಿಲ್ಲ ಇನ್ನೊಂದು ಕಡೆ ಬಲ್ಗೇರಿಯಾ ಮತ್ತು ಸರ್ವಿಯಾ ಅಧಿಪತಿಗಳ ಪ್ರಜೆಗಳು ಟರ್ಕಿಯವರ ಕೃತ್ಯಗಳನ್ನು ಸಹಿಸಲಾರದೆ ರೇಗಿರುತ್ತಾರೆ ಇದನ್ನೆಲ್ಲಾ ನೋಡುವಲ್ಲಿ ಯೂರೋಪಿಯನ್ ಟರ್ಕಿಯೊಳಗೆ ವಿಶೇಷವಾದ ಕಲಹಗಳೂ ಅಸಮಾಧಾನವೂ ಕಷ್ಟನಷ್ಟಗಳೂ ಪ್ರಾಪ್ತವಾಗಿವೆ ಎಂದು ಗೊತ್ತಾಗುತ್ತದೆ

ಈಗೀಗ ನೋಡುವಲ್ಲಿ ಮೇಲ್ಕಂಡ ಕಮಿಟಿಯವರ ಅಧಿಕಾರವು ಸಡಿಲವಾಗಿ, ಸ್ವಜನರೂ ಪ್ರಜೆಗಳೂ ಅವರ ದುರುಬಾರುಗಳನ್ನು ನೋಡಿ ಅಸಹ್ಯಪಟ್ಟುಕೊಳ್ಳುತ್ತಾ ಬಂದಿದ್ದಾರೆ ಈ ಶಿಫಾರಂ ಕಮಿಟಿಯವರ ಪ್ರೇರಣೆಯಿಂದ ಚುನಾವಣೆಯಾಗಿರುವಂಥಾ ಪಾರ್ಲಿಮೆಂಟ್ ಮೆಂಬರುಗಳು ಅದೇ ಕಮಿಟಿಯ ಪ್ರೋತ್ಸಾಹದಿಂದ ಮಂತ್ರಿಗಳನ್ನು ವಜಾಮಾಡಬೇಕೆಂದು ಸುಲ್ತಾನರಿಗೆ ತಿಳಿಸಿದಾಗ ಸುಲ್ತಾನರು ಪಾರ್ಲಿಮೆಂಟಿನ ಸಲಹೆಯನ್ನು ನೆರವೇರಿಸದೆ ಅದೇ ಮಂತ್ರಿಗಳನ್ನು ಕೆಲಸದಲ್ಲಿ ಇಟ್ಟುಕೊಂಡಿದ್ದಾರೆ ಈಚೆಗೆ ಸುಲ್ತಾನರ ಆಜ್ಞೆಯ ಪ್ರಕಾರ ಆ ಪಾರ್ಲಿಮೆಂಟು ವಜಾ ಆಯಿತು, ಇನ್ನು ಕೆಲವು ದಿನಗಳೊಳಗಾಗಿ ಹೊಸ ಮೆಂಬರುಗಳ ಚುನಾವಣೆ ನಡೆಯುವುದಾಗಿದೆ

Y M C A ಅಸ್ತಿಭಾರ ಶಿಲೆಯ ಪ್ರತಿಷ್ಠೋತ್ಸವವೂ ಶ್ರೀಮನ್ಮಹಾರಾಜರವರ ಭಾಷಣವೂ

"ಸ್ಕೂಲುಗಳನ್ನೂ ಕಾಲೇಜುಗಳನ್ನೂ ಬಿಟ್ಟು ಉದ್ಯೋಗಗಳ ಮೇಲೆ ಹೋಗುವ ಯೌವನಸ್ಥರು ವಿವಿಧವಾದ ಕೆಟ್ಟ ಶೋಧನೆಗಳಿಗೆ ಗುರಿಯಾಗಿರುತ್ತಾರೆಂಬುವುದು ಸರ್ವರಿಗೂ ತಿಳಿದೇ ಇರುತ್ತದೆ ಬಹಳ ವರುಷಗಳ ಹಿಂದೆ ಲಂಡನ್ ಪಟ್ಟಣದಲ್ಲಿದ್ದ ಸರ್ ಜಾರ್ಜ್ ವಿಲ್ಲಿಯಮ್ಸ್ ಎಂಬ ಭಾರಿ ವರ್ತಕರು ತಮ್ಮ ಶ್ಯಾಪಿಗೆ ಕೆಲಸಮಾಡುತ್ತಿದ್ದ ಅನೇಕ ಯೌವನಸ್ಥರಿಗೆ ಏನಾದರೂ ಒಂದು ಉಪಕಾರ ಮಾಡಬೇಕೆಂದು ಉದ್ದೇಶಪಟ್ಟು ಯೌವನಸ್ಥರ ಸಮಾಜವನ್ನು ಏರ್ಪಡಿಸಿದರು ಈ ಸಂಘದವರು ಮಾಡುತ್ತಾ ಬಂದ ಪ್ರಾಮುಖ್ಯವಾದ ಮೂರು ಕಾರ್ಯಗಳೇನೆಂದರೆ—1 ಕೂಟಗಳನ್ನು ನಡಿಸಿ ಅವುಗಳಲ್ಲಿ ಮತವಿಷಯವಾಗಿಯೂ ಭಕ್ತಿಶ್ರೇಯಸ್ಸುಗಳ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡುವುದು 2 ಲೌಕಿಕವಿದ್ಯೆ, ಜ್ಞಾನಾಭಿವೃದ್ಧಿಗಳಿಗೆ ಉಪಯುಕ್ತವಾದ ವಿಷಯಗಳನ್ನು ತೆಗೆದುಕೊಂಡು ಉಪನ್ಯಾಸಗಳನ್ನು ಮಾಡಿ ಚರ್ಚಿಸುವುದು 3 ಕ್ರಿಕೆಟ್, ಫುಟ್ ಬಾಲ್ ಟೆನ್ನಿಸ್ ಮೊದಲಾದ ಅಂಗಸಾಧನೆಗೆ ಅನುಕೂಲವಾದ ಆಟಪಾಟಗಳನ್ನು ಕಲ್ಪಿಸುವುದು ಇವುಗಳೇ ಹೀಗೆ ಈ ಸಮಾಜವು ಯುವಕರಿಗೆ ಪಾರಮಾರ್ಥಿಕ ಮತ್ತು ಐಹಿಕ ಜ್ಞಾನೋದಯವನ್ನುಂಟುಮಾಡುತ್ತಾ ಬಂದುದಲ್ಲದೆ ಅವರ ಆರೋಗ್ಯಭಾಗ್ಯವನ್ನು ವೃದ್ಧಿಪಡಿಸುವುದಾಗಿದ್ದಿತು

ಇದು ತುಂಬಾ ಫಲದಾಯಕವಾದುದೆಂದು ಕಂಡು ಬಂದುದರಿಂದ ಇಂಗ್ಲೆಂಡಿನ ಬೇರೆ ಬೇರೆ ಕಡೆಗಳಲ್ಲಿ ಮಾತ್ರವಲ್ಲದೆ ಅಮೇರಿಕ ಮತ್ತು ಯೂರೋಪ್ ಖಂಡಗಳಲ್ಲಿಯೂ ಏರ್ಪಾಡಾಯಿತು ಈ ಸಮಾಜವು ವೈ ಎಂ ಸಿ ಎ ಎಂದರೆ ಯೌವನಸ್ಥರ ಕ್ರೈಸ್ತ ಸಮಾಜವೆಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ ಕಲ್ಕತ್ತ, ಬೊಂಬಾಯಿ, ಮದ್ರಾಸ್ ಪಟ್ಟಣಗಳಲ್ಲಿ ಈ ಸಮಾಜದ ಭಾರಿ ಭಾರಿ ಕಟ್ಟಡಗಳು ಇರುತ್ತವೆ ಕೆಲವು ವರುಷಗಳ ಹಿಂದೆ ಈ ಸಮಾಜವು ಬೆಂಗಳೂರಲ್ಲಿ ಏರ್ಪಾಡಾಗಿದ್ದಾಗ್ಯೂ ಈ ವರೆಗೂ ಅದಕ್ಕೆ ಸ್ವಂತವಾದ ಒಂದು ಕಟ್ಟಡವು ಇರಲಿಲ್ಲ ಈಗ ದಯಾಳುಗಳಾದ ನಮ್ಮ ಮೈಸೂರು ಗೌರ್ನಮೆಂಟಿನವರು ಬೆಂಗಳೂರು ಸೆಂಟ್ರಲ್ ಕಾಲೇಜ್ ಸಮೀಪದಲ್ಲಿ ಗೌರ್ನಮೆಂಟ್ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯ ಪಕ್ಕದಲ್ಲಿ ಉತ್ಕೃಷ್ಟವಾದ ಮತ್ತು ವಿಸ್ತಾರವಾದ ನಿವೇಶನವನ್ನು ಈ ಸಂಘದವರಿಗೆ ದಾನಮಾಡಿರುತ್ತಾರೆ ಇಲ್ಲಿ ಅವರು ತಮಗೆ ಅನುಕೂಲವಾದ ಕಟ್ಟಡಗಳನ್ನು ಕಟ್ಟಿಕೊಳ್ಳುವುದಕ್ಕೂ ವಿವಿಧ ಆಟಪಾಟಗಳಿಗೆ ತಕ್ಕ ಸ್ಥಳಗಳನ್ನು ಏರ್ಪಡಿಸಿಕೊಳ್ಳುವುದಕ್ಕೂ ಸಾಕಾದಷ್ಟು ಜಾಗವಿರುತ್ತದೆ ಕಳೆದ 13 ನೆಯ ತಾರೀಖಿನಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಅಲ್ಲಿಗೆ ದಯಮಾಡಿಸಿ ಆ ಕಟ್ಟಡದ ಅಸ್ತಿಭಾರ ಶಿಲೆಯನ್ನು ಬಹು ಅಟ್ಟಹಾಸದಿಂದ ಪ್ರತಿಷ್ಠೆ ಮಾಡಿದರು ಆ ಕಾಲದಲ್ಲಿ ಯುವರಾಜರವರೂ ಬ್ರಿಟಿಷ್ ರೆಸಿಡೆಂಟರವರೂ ದಿವಾನರವರೂ ಕೌನ್ಸಿಲ್ ಮೆಂಬರುಗಳೇ ಆದಿಯಾಗಿ ಗೌರ್ನಮೆಂಟಿನ ಎಲ್ಲಾ ಇಲಾಖೆಗಳ ಮುಖ್ಯ ಆಫೀಸರುಗಳೂ ಹಾಜರಾಗಿದ್ದರು ಅಸ್ತಿಭಾರ ಶಿಲೆಯನ್ನು ಪ್ರತಿಷ್ಠೆ ಮಾಡುವುದಕ್ಕೆ ಮುಂಚೆ ನಮ್ಮ ಶ್ರೀಮನ್ಮಹಾರಾಜರವರು ಇಂಗ್ಲೀಷ್ ಭಾಷೆಯಲ್ಲಿ ಮಾಡಿದ ರಸಿಕವಾದ ಭಾಷಣವನ್ನು ನಮ್ಮ ವಾಚಕ ಮಹನೀಯರ ತಿಳುವಳಿಕೆ ಬಗ್ಗೆ ಕನ್ನಡಕ್ಕೆ ಪರಿವರ್ತಿಸಿರುತ್ತೇವೆ

"ಸರ್ ಹ್ಯೂ ಡ್ಯಾಲಿಯವರೇ, ಸಭಿಕರೇ, ಈ ಸಂಘವು ಸನಾಗರೀಕತೆಯುಳ್ಳ ಪಡೆದಿರುವ ಎಲ್ಲಾ ಗೌರ್ನಮೆಂಟುಗಳ ಪ್ರೋತ್ಸಾಹಕ್ಕೆ ಅರ್ಹವಾದುದಾಗಿದೆಯೆಂಬ ಅಂಶವನ್ನು ನಾವು ದೃಷ್ಟಾಂತಪಡಿಸಬೇಕಾದ ಅವಶ್ಯಕತೆ ಇರುವುದಿಲ್ಲ ಈ ಸಂಘವನ್ನು ಏರ್ಪಡಿಸಿದ ಸರ್ ಜಾರ್ಜ್ ವಿಲ್ಲಿಯಮ್ಸ್‌ರವರ ಕೆಲಸವು ಬಹು ತ್ವರೆಯಾಗಿ ಪ್ರವರ್ಧಮಾನಕ್ಕೆ ಬಂದು ಈಗ ದಿಗಂತ ವಿಶ್ರಾಂತಿಯನ್ನು ಹೊಂದಿರುವ ಸಮಾಜವಾಗಿರುತ್ತದೆ ಈ ಸಂಘದವರು ಸ್ವಲ್ಪ ಕಡಮೆ ಸನಾಗರೀಕತೆಗೆ ಬಂದಿರುವ ಎಲ್ಲಾ ದೇಶಗಳಲ್ಲಿಯೂ ಇರುತ್ತಾರೆ ಈಗ ಈ ಸಮಾಜವು ನಮ್ಮ ಮೈಸೂರು ಸೀಮೆಗೂ ಬಂದಿರುವುದರಿಂದ ನಾವು ಅದಕ್ಕೆ ಸುಸ್ವಾಗತವನ್ನು ಬಯಸುತ್ತೇವೆ ಈ ಸಂಘದವರಿಂದ ಉಂಟಾಗುವ ಐಹಿಕ ಮತ್ತು ಪಾರಮಾರ್ಥಿಕ ಜ್ಞಾನೋದಯವು ಕ್ರೈಸ್ತರಿಗೆ ಮಾತ್ರವಲ್ಲದೆ ಈ ಮಂದಿರದೊಳಗೆ ಬಂದು ವಿಹರಿಸಿಕೊಳ್ಳುವ ಕ್ರೈಸ್ತೇತರರಿಗೂ ಕೂಡ ಲಭ್ಯವಾಗಲೆಂದು ಹಾರೈಸುತ್ತೇವೆ ಹಿಂದು ದೇಶದಲ್ಲಿರುವ ಮಿಷನ್ ಸ್ಕೂಲುಗಳೂ ಕಾಲೇಜುಗಳೂ ಅದರಲ್ಲಿ ವಿದ್ಯಾಭ್ಯಾಸಮಾಡಿದವರಿಗೆ ವಿದ್ಯಾದಾನವ ಮಾಡುವುದಲ್ಲದೆ ಅವರಲ್ಲಿ ಅನೇಕರನ್ನು ಸದ್ಗುಣಸಂಪನ್ನರನ್ನಾಗಮಾಡಿರುತ್ತವೆ ಈ ಭಾಗದಲ್ಲಿ ಭಾರತೀಯರು ಮಿಷನರಿಗಳಿಗೆ ತುಂಬಾ ಕೃತಜ್ಞತೆಯುಳ್ಳವರಾಗಿರಬೇಕಾಗಿದೆ ವಿದ್ಯಾರ್ಥಿಗಳು ಸ್ಕೂಲುಗಳನ್ನೂ ಕಾಲೇಜುಗಳನ್ನೂ ಬಿಟ್ಟು ತಮ್ಮ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಲೋಕದೊಳಗೆ ನುಗ್ಗಿ ಹೋಗಬೇಕಷ್ಟೆ ಇಂಥ ಕಾಲದಲ್ಲಿ ಅವರು ಅನೇಕ ವಿಧವಾದ ಶೋಧನೆಗಳಿಗೆ ಗುರಿಯಾಗಿರುತ್ತಾರೆ ಇವರ ವಿಷಯ ಅವರ ಸ್ಕೂಲುಗಳಾಗಲಿ ಕಾಲೇಜುಗಳಾಗಲಿ ಚಿಂತಿಸುವುದಿಲ್ಲ ಇಂಥ ವಿಪತ್ತಿನ ಸಮಯದಲ್ಲಿ ಈ ಸಂಘದವರು ಅಂಥವರನ್ನು ಕೈಹಿಡಿದು ಸನ್ಮಾರ್ಗದಲ್ಲಿ ನಡಿಸುವರೆಂದು ನಿಜವಾಗಿ ಹೇಳಬಹುದು ಯಾವುದು ಯೌವನಸ್ಥನನ್ನು ದೇವರಿಗೆ ಭಯಪಡುವಂತೆಯೂ ತನ್ನ ನೆರೆಯವನಿಗೆ ಉಪಕಾರಿಯಾಗಿರುವಂತೆಯೂ ಮಾಡುತ್ತದೆಯೋ ಅಥವಾ ತಾನು ನಂಬಿಕೊಂಡಿರುವ ಮತವನ್ನೇ ಹಿಡಿದು ದೇಶಾಭಿಮಾನಿಯಾಗಿಯೂ ಪರೋಪಕಾರಿಯಾಗಿಯೂ ಇರುವಂತೆ ಬೋಧಿಸುತ್ತದೆಯೋ ಅದಕ್ಕಿಂತಲೂ ಉತ್ತಮವಾದ ಶಿಕ್ಷಣವು ಮತ್ತೊಂದಿರಲಾರದು

"ಈ ಸಂಘವನ್ನು ಇಲ್ಲಿ ಏರ್ಪಡಿಸಿರುವವರು ಸ್ವಾರ್ಥಪರತೆಯನ್ನು ಬಿಟ್ಟು ಪರಹಿತೈಷಿಗಳಾಗಿರುವುದರಿಂದಲೂ ಅವರ ಕಾರ್ಯವು ಇಷ್ಟರಮಟ್ಟಿಗೆ ಸಿದ್ಧಿಗೆ ಬಂದಿರುವುದರಿಂದಲೂ ನಾವು ಬಹಳ ಸಂತೋಷಪಡುತ್ತೇವೆ ನಾವು ಈ ಕಟ್ಟಡದ ಅಸ್ತಿಭಾರಶಿಲೆಯನ್ನು ಇಡುವಲ್ಲಿ ಈ ಸಂಘದವರ ಅಭೀಷ್ಟವು ಸಿದ್ಧಿಗೆ ಬಂದು ಇವರುಗಳು ಚಿರಕಾಲ ನಮ್ಮ ಮಧ್ಯದಲ್ಲಿ ಪ್ರಯೋಜಕರಾಗಿ ಬಾಳುತ್ತಿರಬೇಕೆಂಬುವುದೇ ನಮ್ಮ ಕುತೂಹಲವಾಗಿರುತ್ತದೆ"

ಒಳದೇಶದ ವೃತ್ತಾಂತಗಳು

ಶ್ರೀಮನ್ ಯುವರಾಜರವರು ಮಹಾರಾಜರವರ ಮಿಲಿಟರಿ ಸೆಕ್ರೆಟರಿಯಾಗಿಯೂ, ಕರ್ನಲ್ ಎ ಎ ಜೋಕ್ಸ್ ಯವರು ಯುವರಾಜರವರ ಅಸಿಸ್ಟೆಂಟರಾಗಿಯೂ ನೇಮಕವಾಗಿರುತ್ತಾರೆ

* * *

ಶಿವಗಂಗಾ ಮಠದ ಕೃಷ್ಣಪ್ಪನೆಂಬ ಒಬ್ಬ ಕರಿಬಾರನು ಸುಳ್ಳಾದ ಶ್ರೀಮುಖವನ್ನು ತೋರಿಸಿ ಬೆಂಗಳೂರಿನಲ್ಲಿ ಕೆಲವರಿಂದ ಹಣ ವಸೂಲ್ಮಾಡಿದನೆಂದು ಮೊಕದ್ದಮೆ ಇಗ ವಿಚಾರಣೆಯಾಗುತ್ತಿದೆ

ಕೋಲಾರದಲ್ಲಿ ಚಲಾವಣೆಯಲ್ಲಿದ್ದ ಕೋಲಾರ್ ಬ್ಯಾಂಕು ಲೇವಾದೇವಿಯನ್ನು ನಿಲ್ಲಿಸಿರುತ್ತದೆ ಲಿಕ್ವಿಡೇಟರಾಗಿ ನೇಮಕವಾಗಿರುವ ಮಾ॥ ಕೆಳಕೋಟೆ ತಿಮ್ಮರಾಮಣ್ಣನವರು ಬ್ಯಾಂಕಿನ ಲೇವಾದೇವಿಗಳನ್ನು ವ್ಯವಸ್ಥೆಮಾಡುವರು

* * *

ಬೌರಿಂಗ್‌ಪೇಟೆ ಕೋಲಾರದ ರೈಲ್ವೆ ಸಾಲದ ಕೆಲವು ಪತ್ರಗಳು ಕಳುವಾಗಿ ಕೋಲಾರದ ಡಿಸ್ಟ್ರಿಕ್ಟ್ ಖಜಾನೆಗೆ ಕಳುಹಿಸಿದೆ ಎಂದೂ, ಸಾಲ ಕೊಟ್ಟಿರುವವರು ಟ್ರೆಜರಿ ಆಫೀಸಿನಿಂದ ಕೇಳಿ ಪತ್ರಗಳನ್ನು ತೆಗೆದುಕೊಳ್ಳತಕ್ಕದ್ದೆಂದೂ ಸರ್ಕಾರದವರು ತಿಳಿಸಿದಾರೆ

* * *

ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ಸೋಮವಾರ ಬೆಂಗಳೂರಿಂದ ರಾಜಧಾನಿಗೆ ದಯಮಾಡಿ ಒಂದೆರಡು ದಿನ ಅಲ್ಲಿ ನೀಲಗಿರಿಗೆ ಚಿತ್ತೈಸುವವರಾಗಿದಾರೆಂದೂ, 4 10 ದಿನಗಳ ಮೇಲೆ ಗೌರಿಹಬ್ಬ ಕಾಲಕ್ಕೆ ವಾಪಸು ಬರುವರೆಂದೂ ವರ್ತಮಾನವಿದೆ

* * *

ಮೈಸೂರು ಪಟ್ಟಣದ ಅಂಜುಮನ್ ಸಂಘದವರು ಕಳೆದ ವಾರ ಮುಲ್ಲಾ ವರ ಒಂದು ದೊಡ್ಡ ಸಭೆಯನ್ನು ನಡಿಸಿ ಹೈದರಾಬಾದ್ ನೈಜಾಮರವರ ಕುಮಾರರಿಗೆ ಪಟ್ಟಾಭಿಷೇಕವಾದ ಸಂತೋಷವನ್ನು ಪ್ರಕಾಶಪಡಿಸಿ, ಅವರಿಗೆ ತಮ್ಮ ಸಂತೋಷವನ್ನು ತಿಳಿಸುವಂತೆ ತೀರ್ಮಾನಮಾಡಿದರು

* * *

ರಾಜಧಾನಿಯಲ್ಲಿ ಪ್ರಕಟವಾಗುತ್ತಿದ್ದ ಸಾಧ್ವಿ ಎಂಬ ಪಕ್ಷಪತ್ರಿಕೆಯನ್ನು ೫ ವಾರಗಳು ಸರ್ಕಾರದ ಅಪ್ಪಣೆಯನ್ನು ಪಡೆದು ವಾರ ಪತ್ರಿಕೆಯಾಗಿ ವಾರಕ್ಕೆ ಎರಡು ವಾರಗಳಿಂದ ಪ್ರಕಟಿಸಲುತ್ತಿದಾರೆ ಇದರಲ್ಲಿ ಕೆಲವು ಭಾಗ ಕನ್ನಡವೂ, ಕೆಲವು ಭಾಗ ಇಂಗ್ಲೀಷೂ ಆಗಿದೆ ಈ ಪತ್ರಿಕೆಯು ಅಭಿವೃದ್ಧಿ ಹೊಂದಿ ಶಾಶ್ವತವಾಗಿ ನಡೆಯುತ್ತ ಬರಲೆಂದು ಹಾರೈಸುತ್ತೇವೆ

* * *

ಒಬ್ಬ ಬಾತ್ಮೀದಾರರಿಂದ—ಯುವರಾಜರ ವಿವಾಹ ಮಹೋತ್ಸವ ಕಾಲದಲ್ಲಿ ಆಸ್ಥಾನ ವಿದ್ವಾಂಸರ ಸ್ವಕೀ ವೇ॥ ರಾಜಗೋಪಾಲಯ್ಯಂಗಾರ್ ಎಂಬುವರಿಗೆ ಕೊಟ್ಟಿದ್ದ ಶಾಲು ಮುಂತಾದವು ಕಳುವಾದವೆಂದು ಫಿರ್ಯಾದು ಮಾಡಿದ್ದರು ಆ ವ್ಯಕ್ತಿ ಒಂದು ಶಾಲು ಈಗ ಪಡಿವಾರಕ್ಕೆ ಲಿಂಗ ಉರುಫ್ ಗಿಂಡೆ ಎಂಬುವನ ಬಳಿ ಇದ್ದುದನ್ನು ಡಿಟೆಕ್ಟಿವ್ ಪೊಲೀಸ್ ದಾಸಪ್ಪನು ಪತ್ತೆಮಾಡಿರುತ್ತಾನೆ

* * *

ಹಾಸನದಲ್ಲಿ ನಡೆದ ಶ್ರೀಗಂಧದ ಕಳುವಿನ ಮೊಕದ್ದಮೆಯಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಯಿತು ಈ ಮೊಕದ್ದಮೆಯನ್ನು ಪತ್ತೆಮಾಡುವುದಕ್ಕೆ ಸಹಾಯಮಾಡಿದವರಿಗೂ ಸಾಹಸಪಟ್ಟವರಿಗೂ ಮೈಸೂರು ಸರ್ಕಾರದವರು 1 200 ರೂಪಾಯಿ ಬಹುಮಾನ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ ಈ ಪೈಕಿ ಬೊಂಬಾಯಿನ ಒಬ್ಬ ವರ್ತಕನಿಗೆ 300 ರೂಪಾಯಿ, ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರಿಗೆ 100, ನಮ್ಮ ಸೀಮೆಯ ಪೊಲೀಸ್ ಇನ್ಸ್‌ಪೆಕ್ಟರುಗಳಾದ ಮಾ॥ ಸಿ ಕೃಷ್ಣರಾಯರಿಗೂ, ಮೆ ಎಸ್ ರಾಮಪ್ಪನವರಿಗೂ ತಲಾ 100 ರೂಪಾಯಿ ಇತರರಿಗೆ 600 ರೂಪಾಯಿ, ಈ ಪ್ರಕಾರ ಹಂಚಿಕೊಡುವರು

* * *

ಬೆಂಗಳೂರು ಚಾಮರಾಜಪೇಟೆಯ ಆಸ್ಪತ್ರೆಯಲ್ಲಿ ಡಾಕ್ಟರಾಗಿದ್ದು ಪ್ರಜೆಗಳ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದ ಮಿ॥ ವಾಸುದೇವಮೂರ್ತಿ ಮೊದಲಿಯಾರ್ ಕಾಲವಾದದ್ದರಿಂದ ಬೆಂಗಳೂರು ಪುರವಾಸಿಗಳು ಕಳೆದ ವಾರ ಒಂದು ಸಭೆಯನ್ನು ನಡಿಸಿ, ಅವರ ಪರೋಪಕಾರಗುಣವನ್ನು ಕೊಂಡಾಡಿ, ಅವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಯಾವುದಾದರೊಂದು ಕಾರ್ಯವನ್ನು ನಡಿಸಬೇಕೆಂದು ತೀರ್ಮಾನಮಾಡಿದರೆಂದು ಕೇಳಿ ಸಂತೋಷಪಡುತ್ತೇವೆ ಇವರು ಹಿಂದೆ ಕೋಲಾರ್‌ಪೇಟೆಯಲ್ಲಿದ್ದಾಗ್ಗೆ ಅಲ್ಲಿನ ಪ್ರಜೆಗಳು ಅವರ ಸದ್ಗುಣ ಸಹಿತ ಚಿಂತನೆಗಳನ್ನು ಅನುಭವದಿಂದ ತಿಳಿದು, ಅವರಿಗೆ ಭಂಗಾರದ ತೋಡಾಗಳನ್ನು ಮಾಡಿಸಿಕೊಟ್ಟರು

* * *

ಈ ವಾರದ ಗೆಜೆಟ್ಟಿನಲ್ಲಿ ರೆವಿನ್ಯೂ ಕಮೀಷನರವರು ಸಂಸ್ಥಾನದ ಮಳೆಕಾಲಸ್ಥಿತಿಯು ಸುಮಾರಾಗಿ ತೃಪ್ತಿಕರವಾಗಿದೆ ಎಂದು ಬರೆದಿರುತ್ತಾರೆ ಆದರೆ ಬೆಂಗಳೂರು ಡೆಯಿಲಿ ಪೋಸ್ಟ್ ಎಂಬ ಪತ್ರಿಕೆಯಲ್ಲಿ ತುಮಕೂರು, ಕೋಲಾರ, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಮಳೆ ಇಲ್ಲದೆ ಬೆಳೆಗಳು ಕೆಟ್ಟುಹೋಗಿರುವುದರಿಂದ ಕ್ಷಾಮನಿವಾರಣೆಯ ಕಾರ್ಯಗಳನ್ನು ನಡಿಸಲಾರಂಭಿಸುವಂತೆ ಸರ್ಕಾರದವರು ರೆವಿನ್ಯೂ ಮತ್ತು ಇಂಜನಿಯರ್ ಇಲಾಖೆಗಳಿಗೆ ಅಪ್ಪಣೆಕೊಟ್ಟಿರುತ್ತಾರೆಂದು ಓದಿದೆವು ಈಗ ಧಾನ್ಯಗಳ ಬೆಲೆಗಳೇನೋ ಕ್ಷಾಮಕಾಲದಲ್ಲಿದ್ದಂತೆ ಇರುತ್ತವೆ ಸಂಸ್ಥಾನದೊಳಗೆ ಬಡಬಗ್ಗರಿಗೂ ಅಲ್ಪ ಸಂಬಳಗಾರರಿಗೂ ಜೀವನ ನಡೆಯುವುದು ಬಹಳ ಪ್ರಯಾಸವಾಗಿದೆ

* * *

ಮೆ ಎಸ್ ವೆಂಕಟರಮಣಶೆಟ್ಟರು ಸರ್ಕಾರದಿಂದ ವೇತನ ಪಡೆದು ಸೀಮೆಗೆ ಹೋಗಿ ಇಂಜನಿಯರ್ ವಿದ್ಯೆಯನ್ನು ಕಲಿತು, ವಿಮಾನಯಂತ್ರ ರಚನೆಯಲ್ಲಿ ಹೆಸರುವಾಸಿಯ ಜೊತೆಗೆ ಮೆಡಲನ್ನೂ ಪಡೆದು ವಾಪಸು ಬಂದರು ಇವರಿಗೆ ಬೆಂಗಳೂರಿನಲ್ಲಿ ವೈಶ್ಯ ಮಹಾಜನಗಳು ಒಂದು ಸಭೆಯನ್ನು ಸೇರಿಸಿ ಮೆ॥ ಎಂ ಚೆಂಗ್ಯಯಶೆಟ್ಟರವರ ಅಧ್ಯಕ್ಷತೆಯಲ್ಲಿ ಸುಸ್ವಾಗತವನ್ನು ಬಯಸಿ ಬಹುಮಾನವಾಗಿ ಒಂದು ಚಿನ್ನದ ಗಡಿಯಾರವನ್ನು ಒಪ್ಪಿಸಿದ್ದಲ್ಲದೆ ಅವರಿಂದ ತಮ್ಮ ಜನಕ್ಕೆಲ್ಲಾ ಒಳ್ಳೇ ಹೆಸರು ಬಂತೆಂದು ತಿಳಿದು ಸಂತೋಷಪಟ್ಟರು ಆದರೆ ಆ ಸಂಘದವರು ಅವರ ಮೇಲೆ ಸಮುದ್ರಯಾನಮಾಡಿದಂಥ ದೋಷವನ್ನು ಹೊರಿಸದೆ ಸಹಪಂಕ್ತಿ ಮುಂತಾದದ್ದಕ್ಕೆ ಸೇರಿಸಿಕೊಳ್ಳುವರೋ ಇಲ್ಲವೋ ಮುಂದೆ ತಿಳಿಯಬೇಕು

* * *

ಮದರಾಸ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಪ್ರತಿಯಾಗಿ ಮೈಸೂರು ಸರ್ಕಾರದವರು ಜಾರಿಗೆ ತಂದಿರುವ ಸ್ಕೂಲ್ ಫೈನಲ್ ಎಂಬ ಪರೀಕ್ಷೆಯು ಮುಂದಿನ ವರುಷವೇ ನಡೆಯೋಣವಿರಿಂದ ಈ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಬಾಗದಲ್ಲಿ ಅವಶ್ಯವೆಂದು ತೋರುವ ಒಂದಂಥಾ ಬದಲಾವಣೆಗಳನ್ನು ಆಲೋಚಿಸಿ ಗೊತ್ತುಮಾಡುವುದಕ್ಕೋಸ್ಕರ ಹೈ ಸ್ಕೂಲುಗಳ ಹೆಡ್ ಮಾಸ್ಟರುಗಳೆಲ್ಲಾ ಈ ವಾರ ಬೆಂಗಳೂರಿನಲ್ಲಿ ಒಂದು ಕಡೆ ಸೇರುವವರಾಗಿದ್ದಾರೆ ಇದಲ್ಲದೆ ಈ ಹೊಸ ಪರೀಕ್ಷೆಯನ್ನು ನಡಿಸುವುದಕ್ಕೆ ನೇಮಕವಾಗಿರುವ

...ಮೆಂಬರುಗಳೂ ಬೆಂಗಳೂರಿನಲ್ಲಿ ಸೇರಿ ವಿಷಯಗಳನ್ನು ಚರ್ಚೆ ಮಾಡು...ವಾಗಿವಾರೆ ಮುಖ್ಯನೆಯದಾಗಿ ಸ್ಕೂಲುಗಳ ಇನ್ಸ್‌ಪೆಕ್ಟರುಗಳೆಲ್ಲಾ ಒಂದು ...ಟಿಂಗ್ ಮಾಡಿ, ಸಂಸ್ಥಾನದ ವಿದ್ಯಾಭಿವೃದ್ಧಿಯಾಗುವುದಕ್ಕೆ ಏಕರೀತಿ ...ದ ಶಿಕ್ಷಣ ಕ್ರಮಗಳನ್ನು ರೂಢಿಸುವುದನ್ನು ಕುರಿತು ಪರ್ಯಾಲೋಚಿಸು...ವಾಗಿದಾರೆ

* * *

ಕಳೆದ ವಾರ ರಾಜಧಾನಿಯಲ್ಲಿ ಮೋಡ ಹಾಕಿಕೊಂಡು, ಆಗಾಗ್ಗೆ ...ತುರು ಮಳೆ ಸುರಿಯುತ್ತಿದೆ ಬಿಸಿಲು ಬರುವುದು ಅಪರೂಪ ಹಿಂದಿನ ಬುಧ...ದ ಮಧ್ಯಾಹ್ನದ ಮೇಲೆ ಸುಮಾರು 1½ ಅಂಗುಲ ಮಳೆ ಸುರಿದು ಚರಂಡಿ ...ತುಂಬಿ, ನೀರು ರಸ್ತೆಗಳ ಮೇಲೆಲ್ಲಾ ಹರಿಯಿತು ಹಳೇ ಅಗ್ರಹಾರದ ...ನ ಕರೋಹಟ್ಟಿ ಬೀದಿಯಲ್ಲಿ ಮೂರು ಮಂದಿ ಆಯತಪ್ಪಿ ಚರಂಡಿಯೊಳಗೆ ...ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದರು ಪುಣ್ಯಾತ್ಮರು ಸಾಹಸಪಟ್ಟು ...ವನ್ನು ಎತ್ತಿಹಾಕಿ ಬದುಕಿಸಿದರು ಒಬ್ಬ ಹೆಂಗಸು ಮಾತ್ರ ಸಿಕ್ಕದೆ ಚರಂ...ಯಲ್ಲೇ ಅಕಾಲಮರಣವನ್ನು ಹೊಂದಿದ್ದು ದುಃಖಕರವಾಗಿದೆ ಸುಮಾರು ...ವರುಷಗಳ ಹಿಂದೆ ಶಿವರಾಮಪೇಟೆಯ ಅಂಗಡಿ ಸಾಲಿನ ದೊಡ್ಡ ಬಚ್ಚ...ಲ್ಲಿ ಇಂಥಾ ಅನಾಹುತ ನಡೆದು ಒಬ್ಬ ಹುಡುಗನು ಸತ್ತುಹೋದ ಮೇಲೆ ...ನಿಸಿಪಾಲಿಟಿಯವರು ಆ ಬಚ್ಚಲಿಗೆ ಸ್ವಲ್ಪದೂರ ಕಲ್ಲುಗಳನ್ನು ಹೊದ್ದಿಸಿ... ಇನ್ನೂ ಕೆಲವು ಭಾಗ ಹಾಗೇ ಅಪಾಯಕರವಾದ ಸ್ಥಿತಿಯಲ್ಲಿದೆ ಈಗ ...ದ ಅಪಾಯಕವನ್ನು ನೋಡಿ ಮ್ಯುನಿಸಿಪಾಲಿಟಿಯವರು ಮೇಲ್ಗಂಡ ಅಗಲ ...ಬಚ್ಚಲಿಗೆ ಕಲ್ಲು ಹೊದ್ದಿಸಬೇಕೆಂದು ಅಂದಾಜು ಪಟ್ಟಿಗಳನ್ನು ತಯಾ...ಸುತ್ತಾರೆ ಪೂರ್ವದಲ್ಲಿ 2-3 ಅಂಗುಲ ಮಳೆ ಸುರಿಯುತ್ತಿದ್ದಾಗ ...ಪ್ರಾಣ ನಷ್ಟವಾಗುತ್ತಿರಲಿಲ್ಲ ಈಗ ಸ್ವಲ್ಪ ಮಳೆ ಬಂದರೂ ಬಚ್ಚಲ ...ಗ ತಡೆಯಿಲ್ಲದೆ ಸಾಗಿಹೋಗಲು ಅಲ್ಲಲ್ಲಿ ಅಡಚಣೆಗಳು ಉಂಟಾಗಿ ...ಕಷ್ಟನಷ್ಟಗಳು ಪ್ರಾಪ್ತವಾಗುತ್ತವೆ ಇದನ್ನು ಬೇಗನೆ ಕ್ರಮಪಡಿಸು...ಕ್ಷೇಮಕರವೂ ಅವಶ್ಯವೂ ಆದದ್ದು

ಮೈಸೂರು ಗೆಜೆಟ್ ಸಂಗ್ರಹ

ಕುಣಿಗಲು ಮ್ಯುನಿಸಿಪಲ್ ಬೋರ್ಡಿಗೆ ಮುಂದೆ ಹೇಳುವವರನ್ನು ಮೆಂಬ...ರಾಗಿ ನೇಮಿಸಿದೆ —ಮೆ॥ ಗಳಾದ ರಾಮಪ್ಪನವರು, ಕಪಿನೀಪತಿಶಾಸ್ತ್ರಿ..., ತಿಮ್ಮಪ್ಪನವರು, ಗುಂಡಪ್ಪನವರು, ಸೈಯದ್ ಅಬ್ದುಲ್ ರಜಾಕ್ ...ಸಾಬು

...ಕೆರೆ ಟೌನ್ ಮ್ಯುನಿಸಿಪಲ್ ಕೌನ್ಸಿಲಿಗೆ ಮುಂದಿ ವರ್ಷಕರಾದ ...ಕೃಷ್ಣಾವಧಾನಿಯವರು ಕೌನ್ಸಿಲರಾಗಿ ಚುನಾಯಿಸಲ್ಪಟ್ಟಿದಾರೆ

ಮುಳಬಾಗಲ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಮೆ॥ ಗಳಾದ ಕಸ್ತು ಹೈದರ್ ...ಸಾಬು, ಹೆಬ್ಬಗ ಕೃಷ್ಣಮೂರ್ತಿರಾಯರು, ಮಹಮುದ್ ಯೂಸಿಂ ಸಾಬರು, ...ನಾರಾಯಣಸ್ವಾಮಿ ಶೆಟ್ಟರು, ಕೊಪ್ಪರಂ ಸೀತಾರಾಮಯ್ಯನವರು ...ವಧಿ ಹೊಂದಿದ ಕೌನ್ಸಿಲರುಗಳಾಗಿದ್ದರೆ ಮೆ॥ ಗಳಾದ ರಘುನಾಥಶೆಟ್ಟರು, ...ಸೀತಾರಾಮಪ್ಪನವರು ಮುನಿವೆಂಕಟಗೌಡರು ಗುರುಮೂರ್ತಿಶೆಟ್ಟಿ ...ಕೃಷ್ಣಪ್ಪನವರು ಕೌನ್ಸಿಲರುಗಳಾಗಿ ನೇಮಕವಾಗಿದ್ದಾರೆ

...ಕರ್ನಾಟಕದವರು ಬೀದೂರು ಟೌನ್ ಮತ್ತು ಚಿಂತಾಮಣಿ ಟೌನ್ ಇವೆರಡ...ಹೊಸ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಈ ವರುಷ ಸೆಪ್ಟಂಬರ್ ...ರ ಪ್ರಾರಂಭದಿಂದ ಮ್ಯುನಿಸಿಪಾಲಿಟಿಗಳಾಗಿ ಮಾಡಲಾಗುತ್ತವೆಂದು ಪ್ರಕಟಿ...ದಾರೆ

...ಕೃಷ್ಣರಾಜನಗರ ಮ್ಯುನಿಸಿಪಲ್ ಬೋರ್ಡಿಗೆ ಮೆ॥ ಗಳಾದ ನಟೇಶನೊಡನ...ವನ್ನು, ರಾಮಚಂದ್ರಯ್ಯನವರನ್ನು, ಅನಂತ ನಗರನ್ನು, ತೀರ್ಥಹಳ್ಳಿ ಮ್ಯುನಿಸಿ...ಬೋರ್ಡಿಗೆ ಮೆ॥ ಮೈದೂರು ತಿಪ್ಪಾಜೋಯಿಸರನ್ನು ಮೆಂಬರುಗಳಾಗಿ ...ನೇಮಕವಾಡಿದೆ

...ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮೆ॥ ಜಿ ಕೃಷ್ಣಮೂರ್ತಿ...ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ...ವರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಅವರು ಅದರ ಕೂಡ ...ರಜವನ್ನೂ ಉಪಯೋಗಿಸಿಕೊಳ್ಳಬಹುದು

...ಮತ್ತೊಂದು ಹುಕುಂ ಕೊಡುವ ತನಕ ಅ॥ ಕನ್ಸರ್ವೇಟರ್ ಮೇ॥ ಎಂ ...ಯವರು ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿರತಕ್ಕದ್ದು

...ಗವರ್ನಮೆಂಟ್ ಅ॥ ಸೆಕ್ರೆಟರಿ ಮೆ॥ ಎಸ್ ಹಿರಿಯಣ್ಣಯ್ಯನವರಿಗೆ ...ತಾ 22 ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

...ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ ಕಮಿಷನರ್ ಮೆ॥ ಆರ್ ನಾನಾಸಾಹೇಬ...ರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

...ಮುಂದೆ ಹೇಳುವ ಅಮಲ್ದಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ — ...ಗಳಾದ ಟಿ ವೆಂಕಟರಾಮಯ್ಯನವರು ದಾವಣಗೆರೆಯಿಂದ ಕೃಷ್ಣರಾಜಪೇ...ಟೆಗೆ, ...ಷ್ ಧರ್ಮರಾಯರು ಕೃಷ್ಣರಾಜಪೇಟೆಯಿಂದ ತೀರ್ಥಹಳ್ಳಿಗೆ, ...ಶ್ರೀನಿವಾಸಯ್ಯಂಗಾರ್ಯರು ಮೊಳಕಾಲ್ಮೂರಿನಿಂದ ದಾವಣಗೆರೆಗೆ, ಎಚ್ ಶ್ರೀನಿವಾ...ಸಯ್ಯಂಗಾರ್ಯರು ಜಗಲೂರಿನಿಂದ ಪಾವಗಡಕ್ಕೆ, ಕೆ ಕೆ ವೆಂಕಟಸ್ವಾಮಿ ಅಯ್ಯ...ರು ಪಾವಗಡದಿಂದ ಕುಣಿಗಲಿಗೆ, ಟಿ ಬಾಲಯ್ಯನವರು ಕುಣಿಗಲಿನಿಂದ ...ಜಗಲೂರಿಗೆ

...ಶ್ರೀಮನ್ಮಹಾರಾಜರವರು ಜಮಾದಾರ್ ಅಡ್ಜುಟೆಂಟ್ ಇಬ್ರಾಹಿಂ ...ಖಾನರವರನ್ನು ಜುಲೈ ತಾ 1 ರಿಂದ ಮೈಸೂರು ಇಂಪೀರಿಯಲ್ ಸರ್ವಿಸ್ ...ಟ್ರಾನ್ಸ್‌ಪೋರ್ಟ್ ಕೋರಿನ ಎ ಡಿವಿಜನ್ ಕಮ್ಯಾಂಡರಾಗಿ ನೇಮಕ ಮಾಡಿ...ದ್ದಾರೆ

ಇಂಡಿಯಾ ದೇಶದ ವೃತ್ತಾಂತಗಳು

ಬೊಂಬಾಯಿ ಗವರ್ನರ್ ಕೆಲಸವು ಲಾರ್ಡ್ ಚೆಲಂಸ್‌ಫರ್ಡ್‌ಯವರಿಗೆ ...ಆಗುವದೆಂದು ಸುದ್ದಿ ಹರಡಿತ್ತಷ್ಟೆ ಅವರು ಈ ಸುದ್ದಿಯು ನಿಜವಲ್ಲವೆಂದು ಹೇಳು...ತ್ತಾರೆ

* * *

ವಾಯುವ್ಯ ಸರಹದ್ದು ಪ್ರಾಂತ್ಯದಲ್ಲಿ ಕಳೆದ ಶನಿವಾರ ಬೆಳಗಿನ ಝಾವದ ...ದ 3 ಗಂಟೆಯವರೆಗೆ ಭೂಮಿಯು ಕಂಪಿಸಿತೆಂದೂ, ಪಿಷಾವರ್ ಪಟ್ಟಣ...ದ ಕೆಲವು ಮನೆಗಳೂ ದೊಡ್ಡ ಕಟ್ಟಡಗಳೂ ಅಲುಗಿ ಬಿರುಕು ಬಿಟ್ಟವೆಂದೂ ...ವರ್ತಮಾನ ಬಂದಿದೆ

ನೆಲ್ಲೂರು ಡಿಸ್ಟ್ರಿಕ್ಟ್ ಬೋರ್ಡಿನವರು ಆ ಡಿಸ್ಟ್ರಿಕ್ಟಿನಲ್ಲಿ ಸಣ್ಣ ರೈಲ್ ರಸ್ತೆಗಳನ್ನು ಮಾಡಿಕೊಳ್ಳುವುದಕ್ಕೆ ಅಲ್ಲಿರುವ ಜಮೀನುಗಳ ಹಿಡುವಳಿದಾರರೆಲ್ಲ ರಿಂದಲೂ ಅವರು ಕೊಡುವ ಕಂದಾಯದ ಮೇಲೆ ರೂಪಾಯಿಗೆ ಮೂರು ಕಾಸಿ ನಂತೆ ಒಂದು ವರಿಯನ್ನು ಕೂಡಿಸಬೇಕೆಂದು ತೀರ್ಮಾನ ಮಾಡಿದಾರೆ

* * *

ಬರೋಡಾ ಸಂಸ್ಥಾನದ ಮಹಾರಾಜರವರ ಸಹೋದರರಾದ ಶ್ರೀಮಂತ ಸಂಪತ್‌ರಾವ್ ಗಾಯಕವಾಡರವರು ಆಫ್ರಿಕಾಖಂಡದಲ್ಲಿ ಮೊಂಬಾಸಾ ಎಂಬ ಪ್ರಾಂತ್ಯಕ್ಕೆ ಶಿಕಾರಿ ಮಾಡುವ ಉದ್ದೇಶ್ಯ ಕಳೆದ ಶನಿವಾರ ಬೊಂಬಾಯಿ ನಿಂದ ಹಡಗಿನಲ್ಲಿ ಪ್ರಯಾಣವಾಗಿದರು ಅವರ ಕೂಡ ಮೂರು ಮಂದಿ ದೊಡ್ಡ ಮನುಷ್ಯರೂ, ನಾಲ್ವರು ಸೇವಕರೂ ಹೋಗಿದಾರೆ

* * *

ಕಲ್ಕತ್ತಾ ಪಟ್ಟಣದಲ್ಲಿ ಕಾಲಿಕೇಶ್ವರ ಮೊಹಲ್ಲಾ ಖಳ ಅಬ್ಬಾಯಿಜಾಗೂರ್ ಎಂಬಾತನ ಮನೆಗೆ ಕಳೆದ ಬುಧವಾರ ರಾತ್ರಿ ಕೆಲವು ಮಂದಿ ಕಳ್ಳರು ನುಗ್ಗಿ ಅಬ್ಬಾಯಿ, ಇವನ ಹೆಂಡತಿ, ಇಬ್ಬರು ಗಂಡುಮಕ್ಕಳು, ಈ ನಾಲ್ವರನ್ನೂ ಕೊಂದುಹಾಕಿ, ಆ ಮನೆಯಲ್ಲಿದ್ದ ಜಿಂದಗಿಯನ್ನೆಲ್ಲಾ ಹೊತ್ತುಕೊಂಡು ಹೋದರು ಕಳ್ಳರು ಇನ್ನೂ ಯಾರೆಂದು ಪತ್ತೆ ಆಗಿಲ್ಲ

* * *

ದೆಹಲಿ ಪಟ್ಟಣದಲ್ಲಿ ಪೋಲೀಸ್ ಡೆಪ್ಯುಟಿ ಕಮಿಷನರ್‌ರೂ, ಸೂಪರಿಂಟೆಂಡೆಂಟರೂ, ಎಕ್ಸೈಸ್ ಇನ್ಸ್‌ಪೆಕ್ಟರೂ ಪಂಜಾಬಿಗಳಂತೆ ವೇಷ ಮರೆಸಿಕೊಂಡು ಛಟ್ಟಿಷಹಾಜ ಎಂಬಲ್ಲಿ ಒಂದು ಮನೆ ಮುಗ್ಗಿ ಕೋಕೈನ್ ಎಂಬ ಮದ್ಯವಸ್ತುವನ್ನು ಕೊಂಡು ಮಾರುವವರ ಒಂದು ಗುಂಪನ್ನು ದಸ್ತಗಿರಿ ಮಾಡಿದರು ಅಲ್ಲಿ ಒಬ್ಬ ಹೆಂಗಸೂ ಸೇರಿ 10 ಜನರು ಸಿಕ್ಕಿಬಿದ್ದರು

* * *

ಕಲ್ಕತ್ತಾ ಹೈಕೋರ್ಟಿನ ಜಡ್ಜರಾದ ಮೆ॥ ಷರ್‌ಫುದ್ದೀನ್‌ಯವರು ಆ ಪಟ್ಟಣದೊಳಗಿರುವ ಮಹಮದೀಯ ಬಾಲಕಿಯರಿಗೆ ಧರ್ಮಾರ್ಥವಾಗಿ ವಿದ್ಯೆ ಕಲಿಸುವಂಥಾ ಪಾಠಶಾಲೆಯನ್ನು ಪ್ರಾರಂಭಿಸಬೇಕೆಂದು ಉದ್ದೇಶಪಟ್ಟು ಅದರ ಮೂಲಧನಕ್ಕೆ ಒಂದು ಲಕ್ಷ ರೂಪಾಯಿ ಚಂದಾ ಮೂಲಕ ಕೂಡಿಸುವವರಾಗಿದಾರೆ ಈ ಪಾಠಶಾಲೆಯಲ್ಲಿ ಬಾಲಕಿಯರಿಗೆ ವಿದ್ಯೆಯ ಕೂಡ ಯಾವುದಾದರೊಂದು ಕಸಬನ್ನೂ ಕಲಿಸಬೇಕೆಂಬುವುದು ಅವರ ಅಭಿಮತವಾಗಿದೆ

* * *

ಹೈದರಾಬಾದ್ ನೈಜಾಮರವರು ಹೈದರಾಬಾದಿನಲ್ಲಿರುವ ಮೂಸಿ ನದಿಯ ನೀರನ್ನು ಶೇಖರಮಾಡಿ ಪಟ್ಟಣಕ್ಕೆಲ್ಲ ಒಳ್ಳೇ ಕುಡಿಯುವ ನೀರನ್ನು ಒದಗಿಸಬೇಕೆಂದು ೨ ಮ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿ, ಕಾಮಗಾರಿಗಳು ಆತುರದಿಂದ ನಡೆದು ಪೂರೈಸುವಂತೆ ಹುಕುಂ ಕೊಟ್ಟಿದಾರೆ ಮೈಸೂರು ಸಂಸ್ಥಾನದಲ್ಲಿ ನೌಕರಿಯನ್ನು ಬಿಟ್ಟು ಈಚೆಗೆ ಬರೋಡಾ ಸಂಸ್ಥಾನದಲ್ಲಿ ಚೀಫ್ ಇಂಜನಿಯರಾಗಿದ್ದ ಮೆ॥ ದಳ್ವಾಯಿಯವರನ್ನು ಈ ಕಾಮಗಾರಿಯ ಮೇಲ್ವಿಚಾರಣೆಗೆ ನೇಮಿಸಿರುತ್ತಾರೆ

* * *

ಕಳೆದ ತಾ 17 ಕ್ಕೆ ಅಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 717 ಜನರಿಗೆ ಪ್ಲೇಗ್ ತಗಲಿ 514 ಜನರು ಈ ರೋಗದಲ್ಲಿ ಕಾಲವಾಗಿರುತ್ತಾರೆ ಬೇರೆಬೇರೆ ಅಧಿಪತ್ಯಗಳಲ್ಲಿ ಈ ಮರಣ ಸಂಖ್ಯೆಯ ಹಂಚಿಕೆ ಹ್ಯಾಗಂದರೆ—ಬೊಂಬಾಯಿ 192, ಮದರಾಸ್ 73, ಬಂಗಾಳಾ 7 ಬಿಹಾರ್ ಮತ್ತು ಒರಿಸಾ 35, ಸಂಯುಕ್ತ ಅಧಿಪತ್ಯಗಳು 27, ಬರ್ಮಾ 67, ಮೈಸೂರು 116 ಪಂಜಾಬ್, ಮಧ್ಯ ಪ್ರಾಂತ್ಯಗಳು, ಮಧ್ಯ ಇಂಡಿಯಾ, ಈ ಅಧಿಪತ್ಯಗಳಲ್ಲಿ ಈ ಕಾಯಿಲೆಯ ರಿಪೋರ್ಟೇ ಬಂದಿಲ್ಲ

* * *

ಕಲ್ಕತ್ತೆಯಲ್ಲಿ ಜಗತ್ತು ಆಶ್ರಮದ ಸನ್ಯಾಸಿಗಳು ಒಬ್ಬ ಹುಡುಗನನ್ನು ಅಪಹರಿಸಿಕೊಂಡು ಹೋದರೆಂದು ಅವರನ್ನೆಲ್ಲಾ ದಸ್ತಗಿರಿ ಮಾಡಿ ವಿಚಾರಣೆ ನಡಿಸುತ್ತಿದ್ದರಷ್ಟೆ ಅಪರಾಧಿಗಳ ಪೈಕಿ ದಯಾನಂದ ಮತ್ತು ದಿನೇಂದ್ರ ಎಂಬುವರಿಗೆ 18 ತಿಂಗಳ ಕಠಿಣ ಸಜವೂ, ಸುರೇಂದ್ರ ಮತ್ತು ಡಾಕ್ಟರ್ ಅಭಯಾನಂದರಿಗೆ 12 ತಿಂಗಳ ಕಠಿಣ ಸಜವೂ ಆಜಾನಂದ ಮತ್ತು ಹಂಸಾನಂದರಿಗೆ 6 ತಿಂಗಳ ಕಠಿಣ ಸಜವೂ, ಶರತ್ಚಂದ್ರ, ಹರಿಕಿಶೋರ್, ನಾಳಿನಚಂದ್ರ ಜ್ಯೋತಿಷ, ನರೇಶ ಎಂಬವರಿಗೆ 4 ತಿಂಗಳ ಕಠಿಣ ಸಜವೂ ಆಯಿತು ಕಾಲ ಜರುಗಿನಿಂದ ಒಂದು ವರುಷ ನೇಕಚಾಲಿಗೆ ಜಾಮೀನ್ ಬರೆಸಿಕೊಂಡರು

* * *

ಹಿಂದುಸ್ಥಾನದಲ್ಲಿ ದುಷ್ಟಮೃಗ ಸರ್ಪಗಳಿಂದ ಕೊಲ್ಲಲ್ಪಟ್ಟ ಜನಗಳ 1911 ನೇ ವರುಷದ ಲೆಕ್ಕಗಳು ಪ್ರಕಟವಾಗಿವೆ ಬ್ರಿಟಿಷ್ ಇಂಡಿಯಾದಲ್ಲಿ 117 ಜನರು ಮೃತ್ಯುವಶಪಟ್ಟರು 1910 ನೇ ಇಸವಿಯಲ್ಲಿ 2,182 ಜನರು ಕೀರಿಹೋದರು ಬೊಂಬಾಯಿನಲ್ಲಿ 26 ಜನರು ಅಕಾಲಮರಣವನ್ನು ಹೊಂದಿದರು ಪಂಜಾಬಿನಲ್ಲಿ 6 ಜನರು ಮಾತ್ರ ಕಾಡುಜಂತುಗಳ ಕೈಲಿ ಮೃತರಾದದ್ದು ಅಪೂರ್ವವಾದದ್ದು ಸಂಯುಕ್ತ ಅಧಿಪತ್ಯಗಳು 112, ಬರ್ಮಾ 63 ಮಧ್ಯಪ್ರಾಂತ್ಯಗಳು 129, ಮದರಾಸ್ ಮತ್ತು ಪೂರ್ವಬಂಗಾಳಾ ಆಸಾಂ 300, ಬಂಗಾಳಾ 905, ಈ ರೀತಿ ಜನರು ದುಷ್ಟಪ್ರಾಣಿಗಳಿಂದ ಹಾಳಾಗಿರುತ್ತಾರೆ

* * *

ಕಳೆದ ವಾರ ಯಾವ ಊರಿನಿಂದಲೋ ಒಬ್ಬ ಹಿಂದುವು ಕಲ್ಕತ್ತಾ ಪಟ್ಟಣಕ್ಕೆ ಹೋಗಿ ದೇಹವನ್ನು ದಂಡಿಸಿಕೊಂಡು ತಪಸ್ಸು ಮಾಡಬೇಕೆಂದು ಕಾಳಿಘಾಟಿಗೆ ಹೋಗುತ್ತಿದ್ದನು ಇವನನ್ನು ಮುಳ್ಳುಗಳ ಮಂಚದ ಮೇಲೆ ಮಲಗಿಸಿದ್ದರು ಆ ಮಂಚದಲ್ಲಿ ಸುಮಾರು 150 ಕಬ್ಬಿಣದ ಮೊಳೆಗಳು ಹೊರಟುಕೊಂಡಿದ್ದವು ಆ ಹಿಂದುವು ನಡುವೆ ಮುಚ್ಚುವಂತೆ ಮಾತ್ರ ಒಂದು ಸಣ್ಣ ಅರಿವೆಯನ್ನು ಸುತ್ತಿಕೊಂಡು ಬರೀ ಮೈಯಲ್ಲಿ ಅಂಗಾತಂಗನಾಗಿ ಆ ಮುಳ್ಳುಗಳ ಮೇಲೆ ಮಲಗಿದ್ದನು ಆ ಮಂಚಕ್ಕೆ ಗಾಲಿಗಳನ್ನಿಟ್ಟು ಅವನನ್ನು ರಾಜಬೀದಿಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದದ್ದನ್ನು ಜನರು ನೋಡಿ ಆಶ್ಚರ್ಯಪಡುತ್ತಿದ್ದರು

ವಿದೇಶದ ವೃತ್ತಾಂತಗಳು

ದಕ್ಷಿಣ ಅಮೇರಿಕಕ್ಕೆ ಸೇರಿದ ಪೆರು ರಾಜ್ಯದಲ್ಲಿ 10 ಸೆಕೆಂಡುಗಳ ತನಕ ಭೂಮಿಯು ನಡುಗಿದ್ದರಿಂದ ಪಿಯೂರಾ ಪಟ್ಟಣವೆಲ್ಲಾ ನಾಶವಾಯಿತು ೬ ನೇಕ ಪ್ರಜೆಗಳು ಪ್ರಾಣ ಕಳೆದುಕೊಂಡರು ಬಹು ಜನರಿಗೆ ನಾನಾ ಗಾಯಗಳಾದವು

ತುರ್ಕಿಸ್ಥಾನಕ್ಕೆ ಸೇರಿದ ಟಿಯಾನ್‌ಖಂಡಿನಲ್ಲಿ ಸೈನಿಕರು ದಂಗೆಯೆದ್ದು ನಾನಾ ಕ್ರೂರ ಕೃತ್ಯಗಳನ್ನು ನಡಿಸಿದ್ದಕ್ಕಾಗಿ ರಷ್ಯಾ ಸರ್ಕಾರದ ಅಧಿಕಾರಿಗಳು 15 ಮಂದಿ ಮುಖಂಡರನ್ನು ಗಲ್ಲಿಗೆ ಹಾಕಿಸಿದರು, 191 ಜನರಿಗೆ ಜೈಲ್ ಶಿಕ್ಷೆಯನ್ನು ವಿಧಿಸಿದರು

* * *

ಮಧ್ಯ ಅಮೇರಿಕಕ್ಕೆ ಸೇರಿದ ನಿಕರ್ಾಗುವಾ ಎಂಬ ಸ್ವತಂತ್ರ ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ದಂಗೆಯೆದ್ದು ಲಿಯೋನ್ ಎಂಬ ಪಟ್ಟಣದೊಳಗಿದ್ದ 300 ಸೈನಿಕರನ್ನು ಕಡಿದುಹಾಕಿದರೆಂದೂ, ಈ ಸೈಕಿ 70 ಮಂದಿ ಮಾತ್ರ ತಪ್ಪಿಸಿಕೊಂಡು ಓಡಿಹೋದರೆಂದೂ ತಿಳಿದುಬರುತ್ತದೆ

* * *

ಇಟಲಿಗೂ ಟರ್ಕಿಗೂ ಟ್ರಿಪೊಲಿಯಲ್ಲಿ ನಡೆಯುತ್ತಾ ಬಂದಿರುವ ಯುದ್ಧವು ಇನ್ನು ಬೇಗನೆ ನಿಂತುಹೋದೀತೆಂದು ತೋರುತ್ತದೆ ಆವೆರಡು ರಾಜ್ಯಗಳ ಪ್ರತಿನಿಧಿಗಳೂ ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಸೇರಿ ಕರಾರಿನ ವಿಚಾರಗಳನ್ನು ಕುರಿತು ಚರ್ಚೆ ನಡಿಸುತ್ತಿದಾರೆಂದು ತಂತೀ ವರ್ತಮಾನ ಬಂದಿದೆ

* * *

ಇಂಗ್ಲಾಂಡಿನಲ್ಲಿ ರಾಜ್ಯಧುರಂಧರನೆಂಬ ಯಶಸ್ಸನ್ನು ಸಂಪಾದಿಸಿಕೊಂಡಿರುವ ಲೇಟ್ ಗ್ಲಾಡ್‌ಸ್ಟನ್ ಎಂಬಾತನ ಹೆಸರನ್ನು ಶಾಶ್ವತಪಡಿಸುವುದಕ್ಕೋಸ್ಕರ ೬ ಲಕ್ಷ ರೂಪಾಯಿವರೆಗೆ ಚಂದಾ ವಸೂಲಾಗಿರುತ್ತದೆ ಇದನ್ನು ಆತನ ಹೆಸರಿನಲ್ಲಿ ವಿದ್ಯಾ ಪ್ರೋತ್ಸಾಹಕ್ಕೂ ಇತರ ಕಾರ್ಯಗಳಿಗೂ ವಿನಿಯೋಗಿಸಬೇಕೆಂದು ತೀರ್ಮಾನ ಮಾಡಿದಾರೆ

* * *

ಟೈಟಾನಿಕ್ ಎಂಬ ಅಗಾಧವಾದ ಇಂಗ್ಲಿಷ್ ಜಹಜು ಅಟ್ಲಾಂಟಿಕ್ ಮಹಾಸಾಗರದಲ್ಲಿ ಮುಳುಗಿಹೋದದ್ದರಿಂದ ಅದರಲ್ಲಿ ಕೆಲಸಮಾಡುತ್ತಿದ್ದವರು ಬಹಳ ಮಂದಿ ಪ್ರಯಾಣಿಕರ ಸಮೇತ ಸಮುದ್ರಪಾಲಾದರು ಅವರ ಸಂಸಾರ ಮಕ್ಕಳಿಗೆ ಜೀವನೋಪಾಯವನ್ನು ಕಲ್ಪಿಸುವುದಕ್ಕೆ ಲಂಡನ್ ಪಟ್ಟಣದಲ್ಲಿ ಒಂದು ಧರ್ಮದ ಫಂಡನ್ನು ಕೂಡಿಸಿದಾರೆ ಈ ಫಂಡಿನ ಕಮಿಟಿಯವರು ಮೀಟಿಂಗ್ ಮಾಡಿ, ಈ ಫಂಡಿನಿಂದ ಅಂಥಾ ಸಂಸಾರಗಳಿಗೆ ದ್ರವ್ಯಸಹಾಯ ಮಾಡಲುಪಕ್ರಮಿಸಬೇಕೆಂದು ತೀರ್ಮಾನ ಮಾಡಿದರು ಈಗ ಈ ಫಂಡಿನಲ್ಲಿ 60 ಲಕ್ಷ ರೂಪಾಯಿ ಕೂಡಿರುತ್ತದೆ

* * *

ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ಪಟ್ಟಣದಿಂದ ಕುವೆರ್ನಾವೆಕಾ ಎಂಬ ಸ್ಥಳಕ್ಕೆ ಹೋಗುತ್ತಿದ್ದ ರೈಲ್ ಗಾಡಿಯನ್ನು 300 ಮಂದಿ ಜಪಾಟಿಸ್ಟಾಸ್ ಎಂಬ ದಂಗೆಕೋರರು ಡೈನಮೈಟಿನಿಂದ ಹಾರಿಸಿ ಅನಾಹುತವನ್ನುಂಟುಮಾಡಬೇಕೆಂದು ರೈಲ್ ರಸ್ತೆಯ ಕೆಳಗಡೆ ಸುರಂಗವನ್ನು ತೋಡಿ ಮದ್ದನ್ನು ಹಾಕಿ ಸಿದ್ಧಪಡಿಸಿದರು ರೈಲ್ ಗಾಡಿ ಹೋಗುತ್ತಿರುವಲ್ಲಿ ಮದ್ದು ಹತ್ತಿಕೊಂಡು ಗಾಡಿಯನ್ನು ನಾಶಮಾಡಿತು ಆ ಗಾಡಿಯೊಳಗಿದ್ದ 30 ಮಂದಿ ಸಿಪಾಯಿಗಳೂ, 9 ಜನ 2 ನೇ ತರಗತಿಯ ಪ್ರಯಾಣಸ್ಥರೂ ಮೃತಪಟ್ಟರು ತರುವಾಯ ದಂಗೇಕೋರರು ಆ ಗಾಡಿಗೆ ಬೆಂಕಿ ಹಾಕಿ ಸುಟ್ಟುಬಿಟ್ಟರು 20 ಮಂದಿ ಪ್ರಯಾಣಸ್ಥರು ಗಾಯಪಟ್ಟು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದೆ ಆ ಬೆಂಕಿಯಲ್ಲಿ ಸಿಕ್ಕಿ ಸುಟ್ಟುಹೋದರು

* * *

ಲಂಡನ್ ಪಟ್ಟಣಕ್ಕೆ ಸೇರಿದ ಐಲಿಂಗ್‌ಟನ್ ಎಂಬ ವಿಭಾಗದಲ್ಲಿ ಬಡಬಗ್ಗರಾದ ಪ್ರಜೆಗಳಿಗೆ ವಾಸದ ಮನೆಗಳನ್ನು ಧರ್ಮಾರ್ಥವಾಗಿ ಕಟ್ಟಿಸಿ ಕೊಡಬೇಕೆಂದು ಮ್ಯಾಸಟನ್ ಎಂಬ ಪುಣ್ಯಾತ್ಮನು ತನ್ನ ಆಸ್ತಿಯಿಂದ ಮೂರು ಕೋಟಿ ರೂಪಾಯನ್ನು ವಿನಿಯೋಗಮಾಡತಕ್ಕದ್ದೆಂದು ಮರಣ ಶಾಸನವನ್ನು ಬರೆದಿರುತ್ತಾನೆ ಇದಕ್ಕೋಸ್ಕರ ಕಮಿಟಿಯವರು ಹೈಬರಿ ಪಾರ್ಕಿನೊಳಗೆ ನಾಲ್ಕು ಎಕರೆ ಜಮೀನನ್ನು ಕೊಂಡುಕೊಂಡು, ಅದರಲ್ಲಿ 500-600 ಬಡಜನಗಳು ವಾಸಮಾಡುವುದಕ್ಕೆ ಅನುಕೂಲವಾದಂಥಾ ಮನೆಗಳನ್ನು ಕಟ್ಟಿಸಲಾರಂಭ ಮಾಡಿದಾರೆ ಇದಕ್ಕೆಲ್ಲಾ ಒಟ್ಟು 7,50,000 ರೂಪಾಯಿ ಖರ್ಚಾದೀತೆಂದು ಅಂದಾಜು ಆಗಿದೆ ಇದು ಪೂರೈಸಿದ ಬಳಿಕ ಆ ಮಹಾನಗರದ ಇತರ ಭಾಗಗಳಲ್ಲಿಯೂ ಹೀಗೇ ಬಡವರಿಗೆ ಧರ್ಮದ ಮನೆಗಳನ್ನು ಕಟ್ಟಿಸಲು ಏರ್ಪಾಡು ಮಾಡುವರು

* * *

ಇಂಗ್ಲಾಂಡಿಗೆ ಸೇರಿದ ಬ್ಲಾಕ್‌ಬರ್ನ್ ಪಟ್ಟಣದಲ್ಲಿ ಜಾನ್ ಮಾರ್ಗರಿಸನ್ ಎಂಬೊಬ್ಬ ಬಡವನು ಮೆ॥ ಹಾರ್ನ್‌ಬಿ ಎಂಬಾತನ ಕಾರ್ಖಾನೆಯಲ್ಲಿ ತನ್ನ ತಂದೆಯ ಕಾಲದಿಂದ 50 ವರುಷದವರೆಗೆ ಕೆಲಸ ಮಾಡುತ್ತಾ ಬಂದು ತನಗೆ ದೊರೆಯುತ್ತಿದ್ದ ಕೂಲಿ ಹಣದಲ್ಲಿ ಸ್ವಲ್ಪಸ್ವಲ್ಪವನ್ನು ಎತ್ತಿಡುತ್ತಾ ಇದ್ದನು ಇವನು ಮೂರು ವರುಷಗಳ ಹಿಂದೆ ಕಾಲವಾದಾಗ್ಗೆ ಅವನ ಬಳಿ 45,000 ರೂಪಾಯಿ ಕೂಡಿ ಇತ್ತು ಅವನು ಆ ಹಣದಲ್ಲಿ ತನ್ನ ಕಾರ್ಖಾನೆಯ ಯಜಮಾನನ ಛಾಯಾ ಪ್ರತಿಮೆಯನ್ನು ತಯಾರುಮಾಡಿ ಆ ಪಟ್ಟಣದಲ್ಲಿಟ್ಟು ಆತನ ಹೆಸರನ್ನು ಶಾಶ್ವತಪಡಿಸಬೇಕೆಂದು ಮರಣಶಾಸನವನ್ನು ಬರೆದಿದ್ದನು ಈಗ ಆ ಯಜಮಾನನ ಪ್ರತಿಮೆಯು ಸಿದ್ಧವಾಗಿರುತ್ತದೆ ಆ ಕೂಲಿಯವನಿಗೆ ತನ್ನ ಯಜಮಾನನ ಮೇಲಿದ್ದ ಭಕ್ತಿವಿಶ್ವಾಸಗಳೂ, ಆ ಯಜಮಾನನು ಕೆಲಸದವರ ವಿಷಯದಲ್ಲಿ ತೋರಿಸುತ್ತಿದ್ದ ದಯೆಯೂ ಸ್ತೋತ್ರಾರ್ಹವಾಗಿರುತ್ತವೆ

* * *

ಇಂಗ್ಲಾಂಡಿನಲ್ಲಿರುವ ಕುರುಡ ಪ್ರಜೆಗಳು ಕೆಲವರು ಅಲ್ಲಿನ ಪೋಸ್ಟ್ ಮಾಸ್ಟರ್ ಜನರಲ್‌ರಾದ ಮೆ॥ ಹರ್ಬರ್ಟ್ ಸ್ಯಾಮ್ಯುಯಲ್‌ಯವರ ಬಳಿಗೆ ಹೋಗಿ ಅವರನ್ನು ಕಂಡು, ಕುರುಡರು ಓದುವಂಥಾ ಪುಸ್ತಕಾದಿಗಳು ಪ್ರಪಂಚದಲ್ಲಿ ಪ್ರಕಟವಾದರೆ ಅಂಥವುಗಳನ್ನು ಅಂಚೆಯ ಮೂಲಕ ತರಿಸಿಕೊಳ್ಳಲು ಟಪ್ಪಾಲ್ ಛಾರ್ಜಿನ ದರಗಳನ್ನು ಸುಲಭ ಮಾಡಿ ಕೊಡಬೇಕೆಂದೂ ಅರಿಕೆ ಮಾಡಿಕೊಂಡರು ಪಾರ್ಲಿಮೆಂಟಿನ ಮೆಂಬರ್ ಮೊದಲಾದ ಕೆಲವು ದೊಡ್ಡ ಮನುಷ್ಯರು ಆ ಕುರುಡರ ಕೂಡ ಹೋಗಿ ಅವರ ಪ್ರಾರ್ಥನೆಯನ್ನು ನಡಿಸಿಕೊಡಬೇಕೆಂದು ಕೇಳಿಕೊಂಡರು ಈ ಕುರುಡರ ಪ್ರತಿ ಒಬ್ಬ ಪ್ರತಿನಿಧಿಯನ್ನು ಕಣ್ಣಿದ್ದವನೊಬ್ಬನು ಅವರ ಒಳಗೆ ನಡಿಸಿಕೊಂಡು ಹೋಗಿದ್ದನು ಪೋಸ್ಟ್ ಮಾಸ್ಟರ್ ಜನರಲ್‌ರವರು ಅವರನ್ನು ಬಹು ಪ್ರೀತಿಯಿಂದ ಕಂಡು ಅವರ ಪ್ರಾರ್ಥನೆಯನ್ನು ನೆರವೇರಿಸಿ ಕೊಡುವ ಭಾರವನ್ನು ವಹಿಸುವುದಾಗಿ ಅಪ್ಪಣೆಯನ್ನಿತ್ತು ಕಳುಹಿಸಿದರು

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಚರ್ಚೆಗೆ ತರಬೇಕೆಂಬ ಕೆಲವು ಸಲಹೆಗಳು.

ಈ ಸಲದ ರೆಪ್ರಜೆಂಟೇಟಿವ್ ಮೆಂಬರುಗಳು ಕೆಳಗೆ ನಮೂದು ಮಾಡುವ ಅಂಶಗಳನ್ನು ಮೀಟಿಂಗಿಗೆ ತಂದು ಸರ್ಕಾರಿಗೂ ಅನುಕೂಲ ಮಾಡಿಸಿಕೊಡಬೇಕಾಗಿ ಕೋರಿಕೆ:—

(1) ಯಡತೊರೆ ತಾಲ್ಲೂಕ್ ಹೆಡ್ ಕ್ವಾರ್ಟರನ್ನು ಯಡತೊರೆಯಿಂದ ಸಾಲಿಗ್ರಾಮಕ್ಕೆ ಬದಲಾಯಿಸಿಕೊಡುವದು. ಯಾಕೆಂದರೆ ಸಾಲಿಗ್ರಾಮವು ಯಡತೊರೆಗಿಂತ ಆರೋಗ್ಯ, ವ್ಯಾಪಾರಸ್ಥಳ, ಮತ್ತು ಅಬಾದಾದ ಗ್ರಾಮ (2) ರೆವಿನ್ಯೂ ಸ್ಕೂಲು— ತಾಲ್ಲೂಕು ನೌಕರರಲ್ಲಿ ಶೇಕಡ 95 ರಂತೆ ಪರೀಕ್ಷೆ ವಗೈರೆ ಯಾವದೂ ಇಲ್ಲದೆ ಅಭಿಮಾನದಿಂದ ಕೆಲಸಕ್ಕೆ ಸೇರಿ ಇರುತ್ತಾರೆ; ಹಾಗೆಯೇ ಪ್ರಮೋಷನ್ ದೊರೆಯುತ್ತಾ ಇದೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ನಿರ್ಬಂಧವಿರುವಂತೆ ಇವರಿಗೂ ಮಾಡಿದಲ್ಲಿ ಸಂಸ್ಥಾನಾಮಲೆಯ ರೆವಿನ್ಯೂ ಕೆಲಸವು ಇನ್ನೂ ತೃಪ್ತಿಕರವಾಗಿ ನಡೆಯುತ್ತೆ. ಬಡಬಗ್ಗರು ವೃದ್ಧಿಗೆ ಬರಲು ಸಂಪೂರ್ಣ ಅವಕಾಶವಾಗುತ್ತೆ. ಈಗಿನ ಕ್ರಮದಲ್ಲಿ ಉಪಪನ್ನರು ಮಾತ್ರ ವೃದ್ಧಿಗೆ ಬರುತ್ತಾ ಇದಾರೆ. 1906 ರಲ್ಲಿ ಮಾಜಿ ದಿವಾನರು ಮೆ॥ ಮಾಧವರಾಯರು ಮಾಡಿರುವ ರೂಲನ್ನು ಜಾರೀಗೆ ತಂದಿದ್ದಲ್ಲಿ ಚೆನ್ನಾಗಿತ್ತು. ಈಗಲೂ ನಮ್ಮ ರೆವಿನ್ಯೂ ಕಮಿಷನರು ರೆವಿನ್ಯೂ ಸ್ಕೂಲನ್ನು ಸ್ಥಾಪಿಸಿದಲ್ಲಿ ತುಂಬಾ ಅನುಕೂಲ (3) ಮಲೆನಾಡಿನಲ್ಲಿ ಕೆಲಸ ಮಾಡುವ ಎಲ್ಲಾ ಸರ್ಕಾರದ ನೌಕರರಿಗೂ ಮಲೆನಾಡು ಅಲೋಯನ್ಸು ಕೊಡಿಸುವದು. ಈಗಿನ ಕ್ರಮದಲ್ಲಿ ರೆವಿನ್ಯೂ, ಇಂಜನಿಯರ್ ಮತ್ತು ಫಾರೆಸ್ಟು ಇಲಾಖೆಗಳಿಗೆ ಅವಕಾಶ ಕೊಟ್ಟಿದೆ. (4) ಯಾವ ಇಲಾಖೆಯ ನೌಕರರನ್ನೂ ಒಂದೇ ಸ್ಥಳದಲ್ಲಿ ಐದು ವರ್ಷಕ್ಕಿಂತ ಜಾಸ್ತಿಯಾಗಿ ಇಡದೆ ವರ್ಗಾಯಿಸಿಕೊಡಬೇಕು. ಸರ್ಕಾರಕ್ಕೆ ದುಬಾರಿಯಾಗಿ ಕಂಡುಬಂದರೂ ಪ್ರಜೆಗಳಿಗೆ ಇದರಿಂದ ತುಂಬಾ ಕ್ಷೇಮವುಂಟು (5) ಆಫೀಸರುಗಳಿಗೆ ಕೊಡುವ ಟ್ರಾವಲಿಂಗ್ ಅಲೋಯನ್ಸನ್ನು ತಲಬಿನಲ್ಲಿ ಶೇಕಡ 50 ರಂತೆ ಖಾಯಂ ಮಾಡುವುದರಿಂದ ಸಂಸ್ಥಾನಕ್ಕೆ ತುಂಬಾ ಫಾಯಿದೆ ಉಂಟು; ಯಾಕೆಂದರೆ ಕೆಲವು ಸಂದರ್ಭಗಳಲ್ಲಿ ತಲಬಿನ ಒಂದೂವರೆಯಷ್ಟು ಆಗುವದೂ ಉಂಟು.

ಒಬ್ಬ ವಾಚಕ.

ಕಿವುಡು ಮೂಗರ ಮಹಾಸಭೆಯು.

ಪ್ಯಾರಿಸ್ ಪಟ್ಟಣದಲ್ಲಿ ನಡೆದದ್ದು

ಕಿವುಡು ಮೂಗರ ಮೂರನೇ ಮಹಾಸಭೆಯು ಫ್ರಾನ್ಸ್ ದೇಶದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಎರಡು ವಾರಗಳ ಹಿಂದೆ ಜರುಗಿತು ಈ ಸಭೆಗೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಕಿವುಡು ಮೂಗರು ಪ್ರತಿನಿಧಿಗಳಾಗಿ ಹೋಗಿದ್ದರು. ಇಂಗ್ಲಾಂಡಿನಿಂದ 40 ಮಂದಿ, ಸ್ಕಾಟ್‌ಲೆಂಡಿನಿಂದ 10 ಮಂದಿ, ಅಮೆರಿಕದ ಸಂಯುಕ್ತ ಸಂಸ್ಥಾನಗಳಿಂದ 20 ಮಂದಿ ಕಿವುಡು ಮೂಗರು ಪ್ರತಿನಿಧಿಗಳಾಗಿ ಹಾಜರಾಗಿದ್ದರು. ಇಷ್ಟೇ ಅಲ್ಲ, ಜರ್ಮನಿ, ಆಸ್ಟ್ರಿಯಾ, ಇಟಲಿ, ಬೆಲ್ಜಿಯಂ, ಸ್ಕ್ಯಾಂಡಿನೇವಿಯಾ, ಸ್ಪೇಯಿನ್, ಪೋರ್ಚುಗಲ್, ಸ್ವಿಟ್ಜರ್‌ಲೆಂಡ್, ಜಪಾನ್, ಈ ಮೊದಲಾದ ರಾಜ್ಯಗಳಿಂದಲೂ ಕಿವುಡು ಮೂಗರು ಹೋಗಿದ್ದರು ಸಂಕೇತಗಳ ಮೂಲಕ ಕಿವುಡು ಮೂಗರು ಸಂಭಾಷಣೆ ಮಾಡುವಂಥಾ ಉಪಾಯವನ್ನು ಕಂಡುಹಿಡಿದ ಫ್ರೆಂಚ್ ಅಬ್ಬೆ ಎಂಬಾತನ 50 ನೇ ವರುಷದ ಸಂತೋಷವನ್ನು ಈ ಸಭಿಕರು ಪ್ರಕಾಶಪಡಿಸಿ, ಆತನು ಮಾಡಿದ ಉಪಕಾರವನ್ನು ಕೊಂಡಾಡಿದರು.

ಫ್ರಾನ್ಸಿನ ಅಂಡರ್ ಸೆಕ್ರೆಟರಿ ಆಫ್‌ಸ್ಟೇಟ್ ಆದ ಎಂ. ಮೊರೇಲ್ ಯವರು ಈ ಮಹಾಸಭೆಯನ್ನು ಪ್ರಾರಂಭಮಾಡಿ, ಕಿವುಡು ಮೂಗರ ವಿಹಾರಾರ್ಥವಾದ ಒಂದು ಕ್ಲಬ್ಬನ್ನು ಸ್ಥಾಪಿಸುವದಕ್ಕೋಸ್ಕರ ಫ್ರೆಂಚ್ ಸರ್ಕಾರದವರು 24,000 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆಂಬ ಸಂತೋಷವಾರ್ತೆಯನ್ನು ಸಭಿಕರಿಗೆ ತಿಳಿಸಿದರು. ದ್ವಿಭಾಷಿಯು ಅವರ ಉಪನ್ಯಾಸವನ್ನು ಸಂಜ್ಞೆಗಳ ಮೂಲಕ ವಿವರಿಸಿದನು

ಬಳಿಕ ಕಿವುಡು ಮೂಗ ಪ್ರತಿನಿಧಿಗಳೆಲ್ಲಾ ಸಂಜ್ಞೆಗಳ ಮೂಲಕ ತಮ್ಮ ತಮ್ಮ ಸ್ಥಳ ರಿಪೋರ್ಟುಗಳನ್ನು ವಿವರಿಸಿದರು ಟರ್ಕೀಯಿಂದ ಬಂದಿದ್ದ ಒಬ್ಬ ಕಿವುಡು ಮೂಗನು ಸಂಕೇತಗಳಿಂದ ಮಾಡಿದ ಉಪನ್ಯಾಸವು ಬಹು ಆಶ್ಚರ್ಯವನ್ನುಂಟುಮಾಡಿತು ಬೇರೆ ಬೇರೆ ಕಡೆಗಳಿಂದ ಬಂದಿದ್ದ ಕಿವುಡು ಮೂಗರು ಸಂಜ್ಞೆಗಳ ಮೂಲಕ ಪರಸ್ಪರ ನಡಿಸಿದ ಮಾತು ಕಥೆಗಳೂ, ಸರಸ ಸಲ್ಲಾಪಗಳೂ ಪರಮಾಶ್ಚರ್ಯಕರವಾಗಿದ್ದವು

ಕಿವುಡು ಮೂಗರುಗಳೇ ಸೇರಿ ಒಂದು ನಾಟಕವನ್ನು ಅಭಿನಯಿಸಿದರು. ಎಲ್ಲರೂ ಸೇರಿ ನಡಿಸಿದ ದೇವಾರಾಧನೆಯು ಬಹು ಗಂಭೀರವಾಗಿಯೂ ಮನೋಜ್ಞವಾಗಿಯೂ ಇತ್ತು. ಕಡೆಯಲ್ಲಿ ಈ ಕಿವುಡು ಮೂಗರಿಗೆ ಜಂಯಾನಾ ವಿನೋದಗಳನ್ನು ಕಲ್ಪಿಸಿದ್ದರು ಅವರೆಲ್ಲಾ ಬಹು ಉತ್ಸಾಹದಿಂದ ಆಟಪಾಟಗಳಲ್ಲಿ ಸೇರಿ ವಿಹರಿಸಿ, ಈ ಅಪೂರ್ವವಾದ ಮಹಾ ಸಭೆಯನ್ನು ಮುಕ್ತಾಯ ಮಾಡಿದರು

ಹೊಸ ಜಲಾಶಯದ ಬಳಿಯ ಭೂಮಿಯನ್ನು ಸಾಗುವಳಿಗೆ ಕೊಡುವುದು.

ಕನ್ನಂಬಾಡಿಯ ಹತ್ತಿರ ಕಾವೇರೀನದಿಗೆ ದೊಡ್ಡ ಅಣೆಯನ್ನು ಕಟ್ಟಿ ಅಗಾಧವಾದ ಜಲಾಶಯವನ್ನು ನಿರ್ಮಿಸಲು ಅಣೆಕಟ್ಟೆಯ ಕಾರ್ಯಾರಂಭವಾಗಿರುವುದಷ್ಟೆ. ಈ ಜಲಾಶಯದ ಪ್ರದೇಶದಲ್ಲೂ, ಈ ಜಲಾಶಯದಿಂದ ಮಾಡಲ್ಪಡುವ ಕಾಲುವೆಗಳು ಹರಿಯುವ ಸ್ಥಳಗಳಲ್ಲೂ, ನಿರುಪಯೋಗವಾಗಿ ಬಿದ್ದಿರುವ ಭೂಮಿಯನ್ನು ಸಾಗುವಳಿಗೆ ಕೊಡಿಸಿ ಕೊಡಬೇಕೆಂದು ಅನೇಕರು ಪ್ರಾರ್ಥಿಸಿಕೊಂಡುದರ ಮೇಲೆ ಸರ್ಕಾರದ ಅಪ್ಪಣೆಯಾಗಿರುವುದೇನಂದರೆ —

(1) ಜಲಾಶಯದ ಮೊದಲನೆಯ ಪ್ರಯತ್ನವು ಮುಗಿದು ಮತ್ತೂ ಕಾಲುವೆಗಳು ಅಭಿವೃದ್ಧಿಗೊಳಿಸಲ್ಪಟ್ಟ ಮೇಲೆ ನೀರಾವರಿಯಾಗುವಂತಹ ಭೂಮಿಗಳನ್ನು ಮೊದಲನೆಯಂತಸ್ತು ಪೂರೈಸಿ ನೀರು ದೊರಕುವಂತಾಗುವವರೆಗೂ 1911 ನೆಯ ಜುಲೈ ತಾ. 10 ರಲ್ಲಿ ಹುಟ್ಟಿರುವ ಸರ್ಕಾರಿ ಅಪ್ಪಣೆಯಲ್ಲಿ ಕಂಡ ನಿಬಂಧನೆಗಳ ಪ್ರಕಾರ ಏಕಸಾಲ್ ಸಾಗುವಳಿಗೆ ಮೊದಲು ಅಪೇಕ್ಷಿಸಿದಂತಹವರಿಗೆ ವಿಕ್ರಯಿಸತಕ್ಕದ್ದಲ್ಲದೆ, ಜರೂರಿಗೆ ಇಡಕೊಡದು ಭೂಮಿಯನ್ನು ಪಡೆದುಕೊಂಡವನು ಇಷ್ಟ ಬಂದ ಬೆಳೆಯನ್ನಿಡಲು ಸ್ವತಂತ್ರರಾಗಿರುತ್ತಾರೆ.

(2) ಬೆಳೆಯನ್ನು ಸ್ಥಿರವಾಗಿ ಮಾಡಲು ಭೂಮಿಯನ್ನು ಕೊಡತಕ್ಕ ವಿಧಾನವು ಮೊದಲನೆಯ ಅಂತಸ್ತು ಮುಗಿದು ನೀರು ಬೇಸಾಯಕ್ಕೊದಗಿಸಲ್ಪಡಲು ಸಿದ್ಧವಾದ ತರುವಾಯ ನಿರ್ಧರಿಸಲ್ಪಡುವುದು.

(3) ಜಲಾಶಯದ ಎರಡನೆಯ ಪ್ರಯತ್ನವು ಪೂರೈಸಿದ ಮೇಲೆ ನೀರಾವರಿಯಾಗುವಂತಹ ಭೂಮಿಗಳನ್ನು 1910 ನೆಯ ಸೆಪ್ಟಂಬರು ತಾ. 30 ರಲ್ಲಿ ಹುಟ್ಟಿರುವ ಸರ್ಕಾರಿ ಅಪ್ಪಣೆಯಲ್ಲಿ ಕಂಡ ನಿಬಂಧನೆಗನುಸಾರವಾಗಿ ಮತ್ತೆ ಹಿಡುವಳಿದಾರರು ಕಾಲುವೆಗೆ ಬೇಕಾದಷ್ಟು ಭೂಮಿಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಬಿಟ್ಟುಕೊಡಬೇಕೆಂಬ ಒಡಂಬಡಿಕೆಯ ಮೇಲೆ ಸಾಗುವಳಿಗೆ ಕೊಡತಕ್ಕದ್ದು

(4) ಜಲಾಶಯದಲ್ಲಿ ಐಕ್ಯವಾಗುವಂತಹ ಭೂಮಿಗಳೂ ಮೇಲೆ ಕಂಡ ವಿಧಿಗಳನುಸಾರವಾಗಿ ಏಕಸಾಲ್ ಒಡಂಬಡಿಕೆಯ ಮೇಲೆ ಸಾಗುವಳಿಗೆ ಕೊಡಲ್ಪಡುವವು ಅದರೆ ಅವಶ್ಯವಾಗಿ ಸಾಗುವಳಿಗೆ ತೆಗೆದುಕೊಳ್ಳತಕ್ಕವರು ತಮ್ಮ ಹಿಡುವಳಿಯ ಭೂಮಿಯು ಜಲಾಶಯದಲ್ಲಿ ಸೇರಿಹೋದುದಕ್ಕಾಗಿ ಯಾವ ಪರಿಹಾರದ್ರವ್ಯವನ್ನೂ ಹೊಂದಲಾರರು.

ವ್ಯವಸಾಯದ ಮುಟ್ಟುಗಳು.

ಸರ್ಕಾರದ ಸಹಾಯ.

ಮೈಸೂರು ಸೀಮೆಯ ವ್ಯವಸಾಯದ ಇಲಾಖೆಯ ಮುಖ್ಯಾಧಿಕಾರಿಯಾದ ಮೆ॥ ಎಚ್. ವಿ ಕೃಷ್ಣಯ್ಯನವರು ವ್ಯವಸಾಯಗಾರರಿಗೆ ತಿಳಿಸುವುದೇನೆಂದರೆ:—

1. ವ್ಯವಸಾಯದ ಮುಟ್ಟುಗಳನ್ನು ಮಾರುವುದಕ್ಕಾಗಿ ಒಂದು ಡಿಪೋವನ್ನು ವ್ಯವಸಾಯದ ಇಲಾಖೆಯಲ್ಲೇ ಸರ್ಕಾರದವರು ಏರ್ಪಾಡು ಮಾಡಿರುವ ಸಂಗತಿಯು ಎಲ್ಲರಿಗೂ ಚೆನ್ನಾಗಿ ತಿಳಿದಿರುವಂತೆ ಇಲ್ಲ, ಇದೂ ಅಲ್ಲದೆ ಆ ಡಿಪೋವಿನಿಂದ ಹೊಂದಬಹುದಾದಷ್ಟು ಪ್ರಯೋಜನವನ್ನು ಹೊಂದುತ್ತಿರುವಂತೆಯೂ ಇಲ್ಲ ವ್ಯವಸಾಯಕ್ಕೆ ಸಂಬಂಧಪಟ್ಟ ಎಂಥಾ ಮುಟ್ಟನ್ನು ತರಿಸಬೇಕು, ಎಲ್ಲಿಂದ ತರಿಸಬೇಕು ಮತ್ತು ಅದಕ್ಕೆ ಎಷ್ಟು ಬೆಲೆಯನ್ನು ಕೊಡಬೇಕು ಎಂಬ ಸಂಗತಿಗಳೆಲ್ಲವೂ ಎಲ್ಲಾ ವ್ಯವಸಾಯಗಾರರಿಗೂ ಸಾಧಾರಣವಾಗಿ ತಿಳಿದಿರುವುದಿಲ್ಲ. ಅಂಥಾ ತೊಂದರೆಗಳನ್ನೆಲ್ಲಾ ವ್ಯವಸಾಯಗಾರರಿಗೆ ತಪ್ಪಿಸಬೇಕೆಂಬ ಉದ್ದೇಶದಿಂದಲೇ ಈ ಡಿಪೋವನ್ನು ಏರ್ಪಾಡು ಮಾಡಿರುತ್ತೆ ಯಾವ ಮುಟ್ಟನ್ನು ತರಿಸಿಕೊಳ್ಳಬೇಕೆಂಬ ವಿಷಯಕ್ಕೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲಾ ವ್ಯವಸಾಯಗಾರರಿಗೆ ತಿಳಿಸುವದಲ್ಲದೆ ವ್ಯವಸಾಯದ ಇಲಾಖೆಯಿಂದಲೇ ಅಂಥಾ ಮುಟ್ಟನ್ನು ತರಿಸಿ ಸರಿಯಾದ ಬೆಲೆಗೆ ವ್ಯವಸಾಯದವರಿಗೆ ಮಾರುತ್ತೆ ಬೇಕಾದ ಮುಟ್ಟುಗಳು ಸರ್ಕಾರಿ ಡಿಪೋವಿನಲ್ಲಿ ದಾಸ್ತಾನು ಇಲ್ಲದಿದ್ದರೆ ಅದನ್ನು ಮಾಡುವ ಕಡೆಯಿಂದ ತರಿಸಿಕೊಡುತ್ತೆ. ಇದೂ ಅಲ್ಲದೆ ಅಂಥಾ ಮುಟ್ಟುಗಳನ್ನು ಹ್ಯಾಗೆ ಉಪಯೋಗಿಸಬೇಕೆಂಬ ಸಂಗತಿಯನ್ನೂ ಇಲಾಖೆಯವರೇ ತೋರಿಸಿಕೊಡುತ್ತಾರೆ

2 ಕಬ್ಬನ್ನು ಗಾಣ ಆಡುವದಕ್ಕೆ ಸ್ವಲ್ಪ ದಿನಗಳು ಮುಂಚೆ ದೊಡ್ಡದಾದ ಗಾಣವನ್ನು ಕೊಂಡುಕೊಳ್ಳುವದಕ್ಕಾಗಿಯೂ, ಮುಟ್ಟುಗಳನ್ನು ಉಪಯೋಗಿಸುವದಕ್ಕೆ ಸ್ವಲ್ಪಕಾಲ ಮುಂಚಿತವಾಗಿ ಅವುಗಳನ್ನು ಕೊಂಡುಕೊಳ್ಳುವ ಉದ್ದೇಶದಿಂದಲೂ ಜನಗಳು ಅನೇಕ ವೇಳೆ ಬಂದು ಸರ್ಕಾರಿ ಡಿಪೋವಿನಲ್ಲಿ ನಿಚಾರಿಸಿ ಸಾಮಾನುಗಳು ಆ ಕಾಲದಲ್ಲಿ ಇಲ್ಲದ್ದರಿಂದ ನಿರಾಶರಾಗಿ ಹೊರಟು ಹೋಗಿರುತ್ತಾರೆ. ಸಾಧಾರಣವಾಗಿ ಅನೇಕ ಜನಗಳು ಹೆಚ್ಚಾಗಿ ಉಪಯೋಗಿಸುತ್ತಿರುವಂಥ ಮತ್ತು ಖರ್ಚಾಗುವದೆಂದು ನಂಬಿಕೆ ಇರುವಂಥ ಕಬ್ಬಿಣದ ನೇಗಿಲುಗಳನ್ನು ಮತ್ತು ಇನ್ನು ಒಂದೆರಡು ತರಹ ಮುಟ್ಟುಗಳನ್ನು ಜಾಸ್ತಿಯಾಗಿ ದಾಸ್ತಾನು ಇಟ್ಟುಕೊಂಡಿರುವದು ಸಾಧ್ಯವೇ ಹೊರತು ಎಲ್ಲಾ ಮುಟ್ಟುಗಳನ್ನೂ ಹೇರಳವಾಗಿ ತರಿಸಿ ಇಟ್ಟುಕೊಂಡಿರುವದು ಸಾಧ್ಯವಿಲ್ಲ ಆದದ್ದರಿಂದ ಸರ್ಕಾರಿ ಡಿಪೋವಿನಲ್ಲಿ ದಾಸ್ತಾನು ಇಲ್ಲದೆ ಇರುವ ಮುಟ್ಟುಗಳನ್ನು ಯಾರಾದರೂ ಅಪೇಕ್ಷಿಸಿದಲ್ಲಿ ಅವುಗಳನ್ನು ತರಿಸಿಕೊಡುವದಕ್ಕೆ ಬೇಕಾದಷ್ಟು ಅವಧಿಯನ್ನು ಕೊಡಬೇಕು ಆದದ್ದರಿಂದ ನೇಗಿಲುಗಳೂ ಗುಳಗಳೂ ವಿನಾಯಿಸಿ, ಬೇರೆ ಯಾವ ವ್ಯವಸಾಯದ ಮುಟ್ಟುಗಳಾದರೂ ಬೇಕೆಂದು ಅಪೇಕ್ಷಿಸುವವರು ಅವುಗಳನ್ನು ತಾವು ಉಪಯೋಗಿಸಬೇಕೆಂದಿರುವ ಕಾಲಕ್ಕೆ ಮೂರು ತಿಂಗಳು ಮುಂಚಿತವಾಗಿಯಾದರೂ ವ್ಯವಸಾಯದ ಇಲಾಖೆಗೆ ಬರೆದಪಕ್ಷದಲ್ಲಿ ತರಿಸಿಕೊಡುವದಕ್ಕೆ ಅನುಕೂಲವಾಗುವದು ಸಾಮಾನುಗಳನ್ನು ಕೊಂಡುಕೊಳ್ಳಬಪೇಕ್ಷಿಸುವವರು ನೇರಾಗಿ ವ್ಯವಸಾಯದ ಇಲಾಖೆಗೇನೇ ಬರೆಯಬಹುದು, ಇಲ್ಲವಾದರೆ ಆಯಾ ತಾಲ್ಲೂಕು ಅಮಲ್ದಾರರ ಮೂಲಕವಾಗಿಯಾಗಲಿ ಬರೆಯಬಹುದು

ಶ್ರೀಮನ್ಮಹಾರಾಜರವರ ಸಂಚಾರವು.

ಹೆಸರುಘಟ್ಟದ ಗ್ರಾಸ್ ಫಾರಮಿಗೆ ದಯಮಾಡಿಸಿದ್ದುದು.

ಕಳೆದ ತಾ. 23 ನೇ ಶುಕ್ರವಾರದ ದಿನ ಶ್ರೀಮನ್ಮಹಾರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರು ಚೀಫ್ ಇಂಜನಿಯರವರೂ, ಕರ್ನಲ್ ಜೋನ್ಸ್ ಸಾಹೇಬರೂ ಮತ್ತು ಎಂ ಎ ಜೋನ್ಸ್ ಸಾಹೇಬರವರೂ, ಇವರುಗಳ ಸಹಿತ ಬೆಂಗಳೂರಿನಿಂದ ಮೋಟಾರ್ ಗಾಡಿಗಳಲ್ಲಿ ಸುಪ್ರಯಾಣವನ್ನು ಬೆಳಸಿ ಶ್ರೀ ಚಾಮರಾಜೇಂದ್ರ ವಾಟರ್ ಸಪ್ಲೈ ಹೆಸರುಘಟ್ಟದ ಗ್ರಾಸ್ ಫಾರಮಿಗೆ (ಹುಲ್ಲುಗಾವಲಿಗೆ) ತಲುಪಿ, ಅಲ್ಲಿನ ಕಾರ್ಯಗಳನ್ನು ವಿಚಕ್ಷಣೆಯಿಂದ ಪರಾಮರ್ಶಿಸಿ, ವಾಪಸು ದಯಮಾಡಿಸುವಾಗ್ಗೆ ಚಿಕ್ಕಬಾಣಾವಾರದ ವಿ. ಇ ಸ್ಕೂಲಿನ ಒಳಬಾಲ್ಕದಲ್ಲಿ ತಕ್ಕ ಮರ್ಯಾದೆಗಳೊಂದಿಗೆ ಭೇಟಿಗಾಗಿ ನಿರೀಕ್ಷಿಸಿಕೊಂಡಿರುವಲ್ಲಿ ಮಹಾಸ್ವಾಮಿಯವರ ಸವಾರಿಯು ಸಾಯಂಕಾಲಕ್ಕೆ ಚಿತ್ತೈಸಿತು

ತತ್ಪೂರ್ವವೇ ಸ್ಕೂಲಿನಲ್ಲಿ ಏರ್ಪಾಡುಮಾಡಿದ್ದ ಪ್ರಕಾರ ಹಾದುಗಾರಿಕೆಯಲ್ಲಿ ಚೆನ್ನಾಗಿ ತಯಾರಾಗಿದ್ದ ವಿದ್ಯಾರ್ಥಿಗಳಲ್ಲಿ 6 ಮಂದಿ ಮಹಮ್ಮದೀಯರನ್ನೂ, 6 ಮಂದಿ ಬಾಲಕರನ್ನೂ ಪ್ರತ್ಯೇಕವಾದ ಎರಡು ಗುಂಪು ಮಾಡಿ, ಕಳರು ಮಂಟಪದ ಉಭಯ ಪಾರ್ಶ್ವಗಳಲ್ಲಿಯೂ ಅಭಿಮುಖರಾಗಿರುವಂತೆ ಸರಿಯಾದ ಕ್ರಮದಲ್ಲಿ ಪರಿಶುದ್ಧವಾದ ಉಡುಪುಗಳಿಂದಲೂ ಕಮ್ಮರ್‌ಬಂದ್‌ನಿಂದಲೂ ನಿಲ್ಲಿಸಲ್ಪಟ್ಟಿದ್ದರು. ಉಳಿದ ವಿದ್ಯಾರ್ಥಿಗಳೂ ಮತ್ತು ಪಂಚಮಸ್ಕೂಲು ವಿದ್ಯಾರ್ಥಿಗಳೂ ತಕ್ಕ ಕ್ರಮದೊಂದಿಗೆ ಸ್ಥಾನಾನುಗುಣ್ಯವಾಗಿ ನಿಲ್ಲಿಸಲ್ಪಟ್ಟಿದ್ದರು. ಆ ವೇಳೆಗೆ ಮಹಾಸ್ವಾಮಿಯವರ ಸಂದರ್ಶನಾರ್ಥವಾಗಿ ಅನೇಕ ನೆರೆಹೊರೆ ಗ್ರಾಮಗಳ ವೃದ್ಧರೂ ಹೆಂಗಸರೂ ಮಕ್ಕಳೂ ಮೊದಲಾದ ಪ್ರಜೆಗಳಿಂದ ಸ್ಕೂಲು ಕಾಂಪೌಂಡ್ ಮೈದಾನ ಮತ್ತು ಹೈರೋಡು ಸಹ ನಿಬಿಡೀಕೃತವಾಗಿ, ಕಣ್ಣು ಕಾಣುವಷ್ಟು ದೂರವೂ ಕಿಕ್ಕಿರಿಯುವಂತೆ ತುಂಬಿದ್ದಿತು

ಮಹಾಸ್ವಾಮಿಯವರ ಸವಾರಿಯು ಸ್ಕೂಲು ಬಳಿಯಲ್ಲಿ ಬಾವುಟಗಳಿಂದಲೂ ತೋರಣ ಕದಳೀ ಸ್ತಂಭಗಳಿಂದಲೂ ಅಲಂಕೃತವಾದ ಕಲು ಮಂಟಪವನ್ನು ಅಲಂಕರಿಸಿದರು. ಒಡೆಯನೇ ಹಿಂದುಸ್ಥಾನಿಯಲ್ಲಿಯೂ, ಕನ್ನಡದಲ್ಲಿಯೂ ಬೇರೆಬೇರೆಯಾಗಿ ಬಾಲಕರು ಸುಖಾಗಮನವನ್ನು ಬಯಸಿ ಹಾಡುಗಳನ್ನು ಹಾಡಿದರು ಸ್ಕೂಲ್ ಉಪಾಧ್ಯಾಯರಿಂದ ಕರಾಣು (ಬುಕ್ಕು) ನಿಂಬೇ ಹಣ್ಣುಗಳು ನಜರು ಮಾಡಲ್ಪಟ್ಟವು ನಜರನ್ನು ಸ್ವೀಕರಿಸಿದ ತರುವಾಯ ಸ್ಕೂಲಿನ ವಿಚಾರವನ್ನು ಕುರಿತು ಆತ್ಮಾದರ ಪೂರ್ವಕವಾಗಿ ಮಹಾಸ್ವಾಮಿಯವರು ಕೆಲವು ಪ್ರಶ್ನೆಗಳನ್ನು ಮಾಡಿದರು

ಶ್ರೀಮನ್ಮಹಾರಾಜರವರ ಪ್ರಶ್ನೆ—ಎಷ್ಟು ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ? ಯಾವಯಾವ ಜನಾಂಗದವರು?

ಹೆಡ್ ಮಾಸ್ಟರ ಅರಿಕೆ—ಮಹಾಸ್ವಾಮಿ, ಹಿಂದೂ ಮಹಮ್ಮದೀಯರು ಸೇರಿ 50 ಮಂದಿ ವಿದ್ಯಾರ್ಥಿಗಳು ಇಲ್ಲಿಯೂ, ಪಂಚಮಸ್ಕೂಲಿನಲ್ಲಿ ಕೆಲವು ಆ ಬಾಲಕರು ಅಲ್ಲಿಯೂ ವಿದ್ಯಾಭ್ಯಾಸವನ್ನು ಮಾಡುತ್ತಾ ಇದಾರೆ. ಹುಜೂರು ಸವಾರಿಯು ಕಳೆದ 16-7-1911 ರಲ್ಲಿ ಚಿತ್ತೈಸಿದ್ದಾಗ್ಗೆ ಮಹಮ್ಮದೀಯ ವಿದ್ಯಾರ್ಥಿಗಳು ಹೆಚ್ಚಾಗಿ ಇರಲಿಲ್ಲ ಈಚೆಗೆ ಹೆಚ್ಚು ಮಂದಿ ಸೇರಿ ಹಿಂದುಸ್ಥಾನಿಯಲ್ಲಿ ಹಾಡು ಹೇಳುವಷ್ಟು ಶಕ್ತರಾಗಿರುತ್ತಾರೆ, ಮಹಾಸ್ವಾಮಿ

ಇದನ್ನು ಲಾಲಿಸಿ ಮಹಾಸ್ವಾಮಿಯವರು ಶ್ಲಾಘ್ಯವಾಗಿದೆ, ಸಂತೋಷ ಎಂದು ಅಪ್ಪಣೆಯನ್ನು ದಯಪಾಲಿಸಿದರು

ಮತ್ತೇನು ವಿಷಯ ಎಂದು ಪ್ರಶ್ನೆಮಾಡಿದರು.

ಅರಿಕೆ—ಮಹಾಸ್ವಾಮಿ, ಮಹಾಸ್ವಾಮಿಯವರಿಗೆ ಅಪೂರ್ವವಾದ ದರ್ಬಾರಿನಲ್ಲಿ ಲಭಿಸಿದ ಘನತರವಾದ ಬಿರುದಿನ ಸಂತೋಷ ಸಂಭ್ರಮ, ಅಮೋಘವಾದ ಮಿಲಿಟರಿ ಹುದ್ದೆಯನ್ನು ಈಗ ಸ್ವೀಕರಿಸುವ ಪರಮಾನಂದ ಸಂಭ್ರಮವೂ ದಿವ್ಯಸನ್ನಿಧಿಯಿಂದ ಪೋಷಿಸಲ್ಪಡುತ್ತಾ ಏಳಿಗೆಗೆ ಬಂದಿರುವ ಇಲಾಖೆ (ವಿದ್ಯಾಭ್ಯಾಸ) ಯನ್ನು ಅಪಾರವಾದ ಸಂತೋಷ ಸಮುದ್ರದಲ್ಲಿ ಮುಳುಗಿಸಿರುವ ವಿಷಯವೇ ವಿಶೇಷ ವಿಷಯವಾಗಿರುವದು, ಮಹಾಸ್ವಾಮಿ ಮತ್ತು ಈ ಸಂತೋಷ ಸಂದರ್ಭದಲ್ಲಿ ನಮ್ಮನ್ನಾಳುವ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಸಹಿತ ಮಹಾಸ್ವಾಮಿಯವರ (ಹುಜೂರು) ಸನ್ನಿಧಿಯ ಸಕುಟುಂಬ ಸಪರಿವಾರ ಸಮೇತವಾದ ಪರಂಪರೆಗೆ ಶ್ರೀ ಭಗವಂತನು ಆಯುರಾರೋಗ್ಯಾದಿಗಳನ್ನು ದಯಪಾಲಿಸುತ್ತಾ ಬರಬೇಕಾಗಿ ಸಂಸ್ಥಾನದ ಸಮಸ್ತ ಪ್ರಜೆಗಳ ಕೂಡ ಅನಂತಾನಂತ ಪ್ರಾರ್ಥನೆಗಳನ್ನು ಈ ಮೂಲಕವಾಗಿ ಸಮರ್ಪಿಸುತ್ತೇನೆ, ಮಹಾಪ್ರಭೂ.

ಈ ಪ್ರಾರ್ಥನೆಯನ್ನು ಮಹಾಸ್ವಾಮಿಯವರು ಪ್ರೀತಿಯಿಂದ ಲಾಲಿಸಿ ಬಹಳ ಸಂತೋಷ, ಬಹಳ ಸಂತೋಷ ಎಂಬ ಅಪ್ಪಣೆಯನ್ನನುಗ್ರಹಿಸಿದ ಕೂಡಲೇ ಬಾಲಕರು ಮಂಗಳವನ್ನು ಹಾಡಿ ಪುಷ್ಪವೃಷ್ಟಿಯನ್ನು ಕರೆದು ಸರ್ವರೂ ಸಂತೋಷ ಸೂಚಕವಾದ ಜಯಧ್ವನಿಯನ್ನು ಮಾಡಿದರು. ಶ್ರೀಮನ್ಮಹಾರಾಜರವರು ಸಂತೋಷದೊಡನೆ ಪ್ರಯಾಣೋನ್ಮುಖರಾಗಿ ಬೆಂಗಳೂರನ್ನು ಸುಖವಾಗಿ ತಲುಪಿದರು

ರಾಜಭಕ್ತಿ ಪ್ರದರ್ಶಕ

ಶ್ರೀ ಶೃಂಗೇರಿ ಮಠವು.

ಮೈಸೂರು ಸರ್ಕಾರದ ಹುಕುಮು.

ಶ್ರೀ ಶೃಂಗೇರಿ ಮಠದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರು ಕಾಲಗತಿಯನ್ನೈದಿದ ಬಳಿಕ ಆ ಮಠದ ಮೇಲ್ವಿಚಾರಣೆಯನ್ನು ಮೈಸೂರು ಸರ್ಕಾರದವರು ವಹಿಸಿಕೊಂಡು, ಈಗಿನ ಸ್ವಾಮಿಗಳು ಮಠದ ಆಡಳಿತವನ್ನು ಸ್ವತಂತ್ರಿಸಿ ನಿರ್ವಹಿಸಲು ಸಮರ್ಥರಾಗುವ ತನಕ ಅದರ ಆಸ್ತಿಗಳನ್ನು ಕಾಪಾಡುವುದು ಅವಶ್ಯವೆಂದು ತಿಳಿದು ಅಗ್ಗ ಆ ರೀತಿ ಹುಕುಂ ಕೊಟ್ಟಿದ್ದರು ಈಚೆಗೆ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳವರು ಶೃಂಗೇರಿ ಪೀಠದ ಸ್ವಾಮಿಗಳಾಗಿ ಅಭಿಷೇಕಿಸಲ್ಪಟ್ಟು ಇರುತ್ತಾರೆ. ಮತ್ತು ಇವರು ಮಠದ ಆಡಳಿತಗಳನ್ನು ತಾವೇ ವಹಿಸಿಕೊಂಡು ನಡಿಸುವ ಭಾಗದಲ್ಲಿ ಕುತೂಹಲವುಳ್ಳವರಾಗಿರೋಣದರಿಂದ ಅವರ ಇಷ್ಟಾರ್ಥವನ್ನು ಗವರ್ನಮೆಂಟಿನವರು ಪರ್ಯಾಲೋಚಿಸಿ, ಹಿಂದೆ 1912 ನೇ ಏಪ್ರೆಲ್ ತಾ 1 ರಲ್ಲಿ ಕೊಟ್ಟಿದ್ದ ಹುಕುಮನ್ನು ತಿದ್ದುಪಡಿಮಾಡಿ, ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರು ಮಠದ ಆಡಳಿತವನ್ನೂ ಅದಕ್ಕೆ ಸೇರಿದ ಆಸ್ತಿಗಳ ಮೇಲ್ವಿಚಾರಣೆಯನ್ನೂ ಶ್ರೀ ಸ್ವಾಮಿಯವರಿಗೆ ವಹಿಸತಕ್ಕದ್ದೆಂದು ಈ ತಿಂಗಳು ತಾ 12 ರಲ್ಲಿ ಹುಕುಂ ಕೊಟ್ಟಿರುತ್ತಾರೆ.

ಶ್ರೀ ಮಠದ ಏಜಂಟರ ಅಭಿಮತವು.

ಶೃಂಗೇರಿಯಲ್ಲಿರುವ ಒಬ್ಬ ಬಾತ್ಮಿದಾರರು ಮಠದ ಏಜಂಟರಾದ ಶ್ರೀಕಂಠಶಾಸ್ತ್ರಿಗಳನ್ನು ಕಂಡು, ಅವರ ಕೂಡ ಸಂಭಾಷಣೆ ಮಾಡಿ, ಅವರ ಅಭಿಮತವನ್ನು ತಿಳಿದು ಬರೆಯುವುದೇನಂದರೆ—

ಅಯ್ಯಾ—ಏಜಂಟರವರ ಆಡಳಿತಗಳನ್ನೂ, ಇವರ ಕಾಲದಲ್ಲಿ ಮಠದ ಸ್ಥಿತಿಗಳನ್ನೂ ಸರ್ಕಾರದವರು ಪರಾಂಬರಿಸಿ, ಎಂದಿನಂತೆಯೇ ಅವರಿಗೆ ಕಾರ್ಯಾಧಿಕಾರವನ್ನು ವಹಿಸಿ ನಮ್ಮ ಕೋರಿಕೆಯನ್ನು ನೆರವೇರಿಸಿದ್ದಕ್ಕಾಗಿ ಕೃತಜ್ಞರಾಗಿದೇವೆ. ನಾನು ಏಜಂಟರವರೊಡನೆ ನಡಿಸಿದ ಸಂಭಾಷಣೆಯಿಂದ ತಿಳಿಯ ಬಂದ ಅವರ ಅಭಿಪ್ರಾಯವನ್ನು ಇಲ್ಲಿ ಬರೆದಿದೇನೆ. ಇದನ್ನು ಓದಿದರೆ ಅವರ ದೊಡ್ಡ ಮನಸ್ಸು ವೇದ್ಯವಾಗುವುದಲ್ಲದೆ ಅವರ ಕಾಲದಲ್ಲಿ ಯಾವ ಲೋಪಕ್ಕೂ ಅವಕಾಶವಿಲ್ಲವೆಂದೂ ಮಿಥ್ಯಾಪವಾದಗಳಿಗೆ ಗಮನಕೊಡುವದು ಸರಿಯಲ್ಲವೆಂದೂ ಸಮಸ್ತರಿಗೂ ತಿಳುವಳಿಕೆಯುಂಟಾಗಿ ಅವರ ವಿಚಾರದ ದುರಭಿಪ್ರಾಯಗಳು ದೂರವಾಗುತ್ತವೆ ನಾನು ಹದಿನೆಂಟು ತಿಂಗಳಿಂದಲೂ ಇದ್ದು ಶೃಂಗೇರಿಯ ಆಡಳಿತಗಳನ್ನು ಪರಿಶೀಲಿಸಿರುತ್ತೇನೆ.

“ಸಮುದ್ರಯಾನದ ವಿಚಾರದಲ್ಲಿ ಶ್ರೀ ಮಠದಿಂದ ಹೊರಟ ಧರ್ಮ ಪ್ರಕಾಶಕ ಆಜ್ಞಾಪತ್ರಿಕೆಗೆ ನಾನು ಕಾರಣನಲ್ಲ, ಅದಕ್ಕೆ ಸಂಬಂಧಪಟ್ಟ

ಲ್ಲ ನಾನೂ ಒಬ್ಬ "ರಿಫಾರ್ಮರ್" ಎಂಬುದನ್ನು ಘಂಟಾಘೋಷವಾಗಿ ತಿಳುತ್ತೇನೆ ನಾನಾಗಲಿ ಯಾರಾಗಲಿ ಹೇಳಿದಂತೆ ಸ್ವಾಮಿಗಳವರು ನಡೆಯುವರು ಸಮುದ್ರಯಾನ ಮಾಡಿದವನ್ನು ಯಾಕೆ ಮಾಡಿದಿರೆಂದೂ, ಮಾಡದೇ ಇರುವವನನ್ನು ಮಾಡಿರೆಂದೂ ಸ್ವಾಮಿಗಳು ಕೇಳುವುದೂ ಇಲ್ಲ, ಹೇಳುವುದೂ ಇಲ್ಲ, ಕೇಳಿಯೂ ಇಲ್ಲ ಅವಗನ್ನು ಕೇಳಿದ ಪ್ರಶ್ನೆಗೆ ಧರ್ಮಶಾಸ್ತ್ರಾಧಾರವನ್ನು ತೋರಿಸದವು ಇಷ್ಟಕ್ಕೇ ನನ್ನನ್ನು ಆಕ್ಷೇಪಿಸುವುದು ಸಾಧುವಲ್ಲ —ಮರಳಿ ಸ್ವಾಮಿಗಳಿಂದಲೂ ಸಾಲವಿದ್ದಿದ್ದು 1909 1910 ನೇ ಸಾಲಿನಲ್ಲಿ ತೀರಿ, ಈಗ ಯಾವ ಸಾಲವೂ ಇಲ್ಲ ಸ್ವಾಮಿಗಳವರ ಕಿರೀಟಾದಿಗಳು ಅಡವು ಬಿದ್ದಿದ್ದು ಬಿಡಿಸಿ ತಂದದ್ದಕ್ಕೆ ಮಠದಲ್ಲಿ ದಾಖಲೆಗಳಿವೆ ಮರಳಿ ಬರಹಕ್ಕೆ ಒಂದು ಕಾಸಾದರೂ ಲೆಕ್ಕಕ್ಕೆ ಸೇರದೇ ಹೋಗುವುದಿಲ್ಲ ಪ್ರತಿಯೊಂದಕ್ಕೂ ಬದ್ಧನಾಗಿ ನಡೆಸುತ್ತಿರುವೆನು ನಾನು ಅನ್ಯಾಯವಾಗಿ ಮಠದ ಸ್ವತ್ತನ್ನು ಒಂದು ಕಾಸನ್ನೂ ಸ್ವೀಕರಿಸಿಲ್ಲ ನಾನು ಕೇವಲ ದುಡ್ಡಿಗೋಸ್ಕರ ಕೆಲಸ ಮಾಡುವುದಿಲ್ಲ ಭಕ್ತಿಯಿಂದ ಕೆಲಸ ಮಾಡುತ್ತೇನೆ ಹಾಗೆ ದುಡ್ಡಿಗೋಸ್ಕರ ಕೆಲಸ ಮಾಡುವುದಾದರೆ ಸ್ವಾಮಿಗಳು ಜೀವಂತರಾಗಿದ್ದಾಗ ನಾನು 22 ವರುಷ ಕೆಲಸ ಮಾಡಿದ್ದಕ್ಕೆ ಬೋನಸ್ ರೂಪವಾಗಿ ನನಗೆ ಬೇಕಾದದ್ದನ್ನು ಕೊಡಬಹುದಾಗಿತ್ತು ಹಾಗೆ ಕೊಟ್ಟಿದ್ದರೆ ಯಾರೂ ಅವರನ್ನು ಕೇಳುವವರಿರಲಿಲ್ಲ ಈಗಿನ ಸ್ವಾಮಿಗಳನ್ನು ಪಟ್ಟಕ್ಕೆ ತರಲು ನಾನೇನೂ ಮಹತ್ಪ್ರಯತ್ನ ಮಾಡಲಿಲ್ಲ ಹಿಂದಿನ ಸ್ವಾಮಿಗಳು ಮಹಾರಾಜರಿಗೆ ತಮ್ಮ ಇಷ್ಟವನ್ನು ತಿಳಿಯಪಡಿಸಿದ್ದರು ಅದರಂತೆಯೇ ಕಾರ್ಯವೂ ನೆರವೇರಿಸಲ್ಪಟ್ಟಿದೆ ಈ ವಿಷಯವನ್ನು ಮಹಾರಾಜರವರ ಇಸ್ತಿಹಾರ್ನಾಮೆಯಿಂದಲೇ ತಿಳಿಯಬಹುದು. ಯಾರಿಗೆ ಏನುಬೇಕಾದರೂ, ಸಮುದ್ರಯಾನಾದಿ ಕಾರ್ಯಗಳಿಗೆ ಅಪ್ಪಣೆ ಬೇಕೆಂದರೂ ಸ್ವಾಮಿಗಳಿಗೆ ಬರೆದು, ಕೇಳಿ, ಶಿಕ್ಷರುಂಟು —ನಾನು ಇನ್ನೂ ಕೆಲವು ಕೆಲಸಗಳನ್ನು ಮಾಡಬೇಕಾಗಿರುವುದರಿಂದ ಅದನ್ನು ಪೂರೈಸುವ ಉದ್ದೇಶದಿಂದಿದೇನೆ ಅದರಲ್ಲಿ ಮೊದಲನೆಯದು ಸ್ವಾಮಿಗಳ ಸಮಾಧಿಯ ಮೇಲೆ ದೇವಸ್ಥಾನವನ್ನು ಕಟ್ಟಿಸುವುದು ಇದಕ್ಕಾಗಿ ಕೆಲವು ಕಡೆ ಹೋಗಬೇಕೆಂಬ ಉದ್ದೇಶವಿದೆ ಮಠಧರ್ಮ, ನೀತಿಬೋಧಕವಾದ ಪತ್ರಿಕೆಯನ್ನು ಹೊರಡಿಸಲು ನನ್ನ ಉದ್ದೇಶವಿತ್ತು ಅದನ್ನು ಇಂಗ್ಲೀಷು ಸಂಸ್ಕೃತ ಭಾಷೆಯಲ್ಲಿ ಹೊರಡಿಸಿ ಪ್ರಪಂಚದಲ್ಲೆಲ್ಲಾ ಹರಡಲು ಸಂಕಲ್ಪವಿದ್ದಿತು ಇಲ್ಲಿಂದ ಹೊರಡುವುದಾದರೆ ದೊಡ್ಡದಾಗಿಯೇ ಹೊರಡಬೇಕು ಆದರೆ ನಮ್ಮ ವರಕ್ಕೆ ಪ್ರತಿಸ್ಪರ್ಧಿಗಳಾದ ಶ್ರೀ ಶಿವಗಂಗಾ ಸ್ವಾಮಿಗಳವರು ಶಾರದಾ ಪತ್ರಿಕೆಯನ್ನು ಹೊರಡಿಸುತ್ತಿರುವರು ಅವರು ಉತ್ತಮವಾದ ಧರ್ಮಗಳನ್ನು ಬರೆಯುತ್ತಿರುವರು ನಾನು ಮಾಡುವ ಪ್ರತಿಯೊಂದು ಕೆಲಸವೂ, ಭಕ್ತಿಯಿಂದಲೂ, ಶ್ರದ್ಧೆಯಿಂದಲೂ ಕೂಡಿದ್ದಾಗಿದೆ ಆದರೆ ನನ್ನಲ್ಲಿರುವ ಲೋಪಗಳನ್ನು ನನಗೆ ತೋರಿಸುವುದು ತುಂಬಾ ಸಂತೋಷ"

ಮೈಸೂರು ಸಿಟಿ ಮ್ಯುನಿಸಿಪಾಲಿಟಿಯು

ಹೊಸ ಕೌನ್ಸಲರುಗಳ ಚುನಾವಣೆಯು.

ಕಳೆದ ತಾ 19 ನೇ ಸೋಮವಾರದಿಂದ ಮೈಸೂರು ಪಟ್ಟಣದ ಪ್ರಜೆಗಳು ತಾವೇ ಚುನಾಯಿಸಿಕೊಳ್ಳುವ ಮ್ಯುನಿಸಿಪಾಲಿಟಿಗೆ ತಮ್ಮ ಪ್ರತಿನಿಧಿಗಳನ್ನು ಚುನಾವಣೆ ಮಾಡಿದರು ಈ ಚುನಾವಣೆಯೆಲ್ಲಾ ಕಳೆದ ತಾ 22 ನೇ ಗುರುವಾರ ಪ್ರಾತಃಕಾಲಕ್ಕೆ ಮುಕ್ತಾಯವಾಯಿತು ಕಳೆದ ಸೋಮವಾರ ಬೆಳಿಗ್ಗೆ ಮ್ಯುನಿಸಿಪಲ್ ಆಫೀಸ್ ನೆಡೆದ ಚುನಾವಣಾ ಮೊಹಲ್ಲೆಗೆ ಯಾರ್ಯಾರು ಕೌನ್ಸಲರುಗಳಾಗಿ ಆರಿಸಲ್ಪಟ್ಟರೆಂಬುದನ್ನು ಓಟು ಚೀಟಿಗಳ ಲೆಕ್ಕಾಚಾರದಿಂದ ಗೊತ್ತುಮಾಡಲು ಇದರ ವಿವರ ಹ್ಯಾಗಂದರೆ—

1 ಮಂಡಿ ಮೊಹಲ್ಲೆಯಲ್ಲಿ 97 ಮಂದಿ ಓಟುಗಳದಾರರಿ ಇವರಲ್ಲಿ 52 ಮಂದಿ ಹಾಜರಾಗಿ ಮೆ ಜವಳಿ ಅಂಗಡಿ ಮಾಪಣ್ಣನವರಿಗೆ ಸಮ್ಮತಿ ಹಾಕಿದ್ದರಿಂದ ಮೊಹಲ್ಲೆಗೆ ಅವರು ಮೆಂಬರಾಗಿ ಚುನಾವಣೆಯಾದರು

2 ನಜರುಬಾದು ಮೊಹಲ್ಲೆಯಲ್ಲಿರುವ 11 ಮಂದಿ ಓಟುಗಳ ಪೈಕಿ ಮಂದಿ ಹಾಜರಾಗಿ ಮೆ ತಿರುವೆಂಗಡಮೊದಲಿಯಾರ್‌ರಿಗೆ ಸಮ್ಮತಿಯನ್ನು ಕೊಟ್ಟದ್ದರಿಂದ ಇವರೇ ಆ ಮೊಹಲ್ಲೆಗೆ ಮೆಂಬರಾದರು

3 ಚಾಮರಾಜ ಮೊಹಲ್ಲೆಯಲ್ಲಿ 201 ಜನ ಓಟುಗಾರರಿದ್ದರು ಈ ಪೈಕಿ ಮಂದಿ ಬಂದು ಮೆ|| ಎಂ ವೆಂಕಟಕೃಷ್ಣಯ್ಯನವರಿಗೆ ಸಮ್ಮತಿಗಳನ್ನು ಕೊಟ್ಟರು ಇವರು ಆ ಮೊಹಲ್ಲೆಯ ಮೆಂಬರಾಗಿ ಆರಿಸಲ್ಪಟ್ಟಿದಾರೆ

4 ಲಷ್ಕರ್ ಮೊಹಲ್ಲೆಗೆ ಮೆ|| ಗಳಾದ ರಹಿಮತುಲ್ಲಾ ಆಹಮದ್ ಸೇಟ್ ಎಂ ಅನಂತರಾಜೈಯನವರೂ, ಸೆಟ್ಟೀಜರಾಯರೂ ಮೆಂಬರಾಗಲು ಅರ್ಜಿ ಬರೆದುಕೊಂಡಿದ್ದರು ಆ ಮೊಹಲ್ಲೆಯಲ್ಲಿರುವ 249 ಮಂದಿ ಓಟರುಗಳ ಪೈಕಿ 183 ಜನರು ಹೋಗಿ ತಮ್ಮಿಷ್ಟ ಬಂದ ಇಬ್ಬರಿಗೆ ಸಮ್ಮತಿ ಹಾಕಿದರು ಅನಂತರಾಜೈಯನವರಿಗೆ 130, ಮೆ ಸೆಟ್ಟೀಜರಾಯರಿಗೆ 97, ಮೆ|| ರಹಿಮತುಲ್ಲಾ ಆಹಮದ್ ಸೇಟರಿಗೆ 69, ಈ ರೀತಿ ಓಟುಗಳು ಬಂದದ್ದರಿಂದ ಮೊದಲಿನ ಇಬ್ಬರು ಆ ಮೊಹಲ್ಲೆಯ ಕೌನ್ಸಲರಾಗಿ ತೀರ್ಮಾನ ಮಾಡಲಾಯಿತು

5 ದೇವರಾಜ ಮೊಹಲ್ಲೆಗೆ ಕೌನ್ಸಲರಾಗಲು ಮೆ ಗಳಾದ ಎಂ ಸಿ ಸೀನಪ್ಪಯ್ಯ, ಎ ಸುಬ್ಬಣ್ಣನವರೂ, ಬನುಮೈಯನವರೂ, ಜೆ ಕೆ ನರಸಿಂಹಯ್ಯನವರೂ ಅರ್ಜಿ ಬರೆದುಕೊಂಡಿದ್ದರು ಆ ಮೊಹಲ್ಲೆಗೆ ಸೇರಿದ 338 ಓಟುಗಳಲ್ಲಿ 168 ಮಂದಿ ಹಾಜರಾಗಿ ಆ ನಾಲ್ಕು ಮಂದಿಯ ಪೈಕಿ ತಮಗಿಷ್ಟಬಂದ ಇಬ್ಬರಿಗೆ ಸಮ್ಮತಿಗಳನ್ನು ಬರೆದುಕೊಟ್ಟರು ಈ ಸಮ್ಮತಿಗಳನ್ನೆಲ್ಲಾ ವಿಂಗಡಿಸಿ ಲೆಕ್ಕಮಾಡಿದಾಗ ಮೆ|| ಸುಬ್ಬಣ್ಣನವರಿಗೆ 109, ಮೆ|| ಬನುಮೈಯನವರಿಗೆ 9?, ಮೆ|| ರಂಗೈಯಂಗಾರ್ರಿಗೆ 71, ಮೆ, ನರಸಿಂಹಯ್ಯನವರಿಗೆ 49 ಓಟುಗಳು ಬಂದದ್ದರಿಂದ ಆ ಮೊಹಲ್ಲೆಗೆ ಮೊದಲನೇ ಇಬ್ಬರೂ ಕೌನ್ಸಲರಾಗಿ ಇತ್ಯರ್ಥ ಮಾಡಲಾಯಿತು

6 ಕೃಷ್ಣರಾಜ ಮೊಹಲ್ಲಾಕ್ಕೆ ಮೆ|| ಎಚ್ ಶ್ರೀಕಂಠ್ಯಯನವರೂ, ಮೆ|| ಎಚ್. ವಾಸುದೇವಯ್ಯನವರು ಕೌನ್ಸಲರಾಗಬೇಕೆಂದು ಅರ್ಜಿ ಬರೆದಿದ್ದರು ಆ ಮೊಹಲ್ಲೆಯಲ್ಲಿರುವ 111 ಜನ ಓಟುಗಳ ಪೈಕಿ 85 ಜನರು ಹಾಜರಾಗಿ ತಮಗೆ ಇಷ್ಟವಿದ್ದ ಒಬ್ಬರಿಗೆ ಸಮ್ಮತಿಯನ್ನು ಬರೆದುಕೊಟ್ಟರು ಆ ಸಮ್ಮತಿ ಚೀಟಿಗಳನ್ನು ವಿಂಗಡಿಸಿ ಲೆಕ್ಕ ಮಾಡಿದಾಗ ಮೆ|| ಶ್ರೀಕಂಠ್ಯಯನವರಿಗೆ 71, ಮೆ|| ವಾಸುದೇವಯ್ಯನವರಿಗೆ 13 ಓಟುಗಳು ಬಂದದ್ದರಿಂದ ಮೆ|| ಶ್ರೀಕಂಠ್ಯಯನವರನ್ನು ಆ ಮೊಹಲ್ಲೆಯ ಕೌನ್ಸಲರಾಗಿ ತೀರ್ಮಾನ ಮಾಡಲ್ಪಟ್ಟಿತು

7 ಕೋಟೆ ಮೊಹಲ್ಲಾದಲ್ಲಿ ಮೆ|| ಗಳಾದ ಎಂ ನರಸಿಂಹಸ್ವಾಮಿಯವರೂ, ಜಹಗೀರುದಾರ್ ಮಾದಪ್ಪನವರೂ, ಕೃಷ್ಣಪ್ಪಾಜಿ ಅರಸಿನವರೂ, ಟಿ ಎಂ ಸಿದ್ದಪ್ಪನವರೂ ಮೆಂಬರಾಗಬೇಕೆಂದು ಅರ್ಜಿ ಬರೆದುಕೊಂಡಿದ್ದರು ಆ ಮೊಹಲ್ಲೆಯಲ್ಲಿರುವ 71 ಮಂದಿ ಓಟರುಗಳ ಪೈಕಿ 50 ಮಂದಿ ಹಾಜರಾಗಿ ಆ ಪೈಕಿ ತಮ್ಮಿಷ್ಟ ಬಂದ ಇಬ್ಬರ ಹೆಸರಿಗೆ ಸಮ್ಮತಿ ಹಾಕಿದರು ಇವನ್ನೆಲ್ಲಾ ವಿಂಗಡಿಸಿ ಲೆಕ್ಕ ಹಾಕಿದಾಗ ಮೆ|| ನರಸಿಂಹಸ್ವಾಮಿಯವರಿಗೆ 37, ಮೆ|| ಜಹಗೀರುದಾರ್ ಮಾದಪ್ಪನವರಿಗೆ 36, ಮೆ|| ಕೃಷ್ಣಪ್ಪಾಜಿಅರಸಿನವರಿಗೆ 18, ಮೆ|| ಸಿದ್ದಪ್ಪನವರಿಗೆ 9, ಈ ರೀತಿ ಓಟುಗಳು ಬಂದದ್ದರಿಂದ ಈ ನಾಲ್ವರ ಪೈಕಿ ಹೆಚ್ಚು ಸಮ್ಮತಿಗಳನ್ನು ಪಡೆದ ಮೊದಲನೇ ಇಬ್ಬರನ್ನು ಆ ಮೊಹಲ್ಲೆಯ ಕೌನ್ಸಲರಾಗಿ ಗೊತ್ತುಮಾಡಲಾಯಿತು

ಮೇಲ್ಕಂಡ ಪ್ರಕಾರ ಎಲ್ಲಾ ಓಟು ಚೀಟಿಗಳನ್ನು ಆಯಾಯಿಸಿ ಮಾಡುವಲ್ಲಿ ಕೆಲವು ಓಟರುಗಳು ಹಾಜರಾಗಿ ತಮ್ಮ ಸಮ್ಮತಿಯನ್ನು ಯಾರಿಗೂ ಬರೆಯದೆ ಬರೀ ಚೀಟಿಗಳನ್ನೇ ಪೆಟ್ಟಿಗೆಗೆ ಹಾಕಿದ್ದರು, ಕೆಲವರು ಇಬ್ಬರಿಗೆ ಓಟು ಹಾಕುವ ಹಕ್ಕನ್ನು ಪಡೆದಿದ್ದರೂ ಒಬ್ಬರಿಗೆ ಮಾತ್ರ ಓಟುಹಾಕಿದ್ದರು, ಇನ್ನು ಕೆಲವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯದೆಹೋದದ್ದರಿಂದ ಈ ಚೀಟಿಗಳನ್ನು ವಜಾ ಮಾಡಬೇಕಾಯಿತು

ಈ ಸಲ ನಡೆದ ಚುನಾವಣೆಯಲ್ಲಿ ಮೇಲೆಬರೆದ ಮೆಂಬರುಗಳೇ ಎಲ್ಲಾ ಕಡೆಗಳಲ್ಲೂ ಪ್ರಜೆಗಳಿಂದ ಚುನಾಯಿಸಲ್ಪಟ್ಟರಾದರೂ ಲಷ್ಕರ್ ಮೊಹಲ್ಲೆಗೆ ಮೆ|| ಸೆಟ್ಟೀಜರಾಯರೂ, ದೇವರಾಜ ಮೊಹಲ್ಲೆಗೆ ಮೆ|| ಬನುಮೈಯನವರೂ (ಇಬ್ಬರೂ ವರ್ತಕರು) ಹೊಸದಾಗಿ ಮೆಂಬರಾಗಿ ಚುನಾಯಿಸಲ್ಪಟ್ಟರೆಂದು ತಿಳಿಸಲು ಸಂತೋಷಪಡುತ್ತೇವೆ

ವೈಸ್ ಪ್ರೆಸಿಡೆಂಟರು ಈ ಎಲ್ಲಾ ಮೊಹಲ್ಲೆಗಳ ಓಟು ಚೀಟಿಗಳನ್ನು ಇನ್ನೆರಡು ವಾರಗಳ ತನಕ ಹಾಗೇ ಇಟ್ಟಿದ್ದು, ಆ ಬಳಿಕ ನಾಶಪಡಿಸುವುದಾಗಿ ತಿಳಿಸಿದರು ಹೊಸದಾಗಿ ಕೌನ್ಸಲರಾದವರೂ, ಮೊದಲಿಂದ ಇದ್ದುಕೊಂಡು ಬಂದಿರುವವರೂ ತಮಗೆ ಪ್ರಜೆಗಳು ಮೆಂಬರಾಗುವಂತೆ ಹೆಚ್ಚು ಸಮ್ಮತಿ ಹಾಕಿದ್ದಕ್ಕಾಗಿ ವಿನಯಂನಿಂದ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿ ಪ್ರೆಸಿಡೆಂಟರೇ ಮೊದಲಾಗಿ ಹಾಜರಿದ್ದ ದೊಡ್ಡ ಮನುಷ್ಯರಿಗೆ ಹಾರ ತುರಾಯಿಗಳನ್ನು ಅಡಕೆಲೆಯನ್ನು ಒಪ್ಪಿಸಿದರು ಮೆ, ಅಂಬಳೆ ಅಣ್ಣಯ್ಯ ಪಂಡಿತರು ಪ್ರೆಸಿಡೆಂಟರನ್ನು ಕುರಿತು —ಈ ಸಲ ವೈಸ್ ಪ್ರೆಸಿಡೆಂಟರು ಚುನಾವಣೆಯನ್ನು ಬಹು ತೃಪ್ತಿಕರವಾಗಿಯೂ, ಸರ್ವ ಸಮ್ಮತವಾಗಿಯೂ, ವಿಶದವಾಗಿಯೂ ನಡೆಸಿರುತ್ತಾರೆ ಹೊಸ ಮೆಂಬರುಗಳು ಚುನಾವಣೆಯಾಗಿ ಬಂದದ್ದನ್ನು ನೋಡಿ ಸಂತೋಷಪಡುವೆವು ಮೆ|| ಎಂ ಎ ರಂಗೈಯಂಗಾರ್ರು ಚುನಾವಣೆ ಆಗದೆ ತಪ್ಪಿಹೋದರು ಇವರು ಬೋರ್ಡಿಗೆ ತುಂಬಾ ಸಹಾಯಕರಾಗಿರುವುದರಿಂದ ಇತರ ವಿಷಯದಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡಿ ಅವರಿಗೆ ಮೆಂಬರ ಸ್ಥಾನವು ದೊರಕುವಂತೆ ಮಾಡಿಕೊಡಬೇಕು ಎಂಬ ರೀತಿಯಾದ ಅಭಿಪ್ರಾಯವನ್ನು ತಿಳಿಸಿದಾಗ ಇತರ ಮೆಂಬರುಗಳೂ ಅನುಮೋದಿಸಿದರು ಪ್ರೆಸಿಡೆಂಟರು ಎಲ್ಲರನ್ನೂ ಪ್ರತಿವಂದಿಸಿ ಓಟಿಂಗನ್ನು ಮುಕ್ತಾಯಮಾಡಿದರು

ಬಹುಮಾನ ವಿನಿಯೋಗವು

ಶಿವಸಮುದ್ರದಲ್ಲಿ ನಡೆದ ಸಂತೋಷಕೂಟವು

ಶಿವಸಮುದ್ರದ ಎ ವಿ ಸ್ಕೂಲಿನಲ್ಲಿ ಇದೇ ಮಾಹೆ 19 ನೇ ತಾ ಸೋಮವಾರ ಬಾಲಕರ ಬಹುಮಾನ ಸಭೆಯು ನೆರವೇರಿಸಲ್ಪಟ್ಟಿತು ಸ್ಕೂಲ್ ಕಟ್ಟಡವು ಅನೇಕ ಚಿತ್ರಪಟಗಳಿಂದಲೂ, ತಮ್ಮ ವಿದ್ಯಾರ್ಥಿಗಳಿಂದ ತಯಾರಿಸಲ್ಪಟ್ಟದ್ದ ಕಿಂಡರ್‌ಗಾರ್ಟೆನ್ ಸಾಮಾನುಗಳಿಂದಲೂ ಅಂದವಾಗಿ ಅಲಂಕರಿಸಲ್ಪಟ್ಟಿತ್ತು ಆ ದಿವಸ ಮಧ್ಯಾಹ್ನ 4 ಗಂಟೆಗೆ ಈ ಊರಲ್ಲಿರುವ ಯೂರೋಪ್ಯಿಯನ್ನರೂ, ದೊರೆಸಾನಿಯವರೂ, ದೇಶೀಯ ದೊಡ್ಡ ಮನುಷ್ಯರುಗಳೂ ದಯಮಾಡಿಸಿ ಸಭೆಯನ್ನು ಅಲಂಕರಿಸಿದರು ಸಭೆಯನ್ನು ಕೋಲಾರ ಮೈನಿ ಇಲ್ಲಿನ ಚೀಫ್ ಆಪರೇಟರವರ ಪತ್ನಿಯವರು ಮತ್ತು ಡಾಕ್ಟರ್ ಶೇಷಗಿರಿರಾಯರು ಅಗ್ರಾಸನವನ್ನು ವಹಿಸಿದರು

ಸ್ಕೂಲಿನ ಬಾಲಕ ಬಾಲಕಿಯರುಗಳು ದೇವರ ಸ್ತೋತ್ರ ಮಾಡಿ ನಮ್ಮ ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯ ಗಾನಗಳನ್ನು ಹಾಡಿದರು —ಹೆಡ್ ಮಾಸ್ಟರವರು ಈ ಸ್ಕೂಲಿನಲ್ಲಿ ಅಸಿಸ್ಟೆಂಟ್ ಮಾಸ್ಟರುಗಳು ಕಿಂಡರ್‌ಗಾರ್ಟೆನ್ ಕ್ರಮವನ್ನನುಸರಿಸಿ ವಿದ್ಯಾಭ್ಯಾಸ ಮಾಡಿಸುವುದು, ಇಲ್ಲಿನ ಚೀಫ್ ಆಪರೇಟರವರು ಈ ಸ್ಕೂಲಿಗಾಗಿ ಮಾಡಿಕೊಟ್ಟ ರಕ್ಷಕ ಸಹಾಯಗಳು, ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ಸ್ಕೂಲಿಗಾಗಿ ಮಾಡುತ್ತಲಿರುವ ಸಹಾಯಸಂಪತ್ತುಗಳು ಮುಂತಾದ ವಿಷಯಗಳನ್ನು ವಿವರಿಸಿ ಕೊಂಡಾಡಿ, ಸ್ಕೂಲ್ ಹಿಂಭಾಗದಲ್ಲಿರುವ ಸ್ಥಳವನ್ನು ಸ್ಕೂಲ್ ಗಾರ್ಡನ್‌ಗಾಗಿ ಕೊಡಿಸಬೇಕೆಂದಾಗಿಯೂ, ಮಕ್ಕಳು ಓಡಾಡುವ ನಾಲೆಯ ಮೇಲಿರುವ ಸೇತುವೆಗೆ ಕಬ್ಬಿಣದ ರೈಲ್ ಕಂಬಿಗಳನ್ನು ಹಾಕಿಸಬೇಕೆಂಬದಾಗಿಯೂ, ಸ್ಕೂಲಿಗೆ ಸರ್ಕಾರದವರು ಇನ್ನೂ ಕೆಲವು ಸಹಾಯಗಳನ್ನು ಏರ್ಪಡಿಸಿಕೊಡಬೇಕೆಂಬದಾಗಿಯೂ ಸ್ಕೂಲ್ ರಿಪೋರ್ಟನ್ನು ತಿಳಿಸಿದರು ಆ ಮಾಸ್ಟರ್ ಮೆ|| ಸುಬ್ಬಾಜೋಯಿಸರವರು ವಿದ್ಯೆಯೇ ಶ್ರೇಷ್ಠವೆಂದೂ, ಅದರ ಜೊತೆಗೆ ಕೈಕೆಲಸಗಳನ್ನೂ ಕಲಿಸಿಕೊಂಡು ವಿದ್ಯಾಭ್ಯಾಸ ಮಾಡಿಸಬೇಕೆಂದೂ, ನಮ್ಮ ಸರ್ಕಾರದವರು ಇದಕ್ಕಾಗಿ ತುಂಬಾ ಸಹಾಯ ಸಂಪತ್ತುಗಳನ್ನು ಒದಗಿಸಿ ಕೊಡುತ್ತಿರುವರೆಂದೂ, ಪ್ರಾಥಮಿಕ ವಿದ್ಯಾಭ್ಯಾಸವು ಅಭಿವೃದ್ಧಿಗೆ ಬಂದ ಹೊರತು ನಮ್ಮವರು ಉತ್ತಮಸ್ಥಿತಿಗೆ ಬರುವುದಿಲ್ಲವೆಂದೂ, ಇದಕ್ಕಾಗಿ ಸರ್ಕಾರದವರು ಮಾಡುತ್ತಲಿರುವ ಏರ್ಪಾಡುಗಳಿಗೆ ನಮ್ಮ ಜನಗಳು ಸೇರಿ ಈ ಪ್ರೈಮರಿ ವಿದ್ಯಾಭ್ಯಾಸವನ್ನು ಹೆಚ್ಚಿಸಬೇಕೆಂದೂ ಬಹು ಸ್ವಾರಸ್ಯವಾಗಿ ಉಪನ್ಯಾಸಿಸಿದರು —ಕೂಡಲೆ ಇಬ್ಬರು ಚಿಕ್ಕ ಮಕ್ಕಳು ಬಂದು ಕಿಂಡರ್‌ಗಾರ್ಟೆನ್ ಕಲಿಕೆಗಳ ವಿಷಯವಾಗಿ ಪ್ರಶ್ನೋತ್ತರಗಳನ್ನು ಮಾಡುತ್ತಾ, ಎ ನೇ ತರಗತಿಯಿಂದ ಸೋಫಾ ಕುರ್ಚಿಗಳನ್ನು ರಚಿಸಿ, "ತಂದೆ ತಾಯಿಗಳು ನನ್ನ ಸಂಗಡ ಕೂತುಕೊಂಡು ಸುಖಿಸಲಿ" ಎಂಬ ಅರ್ಥವುಳ್ಳ ಹಾಡನ್ನು ಹೇಳಿ ಸಭಿಕರನ್ನು ಆನಂದಗೊಳಿಸಿದರು —ಅನಂತರದಲ್ಲಿ 3 ನೇ ತರಗತಿಯ ವಿದ್ಯಾರ್ಥಿಗಳಿಬ್ಬರು ಇಂಗ್ಲೀಷು ರಾಜ್ಯಭಾರದಿಂದ ಉಂಟಾಗಿರುವ ಪ್ರಯೋಜನ ಮುಂತಾದ ಒಂದೂ ಚರಿತ್ರೆಯ ವಿಷಯವಾಗಿ ಸಂಭಾಷಿಸಿದರು ಕೂಡಲೆ 1 ನೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ಬಂದು ಕಾವೇರೀ ನದಿ ಹುಟ್ಟುವ ಸ್ಥಳ ಮೊದಲುಗೊಂಡು ಸಮುದ್ರಕ್ಕೆ ಸೇರುವವರೆಗೆ ಈ ನದಿಯಿಂದಾಗುವ ಪ್ರಯೋಜನಗಳನ್ನು, ಈ ಊರಿನಲ್ಲಿ ಉತ್ಪತ್ತಿ ಮಾಡುತ್ತಲಿರುವ ವಿದ್ಯುಚ್ಛಕ್ತಿಯ ವಿಷಯವನ್ನು ಪ್ರಸಂಗಿಸಿ, ಕಾವೇರೀ ನದಿಯ ವರ್ಣನೆಯನ್ನು ಗಾನಮಾಡಿ ಸಂತೋಷಪಡಿಸಿದರು

ಇಂಗ್ಲಿಷ್ ವ್ಯಾಸಂಗಮಾಡುವ ಒಬ್ಬ ವಿದ್ಯಾರ್ಥಿಯು "ತಿರುಕನ ಕನಸು" ಎಂಬ ಕಥೆಯನ್ನು ಇಂಗ್ಲಿಷ್ ಭಾಷೆಯಲ್ಲಿಯೇ ಮಾತಾಡಿ ಅಭಿನಯಿಸಿದನು ಆ ಮೇಲೆ ಬಾಲಕಬಾಲಕಿಯರು ತೋಟದ ಕೆಲಸಗಳ ವಿಷಯವಾಗಿ ಗಾನಮಾಡಿ ಅದರಂತೆ ಅಭಿನಯಿಸಿ ಆಟವಾಡಿ, ತಮ್ಮ ಸ್ಕೂಲಿಗೆ ತೋಟವಿಲ್ಲದಿರುವುದಕ್ಕಾಗಿ ಚಿಂತಿಸುತ್ತಿರುವುದನ್ನು ಸೂಚಿಸಿದರು —ಕೆಲವು ಬಾಲಕಬಾಲಕಿಯರು ಬಂದು ಗುಂಡಾಗಿ ನಿಂತುಕೊಂಡು ಒಬ್ಬ ವಿದ್ಯಾರ್ಥಿಯ ಅಪ್ಪಣೆಯ ಮೇರೆಗೆ ಕಾಗದದಲ್ಲಿ ಕೋಟು, ಪರಾಯಿ, ಬೂಟ್ಸ್‌ಗಳನ್ನು ರಚಿಸಿ ಅವರುಗಳಲ್ಲಿ ಸೇರಿಸಿ ಪ್ರತಿ ಒಬ್ಬ ಯೂರೋಪಿಯನ್ ಹೆಂಗಸರು, ಗಂಡಸರುಗಳಿಗೂ ಪಾರಿತೋಷಕವಾಗಿ ಅರ್ಪಿಸಿದ್ದನ್ನು ಅವರುಗಳು ಆತ್ಮಾದರದೊಡನೆ ಸ್ವೀಕರಿಸಿದರು —1 ನೇ ತರಗತಿಯ ಬಾಲಕಬಾಲಕಿಯರು ಸೇರಿ ಮೊದಲನೆಯ ರೀಡರಿನಲ್ಲಿರುವ "ಗೋವಿನ ಕಥೆ" ಯನ್ನು ನಾಟಕದ ರೀತಿಯಲ್ಲಿ ಅಭಿನಯಿಸಿ, ಸಭಿಕರ ಮನಸ್ಸು ಕರಗುವಂತೆ ಮಾಡಿದರು ಸಭಿಕರಿಗೆ ಗೋವಿನಕಥೆಯಿಂದುಂಟಾದ ಬೇಸರವನ್ನು ಹೋಗಲಾಡಿಸುವದಕ್ಕಾಗಿ ಕೂಡಲೇ ಮೂರು ಜನ ವಿದ್ಯಾರ್ಥಿಗಳು ಚಿಕ್ಕಗಳ ವ್ಯಾಜ್ಯವೆಂಬ ಕಥೆಯನ್ನು ಅಭಿನಯಿಸಿ ಸಂತೋಷಗೊಳಿಸಿದರು ಅನಂತರ ಎಲ್ಲಾ ಬಾಲಕಬಾಲಕಿಯರೂ ಸೇರಿ ಮಂಗಳವನ್ನು ಗಾನಮಾಡಿದರು

ಇಲ್ಲಿನ ಅ|| ಮಾಸ್ಟರು ಮೆ|| ಸುಬ್ಬಾಜೋಯಿಸರು ಸ್ಕೂಲ್ ವಿದ್ಯಾರ್ಥಿಗಳಿಂದ ಕಿಂಡರ್‌ಗಾರ್ಟೆನ್ ಕೆಲಸಗಳನ್ನು ಮಾಡಿಸಿ ಆ ಪದಾರ್ಥಗಳನ್ನೂ, ತಾವು ಕಿಂಡರ್‌ಗಾರ್ಟೆನ್ ಕ್ರಮದಲ್ಲಿ ರಚಿಸಿರುವ ಕೇವಲ ಚಿತ್ರಗಳ ಸಹಾಯದಿಂದಲೇ ಅಕ್ಷರಗಳನ್ನು ಕಲಿಸಬಹುದಾದ "ನಚಿತ್ರ ಕರ್ಣಾಟಕ ವರ್ಣಬೋಧೆ" ಎಂಬ ಪಠನವನ್ನೂ ಚಿತ್ರದುರ್ಗದಲ್ಲಿ ನಡೆದ ಎಗ್ಜಿಭಿಷನ್‌ಗೆ ಕಳುಹಿಸಿದ್ದರು ಆ ಎಗ್ಜಿಭಿಷನ್‌ನಲ್ಲಿ ಸ್ಕೂಲಿಗಾಗಿ ಒಂದು ಬೆಳ್ಳಿ ಮೆಡಲೂ, ಒಂದು ಯೋಗ್ಯತಾ ಪತ್ರವೂ, ಮೇಲ್ಕಂಡ ಪಠನಕ್ಕಾಗಿ ಮೆ|| ಜೋಯಿಸರಿಗೆ ಒಂದು ಮೆಡಲೂ, ಒಂದು ಯೋಗ್ಯತಾ ಪತ್ರವೂ, ವಿದ್ಯಾರ್ಥಿಗಳ ಪೈಕಿ ಒಬ್ಬ ಮುಸಲ್ಮಾನ್ ಬಾಲಕನಿಗೆ ಒಂದು ಯೋಗ್ಯತಾ ಪತ್ರವೂ ಬಂದಿತ್ತು

ಅಗ್ರಾಸನಾಧಿಪತಿಗಳು ಈ ಸ್ಕೂಲಿನಲ್ಲಿ ನಡೆಯುತ್ತಲಿರುವ ವಿದ್ಯಾಭ್ಯಾಸದ ವಿಷಯದಲ್ಲಿಯೂ, ಕಿಂಡರ್‌ಗಾರ್ಟೆನ್ ಕೆಲಸಗಳಲ್ಲಿಯೂ, ಇಲ್ಲಿನ ಮಾಸ್ಟರುಗಳು ಸ್ಕೂಲನ್ನು ತುಂಬಾ ಮುತುವರ್ಜಿಯಿಂದ ಅಭಿವೃದ್ಧಿಗೆ ತರುತ್ತಿರುವುದಾಗಿಯೂ, ಈಗ ನಡೆಸಿದ ಕೆಲಸಗಳೆಲ್ಲಾ ಸಭಿಕರ ಮನಸ್ಸನ್ನು ಆನಂದಗೊಳಿಸಿದವೆಂದೂ ಕೊಂಡಾಡಿ, ಮಾಸ್ಟರುಗಳಿಗೆ ಇಂಥಾ ಕೆಲಸಗಳಿಗಾಗಿ ದೊರೆತವುಗಳೆಂಬದಾಗಿ ವರ್ಣಿಸಿ, ಮೆಡಲುಗಳನ್ನೂ, ಯೋಗ್ಯತಾ ಪತ್ರಗಳನ್ನೂ ದಯಪಾಲಿಸಿದರು ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ದಯಪಾಲಿಸಿದ್ದ ಬಹುಮಾನ ಪುಸ್ತಕಗಳನ್ನು ಪ್ರತಿ ಒಬ್ಬ ಬಾಲಕ ಬಾಲಕಿಯರನ್ನು ಬರಮಾಡಿಕೊಂಡು ಅವರಿಗೆ ದಯಪಾಲಿಸಿದರು

ಸಭಿಕರು ಅಗ್ರಾಸನಾಧಿಪತಿಗಳಿಗೆ ವಂದನಾ ಪೂರ್ವಕವಾದ ಜಯಘೋಷಗಳನ್ನು ಮಾಡಿ ಸಭೆಯನ್ನು ಮುಕ್ತಾಯಮಾಡಿದರು —ಹೆಡ್ ಮಾಸ್ಟರವರು ತಮ್ಮ ರಿಪೋರ್ಟಿನಲ್ಲಿ ಅರಿಕೆಮಾಡಿಕೊಂಡಿರುವ ಅಂಶಗಳನ್ನೂ, ಸ್ಥಳದಸಹಾಗಿ ಆ ಮಾಸ್ಟರುಗಳಿಗೆ ಅಲೋಯನ್ಸನ್ನೂ, ಸ್ಕೂಲ್ ಕಟ್ಟಡ ಅವರುಗಳ ವಾಸದ ಕಟ್ಟಡ ಇವುಗಳಲ್ಲಿರುವ ನ್ಯೂನಾತಿರಿಕ್ತಗಳನ್ನೂ ಸರಿಪಡಿಸಿಕೊಟ್ಟಲ್ಲಿ ಈ ಸ್ಕೂಲು ಇನ್ನೂ ಅಭಿವೃದ್ಧಿಗೆ ಬರುವ ವಿಷಯದಲ್ಲಿ ಸಂದೇಹವಿಲ್ಲ

ಪ್ರೇಕ್ಷಕ

ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರುತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು "ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮೀದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತವಡಿಸುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್‌ಪಾಂಡೆನ್ಸ್.

ಚಿಕ್ಕಬಳ್ಳಾಪುರದ ಪೋಲೀಸ್.

ಅಯ್ಯಾ,

ಕಳೆದ 15 ನೇ ತಾ ವೃತ್ತಾಂತ ಪತ್ರಿಕೆಯಲ್ಲಿ ಚಿಕ್ಕಬಳ್ಳಾಪುರದ ಪೋಲೀಸಿನವರ ವಿಷಯವಾಗಿ ಬರೆದಿರುವ ಆಕ್ಷೇಪಣೆಯನ್ನು ಕುರಿತು ಪ್ರಕಟಿಸಲ್ಪಟ್ಟ ಕ್ರಷ್ಟೆ ಪೋಲೀಸಿನವರು ಹಿಂಸಿಸಿದರೆಂದು ಹೇಳುವ ಸದರಿ ಆಗಸರ ಪಾಪಣ್ಣನೆಂಬುವನು ಇದುವರೆವಿಗೂ ಕಣ್ಣಿನ ದೃಷ್ಟಿಯೂ, ಕೇಳುವಿಕೆಯೂ, ಕೈಕಾಲುಗಳ ಸ್ವಾಧೀನವೂ ಇಲ್ಲದೆ ಕಷ್ಟದಲ್ಲಿಯೇ ಇರುತ್ತಾನೆ ಕಾಲು ಮತ್ತು ಗಂಜಮಾತ್ರ ಸ್ವಲ್ಪವಾಗಿ ಕುಡಿಯುತ್ತಾನೆ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಈ ಊರಿಗೆ ದಯಮಾಡಿ ಸಂಕಟಪಡುತ್ತಿರುವಂಥಾ ಪಾಪಯ್ಯನ ದೇಹಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ, ತುಂಬಾ ಕನಿಕರಪಟ್ಟು ಈ ವಿಷಯವನ್ನು ತನಿಖೆಯಿಂದ ಪರಿಶೀಲನೆ ಮಾಡುವಂತೆ ಅಪ್ಪಣೆ ಕೊಟ್ಟು ಹೊರಟುಹೋದರು ಕೊಲಾರದಿಂದ ಇದೇ ಕೆಲಸಕ್ಕಾಗಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರು ದಯಮಾಡಿ ಈತನ ದೇಹಸ್ಥಿತಿಯನ್ನು ಪರೀಕ್ಷಿಸಿಕೊಂಡು ಹೋ

ದರು ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ಪಾಪ್ಯೆಯನನ್ನು ಬಹು ಮುತುವರ್ಜಿಯಿಂದ ಕಾದಿದ್ದ ಸ್ಥಳಕ್ಕೆ ಕರಸಿಕೊಂಡು ಅವನ ವಾಜ್ಮೂಲವನ್ನು ಬರೆದುಕೊಳ್ಳಬೇಕೆಂದು ಒಂದು ಭಂಡಿಯನ್ನು ಅವನ ಮನೆಗೆ ಕಳುಹಿ ಕೊಟ್ಟಿದ್ದರು ಆ ಕಾಲದಲ್ಲಿ ಪಾಪ್ಯೆಯನು ಬದುಕುತ್ತಾನೆಂಬ ನಿರೀಕ್ಷೆಯೇ ಇದ್ದಿಲ್ಲ ಈ ರೀತಿ ಅವನನ್ನು ಭಂಡಿಯಲ್ಲಿ ಹಾಕಿಕೊಂಡು ಬರಬೇಕೆಂದು ಅಪ್ಪಣೆ ಮಾಡಿ ಭಂಡಿಯನ್ನು ಅವನ ಮನೆಗೆ ಕಳುಹಿಸಿ ಕೊಟ್ಟಿದ್ದು ಯಾತಕೋ ತಿಳಿಯಲಿಲ್ಲ ಇದುವರಿವಿಗೆ ಬೇರೆ ಬೇರೆ ಆಫೀಸರುಗಳು ಅನೇಕ ವೇಳೆ ಅವನಿಂದ ವಾಜ್ಮೂಲಗಳನ್ನು ಬರೆದುಕೊಂಡಿದಾರೆ ಇದುವರಿಗೆ ಅನೇಕ ಆಫೀಸರುಗಳೂ ಅವನ ಮನೆಗೆ ಬಂದು ನೋಡಿಕೊಂಡು ಹೋದರು ಈ ಊರಿನ ಡಾಕ್ಟರ್ ಸಾಹೇಬರು ಸದರಿ ಪಾಪ್ಯೆಯನಿಗೆ ಸರಟಿಫಿಕೇಟು ಕೊಡದೆ, ಇದಕ್ಕಾಗಿ ಕೊಟ್ಟಿದ್ದ ಫೀಜನ್ನು ವಾಪಸು ಕೊಟ್ಟಂತೆ ತಿಳಿಯಬರುತ್ತೆ ನಡೆದಿರುವ ಈ ವಿದ್ಯಮಾನಗಳನ್ನು ಬೇರೇ ದಾರಿಗೆ ತಿರುಗಿಸುವರೋ ಏನೋ ಎಂದು ಅನೇಕರು ಹೇಳಲಾರಂಭಿಸಿದಾರೆ ಸಕಲಪ್ರಭುಗಳಾದ ಸರ್ಕಾರದವರು ಇದರ ವಿಷಯವಾಗಿ ಗಮನಕ್ಕೆ ತಂದು ಪ್ರಜೆಗಳ ಕಷ್ಟಗಳನ್ನು ಪರಿಹರಿಸುವರೆಂಬದಾಗಿ ನಂಬುತ್ತೇನೆ

ಎಂ ಪಾಲ್

ಕೊರಟಗೆರೆ ವರ್ತಮಾನ—ಜವಾಬು

ಅಯ್ಯಾ,

ತಾ 15 ನೇ ತಮ್ಮ ಪತ್ರಿಕೆಯಲ್ಲಿ ಕೊರಟಗೆರೆ ವಿಷಯದಲ್ಲಿ ಪ್ರಕಟಿತವಾದ ವರ್ತಮಾನಗಳನ್ನು ಓದಿದೆನು ಕೊರಟಗೆರೆ ಟವರ್ ಮ್ಯುನಿಸಿಪಾಲಿಟಿಯು ಬಹಳ ಶೋಚನೀಯವಾಗಿದೆ ಎಂದು ಬರೆದಿರುತ್ತಾರೆ ಕೆಲವು ಕಡೆ ಬೀದಿಗಳಲ್ಲಿ ಕಚರಾ ಸರಿಯಾಗಿ ಗುಡಿಸುವದಿಲ್ಲವೆಂತಲೂ, ಲಾಂದ್ರದ ಕಂಭಗಳು ಮಾತ್ರ ಸ್ವಲ್ಪವಾಗಿ ನಿಂತಿವೆ ಎಂತಲೂ ಆಕ್ಷೇಪಣೆ ಮಾಡಿರುತ್ತಾರೆ ಕೊರಟಗೆರೆಯು ಒಂದು ಸಣ್ಣ ಊರಾದಾಗ್ಯೂ ಊರಿನ ಸ್ಥಿತಿಯನ್ನು ಬಲ್ಲವರು ಈ ಮಹನೀಯರಾದರು ಡೆಪ್ಯುಟಿ ಕಮಿಷನರ್ ಸಾಹೇಬರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರುಗಳು ಈ ಟವರ್‌ಗೆ ಆಗಾಗ್ಗೆ ದಯಮಾಡಿ ಊರಿನ ಪಾಕೀಜಾ ಯಾ ಸ್ಯಾನಿಟೇಷನ್ ವಿಷಯದಲ್ಲಿ ಸಂತೋಷಪಟ್ಟು ಹೋಗಿರುತ್ತಾರೆ ಟವರ್ ಝಾಡಮಾಲಿಗಳು 6 ಜನರೂ ಕಚರಾ ಗಾಡಿಯು ಒಂದೂ ಇರುತ್ತವೆ ಇದಕ್ಕೆ ಮ್ಯುನಿಸಿಪಲ್ ಸಿವರ್ ಇಲ್ಲ ಲೋಕಲ್ ಆಫೀಸರುಗಳು ಗ್ರಾಮಾಂತರಗಳ ಮೇಲೆ ಸರ್ಕೀಟು ಹೋದಾಗ ಝಾಡಮಾಲಿಗಳ ಕೆಲಸದಲ್ಲಿ ಅಷ್ಟು ಶ್ರದ್ಧೆ ವಹಿಸದೆ ಇರುವದು ಸಹಜವಾಗಿಯೇ ಇದೆ ೬ ಝಾಡಮಾಲಿಗಳು ಎಷ್ಟು ತಾನೇ ಕೆಲಸ ಮಾಡ್ಯಾರು ? ಕಲ್ಲಿನ ಚರಂಡಿಗಳು ಕೆವಲ ಸಾಮಾನ್ಯವಾಗಿವೆ ಮ್ಯುನಿಸಿಪಾಲಿಟಿಯು ಕೇವಲ ಬಡಸ್ಥಿತಿಯಲ್ಲಿದೆ ವರ್ಷೇ ವರ್ಷ ಸಾಕಾದಷ್ಟು ಹುಟ್ಟುವಳಿಯಿಲ್ಲದೆ, 2 3 ವರ್ಷಗಳಿಂದಲೂ ಯಾವ ಕಾಮಗಾರಿಗಳೂ ನಡೆಯದೆ, ಪ್ರತಿ ಒಂದು ರಸ್ತೆಯೂ, ಗಲ್ಲಿಯೂ, ಚರಂಡಿಯೂ ನೀರಿನ ಪ್ರವಾಹದಿಂದ ಕೊರೆದುಕೊಂಡು ಹೋಗಿರುತ್ತವೆ ಹೀಗಿರುವಲ್ಲಿ ಲಾಂದ್ರಗಳನ್ನು ಹಚ್ಚುವದು ಹೇಗೆ ? ಕೊರಟಗೆರೆಗಿಂತಲೂ ದ್ವಿಗುಣವಾದ ಹುಟ್ಟುವಳಿ ಇರತಕ್ಕ ಮದ್ದಗಿರಿಯಲ್ಲಿ 1 ೨ ಝಾಡಮಾಲಿಗಳಿಂದ ಕೆಲಸ ತಗೆದುಕೊಂಡು ಟವರ್ ಕೆಲಸಗಳಿಗೆ ಲಾಂದ್ರಗಳನ್ನು ಹಚ್ಚುವದಾಗಲಿ ೩ ೪ ವರ್ಷಗಳಿಂದ ನಡೆಯದೆ ಇವೆ ಮದ್ದಗಿರಿಯ ದುಸ್ಥಿತಿಯನ್ನು ನೋಡಿದವರೇ ಬಲ್ಲರು ಕೊರಟಗೆರೆಯನ್ನು ಹೀಯಾಳಿಸುವ ಬಾತ್ಮಿದಾರರು ಮದ್ದಗಿರಿ, ಪಾವಗಡ, ಮತ್ತು ಇತರ ತಾಲ್ಲೂಕಾಮುಲೆಗಳ ಉತ್ಪತ್ತಿ, ಖರ್ಚು ಮತ್ತು ಇತರ ಬಾಬುಗಳ ಅಡಕತಗಳನ್ನು ತಿಳಿದಿದ್ದ ಪಕ್ಷದಲ್ಲಿ ಈ ಪ್ರಕಾರ ಹೇಳಲಾರರು ಕೊರಟಗೆರೆಯನ್ನು ನಾನು ಹೊಗಳತಕ್ಕವನಲ್ಲ ಆದರೂ ಕೊರಟಗೆರೆಯಲ್ಲಿ ಯಾವ ರೋಗ, ಸೋಂಕುಜಾಡ್ಯ ಉಪದ್ರಾದಿಗಳಿಲ್ಲ ಕೊರಟಗೆರೆಯು ಒಳ್ಳೇ ಸ್ಯಾನಿಟರಿಯಾದದ್ದೆಂದು ತುಂಕೂರು ಡಿಸ್ಟ್ರಿಕ್ಟಿನಲ್ಲಿ ಹೆಸರುವಾಸಿ ಹೊಂದಿರುತ್ತದೆ ಇದಕ್ಕೆ ಇಲ್ಲಿರುವ ಆಸ್ಪತ್ರೆಯ [illegible] ಲೆಕ್ಕಗಳು ಸಾಕ್ಷಿ ಹೇಳಬಹುದು

ಪ್ರಜಾಹಿತಕಾರಿ

ತಾಲ್ಲೂಕು ವರ್ತಮಾನಗಳು

[illegible]ಸೂರು —ಈ ಟವರ್‌ನಲ್ಲಿ ಪ್ಲೇಗು ಕಾಣಿಸಿ ಎರಡು ತಿಂಗಳ ಮೇಲಾಯಿತು, ಬ್ರಾಹ್ಮಣರು ಮೊದಲು ಊರುಬಿಟ್ಟರು ಇತರರು ಈಚೆಗೆ ಊರುಬಿಡುತ್ತಾ ಇದಾರೆ ಮುಸಲ್ಮಾನರಲ್ಲಿ ಕೆಲವು ಮರಣಗಳು ನಡೆದದ್ದರ ಮೇಲೆ ಈಗ ಕೆಲವರು ಬಿಡುತ್ತಾ ಇದ್ದಾರೆ ಕೆಲವರು ಪರಸ್ಥಳ ಹೋಗಿದಾರೆ ಇನ್ನು ಸ್ವಲ್ಪ ಜನ ಮಾತ್ರ ಪೇಟೆನಲ್ಲಿರುವರು ಉಳಿದವರೆಲ್ಲಾ ಊರಿನಲ್ಲಿ ಇದಾರೆ ಇದರಿಂದ ಕಾಯಿಲೆಯು ಸಂಪೂರ್ಣವಾಗಿ ಶಮನವಾಗಲು ಅವಕಾಶವಿಲ್ಲ —ಧಾರಣೆವಾಸಿ ಹೇಳಬೇಕೆಂದದ್ದು ? ಇಲ್ಲ ರೂಪಾಯಿಗೆ (ಸೇರು ಅಕ್ಕಿ, 12 ಸೇರು ರಾಗಿ ಎಡಬಲಗಳಿಗೆ ಜೀವನ ನಡೆಯುವುದು ಬಹಳ ಪ್ರಯಾಸವಾಗಿದೆ ಸರ್ಕಾರದವರು ಬಡ ತಾಲೀಕುದಾರರಿಗೆ ಹಿಂದೆ ಕೊಡುತ್ತಾ ಇದ್ದಂತೆ ತಗಲೂ ಕ್ಷಾಮದ ಅಲೋಯನ್ಸನ್ನು ಕೊಡಿ [illegible] ವಿದ್ದಲ್ಲಿ [illegible]

ಗೂ[illegible]ದನೂರು ತಾ|| ಒಸ[illegible]ಹಳ್ಳಿ — ಈ ಗ್ರಾಮದ ಬಳಿ ಪುಷ್ಯದ ಮಳೆ ವಿಶೇಷವಾಗಿ ಸುರಿದು ಪೈರುಗಳಿಗೆ ಕೊಂಚ ನಷ್ಟವಾಗಿದೆ ಗಟ್ಟಿ ಭೂಮಿಗಳು ಸಾಧಾರಣವಾಗಿ ಚನ್ನಾಗಿವೆ —ಈ ಗ್ರಾಮದಲ್ಲಿ ಹೊಸದಾಗಿ ಸ್ಕೂಲ್ ಕಟ್ಟಡವು ತಯಾರಾಗುತ್ತಾ ಇದೆ ನಮ್ಮ ಗ್ರಾಮದ ಶ್ಯಾ ಶ್ರೀಕಂಠಪ್ಪನವರೂ, ಪ ನಂಬೆಗೌಡರೂ ಬಹಳ ಮುತುವರ್ಜಿಯಿಂದ ಕಟ್ಟಿಸುತ್ತಾ ಇದಾರೆ —ಈ ಗ್ರಾಮದ ಕೆರೆಗೆ ನೀರು ಬರಲಿಲ್ಲವಾದದ್ದರಿಂದ ಗದ್ದೆಗಳಿಗೆ ನೀರಿಗೆ ಕೊಂಚ ತೊಂದರೆಯಾಗಿದೆ ಈ ಕೆರೆಯು ಈಗ ಒಂದು ವರುಷದಿಂದ ಕಾಮಗಾರಿ ಆಗುತ್ತಲೇ ಇರುವುದು —ಈ ಗ್ರಾಮಕ್ಕೆ ಮೂರು ಮೈಲಿ ದೂರದಲ್ಲಿರುವ ನಾಮಗೊಂಡ್ಲೆಂಬ ಗ್ರಾಮಕ್ಕೆ ಪ್ಲೇಗ್ ಉಪದ್ರ ಬಂದು 10 60 ಜನಗಳು ಕಾಲವಾದರು ಇನ್ನೂ ದಿನಕ್ಕೆ 3 4 ಜನದಂತೆ ಹೋಗುತ್ತಲೇ ಇದಾರೆ —ಇಲ್ಲಿಗೆ ಅರ್ಧ ಮೈಲಿಯಲ್ಲಿರುವ ಮಾವಿನಕಾಯಿ ಹಳ್ಳಿಯಲ್ಲಿ ಒಂದು ಭಾರೀ ದೇವಸ್ಥಾನವು ತಯಾರಾಗುತ್ತಿರುವದು

ಕಳ್ಳೂರುಕಟ್ಟೆ —ಕುಮುಸಿಯಿಂದ ಕಳ್ಳೂರುಕಟ್ಟೆಗೆ ಅಮಲ್ದಾರ್ರವರು ವರ್ಗಪಟ್ಟು ಬಂದಲಾಗಾಯ್ತು ಟವರ್ ಪಾಕೀಜು ವಿಷಯದಲ್ಲಿ ಬಹಳ ಮುತುವರ್ಜಿಯಿಂದ ಕೆಲಸ ಮಾಡಿಸುತ್ತಾರೆ ಪೂರ್ವಕ್ಕಿಂತಲೂ ಈಗ ಟವರ್ ಮ್ಯಾಕ್ಸಾಲು ಪಾಲು ಸಾಕೀಜು ಆಗುತ್ತಾ ಇದೆ ಹಿಂದೆ ಅಮಲ್ದಾರ್ ಮೆ|| ರಾಮೋಜಿರಾಯರ ಕಾಲದಲ್ಲಿ ಹೊಸದಾಗಿ ರಸ್ತೆಗಳು ಏರ್ಪಡಿಸಿದ್ದರು ದನಕರುಗಳೂ, ಕಟ್ಟಿಗೆ ಗಾಡಿಗಳೂ ಸಂಚರಿಸುವುದಕ್ಕೂ ಟವರ್ ಬಡಾವಣೆಗೂ ರಸ್ತೆ ಮಾಡಿಸಿದ್ದರು ಅವರು ಇರುವ ತನಕ ಅದೆಲ್ಲಾ ಚನ್ನಾಗಿತ್ತು ಅನಂತರ ಬಂದ 2 3 ಜನ ಅಮಲ್ದಾರ್ರು ಅದಕ್ಕೆ ನಿಗಾಕೊಡದೆ ಹೋದದ್ದರಿಂದ [illegible] ವಗೈರೆ ಮುಚ್ಚಿಕೊಂಡು ಬರುತಾ ಇದೆ ಈ ವಿಷಯವನ್ನು ಹಾಲಿ ಮೆಂಬರುಗಳು ಅಮಲ್ದಾರ್ರಿಗೆ ತಿಳಿಸಲಿಲ್ಲವೆಂತ ಕಾಣುತ್ತದೆ ಈ ಟವರ್ ಕೆರೆಯಲ್ಲಿ ಅದೇ ಅಮಲ್ದಾರ್ ಮೆ ರಾಮೋಜಿರಾಯರ ಕಾಲದಲ್ಲಿ ಜನರಿಗೆ ಒಗೆಯುವುದಕ್ಕೆ ಅನುಕೂಲವಾಗುವಂತೆ ಕಲ್ಲುಗಳಿಂದ ಮೆಟ್ಟಿಲುಗಳು ಕಟ್ಟಿಸಿದ್ದರು ಈಚೆಗೆ ಸದರಿ ಕಲ್ಲುಗಳು ಜರಿದು ಸಡಿಲವೆ ಅಲ್ಲಿ ಪಾತ್ರೆ ವಗೈರೆ ತೊಳೆಯುವದಕ್ಕೂ ಅಸ್ಪದವಾಗಿದೆ ಮತ್ತು ಜನಗಳು ಓಡಾಡುವುದಕ್ಕೂ ಬಹಳ ಅಪಾಯಕರವಾಗಿದೆ ಈ ಸಂಗತಿಯನ್ನು ಅಮಲ್ದಾರ್ರಿಗೆ ಮೆಂಬರುಗಳು ತಿಳಿಸಲಿಲ್ಲವಾಗಿ ಕಾಣುತ್ತದೆ —ಈ ಕಳ್ಳೂರುಕಟ್ಟೆಯಲ್ಲಿ ಹೊಸದಾಗಿ ರೀಡಿಂಗ್ ರೂಂ ಸ್ಥಾಪನೆಯಾಗಿ ಸುಮಾರು ವರುಷವಾಗುತ್ತಾ ಬಂತು ಈ ಮುಂಚೆ 7 8 ಮೆಂಬರುಗಳಿಂದ ನಡೆಯುತ್ತಿತ್ತು ಹಾಲಿ ಇರುವ ಅಮಲ್ದಾರ್ರು ಮತ್ತು ಡಾಕ್ಟರವರು ಅನೇಕ ಜನಗಳಿಗೆ ಪ್ರೋತ್ಸಾಹಪಡಿಸಿದ್ದರಿಂದ ಈಗ 12 ಜನಗಳವರೆಗೆ ಮೆಂಬರಾಗಿದಾರೆ

ಯಡತೊರೆ ತಾ|| ಮಿತ್ರ — ಮಳೆ ಸುತರಾಂ ಇಲ್ಲ ಕಿರಾಣಿ ದಿವಸಗಳ ಪೈರು ಒಣಗಿ ನಿಂತಿವೆ ದನಗಳಿಗೆ ಮೇವೇ ಇಲ್ಲದೆ [illegible] ಸ್ಥಿತಿಗೆ ಬರಲುಪಕ್ರಮವಾಗಿದೆ ಈಗ ವರ್ಷಗಳ ತುಂಬಾ ಇದ್ದರೂ ಇಂಥಾ ಕಾಲದಲ್ಲಿ ಮಳೆ ಇಲ್ಲದೆ ದನಕರುಗಳಿಗೆ ಮೇವು ಸಹಾ ಬರದೇ ಇರುವುದು ನೋಡಿದರೆ ಮುಂದೆ ಬರುವ ದುರ್ಭಿಕ್ಷದ ಸೂಚನೆಗಳು ಕಂಡು ಬರುತ್ತಲಿವೆ ರೂಪಾಯಿಗೆ 20 ಕಂತೆಯಂತೆ ಮಾರುತ್ತಾ ಇದ್ದ ಹುಲ್ಲು [illegible] ಕಂತೆಗಳು ಮಾರಲುಪಕ್ರಮವಾಗಿದೆ ಹೀಗೆ ದುಡ್ಡು ಕೊಟ್ಟು ತಂದ ಕೊಳ್ಳಲು ಚೈತನ್ಯವಿಲ್ಲದವರು ಗಂಟೆ ಜೀರು ಕತ್ತಲು ಉಪಕ್ರಮಿಸುವ ದನಗಳ ಕಷ್ಟವನ್ನು ನೋಡಲು ಆಗುವದಿಲ್ಲ —ಯಡತೊರೆಯ ಹತ್ತಿರ ಇರುವ ಇಲವಾಲ ಮತ್ತು ಯಡತೊರೆ ರೋಡಿನಲ್ಲಿರುವ [illegible] ಗ್ರಾಮದ ಹತ್ತಿರ ಚೋರರಿಂದ ಕಳ್ಳತನಕ್ಕೆ ಪ್ರಾರಂಭವಾಗಿದೆ ಈ ಬಾರಿ ಒಬ್ಬ ಕಳ್ಳನು [illegible] ತುಂಬಿದ [illegible]ಗ್ರಾಮದ ಗಾಡಿಗೆ ಬಿದ್ದು [illegible] ಹಿಂಬಗದಲ್ಲಿ ಕಟ್ಟಿದ್ದ ಹಗ ಕೊಯಿದು [illegible] ಅಷ್ಟು ಎಲ್ಲವನ್ನು ಕದ್ದು ತಗೆದುಕೊಂಡನು ಅಷ್ಟರಲ್ಲಿ ಭಂಡಿಯವನು ಎಚ್ಚರಹೊಂದಿ ಕಳ್ಳನನ್ನು ಹಿಡಿದುಕೊಳ್ಳಲು ಹೋಗಲು ಅವನು ತನ್ನ ಕೈಲಿದ್ದ ಕುಡುಗೋಲಿನಿಂದ ಕೈ ಕೊಯಿದು ಓಡಿಹೋಗ [illegible] ಉಳಿಕೆ ಮಾಡುವಷ್ಟರೊಳಗಾಗಿ ಭಂಡಿ ಬಿಡಿಸಿ ತನ್ನ ಕೈ [illegible] ಕಟ್ಟಿಕೊಂಡು ಕಳ್ಳನನ್ನು ಭದ್ರವಾಗಿ ಹಿಡಿದುಕೊಂಡನು ಕಳ್ಳನು ಭಂಡಿಯವನನ್ನೂ ಎತ್ತಿಕೊಂಡು ಹೋಗಲುಪಕ್ರಮ ಮಾಡುವಷ್ಟರಲ್ಲಿ ಬಾಕಿ ಭಂಡಿಯವರು ಹೋಗಿ ಕಳ್ಳನನ್ನು ಹಿಡಿದು ತಂದು ಪೊಲೀಸ್ ಆಫೀಸರ ಮೂಲಕ ಮ್ಯಾಜಿಸ್ಟ್ರೇಟರಲ್ಲಿ ಹಾಜರುಮಾಡಲು ಅವರು ತನಿಖೆಯಿಂದ ಅವನಿಗೆ [illegible] ತಿಂಗಳು ಸಜಾ ವಿಧಿಸಿದರೆಂದು ತಿಳಿಯಬರುತ್ತೆ ಭಂಡಿಯವನು ಮಾಡಿದ ಸಾಹಸ ಬಹಳ ಮೆಚ್ಚತಕ್ಕದ್ದು ಈ ಸ್ಥಳದಲ್ಲಿ ಪೊಲೀಸ್ ಕಾವಲು ಇಟ್ಟು ಅದುದು ರಸ್ತೆ ಆಗತಕ್ಕ ಭಂಡಿಗಳಿಗೂ ಜನಗಳಿಗೂ ತೊಂದರೆ ಇಲ್ಲದಂತೆ ಮಾಡಿದರೆ ಬಹಳ ಉತ್ತಮ —ಈ ವಾರ ಸಂತೆಯಲ್ಲಿ ರಾಗಿ ರೂಪಾಯಿಗೆ 11 ಸೇರು ಅಕ್ಕಿ [illegible] ಸೇರು ಮಾರಿದರು

[illegible] ಎಂಗ[illegible] ತಾ|| ವೇತಮಂಗಲ — ಈ ಊರಿನ ಆಟಿಕ್ಕಿವಿಟಾರವು 20 ನೇ ತಾ ಮಂಗಳವಾರದವರೆಗೂ ಅಷ್ಟು ತೃಪ್ತಿಕರವಾಗಿರಲಿಲ್ಲ ಹ್ಯಾಗೆಂದರೆ ಅನೇಕ ಬಡಬಗ್ಗರು ಹೊಟ್ಟೆಗೆ ಅನ್ನವಿಲ್ಲದ ಗೋಟಿ ಗಡ್ಡೆಗಳನ್ನು ಕತ್ತಾಳೇ ಹಣ್ಣುಗಳನ್ನೂ ತಿನ್ನುತ್ತಾ, ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದರು ಆದರೆ 20 ನೇ ತಾ ರಾತ್ರಿ ಸೃಷ್ಟಿಕರ್ತನು ಬಡ ಪ್ರಜೆಗಳ ಮೇಲೆ ಕಣ್ಣಿಟ್ಟು ಒಳ್ಳೇ ಮಳೆಯನ್ನು ದಯಪಾಲಿಸಿದ್ದರಿಂದ ಜನಗಳು ತಮ್ಮ ಮುಖಗಳಾಗಿ ಹುಲ್ಲು ವಗೈರೆ ಮಾಡಿಕೊಳ್ಳುವದರಲ್ಲಿ ತಮ್ಮ ಜಿರಾಯತು ಕೆಲಸಗಳನ್ನು ಪ್ರಾರಂಭಿಸಿದಾರೆ —ಮತ್ತು ಈ ಊರಿನ ಆಸ್ಪತ್ರೆಗೆ ಹೊಸದಾಗಿ ಬಂದಿರುವ ಕಂಪೌಂಡರ್ ಯಲಹಂಕದ ನರಸಿಂಹಾಚಾರ್ರು ಚಿಕ್ಕವಯಸ್ಸಿನವರಾದಾಗ್ಯೂ ನಮ್ಮ ಸಬ್ ಅಸಿಸ್ಟೆಂಟ್ ಸರ್ಜನ್‌ರಾದ ನಾಗರತ್ನಂ ಮೊದಲಿಯಾರ್ರವರ ಪ್ರೀತಿಪಾತ್ರರಾಗಿಯೂ ವಿಧೇಯರಾಗಿಯೂ ಇರುವದಲ್ಲದೆ ಕೆಲಸದಲ್ಲಿ ತುಂಬಾ ಮುತುವರ್ಜಿಯುಳ್ಳವರಾಗಿದಾರೆಂದು ಹೇಳಲು ಸಂತೋಷಿಸುತ್ತೇನೆ ಇದು ಅಲ್ಲದೆ ಇದೇ ಆಸ್ಪತ್ರೆಗೆ ತಾಯಮ್ಮನೆಂಬ ಒಬ್ಬ ಸೂಲಗಿತ್ತಿಯನ್ನು ಕಳುಹಿದಾರೆ ಈ ಊರಿನಲ್ಲಿ ಇದುವರಿವಿಗೂ ಈ ಕೆಲಸಕ್ಕೆ ತುಂಬಾ ತೊಂದರೆಯಾಗಿತ್ತು ಆದರೆ ನಮ್ಮ ದೊರೆಗಳು ಇದನ್ನು ಪರಿಹಾರಮಾಡಿಕೊಂಡಿರುವದು ತುಂಬಾ ಸಂತೋಷಕರವಾಗಿದೆ ಆದದ್ದರಿಂದ ಈ ಪ್ರಾಂತ್ಯದ ಎಲ್ಲಾ ಜನರೂ ಇವರನ್ನು ತಮ್ಮ ಮನೆಗಳಿಗೆ ಹೆರಿಗೆಗೆ ಕರೆದುಕೊಂಡು ಹೋಗಲು ಕೋರುತ್ತೇನೆ —ಮತ್ತು ಇಲ್ಲಿನ ಪೊಲೀಸ್ ಆಫೀಸರಾದ ಮೆ|| ಸೈಯದ್ ಖಾದರ್ ಸಾಹೇಬರು ಎಷ್ಟೋ ಕಳವುಗಳನ್ನು ಪತ್ತೆಮಾಡಿ ಸಜಾ ಮಾಡಿಸಿರುವದಲ್ಲದೆ ಊರು ಗಸ್ತನ್ನು ತೃಪ್ತಿಕರವಾಗಿ ಇಟ್ಟುಕೊಂಡಿದಾರೆಂದು ಹೇಳಲು ಸಂತೋಷಿಸುತ್ತೇನೆ ಇದೂ ಅಲ್ಲದೆ ಇವರು ಅನೇಕ ವೇಳೆಗಳಲ್ಲಿ ಫಿರ್ಯಾದಿ ಅಪರಾಧಿಗಳನ್ನು ತಮ್ಮ ಮಕ್ಕಳ ಹಾಗೆ ಭಾವಿಸಿ ಅವರಿಗೆ ಬುದ್ಧಿ ಹೇಳುವದನ್ನು ನೋಡುವಾಗ ಇಂಥಾ ಆಫೀಸರಲ್ಲಿ ಇದು ಅಪರೂಪವಾದ ಗುಣವೆಂದು ಕಂಡುಬರುತ್ತದೆ —ಕೋಲಾರದಿಂದ ಮುಳಬಾಗಿಲು ಕೋಟೆಗೆ ಹೋಗುವ ರಸ್ತೆಯಲ್ಲಿ ವೇತಮಂಗಲದ ಸಮೀಪ ಗೆಣ್ಣೂರು ಕೆರೆ ಮತ್ತು ಐಪನಹಳ್ಳಿ ಕೆರೆ ಇವೆರಡು ಕಟ್ಟೆಗಳ ಮೇಲೆಯೇ ಮೇಲೆ ದೇವಿಟ್ಟ ರಸ್ತೆಯುಂಟು ಈ ರಸ್ತೆಯು ಅಗಲದಲ್ಲಿ ಬಹು ಕಡಮೆಯಾಗಿದೆ ಹಾಗೆ ಎಂಥಾ ಈ ಎರಡು ಕೆರೆಗಳೂ ಭಂಗಾರದ ಗಣಿಗೂ ವೇತಮಂಗಲದ ರೈಲ್ವೆ ಸ್ಟೇಷನಿಗೂ ತುಂಬಾ ಸಮೀಪವಾಗಿರುವದರಿಂದ ಸೌದೆ ಭಂಡಿಗಳು ವಿಶೇಷವಾಗಿ ತಿರುಗುತ್ತಾ ಇರುತ್ತವೆ ಇಂಥಾ ಸಮಯದಲ್ಲಿ ಮೋಟಾರ್ ಮತ್ತು ಸೈಕಲ್ ವಗೈರೆ ತೀವ್ರವಾಗಿ ಓಡುವ ಭಂಡಿಗಳು ಬಂದರೆ ತುಂಬಾ ತೊಂದರೆಗೆ ಅವಕಾಶ ಉಂಟಾಗುತ್ತದೆ ಆದದ್ದರಿಂದ ನಮ್ಮ ದಯಾವುಳ್ಳ ಅಮಲ್ದಾರ್ರವರು ಈ ವಿಷಯವನ್ನು ಚಿತ್ತಕ್ಕೆ ತಂದುಕೊಂಡು ಪ್ರಜೆಗಳ ಪ್ರಾಣಸಂರಕ್ಷಣೆ ಬಗ್ಗೆ ಈ ಎರಡು ಕೆರೆಗಳ ರಸ್ತೆಯನ್ನೂ ವಿಸ್ತರಿಸಿಕೊಡಲು ಅಪ್ಪಣೆ ಕೊಟ್ಟು ಮಾಡಿಸಬೇಕೆಂದು ಅನೇಕ ಪ್ರಜೆಗಳು ಹಾರೈಸುತ್ತಾರೆ

ಬೇಲೂರು — ಈ ತಾಲ್ಲೂಕು ಪ್ರದೇಶದಲ್ಲಿ ಬೆಳೆಯುವ ಧಾನ್ಯ, ರಾಗಿ ವಗೈರೆ ಪೈರುಗಳೆಲ್ಲವೂ ಈ ಸಾರಿ ಹುಲುಸಾಗಿ ಚನ್ನಾಗಿಯೇ ಇದೆ [illegible] ರಾಗಿಯು ಕಟಾವಿಗೆ ಕಾಲ ಹಿಡಿದ ಮಳೆ ಬಿಡದೆ ಸುರಿಯುತ್ತಿರುವುದರಿಂದ ಕೆಲಸಗಳಿಗೆ ಅವಕಾಶವಿಲ್ಲದೆ ರಾಗಿಯೆಲ್ಲಾ ಉದುರಿಹೋಗುತ್ತಲೂ ಕೆಲವೆಡೆಯ ತೆನೆಯು ಮೇಲೆ ಮೊಳಕೆ ಬಂದಿರುವುದಾಗಿಯೂ ಕೇಳುವೆನು ಆದರೆ ಧಾರಣೆ ತುಟ್ಟಿಯಾಗಿಯೇ ಇದೆ ಅಕ್ಕಿ ರೂಪಾಯಿಗೆ (ಸೇರು ರಾಗಿ 1(ಸೇರು ಇದರಲ್ಲೂ ಅಳತೆಯಲ್ಲಿ ಮೋಸ ಇರುವುದರಿಂದ ಬಡವರು ಜೀವಿಸುವುದು ಕಷ್ಟವಾಗಿದೆ —ಇಲ್ಲಿನ ಅಮಲ್ದಾರ್ ಮೆ ಎಂ ಕೇಶವಯ್ಯನವರು ಪ್ರಜೆಗಳಿಂದ ಬಂದು ಕೊಡಲ್ಪಟ್ಟ 7 ೫ ಸಾವಿರ ರೂಪಾಯಿನಲ್ಲಿ ಹಾಸನದಲ್ಲಿ ಕಟ್ಟುವ ಟವರ್ ಹಾಲಿಗೆ 100 ರೂಪಾಯಿ ಕೊಟ್ಟು ಈ ಊರು ಕಚೇರಿಯ ಎದುರಿಗೆ ಸ್ಮಾರಕವಾಗಿ ಒಂದು ಕಾರೊನೇಷನ್ ಹಾಲನ್ನು ಕಳೆದ ಮಾಸದಲ್ಲಿ ಆರಂಭಿಸಿ [illegible] ಪೂರೈಸಿರುವರು —ಈ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಮೆ ವಿ ಶ್ರೀನಿವಾಸಮೂರ್ತಿಯವರಿಗೆ ವರ್ಗವಾದುದರಿಂದ 18 ನೇ ಬಾನುವಾರ ತ್ರಿಮತಸ್ಥ ಬ್ರಾಹ್ಮಣರ ಸಮೇತ ಮೆ ಶ್ರೀನಿವಾಸಮೂರ್ತಿಯವರಿಗೆ ಸಕಲೇಶಪುರದ ಸಬ್ ಓವರ್‌ಸಿಯರು ಮೆ ನಾರಾಯಣರಾಯರ ಅಧ್ಯಕ್ಷತೆಯಿಂದ ಅವರಿಗೆ ಔತಣ ಮಾಡಿ, ಒಟ್ಟು ತಾಲ್ಲೂಕು ಮತ್ತು ಸಬ್ ಡಿವಿಜನ್ ಸಿಬ್ಬಂದಿಯವರಿಗೆ ಫೋಟೋ ತೆಗೆಸಿಕೊಂಡು ಮೆ ವಸ್ತಾದ್ ದಯಮಾಡಿ ಅಲ್ಲಿಂದ ಸಂಸ್ಕೃತ ಪಾಠಶಾಲೆಗೆ ಎಲ್ಲರೂ ಹೋಗಿ ಸದರಿ ಮಹನೀಯರನ್ನು ಉತ್ಸಾಹದಿಂದ ಬರಮಾಡಿಕೊಂಡು ಹರಿಕಥೆ ಮತ್ತು ಭಗವನ್ನಾಮ ಸಂಕೀರ್ತನೆಗಳಿಂದ ಅವರ ಮತ್ತು ಸಭಿಕರ ಮನಸ್ಸ ಸಂತೋಷಗೊಳಿಸಿದರು ನಂತರ ಪಾಠಶಾಲಾ ಪಂಡಿತರು ವೇ|| ರಾಮಾಚಾರ್ಯರುಗಳು ಮೆ ಶ್ರೀನಿವಾಸಮೂರ್ತಿಯವರಿಂದ [illegible] ಆಗಿದ್ದ ಅನುಕೂಲವನ್ನು ತೋರಿಸಿ ಅವರ ಗುಣಕಥನ, ಆಶೀರ್ವಾದ ಪ್ರಾರ್ಥನೆಯನ್ನು ಮಾಡಿದರು [illegible] ಈ ಊರು [illegible] [illegible]

[illegible]

ಹಾಗೆ [illegible] ಬದುಕಿಕೊಂಡನೆಂದೂ ಹೇಳುತ್ತಾರೆ — ಈ [illegible] ದೊಡ್ಡ [illegible] ರಿಯವರೆಲ್ಲರೂ ಒಗ್ಗಟ್ಟಾಗಿರುವಂತೆ [illegible] ರಿಯಲ್ಲಿ ಸುಮಾರು 19 ವರುಷ ಸರ್ವೀಸ ಮಾಡಿ ಒಳ್ಳೆ ಹೆಸರು ಪಡೆದು [illegible] ಮಲ್ದಾರ [illegible] ಜಿಲ್ಲೆಯಲ್ಲಿ [illegible] ತಾ 1(ನೇ ತಾ [illegible] ಆ ಸಮಯಕ್ಕೆ ನಷ್ಟವಾಯಿತೆಂದು ಬರೆಯಲು ವಿಷಾದಿಸುತ್ತೇನೆ

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು

ಕೈಸೋಕದೆ ತಯಾರಾದದ್ದು; ಬೇಗ ಸನ್ನಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಕಳುಹಿಸುತ್ತಾರೆ

[66-18] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev J W Thompson M A Proprietor and Manager, Wesleyan Mission Press Mysore 29/8/1912

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಸೆಪ್ಟೆಂಬರ್ ತಾರೀಖು ೪ ನೇ ಗುರುವಾರ. ಸಂಚಿಕೆ ೧೪

The Coromandel Life Assurance Co., Ltd., Bimlipatam

This well known Company issues Policies and Marriage Endowment Diplomas for very low monthly premiums of Rs 8 0, and Rs 1 0 0 respectively on the 1st class. Wanted Active and influential Agents in every Taluk and District on liberal commission or pay.

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ಮದರಾಸ್ ಸರ್ಕಾರದ ವರಿಷ್ಟರ ... ಲೈಫ್ ಅಶೂರೆನ್ಸ್ ಲಿಮಿಟೆಡ್‌ಗೆ ಮೈಸೂರು ... ಬ್ರಾಂಚ್‌ಗಳೂ ... ಮತ್ತು ಬಟುವಟಿಕೆಯುಳ್ಳ ಏಜೆಂಟರುಗಳು ... ಧಾರಾಳವಾದ ಕಮಿಷನ್ ... ಮೇಲೆ ಬೇಕಾಗಿದ್ದಾರೆ ... 1911 ನೇ ಇಸವಿ ... ರೂಪಾಯಿ ಒಂದಕ್ಕೆ ... ರೂಪಾಯಿಯಂತೆಯೂ ... ಈ ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿ ತಿಳಿಯಬಹುದು [115-1]

ಮೆಸರ್ಸ್ ವೆಂ ... ಕೆಂಪ್ ಸನ್,
ಮೈಸೂರು ದೇಶದ ಮತ್ತು ಕೊಡಗಿನ ಜನರಲ್ ಏಜೆಂಟು,
ಚಿಕ್ಕ ದೊಡ್ಡಪೇಟೆ, ಮೈಸೂರು

READY FOR SALE

Exhaustive Notes on '**Tanglewood Tales**' prescribed for the Lower Secondary Examination of 1913, by Mr A Nanjundiah, Headmaster, Hindu Boys' A V School, Mysore Price 4 annas

Apply to **H. VENKATARAMIAH,**
131 — **Vidyanidhi Book Depot, Mysore.**

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ. ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದ್ದಾಗಿರುವುದು. ಕ್ರಯ ೪ ಆಣೆ

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ ೬ ಆಣೆ

ಸತೀಲೋಹಿಣಿ—ಸ್ತ್ರೀಯರೆಲ್ಲರೂ ಇದನ್ನೋದಲೇಬೇಕು ಇಂಥ ರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ ೨ ಆಣೆ [139-10]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಆರೋಗ್ಯದೀಪಿಕೆ	. 3 ಆಣೆ.	ಈ ತಿಂಗಳಲ್ಲಿ ಹಣ ಕಳುಹಿಸಿದರೆ	2 ಆ.
ವ್ಯವಸಾಯಚಂದ್ರಿಕೆ ...	1 ಆ	,, ,,	2 ಆ.
ಮೈಸೂರು ಚರಿತ್ರಸಂಗ್ರಹ	1 ಆ	,, ,,	8 ಪೈ.
ಲಘುವ್ಯಾಕರಣ ...	6 ಪೈ.	,, ,,	4 ಪೈ.

[139-1] ಕೆ ರಾಮಸ್ವಾಮಿಯ್ಯಂಗಾರ್, ಮಾಗಡಿ

ಜಾರ್ಜ್ ಸಾರ್ವಭೌಮರ ಚರಿತ್ರೆ
[93-14]

ಈ ಪುಸ್ತಕವು ಚಕ್ರವರ್ತಿಯವರ ಜೀವಚರಿತ್ರೆಯಲ್ಲಿ ಪ್ರಾಮುಖ್ಯವಾದ ಸಕಲ ಸಂಗತಿಗಳನ್ನೂ, ಲಂಡನ್ ಮತ್ತು ಡೆಹಲಿ ಪಟ್ಟಣಗಳಲ್ಲಿ ನಡೆದ ಕಿರೀಟಧಾರಣೆಗೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ, ಸಂಭಾಷಣೆಗಳನ್ನೂ ಅವುಗಳ ಸಾಗ್ರವಾಗಿಯೂ ಬಹು ಸ್ವಾರಸ್ಯವಾಗಿಯೂ ತಿಳಿಸುತ್ತದೆ ರಾಜಭಕ್ತಿಯುಳ್ಳ ಸಮಸ್ತ ಕನ್ನಡಿಗರೂ ಲೋಕೋತ್ತರವಾದ ಈ ಸುಚರಿತ್ರೆಯನ್ನು ಓದಿ ತಿಳಿಯಬೇಕಾದುದು ಪರಮಾವಶ್ಯಕ. ಅವರ ಭಾವಚಿತ್ರವೂ ಉಂಟು ಶ್ರೀಮನ್ ಮಹಾರಾಜರವರ ಪ್ರೋತ್ಸಾಹವನ್ನೂ ಪಡೆದಿದೆ ಕ್ರಯ ಪ್ರತಿ 1ಕ್ಕೆ 8 ಆ. ಹಾಸಲು 1ಆ.

ವಿಳಾಸ —ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಸಿಂಹೀರಮಚರಿತ್ರೆ

ಇದರಲ್ಲಿ (1) ಧರ್ಮಾಸ್ಥರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು; (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರಿದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ.

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು.

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂ. ಟಪಾಲು ಹಾಸಲು ಬೇರೆ [5-35]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

WILLIAM & Co, FORT, BOMBAY.

ಅಮೃತಾಂಜನ. (Regd.)



ಎಲ್ಲಿ ಸಕೀಸ ಲಕ್ಷ ಕೂಡಿರಿ! ವಾತ, ಸಂಧಿವಾತ, ತಲೆನೋವು ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು, ಘಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು. ಎಲ್ಲ ಕಡೆ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0–8–0.

ಗಜಕರ್ಣದ ಮುಲಾಮು.

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 0–6–0.

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ ಸುಂದರಿತೈಲ 8 ಆಣೆ. [15-28]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೋ, ಫೋರ್ಟು ಮುಂಬಯಿ.

ಡೋಂಗರೆ ಇವರ **ಬಾಲಾಮೃತ.**

[115-8]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣ ಉಳ್ಳದ್ದು. ಅದು ಮಧುರ (ಸವಿ) ಇದ್ದದ್ದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕರ ಇರೋಣ, ಹೊಟ್ಟೆಯು ದೊಡ್ಡದಿರೋಣ ಅಸ್ಥಿಗಳು ಕಡ್ಡಿಯಂತೆ ಇರೋಣ ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಸಹ ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೩ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ವೈದ್ಯಪ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ರೋಗಶಾಮಕಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ... ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಕ್ಕ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಥಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂಧಿಗಳ ನೋವು, ಮೈ ಕಾಲು ಹೊಡತ (ಛಾರ), ಮೈನಡುಕ, ಶೀತ... ಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಜಾಂತಿ ತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ... ವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —೨೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ [136-1]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರವು, ಮೂತ್ರವು ಕಟ್ಟಿದೆ ಕಂಡು ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ಮನೆಗೊಂದು ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪ್ಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಿಟೀಲ್.

140-1

ಪೂರ್ವದ ಕ್ರಯ	ರೂ.	15 0 0
ಈಗಿನ ,,	,,	8–8–0

ಇದು ನಮ್ಮ ಸ್ವಂತ ಆರ್ಡರ್ ಮೇರಿಗೆ ಸೀಮೆಯಲ್ಲಿ ತಯಾರಿಸಿ ನಮ್ಮ ಏಜಂಟರು ಕಳುಹಿಸಿ ಇರುತ್ತಾರೆ. ಇದು ಸಾಧಾರಣ ಪಿಟೀಲುಗಳಿಂಥಾದ್ದಲ್ಲ ಇವರ ನಾದವು ಬಹಳ ಮನೋಹರವಾಗಿದೆ ಪಿಟೀಲು ಕಲಿಯುವವರಿಗೂ, ಪಂಡಿತರುಗಳಿಗೂ, ಸ್ತ್ರೀಯರಿಗೂ ಬಹಳ ಉಪಯೋಗವಾದದ್ದು ಈ ತರಹದ ಮೇಕರ್ ಪಿಟೀಲನ್ನು ಉಪಯೋಗಿಸುವವರು ಬೇರೆ ಪಿಟೀಲನ್ನು ಉಪಯೋಗಿಸರು.

ಒಂದು ತಿಂಗಳ ವರೆಗೆ ಮಾತ್ರ ಅರ್ಧ ಕ್ರಯ.

ವಿಳಾಸ —
ಜ್ಞಾನಸ ಮತ್ತು ಕಂಪನಿ,
ನಂ|| ೨ ಬೊಮ್ಮಾಲ್ಲೆಯನ ಬೀದಿ, ಆನೇಗವನಿ ಸಮೀಪ,
ಮದರಾಸು

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

84-15

ಎಂಥಾ ನೋವಾಗಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರೆತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾದಲ್ಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತ ನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ, ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯನ್ನು ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

BENEFIT YOURSELF AND BENEFIT OTHERS.

The National Insurance and Banking Company Ltd, Amritsar

Authorised Capital	Rs 10,00,000
Subscribed Capital Exceeds	„ 9,00,000
Paid up „ „	„ 1,00,000
Funds Exceed	„ 12 70 000
Policy-holders „	75,000

This Company works in accordance with the Indian Life Assurance Companies' and Provident Societies' Acts 1912 [illegible] double the initial security to the Government as required under the Insurance Act 1912

[illegible] the National, of Amritsar, [illegible]

[illegible] almost all the [illegible] marriages and deaths

WANTED

Active and honest District Superintendents and Taluk Agents for every unrepresented district and taluk of the Mysore Province and Coorg on both salary and commission [illegible] pension [illegible] time, [illegible] and who are well versed in English [illegible] apply

[illegible] with one anna stamp [illegible] in the line to

M. L. NAGANNAH,

Chief Agent,

The Amritsar National Insurance Buildings, Mysore

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



1½

ಬೆನ್ನು ಉಳುಕಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಲೆಗಳು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಮೈ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ಪವಿತ್ರ [illegible] ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದ

ಕೇವಲ ಎಣ್ಣೆಗಳನ್ನು ಉಪಯೋಗಿ ನಿಮ್ಮ ಹಣವನ್ನು ನಷ್ಟ ಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕಳುಹಲ್ಪಡುವುದು

ಸುಂದರವಾದ ಕೇಶರಾಶಿಯು! ಅಂದವಾದ [illegible]!!

ಇವೆ ಪ್ರತಿಯೊಬ್ಬ [illegible] ಆವಶ್ಯಕವಾಗಿವೆ ಆದರೆ ಎಷ್ಟು [illegible] ದೊರೆಯುವದು ಇದೆ [illegible] ಚಕಚಕಿಸುತ್ತಿರಬೇಕು ಅದಲ್ಲದೆ [illegible] ಆಕೃತಿಯಿಂದ ಅವರು ಕಟ್ಟುವಂತೆ ಅವು ನಯವಾಗಿಯೂ ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ರೀತಿಯಿಂದ ಉಪಯೋಗಿಸಿದರೆ [illegible] ಸುಂದರವಾದ ಕೇಶವು [illegible] ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು [illegible]

ಕಾಮಿನಿಯಾ ತೈಲ

ಇದು ಕೂದಲುಗಳನ್ನು [illegible] ಕಾಮಿನಿಯಾ ತೈಲವು [illegible]

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ ನಯವಾಗುತ್ತವೆ ಚಕಚಕಿಸುತ್ತವೆ ಮತ್ತು [illegible] ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ಪಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1-0 0 ಅಂಚೆಯ ವೆಚ್ಚ 0 4 0 ಪೇರಿ ತೆರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದಿದ್ದರೆ ಒಂದು ಅರ್ಧಾಣೆಯ ಟಿಕೆಟನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

26 7 11 ಮಿ ಜಿ ಡಿ ಮದನ್ ಗೋಪಾಲ್ [illegible] ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇಯರ್ ಓಯಿಲು ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1 7 11 ಮೆ|| ಸಿ ಆರ್ ನಾಯುಡು [illegible] ನನ್ನ ಮಿತ್ರರು 'ಕಾಮಿನಿಯಾ ತೈಲ' ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಸೀಸೆಗಳನ್ನು ತ್ವರೆಯಿಂದ ವಿ ಪಿ ಮೂಲಕ ರವಾನಿಸತಕ್ಕದ್ದು [94-36]

ಸುಗಂಧದ್ರವ್ಯಗಳು

ಗುಲ್ ಷಾನ್ (ರೆಜಿಡ್)—[illegible] ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಪ್ರಿಯವಾದದ್ದು ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8 0

ದಿಲ್ ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ [illegible] ಪುಷ್ಪಗಳಿಂದ ತಯಾರಿಸಿದ ಮನೋಹರವಾದ ಸುಗಂಧ [illegible] ಸೀಸೆಗೆ ರೂ 1-8-0

'ಕಾಮಿನಿಯಾ ಸುರಂಗಿ' ರೂ 1-4 0 'ಕಾಮಿನಿಯಾ [illegible]' ರೂ 1

ಎಲ್ಲಾ ಸ್ಥಳಗಳಲ್ಲಿಯೂ [illegible]

ನೋಟ್—ನಮಗೆ ಎಲ್ಲಾ ಕಾಗದಗಳನ್ನು ಇಂಗ್ಲೀಷಿನಲ್ಲೇ ಬರೆಯಬೇಕು. ನಮ್ಮ ವಿಳಾಸ —

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು [illegible] ಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ [illegible] ಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ [illegible] ಔಷಧವನು ಕೊಡುವುದು ಅವಶ್ಯಕ

SCOTT'S EMULSION 2-½

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ [illegible] ಬೆಳೆಸುವ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

Always get the Emulsion with this mark the Fishman —the mark of the "Scott" process

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು [illegible] ಬಂದ ಒಡನೆಯೇ ಅದರ ಗುಣಗಳು [illegible] ಬರುವವು

ಕೈಯಿಂದ ಮುಟ್ಟದೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರ [illegible] ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿ

ಔಷಧಗಳ ಕಾರ್ಖಾನೆ,

ಲಂಡನ್ ಇಂಗ್ಲೆಂ

[illegible] ಇರುವ ಈ ಔಷಧದ ಗುರುತು

THE PLACE FOR HASSAN CAPS !

HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೇ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

33

ಒಳ್ಳೇ ಟೋಪಿಗಳು ಯಾವ [illegible]

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು • ಎಲ್ಲಾ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ [illegible] ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ [illegible] ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ [illegible] ಮೋಸಹೋಗುವರು

ಆದರೆ ಇಲ್ಲಿ ನೋಡಿ - (೧) ನಮ್ಮಲ್ಲಿ ತಯಾರಾಗುವ ಟೋಪಿಗಳು [illegible] ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು [illegible] ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ [illegible] ಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು [illegible] ದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿ [illegible] ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ [illegible]

೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಭಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ [illegible]

ಉಣುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು [illegible] ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ [illegible] ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, [illegible]

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2 4 0 ಮಾತ್ರ, 5 ವರುಷಗಳ ಗ್ಯಾರೆಂಟಿ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ [13-42]

ಮುಖ್ಯವಾಗಿ ಗಮಿನಿಸಿ ಓದಿರಿ

೧. ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀ ಲೆಸ್ ಲಿವರ್ ಚಕ್ಕ ಸೈಜು ಕಂವೆಕ್ಸ್ ಗ್ಲಾಸ್ ಬ್ಯಾಲೆನ್ಸು, ಬಹು [illegible] ಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 5-12 0 ಇದನ್ನು ಆಗಸ್ಟ್ ಅಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಘಂಟೆ ಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ:—ಸುಪೀರಿಯರ್ ವಾಚ್ ಕಂಪನಿ,

ಪೋಸ್ಟ್ ಬಾಕ್ಸ್ ನಂ. 107, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

9—8—1913 ರಿಂದ 16—8—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	13	10	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	27	23	0	0
ಮೈಸೂರು ,,	0	0	0	0
ಕೋಲಾರ್ ,,	4	3	18	11
ಕೋಲಾರ್ ಚಿನ್ನದ ಗಣಿಗಳು	4	–	0	0
ತುಮಕೂರು ಡಿಸ್ಟ್ರಿಕ್ಟು	62	41	0	0
ಹಾಸನ ,,	20	7	0	0
ಚಿತ್ರದುರ್ಗ ,,	1	0	75	28
ಕಡೂರ್ ,,	1	1		0
ಶಿವಮೊಗ್ಗ	28	11	1	0
ಜುಮ್ಲಾ	151	97	93	42

ಶಾಲಿವಾಹನ ಶಕ ವರುಷಂಗಳು 1835 ನೇ ಪರಿಧಾವಿ ಸಂವತ್ಸರೇ ದಕ್ಷಿಣಾಯನೇ ವರ್ಷ ಋತೌ ಶ್ರಾವಣ ಬಹುಳ ದಶಮಿ ಶುಕ್ರವಾರದಿಂದ ಭಾದ್ರಪದ ಶುದ್ಧ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಸೆಪ್ಟಂಬರ್

ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷು ತೇದಿ
ಶುಕ್ರ	ದಶಮಿ	18 31	ಮೃ	31 31	2
ಶನಿ	ಏಕಾದಶಿ	17 17	ಪು	31 31	23
ಭಾನು	ದ್ವಾದಶಿ	20 15	ಪು	27 38	24
ಸೋಮ	ತ್ರಯೋದಶಿ	30 31	ಪು	31	25
ಮಂಗಳ	ಚತುರ್ದಶಿ	11 32	ಮ	17 8	26
ಬುಧ	ಅಮಾವಾಸ್ಯೆ	5 0	ಹು	12 25	27
ಗುರು	ಪಾಡ್ಯಮಿ	3 38	ಉಹ	11	28

ಸ್ಮಾರ್ತವೈಷ್ಣವಾನಾಂ ಸರ್ವತ್ರ ಏಕಾದಶಿ
ಪ್ರದೋಷ ೬ನೇ ಪ್ರದೋಷ
ಬುಧವಾರ ಮಾಸಶಿವರಾತ್ರಿ, ಮಳೆ ನಕ್ಷತ್ರ—ಪುಬ್ಬ 1 ನೇ ಪಾದ
ಸರ್ವತ್ರ ಅಮಾವಾಸ್ಯೆ ಗಮ ನರಾಗೀ ವ್ರತ
ಸ್ಟಂಬರ್ ೨೬ ಮು 1, ಉತ್ತರಫಲ್ಗುಣಿ ಮಳೆ ನಕ್ಷತ್ರ ಉತ್ತರ 1 ನೇ ಪಾದ

ಪೇಟೆ ಧಾರಣೆ

ವಸ್ತು		ಮೈಸೂರು	ಬೆಂಗಳೂರು
ಅಕ್ಕಿ ಪಿಲ್ಲಾ ಗಿಣ್ಣೆ	ರೂ	೧೭ ೦-೦	೧೬ ೦ ೦
ಚಿಣ್ಣ ಅಕ್ಕಿ ಅವಲ್		೧೭ ೮ ೦	೧೬ ೦
ಮಧ್ಯಮ		೧೭ ೦ ೦	೧೬ ೦ ೦
ಅಕ್ಕಿ		೧೭ ೦ ೦	೧೬ ೦ ೦
ಅವಲ್		೧೫ ೦ ೦	೧೪ ೦ ೦
ಮುಂಚ		೧೭ ೮ ೦	೧೬ ೦ ೦
ಗೋಧಿ ಅವರೆ ಪಲ್ಲಾ ಗಿಣ್ಣೆ		೧೩ ೮ ೦	೧೩ ೮ ೦
ಮಧ್ಯಮ		೧೨ ೧೨ ೦	೧೧ ೮ ೦
ರಾಗಿ ಪಲ್ಲಾ ಗಿಣ್ಣೆ		೬ ೨ ೦	೬ ೨ ೦
		೭ ೦ ೦	೭ ೪ ೦
		೬ ೦ ೦	೮ ೦ ೦
ಜೋಳ ಪಲ್ಲಾ ಗಿಣ್ಣೆ		೧೨ ೧೨-೦	೧೧ ೦ ೦
ಕಡಲೆ ,,		೧೧ ೦ ೦	೧೦-೦ ೦
		೧೪ ೦ ೦	೧೪ ೮ ೦
,,		೧೫ ೦ ೦	೧೫ ೦ ೦
		೧೨ ೦ ೦	೧೧ ೦ ೦
ಎಣ್ಣೆ ಒಟ್ಟೆ		೨೪ ೧ ೦	೨೪ ೮ ೦
ಉಪ್ಪು ಪಲ್ಲಾ ಗಿಣ್ಣೆ		೬ ೨ ೦	೬ ೨ ೦
ಹಿಂಡಿ ಸೇರಿಗೆ		೧೪ ೦ ೦	೧೬ ೦ ೦
ಸಕ್ಕರೆ ಮಣ ಗಿಣ್ಣೆ		೩ ೪ ೦	೩ ೪ ೦
ಬೆಲ್ಲ ,,		೩ ೮ ೦	೩ ೪ ೦
ಮಧ್ಯಮ		೩ ೦ ೦	೨ ೮ ೦
ತುಪ್ಪ ಅಚ್ಚು		೫ ೮ ೦	೫ ೬ ೦ ೦
ಮಣ ಗಿಣ್ಣೆ		೬ ೪ ೦	೬ ೮ ೦
		೬ ೦ ೦	೫ ೮ ೦
ಹುರುಳಿ ಪಲ್ಲಾ ಗಿಣ್ಣೆ		೩ ೪ ೦	೬ ೮ ೦
,,		೬ ೦ ೦	೫ ೪
ಹೊಂಗೆ ಮಣ ಗಿಣ್ಣೆ		೧ ೪ ೦	೧ ೪ ೦
ಹೊಗೆ ಸೊಪ್ಪು		೧ ೮ ೦	೧ ೫ ೦
ಮಣ ಗಿಣ್ಣೆ		೧೭ ೫ ೦	೧೭ ೦ ೦
ಹತ್ತಿ ಬೀಜ ಗಿಣ್ಣೆ		೫ ೦ ೦	೫ ೦ ೦
ಹೊಗೆಸೊಪ್ಪು ಗಿಣ್ಣೆ		೬ ೦ ೦	೬ ೦ ೦
ಕೊಬ್ಬರಿ ಮಣ ಗಿಣ್ಣೆ		೬ ೦ ೦	೬ ೦ ೦
ಕೊತ್ತಂಬರಿ ಮಣ ಗಿಣ್ಣೆ		೦ ೧೨ ೦	೦ ೫ ೦
(ಗೋ) ಕೆಂಪು		೧೩ ೮ ೦	೧೫ ೮ ೦
,, ಪಚ್ಚೆ		೧೫ ೧೪ ೬	೧೫ ೧೪ ೬
,, ಗಟ್ಟಿ ಕೋಲ ಗಿಣ್ಣೆ		೨೪ ೪ ೦	೨೪ ೩ ೦
ಕಾಫಿ ಕೋಲ ಗಿಣ್ಣೆ		೪೧ ೦-೦	೪೧ ೦ ೦

ಎಗ್ಜಾಮಿನರ್ ಮಾಸಪುಸ್ತಕ ಟೆಕ್ಸ್‌ನೋಟ್ಸ್ ಬಹುಮಾನ

ಪರೀಕ್ಷಾ ಹುಡುಗರಿಗೆ ಆವಶ್ಯವಾದ ಈ ಮಾಸಪುಸ್ತಕದ ಮಾದರಿ ಸಂಚಿಕೆ ಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿನ ಮೂಲಕ ಪಡೆಯಬಹುದು ಚಂದಾ ರೂ 1 1 0 ಈ ತಿಂಗಳ ಆಖೈರುವರೆಗೆ ಮಾತ್ರ ಬಹುಮಾನ ಕನ್ನಡ 2 3 ನೇ ರೀಡರ್‌ಗಳ ನೋಟ್ಸುಗಳು 5 ಆಣೆ 1½ ಆಣೆ [137 1]

ಸಿ ಪುಟ್ಟಯ್ಯ, ಮ್ಯಾನೇಜರ್, ಎಗ್ಜಾಮಿನರ್ ಆಫೀಸ್, ಚಿಕ್ಕಬಳ್ಳಾಪುರ

A Study of

TANGLEWOOD TALES & A CHRISTMAS CAROL,

for the Lower Secondary Students

It contains Notes on the Text, Summary of the chapters and Questions and Exercises on Translation and Composition from the two books by S Paul Chinnappa B A L T A C P Headmaster, Government A V School Bangalore Notes on Tanglewood Tales 4 as Notes on Christmas Carol 6 as

Apply to

MANAGER, Mission Book Depot
[1 5 1] Avenue Road Bangalore City

ಜ್ವರಕಂಠರಿ

114 50

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ ಮರಿಯಜ್ವರ ವಿಷಮಜ್ವರಾದಿ ಸರ್ವಜ್ವರಗಳನ್ನೂ ಒ ದೆರಡು ಬಾರಿ ಸೇವಿಸುವುದರೊಳಗಾಗಿ ತಪ್ಪದೆ ಗುಣಪಡಿಸುವುದು ...

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೊಟ್ಟೆಗೆ ಬೆಳೆದ ಪ್ಲೀಹ ... ಗುಣಪಡಿಸುವುದು ... ಒಂದು ತಿಂಗಳ ಔಷಧಕ್ಕೆ ೩ ರೂ ೮ ಆಣೆ

ವಾತಮುರಾರಿ—ಎಂದು ... ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ... ಬಾಟಲಿಗೆ ೨ ರೂ ೮ ಆಣೆ

ನಮ್ಮ ದೊಡ್ಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಸ್ ನಾದ ಮತ್ತು ಕಂಪೆನಿ,
ವೇಪೇರಿ ಮದರಾಸ್



ಹತ್ತು ವರುಷಗಳಾದರೂ ನಿಲ್ಲದೆ ನಡೆಯುವ ಗಡಿಯಾರಗಳು

1 ಎಂಡ ಗೂಡ ಜೇಬಿಗೆ ಸಿಲ್ಕು ಪಿನ್ ರಿಂದ 3 ಅರ್ ಸೋನಿಯಾದ್ದು ರೂ 2 5 0
... ರೂ 3 ...
... ರೂ 3 10
... ರೂ 4 8 0
... ರೂ 2 0 0 [120 7]

ನಮ್ಮ ವಿಳಾಸ —ವೆಂಕಟಾಚಲಂ ಕಂಪೆನಿ
ಪೈ ರೋಡ್ ವೇಪೇರಿ, ಮದ್ರಾಸು

ಇತ್ತ ನೋಡಿ — ಇನಾಮು — ಇತ್ತ ನೋಡಿ
ಒಳ್ಳೇ ಸಮಯವು!!!
ಆಗಸ್ಟು 1 ನೇ ತಾರೀಖು ವರೆಗು



ಬರ್ನ್ಯಾ ಟೈಂಪೀಸು ಕ್ರಯ ರೂ 1 8 0 ... ರೂ 2 1 0 ...

ಕ ಮೋನಿಸರ್ ಸಾಮಾನು

... [111 12]

... ಕೊಳ್ಳುವವರಿಗೆ ... ಪ್ರತ್ಯೇಕ

ಅಂಚೆ ಹಾಸಲು ಪ್ರತ್ಯೇಕ

ನಮ್ಮ ವಿಳಾಸ ಸಿ ಪಿ ಬಿ ಕಂಪೆನಿ,
... ಜೇನಾ ಬಜಾರ್ ರೋಡ್, ಮದ್ರಾಸು

ನಿಮಗೆ ಮೈ ಸ್ವಸ್ಥವಿಲ್ಲವೋ?

ನಿಮಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿಮಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಶಾಲಪ್ರವೃತ್ತಿಯಾಗುತ್ತಿದೆಯೇ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊಂಡರೆ ಮಾರನೇ ದಿನ ಬೆಳಗ್ಗೆ ಸುಖವಾಗಿ ಶಾಲಪ್ರವೃತ್ತಿಯಾಗಿ ನಿಮಗೆ ಮೈ ಸ್ವಸ್ಥವಾಗುವುದು



(೧೨ ಆಣೆ ಬುಡ್ಡಿ ಪರಿಮಾಣ)

ಮಲಬದ್ಧತೆಯಿಂದುಂಟಾಗುವ ರೋಗಗಳಿಗೆ ... ಪಿತ್ತಕೋಶರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗ್ಯಾಸ್, ಆಶಕ್ತಿ, ಎದೆಯು ಕಲ್ಲಾಗುವುದು ... ಹೆಂಗಸರ ವ್ಯಾಧಿಗಳು ... ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ... ಆರೋಗ್ಯವನ್ನುಂಟುಮಾಡುವುವು [99 52]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೫೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ... ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ ಡೋನ್ ಬಿ ಒ ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು

ತಾಲ್ಲೋಕು ವರ್ತಮಾನ

ತುಮಕೂರು —ಶ್ರೀಮನ್ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆ ಮಹೋತ್ಸವವು ದೆಹಲಿ ಪಟ್ಟಣದಲ್ಲಿ ಕಳೆದ ವರ್ಷ ನಡೆದ ಸಂದರ್ಭದಲ್ಲಿ ಆ ಮಹೋತ್ಸವದ ಜ್ಞಾಪಕವನ್ನು ... ಅನೇಕ ಸ್ಥಳಗಳಲ್ಲಿ ಪ್ರಜೆಗಳು ಅನೇಕ ವಿಧವಾಗಿ ಕಟ್ಟಡಗಳು ... ಟೌನ್‌ಹಾಲ್ ... ತುಮಕೂರು ... ಜಿಲ್ಲಾ ... ರಾಮಸ್ವಾಮಯ್ಯನವರು ... ಪ್ರಜೆಗಳು ... ಮೈಸೂರು, ಬೆಂಗಳೂರು ಪಟ್ಟಣಗಳನ್ನು ಬಿಟ್ಟರೆ ಈ ತುಮಕೂರು ... ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಪಟ್ಟಣವಾಗಿರುತ್ತದೆ ... ಮಳೆ ... ಬಿ ಎ ಪರೀಕ್ಷೆಯನ್ನು ... ಬ್ಯಾರಿಸ್ಟರ್ ... ಕೆಲವು ಕಡೆ ಕೆಲವು ಮನೆಗಳು ಬಿದ್ದು ... ಜನಗಳಿಗೆ ... ಗ್ರಾಮಸ್ಥರಿಗೆಲ್ಲಾ ಈಗಲೇ ... ಬಹಳ ಅನುಕೂಲವೆಂತ ತಿಳಿಸುತ್ತಾ ಇದಾರೆ

ವೃತ್ತಾಂತ ಪತ್ರಿಕೆ.

೦

ಸಹ ೧೯೧೨ನೇ ಇಸವಿ ಸೆಪ್ಟಂಬರ್ ತಾ. ೫ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ಆರೋಗ್ಯವಿಚಾರವು.

ಸಂಸ್ಥಾನಾಮಳೆ ಆರೋಗ್ಯವಿಚಾರವಾದ 1911 ನೇ ವರುಷದ ರಿಪೋರ್ಟನ್ನು ಸರ್ಕಾರದವರು ಪ್ರಕಟಮಾಡಿರುತ್ತಾರೆ. ಸ್ಯಾನಿಟರಿ ಕಮಿಷನರವರು 1911 ನೇ ಡಿಸೆಂಬರ್ ಕಡೆಗೆ ಮುಕ್ತಾಯವಾದ ಒಂದು ಸಾಲಿನ ರಿಪೋರ್ಟನ್ನು ಬರೆದು 1912 ನೇ ಜೂನ್ 15 ಕ್ಕೆ, ಅಂದರೆ ಆರು ತಿಂಗಳ ಮೇಲೆ ಸರ್ಕಾರಕ್ಕೆ ಕಳುಹಿಸಿದರು. ಗವರ್ನಮೆಂಟಿನವರು ಈ ರಿಪೋರ್ಟನ್ನು 1912 ನೇ ಆಗಸ್ಟು 17 ರಲ್ಲಿ ಪರಾಂಬರಿಸಿ ಅದರ ಗೋಷ್ವಾರೆಯನ್ನು ಪ್ರಕಟಿಸಿರುತ್ತಾರೆ.

1911 ನೇ ವರುಷದಲ್ಲಿ ಈ ಸಂಸ್ಥಾನದೊಳಗ ಹಿಂದಿನ ವರುಷಕ್ಕಿಂತ ಜನನ ಸಂಖ್ಯೆಯು ಕಡಮೆಯಾಯಿತು, ಮರಣ ಸಂಖ್ಯೆಯು ಹೆಚ್ಚಿತು. ಒಟ್ಟು 1,11,913 ಮರಣಗಳಾಗಿರುತ್ತವೆ. ಗ್ರಾಮಾಂತರಗಳಲ್ಲಿ ವಾಸಿಸುವವರಿಗಿಂತ ಪಟ್ಟಣವಾಸಿಗಳೇ ಹೆಚ್ಚಾಗಿ ತೀರಿಹೋಗಿದಾರೆ. ಈ ಜನನ ಮರಣ ಲೆಕ್ಕಗಳು ಯಥಾರ್ಥವಾದವುಗಳೆಂದು ಅವುಗಳನ್ನು ನಂಬುವುದು ಕಷ್ಟವಾಗಿದೆ ಎಂದೂ, ಸ್ಯಾನಿಟರಿ ಕಮಿಷನರವರು ಅವುಗಳ ಲೋಪಗಳನ್ನು ಹುಡುಕುತ್ತಿದಾರೆಂದೂ ಗವರ್ನಮೆಂಟಿನವರು ತಿಳಿಸುತ್ತಾರೆ. ಸರ್ಕಾರದ ರೂಲಸುಗಳನ್ನು ಗ್ರಾಮಾಂತರಗಳಲ್ಲಿರುವ ನೌಕರರು ಮುತುವರ್ಜಿಯಿಂದಲೂ ಕ್ರಮವಾಗಿಯೂ ಜಾರಿಯಲ್ಲಿಟ್ಟು ಲೆಕ್ಕಗಳನ್ನು ಸರಿಯಾಗಿ ಕೂಡಿಸುತ್ತಾ ಇಲ್ಲವೆಂಬುದೂ, ಈ ಲೋಪವು ದೊಡ್ಡ ಪಟ್ಟಣ, ಊರುಗಳಲ್ಲೂ ಕಂಡು ಬರುತ್ತದೆಂದೂ ಹೇಳಬೇಕಾಗಿದೆ. 201 ಜನರು ವಾಂತಿಭೇದಿ ಉಪದ್ರದಲ್ಲಿ ತೀರಿಹೋದರೆಂದು ಈ ರಿಪೋರ್ಟು ಹೇಳುತ್ತದೆ. ನೀರಿನ ದೋಷದಿಂದ ಬರುವ ಈ ರೋಗವನ್ನು ಒಳ್ಳೇ ಕುಡಿಯುವ ನೀರು ಒದಗಿಸಿ ನಿವಾರಣ ಮಾಡಬಹುದು. ಪ್ಲೇಗಿನ ಉಪದ್ರದಿಂದ 2,[illegible], ಅಂದರೆ ಹಿಂದಿನ ವರುಷಕ್ಕಿಂತ 3,115 ಕಡಮೆ ಮರಣಗಳಾದವು. ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಈ ಉಪದ್ರವು ಹರಡಿಕೊಂಡಿದ್ದರೂ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಆದ 1,[illegible] ಮರಣಗಳೇ ಬಹು ಹೆಚ್ಚಾದವು. ಸರ್ಕಾರದವರು ಈ ಮರಣದ ಸಂಖ್ಯೆಯನ್ನು ಕಡಮೆ ಮಾಡುವುದಕ್ಕೆ ಗ್ರಾಮಾಂತರಗಳಲ್ಲೂ ಬಲಾತ್ಕಾರದಿ [illegible] ರೂಲನ್ನು ಜಾರಿಗೆ ತರಬೇಕೆಂದು ಯೋಚಿಸುತ್ತಿದಾರೆ.

ಪ್ಲೇಗು ಉಪದ್ರವು ಪ್ರಜೆಗಳಿಗೆ ಅನೇಕ ಅನುಭವಗಳನ್ನು ಉಂಟುಮಾಡಿದ್ದರೂ ಪ್ರಜೆಗಳು ಅದಕ್ಕೆ ಪ್ರತೀಕಾರಗಳನ್ನು ಯೋಗನೆ ಮಾಡದ ಅಲಕ್ಷ್ಯ ಸ್ವಭಾವದಿಂದ ಅದರ ಹಾವಳಿಯು ಬಹಳ [illegible]. 1911 ನೇ ವರುಷದಲ್ಲಿ 14,617 ಜನರು, ಅಂದರೆ ಹಿಂದಿನ ವರುಷಕ್ಕಿಂತ 5,379 ಜನರು ಹೆಚ್ಚಾಗಿ [illegible] ಹೀಗೆ ಮರಣಗಳು ಹೆಚ್ಚಾಗಲು ಕಾರಣವೇನೋ ತಿಳಿಸುವುದು ಕಷ್ಟವೆಂದು ಸ್ಯಾನಿಟರಿ ಕಮಿಷನರವರು ಹೇಳುತ್ತಾರೆ. ಉಪದ್ರ ಕಾಣಿಸಿಕೊಂಡ ಕೂಡಲೇ ಸ್ಥಳಾಧಿಕಾರಿಯೂ ಮುನ್ಸಿಪ್ಪರೂ ವೈದ್ಯರನ್ನು ಬರಮಾಡಿಕೊಂಡು ಇನಾಕ್ಯುಲೇಷನ್ ಮಾಡಿಸಿದಲ್ಲಿ ಬಹು ಪ್ರಯೋಜನವಾಗುವುದು. ಕಳೆದ ಸಾಲಿನಲ್ಲಿ ಸಂಸ್ಥಾನಾಮಳೆ [illegible],790 ಜನಗಳು ಇನಾಕ್ಯುಲೇಷನ್ ಮಾಡಿಕೊಂಡರು. ಈ ಉಪದ್ರದ ನಿವಾರಣೆಗಾಗಿ ವೈದ್ಯ ಇಲಾಖೆಯ ಮ|| ಮುತ್ತುಸ್ವಾಮಿ ದಾಸರವರೂ, ಮ|| ಆರ್. ಸುಬ್ಬರಾಯರೂ, ಮ|| ಗುರುರಾಯರೂ ತುಂಬಾ ಶ್ರಮಪಟ್ಟರೆಂದು ಕೇಳಿ ಸಂತೋಷಪಡುತ್ತೇವೆ.

ನಾನಾ ಬಗೆಯ ಜ್ವರಗಳಿಂದ ಸಂಸ್ಥಾನಾಮಳೆ ವರುಷೇ ವರುಷ ಬಹಳ ಮರಣಗಳಾಗುತ್ತಿರುವವು. 1910 ರಲ್ಲಿ 47,313 ಮರಣಗಳೂ, 1911 ರಲ್ಲಿ 19,761 ಮರಣಗಳೂ ಆಗಿರುತ್ತವೆ. ಇವುಗಳ ಪೈಕಿ ಮಲನಾಡು ಪ್ರದೇಶಗಳಾದ ಶಿವಮೊಗ್ಗ, ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಆದ ಮರಣಗಳೇ ಬಹಳ ಹೆಚ್ಚು. ಮಲನಾಡಿನಲ್ಲಿ ಪ್ರಜೆಗಳು ಕ್ಷಯವಾಗುತ್ತಿರುವುದನ್ನು ಸರ್ಕಾರದವರು ತನಿಖೆ ನಡಿಸಿ ಪರಿಹಾರಗಳನ್ನು ಕಲ್ಪಿಸಬೇಕೆಂದು ಮೂರುನಾಲ್ಕು ವರುಷಗಳಿಂದ ಪ್ರಯತ್ನಪಡುತ್ತಿದಾರೆ. ಸ್ಯಾನಿಟರಿ ಕಮಿಷನರವರು ಕಡೂರು ಡಿಸ್ಟ್ರಿಕ್ಟಿನ ಸ್ಥಿತಿಗತಿಯನ್ನು ತನಿಖೆಮಾಡಿ ಪ್ರಥಮ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸಿದರು. ಇನ್ನೆರಡು ಡಿಸ್ಟ್ರಿಕ್ಟುಗಳ ರಿಪೋರ್ಟನ್ನು ಸರ್ಕಾರದವರು ನಿರೀಕ್ಷಿಸಿಕೊಂಡಿದಾರೆ. ಮಲೇರಿಯಾ ಜ್ವರಕ್ಕೆ ಕ್ವಿನೈನ್ ಒಳ್ಳೇ ಔಷಧವೆಂದು ಸಿದ್ಧಾಂತಪಟ್ಟಿದೆಯಾದದ್ದರಿಂದ ಆ ಜ್ವರವಿರುವ ಪ್ರದೇಶಗಳಲ್ಲಿ ಸರ್ಕಾರದಿಂದ ಪ್ರಜೆಗಳಿಗೆ ಈ ಕ್ವಿನೈನ್ ಔಷಧವನ್ನು ಮುಫತ್ತಾಗಿ ಎರಡು ವರುಷಕಾಲ ಕೊಡುತ್ತಾ ಬಂದು ಅದರ ಪ್ರಯೋಜನವನ್ನು ತಿಳಿಸಬೇಕೆಂದು ಗವರ್ನಮೆಂಟಿನವರು ಅಪ್ಪಣೆ ಕೊಟ್ಟು ಇಲ್ಲಿಗೆ ನಾಲ್ಕು ತಿಂಗಳಾಯಿತು. ಸರ್ಕಾರದವರ ಈ ಪ್ರಯಾರಂಭಕವಾದ ಹುಕುಮನ್ನು ಗ್ರಾಮಾಂತರಗಳಲ್ಲಿರುವ ನೌಕರರು ಸಾರ್ಥಕಪಡಿಸಿ ಈ ಉಕ್ತ ಜ್ವರದಿಂದಾಗುತ್ತಿರುವ ಕಷ್ಟನಷ್ಟಗಳನ್ನು ಪರಿಹರಮಾಡಬೇಕಾಗಿದೆ. ಅನ್ಯಾಯವಾಗಿ [illegible] ಸೀಮೆಯಾದ ಚಿತ್ರದುರ್ಗ ಡಿಸ್ಟ್ರಿಕ್ಟಿನೊಳಗ [illegible] ತಾಲ್ಲೂಕುಗಳಲ್ಲಿ ಜ್ವರದಿಂದ ಅನೇಕ ಮರಣಗಳಾದವೆಂದು ಈ ರಿಪೋರ್ಟಿನಿಂದ ಗೊತ್ತಾಗುತ್ತದೆ. [illegible] ಪ್ರದೇಶದಲ್ಲಿ ಮಳೆ [illegible] ತಾಲ್ಲೂಕುಗಳಲ್ಲಿ ಕೂಡ ಜ್ವರವು ಪ್ರಬಲವಾಗಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ. ಸರ್ಕಾರದವರು ಅದರ ವೃತ್ತಾಂತವನ್ನು ತನಿಖೆ ಮಾಡಿಸಲು ಈಗಾಗಲೇ ಹುಕುಂ ಕೊಟ್ಟಿರಬೇಕೆಂದು ನಿರೀಕ್ಷಿಸುತ್ತೇವೆ.

ವಾಚಕರ ಪತ್ರ

ಒಬ್ಬ ಚಾತ್ರಿದಾರರು ಬರೆಯುವುದು

ಅಯ್ಯಾ,—ತಮ್ಮ ಕಳೆದ 22 ನೇ ತಾ ಪತ್ರಿಕೆಯಲ್ಲಿ ಮೇಲಿನ ಹೆಡ್ಡಿಂಗ್ ಹಾಕಿ (1) ದೇವರು ನಮ್ಮ ಆತ್ಮದಲ್ಲೇ ಇರುತ್ತಾನೆ. (2) ನಮ್ಮಲ್ಲಿ ಒಳ್ಳೆಯ ಉದ್ದೇಶಗಳನ್ನೂ, ಪ್ರಯತ್ನಗಳನ್ನೂ ಹುಟ್ಟಿಸಿ ನಮ್ಮನ್ನು ನಡಿಸುತ್ತಿರುವವನು ಆತನೇ, (3) ಅಧರ್ಮವನ್ನು ಬಿಟ್ಟು ಸದ್ಧರ್ಮವನ್ನು ಕೈಕೊಳ್ಳಬೇಕೆಂದು ನಮ್ಮನ್ನು ಪ್ರೇರಿಸುತ್ತಿರುವವನೂ ಆತನೇ ಎಂದು ಗ್ಯರೆ ಬರೆಯಲಾಗಿದೆ. ಇದರಿಂದ ಉಂಟಾಗಿರುವ ಕೆಲವು ಸಂಶಯಗಳನ್ನು ಈ ಕೆಳಗೆ ನಿವರಿಸಿದ್ದೇನೆ. ದಯವಿಟ್ಟು ಅವುಗಳಿಗೆ ಸಮಾಧಾನವನ್ನು ತಿಳಿಸಿ ನನ್ನ ಸಂಶಯವನ್ನು ನಿವೃತ್ತಿಮಾಡಬೇಕೆಂದು ಬೇಡುತ್ತೇನೆ.

(1) ದೇವರು ನಮ್ಮಲ್ಲಿದ್ದು ಸದ್ಧರ್ಮಗಳನ್ನೇ ಪ್ರೇರಿಸುತ್ತಲೂ ನಮ್ಮನ್ನು ಸನ್ಮಾರ್ಗದಲ್ಲಿ ನಡಿಸುತ್ತಲೂ ಇದ್ದರೆ ನಾವು ಪಾಪವನ್ನು ಹೇಗೆ ಮಾಡುತ್ತೇವೆ? (2) ದೇವರು ನಡಿಸುವಂತೆ ನಡೆಯುವ ನಾವು ಮಾಡತಕ್ಕ ಕರ್ಮವು ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಅದರ ಫಲವು ಯಾರಿಗೆ ಸೇರಬೇಕು? (3) ದೇವರು ಸದ್ಧರ್ಮವನ್ನು ಕೈಕೊಳ್ಳಬೇಕೆಂದು ಪ್ರೇರಿಸಿದರೂ ನಾವು ದುರ್ಮಾರ್ಗಪ್ರವರ್ತಕರಾಗುತ್ತೇವಾದ್ದರಿಂದ ಪಾಪದ ಫಲವು ನಮಗೆ ಬರುತ್ತದೆಂದು ಹೇಳಿದರೆ ಒಂದು ಕೆಟ್ಟ ಕುದುರೆಯನ್ನು ಸವಾರನು ಲಗಾಂ ಹಿಡಿದು ಸರಿಯಾದ ದಾರಿಗೆ ತಿರುಗಿಸಿದರೂ ಅದು ಹತೋಟಿಗೆ ಬಾರದೆ ಮನಸ್ಸು ಬಂದ ಕಡೆ ಹೋಯಿತೆನ್ನುವಲ್ಲಿ ಸವಾರನ ಚೈತನ್ಯಕ್ಕಿಂತಲೂ ಕುದುರೆಯ ಚೈತನ್ಯವೇ ಹೆಚ್ಚೆನ್ನುವದು ಸ್ಪಷ್ಟವಾಗುವದು. ಹಾಗೆಯೇ ದೇವರು ನಮ್ಮನ್ನು ಒಳ್ಳೆಯ ಮಾರ್ಗಕ್ಕೆ ತಿರುಗಿಸುತ್ತಿದ್ದರೂ ನಾವು ಬೇರೆ ಮಾರ್ಗಕ್ಕೆ ಹೋದರೆ ದೇವರ ಶಕ್ತಿಗಿಂತಲೂ ನಮ್ಮ ಶಕ್ತಿಯು ಹೆಚ್ಚಾಗುವದು. ಇದು ನಿಜವೋ? (4) ನಮ್ಮಲ್ಲಿ ದುಸ್ಸಂಕಲ್ಪಗಳನ್ನು ಪ್ರೇರಿಸುವವರು ಯಾರು? (5) ನಮ್ಮನ್ನು ಸೃಷ್ಟಿಮಾಡಿದವರು ಯಾರು ದೇವರಲ್ಲವೇ? (6) ನಾವು ಕೇಳಿಕೊಂಡೆವೋ ದೇವರು ತಾನಾಗಿಯೇ ನಮ್ಮನ್ನು ಸೃಷ್ಟಿಮಾಡಿದನೋ? (7) ದೇವರು ಸರ್ವಶಕ್ತನಷ್ಟೆ, ನಾವು ಪಾಪ ಮಾಡುವದಕ್ಕೆ ಪ್ರಯತ್ನಪಟ್ಟರೆ ನಿಶ್ಚೈತನ್ಯನಾಗುವಂತೆ ಮಾಡದೆ ಸಹಕಾರಿಯಾಗಿ ಚೈತನ ಕೊಟ್ಟದ್ದು ಯಾಕೆ? (8) ನಾವು ಪಾಪ ಮಾಡದಂತೆ ಅಡ್ಡಿಪಡಿಸುವದಕ್ಕೆ ಆತನಿಂದಾಗದೋ?

ನಮ್ಮ ಚಾತ್ರಿದಾರರು ಕೇಳಿರುವ ಮೇಲ್ಕಂಡ ಪ್ರಶ್ನೆಗಳು ಪ್ರಾಮುಖ್ಯವಾದವುಗಳು. ಪುರಾತನಕಾಲದಿಂದಲೂ ಜ್ಞಾನಿಗಳು ಈ ವಿಚಾರವನ್ನು ಚರ್ಚೆಮಾಡುತ್ತಾ ಬಂದಿದ್ದಾಗ್ಯೂ ಅವರಲ್ಲಿ ಒಬ್ಬರಾದರೂ ಇವಕ್ಕೆ ಸಂಪೂರ್ಣವಾದ ಉತ್ತರವನ್ನು ಕೊಟ್ಟು ಸಕಲ ಸಂದೇಹಗಳನ್ನೂ ಪರಿಹರಿಸಿದ್ದುದಿಲ್ಲ. ಮಾನುಷ ಜ್ಞಾನಶಕ್ತಿಯು ಪರಿಪೂರ್ಣವಾದದ್ದಲ್ಲ. 'ನಾವು ಅಪೂರ್ಣವಾಗಿ ತಿಳುಕೊಳ್ಳುತ್ತೇವೆ' ಎಂದು ಶ್ರೀ ಪೌಲನು ಹೇಳುತ್ತಾನೆ. ಆದರೂ ಮೇಲಿನ ಪ್ರಶ್ನೆಗಳಿಗೆ ತಕ್ಕಮಟ್ಟಿಗೆ ಸಮಾಧಾನ ಹೇಳುವುದು ಸಾಧ್ಯವಾಗಿದೆ. ನಾವು ಇಷ್ಟರಮಟ್ಟಿಗೆ ತಿಳುವಳಿಕೆಯನ್ನು ಹೊಂದಿದರೆ ಅದು ನಮ್ಮ ಅನುದಿನದ ಗುಣನಡತೆಗಳನ್ನು ತಿದ್ದಿ ನಮ್ಮನ್ನು ನಡಿಸುವುದಕ್ಕೆ ಸಾಕಾಗಿರುವುದು.

ಮೊಟ್ಟಮೊದಲು ಮನುಷ್ಯನಿಗೆ ಸ್ವಾತಂತ್ರ್ಯವು ಅಥವಾ ನಿರಂಕುಶವರ್ತನವು ಉಂಟೆಂಬ ಅಂಶವನ್ನು ನಾವು ಮರೆಯಬಾರದು. ಇಂತಹ ಸ್ವಾತಂತ್ರ್ಯವಿಲ್ಲದಿದ್ದರೆ ಧರ್ಮಾಧರ್ಮ ಪಾಪಪುಣ್ಯ ಎಂಬವುಗಳೇ ಇರಲಾರವು. ಗಾರುಡಿಗನು ಬೊಂಬೆಗಳನ್ನು ಕುಣಿಸುವಾಗ ಅವು ತಮ್ಮಷ್ಟಕ್ಕೆ ತಾವೇ ಕುಣಿಯುತ್ತವೆಯೋ ಎಂಬಂತೆ ಕಾಣಿಸುವವು. ಆದರೆ ಆ ಬೊಂಬೆಗಳಲ್ಲಿ ಯಾವ ಶಕ್ತಿಯೂ ಇರುವುದೇ ಇಲ್ಲ. ಸೂತ್ರಧಾರಿಯ ಬಲದಿಂದಲೇ ಅವು ಮೇಲಕ್ಕೂ ಕೆಳಕ್ಕೂ ಈ ಕಡೆಗೂ ಆ ಕಡೆಗೂ ಅವನು ಕುಣಿಸಿದ ಹಾಗೆಲ್ಲಾ ಕುಣಿಯುತ್ತವೆಂದು ನಾವು ಬಲ್ಲೆವಷ್ಟೆ. ಇದರಂತೆ ದೇವರು ಒಬ್ಬ ಸೂತ್ರಧಾರಿಯು ಹಾಗೂ ಮನುಷ್ಯರಾದ ನಾವು ಆತನ ಕೈಯಲ್ಲಿರುವ ಸೂತ್ರದ ಬೊಂಬೆಗಳ ಹಾಗೂ ಇರುವುದಿಲ್ಲ. ಮನುಷ್ಯರು ತಮ್ಮಿಷ್ಟ ಬಂದ ಕಾರ್ಯಗಳನ್ನು ಮಾಡುವುದಕ್ಕೆ ಸ್ವಾತಂತ್ರ್ಯವಿಲ್ಲದೆ, ದೇವರ ಅಪಾರವಾದ ಶಕ್ತಿಯಿಂದ ಬಂಧಿಸಲ್ಪಟ್ಟವರಾಗಿ ಬಿಡಿಸಿಕೊಳ್ಳುವುದಕ್ಕೆ ಯತ್ನವಿಲ್ಲದೆ ಆತನಿಂದಲೇ ಸೂತ್ರದ ಬೊಂಬೆಗಳಂತೆ ಕುಣಿಸಲ್ಪಡುವವರಾಗಿದ್ದರೆ ಅವರು ಮಾಡುವ ಧರ್ಮಕಾರ್ಯಗಳಿಗೆ ಬಹುಮಾನವಾಗಲಿ ಪಾಪಕೃತ್ಯಗಳಿಗೆ ಶಿಕ್ಷೆಯಾಗಲಿ ಅವರಿಗೆ ಪ್ರಾಪ್ತವಾಗಕೂಡದು. ಮತ್ತು ಪಾಪದ ಫಲವನ್ನು ಕುರಿತು ಈಗ ನಾವು ಚರ್ಚಿಸಬೇಕಾದ ಅಗತ್ಯವೂ ಇರುತ್ತಿರಲಿಲ್ಲ. ಏಕೆಂದರೆ ಪಾಪವೆಂಬುವುದೇ ಇರುತ್ತಿರಲಿಲ್ಲ. "ನಿರ್ಬಂಧವುಳ್ಳ ಒಳ್ಳೆಯತನ" ಎಂಬ ಮಾತಿಗೆ ಅರ್ಥವೇ ಇಲ್ಲ. 'ಮೊಲದ ಕೊಂಬು' 'ಬಂಜೆಯಾದ ವಿಧವೆಯ ಮಗ' ಎಂಬಿವು ಹೇಗೆ ಅಸಂಭವಗಳೋ ಇದೂ ಹಾಗೆಯೇ ಅರ್ಥರಹಿತವಾಗಿದೆ. ಕೇವಲ ನಿರ್ಬಂಧದಿಂದಲೇ ಮಾಡಿದ ಕಾರ್ಯವು ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಇಂತಹ ಕೆಲಸವನ್ನು ಒಳ್ಳೆಯದೆಂದು ಸ್ತೋತ್ರಮಾಡುವುದಾಗಲಿ, ಕೆಟ್ಟುದೆಂದು ಆಕ್ಷೇಪಿಸುವುದಾಗಲಿ ಧರ್ಮವಲ್ಲ. ಗಡಿಯಾರಗಳನ್ನು ಮಾಡುವವನು ಒಂದು ಗಡಿಯಾರವು ಸರಿಯಾದ ಕಾಲವನ್ನು ತೋರಿಸುವುದಾದರೆ ಅದನ್ನು ಶ್ಲಾಘಿಸುವುದಿಲ್ಲ, ಮತ್ತೊಂದು ಸ್ವಲ್ಪ ಹೆಚ್ಚು ಕಡಮೆ ಕಾಲವನ್ನು ತೋರಿಸಿದರೆ ಅಥವಾ ನಿಂತೇ ಹೋಗಿದ್ದರೆ ಅದರ ಮೇಲೆ ತಪ್ಪು ಹೊರಿಸುವುದಿಲ್ಲ. ಏಕೆಂದರೆ ಗಡಿಯಾರಕ್ಕೆ ಸ್ವಾತಂತ್ರ್ಯವು ಇರುವುದೇ ಇಲ್ಲ. ಅದನ್ನು ಮಾಡಿದವನು ಹೇಗೆ ಕ್ರಮಪಡಿಸಿ ಇಟ್ಟಿರುತ್ತಾನೋ ಅದು ಆ ರೀತಿ ನಡೆಯುತ್ತದೆ.

ಮನುಷ್ಯನಿಗೆ ಸ್ವಾತಂತ್ರ್ಯವುಂಟೆಂದು ನಂಬುವುದಕ್ಕೆ ಮೂರು ಪ್ರಬಲವಾದ ಆಧಾರಗಳಿರುತ್ತವೆ. (1) ಮನುಷ್ಯನ ಅಂತರ್ಯದಲ್ಲಿರುವ ಮನಸ್ಸಾಕ್ಷಿಯು ಮಾಡುವ ತೀರ್ಮಾನ. ಇದು ಅವನು ಮಾಡುವ ಕಾರ್ಯವು ಒಳ್ಳೆಯದು ಅಥವಾ ಕೆಟ್ಟದು ಎಂದು ಸ್ಪಷ್ಟವಾಗಿ ಅವನಿಗೆ ತಿಳಿಸುತ್ತದೆ. ಅವನು ಸತ್ಕಾರ್ಯ ಮಾಡಿದರೆ ಮನಸ್ಸಾಕ್ಷಿಯು ಸಂತೋಷಪಟ್ಟು ಅವನನ್ನು ಹೊಗಳುತ್ತದೆ, ದುಷ್ಕಾರ್ಯವನ್ನು ಮಾಡಿದರೆ ಅದು ದುಃಖಪಟ್ಟು ಅವನ ಮೇಲೆ ಅಪರಾಧ ಹೊರಿಸುತ್ತದೆ. ಇಂತಹ ಅನುಭವವು ಸರ್ವರಲ್ಲಿಯೂ ಸಾಮಾನ್ಯವಾದದ್ದು. (2) ನಾವು ಬೇರೊಬ್ಬರ ವಿಷಯ ಮಾಡುವ ತೀರ್ಮಾನ. ನಮ್ಮ ನೆರೆಯವರು ಒಳ್ಳೆಯದನ್ನು ಮಾಡಿದರೆ ನಾವು ಅವರನ್ನು ಸ್ತೋತ್ರಮಾಡುವುದೂ ಕೆಟ್ಟುದನ್ನು ಮಾಡಿದರೆ ನಿಂದಿಸುವದೂ ಏಕೆ? ಏಕೆಂದರೆ ಸರ್ವರೂ ಅಧರ್ಮವನ್ನು ತ್ಯಜಿಸಿ ಸದ್ಧರ್ಮವನ್ನೇ ಕೈಕೊಂಡು ನಡೆಯುವುದಕ್ಕೆ ಶಕ್ತರಾಗಿದ್ದಾರೆಂದು ನಾವು ನಂಬಿರುವುದರಿಂದಲೇ. ಮನುಷ್ಯನಿಗೆ ಸ್ವಾತಂತ್ರ್ಯವುಂಟು ಎಂಬ ನಂಬಿಕೆಯ ಮೇಲೆ ಗೌರ್ನಮೆಂಟುಗಳೂ ನ್ಯಾಯಸ್ಥಾನಗಳೂ ತಮ್ಮ ಕಾರ್ಯಗಳನ್ನು ನಡಿಸುತ್ತವೆ. ಮನುಷ್ಯನಿಗೆ ಸ್ವಾತಂತ್ರ್ಯವು ಇಲ್ಲದಿದ್ದ ಪಕ್ಷದಲ್ಲಿ ಗೌರ್ನಮೆಂಟಿನವರು ಒಳ್ಳೆಯ ಕೆಲಸಗಳನ್ನು ಮಾಡಿದವರಿಗೆ ಬಹುಮಾನವನ್ನೂ ಕೆಟ್ಟ ಕೆಲಸಗಳನ್ನು ಮಾಡಿದವರಿಗೆ ಶಿಕ್ಷೆಯನ್ನೂ ವಿಧಿಸುವದು ಶುದ್ಧ ಅನ್ಯಾಯವಾಗಿದೆ. (3) ವೇದೋಕ್ತಿಗಳ ಆಧಾರವು. ಧರ್ಮಾಧರ್ಮ, ನೀತಿ ಅನೀತಿ, ಪಾಪಪುಣ್ಯಗಳೆಂಬ ಮಾತುಗಳು ಸಮಸ್ತ ಮತಗಳ ಧರ್ಮಗ್ರಂಥಗಳಲ್ಲಿಯೂ ಇರುತ್ತವೆ. ದೇವರು ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡುವನೆಂದು ಹೇಳುತ್ತವೆ. ಅವುಗಳಲ್ಲಿ ಧರ್ಮಿಗೆ ಸ್ತೋತ್ರವೂ ಪಾಪಿಷ್ಠರಿಗೆ ಎಚ್ಚರಿಕೆಯೂ ದಂಡನೆಯೂ ಇರುತ್ತವೆ.

ದೇವರು ಸರ್ವಶಕ್ತನೆಂದರೇನು? ಇದರ ಅರ್ಥವೇನೆಂದರೆ, ದೇವರು ತಾನು ಇಷ್ಟಪಡುವುದನ್ನೆಲ್ಲಾ ಮಾಡಲು ಶಕ್ತನಾಗಿರುತ್ತಾನೆಂಬುವುದೇ. ಆದರೆ ದೇವರು ತನ್ನ ಸ್ವಂತ ಇಷ್ಟದಿಂದ ಮನುಷ್ಯರನ್ನು ಸ್ವಾತಂತ್ರ್ಯವುಳ್ಳವರನ್ನಾಗಿ ಸೃಷ್ಟಿಸಿದ್ದಾನೆ. ಎಂದರೆ ಅವರು ನಿರಂಕುಶ ವರ್ತನಾ ಶಕ್ತಿಯುಳ್ಳವರು. ದೇವರ ಚಿತ್ತವನ್ನು ನೆರವೇರಿಸುವುದಕ್ಕಾಗಲಿ ಮೀರುವುದಕ್ಕಾಗಲಿ ಒಳ್ಳೆಯದನ್ನು ಆರಿಸಿಕೊಳ್ಳುವುದಕ್ಕಾಗಲಿ ಬಿಟ್ಟುಬಿಡುವುದಕ್ಕಾಗಲಿ ಸ್ವತಂತ್ರರಾಗಿರುತ್ತಾರೆ. ಕ್ರೈಸ್ತ ಪವಿತ್ರಗ್ರಂಥವು "ದೇವರು ಮನುಷ್ಯನನ್ನು ತನ್ನ ಹೋಲಿಕೆಯಲ್ಲಿ ಉಂಟುಮಾಡಿದನು" ಎಂದು ಹೇಳುವಲ್ಲಿ ಈ ಅರ್ಥವೂ ಗರ್ಭಿತವಾಗಿದೆ. ದೇವರು ಹೇಗೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೋ ಹಾಗೆಯೇ ಮನುಷ್ಯನಿಗೂ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ. ಮನುಷ್ಯನು ಒಳ್ಳೆಯದನ್ನು ಮಾಡುವುದಕ್ಕೆ ದೇವರು ಅವನನ್ನು ಬಲಾತ್ಕಾರವಾದ ಪಡಿಸುವುದಿಲ್ಲ. ಅವನು ಕೆಟ್ಟುದನ್ನು ಮಾಡುವುದಕ್ಕೆ ಇಷ್ಟಪಡುವಾಗ ದೇವರು ಬಲಾತ್ಕಾರದಿಂದ ಅವನನ್ನು ತಡೆದು ನಿಲ್ಲಿಸುವುದಿಲ್ಲ. ಏಕೆಂದರೆ ನಾವು ಮೇಲೆ ಸೂಚಿಸಿದಂತೆ ನಿರ್ಬಂಧದಿಂದ ಮಾಡಿದ ಒಳ್ಳೆಯ ಕಾರ್ಯಕ್ಕೆ ಯಾವ ಬೆಲೆಯೂ ಇರುವುದಿಲ್ಲ.

[illegible] ದೇವರಿಗೆ ಮನುಷ್ಯರ ಮೇಲೆ ಎಂತಹ ಅಧಿಕಾರವಿದೆ? ದೇವರು ಇಷ್ಟಪಟ್ಟರೆ ಒಂದೇ ಮಾತಿನಿಂದ ಅವರನ್ನು ಸೃಷ್ಟಿಸಬಲ್ಲನು, ಪರಿಪಾಲಿಸಬಲ್ಲನು, [illegible]. ಆದರೆ ಮನುಷ್ಯನು ಇಷ್ಟಪಡದಿದ್ದರೆ ಬಲವಂತದಿಂದ ಅವನನ್ನು ಒಳ್ಳೆಯವನನ್ನಾಗಿ ಮಾಡಲಾರನು. ಏಕೆಂದರೆ ಹೀಗೆ ಮಾಡುವುದು ಒಳ್ಳೆಯತನದ ಸ್ವಭಾವಕ್ಕೂ ದೇವರ ಚಿತ್ತಕ್ಕೂ ವಿರುದ್ಧವಾದುದು.

ಸನ್ಮಾರ್ಗವು ಒಂದು ರೈಲ್ ರಸ್ತೆಯ ಹಾಗೂ ಮನುಷ್ಯನು ರೈಲ್ ಬಂಡಿಗೆ ಸೇರಿದ ಒಂದು ಎಂಜನ್ ಗಾಡಿಯ ಹಾಗೂ ಇರುವುದಿಲ್ಲ. ಆ ಎಂಜನ್ ಗಾಡಿಯು ರೈಲ್ ರಸ್ತೆಗಳನ್ನೇ ಅನುಸರಿಸಿ ಓಡಬೇಕು. ಅದನ್ನು ಬಿಟ್ಟು [illegible]ಗಲಿ ಎಡಕ್ಕಾಗಲಿ ಹೋಗಲಾರದು. ಮತ್ತು ಅದರಲ್ಲಿ ಸ್ವಶಕ್ತಿಯು ಇರುವುದಿಲ್ಲ. ಅದನ್ನು ನಡೆಸುವವನು ಹಬೆಯ ಶಕ್ತಿಯನ್ನು ಬಿಟ್ಟರೆ ಅದು ಚಲಿಸುವದು. ಅದನ್ನು ನಿಲ್ಲಿಸಿದ ಕೂಡಲೇ ತಾನೂ ನಿಂತುಹೋಗುವುದು. ಅದಕ್ಕೆ ಸ್ವಾತಂತ್ರ್ಯವು ಇರುವುದಿಲ್ಲ. ಅದು ಸಂಪೂರ್ಣ ಪರಾಧೀನವಾದುದು. ಆದರೆ ದೇವರು ಮನುಷ್ಯನನ್ನು ಸೃಷ್ಟಿಸಿದಾಗ "[illegible]" ಎಂದು ಹೇಳಿದನು.

ದೇವರಿಂದ ನಮಗೆ ಬರುವ ಪ್ರೇರಣೆಯು ನಾವು ಅದನ್ನು ಅಂಗೀಕರಿಸದ ಹೊರತು ನಮಗೆ ಇಷ್ಟವಾಗಿದ್ದರೂ ಅನಿಷ್ಟವಾಗಿದ್ದರೂ [illegible] ಎಳೆಯುವಂತೆ ಅದು ನಮ್ಮನ್ನು ನಿರ್ಬಂಧಪಡಿಸುವುದಿಲ್ಲ. ಒಬ್ಬ ಗುರುವು ತನ್ನ ಶಿಷ್ಯನಿಗೆ ಜ್ಞಾನವೂ ಪ್ರೀತಿಯೂ ಉಳ್ಳ ತಂದೆಯು ತನ್ನ ಮಗನಿಗೆ ಅಥವಾ ಹಿತಚಿಂತಕನು ತನ್ನ ಆಪ್ತನಿಗೆ ಬುದ್ಧಿ ಹೇಳುವ ಪ್ರಕಾರ ದೇವರು ನಮ್ಮನ್ನು ಪ್ರೇರಿಸುತ್ತಾನೆ. ಎಂಜಿನ ನಡಿಸುವವನು ಅದನ್ನು ಹೇಗೆ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾನೋ ಅದರಂತೆ ದೇವರು ನಮ್ಮನ್ನು ನಡಿಸುವುದಿಲ್ಲ. ಧರ್ಮವನ್ನು [illegible]ನೆಂದು ಆತನು ಮಾರ್ಗ ತೋರಿಸಿಕೊಡುತ್ತಾನೆ. ಅದನ್ನೇ ಅನುಸರಿಸಿ ನಡೆಯುವ [illegible] ಆತನು ನಮ್ಮಲ್ಲಿ ಸುಪ್ರೇರಣೆಯನ್ನು ಹುಟ್ಟಿಸಿ ನಮ್ಮ ಪ್ರಯತ್ನಗಳಿಗೆ ಸಹಾಯ ಕೊಡುತ್ತಾನೆ. ಆದರೆ ಆತನು ನಮ್ಮನ್ನು ನಿರ್ಬಂಧಪಡಿಸುವುದಿಲ್ಲ.

ದೇವರ ವಿಷಯವಾದ ಇಂತಹ ಬೋಧನೆಯು ಆತನ ಘನತೆಗೂ ಶಕ್ತಿಗೂ ಲೋಪವನ್ನುಂಟುಮಾಡುತ್ತದೆ ಎಂದಿಗೂ ಇಲ್ಲ. ಅವುಗಳ ಘನವನ್ನು ತಕ್ಕಷ್ಟು [illegible] ಬಾರಿಯಾಗಿ ನಮ್ಮ ದೃಷ್ಟಿಯಲ್ಲಿ ಅವುಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ. ದೇವರು ಬಿರುಗಾಳಿಗಿಂತಲೂ ಬೋರ್ಗರೆಯುವ ಸಮುದ್ರಕ್ಕಿಂತಲೂ ಭಯಂಕರವಾದ ಅಗ್ನಿಗಿಂತಲೂ ಮಹಾ ಸಮರ್ಥನಾಗಿರುವುದರಲ್ಲಿ ಆತನ ಮಹಿಮೆಯು ಕಾಣಬರುವುದಕ್ಕಿಂತಲೂ ಪಾಪಿಷ್ಠರೂ ಅವಿಧೇಯರೂ ಆಗಿರುವ ನರನಾರಿಗೆ ಆತನು ತೋರಿಸುವ ಅಪಾರವಾದ ಸಹನ ದೀರ್ಘಶಾಂತಿ ದಯೆ ಪ್ರೀತಿ ಇವುಗಳಲ್ಲಿ ಹೆಚ್ಚಾಗಿ ವ್ಯಕ್ತವಾಗುತ್ತದೆ. ಈ ಸಲ್ಲಕ್ಷಣಗಳು ಪರಾಕ್ರಮ ಕ್ರಿಯೆಗಳಿಗಿಂದ ಶ್ರೇಷ್ಠವಾದವುಗಳು.

ಹಾಗಾದರೆ ಧರ್ಮವೆಂದರೇನು? ಧರ್ಮವೆಂದರೆ ಯಾವ ಬಲಾತ್ಕಾರದಿಂದರೂ ಇಲ್ಲದೆ ನಮ್ಮ ಸ್ವಂತ ಇಷ್ಟಾಪೂರ್ತಿಯಾಗಿ ದೇವರ ಚಿತ್ತವನ್ನು ನೆರವೇರಿಸುವುದೇ ಆಗಿದೆ. ಶ್ರೀ ಪೌಲನು ತನ್ನ ಶಿಷ್ಯರಲ್ಲಿ ಕೆಲವರ ವಿಷಯವಾಗಿ ಒಬ್ಬನಿಗೆ ಬರೆದ ಸಮಾಚಾರದಲ್ಲಿ "[illegible] ಮನಪೂರ್ವಕವಾಗಿ ದೇವರಿಗೆ ವಿಧೇಯರಾಗಿರುವುದರಿಂದ ಅವರನ್ನು ನಿಮಗೆ ಸ್ತೋತ್ರಮಾಡುತ್ತೇನೆ" ಎಂದು ಹೇಳಿರುತ್ತಾನೆ. ಮಾನವ ಧರ್ಮಶಾಸ್ತ್ರದಲ್ಲಿ ಸ್ತ್ರೀಯರ ವಿಷಯ ಹೀಗೆ ಹೇಳಿರುತ್ತದೆ: "ಆತ್ಮಾನಮಾತ್ಮನಾಯಾಸ್ತು ರಕ್ಷೇಯುಸ್ತಾಃ ಸುರಕ್ಷಿತಾಃ." ಇದರ ಅರ್ಥವೇನೆಂದರೆ, ಯಾರು ಆತ್ಮನನ್ನು ಆತ್ಮದಿಂದ ಕಾಪಾಡಿಕೊಳ್ಳುತ್ತಾರೋ ಅಂಥವರು ಸುರಕ್ಷಿತರಾಗಿರುತ್ತಾರೆ ಎಂಬುವುದೇ. ಈ ಮಾತು ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ಸಲ್ಲತಕ್ಕುದಾಗಿದೆ.

ಯೇಸು ಕ್ರಿಸ್ತನು ತನ್ನ ಮರಣದ ವಿಷಯವಾಗಿ ಯೋಚನೆ ಮಾಡುವಾಗ 'ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ಕಷ್ಟಕರವಾದ ಮರಣವು ನನ್ನನ್ನು ಬಿಟ್ಟು ಹೋಗಲಿ. ಆದರೆ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದ ಪ್ರಕಾರ ಆಗಲಿ' ಎಂದು ಪ್ರಾರ್ಥನೆ ಮಾಡಿದನು. ಹೀಗೆ ನಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಅಧೀನಮಾಡುವುದೇ ಮಾನವರ ಪರಮಧರ್ಮವಾಗಿರುತ್ತದೆ. 'ಮನುಷ್ಯರೇ, ನಾವು ನಮ್ಮ ಚಿತ್ತಗಳನ್ನು ದೇವರ ಚಿತ್ತಕ್ಕೆ ಅಧೀನಪಡಿಸುವುದಕ್ಕಾಗಿ ಪಡೆದಿರುತ್ತೇವೆ' ಎಂದು ಟೆನಿಸನ್ ಎಂಬ ಮಹಾಕವಿಯು ಹೇಳಿರುತ್ತಾನೆ.

ಆದುದರಿಂದ ನೀತಿವಂತರಾಗಿ ನಡೆದುಕೊಳ್ಳಬೇಕಾದರೆ ಪ್ರಾಮುಖ್ಯವಾದ ಎರಡು ಅಂಶಗಳು ಇರಬೇಕು. ಮೊದಲನೆಯದು ದೇವರ ಸಹಾಯ, ಎರಡನೆಯದು ಮನುಷ್ಯನ ಸಮ್ಮತಿ. ದೇವರ ಸಹಾಯವಿಲ್ಲದೆ ಮನುಷ್ಯನು ಒಳ್ಳೆಯವನಾಗಲಾರನು, ಮನುಷ್ಯನು ಸಮ್ಮತಿ ಪಡದಿದ್ದರೆ ದೇವರು ಬಲಾತ್ಕಾರದಿಂದ ಅವನನ್ನು ಒಳ್ಳೆಯವನಾಗಿ ಮಾಡಲಾರನು.

ಬಳಗೇಶದ ವೃತ್ತಾಂತಗಳು

[illegible] ರಾಜಧಾನಿಯಲ್ಲಿರುವ [illegible] ವ್ಯಾನಿಟರ್[illegible] ಮೈಸೂರು ಬಳಿಯಣ ಜಂಗಲಿನಲ್ಲಿ ಕಳೆದ ವಾರ ಎರಡು ಆನೆಗಳನ್ನು [illegible] ಹಿಡಿದಿದ್ದಾರೆ.

* *

ಶ್ರೀ [illegible] ಚಾಮರಾಜೇಂದ್ರ ನಾಟಕ ಸಭೆಯವರು ಈಗ [illegible] ನೇ ತಾ [illegible] ಇಲ್ಲಿನ [illegible] ಯಲ್ಲಿ [illegible] ಚರಿತ್ರೆಯನ್ನು ಅಭಿನಯಿಸಿ [illegible] ತ್ತದೆ.

ರಾಜಧಾನಿಯ ಟೌನ್ ಹಾಲ್ ಬಂಗಲೆಯೊಳಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸುವುದಕ್ಕೆ ಸರ್ಕಾರದವರು ಮ್ಯುನಿಸಿಪಾಲಿಟಿಯವರ ಶಿಫಾರಸನ್ನು ಅಂಗೀಕರಿಸಿ 2,500 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

* * *

ವಿದ್ವಾನ್ ಬಾಲಸರಸ್ವತಿ ವೇ|| ನರಸಿಂಹಾಚಾರ್ಯರವರು ಬೆಂಗಳೂರಿನಲ್ಲಿ ಶ್ಲಾಘ್ಯತ್ರಮವಾದ ಉಪನ್ಯಾಸಗಳನ್ನು ಮಾಡಿದ್ದರಿಂದ ಅಲ್ಲಿನ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಅವರಿಗೆ ಒಂದು ಅಡ್ರೆಸ್ಸನ್ನು ಬಹುಮಾನ ಸಮೇತ ಒಪ್ಪಿಸಿದರೆಂದು ತಿಳಿದುಬಂದಿದೆ

* * *

ಕನ್ನಂಬಾಡಿ ಕಟ್ಟೆಯ ಕಾಮಗಾರಿಯು ಒಂದು ವರುಷದಿಂದ ನಡೆಯುತ್ತಿರುವಷ್ಟು ಈ ಕಾಮಗಾರಿಯು ಕಟ್ಟಡಕ್ಕೆ ಮೊನ್ನೆ ಭಾನುವಾರ ಮಧ್ಯಾಹ್ನ ಸೂಪರಿಂಟೆಂಡಿಂಗ್ ಇಂಜನಿಯರ್ ಮೆ| ಬಿ ಸುಬ್ಬರಾಯರು ಅಸ್ತಿಭಾರವನ್ನು ಹಾಕಿದರೆಂದು ತಿಳಿದು ಬಂದಿದೆ.

* * *

ಶ್ರೀಮನ್ ಮಹಾರಾಜ ವರೂ ಅರಮನೆಯ ರಾಣಿವಾಸದವರೂ ಪರಿವಾರ ಸಮೇತ ಮೊನ್ನೆ ಭಾನುವಾರ ರಾತ್ರಿ ಕಾಲ 1 ಘಂಟೆಗೆ ಮೋಟಾರ್ ಗಾಡಿಗಳಲ್ಲಿ ಬೆಂಗಳೂರಿಂದ ಹೊರಟು 7 ಘಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ಸೇರಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು

* * *

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ 6 ಟಿನ್ ದೀಪದ ಎಣ್ಣೆಯೂ, ಶ್ರವಣಾಯ ರಾಸ್ತೆ ಸೋದನಾ ಇಲಾಖೆಯ ಆಫೀಸಿನಲ್ಲಿ 300 ರೂಪಾಯಿ ಬೆಲೆಯ ಥಿಯೋಡಲೈಟು ಮುಂತಾದವುಗಳೂ ಕಳುವಾದವೆಂದು ಪೋಲೀಸಿಗೆ ವರದಿ ಆಗಿದೆ ಸರ್ಕಾರಿ ಆಫೀಸುಗಳಲ್ಲಿ ಹೀಗೆ ಸಾಮಾನುಗಳು ಕಳುವಾಗುವುದು ಆಶ್ಚರ್ಯವಾಗಿರುವುದು

* * *

ವಿದ್ಯಾಭ್ಯಾಸವನ್ನು ತೀರಿಸಿಕೊಂಡು ಈಗ ತಾನೇ ಬೆಂಗಳೂರಿಗೆ ವಾಪಸು ಬಂದಿರುವ ಮಿ ಎಸ್ ವೆಂಕಟಸುಬ್ಬಶೆಟ್ಟರಿಗೆ ರಾಜ ಧಿವಾನ್ ಮೆ| ವಿ ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಅಲ್ಲಿನ ವೈಶ್ಯಮಂಡಲಿಯವರು ದೊಡ್ಡಪೇಟೆಯ ಹಾಲ್‌ನೊಳಗೆ ಮೊನ್ನೆ ಸಾಯಂಕಾಲ ಒಂದು ಅಡ್ರೆಸ್ಸನ್ನು ಒಪ್ಪಿಸಿ ಸುಮಾರು ಉತ್ಸವವನ್ನು ಬಹುಸುಂದರವಾಗಿ ನಡೆಸಿದರು

* * *

ಕಳೆದ ಶುಕ್ರವಾರ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗೂ, ಮರುದಿನ ಈ ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿಗಳ ಪ್ರಥಮ ಕೂಟವೂ ಜರುಗಿದವು ಡೆಪ್ಯುಟಿ ಕಮಿಷನರವರು ಮೆಂಬರುಗಳಿಂದ ಸೂಚಿಸಲ್ಪಟ್ಟ ವಿಷಯಗಳನ್ನು ಸಾವಧಾನದಿಂದಲೂ ಪ್ರೀತಿಪೂರ್ವಕವಾಗಿಯೂ ಚರ್ಚಿಸಿ, ಅಲ್ಪ ವಿಚಾರಗಳನ್ನು ಬಿಟ್ಟು, ಉಳಿದವುಗಳನ್ನು ಗವರ್ನ್‌ಮೆಂಟಿಗೆ ಕಳುಹಿಸುವುದಾಗಿ ತಿಳಿಸಿದರು

* * *

ಬೆಂಗಳೂರು ದಂಡಿನ ಸೆಂಟ್ ಜಾನ್ ಹಿಲ್ ಎಂಬ ಮೊಹಲ್ಲೆಯೊಳಗೆ ಪೋಲೀಸಿನವರು ಒಂದು ಮನೆಗೆ ನುಗ್ಗಿ ಜೂಜಾಡುತ್ತಿದ್ದ 11 ಜನರನ್ನು ಅವರ ಬಳಿಯಿದ್ದ 310 ರೂಪಾಯಿ ಸಮೇತ ಹಿಡಿದು ಮೊಕದ್ದಮೆ ತಂದರು ಮ್ಯಾಜಿಸ್ಟ್ರೇಟರು ಆ ಮನೆಯ ಮಾಲೀಕನಿಗೆ 50 ರೂ , 3 ಮಂದಿಗೆ ತಲಾ 35 ರೂ., ಮಿಕ್ಕವರಿಗೆ ತಲಾ 25 ರೂಪಾಯಿಯಂತೆ ಜುಲ್ಮಾನೆ ಹಾಕಿ, ವಸೂಲಾದ ಜುಲ್ಮಾನೆಯಲ್ಲಿ ಅರ್ಧವನ್ನು ಪೋಲೀಸಿನವರಿಗೆ ಬಹುಮಾನ ಕೊಡಿಸಿರುತ್ತಾರೆ

* * *

ಕೋಲಾರದ ಚಿನ್ನದ ಗಣಿಗಳಲ್ಲಿ ಚಿನ್ನವನ್ನು ಉತ್ಪತ್ತಿ ಮಾಡಲಾರಂಭಿಸಿದಂದಿನಿಂದ ಕಳೆದ 1910 ನೇ ಡಿಸೆಂಬರ್ ಆಖೈರುವರೆಗೆ ಒಟ್ಟು 30,75,35,920 ರೂಪಾಯಿನ ಚಿನ್ನವನ್ನು ಉತ್ಪತ್ತಿ ಮಾಡಿವೆ ಆ ಕಂಪನಿಗಳ ಷೇರುದಾರರಿಗೆ ಕಂಪನಿಯ ಮ್ಯಾನೇಜರುಗಳು 20,66,98,525 ರೂಪಾಯಿ ಬಡ್ಡಿಯ ರೂಪದಲ್ಲಿ ಪಾವತಿ ಮಾಡಿರುತ್ತಾರೆ ಆ ತಾರೀಖಿನ ವರೆಗೆ ಮೈಸೂರು ಗವರ್ನ್‌ಮೆಂಟಿಗೆ ಕಂಪನಿಯಿಂದ 3,73,41,180 ರೂಪಾಯಿ ರಾಜಸ್ವಾಲು ಸಂದಿರುತ್ತದೆ

* * *

ಚಾಲ್ತಿಸಾಲಿನಲ್ಲಿ ಗ್ರಾಮಾಂತರ ಪಾಠಶಾಲಾ ಫಂಡಿನಿಂದ ಹೊಸ ಪಾಠಶಾಲೆಗಳನ್ನು ಸ್ಥಾಪಿಸುವುದಕ್ಕೆ ಸರ್ಕಾರದವರು 5,000 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರಷ್ಟೆ ಇದನ್ನು ಅನುಸರಿಸಿ 24 ಪಾಠಶಾಲೆಗಳನ್ನು ಸಂಸ್ಥಾನಾದ್ಯಂತ ಪ್ರಾರಂಭಿಸಿ ನಡೆಸಬೇಕೆಂದೂ, ಅವುಗಳಿಗೆ ತಿಂಗಳಿಗೆ ರೂ 116-8-0 ರಂತೆ ಅಥವಾ ವರುಷಕ್ಕೆ 1,998 ರೂಪಾಯಿ ಸಿಬ್ಬಂದಿ ಮುಂತಾದ ಖರ್ಚು ಬೀಳುತ್ತದೆಂದೂ ಇನ್ಸ್‌ಪೆಕ್ಟರ್ ಜನರಲ್‌ರವರ ಶಿಫಾರಸನ್ನು ಮಂಜೂರು ಮಾಡಿದಾರೆ

* * *

ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿಗಳ ಸೌಕರ್ಯಕ್ಕಾಗಿ ಈ ವರುಷ ನವರಾತ್ರಿ ಹಬ್ಬದಿಂದ ಒಂದು ಪ್ರತ್ಯೇಕವಾದ ನಿಲಯವನ್ನು ಕಲ್ಪಿಸುವಂತೆ ಕೆಲವು ದೊಡ್ಡ ಮನುಷ್ಯರು ಏರ್ಪಾಡು ಮಾಡಿರುತ್ತಾರೆ ಇದಕ್ಕೆ ಮಾಗಡಿಯ ಮೆ| ಕೃಷ್ಣಮೂರ್ತಿಯವರು ಸೆಕ್ರೆಟರಿಯಾಗಿ ನಿಂತು ಎಲ್ಲಾ ಭಾಗಗಳಲ್ಲೂ ಪ್ರತಿನಿಧಿಗಳಿಗೆ ಅನುಕೂಲತೆಗಳನ್ನು ಕಲ್ಪಿಸುವುದಕ್ಕೆ ಸನ್ನಾಹ ಮಾಡುತ್ತಿರುವರು ಈ ಏರ್ಪಾಡು ತುಂಬಾ ಸುಖಕರವಾಗಿರೋಣದರಿಂದ ಪ್ರತಿನಿಧಿಗಳು ಈ ಸೌಲಭ್ಯವನ್ನು ಹೊಂದಿ, ಈ ನಿಲಯವು ರಾಜಧಾನಿಯಲ್ಲಿ ಶಾಶ್ವತವಾಗಿ ನೆಲೆಗೊಳ್ಳುವಂತೆ ಮಾಡಬೇಕಾಗಿದೆ

* * *

ಬೌರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದ ವಾಸಸ್ಥನಾದ ತೇಲಿಮುತ್ತಸ್ವಾಮಿ ಅಯ್ಯರ ತಿಮ್ಮಯ್ಯನವರು ಬರೆಯುವುದು —ಕಳೆದ ಮೇ ತಾ 3 ನೇ ಶುಕ್ರವಾರ ಮಧ್ಯಾಹ್ನ 1 ಗಂಟೆ ಸಮಯದಲ್ಲಿ ನಾನೂ ನನ್ನ ಹೆಂಡತಿಯೂ ಊರಲ್ಲಿ ಇಲ್ಲದಿದ್ದಾಗ ನನ್ನ ಮನೆ ಹಿತ್ತಲ ಬಾಗಲಿಗೆ ಕಳ್ಳರು ಕನ್ನಾಹೊಡೆದು ಬೀಗದ ಮುದ್ರೆ ಮನೆಯೊಳಗೆ ಪೆಟ್ಟಿಗೆಯಲ್ಲಿಟ್ಟಿದ್ದ ನನ್ನ 601 ರೂಪಾಯಿನ ಭಂಗಾರದ ಒಡವೆ, ನಗದು ಹಣ, ನೋಟು ಮುಂತಾದದ್ದನ್ನು ಅಪಹರಿಸಿಕೊಂಡು ಹೋದರು. ಪೋಲೀಸಿಗೆ ತಿಳಿಸಿದ್ದರೂ ಇದುವರೆಗೆ ಪತ್ತೆ ಆಗಿಲ್ಲ ಈ ಸೊತ್ತುಗಳನ್ನು ಪತ್ತೆಮಾಡಿಕೊಡುವವರಿಗೆ 50 ರೂಪಾಯಿ ಬಹುಮಾನಕೊಡುವೆನು

* * *

ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯಿಂದ ಓಡುವ ಟ್ರಾಂ ಗಾಡಿಗಳು ಎಲ್ಲೆಲ್ಲಿ ಸಂಚರಿಸುವಂತೆ ಏರ್ಪಾಡಾಗುವುದೋ ಅದನ್ನು ಸರ್ಕಾರದವರು ನಕ್ಷೆಯಲ್ಲಿ ಗುರುತಿಸಿ ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಅಭಿಪ್ರಾಯವನ್ನು ತಿಳಿಸಬೇಕೆಂದು ಕಳುಹಿಸಿದ್ದರು ಕೌನ್ಸಿಲರುಗಳು ಅದನ್ನು ಒಪ್ಪಿಕೊಂಡಿರುತ್ತಾರೆ ಸಿಟಿಯಲ್ಲಿ ಟ್ರಾಂ ಗಾಡಿಗಳು ಸಂಚರಿಸುವ ರಸ್ತೆಗಳು ಯಾವವೆಂದರೆ—ಮೊದಲನೇ ರಸ್ತೆಯು ಬಸವನ ಗುಡಿಯಿಂದ ಕೋಟೆ, ದೊಡ್ಡ ಪೇಟೆ ಚೌಕ, ಯಲಹಂಕದ ಚೌಕ, ಪಬ್ಲಿಕ್ ಆಫೀಸುಗಳು, ಜನರಲ್ ಪೋಸ್ಟ್ ಆಫೀಸು ವರೆಗೆ ಹೋಗಿ ಅಲ್ಲಿಂದ ದಂಡಿಗೆ ತಿರುಗುತ್ತದೆ; ಎರಡನೇ ರಸ್ತೆಯು ಯಲಹಂಕದ ಚೌಕದಿಂದ ಧರ್ಮಾಂಬುಧಿ ಕೆರೆ ಮಾರ್ಗವಾಗಿ ಸಿಟಿ ರೈಲ್ವೆ ಸ್ಟೇಷನ್‌ಗೂ, ಅಲ್ಲಿಂದ ಮಲ್ಲೇಶ್ವರಕ್ಕೂ ಹೋಗುವುದು

ಮೈಸೂರು ಗೆಜೆಟ್ ಸಂಗ್ರಹ.

ಹಾಸನದ ತಾ ಬೈಲಹಳ್ಳಿ, ಚನ್ನರಾಯಪಟ್ಟಣದ ತಾ ಕೆಂಬಾಳು, ಬೇಗೂರು; ಬೇಲೂರು ತಾ. ಆಗಸರವಳ್ಳಿ, ಅರಕಲಗೂಡು ತಾ. ಉಲಿವಾಳ, ತುಂಕೂರು ತಾ ಚಿಕ್ಕ ತೊಟ್ಟಕೆರೆ, ಜೋಡಿ ಮಲುಕುಂಟೆ; ಮಧುಗಿರಿ ತಾ ಕಡಗತೂರು, ತಿಪ್ಟೂರು ತಾ. ಮತ್ತಿಗಟ್ಟೆ; ಯಳಂದೂರು ತಾ ಮಾಂಬಳ್ಳಿ, ಹುಣಸೂರು ತಾ. ಕಲ್ಕುಣಿಕೆ, ಮಳವಳ್ಳಿ ತಾ ದೊಡ್ಡರಸಿನಕೆರೆ, ಚಾಮರಾಜನಗರದ ತಾ. ಕೊತ್ತಲವಾಡಿ—ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯಬಂದಿದೆ

ಕೊಪ್ಪ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಬಿ ಭೀಮರಾಯರಿಗೆ ಆಗಸ್ಟ್ ತಾ. 20 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಯಡೆಹಳ್ಳಿಯ ಡೆಪ್ಯುಟಿ ಅಮಲ್ದಾರ್ ಮೆ|| ಎಸ್ ಸುಬ್ಬರಾಯರು ಕೊಪ್ಪ ತಾಲ್ಲೂಕಿನ ಅಮಲ್ದಾರರಾಗಿಯೂ, ರೆವಿನ್ಯೂ ಕಮಿಷನರವರ ಆಫೀಸ್ ಕ್ಲಾರ್ಕ್ ಮೆ|| ಎಲ್. ಎಸ್. ರಂಗೋಯವರು ಯಡೆಹಳ್ಳಿಯ ಡೆಪ್ಯುಟಿ ಅಮಲ್ದಾರರಾಗಿಯೂ ಬದಲಿ ನೇಮಿಸಲ್ಪಟ್ಟಿದಾರೆ

ಲೆಫ್ಟಿನೆಂಟ್ ಕರ್ನಲ್ ಆರ್. ಜಿ ಜೋನ್ಸ್‌ಯವರು ಆಗಸ್ಟ್ ತಾ. 15 ರಿಂದ ರಜವನ್ನು ಉಪಯೋಗಿಸಿಕೊಳ್ಳಬಹುದಾಗಿದೆ

ಮೆ| ಎಂ ವಾಸುದೇವರಾಯರು 1913 ನೇ ಜೂನ್ ಆಖೈರು ವರೆಗೆ ಯಳಂದೂರು ಜಹಗೀರಿಯ ಅಮಲ್ದಾರರಾಗಿ ಇರತಕ್ಕದ್ದು

ಹಾಸನ್ ಡಿವಿಜನ್ ಅ|| ಇಂಜನಿಯರ್ ಮೆ|| ಎ ಪುಟ್ಟಸ್ವಾಮಯ್ಯನವರಿಗೆ ಆಗಸ್ಟ್ ತಾ 20 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬಹುಮಾನ ವಿನಿಯೋಗವು.

ಮಂಡ್ಯದ ಗವರ್ನ್‌ಮೆಂಟ್ ಗರಲ್ಸ್ ಸ್ಕೂಲು.

ಇಲ್ಲಿನ ತಾಲ್ಲೂಕು ಗೌರ್ನಮೆಂಟ್ ಕನ್ನಡಾ ಗರಲ್ಸ್ ಸ್ಕೂಲ್ ವಿದ್ಯಾರ್ಥಿನಿಯರಿಗೆ ಕಳೆದ ತಿಂಗಳು ತಾ 16 ನೇ ಶುಕ್ರವಾರ ಸಾಯಂಕಾಲ 5 ಗಂಟೆಗೆ ಬಹುಮಾನ ಪುಸ್ತಕಗಳು ಹಂಚಲ್ಪಟ್ಟವು. ಆ ಕಾಲದಲ್ಲಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರಾದ ಮೆ| ಎನ್ ರಾಮರಾಯರವರು ದಯವಿಟ್ಟು ಅಗ್ರಾಸನವನ್ನು ವಹಿಸಿ ಸಭಾಕೆಲಸಗಳನ್ನು ನೆರವೇರಿಸಿ ಪ್ರೋತ್ಸಾಹಿಸಿದುದಕ್ಕಾಗಿ ಸಭಿಕರೆಲ್ಲರೂ ಆನಂದ ಪಟ್ಟರು. ಆ ಕಾಲದಲ್ಲಿ ತಾಲ್ಲೂಕ್ ಅಮಲ್ದಾರ್ರವರು, ಶಿರಸ್ತೇದಾರ್ರವರು, ಮುನ್ಸಿಪಲ್ ಮೆಂಬರುಗಳೇ ಮುಂತಾದ ದೊಡ್ಡ ಮನುಷ್ಯರುಗಳು ಸಭೆಯನ್ನಲಂಕರಿಸಿದ್ದರು

ಬಾಲಕಿಯರು ಮೊದಲು ಶಾರದಾ ಸ್ತುತಿಯನ್ನೂ, ಪರಮಾತ್ಮನ ಧ್ಯಾನವನ್ನೂ ಮಾಡಿದ ಬಳಿಕ ಹೆಡ್ ಮಾಸ್ಟರ್ ಮೆ। ಶ್ರೀನಿವಾಸಯ್ಯಂಗಾರ್ರವರು ಸ್ಕೂಲಿನ ರಿಪೋರ್ಟನ್ನು ಓದಿದರು ಬಾಲಕಿಯರಿಬ್ಬರು ಸ್ತ್ರೀ ವಿದ್ಯಾಭ್ಯಾಸದ ವಿಷಯವಾಗಿ ಪ್ರಶ್ನೋತ್ತರವಾದ ಒಂದು ಉಪನ್ಯಾಸವನ್ನು ಬಹಳ ಚಮತ್ಕಾರವಾಗಿ ಮಾಡಿದರು ಅನಂತರ ಶ್ರೀಮದಿಂಡಿಯಾ ಚಕ್ರವರ್ತಿಗಳವರ ಮತ್ತೂ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆಸಲ್ಪಟ್ಟವು ತರುವಾಯ ಬಾಲಕಿಯರು ಭಗವಂತನ ವಿಷಯವಾಗಿ ಮಂಗಳ ಸ್ತೋತ್ರಗಳನ್ನು ಹಾಡಿದರು. ಸಭಾಧ್ಯಕ್ಷರವರು ಈ ಕಾರ್ಯವನ್ನು ತಾವು ಬಹಳ ಸಂತೋಷದಿಂದ ನೆರವೇರಿಸಿದ್ದಾಗಿಯೂ, ಇಂಡಿಯಾ ಮತ್ತು ಮೈಸೂರ್ ದೇಶದ ವಿಷಯವಾಗಿ ಬಾಲಕಿಯರು ತೋರಿಸಿದ ಭಕ್ತಿವಿಶ್ವಾಸಗಳನ್ನೂ, ಹೆಡ್ ಮಾಸ್ಟರ ರಿಪೋರ್ಟನ್ನೂ ಪರಾಂಬರಿಸಿ ಈ ಕೆಲಸಕ್ಕೆ ಪ್ರೋತ್ಸಾಹಕರಾದ ಅಮಲ್ದಾರ್ರವರ ಮತ್ತು ಪೋಲೀಸ್ ಇನ್ಸ್‌ಪೆಕ್ಟರವರೇ ಮುಂತಾದವರ ಭಕ್ತಿವಿಶ್ವಾಸಗಳನ್ನು ಹೊಗಳಿ ಪುರಜನಗಳನ್ನು ಪ್ರೋತ್ಸಾಹಿಸಿ ಮಕ್ಕಳಿಗೆ ವಿದ್ಯಾಭ್ಯಾಸದ ಇಲಾಖೆಯಿಂದ ದಯಪಾಲಿಸಿಕೊಟ್ಟಿದ್ದ ಬಹುಮಾನ ಪುಸ್ತಕಗಳನ್ನೂ, ಇಲ್ಲಿನ ಮಹನೀಯರು ಚಂದಾ ಹಣದಿಂದ ತರಿಸಿದ್ದ ಪುಸ್ತಕಗಳನ್ನೂ ಸ್ವಹಸ್ತ ದಯಪಾಲಿಸಿದರು

ಕಡೆಯಲ್ಲಿ ಸಭಾಧ್ಯಕ್ಷರವರಿಗೂ, ಸಭಾಸದರುಗಳಿಗೂ ಹಾರ ತುರಾಯಿ, ಗಂಧ ಪಾನ್‌ಸುಪಾರಿ ವಗೈರೆ ಮರ್ಯಾದೆಗಳೂ, ಮಕ್ಕಳಿಗೆ ತಿಂಡಿಯೂ ವಿನಿಯೋಗಿಸಲ್ಪಟ್ಟು, ಸಭೆಯನ್ನು ಬರಖಾಸ್ತು ಮಾಡಿ ಸಂತೋಷದಿಂದ ತೆರಳಿದರು.

ವಿದೇಶದ ವೃತ್ತಾಂತಗಳು.

ಫ್ರೆಂಚ್ ಸರ್ಕಾರದವರು ತಮ್ಮ ದೇಶಕ್ಕೂ ತಮ್ಮ ದೇಶದ ಕುಶಲ ವಿದ್ಯಾದಿಗಳಿಗೂ ವಿಶೇಷ ಪ್ರಯೋಜನವುಂಟೆಂಬ ಅಂಶವನ್ನು ತಿಳಿದು 1916ನೇ ಇಸವಿಯಲ್ಲಿ ಪ್ರಪಂಚದ ಕುಶಲ ವಿದ್ಯಾಪ್ರೋತ್ಸಾಹಕ ಪ್ರದರ್ಶನವನ್ನು ನಡಿಸಬೇಕೆಂದು ತೀರ್ಮಾನಮಾಡಿದಾರೆ

* * *

ಜರ್ಮನಿಗೆ ಸೇರಿದ ನ್ಯೂರಂಬರ್ಗಿನ ಬಳಿ ಸ್ಪೆನ್ಸೋ ಎಂಬ ಸ್ಥಳದಲ್ಲಿ ಒಂದು ಭಾರೀ ಹೊಸ ಕಟ್ಟಡವನ್ನು ಕಟ್ಟುತ್ತಿರುವಾಗ್ಗೆ ಅದರ ಕಬ್ಬಿಣದ ಸಾಮಾನುಗಳೆಲ್ಲಾ ಸಡಿಲವಾಗಿ ತಾರಸಿಯು ಕಳಚಿ ಬಿದ್ದುಕೊಂಡಿತು 10 ಮಂದಿ ಮೃತಪಟ್ಟರು , 37 ಮಂದಿಗೆ ಜಖಂ ಆಗಿದೆ

* * *

ಇಂಗ್ಲಾಂಡ್ ಮತ್ತು ವೇಲ್ಸ್ ದೇಶಗಳಲ್ಲಿ ವರುಷೇ ವರುಷ ಹುಚ್ಚುಹಿಡಿಯುವ ಪ್ರಜೆಗಳ ಸಂಖ್ಯೆಯು ಜಾಸ್ತಿಯಾಗುತ್ತಿದೆ ಎಂದು ಅಲ್ಲಿ ಪ್ರಕಟವಾಗುವ ಪತ್ರಿಕೆಯು ತಿಳಿಸಿರುತ್ತದೆ 1912 ನೇ ಜನವರಿ ತಾ 1 ರಲ್ಲಿ 1,35,661 ಜನರು ಬುದ್ಧಿಸ್ವಾಧೀನವಿಲ್ಲದೆ ಇದ್ದರೆಂದು ಗೊತ್ತಾಗಿದೆ, ಅಂದರೆ ಹಿಂದಿನ ವರುಷಕ್ಕಿಂತ 2,304 ಜನರು ಹೆಚ್ಚಾದರು

* * *

ಇಟಲಿ ರಾಜ್ಯದ ದಕ್ಷಿಣ ಭಾಗದಲ್ಲಿರುವ ಸಿಸಿಲಿ ದ್ವೀಪದಲ್ಲಿ ಎಟ್ನಾ ಎಂಬ ಭಯಂಕರವಾದ ಅಗ್ನಿಪರ್ವತವಿದೆ ಅದರಲ್ಲಿ ಕಳೆದ 15 ದಿನಗಳಿಂದ ಬೆಂಕಿಯ ಜ್ವಾಲೆಗಳು ಹೊರಡುತ್ತಾ ಇರುವುದಾಗಿಯೂ, ಪರ್ವತದ ನೆತ್ತಿಯಲ್ಲಿ ಒಂದ್ ಬಾಯಿ ಕಾಣಿಸಿಕೊಂಡು ಅದರೊಳಗಿಂದ ಹೊಗೆಯೂ ಜ್ವಾಲಪ್ರವಾಹವೂ ಹೊರಟುಬರುತ್ತಿದೆ ಎಂದೂ ವರ್ತಮಾನ ಬಂದಿದೆ

* * *

ಗಣಿಗಳಲ್ಲಿ ಹುಟ್ಟುವ ವಿಷಕರವಾದ ವಾಯುವು ಆನಾಗಿಯೇ ಹತ್ತಿಕೊಂಡು ಅನಾಹುತ ಮಾಗುತ್ತದಷ್ಟೆ. ಇಂಥಾ ಅನಾಹುತಕ್ಕೆ ಕಾರಣವಾಗದಂಥಾ ಲಾಂದ್ರವನ್ನು ಕಂಡುಹಿಡಿದು ತಯಾರುಮಾಡಿಕೊಡುವಂಥಾ ಕಾರೀಗಾರನಿಗೆ 9,000 ರೂಪಾಯಿ ಬಹುಮಾನ ಕೊಡುತ್ತೇವೆಂದು ಇಂಗ್ಲಿಷ್ ಗವರ್ನ್‌ಮೆಂಟಿನವರು ಪ್ರಕಟಿಸಿದ್ದರು. ಫೇಬರ್ ಎಂಬೊಬ್ಬ ಜರ್ಮನಿಯ ಕಾರೀಗಾರನು ಅಂಥಾ ಲಾಂದ್ರವನ್ನು ರಚಿಸಿಕೊಟ್ಟು ಆ ಬಹುಮಾನವನ್ನು ಪಡೆದುಕೊಂಡಿರುತ್ತಾನೆ

* * *

ಲಂಡನ್ ಪಟ್ಟಣದ ಪೂರ್ವ ಭಾಗದ ಮೊಹಲ್ಲೆಗಳಲ್ಲಿರುವಂಥಾ ಬಡ ಬಗ್ಗರಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟು ಅವರ ಕಷ್ಟಗಳನ್ನು ಪರಿಹರಿಸುವುದಕ್ಕೆ ಅಲ್ಲಿನ ಒಂದು ವರ್ತಮಾನ ಪತ್ರಿಕೆಯು ಚಂದಾ ಹಣವನ್ನು ಕೂಡಿಸುತ್ತಲಿದೆ. ಈ ಫಂಡಿಗೆ ಇದುವರೆಗೆ 2,32,500 ರೂಪಾಯಿ ವಸೂಲಾಗಿರುವುದು. ಚಕ್ರವರ್ತಿ ಸಾರ್ವಭೌಮರವರು 500 ಪೌಂಡುಗಳನ್ನೂ, ಮಹಾರಾಜ್ಞಿ ಚಕ್ರವರ್ತಿನಿಯವರು 100 ಪೌಂಡುಗಳನ್ನೂ ಆ ಫಂಡಿಗೆ ಚಂದಾ ಕಳುಹಿಸಿರುತ್ತಾರೆ

* * *

ಮನುಷ್ಯನ ಮೆದುಳಿಗೆ ಹಿಡಿಯುವ ರೋಗವನ್ನು ವಿಶೇಷವಾಗಿ ಪರಿಶೋಧನೆ ಮಾಡಿ ತುಂಬಾ ಪ್ರಖ್ಯಾತಿಗೆ ಬಂದಿರುವ ಫಿಲ್ಲಾಸಿನ್ ಎಂಬ ಪಂಡಿತನು ಮನುಷ್ಯನ ಈಗಿನ ಸ್ಥಿತಿಯನ್ನು ನೋಡಲಾಗಿ ಮನುಷ್ಯಜಾತಿಯೆಲ್ಲಾ ಬುದ್ಧಿಭ್ರಮಣೆ ಹೊಂದಿ ಈ ಪ್ರಪಂಚವು ಅಂತವನ್ನೈದಬಹುದೆಂದು ಕಾಣುತ್ತದೆ ಎಂಬ ಆಶ್ಚರ್ಯಕರವಾದ ಅಭಿಪ್ರಾಯವನ್ನು ಸೂಚಿಸಿರುತ್ತಾನೆ. ಈಗ ಪ್ರಪಂಚದಲ್ಲಿ ಮದ್ಯಪಾನವು ಹರಡಿಕೊಳ್ಳುತ್ತಲೂ, ಕಾಲಕ್ರಮದಲ್ಲಿ ಹೆಚ್ಚುತ್ತಲೂ ಬಂದಿರುವುದೇ ಈ ಅಭಿಪ್ರಾಯಕ್ಕೆ ಕಾರಣವೆಂದು ಹೇಳಿದನು

* * *

ಫ್ರಾನ್ಸ್ ದೇಶದಲ್ಲಿ ಜೂಜಾಟಗಳು ನಡೆಯುವಂಥಾ ಅಂಗಡಿಗಳ ಮೇಲೆಲ್ಲಾ ಸರ್ಕಾರದವರು ಉಸ್ತುವಾರಿ ಇಟ್ಟು, ಅವುಗಳ ಆದಾಯದಲ್ಲಿ ಶೇಕಡಾ 15 ರಂತೆ ರುಸುಂ ತೆಗೆದುಕೊಳ್ಳುತ್ತಾರೆ ಈ ಹಣವನ್ನು ಆಯಾ ಸ್ಥಳದ ಪ್ರಜೋಪಕಾರಕ ಕಾರ್ಯಗಳಿಗೂ ಧರ್ಮಕ್ಕೂ ವಿನಿಯೋಗಿಸುವರು ಈ ಜೂಜಿನ ಮನೆಗಳ ಆದಾಯದ ಮೇಲಣ ತೆರಿಗೆಯಿಂದ 1911 ನೇ ವರುಷದಲ್ಲಿ ಸರ್ಕಾರಕ್ಕೆ 19 ಲಕ್ಷವೂ 20 ಸಾವಿರ ಪೌಂಡುಗಳೂ, ಶೇಕಡಾ 15 ರಂತೆ 2 ಲಕ್ಷವೂ 88 ಸಾವಿರ ಪೌಂಡೂ ಸರ್ಕಾರಕ್ಕೆ ಉತ್ಪತ್ತಿ ಆಗಿರುತ್ತದೆ

* * *

ಜರ್ಮನಿ ರಾಜ್ಯಕ್ಕೆ ಸೇರಿದ ಲಾಥರಿಂಜನ್ ಎಂಬಲ್ಲಿ ಒಂದು ಕಲ್ಲಿದ್ದಲ ಗಣಿಯೊಳಗೆ ವಿಷಕರವಾದ ವಾಯು ಹುಟ್ಟಿ ಹತ್ತಿಕೊಂಡು ಬಹಳ ಪ್ರಾಣನಷ್ಟವನ್ನುಂಟುಮಾಡಿತು. ಆ ಸಮಯದಲ್ಲಿ ಆ ಗಣಿಯೊಳಗೆ 650 ಜನರು ಕೆಲಸ ಮಾಡುತ್ತಿದ್ದರು ಈ ಪೈಕಿ ಬಹು ಮಂದಿ ಅಕಾಲ ಮರಣ ಹೊಂದಿರುತ್ತಾರೆ ಸರ್ಕಾರದವರೂ ಪ್ರಜೆಗಳೂ ಸಾಹಸಪಟ್ಟು 30-40 ಹೆಣಗಳನ್ನು ಗಣಿಯೊಳಗಿಂದ ಹೊರಕ್ಕೆ ಸಾಗಿಸಿದರು ಒಳಗೆ ಇನ್ನೂ ಉರಿಯು ಶಮನವಾಗಲಿಲ್ಲವಾದ ಕಾರಣ ಯಾವ ಪ್ರಯತ್ನವನ್ನೂ ಮಾಡುವುದಕ್ಕಿಲ್ಲವಾಗಿದೆ.

* * *

ಜರ್ಮನಿ ರಾಜ್ಯದ ಪೋಸ್ಟ್ ಆಫೀಸುಗಳಲ್ಲಿ ಗುಮಾಸ್ತೆ ಮೊದಲಾದ ಕೆಲಸಗಳಿಗೆ ಈ ವರುಷದಿಂದ 8,600 ಮಂದಿ ಸ್ತ್ರೀಯರನ್ನು ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಿದಾರೆ. ಈ ಏರ್ಪಾಡಿನಿಂದ ಆ ಇಲಾಖೆಯ ಖರ್ಚಿನಲ್ಲಿ ವರುಷಕ್ಕೆ 15 ಲಕ್ಷ ರೂಪಾಯಿ ಕಡಮೆಯಾಗುವುದೆಂದು ಹೇಳುವರು. ಈಗ ಗುಮಾಸ್ತರಾಗಿರುವ ಗಂಡಸರು ನಮ್ಮ ಕೆಲಸಕ್ಕೆ ಹೆಂಗಸರು ಬೇಡಾತ್ತಲ್ಲಾ ಎಂದು ಆಗ್ರಹಪಡುತ್ತಿದಾರೆ, ಹೆಂಗಸರಾದರೋ ತಾವು ಎಷ್ಟು ನಿಯತತ್ತಾಗಿಯೂ ಕಷ್ಟಪಟ್ಟೂ ಕೆಲಸ ಮಾಡಿದಾಗ್ಯೂ ಗಂಡಸರಿಗೆ ಕೊಡುವಷ್ಟು ಸಂಬಳವನ್ನು ತಮಗೆ ಕೊಡುವುದಿಲ್ಲವಲ್ಲಾ ಎಂದು ಹೋರಾಡುವರು

* * *

ಇಂಗ್ಲಾಂಡಿನ ಪಶ್ಚಿಮದಲ್ಲಿರುವ ಐರ್ಲ್ಯಾಂಡ್ ದ್ವೀಪದಲ್ಲಿ ಕೆಲವು ಕಡೆಗಳಲ್ಲಿ ಗೋವುಗಳಿಗೆ ಕಾಲುಬಾಯಿಜ್ವರ ಪ್ರಾಪ್ತವಾಯಿತು ಸರ್ಕಾರದವರು ಆ ರೋಗವನ್ನು ಅಡಗಿಸಬೇಕೆಂದು ರೋಗ ತಗಲಿದ ಅನೇಕ ದನಗಳನ್ನು ಕೊಂದು ಹಾಕಿ, ಡಿಸಿನ್‌ಫೆಕ್ಷನ್ ಮುಂತಾದ ಪ್ರತೀಕಾರ ಕಾರ್ಯಗಳನ್ನು ಮಾಡುತ್ತಿದಾರೆ ಪ್ರಜೆಗಳು ಸ್ವಲ್ಪವೂ ಗೊಣಗುಟ್ಟದೆ ಸರ್ಕಾರದ ಅಧಿಕಾರಿಗಳು ಹೇಳುವಂತೆ ನಡೆದುಕೊಳ್ಳುತ್ತಾ ಉಪದ್ರವನ್ನು ಅಡಗಿಸುವುದರಲ್ಲಿ ಅವರಿಗೆ ಸಹಾಯ ಮಾಡುತ್ತಿದಾರೆ ಮೆ। ಬೆಲ್ ಎಂಬೊಬ್ಬ ಪಶುವೈದ್ಯನು ಕಾಯಿಲೆಯಾಗಿದ್ದ ಒಂದು ಎತ್ತಿಗೆ ಚಿಕಿತ್ಸೆ ಮಾಡುತ್ತಿರುವಲ್ಲಿ ಅದು ಅತನನ್ನು ಕಚ್ಚಿದ್ದರಿಂದ ಆ ವೈದ್ಯನಿಗೂ ಕಾಲುಬಾಯಿಜ್ವರ ಕಾಣಿಸಿಕೊಂಡು ನರಳುತ್ತಿದಾನೆ.

* * *

ಸ್ಪೈಯಿನ್ ರಾಜ್ಯಕ್ಕೆ ಸೇರಿದ ಕ್ಯಾಸರಿಲ್ ಎಂಬ ಪಟ್ಟಣದ ಪುರಾಧ್ಯಕ್ಷನು (ಮೇಯರ್) ಹುಚ್ಚು ಹಿಡಿದು ಆಸ್ಪತ್ರೆಯಲ್ಲಿ ಕಾಲವಾದನು ಈತನು ತನ್ನ ಆಸ್ತಿಯನ್ನೆಲ್ಲಾ ಅಂದರೆ 15 ಲಕ್ಷ ರೂಪಾಯನ್ನು ಸ್ಪೈಯಿನ್ ರಾಜ್ಯದ ದೊರೆಯವರಿಗೆ ಕೊಡಬೇಕೆಂದು ಮರಣ ಶಾಸನವನ್ನು ಬರೆದಿರುತ್ತಾನೆ ಇದನ್ನು ನೋಡಿ ಅತನ ಸಹೋದರಿಯು ತನಗೆ ಆ ಹಣ ಸಲ್ಲಬೇಕೆಂದೂ, ದೊರೆಯವರಿಗೆ ಕೊಡಕೂಡದೆಂದೂ ದಾವಾ ಮಾಡಿರುತ್ತಾಳೆ ಆದಕಾರಣ ಮೇಲ್ಕಂಡ ಮರಣ ಶಾಸನವನ್ನು ಸಿದ್ಧಾಂತ ಮಾಡಿ ಆ ಹಣವನ್ನು ಪಡೆದುಕೊಳ್ಳುವುದಕ್ಕೆ ಸ್ಪೈಯಿನ್ ರಾಜ್ಯದ ದೊರೆಯವರು ಕಳೆದ ತಿಂಗಳು ತಾ. 29 ರಲ್ಲಿ ಸಿವಿಲ್ ಕೋರ್ಟಿಗೆ ಹೋಗಬೇಕಾಗಿತ್ತು ಇದರ ವ್ಯವಸ್ಥೆ ಹ್ಯಾಗಾಯಿತೋ ಇನ್ನೂ ತಿಳಿದು ಬರಲಿಲ್ಲ

* * *

ಜರ್ಮನಿ ರಾಜ್ಯದಲ್ಲಿ ಕ್ರೂಪ್ ಎಂಬ ಸಂಸಾರದವರು ಯುದ್ಧ ಸಾಮಗ್ರಿಗಳನ್ನು ತಯಾರುಮಾಡುವ ಕಾರ್ಖಾನೆಯನ್ನು ಇಟ್ಟು ನಡಿಸುತ್ತಿದಾರೆ ಈ ಕಾರ್ಖಾನೆಯು ಲೋಕದಲ್ಲೆಲ್ಲಾ ಬಹಳ ಪ್ರಖ್ಯಾತಿ ಹೊಂದಿರುವುದು ಅದು ಸ್ಥಾಪನೆಯಾಗಿ 101 ವರುಷಗಳಾದದ್ದರಿಂದ ಯಜಮಾನರು ಕೆಲವು ದಿವಸಗಳ ಹಿಂದೆ ಶತಮಾನೋತ್ಸವವನ್ನು ಮಾಡಿದರು. ಅದರಲ್ಲಿ ಕೆಲಸ ಮಾಡುವಂಥಾ ಕಾರೀಗಾರರಿಗೂ ಅವರ ಸಂಸಾರಗಳಿಗೂ ಸುಮಾರು ನಾಲ್ಕಾರು ಸಾವಿರ ಪ್ರಜೆಗಳಿಗೆ ಸುಭೋಜನ ಮಾಡಿಸಿ, ಈ ಸಂತೋಷೋತ್ಸವಕ್ಕೆ ಜರ್ಮನಿಯ ಚಕ್ರವರ್ತಿಯವರೂ, ಮಂತ್ರಿಗಳೂ, ಅಧಿಕಾರಿಗಳೂ, ದೊಡ್ಡ ಮನುಷ್ಯರೂ ಕರೆಸಲ್ಪಟ್ಟಿದ್ದರು ವಿಶೇಷವಾದ ವಿಹಾರಗಳೂ, ಬಾಣಬಿರುಸುಗಳೂ, ವಿನೋದಗಳೂ ನಡೆದವು. ಇದಲ್ಲದೆ ಆ ಕಾರ್ಖಾನೆಯ ಯಜಮಾನರು ಕೆಲಸ ಮಾಡುವವರಿಗೆಲ್ಲಾ 105 ಲಕ್ಷ ರೂಪಾಯನ್ನು ಬಹುಮಾನವಾಗಿ ಹಂಚಿಕೊಟ್ಟರು

ಮೈಸೂರು ಹಾಸನದ ರೈಲ್ವೆ

ಒಂದು ಸಲಹೆಯು

ಈಗ್ಗೆ ಸುಮಾರು 10 15 ವರ್ಷಗಳ ಲಾಗಾಯ್ತಿನಿಂದಲೂ ಹಾಸನಕ್ಕೆ ರೈಲ್ ಬರುತ್ತೆಂಬ ವರ್ತಮಾನವಿರುತ್ತೆಯೇ ಹೊರತು ರೈಲು ಮಾತ್ರ ಬರಲಿಲ್ಲ ಸುಮಾರು 8-10 ವರ್ಷಗಳಿಂದಲೂ ಮೈಸೂರು ದಸರಾ ರೆಪ್ರೆಜೆಂಟೇಟಿವ್ ಮೀಟಿಂಗಿನಲ್ಲಿ ಹಾಸನಕ್ಕೆ ರೈಲ್ ಹಾಕಬೇಕೆಂಬ ಪ್ರಾರ್ಥನೆಯು ಇದ್ದೇ ಇದೆ ಮೈಸೂರು ದೇಶದಲ್ಲಿ ಹಿಂದೆ ದಿವಾನ್ ರಾಗಿದ್ದ ಸರ್ ಕೆ ಶೇಷಾದ್ರಿ ಅಯ್ಯರವರ ಕಾಲದಲ್ಲಿ ಅರಸೀಕೆರೆಯಿಂದ ಮಂಗಳೂರಿಗೆ ರೈಲು ಹಾಕಿಸಬೇಕೆಂಬ ಆಲೋಚನೆಯಿಂದ ಅರಸೀಕೆರೆಯಿಂದ ಮಂಗಳೂರಿಗೆ ರೈಲ್ವೆ ಸರ್ವೆ ಸಹಾ ನಡೆದಿತ್ತು ಈ ಲೈನ್ ಓಪನ್ ಮಾಡುವುದರಿಂದ ಮೈಸೂರು ದೇಶಕ್ಕೆ ಸಮುದ್ರ ತೀರವು ಹತ್ತಿರವಾಗುತ್ತೆಂತಲೂ, ಬೊಂಬಾಯಿ ವಗೈರೆ ದೊಡ್ಡ ದೊಡ್ಡ ರೇವುಗಳಿಗೆ ಸಮೀಪವಾಗುತ್ತೆಂತಲೂ, ಇದರಿಂದ ಮೈಸೂರು ಸೀಮೆಯ ವ್ಯಾಪಾರದ ಸ್ಥಿತಿ ಬಹಳ ಅಭಿವೃದ್ಧಿಹೊಂದುತ್ತದೆಂಬ ಆಲೋಚನೆಯಿಂದ ನಡೆದದ್ದಾಗಿ ಕಾಣುತ್ತೆ ಈಚೆಗೆ ಈ ಲೈನ್ ವಿಚಾರ ನಿಂತುಹೋಗಿ, ಅರಸೀಕೆರೆಯಿಂದ ಹಾಸನ, ಹೊಳೇನರಸೀಪುರ, ಸಾಲಿಗ್ರಾಮ, ಚುಂಚನಕಟ್ಟೆ ಇಲವಾಲದ ಮುಖಾಂತ್ರವಾಗಿ ಮೈಸೂರಿಗೂ ಮತ್ತು ನಂಜನಗೂಡಿನಿಂದ ಈರೋಡಿಗೂ ಲೈನ್ ಓಪನ್ ಆಗುವದಾಗಿ ವರ್ತಮಾನ ಹುಟ್ಟಿ ಅರಸೀಕೆರೆಯಿಂದ ಮೈಸೂರಿಗೆ ಸರ್ವೆ ಸಹಾ ನಡೆದಿರುತ್ತೆ ಈ ಲೈನ್ ಓಪನ್ ಮಾಡುವುದರಿಂದ ನಾಗಪಟ್ಟಣದ ಸಮುದ್ರ ತೀರವು ಮೈಸೂರು ರಾಜಧಾನಿಗೆ ಬಹಳ ಹತ್ತಿರವಾಗಿ, ರಾಜಧಾನಿಯು ಬಡಕಾಯುವದಲ್ಲದೆ ವ್ಯಾಪಾರವೂ ಅಭಿವೃದ್ಧಿಯಾಗುವುದರಲ್ಲಿ ಏನೇನೂ ಸಂಶಯ ತೋರುವುದಿಲ್ಲ ಈ ಲೈನ್‌ನಲ್ಲಿ ಆಮದು ರಫ್ತು ಸಹ ಬಹಳವಾಗಿರುತ್ತೆ

ಈಗ್ಗೆ ಎರಡು ಮೂರು ವಾರಗಳ ಹಿಂದಿನ ಮೈಸೂರು ಗೆಜೆಟ್ಟಿನಲ್ಲಿ ಕಡೇನಹಳ್ಳಿಯಿಂದ ಬೂಕನಕೆರೆಗೂ ಮತ್ತು ಬೂಕನಕೆರೆಯಿಂದ ಶ್ರೀರಂಗಪಟ್ಟಣ ಅಥವಾ ಮೈಸೂರು ರಾಜಧಾನಿಗೆ ರೈಲು ಹಾಕತಕ್ಕ ಬಗ್ಗೆ ಸರ್ವೆ ಮಾಡಲು ಹುಕುಂ ಆಗಿರುವುದಾಗಿ ನಮೂದು ಮಾಡಿರುತ್ತೆ ಈ ರೀತಿ ರೈಲು ಹಾಕುವುದರಿಂದ ಚೆನ್ನರಾಯಪಟ್ಟಣ ಮತ್ತು ಕೃಷ್ಣರಾಜಪೇಟೆ ಈ ಎರಡು ತಾಲ್ಲೋಕ್ ಹೆಡ್‌ಕ್ವಾರ್ಟರ್‌ಗಳಿಗೆ ರೈಲು ಬಂದಂತೆ ಆಗುತ್ತೆ ಮತ್ತು ದಾರಿಯಲ್ಲಿ ಯಾವ ಹೊಳೆಗಳೂ ಸಿಕ್ಕುವುದಿಲ್ಲವಾದ್ದರಿಂದ ಸೇತುವೆಗಳನ್ನು ಕಟ್ಟತಕ್ಕ ಅವಶ್ಯವಿಲ್ಲ ಆದರೆ ಈ ರಸ್ತೆಯಲ್ಲಿ ಆಮದು ರಫ್ತು ಕಮ್ಮಿ ಒಂದು ವೇಳೆ ಯಾತ್ರಾಸ್ಥಳಗಳಾದ ಶ್ರವಣಬೆಳಗುಳ ಮತ್ತು ಮೇಲುಕೋಟೆ ಇವುಗಳ ಮುಖಾಂತರ ರೈಲ್ ರಸ್ತೆ ತಂದರೆ ಸುಮಾರು ಒಂದು ವರ್ಷಕ್ಕೆ ಈ ಎರಡು ಯಾತ್ರಾಸ್ಥಳಗಳಿಂದ 10,000 ಪ್ರಯಾಣಿಕರು ಬಂದರೆ ಹೆಚ್ಚು ಇದು ವಿನಹಾ ಬಾಕಿ ವರಮಾನಗಳು ಯಾವದೂ ಕಂಡುಬರುವದಿಲ್ಲ ಯಾತಕ್ಕೆಂದರೆ ಈ ರಸ್ತೆಯ ಉಭಯ ಪಾರ್ಶ್ವಗಳಲ್ಲಿರತಕ್ಕ ಪ್ರದೇಶಗಳಲ್ಲಿ ವಿಶೇಷವಾಗಿ ಬೆಳೆಯಾಗತಕ್ಕ ಪದಾರ್ಥಗಳು ಯಾವದೂ ಕಂಡುಬರುವುದಿಲ್ಲ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಆದ ಹಾಸನಕ್ಕೆ ರೈಲು ಬಂದಂತೆ ಆಗಲಿಲ್ಲ

ಅರಸೀಕೆರೆಯಿಂದ ಹಾಸನ, ಹೊಳೆನರಸಿಪುರ, ಸಾಲಿಗ್ರಾಮ, ಚುಂಚನಕಟ್ಟೆ, ಯಡತೊರೆ, ಇಲವಾಲದ ಮುಖಾಂತರವಾಗಿ ರೈಲನ್ನು ಮೈಸೂರಿಗೆ ಹಾಕಿದರೆ ಮಧ್ಯ ಹೊಳೆನರಸೀಪುರದಲ್ಲಿ ಒಂದು, ಮತ್ತು ಚುಂಚನಕಟ್ಟೆಯಲ್ಲಿ ಒಂದು, ಈ ರೀತಿ ಎರಡು ಸೇತುವೆಗಳನ್ನು ಹೇಮಾವತಿ ಮತ್ತು ಕಾವೇರಿ ನದಿಗಳಿಗೆ ಕಟ್ಟಬೇಕಾಗುತ್ತೆ ಈ ಸೇತುವೆಗಳನ್ನು ಕಟ್ಟಿಸತಕ್ಕ ಖರ್ಚು ಮೇಲಿನ ರಸ್ತೆಗಿಂತಲೂ ಹೆಚ್ಚಾಗಿ ತಗಲಿದರೂ ಈ ರಸ್ತೆಯಲ್ಲಿ ಮೇಲಿನ ರಸ್ತೆಗೂ ಮತ್ತು ಈ ಸೇತುವೆಗಳನ್ನು ಕಟ್ಟಿಸತಕ್ಕ ಖರ್ಚಿನ ಬಡ್ಡಿ ಇವುಗಳಿಗಿಂತಲೂ ಹೆಚ್ಚಾಗಿ ವರಮಾನವಿರುವದರಲ್ಲಿ ಯಾವ ಸಂಶಯವೂ ಕಂಡು ಬರುವುದಿಲ್ಲ ಹ್ಯಾಗೆಂದರೆ ಈ ರಸ್ತೆಯಲ್ಲಿ ಮಧ್ಯ ಹೊಳೆನರಸೀಪುರ, ಯಡತೊರೆ, ಇಲವಾಲ ಈ ನಾಲ್ಕು ಕಡೆಗಳಲ್ಲಿ ಟೋಲ್ ಗೇಟುಗಳಿರುತ್ತವೆ ಇವುಗಳಿಂದ ವರ್ಷ ಒಂದಕ್ಕೆ ಸುಮಾರು 10,000, 4,000, 8,000, 1,000 ರೂಪಾಯಿಗಳಿಗೆ ಕಮ್ಮಿ ಇಲ್ಲದಂತೆ ಹರಾಜಿನಿಂದ ಕಂಟ್ರ್ಯಾಕ್ಟು ಹೋಗುತ್ತಾ ಸಿಕ್ಕುತ್ತೆ ಇದೆಲ್ಲಾ ಒಟ್ಟು 23,000 ರೂಪಾಯಿ ಆಯಿತು ಇವುಗಳ ಎಷ್ಟಾಬಂದಿ ಖರ್ಚು 3,000 ರೂಪಾಯಿ ಎಂಬದಾಗಿಯೂ ಮತ್ತು ಕಂಟ್ರ್ಯಾಕ್ಟುದಾರರ ನಷ್ಟ 6,000 ರೂಪಾಯಿ ಎಂಬದಾಗಿಯೂ ಇಟ್ಟುಕೊಳ್ಳೋಣ ಹಾಗಾದರೆ ಒಟ್ಟು 10,000 ರೂಪಾಯಿ ಉತ್ಪತ್ತಿ ಆದ ಹಾಗೆ ಆಯಿತು ಒಂದು ಭರ್ತಿ ಗಾಡಿಗೆ ನಾಲ್ಕು ಆಣೆ ಮತ್ತು ಖಾಲಿಗಾಡಿಗೆ ಎರಡು ಆಣೆ ಈ ರೀತಿ ವಸೂಲ್ಮಾಡುತ್ತಾರೆ ಇದಲ್ಲದೆ ಅನೇಕ ಗಾಡಿಗಳು ಹೊಸ ರಸ್ತೆಗಳಲ್ಲಿ ಹೋಗುತ್ತಾ ಬರುತ್ತಾ ಇವೆ ಇವುಗಳನ್ನೆಲ್ಲಾ ಲೆಕ್ಕಕ್ಕೆ ಸೇರಿಸಿ, ಸರಾಸರಿ ಒಂದು ಗಾಡಿಗೆ 3 ಆಣೆಯಂತೆ ಲೆಕ್ಕಾಚಾರ ಹಾಕಿದರೆ 2,10,000 ಗಾಡಿಗಳ ಭರ್ತಿ ಸಿಕ್ಕಿದ ಹಾಗೆ ಆಗುತ್ತದಲ್ಲದೆ ಪ್ರಯಾಣಿಕರ ಸಂಖ್ಯೆಯು ಸಹ ಮೇಲಿನ ರಸ್ತೆಯಲ್ಲಿ ಬರತಕ್ಕವರ ಸಂಖ್ಯೆಗಿಂತಲೂ ಹೆಚ್ಚಾಗಿರಬಹುದಾಗಿ ಊಹಿಸಬಹುದಾಗಿದೆ ಹೊಳೆನರಸಿಪುರ, ಯಡತೊರೆ, ಹಾಸನ, ಈ ತಾಲ್ಲೂಕುಗಳಲ್ಲಿ ನಾಲೆಗಳು ವಿಶೇಷವಾಗಿರುವದರಿಂದ ಭತ್ತದ ಪೈರು ಅನೇಕವಾಗಿ ಬೆಳೆಯುತ್ತೆ ಇತರೆ ನಾನಾ ಪೈರುಗಳು ಮಲನಾಡಿನ ಕಾಫಿ, ಏಲಕ್ಕಿ, ಸೀಗೆಕಾಯಿ, ಅಂಟ್ವಾಳದಕಾಯಿ, ಅಳಲೆಕಾಯಿ ವಗೈರೆ ವಿಷಯಗಳೆಲ್ಲಾ ರೈಲಿಗೆ ಭರ್ತಿ ಸಿಕ್ಕುತ್ತಲ್ಲದೆ ಹಾಸನದ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೂ ಮತ್ತು ಹೊಳೆನರಸಿಪುರ, ಯಡತೊರೆ ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ ಸಹ ರೈಲ್ ಬಂದಂತೆ ಆಗಿ ಇವೆಲ್ಲಾ ಅಭಿವೃದ್ಧಿಸ್ಥಿತಿಗೆ ಬರುತ್ತವೆ ಈ ವಿಚಾರಗಳನ್ನೆಲ್ಲಾ ಅವಗಾಹನೆಗೆ ತಂದುಕೊಂಡು ಈ ವರುಷದ ದಸರಾ ಮೀಟಿಂಗಿನಲ್ಲಿ ಈ ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟಿನ ದಸರಾ ಮೆಂಬರುಗಳು ಚರ್ಚಿಸುವರೆಂದು ನಂಬಿರುತ್ತೇವೆ ಈ ಗ್ರಾಮಗಳ ರೈತರುಗಳು ಧ್ಯವಸ್ಥೆಗಳನ್ನು ಪೇರಾವು ಮಾಡದೆ ತಮ್ಮ ಜಮೀನುಗಳು ರೈಲ್ ರಸ್ತೆಗೆ ಹೋಗಬಹುದೆಂಬ ಸಂಶಯವುಳ್ಳವರಾಗಿರುತ್ತಾರೆ ಆದ್ದರಿಂದ ನಮ್ಮ ಘನವಾದ ಸರ್ಕಾರದವರು ಈ ವಿಚಾರಗಳನ್ನು ಇನ್ನೊಂದಾವರ್ತಿ ಅವಗಾಹನೆಗೆ ತಂದುಕೊಂಡು ಮೈಸೂರು ಹಾಸನದ ರೈಲ್ ರಸ್ತೆಯನ್ನು ಅರಸೀಕೆರೆಯಿಂದ ಹಾಸನ, ಹೊಳೆನರಸಿಪುರ, ಸಾಲಿಗ್ರಾಮ, ಚುಂಚನಕಟ್ಟೆ, ಇಲವಾಲದ ಮುಖಾಂತರ ಮೈಸೂರು ರಾಜಧಾನಿಗೆ ಹಾಕಿಸಿಕೊಟ್ಟು ಇಲ್ಲಿನ ರೈತಪ್ರಜೆಗಳ ಅಭಿಲಾಷೆಗಳನ್ನು ನೆರವೇರಿಸಿಕೊಡುವರೆಂದು ನಂಬಿರುತ್ತೇವೆ

ಪ್ರಜಾಹಿತೈಷಿ

ಮೇಲುಕೋಟೆ ನೇಯಿಗೆ ಕೋಆಪರೇಟಿವ್ ಸೊಸೈಟಿ, ಲಿಮಿಟೆಡ್

1906 ನೇ ಸೆಪ್ಟೆಂಬರ್ ಲಾಗಾಯಿತು 1912 ನೇ ಜೂನ್ ಆಖೈರು ವರಿಗಿನ ಅಭಿವೃದ್ಧಿಯ ಸಂಕ್ಷೇಪ ಪತ್ರವು

ಮೇಲುಕೋಟೆ ನೇಯಿಗೆ ಕೋಆಪರೇಟಿವ್ ಸೊಸೈಟಿಯು 1906 ನೇ ಸೆಪ್ಟೆಂಬರ್ 20 ರಲ್ಲು ರಿಜಿಸ್ಟರ್ ಮಾಡಲ್ಪಟ್ಟಿತು ಈ ಸಂಘವು ಸ್ಥಾಪನೆಯಾಗುವುದಕ್ಕೆ ಮೊದಲು ಇಲ್ಲಿನ ಕಸಬುದಾರರು ಕಮ್ಮಿ ತಿಳುವಳಿಕೆಯಿಂದ ಐಕಮತ್ಯವಿಲ್ಲದೆ ತಮ್ಮ ಕಸಬುಗಳಿಗೆ ಬೇಕಾದ ಸಾಮಾನುಗಳನ್ನು ಸಕಾಲದಲ್ಲಿ ಒದಗಿಸಿಕೊಳ್ಳದೆ, ತಮ್ಮ ಕೈಗಾರಿಕೆಗಳನ್ನು ಉತ್ತಮಸ್ಥಿತಿಗೆ ತರಲು ಸಹಾಯಶೂನ್ಯರಾಗಿ ಸರ್ಕಾರದವರ ದೃಷ್ಟಿಗೂ ಬೀಳಗೆ ಪೇಚಾಡುತ್ತಿದ್ದರು ಇಲ್ಲಿನ ಕೆಲವು ಮಹನೀಯರು ಎಲ್ಲರೂ ಸನ್ಮಾರ್ಗದಲ್ಲಿದ್ದು ಐಕಮತ್ಯರಾಗಿರುವದರಿಂದ ಉಂಟಾಗತಕ್ಕ ಆದಾಯ ಮತ್ತು ಸಹಾಯಸಂಪತ್ತಿಯನ್ನು ಚನ್ನಾಗಿ ತಿಳಿಯುವಂತೆ ದೃಷ್ಟಾಂತಗಳೊಡನೆ ತಿಳಿಸಿ ಐಕಮತ್ಯವನ್ನು ಉಂಟುಮಾಡಿ ನೇಯಿಗೆಯವರ ಅಭಿವೃದ್ಧಿಗಾಗಿ ಈ ಸಂಘವನ್ನು ಸ್ಥಾಪಿಸಿದರು ಈ ಸಂಘವು ತೃಪ್ತಿಕರವಾಗಿ ಕಳೆದ 6 ವರುಷಗಳಿಂದಲೂ ಕ್ರಮವಾಗಿ ನಡೆಯುತ್ತಾ ಬಂದಿರುವದರಿಂದ ಜನರು ತಮ್ಮ ಮೌಢ್ಯತನವನ್ನು ಬಿಟ್ಟು ಮತಭೇದನಿಲ್ಲದೆ ಇತರ ಪಂಗಡದವರೂ ಸಹ ಐಕಮತ್ಯವಾಗಿ ವರ್ತಿಸುತ್ತಾ ಬರುತ್ತಲಿದ್ದಾರೆ

ಈ ಊರಲ್ಲಿ ಕೈಗಾರಿಕೆ ಮಗ್ಗಗಳು ಅನೇಕ ಇರುವದರಿಂದ ಅವುಗಳಿಗೆ ಅನುಕೂಲವಾಗಿ ನೂಲು, ರೇಶ್ಮೆ ತರಿಸಿ ಮೆಂಬರಾದವರಿಗೆ ನಫೆ ಇಲ್ಲದೆ ಸಾಲಕ್ಕಾಗಿಯೂ, ಮೆಂಬರಲ್ಲದವರಿಗೆ ನಗದು ಹಣಕ್ಕೂ ಮಾರಾಟ ಮಾಡಬೇಕೆಂತಲೂ, ಮೆಂಬರುಗಳು ಕೊಡತಕ್ಕ ಸರಕುಗಳನ್ನು ಸಾಧ್ಯವಾದ ಮಟ್ಟಿಗೆ ಶೇಖರಿಸಿ ಮಾರುವದರ ಮೂಲಕ ಸಂಘವನ್ನು ಅಭಿವೃದ್ಧಿಗೆ ತರಬೇಕೆಂತಲೂ ನಿರ್ಧರಿಸಲ್ಪಟ್ಟಿತು ಇದಕ್ಕೆ ಅನುಸಾರವಾಗಿ ಷೇರು ಒಂದಕ್ಕೆ 5 ರೂ ಮೇರೆ 1,000 ಷೇರುಗಳು ಈ ಸೊಸೈಟಿಗೆ ಇರಬೇಕೆಂದು ನಿಷ್ಕರ್ಷಿಸಲ್ಪಟ್ಟಿರುತ್ತೆ ಈ ಸಂಘದ ಆಡಳಿತವು ಮೇಲುಕೋಟೆಗೆ 6 ಮೈಲಿ ಫಾಸಲೆಯಲ್ಲಿರತಕ್ಕ ಗ್ರಾಮಗಳಿಗೆ ಮಾತ್ರವೇ ಅಲ್ಲದೆ ಇಂಡಿಯದ ಯಾವ ಭಾಗದಲ್ಲೇ ಆಗಲಿ ವರ್ತಕರೇ ಮೊದಲಾದ ಯೋಗ್ಯ ಮನುಷ್ಯರೂ ಇದಕ್ಕೆ ಮೆಂಬರಾಗಿ ಸೇರುವ ಸ್ವಾತಂತ್ರ್ಯವೂ ಸಹ ಅನ್ವಯಿಸಿರುತ್ತದೆ ಷೇರು ಮೊಬಲಗು ಎಂಥಾ ಬಡವರಿಗೂ ಅನುಕೂಲವಾಗಿರುವಂತೆ ಅತ್ಯಲ್ಪವಾಗಿ ಅವರವರ ಶಕ್ತ್ಯಾನುಸಾರ ಪಾವತಿಮಾಡಬಹುದಾಗಿರುತ್ತೆ ಸಂದೇಹಾಸ್ಪದರಾದ ಕೆಲವು ಹೂಗಾರರಿಗೂ ಸಹ ಬರಮಸೆಯುಂಟಾಗುವ ಉಪನಿಬಂಧನೆಗಳು ಏರ್ಪಡಿಸಿರುತ್ತೆ ಮತ್ತು ಮೆಂಬರುಗಳು ಅವರವರ ಅನುಕೂಲಕ್ಕೆ ತಕ್ಕಹಾಗೆ ಮೊಬಲಗನ್ನೂ ಸಾಮಾನುಗಳನ್ನೂ, ಸರಕುಗಳನ್ನೂ ಸಂಘಕ್ಕೆ ನಷ್ಟಬಾರದ ರೀತಿ ಸಾಲವಾಗಿ ಸಕಾಲಕ್ಕೆ ಹೊಂದುತ್ತಾ ಇರುತ್ತಾರೆ ಈ ಕಾರಣಗಳಿಂದ ಈ ಸಂಘವು ಜನಗಳ ವಿಶ್ವಾಸಕ್ಕೆ ಪಾತ್ರವಾಗಿ ನಮ್ಮಗಳಿಗೆ ಹೊಸದಾದ ಈ ವಿಷಯವನ್ನು ಜನಗಳಿಗೆ ವಿದಿತಪಡಿಸುತ್ತಾ ಅಭಿವೃದ್ಧಿಯನ್ನು ಹೊಂದುತ್ತಿರುವುದಕ್ಕೆ ನಾವುಗಳೆಲ್ಲರೂ ಅಭಿನಂದಿಸಬೇಕಾಗಿದೆ

ಸಂಘವು ಪ್ರಾರಂಭವಾದಾಗ 10 ಮೆಂಬರುಗಳಿದ್ದು ಈಗ 110 ಮೆಂಬರುಗಳಿರುತ್ತಾರೆ ಈ ಪೈಕಿ 10 ಜನ ಬ್ರಾಹ್ಮಣರು, 76 ಕಸಬುದಾರರು 18 ವ್ಯವಸಾಯಗಾರರು, 6 ಸರ್ಕಾರಿ ನೌಕರಿಯವರು ಷೇರು ಮೊಬಲಗು, ಪ್ರವೇಶಧನ ಮತ್ತು ಡಿಪಾಜಿಟ್ ಮೊಬಲಗು ಇವುಗಳಿಂದ ಸೇರಿರತಕ್ಕ ಸಂಘದ ಬಂಡವಾಳವು ಸೊಸೈಟಿಯ ಅಭಿವೃದ್ಧಿಯನ್ನು ವ್ಯಕ್ತಪಡಿಸುತ್ತದೆ 1907 ನೇ ಜೂನ್ ಆಖೈರಿನಲ್ಲಿ ರೂ 1,833 8 0 ಬಂಡವಾಳವಿತ್ತು ಅಲ್ಲಿಂದ ಕಳೆದ 5 ವರ್ಷಗಳಲ್ಲಿ ಕ್ರಮವಾಗಿ ಸೊಸೈಟಿಯ ಮೂಲಧನವು ರೂ 7,581 7 8 ಪೈಗೆ ಹೆಚ್ಚಿರುತ್ತೆ ಪ್ರಾರಂಭ ಲಾಗಾಯ್ತು 1912 ನೇ ಜೂನ್ ಆಖೈರುವರೆಗೆ ರೂ 5,316 7 7 ಪೈಗಳ 3,04 ಸಾಲಗಳು ಮೆಂಬರುಗಳಿಗೆ ಕೊಡಲ್ಪಟ್ಟು ರೂ 18,617 3 2 ಪೈ ವಾಪಸ್ ಬಂದಿರುವುದಲ್ಲದೆ, 1912 ನೇ ಜೂನ್ ಆಖೈರಿನಲ್ಲಿ ರೂ 1,378 4 5 ಪೈ ಮಾತ್ರ ಮೆಂಬರುಗಳಿಂದ ಬಾಕಿ ಬರಬೇಕಾಗಿದೆ ಮೆಂಬರುಗಳೆಲ್ಲರೂ ತಾವು ತೆಗೆದುಕೊಂಡಿರುವ ಸಾಲಗಳನ್ನು ಕ್ರಮವಾಗಿ ಸಕಾಲಕ್ಕೆ ಪಾವತಿಮಾಡುತ್ತಿರುವುದು ಪ್ರೋತ್ಸಾಹಕರವಾಗಿದೆ ಪೂರ್ವಲಾಗಾಯ್ತು 1912 ನೇ ಜೂನ್ ಆಖೈರುವರೆಗೆ ನಗದು ಖರೀದಿಗೆ ರೂ 1,16,692 3 11 ಪೈಗಳ ನೂಲು, ರೇಷ್ಮೆ ವಗೈರೆ ಸಾಮಾನುಗಳು ಕೊಳ್ಳಲ್ಪಟ್ಟು ರೂ 1,04,106 14 1 ಪೈಗಳಷ್ಟು ಸಾಮಾನುಗಳು ಬಿಕರಿಯಾಗಿ, ಹಾಲಿ ರೂ 2,596 5 10 ಪೈಗಳ ಸಾಮಾನು ಹಾಜರಿಯಲ್ಲಿರುತ್ತೆ

ನಗದು ಸಾಲವಾಗಿ ತೆಗೆದುಕೊಳ್ಳುವುದಕ್ಕೆ ಮಾಹೆಯಾನಾ ಶೇಕಡ 12 ಆಣೆ ಮೇರೆಯೂ, ಒಂದು ರೂಪಾಯಿ ಮೇರೆಯೂ ಬಡ್ಡಿ ವಸೂಲ್ಮಾಡುತ್ತಾ ಇದೆ ಸಂಘವು ಅಭಿವೃದ್ಧಿಗೆ ಬಂದ ಹಾಗೆಲ್ಲಾ ಬಡ್ಡಿಯ ದರವನ್ನು ಕಡಮೆಮಾಡಬೇಕೆಂಬ ಯೋಚನೆ ಇದೆ ಮೆಂಬರುಗಳಿಂದಲೂ, ಇತರರಿಂದಲೂ ರೂ 10,252 0 1 ಪೈ ಡಿಪಾಜಿಟ್ಟಾಗಿ ಅಂಗೀಕರಿಸಲ್ಪಟ್ಟು ರೂ 9,926 7 5 ಪೈ ವಾಪಸ್ಸಾಗಿ, ರೂ 325 8 8 ಪೈ ಹಾಜರಿರುತ್ತೆ ಸಂಘದ ಅಭಿವೃದ್ಧಿಗಾಗಿ ನಮ್ಮ ಸರ್ಕಾರದವರು ರೂ 2,000 ಸಾಲವನ್ನು ಮುಂಜೂರ್ಮಾಡಿದಾಗ್ಯೂ ಅದನ್ನು ಉಪಯೋಗಿಸಿಕೊಳ್ಳಬೇಕಾದ ಅವಶ್ಯಕತೆಯು ಇದುವರೆವಿಗೆ ಸಂಭವಿಸದೆ ಇರುವದಕ್ಕೆ ಬಹಳ ಸಂತೋಷಪಡಬೇಕಾಗಿದೆ ಈಗ ಮಾಹೆಯಾನಾ ಸರಾಸರಿ ಒಟ್ಟು ಗುಮಾಸ್ತೆ ಮತ್ತು ಆಫೀಸ್ ಬಾಡಿಗೆ ಸಹ ರೂ 150 ಖರ್ಚಾಗುತ್ತಿದೆ ಚಾಲ್ತಿ ಸಾಲಿನಲ್ಲಾದರೂ ಒಬ್ಬ ಜವಾನನನ್ನು ನೇಮಿಸುವ ಯೋಚನೆ ಇದೆ

ಖರ್ಚು ಕಳೆದು ನಿವ್ವಳ ನಫೆಯು ಕಳೆದ 1907 ನೇ ಜೂನ್ ಆಖೈರ್ ಲಾಗಾಯಿತು ಕ್ರಮವಾಗಿ 6 ವರ್ಷಗಳಿಂದ ರೂ 111 15-9 ಪೈ, ರೂ 503 1-3 ಪೈ, ರೂ 652 13 0 ಪೈ, ರೂ 560 1 3 ಪೈ ರೂ 690 6-2 ಪೈ ರೂ 1,013 11 ಪೈ ಬಂದಿರುತ್ತದೆ ಮತ್ತು ಮೆಂಬರುಗಳು ಪಾವತಿಮಾಡಿರುವ ಷೇರು ಮೊಬಲಗಿನ ಮೇಲೆ ಕಳೆದ ಆರು ವರ್ಷಗಳಿಂದ ಕ್ರಮವಾಗಿ ಸಾಲಿಯಾನಾ 18, 15¼, 13¾, 11¼, 9¾, 8 ನಫೆ ಹಂಚಿರುತ್ತದೆ ಚಾಲ್ತಿ ಸಾಲಿನಲ್ಲಿ ಸಂಘವು ಉನ್ನತ ಪದವಿಗೆ ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳಿಂದ ಚುನಾಯಿಸಲ್ಪಟ್ಟ ಆನರರಿ ಕಮಿಟಿಯವರಿಂದ ಸಂಘದ ಕೆಲಸವು ನಡಿಸಲ್ಪಡುತ್ತಿದೆ ಈ ಕಮಿಟಿಯವರು ತಮ್ಮಲ್ಲಿಯೇ ಒಬ್ಬ ಪ್ರೆಸಿಡೆಂಟ್ ಒಬ್ಬ ಸೆಕ್ರೆಟರಿ ಒಬ್ಬ ಟ್ರೆಜರರ್ ಇವರುಗಳನ್ನು ಚುನಾಯಿಸಿಕೊಳ್ಳುತ್ತಾರೆ ಮತ್ತು ಸೆಕ್ರೆಟರಿಯವರಿಗೆ ಒಟ್ಟು ಆದಾಯದ ¼ ಭಾಗವನ್ನು ಬಹುಮಾನವಾಗಿ ಕೊಡುತ್ತಾರೆ ಈ ರೀತಿ ಮ್ಯಾನೇಜಿಂಗ್ ಕಮಿಟಿಯವರಿಗೂ ಬಹುಮಾನ ಕೊಡಬೇಕೆಂದು ಮೆಂಬರುಗಳು ಯೋಚಿಸುತ್ತಿರುವರು — ಪ್ರತಿ ವರ್ಷವೂ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳಿಂದ ಚುನಾಯಿಸಲ್ಪಟ್ಟು, ಅರ್ಹರಾಗಿರತಕ್ಕ ಆಡಿಟರವರಿಂದ ಲೆಕ್ಕಗಳೆಲ್ಲವೂ ಆಗಾಗ್ಗೆ ತನಿಖೆಮಾಡಲ್ಪಡುತ್ತಿದೆ ಮತ್ತು ಇನ್‌ಸ್ಪೆಕ್ಟರವರೂ, ಕಮಿಟಿ ಮೆಂಬರುಗಳೂ, ಕ್ಲುಪ್ತಕಾಲಗಳಲ್ಲಿ ಲೆಕ್ಕಗಳನ್ನೂ, ಇತರ ರಿಕಾರ್ಡುಗಳನ್ನೂ ಪರಿಶೋಧಿಸುತ್ತಾರೆ

ಈ ಸೊಸೈಟಿಯ ಉದ್ದೇಶಗಳ ಪೈಕಿ ಎರಡು ಉದ್ದೇಶಗಳನ್ನು ಪ್ರತ್ಯೇಕಿಸಿ ಬೇರೆ ಎರಡು ಸೊಸೈಟಿಗಳು ರಿಜಿಸ್ಟರ್ ಮಾಡಲ್ಪಟ್ಟಿವೆ ಇದರಿಂದ ಈ ಸಂಘಕ್ಕೆ ಸ್ವಲ್ಪ ಕುಂದಕ ಉಂಟಾಯಿತೇ ವಿನಹ ಮತ್ತೆ ಬೇರೆ ಇಲ್ಲ ಈ ವಿಷಯದಲ್ಲಿ ನಮ್ಮ ರೆಜಿಸ್ಟ್ರಾರ್ ಸಾಹೇಬರವರು ತಕ್ಕ ನಿವಾರಣೆಯನ್ನು ಮಾಡಿಕೊಡುವರೆಂದು ನಿರೀಕ್ಷಿಸಲ್ಪಟ್ಟಿರುತ್ತೆ ಈ ಸಂಘವು ಸ್ಥಾಪನೆಯಾಗುವುದಕ್ಕೆ ಮೊದಲು ಇಲ್ಲಿಯ ನೇಯಿಗೆಯವರು ಬಹಳ ಒರಟುಕೆಲಸವನ್ನು ಮಾಡುತ್ತಿದ್ದರು ಈಗ ಇವರೆಲ್ಲರೂ ಬಹಳ ನಾಜೋಕಾದ ಬನಾರಸ್, ಮಧುರೆ ಮತ್ತು ಶಾಲ್ಕು, ಕೊಳ್ಳೇಗಾಲ, ಧರ್ಮಾವರ ಮೊದಲಾದ ಸ್ಥಳಗಳಲ್ಲಿ ನಡೆಯುವ ಕೆಲಸಗಳನ್ನೂ, ಜರತಾರಿ ಕೆಲಸಗಳನ್ನೂ ಬಹಳ ಶ್ಲಾಘ್ಯವಾಗಿ ಮಾಡುತ್ತಾರೆ ಅಲ್ಲದೆ ಇವರಿಗೆ ರೇಷ್ಮೆಗಳಿಗೆ ಬಣ್ಣ ಹಾಕುವುದು ಬರುತ್ತಿರಲಿಲ್ಲ ಇದರಿಂದ ಇವರಿಗೆ ಸಾಲಿಯಾನ ರೂ 6,000 ಖರ್ಚಾಗುತ್ತಿತ್ತು ಈಗ ಎಲ್ಲರೂ ರೇಷ್ಮೆಗೆ ಬೇಕಾದ ಘಟ್ಟಿ ಬಣ್ಣವನ್ನು ಹಾಕುವುದರಲ್ಲಿ ನಿಪುಣರಾಗಿರುತ್ತಾರೆ ಈ ರೀತಿಯಾಗಿ ಸಂಘದಿಂದ ಅನೇಕ ಪ್ರಯೋಜನಗಳು ಉಂಟಾಗುತ್ತಲಿವೆ ಇಂಥಾ ಅಲ್ಪಸ್ಥಳದ ಸೊಸೈಟಿಯ ರಿಜರ್ವ್ ಫಂಡು ಇಷ್ಟು ಅಲ್ಪ ಕಾಲದಲ್ಲಿ ರೂ 1,600 ಆಗಿರುವದು ಬಹಳ ಸಂತೋಷಕರವಾಗಿದೆ ಮತ್ತು ಇಂಥಾ ಸಂಘಗಳು ಅಭಿವೃದ್ಧಿಗೆ ಬರಲು, ನಮ್ಮ ರೆಜಿಸ್ಟ್ರಾರ್ ಸಾಹೇಬರವರು ಕಾನ್‌ಫರೆನ್ಸನ್ನು ಏರ್ಪಡಿಸಿದ್ದು ಮುಖ್ಯ ಕಾರಣವಾಗಿದೆ ನಮ್ಮ ಸಂಘದ ಮೆಂಬರುಗಳೂ, ಕಮಿಟಿಯವರೂ ಸಂಘದ ಏಳಿಗೆಗೆ ಐಕಮತ್ಯದಿಂದ ಕೆಲಸಗಳನ್ನು ನಡಿಸುತ್ತಿರುವುದು ತುಂಬಾ ಪ್ರೋತ್ಸಾಹಕರವಾಗಿದೆ ಈ ಊರಿನ ಪಟ್ಟಣ ಪ್ರೊಹಿತ್ ವಿದ್ವಾಂಸರು ತಮ್ಮ ಮೂಲಧನವನ್ನು ಈ ಸಂಘದಲ್ಲಿ ಇಡುವುದಕ್ಕೆ ಅಪ್ಲಿಕೇಷನ್ ಕೊಟ್ಟಿರುತ್ತಾರೆ ಈ ರೀತಿಯಾಗಿ ಸಂಘದ ಭರವಸೆಯು ಜನಗಳಿಗೆ ಉಂಟಾಗಿ ಗೋಚರವಾಗಿದೆ ಮೆಂಬರುಗಳೆಲ್ಲರೂ ಉತ್ಸಾಹದಿಂದ ಸಂಘಕ್ಕೆ ಪ್ರೋತ್ಸಾಹವನ್ನು ಕೊಡಬೇಕಾಗಿದೆ

ಕರಡಿ ವೆಂಕಟರಮಣಶೆಟ್ಟರು,
ಸೆಕ್ರೆಟರಿ

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮೀಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವ ಹಾಗೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮೀಗಳು ಅದೇ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮೀಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮೀಗಳನ್ನು ಅನೇಕರು “ರೆವ್ ಇ ಡಬ್ಲ್ಯು ಟಾಂಕ್ಲಿನ್ ಸಾಹೇಬರಿಗೆ, ಮೈಸೂರು” ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ “ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು” ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮೀಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮೀದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್‌ಪಾಂಡೆನ್ಸ್

ಆಸ್ಪತ್ರೆಗಳಲ್ಲಿ ಔಷಧವಿಲ್ಲವಂತೆ

ಅಯ್ಯಾ,

ನನಗೆ ಒಂದು ವರ್ಷದಿಂದ ಕಣ್ಣುಗಳಲ್ಲಿ ನೀರು ಸೋರುತ್ತಿದೆ ದೊಡ್ಡಬಳ್ಳಾಪುರದ ಆಸ್ಪತ್ರೆಗೆ ಹೊಸ ಡಾಕ್ಟರು ಬಂದಿದ್ದಾರೆಂದೂ ರೋಗಗಳಿಗೆ ಒಳ್ಳೇ ಇಲಾಜು ಮಾಡುತ್ತಾರೆಂದೂ ಕೇಳಿ ನಾನು ಚಿಕಿತ್ಸೆಗಾಗಿ ಕಳೆದ ೩ ನೇ 1 ನೇ ತಾರೀಖಿನಲ್ಲಿ ಅಲ್ಲಿಗೆ ಹೋದೆನು ಅವರು ಕಣ್ಣುಗಳನ್ನು ನೋಡಿ ಇದಕ್ಕೆ ನಮ್ಮ ಆಸ್ಪತ್ರೆಯಲ್ಲಿ ಔಷಧ ಇಲ್ಲವೆಂದೂ, ಬೆಂಗಳೂರಿಂದ ತರಿಸಿ ಇಲಾಜು ಮಾಡುತ್ತೇನೆಂದೂ ಹೇಳಿದರು ನಾಲ್ಕೈದು ದಿವಸ ಹೋದ ಬಳಿಕ ಈಗ ನಿಮಗೆ ಔಷಧ ತರಿಸಿ ಇರುತ್ತೇನೆ ಇದರ ಬೆಲೆ ಎರಡು ರೂಪಾಯಿ ಹನ್ನೆರಡು ಆಣೆ ಕೊಟ್ಟರೆ ಇಲಾಜು ಮಾಡುತ್ತೇನೆಂದು ಹೇಳಿದರು ನಮ್ಮಂಥಾ ಬಡವರು ಈ ಸ್ವಲ್ಪ ಇಲಾಜಿಗೆ ಈ ಕಷ್ಟಕಾಲದಲ್ಲಿ ಹಣ ಎಲ್ಲಿಂದ ಕೊಡಬೇಕು ದಯಾಳುಗಳಾದ ಮೈಸೂರು ಸರ್ಕಾರದವರು ಆಸ್ಪತ್ರೆಗಳಲ್ಲಿ ಎಲ್ಲಾ ತರಹ ರೋಗಗಳಿಗೆ ಔಷಧಗಳನ್ನಿಟ್ಟು ನಮ್ಮಂಥ ಬಡವರಿಗೆ ಫ್ರೀ ಇಲಾಜು ಮಾಡಿಸಿ ಇನ್ನು ಮುಂದೆ ವೈದ್ಯರು ಯಾವ ವಿಧವಾಗಿಯೂ ರೋಗಿಗಳಿಂದ ಹಣ ತೆಗೆದುಕೊಳ್ಳದಹಾಗೆ ಅನುಕೂಲ ಮಾಡ್ಯಾರೆಂದು ನಂಬಿದೇನೆ

ಕೆ ಎಸ್ ಇಸ್ಮಾಯಿಲ್

ನಾರ್ಮಲ್ ಸ್ಕೂಲ್ ಓದಿದ ಮಾಸ್ತರುಗಳ ಸಂಬಳ

ಅಯ್ಯಾ,

ಸರ್ಕಾರದವರು ಪ್ರತಿ ವರ್ಷವೂ ನಾರ್ಮಲ್ ಸ್ಕೂಲಿಗೆ ಹೋಗತಕ್ಕ ಮೇಷ್ಟರುಗಳಿಗೆ ಬದಲಾಗಿ ಹೊಸ ಮೇಷ್ಟರುಗಳನ್ನು ಚುನಾಯಿಸುತ್ತಾ ಇಷ್ಟು ಸರ್ಕಾರದವರು ಇವರಿಗೆ 6 ರೂಪಾಯಿ ತಿಂಗಳಿಗೆ ಸಂಬಳ ಏರ್ಪಡಿಸಿದ್ದಾರೆ ಇದು ಎಷ್ಟು ಮಟ್ಟಿಗೂ ಒಬ್ಬನ ಜೀವನೋಪಾಯಕ್ಕೂ ಸಹ ಸಾಕಾಗುವುದಿಲ್ಲ ಅಂಥಾ

...ಹೊಡತಿ ಮಕ್ಕಳಿದ್ದರೆ ಅವರು ಹೇಗೆ ಜೀವಿಸಬೇಕು? ಅದರಲ್ಲೂ ಈ ...ಕಾಲದಲ್ಲಿ ಅವರ ಅವಸ್ಥೆಯು ಹೇಳಬೇಕಾದದ್ದೇ ಇಲ್ಲ. ಸರ್ಕಾರದ ...ಸರಿಯಾಗಿ ನಡೆಯುತ್ತಾ ಇದ್ದುದರಿಂದ ಈ ಬದಲಿಯವರಿಗೆ ಸಂಬಳ ಹೆಚ್ಚುವ ...ಕ್ರಮವು ಎರಡು ವರ್ಷಗಳ ಹಿಂದೆ ವರ್ತಮಾನವಿತ್ತು. ಆದರೆ ಇದುವರೆಗೆ ...ವ ಏರ್ಪಾಡೂ ಆಗಲಿಲ್ಲ. ಆದ್ದರಿಂದ ಧರ್ಮಪ್ರಭುಗಳಾದ ಮಹಾರಾಜಾ ...ಸರ್ಕಾರದವರು ದಯವಿಟ್ಟು ಈ ಬದಲಿ ಮಾಸ್ಟರುಗಳ ಸಂಬಳವನ್ನು ಹೆಚ್ಚಿಸಿಕೊಡ ...ಬೇಕೆಂಬುದಾಗಿ ಪ್ರಜಾ ಪ್ರತಿನಿಧಿಗಳು ಸರ್ಕಾರದವರನ್ನು ಈ ವರ್ಷದ ಮಾಟಿಂ ...ನಲ್ಲಿ ಕೇಳಿ ಚರ್ಚಿಸಬೇಕಾಗಿ ಕೋರುವ

ವಿದ್ಯಾಭಿಮಾನಿ.

[ಇವರು ಹೇಳುವಂತೆ ಈ ಬದಲಿ ಮಾಸ್ಟರುಗಳ ಸಂಬಳ ಹೆಚ್ಚಾಗಿರಬೇಕು ...ಹತ್ತು ರೂಪಾಯಿ ಸಂಬಳದಿಂದ ಈ ಕಾಲದಲ್ಲಿ ಅವರ ಜೀವನ ನಡೆಯುವುದು ...ಹೇಗೋ ತಿಳಿಯುವುದಿಲ್ಲ. ಸರ್ಕಾರದವರು ಅವರಿಗೆ ಜೀವನ ನಡೆಯುವಂಥಾ ...ಸಂಬಳವನ್ನು ಮಾತ್ರವಾದರೂ ಕೊಡುವುದು ಧರ್ಮವೆಂದು ನಮಗೆ ತೋರುತ್ತದೆ. ಎಡಿ.]

ಹೊಗೆಸೊಪ್ಪಿನ ದುರ್ಗುಣಗಳು

...ಸ್ವಾಮಿ,

ಹೊಗೆಸೊಪ್ಪು ಮಾದಕ ದ್ರವ್ಯಗಳಲ್ಲಿ ಒಂದಾಗಿರುತ್ತದೆ. ಒಟು ಪ್ರಜೆಗ ...ಳಲ್ಲಿ ಸುಮಾರು ಶೇಕಡ ೯೦ ಜನಗಳು ಯಾವ ರೀತಿಯಲ್ಲಾದರೂ ಇದನ್ನು ...ಉಪಯೋಗಿಸುತ್ತಿರುವರು. ೬ ವರ್ಷದ ಹುಡುಗರು ಮೊದಲುಗೊಂಡು ಎಲ್ಲರೂ ...ಬೀಡಿ ಸಿಗರೇಟುಗಳನ್ನು ಸೇದುವರು. ಇನ್ನು ಕೆಲವರು ನಶ್ಯದ ರೀತಿಯಲ್ಲಿ ...ಉಪಯೋಗಿಸುವರು. ಹೆಂಗಸರುಗಳೂ ಅಡಕೆಲೆ ಜೊತೆಗೆ ಹಾಕಿಕೊಳ್ಳುವರು. ...ಬೀಡಿ, ಸಿಗರೇಟುಗಳನ್ನು ಸೇದುವುದರಿಂದ ಬಾಯಿ ದುರ್ವಾಸನೆಯಾಗುವುದ ...ಲ್ಲದೆ, ಪ್ರಾಣಾಧಾರಕವಾಗಿರುವ ಹೃದಯ ಕಮಲವು ಸುಟ್ಟು ಹೋಗುತ್ತದೆ. ...ನಶ್ಯವು ಮೆದುಳನ್ನು ಕೆಡಿಸಿ ಎಂದಿಗೂ ಗುಣವಾಗದಂಥಾ ತಲೆಶೂಲೆಯನ್ನು ...ಹುಟ್ಟಿಸುವುದಲ್ಲದೆ ಸರ್ವ ಇಂದ್ರಿಯಗಳಿಗೂ ಪ್ರಧಾನವಾಗಿರುವ ಕಣ್ಣನ್ನು ಕೆಡಿ ...ಸುತ್ತದೆ ಮತ್ತು ಪೀನಸಿ ಎಂಬ ರೋಗ ಉಂಟಾಗುತ್ತದೆ. ಇದನ್ನು ಅಡಕೆಲೆ ...ಜೊತೆಗೆ ಹಾಕಿಕೊಳ್ಳುವುದರಿಂದ ಬಾಯಿಯು ದುರ್ವಾಸನೆಯಾಗುವುದಲ್ಲದೆ, ...ವಾಸಿ ಮಾಡಲು ಆಗದಂಥಾ ಒಂದು ಹುಣ್ಣು ಬಾಯಿಯಲ್ಲಿ ಹುಟ್ಟುತ್ತದೆ. ...ವ್ಯಾಧಿ ಉಂಟಾದವರಲ್ಲಿ ಶೇಕಡ ೯ರಂತೆ ಕೊನೆಗಾಣುವುದಕ್ಕೆ ಬರುವುದಿಲ್ಲ. ...ವು ಅನೇಕ ಡಾಕ್ಟರುಗಳು ಹೇಳುತ್ತಿರುವರು. ಇದರಲ್ಲಿ ಇಷ್ಟು ನಾಶ ...ಕರವಾದಷ್ಟು ದುರ್ಗುಣಗಳಿದ್ದಾಗ್ಯೂ ಇದನ್ನು ಯಾವ ಪ್ರಯೋಜನಕ್ಕಾಗಿ ...ಉಪಯೋಗಿಸುತ್ತಿರುವರೋ ತಿಳಿಯದು. ...ದೆ ತಾಯಿಗಳು ಈ ...ವಾಗಿ ಮಕ್ಕಳಿಗೆ ಆಗಾಗ್ಗೆ ಬುದ್ಧಿವಾದವನ್ನು ಹೇಳುತ್ತಿದ್ದರೆ ಒಳ್ಳೆಯದು. ...ಪಾಠಶಾಲೆಗಳ ಉಪಾಧ್ಯಾಯರು ಹುಡುಗರು ಕಲಿತುಕೊಳ್ಳುವುದು ಎಲ್ಲರಿಗೂ ತಿಳಿ ...ದಿದೆ. ಈ ವಿಷಯವಾಗಿ ನಮ್ಮ ಧರ್ಮ ಸರ್ಕಾರದವರು ಒಂದು ಕಾನೂನ ...ನ್ನು ಮಾಡಿ ಕೆಲವು ಕಡೆ ಜಾರಿಗೆ ತಂದಿರುತ್ತಾರೆ. ಇದರಂತೆ ಸಂಸ್ಥಾನದ ...ಎಲ್ಲಾ ಕಡೆಯಲ್ಲಿಯೂ ಜಾರಿಗೆ ತರುವರೆಂದು ನಂಬಬೇಕಾಗಿದೆ.

ಎಚ್. ಜೆ. ನಾಗಪ್ಪ

ಜೀತದ ಪ್ರಕಾರವು

ತಮ್ಮ ಪತ್ರಿಕೆಯಲ್ಲಿ ಮ. ಟಿ. ವಿಶ್ವೇಶ್ವರಯ್ಯನವರು ಜೀತಪದ್ಧತಿಯ ವಿಷ ...ಯವಾಗಿ ಬರೆದಿರುವುದನ್ನು ಓದಿದೆನು. ನಮ್ಮ ದೇಶದ ಗ್ರಾಮಾಂತರಗಳ ಒಕ್ಕಲ ...ಗರಲ್ಲಿಯೇ ಈ ಪದ್ಧತಿಯು ಹೆಚ್ಚು ಆಚರಣೆಯಲ್ಲಿರುತ್ತದೆ. ರೈತರು ಅನಿ ...ವಾರ್ಯವಾದ ಸಂದರ್ಭಗಳಲ್ಲಿ ತಮ್ಮ ಸ್ಥಿರಸ್ವತ್ತು ಸಾಲದೇ ಇದ್ದರೆ ಅವರ ...ಗಂಡು ಅಥವಾ ಹೆಣ್ಣುಮಕ್ಕಳನ್ನು ಈಡುಮಾಡಿ ಪತ್ರ ಬರೆದುಕೊಟ್ಟು ...ಲ್ಲಿ ಸಾಲಮಾಡುತ್ತಾರೆ. ಈ ಹುಡುಗರು ಸಾಲಗಾರನ ಮನೆಯಲ್ಲಿ ...ದನಕಾಯುವುದೇ ಮುಂತಾದ ಕೆಲಸಗಳನ್ನು ಮಾಡಿಕೊಂಡು ಜೀವಿಸುತ್ತಾರೆ. ...ಅಥಾ ಜೀತಗಾರನು ಗೃಹಾಚಾರದ ಪಕ್ಷದಲ್ಲಿ ಸಾಲಗಾರನು ಛಲದಿಂದ ...ಸಾಲದ ಮೊಬಲಗನ್ನು ಹೆಚ್ಚಿಸುತ್ತಾನೆ. ಆಗ ಇಂಥಾ ಸಾಲ ...ತೀರಿಸುವುದಕ್ಕೆ ಮಾರ್ಗವಿಲ್ಲದೆ ಋಣಮುಕ್ತರಾಗುವುದೇ ಅಪರೂಪ ...ತಮ್ಮ ಮಕ್ಕಳನ್ನು ಜೀವಾವಧಿ ಸಾಲಗಾರನ ಗುಲಾಮರಾಗುವಂತೆ ಮಾಡಿ ...ತ್ತಾರೆ. ಅನೇಕ ವರ್ಷ ಪರಂಪರೆಗಳಿಂದ ಪುನಃ ಅದೇ ಮನೆಯ ಸೇವೆ ...ನಡೆಯುವುದೂ ಉಂಟು. ಇದರಿಂದ ಸಾಲವು ಬಹಳವಾಗಿ ಹೆಚ್ಚಿ ಅದನ್ನು ...ತೀರಿಸುವುದು ಕೇವಲ ಅಸಾಧ್ಯವಾಗುತ್ತದೆ. ಕಾಲಕ್ರಮೇಣ ತಂದೆತಾಯಿಗಳು ...ಮಕ್ಕಳ ಬಿಡುಗಡೆಯನ್ನು ತಾವು ಅಪೇಕ್ಷಿಸಿದಾಗಲೂ, ಪ್ರಾಪ್ತವ ...ಯಸ್ಕರಾದ ಮಕ್ಕಳು ತಾವೇ ತಮ್ಮ ಸ್ವಾತಂತ್ರ್ಯವನ್ನು ಬಯಸಿದಾಗಲೂ ...ಸಾಲವನ್ನು ತೀರಿಸುವ ಗತಿ ಇಲ್ಲದಿರುವುದರಿಂದ ಯಜಮಾನನು ಕುಟುಂಬಕ್ಕೆ ...ಆಧಾರವಾಗಿರುವ ಹೊಲ ಗದ್ದೆ ಸ್ಥಿರಸ್ವತ್ತುಗಳನ್ನು ಸಾಲಕ್ಕೆ ...ಆಗಿರುವುದರಿಂದ ಮಾಲೀಕನ ಹಸ್ತದಿಂದ ತಪ್ಪಿಸಿಬಿಟ್ಟು, ಸಂಸಾರವನ್ನೇ ...ದುಃಖಕ್ಕೆ ಗುರಿಪಡಿಸುತ್ತಾನೆ. ಈ ರೀತಿಯಲ್ಲಿ ಸಣ್ಣ ಮಕ್ಕಳನ್ನು ಈಡು ...ಮಾಡಿ ಬರೆಯಲ್ಪಟ್ಟ ಪತ್ರಗಳನ್ನೂ, ಅಂಥಾ ಪತ್ರಗಳ ಆಧಾರದ ಮೇಲೆ ಸ್ಥಿರ ...ಸ್ವತ್ತುಗಳನ್ನು ಪಡೆಯಬೇಕೆಂದು ಸಿವಿಲ್ ಕೋರ್ಟಿಗೆ ದಾಖಲಾಗುವ ದಾವಾಗ ...ಳನ್ನು ಸರ್ಕಾರದವರು ನಿರಾಕರಿಸುವಂತೆ ಕಾನೂನಾಗಬೇಕೆಂಬುದಾಗಿ ನನ್ನ ಅಭಿ ...ಪ್ರಾಯವಾಗಿದೆ.

ಮೈಸೂರು ರಾಮೇಶ್ವರೈಯ

ತಾಲ್ಲೋಕು ವರ್ತಮಾನಗಳು.

ಕೊಳ್ಳೇಗಾಲ.—ಇಲ್ಲಿ ಕಳೆದ ೨೨ ನೇ ತಾ. ಬೃಹಸ್ಪತಿವಾರ ರಾತ್ರಿ ...ನ ಹಳ್ಳಿಯ ಬ್ರಹ್ಮಶ್ರೀ ರಾಮದಾಸರವರು ಸಾಲಿಗ್ರಾಮೋತ್ಪತ್ತಿ ವಿಷಯ ...ದ ಹರಿಕಥಾ ಕಾಲಕ್ಷೇಪವನ್ನು ಮಾಡಿದರು. ಆಗ್ಗೆ ಈ ಗಾಮಸ್ಥರಾದ ಸಕ ...ಲ ಸಜ್ಜನರೂ, ಸರ್ಕಾರಿ ಅಧಿಕಾರಿಗಳೂ, ವಕೀಲರುಗಳೂ ಇತರ ನಿವಾಸಿ ...ಗಳೂ ಸುಮಾರು ೨೦೦–೩೦೦ ಜನಗಳು ದಯಮಾಡಿಸಿದ್ದರು. ಕಥಾಸಾರಾಂಶವು ...ಬಹು ಮನೋಹರವಾಗಿತ್ತು. ಸಭೆಯವರಲ್ಲಿ ಪ್ರಮುಖರಿಂದ ಬ್ರಹ್ಮಶ್ರೀ ...ದಾಸರ ತಮ್ಮಯ್ಯ ಶಾಸ್ತ್ರಿಗಳವರು ದಾಸರ ಅಸಾಧಾರಣವಾದ ಯೋಗ್ಯತೆ ...ಯನ್ನು ಕುರಿತು ಕಥಾಂತ್ಯದಲ್ಲಿ ಒಂದು ಉಪನ್ಯಾಸವಮಾಡಿ ದಾಸರಿಗೆ ಸಭೆಯ ...ಸನ್ಮಾನ ಮತ್ತು ಆಶೀರ್ವಾದ ರೂಪವಾದ ಒಂದು ಬಂಗಾರದ ಮೆಡಲನ್ನು ಬಹುಮಾನ ಮಾಡಿದರು. ಮತ್ತು ಈ ಸಂದರ್ಭದಲ್ಲಿ ಸಹಾಯಕರಾಗಿದ್ದ ಕೊಳ್ಳೇಗಾಲದ ಪಟೇಲ್ ವಿದ್ವಾನ್ ನಾರಾಯಣಸ್ವಾಮಿಗೂ, ಮೃದಂಗದ ಲಿಂಗಯ್ಯನಿಗೂ ಮರ್ಯಾದೆ ಮಾಡಲ್ಪಟ್ಟಿತು.

ಚಾಮರಾಜನಗರ.—೨–೩ ದಿನ ಸ್ವಲ್ಪ ಸ್ವಲ್ಪ ಮಳೆ ಬಂದ ಕಾರಣ ಕಾದುಕೊಂಡಿದ್ದ ರೈತರೆಲ್ಲಾ ರಾಗಿ ಪೈರಾವು ಮಾಡಿಬಿಟ್ಟರು. ಆದರೆ ತರಿ ಹೊಲಗಳು ಆಡುತ್ತವೆಯೇ ಹೊರ್ತು ಮಳೆ ಇಲ್ಲವೇ ಇಲ್ಲ. ಕೆರೆ ಭಾವಿಗಳಿಗೆ ನೀರಿಲ್ಲ. ಧಾರಣೆ ವಾಸಿಗಳು ಇಳಿಯಲಿಲ್ಲ. ಬಡವರಿಗೆ ತುಂಬಾ ಕಷ್ಟವಾಗಿದೆ.—ಜೂಜಾಟವು ಆನಸ್ಯ, ಮೂಕಳ್ಳಿ ಬಳಿ ಇನ್ನೂ ನಡೆಯುತ್ತಲೇ ಇದೆ. ಪೋಲೀಸ್ ಆಫೀಸಿನಲ್ಲಿ ವಿಚಾರಿಸಲಾಗಿ ವಾರಂಟು ಆಗುವದಕ್ಕೆ ಸಬ್ ಡಿವಿಜನ್ ಆಫೀಸಿಗೆ ಹೋಗಿದೆ ಅನ್ನುತ್ತಾರೆ.—ಇಲ್ಲಿ ಸಾರಾಯಿ ಅಂಗಡಿ ಇಟ್ಟಿರುವ ಮೊದಲಿಯಾರ್‌ರ ಪೈಕಿ ಅಕ್ಕನ ಒಡವೆಯನ್ನು ತಮ್ಮನು ಕಳುವು ಮಾಡಿಕೊಂಡು ಹೊರಟುಹೋಗಿದಾನೆಂದು ತಿಳಿಸಿದ್ದಷ್ಟು ಇಲ್ಲಿನ ಪೋಲೀಸ್ ಜಮಾದಾರ್‌ರು ಅವನನ್ನು ಕೋಲಾರದಿಂದ ಹಿಡಿದು ತಂದರು. ವಿಚಾರಣೆಗೆ ಗುರಿಮಾಡಿದಾರೆ.—೧೯೦೭ ರಲ್ಲಿ ಇಲ್ಲಿ ರಾಸುಗಳನ್ನು ಕಳವು ಮಾಡಿದ್ದ ಒಬ್ಬ ಕರ್ನಾಟಕ ಬ್ರಾಹ್ಮಣನು ೪–೫ ವರ್ಷಗಳಿಂದ ಸಿಕ್ಕಿರಲಿಲ್ಲ. ಈಗ ಇಲ್ಲಿನ ಪೋಲೀಸಿನವರು ಸಂತೆಮರಳ್ಳಿಯಲ್ಲಿ ಹಿಡಿದು ವಿಚಾರಣೆಗೆ ಗುರಿಮಾಡಿದಾರೆ. ಈ ಮರೆ ಕದ್ದವನ ವಿಚಾರಣೆ ಇನ್ನೂ ನಡೆಯುತ್ತಲೇ ಇದೆ.

ದಾವಣಗೆರೆ.—ಈ ಊರಿನಲ್ಲಿ ವಿಶೇಷ ಮಳೆಯಾಗಿರುವುದಲ್ಲದೆ ಪೈರು ಪಚ್ಚೆಗಳು ಚೆನ್ನಾಗಿ ಬೆಳದು ಜನಗಳಿಗೆ ಹರ್ಷವನ್ನುಂಟುಮಾಡಿರುತ್ತವೆ.—ಈ ಊರಿನಿಂದ ಸ್ಕೂಲ್ ಫೈನಲ್ ಕ್ಲಾಸಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಹೋಗಿರುವ ಹರಿದಾಸ ದುಗ್ಗಪ್ಪನೆಂಬ ವಿದ್ಯಾರ್ಥಿಗೆ ಇಲ್ಲಿನ ಸಾಹುಕಾರ್‌ರುಗಳು ಮೆ॥ ಗಳಾದ ಮುರುಡಪ್ಪ, ರಾಜನಹಳ್ಳಿ ವಿರೂಪಾಕ್ಷಪ್ಪ, ರಾಮಲಿಂಗಪ್ಪ, ಗುಂಟನೂರು ಲಕ್ಷ್ಮಪ್ಪನವರ ದೊಡ್ಡ ಅಡಿವಪ್ಪ, ನಾಮನೂರು ಸೋಮಣ್ಣ, ಇವರುಗಳು ಪ್ರತಿ ತಿಂಗಳಿಗೆ ತಲಾ ಎರಡು ರೂಪಾಯಿನಂತೆ ಸಹಾಯ ಮಾಡುತ್ತಾ ಇರುವರು. ಈ ರೀತಿ ಸಾಹುಕಾರರುಗಳು ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಾ ಬಂದರೆ ರಾಜಭಾಷೆಯಾದ ಇಂಗ್ಲೀಷು ಭಾಷೆಯು ಹೆಚ್ಚುತ್ತಾ ಬಂದು ಹಿಂದುಳಿದಿರುವ ಬಡ ಜನಗಳನ್ನು ಮುಂದಕ್ಕೆ ಬರುವಂತೆ ಮಾಡಬಹುದು. ಇವರು ಮಾಡಿರುವ ಮಹೋಪಕಾರವು ಸ್ತೋತ್ರಾರ್ಹವಾಗಿರುತ್ತದೆ. ಮತ್ತು ಹೀರಶೈವ ಜಗದ್ಗುರುಗಳವರ ನಾಮಾ ಮಠದಲ್ಲಿ ಶ್ರೀ ಮೃತ್ಯುಂಜಯ ದೇವರ ಅಧ್ಯಕ್ಷತೆಯಲ್ಲಿ ಸಾಯಂಕಾಲ ದೇವರ ಭಜನೆ ಮತ್ತು ಉಪನ್ಯಾಸಗಳು ನಡೆಯುವುದರಿಂದ ಅಲ್ಲಿ ನಿತ್ಯವೂ ೩೦೦ ಜನಗಳವರಿಗೆ ಸೇರುತ್ತಿರುವರು.

ಹಿರಿಯೂರು.—ಕೆಲವು ದಿವಸಗಳಿಂದ ಬಿಸಲು ಕಾಯುತ್ತಿದ್ದು ಈಗೀಗ ಸ್ವಲ್ಪ ಮಳೆಯಾಗುತ್ತಾ, ಪೈರುಗಳಿಗೆ ಅನುಕೂಲವಾಗಿದೆ. ಧಾರಣೆವಾಸಿಗಳು ಯಥಾಸ್ಥಿತಿ ಇರುತ್ತವೆ.—ಅನಾಥಾಲಯವು ಈ ತಿಂಗಳಲ್ಲಿ ಪ್ರಾರಂಭವಾಗುವುದೆಂದು ಪ್ರಕಟವಾಗಿತ್ತಷ್ಟೆ. ಆದರೆ ಕಾರಣಾಂತರದಿಂದ ಕಾರ್ತೀಕ ಮಾಸದಲ್ಲಿ ಪ್ರಾರಂಭಿಸಲ್ಪಡುವುದಾಗಿ ತಿಳಿಯುತ್ತೇನೆ. ಅನಾಥ ಬಾಲಕರು ಆ ಒಳಗಾಗಿ ಬಂದು ಸೇರುವುದಕ್ಕೆ ಅನುಕೂಲವಾಗಿದೆ. ಮ. ಹಿರೇಬಿ ಗೋವಿಂದಪ್ಪನವರು ತಮ್ಮ ಮನೆಯನ್ನೆಲ್ಲಾ ಮ. ಬೇಲೂರು ಕೇಶವರಾಯ ಶೆಟ್ಟರವರಿಗೆ ವಹಿಸಿರುವುದರಿಂದ ಅನಾಥಾಲಯದ ಕಾರ್ಯಗಳು ಮುಂದೆ ಸಮರ್ಪಕವಾಗಿ ನಡೆಯುವುದಾಗಿ ನಂಬುತ್ತೇನೆ.—ಇಲ್ಲಿ ಎ. ವಿ. ಸ್ಕೂಲ್ ಇಂಗ್ಲಿಷ್ ಅ. ಮಾಸ್ಟರಾದ ಮ. ನರಸಿಂಹಾಚಾರ್ಯರಿಗೆ ಚಿಕ್ಕಪೇಟೆಯ ಗುಮಾಸ್ತೆ ಕೆಲಸವಾಯಿತು. ಕಳೆದ ವಾರ ಅವರ ಮಿತ್ರಮಂಡಲಿಯವರು ಅವರಿಗೆ ಟೀ ಪಾರ್ಟಿಯನ್ನು ಕೊಟ್ಟು ಪ್ರೀತಿಯನ್ನು ಬಯಸಿದರು.—ಇಲ್ಲಿ ಪ್ರಜಾನುರಾಗಿಗಳಾಗಿದ್ದ ಡಾಕ್ಟರ್ ನಂಜುಂಡಯ್ಯನವರಿಗೆ ಚಿತ್ರದುರ್ಗಕ್ಕೆ ವರ್ಗವಾಗಿ ತರೀಕೆರೆಯಿಂದ ಡಾಕ್ಟರ್ ಗುರುರಾಯರು ಬಂದಿರುತ್ತಾರೆ.—ಮಾಲೂರಿನಿಂದ ೧೧–೧೨ ವಯಸ್ಸಿನ ಅಶ್ವತ್ಥನಾರಾಯಣನೆಂಬ ಬಾಲಕನು ಸಂಗೀತದಲ್ಲಿ ಬಹಳ ಪರಿಶ್ರಮಹೊಂದಿ, ಅನೇಕ ಕಡೆ ಒಳ್ಳೆಯ ಯೋಗ್ಯತಾ ಪತ್ರಿಕೆಗಳನ್ನೂ, ಬೇಲೂರಿನಲ್ಲಿ ಭಂಗಾರದ ಮೆಡಲನ್ನೂ ಪಡೆದು, ಇಲ್ಲೂ ೨–೩ ಕಡೆ ಸಂಗೀತ ಕಚೇರಿ ಮಾಡಿದನು. ಈತನಿಗೆ ನೇತ್ರಪಾಟವಿಲ್ಲದವನಾಗಿ, ವಯಸ್ಸು ಚಿಕ್ಕದಾಗಿದ್ದರೂ ಈ ಅಸಾಧಾರಣವಾದ ಪರಿಶ್ರಮಹೊಂದಿರುವುದು ಕೇವಲ ಆಶ್ಚರ್ಯವಾಗಿದೆ.—ಇಲ್ಲಿನ ಸಾಹುಕಾರರು ಮ. ಸತ್ತೆ ಬೀರಪ್ಪನವರಿಗೆ ಕಳೆದ ತಾ. ೨೭ ನೇ ಭಾನುವಾರ ದ್ವಿತೀಯ ವಿವಾಹವು ಬಹಳ ಆಡಂಬರದಿಂದ ನೆರವೇರಿತು. ಆದ್ದರಿಂದ ತಾಲ್ಲೂಕು ಅಮಲ್ದಾರರೂ, ಇತರ ಸರ್ಕಾರಿ ನೌಕರರೂ ಸ್ಥಳಿಕರೂ ಆಹ್ವಾನಿಸಲ್ಪಟ್ಟಿದ್ದು, ಮದುವೆಯು ವಿಜೃಂಭಣೆಯಿಂದ ನಡೆಯಿತು. ಇವರೇ ಗರ್ಲ್ಸ್ ಸ್ಕೂಲ್ ಮೊದಲಾದ ಕಟ್ಟಡಗಳನ್ನು ಕಟ್ಟಿಸಿಕೊಡುವವರಾಗಿರುವರು.

ದೇವನಹಳ್ಳಿ.—ಈ ಪ್ರಾಂತ್ಯದಲ್ಲಿ ಮಳೆಗಳು ಸಮೃದ್ಧಿಯಾಗಿ ಬಿದ್ದು ಪೈರುಪಚ್ಚೆಗಳೆಲ್ಲಾ ಚನ್ನಾಗಿದ್ದಾಗ್ಯೂ ಅನಾವೃಷ್ಟಿ ಪ್ರದೇಶಗಳಲ್ಲಿರುವಂತೆಯೇ ಇಲ್ಲಿಯೂ ಧಾರಣೆವಾಸಿಗಳು ಇನ್ನೂ ಏರುತ್ತಲೇ ಇವೆ. ಅಕ್ಕಿ ರೂಪಾಯಿಗೆ ೬ ಸೇರೂ ರಾಗಿ ೧೨ ಸೇರೂ ಮಾರುತ್ತಲಿವೆ. ಇಂಥಾ ದುರ್ಭಿಕ್ಷ ಕಾಲದಲ್ಲಿಯೂ ವರ್ತಕರು ಕಮ್ಮಿ ಸೇರು, ಕಮ್ಮಿ ತೂಕದ ಬಟ್ಟುಗಳನ್ನು ಇಟ್ಟುಕೊಂಡು ಪ್ರಜೆಗಳನ್ನು ಮೋಸಪಡಿಸುತ್ತಿರುವರು. ಧರ್ಮ ಸರ್ಕಾರದವರು ಹೊಸದಾಗಿ ಮಾಡಿಸಿರುವ ತೂಕದ ಬಟ್ಟುಗಳನ್ನೂ, ಅಳತೆ ಸೇರುಗಳನ್ನೂ ಜಾಗ್ರತೆಯಲ್ಲಿಯೇ ಜಾರಿಗೆ ತಂದರೆ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ. ಊರಿನೊಳಗೆ ಟೈಫಾಯ್ಡ್ ಜ್ವರ, ಕೆಮ್ಮಲು, ಭೇದಿ ಮೊದಲಾದವು ಹರಡಿ ಜನಗಳನ್ನು ಪೀಡಿಸುತ್ತಲಿವೆ. ಈ ವಿಷಯದಲ್ಲಿ ಮಕ್ಕಳ ಅವಸ್ಥೆ ಹೇಳತೀರದು. ಅಂಗಡಿಗಳಲ್ಲಿ ವಿಶೇಷವಾಗಿ ಮಾರಾಟವಾಗುವ ಕುಸುಬೆ ಮತ್ತು ಕಡ್ಲೆಕಾಯಿ ಎಣ್ಣೆಯ ತಿಂಡಿ ಪದಾರ್ಥಗಳೇ ಇದಕ್ಕೆ ಕಾರಣವೆಂದು ಹೇಳಬಹುದು.—ಊರಿನಲ್ಲಿ ಕುಂಬಾರರ ಆವಿಗಳು ಸದಾ ಉರಿಯುತ್ತಿರುವುದರಿಂದ ಇದರ ಹೊಗೆಯಿಂದ ಜನಗಳಿಗೆ ತುಂಬಾ ಅನಾರೋಗ್ಯಕ್ಕೆ ಆಸ್ಪದವಾಗಿದೆ. ಈ ವಿಷಯಗಳಲ್ಲಿ ನಮ್ಮ ಸ್ಯಾನಿಟರಿ ಇನ್‌ಸ್ಪೆಕ್ಟರವರು ಯಾಕೆ ಗಮನಕೊಡಬಾರದೋ ತಿಳಿಯದು.—ಈಚೆಗೆ ಇಲ್ಲಿ ೪–೫ ಕಳ್ಳತನಗಳು ನಡೆದವು. ಇವುಗಳಲ್ಲಿ ಅಕ್ಕಸಾಲೆ ರಾಮಕ್ಕನೆಂಬುವಳ ಮನೆಯಲ್ಲಿ ಅವಲಕ್ಕಿ ಭದ್ರಣ್ಣನೆಂಬುವನು ಮಾಡಿದ ಸುಮಾರು ೩೦೦ ರೂಪಾಯಿ ಕಳ್ಳತನವೇ ದೊಡ್ಡದು. ನಮ್ಮ ಪಬ್ಲಿಕ್ ಪ್ರಾಸಿಕ್ಯೂಟರವರು, ಡಫೇದಾರರು, ತುಂಬಾ ಮುತುವರ್ಜಿ ವಹಿಸಿ ಇದನ್ನು ಪತ್ತೆ ಮಾಡಿರುತ್ತಾರೆ.—ಹಿಂದೆ ಇಲ್ಲಿಗೆ ಬಂದಿದ್ದ ಅನೇಕ ಜನ ಅಮಲ್ದಾರರುಗಳು ಇಲ್ಲಿನ ತಾಲ್ಲೂಕು ಕಛೇರಿ ಸಮೀಪದಲ್ಲಿ ಅನೇಕ ಭಾವಿಗಳನ್ನು ತೋಡಿಸಿದ್ದರು. ಆದರೆ ಯಾವುದರಲ್ಲಿಯೂ ನೀರಿಲ್ಲದೆ ಕಛೇರಿಗೆ ಬರತಕ್ಕ ಗ್ರಾಮಾಂತರ ಜನಗಳಿಗೆ ನೀರಿಗೆ ತುಂಬಾ ಕಷ್ಟವಾಗಿತ್ತು. ಈಗಿನ ನಮ್ಮ ಅಮಲ್ದಾರ್ ಮೆ॥ ನಾರಣಯ್ಯನವರು ಹೊಸದಾಗಿ ಒಂದು ಭಾವಿಯನ್ನು ತೋಡಿಸಿದಾರೆ. ಇದರಲ್ಲಿ ಯಥೇಷ್ಟವಾದ ಜಲವು ಬಿದ್ದಿರುವುದನ್ನು ನೋಡಿ ಜನಗಳು ತುಂಬಾ ಸಂತೋಷಪಡುತ್ತಿದಾರೆ.

ಹೊಸಕೋಟೆ.—ಈ ಊರಿಗೆ ೪ ಮೈಲಿ ದೂರದಲ್ಲಿರುವ ಚಿಕ್ಕಗಟಿಗನಬೆ ಎಂಬ ಗ್ರಾಮದಲ್ಲಿ ಹೆಡ್ ಶಿಪಾಯಿ ಷೇಕ್‌ಮದಾರ್ ಸಾಬರ ಮನೆಯಲ್ಲಿ ಕಳೆದ ತಿಂಗಳು ೧೬ ನೇ ತಾ. ಬೆಳಿಗ್ಗೆ ಒಂದು ಆಶ್ಚರ್ಯಕರವಾದ ಗಂಡು ಮಗು ಹುಟ್ಟಿತು. ಈ ಮಗುವಿಗೆ ಮಲದ್ವಾರವಿರಲಿಲ್ಲ. ಆಗ ಅಲ್ಲಿದ್ದವರು ಆ ಕೂಸನ್ನು ಪರೀಕ್ಷಿಸಲಾಗಿ ಸಂಪೂರ್ಣವಾಗಿ ಮಲದ್ವಾರವಿಲ್ಲದೇನೇ ಹುಟ್ಟಿತು ಎಂಬದಾಗಿ ತಿಳಿಯ ಬಂದದ್ದರ ಮೇಲೆ ತಕ್ಷಣವೇ ವಿವೇಕಿಯಾದ ಆ ಕೂಸಿನ ತಂದೆಯಾದ ಷೇಕ್‌ಮದಾರ್ ಸಾಬಿಯು ಆ ಕೂಸನ್ನು ಆಸ್ಪತ್ರೆಗೆ ತೆಗೆದುಕೊಂಡು ಬಂದು ಮಗುವಿನ ಸಮಾಚಾರವನ್ನು ತಿಳಿಸಿದನು. ಆಗ ದಯಾಳುಗಳಾದ ಡಾಕ್ಟರು ರಾಮಸ್ವಾಮಿಪಿಳ್ಳೆಯವರು ಬಹು ಮುತುವರ್ಜಿಯಿಂದ ಆ ಮಗುವಿನ ಮಲದ್ವಾರವನ್ನು ಕೊಯಿದು ತಕ್ಕ ಚಿಕಿತ್ಸೆ ಮಾಡಿದ ತರುವಾಯ ಮಲವಿಸರ್ಜನೆಯು ಸ್ವಾಭಾವಿಕವಾಗಿ ಆಯಿತು. ಈಗ ಈ ಮಗುವು ಸಂಪೂರ್ಣ ಆರೋಗ್ಯವಾಗಿದೆ. ಡಾಕ್ಟರು ಈ ಮಗುವಿಗೆ ಮಾಡಿದ ಚಿಕಿತ್ಸೆ ಮತ್ತು ಪಟ್ಟ ಕಷ್ಟಗಳು ವ್ಯರ್ಥವಾಗದಂತೆ ಈ ಮಗುವು ಸಂಪೂರ್ಣವಾದ ಕ್ಷೇಮವನ್ನೂ ಬಲವನ್ನೂ ಹೊಂದಿ ಬೆಳೆಯಲೆಂದು ಪ್ರಾರ್ಥಿಸುತ್ತೇನೆ.—ಈ ಊರಿನಲ್ಲಿ ಮಳೆ ಇಲ್ಲದೆ ರೈತರು ಬಹು ಕಷ್ಟಪಟ್ಟುಕೊಂಡು ಯಾವಾಗಲೂ ಆಕಾಶವನ್ನೇ ನೋಡುತ್ತಾ ಇದ್ದರು. ಆದರೆ ಕಳೆದ ೨೦ ನೇ ತಾ. ದಿನ ಎರಡು ಹದ ಮಳೆ ಸುರಿಯಿತು. ಪುನಃ ೨೨ ನೇ ತಾ. ೨೧ ಹದ ಮಳೆ ಬಿತ್ತು. ತರುವಾಯ ಎರಡಾವರ್ತಿ ಸಣ್ಣ ಮಳೆ ಬಿತ್ತು. ಈಗ ಪೈರುಗಳೆಲ್ಲಾ ಬಹಳ ಹಸನಾಗಿವೆ. ರೈತರೆಲ್ಲಾ ಬಹಳ ಸಂತೋಷಪಡುತ್ತಾ ಇದಾರೆ. ಆದರೆ ಅಕ್ಕಿ ರಾಗಿಯ ಧಾರಣೆ ಮಾತ್ರ ಬಹಳ ಚಡಾವಾಗಿದೆ. ಧಾರಣೆವಾಸಿ ಯಾವಾಗ ಇಳಿಯುತ್ತದೋ ತಿಳಿಯದು. ಧಾತು ಈಶ್ವರ ಸಂವತ್ಸರಗಳಲ್ಲಿ ಯಾವ ಪ್ರಕಾರ ಧಾರಣೆಗಳು ಇದ್ದವೋ ಅದೇ ಪ್ರಕಾರ ಈಗಲೂ ಇವೆ. ಆದ್ದರಿಂದ ದಯಾಳುಗಳಾದ ನಮ್ಮ ಮೈಸೂರು ಮಹಾರಾಜಾ ಸರ್ಕಾರದವರು ಬಡನೌಕರರಿಗೆ ಬರುವ ಸಂಬಳವನ್ನೂ ಈಗಿನ ಧಾರಣೆವಾಸಿಯನ್ನೂ ಆಲೋಚಿಸಿ ಒಡಸಂಸಾರಿಗಳು ಜೀವನೋಪಾಯವನ್ನು ನಡಿಸಿಕೊಂಡು ಹೋಗುವ ಹಾಗೆ ಕ್ಷಾಮಕಾಲದ ಅಲೋಯನ್ಸನ್ನು ಕೊಟ್ಟು ಕಾಪಾಡುವರೆಂದು ಪ್ರಾರ್ಥನೆ.

ತರೀಕೆರೆ.—ಈ ಊರಿನ ಡಾಕ್ಟರು ಮ. ಎಂ. ಗುರುರಾಯರು ಬೀರೂರಿಗೆ ವರ್ಗವಾಗಿ ಹೋದರು. ಇವರ ಸ್ಥಳಕ್ಕೆ ಮೈಸೂರಿಂದ ಮ. ರಾಜಗೋಪಾಲನಾಯುಡು ಯವರು ಬಂದಿರುತ್ತಾರೆ. ಮೊದಲಿನವರು ಯಾವ ಪ್ರಕಾರವಾಗಿ ಬಡಬಗ್ಗರನ್ನೂ, ದೊಡ್ಡವರನ್ನೂ ಒಂದೇ ರೀತಿಯಾಗಿ ಕಾಣುತ್ತಾ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರೋ ಇವರೂ ಅದೇ ರೀತಿಯಾಗಿದ್ದುಕೊಂಡು ಒಳ್ಳೇ ಕೀರ್ತಿಯನ್ನು ಪಡೆಯುವರೆಂದು ನಂಬುತ್ತೇನೆ.—ಇಲ್ಲಿನ ಸೂಲಗಿತ್ತಿಯು ಖಾಯಿಲೆಯ ದೆಸೆಯಿಂದ ರಜಾ ಪಡೆದುಕೊಂಡು ಹೋಗಿದ್ದಾಗ್ಯೂ, ಸರ್ಕಾರದವರು ಇನ್ನೂ ಯಾರನ್ನೂ ಈ ಸ್ಥಳಕ್ಕೆ ಕಳುಹಿಸದಿರುವದು ತುಂಬಾ ಆಶ್ಚರ್ಯವಾಗಿದೆ. ಇದು ಭಾರಿ ತಾಲ್ಲೂಕು. ಇಲ್ಲಿಗೆ ಸೂಲಗಿತ್ತಿ ಬಹು ಆವಶ್ಯಕ. ನಮ್ಮ ಸೀನಿಯರ್ ಸರ್ಜನ್ ರವರು ಒಬ್ಬ ಸೂಲಗಿತ್ತಿಯನ್ನು ಕಳುಹಿಸಿಕೊಡುವರೆಂದು ನಂಬುತ್ತೇನೆ.—ಈಗ ಸುಮಾರು ೫೦–೬೦ ವರ್ಷಗಳ ಕೆಳಗೆ ಮೆ॥ ಹೆನ್ರಿ ಕೋರ್ಬೆಟ್ ಎಂಬುವರು ಈ ಪ್ರಾಂತ್ಯ ಸಂಚಾರ ಮಾಡಿ ಕಲ್ಲತ್ತಗಿರಿ ಮೇಲೆ ಕಾಫಿ ಪ್ಲಾಂಟೇಷನ್ ಪ್ರಾರಂಭಿಸಿ, ಕಾಡಾಗಿದ್ದ ಸ್ಥಳಗಳನ್ನೆಲ್ಲಾ ಬಹು ಉತ್ತಮ ಸ್ಥಿತಿಗೆ ತಂದು ಮೈಸೂರು ಸೀಮೆಯಲ್ಲಿ ಒಳ್ಳೇ ಕೀರ್ತಿಪಡೆದಿದ್ದರು. ಇವರು ಮಾಡಿದ ಧರ್ಮ ಕಾರ್ಯಗಳು ಅನೇಕ ಉಂಟು. ಇವರು ಎಲ್ಲಾ ಮತಸ್ಥರಿಗೂ ತಮ್ಮ ಪ್ರೀತಿಯನ್ನು ತೋರಿಸಿದಾರೆ. ಶಿವಮೊಗ್ಗೆಯಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಮುಟ್ಟಿಸಿ, ಬಹು ಸೊಗಸಾದ ಛತ್ರವನ್ನು ಕಟ್ಟಿಸಿದಾರೆ. ಮತ್ತು ಅಲ್ಲಿನ ವೆಸ್ಲಿಯನ್ ಮಿಷನ್ ದೇವಾಲಯ ಕಟ್ಟುವುದಕ್ಕೆ ಎಷ್ಟೋ ದ್ರವ್ಯಸಹಾಯ ಮಾಡಿದರು. ಈ ತರೀಕೆರೆ ಪ್ರಾಂತ್ಯದಲ್ಲಿ ಅನೇಕರಿಗೆ ತೋಟ ಗದ್ದೆ ಮೊದಲಾದವುಗಳನ್ನು ಉಚಿತವಾಗಿ ಕೊಟ್ಟಿದಾರೆ. ಇಂಥವರ ಜ್ಯೇಷ್ಠ ಕುಮಾರರಾದ ಮೆ॥ ಹೆಚ್. ಕೋರ್ಬೆಟ್‌ಯವರು ರೋಗ ಪೀಡಿತರಾಗಿ ಕಳೆದ ತಿಂಗಳು ೧೫ ನೇ ತಾ. ಶಿವಮೊಗ್ಗೆಯಲ್ಲಿ ಕಾಲವಾದ ಸಂಗತಿಯನ್ನು ಕೇಳಿ, ಈ ಪ್ರಾಂತ್ಯದ ಅನೇಕರು ತುಂಬಾ ಚಿಂತಿಸುತ್ತಾರೆ. ಇವರು ಶಿಕಾರಿ ಮಾಡುವುದರಲ್ಲಿ ಬಹು ಹೆಸರುವಾಸಿಯಾಗಿದ್ದರು. ಸುಮಾರು ೫೦ ವರ್ಷ ವಯಸ್ಸಾಗಿದ್ದ ಇವರಿಗೆ ಒಬ್ಬ ತಂಗಿ, ಒಬ್ಬ ತಮ್ಮ, ಇಬ್ಬರು ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳೂ, ಪತ್ನಿಯೂ ಇರುತ್ತಾರೆ.

ಹಾಸನ.—ಈ ಪ್ರಾಂತ್ಯ ಮಳೆ ಸಾಕಾದಷ್ಟಾಗಿದೆ. ಧಾರಣೆ ವಾಸಿಯಾದರೋ ಕ್ಷಾಮಕಾಲವನ್ನೇ ಹೋಲುತ್ತಲಿದೆ. ಇಸ್ಪೀಟು ಮೂರೆಲೆ ಆಟವು ಪ್ರಬಲವಾಗಿದೆ. ಇದರ ದೆಸೆಯಿಂದ ಅನೇಕ ಕುಟುಂಬಗಳೇ ಕೆಟ್ಟುಹೋಗಿವೆ. ದೊಡ್ಡ ದೊಡ್ಡ ಉದ್ಯೋಗಸ್ಥರೂ, ತಕ್ಕಮಟ್ಟಿಗೂ ವಿದ್ಯಾವಂತರಾದವರೂ ಈ ದುವ್ಯಸನಗಳಲ್ಲಿ ಪ್ರವೇಶಿಸಿರುವದು ತುಂಬಾ ನಾಚಿಕೆಯಾಗಿದೆ.—೨ ತಿಂಗಳ ಹಿಂದೆ ಅರಸೀಕೆರೆ ತಾಲ್ಲೂಕು ಕತ್ಲಿಂಗೆರೆ ಗ್ರಾಮದಲ್ಲಿ ಕೆಂಗನ ಹನುಮನೆಂಬ ಒಕ್ಕಲಿಗನನ್ನು ಇವನ ಹೆಂಡತಿ ತಿಮ್ಮಿಯೂ, ನಾಗ ತಿಮ್ಮನೂ, ಮತ್ತೊಬ್ಬ ಎಂಬುವನೂ ಸೇರಿ ಖೂನಿಮಾಡಿದ್ದರೆಂಬ ಮೊಕದ್ದಮೆಯು ವಿಚಾರಣೆ ನಡೆದು, ಮೊನ್ನೆ ತಾ. ೨೩ ನೇ ಶುಕ್ರವಾರ ತೀರ್ಪು ಹೇಳಲ್ಪಟ್ಟಿತು. ತಿಮ್ಮಿಯು ಪ್ರೇರಕಳೆಂದೂ, ಮತ್ತೊಬ್ಬನು ಕೊಂದವನೆಂದೂ ವ್ಯಕ್ತವಾದುದರಿಂದ ಇವರಿಬ್ಬರಿಗೂ ಮರಣದಂಡನೆಯಾಗಿ, ಕೊಲೆಯಾದವನ ಮಗ ತಿಮ್ಮನು ಅಪ್ರೂವರಾಗಿ ಆರಿಸಿಕೊಳ್ಳಲ್ಪಟ್ಟಿದ್ದುದರಿಂದ ಬಿಡುಗಡೆ ಹೊಂದಿದನು. ಇದಲ್ಲದೆ ಈ ಊರಿಗೆ ಸಮೀಪದಲ್ಲಿ ನಡೆದಿದ್ದ ಇನ್ನೊಂದು ಖೂನಿ ಮೊಕದ್ದಮೆಯು ಸರಿಯಾದ ರುಜುವಾತು ಸಿಕ್ಕಲಿಲ್ಲವೆಂದು ವಜಾ ಆಯಿತಂತೆ.—ಇಲ್ಲಿಗೆ ಸಮೀಪದಲ್ಲಿರುವ ಕಿಕ್ಕಾನೆ ಎಂಬ ಗ್ರಾಮದಲ್ಲಿ ಒಬ್ಬ ಸ್ಮಾರ್ತ ಬ್ರಾಹ್ಮಣನು ತನ್ನ ಪತ್ನಿಯನ್ನು ನೀರು ಸೇದುವ ಭಾವಿಗೆ ತಳ್ಳಿಬಿಟ್ಟು ಕೊಂದುಹಾಕಿದನೆಂದು ವರ್ತಮಾನ ಬಂದು ಪೋಲೀಸಿನವರು ಅಲ್ಲಿಗೆ ಹೋಗಿ ವಿಚಾರಣೆ ನಡೆಸಿ, ಆ ಹೆಂಗಸು ನೀರು ಸೇದುತ್ತಿದ್ದಾಗ ರಾಟೆಯು ಮುರಿದು ಆಕೆ ಭಾವಿಯಲ್ಲಿ ಬಿದ್ದು ಮೃತಪಟ್ಟಳೆಂದು ಗೊತ್ತುಮಾಡಿಕೊಂಡು ಬಂದರೆಂದು ತಿಳಿದು ಬಂದಿದೆ.—ರೈಲ್ವೆ ಇಂಜಿನಿಯರ್ ಮೆ॥ ಕ್ಯಾಪ್ ಸಾಹೇಬರು ಕೆಲವು ದಿನ ಸಿಬ್ಬಂದಿಯೊಡನೆ ಚನ್ನರಾಯಪಟ್ಟಣದಲ್ಲಿದ್ದುಕೊಂಡು, ರೈಲ್ವೆಯ ಸರ್ವೇ ಕೆಲಸವನ್ನು ಮಾಡು

ವಾದಕ್ಕಾಗಿ ಬಂದಿದಾರೆ. ಶ್ರೀರಂಗಪಟ್ಟಣದಿಂದ ಸಟ್ಟಿಗೆ ಕೊನೇಹಳ್ಳಿಗೆ ಮೊದಲು ರೈಲ್ ಹಾಕಿ ಅನಂತರ ಅದೇ ಮಾರ್ಗದ ಗಂಡಸಿ ಎಂಬ ಸ್ಥಳದಿಂದ ಹಾಸನಕ್ಕೆ ಸಣ್ಣ ರೈಲ್ ಮಾರ್ಗವನ್ನು ಏರ್ಪಡಿಸುವ ಯೋಚನೆಯುಳ್ಳದ್ದಾಗಿಯೂ ತಿಳಿದು ಬಂದಿದೆ. ಮೊದಲಿನ ಏರ್ಪಾಡಿನಂತೆ ಮೈಸೂರಿನಿಂದ ಸಟ್ಟಿಗೆ ಹೊಳೇನರಸೀಪುರದ ಮಾರ್ಗವಾಗಿ ಈ ಊರಿನ ಮೇಲೆ ಅರಸೀಕೆರೆಗೆ ಕೂಡಿಸುವುದಾದರೆ ಇದರಿಂದ ಅಧಿಕಾಧಿಕ ಲಾಭವೂ, ವ್ಯವಸಾಯಗಳಿಗೂ ವ್ಯಾಪಾರಿಗಳಿಗೂ ಹೆಚ್ಚಾದ ಪ್ರಯೋಜನವೂ ಉಂಟಾಗುತ್ತಿದ್ದುದರಲ್ಲಿ ಸಂದೇಹವಿಲ್ಲ. ಸರ್ಕಾರದವರು ಪೂರ್ವದ ಉದ್ದೇಶವನ್ನೇ ಜಾರಿಗೆ ತಂದರೆ ಸಂತೋಷ.

ನಂಜನಗೂಡು.—ಧಾರಣೆವಾಸಿಗಳು ಬಹಳ ಭಡಾವಾಗಿರುತ್ತೆ. ಅಕ್ಕಿ 5½-6 ಸೇರಿನ ಮೇಲೆ ಸಿಕ್ಕುವದಿಲ್ಲ.—ಒಂದು ವಾರದಿಂದ ಶೀತಗಾಳಿ ಬೀಸುತ್ತಿದೆ. ಈ ಊರಿನಲ್ಲಿ 15 ದಿವಸಗಳ ಒಳಗೆ ಪರಸ್ಥಳಗಳಿಂದ ಬಂದ ಪ್ಲೇಗ್ ರೋಗದಿಂದ 5-6 ಜನಗಳು ಸತ್ತರು. ಅಲ್ಲಲ್ಲಿ ಕಾಲರಾ ಉಪದ್ರವಿರುವಂತೆ ವದಂತಿ ಇದೆ. ಇಲ್ಲಿನ ವೆಸ್ಲಿಯನ್ ಮಿಷನ್ ಸ್ಕೂಲನ್ನು ಹೊಸದಾಗಿ ಕಟ್ಟಿರುವ ಮಾರ್ಕೆಟ್ಟಿನ ಮಹಡಿಯ ಮೇಲೆ ಮಾಡುತ್ತಾ ಇದಾರೆ. ಈ ಮಾರ್ಕೆಟ್ಟಿನ ಸಮೀಪದಲ್ಲಿರುವ ಕಾಯಿ ಅಂಗಡಿ ಬೀದಿಯು ಬಚ್ಚಲ ನೀರು ಅಲ್ಲೇ ನಿಂತು ವಾಸನೆ ಹುಟ್ಟಿ ರೋಗಾದ್ಯುಪದ್ರವಗಳಿಗೆ ಕಾರಣವಾಗಿದೆ. ಇಲ್ಲೇ ಸ್ಕೂಲು, ಕೋರ್ಟು, ಮಾರ್ಕೆಟ್ಟು ಮೊದಲಾದವು ಇರುತ್ತವೆ. ಈ ಬೀದಿಯನ್ನು ವಿಸ್ತರಿಸಿ ಮಾರ್ಕೆಟ್ಟಿಗೆ ರಸ್ತೆ ಹಾಕಲು ಏರ್ಪಾಡಾಗಿ ಬಹಳ ದಿವಸಗಳಾದಾಗ್ಯೂ ಕಾಯಿ ಅಂಗಡಿ ಬೀದಿ ವರೆಗೆ ರಸ್ತೆ ಹಾಕಿ ಮುಂದಕ್ಕೆ ಈ ಗಲೀಜಿರುವ ಸ್ಥಳದಲ್ಲಿ ಕೆಲಸವನ್ನು ನಿಲ್ಲಿಸಿರುವದು ಶೋಚನೀಯವಾಗಿದೆ. ಚಾಲ್ತಿ ಸಾಲಿನಲ್ಲಾದರೂ ಇದನ್ನು ಪೂರೈಸಬಹುದೆಂದು ನಂಬುತ್ತೇವೆ.—ಇಲ್ಲಿನ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆರಾಧನೆಗಾಗಿ ಪರಸ್ಥಳದಿಂದ ಬಂದಿದ್ದ ಅನೇಕ ವಿದ್ವಾಂಸರು ಶ್ರೀಯವರ ಸಮಕ್ಷಮ ತಮ್ಮ ವಿದ್ಯಾಪ್ರಭಾವವನ್ನು ಪ್ರಕಾಶಪಡಿಸಿ ನಾಲ್ಕು ದಿನ ದೊಡ್ಡ ಸಭೆ ನಡಿಸಿದರು. ಶ್ರೀಗಳವರು ಸ್ವರ ಪರಸ್ಥಳದವರಿಗೆ 4 ದಿನಗಳು ಮೃಷ್ಟಾನ್ನ ಭೋಜನ ಮಾಡಿಸಿ ಭಾರಿ ಸಂಭಾವನೆಗಳನ್ನು ದಯಪಾಲಿಸಿ ವಿದ್ಯಾಪ್ರೋತ್ಸಾಹವನ್ನು ಮಾಡಿದ್ದಕ್ಕಾಗಿ ಅವರನ್ನು ವಂದಿಸುತ್ತೇವೆ.—ಇಲ್ಲಿನ ಮ್ಯುನಿಸಿಪಲ್ ತೆರಿಗೆ ವಸೂಲಿಯನ್ನು ಮೆಂಬರುಗಳು ಮನೇಗಾರರ ಲೆಕ್ಕಕ್ಕೆ ಮನೆಯಲ್ಲೇ ಸ್ಟಿಕ್ ಮಾಡಿ ನೌಕರರನ್ನು ದಂಡಿಸುವುದಕ್ಕಿಂತ ಆಯಾ ಉಕ್ಕಡಕ್ಕೆ ಸ್ವತಹಾ ಹೋಗಿ ಜನಗಳ ಅಜಮಾಯಿಷಿ ಮಾಡಿ ಲೆಕ್ಕಕ್ಕೆ ಸ್ಟಿಕ್ ಮಾಡುತ್ತಾ ಬಂದರೆ ಜನಗಳಲ್ಲೂ ಮತ್ತು ನೌಕರರಲ್ಲೂ ಅಸಮಾಧಾನವು ನಿವಾರಣೆಯಾಗಬಹುದು.

ಮಂಡ್ಯ.—ಕಳೆದ ವಾರ ಒಂದೆರಡು ಮಳೆಗಳಾದವು. ರೈತರು ಹಸಿಕಾರಾಗಿ ರಾಗಿ ಮುಂತಾದವುಗಳನ್ನು ಬಿತ್ತಿದಾರೆ. ಇಷ್ಟರೊಳಗೆ ಕಟಾವಿಗೆ ಬರಬೇಕಾಗಿದ್ದ ಜೋಳದ ಪೈರು ನಷ್ಟಹೊಂದಿತು.—ಕಳೆದ ತಿಂಗಳು ಪ್ರಾರಂಭದಲ್ಲಿ ಗುತ್ತಲಿನಿಂದ ಪರ ಊರಿಗೆ ಹೋಗಲು ಹೊರಟ ಒಬ್ಬ ಈಡಿಗರ ಹೆಂಗಸು ನೀರಿಗಾಗಿ ಬೂದನೂರು ಬಳಿ ಒಂದು ಕೊಳಕ್ಕೆ ಹೋಗಿ ಮುಗ್ಗರಿಸಿ ನೀರಿನಲ್ಲಿ ಬಿದ್ದು ಪ್ರಾಣಕಳಕೊಂಡಳು. ಈ ಕೊಳವು ಆಳವಾಗಿಯೂ ಇಳಿಯುವುದಕ್ಕೆ ತುಂಬಾ ಅಪಾಯಕರವಾಗಿಯೂ ಇದೆ.—ಜೂಲೈ ತಾ 26 ರಲ್ಲಿ ಇಲ್ಲಿಗೆ 20 ಮೈಲಿ ದೂರವಿರುವ ಹೊನ್ನೇನಹಳ್ಳಿ ಗ್ರಾಮದಲ್ಲಿ ಒಬ್ಬ ಒಕ್ಕಲಿಗರ ಹೆಂಗಸು ಮಗು ಹೆತ್ತು ಖೂನ್ ಮಾಡಿ ಬುಡಕೆಗಳಲ್ಲಿ ತುಂಬಿ ಹೂಳಬೇಕೆಂದಿದ್ದಳು. ಇದು ಅಧಿಕಾರಿಗಳಿಗೆ ತಿಳಿದು ಅವಳನ್ನು ಲಾಕಪ್ಪಿನಲ್ಲಿ ಇಟ್ಟಿದಾರೆ. ಆಗಸ್ಟು 10 ರಲ್ಲಿ ಇಲ್ಲಿಗೆ 15 ಮೈಲಿಯಲ್ಲಿರುವ ಉಪ್ಪರಕನಹಳ್ಳಿಯಲ್ಲಿ ಜೋಳದ ಹೊಲವನ್ನು ಕಾಯುವದಕ್ಕೆ ಹೋದ 6 ವರ್ಷದ ಲಿಂಗಾಯಿತರ ಹುಡುಗನು ಅಟ್ಟಣಿಗೆಯ ಮೇಲೆ ಹತ್ತಿ ತಮಾಷೆಗಾಗಿ ಬೆಂಕಿ ಕಡ್ಡಿಯನ್ನು ಗೀಚಿ ತಾನೂ ಸುಟ್ಟುಹೋಗಿ ಮೃತಪಟ್ಟನು. ಇಲ್ಲಿಗೆ ಸ್ವಲ್ಪ ದೂರದಲ್ಲಿರುವ ಉರಿದಕೊಪ್ಪಲು ಗ್ರಾಮದಲ್ಲಿ ಕುಷ್ಠರೋಗದಿಂದ ನರಳುತ್ತಿದ್ದ ಒಬ್ಬ ಹೆಂಗಸು ಬಾಗಿಲು ಮುಚ್ಚಿಕೊಂಡು ಪ್ರಾಣಬಿಟ್ಟ ಸಂಗತಿ ಮೂರು ದಿನಗಳ ಮೇಲೆ ಸರ್ಕಾರಕ್ಕೆ ಗೊತ್ತಾಗಿ ದಫನ್ ಮಾಡಿಸಿದರು. ತಾ 29 ರಲ್ಲಿ ಕೆರಗೋಡು ಗೌಡಗೆರೆಯಲ್ಲಿ 9 ಮಂದಿ ಎಳ್ಳೆಣ್ಣೆ ಜೋಳವನ್ನೂ ತಿಂದು ಬುದ್ಧಿಸ್ತಿಮಿತವಿಲ್ಲದೆ ಬಹು ಭಯಂಕರವಾದ ಸ್ಥಿತಿಯಲ್ಲಿದ್ದದ್ದು ಡಾಕ್ಟರವರಿಗೆ ತಿಳಿದು ಅವರು ತಕ್ಷಣವೇ ಅಲ್ಲಿಗೆ ಹೋಗಿ ಇಲಾಜು ಮಾಡಿದ್ದರಲ್ಲಿ ಎಲ್ಲರೂ ಬದುಕಿಕೊಂಡರು.—ಇಲ್ಲಿನ ಸಂತೆ ವಿಷಯವಾದ ಆಕ್ಷೇಪಣೆಯು ಕ್ರಮೇಣ ನಿವಾರಣೆಯಾಗುತ್ತಾ ಇದೆ. ಹೊಸದಾಗಿ ಬಂದಿರತಕ್ಕ ಜಮಾದಾರ್ ಮಿ ಎಂ ಎಸ್. ಶಿವರಾಜ್ ಎಂಬುವರು ಪೋಲೀಸ್ ಮುತುವರ್ಜಿಯನ್ನು ಹೆಚ್ಚು ಮಾಡಿ ಮೋಸಮಾಡಿದ 7-8 ಮಂದಿಯ ಮೇಲೆ ಮೊಕದ್ದಮೆ ತಂದಿದಾರೆ. ದೇ ಮತ್ತು ಸ್ಟಬ್ ದಸ್ತುಗಳು ಜಾಸ್ತಿಯಾಗಿ ಜರುಗುತ್ತಲಿವೆ.—ಕಳೆದ ತಿಂಗಳ ಅಂತ್ಯದಲ್ಲಿ ಸಬ್ ಡಿವಿಜನ್ ಸಾಹೇಬರು ಈ ಊರಿಗೆ ದಯಮಾಡಿ ನೀರಿನ ಅನಾನುಕೂಲವನ್ನು ಹೋಗಲಾಡಿಸುವುದಕ್ಕೆ ಮಾಡಿದ ಏರ್ಪಾಡು ಯಾವಾಗ ನೆರವೇರುತ್ತೋ ಎಂದು ನಿರೀಕ್ಷಿಸಿಕೊಂಡಿದೇವೆ.

ಇಲ್ಲಿಗೆ 2 ಮೈಲಿಯಲ್ಲಿರುವ ಕ್ಯಾತನಗೆರೆಯಲ್ಲಿ ನೀರಿನ ಕಷ್ಟವು ಅಧಿಕವಾಗಿ ಮಳೆಯ ನೀರಿನ ಮಾಲಿನ್ಯ ಸಂಗ್ರಹಿಸಲ್ಪಟ್ಟ ನೀರನ್ನು ಕುಡಿದು ಅನೇಕ ತರವಾದ ಕಾಯಿಲೆಗಳನ್ನು ಅನುಭವಿಸುವದಕ್ಕೆ ಕಾರಣವಾಗಿದೆ. 6-7 ವರ್ಷಗಳ ಹಿಂದೆ ಸರ್ಕಾರದವರು ತೆಗಿಸಿಕೊಟ್ಟಿದ್ದ ಕೊಳವು ಹಾಳಾಯಿತು. ಸರ್ಕಾರದವರು ಈ ಊರಿನ ನೀರಿನ ಕಷ್ಟವನ್ನು ತಪ್ಪಿಸಲು ಹಾಳಾಗಿರತಕ್ಕ ಕೊಳವನ್ನು ರಿಪೇರಿ ಮಾಡಿಸಿದರೂ ಸರಿಯೇ, ಹೊಸದಾದ ಒಂದು ಭಾವಿಯನ್ನು ತೋಡಿಸಿದರೂ ಸರಿಯೇ. ಇದರಿಂದ ಆ ಊರಿಗೆ ಸರ್ಕಾರದವರು ಒಬ್ಬ ವೈದ್ಯನನ್ನು ಕಳುಹಿಸಿಕೊಟ್ಟಂತಾಗುವದು.

ಚಿಕ್ಕಮಗಳೂರು.—ಈ ಪ್ರಾಂತ್ಯ ರಾಗಿ ಕೊಯಿಲಿಗೆ ಬಂದಿರುತ್ತೆ. ಮಳೆ ಅಷ್ಟೇನೂ ಹೆಚ್ಚಾಗಿಲ್ಲದೆ ಇದ್ದಾಗ್ಯೂ ತುಂತುರು ಮಳೆಯು ದೆಸೆಯಿಂದ ಕಟಾವು ಮಾಡಲು ಅಡಚಣೆಯಾಗಿದೆ. ಸಂತೆಯ ಧಾರಣೆವಾಸಿಗಳಾದರೋ ಕ್ಷಾಮವನ್ನು ಸೂಚಿಸುತ್ತಲಿವೆ. ಅಕ್ಕಿ ರೂಪಾಯಿಗೆ 6-6½ ಸೇರು, ರಾಗಿ 14-15 ಸೇರು ಬಿಕರಿಯಾಗುವದು.—ಈಗ ಟವನ್ನಿನಲ್ಲಿ ಪ್ಲೇಗ್ ತಲೆದೋರಿ ಅಲ್ಲಲ್ಲಿ ಇಲಿಗಳು ಸಾಯುತ್ತಲಿವೆ. ಇಬ್ಬರಿಗೆ ರೋಗ ತಗಲಿರುತ್ತೆ. ಅಲ್ಲದೆ ಒಂದು ಮರಣವೂ ಆಯಿತು. ಇದರಿಂದ ಜನಗಳು ತುಂಬಾ ಗಾಬರಿಪಡುತ್ತಲಿದಾರೆ. ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು—ಟವನ್ ಸಮೀಪ ಅನುಕೂಲವಾದ ಮೈದಾನ್ ಜಾಗಾ ಇಲ್ಲದೆ ಇರುವುದೂ, ಮಲೆನಾಡಿನಲ್ಲಿ ಮಳೆಗಾಲದಲ್ಲಿ ಹೊರಗೆ ಹಂಗಾಮಿಯಾಗಿ ಷೆಡ್ಡುಗಳಲ್ಲಿ ವಾಸ ಮಾಡುವುದು ಶ್ರಮವೆಂಬುವುದೂ ಊರನ್ನು ಬಿಡದೆ ಇರಲು ಮುಖ್ಯಕಾರಣವಾಗಿರುತ್ತವೆ. ಆದ್ದರಿಂದ ಊರಲ್ಲಿದ್ದುಕೊಂಡು ಈ ರೋಗವನ್ನು ತಪ್ಪಿಸಿಕೊಳ್ಳುವ ಉಪಾಯವನ್ನು ಯೋಚಿಸಬೇಕಾಗಿರುತ್ತೆ. ಇದಕ್ಕೆ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದೂ, ಮನೆಯಲ್ಲಿ ಇಲಿಗಳು ಸೇರದಂತೆ ನೋಡಿಕೊಳ್ಳುತ್ತಾ ಅವಶ್ಯ ಬಿದ್ದಲ್ಲಿ ಡಿಸಿನ್ಫೆಕ್ಟ್ ಮಾಡಿಸುವುದೂ, ರೋಗ ತಗಲಿದವರನ್ನು ಪ್ರತ್ಯೇಕವಾಗಿ ಇಡುವುದೂ ಪರಿಹಾರವೆಂದೂ, ಈ ರೋಗದ ಚಿಹ್ನೆಗಳು ಕಂಡುಬಂದಲ್ಲಿ ತಕ್ಷಣ ಮನೆ ಬಿಟ್ಟು ಕೆಲವು ಕಾಲ ಮ್ಯುನಿಸಿಪಾಲಿಟಿಯವರು ಹಾಕಿಸಿರುವ ಹೆಲ್ತ್ ಕ್ಯಾಂಪ್ ಷೆಡ್ಡುಗಳಲ್ಲಿ ವಾಸ ಮಾಡುವಂತೆಯೂ ಜನಗಳಿಗೆ ಪ್ರೋತ್ಸಾಹಪಡಿಸಬೇಕೆಂದೂ ಈ ಟವನ್ನಿನಲ್ಲಿರುವ ಮುಖ್ಯಸ್ಥರಿಗೆ ಅಪ್ಪಣೆ ಕೊಡಿಸಿರುತ್ತಾರೆ. ಈ ರೀತಿಯಾಗಿ ನಡೆದುಕೊಂಡರೆ ಈ ಸಾಂಕ್ರಾಮಿಕ ರೋಗವು ಹರಡಲು ಅವಕಾಶವಾಗುವುದಿಲ್ಲವೆಂದು ಹೇಳಬಹುದು.—ಕಳೆದ ತಿಂಗಳು ತಾನೇ ಸ್ಥಾಪಿಸಲ್ಪಟ್ಟ ಮೋಟಾರ್ ಸರ್ವಿಸ್ ಕಂಪನಿಯವರು ತಮ್ಮ ಮೋಟಾರ್ ಗಾಡಿಯ ರಬ್ಬರ್ ಟೈರುಗಳು ಕೆಟ್ಟುಹೋದದ್ದರ ದೆಸೆಯಿಂದ ಕಡೂರಿಗೆ ಗಾಡಿ ಬಿಡುವುದನ್ನು ಈಗ 10-12 ದಿವಸದಿಂದಲೂ ನಿಲ್ಲಿಸಿದಾರೆ. ಇಷ್ಟು ಬೇಗ ಟೈರುಗಳು ಕೆಟ್ಟುಹೋಗುವುದಕ್ಕೆ ಕಡೂರು ರಸ್ತೆಯೇ ಕಾರಣವಾಗಿದೆ. ರಸ್ತೆಯು ನಾದುರುಸ್ತಾಗಿದ್ದರೆ ಎಂಥಾ ಮೋಟಾರ್ ಗಾಡಿಯಾದರೂ ಕೆಟ್ಟುಹೋಗುವುದು. ಕಡೂರು ರಸ್ತೆಯು ಹೈ ರೋಡಾಗಿದೆ. ಇದರಲ್ಲಿ ಪ್ರತಿನಿತ್ಯವೂ ಅನೇಕ ಗಾಡಿಗಳೂ ಟಾಂಗಾಗಳೂ ಕೋಚ್‌ಗಾಡಿಗಳೂ ಬೈಸಿಕಲ್ ಮೋಟಾರ್ ಮುಂತಾದವುಗಳೂ ತಿರುಗಾಡುತ್ತಿರುವುದರಿಂದ ಇದು ಯಾವಾಗಲೂ ಉತ್ತಮವಾದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು ಆವಶ್ಯಕವಾಗಿದೆ. ಮೇಲ್ಕಂಡ ಮೋಟಾರ್ ಕಂಪನಿಯವರಿಗೆ ಇದರಿಂದ ನೂರಾರು ರೂಪಾಯಿ ನಷ್ಟವಾಯಿತು. ಚಿಕ್ಕಮಗಳೂರು ಪ್ರಜೆಗಳಿಗೆ ಬಹು ಅನುಕೂಲವಾಗಿದ್ದ ಮೋಟಾರ್ ಸರ್ವಿಸ್ ಕಂಪನಿಯು ಇಷ್ಟು ಬೇಗ ನಿಂತುಹೋದದ್ದು ತುಂಬಾ ವ್ಯಸನ. ಇಂಜನಿಯರ್ ಇಲಾಖೆಯವರು ಈ ರಸ್ತೆಗೆ ನಿಗಾಕೊಡುವುದು ಅತ್ಯಾವಶ್ಯಕ.—ಈ ಟವನ್ನಿನಲ್ಲಿರುವ ಸರ್ಕಾರಿ ಬಾಲಿಕಾ ಪಾಠಶಾಲೆಯಲ್ಲಿ ಭಾನುವಾರ ಸ್ಕೂಲನ್ನು ಇಟ್ಟು ಅದಕ್ಕೆ ಪ್ರತಿಯಾಗಿ ಶುಕ್ರವಾರ ಸ್ಕೂಲನ್ನು ಮುಚ್ಚುತ್ತಾರೆ. ಇದಕ್ಕೆ ತಕ್ಕ ಕಾರಣವಿರಬಹುದಾದರೂ ಸರ್ಕಾರಿ ಹುಕುಮನ್ನು ಅಲಕ್ಷ್ಯಮಾಡಿದ ಹಾಗಾಯಿತಲ್ಲವೇ. ಇಲ್ಲಿ 3-4 ವರುಷಗಳಿಂದ ಪೋಸ್ಟ್ ಮಾಸ್ತರಾಗಿದ್ದ ಮಿ॥ ಭಗವಾನ್ ಯವರಿಗೆ ಬೆಂಗಳೂರಿಗೆ ವರ್ಗವಾಯಿತೆಂದು ಕೇಳುತ್ತೇನೆ. ಇವರು ಜನಾನುರಾಗಿಗಳಾಯೂ ಸಚ್ಚರಿತ್ರರಾಗಿಯೂ ತಮ್ಮ ಉದ್ಯೋಗವನ್ನು ನಿಷ್ಠೆಯಿಂದ ನೆರವೇರಿಸುತ್ತಾ ಬಂದು ಇದ್ದರು. ಅವರ ಸ್ಥಾನಕ್ಕೆ ಬರುವವರು ಸಹ ಅವರ ಹಾಗೆಯೇ ಪ್ರಜಾನುರಾಗಿಗಳಾಗಿ ಕೀರ್ತಿ ಸಂಪಾದಿಸುವರೆಂದು ನಿರೀಕ್ಷಿಸುತ್ತೇವೆ.—ಕಳೆದ ಬುಧವಾರ ರೈಲ್ವೆ ಇಂಜನಿಯರ್ ಮಿ, ಬೆಲ್ ಸಾಹೇಬರು ಇಲ್ಲಿಗೆ ಬಂದು ಮರುದಿನ ಮೋಟಾರ್ ಗಾಡಿಯಲ್ಲಿ ಕೆಲವು ಯೂರೋಪಿಯನ್ ಸರದಾರರೊಂದಿಗೆ ಬೇಲೂರು ರಸ್ತೆಯನ್ನೂ, ಕಡೂರು ರಸ್ತೆಯನ್ನೂ ಕೆಲವು ದೂರ ನೋಡಿ ಬಂದರು. ಇವರನ್ನು ನಮ್ಮ ಮೈಸೂರು ಸರಕಾರದವರು ರೈಲ್ವೆ ಬಡಾವಣೆ ಮಾಡುವದಕ್ಕಾಗಿ ಬೇರೆ ಬೇರೆ ಭಾಗಗಳಿಗೆ ಕಳುಹಿಸಿರುತ್ತಾರೆ. ಅದೇ ಉದ್ದೇಶಕ್ಕಾಗಿಯೇ ಅವರು ಇಲ್ಲಿಗೂ ಬಂದಿದ್ದರು. ಇವರು ಶ್ರೀರಂಗಪಟ್ಟಣದಿಂದ ಚನ್ನರಾಯಪಟ್ಟಣದ ಮಾರ್ಗವಾಗಿ ಹಾಸನಕ್ಕೂ ಒಂದು ರಸ್ತೆ ಇರಬೇಕೆಂತಲೂ, ನಂಜನಗೂಡಿನಿಂದ ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಈರೋಡಿಗೆ ಒಂದು ರಸ್ತೆಯನ್ನು ಹಾಕಿ ಅಲ್ಲಿ ಎಸ್ ಐ ಆರ್ ಲೈನಿಗೆ ಸೇರಿಸಬೇಕೆಂತಲೂ, ಶ್ರೀರಂಗಪಟ್ಟಣದಿಂದ ಹಾಸನದ ಮೇಲೆ ಬಂದು ಕೋನೇಹಳ್ಳಿಗೆ ಸೇರುವ ಲೈನು ಮೆಯಿನ್ ಲೈನಾಗಿರಬೇಕೆಂತಲೂ, ಹೀಗೆ ಮಾಡುವುದರಿಂದ ಪೂನಾದಿಂದ ಇಂಡಿಯಾದೇಶದ ಅನ್ಯದೇಶ ಭಾಗಕ್ಕೂ ನೇರಾ ಗಾಡಿಗಳನ್ನು ಬದಲಾಯಿಸದೆ ಬಿಡಬಹುದೆಂತಲೂ ನಮ್ಮ ಮೈಸೂರು ಸರಕಾರದವರಿಗೆ ಸಲಹೆಕೊಡಬೇಕೆಂಬ ಉದ್ದೇಶವುಳ್ಳವರಾಗಿದ್ದಾರೆಂದು ತಿಳಿದುಬರುತ್ತದೆ. ಚಿಕ್ಕಮಗಳೂರಿಗೆ ರೈಲ್ ಬಂಡಿಯು ಬರುವುದು ಬಹು ಸಂತೋಷಪ್ರದವಾದದ್ದೆನ್ನುವದಕ್ಕೆ ಸಂದೇಹವಿಲ್ಲ. ಇಲ್ಲಿನ ಪ್ರಜೆಗಳು ಇದನ್ನು ಲವಲವಿಕೆಯಿಂದ ಎದುರುನೋಡುತ್ತಲಿದಾರೆ.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಉಷ್ಣಮರ್ಜ ಚೂರ್ಣವು.

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1-0-0

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳು ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಿಂತು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ರಮೇಣ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು. ಹಾಗೆ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು.

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0-4-0 ಡಬ್ಬಿ 12 ಕ್ಕೆ ರೂ 2-8-0.

ಈ ಹಲ್ಲುಪುಡಿ ಹಲ್ಲು ನೋವು ಮಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು. ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು. ಹಲ್ಲುಗಳನ್ನು ಸ್ವಚ್ಛ ಮಾಡುವದು. [121-45]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಚೀನಾ ಬಜಾರ್ ರೋಡ್, ಮದ್ರಾಸು

ಪುಷ್ಪಕಾಂತಿ ತೈಲ.

ಸೀಸೆ 1 ಕ್ಕೆ ೯ ಆಣೆ 6 ಸೀಸೆಗಳನ್ನು ಒಂದೇ ಸಲ ತರಿಸಿಕೊಂಡರೆ 1 ಸೀಸೆ ಇನಾಂ. ಇದು ಅಧಿಕ ಸುವಾಸನೆ ಉಳ್ಳದ್ದು. ಇದನ್ನು ತಲೆಗೆ ಸವರಿಕೊಳ್ಳುವದರಿಂದ ಮನಸ್ಸಿಗೆ ಆನಂದವನ್ನೂ ಉತ್ಸಾಹವನ್ನೂ ಉಂಟುಮಾಡುತ್ತೆ. ನರೆತ ಕೂದಲು ಕಪ್ಪಾಗುತ್ತೆ. ಕೂದಲು ಹೇರಳವಾಗಿ ಬೆಳೆಯುತ್ತೆ. ಇದನ್ನು ಪ್ರತಿನಿತ್ಯ ತಲೆಗೆ ಸವರಿಕೊಳ್ಳುತ್ತಾ ಬಂದರೆ ತಲೆ ತಿರುಗಾಟವನ್ನೂ ಚಾಳೀಶ್ವರವನ್ನೂ ಹೋಗಲಾಡಿಸುತ್ತೆ.

ಬಹುಮಾನ ಬಹುಮಾನ ಬಹುಮಾನ

ಮೇಲೆ ಹೇಳಿದ ಪುಷ್ಪಕಾಂತಿ ತೈಲವನ್ನು ತರಿಸಿಕೊಳ್ಳುವವರಿಗೆ ಈ ಪತ್ರಿಕೆಯಲ್ಲಿ ಕಾಣಿಸಿರುವ ಮೂರು ಗಡಿಯಾರಗಳನ್ನು ಬಹುಮಾನವಾಗಿ ಕೊಡುತ್ತೆ. ಬಹುಮತಿಯ ವಿವರ.—ಲೋಕಪ್ರಸಿದ್ಧಿಯನ್ನು ಪಡೆದ ಪುಷ್ಪಕಾಂತಿ ತೈಲವನ್ನು ತರಿಸಿಕೊಳ್ಳುವವರ ಹೆಸರುಗಳನ್ನು ಪ್ರತಿ ತಿಂಗಳ ಆಖೈರಿನಲ್ಲೂ ಮೊತ್ತವಾಗಿ ಸೇರಿಸಿ ಆ ಮೊತ್ತ ಹೆಸರುಗಳಿಗೆ ಮೇಲೆ ಹೇಳಿದ 3 ಗಡಿಯಾರಗಳು ಯಾರ ಹೆಸರಿಗೆ ಬರುತ್ತವೆಯೋ ಅವರವರ ಹೆಸರುಗಳಿಗೆ ಹೆಸರೊಂದು ಗಡಿಯಾರವನ್ನು ಬಹುಮಾನವಾಗಿ ಭಾರಿ ಮೂಲಕ ಕಳುಹಿಸುತ್ತೇವೆ. ಆದಕಾರಣ ಗಡಿಯಾರ ಬಹುಮತಿ ಕೋರುವವರು ತಿಂಗಳ ಆಖೈರ್ ಒಳಗಾಗಿ ಜಾಗ್ರತೆ ದಯಮಾಡಿ ಕಳುಹಿಸಬೇಕು. [131-1] ನಮ್ಮ ವಿಳಾಸ—

ಜಿ. ಎ. ಪಾಲ್ ಅಂಡ್ ಕಂಪೆನಿ, ನುಂಗಂಬಾಕಂ, ಮದರಾಸು

ಗನ್ ಟೈಂ ಕೀಪರು ಘಡಿಯಾರವು

131-2

ಮೊದಲಿನ ಬೆಲೆ ರೂ 5 8 0 ಈಗಿನ ಬೆಲೆ ರೂ 3-8-0

ಈ ನಮ್ಮ ಘಡಿಯಾರವು ಗೌರ್ನಮೆಂಟು ಗುಂಡಿಗೆ ಸರಿಯಾದ ಕಾಲವನ್ನು ತೋರಿಸುವದರಿಂದ ಈ ಹೆಸರು ಕೊಟ್ಟಿರುತ್ತೆ. ಈ ಹೆಸರಿಗೆ ತಕ್ಕಂತೆಯೇ ಇದರ ಅಂಗಾಂಗಗಳು ಬಹಳ ಬಲವಾದ ಮತ್ತು ಮಜಬೂತಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿರುತ್ತೆ. ಈ ಘಡಿಯಾರವನ್ನು ಎಂಥಾ ಕಷ್ಟ ಸಹುವವರೂ ಕೂಡ ಉಪಯೋಗಿಸಬಹುದು. ಈ ಘಡಿಯಾರವನ್ನು ತೆಗಿಯುವವರು ಚಿತ್ರ ರೇಖೆಯುಳ್ಳ ಈ ಚಿತ್ರದಲ್ಲಿ



ಕಂಡಂತೆಯೇ ಆ ಘಡಿಯಾರದ ಡೈಲ್ ಮೇಲೆ ಗನ್ ಟೈಂ ಎಂದು ಇಂಗ್ಲೀಷಿನಲ್ಲಿ ಬರೆದು ಆ ಗನ್ ಮಾರ್ಕನ್ನು ಅದರ ಮೇಲ್ಭಾಗದಲ್ಲಿ ತೋರಿಸಿರುವದನ್ನು ಚೆನ್ನಾಗಿ ಗಮನಿಸಿ ತೆಗಿಯಬೇಕು. ಇದನ್ನು ಒಬ್ಬರು ತೆಗೆದರೆ, ಅವರು ತಾವಾಗಿಯೇ ಇದರ ಅದ್ಭುತವನ್ನು ತಮ್ಮ ಸ್ನೇಹಿತರಿಗೆ ತಿಳಿಸಿ ಅವರೂ ತೆಗೆಯುವಂತೆ ಪ್ರೋತ್ಸಾಹಿಸುವದರಲ್ಲಿ ಸಂದೇಹವಿಲ್ಲ. ಸುಮ್ಮನೆ ಹೆಚ್ಚು ವರ್ಣಿಸಿ ಬರೆಯುವದರಿಂದ ಪ್ರಯೋಜನವಿಲ್ಲ. ಇಂಥಾ ಘಡಿಯಾರವು ಈ ಕಮ್ಮಿ ಬೆಲೆಗೆ ಇನ್ನು ಕೆಲವು ದಿನಗಳು ಮಾತ್ರ ಕೊಡಲ್ಪಡುತ್ತೆ. ಈ ಘಡಿಯಾರವನ್ನು ತೆಗೆಯುವವರಿಗೆ ಒಂದು ರೋಲ್ಡುಗೋಲ್ಡು ಸರಪಣಿಯನ್ನು ಇನಾಮಾಗಿ ಕೊಡಲ್ಪಡುತ್ತೆ.

ಯಂಪರರ್ ವಾಚ್ ಕಂಪನಿ, ಪೋಸ್ಟ್ ಬಾಕ್ಸ್ 170, ಮದರಾಸ್.

Printed and Published by the Rev. E. W. Thompson, M.A., Proprietor and Manager Wesleyan Mission Press, Mysore. 5/9/1912



MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಶ್ರೈಸ್ಸೋಕದ ಮಾಡಿದ. ಬರೀ ಸುಸ್ವಾಹಾರ.

ಮೆಲಿನ್ಸ್ ಆಹಾರವು ಉತ್ತೇಜನ ಕೊಡುವುದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಪುಗಸಟ್ಟೆ ಕಳುಹಿಸುತ್ತಾರೆ.

[66-19] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೨ ನೇ ಇಸವಿ ಸೆಪ್ಟೆಂಬರ್ ತಾರೀಖು ೧೨ ನೇ ಗುರುವಾರ. ಸಂಚಿಕೆ ೧೦೭

A Study of

TANGLEWOOD TALES & A CHRISTMAS CAROL,

for the Lower Secondary Students

It contains Notes on the Text Summary of the Chapters and Questions and Exercises on Translation and Composition from the two books by S Paul Thimmappa, B.A. L.T., A.C.P., Headmaster Government A.V. School Bangalore Notes on Tanglewood Tales, 4 as Notes on Christmas Carol 6 as will be ready for sale from the 20th instant

The MANAGER, Mission Book Depot,
Avenue Road, Bangalore City.

ಜಾರ್ಜ್ ಸಾರ್ವಭೌಮರ ಚರಿತ್ರೆ

[92-15]

ಈ ಪುಸ್ತಕವು ಚಕ್ರವರ್ತಿಗಳವರ ಜೀವಚರಿತ್ರೆಯುಳ್ಳ ಪ್ರಾಮುಖ್ಯವಾದ ... ಮತ್ತು ... ನಡೆದ ... ಸಮಸ್ತ ... ಸಂಭಾಷಣೆಗಳನ್ನೂ ... ರಾಜಭಕ್ತಿಯುಳ್ಳ ... ಈ ಸುಚರಿತ್ರೆಯನ್ನು ಓದಿ ತಿಳಿಯ ... ಅವರ ಭಾವಚಿತ್ರವೂ ಉಂಟು ... ಕ್ರಯ ಪ್ರತಿ 1 ಕ್ಕೆ ... ಅಂಚೆ ... ಆ

ವಿಳಾಸ—ಸಿ ಎಲ್ ಎಸ್. ಬುಕ್ ಡಿಪೋ, ಮೈಸೂರು.

The Coromandel Life Assurance Co., Ltd.,

Bimlipatam

This well known Company issues Policies and Marriage Endowment Diplomas for very low monthly premiums of 1-8-0 and Re 1-0-0 respectively in the 1st class.

Wanted Active and influential Agents in every District and Taluk on liberal commission or pay

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ... ಕೊರೊಮಾಂಡಲ್ ... ಕಂಪನಿ ಲಿಮಿಟೆಡ್ ಗೆ ಜೀವವಿಮೆ ಮತ್ತು ಮದುವೆ ಬ್ರಾಂಚಿಗೆ ... ಸಂಖ್ಯೆ ಮತ್ತು ಚಟುವಟಿಕೆಯುಳ್ಳ ಏಜಂಟರುಗಳು ಎಲ್ಲಾ ... ತಾಲ್ಲೋಕುಗಳಲ್ಲಿಯೂ ... ಕಮಿಷನ್ ... ಈ ಕಂಪನಿಗೆ ... ಸರ್ಟಿಫಿಕೇಟು ... ಇಸವಿಯಲ್ಲಿ ಜೀವವಿಮೆಯಲ್ಲಿ ರೂಪಾಯಿ ಒಂದಕ್ಕೆ 6 ರೂಪಾಯಿ ... ಮದುವೆ ಬ್ರಾಂಚಿನಲ್ಲಿ ರೂಪಾಯಿ ಒಂದಕ್ಕೆ 1 ರೂಪಾಯಿನಂತೆ ... ಈ ಕೆಳಗಿನ ವಿಳಾಸಕ್ಕೆ ... ಬೇಗ ಬರೆಯಿರಿ [135-4]

ಮೆಸರ್ಸ್ ವೆಂಕಟಾಚಲಂ ಅಂಡ್ ಸನ್,

ಮೈಸೂರು ದೇಶದ ಮತ್ತು ಕೊಡಗಿನ ಜನರಲ್ ಏಜೆಂಟು,

ಚಿಟ್ಟಿ ದೊಡ್ಡಪೇಟೆ. ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84-16

... ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ... ಕರುಳು, ... ಯಾವ ಕಾರಣದಿಂದ ಹುಟ್ಟುವ ಬಾಧೆ ... ತಲೆನೋವು ... ಚಳಿ ... ಬಾಧೆ ... ಎಲ್ಲಾ ತರದ ನೋವು ... ಮಾಡಿಕೊ ... ಕೆಲಸ ಮಾಡುತ್ತೇನೆ ... ಸಮೀಪದಲ್ಲಿ ... ಅಂಗಡಿಗೆ ಹೋಗು ... ಒಂದು ... ಆದಕ್ಕೆ ... ಕೊಟ್ಟರೆ ... ತೆಗೆದುಕೊ ಈ ಯುಕ್ತಿಗೆ ... ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ... ನೋವು ... ಇದು ಉತ್ತಮೋತ್ತಮವಾದ ಪರಿಹಾರ ... ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"... ಮ್ಯಾಜಿಕ್ ಬಾಮ್" ಎಂಬ ಹೆಸರನ್ನು ಮರೆಯಬೇಡಿ ... ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ ... ಅಥವಾ ... ಪ್ಯಾಕಿಂಗ್ ಪೋಸ್ಟೇಜ್ ಮಾಫಿ ... ವ್ಯಾಪಾರಸ್ಥರಿಗೆ ಧಾರಾಳ ... ಸಿಗುತ್ತೆ ವಿಳಾಸಗಳು (1) ಎಸ್ ... 37 ... ಬೀದಿ, ಪುರಸವಾಕಂ, ವೇಪೇರಿ, ಮದರಾಸ್. (2) ... ಎಸ್. ... ಜನರಲ್ ಮರ್ಚೆಂಟ್, ತುಮಕೂರು

ಡೋಂಗರೆ ಇವರ ಬಾಲಾಮೃತ.

[115-9]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣ ಉಳ್ಳದ್ದು ಅದು ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತೆಗೆದುಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಇಕ್ಕಟ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಆಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಸಾಕ್ಷ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ; ಟಪಾಲ್ ಖರ್ಚು 8 ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ. ಗಿರಗಾವ, ಮುಂಬಯಿ.

WILLIAM & Co, FORT, BOMBAY.

ಅಮೃತಾಂಜನ. (Regd.)



ಇಲ್ಲಿ ವಿಶೇಷ ಲಕ್ಷ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು, ಘಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0–8–0.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 0–6–0.

ದಂತಮಂಜನ 2 ಆಣೆ. ನೇತ್ರಾಂಜನ 4 ಆಣೆ. ಸುಂದರಿ ತೈಲ 8 ಆಣೆ [36-29]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಪೋಸ್ಟ್ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ... ತಯಾರಿಸಿದೆ ... ಜ್ವರ, ಹೊಟ್ಟೆ ... ಸಂಧುಗಳ ನೋವು, ... ನಡುಕ, ... ಅಜೀರ್ಣ, ಅಗ್ನಿನಷ್ಟ ... ಕೆಮ್ಮು ... ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ... ಉಪಯೋಗಿಸುತ್ತಿದರೆ ಬಹಳ ಹೊತ್ತು ಸುವಾಸನೆಯಿರುತ್ತಾ, ಎಂತಹ ... ನರಗಳ ಹವಾ ಬಲಾವಳಿಯನ್ನು ಸರಿಪಡಿಸಿ ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತವೆ ಸ್ತ್ರೀಯರ ... ಮಕ್ಕಳ ಎಳವು ಜ್ವರ, ... ಜ್ವರ ... ಗಳನ್ನು ಗುಣಪಡಿಸುತ್ತದೆ ಇದನ್ನು ... ಖಂಡಿತವಾಗಿಯೂ ... ಸೋಂಕಿಗೆ ಗುರಿಯಾಗುವದಿಲ್ಲ ... ವರ್ಧಕವಾಗಿದೆ — ೨೦ ಮಾತ್ರೆಗಳುಳ್ಳ ಕುಪ್ಪಿಗೆ ... ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ... ಆಣೆ [136-2]

೨. ವೈಶ್ವಾನರಾಸವ (ಕಾಲರಾ ಔಷಧ).

... (ಕಾಲರಾ) ... ಅಜೀರ್ಣದ ಬೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ... ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ... ಮೂತ್ರವು ... ಸಮಯದಲ್ಲಿ ... ಒಂದು ಬುಡ್ಡಿಯು ನಿಮ್ಮಲ್ಲಿರಲಿ ... ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ... ರೂ 1 ಟಪಾಲ ಖರ್ಚು ...

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಿಟ್ಟಿ! ಪ್ರಗಸಟ್ಟ! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ... ಲೀವರ್ ವಾಚನ್ನು ರೂ ೩-೮-೦ ಗೆ ಕೊಂಡುಕೊಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು ಇದರಲ್ಲಿ ಮೋಸ ಸ್ವಲ್ಪವೂ ಇಲ್ಲ



(೧) ಒಂದು ಸೊಗಸಾದ ಸರಪಣಿ
(೨) ಒಂದು ...
(೩) ಒಂದು ಚಾಕು
(೪) ಒಂದು ತಮಾಖು ಪೆಟ್ಟಿಗೆ
(೫) ಒಂದು ಮಡಿಚುವ ಕತ್ತರಿ
(೬) ಒಂದು ಫೌಂಟನ್ ಪೆನ್
(೭) ಒಂದು ಕೈ ಚೀಲ.
(೮) ಒಂದು ಜೊತೆ ಕಾಲುಚೀಲ.
(೯) ಒಂದು ಸುಂದರವಾದ ಉಂಗುರ.
(೧೦) ಒಂದು ಸೊಗಸಾದ ಬೀಸಣಿಗೆ.
(೧೧) ಒಂದು ಸೆಟ್ ಷರಟುಗುಂಡಿ.
(೧೨) ಒಂದು ಕತ್ತಿ ಸಾಪ್ಟು.

109-14] ವಿಳಾಸ:—ಪಿ. ಎ. ರಜಾಕ್ ಅಂಡ್ ಕೋ., ೧೧ ಎಸ್‌ಪ್ಲೇನೇಡ್ ರೋಡ್, ಮದರಾಸ್.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಕ್ಕಾಗಿ ಪ್ರಾಣವನ್ನಾದರೂ ಕೊಡಬಹುದು" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿಧಾಯಕ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಸರೆಂಬಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ.

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸಾರಸ್ಯವು ತಾನಾಗಿ ಗೊತ್ತಾಗುವದು.

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ. ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ. [5 8]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

[illegible]

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

[illegible]

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

[illegible]

ಕಾಮಿನಿಯಾ ತೈಲ—

ಇದು ಕೂದಲುಗಳನ್ನು ... ನುಣುಪು, ಅತಿ ಸ್ವಚ್ಛ, ಕೂದಲುಗಳು ... ಕಾಮಿನಿಯಾ ತೈಲವು ... ಉಪಯೋಗಿಸಿದ ... ಈಗ ನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ... ಮುಡಿಯುವ ...

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಿಕ್ಕನಿಸುತ್ತವೆ, ಮತ್ತು ... ವಾದ ಶೀಲ ... ಪರಿಮಳ ಬೀಸು ... ಬೆಳೆಯುತ್ತವೆ.

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

1 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕಾದರೆ ಒಂದು ಅರ್ಧಾಣೆಯ ಟಿಕೆಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಶಂಸಾ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುತ್ತೇವೆ —

28-7-11 ನು ... ಕಾಮಿನಿಯಾ ... ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇರ್ ಆಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1-7-11 ಮಿ॥ ಸಿ. ಆರ್. ನಾಯುಡು ... ನನ್ನ ಮಿತ್ರರು "ಕಾಮಿನಿಯಾ" ತೈಲ ... ರವಾನಿಸತಕ್ಕದ್ದು. [9 37]

ಸುಗಂಧದ್ರವ್ಯಗಳು

ಗುಲ್-ಹಾರ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ... ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದರು. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ 1-8-0.

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಜಾಜಿ ಪುಷ್ಪಗಳಿಂದ ತಯಾರಿಸಿದ ಅಪೇಕ್ಷಿಣವಾದ ಸುಗಂಧ ಡ್ರಾಂ ಸೀಸೆಗೆ ರೂ 1-4-0.

"ಕಾಮಿನಿಯಾ ಸುರಭಿ"—ರೂ 1-4-0, "ಕಾಮಿನಿಯಾ ಮಾಲತಿ" ರೂ 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು. ನಮ್ಮ ವಿಳಾಸ —

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

[1 37]

[illegible]

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ... ಅಫೀಮು ಮುಂತಾದ ... ಇಲ್ಲ.

ಈ ಔಷಧವು ... ತಗಿ ... ತಯಾರಾಗಿದೆ.

ಕೆಮ್ಮಿನ ಮುಚ್ಚಳ ... ತಯಾರಾಗಿದೆ.

ಎಲ್ಲಾ ... ವಿಕರಿಸಲಾಗುತ್ತದೆ. ... ಸೀಸೆಗೆ ... ರೂ ... ಸೀಸೆಗೆ ... ಆಣೆ ...

ಮಕ್ಕಳ ಆರೋಗ್ಯವನ್ನು

[illegible]

SCOTT'S EMULSION [1 37]

(ಸ್ಕಾಟ್ಸ್ ಇಮಲ್ಷನ್)

[illegible]

ಈ ಮಾರ್ಕುಳ್ಳ ಔಷಧವನ್ನು ಕೊಂಡುಕೊಳ್ಳಿ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್ ... ಲಂಡನ್, ಇಂಗ್ಲಂಡ್.



ಹೆಚ್ಚು ... ಗಡಿಯಾರಗಳು ...

[illegible]

ನಮ್ಮ ವಿಳಾಸ ವೆಂಕಟಾಚಲಂ ಕಂಪೆನಿ,

ಪ್ಯಾರಿಸ್ ರೋಡ್, ವೇಪೇರಿ ಮದ್ರಾಸು.

ನೋಟೀಸು

ಒಳ್ಳೇ ಸಮಯವು!!!

ಸೆಪ್ಟಂಬರ್ ... ತಾರೀಖು ವರೆಗೂ



[illegible]

ಕಾರೋನೇಷನ್ ವಾಚು

[illegible] [101]

ಅಂಚೆ ಹಾಸಲು ಪ್ರತ್ಯೇಕ

[illegible]

ನಮ್ಮ ವಿಳಾಸ ... ಕಂಪೆನಿ,

177 ಜೇನಾ ಬಜಾರ್ ರೋಡ್, ಮದ್ರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ. [1 37]

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ... ಎಲ್ಲಿಂದ ಇತರ ಕಡೆಗಳಿಗೆಲ್ಲಾ ... ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಸಲಾಗುತ್ತಿರುವ ಟೋಪಿಗಳ ದಾರವು ... ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಳ್ಳುವರು ...

ಆದರೆ ಇನ್ನು ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ... ಚನ್ನಾಗಿ ಹಾಕಿಸುತ್ತೇವೆ ... ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆಯದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೬ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೬ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕಾಶ್ಮೀರ ಟೋಪಿ, ಪೂನಾ ಮುಂಡಾಸು, ಅರ್ಧ ಮುಂಡಾಸು, ಕೆತ್ತನೆ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಜ್ವರಶಂಕರಿ.

[illegible]

[illegible]

ಪ್ಲೀಹೋದರಾರಿ—...

[illegible]

ವಾತಮುರಾರಿ—ಇದು ಚಳಿನೋವು, ಉಳುಕು ... ಪ್ರಕಾಮಾಗುತ್ತದೆ ... ಬಾಟಲಿಗೆ ೮ ಆಣೆ ೨ ಬಾಟಲಿಗೆ ೧ ರೂ ...

ನಮ್ಮ ವಿಳಾಸ—ಬಿ. ಎಮ್. ನಾಥ ಮತ್ತು ಕಂಪೆನಿ, ವೇಪೇರಿ, ಮದ್ರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

	ಬಂದ	ಸತ್ತ	ಬಗಳಿ	ಸತ್ತ
ಬೆಂಗಳೂರು ಪಟ್ಟಣ	16	9	0	0
ಮೈಸೂರು	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು	11	10	0	0
ಕೋಲಾರ	6	6	10	[illegible]
ಕೋಲಾರ್ ಚಿನ್ನದ ಗಣಿಗಳು	0	1	0	0
ತುಮಕೂರು ಡಿಸ್ಟ್ರಿಕ್ಟು	11	[illegible]	0	0
ಹಾಸನ	11	2	0	0
ಚಿತ್ರದುರ್ಗ	0	0	16	18
ಕಡೂರ್	11	7	0	[illegible]
ಶಿವಮೊಗ್ಗ	1	11	[illegible]	1
ಮೊತ್ತ	121	77	1	29

[illegible] 1917 [illegible]

1912 ನೇ ಸಪ್ಟಂಬರ್

ತಾ	ವಾರ		ಘಳಿಗೆ	ನಕ್ಷತ್ರ	ಘಳಿಗೆ	[illegible]
13	ಶುಕ್ರ	ತದಿಗೆ	55-11	ಹಸ್ತ	9	29
14	ಶನಿ	[illegible]	52-11	ಚಿತ್ತ	7	0
15	ಭಾನು	[illegible]	49-11	[illegible]	17	8
16	ಸೋಮ	[illegible]	40-25	[illegible]	7	1
17	ಮಂಗಳ	ಸಪ್ತಮಿ	41-21	ಅನೂ	13	2
18	ಬುಧ	ಅಷ್ಟಮಿ	14-10	[illegible]	21	1
19	ಗುರು	ನವಮಿ	17-0	ಮೂಲ	14-37	1

[illegible]

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಅಕ್ಕಿ ಮಲ್ಲಿಗೆ	[illegible]	[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible]		[illegible]	[illegible]

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಉಷ್ಣಮರ್ಜ್ಜಿ ಚೂರ್ಣವು.

10 ತೊಲ ತೂಕವುಳ್ಳ ಡಬ್ಬಿ 1 ಕ್ಕೆ ರೂ 1-0-0

ಈ ಚೂರ್ಣವನ್ನು ಸೇವಿಸುವುದರಿಂದ ಸಕಲ ಉಷ್ಣ ರೋಗಗಳೂ ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ಸೀತು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ರಮೇಣ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲಿ ಉಷ್ಣ ರೋಗವು ನಾಶವಾಗುವದು. ಹಾಗೆ ಉಷ್ಣಸಂಬಂಧವಾದ ಇತರ ರೋಗಗಳಿಗೆ ಸಹಾ ಸಾರವಾಗುವವು.

ದಂತಧಾವನ ಚೂರ್ಣವು

ಡಬ್ಬಿ 1 ಕ್ಕೆ ಕ್ರಯ ರೂ 0-1-0 ಡಬ್ಬಿ 12 ಕ್ಕೆ ರೂ 2-8-0

ಈ ಪಲ್ಲುಪುಡಿ ಹಲ್ಲು ನೋವು, ವಸಡು ಕೊಳೆ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು. ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ಇರುವುವಲ್ಲದೆ ಹಲ್ಲುಗಳನ್ನು ಸ್ವಚ್ಛವಾದುವವು. [121-16]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಜೇನಾ ಬಜಾರ್ ರೋಡ್, ಮದ್ರಾಸು.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indian Life Assurance Companies' and Provident Societies' Acts 1912** and has also given **double the initial security** to the **Government** as required under the **Insurance Act 1912.**

How is it that the **National, of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions and distributes relief in thousands every quarter on account of **marriages and deaths** 122-7

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time who reside in district or taluk head quarters and who are well versed in English need apply.

For further particulars and prospectuses please apply with **one anna stamp** and your previous experience in the line to:—

M. L. NAGANNAH,

Chief Agent,

The Amritsar National Insurance Buildings, Mysore.

ಡಾಕ್ಟರ್ ಹಿಸ್ಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಹಿತ

ರೂ 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದ್ದರಿಂದ ಜೀವಮಾನವೆಲ್ಲ ಬರುವುದು. ಇದು ಎಂಥಾ ಕೆಲಸವಾದರೂ ಅನುಕೂಲವಾದದ್ದು. ಇದನ್ನು [illegible] ಸರಿಯಾದ ಕಾಲವನ್ನು ತೋರಿಸತಕ್ಕದ್ದು. [13-21]

ಮುಖ್ಯವಾಗಿ ಗಮನಿಸಿ ಓದಿರಿ

ರೇ. ಒಮುಮಾನ ಸಹಿತ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಬಗೆ ವಾಚ್ ಕೇಸ್ ಲೀವರ್ ಚಿಕ್ಕ ಸೈಜು ಕಂಪೆನಿ ಸೋರ್ ಬಾಕ್ಸು ಬಹು ಬಲವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕ್ಕೆಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 3-12-0 ಇದನ್ನು ಆರ್ಡರ್ ಮಾಡಿದವರಿಗೆ 10 ಘಂಟೆ ನಿದ್ರೆ ಮಾಡುವಂತಹ ಬೆಲ್ ಅಲಾರಂ ಕ್ಲಾಕ್ ಉಚಿತವಾಗಿ ಕೊಡಲ್ಪಡುತ್ತದೆ.

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ 167 ಮದರಾಸು.

READY FOR SALE

Exhaustive Notes on 'Tanglewood Tales' prescribed for the Lower Secondary Examination of 1913, by Mr. Y. Nanjundiah, Headmaster Hindu Boys A. V. School, Mysore. Price 4 annas.

Apply to —H. VENKATARAMIAH,

[131-3] Vidyanidhi Book Depot, Mysore.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ—ಇದು ಅನಂಗಸುಂದರಿಯ ಉಪಸಂಹಾರ. ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದಾಗಿರುವುದು. ಕ್ರಯ 8 ಆಣೆ

ಕುಮುದಿನಿ—ಗಾಯಿಂದ ಕಷ್ಟಪಡದ ಪತಿವ್ರತೆಯ ಕಥೆ, ಕ್ರಯ 6 ಆಣೆ

ಸತೀರೋಹಿಣಿ— [illegible] ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು. ಕ್ರಯ 2 ಆಣೆ [130-11]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಗನ್ ಟೈಂ ಲೀವರು ಘಡಿಯಾರವು.

131-3

ಮೊದಲಿನ ಬೆಲೆ ರೂ 5 8 0 ಈಗಿನ ಬೆಲೆ ರೂ. 3 8-0.

ಈ ನಮ್ಮ ಘಡಿಯಾರವು ಗವರ್ನಮೆಂಟು ಗನ್ನಿನ ಹಾರಿಸುವ ಕಾಲವನ್ನು ತೋರಿಸುವದರಿಂದ ಈ ಹೆಸರು ಕೊಟ್ಟದ್ದು. ಈ ಹೆಸರಿಗೆ ತಕ್ಕಂತೆಯೇ ಇದರ ಅಂಗಾಂಗಗಳೂ ಬಹಳ ಬಲವಾದ ಮತ್ತು ಮಜಬೂತಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿರುತ್ತೆ. ಈ ಘಡಿಯಾರದ ನ್ನು ಎಂಥಾ ಕಷ್ಟ ಸಮಯದಲ್ಲೂ ಉಪಯೋಗಿಸಬಹುದು. ಈ ಘಡಿಯಾರವನ್ನು ತೆಗೆಯುವವರು ಬಹಳ ಹೆಚ್ಚಿಕೆಯಿಂದ ಈ ಚಿತ್ರದಲ್ಲಿ ಕಂಡಂತೆ



ಬೋ ಆ ಘಡಿಯಾರದ ಮೇಲ್ ಮುಚ್ಚಳ [illegible] ಆ ಗನ್ ಮಾರ್ಕನ್ನು ಅದರ ಮೇಲ್ಭಾಗದಲ್ಲಿ ತೋರಿಸಿರುವದನ್ನು ಚನ್ನಾಗಿ ಗಮನಿಸಿ ಗುರ್ತಿಸಿ ಕೊಳ್ಳುವದು. ಅವರು ಖಾಯಂ ಇದರ ಅಂದವನ್ನು ತಮ್ಮ ಸ್ನೇಹಿತರಿಗೆ ತಿಳಿಸಿ ಅವರೂ ತೆಗೆಯುವಂತೆ ಪ್ರೋತ್ಸಾಹಿಸುವದರಲ್ಲಿ ಸಂದೇಹವಿಲ್ಲ. ಸುಮಾರು ಹೆಚ್ಚು ವರ್ಣನೆ ಬರೆಯುವದರಿಂದ ಪ್ರಯೋಜನವಿಲ್ಲ. ಇಂಥಾ ಘಡಿಯಾರ ಈ ಕಮ್ಮಿ ಬೆಲೆಗೆ ಇನ್ನು ಕೆಲವು ದಿನಗಳು ಮಾತ್ರ ಕೊಡಲ್ಪಡುತ್ತೆ. ಈ ಘಡಿಯಾರವನ್ನು ತೆಗೆಯುವವರಿಗೆ ಒಂದು ರೋಲ್ಡುಗೋಲ್ಡು ಸರಪಣಿಯನ್ನು ಇನಾಮಾಗಿ ಕೊಡಲ್ಪಡುತ್ತೆ.

ಯಂಪೆರರ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ 170, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅದರ ಹಾಗೆ ಲಕ್ಷಣಗಳಿರುವುದು — ಬೆನ್ನಿನಲ್ಲಿ ಛಳುಕು ಹಿಡಿಯಲ್ಪಡುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇರುವುದು, ಬಿಡುವ ಬಯಕೆ ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ ಕೀಲು ನೋವು ತಲೆ ತಿರುಗುವಿಕೆ, ಮೈನೋವು ಕೀಲುನೋವು ಮೊದಲಾದ [illegible]. ಇವು ಮೊದಲಾದುವು ಆಲಕ್ಷ್ಯ ಮಾಡಿದರೆ ಮೂತ್ರೋತ್ಪನ್ನವಾದ ವ್ಯಾಧಿ, ಉರುಮೂತ್ರ, ಮೂತ್ರಕೋಶದ ಕ್ಷಯ ಮೊದಲಾದ [illegible] ರೋಗಗಳಿಂದ ಸಂದೇಹವಿಲ್ಲ.

ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮತ್ತೆ ಕ್ರಿಯೆಗಳನ್ನು ಸರಿಪಡಿಸಿ ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [112-1]

ಆರೋಗ್ಯ ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯ ಮಾಡುವುವು.



ರೂ. ೨ ೮ ೦, ಅಥವಾ ೬ ಬುಡ್ಡಿಗಳಿಗೆ ರೂ ೧೩ ೮ ೦ ದವಾಖಾನೆಗಳನ್ನು ಮಾರುವವರಲ್ಲೆಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೫೦, ಬೊಂಬಾಯಿ ಎಂಬಲ್ಲಿ ದೊರೆಯುವುವು

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಶುಕ್ರವಾರ ಬೆಳಗಿನ ಝಾವದಲ್ಲಿ ಡಕಾಯಿತ ಕಳ್ಳರು ಅಲ್ಲಿನ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ರಾಯ್ ಬಹದ್ದೂರ್ ಲಾಲ್ ಮೋಹನ್ ಡೇ ಯವರನ್ನು ಹೊಡೆದು ಗಾಯ ಮಾಡಿದರು. ಡಕಾಯಿತರು ಬಹು ಭಾರಿ ಪ್ರಯತ್ನ ಮಾಡಿದರೂ ಕಳ್ಳರು ಸಿಕ್ಕಲಿಲ್ಲ. [illegible] ಆ ಮನೆಯ ಬಳಿ ಒಬ್ಬ ಪೋಲೀಸಿನವನು [illegible] ಮೂರು ದರೋಡೆ ಕೋರರು ಬಂದು ಆ ಮನೆಗೆ ಪ್ರವೇಶಿಸಲು ಪ್ರಯತ್ನ ಪಡುತ್ತಿರುವುದನ್ನು ನೋಡಿ ಪೋಲೀಸಿನವರು ಅವರನ್ನು ಹಿಡಿಯಲು ಪ್ರಯತ್ನಿಸಿದರು. [illegible] ರೆಟ್ಟೆಗಳು ಬಿದ್ದವು. ಅದರಿಂದ ಪೋಲೀಸಿನವರು ಕಳ್ಳರನ್ನು ಹಿಡಿಯದೆ ಬಿಟ್ಟುಬಿಟ್ಟಿದ್ದಾರೆ.

ವೃತ್ತಾಂತ ಪತ್ರಿಕೆ.

ಸನ್ ೧೯೧೨ನೇ ಇಸವಿ ಸೆಪ್ಟೆಂಬರ್ ತಾ ೧೨ನೇ ಗುರುವಾರ

ಮೈಸೂರು ಸಂಸ್ಥಾನವೂ ವಿದ್ಯಾಭಿವೃದ್ಧಿಯೂ.

ಮೈಸೂರು ಸಂಸ್ಥಾನದಲ್ಲಿ ವಿದ್ಯೆಯನ್ನು ಹರಡುವ ವಿಷಯದಲ್ಲಿ ಪರ್ಯಾಲೋಚನೆಮಾಡಿ ಅವಶ್ಯವೂ ಅನುಕೂಲವೂ ಆದ ಏರ್ಪಾಡುಗಳನ್ನು ಸೂಚಿಸಬೇಕೆಂದು ಗವರ್ನ್‌ಮೆಂಟಿನವರು ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ ಈ ಕಮಿಟಿಯು ಈ ಸೀಮೆಯ ಸಂಪದಭಿವೃದ್ಧಿ ಸಮಾಜದ ಒಂದು ಶಾಖೆಯಾಗಿರುವುದು ಈ ಕಮಿಟಿಯ ಮೆಂಬರುಗಳು ಈ ಸಲ ರಾಜಧಾನಿಯಲ್ಲಿ ಸಭೆ ಸೇರಿ ತೀರ್ಮಾನ ಮಾಡಿದ ವಿಚಾರಗಳನ್ನು ಸೆಕ್ರೆಟರಿಯವರು ಸರ್ಕಾರಕ್ಕೆ ಕಳುಹಿಸಿದರು ಅ ಪೈಕಿ ಮುಖ್ಯವಾದ ಅಂಶಗಳನ್ನು ಈ ಮೊದಲೇ ಪ್ರಕಟಮಾಡಿರುವೆವು ಈ ಸಮಾಜದ ಸಲಹೆಗಳ ವಿಷಯದಲ್ಲಿ ಸರ್ಕಾರದವರು ಅಪ್ಪಣೆಕೊಡಿಸಿರುವ ಕೆಲವು ವಿಚಾರಗಳನ್ನು ಕುರಿತು ಈಗ ಪ್ರಸ್ತಾಪಿಸುತ್ತೇವೆ.

ಸಂಸ್ಥಾನಾದ್ಯಂತ ಹೊಸ ಸ್ಕೂಲುಗಳನ್ನು ಸ್ಥಾಪಿಸುವುದಕ್ಕೂ, ಸ್ಕೂಲುಗಳನ್ನು ಕಟ್ಟಿಸುವುದಕ್ಕೂ ಹಣವನ್ನು ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಕೇಳಿದರು ಇದಕ್ಕಾಗಿ ಸರ್ಕಾರದವರು ೨,೪೪,೦೦೦ ರೂಪಾಯನ್ನು ಈ ವರುಷದ ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿರುವುದಾಗಿ ಸೂಚಿಸುತ್ತಾರೆ. ಇದರಲ್ಲಿ ಹೊಸ ಸ್ಕೂಲುಗಳನ್ನು ಪ್ರಾರಂಭಮಾಡುವುದಕ್ಕೂ, ಈಗ ಇರತಕ್ಕವುಗಳನ್ನು ಕ್ರಮಪಡಿಸುವುದಕ್ಕೂ ಒಂದು ಲಕ್ಷ ರೂಪಾಯೂ, ಸ್ಕೂಲ್ ಮನೆಗಳನ್ನು ಕಟ್ಟಿಸುವುದಕ್ಕೆ ಒಂದು ಲಕ್ಷ ರೂಪಾಯೂ ರಾಜಾದಾಯದಿಂದ ಕೊಟ್ಟಿದೆ, ಇವಲ್ಲದೆ ಗ್ರಾಮಫಾರಾಲಾ ಫಂಡಿನಿಂದ ಹೊಸ ಪಾಠಶಾಲೆಗಳನ್ನು ಇಡಿಸುವುದಕ್ಕೆ ೪,೦೦೦ ರೂಪಾಯನ್ನೂ, ಪಾಠಶಾಲಾ ಕಟ್ಟಡಗಳಿಗೆ ೪೦,೦೦೦ ರೂಪಾಯನ್ನೂ ವಿನಿಯೋಗಿಸಬಹುದೆಂದು ತಿಳಿಸಲಾಗಿದೆ ಕಟ್ಟಡಗಳೂ ತರಬೇತಾದ ಉಪಾಧ್ಯಾಯರೂ ಸಿದ್ಧವಾದಲ್ಲದೆ ಪಾಠಶಾಲೆಗಳನ್ನು ಇಡಲಾಗುವುದಿಲ್ಲ ಕಟ್ಟಡಗಳನ್ನು ಇಂಜನಿಯರು ಇಲಾಖೆಯವರಿಂದಲೇ ಮಾಡಿಸುವುದಾದರೆ ಸಾವಕಾಶವಾಗುತ್ತದೆ ಕೆಲವನ್ನು ಇಲಾಖೆಯವರ ಮೂಲಕವೂ ಕೆಲವನ್ನು ಆಯಾ ಸ್ಥಳದ ಮುಖಂಡರುಗಳ ಮೂಲಕವೂ ಕಟ್ಟಿಸಿದರೆ ಬೇಗ ಸಿದ್ಧವಾಗಬಹುದು ತರಬೇತಾದ ಉಪಾಧ್ಯಾಯರು ಅಷ್ಟು ಬೇಗ ದೊರೆಯಲಾರರು ಈಗಿರುವ ನಾರ್ಮಲ್ ಸ್ಕೂಲುಗಳಲ್ಲಿ ತರಬೇತಾಗುವಷ್ಟು ಉಪಾಧ್ಯಾಯರು ಸಾಕಾಗುವುದಿಲ್ಲ ಕೆಲವು ಕಾಲದ ಮಟ್ಟಿಗಾದರೂ ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲೂ ಸಾಮಾನ್ಯವಾದ ನಾರ್ಮಲ್ ಸ್ಕೂಲನ್ನು ಇಟ್ಟು ಪ್ರೈಮರಿ ಪಾಠಶಾಲೆಗಳಿಗೆ ಹೆಚ್ಚಾಗಿ ಉಪಾಧ್ಯಾಯರನ್ನು ಒದಗಿಸಿಕೊಳ್ಳಬೇಕಾಗುವುದು. ಸರ್ಕಾರದವರು ಅಭಿಪ್ರಾಯಪಡುವಂತೆ ಈ ಭಾಗವನ್ನು ಕಾಲಕ್ರಮದಲ್ಲಿ ಮಾಡಿಕೊಳ್ಳುವುದಾದರೆ ಇವರ ಉದ್ದೇಶದಂತೆ ಪಾಠಶಾಲೆಗಳ ಸಂಖ್ಯೆಯು ಹೆಚ್ಚುವುದಕ್ಕೆ ಅವಕಾಶ ಕಾಣುವುದಿಲ್ಲ. ಈ ಕಮಿಟಿಯವರ ಸಲಹೆಗಳನ್ನು ಇನ್ಸ್‌ಪೆಕ್ಟರ್ ಜನರಲ್‌ರವರು ಪರ್ಯಾಲೋಚಿಸಿ ಕಾರ್ಯಭಾಗವನ್ನು ತಿಳಿಸಬೇಕೆಂದು ಗವರ್ನ್‌ಮೆಂಟಿನವರು ಸೂಚಿಸಿರುತ್ತಾರೆ

ಸ್ತ್ರೀ ವಿದ್ಯಾಭ್ಯಾಸವನ್ನು ಹರಡುವುದಕ್ಕೆ ಬಾಲಿಕಾ ಪಾಠಶಾಲೆಗಳಿಗೆ ಉಪಾಧ್ಯಾಯಿನಿಯರನ್ನೇ ಹೆಚ್ಚಾಗಿ ನೇಮಿಸುವಂತಾಗಬೇಕೆಂದೂ, ಅವುಗಳ ಪರೀಕ್ಷೆಗೆ ಸ್ತ್ರೀಯರೇ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಡಬೇಕೆಂದೂ, ಮನೆಗಳಲ್ಲಿ ಹೆಂಗಸರಿಗೆ ವಿದ್ಯೆ ಹೇಳಿಕೊಡುವುದಕ್ಕೆ ಪ್ರೋತ್ಸಾಹವಾಗಬೇಕೆಂದೂ ಮೇಲ್ಕಂಡ ಕಮಿಟಿಯವರು ಸೂಚಿಸಿದರು ಸರ್ಕಾರದವರು ಮುಖ್ಯವಾದ ಬಾಲಿಕಾ ಪಾಠಶಾಲೆಗಳಲ್ಲಿ ಗಂಡಸರು ಉಪಾಧ್ಯಾಯರಾಗಿರುವುದನ್ನು ಬಹಳ ಮಟ್ಟಿಗೆ ಕಡಮೆಮಾಡಿ ಸ್ತ್ರೀಯರನ್ನೇ ನೇಮಿಸಲು ಏರ್ಪಾಡುಮಾಡುತ್ತಾ ಬರುತ್ತೇವೆಂದೂ, ಸ್ತ್ರೀ ಇನ್ಸ್‌ಪೆಕ್ಟರನ್ನು ನೇಮಕಮಾಡುವ ಭಾಗವನ್ನು ಪರ್ಯಾಲೋಚನೆಮಾಡುತ್ತಿರುವುದಾಗಿಯೂ, ಮನೆಗಳಲ್ಲಿ ಹೆಂಗಸರಿಗೆ ವಿದ್ಯೆ ಹೇಳಿಸುವ ಏರ್ಪಾಡು ಅಷ್ಟೇನೂ ಆತುರವಾದದ್ದಲ್ಲವಾದಕಾರಣ ಈ ವಿಚಾರವನ್ನು ಪ್ರತ್ಯೇಕವಾಗಿ ಯೋಚಿಸುತ್ತೇವೆಂದೂ ಹೇಳುತ್ತಾರೆ

ಕಮಿಟಿಯವರು ಸೂಚಿಸಿರುವ ಇನ್ನು ಕೆಲವು ವಿಚಾರಗಳನ್ನು ಸರ್ಕಾರದವರು ಇನ್ಸ್‌ಪೆಕ್ಟರ್ ಜನರಲ್‌ರವರ ಪರ್ಯಾಲೋಚನೆಗೂ ಸಲಹೆಗೂ ಕಳುಹಿಸಿಕೊಟ್ಟು, ಕಮಿಟಿ ಮೆಂಬರುಗಳನ್ನೂ, ಸಂಪದಭಿವೃದ್ಧಿ ಸಮಾಜದವರನ್ನೂ ವಂದಿಸಿರುವುದನ್ನು ನೋಡಲಾಗಿ ಈ ಕಮಿಟಿಯ ಕಾರ್ಯಗಳು ಮುಕ್ತಾಯ ಹೊಂದಿದವೆಂದು ತೋರುತ್ತದೆ

ಒಬ್ಬ ಅನಾಥ ಸಂರಕ್ಷಕನು

ಕಳೆದ ತಿಂಗಳಲ್ಲಿ ಇಂಗ್ಲಾಂಡಿನಲ್ಲಿ ಜನರಲ್ ಬೂತ್ ಎಂಬ ಪ್ರಸಿದ್ಧಪುರುಷರು ದೈವಾಧೀನರಾದರೆಂದು ತಿಳಿದು ಬಂದಿದೆ ಈ ಮಹನೀಯರ ಮರಣವಾರ್ತೆಯು ಭೂಲೋಕದ ಚತುರ್ದಿಕ್ಕುಗಳಲ್ಲಿಯೂ ಇರುವ ಲಕ್ಷೋಪಲಕ್ಷ ಜನಗಳಿಗೆ ಅಪಾರವಾದ ದುಃಖವನ್ನುಂಟುಮಾಡಿರುತ್ತದೆ ನಮ್ಮ ವಾಚಕ ಮಹನೀಯರಲ್ಲಿ ಅನೇಕರು ಇವರ ಪ್ರಸಿದ್ಧಿಯನ್ನು ಕೇಳಿಬಲ್ಲವರಾಗಿರಬಹುದು ಇವರು 1829 ರಲ್ಲಿ ಇಂಗ್ಲಾಂಡಿನಲ್ಲಿರುವ ನಾಟಿಂಗ್‌ಹಾಮ್ ಎಂಬ ಊರಿನಲ್ಲಿ ಜನಿಸಿದರು ಇವರ ತಂದೆಯು ಗಾರೆ ಕೆಲಸ ಮಾಡುವವರಾಗಿದ್ದರು ಇವರು ಹದಿನೈದು ವರುಷ ಪ್ರಾಯದವರಾಗಿದ್ದಾಗ ಯೇಸು ಕ್ರಿಸ್ತನ ಭಕ್ತರಾಗಿ ಆತನ ಮಾರ್ಗವನ್ನನುಸರಿಸಿ ನಡೆಯುವುದಕ್ಕೆ ಪ್ರಾರಂಭಿಸಿದರು ಇವರು ಪ್ರಾಯಸಮರ್ಥರಾದ ಮೇಲೆ ವಿಲ್ಲಿಯಮ್ ಬೂತ್ ಎಂಬ ಹೆಸರಿನಿಂದ ಕೆಲವು ವರುಷಗಳವರೆಗೂ ಪಾದ್ರಿಗಳ ಕೆಲಸಮಾಡುತ್ತಾ ಇದ್ದರು ಇವರಿಗೆ ಮುಖ್ಯವಾಗಿ ಕೇವಲ ಬಡಜನಗಳ ಮೇಲೆ ಇದ್ದ ಅಂತಃಕರಣವು ಅಸಾಧಾರಣವಾದುದಾಗಿತ್ತು ಏನಾದರೂ ಪ್ರಯತ್ನಮಾಡಿ ಹಿಂದುಳಿದಿರುವ ಬಡಜನಗಳನ್ನು ಉತ್ತಮಸ್ಥಿತಿಗೆ ತರಬೇಕೆಂಬ ಬಲವಾದ ಆಸೆಯು ಅವರಲ್ಲಿ ಹುಟ್ಟಿತು ಆದುದರಿಂದ ಅವರು ತಮಗೆ ನೇಮಕವಾಗಿದ್ದ ಕೆಲಸಕ್ಕೆ ರಾಜೀನಾಮೆ ಕೊಟ್ಟು ಪಟ್ಟಣ ಗ್ರಾಮಗಳನ್ನು ಸಂಚರಿಸುತ್ತಾ ಬಡವರನ್ನೂ ಭ್ರಷ್ಟರನ್ನೂ ತಿರಸ್ಕರಿಸಲ್ಪಟ್ಟವರನ್ನೂ ಹುಡುಕುತ್ತಾ ಬಂದರು ಒಂದಾನೊಂದು ದಿನ ಅಂದರೆ 1865ನೆಯ ವರುಷದ ಜುಲೈ ೫ನೆಯ ತಾರೀಖಿನಲ್ಲಿ ಲಂಡನ್ ಪಟ್ಟಣದ ಪೂರ್ವಭಾಗದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿ ಕೊಳಕುತನ, ದಾರಿದ್ರ್ಯ, ದುಷ್ಟತ್ವಗಳಲ್ಲಿ ಬಿದ್ದು ಹೊರಳಾಡುತ್ತಿದ್ದ ಬಡಜನಗಳನ್ನು ನೋಡಿ ಕರುಳು ಮರುಗಿದವರಾಗಿ ಅವರನ್ನು ಐಹಿಕ, ಪಾರಮಾರ್ಥಿಕ ವಿಷಯಗಳಲ್ಲಿ ಉತ್ತಮಸ್ಥಿತಿಗೆ ತರುವುದಕ್ಕಾಗಿ ಬೇಕಾಗಿದ್ದ ಅನೇಕ ಏರ್ಪಾಡುಗಳನ್ನು ಕಲ್ಪಿಸಿಕೊಟ್ಟರು ಈ ಪುಣ್ಯಾತ್ಮರು ತಮ್ಮ ಸ್ವಂತ ಸುಖವನ್ನೂ ಆದಾಯವನ್ನೂ ಸಂಪೂರ್ಣವಾಗಿ ತೊರೆದುಬಿಟ್ಟು, ಬಡವರಿಗೆ ಸಹಾಯಮಾಡುವುದರಲ್ಲಿ ತಾವು ವಾಚಾತೀತವಾದ ಕಷ್ಟನಷ್ಟಗಳನ್ನು ಅನುಭವಿಸುತ್ತಾ ಬಂದರು ಹೀಗೆ ಕೆಲವು ವರುಷಗಳು ಕಳೆದ ತರುವಾಯ ತಾವು ಪ್ರಾರಂಭಿಸಿರುವ ಸತ್ಕಾರ್ಯದ ಫಲವು ಸ್ವದೇಶೀಯರಿಗೆ ಮಾತ್ರವೇ ಅಲ್ಲ, ಅನ್ಯದೇಶಗಳವರಿಗೂ ಲಭಿಸುತ್ತಿರಬೇಕೆಂದು ಉದ್ದೇಶಪಟ್ಟು 1878 ರಲ್ಲಿ "ರಕ್ಷಣೆಯ ಸೈನ್ಯ" ಎಂಬ ನಾಮಧೇಯವನ್ನಿಟ್ಟು ಒಂದು ಸಮಾಜವನ್ನು ಏರ್ಪಡಿಸಿ ಈ ವರೆಗೂ ಅದನ್ನು ನಡಿಸುತ್ತಾ ಬಂದಿರುತ್ತಾರೆ ಆದುದರಿಂದ ಇವರಿಗೆ ಜನರಲ್ ಬೂತ್ ಎಂಬ ಬಿರುದು ಬಂದಿರುತ್ತದೆ. ಈ ಸಮಾಜದ ಶಾಖೆಗಳು ಈಗ 58 ದೇಶಗಳಲ್ಲಿರುತ್ತವೆ ಇದರಲ್ಲಿ ನಮ್ಮ ಹಿಂದೂ ದೇಶವೂ ಸೇರಿದೆ ಯಾವ ಯಾವ ಕಡೆಗಳಲ್ಲಿ ಜನಗಳು ಕೇವಲ ದುಸ್ಥಿತಿಯಲ್ಲಿ ಬಿದ್ದಿರುತ್ತಾರೋ ಅಂಥ ಕಡೆಗಳಲ್ಲಿ ಆ ಬಡಜನಗಳ ಪ್ರಯೋಜನಕ್ಕಾಗಿ ಈ ಸಮಾಜದವರು ಕಟ್ಟಿರುವ 9000 ಮಂದಿರಗಳು ಇರುತ್ತವೆ ಈಗ ಈ ರಕ್ಷಣೆಯ ಸೈನ್ಯಕ್ಕೆ ಸೇರಿದ ಆಫೀಸರುಗಳೂ ಶಿಪಾಯಿಗಳೂ ಎಲ್ಲಾ ಒಟ್ಟು 21,203 ಮಂದಿ ಇರುತ್ತಾರೆ ಇವರಲ್ಲಿ ಕೆಲವರು ನಮ್ಮ ಮೈಸೂರು ಸೀಮೆಗೂ ಅನೇಕ ಸಾರಿ ಬಂದಿರುತ್ತಾರೆ ಜನರಲ್ ಬೂತ್‌ರವರು ಲೋಕದ ಚತುರ್ದಿಕ್ಕುಗಳಲ್ಲಿಯೂ ಹರಡಿಕೊಂಡಿರುವ ಇಷ್ಟು ಅಪಾರವಾದ ಸೈನ್ಯದ ಕೆಲಸಗಳನ್ನು ಆಗಾಗ್ಗೆ ತಾನೇ ಖುದ್ದಾಗಿ ಹೋಗಿ ಪರಾಂಬರಿಸುತ್ತಲೂ ತಮ್ಮ ಸದುದ್ದೇಶವು ನೆರವೇರುವ ಹಾಗೆ ತಕ್ಕ ಏರ್ಪಾಡುಗಳನ್ನು ಕಲ್ಪಿಸಿಕೊಟ್ಟು ಅವನ್ನು ನಡಿಸುತ್ತಲೂ ಬಂದಿರುವುದು ಸುಲಭಸಾಧ್ಯವಾದ ಕಾರ್ಯವಲ್ಲ ಇವರಿಂದ ಲೋಕಕ್ಕೆ ಉಂಟಾಗಿರುವ ಪ್ರಯೋಜನವು ಇಷ್ಟೇ ಎಂದು ಅಳತೆಮಾಡಿ ಹೇಳುವುದು ಅಸಾಧ್ಯ ಬಡವರ ಶ್ರೇಯೋಭಿವೃದ್ಧಿಗಾಗಿ ಏರ್ಪಾಟಾಗಿರುವ ಸಮಾಜಗಳಲ್ಲಿ ಇದಕ್ಕಿಂತಲೂ ಹೆಚ್ಚು ಫಲದಾಯಕವಾದುದು ಬೇರೆ ಯಾವುದಾದರೂ ಇರುವುದಿಲ್ಲ

ತಮ್ಮ ತನುಮನಧನಗಳನ್ನು ಅನಾಥ ಸಂರಕ್ಷಣೆಗಾಗಿ ವಿನಿಯೋಗಿಸತಕ್ಕ ಪುಣ್ಯಾತ್ಮರು ಈ ನಮ್ಮ ದೇಶದಲ್ಲಿ ಎಂದಿಗೆ ಹುಟ್ಟಾರೆಂದು ಹಾರೈಸುತ್ತೇವೆ. ಈಗ ಹಿಂದೆ ಬಿದ್ದಿರುವ ಹೊಲೆಯರು ಮಾದಿಗರು ಮುಂತಾದವರ ಶ್ರೇಯೋಭಿವೃದ್ಧಿಯನ್ನು ಯಥಾರ್ಥವಾದ ಮನಸ್ಸಿನಿಂದ ಹಾರೈಸುವವರು ನಮ್ಮ ಸೀಮೆಯಲ್ಲಿ ಎಷ್ಟು ಮಂದಿ ಇರುತ್ತಾರೆ? ಒಂದು ವೇಳೆ ಅಂಥ ಮನಸ್ಸುಳ್ಳವರಿದ್ದರೂ ಅವರುಗಳು ಕಾರ್ಯತಃ ಮಾಡುತ್ತಾ ಬಂದಿರುವುದೇನು? ದಯಾಳುಗಳಾದ ನಮ್ಮ ಸರ್ಕಾರದವರು ಇಂಥ ಬಡಜನಗಳಿಗಾಗಿ ಪಾಠಶಾಲೆಗಳನ್ನಿಟ್ಟು ವಿದ್ಯಾದಾನ ಮಾಡುತ್ತಿರುವುದು ಸ್ತೋತ್ರಾರ್ಹವಾದುದು. ಇವರೆ ಪಂಚಮರು ವಿದ್ಯಾವಂತರಾದರೆ ನಮ್ಮ ಪಕ್ಕೋಟೆಯಲ್ಲಿರುವುದಿಲ್ಲವೆಂದೂ ನಮ್ಮ ಹೊಲ ತೋಟ ಗದ್ದೆಗಳನ್ನು ನಾವೇ ಮಾಡಬೇಕಾದ ಕಾಲ ಬರುವುದೆಂದೂ ಭಯಪಟ್ಟು ಕೇವಲ ಸ್ವಾರ್ಥತೆಯಿಂದ ತುಂಬಿದವರಾಗಿ ಅಂಥ ಪಾಠಶಾಲೆಗಳ ಅಭಿವೃದ್ಧಿಗೆ ಭಂಗವನ್ನು ತರುವ ಕೆಲವು ಪುಣ್ಯಾತ್ಮರು ಎಲ್ಲೆಲ್ಲಿ ಇರುತ್ತಾರೆ ಇದು ಮಾತ್ರವಲ್ಲದೆ ಶೂದ್ರರಿಗೆ ಧರ್ಮೋಪದೇಶವನ್ನು ಮಾಡಿ, ಅವರನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡುವವರು ಎಷ್ಟು ಮಂದಿ ಇರುತ್ತಾರೆ? ಇದಕ್ಕೆ ಬದಲಾಗಿ ಶೂದ್ರರು ವೇದಶ್ರವಣ ಮಾಡಬಾರದೆಂದು ಅಭಿಪ್ರಾಯಪಡುವವರು ಕೆಲವರು ಇರುತ್ತಾರೆ. ಸ್ವಾರ್ಥತೆಯು ಎಷ್ಟು ಹೆಚ್ಚುತ್ತದೆಯೋ ಅಷ್ಟು ... ಕೇಡಾಗುವುದೇ ಹೊರತು ಮೇಲಾಗಲಾರದು. ನಮ್ಮ ... ಮರು ಲೋಕೋಪಕಾರಿಗಳಾಗಬೇಕಾದರೆ ಸ್ವಾರ್ಥತೆಯನ್ನು ವರ್ಜಿಸಿ ಪರಹಿತೈಷಿಗಳಾಗಿ ಅದಕ್ಕಾಗಿ ಕಷ್ಟನಷ್ಟಗಳನ್ನು ತಾಳುವ ಧೀರತನವನ್ನು ಪಡೆಯಬೇಕು ಕಷ್ಟನಷ್ಟಗಳನ್ನನುಭವಿಸದೆ ಪರೋಪಕಾರ ಮಾಡುವುದು ಅಸಾಧ್ಯ

ದರಿದ್ರರೂ ನೀಚರೂ ದುಷ್ಟರೂ ಆಗಿದ್ದವರನ್ನು ಹುಡುಕಿಕೊಂಡು ಹೋಗಿ ಅವರನ್ನು ಸಂರಕ್ಷಿಸುವಂಥ ಜನರಲ್ ಬೂತ್‌ರವರನ್ನು ಪ್ರೀತಿಸದೇನು? ಆ ಬಡಜನಗಳು ಅವರ ಬಂಧುಗಳಾಗಿರಲಿಲ್ಲ ಅವರಲ್ಲಿ ಅನೇಕರು ಪರದೇಶಿಗಳಾಗಿದ್ದರು ಕಷ್ಟದುಃಖಗಳಲ್ಲಿ ಸಿಕ್ಕಿರುವ ಮಾನವರನ್ನು ಅವರು ಯಾರೇ ಆಗಲಿ ರಕ್ಷಿಸಬೇಕೆಂಬ ಮನಸ್ಸು ಇವರಲ್ಲಿ ಹೇಗೆ ಹುಟ್ಟಿತು? ಇದಕ್ಕೆ ಉತ್ತರವನ್ನು ಹೇಳುವುದು ಕಷ್ಟವಲ್ಲ ಇವರು ಯಾವ ಗುರುವನ್ನು ನಂಬಿದ್ದರೋ ಆ ಯೇಸು ಕ್ರಿಸ್ತನು—"ನಾನು ಕೆಟ್ಟುಹೋದವರನ್ನು ಹುಡುಕಿ ರಕ್ಷಿಸುವುದಕ್ಕಾಗಿ ಬಂದೆನು," "ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು" ಎಂದು ಹೇಳಿದನು ಗುರುವಿನಲ್ಲಿದ್ದ ಮನಸ್ಸೇ ಶಿಷ್ಯನಾದ ಜನರಲ್ ಬೂತ್‌ರವರಲ್ಲಿಯೂ ಇದ್ದಿತು

ಒಳದೇಶದ ವೃತ್ತಾಂತಗಳು

ಮಳವೂರು ಜಹಗೀರುದಾರರಾದ ಮ ರಾ ಸರ್ದಾರ್ ಗಡಾನ್ ಫುರ್ಕೇಜರವರು ಜಹಗೀರಿಯನ್ನು ಆಜೀವ ... ರವರಿಗೆ ... ಬರೆಸಿ ಕೊಟ್ಟಿರುವರಾಗಿ ... ವರ ಗಿದಾರೆ

⁂

ರಾಜಧಾನಿ ನಗರದ ... ಶ್ರೀ ಉತ್ತರಕೆರೆ ಬಳಿಯ ಕೆಳ ಭಾಗಕ್ಕೊ ಇರುವ ನಿವೇಶನವನ್ನು ಇಲ್ಲಿನ ಅನಾಥಾಲಯವನ್ನು ಕಟ್ಟುವುದಕ್ಕಾಗಿ ಟ್ರಸ್ಟ್ ಬೋರ್ಡಿನವರು ಉಚಿತವಾಗಿ ಕೊಟ್ಟಿರುತ್ತಾರೆ

⁂

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಕಾಲೇಜ ಕ್ಕೆ ಹೋಗಬೇಕೆಂದು ಸರ್ಕಾರದವರು ಮೊದಲು ವಿಧಿಸಿದ್ದ ನಿಬಂಧನೆಯನ್ನು ರದ್ದುಮಾಡಿ, ಇನ್ನು ಮುಂದೆ ಲೋವರ್ ಸೆಕೆಂಡರಿ ಪರೀಕ್ಷೆ ಕೊಟ್ಟವರು ನೇರಾಗಿ ಸ್ಕೂಲಿಗೆ ಸೇರಿಕೊಂಡು ಓದಬಹುದೆಂದು ಸ್ಯಾಂಕ್ಷನ್ ಮಾಡಿದ್ದಾರೆ

⁂

ಮ ಬಾಲರಾಜೇ ಅರಸಿನವರಿಗೆ ಈ ಸಲ ಬಿ ಎ ಪರೀಕ್ಷೆ ಆದ ಸಂತೋಷಕ್ಕಾಗಿ ಅವರು ರಾಜಧಾನಿಯ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಿಗೆ ಮೊನ್ನೆ ಸೋಮವಾರ ಮಧ್ಯಾಹ್ನ ವ್ಯಾಯಾಮ ... ಪದ್ಯಗಳನ್ನು ಕಲ್ಪಿಸಿ ಗೆದ್ದವರಿಗೆ ಬಹುಮಾನ ಪುಸ್ತಕಗಳನ್ನೂ, ಎಲ್ಲರಿಗೂ ಫಲಾಹಾರವನ್ನೂ ಕೊಡಿಸಿ ಸಂತೋಷಪಡಿಸಿದರು

⁂

ಮಡಿಕೇರಿ ತಾಲ್ಲೂಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಬಾಳೆಯ ಬೆಳೆಗೆ ಒಂದು ಹುಳು ಹತ್ತಿ ರಾಗಿ ಮತ್ತು ಹರಳಿನ ಪೈರನ್ನು ಹಾಳುಮಾಡುತ್ತಿದೆ ಎಂಬ ಸಂಗತಿಯನ್ನು ಈ ವಾರದ ತಾಲ್ಲೂಕ್ ವರ್ತಮಾನಗಳಲ್ಲಿ ಪ್ರಕಟಿಸುತ್ತೇವೆ ವ್ಯವಸಾಯದ ಇಲಾಖೆಯವರು ಇದನ್ನು ಪರೀಕ್ಷಿಸಿ ತಕ್ಕ ಪರಿಹಾರವನ್ನು ಸೂಚಿಸಬೇಕಾಗಿದೆ

⁂

ಬೆಂಗಳೂರು ಪೇಟೆಯಲ್ಲಿ ವಾಸವಾಗಿರುವ ಮ ಲಾಲಾರಾಯ ಎಂಬ 10 ವರುಷದ ಮಗನು ನೆರೆಮನೆಯಲ್ಲಿದ್ದ ಕೆಲವು ಮಣ್ಣಿನ ಗಾಜಿನ ಪಾತ್ರೆಗಳನ್ನು ಕದ್ದು ... ಬಿಸಾಡಿದ್ದಕ್ಕಾಗಿ, ಮ್ಯಾಜಿಸ್ಟ್ರೇಟರು ಅವನ ತಂದೆಯಿಂದ ಆ ಹುಡುಗನ ನಡತೆಗೆ 100 ರೂಪಾಯಿನ ಎರಡು ಜಾಮೀನುಗಳನ್ನು ತೆಗೆದುಕೊಂಡು ಬಿಡುಗಡೆ ಮಾಡಿಸಿದರು

⁂

ಈಗ ಆಹಾರ ಸಾಮಗ್ರಿಗಳ ಧಾರಣೆಯು ಕ್ಷಾಮಕಾಲವನ್ನು ಸೂಚಿಸುತ್ತಿರುವುದರಿಂದ ಬಡಬಗ್ಗರಿಗೆ ಸರ್ಕಾರದಿಂದ ಅಂಗಡಿಗಳನ್ನಿಟ್ಟು ದಿನಸಿಯನ್ನು ಅಗ್ಗವಾಗಿ ವಿಕ್ರಯಮಾಡಿಸಬೇಕೆಂದು ರಾಜಧಾನಿಯಲ್ಲಿ ಕೆಲವರು ಶ್ರೀಮನ್ಮಹಾರಾಜರವರಿಗೆ ವಿಜ್ಞಾಪಿಸಿಕೊಳ್ಳುವ ಉದ್ದೇಶದಿಂದ ಅರ್ಜಿಗಳಿಗೆ ರುಜುಮಾಡಿಸುತ್ತಿದ್ದಾರೆಂದು ಕೇಳುತ್ತೇವೆ

⁂

ಬೆಂಗಳೂರು ಸಿಟಿಯಲ್ಲಿ ಮ್ಯುನಿಸಿಪಾಲಿಟಿಯವರು ಎರಡು ಅಂಗಡಿಗಳನ್ನು ತೆಗೆದುಕೊಂಡು ಬಿಡಲು, ಅವಕ್ಕೆ ತಲಾ 120 ರೂಪಾಯಿನಂತೆ ಪ್ರತಿಫಲ ಕೊಟ್ಟರೆ ಸಾಕೆಂದು ಹೇಳಿದ್ದಕ್ಕೆ ಅಂಗಡಿಗಳ ಮಾಲೀಕರು ಒಪ್ಪದೆ ದಾವಾ ಹೂಡಿ ಚೀಫ್ ಕೋರ್ಟಿನಲ್ಲಿ ಇದು ಕಳೆದ ವಾರ ಫೈಸಲಾಯಿತು ಮಾಲೀಕರಿಗೆ ಅಂಗಡಿ ಒಂದಕ್ಕೆ 1,150 ರೂಪಾಯಿನಂತೆ ಮ್ಯುನಿಸಿಪಾಲಿಟಿಯವರು ಪ್ರತಿಫಲ ಕೊಡಿಸಿರುತ್ತಾರೆ

⁂

ಚಾಮರಾಜನಗರದ ತಾಲ್ಲೂಕು ದೊಡ್ಡರಾಯಪೇಟೆಯಲ್ಲಿ ವರ್ತಕರಾದ ಮ ... ಯವರು ಸಾವಿರಪಟ್ಟು ಒಂದು ಸ್ಕೂಲ್ ಮನೆಯನ್ನು ಕಟ್ಟಿಸಿ ಕಳೆದ ವಾರ ಬಹಳ ವಿಜೃಂಭಣೆಯಾಗಿ ಪ್ರವೇಶಮಾಡಿಸಿದರು ಎಲ್ಲಾ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಹಾಜರಾಗಿದ್ದು ಬಾಲಕರ ವಿದ್ಯಾಭಿವೃದ್ಧಿಯು ಶಾಶ್ವತವಾಗಿ ನಡೆಯಬೇಕು ಎಂದು ಹರಸಿದ್ದಲ್ಲದೆ ಅದಕ್ಕೆ ಸಹಾಯಕರಾದವರ ಪರೋಪಕಾರವನ್ನು ಕೊಂಡಾಡಿದರು

⁂

ಬ್ರಿಟಿಷ್ ಸರ್ಕಾರ ವಿ ಎನ್ ಕೃಷ್ಣಮೂರ್ತಿಯವರಿಗೆ ಮಾಸಿಯಾನ ... ರೂಪಾಯಿನಂತೆ ಸಲ್ಲಬೇಕಾಗಿದ್ದ ಪೆನ್ಷನ್ ಮೊಬಲಗನ್ನು ಅವರ ಸ್ಮಾರಕವಾದ ... ಕೃಷ್ಣಮೂರ್ತಿಯವರಿಗೆ ದಾನವಾಗಿ ಮಾಡಬೇಕೆಂದು ಸರ್ಕಾರದವರು ಅಪ್ಪಣೆಕೊಟ್ಟಿದ್ದಾರಷ್ಟೆ ಈ ಹಣವನ್ನು ಅವರಿಗೆ ಕೊಡಕೂಡದೆಂದೂ, ಧರ್ಮಕಾರ್ಯಕ್ಕೆ ವಿನಿಯೋಗತಕ್ಕದ್ದಾಗಿದೆ ಎಂದೂ ಜಹಗೀರುದಾರ್ ...

...ಸೀಗರ್ ಫ್ಯೂರ್ಸ್ಯಯನವರು ಅಧ್ಯಕ್ಷತೆ ... ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ನಡೆಸಬೇಕೆಂದು ವಿಮರ

* * *

ಮೈಸೂರು ಪಟ್ಟಣದ ಮುನಿಸಿಪಲ್ ಸರಹದ್ದಿನೊಳಗೆ ಮ್ಯುನಿಸಿಪಲ್ ತೆರಿಗೆಯನ್ನು ಪಾವತಿ ಮಾಡಿ ಮುನಿಸಿಪಾಲಿಟಿಯವರು ಕೊಡುವ ... ಬಿಲ್ಲೆಯನ್ನು ಯಾರೇ ಆಗಲಿ ತಮ್ಮ ... ಕಟ್ಟಿಕೊಳ್ಳದ ಹೊರತು ಅಂಥ ... ಸ್ವಂತಕ್ಕಾಗಿರಲಿ ... ಬಾಡಿಗೆಗಾಗಲಿ ಬೀದಿಯಲ್ಲಿ ಓಡಿಸುತ್ತಿದ್ದರೆ ... ಮುಂದಿನ ನವಂಬರ್ ... ಈ ರೂಲಸು ಜಾರಿಗೆ ತರಲ್ಪಡುವುದೆಂದೂ ಅಂಥವರಿಗೆ 10 ರೂಪಾಯಿಗೆ ಮೀರದಂತೆ ಮಾಜಿಸ್ಟ್ರೇಟರಿಂದ ಜುಲ್ಮಾನೆಯಾಗುವುದೆಂದೂ ಪ್ರಕಟಮಾಡಿರುತ್ತಾರೆ

ಮೈಸೂರು ಗಜೆಟ್ ಸಂಗ್ರಹ

ಬೆಂಗಳೂರು ಸಿಟಿ ಮುನಿಸಿಪಾಲಿಟಿ ಸರಹದ್ದಿನಲ್ಲಿ 1912 ನೆ ಜೂಲೈ ತಾ ... ದ ಮೂರು ವರುಷ ಕಾಲ ಬಲಾತ್ಕಾರದ ... ವಿ ... ಹಾಕುವ ರೂಲಸು ... ಯಲ್ಲಿರತಕ್ಕದ್ದೆಂದು ಹುಕುಂ ಮಾಡಿದೆ

... ತಾಲ್ಲೂಕು ಕುರುವ ... ಟು ... ದೆ ... ತಿಳಿಯತಕ್ಕದ್ದು

... ವರನ್ನು ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ... ಗೆ ನೇಮಕಮಾಡಿದೆ ... ಗಳಾದ ... ಅಧ್ಯಾಪಕ ಪಂಡಿತರು, ... ಬಾಪಟ್ ... ಮೆಂಬರು, ... ರಂಗಯ್ಯಂಗಾರ್ ... ಸ್ವಾಮಿಗಳವರು ... ಗವರ್ನ್ಮೆಂಟ್ ಮೆಂಬರು

... ನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ಮ ಆರ್ ಸು ... ವರಿಗೆ ಕೊಟ್ಟಿರುವ ... ಪ್ರಿವಿಲೆಜ್ ರಜವನ್ನು ... ಕರ ... ಈಗಿನ ... ಪರಾಗಾಡೇ ಜಾರಿಯಲ್ಲಿರತಕ್ಕದ್ದು

ಬೆಂಗಳೂರು ಡೆ. ಕಮಿಷನರವರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ... ಕಣ್ಣಯ್ಯ ... ಬೆಂಗಳೂರು ತಾಲ್ಲೂಕಿನ ಅಮಲ್ದಾರ್ ಮತ್ತು ... ಗಾಗಿ ... ನೋಡತಕ್ಕದ್ದು

... ಡಿ ... ಪೋಲೀಸ್ ಸೂಪರಿಂಟೆಂಡೆಂಟ್ ಮ ಮಹಮದ್ ... ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಆರು ದಿನ ... ಮಾಡಿದೆ

ಬೆಂಗಳೂರು ಸರ್ಕಲ್ ಸ್ಕೂಲುಗಳ ಇನ್ಸ್ಪೆಕ್ಟರ್ ಮ ... ಆರ್ ... ನಾರಾಯಣಯ್ಯನವರಿಗೆ ಕೊಟ್ಟಿರುವ ಮೂರು ... ಗಳ ಪ್ರಿವಿಲೆಜ್ ರ ... ಗೆ ಮತ್ತು ... ರಜಾ ಕೊಟ್ಟಿದೆ ಈಗಿನ ಬದಲಿ ಪರಾಗಾಡೇ ... ಯಲ್ಲಿರತಕ್ಕದ್ದು

... ನಾರಾಯಣಯ್ಯನವರಿಗೆ ಕೊಟ್ಟಿರುವ ... ಮತ್ತು ... ರಜವನ್ನು ಇನ್ನೂ ಎರಡು ... ಗಳು ವಿಸ್ತರಿಸಿದೆ

ಡಾಕ್ಟರ್ ಎ ... ರಾಮಸ್ವಾಮಿಯಂಗಾರ್ರು ಎರಡು ತಿಂಗಳು ... ರಜಾ ಪಡೆದಿದ್ದಾಗ ಅ ಸರ್ಜನ್ ಮ ಎಸ್ ನಾರಾಯಣರಾಯರು ತಮ್ಮ ಕೆಲಸದ ಜೊತೆಗೆ ... ಸರ್ಜನ್ರವರ ಪರ್ಸನಲ್ ಅ... ಗಿಯೂ ಕೆಲಸ ಮಾಡಿದರು

ಶ್ರೀಮನ್ ಮಹಾರಾಜರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟ ... ರಾ ... ಜೂಲೈ ತಾ 10 ರಿಂದ ... ಗ್ರೇಡ್ ಜಮೇದಾರ್ ಟ್ರೂಪ್ ಕಮಾಂಡರಾಗಿಯೂ ಮ ... ಯವರನ್ನು 3 ನೆ ಗ್ರೇಡ್ ಜಮೇದಾರ ಟ್ರೂಪ್ ಕಮಾಂಡರಾಗಿಯೂ ಬಡ್ತಿ ಮಾಡಿದಾರೆ

ಮೈಸೂರು ಇನ್ಫ್ಯಾಂಟರಿ ಇಲಾಖೆಯಲ್ಲಿ ಮುಂದೆ ಹೇಳುವ ಸುಬೇದಾರರನ್ನು 3 ನೇ ಕ್ಲಾಸ್ ಓವರ್ಸಿಯರುಗಳಾಗಿ ಎತ್ತಿ ಮಾಡಿದೆ —ಚಿತ್ರದುರ್ಗ ಡಿಸ್ಟ್ರಿಕ್ಟ್ ಮ ... ಕೇಶವರಾಯರು (?) + 10 ರೂ ... ತು ಕೂರು ಡಿಸ್ಟ್ರಿಕ್ಟ್ ಮ ... ಕೃಷ್ಣರಾಯರು 60 + 10 ರೂ ... ಅರಮನೆ ಡಿವಿಷನ್ ಮ ... ಮುನಿಸ್ವಾಮಿ ಮೊದಲಿಯಾರ್ರು 60 + 10 ರೂ ... ತುಕೂರು ಡಿಸ್ಟ್ರಿಕ್ಟ್ ಮ ... ನಾಗರಾಜಯ್ಯರ್, 60 ರೂ ... ಹಾಸನ ಡಿಸ್ಟ್ರಿಕ್ಟ್ ... ಸ್ವಾಮಿ ಮೊದಲಿಯಾರ್ರು 60 + 10 ರೂ ... ಬೆಂಗಳೂರು ಡಿಸ್ಟ್ರಿಕ್ಟ್ ಮ ... ನಾಗರತ್ನಮೊದಲಿಯಾರ್ರು 60 ರೂ

ಗುಬ್ಬಿ ಡೆಪ್ಯುಟಿ ಅಮಲ್ದಾರ್ ಮ । ... ಟಿ ರಾಮುಡು ... ರಾಯರಿಗೆ ... ಪ್ರಿವಿಲೆಜ್ ರಜವನ್ನು ... ಅವರು ಉಪಯೋಗಿಸಿಕೊಳ್ಳಲು ... ದ್ದು ...

ಚಿಕ್ಕನಾಯಕನಹಳ್ಳಿ ತಾಲ್ಲೂಕು ... ಅಮಲ್ದಾರ್ ಮ ... ಟ ... ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ... ಪ್ರಿವಿಲೆಜ್ ರಜಾ ಕೊಟ್ಟಿದೆ ... ತುರುವೇಕೆರೆಯಲ್ಲಿ ಡೆ. ಅಮಲ್ದಾರ ... ಬದಲಿ ನೋಡುತ್ತಿರುವ ... ಸುಬ್ಬರಾಯರು ಸದರಿ ತಾಲ್ಲೂಕಿನ ... ನೋಡತಕ್ಕದ್ದು

ಮೈಸೂರು ಸರ್ಕಾರಿ ಹುಕುಮುಗಳು

ಒಂದು ಸಂಘಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಿದ್ದು

ಹಾಸನ ಡಿಸ್ಟ್ರಿಕ್ಟ್ ವ್ಯವಸಾಯ ಮತ್ತು ಕಸಬುಗಳ ಸಂಘದಲ್ಲಿ ... ಮೆಂಬರುಗಳು ಸೇರಿಕೊಂಡು ಆ ಡಿಸ್ಟ್ರಿಕ್ಟಿನಲ್ಲಿ ... ವನ್ನೂ ಕಸಬುಗಳನ್ನೂ ಅಭಿವೃದ್ಧಿ ಮಾಡಬೇಕೆಂಬ ಉದ್ದೇಶವುಳ್ಳವರಾದುದರಿಂದ ಈ ಸಂಘದ ಪರವಾಗಿ ಪ್ರತಿನಿಧಿ ಸಭೆಗೆ ಒಬ್ಬ ಮೆಂಬರನ್ನು ಚುನಾಯಿಸುವುದಕ್ಕೆ ಅವಕಾಶ ಕೊಡಬೇಕೆಂದು ಡೆ. ಕಮಿಷನರವರು ಶಿಫಾರಸು ಮಾಡಿದರು ಗವರ್ನ್ಮೆಂಟಿನವರು ಅವರ ಶಿಫಾರಸನ್ನು ಒಪ್ಪಿ ಸ್ಯಾಂಕ್ಷನ್ ... ಮುಂದಿನ ಚುನಾವಣೆಗೆ ... ರುವ ಮೆಂಬರುಗಳ ... ವಿಸ್ತಾರವಾಗಿ ಸರ್ಕಾರದ ತಿಳುವಳಿಕೆಗೆ ತಿಳಿಸಬೇಕೆಂದು ಆಜ್ಞೆ ಕೊಟ್ಟಿರುತ್ತಾರೆ

ಚಿತ್ರದುರ್ಗದ ಕೃಷಿ ಶಿಲ್ಪವಿವರ್ಧನ ಸಮಾಜ

ಈ ಸಮಾಜದಲ್ಲಿ 181 ಮೆಂಬರುಗಳು ಇದ್ದು ಚಿತ್ರದುರ್ಗದಲ್ಲಿ ... ವನ್ನೂ ಕೈಗಾರಿಕೆಗಳನ್ನೂ ವೃದ್ಧಿಮಾಡುವ ಕಾರ್ಯದಲ್ಲಿ ಉದ್ಯುಕ್ತರಾಗಿರುವುದರಿಂದ ಈ ಸಂಘದಿಂದ ಈ ವರುಷದ ಪ್ರತಿನಿಧಿಸಭೆಗೆ ಒಬ್ಬ ಮೆಂಬರನ್ನು ಚುನಾಯಿಸಿ ಕಳುಹಿಸುವುದಕ್ಕೆ ಅವಕಾಶಕೊಡಬಹುದೆಂದು ಡೆಪ್ಯುಟಿ ಕಮಿಷನರು ... ಸರ್ಕಾರದವರು ಅವರ ಶಿಫಾರಸನ್ನು ಅನುಸರಿಸಿ ಆ ಸಮಾಜದ ಪರವಾಗಿ ಈ ವರುಷದ ಪ್ರತಿನಿಧಿ ಸಭೆಗೆ ಒಬ್ಬ ಮೆಂಬರು ಚುನಾವಣೆ ಹೊಂದಿ ಹಾಜರಾಗಬಹುದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ

ಮೈಸೂರು ಮ್ಯುನಿಸಿಪಲ್ ಬಜೆಟ್ಟು

ಸರ್ಕಾರದವರು ರಾಜಧಾನಿಯ 1912 13 ನೇ ಸಾಲಿನ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ ಇದರಲ್ಲಿ ಕಂಡುಬರುವ ಮುಖ್ಯ ಭಾಗಗಳ್ಯಾವವೆಂದರೆ—ಹಿಂದಿನ ಸಾಲಿನ ಶಿಲ್ಕು ರೂ 9,233 ಚಾಲ್ತಿ ಸಾಲಿನ ಉತ್ಪತ್ತಿ ರೂ 1,93 717 ಒಟ್ಟು ಉತ್ಪತ್ತಿ ರೂ 2,02 950 ಇದರಲ್ಲಿ ಚಾಲ್ತಿ ಸಾಲಿನಲ್ಲಿ 1 89,181 ರೂಪಾಯಿ ಖರ್ಚು ಮಾಡತಕ್ಕದ್ದೆಂದೂ, ಸಾಲ್ ಆಖೈರಿನಲ್ಲಿ ರೂ 13 769 ಉಳಿಯುವುದೆಂದೂ ಗೊತ್ತುಮಾಡಿದಾರೆ ರಾಜಧಾನಿಯ ರಸ್ತೆಗಳನ್ನು ದುರಸ್ತುಮಾಡುವುದಕ್ಕೆ 8,100 ರೂಪಾಯನ್ನೂ, ಅಂಟುರೋಗಗಳನ್ನು ಅಡಗಿಸುವ ಖರ್ಚಿಗೆ 1 297 ರೂಪಾಯನ್ನೂ ಸರ್ಕಾರದವರು ಮ್ಯುನಿಸಿಪಾಲಿಟಿಗೆ ಕೊಟ್ಟು ಸಹಾಯಮಾಡುತ್ತಾರೆ ಪಟ್ಟಣದ ಅವರ ಜಮೆಯೊಳಗೆ ಇರುವಂಥಾ ಶರಾಬು ದುಕಾನುಗಳ ಲೈಸೆನ್ಸಿನಿಂದ ಮ್ಯುನಿಸಿಪಾಲಿಟಿಗೆ ಸಾಲಿಯಾನಾ ಬರುತ್ತಿದ್ದ ಸುಮಾರು 9,000 ರೂಪಾಯಿ ಉತ್ಪತ್ತಿಯು ಈ ಸಾಲಿನಿಂದ ... ಹೋಯಿತು ಈ ವಿಚಾರದಲ್ಲಿ ಸರ್ಕಾರದವರು ಯೋಚಿಸುವುದಾಗಿ ... ದಾಗಿ ಆಶ್ವಾಸನೆಕೊಟ್ಟಿದಾರೆ ಪಟ್ಟಣದಲ್ಲಿ ಈಗ ಮೊಹತರ್ಫಾ ರೂಲ್ಸು ಅನುಸರಿಸಿ ಗಾಡಿ ಕಂದಾಯವನ್ನು ವಸೂಲ್ಮಾಡುತ್ತಿರುವುದು ಸರಿಯಲ್ಲವೆಂದೂ ಮುನಿಸಿಪಲ್ ಆಕ್ಟಿನಲ್ಲಿ ಕಂಡ ದರಗಳಂತೆ ಕಂದಾಯವನ್ನು ಹಾಕಿ ವಸೂಲ್ಮಾಡಬೇಕೆಂದೂ ಸರ್ಕಾರದವರು ತಿಳಿಸುತ್ತಾರೆ ಈಗಿರುವ ಮ್ಯುನಿಸಿಪಲ್ ಇಂಜಿನಿಯರವರ ಸಂಬಳ 100 + 20 ರೂಪಾಯಿ ಎಂದು ವಿಧಾಯಕವಾಗಿದ್ದ ಮುನಿಸಿಪಲ್ ಕೌನ್ಸಿಲರುಗಳಿಗೆ ಅಲೋಯನ್ಸು 200 ರೂಪಾಯಿ ಎಂಬ ಭಾಗವನ್ನು ಸರ್ಕಾರದವರು ವಜಾ ಮಾಡಿದರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಲ್ಲುತ್ತಿದ್ದ 180 ರೂಪಾಯಿ ವರುಷಾಸನವನ್ನು ನಿಲ್ಲಿಸುತ್ತಾರೆ ಹುಚ್ಚುನಾಯಿ ಕಡಿತದಿಂದ ಬಡ ಪ್ರಜೆಗಳನ್ನು ಕೂನೂರು ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಮಾಡಿಸುವುದಕ್ಕಾಗಿ ಈ ಸಾಲಿನಲ್ಲಿ ಮುನಿಸಿಪಾಲಿಟಿಯಿಂದ 100 ರೂಪಾಯಿ ಖರ್ಚು ಮಾಡಬಹುದೆಂದು ಸ್ಯಾಂಕ್ಷನ್ ಮಾಡಲಾಗಿದೆ ಚಾಲ್ತಿ ವರುಷದಲ್ಲಿ ರಾಜಧಾನಿಯಲ್ಲಿ ನಡೆಯುವಂತೆ ಸ್ಯಾಂಕ್ಷನ್ ಆಗಿರುವ ಮುನಿಸಿಪಲ್ ಕಾಮಗಾರಿಗಳ್ಯಾವವೆಂದರೆ— ರಸ್ತೆಗಳ ದುರಸ್ತು ಮಾಡುವುದಕ್ಕೆ ರೂ 15,500 ಇಲವಾಲ್ ರಸ್ತೆಯಲ್ಲಿ ಚರಂಡಿಯನ್ನು ಕಲ್ಲುಹೊದಿಸಿ ಮುಚ್ಚುವುದಕ್ಕೆ ರೂ 1 000 ... ರಸ್ತೆಯಲ್ಲಿ ಬಚ್ಚಲನ್ನು ದುರಸ್ತು ಮಾಡುವುದಕ್ಕೆ ರೂ 100, ದಿವಾನ್ಸ್ ರಸ್ತೆಯಲ್ಲಿ ಬಚ್ಚಲನ್ನು ಸರಿಮಾಡುವುದಕ್ಕೆ ರೂ 300 ... ಪೇಟೆಯಲ್ಲಿ ಚರಂಡಿಯ ಮೇಲೆ ಚಪ್ಪಡಿ ಹಾಸಿ ಮುಚ್ಚುವುದಕ್ಕೆ ರೂ 300 ಟೌನ್ ಹಾಲ್ ಬಂಗಲೆಯ ದಕ್ಷಿಣ ... ಎಲುಮಿಚ್ಚಿಗೆ ಮೆಲ್ಲಾವಣೆ ಹಾಕುವುದಕ್ಕೆ ರೂ ... 500 ಟೌನ್ ಬಂಗಲೆಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸುವುದಕ್ಕೆ ರೂ 2 500 ದನಗಳನ್ನು ಕೊಲ್ಲುವ ಕಸಾಯಿಖಾನೆಯನ್ನು ಕಟ್ಟುವುದಕ್ಕೆ ರೂ 1 000 ಇತರ ಮುಂತಾದ ಕಾಮಗಾರಿಗಳಿಗೆ 31,750 ರೂಪಾಯಿ ಖರ್ಚಾಗುತ್ತದೆಂದು ಅಂದಾಜು ಮಾಡಿದೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬಜೆಟ್ಟು

ಬೆಂಗಳೂರು ಸಿಟಿ ಮುನಿಸಿಪಾಲಿಟಿಯ ಚಾಲ್ತಿ ಸಾಲಿನ (1912–13) ಜಮಾ ಖರ್ಚಿನ ಅಂದಾಜುಪಟ್ಟಿಯು ಸರ್ಕಾರದಲ್ಲಿ ವಿಮರ್ಶೆ ಮಾಡಲ್ಪಟ್ಟು ಸ್ಯಾಂಕ್ಷನ್ ಆಗಿರುತ್ತದೆ ಈ ಮುನಿಸಿಪಾಲಿಟಿಯಲ್ಲಿ ಸಗಣಿ ಮತ್ತು ಲೆಕ್ಕದ ಭಾಗಗಳನ್ನು ಬೇರೆಮಾಡಿ ಆಫೀಸಿನ ... ಯನ್ನು ಬದಲಾವಣೆ ಮಾಡುವುದಕ್ಕೆ ಸಿಬ್ಬಂದಿ ಖರ್ಚಿಗೋಸ್ಕರ 1 101 ರೂಪಾಯಿ ತೆಗೆದಿಟ್ಟಿರುವರು ಮುನಿಸಿಪಾಲಿಟಿಯ ಹಿಂದಿನ ವರುಷದ ಶಿಲ್ಕು 1,39,117 ರೂಪಾಯಿಗೆ ಚಾಲ್ತಿ ಸಾಲಿನ ಹುಟ್ಟುವಳಿ 1 00 933 ರೂಪಾಯಿ ಸೇರಿ ಒಟ್ಟು ಜಮಾ 4 30 000 ರೂಪಾಯಿ ಆಗುವುದೆಂದೂ ಇದರಲ್ಲಿ ಚಾಲ್ತಿ ವರುಷದ ಖರ್ಚಿಗೆ 3 31 793 ರೂಪಾಯಿ ಸ್ಯಾಂಕ್ಷನ್ ಮಾಡಿ ಸಾಲಾಖೈರಿನಲ್ಲಿ 1,01 806 ರೂಪಾಯಿ ಶಿಲ್ಕು ಉಳಿಯುವುದೆಂದೂ ಅಂದಾಜು ಆಗಿದೆ ಚಾಲ್ತಿ ಸಾಲಿನಲ್ಲಿ ಹುಟ್ಟುವಳಿಗಿಂತ ಖರ್ಚು ಹೆಚ್ಚಾಗಿರುತ್ತದೆ ಹೊಂದ ವರುಷ ರಸ್ತೆಗಳನ್ನು ದುರಸ್ತು ಮಾಡುವುದು ಹೊಸ ಕಟ್ಟಡಗಳನ್ನು ಕಟ್ಟುವುದು ಪ್ಲೇಗ್ ಕೊಡದ್ದಕ್ಕೆ ... ಈ ಬಾಬುಗಳಿಗೆಲ್ಲಾ 91 297 ರೂಪಾಯಿ ಖರ್ಚಾಯಿತು ಚಾಲ್ತಿ ಸಾಲಿನಲ್ಲಿ ಈ ಬಾಬುಗಳಿಗೆ 1 15 006 ರೂಪಾಯಿ ತೆಗೆದಿಟ್ಟಿದಾರೆ ಯಾವ ಯಾವ ಕಾಮಗಾರಿಗೆ ಎಷ್ಟು ಹಣ ಖರ್ಚು ಮಾಡುವರೋ ತಿಳಿಯುವುದಿಲ್ಲ ಇದರ ಪಟ್ಟಿಯನ್ನು ಕಳುಹಿಸಬೇಕೆಂದು ಸರ್ಕಾರದವರು ಕೇಳಿದಾರೆ ಬೆಂಗಳೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗಿರುವ ಶರಾಪ್ ದುಕಾನುಗಳ ಲೈಸೆನ್ಸ್ ಹಾಸಿನಲ್ಲಿ ಮುನಿಸಿಪಾಲಿಟಿಗೆ ಸಾಲಿಯಾನಾ ಉತ್ಪತ್ತಿಯಾಗುತ್ತಿದ್ದ ಹಣವನ್ನು ಸರ್ಕಾರದವರು ವಜಾಮಾಡಿದ್ದರಿಂದ ಮುನಿಸಿಪಾಲಿಟಿಗೆ ಸುಮಾರು 18 000 ರೂಪಾಯಿ ಹುಟ್ಟುವಳಿಯಲ್ಲಿ ಕಡಮೆಯಾಯಿತು ಈ ಭಾಗವನ್ನು ಸರಿಪಡಿಸಿಕೊಡುವ ವಿಷಯದಲ್ಲಿ ಸರ್ಕಾರದವರು ಆಲೋಚನೆ ಮಾಡುತ್ತಿದಾರೆ ರಸ್ತೆಗಳ ರಿಪೇರಿ, ಪ್ಲೇಗ್ ಬಾಧಿತ ವಿದ್ಯಾರ್ಥಿಗಳ ... ಶೀಯರವರ ಛತ್ರದ ಅನ್ನ ಖರ್ಚು ಈ ಬಾಬುಗಳಿಗೆ ಸರ್ಕಾರದಿಂದ 5,730 ರೂಪಾಯಿ ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನಿಂದ 1 000 ರೂಪಾಯಿ ಇತರ ಬಾಬುಗಳಿಂದ 100 ರೂಪಾಯಿ ಒಟ್ಟು 6 830 ರೂಪಾಯಿ ಸಹಾಯ ದ್ರವ್ಯವು ಮುನಿಸಿಪಾಲಿಟಿಗೆ ಕೊಡಲಾಗುತ್ತದೆ

ದೇಶೀ ಸಿಡುಬಿನ ಇಲಾಖೆಯ ರಿಪೋರ್ಟು

ಸಾನಿಟರಿ ಕಮಿಷನರವರು 1911 ನೆ ಡಿಸೆಂಬರಿಗೆ ಆಖೈರಾದ ಒಂದು ವರುಷದ ಸಿಡುಬಿನ ಇಲಾಖೆಯ ರಿಪೋರ್ಟನ್ನು 1912 ನೇ ಜೂನ್ ತಾ 15 ರಲ್ಲಿ ಗವರ್ನ್ಮೆಂಟಿಗೆ ಕಳುಹಿಸಿದರು ಅದನ್ನು ಸರ್ಕಾರದವರು ಪರಾಂಬರಿಸಿ ಬರೆದಿರುವ ಅಭಿಪ್ರಾಯಗಳ ಮುಖ್ಯಾಂಶಗಳೇನೆಂದರೆ 1910 ನೇ ವರುಷದಲ್ಲಿ ಸಂಸ್ಥಾನದಲ್ಲಿ 99,211 ಜನಗಳಿಗೆ ಇಲಾಖೆಯವರು ಹಚ್ಚೆ ಸಿಡುಬು ಹಾಕಿದರು 1911 ನೇ ವರುಷದಲ್ಲಿ ಸಿಡುಬು ಹಾಕಿಸಿಕೊಂಡವರ ಸಂಖ್ಯೆಯು ಅದಕ್ಕಿಂತ ಹೆಚ್ಚು ಹೆಚ್ಚಾಗಿ 71 87 ಕ್ಕೆ ಇಳಿಯಿತು ಇದಕ್ಕೆ ಪ್ಲೇಗ್ ಹರಡಿಕೊಂಡಿದ್ದುದೂ ... ಸಿಡುಬಿನ ಹಾಲು ಒದಗದೆ ಹೋದದ್ದೂ ಕಾರಣಗಳೆಂದು ಸ್ಯಾನಿಟರಿ ಕಮಿಷನರವರು ತಿಳಿಸುತ್ತಾರೆ ಸಿಡುಬು ಹಾಕಿಸಿಕೊಂಡವರ ಸಂಖ್ಯೆಯು ಕಡಮೆಯಾಗಲು ... ಕಾರಣಗಳೂ ಅವರ ... ಕಡಮೆಯಾಗಿರುತ್ತದೆ ಅವರ ಬದಲಾಗಿ ... ಪ್ರತಿವರುಷವೂ ... ಸಿಡುಬು ಹಾಕುವ ನೌಕರರನ್ನು ನೇಮಿಸಬೇಕೆಂದು ಸ್ಯಾನಿಟರಿ ಕಮಿಷನರು ಬರೆದಿರುವುದನ್ನು ಗವರ್ನ್ಮೆಂಟಿನವರು ಇನ್ನೂ ಸ್ಯಾಂಕ್ಷನ್ ಮಾಡಲಿಲ್ಲ ಸಿಡುಬಿನ ಹಾಲು ಒದಗದೆ ಹೋದದ್ದಕ್ಕೆ ಈ ಬಾಬಿನ ಅಧಿಕಾರಿಯೂ ಸ್ಯಾನಿಟರಿ ಕಮಿಷನರೇ ಆಗಿದ್ದರೂ ಕಾರಣವೇನೆಂಬುದನ್ನು ಈ ರಿಪೋರ್ಟಿನಲ್ಲಿ ಹೇಳಿ ಇಲ್ಲ 1910 ನೇ ಸಾಲಿನಲ್ಲಿ ಪ್ರತಿ ಒಬ್ಬ ನೌಕರನೂ ಸರಾಸರಿ 810 ಜನರಿಗೆ ಸಿಡುಬು ಹಾಕಿದನೆಂದು ಗೊತ್ತಾಗುತ್ತದೆ 1911 ನೇ ವರುಷದಲ್ಲಿ ಈ ಸರಾಸರಿಯು 648 ಕ್ಕೆ ಇಳಿದದ್ದನ್ನು ನೋಡಿದರೆ ಈ ನೌಕರರಲ್ಲಿ ಕೆಲಸದ ಜಾಗ್ರತೆಯೂ, ನಿರ್ಲಕ್ಷ್ಯಭಾವವೂ, ಅವರ ಮೇಲಿ ತಾರಕಾ ಅಧಿಕಾರಿಗಳಲ್ಲಿ ಅಶ್ರದ್ಧೆಯೂ ಹೆಚ್ಚಿತೆಂದು ಹೇಳಬೇಕಾಗಿದೆ ಸಂಸ್ಥಾನದೊಳಗೆ ಬಲಾತ್ಕಾರದಿ ಪ್ರಜೆಗಳಿಗೆ ದೇಶೀ ಸಿಡುಬು ಹಾಕಬೇಕೆಂಬ ರೂಲನ್ನು ಜಾರಿಗೆ ತಂದ ಹಾಗೆಲ್ಲಾ ವರುಷೇವರುಷ ಸಿಡುಬು ಹಾಕಿಸಿಕೊಳ್ಳುವವರ ಸಂಖ್ಯೆಯು ಹೆಚ್ಚಬೇಕು, ಇದಕ್ಕೆ ಪ್ರತಿಯಾಗಿ ಈ ಸಂಖ್ಯೆಯು ಕಡಮೆಯಾಗುತ್ತಿರುವುದನ್ನು ನೋಡುವಲ್ಲಿ ಆ ರೂಲಿನ ಫಲಪರಿಣಾಮವೇನಾಯಿತೆಂಬ ಪ್ರಶ್ನೆ ಹುಟ್ಟುವುದು ಈ ಸಿಡುಬಿನ ಇಲಾಖೆಗಾಗಿ ಹಿಂದಿನ ವರುಷಕ್ಕಿಂತ 1 301 ರೂಪಾಯಿ 1911 ರಲ್ಲಿ ಹೆಚ್ಚಾಗಿ ಖರ್ಚಾಗಿದೆ ಹೀಗೆ ಹೆಚ್ಚು ಖರ್ಚಾಗಲು ಸರ್ಕಾರಿ ನೌಕರರ ಪ್ರಯಾಣದ ಅಲೋಯನ್ಸು ಹೆಚ್ಚಾದದ್ದೇ ಕಾರಣವಾಯಿತು ಸಿಡುಬಿನ ಹಾಲು ತಯಾರಾಗುವ ಕಾರ್ಖಾನೆಗೆ 1911 ರಲ್ಲಿ 9 471 ಚಿಲ್ಲರೆ ರೂಪಾಯಿ ಖರ್ಚಾಯಿತು ಆ ವರುಷ 1,75 416 ಮಂದಿಗೆ ಹಾಕುವಷ್ಟು ಹಾಲು ಅಂದರೆ ಹಿಂದಿನ ವರುಷಕ್ಕಿಂತ ಕಮ್ಮಿಯಾಗಿ ತಯಾರಾಯಿತು ಈ ವ್ಯಕ್ತಿ ... 711 ಜನರಿಗೆ ಹಾಕುವಷ್ಟು ಹಾಲನ್ನು ಹೊರಕ್ಕೆ ರವಾನೆ ಮಾಡಿರುತ್ತದೆ ಕಡೆಯಲಿ ಗವರ್ನ್ಮೆಂಟಿನವರು ಈ ಇಲಾಖೆಯ ಕೆಲಸಗಳು ತೃಪ್ತಿಕರವಾಗಿಲವೆಂದೂ, ಕೀಳು ನೌಕರರು ಚಟುವಟಿಕೆಯಾಗಿ ಕೆಲಸಮಾಡಿ ಇನ್ನೂ ಉತ್ತಮವಾದ ಪ್ರಯೋಜನವನ್ನು ತೋರಿಸುವಂತೆ ಮಾಡಬೇಕೆಂದೂ ಈ ರಿಪೋರ್ಟಿನಲ್ಲಿ ಬರೆದಿದಾರೆ

ವಿದೇಶದ ವೃತ್ತಾಂತಗಳು

ಟರ್ಕಿ ಆಳ್ವಿಕೆಯಾದಲಿ ಕುರ್ದ್ ಎಂಬ ಜನರು ಕೆಲವು ಗ್ರಾಮಗಳನ್ನು ಲೂಟಿ ಮಾಡಿ, ಅನೇಕ ಪ್ರಜೆಗಳನ್ನು ಕೊಂದು ಹೆಂಗಸರನ್ನು ಹೊತ್ತುಕೊಂಡುಹೋದರು ಅವರನ್ನು ಶಿಕ್ಷಿಸುವುದಕ್ಕೆ ಟರ್ಕಿ ಸೈನ್ಯಗಳು ಹೋಗಿವೆ

* * *

ಮದರಾಸ್ ಅಧಿಪತ್ಯದ ಗವರ್ನರಾಗಿ ನೇಮಕವಾಗಿರುವ ಲಾರ್ಡ್ ಪೆಂಟ್ಲೆಂಡ್‌ಯವರನ್ನು ಚಕ್ರವರ್ತಿ ಸಾರ್ವಭೌಮರವರು ತಮ್ಮ ಸನ್ನಿಧಿಗೆ ಕರೆಸಿಕೊಂಡು ಕಳೆದ ವಾರ ಅವರಿಗೆ ಜಿ ... ಎಂಬ ಶ್ರೇಷ್ಠವಾದ ಬಿರುದನ್ನು ಸ್ವಹಸ್ತದಿಂದ ದಯಪಾಲಿಸಿದರು

* * *

ಇಂಗ್ಲಿಷ್ ಗವರ್ನ್ಮೆಂಟಿನ ಸಮುದ್ರಸೈನ್ಯದ ಇಲಾಖೆಯವರು ಅತ್ಯಂತ ದೊಡ್ಡದಾದ ಒಂದು ಯುದ್ಧದ ಹಡಗನ್ನು ನವಂಬರ್ ತಿಂಗಳಲ್ಲಿ ಸಿದ್ಧಪಡಿಸಿಕೊಳ್ಳುತ್ತಾರೆ ಇದು 700 ಅಡಿ ಉದ್ದವಾಗಿ, ಗಂಟೆಗೆ ಸುಮಾರು 26 ಮೈಲಿ ಮುಂದಕ್ಕೆ ಪ್ರಯಾಣಮಾಡುವುದಾಗುತ್ತದೆ

* * *

ಅಮೇರಿಕಕ್ಕೆ ಸೇರಿದ ನೂ ಆರ್ಲೀನ್ಸ್ ಪಟ್ಟಣದ ಬಳಿ ಒಂದು ಎಕ್ಸ್ಪ್ರೆಸ್ ರೈಲ್ ಗಾಡಿಯು ಹೋಗುತ್ತಿದ್ದಾಗ ಒಬ್ಬನೇ ಒಬ್ಬ ದರೋಡೆ ಕೋರನು ಗಾಡಿಯನ್ನು ನಿಲ್ಲಿಸಿ, ಅಂಚೆಬಸ್ತುಗಳಿದ್ದ ಗಾಡಿಯೊಳಕ್ಕೆ ನುಗ್ಗಿ ಲೂಟಿ ಮಾಡಿದ್ದಲ್ಲದೆ ಇನ್ನೈದು ಗಾಡಿಗಳಲ್ಲಿದ್ದ ಪ್ರಯಾಣಸ್ಥರ ಹಣಕಾಸುಗಳನ್ನು ಕಸುಕೊಂಡು ಓಡಿಹೋಗುತ್ತಿರುವಷ್ಟರೊಳಗಾಗಿ ಗಾಡಿ ನಡಿಸುತ್ತಿದ್ದವನು ಆ ದುಷ್ಟನನ್ನು ಹೊಡೆದು ಮಲಗಿಸಿದನು

* * *

ಚೀನಾ ರಾಜ್ಯದಲ್ಲಿ 1,000 ವರುಷಗಳಿಂದಲೂ ಕಿಂಗ್ ಪಾವೋ ಎಂಬ ವರ್ತಮಾನ ಪತ್ರಿಕೆಯು ಪ್ರಕಟವಾಗುತ್ತಿದೆ ಅಲ್ಲಿನ ಪ್ರಭುಗಳು ಅದರ ಎಡಿಟರುಗಳನ್ನು ಆಗಾಗ ಕಷ್ಟಪಡಿಸಿ, ಕೆಲವರನ್ನು ಕೊಲ್ಲಿಸಿಯೂ ಇದಾರೆ ಆದರೂ ಅದು ಕೆಲವು ಕಾಲ ಕಣ್ಮರೆಯಾಗಿದ್ದು ಮತ್ತೆ ಪ್ರಕಟವಾಗುತ್ತಿತ್ತು ಈಚೆಗೆ ಆ ರಾಜ್ಯವು ಸ್ವತಂತ್ರಪ್ರಜಾಪ್ರಭುತ್ವವಾದಾಗ ಪ್ರೆಸಿಡೆಂಟರು ಆ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕೆಂದು ಆಜ್ಞೆ ಮಾಡಿದರು ಆದರೂ ಇಷ್ಟರಲ್ಲೇ ಅದು ಮತ್ತೆ ಪ್ರಕಾಶವಾಗಬೇಕೆಂದು ಊಹಿಸಲ್ಪಟ್ಟಿದೆ

* * *

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲಿ ಕೆಲವು ವರುಷಗಳ ... ತರೂ ಕಾರ್ಖಾನೆಗಳವರೂ ಹತ್ತಿಯ ಬೀಜವನ್ನು ಹಾಳುಗುಂಡಿಗಳಿಗೆ ... ನೆಲಸಮಮಾಡುತ್ತಿದ್ದರು ಈಗ ಈ ಪದ್ಧತಿಯು ... ಹತ್ತಿ ಬೀಜದ ಎಣ್ಣೆಯನ್ನು ತೆಗೆದು ಎಕರಿಮಾಡಿ ಲಾಭಸಂಪಾದನೆ ಮಾಡುತ್ತಿದಾರೆ ಈ ಕಸಬಿನಲ್ಲಿ 1880 ನೇ ಇಸವಿಯಲ್ಲಿ 115 ಲಕ್ಷ ರೂಪಾಯಿ ಉತ್ಪತ್ತಿ ಆಯಿತೆಂದೂ, 1911 ನೇ ಇಸವಿಯಲ್ಲಿ 37 ಕೋಟಿಯೂ 30 ಲಕ್ಷ ರೂಪಾಯಿ ಹುಟ್ಟುವಳಿ ಆಗಿದೆ ಎಂದೂ ತಿಳಿದುಬರುತ್ತದೆ

* * *

ಕೆಲವು ದಿನಗಳ ಹಿಂದೆ ರಾಜದ್ರೋಹಿಗಳ ಗುಂಪಿಗೆ ಸೇರಿದ ಮೂವರನ್ನು ಹಿಡಿದು ... ಗಲ್ಲಿಗೆ ಹಾಕಿದರು ಇನ್ನು ಕೆಲವರು ಟರ್ಕಿ ರಾಜ್ಯದೊಳಗೆ ... ಅಡಗಿಕೊಂಡಿರುವಂತೆ ತಿಳಿದುಬಂದದರಿಂದ ಇಂಗ್ಲಿಷ್ ಅಧಿಕಾರಿಗಳು ಟರ್ಕಿ ಸರ್ಕಾರದವರಿಗೆ ಬರೆದು ಅವರನ್ನೆಲ್ಲಾ ಹಿಡಿದು ಒಪ್ಪಿಸಬೇಕೆಂದು ಕೇಳಿದಾರೆ ಟರ್ಕಿಯಲ್ಲಿ ಒಂದು ಪತ್ರಿಕೆಯನ್ನು ನಡಿಸುತ್ತಿದ್ದವನು ಆ ಗುಂಪಿಗೆ ಸೇರಿದವನೆಂದು ಗೊತ್ತಾದ ಕಾರಣ ಟರ್ಕಿಯವರು ಅತನನ್ನು ದೇಶಭ್ರಷ್ಟನನ್ನಾಗಿ ಮಾಡಿ ಕಳುಹಿಸಿದರು ಇತರರನ್ನು ತಲಾಷ್ ಮಾಡುತ್ತಿದಾರೆ

* * *

ಬ್ರಿಟಿಷ್ ಅಸೋಸಿಯೇಷನ್ ಎಂಬ ಶಾಸ್ತ್ರಜ್ಞರ ಸಭೆಯು ಕಳೆದ ವಾರ ... ಗೆ ಸೇರಿದ ... ಪಟ್ಟಣದಲ್ಲಿ ಸೇರಿತ್ತು ... ಎಂಬ ... ಜೀವನಸ್ಥಾನದ ಮೂಲವನ್ನು ಕುರಿತು ಪರಿಶೋಧನೆ ಮಾಡುತ್ತಾ ಬಂದು ಇದರ ವಿಷಯವಾಗಿ ಒಂದು ಉಪನ್ಯಾಸವನ್ನು ಮಾಡಿದನು ... ಸ್ವಾಭಾವಿಕ ಉತ್ಪತ್ತಿಯಾಗುವುದರ ಲಕ್ಷಣವೂ, ಸಸ್ಯಾದಿಗಳ ... ಒಂದೇ ಆಗಿವೆ ಎಂದೂ ... ವನ್ನು ಕೆಲವು ... ಗಾಗಿ ವಸ್ತುಗಳ ಸಂಯೋಜನದ ಮೂಲಕ ಕಲ್ಪಿಸುವುದು ಸಾಧ್ಯವಾಗಿದೆ ಎಂದೂ ಆ ಪಂಡಿತನು ಅಭಿಪ್ರಾಯಪಡುತ್ತಾನೆ ಈ ಸಭೆಯ ಶೋಧನಾ ... ಆ ಪಟ್ಟಣದಲ್ಲಿ ನಾರಿನ ವರ್ತಕನಾದ ... ಒಂದು ಲಕ್ಷ ದ್ರವ್ಯವನ್ನು ಕೊಟ್ಟಿರುತ್ತಾನೆ

ವಿಚಿತ್ರವಾದ ಸೃಷ್ಟಿಯು

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಸದುರ್ಗ ತಾಲ್ಲೂಕು ಬಾಗೂರಿಗೆ ಸಮೀಪದ ... ಎಂಬ ಗ್ರಾಮದಲ್ಲಿ ದೇವಾಂಗದ ಜಾತಿ ಹನುಮಂತನೆಂಬುವನ ಹೆಂಡತಿ ಹನುಮಕ್ಕನೆಂಬುವಳು ಗರ್ಭಿಣಿಯಾಗಿದ್ದು ಸವಸಾಕ ತುಂಬಿ ಪ್ರಸವವೇದನೆಯುಂಟಾಗಿ ಮೂರು ದಿನಗಳಾಗಿತ್ತು. ಇಷ್ಟಾದಾಗ್ಯೂ ಜನನವಾಗಲಿಲ್ಲ. ಗರ್ಭಿಣಿಯು ಬದುಕುವ ಸಂಭವವೇ ಇರಲಿಲ್ಲವೆಂದು ಎಲ್ಲರೂ ಊಹಿಸಿಕೊಂಡಿದ್ದರು. ಅಷ್ಟರಲ್ಲಿಯೇ ಇದೇ ಬಾಗೂರಿನ ಸಮೀಪದ ... ರಂಗಾಪುರವೆಂಬ ಗ್ರಾಮದಲ್ಲಿ ಸುಬ್ಬಮ್ಮನೆಂಬಾಕೆಯು ಸೂಲಗಿತ್ತಿ ವೃತ್ತಿಯಲ್ಲಿ ಬುದ್ಧಿವಂತೆಯೆಂದು ಮೊದಲಿಂದ ಹನುಮಕ್ಕನಿಗೆ ತಿಳಿದು ನಾಲ್ಕನೇ ದಿವಸ ಆಕೆಯನ್ನು ಕರೆದುಕೊಂಡು ಹೋದನು. ಈಕೆಯು ಗರ್ಭಿಣಿಯನ್ನು ಪರೀಕ್ಷಿಸಿನೋಡಿ ಮಗು ಹೊಟ್ಟೆಯೊಳಗೇ ಮೃತಪಟ್ಟಿರುವ ಸಂಗತಿಯನ್ನು ತಿಳಿಸಿ ಹೊರಗೆ ತೆಗೆಸಿದರು. ಮಗುವು ಹೇಗಿತ್ತೆಂದರೆ ಗಂಡು ಮಗು, ೨ ತಲೆಗಳು, ೪ ಕೈಗಳು, ೪ ಕಾಲುಗಳು, 1 ಹೊಟ್ಟೆ, 1 ಮುಂಡ 1 ತಲೆಗೆ ಮಾತ್ರ ಈ ಆಕೃತಿಯುಳ್ಳದ್ದಾಗಿತ್ತು. ಇದು ಆಶ್ಚರ್ಯವಾದ್ದರಿಂದ ಅನೇಕ ಜನಗಳು ನೋಡುತ್ತಿದ್ದರು. ಮಗುವಿಗೆ ಎರಡು ತಲೆಗಳ ತುಂಬಾ ಗುಂಗುರಾದ ಕೂದಲು ಬೆಳೆದಿತ್ತು. ಇದನ್ನು ಮಾರನೆಯ ದಿನ ಮಣ್ಣಿನಲ್ಲಿ ಹೂತುಬಿಟ್ಟರು. ಬಾಣಂತಿಯು ಸುಖಿಯಾಗಿದ್ದಾಳೆ.

ಗ್ರಾಮಸ್ಥ.

ತುಳಸೀ ಗಿಡವೂ ಮಲೇರಿಯಾ ಜ್ವರವೂ

ನಮ್ಮ ದೇಶದಲ್ಲಿ ದೇವರ ಪೂಜೆ ಮುಂತಾದವುಗಳಿಗೆ ಉಪಯೋಗಿಸುವ ತುಳಸಿಯ ಗಿಡದ ವಿಷಯವನ್ನು ನಾವು ಏನು ಹೇಳಬೇಕಾಗಿರುವುದಿಲ್ಲ. ಅದಕ್ಕಿಂತಲೂ ಹೆಚ್ಚಾದ ಶೋಧನೆಯು ಪಾಶ್ಚಾತ್ಯರಿಂದ ಮಾಡಲ್ಪಟ್ಟಿದೆ. ತುಳಸಿಯ ಗುಣವು ಅನಂತವಾದುದು. ಅದರ ಮಹಿಮೆಯನ್ನು ಆಮೂಲಾಗ್ರವಾಗಿ ತಿಳಿಯಬೇಕಾದರೆ ಇನ್ನೂ ಎಷ್ಟೋ ಕಾಲವು ಬೇಕು. ಈ ಗೂಢಶೋಧನೆಗೆ ಸಿಕ್ಕಿರುವ ಗುಣಗಳಲ್ಲಿ ಕೆಲವನ್ನು ಈ ಕೆಳಗೆ ವಿವರಿಸುವೆವು.

ಯಾವುದೋ ಒಂದು ಗೊತ್ತಿಲ್ಲದ ಪ್ರದೇಶದಲ್ಲಿ ಹುಟ್ಟಿ ಬೆಳೆದ ... ನಗರ ಮುಂತಾದ ಕಡೆಗಳಲ್ಲೆಲ್ಲಾ ಹರಡಿ, ಸಾವಿರಾರು ಜನರನ್ನು ಕೊಲ್ಲುತ್ತಿರುವ "ಮಲೇರಿಯಾ" ಎಂಬ ಜ್ವರವು ಅನೇಕ ದಿವಸಗಳಿಂದ ಪ್ರಬಲವಾಗಿದೆ. ಇನ್ನೂ ಅದರ ಪರಿಹಾರಕ್ಕೆ ಉಪಾಯವನ್ನು ಕಂಡುಹಿಡಿಯಲು ವೈದ್ಯರು ಪ್ರಯತ್ನಿಸುತ್ತಲೇ ಇರುವರು. ಉದ್ದೇಶಕ್ಕೆ ತಕ್ಕ ಫಲ ದೊರೆಯಲಿಲ್ಲ. ಸರ್ಕಾರದವರು ಎಷ್ಟೋ ಹಣವನ್ನು ವ್ಯಯಮಾಡುತ್ತಲೇ ಇರುವರು. ಆದರೇನು? ತಕ್ಕ ಪರಿಹಾರ ವಸ್ತುವು ಇಲ್ಲ. ಈ ಜ್ವರಕ್ಕೆ ಕಾರಣಭೂತವಾದ ಕ್ರಿಮಿಗಳು ಮನುಷ್ಯ ಶರೀರದಲ್ಲಿ ವ್ಯಾಪಿಸಿ ಹರಡುವುದಕ್ಕೆ ಮೊದಲೇ ಅವುಗಳ ನಾಶವನ್ನು ಕಂಡುಹಿಡಿಯಬೇಕೆಂದು ಬೊಂಬಾಯಿ ಗ್ರಾಂಟ್ ಕಾಲೇಜಿನ ವೈದ್ಯಾಧ್ಯಾಪಕರೂ, ಇನ್ನೂ ಇತರ ವೈದ್ಯಶ್ರೇಷ್ಠರೂ ಯೋಚಿಸಿ ಭರತಖಂಡದಲ್ಲಿ ಬೆಳೆಯುವ ತುಳಸಿಯೇ ಮಲೇರಿಯಾ ಜ್ವರಕ್ಕೆ ದಿವ್ಯವಾದ ಔಷಧವೆಂದು ಕಂಡುಹಿಡಿದರು. ಇದರಿಂದ ನಾವು ಪ್ರತಿ ಮನೆಯಲ್ಲಿಯೂ, ತೋಟದಲ್ಲಿಯೂ, ಎಲ್ಲಾ ಸ್ಥಳದಲ್ಲಿಯೂ, ಜಲಾಶ್ರಯಗಳ ಬಳಿಯಲ್ಲಿಯೂ ಕೊಳೆಯುವ ... ಇರುವ ಕಡೆಯೂ ವಿಶೇಷವಾಗಿ ತುಳಸಿಯ ಗಿಡಗಳನ್ನು ಬೆಳೆಯಿಸುವುದು ಉತ್ತಮವೆಂದು ತಿಳಿಯಬಹುದು.

ಮೈಸೂರು ಹಾಸನದ ರೈಲ್ವೆ ರಸ್ತೆಯು

ಈಗ ಸರ್ಕಾರದವರು ತೀರ್ಮಾನಿಸಿರುವ ಮಾರ್ಗವು ಕೋಲಾರ ... ಯಶಸ್ಸು — ಆಡಕೊಪ್ಪೆ, ಶ್ರೀರಂಗಪಟ್ಟಣ — ಈ ಮಾರ್ಗ ... ರೈಲು ಮಾರ್ಗ ಹೋದುದನು ಕಸಬಿಲ್ಲ, ಪಟ್ಟಣಗಳು, ಪ್ರಸಿದ್ಧವಾದ ... ಗಳು ಹತ್ತಿರದಲ್ಲಿ ಸಿಕ್ಕುವುದು. ಕೈಗಾರಿಕೆ, ವ್ಯವಸಾಯ, ಆಭಿವೃದ್ಧಿ ... ವಿಂದ ಬೆಳೆದ ಸಾಮಾನುಗಳ ಸಾಗಣೆಯು ಹೆಚ್ಚಾಗಿ ಆಗುವುದು. ... ಸಮೀಪದ ಹಳ್ಳಿ ಸಾಲುಗಳು ... ಬಹಳ ಭತ್ತವನ್ನು ಬೆಳೆಯುವ ಆನಗೋಡು, ಚಿಕ್ಕನಹಳ್ಳಿ, ಮಾದಾಪುರ, ನೆಲ್ಲೂರು, ಶ್ರೀನಿವಾಸಪುರ ... ಚನ್ನರಾಯಪಟ್ಟಣ ಮುಂತಾದ ಗ್ರಾಮಗಳು ರೈಲಿನ ಅಕ್ಕಪಕ್ಕಗಳಲ್ಲಿ ಸಿಕ್ಕುವ ... ಭತ್ತ ದೊರೆಯುತ್ತದೆ. ಈ ಸ್ಥಳಗಳ ಆಲ್ಲದೆ ಕಬ್ಬಿಣ ... ದ ಆಕರವಾಗಿರುವ ಕಿಕ್ಕೇರಿ, ಆಗಳಿಯ, ದಮನ ..., ಬಿಸ್ಲೇರ, ... ಚಿಕ್ಕ ಹೊಸಹಳ್ಳಿ, ಭಾರತೀಪುರ, ಅತ್ತಿಕುಪ್ಪೆ, ದೊಡ್ಡಸೋಮನಹಳ್ಳಿ ಮುಂತಾದ ಊರುಗಳು ರೈಲಿಗೆ ಸಮೀಪವಾಗಿ, ಈಗ ಬಹು ಪ್ರಯಾಸದಿಂದ ಅರಸೀಕೆರೆಗೆ ದಿನ ಒಂದಕ್ಕೆ ಹೋಗುತ್ತಿರುವ ನೂರಾರು ಬೆಲ್ಲದ ಮತ್ತು ತೆಂಗಿನಕಾಯಿ ಗಾಡಿಗಳೆಲ್ಲಾ ಹತ್ತಿರವಾದ ಈ ರೈಲನ್ನೇ ಸೇರುತ್ತವೆ. ಇದು ಹಾಲದ ಪ್ರವಾಹಗಳುಳ್ಳ ಹೇಮಾವತೀ ನದಿ ಪ್ರವಾಹ ಯಾತ್ರಾಸ್ಥಳವು ರೈಲಿಗೆ ಹತ್ತಿರವಾಗುವದರಿಂದ ದೂರ ಜನಗಳು ಉತ್ತರದೇಶದ ಯಾತ್ರಾರ್ಥಿಗಳಿಂದ ರೈಲು ತುಂಬಿಹೋಗುವದು. ಅಲ್ಲದೆ ಶ್ರವಣಬೆಳಗೊಳ, ಇದರ ಸುತ್ತುಮುತ್ತಲು ಇರುವ ಹಿಂಡಲಹಳ್ಳಿ, ಉತ್ತೇನಹಳ್ಳಿ, ದಾಸೇನಹಳ್ಳಿ, ಬಸ್ತೀಹಳ್ಳಿ, ಚಿನ್ನೇನಹಳ್ಳಿ, ಜನ್ನಾಪುರ, ಸುಂಡಹಳ್ಳಿ, ನಾಗೇನಕೊಪ್ಪಲು, ಕಟ್ಟಾಯ ಮುಂತಾದ ಒಂದು ದಿನಕ್ಕೆ ನೂರಾರು ಮಣ ತಾಮ್ರ ಹಿತ್ತಾಳೆ ಪಾತ್ರೆಗಳು ತಯಾರಾಗುವ ಕೈಗಾರಿಕೆ ಸ್ಥಳಗಳು ರೈಲಿನ ಪಕ್ಕದಲ್ಲಿ ಸಿಕ್ಕುವುದರಿಂದ ಬೇಕಾದಷ್ಟು ಪದಾರ್ಥಗಳು ರಫ್ತಾಗುವವು. ಇವು ರಫ್ತಾಗಬೇಕಾದರೆ ಬೊಂಬಾಯಿ, ಮದರಾಸು, ಹುಬ್ಬಳ್ಳಿ, ಬೆಂಗಳೂರು ಕೊಂಡ ... ಮುಂತಾದ ಕಡೆಗಳಿಂದ ಬೇಕಾದಷ್ಟು ತಾಮ್ರ ಮತ್ತು ಹಿತ್ತಾಳೆ ತಗಡುಗಳು ಇಲ್ಲಿಗೆ ಆಮದಾಗಬೇಕಾಗುವುದು. ಕಿಕ್ಕೇರಿ, ಹೊಸಹೊಳಲು, ಮಾಲುಕೋಟೆ, ಈ ಸ್ಥಳಗಳಲ್ಲಿ ಮಗ್ಗಗಳು ಹೆಚ್ಚಾಗಿರುವುದರಿಂದ ಅನೇಕ ಬಟ್ಟೆಗಳು ತಯಾರಾಗಿ ಅವುಗಳೂ ರೈಲನ್ನು ಅಲಂಕರಿಸುವವು. ಹೀಗೆ ನೂರಾರು ಗಾಡಿಗಳು ಈ ರಸ್ತೆಯಲ್ಲಿ ಓಡಾಡುತ್ತಲೇ ಇರುವವು. ಇವೆಲ್ಲಾ ಸೌಕರ್ಯಗಳಿರುವುದನ್ನು ಆಲೋಚಿಸಿ ಪ್ರಯೋಜನವನ್ನು ಕಂಡುಕೊಂಡೇ ನಮ್ಮ ಸರ್ಕಾರದವರು ಕೊಡಿಸಿಕೊಳ್ಳಲು ಶ್ರೀರಂಗಪಟ್ಟಣದ ಮಾರ್ಗದಲ್ಲೇ ರೈಲು ಹಾಕಲು ನಿರ್ಧರಿಸಿರುವರು. ವಿಶೇಷಗಳಾದ ಸರ್ಕಾರದವರು ಪ್ರಯತ್ನಿಸಿರುವ ಕೋಲಾರ ಶ್ರೀರಂಗಪಟ್ಟಣದ ಮಾರ್ಗವಾಗಿ ರೈಲು ಹಾಕಬೇಕೆಂಬ ಪ್ರಯತ್ನವನ್ನು ಬಿಡದೆ ... ಸರ್ಕಾರದಲ್ಲವೇ?

ಗ್ರಾಮಸ್ಥನೊಬ್ಬ.

ಕಸಬುಗಳ ವಿಚಾರವು.

ಮೈಸೂರು ಸಂಸ್ಥಾನದ ಯಾವ ಯಾವ ಭಾಗದಲ್ಲಿ ಯಾವ ಯಾವ ವ್ಯವಸಾಯ ಮಾಡುತ್ತಾರೆ, ಯಾವ ವಿಧವಾದ ಗೊಬ್ಬರವನ್ನು ಉಪಯೋಗಿಸುತ್ತಾರೆ, ಯಾವ ವಿಧವಾದ ವ್ಯವಸಾಯದ ಮುಟ್ಟುಗಳನ್ನು ಉಪಯೋಗಿಸುತ್ತಾರೆ ಇವೇ ಮೊದಲಾದ ವಿಷಯಗಳನ್ನು ಕುರಿತು ಒಂದು ವ್ಯವಸಾಯ ಸಂಬಂಧವಾದ ಸರ್ವೆಯನ್ನು ನಡಿಸಬೇಕೆಂದು ಹಾಸನದ ಫಾರೆಸ್ಟು ಆಫೀಸರವರಾದ ಮಿ ... ಶ್ರೀನಿವಾಸರಾಯರು ಬರೆದಿರತಕ್ಕ ಪುಸ್ತಕದಲ್ಲಿ ಕೆಳಗೆ ಕಂಡ ವಿಷಯಗಳನ್ನು ನಮೂದಿಸುತ್ತಾರೆ.

(೧) ಕುಣಿಗಲ್ ತಾಲ್ಲೂಕು ... ರು ಕೆಂಪನಹಳ್ಳಿ ಗ್ರಾಮದಲ್ಲಿ ತಯಾರಾಗುವ ರೇಷ್ಮೆಯು ಇತರ ಸ್ಥಳಗಳಲ್ಲಿ ತಯಾರಾಗುವ ರೇಷ್ಮೆಗಳಿಗಿಂತ ಹೆಚ್ಚು ಬೆಲೆ ಬಾಳುತ್ತದೆ. ಇದಕ್ಕೆ ಕಾರಣವೇನೆಂದು ವಿಚಾರಿಸಲಾಗಿ ರೇಷ್ಮೆಯನ್ನು ಬಿಚ್ಚುವಾಗ್ಯೂ ಆ ಗ್ರಾಮದ ಒಂದು ಭಾವಿಯ ನೀರನ್ನು ಉಪಯೋಗಿಸುವುದರಿಂದ ರೇಷ್ಮೆಗೆ ಇತರ ಸ್ಥಳಗಳಲ್ಲಿ ತಯಾರಾದ ರೇಷ್ಮೆಗಳಿಗಿಲ್ಲದ ಉತ್ತಮವಾದ ಹೊಳಪು ಬರುವುದೆಂದು ಗೊತ್ತಾಯಿತು.

(೨) ಮೈಸೂರು ಡಿಸ್ಟ್ರಿಕ್ಟಿನ ಪಶ್ಚಿಮ ಭಾಗ ಮತ್ತು ಹಾಸನದ ಡಿಸ್ಟ್ರಿಕ್ಟಿನಲ್ಲಿ ಫಸಲು ಕಟಾವಾದ ತಕ್ಷಣವೇ ಜಮೀನನ್ನು ಉಳತಕ್ಕ ಕ್ರಮವು ನಾಡಕೆಯಲ್ಲಿದೆ. ಇದಕ್ಕೆ ಕಾರು ಉಳುಮೆಯೆಂದು ಹೆಸರು. ಈ ಉಳುಮೆಯಿಂದ ಉಂಟಾಗತಕ್ಕ ಪ್ರಯೋಜನಗಳು ಮೈದಾನ ಡಿಸ್ಟ್ರಿಕ್ಟುಗಳ ರೈತರಿಗೆ ತಿಳಿಯದು. ಹೀಗೆ ಉತ್ತರೆ ಮುಂದಲ ಮಳೆಗಾಲದಲ್ಲಿ ಮೊದಲು ಮಳೆ ಬಿದ್ದೊಡನೆಯೇ ಬಿತ್ತನೆ ಮಾಡಲು ಜಮೀನನ್ನು ಸಿದ್ಧಪಡಿಸಿಕೊಂಡಂತಾಗುವುದು, ಮತ್ತು ಬೇಸಿಗೆಯ ಬಿಸಿಲಿನಲ್ಲಿ ಮಣ್ಣು ಕಾಯುವುದರಿಂದ ಬಹಳ ಪ್ರಯೋಜನವುಂಟು. ಅಲ್ಲದೆ ಕಾರು ಉಳುಮೆ ಮಾಡಿದ್ದಲ್ಲಿ ಜಮೀನುಗಳಲ್ಲಿನ ಬೇರುಗಳು ಮಳೆಯು ಕಡಮೆಯಾದಾಗ್ಯೂ ತಡೆಯಬಲ್ಲವು. ಮೊಲ್ಲಂದ ವಿಷಯಗಳನ್ನು ರೈತರು ಚೆನ್ನಾಗಿ ನಿಲ್ಲಿಸಬೇಕು.

(೩) ತುಮಕೂರು ಡಿಸ್ಟ್ರಿಕ್ಟಿನಲ್ಲಿ ಪ್ರಸಾಲ್‌ದಲ್ಲಿ ಸಾವಿರಾರು ಮಣ ಅಡಿಕೆ ಸಿಪ್ಪೆಯನ್ನು ಅನ್ಯಾಯವಾಗಿ ಎಸೆಯುತ್ತಿದ್ದಾರೆ. ಆದರೆ ತಿರುವಾಂಕೂರು ಸಂಸ್ಥಾನದಲ್ಲಿ ಅಡಿಕೆ ಸಿಪ್ಪೆಯ ನಾರನ್ನು ಬಿಡಿಸಿ ಬಹಳ ಬೆಲೆ ಬಾಳುವ ಉತ್ಕೃಷ್ಟವಾದ ಜಮಖಾನೆಗಳನ್ನು ತಯಾರು ಮಾಡಲು ಉಪಯೋಗಿಸುತ್ತಾರೆ. ನಮ್ಮವರೂ ಮೊದಲಿಂದ ಕಸಬನ್ನೂ ಕಲಿತರೆ ಅಡಿಕೆ ಸಿಪ್ಪೆಯನ್ನು ಹೋಲುವಂತಹ ಜಮಖಾನೆಗಳನ್ನು ಮಾಡಿ ತುಂಬಾ ಲಾಭವನ್ನು ಪಡೆಯಬಹುದು.

(೪) ಸದ್ಯದಲ್ಲಿ ನಾವು ನಮಗೆ ಬೇಕಾಗುವ ನೂಲು ಮತ್ತು ಹಗ್ಗಗಳನ್ನು ಹೊರದೇಶದಿಂದ ತರಿಸಿಕೊಳ್ಳುತ್ತೇವೆ. ಇದಕ್ಕೆ ಬದಲಾಗಿ ನಾವು ಈಗ ಅನ್ಯಾಯವಾಗಿ ಒಲೆಗೆ ಹಾಕಿ ಉರಿಸುವ ತೆಂಗಿನ ಸಿಪ್ಪೆಯಿಂದ ಕಡವೆಯನ್ನು ತೆಗೆದು, ನಾವೇ ಹಗ್ಗಗಳನ್ನು ತಯಾರುಮಾಡಿದ ಪಕ್ಷದಲ್ಲಿ ಬಹಳ ಆದಾಯಕರವಾಗಿರುತ್ತದೆ.

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು.

ಸೆಪ್ಟೆಂಬರ್ ತಿಂಗಳ ಮೀಟಿಂಗು.

ಕೇವಲ ಉತ್ಸಾಹಭರಿತರಾದ ಈ ಸಂಘದ ಮೆಂಬರುಗಳು ಈ ತಿಂಗಳ ತಾ 1ನೇ ಭಾನುವಾರ ಮಧ್ಯಾಹ್ನ 1 ಘಂಟೆಗೆ ಚಿತ್ರದುರ್ಗದ ಗರ್ಲ್ಸ್ ಸ್ಕೂಲು ಕಟ್ಟಡದಲ್ಲಿ ಸಭೆ ಸೇರಿದರು. 35 ಜನಗಳ ಮೆಂಬರುಗಳು ಕೂಡಿದ್ದರು. ಕೆಲವರು ತಡವಾಗಿ ಬಂದರು.

ಪ್ರಾರಂಭದಲ್ಲಿ ದೇವರ ಪ್ರಾರ್ಥನೆಯು ನಡೆಯಿತು. ಸಂಗೀತ ವಿದ್ವಾನ್ ಮಿ ವೆಂಕಟೇಶ ಶಾಸ್ತ್ರಿಗಳವರು ಕೆಲವು ಪ್ರಾರ್ಥನಾರೂಪವಾದ ಪದಗಳನ್ನೂ, ಇತರೇ ಶ್ಲೋಕಗಳನ್ನೂ ರಾಗತಾಳವಾಗಿ ಮಟ್ಟು ಹಾಕಿ ಮಕ್ಕಳಿಗೆ ಹೇಳತಕ್ಕ ರೀತಿಯನ್ನು ಕಲಿಸಿದರು. ವರ್ನಾಕ್ಯುಲರ್ ಟೀಚರುಗಳಿಗೆ ಪ್ರಾಕ್ಟಿಕಲ್ ಕ್ಲಾಸಿನ ಪಾಠವನ್ನು ಬೋಧಿಸಲು ಅವಕಾಶವನ್ನು ಕೊಟ್ಟರು. ಪಾಠದ ಕೊನೆಯಲ್ಲಿ ಆಕೆ ಇದಕ್ಕೆ ತರದ ... ಆ ಪದಗಳನ್ನು ಗುರುತಿಸಿ ಏಕಾದಶ ... ಅವುಗಳ ಪುನಃ ದರ್ಶನ ... ಪಾಠದ ಉದ್ದೇಶ, ಬೋಧಿಸುವ ವಿಧಾನ, ಪಾಠದ ಪ್ರಾರಂಭ, ಸಮಾಪ್ತಿ ... ಅನುಕೂಲವಾದವು, ಕಠಿಣವಾದ ಅಂಶಗಳನ್ನು ವಿವರಿಸುವ ಚಾತುರ್ಯ ಇವುಗಳನ್ನು ... ಪಾಠದಲ್ಲಿ ಬಾಲಕರಿಗೆ ಅರಿವಾಗಬೇಕಾದ ... ಆ ದಿನ ಅಗ್ರಸನಾಧಿಪತಿಗಳಾಗಿದ್ದ ... ಸ್ಕೂಲ್ ಮಾಸ್ಟರ್ ಮಿ ... ಯವರು ... ಸ್ವರೂಪ, ... ಇವುಗಳನ್ನು ಕುರಿತು ಸ್ವಾರಸ್ಯವಾದ ಒಂದು ಉಪನ್ಯಾಸವನ್ನು ಕೊಟ್ಟರು. ತರುವಾಯ ... ಸ್ಕೂಲು ಹೆಡ್ ಮಾಸ್ಟರವರು ಸುಗುಣ ... ಪಟ ... ಕೊಂಡು ಅವುಗಳಿಗೆ ಚಿತ್ರಗಳಲ್ಲಿ ನಿದರ್ಶನಗಳನ್ನು ಕೊಟ್ಟು ವಿವರಿಸಿದರು — ಕಡೆಯಲ್ಲಿ ಸೆಕ್ರೆಟರಿಯವರು 1911-1912 ನೇ ವರ್ಷದ ವಾರ್ಷಿಕ ರಿಪೋರ್ಟನ್ನು ಓದಿದರು. ಮೆಂಬರುಗಳ ಅಭಿಪ್ರಾಯದ ಮೇರೆ ವಾರ್ಷಿಕೋತ್ಸವವು ಡಿಸೆಂಬರ್ ತಿಂಗಳಲ್ಲಿ ಅಂದರೆ ತಾ 26, 27 ರಲ್ಲಿ ನಡೆಯತಕ್ಕದ್ದೆಂದು ನಿಶ್ಚಯವಾಯಿತು.

ಮುಂದಿನ ತಿಂಗಳ ಮೀಟಿಂಗು ಅಕ್ಟೋಬರ ತಾ. 6ನೇ ಭಾನುವಾರ ನಡೆಯುವದಾಗಿ ತಿಳಿದು ಮುಕ್ತಾಯವಾಯಿತು.

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘದ ಮೆಂಬರುಗಳು 1912-1913 ರಲ್ಲಿ ಚರ್ಚಿಸಿ ಉಪನ್ಯಾಸರೂಪವಾಗಿ ತರಬೇಕಾದ ವಿಷಯಗಳು.

(1) ಹಳ್ಳಿಯ ಪಾಠಶಾಲೆಯು ಹಿತಕರವಾಗಿ ಜನಗಳು ಒಳ್ಳೇ ಅಭಿಪ್ರಾಯವನ್ನುಂಟಾಗಿರುವಂತೆ ಮಾಡುವುದು ಹೇಗೆ? (2) ಸ್ಕೂಲನ್ನು ಕ್ರಮವಾದ ತಿದ್ದುಪಾಟಿಗೆ ತರುವುದಕ್ಕಾಗಿ ವಿದ್ಯಾರ್ಥಿಗಳೂ ಅವರ ಅನ್ಯೋನ್ಯವಾಗಿ ಹೋಗುವ ಮಾರ್ಗಗಳಾವುವು? (3) ಉಪಾಧ್ಯಾಯರ ಕರ್ತವ್ಯ ಮತ್ತು ಪ್ರತಿಫಲವನ್ನು ಕುರಿತ ವಿವರಣೆ. (4) ತರಗತಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದಕ್ಕೆ ಉಪಾಧ್ಯಾಯರು ಗಮನಿಸಬೇಕಾದ ಮುಖ್ಯಾಂಶಗಳಾವುವು? (5) ಉತ್ತಮವಾದ ಉಪಾಧ್ಯಾಯನಾಗುವುದು ಹೇಗೆ? (6) ಒಂದು ಹಳ್ಳಿಯಲ್ಲಿ ಹೊಸದಾಗಿ ಪಾಠಶಾಲೆಯನ್ನು ಸ್ಥಾಪಿಸಬೇಕಾಗಿದ್ದ ಪಕ್ಷದಲ್ಲಿ ಉಪಾಧ್ಯಾಯನು ಕ್ರಮವಾಗಿ ಮಾಡಬೇಕಾದ ಕೆಲಸಗಳೇನು? (7) ಹಲವು ಜನ ಹುಡುಗರು ಸೇರಿದಾಗ ತರಗತಿಗಳನ್ನು ಹೇಗೆ ವಿಂಗಡಿಸುವುದು? ಅವರಿಗೆ ಪಾಠ ಹೇಳಲು ಅನುಕೂಲವಾದ ರೀತಿ ಯಾವುದು? (8) ಮೂರೇ ಹೇಳುವ ಸ್ಕೂಲಿಗೆ ಟೈಂ ಟೇಬಲನ್ನು ಹೇಗೆ ತಯಾರು ಮಾಡಬೇಕು? ... ಸರಳವಾಗಿರಬೇಕು? (9) ಸ್ಕೂಲಿಗೆ ಅವಶ್ಯಕವಾಗಿ ಇಡಬೇಕಾದ ರಿಜಿಸ್ಟರುಗಳಾವುವು? ಅವುಗಳ ಉದ್ದೇಶವೇನು? (10) ಉಪಾಧ್ಯಾಯರು ಯಾವ ಉದ್ದೇಶದಿಂದ ನೋಟ್ಸನ್ನು ಬರೆದುಕೊಂಡಿರಬೇಕು? (11) ಉತ್ತಮವಾದ ಪಾಠಗಳ ಸ್ವಭಾವಗಳಾವುವು? (12) ಎರಡು ಮೂರು ತರಗತಿಗಳನ್ನು ಸೇರಿಸಿ ಬೋಧಿಸುವುದರಿಂದ ಪ್ರಯೋಜನವೇನು? (13) ಚರಿತ್ರೆಯನ್ನು ಬೋಧಿಸುವ ಉತ್ತಮ ಮಾರ್ಗಗಳಾವುವು? (14) ಎಲಿಮೆಂಟರಿ ಸ್ಕೂಲುಗಳಿಗೆ ಡ್ರಾಯಿಂಗ್ ಪಾಠವನ್ನು ಹೇಳುವುದರಿಂದ ಪ್ರಯೋಜನವೇನು? (15) ಚಿಕ್ಕ ಮಕ್ಕಳಿಗೆ ನಾಟಕರೂಪ ಪಾಠವನ್ನು ಹೇಳುವುದರಿಂದ ಉಂಟಾಗುವ ತಿಳುವಳಿಕೆ ಯಾವುದೆಂದು ಎಣಿಸುವುದು? (16) ಬಾಲಕರನ್ನು ಸತ್ಯವಂತರನ್ನಾಗಿಯೂ, ಉದ್ಯೋಗಶೀಲರನ್ನಾಗಿಯೂ ಮಾಡುವುದು ಹೇಗೆ? (17) ಬುದ್ಧಿಸಂಬಂಧವಾದ, ನೀತಿಸಂಬಂಧವಾದ ಶಕ್ತಿಗಳನ್ನು ಸಂಬಂಧಿಸಿಕೊಂಡು ನಡೆಸುವ ಮಾರ್ಗಗಳಾವುವು? (18) ಬಾಲಕರು ವ್ಯರ್ಥವಾಗಿ ಕಾಲಕಳೆಯದಂತೆ ಏನು ಮಾಡಬೇಕು? ... ಗಳನ್ನು ಹೇಗೆ ಅಡಿ ಮಾಡುವುದು?

... ಸಿಂಗ್
ಉಪಾಧ್ಯಾಯ ಸಂಘದ ಸೆಕ್ರೆಟರಿ

ನಮ್ಮ ಪುಸ್ತಕ ಭಂಡಾರವು.

"ಮೃಣಾಲಿನಿ"

ಇದನ್ನು ಮೊದಲು ಬಂಗಾಳದ ಬಂಕಿಮಚಂದ್ರ ಚಟರ್ಜಿಯವರು ಬಂಗಾಳೀ ಭಾಷೆಯಲ್ಲಿ ಬರೆದಿರುವರು. ಬಹಳ ಸ್ವಾರಸ್ಯವಾಗಿಯೂ ನೀತಿಬೋಧಕವಾಗಿಯೂ ಸಮಯಾಚಾರವನ್ನರಿಯುವುದಕ್ಕೆ ಹಿತಕರವಾಗಿಯೂ ಇದ್ದುದರಿಂದ ಈ ಕಥೆಯನ್ನು ನಾನಾ ಭಾಷೆಗಳಿಗೆ ಪರಿವರ್ತನ ಮಾಡಿರುತ್ತಾರೆ. ನಮ್ಮ ಮುಂದಿರುವ ಕನ್ನಡ ಭಾಷಾಂತರವನ್ನು ಕೃಷ್ಣಾಜಿದಾಸೋ ಆನಂದಿಯವರು ... ವರು ... ಈ ಕಥೆಯನ್ನು ... ಗ್ರಾಮಸ್ಥರ ಮುದ್ರಾಲಯಕ್ಕೆ ಬರೆದು ತರಿಸಿಕೊಳ್ಳಬಹುದು. ಇದರ ಮುದ್ರಣ ಕ್ರಮಗಳು ಕೋಮಲವಾಗಿ ... ಎಲ್ಲದರಲ್ಲೂ ... ಈ ಕಥೆಯು ಓದುವುದಕ್ಕೆ ಯೋಗ್ಯವಾಗಿದೆ.

"ಶ್ರೀಮಂತಿನಿ ಭಾವತಿಯು ಏನನ್ನು ಕಲಿಸುತ್ತದೆ"

ಇದು ಮೊದಲು ... ಉಪನ್ಯಾಸದ ಭಾಷಾಂತರವು ... ಜೋನ್ಸ್ ... ಎಂಬ ... ಈ ಉಪನ್ಯಾಸವನ್ನು ಮಾಡಿದರು ... ಬಾಲಿಕಾ ... ಶಾಲೆಯ ಉಪಾಧ್ಯಾಯರಾಗಿರುವ ... ಗುರುದೇವರಾಯರು ಇದನ್ನು ಕನ್ನಡಕ್ಕೆ ಪರಿವರ್ತನ ಮಾಡಿ ಸಕಲ ... ಬಾಲಿಕೆಯರೂ ಓದಿ ಪ್ರಯೋಜನ ಹೊಂದಬೇಕೆಂಬ ಶ್ರೇಷ್ಠವಾದ ಉದ್ದೇಶದಿಂದ ಪ್ರಕಟಮಾಡಿದ್ದಾರೆ. ಇದರಲ್ಲಿ ... ವೈದಗ್ಧ್ಯ, ಶೀಲ, ... ರಾಜಭಕ್ತಿ ಮೊದಲಾದ ಶ್ರೇಷ್ಠ ಗುಣಗಳನ್ನು ... ಕಥೆಗಳಿಂದಲೂ ಮಹಾ ಕವಿಗಳ ... ವಾಕ್ಯಗಳಿಂದಲೂ ... ಹಿತಕರವಾದ ಉದಾಹರಣೆಗಳಿಂದಲೂ ... ಸರಳವಾಗಿ ... ಇದರ ಕ್ರಯ ... ಬುಕ್ ಡಿಪೋದಲ್ಲಿ ಸಿಕ್ಕುವುದು.

"ಹೊಸ ಕನ್ನಡ ಬೋಧಿನಿ ಪುಸ್ತಕ"

ಬಾಲಕರು ಕನ್ನಡ ಪದವನ್ನು ಸುಲಭವಾಗಿಯೂ ... ಮನನಮಾಡಿ ... ಬರೆಯುವಂತೆ ಅಭ್ಯಾಸ ಮಾಡಿಕೊಳ್ಳುವವರಾಗಬೇಕೆಂದು ಮೈಸೂರು ... ಸ್ಕೂಲಿನ ಹೆಡ್ ಮಾಸ್ಟರು ... ಯವರು ಹೊಸ ವಿಧದ ಒಂದು ಕಾಪಿ ಪುಸ್ತಕವನ್ನು ರಚಿಸಿ, ಇದರ ... ನಂಬರನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಇದರ ಮುದ್ರಣ ಕಾಗದ ಅಂದವಾಗಿಯೂ ... ಇದು ... ರುವ ಅಕ್ಷರಗಳು ಗುಂಡಾಗಿ ಅಂದವಾಗಿರುತ್ತವೆ. ... ಇವು ಸ್ವಭಾವದ ... ತೋರಿಸುತ್ತ ಮತ್ತು ಸರಿ ಅಕ್ಷರಗಳು ಈಗಿನ ಕಾಲಕ್ಕೆ ... ಅಂದವಾಗಿಯೂ ... ಇರುವ ಕಾರಣದಿಂದ ಅದರಿಂದ ಮಕ್ಕಳು ಈ ಕಾಪಿ ಪುಸ್ತಕವನ್ನು ಉಪಯೋಗಿಸುವುದರಿಂದ ತುಂಬಾ ಪ್ರಯೋಜನವಾದೀತೆಂದು ನೆನಸುತ್ತೇವೆ. ... ಯವರು ಇದನ್ನು ರಚಿಸುವುದಕ್ಕಾಗಿ ಪಟ್ಟಿರುವ ಶ್ರಮವನ್ನು ಸರ್ಕಾರದವರೂ ಸ್ಕೂಲ್ ಮಾಸ್ಟರುಗಳೂ ಇದನ್ನು ಪ್ರಚಾರಕ್ಕೆ ತರುವ ಮೂಲಕ ಸಾರ್ಥಕಪಡಿಸುತ್ತಾರೆಂದು ನಿರೀಕ್ಷಿಸುವೆವು.

ಬೆಂಗಳೂರು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕು.

ಕಳೆದ ಜೂನ್ ತಿಂಗಳಿಗೆ ಆಖೈರಾದ ಒಂದು ಸಾಲಿನ ಮೊಲ್ಲಂದ ಬ್ಯಾಂಕಿನ ರಿಪೋರ್ಟನ್ನು ನಮಗೆ ಕಳುಹಿಸಿರುತ್ತಾರೆ. ಪರಸ್ಪರ ಸಹಾಯಕ ಸಂಘಗಳ ಏರ್ಪಾಡು ನಮ್ಮ ದೇಶಕ್ಕೆ ಇನ್ನೂ ಹೊಸದಾದರೂ ಅದು ಬಹು ಬೇಗನೆ ಎಲ್ಲಾ ಕಡೆಗಳಿಗೂ ಹರಡಿಕೊಳ್ಳುತ್ತಿರುವುದನ್ನು ನೋಡಿ ಸಂತೋಷಪಡುತ್ತೇವೆ. ... ರಿಂದ ಕಸಬು, ವ್ಯವಸಾಯ, ವ್ಯಾಪಾರಾದಿಗಳನ್ನು ಕೊಳ್ಳುವವರಿಗೂ ಮಾರುವರಿಗೂ ಹಿತಕರವಾಗಿಯೂ ಫಲಕಾರಿಯಾಗಿಯೂ ವೃದ್ಧಿಗೆ ತರಲು ತುಂಬಾ ಕಾರಣವುಂಟು. ಇದರ ಮರ್ಮವು ಇನ್ನೂ ಪರಿಷ್ಕಾರವಾಗಿ ಗೋಚರಕ್ಕೆ ಬಂದಿಲ್ಲ. ವಿಶೇಷ ಬಡ್ಡಿಯನ್ನು ತೆತ್ತು ಜಮೀನು ಮುಂತಾದ ಆಸ್ತಿಗಳನ್ನು ಕಳೆದುಕೊಳ್ಳುವವರಿಗೆ ಈ ಏರ್ಪಾಡು ವಿಶೇಷ ಪ್ರಯೋಜನಕರವಾದದ್ದು. ಇದರಿಂದ ಅವರು ಹಣಗಾರರ ಬಲೆಗೆ ಸಿಕ್ಕಿ ನರಳುವುದು ತಪ್ಪುತ್ತದೆ. ಇಂಥಾ ಸ್ತೋತ್ರಾರ್ಹವಾದ ಏರ್ಪಾಡನ್ನು ನಮ್ಮ ಸರ್ಕಾರದವರು ರೂಢಿಸಿ ಮೇಲ್ಪಟ್ಟ ನೋಡಿಕೊಳ್ಳುತ್ತಿರುವುದು ಯಥಾರ್ಥವಾದ ಪ್ರಜಾಹಿತಕಾರ್ಯವೆನ್ನುವುದಕ್ಕೆ ಸಂಶಯವಿಲ್ಲ. ಮೊಲ್ಲಂದ ಸೆಂಟ್ರಲ್ ಬ್ಯಾಂಕಿಗೆ ಸ್ಥಳಾಂತರಗಳ ಸಂಘಗಳು ಮೆಂಬರಾಗಿ ಹಣವನ್ನು ಒದಗಿಸಿರುವುದಲ್ಲದೆ ಸರ್ಕಾರದವರೂ ಕೆಲವು ಹಣವನ್ನು ಇಟ್ಟಿದ್ದಾರೆ. ಇಂಥಾ ಬ್ಯಾಂಕುಗಳ ಠೇವಣಿಗಳು ಕ್ರಮಕ್ಕೆ ಬಂದು ... ಲಲ್ಲ, ಕಸಬುದಾರರಲ್ಲ, ವರ್ತಕರಲ್ಲ ನಂಬಿಕೆಗೆ ಅರ್ಹತೆಯನ್ನು ... ಕೊಂಡಲ್ಲಿ ಎಲ್ಲರೂ ತಮ್ಮ ಆದಾಯವನ್ನು ಈ ಬ್ಯಾಂಕುಗಳಲ್ಲಿ ...

ಹಳು ಸಹಾಯವಾಗುವುದು. ಮೊದಲಿಂದ ಬ್ಯಾಂಕಿನ ಕಾರುಬಾರುಗಳನ್ನು ಮೊದಲಾಗಿ ಅವು ಅಂಥಾ ನಂಬಿಕೆಯನ್ನು ಸಂಪಾದಿಸಿಕೊಳ್ಳುತ್ತಾ ಬಂದಿವೆ ಎಂದು ಹೇಳಬಹುದಾಗಿದೆ. ಯಾಕೆಂದರೆ ವಿದ್ಯಾವಂತರಾದ ದೊಡ್ಡ ಮನುಷ್ಯರು ಅವುಗಳನ್ನು ಸೇರಿಕೊಂಡು ನಡಿಸುತ್ತಿರುವರು. ಸರ್ಕಾರದವರು ಅದರ ಲೇವಾದೇವಿಗಳನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದಾರೆ.

ಬಾತ್ಮಿದಾರರಿಗೆ ನೋಟೀಸ್.

ಹೊಸ ವಿಧಾನವಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಪ್ರಕಟಿಸತಕ್ಕ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ನಂಬಿಕೆ ಕಡಮೆ. ಬಾತ್ಮಿಗಳು ಕುಲಾ ಸಂಕ್ಷೇಪವಾಗಿರಬೇಕೆಂದು ಬಯಸುತ್ತೇವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಪ್ರತಿನಿಧಿಗಳು - ದಿನ ಇ ಪಬ್ಲಿಕು ಫಾರಸ್ಟರ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಹೀಗೆ ಹೆಸರನ್ನು ಕಾಣಿಸದೆ - ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು. ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟನಾಗದೆ ಹೋಗುವವು. ಬಾತ್ಮಿದಾರರೆಲ್ಲ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಪ್ರಾರ್ಥಿಸುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ. ಇದನ್ನು ಸಕಲರೂ ತಿಳಿಯತಕ್ಕದ್ದು.

ನೊಣವಿನಕೆರೆ ತಿ. ಮಾಲಗಾನಹಳ್ಳಿ. ಈ ಸ್ಥಳದ ಬಾತ್ಮಿಯಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನವೇನೂ ಕಂಡುಬರುವುದಿಲ್ಲ.

ಕೆ ಎಸ್. ರಂಗ ಶೆಟ್ಟಿ ... ನೀವು ಬರೆದಿರುವ ಘಾತಕರ ಪ್ರಕಟವು ಈ ಪತ್ರಿಕೆಯಲ್ಲಿ ಸ್ಥಳ ಸಿಕ್ಕಲಾರದೆಂದು ವಿಷಾದಪಡುತ್ತೇವೆ.

ಮದುಘನಾಸಿ, ದೇವರಗೇರಿ ... ನೀವು ಹೇಳುವ ವಿಚಾರಗಳನ್ನೆಲ್ಲಾ ಮಾಡಲು ಸರ್ಕಾರಕ್ಕೆ ತಿಳಿಸಿ ತೃಪ್ತಿಕರವಾದ ರುಜುವಾತು ತೋರಿಸಿ ಅವರು ಕ್ರಮಪಡಿಸುತ್ತಾರೆ.

ಸಿ.ತಮ್ಮ ಪರಿವಾದನ ಚಿತ್ರದುರ್ಗ ... ಈ ಪತ್ರಿಕೆಯಲ್ಲಿ ವರ್ತಮಾನಗಳನ್ನು ಪ್ರಕಟಪಡಿಸಬಹುದೇ ಹೊರತು ವಿವಾದಗಳಿಗೆ ಹೊಣೆಯಾದ ಕವನಗಳಿಗೆ ಸ್ಥಳವನ್ನು ಬಿಟ್ಟು ಕೊಡಲು ಆಗಲಾರದೆಂದು ವಿಷಾದಿಸುತ್ತೇವೆ.

ಹಿರಿಯಾಲಿ, ರಂಗೇರಿ ... ಸ್ಥಳದ ಮುಜರಾಯಿ ಪಕಮತ್ತದಿಂದ ಅಕ್ರಮವನ್ನು ಸರ್ಕಾರಕ್ಕೆ ಕ್ರಮಪಡಿಸುವ ವಿಷಯದಲ್ಲಿ ಮನುವೆ ಮಾಡಿಕೊಳ್ಳುವುದು ಉಚಿತವಾಗಿದ್ದೀತು. ಉಪನ್ಯಾಸನೆಗಳನ್ನು ಮೊದಲೇ ಪತ್ರಿಕೆಗಳಲ್ಲಿ ಪ್ರಕಟಮಾಡುವುದರ ಉದ್ದೇಶವು ಸಾರ್ಥಕವಾಗಲಾರದು. ಎಡಿ.]

ಕರೆಸ್ಪಾಂಡೆನ್ಸ್.

ಕೊರಟಗೆರೆ ಮುನಿಸಿಪಾಲಿಟಿ.

ಸ್ವಾಮಿ,

ಹೋದ ವಾರದ ತಮ್ಮ ಪತ್ರಿಕೆಯಲ್ಲಿ ಕೊರಟಗೆರೆ ಮುನಿಸಿಪಾಲಿಟಿ ಚೆನ್ನಾಗಿದೆ ಎಂತಲೂ, ೪ ಜನ ಧ್ಯಾನವಾಲಿಗಳು ಇರುತ್ತಾರೆಂತಲೂ, ಚೌಕಿದಾರರು ಕಚರಾ ಘಂಟೆ ಇರುವೆ ಎಂತಲೂ, ಅಲ್ಲದ ಬಾತ್ಮಿದಾರರು ಚೆನ್ನಾಗಿ ನೋಡದೆ ಈ ರೀತಿ ಬರೆಯುತ್ತಿರಲಿಲ್ಲವೆಂತಲೂ ಒಬ್ಬ ಬಾತ್ಮಿದಾರರು ಬರೆದಿದ್ದಾರೆ. ಮುನಿಸಿಪಾಲಿಟಿ ಚೆನ್ನಾಗಿಲ್ಲವೆಂಬುದಕ್ಕೆ ಊರಿನಲ್ಲಿ ಪ್ಲೇಗು ಉಪದ್ರವವು ಹರಡಿಕೊಂಡಿರುವುದು ಯಾತಕ್ಕೆ? ಅದರಲ್ಲಿಯೂ ಸ್ಯಾನಿಟರಿ ಇನ್ಸ್‌ಪೆಕ್ಟರ ಮನೆಯ ಹತ್ತಿರವೇ ಎರಡು ಕೇಸಾಗಿವೆ. ೪ ಜನ ಧ್ಯಾನವಾಲಿಗಳನ್ನು ನಾವು ನೋಡೇ ಇಲ್ಲ. ಇದಕ್ಕಾಗಿ ಇಲ್ಲಿನ ಮೆಂಬರುಗಳು ಸುಮ್ಮನೆ ಚರ್ಚಿಸುತ್ತಲೇ ಇರುತ್ತಾರೆ. ಅವರ ಕೆಲಸಗಳೇನೋ ತಿಳಿಯದು. ಹೊಸ, ಮಧುಗಿರಿ ತಾಲ್ಲೂಕಿನಲ್ಲಿ ಸಹ ಲಾಂದ್ರದ ಕಂಭಗಳು ಮೊದಲಾದುವು ಇರುವುದಾಗಿ ಬರೆದಿರುತ್ತೆ. ಆ ತಾಲ್ಲೂಕುಗಳ ವಿಚಾರ ನಮಗೆ ಏತಕ್ಕೆ? ನಮ್ಮ ತಾಲ್ಲೂಕನ್ನು ನಾವು ನೋಡಿಕೊಳ್ಳುತ್ತೇವೆ. ಆ ತಾಲ್ಲೂಕಿನಲ್ಲಿ ಅಂಟು ಜಾಡ್ಯ ಇಲ್ಲದೆ ಸುರಕ್ಷಿತವಾಗಿರುವುದೇ ಆರೋಗ್ಯವಾಗಿಯೂ ಮುನಿಸಿಪಲ್ ಕೆಲಸಗಳು ಚೆನ್ನಾಗಿಯೂ ನಡೆಯುತ್ತಿರುವುದಕ್ಕೆ ದೃಷ್ಟಾಂತವಾಗಿದೆ. ಮುಖ್ಯ ನಮಗೆ ಬೇಕಾಗಿಲ್ಲ. ನಮ್ಮ ಅಮಲ್ದಾರರ, ಡಾಕ್ಟರವರ, ಮುನಿಸಿಪಲ್ ಮೆಂಬರುಗಳ ಸಹಾಯದಿಂದ ಗ್ರಾಮದಲ್ಲಿನ ಅಂಟು ಜಾಡ್ಯವು ಹೋಗಿ ಪ್ರಜೆಗಳು ಸುಖದಿಂದ ಜೀವಿಸಿದರೆ ಸಾಕಾಗಿದೆ.

ಪ್ರಜಾಹಿತಚಿಂತಕ

ಶ್ರೀಮತು ಜಾರ್ಜ್ ನೈಟ್ ಸ್ಕೂಲು

ಸ್ವಾಮಿ,

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಹೋಬಳಿ ಸುಲ್ತಾನ್‌ಪೇಟೆ ಗ್ರಾಮದ ಪಟೇಲರಾದ ಸಿ. ತಿಮ್ಮಯ್ಯ ಎಂಬುವರಿಂದ ಸನ್ 1911 ನೇ ಇಸವಿ ಡಿಸೆಂಬರ್ ತಾ. 12 ರಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರ ಡೆಲ್ಲೀ ದರ್ಬಾರಿನ ಪಟ್ಟಾಭಿಷೇಕ ಮಹೋತ್ಸವದ ಜ್ಞಾಪಕಾರ್ಥವಾಗಿ ಈ ಗ್ರಾಮದ ಬಾಲಕರಿಗೆ ಕಲಿಸಿ ತನ್ಮೂಲಕ ರಾಜಭಕ್ತಿ ವಿಶ್ವಾಸಗಳನ್ನು ತೋರ್ಪಡಿಸುತ್ತ, ದೇಶೋದ್ಧಾರವನ್ನು ಮಾಡಬೇಕೆಂಬ ಸದುದ್ದೇಶದಿಂದ ಒಂದು ರಾತ್ರಿ ಪಾಠಶಾಲೆಯು ಸ್ಥಾಪಿಸಲ್ಪಟ್ಟಿರುತ್ತೆ. ಈ ಪಾಠಶಾಲೆಯ ಎಲ್ಲಾ ಕೆಲಸಗಳನ್ನೂ ಸ್ವಂತವಾಗಿ ತಿಮ್ಮಯ್ಯನವರೇ ಯಾವ ಪ್ರತಿಫಲವನ್ನೂ ಕೋರದೆ ಸಾಧ್ಯವಾದಮಾತ್ರಕ್ಕೂ ತನು ಮನ ಧನಗಳನ್ನರ್ಪಿಸಿ ನಡಿಸುತ್ತಿದ್ದಾರೆ. ಈಗ ಸುಮಾರು 30-40 ಹುಡುಗರು ರಾತ್ರಿ ಹೊತ್ತು ವಿದ್ಯೆಯನ್ನು ಕಲಿಯುತ್ತಿರುವರು. ಈ ಪಾಠಶಾಲೆಯು ಹಗಲು ಹೊತ್ತು ಕೂಲಿ, ಜರಾಯ್ತಿ ವಗೈರೆ ಕೆಲಸ ಮಾಡಿ ಜೀವಿಸುವ ಸ್ಥಿತಿಯಲ್ಲಿರುವ ಸ್ಕೂಲಿಗೆ ಹೋಗಿ ವಿದ್ಯೆ ಕಲಿಯಲು ಅವಕಾಶವಿಲ್ಲದ ರೈತರಿಗೆ ಬಹಳ ಪ್ರಯೋಜನಕರವಾಗಿದೆ.

ಇಂಥಾ ಕುಗ್ರಾಮಗಳಲ್ಲಿ ವಿದ್ಯಾವಂತರು ಅಪರೂಪರಾದಕಾರಣ ವಿದ್ಯಾಪ್ರೋತ್ಸಾಹಕರಿಲ್ಲದೆ ಅನೇಕ ಜನಗಳು ವಿದ್ಯಾವಿಹೀನರಾಗಿ ತನ್ಮೂಲಕ ಉಂಟಾಗಬಹುದಾದ ನಾನಾ ಕೇಡುಗಳಿಗೆ ಒಳಗಾಗುತ್ತಾರೆ. ಇಂಥಾ ಕೇಡುಗಳನ್ನು ಹೋಗಲಾಡಿಸಲು ದಯಾಳುಗಳಾದ ನಮ್ಮ ಮಹಾರಾಜ ರವರ ಸರ್ಕಾರದವರು ಪ್ರಜೆಗಳ ಹಿತವನ್ನು ಬಯಸಿ ಅನೇಕ ಏರ್ಪಾಟುಗಳನ್ನು ಮಾಡುತ್ತಿದ್ದಾರೆ. ಈ ಏರ್ಪಾಟುಗಳಿಗೆ ಪ್ರಜೆಗಳಾದ ನಾವೂ ಕೂಡ ಈ ರೀತಿ ಸಹಾಯವಾಗಿದ್ದಲ್ಲಿ ಈ ನಮ್ಮ ಮೈಸೂರ್ ದೇಶವು ಶೀಘ್ರದಲ್ಲಿಯೇ ಅಭಿವೃದ್ಧಿಗೆ ಬರಲು ಸಂದೇಹವಿಲ್ಲ. ಪ್ರತಿ ಒಂದು ಸಣ್ಣ ದೊಡ್ಡ ಗ್ರಾಮಗಳಲ್ಲಿರತಕ್ಕ ವಿದ್ಯಾವಂತರೂ, ದೇಶಾಭಿಮಾನಿಗಳೂ, ಧನಿಕರೂ ಇಂಥಾ ರಾತ್ರಿ ಪಾಠಶಾಲೆಗಳನ್ನು ಏರ್ಪಡಿಸಿದಲ್ಲಿ ಹಗಲು ಓದಲು ಅವಕಾಶವಿಲ್ಲದ ಬಡ ರೈತರಿಗೆ ವಿದ್ಯಾದಾನ ಮಾಡಿದಂತಾಗುವುದು. ಸಿ. ತಿಮ್ಮಯ್ಯನವರು ಈ ಗ್ರಾಮದಲ್ಲಿ ಏರ್ಪಡಿಸಿ ನಡಿಸುತ್ತಿರುವ ಈ ರಾತ್ರಿ ಪಾಠಶಾಲೆಗೆ ದೇಶಾಭಿಮಾನಿಗಳೂ, ನಮ್ಮ ಸರ್ಕಾರದವರೂ ಪ್ರೋತ್ಸಾಹಕೊಟ್ಟಲ್ಲಿ ಇನ್ನೂ ಅಭಿವೃದ್ಧಿಗೆ ಬರಲು ಯಾವ ಸಂದೇಹವೂ ಇರಲಾರದೆಂದು ನಂಬುವೆ.

ಪ್ರತ್ಯಕ್ಷದರ್ಶಿ.

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ, ತಾ|| ಬಾಗೇಪಲ್ಲಿ.—ಈ ಗ್ರಾಮದಲ್ಲಿ ಕೆಲವು ಜನ ಅಭಿಮಾನಿಗಳು ಸೇರಿ ಕಳೆದ ಏಪ್ರಿಲ್ ತಿಂಗಳಲ್ಲಿ ಒಂದು ಸಂಘವನ್ನು ಏರ್ಪಡಿಸಿ, ಶ್ರೀ ಸೋಮನಾರಾಯಣಸ್ವಾಮಿ ಯೂನಿಯನ್ ಎಂಬದಾಗಿ ನಾಮಾಂಕಿತವಿಟ್ಟು ಸ್ಥಾಪನೆ ಮಾಡಿರುತ್ತಾರೆ. ಇದರಲ್ಲಿ ಪ್ರೆಸಿಡೆಂಟರು ಜಮೀನ್‌ದಾರ್ ಬಿ. ರಾಮರಾವ್, ಸೆಕ್ರೆಟರಿ ವೈ. ರಾಮಾಚಾರ್, ಸ್ಕೂಲ್ ಮಾಸ್ಟರ್, ಟ್ರೆಷರರ್ ಕೆ ಶ್ರೀನಿವಾಸಪಂಡಿತ್, ಆ. ವೈ.; ಲೈಬ್ರೇರಿಯನ್ ಬಿ ಮುನಿಯಪ್ಪನವರು, ಕಮಿಟಿ ಮೆಂಬರುಗಳು—ಬಿ. ರಾಮಯ್ಯಶೆಟ್ಟರು, ಎ ನಂಜುಂಡಶೆಟ್ಟರು, ಜ ಎನ್ ದಾಸಶೆಟ್ಟರು, ಬಿ ಚನ್ನಪ್ಪಶೆಟ್ಟರು, ಬಿ ವೀರಾಚಾರ್ಯ, ಈ ರೀತಿ ನೇಮಕವಾಗಿರುತ್ತೆ. ಈ ಸಂಘದಲ್ಲಿ ಪುರೋಹಿತರಾದ ನಿ ತಿಮ್ಮಯ್ಯನವರ ಸೇವೆಯೂ, ಆನೇಕಲ್ಲು ನರಸಿಂಹಯ್ಯನವರಿಂದ ಗ್ರಾಮೋಫೋನೂ ನಡೆಸಲ್ಪಟ್ಟವು. ಆ ಕಾಲದಲ್ಲಿ ಗ್ರಾಮಸ್ಥರೆಲ್ಲರೂ ಅಭಿಮಾನಶಾಲಿಗಳಾಗಿ ಬಂದು ಸಂಘವನ್ನು ಪ್ರೋತ್ಸಾಹಪಡಿಸಿದರು.

ಶೃಂಗೇರಿ.—ಕೆಲವು ವರುಷಗಳ ಕೆಳಗೆ ಇಲ್ಲಿನ ದೊಡ್ಡ ಮನುಷ್ಯರೂ, ವಿದ್ಯಾಭಿಮಾನಿಗಳೂ ಸೇರಿ, ಶೃಂಗೇರಿ ಸುಪ್ರಭಾತದ ಸರಸ್ವತೀ ವಾಚಕಶಾಲಾ ಎಂಬ ರೀಡಿಂಗ್ ರೂಮನ್ನು ಸ್ಥಾಪಿಸಿದರು. ಈ ಮಧ್ಯೆ ಅದು ನಾನಾ ಕಾರಣದಿಂದ ವೃದ್ಧಿಗೆ ಬಾರದ ಬಿದ್ದು ಹೋಗುವ ಸ್ಥಿತಿಯಲ್ಲಿದ್ದು, ನಿಜವಾತ್ರಕ್ಕೆ ಜೀವ ಮೂರ್ಛಿತವಾಗಿ ಕಾಣಬರುತ್ತಿತ್ತು. ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡಿಸಲ್ಪಡುತ್ತಿದ್ದರೂ, ಅದರಿಂದ ಪ್ರಯೋಜನವು ಸರ್ವರಿಗೂ ತೃಪ್ತಿಕರವಾಗಿರಲಿಲ್ಲ. ಆದರೆ ಈಗ ವಿದ್ಯಾಭಿಮಾನಿಗಳು ತಮ್ಮ ಸಂಪೂರ್ಣ ದೃಷ್ಟಿಯನ್ನು ಇದರ ಕಡೆಗೆ ಸಲ್ಲಿಸಿ, ತಾವು ಸ್ಥಾಪಿಸಿದ ಸಂಘವನ್ನು ವೃದ್ಧಿಗೆ ತರುವ ಯೋಚನೆ ಮಾಡಿ, ತಕ್ಕ ಪ್ರಯತ್ನಗಳಿಂದ ಕ್ರಮಪಡಿಸಿ ನಡಿಸುತ್ತಿರುವರು. ಪ್ರತಿ ದಿನ, ವಾರ, ಪಕ್ಷ, ಮಾಸ ಪತ್ರಿಕೆಗಳು ಇಂಗ್ಲೀಷಿನಲ್ಲೂ, ಕನ್ನಡದಲ್ಲೂ ಬಂದು, ಮೇಜಿನ ಮೇಲೆ ನಿಲ್ಲುತ್ತಿವೆ. ವಿದ್ಯಾ ಜ್ಞಾನವನ್ನು ಪಡೆಯಲಿಕ್ಕೆ ಉತ್ತಮ ಮಾರ್ಗವಾದ ಈ ರೀಡಿಂಗ್ ಸಂಘಗಳು ದೇಶದಾದ್ಯಂತ ಪ್ರತಿ ಸ್ಥಳದಲ್ಲೂ ಸ್ಥಾಪಿಸಲ್ಪಟ್ಟರೆ ಎಷ್ಟೋ ವಿದ್ಯಾಪ್ರಚಾರವಾಗುವುದಲ್ಲದೆ, ನಾಗರೀಕತೆಯೂ ಹೆಚ್ಚುವುದು. ಕೇವಲ ಮಠ ಸಂಬಂಧವಾದ ಈ ಸ್ಥಳದಲ್ಲಿ ಸಂಘಸಂಸ್ಥೆಯ ಈ ವಿವಾದದ ಸಭೆಯು ಸ್ಥಾಪಿಸಲ್ಪಟ್ಟದ್ದು ಆಶ್ಚರ್ಯಕರವಾಗಿದೆ. ಮೆಂಬರುಗಳು ಈ ಸಭೆಯನ್ನು ದೀರ್ಘಕಾಲ ನಡೆಸಿಕೊಂಡು ಬರುವುದಕ್ಕೆ ತಕ್ಕ ಶಕ್ತಿ, ಉತ್ಸಾಹ, ಏಕಮತ್ಯತೆಯನ್ನು ಪಡೆಯುವವರಾಗಲೆಂದು ಕೋರುತ್ತೇನೆ.

ಹಾಸನ.—ಈ ಊರಿನಲ್ಲಿ ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡುತ್ತಿರುವುದರಿಂದ ಒಂದು ಹದ ಒಳ್ಳೇ ಮಳೆಯಾದರೆ ಸಾಕು ಎಂದು ರೈತರೆಲ್ಲಾ ಆಕಾಶವನ್ನೇ ಎದುರುನೋಡುತ್ತಾ ಇದ್ದಾರೆ. ಈ ಊರಿನ ಧ್ಯಾನವಾಲಿಗಳಾದರೂ ಬೆಳಗಿನ 7 ಘಂಟೆಗೆ ನಮ್ಮ ಬೀದಿಗಳ ಕಚರಾ ಗುಡಿಸಲು ಶುರುಮಾಡುತ್ತಾರೆ. ಚರಂಡಿಗಳಲ್ಲಿ ನೀರನ್ನು ಹಾಕಿಸಿ ತೊಳೆಯತಕ್ಕ ಪದ್ಧತಿ ಈಚೆಗೆ ಯಾವ ಕಾರಣದಿಂದ ನಿಂತಿರುತ್ತೋ ಗೊತ್ತಿಲ್ಲ. ಟವನ್ ಪೋಲೀಸ್ ಸ್ಟೇಷನ್ ಎದರು ಭಾಗದಲ್ಲಿರುವ ಚರಂಡಿ ವಾಸನೆ ಸಹಿಸಲಶಕ್ಯವಾಗಿರುತ್ತೆ. ಸ್ಯಾನಿಟರಿ ಇನ್ಸ್‌ಪೆಕ್ಟರವರು ಈಗ್ಗೆ 1 1½ ತಿಂಗಳಿನಿಂದ ಊರೊಳಗೆ ಪ್ರವೇಶಿಸುವುದೇ ಕಾಣುವದಿಲ್ಲ. ಈ ಊರಿನಲ್ಲಿ ಅಲ್ಲಲ್ಲೇ ಇಲಿಗಳು ಸಾಯುತ್ತಿರುವುದಾಗಿ ವರ್ತಮಾನವಿದೆ. ಆದ್ದರಿಂದ ಮುನಿಸಿಪಾಲಿಟಿಯು ನೋಲ್ಲಟ್ಟಿ ಅಧಿಕಾರಿಗಳು ಸ್ಯಾನಿಟೇಷನ್ ವಿಚಾರದಲ್ಲಿ ತುಂಬಾ ಗಮನಕೊಟ್ಟು ಪ್ರಜೆಗಳನ್ನು ಕಾಪಾಡುವರೆಂದು ಆಶಿಸುತ್ತೇವೆ. ಈ ಊರಿನ ಪೈಲ್‌ವಾನರು ಇಬ್ಬರು ಕೈದಿಗಳು ಮಧ್ಯಾಹ್ನ ಹೊತ್ತಿನಲ್ಲಿ ತಪ್ಪಿಸಿಕೊಂಡು ಹೋಗಿದ್ದರು. ಅವರ ಪೈಕಿ ಒಬ್ಬನನ್ನು ಮಾಗಡಿಯ ಇನ್ಸ್‌ಪೆಕ್ಟರು ಮ ದಿವಾಂಕರ್ಷಿಯವರು ಮಹನತ್ತಿನಿಂದ ಹಿಡಿದು ಇಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಇನ್ನೊಬ್ಬನು ಇನ್ನೂ ಪತ್ತೆಯಾಗಿಲ್ಲ.—ಈ ಊರಿನ ಸಂಪಲ್ ಮೊಕದ್ದಮೆಯಲ್ಲಿ ಶಿಕ್ಷೆಯಾಗಿದ್ದವರ ಪೈಕಿ ಒಬ್ಬೊಬ್ಬರಾಗಿ ಶಿಕ್ಷೆ ಅನುಭವಿಸಿ ವಾಪಸು ಬರುತ್ತಾ ಇದ್ದಾರೆ.—ಅರಸೀಕೆರೆಯಿಂದ ಹಾಸನ, ಹೊಳೆನರಸೀಪುರದ ಮಾರ್ಗವಾಗಿ ಮೈಸೂರಿಗೆ ರೈಲ್ ಹಾಕಿದರೆ ಚೆನ್ನಾಗಿರುತ್ತೆ ಎಂಬದಾಗಿ ಜನಗಳು ಅಭಿಪ್ರಾಯಪಡುವರು.

ಕೊರಟಗೆರೆ.—ಇಲ್ಲಿ ಈಗ 1-3 ವಾರಗಳಿಂದಲೂ ಮಳೆ ಇಲ್ಲದ ಪೈರುಗಳು ಸ್ವಲ್ಪ ಬಾಡಿಕೊಂಡಿವೆ. ಧಾರಣೆವಾಸಿಗಳು ಇನ್ನೂ ಏರುತ್ತಲೇ ಇರುವದರಿಂದ ಬಡಬಗ್ಗರು ತಿಂಡಿಗಿಲ್ಲದೆ ಪೇಚಾಡುತ್ತಾ ಇದ್ದಾರೆ. ಈ ಕಾಲದಲ್ಲಿ ಸಾಂಕ್ರಾಮಿಕ ರೋಗವು ಬೇರೆ ತಲೆದೋರಿರುತ್ತದೆ. ಅಗಸರ ಜಾತಿ ಒಬ್ಬ ಹೆಂಗಸು, ತಿಗಳರ ಜಾತಿ ಒಬ್ಬಳು, ಅಂತು ಇಬ್ಬರು ಹೆಂಗಸರು ತೀರಿಹೋದರು. ಇನ್ನೂ ಇಬ್ಬರಿಗೆ ತಗಲಿರುತ್ತದೆ. ಇಲ್ಲಿನ ಅಮಲ್ದಾರರೂ, ಡಾಕ್ಟರೂ ಬಹಳ ಮುತುವರ್ಜಿಯಿಂದ ರೋಗಪೀಡಿತ ಜನಗಳನ್ನು ವಿಚಾರಿಸುತ್ತಾ, ತಕ್ಕ ಔಷಧಿಗಳನ್ನು ಕೊಡುತ್ತಿದ್ದಾರೆ.—ಈ ಊರಿನಲ್ಲಿ ಮುನಿಸಿಪಾಲಿಟಿ ಬಹಳ ಕಡಮೆಯಾಗಿದೆ. ಇಲ್ಲಿ ಕಚರಾ ಆಚೆಗೆ ಸಾಗಿಹೋಗುವುದಿಲ್ಲ. ಚರಂಡಿಗಳಲ್ಲಿ ಅಲ್ಲಲ್ಲೇ ವಾಸನೆ ಬಡಿಯುತ್ತಾ ಇದೆ. ಸಂದುಗೊಂದುಗಳಲ್ಲಂತು ಹೇಳತೀರದು. ಧ್ಯಾನವಾಲಿಗಳು ಏನು ಮಾಡುತ್ತಾರೋ ತಿಳಿಯದು. ಮುನಿಸಿಪಲ್ ಮೆಂಬರುಗಳೂ, ಅಮಲ್ದಾರರೂ ಗಮನಕ್ಕೆ ತಂದು ಈ ವಿಷಯದಲ್ಲಿ ಸರಿಯಾದ ಏರ್ಪಾಡನ್ನು ಮಾಡುತ್ತಾರೆಂದು ನಂಬುತ್ತೇನೆ. ಅಲ್ಲದೆ ರಾತ್ರಿವೇಳೆ ಬೀದಿಗಳಲ್ಲಿ ಹುಡುಕಿದರೂ ಬೆಳಕಿನ ಸುಳಿಯೇ ಕಾಣುವದಿಲ್ಲ. ಹೋದ ಲಾಂದ್ರಾ ಕಂಭಗಳಂತೂ ಕತ್ತಲಲ್ಲಿ ಹೆದರಿಸುವಂತೆ ನಿಂತಿವೆ. ಏತಕ್ಕೆ ಸ್ಯಾಂಕ್ಷನ್ ಆಗಿದೆ ಎಂದು ಅಂದುಕೊಳ್ಳುತ್ತಾರೆಯೋ? ವಿನಹಾ ದೀಪ ಬೇರೆ ಹಚ್ಚಲಿಲ್ಲ.—ಇಲ್ಲಿನ ಸೊಸೈಟಿಯ ಸೆಕ್ರೆಟರಿಗಳಾದ ಮ|| ಘೀರಣ್ಣದಾಸರವರನ್ನು ಈ ಸಲ ಮೈಸೂರಿನಲ್ಲಿ ನಡೆಯುವ ದಸರಾ ಮಹೋತ್ಸವಕ್ಕೆ ಸೊಸೈಟಿ ಮೆಂಬರನ್ನಾಗಿ ಚುನಾಯಿಸಿದಾರೆ. ರಾಂಪುರದ ಸೀನಪ್ಪನೆಂಬುವನು ಇಲ್ಲಿನ ಪೇಟೆ ವರ್ತಕರ ಮೇಲೆ ಮಧುಗಿರಿ ಮುನ್ಸೀಫ್ ಕೋರ್ಟಿನಲ್ಲಿ ಹಾಕಿದ್ದ ಮೊಕದ್ದಮೆಯನ್ನು ಮೊನ್ನೆ ರುಜು ವಾತು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ವಾಪಸ್ ತೆಗೆದುಕೊಂಡಿರುತ್ತಾನೆ. ಆತನ ಮೇಲೆ ಇಲ್ಲಿನ ಕೋರ್ಟಿನಲ್ಲಿ ನಡೆದಿದ್ದ ಮೊಕದ್ದಮೆಯು ರಾಜಿ ಆಯಿತು. ಇಲ್ಲಿ ಸೋಂಕು ಜಾಡ್ಯದ ಭಯಕ್ಕೋಸ್ಕರ ಪ್ರತಿಯೊಂದು ಮತದವರೂ ರಾತ್ರಿವೇಳೆ ದೇವರ ಸ್ತೋತ್ರಗಳನ್ನು ಮಾಡಿಕೊಂಡು ಬೀದಿಬೀದಿಯಲ್ಲಿಯೂ ತಿರುಗುತ್ತಾರೆ. ಇಲ್ಲಿನ ಮುಸಲ್ಮಾನರ ಮತದಲ್ಲಿ ಮುಖಂಡರಾಗಿಯೂ, ಮುನಿಸಿಪಾಲಿಟಿ ಮೆಂಬರಾಗಿಯೂ, ಛಾರಿ ವರ್ತಕರಾಗಿಯೂ ಇರುವ ನೌಬತ್ ಹುಸೇನ್ ಸಾಹೇಬರವರು ತಮ್ಮ ಮತದವರೂ ಸಹ ದೇವರ ಸ್ತೋತ್ರವನ್ನು ಮಾಡಲಿಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೆ.

ಬೌರಿಂಗ್ ಪೇಟೆ ತಾ|| ಚೇತಮಂಗಲ.—ಸುಮಾರು 8-9 ದಿನಗಳಿಂದ ಮಳೆ ಇಲ್ಲ. ಪೈರುಗಳು ಬಾಡಿಹೋಗುತ್ತಾ ಇವೆ. ಮೋಡಗಳು ಅಡ್ಡವಾದರೆ ಹೊರ್ತು ಮಳೆ ಬಿದ್ದ ಪಾಡಿಲ್ಲ. ಜಾನುವಾರುಗಳಿಗೂ, ಜನಗಳಿಗೂ ಈ ಪ್ರಾಂತ್ಯ ಕುಡಿಯಲು ನೀರು ಸಿಕ್ಕುವದೇ ದುರ್ಲಭವಾಗಿದೆ. ಈ ವಾರ ಸಂತೆಯಲ್ಲಿ ಅಕ್ಕಿ ರೂಪಾಯಿಗೆ 5½ ಸೇರು, ರಾಗಿ 12 ಸೇರು, ರಂಗೂನ್ ನುಚ್ಚು 7 ಸೇರು, ಈ ಪ್ರಕಾರ ಮಾರಿತು. ಬಡವರ ಜೀವನ ತುಂಬಾ ಕಷ್ಟವಾಗಿದೆ. ನಮ್ಮ ಧರ್ಮಸರ್ಕಾರದವರು ಬಡವರ ವಿಚಾರದಲ್ಲಿ ಈಗಿನ ಧಾರಣೆವಾಸಿಗಳನ್ನು ಯೋಚಿಸಿ ಅಡೋಯಿನ್‌ನು ಕೊಟ್ಟು ಕಾಪಾಡುವರೆಂದು ಕೋರುತ್ತೇನೆ.—ಈ ಗ್ರಾಮಕ್ಕೆ ಅತಿ ಸಮೀಪವಾದ ಗನ್ನೇರಹಳ್ಳಿ, ಚಿಟಕೂರು ಗ್ರಾಮಗಳ ಪ್ರಾಂತ್ಯ ಕಾಲರಾ ಉಪದ್ರ ತಲದೋರಿ 8-9 ಜನಗಳು ಮೃತಪಟ್ಟರು. ಹೊಸ ಕಾಯಿಲೆ ಇಲ್ಲವೆಂದು ತಿಳಿಯಬರುತ್ತೆ.—ಇದೇ ತಾಲ್ಲೂಕು ಕಸಬಾ ಹೋಬಳಿ ವೆಂಗಸಂದ್ರ ಗ್ರಾಮದಲ್ಲಿ ಶ್ರೀಂದಿ ಕಂಟ್ರಾಕ್ಟರ್ ಚಂದ್ರ ಗಿರಿ ನಾಯ್ಡ್ ಎಂಬಾತನು ಕಳೆದ ತಾ 11 ನೇ ರಾತ್ರಿ ಮನೆಯಲ್ಲಿ ಒಬ್ಬನೇ ಮಲಗಿರುವವನನ್ನು ಕಳ್ಳರು ತಿಳಿದು ಮನೆ ಗೋಡೆಗೆ ಕನ್ನಾಹಾಕಿ ಮರದ ಪೆಟ್ಟಿಗೆಯಲ್ಲಿ ಇಟ್ಟಿದ್ದ ಸುಮಾರು 100 ರೂಪಾಯಿ ಒಡವೆ, ನಗದು ಹಣ ಮತ್ತು ಬಟ್ಟೆಮುಂತಾದ್ದು ಅಪಹರಿಸಿಕೊಂಡು ಹೋದರು. ಮಾರನೇ ದಿನ ಅಕ್ಕಪಕ್ಕದ ಜನರು ನಾಯ್ಡನು ಹೊರಗೆ ಬರದಿದ್ದದ್ದನ್ನು ಕಂಡು ಆತನನ್ನು ನಿದ್ರೆಯಿಂದ ಎಬ್ಬಿಸಿದರಂತೆ. ಈ ಸಂಗತಿ ಪೋಲೀಸ್ ಆಫೀಸರಿಗೆ ರಿಪೋರ್ಟಾಗಿ ಪತ್ತೆ ತನಿಖೆಯಲ್ಲಿರುತ್ತೆ.—ಬೆಂಗಳೂರು ಗಣೆಯು ಇಲ್ಲಿಗೆ 7 ಮೈಲಿ ದೂರದಲ್ಲಿದೆ. ಇಲ್ಲಿನ ದೊಡ್ಡ ಕೆರೆಯು ... ಆದಲು ಗಣೆಯ ಯೂರೋಪಿಯನ್‌ರು ಮೋಟಾರ್ ಗಾಡಿಗಳಲ್ಲಿ ಬರುತ್ತಲೇ ಇರುತ್ತಾರೆ. ಈ ಗ್ರಾಮದ ಸಮೀಪದ ಗಣೆಯ ಕೆರೆ ... ಮೇಲೆ ರಸ್ತೆ ಬಹಳ ಇಕ್ಕಟ್ಟಾಗಿರುವ ಕಾರಣ ಕೆಲವು ವೇಳೆ ಎತ್ತಿನ ಗಾಡಿಗಳು ಮೋಟಾರ್ ಗಾಡಿಗಳನ್ನು ನೋಡಿ ಎತ್ತುಗಳು ಬೆದರಿ ಗಾಡಿಗಳನ್ನು ಕೆಳಕ್ಕೆ ಹಾಕಿ ಘಟನೆಗಳಲ್ಲದಕ್ಕೆ ಜನಗಳಿಗೆ ಅಪಾಯವನ್ನುಂಟುಮಾಡುತ್ತವೆ. ಈ ಏರಿದಲ್ಲಿ ಈ ಪುರವಾಸಿಗಳು ನಮ್ಮ ಚೀಫ್ ಇಂಜನಿಯರ್ ಸಾಹೇಬರಿಗೆ ಈ ಕಟ್ಟೆಯ ಎರಡು ಪಾರ್ಶ್ವಗಳಲ್ಲೂ ರೈಲ್ ಕಂಬ ಹಾಕಿಸಿ ಪ್ರಜೆಗಳಿಗೆ ರಕ್ಷಿಸು ಈ ತೊಂದರೆಯಿಂದ ಪಾರುಮಾಡಬೇಕೆಂದು ಅರ್ಜಿ ಗುಜರಾಯಿಸಿಕೊಟ್ಟಿದ್ದರೂ ಇದುವರೆಗೂ ಇದನ್ನು ಸಮಾಧಾನವಾಗಿಲ್ಲ. ಇದು ಬಹಳ ಅವಶ್ಯವಾಗಿಯೂ ಪ್ರಾಣಗಳನ್ನು ಕಾಪಾಡತಕ್ಕ ಮುಖ್ಯ ಕೆಲಸವಾಗಿಯೂ ಇರುವದರಿಂದ ನಮ್ಮ ಚೀಫ್ ಇಂಜನಿಯರ್ ಸಾಹೇಬರು ಈ ಉಪಕಾರವನ್ನು ಮಾಡಿಕೊಡುತ್ತಾರೆಂದು ಕೋರಲ್ಪಟ್ಟಿದೆ.

ತುರುವೇಕೆರೆ ಪೇಟೆ.—ಒಂದು ವಾರದಿಂದ ಮಳೆ ಸ್ವಲ್ಪ ಹಾಲಿಸಿ ಬಿಸಿಲು ಚೆನ್ನಾಗಿ ಕಾಯುತ್ತಿದೆ. ರೈತರೆಲ್ಲಾ ಕಳೆ, ನಾಟಿ ಮುಂತಾದ ಆರಂಭ ಕೆಲಸಗಳಲ್ಲಿ ತೊಡಗಿದಾರೆ. ಬೆಳೆಯು ಇದುವರೆಗೆ ಈ ಪ್ರಾಂತ್ಯವೆಲ್ಲಾ ಉತ್ತಮಸ್ಥಿತಿಯಲ್ಲಿದ್ದರೂ ಧಾರಣೆವಾಸಿಯಾದರೋ ದಿನೇ ದಿನೇ ಏರುತ್ತಿವೆ. ಅಕ್ಕಿ ರೂಪಾಯಿಗೆ 6½ 7½ ಸೇರು, ರಾಗಿ 13 14 ಸೇರು ಸಿಕ್ಕುವದೇ ದುರ್ಲಭ. ಸ್ವಲ್ಪ ಸಂಬಳದಿಂದ ಜೀವಿಸುವವರ ಕಷ್ಟವು ಹೇಳಲು ಅಸಾಧ್ಯವಾಗಿದೆ. ಈ ಧಾರಣೆವಾಸಿಯನ್ನು ನೋಡಿದರೆ ಹಿಂದೆ ಕ್ಷಾಮ ಸಂಭವಿಸಿದ್ದಾಗ ಕೂಡ ದಿನಸಿಗಳು ಇಷ್ಟು ತುಟ್ಟಿಯಾಗಿರಲಿಲ್ಲವೆಂದು ಸಾಧಾರಣವಾಗಿ ಹೇಳಬಹುದು. ಕೃಪಾಶಾಲಿಗಳಾದ ಶ್ರೀಮನ್ ಮಹಾರಾಜಾ ಸರ್ಕಾರದವರು ಹಿಂದೆ ಬಡ ನೌಕರರಿಗೆ ದಯಪಾಲಿಸುತ್ತಿದ್ದ ಹಾಗೆ ಅಲೋಯನ್ಸನ್ನು ಸ್ವಲ್ಪಕಾಲದ ಮಟ್ಟಿಗೆ ದಯಪಾಲಿಸಿದಲ್ಲಿ ತುಂಬಾ ಅನುಕೂಲವಾಗುತ್ತೆ.—ಈ ಗ್ರಾಮಕ್ಕೆ ಸಮೀಪಕವಾಗಿ ಕಳ್ಳರ ಆಗಮನವೂ, ಪ್ಲೇಗಿನ ಹಾವಳಿಯೂ ಹೆಚ್ಚಾಗಿ, ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯನ್ನು ಉಂಟುಮಾಡುತ್ತಿವೆ. ಮ|| ಶ್ರೀನಿವಾಸರಾಯರ ಮನೆಯಲ್ಲಿ ಕಳುವಾದ ಮಾಲುಗಳು ಇನ್ನೂ ಪತ್ತೆ ಆಗಲಿಲ್ಲ. ಕಳೆದಾದ 2-3 ದಿನ ರಾತ್ರಿವೇಳೆ ಪೋಲೀಸ್ ಬೀಟಿನವರ ಶಬ್ದ ಕೇಳಬಂತೇ ಹೊರ್ತು ಈಚೆಗೆ ಅವರ ಸುದ್ದಿಯೇ ಇಲ್ಲ. ಮೊನ್ನೆ ಸ್ವಲ್ಪ ದಿನಗಳ ಹಿಂದೆ ಹಗಲು ಹೊತ್ತಿನಲ್ಲೇ ಹರೀಸಂದ್ರದ ಶ್ಯಾಮ ನಾಗಪ್ಪನವರ ಮನೆಯ ಹಿತ್ತಲಲ್ಲಿ ಕಟ್ಟಿದ್ದ ಕುರಿಯನ್ನು ಯಾರೋ ಬಿಚ್ಚಿಕೊಂಡು ಹೋದರು. ಪತ್ತೆ ಆಗಲಿಲ್ಲ. ನಮ್ಮ ಪೋಲೀಸ್ ಇನ್ಸ್‌ಪೆಕ್ಟರವರು ತಕ್ಕ ಏರ್ಪಾಡು ಮಾಡ್ತಾರೆಂದು ನಂಬುತ್ತೇವೆ.—ಈ ಊರಿನಲ್ಲಿ ಪ್ಲೇಗು ಸುಮಾರು 2-3 ತಿಂಗಳ ಆಗಾಯ್ತು ಬಿಟ್ಟಿಲ್ಲ. ಈಗ ಊರಲ್ಲೆಲ್ಲಾ ಹರಡುತ್ತಿದೆ. ಪ್ರತಿದಿನವೂ ಹೊಸದಾಗಿ ತಗಲುವದೂ, ಸಾಯುವದೂ ಇದ್ದೇ ಇದೆ. ಇಲಿಗಳು ಅಲ್ಲಲ್ಲೇ ಸಾಯುತ್ತಿವೆ. ಇನ್ನೂ ಯಾರೂ ಊರು ಬಿಟ್ಟಿಲ್ಲ. ಇಲ್ಲಿನ ಮುನಿಸಿಪಲ್ ವಿಚಾರಣೆಯೂ ಕೆಲಸವೂ ತೃಪ್ತಿಕರವಾಗಿಲ್ಲ. ನಲ್ಲಯ್ಯನವರ ಸತ್ರದ ಎದುರಿಗೆ ಮೇನ್ ರೋಡಿನ ಬಳಿ ಇರುವ ತಿಪ್ಪೆಗುಂಡಿಯಲ್ಲಿ ಒಂದು ಪ್ರಾಣಿ ಸತ್ತುಬಿದ್ದು ಅದರ ದುರ್ವಾಸನೆ ಬಡಿಯುತ್ತಿದೆ. ಇಂಥಾ ಮಧ್ಯ ಪ್ರದೇಶದಲ್ಲೇ ಈ ರೀತಿ ಇದೆ. ಸಂದಿಗೊಂದಿಗಳ ಸಮಾಚಾರವೇನಾಗಿರಬಹುದೋ! ಊರೊಳಗೆಲ್ಲಾ ರಸ್ತೆಗಳ ಪಕ್ಕದಲ್ಲಿ ಕುರುಚಲ ಗಿಡಗಳು ಬೆಳೆದಿರುವುದರಿಂದ ಎಲೆಗಳು ಉದುರಿ, ಕೊಳೆತು ದುರ್ವಾಸನೆಯನ್ನು ಹೆಚ್ಚಿಸುತ್ತಿವೆ. ಇದನ್ನು ತನಿಖೆ ಮಾಡುವವರೇ ಇಲ್ಲ. ಈ ಊರು ಅಸಿಸ್ಟೆಂಟ್ ಕಮಿಷನರವರ ಮತ್ತು ಡೆಪ್ಯುಟಿ ಅಮಲ್ದಾರರವರ ಹೆಡ್ ಕ್ವಾರ್ಟರ್ ಆಗಿದ್ದರೂ ಈ ರೀತಿ ಇರುವುದು ಆಶ್ಚರ್ಯ

ವಾಗಿದೆ ಈ ವಿಚಾರಗಳನ್ನು ಅಧಿಕಾರಿಗಳು ಸ್ವಲ್ಪ ಮಟ್ಟಿಗೆ ತನಿಖೆ ಮಾಡಿದಲ್ಲಿ ಇಂಥಾ ಅನ್ಯಾಯಗಳಿಗೆ ಅವಕಾಶವಾಗಲಾರದು

ತುಂಕೂರು ತಾ|| ಕೋರ — ಈ ಸಾಲಿನಲ್ಲಿ ನಡೆದ ಮಳೆಯಿಂದ ಈಗ ಇರುವ ರಾಗಿ, ಹರಳು, ದಿನ್ನೆಭತ್ತ ಇನ್ನೂ ಅನೇಕ ಪಸಲುಗಳು ನೋಡಿದರೆ ಸಂತೋಷವಾಗುತ್ತೆ ಮುಂದೆಯೂ ಕಡೇವರಿಗೆ ಇದೆ ರೀತಿ ನಡೆಸಿದರೆ ರೈತರ ಮೇಲಿನ ಕೂಲೀಕಾರರ ಕಷ್ಟ ದೂರವಾಗುತ್ತೆ, ಅಂದರೆ ಆಯಾ ಕಾಲದಲಿ ಮಳೆ ಆಗದೆ ಕೂರವಾಗಿರುತ್ತೆ ಪೈರುಗಳು ಒಣಗುತ್ತಾ ಇವೆ ಜನಗಳ ಪೇಚಾಟ ಹೆಚ್ಚುತ್ತಾ ಇವೆ — ಇದಲ್ಲದೆ ಈಗ ಇಪ್ಪತ್ತು ದಿನಗಳಿಂದ ಯಾವುದೋ ಕಾಡ ಇರುವ ಹುಳಗಳು ಪ್ರಾರಂಭವಾಗಿ ಇವೆ ಇವುಗಳು ಗುಬ್ಬಿ ತಾಲ್ಲೂಕು ಚೇಳೂರು ಸಮ್ಮತು ಸುತ್ತಗ್ರಾಮಗಳಲ್ಲಿ, ತುಂಕೂರು ತಾಲ್ಲೂಕು ಬೆಳ್ಳಾವೆ ಸಮ್ಮತು ಸುತ್ತಗ್ರಾಮಗಳಲ್ಲಿ ತುಂಬಿಕೊಂಡು ಹರಳು ಗಿಡಗಳನ್ನು ಹಾಳುಮಾಡಿಬಿಟ್ಟು ಈಗ ಬದುಗಳ ಮೇಲಿನ ಹುಲ್ಲು, ಆಲದಮರ, ಇತರ ಮರಗಳ ಎಲೆಗಳು ಸಹ ತಿನ್ನುತ್ತಾ ಇವೆ ಈ ರೀತಿಯಾಗಿ ತಿನ್ನುವದರಲ್ಲಿ ರಾಗಿ ಪೈರು ಬಿಡುವ ಯಾವ ಸಂಬಿಗೆ ಒಂದು ಎಕರೆ ಭೂಮಿಗೆ ಹರಳು ಹಾಕಿ ಇದ್ದರೆ ಅವರಲ್ಲಿ ಈ ದಿನ ಒಂದು ಹುಳ ಕಂಡರೆ ಮಾರನೇ ದಿನ ಅಲ್ಲಿ ನೋಡುವದಕ್ಕೆ ಒಂದು ಎಲೆ ಸಹಾ ಬಿಡುವದಿಲ್ಲ ಸುಮಾರು ನಾಲ್ಕು ಅಡಿ ಎತ್ತರದ ಗಿಡಗಳು ಇದ್ದರೆ ಒಂದು ಅಡಿ ಕೊಳೆತುಹೋಗುತ್ತವೆ ಅಲ್ಲದೆ ಒಂದು ಹೊಲದಿಂದ ಮತ್ತೊಂದು ಹೊಲಕ್ಕೆ ಸುಮಾರು ಮೂರ್ನಾಲ್ಕು ಮೈಲಿ ಫಾಸಲೆ ಇದ್ದರೆ ಅಲ್ಲಿಗೆ ಸಾಲುಸಾಲಾಗಿ ಹರಿದುಹೋಗುತ್ತವೆ ಇವು ಎರಡು ಅಂಗುಲ ಉದ್ದ, ಕಪ್ಪು ಊದಾ ಬಣ್ಣವಾಗಿರುವವು ಇದಕ್ಕೆ ಪುರಾತನರು ಕೋಂಡಲಿ ಎಂದು ಹೇಳುತ್ತಾರೆ ಸರ್ಕಾರದವರು ಸ್ವಲ್ಪವಾದರು ಇದಾಗಲೆಯಿಂದ ಯಾರಿಸ್ಪಾದರೂ ಕಳುಹಿಸಿ ಇವುಗಳನ್ನು ನಾಶಮಾಡುವ ಉಪಾಯ ನಾಶಮಾಡುವ ಪ್ರಯತ್ನಮಾಡಬೇಕು ರೈತರು ಅನೇಕರು ರಾಗಿ ಫಸಲು ಕಡೆ ಮತ್ತಾವ ಫಸಲು ಜಾಸ್ತಿಯಾಗಿ ಬಿತ್ತಿದ್ದರು ಇದರಿಂದ ಅಂದಾಜು ವಗೈರೆ ಆದ್ದರಿಂದ ಖರ್ಚುಬಾಬು ತೀರುತ್ತದೆಂದು ನಂಬಿದ್ದರು ಅವರ ಫಸಲು ಈ ಹುಳಗಳಿಂದ ನಾಶವಾಗುತ್ತಾ ಬಂದಿವೆ

ಹೊಳೇನರಸೀಪುರ — ಈ ಪ್ರಾಂತ್ಯದಲ್ಲಿ ಮಳೆ ಇಲ್ಲದೆ ದೊಡ್ಡ ರಾಗಿ ಪೈರೆಲ್ಲಾ ಒಣಗುತ್ತಾ ಇವೆ ಕೆಲವು ಕಡೆ ಗಿಡ್ಡ ರಾಗಿ ಪೈರು ಕಳೆಯಾಗಿ ಬಂದಿದೆ ೫ನೇ ತಾ ಮಧ್ಯಾಹ್ನ ೧೨ ಗಂಟೆ ಸಮಯಕ್ಕೆ ಮೈಸೂರು ದೇಶದ ಸ್ಕೂಲುಗಳ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಮೋಟಾರ್ ಗಾಡಿಯಲ್ಲಿ ಹಾಸನದಿಂದ ಇಲ್ಲಿಗೆ ದಯಮಾಡಿದರು ಮೊದಲು ಇಲ್ಲಿನ ಮ ಸಂಸ್ಕೃತಿಯಾಗ್ಯಾಸ ಸ್ಕೂಲಿಗೆ ಸ್ಕೂಲನ್ನು ಇನ್ಸ್ಪೆಕ್ಟ್ ಮಾಡಿ ಅಲ್ಲಿ ತಯಾರಾಗಿ ತಕ್ಕ ಹುಡುಗರನ್ನು ನೋಡಿ ಮ|| ಸುಬ್ಬ ಯ್ಯಾಗ್ಯಾರವರ ಜೋರ್ಣಮಾಗಳಿಗೆ ಬಹು ಸಂತೋಷಪಟ್ಟರು ಇಲ್ಲಿ ತಯಾರಾಗತಕ್ಕ ಸಾಬು ಮು ಹಾಡಗಳನ್ನು ಇಲ್ಲಿನ ಕಲೆಕ್ಟರ್ ತೆಗೆದುಕೊಳ್ಳುವದಕ್ಕೆ ಪ್ರೋತ್ಸಾಹಿಸಬೇಕೆಂದು ಹೇಳಿ, ಅಲ್ಲಿಂದ ಮರಗೆಲಸದ ಸ್ಕೂಲಿಗೆ ಪ್ರವೇಶಿಸಿ, ಅಲ್ಲಿ ಒಬ್ಬನು ತನ್ನ ಕೆಲಸದ ಸಾಮಾನುಗಳನ್ನು ಸುಟಿಯಾಗಿಯೂ ಕ್ರಮವಾಗಿಯೂ ಇಟ್ಟುಕೊಳ್ಳಲಿಲ್ಲನೆಂದು ಅವನಿಗೆ ಜುಲ್ಮಾನೆ ವಿಧಿಸಿದರೆಂದು ತಿಳಿಯಲಾಯಿತು ಕಬ್ಬಿಣದ ಕೆಲಸ ನಡೆಯುವ ಸ್ಥಳಕ್ಕೆ ಹೋಗಿ ಕೆಲವು ಸಾ ಸಾಮಾನುಗಳನ್ನು ತಿದ್ದಿ ಕೆಲವು ಹೋ ಏರ್ಪಾಡುಗಳನ್ನು ಮಾಡಿದರು ಅನಂತರ ಪೇಟೆಬೀದಿಯಲ್ಲಿ ಬಂದು ಬೀದಿಮಗ್ಗದ ಮ ಉಪಾಧ್ಯಾಯರ ರಾಮಣ್ಣನವರ ಮನೆಯ ಬಳಿ ನಿಂತು ಹೂವಿನ ಹಾರ ಮುಂತಾದವುಗಳನ್ನು ಸ್ವೀಕರಿಸಿ ಒಂದು ಮಗ್ಗದ ಮನೆಯನ್ನು ಪ್ರವೇಶಿಸಿ ಅಲ್ಲಿ ನಡೆಯುತಕ್ಕ ನೆಯಿಗೆ ಕೆಲಸವನ್ನು ಪರಾಂಬರಿಸಿ ಇ ಫ್ಲ ಮಗ್ಗದ ಸಾಮಾನುಗಳನ್ನು ಸುಲಭ ಕ್ರಯಕ್ಕೆ ಕೊಡಬೇಕೆಂಬ ಅಭಿಪ್ರಾಯವನ್ನು ತಿಳಿಸಿ, ದೊಡ್ಡ ಮಸೀದಿ ಗಲ್ಲಿಗೆ ಹೋಗಿ ಅಲ್ಲಿ ಮುಸಲ್ಮಾನರು ರೇಷ್ಮೆ ಬಟ್ಟೆಗಳನ್ನು ಮಗ್ಗದ ಮೇಲೆ ನೆಯುವುದನ್ನು ಪರಾಂಬರಿಸಿದರು ಆ ಜನರು ಸ್ವತಃ ರೇಷ್ಮೆಯನ್ನು ಬೆಳೆಸಿ ಅದರಿಂದ, ಇಂಗ್ಲೀಷಿನವರು ಸ್ವಂತ ಪ್ರಯತ್ನದಿಂದಲೇ ಒಳ್ಳೇ ಸ್ಥಿತಿಯಲ್ಲಿರುವರೆಂದೂ ಉದಾಹರಿಸಿಕೊಟ್ಟು, ಅವರೂ ಕೂಡ ಅವರಂತೆ ಆಗಬೇಕೆಂದು ಬುದ್ಧಿವಾದವನ್ನು ಆ ಜನರಿಗೆ ತಿಳಿಸಿ, ಅಲ್ಲಿಂದ ಅರಕಲಗೂಡು, ರಾಮನಾಥಪುರ, ಇವುಗಳನ್ನು ನೋಡಿಕೊಂಡು ಸಾಯಂಕಾಲ ೬ ಗಂಟೆ ಸಮಯದಲಿ ವಾಪಸ್ ಹಾಸನಕ್ಕೆ ದಯಮಾಡಿದರು — ಇಲ್ಲಿನ ಪಾಲ್ಯ ನಂಜುಂಡಪ್ಪನವರ ಮನೆಯಲ್ಲಿ ಇಲ್ಲದ ವೇಳೆ ಇನ್ಸ್ಪೆಕ್ಟರ ಗೃಹಾಂಗಣದಲ್ಲಿ ಯಾರೋ ಹಿತ್ತಲಕಡೆಯಿಂದ ಬಂದು ಹಿತ್ತಲ ಬಾಗಿಲ ಚಿಲಕವನ್ನು ಮುರಿದು ಒಳಗೆ ಹೋಗಿ ಅದರ ಎಕ್ಕಳಗೆ ಕಂಚು ಮುಟ್ಟು ಸಾಮಾನುಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಇದರಿಂದ ಹಾಕೀತಂಗಿಗೆ ಬಹಳ ನಷ್ಟವಾಯಿತು ಕಳವು ನಡೆದ ಈ ಮನೆಯು ಪೈರೋಡು ಪಕ್ಕದಲ್ಲಿದೆ ಮತ್ತು ಟವನ್ ಪೋಲೀಸ್ ಸ್ಟೇಷನಿಗೆ ಸಮೀಪವಾಗಿದೆ ಈ ವಿಚಾರವನ್ನು ಸದರಿ ಮಾಲೀಕರು ಒಡನೆ ಜವಾನದಾರರಿಗೆ ರಿಪೋರ್ಟು ಮಾಡಿದ ಹಾಗೂ ಜವಾನದಾರರು ಬೇಗನೆ ಬಂದರು ಹೇಳಿದರ ಮೇಲೆ ಅವರು ಬಂದು ಮಾಲೀಕರನ್ನು ವಿಚಾರಿಸಿ, ಕಳುವು ಆಗಿರುವ ಸ್ಥಳವನ್ನು ನೋಡಿ ಸಾಮಾನುಗಳನ್ನು ಬರೆದುಕೊಂಡು ಹೋದ ಹಾಗೂ, ಇಲ್ಲಿಗೆ ೧೫ ೨೦ ದಿನಗಳಾದಾಗೂ ಈ ವಿಷಯವನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲವೆಂದು ತಾ ೩ ರಲ್ಲಿ ಇನ್ಸ್ಪೆಕ್ಟರವರಿಗೆ ಅರ್ಜಿ ಬರೆದುಕೊಂಡದ್ದರ ಮೇಲೆ ಅವರು ಎಲ್ಲಾ ಸಾಕ್ಷಿಗಳ ಮಹಜರು ಮಾಡಿಕೊಂಡು ಹೋಗಿರಾರೆ ಈ ಇನ್ಸ್ಪೆಕ್ಟರವರು ಬಹಳ ನಿಧಾನಗಳು, ಕೆಲಸದ ಮೇಲೆ ಬಹು ಮುತುವರ್ಜಿ ವಹಿಸುವವರೂ ಎಂದು ತೋರುತ್ತದೆ ಪೋಲೀಸ್ ಬೀಟು ಸರಿಯಾಗಿರುವಂತೆ ಇನ್ಸ್ಪೆಕ್ಟರವರು ಏರ್ಪಡಿಸಿದರೆ ಬಹಳ ಸಹಾಯವಾದೀತು — ಹಾಸನದ ಡಿಸ್ಟ್ರಿಕ್ಟ್ ಮ್ಯಾನೇಜ್ಮೆಂಟ್ ಮಿಸ್ಟರ್ ಸೂಪರಿಂಟೆಂಡೆಂಟರಾದ ರೆವ|| ಎಚ್ ಸ್ಪೆನ್ಸರ್ ಸಾಹೇಬರವರು ಹೊಳೆನರಸಿಪುರಕ್ಕೆ ಬಂದು ೩ ದಿನ ಇದ್ದು ಬಾಲಿಕೆಯರ ಮತ್ತು ಬಾಲಕರ ಸ್ಕೂಲುಗಳನ್ನು ಪರೀಕ್ಷಿಸಿಕೊಂಡು, ಹೊಸ ಸ್ಕೂಲ್ ಕಟ್ಟಡದ ಏರ್ಪಾಡುಗಳನ್ನು ಪ್ರಾರಂಭಿಸಿ ಹಾಸನಕ್ಕೆ ಪ್ರಯಾಣ ಮಾಡಿದರು — ಇಲ್ಲಿ ಜೂಜುಕಟ್ಟೆ ಹೆಚ್ಚಾಗಿದೆ ಮುಖ್ಯ ಸಂದು, ಹೊಸದ ಅಂಗಡಿ ಸಂದು, ಕೆಲವು ರಹಸ್ಯವಾದ ಮನೆಗಳು, ಇಂಥಾ ಸ್ಥಳಗಳಲ್ಲಿ ಆಡುತ್ತಿರುವದರಿಂದ ಪೋಲೀಸ್ ಇನ್ಸ್ಪೆಕ್ಟರವರು ಗಮನಕ್ಕೆ ತಂದರೆ ಪ್ರಯೋಜನವಾಗಿದೆ

ತಿಪಟೂರು — ಸುಮಾರು ೧೫–೨೦ ದಿನಗಳಿಂದ ಈ ಪ್ರಾಂತ್ಯ ಮಳೆ ಇಲ್ಲ ಈ ವರ್ಷ ನಡೆದ ಮಳೆಯು ಪೈರಿಗೆ ಅನುಕೂಲವಾಯಿತೇ ಹೊರತು ಕೆರೆಕಟ್ಟೆಗಳು ತುಂಬಲಿಲ್ಲ ಪೈರು ಒಳ್ಳೇ ಸ್ಥಿತಿಯಲ್ಲಿದ್ದಾಗ್ಯೂ ಮಳೆಯಿಲ್ಲದೆ ಈಗ ಒಣಗುತ್ತಲಿವೆ ಕುಡಿಯುವ ನೀರಿನ ಅಭಾವವು ದಿನದಿನಕ್ಕೆ ಹೆಚ್ಚುತ್ತಿದೆ ಮ್ಯುನಿಸಿಪಲ್ ಬಾವಿಗಳ ನೀರು ಬತ್ತಿಹೋಯಿತು ಇಲ್ಲಿರುವ ಧರ್ಮಸ್ಥರಾದ ಕೆಲವು ಜನ ವರ್ತಕ ಮಹನೀಯರಿಂದ ಗ್ರಾಮಸ್ಥರು ಕುಡಿಯುವ ನೀರು ಕೇಳದ ಉಪಯುಕ್ತವಾಗಿದೆ ಹೀಗೆ ಪರೋಪಕಾರಾರ್ಥವಾಗಿ ಮಾಡಿರುವ ಈ ಮಹನೀಯರ ಧರ್ಮ ಕೆಲಸಕ್ಕೆ ಜನ ತಿಳಿಯುವಾಗದ ರೀತಿಯಲ್ಲಿ ಕಾಪಾಡತಕ್ಕದ್ದು ಇಲ್ಲಿನ ಮ್ಯುನಿಸಿಪಾಲಿಟಿಯವರ ಕರ್ತವ್ಯವಾಗಿದೆ ಊರಿಗೆ ಪೂರ್ವ ದಿಕ್ಕಿನಲ್ಲಿ ಕೋಡಿಯ ಬಳಿ ಜನಾಬ್ ಬಾವಿ ಎಂಬ ಸಿಹಿನೀರಿನ ಬಾವಿ ಇದೆ ಈ ನೀರನ್ನು ಬಹು ಜನರು ಬಳಸುವರು ಇಂಥಾ ಒಳ್ಳೇ ನೀರು ದೀರ್ಘಕಾಲ ಉಪಯೋಗಿಸುತ್ತಿದೆ ಯಾಕೆಂದರೆ ಅದಕ್ಕೆ ಕೆಲವು ಗಜ ಸಮೀಪದಲ್ಲಿ ಪಬ್ಲಿಕ್ ಲ್ಯಾಟ್ರಿನ್ (ಕಕ್ಕಸು) ಇರುವುದಲ್ಲದೆ ಇದರ ಸುತ್ತುಮುತ್ತಲೂ ಟೌನ್ ಕನ್ಸರ್ವೆನ್ಸಿ ಕಚಡವನ್ನು ತುಂಬುತ್ತಲಿರುವರು ಇದಕ್ಕೆ ಬೇರೆ ಸ್ಥಳವನ್ನು ಏರ್ಪಡಿಸಿ, ಕಕ್ಕಸನ್ನು ತೆಗೆದುಹಾಕಿ, ಸದರಿ ಬಾವಿಯ ನೀರನ್ನು ಕಾಪಾಡಬೇಕೆಂದು ಅನೇಕ ಬಾರಿ ಸೂಚಿಸಿದಾಗ್ಯೂ ಪ್ರಯೋಜನವಿಲ್ಲದಾಯಿತು ಈಗ ಅದಿರೂ ಈ ವಿಷಯಕ್ಕೆ ಕಿಂಚಿತ್ತಾದರೂ ಗಮನಕೊಟ್ಟು ಸರ್ಕಾರಕ್ಕೆ ಅತ್ಯಧಿಕವಾದ ಪ್ರಯೋಜನ ಮಾಡಿದವರಾಗುವರು ೧೧ ೧೨ನೇ ಇದರ ಟೌನ್ ಮತ್ತು ಮ್ಯುನಿಸಿಪಲ್ ಕಂದಾಯವು ಸುಮಾರು ೨,೦೦೦ ರೂಪಾಯಿ (ಸುಮಾರು ೫೦೦ ರೂಪಾಯಿ ಉಳಿದು) ಜೂಜು ಅಧ್ಯಕ್ಷರಿಗಳಿಗೆ ವಸೂಲ್ ಮಾಡಿರುವ ಪಟ್ಟಿ ಬಂದು ನೋಡಿದರೆ ವಗೈರೆ ಮಹಸ್ತು ಸ್ಥಾಪಿತವಾಗಿದೆ ಇಲ್ಲಿಗೆ ಒಂದೆರಡು ತಿಂಗಳ ಹಿಂದೆ ವರ್ತಕರ ಬಂದಿರುವ ಪೋಲೀಸ್ ಜವಾನದಾರರು ರೂಲಿನ ಪ್ರಕಾರ ಸಕಲ ಕಟ್ಟುಪಾಡನ್ನು ಕ್ರಮವಾಗಿ ಇಡುತ್ತಾ ಬಂದಿದ್ದಾರೆ ನ್ಯಾಯಾಧೀಶರು ಇದರ ವಿಷಯದಲ್ಲಿ ಆಸಕ್ತಿಯಿಂದ ಅನ್ವೇಷಿಸಿ ಉತ್ತರೋತ್ತರ ಇದರ ಪ್ರಯೋಜನವನ್ನು ಕಂಡು ಸಂತೋಷಪಡದೆ ಇರಲಾರರು ಇಲ್ಲಿನ ಮ ಶಿವನಂಜೇಗೌಡರ ಮಹನೀಯರಿಗೂ ಗೌಡರ ಪತ್ರ ಕಳುಹಿಸಿದ್ದ ಗೋಡಿನ ವಿಷಯ ಬಹು ದಿನಗಳಿಂದಲೂ ಪಾಸ್ತಿ ಇಡದೆ ಕೋರ್ಟಿಗಳಲ್ಲಿ ವಿಚಾರ ಮಾಡಿಯುಗ ಪರ ಫೈಸಲಾಗಿ ೧೫ ರೂಪಾಯಿ ಜುಲ್ಮಾನೆ ಆಗಿತ್ತು ಈ ತೀರ್ಪಿನ ಮೇಲೆ ಚೀಫ್ ಕೋರ್ಟಿನಲ್ಲಿ ಅಪೀಲು ಗೌಡರ ಪರವಾಗಿ ತೀರ್ಪಾಗಿ ಜುಲ್ಮಾನೆಯು ವಜಾ ಮಾಡಲ್ಪಟ್ಟಿತೆಂದೂ ತಿಳಿದು ಮೂಲಕ ಕೆಲವು ಗೌಡರ ಮಿತ್ರರು ಸಂತೋಷಪಟ್ಟಿದ್ದಾರೆ ಧಾನ್ಯಗಳ ಬೆಲೆಗಳು ಒಂದೆರಡು ತಿಂಗಳಿಂದ ಏರುತ್ತಾ ಇವೆ ಅಕ್ಕಿ ರೂಪಾಯಿಗೆ ೧೦ ಸೇರು, ರಾಗಿ ೧೪ ೧೫ ಸೇರು ಆಗಿದೆ ಜನಗಳಿಗೆ ಸಂಕಷ್ಟ ದಿನೇದಿನೇ ಹೆಚ್ಚುತ್ತಾ ಇದೆ ಬಹು ಜನ ತರುಕರು ದಿನ್ನಾ ಹಾಳಿ ಮನೆಮನೆ ಸುತ್ತುವವನ್ನು ನೋಡುವಾಗ್ಗೆ ಬಡವರೂ ಸಾಸ್ತರು ಕ್ಷಾಮದಿಂದ ಪೀಡಿತರಾಗಿದ್ದಾರೆಂದು ಊಹಿಸಬಹುದು — ಶಾಲಾ ಡಿಪೋಟಿಯು ಹೋಗಿರುವಲ್ಲಿ ಮದ್ದಾನಿನ ನಾಟಕ ಕಂಪನಿಯವರು ಬರುವರೆಂದು ಒಂದು ಎಡಿಶನಲ್ ವಸಂತರನ್ನು ೫೦೦ ರೂಪಾಯಿಗೆ ತಯಾರಿಸುತ್ತಿದ್ದಾರೆ ಕಾಲಕ್ಷೇಪ ಹಾಗೂ ಇವರು ಇಂಥಾ ವಿನೋದಗಳಿಗೆ ಪ್ರಜೆಗಳು ವಿಚಾರವಿಲ್ಲದೆ ಖರ್ಚು ಮಾಡುವುದು ಮೂಢಿತರಾಗಿದೆ ಇಲ್ಲಿನ ಮಿಷನ್ ಶಾಲೆಗಳ ಪಾಠಶಾಲೆಗಳಲ್ಲಿ ಸಲ್ಪಕ್ಕೆ ಕೆಲಸು ಕಲ್ತ್ಯು ಬಾಲಕರು ವರ್ತಕ ಮಹನೀಯರ ಬೆರೋಜನದಿಂದ ಬರಾ ಮಾಡುವ ಭಾಷಣ ವಾಗ್ಮಿಗಳಲ್ಲಿ ಧನ್ಯವಾದವನ್ನು ನೋಡಿ ಸಂತೋಷಪಡಬೇಕಾದದ್ದಾಗಿದೆ ಪಟೂರು ತಾಲ್ಲೂಕು ಕಿಬ್ಬನಹಳ್ಳಿ ಹೋಬಳಿ ಅತ್ತಿಹಾಳು ಗ್ರಾಮದಲ್ಲಿ ಕಳೆದ ವಾರ ಒಂದು ಖೂನ್ ಆಯಿತು ಒಬ್ಬ ಮಾದಿಗರವನು ಸಾಯಂಕಾಲ ಹೊಲದಿಂದ ಮನೆಗೆ ಬರುವ ೧೦ ವಯಸ್ಸಿನ ಮಗನನ್ನು ಅವನಿಗೆ ಆಯಿತೇ ನೀನು ಕೊಡನ್ನಾ ಎಂದು ಕೇಳಿದಾಗ ಅವನು ನೀರು ಕೊಡದೆ ಎದುರು ಮಾತಾಡಲು ಅವನು ಅಸ್ತ್ರ ಪಟ್ಟು ಕೈಯಲ್ಲಿದ್ದ ಕುಡುಗೋಲಿನ ಅವನನ್ನು ಬಲವಾಗಿ ಹೊಡೆಯಲು ಅವನು ಹುಡುಗನಿಗೆ ಸತ್ತರವನ್ನು ನೋಡಿ ಕೊಂದ ಅವನು ಸ್ವತಃ ಸಂಗತಿಯನ್ನು ಪಟೇಲರಿಗೆ ತಿಳಿಸಿದನಂತೆ ಈ ಸುದ್ದಿ ಸಿಕ್ಕಿದ ಕೂಡಲೇ ನಮ್ಮ ಸಬ್ ಡಿವಿಷನ್ ಪೋಲೀಸ್ ಇನ್ಸ್ಪೆಕ್ಟರೂ ಹೋಗಿ ಸ್ಪಾಟ್ ಮಹಜರಾದ ಮೇಲೆ ಆಸಾಮಿಯ ಹೇಳಿಕೆಯನ್ನು ತೆಗೆದುಕೊಂಡು ಆಸಾಮಿಯನ್ನು ಮ್ಯಾಜಿಸ್ಟ್ರೇಟ್ ಬಳಿ ಕಳಿಸಿದರು ಈ ಊರು ಕೋಆಪರೇಟಿವ್ ಸೊಸೈಟಿ ೭ನೇ ವಾರ್ಷಿಕ ಜನರಲ್ ಮೀಟಿಂಗು ಈ ಊರು ಮಿಷನ್ ಗರ್ಲ್ಸ್ ಸ್ಕೂಲ್ ಹಾಲಿನಲ್ಲಿ ತಾ ೨೨ ರಲ್ಲಿ ನಡೆಯಿತು ಇದಕ್ಕಾಗಿ ದಯಮಾಡಿದ ಸೊಸೈಟಿ ರಿಜಿಸ್ಟ್ರಾರ್ ಮ ಎಂ ಎ ಶಾಸ್ತ್ರಿಯಾಗ್ಯಾರವರು ಅಗ್ರಾಸನವನ್ನು ವಹಿಸಿದರು ಆಯಾ ಕ್ರಮದಲ್ಲಿ ಇನ್ಸ್ಪೆಕ್ಟರಾಗಿ ಬಂದಿದ್ದ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು ಸರ್ಕಾರಿ ಹುದ್ದೆದಾರರೂ, ಸಂಘದ ಹೆಂಬರುಗಳೂ ಸಭೆಯನ್ನು ಅಲಂಕರಿಸಿದರು ಸೆಕ್ರೆಟರಿಯವರ ರಿಪೋರ್ಟ್ ಓದಿದನಂತರ ಮೆಂಬರುಗಳು ಸಂಘದ ಬಗ್ಗೆ ಚರ್ಚೆಗಳನ್ನು ಮಾಡಿದರು ರಿಜಿಸ್ಟ್ರಾರವರು ಸಾವಧಾನದಿಂದ ಈ ಸಂಘಕ್ಕೆ ಬೇಕಾದ ಸಲಹೆಗಳನ್ನು ಕೊಟ್ಟು ಕೋಆಪರೇಟಿವ್ ಸೊಸೈಟಿಯಿಂದ ಆಗುವ ಪ್ರಯೋಜನವನ್ನು ಚೆನ್ನಾಗಿ ಉಪನ್ಯಾಸ ಮಾಡಿದರು ಆಸಕ್ತ ಸ್ಥಳಗಳಲ್ಲಿ ಪಠೆಯಲ್ಲಿ ಎಂದುಳಿದಿರುವ ಈ ಊರು ಪಂಚಮರ ವಿಚಾರವಾಗಿ ಸಲ್ಪ ಹೊತ್ತು ಉಪನ್ಯಾಸ ಮಾಡಿದರು ಈ ವಿಚಾರವಾಗಿಯೇ ಪಾ ರೆವರೆಂಡ್ ಮ|| ಉಮ್ಮರ್ ರು ಫ್ರ ಸರಿಸಿ ಮಾತನಾಡಿದರು ಹಾಲಿ ಇರುವ ಪಂಚಮರ ಸ್ಕೂಲಿಗೆ ಹೊಸ ಕಟ್ಟಡ ಕಟ್ಟಿಸುವದೂ, ಪಂಚಮರ ಹುಡುಗರಿಗೆ ಪುಸ್ತಕ ವಗೈರೆ ಕೊಡುವುದಕ್ಕಾಗಿ ಹಣವನ್ನು ಕೂಡಿಸಬೇಕು ಎಂದು ಪಟೇಲರುಗಳು ಅಲ್ಲಿ ಸೇರಿದ್ದ ಮಹನೀಯರೆಲ್ಲಾ ಉದಾರಮನಸ್ಸಿನಿಂದ ಚಂದಾ ಹಾಕಿದರು ಸೊಸೈಟಿ ರಿಜಿಸ್ಟ್ರಾರ್ ಮ|| ರಾ ಸುಬ್ಬರಾವ್ ಯಿನವರಿಗ ಸೂಚನೆ ಪ್ರಾರಂಭವಾದಂದಿನಿಂದ ಅದರ ಕಾರ್ಯಗಳನ್ನು ಸಮರ್ಪಕವಾಗಿ ನಡೆಸಿದ್ದರಿಂದ ಸೊಸೈಟಿ ಮ ರುಗಳು ಅದರ ಫ ಗೌರವ ಸದಸ್ಯರನ್ನಾಗಿ ರಿಜಿಸ್ಟ್ರಾರ ಹಸ್ತದಿಂದ ಬಹುಮಾನವಾಗಿ ಕೊಡಿಸಿದರು ಮತ್ತು ಪಂಚಮರ ವಿದ್ಯಾಭಿವೃದ್ಧಿಗೆ ರಿಜಿಸ್ಟ್ರಾರ್ ಅಮಲ್ದಾರ್ರು, ಡೆಪ್ಯುಟಿ ಇನ್ಸ್ಪೆಕ್ಟರು, ಸರ್ಕಾರಿ ಉದ್ಯೋಗಸ್ಥರು, ವರ್ತಕರು ಉದಾರವಾಗಿ ಚಂದಾ ಎತ್ತಿದರು ಸುಮಾರು ೧೦೦ ರೂಪಾಯಿನ ವರೆಗೆ ವಸೂಲಾಗಿದೆ

ಸಾಗುವಾನಿ ಟಿಂಬರ್ ಡಿಪೋ

ವ್ಯಾಪಾರಿಕೆಗೆ ಸಿದ್ಧವಾಗಿದೆ.

ಮೈಸೂರು ಪಟ್ಟಣದ ನೀಲ ಬಿಲ್ಡಿಂಗಿನ ಉಕ್ಕಡದ ಬಳಿ ಇರುವ ನಮ್ಮ ಡಿಪೋದಲ್ಲಿ ಮಲಬಾರು ... ಕು ತರಿಸಿರುವ ಸಾಗುವಾನಿ ಮರಗಳು ತಯಾರಾಗಿವೆ. ... ಅಡಿ ಉದ್ದ ... ಮತ್ತು ... ಬೀಟೆ ಮರಗಳು ... ೨೫,೦೦೦ ಅಡಿಗಳ ... ಬಾಗಿಲು ... ೫,೦೦೦ ಅಡಿ ... ೨,೫೦೦ ಮಾ ಮಣಸೂ ... ಮರಗಳನ್ನು ಕೊಳ್ಳುವವರು ... ಎಂ. ಕೆ. ಸುಬ್ಬೇಗೌಡ ಅಂಡ್ ಕಂಪೆನಿ, ... ಪಾಲಿನಾ ಉಪಯೋಗಿಸಬಹುದು [೧೧೧]

M K SUBBEGOWDAH & Co.,
Timber Merchants,
240, Kempananjamba Agrahar, Mysore

ಪುಷ್ಪಕಾಂತಿ ತೈಲ

ಸೀಸೆ ೧ಕ್ಕೆ ೩ ಆಣೆ ೬ ಸೀಸೆಗಳನ್ನು ಒಂದೇ ಸಲ ತರಿಸಿಕೊಂಡರೆ ೧ ರೂಪಾಯಿ ಇದು ಅಧಿಕ ಸುವಾಸನೆ ಉಳ್ಳದ್ದು ಇದನ್ನು ತಲೆಗೆ ಹಚ್ಚಿಕೊಳ್ಳುವುದರಿಂದ ಮನಸ್ಸಿಗೆ ಆನಂದವನ್ನೂ ಉತ್ಸಾಹವನ್ನೂ ಉಂಟುಮಾಡುವುದು ... ಕೂದಲು ಕಪ್ಪಾಗಿ ... ಉದ್ದವಾಗಿ ಬೆಳೆಯುತ್ತವೆ ...



ಮೂರು ... ಪುಷ್ಪಕಾಂತಿ ತೈಲವನ್ನು ತರಿಸಿಕೊಳ್ಳುವವರಿಗೆ ... ಬಹುಮಾನವಾಗಿ ... ಕೊಡಲ್ಪಡುವುದು ... [೧೧೨] ನಮ್ಮ ವಿಳಾಸ— ... ಅಂಡ್ ಕಂಪೆನಿ, ಸಂಗುಬಿ ... ಮದರಾಸು

ಶ್ರೇಷ್ಠ ವೈದ್ಯರಿಂದ ... ವೈಸೋಕ ತಯಾರಾದದ್ದು; ಒಳ್ಳೇ ಸಮ್ಮತಾಹಾರ.
ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಬೆಳೆಸುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಕಳುಹಿಸುತ್ತಾರೆ

[66-20] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thompson, M A, Proprietor and Manager, Wesleyan Mission Press, Mysore 12/9/1912

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಸೆಪ್ಟೆಂಬರ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೧೬

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮುಂಗಡವಾಗಿ ... ಕಡೆಗಳಲ್ಲಿ ...
ಮೂಲಕ ಪಡೆಯುವವರಿಗೆ ೧ ಪ್ರತಿಗೆ ಒಂದು ವರುಷಕ್ಕೆ
(ಅಂಚೆ ...) ರೂ ೧ ೦—೦
... ೧ ೧೪ ೦
... ೧ ೧೫ ೦

ವ್ಯಾಪಾರದಾರರಿಗೆ ... ಚಂದಾದಾರರು ತಮ್ಮ ... ಬದಲಾಯಿಸುವಾಗಲೂ, ... ಆಗುವ ಪತ್ರಿಕೆಯು ... ಸಮೂದಿಸತಕ್ಕದ್ದು.

ಪ್ರಕಟನೆ, ನೋಟೀಸುಗಳ ದರಗಳು

ವೃತ್ತಾಂತ ಪತ್ರಿಕೆ ... ಪ್ರಕಟಿಸಿ ಅಥವಾ ... ಒಂದು ರೂಪಾಯಿ ಚಾರ್ಜು ಬೀಳುವುದು ... ಒಂದು ಸಲಕ್ಕೆ ... ಅಪೇಕ್ಷಿಸುವವರು ... ವಿಚಾರಿಸಿ ತಿಳಿದುಕೊಳ್ಳಬಹುದು

ವಿಳಾಸ— ಮಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ನೆಲಮಂಗಲದಲ್ಲಿ ಮನೆ ವಿಕ್ರಿಗೆ ಸಿದ್ಧವಾಗಿದೆ.

[1141]

ತಿಪ್ಪೂರಲ್ಲಿರುವ ಮೃತರಾದ ನನ್ನ ತಂದೆ ಬಾಗೇಪಲ್ಲಿ ನಂಜುಂಡೈಯನವರು ನೆಲಮಂಗಲದ ತಾಲ್ಲೂಕು ದಾಸನಪುರದಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ... ದೇವರ ಸೇವೆ ನಡೆಯುವದಕ್ಕೆ ಕೊಟ್ಟಿರುವ ಜಮೀನುಗಳ ಕಂದಾಯಕ್ಕಾಗಿ ನೆಲಮಂಗಲದ ಟೌನಿನಲ್ಲಿ ಚನ್ನಿಗರಾಯ ದೇವಸ್ಥಾನದ ಬಳಿ ಇರುವ ಮನೆಯನ್ನು ದೇವಸ್ಥಾನಕ್ಕೆ ದಾನಪತ್ರ ಬರೆದುಕೊಟ್ಟು ವಹಿಸಿರುತ್ತಾರೆ. ಈ ಮನೆಯಲ್ಲಿ ಬರುವ ಬಾಡಿಗೆಯು ಜಮೀನ್ ಕಂದಾಯ ದೇವರ ಸೇವೆ ನಡೆಯುವದಕ್ಕೆ ಸಾಲದ್ದರಿಂದಲೂ ನಾನು ದೂರ ಸ್ಥಳದಲ್ಲಿ ಇರುವದರಿಂದ ಸರಿಯಾದ ಬಾಡಿಗೆಗೆ ಕೊಟ್ಟು ಆಗಾಗ್ಗೆ ಮನೆ ರಿಪೇರಿ ಮಾಡಲು ಅವಕಾಶವಿಲ್ಲದ್ದರಿಂದಲೂ ಈ ಧರ್ಮವನ್ನು ಕಾಪಾಡುವದಕ್ಕಾಗಿ ಆ ಮನೆಯನ್ನು ಕ್ರಯಕ್ಕೆ ಕೊಟ್ಟು ಬಂದ ಹಣವನ್ನು ಸರ್ಕಾರಿ ಬ್ಯಾಂಕಿನಲ್ಲಿಟ್ಟು ಬಡ್ಡಿ ಮತ್ತು ಕಂದಾಯ ಮತ್ತು ದೇವತಾ ಸೇವೆ ಸಹಾ ನಡೆಯುವ ಹಾಗೆ ಮಾಡಬೇಕೆಂದಿರುತ್ತೇನಾದ್ದರಿಂದ ನೆಲಮಂಗಲದ ಮನೆಯನ್ನು ಕ್ರಯಕ್ಕೆ ಪಡೆಯಲಪೇಕ್ಷಿಸುವವರು ಕೆಳಗಿನ ವಿಳಾಸದವರನ್ನು ರೂಬರೂ ಆಗಲಿ ಕಾಗದದ ಮುಖಾಂತರವಾಗಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ನನ್ನ ವಿಳಾಸ—ಬಾಗೇಪಲ್ಲಿ ರಾಮೈಯ, ತಿಪ್ಪೂರು.

ಡೋಂಗರೆ ಇವರ ಬಾಲಾಮೃತ.

[115-10]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತೆಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಿರೋಣ, ಅಸ್ಥಿಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

WILLIAM & Co, FORT, BOMBAY.

ಅಮೃತಾಂಜನ್. (Regd)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಡಿತ, ಗಂಟುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು. ಎಲ್ಲೆಲ್ಲಿ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0–8–0.

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 0–6–0.

ದಂತಮಂಜನ 2 ಆಣೆ. ನೇತ್ರಾಂಜನ 1 ಆಣೆ. ಸುಂದರತೈಲ 8 ಆಣೆ. [1530]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ... ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚಿನ ಪದಾರ್ಥಗಳ ... ತಯಾರಿಸಿದೆ. ... ಜ್ವರ, ಹೊಟ್ಟೆ ... ಮೊದಲಾದ (ಜ್ವರ), ... ಶೀತವಾತದ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು ... ಅರೋಚಕತೆ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಒಂದೇ ತರವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ... ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಿರುತ್ತದೆ. ... ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ... ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ... ಮಕ್ಕಳ ... ಜ್ವರ, ... ಕ್ಷಯ ಗಳನ್ನು ಗುಣಪಡಿಸುತ್ತದೆ. ಇವನ್ನು ... ಉಪಯೋಗಿಸುತ್ತಿರುವವರು ... ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—೨೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ. [1363]

ವ್ಯಾಘ್ರಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ... ಸಂಜೀವನವಾಗಿದೆ. ... ರೋಗದ ಮೇಲೆ ಕೆಲಸ ಮಾಡುತ್ತದೆ. ... ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ... ಗುಣವು ತೋರುತ್ತದೆ. ಸಮಯದಲ್ಲಿ ... ಒಂದೇ ಒಂದು ಬುದ್ಧಿಯು ... ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1 ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಾಗುವಾನಿ ಬೀಡ್ ಡಿಪೋ.

ವ್ಯಾಪಾರಕ್ಕೆ ಸಿದ್ಧವಾಗಿದೆ.

ಮೈಸೂರು ಸಿಟಿಗೆ ಸೇರಿದ ಚಿಟ್ಟಿಹಳ್ಳಿ ಉಕ್ಕಡದ ಬಳಿ ಇರುವ ನಮ್ಮ ಬಾಬ್ತು ಡಿಪೋದಲ್ಲಿ ಮಲಬಾರು ಡಿಸ್ಟ್ರಿಕ್ಟು ಬೇಗೂರು ರೇಂಜು ಫಾರೆಸ್ಟಿನಲ್ಲಿ ತಯಾರಾದವುಗಳಲ್ಲಿ ಅತ್ಯುತ್ತಮವಾಗಿಯೂ, ಸುತ್ತಿನಲ್ಲಿ 2 ಅಡಿ ಲಾಗಾಯಿತು 4 ಅಡಿ ವರೆಗಿನ ಸುತ್ತಳತೆಯುಳ್ಳದ್ದಾಗಿಯೂ ಉದ್ದದಲ್ಲಿ 8 ಅಡಿ ಲಾಗಾಯಿತು 25 ಅಡಿ ಉದ್ದದ ವರೆಗೂ ಇರತಕ್ಕ ಸಾಗುವಾನಿ, ಮತ್ತಿ, ಹೊನ್ನೆ, ನಂದಿ ಮತ್ತು ಬೀಟೆ ಮರಗಳು ... ಮತ್ತು ಹಲಗೆಗಳ ವ್ಯಾಪಾರಕ್ಕೆ ಸಿದ್ಧವಾಗಿವೆ. ಏಕ ಕಾಲದಲ್ಲಿ 25,000 ಅಡಿಗಳಿಗೆ ಕಮ್ಮಿಯಿಲ್ಲದ ಬೇಡಿಗೆ ಅಪೇಕ್ಷಿಸುವರೂ ಒದಗಿ-ಕೊಡುವಷ್ಟು ಸಿದ್ಧವಾಗಿದೆ. ಅಲ್ಲದೆ ನಮ್ಮ ಬಾಬ್ತು ಕಲ್ಲಿಕೋಟೆ ಬ್ರಾಂಚು ಡಿಪೋದಲ್ಲಿ ಸಧ್ಯದಲ್ಲಿ 5,000 ಅಡಿ ಅತ್ಯುತ್ತಮವಾದ ಬೀಟೆ ಮರಗಳೂ, 2,500 ಮಣ ಮಣಸೂ ವ್ಯಾಪಾರಕ್ಕೆ ಸಿದ್ಧವಾಗಿವೆ. ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದಲ್ಲದೆ ಕಲ್ಲಿಕೋಟೆಯ ವಿಷಯಕ್ಕೆ ... ಧರ್ಮರಾಜಯ್ಯರ್, ನೂರಣಿ, ಪಾಲಘಾಟ್ ಎಂಬಲ್ಲಿಗಾದರೂ ಬರೆಯಬಹುದು. [1132]

M K SUBBI GOWDAH & Co,
Timber Merchants,
240, Kempananjamba Agrahar, Mysore.

The Coromandel Life Assurance Co., Ltd., Bimlipatam

This well known Company issues Policies and Marriage Endowment Diplomas for very low monthly premiums of Rs 1 8 0 and Re 1 0 0 respectively in the 1st class

Wanted—Active and influential Agents in every District and Taluk on liberal commission or pay

1906 ನೆ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿ ಹೊಂದುತ್ತಿರುವ ಭೀಮುನಿಪಟ್ಟಣದ ಸರ್ಕಾರದ ಅನುಮತಿಯುಳ್ಳ "ದಿ ಕೊರೊಮಾಂಡಲ್ ಜೀವವಿಮಾ ಕಂಪನಿ" ಲಿಮಿಟೆಡ್‌ಗೆ, ಜೀವವಿಮಾ ಮತ್ತು ಮದುವೆ ಬ್ರಾಂಚುಗಳಿಗೂ ಸಹಾ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜಂಟರುಗಳು ಎಲ್ಲಾ ಡಿಸ್ಟ್ರಿಕ್ಟು, ತಾಲ್ಲೋಕುಗಳಲ್ಲಿಯೂ ಧಾರಾಳವಾದ ಕಮಿಷನ್ ಸಂಬಳದ ಮೇಲೆ ಬೇಕಾಗಿದೆ. ಈ ಕಂಪನಿಗೆ ಡಾಕ್ಟರು ಸರಟಿಫಿಕೇಟು ಬೇಕಾಗಿಲ್ಲ. 1911 ನೇ ಇಸವಿಯಲ್ಲಿ ಜೀವವಿಮೆಯಲ್ಲಿ ರೂಪಾಯಿ ಒಂದಕ್ಕೆ 6 ರೂಪಾಯಿ ನಂತೆಯೂ, ಮದುವೆ ಬ್ರಾಂಚಿನಲ್ಲಿ ರೂಪಾಯಿ ಒಂದಕ್ಕೆ 4 ರೂಪಾಯಿನಂತೆಯೂ ಬೋನಸ್ ಆಗಿದೆ. ವಿಶೇಷ ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪಿನೊಡನೆ ಬೇಗ ಬರೆಯಿರಿ. [1354]

ಮೆಸರ್ಸ್ ವೆಂಕಟಾಚಲಂ ಅಂಡ್ ಸನ್,
ಮೈಸೂರು ದೇಶದ ಮತ್ತು ಕೊಡಗಿನ ಜನರಲ್ ಏಜಂಟು,
ಪೇಟೆ ದೊಡ್ಡಕೇರಿ, ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

8417

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಿರ, ತಲೆನೋವುಗಳು ... ಹುಟ್ಟುವ ವ್ಯಾಧಿಯಾಗಲಿ, ಉಬ್ಬಸ, ಹಲ್ಲುನೋವು, ... ಕೆಮ್ಮುಗಳು, ಶೀತಸೆಗಡಿ, ... ಉಳುಕು ... ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ... ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಬದಲಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ... ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ. ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ. ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು —(1) ಎಸ್. ಪೀಟರ್ಸ್, 37 ವಡಮಲೈಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್. (2) ಜೆ. ಎನ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು

ಉಷ್ಣಮರ್ಜಿ ಚೂರ್ಣವು.

10 ತೊಲ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1-0-0

ಈ ಚೂರ್ಣವನ್ನು ಸೇವಿಸುವುದರಿಂದ ಸಕಲ ಉಷ್ಣ ರೋಗಗಳೂ ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ಸಿಂಪು ನೀರು ಧಾರಾಳವಾಗಿ ಇಳಿಯುವದರಿಂದ ವಿಸರ್ಜನೋಣ ರೋಗವು ಕನಿಷ್ಠವಾಗುತ್ತಾ ಎಂದು ಸ್ವಲ್ಪ ದಿವಸಗಳಲ್ಲಿ ಉಷ್ಣ ರೋಗವು ನಾಶವಾಗುವದು ಹಾಗೇ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0 1 0 ಡಬ್ಬಿ 12 ಕ್ಕೆ ರೂ 2 8 0

ಈ ಹಲ್ಲುಪುಡಿ ಹಲ್ಲು ನೋವು, ವಸಡು, ಕಂಠ ಸಂಬಂಧವಾದ ಎಲ್ಲಾ ರೋಗಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು ಹಲ್ಲುಗಳನ್ನು ಸ್ವಚ್ಛ ಮಾಡುವದು [121 47]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಜೇನಾ ಬಜಾರ್ ರೋಡ್, ಮದ್ರಾಸು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



138

[illegible] ಈ ರೋಗಗಳಲ್ಲಾ ... ಈ ಪರಮಾರ್ಥಯುಕ್ತವಾದ ಔಷಧವನ್ನು ... ಪ್ರಪಂಚದಲ್ಲೇ ... ಔಷಧವು ಮಾಡಿರುವ ... ಈ ಔಷಧವನ್ನು ... ಹೊಟ್ಟೆನೋವಿನಿಂದ ... [illegible]

ಶೀಯಿಂದ ಸಕಲವೂ ಮುಟ್ಟಲ್ಲ.

ಇದು ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ಸಿಕ್ಕುವುದು ... ದೊಡ್ಡ ಸೀಸೆಗೆ ೨ ರೂಪಾಯಿ

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indian Life Assurance Companies' and Provident Societies' Acts 1912** and has also given **double the initial security to the Government** as required under the **Insurance Act 1912**

How is it that the **National, of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions and distributes relief in thousands every quarter on account of **marriages and deaths.** 122 8]

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission** The post is permanent, and our agents are entitled to **pension.** None but those who can spare whole time, who reside in district or taluk head quarters and who are well versed in English need apply

For further particulars and prospectuses, please apply with **one anna stamp** and your previous experience in the line to —

M L NAGANNAH,
Chief Agent,
The Amritsar National Insurance Buildings, Mysore.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ— ಇದು ಅನೇಕ ... ಕ್ರಯ ೫ ಆಣೆ

ಕುಮುದಿನಿ— ಬಂಗಾಳಿಯಿಂದ ಕನ್ನಡಿಸಿದ ... ಕ್ರಯ ೬ ಆಣೆ

ಸತೀರೋಹಿಣಿ— ... ಕ್ರಯ ೨ ಆಣೆ [119-12]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 238

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ದ್ರವಕ್ಕೆ ... ಮಕ್ಕಳ ಆರೋಗ್ಯವನ್ನು ವೃದ್ಧಿಪಡಿ ... ಇದು ರುಚಿಯಾಗಿರುವುದರಿಂದ ಮಕ್ಕಳು ... ಇದು ಕಾಯಿಲೆ ಮಕ್ಕಳನ್ನು ಆರೋಗ್ಯ ಮಾಡುವುದು ...

ಕ್ರಸೋಕಡೆ ತಯಾರಾದ್ದು

ಎಲಾ ಔಷಧಿ ... ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್ ... ಔಷಧಿಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಈ ಗುರುತನ್ನು ಇರುವ ಔಷಧವನ್ನೇ ಕೊಂಡುಕೊಳ್ಳಿ

ಜ್ವರಶಂಕರಿ

114 12

ಅನುಭವಸ್ಥರಾದ ... ಜ್ವರಗಳನ್ನು ...

... ಕ್ರಯ ... ರೂ ... ಆಣೆ

ಪ್ಲೀಹೋದರಾರಿ— ದೀರ್ಘಕಾಲ ... ಒಟ್ಟು ... ಆಣೆ

ವಾತಮುರಾರಿ— ಇದು ತಲೆನೋವು, ಉಳುಕು, ... ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ... ೧ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕ್ಯಾಟಲಾಗ್ ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್

ರಾಸ್‌ಕೋಫ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಹಿತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ.

ಈ ಗಡಿಯಾರವು ಬಲವಾದ ... ತಯಾರಾಗಿದ್ದು ... [114 21]

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಗಡಿಯಾರ.

... ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 3 12 0 ಇದನ್ನು ... 10 ... ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ — ಸುಪೀರಿಯರ್ ವಾಚ್ ಕಂಪೆನಿ

ಪೋಸ್ಟ್ ಬಾಕ್ಸ್ ನಂ. 167, ಮದರಾಸು.

ಗನ್ ಟೈಂ ಲೀವರು ಘಡಿಯಾರವು

131-4

ಮೊದಲಿನ ಬೆಲೆ ರೂ 5-8-0 ಈಗಿನ ಬೆಲೆ ರೂ 3-8-0.

ಈ ನಮ್ಮ ಘಡಿಯಾರವು ... ಈ ಹೆಸರು ಕೊಟ್ಟಿದ್ದುತ್ತೆ ...



ಅಂಗಾಂಗಗಳೂ ಬಹಳ ಬಲವಾದ ಮತ್ತು ನಿಜ ... ಈ ಘಡಿಯಾರವನ್ನು ... ಯಿಂದ ಕೈಬಿಡದೆ ... ಕಂಡಿತೆ ...

ಯಂಪರರ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ 170, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇ? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ... ಹಾಸನದಿಂದಲೇ ...

ಈಗ ಇತರ ಕಡೆಗಳಲ್ಲಿ ... ಹಾಸನದ ಟೋಪಿಗಳು ... ವು ಮಾಸಹೋಗುವವು

ಅವರ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿ ... (೨) ಟೋಪಿ ...

ಒಳ್ಳೆಯದಾದ ಚನ್ನಾಗಿ ... ನಮಗೆ ಬೇಗ ಬರೆದು ತರಿಸಿಕೊಳ್ಳಿ ...

ನಾನಾ ಕೆಂಪು, ಕಪ್ಪು, ... ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ... ೧ ರೂ ೬ ೮ ... ೧ ರೂ ೪ ೮

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ೮ ೧ ರೂ ೬ ೮ ...

ಮುಸುಕಿನ ಟೋಪಿಗಳು ೧ ರೂ ೪ ೮, ೧ ರೂ ೬ ೮

ಕೂಸುಗಳ ಟೋಪಿ, ... ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ...

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

ತಾ ೬— 1912 ರಿಂದ ೯- 9 1912 ರ ವರೆಗ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	16	17	0	0
ಮೈಸೂರು ,,	1	0	0	0
ಬೆಂಗಳೂರು ಡಿಸ್ಟ್ರಿಕ್ಟು	14	10	0	0
ಮೈಸೂರು ,,	35	27	0	0
ಕೋಲಾರ್ ,,	10	7	7	4
ಕೋಲಾರ್ ಚಿನ್ನದ ಗಣಿಗಳು	15	12	0	0
ತುಮಕೂರು ಡಿಸ್ಟ್ರಿಕ್ಟು	15	13	0	0
ಹಾಸನ ,,	1	2	0	0
ಚಿತ್ರದುರ್ಗ ,,	0	0	22	17
ಕಡೂರ್ ,,	0	0	0	0
ಶಿವಮೊಗ್ಗ ,,	46	26	5	2
ಜುಮ್ಲಾ	150	111	34	22

ಶ್ರೀವಾಸವ ಶಕ ವರುಷಗಳು 1835 ನೇ ಪರಿಧಾವಿ ಸಂವತ್ಸರೇ ದಕ್ಷಿಣಾಯನೇ ವರ್ಷಋತು ಭಾದ್ರಪದ ಶುದ್ಧ ವರುಷ ದುಕ್ಕಿಣಾರದಿಂದ ಬಾಧ್ರಪದ ಶುದ್ಧ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಸಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ ತೇದಿ
20	ಶುಕ್ರ	ಪಾಡ್ಯ	60-0	ಪೂರ್ವಾ	21-48	5
21	ಶನಿ	ಪಾಡ್ಯ	2-12	ಉತ್ತರಾ	27-10	6
22	ಭಾನು	ಬಿದಿಗೆ	7-0	ಹಸ್ತ	31-21	7
23	ಸೋಮ	ತದಿಗೆ	12-12	ಚಿತ್ತಾ	40 38	8
24	ಮಂಗಳ	ಚತುರ್ಥಿ	17-14	ಸ್ವಾತಿ	47 11	9
25	ಬುಧ	ಪಂಚಮಿ	21-31	ವಿಶಾಖ	52-47	10
26	ಗುರು	ಷಷ್ಠಿ	25 11	ಅನುರಾಧ	57 15	11

ಮಹಾತ್ರಯೋದಶಿ, ಪ ಕಟೀರವ್ರತ. ಕ ಪರಿವರ್ತನ ದ್ವಾದಶಿ. ಪ್ರದೋಷ ವ್ರತ, ಮನ್ವಾದಿ ತ್ರ— ಉತ್ತರ 1ನೇ ಪಾದ. ಚತುರ್ದಶಿ ಅನಂತಪದ್ಮನಾಭವ್ರತ ಉಮಾಮಹೇಶ್ವರವ್ರತ, ಪೂರ್ಣಿಮಾ, ನಾಂದೀವ್ರತ, ಮಹಾಲಯ ಪಕ್ಷ. ಹಸ್ತ 1ನೇ ಪಾದ

ಪೇಟೆ ಧಾರಣೆ.

ವಿನಸಿ		ಮೈಸೂರು	ಬೆಂಗಳೂರು
ಅಕ್ಕಿ ಪಲ್ಲಾ ೧ಕ್ಕೆ	ರೂ	೧೭-೮-೦	೧೬-೦-೦
...ಅಕ್ಕಿ ಅವಲ್		೧೭-೧೨-೦	೧೭-೮-೦
ದಯ್ಯಾ		೧೬-೦-೦	೧೬-೦-೦
...ಅಕ್ಕಿ		೧೭-೪-೦	೧೭-೦-೦
...ಅವಲ್		೧೮-೮-೦	೧೫-೦-೦
...ದಯ್ಯಾ		೧೭-೮-೦	೧೬-೦-೦
...ಅವಲ್ ಪಲ್ಲಾ ೧ಕ್ಕೆ		೧೪-೮-೦	೧೩-೮-೦
ದಯ್ಯಾ ,,		೧೩-೧೨-೦	೧೧-೮-೦
...ಪಲ್ಲಾ ೧ಕ್ಕೆ		೭-೮-೦	೭-೮-೦
... ,,		೬-೧೨-೦	೭-೪-೦
... ,,		೭-೮-೦	೮-೦-೦
...ಪಲ್ಲಾ ೧ಕ್ಕೆ		೧೦-೦-೦	೧೧-೦-೦
...ಜವೆ ,,		೧೨-೦-೦	೧೦-೦-೦
... ,,		೧೪-೮-೦	೧೩-೫-೦
... ,,		೧೬-೦-೦	೧೫-೦-೦
... ,,		೧೨-೮-೦	೧೧-೦-೦
...ಸೆ ೧೨೭ ಕ್ಕೆ		೨೩-೦-೦	೨೪-೦-೦
...ಪಲ್ಲಾ ೧ಕ್ಕೆ		೭-೨-೦	೭-೮-೦
...೧೨೭ ಸೇರಿಗೆ		೧೪-೦-೦	೧೪-೦-೦
...ಯಿ ಮಣ ೧ಕ್ಕೆ		೩-೪-೦	೩-೮-೦
...ಕಾಯಿ ,,		೩-೮-೦	೩-೪-೦
,, ದಯ್ಯಾ		೩-೦-೦	೨-೮-೦
...ತ್ತಿ ಅಚ್ಚು		೫-೮-೦	ಮ ೬-೦-೦
...ಮಣ ೧ಕ್ಕೆ		೬-೬-೦	೬-೮-೦
,, ,,		೬-೦-೦	೫-೦-೦
...ಪಲ್ಲಾ ೧ಕ್ಕೆ		೫-೪-೦	೬-೮-೦
,, ,,		೬-೦-೦	೫-೮-೦
...ಹಣ್ಣು ಮಣ ೧ಕ್ಕೆ		೧-೪-೦	೧-೪-೦
ಹಳೇದು		೧-೦-೦	೧-೨-೦
...ಮಣ ೧ಕ್ಕೆ		೨೦-೦-೦	೧೭-೦-೦
...ಪೆಟ್ಟು ೧ಕ್ಕೆ		೪-೧೨-೦	೫-೦-೦
...ಕಾಯಿ ೧೦೦ ಕ್ಕೆ		೫-೮-೦	೬-೦-೦
...ಕಾಯಿ ಮಣ ೧ಕ್ಕೆ		೦-೮-೦	೧-೮-೦
...ಕಾಯಿ ಮಣ ೧ಕ್ಕೆ		೦-೧೨-೦	೧-೦-೦
...(ಶೌಚ) ಕೆಂಪು		೧೫-೮-೦	೧೫-೮-೦
,, ಪಸಿಮೆ		೧೫-೧೪-೬	೧೫-೧೪-೬
,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೩-೦
...ತೊಲ ೧೦೦ ಕ್ಕೆ		೮೧-೦-೦	೮೧-೦-೦

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪ ಕಂಠೀರವಚರಿತ್ರೆ

ಇದರಲ್ಲಿ (1) ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ ಎಂಬ ನೀತಿ; (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿನಾದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂತಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಬಾಗಗಳು. ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯ ತಾನಾಗಿ ಗೊತ್ತಾಗುವದು

ಕ್ರಯ.—೧ ನೇ ಭಾಗ ೬ ಆಣೆ, ೨ ನೇ ಬಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ. [5-37]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೇಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನು ವ್ಯರ್ಥವಾಗಿ ಹಾಳುಮಾಡಿಕೊಳ್ಳಬೇಡಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದೇ ಸ್ತ್ರೀಯರ ದೇಹದ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಲ್ಲಾ ಸ್ತ್ರೀಯರಿಗೂ ದೇವರು ಸುಂದರವಾದ ಮತ್ತು ದಟ್ಟವಾದ ಕೇಶರಾಶಿ ಇದೆ. ಕೇಶವನ್ನು ಸುಂದರವಾಗಿ ಕಾಪಾಡಬೇಕಾದರೆ ಅದು ಬೆಳೆಯುವಂತೆ ಸುಮ್ಮನಾಗಿ ಚಕಚಕಿಸುತಿರಬೇಕು. ಆದಲ್ಲದೆ ಕೂದಲನ್ನು ಯಾವ ಆಕೃತಿಯಿಂದ ಬೇಕಾದರೂ ಕಟ್ಟುವಂತೆ, ಅದು ಸಮನಾಗಿಯೂ, ಪುಷ್ಕಳವಾಗಿಯೂ ಇರಬೇಕು.

“ಕಾಮಿನಿಯಾ ತೈಲವು.”

(ರಿಜಿಸ್ಟರ್ಡ್)



ಇದನ್ನು ತಕ್ಕುವಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶವಾಮಕ್ಕೆ ಎಂತಹ ಮಹತ್ವ ಕೊಡಲ್ಪಡುತ್ತಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ರಮದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ— ಇದು, ಕೂದಲುಗಳನ್ನು ಚಂದಗೊಳಿಸುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ತಮವು, ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯರು ಈ “ಕಾಮಿನಿಯಾ” ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು. ಇದರಿಂದ ಕೂದಲುಗಳು ಎಷ್ಟು ದುರ್ಬಲವಾಗಿದ್ದರೂ ಅಂದವಾಗಿ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಳ ಬಣ್ಣದಿಂದೊಡಗೂಡಿ, ಆಗಾಗ್ಗೆ ಮುರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ. 1-4-0, ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು. 3 ಸೀಸೆಗಳಿಗೆ ರೂ 3-10-0. ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಒರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28-7-11. ಮ ಬಿ ಟಿ. ಮಾಧವಸಿಂಗ್, ಶಕ್ತಿಣಿವಿಲಾಸ, ಮನ್ನಾರಗುಡಿ— ತಾವು ಕಳುಹಿಸಿಕೊಟ್ಟ “ಕಾಮಿನಿಯಾ ಓಯಿಲ್” ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೇಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7-11 ಮ ಸಿ. ಆರ್. ನಾಯುಡು ಪ ವ. ಡಿ ಟೊಬಿ. (ಬರ್ಮಾ)— ನನ್ನ ಮಿತ್ರರು “ಕಾಮಿನಿಯಾ” ತೈಲ ಸಮ್ಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಸೀಸೆಗಳನ್ನು ತ್ವರ್ಯದಿಂದ ವಿ. ಪಿ ಮೂಲಕ ರವಾನಿಸತಕ್ಕದ್ದು [94-38]

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್.)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದು. ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾಧ್ಯಕ್ಷ ಪರಿಶೋಧಕ ಪಂಡಿತರು ಹೇಳಿದಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ. 1-8-0

ದಿಲ್-ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ತಾಜಾ ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

“ಕಾಮಿನಿಯಾ ಸುರಂಗಿ” ರೂ. 1-4-0; “ಕಾಮಿನಿಯಾಮಾಲತಿ”. ರೂ 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು

ನಮ್ಮ ವಿಳಾಸ:—

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

A Study of

TANGLEWOOD TALES & A CHRISTMAS CAROL,

for the Lower Secondary Students

It contains Notes on the Text, Summary of the chapters and Questions and Exercises on Translation and Composition from the two books by S. Paul Chinnappa, B.A., L.T., A.C.P., Headmaster, Government A V School, Bangalore Notes on Tanglewood Tales, 4 as., Notes on Christmas Carol, 6 as., will be ready for sale from the 20th instant.

The MANAGER, Mission Book Depot,
[138-3] Avenue Road, Bangalore City.

ದಯಮಾಡಿ ಕಣ್ಣೆರದು ಇತ್ತ ನೋಡಿರಿ !!!

ನೂತನವಾಗಿ ಕಂಡುಹಿಡಿದ ರಾಮಬಾಣವಾದ,

“ಕಾರೊನೇಷನ್ ಸಾಬೂನು”

ಈವರೆಗೂ ಯಾವ ವಿಷಯದಲ್ಲೂ ಕೇಳಿಲ್ಲದಂತೆ ದರವನ್ನು ಕಡಿಮೆಮಾಡಲ್ಪಟ್ಟು ಹೊಸ ಸಪ್ಲೈ ಬಂದಿದೆ.

1 ಆಣೆ ಟಪಾಲು ಬಿಲ್ಲೆ ಕಳುಹಿಸಿ ಕೊಟ್ಟವರಿಗೆ ಮಾದರಿ ಸಾಬೂನು ಉಚಿತವಾಗಿ ಕಳುಹಿಸಿಕೊಡುವೆವು

	ಕ್ರಯ	ಹಾಸಲು
1 ಸಾಬೂನಿಗೆ	0 6 0	0 4-0
3 ,,	1 0 0	0 4-0
6 ,,	1 12-0	0-4 0
9 ,,	2 4 0	0 6-0

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು [101-14]

ನಮ್ಮ ಕಂಪನಿಯ ಘಡಿಯಾರ ಮುಂತಾದ ಮಾಲುಗಳ ಕ್ಯಾಟಲಾಗು ಬೇಕಾದವರು ಬರೆದುಕೊಂಡರೆ ಉಚಿತವಾಗಿ ಕಳುಹಿಸಲ್ಪಡುವದು

ನಮ್ಮ ವಿಳಾಸ —ಪಿ. ಸಿ ವಾ ಅಂಡ್ ಕಂಪೆನಿ,

177 ಜೇನಾ ಬಜಾರ್ ರೋಡ್, ಮದ್ರಾಸು.



ಮಜಬೂತಾದ 10 ವರುಷಗಳವರೆಗೂ ಕೆಡದ ಗಡಿಯಾರಗಳು.

120-9

ಬರ್ಮಾ ಟೈಂಪೀಸು ರೂ. 1 4 0 ಬೇ ಟೈಂಪೀಸ್ ರೂ. 2, ಅಲಾರ್ಮ ಸೋನಿಯಾದು ರೂ 2 4-0 ಸರಪಣಿ ಸಹಿತವಾದ ಜೇಬು ಗಡಿಯಾರಗಳು:—ಪೈಕ್ಷ್ ರಸ್ಕೋಪ್ ರೂ 2 8 0; ಸಿಲ್ ಟೈಂ ಲಿವರ್ ರೂ 3-4-0; ರಾಸ್ಕೋಪ್ ಸಿಲ್ವರ್ ಲಿವರ್ ರೂ. 2 3-0 ಕೈಗೆ ಕಟ್ಟಿಕೊಳ್ಳುವ ಲೇಡೀಸ್ ಗಡಿಯಾರಗಳು ನಿಕಲ್ ಮುಚ್ಚಳದ ರೂ 4 4 0, ಅಸಲ್ ಬೆಳ್ಳಿಯದು ರೂ. 5 8 0 ಗಡಿಯಾರದ ಸರಪಣಿಗಳು —ರಂಗು ಕೆಡದ ಬಿಳಿ ಮುಚ್ಚಳದ 12 ಆ ಅಚ್ಚ ಬೆಳ್ಳಿಯದು ರೂ 3. ಥಳಥಳಿಸುವ ಬೆಟ್ಟಗಳಿರುವ ಕೆಂಪು ಉಂಗುರಗಳು. ದೊಡ್ಡ ಸೈಜ್ ರೂ 4, ಸಣ್ಣದು ರೂ 1

ವಿಳಾಸ:—ಸಂಕಯ್ಯ ಚೆಟ್ಟಿ ಕಂಪೆನಿ, ಪೈ ರೋಡ್, ಪೇಪೇರಿ, ಮದ್ರಾಸ್.

ಸ್ವಸ್ಥವಾಗುವದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ದೇಹವು ಆರೋಗ್ಯವಾಗಿರುವದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಹುವಾಗಿಯೋ ಇಳಿಯುವದು; ಬಹಳ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವದು, ತಲೆನೋವು, ಗುಲ್ಮ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮದವು, ಇತ್ಯಾದಿ, ಇವು ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರಾಂಶವ್ರಣ. ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವದು. ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು [112-2]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು.



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುತ್ತದೆ ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುತ್ತದೆ

ವೃತ್ತಾಂತ ಪತ್ರಿಕೆ.

ಸನ್ ೧೯೧೨ ನೇ ಇಸವಿ ಸಪ್ಟಂಬರ್ ತಾ ೧೯ ನೇ ಗುರುವಾರ

ಚೀನಾ ಪ್ರಜಾಪ್ರಭುತ್ವದ ಸ್ಥಿತಿಗತಿಯು.

ಚೀನಾ ರಾಜ್ಯದ ಏಕನಾಯಕ ಪ್ರಭುತ್ವ (ದೊರೆತನ) ವೇ ಪ್ರಪಂಚದ ಸಮಸ್ತ ರಾಜ್ಯಗಳಿಗೂ ಪ್ರಾಚೀನವಾದದ್ದು. ಹೀಗೆ ಪುರಾತನ ಕಾಲದಿಂದಲೂ ನಡೆದುಬಂದ ಈ ರಾಜ್ಯಭಾರವು ಬಹು ಸುಲಭವಾಗಿ ಪಲ್ಲಟವಾಗಿ ಅದೃಶ್ಯವಾಯಿತು, ಇದಕ್ಕೆ ಅಷ್ಟೇನೂ ವಿಶೇಷವಾದ ರಕ್ತಪ್ರವಾಹಗಳು ಹರಿಯಲಿಲ್ಲ. ಈಗ ಚೀನಾ ಚಕ್ರಾಧಿಪತ್ಯದಲ್ಲಿ ಪ್ರಜಾಪ್ರಭುತ್ವವು ಏರ್ಪಟ್ಟು, ಅತ್ಯಂತ ಶೈಶವಾವಸ್ಥೆಯಲ್ಲಿರುತ್ತದೆ.

ರಾಜನೀತಿಜ್ಞರಾದ ಬಹುಮಂದಿ ಯೂರೋಪಿಯನ್ ದೊಡ್ಡ ಮನುಷ್ಯರು ಈ ಹೊಸ ಪ್ರಜಾಪ್ರಭುತ್ವವು ನೆಲೆಯಾಗಿ ನಿಲ್ಲುವ ವಿಷಯದಲ್ಲಿ ಸಂಶಯ ಪಡುತ್ತಿದ್ದಾರೆ. ಈ ಪ್ರಭುತ್ವದ ಬೇರೆಬೇರೆ ಪಂಗಡದವರಿಗೆ ಇಷ್ಟರಲ್ಲೇ ವೈಮನಸ್ಸು ಒಗಳ ಹೋರಾಟಗಳು ಹುಟ್ಟುವವೆಂದೂ, ಯೂರೋಪಿನ ರಾಜ್ಯಗಳು ಪ್ರವೇಶಿಸಬೇಕಾಗುವುದೆಂದೂ, ಚೀನಾ ರಾಜ್ಯವು ಭಾಗಗಳಾಗಿ ಹಂಚಿಕೆಯಾಗ ಬಹುದೆಂದೂ ಸಂಶಯವುಂಟಾಗಿದೆ. ಇನ್ನು ಕೆಲವರು ಅಲ್ಲಿ ನಡೆಯುವ ವಿದ್ಯಮಾನಗಳನ್ನು ನೋಡಿ ಆ ಪ್ರಜಾಪ್ರಭುತ್ವದ ಅಧ್ಯಕ್ಷತೆಯನ್ನು ವಹಿಸಿರುವ ಯುವಾನ್ ಷಿಕಾಯವರು ತಾವೇ ಚೀನೆಯ ಚಕ್ರವರ್ತಿಯಾಗಬೇಕೆಂಬ ಉದ್ದೇಶವುಳ್ಳವರಾಗಿರು ವಂತೆ ಕಾಣುತ್ತದೆಂದು ಹೇಳುವರು. ಈಚೆಗೆ ಅವರ ಅಪ್ಪಣೆಯ ಪ್ರಕಾರ ದಳಪತಿಗಳಿಬ್ಬರು ಕೊಲ್ಲಲ್ಪಟ್ಟರು. ಇದನ್ನು ನೋಡಿ ಅವರು ಹೀಗೆಯೇ ತಮ್ಮ ಪ್ರತಿಪಕ್ಷಿಗಳನ್ನೆಲ್ಲಾ ನಿರ್ನಾಮಮಾಡುತ್ತಾರೆಂದು ಹೇಳಲಾಯಿತು. ಡಾಕ್ಟರ್ ಸನ್ ಯಾಟ್‌ಸೆನ್ ಎಂಬಾತನು ಸ್ವಸಾಮರ್ಥ್ಯದಿಂದ ನಾನಾ ಬಗೆಗಳನ್ನು ಬರೆದು, ವಿಶೇಷ ಸಾಹಸವುಳ್ಳ ದಂಡವನ್ನು ಕೂಡಿಸಿ, ಪ್ರಜೆಗಳನ್ನು ತರಪೇತುಮಾಡಿ ಈಗಿನ ಪ್ರಜಾಪ್ರಭುತ್ವವನ್ನು ಸ್ಥಾಪನೆಯಾಗಿ ಮಾಡಿ ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಗೆ ಬಂದಿರುತ್ತಾನೆ. ಈತನು ಈಗ ಚೀನಾದ ದಕ್ಷಿಣ ಪ್ರಾಂತದಲ್ಲಿದ್ದು ಕೊಂಡು ಮೇಲ್ಕಂಡ ಅಧ್ಯಕ್ಷರಿಂದ ಪೀಕಿಂಗ್ ನಗರಕ್ಕೆ ಬರುವಂತೆ ಕರೆಸಲ್ಪಟ್ಟಾಗ ಅವರು ಈತನನ್ನು ಅಲ್ಲಿ ಕೊಲ್ಲಿಸಿಬಿಡುವರೋ ಎಂದು ಈತನ ಸ್ನೇಹಿತರಲ್ಲಿ ಹೆದರಿಕೆಯುಂಟಾಯಿತು.

[illegible] ಕುಮಾರನಾದ ಡಾಕ್ಟರ್ [illegible] ಎಂಬಾತನು ಚೀನಾದಲ್ಲಿ ಬಹಳ ದಿನಗಳಿಂದ ಇದ್ದುಕೊಂಡು, ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ "ಟೈಮ್ಸ್" ಎಂಬ ಪ್ರಖ್ಯಾತವೂ ಪ್ರಾಮುಖ್ಯವೂ ಆದ ವರ್ತಮಾನ ಪತ್ರಿಕೆಗೆ ಚೀನಾ ರಾಜ್ಯದ ವಿದ್ಯಮಾನಗಳನ್ನು ಬಹುಕಾಲದಿಂದ ಬರೆಯುವ ಬಾತ್ಮೀದಾರನಾಗಿದ್ದನು. ಈತನನ್ನು ಮೇಲ್ಕಂಡ ಅಧ್ಯಕ್ಷರು ತಮ್ಮ ಮಂತ್ರಿಗಳಲ್ಲಿ ಒಬ್ಬನಾಗಿ ನೇಮಿಸಿಕೊಂಡಿದ್ದಾರೆ. ಈತನು ಈಗ ಚೀನೆಯಿಂದ ಇಂಗ್ಲಾಂಡಿಗೆ ಹೋಗಿರುತ್ತಾನೆ. ಮತ್ತು ಈ ನವೀನ ಪ್ರಜಾಪ್ರಭುತ್ವದ ವಿಷಯದಲ್ಲಿ ಉಂಟಾಗಿರುವ ಸಂಶಯಗಳನ್ನೆಲ್ಲಾ ನಿವೃತ್ತಿಮಾಡಿ "ಟೈಮ್ಸ್" ಎಂಬ ಪತ್ರಿಕೆಗೆ ಒಂದು ಬಾತ್ಮಿಯನ್ನು ಬರೆದಿರುವನು. ಈತನ ಅಭಿಪ್ರಾಯವೇನೆಂದರೆ, ಚೀನಾ ಪ್ರಜಾಪ್ರಭುತ್ವದ ವಿಷಯದಲ್ಲಿ ಯಾರೂ ಸಂಶಯವಾಗಲಿ, ಗಾಬರಿಯಾಗಲಿ ಪಡಬೇಕಾದದ್ದಿಲ್ಲ. ಪ್ರಭುತ್ವವು ಏರ್ಪಟ್ಟ ಈ ಸ್ವಲ್ಪ ಕಾಲದಲ್ಲೇ ರಾಜ್ಯಭಾರದಲ್ಲಿ ಅನೇಕ ದೊಡ್ಡ ಬದಲಾವಣೆಗಳಾಗಿರುತ್ತವೆ. ಹೊಸದಾಗಿ ನೇಮಕವಾಗಿರುವ ಅಧಿಕಾರಿಗಳಿಗೆ ಅನುಭವ ಸಾಲದೆಂಬ ಮಾತು ನಿಜವಾದರೂ ಅವರು ಯೂರೋಪ್ ಮತ್ತು ಅಮೇರಿಕದಲ್ಲಿ ಬಹಳ ಚನ್ನಾಗಿ ವಿದ್ಯಾಭ್ಯಾಸ ಮಾಡಿ ಬಂದವರಾದ ಕಾರಣ ಅವರ ಬುದ್ಧಿಕುಶಲತೆಯೂ, ಅವರ ನಡೆನುಡಿಗಳೂ ಎಷ್ಟೋ ಮೇಲಾಗಿರುತ್ತವೆ. ಇವರು ಮೊದಲಿನ ಆಸ್ಥಾನದಲ್ಲಿದ್ದಂಥಾ ದುಷ್ಟಾಧಿಕಾರಿಗಳ ಹಾಗಿರುವುದಿಲ್ಲ.

ಮೊದಲು ಅಧಿಕಾರಿಯಾದವನು ತಾನು ಹುಟ್ಟಿದ ಜಿಲ್ಲೆ[illegible]ದಲ್ಲಿ ನೌಕರಿ ಮಾಡಕೂಡದೆಂಬ ವಿಧಿ ಇತ್ತು. ಇದರಿಂದ ಅಧಿಕಾರಿಯು ತನಗೆ ನೌಕರಿ ಇರುವ ಕಾಲದಲ್ಲಿ ಸಾಧ್ಯವಾದಷ್ಟು ದ್ರವ್ಯವನ್ನು ಅಧರ್ಮ ಮಾರ್ಗಗಳಲ್ಲಿ ಕೂಡಿಸಿತಂದು ತನ್ನ ಜನ್ಮಸ್ಥಳದಲ್ಲಿ ಸುಖವಾಗಿ ಇರುತ್ತಿದ್ದನು. ರಾಜ್ಯದಲ್ಲಿ ಈ ಅಧಿಕಾರಿಗಳ ಕ್ರೂರತನವೂ ಲಂಚಕೋರತನವೂ ವಿಶೇಷವಾಗಿ ಹರಡಿಕೊಂಡು ಪ್ರಜೆಗಳ ಹಿಂಸೆಗೆ ಅವಕಾಶವಾಗುತ್ತಿತ್ತು. ಪ್ರಜೆಗಳು ಅಧಿಕಾರಿಗಳನ್ನು ಕಂಡರೆ ಗಾಬರಿಪಡುತ್ತಿದ್ದರೇ ಹೊರತು ಪರಸ್ಪರ ಭಕ್ತಿ ಪ್ರೀತಿಗಳು ಇರಲಿಲ್ಲ. ಈಗ ಪ್ರಜಾಪ್ರಭುತ್ವವು ಸ್ಥಾಪನೆಯಾದ ಮೇಲೆ ಈ ವಿಧಿಯನ್ನು ವಜಾ ಮಾಡಿಬಿಟ್ಟರು. ಈಚೆಗೆ ಅಧಿಕಾರಿಗಳು ಪ್ರಜೆಗಳ ಇಂಗಿತವನ್ನು ತಿಳಿದು ಕಾರ್ಯಗಳನ್ನು ನಡಿಸುತ್ತಾ ಬಂದಿದ್ದಾರೆ.

ಚೀನಾ ರಾಜ್ಯದಲ್ಲಿ ವ್ಯಾಪಾರವು ಹೆಚ್ಚುತ್ತಾ ಬಂದಿದೆ, ಸುಂಕದ ಬಾಬಿನ ಉತ್ಪತ್ತಿಯು ವಿಶೇಷವಾಗಿ ವೃದ್ಧಿಹೊಂದುತ್ತಿರುವುದು. ಒಳದೇಶದಲ್ಲಿ ಕಲಹ ಕದಿದಾಟಗಳು ಹುಟ್ಟುವವೆಂದಾಗಲಿ, ಪ್ರಜಾಪ್ರಭುತ್ವಕ್ಕೆ ಅಂತ್ಯ ಬರುವುದೆಂದಾಗಲಿ ಅನುಮಾನ ಪಡಲು ಕಾರಣವಿಲ್ಲವೆಂದು ಡಾಕ್ಟರ್ ಮಾರಿಸನ್ ಎಂಬಾತನು ತಿಳಿಸುತ್ತಾನೆ.

ಈ ಬಾತ್ಮಿಯು ಪ್ರಕಟವಾದ ಮೇಲೆ ಡಾಕ್ಟರ್ ಸನ್ ಯಾಟ್ ಸೆನ್ ಎಂಬಾತನು ಪೀಕಿಂಗ್ ನಗರಕ್ಕೆ ಹೋದನೆಂದೂ, ಆ ಯುವಾನ್ ಷಿಕಾಯ್ ಎಂಬ ಅಧ್ಯಕ್ಷರು ಈತನನ್ನು ವಿಶೇಷ ಮರ್ಯಾದೆಯಿಂದ ಎದುರುಗೊಂಡರೆಂದೂ ತಿಳಿದುಬಂದಿದೆ. ಇದರಿಂದ ಡಾಕ್ಟರ್ ಮಾರಿಸನ್ ಎಂಬಾತನ ಅಭಿಮತವು ಯಥಾರ್ಥವಾದದ್ದೆಂದು ಕಾಣುವುದು. ಚೀನಾ ರಾಜ್ಯವನ್ನು ಅಭಿವೃದ್ಧಿಗೆ ತರುವುದರಲ್ಲಿ ಅನೇಕ ಕಷ್ಟಗಳುಂಟು. ಪ್ರಜಾಪ್ರಭುತ್ವದವರು ರಾಜ್ಯದಲ್ಲೆಲ್ಲಾ ವಿದ್ಯೆಯನ್ನು ಹರಡಿಸುವುದಕ್ಕಾಗಿ ಸ್ತ್ರೀ ವಿದ್ಯಾಭ್ಯಾಸವನ್ನು ಹರಡುವವರಾಗಿದ್ದಾರೆ. ಹೀಗೇ ಒಂದೆರಡು ತಲೆಗಳ ತನಕ ಸಾಹಸಪಡುತ್ತಾ ಬಂದಲ್ಲದೆ ಆ ರಾಜ್ಯವು ಉತ್ಕೃಷ್ಟಸ್ಥಿತಿಗೆ ಬರಲಾರದು. ಹ್ಯಾಗೂ ಚೀನಾ ರಾಜ್ಯದಲ್ಲಿ ಒಳಯುದ್ಧಗಳೂ, ಪಕ್ಷಗಳ ಹೋರಾಟಗಳೂ ತಪ್ಪಿ, ವಿವೇಕವೂ ಸತ್ಸಂಪತ್ತಿಯೂ ಸುಖಸಮಾಧಾನಗಳೂ ನೆಲೆಗೊಳ್ಳುವಂತಾಗಲೆಂದು ಹಾರೈಸುತ್ತೇವೆ.

ಲಂಡನ್ ಪಟ್ಟಣದ ನಮ್ಮ ಬಾತ್ಮಿದಾರರು ಬರೆಯುವುದು

ಇಂಗ್ಲಿಷ್ ಪಾರ್ಲಿಮೆಂಟ್ ಸಭೆಯು ಬರಖಾಸ್ತಾಯಿತು. ಮೆಂಬರುಗಳು ವಿರಾಮ ಕಾಲವನ್ನು ಸಂತೋಷದಿಂದ ಕಳೆಯುತ್ತಿದ್ದಾರೆ. ಮೈಸೂರಿನಲ್ಲಿ ವಿಪ್ರ [illegible] ಮತ್ತು [illegible] ಗ್ರೇಟ್ ಬ್ರಿಟನ್‌ನಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳು [illegible] ಯಾಕೆಂದರೆ ಅನೇಕಾನೇಕರು [illegible] ಅನುರಕ್ತರಾಗಿರುವರು.

ಇದುವರೆಗೆ ಇಲ್ಲಿನ ಹವಾ [illegible] ದಿನವೂ ಮಳೆ ಸುರಿಯುವುದು, ಶೀತಗಾಳಿ [illegible] ಅನೇಕಾನೇಕರಿಗೆ [illegible] ಸಲದಕ್ಕೆ [illegible].

ನಾನು [illegible] ಈ ಬಾತ್ಮಿಯನ್ನು ಬರೆಯುತ್ತೇನೆ. [illegible] ರಾಜಕೀಯ ವಿದ್ಯಮಾನಗಳು [illegible] ವರ್ತಮಾನ ಪತ್ರಿಕೆಗಳಲ್ಲೂ ವಿಶೇಷವಾಗಿ ಚರ್ಚೆಯಾಗುತ್ತಿರುವವು. [illegible] ಸ್ವಾಧಿಕಾರವನ್ನು [illegible] ಮಸೂದೆ [illegible] ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ. ಈಗಿನ ಗವರ್ನ್‌ಮೆಂಟಿನವರ ಪಕ್ಷವು ಪಾರ್ಲಿಮೆಂಟಿನಲ್ಲಿ ಅಧಿಕವಾಗಿರೋಣದರಿಂದ ಈ ಮಸೂದೆಯು [illegible] ಅಲ್ಲಿ ಪಾಸಾಗಬಹುದು. ಆದರೆ ಹೌಸ್ ಆಫ್ ಲಾರ್ಡ್ಸ್ [illegible] ಸಭಿಕರು ಅದನ್ನು ಒಪ್ಪದೆ [illegible] ಕಾಣುವುದಿಲ್ಲ. ಈಗಿನ ಗವರ್ನ್‌ಮೆಂಟಿನವರು [illegible] ಈ ಮಸೂದೆಯನ್ನು ಮತ್ತೆ ಪಾರ್ಲಿಮೆಂಟಿಗೆ [illegible] ಹೇಳಲಾಗದು. ಈಚೆಗೆ ಕೆಲವು [illegible] ನಡೆದಿರುವ [illegible] ಚುನಾವಣೆಗಳನ್ನು ನೋಡುವಲ್ಲಿ [illegible] ಗವರ್ನ್‌ಮೆಂಟಿನವರು ತಮ್ಮ ಪಕ್ಷದ [illegible] ಕಳೆದುಕೊಂಡರು, ಇನ್ನು ಕೆಲವು [illegible] ಗವರ್ನ್‌ಮೆಂಟ್ [illegible] ಪ್ರಾಮುಖ್ಯತೆಯು ಬಹು [illegible] ಕಡಮೆಯಾಗಿರುತ್ತದೆ. [illegible] ಸ್ವತಂತ್ರಾಧಿಕಾರವನ್ನು ವಹಿಸುವ ಹೋಂ ರೂಲ್ ಎಂಬ ಮಸೂದೆ [illegible] ವಿಷಯದಲ್ಲಿ ಐರ್ಲಾಂಡಿನ ಉತ್ತರ ಭಾಗದಲ್ಲಿರುವ ಪ್ರಜೆಗಳು ಪ್ರತಿಪಕ್ಷಿಗಳಾಗಿ ನಿಂತು ಅಂಥಾ ಸ್ವತಂತ್ರಾಧಿಕಾರವು ತಮಗೆ ಅವಶ್ಯವಿಲ್ಲವೆಂದು ಪ್ರತಿಭಟಿಸುತ್ತಿದ್ದಾರೆ. ಇದನ್ನು ನೋಡುವಾಗ ಈ ಮಸೂದೆಯು [illegible] ಪರಿಣಾಮ ಕಾಣುವುದಿಲ್ಲ.

ತಿಳಿಯುವುದೂ ಮಾಡುವುದೂ

ಈ ಜಗತ್ತು ಹೇಗೆ ಸೃಷ್ಟಿಸಲ್ಪಟ್ಟಿತು? ನಮ್ಮೊಳಗಿರುವ ಆತ್ಮವು ಎಲ್ಲಿಂದ ಬಂತು? ಮರಣದ ತರುವಾಯ ಅದರ ಗತಿ ಏನು? ದೇವರೆಂಬುವನು ಇದ್ದಾನೆಯೆ? [illegible] ಕಾಲಗಳಲ್ಲಿಯೂ ಜ್ಞಾನಿಗಳಾಗಿರಬಹುದು? ಎಂಬೀ ಪ್ರಶ್ನೆಗಳ ವಿಷಯ ಯಾವಾಗಲೂ ಅನೇಕಾನೇಕರು ವಿಚಾರ ಆಲೋಚನೆ ಮಾಡುತ್ತಿರುವುದನ್ನು ನಾವು ನೋಡುತ್ತೇವೆ. ಇವು ಪ್ರಾಮುಖ್ಯವಾದ ಪ್ರಶ್ನೆಗಳೇ ಆಗಿರುತ್ತವೆ. ಇಂಥವುಗಳಿಗೆ ತಕ್ಕ ಉತ್ತರಗಳನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನಮಾಡಿ, ತಮ್ಮಲ್ಲಿರುವ ಸಂದೇಹವನ್ನೂ ಅಜ್ಞಾನವನ್ನು ಪರಿಹರಿಸಿಕೊಳ್ಳುವುದು ಯುಕ್ತವಾಗಿರುತ್ತದೆ. ನಮ್ಮ ಪೂರ್ವಿಕರಲ್ಲಿ ಜ್ಞಾನಿಗಳೂ ದೇವಭಕ್ತರೂ ಆಗಿದ್ದ ಅನೇಕರು ಈ ಪ್ರಶ್ನೆಗಳ ವಿಷಯ ವಿಚಾರಮಾಡಿ [illegible] ಉತ್ತರವನ್ನು ಹೇಳಿರುತ್ತಾರೆ. ಆದರೆ ಇದುವರೆಗೂ ಒಬ್ಬರಾದರೂ ಇವುಗಳಿಗೆ ಸಂಪೂರ್ಣವಾದ ಉತ್ತರಗಳನ್ನು ಕೊಟ್ಟಿರುವುದಿಲ್ಲ. ಲೋಕದಲ್ಲಿ ಜನಿಸಿದ ಅತ್ಯಂತ ದೊಡ್ಡ ತತ್ವಜ್ಞಾನಿಯಾದರೂ ಕೂಡ ದೇವರ ವಿಷಯವಾಗಿಯೂ ಜಗತ್ತಿನ ವಿಷಯವಾಗಿಯೂ ತನ್ನ ವಿಷಯವಾಗಿಯೂ ಸರ್ವವನ್ನೂ ತಿಳಿದುಕೊಂಡಿರುವುದಿಲ್ಲ. ಮಾನುಷ್ಯ ಜ್ಞಾನಕ್ಕೆ ಮಿತಿಯುಳ್ಳದ್ದು; ಅದರ ವಿವೇಚನಾಶಕ್ತಿಗೆ ಮೇರೆಯು ಇರುತ್ತದೆ. ಅತ್ಯಂತ ಜ್ಞಾನಿಗಳೂ ಕೂಡ ಅತ್ಯಂತ ದೈನ್ಯಭಾವವುಳ್ಳವರಾಗಿಯೇ ಇರುತ್ತಾರೆ. ನನಗೆ ಸರ್ವವೂ ತಿಳಿದಿದೆ, ನನಗೆ ತಿಳಿಯದಿರುವುದು ಏನೂ ಇಲ್ಲ ಎಂಬ ಅಹಂಕಾರವು ಅವರಲ್ಲಿರುವುದಿಲ್ಲ. ಇದಕ್ಕೆ ಬದಲಾಗಿ ತಿಳಿಯತಕ್ಕದ್ದು ಎಷ್ಟೋ ಇದೆ, ಅದರಲ್ಲಿ ನನಗೆ ತಿಳಿದಿರುವುದು ಕೇವಲ ಅಲ್ಪವು. ಆದರೆ ನಾನಾಗಲಿ ಮತ್ತೊಬ್ಬರಾಗಲಿ ಸತ್ಯಾರ್ಥಿಗಳಾಗಿದ್ದರೆ ಈಗ ನಮಗೆ ತಿಳಿದಿರುವುದಕ್ಕಿಂತಲೂ ಮುಂದೆ ಹೆಚ್ಚು ಜ್ಞಾನೋದಯವಾಗುವುದು ಎಂದು ಅರಿಕೆಮಾಡುವವರಾಗಿರುತ್ತಾರೆ. ಹೀಗೆ ಜ್ಞಾನವು ಕಾಲಕ್ರಮೇಣ ವೃದ್ಧಿಯಾಗುತ್ತಾ ಬರುವುದೆಂದು ನಮಗೆ ತಿಳಿದುಬರುತ್ತದೆ. ನಮ್ಮ ಪೂರ್ವಿಕರ ಜ್ಞಾನವು ವ್ಯಾಪಾರ ಮಾಡುವುದಕ್ಕಾಗಿ ನಮ್ಮ ಕೈಗೆ ಕೊಟ್ಟಿರುವ ಒಂದು ಬಂಡವಾಳದಂತೆ ಇರುತ್ತದೆ. ಅದನ್ನು ಸದ್ವಿನಿಯೋಗಪಡಿಸಿ ವೃದ್ಧಿಮಾಡುವುದು ನಮ್ಮ ಕರ್ತವ್ಯ.

ಇಂಥ ವಿಚಾರಗಳು ನಡೆಯುತ್ತಿರುವ ಕಾಲದಲ್ಲಿ ನಾವು ಮುಕ್ತಿಮಾರ್ಗವನ್ನು ಹಿಡಿಯುವುದು ಹೇಗೆ? ನಮ್ಮ ಸಂದೇಹಗಳೆಲ್ಲಾ ನಿವೃತ್ತಿಯಾಗುವ ವರೆಗೂ ನಾವು ಕಾದುಕೊಂಡಿರುವುದಕ್ಕಾಗುವುದಿಲ್ಲ. ನಮ್ಮ ಕಾರ್ಯಗಳಿಗೆ ತಕ್ಕ ಕಾರಣಗಳು ನಮಗೆ ತಿಳಿಯದೆ ಇದ್ದಾಗ್ಯೂ ನಾವು ಕಾರ್ಯಸಾಧಕರಾಗಿಯೇ ಇರಬೇಕು. ನಾವು ಊಟಮಾಡತಕ್ಕ ಆಹಾರವು ಹೇಗೆ ರೂಪಾಂತರವನ್ನು ಹೊಂದಿ ನಮ್ಮ ದೇಹದ ಒಂದು ಅಂಶವಾಗಿ ಸೇರಿಕೊಳ್ಳುತ್ತದೆಂಬುದು ನಮಗೆ ತಿಳಿಯದಿದ್ದಾಗ್ಯೂ ನಾವು ಊಟಮಾಡಲೇ ಬೇಕಷ್ಟೆ. ಒಂದು ಬೀಜದಲ್ಲಿ ಜೀವವು ಹೇಗೆ ಇರುತ್ತದೆ? ಅದು ತನ್ನಷ್ಟಕ್ಕೆ ತಾನೇ ಹುಟ್ಟಿ ಬೆಳೆದು ವೃದ್ಧಿಯಾಗುವುದು ಹೇಗೆ ಎಂಬುದು ನಮಗೆ ತಿಳಿಯದೆ ಇದ್ದಾಗ್ಯೂ ನಾವು ಬೀಜವನ್ನು ಬಿತ್ತಿ ಅದರ ಫಲವನ್ನು ಕೊಯ್ಯುತ್ತೇವೆ. ತಿಳಿದುಕೊಳ್ಳಬೇಕಾದುದು ಮನುಷ್ಯನ ಪ್ರಥಮ ಕರ್ತವ್ಯವಲ್ಲ. ಕಾರ್ಯತಃ ಸಾಗಿಸುವುದು ಅವನ ಪ್ರಧಾನ ಕರ್ತವ್ಯವಾಗಿರುತ್ತದೆ. ದೇವರು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಒಂದು ಸೂಕ್ಷ್ಮ ಶಬ್ದವನ್ನು [illegible] ದ್ದಾನೆ. ಅದು ಧರ್ಮಾಧರ್ಮಗಳೇನೆಂಬುದು ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ. ಮನಸ್ಸಾಕ್ಷಿಯೆಂಬ ಈ ಸೂಕ್ಷ್ಮ ಶಬ್ದಕ್ಕೆ ಕಿವಿಗೊಟ್ಟು ಅದಕ್ಕೆ ವಿಧೇಯರಾಗಿ ನಡೆಯುವುದೇ ಪರಮಧರ್ಮವಾಗಿಯೂ ಮುಕ್ತಿಸಾಧನವಾಗಿಯೂ ಇರುತ್ತದೆ.

ಒಬ್ಬ ಗವರ್ನ್‌ಮೆಂಟ್ ಆಫೀಸರು ತನಗೆ ಸಮಯ ಸಿಕ್ಕುವಾಗಲೆಲ್ಲಾ ಜ್ಞಾನ ಶಾಸ್ತ್ರಪಾರಾಯಣ, ಯೋಗಾಭ್ಯಾಸ ಇವುಗಳನ್ನು ಮಾಡುತ್ತಾ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾಗ್ಯೂ, ಅವನು ಅನುದಿನದ ನಡತೆಯಲ್ಲಿ ಅನ್ಯಾಯದ ತನಾಗಿಯೂ ಲಂಚಕೋರನಾಗಿಯೂ ವರ್ತಿಸುತ್ತಿದ್ದರೆ ಪ್ರಯೋಜನವೇನು? ಅವನೊಳಗಿರುವ ಒಂದು ಸೂಕ್ಷ್ಮ ಶಬ್ದವು [illegible] ತೆಗೆದುಕೊಳ್ಳಬಾರದೆಂದು ಹೇಳುತ್ತಿರುವುದು. ಅದು ದೇವರ ಶಬ್ದವೇ [illegible] ಅವನು ಜ್ಞಾನವನ್ನು ಸಂಪಾದನೆ ಮಾಡದೆ ಹೋಗಿದ್ದರೆ ಆ ಶಬ್ದಕ್ಕೆ ವಿಧೇಯನಾಗಬೇಕು.

ಒಬ್ಬ ವರ್ತಕನು [illegible] ಶಾಸ್ತ್ರವನ್ನು ಪಠಿಸುವುದರಲ್ಲಿಯೂ ತತ್ವವಿಚಾರಗಳನ್ನು ಚರ್ಚೆಮಾಡುವುದರಲ್ಲಿಯೂ ಬಹಳ ಕಾಲವನ್ನು ಕಳೆಯುವವನಾಗಿದ್ದರೆ, [illegible] ರೂಕವನ್ನು ಮತ್ತು [illegible] ಜೋಡು ಗುಣಾ [illegible] ಬಿಟ್ಟು [illegible] [illegible] ಮೋಸಮಾಡುತ್ತಲೂ [illegible] ವರ್ತಿಸುವವನಾಗಿದ್ದರೆ, [illegible] ಸೂಕ್ಷ್ಮ ಶಬ್ದವು ಅವನೊಳಗೆ ಇರುತ್ತದೆ. ಇದು ದೇವರ ಶಬ್ದ. ಅವನು ಜ್ಞಾನಸಂಪಾದನೆ ಮಾಡದಿದ್ದರೂ, ಅವನು ಹೊದಲು ಆ ಶಬ್ದಕ್ಕೆ ಕಿವಿಗೊಟ್ಟು ಅದಕ್ಕೆ ವಿಧೇಯನಾಗಬೇಕು.

ನಮ್ಮ [illegible] ಒಂದು ಮಾರ್ಗವು ಇದೆ. ಅದೇನೆಂದರೆ [illegible] ನಮಗೆ ಈಗ ತೋರುವ [illegible] ಕೆಗೆ ವಿಧೇಯರಾಗಿ ಅದರಂತೆ ನಡೆದುಕೊಳ್ಳುವುದು. [illegible] ಬಂದು [illegible] ಯುತ್ತದೆ. [illegible] ಮಾಡುವುದರಿಂದ ಜ್ಞಾನವು [illegible] ವೃದ್ಧಿಯಾಗುವುದಿಲ್ಲ [illegible] ದಕ್ಷ [illegible] ಗೊತ್ತಾಗುವುದು. [illegible] ಹೇಳಿದ ಮಾತಿನಲ್ಲಿ ಇದೇ ಅಭಿಪ್ರಾಯವು ಅಡಗಿ ಇರುತ್ತದೆ.

"ಕಾಮುಕಗಳ [illegible] ಎರಡು ಬಿದ ನಾದ ವಿಷಯಗಳಿರುತ್ತವೆ —

ಮನಸ್ಸಿನ ಭಾವವು ಆ ಪರಿಶುದ್ಧವಾಗಿರುತ್ತದೆ. [illegible] ಪ್ರತ್ಯಕ್ಷವಾಗಿ ಅವನಿಗೆ ತಿಳಿಯುವುದು.

ಅದರ [illegible] ಪಾದಿಯು ಪೂರ್ಣ [illegible] ಬರುವ ಪ್ರಕಾರವಾದ ಜೀವನ [illegible]

ಒಳದೇಶದ ವೃತ್ತಾಂತಗಳು

ಕಳೆದ ವಾರ ರಾಜಧಾನಿಯಲ್ಲಿ [illegible] ವರ್ಷವು [illegible] ಗಾಳಿ [illegible] ಯಾಗಿಯೂ, ಆರೋಗ್ಯಕರವಾಗಿಯೂ ಇದೆ.

ಧಾರವಾಡದಲ್ಲಿ ಕರ್ನಾಟಕ [illegible] ವರ್ತಕ ಮಂಡಲಿಯ ಕಟ್ಟಡಕ್ಕೆ ಮೈಸೂರು ಸರ್ಕಾರದವರು 1,000 ರೂಪಾಯಿ ದಾನ ಮಾಡಿದರೆಂದು ಕೇಳುತ್ತೇವೆ.

ಶ್ರೀ ಯುವರಾಜರವರು ಸೇನ ಬೆಳಗ್ಗೆ [illegible] ಮಾಡಿ [illegible] ರಾಜಧಾನಿಯಿಂದ ಮಹಾರಾಜ್ [illegible] ಪರಿವಾರ ಸಮೇತ [illegible] ಚಿತ್ತೈಸುವವರಾಗಿದ್ದಾರೆ.

ಕಳೆದ ಸ್ಪ್ರಪರೀ [illegible] ಒಂದು ವರುಷದಲ್ಲಿ ಮೈಸೂರು [illegible] ದಿಂದ ಹುಚ್ಚು ನಾಯಿ ಕಡಿದ 161 ರೋಗಿಗಳು ಕೂನೂರಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸಿಕೊಂಡು [illegible] ದಿದ.

ದಿವಾನ್‌ರವರೂ, ಚೀಫ್ ಇಂಜನಿಯರವರೂ, [illegible] ರವರೂ [illegible] ಕಳೆದ ವಾರವೆಲ್ಲಾ ಇಲ್ಲೇ ಇದ್ದರು. ಅವರೆಲ್ಲಾ [illegible] ನಾಳೆಯೋ ನಾಡಿದ್ದೋ ಬೆಂಗಳೂರಿಗೆ ತೆರಳುವವರಾಗಿದ್ದಾರೆ.

ಬೆಂಗಳೂರು [illegible] ಮ್ಯುನಿಸಿಪಾಲಿಟಿಯವರು [illegible] ಯಾಗಿಯೂ ಹೊಗೆಸೊಪ್ಪನ್ನೂ ವಿಳ್ಳೇದೆಲೆಯನ್ನೂ ಬಿಕರಿ ಮಾಡುವ ವರ್ತಕರಿಂದ [illegible] ರೂಪಾಯಿ, 1 ರೂಪಾಯಿಯಂತೆ ಲೈಸನ್ಸ್ ಫೀಯನ್ನು ಹಾಕಿ ವಸೂಲ್ಮಾಡಬೇಕೆಂದು [illegible] ಮಾನ ಮಾಡಿಕೊಂಡಿದ್ದಾರೆ.

ಇಲ್ಲಿನ ಮಹಾರಾಜಾ ಕಾಲೇಜಿನ ಸಂಸ್ಕೃತ ಪಂಡಿತರಾದ ಮ. ವೆಂಕಟರಾಮ ಶಾಸ್ತ್ರಿಗಳು ಪೆನ್‌ಷನ್ ಮೇಲೆ ಕೆಲಸ ಬಿಟ್ಟದ್ದರಿಂದ ಮ. [illegible] ರವರು ಅವರ ಕೆಲಸಕ್ಕೂ, ಮ. ಎಂ. ವೆಂಕಟಸುಬ್ಬಯ್ಯನವರು ಇಲ್ಲಿನ ನಾರ್ಮಲ್ ಸ್ಕೂಲಿನ ಹೆಡ್ ಮಾಸ್ಟರ್ ಕೆಲಸಕ್ಕೂ ನೇಮಕವಾಗಿರುತ್ತಾರೆ.

ರಾಜಧಾನಿಯ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಹಾಲಿನಲ್ಲಿ [illegible] ಸಾಯಂಕಾಲ ಆ ಸ್ಕೂಲಿನ ಮತ್ತು ಹಾರ್ಡ್‌ವಿಕ್ ಸ್ಕೂಲಿನ ಬಾಲಕರಿಗೆ ಬಹುಮಾನಗಳು ವಿನಿಯೋಗವಾಗುವವು. ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಆದ ಮ. ಎಂ. ರಾಮರಾಯರವರು ದಯಮಾಡಿ ಬಹುಮಾನ ಸಭೆಯ ಅಗ್ರಾಸನವನ್ನು ವಹಿಸುವವರಾಗಿದ್ದಾರೆ.

ಗವರ್ನ್‌ಮೆಂಟಿನಲ್ಲಿ ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡುವಲ್ಲಿ ಮ. ವಿಶ್ವೇಶ್ವರಯ್ಯನವರು ಮುಂದಿನ ದಿವಾನ್‌ರಾಗಿಯೂ, ಮ. ಎನ್. [illegible]

ಬಂದದ್ದು ಅವರ ಪ್ರೈವೆಟ್ ಸೆಕ್ರೆಟರಿಯೂ, ಮ ಕರ್ಪೂರ್ ಶ್ರೀನಿವಾಸ ರಾಯರು ಚೀಫ್ ಇಂಜನಿಯರರಾಗಿಯೂ ನೇಮಕವಾಗಬಹುದೆಂದು ಉನ್ನತ ವರ್ಗದ ಹುಕುಂ ಪ್ರಕಟವಾಗುವ ತನಕ ಖಂಡಿತವಾಗಿ ಹೇಳುವುದಾ ಗುವುದಿಲ್ಲ.

ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡಿಕೊಂಡು ಬಂದಿರುವ ಎಕ್ಸಿಕ್ಯುಟಿವ್ ಇಂಜನಿಯರ್ ಅಲ್ಲಾಯಾ ಸರ್ವೀಸ್ಸಿಗೆ ಸೇರಿದ ಮ ಎಸ್ ವೆಂಕಟ ರಮಣಯ್ಯನವರು ಮದರಾಸಿನ ಆರ್ಯ ವೈಶ್ಯ ಮಹಾ ಸಭೆಯವರು ಅಲ್ಲಿನ ಪಚ್ಚಯಪ್ಪನವರ ಕಾಲೇಜ್ ಕಟ್ಟಡದಲ್ಲಿ ನಿನ್ನೆ ಸಾಯಂಕಾಲ ದಿವ್ಯವಾದ ಸಭೆ ಸೇರಿಸಿ ಸುಖಾಗಮನವನ್ನು ಬಯಸುವಂತೆಯೂ, ಆಗ ಮ ರವರು ಯಂತ್ರಗಳ ಪೂರ್ವೋತ್ತರವನ್ನು ಕುರಿತು ಉಪನ್ಯಾಸ ಮಾಡುವಂತೆಯೂ ಏರ್ಪಾಡಾಗಿತ್ತು.

ರಾಜಧಾನಿಯ ಇಲವಾಲದ ಪಸ್ತೆಯಲ್ಲಿ ಕಳೆದ 13 ನೇ ತಾ ಶುಕ್ರವಾರ ನಸುಕಿನ ಜಾವದ ಮುಂದಿಗೆ ರಾತ್ರಿ 2 ಘಂಟೆ ಹೊತ್ತಿನಲ್ಲಿ ಹೈದರ್ ಸಾಬಿ ಎಂಬ ಮುಸಲ್ಮಾನನು ಸುಗ್ಗಿ ಬಾಬೈಯು ಎಂಬ ಮುಸಲ್ಮಾನನ ದೇವ ಸ್ಥಾನದ ಬಳಿ ಅದೇ ದಿನ ರಾತ್ರಿ 1 ಘಂಟೆ ಹೊತ್ತಿನಲ್ಲಿ ಪಿಡಂಬರೈಯವರ ಮಗನ ದೀಪವನ್ನು ನಾಶಮಾಡುತ್ತಿರುವುದನ್ನು ಡಿಟೆಕ್ಟಿವ್ ಪೋಲೀಸ್ ಇನ್ಸ್‌ಪೆಕ್ಟರು ಸಹಿತ ಹಿಡಿದು ಠಾಣ್ಯಕ್ಕೆ ರವಾನೆ ಮಾಡಿದನು. ಮಾ ಜಿ ಸ್ಟ್ರೇಟರು ಅಪರಾಧಿಗೆ ಒಂದು ವಾರಗಳ ಶಿಕ್ಷೆ ವಿಧಿಸಿದರು.

ಕಳೆದ ನವರಾತ್ರಿ ಉತ್ಸವಕಾಲದಲ್ಲಿ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನವರು ಟೆನ್ನಿಸ್ ಎಂಬ ಆಟದ ಪಂದ್ಯವನ್ನು ನಡೆಸುತ್ತಾರೆ. ಈ ಪಂದ್ಯದಲ್ಲಿ ಗೆದ್ದವರಿಗೆ ಮ ನವರು ಕೊಡುವರು ಇಟ್ಟಿರುವ 100 ರೂ ಪಾಯಿ ಬೆಲೆಯ ಬಿಟ್ಟು ಬಹುಮಾನ ಕೊಡಲ್ಪಡುತ್ತದೆ. 1910 ಮತ್ತು 1911 ನೇ ವರುಷಗಳಲ್ಲಿ ನಡೆದ ಈ ಪಂದ್ಯಗಳಲ್ಲಿ ಮ ... ಗೆದ್ದಿರುತ್ತಾರೆ. ಈ ಪಂದ್ಯಕ್ಕೆ ಸೇರಬೇಕೆನ್ನುವವರು 5 ರೂಪಾಯಿ ಶುಲ್ಕ ಸಹಿತ ಅಕ್ಟೋಬರ್ ತಾ 5 ರೊಳಗೆ ಸೆಕ್ರೆಟರಿ ಮ ಎ ಡಿ ... ಯವರಿಗೆ ಬರೆದುಕೊಳ್ಳಬಹುದು.

ಬೆಂಗಳೂರು ಪಟ್ಟಣದ ಪ್ರೆಸಿಡೆನ್ಸಿ ಕಾಲೇಜಿನ ರಸಾಯನ ಶಾಸ್ತ್ರದ ಪ್ರೊಫೆಸರ್ ... ಪರೀಕ್ಷೆಗೆ ಕಳುಹಿಸಿದ ... ಜನ ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಥಿಯು ಪಾಸ್ ಕ್ಲಾಸಿನಲ್ಲಿಯೂ, ಐದು ಜನ ಸೆಕೆಂಡ್ ಕ್ಲಾಸಿನಲ್ಲಿಯೂ ತೇರ್ಗಡೆಯಾಗಿದ್ದಾರೆ. ಸದರಿ ಸ್ಕೂಲಿನಿಂದ ಓದಿಕೊಂಡು ಪ್ರವೇಶ ಪರೀಕ್ಷೆಗೆ ಹೋಗಿದ್ದ ... ಜನ ವಿದ್ಯಾರ್ಥಿಗಳೂ ತೇರ್ಗಡೆಯಾಗಿದ್ದಾರೆ. ಇದಲ್ಲದೆ ವರ್ಷ ... ಕಳೆದ ನವೆಂಬರ್ ತಿಂಗಳಲ್ಲಿ ನಡೆದ ಮದ್ರಾಸ್ ಟೆಕ್ನಿಕಲ್ ಪರೀಕ್ಷೆಗಳ ಸ್ಕೂಲಿನಿಂದ ಎಲಿಮೆಂಟರಿ ಡ್ರಾಯಿಂಗಿಗೆ ತರಬೇತು ಮಾಡಲ್ಪಟ್ಟು ಕಳುಹಿಸಿದ ... ಜನ ವಿದ್ಯಾರ್ಥಿಗಳೂ ಎಲಿಮೆಂಟರಿ ಪಯಿಂಟ್ ಮಾಡುವ ತರಬೇತು ಮಾಡಲ್ಪಟ್ಟು ಕಳುಹಿಸಿದ್ದ ಒಬ್ಬ ವಿದ್ಯಾರ್ಥಿಯೂ ಸದರಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾರೆ. ಸದರಿ ಸ್ಕೂಲ್ ಕಮಿಟಿಯವರು ಎಷ್ಟು ಜಾಗ್ರತೆಯಿಂದ ತಮ್ಮ ಕೆಲಸಗಳನ್ನು ನಡಿಸುತ್ತಾರೆಂಬುವುದು ಈ ಸಲದ ಫಲಿತಾಂಶದಿಂದ ಗೊತ್ತಾಗುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ರಾವ್ ಬಹದೂರ್ ಮ ಪಿ ಎನ್ ಕೃಷ್ಣರಾಯರಿಗೆ ಸೆಪ್ಟೆಂಬರ್ ತಾ ... ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಅಸಿಸ್ಟೆಂಟ್ ಕಮೀಷನರ್ ಮ ಎಚ್ ... ನಾರಾಯಣರಾಯರು ... ಹುಕುಂ ಕೊಡುವ ತನಕ ತಮ್ಮ ಕೆಲಸಗಳೊಂದಿಗೆ ... ನೋಡಿಕೊಳ್ಳತಕ್ಕದ್ದು.

ಮೈಸೂರು ಸರ್ವೆ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಮ ಬಿ ... ರಾವ್ ಚೆಟ್ಟಿಯವರಿಗೆ ... ತಾ 20 ರಿಂದ ... ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದ್ದು.

ಅಮಲ್ದಾರ್ ಮ ಎ ... ಯವರು ಬೇರೆ ಕೆಲಸದ ಮೇಲಿರುವಾಗ್ಗೆ ... ಹುಕುಂ ಕೊಡಲ್ಪಡುವ ತನಕ ತುಮಕೂರಿನ ಡೆಪ್ಯುಟಿ ... ಮಿ ಎಸ್ ... ರಾಯರು ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಏಕ್ಟಿಂಗ್ ನೇಮಿಸಲ್ಪಟ್ಟಿದ್ದಾರೆ.

ರೆವಿನ್ಯೂ ಮತ್ತು ... ಸೆಕ್ರೆಟೇರಿಯಟ್ಟಿನಲ್ಲಿ ಅಸಿಸ್ಟೆಂಟ್ ... ಮ ಎಚ್ ... ನಾರಾಯಣರನ್ನು ... ಜಿಲ್ಲಾ ... ಸುಪರಿಂಟೆಂಡೆಂಟರಾಗಿ ... ಮಾಡಿದೆ.

ಮೈಸೂರು ... ಪೋಲೀಸ್ ಚೀಫ್ ಇನ್ಸ್‌ಪೆಕ್ಟರ್ ಮ ಮಹಮದ್ ... ಮೊಯಿನ್ ರವರನ್ನು ... ತಾ 11 ರಿಂದ ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟಾಗಿ ನೇಮಕ ಮಾಡಿದೆ.

1 ನೇ ಕ್ಲಾಸ್ ... ರಜಾ ... ಮ ಎಸ್ ರಾಮಸ್ವಾಮಿ ... ಚಿಕ್ಕಬಳ್ಳಾಪುರಕ್ಕೆ ವರ್ಗ ಮಾಡಿದೆ. ರಜಾ ಪೂರೈಸಿದ ಬಳಿಕ ಅಲ್ಲಿಗೆ ಹೋಗತಕ್ಕದ್ದು.

ಮುಂದೆ ಹೇಳುವ ಆಫೀಸರ್ ರುಗಳ ವರ್ಗ ಮಾಡಿದೆ

ಮ ಎಚ್. ವಿ ರಾಮಸ್ವಾಮಿಯವರು ಕಂಟ್ರೋಲರವರ ಆಫೀಸಿನ ... ಟ್ರೆಜರಿ ಆಫೀಸರಾಗಿ ಮ ಎಂ ... ಯವರು ... ಡಿಸ್ಟ್ರಿಕ್ಟ್ ... ಆಫೀಸರಾಗಿರತಕ್ಕದ್ದು.

ಕಡೂರ್ ಅಸಿಸ್ಟೆಂಟ್ ಕಮೀಷನರ್ ಮ ಎಸ್ ಚಕ್ರಪಾಣಿ ಅಯ್ಯಂಗಾರ್ಯರು ... ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ... ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ಕೊಡಲ್ಪಟ್ಟಿದೆ.

ಮೈಸೂರು ... ಸರ್ವಿಸ್ ... ಕೋರ್ಟಿನಲ್ಲಿ ... ವಸೇದಾರ ಪೆರುಮಾಳ್ ಮತ್ತು ಡ್ರೈವರ್ ... ಯವರು ಮಹಮದೀಯ ಮತವನ್ನು ಅವಲಂಬಿಸಿದ್ದರಿಂದ ಅವರ ಹೆಸರುಗಳನ್ನು ಶೇಖ್ ಅಬ್ದುಲ್ಲಾ ಮತ್ತು ಅಬ್ದುಲ್ ಕರೀಂ ಎಂದು ... ಲಾಯಿಸುತ್ತಾರೆ.

... ಇಂಜನಿಯರ್ ಮ ... ಯವರಿಗೆ ಆಗಸ್ಟ್ 12 ರಿಂದ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಮ ... ಆರ್ ಗರುಡಾಚಾರ್ಯರನ್ನು 3 ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ನೇಮಿಸಿ ... ಇಲಾಖೆಗೆ ವರ್ಗ ಮಾಡಿದೆ.

ಮ ... ಆರ್ ... ಮಿರ್ಜಾರವರನ್ನು ಅಸಿಸ್ಟೆಂಟ್ ಇಂಜನಿಯರಾಗಿ ಆಗಸ್ಟ್ ... ರಿಂದ ನೇಮಿಸಿಕೊಂಡು, ರೈಲ್ವೆ ಇಲಾಖೆಗೆ ವರ್ಗ ಮಾಡಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಾಶ್ಮೀರ ಸಂಸ್ಥಾನದ ಮಹಾರಾಜರವರು ಅರಮನೆಯಲ್ಲಿ ನಡೆಯುವ ದರ್ಬಾರ್ ಕಾಲಗಳಲ್ಲಿ ಇನ್ನು ಮುಂದೆ ವೇಶ್ಯಾಸ್ತ್ರೀಯರ ನರ್ತನವನ್ನು ವಜಾ ಮಾಡತಕ್ಕದ್ದೆಂದು ಅಪ್ಪಣೆ ಕೊಟ್ಟಿದ್ದಾರೆ.

ಮಧ್ಯ ಪ್ರಾಂತ್ಯಗಳ ಚೀಫ್ ಕಮಿಷನರವರ ಸಹಾಯಕ್ಕೆ ಒಂದು ನ್ಯಾಯವಿಧಾಯಕ ಸಭೆಯನ್ನು ಕಲ್ಪಿಸಿ ಕೊಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಚರ್ಚೆ ನಡಿಸಿ ಕಾಗದಪತ್ರಗಳನ್ನು ತರಿಸಿಕೊಂಡಿರುತ್ತಾರೆ.

ಬೊಂಬಾಯಿ ಮತ್ತು ಸಂಯುಕ್ತ ಆಧಿಪತ್ಯಗಳಲ್ಲಿ ವ್ಯವಸಾಯವನ್ನು ಅಭಿವೃದ್ಧಿ ಮಾಡತಕ್ಕಂಥಾ ವ್ಯವಸಾಯದ ಇಂಜನಿಯರುಗಳನ್ನು ನೇಮಿಸಿಕೊಳ್ಳಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದ್ದಾರೆ.

ಸಿಕಂದ್ರಾಬಾದಿನಲ್ಲಿರುವ ನವಾಬ್ ಮಹಮದ್ ಮೊಹಿಯುದ್ದೀನ್ ಖಾನ್ ಬಹದೂರ್ ಯವರು ಮುಲ್ಕಾಪುರದಲ್ಲಿ ನಾಲ್ಕು ಕರಡಿಗಳು ಕಾಣಿಸಿಕೊಂಡದ್ದನ್ನು ಕೇಳಿ ಅಲ್ಲಿಗೆ ಹೋಗಿ ಆ ಪೈಕಿ ಮೂರು ಕರಡಿಗಳನ್ನು ಶಿಕಾರಿ ಮಾಡಿದರು. ನಾಲ್ಕನೆಯದು ತಪ್ಪಿಸಿಕೊಂಡು ಹೋಯಿತು.

ಅಲಿಪುರದ ಡೆಪ್ಯುಟಿ ಮ್ಯಾಜಿಸ್ಟ್ರೇಟರಾದ ಬಾಬು ಭೂಪತಿ ಚರಣ ಚಕ್ರವರ್ತಿಯವರು ಹಿಂದಿನ ಮಂಗಳವಾರ ರಾತ್ರಿ ಮನೆಯಿಂದ ಹೋದವರು ನಾಲ್ಕಾರು ದಿನಗಳ ತನಕ ಅವರೇನಾದರೆಂಬುವುದು ತಿಳಿಯಲಿಲ್ಲ. ಕಳೆದ ಸೋಮವಾರ ಇವರ ಶವವು ಮಧುಪುರದ ಒಂದು ಭಾವಿಯಲ್ಲಿ ತೇಲುತ್ತಿತ್ತು.

ಬೊಂಬಾಯಿ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್ ಯವರ ಅಧಿಕಾರದ ಅವಧಿಯು ಪೂರೈಸುತ್ತಾ ಬಂದದ್ದರಿಂದ ಅವರಿಗೆ ಸೀಮೆಗೆ ಹೋಗುವಾಗ್ಗೆ ಪೂನಾ ಪಟ್ಟಣದ ಮುನಿಸಿಪಾಲಿಟಿಯವರು ಒಂದು ಅಡ್ರೆಸ್ಸನ್ನು ಒಪ್ಪಿಸಬೇಕೆಂದು ತೀರ್ಮಾನ ಮಾಡಿ, ಇದಕ್ಕೆ 500 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಮುಖ್ಯರಾದ ಅಧಿಕಾರಿಗಳ ಸಮೇತ ವೈಸ್‌ರಾಯರವರನ್ನು ಕಂಡು ಬರುವುದಕ್ಕಾಗಿ ಕಳೆದ ಶುಕ್ರವಾರ ರಾತ್ರಿ ಸಿಮ್ಲಾ ಪಟ್ಟಣವನ್ನು ಕುರಿತು ಪ್ರಯಾಣಮಾಡಿದರು. ಅವರೆಲ್ಲಾ ಮುಂದಿನ ಸೋಮವಾರ ಅಲ್ಲಿಂದ ಹೈದರಾಬಾದಿಗೆ ವಾಪಸು ಬಂದು, ಆ ಬಳಿಕ ಅಕ್ಟೋಬರ್ ತಾ 1 ರಲ್ಲಿ ಬೊಂಬಾಯಿಗೆ ತೆರಳುತ್ತಾರೆಂದು ವರ್ತಮಾನವಿದೆ.

ಕಳೆದ 7 ನೇ ತಾ ಗೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದೊಳಗೆಲ್ಲಾ 1,233 ಜನರಿಗೆ ಪ್ಲೇಗ್ ಉಪದ್ರ ತಗಲಿ 880 ಮರಣಗಳಾದವು. ಈ ಮರಣಗಳ ಯಾದಿಯ ವಿಂಗಡದ ವಿವರ ಬೊಂಬಾಯಿ ಆಧಿಪತ್ಯ 108, ಮದರಾಸ್ 91, ಬಂಗಾಳಾ 1, ಬೇಹಾರ್ ಮತ್ತು ಒರಿಸಾ 11, ಸಂಯುಕ್ತ ಆಧಿಪತ್ಯಗಳು 70, ಪಂಜಾಬ್ 8, ಬರ್ಮಾ 38, ಮಧ್ಯಪ್ರಾಂತ್ಯಗಳು 3, ಮೈಸೂರು 120, ಹೈದರಾಬಾದ್ 121.

ಹಿಂದೂಸ್ಥಾನದಲ್ಲಿರುವ ಷಿಯಾ ಪಂಗಡದ ಮುಸಲ್ಮಾನ್ ಪ್ರಜೆಗಳು ಲಾಹೋರ್ ನಗರದಲ್ಲಿ ಒಂದು ಮಹಾ ಸಭೆಯನ್ನು ನಡಿಸುವವರಾಗಿದ್ದಾರೆ. ರಾಂಪುರ ಸಂಸ್ಥಾನದ ನವಾಬರವರು ಸಭೆಯ ಪ್ರೆಸಿಡೆಂಟರಾಗಿ ನಿಲ್ಲುವರು. ಪ್ರಿನ್ಸ್ ಮ ಗುಲ್ಸಾನ್ ಅಹಮದ್ ಯವರು ರಿಸೆಪ್ಷನ್ ಕಮಿಟಿಯ ಛೇರ್‌ಮನ್ ರಾಗಿ ನಿಲ್ಲಲು ಒಪ್ಪಿಕೊಂಡಿದ್ದಾರೆ. ಈ ಸಭೆಯು ಅಕ್ಟೋಬರ್ ತಾ 17, 18 19, ಈ ಮೂರು ದಿನ ನಡೆಯುವಂತೆ ನಿಷ್ಕರ್ಷೆಯಾಗಿದೆ.

ಬೊಂಬಾಯಿ ಇಸ್ಲಾಂಪುರ್ ಡಿಸ್ಟ್ರಿಕ್ಟಿಗೆ ಸೇರಿದ ವಾಲಾಚೆಟೀ ಎಂಬ ಊರಿನಲ್ಲಿ ಕಳೆದ ಸೋಮವಾರ ಒಂದು ದೊಡ್ಡ ದರೋಡೆಯ ಕಳವು ನಡೆಯಿತು. ಮಾಷಿರ್ ಎಂಬ ಜನರ ಕಳ್ಳರ ಗುಂಪು ಹಠಾತ್ತನೆ ನುಗ್ಗಿ ಒಂದು ಅಂಗಡಿಯನ್ನು ಲೂಟಿ ಮಾಡಿದರು. ಒಬ್ಬ ಪೋಲೀಸಿನವನಿಗೂ ಇನ್ನೊಬ್ಬ ಪ್ರಜೆಗೂ ಗುಂಡಿ ನೆಟ್ಟು ಬಿದ್ದಿದೆ. ಆ ಆರು ಜನ ಕಳ್ಳರನ್ನು ಹಿಡಿಯಬೇಕೆಂದು ಕುದುರೆ ಸವಾರರು ಓಡಿಸಿಕೊಂಡು ಹೋದರು. ಒಬ್ಬರಾದರೂ ಸಿಕ್ಕಲಿಲ್ಲ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ರಂಗಪುರದಲ್ಲಿ ಗಣೇಶನಾರಾಯಣ ಮಹೇಶ್ವರಿ ಎಂಬ ವರ್ತಕನು ಒಂದು ದಿವಾಣಿ ಮೊಕದ್ದಮೆಯಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗಿದ್ದಾಗ ಮ್ಯಾಜಿಸ್ಟ್ರೇಟ್ ಮ ಅವನೀಚಂದ್ರ ಚಟರ್ಜಿಯವರು ಆ ವರ್ತಕನನ್ನು ಪೋಲಿ ಮತ್ತು ಫೋರ್ಜರ್ ಎಂಬದಾಗಿ ಅಂದರಂತೆ. ಇದಕ್ಕಾಗಿ ಆ ವರ್ತಕನು ಆ ಮ್ಯಾಜಿಸ್ಟ್ರೇಟರ ಮೇಲೆ 10,000 ರೂಪಾಯಿ ಮಾನನಷ್ಟಕ್ಕೆ ದಾವಾ ತರುವುದಾಗಿ ಅವರಿಗೆ ನೋಟೀಸ್ ಕೊಟ್ಟಿರುತ್ತಾನೆ.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಸೋಲನ್ ಎಂಬ ಸ್ಥಳದಲ್ಲಿ ಬಡವರಾದ ಕ್ಷಯರೋಗ ಪೀಡಿತರಿಗೆ ಚಿಕಿತ್ಸೆ ನಡೆಯುವಂಥಾ ಒಂದು ಆಸ್ಪತ್ರೆಯು ನಿರ್ಮಾಣವಾಗುತ್ತದೆ. ಅದು ಸಮುದ್ರಮಟ್ಟದಿಂದ 5,000 ಅಡಿ ಎತ್ತರದಲ್ಲಿರುವ ಪ್ರದೇಶವು. ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ತಮ್ಮ ಸ್ವಂತ ಖರ್ಚಿನಿಂದ ಅಲ್ಲೊಂದು ಪಟ್ಟಣವನ್ನೇ ನಿರ್ಮಾಣಮಾಡುವವರಾಗಿದ್ದಾರೆ. ಪೋಸ್ಟ್ ಆಫೀಸು, ಸ್ಕೂಲು, ವೈದ್ಯಶಾಲೆ, ಮಾರ್ಕೆಟು, ನೀರಿನ ಏರ್ಪಾಡು, ಇವೆಲ್ಲ ಏರ್ಪಾಡಾಗುತ್ತದೆ.

ಬೋಅರರ ಯುದ್ಧದಲ್ಲಿ ಇಂಗ್ಲೀಷ್ ಗವರ್ನಮೆಂಟಿನವರು ಬೋಅರ್ ಯುದ್ಧಭಟರುಗಳನ್ನು ಕೈಸೆರೆ ಹಿಡಿದು ತಂದು ಸಿಲೋನ್ (ಲಂಕಾ) ದ್ವೀಪದಲ್ಲಿ ಕೆಲವು ಕಾಲ ಇಟ್ಟುಕೊಂಡಿದ್ದಾಗ್ಗೆ ಆ ಪೈಕಿ ಕೆಲವು ಬೋಅರರು ಅಲ್ಲೇ ಕಾಲವಾದರಷ್ಟೆ. ಅಲ್ಲಿ ಅವರಿಗೆ ಶಾಶ್ವತವಾದ ಸಮಾಧಿಗಳನ್ನು ಕಟ್ಟಿ ಅಂಕಿತವನ್ನು ಕೆತ್ತಿಸಿಡುವುದಕ್ಕೆ ಮುನಿಸಿಪಾಲಿಟಿಯವರು ಪ್ರಯತ್ನಪಟ್ಟರು. ಈ ಶಾಶ್ವತವೂ ಚರಿತ್ರಾರ್ಹವೂ ಆದ ಕಾರ್ಯಕ್ಕೆ ಸಿಲೋನ್ ಗವರ್ನಮೆಂಟಿನವರೂ, ಇಂಗ್ಲೀಷ್ ಗವರ್ನಮೆಂಟಿನವರೂ, ದಕ್ಷಿಣ ಆಫ್ರಿಕಾ ಗವರ್ನಮೆಂಟಿನವರೂ ದ್ರವ್ಯ ಸಹಾಯ ಮಾಡುವುದಾಗಿ ಒಪ್ಪಿರುತ್ತಾರೆ.

ದಿಹಲಿ ಪಟ್ಟಣದಲ್ಲಿ ಇಂಡಿಯಾ ಗವರ್ನಮೆಂಟನ್ನು ಪ್ರಾರಂಭಿಸುವುದಕ್ಕೆ ಹಂಗಾಮಿಯಾದ ಕಟ್ಟಡಗಳೆಲ್ಲಾ ಸಿದ್ಧವಾಗುತ್ತಾ ಬಂದವು. ಇವುಗಳಿಗೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು 19 ಲಕ್ಷ ರೂಪಾಯಿ ಖರ್ಚುಮಾಡಬಹುದೆಂದು ಸ್ಯಾಂಕ್ಷನ್ ಮಾಡಿದರು. ವೈಸ್‌ರಾಯಿಯವರು ಪತ್ನಿಸಹಿತರಾಗಿ ಅಧಿಕಾರಿಗಳ ಸಂಗಡ ವಿಶೇಷವಾದ ಉತ್ಸವಪೂರ್ವಕವಾಗಿ ಈ ಹೊಸ ರಾಜಧಾನಿಗೆ ಡಿಸೆಂಬರ್ ತಾ. 23 ರಲ್ಲಿ ಪ್ರವೇಶಿಸಿ ರಾಜಧಾನಿಯನ್ನು ಪ್ರಾರಂಭಮಾಡುವವರಾಗಿದ್ದಾರೆಂದೂ, ಆ ಸಮಯದಲ್ಲಿ ಪಂಜಾಬ್ ಆಧಿಪತ್ಯಕ್ಕೊಳಪಟ್ಟ ದೇಶೀಯ ರಾಜರುಗಳೆಲ್ಲಾ ಹಾಜರಾಗುತ್ತಾರೆಂದೂ ತಿಳಿದು ಬಂದಿದೆ.

ಮದರಾಸ್ ಪಟ್ಟಣದ ಜಾರ್ಜ್ ಟೌನ್ ಎಂಬ ಪೇಟೆಯೊಳಗೆ ಒಂದು ಮನೆಯಲ್ಲಿ ಆದಿಲಕ್ಷ್ಮಿ ಎಂಬ ಹುಡುಗಿಗೆ ಕಳೆದ ಭಾನುವಾರ ವಿವಾಹವಾಯಿತು. ಆ ಹೆಣ್ಣು ಆ ದಿನ ರಾತ್ರಿ ದೀಪದ ಕಂಬ ಇಟ್ಟಿದ್ದ ಕೊಠಡಿಯಲ್ಲಿ ಮಲಗಿ ನಿದ್ದೆ ಮಾಡುತ್ತಿದ್ದಾಗ ಅವಳು ಉಟ್ಟಿದ್ದ ಹೊಸ ಸೀರೆಯು ದೀಪಕ್ಕೆ ತಗುಲಿ ಹತ್ತಿಕೊಂಡದ್ದರಿಂದ ಬೆಳಗಿನ ಝಾಮದ 1 ಘಂಟೆಗೆ ಅರಚಿಕೊಳ್ಳುತ್ತಾ ಕೊಠಡಿಯಿಂದ ಓಡಿ ಬಂದಳು. ಅವಳ ತಾಯಿ ಮಗಳನ್ನು ಹಿಡಿದು ಸಂತೈಸಿ ಉಪಚರಿಸುವಲ್ಲಿ ತಾಯಿ ಮಗಳಿಬ್ಬರಿಗೂ ಮೈ ಸುಟ್ಟುಹೋಯಿತು. ಬೆಳಕು ಹರಿದ ಮೇಲೆ ಆ ಹುಡುಗಿಯನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗದೆ ಆ ಹುಡುಗಿಯು ಸತ್ತುಹೋದಳು. ಮದುವೆಯೇ ಆ ಹೆಣ್ಣಿಗೆ ಪ್ರಾಣಕಂಟಕವಾಗಿ ಪರಿಣಮಿಸಿತು.

ಬೊಂಬಾಯಿ ಪಟ್ಟಣದ ಪೋಲೀಸಿನವರು ಅಲ್ಲಿ ಜೂಜಾಡುತ್ತಿದ್ದವರನ್ನು ಹಿಡಿದು ಮೊಕದ್ದಮೆ ಮಾಡಿದರು. ಜೂಜುಕೋರರ ಕಡೆಯ ಲಾಯರು ಮ || ಧೂಂಡಿಯವರು ಮ್ಯಾಜಿಸ್ಟ್ರೇಟರನ್ನು ಕುರಿತು ಈ ಶ್ರಾವಣ ಮಾಸದಲ್ಲಿ ಜೂಜಾಡಬೇಕೆಂದು ಜನರಲ್ಲಿ ಒಂದು ಮೂಢಭಕ್ತಿಯುಂಟಾದದ್ದರಿಂದ ಈ ಅಪರಾಧಿಗಳನ್ನು ಖುಲಾಸ್ ಮಾಡಿಕೊಡಬೇಕೆಂದು ವಾದಿಸಿದರು. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮ ಜೋಶೀಲಾಲ್ ಸೆಟಲ್ವಾಡೆಯವರು ಅದಕ್ಕೆ ಪ್ರತಿಯಾಗಿ ಹಿಂದೂ ಮತವು ಜೂಜಾಡಬೇಕೆಂದು ಜನರಿಗೆ ಬೋಧನೆ ಮಾಡುವುದಿಲ್ಲವೆಂದೂ ಈಗ ಇವರನ್ನು ಮನ್ನಿಸಿ ಬಿಟ್ಟುಬಿಟ್ಟರೆ ಹಬ್ಬ ಕಾಲಗಳಲ್ಲಿ ಕದಿಯುವುದೂ ಹೆಚ್ಚಿ ಅದು ಕೂಡ ಬಿಸೋಡನಾಗಿ ಪರಿಣಮಿಸೀತು ಎಂದೂ ಜವಾಬು ಹೇಳಿ, ಆ ಜೂಜುಕೋರರಿಗೆಲ್ಲಾ ಶಿಕ್ಷೆಯನ್ನು ವಿಧಿಸಿದರು.

ಬೊಂಬಾಯಿ ಆಧಿಪತ್ಯದ ಕೆಲವು ಕಡೆಗಳಲ್ಲಿ ಕ್ಷಾಮವು ಪರಿಹಾರವಾದರೂ ಇನ್ನು ಕೆಲವು ಭಾಗಗಳಲ್ಲಿ ಅದು ಇನ್ನೂ ಇದ್ದೇ ಇದೆ. ಪಂಚಮಹಲ್ ಡಿಸ್ಟ್ರಿಕ್ಟಿನಲ್ಲಿ ಕ್ಷಾಮನಿವಾರಣೆಯ ಕಾರ್ಯಗಳು ನಿಲ್ಲಿಸಲ್ಪಟ್ಟವು. ಕಷ್ಟವಾದ ಪ್ರಾಂತ್ಯದಲ್ಲಿ ಕ್ಷಾಮಪೀಡಿತರು ಇದ್ದೇ ಇದ್ದಾರೆ. ಸರ್ಕಾರದವರು ಜಮೀನು ಆಬಾದು ಮಾಡಿಕೊಳ್ಳುವುದಕ್ಕೆ ರೈತರಿಗೆ ಸಾಲಗಳನ್ನು ಹಂಚಿಕೊಡುತ್ತಾ ಇದ್ದಾರೆ. 7 ನೇ ತಾ ಗೆ ಆಖೈರಾದ ವಾರದಲ್ಲಿ ಕಷ್ಟವಾದಲ್ಲಿ 15 ಜನರೂ, ಅಹಮದಾಬಾದು, ದರ್ಬಾರ್, ಕರ್ನಾಟಕ, ಈ ಪ್ರದೇಶಗಳಲ್ಲಿ 12,168 ಜನರೂ ಕ್ಷಾಮಪೀಡಿತರಾಗಿ ಸರ್ಕಾರದ ಪೋಷಣೆಯಲ್ಲಿರುವರು. ಕಷ್ಟವಾದ ಮತ್ತು ಜಾತಿ ವಾರಿಯ ಸಂಸ್ಥಾನಗಳಲ್ಲಿ 1,912 ಜನರು ಸರ್ಕಾರದ ಅನ್ನ ಛತ್ರಗಳಲ್ಲಿ ಸೇರಿಕೊಂಡು ಜೀವನ ಮಾಡುತ್ತಿದ್ದರು.

ಹೈದರಾಬಾದ್ ಸಂಸ್ಥಾನದಲ್ಲಿ ಕೆಲವರು ಸೇರಿಕೊಂಡು ರಾಜಕೀಯ ವಿಚಾರವಾದ ಮುಸಲತ್ತುಗಳನ್ನು ಮಾಡಿ ಗುಪ್ತವಾಗಿ ಕಾಗದಪತ್ರಗಳನ್ನು ನಡಿಸುತ್ತಿದ್ದಾರೆಂದು ನೈಜಾಮರವರಿಗೂ ಬ್ರಿಟಿಷ್ ರೆಸಿಡೆಂಟರವರಿಗೂ ತಿಳಿಯಿತು. ಅಂಥಾ ಕೆಲವು ಕಾಗದಪತ್ರಗಳೂ ಸಿಕ್ಕಿದವು. ಬರವಣಿಗೆಯ ಪರೀಕ್ಷಕರಾದ ಮ ಹಾರ್ಡ್‌ಲೆಸ್ ಎಂಬ ಅಧಿಕಾರಿಯನ್ನು ಕಲ್ಕತ್ತೆಯಿಂದ ನೈಜಾಂ ಸರ್ಕಾರದವರು ಹೈದರಾಬಾದಿಗೆ ಕರೆಸಿಕೊಂಡು ಆ ಕಾಗದಪತ್ರಗಳನ್ನು ಬರೆದ ಕೈದ ... ಪ್ರತಿಗಳು ಇಂಥಾವರೆಂದು ಖಚಿತ ಮಾಡಿಕೊಂಡರು. ಈ ವಿಚಾರಕ್ಕೆ ಫಲಿತಾಂಶವೇನಾಯಿತೆಂದರೆ, ಕಳೆದ ವಾರ ನೈಜಾಮರವರು ತಮ್ಮ ಸರ್ಕಾರದ ಅಸಿಸ್ಟೆಂಟ್ ಜನರಲ್‌ರವರ ಆಫೀಸ್ ನೌಕರನಾಗಿದ್ದ ಒಬ್ಬನನ್ನೂ, ಮೂರು ಮಂದಿ ವಕೀಲರುಗಳನ್ನೂ ಹುಕುಂ ಕೊಟ್ಟು ಹೈದರಾಬಾದಿನಿಂದ ಗಡಿಪಾರು ಮಾಡಿಸಿಬಿಟ್ಟರು.

ಕುಂಬಕೋಣಕ್ಕೆ ಪೂರ್ವದಿಕ್ಕಿನಲ್ಲಿ ನಾಲ್ಕು ಮೈಲಿ ದೂರದಲ್ಲಿ ಉಪ್ಪಿಲಿಯಪ್ಪನ್ ಕೋಯಿಲ್ ಎಂಬ ಒಂದು ವಿಷ್ಣುದೇವಾಲಯವಿದೆ. ಈ ದೇವಾಲಯಕ್ಕೆ ಅನೇಕ ಭಕ್ತರುಗಳು ಹೋಗಿ ಹರಿಕೆ ಕಪ್ಪಕಾಣಿಕೆಗಳನ್ನು ಸಲ್ಲಿಸುವುದುಂಟು. ಕೆಲವು ದಿನಗಳ ಕೆಳಗೆ ಒಬ್ಬ ಇಂಗ್ಲೀಷ್ ವಿದ್ಯಾವಂತನು ತನ್ನ ಸಂಸಾರಕ್ಕೆ ಸೇರಿದವರನ್ನೆಲ್ಲಾ ಕರೆದುಕೊಂಡು ಆ ದೇವಾಲಯಕ್ಕೆ ಸೇವಾರ್ಥ ನಡಿಸುವುದಕ್ಕೆ ಹೋದನು. ಅವರೆಲ್ಲಾ ದೇವಸ್ಥಾನದೊಳಕ್ಕೆ ಪ್ರವೇಶಿಸಿ ಹೊರಪ್ರಾಕಾರದಲ್ಲಿರುವ ಧ್ವಜಸ್ತಂಭದ ಬಳಿಗೆ ಹೋದ ಕೂಡಲೆ ಒಂದು ನಾಗರಹಾವು ಅಲ್ಲಿ ಅಕಸ್ಮಾತ್ತಾಗಿ ಕಾಣಿಸಿಕೊಂಡು ಅವರಿಗೆ ಅಡ್ಡಲಾಗಿ ಬಂದು ಹೆಡೆಯನ್ನೆತ್ತಿ ಕೋಪದಲ್ಲಿದ್ದಂತೆ ಸದ್ದು ಮಾಡುವುದಕ್ಕಾರಂಭಿಸಿತು. ಅದನ್ನು ನೋಡಿದ ಕೂಡಲೇ ಅವರಿಗೆಲ್ಲಾ ಬಹಳ ಗಾಬರಿಯೂ ಆಶ್ಚರ್ಯವೂ ಉಂಟಾಗಿ ಮುಂದೆ ಹೋಗದೆ ನಿಂತುಬಿಟ್ಟರು. ದೇವಸ್ಥಾನದಲ್ಲಿದ್ದ ಪೂಜಾರಿಯು ಇದನ್ನು ನೋಡಿ ಅವರ ಬಳಿಗೆ ಬಂದು ನಿಮ್ಮ ಪೈಕಿ ಯಾರ ಬಳಿಯಲ್ಲೋ ಉಪ್ಪು ಇದೆ, ಅದರಿಂದ ಈ ಸರ್ಪವು ನಿಮ್ಮನ್ನು ಒಳಕ್ಕೆ ಬಿಡದೆ ತಡೆದುಬಿಟ್ಟಿತು. ಉಪ್ಪನ್ನು ಚೆಲ್ಲಿ ಬಂದರೆ ಯಾವ ಅಡ್ಡಿಯೂ ಇರುವುದಿಲ್ಲ ಎಂದು ಹೇಳಿದನು. ಆಗ ಆ ಗುಂಪಿನವರೆಲ್ಲಾ ತಮ್ಮ ವಸ್ತ್ರಗಳನ್ನು ಬಿಚ್ಚಿ ಶೋಧಿಸಿ ನೋಡುವಲ್ಲಿ ರಾಮಸ್ವಾಮಿ ಎಂಬವನು ಹಿಂದಿನ ದಿನ ಅಂಗಡಿಯಲ್ಲಿ ಕೊಂಡುತಂದು ಅಡಿಗೆಗೆ ಉಪಯೋಗಿಸಿ ಉಳಿದಿದ್ದ ಸಲ್ಪ ಉಪ್ಪನ್ನು ತನ್ನ ಪಂಚೆಯ ಕೊನೆಯಲ್ಲಿ ಗಂಟುಹಾಕಿಕೊಂಡು ಇದ್ದದ್ದು ಅವನ ಪಂಚೆಯಲ್ಲಿ ಸಿಕ್ಕಿತು. ಆ ಉಪ್ಪನ್ನು ಅವನು ಬಿಚ್ಚಿ ಚೆಲ್ಲಿಬಿಟ್ಟನು. ಕೂಡಲೇ ಆ ನಾಗರಹಾವು ಏನೂ ಮಾಡದೆ ಸುಮ್ಮನೆ ಹೊರಟುಹೋಯಿತು. ಬಳಿಕ ಅವರೆಲ್ಲಾ ದೇವಸ್ಥಾನದ ಗರ್ಭಗುಡಿಗೆ ಹೋಗಿ ಪೂಜೆ ಪುನಸ್ಕಾರವನ್ನು ಮಾಡಿಸಿಕೊಂಡು ಕಪ್ಪಕಾಣಿಕೆಗಳನ್ನು ಸಲ್ಲಿಸಿ ವಾಪಸು ಬಂದರು. ದೇವಸ್ಥಾನಕ್ಕೆ ಹೋಗಿದ್ದ ಆ ಇಂಗ್ಲೀಷ್ ವಿದ್ಯಾವಂತನು ನಾಗರಹಾವಿನ ಈ ಕಥೆಯನ್ನು ಬರೆದಿರುತ್ತಾನೆ.

ಹಿಂದುಸ್ಥಾನದಲ್ಲಿ ವಿಮಾನಯಂತ್ರಗಳ ಕಾನೂನು

ಅದರ ನಿಬಂಧನೆಗಳು

ಇಂಡಿಯಾ ಗವರ್ನ್‌ಮೆಂಟಿನವರು ಈ ದೇಶದೊಳಗೆ ವಿಮಾನ ಯಂತ್ರಗಳನ್ನು ಉಪಯೋಗಿಸುವಂಥವರಿಗೆ ಅನ್ವಯಿಸುವಂಥಾ ಕೆಲವು ನಿಬಂಧನೆಗಳನ್ನು ಮಾಡಿ ಒಂದು ಮಸೂದೆ ಕಾನೂನನ್ನು ಇಂಡಿಯಾ ಸರ್ಕಾರಿ ಗೆಜೆಟಿನಲ್ಲಿ ಪ್ರಾಯಸ್ ಮಾಡಿ, ಈ ನಿಬಂಧನೆಗಳ ವಿಷಯದಲ್ಲಿ ಅಕ್ಟೋಬರ್ ತಾ 1 ರಿಂದ ಆಚೆಗೆ ಚರ್ಚೆ ನಡೆಸಿ ತೀರ್ಮಾನಮಾಡುವುದಾಗಿಯೂ, ಅದರೊಳಗೆ ಪ್ರಜೆಗಳೂ ಸಂಘಗಳೂ ಆ ನಿಬಂಧನೆಗಳ ವಿಷಯದಲ್ಲಿ ತಮ್ಮ ಅಭಿಮತವನ್ನು ಸರ್ಕಾರಕ್ಕೆ ತಿಳಿಯಪಡಿಸಬಹುದಾಗಿಯೆಂದೂ ಪ್ರಕಟಿಸಿರುತ್ತಾರೆ. ಈಗ ಪ್ರಾಯಸ್ ಆಗಿರುವ ನಿಬಂಧನೆಗಳ ಕೆಲವುಗಳೇನೆಂದರೆ

ವಿಮಾನ ಯಂತ್ರಗಳನ್ನು ಕೊಂಡು ತಾವು ಉಪಯೋಗಿಸುವವರೆಲ್ಲಾ ಪ್ರಸಿಡೆನ್ಸಿ ಟೌನ್‌ಗಳಲ್ಲಿರುವ ಪೋಲೀಸ್ ಕಮಿಷನರುಗಳಿಗೆ ಮೊದಲೇ ತಿಳಿಸಿ ಅವರಿಂದಲೂ, ಇತರ ಕಡೆಗಳಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಂದಲೂ ಅದಕ್ಕಾಗಿ ಲೈಸೆನ್ಸನ್ನು ಪಡೆದುಕೊಳ್ಳಬೇಕು. ಈ ಲೈಸೆನ್ಸು ವರುಷಕ್ಕೊಂದಾವರ್ತಿ ಕೊಡಲ್ಪಡುವುದು. ವಿಮಾನ ಯಂತ್ರಗಳಲ್ಲಿ ಸಂಚಾರಮಾಡತಕ್ಕವರು ಆ ಯಂತ್ರಗಳೊಳಗೆ ತಮ್ಮ ಜೊತೆಯಲ್ಲಿ ಸ್ಫೋಟಕ ಪದಾರ್ಥಗಳನ್ನಾಗಲಿ, ಯುದ್ಧಸಾಮಗ್ರಿಗಳನ್ನಾಗಲಿ, ತಂತಿ ಇಲ್ಲದ ವರ್ತಮಾನ ಕೊಟ್ಟು ತಿಳಿದುಕೊಳ್ಳಬಹುದಾದ ಉಪಕರಣಗಳನ್ನಾಗಲಿ ತೆಗೆದುಕೊಂಡು ಹೋಗಕೂಡದು. ಸಮಾಚಾರ ಕಾಗದಪತ್ರಗಳನ್ನು ಸ್ಥಳಾಂತರಗಳಿಗೆ ತೆಗೆದುಕೊಂಡು ಹೋಗುವುದಕ್ಕೆ ಪಾರಿವಾಳಗಳನ್ನೂ, ಫೋಟೋ ತೆಗೆಯುವುದಕ್ಕೆ ಬೇಕಾದ ಉಪಕರಣಗಳನ್ನೂ ಸಾಮಾನ್ಯವಾಗಿ ವಿಮಾನ ಯಂತ್ರಗಳಲ್ಲಿ ತೆಗೆದುಕೊಂಡು ಹೋಗಕೂಡದು. ಅದರೆ ಅಧಿಕಾರಸ್ಥರ ಅನುಮತಿಯಿಂದ ಈ ಭಾಗದಲ್ಲಿ ರಿಯಾಯಿತಿ ತೋರಿಸಿದರೂ ತೋರಿಸಬಹುದು. ಮಾಜಿಸ್ಟ್ರೇಟರೂ, ಅಧಿಕಾರಸ್ಥರೂ ಇದ್ದ ಇತರ ಪುರುಷರಾದರೂ ತಮ್ಮ ಇಷ್ಟ ಬಂದ ವೇಳೆಯಲ್ಲಿ ಯಾವ ವಿಮಾನ ಯಂತ್ರವನ್ನಾದರೂ ಪರೀಕ್ಷಿಸಿ ಒಳಗಿರುವ ಪದಾರ್ಥಗಳೆಲ್ಲಾ ತೃಪ್ತಿಕರವಾದ ರೀತಿಯಲ್ಲಿ ಶೋಧಿಸಬಹುದಾಗಿದೆ.

ವೀರವಸಂತರಾಯ.

ಕೋಲಾರ ಜಿಲ್ಲೆ ಚಿಂತಾಮಣಿ ತಾಲೂಕು ಮತ್ತು ಮಾಲೂರು ಸುತ್ತಮುತ್ತಲಿನ ಪ್ರಾಂತಗಳಲ್ಲಿ ವೀರವಸಂತರಾಯನು ಅವತರಿಸುವನೆಂಬ ವಾರ್ತೆಯು ಹರಡಿ ಜನಗಳ ಕಿವಿಗಳನ್ನು ತುಂಬಿತು. ಜನರೊಳಗೆ ಹರಿಕಥೆ ಹೇಳುವ ಬ್ರಾಹ್ಮಣ ಮುಖ್ಯಸ್ಥರಿಗೆ ಒಂದು ಪತ್ರಿಕೆಯನ್ನು ಬರೆದು, ಆ ಪತ್ರದ ಸಮಾಚಾರವನ್ನು ಸಕಲರಿಗೂ ತಿಳಿಸಬೇಕೆಂತಲೂ, ಹಾಗೆ ಮಾಡದೆ ಪತ್ರಗಳನ್ನು ಐದು ಗ್ರಾಮಗಳಿಗೆ ಕಳುಹಿಸಬೇಕೆಂತಲೂ, ಹಾಗೆ ಮಾಡದ ಪಕ್ಷದಲ್ಲಿ ಆ ಗ್ರಾಮದವರು ಪುತ್ರರಿಲ್ಲದವರಾಗಿ ದುಃಖಪಡುವರೆಂದು ಬರೆಯಲಾಗಿತ್ತು. ಆ ಅವತರಿಸತಕ್ಕ ವೀರವಸಂತರಾಯನು ಎಲ್ಲಿ ಯಾವಾಗ ಹೇಗೆ ಅವತರಿಸುವನೆಂಬುದನ್ನು ಆ ಪತ್ರದಲ್ಲಿ ಇದ್ದಂತೆ ಈ ಕೆಳಗೆ ವಿವರಿಸುತ್ತೇವೆ. ಸಾಕ್ಷಾತ್ ಶಿವನೇ ವೀರವಸಂತರಾಯನು ಬೆಟ್ಟದ ಗುಹೆಗಳಲ್ಲಿ ಹುಟ್ಟುವನೆಂದು ಕೆಲವು ದಿವಸಕ್ಕೆ ಆ ಪತ್ರ ಹರಡಿತು. ಸಂವತ್ಸರದ ಶ್ರಾವಣ ಶುದ್ಧ 11 ರಲ್ಲಿ ವೀರವಸಂತರಾಯನ ಅವತಾರವು ಹಗಲು 10 ಘಂಟೆಗೆ ರಾಯಚೂರಿನ ಸಮೀಪದ ಬೆಟ್ಟದಲ್ಲಿ ಆಗತಕ್ಕದ್ದು. ಮಾಮಿನ ಆತನು ಎತ್ತರವಿರುವನೆಂದರೆ ನಾಲ್ಕು ಮೊಳ ಉದ್ದ, ಎಂಟು ಮೊಳ ಅಗಲ, ಕಪ್ಪು ಬಣ್ಣದ ಬಿಳಿ ವಸ್ತ್ರವನ್ನುಟ್ಟು, ಹದಿಮೂರು ನೇತ್ರಗಳು ಮೂರು ಲಕ್ಷದ ಇಪ್ಪತ್ತೆಂಟು ಸಾವಿರ ರೂಪವುಳ್ಳ ಮಹಾತ್ಮನು ದರಿದ್ರರು ಬ್ರಾಹ್ಮಣರು ರೋಗಿಗಳು ಕಷ್ಟಗಳು ಇರುವವರು ವಸಂತರಾಯನು ಬರುವ ಕಾಲಕ್ಕೆ ಹಗಲು 10 ಘಂಟೆಗೆ ಅವನು ಇದ್ದ ಕಡೆ ಹೋಗಿ ನೋಡುವವರು ಮತ್ತು ಅಲ್ಲದ ಆತನನ್ನು ಹಾಗೆ ದರ್ಶಿಸಿ ತಲೆ ಮತ್ತು ಅಲ್ಲಿ ಹೋಗದವರು ಸರ್ವನಾಶವಾಗಿ ಕಷ್ಟಪಡಬೇಕೆಂತಲೂ ಬರೆದಿದೆ. ಈ ವಾರ್ತೆಗಳನ್ನು ಕೆಲವರು ನಂಬಿ ಸೂಚಿಸಿದ ಕಾಲಕ್ಕೆ ಸರಿಯಾಗಿ ಅಲ್ಲಿಗೆ ಹೋಗಿ ಏನೂ ಕಾಣದೆ ಆಶಾಭಗ್ನರಾಗಿ ಹಿಂತಿರುಗಿ ಬಂದರೆಂದು ಸುದ್ದಿ ಕೇಳಿದೆವು.

ಈ ವಿಷಯದಲ್ಲಿ ಹೀಗೆ ಬರೆಯಲು ಬರೆಯುವರ ಉದ್ದೇಶ ಏನೆಂಬುದು ಊಹಿಸುವುದಕ್ಕಾಗದು. ಈ ದೇಶದ ಅನೇಕ ಜನರಲ್ಲಿ ಒಬ್ಬ ಮಹಾತ್ಮನು ಬರಬೇಕೆಂಬ ಕೋರಿಕೆ ನೆಲಗೊಂಡಿರುವುದನ್ನು ಉಪಯೋಗಿಸಿಕೊಳ್ಳುವುದು ಅವರ ಹಾಗಿದ್ದರೂ ನಾವು ನೆನೆಸುವ ಪ್ರಕಾರ ಅವರು ಹೇಳಿಕೆ ಸುಳ್ಳಾದಾಗ ಆ ಮಹಾಪುರುಷನು ಆಗಲಿ ಬರದಿದ್ದರೆ ಅವನೇ ನಮ್ಮ ಯೋಗ್ಯತೆಯನ್ನು ಕರೆಯುತ್ತಾನೆ. ಈ ಸಂದರ್ಭಕ್ಕೆ ಶಿವನಿಗೂ ಆಲೋಚನೆ ಬಂದು ವಚನವು ಸರಿಹೋಗುತ್ತದೆ. ಅದು ಏನೆಂದರೆ — "ಕೆಡ ಬರುತ್ತಾನೆಂದ ಸುದ್ದಿಗಳು!" ಅತಿಯಾದಲ್ಲಿ ಏರಿಕೆಯಾದ ಅವನ ಬೆಲೆ ಕಡಿಮೆ ಗುರುತುಹಿಡಿಯುವಲ್ಲಿ.

ವ. ಯಸ್.

ಮೈಸೂರು ಸರ್ಕಾರಿ ಹುಕುಮು

ಯಳಂದೂರು ಜಹಗೀರುದಾರ.

ಕಳೆದ 1911 ನೇ ಡಿಸೆಂಬರ್ ತಾ 10 ನೇ ಭಾನುವಾರ ಯಳಂದೂರು ಜಹಗೀರುದಾರ್ ರಾವ್ ಬಿ ಎಲ್ ಕೃಷ್ಣಮೂರ್ತಿ, ಸಿ ಐ ಇ. ಯವರು ಕಾಲವಾದ ಬಳಿಕ ಅವರ ಸಹೋದರನ ಕುಮಾರರಾದ ಮಿ ನರಸಿಂಗರಾವ್ ಪೂರ್ಣಯ್ಯನವರು ಜಹಗೀರುದಾರರು ಅಪುತ್ರವಂತರಾಗಿ ಕಾಲವಾದದ್ದರಿಂದಲೂ, ತಾವು ಕೃಷ್ಣರಾಜ ಒಡೆಯರ್ ಮಿ ಸಿ ಎಲ್ ಪೂರ್ಣಯ್ಯನವರ ಹಿರಿಯಮಗನಾದುದರಿಂದಲೂ 1800 ನೇ ಇಸವಿಯಲ್ಲಿ ಮುಖ್ಯದ ಆ ಜಹಗೀರಿಯ ವ್ಯವಸ್ಥೆ ಪ್ರಕಾರ ಆ ಜಹಗೀರುದಾರರಾಗಿ ತಮ್ಮನ್ನು ಹಕ್ಕುದಾರರೆಂದು ನಿರ್ಣಯಿಸಬೇಕೆಂದು ಸರ್ಕಾರದವರನ್ನು ಕೇಳಿಕೊಂಡರು. ಅದರ ಮೇಲೆ ಸರ್ಕಾರದವರು ಮಿ ನರಸಿಂಗರಾವ್ ಪೂರ್ಣಯ್ಯನವರ ಅರ್ಜಿಯನ್ನು ವ್ಯವಸ್ಥೆ ಮಾಡಬೇಕಾಗಿರೋದರಿಂದ ಇತರ ಹಕ್ಕುದಾರರು ಯಾರಾದರೂ ಇದ್ದಲ್ಲಿ 1912 ನೇ ಸಪ್ಟಂಬರು ತಾ 20 ರೊಳಗಾಗಿ ಗವರ್ನ್‌ಮೆಂಟ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದೆಂದು ಪ್ರಕಟಪಡಿಸಿದರು. ಶ್ರೀ ಕೃಷ್ಣಮೂರ್ತಿಯವರೂ ತಾವು ಜಹಗೀರುದಾರರಾಗಬೇಕೆಂದೂ, ಮಿ ಸಿ ರಾಜಾರಾವ್ ಸಾಹೇಬ್‌ಯವರು ತಮ್ಮ ಮೈನರ್ ಮಗನು ಅದಕ್ಕೆ ಹಕ್ಕುದಾರನೆಂದೂ ಮಿ ವೆ ವಿ ಕೃಷ್ಣಮೂರ್ತಿಯವರು ತಮಗೆ ಆ ಜಹಗೀರಿಯ ಉತ್ಪತ್ತಿಯಲ್ಲಿ ಸಲುತ್ತಿರುವ ವರುಷಾಶನವನ್ನು ಹೆಚ್ಚು ಮಾಡಿ ಕೊಡಬೇಕೆಂದೂ ಅರ್ಜಿ ಬರೆದುಕೊಂಡರು.

ಈ ವಿಚಾರವನ್ನು ದಿವಾನ್‌ರವರೂ ಕೌನ್ಸಿಲ್ ಮೆಂಬರುಗಳೂ 1912 ನೇ ಮಾರ್ಚಿ ತಾ 22 ರಲ್ಲೂ, 31 ರಲ್ಲೂ ಕುರಿತು ವಿಚಾರಣೆ ಮಾಡಿದರು. ಮಿ ನರಸಿಂಗರಾವ್ ಪೂರ್ಣಯ್ಯನವರ ಕಡೆ ಮಿ ಎಂ ಸಿ ರಂಗಯ್ಯಂಗಾರರೂ ಮಿ ಎಸ್ ರಂಗಣ್ಣನವರೂ ಆಡಿ ಕೃಷ್ಣಮೂರ್ತಿಯವರ ಪರವಾಗಿ ಮಿ ಎಲ್ ಎ ಗೋವಿಂದರಾಘವ ಅಯ್ಯರವರೂ ಮಿ ಸಿ ರಾಜಾರಾವ್ ಸಾಹೇಬ್‌ಯವರ ಮೈನರ್ ಮಗನ ಪಕ್ಷವನ್ನು ಹಿಡಿದು ಮಿ ಟೀ ಸ್ ಸ್ಮಾರ್ಟ್‌ಯವರೂ, ಮಿ ಕೆ ಶ್ರೀನಿವಾಸ್ಯಯ್ಯಂಗಾರ್ರೂ ವಾದಿಸಿದರು.

ಗವರ್ನ್‌ಮೆಂಟಿನವರು ಎಲ್ಲಾ ವಿಧ ಪ್ರಮಾಣಗಳನ್ನೂ ಪರಿಶೀಲನೆ ಮಾಡಿ ಆಜ್ಞೆ ಕೊಟ್ಟಿರುವ ತೀರ್ಮಾನವೇನೆಂದರೆ. ಮಿ ನರಸಿಂಗರಾವ್ ಪೂರ್ಣಯ್ಯನವರು ಲೇಟ್ ಸರ್ ಪಿ ಎನ್ ಕೃಷ್ಣಮೂರ್ತಿಯವರ ಉತ್ತರಾಧಿಕಾರಿಗಳಾಗಿ ಯಳಂದೂರು ಜಹಗೀರುದಾರರೆಂದು ಇತ್ಯರ್ಥವಾಗಿದೆ. ಈ ವಿಚಾರವನ್ನು ಸರ್ಕಾರಿ ಗೆಜೆಟ್‌ನಲ್ಲಿ ಪ್ರಾಯಸ್ ಮಾಡತಕ್ಕದ್ದು. ಮತ್ತು ಮುಂದೆ ಬರೆದಿರುವಂತೆ ಈ ಜಹಗೀರಿಯ ಉತ್ಪತ್ತಿಯಲ್ಲಿ ವರುಷಾಶನಗಳು ಸಲತಕ್ಕದ್ದೆಂದು ತೀರ್ಮಾನವಾಗಿದೆ. (1) ಲೇಟ್ ಕಾವೇರಿಬಾಯಿ ಕೆ ಪಿ ಮೂರ್ತಿಯವರಿಗೆ 1000 ರೂಪಾಯಿ, (2) ಮಿ ನರಸಿಂಗರಾವ್ ಪೂರ್ಣಯ್ಯನವರ ? 6,000 ರೂಪಾಯಿ.

ಜಪಾನ್ ರಾಜ್ಯದ ಲೇಟ್ ಚಕ್ರವರ್ತಿಯವರು

ಅವರ ಉತ್ತರಕ್ರಿಯಾದಿಗಳು.

ಜಪಾನ್ ಚಕ್ರವರ್ತಿಯವರಾದ ಮುತ್ಸುಹಿತೋರವರು ಕಾಲವಾಗಿ ಇಲ್ಲಿಗೆ ಎರಡು ತಿಂಗಳ ಮೇಲಾಯಿತು. ಅವರ ಶವವನ್ನು ಆ ದೇಶದ ಪದ್ಧತಿಯನ್ನನುಸರಿಸಿ ಕಳೆದ ತಾ 13 ನೇ ಶುಕ್ರವಾರದ ತನಕ ಅರಮನೆಯಲ್ಲಿ ಇಟ್ಟುಕೊಂಡಿದ್ದರು. ಶುಕ್ರವಾರದ ದಿನ ಉತ್ತರಕ್ರಿಯಾದಿಗಳು ಪ್ರಾರಂಭವಾದವು. ಅರಮನೆಯ ವಿಶಾಲವಾದ ಒಂದು ಸ್ಥಳದಲ್ಲಿ ಲೇಟ್ ಚಕ್ರವರ್ತಿಯವರ ಕಳೇಬರವನ್ನು ಇಟ್ಟು ಅಲ್ಲಿ ದೇವರ ಪ್ರಾರ್ಥನೆ ಪೂಜಾದಿಗಳು ನಡೆದವು. ಚಕ್ರವರ್ತಿಯವರು ಸಿಂಹಾಸನಾಧಿಪತಿಯು ಶೋಕವನ್ನು ಧರಿಸಿಕೊಂಡು ತಂದೆಯ ಕಳೇಬರವನ್ನು ಅಭಿವಂದನ ಮಾಡಿ ಪ್ರಾರ್ಥನೆಯನ್ನು ಸಲ್ಲಿಸಿದರು. ನೈವೇದ್ಯಾದಿಗಳೂ ಕೈಂಕರ್ಯ ಮತ್ತು ಎಂಟು ಬಗೆಯ ಬಿಳಿ ರೇಷ್ಮೆ ಬಟ್ಟೆಗಳನ್ನಿಟ್ಟು ಒಪ್ಪಿಸಿದ್ದರು. ಚಕ್ರವರ್ತಿನಿಯವರೂ ಮಹಾರಾಣಿಯವರೂ ಅರಮನೆಯ ಕೆಲವರೂ ಸಹ ಬಂದು ಕೊನೆಯ ಉಪಚಾರಗಳನ್ನು ಮಾಡಿದರು. ಬಳಿಕ ಶವದ ಒಳಗೆ ಹೋಗಿ ಸಮಾಧಿಪೂರ್ವಕವಾಗಿ ನಡೆಯ ಕಾರ್ಯಗಳನ್ನು ನಡೆಸಿದರು. ರಾಜಕುಮಾರರೂ ರಾಜಕುಮಾರಿಯರೂ ಮುಖ್ಯಾಧಿಕಾರಿಗಳೂ ಮತ್ತಿತರ ಅವರನ್ನು ಅನುಸರಿಸಿ ಸಮಾರಂಭಗಳನ್ನು ವಿಶೇಷ ಗಾಂಭೀರ್ಯಯುಕ್ತವಾಗಿ ನೆರವೇರಿಸಿದರು. ತರುವಾಯ ಇತರ ಪ್ರಜೆಗಳು ಆ ಮಂಟಪಕ್ಕೆ ಬಂದು ಕೊನೆಯ ಪ್ರಾರ್ಥನೆಗಳನ್ನು ಸಮರ್ಪಿಸಿದರು.

ಚಕ್ರವರ್ತಿಯವರು ಆ ದಿನ ಕೆಲವು ಬಂದಿಗಳನ್ನು ಬಿಡುಗಡೆ ಮಾಡಿದ್ದಲ್ಲದೆ ಧರ್ಮಕಾರ್ಯಗಳಿಗೋಸ್ಕರ ಹತ್ತು ಲಕ್ಷ ದ್ರವ್ಯವನ್ನು ಸ್ವೀಕರಿಸಿ ದಾನ ಮಾಡಿದರು.

ಲೇಟ್ ಚಕ್ರವರ್ತಿಯವರ ಶವವನ್ನು 10 ಅಡಿ ಉದ್ದ 5 ಅಡಿ ಅಗಲವುಳ್ಳ ಒಂದು ದಿವ್ಯವಾದ ಪೆಟ್ಟಿಗೆಯಲ್ಲಿ ಮಲಗಿಸಿದರು. ಅದು 110 ಮಣ ಭಾರವಾಗಿತ್ತು. ಅದಕ್ಕೆ ದಿವ್ಯವಾದ ಬಟ್ಟೆಗಳನ್ನು ಸುತ್ತಿ ಅಲಂಕಾರ ಮಾಡಿದರು. ಪ್ರಾರ್ಥನಾದಿ ಕಾರ್ಯಗಳು ಮುಗಿದ ಬಳಿಕ ಕಳೇಬರ ಸಹಿತವಾದ ಆ ಪೆಟ್ಟಿಗೆಯನ್ನು ಅರಮನೆಯಿಂದ ಮೆರವಣಿಗೆಯಾಗಿ ಹೊರಕ್ಕೆ ತಂದು, ಅದಕ್ಕಾಗಿ ರಚಿಸಲ್ಪಟ್ಟಿದ್ದ ಒಂದು ರಥದ ಮೇಲಿಟ್ಟರು. ಅಲ್ಲಿ ಅನೇಕ ಸಲ್ಲದ ದೀಪಗಳನ್ನು ಹಚ್ಚಿದ್ದರು. ಎರಡು ಚಕ್ರಗಳುಳ್ಳ ಈ ರಥಕ್ಕೆ ರಾಜಪ್ರದತ್ತವಾದ ಐದು ಶ್ರೇಷ್ಠವಾದ ಎತ್ತುಗಳನ್ನು ತಂದು ಕಟ್ಟಿ ಇವುಗಳಿಂದ ರಥವನ್ನು ಎಳೆಯುವಂತೆ ಏರ್ಪಾಡಾದ ಮಹಾಸ್ಥಳಕ್ಕೆ ಎಳೆಸಿಕೊಂಡು ಹೋದರು. ಈ ಮೆರವಣಿಗೆಯಲ್ಲಿ ಅಧಿಕಾರಿಗಳೇ ಮೊದಲಾದವರೆಲ್ಲಾ ಕೈಯಲ್ಲಿ ಒಂದೊಂದು ದೀಪವನ್ನು ಹಚ್ಚಿ ಹಿಡಿದುಕೊಂಡು ಹೋದರು. ಅಗ್ನಿ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಸೇನೆಯವರೂ ಅಧಿಕಾರಿಗಳೂ ರಾಜಬಂಧುಗಳೂ ಎಲ್ಲಾ ನಡೆಯುತ್ತಾ ಹೋದರು. ಈ ಮೆರವಣಿಗೆಯು ಬಹು ಗಂಭೀರವಾಗಿಯೂ ಅಪೂರ್ವವಾಗಿಯೂ ಇತ್ತು. ಲಕ್ಷಾಂತರ ಪ್ರಜೆಗಳು ಕೂಡಿದ್ದು ತಮ್ಮ ಗತಿಸಿದ ಚಕ್ರವರ್ತಿಯವರಿಗೆ ಮರ್ಯಾದೆ ಮಾಡಿ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ನಾನಾ ಬಗೆಯ ಪ್ರಾಚೀನ ಒಲವಾದ್ಯಗಳು ದೀರ್ಘ ಸ್ವರವನ್ನೆತ್ತಿ ಪದಗಳನ್ನು ನುಡಿಸುತ್ತಿದ್ದವು. 900 ಜನರು ಪಂಜುಗಳನ್ನು ಹಿಡಿದು ಹೋದರು. ಜಪಾನ್ ಮತ್ತು ಇಂಗ್ಲಿಷ್ ಸೇನೆಯವರು ಶೋಭಾಯಮಾನ ರಸ್ತೆಗಳನ್ನು ಸುರಕ್ಷಿತವಾಗಿ ಮಾಡಿದ್ದರು. ರಸ್ತೆಗಳ ಉಭಯಪಾರ್ಶ್ವ ಮನೆಗಳ ಮುಂಭಾಗದಲ್ಲಿ ನಾನಾ ವಿಧವಾದ ಕುರುಹುಗಳನ್ನಿಟ್ಟು ದೀಪಗಳನ್ನು ಉರಿಯಿಸಿದ್ದರು. ಉಭಯಪಾರ್ಶ್ವ ಕಂಭಗಳನ್ನು ನಿಲ್ಲಿಸಿ ಕಪ್ಪು ಬಿಳಿ ಸುತ್ತು ಕಪ್ಪು ಬಾವುಟಗಳನ್ನು ಕಟ್ಟಿದ್ದರು. ರಥವು ಮೈದಾನದ ಮಧ್ಯೆ ಕಟ್ಟಿದ್ದ ಮಂಟಪಕ್ಕೆ ಬಂದ ಕೂಡಲೆ ಚಕ್ರವರ್ತಿಯವರು ಸೈನ್ಯಾಧಿಪತಿಯ ದುಸ್ತನುಳ್ಳ, ರಾಣಿಯವರು ಬಿಳಿಯ ಉಡುಪನ್ನುಳ್ಳ ಕಳೇಬರವಿದ್ದ ಪೆಟ್ಟಿಗೆಯ ಸಮೀಪಕ್ಕೆ ಹೋಗಿ ವಂದನೆ ಮಾಡಿದರು. ಬೆಳಗ್ಗೆ ಅರಮನೆಯೊಳಗೆ ನಡೆದ ಕಾರ್ಯಗಳು ಅಲ್ಲಿ ಸಕಲ ಪ್ರಜೆಗಳ ಎದುರಿಗೆ ನಡೆದವು. ಕಡೆಯಲ್ಲಿ ಚಕ್ರವರ್ತಿಯವರು ಪೆಟ್ಟಿಗೆಯ ಬಳಿಗೆ ಹೋಗಿ ಅದರ ಮೇಲೆ ಕೈಯನ್ನು ಇಟ್ಟುಕೊಂಡು ಸ್ವಲ್ಪ ಹೊತ್ತು ಪ್ರಾರ್ಥನೆಯನ್ನು ಸಲ್ಲಿಸಿದರು. ಬಳಿಕ ಅವರು ಸಂಬಂಧಪಟ್ಟ ಅವಶೇಷವನ್ನು ಆ ಮಹಾದಿವ್ಯ ಮಂದಿರಕ್ಕೆ ತೆಗೆದುಕೊಂಡು ಹೋದರು. ಆ ಸಮಯದಲ್ಲಿ ಅಲ್ಲಿದ್ದವರೆಲ್ಲಾ ಶಿರವನ್ನು ಬಾಗಿಸಿಕೊಂಡು ಮೌನಿಗಳಾಗಿ ನಿಂತಿದ್ದರು. ಸಮಸ್ತ ರಾತ್ರಿಯಲ್ಲಿ ಈ ಕಾರ್ಯಗಳು ನಡೆದವು. ಅನೇಕ ದೇವಾಲಯಗಳಲ್ಲಿ ಆ ಸಮಯದಲ್ಲಿ ಪ್ರಾರ್ಥನೆಗಳನ್ನು ಸಮರ್ಪಿಸಿದ್ದಲ್ಲದೆ ಲೇಟ್ ಚಕ್ರವರ್ತಿಯವರ ಶ್ರೇಷ್ಠ ಗುಣಗಳನ್ನು ಕೊಂಡಾಡಿ ಎಲ್ಲರ ಮನಸ್ಸೂ ಕರಗುವಂತೆ ಉಪನ್ಯಾಸಗಳನ್ನು ಮಾಡಿದರು. ಆ ಪ್ರದೇಶದಲ್ಲಿರುವ ಸಮಸ್ತ ಬೌದ್ಧ ಮತ್ತು ಕ್ರೈಸ್ತ ದೇವಾಲಯಗಳಲ್ಲಿ ಮರ್ಯಾದೆಗೋಸ್ಕರವಾದ ಘಂಟೆಯ ನಾದಗಳು ಕೇಳಿಬರುತ್ತಿದ್ದವು. ದೇವಾಲಯಗಳು ತೋಪುಗಳನ್ನು ಹಾರಿಸುತ್ತಿದ್ದವು. ಹೀಗೆ ಉತ್ತರ ಕ್ರಿಯಾಗಳು ಮುಕ್ತಾಯವಾದವು.

ಬಳಿಕ ಬೆಳಗಿನ ಜಾವದಲ್ಲಿ ಕಳೇಬರವನ್ನು ಸಿದ್ಧವಾಗಿದ್ದ ಒಂದು ರೈಲ್ವೆ ಗಾಡಿಯನ್ನು ಚಕ್ರವರ್ತಿ ಮತ್ತು ಸಂಬಂಧಿಕರು ಅರಮನೆಯ ಜನರೂ ಒಂದು ಸ್ಪೆಷಲ್ ರೈಲ್‌ಗಾಡಿಯಲ್ಲಿ ತಾವು ಹತ್ತಿ ಕುಳಿತುಕೊಂಡು ಸಮಾಧಿಸ್ಥಳವಾದ ಕಿಯೊಟೋ ನಗರಕ್ಕೆ ಪ್ರಯಾಣಮಾಡಿದರು. ಅದು ಲೇಟ್ ಚಕ್ರವರ್ತಿಯವರ ಜನ್ಮಸ್ಥಳವಾಗಿದೆ ಮತ್ತು ಪ್ರಾಚೀನಕಾಲದ ಜಪಾನ್ ಚಕ್ರವರ್ತಿಗಳ ಸಮಾಧಿಗಳನ್ನು ಅಲ್ಲಿ ಸಮಾಧಿಮಾಡಿರುತ್ತಾರೆ. ಆ ರೈಲ್ ಗಾಡಿಯು ಹೋದ ದಾರಿಯ ಉಭಯಪಾರ್ಶ್ವಗಳಲ್ಲೂ ಯಾತ್ರಿಕರು ನಿಂತು ವಂದನೆ ಮಾಡುತ್ತಿದ್ದರು. ಕಡೆಗೆ ಸಮಾಧಿ ಸ್ಥಳಕ್ಕೆ ಹೋಗಿ ಪ್ರಕಾಶಪಡಿಸಿದರು.

ರಾಜಭಕ್ತಿಯೂ ಪತಿವ್ರತಾ ಧರ್ಮವೂ

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾದವರನ್ನು ಓಡಿಸಿ ಪೋರ್ಟ್ ಆರ್ಥರ್ ಎಂಬ ಕೋಟೆಯನ್ನು ಗೆದ್ದು ಜಯಿಸಿದ ಸೇನಾಧಿಪತಿ ಜನರಲ್ ನೋಗಿ ಎಂಬುವನೂ, ಆತನ ಪತ್ನಿಯೂ ಲೇಟ್ ಚಕ್ರವರ್ತಿಯವರ ಕಳೇಬರವನ್ನು ಅರಮನೆಯಿಂದ ಹೊರಕ್ಕೆ ತಂದ ವೇಳೆಯನ್ನು ಸೂಚಿಸುವ ತೋಪುಗಳ ಶಬ್ದವನ್ನು ಕೇಳಿದ ಕೂಡಲೆ ಆ ದಂಪತಿಗಳು ಜಪಾನ್ ದೇಶದ ಪದ್ಧತಿಯಂತೆ ಪ್ರಾಣತ್ಯಾಗ ಮಾಡಿದರು. ಆ ಸಮಯದಲ್ಲಿ ತಮ್ಮ ಮನೆಯಲ್ಲಿ ಏಕಾಂತದಲ್ಲಿ ಕುಳಿತು ಲೇಟ್ ಚಕ್ರವರ್ತಿಯವರ ಪಟಕ್ಕೆ ವಂದನೆ ಮಾಡಿ, ಆತನು ಚಕ್ರವರ್ತಿಯವರ ಮೇಲಿನ ಭಕ್ತಿಯ ಸೂಚನೆಗಾಗಿ ಹೊಟ್ಟೆಯನ್ನು ಕೊಯ್ದುಕೊಂಡು ಪ್ರಾಣವನ್ನು ಬಿಟ್ಟನು. ಆತನ ಪತ್ನಿಯು ತನ್ನ ಗಂಡನ ಮರಣವನ್ನು ನೋಡಿ ತಾನೂ ತನ್ನ ಕತ್ತನ್ನು ಕತ್ತರಿಸಿಕೊಂಡು ಪ್ರಾಣ ಬಿಟ್ಟಳು. ಈ ದಂಪತಿಗಳು ತಮ್ಮ ಮನೆಯಲ್ಲಿ ಕುಳಿತು ಲೇಟ್ ಚಕ್ರವರ್ತಿಯವರ ಭಾವಚಿತ್ರದ ಎದುರಿನಲ್ಲಿ ಈ ರೀತಿ ಪ್ರಾಣತ್ಯಾಗ ಮಾಡಿದರು. ಆ ಮನೆಯ ಭೃತ್ಯರು ಬಾಗಿಲು ತೆರೆದು ನೋಡಲಾಗಿ ಅವರಿದ್ದ ಕೋಣೆಯಲ್ಲಿ ರಕ್ತದ ಪ್ರವಾಹವೇ ಹರಿಯುತ್ತಿತ್ತು. ಜನರಲ್ ನೋಗಿಯವನು ಒಂದು ಹರಿತವಾದ ಕತ್ತಿಯಿಂದ ತನ್ನ ಹೊಟ್ಟೆಯನ್ನು ಕತ್ತರಿಸಿಕೊಂಡಿದ್ದನು. ಆತನ ಪತ್ನಿಯು ಎದೆಗೆ ಕತ್ತಿಯಿಂದ ತಿವಿದುಕೊಂಡು ಪ್ರಾಣಬಿಟ್ಟಳು.

ಇತರ ದೇಶಗಳಲ್ಲಿ ನಡೆದ ಕಾರ್ಯಗಳು

ಲೇಟ್ ಚಕ್ರವರ್ತಿಯವರ ಗೌರವಾರ್ಥ ಕಾರ್ಯಗಳು ನಡೆದವು. ಲಂಡನ್, ಪ್ಯಾರಿಸ್, ಬರ್ಲಿನ್ ಈ ಪಟ್ಟಣಗಳಲ್ಲಿ ಜಪಾನ್ ದೇಶದವರು ತಮ್ಮ ಜನ್ಮಭೂಮಿಯ ಪ್ರಜೆಗಳಾಗಿ ಲೇಟ್ ಚಕ್ರವರ್ತಿಯವರ ಗೌರವಾರ್ಥ ಲೇಟ್ ಚಕ್ರವರ್ತಿಯವರಿಗೆ ವಂದನೆ ಮಾಡಿ ಸಂಬಂಧಪಟ್ಟ ದೇಶಗಳ ಪ್ರತಿನಿಧಿಗಳು ಸಮರ್ಪಿಸಿದರು.

ಪತ್ರಿಕೆದಾರರಿಗೆ ನೋಟೀಸು

ನಮ್ಮ ಪತ್ರಿಕೆಯ ವಿಚಾರಕ್ಕೆ ಬರೆಯುವ ಲೇಖಕರು ತಮ್ಮ ನಿಜವಾದ ಹೆಸರು ವಿಳಾಸವನ್ನು ತಿಳಿಸತಕ್ಕದ್ದು. ಮತ್ತು ಬರೆಯುವ ಕಾಗದವನ್ನು ಒಂದೇ ಪಕ್ಕದಲ್ಲಿ ಬರೆಯಬೇಕು. ಇದು ಪತ್ರಗಳಿಗೆ ಮಾತ್ರ ಅನ್ವಯಿಸುತ್ತದೆ.

ಪ್ರಚುರಪಡಿಸುವುದಕ್ಕೆ ಬರತಕ್ಕ ಲೇಖನಗಳು ನಮಗೆ ಸಾಧ್ಯವಾದಷ್ಟು ಬೇಗ ತಲುಪಬೇಕು. ಹಿಂದುಳಿದ ಲೇಖನಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವುದು ಕಷ್ಟ. ಕೆಲವು ವಾರ್ತೆಗಳು ತುಂಬಾ ತಡವಾಗಿ ನಮಗೆ ಬಂದು ಸೇರುತ್ತವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕಾದ ವಾರ್ತೆಗಳನ್ನು ಅನೇಕರು ನಮ್ಮ ಹೆಸರಿಗೆ ಬರೆಯದೆ ನಮ್ಮ ಪ್ರೆಸ್ ಮ್ಯಾನೇಜರಿಗೆ, ಮೈಸೂರು ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಹೀಗೆ ಮಾಡದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂದಾಗಿ ಮಾತ್ರ ವಿಳಾಸ ಬರೆಯಬೇಕು. ಇಲ್ಲವಾದರೆ ವಾರ್ತೆಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವುದು. ಪತ್ರದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟರೆ ಉಪಕೃತರಾಗುತ್ತೇವೆ.

ಪತ್ರದಾರರು ಅವರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕಡೂರಿನಲ್ಲಿ ಹೊಳಬರಾದ ಕೆಲವು ಸರ್ಕಾರಿ ನೌಕರರಿಂದ ಪ್ರಜೆಗಳಿಗೂ ರೈತರಿಗೂ ತೊಂದರೆ ಉಂಟೆಂದೂ, ಅಂಥವರನ್ನು ವರ್ಗಾಯಿಸಿಕೊಡಬೇಕೆಂದೂ ನಮ್ಮಲ್ಲಿಗೆ ಒಂದು ಪತ್ರ ಬಂದಿದೆ. ಈ ವಿಚಾರವನ್ನು ಅಲ್ಲಿನ ಪ್ರಜೆಗಳು ನಷ್ಟಪಟ್ಟವರೂ ಡೆಪ್ಯುಟಿ ಕಮಿಷನರವರಿಗೆ ಬರೆದುಕೊಂಡಲ್ಲಿ ಅವರು ಅದರ ನಿಜಸ್ಥಿತಿಯನ್ನು ತನಿಖೆಮಾಡದೆ ಇರಲಾರರು.

ಚಿತ್ರದುರ್ಗದ ಪ್ರಾಂಚ್ ಸ್ಕೂಲಿನ ಕಾರುಬಾರುಗಳ ವಿಷಯದಲ್ಲಿ ಆಕ್ಷೇಪಣೆಯುಳ್ಳ ಒಂದು ವಾರ್ತೆ ನಮ್ಮಲ್ಲಿಗೆ ಬಂದಿರುತ್ತದೆ. ಪತ್ರದಾರರು ನಮಗೆ ಬರೆದಿರುವ ಸಂಗತಿಗಳನ್ನು ಹೇಳಲು ಅಲ್ಲಿರುವ ಸ್ಕೂಲ್ ಇನ್ಸ್‌ಪೆಕ್ಟರಿಗೆ ತಿಳಿಸುವುದಾದರೆ ಅವರು ವಿಚಾರಣೆ ಮಾಡಿ ಸರಿ ನ್ಯೂನತೆಗಳನ್ನು ಸರಿಪಡಿಸಲು ಅನುಕೂಲವಾಗುತ್ತದೆ. ಮೊದಲೇ ಅದನ್ನು ಪತ್ರಿಕೆಯಲ್ಲಿ ಪ್ರಕಟ ಮಾಡಲು ನಮಗೆ ಇಷ್ಟ ಇಲ್ಲ.

ಹಾಸನದ ತಾಲ್ಲೂಕು ಗುಡೆಹಳ್ಳಿ ಆಸ್ಪತ್ರೆಯಲ್ಲಿ ನಿಷ್ಕರ್ಷೆಯಾಗಿ ಸಕಲ ಪ್ರಜೆಗಳಿಗೂ ಔಷಧಿಗಳು ದೊರಕದೆ ಕಷ್ಟಪಡುತ್ತಾರೆ. ಅಲ್ಲಿನ ಕೆಲವು ಪ್ರಜೆಗಳು ಸುಮಾರು ಆರು ತಿಂಗಳ ಹಿಂದೆ ಚಿತ್ರದುರ್ಗದ ಡೆಪ್ಯುಟಿ ಕಮಿಷನರಿಗೂ, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಿಗೂ, ಸೀನಿಯರ್ ಸರ್ಜನ್ ಸಾಹೇಬರಿಗೂ ಅರ್ಜಿ ಬರೆದುಕೊಂಡಿದ್ದೆಂದೂ, ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಸರ್ಕಾರಿ ಪಂಚಾಯಿತಿ ಪತ್ರಗಳು ಅವರಿಗೆ ನೋಟೀಸು ಜಾರಿಮಾಡಿಕೊಂಡಿದ್ದರೆಂದೂ, ಇದುವರೆಗೂ ಪರೀಕ್ಷಿಸಿದಾಗ್ಯೂ ಯಾವ ತೃಪ್ತಿಕರವಾದ ವ್ಯವಸ್ಥೆ ಆಗಿಲ್ಲವೆಂದೂ ಒಬ್ಬ ಪತ್ರದಾರರು ಬರೆಯುತ್ತಾರೆ. ಪ್ರಜೆಗಳಲ್ಲಿ ಮುಖ್ಯರಾಗಿಯೂ ಮಾತುಗಾರರಾಗಿಯೂ ಇರುವ ಜನಗಳು ತಮ್ಮ ಕಷ್ಟನಷ್ಟಗಳನ್ನು ಕುರಿತು ಇನ್ಸ್‌ಪೆಕ್ಟರ್ ಸೀನಿಯರ್ ಸರ್ಜನ್‌ರವರಿಗೆ ಅರ್ಜಿ

...ಯಮಕ್ಕೆ ಸತ್ಯಾಂಶವನ್ನು ಅವರು ತನಿಖೆಮಾಡುತ್ತಾರೆಂದು ನಂಬುತ್ತ ಆದುದರಿಂದ ನಾವು ಚರ್ಚಾಸ್ಪದವಾದ ಈ ಬಾತ್ಮಿಯನ್ನು ಪ್ರಕಟಿಸಿದ್ದೇವೆ.

ಎಡಿ.]

ಕರೆಸ್ಪಾಂಡೆನ್ಸ್.

ತೋಟಿ, ತಳವಾರ, ನೀರಗಂಟಿ ಇವರ ಮಿರಾಸಿಯು.

ಸ್ವಾಮಿ,

...ನಾವುಳ್ಳ ಸರ್ವೆ ಆದ ಕಂದಾಯ ನೂತನವಾದ ನಂತರ ಪಟೇಲ್ ಶಾನುಭೋಗ ಮೊದಲಾದ ಗ್ರಾಮ ನೌಕರರಿಗೆ ರೈತರು ಕೊಡುತ್ತಿದ್ದ ... ವರ್ತನೆ, ಮಿರಾಸೆ ಮುಂತಾದ್ದು ಕೂಡದೆಂದು ಸರ್ಕಾರದಿಂದಲೇ ... ಶಾನುಭೋಗನಿಗೆ ಶೇಕಡಾ 7 ರೂಪಾಯಿ, ಪಟೇಲನಿಗೆ ಶೇಕಡಾ 3 ರೂಪಾಯಿ ... ಆಯಾ ಗ್ರಾಮದ ಒಟ್ಟು ಬೀಳು ಹಾಕಿ ಕೊಡುತ್ತಾ ... ತೋಟಿ, ತಳವಾರ, ನೀರಗಂಟಿ, ಇವರಿಗೆ ಆಯಾ ಗ್ರಾಮದ ಮುನಾ... ಜಮೀನುಗಳು ಕೊಟ್ಟಿರುತ್ತಾರೆ. ಈ ಇನಾಮ್ತಿ ಜಮೀನುಗಳು ... ವಾರಸು ನಡೆದು ಬರುತ್ತಾ ಇರುವುದನ್ನೇ ಸರ್ಕಾರದವರು ... ಹೀಗಿದ್ದಾಗ್ಯೂ ... ಬಿರ್ಬಾರಾದ ರೈತರು ತೋಟಿಗೆ ... ಸೇರು, ತಳವಾರನಿಗೆ ಎಕರೆಗೆ 1 ಸೇರು, ಈ ರೀತಿ ಎಕರೆಗೆ 6 ಸೇರು ... ಕೊಡಬೇಕೆಂದು ಸರ್ಕಾರದಿಂದ ಹುಕುಂ ಆಗಿರುವದಾಗಿ ... ತರಿಂದ ... ಮಾಡಿ ಕೊಡಿಸುತ್ತಾರೆ. ಈ ಹುಕುಂ 1870 ನೇ ಇಸವಿ ... ಲಿ ಆದ ಚೀಫ್ ಕಮಿಷನರ್ ಸಾಹೇಬರವರು ಕೊಟ್ಟದ್ದಾಗಿ ಹೇಳು... ಆ ಹುಕುಮಿನಲ್ಲಿ ತೋಟಿ, ತಳವಾರ, ನೀರಗಂಟಿ, ಈ 3 ಜನ... ಮಾತ್ರ ... ಅನಿಶ್ಚಿತವಾಗಿದ್ದ ... ಈ ಹುಕುಂ ಹುಟ್ಟಿದ ... ಹೇಳುತ್ತಾರೆ. ಈ ಹುಕುಂ ಹುಟ್ಟಿದ ... ನೋಟೀಸು ಅದರ ... ಗ್ರಾಮಗಳಿಗೆ ಬರಲಿಲ್ಲ ... ಶಾನುಭೋಗರ ಮನೆ ... ಅವರು ಹೇಳಿದಂತೆ ಕೆಲಸ ಮಾಡಿಕೊಂಡು ... ತಳವಾರರಿಗೆ ... ಗ್ರಾಮಗಳಲ್ಲಿ ಪಟೇಲ ಶಾನುಭೋಗರಿಗೆ ... ರೈತರಿಂದ ... ವಸೂಲು ಕೊಡಿಸಲು ... ಅವು ... ಅರ್ಜಿ ಕೊಟ್ಟು ... ಈ ಹೊಸದಾಗಿ ... ದೂರು ಕೊಡಿಸುತ್ತಾರೆ. ಈ ಪ್ರಕಾರ ನಮ್ಮ ಪ್ರಾಂತ್ಯ ... ಹಾಸನ, ಮೈಸೂರು, ಮಂಡ್ಯ ... ಡಿಸ್ಟ್ರಿಕ್ಟುಗಳಲ್ಲಿ ... ಪ್ರಾಂತ್ಯ ... ಮೈಸೂರು ... ಸರ್ಕಾರಕ್ಕೆ ... ಇದು ಗವರ್ನಮೆಂಟ್ ಹುಕುಂ ಎಂದು ಇದು ... ಈ ರೀತಿ ... ಇವರಲ್ಲಿ ... ಹೇಳಿಕೊಂಡರೆ ... ಸಾಮಾನ್ಯಕ್ಕೆ ಆಗುವದಿಲ್ಲ, ಕೊಡಬೇಕೆಂದು ಅಪ್ಪಣೆ ... ಒಂದು ವೇಳೆ ಕೊಡಬೇಕಾದಾಗ್ಯೂ ಅದು ನ್ಯಾಯ ಮತ್ತು ... ಅನುಸಾರವಾಗಿದ್ದರೆ ... ಜಮೀನುಗಳಿಗೆ ಎಕರೆಗೆ 6 ... 1½ ರೂಪಾಯಿ ಎಕರೆ ಕಂದಾಯದ ಮೇಲೆ ಇರುತ್ತೆ. ಎಕರೆಗೆ ... ರಾಗಿಯನ್ನು ರೈತರು ಕೊಡಬೇಕಾದರೆ ... ಸರಾಸರಿ ಅರ್ಧ ಕಂದಾಯ ಇವರ ಮಿರಾಸಿಗಾಗಿ ಕೊಡಬೇಕಾಗಿದೆ.

ಧಾರಣೆ ವಿಷಯದಲ್ಲಿ 60 ವರುಷಕ್ಕೆ ಒಂದು ಸಾರಿ ಬರುತ್ತಾ ಇದ್ದಂತೆ ... ರೂಪಾಯಿಗೆ 10, ರಾಗಿ 12 ವರುಷಕ್ಕೆ ಒಂದು ಸಾರಿ ... ಈಗ 1 ವರುಷಕ್ಕೆ ಒಂದು ಸಾರಿ ... ಅಲ್ಲದೆ ... ಮೊದಲಿನಂತೆ ... ದಿನೇ ದಿನೇ ಧಾರಣೆ ಜಾಸ್ತಿಯಾಗಿ, ... 6 ಸೇರು ರಾಗಿಗೆ ... ಕಮ್ಮಿ ಆಗುವ ಹಾಗಿಲ್ಲ. ಪಟೇಲ್ ಶಾನುಭೋಗರಿಗೆ ಇನಾಮು ... ಇಲ್ಲದಿರುವ ಸರ್ಕಾರದವರು ತೋಟಿ ... ತೋಟಿ ... ಇನಾಮು ... ಶೇಕಡ 50 ... ಇದು ನ್ಯಾಯವೋ ಧರ್ಮವೋ ... ಕಂದಾಯ ... ಗತಿ ... ಬೆಳೆಯುವ ... ಕಂದಾಯ ... ಜೀವನಕ್ಕೆ ಕೊಂಡು ಸಾಲವಾಗಿ ಇದರ ಜೊತೆಗೆ ... ಕೊಟ್ಟು ಅವರು ಬದುಕುವ ಹಾಗಿಲ್ಲ. ದಸರಾ ... ನಾಯಿಗಳಿಂತ ... ಪಟ್ಟ ... ಮಂತ್ರಿಗಳಿಗೆ ಹೇಳಿ ... ಕೆಲವರು ಬರಾವರ ಬಗೌರವಕ್ಕೆ ಬರಸ್ಪರಿಸುತ್ತಾರೆ, ಕೆಲವರು ... ಗವರ್ನಮೆಂಟಿನಲ್ಲಿ ಅರ್ಜಿ ... ಇದೆಯೋ ... ಮಾಡಿ ... ಮಾಡಿಕೊಡಲಿಲ್ಲ. ಇದು ಬಹು ದಿವಸಗಳಿಂದ ಜರುಗಿ ಬಂದಿದೆ ... ನಾವು ಸರ್ಕಾರದವರು ಕಾಪಾಡುವ ... ತೋಟಿ ತಳವಾರನಿಗೆ ಸರ್ಕಾರದಿಂದ ಇತರೇ ... ಕೊಡಬಹುದು.

ಉದಾಹರಣೆಯಾಗಿ ಒಂದು ಕೂಡ ವಿಷಯ ಹೇಳುತ್ತೇನೆ. ಇದೇ ನಮ್ಮ ... ಎಂಬ ಗ್ರಾಮದಲ್ಲಿ ವೆಂಕಟೇಗೌಡನೆಂಬ ಜಮೀನ್‌ದಾರರ ... ಇವರುಗಳು ಇನ್ನೂ ಅನೇಕ ಜನ ರೈತರು ಈ ಗ್ರಾಮದಲ್ಲಿರುತ್ತಾರೆ ... ಇವರಿಗೂ ಈ ಗ್ರಾಮದ ಪಟೇಲನಿಗೂ ಆಗದ ತೋಟಿಯಿಂದ ... ದೂರು ಮಾಡಿ ತಾಲ್ಲೂಕು ಅಮಲ್ದಾರರವರು ವೆಂಕಟೇಗೌಡನ ... ರಾಗಿ ಕೊಡಿಸಬೇಕೆಂದು ಹುಕುಂ ಕೊಟ್ಟು ನಲೀಸ್ ಕೇಸ್ ... ಹರಾಜು ಮಾಡುವಂತೆ ಹುಕುಂ ಕೊಟ್ಟಿರುತ್ತಾರೆ. ಇವನು ... 100 ರೂಪಾಯಿ ಕಂದಾಯ ಕೊಡತಕ್ಕವನು ... ಮಿರಾಸಿ ... ಸೇರಿಗೆ 30 ರೂಪಾಯಿ ಆಗುತ್ತೆ. ಇದು ನ್ಯಾಯವೋ ... ಇಷ್ಟು ಕೊಡಬೇಕಾದರೆ ಈ ಗ್ರಾಮದ ಇತರ ರೈತರು ಕೊಡುವದು ಸುಮಾರು 200 ರೂಪಾಯಿ ತೋಟಿ ಮಿರಾಸಿ ಆಗಬಹುದು. ಈ ಗ್ರಾಮದ ... 30 ರೂಪಾಯಿ, ... 25 ರೂಪಾಯಿ ತೋಟಿ ... ಇಲ್ಲವೇ, ಇದಕ್ಕೂ ತೋಟಿಯ ಮಿರಾಸಿಗೂ ಇರುವ ವ್ಯತ್ಯಾಸ ... ಇದು ನ್ಯಾಯವೋ ಅಲ್ಲವೋ ಎಂಬ ವಿಚಾರ ತಿಳಿದು ... ರೈತರನ್ನು ಸರ್ಕಾರದವರು ಕಾಪಾಡಬೇಕಾಗಿ ಪ್ರಾರ್ಥಿಸುತ್ತೇನೆ.

ನ್ಯಾ. ಬಂಗಾರ್ಯನು,

ನಾಗಮಂಗಲ ... ತಾಲೂಕು

ತಾಲ್ಲೂಕು ವರ್ತಮಾನಗಳು.

ಚಿಕ್ಕನಾಯಕನಹಳ್ಳಿ.—ಈ ಪ್ರಾಂತ್ಯದಲ್ಲಿ ಮಳೆ ಸಕಾಲದಲ್ಲಿ ಸಮೃದ್ಧಿಯಾಗಿ ಬಿದ್ದು ಪೈರುಪಚ್ಚೆಗಳೆಲ್ಲಾ ಚೆನ್ನಾಗಿದ್ದಾಗ್ಯೂ, ಅನಾವೃಷ್ಟಿ ಪ್ರದೇಶಗಳಲ್ಲಿ ಇರುವಂತೆಯೇ ಇಲ್ಲಿಯೂ ಧಾರಣೆವಾಸಿಗಳು ಇನ್ನೂ ಏರುತ್ತಲೇ ಇವೆ. ಅಕ್ಕಿ ರೂಪಾಯಿಗೆ 5½ 6 ಸೇರು, ರಾಗಿ 13–14 ಸೇರು ಬಿಕರಿಯಾಗುವುದು. ಈ ಧಾರಣೆಗಳೇ ಕ್ಷಾಮವನ್ನು ಸೂಚಿಸುತ್ತವೆ. ಮತ್ತು ಬಡಬಗ್ಗರೆಲ್ಲರೂ ಹೊಟ್ಟೆಗಿಲ್ಲದೆ ಕಳವಳಪಡುತ್ತಿದ್ದಾರೆ. ಕಳೆದ ತಾ 13 ನೇ ಶುಕ್ರವಾರ ಒಂದು ಹದ ಮಳೆಯಾಯಿತು. ರಾತ್ರಿ ಕಾಲದಲ್ಲಿ ಬೀದಿಯಲ್ಲಿ ಹೋದಾಗ ಸಂತರಕ್ಕೆ ದೀಪದ ಕಂಭಗಳನ್ನು ನೋಡಿ ಜನಗಳು ಆ ಕತ್ತಲೆಯಲ್ಲಿ ಹೆದರಿಕೊಳ್ಳುವುದರಲ್ಲಿಯೂ, ಒಬ್ಬರಿಗೊಬ್ಬರು ಢಿಕ್ಕಿ ಹೊಡೆಯುವುದರಲ್ಲಿಯೂ, ಮತ್ತು ಹಾವು ಚೇಳು ಮೊದಲಾದ ದುಷ್ಟ ಜಂತುಗಳಿಂದ ಬಾಧೆಪಡುವುದರಲ್ಲಿಯೂ ಸಂದೇಹ ತಾನಿಲ್ಲ. ಇದನ್ನು ನೋಡಿದರೆ ಇಲ್ಲಿನ ಮ್ಯುನಿಸಿಪಾಲಿಟಿಯು ಎಷ್ಟರಮಟ್ಟಿಗಿದೆ ಎಂಬುದನ್ನು ಊಹಿಸಬಹುದು. ಆದರೆ ಊರು ಮುಂದೆ ಜಟಕಾ ಗಾಡಿ ... ಸಾಹೇಬರ ಅಂಗಡಿಯ ಹತ್ತಿರ ಒಂದು ಲಾಂದ್ರವನ್ನು ಹತ್ತಿಸುತ್ತಾರೆ. ಇದು ಯಾತಕ್ಕೋ ತಿಳಿಯಲಿಲ್ಲ. ಈ ಗ್ರಾಮ ನಾಕೇಬಂದಿ ವಿಚಾರದಲ್ಲಿ ಊರಲ್ಲಿ ಇರತಕ್ಕ ನಾಲ್ಕು ಗೋಡೆಗಳನ್ನು ಒಡೆಸಿಹಾಕಿದರೆ ಪ್ರಜೆಗಳಿಗೆ ತುಂಬಾ ಅನುಕೂಲವಾದೀತು.—ಇಲ್ಲಿನ ಸೊಸೈಟಿಯು ದಿನೇ ದಿನೇ ಅಭಿವೃದ್ಧಿಸ್ಥಿತಿಯಲ್ಲಿದೆ. ಈಗಿರತಕ್ಕ ಕಮಿಟಿ ಮೆಂಬರುಗಳಲ್ಲಿ ಕೆಲವರನ್ನು ಬದಲಾಯಿಸಿದರೆ ಸೊಸೈಟಿಯು ಇನ್ನೂ ಅಭಿವೃದ್ಧಿಸ್ಥಿತಿಗೆ ಬರಬಹುದು.

ಹುಣಸೂರು.—ಪ್ಲೇಗು ಇನ್ನೂ ಕಮ್ಮಿಯಿಲ್ಲ. ಜನರೆಲ್ಲಾ ಊರು ಬಿಟ್ಟಿಲ್ಲ, ಮತ್ತು ಬಿಡುವಂತೆಯೂ ಇಲ್ಲ. ಇದರಿಂದ ಜಾಗ್ರತೆಯ ಸಮಾಧಾನ ವಾಗುವದೂ ಇಲ್ಲ. ತಾಲ್ಲೂಕು ಕಚೇರಿ, ಸಬ್ ರಿಜಿಸ್ಟ್ರಾರ್ ಆಫೀಸು, ಪೋಲೀಸ್ ಆಫೀಸು, ಇವುಗಳಲ್ಲಿ ಇಲಿ ಸತ್ತದ್ದರಿಂದ ಹೊರಗೆ ಪಡಸಾಲೆಯಲ್ಲಿ ಆಫೀಸು ಮಾಡುತ್ತಾ ಇದ್ದಾರೆ. ಲಾಕಪ್‌ನಲ್ಲಿರುವ ವ್ಯಕ್ತಿಗಳನ್ನು ಮೈಸೂರು ಜೈಲಿಗೆ ರವಾನಿಸುವದು ಉತ್ತಮ. ಈ ಪ್ರಾಂತ್ಯ ಬೆಳೆ ಸಾಮಾನ್ಯವಾಗಿ ಚೆನ್ನಾಗಿಯೇ ಇದೆ. ಆದರೆ ಧಾರಣೆವಾಸಿ ಕ್ಷಾಮಕಾಲದಂತೆ ಇದೆ. ಬಡಬಗ್ಗರು ಜೀವನ ಮಾಡುವದು ದುಸ್ತರವಾಗಿದೆ. ಉಡುಪು ಮುಂತಾದದ್ದರಲ್ಲಿ ನಾಗರಿಕತೆ ಹೆಚ್ಚುತ್ತಾ ಬಂದಂತೆ ವರಮಾನವೂ ಹೆಚ್ಚದೆ ಇರುವದು ಮತ್ತೊಂದು ಕಾರಣವಾಗಿದೆ. ... ಮಂಗಳೂರಿಂದ ಇಬ್ಬರು ಆಟಗಾರರು ಬಂದು ಮ್ಯುನಿಸಿಪಾಲಿಟಿಯು ... ಗಳನ್ನು 15–20 ದಿವಸದಿಂದ ಪ್ರದರ್ಶಿಸುತ್ತಾ ಇದ್ದಾರೆ. ಇನ್ನೂ ಎಷ್ಟು ಕಾಲ ಹಿಡಿಯುವದೋ ನೋಡಬೇಕು.—ಈ ಸಲ ದಸರಾ ರೆಪ್ರಜೆಂಟೇಟಿವ್ ಮೆಂಬರುಗಳು ಚರ್ಚಿಸಬೇಕಾದ ಕೆಲವು ವಿಷಯಗಳನ್ನು ಸೂಚಿಸುತ್ತೇನೆ. (1) ಪ್ರಾಸೆಸ್ (ಕಸಬಿನ) ಟ್ಯಾಕ್ಸನ್ನು ಹಾಕುವದು. ಇದರಿಂದ ಸಂಸ್ಥಾನ ಮಳೆಯಲ್ಲಿ ತುಂಬಾ ಉತ್ಪತ್ತಿ ಉಂಟು. ಇದು ಕೊಚ್ಚಿನ್ ಸೀಮೆಯಲ್ಲಿ ಜಾರಿಯಲ್ಲಿ ಇರುತ್ತೆ. (2) ಕೈಮರಿ ವಿದ್ಯಾಭ್ಯಾಸವನ್ನು ಬಲಾತ್ಕಾರವಾಗಿ ಮಾಡಿಸಿಕೊಡುವದು. ಇದರಿಂದ ಸಂಸ್ಥಾನದಲ್ಲಿ ರೈತಾಪಿ ಜನರೆಲ್ಲಾ ಅಕ್ಷರಸ್ಥರಾಗಲು ಅವಕಾಶವಾಗುತ್ತೆ. (3) ಮೆಡಿಕಲ್ ಇನ್ಸ್‌ಪೆಕ್ಟರುಗಳನ್ನು ಇಡಿಸಿಕೊಡುವದು. ಇದರಿಂದ ತಾಲ್ಲೂಕು ಆಸ್ಪತ್ರೆಗಳು ತುಂಬಾ ಅಭಿವೃದ್ಧಿಗೆ ಬರುವದಕ್ಕೆ ಅನುಕೂಲವಾಗುತ್ತೆ. ಈಗಿನ ಕ್ರಮದಲ್ಲಿ ಡಿಸ್ಟ್ರಿಕ್ಟು ಮೆಡಿಕಲ್ ಆಫೀಸರು ಪದೇ ಪದೇ ಬರಲು ಅವಕಾಶವಿಲ್ಲ.

ಮಧುಗಿರಿ ತಾ|| ಕಲಿದೇವಪುರ.—ಈಗ್ಗೆ ಸುಮಾರು ಮೂರು ತಿಂಗಳಿಗೆ ಮೊದಲು ಈ ಗ್ರಾಮಕ್ಕೆ ಕಾಲರಾ ಎಂಬ ಸಾಂಕ್ರಾಮಿಕ ರೋಗವು ಬೇಹಾಳ್ಳಿಯಿಂದ ವ್ಯಾಪಿಸಿ 4-5 ಜನಗಳು ಕಾಲವಾದರು. ಅಷ್ಟಕ್ಕೇ ಶಮನಗೊಂಡಿತು. ... ಈ ಗ್ರಾಮದಲ್ಲಿ ಸಾಂಕ್ರಾಮಿಕ ರೋಗಗಳ ಗಲಾಟೆ ಏನೂ ಇಲ್ಲ.—ಇಲ್ಲಿ ಮಳೆಯಿಲ್ಲದೆ ಪೈರುಗಳು ಒಣಗುತ್ತಾ ಇರುವ ಸಮಯದಲ್ಲಿ ಮಘೆ ಮಳೆಯಲ್ಲಿ ಘನವಾದ ಮೂರು ಹದ ಮಳೆ ಆಗಿ ಕೆರೆಗೆ ಒಂದು ತಿಂಗಳು ನೀರು ಬಂದಿದೆ. ರೈತರು ಹಸನು ಬಿಗಳಾಗಿ ಕಳೆ ಕಳೆಗೆ ಅಷ್ಟಿಷ್ಟು ... ಉಳಿದಿದ್ದ ಜಮೀನನ್ನು ಭತ್ತದ ನಾಟಿ ಮಾಡುತ್ತಿದ್ದಾರೆ. ಆದರೆ ಧಾರಣೆವಾಸಿಗಳು ರಾಗಿ ರೂಪಾಯಿಗೆ 12 ಸೇರು, ಅಕ್ಕಿ 6 ಸೇರು, ಈ ರೀತಿ ಕ್ಷಾಮ ಸೂಚನೆಯುಳ್ಳದ್ದಾಗಿ ಇರುತ್ತೆ. ಬಡವರ ಸಂಕಟ ಹೇಳಲು ಅಸಾಧ್ಯ. ಇಂಥಾ ವೇಳೆಯಲ್ಲಿ ಸರ್ಕಾರದವರು ರಿಲೀಫ್ ಕಾಮಗಾರಿ ಮಾಡಿಸಿ ಬಡವರ ಸಂಕಟವನ್ನು ಹೋಗಲಾಡಿಸುವದು ಅತ್ಯಂತ ಶ್ಲಾಘನೀಯವಾಗಿದೆ. ಇಲ್ಲಿ ಶ್ರೀಮದಾಂಜನೇಯ ಮಂದಿರದಲ್ಲಿ ಹೊಸದಾಗಿ ನಡೆಯುತ್ತಿರುವ ಪ್ರೈವೇಟ್ ಸ್ಕೂಲ್ ಮಾಸ್ತರು ಶ್ರೀ ಅಶ್ವತ್ಥಯ್ಯನವರು ಈ ಗ್ರಾಮದ ದೊಡ್ಡ ಮನುಷ್ಯರನ್ನು ಬರಮಾಡಿಕೊಂಡು ಬಾಲವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾಸ ಮಾಡಿದ ನಂತರ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದ ಗ್ರಾಮದ ಪಟೇಲ್ ಹನುಮೇಗೌಡರಿಗೂ, ರಾಮರೆಡ್ಡಿ, ಹನುಮಂತರೆಡ್ಡಿ, ಇವರುಗಳಿಗೆ ಸದ ಬಾಲಕರಿಂದ ಪ್ರಿಯ ಪ್ರಾರ್ಥನೆ ಮಾಡಿಸಿದರು. ತರುವಾಯ ಇವರು ಸಂತೋಷಪಟ್ಟು ಪ್ರವ್ಯಸಹಾಯ ಮಾಡಿದರು. ಈ ರೀತಿಯಾಗಿ ವಿದ್ಯಾಪಕ್ಷಪಾತಿಗಳು ಪ್ರೋತ್ಸಾಹಗೊಳಿಸುತ್ತಾ ಇದ್ದಲ್ಲಿ ಬಾಲವಿದ್ಯಾಭ್ಯಾಸವು ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲ.

ಚನ್ನರಾಯಪಟ್ಟಣ.—ಈಚೆಗೆ ಕಳೆದ ಮಂಗಳವಾರ ಮತ್ತು ಶುಕ್ರವಾರ ಎರಡು ದಿವಸಗಳೂ ಒಳ್ಳೆ ಮಳೆ ಬಂದದ್ದರಿಂದ ಒಣಗಿಹೋಗುವ ಹಾಗೆ ಇದ್ದ ಪೈರುಗಳೆಲ್ಲಾ ಚೇತರಿಸಿಕೊಂಡವು. ದಿನಸಿ ಧಾರಣೆಗಳು ಇನ್ನೂ ಇಳಿತಕ್ಕೆ ಬಂದಿಲ್ಲ. ಈಗ ಶ್ರೀರಂಗಪಟ್ಟಣ, ಅರ್ಸಿಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ ಮಾರ್ಗವಾಗಿ ಹಾಸನಕ್ಕೆ ರೈಲನ್ನು ಬಿಡಬೇಕೆಂದು ಮೈಸೂರು ಸರ್ಕಾರದವರು ಹುಕುಂ ಮಾಡಿದಾರಷ್ಟೆ. ಆ ಕಾರ್ಯಕ್ಕಾಗಿ ಇಲ್ಲಿ ಎಗ್ಸಿಕ್ಯುಟಿವ್ ಇಂಜನಿಯರಾದ ಮ|| ರೈಸ್ ಸಾಹೇಬರವರು ಮತ್ತು ಓವರ್‌ಸಿಯರುಗಳು ಇಲ್ಲಿನ ಟ್ರಾವಲರ್ಸ್ ಬಂಗ್ಲೆಯಲ್ಲಿ ಡೇರೆ ಹಾಕಿಕೊಂಡು ಮೂರು ವಾರಗಳಿಂದ ರಸ್ತೆಗಳನ್ನೆಲ್ಲಾ ಸರ್ವೆ ಮಾಡಿಕೊಂಡು ಸುಮಾರು 15 ಮೈಲಿಗಳವರೆಗೂ ಬಂದಿರುತ್ತಾರೆ. ಈ ಕೆಲಸವು ಬೇಗನೆ ನಡೆಯುವುದೆಂದು ಅವರುಗಳು ಪ್ರಯಾಸಪಡುವದನ್ನು ನೋಡಿ ಇಲ್ಲಿನ ಜನರೆಲ್ಲಾ ಬಹಳ ಕುತೂಹಲವುಳ್ಳವರಾಗಿದ್ದಾರೆ. ಈ ಮಾರ್ಗದಲ್ಲಿ ರೈಲ್ ಹಾಕಬೇಕೆಂದು ಮೈಸೂರು ಸರ್ಕಾರದವರು ಯಾರಿಗೆ ತಿಂದರೆ ಮುಂದಕ್ಕೆ ಹೆಚ್ಚಾದ ಆದಾಯ ಬರುವದು ಎಂಬುವದಕ್ಕೆ ಅನುಮಾನ ಕಾಣುವದಿಲ್ಲ. ಬೆಲ್ಲ, ತುಪ್ಪ, ಭತ್ತ ಮುಂತಾದವುಗಳು ಆಗಿಂದಾಗ್ಗೆ ರಫ್ತಾಗುತ್ತವೆ. ಜಾಗೆಯೂ ಸಮಾನವಾಗಿರುವದರಿಂದ ಯಾತ್ರಿಕರುಗಳು ಆಗಿಂದಾಗ್ಗೆ ಪ್ರಯಾಣಮಾಡುವದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಮಾರ್ಗವನ್ನೇ ಬಾಯಿಂ ಮಾಡಬೇಕೆಂದು ಇಲ್ಲಿನ ಪ್ರಜೆಗಳು ಪ್ರಾರ್ಥಿಸುತ್ತಾರೆ.—ಹಾಸನದ ಡಿಸ್ಟ್ರಿಕ್ಟ್ ವೆಸ್ಲಿಯನ್ ಮಿಷನ್ ಸೂಪರಿಂಟೆಂಡೆಂಟರಾದ ರೆವ್. ಸ್ಪೆನ್ಸರ್ ಮೋಫಟರವರು ಕಳೆದ ಮಂಗಳವಾರ ಸಾಯಂಕಾಲ ಕುಟುಂಬ ಸಮೇತ ಇಲ್ಲಿಗೆ ದಯಮಾಡಿ, ಬುಧವಾರ ಬೆಳಿಗ್ಗೆ ಸ್ಕೂಲುಗಳನ್ನು ಪರೀಕ್ಷಿಸಿ ಸಂತೋಷಪಟ್ಟು ಕೊಂಡದ್ದಲ್ಲದೆ ಸಾಯಂಕಾಲ ದೇವಾರಾಧನಾ ಕಾರ್ಯಗಳನ್ನು ನಡಿಸಿ, ಮಾರಣೆ ದಿನವೂ ಶುಕ್ರವಾರವೂ ಬೆಳಗೊಳಕ್ಕೆ ಪ್ರಯಾಣಮಾಡಿ ಅಲ್ಲಿನ ವಿಚಾರಗಳನ್ನು ಪರಾಂಬರಿಸಿಕೊಂಡು ಶನಿವಾರ ಬೆಳಿಗ್ಗೆ ಹಾಸನಕ್ಕೆ ವಾಪಸು ದಯಮಾಡಿದರು.

ಬೌರಿಂಗ್ ಪೇಟೆ ತಾ|| ಬೇತಮಂಗಲ.—ಈ ಪ್ರಾಂತ್ಯ ಸುಮಾರು 4–5 ಹದ ಮಳೆ ಬಿದ್ದು, ಗೋಶಾಯಿಗಳಿಗೂ ಜನಗಳಿಗೂ ಕುಡಿಯುವದಕ್ಕೂ, ಬೇಸಾಯಕ್ಕೂ ನೀರು ಸಾಕಾದಷ್ಟು ಬಂದು ಇರುತ್ತೆ. ರೈತರು ವ್ಯವಸಾಯ ಕೆಲಸವನ್ನು ಮಾಡಿಕೊಂಡು ಬಹಳ ಹರುಷವಾಗಿರುತ್ತಾರೆ. ಈ ಊರು ದೊಡ್ಡ ಕೆರೆಗೆ 1½ ಅಡಿ ನೀರು ಬಂದಿರುತ್ತೆ.—ಈ ಊರಿಗೆ 2 ಮೈಲಿ ದೂರದಲ್ಲಿ ಇರತಕ್ಕ ಶ್ರೀ ಗುಟ್ಟಹಳ್ಳಿ ವೆಂಕಟರಮಣಸ್ವಾಮಿ ದೇವಸ್ಥಾನದ ಹುಟ್ಟುವಳಿಯು ಶ್ರಾವಣ ಶನಿವಾರಗಳಿಂದ ಸುಮಾರು 1,200 ರೂಪಾಯಿ ಆಗಿರುತ್ತೆ. ಹೀಗೆ ಕಳೆದ ವರುಷದ ಹುಟ್ಟುವಳಿಗಿಂತಲೂ ಕಡಮೆಯಾದದ್ದಕ್ಕೆ ಕ್ಷಾಮವೇ ಕಾರಣ.—ಈ ಪ್ರಾಂತ್ಯ ತಾ|| ಸಂಬಳ್ಳಿ ಹೋಬಳಿ ಕಂಗಾಂಡಹಳ್ಳಿಯಲ್ಲಿ ಕಾಲರಾ ತಲೆಹಾಕಿ 1 5 ಜನಗಳು ತೀರಿಹೋದರು. ಹೊಸ ಕಾಯಿಲೆ ಯಾವದೂ ಇಲ್ಲ.—ಕಳೆದ ತಾ 12 ನೇ ಗುರುವಾರ ರಾತ್ರಿ ಸುಮಾರು 3 ಗಂಟೆ ಸಮಯದಲ್ಲಿ ಇಲ್ಲಿನ ಮೈನಿಂಗ್ ಸ್ಪೆಷಲ್ ಕಾಂಪೌಂಡಿನಲ್ಲಿ ವಾಚ್‌ಮನ್ ಇಬ್ರಾಹಿಂ ಸಾಬಿ ಮನೆಯಲ್ಲಿ ಕಳ್ಳರು ಕಿಟಕಿ ಬಾಗಿಲು ಕಿತ್ತು ಒಳಕ್ಕೆ ನುಗ್ಗಿ ಸುಮಾರು 100 ರೂಪಾಯಿನ ಒಡವೆ, ನಗದು ಹಣ, ಬಟ್ಟೆಗಳು ಸಹ ದೋಚಿಕೊಂಡು ಹೋದದ್ದಲ್ಲದೆ ಊರಿನಲ್ಲಿ ಮತ್ತೊಬ್ಬ ಮುಸಲ್ಮಾನರ ಮನೆಗೂ ಪ್ರವೇಶಿಸಿ, ಸುಮಾರು 10–50 ರೂಪಾಯಿ ಬಾಳುವಷ್ಟು ಸಾಮಾನುಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ. ಪದೇ ಪದೇ ಕಾಂಪೌಂಡಿನಲ್ಲಿಯೂ ಊರಿನಲ್ಲಿಯೂ ಈ ರೀತಿಯಾದ ಕಳ್ಳತನಗಳು ನಡೆಯುತ್ತಲೇ ಇರುತ್ತವೆ. ಈ ಸ್ಥಳದ ಪೋಲೀಸ್ ಉದ್ಯೋಗಸ್ಥರು ಪ್ರತಿ ರಾತ್ರಿಯೂ ಗಸ್ತುಮಾಡುತ್ತಲೇ ಇರುತ್ತಾರೆ. ಹಾಗಾದರೂ ಈ ರೀತಿ ಕಳ್ಳತನಗಳು ನಡೆಯುವದು ತುಂಬಾ ಆಶ್ಚರ್ಯವಾಗಿದೆ.

ಫ್ರೆಂಚ್ ರಾಕ್ಸ್.—ಕಳೆದ ವಾರ ಈ ಪ್ರಾಂತ್ಯದ ಎಲ್ಲಾ ಕಡೆಗಳಲ್ಲೂ ಎರಡು ಮೂರು ಹದ ಒಳ್ಳೆ ಮಳೆಯಾಗಿ ಭೂಮಿ ತಂಪಾಗಿದೆ. ರೈತರು ಹರ್ಷಿತರಾಗಿ ತಮ್ಮ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಕೆರೆಗೆ ಮಾತ್ರ ನೀರು ಬಂದಿಲ್ಲ. ಜನರಿಗೆ ನೀರಿನ ತೊಂದರೆ ತಪ್ಪಿಲ್ಲ. ಇಲ್ಲಿಗೆ ಹೊಸದಾಗಿ ಬಂದಿರುವ ನಮ್ಮ ಸಬ್ ಡಿವಿಜನ್ ಆಫೀಸರವರು ಆಗಾಗ್ಗೆ ಊರಿನ ಆಯಾ ಭಾಗಗಳನ್ನು ಪರಾಂಬರಿಸುತ್ತಾ ಬರುವದರಿಂದ ಊರಿನ ನಾಕೇಬಂದಿ ತಕ್ಕಮಟ್ಟಿಗೂ ತೃಪ್ತಿಕರವಾಗಿರುತ್ತೆ. ನಮ್ಮ ಆಫೀಸರವರು ಮೊಹಲ್ಲೆಯ ಜನರಿಗೆ ಇರುವ ನೀರಿನ ಅನಾನುಕೂಲತೆಯನ್ನು ಅರಿತವರಾಗಿ ಹಾಸನದ ಬಾವಿ ವಗೈರೆ ಪರಾಂಬರಿಸಿರುವರಾಗಿರುವದರಿಂದ ಅಧಾರ್ಮಿಕವಾಗಿರುವ ಆ ಬಾವಿಯನ್ನು ಪೂರ್ತಿಗೊಳಿಸಿ ನೀರಿಗೆ ಅನುಕೂಲ ಮಾಡಿಕೊಡುವರೆಂಬ ಭರವಸೆಯುಂಟಾಗಿದೆ. ಸಂತೆಯಲ್ಲಿ ನಡೆಯುತ್ತಿರುವ ಮೋಸವು ಪೋಲೀಸ್ ಇಲಾಖೆಯವರ ನಿಗಾವಣೆಯಿಂದ ಬಹುಮಟ್ಟಿಗೆ ಅಡಗಿಹೋಗಿರುವದು ಸಂತೋಷವಾಗಿದೆ. ಈ ಟೌನಿನಲ್ಲಿ ಮ್ಯುನಿಸಿಪಾಲಿಟಿಯ ಕೆಲವು ಕೊರತೆಗಳುಂಟು. ಕೃಷ್ಣಪಕ್ಷದಲ್ಲಿ ಹಾಲಿ ಇರುವ ಹತ್ತು ಲಾಂದ್ರಗಳ ಬೆಳಕು ಸಾಕಾಗುವ ಹಾಗಿಲ್ಲ. ಮತ್ತು ಅವಶ್ಯವಾದ ಕೆಲವು ಕಡೆ ಲಾಂದ್ರಗಳೇ ಇಲ್ಲ. ಇನ್ನೂ ಮೂರು ನಾಲ್ಕು ಹೆಚ್ಚಿಸುವದು ಉಪಕಾರವಾಗಿರುತ್ತೆ. ಊರಿನ ಬೀದಿಗಳೂ ಗಲೀಜೂ ಪ್ರತಿ ದಿನವೂ ಶುದ್ಧಿಯಾಗುತ್ತಿರುವಂತೆ ತೋರುವದಿಲ್ಲ. ದಿನ ಒಂದಕ್ಕೆ ಒಂದೆರಡು ಬೀದಿಗಳಿಗೆ ಮಾತ್ರ ಝಾಡಮಾಲಿಗಳ ದರ್ಶನವಾಗುವಂತೆ ತಿಳಿಯಬರುತ್ತೆ. ಈ ಟೌನಿಗೆ ಝಾಡಮಾಲಿಗಳು ಆರು ಮಂದಿ ಮಾತ್ರ ಇದ್ದಾರೆ. ಇವರಿಂದ ಒಟ್ಟು ಎಲ್ಲಾ ಭಾಗಗಳೂ ಶುದ್ಧಿಯಾಗುವದು ಅಸಾಧ್ಯವೆಂತ ತಿಳಿಯಬರುತ್ತೆ. ಇಂಥಾ ನ್ಯೂನತೆಗಳ ವಿಚಾರದಲ್ಲಿ ನಮ್ಮ ವೈಸ್ ಪ್ರೆಸಿಡೆಂಟರವರು ಗಮನಕೊಡಬೇಕಾಗಿ ಕೋರುತ್ತೇವೆ.—ದಿನಾಲೂ ಮೋಡಗಳಾಡುತ್ತಾ ಇರುವದರಿಂದ ಬಿಸಿಲಿನ ತಾಪ ಕಡಮೆಯಾಗಿದೆ. ಮಧ್ಯಾಹ್ನ ಸಹ ಹವಾ ಆರೋಗ್ಯಕರವಾಗಿದೆ. ಕರಿಯ ನೀರಿನ ದೋಷದಿಂದಲೋ ಏನೋ ಹಾಗೆಯೇ ಕೆಮ್ಮು, ಚಳಿಜ್ವರ, ನೆಗಡಿಗಳ ಕಡೆ ಕೆಲವರು ಕಾಯಿಲೆಯಲ್ಲಿರುವದಾಗಿ ತಿಳಿದುಬರುತ್ತೆ.

ಕಡೂರು.—ಈಗ 15-20 ದಿವಸದಿಂದ ಮಳೆ ಇಲ್ಲ, ರಾಗಿ ಪೈರು ಒಣಗಿಹೋಗುತ್ತಾ ಇದೆ. ಈಗಲಾದರೂ ಒಂದು ಹದ ಮಳೆ ಬಂದರೆ ಅನುಕೂಲ. ರೈತರು ಆಕಾಶವನ್ನೇ ನೋಡುತ್ತಾ ಇದ್ದಾರೆ. ರಾಗಿ 16 ಸೇರು, ಅಕ್ಕಿ 6½–7 ಸೇರು, ಈ ರೀತಿ ಇದೆ. ಆದರೆ ಈ ಟೌನಿನಲ್ಲಿ ಸುಮಾರು 15 ಪೋಲೀಸ್ ಕಾನ್‌ಸ್ಟೇಬಲ್‌ಗಳೂ, ಒಬ್ಬ ಜಮೇದಾರರೂ, ಇಬ್ಬರು ದಫೇದಾರರೂ, ಇವರ ಮೇಲೆ ಇನ್ಸ್‌ಪೆಕ್ಟರವರೂ ಇದ್ದಾಗ್ಯೂ ರಾತ್ರಿ ಹೊತ್ತು ಗಸ್ತಿನ ಬಾಬೇ ಇಲ್ಲವೆಂದು ತೋರುತ್ತೆ. ಈಗ 4 ತಿಂಗಳಿಂದ ಸುತರಾಂ ಗಸ್ತು ಇಲ್ಲವೇ ಇಲ್ಲ. ಇದಕ್ಕೆ ಕಾರಣವೇನೆಂದರೆ, ಮಿಸ್ಟರ್ ಗೋವಿಂದನಾಯನಾಯಕ್ ಎಂಬುವರ ನಾಟಕವು ನಮ್ಮೂರಿಗೆ ಬಂದು 3 ತಿಂಗಳಾಯಿತು. ನಮ್ಮ ಇನ್ಸ್‌ಪೆಕ್ಟರವರು ಅಲ್ಲಿ ಇರುತ್ತಾರೆ. ಅಲ್ಲದೆ ಈ ನಾಟಕದಿಂದ ಅನೇಕ ಬಡ ಜನಗಳು ಕೆಡುತ್ತಿದ್ದಾರೆ. ನಮ್ಮ ಅಮಲ್ದಾರರವರು ಇವರಿಗೆ 1-1 ಆಟಕ್ಕೆ ಲೈಸೆನ್ಸು ಕೊಡದೆ ಒಟ್ಟಿಗೆ 15 ಆಟಕ್ಕೆ ಲೈಸೆನ್ಸು ಕೊಟ್ಟಿರುತ್ತಾರೆ. ಬಡ ಜನಗಳು ನೋಡಬೇಕೆಂಬ ಆಶೆಯಿಂದ ಒಡವೆ ವಸ್ತು ಬಡೆಗಳನ್ನು ಅಡವಿಟ್ಟು ನಾಟಕ ನೋಡಿಕೊಂಡು ಹೋಗುತ್ತಾರೆ. ಹೀಗೆ ಸರ್ಕಾರದವರು ಲೈಸೆನ್ಸು ಕೊಟ್ಟದ್ದಕ್ಕಾಗಿ ಬಹಳ ವ್ಯಸನಪಡಬೇಕಾಗಿದೆ. ಇನ್ನು ಮುಂದೆ ಯಾವ ಆಟಪಾಟಗಳು ಬಂದಾಗ್ಯೂ 5 ಆಟಕ್ಕಿಂತ ಹೆಚ್ಚಿಗೆ ಲೈಸೆನ್ಸು ಕೊಡಕೂಡದಾಗಿ ಮಾಡಬೇಕು.—ಈ ಟೌನ್ ಪೇಟೆ ವಾಸಸ್ಥರು ಪಡುವ ನೀರಿನ ತೊಂದರೆಯು ಎಷ್ಟು ಹೇಳಿದರೂ ತೀರದು. ನಲ್ಲಿಗಳೆಲ್ಲಾ ಮಳೆ ಬಿಸಿಲಿಗೆ ಒಣಗುತ್ತದೆ. ನಲ್ಲಿಗೆ ನೀರು ಸರಬರಾಜು ಆಗುವ ಹಳೇ ಪೇಟೆ ಕಟ್ಟೆಯು ನಾರುತ್ತಿದೆ. ಈ ನಾರುವ ಕಟ್ಟೆ ಮುಂದುಗಡೆಯಲ್ಲಿಯೇ ನಮ್ಮ ಅಮಲ್ದಾರರವರು ಆಫೀಸಿಗೆ ಹೋಗುವ ರೋಡು ಇದೆ. ಇದು ಇವರಿಗೆ ಇನ್ನೂ ಗೊತ್ತಾದ ಹಾಗೆ ಕಾಣುವುದಿಲ್ಲ. ಟೌನ್ ನಾಕೇಬಂದಿ ಚೆನ್ನಾಗಿಲ್ಲ.—ಇದಕ್ಕೆ ಹೊಸ ಮ್ಯುನಿಸಿಪಲ್ ಮುಖ್ಯಸ್ಥರಿಗೆ ಕೇಳಿದ ಮಾಹಿತಿ ಇಲ್ಲ. ಮತ್ತು ಮುನಿಸಿಪಲ್ ಜವಾನ 10 ವರ್ಷದಿಂದ ಇದ್ದಾನೆ. ಇವನಿಗೆ ಝಾಡಮಾಲಿಗಳು ಪಳಗಿಹೋಗಿದ್ದಾರೆ. ಈ ಟೌನಿನಲ್ಲಿ ಇರತಕ್ಕ ಜಾನುವಾರುಗಳಿಗೆ ಮೇಯುವುದಕ್ಕೆ ಗೋಮಾಳವಿಲ್ಲದೆ ಅಷ್ಟಗಳು ಪಡುವ ತೊಂದರೆ ಹೇಳತೀರದು.

ಇಲ್ಲಿ ಈಗ ಹಾದಿ ಇರುವಕ್ಕೆ ಮೋಟರುಗಳಿಗೆ ಸಹಾ ಗೊತ್ತಿದೆ ಅದರಿಂದ ಈ ಭಾಗವು ಅನುಕೂಲವಾಗದ ಇರುವದನ್ನು ನೋಡಿ ವ್ಯಸನಪಡಬೇಕಾಗಿದೆ

ಬೆಂಗಳೂರು ಸಿಟಿ —ಇದೇ ಸೆಪ್ಟೆಂಬರ್ ತಿಂಗಳು 7 ನೇ ತಾ ಶನಿವಾರ ವೆಸ್ಲಿಯನ್ ಮಿಷನ್ ವಿವಿಧ ಸಮಾಜದ ಯೌವನಸ್ಥರು ಬೆಂಗಳೂರು ವೆಸ್ಲಿ ಯನ್ ಸ್ಕೂಲ್ ಹಾಲಿನಲ್ಲಿ ಒಂದು ಗಾಯನ ಕೂಟವನ್ನು ಎಲ್ಲಾ ಕ್ರೈಸ್ತ ಮಂಡಲಿಯವರಿಗಾಗಿ ಜರುಗಿಸಿದರು ಈ ಕೂಟವನ್ನು ವೆಸ್ಲಿಯನ್ ಮಿಷನ್ ಚೇರ್ಮನ್‌ರವರಾದ ರೆವ ರಿಚ್ ಬೋಧಕರು ಪ್ರಾರ್ಥನೆಯಿಂದ ಪ್ರಾರಂಭಿಸಿದರು ಘನ ಥಾಮ್ಸ್ ಬೋಧಕರು ಅಗ್ರಾಸನರಾಗಿದ್ದರು ಅನೇಕ ಯೂರೋಪಿಯನ್ ಮಿಷನೆರಿಗಳೂ, ಮಿಷನೆರಿ ಲೇಡಿಗಳೂ, ಸ್ವದೇಶಬೋಧಕರೂ, ಉಪದೇಶಿಗಳೂ, ಗಂಡಸರೂ ಹೆಂಗಸರೂ ಮಕ್ಕಳೂ, ಹಿಂದೂಗಳಲ್ಲಿ ಆ ಕವಿತಾಪಸರ್ ವೈ ಚಾಮಿ ಭಿಷ್ಮಾಪಂತರವರೂ, ಅವರ ಮಕ್ಕಳೂ, ಇನ್ನೆ ಕೆಲವರೂ, ಹೆಚ್ಚು ಕಡಮೆ ನಾನೂರು ಮಂದಿ ಹಾಜರಾಗಿದ್ದರು ಹೈ ಸ್ಕೂಲ್ ಹಾಲ್ ದಿವ್ಯವಾದ ಬಾವುಟಗಳಿಂದಲೂ, ಕದಳೀಸ್ತಂಭಗಳಿಂದಲೂ, ಲತೆಗಳಿಂದಲೂ ಶೃಂಗರಿಸಲ್ಪಟ್ಟಿತ್ತು ಕೆಲವು ಚಿತ್ರಿಸಲ್ಪಟ್ಟ ಪರದೆಗಳು ಹಾಕಲ್ಪಟ್ಟಿದ್ದವು ಈ ಕೂಟದ ಪ್ರೋಗ್ರಾಮಿನಲ್ಲಿ ಹದಿನಾರು ವಿಷಯಗಳಿದ್ದವು. ಸಮಾಜದವರು ಬಹು ಶ್ರದ್ಧೆಯಿಂದಲೂ, ಆಸಕ್ತಿಯಿಂದಲೂ ಬುದ್ಧಿ ಶಕ್ತಿ ಸಾಮರ್ಥ್ಯಾದಿಗಳನ್ನು ಈ ಕೂಟದಲ್ಲಿ ಪ್ರಕಟಪಡಿಸುತ್ತಾ ಸಭೆಯವರನ್ನು ಆನಂದಪಡಿಸಿದರು ಸಭಿಕರು ವಿಶೇಷ ಕರ್ಣಾನಂದವನ್ನು ಹೊಂದಿ ತಮ್ಮ ಸಂತೋಷವನ್ನು ಸಮಾಜದವರಿಗೆ ಪ್ರಕಟಿಸುವ ಉದ್ದಿಶ್ಯ ಪದೇ ಪದೇ ಚಪ್ಪಾಳೆ ಹೊಡೆಯುತ್ತಿದ್ದರು ಹೀಗೆ ಸಭಿಕರು ಆನಂದಪಡುತ್ತಿರುವಲ್ಲಿ ಅಗ್ರಾಸನಾಸೀನರು ಸಮಾಜದವರ ಪ್ರಯತ್ನ ಸಾಧನೆಗಳನ್ನು ನೋಡಿ ಸಭೆಯವರ ಪರವಾಗಿ ಅವರನ್ನು ಬಹಳವಾಗಿ ವಂದಿಸಿ, ಸಭಿಕರೆಲ್ಲರೂ ಸಮಾಜದವರಿಗೆ ಬೇಕಾಗುವ ಪ್ರೋತ್ಸಾಹವನ್ನೂ, ಸಹಾಯವನ್ನೂ ಕೊಡಲು ಸಿದ್ಧರಾಗಿದ್ದಾರೆಂದು ಹೇಳಿ ಕಡೆಯ ಆಶೀರ್ವಚನದಿಂದ ಕೂಟವನ್ನು ಮುಕ್ತಾಯಮಾಡಿದರು — ಬೆಂಗಳೂರಿನಲ್ಲಿ ಕಳೆದ 10 ನೇ ತಾ ಮಂಗಳವಾರ ರಾತ್ರಿ ಎರಡು ಮೂರು ಹದ ಮಳೆಯಾಯಿತು ಅದೇ ದಿನ ವೆಸ್ಲಿಯನ್ ಮಿಷನ್ ಕಾಂಪೌಂಡಿಗೆ ಕಳ್ಳರುಬಿದ್ದು, ಅಲ್ಲಿಯ ಒಬ್ಬ ಸೇವಕನ ಮನೆಯ ಬಾಗಿಲನ್ನು ಕಿತ್ತು ಒಳಹೊಕ್ಕು ಸುಮಾರು 20 25 ರೂಪಾಯಿ ಬಾಳುವ ಬಟ್ಟೆಗಳನ್ನು ದೋಚಿಕೊಂಡು, ಮತ್ತೊಂದು ಮನೆಯ ಬೀಗವನ್ನು ಮುರಿದು ಏನನ್ನೂ ಕಾಣದೆ ಓಡಿಹೋಗಿರುತ್ತಾರೆ ಆ ರಾತ್ರಿ ಆ ಸಮಯದಲ್ಲಿ ಒಬ್ಬ ಹೆಡ್ ಕಾನ್ಸ್ಟೇಬಲ್, ನಾಲ್ಕು ಮಂದಿ ಪೋಲೀಸಿನವರೂ ಒಟ್ಟು ಐದು ಮಂದಿ ಬಂದೋಬಸ್ತನ್ನು ನೋಡುತ್ತಿದ್ದರಂತೆ ಹೀಗೆ ಐದು ಮಂದಿ ಕಾಯುತ್ತಿದ್ದರೂ ಈ ಕಳುವು ನಡೆದಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗಿರುತ್ತದೆ ಇದೇ ರೀತಿಯಲ್ಲಿ ಹಿಂದೆ ಎರಡಾವರ್ತಿ ಕಳುವು ನಡೆದು ಇದುವರಿವಿಗೂ ಪತ್ತೆಯೇ ಇಲ್ಲ ಹೀಗೆ ಇಲ್ಲಿ ಪದೇ ಪದೇ ಕಳ್ಳತನಗಳು ನಡೆಯುತ್ತಿದ್ದರೂ ಒಂದನ್ನಾದರೂ ಪೋಲೀಸಿನವರು ಪತ್ತೆ ಮಾಡದೆ ಇರುವದನ್ನು ನೋಡುವದು ತುಂಬಾ ಶೋಚನೀಯವಾಗಿರುತ್ತದೆ —ಕಳೆದ ವಾರ ಬಳ್ಳಾಪುರದ ಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಸ್ಕೂಲಿನಲ್ಲಿ ವಿಶೇಷವಾದ ಧರ್ಮಬೋಧನಾ ಕೂಟಗಳು ಜರುಗಿಸಲ್ಪಟ್ಟವು ಅನೇಕ ಒಳ್ಳೇ ಉಪನ್ಯಾಸಗಳೂ, ಭಜನೆಯೂ ಅಲ್ಲಿ ನಡೆದವು ಈ ವಾರವೂ ಕೂಡ ಅದೇ ರೀತಿಯಲ್ಲಿ ನಡೆಸಲ್ಪಡುತ್ತವೆ ಶನಿವಾರ ವಿಶೇಷವಾದ ಭಜನೆಯು ಜರುಗುವದರಿಂದ ಸರ್ವರೂ ಉಚಿತಾರ್ಥವಾಗಿ ಅಲ್ಲಿಗೆ ಹೋಗಬಹುದು

ವಿದೇಶದ ವೃತ್ತಾಂತಗಳು

ಇಟಲಿಯವರು ಟ್ರಿಪೋಲಿಯನ್ನು ಎರಡು ವಿಭಾಗವಮಾಡಿ, ಅಧಿಕಾರಿಗಳನ್ನು ನೇಮಿಸಿ ಆಳ್ವಿಕೆಯ ಕ್ರಮಗಳನ್ನು ರೂಢಿಸಲಾರಂಭಿಸಿದ್ದಾರೆ

ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗ್ ಪಟ್ಟಣದಲ್ಲಿ ಒಂದು ಕಾಲುವೆಯೊಳಗೆ ಮುಳುಗಿದ್ದ ಹಾಸಿಗೆ ಜನಗಳು ಬೆಂಕಿಬಿದ್ದು ಅವರೊಳಗೇ ಸಿಕ್ಕಿ ಉರಿದುಹೋದರು

ಫ್ರಾನ್ಸಿಗೆ ಸೇರಿದ ಎರಡು ಕಲ್ಲಿದ್ದಲು ಗಣಿಗಳೊಳಗೆ ಬೆಂಕಿಹುಟ್ಟಿ ಸುಮಾರು 40 ಮಂದಿ ಕೂಲಿಕಾರರು ಅಕಾಲಮರಣವನ್ನು ಹೊಂದಿದರು ಬಹು ಜನರಿಗೆ ಸುಟ್ಟಗಾಯಗಳಾಗಿ ಕೆಲವರು ಬದುಕುವುದು ಕಷ್ಟವಾಗಿದೆ

ಅಲ್ವಾರ್ ಸಂಸ್ಥಾನದ ಮಹಾರಾಜರವರೂ, ನವಾನಗರ ಸಂಸ್ಥಾನದ ಜಾಂ ಸಾಹೆಬ್ ರಂಜಿತ್‌ಸಿಂಗ್‌ಜಿಯವರೂ, ಪಟುಕೋಟೆ ಸಂಸ್ಥಾನದ ರಾಜರೂ ಈಗ ವಿಲಾಯಿತಿಯಲ್ಲಿ ದೇಹಾರೋಗ್ಯಕ್ಕಾಗಿ ಇದ್ದುಕೊಂಡು ಅಲ್ಲಿ ನಡೆಯುವ ನಾನಾ ವಿನೋದಗಳಲ್ಲಿ ಬೆರೆಯುತ್ತಿದ್ದಾರೆ

ಇಟಲಿ ಸೈನ್ಯದ ಮುಖ್ಯ ದಾರನಾದ ಕ್ಯಾಪ್ಟನ್ ಮಾಯುಮೊ ಎಂಬಾತನು ವಿಮಾನ ಯಂತ್ರದಲ್ಲಿ ಕುಳಿತು ಮಹಾರಾದಿಂದ ಟ್ರಿಪೋಲಿಗೆ ಹೋಗುತ್ತಿರುವಲ್ಲಿ ಬಿದ್ದು ಅರಬ್ಬಿಯವರ ಕೈಗೆ ಸಿಕ್ಕಿದನು ಅವರು ಆತನನ್ನು ಯುದ್ಧಬಂಧನಾಗಿ ಹಿಡಿದುಕೊಂಡು ಹೋಗಿರುತ್ತಾರೆ

ತುರ್ಕಿ ರಾಜ್ಯಕ್ಕೆ ಸೇರಿದ ಸೆಲೋನಿಕ ಆಧಿಪತ್ಯದ ಸಮೀಪದಲ್ಲಿ ಡಾಯಿರೆನ್ ಎಂಬ ಸ್ಥಳದಲ್ಲಿ ಒಂದು ದೊಡ್ಡ ಸಂತೆ ಸೇರಿದ್ದಾಗ ಆ ಜನರ ಗುಂಪಿನ ಮಧ್ಯೆ ಒಂದು ಸಿಡಿಮದ್ದಿನ ಗುಂಡು ಆಕಸ್ಮಾತ್ತಾಗಿ ಮಹಾ ಶಬ್ದದೊಡನೆ ಹಾರಿ ನೂರಾರು ಜನರಿಗೆ ಗಾಯಗಳಾದವು ಹಲವರು ಪ್ರಾಣಗಳನ್ನು ಕಳಕೊಂಡರು

ಕ್ಯಾಪ್ಟನ್ ಸ್ಕಾಟ್ ಎಂಬ ಇಂಗ್ಲಿಷ್ ಮಹನೀಯನು ದಕ್ಷಿಣ ಧ್ರುವ ಪ್ರಾಂತ್ಯದಲ್ಲಿ ಸಂಚರಿಸಿ, ಆ ಧ್ರುವವನ್ನು ಕಳೆದ ಜನವರಿ ತಿಂಗಳ 1 ನೇ ತಾರೀಖಿನಲ್ಲಿ ತಲುಪಿದನೆಂದೂ, ಆತನು ಆ ಲಾಗಾಯಿತು ಆ ಪ್ರಾಂತ್ಯದಲ್ಲಿ ಬೆಟ್ಟಗುಡ್ಡಗಳ ಪ್ರದೇಶವೆಲ್ಲಾ ಸುತ್ತಿ ಭೂಸ್ಥಳವನ್ನು ಹುಡುಕುತ್ತಿದ್ದಾನೆಂದೂ ಬ್ರಿಟಿಷ್ ಅಸೋಸಿಯೇಷನ್ ಎಂಬ ಶಾಸ್ತ್ರಾನ್ವೇಷಕರ ಸಮಾಜದಲ್ಲಿ ಕಳೆದ ವಾರ ಸರ್ ಕ್ಲೆಮೆಂಟ್ಸ್ ಮಾರ್ಕ್‌ಹಾಂರವರು ತಿಳಿಸಿರುವರು

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಹಬ್ಬರ್ ಎಂಬೊಬ್ಬ ವಕೀಲನು ತನ್ನ ಕಕ್ಷಿಗಾರಳಾದ ಜಾಬೋ ಎಂಬೊಬ್ಬ ಆಸ್ಟ್ರಿಯಾ ದೇಶದ ಐಶ್ವರ್ಯವತಿಯ ಸಂಗಡ ದೋಣಿಯಲ್ಲಿ ಕುಳಿತು ಕೆರೆಯ ಮೇಲೆ ತಿರುಗುತ್ತಿದ್ದಾಗ ಆಕೆಯನ್ನು ನೀರಿಗೆ ದೊಬ್ಬಿ ಕೊಂದುಬಿಟ್ಟನೆಂದು ಪೋಲೀಸಿನವರು ಫಿರ್ಯಾದು ಮಾಡಿದ್ದಾರೆ ಆ ವಕೀಲನು ಅವಳಾಗಿಯೇ ಕೆರೆಯೊಳಕ್ಕೆ ಮುಗುಚಿಕೊಂಡಳೆಂದೂ, ತಾನು ಅವಳನ್ನು ಎತ್ತಬೇಕೆಂದು ಸಾಹಸಪಟ್ಟರೂ ಸಾರ್ಥಕವಾಗಲಿಲ್ಲವೆಂದೂ ಹೇಳುತ್ತಾನೆ

ಅಮೇರಿಕಕ್ಕೆ ಸೇರಿದ ವರ್ಜೀನಿಯಾ ಡಿಸ್ಟ್ರಿಕ್ಟಿನಲ್ಲಿ ಹಿಲ್ಸ್‌ವಿಲ್ಲೆ ಎ ಒಲ್ಲಿ ಫ್ಲಾಯಿಡ್ ಅಲ್ಲನ್ ಎಂಬುವನು ಒಂದು ಅಪರಾಧವನ್ನು ಮಾಡಿದ್ದರಿಂದ ಜಡ್ಜಿಯವರು ವಿಚಾರಣೆ ಮಾಡಿ ಅವನಿಗೆ ಶಿಕ್ಷೆ ವಿಧಿಸಿದರು ಅಪರಾಧಿಯು ತನಗಾದ ಶಿಕ್ಷೆಯನ್ನು ಕೇಳಿದ ಕೂಡಲೆ ಆ ಜಡ್ಜಿಯನ್ನು ಕೋರ್ಟಿನೊಳಗೇ ಕೊಂದುಹಾಕಿದನು ಈ ಕ್ರೂರಾತ್ಮನನ್ನು ಕೊಲೆಯ ಅಪರಾಧಕ್ಕಾಗಿ ವಿಚಾರಣೆ ಮಾಡಿ, ಅವನನ್ನು ವಿದ್ಯುಚ್ಛಕ್ತಿಯ ಮೂಲಕ ಕೊಲ್ಲಬೇಕೆಂದು ಮರಣದಂಡನೆಯನ್ನು ವಿಧಿಸುತ್ತಾರೆ

ಪ್ರಪಂಚದ ಸಮಸ್ತ ಜನಾಂಗಗಳಲ್ಲೂ ಉತ್ತಮೋತ್ತಮವಾದ ಗುಣ ಸದ್ವರ್ತನೆಗಳನ್ನು ಕಲಿಸಿ ಮಕ್ಕಳನ್ನು ತರಬೇತು ಮಾಡುವುದು ಅವಶ್ಯವೆಂಬ ಅರ್ಥಕ್ಕೆ ಹೇಗ್ ಪಟ್ಟಣದಲ್ಲಿ ಮೊದಲನೇ ಮಹಾ ಸಭೆಯು ಕಳೆದ ವರುಷ ನಡೆಯಿತು ಈ ವರುಷ ಎರಡನೇ ಮಹಾ ಸಭೆಯನ್ನು ಜರುಗಿಸುವವರಾಗಿದ್ದಾರೆ ಪ್ರಪಂಚದ ಎಲ್ಲಾ ಜನಾಂಗಗಳ ಪ್ರತಿನಿಧಿಗಳೂ ಈ ಮಹಾ ಸಭೆಯಲ್ಲಿ ಸೇರುವರು ಈ ಸಭೆಯ ಕಾರ್ಯನಿರ್ವಾಹಕ ಕಮಿಟಿಗೆ ಡಾಕ್ಟರ್ ಸರ್ವಾಧಿಕಾರಿ ಎಂಬ ಹಿಂದುಸ್ಥಾನದ ದೊಡ್ಡ ಮನುಷ್ಯರನ್ನು ಒಬ್ಬ ಮೆಂಬರಾಗಿ ಸೇರಿಸಿಕೊಂಡಿದ್ದಾರೆ

ಕಳೆದ ಆಗಸ್ಟ್ ತಾ 29 ರಲ್ಲಿ ಚೀನಾ ಚಕ್ರಾಧಿಪತ್ಯದೊಳಗೆ ಕೆಲವು ಪ್ರಾಂತ್ಯಗಳಲ್ಲಿ ಅಪೂರ್ವವಾದ ಸುಂಟರಗಾಳಿಯೂ ಅಪಾರವಾದ ಮಳೆಗಳೂ ಪ್ರಾಪ್ತವಾದವು ವೆನ್‌ಚೂ ಎಂಬ ನದಿಯಲ್ಲಿ ವಿಶೇಷ ಪ್ರವಾಹಗಳು ಒಂದು ದಡಗಳ ಮೇಲೆ ಹರಿದು ಟ್ಸಿಂಗ್‌ಟೀನ್ ಎಂಬ ಪಟ್ಟಣವನ್ನು ಮುಳುಗಿಸಿಬಿಟ್ಟವು ಕೊನಿಯೊ ಎಂಬ ಸ್ಥಳದಲ್ಲಿ 10,000 ಪ್ರಜೆಗಳು ನೀರಿನಲ್ಲಿ ಮುಳುಗಿ ಸತ್ತರು ಚೂಚ್ ಎಂಬ ಆಧಿಪತ್ಯದ ಅನೇಕ ಸಣ್ಣ ನಗರಗಳು ನಾಶಹೊಂದಿದವು ಆ ಪ್ರಾಂತ್ಯಗಳಲ್ಲಾ 30,000 ಪ್ರಜೆಗಳು ಮೃತಪಟ್ಟರೆಂದು ಚೀನಿಯರು ಹೇಳುತ್ತಾರೆ.

ಚಿಕಾಗೋ ಪಟ್ಟಣದಲ್ಲಿ ಮಿ॥ ವಿಕ್ಟರ್ ಲಾಂಡರ್ ಎಂಬುವನಿಗೆ ಒಂದು ಮನೆ ಇದೆ ಈ ಮನೆಯಲ್ಲಿ ಯಾವುದೋ ಒಂದು ಸ್ತ್ರೀಗ್ರಹ ಸೇರಿಕೊಂಡಿದೆಯಂತೆ ಬಾಡಿಗೆಗೆ ಯಾರು ಬಂದರೂ ಒಂದೆರಡು ದಿನಗಳಲ್ಲೇ ಆ ಮನೆಯನ್ನು ಬಿಟ್ಟು ಹೋಗುತ್ತಾರೆ ಈ ಮನೆಗೆ ಸರ್ಕಾರದವರು 30,000 ರೂಪಾಯಿ ಕಂದಾಯ ಹಾಕಿ, ಪಾವತಿ ಮಾಡಬೇಕೆಂದು ಮನೆಯ ಮಾಲೀಕನಿಗೆ ನೋಟೀಸ್ ಕೊಟ್ಟರು ಮಾಲೀಕನು ಪ್ರತ್ಯುತ್ತರವಾಗಿ ಆ ಮನೆಯಲ್ಲಿ ಗ್ರಹ ಸೇರಿಕೊಂಡಿದೆ ಎಂದೂ, ಬಾಡಿಗೆಯವರು ಯಾರೂ ಬರುತ್ತಿಲ್ಲವೆಂದೂ, ಇದರಿಂದ ತನಗೆ 12,000 ರೂಪಾಯಿ ನಷ್ಟವಾಗಿದೆ ಎಂದೂ, ಕಂದಾಯವನ್ನು ಕಡಮೆ ಮಾಡಿಕೊಡಬೇಕೆಂದು ಕೇಳಿ ನ್ಯಾಯ ಮಾಡಿದ್ದು ಸರ್ಕಾರದವರು ತಿಳಿದು ಮನೆಯ ಕಂದಾಯವನ್ನು 21,000 ರೂಪಾಯಿಗೆ ಇಳಿಸುತ್ತಾರೆ

ಆಫ್ರಿಯಾಟಿಕ್ ಸಮುದ್ರತೀರದಲ್ಲಿ ಆಸ್ಟ್ರಿಯಾ ರಾಜ್ಯಕ್ಕೆ ಸೇರಿದ ಟ್ರಿಯೆಸ್ಟ್ ಎಂಬ ಪಟ್ಟಣದೊಳಗೆ ಒಂದು ಜಹಜಿನ ಚಿತ್ರವನ್ನು ಚಿತ್ರಿಸಿ ಮಾಡುವುದಕ್ಕೆ ಜಡ್ಜಿಯೂ ಗುಮಾಸ್ತೆಯೂ ಸೇರಿ ಸ್ಥಳ ಅಜಮಾಯಿಷಿಗಾಗಿ ಹೋಗಿ ಜಹಜಿನ ನಕ್ಷೆ ಮುಂತಾದದ್ದನ್ನು ಬರೆದುಕೊಳ್ಳುತ್ತಿದ್ದಾಗ ಇವರು ಪರರಾಜ್ಯದ ಗೂಢಚಾರರೆಂದೂ, ಇವರಿಂದ ರಾಜ್ಯಕ್ಕೆ ತೊಂದರೆಯಾಗುವುದೆಂದೂ ಸೈನಿಕರು ಅವರನ್ನು ಹಿಡಿದುಕೊಂಡು, ಅವರು ತಮ್ಮ ನಿಜಸ್ವರೂಪವನ್ನು ಎಷ್ಟು ಹೇಳಿದರೂ ಕೇಳದೆ ಸೈನ್ಯಾಧಿಪತಿಯ ಬಳಿಗೆ ಕರೆದುಕೊಂಡು ಹೋದರು ಆದರೆ ದರ್ಯಾಫ್ತಿಯ ಕಾಲದಲ್ಲಿ ಆ ಜಡ್ಜಿಯೂ ಆತನ ಗುಮಾಸ್ತನೂ ತಮ್ಮ ಪೂರ್ವೋತ್ತರವನ್ನು ವಿವರಿಸಿ, ತಮ್ಮ ನೌಕರಿಯ ಕಾಗದಪತ್ರಗಳನ್ನೂ ಗುರುತುಗಳನ್ನೂ ತೋರಿಸಿದಾಗ ಸೈನ್ಯಾಧಿಪತಿಯು ಅವರಿಬ್ಬರನ್ನೂ ಬಿಡುಗಡೆಮಾಡಿದನು

ಚೀನಾ ರಾಷ್ಟ್ರದ ಗವರ್ನ್‌ಮೆಂಟಿನವರು ಟ್ಷಿಂಗ್ ಎಂಬ ಆಧಿಪತ್ಯದಲ್ಲಿರುವ ಚೀನೀಯರ ಉದ್ದವಾದ ಕೂದಲು ಜಡೆಗಳನ್ನು ಕತ್ತರಿಸಿಹಾಕಬೇಕೆಂದು ಪೋಲೀಸಿಗೆ ಹುಕುಂ ಕೊಟ್ಟರು ಪೋಲೀಸಿನವರು ಆ ಹುಕುಮನ್ನು ಜಾರಿ ಮಾಡುವುದಕ್ಕೋಸ್ಕರ ಮೊದಲು ಸುಂಕದ ಕಟ್ಟೆಗೆ ಹೋಗಿ ಅಲ್ಲಿರುವ ಚೀನೀಯರ ಜುಟ್ಟನ್ನು ಕತ್ತರಿಸಿಹಾಕಲಾರಂಭಿಸಿದರು ಚೀನೀಯರಿಗೂ ಪೋಲೀಸಿನವರಿಗೂ ಕದನವಾಯಿತು ಕೆಲವರು ತಪ್ಪಿಸಿಕೊಂಡು ಓಡಿಹೋದರು ಒಂದೇ ದಿನದಲ್ಲಿ 2,000 ಮಂದಿ ಚೀನೀಯರ ಜುಟ್ಟುಗಳು ಕತ್ತರಿಸಲ್ಪಟ್ಟವು ಆ ದಿನ ಆ ಪ್ರದೇಶವೆಲ್ಲಾ ಜನಸಂಚಾರವಿಲ್ಲದ ಊರೇ ಬರಿದಾದಂತೆ ಕಂಡಿತು ಅಂಗಡಿ ಮುಂಗಟ್ಟುಗಳೂ, ಮಾರ್ಕೆಟ್ಟುಗಳೂ ಮುಚ್ಚಿಹೋದವು ಚೀನಾ ಪ್ರಜೆಗಳೆಲ್ಲಾ ತಮ್ಮ ಜುಟ್ಟು ಕತ್ತರಿಸಿಹಾಕುತ್ತಾರೆಂಬ ಭೀತಿಯಿಂದ ಹೊರಗೆ ಬರದೆ ಮನೆಯಲ್ಲಿ ಅವಿತು ಕುಳಿತಿದ್ದರು

ಟ್ಟೇಮ್ಸ್ ಎಂಬ ಲಂಡನ್ ಪಟ್ಟಣದ ವರ್ತಮಾನ ಪತ್ರಿಕೆಗೆ ಚೀನಾ ದೇಶದ ಸಮಾಚಾರಗಳನ್ನು ಬರೆದು ಕಳುಹಿಸುತ್ತಾ ತುಂಬಾ ಪ್ರಖ್ಯಾತಿಹೊಂದಿದ ಡಾಕ್ಟರ್ ಮಾರಿಸನ್ ಎಂಬಾತನನ್ನು ಚೀನಾ ಪ್ರಜಾಪ್ರಭುತ್ವದ ಗವರ್ನ್‌ಮೆಂಟಿನವರು ರಾಜಕೀಯ ಸಲಹೆಗಾರನಾಗಿ ನೇಮಿಸಿಕೊಂಡಿದ್ದಾರೆ ಈಚೆಗೆ ಕಾರ್ಲ್‌ಸ್ರುಹ ವಿದ್ಯಾಸಂಸ್ಥೆಯಲ್ಲಿ ಘನ ಪಂಡಿತರಾದ ಪಿ ಕ್ಲೆ ಎಂಬುವರನ್ನು ಹಿಂದೆ ಇದ್ದ ಚೀನಾ ಸರ್ಕಾರಕ್ಕೆ ಮುಖ್ಯ ಸಲಹೆಗಾರರನ್ನಾಗಿಯೂ, ಫ್ರೆಂಚ್ ಸೈನಿಕರ ಮುಖ್ಯಾಧಿಕಾರರಾದ ಲೆಫ್ಟಿನೆಂಟ್ ಬ್ರಿಸೋ ಎಂಬುವರನ್ನು ಸೈನ್ಯದ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿಯೂ ಚೀನಾ ಗವರ್ನ್‌ಮೆಂಟಿನವರು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ ಸಹಾ ಗವರ್ನ್‌ಮೆಂಟಿನಲ್ಲಿ ನ್ಯಾಯ ಇಲಾಖಾ ಮುಖ್ಯಾಧಿಕಾರಿಯಾಗಿರುವ ಒಬ್ಬ ಫ್ರೆಂಚ್ ದೊಡ್ಡಮನುಷ್ಯನನ್ನು ಕರೆಸಿ ಚೀನಾ ರಾಜ್ಯದಲ್ಲಿ ಅದೇ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವುದಾಗಿ ತಿಳಿದುಬರುತ್ತದೆ

Notes on Tanglewood Tales	0 4 0
ಆರೋಗ್ಯ ಪ್ರಶ್ನೋತ್ತರ (1 1 ನೇ ತರಗತಿಗಳಿಗೆ)	0 1 0
ಸಂಗೀತ ಪಾರಿಜಾತ	0 1 0
ಮುದ್ರಾಮಂಜೂಷ	1 0 0
ಬಿ ವೆಂಕಟಾಚಾರ್ಯರಿಂದ ರಚಿಸಲ್ಪಟ್ಟ ಬೆಂಗಾಲಿ ಪುರಾಣ	1 1 0
ರಾಜಸಿಂಹ	1 1 0

(131-1) ಎಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ನಂಜನಗೂಡು ಮುನ್‌ಸಿಫ್ ಕೋರ್ಟಿನಲ್ಲಿ.

1911-1912 ನೇ ಇಸವಿ ಅಸಲ್ ನಂಬರು 604

ವಾದಿಗಳು —ನಂಜನಗೂಡು ತಾಲ್ಲೂಕು ಕಳಲೆಯಲ್ಲಿರುವ ಕುರುಬರ ಜಾತಿ 1 ನೇ ಮಾದೇಗೌಡನ ಮಗ ದೊಡ್ಡೇಗೌಡ, 2 ನೇ ಮರಿಕರೀಗೌಡನ ಮಗ ಕಾಳೇಗೌಡ, 3 ನೇ ಸುಬ್ಬೇಗೌಡನ ಮಗ ದುಬ್ಬೇಗೌಡ 4 ನೇ ಪುಟ್ಟ ಮಾದೇಗೌಡ

ಪ್ರತಿವಾದಿ — ನಂಜನಗೂಡು ತಾಲ್ಲೂಕು ಕಳಲೆಯಲ್ಲಿ ಇದ್ದು ಹಾಲಿ ತಾಳವಾಡಿ ಹೋಬಳಿಗೆ ಸೇರಿದ ಸೊತ್ತನಪುರದಲ್ಲಿ ಇರುವ ಕಾಟಿ ಪಟೇಲು ಕಬ್ಬೆ ಪಾಲನ ದೇವಣ್ಣನವರ ಮಗ ಮುತ್ತೈಯ

ಇದರಿಂದ ನಂಜನಗೂಡು, ಗುಂಡ್ಲುಪೇಟೆ ಕಸಬಾ, ಡಿವ್ರಾ ತಾಲ್ಲೂಕು ಕಬ್ಬಳ್ಳಿ ಮತ್ತು ತೆರಕಣಾಂಬಿ, ಕೊಳ್ಳೇಗಾಲದ ಕಸಬಾ, ಚಾಮರಾಜನಗರ, ಟಿ ನರಸೀಪುರ ಈ ಸ್ಥಳದಲ್ಲಿ ಇರತಕ್ಕ ಕುರುಬರ ಕಮ್ಯೂನಿಟಿ (ಸಮೂಹದ) ಜನರಿಗೆ ತಿಳಿಯಪಡಿಸುವುದೇನೆಂದರೆ

ಮೇಲ್ಕಂಡ ಕುರುಬರ ಕಮ್ಯೂನಿಟಿಗೆ ಸೇರಿದ ನಂಜನಗೂಡು ತಾಲ್ಲೂಕು ಕಳಲೆಯಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿ ದೇವರ ಪೂಜೆಯನ್ನು ಪ್ರತಿವಾದಿ ಮುತ್ತೈಯನು ತನ್ನ ಸರದಿ ಪ್ರಕಾರ ಸ್ವಾಮ್ಯನಾಲಿನಲ್ಲೂ, ವಿರೋಧಿಕೃತು ನಾಲಿನಲ್ಲೂ ಮಾಡದೆ ತಪ್ಪಿದ್ದರಿಂದ ಆ ಕಾಲದಲ್ಲಿ ದೇವಸ್ಥಾನದ ಪಂಚಾಯಿತಿ ಕಮಿಟಿ ಮೆಂಬರುಗಳ ತೀರ್ಮಾನದ ಪ್ರಕಾರ ವಾದಿಗಳು 17 ರೂಪಾಯಿಗಳನ್ನು ಖರ್ಚುಮಾಡಿ ಪೂಜೆ ಕೆಲಸ ನಡೆಸಿರುವದಾಗಿಯೂ ಆ ಬಾಬ್ತು 17 ರೂಪಾಯಿಗಳು ಮತ್ತು ಬಡ್ಡಿ ನಷ್ಟ 12 ರೂಪಾಯಿಗಳನ್ನು ಸಹಾ ಸದರಿ ಮುತ್ತೈಯನಿಂದ ಕೊಡಿಸಬೇಕೆಂದು ಈ ಕೋರ್ಟಿನಲ್ಲಿ ಮೇಲ್ಕಂಡ ವಾದಿಗಳು ದಾವಾ ತಂದಿರುತ್ತಾರೆ

ಸದರಿ ಮೊಕದ್ದಮೆಗೆ ಕಕ್ಷಿಗಾರರಾಗಿ ಸೇರಬೇಕಾದ್ದ ಇಷ್ಟವುಳ್ಳವರು 1912 ನೇ ಇಸವಿ ಅಕ್ಟೋಬರ್ 30 ನೇ ತಾರೀಖಿನ ದಿವಸ 11 ಘಂಟೆಗೆ ಸರಿಯಾಗಿ ನಂಜನಗೂಡು ಮುನ್‌ಸಿಫ್ ಕೋರ್ಟಿನ ರೂಬರೂಬು ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು [117-1]

ತಾರೀಖು 12-9-1912 ನೇ ಇಸವಿ

F. KRISHNA IYENGAR,
ಮುನ್‌ಸಿಫ್

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದ ಮಾಡಿದೆ. ಬರೀ ಸಸ್ಯಾಹಾರ.

ಮೆಲಿನ್ಸ ಆಹಾರವು ಉತ್ತೇಜನ ಕೊಡುವುದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಪುಸ್ತಕಪಟ್ಟಿ ಕಳುಹಿಸುತ್ತಾರೆ.

[66-21] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thompson, M.A., Proprietor and Manager Wesleyan Mission Press, Mysore. 19/9/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಸೆಪ್ಟಂಬರ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೧೨

...ಗುವಾನಿ ಬೀಡ್ ಡಿಪೋ.

ವ್ಯಾಪಾರಿಕೆಗೆ ಸಿದ್ಧವಾಗಿದೆ.

ಪ್ರಸ್ತುತ ಬಂದ ಹೊಸ ಸರಕಿನ ಉತ್ತಮವಾದ ಬೀಟೆ ಮರದ ನಮ್ಮ ಡಿಪೋದಲ್ಲಿ ... ಬೆಂಗಳೂರು ರೋಡು ... ನಲ್ಲಿ ... ಅತ್ಯುತ್ತಮವಾಗಿಯೂ, ಸುತ್ತಳತೆ ... ಅಡಿ ಲಾಗಾ ... ಅಡಿ ವರೆಗಿನ ... ಉದ್ದ ... ಅಡಿ ಲಾಗಾ ... ಅಡಿ ಉದ್ದ ... ವರೆಗೂ ಇರತಕ್ಕ ನಾಗುವಾನಿ, ಮತ್ತಿ, ಹೊನ್ನೆ, ... ಬೀಟೆ ಮರಗಳು ... ಮತ್ತು ಪರಸ್ಥಳದ ವ್ಯಾಪಾರಕ್ಕೆ ಸಿದ್ಧವಾ... ಕಾಲದಲ್ಲಿ 25,000 ಅಡಿಗಳಿಗೆ ... ಅಪೇಕ್ಷಿಸಿ ... ಅಲ್ಲದೆ ನಮ್ಮ ಬಾಬ್ತು ಕಲ್ಲಿಕೋಟೆ ... ಡಿಪೋದಲ್ಲಿ ... 9,000 ಅಡಿ ಅತ್ಯುತ್ತಮವಾದ ಬೀಟೆ ಮರ ... ವ್ಯಾಪಾರಕ್ಕೆ ಸಿದ್ಧವಾಗಿದೆ. ಅಪೇಕ್ಷೆಯುಳ್ಳ ... ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದಲ್ಲದೆ ಕಲಿ ಕೋಟೆಯ ... ವಿಷಯಕ್ಕೆ ... ನೂರಾಜಯರ್, ಸೂರತ್, ... [113-5]

M K SUBBEGOWDAH & Co.,
Timber Merchants,
210 Kempananjamba Agrahar, Mysore

The Coromandel Life Assurance Co., Ltd., Bimlipatam

The well known Company issues Policies and Marriage Endowment Diplomas for very low monthly premiums of 1-6-0, and Re. 1 0 0 respectively in the 1st class.

Wanted—Active and influential Agents in every District and Taluk on liberal commission or pay.

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಯಲ್ಲಿರುವ ... ಸರ್ಕಾರದ ಪರವಾನಿಯುಳ್ಳ ... ಕೊರೋಮ್ಯಾಂಡಲ್ ... ಕಂಪನಿ ಲಿಮಿಟೆಡ್ ಗೆ ಜೀವವಿಮೆ ಮತ್ತು ಮದುವೆ ಬ್ರಾಂಚ್ ಗ... ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜಂಟರುಗಳು ಎಲ್ಲಾ ... ತಾಲ್ಲೋಕುಗಳಲ್ಲಿಯೂ ಭಾರೀ ... ಕಮಿಷನ್ ... ಬೇಕಾಗಿವೆ. ಈ ಕಂಪನಿಗೆ ... ಸರಟಿಫಿಕೇಟು ... 11 ನೇ ಇಸವಿಯಲ್ಲಿ ... ರೂಪಾಯಿ ಒಂದಕ್ಕೆ ... ರೂಪಾಯಿ ... ಮದುವೆ ಬ್ರಾಂಚಿನಲ್ಲಿ ರೂಪಾಯಿ ಒಂದಕ್ಕೆ 1 ರೂಪಾಯಿಯಂತೆ ... ವಿಶೇಷ ತಿಳಿಯಬೇಕೆನ್ನುವವರು ಈ ಕೆಳಗಿನ ವಿಳಾ... ಬರೆಯಿರಿ. [115-1]

ಮೆಸರ್ಸ್ ವೆಂಕಟಾಚಲಂ ಅಂಡ್ ಸನ್,
ಮೈಸೂರು ದೇಶದ ಮತ್ತು ಕೊಡಗಿನ ಜನರಲ್ ಏಜೆಂಟು,
ಚಿಕ್ಕ ದೊಡ್ಡಪೇಟೆ, ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

81 18

... ನಾನು ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ... ಆಲಸ್ಯ, ತಲೆನೋವು, ... ಬಾಧೆ ... ಉಷ್ಣ, ... ನರಗಳ ... ಕೆಮ್ಮುಗಳು, ... ಕ್ಷಯರೋಗ, ... ಉಬ್ಬಸ, ... ಚಳಿ ಜ್ವರ ... ಇವೆಲ್ಲ ... ನಾನು ವಾಸಿಮಾಡಿಕೊಂಡು ... ಸಮೀಪದಲ್ಲಿ ... ಕ್ಲೆಮೆಂಟನ ಮ್ಯಾಜಿಕ್ ಬಾಂ ಒಂದು ... ಎಂದು ಕೇಳಿ ... ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ... ಈ ಯುಕ್ತಿಯೋಪಾಧಿ ... ದಿನದಲ್ಲಿ 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ... ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ... ನಿಮಗೂ ನಿಶ್ಚಯವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟನ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ... ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ ... ಅಥವಾ ... ವ್ಯಾಪಾರಸ್ಥರಿಗೆ ... ಸಿಗುತ್ತೆ. ವಿಳಾಸಗಳು:—(1) ಎಸ್. ಪಿಂಟರ್, 37 ... ಬೀದಿ, ... ಮದರಾಸ್, (2) ಜೆ ಎಸ್ ... ಜನರಲ್ ಮರ್ಚೆಂಟ್, ತುಮಕೂರು.

ಭಗವದ್ಗೀತೆ

ವಿಷ್ಣು ಸಹಸ್ರನಾಮಸಹಿತ, ಸಚಿತ್ರ.

... ಸೈಜ್ 0-5-0, ಸಣ್ಣಸೈಜ್ 0-4-0 ಈ ನವರಾತ್ರ್ಯೋತ್ಸವ ... 1 ಪುಸ್ತಕಗಳನ್ನು ತರಿಸಿಕೊಂಡರೆ 1 ... ಉಚಿತ.

[115-1] ವಿಳಾಸ —ಗೀತಾಮಂದಿರ, ಮೈಸೂರು.

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಿಲೋತ್ತಮಾ ಸುಂದರಿ.—ಇದು ಅನಂಗಸುಂದರಿಯ ಉಪಸಂಹಾರ. ಕಲ್ಪನಾ ಕೌಶಲ್ಯವೂ ಘಟನಾವಳಿಯೂ ... ಕ್ರಯ 9 ಆಣೆ

ಕುಮುದಿನಿ.—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ 6 ಆಣೆ

ಸತೀರೋಹಿಣಿ.—ಸ್ತ್ರೀಯರೆಲ್ಲರೂ ಇದನ್ನೋದಬೇಕು. ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು. ಕ್ರಯ 2 ಆಣೆ [139-13]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಆಂಗ್ಲಭಾಷಾ ಪ್ರವೇಶದಾಯಿನಿ.

ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಸುವುದು.

ಮೊದಲನೆಯ ಪುಸ್ತಕ—ಪ್ರಥಮಾಭ್ಯಾಸಿಗಳಿಗೆ ಬಹು ಉಪಯೋಗಕರವಾದ ... ಪಾಠಗಳು ಅನೇಕವಾಗಿವೆ. ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ. ಎರಡನೆಯ ಪುಸ್ತಕ—... ವ್ಯಾಕರಣ ನಿಯಮಗಳೂ, ಭಾಷಾಂತರದ ವಾಕ್ಯಗಳೂ ಸೇರಿವೆ. ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ. ಮೂರನೆಯ ಪುಸ್ತಕ—ಪ್ರಶ್ನೋತ್ತರ ರೀತಿಯಾಗಿ ವಿವಿಧ ವಿಷಯಗಳಲ್ಲಿ ಒಬ್ಬರೊಡನೆ ಒಬ್ಬರು ಮಾತಾಡುವ ರೀತಿಯನ್ನೂ, ವ್ಯಾಪಾರಸ್ಥರಿಗೆ ಅನುಕೂಲವಾದ ಅನೇಕ ಸಂಗತಿಗಳನ್ನೂ ತಿಳಿಸುತ್ತದೆ. ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ. ಅಭ್ಯಾಸ ಮಾಡುವವರಿಗೆ ಅನುಕೂಲಿಸುವಂತೆ ಪ್ರತಿ ಪುಸ್ತಕದಲ್ಲಿಯೂ ಒಂದೊಂದು ಶಬ್ದವನ್ನೂ ಇಂಗ್ಲೀಷಿನಲ್ಲಿ ಬರೆದು, ಉಚ್ಚರಿಸುವ ರೀತಿಯನ್ನೂ ಅರ್ಥವನ್ನೂ ಕನ್ನಡದಲ್ಲಿ ತಿಳಿಸಿರುವುದರಿಂದ ಇದುವರೆಗೆ ನಾಲ್ಕು ಸಲ ಅಚ್ಚಾಯಿತು. [150-1]

ವಿಳಾಸ:—ಎಸ್. ಆರ್. ವೆಂಕಟಸುಬ್ಬಯ್ಯ,
ಬಾಷ್ಯಂ ಕಾರ್ಯಾಲಯ, ೧೨೦ ಗುಡಮ್ಮಯನಪೇಟೆ, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115-11]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಇದು ಮಧುರ (ಸವಿ) ಇದ್ದದ್ದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಆಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

WILLIAM & Co, FORT, BOMBAY.

ಅಮೃತಾಂಜನ. (Regd.)

ಎಲ್ಲಿ ವಿಶೇಷ ಲಕ್ಷ ಕೂಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಟ್ಟೆ, ಗಂಟ್ಲುನೋವು, ಘಾಯ, ಉಳಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು. ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-9-0.

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ನಾಲ್ಕು ಹಚ್ಚುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ ಉರಿಯು ಒದುವದಿಲ್ಲ, ಚರ್ಮವ ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 0-6-0.

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ. ಸುಂದರಿ ಕ್ರೀಂ 8 ಆಣೆ [15-31]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೋ, ಫೋರ್ಟ್ಸ್ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ... ಜ್ವರ, ಹೊಟ್ಟೆ ನೋವು ... ಕೀಲು ನೋವು ... ಶೀತ ... ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು ಕೆಮ್ಮು, ... ಇನ್ನೂ ಅನೇಕ ರೋಗಗಳಿಗೆ ... ಗುಣಪಡಿಸುತ್ತದೆ. ... ಉಪಯೋಗಿಸುತ್ತಿದ್ದರೆ ... ಯಾವ ಕಾಯಿಲೆಗೂ ... ರಕ್ತದಲ್ಲಿಯ ದೋಷವನ್ನು ತೆಗೆದು ಬುದ್ಧಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ... ಗುಣಪಡಿಸುತ್ತದೆ ... ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ [136-1]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ... ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ... ಕಟ್ಟಿದ ಕೂಡಲೆ ... ಸಮಯದಲ್ಲಿ ... ಒಂದು ಬುದ್ದಿಯು ನಿಮ್ಮಲ್ಲಿರಲಿ. ... ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1. ... ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದ್ರವ್ಯಸಹಾಯ ಉಂಟಾಗುವುದರಿಂದ ಅವರ ಮಕ್ಕಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರಿದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯ ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ, ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ [1-18]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ
ಚಿನ್ನದ ಪದಕವು ದೊರಕಿಯದೆ

[illegible]

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

[illegible]

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



[illegible]

ಕಾಮಿನಿಯಾ ತೈಲ—

[illegible]

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)— [illegible]

ದಿಲ್-ಬಹಾರ್ (ರಿಜಿಡ್.)— [illegible]

[illegible]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



[illegible]

ಪಿಟೀಲು.

ಪೂರ್ವದ ಕ್ರಯ ರೂ 15 0 0 [149]
ಈಗಿನ ಅರ್ಧ ಕ್ರಯ ರೂ. 8 8-0
ಒಂದು ತಿಂಗಳ ವರೆಗೆ
ಮಾತ್ರ!



[illegible]

ರಾಮಸ್ವಾಮಿಮುತ್ತು ಕಂಪನಿ,
ನಂ|| ೨, ಜೊಮ್ಮಾಲ್ಲೆಯನ ಚೆಟ್ಟಿ, ಅನೇಗುಂಡಿ ಸಮೀಪ,
ಮದರಾಸು

ನೇ ೧೯೧೬ ರಿಂದ ೧೯೦೬ ವರೆಗೆ

[illegible]

SCOTT'S EMULSION 239

(ಸ್ಕಾಟ್ಸ್ ಇಮಲ್ಷನ್)

[illegible]

ಕೈಸೋಕದೆ ತಯಾರಾದದ್ದು.

[illegible]

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಪಾಕೆಟ್ ಲಿವರ್ ವಾಚು

ಇದರ ಕ್ರಯ ೬ ಬಹುಮಾನಗಳ ಸಮೇತ ೩ ರೂ



[illegible]

ಇದರ ಆರು ಬಹುಮಾನಗಳ ತಪಸೀಲು

[illegible]

ಆರ್ ವೆಂಕಟರಮಣ ಅಂಡ್ ಕಂಪನಿ,
ನಂಬರ್ 7 ಕೋ... ವೆಂಕಟಾಚಲಮು ರ... ಬೀದಿ, ಮದ್ರಾಸು

ಹೊಸದು! ಹೊಸದು!! ಹೊಸದು!!!

ಹಿತ್ತಾಳೆ ಮೋಂಬತ್ತಿಯ ದೀವಿಗೆ

[illegible]

ನಮ್ಮ ವಿಳಾಸ ... ಅಂಡ್ ಕಂ

17 ... ಮೌಂಟು ರೋಡು, ಮದ್ರಾಸು

ದಯಮಾಡಿ ಕಣ್ಣಿಂದ ಇತ್ತ ನೋಡಿರಿ!!!

ಕೊರೊನೇಷನ್ ಸಾಬೂನು

[illegible]

ನಮ್ಮ ವಿಳಾಸ ... ಅಂಡ್ ಕಂಪನಿ,
177 ... ಬಜಾರ್ ರೋಡ್, ಮದ್ರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೬—೯—1913 ರಿಂದ 13—೯—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	7	5	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	30	14	0	0
ಕೋಲಾರ್ ,,	14	6	14	8
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	10	8	2	2
ಹಾಸನ ,,	20	12	0	0
ಚಿತ್ರದುರ್ಗ	0	0	0	1
ಕಡೂರ್	7	4	0	0
ಶಿವಮೊಗ್ಗ	15	13	1	1
ಒಟ್ಟು	100	62	19	11

ಶಾಲಿವಾಹನ ಶಕೆ ವರುಷಗಳು 1835 ನೇ ಪರಿಧಾವಿ ಸಂವತ್ಸರದ ದಕ್ಷಿಣಾಯನ ವರ್ಷಋತು ಭಾದ್ರಪದ ಬಹುಳ ಪಕ್ಷ ಮತ್ತು ಶುಕ್ಲ ಪಕ್ಷ ಭಾದ್ರಪದ ... ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಸಪ್ಟಂಬರ್ ಮತ್ತು ಅಕ್ಟೋಬರ್

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಕನ್ನಡ ವಾರಸ ತಾರಿ
೨೬	ಶುಕ್ರ	ಪಾಡ್ಯ	27-28	ರೇವತಿ	60-0	12
೨೭	ಶನಿ	ಬಿದಿಗೆ	28-34	ರೇವತಿ	0-2	13
೨೮	ಭಾನು	ತದಿಗೆ	28-10	ಅಶ್ವಿನಿ	1-57	14
೨೯	ಸೋಮ	ಚೌತಿ	27-0	ಭರಣಿ	2-10	15
೩೦	ಮಂಗಳ	ಪಂಚಮಿ	24-16	ಕೃತ್ತಿಕೆ	2-11	16
೧	ಬುಧ	ಷಷ್ಠಿ	20-56	ರೋಹಿಣಿ	0-17	17
೨	ಗುರು	ಸಪ್ತಮಿ	16-55	ಆರಿದ್ರೆ	55-10	18

ಅನುಪಣ್ಯಾರಂಭ, ಮಳೆ ನಕ್ಷತ್ರ ಹಸ್ತ 1 ನೇ ಪಾದ ... ವಸ್ತ್ರ, ... ಭಾನುವಾರ ... ಸಂಕಟಹರಚತುರ್ಥಿ, ಬುಧವಾರ ... ಮಳೆ ನಕ್ಷತ್ರ ಹಸ್ತ 3 ನೇ ಪಾದ ... ಮಹಾಲಯ, ... 2 ನೇ ಕುಮಾರ ವರ್ಧಂತಿ ;, ... ಮಳೆ ನಕ್ಷತ್ರ ಹಸ್ತ ...

ಪೇಟೆ ಧಾರಣೆ

ದಿನಸು		ಮೈಸೂರು.	ಬೆಂಗಳೂರು
...ಕ್ಕಿ ಸಣ್ಣ ಗಿಡ್ಡೆ	ರೂ	೧೭-೮-೦	೧೬-೦-೦
...ಅಕ್ಕಿ ಅವಲ್		೧೭-೧೨-೦	೧೭-೮-೦
ಮರು		೧೭-೦-೦	೧೬-೦-೦
...ಅಕ್ಕಿ		೧೭-೪-೦	೧೭-೦-೦
...ಅವಲ್		೧೮-೮-೦	೧೮-೦-೦
ಮರು		೧೭-೮-೦	೧೬-೦-೦
...ಅವಲ್ ಸಣ್ಣ ಗಿಡ್ಡೆ		೧೪-೮-೦	೧೨-೮-೦
ಮರು ,,		೧೨-೧೨-೦	೧೧-೮-೦
...ಸಣ್ಣ ಗಿಡ್ಡೆ		೭-೧೨-೦	೭-೦-೦
,,		೭-೪-೦	೬-೧೨-೦
,,		೭-೮-೦	೮-೦-೦
... ಸಣ್ಣ ಗಿಡ್ಡೆ		೧೨-೦-೦	೧೧-೦-೦
... ,,		೧೫-೦-೦	೧೦-೦-೦
,,		೧೯-೪-೦	೧೦-೮-೦
,,		೧೭-೦-೦	೧೫-೦-೦
,,		೧೨-೮-೦	೧೧-೦-೦
... ೧೨೭ ಕ್ಕೆ		೨೩-೦-೦	೨೪-೮-೦
... ಸಣ್ಣ ಗಿಡ್ಡೆ		೭-೪-೦	೭-೮-೦
... ೧೨೭ ಸೇರಿಗೆ		೧೪-೦-೦	೧೪-೦-೦
... ಮಣ ಗಿಡ್ಡೆ		೩-೪-೦	೩-೮-೦
... ,,		೩-೮-೦	೩-೪-೦
ಮರು		೩-೦-೦	೨-೮-೦
... ಅಚ್ಚು		೫-೮-೦	ಮು ೬-೦-೦
... ಮಣ ಗಿಡ್ಡೆ		೬-೧೦-೦	೬-೮-೦
,, ,,		೬-೦-೦	೫-೮-೦
... ಸಣ್ಣ ಗಿಡ್ಡೆ		೫-೧೨-೦	೬-೮-೦
,, ,,		೬-೦-೦	೫-೮-೦
... ಮಣ ಗಿಡ್ಡೆ		೧-೪-೦	೧-೪-೦
... ,,		೧-೦-೦	೧-೨-೦
... ಗಿಡ್ಡೆ		೧೯-೦-೦	೧೭-೦-೦
... ಸಣ್ಣ ಗಿಡ್ಡೆ		೪-೧೫-೦	೫-೦-೦
... ೧೦೦ ಕ್ಕೆ		೫-೮-೦	೬-೦-೦
... ಮಣ ಗಿಡ್ಡೆ		೦-೮-೦	೧-೮-೦
... ಮಣ ಗಿಡ್ಡೆ		೦-೧೨-೦	೧-೦-೦
... ಕೆಂಪು		೧೫-೮-೦	೧೫-೮-೦
,, ಹಸಿರು		೧೫-೧೪-೬	೧೫-೧೪-೬
,, ಗಟ್ಟಿ ತಿರುಳು ಗಿಡ್ಡೆ		೨೪-೩-೦	೨೪-೦-೦
... ೧೦೦ ಕ್ಕೆ		೮೧-೦-೦	೮೧-೦-೦

ಜ್ವರಶಂಕರಿ.

147-1

ಅನುಭವಸಿದ್ಧವಾದ ೨೪ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಈ ದಿವ್ಯ ಔಷಧವು ಛಳಿಜ್ವರ, ಪರಿಸೆಯಜ್ವರ, ವಿಷಮಜ್ವರಾದಿ ಸರ್ವಜ್ವರಗಳನ್ನೂ ಒಂದೆರಡು ಬಾರಿ ಸೇವಿಸುವುದರೊಳಗಾಗಿ ತಪ್ಪದೆ ಗುಣಪಡಿಸುವುದು ಆಬಾಲವೃದ್ಧರೂ ನಿರ್ಭಯವಾಗಿ ಸೇವಿಸಬಹುದು ಪ್ರಾರಂಭದಲ್ಲಿಯೇ ಕೊಟ್ಟರೆ ಪ್ಲೇಗಿನ ಜ್ವರವನ್ನು ಕೂಡಾ ನಿಮ್ಮೆಟ್ಟಿಸುವುದು. ಬಾಟಲಿಗೆ ೧ ರೂ., ೩ ಬಾಟಲಿಗೆ ೨ ರೂ. ೧೦ ಆಣೆ.

ಪ್ಲೀಹೋದರಾರಿ—ದೀರ್ಘಕಾಲ ಛಳಿಜ್ವರ ಬಂದು ಎಷ್ಟು ಹೆಚ್ಚಾಗಿ ಬೆಳೆದ ಜ್ವರದ ಗಡ್ಡೆಯನ್ನಾದರೂ ಖಂಡಿತವಾಗಿ ಗುಣಪಡಿಸುವುದು. ನೂರಾರು ಜನರು ಸೇವಿಸಿ ಗುಣಹೊಂದಿರುವರು ಒಟ್ಟು ಒಂದು ತಿಂಗಳ ಔಷಧಕ್ಕೆ ೩ ರೂ. ೮ ಆಣೆ.

ವಾತಮುರಾರಿ—ಇದು ಕಟಿಶೂಲ, ಉಳುಕು, ಬೀಗುಗಳನ್ನೂ ಸರ್ವವಾತ ಬಾಧೆಗಳನ್ನೂ ಗುಣಪಡಿಸುವುದು ಜ್ವರದಮನಕ್ಕೂ ಸಹಾಯಕವಾಗಿದೆ ಬಾಟಲಿಗೆ ೮ ಆಣೆ.; ೩ ಬಾಟಲಿಗೆ ೧ ರೂ ೬ ಆಣೆ

ನಮ್ಮ ದೊಡ್ಡ ಕಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.



ಮಜಬೂತಾದ 10 ವರುಷಗಳಾದರೂ ಕೆಡದ ಗಡಿಯಾರಗಳು.

120-10

ಬವಾರ್ ಟೈಂಪೀಸು ರೂ 1 1 0, ಬೀ ಟೈಂಪೀಸ್ ರೂ. 2, ಅಕ್ಸ್ ಸೋನಿಯಾದು ರೂ 2 1-0. ನಿಕಲ್ ಸಹಿತವಾದ ಜೇಬು ಗಡಿಯಾರಗಳು —ರೈಲ್ವೆ ರೆಗ್ಯುಲೇಟರ್ ರೂ 2 8 0; ನಕ್ ಟೈಂ ಲಿವರ್ ರೂ 3 1 0, ರಾಸ್ಕೋಪ್ ಸಿಸ್ಟಂ ಲಿವರ್ ರೂ. 2 1 0. ಕೈಗೆ ಕಟ್ಟಿಕೊಳ್ಳುವ ಲೇಡೀಸ್ ಗಡಿಯಾರಗಳು ನಿಕಲ್ ಮುಟಲಿನದು ರೂ. 1 1-0, ಅಸಲ್ ಬೆಳ್ಳಿಯದು ರೂ. 5 8 0. ಗಡಿಯಾರದ ಸರಪಣಿಗಳು —ರಂಗು ಕೆಡದ ಬಿಳಿ ಮುಟಲಿನದು 12 ಆ, ಅಚ್ಚ ಬೆಳ್ಳಿಯದು ರೂ 2. ಛೀಗೂ ಮಳೆಗೂ ಬಿಚ್ಚಿಗಿರುವ ಕೆಂಪು ಬುಲ್ಲೀನಾಗಳು ದೊಡ್ಡ ಸೈಜ್ ರೂ. 6; ಸಣ್ಣದು ರೂ 4

ವಿಳಾಸ —ವೆಂಕಟಾಚಲಂ ಕಂಪೆನಿ, ಹೈ ರೋಡ್, ವೇಪೇರಿ, ಮದ್ರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-39

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳೂರದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮಿದುವಾಗಿ ನಾವೇ ಒಂದು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ ನಮ್ಮಲ್ಲಿ ದೊರೆಯುವುದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ., ೧ ರೂ ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ.; ೧ ರೂ. ೬ ಆ

ಕೂಸುಗಳ ಟೋಪಿ, ಪೂರ್ತಿ ಮುಚ್ಚೋದು, ಅರ್ಧ ಮುಚ್ಚೋದು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು.

ಉಷ್ಣಮರ್ದನ ಚೂರ್ಣವು.

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1-0-0.

ಈ ಚೂರ್ಣವನ್ನು ಸೇವಿಸುವದರಿಂದ ಸಕಲ ಉಷ್ಣ ರೋಗಗಳೂ ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ ಉರಿ ನಿಂತು ನೀರು ಧಾರಾಳವಾಗಿ ಇಳಿಯುವದರಿಂದ ದಿನಕ್ರಮೇಣ ರೋಗವು ಕಮ್ಮಿಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೇ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು.

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ. 0-4-0 ಡಬ್ಬಿ 12 ಕ್ಕೆ ರೂ 2-8-0

ಈ ಹಲ್ಲುಪುಡಿ ಹಲ್ಲು ನೋವು, ಹುಳುಕು, ಕೆಂಪು ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು ಹಲ್ಲುಗಳನ್ನು ಸ್ವಚ್ಛ ಮಾಡುವದು. [121-18]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಜೇನಾ ಬಜಾರ್ ರೋಡ್, ಮದ್ರಾಸು.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indian Life Assurance Companies'** and **Provident Societies' Acts 1912** and has also given **double the initial security to the Government** as required under the **Insurance Act 1912.**

How is it that the **National, of Amritsar,** has become very popular throughout India?

Because, it has got almost all the attractive schemes which any other Life Office or Provident Society in **India** has got and also new and novel ones besides, issues policies at most favourable rates and on most liberal conditions, and distributes relief in thousands every quarter on account of **marriages and deaths.**

122 9.

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time, who reside in district or taluk head quarters and who are well versed in English need apply.

For further particulars and prospectuses, please apply with **one anna stamp** and your previous experience in the line to:—

M. L. NAGANNAH,

Chief Agent,

The Amritsar National Insurance Buildings, Mysore.

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು. ನೋಡುವುದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ, ನಿಲ್ಲದೇ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ಬಿಕರಿಯಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ. [13-25]

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ. 5-13-0. ಇದನ್ನು ಆಗಸ್ಟ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುವುದು.

ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ

ಪೋಸ್ಟ್ ಬಾಕ್ಸ್ ನಂ 167 ಮದರಾಸು.

ವೃತ್ತಾಂತ ಪತ್ರಿಕೆ.

ಸನ್ ೧೯೧೨ ನೇ ಇಸವಿ ಸೆಪ್ಟಂಬರ್ ತಾ ೨೬ ನೇ ಗುರುವಾರ

ಪನಾಮಾ ಕಡಲುಕಾಲುವೆಯು.

ಪನಾಮಾ ಕಾಲುವೆಯ ಕಾಮಗಾರಿ ಪೂರೈಸುತ್ತಾ ಬಂದಿದೆ ಎರಡು ವರುಷಗಳೊಳಗೆ ಅದು ಪ್ರಯಾಣಕ್ಕೆ ಅನುಕೂಲಿಸಬಹುದು. ಉತ್ತರ ಮತ್ತು ದಕ್ಷಿಣ ಅಮೇರಿಕಗಳ ನಡುವೆ ಪನಾಮಾ ಎಂಬ ಭೂಕಂಠವಿರುತ್ತದೆ. ಇದರ ಅಗಲವು ಕೆಲವು ಕಡೆ ಐವತ್ತು ಮೈಲಿಗಿಂತ ಕಡಿಮೆಯಾಗಿದೆ ಅಟ್ಲಾಂಟಿಕ್ ಸಾಗರದಿಂದ ಪೆಸಿಫಿಕ್ ಸಾಗರಕ್ಕೆ ಹೋಗಬೇಕಾದರೆ ಜಹಜುಗಳು ಅಟ್ಲಾಂಟಿಕ್ ಸಾಗರದಲ್ಲಿ ತೀರಾ ದಕ್ಷಿಣಕ್ಕೆ ಬಂದು ದಕ್ಷಿಣ ಅಮೇರಿಕವನ್ನು ಸುತ್ತಬೇಕಾಗಿತ್ತು ನಡುವೆ ಇದ್ದ ಭೂಕಂಠವನ್ನು ಒಡೆದು ಹಾಕಿ ಈ ಜಲಮಾರ್ಗವನ್ನು ಕಲ್ಪಿಸಿದ್ದರಿಂದ ಜಹಜುಗಳಿಗೆ ಐದಾರು ಸಾವಿರ ಮೈಲಿದೂರ ಸುತ್ತಿಕೊಂಡು ಹೋಗುವುದು ತಪ್ಪುತು.

ಈ ಭೂಕಂಠವನ್ನು ಒಡೆದುಹಾಕಬೇಕೆಂಬ ವಿಷಯದಲ್ಲಿ ಅನೇಕಾನೇಕರು ಬಹುಕಾಲದಿಂದ ನಾನಾ ರೀತಿಯಲ್ಲಿ ಯೋಚಿಸಿ ಚರ್ಚೆ ಮಾಡುತ್ತಾ ಬಂದರು ಒಂದು ಸಮುದ್ರತೀರದಿಂದ ಇನ್ನೊಂದು ಸಮುದ್ರತೀರದ ವರೆಗೆ ರೈಲ್ ಕಂಬಿಗಳನ್ನು ಹಾಕಿ ಅವುಗಳ ಮೇಲೆ ಜಹಜುಗಳನ್ನೇ ಸಾಗಿಸಿಕೊಂಡು ಹೋಗುವುದಕ್ಕೆ ಏರ್ಪಾಡು ಮಾಡಬಹುದೆಂದು ಕೆಲವರು ಹೇಳಿದರು ಜಹಜುಗಳನ್ನು ಹೊತ್ತು ಸಾಗಿಸುವುದಕ್ಕೆ ಎಂಜಿನ್‌ಗಳೂ ವ್ಯಾಗನ್‌ಗಳೂ ಅಪಾರ ಶಕ್ತಿಯುಳ್ಳವುಗಳಾಗಬೇಕು ಹಿಂದೆ ಮೆಡಿಟರೇನಿಯನ್ ಮತ್ತು ಕೆಂಪು ಕಡಲುಗಳಿಗೆ ಮಧ್ಯೆ ಇದ್ದ ಸೂಯಸ್ ಎಂಬ ಭೂಕಂಠವನ್ನು ಒಡೆದು ಜಹಜುಗಳು ಸಂಚರಿಸುವಂಥಾ ಜಲಮಾರ್ಗವನ್ನು ಕಲ್ಪಿಸಿದಾಗ ಡಿ ಲೆಸ್ಸೆಪ್ಸ್ ಎಂಬ ಫ್ರೆಂಚ್ ಇಂಜಿನಿಯರು ಮೇಲ್ಕಂಡ ಪನಾಮಾ ಭೂಕಂಠವನ್ನೂ ಒಡೆದುಹಾಕಿ ಅಲ್ಲೂ ಒಂದು ಜಲಮಾರ್ಗವನ್ನೇ ನಿರ್ಮಾಣ ಮಾಡಬಹುದೆಂದು ಅಭಿಪ್ರಾಯಪಟ್ಟನು ಈ ಉದ್ದೇಶದಿಂದ ಒಂದು ಫ್ರೆಂಚ್ ಕಂಪನಿ ನಿರ್ಮಾಣವಾಯಿತು ಆ ಕಾಮಗಾರಿಗೆ ಈ ಕಂಪನಿಯವರು ೧೨೪ ಕೋಟಿ ರೂಪಾಯಿ ಖರ್ಚುಮಾಡಿದರು ಇಷ್ಟಾದರೂ ಆ ಕಾಮಗಾರಿಯು ಪೂರೈಸಲಿಲ್ಲ. ಫ್ರಾನ್ಸಿನಲ್ಲಿ ಈ ಕಂಪನಿಗೆ ಹಣಕೊಟ್ಟು ಷೇರುಪತ್ರಗಳನ್ನು ಕೊಂಡುಕೊಂಡಿದ್ದ ಅನೇಕ ಸಂಸಾರಗಳ ಆಸ್ತಿಯು ಮುಳುಗಿಹೋಯಿತು ಆ ಭೂಕಂಠ ಪ್ರದೇಶದ ವಾಯುಗುಣವು ಮರಣಕರವಾಗಿತ್ತು ಯೂರೋಪಿನ ಇಂಜಿನಿಯರುಗಳು ಜ್ವರದಿಂದ ನೂರಾರು ಮಂದಿ ಅಲ್ಲಿ ಮೃತಪಟ್ಟರು, ಕೂಲಿಯವರಾದರೋ ಸಾವಿರಗಟ್ಲೆ ಅಕಾಲ ಮರಣಕ್ಕೆ ಗುರಿಯಾದರು ಭೂಮಿಯನ್ನು ಒಡೆಯುವುದಕ್ಕೆ ಮೊದಲು ಮಾಡಿದ್ದ ಅಂದಾಜು ಖರ್ಚು ಆ ಕಾಮಗಾರಿಗೆ ಸಾಲದೆಂದು ಗೊತ್ತಾಯಿತು, ಮತ್ತು ಆ ಪ್ರಾಂತ್ಯದಲ್ಲಿ ನದಿಗಳ ಪ್ರವಾಹದ ದೆಸೆಯಿಂದ ಕಾಮಗಾರಿ ಮಾಡಿದ್ದದ್ದೂ ಕೊಚ್ಚಿ ಕೆಟ್ಟು ಹಾಳಾಯಿತು. ಫ್ರೆಂಚರ ಈ ಪನಾಮಾ ಜಲಸಂಧಿಯ ಕಂಪನಿ ದೆಸೆಯಿಂದ ಸಾವಿರಾರು ಸಂಸಾರಗಳು ಕೆಟ್ಟು ಅನೇಕರು ನಿರ್ಗತಿಕರಾಗಿ ಪ್ರಾಣ ಕಳೆದುಕೊಂಡರು ಇದಲ್ಲದೆ ಆ ಸಲಹೆಯನ್ನು ಕೊಟ್ಟ ಮೇಲ್ಕಂಡ ಡಿ ಲೆಸ್ಸೆಪ್ಸ್ ಎಂಬ ಫ್ರೆಂಚ್ ಇಂಜಿನಿಯರಿಗೆ ಬಹಳ ದುಃಖವೂ ಅವಮಾನವೂ ಉಂಟಾಯಿತು

ಹೀಗೆ ಫ್ರೆಂಚರು ಮುಂದರಿಸಲಾರದೆ ಬಿಟ್ಟಿದ್ದ ಈ ಕಾಮಗಾರಿಯನ್ನು ಅಮೇರಿಕದ ಸಂಯುಕ್ತ ಸಂಸ್ಥಾನದವರು ಹಿಡಿದು ಪೂರೈಸಬೇಕೆಂದು ಕಳೆದ ೧೯೦೪ ನೇ ಇಸವಿಯಲ್ಲಿ ಸಂಕಲ್ಪ ಮಾಡಿಕೊಂಡರು. ಈ ಜಲಮಾರ್ಗವು ಸಂಯುಕ್ತ ಸಂಸ್ಥಾನದವರಿಗೆ ಇತರರಿಗಿಂತ ವಿಶೇಷ ಪ್ರಯೋಜನವಾಗತಕ್ಕದ್ದಾಗಿದೆ ಇವರಿಗೆ ಪೂರ್ವಕ್ಕೆ ಅಟ್ಲಾಂಟಿಕ್ ಸಾಗರದ ಕಡೆಯೂ, ಪಶ್ಚಿಮಕ್ಕೆ ಪೆಸಿಫಿಕ್ ಸಾಗರದ ಕಡೆಯೂ ಇರುವ ತೀರಪಟ್ಟಣಗಳಿಂದ ಜಹಜುಗಳನ್ನು ಬಹು ಸುಲಭವಾಗಿಯೂ ಸರಾಗವಾಗಿಯೂ ಜಾಗ್ರತೆಯಾಗಿಯೂ ಸ್ಥಳಾಂತರಕ್ಕೆ ನಡಿಸಿಕೊಂಡು ಹೋಗಿ ಬರುವುದಕ್ಕೆ ಬಹಳ ಅನುಕೂಲವುಂಟು ಸಂಯುಕ್ತ ಸಂಸ್ಥಾನದ ಗವರ್ನ್‌ಮೆಂಟಿನವರು ಆ ಭೂಕಂಠದಲ್ಲಿ ಕೆಲವು ಭೂಪ್ರದೇಶವನ್ನು ಕ್ರಯಕ್ಕೆ ಪಡೆದುಕೊಂಡು ಕಾಲುವೆಯ ಕಾಮಗಾರಿಯನ್ನು ಪ್ರಾರಂಭ ಮಾಡಿದರು ಮೇಲ್ಕಂಡ ಫ್ರೆಂಚ್ ಕಂಪನಿಯವರು ತಮ್ಮ ಸಾಮಾನು ಜಮೀನು ಮುಂತಾದದ್ದನ್ನೆಲ್ಲಾ ಅಮೇರಿಕದವರಿಗೆ ೧೨೪ ಕೋಟಿ ರೂಪಾಯಿಗೆ ಮಾರಿಬಿಟ್ಟರು ಅಮೇರಿಕದವರು ಕಾಮಗಾರಿಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಅಲ್ಲಿದ್ದ ಕೆರೆ ಕೊಳ ಗುಂಡಿಗಳಲ್ಲಿ ಸ್ವಲ್ಪವೂ ನೀರು ನಿಲ್ಲದಂತೆ ಬರ್ತಿಮಾಡಿ, ಸೊಳ್ಳೆಗಳ ಕಾಟವನ್ನು ತಪ್ಪಿಸಿ, ಆರೋಗ್ಯಜನಕವಾದ ಪ್ರದೇಶಗಳಲ್ಲಿ ಬಂಗಲೆ ಮನೆ ಮಠಾದಿಗಳನ್ನು ಕಟ್ಟಿ, ಇಂಜಿನಿಯರುಗಳ ಮತ್ತು ಕೂಲಿಕಾರರ ಆರೋಗ್ಯವನ್ನು ಕಾಪಾಡುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಮಾಡಿಕೊಂಡರು ಫ್ರೆಂಚರು ಸಮುದ್ರಮಟ್ಟಕ್ಕೆ ಸರಿಯಾಗಿ ಉದ್ದಕ್ಕೂ ಒಂದೇ ಆಳವುಳ್ಳ ನಾಲೆಯನ್ನು ತೋಡಬೇಕೆಂದು ಅಂದಾಜು ಮಾಡಿದರು ಇದಕ್ಕೆ ಆ ಮಾರ್ಗದ ಮಧ್ಯಪ್ರದೇಶದಲ್ಲಿ ಒಂದು ಕಡೆ ಇರುವ ಸುಮಾರು ೩೦೦ ಅಡಿ ಎತ್ತರವುಳ್ಳ ಒಂದು ಬೆಟ್ಟದ ಅಂಚನ್ನು ಅವರು ಕತ್ತರಿಸಬೇಕಾಗಿತ್ತು ಅಮೇರಿಕದವರು ಅದರ ಕ್ರಮವನ್ನು ನೋಡಿ ಫ್ರೆಂಚರ ಪ್ಲಾನನ್ನು ಅನುಸರಿಸದೆ ಆ ಜಲಮಾರ್ಗವನ್ನು ಮೂರು ಲೆವಲ್ (ಮಟ್ಟ) ಗಳುಳ್ಳದ್ದಾಗಿ ಕಲ್ಪಿಸಬೇಕೆಂದು ಗೊತ್ತುಮಾಡಿ ಅದೇ ರೀತಿ ಕಾಮಗಾರಿ ಮಾಡುತ್ತಾ ಬಂದಿದಾರೆ

ಈ ಜಲಮಾರ್ಗವು ಸಿದ್ಧವಾದ ಮೇಲೆ ಜಹಜುಗಳು ಅಟ್ಲಾಂಟಿಕ್ ಸಾಗರದಿಂದ ಪನಾಮಾ ಬಳಿ ಈ ನಾಲೆಯೊಳಗೆ ನುಗ್ಗಿ ಪೆಸಿಫಿಕ್ ಸಾಗರಕ್ಕೆ ಹೋಗುವವು ಜಹಜು ಮೊದಲು ಸಮುದ್ರ ಮಟ್ಟದಲ್ಲಿ ೭½ ಮೈಲಿ ದೂರ ಹೋಗುತ್ತದೆ ಅದುವರೆಗೆ ಈ ಜಲಮಾರ್ಗವು ೫೦೦ ಅಡಿ ಅಗಲವಾಗಿಯೂ, ೪೧ ಅಡಿ ಆಳವಾಗಿಯೂ ಇದೆ ಅಲ್ಲಿ ಯಂತ್ರಗಳ ಕೀಲನ್ನು ಇಟ್ಟು ಆ ಜಹಜನ್ನು ೮೫ ಅಡಿಯಷ್ಟು ಮೇಲಕ್ಕೆ ಎತ್ತುವರು ಮುಂದೆ ಅದು ೨ ಮೈಲಿ ದೂರ ಒಂದು ಕೆರೆಯನ್ನು ಹಾಯುತ್ತದೆ ಬಳಿಕ ಅದು ಯಂತ್ರಗಳ ಸಹಾಯದಿಂದ ಇನ್ನೂ ೩೦ ಅಡಿಯಷ್ಟು ಮೇಲಕ್ಕೆ ಎತ್ತಲ್ಪಟ್ಟು, ಬೆಟ್ಟದ ಪಕ್ಕವನ್ನು ಕತ್ತರಿಸಿ ಬಯಲಾಗಿ ಮಾಡಿರುವ ಪ್ರದೇಶದಲ್ಲಿ ಹೋಗುವುದು ಈ ಭಾಗಕ್ಕೆ ಕುಲೆಬ್ರ ಕಟ್ ಎಂಬ ಹೆಸರು ಇಲ್ಲಿ ನಾಲೆಯು ೩೦೦ ಅಡಿಯಷ್ಟು ಮಾತ್ರ ಅಗಲವುಳ್ಳದ್ದಾಗಿದೆ ಅಲ್ಲಿಂದ ಮುಂದಕ್ಕೆ ೩೨ ಮೈಲಿ ದೂರ ಈ ಜಲಮಾರ್ಗವು ಒಂದು ಕೆರೆಯೋಪಾದಿಯಲ್ಲಿದೆ ಅದರಲ್ಲಿರುವ ನಾಲೆಯು ೫೦೦ ರಿಂದ ೧೦೦೦ ಅಡಿಗಳ ತನಕ ಅಗಲವಾಗಿರುವುದು ಪಶ್ಚಿಮ ಭಾಗದಲ್ಲಿ ಗಟೂನ್ ಎಂಬಲ್ಲಿ ಒಂದು ಭಾರಿ ಅಣೆಯನ್ನು ಕಟ್ಟಿ ಈ ಕೆರೆಯನ್ನು ಕಲ್ಪಿಸಿದಾರೆ ನದಿಗಳಲ್ಲಿ ಬರುವ ಪ್ರವಾಹಗಳನ್ನೆಲ್ಲಾ ಈ ಅಣೆಯೂ ಕೆರೆಯೂ ತಡೆಯುತ್ತವೆ. ಜಹಜು ಗಟೂನಿಗೆ ಬಂದು ಅಲ್ಲಿಂದ ಮೂರು ಯಂತ್ರಗಳ ಸಹಾಯದಿಂದ ೮೫ ಅಡಿ ಕೆಳಕ್ಕೆ ಇಳಿದು ೭ ಮೈಲಿ ದೂರ ಸಮುದ್ರ ಮಟ್ಟದಲ್ಲೇ ೫೦೦ ಅಡಿ ಅಗಲವುಳ್ಳ ನಾಲೆಯನ್ನು ಹಾದು ಪೆಸಿಫಿಕ್ ಸಾಗರವನ್ನು ಸೇರುತ್ತದೆ

ಈ ಜಲಮಾರ್ಗದ ಕಾಮಗಾರಿಯು ಎಷ್ಟು ಅಗಾಧವಾದದ್ದು ಎಂಬುವುದನ್ನು ಮುಂದಿನ ಲೆಕ್ಕಗಳಿಂದ ಊಹಿಸಿಕೊಳ್ಳಬಹುದು ಕುಲೆಬ್ರ ಕಟ್ ಎಂಬ ಸ್ಥಳದಲ್ಲಿ ಇನ್ನೂ ಒಂದು ಕೋಟಿ ಘನಗಜಗಳ ಭೂಮಿಯನ್ನು ತೋಡಿ ಮಣ್ಣು ಸಾಗಿಸಬೇಕಾಗಿದೆ ಈಗ ಬಹಳ ಶಕ್ತಿಯುಳ್ಳಂಥಾ ಯಂತ್ರಗಳ ಮೂಲಕ ಭೂಮಿಯನ್ನು ತೋಡಿಸುತ್ತಾ, ತಿಂಗಳಿಗೆ ೧೦ ಲಕ್ಷ ಘನ ಅಡಿಗಳ ಮಣ್ಣು ಮುಂತಾದದ್ದನ್ನು ದೂರಕ್ಕೆ ಸಾಗಿಸುತ್ತಾ ಇದಾರೆ

ಸೂಯಸ್ ಜಲಮಾರ್ಗವನ್ನು ಕಲ್ಪಿಸಿದ್ದರಿಂದ ಪ್ರಪಂಚಕ್ಕೆ ಎಷ್ಟು ಉಪಕಾರವೂ ಶ್ರೇಯಸ್ಸೂ ಉಂಟಾಯಿತೋ ಹಾಗೆಯೇ ಈ ಪನಾಮಾ ಜಲಸಂಧಿಯಿಂದಲೂ ಅಪಾರವಾದ ಪ್ರಯೋಜನವಾಗುವುದು. ಇದರಿಂದ ಸಂಯುಕ್ತ ಸಂಸ್ಥಾನಗಳು ಆಸ್ಟ್ರೇಲಿಯಕ್ಕೂ ಚೀನಕ್ಕೂ ಜಪಾನಿಗೂ ಬಹಳ ಸಮೀಪವಾಗುತ್ತವೆ ಮತ್ತು ಈ ಜಲಮಾರ್ಗದ ದೆಸೆಯಿಂದ ಪೂರ್ವದಿಕ್ಕಿನ ರಾಜ್ಯಗಳ ಮತ್ತು ಪಾಶ್ಚಾತ್ಯ ದೇಶಗಳ ವ್ಯಾಪಾರ, ಪದ್ಧತಿ, ಆಚಾರಗಳು, ಮತಭಕ್ತಿ, ಇವು ಬೇಗ ಬೇಗನೆ ಕಲೆತು ಶ್ರೇಯೋಭಿವೃದ್ಧಿಯನ್ನು ಹೊಂದಲು ವಿಶೇಷ ಸಹಾಯವಾಯಿತು.

ಒಳದೇಶದ ವೃತ್ತಾಂತಗಳು

ಕೇಟ್ ಮಹಾರಾಜರವರ ಜನ್ಮ [illegible] ನಾಳೆ ಅರಮನೆಯಲ್ಲಿ ನಡೆಯಬೇಕಾಗಿರುವುದರಿಂದ ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ಈ ದಿನ ಸಾಯಂಕಾಲದೊಳಗಾಗಿ ರಾಜಧಾನಿಗೆ [illegible]ವರಾಗಿದಾರೆ

ಶ್ರೀಮನ್ಮಹಾರಾಜರವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಡಾಕ್ಟರ್ ಟಿ ವಿ ಆರುಮೊಗಂ ಮೊದಲಿಯಾರ್‌ರವರನ್ನು ಅರಮನೆಯಲ್ಲಿ ಸ್ಪೆಷಲ್ ಡ್ಯೂಟಿಗಾಗಿ ಕೆಲವು ದಿನಗಳ ಮಟ್ಟಿಗೆ ರಾಜಧಾನಿಗೆ ಕರೆಸಿಕೊಂಡಿದಾರೆ

* * *

ಮೈಸೂರು ಸರ್ಕಾರದವರು ಈ ವರುಷ ನವರಾತ್ರಿ ಉತ್ಸವ ಕಾಲದಲ್ಲಿ ರಾಜಧಾನಿಗೆ ಬರುವಂಥಾ ಅತಿಥಿಗಳಿಗೂ ಪ್ರಮುಖಪ್ರತಿನಿಧಿಗಳಿಗೂ [illegible] ಮುಂತಾದ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ರಿಜಿಸ್ಟ್ರಾರ್ ಮಿ [illegible] ನಾರಾಯಣರಾಯ ಅಯ್ಯಂಗಾರ್ರನ್ನು ನೇಮಕಮಾಡಿರುತ್ತಾರೆ

* * *

ಮೈಸೂರು ಸರ್ಕಾರದವರು ಹೊಳೆನರಸೀಪುರದಿಂದ ಚನ್ನರಾಯಪಟ್ಟಣ ಹಾಸನ ಮತ್ತು ಚಿಕ್ಕಮಗಳೂರು ಮಾರ್ಗವಾಗಿ ಕಡೂರಿಗೆ ರೈಲ್ ರಸ್ತೆಯನ್ನು ಹಾಕುವುದಕ್ಕೆ ಕೆಲವು ಜಮೀನುಗಳು ಬೇಕಾಗಿವೆ ಎಂದೂ ಆ ರಸ್ತೆಯನ್ನು ಸರ್ವೆ ಮಾಡುವ [illegible] ಯವರಿಗೆ ಅಧಿಕಾರ ವಹಿಸಲಾಗಿದೆ ಎಂದೂ ತಿಳಿಸಿರುತ್ತಾರೆ

* * *

ಬೆಂಗಳೂರು ಕಬ್ಬನ್‌ಪೇಟೆಯ ಒಕ್ಕಲಿಗ [illegible] ನೆಂಬುವನು [illegible] ಸಿಟಿ ಪೋಲೀಸಿನವರು ತನ್ನನ್ನು ಅಕ್ರಮವಾಗಿ ದಸ್ತಗಿರಿ [illegible] ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿ [illegible] ಕೇಸನ್ನು ಹಾಜರುಮಾಡಿದನು ಮ್ಯಾಜಿಸ್ಟ್ರೇಟರು ಆ ಪೋಲೀಸಿನವರಿಗೆ ಸಮನ್ಸ್ ಕೊಟ್ಟು ವಿಚಾರಣೆಗೆ ಇಟ್ಟುಕೊಂಡಿದಾರೆ

* * *

ಒಕ್ಕಲಿಗರ [illegible] ಮತ್ತು [illegible] ಬರೆದು [illegible] ಗಂಧ [illegible] ಕರೆ [illegible] ಕಡೆ ಹೋಗಿದ [illegible] ಕಸಗೆ [illegible] ಕಟ್ಟಡವನ್ನು [illegible] ಅವಮಾನ ಕೊಡುತ್ತೇನೆ

* * *

[illegible] ಬೆಂಗಳೂರು [illegible] ಮಾಡಿದಲ್ಲಿ [illegible] ಕಟ್ಟಡ [illegible] ಅವರ ಪಿತ್ರಾರ್ಜಿತವಾಗಿ [illegible] ಮನೆಯ ಮುದಲು [illegible] ಇದೆ

* * *

[illegible] ಬೆಂಗಳೂರು [illegible] ಉಪನ್ಯಾಸಗಳನ್ನು ಮಾಡಿದ್ದರಿಂದ ಅವರ [illegible] ಪುರಜನರು ಅವರಿಗೆ [illegible] ಕೊಟ್ಟು [illegible] ಕೃತಜ್ಞತೆಯನ್ನೂ [illegible]

* * *

ಬೆಂಗಳೂರು ದಂಡಿನಲ್ಲಿರುವ ಆರ್ಕಾಟ್ ನಾರಾಯಣಸ್ವಾಮಿ ಮುದಲಿಯಾರ್ [illegible] ಹಾಕಿ [illegible] ಅದನ್ನು ಕಳೆದ [illegible] ಬಹದೂರ್ [illegible] ಅವರ ಧರ್ಮಕಾರ್ಯಗಳನ್ನು [illegible]

* * *

[illegible] ಬೆಂಗಳೂರು [illegible] ಕೊಟ್ಟು [illegible] ನನಗೆ ತಿಳಿಸುವುದಕ್ಕಾಗಿ [illegible] ಹೇಳಿದರು [illegible] ಸಾಧಿಸಿರುತ್ತಾರೆ

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರು ತಾಲ್ಲೂಕು ಬೋರ್ಡಿನ ಮೆಂಬರುಗಳು ಮಿ ಬಿ [illegible] ಸಾಹೇಬರನ್ನು ವೈಸ್ ಪ್ರೆಸಿಡೆಂಟಾಗಿ ಚುನಾವಣೆ ಮಾಡಿಕೊಂಡಿರುತ್ತಾರೆ.

ಮಿ [illegible] ಶ್ರೀನಿವಾಸಯ್ಯನವರು ಜೂನ್ ತಾ ೧೦ ರ [illegible] ಮಿ ಎಚ್ ನಾರಾಯಣರಾಯರು [illegible] ರಿಜಿಸ್ಟ್ರಾರ್ ಮತ್ತು ರೆಕಾರ್ಡ್ಸ್ ಆಫೀಸಿಗೆ ವರ್ಗವಾಗಿದೆ

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ೧ ನೇ ಗ್ರೇಡ್ ಕ್ಲರ್ಕ್ ಮಿ ಪಿ ನಂಜುಂಡಯ್ಯನವರನ್ನು [illegible] ಸೂಪರಿಂಟೆಂಡೆಂಟಾಗಿ [illegible] ಸರ್ವೆ ಸೂಪರಿಂಟೆಂಡೆಂಟರ ಆಫೀಸಿಗೆ ವರ್ಗ ಮಾಡಿದೆ

ಮುಂದೆ ಹೇಳುವವರನ್ನು ೧ ನೇ ಗ್ರೇಡ್ [illegible] ನೇಮಕ ಮಾಡಿದೆ [illegible] ಎನ್ ರಾಮರಾಯರು, ಸಿ ಬಿ ಲಕ್ಷ್ಮೀನಾರಾಯಣರಾಯರು

[illegible] ಅಮಲ್ದಾರ್ ಮಿ ಎಲ್ [illegible] ರವರಿಗೆ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಶ್ರೀಮನ್ ಯುವರಾಜರವರ ಬಳಿ ಸ್ಪೆಷಲ್ ಆಫೀಸರಾಗಿರುವ ಮಿ ಎ ಸಿಂಗ್ರಾಚಾರ್ಯರನ್ನು ಆಗಸ್ಟ್ ತಾ ೧೦ರಿಂದ ಅವರ ಪರ್ಸನಲ್ ಅಸಿಸ್ಟೆಂಟಾಗಿ ನೇಮಕವಾಗಿದೆ

ಮುಂದೆ ಹೇಳುವ ಅಮಲ್ದಾರ್ರುಗಳ ಎತ್ತಿ ಹುಕುಂ ಮಾಡಿದೆ:—ಮ|| ಪ್ರಿನ್ಸಿಪಾಲ್ರು 1 ನೇ ಕ್ಲಾಸ್ ಮಾಯಂ, ಮ|| ಜಿ. ನಾರಾಯಣರಾಯರು ಸೆಕೆಂಡ್ ಕ್ಲಾಸ್ ಮಾಯಂ.

ಎಕ್ಸೈಸ್ ಕಮಿಷನರ್ ರವರ ಆಫೀಸ್ ಅಸಿಸ್ಟೆಂಟ್ ಮ|| ಬಿ ರಾಮಣ್ಣನವರು, ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಪ್ರೊಬೇಷನರಿ ಅಸಿಸ್ಟೆಂಟುಗಳನ್ನೂ 1 ರಿಂದ 1 ನೇ ಕ್ಲಾಸಿಗೆ ಬಡ್ತಿ ಮಾಡಿದೆ

ಎಕ್ಸೈಸ್ ಆಫೀಸರ್ ಮ ಸಿ ಕೃಷ್ಣಮನಾಯ್ಡುಯವರು ರಜದಿಂದ ಬಂದ ಬಳಿಕ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗವಾಗತಕ್ಕದ್ದು

ಶಿವಮೊಗ್ಗ ಎಕ್ಸೈಸ್ ಆಫೀಸರ್ ಮ ಬಿ. ಭೀಮರಾಯರನ್ನು ಮೈಸೂರು ಎಕ್ಸೈಸ್ ಕಮಿಷನರವರ ಸಹಾಯಕ್ಕಾಗಿ ವರ್ಗಮಾಡಿದೆ

ಇಂಪೀರಿಯಲ್ ಸರ್ವಿಸ್ ಸೈನ್ಯದ 2 ನೇ ಕಮಾಂಡ್ ಮ ರಿಸಾಲ್ದಾರ್ ಮೇಜರ್ ರಣನೋರೆಯವರನ್ನು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕಮಾಂಡೆಂಟಾಗಿ ನೇಮಕ ಮಾಡಿದೆ

ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲು

ಬಹುಮಾನಗಳ ವಿನಿಯೋಗವು.

ಸ್ಥಳದ ವೆಸ್ಲಿಯನ್ ಮಿಷನ್ ಹೈ ಸ್ಕೂಲಿನಲ್ಲಿ ಆ ಸ್ಕೂಲಿನ ಮತ್ತು, ಅದರ ಅಂಗವಾದ ಹಾರ್ಡ್‌ವಿಕ್ ಸ್ಕೂಲಿನ ಬಾಲಕರಿಗೂ ವಾರ್ಷಿಕ ಬಹುಮಾನಗಳನ್ನೂ, ಸರ್ಟಿಫಿಕೇಟುಗಳನ್ನೂ ಕೊಡುವುದು, ಮೈಸೂರು ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಆದ ಮ ಎ ರಾಮಾನುಜಂ, ಎ ಎ ಯವರು ಸಭೆಯ ಅಗ್ರಾಸನದಲ್ಲಿ ವಹಿಸಿದ್ದರು ರಾಜಧಾನಿಯಲ್ಲಿರುವ ಕೆಲವು ಯೂರೋಪಿಯನ್ ಪ್ರಮುಖರೂ ದೊಡ್ಡ ಮನುಷ್ಯರೂ ಅಧಿಕಾರಿಗಳೂ ವಿದ್ಯಾರ್ಥಿಗಳೂ ಈ ಕೂಟದಲ್ಲಿ ಹಾಜರಾಗಿದ್ದರು

ರೆ ಜಿ ಡಬ್ಲಿಯು ಗ್ರೀವೆಯವರು ಪ್ರಾರ್ಥನಾಪೂರ್ವಕವಾಗಿ ಸಭೆಯ ಕಾರ್ಯಗಳನ್ನು ಪ್ರಾರಂಭಿಸಿ ಮ ರಾಮಾನುಜಯರ ವಿಚಾರದಲ್ಲಿ ಸಾಧಕ ಪೂರ್ವಕವಾದ ಕೆಲವು ವಾಕ್ಯಗಳನ್ನು ಹೇಳಿ, ಅವರು ಸಭೆಯ ಅಗ್ರಾಸನವನ್ನು ವಹಿಸಿದ್ದಕ್ಕಾಗಿ ಅವರನ್ನು ವಂದನೆ ಮಾಡಿದರು ಬಳಿಕ ಹೈ ಸ್ಕೂಲಿನ ಪ್ರಿನ್ಸಿಪಾಲ್ ರೆ ಸಿ ಡಬ್ಲಿಯು ಆರ್ಮ್‌ಸ್ಟ್ರಾಂಗ್‌ರವರು 1911-12 ನೇ ವರ್ಷದ ಸ್ಕೂಲಿನ ರಿಪೋರ್ಟನ್ನು ಓದಿದರು ಅದರ ಮುಖ್ಯಾಂಶಗಳೇನೆಂದರೆ

1911 ನೇ ಮಾರ್ಚ್ ಏಪ್ರಿಲಿನಲ್ಲಿ ಹೈ ಸ್ಕೂಲಿನ ವಿದ್ಯಾರ್ಥಿಗಳ ಸಂಖ್ಯೆಯು ಇದ್ದದ್ದು 1912 ನೇ ಮಾರ್ಚಿ ತಿಂಗಳಲ್ಲಿ 150 ಕ್ಕೆ ವೃದ್ಧಿಯಾಯಿತು ಈಗ ಹೈ ಸ್ಕೂಲಿನಲ್ಲಿ 110 ಮಂದಿ ವಿದ್ಯಾರ್ಥಿಗಳಿರುತ್ತಾರೆ ಅದನ್ನು ನೋಡಿದರೆ ಈ ಸ್ಕೂಲಿನ ಜನಪ್ರಿಯತೆಯು ವ್ಯಕ್ತವಾಗುತ್ತದೆ ಈ ಸ್ಕೂಲಿನಲ್ಲಿ ಓದಿದ ವಿದ್ಯಾರ್ಥಿಗಳ ಪೈಕಿ ಈ ಸಲ 11 ಮಂದಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ, 21 ಮಂದಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲೂ ತೇರ್ಗಡೆಯಾದರು. ಈ ಸ್ಕೂಲಿನ ಒಳ್ಳೆ ಹೆಸರನ್ನು ಎತ್ತಿ ತೋರಿಸುತ್ತಾರೆ ಈ ಸ್ಕೂಲಿನಲ್ಲಿ ಬಾಲಕರನ್ನು ಲಕ್ಷ್ಯಪೂರ್ವಕವಾಗಿ ಮಾಡಬೇಕೆಂಬುದೇ ಪ್ರಧಾನವಾದ ಉದ್ದೇಶವಾಗಿಟ್ಟುಕೊಂಡಿದೆ, ಬಾಲಕರಿಗೆ ವಿದ್ಯೆಗೆ ಬೇಕಾದ ಸಹಕಾರ ಸಚ್ಚರಿತ್ರೆ ಸನ್ಮಾರ್ಗದ ಬಗೆಗಳನ್ನು ತೋರಿಸಿ ಅವುಗಳನ್ನು ಅನುಸರಿಸುವಂತೆ ಮಾಡುವುದು ಸುಲಭವಾಗಿಯೇ ಇದೆ ಇದನ್ನು ಸಾಧಿಸುವ ಭಾರವು ತಮ್ಮ ಮೇಲೆ ಇದೆ ಎಂದು ಈಗ ಹೇಳುವ ಉತ್ತರವನ್ನು ಆಲೋಚಿಸುತ್ತಾ ಇದಕ್ಕೆ ಸಾಕ್ಷಿ ಬೇಕಾದರೆ ಈ ಸ್ಕೂಲಿಗೆ ಮಂಜೂರಾದ ಕೊಠಡಿಯು ಸಾಲದೆ ವಿದ್ಯಾರ್ಥಿಗಳು ಕ್ಲಾಸ್ ಟೈಮಿಗೆ ಅವರ ಕಷ್ಟಗಳೂ ಪ್ರಯೋಜನಗಳನ್ನೂ ಮಹಾಸ್ವಾಮಿಯವರಲ್ಲಿ ನಾಗರೀಕ ಸರ್ವೆ ಮೈಸೂರು ಸರ್ಕಾರದವರೂ ಉಚಿತ ಸಂಸ್ಥಾನಾಮುಳ ಸಹಾಯಧನಗಳನ್ನು ಸಾ ಹಿಸುತ್ತಾರೆ ಈ ಸ್ಕೂಲಿನ ವಿದ್ಯಾರ್ಥಿಗಳಿಗೆ ಸೌಕರ್ಯಕ್ಕೆ ದೊಡ್ಡ ಬೇಬಲಾಗಿ ಪರಿಗಣಿಸುವುದು ಅನೇಕ ಹುಡುಗರು ಡ್ರಿಲ್ ಗೆ ಬಂದು ಓದತಕ್ಕವರಾಗಿರಾತ ಅವರಿಗೆ ವಸತಿಯಾದ ಮತ್ತು ಎಲ್ಲಾ ಬಗೆಯಲ್ಲಿ ನಿರ್ದೋಷವಾದ ಸ್ಥಳ ದೊರೆತರೆ ನಾನಾ ರೀತಿಯಲ್ಲಿ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವರು ಆದಕಾರಣ ಈ ಸ್ಕೂಲಿಗೆ ಸಂಬಂಧಪಟ್ಟ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿಕೊಳ್ಳಬೇಕೆಂದು ಕೋರುತ್ತೇವೆ ತಂದೆ ತಾಯಿಗಳು ಆಗಾಗ್ಗೆ ಈ ಕೊರತೆಯ ವಿಷಯದಲ್ಲಿ ಹೇಳುತ್ತಾರೆ ಕೆಲವರಿಗೆ 25 ಮಂದಿಗೂ ಒಂದು ಬಾಡಿಗೆ ಮನೆಯಲ್ಲಿದ್ದು ಓದುವ ವಿದ್ಯಾರ್ಥಿಗಳ ಯೋಗ್ಯ ವಿಚಾರವಾದರೆ ಅದರಲ್ಲಿ ಎಷ್ಟು ಮಂದಿ ಸೇರುವರು ಪ್ರಾಪ್ತರ ಬಾಲಕರೂ ಅನೇಕವಾಗಿ ಇದ್ದು ಅಂಥಾ ನಿಲಯವನ್ನು ಅಪೇಕ್ಷಿಸುವರು ಇಂಥಾ ಶ್ರೇಷ್ಠವೂ ಪ್ರಧಾನವೂ ಆದ ಕಾರ್ಯಕ್ಕೆ ಪ್ರಜೆಗಳ ಹಿತಚಿಂತಕರೆಲ್ಲಾ ಸಹಾಯ ಮಾಡಬೇಕಾಗಿರುವುದು ಈಗಾಗ ಹೇಳುತ್ತೇವೆ ಕೊಠಡಿಗಳಾಗಿದ ಯೋಗ್ಯವೂ ಸಮೀಪವೂ ಆದ ನಿವೇಶನ ದೊರೆತ ಕೆಲಸವನ್ನು ಪ್ರಾರಂಭಿಸಬಹುದು ಇದಕ್ಕೆ ಗವರ್ನಮೆಂಟಿನವರೂ ಸಹಾಯ ಮಾಡದೆ ಇರಲಾರರು ಆಟಗಳು, ಸಂಘಗಳು, ಕಸರತ್ತುಗಳಲ್ಲಿ ಸ್ಕೂಲಿನ ವಿದ್ಯಾರ್ಥಿಗಳು ಸುಶಿಕ್ಷಿತರಾಗಿ ಪಲವು ಸಂಘಗಳಲ್ಲಿ ಬಹುಮಾನವನ್ನು ಸಂಪಾದಿಸಿಕೊಂಡಿದ್ದಾರೆ ಲಡ್ಲೋ ಕೋರ್ಟ್ ಮ ಬಿ ಆರ್ ಕೃಷ್ಣಪ್ಪನವರು ಈ ಸ್ಕೂಲಿನ ವಿದ್ಯಾರ್ಥಿಗಳಿಗೆ ಆಗಿಂದಾಗ್ಗೆ ವಿಶೇಷವಾದ ಸಹಾಯವನ್ನು ಪ್ರೋತ್ಸಾಹವನ್ನೂ ಕೊಡುತ್ತಿರುವುದು ಸ್ತೋತ್ರಾರ್ಹವಾಗಿದೆ ನಾರಾಯಣ ಆಟದಲ್ಲಿ ಹಿಂಥ ರೀತಿ ಉತ್ತಮನಾಗಿರುವಂಥಾ ಬಾಲಕನಿಗೆ ಅವರು ತಮ್ಮ ಹೆಸರಿನಲ್ಲಿ ಬಹುಮಾನ ಕೊಡಬೇಕೆಂದು ಹತ್ತು ರೂಪಾಯಿ ಕಳುಹಿಸಿದ್ದಾರೆ.

ಪ್ರೆಸಿಡೆಂಟರವರು ಆಗ ಹಾರ್ಡ್‌ವಿಕ್ ಸ್ಕೂಲಿನ ಮತ್ತು ಕಮರ್ಷಿಯಲ್ ಸ್ಕೂಲಿನ ರಿಪೋರ್ಟನ್ನು ಓದಿ ಹೇಳಿದರು. ಅವರಡು ಸ್ಕೂಲುಗಳಲ್ಲೂ ಬಾಲಕರ ಸಂಖ್ಯೆಯು ವೃದ್ಧಿಹೊಂದಿರುವುದಲ್ಲದೆ ಪಬ್ಲಿಕ್ ಪರೀಕ್ಷೆಗಳಲ್ಲಿ ಹೆಚ್ಚು ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರೆಂದೂ, ಇವೆರಡೂ ವೃದ್ಧಿಯಾಗುತ್ತಿವೆ ಎಂದೂ ಗೊತ್ತಾಯಿತು.

ತರುವಾಯ ಮ| ಎಂ ರಾಮರಾಯರು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನೂ, ಸರ್ಟಿಫಿಕೇಟುಗಳನ್ನೂ ಹಂಚಿಕೊಟ್ಟು ಸಭಿಕರನ್ನು ಕುರಿತು ಹೇಳಿದ ಮುಖ್ಯಾಭಿಪ್ರಾಯಗಳೇನೆಂದರೆ:— ಪೂರ್ವಕಾಲದಲ್ಲಿ ವಿದ್ಯಾರ್ಥಿಗಳು ಗುರುಕುಲ ವಾಸಮಾಡಿ ವಿದ್ಯೆಗಾಗಿ ಬಹಳ ಶ್ರಮಪಡುತ್ತಿದ್ದರು ಈಗ ಅವರಿಗೆ ಅಂಥಾ ಕಷ್ಟಗಳೆಲ್ಲಾ ತಪ್ಪಿಹೋದವು. ಈಗ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ವಿಶೇಷ ದ್ರವ್ಯವನ್ನು ಖರ್ಚುಮಾಡಿ ವಿದ್ಯೆ ಕಲಿಸುವುದು ಮಾತ್ರವೇ ಅಲ್ಲ, ಅವರ ಪಿನಾ ಹಾದಿಗಳಿಗೂ ಹಣವನ್ನು ಒದಗಿಸಬೇಕಾಗಿದೆ ಹೀಗಾದರೂ ಬಹುಮಂದಿ ಬಾಲಕರು ತಮ್ಮ ತಂದೆ, ತಾಯಿಗಳ ಕಷ್ಟಗಳನ್ನು ಪರಿಗಣಿಸದೇನೂ, ಮುತುವರ್ಜಿ ವಹಿಸಿ ವ್ಯಾಸಂಗ ಮಾಡದೇನೂ ಉಪಾಧ್ಯಾಯರು ತಮಗೆ ಸರಿಯಾಗಿ ವಿದ್ಯೆ ಹೇಳಿಕೊಡುವುದಿಲ್ಲವೆಂದು ಆಕ್ಷೇಪಣೆ ಮಾಡುತ್ತಾರೆ. ಇದು ಎಷ್ಟು ಮಾತ್ರಕ್ಕೂ ಧರ್ಮವೆನಿಸುವುದಿಲ್ಲ ವಿದ್ಯಾರ್ಥಿಗಳು ಪ್ರಾರಂಭದಿಂದಲೂ ಆಲಸ್ಯ ಮಾಡದೆ ಕ್ರಮವಾಗಿ ವ್ಯಾಸಂಗ ಮಾಡುತ್ತಾ ಬರಬೇಕಾಗಿದೆ ಪ್ರಾಚೀನ ಕಾಲದಲ್ಲಿ ವಿದ್ಯೆಯನ್ನು ಹೇಳಿಸುವುದು ಸರ್ಕಾರದವರ ಕರ್ತವ್ಯವಾಗಿರಲಿಲ್ಲ. ಈಗಲಾದರೋ ಗವರ್ನ್‌ಮೆಂಟಿನವರು ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಅಪಾರವಾದ ದ್ರವ್ಯವನ್ನು ವಿನಿಯೋಗಿಸಬೇಕೆಂದೂ, ಇದು ಅವರ ಕರ್ತವ್ಯವೆಂದೂ ಹೇಳುತ್ತಾರೆ ಸರ್ಕಾರದವರು ಈ ಭಾಗದಲ್ಲಿ ಎಷ್ಟು ಹಣ ಖರ್ಚು ಮಾಡಿದ್ದರೂ, ಎಷ್ಟು ಮಟ್ಟಿಗೆ ಸಾಹಸಪಡುತ್ತಿದ್ದರೂ ಇನ್ನೂ ಅನೇಕಾನೇಕರು ಅಕ್ಷರಜ್ಞಾನವಿಲ್ಲದೆ ಸೇಗಲ ಗುರುತು, ಒಳೆಯ ಗುರುತುಗಳನ್ನು ಹಾಕುತ್ತಿರುವರು ಪುಣ್ಯವಂತರೂ ಪ್ರತಿಷ್ಠಿತ ಚಿಂತಕರೂ ವಿದ್ಯಾರ್ಥಿಗಳಿಗೆ ತಮ್ಮ ಹೆಸರುಗಳ ಮೇಲೆ ಬಹುಮಾನ ಕೊಡುವುದಕ್ಕೆ ಪ್ರತಿಯಾಗಿ ಅವರು ಅಲ್ಪಸ್ವಲ್ಪ ಹಣವನ್ನು ವಿನಿಯೋಗಿಸಿ ಒಂದೊಂದು ಪಾಠಶಾಲೆಯನ್ನು ಸ್ಥಾಪಿಸುವುದಾದರೆ ಸಂಸ್ಥಾನಕ್ಕೆ ಎಷ್ಟೋ ಶ್ರೇಯಸ್ಕರವಾದೀತು ಪೂರ್ವದಲ್ಲಿ ಛತ್ರ, ಮಠ, ದೇವಸ್ಥಾನ, ಕೊಳ, ಸೋಪಾನಾದಿಗಳನ್ನು ಕಟ್ಟಿಸುವುದು ಪುಣ್ಯಕ್ರಿಯೆ ಎಂದು ತಿಳಿದಿದ್ದರು ಈಗ ವಿದ್ಯಾದಾನಕ್ಕೆ ಸಮಾನವಾದ ಪುಣ್ಯವೂ ಪರೋಪಕಾರವೂ ಬೇರೊಂದಿಲ್ಲವೆಂದು ಖಚಿತವಾಗಿದೆ

ಬಳಿಕ ರೆವರೆಂಡ್ ಗ್ರೀವೆಯವರು ವಿದ್ಯಾರ್ಥಿಗಳೆಲ್ಲರೂ ಆವಶ್ಯಕತೆಯನ್ನು ವಿವರಿಸಿ, ಧರ್ಮಿಷ್ಠರಾದ ಮಹನೀಯರು ಒಂದು ಕಟ್ಟಡವನ್ನೋ ನಿವೇಶನವನ್ನೋ ಬಿಟ್ಟುಕೊಟ್ಟು ಶಾಶ್ವತವಾದ ಕೀರ್ತಿಯನ್ನು ಹೊಂದುವವರಾಗಲೆಂದು ಹಾರೈಸಿ, ಸಭಿಕರ ಪರವಾಗಿ ಮ ರಾಮರಾಯರನ್ನು ವಂದಿಸಿ, ಆ ಸಂತೋಷಕೂಟವನ್ನು ಮುಕ್ತಾಯಮಾಡಿದರು

ಇಂಡಿಯಾ ದೇಶದ ವೃತ್ತಾಂತಗಳು.

ಗಾಯಕವಾಡ ಮಹಾರಾಜರವರು ಬರೋಡಾ ನಗರದಲ್ಲಿ ಮಹಮದೀಯರು ಸೇರಿ ನಮಾಜು ಮುಂತಾದ ಭಕ್ತಿ ಕ್ರಿಯೆಗಳನ್ನು ಮಾಡಿಕೊಳ್ಳುವಂಥಾ ಒಂದು ಮಸೀದಿಯನ್ನು ಸ್ಥಾಪನೆ ಮಾಡಿ, ಅದಕ್ಕೆ ಜುಮ್ಮಾ ಮಸೀದಿ ಎಂದು ಹೆಸರಿಟ್ಟರು ಹಿಂದೂಮತದ ದೊರೆಯಾದ ಈ ಮಹಾರಾಜರವರು ತಮ್ಮ ರಾಜ್ಯದ ಮುಸಲ್ಮಾನರ ಮೇಲಿರುವ ಪ್ರೀತಿಯನ್ನು ಈ ರೀತಿ ಪ್ರಕಟಪಡಿಸಿದ್ದನ್ನು ನೋಡಿ ಮುಸಲ್ಮಾನ್ ಪ್ರಜೆಗಳೆಲ್ಲಾ ಅವರ ಔದಾರ್ಯವನ್ನೂ ನಿಷ್ಪಕ್ಷಪಾತವನ್ನೂ ಕೊಂಡಾಡುತ್ತಿದ್ದಾರೆ

ಕಳೆದ 18 ನೇ ತಾ ಬುಧವಾರ ತಿರುವಾಂಕೂರು (ತಿರುವನಂತಪುರ) ಸಂಸ್ಥಾನದ ಮಹಾರಾಜರವರ 55 ನೇ ವರುಷದ ಜನ್ಮೋತ್ಸವವು ವಿಶೇಷ ಆಡಂಬರದಿಂದ ನಡೆಯಿತು ಮಹಾರಾಜರವರು ಬೆಳಿಗ್ಗೆ ವೈದಿಕ ಕರ್ಮಗಳನ್ನು ತೀರಿಸಿಕೊಂಡು ದರ್ಬಾರ್ ನಡೆಸಿದರು ದಿವಾನ್‌ರವರು ಮೊದಲಾದ ಅಧಿಕಾರಿಗಳೂ ದೊಡ್ಡ ಮನುಷ್ಯರೂ ದರ್ಬಾರಿನಲ್ಲಿ ಹಾಜರಾಗಿ ಮಹಾರಾಜರಿಗೆ ನಜರುಗಳನ್ನು ಒಪ್ಪಿಸಿದರು ಬಳಿಕ ಮಹಾರಾಜರವರು ಕೋಟೆಯೊಳಗೆ ಮೆರವಣಿಗೆ ಹೊರಟರು ಸಾವಿರಾರು ಬಡಬಗ್ಗರಿಗೆ ಅನ್ನದಾನಾದಿಗಳು ನಡೆಸಲ್ಪಟ್ಟವು

ಮದ್ರಾಸ್ ಪೊಲೀಸ್ ಕಮಿಷನರ್‌ರವರು ಕಳೆದ ವಾರ ಒಂದು ಅಪೂರ್ವವಾದ ಸಭೆಯಲ್ಲಿ ಪ್ರೆಸಿಡೆನ್ಸಿ ಕಾಲೇಜಿನ ಕೆಲವು ವಿದ್ಯಾರ್ಥಿಗಳನ್ನು ನೇಮಿಸಿದರು. ಸ್ಥಳೀಯ ಹುಡುಗರೂ ಮಹಮದೀಯರೂ ಸ್ಕೂಲಿಗೆ ಸೇರಿ ಎಡ ಮುಸಲ್ಮಾನ್ ಪ್ರಜೆಗಳಿಗೆ ಇಂಗ್ಲಿಷ್ ವಿದ್ಯೆಯನ್ನು ಕಲಿಸಿ ಅವರನ್ನು ಬುದ್ಧಿವಂತರನ್ನಾಗಿ ಮಾಡಬೇಕೆಂದು ಗೊತ್ತುಮಾಡಿದರು ಬಹು ಮಂದಿ ಮಹಮದೀಯರು ಹುಡುಗರೂ ಈ ಪಕ್ಷವನ್ನು ಸೇರಿದರು ಈ ವಿದ್ಯಾ ಪ್ರಚಾರಕ ಸಂಘದ ಸಹಾಯ ಮಾಡುವರು ಇನ್ನು ಮುಂದೆ ಇದೇ ಉದ್ದೇಶದಿಂದ ಹಲವು ಬಂಗಲೆ ಹಿಂದೆ ಮುಂದೆ ಗಳಲ್ಲಿ ಸಭೆಗಳು ನಡೆಸಲ್ಪಡುವವೆಂದು ತಿಳಿದುಬಂದಿದೆ

ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ಕೊಚೂರಿಬಾರಿ ಎಂಬ ಟೀ ತೋಟಕ್ಕೆ ಸುಮಾರು 15,000 ರೂಪಾಯಿ ಉಳ್ಳ ಖಜಾನೆಯನ್ನು ಗಾಡಿಯ ಮೇಲೆ ನಾಗಿ ಕೊಂಡು ಹೋಗುತ್ತಿದ್ದಾಗ ಸ್ಥಳದಿಂದ ಸ್ವಲ್ಪ ದೂರದಲ್ಲಿ 11-15 ಮಂದಿ ಕಳ್ಳರು ಬಿದ್ದು ಕಾವಲಿದ್ದವರನ್ನೆಲ್ಲಾ ಚೆನ್ನಾಗಿ ಹೊಡೆದು, ಖಜಾನೆಯನ್ನು ಲೂಟಿ ಮಾಡಿಕೊಂಡು ಹೋದರು. ಆ ತೋಟದ ಆಳುಕಾಳುಗಳು ಆ ಸುತ್ತುಮುತ್ತಲಲ್ಲಿ ಹುಡುಕಿ ಇಬ್ಬರನ್ನು ಹಿಡಿದುತಂದರು ಇವರಿಬ್ಬರಿಗೂ ಪೊಲೀಸಿನವರು ಕಠಿಣ ಶಿಕ್ಷೆ ಕೊಡಿಸುವುದಾಗಿ ನ್ಯಾಯ ಮಾಡಿದ ರೀತಿ ಆಗಿಂದ ಈ ಕಳುವಿನ ಕಾರ್ಯಕರ್ತರು ಪತ್ತೆಯಾಯಿತು ಈಗ ವಿಚಾರಣೆಯು ನಡೆಯುತ್ತಿದೆ

ಪ್ರತಿ ವರುಷವೂ ಹಿಂದುಸ್ಥಾನದಲ್ಲಿ ಹಿಂದುಗಳೂ ಮಹಮದೀಯರೂ ಯಾತ್ರೆ ತೀರ್ಥಾದಿಗಳಿಗೋಸ್ಕರ ಹೋಗಿ ಸೇರುವಂಥಾ ದೊಡ್ಡ ದೊಡ್ಡ ಸ್ಥಳಗಳಲ್ಲಿ ಅವರ ಆರೋಗ್ಯಾದಿಗಳನ್ನು ಕಾಪಾಡುವುದಕ್ಕಾಗಿ ಯಾವ ಯಾವ ಏರ್ಪಾಡುಗಳು ನಡೆಯುತ್ತಿವೆ, ಇನ್ನಾವ ಕಾರ್ಯಗಳು ನಡೆಸಲ್ಪಡಬೇಕೆಂದೂ ಪಂಚಾಯಿತಿ ಕಮಿಟಿಯವರು ತನಿಖೆ ಮಾಡಿ ಒಂದು ರಿಪೋರ್ಟು ಕಳುಹಿಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಅಪ್ಪಣೆಕೊಡಿಸಿದ್ದಾರೆ ಈ ಪಂಚಾಯಿತರು ಅಂಥಾ ಯಾತ್ರಾ ಸ್ಥಳಗಳಿಗೆ ಹೋಗಿ ಯಾತ್ರಿಕರಿಗೆ ಇಳಿಯುವ ಸ್ಥಳ, ಅವರ ಆರೋಗ್ಯ ಸ್ಥಿತಿ, ಒಳ್ಳೇ ಕುಡಿಯುವ ನೀರಿನ ಸರಬರಾಯಿ, ಪ್ರಯಾಣದ ಸೌಕರ್ಯ, ಈ ಮೊದಲಾದ ವಿಚಾರಗಳನ್ನು ಪರೀಕ್ಷಿಸುವವರಾಗಿದ್ದಾರೆ

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಬಿಕಾನಿಯರ್ ಮಹಾರಾಜರವರಿಗೆ ಪಟ್ಟಾಭಿಷೇಕವಾದ 25 ನೇ ವರುಷದ ಸಂತೋಷೋತ್ಸವಗಳು ಕಳೆದ 13 ನೇ ತಾರೀಖಿನಿಂದ ಪ್ರಾರಂಭವಾಗಿ ಮುಂದಿನ ರವಿವಾರಕ್ಕೆ ಮುಕ್ತಾಯವಾಗುವವು. ಮೊನ್ನೆ ಮಂಗಳವಾರ ಮಹಾರಾಜರವರು ಒಂದು ವಿಶೇಷವಾದ ದರ್ಬಾರನ್ನು ನಡೆಸಿದರು ಬಹು ಜನ ಅಧಿಕಾರಿಗಳಿಗೂ ವಿದ್ಯಾವಂತರೇ ಮೊದಲಾದವರಿಗೂ ಇನಾಮುಗಳನ್ನು ಕೊಟ್ಟರು. ಖೈದಿಗಳನ್ನು ಬಂದೀಖಾನೆಗಳಿಂದ ಖುಲಾಸ್ ಮಾಡಿಸಿದರು ಪ್ರಜೆಗಳಿಂದ ಅಡ್ರೆಸ್ಸುಗಳನ್ನು ಸ್ವೀಕರಿಸಿದರು. ಇದಲ್ಲದೆ ಸಂಸ್ಥಾನಾಮುಳ ಅನ್ವಯಿಸುವಂಥಾ ಕೆಲವು ವರಪ್ರದಾನಗಳನ್ನು ಮಹಾರಾಜರವರು ದಯಪಾಲಿಸಿದರು ಡಂಗೂರ್ ಮೆಮೋರಿಯಲ್ ಕಾಲೇಜನ್ನು ಪ್ರತಿಷ್ಠೆ ಮಾಡಿದರು

ಈಚೆಗೆ ಟಿಬೆಟ್ಟಿನಲ್ಲಿ ಸ್ವದೇಶಿಗಳಿಗೂ ಚೀನಾ ಸೈನಿಕರಿಗೂ ಅನೇಕ ಸಣ್ಣ ದೊಡ್ಡ ಯುದ್ಧಗಳೂ ಕಡಿದಾಟಗಳೂ ನಡೆಯುತ್ತಾ ಬಂದವು ಚೀನೆಯವರು ಟಿಬೆಟ್ಟಿನಲ್ಲಿ ತಮ್ಮ ಅಧಿಕಾರಕ್ಕೆ ಲೋಪ ಬಾರದಂತೆ ದರ್ಪವನ್ನಿಟ್ಟು ಕಾಪಾಡಿಕೊಳ್ಳಬೇಕೆಂದು ತಮ್ಮ ಸೈನಿಕರನ್ನೂ ಅಧಿಕಾರಿಗಳನ್ನೂ ಟಿಬೆಟ್ಟಿಗೆ ಕಳುಹಿಸಿದರು ಟಿಬೆಟ್ಟಿನ ದಳಾಯಿ ಲಾಮಾ ಎಂಬ ವೈದಿಕ ಮಹಾ ಗುರುವು ಕೆಲವು ಕಾಲದಿಂದ ಇಂಗ್ಲಿಷರ ಆಶ್ರಯದಲ್ಲಿದ್ದು ಈಗ ಪರಿವಾರ ಸಮೇತ ಟಿಬೆಟ್ಟಿಗೆ ವಾಪಸು ಹೋಗುತ್ತಿದ್ದಾರೆ. ಚೀನಾ ಗವರ್ನ್‌ಮೆಂಟಿನವರು ಹೊಸದಾಗಿ ಏರ್ಪಡಿಸಿಕೊಂಡಿರುವ ಪ್ರಜಾ ಪ್ರಭುತ್ವವನ್ನು ಸ್ಥಿರಪಡಿಸಿಕೊಳ್ಳುವುದರಲ್ಲೇ ಉದ್ಯುಕ್ತರಾಗಿರೋಣದರಿಂದ ಸದ್ಯದಲ್ಲಿ ಟಿಬೆಟ್ಟಿನ ವಿಚಾರಕ್ಕೆ ಗಮನಕೊಡಲು ಆಗಲಾರದೆಂದು ಗೊತ್ತುಮಾಡಿಕೊಂಡರು ಟಿಬೆಟ್ಟಿಗೆ ಕಳುಹಿಸಿದ್ದ ಚೀನಾ ಸೈನಿಕರನ್ನೆಲ್ಲಾ ವಾಪಸು ಕರೆಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಸುಮಾರು 1,500 ಮಂದಿ ಚೀನಾ ಸೈನಿಕರೇ ಮೊದಲಾದವರು ಟಿಬೆಟ್ಟನ್ನು ಬಿಟ್ಟು ಕಲ್ಕತ್ತೆಗೆ ಬಂದು ಅಲ್ಲಿ ಹಡಗುಗಳನ್ನು ಹತ್ತಿ ಷಾಂಘಾಯಿ ಪಟ್ಟಣಕ್ಕೆ ಹೋಗುವವರಾಗಿದ್ದಾರೆ

ವಿದೇಶದ ವೃತ್ತಾಂತಗಳು.

ಕಳೆದ ತಾ 17 ನೇ ಮಂಗಳವಾರ ಟ್ರಿಪೋಲಿಯ ಬಳಿ ಟರ್ಕಿಯವರಿಗೂ ಇಟಲಿಯವರಿಗೂ ಬಹು ಕಠಿಣವಾದ ಯುದ್ಧ ನಡೆಯಿತು ಡೇರ್ನಾ ಎಂಬ ಸ್ಥಳದಲ್ಲಿ ಶತ್ರುಗಳು ಹಲವು ಸಾರಿ ಒಬ್ಬರ ಮೇಲೊಬ್ಬರು ನುಗ್ಗಿ ಕಡಿದಾಡಿದರು ಇಟಲಿ ಸೈನಿಕರಲ್ಲಿ 61 ಮಂದಿ ಕೊಲೆಯಾದರು, 130 ಮಂದಿ ಗಾಯಪಟ್ಟರು, ಅರಬ್ಬಿಯವರಲ್ಲಿ 1,000 ಮಂದಿ ಹತರಾದರು, ಇನ್ನಷ್ಟು ಜನರಿಗೆ ಗಾಯಗಳಾದವು ಇಟಲಿಯವರು ಶತ್ರುಗಳಲ್ಲಿ 41 ಜನರನ್ನು ಕೈಸೆರೆ ಹಿಡಿದಿರುತ್ತಾರೆ

ಜಪಾನ್ ದೇಶದವರಲ್ಲಿ ದೊರೆಯೋ ಇತರ ದೊಡ್ಡ ಮನುಷ್ಯರೋ ಮೃತಪಟ್ಟರೆ ಅಥವಾ ದೊರೆಯ ಆಜ್ಞೆಯಾದರೆ ಅವರಲ್ಲಿ ಭಯ ಭಕ್ತಿ ವಿಶ್ವಾಸಾದಿಗಳನ್ನು ಪಡೆದಿರುವಂಥವರು ತಾವಾಗಿಯೇ ಆತ್ಮಹತ್ಯ ಮಾಡಿಕೊಳ್ಳುವ ಪದ್ಧತಿಯುಂಟು ಈ ಪದ್ಧತಿಯನ್ನನುಸರಿಸಿಯೇ ಕಳೆದ ವಾರ ಮೇಜಿ ಚಕ್ರವರ್ತಿಯವರ ಸಮಾಧಿ ಕಾಲದಲ್ಲಿ ಜನರಲ್ ನೋಗಿ ಎಂಬ ಸೇನಾಧಿಪತಿಯು ಪತ್ನಿ ಸಹಿತ ಆತ್ಮಹತ್ಯ ಮಾಡಿಕೊಂಡನು ಅಮೇರಿಕಕ್ಕೆ ಸೇರಿದ ಕೊಲಂಬಿಯಾ ಡಿಸ್ಟ್ರಿಕ್ಟಿನಲ್ಲಿ ಜಪಾನೀಯರು ಕೆಲವು ಮಂದಿ ಇರುತ್ತಾರೆ ಇವರಲ್ಲಿ ಅಂದರೆ 50 ಮಂದಿ ಕಳೆದ ವಾರ ಅಂತರಂಗವಾಗಿ ಒಂದು ಕಡೆ ಸೇರಿ ಮೀಟಿಂಗ್ ಮಾಡಿ, ತಮ್ಮ ಮುಖ್ಯ ಲಾಟ್ ಚೀಟಿಗಳನ್ನು ಎತ್ತಿ, ಜಪಾನ್ ಚಕ್ರವರ್ತಿಯವರು ಕಾಲವಾದ ಕಾರಣ ತಮ್ಮಲ್ಲಿ ಒಬ್ಬನು ಆತ್ಮಹತ್ಯ ಮಾಡಿಕೊಳ್ಳುವಂತೆ ನಿಷ್ಕರ್ಷೆ ಮಾಡಿಕೊಳ್ಳುವರಲ್ಲ ಈ ವಿಚಾರವು ರಟ್ಟಾಗಿ ಪೊಲೀಸಿನವರು ಹೋಗಿ ಅವರೆಲ್ಲಾ ಚದುರಿಸಿದ್ದಲ್ಲದೆ ಅವರಲ್ಲಿ ಮುಖಂಡರಾಗಿದ್ದವರನ್ನು ದಸ್ತಗಿರಿ ಮಾಡಿರುತ್ತಾರೆ

ಲಂಡನ್ ಪಟ್ಟಣ ಒಂದರಲ್ಲಿ ಆಗುವಷ್ಟು ಸಂಪತ್ತಿಯು ಉತ್ಪತ್ತಿಯು ಪ್ರಪಂಚದ ಇನ್ನಾವ ಪಟ್ಟಣದಲ್ಲೂ ಆಗುವುದಿಲ್ಲವೆಂಬ ಅಂಶವನ್ನು ಕೆಳಗೆ ವಿವರಿಸುವ ಲೆಕ್ಕಗಳಿಂದ ತಿಳಿಯಬಹುದು ಆ ಪಟ್ಟಣದಲ್ಲಿ ಮನೆಗಳ ಮಾಲೀಕರಿಗೆ ಬಾಡಿಗೆ ಮೊದಲಾದವುಗಳಿಂದ ವರುಷಕ್ಕೆ 210 ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತದೆ ಪ್ರಜೆಗಳು 61 ಲಕ್ಷ ರೂಪಾಯಿ ತೆರಿಗೆಗಳನ್ನು ಕೊಡುವರು ಜನರು ಸಾಕುವ ಸುಮಾರು 1,80,000 ನಾಯಿಗಳಿಗಾಗಿ ವರುಷಕ್ಕೆ 9,15,000 ರೂಪಾಯಿ ತೆರಿಗೆಯನ್ನು ಪಾವತಿಮಾಡುವರು ಪಟ್ಟಣದವರು ಇಟ್ಟುಕೊಂಡಿರುವ ಮೋಟಾರ್ ಮತ್ತು ಇತರ ವಾಹನಗಳಿಗೆ ಪ್ರತಿ ವರುಷವೂ 75 ಲಕ್ಷ ರೂಪಾಯಿ ತನಕ ಲೈಸೆನ್ಸ್ ಹಣ ಕೊಡುತ್ತಾರೆ ಲಂಡನ್ ಪಟ್ಟಣದೊಳಗೆ ವಾರ ಒಂದಕ್ಕೆ 75 ಮದುವೆಗಳೂ, 100 ಕದವು ಇಲ್ಲದ ಆಕಸ್ಮಿಕವಾದ ಮರಣಗಳೂ ನಡೆಯುವವು ಪ್ರತಿ ವರುಷವೂ ಆ ನಗರದಲ್ಲಿ 3,000 ಪ್ರಜೆಗಳು ಹುಚ್ಚ ನಾಯಿಗಳಿಂದ ಕಚ್ಚಿಸಲ್ಪಡುವರು. ಅಂಚೆ ಜವಾನರು ಆ ಪಟ್ಟಣದಲ್ಲಿ ಪ್ರತಿ ದಿನವೂ ಅಂಚೆಯ ಮೇಲೆ ಬರುವಂಥಾ 10,00,000 ಕಾಗದಗಳು, ಪೋಸ್ಟ್ ಕಾರ್ಡುಗಳು, ನೋಟೀಸುಗಳು, ವರ್ತಮಾನ ಪತ್ರಿಕೆಗಳು, ಇವನ್ನು ವಿಳಾಸದಾರರಿಗೆ ಬಟವಾಡೆ ಮಾಡುತ್ತಾರೆ

ನೊಣಗಳಿಂದ ಅನೇಕ ಅಂಟುರೋಗಗಳು ಮನುಷ್ಯರಿಗೆ ವ್ಯಾಪಿಸುತ್ತವೆಂದು ನಿಷ್ಕರ್ಷೆಯಾಗಿದೆಯಷ್ಟೆ ಈ ಪ್ರಾಣಿಗಳು ಎಲ್ಲೆಲ್ಲಿಯೋ ಬಚ್ಚಲು ಮೊದಲಾದ ಸ್ಥಳಗಳಲ್ಲಿ ಕುಳಿತು ಅವುಗಳಲ್ಲಿರುವ ರೋಗದ ಕ್ರಿಮಿಗಳನ್ನು ತಮ್ಮ ಕಾಲುಗಳ ಮೇಲೆ ಹೊತ್ತುತಂದು ಮನುಷ್ಯರು ತಿನ್ನುವ ಪದಾರ್ಥಗಳ ಮೇಲೂ ತಿಂಡಿಗಳ ಮೇಲೂ ಬಟ್ಟೆ ಬರೆಗಳ ಮೇಲೂ ಕುಳಿತುಕೊಳ್ಳುವುದರ ಮೂಲಕ ನಾನಾ ರೋಗಗಳನ್ನು ಮನುಷ್ಯರಲ್ಲಿ ಹುಟ್ಟಿಸುವುವು ಆದಕಾರಣ ಪ್ರಜೆಗಳು ತಮ್ಮ ಮನೆಗಳೊಳಗೆ ಪ್ರಯತ್ನಪೂರ್ವಕವಾಗಿ ನೊಣಗಳನ್ನು ಹಿಡಿದು ಕೊಂದು ಹಾಕಬೇಕಾದದ್ದು ಪರಮಾವಶ್ಯಕವೆಂದು ಪ್ರಸಿದ್ಧ ವೈದ್ಯರುಗಳು ಹೇಳುತ್ತಾರೆ ವಿಷ ಮಿಶ್ರಮಾಡಿದ ಕೆಲವು ಪದಾರ್ಥಗಳನ್ನು ಪಾತ್ರೆ, ಎಲೆ ಮುಂತಾದವುಗಳಿಗೆ ಬಳಿದು ಇಟ್ಟರೆ ನೊಣಗಳು ಅವುಗಳ ಮೇಲೆ ಬಂದು ಕುಳಿತು ತಿಂದು ಸತ್ತುಹೋಗುವುವು ಅಮೆರಿಕಾ ಎಂಬ ಇಂಗ್ಲಿಷ್ ಸಾಮ್ರಾಜ್ಯದ ಕೆಲವು ಪಟ್ಟಣಗಳಲ್ಲಿ ಮ್ಯುನಿಸಿಪಾಲಿಟಿಯವರು ನೊಣಗಳನ್ನು ಕೊಂದು ಹಾಜರು ಮಾಡುವವರಿಗೆ ಇನಾಮುಗಳನ್ನು ಕೊಡಲಾರಂಭಿಸಿದ್ದಾರೆ ಒಬ್ಬ ಬಾಲಕನು ಎರಡು ದಿನಗಳಲ್ಲಿ 1,31,300 ನೊಣಗಳನ್ನು ಕೊಂದು ಇನಾಮನ್ನು ಹೊಂದಿದನು ಅನೇಕರು ಈ ಪ್ರಾಣಿಗಳ ಹುಟ್ಟನ್ನೇ ತಡೆಯಬೇಕೆಂದು ಸಾಹಸಪಡುತ್ತಿರುವರು

ಮದ್ಯಪಾನವನ್ನು ತ್ಯಜಿಸಿದ್ದು

ಬಹು ಸ್ತೋತ್ರಾರ್ಹವಾದ ಕಾರ್ಯವು

ನಂಜನಗೂಡು ತಾಲೂಕು ಕಳಲೆ ಹೋಬಳಿಯಲ್ಲಿ ಗಟಿ ಒಂದಕ್ಕೆ ಹತ್ತಾರು ಗ್ರಾಮಗಳಂತೆ ಸೇರಿರುತ್ತವೆ ಇಂಥಾ ಸುಮಾರು ೪೨ ಗಡಿಗಳಿಗೆ ಸೇರಿದ ಗ್ರಾಮವಾಸಿಗಳಾದ ಸುಮಾರು ಎರಡು ಸಹಸ್ರ ಪಂಚಮರು ಅವರ ಮುಖಂಡರುಗಳ ಮಾತಿಗೆ ಕಟ್ಟುಬಿದ್ದು ೧೫ ದಿಂಗಳಿಂದ ಶೇಂದಿ ಕುಡಿಯುವುದನ್ನು ಬಿಟ್ಟು ಇರುತ್ತಾರೆಂದು ಕೇಳಿ ಸಂತೋಷಪಡುವೆವು ಈ ಬಗೆಯಲ್ಲಿ ನಮಗೆ ತಿಳಿದು ಬಂದಿರುವ ಕಾರಣವೇನೆಂದರೆ— ಶೇಂದಿ ಕಂಟ್ರ್ಯಾಕ್ಟುದಾರರು ಶೇಂದಿಯ ಬೆಲೆ ಧಾರಣೆಯನ್ನು ಹೆಚ್ಚಿಸಿದರು ಆ ಪ್ರಾಂತ್ಯ ಶೇಂದಿಯನ್ನು ಕುಡಿಯುತ್ತಿದ್ದ ಪಂಚಮರು ಈ ವಿಚಾರವನ್ನು ಕುರಿತು ಚರ್ಚಿಸುವುದಕ್ಕಾಗಿ ಒಂದು ಸಭೆಯನ್ನು ನಡಿಸಿದರು ಯಜಮಾನ್ ಎಂಬಾತನು ಅವರಲ್ಲಿ ಮುಖಂಡನಾಗಿ ನಿಂತು ಮದ್ಯಪಾನದಿಂದಾಗುವ ಕೇಡುಗಳನ್ನೂ ಹಾನಿಗಳನ್ನೂ ಎಲ್ಲಾ ಜನರಿಗೂ ವಿವರಿಸಿ ಈ ಕೆಟ್ಟಪದ್ಧತಿಯನ್ನು ಎಲ್ಲರೂ ಬಿಟ್ಟುಬಿಡಬೇಕೆಂದು ಹೇಳಿದ ಹಾಗೂ, ಅವರೆಲ್ಲಾ ಆ ರೀತಿ ಒಪ್ಪಿಕೊಂಡ ಹಾಗೂ ಕೇಳಿಬಂದಿದೆ ಈ ಸಭೆಯಲ್ಲಿ ನಡೆದ ಕಟ್ಟಳೆಯ ಪ್ರಕಾರ ಆ ಜನರೆಲ್ಲಾ ಆಚರಣೆಯಲ್ಲಿ ತಂದು ಇರುತ್ತಾರೆ ಆ ಪೈಕಿ ಕುಂಭಳ್ಳಿ ಎಂಬ ಗ್ರಾಮದ ಸುಮಾರು ೫೦ ಮಂದಿ ಈ ಕಟ್ಟಳೆಯನ್ನು ಮೀರಿ ಶೇಂದಿಯನ್ನು ಕುಡಿದ ಹಾಗೂ, ಇದನ್ನು ತಿಳಿದು ಆ ಸಭೆಯವರು ಅವರಿಗೆಲ್ಲಾ ಬಹಿಷ್ಕಾರ ಹಾಕಿರುವ ಹಾಗೂ, ಈಗ ಅವರೆಲ್ಲಾ ತಮ್ಮ ತಪ್ಪನ್ನು ಒಪ್ಪಿಕೊಂಡು ಕುಲಕ್ಕೆ ಸೇರಿಕೊಳ್ಳುವುದರಲ್ಲಿ ಆತುರಪಡುತ್ತಿದ್ದಾರೆಂದೂ ತಿಳಿದುಬರುತ್ತದೆ ಆದ್ದರಿಂದ ಈ ಜನಗಳ ಮಧ್ಯೆ ಇರುವ ಶೇಂದಿ ಅಂಗಡಿಗಳಲ್ಲಿ ಉತ್ಪತ್ತಿ ಆಗದೆ ಇರುವುದನ್ನು ನೋಡಿ ಕಂಟ್ರ್ಯಾಕ್ಟುದಾರರೇ ಮುಂತಾದವರು ಆ ಜನಗಳಿಗೆ ಬಂದು ಕುಡಿಯುವಂತೆ ನಾನಾ ಪ್ರೋತ್ಸಾಹಗಳನ್ನು ಕೊಡುತ್ತಿದ್ದಾರೆಂದು ವರ್ತಮಾನವಿದೆ ಹಾಗೂ ಈ ಗ್ರಾಮಸ್ಥರುಗಳ ಮನೋನಿಶ್ಚಯವನ್ನು ನೋಡಿ ತುಂಬಾ ಸಂತೋಷಪಡುತ್ತೇವೆ ಇನ್ನು ಮುಂದೆ ಅವರೆಲ್ಲಾ ಅಭಿವೃದ್ಧಿಗೆ ಬರಲು ಅನುಮಾನವಿಲ್ಲ ಇತರ ಕಡೆಗಳವರೂ ಇವರ ನಿಲುವನ್ನೂ ಅನುಸರಿಸಿ ಮದ್ಯವೆಂಬ ಗುಪ್ತ ರಾಕ್ಷಸನನ್ನು ತಮ್ಮ ಮನೆಯಿಂದ ಓಡಿಸುವರು ಪರಾಕ್ರಮಿಗಳಾಗಬೇಕೆಂದು ಹಾರೈಸುತ್ತೇವೆ ಇದಲ್ಲದೆ ಸ್ಥಳಾಧಿಕಾರಿಗಳೂ ಪ್ರಜಾವತ್ಸಲರೂ ಮೇಲ್ಕಂಡ ವಿಚಾರವನ್ನು ತನಿಖೆ ಮಾಡಿ ಆ ಜನಗಳನ್ನು ಕರೆದು ಅವರಿಗೆ ಪ್ರೋತ್ಸಾಹಪಡಿಸಿ ಅವರ ಮನೋನಿಶ್ಚಯವು ಸ್ಥಿರವಾಗಿ ನಿಲ್ಲುವಂತೆಯೂ, ಇಂಥಾ ಸತ್ಪ್ರವರ್ತನೆಯು ಇತರ ಕಡೆಗಳಲ್ಲಿಯೂ ಹರಡಿಕೊಳ್ಳುವಂತೆಯೂ ಪ್ರೋತ್ಸಾಹಪಡಿಸಬೇಕೆಂದು ಕೋರುತ್ತೇವೆ

ಡಾಕ್ಟರ್ ಇ. ಎಸ್. ಕೃಷ್ಣಸ್ವಾಮಿ ಅಯ್ಯರವರು

ಸೀಮೆಗೆ ಪ್ರಯಾಣ ಮಾಡಿದರು

ರಾಜಧಾನಿಯಲ್ಲಿ ಬಹು ಕಾಲದಿಂದ ಸಿವಿಲ್ ಸರ್ಜನ್‌ರಾಗಿಯೂ ಚೆಲುವಾಂಬಾ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿಯೂ ಇದ್ದ ಮಿ॥ ಇ. ಎಸ್. ಕೃಷ್ಣಸ್ವಾಮಿ ಅಯ್ಯರವರು ತಮ್ಮ ಕುಮಾರನನ್ನು ಕರೆದುಕೊಂಡು ಲಂಡನ್ ಪಟ್ಟಣಕ್ಕೆ ಹೋಗುವುದಕ್ಕಾಗಿ ಬೊಂಬಾಯಿ ಪಟ್ಟಣವನ್ನು ಕುರಿತು ಹೋದ ಬುಧವಾರ ರಾತ್ರಿ ಇಲ್ಲಿಂದ ಪ್ರಯಾಣ ಮಾಡಿದರು ಕಳೆದ ಶನಿವಾರ ಸಾಯಂಕಾಲ ಇಲ್ಲಿನ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಅವರನ್ನು ಕರೆಸಿಕೊಂಡು ಅವರ ಕೂಡ ಫಲಾಹಾರಾದಿಗಳನ್ನು ಸ್ವೀಕರಿಸಿ ಗೀತ ವಿನೋದ ಬಿ ಕೃಷ್ಣಸ್ವಾಮಿಯವರ ಮನೋಹರವಾದ ಹಾಡುಗಾರಿಕೆಯನ್ನು ಮಾಡಿ, ಸಂತೋಷಪಡಿಸಿದರು ಈ ಕೂಟದಲ್ಲಿ ಬಹು ಮಂದಿ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಹಾಜರಾಗಿದ್ದರು ಕಡೆಯಲ್ಲಿ ಅಡ್ವೊಕೇಟ್ ಮಿ॥ ಎಂ. ಸಿ. ರಂಗಯ್ಯಂಗಾರ್ಯರವರು ಡಾಕ್ಟರ್ ಕೃಷ್ಣಸ್ವಾಮಿ ಅಯ್ಯರವರ ಗುಣಕಥನವನ್ನು ಮಾಡಿ ಅವರ ಅಸಾಧಾರಣವಾದ ವಿದ್ಯಾಚಿಂತನಾ ಗುಣವನ್ನೂ ಕರ್ತವ್ಯತತ್ಪರತೆಯನ್ನೂ ಬುದ್ಧಿಕುಶಲತೆಯನ್ನೂ ಕೊಂಡಾಡಿದರು. ಅವರು ಇನ್ನೂ ಹೇಳಿದ ಅಭಿಪ್ರಾಯಗಳೇನೆಂದರೆ ಮೈಸೂರು ಸರ್ಕಾರದವರು ಸ್ವಾಯತ್ತ ವಿದ್ಯಾವಂತರಿಗೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ಸೀಮೆಗೆ ಕಳುಹಿಸುವುದು ವಾಡಿಕೆಯಾಗಿದೆ ಈಗ ಅದರ ಜೊತೆಗೆ ಸರ್ಕಾರದಾರರಾಗಿರುವ ವೈದ್ಯರನ್ನೂ ಸಹ ಕೊಟ್ಟು ಸೀಮೆಗೆ ಕಳುಹಿಸುವುದನ್ನು, ರೂಢಿಗೆ ತರುತ್ತಿರುವುದಕ್ಕಾಗಿ ಸರ್ಕಾರದವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸತಕ್ಕದ್ದಾಗಿದೆ ವೈದ್ಯಶಾಸ್ತ್ರವು ಪಾಶ್ಚಾತ್ಯ ದೇಶಗಳಲ್ಲಿ ಬಹು ವಿಶೇಷವಾಗಿ ಪ್ರೌಢಸ್ಥಿತಿಗೆ ಬಂದು ನಾನಾ ಹೊಸ ಚಿಕಿತ್ಸೆಗಳು ರೂಢಿಗೆ ಬರುತ್ತಿರುವವು ಅವನ್ನೆಲ್ಲಾ ನೋಡಿ ತಿಳಿದುಕೊಂಡು ಬರುವುದಕ್ಕಾಗಿ ನಮ್ಮ ವೈದ್ಯರು ಆಗಾಗ್ಗೆ ಸೀಮೆಗೆ ಹೋಗುವುದು ಅವಶ್ಯಕವಾಗಿರುತ್ತದೆ ಡಾಕ್ಟರ್ ಕೃಷ್ಣಸ್ವಾಮಿ ಅಯ್ಯರವರು ಅಲ್ಲಿನ ವಿಶೇಷತರವಾದ ಚಿಕಿತ್ಸಾ ವಿಧಾನಗಳನ್ನು ಕಲಿತು ಬರುವ ಸಮರ್ಥರಾಗಿಯೂ ಅನುಭವಶಾಲಿಗಳಾಗಿಯೂ ಇರುತ್ತಾರೆ ಇವರೂ ಇವರ ಕುಮಾರನೂ ಉದ್ದೇಶಪಟ್ಟಿರುವ ಕಾರ್ಯಗಳನ್ನು ಸಾರ್ಥಕವಾಗಿ ನೆರವೇರಿಸಿಕೊಂಡು ಸುರಕ್ಷಿತರಾಗಿ ವಾಪಸು ಬರಲೆಂದು ಎಲ್ಲರೂ ಹಾರೈಸಿದರು ಬುಧವಾರ ರಾತ್ರಿ ಬಹು ಮಂದಿ ದೊಡ್ಡ ಮನುಷ್ಯರು ರೈಲ್ವೆ ಸ್ಟೇಷನ್‌ಗೆ ಹೋಗಿ ಮಿ॥ ಕೃಷ್ಣಸ್ವಾಮಿ ಅಯ್ಯರವರನ್ನು ನಾಗಕಳುಹಿ ಬಂದರು

ಸರ್ಕಾರದವರು ಇವರ ಕೆಲಸಕ್ಕೆ ದರ್ಬಾರ್ ಸರ್ಜನ್‌ರಾದ ಮಿ॥ ಫ್ರಾನ್ಸ್‌ಯವರನ್ನು ಆಸ್ಪತ್ರೆಯ ಡಿಪಾರ್ಟ್‌ಮೆಂಟ್, ಡಿಸ್ಟ್ರಿಕ್ಟ್ ಆಸ್ಪತ್ರೆಗಳ ಮತ್ತು ವೃದ್ಧರ ಮೇಲ್ವಿಚಾರಣೆಗೆ ಸಹ ... ರಾಜಾರಾಮರಾಯರನ್ನೂ ನೇಮಿಸಿರುತ್ತಾರೆ

ಜಪಾನೀಯರೂ ಅವರ ಮನೆಗಳೂ

ಜಪಾನಿನವರು ಬಹು ಪ್ರಾಚೀನದಿಂದ ಸುಲಭ ವಿಧವಾದ ಸಣ್ಣ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಅಲ್ಲಿಯ ಮನೆಗಳು ಬಹು ವಿಚಿತ್ರವಾಗಿರುತ್ತವೆ ಅವು ನಮ್ಮ ದೇಶದ ಮನೆಗಳಂತೆ ಇರುವುದಿಲ್ಲ ಸುತ್ತ ಮರದಿಂದ ಮನೆಗಳು ಬಹಳ ಅಪೂರ್ವ ಮನೆ ಗೋಡೆಗಳನ್ನು ನಮ್ಮ ಗೋಡೆಗಳಂತೆ ಇಟ್ಟಿಗೆ ಗಾರೆ ಕಲ್ಲು ಅಥವಾ ಮಣ್ಣಿನಿಂದ ಮಾಡಿರುವುದಿಲ್ಲ ಜಪಾನ್ ದೇಶದ ಮನೆಗಳ ಗೋಡೆ ಬಾಗಿಲು ಬಾಗಿಲು ಮುಂತಾದ ಸಮಸ್ತವೂ ಮರದ ಪಟ್ಟಿ ಆಗಿರುತ್ತವೆ ಕೆಲಸಕ್ಕೆ ಹಲಗೆ ಅಥವಾ ಹುಲ್ಲಿನ ಚಾವಣಿಯೂ ಇಟ್ಟು ಕೇವಲ ಬಡವರ ಮನೆಗಳು ಬಹು ಎಂಬುಗಳಿಂದ ಕಟ್ಟಲ್ಪಟ್ಟಿರುತ್ತವೆ ಎಲ್ಲಾ ಮನೆಗಳೂ ಪುಟ್ಟವಾಗಿ ಅಂದವಾಗಿರುತ್ತವೆ ಹೊರಗಡೆಗೆಲ್ಲಾ ನೀಲಿ ಬಣ್ಣವನ್ನು ಹಚ್ಚಿರುತ್ತಾರೆ ಮನೆಯ ಸುತ್ತುಮುತ್ತಲೂ ಅಥವಾ ಕಡೆಯ ಪಕ್ಕ ಹಿಂದು ಮುಂದುಗಡೆಗಳಲ್ಲಾದರೂ ಸ್ವಲ್ಪಮಟ್ಟಿಗೆ ಬಯಲು ಇದ್ದೇ ಇರುತ್ತದೆ ಈ ಅಂಗಳ ಅಥವಾ ಹಿತ್ತಿಲಿನಲ್ಲಿ ಸುಗಂಧಮಯವಾಗಿಯೂ ವಿಚಿತ್ರವರ್ಣವಾಗಿಯೂ ಇರುವ ನಾನಾ ವಿಧವಾದ ಪುಷ್ಪಗಳನ್ನು ಬಿಡತಕ್ಕ ಗಿಡಗಳನ್ನೊಳಗೊಂಡ ಉದ್ಯಾನಗಳನ್ನು ಮಾಡಿಕೊಂಡಿರುವರು ಆ ರಾಜ್ಯದಲ್ಲಿ ಎಲ್ಲಿ ನೋಡಿದರೂ ಪುಷ್ಪೋದ್ಯಾನವಿಲ್ಲದ ಮನೆಯೇ ಇಲ್ಲ ಮನೆಯ ಗೋಡೆಗಳಾದ ಹಲಗೆಗಳು ಸದಾ ಇದ್ದಂತೆಯೇ ಇರಬೇಕೆಂಬುದೇನೂ ಇಲ್ಲ ಹಗಲು ಹೊತ್ತಿನಲ್ಲಿ ಆ ಹಲಗೆಗಳನ್ನು ತೆಗೆದು ಅವುಗಳಿಂದಲೇ ಮನೆಯ ಸುತ್ತಲೂ ಚಾವಣಿಯುಳ್ಳ ವರಾಂಡಾ ಯಾಗುವಂತೆ ಮಾಡಿಕೊಳ್ಳುವುದೂ ಉಂಟು ಯಾಕೆಂದರೆ ತಮ್ಮ ಮನೆಯ ಒಳಗಡೆ ಇರುವುದನ್ನೂ ನಡೆಯುವುದನ್ನೂ ಬೀದಿಯವರೆಲ್ಲರೂ ನೋಡಿ ಸಂತೋಷಪಡಲಿ ಎಂದು ಜಪಾನರಿಗೆ ಬಹಳ ಆಸೆ ಒಂದು ಮನೆಯಲ್ಲಿ ಒಬ್ಬ ಗೃಹಿಣಿಯು ಕೋಮಲ ಕೇಶಪಾಶವನ್ನು ಸರಿಮಾಡಿಕೊಂಡು ಕುಂಕುಮಾದಿವರ್ಣಗಳಿಂದ ತನ್ನ ಮುಖಮಂಡಲಕ್ಕೆ ಕಾಂತಿಯನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನೂ, ಮತ್ತೊಂದು ಮನೆಯಲ್ಲಿ ಕುಟುಂಬದವರು ಕುಳಿತು ಸುಖಭೋಜನ ಮಾಡುತ್ತಿರುವುದನ್ನೂ ಬೀದಿಯಲ್ಲಿ ಹೋಗತಕ್ಕವರು ನೋಡಬಹುದು ಮನೆಯ ಒಳಭಾಗವು ನಮ್ಮಲ್ಲಿರುವಂತೆ ಕೊಠಡಿ, ನಡುವೆ, ತೊಟ್ಟಿ ಹಜಾರ, ಇತ್ಯಾದಿ ಹಲವು ಬಗೆಯ ವಿಭಾಗಗಳನ್ನೊಳಗೊಂಡಿರುವುದಿಲ್ಲ ಪ್ರತಿಯೊಂದು ಮನೆಯ ಒಳಗೂ ಸಾಮಾನ್ಯವಾಗಿ ಒಂದೇ ಹಾಲ್ ಆಗಿರುವುದು ರಾತ್ರಿ ಮುಂತಾದ ಅವಶ್ಯಕವಾದ ವೇಳೆಗಳಲ್ಲಿ ನಡುವೆ ಕಾಗದದ ರಟ್ಟುಗಳನ್ನು ಗೋಡೆಗಳಂತೆ ಸೇರಿಸಿ, ಬೇಕಾದಷ್ಟು ಕೊಠಡಿಗಳನ್ನಾಗಿ ಮಾಡಿಕೊಳ್ಳುತ್ತಾರೆ ಮನೆಗಳ ಕಿಟಕಿಗಳು ಮರದ ಅಥವಾ ಬಿದಿರಿನ ಚೌಕಟ್ಟುಳ್ಳವಾಗಿರುತ್ತವೆ ಮತ್ತು ಈ ಕಿಟಕಿಗಳಲ್ಲಿ ಸಂದುಗಳಿರುವುದಿಲ್ಲ ಅಂದರೆ ಕಬ್ಬಿಣದ ಸಲಾಕಿ ಮುಂತಾದುವನ್ನು ಹಾಕದ ಆ ಸ್ಥಳಕ್ಕೆ ಎಣ್ಣೆಯ ಕಾಗದವನ್ನು ಅಂಟಿಸುತ್ತಾರೆ ಆ ಮೂಲಕ ಬೆಳಕು ಧಾರಾಳವಾಗಿ ಬರುತ್ತದೆ ಈ ಮನೆಗಳು ಬಹಳ ಮಟ್ಟಿಗೆ ಎರಡಂತಸ್ತಿನವು ಯಥೇಚ್ಛವಾದ ಗಾಳಿ ಬೆಳಕುಗಳುಳ್ಳವಾಗಿಯೂ ಇರುತ್ತವೆ ಶ್ರೀಮಂತರ ಮನೆಗಳ ಒಳಮಾಳಿಗೆಗೆ ಚಿನ್ನ ಬೆಳ್ಳಿಯ ವರ್ಣಗಳಿಂದ ಅಲಂಕಾರ ಮಾಡಿರುವುದೂ ಉಂಟು ಎಲ್ಲರ ಮನೆಯ ನೆಲಕ್ಕೂ ಮರದ ಹಲಗೆಗಳನ್ನು ಹಾಸಿರುತ್ತಾರೆ ಚೀನಿಯ ಮಾದರಿಯನ್ನು ತಪ್ಪಿಸಿಕೊಳ್ಳುವುದೇ ಇದರ ಉದ್ದೇಶ ಮನೆಯವರು ಎಷ್ಟು ದೊಡ್ಡ ಮನುಷ್ಯರಾದರೂ ಕುರ್ಚಿ ಮೇಜು, ಮಂಚ, ಸೋಫಾ ಮುಂತಾದ ಯಾವ ದೊಡ್ಡ ಪದಾರ್ಥವೂ ಇರುವುದಿಲ್ಲ ನೆಲದ ಮೇಲೆ ಮೃದುವಾದ (ಚಾಪೆ) ಗಳನ್ನು ಹಾಸಿ ಬಹು ನಿರ್ಮಲವಾಗಿಟ್ಟುಕೊಂಡಿರುತ್ತಾರೆ ಈ ಚಾಪೆಗಳನ್ನು ಮೃದುವಾದ ಒಂದು ಬಗೆಯ ಹುಲ್ಲಿನಿಂದ ನೆಯ್ದು, ರೇಷ್ಮೆಯ ಅಂಚುಕಟ್ಟಿ, ನಯನ ಚಿತ್ತಾಕರ್ಷಣೀಯವಾಗುವಂತೆ ಬಹು ನಾಜೂಕಿನ ಸೊಗಸಾಗಿ ಮಾಡಿರುವರು ಎಲ್ಲರೂ ಮನೆಯ ಒಳಗಡೆ ಮಧ್ಯಭಾಗದಲ್ಲಿ ಸುಂದರವಾದ ಒಂದು ಪಾತ್ರೆಯಲ್ಲಿ ನೀರು ತುಂಬಿ, ಅದರಲ್ಲಿ ನಾನಾ ಬಗೆಯ ಉತ್ತಮವಾದ ಕುಸುಮಗಳನ್ನು ಜೋಡಿಸಿಟ್ಟು ಅದನ್ನು ಮನೆಗೆ ಅಲಂಕಾರಪ್ರಾಯವಾದುದು ಬಾವಿಸುತ್ತಾರೆ ಹೀಗೆ ಪುಷ್ಪಗಳನ್ನು ಮನೋಹರವಾಗುವಂತೆ ಸೇರಿಸುವುದರಲ್ಲಿ ಬಹಳ ಚಮತ್ಕಾರವುಂಟು ಈ ವಿಷಯವಾಗಿ ಅನೇಕ ಗ್ರಂಥಗಳು ಕೂಡ ಹುಟ್ಟಿವೆ ಆದಿಯಿಂದಲೂ ಹೆಣ್ಣು ಮಕ್ಕಳನ್ನು ಈ ಕೆಲಸದಲ್ಲಿ ತರಬೇತು ಮಾಡುತ್ತಾರೆ ಮನೆಯಲ್ಲಿ ಮುಖ್ಯವಾದ ಪ್ರದೇಶದ ಒಂದು ಗೋಡೆಯ ಗೂಡಿನಲ್ಲಿ ತಮ್ಮ ಚಕ್ರವರ್ತಿಯಾದ ಮಿಕಾಡೋಯವರ ಚಿತ್ರಪಟ, ಸ್ವರ್ಗಸ್ಥರಾದ ಪಿತೃಪುರುಷರ ಹೆಸರನ್ನು ಬರೆದಿರುವ ಕಾಗದಗಳು, ಮತ್ತು ದೇವರ ಕೆಲವು ವಿಗ್ರಹಗಳು ಇವನ್ನಿಟ್ಟುಕೊಂಡು ನಿತ್ಯವೂ ಪೂಜಿಸುವರು ಈ ಗೂಡಿಗೆ ದೇವರ ಕೋಣೆಯೆಂದು ಹೆಸರು ಮನೆಯ ಒಳಗೋಡೆಗಳಿಗೂ ಒಳಮಾಳಿಗೆಗೂ ಕಾಗದವನ್ನಂಟಿಸಿ, ಅದರ ಮೇಲೆ ನಾನಾ ವಿಧವಾದ ಲತೆಗಳನ್ನೂ ಪುಷ್ಪಗಳನ್ನೂ ಪಕ್ಷಿಗಳನ್ನೂ ಚಿತ್ರಿಸಿರುವರು ಇವನ್ನು ವಾರಕ್ಕೊಂದು ಸಲ ತೆಗೆದುಹಾಕಿ ಹೊಸ ಕಾಗದವನ್ನು ಹಚ್ಚಿಸಿ ಅದರ ಮೇಲೆ ಹೊಸ ತರದ ಮತ್ತೊಂದು ಚಿತ್ರವನ್ನು ಬರೆಯುವರು ಬೀದಿಗೆ ಸಲ್ಲ ಮರೆಮಾಡಿಕೊಳ್ಳಬೇಕೆಂದು ಮನೆಯವರಿಗೆ ತೋರಿದರೆ ಒಂದು ತೆರೆಯನ್ನು ಇಳಿಯಬಿಡುವರು ಅದು ರೇಷ್ಮೆಯಿಂದ ಮಾಡಲ್ಪಟ್ಟು ನಾನಾ ಬಗೆಯ ಬಣ್ಣಗಳಿಂದ ಸುಂದರವಾಗಿ ಚಿತ್ರಿಸಲ್ಪಟ್ಟಿರುತ್ತದೆ ಅದರ ಮೇಲೆ ಮನೆಯ ಯಜಮಾನರ ಹೆಸರನ್ನು ಬಣ್ಣದಿಂದ ಬರೆದಿರುವರು ಚಳಿಗಾಲದಲ್ಲಿ ಮನೆಗೆ ಬೇಕಾದಷ್ಟು ಕಾವನ್ನುಂಟು ಮಾಡಿಕೊಳ್ಳುವುದಕ್ಕೋಸ್ಕರ ಒಳಗಡೆ ಒಡ್ಡಾಣಿಯ ತರದನ್ನು ಸೇರಿಸಿ ಮಾಡಿರುವ ಮರದ ಪೆಟ್ಟಿಗೆಗಳಲ್ಲಿ ಇದ್ದಲನ್ನು ಹಾಕಿ ಬೆಂಕಿಯನ್ನು ಮಾಡಿ ಉಪಯೋಗಿಸಿಕೊಳ್ಳುತ್ತಾರೆ ಚಾಡಿಮಣ್ಣಿನಿಂದ ಮಾಡಿದ ಕಿಷ್ಟ ಒಲೆಗಳ ಮೇಲೆ ಅಡಿಗೆ ಮಾಡಿಕೊಳ್ಳುತ್ತಾರೆ ಕೇವಲ ಬಡವರಾಗಿ ಹಳ್ಳಿಗಳಲ್ಲಿರತಕ್ಕವರು ಹುಲ್ಲು ಗುಡಿಸಲುಗಳಲ್ಲಿ ವಾಸಮಾಡುತ್ತಾರೆ

ವ್ಯವಸಾಯ ವಿಚಾರಗಳು

(೧) ಬೆಂಗಳೂರು ಲಾಲ್‌ಬಾಗ್ ಬಿತ್ತನೆ ಕೋಠಿಯು

For further particulars and prospectuses please apply with **one anna stamp** and your previous experience in the line to —

M. L. NAGANNAH,
Chief Agent,
The Amritsar National Insurance Buildings, Mysore.

ಕಾವೇರಿ ಪ್ರವಾಹದ ರಿಲೀಫ್ ಫಂಡು

ಎಪ್ಪತ್ತೊಂಭತ್ತನೆಯ ಚಂದಾ ಪಟ್ಟಿ

ಕಾವೇರಿ ಮತ್ತು ಕಪಿನೀ ಹೊಳೆಗಳ ಪ್ರವಾಹದಿಂದ ಮಳವಳ್ಳಿ ಮತ್ತು ತಿರುಮಕೂಡ್ಲು ನರಸೀಪುರ ತಾಲ್ಲೂಕುಗಳಲ್ಲಿ ಮನೆಮಠಾದಿಗಳನ್ನು ಕಳೆದುಕೊಂಡು ಸಂಕಟಪಡುತ್ತಿರುವ ಬಡಬಗ್ಗರಿಗೆ ಸಹಾಯವಾಗಲು ಏರ್ಪಾಡಾಗಿರುವ ಪರ್ಮನೆಂಟ್ ಫಂಡಿಗೆ ಚಂದಾ ಕೊಟ್ಟಿರುವವರ ಲೀಸ್ಟು —

ಮಾಲೂರು ಸಬ್ ರಿಜಿಸ್ಟ್ರಾರ್ ಎಂ ಎ ನಂಜುಂಡಯ್ಯನವರ ಮೂಲಕ— ಅಬ್ದುಲ್ ರಹೀಂ ... ರೂ 1 ಚಿಲ್ಲರೆ ವಸೂಲಾದದ್ದು ರೂ 31 3 0 ... ರೂ 0 7 6, ಒಟ್ಟು ರೂ ... 0
ಏವಡೆಗ್ಗ್ ... ಪೋಲೀಸ್ ಸೂಪರಿಂಟೆಂಡೆಂಟರ ಮೂಲಕ—ಶಿಕಾರಿಪುರ ತಾ ಇನ್ಸ್‌ಪೆಕ್ಟರ್ ಟಿ ಎಸ್ ನಾಗೇಶರಾಯರು ರೂ ೨, ಚನ್ನಗಿರಿ ತಾ ಇನ್ಸ್‌ಪೆಕ್ಟರ್ ತಿರುಮಲರಾಯರು ಮತ್ತು ಹೊನ್ನಾಳಿ ತಾ, ಇನ್ಸ್‌ಪೆಕ್ಟರ್ ಟಿ ... ತಲಾ ರೂ 1, ಕುಂಸಿ ಸಬ್ ಇನ್ಸ್‌ಪೆಕ್ಟರ್ ರಾಜಶೇಖರಯ್ಯನವರು 0-8-0 ಜುಮ್ಲಾ ,, 7-8 0
ಚಳ್ಳಕೆರೆ ತಾಲ್ಲೂಕು ಅಮಲ್ದಾರ್ರ ಮೂಲಕ ತೂಪರವಳ್ಳಿ ಗ್ರಾಮದ ಲಿಂಗ ಬಿನ್ ಕೆಂಚಪ್ಪನವರು ರೂ 1 2 0, ದೊಡ್ಡಲಿಂಗಾಚಿತ್ರ ರೂ 1 0 3 ಕರಿಲಿಂಗಪ್ಪ ಬಿನ್ ಚಿತ್ರಯ್ಯ ರೂ 1, ಭೀಮಣ್ಣ ಬಿನ್ ಲಿಂಗಣ್ಣ ರೂ 1 1 0 ಚಿಲ್ಲರೆ ವಸೂಲಾದದ್ದು ರೂ 7 3-6 ಜುಮ್ಲಾ , 11-4-6
ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ರ ಮೂಲಕ ಕೊಳ್ಳೆಗೌಡನ ಹಳ್ಳಿ ... ರೂ ... 12 0 ಕಟುಮನಹಳ್ಳಿ ... ರೂ 4-4 0, ... ಹಳ್ಳಿ ... ರೂ 1 8 0, ... ಜವರೇಗೌಡ ವಗೈರೆ ರೂ 3, ಮಂಚೇಗೌಡನ ಹಳ್ಳಿ ... ರೂ 1, ಬೂದನೂರು ... ಚನ್ನಪ್ಪಗೌಡ ವಗೈರೆ ರೂ 2 12 0, ... ವೀರೇಗೌಡ ವಗೈರೆ ರೂ 2 8 0 ಕೆಂಚನಾಯಕನ ಹಳ್ಳಿ ... ಚನ್ನ ಮಲ್ಲೇಗೌಡ ವಗೈರೆ ರೂ 2 8 0, ಅಂತರಸಂತೆ ಶೇಕದಾರ್ ... ಯವರು, ಗುಜ್ಜಪ್ಪನ ... ಹೊಲೆಯರು, ... ಶೇಕದಾರ್ ಸೈಯದ್ ... ಸಾಹೇಬರು, ... ದಾರ್ ಪರಮಾರವರು ತಲಾ ರೂ 2 ಅಂತರಸಂತೆ ... ನಂಜುಂಡಯ್ಯ ... ಸೈಯದ್ ... ಸಾಹೇಬ್, ... ಸಾಹೇಬ್ ... ತಮ್ಮ ... ಹೊಸಹಳ್ಳಿ ... ಗೌಡ, ಹೈರಿಗೆ ... ಬಲಗೈ ... ದೊಡ್ಡ ... ಮಾಡಿ ನಾರಗೌಡ ... ಗೌಡ ... ಲಿಂಗೇಗೌಡ ... ಗೌಡ ... ಗೌಡ ಚಿಕ್ಕ ಹಳ್ಳಿ ... ಗೌಡ, ಹೊಸೂರು ಚಿಕ್ಕ ... ಗೌಡ, ನಾಗನಾಯ್ಕ ಬಸವೇಗೌಡ, ಅಂತರಸಂತೆ ಕಾಳೇಗೌಡ—ತಲಾ ರೂ 1, ಮಾದಾಪುರ ಹೊಸ ಹಳ್ಳಿ ದೊಡ್ಡ ಕೆಂಚೇಗೌಡ ವಗೈರೆ ರೂ 1-8-0, ಚಿಲ್ಲರೆ ವಸೂಲಾದದ್ದು ರೂ 1 1-0, ಜುಮ್ಲಾ ,, 40-0 0

ಮೊದಲು ಜಮಾ ಬಂದಿರುವ ಮೊಬಲಗು ರೂ 16,029 15-11
ಜುಮ್ಲಾ ರೂಪಾಯಿ 16,158-12-5

ತಾ 7-10-1912, ಎಂ ಜಿ ಕೃಷ್ಣಸ್ವಾಮಿರಾವ್,
ಮೈಸೂರು ಫಂಡಿನ ಸೆಕ್ರೆಟರಿ ಮತ್ತು ಟ್ರೆಜರರ್.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೨ನೇ ಇಸವಿ ಅಕ್ಟೋಬರ್ ತಾ. ೧೦ ನೇ ಗುರುವಾರ.

ಬಾಲ್ಕನ್ ಸಂಸ್ಥಾನಗಳೂ ಟರ್ಕಿ ರಾಜ್ಯವೂ.

ಯೂರೋಪಿನಿಂದ ಬಂದಿರುವ ತಂತೀವರ್ತಮಾನಗಳನ್ನು ನೋಡಲಾಗಿ ಬಾಲ್ಕನ್ ಸಂಸ್ಥಾನಗಳೆಂದು ಹೆಸರು ಪಡೆದಿರುವ ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ ಸೀಮೆಗಳವರು ಗ್ರೀಸ್ ರಾಜ್ಯದವರ ಕೂಡ ಸೇರಿಕೊಂಡು ಟರ್ಕಿಯವರಿಗೆ ಎದುರು ಶಕ್ತಿಗಳಾಗಿ ನಿಂತಿದಾರೆಂದೂ, ಯುದ್ಧಪ್ರಸಂಗವು ಬಹಳ ಸಮೀಪವಾಗಿದೆ ಎಂದೂ ಗೊತ್ತಾಗುತ್ತದೆ. ಎರಡು ಪಕ್ಷಗಳಲ್ಲೂ ಯುದ್ಧಕ್ಕೋಸ್ಕರ ಸೈನ್ಯಾದಿಗಳನ್ನು ಕೂಡಿಸಿ ಎಲ್ಲೆಕಟ್ಟುಗಳಿಗೆ ವೇಗವೇಗನೆ ಕಳುಹಿಸುತ್ತಿರುವರು. ಮ್ಯಾಸಿಡೋನಿಯಾ ಸೀಮೆಯೇ ಈ ಕಲಹಕ್ಕೆ ಮೂಲಸ್ಥಾನವು. ಮ್ಯಾಸಿಡೋನಿಯಾದಲ್ಲಿ ಅನೇಕ ಪ್ರಜೆಗಳು ಬಲ್ಗರರು, ಕೆಲವರು ಗ್ರೀಕರು. ಮ್ಯಾಸಿಡೋನಿಯದಲ್ಲಿ ಟರ್ಕಿಯವರ ಆಳ್ವಿಕೆಯ ಕ್ರಮಗಳು ಬಹಳ ವರುಷಗಳಿಂದ ಅಸಮಾಧಾನಕರವಾಗಿವೆ. ಅದನ್ನು ಸರಿಪಡಿಸುವುದಕ್ಕೆ ಯೂರೋಪ್ ಖಂಡದ ಇತರ ರಾಜ್ಯಗಳವರು ಆಗಾಗ್ಗೆ ಪ್ರಯತ್ನಪಟ್ಟು ಅವಶ್ಯವಾದ ಬದಲಾವಣೆಗಳನ್ನು ಸೂಚಿಸುತ್ತಾ ಬಂದಿರುವರು. ಈ ಪ್ರಯತ್ನಗಳು ಹಿಂದೆ ಸುಲ್ತಾನರ ದವಲತ್ತಿನಲ್ಲಿ ವ್ಯರ್ಥವಾಗಿ ಪರಿಣಮಿಸಿದವು. ಸುಲ್ತಾನರು ಭರವಸೆ ಹೇಳುತ್ತಾ ಬಂದರಲ್ಲದೆ ಅವರ ಕಾಲದಲ್ಲಿ ಸರಿಯಾದ ಯಾವುದೊಂದು ಬದಲಾವಣೆಯೂ ನಡೆಯದೆ ಹೋಯಿತು. ಈಚೆಗೆ ಟರ್ಕಿಯಲ್ಲಿ ದವಲತ್ತು ಬದಲಾವಣೆಯಾಗಿ, ದೇಶೋನ್ನತಿಗೆಂದು ಏರ್ಪಟ್ಟ ನೂತನ ಸಂಘದ ಟರ್ಕಿಯವರು ಹೊಸ ಸುಲ್ತಾನರನ್ನು ನೇಮಕ ಮಾಡಿದರು. ಇವರ ಕಾಲದಲ್ಲೂ ಕೂಡ ಮೇಲ್ಕಂಡ ಯಾವ ಬದಲಾವಣೆಗಳೂ ಸಾರ್ಥಕವಾಗಿ ರೂಢಿಸಲ್ಪಡಲಿಲ್ಲ. ಹೊಸ ರಾಜಭಾರದಲ್ಲಿ ಮೊದಲು ಎಲ್ಲಾ ತೃಪ್ತಿಕರವಾಗಿದ್ದಂತೆ ಕಂಡುಬಂದಿತು, ಮ್ಯಾಸಿಡೋನಿಯಾದಲ್ಲಿಯೂ ಸಕಲ ಕೋಮುಗಳ ಪ್ರಜೆಗಳೂ ಸನ್ನದ್ಧರಾಗಿದ್ದರು. ಆದರೆ ನೂತನ ಸಂಘದ ಕಟ್ಟುಬಿಟ್ಟವರ ಕಾರುಬಾರುಗಳು ಹಿಂದೆ ಸುಲ್ತಾನರ ದವಲತ್ತಿನಂತೆಯೇ ಅನ್ಯಾಯಯುಕ್ತವಾಯಿತು, ಅನೇಕ ಕೊಲೆಗಳೂ ಕ್ರೂರಕೃತ್ಯಗಳೂ ನಡೆದಾಗ್ಯೂ ಅವುಗಳನ್ನು ತಪ್ಪಿಸಿ ಅಡಗಿಸುವುದಕ್ಕೆ ಪ್ರತಿಯಾಗಿ ಅವು ಪ್ರಪಂಚಕ್ಕೆ ಗೋಚರವಾಗದಂತೆ ಮುಚ್ಚುಮರೆ ಮಾಡುತ್ತಾ ಬಂದರು.

ಈಚೀಚೆಗೆ ನಡೆಯುತ್ತಾ ಬಂದಿರುವ ಕಾರ್ಯಗಳು ಮ್ಯಾಸಿಡೋನಿಯಾದಲ್ಲಿ ವಿಶೇಷವಾದ ಅಸಮಾಧಾನವನ್ನೂ ಉಗ್ರಪವನ್ನೂ ಉಂಟುಮಾಡಿರುತ್ತವೆ. ಅವಶ್ಯವಾದ ಬದಲಾವಣೆಗಳು ನಡೆಯುವಂತೆ ಮಾಡಿಕೊಳ್ಳಬೇಕೆಂದು ಈಗ ಬಾಲ್ಕನ್ ಸಂಸ್ಥಾನಗಳವರು ಹಟಹಿಡಿದು ನಿಂತಿದಾರೆ. ರಷ್ಯಾ, ಆಸ್ಟ್ರಿಯ, ಫ್ರಾನ್ಸ್ ಮತ್ತು ಇಂಗ್ಲೆಂಡ್ ರಾಜ್ಯಗಳವರು ಯುದ್ಧಸಂಭವವಾಗದಂತೆ ಮಾಡಬೇಕೆಂದು ಸಾಹಸಪಡುತ್ತಿರುವರು. ಇವರ ಪ್ರಯತ್ನವು ಸಫಲವಾಗಿ, ಸೇರಿದ್ದ ಸೈನ್ಯಗಳು ತೊಲೆಯಲ್ಪಟ್ಟು, ನಮ್ಮ ಬಳಿ ಸಮಾಧಾನಗಳು ನಡೆಗೊಳ್ಳುವಂತಾಗಲೆಂದು ಹಾರೈಸುತ್ತೇವೆ. ಹಾಗೂ ಆ ಪ್ರಾಂತದಲ್ಲಿ ನೆಮ್ಮದಿಯೂ ಸಮಾಧಾನವೂ ನೆಲೆಗೊಳ್ಳಬೇಕಾದರೆ ಮ್ಯಾಸಿಡೋನಿಯದ ಆಳ್ವಿಕೆಯ ಕ್ರಮಗಳು ವಿಶೇಷವಾಗಿ ಬದಲಾವಣೆಯಾಗಿಯೇ ತೀರಬೇಕೆನ್ನುವುದು ನಿಂತಿತ.

ಜನರಲ್ ನೋಗಿಯವರು ಆತ್ಮಹತ್ಯ ಮಾಡಿಕೊಂಡುದು.

ಕಾಲಾಧೀನರಾದ ಜಪಾನ್ ಚಕ್ರವರ್ತಿಯವರ ಕಳೇಬರವು ಅರಮನೆಯಿಂದ ರುದ್ರಭೂಮಿಗೆ ಹೊರಡುವ ಮೆರವಣಿಗೆಯನ್ನು ಪ್ರಕಟಮಾಡುವ ತೋಪುಗಳು ಹಾರಿಸಲ್ಪಡುತ್ತಿರುವಲ್ಲಿಯೇ ಜನರಲ್ ನೋಗಿಯವರೂ ಅವರ ಪತ್ನಿಯವರೂ ಆತ್ಮಹತ್ಯಮಾಡಿಕೊಂಡರು. ಇವರ ಮರಣವಾರ್ತೆಯು ಲೋಕದ ಚತುರ್ದಿಕ್ಕುಗಳಿಗೂ ವ್ಯಾಪಿಸಿರುತ್ತದೆ. ಜನರಲ್ ನೋಗಿಯವರು 1849 ರಲ್ಲಿ ಜನಿಸಿದರು. 1904 ರಲ್ಲಿ ಜಪಾನ್‌ರವರಿಗೂ ರಷ್ಯಾದವರಿಗೂ ನಡೆದ ಯುದ್ಧದಲ್ಲಿ ಜಪಾನಿನ ಕಡೆ ಇದ್ದ ಜನರಲ್‌ಗಳ ಪೈಕಿ ಇವರು ಒಬ್ಬರಾಗಿದ್ದರು. ಇವರು ಪೋರ್ಟ್ ಆರ್ಥರ್ ಕೋಟೆಯನ್ನು ಒಂದೇ ದಿನದಲ್ಲಿ ಕೈವಶಮಾಡಿಕೊಂಡರು. ತರುವಾಯ ಈ ಕೋಟೆಯನ್ನು ಜಪಾನಿನವರು ರಷ್ಯದವರಿಗೆ ಕೊಟ್ಟುಬಿಟ್ಟರು. ಜಪಾನಿನವರಿಗೂ ರಷ್ಯದವರಿಗೂ ಯುದ್ಧಪ್ರಾರಂಭವಾದಾಗ ರಷ್ಯದವರ ವಶದಲ್ಲಿದ್ದ ಪೋರ್ಟ್ ಆರ್ಥರನ್ನು ಅವರಿಂದ ತೆಗೆದುಕೊಳ್ಳುವ ಮಹಾ ಪ್ರಯಾಸವಾದ ಕೆಲಸವು ಜನರಲ್ ನೋಗಿಯವರಿಗೆ ವಹಿಸಲ್ಪಟ್ಟಿತು. ರಷ್ಯದವರು ಅದರಲ್ಲಿ ದೊಡ್ಡ ಸೈನ್ಯವನ್ನು ಆ ಕೋಟೆಯನ್ನು ಬಲಪಡಿಸಿದ್ದುದರಿಂದ ಅದನ್ನು ಜಯಿಸುವುದು ಸುಲಭಸಾಧ್ಯವಾಗಿರಲಿಲ್ಲ. ಆದರೂ ಜನರಲ್ ನೋಗಿಯವರ ಯುಕ್ತಿಚಮತ್ಕಾರಗಳಿಂದಲೂ ಜಪಾನರ ಧೀರತನದಿಂದಲೂ ಅನೇಕ ತಿಂಗಳುಗಳ ತರುವಾಯ ಅಗಮ್ಯವಾದ ಪೋರ್ಟ್ ಆರ್ಥರ್ ಕೋಟೆಯು ಎರಡನೆಯ ಸಾರಿ ನೋಗಿಯವರ ಕೈವಶವಾಯಿತು.

ಜನರಲ್ ನೋಗಿಯವರು ಧೀರನಾದ ಶಿಪಾಯಿಯಾಗಿದ್ದುದು ಮಾತ್ರವಲ್ಲದೆ, ಉತ್ತಮವಾದ ಗುಣನಡತೆಗಳುಳ್ಳವರಾಗಿದ್ದರು. ಅವರು ಇಷ್ಟು ದೊಡ್ಡವರಾಗಿದ್ದರೂ ಸಾಧಾರಣ ಜನರಂತೆ ಜೀವಿಸುತ್ತಾ ಇದ್ದರು. ಕತ್ತಿವರಸೆಯೂ ಮಕ್ಕಳೊಂದಿಗೆ ಮಾತನಾಡುವುದೂ ಅವರಿಗೆ ಪ್ರಿಯವಾಗಿದ್ದುವು. ಸಮಾಧಾನದ ಕಾಲದಲ್ಲಿ ಯಾವ ಶಿಪಾಯಿಯು ತನ್ನ ಕರ್ತವ್ಯವನ್ನು ತಪ್ಪದೆ ನೆರವೇರಿಸುತ್ತಾನೋ ಅವನೇ ಯುದ್ಧಕಾಲದಲ್ಲಿ ಪ್ರಸಿದ್ಧಿಯನ್ನು ಪಡೆಯುವನು; ಶಿಪಾಯಿಗೆ ಅಲಕ್ಷ್ಯಭಾವವು ಇರಲೇಬಾರದು; ಜಪಾನರ ಧ್ವಜಪಟದ ಕೆಳಗೆ ಯುದ್ಧಮಾಡಿ, ಜಯಪ್ರದವನ್ನು ಪಡೆಯಬೇಕೆಂದಿರುವವನು ಜಿತೇಂದ್ರಿಯನಾಗಿರಬೇಕೆಂದು ಹೇಳುತ್ತಿದ್ದರು.

ರಷ್ಯದವರೊಂದಿಗೆ ನಡೆದ ಯುದ್ಧದಲ್ಲಿ ಇವರೂ ಇವರ ಇಬ್ಬರು ಕುಮಾರರೂ ಪ್ರಖ್ಯಾತಿಯನ್ನು ಪಡೆಯಬೇಕೆಂದಿದ್ದರು. ಇವರ ಇಬ್ಬರು ಕುಮಾರರು ಯುದ್ಧದಲ್ಲಿ ಮಡಿದುಹೋದುದರಿಂದ ಇವರ ಕುಟುಂಬದಲ್ಲಿ ಇವರೂ ಇವರ ಪತ್ನಿಯವರೂ ಮಾತ್ರ ಉಳಿದರು. ಆದುದರಿಂದ ಇವರು ಜೀವದ ಮೇಲಣ ಆಶೆಯನ್ನು ತೊರೆದು ಆದಷ್ಟು ಬೇಗ ತಾವೂ ತಮ್ಮ ಚಕ್ರವರ್ತಿಯ ಜೊತೆಗ ಹೋಗಬೇಕೆಂದು ಉದ್ದೇಶಪಟ್ಟರು.

ಚಕ್ರವರ್ತಿಯವರ ಉತ್ತರಕ್ರಿಯೆಯು ನಡೆದ ಆ ದಿನದಲ್ಲಿ ಈ ದಂಪತಿಗಳಿಬ್ಬರೂ ಯಾರೂ ಗದ್ದಲ ಮಾಡಬಾರದೆಂದು ಸೇವಕರಿಗೆ ಅಪ್ಪಣೆ ಕೊಟ್ಟು ಒಂದು ಕೊಠಡಿಯೊಳಗೆ ಹೋಗಿ ಬಾಗಲು ಮುಚ್ಚಿಕೊಂಡರು. ಆ ಕೊಠಡಿಯಲ್ಲಿ ಸತ್ತುಹೋಗಿದ್ದ ತಮ್ಮ ಇಬ್ಬರು ಕುಮಾರರ ಪಟಗಳೂ ಹಳೆಯ ಮತ್ತು ಹೊಸ ಚಕ್ರವರ್ತಿಗಳ ಪಟಗಳೂ ಗೋಡೆಗೆ ತಗಲಿಹಾಕಿದ್ದುವು. ಅರಮನೆಯಿಂದ ಚಕ್ರವರ್ತಿಯವರ ಕಳೇಬರವು ಮೆರವಣಿಗೆಯಾಗಿ ಹೊರಟುದನ್ನು ಪ್ರಕಟಮಾಡುವ ತೋಪುಗಳು ಕೇಳಿಸಿದ ಸ್ವಲ್ಪ ಹೊತ್ತಿನೊಳಗಾಗಿ ಅವರಿದ್ದ ಕೊಠಡಿಯಲ್ಲಿ ಒಂದು ಅಪರೂಪವಾದ ಶಬ್ದವಾಯಿತು. ಅದನ್ನು ಕೇಳಿದ ಸೇವಕರು ಕೂಡಲೆ ಪೋಲೀಸಿಗೆ ತಿಳಿಸಿ ಅವರು ಬಂದು ಬಾಗಿಲು ತೆರೆಯಬೇಕೆಂದು ಕೇಳಿಕೊಂಡರು. ಅವರು ಬಂದು ನೋಡುವಾಗ್ಗೆ ಜನರಲ್‌ರವರು ಯೂನಿಫಾರಂ ಡ್ರೆಸ್ ಹಾಕಿಕೊಂಡು ಹೊಟ್ಟೆಯಲ್ಲಿಯೂ ಕತ್ತಿನಲ್ಲಿಯೂ ಘಾಯವಾಗಿ ಸತ್ತಿರುವುದನ್ನೂ ಅವರ ಪತ್ನಿಯು ಅವರ ಎದುರಾಗಿ ಕತ್ತಿನಲ್ಲಿ ಚುಚ್ಚಿಕೊಂಡು ಸತ್ತಿರುವುದನ್ನು ಕಂಡರು. ಹೀಗೆ ಆತ್ಮಹತ್ಯ ಮಾಡಿಕೊಳ್ಳುವುದು ಜಪಾನ್ ಯುದ್ಧಭಟರ ವ್ಯವಹಾರವಾಗಿರುತ್ತದೆ.

ಇವರುಗಳು ಆತ್ಮಹತ್ಯ ಮಾಡಿಕೊಂಡುದರಲ್ಲಿ ಶ್ಲಾಘ್ಯವಾದ ಗುಣಗಳು ಪ್ರಕಟವಾಗುತ್ತವೆ. ಅವುಗಳೇನೆಂದರೆ, ದೇಹಕ್ಕೆ ಸಂಪ್ರಾಪ್ತವಾಗುವ ನೋವು, ಮರಣ ಇವುಗಳನ್ನು ಅಲ್ಪವೆಂದೆಣಿಸುವುದೂ ಅಸಾಧಾರಣವಾದ ರಾಜಭಕ್ತಿಯೂ ಇವುಗಳೇ. ಹೀಗಿದ್ದರೂ ಅವರು ಮಾಡಿದುದು ನ್ಯಾಯವೆಂದು ನಾವು ಒಪ್ಪುವುದಿಲ್ಲ. ನವನಾಗರೀಕರಾದ ಜಪಾನರೂ ಇದೇ ಅಭಿಪ್ರಾಯವುಳ್ಳವರಾಗಿ ಅವರ ಧೀರತನಕ್ಕೆ ಮೆಚ್ಚಿಕೊಂಡಾಗ್ಯೂ ಅವರು ಮಾಡಿಕೊಂಡ ಆತ್ಮಹತ್ಯಕಾರ್ಯವು ಇತರರು ಅನುಸರಿಸತಕ್ಕದ್ದಲ್ಲವೆಂದು ಜಪಾನ್ ವರ್ತಮಾನಪತ್ರಿಕಾಕರ್ತರು ತಿಳಿಸುತ್ತಾರೆ.

ಮಾನವರು ಅನುಸರಿಸಬೇಕಾದ ಎರಡು ಸತ್ಯಾಂಶಗಳಿರುತ್ತವೆ. (1) ದೇವರು ರಾಜಾಧಿರಾಜನಾಗಿರುತ್ತಾನೆ ಎಂಬುದು. ಆತನಿಗೆ ವಿಧೇಯರಾಗಿರುವುದು ನಮ್ಮ ಪ್ರಥಮ ಕರ್ತವ್ಯ. "ದೇವರಿಗೆ ಭಯಪಡಿರಿ, ಅರಸನನ್ನು ಸನ್ಮಾನಿಸಿರಿ" ಎಂದು ಕ್ರೈಸ್ತರ ಸತ್ಯವೇದದಲ್ಲಿ ಹೇಳಿರುತ್ತದೆ. ಯಾವ ಮಾನವನು ದೇವರಿಗೆ ಸಲ್ಲಿಸಬೇಕಾದ ಮರ್ಯಾದೆಯನ್ನು ಮನುಷ್ಯನಿಗೆ ಸಲ್ಲಿಸುತ್ತಾನೋ ಅಂಥವನು ತನ್ನ ಮನವು ಕೊರತೆಯುಳ್ಳದ್ದೆಂದು ಬೇಗ ಕಂಡುಕೊಳ್ಳುವನು. ಮನುಷ್ಯನು ಅಂಥವನಲ್ಲಿ ಉತ್ತಮವಾದ ದೇವಾಭಿಮಾನವು ಇರುವುದಿಲ್ಲ. ಮನುಷ್ಯರು ದೇವರಿಗೆ ಸಲ್ಲಿಸಬೇಕಾದ ಮರ್ಯಾದೆಯನ್ನು ಅರಸನಿಗೆ ಸಲ್ಲಿಸಬಾರದು. (2) ದೇವರೇ ನಮ್ಮ ಜೀವಾಧಾರಕನಾಗಿರುತ್ತಾನೆ. ಆದುದರಿಂದ ಯಾವನಾದರೂ ಆತ್ಮಹತ್ಯ ಮಾಡಿಕೊಳ್ಳುವುದಕ್ಕೆ ಹಕ್ಕು ಇರುವುದಿಲ್ಲ. ನಮ್ಮ ಪ್ರಾಣವು ದೇವರ ಸೊತ್ತಾಗಿರುತ್ತದೆ. ಆತನು ನಮ್ಮನ್ನು ಕರೆಯುವಾಗ ನಾವು ಹೋಗಬೇಕೇ ಹೊರತು ಅದಕ್ಕೆ ಮುಂಚೆ ನಮ್ಮ ಪ್ರಾಣವನ್ನು ಕಳೆದುಕೊಳ್ಳಬಾರದು. ಸರ್ವದಾ ಈ ಸೂತ್ರವನ್ನನುಸರಿಸುವುದು ಕ್ಷೇಮಕರವು. ಇದು ಮನುಷ್ಯನ ಘನತೆಯನ್ನೂ ಏಳ್ಗೆಯನ್ನೂ ಕಾಪಾಡುತ್ತದೆ.

ಒಳದೇಶದ ವೃತ್ತಾಂತಗಳು.

ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಮ ಸಿ. ಎಸ್. ಕೃಷ್ಣರಾಯರ ತಂದೆ 87 ವಯಸ್ಸಿನ ಮ ಪಿ. ಸುಬ್ಬಾಚಾರ್ಯರು ಕೆಲಲೂರಿನಲ್ಲಿ ಕಳೆದ ತಾ. 30 ನೇ ಸೋಮವಾರ ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇವೆ.

* * *

ಬೆಂಗಳೂರಿನ ಆಚೆ ವೈಟ್‌ಫೀಲ್ಡ್ (ಕಾಡುಗುಡಿ) ಎಂಬ ಸ್ಥಳದಲ್ಲಿ ಈ ಸೀಮೆಯ ಕ್ರೈಸ್ತ ವಿದ್ಯಾರ್ಥಿಗಳೂ ಯೌವನಸ್ಥರೂ ಸೇರಿ ನಾಳೆಯಿಂದ ಮೂರು ದಿನಗಳ ತನಕ ಪ್ರಿಯಸ್ಕರವಾದ ಕೂಟಗಳನ್ನು ನಡಿಸುತ್ತಾರೆ. ಇದಕ್ಕಾಗಿ ರಾಜಧಾನಿಯಿಂದಲೂ ಹಲವರು ಅಲ್ಲಿಗೆ ಪ್ರಯಾಣಮಾಡಿರುವರು.

* * *

ಸಂಸ್ಥಾನಾಮುಳೆ ಕೈತ ಪ್ರಜೆಗಳು ಕಾಡಿನಿಂದ ಸಾಗಿಸಿಕೊಂಡು ಹೋಗುವಂಥಾ ಒಂದು ಭಂಡಿ ಬೊಂಬಿಗೆ ಇರುವ ಜಂಬಿ ಮರಕ್ಕೆ 1 ರೂಪಾಯನ್ನೂ, ಹೊನ್ನೆ ಮತ್ತು ಶಿವಳಬೋಗಿ ಮರಗಳಿಗೆ 1 ರೂಪಾಯನ್ನೂ ಫಾರೆಸ್ಟಿನವರು ತೆಗೆದುಕೊಂಡು ಅಪ್ಪಣೆ ಕೊಡತಕ್ಕದ್ದೆಂದು ಸರಕಾರದವರು ಹುಕುಂ ಕೊಟ್ಟಿದಾರೆ.

* * *

ಚನ್ನಪಟ್ಟಣದ ತಾಲ್ಲೂಕು ಬೇಸ್ತಾರಿನಲ್ಲಿ ವೈದ್ಯಶಾಲೆಯನ್ನು ಇಡಿಸಿಕೊಡಬೇಕೆಂದು ಪ್ರಜೆಗಳು ಕೇಳಿಕೊಂಡರು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಮೀಟಿಂಗಿನಲ್ಲಿ ಸರ್ಕಾರವು ಮ್ಯುನಿಸಿಪಾಲಿಟಿಯಾಗಿ ರೂಪಿಸದರಿಂದ ಅಲ್ಲಿ ಒಂದು ವೈದ್ಯಶಾಲೆಯನ್ನು ಇಡಬೇಕೆಂದು ತೀರ್ಮಾನ ಮಾಡಿದಾರೆ.

* * *

ಮುಂದೆ ಹೇಳುವ ತಾಲ್ಲೂಕ್ ಶಿರಸ್ತೇದಾರರ ವರ್ಗಾವರ್ಗಿ ಹುಕುಂ ಆಗಿದೆ—ಮ| ಗಳಾದ ವೆಂಕಟಕೃಷ್ಣಯ್ಯನವರು ಸುಂದ್ರದಿಂದ ಶ್ರೀರಂಗಪಟ್ಟಣಕ್ಕೆ, ಸಿ. ವಿ. ರಾಮರಾಯರು ಶ್ರೀರಂಗಪಟ್ಟಣದಿಂದ ಮಂಡ್ಯಕ್ಕೆ, ಎಂ. ರಾಮಚಂದ್ರರಾಯರು ಯಡತೊರೆಯಿಂದ ನಾಗಮಂಗಲಕ್ಕೆ, ಶ್ರೀನಿವಾಸಯ್ಯಂಗಾರ್ಯ ನಾಗಮಂಗಲದಿಂದ ಯಡತೊರೆಗೆ.

* * *

ಬೆಂಗಳೂರು ಚಿಕ್ಕಪೇಟೆಯಲ್ಲಿ 16 ವರುಷದ ಒಬ್ಬ ಹುಡುಗನು ಕೃಷ್ಣಪ್ಪನೆಂಬವರ ಮನೆಗೆ ನುಗ್ಗಿ ಕಳುವುಮಾಡುತ್ತಿದ್ದಾಗ ಪೋಲೀಸಿನವನ ಕಣ್ಣಿಗೆ ಬಿದ್ದನು. ಅವನು ಹೋಗಿ ಹಿಡಿಯುವಷ್ಟರಲ್ಲೇ ಹುಡುಗನು ಗೋಡೆ ಹಾರಿ ಭಾವಿಯೊಳಕ್ಕೆ ಧುಮುಕಿದನು. ಪೋಲೀಸಿನವರು ಬಹಳ ಸಾಹಸಮಾಡಿ ಅವನನ್ನು ಭಾವಿಯಿಂದ ಮೇಲಕ್ಕೆ ಎತ್ತಿದರು.

* * *

ಚಿತ್ರದುರ್ಗದ ರೈಲ್ವೆ ಕಾಮಗಾರಿಗೆ 6 ಲಕ್ಷ ರೂಪಾಯಿ ಬೇಕಾದೀತೆಂದು ಅಂದಾಜು ಆಗಿದೆ. ಆ ಪೈಕಿ ಅರೆವಾಸಿ ಹಣವನ್ನು ಆ ಡಿಸ್ಟ್ರಿಕ್ಟಿನ ಪ್ರಜೆಗಳಿಂದ ಸಾಲವಾಗಿ ಕೂಡಿಸುವುದು ಸಾಧ್ಯವೇ ಎಂಬ ವಿಚಾರವನ್ನು ಡೆಪ್ಯುಟಿ ಕಮಿಷನರವರು ತನಿಖೆ ಮಾಡುತ್ತಲಿದಾರೆ. ಪ್ರಜೆಗಳು ಬೇಗನೆ ಭರವಸೆಕೊಟ್ಟರೆ ಕಾಮಗಾರಿಯು ಈ ವರುಷವೇ ಪ್ರಾರಂಭವಾಗಬಹುದು.

* * *

ಬೆಂಗಳೂರು ಸಿಟಿ ಮಲ್ಲೇಶ್ವರದ ಪ್ರಜೆಗಳು ಕಳೆದ ಭಾನುವಾರ ಒಂದು ಸಂತೋಷಸಭೆಯನ್ನು ನಡಿಸಿ, ಈಗತಾನೇ ಕೆಲಸದಿಂದ ನಿವೃತ್ತರಾದ ಸಬ್ ಅಸಿಸ್ಟಂಟ್ ಸರ್ಜನ್ ಮ ಸಿ. ಬಿ. ನರಸಿಂಗರಾಯರ ಪರೋಪಕಾರ ಕಾರ್ಯವನ್ನೂ ಸದ್ಗುಣಗಳನ್ನೂ ಕೊಂಡಾಡಿ, ಅವರಿಗೆ ಒಂದು ಬೆಳ್ಳಿಯ ತಟ್ಟೆಯನ್ನು ಬಹುಮಾನವಾಗಿ ಒಪ್ಪಿಸಿ, ಅವರಲ್ಲಿ ತಮಗಿದ್ದ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು.

* * *

ಬೆಂಗಳೂರು ಸಿದ್ದಿಕಟ್ಟೆಯಲ್ಲಿ ಮಳೆ ಇಲ್ಲದ ಈ ದಿನಗಳಿಗೆ ಗುರುವಾರ ಪ್ರತಿಗಳನ್ನು ಮ ಗಳಾದ ಸಿಕ್ಕಿಂ ಶೇಷಯ್ಯನವರು, ದೇವರಾಜ ಅರಸಿನವರು, ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರು, ಕೆಂಪಣ್ಣ ನಾಯಕರವರು, ಮತ್ತು ದಿವಾನ್ ಮಾಧವರಾಯರೇ ಮೊದಲಾದ ದೊಡ್ಡ ಮನುಷ್ಯರು ಕೆಲಕೆಲವು ಕಾಲ ಅನ್ನಛತ್ರಗಳನ್ನು ನಡಿಸಿ ಸಂರಕ್ಷಣೆ ಮಾಡುತ್ತಾ ಬಂದಿರುವುದು ಸ್ತೋತ್ರಾರ್ಹವಾಗಿದೆ.

* * *

ಬೆಂಗಳೂರು ಸಿಟಿಯಲ್ಲಿ ಈ ಸಲ ಮ್ಯುನಿಸಿಪಲ್ ಚುನಾವಣೆಯು ರೂಲುಗಳನುಸಾರವಾಗಿ ನಡೆಯಲಿಲ್ಲವಾದುದರಿಂದ ಆಕ್ಷೇಪಣೆಗಳು ಆದವೆಂದೂ, ಇದರಿಂದ ತಾವು ಚುನಾಯಿಸಲ್ಪಡದೆಹೋದವೆಂದೂ, ಈ ಸಲ ನಡೆದ ಚುನಾವಣೆಗಳನ್ನೆಲ್ಲಾ ರದ್ದುಮಾಡಬೇಕೆಂದೂ ಮ| ಗಳಾದ ಲಕ್ಷ್ಮೀನಾರಾಯಣ ಸಿಂಗರವರೂ, ರಾಮಚಂದ್ರಪ್ಪನವರೂ, ಸೂರಪ್ಪನವರೂ ಸಹ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟಿನಲ್ಲಿ ದಾವಾ ತಂದಿದಾರೆ.

* * *

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯ ಪ್ರೈವೇಟ್ ರೈಲು ಬಿಡಲಿಕ್ಕೆಂದು, ಕಂಪೆನಿಯ ಕಾರ್ಯಗಳಿಗೆ ತುಂಬಾ ಸಾಹಸಪಟ್ಟು ಸಹಾಯಮಾಡಿದ ಮ ಎ. ಸುಬ್ಬರಾಯರಿಗೆ ಕಂಪನಿ ಸಾವಿರದ 2,500 ರೂಪಾಯಿ ಇನಾಮು ಕೊಡಬೇಕೆಂದೂ, ಬೆಂಗಳೂರು ದಂಡಿನ ರೈಲ್ವೆ ಸ್ಟೇಷನ್‌ವರೆಗೆ ಹೋಗಿರುವ ರೈಲ್ವೆ ರಸ್ತೆಯ ಪಕ್ಕದಲ್ಲೇ ಲೈಟ್ ರೈಲು ಹಾಕುವುದಕ್ಕೆ ಅವಕಾಶ ಕೊಡಬೇಕೆಂದು ಎಂ. ಎಸ್. ಎಂ. ರೈಲ್ವೆ ಕಂಪನಿಯವರನ್ನು ಕೇಳಿಕೊಳ್ಳಬೇಕೆಂದೂ ತೀರ್ಮಾನ ಮಾಡಿದರು.

* * *

ದಾವಣಗೆರೆಯ ಪ ಪಂಕ್ತಿಗ ರಸ್ತೆ ಹಾಕಿಸುವುದಕ್ಕೆ ಸರಕಾರದವರು 11,500 ರೂಪಾಯಿ ಅಂದಾಜು ಬರೆಯಲು ಸ್ಯಾಂಕ್ಷನ್ ಮಾಡಿದರು. ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡಿನವರು ಬಾಬ್ತಿನಾಗಿ 1,000 ರೂಪಾಯಿ ಮಾತ್ರ ವಿನಿಯೋಗಿಸಬಹುದೆಂದು ಗೊತ್ತುಮಾಡಿದಾರೆ. ಆ ತೋರಿದ ಅಪಕ್ಷೇಪಣೆಯ ಗ್ರಾಮಾದಿಗಳಲ್ಲಿ ಹಳ್ಳಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಭಾವಿಗಳನ್ನು ತೋಡಿಸಬೇಕಾಗಿದೆ ಎಂದೂ, ಇದಕ್ಕೆ ಸರಕಾರದಿಂದಲೇ 20,000 ರೂಪಾಯಿ ಕೊಡಿಸಬೇಕೆಂದೂ ಬೋರ್ಡಿನವರು ಹೇಳಿಕೊಂಡಿದಾರೆ.

* * *

ಬೆಂಗಳೂರು ಸಿಟಿ ಎದ್ದಿ ಕಟ್ಟೆ ಮುಂತಾದ ಭಾಗಗಳಲ್ಲಿ ಮಳೆಯ ನೀರು ಅನಾಹುತದಿಂದ ಕಳೆದ ದಿನಗಳಿಗೆ ಗುರಿಯಾದ ಜನರ ಮನೆಗಳನ್ನೆಲ್ಲಾ ಪರೀಕ್ಷಿಸಿ ಆಗಿದ್ದ ಅಂದಾಜು ಪಂಚೆ 11,100 ರೂಪಾಯಿಗೆ ವಾಲೀಂಟಿಯರುಗಳಿಂದ ಕೂಡಿಕೊಂಡು ಬಿಡೆಮಾಡಿ, ಕೆಲವು ಸ್ಥಾನವನ್ನು ಮಾರ್ಕೆಟ್ಟಿಗೆ ಸೇರಿಸಬೇಕೆಂದೂ, ಮನೆ ಕಳೆದುಕೊಂಡವರಿಗೆ ಬೇರೆ ಸ್ಥಳದಲ್ಲಿ ನಿವೇಶನಗಳನ್ನು ಕೊಡುವುದಲ್ಲದೆ ಇಷ್ಟ ಪಟ್ಟವರಿಗೆ ಮನೆಗಳನ್ನೂ ಕಟ್ಟಿಸಿಕೊಡಬೇಕೆಂದೂ ಮ್ಯುನಿಸಿಪಾಲಿಟಿಯವರು ತೀರ್ಮಾನಮಾಡಿ, ಇದಕ್ಕೋಸ್ಕರ ಒಂದು ಕಮಿಟಿಯನ್ನು ಗೊತ್ತುಮಾಡಿದ್ದಾರೆ.

* * *

ರಾಜಧಾನಿಯ ಬಟ್ಟೆಗಳ ಗೂಡಿನಲ್ಲಿದ್ದ ಮ ವಾರಿಯರ್ ಚಾರಿಯವರು ಕೆಲವು ದಿನಗಳಿಂದ ಕಾಯಿಲೆ ಇದ್ದು ಮೊನ್ನೆ ಸಾಯಂಕಾಲ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ರಾಜಧಾನಿಯಲ್ಲಿ ವೆಸ್ಲಿಯನ್ ಮಿಷನ್ ಸಂಘದವರ ಅನೇಕ ಸ್ಕೂಲು, ಆಸ್ಪತ್ರೆ, ದೇವಾಲಯ, ಬಂಗಲೆ ಮುಂತಾದ ಕಟ್ಟಡಗಳನ್ನು ಕಂಟ್ರಾಕ್ಟು ವಹಿಸಿ, ಬಹು ನಂಬಿಕೆಯಿಂದಲೂ, ಪ್ರಾಮಾಣಿಕತೆಯಿಂದಲೂ ಕಟ್ಟಿಕೊಟ್ಟಿರುವುದು ಮಾತ್ರವೇ ಅಲ್ಲ, ಅವರು ತಮ್ಮ ಗುಣನಡತೆಗಳಿಂದ ಅನೇಕ ದೊಡ್ಡ ಮನುಷ್ಯರಲ್ಲೂ ಸಾಮಾನ್ಯ ಪ್ರಜೆಗಳಲ್ಲೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದರು.

* * *

ನಾಳೆಯಿಂದ ರಾಜಧಾನಿಯಲ್ಲಿ ನವರಾತ್ರಿ ಉತ್ಸವಾದಿಗಳು ಪ್ರಾರಂಭವಾಗುವವು. ತಾ. 14 ನೇ ಸೋಮವಾರ ಮಧ್ಯಾಹ್ನ ಇಲ್ಲಿನ ಟೌನ್ ಹಾಲ್ ಮಹಡಿಯಲ್ಲಿ ಮೈಸೂರು ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಎರಡನೇ ಮಹಾಸಭೆಯು ಪ್ರಾರಂಭವಾಗಿ ಮೂರು ದಿನ ನಡೆಯುತ್ತದೆ. ಅದೇ ದಿನ ಸಾಯಂಕಾಲ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನವು ತೆರೆಯಲ್ಪಡುವುದು. ಚಾಮುಂಡಿ ಬೆಟ್ಟದ ರೇಸ್ ಕೋರ್ಸಿನಲ್ಲಿ ತಾ. 21 ಮತ್ತು 22 ನೇ ಸೋಮವಾರವೂ ಮಂಗಳವಾರವೂ ಜೀವರಾಶಿಗಳ ಪ್ರದರ್ಶನವು ಜರುಗುತ್ತದೆ. ತಾ. 23 ನೇ ಬುಧವಾರ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುವುದು. ಮಳೆಯು ತೃಪ್ತಿಕರವಾಗಿ ನಡೆದು, ಪಟ್ಟಣದ ಆರೋಗ್ಯಸ್ಥಿತಿಯು ಚೆನ್ನಾಗಿರುವುದರಿಂದ ಈ ಉತ್ಸವಾದಿಗಳಿಗೆ ಹೊರಗಿನ ಜನಗಳು ವಿಶೇಷವಾಗಿ ಬಂದು ಸಂತೋಷಪಟ್ಟು ಹೋಗಲು ತುಂಬಾ ಅನುಕೂಲವಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಯಡತೊರೆ ತಾಲ್ಲೂಕು ಸಾಲಿಗ್ರಾಮದ ಮ್ಯುನಿಸಿಪಲ್ ಬೋರ್ಡಿಗೆ ಮೆ|| ಕುಬೇರಶೆಟ್ಟರನ್ನೂ, ಮ| ದ್ಯಾವರಸೇಗೌಡನ ಕಾಳೇಗೌಡರನ್ನೂ ಮೆಂಬರಾಗಿ ನೇಮಿಸಿದೆ.

ಯಡತೊರೆ ಮ್ಯುನಿಸಿಪಲ್ ಬೋರ್ಡಿಗೆ ಮುಂದೆ ಹೇಳುವವರನ್ನು ಮೆಂಬರಾಗಿ ನೇಮಕಮಾಡಿದೆ.—ಮೆ| ಗಳಾದ ವೆಂಕೋಜಿರಾಯರು, ಬಾಡಿಗೆ ಅಣ್ಣಯ್ಯಶೆಟ್ಟಿ, ರಂಗಶೆಟ್ಟಿ, ಬಿಳಿ ಚಿಕ್ಕಬಸವಣ್ಣನವರು, ಹಾಜಿ ಅಬ್ದುಲ್ಲಾ ಖಾನ್ ಸಾಹೇಬರು, ಪನಾದಶೆಟ್ಟಿ, ಸಿದ್ದಲಿಂಗಶೆಟ್ಟಿ.

ಮೆ|| ಮುಸ್ತಫಾ ಬೇಗ್‌ಯವರನ್ನು ಕೋಲಾರ್ ಟವನ್ ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಕಮಾಡಿದೆ.

ತುಮಕೂರು ಡೆಪ್ಯುಟಿ ಅಮಲ್ದಾರ್ ಮ| ಟಿ. ಸ್ವಾಮಿನಾಥಶಾಸ್ತ್ರಿಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಪ್ರೊಬೇಷನರ್ ಮಿ ಬಿ ಮೊಹಿದೀನ್ [illegible]ಯವರು ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ತುರುವೇಕೆರೆ ಡೆಪ್ಯುಟಿ [illegible]ರ್ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾದ ಅ ಕೃಷ್ಣಸ್ವಾಮಿ ಅಯ್ಯಂಗಾರ್ ಮೈಸೂರು ಖಜಾನೆ ಸ್ಥಳದ ಖಜಾನೆ ಸರ್ಕಾರ [illegible]ಯವರಿಗೆ ಒಂದು ವರುಷದ ರಜಾ ಕೊಟ್ಟಿದೆ.

[illegible] ಆಫೀಸರ್ ಮಿ ಜಿ ಹನುಮಂತರಾಯರು ತಾತ್ಕಾಲಿಕವಾಗಿ ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜನ್ನು ವಹಿಸಿ, ಆ ಕಾಲದಲ್ಲಿ 1ನೇ [illegible] ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

[illegible] ಆಫೀಸರ್ ಮಿ ಮಹಮ್ಮದ್ ಅಬ್ದುಲ್ಲಾ ಹರಿ ಚಿತ್ರದುರ್ಗದ ಎಕ್ಸ್ [illegible] ಕೊಟ್ಟಿರುವ ಎರಡು ತಿಂಗಳ [illegible] ರಜವನ್ನು ಇನ್ನೂ ಹದಿ[illegible] ದಿನ ವಿಸ್ತರಿಸಲಾಗಿದೆ. [illegible] ಕಾರ್ಯದಲ್ಲಿರತಕ್ಕದ್ದು.

ಹಾಸನ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ ಕೆ [illegible] [illegible]ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು [illegible] ಪ್ರಿವಿಲೇಜ್ ರಜಾ [illegible] ಮಿ [illegible] ನಾರಾಯಣರಾಯರು [illegible] ಮತ್ತು ಕೊಡ[illegible] ಹಾಸನ ಡಿಸ್ಟ್ರಿಕ್ಟಿನ ಸ್ಕೂಲುಗಳ [illegible]ಕ್ಕರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

[illegible] ಮಹಾರಾಜರವರು ಮಿ [illegible] ಅರ್ಜಿಯನ್ನು [illegible] ಸರ್ವೀಸ್ [illegible] 5ನೇ ಗ್ರೇಡ್ ಅಮಲ್ದಾರ್ ಟ್ರೆಜರ್ [illegible]ವಾಗಿ ಕೆಲಸಕ್ಕೆ ಸೇರುವುದನ್ನು [illegible] ಮಾಡಿರುತ್ತಾರೆ.

ಮೊದಲನೇ [illegible] ಮಿ [illegible] ಸಂಪತ್ ಅಯ್ಯಂಗಾರ್ ಸೆಪ್ಟೆಂ[illegible] 18 ರಲ್ಲಿ [illegible] ಕೆಲಸದ ಚಾರ್ಜನ್ನು [illegible]ರು.

[illegible] ಡೆಪ್ಯುಟಿ [illegible] ಮಿ [illegible] ರಾಮ [illegible] ಸೆಪ್ಟೆಂಬರ್ 30 [illegible] ಎರಡು ತಿಂಗಳ [illegible] ರಜಾ ಕೊಟ್ಟಿದೆ. ಮೈಸೂರು [illegible] ಮಿ [illegible] ಅವರ [illegible] ಪ್ರಿವಿಲೇಜ್ ರಜಾ [illegible].

[illegible] ಮಿ ಆರ್ [illegible] ಸೆಪ್ಟೆಂಬರ್ ತಾ 1[illegible] ಒಂದು [illegible] ಪ್ರಿವಿಲೇಜ್ ರಜಾ [illegible].

ಮೈಸೂರು [illegible] ಮಿ [illegible] 2ನೇ [illegible] ವರುಷ [illegible] ಅಯ್ಯಂಗಾರ್ [illegible] ಮುತ್ತು [illegible] ಅಯ್ಯಂಗಾರ್ [illegible] ಪ್ರಿವಿಲೇಜ್ [illegible].

ಮೈ [illegible] 2ನೇ ಕ್ಲಾಸ್ [illegible] ಪಟ್ಟಿಯಲ್ಲಿ [illegible] ವರ್ಗಾಯಿಸಲಾಗಿದೆ.

ದಸರಾ ಮಹೋತ್ಸವದ ದರ್ಬಾರ್ ಪ್ರೋಗ್ರಾಂ

(12ನೇ ಅಕ್ಟೋಬರ್ (ಪರಿಧಾವಿನಾಮ ಸಂವತ್ಸರದ ಆಶ್ವಯುಜ ಶುದ್ಧ)

1912ನೇ ಅಕ್ಟೋಬರ್ ತಾ 11ನೇ ಶುಕ್ರವಾರ ಪ್ರಾತಃಕಾಲ 11 [illegible] 13 ಗಂಟೆಯ ಒಳಗೆ [illegible] ಸಿಂಹಾಸನಾರೋಹಣ, [illegible] ದರ್ಬಾರು, ನಜರ್.

ತಾ 12ನೇ [illegible] 18ನೇ ಶುಕ್ರವಾರದ ವರೆಗೆ 7 ದಿವಸವೂ ದಿನ [illegible] ಗಂಟೆಗೆ [illegible] ದರ್ಬಾರ್.

ತಾ 11ನೇ [illegible] ಪ್ರಾತಃಕಾಲ 7 ಗಂಟೆಯ ಮೇಲೆ 9 ಗಂಟೆಯ [illegible] ಆನೆ ಕುದುರೆ ಮತ್ತು ಆಯುಧ [illegible] ಪೂಜೆ, ಸಾಯಂಕಾಲ [illegible] ದರ್ಬಾರ್.

ತಾ 20ನೇ ಭಾನುವಾರ [illegible] 10½ ಘಂಟೆಗೆ ವಿಜಯದಶಮಿ ಬನ್ನಿ [illegible] ಬನ್ನಿ ಮಂಟಪಕ್ಕೆ ವಿಜಯಮಾಡುವದು, ಅನಂತರ [illegible] ಸಾಯಂಕಾಲ [illegible] ಘಂಟೆಗೆ [illegible] ಅನಂತರ ದರ್ಬಾರ್.

ತಾ 21ನೇ ಸೋಮವಾರ ಸಾಯಂಕಾಲ 7½ ಘಂಟೆಗೆ ಅಂಬಾವಿಲಾಸ ದರ್ಬಾರ್, ನಜರ್.

ತಾ 22ನೇ ಮಂಗಳವಾರ ಸಾಯಂಕಾಲ 7½ ಘಂಟೆಗೆ ಅಂಬಾವಿಲಾಸ ದರ್ಬಾರ್, ಮಿಲಿಟೆರಿಯವರಿಗೂ ಪ್ರಜಾಪ್ರತಿನಿಧಿಗಳಿಗೂ ನಜರ್.

ರಾಗಿ ಹಗೇವಿನಲ್ಲಿ ಇಬ್ಬರ ಮರಣವು

ಕೋಲಾರ ತಾಲ್ಲೂಕು ಕಸಬಾ ಸಮ್ಮತು [illegible] ಗ್ರಾಮದಲ್ಲಿ [illegible] ಸುಮಾರು 25 ಹದ ಮಳೆ ಆಗಿರುತ್ತೆ. ರಾಗಿ ಪೈರೆಲ್ಲಾ ಹೊಡೆಗೆ [illegible] ಹೋಯುತ್ತಾ ಇವೆ. ಕಳೆದ ಮಾಹೆ ತಾ 27 [illegible] ರಲ್ಲಿ ಮಳೆ [illegible]ವಾದದ್ದರಿಂದ [illegible] ಮನೆಗಳು ನೆಲಸಮವಾಗಿ ಬಿದ್ದುಹೋದವು [illegible] ಯಾವ ಅಪಾಯವೂ ಸಂಭವಿಸಲಿಲ್ಲ. ಆದರೆ [illegible] ಮನೆಯಲ್ಲಿ [illegible] ಸಿಕ್ಕಿ ಸತ್ತುಹೋಯಿತು.

ತಾ 28 ರಲ್ಲಿ ಈ ಗ್ರಾಮಕ್ಕೆ ಮೂರು ಮೈಲಿ ಫಾಸಲೆಯಲ್ಲಿರುವ [illegible] ಗ್ರಾಮದಲ್ಲಿ 60 70 ಖಂಡುಗ ರಾಗಿ ಹಿಡಿಸತಕ್ಕ ಹಗೇವಿನಲ್ಲಿ [illegible] ಮಾಲೀಕನು ಅದರಲ್ಲಿ ರಾಗಿ ಭರ್ತಿ ಮಾಡಿ ಅದರ ಮೇಲೆ [illegible] ಮುಚ್ಚಿಬಿಟ್ಟಿದ್ದನು. ಮಳೆಗಳು ವಿಪರೀತವಾದದ್ದರಿಂದ ಮನೆಯಲ್ಲಿ [illegible], ಅಥವಾ ಹಗೇವಿಗೆ ನೀರು ಮಿತ್ತಿಯಿಂದ ತುಂಬಿಹೋ[illegible] ತಳದಲ್ಲಿ ರಾಗಿ, ಅದರ ಮೇಲೆ ನೀರು, ಆ ನೀರಿನ [illegible] ರಾಗಿಯು ಮೇಲೆ ಹಾಕಲ್ಪಟ್ಟದ್ದ ಹೊಟ್ಟು ತೇಲುತ್ತಾ ನೀರ [illegible]ದ್ದರಿಂದ ನೀರು ಬಿದ್ದಿಲ್ಲವೆಂದು ಮನೆ ಖರ್ಚಿಗಾಗಿ ಸ್ವಲ್ಪ [illegible]ನ್ನು ತೆಗೆದುಕೊಂಡು ಬರಬೇಕೆಂಬುದಾಗಿ ಒಬ್ಬನನ್ನು ಇಳಿಸಲು ಅವನು ಹಗೇವಿನಲ್ಲಿ ಇಳಿದು ನೀರಿನಲ್ಲಿ ಮುಳುಗಿ ಸತ್ತುಹೋದನು. ಕೆಲವು ಹೊತ್ತಿನವರಿಗೂ ಸರ್ಕಾರವಾಗಿರಲು ಅವನ ಕ್ಷೇಮಕ್ಕಾಗಿ ಮತ್ತೊಬ್ಬನನ್ನು ಇಳಿಸಲು ಅವನು ಸಹಾ ಮೊದಲ್ಪಟ್ಟವನ ದುರ್ಗತಿಯನ್ನೇ ಹೊಂದಿ ಈರ್ವರೂ ಸತ್ತುಹೋಗಿದ್ದರು.

ಇಂಥಾ ಹಗೇವಿನ ದೆಸೆಯಿಂದ ಅನೇಕ ಅಪಾಯಗಳು ನಡೆಯುತ್ತಾ ಇವೆ. ಹಗೇವಿನ ಬಾಯಿ ಮುಚ್ಚಿದ ಮೇಲೆ ಅದರೊಳಗೆ ಒಂದು ವಿಧವಾದ ವಿಷ ವಾಯುವು ತುಂಬಿಕೊಳ್ಳುತ್ತದೆ. ಇಂಥಾ ದುರ್ವಾಯುವು ಹೊರಕ್ಕೆ ಹೊರಡಿಸದಲ್ಲದೆ ಒಳಕ್ಕೆ ಇಳಿದರೆ ಪ್ರಾಣ ಹೋಗುತ್ತೆ. ಇದರಂತೆ ಆತುರವಾಗಿ ಇಳಿದವರು ಅನೇಕರು ಪ್ರಾಣಗಳನ್ನು ಕಳೆದುಕೊಂಡಿರುತ್ತಾರೆ. ಇದಲ್ಲದೆ ರಾಗಿಯನ್ನು ಹಾಕಿದ ಹಗೇವಿಗೆ ನೀರು ಬಿದ್ದಲ್ಲಿ ಸದರಿ ರಾಗಿಯು ಮೇಲ್ಕಂಡ ವಿಷಕರವಾದ ವಾಯುವಿನಿಂದ ಬೆಂದು, ಆ ರಾಗಿಯು ಪ್ರಬಲವಾದ ವಿಷವಾಗುತ್ತೆ. ಇಂಥಾ ರಾಗಿಯು ರೂಪ ಮಾತ್ರ ಕೆಡುವುದಿಲ್ಲ. ತಿಳಿಯದೆ ಸದರಿ ರಾಗಿಯನ್ನು ತಿಂದವರಿಗೂ ಪ್ರಾಣ ಹೋಗುತ್ತೆ. ಅದರ ಜೊತೆಯಲ್ಲಿ ಒಳ್ಳೇ ರಾಗಿಯನ್ನು ಬೆರಿಕೆ ಮಾಡಿ ತಿಂದರೆ ಇದರಿಂದಲೂ ಪ್ರಾಣಾಪಾಯಕ್ಕೆ ಕಾರಣವುಂಟಾಗುತ್ತೆ. ಎನ್ನುವುದಕ್ಕೂ, ಹಟ್ಟಿ ಮೇಲೆ ಬಿಸಾಡುವುದಕ್ಕೂ ಮನಸ್ಸು ಬಾರದ ಲುಬ್ಧಕರು ಸದರಿ ರಾಗಿಯನ್ನು ತಿರುಪಗಾರರಿಗೂ, ವ್ಯಾಪಾರಸ್ಥರಿಗೂ, ಅಂಗಡಿಗಳಿಗೂ ಸಹಾ ಹಾಕಿ ಪ್ರಜೆಗಳ ಪ್ರಾಣಗಳನ್ನು ಸೂಕ್ಷ್ಮ ರೂಪದಲ್ಲೇ ತೆಗೆಯುತ್ತಾರೆ. ಸಾಮಾನ್ಯವಾಗಿ ಕೆಟ್ಟ ರಾಗಿ ಎಂದು ಗುರ್ತಿಸಲು ಆಗಲಾರದ್ದರಿಂದ ಮೇಲ್ಕಂಡ ಅನಾಹುತಗಳಿಗೆ ಕಾರಣವಾಗುವುದು. ಇನ್ನು ಮುಂದಾದರೂ ಧರ್ಮಸ್ವರೂಪಿಗಳಾದ ಸರ್ಕಾರದವರು ಅಕಾಲ ಮರಣಗಳನ್ನುಂಟುಮಾಡುವ ಪ್ರತ್ಯಕ್ಷ ದರ್ಶನೀಯವಾದ ಹಗೇವುಗಳೆಂಬ ಗುಪ್ತ ರಾಕ್ಷಸನನ್ನು ಸಿದ್ಧಾಂತ[illegible]ದಿಂದ ನಾಶಪಡಿಸಿ ಪ್ರಜೆಗಳಿಗೆ [illegible]ವನ್ನುಂಟುಮಾಡಬೇಕೆಂದು ಕೋರುತ್ತೇನೆ. ದಸರಾ ಹಬ್ಬಕ್ಕಾಗಿ ಮೈಸೂರಿಗೆ ದಯಮಾಡಿಸತಕ್ಕ ಮೆಂಬರುಗಳು ಇದನ್ನು ಕುರಿತು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸದೆ ಇರಲಾರರೆಂದು ನಂಬಿರುತ್ತೇನೆ.

ನಿಮ್ಮ ವಾಚಕ.

ಇಂಡಿಯಾ ದೇಶದ ವೃತ್ತಾಂತಗಳು.

ಮಿ ಫ್ರಾಂಕ್ ಹಾಸ್ಕಿಂಗ್‌ಟನ್ [illegible] ಯವರು ಮುಂದಿನ ನವಂಬರ್ ತಾ 1 ರಿಂದ ತೊಡಗಿಸಿ ಕೈಸರ್‌ಗಾಗಿ ನೇಮಿಸಲ್ಪಡುವರು.

[illegible] ಅಧಿಪತ್ಯದಲ್ಲಿ ಮಲೇರಿಯಾ ಜ್ವರದಿಂದ 1911-12ನೇ ಸಾಲಿನಲ್ಲಿ 10,81,000 ಪ್ರಜೆಗಳು ಅಳಿದರೆ, ಹಿಂದಿನ ಸಾಲಿಗಿಂತಲೂ 30,000 ಜನರು ಹೆಚ್ಚಾಗಿ ಮಡಿದಿದ್ದಾರೆ.

ಇಂಡಿಯಾ ಗವರ್ನ್‌ಮೆಂಟಿನವರು ಹೊಸದಾಗಿ ಬೆಳ್ಳಿಯ ನಾಣ್ಯಗಳನ್ನು [illegible] ಜಹಜುಗಳ ಮೇಲೆ [illegible] 7½ ಲಕ್ಷ ರೂಪಾಯಿನ ಬೆಳ್ಳಿ ಗಟ್ಟಿಗಳನ್ನು ತರಿಸಿದ್ದಾರೆ.

ಪಂಜಾಬ್ ಗವರ್ನ್‌ಮೆಂಟಿನವರು ಲಾಹೋರಿನ ಇಸ್ಲಾಮಿಯಾ ಕಾಲೇಜಿನ ವಿದ್ಯಾರ್ಥಿ ಹಾಸ್ಟೆಲ್ [illegible] ಕಾಮಗಾರಿಯನ್ನು ಪೂರೈಸುವುದಕ್ಕೆ [illegible] ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ [illegible] ಪ್ರಾಯಸಮರ್ಥನಾದ [illegible] ಜೀವನಕ್ಕೆ ಯಾವ ಉದ್ಯೋಗವೂ ದೊರಕದೆ ಖಿನ್ನನಾಗಿ ತನ್ನ [illegible] ಕೊಂದುಹಾಕಿ ತಾನೂ ಆತ್ಮಹತ್ಯ ಮಾಡಿಕೊಂಡನು.

ಬೊಂಬಾಯಿ ಪಟ್ಟಣದಲ್ಲಿ [illegible] ಎಂಬ ಕಂಪನಿಯ ಸಾಮಾನುಗಳ ಕಾರ್ಖಾನೆಗೆ ಕಳೆದ [illegible] ಸಾಯಂಕಾಲ 11 ಗಂಟೆಯಲ್ಲಿ ಬೆಂಕಿ ಬಿದ್ದು ಸುಮಾರು ನಾಲ್ಕು ಲಕ್ಷ ರೂಪಾಯಿನ ಹತ್ತಿ ಮುಂತಾದ ಸರಕು ಸುಟ್ಟುಹೋಯಿತು.

ಪೂರ್ವ ಬಂಗಾಳಕ್ಕೆ ಸೇರಿದ [illegible]ದಲ್ಲಿ ಲಲಿತಮೋಹನ ಬೋಸ್ ಎಂಬೊಬ್ಬ ಪೊಲೀಸ್ ಇನ್ಸ್‌ಪೆಕ್ಟರು [illegible] ಜನರಿಂದ [illegible] ಗುಟ್ಟು ತಿಳಿದುಕೊಂಡನೆಂದು [illegible] ಅವನಿಗೆ ಆರು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಕಲ್ಕತ್ತಾ ಪಟ್ಟಣದ ಬಾಲಿಗಂಜ್ ಮತ್ತು [illegible] ನಡುವೆ ಕಳೆದ [illegible] ರೈಲ್ ರಸ್ತೆ ಗೇಟನ್ನು ನುಗ್ಗಿ ಹೋಗುತ್ತಿದ್ದ ಒಂದು ಗಾಡಿಯು ರೈಲ್ ಗಾಡಿಗೆ ಅಡ್ಡವಾಗಿ ಸಿಕ್ಕಿ [illegible] ಅವರಲ್ಲಿ [illegible] ಐದು ಮಂದಿ ತಕ್ಷಣ ಮೃತರಾದರು.

ಹರಿದ್ವಾರದ ಗುರುಕುಲದಿಂದ ಮಹಾತ್ಮ ಮುನ್ಷೀರಾಂ ಎಂಬುವರು "ಸತ್ಯಧರ್ಮಪ್ರಚಾರಕ" ಎಂಬ ಹಿಂದಿ ಭಾಷಾ ಪತ್ರಿಕೆಯನ್ನು ಇದುವರೆಗೆ ಪ್ರಕಟಿಸುತ್ತಿದ್ದು, ಇನ್ನು ಮುಂದೆ ಅದನ್ನು ದಿಲ್ಲಿ ಪಟ್ಟಣದಲ್ಲಿ ಅಚ್ಚು ಮಾಡಿ ಪ್ರಕಟಿಸುತ್ತೇವೆಂದು ಅರ್ಜಿ ಹಾಕಿಕೊಂಡದ್ದಕ್ಕೆ ದೆಹಲಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಛಾಪಖಾನೆಗಳ ಹೊಸ ಕಾನೂನು ಪ್ರಕಾರ 500 ರೂಪಾಯಿ ಠೇವಣಿ ಇಡಬೇಕೆಂದು ಕೇಳಿದ್ದಾರೆ.

[illegible] ಸರ್ವಕಲಾಶಾಲೆಯ ನಿಧಿಗೆ ಕಳೆದ ಸೆಪ್ಟೆಂಬರ್ [illegible] ವರೆಗೆ 11,71,0[illegible] ರೂಪಾಯಿ ಚಂದಾ ವಸೂಲಾಗಿರುತ್ತದೆ. [illegible] ಕೊಡುವುದಾಗಿ ವಾಗ್ದಾನ ಮಾಡಿರುವ ಸಾಹುಕಾರರು ಒಂದೆರಡು ತಿಂಗಳೊಳಗಾಗಿ ಪಾವತಿ ಮಾಡುತ್ತಾರೆಂದು [illegible] ಹಾಗೂ ವಸೂಲಾದ [illegible] 50 ಲಕ್ಷ ರೂಪಾಯಿ ಠೇವಣಿ ಆಗುವ ವರೆಗೆ ಈ ಕಾರ್ಯವನ್ನು ಕುರಿತು ಗವರ್ನ್‌ಮೆಂಟಿನವರ ಕೂಡ ಕಲೆತು ಪರ್ಯಾಲೋಚಿಸುವಹಾಗಿಲ್ಲ.

ಮಿಸೆಸ್ ಥಾರ್ನ್ ಎಂಬೊಬ್ಬ ಯೂರೋಪಿಯನ್ ಸ್ತ್ರೀಯು ಬೊಂಬಾಯಿನ ತಾಜ್ ಮಹಲ್ ಹೋಟೇಲಿಗೂ, ಜಟಕಾ ಗಾಡಿಯವನಿಗೂ ಹಣ ಕೊಡದೆ ಮೋಸ ಮಾಡಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಆಕೆಗೆ ಎರಡು ತಿಂಗಳ ಕಠಿಣ ಸಜಾ ವಿಧಿಸಿದರು. ಆಕೆ ಅದರ ಮೇಲೆ ಹೈಕೋರ್ಟಿಗೆ ಅಪೀಲ್ ಮಾಡಿಕೊಂಡಳು. ಇಬ್ಬರು ಜಡ್ಜಿಗಳು ಆಕೆಯ ಅಪೀಲನ್ನು ವಿಚಾರಣೆಯಿಂದ ತಳ್ಳಿಬಿಟ್ಟು, ಮ್ಯಾಜಿಸ್ಟ್ರೇಟರು ವಿಧಿಸಿದ್ದ ಶಿಕ್ಷೆಯನ್ನು ಖಾಯಂ ಮಾಡಿದರು.

ಕೀರ್ತಿಶೇಷರಾದ ಎಡ್ವರ್ಡ್ ಪ್ರಭುಗಳ ಹೆಸರಿನ ಮೇಲೆ ಪೂನಾ ನಗರದಲ್ಲಿ ಕಳೆದ ವಾರ ಒಂದು ಹೆಂಗಸರ ಆಸ್ಪತ್ರೆ ಕಟ್ಟುವುದಕ್ಕೆ ಗವರ್ನರ್ ಸರ್ ಜಾರ್ಜ್ ಕ್ಲಾರ್ಕ್‌ರವರು ಅಸ್ತಿವಾರದ ಕಲ್ಲನ್ನು ಸ್ಥಾಪಿಸಿದರು. ಈ ಆಸ್ಪತ್ರೆ ಕಟ್ಟಡಕ್ಕೆ 65,000 ರೂಪಾಯಿ ಖರ್ಚಾಗುತ್ತದೆ. ಅದನ್ನು ಮುಂದೆ ನಡೆಸುವುದಕ್ಕೆ 65,000 ರೂಪಾಯಿ ಚಂದಾ ವಸೂಲಾಗಿದೆ. ಇದಲ್ಲದೆ ಅದಕ್ಕೆ ಸೇರಿದ ಒಂದು ವೈದ್ಯಶಾಲೆಯನ್ನು ಇಟ್ಟು ನಡೆಸುವುದಕ್ಕೆ [illegible] ಸರದಾರ್ [illegible] ವಿಜಯಸಿಂಗ್ ಮೊದಲಿಯಾರ್‌ರವರ ಕಡೆ ಸಂಬಂಧಿಗಳು 20,000 ರೂಪಾಯಿ ಕೊಟ್ಟಿದ್ದಾರೆ.

ಕಳೆದ ಸೆಪ್ಟೆಂಬರ್ ತಾ 28 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಒಟ್ಟು 1,915 ಜನರಿಗೆ ಪ್ಲೇಗ್ ತಗಲಿ, 1,512 ಮರಣಗಳಾಗಿರುತ್ತವೆ. ಬೇರೆ ಬೇರೆ ಅಧಿಪತ್ಯಗಳಲ್ಲಿ ಈ ಮರಣ ಸಂಖ್ಯೆಯ ವಿವರ ಹ್ಯಾಗಂದರೆ—ಬೊಂಬಾಯಿ 734, ಮದರಾಸ್ 63, ಬಂಗಾಳಾ 5, ಬೀಹಾರ್ 44, ಸಂಯುಕ್ತ ಅಧಿಪತ್ಯಗಳು 128, ಪಂಜಾಬ್ 11, ಬರ್ಮಾ 20, ಮಧ್ಯಪ್ರಾಂತ್ಯಗಳು 9, ಮೈಸೂರು 175, ಹೈದರಾಬಾದ್ 261, ಮಧ್ಯ ಇಂಡಿಯಾ 64, ರಾಜಪುಟಾನಾ 20.

ಬ್ರಹ್ಮಸಮಾಜವೆಂಬ ಮತಸ್ಥಾಪಕರಾಗಿ ಕೀರ್ತಿಶೇಷರಾದ ರಾಜಾರಾಂ ಮೋಹನರಾಯರವರು ಇಂಗ್ಲಾಂಡಿಗೆ ಸೇರಿದ ಬ್ರಿಸ್ಟಲ್ ಪಟ್ಟಣದಲ್ಲಿ ಕಾಲವಾಗಿ ಅಲ್ಲೇ ಸಮಾಧಿಮಾಡಲ್ಪಟ್ಟಿದ್ದಾರೆ. ಚಿತ್ತಗಾಂಗದಲ್ಲಿರುವ ಸಾಧಾರಣ ಬ್ರಹ್ಮಸಮಾಜದವರು ಒಂದು ಮಹಾ ಸಭೆಯನ್ನು ನಡಸಿ, ತಮ್ಮ ಮತಸ್ಥಾಪಕರ ದೇಹವನ್ನು ಬ್ರಿಸ್ಟಲ್ ಪಟ್ಟಣದ ಪುರಾಧ್ಯಕ್ಷರ ಅನುಜ್ಞೆಯನ್ನು ಪಡೆದು ಅಲ್ಲಿಂದ ಹಿಂದುಸ್ಥಾನಕ್ಕೆ ತಂದು ಇಟ್ಟು, ಯೋಗ್ಯವಾದ ಸಮಾಧಿಯನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಈ ಸಲ ಅಲಹಾಬಾದಿನಲ್ಲಿ ನಡೆಯುವ ಮುಸಲ್ಮಾನರ ಸಾರ್ವಜನಿಕ ಸಭೆಯಲ್ಲಿ ಮಹಮದೀಯರ ವಿದ್ಯಾನಿಲಯದ ವಿಚಾರವು ಚರ್ಚೆಯಾಗುತ್ತಾದ್ದರಿಂದ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಮುಸಲ್ಮಾನರಲ್ಲಿ ಪ್ರಮುಖರಾದವರು ಆ ಸಭೆಗೆ ಹೋಗುವರು. ರೈಟ್ ಆನರಬಲ್ ಸೈಯದ್ ಅಮೀರಲ್ಲಿಯವರು ಕ್ಷೇಮಯಿಂದ ದಯಮಾಡಿ ಈ ಸಭೆಯ ಅಗ್ರಾಸನವನ್ನು ವಹಿಸುವುದಾಗಿ ಒಪ್ಪಿರುತ್ತಾರೆ. ಘನವಂತರಾದ ಆಗಾಖಾನ್‌ರವರು ರಾಜ ಚಕ್ರವರ್ತಿಯವರಿಂದ ಬಂದಿರುವ ಆಹ್ವಾನ ಪತ್ರಿಕೆಯನ್ನು ಸ್ವೀಕರಿಸಿ ಅಲ್ಲಿಗೆ ದಯಮಾಡುವರು.

ಅಹಮದಾಬಾದಿನಲ್ಲಿರುವ ವಿಕ್ಟೋರಿಯಾ ಜೂಬಿಲಿ ಆಸ್ಪತ್ರೆಯಲ್ಲಿ ಸೂಲಗಿತ್ತಿಯರನ್ನೂ ನರ್ಸುಗಳನ್ನೂ ತಯಾರುಮಾಡುವ ಏರ್ಪಾಟಿಗೆ ಅಲ್ಲಿರುವ ಸರ್ ಚಿನೂಭಾಯಿ ಮಾಧವಲಾಲ್, ಸಿ ಐ ಇ ಎಂಬ ಕೋಟ್ಯಾಧೀಶ್ವರನು 1,15,000 ರೂಪಾಯಿ ಧರ್ಮ ಮಾಡಿರುತ್ತಾನೆ. ಹಿಂದೂ ಸ್ತ್ರೀಯರನ್ನು ಈ ಪರಹಿತ ಸಾಧಕವಾದ ಉದ್ಯೋಗಗಳಿಗೆ ತಯಾರುಮಾಡುವಂಥಾ ಪಾಠಶಾಲೆಯನ್ನು ಬೊಂಬಾಯಿ ಸರ್ಕಾರದವರು 30,000 ರೂಪಾಯಿ ಖರ್ಚು ಮಾಡಿ ಕಟ್ಟಿಸುವಂತೆ ಒಪ್ಪಿಕೊಂಡಿದ್ದಾರೆ. ಹಿಂದೂ ಮೊದಲಾದ ದೇಶೀಯ ಸ್ತ್ರೀಯರ ಹಿತವನ್ನು ಬಯಸಿ ಮಾಡಿರುವ ಧರ್ಮಕಾರ್ಯದಿಂದ ಆ ಕೋಟ್ಯಾಧೀಶ್ವರನ ಕೀರ್ತಿಯು ಅಧಿಕವಾಯಿತು.

ಡೆಹಲಿ ದರ್ಬಾರ್ ಕಾಲದಲ್ಲಿ ಈ ರಾಷ್ಟ್ರದ ಪ್ರಥಮ ವಿದ್ಯಾಪ್ರಚಾರಕೆಗಾಗಿ ಚಕ್ರವರ್ತಿ ಸಾರ್ವಭೌಮರವರು ದಯಪಾಲಿಸಿದ ಐವತ್ತು ಲಕ್ಷ ರೂಪಾಯಿನಲ್ಲಿ ಮದರಾಸ್ ಗವರ್ನ್‌ಮೆಂಟಿನವರು ಕೆಲವು ಹಣವನ್ನು ಮಲಬಾರ್ ಜಿಲ್ಲೆಗೆ ಹಂಚಿಕೊಟ್ಟರು. ಮ॥ ಎಂ ಸಿ ಕೃಷ್ಣವರ್ಮ ರಾಜರವರು ಮುಂಚಿತವಾಗಿ ನಿಂತು ದೊಡ್ಡ ಮೆರವಣಿಗೆಯಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಿ ಅವರಿಗೆಲ್ಲಾ ತಿಂಡಿ ಮುಂತಾದದ್ದು ಕೊಡಿಸಿ ಎಲ್ಲರೂ ಆನಂದಪಡುತ್ತಿದ್ದಾಗ ಮಾಲಪುರ ಡಿವಿಜನ್‌ನಲ್ಲಿ ಐವತ್ತು ಪಾಠಶಾಲೆಗಳನ್ನು ಸ್ಥಾಪನೆ ಮಾಡಿದರು. ಪಂಚಮರು ಮತ್ತು ಇತರ ಹಿಂದುಳಿದ ಜಾತಿಗಳ ಮಕ್ಕಳಿಗೆ ಆ ದಿನ ಬಟ್ಟೆಬರೆಗಳನ್ನೂ ಕೊಡಿಸಿ ಸಂತೋಷವನ್ನೂ ಉತ್ಸಾಹವನ್ನೂ ಉಂಟುಮಾಡಿದರು.

ಕಲ್ಕತ್ತಾದ ಕೆಲವು ಬ್ರಾಹ್ಮಣ ಬಂಧುಗಳು ಒಬ್ಬ ಕೂಲೀ ಹುಡುಗಿಗೆ ಒಳ್ಳೇ ಉಡಿಗೆತೊಡಿಗೆಗಳನ್ನು ಹಾಕಿ ಬ್ರಾಹ್ಮಣ ಕನ್ಯೆಯೆಂದು [illegible] ಸಂಸ್ಥಾನದ ರಾಜಧಾನಿಯಲ್ಲಿ ಐಶ್ವರ್ಯವಂತನಾಗಿರುವ ಒಬ್ಬ ಬ್ರಾಹ್ಮಣನಿಗೆ ಕೊಟ್ಟು ವಿವಾಹ ಮಾಡಿ, ಅವನಿಂದ 2,100 ರೂಪಾಯಿ ಕನ್ಯಾದಕ್ಷಿಣೆಯನ್ನು ತೆಗೆದುಕೊಂಡು ಹೋದರು. ಆ ಹುಡುಗಿಯು ಮೂರು ತಿಂಗಳ ವರೆಗೆ ಗಂಡನ ಮನೆಯಲ್ಲಿದ್ದು 800 ರೂಪಾಯಿನ ಒಡವೆಗಳನ್ನು ಅಪಹರಿಸಿಕೊಂಡು ಕಲ್ಕತ್ತಾದಕ್ಕೆ ಓಡಿಹೋದಳು. ಗಂಡನು ಆ ಕೂಡಲೆ ತಂತೀ ವರ್ತಮಾನ ಕೊಟ್ಟದ್ದರ ಮೇಲೆ ಪೊಲೀಸಿನವರು ಆ ಹೆಂಗಸನ್ನು ದಸ್ತಗಿರಿ ಮಾಡಿದರು. ಇವಳ ಮೂಲಕ ಇನ್ನೈದು ಮಂದಿ ಹೆಂಗಸರು ಈಗ ಸಿಕ್ಕಿಬಿದ್ದು, ಇವರೆಲ್ಲಾ ದಯಾರ್ಸ್ಥಿತಿಯನ್ನು ಎದುರುನೋಡುತ್ತಾ ಬಂದೀಖಾನೆಯಲ್ಲಿ ಬಿದ್ದಿದ್ದಾರೆ.

ವಿದೇಶದ ವೃತ್ತಾಂತಗಳು.

ಚೀನಾ ಪ್ರಜಾಪ್ರಭುತ್ವಕ್ಕೆ ಸೇರಿದ ಹೂಪೆ ಅಧಿಪತ್ಯದಲ್ಲಿ ಹ್ಯಾಂಕೌ ಪಟ್ಟಣದೊಳಗೆ ಕಳೆದ ವಾರದ ಒಂದು ಮದ್ದಿನ ಮನೆಗೆ ಬೆಂಕಿ ಬಿದ್ದು ಮಹಾ ಶಬ್ದ ದೊಡನೆ ಹಾರಿ 100 ಜನರು ಅಕಾಲಮರಣವನ್ನು ಹೊಂದಿದರು.

ಅಮೇರಿಕಕ್ಕೆ ಸೇರಿದ ವಯೋಮಿಂಗ್ ಡಿಸ್ಟ್ರಿಕ್ಟಿನ [illegible] ಎಂಬ ಸ್ಥಳದ [illegible]ಯಲ್ಲಿ ಒಬ್ಬ [illegible] ಒಬ್ಬ ಮುದುಕಿಯು [illegible] ವರ್ಷಕ್ಕಾಗಿ 150 [illegible] ಆವನನು ಕೇವಲ [illegible] ಮಹಾ [illegible] ವರ್ತಮಾನ ಬಂದಿದೆ.

ಅಮೇರಿಕದಲ್ಲಿ [illegible] ನೀಗ್ರೋ ಮನುಷ್ಯನಿಗೆ ಈಗ 111 ವರುಷ. ಈತನು ಇದುವರೆಗೆ ಬ್ರಹ್ಮಚಾರಿಯಾಗಿದ್ದು ಸೂಸಿ [illegible] ಎಂಬ 60 ವಯಸ್ಸಿನ ಕನ್ಯೆಯನ್ನು ವರಿಸಿ ಈಗ ವಿವಾಹ ಮಾಡಿಕೊಂಡಿದ್ದಾನೆ. ಆತನು ಭೋಜನದಲ್ಲಿ ಮಿತವಾಗಿರುವುದರಿಂದಲೇ ತಾನು ಆರೋಗ್ಯದಿಂದಲೂ ಲವಲವಿಕೆಯಿಂದಲೂ ಇರುತ್ತೇನೆಂದು ಹೇಳುವನು. ಈತನನ್ನು ಚುಟ್ಟಾ ಸೇದತಕ್ಕವನಲ್ಲವೆಂದಾಗಲಿ, ಮದ್ಯವಿಸರ್ಜಕನೆಂದಾಗಲಿ ಹೇಳುವುದಕ್ಕಾಗುವುದಿಲ್ಲ.

ಫ್ರಾನ್ಸ್ ಪ್ರಜಾಪ್ರಭುತ್ವಕ್ಕೆ ಸೇರಿದ ಲಿಲ್ಲಿ ಎಂಬ ಪಟ್ಟಣದಲ್ಲಿ ಸಿಸಿಲ್ [illegible] ಎಂಬಾತನ ಅಧ್ಯಕ್ಷತೆಯಲ್ಲಿ 500 ಜನರು ಸೇರಿ ಒಂದು ಸಭೆಯನ್ನು ನಡೆಸಿ, ಇನ್ನು ಮುಂದೆ ತಮ್ಮಲ್ಲಿ ಯಾರೊಬ್ಬರೂ ತಮ್ಮ [illegible] ರುವ ಪರ್ಯಂತರ ಯಾವುದೊಂದು ಮತಕ್ಕೆ ಕೃವನ್ನೂ ಆಚರಿಸುವುದಿಲ್ಲವೆಂದೂ, ತಮ್ಮ ಮರಣಾನಂತರದಲ್ಲಿ ತಮ್ಮ ದೇಹಗಳನ್ನು ಸಂಸ್ಕಾರ ಮಾಡುವಾಗ ಯಾವ ಮತಾನುಸಾರವಾದ ಆಚರಣೆಗಳನ್ನೂ ನಡಿಸದಂತೆ ಬರೆದಿಡುತ್ತೇವೆಂದೂ, ತಮ್ಮ ಸಂಸಾರದ ಮಕ್ಕಳಿಗೂ ತಮ್ಮ ಸ್ನೇಹಿತರು ಮೊದಲಾದವರಿಗೂ ಈ ವಿಚಾರವನ್ನೇ ಬೋಧೆ ಮಾಡುತ್ತಾ ಬರುವುದಾಗಿಯೂ ಸಂಕಲ್ಪ ಮಾಡಿಕೊಂಡರು.

ಚೀನಾ ಪ್ರಜಾಪ್ರಭುತ್ವಕ್ಕೆ ಸೇರಿದ ಚೆಕಿಯಾಂಗ್ ಎಂಬ ಅಧಿಪತ್ಯದೊಳಗೆ ಕಳೆದ ಆಗಸ್ಟ್ ತಾ 29 ರಲ್ಲಿ ಅಪಾರವಾದ ಸುಂಟರಗಾಳಿ ಹುಟ್ಟಿ [illegible] ಎಂಬ ಪಟ್ಟಣವು ನಾಶವಾಯಿತು. ಅಲ್ಲಿ 10,000 ಪ್ರಜೆಗಳು ಲಯವಾದರೆಂದು ಹೇಳುವರು. ಕೋಸಿಯೋ ಎಂಬ ಊರೂ ಹಾಳಾಗಿ ಅದರೊಳಗಿದ್ದ ಪ್ರತಿ ಒಂದು ಪ್ರಾಣಿಯೂ ಸಮುದ್ರದಲ್ಲಿ ಮುಳುಗಿಹೋಗಿದವು. ಇನ್ನೂ ಕೆಲವು ಸ್ಥಳಗಳಲ್ಲಿ ಇಂಥಾ ಅನಾಹುತ ಸಂಭವಿಸಿತು. ಈ ಸುಂಟರಗಾಳಿಯ ದೆಸೆಯಿಂದ 30-40 ಸಾವಿರ ಪ್ರಜೆಗಳು ಲಯವಾದರೆಂದು ಚೀನೀಯರು ಹೇಳುತ್ತಾರೆ. ಆಸ್ತಿಪಾಸ್ತಿಗಳೂ ಫಲಭರಿತವಾದ ಜಮೀನುಗಳೂ ಅಪಾರವಾಗಿ ನಷ್ಟಹೊಂದಿರುತ್ತವೆ.

ದಕ್ಷಿಣಪ್ರಾಂತ್ಯದ ಜಿಟ್ಟೆಗಳು

ಮದರಾಸ್ ಗವರ್ನ್ಮೆಂಟಿನ ಎಂಟಮಾಲಜಿಸ್ಟರಾದ ಮಿ|| ಟಿ ಫೆಯಿರ್ ಬ್ರಿಗ್ ಫ್ಲೆಚ್ಚರ್‌ರವರೂ, ಇವರ ಅಸಿಸ್ಟೆಂಟರಾದ ಮ|| ಎ ರಾಮಚಂದ್ರ ರಾಯರೂ ರೈತಪ್ರಜೆಗಳಿಗೆ ತಿಳಿಸುವುದೇನೆಂದರೆ–

ಈಗ ಸುಮಾರು ಆರೇಳು ವರ್ಷಗಳ ಲಾಗಾಯ್ತು ಬಳ್ಳಾರಿ, ಕರ್ನೂಲು ಜಿಲ್ಲೆಗಳ ಕೆಲವು ಪ್ರಾಂತಗಳಲ್ಲಿ ಮುಖ್ಯ ಪೈರುಗಳಿಗೆ ಜಿಟ್ಟೆ ಹುಳುವಿನ ಬಾಧೆಯುಂಟಾಗಿ ವಿಶೇಷ ಫಲ ನಷ್ಟವಾಗುತ್ತಾ ಬಂದಿರುವುದು. ಈ ಜಿಟ್ಟೆಗಳು ಸ್ವಲ್ಪ ಸಾಧಾರಣವಾಗಿ ದೊಡ್ಡದಾಗಿಯೇ ಇರುತ್ತವೆ, ಮತ್ತು ಇವುಗಳಿಗೆ ರೆಕ್ಕೆಗಳು ಬರುವದಿಲ್ಲ. ಇವನ್ನು ಕನ್ನಡದಲ್ಲಿ ಜಿಟ್ಟೆಗಳೆಂತಲೂ, ತೆಲುಗು ದೇಶಗಳಲ್ಲಿ ಮಿಡತೆಗಳೆಂತಲೂ ಕರೆಯುತ್ತಾರೆ. ಕಳೆದ ವರುಷ ಆಶ್ವೀಜ ಕಾರ್ತೀಕ ಮಾಸಗಳಲ್ಲಿ ಭೂಮಿಯಲ್ಲಿಟ್ಟ ತತ್ತಿಗಳಿಂದ ಆಷಾಢ ಶ್ರಾವಣಮಾಸಗಳಲ್ಲಿ ಮರಿಗಳು ಹುಟ್ಟುವವು. ಹುಟ್ಟಿದ ಕೂಡಲೆ ಮರಿಗಳು ಜೋಳ, ಸವಣೆ, ಮತ್ತು ಅಲ್ಪಸ್ವಲ್ಪ ಅಕ್ಕಡಿ ಪೈರು ಮೊದಲಾದ ಎಳೇ ಪೈರುಗಳನ್ನೂ, ಹುಲ್ಲನ್ನೂ ತಿನ್ನಲಿಕ್ಕಾರಂಭಿಸುವವು. ಅವುಗಳು ದಿನೇ ದಿನೇ ದೊಡ್ಡದಾಗಿ ಬೆಳೆಯುತ್ತಾ ಪ್ರಾಯಕ್ಕೆ ಬಂದಾಗ ಹೂವುಗಳನ್ನೂ ಫಲಕ್ಕೆ ಬರುವ ಕಾಳುಗಳನ್ನೂ ಹಾಳುಮಾಡುತ್ತವೆ. ಹೆಣ್ಣು ಜಿಟ್ಟೆಗಳು ಹೊಟ್ಟೆಯಿಂದ ಭೂಮಿಯೊಳಕ್ಕೆ ೨-೩ ಅಂಗುಲ ಆಳದ ವರೆವಿಗೂ ರಂಧ್ರಗಳನ್ನು ಮಾಡಿ ಅವುಗಳೊಳಗೆ ೪೦ ರಿಂದ ೬೦ ರ ವರೆವಿಗೂ ತತ್ತಿಗಳನ್ನು ರಾಶಿಯಾಗಿಡುತ್ತವೆ. ಪ್ರತಿ ಹೆಣ್ಣು ಜಿಟ್ಟೆಯೂ ಇಂಥ ೨-೩ ತತ್ತಿ ರಾಶಿಗಳನ್ನಿಡಬಹುದು. ಹೀಗೆ ಇಡಲ್ಪಟ್ಟ ತತ್ತಿಗಳು, ಬೇಸಿಗೆಯೆಲ್ಲಾ ಕಳೆದು, ಮುಂದಿನ ಮುಂಗಾರುಮಳೆ ಪ್ರಾರಂಭವಾಗುವ ವರೆವಿಗೂ, ಭೂಮಿಯಲ್ಲಿ ಹಾಗೆಯೇ ಇರುವವು.

ಈ ಜಿಟ್ಟೆಗಳ ಕಾಟವು ಆದಿಯಲ್ಲಿ ಬೊಂಬಾಯಿ ಅಧಿಪತ್ಯದಲ್ಲಿ ಸೇರಿಗೊಂಡು ಈ ಪ್ರಾಂತ್ಯಗಳಿಗೆ ಹಬ್ಬಿದ್ದಿತ್ತು. ಈಚೆಗೆ ಹೈದರಾಬಾದ್ ಮೈಸೂರು ರಾಜ್ಯದ ಕೆಲವು ಭಾಗಗಳಿಗೂ, ಬಳ್ಳಾರಿ ಮತ್ತು ಕರ್ನೂಲು ಜಿಲ್ಲೆಗಳ ಕೆಲವು ಭಾಗಗಳಿಗೂ ವ್ಯಾಪಿಸಿರುತ್ತದೆ. ರೆಕ್ಕೆಗಳಿಲ್ಲದಿರುವ ಕಾರಣ ಬಹುದೂರ ನಡೆದಾಗಲಿಯೇ ಹಾರಿಹೋಗಲು ಶಕ್ತಿ ಇಲ್ಲದ ಇದ್ದಾಗ್ಯೂ ಈ ಜಿಟ್ಟೆಗಳು ಧಂಡಿಗಳ ಮೂಲಕ ಸ್ಥಳದಿಂದ ಸ್ಥಳಗಳಿಗೆ ವ್ಯಾಪಿಸುವವು. ಒಣಗಿದ ಮೇವು ಆಶ್ವೀಜ ಕಾರ್ತೀಕ ಮಾಸಗಳಲ್ಲಿ ಸಿಕ್ಕುವದು ಕಡಮೆಯಾದ ಕಾರಣ ಬಲಿತ ಜೋಳದ ಹಸಿ ದಂಟುಗಳನ್ನು ಕಿತ್ತು ದನಗಳಿಗೆ ತಿನ್ನಿಸುತ್ತಾರೆ ಮತ್ತು ಒಂದೆರಡು ಹಸೀ ಸೊಪ್ಪಿನ ಹೊರೆಗಳನ್ನು ಸಾಧಾರಣವಾಗಿ ಧಂಡಿಗಳಲ್ಲಿ ಹಾಕಿಕೊಂಡು ಹೋಗುತ್ತಾರೆ. ಆಗ ಜನರ ಭಾವವಿಲ್ಲದೆ ಜಿಟ್ಟೆಗಳು ಮೇವಿನೊಂದಿಗೆ ಹೋಗಿ ಹೊಸ ಸ್ಥಳಗಳಿಗೆ ವ್ಯಾಪಿಸುವವು. ಪ್ರತಿ ಹೆಣ್ಣು ಜಿಟ್ಟೆಯೂ ಸರಾಸರಿ ಒಂದುನೂರು ತತ್ತಿಗಳ ವರೆವಿಗೂ ಇಡಬಹುದಾದ್ದರಿಂದ ಕೆಲವು ವರ್ಷಗಳಲ್ಲಿಯೇ ಸಾವಿರಾರು ಆಗಬಹುದು. ಆದಕಾರಣ ಹಸೀ ಮೇವನ್ನು ಧಂಡಿಯೊಳಗೆ ಹಾಕುವದಕ್ಕೆ ಮೊದಲು ಹುಳಗಳಿಲ್ಲದಂತೆ ನೋಡಿ ತೆಗೆದುಕೊಂಡು ಹೋಗುವುದು ಅತಿ ಮುಖ್ಯವಾಗಿದೆ.

ಧಂಡಿಯವರು ಬಹಳವಾಗಿ ರೈತರೇ ಆಗಿರುತ್ತಾರೆ. ಅವರು ಅಜಾಗರೂಕತೆಯಿಂದ ಹಸೀ ಸೊಪ್ಪನ್ನು ಹಳ್ಳಿಗಳಿಗೆ ತೆಗೆದುಕೊಂಡು ಹೋದರೆ ಅಲ್ಲಿರುವ ತಮ್ಮಂಥ ರೈತರುಗಳಿಗೆಲ್ಲಾ ಮಹಾ ಕೇಡನ್ನುಂಟುಮಾಡಿದಂತಾಗುವುದು. ಜಿಟ್ಟೆಗಳ ಕಾಟವಿಲ್ಲದಿರುವ ಹಳ್ಳಿಗಳ ಗೌಡರು ಶ್ಯಾನುಭೋಗರು ಮತ್ತು ರೈತರು ಜಿಟ್ಟೆಗಳ ಅನಾಂತ್ರವಿರುವ ಪ್ರದೇಶಗಳಿಂದ ಬರತಕ್ಕ ಪ್ರತಿಯೊಂದು ಧಂಡಿಯಲ್ಲಿನ ಹಸೀ ಸೊಪ್ಪನ್ನು ಚೆನ್ನಾಗಿ ಪರೀಕ್ಷಿಸಿ ಜಿಟ್ಟೆಗಳಿದ್ದರೆ ಕೊಲ್ಲಬೇಕು. ಜಿಟ್ಟೆಗಳ ಕಾಟವು ಸಂಭವಿಸಿದ ಒಂದೆರಡು ಸಂವತ್ಸರಗಳಲ್ಲಿ ಅವುಗಳ ಬಾಧೆಯು ಒಂದೆರಡು ಹೊಲಗಳಲ್ಲಿರುವ ಕಾರಣ ಸರಿಯಾದ ರೀತಿಯಲ್ಲಿ ಸೇರಿ ವಿಶೇಷ ಪ್ರಯಾಸವಿಲ್ಲದೆ ಸ್ವಲ್ಪಕಾಲದಲ್ಲಿ ಜಿಟ್ಟೆಗಳನ್ನು ಕೈಯಿಂದ ಆರಿಸಿ ಹಿಡಿದು ನಾಶಮಾಡಬಹುದು.

ಪ್ರೌಢಾವಿವಾಹವು

ಪ್ರೌಢಾವಿವಾಹವೆಂದರೆ ಸುಜ್ಞಾನ ಅಥವಾ ತಿಳುವಳಿಕೆಯುಳ್ಳ ವಧೂವರರ ಲಗ್ನವು. ಗಂಡುಹೆಣ್ಣು ಮಕ್ಕಳು ದೊಡ್ಡವರಾಗಿ ತಮ್ಮ ಹಿತಾಹಿತವನ್ನು ತಿಳಿದುಕೊಳ್ಳಲಿಕ್ಕೆ ತಕ್ಕವರಾದ ಮೇಲೆ ಮಾಡಿಕೊಳ್ಳತಕ್ಕ ಮದುವೆಗೆ ಈ ಹೆಸರು ಕೊಟ್ಟಿದೆ. ಪ್ರೌಢಾವಿವಾಹದಿಂದ ಆಗುವ ಪ್ರಯೋಜನಗಳು ಯಾವವೆಂದರೆ – ವಧೂವರರು ಜ್ಞಾನವಂತರಾಗಿದ್ದರೆ ತಮ್ಮ ಮೇಲಿರುವ ಜವಾಬ್ದಾರಿಯನ್ನು ತಿಳಿದುಕೊಂಡು ನಡೆಸುವರು. ಸದ್ಯಕ್ಕೆ ಸ್ತ್ರೀಪುರುಷರಲ್ಲಿ ಕಂಡುಬರುವ ಅಸಂತೋಷವು ಕಡಮೆಯಾಗುವದು. ಇಬ್ಬರೂ ಪರಸ್ಪರ ಒಂದೇ ಮನಸ್ಸಿನಿಂದಲೂ, ಒಬ್ಬರಿಗೊಬ್ಬರು ಅನುಕೂಲರಾಗಿಯೂ, ಪ್ರೇಮಬದ್ಧರಾಗಿಯೂ ನಡೆಯುವರು. ಪ್ರೌಢಾವಿವಾಹವು ಪ್ರಚಲಿತವಾದರೆ ಬಾಲಿಕೆಯರು ಧರ್ಮಸಂಬಂಧವಾದ ಶಿಕ್ಷಣವನ್ನೂ, ಪ್ರಪಂಚಸಂಬಂಧದ ಶಿಕ್ಷಣವನ್ನೂ ಹೊಂದುವುದರಲ್ಲಿ ತಮ್ಮ ಬಾಲ್ಯವನ್ನು ಕಳೆಯುವರಲ್ಲದೆ, ತಮ್ಮಲ್ಲಿ ಸಂಸಾರ ರಥವನ್ನು ನಡಿಸುವ ಸಾಮರ್ಥ್ಯವು ಬಂದಕೂಡಲೆ ತಮಗೆ ಅನುರೂಪನಾದ ಪತಿಯನ್ನು ತಮ್ಮ ತಂದೆತಾಯಿಗಳ ಅನುಮತಿಯಿಂದ ವರಿಸಿ, ಲಗ್ನಮಾಡಿಕೊಂಡು ಸುಖದಿಂದ ಕಾಲ ಕಳೆಯುವರು. ಅನುರೂಪ ಗುಣಯುಕ್ತರಾದ ಸ್ತ್ರೀಪುರುಷರೇ ಪರಸ್ಪರರನ್ನು ವರಿಸುವರು. ಇದರಿಂದ ನಿರ್ಮಲವಾದ ಪ್ರೇಮವೇ ಪ್ರಾಧಾನ್ಯವಾಗುವುದು. ಪರಸ್ಪರ ಅವರಲ್ಲಿ ಪ್ರೇಮಭಾವವು ಪೂರ್ಣವಾಗಿದ್ದರೆ ವಿಪತ್ತಾಪತ್ತುಗಳಲ್ಲಿ ಸಹ ಒಂದು ತರದಿಂದ ಸೌಖ್ಯವೇ ಆಗುವುದು. ಪ್ರೇಮವೇ ಸಮಸ್ತ ಸೌಖ್ಯದ ಉತ್ಪತ್ತಿಸ್ಥಾನವು. ಅದು ಚೆನ್ನಾಗಿ ಸ್ಥಿರಗೊಂಡಿದ್ದರೆ ಸ್ತ್ರೀಪುರುಷರ ಸದ್ಗುಣಗಳೂ, ಸದಾಚಾರಗಳೂ ವೃದ್ಧಿಹೊಂದುತ್ತವೆ. ಪುರುಷನ ಇಚ್ಛೆಯಂತೆ ಸ್ತ್ರೀಯೂ, ಸ್ತ್ರೀಯ ಇಚ್ಛೆಯಂತೆ ಪುರುಷನೂ ನಡೆದು, ಪರಸ್ಪರರ ಸಮ್ಮತಿಯಿಂದಲೂ, ತಾಯಿತಂದೆ ಗುರುಹಿರಿಯರ ಅನುಮತಿಯಿಂದ ವಿವಾಹಗಳಾಗುತ್ತಾ ಬಂದರೆ ಸಮಾಜದಲ್ಲಿ ಸುಖಶಾಂತಿಗಳು ನೆಲೆಗೊಳ್ಳುವವು. ಬಾಲ್ಯವಿವಾಹದಿಂದ ಬಲಹೀನವಾದ ಸಂತತಿಯು ಹುಟ್ಟುತ್ತದೆ. ವಿವಾಹ ಬಂಧನವು ಎಷ್ಟು ಮಹತ್ವವುಳ್ಳದ್ದು ? ಎಷ್ಟು ಪವಿತ್ರವಾದದ್ದು ? ಎಷ್ಟು ಗೌರವವುಳ್ಳದು ? ಎಂಬದನ್ನು ಅರಿತುಕೊಳ್ಳುವ ಜ್ಞಾನವೂ, ಬುದ್ಧಿಬಲವೂ ಪರಿಪಕ್ವತೆಯಲ್ಲಿ ಬರುವಂತೆ ಚಿಕ್ಕತನದಲ್ಲಿ ಹ್ಯಾಗೆ ಬಂದೀತು ? ಪ್ರೌಢಾವಿವಾಹದಿಂದ ಸಮಾಜದಲ್ಲಿರುವ ನೀತಿಯೂ, ಸುಶೀಲವೂ ವೃದ್ಧಿಹೊಂದುವವು. ಸ್ತ್ರೀಯರ ಗೌರವವನ್ನು ಕುರಿತು ಒಬ್ಬ ಪಾಶ್ಚಾತ್ಯ ಪಂಡಿತನು ಅನ್ನುವದೇನಂದರೆ, "ಸ್ತ್ರೀಯರ ಶೀಲದಿಂದಲೇ ರಾಷ್ಟ್ರವು ಎಷ್ಟು ಮಟ್ಟಿಗೆ ನಾಗರಿಕತೆಯನ್ನು ಹೊಂದಿರುತ್ತದೆಂಬದು ನಿರ್ಣಯಿಸಲ್ಪಡುತ್ತದೆ" -

ಶಿಕ್ಷಣವಿಲ್ಲದೆ ಸ್ತ್ರೀಯರು ಎಂದಿಗೂ ಊರ್ಜಿತಾವಸ್ಥೆಯನ್ನು ಹೊಂದಲಾರರು. ವಿದ್ಯೆಯುಳ್ಳವಳೇ ಸತಿಯು ತನ್ನ ಪತಿಗೆ ತಕ್ಕವಳಾಗುವಳು. ಅವರ ವಿದ್ಯಾರ್ಜನೆಗೆ ತಕ್ಕ ಕಾಲವಾದ ಬಾಲ್ಯದಲ್ಲಿಯೇ ನಮ್ಮ ಬಾಲಿಕೆಯರಿಗೆ ಲಗ್ನವಾಗುವ ಕಾರಣ ವಿದ್ಯಾರ್ಜನವು ಅವರಿಗೆ ವರ್ಜ್ಯವಾಗುತ್ತದೆ. ಶಿಕ್ಷಣದಿಂದ ಸ್ತ್ರೀಯರು ನೀತಿವಂತರಾಗುವರು. ಪ್ರೌಢಾವಿವಾಹವು ರೂಢವಾಯಿತೆಂದರೆ ಬಾಲವಿಧವೆಯರ ಸಂಖ್ಯೆಯು ಅತಿ ಕಡಮೆಯಾಗುವುದು. ಸಾಂಪ್ರತ ಕಾಲದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಸಮಾಜದಲ್ಲಿ ಬಾಲವಿಧವೆಯರ ಸಂಖ್ಯೆಯು ಹೆಚ್ಚುತ್ತಾ ಬಂದಿದೆ. ಇವರು ತಮ್ಮ ಆಯುಷ್ಯವನ್ನು ಬಹಳ ಕಷ್ಟದಿಂದ ಕಳೆಯುತ್ತಲಿದ್ದಾರೆ. ಇಂಥ ಬಾಲಿಕೆಯರನ್ನು ಚಿಕ್ಕ ವಯಸ್ಸಿನಲ್ಲಿ ಲಗ್ನಮಾಡಿಕೊಡುವುದರಿಂದ ಅವರನ್ನು ಇಂಥ ದುಃಖಸಾಗರದಲ್ಲಿ ಮುಳುಗಿಸಿದ್ದಕ್ಕೆ ಅವರ ತಂದೆತಾಯಿಗಳೇ ಜವಾಬ್ದಾರರು. ಸ್ತ್ರೀಯರು ಸುಶಿಕ್ಷಿತರೂ, ನೀತಿವಂತರೂ ಆದರೆಂದರೆ ಅವರಲ್ಲಿ ನೆಲೆಗೊಂಡಿರುವ ಮಿಥ್ಯಾಶ್ರದ್ಧೆಯೂ ಸಂಕುಚಿತವಾದ ಆಲೋಚನೆಗಳೂ ನಾಶಹೊಂದಿ, ಅವರು ಉದಾರಮನಸ್ಸುಳ್ಳವರೂ ದಯಾದಾಕ್ಷಿಣ್ಯವುಳ್ಳವರೂ ಆಗುತ್ತಾರೆ. ಇದರಿಂದ ಅವರ ಮಕ್ಕಳು ಬುದ್ಧಿವಂತರೂ, ನೀತಿವಂತರೂ, ಸುಶಿಕ್ಷಿತರೂ ಆಗುವರು. ಸಮಾಜದ ಉತ್ಕರ್ಷಕ್ಕಾಗಿ ಹಲವು ಸ್ತ್ರೀಯರು ತಮ್ಮ ಆಯುಷ್ಯವನ್ನು ಅರ್ಪಿಸುವರು. ಈ ಮೇರೆಗೆ ಅಲೌಕಿಕ ಸ್ತ್ರೀರತ್ನಗಳು ತಮ್ಮ ಗುಣದಿಂದಲೂ, ಶೀಲದಿಂದಲೂ ನಮ್ಮ ಸಮಾಜವನ್ನು ಅಲಂಕರಿಸುವರು. ಪ್ರೌಢಾವಿವಾಹವು ಪ್ರಚಾರದಲ್ಲಿ ಬಂದರೆ ಸಮಾಜ ಸುಧಾರಣೆಯ ಮಾರ್ಗವು ತೀರ ಸುಲಭವಾಗುತ್ತದೆ. ನಾವು ಕಾಲಕ್ಕನುಸಾರವಾಗಿ ಸುಧಾರಿಸುತ್ತ ಹೋಗಬೇಕು. ಪ್ರೌಢಾವಿವಾಹದಿಂದ ಹುಟ್ಟುವ ಸಂತತಿಯು ಸದೃಢವೂ, ಕಾಂತಿಯುಳ್ಳದ್ದೂ ಆಗುವುದರಿಂದ ಸಮಾಜವು ಬಲವುಳ್ಳದ್ದಾಗುವುದು. ಸ್ತ್ರೀಯರು ಪ್ರೌಢೆಯರಾಗುವವರೆಗೆ ಅವಿವಾಹಿತರಾಗಿದ್ದ ರೀತಿಯಿಂದ ಅವರ ತಿಳುವಳಿಕೆಯು ವೃದ್ಧಿಹೊಂದುವುದು. ಇದರಿಂದ ಸಮಾಜ ಹಿತವು ಹೆಚ್ಚಾಗುವುದು. ಕನ್ನಿಕೆಯರ ವಿವಾಹಕಾಲದ ಮರ್ಯಾದೆಯನ್ನು ಹೆಚ್ಚಿಸಿದರೆ ಆ ಕಾಲದಲ್ಲಿ ಅವರಿಗೆ ವಿದ್ಯಾಭ್ಯಾಸ ಸಾಗಲಿಕ್ಕೆ ಬಹಳ ಅನುಕೂಲವಾಗುವುದು.

ಶ್ರೀ ಪ. ಸಿ.

ಮದ್ಯಪಾನವೆಂಬ ಗುಪ್ತರಾಕ್ಷಸನ ಹಾವಳಿ

ಮದ್ಯಪಾನವೆಂಬ ಗುಪ್ತರಾಕ್ಷಸನು ಪಂಚಮಕುಲದವರಲ್ಲಿ ಸೇರಿಕೊಂಡು ಅವರ ದಿನದಿನ ಸಂಪಾದನೆಯ ಧನವನ್ನು ಸೂರೆಗೊಳ್ಳುತ್ತಾ ಪ್ರಬಲಗೊಂಡಿತ್ತು. ಈ ಮದ್ಯಪಾನದ ಹಾವಳಿಯನ್ನು ನಿರ್ಮೂಲಮಾಡಬೇಕೆಂಬ ಇರಾದೆಯಿಂದ ನಂಜನಗೂಡು ತಾಲ್ಲೂಕು ಕಳಲೆಯಲ್ಲಿ ಪಟೇಲ್‌ದಾರ ಮತ್ತು ಬಡಜನರ ಹಿತಚಿಂತಕರಾದ ಒಬ್ಬರು ಕೆಲವು ತಿಂಗಳಿಂದ ಸಾಹಸಪಟ್ಟು [illegible] ಸಹಾಯದಿಂದ, ಪಂಚಮರ ಮುಖಂಡರಲ್ಲಿಯೂ ಇತರರಲ್ಲಿಯೂ ಮದ್ಯಪಾನದಿಂದ ಉಂಟಾಗುತ್ತಾ ಇರುವ ಕೆಡುಕುತನವನ್ನು ಮತ್ತು ವಿದ್ಯಾಭಿವೃದ್ಧಿಯಿಂದಲೂ, ಜಿರಾಯ್ತಿ ಕಸಬಿನಿಂದಲೂ ಒಳ್ಳೇ ನಡತೆಯಿಂದಲೂ ಉಂಟಾಗುವ ಕ್ಷೇಮಾಭಿವೃದ್ಧಿಯನ್ನೂ ಆಗಾಗ್ಗೆ ಉಪದೇಶಮಾಡುತ್ತಾ ಬಂದರು. ಈ ಒಳ್ಳೇ ಸಲಹೆಗಳನ್ನು ಕೇಳಿಯಲ್ಲಿರುವ ಪಂಚಮರ ಚಾಂ ಕಳಲೆ ಯಜಮಾನನಾದ [illegible] ತನ್ನ ಕುಲದವರಲ್ಲಿ ಈ ವಿಷಯವನ್ನು ಚರ್ಚಿಸಿ ಒಳ್ಳೆ ಅಭಿಪ್ರಾಯವನ್ನು ಹೊಂದಬೇಕೆಂಬದಾಗಿ ತಮ್ಮ ಕುಲದ ಗಡಿಗೆ ಸೇರಿದ 13 ಗ್ರಾಮಗಳ ಮುಖಂಡರನ್ನೂ ಮತ್ತು ಇನ್ನು ಕೆಲವು ಗಡಿ ಸುಮಾರು 150 ಗ್ರಾಮಗಳ ಮುಖಂಡ ಜನರನ್ನೂ ಸಹ ಸೇರಿಸಿ, ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದ [illegible] ತೋಪಿನಲ್ಲಿ ಕಳೆದ ಜೂಲೈ ತಾ|| 13 ರಲ್ಲಿ ಸುಮಾರು ಎರಡು ಸಾವಿರ ಜನವುಳ್ಳ ಒಂದು ದೊಡ್ಡ ಸಭೆಯು ಸೇರಿ ದೇವರ ಕಾರ್ಯ ನೆರವೇರಿದ ನಂತರ ಆ ಸಭೆಯಲ್ಲಿ ಮದ್ಯಪಾನದಿಂದ ಉಂಟಾಗುವ ಅನೇಕ ಕೇಡನ್ನು ಕುರಿತು ಅಲ್ಲಿ ನೆರೆದಿದ್ದ ಯಜಮಾನ [illegible] ಕೆಲವು ಗಡಿ ಮುಖಂಡರು ತಮ್ಮ ಕುಲದವರಿಗೆ ವಿಶದವಾಗಿ ತಿಳಿಸಿದರು. ಈ ಒಳ್ಳೇ ಉಪನ್ಯಾಸವನ್ನು ಸಭೆಯವರು ಕೇಳಿ ಬಹಳ ಸಂತೋಷಪಟ್ಟು ಮುಂದೆ ಹೆಂಡ ಕುಡಿಯುವದನ್ನು ಬಿಟ್ಟುಬಿಡುವದಾಗಿಯೂ, ವಿದ್ಯಾಭ್ಯಾಸ ಜಿರಾಯ್ತಿ ಕಸಬು ಮೊದಲಾದ ಒಳ್ಳೇ ನಡತೆಯಿಂದ ಇರುವದಾಗಿಯೂ ಏಕವಾಕ್ಯತೆಯಿಂದ ಸರ್ವರೂ ಪ್ರಮಾಣಮಾಡಿ ಒಪ್ಪಿಕೊಂಡರು. ಆ ಕಾಲದಲ್ಲಿ ಅಲ್ಲಿದ್ದವರಿಗೆಲ್ಲಾ ಅಪರಿಮಿತವಾದ ಸಂತೋಷವುಂಟಾಯ್ತು. ಅನಂತರ ಆ ಸಭೆಯವರು ನಾಲಾಗಿ ಕುಳಿತು ಸಂತೋಷದಿಂದ ಸುಭೋಜನಮಾಡುವ ಕಾಲಕ್ಕೆ ಸರಿಯಾಗಿ ಹೆಂಡದ ಕಂಟ್ರಾಕ್ಟುದಾರರಾಗಿಯೂ, ಸಾಹುಕಾರರಾಗಿಯೂ ಇರುವ ನಂಜನಗೂಡು ಧಂಡೆಯವರು ನೂರಾರು ಕೈಕೋಳ, ಬಂದೂಕು ಸಮೇತ ಪೋಲೀಸಿನವರನ್ನು ಕರೆದುಕೊಂಡು ಕುದುರೆ ಗಾಡಿಯಲ್ಲಿ ಬಂದು, ಸಭೆಯ ಜನರನ್ನು ನೋಡಿದರಂತೆ. ಆ ಕೂಡ್ಲೆ ಅವರ ಮನಸ್ಸಿನಲ್ಲಿ ಬಹು ಕೋಪವೂ ವ್ಯಥೆಯೂ ಉಂಟಾಗಿ ಭೋಜನ ಕಾಲದಲ್ಲಿಯೇ ಪೋಲೀಸಿನವರ ಸಮೇತ ಊಟಮಾಡುತ್ತಾ ಇದ್ದ ಮುಖ್ಯಸ್ಥರಿಗೆ ನೀವು ಹೆಂಡ ಕುಡಿಯಕೂಡದೆಂದು ಕಟ್ಟುಮಾಡುವದಕ್ಕೆ ಸಭೆ ಸೇರಿ ಇರುತ್ತೀರಿ ಎಂದು ಮುಖಂಡರಲ್ಲಿ ಎಂಟು ಜನರನ್ನು ವಸ್ತಗಿರಿಮಾಡಿ ತೆಗೆದುಕೊಂಡುಹೋಗಿ ಬಂದೋಬಸ್ತು ಮಾಡಿಸುತ್ತೇವೆಂದು ಎಂಟು ಜನ ಮುಖಂಡರನ್ನು ಈಚೆಗೆ ಕರೆದುಕೊಂಡು ಬಂದರಂತೆ. ಇದನ್ನು ಸಭೆಯಲ್ಲಿ ಊಟಮಾಡುತ್ತಾ ಇದ್ದ ಎಲ್ಲಾ ಜನರೂ ನೋಡಿ ಊಟ ಬಿಟ್ಟು ಏಕಕಾಲದಲ್ಲಿ ಎದ್ದುಬಿಟ್ಟು, ಒಟ್ಟಿಗೆ ಇವರ ಜೊತೆಯಲ್ಲಿ ಹೊರಡಲು ಸಿದ್ಧರಾದರಂತೆ. ಇದನ್ನು ನೋಡಿ ಧಂಡೆಯನವರು ವಗೈರೆಯವರು ಏನೋ ಯೋಚನೆಮಾಡಿಕೊಂಡು ಮೋಗಳಕೇರಿಗೆ ಹೊರಟುಹೋಗಿ ಪುನಃ ಬರಲೇ ಇಲ್ಲವಂತೆ. ಈ ಧಂಡೆಯನವರ ಮೇಲೆ ನಂಜನಗೂಡು ಸಬ್ ಡಿವಿಜನ್ ಕೋರ್ಟಿನಲ್ಲಿ ಫಿರ್ಯಾದು ನಡೆದು ವಿಚಾರದಲ್ಲಿ ಇರುತ್ತೆ. ಕುಂಬಳ್ಳಿ ಪಂಚಮರು ಧಂಡೆಯನವರಿಗೆ ಸಹಾಯವಾಗಿ, ಮದ್ಯಪಾನ ಮಾಡಿದ್ದರಿಂದ ಸಭೆಯವರು ಅವರನ್ನು ಬಿಟ್ಟು ಇರುತ್ತಾರೆ. ಈ ಕುಂಬಳ್ಳಿಯವರು ತಮ್ಮ ತಪ್ಪನ್ನು ತಿಳಿದುಕೊಂಡು ತಮ್ಮ ಜನರನ್ನು ಸೇರಿಕೊಳ್ಳಬೇಕಾಗಿ ಆತುರಪಡುತ್ತಾ ಇರುತ್ತಾರೆ.

ಹಾಲಿ ಸುಮಾರು 300 ಗ್ರಾಮಗಳ ಪಂಚಮರು ಪ್ರಮಾಣ ಮಾಡಿ ಹೆಂಡ ಕುಡಿಯುವುದನ್ನು 3-4 ತಿಂಗಳ ಲಾಗಾಯ್ತು ಬಿಟ್ಟು ಇರುತ್ತಾರೆ. ಈಗ ಪಂಚಮರಲ್ಲಿ ಸಂಪಾದನೆ ಆಗುತ್ತಾ ಇರುವ ಧನವು ಇವರಲ್ಲಿ ನೆಲೆಗೊಂಡು ಸುಖವಾಗಿ ವಿದ್ಯಾಭ್ಯಾಸ, ಜಿರಾಯ್ತಿ ಮಾಡಿಕೊಂಡು ಸಂತೋಷವಾಗಿ ಇರುತ್ತಾರೆ. ಈ ಮದ್ಯಪಾನವೆಂಬ ಗುಪ್ತ ರಾಕ್ಷಸನಿಗೆ ಉಂಟಾಗಿ ಇರುವ ಕ್ಷಯ ರೋಗವನ್ನು ಹೋಗಲಾಡಿಸಿ ಅದರ ಪ್ರತಾಪವನ್ನು ಪುನಃ ನೆಲಗೊಳಿಸಬೇಕೆಂದು ಹೆಂಡದ ಕಂಟ್ರಾಕ್ಟುದಾರರು ಮತ್ತು ಇವರ ಕಡೆಯವರು ಅಲ್ಲಲ್ಲಿ ಸಂಚರಿಸುತ್ತಾ, ಇತರ ಗ್ರಾಮ ಮುಖಂಡರಲ್ಲಿ ದೂರು ಹೇಳುತ್ತಾ, ಬಸಿರಿಯನ್ನು ಪ್ರಯೋಗಿಸುತ್ತಾ ಇರುತ್ತಾರೆ. ಕಳಲೆಯಲ್ಲಿ ಮುಖಂಡರಾದವರು ಈ ನಿರಾಧಾರವಾದ ಅಭ್ಯಾಸವು ಯಾವ ಕೋಮಿನಲ್ಲಿಯೂ ನಿಲ್ಲುವುದಕ್ಕೆ ಅವಕಾಶವಿಲ್ಲದಂತೆ ಕ್ಷೀಣಗೊಂಡು ನಿರ್ಮೂಲವಾಗಬೇಕೆಂದು ಪ್ರಯತ್ನಪಡುತ್ತಾ, ದೇವರಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದಾರೆ. ಈ ಧ್ವಂಸ ಯುದ್ಧದಲ್ಲಿ ಹೆಂಡದ ಕಂಟ್ರಾಕ್ಟುದಾರರಿಗೆ ನಷ್ಟವುಂಟಾಗಿ ವ್ಯಥೆಪಡುತ್ತಾ ಸಂಚರಿಸುತ್ತಿರುವರು. ಅಯ್ಯೋ ಪಾಪ ! ಈ ವಿಷಯದಲ್ಲಿ ಸರ್ವರೂ ವ್ಯಥೆಪಡಬೇಕಾಗಿದೆ. ಏಕಕಾಲದಲ್ಲಿ ಪಂಚಮರು ತಮ್ಮ ಏಳಿಗೆಗಾಗಿ ಉಂಟುಮಾಡಿಕೊಂಡು ಇರುವ ಅವರ ದೃಢ ಮನಸ್ಸು ಕಲ್ಪಕಲ್ಪ ಸರ್ವರೂ ಸಂತೋಷಪಡಬೇಕಾಗಿರುತ್ತೆ. ಇವರ ಮೂಲ ಪುರುಷನ ಸಂಕಲ್ಪವು ಮುಂದೆ ಸ್ಥಿರವಾಗಿ ನಿಲ್ಲುವುದೇ ? ದೇವರು ನೆರವೇರಿಸಿ ಸಂತೋಷವನ್ನು ಉಂಟುಮಾಡುವುದು ಅವನ ಭಾರವಾಗಿದೆ.

ಬಡವರ ಹಿತಚಿಂತಕ

ಪರಸ್ಪರ ಸಹಾಯಕ ಸಂಘಗಳ ವಿಚಾರವು

ವಿನ್ನಘಟ್ಟದ ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು

ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಸರ್ಕಾರದವರು ದಿವಾನ್ ಸರ್ ಕೃಷ್ಣಮೂರ್ತಿಯವರ ಕಾಲದಲ್ಲಿ ಪ್ರಜೆಗಳು ತಾವು ತಾವೇ ತಮ್ಮಲ್ಲಿ ಒಂದೊಂದು ಬ್ಯಾಂಕನ್ನು ಏರ್ಪಡಿಸಿಕೊಳ್ಳುವುದು ಸರ್ವ ವಿಷಯಗಳಲ್ಲೂ ಅನುಕೂಲವಾದದ್ದೆಂದು ಸಲಹೆ ಕೊಟ್ಟದ್ದು ಸರ್ವರಿಗೂ ತಿಳಿದ ಸಮಾಚಾರವಾಗಿ ಈ ಬ್ಯಾಂಕುಗಳು ಪ್ರತಿ ಒಂದು ತಾಲ್ಲೂಕಿನಲ್ಲೂ ಏರ್ಪಾಟಾಗಿ ಅವುಗಳಿಂದ ಪ್ರಜೆಗಳಿಗೆ ಎಷ್ಟೋ ಸೌಲಭ್ಯಗಳುಂಟಾಗಿವೆ ಎಂಬುದು ಕೇವಲ ಅನುಭವಕ್ಕೆ ಬಂದಿದೆ. ಆದರೆ ನಮ್ಮ ಮಹಾರಾಜರವರ ಘನವಾದ ಉದ್ದೇಶವನ್ನು ಸಕಲರೂ ತಿಳಿದುಕೊಂಡಂತೆ ಕಾಣುವುದಿಲ್ಲ. ಆದ್ದರಿಂದ ವಿನ್ನಘಟ್ಟದ ಕೋಆಪರೇಟಿವ್ ಸೊಸೈಟಿಯ ರಿಪೋರ್ಟಿನಿಂದಲೂ ಜನರಲ್ ಮೀಟಿಂಗಿನಲ್ಲಿ ನಡೆದ ಉಪನ್ಯಾಸಗಳಿಂದಲೂ ಗೌರ್ನಮೆಂಟಿನವರ ಘನವಾದ ಉದ್ದೇಶವೇನೆಂದು ವಿಸ್ತಾರವಾಗಿ ಸಕಲರೂ ತಿಳಿದುಕೊಳ್ಳಬಹುದು.

ಈ ಶೇರ್ ಕ್ರಮ - ಒಂದು ಶೇರಿನ ಬೆಲೆ 10 ರೂಪಾಯಿ. ಈ ಹಣವನ್ನು 20 ಕಂತುಗಳಲ್ಲಾಗಲಿ, ಒಂದೇ ಕಂತಿನಲ್ಲಾಗಲಿ ಕೊಡಬಹುದು. ಸೇರುವಾತನು ಇಂಥಾ ಶೇರುಗಳನ್ನು 1 ರಿಂದ 10 ರ ವರೆಗೂ, ಅದಕ್ಕೆ ಹೆಚ್ಚಾಗಿ ಯಾರೂ ಕೊಳ್ಳಕೂಡದು. ಈ ಬ್ಯಾಂಕಿನಿಂದ ಸಹಾಯ ಪಡೆಯಬೇಕಾದವನು ಶೇರುದಾರನೇ ವಿನಾ ಇತರರಿಗೆ ದೊರೆಯುವುದಿಲ್ಲ. ಈ ಬ್ಯಾಂಕಿನಿಂದ ಸಾಲ ಪಡೆಯುವವರಿಗೆ ಸರ್ಕಾರದವರು ಕಲ್ಪಿಸಿಕೊಟ್ಟಿರುವ ಸೌಲಭ್ಯಗಳನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ. ಹೇಗೆಂದರೆ, ಒಬ್ಬನು ಇತರ ಸಾಹುಕಾರರಲ್ಲಿ ಸಾಲ ತೆಗೆಯಬೇಕಾದರೆ 100 ರೂಪಾಯಿಗೆ 1 ರೂಪಾಯಿನ ಕಾಗದವೇ ಬೇಕು. ಆಧಾರ ಹೋಗಬೇಕಾದ್ದಕ್ಕೆ ತಕ್ಕ ಕಾಗದ ಇದ್ದರೆ ಇರಬೇಕು. ಪತ್ರ ಬರೆಯುವವನಿಗೆ ಮಸಿ ಕೂಲಿ ಕೊಡಬೇಕು, ಇಲ್ಲದಿದ್ದರೆ ಚಿಕ್ಕಾಸು ಬೀಳುವದಿಲ್ಲ. ಸಾಕ್ಷಿಗಳಿಗೆ ಕೂಲಿ ಕೊಡಬೇಕು. ರಿಜಿಸ್ಟರ್ ಮಾಡುವ ಕಾಲದಲ್ಲಿ ಖರ್ಚಿಗೆ ಮಿತಿ ಇಲ್ಲ. ಈ ತೊಂದರೆಗಳು ಸಾಹುಕಾರರ ಬ್ಯಾಂಕುಗಳಲ್ಲಿ ಉಂಟು ಬರುವದು ಸರ್ವರಿಗೂ ಗೊತ್ತಿದೆ. ಆದರೆ ಈ ಕೋಆಪರೇಟಿವ್ ಸೊಸೈಟಿ ಬ್ಯಾಂಕಿನಲ್ಲಿ ಸಾಲ ಪಡೆಯುತಕ್ಕವರಿಗೆ ಕಾಗದದ ಖರ್ಚು, ರಿಜಿಸ್ಟರ್ ಮಾಡುವ ಖರ್ಚು, ಬೇರೆ ಖರ್ಚು ಏನೂ ಇಲ್ಲದೆ, ಸುಲಭ ದರದಲ್ಲಿ ಹಣವನ್ನು ದೊರಕಿಸಿಕೊಂಡು, ಮತ್ತು ಕಂತುಗಳಾಗಿ 10 ತಿಂಗಳಲ್ಲಿ ಬ್ಯಾಂಕಿಗೆ ಕೊಡಬಹುದು. ಇತರ ಬ್ಯಾಂಕುಗಳಲ್ಲಿ ಸಿಕ್ಕಿಕೊಂಡು ಬರತಕ್ಕ ಆಸ್ತಿಗಳನ್ನು ಬಲಾತ್ಕಾರ ಹರಾಜು ಮಾಡಿಸಿಕೊಳ್ಳುವ ತೊಂದರೆಯೂ, ಅಸಲು ಮಕ್ಕಳ ತಲೆಯ ಮೇಲೆ ಬೀಳುವ ತೊಂದರೆಯೂ ತಪ್ಪಿಹೋಗಿ ಋಣಮುಕ್ತರಾಗಬಹುದು. ಇಂಥಾ ಬ್ಯಾಂಕಿನಲ್ಲಿ ಪ್ರಜೆಗಳಿಗೆ ಯಾವ ಬಗೆಯಲ್ಲಿಯೂ ಕಷ್ಟನಷ್ಟಗಳುಂಟಾಗಬಾರದೆಂದು ನಮ್ಮ ಮಹಾಸ್ವಾಮಿಯವರ ಸರ್ಕಾರದವರು ಇನ್ಸ್‌ಪೆಕ್ಟರುಗಳನ್ನೂ, ರೆಜಿಸ್ಟ್ರಾರನ್ನೂ ಪ್ರತ್ಯೇಕವಾಗಿ ಇದಕ್ಕಾಗಿಯೇ ನೇಮಕ ಮಾಡಿರುವರು. ಈ ಅಧಿಕಾರಿಗಳು ಆಗಿಂದಾಗ್ಗೆ ಪರ್ಯಟನಮಾಡಿ, ಲೆಕ್ಕಪತ್ರಗಳನ್ನು ತನಿಖೆ ಮಾಡುತ್ತಿರುವುದರಿಂದ ಈ ಬ್ಯಾಂಕುಗಳು ನಂಬಿಕೆಯಾಗಿಯೂ, ಭದ್ರವಾಗಿಯೂ ಸರ್ಕಾರದವರ ಆವರಣದಲ್ಲಿ ನಡೆಯುತ್ತಿರುವವೆಂದು ಗೊತ್ತಾಗಿದೆ. ಆದ್ದರಿಂದ ಪ್ರತಿ ಒಬ್ಬ ಬಡ ಪ್ರಜೆಯೂ ಮುಖ್ಯವಾಗಿ ರೈತ ಪ್ರಜೆಗಳು ಧೈರ್ಯವಾಗಿ ಈ ಬ್ಯಾಂಕಿನ ಷೇರುಗಳನ್ನು ಕೊಂಡುಕೊಂಡು ಅವಶ್ಯ ಬಿದ್ದಾಗ ಒಂದು ತಾಂಬ್ರದ ಕಾಸೂ ಖರ್ಚಿಲ್ಲದೆ, ತಾವು ಅಪೇಕ್ಷಿಸಿದ ಹಣವನ್ನು ಸಂಖ್ಯೆಯಲ್ಲಿ ಕಡಮೆಯಿಲ್ಲದೆ ಮೊತ್ತವನ್ನು ಪಡೆಯಬಹುದು. ಇಂಥಾ ರಿಯಾಯ್ತಿಗಳನ್ನು ಕಲ್ಪಿಸಿ ಪ್ರಜೆಗಳು ಸಾಹುಕಾರರ ಬ್ಯಾಂಕುಗಳಿಂದ ಹಾಳಾಗದಂತೆ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತ ಏಳಿಗೆಗೆ ಬರಬೇಕೆಂಬ ಘನತರವಾದ ಉದ್ದೇಶ ಮಾಡಿದ ನಮ್ಮ ಮಹಾಸ್ವಾಮಿಯವರನ್ನು ಎಷ್ಟು ಕೊಂಡಾಡಿದರೂ ಸಾಲದು.

ಕಳೆದ ತಾ|| 30 ರಲ್ಲಿ ವಿನ್ನಘಟ್ಟದ ಎ. ವಿ. ಸ್ಕೂಲಿನಲ್ಲಿ ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು ನಡೆಯಿತು. ಮೆಂಬರುಗಳು 120 ಮಂದಿ, ಇತರರು ಸುಮಾರು 100 ಮಂದಿ. ಅಂತು 220 ಮಂದಿ ಹಾಜರಿದ್ದರು. ಆ ಸಮಯಕ್ಕೆ ಮೈಸೂರು ಸೀಮೆಯ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್ ಮ|| ಎಂ. ಎ. ನಾರಾಯಣಯ್ಯಂಗಾರ್ಯರವರು ದಯಮಾಡಿ ಮೆಂಬರುಗಳ ಅಪೇಕ್ಷೆಯಂತೆ ಅಗ್ರಾಸನವನ್ನು ವಹಿಸಿದರು. ಮ|| ಗುಂಡೂರಾಯರು ಅಗ್ರಾಸನಾಧಿಪತಿಗಳನ್ನು ವಂದಿಸಿ ಸಭೆಯ ಉದ್ದೇಶವನ್ನು ವಿವರಿಸಿದರು. ಮ|| ಶ್ರೀನಿವಾಸ ಮೂರ್ತಿಗಳವರು ಹಿಂದಿನ ಸಾಲಿನ ರಿಪೋರ್ಟನ್ನು ಓದಿದರು. ಅನಂತರ ಮ|| ಸೂರಪ್ಪನವರು ಈ ಸೊಸೈಟಿಯ ಮೆಂಬರುಗಳ ಪರವಾಗಿ ಅಗ್ರಾಸನರನ್ನು ವಂದಿಸಿ, ಈ ಸೊಸೈಟಿಯು ಪ್ರಾರಂಭದ ಕಷ್ಟವನ್ನೂ ಈಗಿನ ಅಭಿವೃದ್ಧಿಯನ್ನೂ ಕುರಿತು ಮಾತನಾಡಿದರು. ಮ|| ನಾಗಪ್ಪನವರು ಈ ಸೊಸೈಟಿಯು ಹಣದಿಂದ ರೈತಾಪಿ ಜನಗಳಿಗೆ ಗೊಬ್ಬರ ಮುಂತಾದ್ದು ತರಿಸಿಕೊಡಲು ಅನುಕೂಲವಾಗಬೇಕೆಂಬದಾಗಿ ದೀರ್ಘ ಸಂಭಾಷಣೆ ಮಾಡಿದರು. ಮ|| ವಿಶ್ವೇಶ್ವರಯ್ಯನವರು ಸಾಲ ತೀರಿಸುವ 10 ಕಂತುಗಳನ್ನು 20 ಕ್ಕೆ ಹೆಚ್ಚಿಸಿಕೊಡಬೇಕೆಂದು ಸೂಚಿಸಿದರು. ಅಗ್ರಾಸನರು ಹೇಳಿದ್ದೇನೆಂದರೆ— ನೀವು ಕೇಳಿದ ವಿಷಯ ಅಂದರೆ 10 ನ್ನು 20 ಕಂತುಗಳಿಗೆ ಹೆಚ್ಚುಮಾಡಿ ಕೊಡಬೇಕೆಂಬುದು ಆಗಲಾರದು. ಕಾರಣ ಮದುವೆ ಮುಂಜಿಗೆ ನಮ್ಮ ಹಿರಿಯರಂತೆ ಹೆಚ್ಚು ಖರ್ಚು ಮಾಡುವದನ್ನು ನಾವು ಅಪೇ

...ಸು. ಒಂದು ವೇಳೆ ಹಣವಂತರು ಆ ಕ್ರಮವನ್ನು ಅನುಸರಿಸಿದರೂ ...ಲ್ಲ ಅಲ್ಪ ಸಂಬಳಗಾರರು ಸೊಸೈಟಿಯಲ್ಲಿ ಸಾಲ ಪಡೆದು ದುಂದು ...ರ್ಚ ಮಾಡುವವರಲ್ಲಿ ಸರ್ಕಾರದವರು 10 ನ್ನು 20 ಕಂತಿಗೆ ಬದಲಾಯಿಸಿ ...ಟ್ಟುಕೊಳ್ಳಲಿ ಮನುಷ್ಯನ ಆಯುಸ್ಸು ಎಷ್ಟರದು? ಸಂಬಳ ...ದುವವರಲ್ಲಿ ಯಾರಾದರೂ ಮೃತಪಟ್ಟರೆ ಸೊಸೈಟಿಗೆ ನಷ್ಟವಾಗುವುದು ...ರದವರಿಗಂತಲೂ ರಿಕ್ರೂಟ್ ಮಾಡುವವರೂ, ವರ್ತಕರೂ ಈ ಸೊಸೈಟಿಗೆ ...ಸಾಲ ಪಡೆಯುವದಾದರೆ 1 ವರುಷದ ಕಂತಿಗೆ ಹಣ ಕೊಡಲು ನಾನು ...ಸು ಮಾಡುತ್ತೇನೆ. ಈ ಸೊಸೈಟಿಗೆ ಚಂತರು ಹೆಚ್ಚಾಗಿ ಸೇರಿದರೇ ಒಳ್ಳೆ... ಅವರಿಗೆ ಬೇಕಾದ ವ್ಯವಸಾಯದ ಮುಟ್ಟುಗಳು, ತರಹವಾರಿ ಗೊಬ್ಬರ, ...ಮುಖ್ಯವಾದವುಗಳನ್ನು ತರಿಸಿ ಕೊಡಬಹುದು. ಆಗ ಇತರ ಬ್ಯಾಂಕುಗ... ನ್ನು ಆಸ್ತಿ ಯಾವತ್ತೂ ಬರೆದುಕೊಡುವ ಕೆಟ್ಟ ಪದ್ಧತಿ ತಪ್ಪಿಹೋಗು... ...ದಾಸರನ್ನು ದಾರಿದ ಬಡರೈತರು ಎಷ್ಟೋ ಕಷ್ಟಪಟ್ಟು ಬೆಳೆ ಮಾಡಿ ...ಬಡ್ಡಿಗೇ ಸಾಲುವುದಿಲ್ಲ. ಅಸಲೋ ಹಾಗೆಯೇ ಇರುವುದು. ಇಂಥ ...ಈ ಸೊಸೈಟಿಯಲ್ಲಿ ಸಾಹುಕಾರರಾದವರ ಇತರ ಬ್ಯಾಂಕುಗಳಲ್ಲಿರುವ ತಮ್ಮ ...ನ್ನು ತೀರಿಸಿಕೊಂಡು ಆ ಬಾಧೆಯಿಂದ ಬಿಡುಗಡೆ ಮಾಡಿಕೊಳ್ಳಲು ಸುಲಭ... ...ಲ್ಲ. ಈ ಸೊಸೈಟಿಯು ದವಸ ಒದಗಿಸಿಕೊಳ್ಳಬಹುದಲ್ಲವೇ? ಈ ಊರಿನ ...ಆಪರೇಟಿವ್ ಸೊಸೈಟಿಯು ಅಭಿವೃದ್ಧಿಯನ್ನು ಕುರಿತು ನಾನು ಹೆಚ್ಚೇನೂ ...ಬೇಕಾದದ್ದಿಲ್ಲ. ಈ ಹದಿನೆಂಟು ತಿಂಗಳಲ್ಲಿ ತುಂಬಾ ಅಭಿವೃದ್ಧಿಯನ್ನು ...ಹೊಂದಿ ಷೇರುದಾರರಿಗೆ ಶೇಕಡ 6¾ ರೂಪಾಯಿ ಆದಾಯವಾಯಿ... ...ಕ್ಕೆ ನಾನು ತುಂಬಾ ಸಂತೋಷಪಡುತ್ತೇನೆ. ಕಮಿಟಿ ಮೆಂಬರುಗಳು ...ವನ್ನು ನಿರೀಕ್ಷಿಸದ ರೀತಿಯಲ್ಲಿ ಕೆಲಸ ನಡಿಸುವುದರಿಂದ ...ತುಂಬಾ ಸಂತೋಷಿಸುತ್ತೇನೆ. ಇನ್ನು ಮುಂದೆಯೂ ಈಗಿಯೇ ಕೆಲಸ ...ಕ್ತ ಸರ್ಕಾರದವರು ... ಇತರ ಬ್ಯಾಂಕುಗಳೂ ಇದಕ್ಕೆ ...ಕೊಂಡು ... ಸಹಾಯವನ್ನು ಕೈಸ್ವೀಕರಿಸಿ ನಡಿಸಿಕೊಂಡು ಬರು... ...ತಿಸುತ್ತೇನೆ ... 1,000 ರೂಪಾಯಿಗ... ...ರೆಕ್ಟರ್ ... ಮಾಡಿದ ಉಪನ್ಯಾಸ... ...ಸವರನ್ನು ... ಕಳೆದ ವರುಷದ... ...ರ್ ಯುವರಾಜರವರು ಈ ಸೊಸೈಟಿಗೆ ... ಸಂಪಾದಿಸಿದ ...ವನ್ನು ... ಕಳೆದ ... ...ಸುವ ... ...ಶ್ರೀಮನ್ಮಹಾರಾಜರವರನ್ನೂ ... ಎಕ್ಸಲೆನ್ಸಿಯವ... ...ಧನ್ಯವಾದ... ಕೊಟ್ಟು ಮುಗಿಸಿದ... ...ದು.

ಬಿ. ರ. ಕ. ದಾಸ್

ಚಂದಾದಾರರಿಗೆ ನೋಟೀಸ್

ಪಡು ವಿಳಾಸವುಳ್ಳ ವರ್ತಮಾನಗಳ ... ಕೊಡಬಾರದು. ...ವಾದವರು ತಮ್ಮ ಅನುಕೂಲಕ್ಕೋಸ್ಕರ ತಮ್ಮ ಸರಿಯಾದ ಹೆಸರು ...ನ್ನು ಬರೆಯಬೇಕು. ಮತ್ತು ... ...ಪಡೆಯಕೂಡದು, ... ಕೂಡದಾಗಿದ್ದ... ...ಕಟಿಸುವುದಕ್ಕೆ ವರ್ತಮಾನಗಳನ್ನು ... ಮುಂತಾಗಿ ನಮಗೆ ... ಈ ವಾರ, ...ಲ್ಲಿ ನಮಗೆ ಬರುವ ... ಆಯಾ ವಾರದಲ್ಲೇ ಪ್ರಕಟವಾಗುವವು. ...ದ ಕಡೆಯ ... ...ಕಾಗಿರಬೇಕೆಂದು ಒತ್ತ... ...ದೆ.

ಸಮಾನವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳನ್ನು ...ಟೀವ್ ... ವಿಷಯ ... ...ಬರೆದ ... ಹೆಸರನ್ನು ... ಕೇವಲ ... ಎಡಿಟರ್, ... ಬದಲಾಗಿ ಮಾತ್ರ ವಿಳಾಸ ಬರೆಯಬೇಕು. ...ವಾದ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗದೆ ಹೋಗುವವು. ಚಂದಾದಾರ... ...ಕ ವಿಷಯವನ್ನು ... ಬೇಕೆಂದು ... ...ಯಲ್ಲಿ ಬರೆದವರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ...ಇದನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಬಿ. ನಾಲಾ ಮರ್ಮಗಾರರ ಮೇರೆ ಬಕ್ಷೀಸ್.

...,

ತುಮಕೂರು ಸಮೀಪ ... ಅವಾಸ ಕೆರೆ ದಕ್ಷಿಣ ನಾಲಾ ...ರ್ಜ್ ದಾದಾಪ ಹೊಸಳ್ಳಿ ಗ್ರಾಮದ ರೈತರು ನಾಲಾ ಮರ್ಮಗಾರರಿಗೆ ...ಪೇಕ್ಷೆಯಂತೆ ... ಈ ವರುಷದ ಅವರುಗಳ ...ಫಸಲಿಗೆ ನೀರು ಕೊಡದ ಸಬ್ ಡಿವಿಜನ್ ಸಾಹೇಬರವರ ಅಪ್ಪಣೆಗೂ ...ಮಾಡಿದೊಡನೆ ವಿಷಯ ಕುರಿತು ... ತಾ 1 ನೇ ತಾ ...ಮ್ಮ ಪತ್ರಿಕೆಯಲ್ಲಿ ಈ ವಿಷಯವನ್ನು ಪ್ರಕಟಿಸಬೇಕೆಂದು ನಾನು ಬರೆದ ...ದನ್ನು ಪ್ರಕಟಿಸಲು ತಮಗೆ ಇಷ್ಟವಿಲ್ಲವೆಂತಲೂ, ಅಧಿಕಾರಿಗಳು ಯಾವ ...ರೈತರ ಕಷ್ಟನಷ್ಟಗಳನ್ನು ಪರಿಹರಿಸುವರೋ ನೋಡುವೆವೆಂತಲೂ ಜಾತಿ... ...ನೋಟೀಸ್ ಕಾಲಂನಲ್ಲಿ ತಿಳಿಸಿರೋಣವಾಗಿದೆ.

ಮೇಲ್ಕಂಡ ವಿಷಯದಲ್ಲಿ ರೈತರು ಸಬ್ ಡಿವಿಜನ್ ಆಫೀಸರವರಿಗೆ ... ...ಗಳನ್ನು ಬರೆದುಕೊಂಡರು. ಅವರಿಂದ ಏನೊಂದೂ ಹುಕುಂ ಬರಲಿಲ್ಲ. ...ಲ್ಲಿ ಈ ರೈತರು ಇಟ್ಟಿದ್ದ ತರಿ ಫಸಲ್ ಹೊಡೆಯಾಗಿದ್ದದ್ದೆಲ್ಲಾ ಅಂದರೆ ...ಸು 3-4 ಸಾವಿರ ರೂಪಾಯಿನ ಫಸಲೆಲ್ಲಾ ನೀರಿಲ್ಲದೆ ಒಣಗಿಹೋಯಿತು. ...ನೀರು ಕೊಡದ್ದರಿಂದ ನಮ್ಮ ಫಸಲೆಲ್ಲಾ ಒಣಗಿಹೋಗಿರುತ್ತೆ. ನಾಲಾ ...ರು ಮನಃಪೂರ್ವಕವಾಗಿ ನಮ್ಮ ಫಸಲಿಗೆ ನೀರು ಕೊಡದೆ ಒಣಗಿಸಿರುವ ...ದ ನಮ್ಮ ನಷ್ಟಕ್ಕೆ ಯಾರ ಮೇಲೆ ನಾವು ಡಾಮೇಜ್ ಮಾಡಬೇಕೆಂತ ...ಕಟ್ ಬರಕೊಂಡರು. ಅದಕ್ಕೂ ತಹಶೀಲ್ದಾರರಿಂದ ಏನೊಂದೂ ಹುಕುಂ ...ಬರಲಿಲ್ಲ. ಕಳೆದ ಆಗಸ್ಟು ತಾ 12 ರಲ್ಲೂ ತುಮಕೂರ್ ಡಿಸ್ಟ್ರಿಕ್ಟ್ ...ಕಲೆಕ್ಟರ್ ಸಾಹೇಬರವರ ಸವಾರಿ ದಯಮಾಡಿಸಿದ್ದಾಗ ರೈತರು ರೂಬ-

ರೂಬ್ ತಮ್ಮ ಕಷ್ಟನಷ್ಟಗಳನ್ನೆಲ್ಲಾ ಹೇಳಿಕೊಂಡದ್ದಲ್ಲದೆ ಈ ವಿಷಯದಲ್ಲಿ ಅರ್ಜಿ ಸಹಾ ಕೊಟ್ಟರು. ಒಂದಲ ನಡವಳಿಕೆ ಏನು ನಡೆದಿದೆ? ನಮ್ಮ ಫಿರ್ಯಾದಿನ ಕಟ್ಟು ತರಿಸಿ ನೋಡಿ ಇಂಡಾರ್ಸ್ ಕೊಡುತ್ತೇವೆಂತ ಅಪ್ಪಣೆ ಆಯಿತು. ಈ ತಹಶೀಲ್ದಾರರಿಗೂ ಏನೊಂದೂ ಹುಕುಂ ಬರಲಿಲ್ಲ.

ಸರ್ಕಾರೀ ನೌಕರರು ಕೆಲಸ ಮಾಡದಿದ್ದಾಗ್ಯೂ ರೈತರು ಅವರ ಮೇಲೆ ಫಿರ್ಯಾದ್ ನಡಿಸಬೇಕೇ ಹೊರತು ತಾವೇ ಸ್ವತಂತ್ರಿಸಿ ನ್ಯಾಯವಾದ ಕೆಲಸ ಸಹಾ ಮಾಡಿಕೊಳ್ಳಕೂಡದು. ಈ ಮರ್ಮಗಾರರು, ನೀರು ಬಿಡದಿದ್ದರೆ ತಮ್ಮ ಪೈರನ್ನು ಉಳಿಸಿಕೊಳ್ಳಲು ನೀರು ಬಿಟ್ಟುಕೊಂಡಿದ್ದರೆ ರೈತರಿಗೆಲ್ಲಾ ಶಿಕ್ಷೆ ವಿಧಿಸುತ್ತಿದ್ದರು. ಸರ್ಕಾರೀ ನೌಕರರು ಅನ್ಯಾಯಮಾಡಿ ರೈತರ ಜೀವನವನ್ನೇ ನಾಶಮಾಡಿ ಕಷ್ಟನಷ್ಟಗಳಿಗೆ ಗುರಿಪಡಿಸಿದ್ದನ್ನು ಫಿರ್ಯಾದ್ ಮಾಡಿದರೆ ಎಷ್ಟು ದಿವಸದಲ್ಲಿ ಇತ್ಯರ್ಥವಾದೀತೋ ಗೊತ್ತಿಲ್ಲ. ಇಂಥಾ ಅನ್ಯಾಯವಾಗಿರುವದನ್ನು ಸರ್ಕಾರದವರ ಅವಗಾಹನೆಗೆ ಬರುವದಕ್ಕಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುತ್ತೇನೆ.

ರೈತರ ಹಿತಚಿಂತಕ

[ಮೇಲ್ಕಂಡ ರೈತರು ತಮ್ಮ ಅಹವಾಲನ್ನು ಸಂಸ್ಥಾನದ ದಿವಾನ್ ಸಾಹೇಬರವರಿಗೆ ಅರ್ಜಿಯ ಮೂಲಕ ಅರಿಕೆ ಮಾಡಿಕೊಳ್ಳಬಹುದು. ಅದರೆ ಡೆಪ್ಯುಟಿ ಕಮಿಷನರ್‌ರವರು ಇಷ್ಟರಲ್ಲೇ ಇಂಡಾರ್ಸು ಕೊಟ್ಟಾರೆಂದು ನಿರೀಕ್ಷಿಸುತ್ತೇವೆ. ಕಷ್ಟ ನಷ್ಟಗಳಿಗೆ ಗುರಿಯಾದ ಪ್ರಜೆಗಳು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡಲ್ಲಿ ಕಾಲಕ್ರಮದಲ್ಲಿ ನಿಷ್ಪಕ್ಷಪಾತವಾದ ತನಿಖೆಯಿಂದ ಪರಿಹರಿಸಬೇಕಾದದ್ದು ಅವರ ಧರ್ಮವಾಗಿದೆ.—ಎಡಿ.]

ತಾಲ್ಲೋಕು ವರ್ತಮಾನಗಳು.

ಹೋಳೂರಿಪೇಟೆ.—ಕಳೆದ 2 ನೇ ತಾ ಬುಧವಾರ ಸಾಯಂಕಾಲ ಮೇಲುಕೋಟೆಯ ಶ್ರೀ ತಿರುಕಾರಿ ಸ್ವಾಮಿಗಳವರ ಮಠದಲ್ಲಿ ಒಂದು ಸಭೆಯು ಸೇರಿತು. ಈ ... ಮಠದಲ್ಲಿ ವೇದಾಂತ ವಿದ್ಯಾರ್ಥಿಗಳಿಗೆ ಬೇಕಿದ್ದ ಮತ್ತು ಶ್ರೀಭಾಷ್ಯದಲ್ಲಿಯೂ, ಇತರ ಸಂಪ್ರದಾಯ ಗ್ರಂಥಗಳಲ್ಲಿಯೂ ಪರಿಪೂರ್ಣ ... ಶ್ರೀಮಾನ್ ಕಾರಪ್ಪಾಕಂ ವೆಂಕಟಾಚಾರ್ಯರು ... ದಯಮಾಡಿ ... ಶ್ರೀಕಾರ್ಯ ನಡ... ... ದಾದಾಯರ ... ಸಮಾಧಾನಗಳನ್ನು ... ಸ್ವರೂಪಕರಾಗಿ ... ಕಾರರಾಗಿ ... ಜನಗಳ ... ಉಪನ್ಯಾಸವನ್ನು ... ಮೇಲೆ ... ಯನ್ನು ಅನುಸರಿಸಿ ಈ ... ರದಕ್ಕೆ ... ಇತರ ವಿದ್ವಾಂಸರುಗಳೂ ... ಯ ... ಆಗ ಗ್ಗೆ ಉಪಯುಕ್ತವಾದ ಉಪನ್ಯಾಸಗಳಿಂದ ... ಸ್ವಾರಿ ... ಸಬೇಕಾಗಿದ.

ಮಾಗಡಿ.— ಈಗ 7 ... ದಿನಗಳ ... ಮಳೆಯು ಬಿದ್ದ ... ವಾಗಿ ಹುಯ್ಯುತ್ತಾ ಇದೆ. ... ಕೋಡಗಾನದಲ್ಲಿ ಮುಳುಗಿ ... ಮತ್ತಾ ... ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿ ಹರಿಯುತ್ತಿವೆ. ... ಮೇಲೂ ... ಗಳಿಗೆ ... ಇಲ್ಲ. ಎಲ್ಲರೂ ಸುಗ್ಗಿಯನ್ನೇ ಎದುರು ನೋಡುತ್ತಾರೆ. ... ಅಮಲ್ದಾರರು ... ಹೆಸರುಗಳನ್ನು ... ಕೊಂಡು ... ವರ್ತಮಾನವಿದೆ. ಇವ... ... ಕಡೆ ನಮ್ಮ ಅಮಲ್ದಾರರವರ ದೃಷ್ಟಿಯು ಬಿದ್ದು ... ವರ್ಣ... ಜೂಜಾಟವನ್ನು ... ತಪ್ಪಿಸುವುದರಿಂದ ... ಬಡವರ ಮಕ್ಕಳು ... ಜೂಜುಗಾರರೂ, ಕಳ್ಳತನ ಮೊದಲಾದವುಗಳಿಗೆ ... ತಮ್ಮ ಕೆಲಸಗಳಲ್ಲಿ ಉದುಕ್ತರಾಗುವರು. ಇಲ್ಲಿನ ಪೊಲೀಸ್ ಆಫೀಸಿನಲ್ಲಿ ಒಂದು ಕಾರ್ಯ ... ಒಂದು ಗಂಟೆ ... ಮುನಿಸಿಪಾಲ್, ... ಮೊದಲಾದವುಗಳನ್ನು ಮಾಡಬೇಕಾದಲ್ಲಿ 2-3 ... ಕೆಲಸವಾಗುವುದು ... ಇಲ್ಲಿನ ಡಾಕ್ಟರ್ ಸುಬ್ಬರಾವ್ ... ಅವರು ತುಂಬಾ ಮುತುವರ್ಜಿಯಿಂದ ... ಬಡ ಜನಗಳು ... ಒಳ್ಳೆ ... ಔಷಧಿಗಳನ್ನು ಕೊಟ್ಟು ಇಲಾಜು ಮಾಡಿ ... ಇವರು ಮುಸಲ್ಮಾನರಾದರೂ ಹಿಂದುಗಳ ಮೇಲೆ ಇವರಿಗಿರತಕ್ಕ ಅಭಿಮಾನವು ಸ್ತೋತ್ರಾರ್ಹವಾದದ್ದು. ... ಇಲ್ಲಿ ಸ್ಥಾಪಿಸಿರುವ ವಾಚನಾಲಯದಿಂದ ಜನಗಳಿಗೆ ಉಪಯೋಗವೇನೂ ಕಾಣುವದಿಲ್ಲ. ... ಪತ್ರಿಕೆಗಳನ್ನೂ, ಪುಸ್ತಕಗಳನ್ನೂ ರಾತ್ರಿ ಹೊತ್ತು ಕೊಂಡು ... ಓದುತ್ತಾರೆಯೇ ಹೊರತು ... ನೋಡುವುದಕ್ಕೆ ಆಗುವದಿಲ್ಲ. ಆದ್ದರಿಂದ ... ನೋಡಲಿಯುವರೇ ಸದರಿ ವಾಚನಾಲಯವನ್ನು ... ಇರುವ ಯಾವದಾದರೊಂದು ಅಂಗಡಿಯಲ್ಲಿ ಸ್ಥಾಪಿಸಿ, ಹಗಲೂ ರಾತ್ರಿ ಬಾಗಿಲು ತೆರೆದಿರುವಂತೆ ... ಜನಗಳು ಹೋಗಿ ಓದಿ ನೋಡಿಕೊಂಡು ಅಪರಿಮಿತವಾದ ಪ್ರಯೋಜನಗಳನ್ನು ಹೊಂದಿ ಹೋಗುತ್ತಾರೆ. ಮಾಗಡಿಯಲ್ಲಿ ಅನೇಕವಾದ ... ಗಳೂ, ವಸ್ತ್ರಗಳೂ, ... ಗಳೂ, ದೀಪಸ್ತಂಭಗಳೂ, ... ಗಳೂ, ಎರಕ ಕೆಲಸದಲ್ಲಿ ಪ್ರಖ್ಯಾತವಾದವರಿಂದ ತಯಾರಿಸಲ್ಪಡುತ್ತಿರುವ ಬಿಂದಿಗೆಗಳೂ, ... ಗಳೂ, ... ವಾಗಿರುವ ... ತಯಾರಿಸಲ್ಪಡುತ್ತವೆ. ಇದರಿಂದ ಮಾಗಡಿಯಲ್ಲಿ ಒಂದು ಇಂಡಸ್ಟ್ರಿಯಲ್ ಸ್ಕೂಲನ್ನು ಇಟ್ಟಲ್ಲಿ ಅನೇಕರು ... ಬಯಲ ಕೆಲಸಗಳು ನಡೆದು, ಅಭಿವೃದ್ಧಿಗೆ ಬರುವವೆಂದು ನಂಬಿರುತ್ತೇವೆ. ಆದ್ದರಿಂದ ಪುರವಾಸಿಗಳೆಲ್ಲರೂ ಇದಕ್ಕೆ ಗಮನ ಕೊಡಬೇಕಾಗಿ ಪ್ರಾರ್ಥನೆ.

ಶ್ರೀರಂಗಪಟ್ಟಣ.— ಈ ಊರಿನಲ್ಲಿ ಆಗಾಗ್ಗೆ ಮಳೆ ಆಗುತ್ತಾ ಇದೆ. ದನಕರುಗಳಿಗೆ ತೃಣವೂ, ನೀರೂ ಸಮೃದ್ಧಿಯಾಗಿದೆ. ಧಾರಣೆಮಾತ್ರ ಮಾತ್ರ ತಗ್ಗಲಿಲ್ಲ. ಪಟ್ಟಣವು ಆರೋಗ್ಯಸ್ಥಿತಿಯಲ್ಲಿದೆ. ಭಾವಿಗಳಿಗೆ ಮಾತ್ರ ನೀರು ಬಂದಿಲ್ಲ.—ಈ ಟವುನ್ ಮುನಿಸಿಪಾಲಿಟಿಗೆ ಮೆಂಬರ ಚುನಾವಣೆಯು ಕಳೆದ 1-5 ನೇ ತಾ ನಲ್ಲಿ ಮೆ|| ಎನ್. ರಾಮರಾವ್, ಸಬ್ ಡಿವಿಜನ್ ಆಫೀಸರವರ ಅಧ್ಯಕ್ಷತೆಯಿಂದ ಪೋಲಿಂಗು ನಡೆಯಿತು. ಆ ದಿವಸ ಸುಮಾರು 500 ಜನಗಳ ವರಿಗೂ ವೋಟರುಗಳು ಸೇರಿದ್ದರು. ಈ ಮುನಿಸಿಪಾಲಿಟಿ ಸ್ಥಾಪಿಸಲ್ಪಟ್ಟಾರಭ್ಯ ಈ ವರುಷದಂಥಾ ಗಲಾಟೆ ಯಾವಾಗ್ಯೂ ನಡೆದಿರಲಿಲ್ಲ. ಹಳಬರು ನಾಲ್ಕು ಜನರೂ, ಹೊಸಬರು ನಾಲ್ಕು ಜನರೂ ಉಮೇದುವಾರರಾಗಿದ್ದರು. ಇವರಲ್ಲಿ ಹೊಸಬರಾದ ಮ. ಎಸ್. ಎ. ಜವರೈಯನವರಿಗೆ 314, ಮ. ಬಿ. ದೇವೋಜಿರಾಯರಿಗೆ 3.., ಮ. ಎನ್. ಸಿದ್ದಲಿಂಗಪ್ಪನವರಿಗೆ 2.. ವೋಟ್ಸು ಬಂದವು. ಹಳಬರ ಪೈಕಿ ಮೆ|| ಬಿ. ನರಸಿಂಗರಾಯರಿಗೆ 135 ವೋಟ್ಸು ಮಾತ್ರ ಬಂದು, ಇವರು ಚುನಾಯಿಸಲ್ಪಡದೆಹೋದರಾಗಿ ಸ್ಥಳವಾಸಿಗಳು ವಿಷಾದಿಸುವರು. ಸರ್ಕಾರದವರಾದರೂ ಇವರನ್ನು ಮೆಂಬರಾಗಿ ಚುನಾಯಿಸುತ್ತಾರೆಂದು ನಂಬಿದೇನೆ. ಆದರೆ ಮುಂದಾದರೂ ಇವರು ಜನಾನುರಾಗಿಗಳಾಗಿ ಕೆಲಸ ಮಾಡಿ ಈ ಪಟ್ಟಣವನ್ನು ಅಭಿವೃದ್ಧಿಗೆ ತರುತ್ತಾರೆಂದು ನಂಬಿದೇನೆ. ಹೊಸ ಮೆಂಬರುಗಳು ತಮಗೆ ದೊರೆತಿರುವ ಮೆಂಬರ್ ತನವು ಕೇವಲ ತಮ್ಮ ಗೌರವಕ್ಕೆ ಮಾತ್ರವೆಂದು ಭಾವಿಸದೆ, ಬಹುಕಾಲದಿಂದಲೂ ಮುನಿಸಿಪಾಲಿಟಿಯವರ ಉಪೇಕ್ಷೆಯಿಂದಲೂ, ಇತರ ಕಾರಣಗಳಿಂದಲೂ ಕ್ಷೀಣದೆಸೆಗೆ ಬಂದಿರುವ ಪುರಾತನ ಪ್ರಸಿದ್ಧವಾದ ಈ ಪಟ್ಟಣದ ಅಭಿವೃದ್ಧಿ ವಿಚಾರದಲ್ಲಿ ತಕ್ಕ ಸಹಾಯ ಮಾಡುತ್ತಾರೆಂದು ಕೋರುತ್ತೇನೆ.—ತಾ. 6 ನೇ ಭಾನುವಾರ ಮಧ್ಯಾಹ್ನ 5 ಗಂಟೆ ಸಮಯದಲ್ಲಿ ಇಲ್ಲಿನ ಶ್ರೀ ಚಾಮರಾಜೇಂದ್ರ ಮೆಮೋರಿಯಲ್ ಹಾಲ್ ಮುಂಭಾಗದಲ್ಲಿ ಈ ಶ್ರೀರಂಗಪಟ್ಟಣದ ನಿವಾಸಿಯಾಗಿದ್ದು, ಶಕ್ತಿ ನಗ್ನರೆ ಸಾಧನೆಗಳಲ್ಲಿ ಬಹು ಪ್ರಸಿದ್ಧಿಹೊಂದಿ ಅನೇಕ ಭಂಗಾರದ ಪದಕಗಳನ್ನೂ, ಸರ್ಟಿಫಿಕೇಟುಗಳನ್ನೂ ಪಡೆದು ಸ್ವಾಭಿಮಾನದಿಂದ ಇಲ್ಲಿಗೆ ಬಂದಿರುವ ಮೆ|| ನರಸಿಂಹಾಚಾರ್ಯರು ತಮ್ಮ ಸಾಹಸ ಚಮತ್ಕಾರವುಳ್ಳ ಸಾಧನೆಗಳನ್ನು ಪ್ರದರ್ಶನ ಮಾಡಿದರು. ಅಗ್ಗೆ ಸಮಸ್ತ ಅಧಿಕಾರಿಗಳೂ, ನೌಕರರೂ, ಮುನಿಸಿಪಲ್ ಮೆಂಬರುಗಳೂ, ರೈಯತುಗಳೂ, ವಿದ್ಯಾರ್ಥಿಗಳೂ, ಪುರವಾಸಿಗಳೂ ಸಹ ಸೇರಿದ್ದರು. ಅವರ ಅಸಾಧಾರಣವಾದ ಅಂಗಸಾಧನೆ ಮುಂತಾದವುಗಳನ್ನು ನೋಡಿ ಎಲ್ಲರೂ ಆನಂದಪಟ್ಟು, ಅವರನ್ನು ಕೊಂಡಾಡಿದರು.—ಇಲ್ಲಿಗೆ 7 ನೇ ತಾ ಸ್ಯಾನಿಟರಿ ಇನ್‌ಸ್ಪೆಕ್ಟರವರು ದಯಮಾಡಿ, ಈ ಪಟ್ಟಣದ ಅನೇಕ ಗಲ್ಲಿ, ಕಚರಾ ಸ್ಥಳ ಮುಂತಾದವುಗಳನ್ನು ಹೆಲ್ತ್ ಆಫೀಸರೂ, ಅಮಲ್ದಾರ್, ಡಾಕ್ಟರು ಸಹಿತವಾಗಿ ಬಂದು ನೋಡಿಕೊಂಡು ಹೋಗಿರುತ್ತಾರೆ. ಯಾರಾದರೂ ಮಾಡಿ ಈ ಪಟ್ಟಣವನ್ನು ಅಭಿವೃದ್ಧಿಗೆ ತರಬೇಕೆಂಬುದೇ ಪ್ರಾರ್ಥನೆ.

ತರೀಕೆರೆ.—ತರೀಕೆರೆ ಟವನಿನ ಹಿಂದುಸ್ತಾನಿ ಸ್ಕೂಲ್ ಕಟ್ಟಡದಲ್ಲಿ ಕಳೆದ ತಾ 3 ನೇ ಬುಧವಾರ ಸಾಯಂಕಾಲ ತರೀಕೆರೆ ಮುಸ್ಲಿಂ ಅಸೋಸಿಯೇಷನ್ ಎಂಬ ಮುಸಲ್ಮಾನ್ ಸಂಘದವರು ತರೀಕೆರೆ ಟವುನಿನ ಸರ್ಕಾರಿ ಉದ್ಯೋಗಸ್ಥರಾದ ದೊಡ್ಡ ಮನುಷ್ಯರುಗಳಿಗೂ ಮತ್ತು ಪುರವಾಸಿಗಳಾದ ಹಿಂದು ಮತ್ತು ಮುಸಲ್ಮಾನ್ ದೊಡ್ಡ ಮನುಷ್ಯರುಗಳಿಗೂ ಇನ್‌ವಿಟೇಷನ್ ಕಾರ್ಡುಗಳನ್ನು ಕೊಟ್ಟು ಸುಮಾರು 100-100 ಜನರ ವರಿಗೂ ಬರಮಾಡಿಕೊಂಡು, ಇಲ್ಲಿನ ಪ್ರಖ್ಯಾತಹಿತಚಿಂತಕರಾದ ಅಮಲ್ದಾರ್ ಮೆ|| ವಿ. ಸುಬ್ಬರಾಯರವರನ್ನು ಅಗ್ರಾಸನಾಧಿಪತಿಗಳನ್ನಾಗಿ ಮಾಡಿ, ಕೊಡತಕ್ಕ ಸನ್ನಿಯ ಉದ್ದೇಶವನ್ನು ಇಂಗ್ಲೀಷಿನಲ್ಲಿಯೂ, ಹಿಂದುಸ್ತಾನಿಯಲ್ಲಿಯೂ ಮೂರು ಅಡ್ರೆಸ್ಸುಗಳು ಮತ್ತು ಒಂದು ಉಪನ್ಯಾಸ ಸಹ ಬಹು ರಮಣೀಯವಾಗಿ ಕೊಟ್ಟು, ಅಸೋಸಿಯೇಷನವರ ಉದ್ದೇಶವಾದ ರೀಡಿಂಗ್ ರೂಮಿನ ಪ್ರಾರಂಭೋತ್ಸವದ ಕಾಗದಪತ್ರಗಳನ್ನು ಅಗ್ರಾಸನಾಧಿಪತಿಗಳು ಬಿಚ್ಚಿ ಇವರ ಉಪನ್ಯಾಸ ಬಹು ಅನುಭವಭರಿತವಾದ ವಾಕ್ಯಗಳೊಡನೆ ಕನ್ನಡ ಭಾಷೆಯಲ್ಲಿ ಕೊಟ್ಟರು. ಅನಂತರ ಗ್ರಾಮಾಫೋನ್ ಗಾಯನವಾದ ತರುವಾಯ ಸಭಿಕರೆಲ್ಲರಿಗೂ ಅಸೋಸಿಯೇಷನ್ ಪರವಾಗಿ ದಿವ್ಯವಾದ ಹಾರಾತುರಾಯಿ ಗಂಧತಾಂಬೂಲಗಳು ಹಂಚಿ ಪರಿಪಾಲನೆ ಮಾಡಿದರು. ತರೀಕೆರೆ ಟವುನ್ ಮುಸಲ್ಮಾನರಲ್ಲಿ ಈ ರೀತಿ ರಮಣೀಯವಾಗಿಯೂ, ಸಂತ್ರಾಸಂದರ್ಶವಾಗಿಯೂ ಸಭೆ ಸೇರಿದ್ದು ಇದೇ ಮೊದಲಾಗಿರುತ್ತದೆ. ಇದು ಉತ್ತರೋತ್ತರ ಪ್ರಬಲಿಸ್ಥಿತಿಗೆ ಏರಲೆಂದು ಹಾರೈಸುತ್ತೇನೆ.—ರೈಲ್ವೆ ಸ್ಟೇಷನ್ ಬಳಿಯಲ್ಲಿರುವ ವೆಂಕಟರಾಯರ ಚಾವಡಿಯಲ್ಲಿ ಒಂದು ಹಸು ಕಳೆದ ತಿಂಗಳು 21 ನೇ ತಾ ಕೇಳುತ್ತಿದ್ದದ್ದು ಇಲ್ಲಿನ ಪೋಲೀಸಿಗೆ ತಿಳಿಯಿತೆಂದು ಮಹಜರ್ ನಡೆದಲ್ಲಿ ಹರಸ್ತವದವನೆಂತಲೂ, ಲಿಂಗಾಯತ ಮಠ್ ... ಹಲೂ ತಿಳಿಯಬಂದು ... ಇತನು ಸೋಟದಲ್ಲಿ ಕಲ್ಲು ಕಟ್ಟಿ ಕೊಂಡು ಬಿದ್ದು ... ಆತನ ಸೊಂಟದಲ್ಲಿ ಕಟ್ಟಿದ್ದ ಕಲ್ಲುಗಳಿಂದ ತಿಳಿಯಬಹುದು. ಈತನಿಗೆ ಸುಮಾರು 40 ವರ್ಷ ಪ್ರಾಯವಿರಬಹುದು. ಈ ಶವವನ್ನು ಇಲ್ಲಿನ ... ಸಾಲಿಗ ... ಪರಶ್ ಮಾಡಿದರು. ಇಲ್ಲಿನ ಅಮಲ್ದಾರರೇ ಮೊದಲಾದ ದೊಡ್ಡ ಮನುಷ್ಯರೆಲ್ಲಾ ಸೇರಿ ತಾಲ್ಲೂಕು ಕಛೇರಿ ಬಳಿ ಎಕ್ಕಡವಾಗಿ ಒಂದು ರೀಡಿಂಗ್ ರೂಂ ಕಟ್ಟಡ ಕಟ್ಟಿ..., ಕಳೆದ ತಿಂಗಳು 27 ನೇ ತಾ ಪ್ರತಿಷ್ಠೆ ಮಾಡಿದರು. ... ಕಾರ್ಪೊರೇಷನ್ ಕಟ್ಟಡ ಕಟ್ಟುವದಕ್ಕೆ ಪ್ರಾರಂಭಿಸಿರುತ್ತಾರೆಂದು ವರ್ತಮಾನ. ಇದು ಎಷ್ಟೋ ಸಂತೋಷಕರವಾದದ್ದು. ಆದರೆ ಈ ತಾಲ್ಲೂಕಿನಲ್ಲಿ ಇನ್ನೂ ಯಾವ ಸುಧಾರಣೆಯೂ ಇಲ್ಲದಿರುವದು ವ್ಯಸನ. ಈ ವಿಷಯದಲ್ಲಿ ನಮ್ಮ ಅಮಲ್ದಾರರವರು ಪ್ರಯತ್ನಪಡುವರೆಂದು ನಂಬುತ್ತೇನೆ. ಈ ಪ್ರಾಂತ್ಯ ಒಳ್ಳೇ ಮಲೆಯಾಗಿ ಬೆಳೆಗಳು ಉತ್ತಮಸ್ಥಿತಿಯಲ್ಲಿರುವದನ್ನು ನೋಡಿದರೆ ಮನಸ್ಸಂತೋಷವಾಗುತ್ತದೆ. ಆದರೆ ಧಾರಣೆಯನ್ನು ನೋಡಿದರೆ ಮನಸ್ಸು ಕುಗ್ಗಿಹೋಗುತ್ತದೆ.

ಚಿಕ್ಕಮಗಳೂರು.— ಈ ಊರಲ್ಲಿ ಸ್ವಲ್ಪ ದಿನದಿಂದ, ಬಹು ಜೋರಾದ ಮಳೆ ಬರುತ್ತಾ ಇದೆ. ಮಳೆ ಜೋರಿನಿಂದ ಕೆಲವು ಮನೆಗಳು ಬೀಳುವ ಸಂಭವವುಂಟು, ಇಲ್ಲಿ ಅಲ್ಲಿ ಗುಂಡಿಗಳಲ್ಲು ನೀರು ನಿಂತಿರುವದ್ದರಿಂದ ಮಲೇರಿಯಾ ಜ್ವರವು ಸಂಭವಿಸೀತೆಂತ ಜನಗಳು ಯೋಚಿಸಬೇಕಾಗಿದೆ. ಈಗ ಪ್ಲೇಗಿನ ಗಡಿಬಿಡಿ ಕೊಂಚ ಕಮ್ಮಿ ಆಗುತ್ತಾ ಇದೆ. ಬಸವನ ಹಳ್ಳಿ ಪ್ರಾಂತ್ಯ ಇಲಿ ಬೀಳುತ್ತಾ ಇದೆ. ಈಗ ಕಾಫಿಗೆ ದರ ಇರುವದರಿಂದ ಹಾಳುಬಿದ್ದಿದ್ದ ಈ ಪ್ರಾಂತ್ಯದ ಕಾಫಿ ತೋಟಗಳೆಲ್ಲಾ ಜನರು ವ್ಯವಸಾಯ ಮಾಡುತ್ತಾ ಇದಾರೆ. ಮತ್ತು ಕಾಫಿ ಪ್ಲಾಂಟರುಗಳು ಸಹ ಹಣವಂತರಾಗಿರುತ್ತಾರೆ. ಇಷ್ಟು ಮಳೆ ಬಂದರೂ ಜನಸು ದರ ಅಕ್ಕಿ ರೂಪಾಯಿಗೆ 7½ ಸೇರು, ರಾಗಿ 15 ಸೇರು ಇದೆ. ಆದ್ದರಿಂದ ಜನಗಳು ಬಹು ಮೊಪ್ಪ ಪರಿಗಾಲ ಅನುಭವಿಸುತ್ತಿರುವುದು ಕಾಣಬೇಕಾಗಿದೆ. ಈ ಊರಿಗೆ ರೈಲ್ವೆ ಬರತಕ್ಕ ಬಗ್ಗೆ ಈಗ ರೈಲ್ವೆ ಸರ್ವೇಗಾಗಿ ಏರ್ಪಟ್ಟಿರುವ ಇಂಜಿನಿಯರ್ ಇಲಾಖೆಯವರು ಕಡೂರು, ಚಿಕ್ಕಮಗಳೂರು, ಬೇಲೂರು, ಹಾಸನ, ಚನ್ನರಾಯಪಟ್ಟಣದಿಂದ ಹೊಳೆನರಸೀಪುರಕ್ಕೆ ಸೇರಿಸುವದಕ್ಕೆ 15 ದಿನ ಆಗಾಯಿತು. ಕೆಲವು ಓವರ್ಸಿಯರವರ ಸಹಾಯದಿಂದ ಮೆ|| ಮಿರ್ಜಾ ಸಾಹೇಬರವರು ಸರ್ವೆ ಮಾಡುತ್ತಾದಾಗಿ ತಿಳಿಯುತ್ತೆ. ಇದು ಬಹು ಶ್ಲಾಘ್ಯವಾದ ಏರ್ಪಾಡಾದ್ದರಿಂದ ಸರ್ಕಾರದವರಿಗೆ ಲಾಭವೂ ಆಗುವದೂ ಅಲ್ಲದೆ ಜನಗಳ ಕೋರಿಕೆಯೂ ನೆರವೇರಿದಂತೆ ಆಯಿತು.—ಕಳೆದ 3 ವರುಷದಿಂದ ಚಿಕ್ಕಮಗಳೂರು ಟವನ್ ಕೋಆಪರೇಟಿವ್ ಸೊಸೈಟಿ ಏರ್ಪಟ್ಟು ಜನಗಳ ಸಹಾಯದಿಂದ ಸಂಘದ ಕೆಲಸವು ಬಹು ಸಂವಿಕೆಯಾಗಿ ನಡೆಯುತ್ತಾ ಇದೆ. ಈ ಸಂಘದ ಜನರಲ್ ಮೀಟಿಂಗು ಮೊನ್ನೆ ನಡೆದು, ಈ ವರುಷ ದಸರಾ ಕಾಲದಲ್ಲಿ ನಡೆಯತಕ್ಕ ಮೈಸೂರು ದೇಶದ

ಕೋಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್‌ಗೆ ಸಂಘದ ವಿಚಾರ ಚರ್ಚಿಸತಕ್ಕ ಬಗ್ಗೆ ಹೋಗುವರೆ ಸೆಕ್ರೆಟರಿ ಪೇಷ್ಕಾರ್ ಅಮಲ್ದಾರ್ ಮ ಕೇಶವಾಚಾರ್ರನ್ನೂ, ಕಾಫಿ ಪ್ಲಾಂಟರ್ ಸಾಹುಕಾರ್ ಮ|| ಬಿ. ಎಚ್ ಹನುಮಂತಪ್ಪನವರನ್ನೂ ಚುನಾಯಿಸಿ, ಮೊದಲು ಸಂಘಕ್ಕೆ ಏರ್ಪಡಿಸಿದ್ದ 1,000 ಷೇರು ಭರ್ತಿ ಆಗಿದ್ದರಿಂದ ಪುನಃ 1,000 ಷೇರು ರೆಜಿಸ್ಟರು ಬಗ್ಗೆ ಗೌರ್ನಮೆಂಟಿಗೆ ಕಳುಹಿಸಿದೆ ದಾಗಿ ತಿಳಿಯಬರುತ್ತೆ —ಈ ಊರಲ್ಲಿ ಯಾವ ತರದ ಕೈಗಾರಿಕೆ ಕೆಲಸವೂ ಇಲ್ಲದ್ದರಿಂದ ಸಾಹುಕಾರ್ ಮತ್ತು ಕಾಫಿ ಪ್ಲಾಂಟರ್ ಮ|| ಬಿ. ಎಚ್ ಹನುಮಂತಪ್ಪ, ಪ್ಲೀಡರ್ ಮ|| ರಾಮಸ್ವಾಮಿ ಅಯ್ಯಂಗಾರ್, ಇವರ ಪ್ರೋತ್ಸಾಹದಿಂದ 1೦ ದಿವಸಗಳ ಮುಂಚೆ ದತ್ತಾತ್ರೇಯ ಕೈಗಾರಿಕೆ ಸೊಸೈಟಿ ಎಂಬ ಸಂಘವನ್ನು ಏರ್ಪಡಿಸಿ ರೆಜಿಸ್ಟರು ಬಗ್ಗೆ ಗೌರ್ನಮೆಂಟಿಗೆ ಕಳುಹಿಸಿರುತ್ತಾರೆ ಸಂಘದ ರೂಲ್ಸು ತಯಾರಿಸಿ 1,000 ಷೇರು 5 ರೂಪಾಯಿ ಮೌಲ್ಯದ ಬಾಬತು ನಿಷ್ಕರ್ಷಿಸಿ ಪ್ರೆಸಿಡೆಂಟರನ್ನಾಗಿ ಅಡ್ವೋಕೇಟ್ ಮ|| ಯು ಎನ್ ಶಿವರಾಯರವರನ್ನೂ, ಸೆಕ್ರೆಟರಿ ಟ್ರೆಜರರನ್ನಾಗಿ ಚುನಾಯಿಸಿ, ಸರ್ಕಾರದ ಅಪ್ಪಣೆ ಬಂದಕೂಡಲೆ ಮಂಗಳೂರು ಮಿಷನ್ ನಮೂನೆ ಮಗ್ಗಗಳನ್ನು ತರಿಸಿ ನೆಯ್ಗೆ ನಡಿಸಬಹುದಾಗಿ ತಿಳಿಯಬರುತ್ತೆ —ಇಲ್ಲಿನ ಮೋಟಾರ್ ಸರ್ವೀಸು ಕೆಲವು ಕಾಲ ನಿಂತಿದ್ದು ಈಗ ಪುನಃ ಯಾವ ತೊಂದರೆ ಇಲ್ಲದೆಯೂ ಪ್ರಯಾಣಿಕರಿಗೆ ಅನುಕೂಲವಾಗಿಯೂ ನಡೆಯುತ್ತಿದೆ

ತಿಪ್ಟೂರು —ಇಲ್ಲಿ 10 12 ದಿವಸಗಳಿಂದಲೂ ತಕ್ಕದ ಮಳೆ ಬರುತ್ತಲಿ ಇದೆ ತಾ 1 ರಲ್ಲಿ ಬಂದ ಮಳೆಯಿಂದ ಕೆರೆಗಳ ಅರ್ಧಭಾಗ ನೀರು ಬಂದು ಈ ಊರಿನ ನೀರಿನ ಕ್ಷಾಮವನ್ನು ಹೋಗಲಾಡಿಸಿರುತ್ತೆ ಇದು ಇಲ್ಲಿನ ಜನಗಳಿಗೆ ಮೊದಲನೇ ಸಂತೋಷ —ಮದರಾಸಿನಿಂದ ಅರವ ನಾಟಕ ಕಂಪನಿಯವರು ಬಂದು ಆಗಲೇ ೨೦ ನಾಟಕಗಳನ್ನು ಆಡಿದರು ಬಹು ದೂರದಾರಿಯಿಂದ ಅನ್ನಾಹಾರ ನಿದ್ರೆಗಳನ್ನು ತೊರೆದು ದುಡ್ಡುಕೊಟ್ಟು ಪೇರಾದಲ್ಲಿ ಕುಳಿತು ಭಾಷೆ ತಿಳಿಯದ ರೀತಿ ಮಗ್ಗುಲಲ್ಲಿರುವವರನ್ನು ಅದೇನು ಇದೇನು ಎಂದು ಕೇಳುವುದೂ ಇನಿತಿಲ್ಲದೆ ಎಷ್ಟರ ಮಟ್ಟಿಗೆ ಎಂದು ನೋಡುವುದು ಮಾತ್ರ ತಿಳಿಯುವುದು ಇನ್ನೇನು ತಿಳಿಯುವುದಿಲ್ಲ ಇದಕ್ಕಾಗಿ ಊರಿನಿಂದ ಬಂದೆವು ಎಂದು ಅಂದುಕೊಂಡು ಆಟ ತೀರಿದ ಮೇಲೆ ಅಂಗಡಿ ಬಾಗಿಲಲ್ಲಿ ಮಲಗಿದ್ದು ಹೋಗುತ್ತಾರೆ ಬೇರೆ ಊರಿನಲ್ಲಿ ಜನಗಳನ್ನು ನೋಡಿದರೆ ಜಾತ್ರೆಯೋ ಎಂಬಂತೆ ಕಾಣುತ್ತೆ ರೂಪಾಯಿಗೆ 5 ಸೇರು ಅಕ್ಕಿಯಾಗಿದ್ದರೂ ನಾಟಕ ನೋಡುವುದು ಮಾತ್ರ ತಪ್ಪುವದಿಲ್ಲ - ಸರ್ಕಲ್ ಇನ್ಸ್‌ಪೆಕ್ಟರವರು ಪ್ರಯಾಣಮಾಡಿಸಿ ಇಲ್ಲಿನ ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸುತ್ತಿದಾರೆ —ಇಲ್ಲಿನ ವೀರಶೈವ ಮಂಡಲಿಯವರು ವೀರಶೈವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕಟ್ಟಿಸುವ ವೀರಶೈವ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯು ಇದೇ ಮಾಹೆ 11 ನೇ ಶುಕ್ರವಾರ ತುಂಕೂರು ಡಿಪ್ಯುಟಿ ಕಮಿಷನರ್‌ರಾದ ಮ|| ಎಸ್ ನಂಜುಂಡಯ್ಯನವರು ಅಧ್ಯಕ್ಷತೆಯಿಂದ ನಡೆಯಬಹುದಾಗಿತ್ತಾಗಿ, ಇದಕ್ಕಾಗಿ ಅಗ್ರಹಾರದ ಮುಖಂಡರಾದ ಸಾಹುಕಾರ್ ಕೆಂಚಶೆಟ್ಟಿಯವರು, ಮಾಸ್ಟರ್ ಬಸಪ್ಪನವರು ಸಹ ಬಹಳ ಮುತುವರ್ಜಿಯಿಂದ ಕೆಲಸವಹಿಸಿ ಮಾಡುತ್ತಾ ಇದಾರೆ ಈ ಊರಿನಲ್ಲಿ 2 3 ವರುಷಗಳಿಂದಲೂ ಇದ್ದ ಸ್ಪೆಷಲ್ ಮಾಸ್ತರವರು ಇಲ್ಲಿಂದ ಯಡವ ತಪ್ಪಕ್ಕೆ ವರ್ಗವಾದಲ್ಪಟ್ಟರು ಇವರು ಜನಾನುರಾಗಿಗಳಾಗಿದ್ದರು ಇವರ ಎದರಿಗೆ ಈಗ ಬಂದಿರುವ ಮ|| ರಾಮಸಿಂಗ್ ಯವರು ಬಂದಿರುವವರನ್ನೇ ಅನುಸರಿಸುವರೆಂದು ನಿರೀಕ್ಷಿಸಲ್ಪಟ್ಟಿದೆ ತಿಪ್ಟೂರಲ್ಲಿರುವ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ಸಲುವಾಗಿ ಕಟ್ಟಡಗಳನ್ನು ಸ್ಥಾಪಿಸುವುದಕ್ಕೆ ಇದುವರೆಗ ಸಹಾಯ ಮಾಡಿರುವ ಮಹನೀಯರು ಯಾರೆಂದರೆ—ಮ|| ಗಳಾದ ಸಾಹುಕಾರ್ ಕೊಟ್ರಶೆಟ್ಟಿಯವರು ರೂ 10 ಗ್ರಾಂಟಿಗೆ ಫುಟ್‌ಪಾತ್ ಕಟ್ಟಿಸಿದ್ರು, ತಿಂಗಳು ಬಸವನವರು ಉರಕೊಂಡ ಮರುಳಸಿದ್ದಪ್ಪನವರು ತಲಾ ರೂ 5 ದೇವಮುದ್ದೆ ಮಲ್ಲಪ್ಪನವರು ರೂ 1, ಪಟ್ಣಶೆಟ್ಟಿ ಚನ್ನವೀರಪ್ಪನವರು ಮುದ್ದಪ್ಪ ರಾಮಶೆಟ್ಟಿ, ಗ್ರಾಂಟಿಗೆ ರಾಚಶೆಟ್ಟಿ, ತಲಾ ರೂ 1 ಪ್ರೊಪೈಟರ್ ತಿಮ್ಮಶೆಟ್ಟಿಯವರು, ಮುದ್ದಪ್ಪ ವರ್ತಕರ್ ಚನ್ನಬಸಪ್ಪ, ಪ್ಯಾಪ್ಕಾಸರ್ ಬಸವಣ್ಣನವರು ತಲಾ ರೂ 2, ಗ್ರಾಂಟಿಗೆ ಜುಂಜಪ್ಪಯನವರು, ಬ್ರಹ್ಮ ದೇವರಹಳ್ಳಿ ಸಿದ್ದಪ್ಪ ಶೆಟ್ಟಿ ಸೋಮೂರು ಹನುಮಂತಶೆಟ್ಟಿ, ಸೋಲೂರು ವೆಂಕಟರಮಣಶೆಟ್ಟಿ, ಬಾಗೇಪಲ್ಲಿ ರಾಮಯ್ಯಶೆಟ್ಟಿ, ತಲಾ ರೂ 1, ಜುನ್ನಾಲೂ 11 —ಕೆರೆಯು ಟವನ್ ಪಕ್ಕದಲ್ಲಿರುವದರಿಂದ ಜನರು ಗಲೀಜುಮಾಡುವದು ಇನ್ನೂ ತಪ್ಪಿಲ್ಲವಾದ್ದರಿಂದ ನಮ್ಮ ದಯಾಳುಗಳಾದ ಅಮಲ್ದಾರ್ ಮ|| ಬಸವರಾಜ ಅರಸಿನವರು ಪೋಲೀಸ್ ಬಸ್ತವಾರಿ ಇಟ್ಟು ಬಂದೋಬಸ್ತು ಮಾಡಿಸಿದರೆ ಪ್ರಜೆಗಳ ಆರೋಗ್ಯವನ್ನು ಕಾಪಾಡಿದಂತಾಗುತ್ತೆ ಮತ್ತು ನಾರಕ್ಕೊಂದಾವರ್ತಿ ಅವರು ಟವನ್‌ಗೆ ಪ್ರವೇಶಿಸಿದರೆ ಮ್ಯುನಿಸಿಪಾಲಿಟಿ ವಿಚಾರಗಳು ಕ್ರಮದ ಪುತ್ತವೆ —ಈ ಊರು ಕೆರೆಯ ಹಿಂಭಾಗದಲ್ಲಿ ಹಿಂದೂಸ್ಥಾನಿ ಬಾಲಕಿಯರಿಗಾಗಿ ದೊಡ್ಡದಾದ ಸ್ಕೂಲು ಬಿಲ್ಡಿಂಗನ್ನು ಮ|| ಮಹಮ್ಮದ್ ಪೆಸ್ಟಗಿರ್ ಸಾಬರು ಧರ್ಮಾರ್ಥವಾಗಿ ಕಟ್ಟಿಸುತ್ತಿದಾರೆ ಇವರು ಜಾತಿಯಲ್ಲಿ ಮಹಮ್ಮದೀಯರಾದಾಗ್ಯೂ ಜನೋಪಕಾರಿಗಳು, ಹಿಂದೂಗಳ ವಿದ್ಯಾಭ್ಯಾಸಕ್ಕೂ ಕಟ್ಟಡಕ್ಕೂ ವಿಶೇಷವಾದ ಸಹಾಯಮಾಡುವವರಾಗಿದಾರೆ

ನೊಣವಿನಕೆರೆ ಪುರ.—ಇಲ್ಲಿನ ಹವಾ ಆರೋಗ್ಯಕರವಾಗಿಯೂ ತಂಪಾಗಿಯೂ ಇದೆ ಜನಗಳಲ್ಲಿ ಅನೇಕರಿಗೆ ನೆಗಡಿ ಕೆಮ್ಮು ಮಾತ್ರ ಇದೆ ಈ ಸಾರಿ ಕಾಲಕ್ರಮವಾಗಿ ಬೆಳೆದಿರುವ ರಾಗಿ ಫಸಲು ಉಬ್ಬಿ ಕೆಂಬಿ ಮೆರೆಯುತ್ತಿರುವದು ಅದನ್ನು ನೋಡುವ ರೈತರ ಆನಂದಕ್ಕೆ ಅಂತವೇ ಇಲ್ಲ ಧಾರಣೆ ರಾಗಿ 16 ಸೇರು, ಅಕ್ಕಿ 6 ಸೇರು ವರಿಗೂ ಮಾರುತ್ತೆ ಈ ಊರಲ್ಲಿ ತುಂಬಿರುವ ದೇವಾಂಗದವರಿಗೆ ನೆಸಬಿನ ಕೆಲಸ ಚನ್ನಾಗಿ ನಡೆಯುತ್ತಿವೆ ಅದರಿಂದ ಅವರ ಜೀವನಕ್ಕೆ ಕೊರತೆಯಿಲ್ಲ ಆದರೆ ಗೌರಿ ಗಣೇಶ ಹಬ್ಬ ಕಾಲದಲ್ಲಿ ಕೆಲವರು ಹುಚ್ಚು ವಿಚಾರ ಮಾಡುತ್ತಾರೆ, ಅಂದರೆ ಮೊಹರಂ ಹಬ್ಬದಲ್ಲಿ ಹಾಕುವಂಥಾ ಹುಲಿ ಮುಂತಾದ ವೇಷಗಳನ್ನು ಹಾಕಿಕೊಂಡು ಪ್ರತಿ ಸಾಯಂಕಾಲ ಬೀದಿಯಲ್ಲಿ ಕುಣಿಯುತ್ತಾರೆ ಇಂದಾ ನಾಗರಿಕಕಾಲದಲ್ಲಿ ಈ ರೀತಿ ಮೃಗಗಳ ಮತ್ತು ಇತರ ಅಸಹ್ಯಕರವಾದ ಬಣ್ಣ ವೇಷಗಳನ್ನು ಧರಿಸುವುದಕ್ಕಿಂತಲೂ, ನಾಗರಿಕವಾದ ರೀತಿಯಲ್ಲಿ ಸಂತೋಷಪಡುವುದು ಬಹು ಒಳ್ಳೇದು ಈ ದೇವಾಂಗದ ಜನರು ವರ್ಷವೆಲ್ಲಾ ಸೀರೆಗಳನ್ನು ನೇಯುವುದರಲ್ಲಿ ತುಂಬಾ ಕಷ್ಟಪಡುವುದರಿಂದ ಅವರು ಈ ಹಬ್ಬ ಕಾಲದಲ್ಲಿ ಎರಡು ವಾರ ಯಾವ ಕೆಲಸವನ್ನೂ ಮಾಡದೆ ವಿಶ್ರಾಂತಿಗಾಗಿ ಈ ಹಬ್ಬದಲ್ಲಿ ಪ್ರತಿ ಒಬ್ಬರೂ ಬಹಳ ಹಣ ಖರ್ಚು ಮಾಡುತ್ತಾರೆ ಈ ಊರು ಪೇಟೆ ವರ್ತಕರಲ್ಲಿ ಮೂರು ನಾಲ್ಕು ಜನಗಳ ಅಂಗಡಿಗಳಲ್ಲಿ ಕೆಮ್ಮು ಬೊಟ್ಟು, ಕಡಮೆ ಅಳತೆ ಸೇರುಗಳುಂಟೆಂತ ತಿಳಿಯಲಾಗಿದೆ ಅಂಥವರ ಮೇಲೆ ಪೊಲೀಸಿನವರ ದೃಷ್ಟಿ ಬೀಳದೆ ಇರುವುದು ಯಾಕೋ ಕಾಣೆ – ಕೆಲವು ದಿನಗಳ ಹಿಂದೆ ಈ ಊರಲ್ಲಿ ನಡೆದ ಕಳುವಿನ ಮೊಕದ್ದಮೆ ಮುಖಾಂತರವಾಗಿ ಉಪ್ಪಾರ ಎಲ್ಲಸಿಗೂ, ಕಸಾಬ ಮುಜಲ್ದಾರ್ ಷೇಕ್ ಎಂಬವನಿಗೂ ಮೂರು ತಿಂಗಳಂತೆ ಸಜಾ ಆಯಿತು – ಈ ಊರಲ್ಲಿರುವ ಸಾಹುಕಾರ್ ಅಲಂಪಲ್ಲಿ ವೆಂಕಟನಾರಾಯಣಶೆಟ್ಟರು ಹೊಸದಾಗಿ ಕಟ್ಟಿಸಿರುವ ಥಿಯಾಸಾಫಿಕಲ್ ಹಾಲ್‌ನಲ್ಲಿ ಕ್ರಮೇಣ ಸಂಸ್ಕೃತ ಪಾಠಶಾಲೆಯೂ, ವೇದಾಂತವಾದವೂ ನಡೆಯುವುದೇ ಶ್ರೇಯಸ್ಕರವಾಗಿದೆ ಪ್ರಕೃತದಲ್ಲಿ ಅದನ್ನು ಉಪನ್ಯಾಸ ಮಂದಿರ ಮತ್ತು ರೀಡಿಂಗ್ ರೂಮಿನಂತೆ ಉಪಯೋಗಿಸುತ್ತಿದಾರೆ ಈ ಊರಲ್ಲಿರುವ ವೆಸ್ಲಿಯನ್ ಮಿಷನ್ ಗುಡ್ಡದಹಳ್ಳಿ ಹೋಂನಲ್ಲಿ ಮೇರಿಬಾಯಮ್ಮನವರು ಅನೇಕ ಮಂದಿ ವಿಧವಾ ಸ್ತ್ರೀಯರನ್ನೂ ಮಕ್ಕಳನ್ನೂ ಪೋಷಿಸಿಕೊಂಡು, ಅವರಿಗೆ ಪ್ರತ್ಯೇಕವಾಗಿ ಒಂದು ಕಟ್ಟಡವನ್ನು ಕಟ್ಟಿಸಿ, ಭಕ್ತಿ ಮಾರ್ಗದಲ್ಲೂ ವಿದ್ಯೆಯಲ್ಲೂ ಕೈಗಾರಿಕೆ ಕೆಲಸದಲ್ಲೂ ಪ್ರೋತ್ಸಾಹಪಡಿಸುತ್ತಲಿರುವುದರಿಂದ ಈ ವರೆಗೆ ಸುಮಾರು 10 ಮಂದಿ ಸಂತೋಷವಾಗಿ ಅಲ್ಲಿ ಸೇರಿ ವಾಸಮಾಡುತ್ತಿದಾರೆ ಈ ಸಾರಿ ನಡೆಯುವ ದಸರಾ ವಿಶಾಖಂಗಳಲ್ಲಿ ಈ ಊರ ಪ್ರತಿನಿಧಿಗಳು ಒಳ್ಳೇ ಪ್ರಯೋಜನಕರವಾದ ವಿಷಯಗಳನ್ನು ಕುರಿತು ಪ್ರಸ್ತಾಪನೆ ಮಾಡುವವರಾಗಿದಾರೆ ಈ ಊರು ಬರ ಬರ ಅನೇಕ ಸ್ವಾತಂತ್ರ್ಯಗಳಲ್ಲಿ ಹಾಳು ಬಿದ್ದಿರುವ ಮನೆಗಳಿಂದ ಮುಚ್ಚಿಹೋಗುತ್ತಿದೆ ಗ್ರಾಮನೈರ್ಮಲ್ಯ ದೇವಾಂಗದವರ ಕೆಲಸದಿಂದ ಮಾತ್ರ ತೋರುವುದು ಇದನ್ನು ಅಭಿವೃದ್ಧಿಗೆ ತರಲಿಕ್ಕೆ ಪ್ರಕೃತ ಒಂದು ಮುನಿಸಿಪಾಲಿಟಿ ಬರಬೇಕಾಗಿದೆ ಬೇರೆ ಕೆಲವು ಒಳ್ಳೇ ತಾಲ್ಲೂಕುಗಳ ಸಂಗದ ಈ ಊರನ್ನು ಹೋಲಿಸಿದರೆ ಚಿಕ್ಕಬಳ್ಳಾಪುರದ ತಾಲ್ಲೂಕು ಬಹಳ ಹಿಂದೆ ಬಿದ್ದಿದೆ — ಗ್ರಾಮಾಂತರಗಳಲ್ಲಿ ಸಾಕ್ಷರತೆ ಕಡಿಮೆ ಎಂತ ಕೆಲವರು ಹೇಳುತ್ತಾರೆ ಸಂತೆ ದಿವಸಗಳಲ್ಲಿ ಸಣ್ಣ ಮಕ್ಕಳು ಮನಬಂದಂತೆ ಇರುವುದು ಸಹಜ ಹೇಳುವದಿಲ್ಲ ಹೀಗೆ ಮಾರುವವರಿಂದ ಕೆಲವು ಜನರು ಬೇರೆ ವಸ್ತು ವಿಗರಟ್ ತೆಗೆದುಕೊಳ್ಳುವುದನ್ನು ಕೇಳಿದ್ದೇವೆ ಕಾಣಬರುವುದು ಕಳೆದ ನಾರವಲ್ಲಿ ಬೀಳುವ ಮಳೆ ನೋಡಿದರೆ ಕೆಂಗಲಿಲ್ಲ ಕೋಡಿ ಬಿದ್ದಿರುವುದು ಪರಗ್ಗೆ ಗಳ ಪಸಲಿಗೆ ತುಂಬಾ ಅನುಕೂಲವಾಯಿತು

ಹೊರೂರು —ಬಹಳ ದಿನಗಳಿಂದ ಮಳೆಯಿಲ್ಲದೆ ಇದ್ದುದು ಈಗ 15 ದಿನಗಳ ಕೆಳಗೆ 2-3 ಹದ ಮಳೆಯಾಗಿ ಜನರಿಗೆ ಸಂತೋಷವನ್ನುಂಟುಮಾಡಿದ ಪೈರುಗಳ ಅಭಿವೃದ್ಧಿಗೂ ಸಹಕಾರಿಯಾಗಿದೆ - ಕಳೆದ ಮೂರು ತಿಂಗಳಿಂದ ಇಲ್ಲಿ ನಾಟಕವಾಡುತ್ತಿದ್ದ ಮದರಾಸು ತಮಿಳು ನಾಟಕ ಸಂಘದವರು ಈಗ ತಮ್ಮೂರು ಪ್ರಾಂತ್ಯ ಹೊರಟುಹೋದರು ಆ ಸಂಘದ ಪ್ರೊಪ್ರೈಟರ್ ಮ|| ಗೋವಿಂದಸಾಮಿನಾಯುಕರಿಗೆ ಇಲ್ಲಿಯ ಪ್ರಮುಖರೂ, ಬೇರೆ ನ ಕರರೂ ಪ್ರತ್ಯೇಕ ಪ್ರತ್ಯೇಕವಾಗಿ ಎರಡು ಬಂಗಾರದ ಮೆಡಲನ್ನು ಕೊಟ್ಟರು ಅವರು ಇಲ್ಲಿಯ ಪಬ್ಲಿಕ್ ಲೈಬ್ರರಿ ಕಟ್ಟಡಕ್ಕೆ 200 ರೂಪಾಯಿ ಕೊಟ್ಟಿರುವುದು ಶ್ಲಾಘನೀಯವಾಗಿದೆ ಕಟ್ಟಡವನ್ನು ಪ್ರಾರಂಭಿಸುವುದು ಅವರ ಕಡೆಯಿಂದಾಗಿ ಇಲ್ಲಿಯ ಸಾಹುಕಾರ್ ಮ|| ಹಿರೀಲಿಂಗಪ್ಪನವರು ವರ್ಷ ವರ್ಷವೂ ಬಡವರಾದ ಬಾಲಕ, ಬಾಲಕಿಯರಿಗೆ ಆಟಪಾಟಗಳನ್ನಾಡಿಸಿ ಪುಸ್ತಕ ಮೊದಲಾದವುಗಳನ್ನು ಕೊಡಿಸಿ ವಿದ್ಯಾ ಪ್ರೋತ್ಸಾಹವನ್ನುಂಟುಮಾಡುವ ಸಮಾರಂಭವು ತಾ 16 ನೇ ಸೋಮವಾರ ನಡೆಯಿತು ಇದಕ್ಕಾಗಿ ಸ್ಥಳೀಯ ದೊಡ್ಡ ಮನುಷ್ಯರೂ ಸಬ್ ಅಸಿಸ್ಟೆಂಟ್ ಸರ್ಜನ್ನರೂ, ಸಾನಿಟರಿ ಇನ್ಸ್‌ಪೆಕ್ಟರರೂ ಶೇಕದಾರರೂ ಪೋಲೀಸ್ ಜಮಾದಾರರೂ, ನೇಟಿವ್ ಡಾಕ್ಟರೂ, ಉಪಾಧ್ಯಾಯರುಗಳೂ ಬಾಲಕ ಬಾಲಕಿಯರೂ ಬಂದು ಸೇರಿದರು ಕಡದರಿಂದ ಅಮಲ್ದಾರ್ ಮ|| ರಾಜಾರಾಯರೂ, ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ|| ಕೃಷ್ಣಸ್ವಾಮಿ ಅಯ್ಯಂಗಾರ್ಯರೂ ದಯಮಾಡಿಸಿದ್ದರು ಆಟಗಳು ಸುಮಾರು 1 ಗಂಟೆಯ ಪೂರ್ವ ಉಪಕ್ರಮವಾಗಿ ನಡೆದ ಬಳಿಕ ಸಭೆಯು ಎ ವಿ ಸ್ಕೂಲ್ ಹಾಲಿನಲ್ಲಿ ಸೇರಲಾಯಿತು ಸಭಿಕರ ಕೋರಿಕೆಯಂತೆ ಅಮಲ್ದಾರರು ಅಗ್ರಾಸನವನ್ನು ವಹಿಸಿದರು ಮ|| ಸೊಂಡೆಕೊಪ್ಪದ ನರಸಪ್ಪನವರು ಸಭೆಯ ಉದ್ದೇಶವನ್ನು ತಿಳಿಸಿದರು ಕಮಲಮ್ಮನೆಂಬ ಬಾಲಕಿಯು ಸ್ತ್ರೀ ವಿದ್ಯೆ ಎಂಬ ಸಣ್ಣ ಉಪನ್ಯಾಸವನ್ನು ಓದಿದಳು ನೇಟಿವ್ ಡಾಕ್ಟರ್ ಮ|| ಚಿದಂಬರಪಂಡಿತರು ಧರ್ಮ ವಿಚಾರವನ್ನು ಉಪನ್ಯಾಸ ಮಾಡಿದರು ಬಾಲಕ ಬಾಲಕಿಯರಿಗೆ ಉಪಯುಕ್ತವಾದ ಪುಸ್ತಕ, ಸ್ಲೇಟು ಮೊದಲಾದವೂ, ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳೂ ಸಭಾಧ್ಯಕ್ಷರಿಂದ ಕೊಡಿಸಲ್ಪಟ್ಟವು ಅನಂತರ ಬಾಲಕಿಯರು ದೇವರ ಸ್ತೋತ್ರವನ್ನೂ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮಾಡಿದರು ಬಳಿಕ ಕಡೂರು ಹೆಡ್ ಮಾಸ್ಟರವರು—ಮ|| ಸಾ ಹಿರೀಲಿಂಗಪ್ಪನವರು ವರ್ಷ ವರ್ಷವೂ ಕಡದೂರಿಗೆ ಪರೀಕ್ಷಾರ್ಥವಾಗಿ ಬರುವ ಬಾಲಕರಿಗೆ ಭೋಜನಾದಿಗಳಿಗೆ ಅನುಕೂಲ ಮಾಡುತ್ತಿರುವರೆಂದೂ, ಕಳೆದ ವರ್ಷ ಕಾರಣಾಂತರದಿಂದ ತಪ್ಪಿಹೋಯಿತೆಂದೂ, ಮುಂದೆ ಕ್ರಮವಾಗಿ ನಡೆಯಿಸುವರೆಂದೂ ಅವರ ಉದಾರ ಗುಣವನ್ನು ತಿಳಿಯಪಡಿಸಿದರು ಸಭಾಧ್ಯಕ್ಷರು ಮ|| ಲಿಂಗಪ್ಪನವರು ಮಾಡುತ್ತಿರುವ ಧರ್ಮಕಾರ್ಯವನ್ನು ಕೊಂಡಾಡಿ ಸಮಯೋಚಿತವಾದ ಭಾಷಣವನ್ನು ಮಾಡಿದರು ಅನಂತರ ಮ|| ಎಂ ಟಿ ಶೇಷಾದ್ರಿಯಂಗಾರ್ಯರು ಸಭಾಧ್ಯಕ್ಷರಿಗೂ, ಕಡೂರು ಹೆಡ್ ಮಾಸ್ಟರಿಗೂ, ಸಭಿಕರಿಗೂ ವಂದನೆಗಳನ್ನು ಅರ್ಪಿಸಿದರು ಆ ಮೇಲೆ ಕಡೂರು ಹೆಡ್ ಮಾಸ್ಟರು ಆಟಪಾಟಗಳಲ್ಲಿ ಸಹಾಯ ಮಾಡಿದ ಸಬ್ ಅ|| ಸರ್ಜನ್‌ರೇ ಮೊದಲಾದವರನ್ನು ವಂದಿಸಿ ಸಭಿಕರೊಡನೆ ಚಕ್ರವರ್ತಿ ಚಕ್ರವರ್ತಿನಿಯವರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಬಯಸಿದರು — ತರೀಕೆರೆಯಿಂದ ವರ್ಗವಾಗಿ ಬಂದಿರುವ ಅ|| ಸರ್ಜನ್ ಮ|| ಗುರುರಾಯರು ಪ್ರಜಾನುರಾಗಿಗಳಾಗುತ್ತಿರುವುದಕ್ಕಾಗಿ ಸಂತೋಷಿಸುತ್ತೇವೆ —ಸಾಹುಕಾರ್ ಪಶ್ರ ವಿ ರಪ್ಪನವರು ಸ್ವಂತ ಖರ್ಚಿನಿಂದ ಪಾತ್ರವಾಗಿ ನಡೆಸುವ ಗರ್ಲ್ ಸ್ಕೂಲ್ ಕಟ್ಟಡವನ್ನು ಕಟ್ಟಿಸಲು ಅನುಕೂಲಿಸಲ್ಲವೆಂದು ತಿಳಿಯುತ್ತೆ ಸರ್ಕಾರದವರು ಸರಿಯಾದ ಸ್ಥಳವನ್ನು ಕೊಡಿಸಿ ಅನುಕೂಲಮಾಡಿಕೊಡುವರೆಂದು ನಂಬುತ್ತೇವೆ— ಧಾರಣೆವಾಸಿ ಅಕ್ಕಿ 6½ 7 ಸೇರು, ರಾಗಿ 16-16 ಸೇರು, ಹುರುಳಿ 16 17 ಸೇರು ಇದೆ- -ಮೈಸೂರು ಸರ್ಕಲ್ ಸ್ಕೂಲುಗಳ ಇನ್ಸ್‌ಪೆಕ್ಟರು ಮ|| ಎಂ ಶ್ರೀನಿವಾಸರಾಯರು ಇಷರಲ್ಲಿ ಸ್ಕೂಲುಗಳ ಪರೀಕ್ಷೆಗಾಗಿ ಬರುವವರಾಗಿದಾರೆ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಲ್ಲಿಯವರೆಗೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ— ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ಪದೇಪದೇ ಆಗಿಯೋ ಬಿಸಿಯಾಗಿಯೋ ಇಳಿಯುವುದು ಬಿಡದ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ ಕಣ್ಣುಮಂಜು, ತಲೆ ತಿರುಗುವಿಕೆ, ಮೈನೋವು, ಕಾಲುನೋವು, ಮರವು, ನಿತ್ರಾಣ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರಶರ್ಕರ, ವಾಯು, ಮಧುಮೇಹ, ಜಲೋದರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [13-5]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ [ಔಷಧಿ]ಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ— ಇವರಲ್ಲಿ ದೊರೆಯುವುವು

ಬಹಳ ಮೇಲಾದ ಅಚ್ಚು ಕರೀ ಬಣ್ಣದ ಮದುರೆ ಜರಿಂನಡಿ ಅಂಚಿನ ಸೀರೆಗಳು.

ಕ್ರಯ ರೂ 2-3-0



ಇವು ವರ್ತಕರಿಗೂ, ಭಾಗವಂತರಿಗೂ, ಬಡವರಿಗೂ ಬೇಕಾದವು ನಮ್ಮಲ್ಲಿನ ಕರೀ ಬಣ್ಣದ ಮದುರೆ ಜರಿನಡಿ ಸೀರೆಗಳು ಉಡುವುದಕ್ಕೆ ಬಹಳ ಅನುಕೂಲವಾಗಿಯೂ ನೋಡುವುದಕ್ಕೆ ಸೊಗಸಾಗಿಯೂ, ಸರ್ವರಿಗೂ ಲಾಭವಾಗಿಯೂ ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟು ವರ್ಷ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ಉದ್ದ ಮತ್ತು ಹೊದಿಯುವ ಸೆರಗುಗಳು ಸ್ವಲ್ಪವೂ ನತಾಸಿಲ್ಲದೆ ಬಹು ಸೊಗಸಾಗಿ ನೇಯಲ್ಪಟ್ಟು ಉದ್ದವು ಧಾರಾಳವಾಗಿ 18 ಮೊಳವಿದೆ ಪರೀಕ್ಷಾರ್ಥ ಒಂದು ಸೀರೆ ತರಿಸಿದಲ್ಲಿ ನಿಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಬರೆಯುವರು

ನಮ್ಮ ವಿಳಾಸ—ಎನ್. ಎಸ್ ಭಟ್ಟಾಚಾರ್,
ನುಂಗಂಬಾಕಂ, ಮದರಾಸು

ಹೊಸ ಕಾದಂಬರಿಗಳು! ನವೀನ ಪುಸ್ತಕಗಳು!!

ತಾರಾಸುಂದರಿ.—ಇದು ಅನಂಗಸುಂದರಿಯ ಉಪಸಂಹಾರ ಕಲ್ಪನಾ ಕೌಶಲವೂ ಘಟನಾವಳಿಯೂ ಬಲು ಮುದ್ದಾಗಿರುವುದು ಕ್ರಯ 8 ಆಣೆ

ಕುಮುದಿನಿ.—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ ಕ್ರಯ 6 ಆಣೆ.

ಸತೀರೋಹಿಣಿ.—ಸ್ತ್ರೀಯರೆಲ್ಲರೂ ಇದನ್ನೋದಬೇಕು ಇಂತಹ ಸರಸವಾದ ಕಥೆಯು ಇದುವರೆಗೂ ಇಲ್ಲವೆಂದು ಎಷ್ಟೋ ಮಂದಿ ಅಭಿಪ್ರಾಯಪಟ್ಟಿರುವರು ಕ್ರಯ 2 ಆಣೆ [130 17]

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲ್ಲಿನ್ಸ್ ಆಹಾರವು

ಕೈಸೋಕದೆ ತಯಾರಾದದ್ದು; ಬಲೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಪೋಷಿಸುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಕಳುಹಿಸುತ್ತಾರೆ

[66-24] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thompson M.A., Proprietor and Manager Wesleyan Mission Press Mysore 10/10/1913

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೨ ನೇ ಇಸವಿ ಅಕ್ಟೋಬರ್ ತಾರೀಖು ೧೭ ನೇ ಗುರುವಾರ ಸಂಚಿಕೆ ೨೦

HASSAN CAPS.

Notice ವಿಶೇಷ ಸಂಗತಿ

ಹಾಸನದ ಟೋಪಿಗಳು.

...ಳಿನ ಅಂತ್ಯವರಿಗೆ 1 ರೂ 6 ಆ ಬಾಳುವ ಟೋಪಿಗಳು ...ಗೆ, 1 ರೂ 1 ಆ ಬಾಳುವ ಟೋಪಿಗಳು 1 ರೂ 2 ಆ ಗೂ ...ಲ್ಪಡುವವು

...ತುವ ಟೋಪಿಗಳೆಲ್ಲಾ ಪೋಸ್ಟೇಜು 1 ರೂ 9 ಆ ಮಾರಿ ಬಿಕರಿ ...

...ಮ ಟೋಪಿಯೂ ಯುನಿಫಾರಮು ಸೂಪರಿಂಟೆಂಡೆಂಟರ ...ಟ್ಟಿಸಲ್ಪಟ್ಟ ಹೊರತು ಮಾರಲ್ಪಡುವದಿಲ್ಲ [107-1]

...ಮ್ಮ ವಿಳಾಸ

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,

ತುಂಕೂರು.

Address–
Wesleyan Mission Cap Industry,
Tumkur

ಗೃಹಕೃತ್ಯದ ನೋಟೀಸು.

ನಮ್ಮ ತಾಯಿ ಗೌರಮ್ಮನು ವಯಸ್ಸಾದ ಮುದುಕಿಯಾಗಿರುತ್ತಾಳೆ ಈಕೆಗೆ ನಾನೊಬ್ಬನೇ ಮಗ ನನಗೆ ಲಗ್ನವಾಗಿ ನನ್ನ ಸಂಸಾರದೊಂದಿಗೆ ವಾಸಮಾಡುತ್ತಾ ಇರುತ್ತೇನೆ ನಮ್ಮ ಹಿರಿಯರು ಸಂಪಾದಿಸಿದ ಮನೆ, ಕೋಟೆ, ಹೊಲ ಸಹಾ ನನ ವಶದಲ್ಲಿಯೇ ಇರುತ್ತವೆ ನಮ್ಮ ತಾಯಿಯು ನನ್ನಲ್ಲಿ ಮನಸ್ತಾಪವಾಗಿ ಹಾಲಿ ಕಡೂರು ತಾಲ್ಲೋಕು ಯಳಗೆರೆಯಲ್ಲಿ ಮುಳ್ಳಪ್ಪನ ಮನೆಯಲ್ಲಿ ಇರುತ್ತಾಳೆ ಈತನ ಹೆಂಡತಿ ಚೆಟ್ಟಿಯಮ್ಮನ ಬೋಧನೆಗೆ ಒಳಪಟ್ಟು ನನ್ನ ಬಾಬತು ಒಂದು ಜೊತೆ ಬುಗಡಿ, ಒಂದು ಜೊತೆ ಬಾವಲಿಯುಂಗುರ, ಒಂದು ಜೊತೆ ನಾಗೆ ಬಾವಲಿ ಮತ್ತು ನಗದು ಐವತ್ತು ರೂಪಾಯಿ ಸಹಾ ತೆಗೆದುಕೊಂಡು ಹೋಗಿ ಸದರಿಯವರ ಮನೆಯಲ್ಲಿ ಇರುತ್ತಾಳೆ ಮೇಲ್ಕಂಡ ನನ್ನ ... ರಸ ತ್ತುಗಳನ್ನೂ ಸಹ ವರಭಾರೆ ಮಾಡುತ್ತಾಳೆಂತ ನನಗೆ ತಿಳಿಯುತ್ತದೆ ಈಕೆಯಲ್ಲಿ ಇರುವ ಚರಜಂದಗಿ ಆಗಲಿ, ನನ್ನ ಸ್ಥಿರಸ್ವತ್ತಾಗಲಿ ಈಕೆಯಿಂದ ಯಾರಾದರೂ ಕ್ರಯ ದಾನ ಮೊದಲಾದ ವರಬಾರೆಯ ಮೂಲಕ ಮೇಲ್ಕಂಡ ಚೆಟ್ಟಿಯಮ್ಮ ಮುಂತಾಗಿ ಯಾರಾದರೂ ಪಡಕೊಂಡಲ್ಲಿ ಅದು ಊರ್ಜಿತವಾಗಲಾರದು ಇದರಿಂದ ನನಗೆ ಉಂಟಾಗಬಹುದಾದ ಎಲ್ಲಾ ಲುಕ್ಸಾನಿಗೂ ಅವರೇ ಬಾಧ್ಯರಾಗಿರುತ್ತಾರೆ ಎಂಬ ಸಂಗತಿ ಸಕಲರಿಗೂ ಈ ಮೂಲಕ ತಿಳಿಯಪಡಿಸಿರುತ್ತೇನೆ

ಹೊಸದುರ್ಗದ ತಾಲ್ಲೋಕು ಬೆಲಗೂರು ಊರ ತಿಪ್ಪಣ್ಣನವರ ಮಗ

[158-1] ಪೀರಪ್ಪನ ರುಜು

ನತ್‌ಮಲ್ ಡೈರಿಗಳು.

ನಮ್ಮಲ್ಲಿ ಪ್ರತಿ ವರುಷವೂ ತಯಾರಾಗುವಂತೆ 1914 ನೇ ಇಸ್ವಿ 4 ನಮೂನೆ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿದೆ

ನಂಬರು 1	ಚಿಕ್ಕ ಸೈಜು ಸಾದಾ	ಕ್ರಯ 4 ಆಣೆ
,, 2	ಡಿಟ್ಟೋ ಫ್ಲಾಪು	,, 6 ಆಣೆ
,, 3	ದೊಡ್ಡ ಸೈಜು ಸಾದಾ	,, 6 ಆಣೆ
,, 4	ಡಿಟ್ಟೋ ಫ್ಲಾಪು	,, 8 ಆಣೆ

ಒಂದೇ ದಫಾ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಜಾಸ್ತಿ 25 ರೂ ಗೆ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ರೂಪಾಯಿಗೆ 2 ಆಣೆ ಯಂತೆ ಡಿಸ್ಕೌಂಟು ಮಾತ್ರ ದೊರೆಯುತ್ತೆ ಈಗಲೇ ಕೆಳಗಿನ ವಿಳಾಸದಾರ್‍ರಿಗೆ ಬರೆದು ತರಿಸಿಕೊಳ್ಳಿ, ಕಾಲವಿಳಂಬ ಮಾಡಿದಲ್ಲಿ ಮುಗಿದುಹೋಗುತ್ತೆ [105 3]

ವಿಳಾಸ —ಎಸ್ ಡಿ ನತ್‌ಮಲ್ ಕಂಪನಿ, ಮೈಸೂರು

ಡೋಂಗರೆ ಇವರ ಬಾಲಾಮೃತ.

[115-14]

...ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ...ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ...ದೋಣ, ಅಸ್ತಿಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲ ...ಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೩ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಇದೇ ನಿಜವಾದ ರೈಲ್ವೇ ರೆಗ್ಯುಲೇಟರೆಂಬ ಜೇಬು ಗಡಿಯಾರ

ಕ್ರಯ ರೂಪಾಯಿ 1 15 0

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ 6 ರೂಪಾಯಿನ ಈ ಗಡಿಯಾರವನ್ನು 500 ಗಡಿಯಾರಗಳು ಮುಗಿಯುವವರಿವಿಗೆ ಮಾತ್ರವೇ 1-15 0 ಆಣೆಗೆ



ಕೊಡಲ್ಪಡುತ್ತೆ ಅದೃಷ್ಟವಂತರುಗಳಲ್ಲದೆ ಮತ್ತಾರಿಗೂ ದೊರೆಯಲಾರದು ಮೋಸವೆಂದು ತಿಳಿದು ಆಲಸ್ಯಮಾಡುವವರಿಗೆ ಇದು ನಿಜವಾಗಿ ದೊರೆಯಲಾರದು ಮ॥ ರಾ॥ ಪಾಲ್ ಕಂಪನಿಯವರ ನಿಜ ಸ್ಥಿತಿಯನ್ನು ಈ ಗಡಿಯಾರದಿಂದಲೇ ತಿಳಿದುಕೊಳ್ಳಿರಿ ಎಂದು ಜಾಗ್ರತೆ ದರಖಾಸ್ತು ಕಳುಹಿಸಿ

ಇದನ್ನು ರೈಲ್ ನೌಕರದಾರರುಗಳು ಪರಿಶೀಲಿಸಿದ್ದಾರೆ ಈ ಗಡಿಯಾರವು ರೈಲ್ವೇ ಅಧಿಕಾರಿಗಳಿಂದ ಹೆಸರುವಾಸಿಯನ್ನು ಪಡೆದಿರುತ್ತೆ ಇದು ಇತರ ಅಲ್ಪ ಕ್ರಯದ ಗಡಿಯಾರಗಳ ಹಾಗಲ್ಲ. ಇದಕ್ಕೆ ... ವರುಷಗಳ ವರೆಗೆ ನಾವು ಜವಾಬುದಾರರು ರೈಲ್ ಹೊತ್ತಿಗೆ 1 ನಿಮಿಷ ಸಹ ವ್ಯತ್ಯಾಸವಿಲ್ಲದೆ ನಡೆಯುವದರಿಂದಲೇ ರೈಲ್ವೇ ಕಂಪನಿಯವರುಗಳು ಎಲ್ಲರೂ ಉಪಯೋಗಿಸುತ್ತಲಿದ್ದಾರೆ

WILLIAM & Co. FORT, BOMBAY

ಅಮೃತಾಂಜನ್. (Regd.)

ಇಲ್ಲಿ ವಿಶೇಷ ಲಕ್ಷ ಕೊಡಿರಿ! ವಾತ, ಸಂಧಿವಾತ ತಲೇನೋವು, ಸೊಂಟನೋವು, ಶೀತ, ಕಜ್ಜಿ ಗಂಟ್ಲುನೋವು, ಘಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-8 0

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ ಡಬ್ಬಿ 1ಕ್ಕೆ 0–6–0.

ದಂತಮಂಜನ 2 ಆಣೆ ನೇತ್ರಾಂಜನ 4 ಆಣೆ ಸುಂದರಿತೈಲ 8 ಆಣೆ [13 31]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಫೋರ್ಟ್ಸು ಮುಂಬಯಿ

ಪುಷ್ಪಕಾಂತಿ ತೈಲ.

ಸೀಸೆ 1 ಕ್ಕೆ 9 ಆಣೆ 6 ಸೀಸೆಗಳನ್ನು ಒಂದೇ ಸಲ ತರಿಸಿಕೊಂಡರೆ 1 ಸೀಸೆ ಇನಾಂ ಇದು ಅಧಿಕ ಸುವಾಸನೆ ಉಳ್ಳದ್ದು ಇದನ್ನು ತಲೆಗೆ ಸವರಿಕೊಳ್ಳುವದರಿಂದ ಮನಸ್ಸಿಗೆ ಆನಂದವನ್ನೂ ಉತ್ಸಾಹವನ್ನೂ ಉಂಟುಮಾಡುತ್ತ ನರೆತ ಕೂದಲು ಕಪ್ಪಾಗುತ್ತೆ. ಕೂದಲು ಹೇರಳವಾಗಿ ಬೆಳೆಯುತ್ತೆ ಇದನ್ನು ಪ್ರತಿನಿತ್ಯವೂ ತಲೆಗೆ ಸವರಿಕೊಳ್ಳುತ್ತಾ ಬಂದರೆ ತಲೆ ತಿರುಗಾಟವನ್ನೂ ಚಾಳೀಶ ರೋಗವನ್ನೂ ಹೋಗಲಾಡಿಸುತ್ತೆ

ಬಹುಮಾನ ಬಹುಮಾನ ಬಹುಮಾನ



ಮೇಲೆ ಹೇಳಿದ ಪುಷ್ಪಕಾಂತಿ ತೈಲವನ್ನು ತರಿಸಿಕೊಳ್ಳುವವರಿಗೆ ಈ ನಕ್ಷೆಯಲ್ಲಿ ಕಾಣುವ ಮೂರು ಗಡಿಯಾರಗಳನ್ನು ಬಹುಮಾನವಾಗಿ ಕೊಡಲ್ಪಡುತ್ತೆ ... ಪುಷ್ಪಕಾಂತಿ ತೈಲವನ್ನು ... ಒಟ್ಟನಾಗಿ ... ಗಡಿಯಾರಗಳು ಯಾರ ಯಾರ ... ಅವರವರ ಹೆಸರುಗಳಿಗೆ ... ಗಡಿಯಾರವನು ಬಹುಮಾನವಾಗಿ ... ಕಳುಹಿಸುತ್ತೇವೆ ... ಗಡಿಯಾರ ... ಬೇಗನೆ ಜಾಗ್ರತೆ ದರಖಾಸ್ತು ಕಳುಹಿಸಿರಿ [151 2] ನಮ್ಮ ವಿಳಾಸ—

ಜೆ ಎ ಪಾಲ್ ಅಂಡ್ ಕಂಪನಿ,

ಸಂಗುಂವಾರ್ಕಂ ಮದರಾಸು

ಸಪ್ಟೆಂಬರ್ ... ಬಹುಮಾನ ... ಯೋಗ

ಕಳೆದ ಸಪ್ಟೆಂಬರ್ 3 ನೇ ಆಪ್ರಿಲ್ 11 ನೇ ಸೋಮವಾರ ದಿನ ಈ ಕೆಳಗಣ ವಿಳಾಸದಾರರು ಗಡಿಯಾರದ ಬಹುಮಾನವನ್ನು ಪಡೆದಿರುತ್ತಾರೆ

1 ನೆ ಪುಟ್ಟಸ್ವಾಮಯ್ಯನವರು ... ಇನ್ಸ್‌ಪೆಕ್ಟರ್, ಚಾಮರಾಜನಗರ ಮೈಸೂರು ಡಿ

2 ನೆ ಸಾವಿತ್ರಮ್ಮ ... ನಾರಾಯಣಸ್ವಾಮಯ್ಯನವರು, ಸ್ಯಾನಿಟರಿ ಇನ್ಸ್‌ಪೆಕ್ಟರ್, ಅರಸೀಕೆರೆ, ಹಾಸನ ಡಿ

3 ನರಸಿಂಹಯ್ಯ, ಪಾಪ್‌ಕೀಪರ್, ಅಜ್ಜಂಪುರ, ಎಡತೊರೆ ತಾಲ್ಲೂಕು, ಮೈಸೂರು ಡಿ

ಬೇಕಾದವರು ನಿಜಸ್ಥಿತಿಯನ್ನು ಈ ವಿಳಾಸದಾರರಿಗೆ ಬರೆದು ತಿಳಿದುಕೊಳ್ಳಬಹುದು

ಶ್ರೀ ಸೀತಾರಾಘವ ಪಾಕೆಟ್ ಡೈರಿ ಸನ್ 1913 ನೇ ಇಸವಿಯದು



ಬೇಡಬೇಕಾದವರು ಬರೆದು ತರಿಸಿಕೊಳ್ಳಿ ನಂ 1 ಸಣ್ಣ ಸೈಜು ಸಾದಾ ಡೈರಿಗೆ 0 4 0 ನಂ 2 ಸಣ್ಣ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಡೈರಿಗೆ 0 6 0 ನಂ 3 ದೊಡ್ಡ ಸೈಜು ಸಾದಾ ಡೈರಿಗೆ 0 6 0 ನಂ 4 ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಡೈರಿಗೆ 0 8 0 ಟಪಾಲು ಖರ್ಚು ಬೇರೆ ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು, 25 ರೂಪಾಯಿಗಿಂತ ಹೆಚ್ಚು ಡೈರಿ ತರಿಸುವವರಿಗೆ ರೂಪಾಯಿಗೆ 2 ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ [136 7]

ವಿಶೇಷ -(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ... ಮುದ್ರಿಂತು ಮಾಡಿಸಿದೆ (2) ಪೇಜ್‌ ... ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ... ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು ಷೋಡಶಕರ್ಮಕ್ಕೆ ಬೇಕಾದ ... ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ (3) ಕೋರ್ಟುಫೀಜ್ ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ... ಮುಖ್ಯವಾಗಿ ಬೇಕಾಗುವ ಪುಸ್ತಕ ... ಹೇಳಿದಿರುವದು ಹೊಸ ವಿಷಯಗಳನ್ನು ಸೇರಿಸಿದೆ (4) ಮದರಾಸ್ ಮತ್ತು ನಮ್ಮ ಮಹಾರಾಜರ ..., ರೈಲು ಹೊರಡುವ ಕಾಲ, ಅಂತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಆವರ ತಂಬು, ಗೌರ್ನ್‌ಮೆಂಟ್ ರಜಾ ... ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಕೋಷ್ಟಕ ... ತುಯುಸಂತ್ರವಟ್ಟಿ ಸಹಾ ಇರುತ್ತದೆ ಮೇಲೆ ಚಿಕ್ಕ, ಹಾಲಿನ ... ವಿಷಯ, ಒಟ್ಟು ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯ

... ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಕುಂತಳಾನಂದ ತೈಲವು

147 ‑

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಸದ್ವಾಸನೆಯನ್ನು ಪರಿಮಳಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಪ್ರತಿ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ತಲೆಯನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಯುಕ್ತವಾದ ಅಲಂಕಾರವಾಗಿದೆ ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನವಿರಾದ ಕೇಶರಾಶಿ ಇದೆ? ಕೇಶರಾಶಿಯು ಸುಂದರವಾಗಿ ಕಾಣಬೇಕಾದರೆ ಅವು ರೇಶಿಮೆಯ ಹಾಗೆ ಮೆದುವಾಗಿ ಬಳುಕುವಂಥವುಗಳಾಗಿ ಅಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಜಿಸ್ಟರ್ಡ್)

ಇದನ್ನು ತಕ್ಕುದಾದ ರೀತಿಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶವಿನ್ಯಾಸಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಸ್ವಲ್ಪದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ — ಇದು ಕೂದಲುಗಳನ್ನು ಬಂದಗ್ಗಿಸಿಯುವ ಸರ್ವತೆ ರೋಗಗಳನ್ನೂ ನಿವಾರಿಸುವದು ಮತ್ತು ಅದು ತ್ವರೆಯಾಗಿ, ಕೂದಲುಗಳು ಬೇಗನೆ ಬೆಳೆಯುವವು ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ಮೃದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಬಹುದಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ನಿಪುಣವಾಗುತ್ತವೆ ನಯವಾಗುತ್ತವೆ, ಥಳಥಳಿಸುತ್ತವೆ, ಮತ್ತು ದಬ್ಬಿಡವಾದ ನೀಲ ಬಣ್ಣದಿಂದಾದರೂ ಆಗಾಗ್ಗೆ ಹಂದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಮೂರು ತರಿಸುವವರು 3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕಾದರೆ ಎಂದು ಅರ್ಧಾಣೆಯ ಚೀಟಿನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಸಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೆಳಗೆ ಬರೆದಿಹೆವು —

28-7-11 ಮ ಬಿ ಡಿ ವೈದ್ಯರ ರಾಗ್, ರುಕ್ಮಿಣಿವಿಲಾಸ ಮನ್ನರಗುಡಿ— ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಶೋಭಿಸುತ್ತಿದೆ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7-11 ಮೆ|| ಸಿ ಆರ್ ನಾಯುಡು ಪ ವ ಡಿ ಟಾಸಿಬ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ ಸಮರ್ಥವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಸೀಸೆಗಳನ್ನು ತ ಯಾರಿಸಿದ ವಿ ಪಿ ಮೂಲಕ ರವಾನಿಸತಕ್ಕದು

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0

ದಿಲ್-ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

• ಕಾಮಿನಿಯಾ ಸುರಂಗಿ "—ರೂ 1-4-0, • ಕಾಮಿನಿಯಾಮಾಲತಿ "—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರಯಬೇಕು

ನಮ್ಮ ವಿಳಾಸ — [91 13]

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್ಜಿದ್, ಬೊಂಬಾಯಿ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



ಬೆನ್ನುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಒಡಾವ ನೋವು ವಾಯುನೋವು— ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಂಟುಗಟ್ಟುವದು ಊದಿಕೊಳ್ಳುವದು, ಕಠಿಣವಾಗಿ ಸೆಳೆಯುವ ಬಾಧೆ, ಒಂದು ಇಳಿಯುವದು, ವಿಶ್ರಾಂತಿ ತೋರದೆ ಇರುವುದು, ನಿದ್ರೆ ಹತ್ತದೆ ಇರುವುದು ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಚತುರವಾದ ... ತಡವಿ ... ಮೂಳೆಯೊಳಕ್ಕೆ ವ್ಯಾಪಿಸಿ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ... ವರೆಗೂ ... ಹಚ್ಚಿದ್ದರೆ ಕಿತ್ತುಹಾಕಿಬಿಡುವುದು

ಇದು ... ತಯಾರಾದ ಔಷಧ

... ಮುಟಿದ್ದ ... ಅಲ

ಇದು ಎಲ್ಲೆಲ್ಲೂ ಬಿಕರಿಯಾಗುವದು ... ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಆರೋಗ್ಯ ಪ್ರಶ್ನೋತ್ತರ ಬೆಲೆ ೧ ಆಣೆ

(ಇದು ಪ್ರಶ್ನಪತ್ರಿಕೆಗಳಿಗೆ ತಕ್ಕ ಉತ್ತರಗಳನ್ನೊಳಗೊಂಡಿದೆ) [152 3]

ಸನಾತನ ಸೂಕ್ಷ್ಮ ಧರ್ಮ ೨ ಆ ... ಸಾರ್ವಭೌಮರ ಚರಿತ್ರೆ ೩ ಆ

Notes on Tangle Wood Tales Reduced price 2 As

ಎಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಸುಲಭ ಕ್ರಯದ ಘಟ್ಟಿ ಗಡಿಯಾರಗಳು.

ಪ್ರಖ್ಯಾತಿ ಹೊಂದಿದ ಪಿ ಆರ್ ... ಮತ್ತು ಟಿ ಆರ್ ... ಸನ್ಸ್ ಮುಂತಾದ ಕಂಪನಿಗಳು ... ವರುಷಗಳ ಅನುಭವ ಪಡೆದಿರುವ ನಾವು ...



... ಗಡಿಯಾರಗಳು ... (1) ... 3 ವರುಷ ಗ್ಯಾರಂಟಿ ವಾಚ್ ಕ್ರಯ ರೂ 2-1-0 ಮಾತ್ರ (2) ಇದೇ ತರದ ... 3 ವರುಷ ಗ್ಯಾರಂಟಿ ವಾಚ್ ಕ್ರಯ 1 ರೂ 14 ಆಣೆ ಮಾತ್ರ (3) 8 ದಿನದ ಗಂಟೆ ಹೊಡೆಯುವ ... 5 ವರುಷ ಗ್ಯಾರಂಟಿ ಕ್ರಯ ರೂ 7-8-0 ... 2 ರೂ ... (4) ... 2 ವರುಷ ಗ್ಯಾರಂಟಿ ಕ್ರಯ ರೂ 1-1-0 ಮಾತ್ರ (5) ... ವಾಚ್ ... 2 ವರುಷ ಗ್ಯಾರಂಟಿ ಕ್ರಯ ರೂ 1-15-0 ಮಾತ್ರ (6) ... 1 ವರುಷದ ಗ್ಯಾರಂಟಿ ವಾಚ್ ರೂ 1-1-0 (7) ... ಕ್ರಯ ರೂ 7 ಮಾತ್ರ (8) ... ರೂ 1-8-0 ... ರೂ 1 ... 2 ವರುಷ ಗ್ಯಾರಂಟಿ ಉಂಟು [151 2]

ನಮ್ಮ ವಿಳಾಸ —ಸ್ವಿಸ್ ಅಮೆರಿಕನ್ ವಾಚ್ ಕಂಪನಿ
46 ಎಸ್ಪ್ಲನೇಡ್, ಮದರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 12

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಪಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ಅಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹೊಸ ಕಾದಂಬರಿಗಳು! ನವೀನ ಪುಸ್ತಕಗ

ತಾರಾಸುಂದರಿ— ಇದು ಅನಂಗಸುಂದರಿಯ ಉಪಸಂಹಾರ ... ಘಟನಾವೈಚಿತ್ರ್ಯ ... ಮುದ್ರಿತವಾಗಿರುವದು ಕ್ರಯ 8

ಕುಮುದಿನಿ— ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿ ... ಕ್ರಯ 1 ಆಣೆ

ಸತೀರೋಹಿಣಿ ... ಇದನ್ನೋದಿದವರೆಲ್ಲರೂ ... ರಸವಾದ ಕಥೆಯು ಇದುವರೆಗೂ ಇಲ್ಲವೆಂದು ... ಕ್ರಯ 2 ಆಣೆ [181

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂ

ದಯಮಾಡಿ ಕಣ್ತೆರೆದು ಇತ್ತ ನೋಡಿರಿ !!!

ನೂತನವಾಗಿ ... ರೋಮಸಂಹಾರಕ,
... ಸಾಬೂನು

ಈವರೆಗೆ ಯಾವ ... ಇಲ್ಲದಂತೆ ತಯಾರು ಮಾಡಲ್ಪಟ್ಟು ... ಬಂದಿದೆ

1 ಆಣೆ ಟಪಾಲು ಚೀಟಿ ಕೊಟ್ಟರೆ ನಮೂನೆ ಸಾಬೂನು ... ಕಳುಹಿಸಿಕೊಡುವೆವು

	ಕ್ರಯ	
1 ಸಾಬೂನಿಗೆ	0 6 0	
3	1 0 0	
6	1 12 0	
9	,, 3 1 0	

ಹಾ ಪಾರಸ್ಥರಿಗೆ ... ಕೊಡುವೆವು [18

ನಮ್ಮ ... ತಯಾರ ... ಮಾಲುಗಳು ... ಬೇಕಾದವರು ಬರೆದುಕೊಂಡರೆ ಉಚಿತವಾಗಿ ಕಳುಹಿಸಿಕೊಡಲ್ಪಡುವದು.

ನಮ್ಮ ವಿಳಾಸ ಬಿ ಸಿ ಷಾ ಅಂಡ್ ಕಂಪೆ
177 ಚೈನಾ ಬಜಾರ್ ರೋಡ್, ಮದ

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣ ... ದಿಂದ ನಾನಾ ... ಬಾಧೆಗಳನ್ನು ಕೊಂಡು ಬೆಳೆಯಬೇಕಾಗಿದೆ

ಅವರ ... ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಹೊಂದಿ ಬೆಳೆಯುವದಕ್ಕೆ ಅವರಿಗೆ ... ಬಲಕಾರಿಯಾದ ಔಷಧವನು ಕೊಡುತ್ತಿರುವದು ಅವಶ್ಯಕ

SCOTT'S EMULSION

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಮೀನುಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾ... ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವಿಸಿ ... ಒಡನೆಯೇ ಅದರ ... ಕಂಡುಬರುವವು

ಕೈಯಿಂದ ಮುಟ್ಟದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥ... ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ...
ಔಷಧಗಳ ಕಾರ್ಖಾ...
ಲಂಡನ್, ಇಂ...

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೫—೧೦—1913 ರಿಂದ 11—10—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	25	11	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	18	15	0	0
ಮೈಸೂರು ,,	11	11	0	0
ಕೋಲಾರ್ ,,	[illegible]	[illegible]	21	13
ಕೋಲಾರ್ ಚಿನ್ನದ ಗಣಿಗಳು	18	32	0	0
ತುಮಕೂರು ಡಿಸ್ಟ್ರಿಕ್ಟು	1	1	11	5
ಹಾಸನ	1	1	0	[illegible]
ಚಿತ್ರದುರ್ಗ	0	0	18	18
ಕಡೂರ್ ,,	1	11	0	0
ಶಿವಮೊಗ್ಗ ,,	15	9	[illegible]	[illegible]
ಜುಮ್ಲಾ	111	[illegible]	[illegible]	[illegible]

[illegible] 1912 ನೇ ಅಕ್ಟೋಬರ್

ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ದಿನ
[illegible]	[illegible]	[illegible]	[illegible]	[illegible]	[illegible]

[illegible]

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
[illegible]	[illegible]	[illegible]

ಒಂದೇ ಕಥೆ! ಅಪೂರ್ವಗ್ರಂಥ!! ೩೧೭ ಪುಟಗಳು!!!

ಪ್ರತಾಪ ಕಂಠೀರವ ಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಶತ್ರುಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ (2) ಸ್ತ್ರೀಚಾತುರ್ಯ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಧನ ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ — ಆರೆ ೨ನೇ ಭಾಗ ೧೦ ಆಣೆ, ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಜೀರೆ [5 11]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ ಬೆಂಗಳೂರು ಸಿಟಿ

ಆಯುರ್ವೇದೋದಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು

ಉಷ್ಣ ಮರ್ಜಿ ಚೂರ್ಣವು

10 ತೊಲೆ ಔಷಧಿಯುಳ್ಳ ಡಬ್ಬಿ 1 ಕ್ಕೆ ರೂ 1 0 0

ಈ ಚೂರ್ಣವನ್ನು ಸೇವಿಸುವುದರಿಂದ ಸಕಲ ಉಷ್ಣ ರೋಗಗಳೂ ಮೂರು ದಿವಸಗಳಲ್ಲಿ ಗುಣವಾಗುತ್ತವೆ [illegible] ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ಮೊದಲಾದ ರೋಗ ಗಳು ನಾಶವಾಗುವವು ಹಾಗೇ ಉಷ್ಣಸಂಬಂಧವಾದ ಇತರ ರೋಗ ಗಳೂ ನಾಶವಾಗುವವು

ದಂತಧಾವನ ಚೂರ್ಣವು

ಡಬ್ಬಿ 1 ಕ್ಕೆ ಕ್ರಯ ರೂ 0 4 0 ಡಬ್ಬಿ 12 ಕ್ಕೆ ರೂ 2 9 0

ಈ ಹಲ್ಲುಪುಡಿ ಹಲ್ಲು ನೋವು, ವಾಯು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವಾರಿಸುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ಹಲ್ಲುಗಳು ಸದಾ ಬಿಳಿಯಾಗಿಯೂ ಗಟ್ಟಿಯಾಗಿಯೂ ಇರುವವು [121-10]

ರಾಜವೈದ್ಯ ನಾರಾಯಣಜೀ ಕೇಶವಜೀ,

771 ಜೇನಾ ಬಜಾರ್ ರೋಡ್, ಮದ್ರಾಸು.

ಚಂದ್ರಕಾಂತಿ ತೈಲ.

[illegible] ಸೀಸೆಗಳನ್ನು ಒಂದೇ ಸಲ ತರಿಸಿಕೊಂಡರೆ [illegible] ಇದು ಅಧಿಕ ಸುವಾಸನೆಯುಳ್ಳದ್ದು ಇದನ್ನು ತಲೆಗೆ ಸವರಿ

ಕೊಳ್ಳುವುದರಿಂದ ಮಸ್ತಿಷ್ಕಕ್ಕೆ ಆನಂದವನ್ನೂ ಉತ್ಸಾಹವನ್ನೂ ಉಂಟುಮಾಡಿ, ನರೆತ ಕೂದಲು ಕಪ್ಪಾಗುತ್ತದೆ. ಇದನ್ನು ಪ್ರತಿ ನಿತ್ಯವೂ ತಲೆಗೆ ಸವರಿಕೊಳ್ಳುತ್ತಾ ಬಂದರೆ ತಲೆತುರಿಕೆಯನ್ನೂ ಹೊಟ್ಟನ್ನೂ ಹೋಗಲಾಡಿಸುತ್ತೆ. ಮೋಕ್ಷಪ್ರದವಾದ ಚಂದ್ರಕಾಂತಿಯಂತೆ ಕೇಶರಾಶಿಯನ್ನು ಶ್ಯಾಮಲವಾಗಿಯೂ, ಚಕಚಕಿತವಾಗಿಯೂ, ನಿಬಿಡವಾಗಿಯೂ, ಗಟ್ಟಿಯಾದ ಬೇರುಗಳುಳ್ಳ ವೃದ್ಧಿಯಾಗುವಂತೆ ಮಾಡುವದಲ್ಲದೆ ಬಲವಾಗಿ ಬೆಳಸಿ ಮುಖಕ್ಕೆ ಒಂದು ಸೌಂದರ್ಯವನ್ನೂ ಕೊಡುವದು [illegible] ಉಪಯೋಗಿಸಿ [157 1]

ನಮ್ಮ ವಿಳಾಸ —ರಾಮಸ್ವಾಮಿ ಮತ್ತು ಕಂಪೆನಿ,

೧ ಚಿನ್ನಮ್ಮಶೆಟ್ಟಿಯರವರ ಬೀದಿ ಆನೆಗವುಂಡಿ ಸಮೀಪ, ಮದ್ರಾಸ್

ನಾಗುವಾನಿ ಬೀಡ್ ಡಿಪೋ.

ಮಾರಿಕೆಗೆ ಸಿದ್ಧವಾಗಿದೆ.

ಮೈಸೂರು ಸಿಟಿಗೆ ಸೇರಿದ ಚಟ್ಟನಹಳ್ಳಿ ಉಕ್ಕಡದ ಬಳಿ ಇರುವ ನಮ್ಮ ಬಾಬ್ತು ಡಿಪೋದಲ್ಲಿ ಮಲಬಾರು ಡಿಸ್ಟ್ರಿಕ್ಟು ಬೇರೆ ಬೇರೆ ಫಾರೆಸ್ಟಿನಲ್ಲಿ ತಯಾರಾದ್ದು 2 ಅಡಿ ಉದ್ದ ಯಿಂದ 8 ಅಡಿ ವರೆಗೆ ಸುತ್ತುಳ್ಳದ್ದಾಗಿಯೂ ಉದ್ದದಲ್ಲಿ 8 ಅಡಿ ಯಿಂದ 25 ಅಡಿ ಉದ್ದದ ವರೆಗೂ ಇರತಕ್ಕ ನಾಗುವಾನಿ, ಮತ್ತಿ, ಹೊನ್ನೆ, ನಂದಿ ಮತ್ತು ಬೀಟೆ ಮರಗಳು ಸ್ಥಳ ಮತ್ತು ದರಖಾಸ್ತಿನ ಮಾರಾಟಕ್ಕೆ ಸಿದ್ಧವಾಗಿವೆ ಈ ಕಾಲದಲ್ಲಿ 25,000 ಅಡಿಗಳಿಗೆ ಕಮ್ಮಿಯಿಲ್ಲದ ಬೆಲೆಗೆ ಆಸಕ್ತಿಯಿರುವ [illegible] ಕೊಡುವದಲ್ಲದೆ ನಮ್ಮ ಬಾಬ್ತು ಕಲ್ಲಿಕೋಟೆ [illegible] ಡಿಪೋದಲ್ಲಿ ಸದ್ಯದಲ್ಲಿ 4,000 ಅಡಿ ಉತ್ತಮವಾದ ಬೀಟೆ ಮರ ಗಳೂ 2,500 ಮರ ಹಲಸು ಮಾರಾಟಕ್ಕೆ ಸಿದ್ಧವಾಗಿವೆ ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದಲ್ಲದೆ ಕಲ್ಲಿಕೋಟೆಯ ನಾವಾಗಳ ವಿಷಯಕ್ಕೆ [illegible] ಧರ್ಮರಾಜಯ್ಯರ್, ಸರ್ಕಾರಿ, ಪಾಲ್ಘಾಟ್ ಇವರಲ್ಲಿ ಕೇಳಬಹುದು [1 14]

M K SUBBEGOWDAH & Co,

Timber Merchants,

240 Kempananjamba Agrahar, Mysore

BENEFIT YOURSELF AND BENEFIT OTHERS

The National Insurance and Banking Company Ltd., Amritsar

Authorised Capital	Rs	10,00,000
Subscribed Capital Exceeds	,,	9,00,000
Paid up ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indian Life Assurance Companies'** and **Provident Societies' Acts 1912** and has also given **double the initial security** to the **Government** as required under the **Insurance Act 1912**

How is it that the **National of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions, and distributes relief in thousands every quarter on account of **marriages and deaths.**

[122 12]

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission** The post is permanent and our agents are **entitled to pension** None but those who can spare whole time who reside in district or taluk head quarters and who are well versed in English need apply

For further particulars and prospectuses, please apply with **one anna stamp** and your previous experience in the line to —

M L NAGANNAH,

Chief Agent,

The Amritsar National Insurance Buildings, Mysore

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೊ,

(೧೨ ಆಣೆ ಬುಡ್ಡಿ ಸರಿ ಗಾತ್ರ)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ [illegible] ಮಲಬಂಧನ-ಎಂದರೆ ಅಜೀರ್ಣವೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಎರಡು ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುತ್ತದೆ ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧಕ್ಕೆ ಮೂಲಕಾರಣವಾಗಿರುವುದು ಮಲಬದ್ಧತೆಯಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ – ಪಿತ್ತಕೋಶ ರೋಗ ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ ಎದೆಯು ತಲ್ಲಣಿಸುವುದು ತಲೆಸುತ್ತುವುದು ತಲೆನೋವು ಹೊಟ್ಟೆಯುಬ್ಬರ, ಮಲಕ್ಕೆಗಿನ ಹೊಟ್ಟೆನೋವು [illegible] ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯ ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ನಿಮಗೋಸ್ಕರವೆಂದೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ನರಗಳಲ್ಲಿರುವ ಮಲವನ್ನೂ ಕಲ್ಮಶವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಎಚ್ಚರಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [12 6]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲೆಲ್ಲಾ ದೊರೆಯುವುವು ಅಥವಾ ಡೋನ್, ಪಿ ಒ ಬಾಕ್ಸ್ ೨೨ ಬೊಂಬಾಯಿ— ಇವರಲ್ಲಿ ದೊರೆಯುವುವು

ಚಿತ್ರದುರ್ಗದ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು

ಅಕ್ಟೋಬರ್ ತಿಂಗಳ ಮೀಟಿಂಗು

ಈ ಮಾಸ ೩ನೇ ಸಭೆಯನ್ನು ಈ ಸಂಘದ ಮೆಂಬರುಗಳು ತಿಂಗಳ ಗಟ್ಟಳೆ ಇಂತಿಂಗನ್ನು ನಡಿಸಿದರು ಸುಮಾರು ೨೨ ಜನ ಮೆಂಬರುಗಳು ಹಾಜರಿದ್ದರು ದೇವರ ಪ್ರಾರ್ಥನೆಯು ಇವರ [illegible] ಗಳಲ್ಲಿ ಪಾರ ನಡಿಸಿತು ನಂತರ ಬೋರ್ಡಿನ ವಿಚಾರದ ಚರ್ಚೆಯಾಯಿತು ಸಂಘದ ಸೆಕ್ರೆಟರಿಯವರು ಮಾಡಿದ ಉಪನ್ಯಾಸದ ಸಾರಾಂಶವೇನೆಂದರೆ—

ನಿಮ್ಮ ಭಾಗದ ಶಾಲೆಗಳಲ್ಲಿಯೇ ಮಕ್ಕಳ ದೇಹ, ಬುದ್ಧಿ, ಆತ್ಮಿಕ, ಇವುಗಳ ಏಕರೀತಿಯಾದ ಬೆಳವಣಿಗೆ ಅವಶ್ಯಕವಾದುದು ಇದು ಉಪಾಧ್ಯಾಯರ, ಪೋಷಕಾಕರ್ತರ ಗಮನಕ್ಕೆ ಬಾರದ ಅಂಶವಾಗಿದೆ ಪ್ರತಿಯೊಬ್ಬ ಬಾಲಕರ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಜಾಗರೂಕತೆ [illegible] ಅವರ ಸ್ವಭಾವದ [illegible] ಗಮನಕ್ಕೆ ತೋರದಿಲ್ಲ ಇದರಿಂದ ವಿದ್ಯಾಭ್ಯಾಸದ ಉದ್ದೇಶವು ಸರಿಯಾಗಿ ನೆರವೇರುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ ಬಾಲಕರು ಅನೇಕ ಜನ [illegible] ಕಾಣುವುದು ಕ್ಕೆ ಅವಕಾಶವಾಯಿತು [illegible] ಕಾಲದಲ್ಲಿ ಮಕ್ಕಳ ನಡತೆಯನ್ನು ತಿದ್ದಲು ಅವಕಾಶ ದೊರೆಯುವುದಿಲ್ಲ [illegible] ಇದಕ್ಕಾಗಿ ಸರ್ಕಾರದವರ ಗಮನವು ಈ ಕಡೆಗೆ ಎಳೆಯುತ್ತದೆ ಈಗಿನ ಪಾಠದ ಪಟ್ಟಿಯಲ್ಲಿ ನೀತಿಮತ ಬೋಧೆಗೆ ಅವಕಾಶ ಮಾಡಿದರು ಈಗಿನ ಬಾಲಕರು ಸತ್ಪ್ರಜೆಗಳಾಗಿ ಬಾಳಬೇಕೆಂಬುವದೇ ಅವರ ಉದ್ದೇಶ ಉಪಾಧ್ಯಾಯರುಗಳೆಂದರೆ ಈ ಉದ್ದೇಶವು ಮಕ್ಕಳು ಭಾಗ ಸೇರೋತ್ತಕ್ಕದ್ದಾಗಿದೆ ಆದರಿಂದ ಮಕ್ಕಳಲ್ಲಿ ಸತ್ಯ, ಶಾಂತತ್ವ, ಧೈರ್ಯ, ವಿನಯ, ದಯೆ, ತೃಪ್ತಿ, ಈ ಮೊದಲಾದ ಸುಗುಣಗಳುಂಟಾಗುವಂತೆ ತಕ್ಕ ಉಪಾಯಗಳನ್ನು ಕೈಕೊಂಡು ವಿದ್ಯಾರ್ಥಿಗಳ ಸಮುದಾಯದ ಮನಸ್ಸಿಗೆ ಹಿಡಿಯುವಂತೆ ಬೋಧಿಸಬೇಕು ಇದಕ್ಕಾಗಿ ಮುಂದಿನ ೩ ಸಂಘದ ಸಭೆಗಳಲ್ಲಿಯೇ ಚರ್ಚಿಸಬೇಕು ಈ ಮೊದಲು ಪ್ರತ್ಯೇಕಿಸಿ [illegible] ಕೊಂಡು ಗೊತ್ತುಮಾಡಿ ಸಲ್ಲಿಸಿದರು [illegible] ಸಂಘಾಧ್ಯಕ್ಷ, ಸಂಘದ ಸೆಕ್ರೆಟರಿ

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೨ ನೇ ಇಸವಿ ಅಕ್ಟೋಬರ್ ತಾ ೧೭ ನೇ ಗುರುವಾರ

ಮ್ಯಾಸಿಡೋನಿಯಾ—ಯುದ್ಧದ ಕಾರಣ.

ಬಲ್ಗೇರಿಯಾ ಮಂತ್ರಿಯು ಮುಂದೆ ಹೇಳುವ ವಿಷಯವನ್ನು ಹೇಳಿ ಪ್ರಪಂಚಕ್ಕೆಲ್ಲಾ ತಿಳಿಯಬೇಕೆಂದು ಅದನ್ನು ಲಂಡನ್ ಪಟ್ಟಣದ ಎರಡು ಪ್ರಾಮುಖ್ಯವಾದ ಪತ್ರಿಕೆಗಳಲ್ಲಿ ಪ್ರಕಟಮಾಡಿರುತ್ತಾರೆ. ಏನೆಂದರೆ, "ಮ್ಯಾಸಿಡೋನಿಯ ಸೀಮೆಯಲ್ಲಿ ನಮ್ಮ ಕ್ರೈಸ್ತ ಸಹೋದರರ ಸಂಕಟವನ್ನು ಪರಿಹರಿಸುವುದಕ್ಕೋಸ್ಕರಲೂ, ಬರ್ಲಿನ್ ನಗರದಲ್ಲಿ ನಡೆದ ಮಹಾಸಮಾಜದ ದೆಸೆಯಿಂದ ಆ ನಮ್ಮ ಸಹೋದರರು ಕಳೆದುಕೊಂಡಿರುವ ಸ್ವಾತಂತ್ರ್ಯವನ್ನು ಮತ್ತೆ ಸಂಪಾದನೆ ಮಾಡಿಕೊಡುವುದಕ್ಕೋಸ್ಕರಲೂ ನಾವು ಈಗ ಯುದ್ಧವೆಂಬೀ ಭಯಂಕರವಾದ ಪ್ರತಿಫಲವನ್ನು ಸಲ್ಲಿಸುವವರಾಗಿದೇವೆ. ಲೋಕಪ್ರಸಿದ್ಧನಾದ ಗ್ಲಾಡ್‌ಸ್ಟನ್ ಪ್ರಭುವು ಬಹು ಕಠಿಣೋಕ್ತಿಗಳಿಂದ ಖಂಡೀಕರಿಸಿದಂಥಾ ಟರ್ಕಿಯ ಅಧರ್ಮ ಪರಿಪಾಲನೆಯಲ್ಲೇ ಬಿದ್ದು ನರಳಬೇಕೆಂದು ಆ ಮಹಾ ಸಮಾಜದವರು ಈ ನಮ್ಮ ಕ್ರೈಸ್ತ ಸಹೋದರರನ್ನು ದೂಡಿಬಿಟ್ಟರು." ಈ ವಾಕ್ಯಗಳು ಸರಿಯಾಗಿ ಅರ್ಥವಾಗಬೇಕಾದರೆ ವಾಚಕರು ಕೆಳಗಿನ ಸಂಗತಿಗಳನ್ನು ಸಾವಧಾನದಿಂದ ಓದಿಕೊಳ್ಳಬೇಕಾಗಿದೆ.

ಟರ್ಕಿ ಗವರ್ನ್‌ಮೆಂಟಿನ ಪರಿಪಾಲನೆಗೆ ಸೇರಿ ನಾನಾ ಕಷ್ಟನಷ್ಟ ಮನೋವ್ಯಥೆಗಳನ್ನು ಅನುಭವಿಸುತ್ತಿರುವಂಥಾ ಮ್ಯಾಸಿಡೋನಿಯಾ ಸೀಮೆಯ ಕ್ರೈಸ್ತ ಪ್ರಜೆಗಳನ್ನು ಉದ್ಧಾರಮಾಡುವುದು ಈ ಯುದ್ಧಕ್ಕೆ ಒಂದು ಉದ್ದೇಶವಾಗಿದೆ ಎಂದು ಈಗ ಏಕೀಭವಿಸಿರುವ ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ ಮತ್ತು ಗ್ರೀಸ್ ರಾಜ್ಯಗಳವರು ಕಾರಣ ಹೇಳುತ್ತಾರೆ. ಹಿಂದೆ ಒಂದಾನೊಂದು ಕಾಲದಲ್ಲಿ ಈ ರಾಜ್ಯಗಳಲ್ಲಿ ಪ್ರತಿ ಒಂದೂ ಟರ್ಕಿ ರಾಜ್ಯದೊಳಗೆ ಬೇರೆ ಬೇರೆ ಅಧಿಪತ್ಯಗಳಾಗಿದ್ದವು, ಆದರೆ ಕಾಲಕ್ರಮದಲ್ಲಿ ಆ ಪ್ರತಿ ಒಂದು ಅಧಿಪತ್ಯವೂ ಪ್ರತ್ಯೇಕವಾದ ಸ್ವತಂತ್ರ ರಾಜ್ಯವಾಗಿ ಪರಿಣಮಿಸಿರುತ್ತದೆ. ಬಲ್ಗೇರಿಯ ಅಧಿಪತ್ಯವು ಟರ್ಕಿ ಸುಲ್ತಾನರ ಅಧಿಕಾರವನ್ನು ಒಗದುಬಿಟ್ಟು ಸ್ವತಂತ್ರ ರಾಜ್ಯವಾಗಿ ಇಲ್ಲಿಗೆ ನಾಲ್ಕೈದು ವರುಷಗಳಾಗಿರಬಹುದು.

ಕಳೆದ 1875 ನೇ ಇಸವಿಯಲ್ಲಿ ಬಲ್ಗೇರಿಯ ಸೀಮೆಯು ಟರ್ಕಿ ರಾಜ್ಯದಲ್ಲಿ ಒಂದು ಅಧಿಪತ್ಯವಾಗಿತ್ತು. ಅಲ್ಲಿನ ಪ್ರಜೆಗಳು ಆಳ್ವಿಕೆಯ ಅಧರ್ಮವನ್ನೂ, ಅಧಿಕಾರಿಗಳ ಕ್ರೌರ್ಯವನ್ನೂ ಸಹಿಸಲಾರದೆ ದಂಗೆಯೆದ್ದರು ಆದರೆ ಈ ದಂಗೆಯನ್ನು ಟರ್ಕಿಯವರು ಬಹು ಕ್ರೂರತನದಿಂದ ಅಡಗಿಸಿಬಿಟ್ಟರು. ಬಾಷಿಬಜೂಕ್ ಎಂಬ ಅರೆಕಿರಾತರಾದ ಮಹಮದೀಯ ಸೈನಿಕರನ್ನು ಟರ್ಕಿಯವರು ಏಷ್ಯಾಖಂಡದಿಂದ ಕರೆದುತಂದು ಬಲ್ಗೇರಿಯಾ ಗ್ರಾಮಗಳ ಮೇಲೆ ನುಗ್ಗಿಸಿದರು. ಇವರ ಹಾವಳಿಯಿಂದ ಗ್ರಾಮಗಳು ಸಂಪೂರ್ಣವಾಗಿ ಹಾಳುಬಿದ್ದವು; ಹೆಂಗಸರನ್ನು ಹಿಂಸಿಸಿ ಅಪಮಾನಪಡಿಸಿದರು; ಸಾವಿರಾರು ಹೆಂಗಸರುಮಕ್ಕಳನ್ನು ಅನ್ಯಾಯವಾಗಿ ಕೊಂದುಬಿಟ್ಟರು. ಆ ಸಮಯದಲ್ಲಿ ಆ ಪ್ರಾಂತ್ಯ ಸಂಚರಿಸುತ್ತಿದ್ದ ಇಬ್ಬರು ಬಾತ್ಮೀದಾರರು ಈ ಘೋರ ಕೃತ್ಯಗಳನ್ನು ವಿವರಿಸಿ ಅಮೇರಿಕದ ಒಂದು ಪತ್ರಿಕೆಯಲ್ಲೂ, ಇಂಗ್ಲಾಂಡಿನ ಒಂದು ಪತ್ರಿಕೆಯಲ್ಲೂ ಮೊದಲು ಪ್ರಕಟಮಾಡಿದರು. ಯೂರೋಪಿನ ರಾಜ್ಯಧುರಂಧರರು ಆ ವೃತ್ತಾಂತವನ್ನು ಓದಿದರೂ ಅದೆಲ್ಲಾ ನಿಜವಾದದ್ದೆಂದು ನಂಬಲಿಲ್ಲ. ಟರ್ಕಿ ಗವರ್ನ್‌ಮೆಂಟಿನವರಾದರೋ ದಂಗೆಯೆದ್ದಿದ್ದವರನ್ನಲ್ಲದ ಇನ್ಯಾರನ್ನೂ ಕೊಲ್ಲಲಿಲ್ಲವೆಂದು ಹೇಳಿದರು. ಆದರೆ ಇಂಗ್ಲಿಷ್ ಗವರ್ನ್‌ಮೆಂಟಿನವರು ತಮ್ಮ ಅಧಿಕಾರಿಗಳಲ್ಲಿ ಕೆಲವರನ್ನು ನೇಮಿಸಿ ಬಲ್ಗೇರಿಯ ಸೀಮೆಗೆ ಕಳುಹಿಸಿ ವಿಚಾರಿಸಿದ್ದರಲ್ಲಿ ಆ ವರ್ತಮಾನ ಪತ್ರಿಕೆಗಳು ಪ್ರಕಟಿಸಿದ್ದ ಘೋರಕೃತ್ಯಗಳು ಯಥಾರ್ಥವಾದವುಗಳೆಂದು ಸರ್ಕಾರಿಯಾಗಿ ಸಿದ್ಧಾಂತಮಾಡಲಾಯಿತು. ಒಬ್ಬ ರಾಯಭಾರಿಯು ಅಲ್ಲಿ ಸಂಚರಿಸಿದಾಗ ಒಂದು ಕಡೆ ನೂರಾರು ಹೆಂಗಸರುಮಕ್ಕಳ ಶವಗಳುಳ್ಳ ಒಂದು ರಾಸಿಯನ್ನೇ ಕಂಡೆನೆಂದೂ, ಅವುಗಳಲ್ಲಿ ಯುದ್ಧಭಟನ ಶವ ಒಂದಾದರೂ ಇರಲಿಲ್ಲವೆಂದೂ ಹೇಳಿದನು. ಒಂದು ನಗರದಲ್ಲಿದ್ದ 5,000 ಪ್ರಜೆಗಳು ಸಮೂಲವಾಗಿ ಕೊಲ್ಲಲ್ಪಟ್ಟರು ಇಂಥಾ ಕೊಲೆಗೆ ಅಪ್ಪಣೆ ಕೊಟ್ಟ ಸೈನ್ಯಾಧಿಪತಿಗೆ ಸುಲ್ತಾನರಿಂದ ಬಿರುದೂ, ಬಡ್ತಿಯೂ ದೊರಕಿದವು. ಬಲ್ಗೇರಿಯದಲ್ಲಿ ನಡೆದ ಈ ಘೋರಕೃತ್ಯಗಳೇ ಆ ಮಹನೀಯನಾದ ಗ್ಲಾಡ್‌ಸ್ಟನ್ ಪ್ರಭುವಿನ ಆಗ್ರಹವನ್ನು ಉದ್ರೇಕಮಾಡಿದವು. ಈತನು ಈ ವಿಚಾರವನ್ನು ಕುರಿತು ಬರೆದ ಹಸ್ತಪತ್ರವು ಯೂರೋಪಿನಲ್ಲೆಲ್ಲಾ ಹರಡಿಕೊಂಡದ್ದಲ್ಲದೆ ಅದು ಇಂಗ್ಲಿಷ್ ಪ್ರಜೆಗಳಲ್ಲಿ ಮಹತ್ತರವಾದ ರೋಷವನ್ನುಂಟುಮಾಡಿತು.

ಬಳಿಕ ರಷ್ಯಾ ರಾಜ್ಯವು ಟರ್ಕಿಯ ಮೇಲೆ ಯುದ್ಧಕ್ಕೆ ಹೊರಟಿತು. ಪ್ಲೆವ್ನಾ ಎಂಬಲ್ಲಿ ಟರ್ಕಿಯವರು ಬಹು ಪರಾಕ್ರಮದಿಂದ ಕಾದಿದರೂ ಕಡೆಗೆ ಸೋತುಹೋದರು. ರಷ್ಯಾ ಸೈನ್ಯಗಳು ಸುಮ್ಮನಾಗದೆ ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದ ಮೇಲೆ ನುಗ್ಗಿದವು. ಕಡೆಗೆ ಸ್ಯಾನ್ ಸ್ಟೆಫನೋ ಎಂಬಲ್ಲಿ ಟರ್ಕಿಯವರಿಗೂ ರಷ್ಯಾದವರಿಗೂ ಒಂದು ಕರಾರು ನಡೆದು ಯುದ್ಧ ನಿಂತಿತು. ಈ ತಹನಾಮೆಯಲ್ಲಿ ಬಲ್ಗೇರಿಯ ಪ್ರಾಂತ್ಯವು ಪ್ರತ್ಯೇಕವಾದ ಸಂಸ್ಥಾನವಾಗಬೇಕೆಂದೂ, ಅಲ್ಲಿನವರೇ ಒಬ್ಬ ದೊರೆಯನ್ನು ನೇಮಿಸಿಕೊಂಡು ತಮಗೆ ಅನುಕೂಲವಾದ ಕಟ್ಟಲೆ ಕಾನೂನುಗಳನ್ನು ಮಾಡಿಕೊಳ್ಳಬಹುದೆಂದೂ, ಆ ದೊರೆಯು ಸುಲ್ತಾನರ ಕೈಕೆಳಗಿನ ಅಧಿರಾಜನಾಗಿ ಮಾತ್ರ ಇರತಕ್ಕದ್ದೆಂದೂ ಸಹಾ ಇವನ್ನು ಆ ಎರಡು ರಾಜ್ಯಗಳವರೂ ಒಪ್ಪಿಕೊಂಡರು. ಈ ಬಲ್ಗೇರಿಯದೊಳಗೆ ಮ್ಯಾಸಿಡೋನಿಯಾ ಎಂಬ ಪ್ರದೇಶವೂ ಸೇರಿಸಲ್ಪಟ್ಟಿತು

ಆದರೆ ಆ ಸಮಯದಲ್ಲಿ ಇಂಗ್ಲಾಂಡಿನೊಳಗೆ ಲಾರ್ಡ್ ಬೀಕನ್ಸ್‌ಫೀಲ್ಡ್‌ಯವರು ಮಂತ್ರಿಶ್ರೇಷ್ಠರಾಗಿಯೂ, ಗ್ಲಾಡ್‌ಸ್ಟನ್ ಪ್ರಭುವು ಆ ಮಂತ್ರಿಯ ಪ್ರತಿಪಕ್ಷಿಯಾಗಿಯೂ ಇದ್ದರು ಗ್ಲಾಡ್‌ಸ್ಟನ್ ಪ್ರಭುವು ಆ ಸಮಯದಲ್ಲಿ ಎಷ್ಟು ಬಲ ಹೇಳಿದ್ದೇನಂದರೆ, ಈ ಹೊಸ ಏರ್ಪಾಡಿನಿಂದ ಬಲ್ಗೇರಿಯ ಸಂಸ್ಥಾನವು ವಸ್ತುತಃ ರಷ್ಯಾ ಪೋಷ್ಯವರ್ಗಕ್ಕೆ ಸೇರಿಕೊಂಡು, ಕಡೆಗೆ ರಷ್ಯಾ ಚಕ್ರಾಧಿಪತ್ಯದಲ್ಲಿ ಐಕ್ಯವಾಗುವುದು; ಹೀಗೆ ಯೂರೋಪಿನ ದಕ್ಷಿಣ ಪ್ರಾಂತ್ಯದಲ್ಲೂ, ಮೆಡಿಟರೇನಿಯನ್ ಕಡಲಿನ ತೀರಗಳಲ್ಲೂ ರಷ್ಯಾ ರಾಜ್ಯವು ವ್ಯಾಪಿಸಿಕೊಳ್ಳುವುದು ಇಂಗ್ಲಾಂಡಿಗೆ ಅಪಾಯಕಾರಿಯಾದೀತು. ಬರ್ಲಿನ್ ಪಟ್ಟಣದಲ್ಲಿ ಇದರ ವ್ಯವಸ್ಥೆಗಾಗಿ ಯೂರೋಪಿನ ರಾಜ್ಯಗಳ ಪ್ರತಿನಿಧಿಗಳು ಸೇರಿ ರಷ್ಯಾದವರನ್ನು ಅಲ್ಲಿಗೆ ಬರಮಾಡಿಕೊಂಡು ಒಂದು ಮಹಾಸಭೆಯನ್ನು ನಡಿಸಿದರು. ಈ ಮಹಾಸಭಿಕರು ಸ್ಯಾನ್ ಸ್ಟೆಫನೋದಲ್ಲಿ ನಡೆದಿದ್ದ ತಹನಾಮೆಯನ್ನು ರದ್ದುಮಾಡಿದರಲ್ಲದೆ ಮ್ಯಾಸಿಡೋನಿಯ ಸೀಮೆಯನ್ನು ಬಲ್ಗೇರಿಯದಿಂದ ಪ್ರತ್ಯೇಕಿಸಿ ಮತ್ತೆ ಟರ್ಕಿ ರಾಜ್ಯಕ್ಕೆ ಸೇರಿಸಿಬಿಟ್ಟರು. ಈ ಏರ್ಪಾಡಿಗೆ ಇಂಗ್ಲಾಂಡಿನವರೇ ವಿಶೇಷ ಸಹಾಯಮಾಡಿದವರು. ಈ ತಪ್ಪು ಬಹು ಘೋರವಾಗಿಯೂ, ತುಂಬಾ ಅಪಮಾನಕರವಾಗಿಯೂ ಪರಿಣಮಿಸಿತು, ಯಾಕೆಂದರೆ ಮ್ಯಾಸಿಡೋನಿಯವನ್ನು ಪ್ರತ್ಯೇಕಿಸದೆ ಬಲ್ಗೇರಿಯದ ಅಂಶವಾಗಿಯೇ ಉಳಿಸಿದ್ದಲ್ಲಿ ಈಗಿನ ಯುದ್ಧಕಾರ್ಯಗಳು ಸಂಭವವಾಗುತ್ತಲೇ ಇರಲಿಲ್ಲ.

ಬರ್ಲಿನ್ ಮಹಾಸಭೆಯವರು ತೀರ್ಮಾನಮಾಡಿದಂತೆ ಸುಲ್ತಾನರು ಮ್ಯಾಸಿಡೋನಿಯದಲ್ಲಿ ಪ್ರಜಾಪರಿಪಾಲನೆಯ ಕ್ರಮಗಳನ್ನು ಬದಲಾವಣೆ ಮಾಡಿಡುವುದಾಗಿ ಒಪ್ಪಿಕೊಂಡರು. ಹೊಸ ಕ್ರಮಗಳನ್ನು ಸೂಚಿಸುವುದಕ್ಕೆ ಒಂದು ಕಮಿಟಿ ಏರ್ಪಾಡಾಗಬೇಕೆಂದೂ, ಈ ಕಮಿಟಿಯಲ್ಲಿ ಮ್ಯಾಸಿಡೋನಿಯದ ಪ್ರತಿನಿಧಿಗಳೂ ಕೆಲವರಿರಬೇಕೆಂದೂ ಒಪ್ಪಂದವಾದದ್ದೇನೋ ಅಷ್ಟೆ; ಈ ರೀತಿಯಾದ ಕಮಿಟಿಯು ನೇಮಕವಾಗಲೇ ಇಲ್ಲ. ಆ ಲಾಗಾಯಿತು 35 ಸಂವತ್ಸರಗಳಿಂದಲೂ ಮ್ಯಾಸಿಡೋನಿಯಾ ಪ್ರಜೆಗಳು ಟರ್ಕಿ ಅಧಿಕಾರಿಗಳ ಅಧರ್ಮವಾದ ಆಳ್ವಿಕೆಯಲ್ಲಿ ಬಿದ್ದು ಸಂಕಟಪಡುತ್ತಾ ಬಂದಿದ್ದಾರೆ. ಆ ಸೀಮೆಯಲ್ಲಿ ಸಂಚಾರಮಾಡಿಕೊಂಡು ಬಂದಿರುವವರು ಅಲ್ಲಿನ ಸ್ಥಿತಿಗತಿಯು ಒಂದೇ ರೀತಿ ವಿಷಾದಕರವಾಗಿದೆ ಎಂದು ತಿಳಿಸುವರು

ಈ ಮ್ಯಾಸಿಡೋನಿಯಾ ಪ್ರಜೆಗಳ ಕಷ್ಟ ಸಂಕಟಗಳು ಏನೆಂದು ನೋಡೋಣ. (1) ಅವರ ಪ್ರಾಣ ಮಾನ ಧನಗಳಿಗೆ ಭಾಧ್ಯತೆ ಇಲ್ಲ. ದರೋಡೆಗಳು ಹೆಚ್ಚಿಹೋಗಿವೆ. ಆಯುಧಪಾಣಿಗಳಾದ ಕ್ರೂರಾತ್ಮಗಳು ಬೆಟ್ಟಗುಡ್ಡಗಳಲ್ಲಿ ಅಡಗಿದ್ದು ಆಗಾಗ್ಗೆ ಊರು ಗ್ರಾಮಗಳಿಗೆ ನುಗ್ಗಿಬಂದು ರೈತರ ಮತ್ತು ಪ್ರಜೆಗಳ ಆಸ್ತಿಪಾಸ್ತಿಯನ್ನು ಕೊಳ್ಳೆಹೊಡೆಯುತ್ತಾರೆ. ಅಲ್ಬೇನಿಯರೆಂಬೀ ಜನರು ದರೋಡೆಕೋರರು. ಟರ್ಕಿ ಗವರ್ನ್‌ಮೆಂಟಿನವರು ಅವರ ಹಾವಳಿಯನ್ನು ದರ್ಪವಿಟ್ಟು ಅಡಗಿಸಲಿಲ್ಲ (2) ಅಧಿಕಾರಿಗಳು ಲಂಚಕೋರರು. ಕಂದಾಯ ಕೌಳಿಗೆಗಳನ್ನು ನ್ಯಾಯವಾದದ್ದಕ್ಕಿಂತ ಹೆಚ್ಚಾಗಿ ಸುಲಿದುಕೊಳ್ಳುವರು. ಜನರನ್ನು ಅನ್ಯಾಯವಾಗಿ ಹೊಡೆದುಬಡಿದು ಹಿಂಸೆಪಡಿಸಿ ಬಂದೀಖಾನೆಗೆ ಹಾಕುತ್ತಾರೆ. ಕಷ್ಟ ನಷ್ಟಗಳಿಗೆ ಗುರಿಯಾದ ಪ್ರಜೆಗಳಿಗ ನ್ಯಾಯಸ್ಥಾನಗಳಲ್ಲಿ ಪರಿಹಾರ ಸಿಕ್ಕುವುದಿಲ್ಲ, (3) ಆಳ್ವಿಕೆಯ ಕ್ರಮಗಳಾದರೋ ಧರ್ಮ ವಿರುದ್ಧವಾಗಿರುವವು. ಮಹಮದೀಯರು ಪಡೆದಿರುವ ಹಕ್ಕು, ಸ್ವಾತಂತ್ರ್ಯಾದಿಗಳು ಇತರ ಪ್ರಜೆಗಳಿಗೆ ಇಲ್ಲ, ಕಾನೂನು ಪಕ್ಷಪಾತ ಸಹಿತವಾಗಿದೆ. (4) ಮ್ಯಾಸಿಡೋನಿಯದಲ್ಲಿರುವ ಗ್ರೀಕರೂ ಬಲ್ಗೇರಿಯನರೂ ದ್ರವ್ಯವನ್ನು ಒದಗಿಸಿಕೊಂಡು, ವಿದ್ಯೆ ಬುದ್ಧಿ ನಾಗರಿಕಗಳಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ ಅವರನ್ನು ಆಳುವಂಥಾ ಟರ್ಕಿ ಗವರ್ನ್‌ಮೆಂಟು ಇನ್ನೂ ಅನಾಗರಿಕವಾಗಿಯೇ ಇರುತ್ತದೆ.

ಮ್ಯಾಸಿಡೋನಿಯದಲ್ಲಿರುವ ಪ್ರಜೆಗಳು ಬೇರೆ ಬೇರೆ ವಂಶಗಳಿಗೂ, ಪಂಗಡಗಳಿಗೂ, ಮತಗಳಿಗೂ ಸೇರಿದವರಾಗಿರುವ ಕಾರಣ ಅವರನ್ನೆಲ್ಲಾ ಸರ್ವಸಮರ್ಪಕವಾಗಿ ಪರಿಪಾಲನೆಮಾಡುವುದು ಯಾವ ಗವರ್ನ್‌ಮೆಂಟಿಗೂ ಸುಲಭಸಾಧ್ಯವಲ್ಲ. ಮತರೀತ್ಯಾ ಮಹಮದೀಯರಿಗೂ ಕ್ರೈಸ್ತರಿಗೂ ಇರುವ ವ್ಯತ್ಯಾಸವುಂಟು, ಜನಾಂಗಗಳನ್ನು ನೋಡಿದರೆ ಅಲ್ಲಿ ಟರ್ಕಿಯವರು, ಅಲ್ಬೇನ್ಯರು, ಬಲ್ಗರರು, ಸರ್ಬರು, ಗ್ರೀಕರು ಇರುತ್ತಾರೆ. ಪೂರ್ವಕಾಲದಲ್ಲಿ ಬಲ್ಗರರೂ ಗ್ರೀಕರೂ ಪರಸ್ಪರ ವಿರೋಧಿಗಳಾಗಿದ್ದರು. ಈಗ ಅಧರ್ಮವಾದ ಆಳ್ವಿಕೆಯನ್ನು ತೊಡೆದುಬಿಡುವುದಕ್ಕಾಗಿಯೇ ಅವರು ಏಕೀಭವಿಸಿರುತ್ತಾರೆ.

ಈಗ ಯುದ್ಧ ಪ್ರಾರಂಭವಾಗಿರುವುದನ್ನು ನೋಡಿ ನಾವು ತುಂಬಾ ವ್ಯಥೆಪಡುತ್ತೇವೆ ಇದರ ಪರಿಣಾಮವೇನೆಂದು ಯಾರೂ ಹೇಳಲಾರರು. ಇದು ಪ್ರಾಪ್ತವಾಗದೆ ಹೋಗಿದ್ದರೆ ಎಷ್ಟೋ ಚನ್ನಾಗಿತ್ತು. ಟರ್ಕಿ ರಾಜ್ಯಭಾರವು ಈಚೆಗೆ ರೂಪಾಂತರ ಹೊಂದಿದಾಗ ಇನ್ನು ಮುಂದೆ ಮ್ಯಾಸಿಡೋನಿಯದ ಸೌಭಾಗ್ಯವು ಸ್ಥಿರಪಡುವುದೆಂದೂ, ಟರ್ಕಿಯ ಸಕಲ ಪ್ರಜೆಗಳಲ್ಲೂ ಸಮೃದ್ಧಿ ಸಮಾಧಾನಗಳು ನೆಲೆಗೊಳ್ಳುವವೆಂದೂ ಎಲ್ಲರೂ ನೆನಸಿದ್ದರು. ಆದರೆ ಆ ನಿರೀಕ್ಷೆಯು ವಿಫಲವಾಯಿತು. ಆಳ್ವಿಕೆಯ ಕ್ರಮಗಳು ಮಾಜಿ ಸುಲ್ತಾನರ ದೌಲತ್ತಿನಲ್ಲಿದ್ದಂತೆಯೇ ಕ್ರೂರತರವಾಗಿಯೂ ಅಧರ್ಮವಾಗಿಯೂ ಪರಿಣಮಿಸಿರುತ್ತವೆ. ಟರ್ಕಿಯ ಹೊಸ ಮಂತ್ರಿಗಳು ಬಹಳ ಸಮರ್ಥರೆಂದೂ ಧರ್ಮವಾಗಿ ಪ್ರಜಾಹಿತಚಿಂತನೆಯುಳ್ಳ ಬದಲಾವಣೆಗಳನ್ನು ರೂಢಿಸುವುದ[ಕ್ಕೆ] ಕುತೂಹಲವುಳ್ಳವರಾಗಿದಾರೆಂದೂ ತಿಳಿಯುತ್ತದೆ. ಆದರೆ ಇಷ್ಟು ಪ್ರಕಾರ ಮ್ಯಾಸಿಡೋನಿಯದಲ್ಲಿ ಹೊಸ ಕ್ರಮಗಳ[ನ್ನು] ರೂಢಿಸಲು ಅವರಿಗೆ ಅವಕಾಶ ಲಭಿಸಲಿಲ್ಲ. ಈ ಪ್ರಪಂಚ ಮತ್ತು ಸಕಲ ಪ್ರಜೆಗಳ ನಿರ್ಮಾಣಕರ್ತನೂ ಧರ್ಮಪರಿಪಾಲನೂ ಆಗಿರುವ ದೇವರು ಈ ಯುದ್ಧದಲ್ಲಿ ದುಷ್ಟರಿಗೆ ಶಿಕ್ಷೆಯ[ನ್ನೂ] ಶಿಷ್ಟರಿಗೆ ರಕ್ಷಣೆಯನ್ನೂ ದಯಪಾಲಿಸಿ, ಸತ್ಯವನ್ನೂ ಧ[ರ್ಮ]ವನ್ನೂ ದೀರ್ಘಶಾಂತಿಯನ್ನೂ ನೆಲೆಗೊಳಿಸುವವನಾಗಲೆ[ಂದು] ನಾವೆಲ್ಲಾ ಪ್ರಾರ್ಥಿಸೋಣ

ನವರಾತ್ರಿ ಉತ್ಸವಗಳು.

ನವರಾತ್ರಿಯ ಉತ್ಸವಗಳು ರಾಜಧಾನಿಯಲ್ಲಿ ಕಳೆದ ಶುಕ್ರವಾರ ಪ್ರಾ[ರಂಭ]ವಾಗಿ ನಡೆಯುತ್ತಾ ಬಂದಿವೆ ಕೋಟೆಯಲ್ಲಿ ಅದಿಯಿಂದಲೂ ಇದ್ದ ... ಮನೆಗಳನ್ನು ಒಡೆದುಹಾಕಿ ಪ್ರೈದಾನ್ ಮಾಡಿ, ಹೊಸ ಅರಮನೆಯು ಪ್ರಾ[ಮುಖ್ಯ]ವಾಗಿ ಕಾಣುವಂತೆ ಮಾಡಿದಾರೆ. ಅರಮನೆಯ ಸಜ್ಜೆ ಅಥವಾ ದರ್ಬಾರ್ ... ರವನ್ನು ಹೊಸ ಬಣ್ಣಗಳಿಂದಲೂ ನೂತನ ಬದಲಾವಣೆಗಳಿಂದಲೂ ಕಣ್ಣ[ಸೆಳೆಯು]ವಂತೆ ಮಾಡಿರುವರು ಅರಮನೆಯ ಮುಂಭಾಗದಲ್ಲಿರುವ ಚೌಕವು ... ಹಲವು ಅಲಂಕಾರಗಳಿಂದ ಶೋಭಿಸುತ್ತಿರುವುದು.

ಶುಕ್ರವಾರ ಬೆಳಿಗ್ಗಿನಿಂದಲೂ ಸಾವಿರಾರು ಪ್ರಜೆಗಳು ಅರಮನೆಯಲ್ಲಿ ನಡೆ]ಯುವ ಉತ್ಸವಾದಿಗಳನ್ನು ನೋಡಲು ಕುತೂಹಲಯುಕ್ತರಾಗಿ ಮೈದಾನ ಕಿಕ್ಕಿರಿಯುವಂತೆ ನೆರೆದಿದ್ದರು ಸೈನ್ಯಗಳೂ ಆನೆ ಕುದುರೆ ಒಂಟೆಗಳೂ ... ಮುಂಚೆಯೇ ಹಾಜರಾಗಿ ಸಾಲುಗಟ್ಟಿ ನೇಮಕವಾದ ಸ್ಥಳಗಳಲ್ಲಿ ನಿಂತ[ಿದ್ದ]ವು ಬ್ಯಾಂಡುಗಳೂ ಇತರ ಬೇರೆ ಬೇರೆ ವಾದ್ಯಗಾರರೂ ಆನೆಬಾಗಿಲ ... ಸಾಲುಕಟ್ಟಿ ನಿಂತು ಇಂಪಾದ ಹಾಡುಗಳನ್ನು ನುಡಿಸುತ್ತಾ ಇದ್ದರು

ಸುಮಾರು 11.30 ಗಂಟೆಗೆ ಶ್ರೀಮನ್ ಮಹಾರಾಜರವರು ಅಷ್ಟ[ಮಂಗಳ]ವನ್ನು ತರಿಸಿಕೊಂಡು, ದಿವ್ಯವಾದ ಭಂಗಾರದ ಪೋಷಾಕನ್ನು ಧರಿಸಿ ಅಮೂಲ್ಯವಾದ ರತ್ನಾಭರಣಭೂಷಿತರಾಗಿ ಶ್ರೀಮದ್ ಯುವರಾಜನವರ ಸ[ಮೇತ] ದರ್ಬಾರ್ ಮಂದಿರಕ್ಕೆ ಚಿತ್ತೈಸಿದರು. ಅಲ್ಲಿ ಸಿಂಹಾಸನದ ಬಲಗಡೆ ಕಿನಾರೆಯಲ್ಲಿ ಶ್ರೀಪಾದ್ಯಾಸನವನ್ನಲಂಕರಿಸಿ ರಾಜಪುರೋಹಿತರ ಮುಖೇನ ... ದಾನಾದಿಗಳನ್ನು ನೆರವೇರಿಸಿ ಅಲ್ಲಿಂದ ಸಿಂಹಾಸನದ ಬಳಿಗೆ ಬರುವನ ... ಸನವನ್ನು ಯಥಾವಿಧಿಯಾಗಿ ಪೂಜೆ ಮಾಡಿ ಪ್ರದಕ್ಷಿಣೆ ನಮಸ್ಕಾರಗಳನ್ನು ... ಸಿ ಸರ್ದಾರ್ ಗೋಪಾಲರಾಜ ಅರಸಿನವರ ಹಸ್ತಲಾಘವದಿಂದ ಸಿಂಹಾಸ[ನವನ್ನು] ಹತ್ತಿ ಸಲಾಂಬಾಜಾ ವಾದಿಸುತ್ತಿದ್ದ ಸಕಲ ಸೈನಿಕರಿಗೂ ಪ್ರತಿವಂದನೆ ... ಗೌರವಾರ್ಥವಾದ 21 ತೋಪುಗಳು ಹಾರುತ್ತಿರುವಲ್ಲಿ ಜಯಘೋಷಗಳ ... ಕುಳಿತುಕೊಂಡರು ಶ್ರೀಮದ್ ಯುವರಾಜರವರು ಸಿಂಹಾಸನದ ಬಲ[ಗಡೆ] ಎಡುರುಮೂಲೆಯಲ್ಲಿ ಹಾಕಿದ ಶ್ರೀಪಾದ್ಯಾಸನವನ್ನು ಅಲಂಕರಿಸಿದರು ... ಸರು, ಋತ್ವಿಕ್ಕರು, ಶಾಸ್ತ್ರಿಗಳೇ ಮೊದಲಾದ ವೈದಿಕ ಮಹನೀಯರೂ ... ಬೇರೆ ಮಠ ಮತ್ತು ದೇವಸ್ಥಾನಗಳ ಪ್ರತಿನಿಧಿಗಳೂ ಒಬ್ಬೊಬ್ಬರಾಗಿ ಸಿಂಹಾ[ಸನದ] ಬಳಿಗೆ ಹೋಗಿ ದರ್ಬಾರ್ ಭಕ್ಷಿಯವರ ಸಹಾಯದಿಂದ ಶ್ರೀಮನ್ ಮಹಾ[ರಾಜ]ರವರಿಗೆ ಫಲವನ್ನು ಒಪ್ಪಿಸಿ ಆಶೀರ್ವಚನ ಪೂರ್ವಕವಾಗಿ ಮಂತ್ರಾಕ್ಷತೆ[ಯನ್ನು] ಶಿರಸ್ಸಿನ ಮೇಲೆ ಹಾಕಿ ತೆರಳಿದರು. ಇದಕ್ಕೆ ಮುಂಚೆಯೇ ಪಟ್ಟದಾನೆ[ಕುದುರೆ]ಗಳು ಮಂಗಳವಾದ್ಯಗಳ ಸಮೇತ ಕೆಮ್ಮಣ್ಣು ಮಟ್ಟಿಗೆ ಬಂದು ಶ್ರೀಮನ್ ... ರಾಜರವರಿಗೆ ಮುಜರೆ ಮಾಡಿ ಕೆರೆಯ ಬಳಿಗೆ ಹೊರಟುಹೋದವು. ... ಮಂಡಲಿಯವರು ಫಲ ಮಂತ್ರಾಕ್ಷತೆಗಳನ್ನು ಒಪ್ಪಿಸಿದ ತರುವಾಯ ದ[ರ್ಬಾರಿ]ನಲ್ಲಿ ಹಾಜರಾಗಿದ್ದ ಸರ್ದಾರರೂ, ಅರಸುಗಳೂ, ಅಧಿಕಾರಿಗಳೂ, ಕೋಮುಗಳ ಮತ್ತು ಕಸಬುಗಳ ಮುಖ್ಯ ದೊಡ್ಡ ಮನುಷ್ಯರೂ ಶ್ರೀ[ಮನ್] ಮಹಾರಾಜರವರಿಗೆ ಸಾಲುಕಟ್ಟಿ ನಿಂತು ಮುಜರೆಮಾಡಿ, ಒಬ್ಬೊಬ್ಬರಾಗಿ [ಸಿಂಹಾ]ಸನದ ಬಳಿಗೆ ಹೋಗಿ ದರ್ಬಾರ್ ಭಕ್ಷಿಯವರ ಸಹಾಯದಿಂದ ಒಪ್ಪಿಸಿದ ... ಗಳನ್ನು ಶ್ರೀಮನ್ ಮಹಾರಾಜರವರು ಕೃಪೆಯಿಟ್ಟು ಮುಟ್ಟಿ ವಾಪಸು ... ಲಿಸಿದರು. ಕೆಳಗಡೆ ಮೈದಾನದಲ್ಲಿ ಸಮಸ್ತ ಸೈನಿಕರೂ ಪದ್ಧತಿಯನ್ನ[ನುಸರಿಸಿ] ಕವಾತು ಮಾಡಿ ಸಾಲುಕಟ್ಟಿ ನಿಂತುಕೊಂಡ ಮೇಲೆ ಸಿಪಾಯಿಗಳು ಮೂರ[ು] ಸುಸುಟುಗಳನ್ನು ಹಾರಿಸಿದರು. ಬಳಿಕ ಸೈನಿಕರು ತಮ್ಮ ಸ್ಥಾನಗಳ[ಲ್ಲಿ] ನಿಂತುಕೊಂಡು "ಶ್ರೀಮನ್ ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ [ಬಹದ್ದೂ]ರ್ ಕಿಜೈ" ಎಂಬದಾಗಿ ಉಚ್ಚಸ್ವರದಿಂದ ಧ್ವನಿ ಮಾಡಿ ಜಯವನ್ನು ... ದರ್ಬಾರಿನಲ್ಲಿ ಮಹಾರಾಜರವರ ಅನುಜ್ಞೆಯನ್ನು ಪಡೆದು ದರ್ಬಾರ್ ... ರವರು ಸರ್ದಾರ್ ಕಾಂತರಾಜ ಅರಸಿನವರ ಕೈಯಿಂದ ಶ್ರೀಮನ್ ಮ[ಹಾರಾಜ]ರವರಿಗೆ ಹಾರಾ ತುರಾಯಿ ಅತ್ತರ್ ಪಾನ್ ಸುಪಾರಿಗಳನ್ನು ಒಪ್ಪಿಸಿದರು. ಆನೆ ಕುದುರೆಗಳು ಕೆರೆ ಬಳಿಯಿಂದ ವಾಪಸು ಬಂದ ಬಳಿಕ ವೈದಿಕ ... ಮೊದಲಾದ ಸಮಸ್ತ ದೊಡ್ಡ ಮನುಷ್ಯರಿಗೂ ಹಾರಾ ಹಾಕಿ ಪಾನ್ ... ಕೊಟ್ಟರು ತರುವಾಯ ಮುಜರೆ ನಡೆದು ಬೆಳಿಗ್ಗಿನ ದರ್ಬಾರು ಮು[ಕ್ತಾಯ]ವಾಡಲಾಯಿತು

ಆ ದಿನ ಸಾಯಂಕಾಲ ಶ್ರೀಮನ್ ಮಹಾರಾಜರವರು ಶ್ರೀಮದ್ [ಯುವ]ರಾಜರವರ ಸಮೇತ ದರ್ಬಾರ್ ಮಂದಿರಕ್ಕೆ ಚಿತ್ತೈಸಿ ಸಿಂಹಾಸನದಲ್ಲಿ ... ದರ್ಬಾರ್ ನಡಿಸಿದರು. ಕೆಲವು ಮಿಲಿಟರಿ ಹುದ್ದೆದಾರರು ಆಗ ಮು[ಜರೆ] ನಜರು ಒಪ್ಪಿಸಿದರು. ಜಟ್ಟಿ ಕಾಳಗಗಳು, ಸಿಪಾಯಿಗಳ ಚಮತ್ಕಾ[ರದ] ಕಸರತ್ತುಗಳು, ಪಶ್ಚಾತ್ತಾವರಿಸಗಳು ನಡೆದು, ಆನೆ ಕುದುರೆಗಳು ಕೆರೆ ಬಳಿ[ಯಿಂದ] ವಾಪಸು ಬಂದ ಮೇಲೆ ದಿವ್ಯವಾದ ಬಾಣಬಿರುಸುಗಳು ಹಚ್ಚಲ್ಪಟ್ಟವು

ಹೀಗೆಯೇ ಇನ್ನೆಂಟು ದಿನಗಳೂ ಸಾಯಂಕಾಲ ದಿನವೂ ದರ್ಬಾ[ರು ನಡೆ]ಯುತ್ತಾ ಬಂದು, ತಾ. 19 ನೇ ಶನಿವಾರ ಆಯುಧಗಜಾಶ್ವಗಳ ... ಸಾಯಂಕಾಲ ಇಂಗ್ಲಿಷ್ ದರ್ಬಾರೂ, ತಾ 20 ನೇ ಭಾನುವಾರ ವಿಜ[ಯ] ಉತ್ಸವವೂ ಜರುಗುವವು.

ಬಳಿದೇಶದ ವೃತ್ತಾಂತಗಳು.

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಪಕ್ಷದ ಮು[ಖಂಡ] ಅಡ್ವೊಕೇಟ್ ಮೆ|| ಎ. ರಾಮಣ್ಣನವರಿಗೆ ಅರಮನೆಯ ದರ್ಬಾರಿನಲ್ಲಿ ಹಾರಾ ಹಾಕುವಂತೆ ಅಪ್ಪಣೆ ಆಯಿತು.

…ಕಾರದಿಂದ ಶ್ರೀನಿವಾಸಪುರ, ಚಿಂತಾಮಣಿ ಶಿಡ್ಲಘಟ್ಟದ ಮಾರ್ಗವಾಗಿ …ಪುರಕ್ಕೆ ರೈಲು ಹಾಕಬೇಕಾಗಿರೋಣದರಿಂದ ಆ ರಸ್ತೆಯನ್ನು ಸರ್ವೆ …ರೈಲ್ವೆ ಇಂಜನಿಯರರವರಿಗೆ ಅವಶ್ಯವಾದ ಅಧಿಕಾರವನ್ನು ವಹಿಸಿರುತ್ತಾರೆ

*

…ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿರುವ ಮ, ಆರ್. …ಕ್ಯಾಂಬೆಲ್‌ರವರು ಮುಂದಿನ ವರುಷ ಮದರಾಸ್ ಸರ್ವಿಸಿನಿಂದ ನಿವೃತ್ತ… …ಬಳಿಕ ಮೈಸೂರಿನಲ್ಲಿ ಈಗಿನ ಕೆಲಸದಲ್ಲೇ ಇರುತ್ತಾರೆಂದು ತಿಳಿಯು…

*

…ರಾತ್ರಿ ಉತ್ಸವಗಳ ಸಮಿತ್ತ ಬ್ರಿಟಿಷ್ ರೆಸಿಡೆಂಟರೇ ಮೊದಲಾದ …ಪಿಯನ್ ಅತಿಥಿಗಳು ನಾಳೆಯೂ ನಾಡಿದ್ದೂ ರಾಜಧಾನಿಗೆ ದಯಮಾಡು… …ಶನಿವಾರ ಸಾಯಂಕಾಲ ಅರಮನೆಯಲ್ಲಿ ಇಂಗ್ಲಿಷ್ ದರ್ಬಾರು ನಡೆ…

*

ಮೈಸೂರು ಸಂಸ್ಥಾನದಲ್ಲಿ ಸ್ಕೌಟ್ ವಿದ್ಯಾಭ್ಯಾಸ ಮಾಡಿಸುವಂಥಾ …ಧ್ಯಾಯರೆಲ್ಲಾ ರಾಜಧಾನಿಯಲ್ಲಿ ಮುಂದಿನ ಸೋಮವಾರವೂ ಮಂಗಳ… …ಒಂದು ಸಭೆ ನಡಿಸಿ, ಆ ಶಿಕ್ಷಣ ವಿಚಾರವನ್ನು ಕುರಿತು ಉಪನ್ಯಾಸಗ… …ರ್ಚೆಗಳನ್ನೂ ನಡಿಸುವವರಾಗಿದ್ದಾರೆ

*

…ಕಾರದ ಚಿನ್ನದ ಗಣಿಗಳ ಪ್ರಾಂತ್ಯದಲ್ಲಿ ಕೇರಿ ನಾಯಿಗಳ ಕಾಟವನ್ನು …ಸುವದಕ್ಕಾಗಿ ಸರ್ಕಾರದವರು ಅಲ್ಲಿ ನಾಯಿ ಸಾಕುವವರಿಂದ ದೊಡ್ಡ… …ಒಂದು ರೂಪಾಯಿ, ಸಣ್ಣದಕ್ಕೆ ಎಂಟಾಣೆಯಂತೆ ವರುಷಕ್ಕೊಂದುಸಲ …ಕ ವಸೂಲ್ ಮಾಡುವ ರೂಲನ್ನು ಸ್ಯಾಂಕ್ಷನ್ ಮಾಡಿದ್ದಾರೆ

*

…ಬಾಯಿ ಪಟ್ಟಣದ ವಿಕ್ಟೋರಿಯಾ ಇಂಸ್ಟಿಟ್ಯೂಟಿನಲ್ಲಿ ತರಪೇತಾಗಿ, …ಬೆಂಗಳೂರು ತಾತಾ ಇನ್ಸ್ಟಿಟ್ಯೂಟಿನಲ್ಲಿ ಓದುತ್ತಿರುವ ಮ ಎಸ್ ಎಂ …ಸ್ವಾಮಿ ಎಂಬುವರು ವಿದ್ಯುಚ್ಛಕ್ತಿ ವಿಚಾರವನ್ನು ಕಲಿತು ಬರುವುದಕ್ಕಾಗಿ …ಮುಂದಿನ ಕಾಲ ಅಮೇರಿಕಕ್ಕೆ ಹೋಗಿರುವವರಾಗಿದ್ದಾರೆಂದು ಕೇಳುತ್ತೇವೆ

*

ಮದರಾಸ್ ಗವರ್ನ್‌ಮೆಂಟಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿರುವ …ನರ್ವಿದ ಮ ಶಿವಸ್ವಾಮಿ ಅಯ್ಯರವರು ನೆನ್ನೆ ಬೆಳಿಗ್ಗೆ ರಾಜಧಾನಿಗೆ …ಮಾಡುವವರಾಗಿದ್ದರು ಸರ್ ಶೇಷಾದ್ರಿ ಅಯ್ಯರವರ ಬಂಗಳೆಯನ್ನು ಅವ… …ಗೊತ್ತುಪಡಿಸಿದ್ದಾರೆ ಅವರು ಒಂದೆರಡು ದಿನ ಮಾತ್ರ ಇದ್ದು ಮದರಾ… …ಕ್ಕೆ ಹಿಂತಿರುಗಿ ಹೋಗುವರು

*

ಚೀಫ್ ಇಂಜನಿಯರ್ ಮ ವಿಶ್ವೇಶ್ವರಯ್ಯನವರು ದಸರಾ ರಜವನ್ನು …ಪಯೋಗಿಸಿಕೊಂಡು 15 20 ದಿನಗಳ ವರೆಗೆ ಉತ್ತರದೇಶದಲ್ಲಿ ಸಂಚಾರ …ಹೋಗಿಬರುವುದಕ್ಕೋಸ್ಕರ ನೆನ್ನೆ ರಾತ್ರಿ ರಾಜಧಾನಿಯಿಂದ ಪ್ರಯಾಣ …ರು ಇವರು ವಾಪಸು ಒಂದನೇ ತಾರೀಖು ನವೆಂಬರ್ ತಿಂಗಳ ಆದಿಭಾಗದಲ್ಲಿ …ವ ದಿವಾನ್‌ಗಿರಿಯನ್ನು ವಹಿಸಿಕೊಳ್ಳುತ್ತಾರೆಂದು ಪ್ರಕಟವಾಗಿದೆ

*

ರಾಜಧಾನಿಯ ಕೋಟೆ ಅವರಣದೊಳಗೆ 6 7 ಕಡೆ ಡೇರಾ ಹಾಕಿಕೊಂಡು …ಜೂಜಾಟವನ್ನು ನಡಿಸುತ್ತಿದ್ದಾರೆ ಇಂಥಾ ಮೋಸಕರವಾದ ಆಟಗಳಿಗ… …ವರು ಲೈಸನ್ಸು ಕೊಟ್ಟಂತೆ ಮಾಡಿದರೆ ಕ್ಷೇಮವಾದೀತು ನವರಾತ್ರಿ… …ಉತ್ಸವ ಕಾಲಗಳಲ್ಲಿ ಸಾವಿರಾರು ಜನರು ರಾಜಧಾನಿಗೆ ಎಂದು ಈ… …ಲ್ಲಿ ಎಷ್ಟು ಹಣ ಪಟ್ಟು ವ್ಯರ್ಥವಾಗುವುದು ತಪ್ಪಬೇಕೆಂದು ಪ್ರಾರ್ಥಿಸುತ್ತೇವೆ

*

ಈ ಸಲ ರಾಜಧಾನಿಯಲ್ಲಿ ನವರಾತ್ರಿ ಉತ್ಸವದ ಮೊದಲನೇ ದಿನ ಅರಮ… …ಮುಂದೆ ನಿಂತಿದ್ದ ಕೆಲವು ಸಿಪಾಯಿಗಳೂ, ಆನೆ ಒಂಟೆಗಳ ಮೇಲಿದ್ದ… …ಬಿಸಿಲಿನ ತಾಪ ಸಹಿಸಲಾರದೆ ಬಿದ್ದುಬಿಟ್ಟರು ಇವರೆಲ್ಲಾ ಒಂದೆರಡು… …ಲ್ಲೇ ಚೇತರಿಸಿಕೊಂಡು ಕೆಲಸದ ಮೇಲೆ ಹಾಜರಾಗಿರುತ್ತಾರೆ ಮಂಗಳ… …ರಾತ್ರಿ ದರ್ಬಾರ್ ಕಾಲದಲ್ಲಿ ಸಜ್ಜೆಯ ಮೇಲೆ ಸಿಂಹಾಸನದ ಹಿಂಭಾಗದಲ್ಲಿ… …ಸಿಪಾಯಿಗಳ ಪೈಕಿ ಒಬ್ಬನು ಅಕಸ್ಮಾತ್ತಾಗಿ ಘೇರಿ ಬಂದು ಬಿದ್ದುಬಿ… …ಕೂಡಲೇ ಅಲ್ಲಿದ್ದವರು ಆವನನ್ನು ಹೊರಕ್ಕೆ ಕರೆದುಕೊಂಡು ಹೋಗಿ… …ಮಾಡಿದ ಮೇಲೆ ಅವನಿಗೆ ಗುಣವಾಯಿತು

*

ಮಧುಗಿರಿಯ ಒಬ್ಬ ಬಾತ್ಮಿದಾರರು ಬರೆಯುವುದು —ಇಲ್ಲಿನ ಸಬ್ ರೆಜಿ… …ಸ್ಟ್ರಾರ್ ಮ॥ ಎಂ ಎಸ್ ರಾಮದಾಸಪ್ಪನವರು ಈ ಮಾಹೆ ೨ ನೇ ತಾ ಈ… …ಬಿಟ್ಟು ಮೈಸೂರಿಗೆ ರಜದ ಮೇಲೆ ದಯಮಾಡಿದರು ಅವರು ಈ… …ಪುನಃ ದಯಮಾಡುವ ಸಂಭವವಿಲ್ಲ ಇಂಥಾ ಹಿತಚಿಂತಕರಾದ ಅಧಿ… …ರನ್ನು ಕಳೆದುಕೊಂಡದ್ದಕ್ಕೆ ಇಲ್ಲಿನ ಪ್ರಜೆಗಳೆಲ್ಲಾ ವಿಷಾದಪಡುತ್ತಾರೆ …ಪ ಹೋಗುವಾಗ ಇವರಿಗೆ ನಡೆದ ಮರ್ಯಾದೆಯು ಇದುವರೆಗೆ ಎಂಥ… …ರಿಜಿಸ್ಟ್ರಾರುಗಳ ಪೈಕಿ ಯಾರಿಗೂ ಆಗಲಿಲ್ಲ ಮತ್ತು ಯಾವ ಆಫೀಸ… …ನಡೆಯಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು

ಯುದ್ಧ ಪ್ರಾರಂಭವಾಯಿತು

ಮುಖ್ಯವಾದ ತಂತೀ ವರ್ತಮಾನಗಳು

ಅಕ್ಟೋಬರ್, ತಾ ೯ ನೇ ಮಂಗಳವಾರ —ಮಾಂಟನೀಗ್ರೋದವರು …ಯವರ ಮೇಲೆ ಯುದ್ಧವನ್ನು ಪ್ರಾರಂಭಿಸಿದರು. ಮಾಂಟನೀಗ್ರೋ… …ಯ ಎಲ್ಲೆಕಟ್ಟಿನಲ್ಲಿರುವ ತೂಜಿ ಎಂಬಲ್ಲಿ ಮಲಿಸೋರಿಸ್ ಜನರು ಟರ್ಕಿ… …ದ ಒಂಭತ್ತು ಪಟಾಲಂ ಸೈನ್ಯವನ್ನು ಸಂಧಿಸಿ ನೆನ್ನೆಯೆಲ್ಲಾ ಕಠಿಣವಾಗಿ …ದ್ಧಮಾಡಿದರು

ತಾ ೧೦ನೇ ಬುಧವಾರ —ಮಾಂಟನೀಗ್ರೋದವರು ಟರ್ಕಿಯವರ ಮೇಲೆ …ಮುತ್ತಿಗೆ ಹಾಕಿ, ಬೇರಾನಾ ಎಂಬ ಸ್ಥಳವನ್ನು ಘೇರಾಯಿಸಿಕೊಂಡರು …ಯುದ್ಧ ನಡೆಯುತ್ತಾ ಇದೆ ಡಿಮಮಾವಾಲಾ ಎಂಬಲ್ಲಿ ಶತ್ರುಗಳು …ದ್ದು ಗುಂಡುಗಳನ್ನು ಹಾರಿಸಿದರು ಸರ್ವಿಯದವರೂ ಗ್ರೀಕರೂ ಎಲ್ಲೆ… …ಗಳಲ್ಲಿ ಟರ್ಕಿಯವರ ಮೇಲೆ ಕೆಲವು ಸಣ್ಣ ಯುದ್ಧಗಳನ್ನು ಮಾಡಿದರು …ದು ಮುಖ್ಯಸ್ಥನಾದ ಪ್ರೆಜಾಪ್ ಎಂಬಾತನು ಡಿಪಾಕೋವಾದಿಂದ 4,000 …ನ್ನು ತರಿಸಿಕೊಂಡು ಬೇರಾನೆಯಲ್ಲಿ ಮಾಂಟಿನೀಗ್ರೋದವರನ್ನು ಚದರಿಸಿ …ನುಗ್ಗಿ ಆರು ಮೈಲಿ ದೂರ ಹೋಗಿರುತ್ತಾನೆ ಎಲ್ಲೆಕಟ್ಟುಗಳಲ್ಲಿ ಕಠಿಣ…ವಾದ ಯುದ್ಧ ನಡೆಯುತ್ತಿದೆ ಎಸಾದ್ ಪಾಷಾ ಎಂಬ ಹುದ್ದೇದಾರನು ಸ್ಕುಟಾರಿ ಪಟ್ಟಣದ ಮುತ್ತಿಗೆಯನ್ನು ಬಿಡಿಸುವುದಕ್ಕೆ ಹೋಗುತ್ತಿದ್ದಾನೆ

21 ನಿಮಿಷ ಫಿರಂಗಿ ಯುದ್ಧ ನಡೆದು ಟರ್ಕಿ ಸೈನ್ಯಗಳು ಪ್ಲಾನಿನಿಟ್ಸಾ ಬೆಟ್ಟದಿಂದ ಓಡಿಸಲ್ಪಟ್ಟರು ಮಧ್ಯಾಹ್ನ 2 ಗಂಟೆಗೆ ಟರ್ಕಿ ಸೈನ್ಯಗಳು ಸ್ಕುಟಾರಿ ಕೆರೆಯ ಎಳ ಇಳಿದು ಶತ್ರುಗಳನ್ನು ಸಂಧಿಸಿ ಕಠಿಣವಾದ ಯುದ್ಧ ನಡಿಸಿದರು

ತಾ 10 ನೇ ಗುರುವಾರ —ಮಾಂಟನೀಗ್ರೋದವರು ಡೆಚಿಚ್ ಎಂಬ ಸ್ಥಳವನ್ನು ಈ ದಿನ ಸ್ವಾಧೀನಪಡಿಸಿಕೊಂಡರು ಟರ್ಕಿ ಸೈನ್ಯಾಧಿಪತಿಯು ತನ್ನ ದಳಪತಿಗಳ ಮತ್ತೂ ಸೈನಿಕರ ಸಮೇತ ಶತ್ರುಗಳ ವಶವರ್ತಿಯಾದನು ನಾಲ್ಕು ಫಿರಂಗಿಗಳು ಶತ್ರುಗಳಿಗೆ ಸಿಕ್ಕಿದವು ತೂಜಿ ಎಂಬಲ್ಲಿ ಯುದ್ಧ ನಡೆಯುತ್ತಿದೆ ಮಾಂಟನೀಗ್ರೋದವರು ಡೆಚಿಚ್‌ನಲ್ಲಿ ತಮ್ಮ ಬಾವುಟಾ ನಟ್ಟಿದ್ದಾರೆ

ತಾ 11 ನೇ ಶುಕ್ರವಾರ —ಬೇರಾನೆಯನ್ನು ಮುತ್ತಿಗೆ ಹಾಕಿಕೊಂಡಿದ್ದ ಮಾಂಟನೀಗ್ರೋ ಸೈನಿಕರು ಸೋತುಹೋದರೆಂತಲೂ, ನೋಗುಚಾಕ್ ಮತ್ತು ಯೊನಿಕೇಫ್‌ಗಳ ಮೇಲೆ ನುಗ್ಗಿಬಂದ ಬಲ್ಗೇರರು ಹಿಂದಕ್ಕೆ ಓಡಿಸಲ್ಪಟ್ಟರೆಂದೂ ಟರ್ಕಿ ಸರ್ಕಾರದವರು ಪ್ರಕಟಿಸಿದಾರೆ

ಬಾಶಿಬಜೂಕ್ ಎಂಬ ಅರೆಕಿರಾತರಾದ ಮಹಮದೀಯ ದರೋಡೆ ಗುಂಪಿನವರು ಮ್ಯಾಸಿಡೋನಿಯದಲ್ಲಿ ಸರ್ವಿಯಾಕ್ಕೆ ಸೇರಿದ ಗ್ರಾಮಗಳಿಗೆ ನುಗ್ಗಿಬಂದು ಪ್ರಜೆಗಳನ್ನು ಕೊಲ್ಲುತ್ತಲೂ ಕೊಳ್ಳೆಹೊಡೆಯುತ್ತಲೂ ಇದ್ದಾರೆಂದು ಸರ್ವಿಯಾ ರಾಜಧಾನಿಯಲ್ಲಿ ಬಲವಾದ ಸುದ್ದಿ ಹುಟ್ಟಿದೆ

ತಾ 12 ನೇ ಶನಿವಾರ —ಮಾಂಟನೀಗ್ರೋ ಸೈನ್ಯಗಳು ಹದಿನಾಲ್ಕು ಗಂಟೆ ಹೊತ್ತು ಬಹು ಕಠಿಣವಾದ ಯುದ್ಧ ಮಾಡಿ ಒಂದು ಗುಡ್ಡದ ಮೇಲಿದ್ದ ರೊಗಾಮೆ ಎಂಬ ಕೋಟೆಯನ್ನು ವಶಪಡಿಸಿ, ಸ್ಕುಟಾರಿ ರಸ್ತೆಯನ್ನು ಬಿಡಿಸಿದರು ಇವರ ಕಡೆ 130 ಮಂದಿ ಕೊಲೆಯಾದರು 100 ಜನರಿಗೆ ಗಾಯಗಳಾಗಿವೆ ಟರ್ಕಿಯವರು ಮತ್ತೆ ಅವರ ಮೇಲೆ ನುಗ್ಗಿ ಯುದ್ಧಮಾಡಿ ಸೋತು ಹಿಮ್ಮೆಟ್ಟಿದರು

ತಾ 13 ನೇ ಭಾನುವಾರ —ಮಾಂಟನೀಗ್ರೋ ಸೈನಿಕರು ನೆನ್ನೆ ಟರ್ಕಿ ಸೈನಿಕರನ್ನು ಸೋಲಿಸಿ ತೂಜಿ ಪಟ್ಟಣಕ್ಕೆ ಮುತ್ತಿಗೆ ಹಾಕಿದರು ಸ್ಕುಟಾರಿಗೂ ತೂಜಾದಿಗೂ ಸಂಬಂಧವನ್ನು ತಪ್ಪಿಸಬಿಟ್ಟರು

ಮಾಂಟನೀಗ್ರೋ ಸೈನ್ಯಗಳು ಬಯಲೋಪಾಲ್ಜೆ ಎಂಬ ಸ್ಥಳದಲ್ಲಿ ನೆನ್ನೆ ಸಾಯಂಕಾಲ 4 ಗಂಟೆಯ ತನಕ ಕಠಿಣವಾಗಿ ಯುದ್ಧಮಾಡಿ ಜಯಹೊಂದಿ ಆ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಹಂಗಾಮಿಯಾದ ಗೌರ್ನ್‌ಮೆಂಟನ್ನು ಸ್ಥಾಪಿಸಿಕೊಂಡಿದ್ದಾರೆ

ಪರರಾಷ್ಟ್ರಗಳವರು ಈ ಯುದ್ಧವು ಇಲ್ಲಿಗೇ ನಿಲ್ಲುವಂತೆಯೂ ಮುಂದೆ ಬೆಳೆಯುವಂತೆಯೂ ಮಾಡಬೇಕೆಂದು ಸಾಹಸಪಟ್ಟು, ಯುದ್ಧಕ್ಕೆ ಸನ್ನದ್ಧರಾಗಿಯೂ ಆಗುತ್ತಲೂ ಇರುವ ಶತ್ರುಗಳಿಗೆ ಸಮಾಧಾನ ಹೇಳಿ ಕರಾರು ನಡಿಸುವ ತರದೂದಿನಲ್ಲಿದ್ದಾರೆ

ಶಿವಪುರಿನ ವೀರಶೈವಾಶ್ರಮವು

ಅಸ್ತಿಭಾರ ಶಿಲಾಪ್ರತಿಷ್ಠೆಯು

ಕಳೆದ 11 ನೇ ತಾ ಶುಕ್ರವಾರ ಇಲ್ಲಿನ ವೀರಶೈವಾಶ್ರಮದ ಅಸ್ತಿಭಾರ ಶಿಲೆ ಹಾಕಿದ ಉತ್ಸವವು ಅತಿ ವೈಭವದಿಂದ ಜರುಗಿತು ಡೆಪ್ಯುಟಿ ಕಮಿಷನರ್ ಮ ಬಾಲಸುಂದರಂ ಅಯ್ಯರವರು ಸಭೆಯ ಅಗ್ರಾಸನವನ್ನು ವಹಿಸಿದರು ಈ ಪ್ರಾಂತ್ಯದ ಸರ್ಕಾರಿ ಅಧಿಕಾರಿಗಳೇ ಮುಂತಾದವರೆಲ್ಲಾ ಈ ಸಭೆಗೆ ದಯಮಾಡಿದ್ದರು ಚಿಕ್ಕೂರದ ಎಳ ಮ ಕೊಟ್ಟೂರಯ್ಯನವರು, ಮ ಬಸಪ್ಪನವರು ವಗೈರೆ ಆಶ್ರಮದ ಮುಖಂಡರು ಅತಿಥಿಗಳನ್ನು ಬರಮಾಡಿಕೊಂಡರು ಮಂಟಪವು ಜನಸ್ತೋಮದಿಂದ ಕಿಕ್ಕಿರಿಯುತ್ತಿತ್ತು ಪಿಟೀಲ್ ಮದ್ದಳೆ ಗಾಯನಗಳು ಸಭಿಕರಿಗೆ ಕರ್ಣಾನಂದವನ್ನುಂಟುಮಾಡುತ್ತಿದ್ದವು ವೀರಶೈವಾಶ್ರಮದ ಮುಖ್ಯ ಉದ್ದೇಶವನ್ನು ಕುರಿತು ಅಡ್ವೋಕೇಟ್ ಮ ವೀರಬಸಪ್ಪನವರು ಇಂಗ್ಲಿಷಿನಲ್ಲಿ ಒಂದು ಭಾಷಣವನ್ನು ಮಾಡಿದರು ಸದರಿ ಭಾಷಣವನ್ನೇ ಮ ಮಾದಪ್ಪ ಶಾಸ್ತ್ರಿಗಳು ಕನ್ನಡದಲ್ಲಿ ಓದಿದರು ಅದರ ಮುಖ್ಯ ಸಾರಾಂಶ—ಸದರಿ ಆಶ್ರಮವು ಸ್ಥಳೀಯ ವೀರಶೈವ ಮಂಡಲಿಯ ವರ್ತಕಮಹನೀಯರು ತಮ್ಮ ಶಕ್ತ್ಯಾನುಸಾರ ಕೊಟ್ಟ ಸುಮಾರು 15,000 ರೂಪಾಯಿ ಚಂದಾ ವೆಚ್ಚಬಲಗಿನ ಅಂದಾಜಿನಿಂದ ತಯಾರಿಸಲ್ಪಡತಕ್ಕದ್ದು ಈ ಪೈಕಿ 5,000 ರೂ ಮ ಕೊಟ್ಟೂರಯ್ಯನವರ ಚಂದಾ ಆಗಿರುತ್ತದೆ ಈ ಆಶ್ರಮವು ಚಿತ್ರದುರ್ಗದ ಮುರುಗಿ ಮಠದ ಶಾಖೆಯಾಗಿರುವದು ಇದರಲ್ಲಿ ವೀರಶೈವ ಮಂಡಲಿಯ ಬಾಲಕರಿಗೆ ಒಂದು ವಿದ್ಯಾರ್ಥಿನಿಲಯವೂ ಏರ್ಪಟ್ಟು ಮತಸಿದ್ಧಾಂತಗಳ ಬೋಧನೆಯೂ, ಸಂಸ್ಕೃತ ವಿದ್ಯಾಭ್ಯಾಸವೂ ಜರುಗುವದು ಈ ರೀತಿ ವಿಶಿಷ್ಟ ಮಿಶ್ರಿತ ಧರ್ಮದ ಹಣದಿ ವರ್ತಜರುಗತಕ್ಕದ್ದು ಕಟ್ಟಡವು ಪೂರೈಸಿದ ನಂತರ ಕಾರ್ಯಾದರ್ಶಿಗಳು ಇದನ್ನು ಕ್ರಮಕ್ಕೆ ತರುವರು ಈ ಧರ್ಮಕಾರ್ಯಕ್ಕೆ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರು ದಯಪಾಲಿಸಿ ಡೆಪ್ಯುಟಿ ಕಮಿಷನರವರ ಮೂಲಕ ಕೊಟ್ಟಿರುವ ಖಾಲಿ ನಿವೇಶನದ ನಿಮಿತ್ತ ಬಡ ಪ್ರಜೆಗಳಾದ ತಾವು ಅತ್ಯಂತ ಕೃತಜ್ಞರಾಗಿರುವೆವು ಅಲ್ಲದೆ ಸೌ ರುದ್ರಮ್ಮನವರೂ, ಮ ಅಣ್ಣಪ್ಪನವರೂ ಈ ನಿಲಯಕ್ಕೆ ವಿಸ್ತಾರವಾದ ಜಮೀನನ್ನು ಕೊಟ್ಟಿರುವದರಿಂದ ಇವರನ್ನೂ ವಂದಿಸುವೆವು ಈ ರೀತಿ ಭಾಷಣವಾದ ನಂತರ ಡೆಪ್ಯುಟಿ ಕಮಿಷನರವರು ಎಷ್ಟು ಸಂತಸ ಮಾಡಿದ ಭಾಷಣದ ತಾತ್ಪರ್ಯ—ಈ ನಿಲಯದ ಏಳಿಗೆಯನ್ನೂ, ವೀರಶೈವರ ಅಭಿವೃದ್ಧಿಯನ್ನೂ ನೋಡಿ ಸಂತೋಷಪಡತಕ್ಕದ್ದೇ ನಮ್ಮ ಮುಖ್ಯ ಉದ್ದೇಶವು ಸದರಿ ಪಂಗಡದವರಂತೆ ಬೇರೆ ಪಂಗಡದವರೂ ಲೌಕಿಕ ಪಾರಮಾರ್ಥಿಕ ವಿಷಯಗಳಲ್ಲಿ ಅಭಿವೃದ್ಧಿಯನ್ನು ಹೊಂದಬೇಕೆಂದು ಅಪೇಕ್ಷಿಸುವರು ಆದರೆ ಆಯಾ ಪಂಗಡದವರು ತಮ್ಮ ಸ್ಥಿತಿಯನ್ನುಮಾತ್ರ ಅಭಿವೃದ್ಧಿಗೆ ತಂದುಕೊಳ್ಳುವದೇ ಸಾಕೆಂದು ಎಣಿಸದೆ, ಸದರಿ ಮೇರೆಯನ್ನು ದಾಟಿನೋಡಿ, ಹೀನಸ್ಥಿತಿಯಲ್ಲಿ ಬಿದ್ದಿರುವ ಇತರೇ ಬಡಜನರನ್ನು ಕಂಡು ಅಂಥವರನ್ನೂ ಅಭಿವೃದ್ಧಿಸ್ಥಿತಿಗೆ ತರತಕ್ಕದ್ದು ತಮ್ಮ ಕರ್ತವ್ಯವೆಂದು ಕಾರ್ಯತಃ ಪ್ರಯತ್ನ ಪಡತಕ್ಕದ್ದೇ ಪಾರಮಾರ್ಥಿಕ ವಿಚಾರದಲ್ಲಿ ಅತ್ಯಂತ ಶ್ರೇಷ್ಠವೆನಿಸುವುದು ಯಾಕಂದರೆ ಸರ್ವರಿಗೂ ದೇವರೊಬ್ಬನೇ ಆಗಿದ್ದಾನೆ ನಾವೆಲ್ಲರೂ ಸಹೋದರ ಭಾವವುಳ್ಳವರಾಗಿರಬೇಕೆಂದು ಅತ್ಯಂತ ಸ್ವಾರಸ್ಯವಾದ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿದ ನಂತರ ಬೆಳ್ಳಿಯಿಂದ ತಯಾರಿಸಲ್ಪಟ್ಟ ಕರಣೆಯನ್ನು ಹಿಡಿದು ತಮ್ಮ ಹೆಸರಿನಲ್ಲಿ ಅಸ್ತಿಭಾರದ ಶ್ರೀಮುಕ್ತಿಗೆ ಗಾರೆ ಹಚ್ಚಿ ಕಟ್ಟಡವನ್ನು ಪ್ರಾರಂಭಿಸಿದರು ಅನಂತರ ಎಲ್ಲರ ಫೋಟೋ ತೆಗೆಯಲಾಯಿತು ಸಭೆಯು ಗಂಧ ಪುಷ್ಪ ತಾಂಬೂಲಗಳು ಹಂಚಿದ ಮೇಲೆ ಬರಖಾಸ್ತಾಯಿತು ಈ ವಿಧವಾದ ಉತ್ಸವವು ಈ ಸ್ಥಳಕ್ಕೆ ಕೇವಲ ಅಪೂರ್ವವೆಂದು ತಿಳಿಯಲಾಗುತ್ತೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಇರದು ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸಾಧಾರಣವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು "ರೆವ್ ಇ ಡಬ್ಲಿಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ವ್ಯಕ್ತಪಡಿಸುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಅನುಭವಿ, ದೇವನಹಳ್ಳಿ —ನಿಮ್ಮ ಕಡೆಯಿಂದ ಬರುವ ಮೆಂಬರಿಗೆ ತಿಳಿಸಿ, ಅವರು ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರುವಂತೆ ಮಾಡುವುದು ಉತ್ತಮ

ಪೆನ್‌ಷನ್ ಆಫೀಸರ್, ಚಿತ್ರದುರ್ಗ —ನೀವು ಹೇಳುವ ವಿಚಾರವು ಪ್ರಜೆಗಳ ಬಹುಮತಿಯ ಪ್ರಕಾರ ವ್ಯವಸ್ಥೆಯಾಗತಕ್ಕದ್ದಲ್ಲವಾದಕಾರಣ ನಿಮ್ಮ ಅಭಿಪ್ರಾಯವನ್ನು ಪ್ರಕಟಮಾಡುವುದರಿಂದ ಪ್ರಯೋಜನ ಕಾಣೆಯದು

—ಎಡಿ]

ಕರೆಸ್‌ಪಾಂಡೆನ್ಸ್.

ಶಿವಮೊಗ್ಗಾ ವಿಚಾರಗಳು

ಅಯ್ಯಾ,

ಶಿವಮೊಗ್ಗಾ ತಾಲ್ಲೂಕು ಸಕ್ರೆಬೈಲ್ ಜಂಗ್ಲಿಯಲ್ಲಿ ಆನೆ ಹಿಡಿಯಲು ಖೆಡ್ಡಾ ತಯಾರಿಸಿರುವದು ಸರಿಯಷ್ಟೆ ಸದರಿ ಕೆಲಸವನ್ನು ಫೆಬ್ರವರಿ, ಮಾರ್ಚಿ ತಿಂಗಳುಗಳಲ್ಲಿ ಏರ್ಪಡಿಸಿದ್ದರೆ ಇಷ್ಟು ಜನ ರೈತರಿಗೂ ಸರ್ಕಾರದವರಿಗೂ ಶ್ರಮವಿಲ್ಲದೆ ಆನೆಗಳನ್ನು ಖೆಡ್ಡಾಕ್ಕೆ ತಂದು ಕೆಡವಬಹುದಾಗಿತ್ತೆಂದು ತೋರುತ್ತೆ

ಶಿವಮೊಗ್ಗಾ ಓವರ್ ಬಡಿಗೇರ ಬೀದಿಯಲ್ಲಿ ಒಬ್ಬ ಮಿಸ್ಟರ್ ಕ್ರೈಸ್ತರಿದ್ದಾರೆ ಸದರಿಯವರ ಮನೆಯ ಆಸ್ಪಾಸಿನಲ್ಲಿ ತುಂಟರಾದ ಕೆಲವು ಹಿಂದೂ ಮುಸಲ್ಮಾನರು ಸದರಿಯವರಿಗೆ ಕೇಡನ್ನುಂಟುಮಾಡಬೇಕೆಂಬ ಇರಾದೆಯಿಂದ ಸುಮಾರು ಒಂದು ವರುಷದಿಂದಲೂ ಕೋಳಿಗಳನ್ನೂ ದನಗಳನ್ನೂ ಹೊಡೆದು ಮನೆಯ ಹಿಂದುಮುಂದೆ ಹಾಕುವುದು, ರಾತ್ರಿಕಾಲದಲ್ಲಿ ಮನೆಯ ಮೇಲೆ ಜೋರಾಗಿ ಕಲ್ಲು ಹೊಡೆಯುವುದು, ಮನೆಯ ಪಕ್ಕದಲ್ಲಿ ಸಾಲುಸಾಲಾಗಿ ಹೇಸಿಕೆ ಮಾಡುವುದು, ರಾತ್ರಿಕಾಲದಲ್ಲಿ ಗುಂಪುಗುಂಪಾಗಿಯೋ ದೂರದೂರವಾಗಿಯೋ ನಿಂತು ಮನಸ್ಸು ದೂಷಿಸಿ ಸಿಕ್ಕಿದಲ್ಲಿ ಹೊಡೆದು ಕೊಂದುಹಾಕುತ್ತೇವೆಂದು ಹೇಳುವುದು ನೋಡಿದರೆ ನೆರೆಹೊರೆಯ ಸದ್ನಡತೆಯುಳ್ಳ ಕ್ರೈಸ್ತರು ತಮ್ಮ ಜೂಜಾಟಕ್ಕೆ ಅಡ್ಡಿಯಾಗಿರುವುದೇ ಕಾರಣವಾಗಿದೆ ಸ್ವಲ್ಪ ದಿವಸದ ಕೆಳಗೆ ಒಬ್ಬ ಪೋಲೀಸ್ ನೌಕರನನ್ನು ಹೊಡೆದು ತಾವೇ ಫಿರ್ಯಾದು ಸಹಾ ಕೊಟ್ಟಿದ್ದರು ಕಡೆಯಲ್ಲಿ ಸದರಿ ಕ್ರೈಸ್ತರ ಸಮಕ್ಷಮ ಆಫೀಸ್ ಪಂಚಾಯ್ತಿಯಲ್ಲಿ ಸದರಿ ಪುಂಡರು ಜುಲ್ಮಾನೆ ಸಹಾ ಕೊಟ್ಟಿದ್ದಾರೆ ಇಂಥಾ ಪುಂಡರ ಮೇಲೆ ಸರ್ಕಾರದವರು ನಿಗಾಕೊಟ್ಟಲ್ಲಿ ದಾಂಧಲೆಗೆ ಅವಕಾಶವಿಲ್ಲದೆ ಉತ್ತಮರಾದ ಮರ್ಯಾದಸ್ಥರಿಗೆ ಅನುಕೂಲವಾಗಬಹುದೆಂದು ವ್ಯಕ್ತಪಡಿಸುತ್ತೇನೆ

ನಿತ್ಯಸಂಚಾರಿ

ಅಳತೆ ತೂಕಗಳು

ಅಯ್ಯಾ,

ಇದುವರಿವಿಗೂ ಈ ನಮ್ಮ ಮೈಸೂರು ದೇಶದಲ್ಲಿ ನಾನಾವಿಧ ಸೇರುಗಳೂ, ನಾನಾವಿಧ ತೂಕಗಳೂ ಇದ್ದವು ಇದನ್ನು ಸಂಪೂರ್ಣ ನಿವೃತ್ತಿಮಾಡಿ ನಮ್ಮ ದೇಶದಲ್ಲೆಲ್ಲಾ ಒಂದೇ ವಿಧವಾದ ಅಳತೆಯೂ, ತೂಕವೂ ಇರಬೇಕೆಂದು ನಮ್ಮ ಸರ್ಕಾರದವರು ಈಗ ತಾನೇ ಒಂದು ಹೊಸ ಕಾನೂನನ್ನು ಏರ್ಪಡಿಸಿ ಕಾನೂನು ಪುಸ್ತಕಗಳನ್ನು ಹೊರಡಿಸಿರುತ್ತಾರೆ ಈ ಕಾನೂನು 1912 ನೇ ಜೂಲೈ ಗುರ್ರೇ ಲಾಗಾಯ್ತು ಜಾರಿಯಲ್ಲಿ ಬರತಕ್ಕದ್ದೆಂದು ಮೊದಲು ಪ್ರಕಟವಾಗಿತ್ತು, ಮತ್ತು ಈ ಪುಸ್ತಕಗಳಲ್ಲೂ ಸಹಾ ಅದೇ ರೀತಿ ಇರುತ್ತದೆ ಆದರೆ ಮೊನ್ನೆ "ವೃತ್ತಾಂತ ಪತ್ರಿಕೆ"ಯಲ್ಲಿ ಮಾತ್ರ ಈ ಕಾನೂನು ಅಕ್ಟೋಬರ್ ಗುರ್ರೇ ಲಾಗಾಯ್ತು ಜಾರಿಗೆ ಬರತಕ್ಕದ್ದೆಂದು ಛಾಪಿಸಾಗಿತ್ತು ಆದರೆ ನಿರ್ಧಾರವಾದ ಕಾಲವೇ ಗೊತ್ತಾಗಲಿಲ್ಲ ಕೆಲವರಿಗೆ ಈ ಕಾನೂನಾಗಿರುವದು ಗೊತ್ತಿದ್ದಾಗ್ಯೂ, ಯಾವ ಲಾಗಾಯ್ತು ಅದು ಜಾರಿ ಎಂಬುದು ಗೊತ್ತಾಗಿಲ್ಲ ಅನೇಕ ಜನರಿಗೆ ಈ ಹೊಸ ಕಾನೂನಾಗಿರುವದೇ ಗೊತ್ತಿಲ್ಲ ಈ ಹೊಸ ಕಾನೂನು ಪುಸ್ತಕಗಳನ್ನು ಓದಿರುವ ಕೆಲವರು ಅದು ಅರ್ಥವಾಗುವದಿಲ್ಲವೆಂದು ಹೇಳುತ್ತಾರೆ ಇದೆಲ್ಲಾ ಬರೀ ವರ್ತಮಾನವಾಗಿದೆಯಲ್ಲದೆ ಹಾಲಿ ಅಳತೆಯೂ ತೂಕವೂ ಯಥಾಪ್ರಕಾರ ಇರುತ್ತವೆ ಈ ಕಾನೂನು ಅತಿ ಮುಖ್ಯವಾದದ್ದು ಇದು ದೊಡ್ಡ ಸ್ಥಳದ ವರ್ತಕರಿಗೂ, ಹಳ್ಳಿಗಾಡಿನವರಿಗೂ, ರೈತರು ಮುಂತಾದವರಿಗೂ, ಸರ್ಕಾರೀ ನೌಕರರಿಗೂ, ಸಕಲರಿಗೂ ಬೇಕಾದದ್ದು ಆದ್ದರಿಂದ ಈ ಕಾನೂನು ಜಾರಿಗೆ ಬರುವ ಮುಂಚೆ ಸರ್ವರೂ ಈ ಪುಸ್ತಕವನ್ನು ಓದಿ ಚನ್ನಾಗಿ ಮುಂದಟ್ಟುಮಾಡಿಕೊಳ್ಳುವದಲ್ಲದೆ ಅದರಂತೆ ನಡೆಯಲು ಬದ್ಧರಾಗಿರಬೇಕು ಆದ್ದರಿಂದ ಸರ್ಕಾರದವರು ದಯವಿಟ್ಟು ಈ ಕಾನೂನು ಸಂಗತಿಯನ್ನು ಗ್ರಾಮಾಂತ್ಯಗಳಲ್ಲೆಲ್ಲಾ ಡಂಗೂರದ ಮೂಲಕ ಪ್ರಸಿದ್ಧಪಡಿಸುವದು, ಪೋಲೀಸ್ ಸ್ಟೇಷನ್ ವಗೈರೆ ಪ್ರಮುಖವಾದ ಸ್ಥಳಗಳಿಗೆ ವರ್ತಕರುಗಳನ್ನು ಕರೆಸಿಕೊಂಡು ಮುಂದಟ್ಟಾಗುವ ರೀತಿ ಓದಿ ಹೇಳುವದು, ಮತ್ತು ಈ ಪುಸ್ತಕದ ಬೆಲೆ 1 ಆಣೆ ಸುಲಭವಾಗಿರುವದರಿಂದ ಬೇಕಾದವರಿಗೆ ತರಿಸಿಕೊಡುವದು, ಈ ರೀತಿ ಮಾಡಿದ ನಂತರ ಈ ಕಾನೂನು ಪ್ರಸಿದ್ಧಿಗೆ ತಂದು ಜಾರಿಲಿ ಇಡತಕ್ಕದ್ದು ಒಳ್ಳೆಯದು ಈ ರೀತಿ ಮಾಡಿಯೂ ಹಳೇ ಸೇರು ಮತ್ತು ಬಟ್ಟುಗಳನ್ನು ಇಟ್ಟುಕೊಂಡಿದ್ದವರಿಗೆ ಪ್ರಾಸಿಕ್ಯೂಷನ್ ನಡಿಸುತ್ತಾ ಬಂದಲ್ಲಿ ಕಾನೂನು ತಪ್ಪದೆ ಸರಿಯಾಗಿ ನಡೆಯುವಂತೆ ಆಗುತ್ತದೆ ಇದಲ್ಲದೆ ಹೊಸ ಸೇರುಗಳನ್ನೂ ತೂಕದ ಬಟ್ಟುಗಳನ್ನೂ ಸರ್ಕಾರದವರೇ ತಯಾರಿಸಿ ಪ್ರತಿ ತಾಲ್ಲೂಕು ಖಜಾನೆಯಲ್ಲೂ ಮಾರಾಟಕ್ಕೆ ಇಡಿಸಿದಲ್ಲಿ ವರ್ತಕರಿಗೆಲ್ಲಾ ತುಂಬಾ ಅನುಕೂಲವಾಗುತ್ತದೆ ಆದ್ದರಿಂದ ಸಂಬಂಧಪಟ್ಟ ಸರ್ಕಾರಿ ಹುದ್ದೇದಾರರು ಈ ರೀತಿ ಮಾಡುತ್ತಾರೆಂದು ನಂಬಿರುತ್ತೇನೆ

ಬೀಗಳೂರು ಕೆ ವೆಂಕಟರಾಯಶೆಟ್ಟಿ

ಜೋಳಕ್ಕೆ ಹತ್ತುವ ಜಿಟ್ಟೆ ಹುಳ

ಮೈಸೂರು ಸರ್ಕಾರದ ವ್ಯವಸಾಯದ ಇಲಾಖಾ ಆಫೀಸರಾದ ಮೈ ಎಚ್ ಎ ಕೃಷ್ಣಯ್ಯನವರು ರೈತಪ್ರಜೆಗಳಿಗೆ ತಿಳಿಸುವುದೇನೆಂದರೆ—

1911 ನೇ ಇಸವಿಯಲ್ಲಿ ಈ ಹುಳುಗಳು ಹೊನ್ನಾಳಿ ಮತ್ತು ಚಿತ್ರದುರ್ಗದ ಸುತ್ತುಮುತ್ತಲಿನ ಗ್ರಾಮಗಳಲ್ಲಿನ ಜೋಳದ ಪೈರಿಗೆ ಹತ್ತಿ, ಪೈರನ್ನೆಲ್ಲಾ ಬಹಳ ಮಟ್ಟಿಗೆ ಹಾಳುಮಾಡಬಹುದಾಗಿದ್ದಾಗ ಅವರ ಹಾವಳಿಯನ್ನು ತಗ್ಗಿಸಿ, ಪೈರನ್ನು ಉಳಿಸುವದಕ್ಕಾಗಿ ವ್ಯವಸಾಯದ ಇಲಾಖೆಯವರೇ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿಕೊಂಡು ಕೆಲಸವನ್ನು ನಡೆಯಿಸಿದ್ದಾಯಿತು ಆ ಕಾಲದಲ್ಲಿ ಮಲೆಬೆನ್ನೂರು, ದಾವಣಗೆರೆ, ಚನ್ನಗಿರಿ ಮತ್ತು ಬಿಜಾಪುರ ಗ್ರಾಮಗಳಲ್ಲಿಯೂ ಜಿಟ್ಟೆಗಳು ಇರುವ ಸಂಗತಿಯು ತಿಳಿದುಬಂದಿತ್ತು ಆದರೆ ಆ ಗ್ರಾಮಗಳಲ್ಲಿ ಮಳೆಯು ಸ್ವಲ್ಪ ಹಿಂಗಾಲವಾಗಿ ಬಿದ್ದದ್ದರಿಂದ ಹೊಲಗಳಲ್ಲಿ ಪೈರನ್ನು ಇಡುವದು ತಾವಕಾಶವಾಯಿತು ಆದಕಾರಣ ಜಿಟ್ಟೆಗಳ ಮೊಟ್ಟೆಗಳು ಒಡೆದು ಮರಿಗಳು ಹೊರಕ್ಕೆ ಬಂದಾಗ ಹೊಲಗಳಲ್ಲಿ ಬೀಜವನ್ನೇ ಬಿತ್ತಿರಲಿಲ್ಲ, ಅಥವಾ ಬಿತ್ತಿದ್ದರೂ ಪೈರೇ ಹುಟ್ಟಿರಲಿಲ್ಲ ಆ ಸಂದರ್ಭದಲ್ಲಿ ಜಿಟ್ಟೆ ಮರಿಗಳೆಲ್ಲಾ ಹೊಟ್ಟೆಗೆ ತಿಂಡಿಯಿಲ್ಲದೆಯೇ ಅನೇಕವಾಗಿ ಸತ್ತುಹೋದವು ಈ ಕಾರಣಗಳಿಂದ ಹುಳುಗಳನ್ನು ಹಿಡಿದು ಹಾಕುವ ಏರ್ಪಾಡನ್ನು ಆ ಗ್ರಾಮಗಳಲ್ಲಿ ಮಾಡಲಿಲ್ಲ ಹೋದ ವರುಷ ಜಿಟ್ಟೆಗಳನ್ನು ಹಿಡಿದುಹಾಕುವ ಕೆಲಸವನ್ನು ವ್ಯವಸಾಯದ ಇಲಾಖೆಯಿಂದಲೇ ಅನೇಕ ಕಡೆಗಳಲ್ಲಿ ನಡೆಯಿಸಿದ್ದರಿಂದಲೂ, ಮೇಲೆ ಹೇಳಿರುವಂತೆ ಇನ್ನು ಕೆಲವು ಕಡೆಗಳಲ್ಲಿ ಅವುಗಳ ಅಭಿವೃದ್ಧಿಗೆ ಅನಾನುಕೂಲವಾದ್ದರಿಂದಲೂ ಈ ವರುಷ ಅವುಗಳ ಸಂತಾನವೇ ಬಹಳ ಕಡಮೆಯಾಗಿರುವದಲ್ಲದೆ ಅಲ್ಲೊಂದು ಇಲ್ಲೊಂದು ಕಡೆಯಲ್ಲಿ ಮಾತ್ರ ಪೈರಿಗೆ ಹತ್ತಿರುತ್ತವೆ — ಅವುಗಳ ಸಂತಾನದ ಅಭಿವೃದ್ಧಿಗೆ ಹೋದ ವರುಷ ಅನಾನುಕೂಲವಾದಂತೆ ಮುಂದಕ್ಕೂ ಅನಾನುಕೂಲವಾದ ಸಂದರ್ಭಗಳು ತಾವಾಗಿಯೇ ಏರ್ಪಡುವವೆಂದು ನಂಬಿಕೊಂಡಿರುವುದಕ್ಕಾಗುವುದಿಲ್ಲ ಪ್ರತಿಯೊಂದು ಹೆಣ್ಣು ಜಿಟ್ಟೆಯೂ 7 ಮೊಟ್ಟೆಗಳನ್ನು ಇಡಬಲ್ಲದೆಂಬ ಸಂಗತಿಯನ್ನು ಜ್ಞಾಪಕಕ್ಕೆ ತಂದುಕೊಂಡರೆ ಈಗ ಉಳಿದಿರುವ ಅಲ್ಪಸ್ವಲ್ಪ ಜಿಟ್ಟೆಗಳಿಂದಲೇ ಒಂದೆರಡು ವರುಷಗಳಲ್ಲಿ ಅವುಗಳ ಸಂತಾನವು ಬಹಳವಾಗಿ ಹೆಚ್ಚಿ ಅವುಗಳಿಂದ ಮರುಗಿ ಪೈರಿಗೆ ಬಹಳ ಅನಾನುಕೂಲವಾಗುವದೆಂಬ ಸಂಗತಿಯು ಸುಲಭವಾಗಿ ಮನಸ್ಸಿಗೆ ಹತ್ತುವದು ಆದ್ದರಿಂದ ಮುಂದಕ್ಕೂ ಅವುಗಳಿಂದಾಗಬಹುದಾದ ಹಾವಳಿಯನ್ನು ಸಾಧ್ಯವಾದ ಮಟ್ಟಿಗೂ ತಪ್ಪಿಸಬೇಕಾದರೆ ಈಗ ಹೊಲಗಳಲ್ಲಿರುವ ಜಿಟ್ಟೆಗಳನ್ನು ಹಿಡಿದು ಕೊಂದುಹಾಕಬೇಕು ಅವು ಮೊಟ್ಟೆಗಳನ್ನು ಇಡುವದಕ್ಕೆ ಮುಂಚಿತವಾಗಿಯೇ ಅವುಗಳನ್ನು ಹಿಡಿದು ನಾಶಮಾಡಬೇಕೆಂಬ ಸಂಗತಿಯು ಸ್ಪಷ್ಟವಾಗಿಯೇ ಇರುತ್ತೆ — ಈಗ ಎಕರೆಯೊಂದಕ್ಕೆ ಸಾವಿರ ಜಿಟ್ಟೆಗಳಿಗಿಂತ ಬಹಳ ಹೆಚ್ಚಾಗಿರುವಂತೆ ಕಾಣುವದಿಲ್ಲವಾದ್ದರಿಂದ ಅವುಗಳನ್ನೆಲ್ಲಾ ಕೈಯಿಂದಲೇ ಆರಿಸಿ ಹಾಕಬಹುದು, ಅಥವಾ ಪೈರು ಬಹಳ ಎತ್ತರವಾಗಿಲ್ಲದಿರುವ ಕಡೆಗಳಲ್ಲಿ ಕೈ ಬಲೆಯಿಂದ ಅವುಗಳನ್ನು ಹಿಡಿಯಬಹುದು ಕೈ ಬಲೆಯನ್ನು ಮಾಡಬೇಕಾದರೆ ಒಂದು ಚೀಲವನ್ನು ತೆಗೆದುಕೊಂಡು, ಅದರ ಬಾಯಿಯು ಸುಮಾರು ೭ ಅಡಿ ಅಗಲವಿರುವಂತೆಯೂ ಯಾವಾಗಲೂ ತೆರೆದುಕೊಂಡಿರುವಂತೆಯೂ ಬಿದಿರಿನಿಂದಾಗಲಿ ಬೆತ್ತದಿಂದಾಗಲಿ ಒಂದು ಉಂಗುರವನ್ನು ಮಾಡಿ ಅದರ ಬಾಯಿಗೆ ಕಟ್ಟಬೇಕು ಬಲೆಯನ್ನು ಹಿಡಿದುಕೊಳ್ಳುವದಕ್ಕೆ ಅನುಕೂಲವಾಗಿರುವಂತೆ ಒಂದು ಕೋಲನ್ನು ಬಾಯಿನ ಉಂಗುರಕ್ಕೆ ಭದ್ರವಾಗಿ ಕಟ್ಟಬೇಕು ಇಷ್ಟೆಲ್ಲಾ ಮಾಡುವದಕ್ಕೆ ಚೀಲ ಒಂದಕ್ಕೆ ಸುಮಾರು ನಾಲ್ಕಾಣೆ ಖರ್ಚಾಗಬಹುದು ಅದರಿಂದ ಜಿಟ್ಟೆಗಳನ್ನು ಹಿಡಿದು ಅವುಗಳನ್ನೆಲ್ಲಾ ಸ್ವಲ್ಪ ಸೀಮೆ ಎಣ್ಣೆಯನ್ನು ಬೆರಸಿರುವ ನೀರಿನಲ್ಲಿ ಹಾಕಿದರೆ ಅವು ಸತ್ತುಹೋಗುವವು

ಈ ಹುಳದ ಜೀವನಾನದ ಚರಿತ್ರೆಯನ್ನೆಲ್ಲಾ ವಿಷಯ ಪತ್ರಿಕೆಯಲ್ಲಿ ಬರೆದು ಕನ್ನಡದಲ್ಲಿ ಪ್ರಚುರಪಡಿಸಿದೆ ಬೇಕಾದವರು ಇಲಾಖೆಗೆ ಬರೆದುಕೊಂಡಲ್ಲಿ ಮುಫತ್ತಾಗಿಯೇ ಕಳುಹಿಸುತ್ತಾರೆ

ಅರಮನೆಯ ಪ್ರದರ್ಶನೋತ್ಸವವು.

ಕೈಗಾರಿಕ ಮತ್ತು ವ್ಯವಸಾಯೋಪಕರಣ ವಸ್ತುಗಳ ಪ್ರದರ್ಶನ

ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ನವರಾತ್ರಿ ಉತ್ಸವಗಳ ಕಾಲದಲ್ಲಿ ಜರುಗುವ ಉತ್ಸವಗಳ ಪೈಕಿ ಒಂದಾಗಿರುವ ಪ್ರದರ್ಶನೋತ್ಸವವು ಕಳೆದ ತಾ 13 ನೇ ಸೋಮವಾರ ಸಾಯಂಕಾಲ 4½ ಗಂಟೆಗೆ ಪ್ರಾರಂಭವಾಯಿತು ಶ್ರೀಮನ್ ಯುವರಾಜರವರು ಸಭೆಯ ಅಗ್ರಾಸನವನ್ನು ವಹಿಸಿದರು ಅಧಿಕಾರಿಗಳೂ, ರಾಜಬಂಧುಗಳೂ, ಎಲ್ಲಾ ಕೋಮುಗಳ ಮತ್ತು ಕಸಬುಗಳ ದೊಡ್ಡ ಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು ಪ್ರದರ್ಶನದ ಕಮಿಟಿ ಪ್ರೆಸಿಡೆಂಟರಾದ ಮಿ ಜೆ. ಎಚ್. ಕ್ರಂಬೀಗಲ್ ರವರು ಸಭೆಯ ಕಾರ್ಯವನ್ನು ಪ್ರಾರಂಭಿಸಿ ಶ್ರೀಮನ್ ಯುವರಾಜರವರನ್ನು ಕುರಿತು ಅರಿಕೆ ಮಾಡಿದ ಅಡ್ರೆಸ್ಸಿನ ಮುಖ್ಯಾಭಿಪ್ರಾಯವೇನೆಂದರೆ—

ಮಹಾಸ್ವಾಮಿ,—ಈಗ ಸಿದ್ಧವಾಗಿರುವ ಅರಮನೆಯ ದಸರಾ ಎಗ್ಜಿಭಿಷನ್ ಶಾಲೆಯನ್ನು ತಾವು ಕೃಪೆಯಿಟ್ಟು ತೆರೆದು ಪ್ರಾರಂಭಮಾಡಬೇಕೆಂದು ಕಮಿಟಿಯವರ ಪರವಾಗಿಯೂ, ವಸ್ತುಗಳನ್ನು ತಂದಿಟ್ಟು ಪ್ರದರ್ಶನಮಾಡಿರುವವರ ಪರವಾಗಿಯೂ, ಈ ಸಭೆಯಲ್ಲಿ ಸೇರಿರುವ ಮಹನೀಯರ ಪರವಾಗಿಯೂ ತಮಗೆ ಸುಸ್ವಾಗತವನ್ನು ಬಯಸಿ ಕೇಳಿಕೊಳ್ಳುತ್ತೇನೆ — ತಾವು ಈ ಘನತರವಾದ ಕಾರ್ಯವನ್ನು ನೆರವೇರಿಸಲು ದಯಮಾಡಿದ್ದು ನಮ್ಮಗಳಿಗೆಲ್ಲಾ ವಿಶೇಷವಾದ ಗೌರವವೂ ಆನಂದವೂ ಉಂಟಾಗಿರುತ್ತದೆ ಈಗ ತಮ್ಮ ಪರಾಂಬರಿಕೆಗೆ ಸಿದ್ಧವಾಗಿರುವ ಈ ಪ್ರದರ್ಶನಾಲಯದಲ್ಲಿ ಅನೇಕ ಹೊಸ ತರಹಾ ವಸ್ತುಗಳು ಇಡಲ್ಪಟ್ಟು, ಹಿಂದಿನ ಪ್ರದರ್ಶನಗಳಿಗಿಂತ ಎಷ್ಟೋ ಅಭಿವೃದ್ಧಿಯಾಗಿದೆ ಕಾರ್ಖಾನೆಗಾರರು ಮಾರಾಟವಾಗುತ್ತೆಂಬ ಉದ್ದೇಶ ಮಾತ್ರದಿಂದಲೇ ತಮ್ಮ ವಸ್ತುಗಳನ್ನು ತಂದು ಪ್ರದರ್ಶನ ಮಾಡಿಲ್ಲ ಶ್ರೀಮನ್ ಮಹಾರಾಜರವರ ಮನಃಪೂರ್ವಕವಾದ ಸಹಾಯವೂ ಪ್ರೋತ್ಸಾಹವೂ, ಬಹುಮಾನಗಳನ್ನು ಸ್ವತಃ ದಯಪಾಲಿಸುವುದರಲ್ಲಿ ಅವರ ಶ್ರದ್ಧೆಯೂ ಪ್ರೀತಿಯೂ, ಅವರ ಪ್ರೇಮಯುಕ್ತವಾದ ವಾಕ್ಯಗಳೂ, ತಮ್ಮ ಪ್ರೋತ್ಸಾಹವೂ ಪ್ರದರ್ಶನಕ್ಕೆ ವಸ್ತುಗಳನ್ನು ತರತಕ್ಕವರಿಗೆ ಎಷ್ಟೋ ಆದರವನ್ನು ಕೊಡುತ್ತಿರುವವು ಅವರು ತಮ್ಮಗಳ ಆದರವನ್ನೂ ಪ್ರೋತ್ಸಾಹವನ್ನೂ ಮರೆಯದೆ ನೆನಪಿಟ್ಟುಕೊಂಡು ವರುಷೇ ವರುಷ ಪ್ರದರ್ಶನಕ್ಕೆ ವಸ್ತುಗಳನ್ನು ತರುತ್ತಿದ್ದಾರೆ ಇದರಿಂದ ಈ ಪ್ರದರ್ಶನೋತ್ಸವವು ಕ್ರಮವಾಗಿ ವೃದ್ಧಿಹೊಂದುತ್ತಿದೆ — ಈ ಸಲ ಪ್ರದರ್ಶನಕ್ಕೆ ಹೆಚ್ಚು ಜನರು ಹೆಚ್ಚು ವಸ್ತುಗಳನ್ನು ಕಳುಹಿಸಿರುವರು ಯಂತ್ರ, ವಿದ್ಯುಚ್ಛಕ್ತಿ, ನೀರಾವರಿ, ರೇಷ್ಮೆ, ಈ ಮೊದಲಾದ ಪ್ರದರ್ಶನ ಭಾಗಗಳು ಅತ್ಯಂತ ಸ್ವಾರಸ್ಯವಾಗಿವೆ — ಸ್ತ್ರೀಯರ ಕಸಬುಗಳನ್ನು ಪ್ರದರ್ಶನ ಮಾಡಿರುವ ಭಾಗವು ಬಹು ವಿಶೇಷವಾಗಿದೆ ಮಹಾರಾಜಕುಮಾರಿ ಸೌ|| ಚಲುವಾಜಮ್ಮಣ್ಣಿಯವರು ಸ್ತ್ರೀ ಶಾಖೆಯ ಕಮಿಟಿ ಪ್ರೆಸಿಡೆಂಟರಾಗಿ ನಿಂತು ತುಂಬಾ ಸಾಹಸಪಟ್ಟು ಪ್ರೋತ್ಸಾಹಕೊಡುತ್ತಾ ಬಂದದ್ದರಿಂದ ಆ ಕಮಿಟಿಯವರ ಮೂಲಕ ಕಳುಹಿಸಲ್ಪಟ್ಟಿರುವ ಪ್ರದರ್ಶನ ಪದಾರ್ಥಗಳು ಬಹು ಸಂತೋಷಪ್ರದವಾಗಿರುತ್ತವೆ ಈ ರೀತಿ ಮೈಸೂರು ರಾಜಮನೆತನದವರು ಸಹಾಯಮಾಡಲು ನಿಂತದ್ದರಿಂದ ಸಂಸ್ಥಾನದ ಮಹಿಳೆಯರಿಗೆ ಉತ್ಸಾಹಹುಟ್ಟಿ ವಸ್ತುಗಳನ್ನು ಕೊಡಿಸಿ ಪ್ರದರ್ಶನಕ್ಕೆ ಕಳುಹಿಸಿದ ಭಾಗದಲ್ಲಿ ಎಷ್ಟೋ ಸಹಾಯವಾಯಿತು — ಈ ಸಲ ಅನೇಕ ಜನರು ದೂರಸ್ಥಳಗಳಿಂದ ಬಂದು ಪ್ರದರ್ಶನವನ್ನು ನೋಡುತ್ತಾರೆಂದು ಊಹಿಸಬಹುದಾಗಿದೆ ಅನೇಕ ಜನರು ರೈಲ್ವೆ ಟಿಕೆಟುಗಳನ್ನು ಪ್ರದರ್ಶನದ ಫೀಜು ಸಮೇತ ಖಾವತಿಮಾಡಿ ಕೊಂಡುಕೊಂಡಿರುವರು ಇವರಲ್ಲಿ ಬಹುಮಂದಿ ಕಸಬುದಾರರೆಂದೂ, ರೈತರೆಂದೂ ತಿಳಿದು ಸಂತೋಷಪಡಬೇಕಾಗಿದೆ — ಆದಕಾರಣ ಈ ಪ್ರದರ್ಶನದ ಪ್ರಯೋಜನವು ಈ ವರುಷ ಬಹಳ ವಿಶೇಷವಾಗಿದ್ದಿತೆಂದು ಹೇಳಬಹುದು ತಾವು ಈ ಪ್ರದರ್ಶನಶಾಲೆಯನ್ನು ಪ್ರಾರಂಭಿಸುವುದಕ್ಕೆ ಒಪ್ಪಿ ದಯಮಾಡಿದ್ದಕ್ಕಾಗಿ ನಾವೆಲ್ಲಾ ತಮ್ಮನ್ನು ಬಹಳವಾಗಿ ವಂದಿಸುವೆವು

ತರುವಾಯ ಶ್ರೀಮನ್ ಯುವರಾಜರವರು ಪ್ರೆಸಿಡೆಂಟರನ್ನೂ ಕಮಿಟಿ ಮೆಂಬರುಗಳನ್ನೂ ಅವರ ಶ್ರಮವು ಸಾರ್ಥಕವಾಯಿತೆಂದು ವಿನಯಪೂರ್ವಕವಾಗಿ ಸಂತೋಷಪಟ್ಟು ಅಭಿನಂದಿಸಿದರು ವರುಷೇ ವರುಷ ಮೈಸೂರು ಪ್ರದರ್ಶನವು ಶಾಶ್ವತವಾಗಿ ನಿಂತಕೆಂತಲೂ, ಎಲ್ಲಾ ಕಡೆಗಳಿಂದ ರೈತರೂ ಕಸಬುದಾರರೂ ಹೆಚ್ಚುಹೆಚ್ಚಾಗಿ ಬಂದು ಪ್ರದರ್ಶನ ವಸ್ತುಗಳನ್ನು ನೋಡಿ ಪ್ರಯೋಜನ ಹೊಂದುವ ಹಾಗಾಯಿತೆಂತಲೂ, ಸ್ತ್ರೀಶಾಖೆಯ ಕಮಿಟಿಯವರು ಸಾಹಸಪಟ್ಟು ಈ ಸಲದ ಪ್ರದರ್ಶನಶಾಲೆಗೆ ಬಹು ವಿಶೇಷವಾದ ಚಿತ್ರವಸ್ತುಗಳನ್ನು ಕಳುಹಿಸಿರುವುದು ತುಂಬಾ ಸಂತೋಷಪ್ರದವಾಗಿದೆ ಎಂದೂ ಅಪ್ಪಣೆ ಕೊಡಿಸಿ, ಶ್ರೀಮನ್ ಯುವರಾಜರವರು ಪ್ರಾರಂಭೋತ್ಸವವನ್ನು ನೆರವೇರಿಸಿದರು

ಬಳಿಕ ಶ್ರೀಮನ್ ಯುವರಾಜರವರನ್ನು ಪ್ರೆಸಿಡೆಂಟರು ಪ್ರದರ್ಶನಶಾಲೆಯೊಳಕ್ಕೆ ಕರೆದುಕೊಂಡು ಹೋಗಿ ಪ್ರತಿ ಒಂದು ಕೊಠಡಿಯಲ್ಲೂ ಇಟ್ಟಿರುವ ವಸ್ತುಗಳನ್ನು ತೋರಿಸಿ ವಿವರಿಸಿದರು ಶ್ರೀಮನ್ ಯುವರಾಜರವರು ಸುಮಾರು ಒಂದು ಗಂಟೆ ಕಾಲ ಇದ್ದು ಪ್ರದರ್ಶನಶಾಲೆಯ ಎಲ್ಲಾ ಕೊಠಡಿಗಳಲ್ಲೂ ಪ್ರವೇಶಿಸಿ ಪ್ರದರ್ಶನಮಾಡಿದ್ದ ವಸ್ತುಗಳನ್ನು ನೋಡಿ ತುಂಬಾ ಸಂತೋಷ ಪಟ್ಟುಕೊಂಡು ವಾಪಸು ಹೊರಟರು ತರುವಾಯ ಅಲ್ಲಿದ್ದ ದೊಡ್ಡ ಮನುಷ್ಯರೆಲ್ಲಾ ಪ್ರದರ್ಶನ ಶಾಲೆಯೊಳಕ್ಕೆ ಪ್ರವೇಶಿಸಿ ವಸ್ತುವಿಶೇಷಗಳನ್ನು ನೋಡಿ ಮೆಚ್ಚಿಕೊಂದರು

ಪ್ರದರ್ಶನಶಾಲೆಯು ತಾ 25 ರ ವರೆಗೆ ಪ್ರತಿ ದಿನವೂ ಮಧ್ಯಾಹ್ನ 1 ಗಂಟೆಯಿಂದ ರಾತ್ರಿ 9 ಗಂಟೆಯ ತನಕ ತೆರೆದಿರುತ್ತಾದ್ದರಿಂದ ಪ್ರಜೆಗಳೂ ಕಾರ್ಖಾನೆಗಾರರೂ ಹೆಚ್ಚಾಗಿ ಹೋಗಿ ವಸ್ತುಗಳನ್ನು ನೋಡಿ ಬರುವುದರ ಮೂಲಕ ತಾವೂ ಪ್ರಯೋಜನ ಹೊಂದುವುದಲ್ಲದೆ ಪ್ರದರ್ಶಕರಿಗೆ ಪ್ರೋತ್ಸಾಹವನ್ನುಂಟುಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ ಈ ಪ್ರದರ್ಶನದ ವಿವರಣೆಯನ್ನು ಮುಂದಿನ ವಾರ ಸಂಕ್ಷೇಪವಾಗಿ ತಿಳಿಸಲಾಗುವುದು

ಅನ್ಯೋನ್ಯ ಸಹಾಯ ಸಂಘವು

ಎರಡನೆಯ ವಾರ್ಷಿಕ ಮಹಾ ಸಭೆಯು

ಕಳೆದ ತಾ 11 ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ಮೈಸೂರು ಸಂಸ್ಥಾನದ ಅನ್ಯೋನ್ಯ ಸಹಾಯ ಸಂಘಗಳ ಎರಡನೇ ವಾರ್ಷಿಕ ಸಭೆಯು ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಪ್ರಾರಂಭವಾಯಿತು ಶ್ರೀಮನ್ ಯುವರಾಜರವರು ದಯಮಾಡಿ ಅಗ್ರಾಸನವನ್ನು ವಹಿಸಿದರು ಅಧಿಕಾರಸ್ಥರೂ, ರಾಜಬಂಧುಗಳೂ, ರಾಜಧಾನಿಯ ಎಲ್ಲಾ ಕೋಮು ಮತ್ತು ಕಸಬುಗಳ ದೊಡ್ಡ ಮನುಷ್ಯರೂ ಅಲ್ಲದೆ ಸಂಸ್ಥಾನದ ಅನ್ಯೋನ್ಯ ಸಹಾಯ ಸಂಘಗಳ 100 ಮಂದಿ ಪ್ರತಿನಿಧಿಗಳೂ ಮೇಲ್ಕಂಡ ಟೌನ್ ಹಾಲ್ ಮುಂದಿರುವ ಚಿಕ್ಕ ರಿಯಾದ ವೆರಾಂಡಾ ವಿನಲ್ಲಿ ಹಾಜರಾಗಿದ್ದರು

ಅನ್ಯೋನ್ಯ ಸಹಾಯ ಸಂಘಗಳ ಗವರ್ನಮೆಂಟ್ ರೆಜಿಸ್ಟ್ರಾರ್ ಮಿ ಎಂ ಎ ನಾರಾಯಣಯ್ಯಂಗಾರ್ಯರವರು ಸಭಾ ಕಾರ್ಯವನ್ನು ಪ್ರಾರಂಭಿಸಿ ಶ್ರೀಮನ್ ಯುವರಾಜರವರನ್ನು ಕುರಿತು ಅರಿಕೆಮಾಡಿದ್ದೇನೆಂದರೆ—

ರೆಜಿಸ್ಟ್ರಾರ್‌ರವರು ಯುವರಾಜರವರನ್ನು ಕುರಿತು ಅರಿಕೆಮಾಡಿದ್ದು

ಮಹಾಸ್ವಾಮಿ,— ಈಗ ನೆರೆದಿರುವ ಅನ್ಯೋನ್ಯ ಸಹಾಯ ಸಂಘಗಳ ಎರಡನೇ ಮಹಾಸಭೆಯನ್ನು ತಾವು ಉಪಕ್ರಮಿಸಬೇಕೆಂದು ಬಹಳ ವಿನಯವಾಗಿ ಪ್ರಾರ್ಥಿಸುತ್ತೇವೆ ಹೋದ ವರುಷ ಇದೇ ದಸರಾ ಮಹೋತ್ಸವ ಕಾಲದಲ್ಲಿ ನಮ್ಮ ಮೊದಲನೇ ಮಹಾಸಭೆಯನ್ನು ಉಪಕ್ರಮಿಸಿದಿರಿ ಆಗ ಮಹಾಸ್ವಾಮಿಯವರು ಅನುಗ್ರಹಿಸಿದ ಬುದ್ಧಿವಾದವೂ, ದಯಪಾಲಿಸಿದ ಪ್ರೋತ್ಸಾಹವೂ, ಇನ್ನೂ ನಮ್ಮ ಹೃದಯದಲ್ಲಿ ಚೆನ್ನಾಗಿ ನೆಲೆಗೊಂಡಿವೆ ಈ ಸಂಘಗಳ ಪ್ರಯೋಜನಗಳೂ ಅವುಗಳಿಂದ ನಮಗೆ ಉಂಟಾಗುವ ಶ್ರೇಯಸ್ಸೂ, ಕೀರ್ತಿಯೂ, ಬಹುಮಾನವೂ ತಿಳಿಯಲಾಯಿತು ಈ ಸಂಘಗಳ ಅಭಿವೃದ್ಧಿಗೋಸ್ಕರ ಎಷ್ಟೆಷ್ಟು ಶ್ರಮ ತೆಗೆದುಕೊಂಡರೂ ಅಷ್ಟಷ್ಟು ಫಲ ಅನುಭವಿಸಬಹುದೆಂದು ತಿಳಿದು ಬಂದಿತು ಈ ತಿಳುವಳಿಕೆಯಿಂದ ನಮ್ಮ ದೇಶದಲ್ಲಿ ಎಷ್ಟೋ ಹೊಸ ಸಂಘಗಳು ಏರ್ಪಡುತ್ತಿವೆ ಹಳೇ ಸಂಘಗಳು ಅಭಿವೃದ್ಧಿ ಹೊಂದುತ್ತಿವೆ — ಹೋದ ಸಲ ಮಹಾಸ್ವಾಮಿಯವರು ಉತ್ಸಾಹದೊಂದಿಗೆ ನಮಗೆಲ್ಲರಿಗೂ ತಿಳಿಯುವಂತೆ ನಮ್ಮ ಮಾತೃಭಾಷೆಯಲ್ಲಿಯೇ ನಡಿಸಿದ ಉಪನ್ಯಾಸವು ಇನ್ನೂ ನಮ್ಮ ಕಿವಿಯಲ್ಲಿ ಕೇಳುತ್ತಿರುವಂತಿದೆ ಇದಲ್ಲದೆ, ಮಹಾಸ್ವಾಮಿಯವರ ಉಪನ್ಯಾಸವನ್ನು ಮುದ್ರಿಸಿರುವುದರಿಂದ ಅನೇಕ ದೂರದ ಗ್ರಾಮಗಳಲ್ಲಿ ಎಷ್ಟೋ ಸಂಘಗಳಲ್ಲಿ ಪುನಃ ಪುನಃ ಓದುತ್ತಿರುವರು ನಿಶ್ಶಬ್ದವಾಗಿ ಏಕಾಗ್ರತೆಯಿಂದ ಕೇಳುತ್ತಿರುವರು ಕೊನೆಗೆ ನಮ್ಮ ಮಹಾಸ್ವಾಮಿಯವರು ನಮ್ಮನ್ನು ಇಷ್ಟು ಪ್ರೀತಿಸಿ, ನಮ್ಮ ಕಷ್ಟಸುಖಗಳನ್ನು ಯೋಚಿಸಿ, ನಮ್ಮ ಯೋಗಕ್ಷೇಮದಲ್ಲಿ ಇಷ್ಟೊಂದು ಆಸಕ್ತರಾಗಿದ್ದಾರೆಯೇ ಎಂದು ಆನಂದದಿಂದ ಉಬ್ಬಿ ಮೈಮರೆತು ಚಪ್ಪಾಳೆ ತಟ್ಟುವರು — ಇಷ್ಟು ಮಾಡಿದ್ದೂ ಅಲ್ಲದೆ, ಮಹಾಸ್ವಾಮಿಯವರು ಸಂಘಗಳ ಪ್ರತಿನಿಧಿಗಳ ಜತೆಗೆ ಕುಳಿತು ಫೋಟೋಗ್ರಾಫ್ ತೆಗಿಸಿಕೊಂಡಿರಿ ಮತ್ತು ಸಂಘಗಳಲ್ಲಿ ಪ್ರತಿನಿಧಿಗಳ ಕೆಲಸವನ್ನು ಮೆಚ್ಚಿದ್ದಕ್ಕಾಗಿ ಫೋಟೋಗ್ರಾಫಿನಲ್ಲಿ ಮಹಾಸ್ವಾಮಿಯವರು ತಮ್ಮ ಹೆಸರನ್ನು ಸ್ವಹಸ್ತದಿಂದ ಬರೆದು ಬಹುಮಾನವಾಗಿ ದಯಪಾಲಿಸಿದಿರಿ ಈ ಚಿತ್ರಪಟಗಳು ಗ್ರಾಮಸಂಘದಲ್ಲಿ ಎಲ್ಲರಿಗೂ ಕಾಣುವಂತೆ ಒಳ್ಳೇ ಸ್ಥಳದಲ್ಲಿ ಇಡಲ್ಪಟ್ಟಿವೆ ಇದನ್ನು ನೋಡಿ ಅನೇಕರು ತಾವು ಹೀಗೆಯೇ ಅನ್ಯೋನ್ಯ ಸಹಾಯ ಸಂಘಗಳಲ್ಲಿ ಒಳ್ಳೇ ಕೆಲಸವನ್ನು ಮಾಡಬೇಕು, ಮಹಾಸ್ವಾಮಿಯವರಲ್ಲಿ ಕೀರ್ತಿಯನ್ನು ಪಡೆಯಬೇಕೆಂದು ಸೆಕ್ರೆಟರಿಗಳಾಗಿಯೂ ಪಂಚಾಯಿತರಾಗಿಯೂ ಮುಂದು ಮುಂದಾಗಿ ಬರುವರು — ನಮ್ಮಗಳ ಕ್ಷೇಮಚಿಂತನೆಯಲ್ಲಿ ಮಹಾಸ್ವಾಮಿಯವರಿಗೆ ಇರುವ ಆದರವೂ, ಕುತೂಹಲವೂ ಎಲ್ಲಲ್ಲಿಯೂ ತಿಳಿದಿರುತ್ತದೆ ಇದನ್ನು ತಿಳಿದುಕೊಂಡು ಅನೇಕರು ಮಹಾಸ್ವಾಮಿಯವರಲ್ಲಿ ಬಂದು, ಮಹಾಸ್ವಾಮಿಯವರಿಗೆ ಆಗತಕ್ಕ ಶ್ರಮವನ್ನು ಸ್ವಲ್ಪವೂ ಕೊಡದೆ ಚಿಂತಿಸದೆ, ತಮ್ಮ ತಮ್ಮ ವಿಷಯಗಳಲ್ಲಿ ಮಹಾಸ್ವಾಮಿಯವರ ಸಹಾಯವನ್ನು ಕೇಳಿಕೊಳ್ಳುವರು ಇಷ್ಟು ಸ್ವಲ್ಪ ಹೊತ್ತಿನಲ್ಲಿಯೇ ಇನ್ನೊಂದು ಕಡೆಗೆ ದಯಮಾಡಿ ವ್ಯವಸಾಯ ಮತ್ತು ಕೈಗಾರಿಕೆ ವಸ್ತುಪ್ರದರ್ಶನವನ್ನು ಉಪಕ್ರಮಿಸಲು ಮಹಾಸ್ವಾಮಿಯವರು ಅಪ್ಪಣೆ ಕೊಡುವಂತೆ ಒಪ್ಪಿರುವದನ್ನು ನಾವೆಲ್ಲರೂ ಬಲ್ಲೆವು ಆದರೆ ಹೋದ ವರುಷದಲ್ಲಿ ಮಹಾಸ್ವಾಮಿಯವರ ಸಹಾಯದಿಂದ ಉಂಟಾದ ಅನುಕೂಲವಾದ ಫಲಗಳನ್ನು ಗಮನಕ್ಕೆ ತಂದು, ಮಹಾಸ್ವಾಮಿಯವರ ಶ್ರಮವನ್ನು ಯೋಚಿಸದೆ, ಮಹಾಸ್ವಾಮಿಯವರೇ ದಯಮಾಡಿ ಈ ಸಭೆಯ ಉಪಕ್ರಮವನ್ನು ಬೆಳಸಬೇಕೆಂದು ಈ ನೂರಾರು ಜನರ ಪ್ರಾರ್ಥನೆಯನ್ನು ಸನ್ನಿಧಾನದಲ್ಲಿ ವಿಜ್ಞಾಪಿಸುವೆವು

ಬಳಿಕ ರೆಜಿಸ್ಟ್ರಾರ್‌ರವರು ಸಂಸ್ಥಾನದ ಸೀನಿಯರ್ ಕೌನ್ಸಿಲರ್ ಮಿ ಎಚ್ ವಿ ನಂಜುಂಡಯ್ಯನವರನ್ನು ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಿ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೇಳಿಕೊಳ್ಳುವಲ್ಲಿ ಹೇಳಿದ್ದೇನೆಂದರೆ—

ರೆಜಿಸ್ಟ್ರಾರ್‌ರವರು ಮಿ ನಂಜುಂಡಯ್ಯನವರನ್ನು ಕುರಿತು ಹೇಳಿದ್ದು

ಮಹಾಸ್ವಾಮಿಯವರು ಸಭೆಯ ಉಪಕ್ರಮವನ್ನು ಈಗ ನಡಿಸಿದ್ದರಿಂದ ಸರಿಯಷ್ಟೆ ಆದರೆ ಚರ್ಚಿಸುವ ವಿಷಯಗಳು ಮೂರುದಿವಸವಾದರೂ ತೀರದೆ ಇದ್ದ ಇಷ್ಟು ಶ್ರಮವನ್ನೂ ಮಹಾಸ್ವಾಮಿಯವರಿಗೆ ಕೊಡುವದಕ್ಕೆ ನಮ್ಮ ಮನಸ್ಸು ಒಪ್ಪುವುದಿಲ್ಲ ಹೀಗಿರುವಲ್ಲಿ ಬಹಳವಾಗಿ ದಯವಿಟ್ಟು ನಮ್ಮ ಘನ ಕೌನ್ಸಿಲರ್ ಮತ್ತು ಅಫಿಸಿಯೇಟಿಂಗ್ ಚೀಫ್ ಜಡ್ಜರಾದ ತಾವು ನಮ್ಮ ಸಹಾಯಕ್ಕೆ ಬಂದು ನಮ್ಮ ಕೆಲಸ ಕಾರ್ಯಗಳನ್ನು ಪ್ರೆಸಿಡೆಂಟರಾಗಿದ್ದು ಕೊಡಿಸಿಕೊಡಬೇಕೆಂದು ಇಲ್ಲಿ ಸೇರಿರುವ ಸಕಲರೆಲ್ಲರೂ ವಿಜ್ಞಾಪಿಸಿಕೊಳ್ಳುವರು ಅವರಿಗೋಸ್ಕರ ಬಂದಿರುವ ವಿಷಯಗಳನ್ನು ಅರಿಕೆಮಾಡುವೆನು ಹೋದ ಸಲ ಮಹಾಸ್ವಾಮಿಯವರು ಸಭೆ ಸೇರಿಸುವುದನ್ನು ಅತ್ಯಂತ ದಯವಾಗಿ ಆರಂಭಿಸಿದರು ಆ ತರುವಾಯ ಡಾಕ್ಟರ್ ಮಿ ಬ್ರಜೇಂದ್ರನಾಥ ಸೀಲ್ ಹಾಗೂ ರಾಜಮಂತ್ರಪ್ರವೀಣ ಮಿ ಶ್ರೀನಿವಾಸ ಅಯ್ಯಂಗಾರವರು ಅಗ್ರಾಸನವನ್ನು ವಹಿಸಿದರು ಆಗ ಅನೇಕ ತೀರ್ಮಾನಗಳು ನಡೆದವು ವರ್ಷಂಪ್ರತಿ ವರ್ಷದಲ್ಲಿಯೂ ಈ ಸಭೆಯು ನಡೆಯಬೇಕೆಂದು ಏಕವಾಕ್ಯವಾಗಿ ನಿಶ್ಚಯಿಸಲ್ಪಟ್ಟಿತು ಅದಕ್ಕನುಸಾರವಾಗಿ ಈ ಸಭೆಯು ಪ್ರಯೋಜನವನ್ನು ತಿಳಿದುಕೊಂಡು ದಸರಾಮಹೋತ್ಸವ ಮೈಸೂರಿನಲ್ಲಿ ಘನ ಬರುತ್ತಿದ್ದು ಮೈಸೂರಿನಲ್ಲಿಯೇ ನಮ್ಮ ಪ್ರತಿನಿಧಿಗಳೆಲ್ಲರೂ ಸೇರಿ ನಮ್ಮ ಸಂಘಗಳ ಕಾರ್ಯದ ಅಭಿವೃದ್ಧಿಗೆ ಅತ್ಯವಶ್ಯಕವಾದ ಈ ಮಹಾಸಭೆಯನ್ನು ನೆರವೇರಿಸಬೇಕೆಂದು ಅನೇಕ ಕಡೆಯಿಂದ ನಮ್ಮನ್ನು ಕೇಳಿದರು ಮೂರನೆಯ ಬೇರೆ ಯಾವುದು, ಇತರ ಕಡೆಗಳಲ್ಲೆಲ್ಲಾ ಸರ್ಕಾರದ ಸಹಾಯವೇನೂ ವಿಶೇಷವಾಗಿ ಇಲ್ಲದೆ ಜನರು ತಾವೇ ಇಂಥಾ ಸಭೆಗಳನ್ನು ನಡಿಸುತ್ತಾರೆ ಈ ಸಭಾಕಾರ್ಯವನ್ನು ನಿರ್ವಹಿಸುವದಕ್ಕೆ ಯೋಗ್ಯರಾದ ದೊಡ್ಡ ಮನುಷ್ಯರು ಮೈಸೂರು ಬೆಂಗಳೂರುಗಳಲ್ಲಿ ಅನೇಕರು ಇರುವರು ಆದ್ದರಿಂದ ನಮ್ಮಲ್ಲಿ ಕೆಲವರು ಸೇರಿ ಒಂದು ಕಾನ್ಫರೆನ್ಸ್ ಕಮಿಟಿಯನ್ನು ಮಾಡಿಕೊಂಡು ಈ ಸಭೆಗೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಿರಿ ಎಂದು ತಿಳಿಸಿದೆವು ಆದರೂ ಒಬ್ಬರೂ ಮುಂದಾಳಾಗಿ ಬರಲಿಲ್ಲ, ಮೊಂತೆ ಸಭೆ ನಡಿಸಬೇಕೇ ಬೇಡವೆ ಈ ಕಾಲದಲ್ಲಿ ಆಗಬೇಕು, ಯಾವ ವಿಷಯಗಳನ್ನು ಚರ್ಚಿಸಬೇಕು ಎಂದು ಮೂರು ತಿಂಗಳಲ್ಲಿ ಸರ್ಕ್ಯುಲರ್ ಮುಖಾಂತರ ಸಂಘಗಳನ್ನು ಕೇಳಿದೆವು ಅದಕ್ಕೆ ಸರಿ ದಸರಾ ಕಾಲದಲ್ಲಿ ಮೈಸೂರಿನಲ್ಲಿ ಆಗತಕ್ಕದ್ದೆಂದು ಹೇಳಿಕಳುಹಿಸಿದರು, 100 ಪ್ರತಿನಿಧಿಗಳನ್ನು ಖರ್ಚನ್ನೂ ವಹಿಸಿಕೊಂಡು ಕಳುಹಿಸುತ್ತೇವೆಂತಲೂ, ಈಗ ಪತ್ರಿಕೆಯಲ್ಲಿ ಸೂಚಿಸಿರುವ ಎಲ್ಲಾ ವಿಷಯಗಳನ್ನು ಚರ್ಚಿಸಬೇಕೆಂತಲೂ 130 ಸಂಘಗಳಿಂದ ಜವಾಬುಗಳು ಬಂದವು ಆ ಸಂಘಗಳ ಇಷ್ಟಾನುಸಾರವಾಗಿ ತಕ್ಕ ಏರ್ಪಾಡುಗಳು ನಡೆಯಬೇಕೆಂದು ಗವರ್ನಮೆಂಟಿಗೆ ಬರೆದೆವು ಗವರ್ನಮೆಂಟಿನವರು ಆದರವಾಗಿ ನಡಿಸಬಹುದೆಂದು ಒಪ್ಪಿದರು ಎಕನಾಮಿಕ್ ಕಾನ್ಫರೆನ್ಸಿನ ವ್ಯವಸಾಯ ಕಮಿಟಿಯವರು 500 ರೂಪಾಯಿಗಳನ್ನೂ, ಕೈಗಾರಿಕೆ ಕಮಿಟಿಯವರು 200 ರೂಪಾಯಿಗಳನ್ನೂ ಸಭೆಯ ಖರ್ಚಿಗಾಗಿ ಕೊಟ್ಟರು ಹೀಗೆ ವಿಷಯವೇನೋ ಸರಿಯಷ್ಟೆ ಇದನ್ನೆಲ್ಲಾ ನಿರ್ವಹಿಸುವದಕ್ಕೆ ನಮಗೆ ಸರಿಯಾದ ಸಹಾಯಕರ್ತರು ಯಾರು ಸಿಕ್ಕುವರು ಎಂಬ ಚಿಂತೆ ಉಂಟಾಯಿತು ದೊಡ್ಡ ಮನುಷ್ಯರಲ್ಲಿ ಆಲೋಚಿಸಲು ತಮಗಿಂತಲೂ ಯೋಗ್ಯರು ಯಾರೂ ಸಿಕ್ಕರು ನಮಗೆ ಘನ ಕೌನ್ಸಿಲರ್ ಆಗಿಯೂ ಮತ್ತು ಅಫಿಸಿಯೇಟಿಂಗ್ ಚೀಫ್ ಜಡ್ಜರವರಾಗಿಯೂ ಇರುವ ದೊಡ್ಡ ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಸಕಲ ವಿದ್ಯಾವಿಶಾರದರಾಗಿಯೂ ನಮ್ಮ ದೇಶದಲ್ಲಿಯೇ ಹುಟ್ಟಿ ಬೆಳೆದು ಎಲ್ಲರ ಕಷ್ಟಸುಖಗಳನ್ನೂ ಚೆನ್ನಾಗಿ ತಿಳಿದಿರುವಿರಿ ವಿವಿಧವಾದ ಸರ್ಕಾರದ ಉದ್ಯೋಗಗಳನ್ನು ಮಾಡಿ ಪ್ರತಿಯೊಂದು ಬಾಬಿನಲ್ಲಿಯೂ ಜನರ ಯೋಗಕ್ಷೇಮವನ್ನು ವಿಚಾರಿಸಿರುವಿರಿ ನಮ್ಮ ದೇಶದ ಏಳಿಗೆಯಲ್ಲಿ ಅತ್ಯಾಸಕ್ತಚಿತ್ತರಾಗಿರುವಿರಿ ಸ್ವದೇಶಾಭಿಮಾನವೂ, ಸ್ವಜನಾನುರಾಗವೂ ತಮ್ಮಲ್ಲಿ ಪರಿಪೂರ್ಣವಾಗಿ ಇವೆ ತಮ್ಮ ಇಂಗ್ಲೀಷು ಪಾಂಡಿತ್ಯ ಅನ್ಯಾದೃಶವಾದುದು ಕನ್ನಡ ಜ್ಞಾನವೂ ಅದಕ್ಕೆ ಮೀರಿದೆ ಇಂಗ್ಲೀಷಿನ ಸಕಲ ಚರಿತ್ರೆಗಳನ್ನೂ ನವವಿಕೆಗಳನ್ನೂ ಓದಿ ತಿಳಿದಿರುವಿರಿ ನಮ್ಮ ಮಾತೃಭಾಷೆಯಲ್ಲಿ ನಮಗೆ ತಿಳಿಯುವಂತೆ ಅವೆಲ್ಲವನ್ನೂ ಹೇಳಿಕೊಟ್ಟು ನಮ್ಮ ಸಭಾಕಾರ್ಯವನ್ನು ನಡಿಸುವಿರಿ ತಮ್ಮನ್ನು ಬಿಟ್ಟರೆ ಇನ್ನಾರೂ ಸಿಕ್ಕರು ಎಂಬ ಯೋಚನೆಗಳ ಮೇಲೆ ತಾವು ಒಪ್ಪುವಿರೋ ಇಲ್ಲವೋ ಎಂಬ ಭಯವು ಉಂಟಾಯಿತು ತಮ್ಮನ್ನು ಕೇಳಿಕೊಂಡನಂತರ ತಾವು ಒಪ್ಪಿಕೊಂಡದ್ದಕ್ಕಾಗಿ ನಮ್ಮ ಸಂತೋಷವು ಅಷ್ಟಿಷ್ಟಲ್ಲ ತಾವು ಅಗ್ರಾಸನಾಧಿಪತ್ಯವನ್ನು ವಹಿಸಿ ನಮಗೆ ಬುದ್ಧಿವಾದವನ್ನು ಕೊಟ್ಟು ನಮ್ಮ ಸಭಾಕಾರ್ಯಗಳು ಬಹಳ ಚೆನ್ನಾಗಿ ನಡೆಯುವಂತೆಯೂ, ಒಳ್ಳೇ ತೀರ್ಮಾನಗಳನ್ನು ಮಾಡಿಕೊಳ್ಳುವಂತೆಯೂ ಅನ್ಯೋನ್ಯ ಸಹಾಯ ಸಂಘಗಳ ವಿಷಯವಾಗಿ ಹೆಚ್ಚು ತಿಳುವಳಿಕೆ ಹುಟ್ಟುವಂತೆಯೂ [illegible]

...ನಮ್ಮ ಎಲ್ಲರ ಶ್ರಮಗಳೂ ಸಫಲವಾಗುವಂತೆಯೂ ಮಾಡಿಕೊಡಬೇಕೆಂದು ... ಎಲ್ಲರೂ ಪ್ರಾರ್ಥಿಸುವರು

ಶ್ರೀಮದ್ಯುವರಾಜರವರು ಎರಡನೆಯ ಮಹಾ ಸಭೆಯನ್ನು ... ಸ್ಥಳವನ್ನು ಕುರಿತು ಅಪ್ಪಣೆಕೊಡಿಸಿದ ವಾಕ್ಯಗಳೇನೆಂದರೆ—

ಶ್ರೀಮದ್ಯುವರಾಜರವರ ಭಾಷಣವು

ಮ|| ನಾರಸ್ಯಯಂಗಾರ್ಯರವರೇ, ಮ|| ನಂಜುಂಡಯ್ಯನವರೇ, ಮಹನೀಯರೇ,—ನೀವು ಹೇಳುವಂತೆ, ಕಳೆದ ವರ್ಷ ಇದೇ ದಸರಾ ಮಹೋತ್ಸವಕಾಲದಲ್ಲಿ ಇದೇ ಸ್ಥಳದಲ್ಲಿ ನಮ್ಮ ದೇಶದ ಪರಸ್ಪರ ಸಹಾಯಕ ಸಂಘಗಳ ಪ್ರಥಮ ಮಹಾಸಭೆಯು ನಡೆಯಿತು. ಆ ಕಾಲದಲ್ಲಿ ತಮ್ಮೆಲ್ಲರ ಆಗಮನದಿಂದ ನಮಗೆ ಉಂಟಾದ ಸಂತೋಷವನ್ನು ಸೂಚಿಸಿ ಸಭಾಕಾರ್ಯದಲ್ಲಿ ತಮ್ಮಗಳಿಗೆ ಪ್ರೋತ್ಸಾಹಕರವಾಗುವಂತೆ ಉಪನ್ಯಾಸಮಾಡಿದೆವಷ್ಟೆ. ಆಗ ತಾವುಗಳು ತಮ್ಮ ತಮ್ಮ ಅನುಭವಗಳನ್ನು ಹೋಲಿಸಿ ನೋಡಿ ಅಲ್ಲಿ ಸಂಭವಿಸಿದ ಸಂದೇಹಗಳನ್ನು ಪರಿಹರಿಸಿಕೊಂಡು ಪರಸ್ಪರ ಸಹಾಯಕ ಸಂಘಗಳನ್ನು ಕ್ರಮದಲ್ಲಿ ಅಭಿವೃದ್ಧಿಪಡಿಸಬೇಕಾಗಿರುವ ನಿಯಮಗಳನ್ನು ಚೆನ್ನಾಗಿ ವಿಚಾರಮಾಡಿದಿರಿ. ತಮ್ಮ ... ಅನುಕೂಲವಾದ ಅನ್ಯೋನ್ಯ ಸಹಾಯಕ ಸಂಘಗಳ ಪುರೋಭಿವೃದ್ಧಿಗೆ ಯಾವ ವಿಧವಾದ ಕುಂದಕವೂ ಬಾರದಂತೆಯೂ ಅವಶ್ಯಕವಾದ ಅನೇಕ ... ನಿರ್ಮಾಣಗಳನ್ನು ಏರ್ಪಡಿಸಿಕೊಂಡಿರಿ. ತಮ್ಮ ಚರ್ಚೆಗಳಿಂದ ಪ್ರಯೋಜನವು ಬಹಳವಾಗಿ ಉಂಟಾದುದು. ಪರಸ್ಪರ ಸಹಾಯಕ ಸಂಘಗಳ ಉದ್ದೇಶಗಳು, ತತ್ವಗಳು, ನಿಯಮಗಳು ಇವುಗಳ ವಿಷಯವಾದ ತಿಳುವಳಿಕೆಯು ನಮ್ಮ ... ಮೊದಲಿಗಿಂತ ಹೆಚ್ಚಾಗಿ ಉಂಟಾಯಿತು. ಮತ್ತು ದೂರ ದೂರದಲ್ಲಿರುವ ಗ್ರಾಮಗಳಿಗೂ ಕೂಡ ಈ ತಿಳುವಳಿಕೆಯು ಹರಡಿಕೊಳ್ಳುತ್ತಾ ಬಂದಿತು ... ಸಂಘಗಳಿಗೆ ಸೇರಿದ ಮೆಂಬರುಗಳು ಸತ್ಯತೆಯಿಂದ ನಡೆದುಕೊಳ್ಳಬೇಕೆಂಬ ... ನಂಬಿಕೆಗೆ ಅರ್ಹರಾಗಬೇಕೆಂತಲೂ ಪ್ರಯತ್ನಪಡುತ್ತಿರುವರು. ಸಹ... ವಾಗಿ ಏಕಮತದಿಂದ ತಮ್ಮ ತಮ್ಮ ಸಂಘಕಾರ್ಯಗಳನ್ನು ನಡೆಸುತ್ತಿರುವರು. ತಮ್ಮ ತಮ್ಮ ಕಸುಬುಗಳಿಗೆ ಬೇಕಾಗಿರುವ ಹಣವನ್ನು ಸುಲಭ ಬಡ್ಡಿಯ... ದೊರೆಯುವಂತೆ ಮಾಡಿಕೊಳ್ಳುತ್ತಿರುವರು. ಈ ಅಮೂಲ್ಯವಾದ ಫಲಗಳು ... ನ್ಯೋನ್ಯ ಸಹಾಯ ಸಂಘಗಳಿಂದ ಉಂಟಾಗುವುವೆಂದು ಜನಗಳು ತಿಳಿದುಕೊಂಡಿರುವರು.—ಇದೇ ಮೊದಲಾದ ಕಾರಣಗಳಿಂದ, ಕಳೆದ ವರ್ಷದಲ್ಲಿ ಪರಸ್ಪರ ಸಹಾಯ ಸಂಘಗಳು ಬಹಳ ಹೆಚ್ಚಾಗಿ ಅಭಿವೃದ್ಧಿಯಾದುವು. ಸಂಘಗಳು 111 ರಿಂದ 217 ಆಗಿವೆ. ಮೆಂಬರುಗಳು 10,000 ದಿಂದ 14,000 ಕ್ಕೆ ಹೆಚ್ಚಿರುವರು. ಮೂಲಧನವು 1 ಲಕ್ಷ ರೂಪಾಯಿಗಳಿಂದ 4 ಲಕ್ಷ ರೂಪಾಯಿಗಳಿಗೂ ... ಜಮಾ ಖರ್ಚು 21 ಲಕ್ಷ ರೂಪಾಯಿಗಳಿಂದ 40 ಲಕ್ಷ ರೂಪಾಯಿವರೆಗೂ ಏರಿರುತ್ತದೆ. ಇವುಗಳಿಗಿಂತಲೂ ಹೆಚ್ಚಾಗಿ ನಮಗೆ ಸಂತೋಷವನ್ನುಂಟುಮಾಡುವ ವಿಷಯವು ಯಾವುದೆಂದರೆ ಅದೇ ನಂಬಿಕೆ ಅನ್ಯೋನ್ಯ ಸಹಾಯ ... ಗಳಲ್ಲಿ ಇರಬೇಕಾದ ಗುಣಗಳೂ ಕೂಡ ಅಭಿವೃದ್ಧಿಹೊಂದು... ಈ ಅಭಿವೃದ್ಧಿಯು ಬೆಂಗಳೂರು, ಮೈಸೂರು, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ವಿಶೇಷವಾಗಿದೆ. ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಈ ಸಂಘಗಳನ್ನು ಸ್ಥಾಪಿಸಿಕೊಳ್ಳಬೇಕೆಂಬ ಕುತೂಹಲವು ಈಚೆಗೆ ... ಇತರ ಡಿಸ್ಟ್ರಿಕ್ಟುಗಳು ಈ ವಿಷಯದಲ್ಲಿ ಇನ್ನೂ ಹಿಂದಾಗಿವೆ. ... ದೇಶದಲ್ಲಿ 16,000 ಗ್ರಾಮಗಳಿವೆ. ಅವುಗಳ ಪೈಕಿ 1,500 ಗ್ರಾಮಗಳಿಗೆ ... ಈ ಸಂಘಗಳು ದೊರಕಿವೆ. ಅನ್ಯೋನ್ಯ ಸಹಾಯಕ ಸಂಘಗಳು ಸಮರ್ಥವಾದ ವ್ಯಾಪಾರಿಗಳಿಗೂ ಕೈಗಾರಿಕರಿಗೂ ಬಂಡವಾಳವನ್ನು ಒದಗಿಸುವುವು ... ಶೈಲಿ ಜನರು ಸುಲಭ ಬಡ್ಡಿಯಲ್ಲಿ ಸಾಲವನ್ನು ಹೊಂದುವರು. ಸಾಲ ತೆಗೆದುಕೊಳ್ಳುವರು ಅವರ ನಾಣ್ಯವನ್ನೂ ಗೌರವವನ್ನೂ ಸತ್ಯತೆಯನ್ನೂ ... ಕೊಳ್ಳುವ ಮೆಂಬರುಗಳು ಅನ್ಯೋನ್ಯ ಕಷ್ಟಸುಖಗಳನ್ನು ತಿಳಿದುಕೊಂಡು ... ಸಾಲಿಯಾಗಿ ನಂಬಿಕೆಯಿಂದ ಉತ್ತರವಾದಿತ್ವವಿರುವಂತೆ ನಡೆದುಕೊಳ್ಳುವರು ... ತಮ್ಮ ಸಂಘವು ಹೆಸರುವಾಸಿಯಾಗಬೇಕೆಂದು ಯತ್ನಿಸುವರು. ... ಸಮಯದಲ್ಲಿ ಸಾಲ ತೆಗೆದುಕೊಳ್ಳುವಾಗ ಹಿಡಿಯುವ ಕಷ್ಟಗಳು ಅವರಿಗೆ ಇಲ್ಲ. ಹೆಚ್ಚು ಹಣ ಕೊಡುವ ಪದ್ಧತಿಯು ಇಲ್ಲ. ಮೊದಲಿನಂತೆ ಶೇಕಡ ಮೂವತ್ತರಿಂದ ... 2 ರೂಪಾಯಿವರೆಗೆ ಬಡ್ಡಿ ತೆರಬೇಕಾಗಿರುವಲ್ಲಿ ನಮ್ಮ ಸಂಘಗಳ ... ಈ ವರ್ಷ 61 ಲಕ್ಷ ರೂಪಾಯಿಗಳ ಸಾಲಗಳು 14,000 ಜನಗಳಿಗೆ ... ರೂಪಾಯಿಗೆ 1 ರೂಪಾಯಿ ಬಡ್ಡಿಯು ಉಳಿದುವು. ಈ ಮೂಲಕವಾಗಿ ... ಯಲ್ಲಿ 30,000 ರೂಪಾಯಿಗಳು ಉಳಿದುವು. ಹೀಗೆ ಕಾಣಬರುವ ... ಸಂಘಗಳು ಇನ್ನೂ ಹತ್ತುಪಾಲು ನಮ್ಮ ದೇಶದಲ್ಲಿ ಹೆಚ್ಚುವುದಕ್ಕೆ ಅವಕಾಶವಿದೆ. ಪ್ರತಿಯೊಂದು ಗ್ರಾಮದಲ್ಲೂ ಕೊನೆಪಕ್ಷ ಹತ್ತಾರು ಗ್ರಾಮಗಳ ... ದಲ್ಲಾದರೂ ಒಂದು ಸಂಘ ಇರಬೇಕು. ಅವುಗಳಲ್ಲಿ ನಡಿಸಬೇಕಾದ ... ಹೊಸ ಕಸಬಿನ ಅನ್ಯೋನ್ಯ ಸಹಾಯ ಸಂಘಗಳ ನಿಯಮಗಳನ್ನು ... ಕಾರ್ಯದಕ್ಷತೆಯು ಹೆಚ್ಚಿಸಿಕೊಳ್ಳಬೇಕು. ನಾವು ಅಲ್ಪ ಸಂತೋಷಿಗಳು ... ಬೇಕಾದ ಅನುಕೂಲಗಳನ್ನು ಸಲ್ಪದಲ್ಲಿಯೇ ಒದಗಿಸಿಕೊಂಡು ತೃಪ್ತಿಪಟ್ಟಿದ್ದೇವೆ. ಹೀಗಿದ್ದರೂ ಕೂಡ ಹಲವು ವಿವಿಧವಾದ ವಿಷಯಗಳಲ್ಲಿ ನಮ್ಮ ... ಅಭಿವೃದ್ಧಿಯನ್ನು ಹಾರೈಸುವೆವು. ಈ ವಿವಿಧ ವಿಷಯಗಳಲ್ಲಿಯೂ ಅನ್ಯೋನ್ಯ ಸಹಾಯ ಸಂಘಗಳು ನಮಗೆ ಸಹಕಾರಿಗಳಾಗುವುವು. ಯಾವ ಯಾವ ... ಪ್ರಯೋಜನಗಳನ್ನು ಪಡೆದು ನಾವು ಉನ್ನತಸ್ಥಿತಿಗೆ ಬರುವುದು ... ಸಂಪದಲ್ಲಿ ಎಷ್ಟು ಚೆನ್ನಾಗಿ ವಿಮರ್ಶಿಸಿ ಎಷ್ಟು ವಿಸ್ತರಣೆಯಾಗಿ ಈ ಸಂಘ... ಬಹುದೆಂಬುವದಕ್ಕೆ ಈಗ ತಾವು ಮಾಡಿಕೊಂಡಿರುವ ವಿಷಯಸೂಚಕ ... ಪಟ್ಟಿಯನ್ನು ಸ್ವಲ್ಪಮಟ್ಟಿಗೆ ನೋಡಿದವರೇ ಸಾಕ್ಷಿಗಳಾಗಿ ಇವೆ. ಈ ಸಂಘ... ಸಭೆಯು ತಮ್ಮ ಕೃಪೆಯಲ್ಲೇ ಇರುತ್ತದೆ. ಬಹಳ ದೂರದಿಂದ ಅನೇಕ ... ದ 100 ಸಂಘಗಳಿಗೆ ಪ್ರತಿನಿಧಿಗಳಾಗಿ ಸುಮಾರು 100 ಜನಗಳು ಬಂದಿರುವುದನ್ನು ನೋಡುವುದರಿಂದ ಬಹಳ ಸಂತೋಷಿಸುತ್ತೇವೆ. ತಾವು ನಡಸುವ ... ಕಳೆದ ವರ್ಷಕ್ಕಿಂತಲೂ ಚೆನ್ನಾಗಿ ಪರ್ಯಾಲೋಚಿತವಾಗಿಯೂ ... ಉಪಯೋಗಕರವಾಗಿಯೂ ನಡವಳಿಕೆಯಲ್ಲಿ ತರತಕ್ಕದ್ದಾಗಿಯೂ ಆಗು... ನಂಬುತ್ತೇವೆ.— ಅನ್ಯೋನ್ಯ ಸಹಾಯ ಸಂಘಗಳು ನೆಲೆಗೊಂಡಿರುವ ... ದೇಶಗಳಲ್ಲಿಯೂ ಇಂಥಾ ಸಭೆಯು ಪ್ರತಿವರ್ಷವೂ ನಡೆಯುತ್ತಿದೆ. ಆ... ಸಂಬಂಧವಾದ ಉಪನ್ಯಾಸಗಳು ಓದಲ್ಪಡುವುವು ಮತ್ತು ವಿಚಾರಣೀಯ ವಿಷಯಗಳು ಚರ್ಚೆಯಾಗಿ ನಿರ್ಮಾಣಿಸಲ್ಪಡುವುವು. ಅನ್ಯೋನ್ಯ ಸಂಘಗಳು ಮುಂದಿನ ವರ್ಷಕ್ಕೆ ಯಾವ ರೀತಿಯಲ್ಲಿ ನಡೆದುಕೊಂಡು ... ಹೊಂದಬೇಕೆನ್ನುವ ಅದನ್ನು ಈ ಸಭೆಯು ನಿಷ್ಕರ್ಷಿಸುವುದು. ಮುಂಬ... ಮತ್ತು ಇತರರಲ್ಲಿಯೂ ಈ ಸಂಘಗಳ ಪ್ರಯೋಜನವೂ ನಿಯಮವೂ ತಿಳಿಯುವಂತೆ ಮಾಡುವುದು. ಆದ್ದರಿಂದ ವರ್ಷಂಪ್ರತಿವರ್ಷದಲ್ಲಿಯೂ ಇಂಥ ಸಭೆಯನ್ನು ನಡೆಸುತ್ತಾ ಬರುವುದಲ್ಲದೆ ಅದಕ್ಕೆ ತಕ್ಕ ಒಂದು ಶಾಶ್ವತವಾದ ಆಕೃತಿಯನ್ನು ಕಲ್ಪಿಸುವಿರೆಂದು ಕೋರುತ್ತೇವೆ.—ತಮ್ಮ ಚರ್ಚೆಗಳು ಎಲ್ಲರ ಶ್ರೇಯಸ್ಸನ್ನೂ ಸಂಪತ್ತನ್ನೂ ಹೆಚ್ಚಿಸುವುವು. ಆದುದರಿಂದ ಈ ಸಭಾಕಾರ್ಯದಲ್ಲಿ ನಮ್ಮ ಅಭಿಮಾನವೂ ಉತ್ಸಾಹವೂ ಸಂಪೂರ್ಣವಾಗಿವೆ. ಈ ಸಭೆಯ ಉಪಕ್ರಮವನ್ನು ನಡೆಸುವುದಕ್ಕೋಸ್ಕರ ತಮ್ಮ ಪ್ರಾರ್ಥನೆಯನ್ನು ಸಂತೋಷದಿಂದ ಅಂಗೀಕರಿಸುತ್ತೇವೆ. ತಮ್ಮೆಲ್ಲರಿಗೂ ಸುಸ್ವಾಗತವನ್ನು ಬಯಸುವೆವು. ಶ್ರೇಯೋಭಿವೃದ್ಧಿ ಉಂಟಾಗಲೆಂದು ಹಾರೈಸುವೆವು.

ಆ ಮೇಲೆ ಮೆ|| ನಂಜುಂಡಯ್ಯನವರು ಅಧ್ಯಕ್ಷಭಾಷಣವನ್ನು ಮೊದಲು ಇಂಗ್ಲಿಷಿನಲ್ಲಿ ಓದಿ, ಬಳಿಕ ಅದರ ಸಾರಾಂಶವನ್ನು ಕನ್ನಡದಲ್ಲೂ ತಿಳಿಸಿದರು. ಈ ಭಾಷಣವು ದೀರ್ಘವಾದದ್ದಾದರೂ ಬಹು ಸ್ವಾರಸ್ಯವೂ ಅತ್ಯಂತ ಉಪಯುಕ್ತವೂ ಆಗಿತ್ತು. ಅನ್ಯೋನ್ಯ ಸಹಾಯ ಸಂಘದ ಪೂರ್ವೋತ್ತರವೂ ಅದರ ಆಶಯವೂ ಅದರಿಂದುಂಟಾಗತಕ್ಕ ಫಲಗಳೂ ಎಲ್ಲಾ ಬಹಳ ಚೆನ್ನಾಗಿ ಚರ್ಚಿಸಲ್ಪಟ್ಟಿರುತ್ತವೆ. ಅವರಲ್ಲೆಲ್ಲಾ ಅತ್ಯಂತ ವಿಶೇಷವೆಂದು ಕಂಡುಬಂದ ಕಡೆಯ ಭಾಗವನ್ನು ಇಲ್ಲಿ ಪ್ರಕಟಿಸುವೆವು —

ಈಚೆಗೆ 5-6 ವರ್ಷಗಳಿಂದ ನಮ್ಮ ಸೀಮೆಯಲ್ಲಿ ಹುಟ್ಟಿರುವ ಅನ್ಯೋನ್ಯ ಸಹಾಯ ಸಂಘಗಳಲ್ಲಿ ಮೊದಲಿನ ಬ್ಯಾಂಕುಗಳ (ವ್ಯವಸಾಯದ) ಏರ್ಪಾಟಿನಲ್ಲಿದ್ದ ದೋಷಗಳನ್ನು ಕೂಡಿದಮಟ್ಟಿಗೆ ತಪ್ಪಿಸಲಾಗಿದೆ. ವ್ಯವಸಾಯದ ಬ್ಯಾಂಕುಗಳಿಗೆ ಸೇರಿದ್ದ ಅನೇಕ ಲಕ್ಷ ರೂಪಾಯಿಗಳ ಮೂಲಧನದಲ್ಲಿ ಪ್ರಾಯಶಃ ಪೂರ್ವೆಲ್ಲಾ ಸರ್ಕಾರದಿಂದ ಸಾಲವಾಗಿ ಕೊಟ್ಟದ್ದೇ ಆಗಿತ್ತು. ಈಗ ಇರುವ 208 ಸಂಘಗಳಿಗೆ ಮೂಲಧನವು 6¼ ಲಕ್ಷ ರೂಪಾಯಿ ಇರುವುದು. ವರ್ಷದಲ್ಲಿ 15 ಲಕ್ಷದ ವರೆಗೂ ಲೇವಾದೇವಿಗಳು ನಡೆಯುವುವು. ಇದಕ್ಕೆಲ್ಲಾ ಸರ್ಕಾರದಿಂದ ಕೊಟ್ಟಿರುವುದು 700 ರೂಪಾಯಿ ಮಾತ್ರವಾಗಿದೆ.—ಸಾಲವನ್ನು ಪಡೆಯಬೇಕಾದವರು ಅದನ್ನು ಬಡ್ಡಿಯ ಸಹಿತವಾಗಿ ತಕ್ಕ ಕಾಲದಲ್ಲಿ ವಾಪಸು ಕೊಡುವ ಶಕ್ತಿಯುಳ್ಳವರೆಂಬ ಘನತೆಯನ್ನುಂಟುಮಾಡುವವರಾಗಿರಬೇಕು. ಭಾಗ್ಯವಂತರಿಗೆ ಸಾಲ ಸುಲಭವಾಗಿ ಅವರ ಮಾತಿನ ನಂಬಿಕೆಯ ಮೇಲೆಯೇ ಹುಟ್ಟುವುದು. ಬಡವರಿಗೆ ಸಾಲವು ಅತ್ಯಂತ ಅವಶ್ಯಕವಾಗಿದ್ದರೂ ಸಾಲ ಹುಟ್ಟುವುದು ಕಷ್ಟವಾಗಿರುವುದು. ಒತ್ತೆಯಾಗಿ ಕೊಡುವುದಕ್ಕೆ ತಕ್ಕ ಒಡವೆ ವಸ್ತುಗಳಿರುವುದಿಲ್ಲ. ವಸ್ತುವಿಲ್ಲದೆ ಇವರ ಮಾತಿನ ನಂಬುಗೆ ಸಾಲದಾಗಿರುವುದು. ಒಂದೇ ಗ್ರಾಮದಲ್ಲಿ ಅಥವಾ ಸಂಘದಲ್ಲಿ ಸಮಾನರಾದ ಅನೇಕರಿರಲು, ಅವರೆಲ್ಲರಿಗೂ ಒಂದೇ ಸಾರಿ ಸಾಲ ಬೇಕಾಗಲಾರದು. ಒಬ್ಬರಿಗೆ ಸಾಲ ಬೇಕಾದಾಗ ಮತ್ತೊಬ್ಬರು ಒತ್ತಾಸೆಯಾದರೆ ಇಬ್ಬರೂ ಸೇರಿದ ಒಟ್ಟು ಜವಾಬ್ದಾರಿಯು ಮೊದಲು ಬೇಕಾದ ವರ್ತಕರಿಗೆ ತಕ್ಕ ಆಧಾರವಾಗುವುದು. ಹೀಗೆ ಸಾಲ ಬೇಕಾದಾಗಲೆಲ್ಲಾ ಒಬ್ಬರಿಗೊಬ್ಬರು ಹೊಣೆಯಾಗುವುದಕ್ಕೆ ಬದಲಾಗಿ, ಸರಿಯಾಗಿ ಪರಸ್ಪರ ನಂಬುಗೆಯುಳ್ಳವರು ಅನೇಕರು ಒಟ್ಟಾಗಿ ಸಂಘವನ್ನು ಮಾಡಿಕೊಳ್ಳುವುದು ಅನುಕೂಲವಾಗಿರುವುದು. ಇವರೆಲ್ಲರೂ ಒಟ್ಟಾಗಿ ಸೇರಿ ಜವಾಬ್ದಾರರಾಗುವುದರಿಂದ ಈ ತರದ ಸಂಘದವರಿಗೆ ಹೊರಗಿನವರು ಸಮೃದ್ಧಿಯಾಗಿ ಹಣವನ್ನು ಸಾಲವಾಗಿ ಕೊಡಬಹುದು. ಇದಲ್ಲದೆ ಹಣವು ನಷ್ಟವಾಗಲಾರದ ಭದ್ರತೆಯು ಹೆಚ್ಚಾಗುವುದರಿಂದ ಸುಲಭವಾದ ಬಡ್ಡಿಗೆ ಹಣವು ದೊರೆಯುವುದು. ಸಂಘಗಳಿಗೆ ಸಾಮಾನ್ಯರ ಫಾಯಿದೆಯಲ್ಲದೆ ಬೇರೆ ಫಾಯಿದೆಯನ್ನು ಸಂಪಾದಿಸಬೇಕೆಂಬ ಉದ್ದೇಶವಿಲ್ಲದಿರುವುದರಿಂದ ಮೆಂಬರುಗಳಿಗೆ ಸಾಲ ಬೇಕಾದಾಗ ಸುಲಭವಾಗಿ ದೊರೆಯುವುದು.— ಅನೇಕ ದೇಶಗಳಲ್ಲಿ ಈ ಸಂಘಗಳು ಏರ್ಪಟ್ಟು ತಮ್ಮ ಉಪಜೀವನಕ್ಕೆ ಸ್ಥಿರವಾದ ಉಪಪತ್ತಿಯಿಲ್ಲದ ಕೂಲಿಯಿಂದ ಜೀವಿಸುವ ಬಡಜನರಿಗೂ, ಸ್ವಲ್ಪ ಸ್ವಲ್ಪ ಜಮೀನು ಮಾಡಿಕೊಂಡಿರುವ ರೈತರಿಗೂ ಇದರಿಂದ ಬಹಳ ಉಪಪತ್ತಿಯುಂಟಾಗಿದೆ. ಕೆಲವರು ಕೂಲಿಯ ಜನರು ಸೇರಿ ಅನ್ಯೋನ್ಯ ಸಹಾಯಕ್ಕೋಸ್ಕರ ಆ ಸಂಘಗಳನ್ನು ಮೊದಲು ಕೊಂಚಕೊಂಚವಾಗಿ ತಮಗೆ ಬೇಕಾಗುವ ಪದಾರ್ಥಗಳನ್ನು ವ್ಯಾಪಾರದಕ್ಕೆ ಪಕ್ರಮಿಸಿದರೆ ಅಂತಹ ಚಿಲ್ಲರೆ ಅಂಗಡಿಗಳು ಈಗ ಬೆಳೆದು, ಅನೇಕ ಲಕ್ಷ ಮೆಂಬರುಗಳನ್ನು ಸೇರಿಸಿಕೊಂಡು ಅನೇಕ ಸ್ಥಳಗಳಲ್ಲಿ ದೊಡ್ಡ ದೊಡ್ಡ ಅಂಗಡಿಗಳನ್ನೂ ಕಾರ್ಖಾನೆಗಳನ್ನೂ ಸ್ಥಾಪಿಸಿಕೊಂಡು ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳ ವ್ಯಾಪಾರವನ್ನು ನಡೆಸುತ್ತಿವೆ. ನಮ್ಮ ಸೀಮೆಯಲ್ಲಿ ಈ ಸಂಘಗಳು ಮೊದಲನೆಯ ವರ್ಷ (ಅಂದರೆ 1905-6 ನೆ ಇಸವಿ) ಇದ್ದುವು 6, ಮೆಂಬರುಗಳು 303, ಮೂಲಧನ ರೂ 14,211, ಈಗ 208 ಸಂಘಗಳಿಗೆ ಇರುವ ಮೆಂಬರುಗಳು 13,115 ಮಂದಿ. ಮೂಲಧನ ರೂ 6,71,112 ಆಗಿವೆ. ಹೀಗೆ ಅಭಿವೃದ್ಧಿಯಾಗಿರುವುದನ್ನು ನೋಡಿದರೆ ಈ ಸಹಾಯ ಸಂಘಗಳು ಇಷ್ಟರಲ್ಲಿಯೇ ನಿಲ್ಲವು. ಈ ದೇಶದಲ್ಲೆಲ್ಲಾ ಹರಡಿಕೊಂಡು ಶ್ರೀಮನ್ ಯುವರಾಜರವರು ಅಪ್ಪಣೆ ಕೊಡಿಸಿದಂತೆ ಪ್ರತಿ ಗ್ರಾಮದಲ್ಲಿಯೂ ಸಣ್ಣ ಗ್ರಾಮಗಳ ಪ್ರತಿ ಗುಂಪಿನಲ್ಲಿಯೂ ಒಂದೊಂದಿರುವಂತೆ ಆಗುವವೆಂಬುವದಕ್ಕೆ ಸಂದೇಹ ತೋರುವುದಿಲ್ಲ. ಉಪಪತ್ತಿ ಸಾಲದೆ ಕಷ್ಟಪಡುವ ಅನೇಕ ರೈತರಿಗೂ ಇತರ ಜನರಿಗೂ ವಿಶೇಷವಾಗಿ ಪ್ರಯೋಜನಕಾರಿಯಾಗಿ ಅವರ ಪರಸ್ಪರ ಮೈತ್ರಿಯನ್ನೂ ಏಕಮತವನ್ನೂ ವೃದ್ಧಿಮಾಡಿ ಸ್ವಲ್ಪವಾದರೂ ಅನಿಷ್ಟಮಿಶ್ರವಿಲ್ಲದೆ ಅವರಲ್ಲಿ ಸೇರುವ ಸರ್ವರಿಗೂ ಶ್ರೇಯಸ್ಕರವಾಗಿರುವುದರಿಂದ ಈ ಸಂಘಗಳ ವಿಷಯವಾಗಿ ಸರ್ವದಾ ಪ್ರಜಾಸಂಪದಭಿವೃದ್ಧಿನಿರತರಾದ ನಮ್ಮ ಶ್ರೀಮನ್ ಮಹಾರಾಜರವರು ಆತ್ಮಾದರವುಳ್ಳವರಾಗಿರುವರು. ತದ್ಭ್ರಾತೃಗಳಾದ ಗುಣಪೂರ್ಣರಾದ ನಮ್ಮ ಯುವರಾಜರವರು ಅವರ ಪ್ರತಿನಿಧಿಗಳಾಗಿ ಇಲ್ಲಿ ಸದಯ ದಯಮಾಡಿ ನಮಗೆಲ್ಲಾ ಪ್ರೋತ್ಸಾಹ ಉಂಟಾಗುವಂತೆ ಸದ್ಭಾವವನ್ನು ಇಷ್ಟು ವಿಶ್ವಾಸದಿಂದ ತಿಳಿಸಿರುವದಕ್ಕಾಗಿ ನಾವೆಲ್ಲರೂ ಅತ್ಯಂತ ಕೃತಜ್ಞರಾಗಿರಬೇಕೆಂದು ನನ್ನ ಅರಿಕೆಯಾಗಿದೆ.

ತಾಲ್ಲೋಕು ವರ್ತಮಾನಗಳು

ಹುಣಸೂರು.—ಇಲ್ಲಿ 2-3 ದಿವಸಗಳಿಂದ ದೊಡ್ಡ ಮಳೆ ಬಿದ್ದು, ಹೆಮ್ಮೆಗಳಲ್ಲಿರುವ ರೈತಾಪಿ ಜನಗಳಿಗೆ ಬಹಳ ತೊಂದರೆಯಾಯಿತು. ಅಕ್ಕಪಕ್ಕದ ಬಾಜು ಗ್ರಾಮಗಳಲ್ಲಿ ಹೆಮ್ಮೆಗಳಿಂದ ಜನಗಳು ಊರಿಗೆ ಹೋಗುತ್ತಿದ್ದಾರೆ.— ಈ ಟವನ್ನಿಂದ ಹೊರಗೆ ಹೊರಟಿದ್ದ ಅಗಸಾಲಿಗರ ಮನೆಗೆ ತಾ 12 ರಲ್ಲಿ ಕಳ್ಳರು ನುಗ್ಗಿ ಕೆಲವು ಸಾಮಾನುಗಳನ್ನು ಸಾಗಿಸಿಕೊಂಡು ಸೇತುವೆ ಬಳಿ ಇರುವ ಸಾರಾಯಿನ ಅಂಗಡಿ ಬೀಗ ಮುರಿದು ಒಳಕ್ಕೆ ನುಗ್ಗಲು ಪ್ರಯತ್ನಪಟ್ಟಾಗ ಮಾಲೀಕರು ಎಚ್ಚರವಾಗಿದ್ದದ್ದನ್ನು ನೋಡಿ ಕಳ್ಳರು ಓಡಿಹೋದರು. ಅಲ್ಲಿಗೆ ಒಳ್ಳೆ ಪೋಲೀಸ್ ಕಾವಲು ಇಟ್ಟರೆ ಕ್ಷೇಮವಾದೀತು.

ಹಾಸನ.—ಈ ಊರಿನಲ್ಲಿ ಈಗ ಮಳೆ ಇಲ್ಲದ ದಿನವೇ ಅಪರೂಪವಾಗಿದೆ. ಗುಡಿಸಲುಗಳಲ್ಲಿ ವಾಸಮಾಡುವವರ ಪಾಡು ಬಹಳ ಕಷ್ಟಕರವಾಗಿದೆ. ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿ ಬಿದ್ದು ಹರಿಯುತ್ತಿವೆ. ಈ ಊರಿನ ದೇವಿಗೆರೆಯು ಕೋಡಿ ಬಿದ್ದಿತ್ತು. ಪಕ್ಕದಲ್ಲಿರುವ ಕೊಳವು ತುಂಬಿ ತುಳುಕುತ್ತಿದ್ದುದರಿಂದ ಬಹುಕಾಲದಿಂದ ಮುಚ್ಚಿಹೋಗಿದ್ದ ಇದರ ತೂಬನ್ನು ಅಗೆದು ಜಲಮಾರ್ಗವನ್ನು ಶೋಧಿಸಿ ನೀರನ್ನು ಬಿಡಬೇಕಾಯಿತು. ಈ ಕೊಳದಲ್ಲಿದ್ದ ಮೀನುಗಳು ಸಾಯುತ್ತಾ ಇವೆ. ಯಾರೋ ವಿಷ ಹಾಕಿರಬೇಕೆಂದು ಹೇಳುತ್ತಾರೆ. ಸಿವಿಲ್ ಸರ್ಜನ್ ರಾವ್ ಮೆ|| ಆಶೀರ್ವಾದಂಯವರು ಆ ನೀರನ್ನು ಪರೀಕ್ಷೆಗೋಸ್ಕರ ಬೆಂಗಳೂರಿಗೆ ಕಳುಹಿಸಿದಾರೆ. ಈಚೆಗೆ ಮೀನುಗಳು ಸಾಯದೇಲೂ, ಜನಗಳು ಅದೇ ನೀರನ್ನು ಉಪಯೋಗಿಸುತ್ತಿದ್ದರೂ ನಿರ್ಬಾಧಕವಾಗಿರುವದರಿಂದಲೂ ಹೊಸ ನೀರೇ ಅದಕ್ಕೆ ಕಾರಣವಾಗಿರಬಹುದು. ಚನ್ನಪಟ್ಟಣದ ಕೆರೆಯು ಕಳೆದ ಶನಿವಾರ ರಾತ್ರಿ ಸುರಿದ ದೊಡ್ಡ ಮಳೆಯಲ್ಲಿ ಕೋಡಿ ಬಿದ್ದಿತು. ಇಷ್ಟಾದರೂ ಧಾರಣೆವಾಸಿಗಳು ಕ್ಷಾಮಸೂಚಕವಾಗಿವೆ. ಅಕ್ಕಿ 5½-6 ಸೇರು, ರಾಗಿ 14-16 ಸೇರು ಇವೆ. ವಿಶೇಷವಾದ ಶೈತ್ಯದಿಂದ ಅಲ್ಲಲ್ಲಿ ಜನಗಳು ನೆಗಡಿ ಕೆಮ್ಮುಗಳಿಂದ ತೊಂದರೆ ಪಟ್ಟು, ಮಳೆ ಸದ್ಯ ನಿಂತರೆ ಸಾಕೆಂದು ಜಿಗುಪ್ಸೆ ಪಡುತ್ತಿರುವರು.

ತರೀಕೆರೆ.—ತಾಲ್ಲೂಕಾಮಳೆ ಮಳೆಯು ಸಮೃದ್ಧಿಯಾಗಿ ಪೈರು ಚನ್ನಾಗಿವೆ. ಆದರೆ ದಿನಸಿ ಧಾರಣೆ ಮಾತ್ರ ತುಂಬಾ ಚಡಾವಾಗಿರುತ್ತೆ. ಇಲ್ಲಿನ ಚಿಕ್ಕೆರೆಯಲ್ಲಿ ಇದುವರಿವಿಗೂ ನೀರಿಲ್ಲದೆ ಕುಡಿಯುವದಕ್ಕೆ ತೊಂದರೆಯಾಗಿತ್ತು. ಈಗ 4-5 ಸಲ ಕೆರೆ ತುಂಬಿ ಕೋಡಿಬಿತ್ತು. ಕೋಡಿಯ ಕಲ್ಲುಗಳು ಕಿತ್ತುಹೋಗಿರುವದರಿಂದ ಸದಾ ನೀರು ಹರಿದುಹೋಗುತ್ತಿದೆ. ತಾಲ್ಲೂಕು ಆಫೀಸರು ದಯವಿಟ್ಟು ಇದನ್ನು ರಿಪೇರಿಮಾಡಿಸದಿದ್ದಲ್ಲಿ ಕಳೆದ ಬೇಸಿಗೆಯಂತೆ ನೀರಿನ ತೊಂದರೆಯುಂಟಾಗುತ್ತದೆ. ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುವಂತೆ ಕಲ್ಲತ್ತಿಗಿರಿ ನಾಲೆ ಜಾಗ್ರತೆಯಾಗಿ ತಯಾರಾದಲ್ಲಿ ನೀರಿನ ಕಷ್ಟವೇ ತಪ್ಪೀತು.—ಈ ಟವನ್ನಲ್ಲಿ ಸ್ಯಾನಿಟರಿ ರೂಲ್ಸಿನಂತೆ ಅನೇಕ ಸಂದಿ ಬೀದಿಗಳನ್ನು ಮಾಡಿಸಿ ಸುಮಾರು 5-6 ವರ್ಷಗಳಾಗಿರಬಹುದು. ಇವು ರಿಪೇರಿ ಇಲ್ಲ. ಕಾಲಿ ಮುಳ್ಳು ಪುರುಚಿ, ವಗೈರೆ ಕಟ್ಟೆ ಲಾಂಟಾನಾ ಗಿಡಗಳು ಬೆಳೆದು ಇವುಗಳ ಮರೆಯಲ್ಲಿ ಜನರು ಹೇಸಿಕೆಮಾಡುವುದರಿಂದ ದುರ್ವಾಸನೆ ಉಂಟಾಗುತ್ತದೆ. ಈ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಗಮನಕೊಡತಕ್ಕದ್ದು. ಒಳ್ಳೆಯದು. ಟವನ್ನಲ್ಲಿ 4-6 ದಿವಸಗಳಿಂದ ಕಿರುಬನು ರಾತ್ರಿ ಹೊತ್ತು ಸುತ್ತುವದೆಂತ ಕೆಲವರು ಹೇಳುತ್ತಾರೆ. ಈ ಭಾಗದಲ್ಲಿ ಪೋಲೀಸಿನವರು ಜಾಗ್ರತೆ ಇಡಬೇಕು.—ಇಲ್ಲಿನ ಮಹಮ್ಮದೀಯರ ರೀಡಿಂಗ್ ರೂಮು ಅಭಿವೃದ್ಧಿಸ್ಥಿತಿಯಲ್ಲಿದೆ.—ಈ ಊರಲ್ಲಿ ವಿಜಯದಶಮಿಯಿಂದ 5-6 ದಿನ ಕುಸ್ತಿ ಕಸರತ್ತು ವಗೈರೆ ನಡಿಸಲು 1-2 ತಿಂಗಳಿಂದ ಗರಡಿಯವರು ತಯಾರಾಗುತ್ತಲಿದಾರೆ.

ಕೊರಟಗೆರೆ.—ಇಲ್ಲಿ ಮಳೆ ತಕ್ಕಮಟ್ಟಿಗೆ ಆಗಿ ಕೆರೆ ಕಟ್ಟೆಗಳು ತುಂಬಿವೆ. ತರಿ, ಖುಷ್ಕಿ ಬೆಳೆಗಳು ಬಹಳ ಚೆನ್ನಾಗಿವೆ. ಇಲ್ಲಿನ ಸುವರ್ಣಮುಖೀ ನದಿಯಲ್ಲಿ ಯಾವಾಗಲೂ ವಿಶೇಷವಾಗಿ ನೀರು ಹರಿಯುತ್ತಲೇ ಇದೆ. ಕಾಲರಾ ಗಲಾಟೆಯು ಸಂಪೂರ್ಣವಾಗಿ ನಿಂತುಹೋಯಿತು. ಇಲ್ಲಿನ ಸಂತೆಯೂ ತಕ್ಕಮಟ್ಟಿಗೆ ಸೇರುತ್ತದೆ. ಧಾರಣೆವಾಸಿಗಳು ಇಳಿಯುತ್ತಾ ಬಂದಿದೆ.—ಮೆ|| ಬಹಾದುರ್ ಸಾಹೇಬರು ತಮ್ಮ ಮತದವರಿಗೂ, ಇನ್ನೂ ಇತರ ಅಂದರೆ ತಮ್ಮಲ್ಲಿ ಊಟಮಾಡತಕ್ಕ ಬಡವರಿಗೂ ಸಹ ಇಲ್ಲಿನ ಜುಮ್ಮಾ ಮಸೀದಿಯಲ್ಲಿ ಸಂತರ್ಪಣೆ ನಡಿಸಿದರು.—ಇದೇ ತಾಲ್ಲೂಕಿಗೆ ಸೇರಿದ ಅಕ್ಕಿರಾಂಪುರವೆಂಬ ಗ್ರಾಮದಲ್ಲಿ ಶಂಕರಭಟ್ಟರ ಮಗಳು ಸುಮಾರು 10-12 ವಯಸ್ಸಿನ ಹುಡುಗಿಯನ್ನು ಮಧ್ಯಾಹ್ನ ಸುಮಾರು 1 ಗಂಟೆ ವೇಳೆಯಲ್ಲಿ ಯಾರೋ ದುರುಳರು ಆಭರಣಗಳ ಆಸೆಗೋಸ್ಕರ ಒಂದು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಪ್ರಾಣವನ್ನು ಕಳೆದು ಮೇಲೆ ಶವವನ್ನು ಎಳೆದುಹೋಗಿದ್ದರು. ಅದನ್ನು ಪತ್ತೆ ಮಾಡುವದಕ್ಕೋಸ್ಕರ ಇಲ್ಲಿನ ಇನ್ಸ್‌ಪೆಕ್ಟರವರೂ, ಅಮಲ್ದಾರರೂ ಹೋಗಿರುತ್ತಾರೆ. ಪತ್ತೆ ಶರಮೂಡು ನಡೆಯುತ್ತಲಿದೆ. ಇಂಥಾ ಮರಣವನ್ನು ಕೇಳಿ ಬಡವರು ನೊಂದಿ ಕಷಪಡುವುದನ್ನು ಬರೆಯಲು ಆಗುವದಿಲ್ಲ. ಅವರಿಗಾದರೋ ಏಕಪುತ್ರಿ, ಸ್ನಾನಕ್ಕೆ ಹೋಗಿಬರುವಾಗ ಊರಿನ ಮಧ್ಯ ಅಂದರೆ ಎಲ್ಲಾ ಜನಗಳೂ ತಿರುಗಾಡುತ್ತಲೂ ವಾಸಿಸುತ್ತಲೂ ಇರುವ ಸ್ಥಳದಲ್ಲಿಯೇ ಈ ಕೊಲೆ ನಡೆದಿರುತ್ತದೆ.— ಇಲ್ಲಿನ ಫಾರೆಸ್ಟ್ ರೇಂಜರ್ ವಂಡರ್ ಕೆಲಸವು ಮ|| ರಂಗದಾಮಯ್ಯನವರಿಗೆ ಆಯಿತು. ಈಗ ರೈತರಿಗೆ ಸಲೀಸ್ ಲೈಸೆನ್ಸು ಸಿಕ್ಕುತ್ತದೆ.—ಈಗ ಹೊಸದಾಗಿ ಒಬ್ಬ ಮ್ಯುನಿಸಿಪಲ್ ಮೆಂಬರನ್ನು ಚುನಾಯಿಸುವಂತೆ ವರ್ತಮಾನವಿದೆ. ಅದಕ್ಕೆ ಇವರನ್ನೇ ನೇಮಕ ಮಾಡಿದರೆ ಉತ್ತಮ. ಅಂತು ಅಮಲ್ದಾರರವರು ಈಗ ಇರುವ ಮೆಂಬರುಗಳ ದೊಂಬರಾಟ ಚುನಾವಣೆ ಮಾಡಿದಲ್ಲಿ ಎಲ್ಲಾ ಪ್ರಜೆಗಳಿಗೂ ಹಿತವಾಗಿರುತ್ತದೆ. ಯಾತಕ್ಕೆಂದರೆ ಈಗಿನ ಮೆಂಬರುಗಳು ಜನಗಳ ಯೋಗ್ಯತೆಯನ್ನೂ, ಗುಣಾವಗುಣಗಳನ್ನೂ ಚನ್ನಾಗಿ ಬಲ್ಲವರಾಗಿರುತ್ತಾರೆ.—ಈ ಊರಿನಲ್ಲಿ ಅಕ್ಕಸಾಲಿಗರು ಬೇರೆ ಬೇರೆ ಸಂಗಡಗಳಾಗಿ ಬಹುಕಾಲದಿಂದಲೂ ಇದ್ದವರು ಮೊನ್ನೆ ಎಲ್ಲರೂ ಒಂದು ಕಡೆ ಸಭೆ ಸೇರಿ, ಇನ್ನು ಮೇಲೆ ಪರ್ವಕಾಲದಲ್ಲಿ ಉದ್ಯೋಗಕ್ಕೆ ಹೋಗಬೇಕಾದರೆ ತಮ್ಮ ದೇವಸ್ಥಾನಕ್ಕೆ ಹೂವು ಪುರ್ಣ ಕೊಟ್ಟು ಹೋಗಬೇಕು. ಹಾಗೆ ಇಲ್ಲದೆ ಇದ್ದರೆ ಯಾರೂ ಹೋಗಕೂಡದು ಎಂಬದಾಗಿ ನಿಬಂಧನೆ ಮಾಡಿಕೊಂಡಿರುತ್ತಾರೆ.

ಬೇಲೂರು.—ಇಲ್ಲಿ ಮಳೆ ಚೆನ್ನಾಗಿ ಆಗಿದೆ. ಹಗಲೆಲ್ಲಾ ಬಿಸಿಲು ಚೆನ್ನಾಗಿ ಕಾಯ್ದು ರಾತ್ರಿ ಹೊತ್ತು ಮಳೆಯಾಗುತ್ತಿದೆ. ಅಡಿಕೆ ಬೇಸಾಯಮಾಡುವವರಿಗೆ ಬಹಳ ಅನುಕೂಲವಾಗಿದೆ. ಇವರು ಅಡಿಕೆ ಸಿಪ್ಪೆಯನ್ನು ಬೀದಿಯಲ್ಲಿ ಹಾಕಿಸಿರುವರು. ಅದು ಕೊಳೆತು ನಾರುತ್ತದೆ. ಅಲ್ಲಲ್ಲಿ ಇಲಿಬಿದ್ದಂತೆ ವರ್ತಮಾನವಿದೆ. ಮ್ಯುನಿಸಿಪಾಲಿಟಿಯವರು ಇಂತಹ ಕಶ್ಮಲಕ್ಕೆ ಅವಕಾಶಕೊಡಲಾರರೆಂದು ನಂಬುತ್ತೇವೆ.—ಶ್ರೀಮಾನ್ ಅಮಲ್ದಾರ್ ನರಸಣ್ಣನವರು ಕಟ್ಟಿಸಿರುವ ಕೋರ್ಟ ಭಾಗಕ್ಕೆ ಪಕ್ಕದಲ್ಲಿ ಬಚ್ಚಲ ನೀರು ಹರಿದುಬಂದು ಸ್ವಲ್ಪ ಹೊಂಡದಂತೆ ನಿಂತಿರುವುದು. ಅದರ ಮೇಲೆ ಅಡಕೆ ಸಿಪ್ಪೆಗಳನ್ನು ಹಾಕುವರು. ಸಿಪ್ಪೆಯಿಂದ ಕೊಳಚೆ ನೀರು ಕೆಡುವುದಕ್ಕೆ ಅವಕಾಶವಾಗಿದೆ. ಮ್ಯುನಿಸಿಪಾಲಿಟಿಯವರು ಈ ವಿಷಯಕ್ಕೆ ಗಮನಕೊಡುವರಾಗಿ ನಂಬುತ್ತೇವೆ.—ಕಳೆದ ತಾ 24 ರಲ್ಲಿ ಮೈಸೂರು ಸರ್ಕಲ್ ಸ್ಕೂಲುಗಳ ಇನ್ಸ್‌ಪೆಕ್ಟರು ಮ|| ಎಂ. ಶ್ರೀನಿವಾಸರಾಯರು ತರೀಕೆರೆಯಿಂದ ಬಂದು ಸ್ಕೂಲುಗಳನ್ನು ಪರೀಕ್ಷಿಸಿದರು. ಇಲ್ಲಿ ಬಾಲಿಕಾ ಪಾಠಶಾಲೆಯನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನವಾಗಿ, ನಿವೇಶನವಿಲ್ಲದೆ ಇದುವರೆಗೆ ಕಟ್ಟಿಸಲು ಆಗಿರಲಿಲ್ಲ. ಮ|| ಪತ್ರಿ ವೀರಪ್ಪನವರು ಅವರನ್ನು ಕಂಡು ನಿವೇಶನವನ್ನು ಸರ್ಕಾರದಿಂದ ಕೊಡಿಸಬೇಕೆಂದು ಕೇಳಿದ್ದಕ್ಕೆ ಇನ್ಸ್‌ಪೆಕ್ಟರವರು ಎ. ವಿ. ಸ್ಕೂಲ್ ಪಕ್ಕದಲ್ಲಿರುವ

ಶಾಲೆ ನಿವೇಶನವನ್ನು ನೋಡಿ, ಅದರ ಎರಡು ಕಡೆಯಲ್ಲಿರುವ ಮನೆಗಳನ್ನು ಬಿಡಿಸಿ ನಿವೇಶನವನ್ನು ಕೊಡಿಸುವುದಾಗಿಯೂ, ಕಟ್ಟಡವನ್ನು ಜಾಗ್ರತೆಯಾಗಿ ಮಾಡಿಸಬೇಕೆಂಬದಾಗಿಯೂ ತಿಳಿಸಿ ಅರಸೀಕೆರೆಗೆ ತೆರಳಿದರು —ಇಲ್ಲಿನ ರೈಲ್ವೆ ಸ್ಟೇಷನ್ ಊರಿಗೆ ದೂರವಾಗಿದ್ದರೂ ರೈಲುಹಾದಿಯು ಊರಪಕ್ಕದಲ್ಲಿ ಹೋಗಿದೆ ಅದಕ್ಕೆ ಪಕ್ಕಗಳಲ್ಲಿ ಕಟ್ಟಾಣಿಯಾಗಲಿ, ತಂತಿಯ ಬೇಲಿಯಾಗಲಿ ಇಲ್ಲದಿರುವುದರಿಂದ ಆಗಾಗ್ಗೆ ದನಕರುಗಳು ರೈಲಿಗೆ ಸಿಕ್ಕಿ ನಷ್ಟವಾಗುತ್ತವೆ ಆದುದರಿಂದ ರೈಲ್ವೆ ಇಲಾಖೆಯವರು ಸರಿಯಾದ ಏರ್ಪಾಡು ಮಾಡುವರೆಂದು ನಂಬುತ್ತೇನೆ —ಮ ಕಣಕಟ್ಟೆ ರಾಮಯ್ಯನವರು ಸ್ಥಾಪಿಸಿರುವ ದೇವಾಲಯಗಳ ಮುಂಭಾಗದ ಖಾಲಿ ನಿವೇಶನವು ಅನುಕೂಲವಾಗಿಯೂ ಅಂದವಾಗಿಯೂ ಇರುವುದು ಬಾಲಿಕಾ ಪಾಠಶಾಲೆ ಕಟ್ಟುವ ನಿವೇಶನವು ಅಲ್ಲಿದೆ ಅಲ್ಲಿ ಪಾಠಶಾಲೆ ಕಟ್ಟುವುದು ಯುಕ್ತವಾಗಿ ತೋರುವುದಿಲ್ಲ ಸರ್ಕಾರದವರು ಕೊಡಿಸುವ ನಿವೇಶನದಲ್ಲಿ ಕಟ್ಟುವುದೇ ಉತ್ತಮ —ಅನಾಥಾಲಯವು ಕಾರ್ತೀಕ ಮಾಸದಲ್ಲಿ ಪ್ರಾರಂಭಿಸಲ್ಪಡುವುದಾಗಿ ತಿಳಿಯುತ್ತೇನೆ ಆಲಯದ ಕಮಿಟಿಯವರು ಸಭೆ ಸೇರಿ ಆದಷ್ಟು ಏರ್ಪಾಡು ಮಾಡುತ್ತಿರುವುದು ಅನುಕೂಲ —ಧಾರಣೆ ಅಕ್ಕಿ 6¼-7 ಸೇರು, ರಾಗಿ 16-17 ಸೇರು ಮಾರುತ್ತದೆ —ಕಡೂರಿನಲ್ಲಿ ಪ್ಲೇಗ್ ಶುರುವಾಗಿ 2-1 ಮರಣಗಳಾಗಿ ಈಗ ಸಮಾಧಾನಸ್ಥಿತಿಯಲ್ಲಿದೆ ಎಂದು ವರ್ತಮಾನ

ಕುಣಿಗಲು —ಈ ಊರಿಗೆ ಕಳೆದ ತಾ 1ನೇ ಗುರುವಾರ ಸಾಯಂಕಾಲ ಪಮ್ಮ ಪ್ರಿನ್ಸ್ ಯುವರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿಯೊಡನೆ ದಯಮಾಡಿ ಆ ರಾತ್ರಿ ಸ್ಟಡ್ ಫಾರಂನಲ್ಲಿರುವ ಬಂಗಲೆಯಲ್ಲಿ ಮೊಕ್ಕಾಂ ಮಾಡಿದರು ಮಾರನೆಯ ಬೆಳಗ್ಗೆ ಹೊರಟು ರಾಂಬಾಣದ ಹಂತದಲ್ಲಿರುವ ಲೂಸರ್ನ್ ತೋಟವನ್ನು ಪರಾಂಬರಿಸಿ ಪಾಸ್ ಚಿತ್ತೈಸಿದರು ಮಧ್ಯಾಹ್ನ ಫಾರಂನಲ್ಲಿರತಕ್ಕ ಕುದುರೆಗಳನ್ನೆಲ್ಲಾ ಸ್ವತಃ ಪರಾಂಬರಿಸಿ 19 ಕುದುರೆಗಳನ್ನು ಮೈಸೂರಿಗೆ ರವಾನಿಸಿದರು 3ನೇ ಶನಿವಾರ ಸ್ಟಡ್ ಫಾರಮ್ಮಿನ ವರ್ತಮಾನಗಳನ್ನು ಪರಾಂಬರಿಸಿ, ಮಧ್ಯಾಹ್ನ 12 ಘಂಟೆ ವೇಳೆಗೆ ಗೌರ್ನಮೆಂಟ್ ಎ ವಿ ಸ್ಕೂಲಿನಲ್ಲಿ ನಡೆಯುತ್ತಿರುವ ರೇಷ್ಮೆ ವ್ಯವಸಾಯವನ್ನು ಪರಾಂಬರಿಸಲು ದಯಮಾಡಿ, ಮ ಶಂಕರರಾಯರು ಬಹಳ ಶ್ರದ್ಧೆಯಿಂದ ಕೆಲಸಮಾಡುವ ರೇಷ್ಮೆ ವಿಚಾರದ ತಸ್ಶೀಲನ್ನೆಲ್ಲಾ ನಿಧಾನವಾಗಿ ಪರಾಂಬರಿಸಿ ತುಂಬಾ ಸಂತೋಷಪಟ್ಟು, ಇಲ್ಲಿ ಒಂದು ಸಿಲ್ಕ್ ಫಾರಂ ಏರ್ಪಾಡು ಮಾಡುವದಾಗಿಯೂ, ಇದರ ವಿಚಾರದಲ್ಲಿ ಮಹಾಸಭೆಗೆ ತಕ್ಕ ಪಲ ದೊರಕೀತೆಂಬ ಅಭಿಪ್ರಾಯವನ್ನು ಸೂಚಿಸಿ ಚಿತ್ತೈಸಿದರು ಮ|| ಶಂಕರರಾಯರು ಈ ಗ್ರಾಮಕ್ಕೆ ಬಂದ 2 ವರುಷದಿಂದ ಎ ವಿ ಸ್ಕೂಲ್ ಮತ್ತು ಹಿಂದೂಸ್ಥಾನಿ ಸ್ಕೂಲ್ ಹುಡುಗರಲ್ಲಿ ಅನೇಕರು ಸ್ವಂತವಾಗಿ ರೇಷ್ಮೆ ಕೆಲಸಗಳನ್ನು ಮಾಡುವಂತೆ ತಯಾರ್ಮಾಡಿರುತ್ತಾರಲ್ಲದೆ ಗ್ರಾಮಾಂತರಗಳಿಗೂ ಹೋಗಿ ವ್ಯವಸಾಯ ಮಾಡತಕ್ಕ ರೈತರಿಗೆ ಮುತುವರ್ಜಿಯಿಂದ ರೇಷ್ಮೆ ಸಂಬಂಧವಾದ ತಿಳುವಳಿಕೆ ಕೊಟ್ಟು ಅಲ್ಲದೆ, ಬಿಡದೀಪುರ ವಗೈರೆ ಸ್ಥಳಗಳಿಂದ ಸಿಲ್ಕ್ ಮೊಟ್ಟೆಗಳನ್ನು ತರಿಸಿಕೊಟ್ಟು ಪ್ರೋತ್ಸಾಹಕರಾಗಿರುತ್ತಾರೆ ಅನೇಕ ಗ್ರಾಮದವರು ಹರಳುಕೊಳ್ಳುವ ರೇಷ್ಮೆ ಕಸಬನ್ನು ಮಾಡುತ್ತಿದ್ದಾರೆ

ಮಂಡ್ಯ —ಅತಿವೃಷ್ಟಿಯಿಂದ ಪೈರುಗಳು ಕೆಡುತ್ತಾ ಇವೆ ಧಾರಣೆ ವಾಸಿ ಇಳಿಯಲಿಲ್ಲ ಬ್ರಾಹ್ಮಣರ ಬೀದಿಯ ಕೆಳ ಭಾಗದಲ್ಲೂ ಸಂತೆಗೆ ಹೋಗುವ ಚಿಕ್ಕ ಬೀದಿಯ ಬಲ ಭಾಗದಲ್ಲಿ ನೀರು ನಿಂತು ದುರ್ವಾಸನೆಯಾಗಿದೆ ಕಸ ಕುಪ್ಪೆಗಳು ಹೆಚ್ಚಾಗಿ ನಿಂತು ಸಾಂಕ್ರಾಮಿಕ ರೋಗಕ್ಕೆ ಅವಕಾಶವಾಗಿದೆ ಬಟ್ಟಲಿನ ರೊಟ್ಟು ದೊಡ್ಡ ಹಳ್ಳಕ್ಕೆ ಸೇರುವ ಕಡೆ ದೊಡ್ಡ ಚರಂಡಿ ಆಗಬೇಕು ಕಳೆದ ತಿಂಗಳ ತಾ 30ರಲ್ಲಿ ಇಲ್ಲಿನ ವರ್ತಕರ ದ ಮ|| ಪದ್ಮರಾಜಯ್ಯನವರ ಪತ್ನಿಯು ಹೊಸಳ್ಳಿ ಕೆರೆಗೆ ನೀರಿಗಾಗಿ ಹೋಗಿದ್ದು ಆಯತಪ್ಪಿ ಬಿದ್ದು ಅಕಾಲಮರಣಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ ಈ ಕೆರೆಯ ಭಾವಿಗಳಿಗೆ ಎತ್ತರವಾದ ಕಟ್ಟೆಗಳನ್ನು ಹಾಕಿಸಿದರೆ ತುಂಬಾ ಕ್ಷೇಮ ತಾ 1ರಲ್ಲಿ ಇಲ್ಲಿನ ಸೂಪರ್‌ವೈಸರೂ, ಇನ್ಸ್‌ಪೆಕ್ಟರೂ ಸ ಪಿ ಮೊಬೈಲಿನಲ್ಲಿ ಬರುತ್ತಿರುವಾಗ್ಗೆ ಒಬ್ಬ ದುಷ್ಟಾತ್ಮನು ತಿರಸ್ತೇದಾರರ ಮನೆ ಎದುರಿಗೆ ಪಬ್ಲಿಕ್ ರೋಡಿನಲ್ಲಿ ಒಂದು ನಾಯಿ ಬಂದು ಇನ್ಸ್‌ಪೆಕ್ಟರ ಗೋಡಾ ಹಾರಿಸಿಕೊಂಡು ಓಡಿಹೋಗುತ್ತಿರುವಲ್ಲಿ ಆಳು ಅವನ ಹಿಂದೆ ಓಡಿ ಹಿಡಿದು ತರಲು ತಕ್ಷಣವೇ ಪೋಲೀಸ್ ಇನ್ಸ್‌ಪೆಕ್ಟರಾಗಿ 4 ದಿನಗಳ ನಂತರ ಕೆಲಸದಿಂದ ಅಮಾನತ್ತು ಆಯಿತೆಂದು ಕೇಳಿದೆನು ತಾ 8ರಲ್ಲಿ ಮ ಶಿವರಾಂ ಸಿಲ್ವರ ಮನೆಗೆ ಕಳ್ಳರು ಬಿದ್ದು 2-1 ಸ್ಥಳದಲ್ಲಿ ಕನ್ನಹಾಕಿ ಒಳಕ್ಕೆ ಪ್ರವೇಶಿಸಿ ಪಾತ್ರೆಪದಾರ್ಥಗಳನ್ನು ಮುಟ್ಟದೆ ಅಲ್ಲಲ್ಲಿ ದೊಡ್ಡ ದೊಡ್ಡ ಕೆಲ್ಲಗಳನ್ನು ತೆಗೆದು ಓಡಿಹೋದರು ಮತ್ತು ಕೆಲವು ತಿಂಗಳ ಕೆಳಗೆ ಮ ಜನ ಸೇಟರ ಮನೆಯಲ್ಲೂ, ಪೋಸ್ಟ್ ಆಫೀಸಿನಲ್ಲೂ ಇದೇ ರೀತಿ ಮಾಡಿ ಓಡಿಹೋದ ಕಳ್ಳರಾರೆ ಬುದ್ಧಿ ಗೊತ್ತಿಲ್ಲ ಮದ್ದೂರಲ್ಲಿ ಹಿಡಿದ ಜಾನ್‌ಕಾರ ಮತ್ತು ಇಲಿ ಸ ಸ ಕೆಲ ಮೋಸಮಾಡಿದರೆಂದು ಹಿಡಿದ ಬೊಕದ್ದಮೆಗಳು ಏನಾದವೋ ತಿಳಿಯಲಿಲ್ಲ

ಚಿಕ್ಕಮಗಳೂರು.—ಇಲ್ಲಿ ಸುಮಾರಾಗಿ ಪ್ರತಿ ನಿತ್ಯ ಮಳೆ ಬರುತ್ತಿದೆ ಧಾರಣೆಗಳು ಇನ್ನೂ ಇಳಿದಿಲ್ಲ ಆಗಾಗ್ಗೆ ಪ್ಲೇಗ್ ಮರಣಗಳಾಗುವವು, ಇಲಿಗಳು ಅಲ್ಲಲ್ಲಿ ಸಾಯುತ್ತವೆ ಮೊನ್ನೆ ಡಾ॥ ಡೇವಿಡ್‌ಯವರು ಪೇಟರ್‌ಪೇಟೆಯಲ್ಲಿ ಕೆಲವರಿಗೆ ಪ್ಲೇಗ್ ಚುಚ್ಚು ಹಾಕಿದರು ಕಳೆದ ಶುಕ್ರವಾರ ಸಾಯಂಕಾಲ ರೆವ್ ಸ್ಲೇಟರ್ ಸಾಹೇಬರು ಪತ್ನೀ ಸಮೇತರಾಗಿ ಕಡೂರಿನಿಂದ ಮೋಟಾರ್ ಗಾಡಿಯಲ್ಲಿ ಬಂದರು ಇವರ ವಿವಾಹವು ಕಳೆದ ಗುರುವಾರ ನೀಲಗಿರಿಯಲ್ಲಿ ಜರುಗಿತು ಇಲ್ಲಿನ ವೆಸ್ಲಿಯನ್ ಕ್ರೈಸ್ತ ಮಂಡಲಿಯವರು ಅವರ ಬಂಗಲೆಗೆ ಹೋಗಿ ನೂತನ ದಂಪತಿಗಳನ್ನು ಸತ್ಕರಿಸಿ ಅವರಿಗೆ ಬಹುಮಾನ ಸಮೇತ ವಂದನಾ ಪತ್ರಿಕೆಯನ್ನು ಒಪ್ಪಿಸಿ, ಅವರಿಗಾಗಿ ಒಂದು ಟೀ ಪಾರ್ಟಿ ನಡಿಸಿದರು ಮರುದಿನ ಇಲ್ಲಿನ ಮಿಷನ್ ಬಾಲಿಕಾ ಪಾಠಶಾಲೆಯ ಉಪಾಧ್ಯಾಯರೂ, ವಿದ್ಯಾರ್ಥಿನಿಯರ ಹೆತ್ತವರೂ ರೆವ್ ಸ್ಲೇಟರ್ ಸಾಹೇಬರನ್ನು ಪತ್ನಿ ಸಮೇತ ಮಿಷನ್ ಸ್ಕೂಲಿಗೆ ಬರಮಾಡಿಕೊಂಡು ವಂದನಾ ಪತ್ರಿಕೆಯನ್ನೂ ಬಹುಮಾನವನ್ನೂ ಒಪ್ಪಿಸಿದರು ಆಗ್ಗೆ ಡೆಪ್ಯುಟಿ ಕಮಿಷನರ್ ಮೊದಲಾದ ದೊಡ್ಡ ಮನುಷ್ಯರೆಲ್ಲಾ ದಯಮಾಡಿದ್ದರು ರೆವ್ ಸ್ಲೇಟರ್ ದೊರೆಯವರ ಪತ್ನಿಯವರು ಮೈಸೂರು ದೇಶೀಯರಿಗೆ ಅಪರಿಚಿತರಲ್ಲ, ಇವರು ಡಾಕ್ಟರ್ ನಾಟ್ ಎಂಬ ಹೆಸರಿನಿಂದ ಮೈಸೂರು ಮಿಷನ್ ಆಸ್ಪತ್ರೆಯಲ್ಲಿ ಧರ್ಮವಾಗಿ ಕೆಲಸ ಮಾಡುತ್ತಾ ಅನೇಕರಿಗೆ ಉಪಕಾರಿಗಳಾಗಿದ್ದರು —ಇಲ್ಲಿ ಕಳೆದ ವಾರ ಅಡ್ವೊಕೇಟ್ ದಾಸಪ್ಪನವರ ಮನೆಯಲ್ಲಿ ಒಂದು ಕಳುವಾಯಿತು ಕಳ್ಳರು ಕನ್ನಾ ಹಾಕಿ ಸುಮಾರು 70 ರೂಪಾಯಿನ ಮಾಲನ್ನು ಕದ್ದು ಇರುತ್ತಾರೆ ಪೊಲೀಸಿನವರು ಎಚ್ಚರಿಕೆಯಿಂದ ನೋಡಿಕೊಳ್ಳುವರೆಂದು ನಿರೀಕ್ಷಿಸಲ್ಪಟ್ಟಿದೆ ಕಳೆದ ಶುಕ್ರವಾರ ಬೆಳಗ್ಗೆ ಒಬ್ಬ ವಡ್ಡರ ಹುಡುಗನು ಇಲಿ ಹಿಡಿಯುವ ಉದ್ದೇಶದಿಂದ ಎ ವಿ ಸ್ಕೂಲ್ ಪಕ್ಕದಲ್ಲಿ ಒಂದು ಹುಣಸೆ ಮರದ ಕೆಳಗಣ ಬಿಲದಲ್ಲಿ ಕೈ ಹಾಕಲು ಒಂದು ನಾಗರಹಾವಿನ ಬಾಲವು ಕೈಗೆ ಸಿಕ್ಕಿತು ಅವನು ಅದನ್ನು ಹಿಡಿದು ಈಚೆಗೆ ಎಳೆದುಹಾಕಲು ಆ ನಾಗರಹಾವು ರೋಷದೊಡನೆ ಅವನ ಬೆರಳನ್ನು ಕಚ್ಚಿತು ಕೂಡಲೇ ಅವನಿಗೆ ಸ್ಮರಣೆ ತಪ್ಪಿ ನೆಲದ ಮೇಲೆ ಬಿದ್ದನು ಆಗ ಸಮೀಪದಲ್ಲಿದ್ದ ಆ ಹುಡುಗನ ನೆಂಟರು ಬಂದು ಹಾವನ್ನು ಕೊಂದುಹಾಕಿದ್ದಲ್ಲದೆ ಹುಡುಗನ ಬೆರಳಿಗೆ ಒಂದು ಮಾತ್ರೆಯನ್ನು ಅಂಟಿಸಿದರು ಆ ಮಾತ್ರೆಯು ಅವನಲ್ಲಿ ವ್ಯಾಪಿಸಿದ ವಿಷವನ್ನೆಲ್ಲಾ ಸುಮಾರು 10 ನಿಮಿಷದೊಳಗೆ ಹೀರಿಬಿಡಲು, ಆ ಹುಡುಗನಿಗೆ ಸ್ಮರಣೆ ಬಂದು ಚೆಟ್ಟಗಾದನು ಆ ವಡ್ಡರಲ್ಲಿ ಒಂದು ಬೇರು ಸಹಾ ಉಂಟು ಆ ಬೇರನ್ನು ಕಂಡರೆ ಹಾವು ಸುಮ್ಮನೆ ಸ್ಥಳದಲ್ಲಿ ಮಲಗುತ್ತದೆ ನಾಗರಹಾವು ಕಡಿದದ್ದಕ್ಕೆ ಇಂಥಾ ಸಂಜೀವನವು ಇದ್ದು ಸಕಲ ಪ್ರಜೆಗಳಿಗೂ ತಿಳಿದಿದ್ದರೆ ಎಷ್ಟೋ ಉಪಕಾರವಾದೀತು ನೂರಾರು ಅಕಾಲ ಮರಣಗಳನ್ನು ತಪ್ಪಿಸಬಹುದು

ಹಾಸನದ ತಾ|| ಗೋರೂರು — ಹಾಸನ ಡಿಸ್ಟ್ರಿಕ್ಟಿನಲ್ಲಿ ಗೋರೂರು ಬಳಿ ಹೇಮಾವತಿ ನದಿಗೆ ಸೇತುವೆ ಕಟ್ಟತಕ್ಕ ವಿಚಾರವು ಕೆಲವು ಕಾಲದಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುತ್ತಾ ಬಂದು 1911ನೇ ವರುಷದಲ್ಲಿ ನಮ್ಮ ಘನವನ್ನು ಹೊಂದಿದ ದಿವಾನರವರು ವಿಚಾರಿಸಿಯು ಪ ಇತ ಫಲಪಡಿಸುವುದಾಗಿ ಗುರುತುಹಾಕಿಕೊಂಡಿರುವ ವಿಷಯಗಳೊಳಗೆ ಇದು ಒಂದೆನಿಸಿಕೊಂಡಿರುತ್ತದೆ ರೆಪ್ರಜೆಂಟೆಟಿವ್ ಮೆಂಬರುಗಳು ಈ ಸಾಲು ಮಹಾಜನ ಸಭೆಯಲ್ಲೂ ಸದರಿ ವಿಚಾರವನ್ನು ಅರಿಕೆಮಾಡುವುದರ ಮೂಲಕ ದಯಾಳು ಗೌರ್ನಮೆಂಟಿನವರು ಅಂಗೀಕರಿಸಿ ಏರ್ಪಾಡು ಇಡುವುದಾದರೆ ಈ ಸಂಚರಿಸತಕ್ಕ ಮಲ್ಲಾಡು ಪ್ರಜೆಗಳು ಮುಂತಾದ ಪ್ರಜೆಗಳ ಕ್ಷೇಮವು ಹೆಚ್ಚೀತೆಂದು ಹಾರೈಸುತ್ತೇನೆ ದೋಣಿಕರಮುಖದಲ್ಲಿ ಹೆಚ್ಚಿಗೆ ವಸೂಲ್ಮಾಡುವದೂ, ನೋಟೀಸ್ ಬೋರ್ಡ್ ಮತ್ತು ರಸೀದಿ ಕೊಡವುದು ಸಹ ಜಾರಿಯಲ್ಲಿ ಇಲ್ಲದೆ ಇರುವದೂ ತುಂಬಾ ವ್ಯಸನಕರವಾಗಿದೆ ಪಂಚಾಯ್ ದೋಣಿ ಒಡೆದು ನೀರು ತುಂಬುತ್ತಾ ಇರುವ ಬಳಿ ಮನ್ನು ಮೆತ್ತಿ ನಡೆಸುತ್ತಾ ಇರುವುದು ತುಂಬಾ ಅಪಾಯಕರವಾಗಿ ಭೀತಿಯನ್ನುಂಟುಮಾಡುತ್ತಾ ಇದೆ ಸರ್ಕಾರದವರು ಹೊಸ ದೋಣಿಯನ್ನು ಕಳುಹಿಸದಿರುವುದರಿಂದ ಪ್ರಯಾಣಿಕರಿಗೆ ಕಷ್ಟವಾಗಿದೆ ಒಂದೆ ದೋಣಿ ಮುಳುಗಿ ಅನಾಹುತ ಸಂಭವಿಸಿರುವದು ಎಲ್ಲರಿಗೂ ತಿಳಿದೇ ಇರುತ್ತದೆ ಇಲ್ಲಿನ ಪಂಚಮರಿಗೆ ಸ್ಕೂಲನ್ನೇರ್ಪಡಿಸಿ ಕೊಡಬೇಕೆಂದು ಕೆಲವು ಜನರು ಬೇಡಿಕೊಂಡದ್ದರ ಮೇಲೆ ಅರ್ಜಿಯು ಸ್ವತಃವಾಗಿ ಮೇಲಕ್ಕೆ ಶಿಫಾರಸು ನಡೆದಿರುತ್ತೇವೆಂದು ಈ ಜನರಲ್ಲಿ ಕರುಣೆಯನ್ನು ತೋರಿಸಿ ಸ್ಕೂಲು ಡಿಪಾರ್ಟ್‌ಮೆಂಟ್ ಡೆಪ್ಯುಟಿ ಇನ್ಸ್‌ಪೆಕ್ಟರವರು ಅಪ್ಪಣೆ ಕೊಡಿಸಿರುವದು ತುಂಬಾ ಶ್ಲಾಘ್ಯವಾಗಿದೆ ಗೌರ್ನಮೆಂಟಿನವರು ಕಟ್ಟಡವನ್ನು ಸರ್ಕಾರಿಯಾಗಿಯೇ ಕಟ್ಟಿಸಿ, ಈ ಬಡಜನರ ದೌರ್ಭಾಗ್ಯವನ್ನು ಹೋಗಲಾಡಿಸಿ ಅಭಿವೃದ್ಧಿಗೆ ತರಬೇಕಾಗಿ ಪ್ರಾ ಸಮೀಪ ಇರುವ ಎಸವಾಸೆ, ಹೆಬ್ಬಾಲೆ, ಈ ಊರುಗಳಲ್ಲಿ ಸುಮಾರು 150 ರೂಪಾಯಿ ಬೆಲೆಯಾಗುವ ಎತ್ತುಗಳನ್ನು ಕಟ್ಟಿದ್ದ ಎಳೆ ಕಳುವು ಮಾಡುತ್ತಾರೆ ಆಸಾಮಿಗಳು ಪತ್ತೆ ಇಲ್ಲ

ಈ ಪ್ರಾಂತ ರಾಗಿ ಪಸಲು ಕಟಾವಾಯ್ತು ರಾಗಿ ರೂಪಾಯಿಗೆ 16 ಸೇರು, ಅಕ್ಕಿ 6 ಸೇರು ಮಾರಾಟವಾಗುತ್ತದೆ ಸಾಲೇ ಅಪರೋಕ್ಷ ಸುರಿಯುತ್ತಿದೆ, ಕುಂಟೆಗಳು ಕೋಡಿ ಬೀಳುತ್ತಾ ಇವೆ ಒರಳ್ ಸೇರುವುದು ಹಾಳಾಗುತ್ತಾ ಬಂತು ಇಲ್ಲಿನ ಕೆಲಸ ಮುಂದುವರೆದು ವಿಶೇಷ ಮಾರಿಯಮ್ಮನ ಸೇವೆ ನಡೆಸಬೇಕೆಂದು ತಾ ಮೊದಲುಗ ಗೊತ್ತುಮಾಡಿ ಅನೇಕ ಬಡಜನಗಳ ಹಿಂಸೆಪಡಿಸಿ ವಸೂಲ್ಮಾಡಿಕೊಂಡು 10 11 ಸಾರಾಯಿ ಪ್ಯಾಕೆಟ್‌ಗಳನ್ನು ತರಿಸಿ ಕತ್ತರಿಸಿ ಮೊದಲಾದ ಸುಮಾರು 1,000 ಜನಗಳಿಗೆ ಬ್ರಾಹ್ಮಣಬೀದಿ ಕೋಟೆ ಬಾಗಿಲಿನಲ್ಲಿ ಊಟವನ್ನು ಮಾಡಿಸಿದ್ದು ತುಂಬಾ ವ್ಯಸನಕರವಾಗಿದೆ ಈ ಅಚಾತುರ್ಯವಾದ ಕೃತ್ಯವು ಅನೇಕ ದಿವಸಗಳಿಂದ ನಡೆದಿರಲಿಲ್ಲ

The Coromandel Life Assurance Co., Ltd., Bimlipatam.

This well-known Company issues Policies and Marriage Endowment Diplomas for very low monthly premiums of Rs 1 8 0 and Rs 1 0 0 respectively, in the 1st class

Wanted Active and influential Agents in every District and Taluk on liberal commission or pay

1906ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ಭೀಮುನಿಪಟ್ಟಣದ ಸರ್ಕಾರದ ಛಾರ್ಟರುಳ್ಳ ದಿ ಕೊರೊಮ್ಯಾಂಡಲ್ ಜೀವವಿಮೆ ಕಂಪನಿ ಲಿಮಿಟೆಡ್‌ಗೆ ಜೀವವಿಮೆ ಮತ್ತು ಮದುವೆ ಬ್ರಾಂಚುಗಳಿಗೂ ಸಹಾ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಎಲ್ಲ ಡಿಸ್ಟ್ರಿಕ್ಟು ತಾಲ್ಲೋಕುಗಳಲ್ಲಿಯೂ ಧಾರಾಳವಾದ ಕಮಿಷನ್ ಏರ್ಪಾಡಿನ ಮೇಲೆ ಬೇಕಾಗಿದೆ ಈ ಕಂಪನಿಗೆ ಡಾಕ್ಟರು ಸರ್ಟಿಫಿಕೇಟು ತಪ್ಪಿಸುವು 1911ನೇ ಇಸವಿಯಲ್ಲಿ ಜೀವವಿಮೆಯಲ್ಲಿ ರೂಪಾಯಿ ಒಂದಕ್ಕೆ 6 ರೂಪಾಯಿ ನಂತೆಯೂ, ಮದುವ ಬ್ರಾಂಚಿನಲ್ಲಿ ರೂಪಾಯಿ ಒಂದಕ್ಕೆ 1 ರೂಪಾಯಿನಂತೆಯೂ ಬೋನಸು ಆಗಿದೆ ವಿಶೇಷ ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಒಡನೆಯೇ ಬರೆಯಿರಿ [155 5]

ಮೆಸರ್ಸ್ ವೆಂಕಟಾಚಲಂ ಅಂಡ್ ಸನ್,

ಮೈಸೂರು ದೇಶದ ಮತ್ತು ಕೊಡಗಿನ ಜನರಲ್ ಏಜೆಂಟು,

ತೆಲುಗು ದೊಡ್ಡಪೇಟೆ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 21

ಎಂದು ನೋವಿದ್ದರೂ ಸಾ ವಾಡಿಕೊಳ್ಳುವನೆ ಮ ಹೇಳು ವಾತ, ಕೀಲು, ಆರಡಿ, ತಲೆನೋವುಗಳು ಯಾವ ಕಾರಣದ ಹುಟ್ಟುವ ಬ ಯಾಗಲಿ, ಉಬ್ಬಸ ಹಲ್ಲುನೋವು ಗ ಟು ಗಾಯ ವ್ರಣ, ಕೆಮ್ಮು ಶೀತಸೆಗಡಿ ಶಾ ಪರೋಗ, ಜಜ್ಜು, ಉಳುಕು ಸೆಳೆತ, ಚೇಳು ಕಡಿದ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಗ್ಗದ ಸ ತೋಷವಾಗಿ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾ ಸಮೀಪದಲ್ಲಿರುವ ವ್ಯಾಪಾರಿಯ ಅಂಗಡಿಗೆ ಹೋಗಿ ಕ್ಲೆಮೆಂಟರ ಮಾಜಿಕ್ ಬಾಂ ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಎಲ್ಲಾ ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನ ಉಪಯೋಗಿಸಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

ಕ್ಲೆಮೆಂಟರ ಮಾಜಿಕ್ ಬಾಂ ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 4 ಅಥವಾ ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ಸಾ ಸಾಹುಕಾರರಿಗೆ ಆದ ಡಿಸ್ಕೌಂಟು ಸಿಗುತ್ತದೆ ವಿಳಾಸಗಳು (1) ಎಸ್ ಸೀಟರ್, ವಡಮುಳಿಸಿಲ್ ಬೀದಿ, ಪುರ್ಸವಾಕಂ, ವೇಪೇರಿ, ಮದರಾಸ್, (2) ಕೆ ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಬಹಳ ಮೇಲಾದ ಅಚ್ಚು ಕರೀ ಬಣ್ಣದ ಮಧು

ಚೆಂಗಡಿ ಅಂಚಿನ ಸೀರೆಗಳು.

ಅವಲ್ ರವಿ ಕ್ರಯ ರೂ 4-0 0 ಮರು ರ ಕ್ರಯ ರೂ



[155 21]

ಇದರಿಂದ ವರ್ತಕರಿಗೂ, ಬಾಗ ನ ತರಿಗೂ ಬಡವರಿಗೂ ಲಾಭ ವರಿ ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚೆಂಗಡಿ ಸೀರೆಗಳು ಉಡುವುದಕ್ಕೆ ಅನುಕೂಲವಾಗಿಯೂ, ನೋಡುವುದಕ್ಕೆ ಸೊಗಸಾಗಿಯೂ ಕರ್ನಾಟಕ ಗಳಿಗೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ದಯಮಾಡಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬಿಡಲಾರದು ಮತ್ತು ಹೊದಿಯುವ ಸೆರಗುಗಳು ಸ್ವಲ್ಪ ಕಾಲದಲ್ಲೇ ಬಿಸುಟಾಗಿದ ಸೀರೆಯು ಅದ್ದವು ಧಾರಾಳವಾಗಿ 18 ಮೊಳ ಸರಿಕಟ್ಟೆ ನು ತರಿಸಿದಲ್ಲಿ ನಮ್ಮ ಸಿರಿತೊಡೆಯುವರು ಅನೇಕ ಸೀರೆಗಳಿಗೆ ಬರೆಯಿರಿ

ನಮ್ಮ ವಿಳಾಸ—ಎ ಎಸ್ ಭಟ್ಟಾಚಾರ್,

ಸುಂಗುವಾರಕಂ, ಮದರಾಸ್

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕ್ಷೈಸೋಕದ ಮಾಡಿದ. ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಉತ್ತೇಜನ ಕೊಡುವಂಥದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದಿರಿ ಪುಸ್ತಕ ಕಳುಹಿಸುತ್ತಾರೆ

[66 25] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

Printed and Published by the Rev. F. W. Thomas, M.A. Proprietor and Manager, Wesleyan Mission Press, Mysore. 17/10/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸರ್ ೧೯೧೨ ನೇ ಇಸವಿ ಅಕ್ಟೋಬರ್ ತಾರೀಖು ೨೪ ನೇ ಗುರುವಾರ. ಸಂಚಿಕೆ ೩೧

ಆರು ಹೊಸ ಕಾದಂಬರಿಗಳು!!

[134-47]

ಮೋಹನೆ—ಕನ್ನಡದ ಬಂಗಾಳಿಯ ಚಮತ್ಕಾರವಾದ ಕಥೆ 12 ಆಣೆ
ಅನಂಗಸುಂದರಿ—ಮೂಲಕ ಕಥೆಯುಳ್ಳ ಶೃಂಗಾರ ರಸ [illegible]
[illegible] 8 ಆಣೆ ತಾರಾಸುಂದರಿ— ಅನಂಗಸುಂದರಿಯ ಎರಡ[illegible]
[illegible] 8 ಆಣೆ ಕುಮುದಿನಿ — ಬಂಗಾಳಿಯ ದ ಕನ್ನಡದ ಪತ್ತೇದಾ[illegible]
[illegible] 8 ಆಣೆ ಸತೀರೋಹಿಣಿ—ಪಾತಿವ್ರತ್ಯವನ್ನು ಬೋಧಿಸುವ
[illegible] ಆಣೆ ಸಂತಾಪಕ [illegible] 1 ಆಣೆ
[illegible] ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ಸತ್ಯಮಲ್ ಸ್ಪ್ರಿಂಗುಗಳು

[illegible] 1911 ನೇ ಇಸ್ [illegible]
[illegible]

ನಂ 1 [illegible]	ಕ್ರಯ	1 ಆಣೆ
,, 2 [illegible]	,,	4 ಆಣೆ
,, 3 ದೊಡ್ಡ [illegible]	,,	6 ಆಣೆ
,, 4 [illegible]	,,	8 ಆಣೆ

[illegible] 12 [illegible] ರೂಪಾಯಿಗೆ 2 ಆಣೆ
[illegible] ಈಗಲೇ ಕೆಳಗಿನ ವಿಳಾಸವಾಗಿ ನೆ[illegible] ಮುಂದುವರಿಯುತ್ತೆ [115-1]
ವಿಳಾಸ :—ಎಸ್. [illegible] ಸತ್ಯಮಲ್ ಕಂಪನಿ, ಮೈಸೂರು

The Coromandel Life Assurance Co, Ltd.

Bimlipatam

This well known Company issues Policies and Marriage [illegible] Diplomas for very low monthly premiums of [illegible] and Rs. 1 0 0 respectively in the 1st class.

Wanted—Active and influential Agent in every [illegible] and Taluk, liberal commission on pay.

[illegible]
[illegible] [115-1]

ಮೆಸರ್ಸ್ [illegible] ಅಂಡ್ ಸನ್,
ಮೈಸೂರು ದೇಶದ [illegible]
[illegible] ದೊಡ್ಡಪೇಟೆ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

[41-22]

[illegible]
ಕ್ಷೆಯಾಗಿ [illegible] ಸಮಾಸವಲ್ಲಿ
[illegible] ಅಂಗಡಿಗೆ ಹೋಗು [illegible] ಮ್ಯಾಜಿಕ್ ಬಾಂ ಒಂದು
[illegible] ಅದಕ್ಕೆ ಪ್ರತಿಯಾಗಿ [illegible] ಕೊಟ್ಟರೆ
[illegible] ಈ ಯುಕ್ತಿ [illegible]
[illegible] 12 ಆಣೆಗೆ ಸಿಕ್ಕುತ್ತವೆ ಸಮಸ್ತ [illegible]
[illegible] ಉತ್ತಮವಾದ ಪರಿಹಾರ [illegible]
[illegible] ನಮಗೂ [illegible] ವಾಸಿಯಾಗುತ್ತವೆ
[illegible] ಮ್ಯಾಜಿಕ್ [illegible]
[illegible] 1 ಆಣೆ, ಅಂಚೆ [illegible] 1 ಆಣೆ [illegible]
[illegible] ಪ್ಯಾಕಿಂಗ್ ಪೋಸ್ಟೇಜ್ [illegible]
[illegible] ವಿಳಾಸಗಳು :—(1) ಎಸ್. [illegible], 87 [illegible] ವೀಧಿ, [illegible], ಮದರಾಸ್, (2) [illegible] ಎಸ್. [illegible] ಜನರಲ್ ಮರ್ಚಂಟ್, ತುಮಕೂರು

ಗಿರವಿ ಮಾಲು ಹರಾಜು ನೋಟೀಸು.

ನಂಜನಗೂಡು ಕಸಬಾದಲ್ಲಿದ್ದು ಹಾಲಿ ಬೆಂಗಳೂರು [illegible] ರುವ ಆರ್ಕ್ [illegible] ಕಂಟ್ರಾಕ್ಟರ್ [illegible] ಅಂಡ್ ಕೋ [illegible] ಗುಮಾಸ್ತೆ [illegible] ಮಕ್ಕಳು [illegible] ರೂಪಾಯಿ [illegible] ಒಂದು [illegible] ನಂಜನಗೂಡು [illegible] ತಾ 7-1909 ರಲ್ಲಿ 30 ದಿನಗಳ ವಾಯಿದೆಗೆ [illegible] ಇದನ್ನು ತಾ [illegible] 30 ದಿನಗಳಿಗೆ [illegible] ಇದುವರಿವಿಗೂ [illegible] ಟಪಾಲು ಮೂಲಕ ರಿಜಿಸ್ಟರು ನೋಟೀಸ್ ಕೊಟ್ಟ [illegible] ಮೂಲಕ ಪ್ರಚುರಪಡಿಸುವದೇನಂ[illegible] ನಂಜನಗೂಡು ಕಸಬಾದಲ್ಲಿ ಬ್ಯಾಂಕ್ ಹೌಸ್‌ನಲ್ಲಿ ತಾ 31-10-1912 ರಲ್ಲಿ [illegible] 12 ರಿಂದ [illegible] ಬಹಿರಂಗವಾಗಿ ಹರಾಜು ಹಾಕಿಸಲ್ಪಡುತ್ತೆ [illegible] ಬ್ಯಾಂಕಿಗೆ ಬರಬೇಕಾದ ಅಸಲು [illegible] ಬಾಕಿಯಾಗುವ [illegible] ತಿಳಿಯುವದು

[151-1] [illegible] ಶಂಕರಶಾಸ್ತ್ರಿ, ಏಜಂಟ್

HASSAN CAPS.

Special Notice ವಿಶೇಷ ಸಂಗತಿ

ಹಾಸನದ ಟೋಪಿಗಳು.

ಈ ತಿಂಗಳಿನ ಅಂತ್ಯದವರಿಗೂ 1 ರೂ 6 ಆ ಬಾಳುವ ಟೋಪಿಗಳು 1 ರೂ 4 ಆ ಗೂ, 1 ರೂ 4 ಆ ಬಾಳುವ ಟೋಪಿಗಳು 1 ರೂ 2 ಆ. ಗೂ ವಿಕ್ರಯಿಸಲ್ಪಡುವವು

ಶ್ರೇಷ್ಠ ತರದ ಟೋಪಿಗಳೆಲ್ಲಾ [illegible] 1 ರೂ 4 ಆ [illegible] ಯಾಗುವವು

ಪ್ರತಿಯೊಂದು ಟೋಪಿಯೂ [illegible] ಸೂಪರಿಂಟೆಂಡೆಂಟರಿಂದ ಪರೀಕ್ಷಿಸಲ್ಪಟ್ಟ ಹೊರತು ಮಾರಲ್ಪಡುವದಿಲ್ಲ [157-2]

ನಮ್ಮ ವಿಳಾಸ —

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,

ತುಂಕೂರು.

Address

Wesleyan Mission Cap Industry,
Tumkur

ಡೋಂಗರೆ ಇವರ ಬಾಲಾಮೃತ.

[115-15]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದ ರಿಂದ ಹುಡುಗರು ಬಹಳ ಸಂತೋಷದಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ವಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲ ದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

WILLIAM & Co, FORT, BOMBAY.

ಅಮೃತಾಂಜನ್. (Regd.)

[illegible] ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಫ, ಗಂಟಲು ನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರು ವದು [illegible] ಪ್ರಖ್ಯಾತ [illegible] ಅಮೃತಾಂಜನ್ ಬಾಟ್ಲಿ 1 ಕ್ಕೆ 0-8-0

ಗಜಕರ್ಣದ ಮುಲಾಮು

[illegible] ತಾಗಿಸುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ [illegible] ಆಗುವದಿಲ್ಲ. ಡಬ್ಬಿ 1 ಕ್ಕೆ 0-6-0.

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ ಸುಂದರತೈಲ 4 ಆಣೆ [17-37]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೊ. ಫೋರ್ಟ್ ಮುಂಬಯಿ

ಪಾಕೆಟ್ ಡೈರಿ

ಶ್ರೀ [illegible] ಸರ್ 1913 ನೇ ಇಸವಿಯದು

[illegible] ಬಟ್ಟು ಮುಚ್ಚಳ [illegible] ಬಟ್ಟು ಮುಚ್ಚಳ ಹಾಕಿರುವ [illegible] 10 [illegible] ರೂಪಾಯಿಗಿಂತ ಹೆಚ್ಚು ದ್ದರಿಂ ತರಿಸಿಕೊಳ್ಳುವವರಿಗೆ ರೂಪಾಯಿಗೆ 2½ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ [118-8]

ವಿವರಣೆ—(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಆ ದಿನ [illegible] ಪ್ರತಿ ಪೇಜಿಗೂ ರೂಲು ಹಾಕಿಸಿ [illegible] ಬೈಂಡು ಮಾಡಿಸಿದೆ (2) [illegible] ಸಾಧಕಬಾಧಕಗಳನ್ನು ತಕ್ಕಷ್ಟುಗೆ ವಿವರಿಸಿದೆ [illegible], ರಾಹುಕಾಲ ಗುಳಿಕಕಾಲಗಳು, [illegible] ಮೊದಲುಗೊಂಡು [illegible] ಬೇಕಾದ [illegible] ಸುಲಭವಾಗಿ ತಿಳಿಯುವಂತೆ ಬರೆದಿದೆ (3) [illegible] ಸಂಗತಿ, [illegible] ಇವುಗಳಲ್ಲಿ [illegible] (4) ಮದರಾಸ್ ಮತ್ತು [illegible] ತಲುಪು, ಗೌರ್ನಮೆಂಟ್ [illegible] ತಲುಪುವ [illegible] ಈ ಹೊಸ ಪ್ರಯತ್ನಕ್ಕೆ [illegible] ಪ್ರೋತ್ಸಾಹ ಅತ್ಯವ[illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕುಂತಳಾನಂದ ತೈಲವು.

147-5

ಅಂಡಮಾನಿನ ಪೀಠ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ಸದ್ಯಃಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. [illegible] ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. [illegible] ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು [illegible]

ನಮ್ಮ ವಿಳಾಸ—ಪಿ ಎಸ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

CHAMBERLAIN'S COUGH REMEDY.

ಚೇಂಬರ್ಲೇನ್ಯವರು ಕಂಡುಹಿಡಿದ ಕೆಮ್ಮಿನ ಔಷಧವು.

1-43



ಶೀತದ ಕೆಮ್ಮು, ಗಂಟಲು ಗೂರಲು, ದುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲಿ ಏಳುವ ಸಮಸ್ತ ವ್ಯಾಧಿಗಳು ಇವಕ್ಕೆಲ್ಲಾ ಈ ಔಷದವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ವಮನಾಯು ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗ ಅಸ್ಪದವಾಗುವುದು

ಚೇಂಬರ್ಲೇನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷದವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ತ್ವರಿತವಾಗಿ ನಿವಾರಣೆಮಾಡುತ್ತದೆ ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರ ಕೆಮ್ಮಿನ ರೋಗವನ್ನು [illegible] ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮು ಶಮನವಾಗಿ, [illegible] ನಿದ್ದೆಮಾಡುವಾಗ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್ ರವರು ಕಂಡುಹಿಡಿದಿರುವ ಕೆಮ್ಮಿನ ಔಷದದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ ಈ ಔಷದವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯವಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ.

ಓದಿ! ಕಥೆ! ಅಪೂರ್ವಗ್ರಂಥ!! ೨೧೭ ಪುಟಗಳು!!!

ಪ್ರತಾಪ ಕಂಠೀರವ ಚರಿತ್ರೆ

ಇದರಲ್ಲಿ (1) [illegible] ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಎಂದರೂ ತೊಲಗಿಹೋಗುತ್ತವೆ ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ, [illegible] ಯುಕ್ತಿ-ಸಾಹಸ-ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರವಾಗಿಯೂ ಕೂಡಿದ ಕಥಾ ಸಂದರ್ಭಗಳು (4) ವನ, ಸರಸ್ಸು, ಅರಮನೆ ವರ್ಣನೆಗಳು, (5) ಮನುಷ್ಯ ಯತ್ನಕ್ಕೆ [illegible] ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಸಗಳಿಂದ ಒಂದಕ್ಕೊಂದು ಜೋಡಿಸಿಟ್ಟು ಮನಸ್ಸನ್ನು ಸೆಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

[illegible] ಮುಗಿಸುವ ವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ [illegible] ಓದಿ ನೋಡುವರಿಗೆ ಕಡೆಯ [illegible] ಗೊತ್ತಾಗುವುದು

ಕ್ರಯ ೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ, ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ವೆಚ್ಚ ಬೇರೆ [5-12]

ನಮ್ಮ ವಿಳಾಸ—ವಿಜಯಾ[illegible] ಕಂಪೆನಿ ಬೆಂಗಳೂರು ಸಿಟಿ.

ಆಯುರ್ವೇದೀಯ ಔಷಧಾಲಯದಲ್ಲಿ ಮಾರಾಟಕ್ಕೆ ತಯಾರಾಗಿರುವ ಅಪೂರ್ವವಾದ ಸಿದ್ಧೌಷಧ ಕ್ರಮವು

ಉಷ್ಣಮರ್ಜ ಚೂರ್ಣವು.

10 ತೊಲೆ ಔಷದಿಯುಳ್ಳ ಡಬ್ಬಿ 1 ಕ್ಕೆ ರೂ 1-0-0

ಈ ಚೂರ್ಣವನ್ನು ಸೇವಿಸುವುದರಿಂದ ಸಕಲ ಉಷ್ಣ ರೋಗಗಳೂ ಮೂರು ದಿವಸಗಳಲ್ಲಿ ಮೂತ್ರದಲ್ಲಿರುವ [illegible] ಧಾರಾಳವಾಗಿ ಇಳಿಯುವುದರಿಂದ ದಿನಕ್ರಮೇಣ [illegible] ಕಡಿಮೆಯಾಗುತ್ತಾ ಬಂದು ಸ್ವಲ್ಪ ದಿವಸಗಳಲ್ಲೇ ಉಷ್ಣ ರೋಗವು ನಾಶವಾಗುವದು ಹಾಗೇ ಉಷ್ಣಸಂಬಂಧವಾದ ಇತರ ರೋಗಗಳೂ ಸಹಾ ನಾಶವಾಗುವವು

ದಂತಧಾವನ ಚೂರ್ಣವು.

ಡಬ್ಬಿ 1 ಕ್ಕೆ ಕ್ರಯ ರೂ 0-1-0 ಡಬ್ಬಿ 12 ಕ್ಕೆ ರೂ. [illegible]

ಈ ಹಲ್ಲುಪುಡಿ ಹಲ್ಲು ನೋವು, ವಸಡು, ಕಂಠ ಸಂಬಂಧವಾದ ವ್ಯಾಧಿಗಳನ್ನು ನಿವರ್ತಿ ಮಾಡುವದು ಇದನ್ನು ಪ್ರತಿ ದಿವಸವೂ ಉಪಯೋಗಿಸುವದರಿಂದ ವೃದ್ಧಾಪ್ಯದಲ್ಲಿ ಸಹಾ ಹಲ್ಲುಗಳು ಸಡಿಲದೆ ಬಿಗಿಯಾಗಿಯೂ ಗಟ್ಟಿಯಾಗಿಯೂ ನಿಂತಿರುವವು. ಹಲ್ಲುಗಳನ್ನು ಸ್ವಚ್ಛ ಮಾಡುವದು. [121-51]

ರಾಜವೈದ್ಯ ನಾರಾಯಣಜೀ ಕೇಶವಜೀ,
771 ಜೇನಾ ಬಜಾರ್ ರೋಡ್, ಮದ್ರಾಸು.

ಸಾಗುವಾನಿ ಜೀಡ್ ಡಿಪೋ.

ಮಾರಿಕೆಗೆ ಸಿದ್ಧವಾಗಿದೆ.

ಮೈಸೂರು ಸಿಟಿಗೆ ಸೇರಿದ ಚಟ್ನಹಳ್ಳಿ ಊಕ್ಕಡದ ಬಳಿ ಇರುವ ನಮ್ಮ ಬಾಬ್ತು ಡಿಪೋದಲ್ಲಿ ಮಲ್ಲೂರು ಡಿಸ್ಟ್ರಿಕ್ಟು, ಹೆಗ್ಗೂರು ರೇಂಜು ಫಾರೆಸ್ಟಿನಲ್ಲಿ [illegible] ಅತ್ಯುತ್ತಮವಾಗಿಯೂ, ಸುತ್ತಳತೆಯಲ್ಲಿ 3 ಅಡಿ ಲಾಗಾಯತು 8 ಅಡಿ ವರೆಗಿನ ಸುತ್ತುಳ್ಳದ್ದಾಗಿಯೂ, ಉದ್ದದಲ್ಲಿ 8 ಅಡಿ ಲಾಗಾಯತು 35 ಅಡಿ ಉದ್ದದ ವರೆಗೂ ಇರತಕ್ಕ ಸಾಗುವಾನಿ, ಮತ್ತಿ, ಹೊನ್ನೆ, ನಂದಿ ಮತ್ತು ಬೀಟೆ ಮರಗಳು [illegible] ಮತ್ತು ಸರ್ಕಾರದ ಮಾರಾಟಕ್ಕೆ ಸಿದ್ಧವಾಗಿವೆ ಏಕ ಕಾಲದಲ್ಲಿ 25,000 ಅಡಿಗಳಿಗೆ ಕಮ್ಮಿಯಿಲ್ಲದೆ ಬೇಡಿಗೆ ಅಪೇಕ್ಷಿಸಿದರೂ ಒದಗಿಸಿಕೊಡುವಷ್ಟು ಸಿದ್ಧವಾಗಿವೆ ಅಲ್ಲದೆ ನಮ್ಮ ಬಾಬ್ತು ಕಲ್ಲಿಕೋಟೆ ಬ್ರಾಂಚು ಡಿಪೋದಲ್ಲಿ ಸಧ್ಯದಲ್ಲಿ 5,000 ಅಡಿ ಅತ್ಯುತ್ತಮವಾದ ಬೀಟೆ ಮರಗಳೂ, 2,500 ಮರ ಮಾರಾಟಕ್ಕೆ ಸಿದ್ಧವಾಗಿವೆ. ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದಲ್ಲದೆ ಕಲ್ಲಿಕೋಟೆಯ [illegible] ವಿಷಯಕ್ಕೆ [illegible], ಸೂರತ್, ಪಾಲಘಾಟ್ [illegible] [143-7]

M. K. SUBBEGOWDAH & Co.,
Timber Merchants,
240, Komponanjamba Agrahar, Mysore.

ಮಕ್ಕಳ ಆರೋಗ್ಯವನ್ನು

[illegible] ಭಾರವಾಗಿದ

[illegible] ಮಕ್ಕಳು [illegible] ವಂಥವರಾಗಿದ್ದು

ಆಹಾರರುಚಿ [illegible]

SCOTT'S EMULSION 2-13

(ಸ್ಕಾಟ್ಸ್ ಇಮಲ್ಷನ್)

[illegible]

[illegible] ಕೊಟ್ಟು [illegible] ದೊಡ್ಡ [illegible] ಆದು ಸಂತೋಷವೂ ಆನಂದವೂ [illegible] ಆಗಾರದ [illegible]

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮಾನುಮನುಷ್ಯ ಇರುವ ಔಷದವನ್ನೇ ತೆಗೆದುಕೊಳ್ಳಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯು ಬೋಳಿರುವುದೇನು?

ಹಾಸನದ ಟೋಪಿ ಇಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

1-13

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ನಾರವೆಲ್ಲಾ ಬೇಳಾದದು ಅವು ಹಾಸನದ ಟೋಪಿಗಳೆಂದು [illegible] ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೇಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ [illegible] ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹು ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ಮಾರಿಸುವದಿಲ್ಲ.

ಸಾದಾ ಕೆಂಪು, ಕಪ್ಪು, ಹಸಿರು, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧-೮, ರೂ ೧-೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ., ೧ ರೂ ೮ ಆ., ೧ ರೂ ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ [illegible]

ಕೂಸುಗಳ ಟೋಪಿ, [illegible], ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು [illegible] ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

[illegible] ಉಪಯೋಗಿ[illegible] ಹಾಕಿಕೊಳ್ಳಿರಿ

ಸಮಾನವಿಯು ಪ್ರಕೃತಿಯಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು

[illegible]

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



[illegible]

ಕಾಮಿನಿಯಾ ತೈಲ [illegible]

[illegible] ಕಾಮಿನಿಯಾ ತೈಲದ [illegible] ಬೆಳೆಯುತ್ತಿವೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅ ಟಪಾಲು ಖರ್ಚು 0-5-0 ಬೇರೆ [illegible]
3 ಸೀಸೆಗೆ ರೂ 2-10-0 ಅ ಟಪಾಲು ಖ. 0-7-0

ಸಮಾನವಿಯು ಬೇಕೆಂದರೆ [illegible] ಕಳುಹಿ[illegible]

ಕಾಮಿನಿಯಾ ತೈಲದ ಕುರಿತು [illegible] ಪತ್ರಗಳಿಂದ [illegible] ಕೊಡುವೆವು

28-7-11 ಮ ಬಿ ಡಿ [illegible], ಮದ್ರಾಸು [illegible] ಕಾಮಿನಿಯಾ ಆಯಿಲ್ [illegible] ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯದು [illegible] ಮತ್ತು ಇದಕ್ಕೆ ಸಮಾನವಾದ ಹೇರ್ ಆಯಿಲ್ ಬೇರೆ ಇಲ್ಲ [illegible] ಅಭಿಪ್ರಾಯವು

1-7-11 ಮ [illegible] ನಾಯುಡು [illegible] ಮಿತ್ರರು-ಕಾಮಿನಿಯಾ ತೈಲವನ್ನು [illegible] ವಿಶೇಷ ಪ್ರಶಂಸೆಯನ್ನು [illegible]

ಸುಗಂಧದ್ರವ್ಯಗಳು.

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ [illegible] ಅತ್ಯಂತ ಶ್ರೇಷ್ಠವಾದದು, ಮಹಾ ಸುಗಂಧವುಳ್ಳದು [illegible] ಮೊತ್ತಮವಾದ ಸುವಾಸನೆಯನ್ನುಳ್ಳದು ಕ್ರಯ [illegible] ರೂ 1-[illegible]

ದಿಲ್ ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ [illegible] ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ [illegible] ರೂ 1-[illegible]

ಕಾಮಿನಿಯಾ ಸುಗಂಧ ರೂ. 1-1-0, ಕಾಮಿನಿಯಾ [illegible]

ಎಲ್ಲಾ ಸ್ಥಳಗಳಲ್ಲಿಯೂ ಸಿಗುವುದು [illegible]

ಸೂಚನೆ— ನಮಗೆ ಎಲ್ಲಾ ಕಾಗದಗಳನ್ನೂ [illegible]

ನಮ್ಮ ವಿಳಾಸ — [94-48]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,
ಜುಮ್ಮಾಮಸೀದ್, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—10—1912 ರಿಂದ 11—10—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	11	11	0	0
ಮೈಸೂರು "	0	0	0	0
ಬೆಂಗಳೂರು ಡಿಸ್ಟ್ರಿಕ್ಟು	12	10	0	0
ಮೈಸೂರು "	15	11	0	0
ಕೋಲಾರ "	4	2	72	40
ಕೋಲಾರ್ ಚಿನ್ನದ ಗಣಿಗಳು	13	28	0	0
ತುಮಕೂರು ಡಿಸ್ಟ್ರಿಕ್ಟು	3	1	12	7
ಹಾಸನ "	0	0	0	0
ಚಿತ್ರದುರ್ಗ "	0	0	91	28
ಕಡೂರ್ "	6	1	0	0
ಶಿವಮೊಗ್ಗ "	22	15	3	1
ಮೊತ್ತ	138	85	178	75

ಶಾಲಿವಾಹನ ಶಕ ವರುಷ ಗತ 1834 ನೇ ಪರಿಧಾವಿ ಸಂವತ್ಸರದ ದಕ್ಷಿಣಾಯನ ಶರದೃತು ಆಶ್ವೀಜ ಕೃಷ್ಣ ಚತುರ್ದಶಿ ಶುಕ್ರವಾರದಿಂದ ಆಶ್ವೀಜ ಬಹುಳ ಪಂಚಮಿ ವರೆಗಿನ ಒಂದು ವಾರದ ಪಂಚಾಂಗ

1912 ನೇ ಅಕ್ಟೋಬರ್

ತಾ, ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
ಶುಕ್ರ	ಚತುರ್ದಶಿ	1-11	ಚಿತ್ತಾ	18-23	10
ಶನಿ	ಅಮಾವಾಸ್ಯೆ	2-19	ಸ್ವಾತಿ	20-14	11
ಭಾನು	ಪಾಡ್ಯ	2-13	ವಿಶಾಖ	21-14	12
ಸೋಮ	ಬಿದಿಗೆ	1-17	ಅನೂರಾಧ	58-10	13
ಮಂಗಳ	ತದಿಗೆ	55-18	ಜ್ಯೇಷ್ಠ	20-22	14
ಬುಧ	ಚತುರ್ಥಿ	51-16	ಮೂಲ	18-6	15
ಗುರು	ಪಂಚಮಿ	16-3	ಪೂರ್ವಾಷಾಢ	15-7	16

ವಿಶೇಷ: ಶುಕ್ರ, ಮಹಾಳಯ ಅಮಾವಾಸ್ಯೆ ...
ಹನುಮದ್ವ್ರತ ...
ತ್ರಿಲೋಚನ ಗೌರೀ ವ್ರತ
ಸಂಕಷ್ಟಹರ ಚತುರ್ಥಿ
ಸಾಯಂಕಾಲ, ಮಹಾ ನಕ್ಷತ್ರ ... 1 ನೇ ಪಾದ

ಪೇಟೆ ಧಾರಣೆ.

ವಿವರ		ಮೈಸೂರು	ಬೆಂಗಳೂರು
ಅಕ್ಕಿ ಪಲ್ಲಾ ೧ಕ್ಕೆ	ರೂ	೧೭-೦-೦	೧೭-೮-೦
ಅಕ್ಕಿ ಅವಲ್		೧೭-೮-೦	೧೭ ೧೨-೦
ಮಧ್ಯ		೧೭ ೦-೦	೧೭ ೦ [illegible]
... ಅಕ್ಕಿ		೧೭-೦ ೦	೧೭ [illegible]
... ಜೋಳ		೧೭ ೮-೦	೧೭ [illegible]
ಮಧ್ಯ		೧೮-೦-೦	೧೭-೦ ೦
ಬಿಳಿ ಜವಳ್ ಪಲ್ಲಾ ೧ಕ್ಕೆ		೧೪-೮ ೦	೧೩-೮-೦
ಮಧ್ಯ "		೧೨-೧೨ ೦	೧೨-[illegible]
ರಾಗಿ ಪಲ್ಲಾ ೧ಕ್ಕೆ		೭ ೪-೦	೭ [illegible]
"		[illegible]	[illegible]
"		[illegible]	[illegible]
... ಪಲ್ಲ ೧ಕ್ಕೆ		೧೨-[illegible]	೧೩-೧೨ [illegible]
... "		[illegible]	೧೦-೦-೦
"		[illegible]	[illegible]
"		[illegible]	[illegible]
"		೧೨ ೦ ೦	೧೨ ೦ ೦
... ೧ಮೂಟೆಗೆ		[illegible]	೨೬-೦-೦
... ಪಲ್ಲ ೧ಕ್ಕೆ		[illegible]	೭-೨-೦
... ಸೇರಿಗೆ		೧೦ ೦-೦	೧೨-[illegible]
... ಮಣ ೧ಕ್ಕೆ		[illegible]	೩ ೦ ೦
... "		[illegible]	೩-[illegible]-೦
ಮಧ್ಯ		[illegible]	೨ ೧ ೨-೦
... ಅಚ್ಚು ೧ಖಂಡಕ್ಕೆ		[illegible]	ಮಾ ೫-೦-೦
... ಮಣ ೧ಕ್ಕೆ		೬ ೧೫-೦	[illegible]
" "		೫-೮-೦	೬-೦-೦
... ಪಲ್ಲ ೧ಕ್ಕೆ		೬-೦-೦	೫ ೪ ೦
" "		೬ [illegible]-೦	೬-೦-೦
... ಮಣ ೧ಕ್ಕೆ		೧-[illegible]-೦	೧-೪-೦
... "		೧-೦-೦	೧ ೨-೦
... ೧ಕ್ಕೆ		೧೭-೮-೦	೧೯-೦-೦
... ಪಲ್ಲ ೧ಕ್ಕೆ		೫-೦ ೦	೫-೦-೦
... ೧ಖಂಡಕ್ಕೆ		೬ ೦-೦	೬-೦-೦
... ಮಣ ೧ಕ್ಕೆ		೦ ೨-೦	೧-೦-೦
... ಮಣ ೧ಕ್ಕೆ		೦-೧೦-೦	೦-೫ ೬
(ಟೀ) ಕೆಂಪು		೧೫ ೦ ೦	೧೫-೫-೦
" ಬಿಳಿಪು		೧೫-೧೦ ೬	೧೫-೧೪-೦
" ಗಬ್ಬು ಕೊಂಬು ೧ಕ್ಕೆ		೨೬-೪-೦	೨೯-೪-೦
... ಕೋಲು ೧ಖಂಡಕ್ಕೆ		೮೧-೦-೦	೮೧-೦-೦

ಆರೋಗ್ಯ ಪ್ರಶ್ನೋತ್ತರ ಬೆಲೆ ೧ ಆಣೆ.

(... ಪ್ರಶ್ನೆಗಳಿಗೆ ಸುಲಭ ಉತ್ತರಗಳನ್ನೊಳಗೊಂಡಿದೆ) [152-4]

... ಸಾರ್ವಭೌಮನ ಚರಿತ್ರೆ 8 ಆ

Notes on "Tangle-Wood Tales" Reduced price 2 As.

ಎಂ. ವೆಂಕಟರಾಮಯ್ಯ ... ಬುಕ್ ಡಿಪೋ, ಮೈಸೂರು

ದಯಮಾಡಿ ಕಣ್ಣಿರದು ಇತ್ತ ನೋಡಿರಿ !!!

ಸೊಗಸಾಗಿ ಕಮ್ಮು ... ಪೊಮೇಟಂ ಸಾಬೂನು,

" ... ಸಾಬೂನು "

ಈಗಾಗಲೇ ಯಾವ ವಿಷಯದಲ್ಲೂ ಕೆಡ ಕಲ್ಪನೆಂತೆ ತಯಾರು ಮಾಡಲ್ಪಟ್ಟು ಹೊಸ ಸಪ್ಲೈ ಬಂದಿದೆ.

1 ಆಣೆ ಟಪಾಲು ಬಿಲ್ಲೆ ಕಳುಹಿಸಿ ಕೊಟ್ಟವರಿಗೆ ಮಾದರಿ ಸಾಬೂನು ಉಚಿತವಾಗಿ ಕಳುಹಿಸಿಕೊಡುವೆವು.

		ಕ್ರಯ	ಹಾಸಲು
1	ಸಾಬೂನಿಗೆ	0—6—0	0—4—0
3	"	1—0—0	0—4—0
6	"	1—12—0	0—4—0
9	"	2—4—0	0—6—0

ವರ್ತಕರಿಗೆ ಧಾರಾಳವಾದ ಕಮಿಷನ್ ಕೊಡುವೆವು [101-10]

ನಮ್ಮ ಕಂಪನಿಯ ಘಡಿಯಾರ ಮುಂತಾದ ಮಾಲುಗಳುಳ್ಳ ಕ್ಯಾಟಲಾಗು ಬೇಕಾದವರು ಬರೆದುಕೊಂಡರೆ ಉಚಿತವಾಗಿ ಕಳುಹಿಸಿಕೊಡಲ್ಪಡುವದು

ನಮ್ಮ, ಸೀ. ಎಸ್. ಬಿ ಸಿ ಪಾ ಅಂಡ್ ಕಂಪೆನಿ,

177 ಜೇನಾ ಬಜಾರ್ ರೋಡ್, ಮದ್ರಾಸು.

BENEFIT YOURSELF AND BENEFIT OTHERS

The National Insurance and Banking Company Ltd., Amritsar.

Authorised Capital	**Rs.**	**10,00,000**
Subscribed Capital Exceeds	,,	**9,00,000**
Paid up ,, ,,	,,	**1,00,000**
Funds Exceed	,,	**12,00,000**
Policy-holders ,,		**75,000**

This Company works in accordance with **the Indian Life Assurance Companies' and Provident Societies' Acts 1912** and has also given **double the initial security** to the **Government** as required under the **Insurance Act 1912.**

How is it that the **National, of Amritsar,** has become very popular throughout India?

Because it has got almost all the attractive schemes which any other Life Office or Provident Society in India has got and also new and novel ones besides; issues policies at most favourable rates and on most liberal conditions and distributes relief in thousands every quarter on account of **marriages and deaths.** [122 13]

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time who reside in district or taluk head quarters and who are well versed in English need apply.

For further particulars and prospectuses, please apply with **one anna stamp** and your previous experience in the line to —

M. I. NAGANNAH,
Chief Agent,
The Amritsar National Insurance Buildings, Mysore.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವನ್ನು ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ದೇಹವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೂ ವ್ಯಾಧಿಯಿಂದಲೂ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ದೇಹಕ್ಕೆ ರೋಗಪ್ರಾಪ್ತವಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಆಧಾರವಾದ ಲಕ್ಷಣಗಳೇನೆಂದರೆ.— ಬೆನ್ನಿನಲ್ಲಿ ಛಳುಕು, ... ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಡುವಾಗಿಯೋ ಇಳಿಯುವುದು, ಬಹಳ ಬಾಯಾರಿಕೆ; ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮುಂತಾದವು. ಇವೇ ಮೊದಲಾದುವುಗಳ ಲಕ್ಷ್ಯ ಮಾಡದಿದ್ದರೆ ಮೂತ್ರರೋಗವುಂಟಾಗುವುದು, ಶುಷ್ಕ ... ಮೂತ್ರಕೋಶದ ಕ್ಷಯರೋಗವುಂಟಾಗುವುದು. ... ಸ್ತ್ರೀಸಂಬಂಧವಾದ ರೋಗಗಳೆಂದು ಹೇಳುವ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರವನ್ನು ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ದೇಹಕ್ಕೆ ಆರೋಗ್ಯವನ್ನುಂಟುಮಾಡುವುವು [12-7]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ... ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



... ಔಷಧ ... ಬುಡ್ಡಿಗೆ ... ಔಷಧಗಳನ್ನು ಮಾರುವವರಲ್ಲೆಲ್ಲಾ ದೊರೆಯುವುದು ಅಥವಾ ಡೋನ್ಸ್, ಪಿ. ಓ. ಬಾಕ್ಸ್ ..., ಬೊಂಬಾಯಿ ಇವರಲ್ಲಿ ದೊರೆಯುವುವು

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಇಲ್ಲಿ ಬೆಳೆಗಳು ಚೆನ್ನಾಗಿದ್ದು ತೆನೆ ಕಟ್ಟುತ್ತಾ ಬಂದಿವೆ. ಕೆರೆ ಕುಂಟೆಗಳು ಭರ್ತಿಯಾಗಿರುತ್ತವೆ. ಜಾಡ್ಯಗಳು ಇಲ್ಲ. ಇಲ್ಲಿನ ಗೋಣಿಗರಪೇಟೆ ಗರಡಿ ಚಿನ್ನನ್ನನಿಗೂ ಕಾಡನೂರು ಬಸಪ್ಪನಿಗೂ ಕಳೆದ ತಾ. 6 ರಲ್ಲಿ ಕುಸ್ತಿ ನಡೆದು ಸಮನಾಯಿತು. ಅದರಿಂದ ಪುನಃ 11 ನೇ ತಾ. ಕುಸ್ತಿಮಾಡಿದರು. ಆಗ 3-1 ನಿಮಿಷದಲ್ಲಿ ಬಸಪ್ಪನು ಚಿನ್ನನ್ನನಿಗೆ ಚಿತ್ತುಮಾಡಿದನು. ಚಿನ್ನನ್ನನ ಕಡೆಯ ಕೆಲವರು ಚಿತ್ತು ಆಗಲಿಲ್ಲವೆಂದು ಹೋರಾಡಿದರು. ಹಾಜರಿದ್ದ ಪೊಲೀಸ್ ಇನ್ಸ್‌ಪೆಕ್ಟರವರು ಗಲಭೆ ಆಗದಂತೆ ಪೂರಾ ಬಂದೋಬಸ್ತು ಮಾಡಿ ನ್ಯಾಯವಾಗಿ ಗೆದ್ದವನಿಗೆ ಎರಡು ಭಾಗವೂ, ಸೋತವನಿಗೆ ಒಂದು ಭಾಗವೂ ಕೊಡುವಂತೆ ಮಾಡಿದ್ದರಿಂದ ಸಭಿಕರೆಲ್ಲರಿಗೂ ಸಂತೋಷವಾಯಿತು — ಇಲ್ಲಿ ಟವನ್ ಗಸ್ತು ಚೆನ್ನಾಗಿ ನಡೆಯುತ್ತೆ. ದಸೇದಾರ್ರು ಇನ್ಸ್‌ಪೆಕ್ಟರವರ ಇದಾಯತಿ ಮುತುವರ್ಜಿಯಿಂದ ಕೆಲಸವಾಗುತ್ತಿದೆ —ಇಲ್ಲಿ ಜೂಜಾಟವು ಜಾಸ್ತಿಯಾಗಿದೆ. ಅಲ್ಲದೆ ಕೆಲವು ಸಂಸಾರಸ್ಥರ ಮನೆಗಳಲ್ಲಿ ಹಗಲಿನಿಂದ ರಾತ್ರಿ 10 ಘಂಟೆವರೆಗೆ ಜೂಜು ನಡೆಯುತ್ತೆ. ಇದನ್ನು ನಮ್ಮ ಪೋಲೀಸಿನವರು ಮನಸ್ಸಿಗೆ ತಂದುಕೊಂಡು ನಿಲ್ಲಿಸಿದರೆ ತುಂಬಾ ಉಪಕಾರವಾಗುವದು —ರಾತ್ರಿ ಕಾಲಗಳಲ್ಲಿ ಮ್ಯುನಿಸಿಪಲ್ ದೀಪಗಳು ಪಕ್ಕ ಬೀದಿಗಳಿಗೂ ಸರಿಯಾಗಿ ಪ್ರಕಾಶಿಸುವದಿಲ್ಲ. ಇದನ್ನು ಕ್ರಮಪಡಿಸಬೇಕೆಂದು ನಿರೀಕ್ಷಿಸುತ್ತೇವೆ.

ಚಿಕ್ಕಮಗಳೂರು.—ಕಳೆದ ಗುರುವಾರ ಇಂಜನಿಯರ್ ಇಲಾಖೆಯ ಸಬ್ ಡಿವಿಜನ್ ಆಫೀಸರಾದ ಮಿ ಎ. ರಾಘವೇಂದ್ರರಾಯರು ಪೆನ್ಷನ್ ಮೇಲೆ ನಿವೃತ್ತರಾದರು. ಅವರ ಮಿತ್ರರೆಲ್ಲಾ ಸೇರಿ ಆ ದಿನ ಸಾಯಂಕಾಲ ಇಲ್ಲಿನ ಇಂಜನಿಯರ್ ಆಫೀಸಿನಲ್ಲಿ ಒಂದು ಔತಣವನ್ನು ನಡಿಸಿ ಅವರಿಗೆ ಮರ್ಯಾದೆ ಮಾಡಿದರು. ಮಿ ರಾಘವೇಂದ್ರರಾಯರು ಇಲ್ಲಿ ವಿದ್ಯಾಭ್ಯಾಸ ಮಾಡಿ 1878 ರಲ್ಲಿ ಪ್ರಸಿದ್ಧ ಇಂಜನಿಯರಾಗಿದ್ದ ಮಿ ಗ್ರಾಹಂ ಎಂಬುವರ ಕೈ ಕೆಳಗೆ ಕೆಲಸಕ್ಕೆ ನಿಂತರು. ಅಂದಿನಿಂದ ಈ ವರೆಗೂ ಅಂದರೆ 34 ವರುಷ ಇವರು ಇಂಜನಿಯರ್ ಇಲಾಖೆಯಲ್ಲೇ ಕೆಲಸ ಮಾಡುತ್ತಾ ಬಂದಿದಾರೆ. ಕೆಲಸಕ್ಕೆ ಸೇರಿದಂದಿನಿಂದ 20 ವರುಷಗಳ ವರೆಗೂ ಇಲ್ಲಿಯೇ ಇದ್ದು, ಅನಂತರ ಆಗಾಗ್ಗೆ ಬೇರೆ ಬೇರೆ ಜಿಲ್ಲೆಗಳಿಗೆ ವರ್ಗವಾಗಿ ಹೋದರು. ಅಲ್ಲಿ ಕಟ್ಟಲ್ಪಟ್ಟ ಟ್ರಾನ್ಸ್‌ಫೋರ್ ... ಸೆಂಟ್ರಲ್ ಕಾಲೇಜ್ ಹಾಸ್ಟೆಲ್, ರೆವಿನ್ಯೂ ಸರ್ವೆ ಆಫೀಸು, ಈ ಮುಂತಾದ ಕಟ್ಟಡಗಳು ಇವರ ಹೆಸರನ್ನು ಸ್ಥಾಪನೆ ಮಾಡುತ್ತಿವೆ. ಅಲ್ಲದೆ 1903 ರಲ್ಲಿ ಇಂಜನಿಯರ್ ಇಲಾಖೆಯಲ್ಲಿ ಅಪಹರಿಸಲ್ಪಟ್ಟ 18,200 ರೂಪಾಯಿಗಳನ್ನು ಪತ್ತೆ ಮಾಡಿದ್ದರಿಂದ ಇವರ ಹೆಸರು ಮತ್ತಷ್ಟು ಕೀರ್ತಿಗೆ ಬಂತು. ಇದರಿಂದ ಇವರಿಗೆ ಹಿಸ್ ಹೈನೆಸ್ ಕೋರ್ಟಿನ ವರ್ಗವಾಗಿ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ಈ ದೇಶಕ್ಕೆ ಬಿಜಯಮಾಡಿದ ಕಾಲದಲ್ಲಿ ಇವರಿಗಾಗಿ ಮೈಸೂರು ಮಹಾರಾಜರ ರಸ್ತೆಯನ್ನು ದುರುಸ್ತು ಮಾಡುವ ಕೆಲಸದಲ್ಲಿ ತುಂಬಾ ಸಾಹಸವನ್ನು ತೋರಿಸಿದ್ದರಿಂದ ಗವರ್ನ್‌ಮೆಂಟಿನವರು ಇವರಿಗೆ ಯೋಗ್ಯವಾದ ಪಾರಿತೋಷಕವನ್ನಿತ್ತು ತರಿಗೆ ಈ ಡಿಸ್ಟ್ರಿಕ್ಟಿಗೆ ವರ್ಗಾಯಿಸಿದರು. ಇಲ್ಲಿ ಇವರು ಯುವರಾಜ ಮೆಮೋರಿಯಲ್ ಹಾಲ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ ಬಂಗಲೆ, ... ಮುಂತಾದುವುಗಳನ್ನು ಮಾಡಿಸಿದ್ದು ಮಾತ್ರವಲ್ಲದೆ, ಈ ಊರಿಗೆ ನೀರಿನ ಸರಬರಾಯಿ ಆಗತಕ್ಕ ಕಾರಣ ಕೆರೆಯು ಏರಿಯಲ್ಲಿ ಮೋರಿ ಬಿದ್ದು ಕೆರೆಯ ನೀರೆಲ್ಲಾ ಬಸಿದುಹೋಗುತ್ತಿದ್ದು, 12 ವರುಷಗಳಿಂದ ಪ್ರಯತ್ನ ಪಟ್ಟರೂ ಯಾರಿಗೂ ತಿಳಿಯಬಾರದಿದ್ದ ಕಾರಣವನ್ನು ಮಿ। ರಾಘವೇಂದ್ರರಾಯರೇ ಕಂಡುಹಿಡಿದು ಏರಿಯನ್ನು ಕಡಿಸಿ, ತರಿಗೆ ಅದನ್ನು ಭದ್ರವಾಗಿ ಕಟ್ಟಿ ಒಂದು ವರುಷಕ್ಕೆ ಆಗುವಷ್ಟು ನೀರು ನಿಲ್ಲುವಂತೆ ಮಾಡಿದರು. ಹೀಗೆ ಇವರು ಜನೋಪಕಾರಿಗಳಾಗಿ ಬದುಕಿ ಸರ್ವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇವರಿಗೆ ಈ ವಿಶ್ರಾಂತಿಯಲ್ಲಿ ಆರೋಗ್ಯವೂ ದೀರ್ಘಾಯುಸ್ಸೂ ಉಂಟಾಗಲೆಂದು ಕೋರುತ್ತೇವೆ — ಇಲ್ಲಿ ನಾಲ್ಕಾರು ದಿನಗಳಿಂದ ಮಳೆ ಇಲ್ಲದೆ ಬಿಸಿಲು ಕಾಯುತ್ತಿದ್ದರೂ ಪ್ಲೇಗು ನಿಂತಿಲ್ಲ. ಸಮೀಪದಲ್ಲಿರುವ ನಲ್ಲಿಕೆರೆಹಳ್ಳಿ, ಅತ್ತಿಗುಂದ, ಈ ಪ್ರಾಂತ್ಯ ರೋಗವು ಬಲವಾಗಿದೆ. ಡಾಕ್ಟರುಗಳು ಆ ಜನರಿಗೆ ಇನಾಕ್ಯುಲೇಷನ್ ಮಾಡುತ್ತಾ ಬಂದಿದಾರೆ.

ದಾವಣಗೆರೆ.—ಈ ವರ್ಷ ಮಳೆಯು ತಕ್ಕಮಟ್ಟಿಗೆ ಚೆನ್ನಾಗಿ ಆಗಿರುತ್ತೆ. ಬೆಳೆಗಳು ಸಾಧಾರಣವಾಗಿರುತ್ತೆ. ಈ ಡಿಸ್ಟ್ರಿಕ್ಟಿನ ಬೆಳೆಯಾದ ಹತ್ತಿಯು ಅಂದಾಜು ಮಾಡಿದಷ್ಟು ಆಗುವದಿಲ್ಲ ... ಬೆಳೆಯು ... ತಿಳಿಯುತ್ತಾಗಿರುತ್ತೆ. ವಿಶೇಷ ಮಳೆಯಾದದ್ದೇ ಇದಕ್ಕೆ ಕಾರಣವೆಂದು ಹೇಳಬಹುದಾಗಿದೆ. ಊರಿನ ಆರೋಗ್ಯಸ್ಥಿತಿ ಚೆನ್ನಾಗಿದೆ. ಒಂದೆರಡು ಕಾಲರಾ ಕೇಸುಗಳು ಆಗಿದ್ದವು. ಆದರೂ ಬಹಳ ಅನಾಹುತಗಳು ಆಗದೆ ಇರುವದಕ್ಕಾಗಿ ಸಂತೋಷಪಡುತ್ತೇವೆ. ಪ್ರತಿ ವರ್ಷವೂ ಜೂನ್ ಆಗಸ್ಟ್ ತಿಂಗಳುಗಳಲ್ಲಿ ಶುರುವಾಗುತ್ತಿದ್ದ ಪ್ಲೇಗ್ ಉಪದ್ರವು ಈ ವರುಷ ಮಾಸಿಕೆ ಮಾಡಿರುವದೇ ಪ್ರಜೆಗಳಿಗೆ ಬಹಳ ಸಂತೋಷ. ಧಾರಣೆವಾಸಿಗಳು ಮಾತ್ರ ಇಳಿಯಬೇಕಾಗಿಲ್ಲ —ಇಲ್ಲಿನ ಅಮಾಲ್ದಾರರಾಗಿದ್ದ ಮಿ। ವೆಂಕಟಸ್ವಾಮಯ್ಯನವರಿಗೆ ಕೃಷ್ಣರಾಜಪೇಟೆಗೆ ವರ್ಗವಾಯಿತು. ಇವರು ಇಲ್ಲಿಗೆ ಬಂದು ಸುಮಾರು ನಾಲ್ಕು ವರುಷಗಳಾಗುತ್ತೆ. ಇವರ ಕಾಲದಲ್ಲಿ ಊರಿನವರು ಬಹಳ ಮಟ್ಟಿಗೆ ಸುಖವಾಗಿದ್ದರು. ಇವರ ಮುಖ್ಯ ಉದ್ದೇಶವೆಂದು ಜನರಿಗೆ ತಿಳಿದಿರುವದು ಏನೆಂದರೆ, ಶ್ರೀಮಂತರು ಬಡವರು ಎಂಬ ಭೇದವಿಲ್ಲದೆ ಏಕರೀತಿಯಾಗಿ ಸರ್ವರ ಅನುಕೂಲತೆಗಳನ್ನು ಅರಿತು, ಅವರವರ ಅಹವಾಲುಗಳನ್ನು ವಿಚಾರಿಸಿ ಅನ್ನಕೆ ದಯಪಾಲಿಸುತ್ತಿದ್ದರು. ಇವರು ಮ್ಯುನಿಸಿಪಾಲಿಟಿಯಲ್ಲಿ ಬಹಳ ಏರ್ಪಾಡುಗಳನ್ನು ಮಾಡಿದ್ದಾರೆ. ಜನರ ಹಿತದ ಕಡೆ ಬಹಳ ಲಕ್ಷ್ಯ ಕೊಡುತ್ತಿದ್ದರು. ಪ್ಲೇಗ್ ಕಾಲಗಳಲ್ಲಿ ಇವರು ನಡಿಸಿದ ಕಾರ್ಯಗಳು ವಿಶೇಷ ಸುಖವನ್ನುಂಟುಮಾಡಿರುತ್ತೆ. ಇವರು ಜಾಗ್ರತೆಯಾಗಿ ಇವರಿಗೆ ವರ್ಗವಾದದ್ದಾಗಿ ನಾವು ಬಹಳ ವ್ಯಸನಪಡುತ್ತೇವೆ. ಕಳೆದ ತಾ. 3 ರಲ್ಲಿ ಮಿ। ವೆಂಕಟಸ್ವಾಮಯ್ಯನವರಿಗಾಗಿ ಒಂದು ಔತಣ ನಡೆಯಿತು. ಆಗ್ಗೆ ಹೊಸ ಅಮಲ್ದಾರರಾದ ಮಿ। ... ಅಸಿಸ್ಟೆಂಟ್ ಅಮಲ್ದಾರ ಮಿ। ... ಹಾಜರಿದ್ದು ಸಂತೋಷಪಡುತ್ತೇವೆ. ಭೋಜನಾನಂತರ ತಾಳಮೇಳಗಳೊಡನೆ ಮಿ। ವೆಂಕಟಸ್ವಾಮಯ್ಯನವರನ್ನು ಅವರ ಬಿಡಾರಕ್ಕೆ ಕಳುಹಿಸಿಕೊಟ್ಟರು. ಅದೇ ಸಾಯಂಕಾಲ ಊರಿನ ಮುಖ್ಯ ವರ್ತಕರುಗಳಿಯವರು ಕೆಲವು ಕಡೆ ಮಿ। ವೆಂಕಟಸ್ವಾಮಯ್ಯನವರನ್ನು ಬರಮಾಡಿಕೊಂಡು ಮರ್ಯಾದೆ ಮಾಡಿದರು. ಆ ಕಾಲದಲ್ಲಿ ಒಂದು ಕಡೆ ಮಿ ನಾರಾಯಣಶೆಟ್ಟಿ, ಮಿ। ಎಚ್. ... ರಾಯರು ಮಿ। ವೆಂಕಟಸ್ವಾಮಯ್ಯನವರಿಂದ ಹೊಂದಿದ ಸುಖಗಳನ್ನು ವಿವರಿಸಿ ಅವರನ್ನು ಪ್ರಶಂಸೆ ಮಾಡಿದರು. ಮತ್ತೊಂದು ಕಡೆ ಮಿ। ... ಯವರು ಒಂದು ಉಪನ್ಯಾಸದಿಂದ ಮಿ। ವೆಂಕಟಸ್ವಾಮಯ್ಯನವರ ಗುಣಕಥನ ಮಾಡಿದರು. ... ಯವರು ಸಮಯೋಚಿತವಾಗಿ ಒಂದು ಪದವನ್ನು ... ಅಮಲ್ದಾರರವರ ಶ್ರೇಯಸ್ಸಿಗಾಗಿ ಪ್ರಾರ್ಥಿಸಿದರು

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೨ ನೇ ಇಸವಿ ಅಕ್ಟೋಬರ್ ತಾ ೨೪ ನೇ ಗುರುವಾರ.

ನವರಾತ್ರಿ ಉತ್ಸವಗಳೂ, ಸಭೆಗಳೂ, ಬಿರುದುಗಳೂ.

ಈ ಸಲ ಮೈಸೂರು ಪಟ್ಟಣದಲ್ಲಿ ನವರಾತ್ರಿ ಕಟ್ಲೆಯ ಉತ್ಸವಗಳು ಬಹು ಉತ್ಸಾಹದಿಂದಲೂ ವಿಶೇಷ ಆಹ್ಲಾದಕರವಾಗಿಯೂ ಜರಗಿದವೆಂದು ಸಂತೋಷ ಪಡುತ್ತೇವೆ. ಅರಮನೆಯಲ್ಲಿ ನಡೆದ ದರ್ಬಾರುಗಳೂ, ಬೇರೆ ಬೇರೆ ಪ್ರದರ್ಶನೋತ್ಸವಗಳೂ, ಪರಸ್ಪರ ಸಹಾಯ ಸಂಘಗಳ ಮಹಾಸಭೆಯೂ, ಹಲವು ಸಂತೋಷ ಕೂಟಗಳೂ ಶ್ಲಾಘ್ಯವಾಗಿಯೂ ಸರ್ವಸಮ್ಮತವಾಗಿಯೂ ನೆರವೇರಿ, ಶ್ರೀಮನ್ ಮಹಾರಾಜರವರಿಗೂ ಪ್ರಜೆಗಳಿಗೂ ಇರುವ ಪರಸ್ಪರವಾದ ಪ್ರೀತಿ ಅನುರಾಗಗಳನ್ನು ಬಹುಮಟ್ಟಿಗೆ ವೃದ್ಧಿಮಾಡಿರುತ್ತವೆ. ಈ ಸಲ ಕಾಲಸ್ಥಿತಿಯು ಸಂಸ್ಥಾನದಲ್ಲಿ ಸರ್ವೋತ್ತಮವಾಗಿದ್ದು, ರೋಗಾದ್ಯುಪದ್ರವಗಳ ಬಾಧೆಯೇನೂ ಇಲ್ಲದ ಕಾರಣ ಈ ಉತ್ಸವಗಳಿಗೂ ಸಭೆಗಳಿಗೂ ಪ್ರಜೆಗಳು ಹೇರಳವಾಗಿ ರಾಜಧಾನಿಗೆ ಬಂದಿದ್ದರು.

ಪರಸ್ಪರಸಹಾಯ ಸಂಘಗಳ ವಾರ್ಷಿಕ ಸಭೆಯು ಬಹಳ ತೃಪ್ತಿಕರವಾಗಿ ನಡೆದು, ಮೆಂಬರುಗಳು ಆ ಸಂಘಗಳ ಪುರೋವೃದ್ಧಿಗೆ ಸಹಕಾರಿಗಳಾದ ಹಲವು ವಿಷಯಗಳನ್ನು ಕುರಿತು ಚರ್ಚಿಸಿ ಒಳ್ಳೆಯ ತೀರ್ಮಾನಗಳನ್ನು ಮಾಡಿಕೊಂಡಿದಾರೆ. ದೇಶಾಭ್ಯುದಯಕ್ಕೆ ಪ್ರಜೆಗಳಲ್ಲಿ ಸತ್ಯಸಂಧತೆಯೂ, ಪರಸ್ಪರ ನಂಬಿಕೆಯೂ, ಭಕ್ತಿ ಪ್ರೀತಿಗಳೂ ನೆಲೆಗೊಳ್ಳಬೇಕಾದದ್ದು ಪರಮಾವಶ್ಯಕವಾದ ಕಾರಣ ಮೆಂಬರುಗಳು ಸಾಹಸಪಟ್ಟು ಇವನ್ನು ಅಭಿವೃದ್ಧಿ ಮಾಡುವರೆಂದು ಹಾರೈಸುತ್ತೇವೆ.

ಈ ಸೀಮೆಯ ಅಭಿವೃದ್ಧಿಗೆ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ಆವಶ್ಯವಾದದ್ದೆಂದು ಹೇಳಬೇಕಾಗಿಲ್ಲ. ಇದರಿಂದ ರೈತ ಪ್ರಜೆಗಳಿಗೂ ಕಸಬುದಾರರಿಗೂ ಸಾಕ್ಷಾತ್ತಾದ ತಿಳುವಳಿಕೆಯುಂಟಾಗುತ್ತದೆ; ಅವರ ವಿಚಾರ ಶಕ್ತಿಯೂ, ವಿಶೇಷಜ್ಞಾನವೂ, ಬುದ್ಧಿಕೌಶಲ್ಯವೂ ವಿಕಾಸ ಹೊಂದುವವು. ಈ ಶ್ರೇಷ್ಠವಾದ ಉದ್ದೇಶದಿಂದಲೇ ಪ್ರದರ್ಶನವನ್ನು ಶ್ರೀಮನ್ ಮಹಾರಾಜರವರು ರಾಜಧಾನಿಯಲ್ಲಿ ಪ್ರತಿ ವರುಷವೂ ನಡೆಸುತ್ತಾ ಬಂದಿರುವರೆಂಬುವುದನ್ನು ಪ್ರಜೆಗಳು ತಿಳಿದು, ಹೇರಳವಾಗಿ ಹೋಗಿ ನೋಡಿ ಪ್ರಯೋಜನ ಪಡೆಯುವುದರ ಮೂಲಕ ಪ್ರಭುಗಳ ಅಭೀಷ್ಟವನ್ನು ಸಾರ್ಥಕಪಡಿಸುವರೆಂದು ನಂಬಿದ್ದೇವೆ. ಈ ವರುಷ ಪ್ರದರ್ಶನದ ನೋಟಕರ ಸಂಖ್ಯೆಯು ಬಹಳ ಹೆಚ್ಚಾಗಿದೆ ಎಂದು ತಿಳಿದು ಸಂತೋಷ ಪಡುತ್ತೇವೆ.

ಪ್ರಜಾಪ್ರತಿನಿಧಿ ಸಭೆಯು ನೆನ್ನೆಯಿಂದ ಪ್ರಾರಂಭವಾಗಿದೆ. ಪ್ರತಿನಿಧಿಗಳು ಈ ಸಲದಷ್ಟು ಹಿಂದೆ ಯಾವಾಗಲೂ ಬಂದಿರಲಿಲ್ಲ. ಈ ಸಭೆಯ ಉದ್ದೇಶವನ್ನು ಮೆಂಬರುಗಳು ಪರಿಚಿತವನ್ನು ಕೋರಿ ಹಿಂದೆ ಬಿದ್ದಿರುವ ಪ್ರಜೆಗಳನ್ನು ಮುಂದಕ್ಕೆ ತರುವುದಕ್ಕೂ, ನ್ಯಾಯವಾದ ಕುಂದು ಕೊರತೆಗಳನ್ನು ಮುಚ್ಚುಮರೆಯಿಲ್ಲದೆ ಸರ್ಕಾರದವರಿಗೆ ಅರಿಕೆಮಾಡಿ ಪರಿಹರಿಸಿಕೊಳ್ಳುವುದಕ್ಕೂ, ಪಕ್ಷಪಾತವಿಲ್ಲದೆ ಸರ್ವಸಮತ್ವಭಾವದಿಂದ ಸಲಹೆಗಳನ್ನು ಕೊಡುವುದಕ್ಕೂ ಸಹಕಾರಿಗಳಾದ ವಿಷಯಗಳನ್ನು ಹಿಡಿದು ಚರ್ಚಿಸಿ ಸಾರ್ಥಕಪಡಿಸುವವರಾಗಲೆಂದು ಕೋರುತ್ತೇವೆ.

ಈ ಸಲ ಅರಮನೆಯಲ್ಲಿ ನಡೆದ ದರ್ಬಾರುಗಳಲ್ಲಿ ಶ್ರೀಮನ್ಮಹಾರಾಜರವರು ಸಂಸ್ಥಾನದ ದಿವಾನರಾದ ಮ॥ ಟಿ. ಆನಂದರಾವ್, ಸಿ. ಐ. ಇ. ಯವರಿಗೆ "ಪ್ರಧಾನ ಶಿರೋಮಣಿ" ಎಂಬ ಬಿರುದನ್ನು ತಕ್ಕ ಖಿಲ್ಲತ್ತುಗಳ ಸಮೇತ ದಯಪಾಲಿಸಿದ್ದು ಸಂತೋಷಪ್ರದವಾಗಿದೆ. ಇವರ ಶಾಂತಸ್ವಭಾವವೂ, ಗಾಂಭೀರ್ಯವೂ, ಸತ್ಯಪ್ರವರ್ತನವೂ, ಭೂತದಯೆ ಪರೋಪಕಾರ ಗುಣವೂ ಸ್ತುತ್ಯರ್ಹವಾಗಿರುತ್ತವೆ. ಅರಮನೆಯ ಪಂಡಿತ ಮಹಾವಿದ್ವಾನ್ ವೇ॥ ಅಯ್ಯಾಶಾಸ್ತ್ರಿಗಳಿಗೆ ಅವರ ಕವಿತಾಚತುರತೆಯನ್ನು ಪರಿಶೀಲಿಸಿ "ಕವಿತಿಲಕ" ಎಂಬ ಬಿರುದನ್ನೂ, ವೀಣಾ ಗಾನದಲ್ಲಿ ವಿಶೇಷ ಕೌಶಲ್ಯವನ್ನು ಸಂಪಾದಿಸಿಕೊಂಡಿರುವ ಅರಮನೆಯ ಪಂಡಿತರು ಮ॥ ಸುಬ್ಬಣ್ಣನವರಿಗೆ "ವೈಣಿಕಪ್ರವೀಣ" ಎಂಬ ಬಿರುದನ್ನೂ, ದಕ್ಷಿಣ ದೇಶದಲ್ಲೆಲ್ಲಾ ಹಾಡುಗಾರಿಕೆಯಲ್ಲಿ ಪ್ರಸಿದ್ಧಿ ಹೊಂದಿ ಅನೇಕ ಮೆಡಲುಗಳನ್ನೂ ತೋಡಾಗಳನ್ನೂ ಸಂಪಾದಿಸಿಕೊಂಡಿರುವ ಅರಮನೆ ವಿದ್ವಾಂಸರು ಮ॥ ಬಿ. ಕೃಷ್ಣಪ್ಪನವರಿಗೆ "ಗಾನವಿಶಾರದ" ಎಂಬ ಬಿರುದನ್ನೂ ಮಹಾರಾಜರವರು ತಕ್ಕ ಭಂಗಾರದ ತೋಡಾ ಖಿಲ್ಲತ್ತುಗಳ ಸಹಿತ ದಯಪಾಲಿಸಿರುವುದು ಕುಶಲವಿದ್ಯಾ ಪ್ರೇಮಿಗಳಿಗೆ ಬಹಳ ಪ್ರೋತ್ಸಾಹವಾಯಿತೆಂದು ಸಂತೋಷಪಡುತ್ತೇವೆ.

ಚಕ್ರವರ್ತಿಯವರು ಕೆಲವು ಬೆಸ್ತರಿಗೆ ಬಹುಮಾನಗಳನ್ನು ದಯಪಾಲಿಸಿದುದು.

ಸಮುದ್ರದ ಮೇಲೆ ವೇಗವಾಗಿ ಸಂಚಾರಮಾಡುವ ದೊಡ್ಡ ದೊಡ್ಡ ಹಡಗುಗಳು ಆಗಾಗ್ಗೆ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ, ಅಥವಾ ಬಂಡೆಗಳಿಗೆ ತಗಲಿ, ಭಯಂಕರವಾದ ಅಪಾಯಗಳೂ ಪ್ರಾಣನಷ್ಟಗಳೂ ಉಂಟಾಗುತ್ತವೆಯಷ್ಟೆ. ಇಂತಹ ಸಂದರ್ಭಗಳಲ್ಲಿ ಪ್ರಾಣಾಪಾಯಕ್ಕೆ ಸಿಕ್ಕುವ ಬಡ ಪ್ರಯಾಣಿಕರ ದೌರ್ಭಾಗ್ಯ ಸ್ಥಿತಿಯು ವರ್ಣಿಸಲಸಾಧ್ಯವಾಗಿರುವುದು. ಇವರಿಗೆ ಸಂಭವಿಸುವ ಅಪಾಯಗಳ ವಿಷಯ ಇತರರಿಗೆ ತಿಳಿಯುವುದು ಕಷ್ಟ. ಒಂದುವೇಳೆ ತಿಳಿದರೂ ಇಂಥವರಿಗೆ ಸಹಾಯ ಕೊಡುವುದಕ್ಕಾಗಿ ಹಿಂತೆಗೆಯದೆ ಓಡಿಹೋಗುವಷ್ಟು ಧೈರ್ಯವುಳ್ಳವರು ಹೆಚ್ಚಾಗಿರುವುದಿಲ್ಲ. ಈ ವರುಷದಲ್ಲಿ ಕೆಲವು ಸಂದರ್ಭಗಳಲ್ಲಿ ಇಂತಹ ಅಪಾಯಗಳಿಗೆ ಸಿಕ್ಕಿ, ಮರಣದ ಬಾಯಿಗೆ ತುತ್ತಾಗುತ್ತಿದ್ದ ಅನೇಕರ ಪ್ರಾಣಸಂರಕ್ಷಣೆಮಾಡುವುದರಲ್ಲಿ ತಮ್ಮ ಧೀರತನ ಸಾಹಸಗಳನ್ನು ಪ್ರಕಾಶಪಡಿಸಿರುವ ಕೆಲವು ಮಂದಿ ಬೆಸ್ತರನ್ನು ಕಳೆದ ತಿಂಗಳಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರು ತಮ್ಮ ಬಾಲ್ ಮೋರಲ್ ರಾಜಭವನಕ್ಕೆ ಬರಮಾಡಿಕೊಂಡು ಅವರೆಲ್ಲರಿಗೂ ಒಂದೊಂದು ಕಂಚಿನ ಮೆಡಲುಗಳನ್ನೂ ಬಹುಮಾನಗಳನ್ನೂ ದಯಪಾಲಿಸಿರುವುದಾಗಿ ತಿಳಿದು ಬರುತ್ತದೆ.

ಬಹುಮಾನ ಪಡೆದವರಲ್ಲಿ ಇಬ್ಬರು ಸ್ಕಾರ್ ಬರೋ ಎಂಬ ರೇವುಪಟ್ಟಣದಲ್ಲಿ ಹಡಗಿನ ಅಪಾಯಗಳಿಗೆ ಸಿಕ್ಕಿದ ಜನಗಳ ಪ್ರಾಣಗಳನ್ನು ರಕ್ಷಿಸುವುದಕ್ಕಾಗಿ ಏರ್ಪಾಟಾಗಿರುವ ಉಮೇದುವಾರರ ಒಂದು ಸಂಘಕ್ಕೆ ಸೇರಿದವರಾಗಿದ್ದರು. ಕಳೆದ ಜನವರಿ 11 ನೆಯ ತಾರೀಖಿನಲ್ಲಿ ಡಂಡಿಯಿಂದ ಸ್ಕಾರ್ ಬರೋ ರೇವಿಗೆ ಬರುತ್ತಿದ್ದ ಒಂದು ಜಹಜು ದಡದ ಸಮೀಪದಲ್ಲಿ ಆಕಸ್ಮಾತ್ತಾಗಿ ಒಂದು ಬಂಡೆಗೆ ಬಡಿದು ಅಪಾಯಕ್ಕೀಡಾಯಿತು. ಅದರಲ್ಲಿದ್ದ ಎಂಟು ಮಂದಿಯು ಕೇಗೆ ಬನ್ನು ಬಂಡೆಗಳನ್ನು ಭದ್ರವಾಗಿ ಹಿಡಿದುಕೊಂಡು ತಮ್ಮ ಪ್ರಾಣಗಳನ್ನು ರಕ್ಷಿಸುವವರು ಎಷ್ಟು ಹೊತ್ತಿಗೆ ಬಂದಾರೆಂದು ಹಾರೈಸುತ್ತಾ ಕಾದಿದ್ದರು. ಮೇಲ್ಕಂಡ ಇಬ್ಬರು ಬೆಸ್ತರು ಕೂಡಲೇ ಸಮುದ್ರದೊಳಗೆ ನುಗ್ಗಿಹೋಗಿ, ಆ ಎಂಟು ಮಂದಿಯನ್ನು ಸುರಕ್ಷಿತವಾಗಿ ದಡಕ್ಕೆ ತಂದು ಸೇರಿಸಿದರು.

ಕಳೆದ ಜನವರಿ 17 ನೆಯ ತಾರೀಖಿನಲ್ಲಿ ಪೀಟರ್ ಹೆಡ್ ಎಂಬ ಸ್ಥಳದಿಂದ ಹೊರಟಿದ್ದ ಇನ್ನೊಂದು ಜಹಜು ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ, ಬಡಕೊಚ್ಚಿಕೊಂಡುಹೋಗಿ, ಎಡ್ ವರ್ಡ್ ಪ್ರೋ ಎಂಬಲ್ಲಿ ಬಂಡೆಗೆ ಬಡಿದು ಅಪಾಯಕ್ಕೀಡಾದಾಗ ಸಟ್ ಲ್ಯಾಂಡಿನಲ್ಲಿದ್ದ ಎಂಟು ಮಂದಿ ಬೆಸ್ತರು ಕೂಡಲೆ ಒಂದು ದೋಣಿಯನ್ನು ತೆಗೆದುಕೊಂಡು ಅವರ ಸಹಾಯಕ್ಕೆ ಓಡಿಹೋಗಿ, ಆ ಜಹಜಿನಲ್ಲಿದ್ದವರ ಪ್ರಾಣಗಳನ್ನೆಲ್ಲಾ ಸಂರಕ್ಷಿಸಿದರು.

ಜನವರಿ ತಾರೀಖು 19 ರಲ್ಲಿ ಪೌರ್ ರೋಸಾಲಾ ಹೆಡ್ ಎಂಬಲ್ಲಿ ಮತ್ತೊಂದು ಜಹಜು ದಡದ ಸಮೀಪದಲ್ಲಿ ಬಂಡೆಗೆ ಬಡಿದು ಅಪಾಯಕ್ಕೀಡಾಯಿತು. ಜಹಜಿನಲ್ಲಿದ್ದವರ ಪೈಕಿ ನಾಲ್ಕು ಮಂದಿ ಈಜಿಕೊಂಡು ದಡಕ್ಕೆ ಬಂದು ಸೇರುವುದಕ್ಕೆ ಪ್ರಯತ್ನಪಟ್ಟರು. ಅವರಲ್ಲಿ ಒಬ್ಬನು ಮಾತ್ರ ಬಹಳ ಸಾಹಸಪಟ್ಟು ದಡವನ್ನು ಸೇರಿದನು. ಉಳಿದ ಮೂವರಲ್ಲಿ ಇಬ್ಬರು ಸಮುದ್ರದ ಪಾಲಾದರು. ಮತ್ತೊಬ್ಬನು ಸೋತು ಮುಳುಗುವುದಕ್ಕಿದ್ದನು. ಕೂಡಲೆ ಅದೇ ಊರಿನ ಒಬ್ಬ ಬೆಸ್ತನು ಈಜಿಕೊಂಡು ಹೋಗಿ ಅವನನ್ನು ಹಿಡಿದು ದಡಕ್ಕೆ ಸೇರಿಸಿದನು. ತರುವಾಯ ಅದೇ ಬೆಸ್ತನೂ ಬೇರೆ ಮೂರು ಮಂದಿ ಬೆಸ್ತರೂ ಸೇರಿ ಒಂದು ದೋಣಿಯನ್ನು ತೆಗೆದುಕೊಂಡು ಹೋಗಿ, ಆ ಜಹಜಿನಲ್ಲಿ ಇನ್ನೂ ಉಳಿದಿದ್ದವರನ್ನು ಸುಕ್ಷೇಮದೊಡನೆ ಭೂಮಿಗೆ ತಂದು ಇಳಿಸಿದರು. ಈ 14 ಮಂದಿ ಬೆಸ್ತರಿಗೂ ಮೆಡಲುಗಳೂ ಬಹುಮಾನಗಳೂ ಸಿಕ್ಕಿರುತ್ತವೆ.

ಆಪತ್ತಿಗೆ ಸಿಕ್ಕಿಬಿದ್ದವರ ವಿಷಯದಲ್ಲಿ ಈ ಬೆಸ್ತರಿಗಿದ್ದ ಸಂತಾಪವೂ ಅವರಿಗೆ ಸಹಾಯ ಮಾಡುವುದರಲ್ಲಿ ಇವರು ಪ್ರಕಾಶಪಡಿಸಿರುವ ಧೀರತನವೂ ಸ್ತೋತ್ರಾರ್ಹವಾದುವುಗಳಾಗಿರುತ್ತವೆ. ಇವರ ಉದ್ಯೋಗ ವಿದ್ಯಮಾನಗಳು ಕೇವಲ ಅಲ್ಪವಾದುವುಗಳೇ ಆಗಿದ್ದರೂ ಇವರ ಗುಣನಡತೆಗಳು ಅಲ್ಪವಾದುವುಗಳಲ್ಲ. ಆದುದರಿಂದ ಇವರು ಚಕ್ರವರ್ತಿ ಸಾರ್ವಭೌಮರ ಬಹುಮಾನಕ್ಕೆ ಪಾತ್ರರಾದುದನ್ನು ನೋಡಿ ನಾವು ಸಂತೋಷಪಡಬೇಕಾಗಿದೆ. ಜನಗಳಲ್ಲಿ ಸ್ವಾರ್ಥಚಿಂತೆಯು ಸ್ವಲ್ಪಮಟ್ಟಿಗೆ ಹೆಚ್ಚಾಗಿರುತ್ತದೆಯೋ ಅಷ್ಟರಮಟ್ಟಿಗೆ ಲೋಕದಲ್ಲಿ ಪರೋಪಕಾರವು ಕಡಮೆಯಾಗುವುದು. ಕಷ್ಟದಲ್ಲಿ ಬಿದ್ದವರು ಯಾರೇ ಆಗಲಿ ಅವರಿಗೆ ಸಹಾಯಮಾಡುವುದು ಮಾನುಷಧರ್ಮವಾಗಿರುತ್ತದೆ. ಯಾರು ಹಾಗೆ ಮಾಡುವುದಿಲ್ಲವೋ ಅವನು ಹೆಸರಿಗೆ ಹೊರತು ಮನುಷ್ಯನೆಂದು ಕರೆಸಿಕೊಳ್ಳುವುದಕ್ಕೆ ಯೋಗ್ಯನಾಗಲಾರನು.

ಯೇಸು ಕ್ರಿಸ್ತನಲ್ಲಿ ಮನುಷ್ಯಸ್ವಭಾವವು ಯಾವ ದೋಷವಾದರೂ ಇಲ್ಲದೆ ಸಂಪೂರ್ಣವಾಗಿದ್ದಿತು. ಆತನು ಈ ಲೋಕದಲ್ಲಿ ಅವತರಿಸಿದ ಮುಖ್ಯವಾದ ಉದ್ದೇಶವು—ಕೆಟ್ಟುಹೋದ ಮಾನವರನ್ನು ಹುಡುಕಿ ರಕ್ಷಿಸಬೇಕೆಂಬುವುದೇ ಆಗಿದ್ದಿತು. ಆತನ ಜೀವನಚರಿತ್ರೆಯನ್ನು ಓದಿನೋಡಿದರೆ, ಇದು ಸ್ಪಷ್ಟವಾಗಿ ಕಂಡುಬರುವುದು. ಶ್ರೀ ಪೌಲನು ಫಿಲಿಪ್ಪಿ ಪಟ್ಟಣದಲ್ಲಿದ್ದ ಕ್ರೈಸ್ತರಿಗೆ ಒಂದು ಪತ್ರಿಕೆಯನ್ನು ಬರೆಯುವಾಗ್ಗೆ ಹೀಗೆ ಬುದ್ಧಿವಾದವನ್ನು ಹೇಳುತ್ತಾನೆ—"ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ, ಪರಹಿತವನ್ನು ಸಹ ನೋಡಲಿ. ಕ್ರಿಸ್ತ ಯೇಸುವಿನಲ್ಲಿದ್ದಂಥಾ ಮನಸ್ಸು ನಿಮ್ಮಲ್ಲಿಯೂ ಇರಲಿ. ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸಮಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು, ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ, ತನ್ನನ್ನು ತಗ್ಗಿಸಿಕೊಂಡು, ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತಸ್ಥಾನಕ್ಕೆ ಏರಿಸಿ, ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ" ಎಂಬುವುದೇ. ಇಂತಹ ಮನಸ್ಸು ಸರ್ವರಲ್ಲಿಯೂ ಇರಬೇಕಾದುದು ಅತ್ಯಾವಶ್ಯಕವಲ್ಲವೆ?

ಟರ್ಕಿ ಮಾಂಟಿನಿಗ್ರೋ ಯುದ್ಧವು

ಕಳೆದ ವಾರ ಬಂದಿರುವ ಮುಖ್ಯ ತಂತೀ ವರ್ತಮಾನಗಳು

ತಾ. 14 ನೇ ಸೋಮವಾರ — ಟರ್ಕಿಯವರಿಗೂ ಮಾಂಟಿನಿಗ್ರೋದವರಿಗೂ ನಡೆಯುತ್ತಿರುವ ಯುದ್ಧದ ಮೊದಲನೆ ಕದನಗಳಲ್ಲಿ ಮಾಂಟಿನಿಗ್ರೋದವರ ಕಡೆ ಬಹಳ ಮಂದಿ ನಷ್ಟಪಡುತ್ತಿದಾರೆ. ನಾಪಟ್ಟಾ ಆಸ್ಪತ್ರೆಗಳಲ್ಲಿ ಗಾಯಪಟ್ಟ 370 ಮಂದಿ ಚಿಕಿತ್ಸೆ ಹೊಂದುತ್ತಿದಾರೆ. ಯುದ್ಧಭೂಮಿಯಲ್ಲಿ ಗಾಯಪಟ್ಟು ಬರುತ್ತಿರುವ ಸೈನಿಕರ ಸಂಖ್ಯೆ ಹೆಚ್ಚುತ್ತಿದೆ. ಮಾಂಟಿನಿಗ್ರೋದವರು ಸ್ಕುಟಾರಿ ಕೆರೆಯ ಬಳಿಯಿದ್ದ ಟರ್ಕಿ ಹಡಗನ್ನು ಹಾಳುಗೆಡಹಿದರು. ಟರ್ಕಿಯ ಮತ್ತು ಕ್ರೀಟ್ ಯಾದಲ್ಲಿ ಯುದ್ಧ ನಡೆಯುತ್ತಿರುವುದು ಸ್ಕುಟಾರಿಗೆ ಕಾಣುತ್ತಿದೆ. ಮಾಂಟಿನಿಗ್ರೋದವರು ಕ್ರೀಟ್ ಯುವನ್ನು ಮುತ್ತಿಗೆ ಹಾಕಿದರು, ... ಮಂದಿ ಮಕ್ಕಳು ಬೆಂಕಿಯಲ್ಲಿ ನಾಶವಾದರು. ಬಿಜ್ಜ ಗುಂಡಿಯ ಬಳಿ ಇದ್ದ ಗುಡ್ಡವನ್ನು ಮಾಂಟಿನಿಗ್ರೋದವರು ಆಕ್ರಮಿಸಿಕೊಂಡರು. ಅವರನ್ನು ... ದೇ. ಪಡೆದ ಟರ್ಕಿ ಸೈನಿಕರಲ್ಲಿ ಅನೇಕರು ನಷ್ಟಪಟ್ಟು ಸೋತುಹೋದರು. ಮಾಂಟಿನಿಗ್ರೋದವರಿಗೆ ನಾಲ್ಕು ಫಿರಂಗಿಗಳೂ, ಅನೇಕ ಬಂದೂಕುಗಳೂ ಆಹಾರ ಮದ್ದು ಗುಂಡು ಸಿಕ್ಕಿದವು. ಇದುವರೆಗೆ ಇವರ ಕಡೆ 416 ಮಂದಿ ಕೊಲೆಯಾದರು, 800 ಮಂದಿ ಗಾಯಪಟ್ಟರು.

ಟೂಜಿ ಪಟ್ಟಣವು ಈ ದಿನ ಮಾಂಟಿನಿಗ್ರೋದವರಿಗೆ ಸ್ವಾಧೀನವಾಯಿತು. ಅವರಿಗೆ ಅಲ್ಲಿ ಅನೇಕ ಫಿರಂಗಿಗಳು, 7,000 ಬಂದೂಕುಗಳು, 800 ... ಗಳು, ಅನೇಕ ಕುದುರೆಗಳು, ಹತ್ತು ದಿನಗಳ ಆಹಾರ ಸಾಮಗ್ರಿಗಳು ಸಿಕ್ಕಿದವು. ಅಲ್ಲದೆ ಆರು ಪಟಾಲಮಿನ ಟರ್ಕಿ ಸೈನಿಕರು ಸೆರೆಯಾಗಿರುತ್ತಾರೆ.

ಈ ದಿನ ಬೆಳಗಿನ ಝಾವ 6 ಗಂಟೆಯಲ್ಲಿ ಟರ್ಕಿ ಸೈನ್ಯಗಳು ಎತ್ತ... ನ್ನು ದಾಟಿ ಹೋಗಿ ಸರ್ವಿಯಾ ರಾಜ್ಯಕ್ಕೆ ಸೇರಿದ ರಿಸ್ಟೋವಾಟ್ಸ್ ಎಂಬ ... ದ ಬಳಿ ಸರ್ವಿಯಾ ಸೈನ್ಯವನ್ನು ಸಂಧಿಸಿದವು. ಸರ್ವಿಯಾ ಸೈನ್ಯಗಳು ... ಗೂಡಿ ಬಹಳ ಹೊತ್ತು ಯುದ್ಧ ನಡೆ ಟರ್ಕಿಯವರನ್ನು ಓಡಿಸಿ ಬಿಟ್ಟವು. ಎಪ್ಪಕಟ್ಟಿನ ಸರಹದ್ದಿನಲ್ಲಿ ಉಪ್ಪಕ್ಕೂ ಹತ್ತು ಮೈಲಿ ದೂರ ಕದನಗಳು ನಡೆಯುತ್ತಿರುವವು.

ತಾ. 15 ನೇ ಮಂಗಳವಾರ.—ಟರ್ಕಿಯವರ ಹೊಸ ಸೈನಿಕರು ಗು... ಯನ್ನು ಪಲಪಿ, ಮಾಂಟಿನಿಗ್ರೋದವರ ಮೇಲೆ ಯುದ್ಧ ಕಾರ್ಯಗಳನ್ನು ನಡೆಸುತ್ತಿರುವುದಾಗಿಯೂ ಅವರನ್ನು ಅಲ್ಲಿಂದ ಹಿಮ್ಮೆಟ್ಟಿಸುತ್ತಿದಾರೆಂತಲೂ ... ಮಾಂಟಿನಿಗ್ರೋ ದೇಶದೊಳಗೆ ಕದನವಾಗುತ್ತಿದೆ ಎಂದೂ, ಟೂಜಿಯಲ್ಲಿ ಟರ್ಕಿಯವರಿಗೆ ಜಯಪ್ರದವಾಯಿತೆಂದೂ ಟರ್ಕಿ ಸರ್ಕಾರದವರು ಪ್ರಕಟಿಸಿ... 1,000 ಮಾಂಟಿನಿಗ್ರೋ ಸೈನಿಕರು ಟಾರಾಬಾಷ್ ಠಾಣ್ಯವನ್ನು ಮುತ್ತಿಗೆ ಹಾಕಬೇಕೆಂದು ಪ್ರಯತ್ನಪಡುತ್ತಿದ್ದದನ್ನು ಟರ್ಕಿಯವರು ಪ್ರಚಂಡ... ದೀಪದ ಬೆಳಕಿನ ಮೂಲಕ ಸ್ಕುಟಾರಿಯಿಂದ ನೋಡಿ ತಿಳಿದು ಅವರ ಮೇಲೆ ... ಬಾಣದ ಫಿರಂಗಿಗಳನ್ನೂ ಬಂದೂಕುಗಳನ್ನೂ ಗುರಿಕಟ್ಟಿ ಹೊಡೆದರು ... ಗಳ ಮಳೆಯನ್ನಾಗಲಿ, ಹಿಮ್ಮೆಟ್ಟಿ ಎಂದು ಹೇಳಿದ ತಮ್ಮ ಸೈನ್ಯಾಧಿಪತಿ... ಹುಕುಮನ್ನಾಗಲಿ ಲಕ್ಷ್ಯಮಾಡದ 1,000 ಮಾಂಟಿನಿಗ್ರೋದವರೂ ರೋ... ದ ಶತ್ರುಗಳ ಮೇಲೆ ನುಗ್ಗಿಹೋದದ್ದರಿಂದ ಇವರೆಲ್ಲಾ ಹುಲ್ಲಾಗಿ ... ದಹಾ ಉಳಿಯದಂತೆ ಹತರಾದರೆಂದು ಹೇಳುತ್ತಾರೆ.

ನೆನ್ನೆಯೆಲ್ಲಾ ಸರ್ವಿಯಾ ಎಪ್ಪಕಟ್ಟಿನಲ್ಲಿ ಯುದ್ಧನಾಯಿತು. ... ಸೈನ್ಯಗಳು 4,000 ಇದ್ದವು. ಸರ್ವಿಯ ಸೈನಿಕರಲ್ಲಿ 31 ಮಂದಿ ಕೊಲೆಯಾದರು; 1 ಮಂದಿಗೆ ಗಾಯವಾಯಿತು. ಆದರಿಂದ ಇವರು ಹಿಮ್ಮೆಟ್ಟಿದರು.

ತಾ 16 ನೇ ಬುಧವಾರ.—ಟೂಜಿ, ಸ್ಕುಟಾರಿಗಳ ನಡುವೆ ... ದೌಲಾನ್ ಕೋಟೆಯು ಮಾಂಟಿನಿಗ್ರೋದವರ ವಶವಾಯಿತು. ಅಲ್ಲಿ ಟರ್ಕಿ ಸೈನಿಕರಲ್ಲದೆ ಅವರ ಅಧಿಕಾರಿಗಳೂ 12 ಮಂದಿ ಇದ್ದು ಎಲ್ಲಾ ... ಹಿಡಿಯಲ್ಪಟ್ಟರು. ಈ ಜಯಪ್ರದದ ಸುದ್ದಿ ತಿಳಿಯದೆಂದು ಟರ್ಕಿಯ... ಹೇಳುತ್ತಾರೆ.

ತಾ. 17 ನೇ ಗುರುವಾರ.—ನೆನ್ನೆ ಮಾಂಟಿನಿಗ್ರೋದವರು ಬೆ... ವನ್ನು ಗೆದ್ದು 700 ಮಂದಿ ಶತ್ರು ಸೈನಿಕರನ್ನು ಸೆರೆ ಹಿಡಿದದಲ್ಲದೆ 14 ಫಿರಂಗಿಗಳನ್ನು ಕಿತ್ತುಕೊಂಡರು. ಮಾಂಟಿನಿಗ್ರೋದವರ ಕಡೆ 10 ಮಂದಿ ಕೊಲ್ಲಲ್ಪಟ್ಟರು; 10 ಮಂದಿಗೆ ಗಾಯಗಳಾದವು.

ಬಲ್ಗೇರಿಯ, ಸರ್ವಿಯ ಮತ್ತು ಗ್ರೀಸ್ ರಾಜ್ಯಗಳವರು ಕೂಡ ಟರ್ಕಿಯ ಮೇಲೆ ಯುದ್ಧಮಾಡುವುದಾಗಿ ಪ್ರಸಿದ್ಧಮಾಡಿಕೊಟ್ಟರು.

ಸರ್ವಿಯ ಸೈನಿಕರು ಪ್ರಿಜಫೋಲ್ಸ್ ಎಂಬಲ್ಲಿ ಅಲ್ಬೇನಿಯನ್ನರ ಸಂಗಡ ಯುದ್ಧಮಾಡಿ 200 ಮಂದಿಯನ್ನು ಕೊಂದು ನೋಯಿಸಿದರು. ನವೀಪಜಾರ್ ನಲ್ಲಿ ಬಲ್ಗೇರಿಯರು ಟರ್ಕಿ ಸೈನಿಕರ ಮೇಲೆ ಯುದ್ಧಮಾಡುತ್ತಿದಾರೆ.

ತಾ. 18 ನೇ ಶುಕ್ರವಾರ.—ಬಲ್ಗೇರಿಯರು ಫಿಲಿಪ್ಪೋಪೊಲಿಸ್ಸಿನ ದಕ್ಷಿಣ ... ಎರಡು ಭಾರೀ ರೈಲ್ ಸೇತುವೆಗಳನ್ನು ಹಾಳುಮಾಡಿ, ಟೆಲಿಗ್ರಾಫ್ ತಂತಿಗಳನ್ನು ಕಿತ್ತುಹಾಕಿದರು. ಟರ್ಕಿ ಸುಲ್ತಾನರು ತಮ್ಮ ಸೈನಿಕರಿಗೆಲ್ಲಾ ಯುದ್ಧ...

ವರೆಗೂ ಹೆಂಗಸರು ಮಕ್ಕಳನ್ನೂ ಅವರುಗಳ ಆಸ್ತಿಪಾಸ್ತಿಗ ... ಹಿಂದಕ್ಕೆ ... ಟರ್ಕಿ ಸೈನಿಕರು ಪ್ರಿಜ್ರೆಂಡ್ ಎಂಬ ಪಟ್ಟಣವನ್ನು ಸುತ್ತ ಸ್ವಾಧೀನ ... ಸೆರೆಯಾ ಸ್ಥಾನಗಳನ್ನು ಸೂರೆಗೊಳಿಸಿ ... ಬಹಳ ನಷ್ಟ ಪಟ್ಟು ... ಆಹಾರ ಸಾಮಗ್ರಿಗಳನ್ನು ... ಟರ್ಕಿಯಿಂದ ವರ್ತಮಾನ ಬಂದಿದೆ

ತಾ 11 ನೇ ಶನಿವಾರ ... ಒಂದು ಸಣ್ಣ ಪಟ್ಟಣವನ್ನು ... ಗಡಿಯಲ್ಲಿ ... ಎಂಬ ಸ್ಥಳವು ಟರ್ಕಿಯ ... ಗ್ರೀಕರು ... ಎಂಬ ಪಟ್ಟಣವನ್ನು ಆಕ್ರಮಿಸಿ ... ಎಲಾಸೊನ ಎಂಬ ಪಟ್ಟ ... ಕಡೆಗೆ ನುಗ್ಗುತ್ತಿದಾರೆ ... ಟರ್ಕಿ ಸಮುದ್ರತೀರಕ್ಕೆ ಮುತ್ತಿಗೆ ಹಾಕಿರುವರು ಟರ್ಕಿಯವರು ... ಸೇರಿದ ನಾನಾ ... ಪಡೆಗಳನ್ನು ... ಎಲ್ಲಾ ಕಡೆಗಳಲ್ಲೂ ಸಣ್ಣ ಯುದ್ಧಗಳು ನಡೆಯುತ್ತಿರುವವು

ಒಳದೇಶದ ವೃತ್ತಾಂತಗಳು.

... ತಾ 27 ನೇ ಭಾನುವಾರ ಮಧ್ಯಾಹ್ನ ಪ್ರಜಾಪ್ರತಿನಿಧಿಗಳಿಗೆ ರಾಜ ... ಸದ್ಯೋಯುಕ್ತ ವಿತನ ನಡಿಸಲ ... ದು ಕೇಳುತ್ತೇವೆ.

ಕಳೆದ ಸೋಮವಾರದಿಂದ ರಾಜಧಾನಿಯಲ್ಲಿ ಮೋಡ ಕವಿದುಕೊಂಡು ... ಮಳೆ ಸುರಿಯುತ್ತಾ ಇದೆ ಈ ಶೀತ ಗಾಳಿ ಮಳೆಗಳಿಂದ ... ಜನರು ... ಕಷ್ಟಪಡುತ್ತಿದ್ದಾರೆ

ಮೈಸೂರು ತಾಲ್ಲೂಕಿಗೆ ಸೇರಿದ ... ಗ್ರಾಮದಲ್ಲಿ ಕೆಲವು ದಿನಗಳ ... ಒಬ್ಬನನ್ನು ಹಾರೋ ... ಪೋಲೀಸಿನವರು ಶಾವನ ... ಮೂರು ಮಂದಿಯನ್ನು ಹಿಡಿದು ಆವರ ಮೇಲೆ ... ಮೊಕದ್ದಮೆಯನ್ನು ಹೂಡಿದ್ದಾರೆ

... ಕೋರ್ಟಿನ ಹೆಡ್ ಕ್ಲಾರ್ಕ್ ... ಕಳೆದ ಆದಿವಾರ ದಿನ ಸಾಯಂಕಾಲದ ಹೊತ್ತಿನಲ್ಲಿ ಸ್ನಾನ ಮಾಡುತ್ತಿ ... ಮೃತರಾದರು ಇವರ ದೇಹವು ಎಂಟು ದಿನಗಳ ಮೇಲೆ ... ಸಿಕ್ಕಿ ಉತ್ತರಕ್ರಿಯೆಗಳು ನಡಿಸಲ್ಪಟ್ಟವು.

... ಹೊಸ ... ನ್ಯಾಯವಾದಿಗಳು ... ವಾದಿಸುತ್ತಾರೆ ... ಅವರನ್ನು ... ಅರ್ಹರಾಗುವ ... ಒಂದು ಪ್ರಿಂಟಿನ ಆರ್ಡರು ... ಬಂದಿದೆ

ಮೈಸೂರು ಗವರ್ನ್ಮೆಂಟಿನವರು ಇನ್ನು ಮುಂದೆ ... ಎಂಬ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ... ಈ ಪರೀಕ್ಷೆಗಳಿಗೆ ... ಈ ಸಂಸ್ಥಾನದ ಶಾಲೆಗಳಲ್ಲಿ ತೇರ್ಗಡೆಯಾದವ ... ಮಾತ್ರ ಸೇರಿಸುವುದಾಗಿಯೂ ಆಜ್ಞೆ ಹೊರಡಿಸಿರುತ್ತಾರೆ

ಶ್ರೀಮನ್ಮಹಾರಾಜರವರು ... ದಿನ ... ಪಟ್ಟಣ ಪ್ರಾಂತ್ಯ ತಲಕಾವೇರಿ ... ಕಡೆ ಸಂಚಾರ ಮಾಡುವವರಾಗಿದ್ದಾ ... ಅವರ ... ಕ್ರಮವಾಗಿ ... ಅವರ ... ಸರ್ವೀಸ್ ... ವೀ ಪಿ ... ಮಾಧವರಾಯರವರು ... ಒಂದು ದಿವಸ ಮಟ್ಟಿಗೆ ಹೋಗಿ ... ದು ಕೇಳುತ್ತೇವೆ

... ದಕ್ಷಿಣ ಆಫ್ರಿಕದಲ್ಲಿ ಆವರ ... ಈ ಸರ್ಕಾರದವರು ಮೈಸೂರು ಗವರ್ನ್ಮೆಂಟಿಗೆ ... ಇಂಡಿಯಾ ಗವರ್ನ್ಮೆಂಟಿನವರು ... ಸರ್ ಶೇಷಾದ್ರಿ ಅಯ್ಯರವರ ಕಾಲದಿಂ ... ಈಗ ನಮ್ಮ ಸರ್ಕಾರಕ್ಕೆ ಅನುಕೂಲವಾಗುವಂತೆ ... ವಾದದ್ದಕ್ಕಾಗಿ ಸಂತೋಷಪಡುತ್ತೇವೆ

... ಮಹಾರಾಜರವರ ಸನ್ನಿಧಿಯಲ್ಲಿ ... ಸಂಸ್ಥಾನದ ... ಪುತ್ರ ... ಕಳೆದ ಗುರುವಾರ ರಾಜಧಾ ... ಬಂಗಲೆಯಲ್ಲಿ ... ಇವರು ಎರಡು ... ಹೋಗಿದ್ದಾಗ ... ಸಾನದ ಎದುರು ... ಅವರಿಗೆ ... ಕೊಟ್ಟಿದ್ದರು ಈಗ ಇವರು ಈ ಪಟ್ಟಣದ ಮುಖ್ಯ ... ನೋಡಿ ಸಂತೋಷಪಡುತ್ತಿದ್ದಾರೆ

ಕಳೆದ ವಾರ ರಾಜಧಾನಿಯ ಅರಸುಗಳ ಬೋರ್ಡಿಂಗ್ ಸ್ಕೂಲಿನಲ್ಲಿ ... ಮೀಟಿಂಗ್ ನಡೆದು, ಅದರ ಮೇಲ್ವಿಚಾರಣೆಯ ಕಮಿಟಿ ಮೆಂಬರುಗಳ ... ಮಾಡಿದರು ಶ್ರೀಮದ್ಯುವರಾಜರವರು ಕಮಿಟಿ ಪ್ರೆಸಿಡೆ ... ಒಪ್ಪಿಕೊಂಡಿರುವುದು ಸಂತೋಷಪ್ರದವಾಗಿದೆ ಸರ್ದಾರ್ ಕಾಂತ ... ರವರು ಸೆಕ್ರಿಟರಿಯಾದದ್ದೂ, ಮ|| ಬಿ ... ಸಾಹೇಬರು ಕಮಿ ... ದದ್ದೂ ಸ್ಕೂಲಿನ ಪುರೋವೃದ್ಧಿಗೆ ತುಂಬಾ ಸಹಾಯವಾಯಿತು

... ಮಧ್ಯಾಹ್ನ ರಾಜಧಾನಿಯ ರೇಸ್ ಕೋರ್ಸ್ ಮೈದಾನದಲ್ಲಿ ಶ್ರೀಮನ್ ... ರವರು ಪಟ್ಟಣದ ದೊಡ್ಡ ಮನುಷ್ಯರಿಗೂ, ಯೂರೋಪಿಯನ್ ಅತಿಥಿ ... ಅಟ್ ಹೋಂ ಎಂಬ ಕೂಟವನ್ನು ನಡಿಸಿ ಸಂತೋಷ ಪಡಿಸಿದ್ದಲ್ಲದೆ ... ಪ್ರದರ್ಶನದಲ್ಲಿ ಗೆದ್ದವರಿಗೆ ಬಹುಮಾನಗಳನ್ನೂ ದಯಪಾಲಿಸಿ ... 26 ನೇ ತಾ ಶನಿವಾರ ಸಾಯಂಕಾಲ 4 ಗಂಟೆಯ ಮೇಲೆ ಅದೇ ... ತಂಬಾನಾ ಆಟಗಳು ನಡೆದು, ಅಧಿಕಾರಿಗಳ "ಅಟ್ ಹೋಂ" ... ಜರುಗುತ್ತವೆಂದು ತಿಳಿಯಬರುತ್ತದೆ

ಚಿಕ್ಕಮಗಳೂರು ಟೌನ್ ಕುಡಿಯುವ ನೀರಿನ ಏರ್ಪಾಡಿಗೆ ಸರ್ಕಾರದ ವರು 10,000 ರೂಪಾಯನ್ನು ದಯಪಾಲಿಸಿದ್ದಕ್ಕಾಗಿ ಪುರವಾಸಿಗಳ ಪರವಾಗಿ ಮ|| ಸಿ ಶ್ರೀನಿವಾಸರಾಯರೇ ಮುಂತಾದವರು ನೆನ್ನೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಗವರ್ನ್ಮೆಂಟಿನವರನ್ನು ವಂದಿಸಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ದಿವಾನ್ ರವರಿಗೆ ಒಪ್ಪಿಸಿದರು ಚಿಕ್ಕಮಗಳೂರಿನ ಡ್ರೈನೇಜ್ ವಿಚಾರಕ್ಕೆ ಸರ್ಕಾರದಿಂದ ದ್ರವ್ಯಸಹಾಯ ಮಾಡಿಕೊಡಬೇಕೆಂದೂ, ಈ ಕಾರ್ಯವು ನೀರಿನ ವಿಚಾರದಂತೆ ಯೇ ಪ್ರಜಾ ಕ್ಷೇಮಕ್ಕೆ ಬಹು ಮುಖ್ಯವಾದದ್ದೆಂದೂ ಅದೇ ಪತ್ರಿಕೆಯಲ್ಲಿ ಕೇಳಿಕೊಂಡಿದಾರೆ

ಕಳೆದ ಸೋಮವಾರವೂ ಮಂಗಳವಾರವೂ ಪ್ರಜಾಪ್ರತಿನಿಧಿಗಳು ಪ್ರತಿನಿಧಿ ಮಂದಿರದಲ್ಲಿ ಸಭೆ ಸೇರಿ, ನ್ಯಾಯವಿಧಾಯಕ ಸಭೆಯ ಮೆಂಬರುಗಳಿಗೆ ಇನ್ನೂ ಕೆಲವು ಹೆಚ್ಚು ಅಧಿಕಾರಗಳನ್ನು ವಹಿಸುವಂತೆ ಸರ್ಕಾರದವರನ್ನು ಕೇಳಿಕೊಳ್ಳ ಬೇಕೆಂದು ಸ್ವಲ್ಪಮಟ್ಟಿಗೆ ಚರ್ಚೆ ನಡಿಸಿ ಮಾನಸಿಕ ಮಾಡಿದರೆಂತಲೂ, ಶ್ರೀಮನ್ ಮಹಾರಾಜರವರನ್ನೂ ಶ್ರೀಮದ್ಯುವರಾಜರವರನ್ನೂ ಬಿಜಮಾಡಿಸಿಕೊಂಡು ಅವರಿಗೆ ಪ್ರತಿನಿಧಿಗಳೆಲ್ಲಾ ಸೇರಿ ಪ್ರತಿ ವರುಷವೂ ಅಟ್ ಹೋಂ ಎಂಬ ಒಂದು ಸಂತೋಷ ಕೂಟವನ್ನು ನಡಿಸಿ ಪ್ರಜಾಪ್ರತಿನಿಧಿಗಳ ಭಕ್ತಿ ವಿಶ್ವಾಸಗಳನ್ನು ಪ್ರಕಾಶ ಪಡಿಸಬೇಕೆಂದು ತೀರ್ಮಾನ ಮಾಡಿಕೊಂಡಿದಾರೆಂತಲೂ ಕೇಳುತ್ತೇವೆ

ಚೆನ್ನರಾಯ ಪಟ್ಟಣದ ಬಾತ್ಮೀದಾರರು ಬರೆಯುವುದು—ಇಲ್ಲಿದ್ದ ಅಮಲ್ದಾರ್ ಮ|| ಗೋಪಾಲ ಕೃಷ್ಣಯ್ಯಂಗಾರ್ಯರಿಗೆ ಮಂಜರಾಬಾದಿಗೂ, ಮಂಜರಾಬಾದಿನ ಮ|| ನಾರಾಯಣರಾಯರಿಗೆ ಇಲ್ಲಿಗೂ ವರ್ಗವಾಯಿತು ತಾ 12 ನೇ ಶನಿವಾರ ಅವರೀರ್ವರಿಗೂ ಸರ್ಕಾರಿ ಆಫೀಸರುಗಳು ಔತನ ಮಾಡಿದರು ಮರು ದಿನ ಬೆಳಗ್ಗೆ ಅವರಿಗೆ ರೀಡಿಂಗ್ ರೂಂ ಮೆಂಬರುಗಳು ಸಹ ಔತನ ಮಾಡಿ, ಬ್ಯಾಂಡ್ ವಾದ್ಯ ಮುಂತಾದ ಮರ್ಯಾದೆಗಳೊಂದಿಗೆ ಮ|| ಗೋಪಾಲ ಕೃಷ್ಣಯ್ಯಂಗಾರ್ಯರನ್ನು ಮಂಜರಾಬಾದಿಗೆ ಸಾಗಕಳುಹಿಸಿದರು. ಇವರು ತಾಲ್ಲೋಕಿಗೆ ಬಂದು ಸ್ವಲ್ಪ ದಿವಸಗಳಾದಾಗ್ಯೂ ಇಲ್ಲಿನ ಜನಗಳಲ್ಲಿ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು

ಮದರಾಸ್ ಗವರ್ನ್ಮೆಂಟಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾದ ಘನವಂತರಾದ ಮ ಪಿ ಎಸ್ ಶಿವಸ್ವಾಮಿ ಅಯ್ಯರವರು ಕಳೆದ ಶನಿವಾರ ಮತ್ತೆ ರಾಜಧಾನಿಗೆ ದಯಮಾಡಿ, ಸರ್ ಶೇಷಾದ್ರಿ ಅಯ್ಯರವರ ಬಂಗಲೆಯಲ್ಲಿ ಎರಡು ದಿನ ಇದ್ದು, ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ಪಟ್ಟಣದ ಎಲ್ಲಾ ಭಾಗಗಳನ್ನೂ ನೋಡಿಕೊಂಡು ತೆರಳಿದರು ಇವರು ಕಳೆದ ತಾ 18 ನೇ ಶುಕ್ರವಾರ ಕೊಡಗು ಭಾಗಮಂಡಲಕ್ಕೆ ಮೋಟಾರಿನಲ್ಲಿ ಹೋಗಿ ಮೂಲಕಾವೇರಿಯಲ್ಲಿ ಪತ್ನೀ ಸಹಿತ ಸ್ನಾನಮಾಡಿ ದೇವಸ್ಥಾನದಲ್ಲಿ ಅರ್ಚನಾದಿ ಸೇವಾರ್ಥಗಳನ್ನು ನಡಿಸಿ ದಾನ ದಕ್ಷಿಣೆಗಳನ್ನು ಕೊಟ್ಟು ಮಡಕೇರಿಯ ಕಡೆ ಪ್ರಯಾಣ ಮಾಡಿದರೆಂದು ಅಲ್ಲಿನ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಒಕ್ಕಲಿಗರ ಸಂಘದ ಪರವಾಗಿ ಒಬ್ಬ ಮೆಂಬರನ್ನು ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಿ ಕಳುಹಿಸಬಹುದೆಂದು ಸರ್ಕಾರದವರು ಅಪ್ಪಣೆ ಕೊಟ್ಟಿರುವಂತೆ ಆ ಸಂಘದವರು ಮ ಕೆ ಎಚ್ ರಾಮಯ್ಯನವರನ್ನು ತಮ್ಮ ಪ್ರತಿನಿಧಿಯಾಗಿ ಕಳುಹಿಸಿದಾರೆ ಇವರು ನೆನ್ನೆ ಪ್ರಾರಂಭವಾದ ಪ್ರತಿನಿಧಿ ಸಭೆಯಲ್ಲಿ ಸಂಘದ ಪರವಾಗಿ ದಿವಾನ್‌ರವರಿಗೆ ಒಂದು ವಂದನಾ ಪತ್ರಿಕೆಯನ್ನು ಒಪ್ಪಿಸಿ, ಪ್ರತಿನಿಧಿ ಸಭೆಗೆ ಆ ಸಂಘದಿಂದ ಇಬ್ಬರು ಮೆಂಬರುಗಳನ್ನೂ ನ್ಯಾಯವಿಧಾಯಕ ಸಭೆಗೆ ಒಬ್ಬ ಮೆಂಬರನ್ನೂ ಚುನಾಯಿಸಿ ಕಳುಹಿಸುವಂತೆ ಅಧಿಕಾರವನ್ನು ದಯಪಾಲಿಸಬೇಕೆಂದು ಕೇಳಿಕೊಂಡರು ಈ ವಂದನಾಪತ್ರಿಕೆಯನ್ನು ಸ್ಥಳಸಂಕೋಚದಿಂದ ಸಂಪೂರ್ಣವಾಗಿ ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುತ್ತೇವೆ

ನೆನ್ನೆ ದಿನ ಮಧ್ಯಾಹ್ನ 12 ಗಂಟೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಜೂಬಿಲಿ ... ದರ್ಬಾರ್ ಹಾಲಿನಲ್ಲಿ ಪ್ರಾರಂಭವಾಯಿತು ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಸರದಾರರೂ ಮೊರಸಾಹೇಬರೂ, ಮೈಸೂರು ಗವರ್ನ್ಮೆಂಟಿನ ಮುಖ್ಯಾಧಿಕಾರಿಗಳೂ, 270 ಮಂದಿಯ ಪೈಕಿ 215 ಮಂದಿ ಪ್ರಜಾಪ್ರತಿನಿಧಿಗಳೂ, ನೂರಾರು ಮಂದಿ ದೊಡ್ಡ ಮನುಷ್ಯರೂ ಸಭೆಯಲ್ಲಿ ಹಾಜರಾಗಿದ್ದರು ದಿವಾನ್ ಮ ... ಆನಂದರಾಯರು ಅಡ್ರೆಸ್ಸನ್ನು ಇಂಗ್ಲೀಷಿನಲ್ಲಿ ಓದಿದರು ಈ ಅಡ್ರೆಸ್ಸಿನ ಕನ್ನಡ ಪ್ರತಿಯು ಪದ್ಧತಿಯಂತೆ ನಮಗೆ ಮೊದಲೇ ದೊರಕಲಿಲ್ಲವಾಗಿ ಅದರಲ್ಲಿ ಕಂಡುಬರುವ ಮುಖ್ಯ ಭಾಗಗಳನ್ನು ಮುಂದಿನ ವಾರ ಪ್ರಕಟಿಸಲಾಗುವುದು

ಕಳೆದ ಗುರುವಾರ ಮಧ್ಯಾಹ್ನ ಶ್ರೀಮದ್ಯುವರಾಜರವರು ಪರಸ್ಪರ ಸಹಾಯ ಸಂಘಗಳ ಮಹಾಸಭೆಗೆ ಬೇರೆ ಬೇರೆ ಕಡೆಗಳಿಂದ ರಾಜಧಾನಿಗೆ ಬಂದಿದ್ದ ಮೆಂಬರುಗಳನ್ನೂ ಅಧಿಕಾರಿಗಳೇ ಮೊದಲಾದ ಇತರರನ್ನೂ ಪಾರ್ಕ್ ಬಂಗಲೆಯ ಪಕ್ಕದಲ್ಲಿರುವ ಏನ್ನಾದ ಮೃಗಾಲಯದ ಉದ್ಯಾನವನಕ್ಕೆ ಬರಮಾಡಿಕೊಂಡು, ಅವರನ್ನೆಲ್ಲಾ ಸಂಧಿಸಿ ಅವರವರ ಯೋಗಕ್ಷೇಮಗಳನ್ನು ವಿಚಾರಿಸಿ, ಅವರಿಗೆಲ್ಲಾ ಬಗೆಬಗೆಯ ಫಲಾಹಾರಗಳನ್ನು ಕೊಡಿಸಿದಲ್ಲದೆ ಅವರ ಮನೋಲ್ಲಾಸಕ್ಕಾಗಿ ನಾನಾ ತರದ ಆಟಪಾಟಗಳನ್ನೂ ಕಲ್ಪಿಸಿದ್ದರು ಸುಮಾರು 700 ಮಂದಿ ದೊಡ್ಡ ಮನುಷ್ಯರು ಈ ಕೂಟದಲ್ಲಿ ಬೆರೆದು ಬಹಳವಾಗಿ ಸಂತೋಷಪಟ್ಟು ಬಂದರು ಇದಲ್ಲದೆ ಮೆಂಬರುಗಳ ಪ್ರಾರ್ಥನೆಯಂತೆ ಶ್ರೀಮನ್ಮಹಾರಾಜರವರು ಅನೇಕರನ್ನು ನವರಾತ್ರಿ ದರ್ಬಾರಿಗೆ ಕರೆಸಿಕೊಂಡಿದ್ದರು

ಕಳೆದ ವಾರ ರಾಜಧಾನಿಯಲ್ಲಿ ಮೂರು ದುರ್ಮರಣಗಳಾದವೆಂದು ಕೇಳಿ ವಿಷಾದಿಸುತ್ತೇವೆ ಒಬ್ಬನು ದೊಡ್ಡಕೆರೆಯಲ್ಲಿ ಬಿದ್ದು ತೀರಿಹೋದನು ಇನ್ನೊಬ್ಬನು ಲಷ್ಕರ್ ಮೊಹಲ್ಲೆಯ ಒಂದು ದೇವಸ್ಥಾನದ ಭಾವಿಯಲ್ಲಿ ಬಿದ್ದು ಸತ್ತನು ಸಿಟಿ ಮ್ಯಾಜಿಸ್ಟ್ರೇಟರು ಲಾಷ್ ಮಹಜರು ನಡಿಸಿ ಶವಗಳನ್ನು ದಫನ್‌ಗೆ ಕೊಡಿಸಿದರು ವೈದ್ಯ ಪುರೋಹಿತರಾಗಿದ್ದ ... ರಾಮಭಟ್ಟರನ್ನು ಶಿವರಾಮಪೇಟೆಯಲ್ಲಿ ಅವರ ಮನೆಯೊಳಗೆ ಕಳೆದ ಗುರುವಾರ ರಾತ್ರಿ ಯಾರೋ ಗಾಯಮಾಡಿ ಪ್ರಾಣತೆಗೆದು, ಪೆಟ್ಟಿಗೆಗಳನ್ನು ಒಡೆದು ಆಸ್ತಿಯನ್ನು ಎತ್ತಿಹಾಕಿದ್ದರೆಂದು ಮರುದಿನ ಗೊತ್ತಾಯಿತು ಸಿಟಿ ಮ್ಯಾಜಿಸ್ಟ್ರೇಟರು ಮಹಜರು ನಡಿಸಿ

ಪರೀಕ್ಷೆಗಾಗಿ ಶವವನ್ನು ಆಸ್ಪತ್ರೆಗೆ ಕಳುಹಿಸಿದರು. ಕಡೆಗೆ ಇದು ಒಂದು ಕೊಲೆ ಎಂದು ತೀರ್ಮಾನವಾಗಿ ಶುಕ್ರವಾರ ಶವವು ದಹನಕ್ಕೆ ಕೊಡಲಾಯಿತು ಪೋಲೀಸಿನವರು ಈ ಕೊಲೆಯ ಪೂರ್ವೋತ್ತರವನ್ನು ಪತ್ತೆಮಾಡುತ್ತಿದಾರೆ

ಕಡೇ ದಿನದ ದರ್ಬಾರು.

ವಿದ್ವತ್ ಪರೀಕ್ಷೆಗಳ ಬಹುಮಾನ ವಿನಿಯೋಗವು.

ಕಳೆದ ಮಂಗಳವಾರ ರಾತ್ರಿ ಅರಮನೆ ಅಂಬಾವಿಲಾಸ ತೊಟ್ಟಿಯಲ್ಲಿ ನಡೆದ ಪ್ರೈವೇಟ್ ದಸರಾ ದರ್ಬಾರಿನಲ್ಲಿ ಅರಮನೆಯ ಕಂಟ್ರೋಲರವರು ಈ ಸಲದ ವಿದ್ವತ್ ಪರೀಕ್ಷೆಗಳ ರಿಪೋರ್ಟನ್ನು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಓದಿ ಅರಿಕೆ ಮಾಡಿದ್ದಲ್ಲದೆ, ಕಳೆದ 1891 ನೇ ಇಸವಿ ಆಗಾಯಿತು ಮ|| ಎ. ಮಹಾದೇವ ಶಾಸ್ತ್ರಿಗಳವರು ಮಹಾರಾಜರವರ ಸಂಸ್ಕೃತ ಪಾಠಶಾಲೆಯ ಮೇಲ್ವಿಚಾರಣಾ ಕಮಿಟಿಯ ಸೆಕ್ರೆಟರಿಗಳಾಗಿದ್ದು ಸರ್ವಸಮ್ಮತವಾಗಿ ಕಾರ್ಯಗಳನ್ನು ನಡಿಸಿದರೆಂದು ಅವರಿಗೆ ವಂದನೆಯನ್ನು ಸಲ್ಲಿಸಿ, ಅವರ ಸ್ಥಾನಕ್ಕೆ ವಿದ್ಯಾ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರಾಗಿದ್ದು ಪೆನ್‌ಷನ್ ಪಡೆದಿರುವ ಮ ಎಸ್ ರಂಗಾಚಾರ್ಯರನ್ನು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಕಳೆದ ವರುಷ ನೇಮಕ ಮಾಡಿದೆ ಎಂತಲೂ, ಅವರು ಸ್ವತಃ ವಿದ್ವತ್ ಪಂಡಿತರಾಗಿರೋಣದರಿಂದಲೂ, 1891 ನೇ ಇಸವಿಗೆ ಮುಂಚೆ ಸುಮಾರು ಇಪ್ಪತ್ತು ವರುಷ ಆ ಪಾಠಶಾಲೆಯಲ್ಲಿದ್ದು ತುಂಬಾ ಅನುಭವಪಡೆದವರಾಗಿರೋಣದರಿಂದಲೂ ಇವರ ಕಾಲದಲ್ಲಿ ಆ ಪಾಠಶಾಲೆಯು ಇನ್ನೂ ಅಭಿವೃದ್ಧಿ ಹೊಂದಲು ಸಂದೇಹವಿಲ್ಲವೆಂದೂ ಅರಿಕೆ ಮಾಡಿದರು ಈ ಸಲ ವಿದ್ವತ್ ಪರೀಕ್ಷೆಗಳಿಗೆ ಉತ್ತರದೇಶದ ಪಂಡಿತರ್ಯಾರೂ ಬಂದಿರಲಿಲ್ಲ 47 ಮಂದಿ ಪಂಡಿತರು ಪರೀಕ್ಷೆಗಳಿಗೆ ಅರ್ಜಿ ಬರೆದುಕೊಂಡಿದ್ದರು ಆ ಪೈಕಿ 45 ಜನರು ಪರೀಕ್ಷೆಗಳಿಗೆ ಹಾಜರಾಗಿ 28 ಮಂದಿ ವೇದ, ವೇದಾಂತ, ಶಾಸ್ತ್ರಾದಿಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ ಈ ಪೈಕಿ, 13 ಮಂದಿ ಮೈಸೂರು ಸಂಸ್ಕೃತ ಪಾಠಶಾಲೆಯಲ್ಲಿ ಶಿಕ್ಷಣ ಹೊಂದಿದವರೆಂದೂ, ಉಳಿದ 15 ಮಂದಿಯಲ್ಲಿ ಕೆಲವರು ಮೈಸೂರು ಸೀಮೆಯವರಾಗಿಯೂ ಕೆಲವರು ದಕ್ಷಿಣ ದೇಶದವರಾಗಿಯೂ ಇರುತ್ತಾರೆಂದೂ ತಿಳಿಯಿತು ಡೆಪ್ಯುಟಿ ಚೀಫ್ ಇಂಜನಿಯರ್ ಮ|| ಕರ್ಪೂರ ಶ್ರೀನಿವಾಸರಾಯರವರು ನ್ಯಾಯಶಾಸ್ತ್ರದಲ್ಲಿ ತೇರ್ಗಡೆ ಹೊಂದುವವರಿಗೆ ಕಳೆದ ಐದು ವರುಷಗಳಿಂದಲೂ ಪ್ರತಿ ವರುಷವೂ 100 ರೂಪಾಯಿನಂತೆ ಬಹುಮಾನ ಕೊಡುತ್ತಾ ಬಂದಿದಾರೆ ಇದಲ್ಲದೆ ಸೆಕ್ರೆಟರಿ ಮ ಎಸ್. ರಂಗಾಚಾರ್ಯರು ತಮ್ಮ ತಂದೆಯವರ ಹೆಸರಿನ ಮೇಲೆ ಪ್ರತಿ ವರುಷವೂ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಒಬ್ಬ ಪಂಡಿತರಿಗೆ 50 ರೂಪಾಯಿನಂತೆ ಬಹುಮಾನ ಕೊಡಲು ಕುತೂಹಲವುಳ್ಳವರಾಗಿದಾರೆಂದು ಕಂಟ್ರೋಲರವರು ಅರಿಕೆ ಮಾಡಿ ಅದಕ್ಕೆ ಶ್ರೀಮನ್ಮಹಾರಾಜರವರ ಸಮ್ಮತಿಯನ್ನು ಪಡೆದುಕೊಂಡರು.

ರಿಪೋರ್ಟ್ ಓದಿದ ಬಳಿಕ ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಪಂಡಿತೋತ್ತಮರನ್ನು ಶ್ರೀಮನ್ಮಹಾರಾಜರವರು ಸ್ವಸಮ್ಮುಖಕ್ಕೆ ಕರೆಸಿಕೊಂಡು, ಅವರಿಗೆಲ್ಲಾ ಅವರ ಪರೀಕ್ಷೆಯ ಯೋಗ್ಯತಾನುಸಾರವಾಗಿ ಶಾಲುಜೋಡಿಗಳನ್ನೂ, ದ್ರವ್ಯರೂಪವಾದ ಬಹುಮಾನವನ್ನೂ, ಸರ್ಟಿಫಿಕೇಟುಗಳನ್ನೂ ಕಂಟ್ರೋಲರವರ ಮೂಲಕ ಕೊಡಿಸಿ ಸಂತೋಷಪಡಿಸಿದರು

ಮೈಸೂರು ಸಂಸ್ಥಾನದ ಆಸ್ತಿ ದೇಣೆಗಳ ವಿವರಣೆಯು.

1912 ನೇ ಜೂಲೈ 1 ನೇ ತಾರೀಖಿನಲ್ಲಿ.

ಆಸ್ತಿಯ ಬಾಬುಗಳು.

ಬಾಬು	1910 11	1911-12
ಖಜಾನೆಗಳಲ್ಲಿ ಹಾಜರಿರುವ ಹಣ	1,06,24,000	1,16,95,000
ಪತ್ರ ಮೊದಲಾದ ಉತ್ಪತ್ತಿಯಾಗುವ ಆಸ್ತಿಗಳ ಮೇಲೆ ಕೊಟ್ಟಿರುವ ಹಣ	1,66,16,000	1,97,74,000
ಸಾಲವಾಗಿಯೂ ಅಡ್ವಾನ್ಸಾಗಿಯೂ ಕೊಟ್ಟಿರುವ ಹಣ	35,13,000	31,16,000
ಇತರ ಬಾಬುಗಳಲ್ಲಿ ಉಳಿಕೆ ಹಣ	10 07,000	9,36,000
ಜುಮ್ಲಾ ರೂ	3,18,12,000	3,57,19,000

ದೇಣೆ ಬಾಬುಗಳು.

ಬಾಬು	1910-11	1911-12
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ದಾರರಿಗೆ ಕೊಡಬೇಕಾಗಿರುವ ಹಣ	67,11,000	72,61,000
1882 ನೇ ಇಸವಿ ಬಾಬತು ಮೈಸೂರು ರೈಲ್ವೆ ಸಾಲಕ್ಕೆ ಕೊಡಬೇಕಾದ ಹಣ	18,000	18,000
1906 07 ನೇ ಇಸವಿಯ ಶೇಕಡ ನಾಲ್ಕು ರೂಪಾಯಿ ಬಡ್ಡಿ ಮೈಸೂರು ಸ್ಟೇಟ್ ಸಾಲಕ್ಕೆ ಕೊಡಬೇಕಾದ ಹಣ	20,00,000	20,00,000
ಮೈಸೂರು ಸಿವಿಲ್ ಪೆನ್ಷನ್ ... ಫಂಡಿಗಾಗಿ ಕೊಡಬೇಕಾದ ಹಣ	21,91,000	21,24,000
ಲೋಕಲ್ ಮತ್ತು ಇತರ ಫಂಡುಗಳಿಗೆ ಕೊಡಬೇಕಾದ ಹಣ	28,50,000	29,51,000
ಧರ್ಮಫಂಡು ಮೊದಲಾದ ಬಾಬುಗಳಿಗಾಗಿ ಹಿಡಿದಿರುವ ಡಿಪಾಜಿಟ್ಟು ಹಣ	15 98,000	19,76,000
ಕಾವೇರಿ ವಿದ್ಯುಚ್ಛಕ್ತಿಯ ನಷ್ಟಪರಿಹಾರದ ಫಂಡಿಗೆ ಕೊಡಬೇಕಾದ ಹಣ	19,17,000	19,83,000
ಇತರ ಬಾಬುಗಳಿಗೆ ಸಲ್ಲಬೇಕಾಗಿರುವ ಮೊಬಲಗು	2,32,000	7,30,000
ಜುಮ್ಲಾ ರೂ.	1,76,11,000	1,90,60,000

ಮೇಲ್ಕಂಡ ಲೆಕ್ಕಗಳ ಪ್ರಕಾರ ಮೈಸೂರು ಗವರ್ನ್ಮೆಂಟಿನ ಒಟ್ಟು ಆಸ್ತಿಯಾದ 3,57,19,000 ರೂಪಾಯಿನಲ್ಲಿ ದೇಣೆ ಬಾಬು ಅಂದರೆ 1,90,60,000 ರೂಪಾಯನ್ನು ಕಳೆದುಬಿಟ್ಟಲ್ಲಿ 1912 ನೇ ಜೂಲೈ ತಾ 1 ರಲ್ಲಿ ಗವರ್ನ್ಮೆಂಟಿನಲ್ಲಿ 1,67,19,000 ರೂಪಾಯಿ ... ಉಳಿದಿರುತ್ತದೆಂದು ನೆನ್ನೆ ಸಂಸ್ಥಾನದ ದಿವಾನ್ ಸಾಹೇಬರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಒಪ್ಪಿಸಿಕೊಂಡಿದೆ ಅಡ್ರೆಸ್ಸಿನಿಂದ ಗೊತ್ತಾಗುತ್ತದೆ

ದಕ್ಷಿಣ ದೇಶದ ಹಿಂದೂ ಪಂಡಿತರ ಪರಿಷತ್ತು

ತಿರುಪಾಡಿಯಲ್ಲಿ ನಡೆಯುವುದು.

ಮುಂದಿನ ಡಿಸೆಂಬರ್ ತಿಂಗಳ 14 ನೇ ತಾರೀಖಿನಿಂದ ತಂಜಾವೂರು ಜಿಲ್ಲೆಗೆ ಸೇರಿದ ತಿರುಪಾಡಿ ಎಂಬ ಪಟ್ಟಣದಲ್ಲಿ ದಕ್ಷಿಣ ದೇಶದ ಹಿಂದೂ ಶಾಸ್ತ್ರ ಪಂಡಿತರುಗಳ ಮಹಾಸಭೆಯು ನಡೆಯುವಂತೆ ಗೊತ್ತಾಗಿದೆ. ಈ ಸಭೆಯು 1-5 ದಿನಗಳು ಜರುಗುವುವು. ಈ ಪರಿಷತ್ತಿಗೆ ಅನೇಕ ಮಹಾರಾಜರು, ರಾಜರು, ಜಮೀನ್‌ದಾರರೇ ಮುಂತಾದವರು ತಮ್ಮ ಕಡೆಯ ಶ್ರೇಷ್ಠ ವಿದ್ಯಾಪಂಡಿತರುಗಳನ್ನು ಕಳುಹಿಸುವವರಾಗಿದ್ದಾರೆ. ಇದಲ್ಲದೆ ಪಂಡಿತರ ಸಭೆಗಳೂ, ಇತರ ಸಂಘಗಳವರೂ ಅಲ್ಲಿಗೆ ಪ್ರತಿನಿಧಿಗಳನ್ನು ಕಳುಹಿಸಬಹುದಾಗಿದೆ. ಈ ಮಹಾ ಪರಿಷತ್ತಿನಲ್ಲಿ ಚರ್ಚಿಸಲ್ಪಡುವ ವಿಷಯಗಳಾವುವೆಂದರೆ— (1) ಸಮುದ್ರಯಾನ, (2) ಹೆಣ್ಣು ಮಕ್ಕಳಿಗೆ ಇನ್ನೂ ಸ್ವಲ್ಪ ಹೆಚ್ಚು ವಯಸ್ಸಾದ ಬಳಿಕ ವಿವಾಹಮಾಡುವುದು, (3) ಅನ್ಯಮತಾವಲಂಬಿಗಳಾಗಿದ್ದ ಹಿಂದುಗಳನ್ನು ಅವರು ಇಷ್ಟಪಟ್ಟಲ್ಲಿ ಪುನಃ ಹಿಂದು ಮತಕ್ಕೆ ಸೇರಿಸಿಕೊಳ್ಳುವುದು, ಇತ್ಯಾದಿಗಳು. "ಜೀವನ್ಮಾನದ ಉದ್ದೇಶ" ಎಂಬ ವಿಷಯವಾಗಿ ಸಂಸ್ಕೃತದಲ್ಲಿ ಉತ್ತಮವಾದ ಉಪನ್ಯಾಸವನ್ನು ಬರೆದು ಕಳುಹಿಸುವವರಿಗೆ ಮಹಾರಾಜ ದಿವಾನ್ ಮಿ ವಿ ಪಿ ಮಾಧವರಾವ್ ಸಿ ಐ ಇ ಯವರು 250 ರೂಪಾಯಿ ಬಹುಮಾನ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಆ ಉಪನ್ಯಾಸಗಳಲ್ಲಿ 2 ನೆಯದೆಂದು ತೀರ್ಮಾನವಾಗುವ ಉಪನ್ಯಾಸಕ್ಕೆ 150 ರೂಪಾಯಿ ಬಹುಮಾನ ದೊರಕುವುದು. ಮದರಾಸಿನಲ್ಲಿರುವ ಪಂಡಿತ ಡಿ. ಗೋಪಾಲಾಚಾರ್ಯರವರು "ವಿಷ್ಣುಚರಿತ" ಎಂಬ ವಿಷಯವನ್ನು ಕುರಿತು ಬರೆದು ಬರುವಂಥಾ ಉಪನ್ಯಾಸಗಳಲ್ಲಿ ಉತ್ತಮವಾದದ್ದಕ್ಕೆ ಬಹುಮಾನ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಈ ಪರಿಷತ್ತಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿದುಕೊಳ್ಳಬೇಕೆನ್ನುವವರು ಮದರಾಸ್ ಪಟ್ಟಣದ ಮೈಲಾಪುರದಲ್ಲಿರುವ ಮಿ ಆರ್ ಸ್ವಾಮಿನಾಥ ಅಯ್ಯರವರಿಗೆ ಬರೆದಲ್ಲಿ ಅವರು ತಿಳಿಸುತ್ತಾರೆ.

ಮಾರಥಾನ್ ರೇಸ್ ಎಂಬ ಪಂದ್ಯವು.

ಆರು ಮೈಲಿ ದೂರ ಓಡಿದ ಓಟ.

ಕಳೆದ ಸೋಮವಾರ ಈ ಓಟದ ಪಂದ್ಯವು ರಾಜಧಾನಿಯಲ್ಲಿ ಜರುಗಿತು. ಇಂಥಾ ಪಂದ್ಯವು ಇದುವರೆಗೆ ಮೈಸೂರಿನಲ್ಲಿ ನಡೆಯಲಿಲ್ಲ. ಆ ಸೆಕ್ರೆಟರಿ ಸರ್ದಾರ್ ಎಂ. ಗೋಪಾಲರಾಜೆ ಅರಸಿನವರು ಈ ಪಂದ್ಯವನ್ನು ತೃಪ್ತಿಕರವಾಗಿ ನಡಿಸಿದರು. ಮೈಸೂರು ಶ್ರೀರಂಗಪಟ್ಟಣದ ರಸ್ತೆಯಲ್ಲಿ 2 ನೇ ಮೈಲಿಕಲ್ಲಿನ ಬಳಿ ಇರುವ ಚಾಮುಂಡಿ ಪೇಟೆಯ ತಪ್ಪಲಿನಲ್ಲಿರುವ ರೇಸ್ ಕೋರ್ಸ್ ಎಂಬ ಕುದುರೆ ಪಂದ್ಯದ ಬಯಲಿನವರೆಗೆ ಆರು ಮೈಲಿಯನ್ನು ಗೊತ್ತುಮಾಡಿ, ಗೆದ್ದ ಮೂರು ಮಂದಿಗೆ ಬಹುಮಾನ ಕೊಡುವುದಾಗಿ ಸೆಕ್ರೆಟರಿಯವರು ಮೊದಲೇ ಪ್ರಕಟಿಸಿದ್ದರು. ಅದರ ಪ್ರಕಾರ 75 ಮಂದಿ ಈ ಪಂದ್ಯಕ್ಕೆ ಸೇರುತ್ತೇವೆಂದು ತಿಳಿಸಿದ್ದರು. ಆದರೆ 31 ಜನರು ಮಾತ್ರ ಆ ದಿನ ಆರನೇ ಮೈಲಿ ಕಲ್ಲಿನ ಬಳಿ ಹಾಜರಾದರು. ಮಹಾರಾಜರವರ ನೋಟೀಸ್ ಆಫೀಸಿಯು ಮಿ. ವಿಲಿಯಮ್ಸ್ ಮೊದಲಾದವರು ಅಲ್ಲಿ ಕಾದಿದ್ದ ವರನ್ನೆಲ್ಲಾ ಸಾಲಾಗಿ ನಿಲ್ಲಿಸಿ ಹೊರಡುವಂತೆ ಆಜ್ಞೆ ಕೊಟ್ಟರು. ಸರ್ದಾರ್ ಗೋಪಾಲರಾಜೆ ಅರಸಿನವರು ಕುದುರೆಯ ಮೇಲೆ ಸವಾರಿಮಾಡಿಕೊಂಡು ಸಂಪನ್ನಗಾರರೆಲ್ಲಾ ಸರಿಯಾದ ದಾರಿಯನ್ನು ತೋರಿಸುತ್ತಾ ಅವರುಗಳ ಮುಂದೆ ಬಂದರು. ರಸ್ತೆಯ ಪೊಲೀಸ್ ಕಾವಲಿಟ್ಟದ್ದರಿಂದ ಜನಸಂಚಾರ ದಿಂದ ಪಂದ್ಯಗಾರರಿಗೆ ಅಡಚಣೆ ಮಾಡುತ್ತಿತ್ತು. ಆದರೂ ಹೊರಟಾಗ ಇದ್ದ 31 ಮಂದಿ ಪಂದ್ಯದವರಲ್ಲಿ 19 ಮಂದಿ ಮಾತ್ರ ಕೊನೆಗೆ ಬಂದರು. ಇವರಲ್ಲಿ ಮೊದಲಾಗಿ ಬರುವ ಮೂರು ಮಂದಿಗೆ ಮಾತ್ರ ಬಹುಮಾನ ಸಿಕ್ಕುತ್ತದೆಂದು ಪ್ರಕಟವಾಗಿತ್ತು. ಆದರೆ ಮಹಾರಾಜರವರು ಕೃಪೆಯಿಟ್ಟು ಮೊದಲನೇ ಏಳು ಮಂದಿಗೆ ಬಹುಮಾನಗಳನ್ನು ದಯಪಾಲಿಸಿದರು. ಇವರಲ್ಲಿ 30 ನಿಮಿಷಗಳಲ್ಲಿ ಆರು ಮೈಲಿ ಓಡಿಬಂದು ಒಂದು ಬೆಳ್ಳಿ ಬಟ್ಟಲೂ 70 ರೂಪಾಯಿಯೂ ಬಹುಮಾನವಾಗಿ ಪಡೆದ ಮೊದಲನೇ ಪಂದ್ಯಗಾರನು ಮೈಸೂರು ಗವರ್ನ್‌ಮೆಂಟ್ ಹೈಸ್ಕೂಲ್ ಸ್ಕೂಲಿನಲ್ಲಿ ಮುಂಗೆಲಸದವನು. ಕಲಿತಿರುವ ಶ್ರೀನಿವಾಸನೆಂಬುವನು. ತಮ್ಮ ಸರ್ಕಾರಿ ಪೋಲೀಸ್ ನಾಯಕನೆಂಬುವನು ಎರಡನೆಯವನಾಗಿ ಒಂದು 50 ರೂಪಾಯಿ ಬಹುಮಾನವನ್ನು ಪಡೆದನು. ಮೂರನೇ ಬಹುಮಾನವಾದ 25 ರೂಪಾಯಿ ಅದೇ ರಮ್ಮನಹಳ್ಳಿ ನಾರಸಿಂಹನೆಂಬುವನಿಗೆ ದೊರಕಿತು. ಮೈಸೂರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾದ ಸುಬ್ಬರಾವ್, ರಮ್ಮನಹಳ್ಳಿ ಮರಿಯಪ್ಪ, ರಮ್ಮನಹಳ್ಳಿ ಚನ್ನ, ಪೋಲೀಸ್ ಕಾನ್‌ಸ್ಟೇಬಲ್ ನಾಗಕೇಂದ್ರರಾವ್ ಎಂಬೀ ನಾಲ್ಕು ಮಂದಿಯೂ ಪಂದ್ಯದಲ್ಲಿ ಬಹಳ ಸಾಹಸಪಟ್ಟರೆಂದು ಅವರಿಗೆ ತಲಾ 15 ರೂಪಾಯಿನಂತೆ ಬಹುಮಾನ ದೊರಕಿತು. ಈ ಏಳು ಮಂದಿಯೂ ಒಬ್ಬರ ಹಿಂದೊಬ್ಬರಂತೆ 2-1-4 ನಿಮಿಷಗಳ ಅಂತರದಲ್ಲಿ ಓಡಿಬಂದರೆಂದು ತಿಳಿಯುತ್ತದೆ.

ಟರ್ಕಿ ಇಟಲಿ ಯುದ್ಧವು.

ಯುದ್ಧ ನಿಂತು ಕರಾರು ನಡೆಯಿತು.

ಆಫ್ರಿಕದ ಉತ್ತರ ಪ್ರಾಂತ್ಯದಲ್ಲಿರುವ ಟ್ರಿಪೋಲಿ ಎಂಬ ಟರ್ಕಿ ದೇಶಭಾಗಕ್ಕೆ ಇಟಲಿಯವರು ಸನ್ 1911 ನೇ ಸೆಪ್ಟೆಂಬರ್ ತಾ 29 ರಿಂದ ಯುದ್ಧಕಾರ್ಯಗಳನ್ನು ನಡಸುತ್ತಾ ಬಂದಿರುತ್ತಾರಷ್ಟೆ. ಈ ಯುದ್ಧದಲ್ಲಿ ಕಠಿಣವಾದ ಕದನಗಳು ಅಷ್ಟೇನೂ ವಿಶೇಷವಾಗಿ ನಡೆಯಲಿಲ್ಲ. ಇಟಲಿಯವರು ಕಳೆದ ಅಕ್ಟೋಬರ್ ತಿಂಗಳಲ್ಲಿ ಟ್ರಿಪೋಲಿ, ಬೆಂಗಾಜಿ, ಟೊಬ್ರುಕ್ ಎಂಬೀ ಪಟ್ಟಣಗಳನ್ನು ಟರ್ಕಿಯವರಿಂದ ಗೆದ್ದುಕೊಂಡು ತಮ್ಮ ಗವರ್ನ್‌ಮೆಂಟನ್ನು ಸ್ಥಾಪಿಸಿದರು. ಈ ವರುಷ ಏಪ್ರಿಲ್ ಮತ್ತು ಜೂನ್ ತಿಂಗಳಲ್ಲಿ ಬಿಕಾಮುಕ್, ಮಿಸ್ರಾಟಾ ಎಂಬ ತೀರಪಟ್ಟಣಗಳು ಇಟಲಿಯವರ ಸ್ವಾಧೀನವಾದವು. ಅಲ್ಲಿಂದೀಚೆಗೆ ಇಟಲಿ ಟರ್ಕಿ ಸೈನ್ಯಗಳು ಪಲವು ಸಣ್ಣ ಪುಟ್ಟ ಕದನಗಳನ್ನು ನಡಿಸುತ್ತಾ ಬಂದಿದ್ದರೂ ವಿಶೇಷವಾದ ಪರ್ಯಾಪರ್ಯಗಳು ಯಾರೊಬ್ಬರಿಗೂ ಆಗಲಿಲ್ಲ.

ಕಳೆದ 15 ನೇ ತಾ ಮಂಗಳವಾರ ಇಟಲಿಯವರಿಗೂ ಟರ್ಕಿಯವರಿಗೂ ಒಂದು ತಹನಾಮೆ ನಡೆದು ಈ ಯುದ್ಧವು ಮುಕ್ತಾಯವಾಯಿತೆಂದು ತಿಳಿಸಲು ಸಂತೋಷವಾಗುತ್ತದೆ. ಇದನ್ನು ಲೌಸನ್ನೆ ತಹನಾಮೆಯೆಂದು ಕರೆಯುವರು. ಎರಡು ರಾಜ್ಯಗಳ ಪ್ರತಿನಿಧಿಗಳೂ ಈ ತಹನಾಮೆಗೆ ಸಮ್ಮತಿಹಾಕಿ ಮುಂದಿನ ಕಾರ್ಯ ಬದ್ಧರಾದವರಾಗಿದ್ದಾರೆ. ಅದರಲ್ಲಿ ಕಂಡುಬರುವ ಮುಖ್ಯ ಕೆಲವು ಸಂಗತಿಗಳೇನೆಂದರೆ—ಟರ್ಕಿ ಗವರ್ನ್‌ಮೆಂಟಿನವರು ಇಷ್ಟರೊಳಗಾಗಿ ಮೊಯಿನ್ನು ಪ್ರಕಟಿಸಿ ಟ್ರಿಪೋಲಿ ಅಧಿಪತ್ಯವು ಇನ್ನು ಮುಂದೆ ಸ್ವತಂತ್ರಾಧಿಕಾರವುಳ್ಳದ್ದೆಂದೂ, ಅದರ ಸ್ವಾಮಿತ್ವವು ಮಾತ್ರ ತಮ್ಮದೆಂದೂ ತಿಳಿಸುವರು. ಕೂಡಲೇ ಇಟಲಿ ರಾಜರವರು ಟ್ರಿಪೋಲಿಯನ್ನು ತಮ್ಮ ಅಧೀನದಲ್ಲಿರುವ ಅಧಿಪತ್ಯವೆಂದು ಇಷ್ಟಾರು ಪ್ರಕಟಿಸಿ ಅಲ್ಲಿ ತಮ್ಮ ಗವರ್ನ್‌ಮೆಂಟನ್ನು ಸ್ಥಾಪನೆ ಮಾಡಿಕೊಳ್ಳುತ್ತಾರೆ. ಟ್ರಿಪೋಲಿಯಲ್ಲಿರುವ ಮುಸಲ್ಮಾನರಲ್ಲಿ ಹುಟ್ಟುವಂಥಾ ಸೂಕ್ಷ್ಮ ವಿಷಯಗಳನ್ನು ಟರ್ಕಿ ಸುಲ್ತಾನರು ವ್ಯವಸ್ಥೆಮಾಡುವರು. ಮತ್ತು ಟರ್ಕಿ ಸೈನ್ಯಗಳನ್ನೆಲ್ಲಾ ಟ್ರಿಪೋಲಿಯಿಂದ ಕೂಡಲೇ ವಾಪಸು ಕರಸಿಕೊಳ್ಳುತ್ತಾರೆ. ಇಟಲಿಯವರು ಈಜಿಯನ್ ದ್ವೀಪಗಳನ್ನು ಬಿಟ್ಟುಹೋಗುವುದಲ್ಲದೆ ಆ ದ್ವೀಪಗಳಲ್ಲಿ ದಂಗೆಯೆದ್ದ ಜನರ ಅಪರಾಧವನ್ನು ಕ್ಷಮಾಪಣೆ ಮಾಡುತ್ತಾರೆ. ಇಟಲಿಯವರು ಟರ್ಕಿಯವರಿಗೆ ಪ್ರತಿ ವರುಷವೂ ಕೆಲವು ದ್ರವ್ಯವನ್ನು ಪರಿಹಾರವಾಗಿ ಪಾವತಿ ಮಾಡುತ್ತಾ ಬರುವರು. ಟ್ರಿಪೋಲಿಯಲ್ಲಿ ಟರ್ಕಿಯ ಪ್ರಜೆಗಳನ್ನೂ ಆಸ್ತಿಪಾಸ್ತಿಗಳನ್ನೂ ಕಾಪಾಡಿಕೊಳ್ಳುವುದಕ್ಕೆ ಟರ್ಕಿ ಅಧಿಕಾರಿಯೊಬ್ಬನು ನೇಮಕನಾಗುವನೆಂದೂ, ಟರ್ಕಿ ಸಂಬಳ ಮುಂತಾದವನ್ನು ಇಟಲಿಯವರೇ ವಹಿಸಿಕೊಂಡು ಪಾವತಿ ಮಾಡುತ್ತಾರೆಂದೂ ಈ ಕರಾರಿನಲ್ಲಿ ಬರೆದಿದೆ ಎಂದು ಹೇಳುತ್ತಾರೆ. ಮುಸಲ್ಮಾನ್ ಪ್ರಜೆಗಳಿಗೆ ಮತಭಕ್ತಿ ಮುಂತಾದದ್ದನ್ನು ಬೋಧಿಸುವಂಥಾ ಮೌಲ್ವಿಗಳನ್ನು ಷೇಕ್ ಉಲ್ ಇಸ್ಲಾಂ ಸಂಘದವರು ನೇಮಕಮಾಡುವರು. ಆರ್ಕಿಪೆಲಗೋ ಎಂಬ ದ್ವೀಪ ಸಮುದಾಯಗಳಲ್ಲಿ ಪ್ರಜಾ ಪರಿಪಾಲನೆಯ ಕ್ರಮಗಳನ್ನು ಬದಲಾವಣೆ ಮಾಡಿ ಪ್ರಜಾ ಸಮ್ಮತವಾದ ರಾಜ್ಯಭಾರವನ್ನು ರೂಪಿಸುತ್ತೇವೆಂದು ಸುಲ್ತಾನರು ಒಪ್ಪಿಕೊಂಡಿದ್ದಾರೆ.

ಈ ಕರಾರಿನ ಪ್ರಕಾರ ಇಟಲಿಯವರಿಗೆ ಟ್ರಿಪೋಲಿಯು ದೊರಕಿತಾದಾಗ್ಯೂ ಆ ದೇಶವು ಅವರಿಗೆ ಸುಲಭವಾಗಿ ಸ್ವಾಧೀನವಾಗುವ ಹಾಗೆ ಕಾಣುವುದಿಲ್ಲ. ಅಲ್ಲಿರುವ ಟರ್ಕಿಯವರನ್ನು ಯಾಗಾದರೂ ಅಡಗಿಸಿ ಪರೋಕ್ಷದಲ್ಲಿ ಇಟ್ಟುಕೊಳ್ಳಬಹುದು. ಆದರೆ ಅಲ್ಲಿನ ಅರಬ್ಬಿಯವರು ಬಹು ಸ್ವೇಚ್ಛಾ ಪ್ರವರ್ತಕರು; ಅವರು ಈ ಕರಾರಿನ ಕಲಮುಗಳನ್ನು ಲಕ್ಷ್ಯ ಮಾಡುವ ಹಾಗೆ ಕಾಣುವುದಿಲ್ಲ. ಇಟಲಿಯವರಿಗೆ ಟ್ರಿಪೋಲಿಯಲ್ಲಿ ಕದನಗಳು ಹೆಚ್ಚುವವಲ್ಲದೆ ಅದರಿಂದ ಪ್ರಯೋಜನ ಹೆಚ್ಚಾಗಲಾರದು. ಇದರ ಫಲಾಫಲಗಳು ಕಾಲಕ್ರಮದಲ್ಲಿ ಗೋಚರಿಸುತ್ತವೆಂದು ನಿರೀಕ್ಷಿಸಬಹುದಾಗಿದೆ.

ಲಕ್ಷ್ಮೀವಿಲಾಸ ಬಾಲಿಕಾ ಪಾಠಶಾಲಾ.

ರಾ|| ಎಂ. ರಾಮರಾವ್, ಬಿ. ಎ. ಯವರು ಪ್ರತಿಷ್ಠೆ ಮಾಡಿದ್ದು.

ರಾಜಧಾನಿಯ ಬೆಟ್ಟಗೊಡಿನಲ್ಲಿ ಮುನಿಸಿಪಲ್ ಕೌನ್ಸಿಲರಾಗಿರುವ ಮಿ. ತಿರುವೆಂಗಡ ಮೊದಲಿಯಾರ್ರವರು ಆ ನೆರೆಹೊರೆಯ ಬಾಲಕಿಯರ ಪಾಠಶಾಲೆಗಾಗಿ ಒಂದು ವಿಸ್ತಾರವೂ ಅನುಕೂಲವೂ ಆದ ಕಟ್ಟಡವನ್ನು ಕಟ್ಟಿಸಿ, ಈ ವರುಷದ ನವರಾತ್ರಿ ವಿಜಯ ದಶಮಿ ದಿನ ಅಂದರೆ ಕಳೆದ ತಾ. 20 ನೇ ಭಾನುವಾರ ಬೆಳಿಗ್ಗೆ ಪ್ರಾರಂಭೋತ್ಸವವನ್ನು ನಡಿಸಿ, ಮುಂದಿನ ಕೆಲಸವನ್ನು ಪ್ರಾರಂಭಿಸಿರುತ್ತಾರೆ. ಆ ದಿನ ಬೆಳಿಗ್ಗೆ ಆದಕ್ಕಾಗಿ ಅವರು ತಮ್ಮ ಮನೆಯಲ್ಲಿ ಒಂದು ಸಂತೋಷಕೂಟವನ್ನು ನಡಿಸಿದರು. ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರಾ ಎಂ. ರಾಮರಾಯರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಮೇಲುಕವಿಯಾಸ್ಟರವರು, ಮುನಿಸಿಪಲ್ ವೈಸ್ ಪ್ರೆಸಿಡೆಂಟರು, ಮುನಿಸಿಪಲ್ ಕೌನ್ಸಿಲರುಗಳು, ಪೇಟೆಗೆ ಗೂಡಿನಲ್ಲಿರುವ ಮುಖ್ಯಸ್ಥರಾದ ದೊಡ್ಡ ಮನುಷ್ಯರು ಸಭೆಯಲ್ಲಿ ಹಾಜರಾಗಿದ್ದರು. ಮಿ. ಎಂ. ಪುಟ್ಟಕೃಷ್ಣಯ್ಯನವರು ಸಭೆಯ ಉದ್ದೇಶವನ್ನು ತಿಳಿಸಿ, ಮಿ. ತಿರುವೆಂಗಡ ಮೊದಲಿಯಾರ್ರವರು ಕೆಲವು ವರುಷಗಳಿಂದ ಆ ನೆರೆಹೊರೆಯಲ್ಲಿ ಒಂದು ಬಾಲಕರ ಸ್ಕೂಲನ್ನು ಇಟ್ಟು ನಡಸುತ್ತಾ ಬಂದು, ಈಗ ಅಲ್ಲಿನ ಬಾಲಕಿಯರಿಗೂ ವಿದ್ಯೆ ಕಲಿಸುವುದಕ್ಕೆ ಬೇಕಾದ ಅನುಕೂಲಗಳನ್ನೆಲ್ಲಾ ಒದಗಿಸಿ ಮಕ್ಕಳ ಅಭಿವೃದ್ಧಿಯ ವಿಷಯದಲ್ಲಿ ತಮಗಿರುವ ವಿಶೇಷವಾದ ಪ್ರೀತಿ ಅಭಿಮಾನಗಳನ್ನು ಪ್ರಕಾಶಪಡಿಸುತ್ತಾರೆಂದೂ, ಅವರ ಈ ಪ್ರಜಾರಂಜಕವಾದ ಕಾರ್ಯವು ಪರಮ ಸಂತೋಷಕರವಾಗಿಯೂ ವಿಶೇಷ ಪ್ರೋತ್ಸಾಹಕರವಾದದ್ದಾಗಿಯೂ ಇರುವುದಾಗಿ ವಿವರಿಸಿ ಕೊಂಡಾಡಿದರು. ಬಳಿಕ ಒಬ್ಬ ಮೊದಲಿಯಾರ್ರವರು ಬೆಂಗಳೂರು ದಂಡಿನ ಏಳು ವರುಷಗಳಿಂದ ಈ ಬಾಲಿಕಾ ಪಾಠಶಾಲೆಯು ಶ್ರೇಯಸ್ಸನ್ನು ಒಂದು ಬರೆದು ಓದಿದ್ದ ವರದಿಯ ಭಾಗವು ಕಾಣದವನ್ನು ಓದಿದ್ದಲ್ಲದೆ ಸಭಿಕರಿಗೆಲ್ಲಾ ಅಭಿನಂದನ ಪೂರ್ವಕವಾದ ಒಂದು ಚಿಕ್ಕ ಭಾಷಣವನ್ನು ಮಾಡಿದರು. ತರುವಾಯ ಮಿ ಎಂ ರಾಮರಾಯರು ಬಾಲಿಕಾ ಪಾಠಶಾಲೆಯನ್ನು ಪ್ರತಿಷ್ಠೆ ಮಾಡುವುದಕ್ಕೆ ಪೂರ್ವಭಾವಿಯಾಗಿ ಸಮಯೋಚಿತವಾದ ಕೆಲವು ಮಾತುಗಳನ್ನಾಡಿ, ಈಗಿನ ಕಾಲದಲ್ಲಿ ಇತರ ಎಲ್ಲಾ ದಾನಗಳಿಗಿಂತಲೂ ವಿದ್ಯಾದಾನಕ್ಕೆ ಸಹಾಯ ಮಾಡುವುದೇ ಪ್ರಧಾನವಾದದ್ದೆಂದೂ, ಸಕಲ ವಿಧವಾದ ಅಭಿವೃದ್ಧಿಗೂ ವಿದ್ಯೆಯೇ ಮುಖ್ಯವಾದ ಆಸ್ತಿಭಾರವಾದದ್ದೆಂದೂ, ಮೈಸೂರು ಪಟ್ಟಣದ ಮುನಿಸಿಪಲ್ ಕೌನ್ಸಿಲರುಗಳು ಪಟ್ಟಣದಲ್ಲಿ ಮಕ್ಕಳಿಗೆ ವಿದ್ಯೆ ಕಲಿಸುವ ಜಾಗದ ಸಾಹಸ ಮತ್ತು ಕುತೂಹಲಪಡುವವನು ಈ ಸಂಸ್ಥಾನದ ಇತರ ಕಡೆಗಳಲ್ಲಿ ಇಷ್ಟು ಕಂಡುಬರುತ್ತಾ ಇಲ್ಲವೆಂದೂ, ಮಿ ತಿರುವೆಂಗಡ ಮೊದಲಿಯಾರ್ರವರು ವಿದ್ಯಾಭಿವೃದ್ಧಿಗೆ ತೋರಿಸಿದ ಔದಾರ್ಯವು ಇತರರಿಗೆ ಬಹು ಶ್ರೇಷ್ಠವಾದ ಮೇಲ್ಪಂಕ್ತಿಯಾಗಿದೆ ಎಂದೂ, ಈ ಪುಣ್ಯಕರವಾದ ಪರೋಪಕಾರ ಕಾರ್ಯದಲ್ಲಿ ಅವರಿಗೆ ಸಹಾಯ ಮಾಡುವಂಥಾ ಈ ನೆರೆಹೊರೆಯ ಇತರ ಮುಖಂಡರು ಮೇಲುಪಂಕ್ತಿಯನ್ನು ತೋರಿಸತಕ್ಕದ್ದಾಗಿದೆಯೆಂದೂ ಹೇಳಿದರು. ಬಳಿಕ ಮಿ. ಮೊದಲಿಯಾರ್ರವರು ಸಭಿಕರಿಗೆಲ್ಲಾ ಪುಷ್ಪಮಾಲಿಕೆಗಳನ್ನು ಹಾಕಿ, ಅವರನ್ನು ಹೊಸ ಪಾಠಶಾಲೆಯ ಒಳಗೆ ಓಲಗ ಸಮೇತ ಕರೆದುಕೊಂಡು ಹೋದರು. ಅಲ್ಲಿ ಮಿ. ರಾಮರಾಯರವರು— ಈ ಬಾಲಿಕಾ ಪಾಠಶಾಲೆಯು ಶಾಶ್ವತವಾಗಿ ನಡೆದು ಅಭಿವೃದ್ಧಿ ಹೊಂದುತ್ತಾ ಬರಲೆಂದು ಪ್ರಾರ್ಥಿಸುತ್ತೇನೆ. ಅದಕ್ಕೆ ಇಟ್ಟಿರುವ ಲಕ್ಷ್ಮೀವಿಲಾಸವೆಂಬ ಹೆಸರು ಅನ್ವರ್ಥವಾಗಿ, ಹೆಣ್ಣು ಮಕ್ಕಳಿಗೆ ದೀರ್ಘವಾದ ಶ್ರೇಯಸ್ಸನ್ನು ಉಂಟುಮಾಡಲೆನ್ನುವುದಕ್ಕೆ ಸಂಶಯವಿಲ್ಲ ಎಂದು ಹೇಳಿ ಪಾಠಶಾಲೆಯು ಪ್ರಾರಂಭವಾಯಿತೆಂದು ಸಾರಿದರು. ಒಂದು ನಾಲ್ಕು ಕೆಟ್ಟ ಸಿಂಗರಿಸಿದ್ದ ಹೆಣ್ಣುಮಕ್ಕಳು ಸರಸ್ವತಿ ಸ್ತೋತ್ರವನ್ನು ಮಧುರವಾಗಿ ಹಾಡುತ್ತಿರುವಲ್ಲಿ ಪೂಜಾರಿಯು ಶ್ರೀ ಸರಸ್ವತಿ ದೇವಿಗೆ ಮಂಗಳಾರತಿ ಮಾಡಿದನು. ಎಲ್ಲರೂ ಸಂತೋಷಪೂರ್ವಕರಾಗಿ ಮೊದಲಿಯಾರ್ರವರು ಎಂಬ ದೊಡ್ಡ ಮನುಷ್ಯರನ್ನು ಬಹು ಆದರದಿಂದ ಸ್ತುತಿಸಿ ಅವರುಗಳಿಂದ ಬೀಳ್ಕೊಂಡು ತೆರಳಿದರು. ಪ್ರಜೆಗಳಿಂದ ಚುನಾಯಿಸಲ್ಪಡುವ ಮುನಿಸಿಪಲ್ ಕೌನ್ಸಿಲರ್ ಮಿ ತಿರುವೆಂಗಡ ಮೊದಲಿಯಾರ್ರವರು ಮಹಾಧರ್ಮಿಷ್ಠರು ಎಂದು ಬಿರುದು ಪಡೆಯತಕ್ಕ ಪ್ರಜಾಪ್ರೀತಿಯನ್ನು ಪ್ರಕಾಶಪಡಿಸುವುದಕ್ಕಾಗಿ ಆ ನೆರೆಹೊರೆಯ ಪ್ರಜೆಗಳು ಕೃತಜ್ಞರಾಗಿ ಅವರನ್ನು ಸ್ತುತಿಸಿ, ಈ ಪಾಠಶಾಲೆಯು ಶಾಶ್ವತವಾಗಿ ನಡೆದು ಅಭಿವೃದ್ಧಿ ಹೊಂದುತ್ತಾ ಬರಲೆಂದು ಹಾರೈಸುತ್ತೇವೆ.

ನವರಾತ್ರಿ ಉತ್ಸವಗಳು

ಕಳೆದ ವಾರದಲ್ಲಿ ಪ್ರತಿ ದಿನವೂ ಸಾಯಂಕಾಲದ ಹೊತ್ತು ರಾಜಧಾನಿಯ ಕೋಟೆಯಲ್ಲಿ ನವರಾತ್ರಿ ನಿಮಿತ್ತವಾದ ದರ್ಬಾರೂ ಅದಕ್ಕೆ ಸಂಬಂಧಪಟ್ಟ ಉತ್ಸವಗಳೂ ಬಹು ವೈಭವದಿಂದಲೂ ಅತ್ಯಂತ ಸಂಭ್ರಮಯುಕ್ತವಾಗಿಯೂ ನೆರವೇರಿದವು. ಪ್ರತಿ ದಿನವೂ ಶ್ರೀಮನ್ ಮಹಾರಾಜರವರು ದಿವ್ಯವಾದ ವೇಷಭೂಷಣಗಳನ್ನು ಧರಿಸಿಕೊಂಡು ಕೆಲವೇ ನಿಮಿಷ ಸಮಯದ ಅಧ್ಯಯನದಿಂದ ಅತ್ಯಂತ ತೇಜಸ್ವಿಗಳಾಗಿ, ಶ್ರೀಮನ್ ಯುವರಾಜರವರ ಸಮೇತ ರತ್ನಖಚಿತ ಸಿಂಹಾಸನವನ್ನು ಕುಳಿತು ಸಭಾಂಗಣದ ವಿಧಿ ನಿಯಮಗಳನ್ನು ಚಿತ್ತೈಸಿ, ಪ್ರತಿ ದಿನ ದರ್ಬಾರಿನ ಕೆಲಸಗಳನ್ನು ಪೂರೈಸಿಕೊಂಡು ಬರುತ್ತಿದ್ದರು. ಪ್ರತಿ ದಿನ ಸಾಯಂಕಾಲ ನಡೆದ ದರ್ಬಾರಿನ ಕಾಲದಲ್ಲಿ ಸ್ವೀಕರಿಸುತ್ತಿದ್ದ ನಾನಾ ಚಮತ್ಕಾರ ಮತ್ತು ಸಾಹಸಯುಕ್ತವಾದ ಕಸರತ್ತುಗಳನ್ನೂ ಪರಿಸೆಗಳನ್ನೂ ಮಾಡಿದರು. ಪಟ ಕಾಳಗಗಳು, ಕೋಲಾಟದ ಕುಸ್ತಿಗಳು, ಗರಡಿಯವರ ಪ್ರದರ್ಶನಗಳು ಬಹು ಆಶ್ಚರ್ಯವಾಗಿಯೂ ಉತ್ಸಾಹಕರವಾಗಿಯೂ ಸಂತೋಷಪ್ರದವಾಗಿಯೂ ನಡೆಯುತ್ತಿದ್ದವು. ನಾನಾ ಬಗೆಯ ಚಿತ್ರವಿಚಿತ್ರವಾದ ಬಾಣ ಬಿರುಸುಗಳ ತಮಾಷೆಯೂ ಪ್ರತಿ ದಿನವೂ ಬಹು ಸೊಗಸಾಗಿ ನಡೆಯುತ್ತಿತ್ತು. ದಿನವೂ ಸುಮಾರು 600-700 ಮಂದಿಯವರೆಗೆ ರಾಜಬಂಧುಗಳು, ಅಧಿಕಾರಿಗಳು, ಪ್ರತಿಷ್ಠಿತರುಗಳು, ಎಲ್ಲಾ ಕೋಮುಗಳ ಮತ್ತು ದೇಶಗಳ ಮುಖ್ಯ ಮುಖ್ಯರು, ಸೈನಿಕ ಮತ್ತು ಪೊಲೀಸ್ ಉದ್ಯೋಗಸ್ಥರುಗಳು ದರ್ಬಾರಿನಲ್ಲಿ ಹಾಜರಾಗಿದ್ದು ಮಹಾರಾಜರವರಿಗೆ ನಜರು ಮುಜರೆಗಳನ್ನು ಮಾಡಿ ಹೋಗುತ್ತಿದ್ದರು. ದರ್ಬಾರಿನ ಕೆಲಸವು ತೀರಿದ ನಂತರ ಎಲ್ಲಾ ಬಹು ವಿಶೇಷವಾಗಿಯೇ ನಡೆಯುತ್ತಿದ್ದವು. ನವರಾತ್ರಿಯಲ್ಲಿ ಅರಮನೆ ಮುಂಭಾಗದಲ್ಲೂ ಪಟ್ಟಣದ ರಸ್ತೆಗಳಲ್ಲೂ ಸಾರ್ವಜನಿಕ ಕಟ್ಟಡಗಳಲ್ಲೂ ಅತ್ಯಂತ ಸುತ್ತಲೂ ವಿದ್ಯುಚ್ಛಕ್ತಿಯ ದೀಪಗಳ ಸಜ್ಜಿಗಳನ್ನಿಟ್ಟು ಸ್ತೋತ್ರ ಸಂದರ್ಭವಾಗಿ ಮಾಡಿದ್ದರು. ಈ ದೀಪೋತ್ಸವದ ವೈಭವವು ವಿವರಿಸಲಶಕ್ಯವಾಗಿದೆ. ಈ ಅಸಂಖ್ಯಾತವಾದ ದೀಪಗಳಲ್ಲಿ ಪ್ರಕಾಶವಾಗುತ್ತಲೂ ಏಕಕಾಲದಲ್ಲಿ ಹೊತ್ತಿಕೊಳ್ಳುವುದನ್ನು ಕಣ್ಣು ತೆರೆದು ನೋಡುವುದಕ್ಕೆ ಅದ್ಭುತವಾಗಿರುತ್ತಿತ್ತು. ಬೆಳಗುತ್ತಿರುವ ದೀಪಗಳ ಶೋಭೆಯನ್ನು ನೋಡಿ ಪಟ್ಟಣದವರು ಆನಂದಪಡುತ್ತಿದ್ದರು.

ಈ ಉತ್ಸವವನ್ನು ನೋಡಿ ಸಂತೋಷಪಡುವುದಕ್ಕಾಗಿ ರಾಜಧಾನಿಗೆ ಹಲವು ಕಡೆಗಳಿಂದ ಪ್ರಜೆಗಳು ಬಹು ಅಪಾರವಾಗಿ ಬಂದಿದ್ದರು. ಸೋಟಕ್ಕಾಗಿ ಬಹುವರ್ಷಗಳಿಂದ ರಾಜಧಾನಿಯ ಆಕರ್ಷಣೆಯಾದ ಅರಮನೆಯ ಮುಂಭಾಗದಲ್ಲಿರುವ ವಿಸ್ತಾರವಾದ ಮೈದಾನವೆಲ್ಲಾ ಭಾಗಗಳಲ್ಲೂ ಜನರಿಂದ ತುಂಬಿಹೋಗಿದ್ದವು. ಸುತ್ತಲಿನ ವಿಶಾಲ ಪ್ರದೇಶವನ್ನು ನೋಡಿ ಮತ್ತು ಪೋಲೀಸಿನವರು ನೋಟಕರನ್ನು ಬಹಳ ಸಹನದಿಂದ ಉಪಚರಿಸಿ ಅವರ ಸಂತೋಷಕ್ಕೆ ಅಡ್ಡಿ ಮಾಡದ ಹೋದಿಕೊಂಡರು. ಈ ಬಾರಿ ನವರಾತ್ರಿ ಉತ್ಸವ ಕಾಲದಲ್ಲಿ ಮಳೆ ಬೀಳದೆ ಇದ್ದುದು ಬಹು ಸುಖಪ್ರದವಾಗಿತ್ತು. ಉತ್ಸವಗಳನ್ನು ನೋಡಲು ಬರುವ ಪ್ರಜೆಗಳಿಗೆ ಯಾವ ಕಷ್ಟವೂ ಸಂಭವಿಸಲಿಲ್ಲ. ಅದರಿಂದ ಅವರು ಸುಖವಾಗಿ ಪ್ರತಿದಿನವೂ ಉತ್ಸವವನ್ನು ನೋಡಿ ಶ್ರೀಮನ್ಮಹಾರಾಜರವರ ಉತ್ಸವವನ್ನು ಸಂತೋಷ ಸಂಭ್ರಮಗಳನ್ನು ವೃದ್ಧಿಗೊಳಿಸಿದರು.

ಆಯುಧ ಪೂಜೆ.

ತಾ. 19 ನೇ ಶನಿವಾರ ಅರಮನೆಯಲ್ಲಿ ಆಯುಧ ಮತ್ತು ವಾಹನಗಳ ಪೂಜೆಗಳು ಬೆಳಿಗ್ಗೆ ನಡೆದವು. ಮಹಾರಾಜರವರ ಪಟ್ಟದ ಕತ್ತಿ ಮೊದಲಾದ ಆಯುಧಗಳನ್ನು ದಿವ್ಯವಾದ ಪಾಲಕಿಯಲ್ಲಿಟ್ಟು, ಪಟ್ಟದಾನೆ ಪಟ್ಟದ ಕುದುರೆಗಳೊಡನೆ ಸಮಸ್ತ ಬಿರುದು ಬಾವಲಿಗಳ ಸಮೇತ ಕೋಟೆಯ ನಾಲ್ಕು ಬೀದಿಗಳಲ್ಲೂ ಮೆರವಣಿಗೆ ಮಾಡಿ ಕರೆಯ ಒಳಗೆ ತೆಗೆದುಕೊಂಡು ಹೋಗಿ ಅಲ್ಲಿ ನಿಷ್ಕರ್ಷಿತ ಪ್ರಕಾರ ಸಮಯಕ್ಕೆ ಸರಿಯಾಗಿ ಆಚರಿಸಿ, ಮತ್ತೆ ಮೆರವಣಿಗೆಯಲ್ಲಿ ಅರಮನೆಗೆ ತಂದರು. ಅಲ್ಲಿ ಶ್ರೀಮನ್ಮಹಾರಾಜರವರು ಆಯುಧಗಳಿಗೆ ಯಥಾವಿಧಿಯಾಗಿ ಪೂಜಾದಿಗಳನ್ನು ನಡಿಸಿ ದಾನಾದಿಗಳನ್ನು ಮಾಡಿದರು. ಈ ಮೆರವಣಿಗೆಯು ಬಹು ಅಟ್ಟಹಾಸದಿಂದಲೂ ಅತ್ಯಂತ ಸಂತೋಷಪ್ರದವಾಗಿಯೂ ಬೆಳೆಯಿತು. ಅನೇಕ ಸಹಸ್ರ ಪ್ರಜೆಗಳು ಮೆರವಣಿಗೆ ಹೋಗುತ್ತಿದ್ದ ರಸ್ತೆಗಳ ಉಭಯ ಪಾರ್ಶ್ವಗಳಲ್ಲೂ ಕಿಕ್ಕಿರಿಯುವಂತೆ ನಿಂತುಕೊಂಡು ಆನಂದಪಟ್ಟರು.

ಇಂಗ್ಲಿಷ್ ದರ್ಬಾರು.

ಅದೇ ದಿವಸದ ಸಾಯಂಕಾಲ ಶ್ರೀಮನ್ ಮಹಾರಾಜರವರು ಅರಮನೆಯಲ್ಲಿ ಯೂರೋಪಿಯನ್ ಅತಿಥಿಗಳಿಗಾಗಿ ಇಂಗ್ಲಿಷ್ ದರ್ಬಾರನ್ನು ನಡಿಸಿದರು. ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿಯವರು ಸತಿ ಪುತ್ರಿಯರ ಸಮೇತ ಬಂದಿದ್ದರು. ಇವರನ್ನು ಅರಮನೆಯ ಬಿರುದು ಸಲ್ಯೂಟ್‌ಗಳ ಸಮೇತ ದಿವ್ಯವಾದ ಅರಮನೆಯ ನಾಲ್ಕು ಕುದುರೆ ಕಟ್ಟಿದ ಸಾರೋಟಿನಲ್ಲಿ ಗೌರವಾರ್ಥವಾದ ತೋಪುಗಳು ಹಾರುತ್ತಿರುವಲ್ಲಿ ಕರೆದುತಂದು ಅರಮನೆಯ ಬಾಗಿಲಲ್ಲಿ ಇಳಿಸಿದರು. ಸರ್ದಾರ್ ಗೋಪಾಲಕೃಷ್ಣ ಅರಸಿನವರೂ, ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿ ಮಿ. ಕೆ. ಆರ್. ಶ್ರೀನಿವಾಸಯ್ಯಂಗಾರ್ರವರೂ ಕಾದಿದ್ದು ರೆಸಿಡೆಂಟರನ್ನು ಸಾರೋಟಿನಿಂದ ಇಳಿಸಿ, ಸ್ವಾಗತಿಸಿ ಕರೆದುಕೊಂಡು ಹೋದರು. ದರ್ಬಾರ್ ಹಾಲಿನ ಮೆಟ್ಟಿಲ ಹತ್ತಿರ ಬಳಿ ದಿವಾನ್ ಮಿ. ಟಿ. ಆನಂದರಾಯರು ಕಾದಿದ್ದು ಅವರನ್ನು ಸ್ವಾಗತಿಸಿ, ಅವರ ಕೂಡ ಮಾತನಾಡುತ್ತಾ ದರ್ಬಾರ್ ಹಾಲಿನ ಬಳಿಗೆ ಕರೆದುಕೊಂಡು ಹೋಗುತ್ತಿರಲು ಒಳಗಿನಿಂದ ಶ್ರೀಮನ್ಮಹಾರಾಜರವರು ಚಿತ್ತೈಸಿ ಬ್ರಿಟಿಷ್ ರೆಸಿಡೆಂಟರಿಗೆ ಹಸ್ತಲಾಘವವನ್ನಿತ್ತು ಕುಶಲಪ್ರಶ್ನೆ ಕೇಳುತ್ತಾ ಅವರ ಕೈಹಿಡಿದು ಮಾಡಿ ಸಿಂಹಾಸನದ ಬಲಪಾರ್ಶ್ವದಲ್ಲಿ ಏರ್ಪಡಿಸಿದ್ದ ದಿವ್ಯವಾದ ಕುರ್ಚಿಯಲ್ಲಿ ಅವರನ್ನು ಕೂರಿಸಿ, ಬ್ಯಾಂಡ್ ವಾದ್ಯದವರು ಮಂಗಳ ವಾದ್ಯಗಳು ಘೋಷಿಸುತ್ತಿರುವಲ್ಲಿ ಸಿಂಹಾಸನವನ್ನು ಹತ್ತಿ ಸೈನಿಕರ ಪ್ರತಿವಂದನೆ ಮಾಡಿ ಕುಳಿತುಕೊಂಡರು. ಬಳಿಕ 10-15 ಮಂದಿ ಯೂರೋಪಿಯನ್ ಸಭಿಕರೂ ದೊರೆಸಾನಿಗಳೂ ಒಬ್ಬೊಬ್ಬರಾಗಿ ಸಿಂಹಾಸನದ ಮುಂದಿನಿಂದ ಹಾದು ಮಹಾರಾಜರವರನ್ನು ವಂದಿಸಿ ಒಂದು ರೆಸಿಡೆಂಟರ ಬಲಪಾರ್ಶ್ವದಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ ಸಾಲುಕಟ್ಟಿ ಕುಳಿತುಕೊಂಡರು. ಸಿಂಹಾಸನದ ಎಡಪಾರ್ಶ್ವದಲ್ಲಿ ಮುಖ್ಯ

...ವರ್ಣನೆಯೂ ಅರಸುಗಳಿಗೆ [illegible] ಮೇಲೆ ಕುಳಿತರು [illegible] ಯುವರಾಜರವರೂ ಸಿಂಹಾಸನದ ಎದುರುಗಡೆ ಶ್ರೇಷ್ಠವಾದ ಪೀಠವನ್ನ [illegible] ಳಿತರು.

ದರ್ಬಾರ್ ಪ್ರಾರಂಭವಾದ ಕೂಡಲೆ [illegible] ಪ್ಲಾಟ್‌ಫಾರಮಿನ ಮೇಲ [illegible] ಕೆಮ್ಮಣ್ಣು [illegible] ಯಲ್ಲಿ [illegible] ಗಳೂ ಕೆಂಪುಗಳೂ [illegible] ತ್ತಿದ್ದವು [illegible] ಕುದುರೆ ಸವಾರರು ಕುದುರೆಗಳ ಮೇಲ [illegible] ನ್ನದ [illegible] ಗಿ ಕೇಸರಿ ಬಣ್ಣಗಳನ್ನು ಮಾಡಿದರು [illegible] ಅದೇ ರೀತಿ [illegible] ಮಾಡಿದರು. ಇದು ಬಹು ಸ್ವಾರಸ್ಯ [illegible] ಉತ್ಸಾಹಕರವಾಗಿಯೂ ಇತ್ತು. ಬಳಿಕ ಚಿತ್ರವಿಚಿತ್ರವಾ [illegible] ಅದ ಬಗೆಬಗೆಯ [illegible] ಬಿರುದುಗಳು [illegible] ದರ್ಬಾರಿ [illegible] ಬ್ರಿಟಿಷ್ ರೆಸಿಡೆಂಟರ್ ಮೊದಲಾದ ಯೂರೋಪಿಯನ್ ಅತಿಥಿಗಳಿಗೆ ಅವ [illegible] ಸ್ಥಾನಗಳನ್ನು ನೀಡಿದರು. ಅವರೆಲ್ಲಾ ನೋಡ [illegible] ಕ್ರಮವಾಗಿ ಸಿಂಹಾಸನದ ಮುಂದೆ ಬಂದು ವಂದಿಸಿ ಮಹಾರಾಜ [illegible] ಪದವಿಗಳನ್ನು ಪಡೆದು ತೆರಳಿದರು. ಬ್ರಿಟಿಷ್ ರೆಸಿಡೆಂಟರವರನ್ನು [illegible] ಮರ್ಯಾದೆ ಕೊಟ್ಟು ಕರೆದು ತಂದು [illegible] ಕೊಡ [illegible] ಗುತ್ತಿರುವಲ್ಲಿ ಬಿರುದು ಸಲ್ಯೂಟ್ ಸಮೇತ ಕಳುಹಿಸಿ ಕೊಟ್ಟರು. [illegible] ಇಂಗ್ಲಿಷ್ [illegible] ಅರಮನೆಯ [illegible] ದರ್ಬಾರ್ ಗಾಡಿಗಳಲ್ಲಿ ಕುಳಿತು ತೆರಳಿದರು. ಅನಂತರ [illegible] ಮಹಾರಾಜರವರು [illegible] ಹೊತ್ತು ದರ್ಬಾರ್ ನಡೆಸಿ ಪಟ್ಟದ ಆನ [illegible] ಬಂದು ನಿಂತಿತು. ಅದರೊಡನೆ ಇಂಗ್ಲಿಷ್ ದರ್ಬಾರನ್ನು ಮುಕ್ತಾ [illegible] ದರ್ಬಾರ್ [illegible] ಅರಮನೆಯ ಹೊರಭಾಗ [illegible] ಎಲ್ಲಾ [illegible] ಶಕ್ತಿಯ [illegible] ಅರಮನೆಯ [illegible] ಅಲಂಕಾರ [illegible] ಅಲಂಕೃತ [illegible] ಅಭ್ಯಾಸವಾಯಿತು [illegible] ದರ್ಬಾರ್ [illegible] ಅರಮನೆ [illegible] ನಗಳುಂಟಾದವು.

[illegible] ಉತ್ಸವ.

[illegible] ೨೦ನೇ [illegible] ಉತ್ಸವ [illegible] ೧೦ ಗಂಟೆಯ [illegible] ಮಹಾರಾ [illegible] ಕುಮಾರರು [illegible] ಅರಮನೆಯ [illegible] ಕುಮಾರರನ್ನು [illegible] ದೊಡ್ಡ [illegible] ಮಂಟಪಕ್ಕೆ [illegible] ವಸ್ತುಗಳನ್ನು [illegible]

[illegible] ಮಹಾರಾಜರವರು [illegible] ಯುವರಾಜರವರ ಸಮೇತ [illegible] ನಿರೋಶರಾಗಿ [illegible] ಅರಮನೆಯಿಂದ ಹೊರಟು [illegible] ಮಂಟಪಕ್ಕೆ [illegible] ದರ್ಬಾರ್ [illegible] ಮಹಾರಾಜರವರಿಗೆ [illegible] ಮಂಟಪವನ್ನು [illegible] ಮಹಾರಾಜರವರು [illegible] ಅಲ್ಲಿಂದ [illegible] ಉತ್ಸವಗಳು [illegible] ೨೧ ತೋಪುಗಳು ಹಾರಿಸಲ್ಪ [illegible] ಮಹಾರಾಜರವರು [illegible] ಮಹಾರಾಜರವರಿಗೆ [illegible] ಯುವರಾಜರವರ ಕೂಡ ಆನೆ ಪತ್ತ [illegible] ರಾತ್ರಿ ಮನೆಗಳಲ್ಲಿ [illegible] ಉತ್ಸಾಹ [illegible] ಸುಮಾರು ೧೧½ ಗಂಟೆಯ [illegible] ಅರಮನೆಯನ್ನು ಸೇರಿ [illegible] ಉತ್ಸವಗಳನ್ನು [illegible] ಸರ್ವ ಪ್ರಜಾ [illegible] ಮುಕ್ತಾಯವಾಯಿತು. ಆ ರಾತ್ರಿ ನಡೆದ [illegible] ದೀಪೋತ್ಸವದ ವೈಭವವೂ ಅಪೂರ್ವವಾಗಿಯೂ ಮನೋಹರ [illegible] ಇತ್ತು.

ಅರಸಿನ ಪ್ರದರ್ಶನ ಶಾಲೆಯು.

[illegible] ಗಳು, ವ್ಯವಸಾಯೋಪಕರಣಗಳು ಮತ್ತು ಇತರ ವಸ್ತುಗಳ ವಿವರಣೆಯು.

ವ್ಯವಸಾಯದ ಮುಟ್ಟುಗಳು.

[illegible] ಮೈಸೂರು ಪಟ್ಟಣದ ಪುಷ್ಪವನಾಭಿವೃದ್ಧಿಯಲ್ಲಿ ಇಟ್ಟಿರುವ ಪ್ರದರ್ಶ [illegible] ಎಲ್ಲಾ ಭಾಗಗಳಲ್ಲೂ ನೋಡತಕ್ಕದ್ದಾಗಿದೆ. ಮೊದಲು ನಮ್ಮ [illegible] ವ್ಯವಸಾಯಗಾರರಿಗೆ ಅವಶ್ಯವಾಗಿರುವಂಥಾ ಯಂತ್ರೋಪಕರಣಗಳ [illegible] ಎಲ್ಲರೂ ವಿಶೇಷವಾಗಿ ನೋಡಿ ತಿಳಿಯಬೇಕಾಗಿದೆ. ಮೈಸೂರು [illegible] ವ್ಯವಸಾಯ ಇಲಾಖೆಯವರು ಕೃಷಿ ಸಂಬಂಧವಾದ ಸುಲಭ ಬೆಲೆ [illegible] ನೇಗಿಲು ಮೊದಲಾದ ಮುಟ್ಟುಗಳನ್ನು ಇಡಿಸಿದಾರೆ. [illegible] ವ್ಯವಸಾಯ ಮಾಡುವವರು ಇವುಗಳಲ್ಲಿ ಪ್ರತಿ ಒಂದನ್ನೂ ಚೆನ್ನಾಗಿ [illegible] ತಮಗೆ ಅನುಕೂಲವಾಗಿರುವವುಗಳನ್ನು ಗೊತ್ತುಮಾಡಿಕೊಳ್ಳಬೇ [illegible] ಇಲ್ಲದೆ ಬೊಂಬಾಯಿನ ಪೇಲ್ಸ್ ಬೆಂಡಾಲ್ ಕಂಪನಿಯವರು ಕೂಡ [illegible] ಮುಟ್ಟುಗಳನ್ನು ಪ್ರದರ್ಶನ ಮಾಡಿರುವರು. ರೈತರು ಇವುಗಳನ್ನು ಪರೀಕ್ಷೆ ಮಾಡಬಹುದು.—ಸರ್ಕಾರಿ ವ್ಯವಸಾಯದ ಇಲಾಖೆಯವರು ಈ ಪ್ರದರ್ಶನ ಶಾಲೆಯ ಒಂದು ಕೊಟಡಿಯಲ್ಲಿ ಸಂಸ್ಥಾನದೊಳಗೆ ಬೇರೆ ಬೇರೆ ಪೈರುಗಳಿಗೆ ಹಿಡಿದು ನಷ್ಟಪಡಿಸುವಂಥಾ ನಾನಾ ಜಾತಿಯ ಚಿಟ್ಟೆ, ಹುಳ, ಕ್ರಿಮಿಕೀಟಾದಿಗಳನ್ನು ಇಟ್ಟು ತೋರಿಸಿ, ಅವುಗಳ ಪರಿಹಾರಕ್ಕೆ ರೈತರು ಮಾಡಬೇಕಾಗಿರುವಂಥಾ ಉಪಾಯಗಳನ್ನು ಕೇಳಿದವರಿಗೆ ವಿವರಿಸಿ ಹೇಳುತ್ತಾರೆ ಮತ್ತು ಯಾವ ಯಾವ ಬೆಳೆಗೆ ಎಂಥೆಂಥಾ ಗೊಬ್ಬರವನ್ನು ಹಾಕಬೇಕು, ಯಾವ ರೀತಿ ವ್ಯವಸಾಯ ಮಾಡಬೇಕು, ಎಂಥಾ ಜಮೀನಿನಲ್ಲಿ ಎಂಥಾ ಬೆಳೆಯನ್ನಿಡಬೇಕು, ಬಿತ್ತುವ ಬೀಜ ಹೇಗಿರಬೇಕು, ಒಳ್ಳೇ ಬಿತ್ತನೆಗಳನ್ನು ಹ್ಯಾಗೆ ತರಿಸಿಕೊಳ್ಳಬೇಕು ಎಂಬೀ ವಿಚಾರಗಳನ್ನೂ ಅಲ್ಲಿ ಕೇಳಿ ತಿಳಿದುಕೊಳ್ಳಬಹುದು. ಕೈಗಾರಿಕೆಗಳಿಗೆ ಉಪಯುಕ್ತವಾಗಿಯೂ, ರೈತರಿಗೆ ವಿಶೇಷ ಲಾಭ ಬರುವಂಥಾದ್ದಾಗಿಯೂ ಇರುವ ಹೊಸ ಪೈರುಗಳ ವಿಷಯವನ್ನೂ ಆ ಕೊಟಡಿಯಲ್ಲಿ ಕೇಳಿದವರಿಗೆ ತಿಳಿಸುತ್ತಾರೆ. ಜಮೀನುದಾರರೂ ವ್ಯವಸಾಯ ಮಾಡತಕ್ಕ ರೈತಪ್ರತಿಗಳೂ ಇವುಗಳನ್ನು ಈ ಪ್ರದರ್ಶನದಲ್ಲಿ ಮೊದಲು ನೋಡಿ ಚೆನ್ನಾಗಿ ತಿಳಿದುಕೊಂಡಲ್ಲಿ ಪ್ರಯೋಜನ ಹೊಂದುವುದರಲ್ಲಿ ಅನುಮಾನವಿಲ್ಲ.

ವ್ಯವಸಾಯಕ್ಕೂ, ಧಾನ್ಯಗಳ ರಾಶಿಗೂ, ಹತ್ತಿ ಅಡಿಕೆಗಳನ್ನು ಬಿಡಿಸುವುದಕ್ಕೂ ಬಹಳ ಪ್ರಯೋಜನಕರವಾಗಿರುವಂಥಾ ಸುಲಭತರವಾದ ಅನೇಕ ಯಂತ್ರಗಳನ್ನು ಈ ಪ್ರದರ್ಶನದಲ್ಲಿ ನೋಡಬಹುದು. ಕನ್ನಂಬಾಡಿಯಲ್ಲಿ ಗವರ್ನ್‌ಮೆಂಟಿನವರು ಕಟ್ಟಲಾರಂಭಿಸಿರುವ ಆಣೆಕಟ್ಟು, ಕಲಾಪು, ಇದರ ಕೋಡಿ, ಇದರಿಂದ ಹೊರಡುವ ನಾಲೆಗಳು ಎಲ್ಲಾ ಸಿದ್ಧವಾದ ಮೇಲೆ ಹ್ಯಾಗಿರುತ್ತವೆ ಎಂಬುದನ್ನು ಮೈಸೂರು ಇಂಜನಿಯರ್ ಸ್ಕೂಲಿನವರು ಸಂಕ್ಷೇಪವಾಗಿಯೂ ಸಾಕ್ಷಾತ್ತಾಗಿಯೂ ಮಾಡಿಟ್ಟು ತೋರಿಸಿರುತ್ತಾರೆ. ಈ ಪ್ರದರ್ಶನ ಶಾಲೆಯಲ್ಲಿ ನೋಡಬಹುದು. ಕೋಲಾರದ ಭಂಗಾರದ ಗಣಿಗಳಲ್ಲಿ ಗಣಿಯೊಳಕ್ಕೆ ಇಳಿಯುವುದು, ಒಳಗಿಂದ ಭಂಗಾರವಿರುವ ಕಲ್ಲುಗಳನ್ನು ಮೇಲಕ್ಕೆತ್ತಿ ತರುವುದು, ಅದನ್ನು ನುಣ್ಣಗೆ ಪುಡಿಮಾಡುವುದು, ಈ ಭಾಗಗಳನ್ನೆಲ್ಲಾ ಮರದಲ್ಲಿ ಮಾಡಿಟ್ಟ ಒಂದು ದೊಡ್ಡ ಯಂತ್ರದ ಮೂಲಕ ಮಾಡಿ ತೋರಿಸಿದಾರೆ. ಇದು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ತಯಾರಾದದ್ದು. ಭಂಗಾರದ ಗಣಿಗಳನ್ನು ನೋಡಿ ಕಾಣದವರು ಈ ಯಂತ್ರ ಮಾಡುವ ಕೆಲಸವನ್ನು ನೋಡಿ ತಕ್ಕಮಟ್ಟಿಗೆ ತಿಳಿಯಬಹುದು. ಮಂಗಳೂರು ಬಾಸಲ್ ಮಿಶನ್ ಕಾರ್ಖಾನೆಯಲ್ಲಿ ತಯಾರಾಗಿ ಬರುವ ಪ್ರಸಿದ್ಧವಾದ ಹೆಂಚು, ಇಟ್ಟಿಗೆ, ಹೂಕುಂಡ, ನಲ್ಲಿ, ಚಪ್ಪರಬಿಲ್ಲೆ, ಆಟದ ಸಾಮಾನು, ಮಣ್ಣಿನ ಪಾತ್ರೆ ಪದಾರ್ಥಗಳು, ಇವನ್ನೆಲ್ಲಾ ಬೆಂಗಳೂರಿನಲ್ಲಿ ಆ ಕಂಪನಿಯ ಏಜೆಂಟರಾಗಿರುವ ಮಿ॥ ಕ್ಯಾಂಪೆಲ್‌ರವರು ಇಟ್ಟು ತೋರಿಸಿದಾರೆ. ಇದನ್ನು ನೋಡುವಲ್ಲಿ ನಮ್ಮ ದೇಶದ ಮಣ್ಣಿನಿಂದ ಎಂಥೆಂಥಾ ಉಪಯುಕ್ತವೂ, ಲಾಭಕರವೂ ಆದ ವಸ್ತುಗಳನ್ನು ಮಾಡಿಕೊಳ್ಳಬಹುದೆಂದು ಗೊತ್ತಾಗುತ್ತದೆ. ಭಾವಿ, ಕೊಳ ಮೊದಲಾದ ಹಳ್ಳ ಪ್ರದೇಶದಿಂದ ಎತ್ತರವಾಗಿರುವ ಜಮೀನುಗಳಿಗೆ ನೀರನ್ನು ಎತ್ತಿ ಹಾಯಿಸುವಂಥಾ ಯಂತ್ರಗಳು ಅನೇಕವಾಗಿ ಪ್ರದರ್ಶನ ಮಾಡಲ್ಪಟ್ಟಿವೆ. ಈ ಪ್ರಕಾರ ಕೊಡಲ್ಪಟ್ಟ ನಾಮದಗಲ ಟ್ರೈನಿಂಗ್ ಇನ್ಸ್ಟಿಟ್ಯೂಟಿನವರು ಇಟ್ಟಿರುವ ಯಂತ್ರವು ಬಹಳ ಸುಲಭವಾದದ್ದು. ವಿಶೇಷ ಬಡಬಗ್ಗರೂ ಅನುಕೂಲವಾಗಿ ಕೊಂಡಿಟ್ಟುಕೊಳ್ಳಬಹುದು. ಇದರ ಭಾಗಗಳು ತೊಡಕಾದದ್ದುಗಳಲ್ಲ. ಇದನ್ನು ಸಾಧಾರಣ ರೈತರೂ ಕೂಡ ಉಪಯೋಗಿಸಬಹುದಾಗಿದೆ. ವಿಸ್ತಾರವಾದ ಜಮೀನಿಗೆ ನೀರು ಹಾಯಿಸುವುದಕ್ಕೂ ಅನುಕೂಲಿಸುವ ನಾನಾ ಥರ ಇಂಜನ್ ಪಂಪುಗಳನ್ನೂ, ಅವು ನೀರೆತ್ತಿ ಸುರಿಯುತ್ತಿರುವುದನ್ನೂ ಈ ಪ್ರದರ್ಶನದಲ್ಲಿ ನೋಡಬಹುದು.

ಮದರಾಸ್ ಆರ್ಟ್ಸ್ ಸ್ಕೂಲಿನ ಹಾರುವ ಬಿಳಿಯ ಎರಡು ಮಗ್ಗಗಳು ಒಂದು ಜಾಗದಲ್ಲಿ ನೇಯುತ್ತಿರುವವು. ಅಲ್ಲಿನವರೇ ಬಂದು ಈ ಮಗ್ಗದ ಭಾಗಗಳನ್ನೂ ಅದರಲ್ಲಿ ಕೆಲಸಮಾಡುವ ಕ್ರಮಗಳನ್ನೂ ಸಾಕ್ಷಾತ್ತಾಗಿ ನೇಯ್ದು ತೋರಿಸುತ್ತಿದಾರೆ. ನಮ್ಮ ಸೀಮೆಯ ದೇವಾಂಗದವರು ಇದನ್ನು ನೋಡಿ, ಇದರ ವೃತ್ತಾಂತವನ್ನೆಲ್ಲಾ ತಿಳಿದುಕೊಳ್ಳಬಹುದು. ಈ ಮಗ್ಗಗಳಲ್ಲಿ ಬಹು ಸುಲಭವಾಗಿಯೂ ಜಾಗ್ರತೆಯಿಂದಲೂ ಎನಾದರೂ ಬಟ್ಟೆಗಳನ್ನು ನೇಯ್ದು ಲಾಭ ಸಂಪಾದಿಸುವ ಉಪಾಯವನ್ನು ನಮ್ಮ ದೇವಾಂಗದವರು ಹೆಚ್ಚುಹೆಚ್ಚಾಗಿ ಕಲಿತುಕೊಳ್ಳಬೇಕಾಗಿದೆ. ಅಪೇಕ್ಷಿಸುವವರಿಗೆ ಅಂಥಾ ಮಗ್ಗಗಳನ್ನು ಸುಲಭ ಕ್ರಯಕ್ಕೆ ತರಿಸಿಕೊಡುವರು.

ಇನ್ನೊಂದು ಕೊಠಡಿಯಲ್ಲಿ ಚನ್ನಪಟ್ಟಣದ ಇಂಡಸ್ಟ್ರಿಯಲ್ ಸ್ಕೂಲಿನ ಕಸಬುಗಳ ಶಿಕ್ಷಕರು ತಮ್ಮ ಹಸ್ತಕೌಶಲದಿಂದ ಮಾಡುತ್ತಿರುವಂಥಾ ದಿವ್ಯವಾದ ವಸ್ತು ವಿಶೇಷಗಳನ್ನು ನೋಡಬಹುದು. ಅವರು ಅಲ್ಲಿ ಯಂತ್ರಗಳನ್ನೂ ಆಯುಧಗಳನ್ನೂ ವಿದ್ಯುಚ್ಛಕ್ತಿಯ ಸಹಾಯದಿಂದ ಪ್ರಯೋಗಿಸಿ ಬಗ್ಗದ ಸಾಮಾನುಗಳನ್ನು ತಯಾರುಮಾಡಿ ತೋರಿಸುತ್ತಿದಾರೆ. ಮರದಲ್ಲೂ ಮೂಳೆಯಲ್ಲೂ ಚಿತ್ರ ವಸ್ತುಗಳನ್ನು ಕೆತ್ತಿ ಬಿಡಿಸಿ ರೂಪ ಮಾಡುತ್ತಿರುವ ಕಾರೀಗಾರರನ್ನೂ ಈ ಪಕ್ಕದಲ್ಲಿ ನೋಡಬಹುದು.

ಒಂದು ಕೊಟಡಿಯೊಳಗೆ ಈ ಸಂಸ್ಥಾನದ ಕಾಡುಗಳು ಹ್ಯಾಗಿವೆ, ಅವುಗಳ ಮಧ್ಯ ಕುರುಬರೇ ಮುಂತಾದ ಜನರು ಹ್ಯಾಗೆ ವಾಸಮಾಡುವರು, ಅವರ ಮನೆಮಠ ವ್ಯವಸಾಯ ಕ್ರಮಗಳು ಹ್ಯಾಗಿವೆ, ಯಾವ ಯಾವ ಜಾತಿಯ ಗಿಡ ಮರ ಗಡ್ಡೆ ಗೆಣಸು ಮೂಲಿಕೆಗಳು ದೊರೆಯುತ್ತವೆ, ಕೈಗಾರಿಕೆ ಕಸಬುಗಳಿಗೆ ಅವಶ್ಯವಾದ ಸಾಮಾನುಗಳು ಎಲ್ಲೆಲ್ಲಿ ಎಷ್ಟೆಷ್ಟು ಮಟ್ಟಿಗೆ ದೊರಕುವವು, ಯಾವ ಕಾಡು ಬೆಳೆಯಿಂದ ಎಂಥಾ ಕೈಗಾರಿಕೆ ಮಾಡಬಹುದು, ಈ ಮೊದಲಾದವುಗಳೆಲ್ಲಾ ಸಾಕ್ಷಾತ್ತಾಗಿ ನೋಡಿ ತಿಳಿಯುವಂತೆ ಬಹು ಅಂದವಾಗಿ ಸೇರಿಸಿಟ್ಟು ತೋರಿಸಿದಾರೆ. ನಮ್ಮ ಸೀಮೆಯಲ್ಲಿ ಗಿಡ ಮರ ವನೌಷಧಾದಿಗಳಿಂದಲೂ ಬೇರೆ ಬೇರೆ ಉತ್ಪನ್ನಗಳಿಂದಲೂ ಮನುಷ್ಯರ ಮನುಷ್ಯರ ಉಪಯೋಗಕ್ಕೆ ಬರುವಂಥಾ ಪದಾರ್ಥಗಳನ್ನು ತಯಾರುಮಾಡತಕ್ಕ ಕಸಬುದಾರರು ಬಂದು ಈ ಕೊಟಡಿಯಲ್ಲಿ ಅಣಿಮಾಡಿಟ್ಟು ತೋರಿಸಿರುವ ಸಲಕರಣೆಗಳನ್ನು ನೋಡಿ ಪ್ರಯೋಜನ ಹೊಂದಬಹುದಾಗಿದೆ. ಅಲ್ಲದೆ ಕಾಡುಗಳಲ್ಲಿ ಸಿಕ್ಕಿ ಕೊಂದುಹಾಕಿದ ದೊಡ್ಡ ಮೃಗಗಳ ಅಂಗಗಳೂ, ಎಣ್ಣೆಗಳೂ, ದ್ರಾವಕಗಳೂ ಪ್ರದರ್ಶನ ಮಾಡಲ್ಪಟ್ಟಿರುವವು.

ಒಂದು ಕೊಟಡಿಯಲ್ಲಿ ಇಂಪಾದ ಸಂಗೀತಗಳನ್ನು ಹಾಡುವ ಗ್ರಾಮೊಫೋನ್‌ಗಳು ಇಡಲ್ಪಟ್ಟಿವೆ. ಅದು ಒಂದು ಅಂಗಡಿಯಾಗಿ ಪರಿಣಮಿಸಿಲ್ಲದೆ ಇದರಿಂದ ಪ್ರಯೋಜನವೇನೂ ನಮಗೆ ಕಾಣಲಿಲ್ಲ. ಮತ್ತೊಂದು ಕೊಟಡಿಯೊಳಗೆ ಮಡಿಗೆಲಸದ ಬಹು ಬೆಲೆಯುಳ್ಳ ಕುಪ್ಪಸ, ಪಂಚೆ, ಮೇಜು, ಜೀರು ಮೊದಲಾದವುಗಳನ್ನು ನೋಡಬಹುದು. ಇದೂ ಅಂಗಡಿಯಲ್ಲದೆ ಅಷ್ಟೇನೂ ಮೆಚ್ಚತಕ್ಕ ಪ್ರದರ್ಶನವಾದದ್ದಲ್ಲ. ಇನ್ನೊಂದು ಕೊಟಡಿಯಲ್ಲಿ ಟೈಪ್‌ರೈಟರ್ [illegible] ಬರವಣಿಗೆಯ ಯಂತ್ರಗಳು, ಹೊಲಿಯುವ ಯಂತ್ರಗಳು, ಮರದ ಸಾಮಾನುಗಳು ಇಡಲ್ಪಟ್ಟಿವೆ. ಅಲ್ಲಿಂದ ಮುಂದಿನ ಕೊಟಡಿಗೆ ಹೋದರೆ ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಕಸಬುಗಳನ್ನು ಕಲಿಯುವಂಥಾವರು ಮಾಡಿದ್ದಲ್ಲಿ ಮಾಡಿರುವ ನಾನಾ ಉಪಯುಕ್ತವಾದ ಪದಾರ್ಥಗಳನ್ನು ನೋಡಿ ಸಂತೋಷ ಪಡಬಹುದು. ಅದರಲ್ಲಿ ಚಿಕ್ಕ ಚಿಕ್ಕ ಹೊಸ ರೀತಿಯಲ್ಲಿ ಹದಕೊಟ್ಟ ಪೆಟ್ಟಿಗೆ, ಮೇಜು, ಜೀನು, ಲಗಾಮು ಮುಂತಾದವುಗಳನ್ನು ಮಾಡಿಟ್ಟಿದಾರೆ. ಮುಂದಿನ ಕೊಟಡಿಯೊಳಗೆ ದಿನಸಾವರಿ ಹೊಗೆಸೊಪ್ಪುಗಳು, ಚುಟ್ಟಾ ಸಿಗರೆಟ್ಟುಗಳು, ಬಗೆಬಗೆಯ ರೇಷ್ಮೆದಾರಗಳು, ನಾರಿನ ಜಮಖಾನಗಳು, ಟೀ ಸೊಪ್ಪು, ಕಾಫಿ ಬೀಜಗಳು, ರಬ್ಬರ್, ನಾರುಗಳಲ್ಲಿ ಮಾಡಿರುವ ಪದಾರ್ಥಗಳು, ದಿನಸಾವರಿ ಹತ್ತಿಗಳು, ಇವನ್ನೆಲ್ಲಾ ನೋಡಬಹುದು. ಸಾವಕಾಶವಾಗಿಯೂ ವಿವೇಕದಿಂದಲೂ ಈ ಕೊಟಡಿಗಳಲ್ಲಿರುವ ವಸ್ತುಗಳನ್ನು ನೋಡುವುದರಿಂದ ರೈತರೂ, ಕಸಬುದಾರರೂ ಪ್ರಯೋಜನಹೊಂದುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಇನ್ನೊಂದು ಕೊಟಡಿಗೆ ಹೋದಲ್ಲಿ ಬೊಂಬಾಯಿ ವ್ಯವಸಾಯದ ಇಲಾಖೆಯವರು ಆ ಪ್ರಾಂತ್ಯಗಳಲ್ಲಿ ಬೆಳೆಯಾಗುವಂಥಾ ಧಾನ್ಯಾದಿಗಳನ್ನೂ ಕಸಬುಗಳಿಗೆ ಬೇಕಾಗುವ ಪೈರುಗಳನ್ನೂ ತಂದಿಟ್ಟು ತೋರಿಸಿದಾರೆ. ಈ ಇಲಾಖೆಯವರ ಮಾಸಪತ್ರಿಕೆಯನ್ನು ವರುಷಕ್ಕೆ ಒಂದು ರೂಪಾಯಿ ಚಂದಾ ಕೊಟ್ಟು ತರಿಸಿಕೊಂಡರೆ ರೈತರೂ ಕೈಗಾರಿಕೆಯವರೂ ಅನೇಕ ಹಿತಕರವಾದ ಸಂಗತಿಗಳನ್ನು ಅದರಲ್ಲಿ ಓದಿಕೊಳ್ಳುತ್ತಾ ಬರಬಹುದು. ಇದಲ್ಲದೆ ಈ ಕೊಟಡಿಯೊಳಗೆ ತೋಟದ ಫಲಗಳೂ, ಪುಷ್ಕಳವಾಗಿ ಬೆಳೆದ ತರಕಾರಿಗಳೂ ಕಾಣುತ್ತವೆ. ವಿಧವಿಧವಾದ ಮತ್ತು ಬಹು ದುಬಾರಾದ ಮೆಣಸು, ದಾಲ್ಚಿನ್ನಿ, ಅವರೆಗಳನ್ನು ನೋಡಿದರೆ ಮನಸ್ಸಿಗೆ ಎಷ್ಟೋ ಹರ್ಷವಾಗುವುದು. ಇದನ್ನು ನೋಡುವಂಥಾ ಕೃಷಿಕಾರರಿಗೆ ತಾವೂ ಅದರಂತೆಯೇ ಉತ್ಕೃಷ್ಟವಾದ ಫಸಲನ್ನು ಬೆಳೆಯಬೇಕೆಂಬ ಉತ್ಸಾಹವೂ ಪ್ರೋತ್ಸಾಹವೂ ಉಂಟಾಗದೆ ಇರಲಾರದು. ಮುಂದಿನ ಕೊಟಡಿಯಲ್ಲಿ ದಿನಸಾವರಿ ಧಾನ್ಯಗಳು, ಎಣ್ಣೆ ಬೀಜಗಳು, ಮದರಾಸ್ ಪ್ಯಾರಿ ಕಂಪನಿಯವರಲ್ಲಿ ದೊರೆಯುವ ತರಹಾವರಿ ಗೊಬ್ಬರಗಳು, ಈ ಮುಂತಾದವು ಪ್ರದರ್ಶನ ಮಾಡಲ್ಪಟ್ಟವೆ. ಈ ಗೊಬ್ಬರಗಳ ವಿವರಣೆಯೂ, ಅವುಗಳನ್ನು ಉಪಯೋಗಿಸುವ ವಿಧಾನವೂ, ಯಾವ ಬೆಳೆಗೆ ಯಾವ ಗೊಬ್ಬರ ಹಾಕಬೇಕೆನ್ನುವುದೂ, ಇವೆಲ್ಲಾ ನಮ್ಮ ಭೂವ್ಯವಸಾಯಗಾರರು ತಿಳಿಯಬೇಕಾದದ್ದು ಅವಶ್ಯವಾದ ಕಾರಣ ಅವರಿಗೆ ಈ ಪ್ರದರ್ಶನ ಭಾಗದಿಂದ ತುಂಬಾ ಪ್ರಯೋಜನವುಂಟು.

ಇನ್ನು ಮೂರು ಕೊಟಡಿಗಳಲ್ಲಿ ಅಕ್ಕಿ, ಭತ್ತ, ರಾಗಿ, ಜೋಳ, ಕಾಳುಗಳು, ಈ ಮೊದಲಾದ ಧಾನ್ಯಗಳನ್ನು ನಮ್ಮ ಸೀಮೆಯ ಯಾವ ಯಾವ ಭಾಗದಲ್ಲಿ ಯಾರ್‍ಯಾರು ಉತ್ಕೃಷ್ಟವಾಗಿ ಬೆಳೆಮಾಡುವರೋ, ಆಯಾ ಸ್ಥಳದ ಧಾನ್ಯ ಲಕ್ಷಣವೆಂಥದ್ದೋ, ಯಾವ ಸ್ಥಳ ಎಷ್ಟು ದಿನಗಳಲ್ಲಿ ಪೈರಾಗುವುದೋ, ಎಷ್ಟು ಮಟ್ಟಿಗೆ ಆಗುವುದೋ, ಇವೆಲ್ಲಾ ಸಾವಧಾನವಾಗಿ ನೋಡಿದರೆ ತಿಳಿದುಕೊಳ್ಳಬಹುದು.

ಬಾತ್ಮಿದಾರರಿಗೆ ನೋಟೀಸ್.

ಹೆಸರು ನಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ನಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಬಾತ್ಮಿಗಳನ್ನು ಅನೇಕರು - ರೆವ್. ಇ. ಡಬ್ಲಿಯು. ಫಾಂಕ್ಸ್ ವಾಡೆಬಂಗ, ಮೈಸೂರು - ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಅದಕ್ಕೆ ಹೆಸರನ್ನು ಬರೆಯದೆ - ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು - ಎಂಬದಾಗಿ - ಮಾತ್ರ - ವಿಳಾಸ ಬರೆಯಬೇಕು. ಇಲ್ಲವಾದರೆ ಬಾತ್ಮಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು. ಬಾತ್ಮಿದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಪ್ರಾರ್ಥಿಸುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

—ಎಡಿ.]

ಕರೆಸ್ಪಾಂಡೆನ್ಸ್.

ಕೃತಜ್ಞತಾ ಪ್ರದರ್ಶನವು.

ಅಯ್ಯಾ,

ಕಳೆದ 1911 ನೇ ಜುಲೈ 19 ನೇ ತಾ॥ ಆಕಸ್ಮಿಕವಾಗಿ ಪ್ರಾಪ್ತವಾದ ಕಾವೇರಿ ಪ್ರವಾಹದ ಅನಾಹುತದ ದೆಸೆಯಿಂದ ಅನೇಕ ಗ್ರಾಮಗಳು ನಾಶವಾಗಿ ರೈತರಿಗೆ ಮನೆ ವಗೈರೆ ವಾಸಸ್ಥಳಗಳಿಲ್ಲದೆ ತೊಂದರೆಯೂ, ಅತ್ಯಂತ ಕಷ್ಟವೂ ಪಡುತ್ತಿದ್ದದ್ದು ಸಮಸ್ತರೂ ತಿಳಿದ ವಿಷಯವಾಗಿರುತ್ತೆ. ಇಂಥಾ ಅನಾಥರುಗಳಿಗೆ ಸಹಾಯಮಾಡುವದಕ್ಕಾಗಿ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರಾಗಿದ್ದ ಮಿ॥ ಕಾಂತರಾಜ ಅರಸಿನವರು ಫಂಡು ಮೊಬಲಗು ಜಮಾಯಿಸಲು ಏರ್ಪಾಟುಗಳು ಮಾಡಿ ಕಮಿಟಿ ಏರ್ಪಡಿಸಿ ಇದಕ್ಕಾಗಿ ತಾಲ್ಲೂಕು ಅಮಲ್ದಾರರುಗಳು ಸಹಾ ಚಂದಾ ವಸೂಲ್ಮಾಡಿ ತಮ್ಮೊಳಕ್ಕೆ ಸರ್ಕಾರದಿಂದ ಗ್ರ್ಯಾಂಟ್ ಆದ ಮೊಬಲಗು ಟಿ. ನರಸೀಪುರದ ತಾಲ್ಲೂಕು ಕೃಷ್ಣಾಪುರ, ಮುತ್ತತ್ತಿ, ಬನ್ನಾಗಿಲು ಮತ್ತೊಳೆ, ಅಬ್ಬಾನೈಯನದುಂಡಿ, ಈ ಗ್ರಾಮಗಳಲ್ಲಿ ಮನೆಗಳು ಕಾವೇರಿ ಪ್ರವಾಹದಿಂದ ಬಿದ್ದುಹೋಯಿತು. ಸುಮಾರು ಈ ತಾಲ್ಲೂಕು ಒಂದಕ್ಕೆ ಮೂವತ್ತು ಸಾವಿರ ರೂಪಾಯಿಗಳು ಲುಕ್ಸಾನು ಆಯಿತು. ಇದಕ್ಕಾಗಿ ಸರ್ಕಾರದವರು ನಂಜನಗೂಡು ಸಬ್ ಡಿವಿಜನ್ ಆಫೀಸರವರು ಮಿ॥ ಎನ್. ಸುಬ್ಬರಾಯರವರು ಬಹಳ ದಯಾರಸದಿಂದಲೂ ವಿಚಾರಿಸಿ ಈ ತಾಲೂಕು ರೈತರುಗಳಿಗೆ ಹಣವನ್ನು ಕೊಡಿಸಿದರು. ಸುಮಾರು ಈ ತಾಲ್ಲೂಕು ಒಂದಕ್ಕೆ ಹತ್ತು ಸಾವಿರ ರೂಪಾಯಿ ವಿನಿಯೋಗವಾಗಿರಬಹುದು. ಮತ್ತು ಇವರುಗಳಿಗೆ ಮನೆಗಳು ಕಟ್ಟಿಕೊಳ್ಳುವದಕ್ಕೆ ಸ್ಥಳ ಅಂದರೆ ಜಮೀನುಗಳು ಕೊಡಿಸಿರುವದು ಸುಮಾರು ಸಾವಿರ ರೂಪಾಯಿ ಆಗಬಹುದು. ಪುಣ್ಯವಂತರಾದ ರೈತರುಗಳಿಗ ಮಾತ್ರ ಏನೂ ಕೊಡಲಿಲ್ಲ.

ಪ್ರಚುರಪಡಿಸುವುದಕ್ಕೆ ಬರತಕ್ಕ ವಾತ್ತೆಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವಾತ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ವಾತ್ತೆಗಳು ಬಹಳಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕಾದ ವಾತ್ತೆಗಳನ್ನು ಅನೇಕರು - ರೆವ್. ಇ. ಪಿ. ರೈಸ್ ಸಾಹೇಬರಿಗೆ, ಮೈಸೂರು - ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಆಗೆ ಹೆಸರನ್ನು ಹಾಕಿದ - ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು - ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು. ಇಲ್ಲವಾದರೆ ವಾತ್ತೆಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು. ವಾತ್ತಾದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಪ್ರಾರ್ಥಿಸುತ್ತೇವೆ.

ವಾತ್ತಾದಾರರು ಹರುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುತ್ತಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ನಮ್ಮ ಪತ್ರಿಕೆಯಲ್ಲಿ ಚಿಕಿತ್ಸೆಗೆ ಪ್ರಕಟವಾಗುವ ಇಂಗ್ಲೀಷ್ [illegible] ಔಷಧಗಳನ್ನು ಓದಿ ವಾಚಕರು ತರಿಸಿಕೊಂಡು ಉಪಯೋಗಪಡುವರೆಂದು ತಿಳಿಸುತ್ತಾರೆ. ವಾಚಕರು ವಿವೇಕವನ್ನು ಉಪಯೋಗಿಸಿ, ಸಂಬಂಧಪಟ್ಟ ಪದಾರ್ಥಗಳನ್ನು ಮಾತ್ರ ತರಿಸಿಕೊಳ್ಳಬೇಕಾಗಿದೆ.

ಪ್ರಜಾಹಿತೈಷಿಣಿ, ಮೈಸೂರು [illegible] ಹಣ ಸಂಪಾದನೆ ಧರ್ಮಕ್ಕೆ ಒಳ್ಳೆ [illegible] ಕೊಡುವ ಆಸ್ಪತ್ರೆಗಳನ್ನು ಇಟ್ಟಿರುವಲ್ಲಿ ಜನರು ನಿರ್ಮೋಕವಿಲ್ಲದ ಸಿಕ್ಕಿದ ಪಂಡಿತರಲ್ಲೆಲ್ಲಾ ಔಷಧ ಪಡೆದು ಅವರಿಗೆ ದ್ರವ್ಯ ಕೊಟ್ಟು ಹಣವನ್ನೂ ದೇಹಾರೋಗ್ಯವನ್ನೂ ಕಳಸಿಕೊಂಡು ಅಳುವುದು ಸಹಜವಲ್ಲ. ಎಡಿ]

ಕರೆಸ್ಪಾಂಡೆನ್ಸ್.

ಮಂಡ್ಯದ ತಾಲ್ಲೂಕು ಹುಲಿಯೂರು ದುರ್ಗದ [illegible]

ಅಯ್ಯಾ,

ಇದು ತಾಲ್ಲೂಕಿಗೆ [illegible] ವಾಗಿರುತ್ತೆ. [illegible] ಇದೆ [illegible] ಸ್ಕೂಲಿಗೆ [illegible] ಸ್ಕೂಲ್ [illegible] ಆಗಿ ಒಂದು ವರುಷವಾಗುತ್ತಾ ಬಂತು. ಆದರೆ ಇಲ್ಲಿಯ ಜನಗಳಲ್ಲಿ ಕೆಲಸವಾದರೂ ಏಕಮತವಿಲ್ಲ. ಸ್ಕೂಲಿನ ವಿದ್ಯಾಕ್ರಮವು ಇವರಿಗೆ ಬೇಕಾಗಿಲ್ಲ. ಕೂಲಿ ಮನೆಗಳಲ್ಲಿ ತಮ್ಮ ಬಾಲಕರು ನಿರಂತರ ಗೋವಿನ ಹಾಡು. [illegible] ಇವುಗಳನ್ನು ಓದಿಬಿಟ್ಟರೆ ವಿದ್ಯಾವಂತರಾದರೆಂದು ತಿಳಿದುಕೊಂಡು ಕೂಲಿಮಠದ ಉಪಾಧ್ಯಾಯರ ಶಿಷ್ಯರಾಗಿ [illegible] ಇಲ್ಲ [illegible] ದಂಡಾ ಹಾಕುತ್ತಾರೆ. ಇದು ಬುದ್ಧಿ ಹೀನತನವೋ ಹೊಟ್ಟೆ ಕಿಚ್ಚೋ ಅಲ್ಲ. ನಮ್ಮ ತಾಲ್ಲೂಕು ಅಮಲ್ದಾರರು ಈ ಜನಗಳ ಅವಿವೇಕವನ್ನು ಹೋಗಲಾಡಿ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿಸಿರೆಂದು [illegible] ಆಚೆ [illegible] ಉತ್ತಮವಾದೀತು.

ಈ ಗ್ರಾಮದಲ್ಲಿ [illegible] ಇಲ್ಲ. ಗ್ರಾಮಕ್ಕೆ ಉತ್ತರ ಪಾರ್ಶ್ವದಲ್ಲಿ ಒಂದು ಚಿಕ್ಕ ಕೆರೆ ಇರುತ್ತೆ. ಇದರಲ್ಲಿ ಬೇಸಿಗೆ ಕಾಲದಲ್ಲಿ ಸುತರಾಂ ನೀರಿರುವುದಿಲ್ಲ. ಕಳೆದ ಜೂನ್ ಮಾಹೆಯಲ್ಲಿ ಈ ಕೆರೆಯಲ್ಲಿ ಅಲ್ಪಸ್ವಲ್ಪ ಇದ್ದ ಕೊಳೆ ನೀರನ್ನು ಕುಡಿದು ಕಾಲರಾ ರೋಗದಿಂದ 40 ಜನಗಳು ಮೃತಪಟ್ಟರು. ಈಗ ಒಂದು ತಿಂಗಳಲ್ಲಿ ಮಳೆಯಾಗಿ ಕೆರೆ ತುಂಬಿದೆ. ಆದರೆ ಈ ಕೆರೆಯಲ್ಲಿ ಕೊಳೆ ಬಟ್ಟೆಗಳನ್ನೊಗೆಯುವುದು, ಎಮ್ಮೆಗಳನ್ನು ದನಗಳನ್ನೂ ತೊಳೆಯುವುದು ಮುಂತಾದ ಕೃತ್ಯಗಳನ್ನು ನಡೆಸುತ್ತಾರೆ. ಇದರಿಂದ ಪುನಃ ಸಾಂಕ್ರಾಮಿಕ ಜಾಡ್ಯಗಳಿಗೆ ಕಾರಣವುಂಟಾಗುತ್ತೆ. ಇದನ್ನು ತಪ್ಪಿಸುವರೆ ಕ್ಷೇಮವಾದೀತು. ಗ್ರಾಮದಲ್ಲಿ ಏಕಮತವಿಲ್ಲದಿರುವುದೇ ಇವುಗಳಿಗೆಲ್ಲಾ ಕಾರಣವಾಗಿರುತ್ತೆ. ನಮ್ಮ ಅಮಲ್ದಾರರು ಇದನ್ನೆಲ್ಲಾ ಸರಿಪಡಿಸಿಯಾರೆಂದು ನಂಬಿದೆ.

ಪ್ರಜಾಹಿತೈಷಿ.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

21 ನೆಯ ಅಕ್ಟೋಬರ್ 1912

ಪ್ರಾರಂಭದಲ್ಲಿ ದಿವಾನರವರು ಹಿಂದಿನ ದರ್ಬಾರಿನ ವೈಭವವನ್ನೂ, ಅಲ್ಲಿ ಶ್ರೀಮನ್ ಮಹಾರಾಜರೇ ಮೊದಲಾದವರು ದಯಮಾಡಿಸಿದ್ದನ್ನೂ, ಶ್ರೀಮನ್ ಯುವರಾಜರವರಿಗೆ ಬಿರುದು ಬಂದದ್ದನ್ನೂ ಕುರಿತು ಪ್ರಸ್ತಾಪಮಾಡಿ ಬಳಿಕ

ಆಯವ್ಯಯಗಳು

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಯಾ ಖರ್ಚು ಬಾತು ಉಳಿದ ಜಾಸ್ತಿ ಹುಟ್ಟುವಳಿಯ ವಿಷಯವನ್ನು ವ್ಯವಸ್ಥೆ ಮಾಡುವುದರಲ್ಲಿ ಇಂಡಿಯ ಸರಕಾರದವರು ಔದಾರ್ಯವನ್ನೂ ದಯಾಳುತೆಯನ್ನೂ ತೋರ್ಪಡಿಸಿರುತ್ತಾರೆಂಬ ಸಂಗತಿಯನ್ನು ತಾವುಗಳು ಕೇಳಿ ಸಂತೋಷಪಡತಕ್ಕದಾಗಿರುತ್ತದೆ. ಈ ವಿಷಯವನ್ನು ಸರ್. ಕೆ. ಶೇಷಾದ್ರಿ ಅಯ್ಯರವರು 1897 ನೆಯ ಇಸವಿಯ ತಮ್ಮ ಉಪನ್ಯಾಸದಲ್ಲಿ ಈ ಸಭೆಯಲ್ಲಿ ಸೂಚಿಸಿದ್ದರು. ಅಂದಿನಿಂದ ಇದುವರೆಗೂ ಈ ವಿಷಯದಲ್ಲಿ ಕಾಗದ ಪತ್ರಗಳು ನಡೆಯುತಲಿದ್ದುವು. ಕೇವಲ ಸಂಸ್ಥಾನಕ್ಕೆ ಮಾತ್ರವೇ ಇಟ್ಟಿರುವ ಲೆಕ್ಕಗಳಲ್ಲಿ ತೋರಿಸುವ ಕೆಲವು ಬಾಬಿನ ಖರ್ಚುಗಳನ್ನು ಒಂದು ಭಾಗದ ಮಟ್ಟಿಗೆ ಅಥವಾ ಸಂಪೂರ್ಣವಾಗಿ ವಜಾ ಮಾಡತಕ್ಕದೆಂದು ಇಂಡಿಯ ಸರಕಾರದವರು ಈಗ ತೀರ್ಮಾನಮಾಡಿರುತ್ತಾರೆ. ಈ ತೀರ್ಮಾನವು ಹಿಂದಿನಿಂದಲೂ ಜಾರಿಗೆ ಬರತಕ್ಕದೆಂದು ಗೊತ್ತಾಗಿರುವುದರಿಂದ, ನಮ್ಮ ಸಂಸ್ಥಾನದ ಸುವರ್ತಮಾನಕ್ಕೆ ವಿಶೇಷ ಅನುಕೂಲ ಉಂಟಾಗುವುದೆಂದು ನಿರೀಕ್ಷಿಸಲಾಗಿದೆ.

1910-11 ನೆಯ ವರ್ಷದ ಲೆಕ್ಕಗಳು

1910-11 ನೆಯ ವರ್ಷದ ಜಮಾಖರ್ಚು ಅಂದಾಜನ್ನು ಕಾಲಸ್ಥಿತಿಯು ಸಾಮಾನ್ಯವಾಗಿ ಸುಭಿಕ್ಷವಾಗಿರುವುದೆಂಬ ನಿರೀಕ್ಷಣೆಯಮೇಲೆ ತಯಾರುಮಾಡಿದುದರಿಂದ, 5.66 ಲಕ್ಷ ರೂಪಾಯಿ ಉಳಿಯಬಹುದೆಂದು ಎಣಿಸಲಾಗಿತ್ತು, ಆದರೆ ವಸ್ತುತಃ ಈಗ 21.02 ಲಕ್ಷ ರೂಪಾಯಿ ಉಳಿದಿರುತ್ತದೆ. ಸಾಮಾನ್ಯ ಬಾಬುಗಳಲ್ಲಿ 19.62 ಲಕ್ಷ ರೂಪಾಯಿಯೂ, ಕಾವೇರಿ ವಿದ್ಯುಚ್ಛಕ್ತಿಯ ವಿಭಾಗದ ಬಾಬಿನಲ್ಲಿ 1.40 ಲಕ್ಷ ರೂಪಾಯಿಯೂ ಹೆಚ್ಚಾಗಿ ಉಳಿಯಿತು. ಕ್ಷಾಮಗಳ ನಿವಾರಣಾರ್ಥವಾಗಿ ತೆಗೆದಿಡುವ ಫಂಡಿಗಾಗಿಯೂ ಸರಕಾರಿ ಸಾಲವನ್ನು ತೀರಿಸುವುದಕ್ಕೆ ಏರ್ಪಡಿಸಿರುವ ಫಂಡಿಗಾಗಿಯೂ 1,33,000 ರೂಪಾಯಿಯನ್ನೂ, ಕಾವೇರಿ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಯಂತ್ರ ಕಟ್ಟಡ ಮುಂತಾದುವುಗಳ ಮರಮ್ಮತಿಗಾಗಿ ಸರಾಸರಿ ವರ್ಷಾವರ್ಷ ಸವೆದು ಇಡುವ ಫಂಡಿಗಾಗಿ 2,84,000 ರೂಪಾಯಿಯನ್ನೂ ತೆಗೆದಿಟ್ಟ ನಂತರ, ಮೇಲ್ಕಂಡಂತೆ ಹೆಚ್ಚು ಹಣವು ಉಳಿದಿರುತ್ತದೆ. ಈ ರೀತಿಯಾಗಿ ಆಯಾ ಬಾಬುಗಳಲ್ಲಿ ಅಂದಾಜು ಮಾಡಿರುವುದಕ್ಕೂ ವಸ್ತುತಃ ನಡೆದುದಕ್ಕೂ ಇರುವ ವ್ಯತ್ಯಾಸಕ್ಕೆ ಕಾರಣವನ್ನು, 1912 ನೆಯ ಮೇ 16 ನೆಯ ತಾರೀಖಿನ ಗೆಜೆಟ್ಟಿನಲ್ಲಿ ಪ್ರಾಯಿಸಾಗಿರುವ ಅಪ್ರೋಪ್ರಿಯೇಷನ್ ರಿಪೋರ್ಟಿನಲ್ಲಿ ಸಂಪೂರ್ಣವಾಗಿ ವಿವರಿಸಿರುತ್ತದೆ.

1911-12 ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳು.

ತಿದ್ದುಪಾಟಾದ ಅಂದಾಜುಗಳ ಮೇರೆಗೆ (ಈ ಅಂದಾಜುಗಳನ್ನು ಬಹಳ ಜಾಗರೂಕತೆಯಿಂದ ತಯಾರುಮಾಡಿರುವುದರಿಂದ ಅವುಗಳಿಗೂ ವಸ್ತುತಃ ನಡೆದಿರಬಹುದಾದುದಕ್ಕೂ ಬಹುಶಃ ವಿಶೇಷ ವ್ಯತ್ಯಾಸವಿರಲಾರದು.) 1911-12 ನೆಯ ವರ್ಷದ ಸಾಮಾನ್ಯ ಬಾಬಿನಲ್ಲಿ 2,11,16,000 ರೂಪಾಯಿಯೂ, ಕಾವೇರಿ ವಿದ್ಯುಚ್ಛಕ್ತಿಯ ಬಾಬಿನಲ್ಲಿ 16,61,000 ರೂಪಾಯಿಯೂ—ಈರೀತಿ ಒಟ್ಟು 2,19,80,000 ರೂಪಾಯಿಗಳ ಹುಟ್ಟುವಳಿಯಾಗಬಹುದೆಂದು ಎಣಿಸಲಾಗಿದೆ. ಇದೇ ಪ್ರಕಾರ ಸಾಮಾನ್ಯ ಬಾಬಿನಲ್ಲಿ 2,23,03,000 ರೂಪಾಯಿಯೂ, (ಫಾಮಿನ್ ಫಂಡಿಗಾಗಿಯೂ ಮತ್ತು ಡಿಪ್ರಿಸಿಯೇಷನ್ ಫಂಡಿಗಾಗಿಯೂ ಕೊಡುವ ಮೊಬಲಗೂ ಸೇರಿ) ಕಾವೇರಿ ವಿದ್ಯುಚ್ಛಕ್ತಿಯ ಬಾಬಿನಲ್ಲಿ 12,45,000 ರೂಪಾಯಿಯೂ, ಈ ರೀತಿ ಒಟ್ಟು 2,35,50,000 ರೂಪಾಯಿಗಳ ಖರ್ಚು ಆಗಬಹುದೆಂಬ ನಿರೀಕ್ಷಣೆಯಿದೆ. ಈ ಜಮಾ ಖರ್ಚಿನ ನಿವ್ವಳ ಫಲಿತಾಂಶವೇನೆಂದರೆ, 1911-12 ನೆಯ ವರ್ಷದ ಬಜೆಟ್ ಅಂದಾಜಿನಲ್ಲಿ ನಿರೀಕ್ಷಿಸಿದ್ದ ಮೊತ್ತಕ್ಕೆ 3,20,000 ರೂಪಾಯಿ ಕಮ್ಮಿ ಬೀಳುವುದಕ್ಕೆ ಬದಲಾಗಿ, ಪುನರ್ವಿಮರ್ಶೆ ಮಾಡಲ್ಪಟ್ಟ ಅಂದಾಜಿನ ಮೇರೆಗೆ 14,30,000 ರೂಪಾಯಿ ಹೆಚ್ಚಾಗಿ ಉಳಿಯಬಹುದೆಂದು ತೋರುತ್ತದೆ.

1912-13 ನೆಯ ವರ್ಷದ ಆಯವ್ಯಯದ ಅಂದಾಜು

ಈ ಸಂಸ್ಥಾನದ ಅನೇಕ ಭಾಗಗಳಲ್ಲಿ ಮುಂದಾಗಿ ಬೀಳುವ ಮುಂಗಾರು ಮಳೆಗಳು ಸರಿಯಾಗಿ ನಡಿಸಲಿಲ್ಲವಾದಕಾರಣ 1912-13 ನೆಯ ವರ್ಷದ ಜಮಾಖರ್ಚು ಅಂದಾಜುಗಳನ್ನು ಬಹಳ ಜಾಗರೂಕತೆಯಿಂದ ತಯಾರುಮಾಡಬೇಕಾಯಿತು. ಈ ವರ್ಷ ಸಾಮಾನ್ಯ ಬಾಬಿನಲ್ಲಿ 2,28,40,000 ರೂಪಾಯಿಯೂ, ಕಾವೇರಿ ವಿದ್ಯುಚ್ಛಕ್ತಿಯ ಬಾಬಿನಲ್ಲಿ 16,20,000 ರೂಪಾಯಿಯೂ, ಈ ಮೇರೆಗೆ ಒಟ್ಟು 2,44,60,000 ರೂಪಾಯಿ ಹುಟ್ಟುವಳಿಯಾಗಬಹುದೆಂದು ಅಂದಾಜಾಗಿದೆ. ಒಟ್ಟು ಖರ್ಚು ಸಾಮಾನ್ಯ ಬಾಬಿನಲ್ಲಿ 2,61,85,000 ರೂಪಾಯಿಯೂ, ಕಾವೇರಿ ವಿದ್ಯುಚ್ಛಕ್ತಿಯ ವಿಭಾಗದ ಬಾಬಿನಲ್ಲಿ 16,21,000 ರೂಪಾಯಿಯೂ ಆಗುವುದು.

ಈ ರೀತಿ ಒಟ್ಟು ಖರ್ಚು 2,78,06,000 ರೂಪಾಯಿ ಆಗುವುದು. ಇದರ ಮೇರೆಗೆ ಖರ್ಚಿಗೆ 33,46,000 ರೂಪಾಯಿ ಸಾಲದೆ ಹೋದ ಹಾಗಾಯಿತು. ಮೇಲೆ ಹೇಳಿದ ಕಾಲಸ್ಥಿತಿಗೋಸ್ಕರ ಜಮೀನ್ ಕಂದಾಯದ ಹುಟ್ಟುವಳಿಯು 1,01,30,000 ರೂಪಾಯಿ ಆಗುವುದೆಂದು ಅಂದಾಜು ಮಾಡಿರುತ್ತದೆ. ಇದಕ್ಕೆ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಕಾಲಸ್ಥಿತಿಯು ಉತ್ತಮವೆನ್ನಿಸಿಕೊಳ್ಳುತ್ತಾ ಬಂದರೆ ಕೂಡ ಸದರಿ ಹುಟ್ಟುವಳಿಯ ಅಂದಾಜನ್ನು ಏರಿಸಿಯಿಲ್ಲ. ಉಳಿದ ಬಾಬುಗಳಲ್ಲಿ ಸಾಮಾನ್ಯವಾಗಿ ಎಷ್ಟೆಷ್ಟು ಆಗುವವೋ ಅಷ್ಟೇ ಹುಟ್ಟುವಳಿಯು ಆಗುವುದೆಂದು ಅಂದಾಜು ಮಾಡಿದೆ.

ಕಳೆದ ಮೂರು ವರ್ಷಗಳಿಂದಲೂ ಒಂದೇ ರೀತಿಯಲ್ಲಿ ನಡೆದು ಬಂದ ದೃಷ್ಟಾಂತವು ಬಲಿಸಿದೆ, ಖರ್ಚು ಮಾಡತಕ್ಕ ಇಲಾಖೆಯವರು ಕೇಳಿದ ಹಾಗೆಲ್ಲಾ ಸರಕಾರದವರು ಧಾರಾಳವಾಗಿ ಹಣವನ್ನು ಕೊಡುವುದಕ್ಕೆ ಸಾಧ್ಯವಾಯಿತು. ವಿದ್ಯಾಭ್ಯಾಸವನ್ನು ಹೆಚ್ಚಿಸುವ ಸಂಬಂಧದಲ್ಲಿ, ಹೆಚ್ಚಿನ ಏರ್ಪಾಡುಗಳನ್ನು ಮಾಡುವುದಕ್ಕಾಗಿ 2,00,000 ರೂಪಾಯಿ ಹೆಚ್ಚು ಗ್ರಾಂಟನ್ನು ಕೊಡಲಾಗಿದೆ. ಮತ್ತು ಎಕನಾಮಿಕ್ ಕಾನ್ಫರೆನ್ಸಿನವರಿಗೆ ಇದರ ಖರ್ಚುಗಳ ಜೊತೆಗೆ ಕೆಲವು ಮುಖ್ಯವಾದ ಕೈಗಾರಿಕೆಗಳನ್ನು ವಿಚಾರ ಮಾಡುವ ಖರ್ಚಿಗೂ, ಸಂಸ್ಥಾನದಲ್ಲಿ ಅಲ್ಲಲ್ಲಿ ನಡೆಯುತ್ತಿರುವ ಕೈಗಾರಿಕೆಗಳನ್ನೆಲ್ಲ ಪ್ರತ್ಯಕ್ಷವಾಗಿ ವಿಚಾರ ಪೂರ್ವಕ ನೋಡಿಕೊಂಡು ಬರುವುದಕ್ಕೂ, ಕೈಗಾರಿಕೆ ಮತ್ತು ವ್ಯವಸಾಯ ವಿಷಯಗಳಲ್ಲಿ ಅಭಿಜ್ಞರಾದವರ ಆಲೋಚನೆಯನ್ನು ಕೇಳಿ ಪರೀಕ್ಷೆಗಳನ್ನು ನಡಿಸುವ ಕೆಲಸಕ್ಕೂ 1,16,000 ರೂಪಾಯಿ ಗ್ರಾಂಟನ್ನು ಕೊಟ್ಟಿರುತ್ತದೆ. ನಾಡಿಕೆಯಾಗಿ ಮರಮತ್ ಇಲಾಖೆಗೆ ಸಲ್ಲುತ್ತಿದ್ದ ಗ್ರಾಂಟಿಗಾಗಿ ಈ ವರ್ಷದಲ್ಲಿ 30 ಲಕ್ಷ ರೂಪಾಯಿ ಕೊಡತಕ್ಕದೆಂದು ಗೊತ್ತುಮಾಡಿರುತ್ತದೆ. ಇದೂ ಅಲ್ಲದೆ ಕನ್ನಂಬಾಡಿ ಜಲಾಶಯಕ್ಕಾಗಿ 20 ಲಕ್ಷ ರೂಪಾಯಿ ಗ್ರಾಂಟನ್ನೂ ಬೆಂಗಳೂರು ಎಲೆಕ್ಟ್ರಿಕ್ ಟ್ರಾಂವೇಗಾಗಿ 7 ಲಕ್ಷ ರೂಪಾಯಿ ಗ್ರಾಂಟನ್ನೂ ಸಹ ಹೆಚ್ಚಾಗಿ ಮಂಜೂರು ಮಾಡಲಾಗಿದೆ. ರೈಲ್ವೆಗಳಿಗಾಗಿ 13,25,000 ರೂಪಾಯಿಯ ಭಾರೀ ಗ್ರಾಂಟನ್ನು ಕೊಡಬೇಕಾಗಿದೆ. ಕೆಲವು ಲೈನುಗಳ ಸರ್ವೆ ಕೆಲಸವು ನಡೆಯುತ್ತಿದೆ. ಮುಂದೆ ಶೀಘ್ರದಲ್ಲಿಯೇ ಒಂದೆರಡು ಲೈನುಗಳಲ್ಲಿ ರೈಲನ್ನು ಹಾಕಿಸುವ ಕೆಲಸವು ಉಪಕ್ರಮವಾಗಬಹುದೆಂಬುದಾಗಿ ಸರಕಾರದವರು ನಿರೀಕ್ಷಿಸುತ್ತಿದ್ದಾರೆ.

ಬಜೆಟ್ಟಿನಲ್ಲಿ ಭಾರೀ ಖರ್ಚನ್ನೂ ಕಮ್ಮಿ ಹುಟ್ಟುವಳಿಯನ್ನೂ ತೋರಿಸಿರುವ ಮಾತ್ರದಿಂದ ಸರಕಾರೀ ಪ್ರಯೋಜನಸ್ಥಿತಿಯ ವಿಷಯದಲ್ಲಿ ಯಾವ ವಿಚಾರವೂ ಪಡಬೇಕಾದ ಕಾರಣವಿಲ್ಲ. ಇದರಿಂದ ಖರ್ಚು ಬಾಬಿನಲ್ಲಿ ಮಿತಿಮೀರಿರುವುದೆಂದಾಗಲೀ ಹುಟ್ಟುವಳಿಯ ಬಾಬಿನಲ್ಲಿ ಕಮ್ಮಿ ಬಿದ್ದಿತೆಂತಾಗಲೀ ಎಣಿಸಕೂಡದು. ಬಾಲ್ತಿ ವರ್ಷದೊಳಗೆ ನಾವು ಮಾಡಬೇಕಾಗಿರುವ ಕಾರ್ಯಕ್ರಮವನ್ನು ನಿರ್ವಹಿಸುವುದರಲ್ಲಿ ಹಿಂದಿನ ವರ್ಷಗಳಿಂದ ಉಳಿದಿರುವ ಹಣದ ಪೈಕಿ ಒಂದು ಭಾಗವನ್ನು ಪ್ರಜೆಗಳ ಪುರೋಭಿವೃದ್ಧಿಗೂ ಸನ್ಮಾನ ಪ್ರವರ್ತನೆಗೂ ಸಂಬಂಧಪಟ್ಟ ದೀರ್ಘಕಾಲ ನಡೆದುಬರುವ ಮುಖ್ಯವಾದ ದೊಡ್ಡ ದೊಡ್ಡ ಏರ್ಪಾಡುಗಳಿಗೆ ವಿನಿಯೋಗಮಾಡುವ ಮಾರ್ಗಗಳನ್ನು ಕಲ್ಪಿಸಿರುತ್ತೇವೆಂದು ಭಾವಿಸಬೇಕು.

ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳು.

ಸರಕಾರೀ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಹಣವನ್ನು ಡಿಪಾಜಿಟ್ ಮಾಡಿದವರ ಸಂಖ್ಯೆಯೂ ಡಿಪಾಜಿಟ್ ಮಾಡಲ್ಪಟ್ಟ ಮೊಬಲಗೂ ಸಹ ಒಂದೇ ರೀತಿಯಾಗಿ ಹೆಚ್ಚುತ್ತಾ ಇವೆ. ಹಿಂದಿನ ವರ್ಷದ ಆಖೈರಿನ ದಿವಸದಲ್ಲಿ 15,085 ಡಿಪಾಜಿಟರುಗಳೂ, ಅವರ ಲೆಕ್ಕದಲ್ಲಿ 67,31,353 ರೂಪಾಯಿಯೂ ಇದ್ದುದಕ್ಕೆ ಪ್ರತಿಯಾಗಿ, ಈ ವರ್ಷದ ಆಖೈರಿನ ದಿವಸದಲ್ಲಿ 15,212 ಡಿಪಾಜಿಟರುಗಳೂ ಅವರ ಲೆಕ್ಕದಲ್ಲಿ 72,61,451 ರೂಪಾಯಿಯೂ ಇದ್ದುವು. ಡಿಪಾಜಿಟು ಮಾಡಲ್ಪಡಬಹುದಾದ ಪರಮಾವಧಿಯ ಮೊಬಲಗಿಗೆ ಸಂಬಂಧಪಟ್ಟ ನಿಬಂಧನೆಯನ್ನು ಬದಲಾಯಿಸಿ ಡಿಪಾಜಿಟರುಗಳಿಗೆ ಇನ್ನೂ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂಬ ವಿಷಯವು ಸರಕಾರದವರ ಆಲೋಚನೆಯಲ್ಲಿದೆ ಎಂಬುದನ್ನು ಕೇಳಿ ತಾವುಗಳು ಸಂತೋಷಿಸಬಹುದಾಗಿದೆ.

ಕಾನೂನಿನ ಏರ್ಪಾಡು.

ಪ್ರಸಕ್ತ ವರ್ಷದಲ್ಲಿ ನ್ಯಾಯವಿಧಾಯಕ ಸಭೆಯವರು ಮೂರು ಮೀಟಿಂಗುಗಳನ್ನು ನಡಿಸಿದರು. ಹಿಂದಿನ ವರ್ಷದಿಂದಲೂ ಬಾಕಿ ನಿಂತಿದ್ದ 9 ಮಸೂದೆಗಳೂ ಸೇರಿ ಒಟ್ಟಿಗೆ 15 ಮಸೂದೆಗಳು ಪರ್ಯಾಲೋಚಿಸಲ್ಪಟ್ಟುವು. ಬಾಕಿ ನಿಂತಿದ್ದುವುಗಳ ಪೈಕಿ 6 ಮಸೂದೆಗಳೂ ಹೊಸ ಮಸೂದೆಗಳ ಪೈಕಿ ಎರಡು ಮಸೂದೆಗಳೂ, ಕಾನೂನಾಗಿ ಮಂಜೂರಾದಲ್ಪಟ್ಟುವು.

ಸಂಸ್ಥಾನದಲ್ಲಿರುವ ಮುಜರಾಯಿ ಧರ್ಮಾದಾಯಗಳನ್ನು ಕುರಿತ ಒಂದು ರೆಗ್ಯುಲೇಷನು ಸರಕಾರದವರ ಪರ್ಯಾಲೋಚನೆಯಲ್ಲಿದೆ. ಕಡೆಯಲ್ಲಿ ತಿಳಿಸಿದ ಮುಜರಾಯಿ ಮಸೂದಾ ಕಾನೂನು ಈಚೆಗ ಗೆಜೆಟ್ಟಿನಲ್ಲಿ ಪ್ರಾಯಿಸ್ ಆಗಿದೆ. ಇಂತಹುದೊಂದು ಕಾನೂನು ಬೇಕೆಂದು ಬಹು ಕಾಲದಿಂದಲೂ ಜನರು ಅಪೇಕ್ಷಿಸುತ್ತಿದ್ದರು. ಇದನ್ನು ಈ ಸಭೆಯ ಮೆಂಬರುಗಳಾದ ತಾವೆಲ್ಲರೂ ಆದರಿಸಿ ಒಪ್ಪಿದರೆಂದು ಎಣಿಸಿರುತ್ತೇನೆ. ಇದರ ವಿಷಯದಲ್ಲಿ ತಮಗೆ ತೋರುವ ಆಕ್ಷೇಪಣೆಗಳನ್ನೂ ಸೂಚನೆಗಳನ್ನೂ ತಿಳಿಸಿದ ಪಕ್ಷದಲ್ಲಿ ಅವುಗಳನ್ನು ಸಂತೋಷದಿಂದ ಪರ್ಯಾಲೋಚಿಸುವೆವು. ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗರನ್ನು ಸ್ಕೂಲಿಗೆ ಕಳುಹಿಸುವಂತೆ ಬಲಾತ್ಕರಿಸುವ ಕ್ರಮವನ್ನು ಜಾರಿಗೆ ತರುವ ಕೆಲವು ಸ್ಥಳಗಳಲ್ಲಿ ಸರಿಯಾದ ವಿವೇಚನೆಯಿಂದ ಜಾರಿಗೆ ತರುವುದರ ಮೂಲಕ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸಾರಕ್ಕೋಸ್ಕರ ಒಂದು ಕಾನೂನನ್ನು ಶೀಘ್ರದಲ್ಲಿಯೇ ನ್ಯಾಯವಿಧಾಯಕ ಸಭೆಯವರ ಪರ್ಯಾಲೋಚನೆಗೆ ತರಬೇಕೆಂತಲೂ ಸಹ ಸರಕಾರದವರು ಉದ್ದೇಶಿಸಿರುತ್ತಾರೆ. ಈ ಮಸೂದಾ ಕಾನೂನಿನ ಪ್ರತಿಗಳನ್ನು ತಮಗೆ ಹಂಚಲಾಗುವುದು. ಅದರ ಮೇಲೆ ತಮಗೆ ತೋರಬಹುದಾದ ಆಕ್ಷೇಪಗಳನ್ನೂ ಸಲಹೆಗಳನ್ನೂ ತಿಳಿಸಿದರೆ ಅವು ಸಂತೋಷದಿಂದ ಸ್ವೀಕರಿಸಲ್ಪಡುವುವು.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ.

ಸಂಸ್ಥಾನದ ಕಾರ್ಯನಿರ್ವಹಣವನ್ನು ಮಾಡುವ ದೊಡ್ಡ ದೊಡ್ಡ ಉದ್ಯೋಗಗಳ ವಿಷಯವಾಗಿ ಪ್ರಸ್ತಾಪಿಸುವುದಕ್ಕೆ ಮೊದಲು, ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಗೆ ಸಂಬಂಧಪಟ್ಟ ನಿಯಮಗಳನ್ನು ಅನೇಕಾಂಶಗಳಲ್ಲಿ ತಿದ್ದುಪಾಟು ಮಾಡಿ, ಜನ್ಮತಃ ಅಥವಾ ದೀರ್ಘಕಾಲವಾಸದಿಂದ ಮೈಸೂರಿನವರಾಗಿರುವವರನ್ನು ಅಥವಾ ಈ ಸಂಸ್ಥಾನದ ಕಾಲೇಜುಗಳಲ್ಲಿ ಓದಿ ಡಿಗ್ರಿಗಳನ್ನು ಪಡೆದವರನ್ನು ಮಾತ್ರವೇ ಈ ಪರೀಕ್ಷೆಗೆ ಸೇರಿಸಬಹುದೆಂದು ನಿಯಮ ಮಾಡಿರುವ ವಿಷಯವನ್ನು ತಮಗೆ ತಿಳಿಸಬೇಕೆನ್ನುತ್ತೇನೆ. ಸಿವಿಲ್ ಸರ್ವಿಸ್ ಪ್ರೊಬೇಷನರುಗಳನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫೀಸಿನ ಎಲ್ಲಾ ಬಾಬುಗಳಲ್ಲಿಯೂ ತರಬಿಯತ್ ಮಾಡಲು ಏರ್ಪಾಟು ಮಾಡಲಾಗಿದೆ.

ಲ್ಯಾಂಡ್ ರೆವಿನ್ಯೂ ಇಲಾಖೆ.

ಕಾಲಸ್ಥಿತಿ

ಪ್ರಸಕ್ತ ವರ್ಷದ ಕಾಲಸ್ಥಿತಿಯು ಹಿಂದಿನ ವರ್ಷದಷ್ಟು ಅನುಕೂಲವಾಗಿರಲಿಲ್ಲ. ಏಪ್ರಿಲ್ ತಿಂಗಳಲ್ಲಿ ಸ್ವಲ್ಪ ಮಳೆಯಾಯಿತು. ಮೇ ಜೂನ್ ತಿಂಗಳುಗಳಲ್ಲಿ ಮುಂಗಾರುಮಳೆಯು ಎಂದಿಗಿಂತ ಚೆನ್ನಾಗಿ ನಡೆದು, ಮುಂದೆಯೂ ಬಹಳ ಅನುಕೂಲವಾದೀತೆಂದು ಕಾಣಬಂತು. ಆದರೆ ಜುಲೈ ಆಗಸ್ಟ್ ತಿಂಗಳಲ್ಲಿ ಸರಾಸರಿಗಿಂತ ಅರ್ಧಪಾಲು ಕಮ್ಮಿಯಾಯಿತು. ಇದರಿಂದ ಸ್ವಲ್ಪ ಭೀತಿಯುಂಟಾಗಿತ್ತು. ಆದರೆ ಹಿಂಗಾರುಮಳೆಯು ಅಕ್ಟೋಬರ್ ತಿಂಗಳಲ್ಲಿ ಸಮೃದ್ಧಿಯಾಗಿ ಆದುದರಿಂದ ಕಾಲಸ್ಥಿತಿಯು ಬಹಳ ಉತ್ತಮವಾಯಿತು. ಒಟ್ಟಿನಲ್ಲಿ ಈ ವರ್ಷ ಸರಾಸರಿ 13.22 ಅಂಗುಲ ಮಳೆಯಾದಂತಾಯಿತು. ಇದು ಯಥೇಚ್ಛವಾಗಿ ಮಳೆಯಾದ ಹಿಂದಿನ ವರ್ಷಕ್ಕಿಂತಲೂ 15.07 ಅಂಗುಲವೂ, ಕಳೆದ 10 ವರ್ಷಗಳ ಸರಾಸರಿಗಿಂತಲೂ 17.3 ಅಂಗುಲವೂ ಕಮ್ಮಿಯಾದಂತಾಯಿತು. ಈ ವಿಧವಾದ ಕಾಲಸ್ಥಿತಿಯು ದೆಸೆಯಿಂದ, ಸರಾಸರಿ ಬೆಳೆಯು ಕಳೆದ ವರ್ಷಕ್ಕಿಂತಲೂ ಸ್ವಲ್ಪ ಕಮ್ಮಿ ಬಿದ್ದಿತು. ಮುಖ್ಯವಾದ ಆಹಾರ ಧಾನ್ಯಗಳ ಧಾರಣೆಯಾಸಿಯು, ಹೋದ ವರ್ಷದ ಆದಿಭಾಗದಲ್ಲಿದ್ದುದಕ್ಕಿಂತಲೂ ಈ ವರ್ಷದ ಆದಿಭಾಗದಲ್ಲಿ ಅನುಕೂಲವಾಗಿತ್ತು. ಆದರೆ ಆಗಸ್ಟ್ ತಿಂಗಳ ಅಂತ್ಯಭಾಗದಲ್ಲಿ ಧಾರಣೆಗಳು ಹೆಚ್ಚು ಉಪಕ್ರಮಿಸಿ, ಜನವರಿ ಡಿಸೆಂಬರ್ ತಿಂಗಳುಗಳಲ್ಲಿಯೂ ಅದರ ಹಿಂದಿನ ವರ್ಷದಲ್ಲಿಯಂತೆ ಇಳಿಯುವ ಸೂಚನೆಯೇ ತೋರಲಿಲ್ಲ. ಈ ದವಸಗಳ ಧಾರಣೆಗಳು ವಿಶೇಷವಿಸೇ ಏರುತ್ತಲೇ ಇವೆ.

ಚಿಕ್ಕ ಕೆರೆಗಳ ಆಬಾದು

ಚಿಕ್ಕ ಕೆರೆಗಳನ್ನು ಆಬಾದು ಮಾಡುವುದಕ್ಕೆ ಮಂಜೂರ್ಮಾಡಿದ್ದ ಒಂದು ಲಕ್ಷ ರೂಪಾಯಿನ ಪೈಕಿ, 82,182 ರೂಪಾಯಿ ಅಥವಾ ಶೇಕಡಾ 82 ಕ್ಕೆ ಸ್ವಲ್ಪ ಹೆಚ್ಚಾಗಿ ಖರ್ಚಾಯಿತು. ಆಬಾದು ಮಾಡುವುದಕ್ಕೆ ತೊಡಗಿದ ಕೆರೆಗಳ ಸಂಖ್ಯೆ 540. ಅವುಗಳ ಪೈಕಿ ವರ್ಷದ ಆಖೈರಿನಲ್ಲಿ 272 ಕೆರೆಗಳ ಮರಮ್ಮತಿ ಕೆಲಸವು ಪೂರೈಸಿತು. 268 ಕೆರೆಗಳ ಮರಮ್ಮತಿ ಕೆಲಸವು ಪೂರೈಸದೆ ಬಾಕಿಯಲ್ಲಿತ್ತು.

ಮಲನಾಡು ಕೂಲಿಗಳು ನೆಲಗೊಳ್ಳುವುದು

ಶಿವಮೊಗ್ಗ ಡಿಸ್ಟ್ರಿಕ್ಟಿನ ಮಲೆನಾಡು ಪ್ರದೇಶದಲ್ಲಿ ಮಲನಾಡು ಕೂಲಿಗಳು ನೆಲೆಗೊಳ್ಳುವುದಕ್ಕೋಸ್ಕರ, 1908 ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ಮಂಜೂರಾದ ಏರ್ಪಾಡಿನ ಮೇರೆಗೆ 101 ಜನ ಕೆಲಸ ಮಾಡುವ ಶಕ್ತಿಯುಳ್ಳವರೂ, 173 ಮಂದಿ ಮಕ್ಕಳೂ ಬಲ್ಲ 101 ಸಂಸಾರಗಳು ಸಾಗರ ತಾಲ್ಲೂಕಿನ ಕಲ್ಲೂರು ಮತ್ತು ಭೀಮನ ಹೊಬಳಿಯಲ್ಲಿ ರೈತರು ವ್ಯವಸಾಯಗಾರರಾಗಿ ನೆಲೆಗೊಂಡಿರುತ್ತಾರೆ. ಇವರಿಗಾಗಿ ಒಟ್ಟು 5,575 ರೂಪಾಯಿ ಖರ್ಚು ಮಾಡಿದೆ. ಸುಮಾರು ಈ ಮೊಬಲಗಿನಲ್ಲಿಯೇ ಉಳುವ ದನಗಳನ್ನೂ ಬಿತ್ತನೆಯ ಬೀಜಗಳನ್ನೂ ಕೊಂಡುಕೊಳ್ಳುವುದಕ್ಕಾಗಿ ಕೊಟ್ಟಿದೆ. 101 ಎಕರೆ ವಿಸ್ತೀರ್ಣವುಳ್ಳ ಪ್ರದೇಶವು ವ್ಯವಸಾಯಗಾರರಿಗೆ ಬಂದಿರುತ್ತದೆ. 119 ಎಕರೆಯು ಕಮ್ಮಿಯಾಗುವಳಿಯಲ್ಲಿದೆ. ಈ ಕೂಲಿ ಜನಗಳು ತಾವು ಒಂದು ಸ್ಥಳದಲ್ಲಿ ನೆಲೆಗೊಂಡಿರುವುದರಿಂದ ತಮಗೆ ವಿಶೇಷ ಪ್ರಯೋಜನವುಂಟಾಗಿದೆಯೆಂದು ಭಾವಿಸುತ್ತಿರುವುದು ಕಂಡು, ಈ ಸೀಮೆಯ ಸರಹದ್ದಿನಾಚೆ ಅಲೆಯುತ್ತಿರುವ ಅದೇ ಜಾತಿಯ ಜನಗಳು ತಾವೂ ಒಂದೆಡೆಯಲ್ಲಿ ನೆಲಸಿಕೊಂಡು ಜಿರಾಯತಿ ಕಸಬನ್ನು ಅವಲಂಬಿಸುವುದಕ್ಕೋಸ್ಕರ ಹೊರಟು ಬರುತ್ತಿದ್ದಾರೆಂದು ತಿಳಿಯಬರುತ್ತದೆ. ಮಲೆನಾಡಿನಲ್ಲಿರುವ ಇತರ ಬಡಜನಗಳಿಗೂ ಈ ವಿಧದ ಸೌಕರ್ಯಗಳನ್ನು ಕಲ್ಪಿಸಿಕೊಡುವ ವಿಚಾರವು ಸರಕಾರದವರ ಪರ್ಯಾಲೋಚನೆಯಲ್ಲಿದೆ.

ಸಿವಿಲ್ ವೈದ್ಯದ ಇಲಾಖೆ

ಸಂಸ್ಥಾನದಲ್ಲಿ ಅಸಿಸ್ಟೆಂಟ್ ವೆಟರಿನರಿ ಇನ್ಸ್‌ಪೆಕ್ಟರವರ ಚಾರ್ಜಿನಲ್ಲಿ 8 ಪಶುವೈದ್ಯದ ಆಸ್ಪತ್ರೆಗಳೂ, ಡಿಸ್‌ಪೆನ್ಸರಿಗಳೂ ಇದ್ದುವು. ಚಿಕಿತ್ಸೆ ಹೊಂದಿದ ಪ್ರಾಣಿಗಳ ಸಂಖ್ಯೆಯು ಹಿಂದಿನ ವರ್ಷ 13,110, ಈ ವರ್ಷ 14,0[illegible] ಚಿಕಿತ್ಸೆ ಹೊಂದಿದ ಪ್ರಾಣಿಗಳಲ್ಲಿ ಶೇಕಡಾ 61 ರಂತೆ ದನಕರುಗಳಾಗಿಯೂ, [illegible] ಮಿಕ್ಕ ಕುದುರೆ ನಾಯಿ ಮೊದಲಾದುವಾಗಿಯೂ ಇವೆ. ದನಗಳ ಸಾಂಕ್ರಾಮಿಕ ರೋಗ ನಿವಾರಣೆಗೋಸ್ಕರ, ಹಿಂದಿನ ವರ್ಷ 551 ದನಗಳಿಗೂ, ಈ ವರ್ಷ 4,5[illegible] ದನಗಳಿಗೂ ಸಿಡುಬು ಹಾಕಲಾಯಿತು. ಫಲಿತಾಂಶವು ಬಹಳ ಪ್ರೋತ್ಸಾಹಕರವಾಗಿದೆ.

ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಆಫೀಸು ಸಿಬ್ಬಂದಿ.

ತಾಲ್ಲೂಕು ನೌಕರರು ಸರಕಾರಿ ಕೆಲಸಕ್ಕೋಸ್ಕರ ಮಾಡುವ ಸಂಚಾರಗಳಿಗೆ ಭತ್ಯವನ್ನು ಕೊಡಬೇಕೆಂದು ತೀರ್ಮಾನಿಸಿರುತ್ತದೆಂಬ ಸಂಗತಿಯನ್ನು ಸಭಿಕರು ತಮಗೆ ತಿಳಿಸಬೇಕಾಗಿದೆ. ಡಿಸ್ಟ್ರಿಕ್ಟ್ ಆಫೀಸುಗಳ ಸಿಬ್ಬಂದಿಯು ಪುನರ್ವ್ಯವಸ್ಥೆಯು ನೆರವೇರಿಸಲ್ಪಟ್ಟಿದೆ. ತಾಲ್ಲೂಕು ಆಫೀಸುಗಳ ಸಿಬ್ಬಂದಿಯನ್ನು ಪುನರ್ವ್ಯವಸ್ಥೆ ಮಾಡುವ ವಿಷಯವು ಪರ್ಯಾಲೋಚನೆಯಲ್ಲಿದೆ.

ವ್ಯವಸಾಯದ ಇಲಾಖೆ

ಗತವರ್ಷದಲ್ಲಿ ಸ್ವಲ್ಪಮಟ್ಟಿಗೆ ಪರೀಕ್ಷಿಸಿ ನೋಡಿದ 25 ಬಗೆಯ ಬತ್ತಗಳ ಪೈಕಿ ಉತ್ತಮವಾದ 12 ಬಗೆಯ ಬತ್ತವನ್ನು ಆರಿಸಿ ಆಯ್ದು ಅದನ್ನು ಈ ವರ್ಷದ ಆಯಾಕಾಲದಲ್ಲಿ ಬಿತ್ತುವುದಕ್ಕೆ ತೆಗೆದಿಡಲಾಗಿದೆ. ಒಳ್ಳೆ ಫಲವನ್ನು ಕೊಡುವ ಬತ್ತದ ಬಿತ್ತನೆಯ ಬೀಜವು ಮುಂದಿನ ವರ್ಷ ರೈತರಿಗೆ ಹಂಚುವುದಕ್ಕೆ ಸಿದ್ಧವಾಗಿರುವುದು. ಜೋಳ ಮತ್ತು ಹಾರಿವರ್ಸ್ ಕಬ್ಬುಗಳು ಈ ವರ್ಷವೂ ಬಹು ಚೆನ್ನಾಗಿ ಬೆಳೆದಿರುತ್ತವೆ. ಪರೀಕ್ಷಾ ಕ್ಷೇತ್ರದಲ್ಲಿ ಕಬ್ಬಿನ ಹಾಲನ್ನು ಕಾಯಿಸುವುದಕ್ಕೆ ಹಾಕಿ ಉಪಯೋಗಿಸುತ್ತಿರುವಂತಹ ಕೆಲವು ಯಂತ್ರ ಸಾಮಗ್ರಿಗಳನ್ನು ಎಂದರೆ, ಕಬ್ಬಿನ ಹಾಲನ್ನು ಶೋಧಿಸುವುದಕ್ಕೋಸ್ಕರ ಬೇರೆ ಬೇರೆ ಮಟ್ಟದಲ್ಲಿ ಇರುವ ಮೂರು ಚಪ್ಪಟೆಯ ಕೊಪ್ಪರಿಗೆಯನ್ನೂ ಒಂದು ಗೂಡು ಕೊಪ್ಪರಿಗೆಯನ್ನೂ ಚನ್ನಗಿರಿ, ಹೊಸೂರು ಹರಿಯರ, ಸೂಳೇಕೆರೆ ಎಂಬ ಊರು ಮುಂತಾದ ಕಡೆಗಳಲ್ಲಿ ಈ ಸ್ಥಳಗಳಿಗೆ ಕಳುಹಿಸಿಕೊಟ್ಟು, ಅವುಗಳ ಕೆಲಸ ಮಾಡುವ ವಿಧವನ್ನು ತೋರಿಸಲಾಯಿತು. ಇದುವರೆಗೂ ಗಟ್ಟಿಯಾದ ಬೆಲ್ಲವು ತಯಾರಾಗದೆ ಇದ್ದ ಸ್ಥಳಗಳಲ್ಲಿ ಇಲಾಖಾ ನೌಕರರು ಆ ರೀತಿ ಮಾಡಿ ತೋರಿಸಿದರು. ಇಲಾಖೆಯವರು ತಯಾರುಮಾಡಿದ ಬೆಲ್ಲವು ಸ್ಥಳದ ತಯಾರೀ ಬೆಲ್ಲಕ್ಕಿಂತ ಉತ್ತಮವಾಗಿತ್ತು. ಅದಕ್ಕೆ ಬೆಲೆಯೂ ಹೆಚ್ಚಾಗಿ ದೊರೆಯಿತು. ಕೆಲವು ಹಳೆ, ಚಾಟಿರಾಯನಪುರ ಮತ್ತು ಹಾರೋಹಳ್ಳಿ ಗ್ರಾಮಗಳವರು ಬೆಲ್ಲವನ್ನು ತಯಾರುಮಾಡುವ ವಿಧಾನವನ್ನು ತೋರಿಸಬೇಕೆಂದು ಇಲಾಖೆಯವರ ಸಹಾಯವನ್ನು ಅಪೇಕ್ಷಿಸಿದರು. ಅವರ ಕೋರಿಕೆಯಂತೆ ಸದರೀ ವಿಧಾನವನ್ನು ಆವರಿಗೆ ತಿಳಿಯಪಡಿಸಲಾಯಿತು.

ಚಿತ್ರದುರ್ಗ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಸಾಮಾನ್ಯವಾಗಿ ಎಲ್ಲಿಯೂ ಕೆಂಪೋಡೆಯ ಮತ್ತು ಜೋಳದ ಪದ್ಧತಿಯನ್ನು ಬಳಸುವುದಕ್ಕೆ ಪ್ರಯತ್ನಗಳನ್ನು ನಡಿಸುತ್ತಿದೆ. ಸುಮಾರು 5,000 ಪೌಂಡು ಹತ್ತಿ ಬೀಜವನ್ನು ಹಂಚಿರುವುದರಿಂದ, ಈ ವರ್ಷ 1,000 ಎಕರೆಗಿಂತಲೂ ಜಾಸ್ತಿಯಾದ ಜಮೀನು ಹತ್ತಿ ತರದೆಯ ಹತ್ತಿಯು ಸಾಗುವಳಿಗೆ ಬರತಕ್ಕದಾಗಿದೆ.

ವ್ಯವಸಾಯದ ಮುಟ್ಟುಗಳ ಕೋಠಿ

ಈ ಕೋಠಿಯಲ್ಲಿ ಎಂದಿನಂತೆ ಉಪಯುಕ್ತವಾದ ಕೆಲಸವು ನಡೆಯಿತು. ಹಿಂದಿನ ವರ್ಷದಲ್ಲಿ 100 ನೇಗಿಲುಗಳು ಬಿಕರಿಯಾಗಿದ್ದುವಲ್ಲ, ಈ ವರ್ಷ 1[illegible] ನೇಗಿಲುಗಳು ಬಿಕರಿಯಾದುವು. ಮೇವನ್ನು ಕತ್ತರಿಸುವ ಯಂತ್ರಗಳೂ, ಕುಂಟೆ ಹೊಡೆಯುವ ಯಂತ್ರಗಳೂ ಸರಪಣಿ ಪಂಪುಗಳೂ ಸಕ್ಕರೆ ತಯಾರು ಮಾಡುವ ಕೊಪ್ಪರಿಗೆಗಳೂ ಈ ಕೋಠಿಯಲ್ಲಿ ಬಿಕರಿಯಾದುವು. ಕೆಮಿಕಲ್ ಲ್ಯಾಬೊರೇಟರಿ ಯಾ ರಸಾಯನಶಾಸ್ತ್ರ ಕಾರ್ಯಾಲಯದಲ್ಲಿ ನೋಡಿದ ಗೊಬ್ಬರಗಳು, ಕಬ್ಬು, ಮಣ್ಣು, ದನಗಳ ಮೇವು—ಮೊದಲಾದುವುಗಳ ಪರೀಕ್ಷೆಗಳನ್ನೂ ಶೋಧನೆಗಳನ್ನೂ ನಡಿಸಲಾಯಿತು.

ಬೂಜು ಮೊದಲಾದ ಸಸ್ಯರೋಗಗಳನ್ನು ಕುರಿತ ವಿಷಯ.

ಹಿಂದಿನ ವರ್ಷದಂತೆ ಕೊಳೆ ರೋಗದ ನಿವಾರಣೆಗೋಸ್ಕರ ಮಾಡಬೇಕಾದ ಚಿಕಿತ್ಸೆಯನ್ನು ಜನಗಳಿಗೆ ಪ್ರದರ್ಶನ ಮಾಡಿದುದು ಈ (ಮೈಕಾಲಜಿ) ಇಲಾಖೆಯ ನೌಕರರು ನಡಿಸಿದ ಮುಖ್ಯ ಕಾರ್ಯವಾಗಿದೆ. ಮೂಡಿಗೆರೆಯಲ್ಲಿಯೂ ಆಗುಂಬೆಯಲ್ಲಿಯೂ ಇರತಕ್ಕ ಪರೀಕ್ಷಾರ್ಥವಾದ ತೋಟಗಳ ವಿನಾ ಕೊಪ್ಪ, ಸಾಗರ, ನಗರ, ತೀರ್ಥಹಳ್ಳಿ ಮತ್ತು ಕೊಪ್ಪ ತಾಲ್ಲೂಕುಗಳ ಬೇರೆ ಬೇರೆ ಭಾಗಗಳಲ್ಲಿ ಇರತಕ್ಕ ಸುಮಾರು 21½ ಎಕರೆಗಳ ವಿಸ್ತೀರ್ಣವುಳ್ಳ 65 ತೋಟಗಳಲ್ಲಿ ಸರಕಾರದವರ ಮೇಲ್ವಿಚಾರಣೆ ಮೇಲ್ಕಂಡ ಕ್ರಿಮಿನಾಶಕ ಪ್ರಯತ್ನಗಳು ನಡೆದುವು. 33 ಮಂದಿ ತೋಟಗಳ ಮಾಲೀಕರು ದ್ರಾವಕ ಸಿಂಪಡಿಸುವ ಯಂತ್ರಗಳನ್ನು ಕ್ರಯಕ್ಕೆ ತೆಗೆದುಕೊಂಡು ಸುಮಾರು 100 ಎಕರೆ ಪ್ರದೇಶದಲ್ಲಿ ತಾವೇ ಚಿಕಿತ್ಸೆಯನ್ನು ನಡಿಸಿದರು. ಅಡಕೆಯ ಮರಗಳಿಗೆ ಬರುವ ಅಣಬೆ ರೋಗ ಮತ್ತು ಗಂಧದ ಮರಗಳಿಗೆ ಬರುವ ಸ್ಪೈಕ್ ರೋಗಗಳ ಕಾರಣಗಳನ್ನು ಪರಿಶೋಧಿಸುವ ಕೆಲಸವು ಕೆಲವು ಕಾಲಕ್ಕೆ ಮುಂಚೆ ಆರಂಭಿಸಲಾಯಿತು. ಆದರೆ ಈ ಇಲಾಖೆಯಲ್ಲಿ ಸಾಕಾದಷ್ಟು ನೌಕರರು ಇಲ್ಲವಾದುದರಿಂದ ಸದರೀ ಕೆಲಸವು ಮುಂದಕ್ಕೆ ಸಾಗಲಿಲ್ಲ. ಉರುಳುಗಡ್ಡೆಗೆ ಬರುವ ಬಂಗಡೀ ರೋಗದ ವಿಷಯದಲ್ಲಿ ಈ ವರ್ಷ ಇನ್ನೂ ಹೆಚ್ಚು ಕೆಲಸವು ನಡೆಯಿತು. ಜೋಳಕ್ಕೆ ಬರುವ ಮಸಿರೋಗದ ಅದ್ಭುತ ಚರಿತ್ರೆಯನ್ನು ತಿಳಿದುಕೊಳ್ಳುವ ಕೆಲಸವು ಪ್ರಾಯಶಃ ಪೂರೈಸಿತೆಂದೇ ಹೇಳಬೇಕು. ಜೋಳಕ್ಕೆ ಬತ್ತಕ್ಕೂ ಬರುವ ಮಿಡತೆ ರೋಗಗಳ ನಿವಾರಣೆಗೆ ಕೆಲವು ಉಪಾಯಾಂತರಗಳನ್ನು ಮಾಡಿದುದೂ, ಮತ್ತು ಕಂಬಳಿ ಹುಳುಗಳಿಂದ ಉಂಟಾಗುವ ಉಪದ್ರವದ ವಿಷಯದಲ್ಲಿ ಮತ್ತೆ ಕೆಲವು ಪರೀಕ್ಷೆಗಳನ್ನು ನಡಿಸಿದುದೂ—ಇವೇ ಕ್ರಿಮಿಶಾಸ್ತ್ರಾಲಯದ ಇಲಾಖೆಯವರು ಮಾಡಿದ ಮುಖ್ಯ ಕಾರ್ಯಗಳಾಗಿವೆ. ಕಂಬಳಿ ಹುಳುಗಳಿಂದ ಉಂಟಾಗುವ ರೋಗಗಳನ್ನು ತಪ್ಪಿಸಬೇಕಾದರೆ ಹುಳುಗಳನ್ನು ಕೈಯಿಂದ ಆಯ್ದು ಆಚೆಗೆ ಹಾಕುವುದೂ, ಆಳವಾಗಿ ಉಳ್ಳೆ ಹೊಡೆಯುವುದೂ ಮುಖ್ಯ ಸಾಧನಗಳಾಗಿರುತ್ತವೆಂದು ಸೂಚಿಸಿ, ಆ ಬಗ್ಗೆ ಸಣ್ಣದೊಂದು ಕರಪತ್ರವನ್ನು ಪ್ರಾಯಿಸ್ಮಾಡಿ, ಅದರ ಪ್ರತಿಗಳನ್ನು ರೋಗವು ವ್ಯಾಪಿಸಿಕೊಂಡಿರುವ ಸ್ಥಳಗಳಲ್ಲಿ ರೈತರಿಗೆ ಹಂಚಲಾಯಿತು.

ವ್ಯವಸಾಯದ ಬ್ಯಾಂಕುಗಳು.

ಈ ವರ್ಷದ ಆದಿಭಾಗದಲ್ಲಿ 9 ವ್ಯವಸಾಯದ ಬ್ಯಾಂಕುಗಳಲ್ಲಿ ಕೆಲಸವು ನಡೆಯುತ್ತಿತ್ತು. ಆದರೆ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಗೂಳೂರು, ದಾಬಸ್‌ಪೇಟೆ ಮತ್ತು ಹಾಲುದೊಡ್ಡೇರಿ ಬ್ಯಾಂಕುಗಳಲ್ಲಿ ವಿಶೇಷವಾಗಿ ಬಾಕಿನಿಂತು ಅವುಗಳು ಮುಂದೆ ಉಜ್ಜೀವಿಸಿರುವ ಸಂಭವವೇ ಕಂಡುಬರಲಿಲ್ಲವಾದುದರಿಂದ, ಆ ಮೂರು ಬ್ಯಾಂಕುಗಳನ್ನೂ ಮೌಕೂಫ್ ಮಾಡುವುದಕ್ಕೆ ಹುಕುಂ ಮಾಡಬೇಕಾಯಿತು. ಆದುದರಿಂದ ಸಾಲಾಖೈರಿನಲ್ಲಿ ಆರು ಬ್ಯಾಂಕುಗಳಲ್ಲಿ ಮಾತ್ರವೇ ಕೆಲಸವು [illegible]

...ಈ ಆರು ಬ್ಯಾಂಕುಗಳ ಪೈಕಿ ನಂಜನಗೂಡಿನ ಬ್ಯಾಂಕಿನ ... ಬರಬೇಕಾದ ಬಾಕಿಬಾಬ್ತು ಹೆಚ್ಚಾಗಿ, ಅದರಲ್ಲಿ ಸಿಂಹಿದ ಸುಮಾರು ... ರೂಪಾಯಿನ ರಿಜರ್ವ್ ಫಂಡ್ ಅಲ್ಪಸ್ವಲ್ಪ ಕೆಲಸ ನಡೆಯುತ್ತಿತ್ತು. ...ಕಿನ್ನಿಯೂ ಕೂಡ ಈಚೆಗೆ ಕೆಲಸವು ನಿಂತುಹೋಗಿ, ಆರ್ಬಿಟ್ರರ್ ... ಕೋಆಪರೇಟಿವ್ ಸೊಸೈಟೀಸ್ ನಿಬಂಧನೆಗಳ 76 ನೆಯ ಪ್ರಕರಣದ ಮೇರೆಗೆ ರಿಜಿಸ್ಟ್ರಾರ್ ... ವಿಲೇವಾರಿ ಮಾಡಿದ ತರುವಾಯ ಬ್ಯಾಂಕನ್ನು ಮುಚ್ಚಬೇಕೆಂದು ... ತೀರ್ಮಾನಿಸಿರುತ್ತಾರೆ. ಈ ಮೊಬಲಗನ್ನು ವೇದಾಭ್ಯಾಸ ಅಭಿವೃ... ಒಂದು ಸಣ್ಣ ಸಂಸ್ಥೆಗೆ ಕೊಡಬೇಕೆಂದು ಸಲಹೆ ಬಂದಿರುತ್ತದೆ. ... ಆಲೋಚನೆಯಲ್ಲಿದೆ.

ವ್ಯವಸಾಯದ ಬ್ಯಾಂಕುಗಳು ಪೂರ್ಣ ಋಣ ವಿಮುಕ್ತಿ ಮಾಡುವ ವಿಚಾರ ... ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂದು ಹೋದವರ್ಷ ಸೂಚಿಸ... ಈ ವಿಷಯದಲ್ಲಿ ಅನುಕೂಲವಾದ ಸ್ಥಳಗಳಲ್ಲೆಲ್ಲಾ ಮೌಲ್ಯಕೂಡಾದ ವ್ಯವ... ಬ್ಯಾಂಕುಗಳಿಗೆ ಬದಲಾಗಿ ಮಿತಿಯುಳ್ಳ ಜವಾಬ್ದಾರಿಯುಳ್ಳ ಅನ್ಯೋನ್ಯ ... ಸಂಘಗಳನ್ನು ಸ್ಥಾಪಿಸಿ, ಆ ಬ್ಯಾಂಕುಗಳ ಮೆಂಬರುಗಳಿಗೆ ಅಂತಹ ... ಉಂಟಾಗುವ ಪ್ರಯೋಜನಗಳನ್ನು ಅನುಭವಿಸಲು ಅವಕಾಶವನ್ನು ... ಕೊಡಬೇಕೆಂದು ತೀರ್ಮಾನಿಸಲಾಯಿತು. ಅದೇ ರೀತಿಯಾಗಿ 18 ಸ್ಥಳಗ... ಅನ್ಯೋನ್ಯ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟು, ಮೌಲ್ಯಕೂಡಾದ ವ್ಯವ... ಬ್ಯಾಂಕುಗಳ 50 ಮಂದಿ ಮೆಂಬರುಗಳು ಆ ಸಂಘಗಳಿಗೆ ಮೆಂಬರಾಗಿರುವ ... ಕದ ಬ್ಯಾಂಕುಗಳ ಸಾಲಗಳನ್ನು ತೀರಿಸುವುದಕ್ಕಾಗಿ 1,525 ರೂಪಾ... ವ್ಯವಸಾಯ ಕಾರ್ಯಗಳಿಗಾಗಿ 2,131 ರೂಪಾಯನ್ನೂ ಸಾಲ ತೆಗೆದು... ಕೊಂಡಿರುತ್ತಾರೆ. ಇದಲ್ಲದೆ ಆ ಮೆಂಬರುಗಳು ಈ ಸಂಘಗಳ ಷೇರ್ ಧನಕ್ಕಾಗಿ ... ರೂಪಾಯನ್ನು ಕೊಟ್ಟಿರುತ್ತಾರೆ. ಈ ರೀತಿಯಲ್ಲಿ ಅವರು ತಮ್ಮ ಸಂಪಾ... ದನೆಯ ಕೆಲವು ಭಾಗವನ್ನು ಉಳಿಸಿಕೊಂಡಂತಾಯಿತು. ಅವರುಗಳು ಈ ... ಸಂಘಗಳ ಮೆಂಬರುಗಳಾಗಿರದಿದ್ದ ಪಕ್ಷದಲ್ಲಿ ಏನನ್ನೂ ಉಳಿಸಿಕೊಳ್ಳುತ್ತಿರ... ಈ ಪೈಕಿ ಅನೇಕ ಸಂಘಗಳು ಇನ್ನೂ ಬಾಲ್ಯದಶೆಯಲ್ಲಿದ್ದರೂ, ಅವು ... ಪ್ರಜಾಸುಖಾಭಿವೃದ್ಧಿಯ ಹೇತುವಾಗಿವೆ. ಅವುಗಳಿಂದ ಮೆಂಬರುಗಳಿಗೆ ... ಪ್ರಯೋಜನವಾಗುವ ಸಂಭವವಿದೆ. ಕೆಲವು ತಾಲ್ಲೂಕುಗಳಲ್ಲಿರುವ ... ಕೆಳಗಂಡ ಮೌಲ್ಯಕೂಡಾದ ಬ್ಯಾಂಕುಗಳ ವಸೂಲು ಸಹ, ಎಲ್ಲಾ ಒಟ್ಟು ... 61,815 ರೂಪಾಯಿಯೂ, ಬಡ್ಡಿಗಾಗಿ 7,371 ರೂಪಾಯಿಯೂ ... ಆಗಿರುತ್ತದೆ. ಇದಕ್ಕೆ ಪ್ರತಿಯಾಗಿ ಹಿಂದಿನ ವರ್ಷ ಅಸಲಿಗಾಗಿ 79,793 ... ರೂಪಾಯಿಯೂ, ಬಡ್ಡಿಗಾಗಿ 1,912 ರೂಪಾಯಿಯೂ ವಸೂಲಾಯಿತು. ... ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಮಾತ್ರ ವಸೂಲಿಗಾಗಿ ಬಲಾತ್ಕಾರ ... ಕ್ರಮಗಳನ್ನು ನಡಿಸಬೇಕಾಯಿತು.

ರಿಜಿಸ್ಟ್ರೇಷನ್

ಈ ಸಾಲಿನಲ್ಲಿ ರಿಜಿಸ್ಟರಾದ ಲಿಖಿತ ದಸ್ತಾವೇಜುಗಳ ಸಂಖ್ಯೆಯೂ ಅದರ ... ಬಾಬ್ತು ವರಮಾನವೂ ಎರಡೂ ತಕ್ಕಮಟ್ಟಿಗೆ ಹೆಚ್ಚಾದವು. ಹಿಂದಿನ ... ಸಾಲಿನಲ್ಲಿ 86,8?? ದಸ್ತಾವೇಜುಗಳು ರಿಜಿಸ್ಟರಾಗಿ 1,63,100 ರೂಪಾ... ವರಮಾನವಾಗಿದ್ದಲ್ಲಿ ಈ ವರ್ಷದಲ್ಲಿ 91,191 ದಸ್ತಾವೇಜುಗಳು ರಿಜಿಸ್ಟರಾಗಿ ... ರೂಪಾಯಿ ವಸೂಲಾಗಿದೆ. ರಿಜಿಸ್ಟರಾದ ಲಿಖಿತ ಪತ್ರಗಳ ಸಂಖ್ಯೆಯು ... ಸ್ವಲ್ಪವಾಗಿ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಹೆಚ್ಚಾಯಿತು. ಹೀಗೆ ಹೆಚ್ಚು... ರಿಜಿಸ್ಟರ್ ಮಾಡಿಸುವುದರ ಪ್ರಯೋಜನವು ಜನಗಳಿಗೆ ಹೆಚ್ಚಾಗಿ ತಿಳಿಯಬಂದುದೂ, ಕಾಲಸ್ಥಿತಿಯು ಪ್ರತಿಕೂಲವಾದುದೂ ಮುಖ್ಯ ಕಾರಣಗಳಾಗಿವೆ.

ಸ್ಟಾಂಪುಗಳು

ಈ ಸಾಲಿನಲ್ಲಿ ಸ್ಟಾಂಪಿನ ಹುಟ್ಟುವಳಿಯು ಬಹಳ ಮಟ್ಟಿಗೆ ಹೆಚ್ಚಿತು. ಇದು ... ಈ ಬಾಬಿನಲ್ಲಿ ಹಿಂದಿನ ವರ್ಷ 8,26,100 ರೂಪಾಯಿ ಉತ್ಪತ್ತಿಯಾಗಿ... ಈ ವರ್ಷ 9,1?,?00 ರೂಪಾಯಿ ಹುಟ್ಟುವಳಿಯಾಗಿದೆ. ಈ ವರ್ಷದ ... ಹುಟ್ಟುವಳಿಯ ಪೈಕಿ 57,200 ರೂಪಾಯಿ ಕೋರ್ಟ್ ಫೀ ಸ್ಟಾಂಪು ... ದಲ್ಲಿಯೂ, 31,100 ರೂಪಾಯಿ ಜನರಲ್ ಸ್ಟಾಂಪು ಬಾಬಿನಲ್ಲಿಯೂ ... ಹೆಚ್ಚಾಗಿರುತ್ತದೆ. ಕೋರ್ಟ್ ಫೀ ಸ್ಟಾಂಪು ಹೆಚ್ಚುವುದಕ್ಕೆ ಈ ವರ್ಷ ... ದಾಖಲಾದ ಸಿವಿಲ್ ದಾವೆಗಳ ಸಂಖ್ಯೆಯೂ ಹೆಚ್ಚಿದುದೂ ಮತ್ತು ಜನರಲ್ ... ಹೆಚ್ಚುವುದಕ್ಕೆ ಹೆಚ್ಚು ಹಣದ ಲೇವಾದೇವಿ ನಡೆದು ರಿಜಿಸ್ಟರ್ ... ಹೆಚ್ಚಿದುದೇ ಕಾರಣಗಳಾಗಿವೆ. ಸ್ಟಾಂಪುಗಳ ಮೇಲೆ ಪ್ರಿಂಟರ್ ... ಸಾಹೇಬರ ಭಾವಚಿತ್ರವನ್ನು ಹಾಕಿರುವ ಒಂದು ಹೊಸ ತರಹೆಯ ಜನ... ಸ್ಟಾಂಪು ಕಾಗದಗಳು ಚಲಾವಣೆಗೆ ಬರತಕ್ಕ ಏರ್ಪಾಡನ್ನು ಮಂಜೂರ್... ವಸ್ತುಪ್ರದರ್ಶನ ಕಾಲದಲ್ಲಿ ಆಜ್ಞೆಗಳನ್ನು ಇತ್ತರು. ಈ ತರಹೆಯ ... ಕಾಗದಗಳು ಜನರ ಉಪಯೋಗಕ್ಕೋಸ್ಕರ ಈ ಪ್ರದರ್ಶನದಲ್ಲಿ ಒದಗಿಸಲು ...

ಆಬ್ಕಾರಿ

ಆಬ್ಕಾರಿ ಬಾಬಿನಲ್ಲಿ ಹಿಂದಿನ ವರ್ಷ ಒಟ್ಟು 13,09,216 ರೂಪಾಯಿ ವಸೂಲಾಗಿರುವಲ್ಲಿ ಈ ವರ್ಷ 15,15,378 ರೂಪಾಯಿ ಹುಟ್ಟುವಳಿಯಾ... ಅಂದರೆ 1,76,102 ರೂಪಾಯಿ ಅಥವಾ ಶೇಕಡಾ 1? ರಷ್ಟು ಹೆಚ್ಚಳ ... ಆಬ್ಕಾರಿ ರೆವಿನ್ಯೂವಿನ ಮುಖ್ಯವಾದ ಎಲ್ಲಾ ಬಾಬುಗಳಲ್ಲಿಯೂ ... ಹುಟ್ಟುವಳಿಯಾಗಿದೆ.

ಷಾಪ್ ಮತ್ತು ಶೇಂದಿ ದುಕಾನುಗಳ ಸಂಖ್ಯೆಯು ಪುನಃ ಕಡಿಮೆಯಾ... 30 ಷಾಪ್ ದುಕಾನುಗಳೂ 11 ಶೇಂದಿ ದುಕಾನುಗಳೂ ಕಡಿಮೆ ...ದವು.

ಫಾರೆಸ್ಟ್ ಇಲಾಖೆ

3,910 ಎಕರೆ ಫಾರೆಸ್ಟ್ ಪ್ಲಾಂಟೇಷನ್‌ನಲ್ಲಿ ಗಂಧ ಹಾಗು ಮತ್ತು ಇತರ ... ಬೀಜಗಳನ್ನು ಬಿತ್ತಿ ನೆಟ್ಟಿದ್ದಾಯಿತು. ಸುಮಾರು 170,161 ... ನಾನಾ ವಿಧದ ಸಸಿಗಳು ಇಲಾಖಾ ಪ್ರಮಾಣದ ... ಎಕರೆಯಾದವು ಮತ್ತು ಸುಮಾರು 112,904 ಘನ ಅಡಿಯ ... ಮರಗಳನ್ನು ಕ್ರಯದಾರರೂ, ಗುತ್ತಿಗೆದಾರರೂ, ಸರ್ಕಾರ ಜಂಗಲುಗಳಿಂದ ... ಸಾಗಿಸಿಕೊಂಡು ಹೋದರು. ಹಿಂದಿನ ವರ್ಷ ಒಟ್ಟಿನಲ್ಲಿ 1,16,291 ... ರೂಪಾಯಿ ವಸೂಲಾಗಿರುವಲ್ಲಿ, ಈ ವರ್ಷ 3,07,?50 ರೂಪಾಯಿ ಸಾಗುವಳಿ... ವಸೂಲಾಯಿತು. ಈ ವರ್ಷ ಒಟ್ಟು 2,??? ಟನ್ ಗಂಧದ ಮರ ... ಮಾರಾಟವಾಯಿತು. ಈ ಬಾಬಿನಲ್ಲಿ ಹಿಂದಿನ ವರ್ಷ 11,75,189 ರೂಪಾಯಿ ... ವಸೂಲಾಗಿರುವಲ್ಲಿ ಈ ವರ್ಷ 12,71,771 ರೂಪಾಯಿ ಹುಟ್ಟುವಳಿ... ದ ನಾಟಾಗಳನ್ನೂ ಇತರ ಜಂಗಲಿನ ಉತ್ಪನ್ನಗಳನ್ನೂ ಸುಲಭವಾಗಿ ... ಸ್ಥಳಗಳಿಗೆ ಸಾಗಿಸುವುದಕ್ಕಾಗಿ ಸುಮಾರು 31 ಮೈಲಿಗಳಷ್ಟು ... ರಸ್ತೆಗಳನ್ನು ಹಾಕಿಸಲಾಯಿತು, ಮತ್ತು ಸುಮಾರು 179 ಮೈಲಿಗಳ ... ರಸ್ತೆಯನ್ನು ದುರಸ್ತು ಪಡಿಸಲಾಯಿತು. ಇವುಗಳಿಗಾಗಿ ಒಟ್ಟು 10,519 ರೂಪಾ... ಖರ್ಚು ಹಿಡಿಯಿತು. ಹೊಸ ಕಟ್ಟಡಗಳಿಗೋಸ್ಕರವೂ ಹಾಲಿ ಇರತಕ್ಕ ... ದುರಸ್ತಿಗಾಗಿಯೂ 22,816 ರೂಪಾಯಿ ಖರ್ಚು ಮಾಡಲಾಯಿತು. ... ಈ ಬಾಬಿನಲ್ಲಿ ಹಿಂದಿನ ವರ್ಷ 20,95,122 ರೂಪಾಯಿ ಹುಟ್ಟುವಳಿ... ಯಾಗಿದ್ದಲ್ಲಿ, ಈ ವರ್ಷ 22,21,087 ರೂಪಾಯಿ ಹುಟ್ಟುವಳಿ ಆಗಿದೆ ... ಹಿಂದಿನ ವರ್ಷ 6,97,690 ರೂಪಾಯಿ ಖರ್ಚಾಗಿರುವಲ್ಲಿ, ಈ ವರ್ಷ ... ರೂಪಾಯಿ ಖರ್ಚಾಗಿದೆ.

ಭೂಗರ್ಭಶೋಧನೆ ಮತ್ತು ಗಣಿಯ ಕೆಲಸ

ಕಬ್ಬಿಣದ ಅದುರು, ಕ್ರೋಮ್ ಎಂಬ ಲೋಹಮಿಶ್ರಿತವಾದ ಕಬ್ಬಿಣದ ಅದುರು, ಅಭ್ರಕ, ಸುಣ್ಣಕಲ್ಲು, ಅಲ್ಪಸ್ವಲ್ಪ ಚಿನ್ನ—ಇವಿರುವ ಕೆಲವು ಪ್ರದೇಶಗಳು ... ಪರೀಕ್ಷೆ ಮಾಡಿಕೊಳ್ಳಲಾಯಿತು. ನಡೆದ ಕೆಲಸಗಳ ವಿಷಯಕವಾದ ರಿಪೋರ್ಟುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ತಯಾರ್ ಮಾಡುತ್ತಲಿರುವರು. ಸ್ಟೇಟ್ ಜಿಯಾಲಜಿಸ್ಟರವರು ಕನ್ನಂಬಾಡಿ ಆಣೆಯ ಪ್ರದೇಶದಲ್ಲಿ ಕಟ್ಟುತ್ತಿರುವ ತಳಹದಿಯ ಭಾಗವನ್ನು ಪರೀಕ್ಷೆಮಾಡಿ ಆ ವಿಷಯದಲ್ಲಿ ಅನುಕೂಲವಾದ ರಿಪೋರ್ಟನ್ನು ಮಾಡಿದರು. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಪಲವನಹಳ್ಳಿಯ ಬಳಿ 13 ಇಂಚು ದಪ್ಪವುಳ್ಳ ಒಂದು ದೊಡ್ಡ ಚಿನ್ನದ ಗಟ್ಟಿಯು ಸಿಕ್ಕಿತು. ಮಣ್ಣನ್ನು ಒಂದನ್ನೂ ಬಿಡದೆ ತೊಳೆದು ಶೋಧಿಸಿ ನೋಡಿದುದರಿಂದ, ಸದರಿ ಪ್ರದೇಶದಲ್ಲಿ ಭೂಮಿಯ ಮೇಲ್ಪದರಿಯ ಮಣ್ಣಿನಲ್ಲಿ ಸ್ವಲ್ಪ ಚಿನ್ನವಿದೆಯೆಂದು ಗೊತ್ತಾಯಿತು. ಸದರಿ ಪ್ರದೇಶದಲ್ಲಿ ಪ್ರಾಸ್ಪೆಕ್ಟಿಂಗಿಗಾಗಿ ಅನೇಕ ಲೈಸೆನ್ಸುಗಳು ತೆಗೆದುಕೊಳ್ಳಲ್ಪಟ್ಟವು. ಆದರೆ ಕೆಲಸವು ಇನ್ನೂ ಉಪಕ್ರಮಿಸಲ್ಪಟ್ಟಿಲ್ಲ.

ಚಿನ್ನ

ಪ್ರಸಕ್ತ ವರ್ಷದಲ್ಲಿ ಚಿನ್ನದ ಉತ್ಪತ್ತಿಯು 11,000 ಔನ್ಸುಗಳಿಗಿಂತ ಅಧಿಕವಾಗಿ ಹೆಚ್ಚಿತು. ಇಷ್ಟೆಲ್ಲವೂ ಕೋಲಾರದ ಗಣಿ ಪ್ರದೇಶದಿಂದಲೇ ಉತ್ಪತ್ತಿಯಾಯಿತು. ಮೈಸೂರು, ಉರಗಂ ಮತ್ತು ನಂದೀದುರ್ಗದ ಗಣಿಗಳು ಹೋದ ವರ್ಷದಂತೆಯೇ ತೃಪ್ತಿಕರವಾದ ಸ್ಥಿತಿಯಲ್ಲಿದ್ದುವು. ಒಟ್ಟು ಮೂರು ಕೋಟಿ ಇಪ್ಪತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಚಿನ್ನವು ಉತ್ಪತ್ತಿಯಾಯಿತು. ಇದರಿಂದ ಸರಕಾರಕ್ಕೆ 16 ಲಕ್ಷ ರೂಪಾಯಿಗಿಂತ ಸ್ವಲ್ಪ ಹೆಚ್ಚಾಗಿಯೇ ರಾಜಾದಾಯವು ದೊರಕಿತು. ಗಣಿಗಳಲ್ಲಿ ಕೆಲಸಮಾಡುವುದಕ್ಕೆ 26,772 ಜನರು ನಿಯಮಿತರಾಗಿದ್ದರು. ಪ್ರಸಕ್ತ ವರ್ಷದಲ್ಲಿ 371 ಅಪಾಯಗಳು ಸಂಭವಿಸಿದುವು. ಆ ಪೈಕಿ 18 ರಲ್ಲಿ ?9 ಜನರು ಮೃತರಾದರು.

ಮರಮತ್ತು ಕಾಮಗಾರಿಗಳು.

ಪ್ರಸಕ್ತ ವರ್ಷದಲ್ಲಿ ಲೋಕಲ್ ಫಂಡು ಫಂಡ್ ಎಲ್ಲಾ ಬಾಬುಗಳಿಂದಲೂ ಮರಮತ್ತು ಕಾಮಗಾರಿಗಳಿಗಾಗಿ ಸುಮಾರು ಒಟ್ಟು 41½ ಲಕ್ಷ ರೂಪಾಯಿ ಖರ್ಚಾಗಿರುತ್ತದೆ. ಈ ಮೊಬಲಗಿನ ಪೈಕಿ, 15¼ ಲಕ್ಷ ರೂಪಾಯಿ ನೀರಾವರಿ ಕಾಮಗಾರಿಗಳಿಗಾಗಿಯೂ, 24¾ ಲಕ್ಷ ರೂಪಾಯಿ ಸಿವಿಲ್ ಕಾಮಗಾರಿಗಳಿಗಾಗಿಯೂ, ಮಿಲಿಟರಿ ಕಟ್ಟಡಗಳಿಗಾಗಿಯೂ ಖರ್ಚಾಗಿರುತ್ತದೆ. ಹೋದ ಸಾಲಿನ ಪ್ರಜಾಪ್ರತಿನಿಧಿ ಸಭೆಯ ಸಮಾರಂಭದಲ್ಲಿ, ಕನ್ನಂಬಾಡಿ ಬಳಿ ಕಾವೇರೀ ನದಿಗೆ ಅಡ್ಡವಾಗಿ ಆಣೆ ಕಟ್ಟತಕ್ಕ ಏರ್ಪಾಡು ಮಂಜೂರಾಗಿರುವುದೆಂದು ತಿಳಿಸಲಾಯಿತು. ಸದರಿ ಏರ್ಪಾಡೇ ಪ್ರಸಕ್ತ ವರ್ಷದಲ್ಲಿ ಉಪಕ್ರಮಿಸಿದ ಮುಖ್ಯವಾದ ಕಾಮಗಾರಿಯಾಗಿರುತ್ತದೆ. ಈ ಏರ್ಪಾಡಿನ ಮೊದಲನೆಯ ಪರ್ಯಾಯದ ಕಾಮಗಾರಿಯು ಈಗ ನಡೆಯುತ್ತಲಿದೆ. ಇದರ ಮೇರೆಗೆ ನದೀಪಾತ್ರದ ಮೇಲೆ 80 ಅಡಿಯ ಮಟ್ಟದಲ್ಲಿ ಕೋಡಿಯಿರುವಂತೆ ಆಣೆಯನ್ನು 97 ಅಡಿಗಳ ಎತ್ತರದವರೆಗೆ ಕಟ್ಟಲಾಗುವುದು. ಈ ಮಟ್ಟದಲ್ಲಿ ಜಲಾಶಯದೊಳಗೆ 1,100 ಕೋಟಿ ಘನ ಅಡಿಯ ನೀರು ನಿಲ್ಲುವುದು. ವಿದ್ಯುಚ್ಛಕ್ತಿಯ ನಾಲ್ಕನೆಯ ಸ್ಥಾಪನೆಯೊಡನೆ ಸೇರಿದ ಈ ಮೊದಲನೆಯ ಪರ್ಯಾಯಕ್ಕೆ ಒಳಪಟ್ಟ ಕಾಮಗಾರಿಗೆ ?0 ಲಕ್ಷ ರೂಪಾಯಿ ಖರ್ಚಾಗುವುದೆಂದು ಅಂದಾಜಾಗಿದೆ. ಈ ಕಾಮಗಾರಿಯು 1911 ನೆಯ ನೊವೆಂಬರ್ ತಿಂಗಳಲ್ಲಿ ಪ್ರಾರಂಭವಾಯಿತು ಮತ್ತು 1912 ನೆಯ ಜೂನ್ ತಿಂಗಳ ಆಖೈರ್‌ವರೆಗೆ 6,97,801 ರೂಪಾಯಿ ಖರ್ಚಾಯಿತು. ಆಣೆಯಿರುವ ಪ್ರದೇಶಕ್ಕೂ ಕ್ಯಾಂಪುಗಳಿಗೂ ಹೋಗಲು ರಸ್ತೆಗಳನ್ನು ಹಾಕುವುದು, ಆಫೀಸುಗಳನ್ನೂ ವಾಸದ ಮನೆಗಳನ್ನೂ ಕಟ್ಟುವುದು, ರೋಗಿಗಳಿಗಾಗಿ ಒಂದು ಆಸ್ಪತ್ರೆಯನ್ನೂ ಕಟ್ಟುವುದು, ನೀರಿನ ಸರಬರಾಯಿಗೂ, ಚರಂಡಿಗಳಿಗೂ ಏರ್ಪಾಡು ಮಾಡುವುದು, ಬೇಕಾದ ಕೂಲಿಯ ಜನರನ್ನೂ ಸಾಮಾನುಗಳನ್ನೂ ಯಂತ್ರಗಳನ್ನೂ, ಮುಟ್ಟುಗಳನ್ನೂ, ಇತರ ಸಾಮಗ್ರಿಗಳನ್ನೂ ಸಂಗ್ರಹಿಸುವುದು, ಇವುಗಳೇ ಪ್ರಸಕ್ತ ವರ್ಷದಲ್ಲಿ ನಡೆದ ಕೆಲಸಗಳಾಗಿವೆ. ನದೀಪಾತ್ರದಲ್ಲಿಯೂ ದಡಗಳಲ್ಲಿಯೂ ಒಂದು ಭಾಗವನ್ನು ಸರಿಮಾಡಿಕೊಂಡು, ಆಣೆಯ ತಳಹದಿಗಾಗಿ ಪಾಯತೋಡುವ ಕೆಲಸವು ಜರುಗಿತು.

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಮಾರಿಕಣಿವೆ ಏರ್ಪಾಡಿನ ಸಂಬಂಧದಲ್ಲಿ ನೀರಾವರಿ ಕೆಲಸಗಳಿಗಾಗಿ ಕೊಡತಕ್ಕ ತಾಳುವಾರಾ ಕ್ರಮದ ತಖ್ತೆಗಳನ್ನು ನಿಷ್ಕರ್ಷಿಸಲಾಯಿತು. ಎತ್ತರವಾದ ಮಟ್ಟದಲ್ಲಿ ಒಂದು ನಾಲೆ ತೆಗೆಸತಕ್ಕ ಕೆಲಸವನ್ನು ಪ್ರಕೃತದಲ್ಲಿ ನಿಲ್ಲಿಸಲಾಗಿದೆ. ನಾಲೆಗಳು ಬರುವ ಪ್ರದೇಶದಲ್ಲಿನ ಗ್ರಾಮಗಳ ಆರೋಗ್ಯಸ್ಥಿತಿಯನ್ನು ಅಭಿವೃದ್ಧಿ ಪಡಿಸತಕ್ಕ ಬಗ್ಗೆ 10,000 ರೂಪಾಯನ್ನು ಮಂಜೂರು ಮಾಡಲಾಯಿತು, ಮತ್ತು ಸಂದಿಹಳ್ಳಿ ಜನವಸತಿ ಗ್ರಾಮಗಳನ್ನು ಮತ್ತು ಆರೋಗ್ಯಕರವಾದ ಪ್ರದೇಶಗಳಲ್ಲಿ ಕಟ್ಟತಕ್ಕ ಬಗ್ಗೆ ಸುಮಾರು 2,000 ರೂಪಾಯಿ ಖರ್ಚು ಮಾಡಬೇಕಾಯಿತು. ಈ ಜಲಾಶಯದ ಕೆಳಗೆ ಕಂದಾಯ ದಾಖಲಾಗಿರುವ 10,812 ಎಕರೆ ಅಚ್ಚುಕಟ್ಟಿನ ಪೈಕಿ ಪ್ರಸಕ್ತ ವರ್ಷದಲ್ಲಿ ಸುಮಾರು 1,072 ಎಕರೆಗಳ ವ್ಯವಸಾಯಕ್ಕೆ ನೀರು ಸರಬರಾಯಿ ಆಯಿತು.

ಪ್ರಸಕ್ತವರ್ಷದಲ್ಲಿ ನಡೆದ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳು ಯಾವುವೆಂದರೆ —ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹೈರಿಗೆಯ ಬಳಿಯಿರುವ ವಾಡ್ಡಿ ಹೊಳೆಗೆ ಅಡ್ಡವಾಗಿ ಒಂದು ಹೊಸ ಕೆರೆಯನ್ನು ಕಟ್ಟುವುದು, ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಶ್ರೀರಾಮದೇವರ ದಕ್ಷಿಣ ನಾಲೆಯನ್ನು ಬದಲಾಯಿಸಿ ಉತ್ತಮಸ್ಥಿತಿಗೆ ತರುವುದು, ಕೃಷ್ಣರಾಜಪೇಟೆ ತಾಲ್ಲೂಕು ಬೋಳಾಪುರದ ಕೆರೆಯನ್ನೂ ಹುಣಸೂರು ತಾಲ್ಲೂಕು ಮೆಣಸೂರು ಕೆರೆಯನ್ನೂ ಅಬಾದಿಗೆ ತರುವುದು. 1911 ನೆಯ ಜುಲೈ ತಿಂಗಳಲ್ಲಿ ಬಂದ ಕಾವೇರೀ ನದಿಯ ಅಮಿತ ಪ್ರವಾಹದ ದೆಸೆಯಿಂದ ನಷ್ಟಕ್ಕೆ ಗುರಿಯಾದ ಹಲವು ಆಣೆಗಳನ್ನು ಕಳೆದ ಬೇಸಗೆಯಲ್ಲಿ ಅರ್ಧ ಲಕ್ಷ ರೂಪಾಯಿ ವರೆಗೆ ಖರ್ಚು ಮುಟ್ಟಿಸಿ ತೃಪ್ತಿಕರವಾಗಿ ಸರಿಪಡಿಸಲಾಯಿತು. ಸಂಸ್ಥಾನದ ಸಣ್ಣ ಕೆರೆಗಳನ್ನು ಅಬಾದಿಗೆ ತರತಕ್ಕ ಬಗ್ಗೆ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಯಿತು.

ಈ ವರ್ಷದಲ್ಲಿ ತಯಾರಾಗುತ್ತಿದ್ದ ಮುಖ್ಯವಾದ ಹೊಸ ಕಟ್ಟಡಗಳು ಯಾವುವೆಂದರೆ—ಮೈಸೂರಲ್ಲಿ ಹೊಸ ಅರಮನೆ ಮತ್ತು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಬೆಂಗಳೂರಲ್ಲಿ ಮಿಂಟೋ ನೇತ್ರ ಆಸ್ಪತ್ರೆ ಮತ್ತು ಹೊಸ ಹೈಸ್ಕೂಲು, ಶಿವಮೊಗ್ಗೆಯಲ್ಲಿ ಸಂದಲ್‌ಕೋಟಿ. ಇದಲ್ಲದೆ ಇದೇ ವರ್ಷದಲ್ಲಿ ಮೈಸೂರು ಅರಮನೆಯಲ್ಲಿ ಇನ್ನೊಂದು ಸಾಲು ಹೊಸದ ಮನೆಗಳನ್ನೂ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಒಂದು ರಸಾಯನ ಶಾಸ್ತ್ರ ಶೋಧನಾಲಯವನ್ನೂ ಕಟ್ಟಲುಪಕ್ರಮಿಸಲಾಯಿತು. ಕೋಲಾರದ ಗಣಿ ಪ್ರದೇಶದಲ್ಲಿ ಬಾರ್ ಎಡ್ವರ್ಡ್ ಹಾಜಿ ಇಸ್ಮಾಯಿಲ್ ಸೇಟರಿಗೆ ಸೇರಿದ - ಕಾರೊನೇಷನ್ ಬಿಲ್ಡಿಂಗ್ಸ್ ಎಂಬ ಕಟ್ಟಡವನ್ನು ಸರ್ಕಾರಕ್ಕೆ ತೆಗೆದುಕೊಂಡು, ಸದರಿ ಕಟ್ಟಡವನ್ನು ಹೆಂಗಸರ ಆಸ್ಪತ್ರೆಗೆ ತಕ್ಕಂತೆ ಅನುಕೂಲಪಡಿಸಿಕೊಳ್ಳುವುದಕ್ಕಾಗಿ 19,130 ರೂಪಾಯಿಗೆ ಒಂದು ಅಂದಾಜನ್ನು ಮಂಜೂರ್ ಮಾಡಲಾಯಿತು.

ರಸ್ತೆಗಳ ಬಾಬಿನಲ್ಲಿ, ಶಿವಮೊಗ್ಗೆ, ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಕೆಲವು ಮಲೆನಾಡು ಪ್ರದೇಶಗಳಲ್ಲಿಯೂ ಜಂಗಲುಗಳಲ್ಲಿಯೂ ಹೊಸದಾಗಿ ಕೆಲವು ರಸ್ತೆಗಳನ್ನು ಹಾಕಿಸುವುದಲ್ಲದೆ ಹಳೆಯ ರಸ್ತೆಗಳನ್ನು ದುರಸ್ತು ಮಾಡಲಾಯಿತು. ತುಂಗಭದ್ರಾ ನದಿಯಮೇಲೆ ಹೊನ್ನಾಳಿಯ ಬಳಿ ಒಂದು ದೊಡ್ಡ ಸೇತುವೆಯನ್ನು ಕಟ್ಟುವ ಕೆಲಸವು ಚೆನ್ನಾಗಿ ನಡೆಯಿತು. ಮೈಸೂರು ಡಿಸ್ಟ್ರಿಕ್ಟಿನಲ್ಲಿ [illegible] ಹೊಳೆಗೆ ಅಡ್ಡವಾಗಿ ಅತ್ಯವಶ್ಯವಾಗಿ ಬೇಕಾದ ಸೇತುವೆಯನ್ನು ಕಟ್ಟತಕ್ಕ ಬಗ್ಗೆ ನಮೂನೆಗಳನ್ನು ತಯಾರಿಸಿ, ಇದಕ್ಕಾಗಿ ಕಳೆದ ಸನೆಬಜೆಟ್ಟಿನಲ್ಲಿ 91,535 ರೂಪಾಯಿನ ಅಂದಾಜು ಮಂಜೂರ್ ಮಾಡಲಾಯಿತು. ಸರ್ಕಾರೀ ಕೆಲಸವನ್ನು ಸುಲಭವಾಗಿ ನಡಿಸುವುದಕ್ಕೆ ಅನುಕೂಲಿಸುವಂತೆ ಸುಮಾರು 80,000 ರೂಪಾಯಿ ಖರ್ಚು ಮುಟ್ಟಿಸಿ ಬೆಂಗಳೂರಿಂದ ಮೈಸೂರಿಗೆ ಟೆಲಿಫೋನ್ ಮಾರ್ಗವನ್ನು ಏರ್ಪಡಿಸಲಾಯಿತು.

ವಿದ್ಯುಚ್ಛಕ್ತಿಯ ಕಾಮಗಾರಿ.

1910-11 ರಲ್ಲಿ ನಡೆಯುತ್ತಿದ್ದ ಕಾವೇರೀ ವಿದ್ಯುಚ್ಛಕ್ತಿಯ 3 ನೆಯ ಸ್ಥಾಪನೆಯ ಕೆಲಸವು ಪ್ರಸಕ್ತ ವರ್ಷದಲ್ಲಿ ಪೂರಯಿಸಿತು. ಬೆಂಗಳೂರು ಮತ್ತು ಮೈಸೂರು ಟವನುಗಳಿಗೆ ಹಾಕಿರುವ ಟ್ರಾನ್ಸ್‌ಮಿಷನ್ ಲೈನುಗಳಿಗೆ ಸಿಡಿಲು ತಗುಲದಂತೆ ತಡೆಯುವ ಅಲ್ಯೂಮಿನಿಯಂ ಎಂಬ ಲೋಹದ ಬಟ್ಟಲುಗಳನ್ನು ಹಾಕಿಸಲಾಯಿತು. ಮೈಸೂರಲ್ಲಿಯೂ, ಬೆಂಗಳೂರು ಸಿಟಿ ಮತ್ತು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನಿನಲ್ಲಿಯೂ, ವಿದ್ಯುಚ್ಛಕ್ತಿಯನ್ನೂ, ದೀಪಗಳನ್ನೂ, ಹೆಚ್ಚಿಸುವುದಕ್ಕಾಗಿ ಬಡಾವಣೆ ಕೆಲಸಗಳನ್ನು ನಡಿಸಲಾಯಿತು. ಮೈಸೂರಲ್ಲಿ ಸೂಪರಿಂಟೆಂಡೆಂಟರ ಆಫೀಸಿಗಾಗಿಯೂ, ಸಾಮಗ್ರಿಗಳನ್ನಿಡುವುದಕ್ಕಾಗಿಯೂ, ಒಟ್ಟು 8,911 ರೂಪಾಯಿ ಖರ್ಚಿನಿಂದ ಒಂದು ಕಟ್ಟಡವನ್ನು ಕಟ್ಟಿಸಲಾಯಿತು. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿನ ಟ್ರಾನ್ಸ್‌ಫಾರ್ಮರ್ ಸ್ಟೇಷನುಗಳಲ್ಲಿ, ಮೋಟಾರ್ ಜನರೇಟರ್ ಸೆಟ್ ಎಂಬ ವಿದ್ಯುಚ್ಛಕ್ತ್ಯುತ್ಪಾದಕವಾದ ಸಲಕರಣೆಗಳನ್ನು ಪುನಃ ಕ್ರಮಪಡಿಸಲಾಯಿತು. ಬೆಂಗಳೂರಲ್ಲಿ ಟ್ರಾಮನ್ನು ಹಾಕುವುದಕ್ಕೂ, ಕಾವೇರೀ ವಿದ್ಯುಚ್ಛಕ್ತಿಯ ನಾಲ್ಕನೆಯ ಸ್ಥಾಪನೆಯನ್ನು ಏರ್ಪಡಿಸುವುದಕ್ಕೂ ಸರ್ವೇ ಕೆಲಸಗಳನ್ನು ಜರುಗಿಸಲಾಯಿತು. ಪ್ರಸಕ್ತವರ್ಷದ ಆಖೈರಿನಲ್ಲಿ ಸದರಿ ಕಾಮಗಾರಿಗಳ ಬಗ್ಗೆ ಅಂದಾಜುಗಳು ಪೂರಯಿಸುತ್ತ ಬಂದಿದ್ದುವು.

ಪ್ರಸ್ತುತವರ್ಷದಲ್ಲಿ ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡಿಗಾಗಿ 57,409 ರೂಪಾಯಿ ಮೂಲಧನವು ಖರ್ಚಾಯಿತು. ಜೂನ್ ಸೇರಿ ಇದುವರೆಗೆ ಒಟ್ಟು 83,13,519 ರೂಪಾಯಿ ಮೂಲಧನವು ಖರ್ಚಾದಹಾಗಾಯಿತು. ಈ ಏರ್ಪಾಡಿನಿಂದ ಪ್ರಸಕ್ತವರ್ಷದಲ್ಲಿ ಒಟ್ಟು 16,04,778 ರೂಪಾಯಿ ಹುಟ್ಟುವಳಿಯಾಯಿತು. ಕೆಲಸಗಳನ್ನು ನಡಿಸುವುದಕ್ಕೆ 6,26,089 ರೂಪಾಯಿ ಖರ್ಚುತಗಲಿತು. ಈ ಖರ್ಚಿನಲ್ಲಿಯೇ, ಡಿಪ್ರಿಸಿಯೇಷನ್ ಫಂಡಿಗಾಗಿ ತೆಗೆದಿಟ್ಟ 2,87,700 ರೂಪಾಯಿಯೂ ಬೇಸಗೆ ಕಾಲದಲ್ಲಿ ನದೀಜಲವನ್ನು ಹಲಾಕಾಗದಂತೆ ನಿಲ್ಲಿಸಿಕೊಂಡು ಸರಬರಾಯನ್ನು ಕ್ರಮಪಡಿಸುವುದಕ್ಕೆ ಖರ್ಚುಮಾಡಿದ 38,718 ರೂಪಾಯಿಯೂ ಸೇರಿರುತ್ತದೆ. ಇದುವರೆಗೆ ಆಗಿರುವ ಮೂಲಧನದ ಮೇಲೆ ಶೇಕಡ 4ರ ಪ್ರಕಾರ ಆಗುವ ಬಡ್ಡಿ ಮೊಬಲಗನ್ನು ವಜಾಮಾಡಿದ ತರುವಾಯ, ನಿವ್ವಳ 7,07,181 ರೂಪಾಯಿ ಹುಟ್ಟುವಳಿಯಾಯಿತು, ಎಂದರೆ ಒಟ್ಟು ಬಂಡವಾಳದ ಮೇಲೆ ಈ ವರ್ಷದಲ್ಲಿ ಶೇಕಡ 8.51 ರಂತೆ ಉತ್ಪತ್ತಿಯಾದಹಾಗಾಯಿತು.

ರೈಲ್ವೆಗಳು

ಹನ್ನೆರಡು ವರ್ಷಗಳಿಗಿಂತಲೂ ಜಾಸ್ತಿಯಾದ ಕಾಲವು ಕಳೆದು ಹೋಗಿದ್ದರೂ ಕೂಡ ರೈಲ್ವೆ ಲೈನುಗಳನ್ನು ಈಚೆಗೆ ಸ್ವಲ್ಪವೂ ಬದಲಾಯಿಸಿಲ್ಲ. ಆದುದರಿಂದ ರೈಲ್ ರಸ್ತೆಗಳ ಅಭಿವೃದ್ಧಿಯ ವಿಷಯದಲ್ಲಿ, ಈ ಸಂಸ್ಥಾನವು ಬ್ರಿಟಿಷ್ ಇಂಡಿಯಾದೇಶಕ್ಕಿಂತ ಹಿಂದೆ ಬಿದ್ದಿರುತ್ತದೆ. ಬ್ರಿಟಿಷ್ ಇಂಡಿಯಾದಲ್ಲಿ ಪ್ರತಿ 8,800 ನಿವಾಸಿಗಳಿಗೆ ಒಂದೊಂದು ಮೈಲಿಯಂತೆ ರೈಲ್ ರಸ್ತೆಯು ಇರುವಲ್ಲಿ, ಮೈಸೂರು ಸಂಸ್ಥಾನದಲ್ಲಿ ಪ್ರತಿ 12,500 ಜನಗಳಿಗೆ ಒಂದೊಂದು ಮೈಲಿಯಂತೆ ರೈಲ್ ರಸ್ತೆ ಇರುತ್ತದೆ. ಬ್ರಿಟಿಷ್ ಇಂಡಿಯಾದಲ್ಲಿ ನಡೆದಿರುವಷ್ಟು ಅಭಿವೃದ್ಧಿಯು ಇಲ್ಲಿಯೂ ಆಗುವಂತೆ ಮಾಡಬೇಕಾದರೆ, ಈಗಿರುವ ರಸ್ತೆಗಳ ಜೊತೆಗೆ ಕನಿಷ್ಠ ಪಕ್ಷ 200 ಮೈಲಿ ರಸ್ತೆಗಳನ್ನು ಹಾಕಿಸಬೇಕಾಗಿರುತ್ತದೆ. ಆದುದರಿಂದಲೇ ಮುಂದಿನ ಕೆಲವು ವರುಷಗಳ ಪರ್ಯಂತರವೂ ರೈಲ್ ರಸ್ತೆಗಳನ್ನು ಕ್ರಮೇಣ ಹೆಚ್ಚಿಸುವ ಮಾರ್ಗವನ್ನು ಅವಲಂಬಿಸಬೇಕೆಂದು ಸರ್ಕಾರದವರು ತೀರ್ಮಾನಿಸಿರುವರು. ಈ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ರೈಲ್ ರಸ್ತೆಗಳನ್ನು ಹಾಕುವ ಏರ್ಪಾಡಿಗೂ, ಸಂಸ್ಥಾನದ ರೈಲ್ವೆ ಇಲಾಖೆಯನ್ನು ಏರ್ಪಡಿಸುವುದಕ್ಕೂ, 1911 ನೆಯ ನವಂಬರಿನಲ್ಲಿ ಮಂಜೂರಾತಿಯನ್ನು ಕೊಡಲಾಯಿತು.

[illegible]ಗಳ ಸೂಚನೆ

ಕಾರ್ಯಕ್ರಮದ ಪಟ್ಟಿಯಲ್ಲಿ ಸೂಚಿಸಿರುವ ರೈಲ್ ರಸ್ತೆಗಳಲ್ಲಿ, ಯಾವುದು ಮೊದಲು ಆಗತಕ್ಕದ್ದು, ಯಾವುದು ಮುಖ್ಯವಾದುದು ಎಂಬುದನ್ನು ಪರಿಶೀಲಿಸಿ ಒಂದೊಂದನ್ನಾಗಿ ವಿಚಾರ ಮಾಡಲಾಗುತ್ತದೆ. ಸೌತ್ ಇಂಡಿಯನ್ ರೈಲ್ವೇ ಕಂಪೆನಿಯವರು ನಂಜನಗೂಡು—ಈರೋಡು ರಸ್ತೆಯನ್ನು ಪುನಃ ಸರ್ವೆಮಾಡಿ, ನಂಜನಗೂಡಿನಿಂದ ಬ್ರಿಟಿಷ್ ದೇಶದ ಸರಹದ್ದಿನ ಭಾಗದ ಪ್ಲಾನುಗಳನ್ನೂ ಅಂದಾಜುಗಳನ್ನೂ ತಯಾರುಮಾಡಿರುತ್ತಾರೆ. ಈ ಏರ್ಪಾಡು ಇಂಗ್ಲೆಂಡಿನಲ್ಲಿ ಡೈರೆಕ್ಟರುಗಳ ಪರ್ಯಾಲೋಚನೆಯಲ್ಲಿರುವುದಾಗಿ ತಿಳಿಯ ಬರುತ್ತದೆ. ಮೈಸೂರು ಹಾಸನ ಲೈನನ್ನು ಪುನಃ ಪರೀಕ್ಷೆ ಮಾಡಲಾಯಿತು. ಸದರಿ ರಸ್ತೆಯನ್ನು ಕಡೆಗೆ ಯಾವ ಮಾರ್ಗವಾಗಿ ಹಾಕಬೇಕೆಂಬುದನ್ನು ನಿಶ್ಚಯಿಸುವುದಕ್ಕಾಗಿ ಸರ್ವೇ ಕೆಲಸವು ನಡೆಯುತ್ತಲಿದೆ. ಕೋಸೇಹಳ್ಳಿಯಿಂದ ಚನ್ನರಾಯಪಟ್ಟಣ ಮತ್ತು ಕೃಷ್ಣರಾಜಪೇಟೆ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಒಂದು ನೇರವಾದ ರೈಲ್ ರಸ್ತೆಯನ್ನೂ, ಹಾಸನಕ್ಕೂ ಹೊಳೆನರಸೀಪುರಕ್ಕೂ ನ್ಯಾರೋಗೇಜಿನ ಬ್ರಾಂಚ್ ಲೈನುಗಳನ್ನೂ ಹಾಕುವ ಏರ್ಪಾಡು ವಿಚಾರದಲ್ಲಿದೆ.

ಲೈಟ್ ರೈಲ್ವೆಗಳು.

ಬೆಂಗಳೂರು-ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯವರು ರಸ್ತೆ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ಬೇಕಾದ ಸನ್ನಾಹಗಳನ್ನು ಪೂರಯಿಸುವವರಲ್ಲಿದ್ದರು. ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ಲೈಟ್ ರೈಲ್ವೆ ರಸ್ತೆಯನ್ನು ಹಾಕುವುದಕ್ಕಾಗಿ ಸರ್ವೇ ಕೆಲಸವು ನಡೆದಿರುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಈ ಕಾಮಗಾರಿಗೆ ಹಣವನ್ನು ಒದಗಿಸುವುದಕ್ಕೆ ಒಪ್ಪಿ, ಬೇಕಾದ ಮೊಬಲಗನ್ನು ಕೊಡುವುದರಿಂದ, ಈ ರೈಲ್ ರಸ್ತೆಯ ಏರ್ಪಾಡಿಗೆ ಇಂಡಿಯಾ ಸರ್ಕಾರದಿಂದ ಅಂಗೀಕಾರವು ಬಂದ ಒಡನೆಯೇ ಕ್ರಮವಾಗಿ ಕೆಲಸವನ್ನು ಪ್ರಾರಂಭಿಸಲಾಗುವುದು. ಬೆಂಗಳೂರು-ಪೂನಾದ ರೈಲ್ ರಸ್ತೆಯಲ್ಲಿರುವ ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ ಮಾತ್ರ ಹೋಗತಕ್ಕ ಒಂದು ಲೈಟ್ ರಸ್ತೆಯನ್ನು ಹಾಕುವುದಕ್ಕೆ ಕೂಡ ಸರ್ವೇ ಕೆಲಸವು ನಡೆದು ಪ್ಲಾನುಗಳೂ ಅಂದಾಜುಪಟ್ಟಿಗಳೂ ತಯಾರಾಗುತ್ತಲಿವೆ.

ಜುಡಿಷಿಯಲ್

ಮುನ್ಸೀಫರ ಹುದ್ದೆಯನ್ನೂ, ಅವರು ಬಡ್ತಿಯನ್ನು ಪಡೆಯುವ ಸಂಭವವನ್ನೂ ಉತ್ತಮಸ್ಥಿತಿಗೆ ತರಲು, ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆಂದು ನಿಮಗೆ ತಿಳಿಸತಕ್ಕ ಮತ್ತೊಂದು ವಿಷಯವಾಗಿದೆ. ಇನ್ನು ಮೇಲೆ ಖಾಯಂ ಅವರನ್ನು ಗೆಜೆಟೆಡ್ ಆಫೀಸರಂತೆ ಭಾವಿಸಲಾಗುವುದು. ಮುನ್ಸೀಫ ಕೆಲಸದಲ್ಲಿ ಖಾಯಂ ಮಾಡಿದನಂತರ ಅವರಿಗೆ ಮಾಹೆಯಾನ 200 ರೂಪಾಯಿ ಸಂಬಳದಿಂದ ಮೊದಲು ಮಾಡಿ, ಮೂರು ವರ್ಷಕ್ಕೆ 50 ರೂಪಾಯಿ ಬಡ್ತಿಯಂತೆ 400 ರೂಪಾಯಿನ ವರೆಗೂ, ಸಂಬಳವನ್ನು ಹೆಚ್ಚಿಸಲಾಗುತ್ತದೆ. ಚೀಫ್ ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರರನ್ನು ಇನ್ನು ಮುಂದೆ ಮುನ್ಸೀಫರ ಗ್ರೇಡಿನಲ್ಲಿ ಸೇರಿಸಲಾಗುವುದು.

ಪೋಲೀಸ್.

ರೆಗ್ಯುಲರ್ ಪೋಲೀಸಿನ ಮಂಜೂರಾದ ಸಿಬ್ಬಂದಿಯು ಹೋದ ವರ್ಷದಷ್ಟೇ ಇತ್ತು, ಎಂದರೆ ಅದರಲ್ಲಿ 811 ಜನ ಹುದ್ದೆದಾರರೂ, 3,019 ಜನ ನೌಕರರೂ ಇದ್ದರು. ಕನ್ನಂಬಾಡಿಯ ಹತ್ತಿರ ಕಟ್ಟುತ್ತಿರುವ ಕಾವೇರೀ ಜಲಾಶಯದ ಬಳಿ ಕೆಲಸ ಮಾಡುವುದಕ್ಕೆ ಸಾಲಿಯಾನ 1,108 ರೂಪಾಯಿ ಖರ್ಚಿನಲ್ಲಿ ಒಬ್ಬ ಇನ್‌ಸ್ಪೆಕ್ಟರ್, ಒಬ್ಬ ಜಮೇದಾರ್, ಇಬ್ಬರು ದಫೇದಾರರು ಮತ್ತು 26 ಕಾನ್‌ಸ್ಟೇಬಲುಗಳ ಒಂದು ಹಂಗಾಮಿ ಸಿಬ್ಬಂದಿಯನ್ನು ಈ ವರ್ಷ ಮಂಜೂರ್ ಮಾಡಲಾಯಿತು. ಆವಶ್ಯಕತೆ ಹೆಚ್ಚುತ್ತಿರುವ ಕೋಲಾರದ ಚಿನ್ನದ ಗಣಿಗಳ ಪ್ರದೇಶದಲ್ಲಿ ಕೆಲಸ ಮಾಡುವುದಕ್ಕೆ 8,280 ರೂಪಾಯಿ ಖರ್ಚಿನಲ್ಲಿ 4 ಹೆಡ್ ಕಾನ್‌ಸ್ಟೇಬಲುಗಳೂ, 30 ಕಾನ್‌ಸ್ಟೇಬಲುಗಳೂ ಉಳ್ಳ ಒಂದು ಹೆಚ್ಚು ಸಿಬ್ಬಂದಿಯನ್ನು ವರ್ಷದ ಅಂತ್ಯದಲ್ಲಿ ಮಂಜೂರ್ ಮಾಡಲಾಯಿತು. [illegible]

[illegible]

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದೆ ಮಾಡಿದ. ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಬೇಗ ಜೀರ್ಣವಾಗುವುದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಸಾಧ್ಯ ಪುಸ್ತಕ ಕಳುಹಿಸುತ್ತಾರೆ.

[06 27] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thom[illegible] Proprietor and Manager, Wesleyan Mission Pr[illegible] Mysore. 31/10/1912

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸೆ ೧೯೧೨ ನೇ ಇಸವಿ ನವಂಬರ್ ತಾರೀಖು ೭ ನೇ ಗುರುವಾರ. ಸಂಚಿಕೆ ೨೨

ಆಯುರ್ವೇದ ಔಷಧಾಲಯ ಶೃಂಗಗಿರಿ.

[illegible] ವಾತ, ಪಿತ್ತ, ಕಫ, ಜ್ವರ [illegible] ಸಂಕಟ [illegible] ೧ ರೂಪಾಯಿ [161 1]

ವಿಳಾಸ —ಆಯುರ್ವೇದ [illegible], ಕ [illegible] ಶಾಸ್ತ್ರಿ, ಶೃಂಗೇರಿ.

ಆರು ಹೊಸ ಕಾದಂಬರಿಗಳು!!

[1] 1[?]

ಲೀಲನೆ—[illegible] ಚಮತ್ಕಾರವಾದ ಕಥೆ 12 ಆಣೆ ಅನಂಗಸುಂದರಿ—[illegible] ಆಣೆ ತಾರಾಸುಂದರಿ—[illegible] ಆಣೆ ಕುಮುದಿನಿ—[illegible] ಆಣೆ ಸತೀರೋಹಿಣಿ—[illegible] ಆಣೆ ಸಂತಾಪಕ—[illegible] ಕಥೆ 1 ಆಣೆ

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

[illegible]ಗುವಾನಿ ಬೀಡ್ ಡಿಪ್ಪೋ.

ವ್ಯಾಪಾರಕ್ಕೆ ಸಿದ್ಧವಾಗಿದೆ.

[illegible] ಸುತ್ತನಲ್ಲಿ 2 ಅಡಿ [illegible] ಉದ್ದದಲ್ಲಿ [illegible] ಕಾಲದಲ್ಲಿ 25000 [illegible] ನಮ್ಮ ಬಾಬ್ತು ಕಲಿ ಕೋಟೆ [illegible] 8000 [illegible] 1,800 [illegible] ಕಲ್ಲಿಕೋಟೆಯ [illegible] ಪಾಲಕಾಟ್ [illegible] ಬರೆಯುವುದು [1139]

M. K. SUBBEGOWDAH & Co,
Timber Merchants,
240, Kempananjamba Agrahar, Mysore.

BENEFIT YOURSELF AND BENEFIT OTHERS.

National Insurance and Banking Company Ltd, Amritsar

Authorised Capital	Rs	10,00,000
Subscribed Capital Exceeds	„	9,00,000
Paid up „ „	„	1,00,000
Funds Exceed	„	12,00,000
Policy-holders „		75,000

The Company works in accordance with the Indian Assurance Companies and Provident Societies' 1912 and has also given double the initial security to Government [illegible] under the Insurance Act.

[illegible] that the National, of Amritsar, has very popular throughout India? Because, it has got almost all the attractive schemes any other Life Office or Provident Society in India and also new and novel ones besides issues at most favourable rates and on most liberal terms, and distributes rebates in thousands every quarter out of marriages and deaths.

[1?? 15]

WANTED

Active and honest District Superintendents and Agents for every unrepresented district and taluk of Mysore Province and Coorg, on both salary and commission. The post is permanent and our agents are entitled to pension. None but those who can spare whole time, reside in district or taluk head quarters and who are versed in English need apply.

For further particulars and prospectuses, please apply with anna stamp and your previous experience in the line.

M. [illegible] NAGANNAH,
Chief Agent,
Volunteer National Insurance Buildings,
Mysore

“ವೃತ್ತಾಂತ ಪತ್ರಿಕೆ” ಚಂದಾ ನಿರ್ಣಯ.

ಮೈಸೂರಿನಲ್ಲಿ ಇತರ ಕಡೆಗಳಲ್ಲಿಯೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ಒಂದು ವರುಷಕ್ಕೆ (ಅಡ್ವಾನ್ಸು) ರೂ ೧ ೦—೦

ಪತ್ರಿಕೆಯನ್ನು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಳ್ಳುವದರಲ್ಲಿ ಒಂದು ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೧೪—೦

" " " " ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸಗಳನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು.

ಪ್ರಕಟನೆ, ನೋಟೀಸುಗಳ ದರಗಳು.

[illegible] ಪ್ರಕಟನೆ ಅಥವಾ [illegible] ಒಂದು ರೂಪಾಯಿ ಛಾರ್ಜ್ [illegible] ಪ್ರಮಾಣದ ಸ್ಥಳಕ್ಕೂ ಒಂದು ಸಲಕ್ಕೆ [illegible] ಅಪೇಕ್ಷಿಸುವವರು [illegible] ಬಹುದು

[illegible] ಮ್ಯಾನೇಜರ್ ವೃತ್ತಾಂತ ಪತ್ರಿಕೆ, ಮೈಸೂರು

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪ ಕಂಠೀರವ ಚರಿತ್ರೆ

ಇದರಲ್ಲಿ (1) “ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ” ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿ ಹೋಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸಾರಸ್ಯವು ತಾನಾಗಿ ಗೊತ್ತಾಗುವದು.

ಕ್ರಯ —೧ ನೇ ಭಾಗ ೬ ಆಣೆ, ೨ ನೇ ಭಾಗ ೧೦ ಆಣೆ, ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ [5 11]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115 17]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಮಕ್ಕಳು ಬಹಳ ಸಂತೋಷದಿಂದ ತೆಗೆದುಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೩ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

WILLIAM & Co, FORT, BOMBAY.

ಅಮೃತಾಂಜನ. (Regd.)

ಎಲ್ಲ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೆನೋವು ಸೊಂಟನೋವು, ಶೀತ, ಕಜ್ಜಿ, ಗಂಟಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ [illegible] ಖಾತ್ರಿಯಾಗಿ ಗುಣವಾಗುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟಿದ್ದು ನಮ್ಮ ಅಮೃತಾಂಜನ ಬಾಟ್ಲಿ 1ಕ್ಕೆ 0-8-0

ಗಜಕರ್ಣದ ಮುಲಾಮು

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು [illegible] ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು [illegible] ಡಬ್ಬಿ 1ಕ್ಕೆ 0-6-0.

ದಂತಮಂಜನ ೩ ಆಣೆ ನೇತ್ರಾಂಜನ ೩ ಆಣೆ. ಸುಂದರಿತೈಲ ೮ ಆಣೆ [15 17]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ.

ಪಾಕೆಟ್ ಡೈರಿ

ಶ್ರೀ ಸೀತಾರಾಘವ

ಸನ್ 1913 ನೇ ಇಸವಿಯದು

[illegible] ನಂ 1 [illegible] ನಂ 2 [illegible] ನಂ 3 [illegible] ನಂ 4 [illegible] 10 [illegible] 25 ರೂಪಾಯಿಗಿಂತ ಹೆಚ್ಚು ಡೈರಿ [illegible] ತರಿಸಿಕೊಳ್ಳುವವರಿಗೆ ರೂಪಾಯಿಗೆ ೨ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ [136 10]

ವಿವರ—(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕೂ [illegible] (2) [illegible] ಪ್ರತಿಯೊಬ್ಬರೂ ತಿಳಿಯಬೇಕಾದ [illegible] (3) ಕೋರ್ಟ್ [illegible] ಸಂಗತಿ, ಸ್ಟಾಂಪ್ [illegible] (4) ಮದರಾಸ್ ಮತ್ತು [illegible] ಮೈಸೂರು [illegible] ಗವರ್ನ್‌ಮೆಂಟ್ [illegible] ಈ ಹೊಸ ಪ್ರಯತ್ನಕ್ಕೆ [illegible] ಪ್ರೋತ್ಸಾಹ ಅತ್ಯವಶ್ಯ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರ ಚೆಂಗನಡಿ ಅಂಚಿನ ಸೀರೆಗಳು.

ಅವಲ್ ರಹಂ ಕ್ರಯ ರೂ ೨ ೬ ೦   ದುಯಂ ರಹಂ ಕ್ರಯ ರೂ. ೨-೨-೦.



ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂ ದರೆ—ನಮ್ಮಲ್ಲಿನ ಕರಿಯ ಬಣ್ಣದ ನುಣುಪೆ ಚುಂಗಡಿ ಸೀರೆಗಳು ಉಡುವುದಕ್ಕೆ ಘನತೆಯಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ. ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸಲ್ಪವೂ ಬದಲಾಯಿಸುವುದಿಲ್ಲ. ಇದರ ಉದುವ ಮತ್ತು ಹೊದಿಯುವ ಸೆರಗುಗಳು ಸ್ವಲ್ಪವೂ ನತ್ಯಾಸವಿಲ್ಲದೆ. ಬಹು ಸಲುದೀಗೂ ನೀತಿಯು ಉತ್ತಮ ಧಾರಣೆಯಾಗಿ ೧೮ ಮೊಳವಿದೆ. ಸರ್ಕಾರ್ಥ ಒಂದನ್ನು ತರಿಸಿದಲ್ಲಿ ನಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಬರೆಯುವರು.

ನಮ್ಮ ವಿಳಾಸ—ಎ. ಎಸ್. ಭಟ್ಟಾಚಾರ್,
ಸುಂಗುವಾರ್ಕಂ, ಮದರಾಸು.

CHAMBERLAIN'S PAIN BALM.

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು.



೧-೧೫

ಚೆನ್ನೆಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಮಾಂಸಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕದ್ದ ನೋವು, ವಾಯುನೋವು—ಇವುಗಳಿಗೆ ಇದು ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ನಾಯುವಾಗುವುದೂ, ಊದಿಕೊಳ್ಳುವುದೂ, ಕಠಿಣವಾಗಿ ನೆಳೆಯುವ ಬಾಧೆ, ಮಾಂಸಗಳಲ್ಲಿ ಶಿರಿಯುವುದೂ, ಶರೀರ ಕೊಂಕರ ಇರುತ್ತದೆ, ನಿಶ್ಚಿತವಾಗಿ ಇರುವುದೂ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೇ ಬರತಕ್ಕ ಸುಖವು ಅದ್ಭುತವಾದ್ದು. ಮೂಳೆಯೊಳಕ್ಕೆ ಹಾಕಿದರೆ ಒಡನೆಯೇ ನೋವಲ್ಲಾ ಸಂಪೂರ್ಣವಾಗಿ ನಿವಾರಿಸಲ್ಪಡುತ್ತದೆ. ಮುಚ್ಚಿ ಉಜ್ಜುವಾಗಲೇ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುರೋಗ ಪುನಃ ಕಾಣಿಸುವುದಿಲ್ಲ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೆಡುವ ಮಾಲ ಇದು ಅಲ್ಲ.

ಇದು ಎಲ್ಲ ವರ್ತಕರಲ್ಲೂ ಸಿಕ್ಕುವದು. ಚಿಕ್ಕ ಬಾಟಲ್ ೧೦ ರೂಪಾಯಿ. ದೊಡ್ಡ ಸೀಸೆ ೨ ರೂಪಾಯಿ.

HASSAN CAPS.

Special Notice. ವಿಶೇಷ ಸೂಚನೆ

ಹಾಸನದ ಟೋಪಿಗಳು.

ಈ ತಿಂಗಳ ೧ನೇ ತಾರೀಖಿನಿಂದ ೧ ರೂ ೬ ಆ. ಬೆಲೆಯುಳ್ಳ ಟೋಪಿಗಳು ೧ ರೂ. ೪ ಆ. ಗೂ, ೧ ರೂ ೪ ಆ. ಬೆಲೆಯುಳ್ಳ ಟೋಪಿಗಳು ೧ ರೂ. ೨ ಆ. ಗೂ ವಿಕ್ರಯಿಸಲ್ಪಡುವುವು.

... ಟೋಪಿಗಳು ... ೧ ರೂ ೬ ಆ. ಮಾರಲ್ಪಡುವುವು.

... ... [೧-೬-೧]

ನಮ್ಮ ವಿಳಾಸ

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,
ತುಂಕೂರು.

Address
Wesleyan Mission Cap Industry,
Tumkur.

ಸೆಪ್ಟಂಬರ್ ೧೯೧೨ ರಿಂದ ೧೯೧೩ ವರೆಗೆ.

ಬಾಲರ ಪುಷ್ಟಿ

ಸುಖಜನಕವಾದ ಪಥ್ಯಗಳಿಂದಲೂ ಪಡೆದಾಗಿ

SCOTT'S EMULSION ೨-೧೫

(ಸ್ಕಾಟ್ಸ್ ಇಮಲ್ಷನ್)

... ಎಲ್ಲಾ ... ಬೆಳವಣಿಗೆಗೆ ಅವಶ್ಯವಾದ ... ಸಾನಾ ತರದ ಕೆಮ್ಮು ... ಶಕ್ತಿಹೀನತೆಗಳು, ನಾನಾ ವಿಧವಾದ ... ಆದುದರಿಂದ ಇದುವೆ ... ಔಷಧವು ಇದೇ.

ಕೈಸೋಕದ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕ್ರಯವಾಗುವದು.

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,
ಔಷಧಗಳ ಕೆಮಿಸ್ಟರು,
ಲಂಡನ್, ಇಂಗ್ಲೆಂಡ್.

ಈ ನಿಶಾನಿಯುಳ್ಳ ಇದರ ಔಷಧವನ್ನೇ ಕೊಂಡುಕೊಳ್ಳಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

೮೪ ೨೬

... ವಾಸಿಮಾಡಿಕೊಳ್ಳುವವನು ... ಕಾರಣವಿ ... ಹುಟ್ಟಿನ ... ಬವಿಸ್ಸುವುದು, ಕೆಮ್ಮುಗಳು ... ಶೀತಗಳು, ... ಕಡಿವ ... ರೋಗಗಳು ... ಬಹು ... ಮತ್ತು ... ಕಾಯಿಲೆ ... ಅದಕ್ಕೆ ಪ್ರಯೋಗಿಸಿ ... ನಮ್ಮ ... ತಿಳಿಯ ... ವಾಗಿ ... ಉತ್ತಮವಾದ ... ಮಾಡುವ ... ನಿವಾರಣ ... ಮದರಾಸು ... ತುಮಕೂರು.

ಇದೇ ಸೂಕ್ಷವಾದ ರೈಲ್ವೇ ರೆಗ್ಯುಲೇಟರ್ ಜೇಬು ಗಡಿಯಾರ

ಕ್ರಯ ರೂಪಾಯಿ ೧-೧೫-೦

ನಮ್ಮ ಕಂಪನಿಯು ಪ್ರಸಿದ್ಧಿಯಾಗುವುದಕ್ಕಾಗಿ ೬ ರೂಪಾಯಿಯ ಈ ಗಡಿಯಾರವನ್ನು ೫೦೦ ಗಡಿಯಾರಗಳು ಮುಗಿಯುವವರೆಗೆ ಮಾತ್ರವೇ ೧-೧೫-೦ ಆಕ್ಕೆ ಕೊಡುತ್ತೇವೆ ...



... ಈ ಗಡಿಯಾರವು ... ಇದು ... ಹಾಗಲ್ಲ ಇದಕ್ಕೆ ... ವರುಷ ... ವಾರಂಟಿ ... ರೂ ಉಪಯೋಗಿಸತಕ್ಕವರು.

ಪುಷ್ಪಕಾಂತಿ ತೈಲ

ಸೀಸೆ ೧ಕ್ಕೆ ೬ ಆಣೆ ... ತಲೆಗೆ ಇದನ್ನು ಹಚ್ಚಿದರೆ ... ಕೂದಲು ಉದ್ದವಾಗಿ ... ಕಪ್ಪಾಗಿ ... ಹೊಳೆಯುತ್ತದೆ ... ಸುಗಂಧವು ...

ಬಹುಮಾನ   ಬಹುಮಾನ   ಬಹುಮಾನ

ಮೇಲೆ ಹೇಳಿದ ಪುಷ್ಪಕಾಂತಿ ತೈಲವನ್ನು ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ಮೂರು ಗಡಿಯಾರಗಳನ್ನು ಬಹುಮಾನವಾಗಿ ಕೊಡಲ್ಪಡುತ್ತೆ. ಬಹುಮಾನವು ಏನು ... ಪುಷ್ಪಕಾಂತಿ ತೈಲವನ್ನು ... ಗಡಿಯಾರಗಳು ... ಬಹುಮಾನವಾಗಿ ... [೧೫-೧] ನಮ್ಮ ವಿಳಾಸ—

ಜಿ. ಎ. ಪೌಲ್ ಅಂಡ್ ಕಂಪೆನಿ

ನಂಗುಂಬಾಕಂ, ಮದರಾಸು.

ಸೆಪ್ಟಂಬರ್ ಬಹುಮಾನ ವಿನಿಯೋಗ

ಕಳೆದ ಸೆಪ್ಟಂಬರ್ ತಿಂಗಳ ಅಕ್ಟೋಬರ್ ೩೦ನೇ ಸೋಮವಾರ ದಿನ ಈ ಕಳಗಿನ ವಿಳಾಸದಾರರು ಗಡಿಯಾರ ಬಹುಮಾನವನ್ನು ಪಡೆದಿರುತ್ತಾರೆ.

೧ ನೇ ಪುಟ್ಟಣ್ಣಯ್ಯನವರು, ಸ್ಯಾನಿಟರಿ ಇನ್ಸ್‌ಪೆಕ್ಟರ್, ಚಾಮರಾಜನಗರ, ಮೈಸೂರು ಡಿ|

೨ ನೇ| ಸಾವಿತ್ರಮ್ಮ, ... ನಾರಾಯಣಸ್ವಾಮಿಯವರು, ... ಇನ್ಸ್‌ಪೆಕ್ಟರ್, ಅರಸೀಕೆರೆ, ಹಾಸನ ಡಿ|

೩ ನೆಯಂತ್ಮೆಯ, ಸಾಪ್‌ಕೀಪರ್, ಅಮೀನಹಳ್ಳಿ, ... ಮೈಸೂರು ಡಿ|

ಬೇಕಾದವರು ಸಜಸ್ತಿತಿಯನ್ನು ಈ ವಿಳಾಸದಾರರಿಗೆ ಬರೆದು ವಿಚಾರಿಸಿಕೊಳ್ಳಬಹುದು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

೨-೧೫

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಸಹಜಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂತಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ನಡಿವ ವ್ಯಾಪಾರಗಳು ... ಹಾಸನದ ಟೋಪಿ ... ತಯಾರಾಗುವುದು.

ಆದರೆ ಇದು ಬೇಡಿ — (೧) ನಮ್ಮಲ್ಲಿ ... ಟೋಪಿಗಳು ಮಾಡಲ್ಪಟ್ಟ ... (೨) ... ಹಾಸನಕ್ಕೆ ಬರದೆ ... ಒಳ್ಳೆ ಟೋಪಿಗಳಿಗೆ ಬಹಳ ಜನ್ಯ ... ಕಳುಹಿಸುತ್ತೇವೆ.

ಒಳ್ಳೆ ಮಾಲು, ತಕ್ಕಾಗಿ ಬೆಲೆ, ... ಬೇಕಾದವರು, ನಮಗೆ ಬೇಗ ಬರೆದು ತರಿಸಿಕೊಳ್ಳಿ. ... ನಮ್ಮಲ್ಲಿ ದೊರೆಯುವುದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೪ ಆ; ೧ ರೂ. ೬ ಆ, ೧ ರೂ. ೮ ಆ

ಮಕ್ಮಲ್ಲುಳ್ಳ ಟೋಪಿಗಳು ರೂ ೧ ಆ, ರೂ ೧-೧೨

ರೇಷ್ಮೆ ಮುಕ್ಕಯುಳ್ಳ ಟೋಪಿಗಳು ರೂ ೨

ಜಾರಿಡ ಟೋಪಿಗಳು ೧ ರೂ. ೧೨ ಆ., ೧ ರೂ ೮ ಆ; ೧ ರೂ ೬ ಆ

ಮುಸಲ್ಮಾನರ ಟೋಪಿಗಳು ೧ ರೂ ೮ ಆ, ೧ ರೂ. ೬ ಆ

ಕೂಸುಗಳ ಟೋಪಿ, ಪೂರ್ತಿ ಮೊಜೋಡು, ಅಲ್ಪ ಮುಸೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದಾಕ್ಷಣವೆ ಕಳುಹಿಸುವೆವು. ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಪಾಕೆಟ್ ವಾಚ ಗಡಿಯಾರ   ಬಹು ಸುಲಭ ಕ್ರಯ

ಪಾಕೆಟ್ ಲಿವರ್ ವಾಚು

ಇದರ ಕ್ರಯ ೬ ಬಹುಮಾನಗಳ ಸಮೇತ ೩ ರೂ ಮಾತ್ರ

೬ ವರ್ಷದ ಗ್ಯಾರಂಟಿ



ಇದು ... ತಪ್ಪದೆ ... ರೂಪಾಯಿ ... ನಮ್ಮ ... ಮತ್ತು ... ಜಾವಾಗಿ ಬಂದಿರುತ್ತೆ. ಈಗ ಕಾಣಿಕೆಯಾಗಿ ... ನಮ್ಮ ತೀರ್ಮಾನಕ್ಕಾಗಿ ... ವರಮಾನ ... [೧೫-೩]

ಇದರ ಆರು ಬಹುಮಾನಗಳು ಇವುಗಳು.

೧ ಸುಂದರವಾದ ಗಡಿಯಾರದ ಸರಪಳಿ ... ಬಹು ...

೨ ... ಉಂಗುರ

೩ ... ಸ್ಟೀಲ್ ...

ಈ ಕೆಳಗಿನ ವಿಳಾಸಕ್ಕೆ ಬರೆದು ... ನಮ್ಮ ವಿಳಾಸ

... ಆರ್. ವೆಂಕಟೇಶ್ವರಯ್ಯರ್ ಅಂಡ್ ಕಂಪೆನಿ,

ನಂಬರ್ ೭ ಕೋಟೆ ವೆಂಕಟಾಚಲಪ್ಪಯರ್ ಬೀದಿ, ಮದ್ರಾಸು.

ಕುಂತಳಾನಂದ ತೈಲವು

147 7

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಪತ್ರಿಗಳು ಮತ್ತು ಸರ್ಟಿಫಿಕೇಟುಗಳನ್ನೂ ಪಡೆದ ಮುಖ್ಯವಾದ ಎಣ್ಣೆ ವರ್ತಕರು ಮತ್ತು ಅನೇಕರಾದ ದೊಡ್ಡ ಮನುಷ್ಯರು ಇದರ ಉತ್ತಮೋತ್ತಮ ಗುಣಗಳನ್ನು ಹೇಳಿರುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರಿಯಾಗಿಯೂ ಬೆಳೆಯಿಸಿ ನಿದ್ದೆಯನ್ನು ತರಿಸುತ್ತದೆ ಮತ್ತು ತಲೆ ನೋವನ್ನು ಹೋಗಲಾಡಿಸಿ ತಲೆಯನ್ನು ತಂಪಾಗಿ ಇಡುತ್ತದೆ.

ಇದು ಶೀತವಲ್ಲ ... ಬೆಲೆ ಬಾಟಲಿ ೧ಕ್ಕೆ ರೂ ೧ ... ಬುಡ್ಡಿಯ 10 ಆಣೆ ...

ಪ್ರತ್ಯೇಕವಾಗಿ ತಯಾರಿಸುವವರು:—ಬಿ. ಎಸ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳಬೇಡಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವುದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಚೆಲುವಾದ ಕೂದಲು ಸ್ತ್ರೀಯರಿಗೆ ಬಹಳ ಸೌಂದರ್ಯವನ್ನು ಕೊಡುತ್ತದೆ ... ಅವುಗಳು ಉದ್ದವಾಗಿಯೂ, ದಟ್ಟವಾಗಿಯೂ ಇರಬೇಕು.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಇದು ಶಾಸ್ತ್ರೀಯವಾದ ತಿಳುವಳಿಕೆಯಿಂದ ತಯಾರಿಸಲ್ಪಟ್ಟಿದೆ ... ಕೂದಲುಗಳು ಹೆಚ್ಚಾಗಿ ಬೆಳೆಯುವುವು.

ಕಾಮಿನಿಯಾ ತೈಲ— ... ಕೂದಲು ಉದುರುವುದನ್ನು ನಿಲ್ಲಿಸಿ ... ತಲೆ ನೋವನ್ನು ಹೋಗಲಾಡಿಸುತ್ತದೆ, ಮತ್ತು ನಿದ್ದೆ ಬರಿಸುತ್ತದೆ.

ಬೆಲೆ 1 ಸೀಸೆಗೆ ರೂ 1 0 0 ಟಪಾಲು ವೆಚ್ಚ 0 4 0 ಬೇರೆ ಕೊಡಬೇಕು. 3 ಸೀಸೆಗಳಿಗೆ ರೂ. 2 10 0 ಟಪಾಲು ವೆಚ್ಚ 0 7 0

ಈ ತೈಲವು ಇಲ್ಲಿ ದೊರೆಯುತ್ತದೆ ...

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್.)— ... ಬೆಲೆ ರೂ 1-8-0.

ದಿಲ್-ಬಹಾರ್ (ರೆಜಿಡ್.)— ... ರೂ 1-8-0.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ಸೂಚನೆ:—ನಮಗೆ ಎಲ್ಲಾ ಊರುಗಳಲ್ಲಿ ಏಜಂಟರು ಬೇಕು.

[91 1]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ, ಜುಮ್ಮಾಮಸೀದ್, ಬೊಂಬಾಯಿ.

ಹತ್ತಿಯ ತುಪ್ಪ.

ಶ್ರೇಷ್ಠವಾದ ಹತ್ತಿಯ ಬೀಜದಿಂದ ತೆಗೆದು ರಸಾಯನ ಶಾಸ್ತ್ರ ಕ್ರಮದಿಂದ ಶುದ್ಧಿಮಾಡಲ್ಪಟ್ಟು, ಘನ ಡಾಕ್ಟರುಗಳು ಪರೀಕ್ಷೆಮಾಡಿ ಶುದ್ಧವಾದದ್ದೆಂದೂ ಆರೋಗ್ಯಕರವಾದದ್ದೆಂದೂ ಹೇಳಿರುವ, ಅಡಿಗೆಗೆ ತುಪ್ಪಕ್ಕೆ ಬದಲಾಗಿ ಅನೇಕರು ಉಪಯೋಗಿಸುತ್ತಿರುವ

'ಹತ್ತಿಯ ತುಪ್ಪವು ಮಾರಾಟಕ್ಕೆ ಸಿದ್ಧವಾಗಿದೆ.

ಗೂಡ ಹೆಚ್ಚು ಬೆಲೆ ಕಡಿಮೆ. ಡಬ್ಬಿ 1 ಕ್ಕೆ 12 ರೂಪಾಯಿ. ಪಂಥೀಗೆ 1-2-0 ... ಬದಲು ಉತ್ಕೃಷ್ಟವಾಗಿದೆ

[161-1]

ಹತ್ತಿಯ ... ಮತ್ತು ... ಅಡಿಗೆಗೂ ... ಉಪಯೋಗಿಸಲ್ಪಡುವುದಕ್ಕೂ ...

ದಿ ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್ 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ಮೆ ಆರ್ ... ಮೈಸೂರು ... ಹಾಸನ, ಚಿಕ್ಕಮಗಳೂರು ... ಈ ಸ್ಥಳಗಳಲ್ಲಿ ... ಕ್ರಯಕ್ಕೆ ದೊರೆಯುವುದು

ಅಕ್ಟೋಬರು 20 ರಿಂದ ನವೆಂಬರ್ 20 ರ ವರೆಗೆ ಮಾತ್ರ!

... (1) ... ಗಡಿಯಾರ ... ರೂ 3-1 ...

... ಗಡಿಯಾರ ರೂ 7. (5) ... ಗಡಿಯಾರ ರೂ 5. (4) ... ಗಡಿಯಾರ ರೂ 7. (6) ... ಗಡಿಯಾರ ರೂ 7. (6) ... ಸಂಗೀತ ಬಾರಿಸುವ ಗಡಿಯಾರ ರೂ 3-1-0 (7) 30 ವರ್ಷಗಳವರೆಗೂ ... ರೂ 3-8-0 ... ರೂ 2 ... ರೂ 1-1-0 (8) ... ರೂ 2-4-0 ... ರೂ 3-1 (9) ... ತೈಲ ... ಸೀಸೆ 1 ಕ್ಕೆ ... ಡಿಸೆಂಬರ್ ಆಖೈರಿನಲ್ಲಿ 1, 2, 3 ನೆಯ ನಂಬರು ಗಡಿಯಾರಗಳನ್ನು ... ಬಹುಮಾನವಾಗಿ ಕೊಡುವೆವು.

[120-15]

ವಿಳಾಸ:—ವೆಂಕಟಾಚಲಂ ಕಂಪೆನಿ, ಫೈರೋಸ್, ಪೋಸ್ಟ್ ಮದ್ರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದರೆ—ಎಂದರೆ, ನಿನಗೆ ಯಾವ ರೋಗವೂ ಉಂಟಾಗಿರಲಿ ... ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ... ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್ ರವರ ಡಿನ್ನರ್ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ... ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(ಇದು ಅಸಲು ಮಾದರಿ)

... ಮಲಬದ್ಧತೆಯಿಂದ ... ಪಿತ್ತಕೋಶ ... ಅಜೀರ್ಣ, ಅಗ್ನಿಮಾಂದ್ಯ, ವಾಯು, ಅರುಚಿ ... ತಲೆನೋವು ... ಗುಳಿಗೆಗಳು ... ಆರೋಗ್ಯವನ್ನುಂಟುಮಾಡುವುವು

[12-9]

ಬೆಲೆ:—ಸೀಸೆ 1 ಕ್ಕೆ ... ಆಣೆ ... ಬುಡ್ಡಿಗಳಿಗೆ ೬.೦ ... ಔಷಧ ವ್ಯಾಪಾರಿಗಳ ಬಳಿ ... ದೊರೆಯುವುದು. ಅಥವಾ ಡಾಕ್ಟರ್ ... ಬೊಂಬಾಯಿ—ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

11—10—1912 ರಿಂದ 18—10—1912 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	17	14	0	0
ಮೈಸೂರು	,,	6	0	0	0
ಬೆಂಗಳೂರು ಡಿಸ್ಟ್ರಿಕ್ಟು		57	36	0	0
ಮೈಸೂರು	,,	34	12	0	0
ಕೋಲಾರ್	,,	0	0	46	25
ಕೋಲಾರ್ ಚಿನ್ನದ ಗಣಿಗಳು		32	33	9	0
ತುಮಕೂರು ಡಿಸ್ಟ್ರಿಕ್ಟು		2	2	16	8
ಹಾಸನ	,	3	1	0	0
ಚಿತ್ರದುರ್ಗ	,	0	0	89	43
ಕಡೂರ್	,,	11	5	0	0
ಶಿವಮೊಗ್ಗ	,	12	5	0	1
	ಜುಮ್ಲಾ	177	108	141	77

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೇ ಶರದೃತೌ ಆಶ್ವೀಜ ಬಹುಳ ಚತುರ್ದಶಿ ಶುಕ್ರವಾರದಿಂದ ಕಾರ್ತೀಕ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ನವಂಬರ್

ತಾ	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ವೃಶ್ಚಿಕ ತೇದಿ
8	ಶುಕ್ರ	ಚತುರ್ದಶಿ	1-56	ಸ್ವಾತಿ	15-7	24
9	ಶನಿ ,,	ಅಮಾವಾಸೆ	1-28	ವಿಶಾಖ	15-6	25
10	ಭಾನು ‡	ಪಾಡ್ಯಮಿ	0-0	ಅನೂರಾಧ	16-13	26
11	ಸೋಮ †	ಬಿದಿಗೆ	0 5	ಜ್ಯೇಷ್ಠ	18-28	27
12	ಮಂಗಳ *	ತದಿಗೆ	1-18	ಮೂಲ	52-16	28
13	ಬುಧ ,,	ಚೌತಿ	1-50	ಪೂರ್ವಾಷಾಢ	56-58	29
14	ಗುರು §	ಪಂಚಮಿ	7 26	ಉತ್ತರಾಷಾಢ	60-0	30

§ ಸರ್ವತ್ರ ಅಮಾವಾಸ್ಯೆ, ಕೇದಾರೇಶ್ವರವ್ರತ, ಮಳೆ ನಕ್ಷತ್ರ—ವಿಶಾಖೆ 2 ನೇ ಪಾದ ,, ಬಲೀಂದ್ರಪೂಜಾ, ವೃಶ್ಚಿಕೆ 4 ಗ್ರಹಾಃ ಚಂ, ಬು, ಗು, ಶು. ‡ ದೀಪಾವಳಿ, ಕಾಮಧೇನು ಪೂಜಾ, ಚಂದ್ರದರ್ಶನಂ, ಜಿಲ್ಲೆ ಚಾರ್ಟ್ 1. † ಕಾರ್ತೀಕ ಸೋಮವಾರ * ಮಳೆ ನಕ್ಷತ್ರ—ವಿಶಾಖೆ 3 ನೇ ಪಾದ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	ರೂ	೧೭-೭-೦	೧೭ ೮-೦
ಕೆಂಬೂತಿ ಅಕ್ಕಿ ಅವಲ್		೧೭-೮-೦	೧೭-೧೨-೦
,, ದುಯಂ		೧೭ ೦-೦	೧೭-೦-೦
ಜಾಪತ್ರಿಣಿ ಅಕ್ಕಿ		೧೭-೦-೦	೧೭-೪-೦
ಸಣ್ಣಕ್ಕಿ ಅವಲ್		೧೮-೮-೦	೧೮ ೮ ೦
,, ದುಯಂ		೧೮-೦-೦	೧೭-೮-೦
ಕೊಗರಿ ಬೇಳೆ ಅವಲ್ ಪಲ್ಲ ೧ಕ್ಕೆ		೧೪-೮-೦	೧೪-೮-೦
,, ದುಯಂ ,,		೧೨-೧೨-೦	೧೨-೮-೦
ಹೈಕ ರಾಗಿ ಪಲ್ಲ ೧ಕ್ಕೆ		೭-೧೨-೦	೭-೮-೦
ಕಾರ್‍ರಾಗಿ ,,		೭-೦-೦	೭-೦-೦
ಜೋಳ ,,		೭-೦-೦	೭-೪-೦
ಹಲಸಂದೆ ಪಲ್ಲ ೧ಕ್ಕೆ		೧೧-೦-೦	೧೪-೧೨-೦
ಬೇಳೆ ಅವರೆ ,,		೧೧-೦-೦	೧೧ ೦ ೦
ಹೆಸರು ,,		೧೪-೮-೦	೧೪-೦-೦
ಉದ್ದು ,,		೧೬-೦-೦	೧೬ ೦-೦
ಕಡಲೆ ,,		೧೨-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೨-೪ ೦	೨೪-೦ ೦
ಹುರುಳಿ ಪಲ್ಲ ೧ಕ್ಕೆ		೬-೮-೦	೭-೨-೦
ಹರಳು ೧೨೭ ಸೇರಿಗೆ		೧೪-೦-೦	೧೪-೦-೦
ಸೀಗೇಕಾಯಿ ಮೂ ೧ಕ್ಕೆ		೪-೪-೦	೪-೮-೦
ಮೆಣಸಿನಕಾಯಿ ,,		೪-೦-೦	೪-೪-೦
,, ದುಯಂ		೨ ೮-೦	೨ ೧೨-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫-೮-೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೧೨-೦	೬-೬-೦
ಹರಳೆಣ್ಣೆ ,, ,,		೫ ೮-೦	೬-೦-೦
ಕೊತ್ತುಂಬರಿ ಪಲ್ಲ ೧ಕ್ಕೆ		೫-೦-೦	೫-೪-೦
ಉಪ್ಪು ,, ,,		೬-೦-೦	೬-೨-೦
ಹುಣಸೇ ಹಣ್ಣು ಮಣ ೧ಕ್ಕೆ		೧-೪-೦	೧-೪-೦
,, ಹಳೇದು ,,		೧-೦-೦	೧-೨-೦
ತುಪ್ಪ ಮೂ ೧ಕ್ಕೆ		೧೭-೦ ೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೦-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬-೦-೦	೬-೦-೬
ಅಳಲೇಕಾಯಿ ಮೂ ೧ಕ್ಕೆ		೦-೮-೦	೧-೦-೦
ಅಂಟ್ವಾಳದಕಾಯಿ ಮೂ ೧ಕ್ಕೆ		೦-೧೨-೦	೧-೮-೦
ಟನ್ನ (ಪೌಂಡ್) ಕೆಂಪು		೧೫-೮-೦	೧೫ ೮-೦
,, ,, ಪಸಿಮೆ		೧೫ ೧೪-೬	೧೫-೧೪-೦
,, ,, ಗಟ್ಟಿ ಕೋಲ ೧ಕ್ಕೆ		೨೪-೪-೦	೨೪-೨-೦
ಬೆಳ್ಳಿ ಗಟ್ಟಿ ಕೋಲ ೧೦೦ಕ್ಕೆ		೮೧-೦-೦	೮೧-೦-೦

ವೃತ್ತಾಂತ ಪತ್ರಿಕೆ.

ಸನ್ ೧೯೧೨ನೇ ಇಸವಿ ನವಂಬರ್ ತಾ ೭ನೇ ಗುರುವಾರ

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಈ ವರುಷ ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಚರ್ಚೆಗಳು ಬಹು ದೀರ್ಘವಾಗಿಯೂ, ವಿಶೇಷ ಉತ್ಸಾಹದಿಂದಲೂ, ಎತರಣೆಯಾಗಿಯೂ ನಡೆದುವು; ಸರ್ಕಾರಕ್ಕೂ ಪ್ರಜೆಗಳಿಗೂ ಇರುವ ಪರಸ್ಪರವಾದ ಭಕ್ತಿ ಪ್ರೀತಿ ಅನುರಾಗಗಳು ಬಹುಮಟ್ಟಿಗೆ ವೃದ್ಧಿಹೊಂದಿದವೆಂದು ತಿಳಿಸಲು ಸಂತೋಷಪಡುತ್ತೇವೆ. ಮೆಂಬರುಗಳು ಸಭೆಯಲ್ಲಿ ಚರ್ಚೆ ಮಾಡಿದ ವಿಷಯಗಳನ್ನೂ ಅವುಗಳಿಗೆ ದಿವಾನರವರು ಅಪ್ಪಣೆ ಕೊಡಿಸಿರುವ ಜವಾಬುಗಳನ್ನೂ ಬಹುಮಟ್ಟಿಗೆ ಸಂಕ್ಷೇಪಿಸಿ ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟಮಾಡಿರುತ್ತೇವೆ. ಉಳಿದ ಚರ್ಚೆಗಳನ್ನೂ ಜವಾಬುಗಳನ್ನೂ ಮುಂದಿನ ವಾರ ತಿಳಿಸಬೇಕೆಂದಿರುವೆವು.

ಪ್ರತಿ ವಿಷಯದಲ್ಲೂ ನಡೆದ ಚರ್ಚೆಗಳನ್ನೆಲ್ಲಾ ಸಂಪೂರ್ಣವಾಗಿ ಬರೆದು ಪ್ರಕಟಿಸುವುದಾದರೆ ಇನ್ನೂರು ಪುಟಗಳಿಗೆ ಕಡಿಮೆಯಾಗದಷ್ಟು ದೊಡ್ಡ ಪುಸ್ತಕವಾದೀತು. ಪ್ರತಿನಿಧಿಗಳು ಈ ಸಲ [illegible] ಒಂದು ನಾಲ್ಕೈದು ವಿಷಯಗಳನ್ನು ಮಾತ್ರ ಸೂಚಿಸಿದ್ದರೆ ಚರ್ಚೆಗಳು ಸಂಪೂರ್ಣವಾಗಿಯೂ, ಸಮರ್ಪಕವಾಗಿಯೂ ಜರುಗಬಹುದಾಗಿತ್ತು. ಸಂಸ್ಥಾನಾದ್ಯಂತ ವ್ಯವಹರಿಸುವ ಸಾಮಾನ್ಯ ವಿಷಯಗಳು 111 ಇದ್ದುದಲ್ಲದೆ, ಡಿಸ್ಟ್ರಿಕ್ಟ್‌ವಾರು ಅನ್ವಯಿಸುವ ಸ್ಥಳೀಯ ವಿಚಾರಗಳು 177 ಇದ್ದುವು. ಇವನ್ನೂ ತೃಪ್ತಿಕರವಾಗಿ ಚರ್ಚಿಸಬೇಕಾದರೆ ಎರಡು ತಿಂಗಳಾದರೂ ಹಿಡಿದೀತು. ಆದರೂ ಈ ಸಲ ಪ್ರತಿನಿಧಿಗಳು ಚರ್ಚೆಗಳನ್ನು ಗಂಭೀರವಾಗಿಯೂ, ವಿವೇಕದಿಂದಲೂ, ಪ್ರಜಾಹಿತಚಿಂತನೆಯಿಂದಲೂ ನಡಿಸಿರುತ್ತಾರೆಂದೂ, ದಿವಾನರವರು ಸಾವಧಾನದಿಂದಲೂ ಪ್ರೀತಿಪೂರ್ವಕವಾಗಿಯೂ ಲಾಲಿಸಿ, ಹಲವು ವಿಷಯಗಳಿಗೆ ಉಚಿತವಾದ ಹುಕುಮನ್ನು ದಯಪಾಲಿಸಿ ಪ್ರತಿನಿಧಿಗಳ ಪ್ರಾರ್ಥನೆಯನ್ನು ನೆರವೇರಿಸಿ ಕೊಟ್ಟಿರುತ್ತಾರೆಂದೂ ಸಂತೋಷಪಡುತ್ತೇವೆ.

[illegible] ಪ್ರತಿನಿಧಿಯವರು ಪತ್ತರಮೂರು ನಡಿಸುವಾಗ [illegible] ವ್ಯಕ್ತಿಗಳನ್ನು [illegible] ಮಾತ್ರ ತಮ್ಮ [illegible] ರಾತ್ರಿ [illegible] ಜೈಲ್ [illegible] ಸರ್ಕಾರದವರು [illegible] ಪ್ರಾರ್ಥನೆಯು [illegible] ಕೂಡದ [illegible] ಬಲವಾದ ಪ್ರವಾದವನ್ನು ತಕ್ಕಮಟ್ಟಿಗೆ [illegible] ವಿರದಾಯದಾಗಿ, [illegible] ಸರ್ಕಾರದವರ [illegible] ಸಂಸ್ಥಾನದಲ್ಲಿ [illegible] ಪ್ರಶಸ್ತವನ್ನು ಹಿಡಿದು [illegible] ವ್ಯತಿರಿಕ್ತಗಾರರು ವಕೀಲರನ್ನಿಟ್ಟು ಆ ಕೋರ್ಟಿನಲ್ಲಿ ಮೊಕದ್ದಮೆ ನಡಿಸುವಂತೆ ಮೊದಲಿದ್ದ ಪದ್ಧತಿಯನ್ನು [illegible] ಬೇಕೆಂಬ [illegible]ವನ್ನು ಗವರ್ನ್‌ಮೆಂಟಿನವರು ಯೋಚಿಸತಕ್ಕದ್ದಾಗಿದೆ. [illegible] ರಾಜಾದಾಯವನ್ನು ಹೆಚ್ಚಿಸುವುದಕ್ಕಾಗಿ ಬಹು ಬೆಲೆಯುಳ್ಳ ಮರಗಳನ್ನು ಕಡಿದು [illegible]ತ್ತಾರೆಂದೂ, ಈ [illegible] ಕಂಟ್ರಾಕ್ಟು ಕೊಟ್ಟು [illegible] ನಷ್ಟಕರವೆಂದೂ, ಕಾಡುಗಳು ಕಡಿಮೆಯಾದರೆ ಮಳೆಗಾಲವೂ ಕಡಿಮೆಯಾಗುವುದೆಂದೂ ಮೆಂಬರುಗಳು ಆಕ್ಷೇಪಣೆ ಮಾಡಿದರು. ಪ್ರಜಾಪಾಲನೆಯಲ್ಲಿ ಪ್ರಜೆಗಳ ಸಂರಕ್ಷಣೆಯೂ ಸೇರಿಕೊಂಡಿದೆಯಾದಕಾರಣ [illegible] ಪ್ರಜೆಗಳು ಕ್ರಮೇಣ [illegible]ತ್ತಿರುವರೆಂಬ [illegible] ಸಂಗತಿಯನ್ನು ಸರ್ಕಾರದವರು ಸವಿಸ್ತಾರವಾಗಿ ಪರಿಶೋಧನೆ ಮಾಡಿಸಿ ಪರಿಹಾರವನ್ನು ಕಲ್ಪಿಸಬೇಕಾಗಿದೆ. ಈ ವಿಚಾರವು ಈ ಸಲ ಸಭೆಯಲ್ಲಿ ಚರ್ಚೆಯಾದಾಗ ಸೀನಿಯರ್ ಸರ್ಕಾರವರೂ, ದಿವಾನರವರೂ ಜವಾಬು ಕೊಟ್ಟಿರುವುದನ್ನು [illegible] ಪ್ರಜೆಗಳು ಓದಿಕೊಂಡು, ತಕ್ಕ ಪರಿಹಾರಗಳನ್ನು ಕೂಡಿದ ಮಟ್ಟಿಗೂ ತಾವೇ ಕಲ್ಪಿಸಿಕೊಳ್ಳುವ ಮುತುವರ್ಜಿ ಮಾಡುವರೆಂದು ನಿರೀಕ್ಷಿಸುತ್ತೇವೆ.

ತಂತಿಗಳಿಲ್ಲದೆ ವಿದ್ಯುಚ್ಛಕ್ತಿಯ ಸಹಾಯದಿಂದ ವರ್ತಮಾನಗಳನ್ನು ಕಳುಹಿಸುವುದು.

ರೈಲ್ ರಸ್ತೆಗಳ ಒಂದು ಪಾರ್ಶ್ವದಲ್ಲಿ ಎತ್ತರವಾದ ಕಂಬಗಳ ಮೇಲೆ ತಂತಿಗಳನ್ನು ಎತ್ತಿಕಟ್ಟಿ, ಅವುಗಳ ಮೂಲಕ ವಿದ್ಯುಚ್ಛಕ್ತಿಯ ಸಹಾಯದಿಂದ ವರ್ತಮಾನಗಳನ್ನು ಒಂದು ಸ್ಟೇಷನಿನಿಂದ ಇನ್ನೊಂದು ಸ್ಟೇಷನಿಗೆ ಕಳುಹಿಸುವುದೂ ಅಲ್ಲಿಂದ ವರ್ತಮಾನಗಳನ್ನು ತರಿಸಿಕೊಳ್ಳುವುದೂ ಸಾಧಾರಣವಾಗಿ ಈಗ ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆಯಷ್ಟೆ. ತಂತಿಗಳ ಮೂಲಕ ಹೀಗೆ ವರ್ತಮಾನಗಳನ್ನು ಕಳುಹಿಸುವುದೂ, ತರಿಸುವುದೂ ಅಸಾಧ್ಯವಾದ ಪಕ್ಷಕ್ಕೆ ನಿರಪಾಯವಾಗಿ ರೈಲ್ ಗಾಡಿಗಳಲ್ಲಿ ಪ್ರಯಾಣ ಮಾಡುವುದೂ ಅಸಾಧ್ಯವಾಗುವುದು. ಆದರೆ ವಿದ್ಯುಚ್ಛಕ್ತಿಯೆಂಬ ಭಟನು ತಂತಿಗಳ ಮೂಲಕ ಒಂದು ಸ್ಟೇಷನಿನಿಂದ ಅನೇಕ ಮೈಲುಗಳ ದೂರದಲ್ಲಿರುವ ಇನ್ನೊಂದು ಸ್ಟೇಷನಿಗೆ ನಿಮಿಷಾರ್ಧದಲ್ಲಿ ಸುದ್ದಿಯನ್ನೊಯ್ಯುವನು ಸುಲಭಸಾಧ್ಯನಾಗಿರುವುದರಿಂದ ರೈಲು ಪ್ರಯಾಣವು ಸಾಧಾರಣ ಅಪಾಯಗಳಿಲ್ಲದೆ ಸುಖಕರವಾಗಿರುವುದು. ಆದರೆ ಈ ನವನಾಗರಿಕತೆಯ ಕಾಲದಲ್ಲಿ ಶಾಸ್ತ್ರಶೋಧಕರಾದವರು ಹೊಸ ಹೊಸ ಯುಕ್ತಿಗಳನ್ನು ನೂತನವಾಗಿ ಕಂಡುಹಿಡಿದು ಪ್ರಯೋಜನವಾದ ಕೆಲಸಗಳನ್ನು ಬಹಳ ಸುಲಭೋಪಾಯಗಳಿಂದ ಜರುಗಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಹೇಗೆಂದರೆ, ಕಂಬಗಳನ್ನು ನಿಲ್ಲಿಸಿ ಅವುಗಳ ಮೇಲೆ ತಂತಿಗಳನ್ನು ಎಳೆದು ಕಟ್ಟುವ ಕಷ್ಟವು ಸುಲಭವಲ್ಲ. ಬಹಳ ಖರ್ಚೂ ಶ್ರಮವೂ ಬೇಕಾಗಿದೆ. ಆದುದರಿಂದ ಈಗ ತಂತಿಗಳ ಗೋಜಿಲ್ಲದೆ ಬರೀ ವಿದ್ಯುಚ್ಛಕ್ತಿಯ ಸಹಾಯದಿಂದ ವರ್ತಮಾನಗಳನ್ನು ಕಳುಹಿಸುವ ಉಪಾಯವು ಲೋಕದ ಕೆಲವೆಡೆಗಳಲ್ಲಿ ಹರಡುತ್ತಾ ಇದೆ. ಈ ಯುಕ್ತಿಯನ್ನು ಕಂಡುಹಿಡಿದ ವೃತ್ತಾಂತವನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇವೆ.

ಪ್ರ —ಮಲೆನಾಡಿನಲ್ಲಿ ಚೌಗು ಹರಿಯುವ ಕಡೆಯಿಂದ 10 ಗಜ ದೂರ ಜಮೀನನ್ನು ಸಾಗುವಳಿಗೆ ಕೊಡಕೂಡದೆಂದು 1912 ನೇ ಮಾರ್ಚ್ ತಿಂಗಳಲ್ಲಿ ಹುಕುಂ ಕೊಡಲಾಗಿದೆ ತರಿ ಬಾಗಾಯತಿಗೆ ನೀರಿನ ಆಸರೆ ಇಲ್ಲದಿದ್ದರೆ ಬೆಳೆಯಾಗುವುದಿಲ್ಲ. ಕೆಲವು ಸ್ಥಳಗಳಲ್ಲಾದರೂ ಈ ಹುಕುಮನ್ನು ಜಾರಿಗೆ ತರಕೂಡದು ಉ —ಈ ಹುಕುಂ ರದ್ದು ಮಾಡಲಾರೆವು ಅರ್ಜಿ ಬರೆದುಕೊಂಡರೆ ಜಮೀನ್ ಅಜಮಾಯಿಷಿಯಿಂದ ಸೂಕ್ತತೋರಿದ ಹುಕುಂ ಕೊಡಬಹುದು

ಪ್ರ —ಚಿಕ್ಕಬಳ್ಳಾಪುರ, ಮೈಸೂರು, ಹುಣಸೂರು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಈ ಮೊದಲಾದ ಹಲವು ತಾಲ್ಲೂಕುಗಳಲ್ಲಿ ಕಾಡು ಹಂದಿಗಳ ಕಾಟವನ್ನು ರೈತರು ತಡೆಯಲಾರದೆ ಬಹಳ ಸಂಕಟಪಡುತ್ತಾರೆ ಪೈರು ಪಚ್ಚೆಗಳನ್ನು ಹಂದಿಗಳು ನುಗ್ಗಿ ತಿಂದು ಹಾಳುಮಾಡುವವು ಅಂಥವುಗಳನ್ನು ಕೊಲ್ಲಬಹುದೆಂದು ಸರ್ಕಾರದವರು ಅವಕಾಶ ಕೊಟ್ಟಿದ್ದರೂ ಗ್ರಾಮಾಂತರಗಳಲ್ಲಿ ಬಂದೂಕು ಹಿಡಿಯತಕ್ಕವರು ಸಿಕ್ಕುವುದು ಅಪರೂಪ ರೈತನು ಬಂದೂಕು ಕೊಂಡು ಉಪಯೋಗಿಸುವಷ್ಟು ಐಶ್ವರ್ಯವಂತನಲ್ಲ ಹಗಲೆಲ್ಲಾ ಹೊಲ ಗದ್ದೆ ತೋಟಗಳಲ್ಲಿ ದುಡಿದು ರಾತ್ರಿ ನಿದ್ದೆಗೆಟ್ಟು ಪೈರು ಪಚ್ಚೆಯನು ಕಾಯುತ್ತಿರಬೇಕಾಗಿದೆ ಈ ಪ್ರಾಣಿಗಳ ಹಾವಳಿಯನ್ನು ತಪ್ಪಿಸಿಕೊಟ್ಟರೆ ಉಳಿದ ಪೈರು ರೈತನ ಕ್ಷೇಮಕ್ಕಾಗುತ್ತದೆ ಉ —ಒಳ್ಳೇದು, ಯೋಚಿಸಿ ಪರಿಹಾರವನ್ನು ಕಲ್ಪಿಸುತ್ತೇವೆ

ಪ್ರ —ಕಂದಾಯದ ರಸೀತಿಯನ್ನು ತ್ರಿಪ್ರತಿಯಾಗಿ ಮಾಡಿಕೊಟ್ಟು, ಕಂದಾಯ ಕೊಡುವವನಿಗೆ ಒಂದು, ಖಜಾನೆಗೆ ಒಂದು, ಶ್ಯಾನುಭೋಗನ ದಾಖಲೆಗೆ ಒಂದು ಇರುವಂತೆ ಮಾಡಿದರೆ ಬಹಳ ಕ್ಷೇಮವಾದೀತು ಉ —ಈ ವಿಚಾರ ಸರ್ಕಾರದವರ ಆಲೋಚನೆಯಲ್ಲಿದೆ

ಪ್ರ —ಪಟ್ಟೆಗಳನ್ನು ಮೊದಲಿದ್ದ ರೀತಿಯಲ್ಲೇ ಇಟ್ಟುಕೊಡಬೇಕು ಉ —ಹೊಸ ನಮೂನೆಯ ಪಟ್ಟೆಗಳನ್ನು ಸರ್ಕಾರದವರು ಈಗತಾನೇ ತಯಾರ್ ಮಾಡಿದ್ದಾರೆ ಅದನ್ನು ಇಷ್ಟರಲ್ಲೇ ಜಾರಿಗೆ ತರುತ್ತಾರೆ

ಪ್ರ —ಗ್ರಾಮದ ಲೆಕ್ಕಗಳ 1 ನೇ ನಂಬರ್ ತಖ್ತೆಯಲ್ಲಿ ಪ್ರತಿ ಸರ್ವೆ ನಂಬರಿನ ಅನುಭವದಾರರ ಹೆಸರನ್ನು ಬರೆದಿಡುವಂತೆ ಹುಕುಂ ಆಗಬೇಕು ಉ —ಇದು ಆಗಲಾರದು

ಪ್ರ —ಸರ್ವೆ ಆಗ ಆಕಾರಕೆಂದು ಅನುಭವದಲ್ಲಿರುವ ಉಡುಸಳ ಜಮೀನನ್ನು ಹಿಸ್ಸೆ ಮತ್ತು ಪಾಲುದಾರರು ಸಮ್ಮತಿಸಟ್ಟು ಕೇಳಿಕೊಂಡರೆ ಭಾಗಮಾಡಿಕೊಡುವಂತೆ ಹುಕುಂ ಆಗಬೇಕು ಉ —ಆಗಬಹುದೆಂದು ಹುಕುಂ ಕೊಟ್ಟಿದೆವೆ [ಈ ಹೊಸ ಹುಕುಮನ್ನು ಸಭೆಯಲ್ಲಿ ಓದಿಸಿ ಮೆಂಬರುಗಳಿಗೆ ಅರ್ಥ ಹೇಳಿದಾಗ ಎಲ್ಲರೂ ಸರ್ಕಾರದವರನ್ನು ವಂದಿಸಿದರು]

ಪ್ರ —ಗ್ರಾಮದ ನಕ್ಷೆಯನ್ನು ಪಟೇಲರಿಗೆ ಕೊಟ್ಟಿರುವಂತೆ ಶ್ಯಾನುಭೋಗರಿಗೂ ಕೊಡಿಸಬೇಕು ಉ — ಇದರಿಂದ ಪ್ರಯೋಜನವೇನೂ ಕಾಣುವುದಿಲ್ಲ

ಪ್ರ —ಜಮೀನುಗಳಿಗೆ ಗೊಬ್ಬರ ಮುಂತಾದದ್ದು ಹೋಗಿ ಬರುವ ಸಣ್ಣ ಹಾದಿಗಳನ್ನು ಗ್ರಾಮದ ರಿಜಿಸ್ಟರಿನಲ್ಲಿ ಬರೆದಿಡಬೇಕು ಅನೇಕರು ಹಾದಿ ಮುಚ್ಚಿ ಗೊಬ್ಬರ ಹೋಗದಂತೆ ಅಡಚಣೆ ಮಾಡುತ್ತಾರೆ ಇದನ್ನು ಬಿಡಿಸುವುದಕ್ಕೆ ರೈತನು ಸಿವಿಲ್ ಕೋರ್ಟಿಗೆ ಹೋಗಿ ವರ್ಷಾವಧಿ ಅಲೆಯಬೇಕಾಗಿದೆ ಉ —ಇದು ಸಾಧ್ಯವಿಲ್ಲ

ಪ್ರ —ಇನಾಮತಿಗಳಲ್ಲಿ ಮುಕ್ತಾಲು ಪಾಲು ಇನಾಂದಾರರು ಒಪ್ಪಿದರೆ ಸರ್ವೆ ಸೆಟ್ಲ್ ಮಾಡಿಸಿಕೊಡಬೇಕು ಉ —ಇದಕ್ಕೆ ಕಾನೂನ್ ಬದಲಾಯಿಸಬೇಕಾಗುತ್ತೆ ಯೋಚಿಸುತ್ತೇವೆ

ಪ್ರ —ಇನಾಂ ಗ್ರಾಮಗಳಲ್ಲಿ ಜಮೀನ್ ಒತ್ತಿಕೊಂಡದ್ದನ್ನು ಅಮಲ್ದಾರರು ತಮ್ಮಿಯಿಂದ ಫೈಸಲ್ ಮಾಡುವಂತೆ ಅಧಿಕಾರ ಕೊಡಬೇಕು ಉ— ಇನಾಂ ಗ್ರಾಮಗಳಲ್ಲಿ ಅಮಲ್ದಾರರು ಪ್ರವೇಶಿಸಕೂಡದು , ಅವರಿಗೆ ಅಧಿಕಾರ ಕೊಡಲಾರೆವು

ಪ್ರ —ಸಂಸ್ಥಾನದ ಬೆಳೆಗಳಲ್ಲಿ ಪ್ರಾಮುಖ್ಯವೆನಿಸಿರುವ ಕಾಫಿ ಫಸಲಿಗೆ ಹಿಡಿಯುವಂಥಾ ರೋಗಗಳನ್ನು ಪರೀಕ್ಷೆ ಮಾಡಿ, ಪರಿಹಾರಗಳನ್ನು ಸೂಚಿಸುವಂತೆಯೂ, ಭೂಗುಣಗಳ ಅಜಮಾಯಿಷಿಯಿಂದ ಒಳ್ಳೇ ಜಮೀನಿನ ಲಕ್ಷಣಗಳನ್ನು ಪ್ರಕಟಿಸುವಂತೆಯೂ ಗವರ್ನ್‌ಮೆಂಟ್ ವ್ಯವಸಾಯದ ಇಲಾಖೆಗೆ ಹುಕುಂ ಕೊಟ್ಟು ಮಾಡಿಸಬೇಕು ಯೂರೋಪಿಯನ್ ಕಾಫಿ ಪ್ಲಾಂಟರುಗಳಿಗೆ ಈ ಭಾಗದಲ್ಲಿ ಸಹಾಯ ಮಾಡುವ ಪರಿಶೋಧಕರಿಗೆ ನಮ್ಮ ಸರ್ಕಾರದಿಂದ ಗ್ರ್ಯಾಂಟು ಕೊಡುತ್ತಿದ್ದರೂ ಅವರು ಬರೆಯುವಂಥಾ ಪುಸ್ತಕಗಳನ್ನು ದೇಶೀಯ ಪ್ಲಾಂಟರುಗಳಿಗೆ ಕೊಡುವುದಿಲ್ಲ ಮತ್ತು ಕಾಫಿ ಮುಂತಾದ ಬೆಳೆಗಳ ವ್ಯವಸಾಯದ ವಿಷಯದಲ್ಲಿ ಆ ಪರಿಶೋಧಕರು ಆಗಾಗ್ಗೆ ಉಪನ್ಯಾಸಗಳನ್ನು ಮಾಡುತ್ತಾರೆ ಈ ಉಪನ್ಯಾಸ ಮಂದಿರಗಳಿಗೆ ದೇಶೀಯ ಪ್ಲಾಂಟರುಗಳನ್ನು ಸೇರಿಸುವುದೂ ಇಲ್ಲ ಉ —ಅವರ ನಿಷ್ಕರ್ಷೆಯನ್ನೂ ... ಮುಂತಾದದ್ದನ್ನೂ ಬರೆದು ವಿಚಾರಿಸುತ್ತೇವೆ

ಪ್ರ —ವ್ಯವಸಾಯ ಮತ್ತು ಕೈಗಾರಿಕೆಗಳನ್ನು ಕುರಿತ ಕನ್ನಡ ಪುಸ್ತಕಗಳನ್ನು ಪ್ರಕಟಿಸಬೇಕು ಉ —ಆಗಲಿ, ಮಾಡುತ್ತೇವೆ

ಪ್ರ —ಪ್ರತಿ ಒಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ರೈತರ ಮಕ್ಕಳಿಗೆ ವ್ಯವಸಾಯ ಕಲಿಸುವ ಪಾಠಶಾಲೆ ಇಡಬೇಕು ಉ —ಸದ್ಯ ಬೆಂಗಳೂರಿನಲ್ಲಿ ಮುಂದಿನ ವರುಷ ಒಂದು ವ್ಯವಸಾಯ ಬೋಧನಾ ವಿದ್ಯಾಶಾಲೆಯನ್ನು ಪ್ರಾರಂಭ ಮಾಡಿಸುತ್ತೇವೆ ಬೋಧಕರು ಅಲ್ಲಿ ತರಪೇತಾಗಿ ಹೊರಬಿದ್ದ ಹಾಗೆಲ್ಲಾ ಅಂಥಾ ಪಾಠಶಾಲೆಗಳನ್ನು ಇತರ ಕಡೆಗಳಲ್ಲೂ ಇಡುತ್ತಾ ಬರುವೆವು

ಪ್ರ —ವ್ಯವಸಾಯವನ್ನು ದೃಷ್ಟಾಂತವಾಗಿ ಮಾಡಿಸಿ ತೋರಿಸುವಂಥಾ ಫಾರಮುಗಳನ್ನು ಪ್ರತಿ ಡಿಸ್ಟ್ರಿಕ್ಟಿನಲ್ಲೂ ಏರ್ಪಡಿಸಬೇಕು ಉ – ಇದು ಕ್ರಮೇಣ ಮಾಡಲಾಗುವುದು.

ಪ್ರ —ವ್ಯವಸಾಯದ ಮುಟ್ಟುಗಳನ್ನೂ ಬಿತ್ತನೆ ಬೀಜಗಳನ್ನೂ ರೈತರಿಗೆ ತಾಲ್ಲೂಕಿನ ಮೂಲಕ ತರಿಸಿಕೊಡಬೇಕು ಉ — ಈಗ ಬೆಂಗಳೂರಿನಲ್ಲಿ ಅಂಥಾ ಡಿಪೋವನ್ನು ಇಡಿಸಿದೇವೆ ಕ್ರಮೇಣ ಇತರ ಕಡೆಗಳಲ್ಲೂ ಇಡುತ್ತೇವೆ

ಪ್ರ —ಮಲೆನಾಡು ತಾಲ್ಲೂಕುಗಳಲ್ಲಿ ಗೋಕಾಯಿಗಳ ರೋಗ ಚಿಕಿತ್ಸೆ ನಡೆಯುವ ಆಸ್ಪತ್ರೆಗಳನ್ನು ಇಡಿಸಬೇಕು ಉ — ಇದು ಸರ್ಕಾರದವರ ಆಲೋಚನೆಯಲ್ಲಿದೆ

ಪ್ರ —ಚಿಕ್ಕಮಗಳೂರಿನ ಪಶುವೈದ್ಯ ಸ್ವಾಧೀನಕ್ಕೆ ಒಂದು ಅಮೃತಮಹಲ್ ಬೀಜದ ಹೋರಿಯನ್ನು ಕಳುಹಿಸಬೇಕು ಉ —ಆಗಲಿ ಕೊಡುವಂತೆ ಹುಕುಂ ಮಾಡುತ್ತೇವೆ

ಪ್ರ —ಯಂತ್ರಗಳನ್ನಿಟ್ಟು ವ್ಯವಸಾಯ ಮಾಡಬೇಕೆಂಬವರಿಗೆ ಯಂತ್ರಗಳನ್ನು ಜೋಡಿಸಿ ನಡೆಸುವವರು ಸಿಕ್ಕುವುದು ದುರ್ಲಭ ಸಿಕ್ಕಿದರೂ ದುಬಾರಿ ಸಂಬಳ ಕೊಡಬೇಕು ಹಾಗೆ ಕೊಟ್ಟಾಗ್ಯೂ ಅವರು ಕೆಲವು ಕಾಲವಾದರೂ ಸ್ಥಿರವಾಗಿ ಒಂದು ಕಡೆ ನಿಲ್ಲುವುದಿಲ್ಲ ಸರ್ಕಾರದವರು ಅಂಥವರನ್ನು ಒದಗಿಸಿಕೊಟ್ಟರೆ ತುಂಬಾ ಅನುಕೂಲವಾದೀತು ಉ —ಅಂಥಾ ಕಾರೀಗಾರರನ್ನು ಒಟ್ಟಾಗಿ ನೇಮಿಸಿಕೊಂಡು, ಅಪೇಕ್ಷೆಪಡುವ ರೈತರ ಬಳಿಗೆ ಕಳುಹಿಸಿಕೊಡಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ

ಪ್ರ —ಕಬ್ಬಿನ ವ್ಯವಸಾಯವನ್ನು ಸಂಸ್ಥಾನದಲ್ಲಿ ಹೆಚ್ಚಿಸುವುದಕ್ಕೆ ಸರ್ಕಾರದವರು ಬೀಜ ಮುಂತಾದದ್ದಕ್ಕೂ, ಯಂತ್ರ ಸಾಮಗ್ರಿಗಳನ್ನು ಕೊಂಡು ತರಿಸುವುದಕ್ಕೂ ರಿಯಾಯತಿ ದರದ ಮೇಲೆ ಧಾರಾಳವಾಗಿ ಸಾಲಗಳನ್ನು ಕೊಟ್ಟು ಪ್ರೋತ್ಸಾಹಪಡಿಸಬೇಕು ಬೊಂಬಾಯಿ ಸರ್ಕಾರದವರು ಅಂಥಾ ರೈತರಿಗೆ ಬಹು ಉದಾರ ಭಾವದಿಂದ ಸಹಾಯ ಮಾಡಿದ ಕಾರಣ ಕಬ್ಬಿನ ಬೆಳೆ ಈಗ ಬಹಳವಾಗಿ ಹೆಚ್ಚಿದೆ ಉ —ಆಗಲಿ ಕಬ್ಬಿನ ಬೆಳೆ ಮಾಡುವ ಪ್ರತಿ ಎಕರೆಗೂ 100 ರೂಪಾಯಿನಂತೆ 2,000 ರೂಪಾಯಿಗೆ ಮೀರದಷ್ಟು ಹಣ ಸರ್ಕಾರದಿಂದ ಸಾಲಕೊಡಬಹುದೆಂದು ಹುಕುಂ ಕೊಡುತ್ತೇವೆ

ಫಾರೆಸ್ಟ್ ವಿಚಾರಗಳು

ಪ್ರ —ಅನಾದಿಯಾಗಿ ಬೆಳೆದಿರುವ ಬಹು ಅಮೂಲ್ಯವಾದ ಗಿಡ ಮರಗಳನ್ನು ಹುಟ್ಟುವಳಿ ಹೆಚ್ಚಿಸಬೇಕೆಂದು ಫಾರೆಸ್ಟಿನವರು ಕಡಿದು ಕಾಡುಗಳನ್ನು ಬರಿದು ಮಾಡುತ್ತಿದ್ದಾರೆಂದು ಮೆಂಬರುಗಳು ಚರ್ಚೆಮಾಡಿದ್ದಕ್ಕೆ ಫಾರೆಸ್ಟ್ ಕನ್ಸರ್ವೇಟರವರು—ಕಡೂರು ಡಿಸ್ಟ್ರಿಕ್ಟಿನ ಕಾಡುಗಳ ವಿಸ್ತಾರವು 538 ಚದರ ಮೈಲಿಯಾಗುತ್ತೆ, ಒಂದು ವರುಷದಲ್ಲಿ 1 000 ಮರಗಳನ್ನು ಅಂದರೆ ಚದರ ಮೈಲಿಗೆ 2 ಮರಗಳಂತೆ ಕಡಿಯುತ್ತೇವೆ ಎಂದು ಸಮಾಧಾನ ಹೇಳಿದರು ಅದಕ್ಕೆ ಪ್ರತಿಯಾಗಿ ಕಡೂರು ಡಿಸ್ಟ್ರಿಕ್ಟಿನ ಮೆಂಬರುಗಳೆಲ್ಲಾ ... ಹತ್ತಿರದಲ್ಲೇ ಮರಗಳನ್ನು ಕಡಿಯುತ್ತಾ ಬಂದಿದೆ ... ಇದರಿಂದ ಕಾಡೆಲ್ಲಾ ಹಾಳಾಗುತ್ತದೆಂದೂ ಕಡಿಯುವುದನ್ನು ... ಬಹಳ ನಷ್ಟವೆಂದೂ ಮೆಂಬರುಗಳು ಬಹಳ ಸಂಗತಿಗಳನ್ನು ದೃಷ್ಟಾಂತಕೊಟ್ಟು ತಿಳಿಸಿದರು ಉ — ಇನ್ನು ಕೆಲವು ದಿನಗಳಲ್ಲೇ ಇಂಡಿಯಾ ಗವರ್ನ್‌ಮೆಂಟಿನ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ರವರು ಈ ಪ್ರಾಂತ ಬರುವವರಲ್ಲಿದ್ದಾರೆ ಆಗ ನಿಮ್ಮ ಆಕ್ಷೇಪಣೆಗಳನ್ನ

ಲ್ಲಾ ಅವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತಿಳಿಯುವೆವು. ಆ ಸಮಯದಲ್ಲಿ ನಿಮ್ಮ ಪೈಕಿ ಕೆಲವರನ್ನು ಅವರ ಬಳಿಗೆ ಕರಸಿಕೊಳ್ಳುತ್ತೇವೆ ಈಗಲೇ ಜವಾಬು ಹೇಳತಕ್ಕ ವಿಷಯವಲ್ಲ

ಪ್ರ.—ದರಖಾಸ್ತುದಾರರು ಜಮೀನುಗಳಲ್ಲಿರುವ ಗಂಧದ ಮರಗಳ ಮಾಲಕಿಯನ್ನು ಪಾವತಿಮಾಡಿದ ಹೊರತು ಜಮೀನು ಸಾಗುವಳಿಗೆ ದೊರಕುವುದಿಲ್ಲ. ಮಾಲಕಿ ಕೊಡಲು ರೈತರಿಗೆ ಚೈತನ್ಯ ಸಾಲದು. ಅನೇಕ ದರಖಾಸ್ತುಗಳು ಇತ್ಯರ್ಥವಾಗದೆ ಬಾಕಿ ನಿಂತಿವೆ. ಮಾಲಕಿಯನ್ನು ವಜಾಮಾಡಿಕೊಡಬೇಕು. ಉ—ಈ ವಿಷಯವಲ್ಲಿ ಡೆಪ್ಯುಟಿ ಕಮೀಷನರುಗಳಿಗೆ ಬರೆದಿರುವೆವು ಅವರ ಅಭಿಪ್ರಾಯಗಳು ಬಂದನಂತರ ಇತ್ಯರ್ಥಮಾಡುತ್ತೇವೆ.

ಪ್ರ.—ಜಮೀನಿನಲ್ಲಿರುವ ಗಂಧದ ಮರವು ಕೆಟ್ಟುಹೋದರೆ ಅದರ ನಷ್ಟಕ್ಕೆ ಜಮೀನ್ ಖಾತೇದಾರನನ್ನು ಗುರಿಮಾಡುತ್ತಾರೆ. ಒಡುವಳಿದಾರನನ್ನು ಜವಾಬ್ದಾರನಾಗಿ ಎಣಿಸಿ, ಅವನಿಂದ ಪರಿಹಾರವನ್ನು ಪಡೆಯಬೇಕು ಉ—ಇದು ಸಾಧ್ಯವಲ್ಲ.

ಪ್ರ.—ರೈತರ ಉಪಯೋಗಕ್ಕೆಂದು ರಿಸರ್ವ್ ಮಾಡದೆ ಬಿಟ್ಟಿರುವ ಮರಗಳು ರೈತನ ಕೆಲಸಕ್ಕೆ ಪ್ರಯೋಜನವಾಗುವುದಿಲ್ಲ. ಬಗನಿ, ಕಗ್ಗಲಿ, ಬಿಳಿಗಲಿ, ಜಾಲಿ, ತಪಸಿ, ಸಾಗದಿ, ಗುಂಚಿ, ದಿಂಡಿಗ, ಈ ಮರಗಳನ್ನು ರೈತನಿಗೆ ಬಿಡಿಸಿ ಕೊಡಬೇಕು. ಉ—ಕಗ್ಗಲಿ ಮತ್ತು ದಿಂಡಿಗ, ಇವೆರಡನ್ನು ರೈತರಿಗಾಗಿ ಬಿಡುವಂತೆ ಹುಕುಂ ಮಾಡಿದ್ದೇವೆ

ಪ್ರ.—ಕಿರೆ ಅಟ್ಟಲು ಸಣ್ಣ ಗಿಡಗಳನ್ನು ಮಲೆನಾಡಿನಲ್ಲಿ ರೈತನಿಗೆ ಬೇಲಿ ಮುಂತಾದದ್ದಕ್ಕೆ ಮುಫತ್ತಾಗಿ ಕೊಡಿಸಬೇಕು. ಉ—ಕೊಡಬಹುದೆಂದು ನಿನ್ನೆ ಡೆಪ್ಯುಟಿ ಕಮೀಷನರಿಗೆ ಹುಕುಂ ಕೊಟ್ಟಿದೇವೆ.

ಪ್ರ.—ಕಾಫಿ ತೋಟಗಳಿಂದಲೂ, ಒಡುವಳಿ ಜಮೀನುಗಳಿಂದಲೂ ರೈತನು ಮರಗಳನ್ನು ಕತ್ತರಿಸಿ ಸಾಗಿಸಿಕೊಳ್ಳುವುದಕ್ಕೆ ಫಾರೆಸ್ಟಿನವರು ಲೈಸೆನ್ಸು ಕೊಡದೆ ಬಹಳ ತಾಮಸಮಾಡುತ್ತಾರೆ ಉ—ಆರು ವಾರ ಅಥವಾ ಎರಡು ತಿಂಗಳೊಳಗಾಗಿ ಲೈಸೆನ್ಸ್ ಕೊಡದಿದ್ದರೆ ಸಾಗಿಸಿಕೊಂಡು ಹೋಗುವಂತೆ ಹುಕುಂ ಮಾಡುತ್ತೇವೆ

ಪ್ರ.—ಮಲೆನಾಡಿನಲ್ಲಿ ಒಡುವಳಿ ಕಾನುಗಳೊಳಕ್ಕೆ ಫಾರೆಸ್ಟಿನವರು ಪ್ರವೇಶಿಸಿ ಮಣಸು, ಮೇಲಕ್ಕೆ ಹಬ್ಬಿಸಿದ ಗಿಡಗಳನು ಕತ್ತರಿಸಿ ರೈತರಿಗೆ ಬಹಳ ನಷ್ಟಪಡಿಸಿದ್ದಾರೆ ಈ ವಿಷಯದಲ್ಲಿ ಮೊಕದ್ದಮೆ ನಡೆಯುತ್ತಾ ಇದೆ. ಒಡುವಳಿ ಕಾನುಗಳೊಳಕ್ಕೆ ಅವರು ಪ್ರವೇಶಿಸದಂತೆ ಅಪ್ಪಣೆಯಾಗಬೇಕು ಉ.—ಅಂಥಾ ಕಾನುಗಳಲ್ಲಿರುವ ಮರಗಳು ಸರ್ಕಾರಕ್ಕೆ ಸೇರಿದ್ದಾಗ ಫಾರೆಸ್ಟಿನವರು ಪ್ರವೇಶಿಸಿ ಕಡಿಯಕೂಡದೆಂದು ಹುಕುಂ ಕೊಡುತ್ತೇವೆ. ಬೇಘಾನಿಯಿಂದ ಹಿಂದೆ ನಡೆದು ಹೋಯಿತು. ಮುಂದೆ ಹಾಗೆ ಮಾಡುವದಿಲ್ಲ

ಪ್ರ.—ಫಾರೆಸ್ಟಿನಿಂದ ಸೌದೆ ತಂದರೆ ದೊಡ್ಡ ಗಾಡಿ ಬೋಜಾಕ್ಕೆ 1 ಆಣೆ, ಒಡ್ಡರಬಂಡಿ ಬೋಜಾಕ್ಕೆ 3 ಆಣೆ ಫೀಜು ಇದ್ದದ್ದನ್ನು ಈಗ 9 ಆಣೆ, 1 ಆಣೆಗೆ ಹೆಚ್ಚಿಸಿದಾರೆ. ಪ್ರತಿ ದಿನವೂ ಪ್ರತಿ ಸಂಸಾರಕ್ಕೂ ಬೇಕಾಗಿರುವ ಸೌದೆಗೆ ಹೀಗೆ ನಿರ್ಬಂಧವನ್ನು ಹೆಚ್ಚಿಸುವುದು ಧರ್ಮವಲ್ಲ. ದರಗಳನ್ನು ಮೊದಲಿದ್ದಂತೆಯೇ ಇಟ್ಟುಕೊಡಬೇಕು ಉ.—ಹೆಚ್ಚಿಸಿಲ್ಲವೆಂದು ಫಾರೆಸ್ಟ್ ಆಫೀಸರು ಹೇಳುತ್ತಾರೆ. ಡೆಪ್ಯುಟಿ ಕಮೀಷನರಿಂದ ರಿಪೋರ್ಟು ತರಿಸಿಕೊಂಡು, ಫೈಸಲ್ ಮಾಡುತ್ತೇವೆ.

ಪ್ರ.—ಮಲೆನಾಡಿನಲ್ಲಿ ಜಹಾಯತುದಾರರಲ್ಲದೆ ಕೂಲಿಮಾಡುವವರೂ ಗಾಡಿ ಸೌದೆ ತಂದುಕೊಳ್ಳುವುದಕ್ಕೆ 1 ಆಣೆ ಫೀಜು ಕೊಡಬೇಕಾಗಿದೆ. ಇದನ್ನು ವಜಾಮಾಡದಿದ್ದರೆ ಆ ಜನರಿಗೆ ಬಹಳ ತೊಂದರೆಯಾಗುವುದು ಮಲೆನಾಡಿನಲ್ಲಿ ಅಪಾರ ಚಳಿಯಾದಕಾರಣ ಜನರು ಪ್ರಾಣಧಾರಣೆಗೆ ಸದಾ ಬೆಂಕಿಯನ್ನು ಇಟ್ಟುಕೊಂಡೇ ಇರಬೇಕು ಉ—ಅಂಥವರಿಂದ ½ ಆಣೆ ಮಾತ್ರ ತೆಗೆದುಕೊಳ್ಳುವಂತೆ ಹುಕುಂ ಕೊಡುತ್ತೇವೆ.

ಪ್ರ.—ಅಡಿಕೆ ಬೇಯಿಸುವುದಕ್ಕೆ ಸೌದೆ ಬೇಕು ಗಾಡಿಗೆ 6 ಆಣೆ ಲೈಸೆನ್ಸ್ ಫೀಜು ಇಟ್ಟಿರುವುದು ದುಬಾರಿಯಾಗಿದೆ. 1 ಆಣೆಗೆ ಇಳಿಸಿಕೊಟ್ಟರೆ ತುಂಬಾ ಸಹಾಯವಾಗುತ್ತೆ. ಉ.—ಆಗುವುದಿಲ್ಲ

ಪ್ರ.—ಕಬ್ಬಿನಹಾಲು ಕಾಯಿಸುವುದಕ್ಕೆ ಸೌದೆಯನ್ನು ಸ್ಟೇಟ್ ಫಾರೆಸ್ಟಿನಿಂದ ತಂದರೆ ಗಾಡಿಗೆ 1 ಆಣೆ ಸುಂಕವನ್ನು ಮೂರು ವರುಷದಿಂದ ಇಟ್ಟು ವಸೂಲ್ಮಾಡುತ್ತಾರೆ. ರಿಯಾಯಿತಿ ದರವನ್ನು ಗೊತ್ತುಮಾಡಿಕೊಡಬೇಕು. ಉ.—ಬೆಲ್ಲ ಕಾಯಿಸುವವರಿಂದ ಮಾತ್ರ ಗಾಡಿ ಸೌದೆಗೆ ½ ಆಣೆ ಸುಂಕ ವಸೂಲ್ಮಾಡುವಂತೆ ಹುಕುಂ ಕೊಡುತ್ತೇವೆ

ಪ್ರ.—ಮಲೆನಾಡಿನಲ್ಲಿ ಹೊಡ್ಡ ಬಿದುರನ್ನು ಒಂದು ವರುಷ ಕಡಿದುಕೊಳ್ಳುವಂತೆ ಹುಕುಂ ಆಯಿತು. ಆದರೆ ಹುಕುಂ ಜಾರಿಗೆ ಬರುವುದರೊಳಗಾಗಿ ವರುಷ ಮುಕ್ತಾಯವಾಯಿತು ವಾಯಿದೆಯನ್ನು ಹೆಚ್ಚಿಸಿಕೊಡಬೇಕು. ಉ.—ಮೂರು ವರುಷದ ವರೆಗೆ ವಾಯಿದೆಯನ್ನು ಹೆಚ್ಚಿಸಿಕೊಡುವಂತೆ ಹುಕುಂ ಕೊಡುವೆವು.

ಪ್ರ.—ದೇವಸ್ಥಾನದ ರಿಪೇರಿಗೆ ಮರವನ್ನು ಮುಫತ್ತಾಗಿ ಕೊಡಿಸಬೇಕು. ಉ—ಇದು ಸಾಧ್ಯವಲ್ಲ, ಹಣವನ್ನು ಕೊಡಿಸಿ ಅರ್ಜಿ ಬರೆದುಕೊಂಡರೆ ಸಂದರ್ಭಾನುಸಾರ ಸಹಾಯಮಾಡಬಹುದು

ಹಣಕಾಸುಗಳ ಬಾಬು.

ಪ್ರ.—ಸಂಸ್ಥಾನಕ್ಕೆಲ್ಲಾ ಮೂಲಾಧಾರಿಗಳಾದ ಜಮೀನುದಾರರೇ ಸರ್ಕಾರಕ್ಕೆ ಸಕಲ ವಿಧವಾದ ತೆರಿಗೆಗಳನ್ನೂ ಕೊಡತಕ್ಕವರಾಗಿದಾರೆ. ಇತರರು ಅಂದರೆ ವರ್ತಕರು, ಲಾಯರುಗಳು, ಸರ್ಕಾರಿ ನೌಕರರು ಮೊದಲಾದವರ್‍ಯಾರೂ ತಮ್ಮ ಆದಾಯಕ್ಕೆ ತಕ್ಕಂತೆ ಯಾವ ಕಂದಾಯವನ್ನೂ ಕೊಡುತ್ತಾ ಇಲ್ಲ ಆದ ಕಾರಣ ಆದಾಯದ ಮೇಲಣ ತೆರಿಗೆಯನ್ನು ಹಾಕಿ, ಆ ಜನಗಳಿಂದಲೂ ವಸೂಲ್ಮಾಡುವಂತಾಗಬೇಕು ಉ.—ಇದಕ್ಕಾಗಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ ಅವರು ಆದಾಯದ ಮೇಲಣ ತೆರಿಗೆ ಹಾಕುವ ವಿಚಾರವನ್ನು ಚರ್ಚೆಮಾಡುತ್ತಿದಾರೆ

ಪ್ರ.—ನೀರಾವರಿ ಕಾಮಗಾರಿಗಳಿಗೂ ರೈಲ್ವೆ ಬಡಾವಣೆಗೂ ರಾಜಾದಾಯವನ್ನು ವಿನಿಯೋಗಿಸುತ್ತಿರುವುದು ಸರಿಯಲ್ಲ ಸಾಲ ತಂದು ಈ ಕಾರ್ಯಗಳನ್ನು ಮಾಡಿಸಿ ಸಂಸ್ಥಾನವನ್ನು ಅಭಿವೃದ್ಧಿಮಾಡಬೇಕು. ಉ.—ಯೋಚಿಸುತ್ತೇವೆ.

ಪ್ರ.—ವ್ಯವಸಾಯಾಭಿವೃದ್ಧಿಗಾಗಿ ರೈತರು ಸರ್ಕಾರದಿಂದ ಪಡೆಯುವ ಸಾಲಗಳಿಗೆ ಸೇಕಡ 6 ರೂಪಾಯಿನಂತೆ ಬಡ್ಡಿ ತೆಗೆದುಕೊಳ್ಳುವುದು ದುಬಾರಿಯಾಗಿದೆ. ಬಡ್ಡಿ ದರವನ್ನು ಕಡಮೆ ಮಾಡಬೇಕು. ಉ.—ಅಂಥಾ ಸಾಲಗಳಿಗೆ ಶೇಕಡಾ 3 ರೂಪಾಯಿನಂತೆ ಬಡ್ಡಿ ತೆಗೆದುಕೊಳ್ಳಬೇಕೆಂದೂ, ಸಾಲ ತೀರಿಸುವ ವಾಯಿದೆಯನ್ನು 3 ರಿಂದ 10 ವರುಷಗಳ ವರೆಗೆ ಹೆಚ್ಚಿಸಿ ಇದನ್ನು ಕೆಲವು ಕಾಲ ನಡಿಸಿ ಪರೀಕ್ಷೆಮಾಡಬೇಕೆಂದೂ ಯೋಚನೆ ಇದೆ.

ಪ್ರ.—ಪರಸ್ಪರ ಸಹಾಯಸಂಘಗಳಿಗೆ ಕೊಡುವ ಸಾಲದ ಮೇಕ್ಕೆ ಶೇಕಡ 4 ಕ್ಕಿಂತ ಬಡ್ಡಿಯನ್ನು ಕಡಮೆಮಾಡಬೇಕು. ಉ.—ಇದು ಆಗತಕ್ಕದ್ದಲ್ಲ.

ಪ್ರ.—ಸಾಮಾನ್ಯ ಪ್ರಜೆಗಳಲ್ಲಿ ಇಷ್ಟಪಡುವವರನ್ನು ಸರ್ಕಾರಿ ಜೀವ ವಿಮೆ (ಲೈಫ್ ಇನ್ಷೂರೆನ್ಸ್) ಕಂಪನಿಗೆ ಸೇರಿಸಿಕೊಳ್ಳುವಂತೆ ಹುಕುಂ ಆಗಬೇಕು ಉ.—ಇದು ಇನ್ನೂ ಆಲೋಚನೆಯಲ್ಲಿದೆ.

ಪ್ರ.—ಸರ್ಕಾರಿ ಜೀವವಿಮೆ ಕಂಪನಿಗೆ ಸೇರಿಕೊಂಡಿರುವ ನೌಕರದಾರರುಗಳು ಕಾರಣಾಂತರದಿಂದ ಚಂದಾ ಕೊಡದೆ ಬಿಟ್ಟುಬಿಟ್ಟರೆ ಅವರು ಪಾವತಿ ಮಾಡಿರುವ ಹಣದಲ್ಲಿ ನ್ಯಾಯವಾದದ್ದನ್ನು ವಜಾ ಮಾಡಿಕೊಂಡು ಉಳಿದದ್ದನ್ನೆಲ್ಲಾ ಅವರಿಗೆ ವಾಪಸು ಕೊಡುವಂತಾಗಬೇಕು ಉ.—ಈಗ ಅಂಥವರಿಗೆ ಅವರು ಪಾವತಿಮಾಡಿದ ಹಣದಲ್ಲಿ ಶೇಕಡ 60 ರಂತೆ ವಾಪಸು ಕೊಡಿಸುತ್ತಿದೇವೆ. ಇದಕ್ಕಿಂತ ಹೆಚ್ಚಾಗಿ ಕೊಡಲಾಗುವುದಿಲ್ಲ.

ಪ್ರ.—ಪೂರ್ವದಲ್ಲಿ ಧರ್ಮಕಾರ್ಯಗಳಿಗಾಗಿ ಯಾರಾದರು ಸರ್ಕಾರದವರ ವಶಕ್ಕೆ ಹಣವನ್ನು ಕೊಟ್ಟರೆ ಅದಕ್ಕೆ ಶೇಕಡ 6 ರಂತೆ ಬಡ್ಡಿ ಕೊಡುತ್ತಿದ್ದರು. ಈಗ 4 ಕ್ಕೆ ಇಳಿಸಿದಾರೆ. ಮೊದಲಿನ ದರವನ್ನೇ ಇಟ್ಟುಕೊಡಬೇಕು. ಉ.—ಇದು ಆಗತಕ್ಕದ್ದಲ್ಲ.

ಪ್ರ.—ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಕೆಲಸ ಮಾಡುವ ನೌಕರದಾರರುಗಳಲ್ಲಿ ಕೆಲವರಿಗೆ ಅಲೋಯನ್ಸ್ ಕೊಡುತ್ತಾರೆ; ಕೆಲವರಿಗೆ ಕೊಡುವುದಿಲ್ಲ ಎಲ್ಲರಿಗೂ ಕೊಡಿಸಬೇಕು. ಉ.—ಆಲೋಚನೆಯಲ್ಲಿದೆ.

ಪ್ರ.—ಈಗಿನ ಫಾರಣೆಗಳು 1876-77 ನೇ ಇಸವಿ ಧಾತು ಈಶ್ವರ ಸಂವತ್ಸರದ ಕ್ಷಾಮ ಕಾಲಕ್ಕಿಂತ ಕಡಮೆಯಾಗಿಲ್ಲ. ಬಡ ನೌಕರರಿಗೆ ಕ್ಷಾಮದ ಅಲೋಯನ್ಸನ್ನು ಕೊಡುವುದು ಧರ್ಮವಾಗಿದೆ. ಮದರಾಸಿನಲ್ಲೂ, ಬಿನ್ನದ ಗಣಿಗಳಲ್ಲೂ ಕೊಡುತ್ತಾರೆ ಉ.—ಕೊಡಬೇಕೆಂಬ ವಿಷಯದಲ್ಲಿ ಚರ್ಚೆ ನಡೆಯುತ್ತಾ ಇದೆ

ಪ್ರ.—ರಂಗೂನಿನ ಕರೆನ್ಸಿ ನೋಟುಗಳನ್ನು ಬೊಂಬಾಯಿನಿಂದ ಮೈಸೂರು ಸೀಮೆಗೆ ವರ್ತಕರು ಕಳುಹಿಸುತ್ತಾರೆ. ಈ ನೋಟುಗಳನ್ನು ಈ ಸಂಸ್ಥಾನದ ಖಜಾನೆಗಳಲ್ಲಿ ಕಮೀಷನ್ ಕೊಡುತ್ತೇವೆಂದು ಹೇಳಿದರೂ ಅಂಗೀಕರಿಸಿ ಹಣ ಕೊಡುವುದಿಲ್ಲ. ಇದು ವ್ಯಾಪಾರಾಭಿವೃದ್ಧಿಗೆ ಅಡಚಣೆಯಾಗಿದೆ ಉ—ಕಂಟ್ರೋಲರವರಿಗೆ ತಿಳಿಸಿ, ತಾಲೂಕು ಖಜಾನೆಗಳಲ್ಲಿ ಅಂಥಾ ನೋಟುಗಳಿಗೆ ಹಣ ಕೊಡಿಸುವಂತೆ ಹುಕುಂ ಕೊಡಿಸುತ್ತೇವೆ

ಎಕ್ಸೈಸ್ ಬಾಬು

ಪ್ರ.—ಸೇಂದಿ ಗುತ್ತಿಗೆದಾರರು ಮಾಡುವ ಅಪರಾಧಗಳಿಗೆ ಅವರನ್ನು ಗುರಿಪಡಿಸಿ ಶಿಕ್ಷಿಸದೆ ಇಜಾರೆದಾರರನ್ನು ಕೋರ್ಟಿಗೆ ಎಳೆದು ಅನ್ಯಾಯವಾಗಿ ಶಿಕ್ಷೆ ಮಾಡುತ್ತಾರೆ ನ್ಯಾಯವಾಗಿ ಅಪರಾಧ ಮಾಡಿದವರಿಗೆ ಶಿಕ್ಷೆ ವಿಧಿಸುವಂತೆ ರೂಲ್ಸು ಬದಲಾಯಿಸಬೇಕು ಉ—ಕಾನೂನ್ ಬದಲಾವಣೆಯಾಗಬೇಕು. ಬದಲಾಯಿಸಿ, ಗೆಜೆಟ್ಟಿನಲ್ಲಿ ಪ್ರಕಟಿಸಿ ಮಾಡಿ. ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ತರುತ್ತೇವೆ

ಪ್ರ.—ಕುಡುಕುತನವು ಹೆಚ್ಚುತ್ತಾ ಇದೆ. ಸರ್ಕಾರದವರು ಬಾಬನ್ನು ಹರಾಜುಹಾಕುವುದು ನಿಲ್ಲಿಸಿದರೆ ಮದ್ಯಪಾನ ಕಡಮೆಯಾಗಬಹುದು. ಹೋಟೆಲುಗಳಲ್ಲಿ ಅನೇಕರು ನಿರ್ಗತಿಕರಾಗಿದಾರೆ ಉ—ಅದನ್ನು ಹಾಗೆ ತಪ್ಪಿಸಬಹುದೋ ನಮಗೆ ತಿಳಿಯದು. ಅವರ ಪಡವಳಿಕೆ ಗೊತ್ತಾಗುವುದಿಲ್ಲ. ಹರಾಜು ಹಾಕದೆ ಬಾಬಿಗೆ ಇಷ್ಟೆಂದು ನಿರ್ಧರಿಸಿ ಬಕರಿಮಾಡುವುದು ಸಾಧ್ಯವಿಲ್ಲ

ಪ್ರ.—ಒಡುವಳಿ ಜಮೀನುಗಳಲ್ಲಿರುವ ಒಂದೆರಡು ಬಗನಿ ಮರಗಳಲ್ಲಿ ಹೆಂಡವನ್ನು ಇಳಿಸಿಕೊಳ್ಳುವುದಕ್ಕೆ ರೈತನಿಗೆ ಅಪ್ಪಣೆ ಕೊಡಬೇಕು ಉ—ಆ ರೀತಿ ಮುಫತ್ತಾಗಿ ಬಿಡಬಹುದೆಂದು ಹುಕುಂ ಕೊಡುವೆವು

ಪ್ರ.—ಬೊಂಬಾಯಿ ಸರ್ಕಾರದವರು ಹುಂಡಿಗಳನ್ನು ಬರೆಯುವುದಕ್ಕಾಗಿ ಬಾಂಡ್ ಕಾಗದಗಳನ್ನು ಚಲಾವಣೆಗೆ ತಂದಿರುವಂತೆ ಮೈಸೂರು ಸರ್ಕಾರದವರೂ ಮಾಡಿಕೊಂಡರೆ ಬಹಳ ಅನುಕೂಲ [ಅಂಥಾ ಒಂದು ಹುಂಡಿ ಪತ್ರವನ್ನು ಮಂಡಲ ಮಾದರಿಗಾಗಿ ದಿವಾನ್‌ರವರಿಗೆ ಒಪ್ಪಿಸಿದರು] ಉ—ಅದನ್ನು ಜಾರಿಗೆ ತರುವ ವಿಚಾರವನ್ನು ಯೋಚಿಸುತ್ತೇವೆ

ಪ್ರ.—ಮೈಸೂರಿನ ರಸೀತಿ ಸ್ಟಾಂಪು ಹಚ್ಚಿದ ಹುಂಡಿಗಳನ್ನು ಹೊರಗಡೆಗೆ ಕಳುಹಿಸಿದರೆ ಮದರಾಸ್, ಬೊಂಬಾಯಿ ಮುಂತಾದ ಸರ್ಕಾರದವರು ಅಲ್ಲಿನ ಸ್ಟಾಂಪು ಹಚ್ಚಬೇಕೆಂದು ಕೇಳುತ್ತಾರೆ. ಉ—ಹಾಗೆ ಹಚ್ಚಬೇಕಾದ ಅಗತ್ಯವಿಲ್ಲ. ಅಂಥಾ ಒಂದು ವಿಷಯವನ್ನು ಕುರಿತು ಅರ್ಜಿ ಬರೆದುಕೊಂಡರೆ ನಾವು ವ್ಯವಸ್ಥೆ ಮಾಡಬಹುದು

ಲೋಕಲ್, ಮ್ಯುನಿಸಿಪಲ್ ಬೋರ್ಡುಗಳು

ಪ್ರ.—ಲೋಕಲ್ ಬೋರ್ಡುಗಳಿಗೂ, ಮ್ಯುನಿಸಿಪಲ್ ಕೌನ್ಸಿಲುಗಳಿಗೂ ಸರ್ಕಾರಿ ನೌಕರರಲ್ಲದ ದೊಡ್ಡ ಮನುಷ್ಯರನ್ನು ವೈಸ್ ಪ್ರೆಸಿಡೆಂಟರನ್ನಾಗಿ ನೇಮಕ ಮಾಡಬೇಕು. ಹಾಗೆ ಕೆಲಸ ಮಾಡಲು ಯೋಗ್ಯತೆಯನ್ನು ಪಡೆದಿರುವವರು ಸಿಕ್ಕುತ್ತಾರೆ ಉ—ಮ್ಯುನಿಸಿಪಲ್ ಕೌನ್ಸಿಲ್‌ಗಳಿಗೆ ಅಂಥವರನ್ನು ಪರೀಕ್ಷಾರ್ಥವಾಗಿ ನೇಮಿಸುವ ಭಾಗದಲ್ಲಿ ಗವರ್ನ್‌ಮೆಂಟಿನವರು ಯೋಚನೆ ಮಾಡುತ್ತಿದಾರೆ

ಪ್ರ.—ಡಿಸ್ಟ್ರಿಕ್ಟ್ ಫಂಡಿನಿಂದ ನಡೆಯಬೇಕಾಗಿರುವ ಕಾಮಗಾರಿಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಇಂಜನಿಯರ್ ಇಲಾಖೆಗೆ ಶೇಕಡ 17 ರೂಪಾಯಿನಂತೆ ಹಣ ಕೊಡಲಾಗುತ್ತದೆ ಆದರೂ ಕಾಮಗಾರಿಗಳು ತೃಪ್ತಿಕರವಾಗಿ ಸಕಾಲದಲ್ಲಿ ನಡೆಯದೆ ಅನಾನುಕೂಲವಾಗುವುದು ಆದಕಾರಣ ಡಿಸ್ಟ್ರಿಕ್ಟ್ ಬೋರ್ಡುಗಳ ತಾಬಿಯಲ್ಲೇ ಒಬ್ಬ ಇಂಜನಿಯರನ್ನು ಇಟ್ಟುಕೊಳ್ಳುವುದು ಅನುಕೂಲ. ಮೊದಲು ಪರೀಕ್ಷಾರ್ಥವಾಗಿ ಒಂದೆರಡು ಕಡೆ ನೇಮಿಸಬಹುದು. ಉ—ಅಂಥಾ ಇಂಜನಿಯರ ಸಂಬಳ, ಸಿಬ್ಬಂದಿ ಮುಂತಾದದ್ದರ ವಿವರಣೆ ಮತ್ತು ಖರ್ಚು, ಇವನ್ನೆಲ್ಲಾ ಸರಿಯಾಗಿ ಬರೆದು ಕೊಟ್ಟರೆ ಅದರ ಸಾಧಕ ಬಾಧಕಗಳನ್ನು ಸರ್ಕಾರದವರು ಯೋಚಿಸಿ ಹುಕುಂ ಕೊಡಬಹುದು

ಪ್ರ.—ಬೆಂಗಳೂರು ಸಿಟಿಯಲ್ಲಿ ದುಷ್ಟರು ಸತ್ತ ದನ ಗೋಕಾಯಿಗಳನ್ನು ಹಿಡಿದು ಪೌಂಡಿಗೆ ಸೇರಿಸುತ್ತಾರೆ. ಇದಕ್ಕೆ ಅವರಿಗೆ ಸರ್ಕಾರದಿಂದ ಇನಾಮು ಕೊಡುವರು ಇದನ್ನು ತಪ್ಪಿಸಬೇಕು ಉ.—ಮ್ಯುನಿಸಿಪಲ್ ಕೌನ್ಸಿಲ್‌ನಲ್ಲಿ ಈ ವಿಷಯ ಚರ್ಚೆ ನಡೆದು, ಅಂಥಾವರಿಗೆ ಬಹುಮಾನ ಕೊಡಬೇಕೆಂದು ಮೆಂಬರುಗಳು ತೀರ್ಮಾನ ಮಾಡಿ ಗವರ್ನ್‌ಮೆಂಟಿನವರನ್ನು ಕೇಳಿಕೊಂಡದ್ದರಿಂದ ಸರ್ಕಾರದವರು ಅದರಂತೆ ಸ್ಯಾಂಕ್ಷನ್ ಮಾಡಿದರು. ಗವರ್ನ್‌ಮೆಂಟಿನವರಾಗಿಯೇ ಇದನ್ನು ಜಾರಿಗೆ ತರಲಿಲ್ಲ

ಪ್ರ.—ಯೂನಿಯನ್‌ಗಳು ಬಹಳವಾಗಿ ಮಾಡಲ್ಪಟ್ಟಿವೆ. ಅನೇಕರು ಯೂನಿಯನ್ ಬೇಡವೆಂದು ಅರ್ಜಿ ಬರೆದುಕೊಳ್ಳುತ್ತಿದಾರೆ. 2-3 ಗ್ರಾಮಗಳನ್ನು ಸೇರಿಸಿ ಯೂನಿಯನ್ ಮಾಡುವುದು ಸರಿಯಾಗಿ ನಡೆಯಲಾರದು ಸರ್ಕಾರದವರು ಪ್ರಜೆಗಳ ಇಷ್ಟವನ್ನು ವಿಚಾರಿಸದೆ ಸ್ಯಾಂಕ್ಷನ್ ಮಾಡಬಾರದು. ಉ—ಡಿಸ್ಟ್ರಿಕ್ಟ್ ಬೋರ್ಡಿನ ತೀರ್ಮಾನವನ್ನು ಅನುಸರಿಸಿ ಸರ್ಕಾರದವರು ಯೂನಿಯನ್‌ಗಳನ್ನು ಸ್ಯಾಂಕ್ಷನ್ ಮಾಡುತ್ತಾರೆ. ವಿವೇಕಿಗಳೂ ಬುದ್ಧಿಶಾಲಿಗಳೂ ಪ್ರಜೆಗಳಿಗೆ ತಿಳುವಳಿಕೆ ಕೊಡಬೇಕು.

ಪ್ರ.—ಮೈನರ್ (ಸಣ್ಣ) ಮ್ಯುನಿಸಿಪಾಲಿಟಿಗಳಲ್ಲೂ ಮೆಂಬರುಗಳನ್ನು ಪ್ರಜೆಗಳ ಬಹುಮತಿಯಿಂದ (ಓಟ್) ಚುನಾಯಿಸುವಂತೆ ಅಪ್ಪಣೆ ಕೊಡಬೇಕು ಉ—ಆಗಲಿ, ಯೋಚಿಸುತ್ತೇವೆ.

ಪ್ರ.—ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಕೋಲಾರ್ ಚಿನ್ನದ ಗಣಿಗೆ 5 ಕಾಸಿನಂತೆಯೂ, ರೈಲ್ವೆ ಕಂಪನಿಗೆ 1 ಆಣೆಯಂತೆಯೂ, ಬಿನ್ನಿ ಕಾರ್ಖಾನೆಗೆ 7 ಕಾಸಿನಂತೆಯೂ ಬಿಕರಿ ಮಾಡಿ, ದೀಪಗಳಿಗೆ ಮಾತ್ರ 2½ ಆಣೆ ದರ ಇಟ್ಟಿದಾರೆ ಕಸಬುಗಳಿಗೂ, ಅಡಿಗೆಗೂ, ದೀಪಕ್ಕೂ ಈ ಶಕ್ತಿಯನ್ನು ಹೆಚ್ಚಾಗಿ ಉಪಯೋಗಿಸಲೆಂದು ದರಗಳನ್ನು ಕಡಮೆ ಮಾಡಿಕೊಡಬೇಕು ಉ—ದೀಪಗಳಿಗೆ ಇಟ್ಟಿರುವ ದರವನ್ನು ಸದ್ಯ ಕಡಮೆ ಮಾಡಲಾಗದು ಹೊತ್ತಿನಲ್ಲಿ ಅಡಿಗೆ, ಕಾರ್ಖಾನೆಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಯ ದರಗಳನ್ನು ಇನ್ನೂ ಸುಲಭಮಾಡಿಕೊಡಬೇಕೆಂದು ಯೋಚಿಸುತ್ತಿದೇವೆ.

ವೈದ್ಯದ ಬಾಬು

ಪ್ರ.—ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿರುವ ಆಸ್ಪತ್ರೆಗಳಲ್ಲಿ ಬ್ರಾಹ್ಮಣರೂ ಲಿಂಗಾಯತರೂ ಕಾಯಿಲೆಗೆ ಚಿಕಿತ್ಸೆ ಹೊಂದಲು ಇರಲಪೇಕ್ಷಿಸಿದರೆ ಕೊಲಮಾಡಿ ಕೊಠಡಿಗಳನ್ನು ಕಟ್ಟಿ ಕೊಡಬೇಕು ಉ—ಅಂಥವರು ಖರ್ಚುಕೊಟ್ಟು ಇಲಾಜು ಮಾಡಿಸಿಕೊಳ್ಳುವುದಕ್ಕೆ ಇಷ್ಟಪಡುವುದಾದರೆ ಕಟ್ಟಿಸುತ್ತೇವೆ

ಪ್ರ.—ಹಿಂದೂ ವೈದ್ಯಶಾಲೆಗಳನ್ನೂ, ಯುನಾನಿ ಆಸ್ಪತ್ರೆಗಳನ್ನೂ ಅನೇಕ ಸ್ಥಳಗಳಲ್ಲಿ ಇಡಿಸಿಕೊಡಬೇಕು ಉ.—ಹಣ ಒದಗಿದ ಹಾಗೆ ಇಡಿಸುತ್ತಾ ಬರುತ್ತೇವೆ.

ಪ್ರ.—ಆಯುರ್ವೇದ ವೈದ್ಯ ವಿದ್ಯಾಶಾಲೆಯ ಜೊತೆಗೆ ಯುನಾನಿ ವೈದ್ಯವನ್ನು ಕಲಿಸುವ ಪಾಠಶಾಲೆಯನ್ನೂ ಇಟ್ಟುಕೊಡಬೇಕು ಉ—ಈಗ ಇರುವ ದಾಗಿರುವ ಆಯುರ್ವೇದ ವಿದ್ಯಾಶಾಲೆಯು ತೃಪ್ತಿಕರವಾಗಿ ನಡೆಯುತ್ತಾ ಅದು ಒಳ್ಳೇ ಸ್ಥಿತಿಗೆ ಬಂದರೆ ಬಳಿಕ ಎರಡನೆಯದನ್ನು ಏರ್ಪಾಡು ಮಾಡುವೆವು

ಪ್ರ.—ಮಲೆನಾಡು ಪ್ರಾಂತ್ಯದಲ್ಲಿ ಪ್ರಜಾಸಂಖ್ಯೆಯು ಬಹಳ ಕಡಿಮೆಯಾಗುತ್ತಿದೆಯೋ ಸರ್ಕಾರದವರು ತನಿಖೆ ಮಾಡಿಸಬೇಕು ಮುಜರಾಬಾದ್ ತಾಲ್ಲೂಕಿನಲ್ಲಿ ಕಳೆದ 10 ವರುಷಗಳಲ್ಲಿ 10,000 ಪ್ರಜೆ ಕಡಮೆಯಾಗಿದೆ ಉ—ಸೀನಿಯರ್ ಸರ್ಜನ್‌ರವರು ಹೇಳಿದ್ದೇನೆಂದರೆ, ನಾನು ಕಡೂರು ತಾನ ಪಿಡ್ತಮಾನಗಳನ್ನು ನೋಡಿ ಬಂದೆನು ಜ್ವರಗಳು, ಶ್ಲೇಷ್ಮಜ್ವರ, ಅನಾರೋಗ್ಯಕರವಾದ ಕೊಳಕು ಸ್ಥಳಗಳಲ್ಲಿ ವಾಸಮಾಡುವುದು, ಮೈ ಬಟ್ಟೆಯಿಲ್ಲದೆ ತಿರುಗುವುದು, ಇವೆಲ್ಲಾ ಪ್ರಜಾಕ್ಷಯಕ್ಕೆ ಕಾರಣ ತಿಳಿದು ಬರುತ್ತದೆ ದಿವಾನ್‌ರವರು ಅಪ್ಪಣೆ ಕೊಡಿಸಿದ್ದೇನೆಂದರೆ, ವರುಷಗಳಿಂದ ನನ್ನ ಸಮಯದಲ್ಲಿ ಕಾಫಿಪ್ಲಾಂಟರಾಗಿರುವ ಒಬ್ಬ ಯುರೋಪಿಯನ್ ಧಣಿಯು ಕೂಡ ಮಾತನಾಡುತ್ತಿದ್ದಾಗ ಅತನನ್ನು ಕುರಿತು ಪ್ರಜಾಕ್ಷಯಕ್ಕೆ ಕಾರಣವೇನಾಗಿರಬಹುದು ಎಂದು ಪ್ರಶ್ನೆ ಮಾಡಿದೆನು ಪೂರ್ವದಲ್ಲಿ ಮಲೆನಾಡಿನ ಜನರು ಕಂಬಳಿ ವಿನಾ ಬೇರೆ ಬಟ್ಟೆ ಹೊದಿಯುತ್ತಿರಲಿಲ್ಲ. ಅವರ ದೇಹದ ರಕ್ಷಣೆಯನ್ನು ಕಂಬಳಿಯು ಮಾಡುತ್ತಿತ್ತು. ಈಗ ಆ ಕಂಬಳಿಗಳನ್ನು ಹೊದಿಯುವವರೇ ಅಪರೂಪವಾದರು ಕಾರಣ ಆ ಶೈತ್ಯವಾದಲಿ ಜನರು ಆರೋಗ್ಯವನ್ನು ಕಾಪಾಡಿಕೊಳ್ಳಲಾರದೆ ಸಾಯುವುದೇನೂ ಆಶ್ಚರ್ಯವಲ್ಲ ಎಂದು ಹೇಳಿದನು,

ಪ್ರ.—ಪ್ಲೇಗ್ ಉಪದ್ರ ಬಂದಾಗ ಕೆಲವರು ಊರು ಬಿಡುತ್ತಾರೆ, ಕೆಲವರು ಊರೊಳಗೇ ಇದ್ದುಕೊಂಡು ಕಳವು ಕನ್ನಾ ಚೋರಿಗಳನ್ನು ಮಾಡುತ್ತಾರೆ. ಆದ್ದರಿಂದ ಯಾರನ್ನೂ ವಿನಾಯಿತಿ ಮಾಡದೆ ಬಲಾತ್ಕಾರದಿಂದ ಎಲ್ಲರನ್ನೂ ಊರುಬಿಟ್ಟು ಹೊರಡಿಸಬೇಕು ಉ.—ಇದಕ್ಕೆ ಕಾನೂನು ಬದಲಾವಣೆ ಮಾಡಬೇಕಾಗುವುದು ಯೋಚಿಸಿ ಮಾಡುತ್ತೇವೆ

ಪ್ರ.—ಸಂಸ್ಥಾನದಲ್ಲೆಲ್ಲಾ ದೇವಿ ಬಿಡುವನ್ನು ಬಲಾತ್ಕರಿಸಿ ಹಾಕುವುದು ಬೇಕು ಇನ್ನೂ ಬ್ಬ ಮೆಂಬರು—ಯಾರಿಗೆ ಇಷ್ಟವಿಲ್ಲವೋ ಅವರನ್ನು ಬಲಾತ್ಕರಿಸಕೂಡದು ಉ.—ವಿನಾಯಿತಿ ಮಾಡಬೇಕೆಂದು ಕೇಳುವವರನ್ನು ಬಲಾತ್ಕರಿಸುವುದಿಲ್ಲ ಈ ಸಂದರ್ಭದಲ್ಲಿ ಹಾಲು ಚೆನ್ನಾಗಿಲ್ಲವೆಂದೂ, ಹಾಕಿಸಿಕೊಂಡವರು ಸತ್ತುಹೋದರೆಂದೂ ಸುಳ್ಳು ವರ್ತಮಾನ ಹುಟ್ಟಿಸಿದ್ದು ದೊಡ್ಡದಾಗಿರುತ್ತದೆ. ಅಂಥಾ ಸುಳ್ಳು ಬರವಣಿಗೆ ಒದೆದು, ಜನಗಳಲ್ಲಿ ಅನುಮಾನವನ್ನು ಹುಟ್ಟಿಸುವವರ ಮೇಲೆ ಇನ್ನು ಫಿರ್ಯಾದು ತರಬೇಕಾಗುವುದು

ಪ್ರ.—ದೊಡ್ಡ ಊರುಗಳ ಆರೋಗ್ಯಾಭಿವೃದ್ಧಿಗೆ ಸರ್ಕಾರದವರು ವರುಷ ವರುಷ ಬಹಳ ಹಣವನ್ನು ಸ್ಯಾಂಕ್ಷನ್ ಮಾಡುತ್ತಾರೆ ಗ್ರಾಮಗಳ ಆರೋಗ್ಯವನ್ನು ಹೆಚ್ಚಿಸಬೇಕಾದದ್ದು ಬಹಳ ಅವಶ್ಯವಾಗಿದೆ. ಸರ್ಕಾರದವರು ಇದಕ್ಕೇ ಪ್ರತ್ಯೇಕವಾಗಿ ಹಣ ಸ್ಯಾಂಕ್ಷನ್ ಮಾಡಬೇಕು ಉ.—ಆಗಲಿ, ಕ್ರಮೇಣ ಮಾಡುತ್ತೇವೆ

ಪ್ರ.—ದೇವಿ ಬಿಡುವು ಹಾಕುವವರು ಗ್ರಾಮಾಂತರಗಳ ಮೇಲೆ ಸಂಚಾರ ಮಾಡಬೇಕಾಗಿರುವುದರಿಂದ ಅವರಿಗೆ ಕುದುರೆ ಅಲೋಯನ್ಸ್ ಸ್ಯಾಂಕ್ಷನ್ ಮಾಡಿಕೊಟ್ಟಲ್ಲಿ ಅವರನ್ನು ನೇಮಿಸಿದ್ದು ಸಾರ್ಥಕವಾಗಿ ಕ್ಷೇಮವಾಗುವುದು ಉ—ಆಗಲಿ, ಯೋಚನೆಯಲ್ಲಿದೆ

ಪ್ರ.—ಸಿವಿಲ್ ಆಸ್ಪತ್ರೆಗಳಲ್ಲಿ ಅಡಿಗೆ ಮನೆ ಒಂದೇ ಇರುವುದರಿಂದ ಉತ್ತಮಜಾತಿಯ ರೋಗಿಗಳಿಗೆ ಅಡಿಗೆ ಮಾಡಲು ಅವಕಾಶವಿಲ್ಲ ಬ್ರಾಹ್ಮಣರು ಮತ್ತು ಲಿಂಗಾಯತರ ಅಡಿಗೆಯವರನ್ನು ಪ್ರತಿ ಡಿಸ್ಟ್ರಿಕ್ಟಿನ ಸಿವಿಲ್ ಆಸ್ಪತ್ರೆಯಲ್ಲಿ ನೇಮಿಸಿಕೊಡಬೇಕು ಉ—ಆಗಲಿ, ಯೋಚಿಸಿ ಮಾಡುತ್ತೇವೆ

Printed and Published by the Rev. E. W. T[illegible] M.A., Proprietor and Manager. Wesleyan Mission [illegible] Mysore. 7/11/1912

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು–ಸರ್ ೧೯೧೨ ನೇ ಇಸವಿ ನವಂಬರ್ ತಾರೀಖು ೧೪ ನೇ ಗುರುವಾರ. ಸಂಚಿಕೆ ೨೪

ಹೊಸ ಕಥೆ! ಅಪೂರ್ವಗ್ರಂಥ !! ೨೧೬ ಪುಟಗಳು !!!

ಪ್ರತಾಪ ಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ದುಷ್ಟರುಗಳಿಗೆ ತೊಂದರೆ ಎಂದರೂ ತೊಲಗಿಹೋಗುತ್ತವೆ" ಎಂಬ ನೀತಿ ... ಸ್ತ್ರೀಧರ್ಮ, ಸ್ತ್ರೀಬುದ್ಧಿ ಕೌಶಲ ... ಯುಕ್ತಿ ಸಾಹಸ ಚಾತುರ್ಯ (3) ... ವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, ... ಸರಸ್ಸು, ಆರಾಮಾದಿ ವರ್ಣನೆಗಳು (೪) ಮನುಷ್ಯಯತ್ನಕ್ಕೆ ವಿಚಾರದ ... ಅನುಭವಕ್ಕೆ ಶಕ್ಯ ವಿಷಯಗಳು (೫) ಎಲ್ಲರೂ ಓದಿ ತಿಳಿದುಕೊಳ್ಳುವ ಸುಲಭವಾದ ಶೈಲಿ (೬) ಸರಪಣಿಯಂತೆ ಒಂದಕ್ಕೊಂದು ಜೋಡಿಸಿ ... ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ ... ಇರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ... ಮನಸ್ಸು ... ಹೆಚ್ಚಾಗಿ ... ಓದಿ ... ಕಥೆಯ ... ವಾಗಿ [illegible] ... ಆಣೆ ಒಟ್ಟು ... [illegible] [1 1]

ವಿಳಾಸ—ವಿಜಯ ... ಕಂಪೆನಿ ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರು ... ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ವರ್ಷಕ್ಕೆ ಒಂದು ವರುಷಕ್ಕೆ

(ಅಡ್ವಾನ್ಸು)	ರೂ ೧–೨–೦
ವರ್ಷದ ... ವರೆಗೆ ... ವೀ ಪೀ ಮೂಲಕ ...	
ಕೆ ... ಅಂಚೆ ಮೂಲಕ ಕಳುಹಿಸುವ ... ಪಾರ್ಸಲ್ ಸಹಿತ ರೂ	೧–೧೪–೦
" " "	೦–೧೫–೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸಗಳನ್ನು ಬದಲಾಯಿಸುವಾಗಲೂ ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣುವ ... ನಂಬರ್ ನ ಏನನ್ನು ಮರೆಯದೇ ನಮೂದಿಸತಕ್ಕದ್ದು

ಪ್ರಕಟನೆ, ನೋಟೀಸುಗಳ ದರಗಳು

ವೃತ್ತಾಂತ ಪತ್ರಿಕೆಯಲ್ಲಿ ಯಾವ ... ವಿಷಯ ಪ್ರಕಟಿಸಿ ಅಥವಾ ... ಒಂದು ... ಒಂದು ... ಪ್ರಕಟಣ ... ಒಂದು ಸುಕ್ಕೆ ... ಹೆಚ್ಚು ... ಅಪೇಕ್ಷಿಸುವವರು ... ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು

ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 26

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆ ... ಉಬ್ಬು, ಹಲ್ಲುನೋವು, ಗಂಟ್ಲು ಗಾರೆಸ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ... ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ ... ರುವ ವೈದ್ಯನ ಅಂಗಡಿಗೆ ಹೋಗು ... ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅವಕ್ಕೆ ... ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೊ. ಈ ಯುಕ್ತಿಯಿಂದ ವಾಸಿಮಾಡುವ ... ೧೨ ಆಣೆಗೆ ... ಈ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"... ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ... ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ ಅಥವಾ ಹೆಚ್ಚು ಬಾಟ್ಲಿ ... ಪ್ಯಾಕಿಂಗ್ ... ಮಾಫಿ ... ಧಾರಾಳ ... ವಿಳಾಸಗಳು—(1) ... ವನಮಾಲಿ ಬೀದಿ, ... ಸಾಹುಕಾರ್ (2) ಜಿ ಎಸ್ ... ಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಹತ್ತಿಯ ತುಪ್ಪ.

ಶ್ರೇಷ್ಠವಾದ ಹತ್ತಿಯ ಬೀಜದಿಂದ ತೆಗೆದು ರಸಾಯನ ಶಾಸ್ತ್ರಜ್ಞರಿಂದ ಶುದ್ಧ ಮಾಡಲ್ಪಟ್ಟು ... ಡಾಕ್ಟರುಗಳು ನಿರ್ದೋಷವಾದ ಮತ್ತು ಆರೋಗ್ಯಕರವಾದ ಆಹಾರವಸ್ತುವೆಂದು ಹೇಳಿರುವ, ಅಡಿಗೆಗೆ ತುಪ್ಪಕ್ಕೆ ಬದಲಾಗಿ ಅನೇಕರು ಉಪಯೋಗಿಸುತ್ತಿರುವ

ಹತ್ತಿಯ ತುಪ್ಪವು ಮಾರಾಟಕ್ಕೆ ಸಿದ್ಧವಾಗಿದೆ

... ಡಬ್ಬ 1 ಕ್ಕೆ 13 ರೂಪಾಯಿ ... 1 2 ... ಇದು ಅಥವಾ ... ಕೂಡಲೆ ... ಉತ್ಕೃಷ್ಟವಾಗಿದೆ [10 1 2]

ಹತ್ತಿಬೀಜದ ಹಿಂಡಿ ಮತ್ತು ಹೊಟ್ಟು ಹಸು, ಎಮ್ಮೆ, ಎತ್ತು, ಕುದುರೆಗಳಿಗೆ ಆರೋಗ್ಯವಾದ ಮತ್ತು ಪುಷ್ಟಿಕರವಾದ ಆಹಾರ ಎಣ್ಣೆ ಹೆಚ್ಚಾಗಿರುವ ಎರೆ ಬೀಜವನ್ನು ... ಹೊಟ್ಟುಗಳನ್ನು ... ಪರುಗಳ ಗೊಬ್ಬರವು ಭೂಮಿಯನ್ನು ... ಫಲಕಾರಿಯಾಗಿಯೂ ಮಾಡುವುದು ಈ ವಸ್ತುಗಳೆಲ್ಲ ... ಸುಲಭ ಕ್ರಯಕ್ಕೆ ದೊರೆಯುತ್ತವೆ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
1.., ಕಿಲಾರಿ ರೋಡ್, ಬೆಂಗಳೂರು ಸಿಟಿ

... ಮೈಸೂರು, ಇವರಲ್ಲೂ ಮತ್ತು ... ಏಜಂಟರಿರುವ ... ಹಾಸನ, ಚನ್ನಪಟ್ಟಣ, ಮದ್ದೂರು ಈ ಸ್ಥಳಗಳಲ್ಲೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ಕ್ರಯಕ್ಕೆ ದೊರೆಯುವವು

ಡೋಂಗರೆ ಇವರ ಬಾಲಾಮೃತ.

[115 18]

... ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ... ಮಕ್ಕಳು ... ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ... ಇರೋಣ ಹೊಟ್ಟೆಯು ದೊಡ್ಡ ... ಎಲುಬುಗಳು ... ಇರೋಣ, ಹಳೆ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲ ... ಬಾಟ್ಲಿಯ ಕಿಮ್ಮತ್ತು ೧೦ ಆಣೆ ಟಪಾಲ್ ಖರ್ಚು ೭ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

WILLIAM & Co. FORT, BOMBAY

ಅಮೃತಾಂಜನ. (Regd)

... ವಿಶೇಷ ಲಕ್ಷಣ ಕೂಡಿದ ವಾತ, ಸಂಧಿವಾತ ತಲೆನೋವು ಸೊಂಟನೋವು, ಶೀತ, ಕೆಮ್ಮು, ಗಂಟುನೋವು ... ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ... ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನ ಬಾಟ್ಲಿ 1 ಕ್ಕೆ 0–8–0

ಗಜಕರ್ಣದ ಮುಲಾಮು

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಜಮಾವ ಕಪ್ಪಾಗುವದಿಲ್ಲ ಡಪ್ಪಿ 1 ಕ್ಕೆ 0–6–0

ದಂತಮಂಜನ 4 ಆಣೆ ನೇತ್ರಾಂಜನ 4 ಆಣೆ ಸುಂದರತೈಲ 8 ಆಣೆ [1 38]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನದ ಡಿಪೊ, ಫೋರ್ಟ್ಸ್ ಮುಂಬಯಿ.

ಪಾಕೆಟ್ ಡೈರಿ

ಶ್ರೀ ಸೀತಾರಾಘವ — ಸರ್ 1913 ನೇ ಇಸವಿಯದು

ಮೊದಲೋದ ಎರೆದು ತರಿ ಕೊಳ್ಳಿ ನಂ 1 ಸಣ್ಣ ಸೈಜು ಸಾದಾ ಬೆಲೆ 0–4–0 ನಂ 2 ಸಣ್ಣ ಸೈಜು ... ಮುಚ್ಚಳ ... ಬೆಲೆ 0 ... ನಂ ... ದೊಡ್ಡ ಸೈಜು ಸಾದಾ ಡೈರಿ 0 ... ನಂ 4 ದೊಡ್ಡ ಸೈಜು ... ಮುಚ್ಚಳ ಹಾಕಿರುವ ... 0–8–0 ಟಪಾಲು ಖರ್ಚು ಬೇರೆ ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು ... ರೂಪಾಯಿಗಿಂತ ಹೆಚ್ಚು ಡೈರಿ ... ವರಿಗೆ ರೂಪಾಯಿಗೆ 2 ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ [136 11]

ವಿವರ—(1) ಈ ವರೆಗೆ ನಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ... ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ... ಕ್ಯಾಲಿಕೋ (ಬಟ್ಟೆ) ... ಎಂದು ಮಾಡಿಸಿದೆ (2) ... ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ... ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು ಷೋಡಶಕರ್ಮಕ್ಕೆ ಬೇಕಾದ ... ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ (3) ಕೋರ್ಟು ... ಅಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ... ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ (4) ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆ, ರೈಲು ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು ಅವರ ಸಂಬಳ, ಗೌರ್ನಮೆಂಟ್ ರಜಾ ... ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಶೇಕಡಾ ... ಬಡ್ಡಿ, ತಲಬುಪಟ್ಟಿ ... ಸಹಾ ಇರುತ್ತದೆ ... ಬಿಲ್ಲ, ... ವಿಷಯ, ಒಟ್ಟು ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯಕ ... ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

... ವಾದ ಗಡಿಯಾರ — ಬಹು ಸುಲಭ ಕ್ರಯ

ಪಾಕೆಟ್ ಲಿವರ್ ವಾಚು

ಇದರ ಕ್ರಯ 6 ಬಹುಮಾನಗಳ ಸಮೇತ 3 ರೂ ಮಾತ್ರ

5 ವರ್ಷಗಳ ಗ್ಯಾರಂಟಿ

ಇದು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಲಿವರ್ ಕೆಲಸದಿಂದಲೂ ನಾಜೂಕಾದ ಮತ್ತು ಬಲವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ... ಈಗ ತಾನೆ ಹೊಸದಾಗಿ ... ಸರಿಯಾದ ಕಾಲವನ್ನು ತೋರಿಸತಕ್ಕದು ... ಯಾದ ... ಅನೇಕ ವರ್ಷ ... ಬಾಳಿಕೆ ... [146 1]

ಇದರ ಆರು ಬಹುಮಾನಗಳ ತಪಸೀಲು

1 ಸುಂದರವಾದ ಗಡಿಯಾರದ ಸರಪಳಿ	4 ... ಪೌಡರ್ ಎಂಬ ಪರಿಮಳ ದ್ರವ್ಯ
2 ದಿಕ್ಕನ್ನು ತೋರಿಸುವ ಉತ್ತರದ ...	... ಕಾರದ ಉಂಗುರ
3 ... ವಾದ ಕರವಸ್ತ್ರ	6 ... ವಾದ 6 ಸ್ಟೀಲ್ ಮುಳ್ಳು

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ ನಮ್ಮ ವಿಳಾಸ —
... ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ್ 7. ಕೋನ್ ವೆಂಕಟಾಚಲ್ಲೈಯರ್ ಬೀದಿ ಮದ್ರಾಸು.

ಕುಂತಳಾನಂದ ತೈಲವು.

147-8

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ನೂರು ಬಗೆಯ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸುವರು. ಈ ತೈಲವು ಕೂದಲನ್ನು ದಟ್ಟವಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಶಿರೋಭೂಷಣವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 1 ಬಾಟಲಿಗೆ 2 ರೂಪಾಯಿ, 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ.—ಬಿ. ಎಮ್. ನಾಥ ಮತ್ತು ಕಂಪೆನಿ,

ಪೇಟೆ, ಮದರಾಸ್

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.



1-46

ಶೀತದ ಕೆಮ್ಮು, ಗಂಟಲು ನೋವುಂಟಾಗುವದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ.

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ಕ್ಷಯವಾಯು ಉಗುಳಿನಲ್ಲಿ ರಕ್ತ ಬೀಳುವದು. ಹಾಗೆಯೇ ಕ್ಷಯರೋಗ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಬಿಗಿಯುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ಹೋಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳದಿರಿ.

ನಮ್ಮ ಣನೆಯು ಪ್ರತ್ಯಕ್ಷವಾಗಿ ಕೊಡಲ್ಪಡುವದು '

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿವೆ. ಆದರೆ ಎಷ್ಟು ಸ್ತ್ರೀಯರಿಗೆ ಕಾಣೆ ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಷಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು, ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ಸಮನಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇವನ್ನು ರತ್ನದಾನ ಮಾಡಿಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶವಾದುತ್ತ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಆ ಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಸ್ವಲ್ಪದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೆಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗ ಈ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಬಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಇದರ ಬೆಲೆ 1 ಸೀಸೆಗೆ ರೂ. 1-0-0. ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0. ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುತ್ತೇವೆ.—

28-7-11. ಮೆ॥ ಬಿ. ಡಿ. ನಾಥಸಿಂಗ್, ರುಕ್ಮಿಣಿವಿಲಾಸ, ನುಸ್ತಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ, ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸಂಸಮಾನವಾದ ಹೇರ್ ಓಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1-7-11. ಮೆ॥ ಸಿ ಆರ್ ನಾಯುಡು ಪ ನ. ಡಿ. ಟಾಕಿಬು, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ ಸಮ್ಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ ೪ ಸೀಸೆಗಳನ್ನು ತ್ವರಿತದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಸುಗಂಧದ್ರವ್ಯಗಳು

ಗುಲ್-ಹಾನ್ (ರಿಜಿಡ್.)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳುವಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ಡ್ರ್ಯಾಂ ಸೀಸೆಗೆ ರೂ. 1-8-0.

ದಿಲ್-ಬಹಾರ್ (ರಿಜಿಡ್.)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅಪೂರ್ವವಾದ ಸುಗಂಧ. ಡ್ರ್ಯಾಂ ಸೀಸೆಗೆ ರೂ. 1-8-0

"ಕಾಮಿನಿಯಾ ಸುರಂಗಿ"—ರೂ. 1-4-0, "ಕಾಮಿನಿಯಾ ವಾಲಕ" ರೂ. 1

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲಿ ಬರೆಯಬೇಕು.

ನಮ್ಮ ವಿಳಾಸ.— [94-10]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಆರು ಹೊಸ ಕಾದಂಬರಿಗಳು!!

130-50

ಶೋಭನೆ—ಕನ್ನಡಿಸಿದ ಬಂಗಾಳೀಯ ಚಮತ್ಕಾರವಾದ ಕಥೆ 12 ಆಣೆ. **ಅನಂಗಸುಂದರಿ**—ಮೇಲಣ ಕಥೆಯಂತೆಯೇ ಸ್ವಾರಸ್ಯವೂ ನೀತಿಪ್ರದವೂ ಆದ ನಾವಲು 8 ಆಣೆ. **ತಾರಾಸುಂದರಿ**—ಅನಂಗಸುಂದರಿಯ ಎರಡನೆಯ ಭಾಗ 8 ಆಣೆ. **ಕುಮುದಿನಿ**—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ 6 ಆಣೆ. **ಸತೀರೋಹಿಣಿ**—ಪಾತಿವ್ರತ್ಯವನ್ನು ಬೋಧಿಸುವ ಕಾದಂಬರಿ 2 ಆಣೆ. **ಸಂತಾಪಕ**—ಇದೊಂದು ಅದ್ಭುತವಾದ ಕಥೆ 1 ಆಣೆ.

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

HASSAN CAPS.

ಹಾಸನದ ಟೋಪಿಗಳು.

ಮೊದಲನೇ ತರಗತಿಯ ನಾನಾ ರೀತಿ ಚುಕ್ಕೆಗಳುಳ್ಳವು			ರೂ	2 0 0
,,	,,	, ಕೆಂಪು ಆಥವ ಕಪ್ಪು	,,	1 8 0
ಎರಡನೇ	,,	,,		,,	1 6 0
ಮೂರನೇ	,,	,,	,,	,,	1 4 0
ನಾಲ್ಕನೇ	,,	,,	,,	,,	1 2 0

ಇನ್ನು ಬೇರೆ ತರಹ ಬೇಕಾದರೆ ಮಾಡಿ ಕಳುಹಿಸುತ್ತೇವೆ.

ನಮ್ಮ ವಿಳಾಸ :— [157-5]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,

ತುಂಕೂರು.

Address-
Wesleyan Mission Cap Industry,
Tumkur.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರ ಬೇಗ ಬರೆದು ತರಿಸಿಕೊಳ್ಳಿ

3-46

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಹಾರನೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೀಮೆಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮುಖ್ಯವಾಗಿ ನಾವೇ ಸಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಚರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ. ೬ ಆ., ೧ ರೂ ೪ ಆ.

ಚುಕ್ಕೆಯುಳ್ಳ ಟೋಪಿಗಳು ರೂ. ೧—೮; ರೂ ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ.; ೧ ರೂ. ೮ ಆ; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ.

ಕೊಸಗಳ ಟೋಪಿ, ಫುಲ್ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ :—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

BENEFIT YOURSELF AND BENEFIT OTHERS.

The National Insurance and Banking Compan[y] Ltd., Amritsar.

Authorised Capital	Rs.	10,00,000
Subscribed Capital Exceeds	,,	9,00,000
Paid up ,, ,,	,,	1,00,000
Funds Exceed	,,	12,00,000
Policy-holders ,,		75,000

This Company works in accordance with **the Indi[an] Life Assurance Companies' and Provident Societi[es] Acts 1912** and has also given **double the initial secur[ity]** to the **Government** as required under the **Insurance A[ct] 1912.**

How is it that the **National, of Amritsar,** h[as] become very popular throughout India?

Because, it has got almost all the attractive schem[es] which any other Life Office or Provident Society in Ind[ia] has got and also new and novel ones besides, issu[es] policies at most favourable rates and on most liber[al] conditions; and distributes relief in thousands every quart[er] on account of **marriages and deaths.**

[122-46

WANTED

Active and honest **District Superintendents** an[d] Taluk Agents for every unrepresented district and taluk o[f] the Mysore Province and Coorg on both **salary** an[d] **commission.** The post is permanent, and our agents ar[e] entitled to **pension.** None but those who can spare whole time, who reside in district or taluk head quarters and wh[o] are well versed in English need apply.

For further particulars and prospectuses please appl[y] with **one anna stamp** and your previous experience in th[e] line to:—

M. L. NAGANNAH,

Chief Agent,

The Amritsar National Insurance Buildings,

Mysore

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಆಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನತ್ವವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 2-46

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

Always get the Emulsion with this mark—the Fishman—the mark of the "Scott" process.

ಈ ವಿಧಾನವನುಸರಿಸಿ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಮೇಲಾದ ಹೊಸ ಪುಸ್ತಕಗಳು.

ಗ್ರಾಮ—ಒಂದು ಸ್ವಾರಸ್ಯವಾದ ಕಥೆ ಈಗತಾನೆ ಅಚ್ಚಾಗಿದೆ 1 ಆಣೆ. ರಾಜಸಾಮ್ರಾಜ್ಯ—ಅದು ಕರಾದ ಸೂರ್ಯವಂಶ ರಾಜ್ಯದ ..... ಸಾದ ಒಂದು ಸವಪ್ನ ಇದೆ, ತಿಳಿವಳಿಕೆ ಹೆಚ್ಚುತ್ತದೆ 6 ಆಣೆ ಉನ್ನತ್ತೆ ಅನುವಾದ ಬಂಗಾಳಿ ನಾವಲ್ 21 ಆಣೆ. ಕಿಂಡರ್‌ಗಾರ್ಟನ್ ಕಥೆ ... ಬೋಧಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು ... ಬೋಧನಕ್ರಮಸಂಗ್ರಹ ಪ್ರತಿ ಸ್ಕೂಲ್‌ಮಾಸ್ತರಿಗೂ ಬೇಕಾದ ... ಆಣೆ ಲೋ ಸೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ... 1 ಆಣೆ [165-1]

...ಕೆಸ್ವಾಮಿ ... ಸ್ಕೂಲ್, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶದ ಮೂಲ ... ರಕ್ತದಿಂದ ... ಕಳ್ಳುತ್ತಿರುವವರಿಗೆ ... ಆರೋಗ್ಯವಾಗಿರುವುದು ... ಮೂತ್ರಕೋಶವು ಆ ಕಾರ್ಯವನ್ನು ನಡೆಸದ ... ಪ್ರಯಾಸ ... ರೋಗಗಳುಂಟಾಗುವುದು

ಮೂತ್ರಕೋಶದ ... ಅಥವಾ ... ಲಕ್ಷಣಗಳೇನೆಂದರೆ — ... ಮೂತ್ರದಲ್ಲಿ ... ಬಿಳುಪಾಗಿ ..., ಬೆನ್ನು ಬಾಯಾರಿಕೆ ಬಳ ... ಕಣ್ಣುಗಳ ..., ಗಂಟು ..., ಮರವು ..., ಇವು ಮೊದಲಾದವು ... ಮೂತ್ರ ... ಮೂತ್ರ, ... ಬಂದರಾದ ... ಉಂಟಾಗುವವು ... ಮೂತ್ರಕೋಶದ ... ಮೂತ್ರಕೋಶಗಳನ್ನು ... ರಕ್ತದಿಂದ ... ಹೊರಕ್ಕೆ ... ಆರೋಗ್ಯವಾಗಿ ... [12-10]

... ಮೂತ್ರಕೋಶದ ... ರೋಗ ... ಡೋನ್ಸ್ ಮೂತ್ರಕೋಶದ ... ಮೂತ್ರಕೋಶಗಳನ್ನು ಆರೋಗ್ಯವಾಗಿ ಮಾಡುವವು



... ೩—೨—೦, ೬ ಡಬ್ಬಿಗಳಿಗೆ ರೂ ೧೦—೮—೦ ... ಮಾರುವವರೆಲ್ಲರಲ್ಲಿಯೂ ಮಾರುವುದು ಅಥವಾ ... ಬಾಕ್ಸ್ ... ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—10—1912 ರಿಂದ 1—11—1912 ರ ವರೆಗೆ

ಊರು	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	4	10	0	0
ಮೈಸೂರು	0	0	0	0
ಬೆಂಗಳೂರು ಡಿಸ್ಟ್ರಿಕ್ಟು	16	14	0	0
ಮೈಸೂರು	51	30	0	0
ಕೋಲಾರ	0	0	31	5
ಕೋಲಾರ ಚಿನ್ನದ ಗಣಿಗಳು	25	15	0	0
ತುಮಕೂರು ಡಿಸ್ಟ್ರಿಕ್ಟು	5	4	51	34
ಹಾಸನ	4	3	0	0
ಚಿತ್ರದುರ್ಗ	0	0	13	33
ಕಡೂರು	6		7	4
ಶಿವಮೊಗ್ಗ	10	8	.	4
ಒಟ್ಟು	151	105	111	84

ಶಾಲಿವಾಹನ ಶಕೆ ವರುಷ ಗಳು 1834 ನೇ ಪರೀಧಾವಿ ಸಂವತ್ಸರ ದಕ್ಷಿಣಾಯನ ಶರದೃತು ಕಾರ್ತೀಕ ಶುದ್ಧ ... ಶುಕ್ರವಾರದಿಂದ ಕಾರ್ತೀಕ ಶುದ್ಧ ... ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ ತೇದಿ
15	ಶುಕ್ರ	ಷಷ್ಠಿ	11-57	ಉತ್ತರಾ	3-3	1
16	ಶನಿ ,,	ಸಪ್ತಮಿ	17 7	ಶ್ರವಣ	9-22	2
17	ಭಾನು ‡	ಅಷ್ಟಮಿ	21-15	ಧನಿಷ್ಠ	15-55	3
18	ಸೋಮ †	ನವಮಿ	27-48	ಶತಭಿಷ	23 17	4
19	ಮಂಗಳ *	ದಶಮಿ	12-25	ಪೂಭಾ	25-7	5
20	ಬುಧ ,,	ಏಕಾದಶಿ	36 7	ಉತ್ತಭಾ	33-3	6
21	ಗುರು §	ದ್ವಾದಶಿ	38-15	ರೇವತಿ	38-24	7

ವಿಷ್ಣುಪದ ಪುಣ್ಯಕಾಲ, ಸಮಾಪ್ತಿ, ಮಳೆ ನಕ್ಷತ್ರ—ವಿಶಾಖೆ 4 ನೇ ಪಾದ. ,, ಅಷ್ಟಮೀ ತಿಥಿ. ‡ ಶೂನ್ಯತಿಥಿ, ವ್ಯತಿ... † ಕಾರ್ತೀಕ ಸೋಮವಾರ, ... ನಕ್ಷತ್ರ—ಅನುರಾಧ 1 ನೇ ಪಾದ. * ಮೇಲುಕೋಟೆಯಲ್ಲಿ ಅಷ್ಟತೀರ್ಥ... ,, ಸರ್ವತ್ರ ಏಕಾದಶಿ, ಮೇಲುಕೋಟೆಯಲ್ಲಿ ಅಷ್ಟತೀರ್ಥ ರಥ. § ... ದ್ವಾದಶೀ, ಪುಷ್ಪಬೃಂದಾವನೋತ್ಸವ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು.
ಕಟ್ಟು ಅಕ್ಕಿ ಪಲ್ಲ ೧ಕ್ಕೆ	ರೂ	೧೭-೪-೦	೧೭-೮-೦
ಕೆಂಪು ಅಕ್ಕಿ ಅವಲ್		೧೭-೮-೦	೧೭-೧೨-೦
,, ಮುಯಿ		೧೭ ೦-೦	೧೭-೦-೦
ಜಾಪತ್ರಿ ಅಕ್ಕಿ		೧೭ ೦-೦	೧೭-೪-೦
ಸಣ್ಣಕ್ಕಿ ಅವಲ್		೧೮-೮-೦	೧೮ ೮-೦
,, ಮುಯಿ		೧೮-೦-೦	೧೭-೮-೦
... ಬೆಳೆ ... ಪಲ್ಲ ೧ಕ್ಕೆ		೧೩-೮-೦	೧೩-೪-೦
,, ಮುಯಿ ,,		೧೨-೧೨-೦	೧೨-೮-೦
ಜೋಳ ರಾಗಿ ಪಲ್ಲ ೧ಕ್ಕೆ		೭-೧೨-೦	೭-೮-೦
ರಾಗಿ		೭-೦-೦	೭-೦-೦
ಜೋಳ ,,		೭-...	೭-೪-೦
ತೊಗರಿಬೇಳೆ ಪಲ್ಲ ೧ಕ್ಕೆ		೧೧-೮-೦	೧೩-೧೨-೦
ಬೇಳೆ ಅವರೆ ,,		೧೧-೦-೦	೧೧ ೦-೦
ಹೆಸರು ,,		೧೩-೮-೦	೧೪-೦-೦
ಉದ್ದು ,,		೧೭-೦-೦	೧೬-೦-೦
ಕಡಲೆ ,,		೧೨ ೮-೦	೧೨-೮-೦
ಎಳ್ಳು ಸೇರು ೧೨೭ಕ್ಕೆ		೨೨-೪ ೦	೨೪-೦-೦
ಹುರುಳಿ ಪಲ್ಲ ೧ಕ್ಕೆ		೬-೧೨-೦	೭-೨-೦
ಹರಳು ೧೨೭ ಸೇರಿಗೆ		೧೩-೦-೦	೧೪-೦-೦
ಹುಣಿಸೇ ... ಮಣ ೧ಕ್ಕೆ		೩ ೪-೦	೩-೮-೦
ಮೆಣಸಿನಕಾಯಿ ,,		೩-೦-೦	೩-೬-೦
,, ಪುಡಿ		೨-೮-೦	೨-೧೨-೦
ಬೆಲ್ಲ ... ಅಚ್ಚು ೧೦೦ಕ್ಕೆ		೫ ೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೨-೦	೬-೬-೦
ಹರಳೆಣ್ಣೆ ,, ,,		೫ ೨-೦	೬-೦-೦
ಕೊಬ್ಬರಿ ... ಪಲ್ಲ ೧ಕ್ಕೆ		೫ ೦-೦	೫-೪-೦
ಉಪ್ಪು ,, ,,		೬ ೦-೦	೬-೦-೦
ಹುಣಿಸೇ ಹಣ್ಣು ಮಣ ೧ಕ್ಕೆ		೧-೪-೦	೧-೪-೦
,, ಹಳೆದು ,,		೧-೦-೦	೧-೨-೦
ತುಪ್ಪ ಮಣ ೧ಕ್ಕೆ		೧೭-೦-೦	೧೯-೦ ೦
ಸೀಮೆಯೆಣ್ಣೆ ಟಿನ್ ೧ಕ್ಕೆ		೫-೦-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬-೮-೦	೬-೦-೬
ಅಳಲೇಕಾಯಿ ಮಣ ೧ಕ್ಕೆ		೬-೦-೦	೧-೦-೦
ಅಂಟುವಾಳದ ಕಾಯಿ ಮಣ ೧ಕ್ಕೆ		೨-೧೨-೦	೧-೮-
ಚಿನ್ನ (ಪೌನ್) ಒಂದು		೧೫ ೮-೦	೧೫ ೮-೦
,, ,, ಪವನ್		೧೫ ೧೪-೬	೧೫-೧೪-೦
,, ,, ಗಟ್ಟಿ ತೊಲ ೧ಕ್ಕೆ		೨೪ ೩-೦	೨೪-೩-೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ		೮೧-೦-೦	೮೧-೦ ೦

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು.

ಸೆಪ್ಟೆಂಬರ್ ತಿಂಗಳ ಮೀಟಿಂಗು.

ಈ ತಿಂಗಳು ತಾ 1 ನೇ ... ಈ ಸಂಘದ ಮೆಂಬರುಗಳು ತಿಂಗಳ ಮೀಟಿಂಗನ್ನು ನಡಸಿದರು ಸುಮಾರು 10 ಜನ ಮೆಂಬರುಗಳು ಮಾತ್ರ ಹಾಜರಿದ್ದರು ಕಳೆದ ತಿಂಗಳಲ್ಲಿ ... ಆಟೆಂಡೆನ್ಸ್ ರಿಜಿಸ್ಟರನ್ನು ಈ ತಿಂಗಳಿನ ಪ್ರಾರಂಭ ... ಫಿಯುವಿ ... ಕ್ಲಾಸುಗಳು ಈ ಮೀಟಿಂಗಿಗೆ ... ರಲ್ಲಿ ... ಬಹಳ ಹೊತ್ತು ಚರ್ಚೆ ನಡಿಸಿದರು ನಾನಾ ... ಹೊರಪಟ್ಟವು ಈ ಸಂಘದ ಅಭಿವೃದ್ಧಿ ವಿಚಾರದಲ್ಲಿ ... ಕ್ರಮಗಳನ್ನು ... ನಡಿಸಬೇಕೆಂದು ಕೆಲವರು ಪ್ರಯತ್ನ ... ಕೆಲವು ನಿಬಂಧನೆಗಳನ್ನು ಮಾಡಿದರು ಮುಂದಿನ ತಿಂಗಳ ... 1 ನೇ ತಾ ... ಕೆಲಸಗಳನ್ನು ... ಮುಕ್ತಾಯಮಾಡಿದರು

ವಿ ... ಭಿಷ್ಮಪ್ಪ, ಸಂಘದ ಸೆಕ್ರೆಟರಿ

ತಾಲ್ಲೂಕು ವರ್ತಮಾನಗಳು

ಶೃಂಗೇರಿ — ಈ ವರ್ಷ ಹದವಾಗಿ ಮಳೆ ನಡೆಯಿತು ಈಗ ಛಳಿ ಪ್ರಾರಂಭವಾಗಿದೆ ಹವಾ ತಕ್ಕಮಟ್ಟಿಗೆ ಅನುಕೂಲವಾಗಿದೆ ಅಡಿಕೆ ಕೊಯಿಲು ಪ್ರಾರಂಭವಾಗಿದ ಬತ್ತದ ಪೈರು ಕಳೆದ ವರ್ಷಕ್ಕಿಂತ ಉತ್ತಮವಾಗಿದ ಇಲ್ಲಿ ಬೆಳೆದ ಭತ್ತವು ಮಂಗಳೂರು ಕಡೆ ಸಾಗಿಹೋಗುವುದರಿಂದ ಧಾರಣೆ ಜಾಸ್ತಿ ಹೆಚ್ಚುತ್ತಿದೆ.—ತಾ 6 ನೇ ಬುದವಾರ ಈಗಿನ ಶ್ರೀಚಂದ್ರಶೇಖರ ಭಾರತೀ ಸ್ವಾಮಿಗಳವರ ವರ್ಧಂತೀ ಮಹೋತ್ಸವವು ವಿಜೃಂಭಣೆಯಾಗಿ ನಡೆಯಿತು — ಊರಿನ ಕೆಲವು ಬೀದಿಗಳಲ್ಲಿ ರಾತ್ರಿ ಕಾಲದಲ್ಲಿ ಕಳ್ಳುಗಳ ಹೊಡೆತವು ಕೇಳಬರುತ್ತ ಪೋಲೀಸು ಅಧಿಕಾರಿಗಳು ಚೆನ್ನಾಗಿ ಗಮನ ಕೊಟ್ಟು ಬಂದೋಬಸ್ತು ಮಾಡುವರೆಂದು ನಂಬಿದೇವೆ.

ಫ್ರೆಂಚ್ ರಾಕ್ಸ್ —ಒಂದೆರಡು ವಾರಗಳಿಂದಲೂ ಮಳೆ ನಿಂತು, ಬಿಸಿಲು ತೀಕ್ಷ್ಣವಾಗಿದ ಕೆರೆಗೆ ಅರ್ಧ ಭಾಗ ನೀರು ಬಂತು ಪೈರುಪಚ್ಚೆಗಳು ಕೋಮಲವಾಗಿವೆ ಆದರೂ ಧಾರಣೆವಾಸಿಗಳು ಮಾತ್ರ ಇಳಿಯಲಿಲ್ಲ — ಈ ಪ್ರಾಂತ್ಯ ಕೋತಿಗಳ ಅವಾಂತ್ರ ಬಹಳ ಊರಿನ ನಾಲ್ಕು ಕಡೆ ಮಂದೆಮಂದೆಯಾಗಿ ಸೇರಿಕೊಂಡು ಪೈರುಗಳನ್ನು ಹಾಳುಮಾಡುತ್ತವೆ ಕಬ್ಬು, ಕದರಿ ಕಾಯಿ, ರಾಗಿ, ಜೋಳಗಳಿಗೆ ಉಳುಗಾಳಿಲ್ಲ ತೆಂಗಿನ ಮರಗಳನ್ನು ಲೂಟಿ ಮಾಡುತ್ತಾ ಇರುವುದರಿಂದ ರೈತರ ಬೊಬ್ಬೆ ಹೇಳತೀರದು ಸರ್ಕಾರದವರು ಈ ಕೋತಿಗಳ ಅವಾಂತ್ರವನ್ನು ತಪ್ಪಿಸಿಕೊಟ್ಟಲ್ಲಿ ತುಂಬಾ ಉಪಕಾರವಾದೀತು 3-4 ವರುಷಗಳಿಂದ ಕೋತಿಗಳ ಹಾವಳಿ ಹೆಚ್ಚಿರುವುದರಿಂದ ರೈತರು ತರಕಾರಿ ವಗೈರೆ ಬೆಳೆಯುವುದನ್ನು ಬಿಡುತ್ತಾ ಬಂದಿರುವರು ಈಗ ಸ್ವಲ್ಪ ಹಣ ವಸೂಲ್ಮಾಡಿ ಕೋತಿ ಹಿಡಿಯುವವರನ್ನು ಕರಸಬೇಕೆಂಬ ಪ್ರಯತ್ನ ನಡೆದಿರುತ್ತೆ ಹಾಗೆ ಹಿಡಿಯತಕ್ಕವರು ಬಂದು ಫ್ರೆಂಚ್ ರಾಕ್ಸ್ ಕಸಬೆಯಲ್ಲಿರುವ ಜಮೀನ್ದಾರ್ ರಾವಬಹದೂರು ಮೊದಲಿಯಾರ್ರನ್ನು ಕಂಡರೆ ಅವರು ತಕ್ಕ ಪ್ರೋತ್ಸಾಹಕೊಡುವದಕ್ಕೆ ಸಿದ್ಧರಾಗಿದಾರೆ

ಕೊರಟಗೆರೆ —ಮ॥ ಲಿಂಗೇಗೌಡರವರು ತಮ್ಮ ಅಂತ್ಯಕಾಲದ ವರೆಗೂ ಷೈವಭಕ್ತರಾಗಿಯೂ ನಾದ ಮಠದಲ್ಲಿ ಮುಖಂಡರಾದ ಯಜಮಾನರಾಗಿಯೂ, ಅಲ್ಲದೆ ವೈದ್ಯಶಾಸ್ತ್ರವನ್ನು ಚೆನ್ನಾಗಿ ಬಲ್ಲವರಾಗಿಯೂ, ನಾಡಿ ಪರೀಕ್ಷೆಯನ್ನು ನೋಡುವವರಲ್ಲಿ ಬಹಳ ಗಟ್ಟಿಗರಾಗಿಯೂ, 40 ವರುಷಗಳು ಇದೇ ಗ್ರಾಮದ ಪಟೇಲಿ ನಡಿಸಿದವರಾಗಿಯೂ, ಎಲ್ಲಾ ಜನಗಳಲ್ಲಿಯೂ ವಿಶ್ವಾಸಪರರಾಗಿಯೂ, ಕನ್ನಡದಲ್ಲಿ ತಕ್ಕಮಟ್ಟಿಗೆ ಪಂಡಿತರಾಗಿಯೂ ಇದ್ದು, ಇದೇ ತಿಂಗಳು 8 ನೇ ತಾ. ರಾತ್ರಿ ಕಾಲವಾದರು. ಇವರಿಗೆ ಸಾಯುವಾಗ್ಗೆ 91 ನೇ ವರುಷ. ಮತ್ತು ಚಿನ್ನ ಬೆಳ್ಳಿ ವ್ಯಾಪಾರದಲ್ಲಿ ಗಟ್ಟಿಗರಾಗಿಯೂ, ಜನೋಪಕಾರಿಗಳಾಗಿಯೂ, ಅನೇಕ ಜನ ಅಕ್ಕಸಾಲಿಗರನ್ನು ತಮ್ಮಲ್ಲಿಟ್ಟುಕೊಂಡು ಅವರಿಗೆ ಜೀವನವನ್ನು ನಡಿಸುತ್ತಿದ್ದವರಾಗಿಯೂ, ನ್ಯಾಯವಾದ ಲೇವಾದೇವಿಗಳನ್ನು ನಡಿಸುತ್ತಾ ಬಡವರನ್ನು ತಕ್ಕಮಟ್ಟಿಗೆ ಆದರಿಸುತ್ತಲೂ ಇದ್ದ ಸೊಲುಬೆಲೆ ಮಲ್ಲಪ್ಪನವರು ... ನೇ ತಾ. ಕಾಲವಾದರು. ಲಿಂಗೇಗೌಡರವರ ಮತ್ತು ಸೊಲುಬೆಲೆ ಮಲ್ಲಪ್ಪನವರ ಮರಣಗಳು ಕೊರಟಗೆರೆ ಟವನ್ ಪ್ರಜೆಗಳಿಗೆ ಬಹಳ ಪರಿತಾಪವನ್ನುಂಟುಮಾಡಿರುತ್ತದೆ

ತುಂಕೂರು.—ಇಲ್ಲಿ ಮಳೆ ಬಹಳವಾಗಿ ಆಯಿತು ಪೈರುಗಳೆಲ್ಲಾ ಫಲವತ್ತಾಗಿ ಬೆಳೆದು ಕಟಾವಿಗೆ ಬಂದಿರುತ್ತವೆ. ರೈತರು ಹರ್ಷಮುಖಿಗಳಾಗಿರುತ್ತಾರೆ ಆದರೆ ಧಾರಣೆವಾಸಿಗಳು ಇಳಿಯಲಿಲ್ಲ. ಸಂತೆಗಳಲ್ಲೂ ಪೇಟೆಗಳಲ್ಲೂ ಕಮ್ಮಿ ಅಳತೆ ಕಮ್ಮಿ ತೂಕವನ್ನು ವ್ಯಾಪಾರಸ್ಥರು ಇಟ್ಟುಕೊಂಡು ಒಕ್ಕಲಿಗರಿಗೆ ಬಹಳ ನಷ್ಟಪಡಿಸುತ್ತಾರೆ ಈ ವಿಷಯದಲ್ಲಿ ಸರ್ಕಾರದವರು ಗಮನ ಕೊಟ್ಟು ಈ ಮೋಸವನ್ನು ಪರೀಕ್ಷಿಸಿ ಸರಿಪಡಿಸುತ್ತಾರೆಂದು ನಂಬುತ್ತೇವೆ —ಈ ಟವನ್ ಮುನ್ಸಿಪಾಲಿಟಿ ಮೆಂಬರುಗಳೂ ಡೆಪ್ಯುಟಿ ಕಮಿಷನರ್ ಮೆ॥ ಬಾಲಸುಂದರಂ ಅಯ್ಯರವರೂ ಪ್ರಜಾನುರಾಗಕ್ಕೆ ಪಾತ್ರರಾಗಿ ಅನೇಕ ಏರ್ಪಾಡುಗಳನ್ನು ಮಾಡುತ್ತಲಿದಾರೆ ಆದರೆ ಕುಂಬಾರರ ಆವಿಗಳಿಂದ ಉಂಟಾಗುವ ದುರ್ಗಂಧವೆ ಹೊಗೆಯು ಧೂಳಿಯನ್ನೆಲ್ಲಾ ಕೆಡಿಸಿ ಸೇವಿಸ ಮಾಡುವುದಕ್ಕೆ ಆಗಲಾರದೆ ಅನೇಕ ತರವಾದ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಿದೆ ಊರ ಮಧ್ಯೆ ನಡೆಯುವ ಈ ಕಸುಬನ್ನು ತಪ್ಪಿಸಿದರೆ ಕ್ಷೇಮವಾದೀತು ಯಾಕೆಂದರೆ ಈ ಊರಿನ ಹವಾ ಬಹಳ ಆರೋಗ್ಯಕರವಾದದ್ದೆಂದು ಅನೇಕ ಜನ ಪೆನ್ಶನ್ ಉದ್ಯೋಗಸ್ಥರುಗಳು ಬಂದು ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ

ತ್ಯಾಮಗೊಂಡ್ಲು —ಈ ಪ್ರಾಂತ್ಯ ಕಾಲಕ್ಕೆ ಸರಿಯಾಗಿ ಮಳೆಯಾಗಿ ಕೆರೆಗಳೆಲ್ಲಾ ಕೋಡಿಬಿದ್ದು ಪೈರುಗಳು ಕಟಾವಾಗುತ್ತಲಿವೆ ಧಾರಣೆ ವಾಸಿಗಳು ರಾಗಿ ಮಾತ್ರ ಇಳಿಮುಖವಾಗಿವೆ ಮುನಿಸಿಪಲ್ ಏರ್ಪಾಡು ತಕ್ಕಮಟ್ಟಿಗೆ ಅನುಕೂಲವಾಗಿದೆ ಆದರೆ ಕೆಲವು ಕಡೆ ಚರಂಡಿಗಳ ಒಟ ಸರಿಯಾಗಿಲ್ಲದೆ ಬಚ್ಚಲ ನೀರು ನಿಲ್ಲುತ್ತದೆ —ಕಳೆದ ವಿಜಯ ದಶಮಿಯ ಉತ್ಸವವನ್ನು ಯಾವ ಗಲಾಟೆಗೂ ಆಸ್ಪದವಿಲ್ಲದಂತೆ ಪಟೇಲ್ ... ಅಶ್ವತ್ಥಪ್ಪನವರು ನಿಂತು ನಡೆಯಿಸಿದರು.—ಈ ಟವನ್ನಿನಲ್ಲಿ ಸಿಡುಬು ಹಾಕುವ ವಿಷಯದಲ್ಲಿ ವಾಕ್ಸಿನೇಟರವರು ಸಂದುಗೊಂದುಗಳನ್ನು ತಿರುಗಿ ಪ್ರತಿಯೊಂದು ಮನೆಯನ್ನು ನೋಡಿ ಹಾಕುತ್ತಲಿದಾರೆ —ಈ ಟವನ್ನಿನಲ್ಲಿದ್ದ ಜಮಾದಾರ್ರು ನೆಲಮಂಗಲಕ್ಕೆ ವರ್ಗಾಯಿಸಲ್ಪಟ್ಟರು ಇವರಿಗೆ ಬದಲಾಗಿ ಬಂದಿರುವ ಜಮಾದಾರ್ರು ... ರಾಮಶೆಟ್ಟಿಯವರು ತುಂಬಾ ಆಸಕ್ತಿಯಿಂದ ಕೆಲಸ ಮಾಡುತ್ತಲಿರುವುದು ಸಂತೋಷಕರವಾಗಿದೆ — ಕೋಟೆಯಲ್ಲಿ ಪಾಳುಮನೆಗಳ ಸಂಖ್ಯೆ ಹೆಚ್ಚಾಗಿರುವದರಿಂದ ಕೋಟೆ ಗಿಡಗಳು ಬೆಳೆದು ಕಾಡಾಗುತ್ತಲಿದೆ —ಈ ಊರಿಂದ ದೊಡ್ಡಬೆಲೆ ಸ್ಟೇಷನ್ನಿಗೆ ಆಗುತ್ತಿದ್ದ ಬಂಡಿ ರಸ್ತೆಯು ಸ್ವಲ್ಪ ದೂರ ಮಟ್ಟಿಗೆ ಆಗಿ ನಿಂತುಹೋಗಿರುತ್ತೆ —ನೂಲೂರು ಸಮೀಪ ... ಗ್ರಾಮದಲ್ಲಿ ಆಚಾರ್ಯರಾಗಿದ್ದ ಸಚ್ಚಿದಾನಂದ ... ನವರು ಈಗ್ಗೆ ಎರಡು ವರುಷಗಳ ಹಿಂದೆ ಈ ಟವನ್ನಿನಲ್ಲಿ ಪ್ರಖ್ಯಾತಿಯನ್ನು ಹೊಂದಿ ಕೆಲವು ದಿನಗಳಲ್ಲು ಕಾಲವಾದರು ಅನಂತರ ಇವರು ಜನಗಳ ಕೋರಿಕೆಯನ್ನು ನೆರವೇರಿಸುತ್ತಾರೆಂದು ತಿಳಿದು ಪ್ರತಿ ... ನೂರಾರು ಜನಗಳು ಅವರ ಸಮಾಧಿಗೆ ಹಣ್ಣು ಕಾಯಿಗಳನ್ನು ತೆಗೆದುಕೊಂಡು ಹೋಗಿ ಪೂಜಿಸುತ್ತಲಿದಾರೆ ಈ ನವನಾಗರಿಕ ಕಾಲದ ಜನಗಳ ಬುದ್ಧಿಯನ್ನೂ, ಅವರು ನಂಬುವದನ್ನೂ, ಅವರ ಹೊಗಳಿಕೆಯನ್ನೂ ನೋಡಿದರೆ ಆಶ್ಚರ್ಯವಾಗುತ್ತವೆ

ಮಾಲೂರು —ಲಕ್ಕೂರು ಗ್ರಾಮದ ಸ್ಕೂಲು ಈ ತಾಲ್ಲೂಕಿನ ಎಲ್ಲಾ ವಿ ಇ ಸ್ಕೂಲುಗಳಿಗಿಂತ ದೊಡ್ಡದು, 130 ಜನ ಬಾಲಕರು ಓದುತ್ತಾರೆ ... ಜನ ಮಾಸ್ತರುಗಳಿರುವರು ಇದು ದೊಡ್ಡ ಸ್ಕೂಲಾಗಿದ್ದರೂ ಸ್ಕೂಲ್ ಕಟ್ಟಡವಿಲ್ಲದೆ ಬಹಳ ಅನಾನುಕೂಲವಾಗಿತ್ತು ಈಗ ನಮ್ಮ ಮಹಾರಾಜಾ ಸರ್ಕಾರದವರು 2,000 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ ಆದರೆ ಗ್ರಾಮಸ್ಥರಿಂದ ಕಂಟ್ರಿಬ್ಯೂಷನ್ ವಸೂಲಾದ ಕೂಡಲೆ ಕಟ್ಟಡಕ್ಕೆ ಶುರು ಮಾಡುವರೆಂದು ತೋರುತ್ತೆ ನಮ್ಮ ಡೆಪ್ಯುಟಿ ಇನ್ಸ್‌ಪೆಕ್ಟರವರು ಈ ವಿಷಯದಲ್ಲಿ ಬಹು ಉತ್ಸಾಹಶೀಲರಾಗಿರುತ್ತಾರೆ ಕಟ್ಟಡಕ್ಕೆ ಸ್ಥಳ ವಗೈರೆ ಬಂದು ನೋಡಿಕೊಂಡು ಹೋದರು —ಹೆಡ್ ಮಾಸ್ಟರು ರೀಡಿಂಗ್ ರೂಂ ಒಂದನ್ನು ಪ್ರಾರಂಭಿಸಿದಾರೆ. ಇದು ಸ್ತೋತ್ರಾರ್ಹವಾಗಿದೆ.—ಈ ಊರಿಗೆ ಒಂದು ಗರ್ಲ್ಸ್ ಸ್ಕೂಲು ಆಗುವ ಹಾಗೆ ಸರ್ಕಾರಕ್ಕೆ ಬರದಿದಾರೆ ಸರ್ಕಾರದವರು ದಯವಿಟ್ಟು ಜಾಗ್ರತೆ ಮಂಜೂರು ಮಾಡಿದರೆ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ಅನುಕೂಲವಾಗಿರುತ್ತೆ. ಸ್ಕೂಲಿನಲ್ಲಿ ಹುಡುಗರ ಸಂಖ್ಯೆ ಜಾಸ್ತಿಯಾದ್ದರಿಂದ ಮತ್ತೊಬ್ಬ ಸಹಾಯೋಪಾಧ್ಯಾಯರನ್ನು ಸರ್ಕಾರದವರು ನಿಯಮಿಸಿದರೆ ವಿದ್ಯಾಭಿವೃದ್ಧಿ ಇನ್ನೂ ಹೆಚ್ಚುವದರಲ್ಲಿ ಸಂಶಯವಿಲ್ಲ.—ಮಾಲೂರು ತಾಲ್ಲೂಕು ಮಾಸ್ತಿಯಲ್ಲಿ ನಡೆಯುವ ಬುಧವಾರ ಸಂತೆಗೆ ಈ ಲಕ್ಕೂರಿನಿಂದ ವರ್ತಕರು ಹೋಗುವ ವಾಡಿಕೆಯುಂಟು ಮೊನ್ನೆ 6 ನೇ ತಾ ಬುಧವಾರ ಪದ್ಧತಿಯಂತೆ ಎಲ್ಲಾ ವರ್ತಕರೂ ಹೋಗಿ ಬರುತ್ತಿರುವಾಗ ಲಕ್ಕೂರಿನಿಂದ ಒಂದೂವರೆ ಮೈಲಿ ಇರತಕ್ಕ ಮಿಣಸಂದ್ರವೆಂಬ ಗ್ರಾಮದ ಬಳಿ ಸುಮಾರು ರಾತ್ರಿ 7 ಘಂಟೆ ಸಮಯದಲ್ಲಿ ಸರಾಫ್ ಮುನಿಯಪ್ಪ, ಸರಾಫ್ ಅಪ್ಪೈಯಾಚಾರಿ, ಜವಳಿ ಅಂಗಡಿ ವೆಂಕಟಪ್ಪ ಎಂಬುವರನ್ನು ಕಳ್ಳರು ಹೊಡೆದು ಬಹಳ ಘಾಯಪಡಿಸಿ, ಅವರ ಪೈಕಿ ಅಪ್ಪೈಯಾಚಾರ್ರನ್ನು ತಲೆಯ ಮೇಲೆ ದೊಣ್ಣೆಯಿಂದ ಘಾಯಪಡಿಸಿ ಅವರ ಸರಾಫ್ ಚೀಲವನ್ನು ಹೊತ್ತುಕೊಂಡು ಬರುತ್ತಿದ್ದ ಕುದುರೆಯನ್ನು ಘಾಬರಿಪಡಿಸಿ, ಅದರಲ್ಲಿದ್ದ ಸುಮಾರು 300-400 ರೂಪಾಯಿ ನಗನಾಣ್ಯಗಳನ್ನು ಅಪಹರಿಸಿಕೊಂಡರು ಆದರೆ ಸರಾಫ್ ಮುನಿಯಪ್ಪನವರನ್ನು ಹೊಡದರೆ ಹಿಡಿದಾಗ್ಯೂ ಅವರು ನಗನಾಣ್ಯಗಳನ್ನು ಕಳೆದುಕೊಳ್ಳಲಿಲ್ಲ ಈ ಚೋರಿ ನಡೆದ ಸ್ಥಳವು ಮಾಲೂರಿನಿಂದ ಹೊಸೂರಿಗೆ ಹೋಗುವ ಹೈರೋಡಿನಲ್ಲಿ ಲಕ್ಕೂರು ಪೋಲೀಸ್ ಸ್ಟೇಷನ್ಗೆ 1-2 ಫರ್ಲಾಂಗ್ ದೂರದಲ್ಲಿದೆ ಇಂಥಾ ದರೋಡೆ ಕಳುವು ನಡೆದದ್ದಕ್ಕಾಗಿ ವಿಷಾದಪಡುತ್ತೇವೆ ಮುಂದಾದರೂ ಪೋಲೀಸ್ ಆಫೀಸರು ಮುತುವರ್ಜಿಯಿಂದ ಸರಿಯಾದ ಏರ್ಪಾಡು ಮಾಡುವರೆಂದು ನಂಬಿದೇವೆ.

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೨ನೇ ಇಸವಿ ನವಂಬರ್ ತಾ ೧೪ನೇ ಗುರುವಾರ

ಮೈಸೂರು ದಿವಾನಗಿರಿಯ ಬದಲಾವಣೆಯು.

ಕೆಲವು ಕಾಲದಿಂದ ಮೆ॥ ಟಿ. ಆನಂದರಾವ್, ಸಿ. ಐ. ಇ. ಯವರು ಮೈಸೂರು ಸಂಸ್ಥಾನದ ದಿವಾನಗಿರಿಯಿಂದ ನಿವೃತ್ತರಾಗುತ್ತಾರೆಂದೂ, ಚೀಫ್ ಇಂಜನಿಯರ್ ಮೆ॥ ಎಂ. ವಿಶ್ವೇಶ್ವರೈಯನವರು ದಿವಾನರಾಗುತ್ತಾರೆಂದೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿತ್ತು. ಈ ಕಾರ್ಯವು ಕಳೆದ ಭಾನುವಾರ ನೆರವೇರಿತೆಂಬ ಸಂಗತಿಯನ್ನು ನಾವು ಇನ್ನೊಂದು ಕಡೆ ಪ್ರಕಟಿಸಿರುವ ವೃತ್ತಾಂತದಿಂದ ತಿಳಿದುಕೊಳ್ಳಬಹುದಾಗಿದೆ

ಮೆ॥ ಟಿ. ಆನಂದರಾಯರವರು ಶ್ರೀಮನ್ಮಹಾರಾಜರವರ ವಿಶೇಷತರವಾದ ಮೆಚ್ಚಿಕೆಯನ್ನೂ, ಈ ಸಂಸ್ಥಾನದ ಪ್ರಜೆಗಳ ಭಕ್ತಿವಿಶ್ವಾಸಗಳನ್ನೂ ಸಂಪಾದಿಸಿಕೊಂಡು ಬಹು ವಿಶೇಷವೂ ಕಷ್ಟಸಾಧ್ಯವೂ ಆದ ದಿವಾನಗಿರಿಯನ್ನು ನಿರ್ವಹಿಸಿ ಈಗ ವಿಶ್ರಾಂತಿಯನ್ನು ಪಡೆದಿರುತ್ತಾರೆ. ಮೆ॥ ಆನಂದರಾಯರವರು ಸುಮಾರು ನಾಲ್ವತ್ತು ವರುಷಗಳ ಕಾಲ ಈ ಸಂಸ್ಥಾನದಲ್ಲಿ ಉದ್ಯೋಗವಹಿಸಿದವರು ಇವರಲ್ಲಿ ಸ್ವಾಮಿಭಕ್ತಿಯೂ, ಚಟುವಟಿಕೆಯೂ ಕಾರ್ಯದಕ್ಷತೆಯೂ ಮೆರೆಯುತ್ತಿದ್ದವು ಅವರ ಸತ್ಯಸಂಧತೆಯೂ, ಸಚ್ಚರಿತ್ರೆಯೂ ಸಕಲರಿಗೂ ಪ್ರೇಯವಾಗಿರುತ್ತವೆ. ಇವರ ದಿವಾನಗಿರಿಯಲ್ಲಿ ಅನೇಕ ಹೊಸ ಏರ್ಪಾಡುಗಳು ಪ್ರಾರಂಭವಾದವು; ಮತ್ತು ಇವರು ಸಂಸ್ಥಾನದ ಆಸ್ತಿಯನ್ನು ವೃದ್ಧಿಪಡಿಸಿ ಉಚ್ಛ್ರಾಯ ಸ್ಥಿತಿಗೆ ತಂದಿಟ್ಟರು ಅವರೂ ಸಂಸ್ಥಾನದಲ್ಲಿ ಸರ್ಕಾರದ ನೌಕರಿಯು ಕಟ್ಟುನಿಟ್ಟಾಗಿಯೂ, ಚಟುವಟಿಕೆಯಿಂದಲೂ, ನಿರ್ದುಷ್ಟವಾಗಿಯೂ ನಡೆಯುವಂತೆ ಪರಿಷ್ಕರಿಸಲ್ಪಟ್ಟಿತೆಂದಾಗಲಿ, ದುಷ್ಕಾರ್ಯಮಾಡಿದವರಿಗೆಲ್ಲಾ ತಕ್ಕ ಪ್ರತೀಕಾರವಾಗುವಂತೆ ಏರ್ಪಟ್ಟಿತೆಂದಾಗಲಿ ನಾವು ಹೇಳಲಾರೆವು. ಮೆ॥ ಆನಂದರಾಯರವರಿಗೆ ನ್ಯಾಯವಾಗಿ ಲಭ್ಯವಾಗಿರುವ ಬಿರುದುಗಳ ಸಮೇತವಾದ ವಿಶ್ರಾಂತಿಸುಖವನ್ನು ಅವರು ದೀರ್ಘಕಾಲ ಅನುಭವಿಸುತ್ತಾ, ಉದ್ದೇಶಪಟ್ಟಿರುವ ವಿಚಾರಗಳಲ್ಲಿ ಅನುರಕ್ತರಾಗಲು ಆರೋಗ್ಯಾದಿಗಳನ್ನು ಪಡೆಯುವವರಾಗಲೆಂದು ಹಾರೈಸುತ್ತೇವೆ.

ಮೆ॥ ವಿಶ್ವೇಶ್ವರೈಯನವರು ದಿವಾನಗಿರಿಗೆ ನೇಮಕವಾದರೆಂದು ಸಂತೋಷಪಡುವೆವು. ಇದುವರೆಗೆ ಅವರು ವಹಿಸಿರುವ ಉದ್ಯೋಗಗಳಲ್ಲಿ ಒಳ್ಳೆಯ ಹೆಸರುವಾಸಿಯನ್ನು ಸಂಪಾದಿಸಿಕೊಂಡಿದಾರೆ. ಮೈಸೂರಿನಲ್ಲೇ ಹುಟ್ಟಿಬೆಳೆದವರಾದರೂ ಅವರು ಬೊಂಬಾಯಿ ಆಧಿಪತ್ಯದಲ್ಲೇ ವಿಶೇಷವಾಗಿ ಬ್ರಿಟಿಷ್ ಸರ್ಕಾರದ ನೌಕರಿಯನ್ನು ಮಾಡಿರುವರು. ಬ್ರಾಹ್ಮಣರಾಗಿದ್ದರೂ ವೈದಿಕ ನಿರ್ಬಂಧಗಳನ್ನೂ ಜಾತಿಕಟ್ಟಳೆಗಳನ್ನೂ ಲಕ್ಷ್ಯಮಾಡದೆ ಅನೇಕ ಪರರಾಜ್ಯಗಳಿಗೆ ಹೋಗಿ ಸಂಚಾರಮಾಡಿಕೊಂಡು ಬಂದಿರುತ್ತಾರೆ. ಜನಗಳ ಮತ್ತು ವಿಷಯಗಳ ಪರಿಜ್ಞಾನವು ಅವರಲ್ಲಿ ವಿಶೇಷವಾಗಿ ಉಂಟು. ಮನೋಧರ್ಮವು ಪರಿಪಕ್ವವಾಗಿರುವಂಥಾ ವಯಸ್ಸಿನಲ್ಲಿ ಅವರು ದಿವಾನಪದವಿಯನ್ನು ವಹಿಸಿಕೊಂಡಿರುತ್ತಾರೆ. ಅವರು ಇನ್ನು ಮುಂದೆ ನಿರ್ವಹಿಸಬೇಕಾಗಿರುವ ಕಾರ್ಯಗಳಿಗೆ ತಮ್ಮಲ್ಲಿರುವ ಮಾನಸಿಕ, ಧಾರ್ಮಿಕ ಮತ್ತು ಕಾಯಕ ಸಾಮರ್ಥ್ಯವನ್ನೆಲ್ಲಾ ವಿನಿಯೋಗಿಸಿದಲ್ಲದೆ ಸಾರ್ಥಕವಾಗಲಾರದು

ಮೆ॥ ವಿಶ್ವೇಶ್ವರೈಯನವರು ಸ್ವಂತವಾಗಿಯೇ ಹೊಸ ವಿಷಯಗಳನ್ನು ಕಲ್ಪಿಸುವಂಥಾ ಸಮರ್ಥರಾದ ಇಂಜನಿಯರೆಂದು ಹೆಸರು ಪಡೆದಿರುತ್ತಾರೆ. ಈಗ ಇನ್ನೊಂದು ತರದ ಸಾಮರ್ಥ್ಯವು ಬೇಕಾಗಿರುವುದರಿಂದ ಪ್ರಜಾಪಾಲನಾಶಕ್ತಿಯೂ ತಮ್ಮಲ್ಲಿ ಉಂಟೆಂಬುವುದನ್ನು ಅವರು ಪ್ರಕಾಶಕ್ಕೆ ತರಬೇಕಾಗಿದೆ ಇಂಥಾ ಶಕ್ತಿಯು ಅವರಲ್ಲಿ ಉಂಟೆಂಬುವುದನ್ನು ಅನೇಕರು ನಿರೀಕ್ಷಿಸುತ್ತಾರಾಗಿ, ಅವರು ಆ ನಿರೀಕ್ಷೆಯನ್ನು ಸಫಲಗೊಳಿಸುವಂತಾಗಲೆಂದು ಹಾರೈಸುತ್ತೇವೆ.

ಮೈಸೂರು ಸಂಸ್ಥಾನದ ಖಜಾನೆಯಲ್ಲಿ ತುಂಬಾ ಹಣವಿದೆ. ಇವನ್ನು ವಿನಿಯೋಗಿಸಿ ಮೆ॥ ವಿಶ್ವೇಶ್ವರೈಯನವರು ಈ ಸಂಸ್ಥಾನದ ಸ್ಥಿತಿಗತಿಯನ್ನು ಉಚ್ಛ್ರಾಯಕ್ಕೆ ತರಬೇಕಾಗಿರುವುದು. ಸಂಸ್ಥಾನದಲ್ಲಿ ರೈಲ್ ರಸ್ತೆಗಳ ಬಡಾವಣೆಯು ಅವಶ್ಯವೂ ಸಂತೋಷಪ್ರದವೂ ಆಗಿದೆ ಹಲವು ವರುಷಗಳಿಂದ ಪ್ರಜೆಗಳು ಅದನ್ನು ನಿರೀಕ್ಷಿಸಿಕೊಂಡು ಬಂದಿದಾರೆ ಮೈಸೂರು ಸೀಮೆಯ ಜಮೀನುಗಳಲ್ಲಿ ಈಗ್ಗಿಂತ ಹೆಚ್ಚಾದ ಫಸಲನ್ನು ಬೆಳೆಯುವಂತೆ ಯಾವ ಏರ್ಪಾಡು ನಡೆದರೂ ರೈತನಿಗೆ ಆನಂದವಾದೀತು ಸಂಸ್ಥಾನದ ರಥದ ಚಕ್ರಗಳನ್ನು ಮೆ॥ ವಿಶ್ವೇಶ್ವರೈಯನವರು ಮಿತಿಮೀರಿ ಓಡಿಸಬಹುದೆಂದು ಅನೇಕರು ಹೇಳುತ್ತಿರುವುದನ್ನು ನಾವು ಕೇಳಿದೇವೆ ಅವರ ದಿವಾನಗಿರಿಯಲ್ಲಿ ನಡಿಸಲ್ಪಡುವ ಪ್ರತಿ ಒಂದು ನೂತನ ಕಾರ್ಯವೂ ಹಣಕಾಸಿನ ವಿಷಯದಲ್ಲಿ ನಷ್ಟಕಾರಿಯಾಗದಿರುವಂತೆ ಗೊತ್ತುಮಾಡಲ್ಪಟ್ಟದ್ದಾಗಿರಬೇಕೆಂದೂ, ಮಿತಿಮೀರಿ ಇಷ್ಟು ಹೊಸ ಕಾರ್ಯಗಳನ್ನು ಏಕಕಾಲದಲ್ಲಿ ಪ್ರಾರಂಭಿಸುವುದು ತರವಲ್ಲವೆಂದೂ ಸೂಚಿಸುತ್ತೇವೆ

ಸಂಸ್ಥಾನದಲ್ಲಿ ಯಥಾರ್ಥವಾದ ಅಭಿವೃದ್ಧಿಯು ಕಂಡುಬರಬೇಕಾದರೆ ಪ್ರಜೆಗಳು ಮೊದಲು ವಿದ್ಯಾವಂತರಾಗಬೇಕೆಂಬ ಅಂಶವನ್ನು ಹೊಸ ದಿವಾನರವರು ಉಚಿತವಾಗಿ ತಿಳಿದುಕೊಂಡಿದಾರೆಂದು ನಮಗೆ ಗೊತ್ತಾಗಿದೆ ಈಗ ಜಾರಿಗೆ ತರಬೇಕೆಂದು ಯೋಚಿಸಿರುವಂಥಾ ಪ್ರಥಮ ವಿದ್ಯಾಶಾಸನದಿಂದ ಸದ್ಯದಲ್ಲಿ ಅಷ್ಟೇನೂ ಪ್ರಯೋಜನವಾದೀತೆಂದು ನಮಗೆ ತೋರುವುದಿಲ್ಲ ಈಗ ಎಲ್ಲಾ ಭಾಗಗಳಲ್ಲೂ ಪ್ರಾರಂಭಿಸಲ್ಪಡಬಹುದಾಗಿರುವ ನೂರಾರು ಪಾಠಶಾಲೆಗಳಿಗೇನೇ ಮೈಸೂರು ಸರ್ಕಾರದವರು ಸಹಾಯವನ್ನು ಒದಗಿಸದೆ ಇರುತ್ತಾರೆ ಈಗಿರುವ ಪಾಠಶಾಲೆಗಳಿಗೂ, ಮುಂದೆ ಆಗುವ ಪಾಠಶಾಲೆಗಳಿಗೂ ಹಣವನ್ನೂ ಉಪಾಧ್ಯಾಯರನ್ನೂ ಒದಗಿಸುವುದಾದರೆ ಬಲಾತ್ಕಾರದ ಕಾನೂನಿನ ಅವಶ್ಯಕತೆಯೇ ಇಲ್ಲದೆ ಅನೇಕ ಪಾಠಶಾಲೆಗಳು ಏರ್ಪಡಬಹುದಾಗಿದೆ ತರಬೇತಾದ ಮತ್ತು ಒಳ್ಳೇ ನಡೆನುಡಿಯುಳ್ಳ ಉಪಾಧ್ಯಾಯರು, ಅವರಿಗೆ ಜೀವನಕ್ಕೆ ಸಾಕಾಗುವಷ್ಟು ಸಂಬಳ, ಇವೆರಡೇ ಸದ್ಯದಲ್ಲಿ ಆವಶ್ಯವಾಗಿರುತ್ತವೆ ಇವೆರಡನ್ನೂ ಒದಗಿಸಿದ ಬಳಿಕ ಬೇಕಾದರೆ ಬಲಾತ್ಕರಿಸುವಂಥಾ ಕಾನೂನು ಮಾಡಬಹುದು ಆದರೆ ಅಂಥಾ ಕಾನೂನು ಅನೇಕ ವರುಷಗಳವರೆಗೆ ಬೇಕಾಗಲಾರದೆಂದು ಹೇಳಬಲ್ಲೆವು

ಆದರೆ ಇವೆಲ್ಲಕ್ಕಿಂತಲೂ ಮೊದಲು ಮೈಸೂರು ಸರ್ಕಾರದ ನೌಕರಿಯನ್ನು ಕ್ರಮಪಡಿಸಿ ಕಟ್ಟುನಿಟ್ಟಾಗಿಯೂ, ಚಟುವಟಿಕೆಯಿಂದಲೂ, ನಿಷ್ಪಕ್ಷಪಾತವಾಗಿಯೂ ನಡೆಯುವಂತೆ ಮೆ॥ ವಿಶ್ವೇಶ್ವರೈಯನವರು ಮಾಡಬೇಕಾದದ್ದು ಪರಮಾವಶ್ಯಕವಾಗಿದೆ ಪ್ರಜೆಗಳು ಹೇಳುವುದನ್ನು ನೋಡಿದರೆ ಸಂಸ್ಥಾನದಲ್ಲಿ ಲಂಚರುಷುವತ್ತುಗಳು ಹೆಚ್ಚಾಗಿರುವಂತೆ ಕಾಣುವುದು ಉದ್ಯೋಗಸ್ಥರಲ್ಲಿ ಅನೇಕ ಮಂದಿ ಬಹಳ ಬೇಕಾಬಿಟ್ಟಿಯಾಗಿ ಕೆಲಸಮಾಡುತ್ತಾರೆ ಪ್ರಜಾಹಿತವೆಂಬುವುದು ಅವರ ಪ್ರಥಮ ಧರ್ಮವಾಗಿಲ್ಲ. ಕೆಲಸವನ್ನು ಎಷ್ಟು ಬೇಗ ಪೂರಾ ಮುಗಿಸಲಿ ? ಯಾವ ರೀತಿ ನಡೆದುಕೊಂಡರೆ ಮೇಲ್ಪಟ್ಟ ಅಧಿಕಾರಿಗೆ ತೃಪ್ತಿಯುಂಟಾಗಿ ಬಡ್ತಿ ಸಿಕ್ಕುತ್ತದೆ ” ಏನು ಮಾಡಿದರೆ ಬೇಗ ಹಣಗಾರನಾಗಬಹುದು ” ಎಂಬೀ ರೀತಿಯಾದ ವಿಚಾರಗಳೇ ಅನೇಕ ನೌಕರಮಾನೇರುಗಳಲ್ಲಿ ಮೆರೆಯುತ್ತಿರುವವು ಇದಕ್ಕೆ ಪ್ರತಿಯಾಗಿ, ರೈತರನ್ನೂ ಗ್ರಾಮಸ್ಥರನ್ನೂ ಯಾವ ರೀತಿಯಲ್ಲಿ ಮುಂದಕ್ಕೆ ತರಬಹುದು ” ಅನ್ಯಾಯ ನಡೆಯುತ್ತಿರುವುದನ್ನು ಹ್ಯಾಗೆ ತಪ್ಪಿಸಲಿ ? ನಿರ್ದುಷ್ಟವೂ ಧರ್ಮವೂ ಆದ ಜೀವನವನ್ನು ಹ್ಯಾಗೆ ಸಂಪಾದಿಸಲಿ ” ಪ್ರಜೆಗಳಲ್ಲಿ ಸಮಾಧಾನ ಸಂತೃಪ್ತಿಗಳನ್ನೂ ರಾಜಭಕ್ತಿಪ್ರೀತಿಗಳನ್ನೂ ಅಭಿವೃದ್ಧಿಪಡಿಸುವಂತ ಕರ್ತವ್ಯಾಂಶವನ್ನು ಹ್ಯಾಗೆ ನೆರವೇರಿಸಲಿ ’ ಎಂಬೀ ರೀತಿಯಾದ ಅಭಿಮತವನ್ನು ಪಡೆದು ವರ್ತಿಸುವವರು ವಿರಳರಾಗುತ್ತಿದಾರೆ. ನೌಕರನಾದವನಲ್ಲಿ ತಾನು ಸರ್ಕಾರದ ತಾಬೇದಾರನೆಂದೂ, ಹಾಗೆಯೇ ಪ್ರಜೆಗಳ ಸೇವಕನೆಂದೂ ತಿಳುವಳಿಕೆಯೇ ಉಂಟಾಗಿರುವಂತೆ ಕಾಣುವುದಿಲ್ಲ. ಗವರ್ನಮೆಂಟಿನ ಸಂಬಳಗಾರರಲ್ಲಿ ಸತ್ಯಸಂಧತೆಯೂ, ಪ್ರಜಾಹಿತಾಪೇಕ್ಷೆಯೂ, ದೇಶಾಭಿಮಾನವೂ, ಹೀನ ದುಷ್ಕಾರ್ಯಗಳ ನಿಗ್ರಹಶಕ್ತಿಯೂ, ಆಯಾ ದಿನದ ಕಾರ್ಯಗಳನ್ನು ನಡಿಸುವುದರಲ್ಲಿ ಉತ್ಸಾಹ ಮುತುವರ್ಜಿಗಳೂ,—ಈ ಮೊದಲಾದ ಗುಣಗಳೆಲ್ಲಾ ಇನ್ನೂ ವಿಶೇಷವಾಗಿ ಹೆಚ್ಚುವುದನ್ನು ನಾವು ನೋಡಬೇಕೆಂದು ಹಾರೈಸುತ್ತೇವೆ. ಮೆ॥ ವಿಶ್ವೇಶ್ವರೈಯನವರು ಆ ರೀತಿ ಸ್ವತಃ ಕೆಲಸಗಳನ್ನು ಮಾಡುವುದರ ಮೂಲಕ ಸಂಸ್ಥಾನದ ಸಮಸ್ತ ಇಲಾಖೆಗಳ ವಿಶಿಷ್ಟ ನೌಕರಮಾನೇರುಗಳಲ್ಲೂ ಅವಶ್ಯವಾಗಿರುವ ದರ್ಪವನ್ನೂ ಉತ್ಸಾಹವನ್ನೂ ಹುಟ್ಟಿಸಿ, ಈ ಸೀಮೆಯನ್ನಾಳುವುದಕ್ಕೆ ದೇವರಿಂದ ನೇಮಿಸಲ್ಪಟ್ಟಿರುವ ಉದ್ಯೋಗಸ್ಥರುಗಳಲ್ಲೆಲ್ಲಾ ಘನತರವಾದ ಭಯಭಕ್ತಿಯನ್ನುಂಟುಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ

ಬಾಲ್ಕನ್ ಯುದ್ಧವು.

ಕಳೆದ ವಾರ ಯುದ್ಧಭೂಮಿಯಲ್ಲಿ ಹಲವು ವಿಶೇಷ ಕಾರ್ಯಗಳು ನಡೆದಿರುತ್ತವೆ ಈ ಯುದ್ಧಕಾರ್ಯಗಳೆಲ್ಲದರಲ್ಲಿ ಸುಮಾರಾಗಿ ತುರ್ಕಿಯವರು ಅಪಜಯಹೊಂದಿದಾರೆಂದೂ, ಶತ್ರುಸೈನ್ಯಕ್ಕೇನೇ ಜಯವಾಗಿರುತ್ತದೆಂದೂ ಹೇಳಬಹುದು

ಗ್ರೀಸಿಗೆ ಸೇರುತ್ತ ದಿಕ್ಕಿನಲ್ಲಿರುವ ಸಲೋನಿಕ ಎಂಬ ತೀರಪಟ್ಟಣವನ್ನು ಗ್ರೀಕರು ಸ್ವಾಧೀನಪಡಿಸಿಕೊಂಡರು (ಆಚೆ ವಾರ ನಾವು ಕಳುಹಿಸಿಕೊಟ್ಟಿರುವ ಪಟವನ್ನು ವಾಚಕರು ನೋಡಿದಲ್ಲಿ ಆ ಪಟ್ಟಣ ಇರುವ ಸ್ಥಳ ಗೊತ್ತಾಗುತ್ತದೆ) ಇದಕ್ಕಾಗಿ ಗ್ರೀಕರಿಗೂ ತುರ್ಕಿಯವರಿಗೂ ವಿಶೇಷ ಯುದ್ಧವೇನೂ ಆದಂತೆ ಕಾಣುವುದಿಲ್ಲ, ಅಲ್ಲಿದ್ದ ೨೫,೦೦೦ ತುರ್ಕಿ ಸೈನಿಕರು ಶರಣಾಗತರಾಗಿ ಪಟ್ಟಣವನ್ನು ಗ್ರೀಕರಿಗೆ ಒಪ್ಪಿಸಿ ಅವರ ಕೈಸೆರೆಯಾದರೆಂದು ತಿಳಿದುಬರುವುದು ಡಾರ್ಡನೆಲ್ಸ್ ಜಲಸಂಧಿಯಲ್ಲಿ ತುರ್ಕಿಯವರು ಹಡಗುಗಳನ್ನು ನಾಶಪಡಿಸುವಂಥಾ ಸಿಡಿಮದ್ದಿನ ಗುಂಡುಗಳನ್ನು ನೀರೊಳಗೆ ಗೋಪ್ಯವಾಗಿ ಇಟ್ಟಿರೋಣದರಿಂದ ಗ್ರೀಕರು ಅಲ್ಲಿಗೆ ತಮ್ಮ ಯುದ್ಧದ ಹಡಗುಗಳನ್ನು ಕಳುಹಿಸುವವರಿಲ್ಲ. ಅದಕ್ಕೆ ಪ್ರತಿಯಾಗಿ ಡಾರ್ಡನೆಲ್ಸ್ ಹತ್ತಿರ ಬೀಳುವ ಮರಿಟ್ಸಾ ಎಂಬ ನದೀಮುಖದಲ್ಲಿ ಗ್ರೀಕರು ತಮ್ಮ ಸೈನ್ಯಗಳನ್ನು ಕಳುಹಿಸಿ ಇಟ್ಟುಕೊಂಡು ಅಲ್ಲಿಂದ ಮುಂದಕ್ಕೆ ರಾಜಧಾನಿಯಾದ ಕಾನ್ಸ್ಟಾಂಟಿನೋಪಲನ್ನು ಪ್ರವೇಶಿಸುವ ಸನ್ನಾಹಮಾಡಿರುತ್ತಾರೆ ಮಾಂಟಿನೀಗ್ರೋದವರು ಕೈಸೆರೆಹಿಡಿದು ಕಳುಹಿರುವ ೭,೦೦೦ ತುರ್ಕಿ ಸೈನ್ಯಗಳೂ, ಗ್ರೀಕರು ಕೈಸೆರೆಹಿಡಿದಿರುವ ೨೭,೦೦೦ ತುರ್ಕಿ ಸೈನ್ಯಗಳೂ ಈಗ ಗ್ರೀಸಿನಲ್ಲಿ ಇರುತ್ತವೆಂದು ಹೇಳುವರು

ಮಾಂಟಿನೀಗ್ರೋದವರಿಗೆ ಸ್ಕುಟಾರಿ ಪಟ್ಟಣವು ಇನ್ನೂ ಸ್ವಾಧೀನವಾಗಲಿಲ್ಲ ಅದನ್ನು ಅವರು ಗೆದ್ದುಕೊಳ್ಳಬೇಕೆಂದು ಸಾಹಸಪಡುತ್ತಿರುವಂತೆ ಕಾಣುತ್ತದೆ ಸರ್ವಿಯಾ ಸೈನ್ಯಗಳು ಆಡ್ರಿಯಾಟಿಕ್ ಸಮುದ್ರತೀರದಲ್ಲಿರುವ ಡೂರಜೋ [illegible] ಪಟ್ಟಣವನ್ನು [illegible] ಸ್ವಾಧೀನಪಡಿಸಿಕೊಳ್ಳುವ [illegible] ನುಗ್ಗುತ್ತಲಿವೆ.

ಆಡ್ರಿಯಾನೋಪಲ್ ಮುತ್ತಿಗೆ [illegible], ಆ ಪಟ್ಟಣಕ್ಕೂ ಕಾನ್ಸ್ಟಾಂಟಿನೋಪಲ್ಲಿಗೂ ನಡುವೆ ಇರುವ ಪ್ರದೇಶದಲ್ಲೂ ಅತ್ಯಂತ ಕಠಿಣವಾದ ಯುದ್ಧಗಳು ನಡೆದಿರುವವು ಆಡ್ರಿಯಾನೋಪಲ್ಲಿನ ಸುತ್ತಮುತ್ತಲಲ್ಲಿರುವ ಎರಡು ಕೋಟೆಗಳು ಬಲ್ಗೇರಿಯ ಸೈನಿಕರ ವಶವಾಗಿರುತ್ತವೆ ಮತ್ತು ಇಷ್ಟರೊಳಗೇ ಆಡ್ರಿಯಾನೋಪಲನ್ನು ಬಲ್ಗೇರಿಯದವರು ಗೆದ್ದುಕೊಳ್ಳುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ ಆಡ್ರಿಯಾನೋಪಲ್‌ಗೂ ಕಾನ್ಸ್ಟಾಂಟಿನೋಪಲ್‌ಗೂ ನಡುವೆ ಟ್ಸಟಾಲ್ಜಾ ಎಂಬ ಕೋಟೆ ಇರುವುದು ತುರ್ಕಿಯವರು ಶತ್ರುಗಳನ್ನು ರಾಜಧಾನಿಗೆ ಬಾರದಂತೆ ಅಲ್ಲಿ ತಡೆದು ಬಹು ಕಠಿಣವಾಗಿ ಯುದ್ಧಮಾಡುವರೆಂದು ಕಾಣುತ್ತದೆ. ಅಲ್ಲಿಂದಾಚೆಗೆ ಕಾನ್ಸ್ಟಾಂಟಿನೋಪಲ್ ರಾಜಧಾನಿಯು ಇಪ್ಪತ್ತು ಮೈಲಿ ದೂರದಲ್ಲಿ [illegible] ಬಲ್ಗೇರಿಯದವರು ಆ ಕೋಟೆಯನ್ನು ಕುರಿತು ನುಗ್ಗುತ್ತಿರುವರು [illegible] ಯುದ್ಧ ನಡೆದಿರಬಹುದು [illegible] ತುರ್ಕಿ ಸೈನ್ಯಗಳು [illegible] ಬಲ್ಗೇರಿಯದವರು ತುರ್ಕಿಯವರನ್ನು ಆ ಕೋಟೆಯಿಂದ [illegible] ಮಾಡಿ, ಅವರ ರಾಜಧಾನಿಯನ್ನು ಪ್ರವೇಶಿಸುವುದೂ ಇಲ್ಲದೂ ಸ್ವಲ್ಪ ದಿನಗಳಲ್ಲೇ ಗೊತ್ತಾಗುತ್ತದೆ

ಆಡ್ರಿಯಾನೋಪಲ್ [illegible] ಯುದ್ಧಗಳಲ್ಲಿ ತುರ್ಕಿಯವರಿಗೆ ಜಯಪ್ರದವಾಯಿತೆಂದು ಕಾನ್ಸ್ಟಾಂಟಿನೋಪಲ್‌ನಿಂದ ಬಂದ ವರ್ತಮಾನಗಳು [illegible] ವರ್ತಮಾನ ಹೇಳುತ್ತದೆ

ಸರ್ವಿಯಾ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣದಲ್ಲಿ ೫೦,೦೦೦ ತುರ್ಕಿ ಸೈನಿಕರು ಕೈಸೆರೆಯಲ್ಲಿ [illegible] ಸೈನಿಕರಲ್ಲಿ ವಿಷಮಜ್ವರವು ಪ್ರಬಲವಾಗಿರುವಂತೆ ಹೇಳುತ್ತಾರೆ ಗಾಯಪಟ್ಟ ತುರ್ಕಿ ಸೈನಿಕರು ಕಾನ್ಸ್ಟಾಂಟಿನೋಪಲ್ಲಿನಲ್ಲಿ ೧೧,೦೦೦ ಜನರು ಇರುತ್ತಾರೆ, ಈಗ ಆ ಪಟ್ಟಣದಲ್ಲಿ ಶಾಂತಿಭಂಗ ಉಂಟಾಗಬಹುದೆಂದು [illegible] ಕಾನ್ಸ್ಟಾಂಟಿನೋಪಲ್ಲಿನಲ್ಲಿರುವ ತಮ್ಮ ತಮ್ಮ ಪ್ರಜೆಗಳನ್ನೂ ಅವರ ಆಸ್ತಿಗಳನ್ನೂ ಕಾಪಾಡುವ ಉದ್ದೇಶದಿಂದ ಪರರಾಜಗಳವರೆಲ್ಲಾ ತಮ್ಮ ಯುದ್ಧದ ಹಡಗುಗಳನ್ನು ಆ ಪಟ್ಟಣದ ಬಳಿಗೆ ಕಳುಹಿರುತ್ತಾರೆ ಆ ಪಟ್ಟಣದಲ್ಲಿ ಯುದ್ಧಗಳೇನಾದರೂ ಸಂಭವಿಸಿದಲ್ಲಿ ಪರರಾಜಗಳ ಪ್ರಜೆಗಳು ತಮ್ಮ ಕಡೆಯ ಹಡಗುಗಳಿಗೆ ಹೋಗಿ ಸೇರಿಕೊಳ್ಳುವರು

ತುರ್ಕಿಯ ಗ್ರಾಮಾಂತರಗಳಲ್ಲಿರುವ ಪ್ರಜೆಗಳು ಗಾಬರಿಬಿದ್ದು ಸಂಕಟಪಡುತ್ತಾ ಊರು ಕೇರಿಗಳನ್ನು ಬಿಟ್ಟು ಕಾನ್ಸ್ಟಾಂಟಿನೋಪಲ್ಲಿಗೆ ಸಾಗಿಹೋಗುತ್ತಿದಾರೆಂದು ಆ ಪ್ರಾಂತದಲ್ಲಿ ಸಂಚರಿಸಿದ ಪತ್ರಿಕಾದಾರರು ತಿಳಿಸುವರು ಈ ಪ್ರಜೆಗಳು ರೈಲು ಗಾಡಿಗಳೊಳಗೆ ಕಿಕ್ಕಿರಿಯುವಂತೆ ತುಂಬಿ, ಹೊರಗಡೆ ಹಲಗೆಗಳ ಮೇಲೂ, ಗಾಡಿಗಳ ಮೇಲ್ಛಾವಣಿಯೂ, ಗಾಡಿಗಳು ಒಂದಕ್ಕೊಂದು ಜೋಡಿಸಲ್ಪಟ್ಟಿರುವ ಕೊಕ್ಕೆ ಸರಪಣಿ ಮೇಲೂ ಕುಳಿತುಕೊಂಡು ಸಾಗಿಹೋಗುತ್ತಿದಾರೆ ಇದಲ್ಲದೆ ಸಾಧಾರಣ ಗಾಡಿಗಳು [illegible] ಭರ್ತಿಯಾಗಿ ರಸ್ತೆಗಳ ಉದ್ದಕ್ಕೂ ತುಂಬಿ ಹೋಗುತ್ತಿರುವವು. ಗ್ರಾಮಾಂತರಗಳೆಲ್ಲಾ ಪಾಳುಬೀಳುತ್ತಿರುವವು ತುರ್ಕಿಯವರೆಲ್ಲಾ ಯೂರೋಪನ್ನೇ ಬಿಟ್ಟುಬಿಟ್ಟು ಏಷ್ಯಾ ಖಂಡವನ್ನು ಕುರಿತು ಹೊರಟುಹೋಗುತ್ತಿರುವಂತೆ ತೋರುತ್ತದೆ

ಮಧ್ಯಸ್ಥಿಕೆ ಮಾಡಿ ಯುದ್ಧವನ್ನು ನಿಲ್ಲಿಸಬೇಕೆಂದು ತುರ್ಕಿಯವರು ಪರರಾಜ್ಯಗಳವರನ್ನು ಕೇಳಿಕೊಂಡಿದಾರೆ ಆದರೆ ಅವರ ಶತ್ರುಗಳು [illegible] ಜಯಪ್ರದ ಹೊಂದುತ್ತಿರುವುದರಿಂದ ಪರರಾಜಗಳವರು ಸಂಧಾನಕ್ಕೆ ಪ್ರವೇಶಿಸುವುದು ಕಷ್ಟವಾಗಿದೆ ಜಯಪ್ರದ ಹೊಂದಿರುವವರು ತಮ್ಮ ಇಷ್ಟಾನುಸಾರ ತುರ್ಕಿಯವರು ನಡೆದುಕೊಳ್ಳಬೇಕೆಂದು ಕೇಳಬಹುದಾಗಿದೆ ಈಗ ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ ಗ್ರೀಸ್ ರಾಜಗಳ ಸೈನ್ಯಗಳು ತುರ್ಕಿಯವರ ಮೇಲೆ ಅನೇಕ ಕಡೆಗಳಲ್ಲಿ ಜಯವೊಂದಿಯೂ, ಜಯಹೊಂದುತ್ತಲೂ ಇರುವ ರೋಷದಿಂದ ಅಲ್ಲಿನ ಸ್ಥಿತಿಗತಿಗಳು ಬದಲಾವಣೆಯಾಗಿರುತ್ತವೆಂದೂ, ಪರರಾಜಗಳವರು ಈ ಹೊಸ ಸ್ಥಿತಿಯನ್ನು ಪರಿಗಣಿಸಿ ಅದಕ್ಕೆ ತಕ್ಕಂತೆ ಇನ್ನು ಮುಂದೆ ಇತ್ಯರ್ಥವಾಗಬೇಕಾಗುತ್ತದೆಂದೂ ಲಂಡನ್ ಪಟ್ಟಣದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಯವರಾದ ಮಿ॥ ಆಸ್ಕಿತ್‌ರವರು ಮೊನ್ನೆ ಸೋಮವಾರ ರಾತ್ರಿ ಹೇಳಿರುವ ಸಂಗತಿಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ

ಒಳದೇಶದ ವೃತ್ತಾಂತಗಳು.

ಕುಲೋಸ್‌ಪೇಟೆ ರೈಲ್ವೆ ಸ್ಟೇಷನ್‌ನಿಂದ ಕಾನ್ಕಾನಹಳ್ಳಿಗೆ ಪ್ರಯಾಣಿಕರ ಸೌಕರ್ಯಕ್ಕಾಗಿ ಮೋಟಾರ್ ಟಪಾಲನ್ನು ಇಡುತ್ತಾರೆಂದು ವರ್ತಮಾನವಿದೆ

•

ಮಾಗಡಿ ತಾಲ್ಲೂಕ್ ರೆವಿನ್ಯೂ ಇನ್‌ಸ್ಪೆಕ್ಟರ್ [illegible] ಸರ್ಕಾರದ ಬಾಬತು ೧೨ ರೂಪಾಯನ್ನು [illegible] ದುರುಪಯೋಗಪಡಿಸಿಕೊಂಡಿದ್ದಾನೆಂದು ಮೊಕದ್ದಮೆ ಆಗಿ, ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದಾರೆ

•

ಮೊನ್ನೆ ಮಂಗಳವಾರ ಸಾಯಂಕಾಲ ಬ್ರಿಟಿಷ್ ರೆಸಿಡೆಂಟರವರು [illegible]ನಿಂದ ರಾಜಧಾನಿಗೆ ಹೊರಟು [illegible] ಗವರ್ನಮೆಂಟ್ ಹೌಸಿನಲ್ಲಿದ್ದು, ಈ ವಿಶೇ

...ಸವನ್ನು ತೀರಿಸಿಕೊಂಡು ನಾಳೆಯದಿನ ಬೆಂಗಳೂರಿಗೆ ತೆರಳುವರು.

...ಪುರದಲ್ಲಿ ಪಾಸ್ಪೆಯನಂಬುವನನ್ನು ಅಕ್ರಮವಾದ ಮಾಡಿ ಹಿಂಸೆ ...ಸರ್ಕಾರದವರು ಇನ್ಸ್ಪೆಕ್ಟರ್ ಗೋವಿಂದನಾಯ್ಡು, ಜಮೇದಾರ್ ...ನಪ್ಪ, ಟೌನ್ ಪೋಲೀಸ್ ದಫೇದಾರ ಮತ್ತು ಇಬ್ಬರು ಪೋಲೀಸ್ ...ಕ್ರಿಮಿನಲ್ ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದ್ದಾರೆ.

...ಬರ್ ತಿಂಗಳು ೨೮, ೨೯, ೩೦, ೩೧ ನೇ ತಾರೀಖುಗಳಲ್ಲಿ ಕಾಳಹಸ್ತಿ ...ಪುರಾಣಸಂಬ ಮಂದಿರದಲ್ಲಿ ಎಳನೆಯ ಅಪ್ತೃತ ಮಹಾಸಭೆಯು ...ವುದು, ಅದರ ಪುರೋಭಿವೃದ್ಧಿಯಲ್ಲಿ ಆಸಕ್ತರಾಗಿರುವವರೆಲ್ಲಾ ಸಭೆಗೆ ...ಪ್ರೋತ್ಸಾಹಪಡಿಸಬೇಕೆಂದೂ ಸೆಕ್ರೆಟರಿಯವರು ತಿಳಿಸುತ್ತಾರೆ.

...ಸೆಂಬರ್ ತಿಂಗಳೊಳಗೆ ಬೆಂಗಳೂರಿನಲ್ಲೂ, ಪುದುಕೋಟೆ ...ಬೂರಿಯರ್ ಸಂಸ್ಥಾನಗಳಲ್ಲೂ ಸರ್ವವಸ್ತು ಪ್ರದರ್ಶನಗಳು ನಡೆಯುವ ...ಮೈಸೂರು ಸಂಸ್ಥಾನದ ಕಾರ್ಖಾನೆದಾರರೂ ಕಸಬುದಾರರೂ ಪ್ರದರ್ಶನ ...ನ್ನು ತಾವು ತಾವೇ ಆಯಾ ಪ್ರದರ್ಶನ ಸ್ಥಳಗಳಿಗೆ ಕಳುಹಿಸಿಕೊಡಬೇ ...ಮೈಸೂರು ಪ್ರದರ್ಶನದ ಕಮಿಟಿ ಪ್ರೆಸಿಡೆಂಟರು ತಿಳಿಯಪಡಿಸಿರುತ್ತಾರೆ.

...ವು, ಸರ್ಕಾರದ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಯಾರೇ ಆಗಲಿ ...ವರ್ಷದಲ್ಲಿ ೨,೦೦೦ ರೂಪಾಯಿಗಿಂತ ಹೆಚ್ಚಾಗಿ ಇಡಕೂಡದೆಂದೂ, ...ಟ್ಟಿನಲ್ಲಿ ಒಟ್ಟು ೨,೦೦೦ ರೂಪಾಯಿಗಿಂತ ಹೆಚ್ಚಾಗಿ ಹಾಕಕೂಡ ...ವರೆಗೆ ಕಟ್ಟುಮಾಡಿದ್ದರು ಸರ್ಕಾರದವರು ಈಗ ಈ ರೂಲನ್ನು ...ಯಾರು ಬೇಕಾದರೂ ಎಷ್ಟು ಹಣವಾದರೂ ಆ ಬ್ಯಾಂಕುಗಳಲ್ಲಿ ...ಡುವ ಅಪ್ಪಣೆ ಕೊಡಿಸಿರುತ್ತಾರೆ.

...ವ ನವರಾತ್ರಿ ಉತ್ಸವಕಾಲದಲ್ಲಿ ರಾಜಧಾನಿಯ ಮ್ಯುನಿಸಿಪಲ್ ...ಟಿಯು ಪೀಪಲ್ಸ್ ಪಾರ್ಕ್ ಚಮರ್‌ನಲ್ಲೂ, ಚಾಮರಾಜರೋಡಿನ ...ಕೋಟೆ ಮುಂದಿನ ಬೀದಿಯಲ್ಲೂ ನೇತ್ರಾನಂದಕರವಾದ ಗಿಡ ...ದೀಪಗಳಿಗೆ ಉಲ್ಲಾಸಕರವಾಗುವಂತೆ ಮಾಡಿಸಿದ್ದರು. ಈ ಏರ್ಪಾಡು ...ನೆಸುವಂತೆ ಮಾಡಿದರೆ ಪ್ರಜೆಗಳಿಗೂ ಆಗಂತುಕರಿಗೂ ತುಂಬ ...ವಾಗಿ ಕಾಣಿಸುವುದಕ್ಕೆ ಸಂಶಯವಿಲ್ಲ.

...ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ...ಸೆಂಟ್ ಜಾನ್ ಆಂಬ್ಯುಲೆನ್ಸ್ ಸಮಾಜ ಸಭೆಯು ವಾರ್ಷಿಕ ...ವಿಶೇಷವಾಗಿ ಏರ್ಪಾಡಾಗಿತ್ತು. ಬ್ರಿಟಿಷ್ ರೆಸಿಡೆಂಟ್ ಕರ್ನಲ್ ...ರೂ, ಶ್ರೀಮತ್ ಯುವರಾಜರವರೂ, ಸರ್ದಾರ್ ಲಕ್ಷ್ಮೀಕಾಂತರಾಜೆ ...ರು ಈ ಸಮಾಜದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವವರಿಗೆ ...ಗಳನ್ನು ಹಂಚಿಕೊಡುವವರಾಗಿದ್ದರು.

...ಜೆಸು ದಂಡಿಗ ಸೇರಿದ ಬ್ಲಾಕ್‌ಪಲ್ಲಿಯಲ್ಲಿ ಏಳು ಮಂದಿ ಮನುಷ್ಯ ...ಜೂಜಾಡುತ್ತಿದ್ದು ಸಿಕ್ಕಿಬಿದ್ದರು ಮ್ಯಾಜಿಸ್ಟ್ರೇಟರು ಅವರನ್ನು ...ಜೂಜಾಡುವವರು ಸ್ವೀಕರಿಸಿದ್ದೂ, ಅವರನ್ನು ಹಿಡಿ ಹೊಡೆದು ಬಿಡಿ ...ಬೇಕೆಂದೂ ಕೋರ್ಟಿನಲ್ಲಿ ಹೇಳಿದ ಎಂಬದಾಗಿ ಬುದ್ಧಿ ಹೇಳಿ ...ಗೆ ಜುಲ್ಮಾನೆ ೩೦ ರೂಪಾಯಿ, ಉಳಿದ ೬ ಮಂದಿಗೂ ತಲಾ ...ಯಿ ಜುಲ್ಮಾನೆ ವಿಧಿಸಿ, ಜೂಜಿನಕಟ್ಟೆಯಲ್ಲಿ ಸಿಕ್ಕಿದ ೧೮ ರೂಪಾ ...ರಕ್ಕೆ ಮುಟ್ಟುಗೋಲು ತೆಗೆದುಕೊಂಡು ಜುಲ್ಮಾನೆ ಹಣದಲ್ಲಿ ...ವರೆ ೧೦೦ ರೂಪಾಯನ್ನು ಪೋಲೀಸಿನವರಿಗೆ ಬಹುಮಾನ ಕೊಡಬೇಕೆಂ ...ರು ಹೇಳಿದರು.

...ವಾರ ಶಿವಮೊಗ್ಗಾ ಡಿಸ್ಟ್ರಿಕ್ಟು ಇಂದುವಳ್ಳಿ ಕಾಟನ ಕಡ್ಡಾ ...ನೆ ತಾ. ೨೩ ರಲ್ಲಿ ಮೂರು ದೊಡ್ಡ ಗಂಧ ಕಾರ್ಖಾನೆಗಳನ್ನು ಹಿಡಿದ ...ಡಿಸ್ಟ್ರಿಕ್ಟ್ ಪಾರೆಸ್ಟ್ ಆಫೀಸರವರು ಇನ್ನು ಕೆಲವು ಆಸಾಮಿಗಳನ್ನು ಹಿಡಿ ...ತನಿಖೆ ಮಾಡುತ್ತಿದ್ದಾರೆಂದೂ ತಿಳಿದಿದೆ. ಈಚೆಗೆ ಅವರ ನಾಯಕತ್ವ ...ಕೊಪ್ಪ ಸಕ್ರೆಪಟ್ಟಣ ಫಾರೆಸ್ಟ್ ರೇಂಜಿನಲ್ಲಿ ಕಳೆದ ೧ ನೇ ತಾ ...ಮೂರು ಕಾರ್ಖಾನೆಗಳನ್ನು ಹಿಡಿದಿರುತ್ತಾರೆಂದು ಸಂತೋಷವರ್ತಮಾನ ...ಗಳ ಹೊಲಗದ್ದೆ ಫಸಲುಗಳಿಗೆ ಈ ಪ್ರಾಣಿಗಳಿಂದ ಸಂಭವಿಸುತ್ತಿದ್ದ ...ನ್ನು ತಪ್ಪಿಸುವುದಕ್ಕೆ ಸರ್ಕಾರದವರು ಮಾಡಿದ ಏರ್ಪಾಡನ್ನು ಡಿಸ್ಟ್ರಿಕ್ಟ್ ಆಫೀಸರವರು ಸಾರ್ಥಕಪಡಿಸಿದ್ದಕ್ಕಾಗಿ ಸಂತೋಷಪಡಬೇಕಾಗಿದೆ.

...ಕಳೆದ ವರುಷಗಳಿಂದ ರಾಜಧಾನಿಯ ವೆಸ್ಲಿಯನ್ ಮಿಷನ್ ...ಮ್ಯಾನೇಜರಾಗಿದ್ದು ಅದನ್ನು ಬಹಳಮಟ್ಟಿಗೆ ಅಭಿವೃದ್ಧಿಗೆ ತಂದು, ...ಗಳ ಯೋಗಕ್ಷೇಮದ ವಿಚಾರಣೆಯಿಂದ ಅವರಿಗೆ ಸೌಕರ್ಯಗಳನ್ನು ...ಈ ಕಾರ್ಖಾನೆಯ ಹೆಸರು ಹಿಂದುಸ್ಥಾನದಲ್ಲೆಲ್ಲಾ ಹರಡು ...ವ ಮಿ॥ ಟಿ ಗೂಲ್ಡ್‌ಯವರು ಪತ್ನೀಸಮೇತ ದೇಹಾರೋಗ್ಯಕ್ಕಾಗಿ ...ಕಾಲ ಸೀಮೆಯಲ್ಲಿದ್ದು ಬರುವುದಕ್ಕಾಗಿ ಈ ದಿನ ರಾತ್ರಿ ರಾಜ ...ಪ್ರಯಾಣಮಾಡುವವರಾಗಿದ್ದಾರೆ ಪ್ರೆಸ್ಸಿನ ನೌಕರಮಾನ್ಯರುಗಳು ...ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿ ತಮ್ಮ ಭಕ್ತಿ ಪ್ರೀತಿ ಕೃತಜ್ಞತೆ ...ಪಡಿಸಿದರು. ಮಿ॥ ಗೂಲ್ಡ್ ದಂಪತಿಗಳು ಆರೋಗ್ಯದಿಂದ ದೃಢ ...ಸೀಮೆಯಿಂದ ಬಂದು ಈ ಅಚ್ಚಿನ ಕಾರ್ಖಾನೆಯನ್ನು ಇನ್ನೂ ...ಮಾಡುವಂತಾಗಲೆಂದು ಹಾರೈಸುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

...ಲಾರ್ ಡಿಸ್ಟ್ರಿಕ್ಟಿನ ಫಾರೆಸ್ಟ್ ಆಫೀಸರ್ ಮಿ॥ ಎಚ್ ರಾಮಯ್ಯನವ ...ರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿ ...ಕೊಟ್ಟಿದೆ. ಮಿ॥ ಜಿ ಕೃಷ್ಣಮೂರ್ತಿ ನಾಯುಡುಯವರು ರವರಿಂದ ...ಇವರನಂತರ ಕೋಲಾರದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿರ...

...ದೇವನಹಳ್ಳಿ ೩ ಲ್ಲೂಕು ಅಮಲ್ದಾರ್ ಮಿ॥ ಬಿ ವೆಂಕಟರಾಮಯ್ಯನವ ...ರು ಈಗಿರುವ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೊಂದು ತಿಂಗಳು ...ಮಾಡಿದೆ. ಶಿರಸ್ತೇದಾರ್ ಮಿ॥ ಕೆ ಎನ್ ವೆಂಕಟಕೃಷ್ಣಯ್ಯನವರು ...ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ...

...ಕೇಶವಯ್ಯನವರು ರಜದ ಮೇಲಿರುವಾಗ್ಗೆ ಮಿ॥ ಎಸ್. ಸುಂದ ...ಗಾರ್ರು ಬೇಲೂರು ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ...ಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

...ಜನರಲ್ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರ್ ಮಿ॥ ...ರಾಮರಾಯರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿಯೂ, ಮೈಸೂ ರು ಜೈಲಿನ ಮತ್ತು ಮಹಾರಾಣಿ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಉತ್ತರ ದೇಶದ ರೈಲ್ವೆ ಇಲಾಖೆಯ ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ಡಿ ಜಿ ದಾಣಿಯವರನ್ನು ಅಕ್ಟೋಬರ್ ತಾ ೨೮ ರಿಂದ ಮೈಸೂರು ರೈಲ್ವೆ ಚೀಫ್ ಇಂಜನಿಯರವರ ಅಸಿಸ್ಟೆಂಟಾಗಿ ನೇಮಕಮಾಡಿದೆ.

ಹೆಗ್ಗಡದೇವನಕೋಟೆ ಆಕ್ಟಿಂಗ್ ಅಮಲ್ದಾರ್ ಮಿ॥ ಎಂ ಎನ್. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮೈಸೂರು ಡೆಪ್ಯುಟಿ ಕಮಿಷನರವರ ಆಫೀಸ್ ಆಕ್ಟಿಂಗ್ ಹೆಡ್ ಅಕೌಂಟೆಂಟ್ ಮಿ॥ ಎಚ್ ಶ್ರೀನಿವಾಸಯ್ಯಂಗಾರ್ರು ಹೆಗ್ಗಡದೇವನಕೋಟೆ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಹಾಸನದ ಡಿಸ್ಟ್ರಿಕ್ಟ್ ಖಜಾನೆ ಆಫೀಸರ್ ಮಿ॥ ಎಂ ಶ್ರೀನಿವಾಸಮೂರ್ತಿಯವರನ್ನು ೩ ರಿಂದ ೨ ನೇ ಕ್ಲಾಸ್ ಅ॥ ಕಮಿಷನರಾಗಿ ಬಡ್ತಿಮಾಡಿದೆ.

ಡೆಪ್ಯುಟಿ ಕಮಿಷನರುಗಳಲ್ಲಿ ಮಿ॥ ಕೆ ಚಾಂಡಿಯವರನ್ನು ಚಿತ್ರದುರ್ಗದಿಂದ ಮೈಸೂರಿಗೂ, ಮಿ॥ ಕೆ. ಕೃಷ್ಣ ಅಯ್ಯರವರನ್ನು ಮೈಸೂರಿನಿಂದ ಚಿತ್ರದುರ್ಗಕ್ಕೂ ವರ್ಗಮಾಡಿದೆ.

ಫ್ರೊ॥ ಅ॥ ಕಮಿಷನರ್ ಮಿ॥ ಟಿ ಜಿ ರಾಮ ಅಯ್ಯರವರು ಮಳವಳ್ಳಿ ತಾಲ್ಲೂಕ್ ಛಾರ್ಜನ್ನು ವಹಿಸಿ ಮೈಸೂರಿನಲ್ಲಿರತಕ್ಕದ್ದು.

ಅ ಇಂಜನಿಯರ್ ಮಿ॥ ಎಸ್ ವೆಂಕಟಸುಬ್ಬಶೆಟ್ಟರವರನ್ನು ವಿದ್ಯುಚ್ಛಕ್ತಿಯ ಇಲಾಖೆಗೆ ವರ್ಗಮಾಡಿದೆ. ಅವರಿಗೆ ಸಂಬಳ ಕೂಡ ೧೦೦ ರೂಪಾಯಿನಂತೆ ಸ್ಪೆಷಲ್ ಅಲೋಯನ್ಸು ಕೊಡತಕ್ಕದ್ದು.

ಮಿ॥ ರೊನಾಲ್ಡ್ ಎಲ್. ಸ್ಮಿತ್‌ಯವರನ್ನು ಹಂಗಾಮಿಯಾಗಿ ೩ ನೇ ಕ್ಲಾಸ್ ಅ ಇಂಜನಿಯರಾಗಿ ನೇಮಿಸಿಕೊಂಡು ರೈಲ್ವೆ ಬಡಾವಣೆಯ ಇಲಾಖೆಗೆ ವರ್ಗಮಾಡಿದೆ.

ಚಾಮರಾಜನಗರದ ಗಲಭೆಯು.

ಭಯಂಕರವಾದ ಕೊಲೆ, ಪಂಚಾಯಿತಿ, ಲೂಟಿ

ಚಾಮರಾಜನಗರಕ್ಕೆ ೨೬ ಮೈಲಿ ದೂರದಲ್ಲಿರುವ ಕಣ್ಣೇಗಾಲವೆಂಬ ಊರಿನಲ್ಲಿ ಇದೇ ತಿಂಗಳು ೬ ನೇ ತಾ ಬುಧವಾರ ಮಧ್ಯಾಹ್ನ ೧೧ ಘಂಟೆ ಹೊತ್ತಿನಲ್ಲಿ ಟಿ ನರಸೀಪುರದ ತಾಲ್ಲೂಕು ಮೂಗೂರು ಎಂಬ ಊರಿನಿಂದ ಸುಮಾರು ೧,೦೦೦ ಜನಗಿಂತ ಹೆಚ್ಚಾಗಿ ಕತ್ತಿ, ಈಟಿ, ಗಂಡುಗೊಡಲಿ, ದೊಣ್ಣೆ, ಮುಂತಾದ ಆಯುಧಗಳೊಡನೆಗೂ, ತಮಟೆ ಕಹಳೆಗಳೊಂದಿಗೂ ಪರಿವಾರದವರೂ, ಮಾದಿಗರೂ, ಇನ್ನೂ ಬೇರೆ ಬೇರೆ ಜನರೂ ಏಕಾಏಕಿ ಕಣ್ಣೇಗಾಲವೆಂಬ ಗ್ರಾಮಕ್ಕೆ ನುಗ್ಗಿಬರುತ್ತಾ, ದಾರಿಯಲ್ಲಿ ಸಿಕ್ಕಿದವರನ್ನು ಹೊಡೆಯುತ್ತಾ, ನಾಯಿಗಳು ಬೊಗಳಿದರೆ ಅವುಗಳನ್ನು ಬರ್ಜಿಯಿಂದ ತಿವಿಯುತ್ತಾ, ಎದುರಾದ ಪರಿವಾರದವರನ್ನು ದೊಣ್ಣೆಗಳಿಂದಲೂ, ಬರ್ಜಿ ದೊಣ್ಣೆಗಳಿಂದಲೂ ಹೊಡೆಯುತ್ತಾ, ಹೆಂಗಸರನ್ನು ಮಾನಭಂಗ ಮಾಡುತ್ತಾ, ಅವರ ಕೈಯ ಮೂಗು ಕಿವಿಗಳಲ್ಲಿದ್ದ ಒಡವೆವಸ್ತುಗಳನ್ನೆಲ್ಲಾ ಕಿತ್ತುಕೊಳ್ಳುತ್ತಾ, ತಂಟೆ ಮಾಡಿದವರನ್ನು ಹೊಡೆಯುತ್ತಾ, ಪ್ರತಿ ಮನೆಯನ್ನೂ ನುಗ್ಗಿ ಆಯಾಯ ಮನೆಗಳಲ್ಲಿದ್ದ ಆಸ್ತಿಪಾಸ್ತಿಗಳನ್ನೆಲ್ಲಾ ಸುಲುಕೊಳ್ಳುತ್ತಾ, ಎದುರಾದ ಗಂಡಸರನ್ನು ಕೊಚ್ಚಿ ಹೊಡೆದು ಬಡಿದಾಡಿದರು. ಇದರಲ್ಲಿ ಮೂವರು ಸತ್ತೇ ಹೋದರು. ಒಪ್ಪಲೆ, ಬಿಂದಿಗೆ, ಬೆಳ್ಳಿ, ಬಂಗಾರ, ಕೋಳಿ, ಕುರಿಗಳು ಮುಂತಾದವುಗಳನ್ನೆಲ್ಲಾ ತೆಗೆದುಕೊಂಡು ಒಂದು ಘಂಟೆಯೊಳಗಾಗಿ ಹತ್ತಿಪ್ಪತ್ತು ಮನೆಗಳಿಗೆ ಬೆಂಕಿ ಇಟ್ಟು ಹೊರಟುಹೋದರು. ಆ ಊರಿನವರಲ್ಲಿ ಕೆಲವರು ಹಾಗೂ ಬಹು ಸಾಹಸದಿಂದ ತಪ್ಪಿಸಿಕೊಂಡು ದಮ್ಮು ಕಟ್ಟಿ ೬ ಮೈಲಿ ಓಡುತ್ತಾ ಚಾಮರಾಜನಗರಕ್ಕೆ ಬಂದು ಈ ಸಂಗತಿಯನ್ನು ಅಮಲ್ದಾರರು ಮತ್ತು ಪೋಲೀಸ್ ಆಫೀಸರರು ಇವರುಗಳಿಗೆ ತಿಳಿಸಲಾಗಿ ಇವರುಗಳು ತಕ್ಷಣವೇ ಪೋಲೀಸಿನವರೊಂದಿಗೆ ಹೋಗಿ ನೋಡಲಾಗಿ ಅವರ್ಯಾರೂ ಇರಲಿಲ್ಲ. ಆದರೆ ಉರಿಯುತ್ತಿರುವ ಮನೆಗಳ ಅವಸ್ಥೆಯನ್ನೂ, ಸತ್ತುಬಿದ್ದವರ ಹೆಣಗಳನ್ನೂ, ಅರ್ಧ ಪ್ರಾಣದಲ್ಲಿ ಕೊರಗುತ್ತಿರುವವರನ್ನೂ, ಹೆಂಗಸರು ಮಕ್ಕಳ ಗೋಳಾಟವನ್ನೂ ನೋಡಿ ಅಧಿಕಾರಿಗಳು ಬಹು ಸಂಕಟಪಟ್ಟರಲ್ಲದೆ ನೋಡಿದ ಜನರೆಲ್ಲರೂ ಅನೇಕವಾಗಿ ಸಂಕಟಪಟ್ಟರು. ನಾಲ್ಕಾರು ಕಡೆಗಳಿಗೆ ಟೆಲಿಗ್ರಾಂಗಳು ಹೋದಕಾರಣ ಪೋಲೀಸ್ ಸೂಪರಿಂಟೆಂಡೆಂಟರೂ, ಇನ್ನೂ ಕೆಲವು ಅಧಿಕಾರಿಗಳೂ, ೭೦ ಮಂದಿ ಇನ್ಸ್ಪೆಕ್ಟರುಗಳೂ, ಕೆಲವು ಪೋಲೀಸಿನವರೂ, ಎಲ್ಲರೂ ಬಂದು ಇಳಿದಿದ್ದಾರೆ. ಸಂಗತಿಗಳು ವಿಚಾರಣೆಯಾಗುತ್ತಾ ಇವೆ. ನಂತರ ಏನಾಗುವುದೋ ನೋಡಬೇಕಾಗಿದೆ.

ಈ ದೊಂಬಿ ಕೆಲಸಕ್ಕೆ ಜನರು ನಾನಾ ವಿಧವಾಗಿ ಕಾರಣಗಳನ್ನು ಹೇಳುತ್ತಾ ಇದ್ದಾರೆ. ಆ ಪೈಕಿ ಒಂದು ಏನೆಂದರೆ— ಕಣ್ಣೇಗಾಲದಲ್ಲಿ ಅಗಸರಿಗೂ, ತೊರೆಯರಿಗೂ ಮೆರವಣಿಗೆಯಲ್ಲಿ ನಡೆಮುಡಿ ಹಾಸುವುದಿಲ್ಲವೆಂದು ಅಗಸರು ತಂಟೆ ಮಾಡಿದ ಕಾರಣ ಅವರವರಿಗೆ ವೈರತ್ವ ಬಂದು ತೊರೆಯರು ಅಗಸರಿಗೆ ಯಾವ ವಿಧವಾದ ಸಹಾಯವನ್ನೂ ಮಾಡಕೊಡದಂತೆ ಕಟ್ಟುಮಾಡಿಬಿಟ್ಟರು. ಆ ಊರಲ್ಲಿದ್ದ ಬ್ರಾಹ್ಮಣರು ಅಗಸರಿಗೆ ಸಹಾಯಕರಾಗಿ ನಿಂತರು. ಈ ವಿಷಯದಲ್ಲಿ ತೊರೆಯರಿಗೂ ಬ್ರಾಹ್ಮಣರಿಗೂ ಮಾತುಕತೆಗಳು ನಡೆದು ವಿರೋಧ ಬೆಳೆಯಿತು. ಈ ಬ್ರಾಹ್ಮಣರ ಜಮೀನುಗಳನ್ನು ತೊರೆಯರು ವಾರಕ್ಕೆ ಮಾಡಿದ್ದರು. ಫಸಲನ್ನು ಕೊಯ್ದು ಪಾಲು ಹಂಚಿಕೊಳ್ಳೋಣವೆಂದು ತೊರೆಯರು ಹೇಳಿದ ಕಾರಣ ನಿಮ್ಮ ಕೈಯಿಂದ ಕೊಯಿಸುವದಿಲ್ಲ, ನಾಳೆ ಬೇರೆಯವರನ್ನು ಕರೆದು ಕೊಯಿಸುತ್ತೇವೆಂದು ಬ್ರಾಹ್ಮಣರು ಹೇಳಿದರು. ಒಳ್ಳೆದು, ಆಗಲಿ, ನಮ್ಮೂರಿಗೆ ನಮ್ಮ ಫಸಲಿಗೆ ಎಂದು ಯಾರು ಕೊಯ್ಯುತ್ತಾರೋ ನೋಡೋಣವೆಂದು ಸುಮ್ಮನಾದರು. ಆಗ ಬ್ರಾಹ್ಮಣರು ಟಿನರಸೀಪುರ ತಾಲ್ಲೂಕಿಗೆ ಸೇರಿದ ಮೂಗೂರಿನಿಂದ ೧೦ ೨೦ ಕೂಲಿ ಆಳುಗಳನ್ನು ಕರೆಸಿ ಫಸಲನ್ನು ಕೊಯಿಸುವಾಗ ಅವರವರಿಗೆ ವಾಗ್ವಾದ ನಡೆದು ಜಗಳವಾಗಿ ಅವರನ್ನು ಹೊಡೆದು ಓಡಿಸಿದರು. ಇವರು ಹೋಗಿ ಮೂಗೂರಿನಲ್ಲಿ ದೂರು ಇಟ್ಟಕಾರಣ ಅಲ್ಲಿನವರು ಸೇವಲ್ಲಾ ಸೇರಿಸಿಕೊಂಡು ನಮ್ಮ ಜಾತಿಗೂ ನಮ್ಮೂರಿಗೂ ಅವಮಾನ ತಂದಿರೆಂದು ಹೇಳಿ ಗುಂಪುಕಟ್ಟಿಕೊಂಡು ಬಂದು ಈ ಕೆಲಸ ಮಾಡಿದರಂತೆ. ಈಗ ನೂರು ಜನ ಪೋಲೀಸಿನವರು ಬಂದು ಅಲ್ಲಿ ಹಾಜರಾಗಬೇಕೆಂದು ಹುಕುಂ ಆಗಿದೆಯಂತೆ. ಈ ತಾಲ್ಲೂಕಿನಿಂದಲೂ ಕೆಲವರು ಆಗಲೇ ಅಲ್ಲಿಗೆ ಹೋಗಿರುತ್ತಾರೆ.

ಬಾತ್ಮಿದಾರ್

ಮುಳ್ಳೂರಿನ ಗಲಾಟೆ ನಡೆದಿರುವ ಸ್ಥಳಕ್ಕೆ ಡೆಪ್ಯುಟಿ ಕಮಿಷನರವರು, ಪೋಲೀಸ್ ಸೂಪರಿಂಟೆಂಡೆಂಟರು, ಸಬ್ ಡಿವಿಷನ್ ಆಫೀಸರ್ ಮೊದಲಾದ ಅಧಿಕಾರಿಗಳೆಲ್ಲಾ ಹೋಗಿ ತನಿಖೆಮಾಡುತ್ತಿದ್ದಾರೆ. ಇವಲ್ಲದೆ ಪ್ರಜಾಸಮೃದ್ಧಿಯನ್ನು ಉಸ್ತುವಾರಿ ಇಟ್ಟು ಕಾಪಾಡುವುದಕ್ಕೂ, ದಸ್ತಗಿರಿಮಾಡಿದವರನ್ನು ವಶದಲ್ಲಿಟ್ಟುಕೊಂಡಿರುವುದಕ್ಕೂ ಸರ್ಕಾರದವರು ರಾಜಧಾನಿಯಿಂದ ೫೦ ಮಂದಿ ರಿಸರ್ವ್ ಪೋಲೀಸಿನವರನ್ನೂ, ಇಬ್ಬರು ಪೋಲೀಸ್ ಇನ್ಸ್ಪೆಕ್ಟರುಗಳನ್ನೂ ಆ ಸ್ಥಳಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇದುವರೆಗೆ ತನಿಖೆ ನಡೆದಿರುವುದರಲ್ಲಿ ಪೋಲೀಸಿನವರು ಸುಮಾರು ನಾಲ್ವತ್ತು ಜನರನ್ನು ದಸ್ತಗಿರಿಮಾಡಿರುವರೆಂದೂ, ಇನ್ನೂ ಹಲವರನ್ನು ಹಿಡಿಯಲು ತಲಾಷ್‌ಮಾಡುತ್ತಿದ್ದಾರೆಂದೂ, ದಂಗೆಮಾಡಿದವರಲ್ಲಿ ಕೆಲವರು ತಲೆತಪ್ಪಿಸಿಕೊಂಡು ಪರಸ್ಥಳಗಳಿಗೆ ಹೋಗಿಬಿಟ್ಟಿದ್ದಾರೆಂದೂ ವರ್ತಮಾನ ಕೇಳುತ್ತೇವೆ.

ಅಭಿನಂದನ ಕೂಟಗಳು.

ರಾಜಧಾನಿಯ ಟೌನ್ ಹಾಲಿನಲ್ಲಿ ನಡೆದದ್ದು.

ಈ ಸಲ ಅರಮನೆಯ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಅರಮನೆ ಪಂಡಿತರಾದ ಮಿ॥ ಸುಬ್ಬಣ್ಣನವರಿಗೆ “ವೈಣಿಕ ಪ್ರವೀಣ” ಎಂಬ ಬಿರುದನ್ನೂ, ಅರಮನೆ ವಿದ್ವಾಂಸರು ಮಿ॥ ಬಿ ಕೃಷ್ಣಪ್ಪನವರಿಗೆ “ಗಾನವಿಶಾರದ” ಎಂಬ ಬಿರುದನ್ನೂ ದಯಪಾಲಿಸಿರುವುದನ್ನು ಕೇಳಿ ಪುರಜನರು ಆನಂದಪಟ್ಟು, ಅವರಿಬ್ಬರಿಗೂ ಕಳೆದ ತಾ ೨೯ ನೇ ಮಂಗಳವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಸಂತೋಷ ಕೂಟವನ್ನು ನಡಿಸಿದರು. ಈ ಸಂತೋಷ ಸಭೆಯಲ್ಲಿ ಸರ್ದಾರ್ ಎಂ. ಕಾಂತರಾಜೆ ಅರಸಿನವರು ಅಗ್ರಾಸನವನ್ನು ವಹಿಸಿದ್ದರು. ಅನೇಕಮಂದಿ ರಾಜಬಂಧುಗಳೂ, ರಾಜಧಾನಿಯಲ್ಲಿರುವ ಸಮಸ್ತ ಮುಖ್ಯಾಧಿಕಾರಿಗಳೂ, ಎಲ್ಲಾ ಕೋಮುಗಳ ಮತ್ತು ಕಸಬುಗಳ ದೊಡ್ಡ ಮನುಷ್ಯರೂ ಅಲ್ಲದೆ ನೂರಾರು ಮಂದಿ ಪುರಜನರು ಹಾಜರಾಗಿದ್ದರು. ಆ ದಿನ ಟೌನ್ ಹಾಲಿನಲ್ಲಿ ಸೇರಿದ್ದ ಸಭೆಯು ಅಪೂರ್ವವಾದದ್ದಾಗಿತ್ತು. ಕೂಟವು ಪ್ರಾರಂಭವಾದ ಕೂಡಲೆ ವೈಣಿಕಪ್ರವೀಣ ಮಿ॥ ಸುಬ್ಬಣ್ಣನವರು ವೀಣೆಯನ್ನು ಬಾರಿಸಿ ತಮ್ಮ ಅಸಾಧಾರಣವಾದ ಪ್ರವೀಣತೆಯನ್ನು ಪ್ರಕಾಶಪಡಿಸಿದರು. ಬಳಿಕ ಗಾನವಿಶಾರದ ಮಿ॥ ಬಿ ಕೃಷ್ಣಪ್ಪನವರು ಬಹು ಇಂಪಾಗಿಯೂ ಭಕ್ತಿರಸಯುಕ್ತವಾಗಿಯೂ ಹಾಡುಗಾರಿಕೆ ನಡಿಸಿ ಸಭಿಕರನ್ನು ಸಂತೋಷಪಡಿಸಿದರು. ತರುವಾಯ ಮಿ॥ ಅಂಬಳೆ ಅಣ್ಣಯ್ಯ ಪಂಡಿತರವರು ಆ ಉಭಯ ವಿದ್ವಾಂಸರ ಪೂರ್ವೋತ್ತರ ಚರಿತ್ರೆಯನ್ನೂ, ಅವರು ಸಂಪಾದಿಸಿಕೊಂಡಿರುವ ಅಸಮಾನವಾದ ವಿದ್ಯಾಪ್ರೌಢಿಮೆಯನ್ನೂ ಕುರಿತು ಸಂಕ್ಷೇಪವಾಗಿಯೂ ಸ್ವಾರಸ್ಯವಾಗಿಯೂ ವಿವರಿಸಿದರು. ಬಳಿಕ ಸರ್ದಾರ್ ಎಂ. ಕಾಂತರಾಜೆ ಅರಸಿನವರು ಶ್ರೀಮನ್ಮಹಾರಾಜರವರು ಆ ವಿದ್ವಾಂಸರುಗಳಿಗೆ ದಯಪಾಲಿಸಿರುವ ಬಿರುದುಗಳ ವಿಷಯವನ್ನೂ ಅವರ ಯೋಗ್ಯತಾಸಿದ್ಧಿಯನ್ನೂ ವಿವರಿಸಿ, ಪುರಜನರು ಈ ವಿದ್ವಾಂಸರುಗಳಿಗೆ ಈ ರೀತಿ ಸಂತೋಷಕೂಟವನ್ನು ನಡಿಸಿದ್ದು ಬಹಳ ಶ್ಲಾಘ್ಯವಾದದ್ದೆಂದು ಮುಂತಾಗಿ ಪ್ರಶಂಸೆ ಮಾಡಿ, ಸಭೆಯನ್ನು ಮುಕ್ತಾಯಕ್ಕೆ ತಂದರು. ಹೂವಿನ ಹಾರ, ಪಾನ್ ಸುಪಾರಿ ಹಂಚಿ ಆದ ಬಳಿಕ ಸಭಿಕರೆಲ್ಲಾ ಎದ್ದು ನಿಂತು ಉತ್ಸಾಹದಿಂದ ಶ್ರೀಮನ್ಮಹಾರಾಜರವರಿಗೂ ರಾಜವರ್ಗದವರಿಗೂ ಶ್ರೇಯಸ್ಸನ್ನು ಬಯಸುತ್ತಾ ತೆರಳಿದರು.

ಸಂಗೀತ ಕಚೇರಿಯು.

ಕಳೆದ ೬ ನೇ ತಾ. ಬುಧವಾರ ಸಾಯಂಕಾಲ ಗಾನವಿಶಾರದ ಮಿ॥ ಬಿ. ಕೃಷ್ಣಪ್ಪನವರು ರಾಜಧಾನಿಯಲ್ಲಿರುವ ದೊಡ್ಡ ಮನುಷ್ಯರನ್ನೂ ರಾಜಬಂಧುಗಳನ್ನೂ ಸಂತೇಪೇಟೆ ಬೊಮ್ಮಯ್ಯನವರ ಛತ್ರಕ್ಕೆ ಬರಮಾಡಿಕೊಂಡು, ತಾವೇ ದಿವ್ಯವಾಗಿಯೂ ಮನೋಜ್ಞವಾಗಿಯೂ ಹಾಡುಗಾರಿಕೆಯನ್ನು ನಡಿಸಿ, ಸಂತೋಷಪಡಿಸಿದರು. ಕೂಟದಲ್ಲಿದ್ದವರೆಲ್ಲಾ ಹೂವಿನ ಹಾರ ಬಹುಮಾನಗಳನ್ನು ಪಡೆದು ಮಿ॥ ಬಿ ಕೃಷ್ಣಪ್ಪನವರನ್ನು ವಂದಿಸಿ ತೆರಳಿದರು.

ಪುರಾಣಿಕರಿಗೆ ಬಹುಮಾನ ಮಾಡಿದ್ದು.

ಅದೇ ಬೊಮ್ಮಯ್ಯನವರ ಛತ್ರದಲ್ಲಿ ಮೊನ್ನೆ ತಾ. ೧೧ ನೇ ಸೋಮವಾರ ಸಾಯಂಕಾಲ ಇನ್ನೊಂದು ಸಂತೋಷ ಕೂಟವು ನೆರವೇರಿತು. ವರ್ತಕ ಮಹನೀಯರೇ ಮುಂತಾದವರೆಲ್ಲಾ ಸೇರಿ, ಪುರಾಣ ಹೇಳುವುದರಲ್ಲಿ ಪ್ರಸಿದ್ಧಿ ಹೊಂದಿರುವ ಪಂಡಿತ ಗಂಜಿಗುಂಟೆ ರಾಮಾಭಟ್ಟರಿಗೆ ಬಂಗಾರದ ತೋಡಾವನ್ನು ಒಪ್ಪಿಸಿದರು. ಈ ಸಭೆಯಲ್ಲಿ ಅರಮನೆ ಕಂಟ್ರೋಲರ್ ಮಿ॥ ಬಿ ರಾಮಕೃಷ್ಣರಾಯರು ಅಗ್ರಾಸನವನ್ನು ವಹಿಸಿದ್ದರು. ಅರಸುಗಳೂ, ವೈದಿಕ ಲೌಕಿಕ ದೊಡ್ಡ ಮನುಷ್ಯರೂ, ವರ್ತಕ ಪ್ರಮುಖರೂ ಹಾಜರಾಗಿದ್ದರು. ಮಿ॥ ರಾಮಾಭಟ್ಟರವರು ರಾಮಾಯಣ ಕಥೆಯನ್ನೆಲ್ಲಾ ಒಂದೂವರೆ ಗಂಟೆ ಹೊತ್ತಿನಲ್ಲಿ ಬಹು ಸ್ವಾರಸ್ಯವಾಗಿ ಹೇಳಿದ ಬಳಿಕ ಮಿ॥ ಬಿ. ರಾಮಕೃಷ್ಣರಾಯರು ಆ ಕಥೆಯಲ್ಲಿ ಕಂಡುಬರುವ ಶ್ರೇಷ್ಠವಾದ ಗುಣಭಾಗಗಳನ್ನು ಎತ್ತಿ ದೀರ್ಘವಾಗಿ ಪ್ರಶಂಸೆ ಮಾಡಿ, ಸಭಿಕರ ಪರವಾಗಿ ಮಿ॥ ರಾಮಾಭಟ್ಟರವರಿಗೆ ತೋಡಾವನ್ನು ಒಪ್ಪಿಸಿದರು. ಹೂವು ಗಂಧ ಅಡಕೆಲೆ ಚರುಪು ಹಂಚಿದ ಮೇಲೆ ಈ ಸಂತೋಷ ಕೂಟವು ಮುಕ್ತಾಯ ಮಾಡಲ್ಪಟ್ಟಿತು.

ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳ ಮಠ.

ಇಲ್ಲಿನ ಶ್ರೀಮಠದ ಪೀಠಸ್ಥರಾದ ಶ್ರೀಮತ್ ಸುಕೃತೀಂದ್ರತೀರ್ಥ ಶ್ರೀಪಾದಂಗಳವರು ಕಳೆದ ಆಶ್ವೀಜ ಬಹುಳ ೧೦ ಭಾನುವಾರ ಮಧ್ಯಾಹ್ನ ಸುಮಾರು ೧ ಗಂಟೆಗೆ ಸರಿಯಾಗಿ ತಮಗೆ ಸಂಭವಿಸಿದ ಅಲ್ಪವಾದ ಕಾಯಿಲೆಯಿಂದ ತಮ್ಮ ಪೂರ್ವಾಶ್ರಮದ ತಮ್ಮಂದಿರಾದ ವೇ॥ ಕೃಷ್ಣಾಚಾರ್ಯರಿಗೆ ಇಲ್ಲಿನ ತಾಲ್ಲೂಕು ಆಫೀಸರುಗಳ ಮತ್ತು ವಿಪ್ರವರ್ಗಗಳ ಸಮಕ್ಷಮ ಆಶ್ರಮಸ್ವೀಕಾರಮಾಡುವಂತೆ ಅಪ್ಪಣೆಮಾಡಿ, ತಾವು ಭಗವದ್ಧ್ಯಾನಾಸಕ್ತರಾಗಿ ಪರಂಧಾಮವನ್ನು ಹೊಂದಿದರು. ಇವರಿಗೆ ಸುಮಾರು ೧೭-೧೮ ವರ್ಷ ವಯಸ್ಸಾಗಿರಬಹುದು. ಈ ಮಹನೀಯರು ಬಾಲ್ಯದಲ್ಲಿ ಸಾಹಿತ್ಯವನ್ನೂ, ಅನಂತರ ತಮ್ಮ ಗುರುಗಳಲ್ಲಿ ದ್ವೈತವೇದಾಂತವನ್ನೂ, ತರ್ಕ ಮತ್ತು ವ್ಯಾಕರಣವನ್ನೂ ಓದಿ ನಿತಪಾಂಡಿತ್ಯವನ್ನು ಹೊಂದಿ ಸ್ವಸ್ಥಳ, ಪರಸ್ಥಳದ ಅನೇಕ ವಿದ್ಯಾರ್ಥಿಗಳಿಗೆ ಪಾಠ ಹೇಳಿ, ಅವರುಗಳಿಗೆ ವಾಸಕ್ಕೆ ಮನೆಯನ್ನೂ ಜೀವನಕ್ಕೆ ವೇತನಗಳನ್ನೂ ಕಲ್ಪಿಸಿಕೊಟ್ಟಿರುತ್ತಾರೆ. ಇವರು ಇಲ್ಲಿನ ಸಬ್ ಡಿವಿಷನ್ ಸಾಹೇಬರ ಮತ್ತು ಅಮಲ್ದಾರರ ವಿಜ್ಞಾಪನೆಯಂತೆ ಹಿಂದಿನ ಭಾದ್ರಪದ ಬಹುಳ ೯ ದಿವಸ ಜೂಬಿಲಿ ಸಂಸ್ಕೃತ ಪಾಠಶಾಲೆಗೆ ದಯಮಾಡಿ ಅಗ್ರಾಸನವನ್ನು ವಹಿಸಿ ಬಾಲಕರಿಗೆ ವಿನಾಯಕನ ಸಹಿತ ಬಹುಮಾನ ರೂಪವಾದ ಪುಸ್ತಕಗಳನ್ನು ಕೊಟ್ಟು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾ ರೂಪವಾದ ಶ್ಲೋಕವನ್ನು ಹೇಳಿ ನಂತರ ವಿದ್ಯಾ ವಿಷಯವಾಗಿ ಸೊಗಸಾದ ಉಪನ್ಯಾಸ ಮಾಡಿ ಸಭಿಕರನ್ನೆಲ್ಲಾ ತುಂಬಾ ಆನಂದಪಡಿಸಿದರು. ಇವರು ನಮ್ಮ ಜಾಗೀರ ಪ್ರಭುಗಳವರ ಪಟ್ಟಾಭಿಷೇಕದ ಜ್ಞಾಪಕಾರ್ಥವಾಗಿ ತಮ್ಮ ಜಹಗೀರ್ ಗ್ರಾಮವಾದ ಬಳ್ಳಾರಿ ಜಿಲ್ಲಾಕ್ಕೆ ಸೇರಿದ ಮಂತ್ರಾಲಯವೆಂಬ ಗ್ರಾಮದ ತಮ್ಮ ಮಹಾಗುರುಗಳವರ ಸನ್ನಿಧಾನದಲ್ಲಿ ತಮ್ಮ ಪೂರ್ವಾಶ್ರಮದ ತಮ್ಮಂದಿರಾದ ವೇ॥ ಕೃಷ್ಣಾಚಾರ್ಯರಾದ “ಶ್ರೀಮತ್ಸಮೀರ ಸಮಯ ಸಂವರ್ಧಿನೀ” ಎಂಬ ದ್ವೈತ ಸಭೆಯನ್ನು ಏರ್ಪಡಿಸಿ, ಹೋದ ವರುಷ ಬಹಳ ವಿಸ್ತರಣೆಯಿಂದ ನಡಿಸಿದರು. ಇವರು ವಿದ್ಯಾವಂತರಾಗಿಯೂ, ಲೌಕಿಕ ವೈದಿಕದಲ್ಲಿ ತುಂಬಾ ಪರಿಶ್ರಮವುಳ್ಳವರಾಗಿಯೂ, ಸ್ವಜನರಲ್ಲಿಯೂ, ಆಶ್ರಿತರಲ್ಲಿಯೂ ತುಂಬಾ ಅನುರಾಗವುಳ್ಳವರಾಗಿಯೂ ಪಾತ್ರಾಪಾತ್ರವರಿತು ಧರ್ಮಕೆಲಸವನ್ನು ಮಾಡುತ್ತಿದ್ದರು. ಈಗಿನ ಗುರುಗಳಾದ ಶ್ರೀ ಸುಶೀಲೇಂದ್ರ ತೀರ್ಥ ಶ್ರೀಪಾದಂಗಳವರು ತಮ್ಮ ಗುರುಗಳಂತೆ ವೇದಾಂತ ಸಾಹಿತ್ಯಾದಿಗಳನ್ನು ತಿಳಿದವರಾಗಿಯೂ, ಉದಾರಿಗಳಾಗಿಯೂ, ಆಶ್ರಿತಾನುರಾಗಸಹಿತರಾಗಿಯೂ ಇರುತ್ತಾರೆ. ಇವರು ತಮ್ಮ ಗುರುಗಳ ಆಜ್ಞಾನುಸಾರ ಮೇಲ್ಕಂಡ ದ್ವೈತ ಸಭೆಯನ್ನು ನಂಜನಗೂಡಿನಲ್ಲೇ ಈ ಮಾರ್ಗಶಿರ ಶುದ್ಧದಲ್ಲಿ ನಡಿಸುವರು. ಇಂಥಾ ಮಹಾಸಭೆಯು ನಮ್ಮ ರಾಜ್ಯದಲ್ಲಿ ಯಾರೂ ಮಾಡಿಲ್ಲ. ಈಗಿನ ಸ್ವಾಮಿಗಳವರು ಈ ಸಭೆಯನ್ನು ಶಾಶ್ವತವಾಗಿ ನಡಿಸುತ್ತಾ, ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತಾ ಬರಲೆಂದು ಕೋರುತ್ತೇನೆ.

ಮಠಾಭಿಮಾನಿ

ಮೈಸೂರು ದಿವಾನಗಿರಿಯ ಬದಲಾವಣೆ

ಮ|| ಎಂ. ವಿಶ್ವೇಶ್ವರೈಯನವರು ನೇಮಕವಾದದ್ದು

ಕಳೆದ ತಾ 10 ನೇ ಭಾನುವಾರ ಬೆಳಿಗ್ಗೆ ಸಂಸ್ಥಾನದ ಚೀಫ್ ಇಂಜನಿಯರಾದ ಮ ಎಂ ವಿಶ್ವೇಶ್ವರೈಯನವರು ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು ರೈಲ್ವೆ ಸ್ಟೇಷನ್‌ನಲ್ಲಿ ರಾಜಧಾನಿಯ ಮುಖ್ಯ ಅಧಿಕಾರಿಗಳು ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿದರು. ಮ. ವಿಶ್ವೇಶ್ವರೈಯನವರು ದಿವಾನ್‌ರವರ ಗಾರ್ಡನ್‌ನಲ್ಲಿ ಕುಳಿತು ಇತರ ಮರ್ಯಾದೆಗಳೊಡನೆ ಸ್ಟೇಷನ್‌ನಿಂದ ದಿವಾನರವರ ಸರ್ಕಾರಿ ಬಂಗಲೆಗೆ ಹೋಗಿ ಇಳಿದುಕೊಂಡರು ಸುಮಾರು 8½ ಗಂಟೆಗೆ ಅವರು ಮೋಟಾರಿನಲ್ಲಿ ರಾಜಧಾನಿಯಿಂದ ಹೊರಟು ಕನ್ನಂಬಾಡಿಗೆ ಹೋಗಿ ಕಾವೇರಿ ತಲಾಬಿನ ಕಾಮಗಾರಿಯನ್ನು ತನಿಖೆಮಾಡಿಕೊಂಡು ಮಧ್ಯಾಹ್ನ ಸುಮಾರು 1 ಗಂಟೆಗೆ ವಾಪಸು ಬಂದು ವಿಶ್ರಮಿಸಿಕೊಂಡರು ತರುವಾಯ ಸುಮಾರು 4 ಗಂಟೆಗೆ ಮ| ವಿಶ್ವೇಶ್ವರೈಯನವರು ಬಂಗಲೆಯಿಂದ ಅರಮನೆಗೆ ಹೋಗಿ ಕರಿಕಲ್ಲುತೊಟ್ಟಿಯಲ್ಲಿ ಶ್ರೀಮನ್ ಮಹಾರಾಜರವರ ಭೇಟಿಮಾಡಿ ಸ್ವಲ್ಪ ಹೊತ್ತು ಅವರ ಕೂಡ ಮಾತನಾಡಿದ ಬಳಿಕ ಹುಜೂರು ಸೆಕ್ರೆಟರಿ ಮ ವಿ ರಾಘವೇಂದ್ರರಾಯರವರು ದಿವಾನ್‌ರವರಿಗೆ ಹಾಕುವಂಥಾ ದಿಂಡಿನ ಹಾರವನ್ನೂ ಸುತ್ತುವೀಳ್ಯವನ್ನೂ ಮಹಾರಾಜರವರ ಬಳಿಗೆ ತಂದು ಒಪ್ಪಿಸಿದಾಗ ಮಹಾರಾಜರವರು ಅವನ್ನು ಮ|| ಮ ವಿಶ್ವೇಶ್ವರೈಯನವರಿಗೆ ಹಾರ ಹಾಕಿ, ವೀಳ್ಯವನ್ನು ಕೊಡಿಸಿ ಮೈಸೂರು ದಿವಾನ್‌ಗಿರಿಯನ್ನು ವಹಿಸಿದರು ಅಲ್ಲಿಂದ ಮ| ವಿಶ್ವೇಶ್ವರೈಯನವರನ್ನು ಹುಜೂರು ಸೆಕ್ರೆಟರಿಯವರು ತೊಟ್ಟಿಯ ಬಾಗಿಲಿಗೆ ಕರೆದುತಂದು ಸಿಪಾಯಿಗಳು ಸೆಲ್ಯೂಟ್ ಮಾಡುತ್ತಿರುವಲ್ಲಿ ಗಾಡಿಯಲ್ಲಿ ಕೂಡಿಸಿ ಕಳುಹಿಸಿಕೊಟ್ಟರು ದಿವಾನ್‌ಗಿರಿಯ ಮರ್ಯಾದೆಗಳೊಡನೆ ಮ| ವಿಶ್ವೇಶ್ವರೈಯನವರು ಅರಮನೆಯಿಂದ ತಮ್ಮ ಬಂಗಲೆಗೆ ವಾಪಸು ಹೋಗಿ, ಸುಮಾರು 5 ಗಂಟೆಗೆ ಮೋಟಾರಿನಲ್ಲಿ ಬಂಗಲೆಯಿಂದ ಹೊರಟು ಚಾಮುಂಡಿ ವಿಲಾಸಕ್ಕೆ ದಯಮಾಡಿ ಶ್ರೀಮನ್ ಯುವರಾಜರವರ ಭೇಟಿಮಾಡಿಕೊಂಡು, ಅಲ್ಲಿಂದ ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಕುದುರೆ ಪಂದ್ಯದ ಸ್ಥಳಕ್ಕೆ ಹೋದರು

ಅಲ್ಲಿ ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ ಹೊಸ ದಿವಾನರವರಿಗಾಗಿ ಅಟ್ ಹೋಂ ಎಂಬ ಸತ್ಕಾರಕೂಟವು ಏರ್ಪಾಡಾಗಿತ್ತು ಅಲ್ಲಿ ಹಾಜರಾಗಿದ್ದವರೆಂದರೆ ಶ್ರೀಮನ್ ಯುವರಾಜರವರು ಮ ಮತ್ತು ಮಿಸೆಸ್ ಕಾಂಬೆಲ್‌ರವರು, ಡಾಕ್ಟರ್ ಮತ್ತು ಮಿಸೆಸ್ ಮಗ್ರಾತ್‌ರವರು, ಡಾ| ಮತ್ತು ಮಿಸೆಸ್ ಫೋರ್ಬ್ಸ್‌ಯವರು, ಮಿಸೆಸ್ ಪೆರ್ಟ್ ಹಂರವರು, ಮುಖ್ಯರಾದ ರೀಜೆಂಟ್‌ವರು, ಮ ಗಳಾದ ಎಂ ವಿಶ್ವೇಶ್ವರೈಯನವರು ರಾಯಬಹದೂರ್ ಎ ನರಸಿಂಹಯ್ಯಂಗಾರ್ಯ, ವಿ ಎಸ್ ನರಸಿಂಹಯ್ಯಂಗಾರ್ಯ, ವಿ ರಾಮಕೃಷ್ಣರಾಯರು, ಸಿ ರಾಮಲಿಂಗರೆಡ್ಡಿಯವರು ಎಸ್ ಎಸ್ ಸುಬ್ಬರಾಯರು, ಎಸ್ ಮಾಧವರಾಯರು ಶ್ರೀಮನ್ ಮಹಾರಾಜರವರು ಇವರುಗಳೊಡನೆ ಕುಳಿತು ಸಂಭಾಷಣೆ ಬೇಸ್, ಟೆನ್ನಿಸ್ ಮೊದಲಾದ ಆಟಗಳನ್ನು ಆಡಿ ಸಂತೋಷಪಟ್ಟರು ಯೂರೋಪಿಯನ್ ಅತಿಥಿಗಳಿಗೆ ಗವರ್ನಮೆಂಟ್ ಹೌಸಿನಲ್ಲಿ ತಯಾರಾಗಿ ಬಂದಿದ್ದ ಅಲ್ಪಾಹಾರಗಳು ಒಂದು ಡೇರೆಯಲ್ಲಿ ಒಪ್ಪಿಸಲ್ಪಟ್ಟವು ಅರಮನೆ ಬಿಡದಿಯಿಂದ ಮಾಡಿಸಿ ತರಿಸಿದ್ದ ದಿವ್ಯವಾದ ಫಲಾಹಾರವಸ್ತುಗಳನ್ನು ಇನ್ನೊಂದು ಡೇರೆಯಲ್ಲಿ ಅರಸುಗಳೂ ದೇಶೀಯರು ದೊಡ್ಡ ಮನುಷ್ಯರೂ ಕೂಡಿ ಸೇವಿಸಿ ಸಂತೋಷಪಟ್ಟರು ಬಳಿಕ ಎಲ್ಲರೂ ಕೆತ್ತಲಾದ ಮೇಲೆ ಶ್ರೀಮನ್ ಮಹಾರಾಜರವರಿಂದ ಬೀಳ್ಕೊಂಡು ತೆರಳಿದರು

ಆ ದಿನ ಮಧ್ಯಾಹ್ನ ಶ್ರೀಮನ್ ಮಹಾರಾಜರವರು ಮುಂದೆ ಹೇಳುವ ರಾಜಾಜ್ಞಾ ಪತ್ರಿಕೆಯನ್ನು ರಾಜಧಾನಿಯಲ್ಲಿ ಪ್ರಕಟಮಾಡಿಸಿದರು –

ಸರ್ಕಾರದಿಂದ ಫಾಯಿನ್ ಆದುದು

ಬೆಂಗಳೂರು, ಭಾನುವಾರ, ನವೆಂಬರ್ ತಾ| 10, 1912

ರಾಜಾಜ್ಞಾ ಪತ್ರಿಕೆ

ಪ್ರಧಾನ ಶಿರೋಮಣಿ ತಂಜಾವೂರು ಮಾಧವರಾವ್ ಆನಂದರಾವ್, ಸಿ ಐ ಇ. ಯವರು ಉದ್ಯೋಗದಿಂದ ನಿವೃತ್ತರಾದಕಾರಣ ಮೈಸೂರು ಸಂಸ್ಥಾನದ ದಿವಾನ್ ಪದವಿಯು ಖಾಲಿಯಾದುದರಿಂದ ನಾವು ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಸಿ ಐ ಇ ಯವರ ರಾಜಭಕ್ತಿಯಲ್ಲಿಯೂ ಕಾರ್ಯದಕ್ಷತೆಯಲ್ಲಿಯೂ, ವಿವೇಚನೆಯಲ್ಲಿಯೂ ಕೇವಲ ವಿಶ್ವಾಸವಿಟ್ಟು ಮೈಸೂರು ಸಂಸ್ಥಾನದ ದಿವಾನ್ ಪದವಿಗೆ ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಸಿ ಐ ಇ ಯವರನ್ನು ಈ ಮೂಲಕ ನೌಕರರ್ ಮಾಡಿರುತ್ತೇವೆ ಮತ್ತು ಉದ್ಯೋಗಪ್ರಯುಕ್ತ ಮಂತ್ರಾಲೋಚನಾ ಸಭಾಧ್ಯಕ್ಷರಾಗಿ ಇರುವಂತೆ ನಾವು ಮೋಕ್ಷಗುಂಡಂ ವಿಶ್ವೇಶ್ವರಯ್ಯ ಸಿ ಐ ಇ ಯವರನ್ನು ನೌಕರರ ಮಾಡುತ್ತೇವೆ

ಇದು 1912 ನೆಯ ಇಸವಿ ನವೆಂಬರ್ 10 ನೆಯ ತಾರೀಖಿನ ದಿವಸ ಮೈಸೂರಲ್ಲಿ ನಮ್ಮ ಮೊಹರ್ ದಸ್ತಖತ್ ಸಹಿ ಕೊಡಲ್ಪಟ್ಟಿರುತ್ತದೆ.

ಕೃಷ್ಣರಾಜ ಒಡೆಯರ್

ದಿವಾನ್ ಮ| ಎಂ ವಿಶ್ವೇಶ್ವರೈಯ, ಸಿ ಐ ಇ ಯವರು ಆ ದಿನ ರಾತ್ರಿಯ ರೈಲು ಹತ್ತಿ ಬೆಂಗಳೂರನ್ನು ಕುರಿತು ಪ್ರಯಾಣಮಾಡಿದರು

ಹಿಂದಿನ ದಿವಾನ್‌ರವರ ಬಳಿ ಪ್ರೈವೇಟ್ ಸೆಕ್ರೆಟರಿಯಾಗಿದ್ದ ಮ| ಟಿ ಗೋವಿಂದರಾಯರೇ ಇನ್ನು ಕೆಲವು ಕಾಲದ ತನಕ ಮ|| ವಿಶ್ವೇಶ್ವರೈಯನವರ ಪ್ರೈವೇಟ್ ಸೆಕ್ರೆಟರಿಯಾಗಿ ಕೆಲಸ ಮಾಡುವರು

ಈಗ ಸೂಪರಿಂಟೆಂಡಿಂಗ್ ಇಂಜನಿಯರಾಗಿರುವ ಮ|| ಕಪೂರ್ ಶ್ರೀನಿವಾಸರಾಯರವರು ಸಂಸ್ಥಾನದ ಅಫಿಸಿಯೇಟಿಂಗ್ ಚೀಫ್ ಇಂಜನಿಯರಾಗಿ ನೇಮಿಸಲ್ಪಟ್ಟಿದ್ದಾರೆ

ಸದ್ಯಕ್ಕೆ ಸಂಸ್ಥಾನದ ರಾಜ್ಯಾಡಳಿತದಲ್ಲಿ ಇನ್ನಾವ ಬದಲಾವಣೆಗಳೂ ಕೂಡಿಸಲ್ಪಡುವುದಿಲ್ಲ.

ಮ|| ಟಿ. ಆನಂದರಾಯರವರ ಸರ್ವೀಸಿನ ಪ್ರಶಂಸೆಯು

ದಿವಾನ್ ಮ|| ಟಿ ಆನಂದರಾಯರವರು ಈ ಸಲ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವುದಕ್ಕೆ ಮೊದಲು ಅಂದರೆ ಈ ತಿಂಗಳು ತಾ. 1 ನೇ ಶುಕ್ರವಾರ ಅರಮನೆಗೆ ಬಂದು ಶ್ರೀಮನ್ ಮಹಾರಾಜರನ್ನು ಭೇಟಿಮಾಡಿ ಅವರಿಂದ ಕಡೆಯ ಅನುಜ್ಞೆಯನ್ನು ಪಡೆದುಕೊಂಡರಾದದ್ದರಿಂದ ಛಾರ್ಜು ಒಪ್ಪಿಸುವುದಕ್ಕಾಗಿ ಅವರು ಮೊನ್ನೆ ಭಾನುವಾರ ರಾಜಧಾನಿಗೆ ದಯಮಾಡಲಿಲ್ಲ ಈಗ ಅವರು ನೌಕರಿಯಿಂದ ನಿವೃತ್ತರಾಗಿರೋದರಿಂದ ಅವರು ಈ ಸಂಸ್ಥಾನದಲ್ಲಿ ಮಾಡಿದ ಸರ್ವೀಸನ್ನು ಕುರಿತು ಶ್ರೀಮನ್ ಮಹಾರಾಜರವರು ಪರಮ ಶ್ಲಾಘನೀಯವೂ ಸರ್ವಸ್ವೀಕಾರ ಸಮ್ಮತವೂ ಆಗಿರುವ ಮುಂದೆ ಹೇಳುವ ಪ್ರಶಂಸೆಯನ್ನು ಸರ್ಕಾರಿಯಾಗಿ ಕಳೆದ ಭಾನುವಾರ ಮಧ್ಯಾಹ್ನ ಪ್ರಕಟ ಮಾಡಿಸಿರುತ್ತಾರೆ

ಸರ್ಕಾರದಿಂದ ಫಾಯಿನ್ ಆದುದು

ಬೆಂಗಳೂರು, ಭಾನುವಾರ, ನವೆಂಬರ್ ತಾ 10, 1912

ಮೈಸೂರು ಸಂಸ್ಥಾನದ ದಿವಾನ್‌ರವರಾದ ಪ್ರಧಾನ ಶಿರೋಮಣಿ ತಂಜಾವೂರು ಮಾಧವರಾವ್ ಆನಂದರಾವ್, ಸಿ ಐ ಇ ಯವರು ಉದ್ಯೋಗದಿಂದ ನಿವೃತ್ತರಾಗಲು ತಮಗೆ ಅಪ್ಪಣೆ ದಯಪಾಲಿಸಬೇಕೆಂದು ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರನ್ನು ಕೇಳಿಕೊಂಡುದರಿಂದ 1912 ನೆಯ ನವೆಂಬರ್ 10 ನೆಯ ತಾರೀಖಿನ ಲಾಗಾಯಿತು ಅವರು ಸರ್ಕಾರಿ ಉದ್ಯೋಗದಿಂದ ನಿವೃತ್ತರಾಗಲು ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ಅನುಮಾನಪೂರ್ವಕವಾಗಿ ಅಪ್ಪಣೆಯನ್ನು ದಯಪಾಲಿಸುತ್ತಾರೆ –(2) ಮ ಆನಂದರಾಯರವರಿಗೆ ನಿವೃತ್ತರಾಗಲು ಅಪ್ಪಣೆ ದಯಪಾಲಿಸುವ ಈ ಸಮಯದಲ್ಲಿ, ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ಈ ಸಂಸ್ಥಾನದಲ್ಲಿ ಮ ಆನಂದರಾಯರವರು ಮಾಡಿರುವ ಅನ್ಯಾದೃಶವಾದ ಕಾರ್ಯನಿರ್ವಾಹವನ್ನು ಅತಿಶಯವಾಗಿ ಮೆಚ್ಚಿಕೊಂಡಿರುವರೆಂಬ ಅಂಶವನ್ನು ಲಿಖಿತಮೂಲಕ ಪ್ರಬುದ್ಧಪಡಿಸಲಪೇಕ್ಷಿಸುತ್ತಾರೆ ಇವರು ಉದ್ಯೋಗದಲ್ಲಿದ್ದ 40 ವರ್ಷಗಳ ದೀರ್ಘಕಾಲದಲ್ಲಿ ನಿರಂತರವೂ ಸರ್ಕಾರಿ ಕೆಲಸಗಳನ್ನು ಆಸಕ್ತಿಯಿಂದ ನೆರವೇರಿಸುವ ವಿಚಾರದಲ್ಲಿ ಸಮಸ್ತರಿಗೂ ಆದರ್ಶಪ್ರಾಯರಾಗಿದ್ದರು ಇವರ ಅಸಾಧಾರಣವಾದ ಬುದ್ಧಿಮತ್ತೆಯಿಂದಲೂ, ಆರ್ಜವದಿಂದಲೂ, ನಿಷ್ಪಕ್ಷಪಾತತೆಯಿಂದಲೂ ನ್ಯಾಯಪರಾಯಣತೆಯಿಂದಲೂ, ಇವೆಲ್ಲಕ್ಕಿಂತಲೂ ಅತಿಶಯವಾಗಿ ಈ ಸಂಸ್ಥಾನವನ್ನಾಳುವ ಮಹಾಸಾಮಿಯವರಲ್ಲಿ ಇವರು ಪ್ರದರ್ಶಿಸುತ್ತಿದ್ದ ನಿಶ್ಚಲವಾದ ಸ್ವಾಮಿಭಕ್ತಿಯಿಂದಲೂ ಸಹ ಇವರು ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರ ಅಭಿಮಾನಕ್ಕೂ ಮೆಚ್ಚುಗೆಗೂ ಪಾತ್ರರಾಗಿರುವುದು ಮಾತ್ರವೇ ಅಲ್ಲದೆ ಶ್ರೀಮನ್ಮಹಾರಾಜರವರ ಸಮಸ್ತ ಪ್ರಜೆಗಳಲ್ಲಿಯೂ ಗೌರವವನ್ನು ಸಂಪಾದಿಸಿರುತ್ತಾರೆ (3) ಬ್ರಿಟಿಷ್ ಸರ್ಕಾರದವರು ಮ ಆನಂದರಾಯರವರಿಗೆ "ಸಿ ಐ ಇ" ಎಂಬ ಘನತೆಯಾದ ಬಿರುದನ್ನು ದಯಪಾಲಿಸುವುದರ ಮೂಲಕ ಇವರ ರಾಜಕಾರ್ಯದಕ್ಷತೆಯ ವಿಷಯದಲ್ಲಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ ಈ ರೀತಿಯಲ್ಲಿ ಬ್ರಿಟಿಷ್ ಸರ್ಕಾರದವರು ತೋರಿಸಿರುವ ಮೆಚ್ಚುಗೆಯನ್ನು ತಾವೂ ಅನುಮೋದಿಸಿರುವರೆಂಬುದನ್ನು ವ್ಯಕ್ತೀಕರಿಸುವುದಕ್ಕಾಗಿ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ಇವರಿಗೆ "ಪ್ರಧಾನ ಶಿರೋಮಣಿ" ಎಂಬ ಬಿರುದನ್ನು ಕೊಡಲ್ಪಡುವ ಹೊಸ ಬಿಲ್ಲತ್ತುಗಳ ಸಮೇತ ದಯಪಾಲಿಸಿರುತ್ತಾರೆ –(4) ಮ| ಆನಂದರಾಯರವರಿಗೆ ಇದಕ್ಕೆ ಮೂರು ತಿಂಗಳ ಪ್ರಿವಿಲೆಜ್ ರಜಾ ಹಕ್ಕಿಗೆ ಪ್ರತಿಯಾಗಿ ಇವರು ಉದ್ಯೋಗದಿಂದ ನಿವೃತ್ತರಾಗುವ ತಾರೀಖಿನ ಲಾಗಾಯಿತು ಮೂರು ತಿಂಗಳವರೆಗೆ ಆಗುವ ಪೂರಾ ಸಂಬಳವು ಕೊಡಲ್ಪಡತಕ್ಕದೆಂದು ಪ್ರಕೃತದಲ್ಲಿ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ಅಭಿಮಾನಪೂರ್ವಕವಾಗಿ ಮಂಜೂರ್ ಹುಕುಂ ದಯಪಾಲಿಸಿರುತ್ತಾರೆ ಇದಲ್ಲದೆ ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರವರು ತಮ್ಮ ಸ್ವಕೀಯಾಭಿಮಾನವನ್ನು ವ್ಯಕ್ತಗೊಳಿಸುವ ಉದ್ದೇಶದೊಡನೆ ಮ|| ಆನಂದರಾಯರವರಿಗೆ 1913 ನೆಯ ಫೆಬ್ರವರಿ 10 ನೆಯ ತಾರೀಖಿನ ಲಾಗಾಯಿತು ಮಾಹೆಯಾನಾ 1,250 ರೂಪಾಯಿ ಸ್ಪೆಷಲ್ ಪೆನ್ಷನನ್ನು ದಯಪಾಲಿಸಿರುತ್ತಾರೆ ಇದಲ್ಲದೆ ಮ ಆನಂದರಾಯರವರ ಬಂಗಲೆಯ ಬಳಿ ಕಾವಲಿರುವ ಗಾರ್ಡ್ ಸಿಪಾಯಿಗಳ ಪಹರೆಯು ಮುಂದೆಯೂ ಇರುವಂತೆ ಶ್ರೀಮನ್ಮಹಾರಾಜರವರು ಅನುಗ್ರಹಿಸಿರುವುದಲ್ಲದೆ ಇವರಿಗೆ ಇಬ್ಬರು ಹರಿಕಾರರು, ಒಬ್ಬ ಜಮೇದಾರ, ಒಬ್ಬ ದಫೇದಾರ, ಆರು ಜನ ದಲಾಯಿತರು ಈ ರೀತಿಯ ಖಾಯಂ ಸಿಬ್ಬಂದಿಯನ್ನೂ ದಯಪಾಲಿಸಿರುತ್ತಾರೆ ಅಲ್ಲದೆ ಸೀನಿಯರ್ ಸರ್ಜನ್‌ರವರು ಮ| ಆನಂದರಾಯರವರೊಡನೆ ಆಲೋಚಿಸಿ, ಪ್ರತಿ ದಿನವೂ ಅವರ ದೇಹಾರೋಗ್ಯವನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಮೆಡಿಕಲ್ ಆಫೀಸರನ್ನು ನಿಯಮಿಸಬೇಕೆಂದು ಅವರಿಗೆ ತಿಳಿಯಿಸಲಾಗುವುದು –ಮ|| ಆನಂದರಾಯರವರು ಈ ರೀತಿ ಗೌರವಪೂರ್ವಕವಾಗಿ ಉದ್ಯೋಗದಿಂದ ನಿವೃತ್ತರಾಗುವಲ್ಲಿ ಶ್ರೀಮನ್ಮಹಾರಾಜರವರು ಅವರಿಗೆ ಕೇವಲ ಶ್ರೇಯಸ್ಸನ್ನು ಕೋರುವರಲ್ಲದೆ ಅವರಿಗೆ ಲಭ್ಯವಾಗಿರುವ ವಿಶ್ರಾಂತಿ ಸುಖವನ್ನು ಚಿರಕಾಲ ಅನುಭವಿಸುವಂತೆ ಭಗವಂತನು ಅನುಗ್ರಹಿಸಲೆಂದು ಬಯಸುತ್ತಾರೆ

ಹುಕುಂ ಪ್ರಕಾರ,

ಆರ್ ಶ್ರೀನಿವಾಸಯ್ಯಂಗಾರ

ಆಫಿಸಿಯೇಟಿಂಗ್ ಸೆಕ್ರೆಟರಿ

ನಮ್ಮ ಪುಸ್ತಕ ಭಂಡಾರವು.

ಕನ್ನಡ ಕಾದಂಬರಿಗಳು

ಆಸ್ಥಾನ ವಿದ್ವಾಂಸರೂ ಕರ್ಣಾಟಕ ಚಂದ್ರಿಕೆಯ ಎಡಿಟರೂ ಆದ ಮ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳು "ಅನಂಗಸುಂದರಿ" ಎಂಬ ಮನೋಹರವಾದ ಕಾದಂಬರಿಯನ್ನೂ, ಅದಕ್ಕೆ ಉಪಸಂಹಾರವಾದ "ತಾರಾಸುಂದರಿ" ಎಂಬ ಕಾದಂಬರಿಯನ್ನೂ, "ಸಂತಾಪಕ" ಎಂಬ ಸಮಾಜ ಚಿತ್ರದಿಂದ ಕೂಡಿದ ಕಥೆಯನ್ನೂ, "ಸತೀರೋಹಿಣಿ" ಎಂಬ ಪಾತಿವ್ರತ್ಯ ಧರ್ಮಬೋಧಕವಾದ ಕಾದಂಬರಿಯನ್ನೂ ನಮಗೆ ಕಳುಹಿಸಿರುವರು ಬಂಗಾಳಿಯ ಕಾದಂಬರಿಗಳು ಘಟನಾವಳಿಗಳಲ್ಲಿಯೂ ವರ್ಣನಾ ಭಾಗಗಳಲ್ಲಿಯೂ ಸಂಕ್ಷೋಭಕಗಳಾಗಿ ಕನ್ನಡಿಗರಿಗೆ ಮನೋರಂಜಕಗಳಾಗಿರುವವೆಂದು ತಿಳಿದು ಮ| ಶಾಸ್ತ್ರಿಗಳವರು ಈ ಪುಸ್ತಕಗಳನ್ನು ಸರಣಿಯಲ್ಲಿಯೂ ಕಲ್ಪನಾ ಕೌಶಲದಲ್ಲಿಯೂ ವ್ಯಾಕರಣ ಮರ್ಯಾದೆಯಲ್ಲಿಯೂ ಅವುಗಳಂತೆಯೇ ಅತಿಶ್ರೇಷ್ಠವಾಗಿ ರಚಿಸಿರುತ್ತಾರೆ ಇವರು ನಾಟಕ, ಪ್ರಹಸನ, ಉಪನ್ಯಾಸ, ಕಾದಂಬರಿ, ಮುಂತಾದವುಗಳನ್ನು ಇದುವರೆಗೆ ಅನೇಕವಾಗಿ ವಿರಚಿಸಿ ಹೆಸರು ಪಡೆದಿರುವರು ವಿದ್ಯಾಪಕ್ಷಪಾತಿಗಳು ಅವರ ಕಾರ್ಯಕ್ಕೆ ಪ್ರೋತ್ಸಾಹಪಡಿಸುವರೆಂದು ನಿರೀಕ್ಷಿಸುವೆವು ಬೆಲೆ—ಅನಂಗಸುಂದರಿ 8 ಆಣೆ ತಾರಾಸುಂದರಿ 4 ಆಣೆ ಸಂತಾಪಕ 4 ಆಣೆ ಸತೀರೋಹಿಣಿ 2 ಆಣೆ

"ಕೃಶಾನುವಿಶ್ವಾವಸು ಸಂವಾದ"

ವೆಂಕಟಾಧ್ವರಿ ಎಂಬ ಕವಿಶ್ರೇಷ್ಠನಿಂದ ಸಂಸ್ಕೃತ ಭಾಷೆಯಲ್ಲಿ ವಿರಚಿತವಾಗಿರುವ ವಿಶ್ವಗುಣಾದರ್ಶವೆಂಬ ಉದ್ಗ್ರಂಥದ ವಾಕ್ಯರೂಪವಾದ ಈ ಕನ್ನಡ ಭಾಷಾಂತರವನ್ನು ಬೆಂಗಳೂರಲ್ಲಿರುವ ಮ ಸುಬ್ರಹ್ಮಣ್ಯ ಅನಂತನಾರಾಯಣಶಾಸ್ತ್ರಿಯವರೂ ಮ ರಾಮಕೃಷ್ಣ ಶಾಸ್ತ್ರಿಯವರೂ ರಚಿಸಿರುತ್ತಾರೆ ಇಲ್ಲಿರುವ ಸಮಸ್ತ ವಸ್ತುಗಳಲ್ಲಿಯೂ ಗುಣದೋಷಗಳೆರಡೂ ಇರುವಂತೆ ಸಜ್ಜನರಿಗೆ ಗುಣವೂ ದುರ್ಜನರಿಗೆ ದೋಷವೂ ಗೋಚರವಾಗುವವು ಕವಿತೆಯೂ ಈ ಗ್ರಂಥದಲ್ಲಿ ಇಬ್ಬರು ಗಂಧರ್ವರ ಸಂವಾದರೂಪವಾಗಿ ರಚಿಸಲ್ಪಟ್ಟಿದೆ ಕ್ರಯ 10 ಆಣೆ

"ಜ್ಯೋತಿಸ್ಸಿದ್ಧಾಂತ ಸಂಗ್ರಹ"

ಮೈಸೂರಲ್ಲಿರುವ ಅಡಿಶನಲ್ ಮ ಸಿ ರ ಶೇಷಾಚಾರ್ಯರವರ ಮೈಸೂರು ಸಂಸ್ಕೃತ ಕಾಲೇಜಿನ ಜ್ಯೋತಿಶ್ಶಾಸ್ತ್ರೋಪಾಧ್ಯಾಯರಾದ ಪುಸ್ತಕ ತಿರುಮಲಾಚಾರ್ಯರೂ ಈ ಗ್ರಂಥವನ್ನು ರಚಿಸಿರುತ್ತಾರೆ ಕಾಲವಿಚಾರ, ಗ್ರಹಗಳ ಚಾರಗಳು ಆಯಾ ಗ್ರಹಗಳಿಗೆ ಇರುವ ಭೂಗೋಳ ವಿವರಣೆ, ಇವೇ ಮೊದಲಾದ ವಿಷಯಗಳು ಪಾಶ್ಚಾತ್ಯ ಗ್ರಂಥಾಧಾರದಿಂದಲೂ ಭಾರತೀಯ ಶಾಸ್ತ್ರ ಸಿದ್ಧಾಂತಗಳಿಂದಲೂ ಸಪ್ರಮಾಣವಾಗಿ ಬರೆಯಲ್ಪಟ್ಟಿರುವವು ಗ್ರಂಥಕರ್ತರು ಭಾಷೆಯಲ್ಲಿ ವಿದ್ವತ್ತರಾಗಿರುವ ಕಾರಣ ವಿದ್ವಾಂಸರಿಗೂ ಸುಗಮವಾಗಿ ತಿಳಿಯುವ ಈ ಗ್ರಂಥಕ್ಕೆ ಶ್ರೇಷ್ಠತೆಯನ್ನು ಉಂಟುಮಾಡಿರುವುದರಿಂದ ಕನ್ನಡಿಗರ ಪ್ರೋತ್ಸಾಹಕ್ಕೆ ಅರ್ಹವಾಗಿರುತ್ತದೆ ಕ್ರಯ 5 ಆಣೆ

"ಉತ್ತಮ."

ನಾರ್ಮಲ್ ಸ್ಕೂಲಿನ ಸಹಾಯೋಪಾಧ್ಯಾಯರಾದ ಮ ಜಿ ಕೃಷ್ಣಯ್ಯಂಗಳವರು ಈ ಕಾದಂಬರಿಯನ್ನು ತೆಲುಗಿನಿಂದ ಭಾಷಾಂತರಿಸಿ ಪ್ರಕಟಿಸಿರುತ್ತಾರೆ ಮಾನಸ್ತರ ನಗರದ ಅಧಿಪತಿಯಾದ ಪ್ರತಾಪಸಿಂಹನ ವಿಷಯದ ಚರಿತ್ರೆ ರೂಪವಾಗಿ ಹಲವರು ತಿಳಿದಿರುವರು ಆತನ ಬಂಧುವಾದ ಚಂದ್ರಾವತಿಯ ಉತ್ತಮನ ಚರಿತ್ರೆಯು ಮಾತ್ರ ಅಷ್ಟಾಗಿ ಪ್ರಸಿದ್ಧವಲ್ಲ ಈ ಚರಿತ್ರೆಯಿಂದ ರಾಜಪುತ್ರರ ಅನೇಕ ವಿಷಯಗಳು ತಿಳಿಯುವುದು ವಿದಿತವಾಗುತ್ತದೆ ಸಾರಸ್ಯವಾಗಿರುವ ಈ ಕಥೆಯನ್ನು ಕನ್ನಡಿಗರು ಓದಿ ಪ್ರಯೋಜನಪಡೆಯುವರು ಬೆಲೆ 4 ಆಣೆ

"ವೇದಗೀತೆ, ಆತ್ಮಗೀತೆ ಇವು ಎರಡು ಕೃತಿಗಳು"

ಬೆಂಗಳೂರಲ್ಲಿರುವ ಸುಮತಿ ಗ್ರಂಥಮಾಲೆ ಆಫೀಸಿನವರು ಈ ಪುಸ್ತಕವನ್ನು ಹೊಸ ರೂಪವಾಗಿ ಪ್ರಕಟಿಸುವರು ಆತ್ಮ ವಿಷಯವಾದ ಸ್ವಾನುಭವ ವಿಷಯ ವೇದಾಂತ ಸಾರವನ್ನು ಉಪನಿಷತ್ತುಗಳಿಂದ ಸಂಗ್ರಹಿಸಿ ಸೂತ್ರಗಳಾಗಿ, ಆತ್ಮಸಂಬಂಧವಾದ ವಿಷಯವು ಗ್ರಂಥಕರ್ತರ ಅವಲಂಬನೆಯಾಗಿರುವುದು ಸರ್ವರಿಗೂ ಸುಲಭವಾಗಿ ತಿಳಿಯುವಂತಿದೆ ನಾವೆಲ್ಲರೂ ಇದನ್ನು ಓದಿ ಪ್ರಯೋಜನವನ್ನು ಪಡೆಯಬೇಕು ಬೆಲೆ 1 ಆಣೆ

"ವಿಶ್ವಲಾವಣ್ಯ ಮೂಲ ಪ್ರಯೋಗ"

ಈ ಪುಸ್ತಕವು ವೈದಿಕ ಗ್ರಂಥವು ಶುದ್ಧವಾಗಿ ಪ್ರಕಟವಾಗಿದೆ ಮೈಸೂರು ಬಟ್ಟರ ಮಕ್ಕಳು ಮ ಎ ಸರಸ ಹಸ್ತಗಳಿಂದ ಪ್ರಕಟಿಸಲ್ಪಟ್ಟಿರುವ ಮುದ್ರಣವಿಲ್ಲದೆ ಬಿಳಿದಾಗುತ್ತಿದ್ದ ಮಂತ್ರಶಾಸ್ತ್ರಗಳನ್ನು ಈ ರೀತಿಯಾಗಿ ಪ್ರಕಟಿಸಿರುವುದು ಪುರೋಹಿತ ವರ್ಗದವರಿಗೆ ಉಪಯುಕ್ತವಾಗಿದೆ 2 ರೂಪಾಯಿ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಪ್ರತಿನಿಧಿ ಸಭೆಯಲ್ಲಿ ನಡೆದ ಪ್ರಶ್ನೆಗಳೂ ದಿವಾನ್‌ರವರು ದಯಪಾಲಿಸಿದ ಉತ್ತರಗಳೂ

ವಿದ್ಯಾಭ್ಯಾಸ

ಪ್ರಾರ್ಥನೆ ಕೆಳಗಿನ ಅಥವಾ ಇಂಗ್ಲಿಷ್ ಲೋವರ್ ಸೆಕೆಂಡರಿ ವ್ಯವಸಾಯ ಶಾಸ್ತ್ರವನ್ನೂ ಇಂಡಸ್ಟ್ರಿಯಲ್ ಗಣಿಕೆಯನ್ನೂ ಒಂದು ಐಚ್ಛಿಕ ವಿಷಯವಾಗಿಟ್ಟು ಬಾಲಕರು ಕಲಿಯುವಂತೆ ಏರ್ಪಾಡಾಗಬೇಕು ಉತ್ತರ ಈ ವಿಷಯವನ್ನು ವಿದ್ಯಾ ಇಲಾಖೆಯವರು ಆಲೋಚನೆ ಮಾಡುತ್ತಿದ್ದಾರೆ ಅವರ ತೀರ್ಮಾನವು ಇನ್ನೂ ತಿಳಿಯಲಿಲ್ಲ

ಪ್ರಾ ಹೈಸ್ಕೂಲ್ ತರಗತಿಗಳಲ್ಲಿ ವ್ಯವಸಾಯ ವಿಷಯವನ್ನು ಚೆನ್ನಾಗಿ ಕಲಿಸ ತರಬೇತು ಮಾಡಬೇಕು ಇಂಥವರು ದೇಶದ ಮಕ್ಕಳಿಗೆ ಉಪಕಾರವಾಗುವುದು ಉ ಈಗ ಪ್ರಯತ್ನವು ಸರ್ಕಾರದವರು ಕೆಲವು ಉಪಾಧ್ಯಾಯರನ್ನು ಆ ರೀತಿ ತರಬೇತು ಮಾಡುತ್ತಿದ್ದಾರೆ

ಪ್ರಾ ಆಂಗ್ಲೋ ವರ್ನಾಕುಲರ್ ಸ್ಕೂಲುಗಳಿಗೆ ಸೇರಿದಂತೆ ವ್ಯವಸಾಯ ಬೋಧನಾ ಕ್ಲಾಸುಗಳನ್ನು ಇಟ್ಟು, ವ್ಯವಸಾಯಗಾರರ ಮಕ್ಕಳಿಗೆ ವಿದ್ಯೆಯನ್ನು ಕಲಿಸಬೇಕು ಉ —ಇದು ಮುಂದೆ ಯೋಚಿಸತಕ್ಕ ವಿಷಯವಾಗಿದೆ

ಪ್ರಾ ಗ್ರಾಮಾಂತರಗಳಲ್ಲಿರುವ ಸಮಸ್ತ ಪಾಠಶಾಲೆಗಳಲ್ಲೂ ವ್ಯವಸಾಯ ಕ್ರಮವನ್ನು ಕಲಿಸಬೇಕು ಉ ಇದು ಗವರ್ನಮೆಂಟಿನ ಆಲೋಚನೆಯಲ್ಲಿದೆ

ಪ್ರಾ ಇನ್ನು ಮುಂದೆ ಪ್ರಥಮ ಪಾಠಶಾಲೆಗಳನ್ನು ಸಂಸ್ಥಾನದ ಬಹಳವಾಗಿ ಹೆಚ್ಚಿಸುವಂತೆ ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ ಅಲ್ಲಲ್ಲಿ ಅಕ್ಷರಾಭ್ಯಾಸದ ಜೊತೆಗೆ ಮಕ್ಕಳಿಗೆ ಇನ್ನೂ ಹೆಚ್ಚಾಗಿ ಕಿಂಡರ್ ಗಾರ್ಟನ್ ಉಪಕರಣಗಳನ್ನೂ ಕಸಬನ್ನೂ ಒಳ್ಳೆ ಅನುಭವವುಳ್ಳ ಉಪಾಧ್ಯಾಯರ ಮೂಲಕ ಕಲಿಸುವಂತೆ ಮಾಡಬೇಕು ಉ —ಇದು ಅವಶ್ಯವು, ಆ ರೀತಿ ಏರ್ಪಾಡು ಮಾಡಲು ಯೋಚಿಸುತ್ತೇವೆ

ಪ್ರಾ —ಸಂಸ್ಥಾನದಲ್ಲೂ ಅನ್ಯದೇಶಗಳಲ್ಲೂ ನಮ್ಮ ಬಾಲಕರು ಕಸಬುಗಳನ್ನು ಕಲಿತು ಬರುವಂತೆ ಸರ್ಕಾರದವರು ಇನ್ನೂ ಹೆಚ್ಚಾಗಿ ವೇತನಗಳನ್ನು ಕೊಟ್ಟು, ಕಳುಹಿಸುತ್ತಾ ಬರಬೇಕು ಉ —ಆಗಲಿ, ಯೋಚಿಸುತ್ತೇವೆ

ಪ್ರಾ —ಹೆಬ್ಬಾಳ್ಳದ ವ್ಯವಸಾಯದ ಫಾರಂನಲ್ಲಿ ರೈತರ ಮಕ್ಕಳಿಗೆ ವೇತನಗಳನ್ನು ಕೊಟ್ಟು, ಕರೆಸಿಕೊಂಡು ಸಾಕ್ಷಾತ್ತಾಗಿ ವ್ಯವಸಾಯ ಕ್ರಮಗಳನ್ನು ಕಲಿಸಿ ತರಬೇತು ಮಾಡಿಸುವುದರಿಂದ ಉಪಕಾರವಾದೀತು ಉ —ಹೆಬ್ಬಾಳ್ಳದ ಫಾರಮು ಈಗ ಬಹಳ ಚೆನ್ನಾಗಿ ನಡೆಯುತ್ತಿದೆ ಮುಂದಿನ ವರುಷ ಹೆಬ್ಬಾಳೂರಿನಲ್ಲಿ ಆ ಫಾರಮಿಗೆ ಸೇರಿದಂತೆ ಒಂದು ವ್ಯವಸಾಯ ಬೋಧನಾ ಶಾಲೆಯನ್ನು ಪ್ರಾರಂಭಿಸುತ್ತೇವೆ ಜಮೀನ್‌ದಾರರ ಮಕ್ಕಳಿಗೆ ವೇತನ

...ಕಲಿಸುತ್ತಾ ಬರುವೆವು. ಈ ಭಾಗವನ್ನು ಸಂಪದಭಿವೃದ್ಧಿ ಸವಾ... ಕಮಿಟಿಯವರು ಆಲೋಚನೆ ಮಾಡುತ್ತಿದಾರೆ.

...ಯಾವ ಯಾವ ಸ್ಥಳದಲ್ಲಿ ಯಾವ ಯಾವ ಕಸಬುಗಳಿವೆ, ಈಗ ... ಬಂದಿವೆಯೋ ಅಂಥಾ ಕಡೆ ಅದೇ ಕಸಬಿನ ಪಾಠಶಾಲೆಯು ... ಕಸಬುದಾರರ ಮಕ್ಕಳನ್ನು ತರಿಸಿ ಪಾಠ, ಪ್ರೋತ್ಸಾಹ ... ಕ್ರಮೇಣ ಅಭಿವೃದ್ಧಿಗೆ ಬರಲು ಅನುಮಾನವಿಲ್ಲ. ... ಯೋಚನೆಯುಳ್ಳವ, ಕ್ರಮೇಣ ಮಾಡುತ್ತೇವೆ.

...ಸ್ಥಾನದಲ್ಲಿ ಸೇಮ್ಯುಯವರ ಮಕ್ಕಳಿಗೆ ವಿದ್ಯೆಯನ್ನೂ ಆ ಕಸ... ಈಗ ಆ ಕಸಬೂ, ಅವರಿಂದ ಬೋಧನೆ ಮಾಡತಕ್ಕವರೂ ... ಯಲ್ಲದಾರೆ. ಉ. ಆಗಲಿ, ಮಾಡುತ್ತೇವೆ.

...ಈ ಸಂಸ್ಥಾನದ ಕಾಲೇಜುಗಳಲ್ಲೂ ಹೈ ಸ್ಕೂಲುಗಳಲ್ಲೂ ...ಮುಯೋಗಿರುವಂಥಾ ಬಾಲಕರಿಗೆ ಮೊದಲು ಸ್ಥಳಕೊಟ್ಟು, ತರು... ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳುವಂತೆ ಅಪ್ಪಣೆ ... ತರಗತಿಗಳಲ್ಲಿ ಸ್ಥಳ ಸಿಕ್ಕದೆ ಈಗ ಹಲವರು ಮದರಾಸ್ ... ಹೋಗಿ ಕಲಿಯುತ್ತಾರೆ. ಉ. ಆಗಲಿ, ಆ ರೀತಿ ... ಈಗಲೂ ಅದೇ ಕ್ರಮವನ್ನು ಇಟ್ಟಿದ...

...ಸ್ಥಾನದ ಸ್ಕೂಲುಗಳಲ್ಲಿ ಈಗ ಭಕ್ತಿ ವಿಚಾರವನ್ನು ಕುರಿತು ... ಹೇಳುವುದು ತೃಪ್ತಿಕರವಾಗಿಲ್ಲ. ಇದರಿಂದ ಹುಡುಗರಲ್ಲಿ ... ಟನೆ, ಗಲಭೆ, ಅಪನಂಬಿಕೆಗಳು ಹುಟ್ಟಲು ಕಾರಣವಾ... ಬೋಧಕರು ಸರ್ವತ್ರ ಅನ್ವಯಿಸುವಂಥಾ ಭಕ್ತಿ ಮಾರ್ಗವನ್ನು ... ತಿಳಿಸದೆ ತಮ್ಮ ಮತಕ್ಕೆ ಅನುಸಾರವಾದ ಸಂಗತಿಗಳನ್ನು ... ಸರ್ಕಾರದವರ ಉದ್ದೇಶವನ್ನು ಭಂಗಪಡಿಸುತ್ತಾರೆ. ... ಸಜಾ ಮಾಡಬೇಕು ಎಂದು ಕೆಲವರು ಕೇಳಿಕೊಂಡರು.

...—ಅವರನ್ನು ಎಷ್ಟು ಮಾತ್ರಕ್ಕೂ ಸಜಾ ಮಾಡಕೂಡದು. ಸಹೆ... ವ್ಯವಹಾರಾದಿಗಳಲ್ಲಿ ಪ್ರಸಿದ್ಧರಾದ ಸತ್ಪುರುಷರನ್ನು ಹುಡುಕಿ ... ನೇಮಿಸಬೇಕು. ಇದರಿಂದ ಮಕ್ಕಳು ಸಚ್ಚರಿತ್ರರಾಗಿ ಬೆಳೆ... ಯುತ್ತದೆ ಎಂದು ಅರಿಕೆ ಮಾಡಿದರು. ಉ. ಸರ್ಕಾರದ ... ವನ್ನು ಸಜಾ ಮಾಡುವವರಾಗಿಲ್ಲ. ಕ್ರಮೇಣ ಅಂಥಾ ... ಕಾರ್ಯಕ್ಕೆ ಒದಗಬಹುದೆಂಬ ನಿರೀಕ್ಷೆ ಇದೆ.

...ಮಿಷನ್ ಸ್ಕೂಲುಗಳಲ್ಲಿ ಕ್ರೈಸ್ತ ಮತವನ್ನು ಹಿಂದೂ ಮಕ್ಕಳಿಗೆ ... ಅದನ್ನು ಕೇಳಲು ಇಷ್ಟವಿಲ್ಲದ ಬಾಲಕರು ಆ ಸಮಯ ... ಹೋಗದಿದ್ದರೆ ಅಪರಾಧವಲ್ಲವೆಂದು ಖಂಡಿತ ಮಾಡಬೇಕು. ... ಕಡೆ ಮಿಷನ್ ಸ್ಕೂಲುಗಳಲ್ಲದೆ ಬೇರೆ ಸ್ಕೂಲುಗಳು ಇರು... ಅಲ್ಲಿಗೇ ಹೋಗಬೇಕಾಗಿದೆ ಎಂದು ಕೆಲವರು ಹೇಳಿದರು. ...—ಮಿಷನ್ ಸ್ಕೂಲುಗಳಿಂದ ನಮ್ಮ ಬಾಲಕರಿಗೆ ತುಂಬಾ ...ವಾಗಿದೆ. ಅನೇಕರು ಅಲ್ಲಿ ವಿದ್ಯಾಭ್ಯಾಸ ಮಾಡಿ ಸದ್ಗೃಹಸ್ಥರೂ ಸತ್ಪುರು... ರವರಿಗೆ ಒಳ್ಳೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದಾರೆ. ಅಂಥಾ ... ಯೋಚಿಸಬೇಕಾದ ಅಗತ್ಯವಿಲ್ಲ ಎಂದು ಹೇಳಿದರು. ಉ.- ಈಗ ... ಬಾಧಕವೇನೂ ಕಂಡುಬಂದಿಲ್ಲ. ಮುಂದೆ ನೋಡೋಣ.

...ಹೈ ಸ್ಕೂಲುಗಳಲ್ಲಿ ಈಗ ವಿದ್ಯಾಭ್ಯಾಸವು ತೃಪ್ತಿಕರವಾಗಿಲ್ಲ. ಇದ... ಮತ್ತು ಪಾಠ ಹೇಳುವುದರಲ್ಲಿ ನಿಪುಣರಲ್ಲದವರು ಉಪಾ... ನೇಮಕವಾಗುತ್ತಿರುವುದೇ ಮುಖ್ಯ ಕಾರಣವಾಗಿದೆ. ಸರ್ವೀಸ್ ... ವನ್ನು ಬದ್ಧಿ ಮಾಡಿ ಬಿಡುತ್ತಾರೆ. ... ಗೆ ಮಾಡದೆ ಬೋಧನೆ ... ಸೇವಿಸಬೇಕು. ೭೫-೮೦ ರೂಪಾಯಿಗೂ ... ಮಾಡಿದವರು ಎಕ್ಕುತ್ತಾರೆಂದು ವಿನಾಲಹಿಯುಳ್ಳವ ಉಪಾ... ನೇಮಿಸಿಕೊಳ್ಳುತ್ತಾರೆ. ಉ. ಇದು ಒಳ್ಳೆ ವಿಸಯ ... ಮಾಡಿದವರನ್ನು ಇನ್‌ಸ್ಪೆಕ್ಟರ್ ಜನರಲ್‌ರವರು ಆಜ್ಞಾನುಯಾ... ಮೋದನೆಯಲ್ಲಿ ಸಮರ್ಥರೆಂದು ಗೊತ್ತಾದ ಮೇಲೆ ... ತಿಲಕಕ್ಕೆ ಕಳುಹಿಸುವಂತೆ ಏರ್ಪಾಡು ಮಾಡುತ್ತಾರೆ.

...ಉಪಾಧ್ಯಾಯರಿಗೆ ೧೦ ರೂಪಾಯಿ ಸಂಬಳ ಸಿಗದೆ ಆಗಿದೆ. ಇಷ್ಟ... ಅವರು ಪತ್ನೀ ಸಂಸಾರವುಳ್ಳವರಾಗಿರಬೇಕು. ಒಂದು ... ಕೆಲ ವರ್ಷದ ಉಪಾಧ್ಯಾಯರಿಗೂ ಒಂದೇ ಸಂಬಳವಿದೆ. ... ಉಪಾಧ್ಯಾಯರಿಗೆ ಹ್ಯಾಗೆ ಕೆಲಸ ಮಾಡಬಹುದು ? ಸಂಬಳವ... ಇಡಬೇಕು. ಆಗಾಗ್ಗೆ ಬಡ್ತಿ ಆಗುವಂತೆ ಮಾಡಿಕೊಡಬೇಕು. ... ಸರ್ಕಾರದವರ ಆಲೋಚನೆಯಲ್ಲಿ ಇದೆ. ಕ್ರಮೇಣ ಮಾಡು...

...ಅಕ್ಷರ ಸಹಿತ ಮತ್ತು ಪತಿತ ಪಂಕ್ತಿಗಳಲ್ಲಿ ಹೇಗಿದೆ ... ಉಪಾಧ್ಯಾಯರಿಗೆ ಏಳಾ ಅಲ್ಪ ಸಂಬಳವಿದೆ. ಬಡ್ತಿಯಾಗು... ಮಾಡಿಲ್ಲ. ಆ ಪರೀಕ್ಷೆಗಳನ್ನು ಕೂಡುವವರಿಗೆ ಪ್ರೋತ್ಸಾಹ ... ಉ. —ಅಂಥವರಿಗೆ ಹೆಚ್ಚಾಗಿ ಸಂಬಳ ಕೊಡಬೇಕೆಂದು ರೂ... ಕೆಲವು ಕಡ ಕೋಮುಗಳೂ ಇವೆ.

...ಕಲ್ ನಿಂದ ಸ್ಕೂಲುಗಳಿಂದ ನೇಜ್ ಸಂದ್ ಸ್ಕೂಲುಗ... ಯವರು ರಾಜೀನಾಮೆಯಿಂದ ವರ್ಗಮಾಡಿಕೊಳ್ಳಬೇಕಾದರೆ ... ಕ್ಷರ್ ಪತ್ರಬೇಕೆಂಬ ವಿಧಿ ಇರುತ್ತೆ. ಇದು ಬಹಳ ಅಸಾ... ಆ ನಿರ್ಬಂಧವನ್ನು ತಪ್ಪಿಸಬೇಕು. ಉ. ಒಳ್ಳೇದು, ...

...—ಅನೇಕ ಗ್ರಾಮಾಂತರ ಸ್ಕೂಲುಗಳಲ್ಲಿ ಎರಡು ತರಗತಿಗಳಿಗೂ ... ಯರೇ ಪಾಠ ಹೇಳುತ್ತಿದಾರೆ. ಇದರಿಂದ ನಾನಾ ಅಸಾನು... ಉ. ಉಪಾಧ್ಯಾಯರು ಸಿಕ್ಕಿದ ಹಾಗೆಲ್ಲಾ ಹೆಚ್ಚಾಗಿ ... ಆಲೋಚನೆ ಇದೆ ಮಾಡುವೆವು.

...ಇಂಗ್ಲಿಷು ಈಗಿನ ಕಾಲದ ವಿದ್ಯೆ, ಇದು ಎಲ್ಲರಿಗೂ ಅವಶ... ಗ್ರಾಮ ಪಾಠಶಾಲೆಗಳಲ್ಲೂ, ಮೊಬಲ್ ಸ್ಕೂಲುಗಳಲ್ಲೂ ಕನ್ನ... ಇಂಗ್ಲಿಷನ್ನು ಮಕ್ಕಳಿಗೆ ಕಲಿಸುವಂತೆ ತರಗತಿಗಳನ್ನು ಕಲ್ಪಿಸಿ ... ಉ.—ಅಂಥಾ ಇಂಗ್ಲಿಷ್ ತರಗತಿಗಳನ್ನು ಇಡುವುದಕ್ಕೆ ... ಹೊಸ ಅವರಲ್ಲಿ ಮುಖ್ಯಸ ಒಂದರವನ್ನು ಸರ್ಕಾರದವರು ... ಕೈಗಾರಿಕೆ, ಉಳಿದ ಎರಡು ಭಾಗವನ್ನು ಕೊಡುವುದಾಗಿ ... ಬರಬೇಕೆಂದರೆ ಆಗಬಹುದು.

...ಮೈಸೂರು ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಾಗಿ ವೇತನಗಳನ್ನು ... ಈಗ ಪಟ್ಟಣಗಳ ಮೈಸೂರಿನಲ್ಲೂ ಇವರಿಗೆ ಬೆಂಗಳೂರಿನಲ್ಲೂ

ಕೊಡುತ್ತಾರೆ. ಇದು ಸಾಲದು. ಉ.—ಕೂಡಿದ ಮಟ್ಟಿಗೆ ಸ್ಕಾಲರ್‌ಷಿಪ್ ಹೆಚ್ಚಿಸುತ್ತಾ ಬರುವೆವು.

ಪ್ರ.—ಸ್ಕೂಲುಗಳಿಗೆ ಸಂಬಂಧಪಟ್ಟಂತೆ ಮಾಡಿಕೊಂಡಿರುವ ಗವರ್ನಮೆಂಟು ಕಸರತ್ತುಗಳ ಏರ್ಪಾಡಿಗೂ, ಆಟಗಳಿಗೂ ಗ್ರಾಂಟು ಕೊಡಬೇಕು. ಉ.—ಕೊಡುವಂತೆ ಹಣವನ್ನು ಸ್ಯಾಂಕ್ಷನ್ ಮಾಡುತ್ತೇವೆ.

ಪ್ರ. ಸಂಸ್ಥಾನದ ಗವರ್ನಮೆಂಟ್ ಮತ್ತು ಗ್ರ್ಯಾಂಟ್ ಸ್ಕೂಲುಗಳಲ್ಲೆಲ್ಲಾ ಯಾವ ವಿದ್ಯಾರ್ಥಿಗಳು ವಿನಾಯತಿ ಮಾಡದಂತೆ ಎಲ್ಲರೂ ಕಸರತ್ತುಗಳನ್ನು ಕ್ರಮವಾಗಿ ಮಾಡಬೇಕೆಂದು ವಿಧಿಸಬೇಕು. ಉ.—ಎಲ್ಲಾ ಕಡೆ ಯಲ್ಲೂ ಆ ರೀತಿ ಏರ್ಪಾಡು ಮಾಡುತ್ತಾ ಇದೇವೆ.

ಪ್ರ.—ಈ ಸ್ಕೂಲುಗಳಲ್ಲೂ ಹೈಸ್ಕೂಲುಗಳಲ್ಲೂ ಫೀಜಿನ ದರಗಳು ಬಹಳ ಹೆಚ್ಚಾಗಿವೆ. ಬಡವರು ಗೃಹಸ್ಥರೂ ಸಮಾನ್ಯ ಪ್ರತಿಯೂ ಕೊಡಲಾರದೆ ಸಂಕಟಪಡುತ್ತಾರೆ. ಉ. ಈಗಿರುವ ದರಗಳನ್ನು ಕಡಮೆ ಮಾಡಲಾಗುವುದಿಲ್ಲ.

ಪ್ರ. ಸ್ಕೂಲ್ ಫೀಜನ್ನು ಮೊದಲಿನಂತೆ ಪ್ರತಿ ತಿಂಗಳಲ್ಲೂ ವಸೂಲ್ಮಾಡುವಂತೆ ಹುಕುಂ ಆಗಬೇಕು. ಒಟ್ಟಿಗೆ ಕೊಡುವುದು ಅನೇಕರಿಗೆ ಕಷ್ಟ. ಉ.—ಈಗ ನಾಲ್ಕು ಕಿಸ್ತುಗಳಲ್ಲಿ ವಸೂಲ್ಮಾಡಬೇಕೆಂದು ರೂಲುಸು ಮಾಡಿದೆ.

ಪ್ರ.—ವಿದ್ಯಾರ್ಥಿಗಳನ್ನು ಕ್ಲಾಸಿನಿಂದ ಕ್ಲಾಸಿಗೆ ಬಡ್ತಿ ಮಾಡುವ ಭಾಗದಲ್ಲಿ ಕೆಲವು ಪ್ರತಿಬಂಧಕಗಳು ಇರುತ್ತವೆ. ಇದರಿಂದ ಹುಡುಗರು ಕೆಡಲು ಅವಕಾಶವಾಗಿದೆ. ಉ. ಈ ವಿಚಾರವನ್ನು ಸ್ಕೂಲ್ ಫೈನಲ್ ಪರೀಕ್ಷಾ ರೂಲಿನ ಕೂಡ ಪರ್ಯಾಲೋಚಿಸುವಂತೆ ತಿಳಿಸುತ್ತೇವೆ.

ಪ್ರ. ಎ. ವಿ. ಸ್ಕೂಲುಗಳಲ್ಲಿ ಚರಿತ್ರೆ ಭೂಗೋಳವನ್ನು ಇಂಗ್ಲಿಷಿನಲ್ಲಿ ಕಲಿಸಬೇಕು. ಉ.—ಇಂಗ್ಲಿಷ್ ಮಾಸ್ಟರುಗಳನ್ನು ಹೆಚ್ಚಿಸಬೇಕಾಗುತ್ತದೆ. ಯೋಚಿಸುತ್ತೇವೆ.

ಪ್ರ.—ಲೋಯರ್ ಸೆಕಂಡರಿ ಪರೀಕ್ಷೆಗೆ ಹೋಗುವ ಪ್ರೈವೆಟ್ ವಿದ್ಯಾರ್ಥಿಗಳ ವಯಸ್ಸು ಗೊತ್ತುಮಾಡಿ, ಅದಕ್ಕೆ ವಿನಾಯತಿಯನ್ನು ಮಜಾಮಾಡುವುದು ಸರಿಯಲ್ಲ. ಈ ನಿಯಮನ್ನ ನಿರ್ಬಂಧವನ್ನು ತೆಗೆದುಹಾಕುತ್ತೇವೆಂದು ಹೋದ ವರುಷ ಅಪ್ಪಣೆ ಆಯಿತು. ಉ. ಆಗಲಿ, ಆ ನಿರ್ಬಂಧವನ್ನು ವಜಾಮಾಡಿ ಹುಕುಂ ಕೊಡುತ್ತೇವೆ.

ಪ್ರ. —ಬಾಲಿಕಾ ಪಾಠಶಾಲೆಗಳಿಗೆ ಗಂಡಸರನ್ನು ಉಪಾಧ್ಯಾಯರಾಗಿ ನೇಮಿಸುವುದರಲ್ಲಿ ಅನೇಕ ಅಸಂಗತಗಳು ಪ್ರಾಪ್ತವಾಗುತ್ತವೆ. ಹೆಂಗಸರನ್ನೇ ನೇಮಿಸಿದರೆ ಕ್ಷೇಮವಾದೀತು. ಉ.- ಹೆಂಗಸರು ಸಿಕ್ಕುವುದು ದುರ್ಲಭ. ಸಿಕ್ಕಿದ ಹಾಗೆ ಅವರನ್ನು ನೇಮಿಸುತ್ತಾ ಬರುವೆವು.

ಪ್ರ. —ಬೆಂಗಳೂರಿನಲ್ಲಿ ಸ್ತ್ರೀಯರಿಗಾಗಿ ಒಂದು ಕಾಲೇಜನ್ನು ಇಡಬೇಕು. ಅಲ್ಲಿ ಅನೇಕ ಸ್ತ್ರೀಯರು ಓದಲು ಸಿದ್ಧರಾಗಿದಾರೆ. ಈಗ ಲೋಯರ್ ಸೆಕೆಂಡರಿ ಪರೀಕ್ಷೆ ಕೊಟ್ಟ ಹೆಣ್ಣುಮಕ್ಕಳು ಮುಂದಕ್ಕೆ ಓದುವುದಕ್ಕೆ ಇಷ್ಟಪಟ್ಟರೂ ಅವಕಾಶವಿಲ್ಲ. ಉ. ಇದು ಮುಂದೆ ಆಗಬೇಕಾದ ವಿಷಯ. ಯೋಚಿಸುತ್ತೇವೆ.

ಪ್ರ. — ಸ್ಕೂಲುಗಳಿಗೆ ಕೊಡುವ ಗ್ರ್ಯಾಂಟಿನ ದರವನ್ನು ಶೇಕಡ ೫೦ ರಂತೆ ಮಾಡಿಕೊಡಬೇಕು. ಉ.—ನಿಮ್ಮ ಅಭಿಪ್ರಾಯವನ್ನೆಲ್ಲಾ ಬರೆದು ಕೊಟ್ಟರೆ ಯೋಚಿಸುತ್ತೇವೆ.

ಪ್ರ. ಗ್ರಾಮಾಂತರಗಳಲ್ಲಿ ಪ್ರಜೆಗಳಿಗೆ ಆರೋಗ್ಯ ವಿಚಾರ, ದೇವಭಕ್ತಿ, ರಾಜಭಕ್ತಿ ಮುಂತಾದ ವಿಚಾರಗಳನ್ನು ಕುರಿತು ಆಗಾಗ್ಗೆ ಉಪನ್ಯಾಸಗಳನ್ನು ಮಾಡಿ ತಿಳಿಯಪಡಿಸಲು ಲೆಕ್ಚರರನ್ನು ನೇಮಿಸಬೇಕು ಮತ್ತು ಹರಿಕಥೆ ಇವುಗಳಿಂದ ಬಹುಮಾನಗಳನ್ನು ಕೊಟ್ಟು ಯೋಗ್ಯರಾದವರಿಗೆ ಸಹಾಯಮಾಡಿ ಸಹಿಬೇಕು. ಜಾತ್ರೆ ಕಾಲಗಳಲ್ಲೂ ಈ ಏರ್ಪಾಡು ಆಗಬೇಕು. ಇದಕ್ಕೆ ಸರ್ಕಾರಿ ನೌಕರರು ಬೆಂಬಲ ಇಲ್ಲಿ ಚರ್ಚೆ ಮಾಡಿದಾಗ - ಯೋಚಿಸುತ್ತೇವೆ - ಎಂಬುದಾಗಿ ಅಪ್ಪಣೆಯಾಗುತ್ತೆ. ವರುಷ ಕಳೆದರೂ ಕಾರ್ಯಾರಂಭವಾಗುವುದಿಲ್ಲ. ಉ. ಆಗಲಿ, ನಾಡೋಣ.

ಪ್ರ. ನಾರ್ಮಲ್ ಸ್ಕೂಲುಗಳಲ್ಲಿ ಅಭ್ಯಾಸ ಮಾಡಬೇಕೆಂದು ಅಪೇಕ್ಷಿಸುವ ಪ್ರೈವೆಟ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡಿಸಬೇಕು. ಉ. ಅಂಥವರು ಎಂದು ಅರ್ಜಿ ಬರೆದುಕೊಂಡರೆ ಕೊಡಬಹುದು.

ಪ್ರ. —ಪಶ್ಚಿಮ ಜನರಿಗಾಗಿ ಅಟ್ಟಲ ನಡೆಸುತ್ತಿರುವ ವೈ.ಎಂ.ಸಿ.ಎ ರಿಲ್ ಮತ್ತು ಲೈಬ್ರೆರಿಗಳಿಗೆ ಸರ್ಕಾರದವರು ದ್ರವ್ಯಸಹಾಯಮಾಡಬೇಕು. ಉ. ಇದು ಯೋಚನೆಯಲ್ಲಿದೆ.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಇಲಾಖೆ.

ಪ್ರ. — ಗವರ್ನಮೆಂಟಿನವರು ಇತ್ತೀಚೆಯಾಗಿ ಇಲಾಖೆಯ ಬಜೆಟನ್ನು ಸ್ಯಾಂಕ್ಷನ್ ಮಾಡುವಲ್ಲಿ ಆ ಹಣದ ಶೇಕಡ ೫೦ ಭಾಗವನ್ನಾದರೂ ಎಲ್ಲಾ ತಾಲ್ಲೂಕುಗಳಿಗೂ ಹಂಚಿಕೊಟ್ಟು, ಉಳಿದ ಎರಡು ಭಾಗಗಳನ್ನು ಪ್ರಾಂತ ಕಾಮಗಾರಿಗಳ ವಿನಿಯೋಗಿಸಿಕೊಳ್ಳಬಹುದು. ಈಗ ಅವಶ್ಯವಾದ ಅನೇಕ ಕಾಮಗಾರಿಗಳು ಸರಿಯಾದ ಕಾಲಕ್ಕೆ ನಡೆಯದೆ ಮೊದಲು ವರ್ಷಗಳಿಗೆ ಮಾತ್ರ ಏರ್ಪಾಡು ಆಗುತ್ತದೆ. ಉ.— ಸದ್ಯದಲ್ಲಿ ಇದು ಸಾಧ್ಯವೆಂದು ತೋರುವುದಿಲ್ಲ.

ಪ್ರ. ಕಾಮಗಾರಿ ಏಸದಮುಖ್ಯದ ವಿಮರ್ಶೆಯ ಏರ್ಪಾಟಿನಲ್ಲಿ ತಾಲ್ಲೂಕಾ ಬರುವ ಲಾಭವನ್ನೆಲ್ಲಾ ಸಣ್ಣಾ ಸಾಮಾನ್ಯ ಕೆರೆಗಳ ಕಾಮಗಾರಿಗೂ, ಅಲ್ಲಲ್ಲಿ ಗಳನ್ನು ಒಳ್ಳೆ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರುವುದಕ್ಕೂ ವಿನಿಯೋಗಿಸಬೇಕು. ಉ. ಆಗಲಿ, ಯೋಚಿಸುತ್ತೇವೆ.

ಪ್ರ. —ಈಗ ಕಾಮಗಾರಿಗಳಿಗೆ ನಿಧಾನುಕವಾಗಿರುವ ಕಂಟ್ರಾಕ್ಟು ದರಗಳು ಬಹಳ ಕಡಮೆ. ಇದರಿಂದ ಒಳ್ಳೇ ಕಂಟ್ರಾಕ್ಟರುಗಳು ಸಿಕ್ಕುವುದಿಲ್ಲ. ದರಗಳು ನಿಯಮಿತವಾದ ಕಾಮಗಾರಿ ನಡೆಯುತ್ತೆ. ಕಟ್ಟಿದ ಮೇಲೆ ಕಾಮಗಾರಿ ನಿಲ್ಲದಂತೆ ಯತ್ನಿಸಿ ಇನ್‌ಜೀನೀಯರಿಗೆ ಇನ್ನೂ ಹೆಚ್ಚು ರಿಪೇರಿ ನೋಡುವ ಸಂಭವ ಪ್ರಾಪ್ತವಾಗಬಹುದು. ಉ. ನಿಜವಾಗಿ ಇದೆ ಎಂದಿನಂತೆ ಹುಕುಂ ಕೊಡುತ್ತೇವೆ.

ರೈಲ್ ಮಾರ್ಗಗಳು

ಪ್ರ. ರೈಲ್ ಮಾರ್ಗವನ್ನು ಸಂದಿಗ್ಧದಿಂದ ಸಂತೆ ಮರಹಳ್ಳಿಯ ಮೇಲೆ ಹಾಸನಕ್ಕೆ ಹೋಗುವ ಎತ್ತರ ರಸ್ತೆ ಸರ್ಕಾರದವರು ಮಾಡಿಸಿ ಕೊಟ್ಟರೆ ಈ ಲೋಕದಿಂದ ಪೆಟ್ರೋಲಿಯಂ ಶೆಲ್ ಕಂಪೆನಿಯವರು ಅಲ್ಲಿಗೆ ತಂದು ಬಿಡುತ್ತಾರೆ. ಇದರಿಂದ ಕಾಮಗಾರಿಗಳಿಗೆ ಹೆಚ್ಚು ಅನುಕೂಲವಾಗುತ್ತೆ. ಮುಂದೆ ಇವು ಹೋಗುವ ಅವಕಾಶಕ್ಕೆ ಹೆಚ್ಚು ಲಾಭವಾಗುತ್ತದೆ. ಉ. ಯೋಚನೆಯಲ್ಲಿದೆ ಇದಾಗುತ್ತದೆ.

ಪ್ರ. ಮಲ್ಲೇಶ್ವರದ ಮದಕೆರೆಯು ಮೇಲೆ ಹೊಸದುರ್ಗಕ್ಕೆ ಹೋಗುವ ಮಾರ್ಗದ ಬಿಟ್ಟ ಸಣ್ಣದ ಮಾಗಿ ಹಾದಿಗಳು ಮತ್ತು ಫೀಡರ್ ಲೈನ್‌ಗೂ ರೈಲು ಮಾರ್ಗಗಳನ್ನು ಮಾಡಬೇಕು. ಉ. ಯೋಚಿಸುತ್ತೇವೆ.

ಪ್ರ. —ಮೈಸೂರಿನಿಂದ ಬಿಳಿಗೆರೆ, ಹೊಸಹಳ್ಳಿ, ಮದೂರು ಮೇಲೆ ಹಾಸನಕ್ಕೆ ರೈಲು ಹಾಕಿದರೆ ಎಷ್ಟು ಲಾಭಕರವೂ, ಅಲ್ಲದೆ ಅಲ್ಲಿಗೆ ಬರ... ಪ್ರಯೋಜ... ನವೆಂಬರ್ ಆದಿಯಿಂದಲೂ ಇದುವರೆಗೆ ಎಲ್ಲರೂ ಒಪ್ಪಿಕೊಂಡಿದ್ದರು. ಇದನ್ನು ತಪ್ಪಿಸಿ ಈಗ ಶ್ರೀರಂಗಪಟ್ಟಣ ಅಥವಾ ಫ್ರೆಂಚ್ ರಾಕ್ಸ್ ನಿಂದ ಕೊಳ್ಳೆಗಾಲಕ್ಕೆ ರೈಲು ಹಾಕುವ ಪ್ರಸ್ತಾವ ಹುಟ್ಟಿದೆ. ಇವರಲ್ಲಿ ಆದಾಯ ಸಲ್ಪ ಕಡಮೆ, ಲಾಭ ಕಾಣುವುದಿಲ್ಲ. ಇದನ್ನು ಬಿಟ್ಟು ಮೊದಲನೆಯದನ್ನೇ ಸ್ವಲ್ಪ ಕಷ್ಟವಾದರೂ, ಹಣ ಹೆಚ್ಚಾಗಿ ಮುಟ್ಟಿದರೂ ಯೋಚನೆ ಮಾಡಬೇಕು ಎಂದು ಕೆಲವು ಮೆಂಬರುಗಳು ಹೇಳಿದರು. ಇನ್ನು ಕೆಲವರು ಮೊದಲನೆಯ ರೈಲ್ ರಸ್ತೆಯಿಂದ ಪ್ರಯೋಜನ ಕಡಮೆ ಎಂದೂ, ಕೊಳ್ಳೆಗಾಲದ ರೈಲೇ ಬಹಳ ಸುಲಭವೂ ಅನುಕೂಲವೂ ಆಗಿದೆಯೆಂದೂ ಹೇಳಿದರು. ಉ.—ಸರ್ಕಾರದವರು ಇವೆರಡು ಮಾರ್ಗಗಳನ್ನೂ ಕುರಿತು ಚರ್ಚೆಮಾಡುತ್ತಿದಾರೆ. ಇನ್ನೂ ಅವರು ಯಾವುದನ್ನೂ ನಿಷ್ಕರ್ಷೆಮಾಡಿಲ್ಲ. ಯಾವುದಾದರೂ, ಹಾಸನಕ್ಕೆ ರೈಲು ಬಾರದೆ ಇರದು. ಉಭಯಪಕ್ಷದವರೂ ನಿಮ್ಮ ಅಭಿಪ್ರಾಯವನ್ನು ಪುಷ್ಟೀಕರಿಸುವಂಥಾ ಆದಾಯ ದೃಷ್ಟಿಯ ಅಂದಾಜು ಮುಂತಾದವುಗಳನ್ನು ಲಿಖಿತ ಸರ್ಕಾರಕ್ಕೆ ಬರೆದುಕೊಟ್ಟರೆ ಈ ವಿಚಾರವನ್ನು ಇತ್ಯರ್ಥಮಾಡುವಾಗ್ಗೆ ನಿಮ್ಮ ಅಭಿಪ್ರಾಯವನ್ನೂ ಆಲೋಚನೆಗೆ ತಂದುಕೊಳ್ಳಲು ಸಹಾಯವಾಗುತ್ತದೆ.

ಪ್ರ.—ಕಡೂರಿನಿಂದ ಅಥವಾ ಬೀರೂರಿನಿಂದ ಚಿಕ್ಕಮಗಳೂರಿಗೆ ರೈಲು ಹಾಕಿದರೆ ಬೊಂಬಾಯಿಯಿಂದ ಬರುವ ಸರಕು ಸುಲಭವಾಗಿಯೂ ಜಾಗ್ರತೆಯಿಂದಲೂ ತಲುಪುವುದಕ್ಕೆ ಅನುಕೂಲವಾದೀತು. ಮಲೆನಾಡಿನ ಸಮಸ್ತ ಉತ್ಪತ್ತಿ ಪದಾರ್ಥಗಳಿಗೂ ಚಿಕ್ಕಮಗಳೂರು ಮುಖ್ಯಸ್ಥಾನವಾಗಿರೋಣದರಿಂದ ಅಲ್ಲಿಗೆ ರೈಲ್ ರಸ್ತೆ ಆಗುವುದು ಅವಶ್ಯ. ಉ. ಸರ್ಕಾರದವರ ಯೋಚನೆಯಲ್ಲಿದೆ.

ಪ್ರ.—ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ ರೈಲ್ ರಸ್ತೆಗಾಗಿ ಸರ್ವೆ ಮಾಡಿದಾಗಿದೆ. ಈ ೨೫ ಮೈಲಿ ರಸ್ತೆಯನ್ನು ಸರ್ಕಾರದವರು ಮಾಡಿಸಿಕೊಟ್ಟರೆ ಹತ್ತಿ ಮತ್ತು ಧಾನ್ಯಾದಿಗಳ ರವಾನೆಗೆ ಈಗ ಕೊಡುತ್ತಿರುವ ದುಬಾರಿ ಭಾಡಿಗೆ ಕಡಮೆಯಾಗುವುದು. ಉ.—ಇದಕ್ಕೆ ಒದಗಿಸಲು ಸರ್ಕಾರದಲ್ಲಿ ಹಣವಿಲ್ಲ. ಕೋಲಾರದ ಡಿಸ್ಟ್ರಿಕ್ಟ್ ಬೋರ್ಡಿನವರು ಹ್ಯಾಗೆ ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ರೈಲು ಹಾಕುವುದಕ್ಕೆ ರೈಲ್ವೆ ಸಾಲಪತ್ರಗಳನ್ನು ವಿಕರಿಮಾಡಿ ಹಣವನ್ನು ಕೂಡಿಸಿರುತ್ತಾರೆಯೋ ಹಾಗೆಯೇ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡಿನವರೂ ಅಲ್ಲಿನ ಪ್ರಜೆಗಳಿಗೆ ರೈಲ್ವೆಗಾಗಿ ಸಾಲಪತ್ರಗಳನ್ನು ವಿಕರಿಮಾಡಿ ಹಣವನ್ನು ಒದಗಿಸಿಕೊಳ್ಳಬಹುದು. ಸರ್ಕಾರದವರು ಈ ಹಣಕ್ಕೆ ಶೇಕಡ ೪ ರಂತೆ ಬಡ್ಡಿಯನ್ನು ಕೊಡಲು ಜಾಮೀನ್ ನಿಲ್ಲಬಹುದು. ಪ್ರಜೆಗಳು ಉದ್ಯುಕ್ತವಾಗಿ ಹಣವನ್ನು ಕೂಡಿಸಿದರೆ ಒಳ್ಳೇದು.

ಪ್ರ. —ಬೆಂಗಳೂರು ಚಿಕ್ಕಬಳ್ಳಾಪುರದ ರೈಲು ಇನ್ನೂ ಯಾವಾಗ ಪ್ರಾರಂಭವಾಗಬೇಕು ಎಂದು ಜನರು ಕಂದಿಯಿದ್ದಾರೆ, ಅದು ೬ ಮೈಲಿ ದೂರ ಮಾಡುತ್ತದೆ. ಇದನ್ನು ತಪ್ಪಿಸಿ ದೊಡ್ಡಬಳ್ಳಾಪುರದಿಂದ ಚಿಕ್ಕಬಳ್ಳಾಪುರಕ್ಕೆ ರೈಲು ಹಾಕಿದರೆ ಸುಲಭವಾಗಿ ಆದೀತು. ಇದು ಬಹಳ ಪ್ರಯೋಜನಕರವಾದದ್ದು. ಈ ೧೬ ಮೈಲಿ ರೈಲು ಹಾಕಿಕೊಟ್ಟು ವ್ಯಾಪಾರಕ್ಕೂ ಪ್ರಜೆಗಳ ಆದಾಯ ವೃದ್ಧಿಗೂ ಸಹಾಯಮಾಡಿಕೊಡಬೇಕೆಂದು ಇಷ್ಟತ್ತು ವರುಷಗಳಿಂದ ಪ್ರಾರ್ಥಿಸಿಕೊಳ್ಳುತ್ತಿದೇವೆ. ಈಗಲಾದರೂ ಸರ್ಕಾರದವರು ಮಾಡಿಸಿಕೊಟ್ಟಲ್ಲಿ ಬಹಳ ಉಪಕಾರವಾದೀತು. ಉ.—ಬೆಂಗಳೂರು ಚಿಕ್ಕಬಳ್ಳಾಪುರದ ರೈಲು ಹಾಕಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ. ಆ ಕಂಪೆನಿಯವರು ಕಾಮಗಾರಿ ಪ್ರಾರಂಭಿಸುವುದೂ, ಇಲ್ಲದೂ ಒಂದೆರಡು ತಿಂಗಳಲ್ಲೇ ವ್ಯವಸ್ಥೆಯಾಗಬೇಕು. ಅದು ಸಾಧ್ಯವಾಗದೆ ಹೋದಲ್ಲಿ ಸರ್ಕಾರದವರು ದೊಡ್ಡಬಳ್ಳಾಪುರಕ್ಕೂ ಚಿಕ್ಕಬಳ್ಳಾಪುರಕ್ಕೂ ರೈಲು ಹಾಕುವುದನ್ನು ಯೋಚಿಸಮಾಡಬಹುದಾಗಿದೆ.

ಪ್ರ. - ಬೆಂಗಳೂರಿನಿಂದ ತಿನವಾಗ್ಗೆಗೂ ಹೋಗಿಬರುವ ರೈಲ್ ಗಾಡಿಗಳಿಗೆ ೧, ೨, ೩ ನೇ ಕ್ಲಾಸ್ ಭಾಗಗಳಲ್ಲಿ ಒಂದೇ ಗಾಡಿಯನ್ನು ಪಾಠಿಸುವಂತೆ ರೈಲ್ವೆ ಕಂಪೆನಿಯವರಿಗೆ ಬರೆಯಬೇಕೆಂದು ಕೆಲವು ವರುಷಗಳಿಂದ ಕೇಳಿಕೊಳ್ಳುತ್ತಿದೇವೆ. ಅದು ಇನ್ನೂ ನೆರವೇರಲಿಲ್ಲ. ಬೀರೂರಿನಲ್ಲಿ ಈಗ ಗಾಡಿ ಬದಲಾಯಿಸುವುದು ಪ್ರಯಾಣಿಕರಿಗೆ ಬಹಳ ಅನಾನುಕೂಲವಾಗಿದೆ. ಉ. ಒಂದಾವರ್ತಿ ರೈಲ್ವೆ ಕಂಪೆನಿಯವರಿಗೆ ಬರೆದದ್ದಕ್ಕೆ ಅಂಥಾ ಗಾಡಿಯನ್ನು ಬಿಡಲು ತಿಳ್ಯಟ್ಟು ಕಡಮೆಬರುವುದು, ಇಲ್ಲವೆಂದು ಅವರು ಜವಾಬು ಕೊಟ್ಟರು. ಇನ್ನೊಂದಾವರ್ತಿ ಅವರಿಗೆ ಬರೆದು ಕೇಳುತ್ತೇವೆ.

ಪ್ರ. - ಬೀರೂರಿನಲ್ಲಿ ಸ್ಟೇಷನ್ ಪ್ಲಾಟ್‌ಫಾರಮನ್ನು ಎತ್ತರಿಸಿ, ಸಿಕೆಯಲ್ಲಿ ೩ ನೇ ತರಗತಿಗಳ ಪ್ರಯಾಣಿಕರಿಗಾಗಿ ಒಂದು ಕೊಠಡಿಯನ್ನು ಕಟ್ಟಿಸುವಂತೆಯೂ ಪ್ರಾರ್ಥಿಸುತ್ತೇವೆ. ಉ.—ರೈಲ್ವೆ ಕಂಪೆನಿಗೆ ಬರೆಯುವೆವು.

ಪ್ರ. ಕಡೂರಿನ ಟರ್ನ್ ಎಕ್ಸ್ ರೈಲ್ ರಸ್ತೆಗೆ ಬೇಲಿ ಹಾಕಿಲ್ಲ. ದನಗಳು ರೈಲಿಗೆ ಸಿಕ್ಕಿ ನಷ್ಟವಾಗುತ್ತಿವೆ. ಉ. ಬೇಲಿ ಹಾಕಿಸುವಂತೆ ಏರ್ಪಾಡು ಮಾಡುವೆವು.

ಪ್ರ. ಎಲ್ಲಾ ರೈಲ್ವೆ ಸ್ಟೇಷನ್‌ಗಳಲ್ಲೂ ೩ ನೇ ತರಗತಿಯ ಸ್ತ್ರೀ ಪ್ರಯಾಣಿಕರು ರೈಲು ಬರುವ ತನಕ ಕಾದುಕೊಂಡಿರುವುದಕ್ಕಾಗಿ ಸುರಕ್ಷಿತವಾದ ಮತ್ತು ಪ್ರತ್ಯೇಕವಾದ ಕೊಠಡಿಗಳನ್ನು ಕಟ್ಟಿಸಿಕೊಡಬೇಕು. ಉ.—ಈ ವಿಚಾರವನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾರೆ.

ಪ್ರ. - ೩ನೇ ಕ್ಲಾಸ್ ಪ್ರಯಾಣಿಕರನ್ನು ರೈಲ್ವೆಯವರು ದನಕರುಗಳಿಗಿಂತ ಕಡೆಯಾಗಿ ನೋಡುತ್ತಾ ಗಾಡಿಗಳೊಳಗೂ ಹೆಚ್ಚು ಜನರನ್ನು ತುಂಬಿ ಬಾಗಿಲು ಹಾಕುತ್ತಾರೆ. ಮೈಸೂರು ಪ್ರಜೆಗಳಿಗೆ ಇದು ತುಂಬಾ ಅವಮಾನಕರವಾಗಿದೆ. ಇದನ್ನು ತಪ್ಪಿಸಿ ಕ್ರಮಪಡಿಸಬೇಕು. ಉ. ರೈಲ್ವೆ ಕಂಪೆನಿಯವರಿಗೆ ಬರೆದು ತಿಳಿಸುತ್ತೇವೆ.

ಮುಜರಾಯಿ

ಪ್ರ. ಸಂಸ್ಥಾನದಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರಗಳನ್ನು ಕ್ರಮವಾಗಿ ನಡೆಸುವುದಕ್ಕೆ ಒಂದು ಮುಜರಾಯಿ ಪಂಚಾಯತಿಯನ್ನು ನೇಮಕಮಾಡಬೇಕು. ಉ. ಆಗಲಿ, ಯೋಚಿಸುವೆವು.

ಪ್ರ. ಅನೇಕ ದೇವಸ್ಥಾನಗಳ ಸಿಬ್ಬಂದಿಗಳು ಅತ್ಯಾಕ್ರಾಂತವಾಗಿವೆ. ಇದರಿಂದ ಅವನ್ನು ತನಿಖೆಮಾಡಿ ಸರಿಪಡಿಸುವುದಕ್ಕೆ ಒಂದು ಪಂಚಾಯತಿ ಏರ್ಪಾಡಾಗಬೇಕು. ಉ. ಆಗಲಿ, ಯೋಚಿಸುತ್ತೇವೆ.

ಪ್ರ. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಒಂದೊಂದು ಸಂಸ್ಕೃತ ಪಾಠಶಾಲೆಯನ್ನಿಟ್ಟು, ಬಲವಾಗುತ್ತಿರುವ ಗೀರ್ವಾಣ ಭಾಷೆಯನ್ನು ಉಜ್ಜೀವಿಸಬೇಕು. ಉ. —ಯೋಚನೆಯಲ್ಲಿದೆ.

ಪ್ರ. ನಂಜನಗೂಡಿನಲ್ಲಿ ಲಿಂಗಾಯತ ವಿದ್ಯಾರ್ಥಿಗಳನ್ನು ಸಂಸ್ಕೃತ ಪಾಠಶಾಲೆಗೆ ಸೇರಿಸಿಕೊಳ್ಳುವಂತೆ ಹುಕುಂ ಆಗಬೇಕು. ಪ್ರಾಚೀನಕಾಲದಲ್ಲಿ ಬ್ರಾಹ್ಮಣರಂತೆ ಸಂಸ್ಕೃತವನ್ನು ಕಲಿತು ಹಲವು ಗ್ರಂಥಗಳ ರಚಿಸಿರುವ ಅನೇಕ ಲಿಂಗಾಯತ ಪಂಡಿತರಿದ್ದರು. ಪಾಠಶಾಲೆಗಳಲ್ಲಿ ಒಂದೇ ಜಾತಿಯವರಿಗೆ ಆ ವಿದ್ಯೆ ಹೇಳಬೇಕೆನ್ನುವುದನ್ನು ತಪ್ಪಿಸಬೇಕು. ಉ.—ನೋಡೋಣ.

ಪ್ರ. —ಪುರುಷರಲ್ಲಿನ ಹಣವನ್ನು ಮಠ ಛತ್ರಗಳಿಗೆ ಬರಿಸಿಕೊಂಡು ವಿದ್ಯಾರ್ಥಿಗಳಿಗೆ ಮೊದಲಿನಂತೆ ಕೊಡಿಸಿದರೆ ಸೇವಾರ್ಥಗಳು ಕ್ರಮವಾಗಿ ನಡೆಯಬಹುದು. ಉ. ಆಗಲಿ, ಹಾಗೆ ಮಾಡುತ್ತೇವೆ.

ಪ್ರ. ಅನಾಥಾಲಯಗಳಿಗೆ ಸರ್ಕಾರದಿಂದ ದ್ರವ್ಯ ಸಹಾಯವಾಗಬೇಕು. ಇದು ಆಗದಿದ್ದರೆ ಅನೇಕ ದೇವಸ್ಥಾನಗಳಲ್ಲಿ ಬಹಳ ಹಣ ಉಳಿದಿದೆ. ಅದರಿಂದಾದರೂ ಸಾಧ್ಯವಾಗುವ ಮಟ್ಟಿಗೆ ಹಣವನ್ನು ಕೊಡುವಂತೆ ಹುಕುಂ ಕೊಡಬೇಕು. ಹೀಗೆ ನಡೆದರೆ ಈ ವಿಚಾರವನ್ನು ಸಮ್ಮೇಳನದಲ್ಲಿ ... ಉದಾರರು ನೆರವೇರಿಸಿ ಕೊಡಬೇಕು. ಉ.— ಅದು ಸುಲಭವಾದದ್ದಲ್ಲ. ಆಗಲಿ, ಯೋಚಿಸುತ್ತೇವೆ.

ಇತರ ವಿಚಾರಗಳು

ಪ್ರ —ಮೈಸೂರು ಸರ್ಕಾರದ ದೊಡ್ಡ ನೌಕರಿಗಳಿಗೆ ಮೈಸೂರು ಯುವರಿಗೋಸ್ಕರ ಪರೀಕ್ಷೆಗಳನ್ನಿಟ್ಟು ತೇರ್ಗಡೆಯೊಂದುವವರನ್ನು ನೇಮಕಮಾಡುವುದಾಗಿ ಈ ಸಲ ಅಡ್ರೆಸ್ಸಿನಲ್ಲಿ ಅಪ್ಪಣೆಕೊಡಿಸಿರುವುದು ಸರ್ವತ್ರ ಸಂತೋಷಪ್ರದವಾಗಿದೆ ಇಂಥಾ ಸ್ವಜನಾಭಿಮಾನಪೂರ್ವಕವಾದ ಹುಕುಮನ್ನು ದಯಪಾಲಿಸಿದ್ದಕ್ಕಾಗಿ ಸಕಲ ಪ್ರಜೆಗಳ ಪರವಾಗಿ ಈ ಸಭೆಯವರು ಗವರ್ನ್‌ಮೆಂಟಿನವರನ್ನು ಕೃತಜ್ಞತೆಯಿಂದ ವಂದಿಸುತ್ತೇವೆ ಕೆಲವರು ಈ ಪರೀಕ್ಷೆಯ ಏರ್ಪಾಡನ್ನೇ ಪಕ್ಷಪಾತ, ಯೋಗ್ಯರಾಗಿ ಕಂಡುಬರುವವರನ್ನು ದೊಡ್ಡ ಪದವಿಗಳಿಗೆ ನೇಮಿಸಿಕೊಳ್ಳುವುದು ಅನುಕೂಲವಾಗಿದೆ ಎಂದೂ, ಕೆಲವರು ಪರೀಕ್ಷೆಯಲ್ಲಿ ತೇರ್ಗಡೆಯೊಂದಿದವರನ್ನೂ ಇತರರನ್ನೂ ನೇಮಿಸಿಕೊಳ್ಳಬೇಕೆಂದೂ ಕೆಲವರು ಈ ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಕನ್ನಡಭಾಷೆಯನ್ನು ಅವಶ್ಯ ವಿಷಯವಾಗಿ ಇಡಬೇಕೆಂದೂ ಅಭಿಪ್ರಾಯಪಟ್ಟರು ಉ —ಕನ್ನಡ ಭಾಷೆಯಲ್ಲಿ ಪರಿಶ್ರಮವಿದೆಯೋ ಇಲ್ಲವೋ ಎಂಬುವುದನ್ನು ಗೊತ್ತುಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕಮಾಡುತ್ತೇವೆ

ತರುವಾಯ ಚರ್ಚಿಸಲ್ಪಟ್ಟ ಮುಂದೆ ಹೇಳುವ ವಿಷಯಗಳನ್ನು ದಿವಾನರವರು ಪರ್ಯಾಲೋಚನೆಗೆಂದು ಗುರುತು ಮಾಡಿಕೊಂಡಿದ್ದಾರೆ —ಪ್ರತಿನಿಧಿ ಸಭೆಗೆ ಮೆಂಬರಾಗತಕ್ಕವರ ಯೋಗ್ಯತೆ ಇನಾಂದಾರರು ೫೦ ರೂಪಾಯಿಗೆ ಪ್ರತಿಯಾಗಿ ೧೦೦ ರೂಪಾಯಿ ಪಾವತಿ ಮಾಡುವವರಾಗಿದ್ದರೂ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಬಹುದೆಂಬ ವಿಷಯ ಆಷಾಢ ಬಹುಳದಲ್ಲಿ ಮೆಂಬರುಗಳ ಚುನಾವಣೆ ಇಟ್ಟಿರುವುದರಿಂದ ಆಗ ಮಲೆನಾಡಿನಲ್ಲಿ ಮಳೆಯ ಕಾಟವಾದ ಕಾರಣ ಅದಕ್ಕಿಂತ ಮುಂಚೆ ಚುನಾವಣೆ ನಡೆಯಬೇಕೆಂದು, ಪ್ರತಿನಿಧಿಗಳು ರಾಜಧಾನಿಗೆ ಸಭೆಯ ಕಾರ್ಯಕ್ಕಾಗಿ ಬರುವಾಗ್ಗೆ ಅವರೆಲ್ಲಾ ಒಟ್ಟಿಗೆ ಒಂದೆ ಕಡೆ ಇಳಿದುಕೊಳ್ಳುವುದಕ್ಕೆ ಅನುಕೂಲಿಸುವಂತೆ ಸ್ಥಳವಸತಿಯನ್ನು ಕಲ್ಪಿಸಿಕೊಡಬೇಕೆಂಬ ವಿಷಯ ಪ್ರತಿನಿಧಿಗಳನ್ನು ಚುನಾವಣೆ ಮಾಡುವಾಗ್ಗೆ ಈಗ ನಡೆಯುವ ಗಲಭೆಗಳು ತಪ್ಪಿ ಕ್ರಮಪಡುವಂತೆ ಚುನಾವಣೆಯ ರೂಲಸೂ ಆಚರಣೆಯೂ ರಚಿಸಲ್ಪಡಬೇಕೆಂಬ ವಿಷಯ ಯಡೆಹಳ್ಳಿ ಸಬ್ ತಾಲ್ಲೂಕಿನಂಥ ಮೊದಲಿನಂತೆ ಮೂರು ಮಂದಿ ಮೆಂಬರನ್ನು ಚುನಾಯಿಸಿ ಕಳುಹಿಸುವಂತೆ ರಿಯಾಯಿತಿ ತೋರಿಸುವ ವಿಚಾರ ಪರಸ್ಪರ ಸಹಾಯ ಸಂಘಗಳಿಂದಲೂ, ಶಿವಮೊಗ್ಗಾ ಲಾಯರ್ ಸಂಘದಿಂದಲೂ ಒಬ್ಬೊಬ್ಬ ಪ್ರತಿನಿಧಿಯನ್ನು ಚುನಾಯಿಸಿ ಕಳುಹಿಸುವ ರಿಯಾಯಿತಿ ಕೊಡಬೇಕೆಂಬ ವಿಷಯ ತಾಲ್ಲೂಕ್ ಹೆಡ್‌ಕ್ವಾರ್ಟರುಗಳಲ್ಲೆಲ್ಲಾ ಒಂದೊಂದು ಟೆಲಿಗ್ರಾಫ್ ಆಫೀಸನ್ನು ಇಟ್ಟುಕೊಡಬೇಕೆಂಬ ವಿಷಯ ಸರ್ಕೀಟುಹೋಗುವ ಅಧಿಕಾರಿಗಳಿಗೆ ಕಂಟ್ರಾಕ್ಟುದಾರರನ್ನು ನೇಮಿಸಿ ಅವರ ಮೂಲಕ ಸಾಮಾನು ಸರಬರಾಯಿ ಮಾಡಿಸಬೇಕೆಂಬ ವಿಷಯ

ಪ್ರ —ಪ್ರಜಾಪ್ರತಿನಿಧಿ ಸಭೆಯ ಪೂರ್ವೋತ್ತರಚರಿತ್ರೆಯನ್ನು ರಚಿಸಿ ಸುಲಭಕ್ರಯಕ್ಕೆ ವಿಕರಿಮಾಡಿದರೆ ಈಗಿನ ಮೆಂಬರುಗಳೂ, ಮುಂದೆ ಬರತಕ್ಕವರೂ ಅದನ್ನು ಕೊಂಡು ಓದಿ ಪ್ರಯೋಜನಹೊಂದಲು ಸಹಾಯವಾಗುತ್ತದೆ ಉ ಅದನ್ನು ತಯಾರುಮಾಡಿಸಿಕೊಡಬಹುದೆಂದು ಹುಕುಂ ಕೊಡುತ್ತೇವೆ

ಪ್ರ —ರೆವಿನ್ಯೂ ಮ್ಯಾನ್ಯುಯಲ್ ಎಂಬ ರೂಲನ್ನು ಕನ್ನಡದಲ್ಲಿ ಬರೆಸಿ ಪ್ರಕಟಿಸಿದರೆ ಪ್ರಜೆಗಳೂ ಜಮೀನ್ದಾರರೂ ಕೊಂಡುಕೊಂಡು, ರೆವಿನ್ಯೂ ಆಚರಣೆಗಳನ್ನೂ ಕ್ರಮಗಳನ್ನೂ ಮುಂದಿಟ್ಟುಕೊಳ್ಳುವುದಕ್ಕೆ ಸಹಾಯವಾಗುತ್ತದೆ ಉ —ಇದನ್ನು ಜಾಗ್ರತೆಯಾಗಿ ಮಾಡಿಸುವಂತೆ ಹೇಳುತ್ತೇವೆ

ಪ್ರ —ಪ್ರತಿ ವರುಷವೂ ಸಂಸ್ಥಾನಾದ್ಯಂತ ರೆವಿನ್ಯೂ ಬಾಬಿನ ಎಷ್ಟು ಮೊಕದ್ದಮೆಗಳು ದಾಖಲಾದವು, ಎಷ್ಟು ವ್ಯವಸ್ಥೆಯಾಗಿ ಎಷ್ಟು ಉಳಿದವು, ರೆವಿನ್ಯೂ ಮಿಸಲೇನಿಯಸ್ ಮೊಕದ್ದಮೆಗಳಲ್ಲೂ ಎಷ್ಟು ದಾಖಲಾಗಿ, ಎಷ್ಟು ವ್ಯವಸ್ಥೆಹೊಂದಿ, ಎಷ್ಟು ಉಳಿಕೊಂಡವು ಎಂಬೀ ವಿಚಾರಗಳನ್ನು ವಾರ್ಷಿಕ ರಿಪೋರ್ಟುಗಳಲ್ಲಿ ಪ್ರಕಟಿಸುವಂತಾಗಬೇಕು ಉ ಇದು ಅಸಾಧ್ಯ

ಪ್ರ —(೧) ಈಗ ಸಂಸ್ಥಾನದ ಸರ್ಕಾರಿ ನೌಕರಮಾನ್ಯರುಗಳಲ್ಲಿ ಜಗಳ್ಳಿಯೂ, ಅಸಮಾಧಾನವೂ, ಗೊಂದಲವೂ, ಅಶ್ರದ್ಧೆಯೂ ಇರುವುದಕ್ಕೆ ಕಾರಣವೇನು (೨) ಅಧಿಕಾರಿಗಳನ್ನೂ ನೌಕರರನ್ನೂ ಯಾವ ಕ್ರಮವನ್ನನುಸರಿಸಿ ನೇಮಿಸಬೇಕು ಮತ್ತು ಅವರನ್ನು ಯಾವ ರೀತಿ ಎಷ್ಟು ದಿನ ತರಬೇತು ಮಾಡಬೇಕು (೩) ಭತ್ಯ ಮತ್ತು ಪ್ರಯಾಣದ ಖರ್ಚು ಅಧಿಕಾರಿಗಳಿಗೆ ಸಲ್ಲುವುದನ್ನು ಯಾವ ರೀತಿ ಕ್ರಮಪಡಿಸಬೇಕು ಈ ಮೂರು ವಿಚಾರಗಳನ್ನೂ ಸರ್ಕಾರದವರು ಪಂಚಾಯಿತರ ಮೂಲಕ ತನಿಖೆಮಾಡಿಸಿ ರಿಪೋರ್ಟು ತರಿಸಿಕೊಂಡು ಆ ರೀತಿ ಬದಲಾವಣೆಗಳನ್ನು ರೂಢಿಸುವುದು ಸರ್ಕಾರದವರಿಗೂ ಪ್ರಜೆಗಳಿಗೂ ಎಷ್ಟೋ ಅನುಕೂಲವಾಗಿದೆ ಈ ಪಂಚಾಯಿತಿಯಲ್ಲಿ ಕೆಲವು ಅಧಿಕಾರಿಗಳೂ ಕೆಲವು ಬಿರೆಂಜುಗಾರರಾದ ದೊಡ್ಡ ಮನುಷ್ಯರೂ ಮೆಂಬರಾಗಿ ನೇಮಿಸಲ್ಪಡಬೇಕು ಯಾಕೆಂದರೆ ಈಗಿನ ಸರ್ವಿಸಿನಲ್ಲಿ ಬಾಂಧವ್ಯವೂ, ದಾಕ್ಷಿಣ್ಯವೂ ಪಾರ್ಟಿ ಪಕ್ಷಗಳೂ ಹೆಚ್ಚಿ ಕೆಲಸಗಳು ಸರಾಗವಾಗಿಯೂ, ತೃಪ್ತಿಕರವಾಗಿಯೂ, ಚಟುವಟಿಕೆಯಿಂದಲೂ ಜರುಗುತ್ತಾ ಇಲ್ಲ ಈಗ ಪೊಲೀಸಿನ ಅಧಿಕಾರಿಗಳು ನಮ್ಮ ಸಂಸ್ಥಾನದಲ್ಲಿ ನೇಮಕವಾಗಿರುವಷ್ಟು ಇತರ ಕಡೆಗಳಲ್ಲಿ ಇಲ್ಲ ಸರ್ಕಾರದವರು ಈಗಲೇ ಈ ಭಾಗಗಳನ್ನೆಲ್ಲಾ ಸಂಪೂರ್ಣವಾಗಿ ತನಿಖೆಮಾಡಿಸಿ ಸರಿಪಡಿಸದಿದ್ದರೆ ಸರ್ಕಾರದ ಕೆಲಸಗಳು ಜರುಗದೆ ಲೋಪವಾಗಿ ಪ್ರಜೆಗಳ ಶ್ರೇಯಸ್ಸಿಗೂ ಸಂಸ್ಥಾನದ ಏಳಿಗೆಗೂ ಕುಂದಕವಾಗಬಹುದು ಉ —ಆಗಲಿ, ಯೋಚಿಸುತ್ತೇವೆ

ಲೋಕಲ್ ಯಾನೆ ಸ್ಥಳೀಯ ವಿಚಾರಗಳು

ಶಿವಮೊಗ್ಗಾ ಡಿಸ್ಟ್ರಿಕ್ಟು

ಅಜಂಪುರದಿಂದ ಚನ್ನಗಿರಿಗೂ, ಶಿವನೆ ಸ್ಟೇಷನ್ನಿಂದ ಉಬ್ರಾಣಿ ಡಿಸ್ಟ್ರಿಕ್ಟ್ ರಸ್ತೆ ಹಾಕಲು ಸರ್ಕಾರದಿಂದ ಹಣ ಕೊಡಲಾಗದೆಂದೂ, ಸಿರಾಳಿಪುರದಿಂದ ಮೊಸರಿಗೆ ೪ ಮೈಲಿ ರಸ್ತೆ ಹಾಕಿಸುವುದನ್ನು ಯೋಚಿಸುತ್ತೇವೆಂದೂ ದಿವಾನರವರು ಹೇಳಿದರು ಚಿಕ್ಕಾಪುರದ ಶ್ರೀಹೊರೆಯೋ ಬಸವಣ್ಣ ದೇವರ ದೇವಸ್ಥಾನದ ರಿಪೇರಿಯನ್ನು ಶ್ರೀಮನ್ ಮಹಾರಾಜಾ ಕೃಷ್ಣರಾಜ ಒಡೆಯರವರು ಮಾಡಿಸಿದ್ದಾರೆಂದೂ, ಅದು ಪ್ರಾಚೀನಕಾಲದ ಚರಿತ್ರಾರ್ಹವಾದ ದೇವಸ್ಥಾನವಾಗಿ ಪ್ರಸಿದ್ಧಿಹೊಂದಿದ್ದು ಈಗ ಜೀರ್ಣವಾಗುತ್ತಿರುವದರಿಂದ ಅದರ ರಿಪೇರಿಯನ್ನು ಸರ್ಕಾರದವರು ಮಾಡಿಸಿಕೊಡಬೇಕೆಂದೂ, ಖರ್ಚಿನ ಪೈಕಿ 1,000 ರೂಪಾಯನ್ನು ಅಲ್ಲಿನ ಪ್ರಜೆಗಳು ಒದಗಿಸಿಕೊಡಲು ಸಿದ್ಧರಾಗಿದ್ದಾರೆಂದೂ ಮೆಂಬರುಗಳು ಹೇಳಿದ್ದರ ಮೇಲೆ ದಿವಾನರವರು ಅದನ್ನು ಗುರುತುಮಾಡಿಕೊಂಡು ಪರ್ಯಾಲೋಚನೆಯಿಂದ ಹುಕುಂ ಕೊಡುವುದಾಗಿ ಅಪ್ಪಣೆ ಕೊಟ್ಟರು ತಾವರೆಕೆರೆಯಲ್ಲಿ ಮತ್ತೆ ಪೋಸ್ಟ್ ಆಫೀಸನ್ನು ಇಡಿಸುವ ವಿಷಯದಲ್ಲಿ ವಿಚಾರಿಸುತ್ತೇವೆಂದು ದಿವಾನರವರು ಹೇಳಿದರು

ಕಡೂರು ಡಿಸ್ಟ್ರಿಕ್ಟು

ತರೀಕೆರೆಯಲ್ಲಿ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನು ನೇಮಕಮಾಡುವುದು, ಯಡೇಹಳ್ಳಿಯಲ್ಲಿ ಮುನ್ಸಿಫ್ ಕೋರ್ಟನ್ನು ಇಡುವುದು, ಬಾಳೆಗಡಿಯಿಂದ ಕೊಪ್ಪಕ್ಕೆ ತಾಲ್ಲೂಕ್ ಕಚೇರಿಯನ್ನು ವರ್ಗಮಾಡುವುದು, ಕಡೂರು ಚಿಕ್ಕಮಗಳೂರು ನಾಟ ರಸ್ತೆಯನ್ನು ಕಣಿವೆಗಳಿರುವ ಕಡೆ ಅಗಲಮಾಡುವುದು, ಸಂಪ್ರವಳ್ಳಿಗೆ ರಸ್ತೆಮಾಡಿಸುವುದು, ಚಿಕ್ಕಮಗಳೂರಿನಲ್ಲಿ ಕಸಬುದಾರಿ ಸ್ಕೂಲನ್ನು ಇಡಿಸುವುದು, ಚಿಕ್ಕಮಗಳೂರು ಹಿಂದೂಸ್ತಾನಿ ಸ್ಕೂಲಿನಲ್ಲಿ ಇಂಗ್ಲಿಷ್ ಕ್ಲಾಸನ್ನು ಇಡುವುದು, ಕಡೂರಿನಲ್ಲಿ ಗರ್ಲ್ಸ್‌ಸ್ಕೂಲ್ ಕಟ್ಟಿಸುವುದು, ಇವುಗಳನ್ನು ದಿವಾನರವರು ವಿಚಾರಮಾಡಲು ಗುರುತುಮಾಡಿಕೊಂಡಿರುತ್ತಾರೆ ಕೊಪ್ಪ ಟವರ್‌ಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅಂದಾಜು ಪಟ್ಟಿ ತಯಾರಾಗುತ್ತದೆ ಎಂದೂ ಅದನ್ನು ಜಾಗ್ರತೆಪಡಿಸಬೇಕೆಂದು ಇಂಜನಿಯರ್ ಇಲಾಖೆಗೆ ಬರೆಯುವುದಾಗಿಯೂ ಹರಿಹರಪುರದಲ್ಲಿ ತುಂಗಾ ನದಿಯ ಸೇತುವೆ ಟೋಲ್ ಕಂಟ್ರಾಕ್ಟರ ಕೊಡ ಡೈತರು ಒಪ್ಪಂದಮಾಡಿಕೊಂಡು ರಿಯಾಯಿತಿ ಪಡೆದ ಟೋಲ್ ಸುಂಕವನ್ನು ಪಾವತಿಸಾಡ ಗೊಬ್ಬರಗೋಡನ್ನು ಸಾಗಿಸಬಹುದೆಂದೂ ಮಲ್ಲೇನಹಳ್ಳಿ ಮತ್ತು ಶೃಂಗೇರಿ ಮಠದಗೋಸ್ಕರ ಮೂಡಿಗೆರೆಯಲ್ಲಿ ಸ್ಕೂಲು ಹೌಸ್ ಹಾಗೂ ಬೋರ್ಡಿಂಗನ್ನು ಕಟ್ಟಿಸುವುದಕ್ಕೆ ಅಂದಾಜು ಪಟ್ಟಿ ತಯಾರಾಗುತ್ತಿದೆ ಕಟ್ಟಡಕ್ಕೆ ಅಂದಾಜು ಪಟ್ಟಿ ತಯಾರುಮಾಡುವಂತೆ ಏರ್ಪಾಟುಮಾಡುವುದಾಗಿಯೂ, ಅದರ ಕಾಮಗಾರಿ ಖರ್ಚಿಗೆ ಸರ್ಕಾರದಿಂದ ಕೆಲವು ಹಣವನ್ನು ಗ್ರಾಂಟು ಕೊಡಿಸುತ್ತೇವೆಂದೂ ದಿವಾನರವರು ತಿಳಿಸಿರುತ್ತಾರೆ

ಚಿತ್ರದುರ್ಗ ಡಿಸ್ಟ್ರಿಕ್ಟು

ಹರಿಹರ ತಾಲ್ಲೂಕಿಗೆ ಸೇರಿದ ದೇವರಬೆಳಗೆರೆ ಕೆರೆಯ ಕಾಮಗಾರಿ ಹರಿಹರದಲ್ಲೂ ದಾವಣಗೆರೆಯಲ್ಲೂ ವ್ಯವಸಾಯದ ಫಾರಮನ್ನು ಮಾಡಿಸುವುದು, ಚಿತ್ರದುರ್ಗದಲ್ಲಿ ಒಂದು ಕಸಬಿನ ಪಾಠಶಾಲೆಯನ್ನಿಡುವುದು, ದಾವಣಗೆರೆಯಲ್ಲಿ ಒಂದು ಹೈ ಸ್ಕೂಲು ಮತ್ತು ವ್ಯಾಪಾರ ಪಾಠಶಾಲೆಯನ್ನು ಕಲ್ಪಿಸುವುದು, ದಾವಣಗೆರೆಯ ರೈಲ್ವೆ ಗುಡ್ಸ್ ಷೆಡ್ಡನ್ನು ಬದಲಾಯಿಸುವುದು, ಕೊಡಗನೂರು, ಮಾಯಕೊಂಡ, ರಾಮಗಿರಿ, ಚಿಕ್ಕಜಾಜೂರು, ಸಾಸಲು ಹೊಳಲ್ಕೆರೆ ರೋಡ್ ಸ್ಟೇಷನ್ನುಗಳಲ್ಲಿ ಗುಡ್ಸ್ ಷೆಡ್ಡುಗಳನ್ನು ಕಟ್ಟಿಸುವುದು, ಹರಿಹರದಲ್ಲಿ ಸಂಗಮೇಶ್ವರಸ್ವಾಮಿ ದೇವಸ್ಥಾನವನ್ನು ಎತ್ತರಿಸಿ ಕಟ್ಟುವುದು, ಈ ವಿಷಯಗಳನ್ನು ತನಿಖೆ ಮಾಡುವುದಕ್ಕೋಸ್ಕರ ದಿವಾನರವರು ಗುರುತುಮಾಡಿಕೊಂಡರು ಹರಿಹರದ ಶ್ರೀಹರಿಹರೇಶ್ವರ ದೇವಸ್ಥಾನಕ್ಕೆ ದಿವಾನ್ ಪೂರ್ಣಯ್ಯನವರು ಶ್ರೀಮನ್ ಕೃಷ್ಣರಾಜ ಒಡೆಯರವರ ದೌಲತ್ತಿನಲ್ಲಿ ಕೊಟ್ಟ ಮೊಗಳ್ಳಿ ಇನಾಮತಿ ಗ್ರಾಮವನ್ನು ದೇವಸ್ಥಾನಕ್ಕೆ ಬಿಡಿಸಿಕೊಡಬೇಕೆಂಬ ವಿಚಾರದಲ್ಲಿ ಸನ್ನದಿನ ನಕಲು ಸಮೇತ ಗವರ್ನ್‌ಮೆಂಟಿಗೆ ಬರೆದುಕೊಂಡರೆ ತನಿಖೆಮಾಡುತ್ತೇವೆಂದೂ ಚಿತ್ರದುರ್ಗದ ಸುತ್ತಲೂ ಇರುವ ಕಂದಕಗಳನ್ನು ಮುಚ್ಚಿಸುವುದಕ್ಕೆ ಸರ್ಕಾರದಿಂದ ಹಣವನ್ನು ಒದಗಿಸಲಾಗದೆಂದೂ ಚಿತ್ರದುರ್ಗದ ಟವರ್ ಮ್ಯುನಿಸಿಪಲ್ ಉತ್ಪತ್ತಿಯನ್ನು ಹೆಚ್ಚಿಸಿಕೊಂಡಲ್ಲದೆ ನೀರು ಒದಗಿಸುವ ಏರ್ಪಾಡನ್ನು ಮಾಡುವುದು ಸಾಧ್ಯವಲ್ಲವೆಂದೂ ದಿವಾನರವರು ತಿಳಿಸಿದರು

ಹಾಸನ ಡಿಸ್ಟ್ರಿಕ್ಟು

ಹಾಸನ ಟವರ್‌ಗೆ ನೀರನ್ನು ಒದಗಿಸಿ, ಆರೋಗ್ಯವಿಚಾರವನ್ನು ಕ್ರಮಪಡಿಸುವುದಕ್ಕೆ ಆ ಮ್ಯುನಿಸಿಪಾಲಿಟಿಯವರು ಸ್ಥಳೀಯ ಪಟ್ಟಿವರಿಯನ್ನು ಹೆಚ್ಚಿಸಬೇಕಾಗಿದೆ ಎಂದೂ ಬೇಲೂರು ಶ್ರೀಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಬೇಕಾಗುವ ರಿಪೇರಿಯನ್ನೆಲ್ಲಾ ಸರ್ಕಾರದವರೇ ಮಾಡಿಸುವುದಲ್ಲದೆ ಉತ್ತಮವಾದ ಒಂದು ವಿಮಾನವನ್ನೂ ಕಟ್ಟಿಸುವ ಏರ್ಪಾಡು ಮಾಡುತ್ತೇವೆಂದೂ ಅಪ್ಪಣೆ ಕೊಟ್ಟರು

ತುಮಕೂರು ಡಿಸ್ಟ್ರಿಕ್ಟು

ತುಮಕೂರು ಟವರ್‌ನಲ್ಲಿ ಅನರರಿ ಮ್ಯಾಜಿಸ್ಟ್ರೇಟರನ್ನು ನೇಮಕಮಾಡುತ್ತೇವೆಂದೂ ಬೇಗೂರು ಕೆರೆಯ ನೀರನ್ನು ಮೂಲು ಗ್ರಾಮಕ್ಕೆ ಬೇಸಗೆಯಲ್ಲಿ ಬಿಟ್ಟುಕೊಳ್ಳುವ ವಿಷಯದಲ್ಲಿ ಡೆಪ್ಯುಟಿ ಕಮಿಷನರ್‌ರಿಂದ ರಿಪೋರ್ಟನ್ನು ತರಿಸಿಕೊಂಡು ತಕ್ಕ ಏರ್ಪಾಡು ಮಾಡುತ್ತೇವೆಂದೂ ದಿವಾನರವರು ಅಪ್ಪಣೆ ಕೊಟ್ಟರು ಊಟಿಕೆರೆಯನ್ನು ದುರಸ್ತು ಮಾಡುವ ಭಾಗದಲ್ಲಿ ಇಂಜನಿಯರ್ ಇಲಾಖೆಗೆ ಬರೆಯುತ್ತಾರೆ ಕವಬವಕೆರೆ ಕೆಳಗಿನ ನಾಲೆ ದುರಸ್ತಿಗೆ ಇಂಜನಿಯರ್ ಇಲಾಖೆಯವರು ಎಕರೆಗೆ ೧ ಆಣೆಗೆ ಏನಾದರೂ ಗೊತ್ತುಮಾಡುವ ಸೆಸ್ಸನ್ನು ಕೊಡಬೇಕಾಗುವುದೆಂದೂ ಮೈಸೂರು ಸಂಸ್ಥಾನದ ಬ್ಯಾಂಕು ಇನ್ನೂ ಸರ್ಕಾರದವರ ಯೋಚನೆಯಲ್ಲಿದೆ ಎಂದೂ ತುಮಕೂರು, ಪಾವಗಡ ಮಧುಗಿರಿ ಟವರ್‌ಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅಂದಾಜು ಪಟ್ಟಿಗಳು ತಯಾರಾಗುತ್ತಿವೆಯೆಂದೂ ತುಮಕೂರು ಜನರಲ್ ಆಸ್ಪತ್ರೆಯೊಳಗೆ ರೋಗಿಗಳಿರುವುದಕ್ಕೆ ಹೊಸ ವಾರ್ಡುಗಳನ್ನು ಕಟ್ಟುವ ಅಂದಾಜು ಮಾಡಿಸುತ್ತೇವೆಂದೂ ದಿವಾನರವರು ಸಾರ್ವಜನಿಕರ ಯದಲ್ಲಿ ಮಾಡಿರುವ ಹೊಸ ರೂಲುಗಳನ್ನು ತುಮಕೂರು ಡಿಸ್ಟ್ರಿಕ್ಟಿಗೂ ಗೆ ತರುವುದಾಗಿಯೂ ಕಡಬದಲ್ಲಿ ಸ್ಕೂಲನ್ನು ಕಟ್ಟುವುದಕ್ಕೆ ಮುಜರಾಯಿ ದವರು ಅರ್ಜಿ ಬರೆದುಕೊಂಡರೆ ಗ್ರಾಂಟು ಕೊಡುವ ವಿಚಾರವನ್ನು ಯೋಚಿಸಬಹುದೆಂದೂ, ತುಮಕೂರು ಟವರ್ ಮಹಾರಾಷ್ಟ್ರದಲ್ಲಿ ಮಕ್ಕಳಿಗೆ ಸ್ಥಳ ಇರುವುದಾದರೆ ತಮ್ಮ ಸ್ವಂತ ಕಟ್ಟಡವನ್ನು ಸ್ಕೂಲಿಗಾಗಿ ಬಿಟ್ಟುಕೊಡುವೆವು ಹೇಮಾ ಹನುಮಂತಯ್ಯನವರು ಒಪ್ಪಿಕೊಂಡದ್ದರಿಂದ ಈ ವಿಚಾರ ವಿದ್ಯಾ ಇಲಾಖೆಗೆ ತಿಳಿಸುತ್ತೇವೆಂದೂ ಕೋರಾಟದಲ್ಲಿರುವ ಶ್ರೀ ಬ್ಯಾಟರಾಯಸ್ವಾಮಿ ದೇವಸ್ಥಾನದ ರಿಪೇರಿ ವಿಷಯದಲ್ಲಿ ಮುಜರಾಯಿ ಇಲಾಖೆಯವರನ್ನು ಕೇಳುತ್ತೇವೆಂದೂ ದಿವಾನರವರು ಅಪ್ಪಣೆ ಕೊಟ್ಟರು

ಕೋಲಾರ ಡಿಸ್ಟ್ರಿಕ್ಟು

ಕೋಲಾರ ಟವರ್ ನೀರಿನ ಏರ್ಪಾಡೂ, ಪುರಾಭಿವೃದ್ಧಿಯೂ ಇಂಜನಿಯರ್ ಇಲಾಖೆಯವರ ಪರ್ಯಾಲೋಚನೆಯಲ್ಲಿದೆ ಎಂದೂ, ಶಿಡ್ಲಘಟ್ಟ ಡಿಸ್ಟ್ರಿಕ್ಟ್ ಸಂಡಿಸ್‌ಬೇ ಮುನಿಸಿಪಲ್ ವಾಸೆಯನ್ನು ಕಟ್ಟ ಕೆರೆಗೆ ಬೀಳುವ ಅವಾಂತರದ ಸಂತ್ರನ್ನು ಸರ್ಕಾರದವರು ವಹಿಸಿಕೊಂಡು ರೂಢಿಸುವ ಮತಪತಿಗಳ ಅಭಿಮತವನ್ನು ಕೇಳಿದೆ ಎಂದೂ ಇಂಡಿಯಾ ಗವರ್ನ್‌ಮೆಂಟಿನ ಸ್ಯಾಂಕ್ಷನ್ ಆಗಿರೋದರಿಂದ ಇನ್ನು ಒಂದೆರಡು ವಾರಗಳಲ್ಲಿ ಕೋಲಾರ ಬೌರಿಂಗ್‌ಪೇಟೆ ರೈಲ್ವೆ ಕಾಮಗಾರಿ ಪ್ರಾರಂಭವಾಗುವುದೆಂದೂ ದೊಡ್ಡಬಳ್ಳಾಪುರದಲ್ಲಿ ಮುನ್ಸಿಫ್ ಕೋರ್ಟು ಇಡುವ ವಿಚಾರ ಯೋಚನೆಯಲ್ಲಿದೆ ಎಂದೂ ದಿವಾನರವರು ಜವಾಬು ದಯಪಾಲಿಸಿದರು

ಬೆಂಗಳೂರು ಡಿಸ್ಟ್ರಿಕ್ಟು

ಬೆಂಗಳೂರಿಗೆ ಒಂದು ಸ್ಮಾಲ್ ಕಾಸ್ ಕೋರ್ಟನ್ನು ಇಡುವ ವಿಷಯ ಚೀಫ್ ಕೋರ್ಟಿನವರು ಒಪ್ಪಿ ಪ್ರತಿವಾದಕಾರ ಪ್ರಜೆಗಳು ಗವರ್ನ್‌ಮೆಂಟಿಗೆ ಒಂದು ಮನವಿ ಅರ್ಜಿಯನ್ನು ಬರೆದುಕೊಳ್ಳಬಹುದೆಂದೂ, ಎಲ್ಲಾ ಸಿವಿಲ್ ಕೋರ್ಟುಗಳನ್ನೂ ಒಂದೇ ಕಡೆ ಮಾಡುವುದಕ್ಕೋಸ್ಕರ ಬೆಂಗಳೂರಿನಲ್ಲಿ ಕಾಲಿ ಸ್ಥಳವನ್ನು ಗೊತ್ತುಮಾಡಿರೋಣದರಿಂದ ಬೇಗನೆ ಕಾಮಗಾರಿ ಪ್ರಾರಂಭವಾಗುತ್ತದೆಂದೂ ಮಾಗಡಿಗೂ ಸಿಲವು ಗುಡ್ಡದಿಂದ ನೀರಿನ ವಸತಿಯನ್ನು ಮಾಡುವುದಕ್ಕೆ ಆ ಪರಿ ತರೀ ವ್ಯವಸಾಯವನ್ನು ಹೆಚ್ಚಿಸುವುದಕ್ಕೆ ಗೌರಿಬಿದನೂರು ಆನೇಕಲ್ಲು ಕಾಮಗಾರಿ ವಿಷಯದಲ್ಲಿ ಇಂಜನಿಯರ್ ಇಲಾಖೆಯವರನ್ನು ಕೇಳುತ್ತೇವೆಂದೂ ಚನ್ನಪಟ್ಟಣದಲ್ಲಿ ಕುಶಾಲ್ ಪೇಟೆಯಲ್ಲೂ ಮುನಿಸಿಪಲ್ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಂಡ ಹೊರತು ಕುಡಿಯುವ ನೀರನ್ನು ಒದಗಿಸುವುದು ಸಾಧ್ಯವಿಲ್ಲವೆಂದೂ ಚನ್ನಪಟ್ಟಣದಲ್ಲಿ ಸೂಪರ್ ಮೊಸಳೆ ಕಟ್ಟುವುದು ಬೆಂಗಳೂರು ನೀರಿನ ಸರಬರಾಜಿನ ನಲ್ಲಿಗಳನ್ನು ಬದಲಾಯಿಸುವುದು ಬೆಂಗಳೂರು ಸಿ ಟಿ ಸಿ ಷನಲ್ ಸನ್ನ ಕಾಲೇಜಿನ ಕಾರ್ಯಾನುಗ್ರಹ ದಿನವು ಕಳೆಯುತ್ತಾ ಸತ್ತವರ ಪ್ರೇತೋಪದ್ರವ ಅಧಿಕಾರದಲ್ಲಿರುವುದು ಸಿಟಿ ಮುನಿಸಿಪಲ್ ಕೌನ್ಸಿಲರುಗಳ ಪೈಕಿ ಪ್ರಜಾಪಕ್ಷದ ಮೆಂಬರನ್ನು ಮ್ಯುನಿಸಿಪಲ್ ಛೇರ್ಮನ್ ಆಗಿ ನೇಮಿಸಬೇಕೆಂಬುವುದು, ಈ ವಿಚಾರಗಳನ್ನು ಪರ್ಯಾಲೋಚಿಸುತ್ತೇವೆಂದೂ ದಿವಾನರವರು ತಿಳಿಸಿರುತ್ತಾರೆ

ಮೈಸೂರು ಡಿಸ್ಟ್ರಿಕ್ಟು

ದಿವಾನರವರು ಅಪ್ಪಣೆ ಕೊಡಿಸಿದ ಪ್ರತ್ಯುತ್ತರಗಳೇನೆಂದರೆ —ಬೆಂಗಳೂರಿನಿಂದ ಕೆಲವು ಆಫೀಸುಗಳನ್ನು ಮೈಸೂರಿಗೆ ವರ್ಗಮಾಡುವುದು ಸರ್ಕಾರದ ಯೋಚನೆಯಲ್ಲಿದೆ ಮೈಸೂರಿನಲ್ಲಿ ೩೦ ಲಕ್ಷ ರೂಪಾಯಿ ಅಂದಾಜಿನ ಆಸ್ಪತ್ರೆಯನ್ನು ಕಟ್ಟಬೇಕೆಂದು ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರಾಗಿ ಒಂದೆರಡು ತಿಂಗಳಲ್ಲೇ ಈ ಕಾಮಗಾರಿ ಪ್ರಾರಂಭವಾಗುವುದು ರಾಜಧಾನಿಯ ಟ್ರಸ್ಟ್ ಬೋರ್ಡನ್ನು ಮ್ಯುನಿಸಿಪಾಲಿಟಿಯ ಜೊತೆಗೆ ಕೂಡಿಸಬೇಕೆಂಬುವುದು ಸರ್ಕಾರದ ಯೋಚನೆಯಲ್ಲಿದೆ ಮೈಸೂರಿನಲ್ಲಿರುವ ಗಲೀಜುಗಳ ಮೇಲಿ ಚಾರಣೆಗೆ ಮೊದಲಿದ್ದಂತೆ ಮಾನೇಜಿಂಗ್ ಕಮಿಟಿಗಳನ್ನು ನೇಮಕ ಮಾಡುತ್ತೇವೆ ಹುಣಸೂರಿನಲ್ಲಿ ಮುನ್ಸಿಫ್ ಕೋರ್ಟನ್ನೂ ರೆವಿನ್ಯೂ ಡಿಪೋಜಿಟ್ ಆಫೀಸನ್ನೂ ಇಟ್ಟುಕೊಡುವಂತೆ ಪ್ರಜೆಗಳು ಸರ್ಕಾರಕ್ಕೆ ಒಂದು ಮನವಿಯನ್ನು ಬರೆದುಕೊಳ್ಳಬಹುದು ಶ್ರೀರಂಗಪಟ್ಟಣದಿಂದ ಮುನ್ಸಿಫ್ ಕೋರ್ಟನ್ನು ಇತರ ಸ್ಥಳಕ್ಕೆ ವರ್ಗಮಾಡುವ ಯೋಚನೆ ಇಲ್ಲ ಬನ್ನೂರಿಗೆ ಸಬ್ ತಾಲ್ಲೂಕ್ ಮಾಡುವ ವಿಷಯದಲ್ಲಿ ರೆವಿನ್ಯೂ ಕಮಿಷನರ್‌ರನ್ನು ಕೇಳುತ್ತೇವೆ ಟಿ ನರಸೀಪುರದಲ್ಲಿ ಹೊಸ ತಾಲ್ಲೂಕ್ ಕಚೇರಿ ಕಟ್ಟುವುದನ್ನು ಜಾಗ್ರತೆಪಡಿಸುವೆವು ಚಿಕ್ಕಯಗಟಿಕೆರೆ ಕೆಳಗಿನ ರೈತರು ಎಕರೆಗೆ 20 ರೂಪಾಯಿಯಂತೆ ಕಂಟ್ರಿಬ್ಯೂಷನ್ ಕೊಡಲು ಒಪ್ಪಿರುವುದರಿಂದ ಕೂಡಲೇ ಕಾಮಗಾರಿ ಪ್ರಾರಂಭಿಸುವಂತೆ ಇಂಜನಿಯರ್ ಇಲಾಖೆಗೆ ಬರೆಯುತ್ತೇವೆ ಹೈರಿಗೆ ಗ್ರಾಮಕ್ಕೆ 1,20,000 ರೂಪಾಯಿನ ಆ ದಾಜಿನ ಒಂದು ಕೆರೆ ಕಟ್ಟಲು ಸ್ಯಾಂಕ್ಷನ್ ಆಗಿದೆ ಹೆಮ್ಮರಗಾಲ ಮತ್ತು ಮುಡಿಗುಂಡ ನಾಲೆಗಳನ್ನು ಎತ್ತರ ಮಾಡುತ್ತೇವೆ ಕನ್ನಂಬಾಡಿ ಕಟ್ಟೆಯ ಕಾಮಗಾರಿ ಈಗತಾನೇ ಪ್ರಾರಂಭವಾಗಿದೆ ಬಾಷಾರಿ ವರ್ತಮಾನಗಳನ್ನು ಸಹ ಕಳುಹಿಸುವರೆ ಇಂ ರೈತರಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿಕೊಡುತ್ತಾರೆ ಜಮೀನಿನ ಪ್ರತಿಫಲ ವ್ಯವಸ್ಥೆಮಾಡುವುದಕ್ಕೆ ಸರ್ಕಾರಿ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಒಂದು ಪಂಚಾಯಿತಿ ಏರ್ಪಾಡಾಗುತ್ತದೆ ತಲಕಾಡಿನ ಮರಳನ್ನು ತೆಗೆಯುವುದಕ್ಕೆ ಮಾಧವಮಂತ್ರಿ ಅಣೆಗಟ್ಟು ದಮ್ಮು ದಡ ಒಡ್ಡುಗಳನ್ನು ಕಟ್ಟಿ ವೇತನ ಎಸ್ಟಾಬ್ಲಿಷ್ಮೆಂಟನ್ನು ನೇಮಿಸುತ್ತೇವೆ ಕಪಿಲಾ ಕಾವೇರಿ ಹೊಳೆ ಸೇರುವ ಸ್ಥಳದಲ್ಲಿ ಮನಸ್ಸು ಮಾಡಬೇಕಾದ ಪ್ರಾರ್ಥನೆ ಸಹಿತ ನರಸೀಪುರದಲ್ಲಿ ಸರ್ಕಾರಿ ದೇವತಾ ಭೂಮಿಯನ್ನು ಇಡುವಂತೆ ಹುಕುಂ ಕೊಡುತ್ತೇವೆ ಬಿಟ್ಟಿರುವ ಸಾವು ಮಹಾರಾಜರವರ ಧರ್ಮಛತ್ರಕ್ಕೆ ಮೆಟ್ಟು ಹಾಕಿ ಮಾಡುತ್ತಾ ಇಂದಿನ ವಿ ಪರಿ ದ ಅದು ಮೆಂಬರುಗಳು ಹೇಳುವಂತೆ ಅತ್ಯಪೇಕ್ಷಿತವಾಗಿದ ಮೇಕ್ರಿಯಲ್ಲಿ ಅನ್ನಛತ್ರವನ್ನು ಕಟ್ಟಿಸುವಂತೆ ಹುಕುಂ ಕೊಡುತ್ತೇವೆ ಮೈಸೂರು ಲೋಕಲ್ ಸರ್ವೀಸ್ ಹುಕ್ಮುಗಳನ್ನು ಬೆಂಗಳೂರು, ಮೈಸೂರು, ಶಿವಮೊಗ್ಗ, ಹಾಸನ, ಈ ನಾಲ್ಕು ಕಡೆಯೂ ನಡೆಯುವಂತೆ ಮಾಡುವೆವು ರಾಜಧಾನಿಯ ಸಿವಿಲ್ ಕೋರ್ಟಿನಲ್ಲಿ ಕಕ್ಷಿಗಾರರು ಇರುವುದಕ್ಕೆ ಒಂದು ಕಟ್ಟಡವನ್ನು ಕಟ್ಟಿಸುತ್ತೇವೆ ಅದೇ ಸಿವಿಲ್ ಕೋರ್ಟಿಗೆ ಬಂದು ರೈಲು ಸ್ಟೇಷನನ್ನು ಏರ್ಪಾಡು ಮಾಡುವಂತೆ ನಿಸ್ಸಂದೇಹವಾಗಿದೆ

ಚಾತ್ರಿ ದಾರಗಳು

ಸ್ಥಳಸಂಕೋಚದಿಂದ ಕೆಲವು ಚಾತ್ರಿಗಳನ್ನು ಪ್ರಕಟಿಸಲಾಗಲಿಲ್ಲವೆಂದು ವಿಷಾದವಟ್ಟು, ಈ ಮೂಲಕ ವ್ಯಸನಪಡುತ್ತೇವೆ —ಎಡಿ]

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಟರಿಗೂ

ಕೈಸೋಕದೆ ಮಾಡಿದೆ. ಬರೀ ಸಸ್ಯಾಹಾರ.

/ ಮೆಲ್ಲಿನ್ಸ್ ಆಹಾರವು ಉತ್ತೇಜನ ಕೊಡುವುದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುವುದು. ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಪುಸ್ತಕಪಟ್ಟಿ ಕಳುಹಿಸುತ್ತಾರೆ

[66-20] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev E W T[...]
M A, Proprietor and Manager, Wesleyan Mission P[...]
Mysore 14/11/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

[illegible] ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೨ ನೇ ಇಸವಿ ನವಂಬರ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೨೫

[illegible]ನಾಶಮಾಡಿಕೊಳ್ಳುತ್ತೇನೆಂದು ಹೇಳು "

84 20

[illegible] ರೋಗಗಳು ನಾಶಮಾಡಿಕೊಳ್ಳುವನೆಂದು ಹೇಳು ನಾಯು, [illegible] ಆಠಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆ [illegible] ಉಬ್ಬಸ, ಹಲ್ಲುನೋವು ಗಂಟ್ಲು ಗಾಡೆನ್ನುವುದು, ಕೆಮ್ಮುಗಳು, [illegible] ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, [illegible] ಎಲ್ಲಾ ತರದ ನೋವನ್ನೂ ನಾನು ನಾಶಮಾಡಿಕೊಂಡು ಆರೋ[illegible] ಕೆಲಸ ಮಾಡುತ್ತೇನೆಂದು [illegible] ಸಮೀಪದಲ್ಲಿ [illegible] ಅಂಗಡಿಗೆ ಹೋಗು ಕ್ಲೆಮೆಂಟ್ಸ ಮ್ಯಾಜಿಕ್ ಬಾಂ ಒಂದು [illegible] ಎಂದು ಕೇಳು ಅದಕ್ಕೆ ಪ್ರತಿಯಾಗಿ [illegible]ವನ್ನು ಕೊಟ್ಟರೆ [illegible] ಕೊಡೆಂದು ಕೇಳಿ ತೆಗೆದುಕೋ ಈ [illegible] ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು [illegible] ಇದು ಉತ್ತಮೋತ್ತಮವಾದ ಪರಿಹಾರ [illegible] ಜನರು [illegible], ನಿಮಗೆ [illegible] ನಾಶವಾಗುತ್ತವೆ

[illegible] ಮ್ಯಾಜಿಕ್ ಬಾಂ [illegible] ಹಸರನ್ನು ಮರೆಯಬೇಡಿ [illegible] 12 ಆಣೆ, ಅಂಚೆ ವೆಚ್ಚ 4 ಆಣೆ [illegible] ಅಥವಾ ಹೆಚ್ಚು [illegible] ಸಿಗುತ್ತೆ [illegible]ಗಳು -(1) ಎಸ್ [illegible], 37 [illegible], [illegible], [illegible], (2) ಜಿ ಎಸ್ [illegible]ರು, ಜನರಲ್ ಮರ್ಚೆಂಟ್, ತುಮಕೂರು

ಹತ್ತಿಯ ತುಪ್ಪ.

[illegible]ವಾದ ಹತ್ತಿಯ ಬೀಜದಿಂದ ತೆಗೆದು ರಸಾಯನ ಶಾಸ್ತ್ರದಿಂದ [illegible], [illegible] ನಿರ್ದೋಷವಾದ ಮತ್ತು ಆರೋಗ್ಯ[illegible] ಹೇಳಿರುವ, ಅಡಿಗೆಗೆ ತುಪ್ಪಕ್ಕೆ ಬದಲಾಗಿ ಅನೇ[illegible] ಉಪಯೋಗಿಸಲ್ಪಡುವ

[illegible] ಸಿದ್ಧವಾಗಿದೆ.

[illegible] ದಬ್ಬಿ 1 ಕ್ಕೆ 12 ರೂಪಾಯಿ [illegible] [illegible] ಉತ್ಪನ್ನ [1613]

[illegible] ಮತ್ತು ಹೂಟ್ಟು [illegible], [illegible] ಆರೋಗ್ಯವಾದ ಮತ್ತು [illegible]ಕರವಾದ ಆಹಾರ [illegible] [illegible]

[illegible] ಕಂಪನಿ, [illegible], 159, [illegible], ಬೆಂಗಳೂರು ಸಿಟಿ.

[illegible]

[illegible]ಗಂಧ. ಪೆಟ್ಟಿ 1 ಕ್ಕೆ 12 ಆಣೆ.

[illegible]

[illegible] ಗಂಧವನ್ನು ಅವಲಂಬಿಸದೆ ಈ ಗಂಧವು [illegible]

[illegible] ಕಪಿಲಾ ಕಂಪನಿ [illegible] ಗಮನಿಸಿ ಗಂಧ [illegible] ಬಿ. ಪಿ. [illegible]

[illegible] ಕ್ಯಾಟಲಾಗು ಕಳುಹಿಸುವೆವು. ಮತ್ತು ಈ ಕಂಪನಿಯಲ್ಲಿ ಇಂಗ್ಲೀ[illegible], ಇತರ ಗಂಧಗಳು, ಗಡಿಯಾರಗಳು, [illegible]ಗಳು, [illegible], ಮಾರಿಕೆಗೆ ತಯಾರಾಗಿದೆ ಕ್ಯಾಟಲಾಗು ಬೇಕಾದವರಿಗೆ [illegible]. [172-1]

ವಿಳಾಸ—ಕಪಿಲಾ ಕಂಪನಿ, ಚಿತ್ತೂರು.

ಜವಳಿ ಕ್ರಯಕ್ಕೆ ಬೇಕಾಗಿದೆ.

11 [illegible] ಸೀರೆಗಳು, 3 [illegible] ಸೀರೆಗಳು, 5-6 ಕಲಾಪತ್ತಿನ [illegible] ಪಂಚೆಗಳು [illegible] ಮಾರಿಕೆ [illegible] ನನ್ನ ಸ್ವಂತ ಉಪಯೋಗಕ್ಕೆ ಬೇಕಾಗಿರುತ್ತೆ [illegible] ಇದ್ದಲ್ಲಿ ತಂದು ತೋರಿಸಿ ಮುನಾಸಬ್ ಕ್ರಯದ [illegible] ವಿಳಾಸ ಸಿ. ಎಸ್. ರಾಮಚಂದ್ರರಾವ್, 919, ಸಂಜರಾಜ ಬಹದ್ದೂರ್ ಅಗ್ರಹಾರ, ಚಾಮರಾಜ ಮೊಹಲ್ಲಾ, ಮೈಸೂರು.

"ಮಹಿಳಾಸಖೀ."

ಮುಂದಿನ ಡಿಸೆಂಬರ್ ತಿಂಗಳಲ್ಲಿ ಹೊರಡುವ "ಮಹಿಳಾಸಖೀ" [illegible] ಆದರ ಚಂದಾದಾರರಿಗೆಲ್ಲಾ ಮದರಾಸ್ [illegible] ಮತ್ತು [illegible] ಚಿತ್ರಪಟವನ್ನು ಉಚಿತವಾಗಿ [illegible]. "ಮಹಿಳಾಸಖೀ" ವರುಷದ ಚಂದಾ [illegible]

ವಿಳಾಸ ಮ್ಯಾನೇಜರ್, ಮಹಿಳಾಸಖೀ, ಮೈಸೂರು

ಒಂದೇ ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) " ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ " ಎಂಬ ನೀತಿ; (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ; (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು; (4) ವನ, ಸರಸ್ಸು, ಆರಾಮಾದಿ ವರ್ಣನೆಗಳು; (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ.

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ; ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ [5-16]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[115-19]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹು ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಶಕ್ತಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

WILLIAM & Co, FORT, BOMBAY.

ಅಮೃತಾಂಜನ್. (Regd.)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು. ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1 ಕ್ಕೆ 0-8-0.

ಗಜಕರ್ಣದ ಮುಲಾಮು.

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ನಾಲ್ಕು ದಿನಗಳಲ್ಲಿ ಶಾಶ್ವತವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ; ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1 ಕ್ಕೆ 0-6-0.

ದಂತಮಂಜನ ೩ ಆಣೆ ನೇತ್ರಾಂಜನ ೬ ಆಣೆ. ಸುಂಡಿಕೈತೈಲ ೪ ಆಣೆ [35-49]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ

ಅಮೃತಾಂಜನದ ಡಿಪೊ, ಪೋಸ್ಟ್ ಮುಂಬಯಿ.

ಪಾಕೆಟ್ ಡೈರಿ

ಶ್ರೀ ಸೀತಾರಾಘವ

ಸನ್ 1913 ನೇ ಇಸವಿಯದು

[illegible] ಬರೆದು ತರಿಸಿಕೊಳ್ಳಿ ನಂ 1 ಸಣ್ಣ ಸೈಜು ಸಾದಾ ಡೈರಿಗೆ 0 1 0 [illegible] ಸಣ್ಣ ಸೈಜು [illegible] ಬಟ್ಟೆ ಮುಚ್ಚಳ ಹಾಕಿರುವ [illegible] 0 3 0 [illegible] ನಂ 3 ದೊಡ್ಡ ಸೈಜು ಸಾದಾ ಡೈರಿಗೆ 0 6 0 ನಂ. 4 ದೊಡ್ಡ ಸೈಜು [illegible] ಬಟ್ಟೆ ಮುಚ್ಚಳ ಹಾಕಿರುವ [illegible] ಡೈರಿಗೆ 0 8 0 ಟಪಾಲು ಖರ್ಚು ಬೇರೆ ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು 25 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ ರೂಪಾಯಿಗೆ 3 ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. [136-18]

ವಿವರಣೆ (1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ [illegible] (ಬಿಳ್ಳಿದು) ಬೈಂಡು ಮಾಡಿಸಿದೆ. (2) [illegible] ಪ್ರತಿಯೊಬ್ಬರೂ [illegible] ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ [illegible], ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, [illegible] ಬೇಕಾದ [illegible], ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ (3) [illegible] ಲೆಕ್ಕ, [illegible] ಸಂಗತಿ, ಸ್ಟಾಂಪ್ ಲೆಕ್ಕ, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ [illegible] ಹೊಸ ವಿಷಯಗಳನ್ನು ಸೇರಿಸಿದೆ. (4) [illegible] ಮತ್ತು [illegible] ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರ [illegible], ಗೌರ್ನಮೆಂಟ್ ರಜಾ ದಿನಗಳು, [illegible] ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, [illegible], [illegible] ಸಹಾ ಇರುತ್ತದೆ. [illegible] ಲೆಕ್ಕ, [illegible] ಲೆಕ್ಕ, ಮುಖ್ಯವಾದ ವಿಷಯ, ಒಟ್ಟು [illegible], ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ ಈ ಹೊಸ ಪ್ರಯತ್ನಕ್ಕೆ [illegible] ಪ್ರೋತ್ಸಾಹ ಅತ್ಯವಶ್ಯ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕುಂತಲಾನಂದ ತೈಲವು.

147 9

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರಿತವಾಗಿಯೂ ಬೆಳೆಯಿಸುವುದಲ್ಲದೆ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ಶೀತಲವೂ ಸುವಾಸನೆಯೂ ಆಗಿರುವುದಲ್ಲದೆ ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 17

ಕಳ ಹೊಟ್ಟೆ ಯ ನೋವು, ಎಡೆಬಿಡದೆ ಭೇದಿಯಾಗುವುದು, ಆಮಶಂಕೆ, ವಾಂತಿ ಭೇದಿ ಉಪದ್ರವ, ಕಾಲುಗಳ ಸೆಳವು, ಹೊಟ್ಟೆ ನಾನಾ ತರದ ಶೂಲೆಗಳು ಈ ರೋಗಗಳಿಗೆ ಶ್ಲಾಘನೀಯವಾದುದುತ್ತ ಈ ಪರವಾಗಿ ಯುಕ್ತವಾದ ಔಷಧವು ಜನರನ್ನು ಕೊಲುವವನ್ನು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲಿ ಇನ್ಯಾವ ಔಷಧವೂ ಮಾಡಿರುವುದಿಲ್ಲ ಪ್ರಕಟದಲ್ಲಿಟ್ಟುಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೆಯಿಂದ ಸ್ವಲ್ಪವೂ ಮುಟ್ಟಬೇಡ

ಇದು ಎಲ್ಲೆಲ್ಲಿಯೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೇಳು ಎಲ್ಲರನು ಉಪಯೋಗಿಸಿ ನಮ್ಮ ವರ್ತನೆಯನ್ನು ಮನಮುಟ್ಟು ಪಾಠುವಾಡಬೇಕಿದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿವೆ ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನವಿರಾದ ಕೇಶರಾಶಿ ಇದೆ? ಕೇಶರಾಶಿಯು ಸುಂದರವಾಗಿ ಕಾಣಬೇಕಾದರೆ ಅವು ದಟ್ಟವಾಗಿಯೂ ಉದ್ದವಾಗಿಯೂ ಇರಬೇಕು ಅದಲ್ಲದೆ ತಲೆಬುರುಡೆಯು ಯಾವ ಅಶುದ್ಧಿಯಿಂದ ಆದರೂ ಕಟ್ಟಿರಬಾರದು, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ಶಕ್ತ್ಯನುಸಾರ ಪ್ರಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶರಾಶಿಗೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅ ಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಸ್ವಲ್ಪದರಲ್ಲಿಯೇ ಬೆಳೆಯುವುವು

ಕಾಮಿನಿಯಾ ತೈಲ—ಇದು ಕೂದಲುಗಳನ್ನು ಚಂದಗೆಯುವ ಸರ್ವ ವಿಧಗಳಲ್ಲಿ ಮಹಿಮೆಯುಳ್ಳದ್ದು ಮತ್ತು ಅತ್ಯುತ್ತಮವು, ಕೂದಲುಗಳು ಹೇಗಿರಬೇಕೆಂದು ಪ್ರತಿಯೊಬ್ಬ ಸ್ತ್ರೀಯರೂ ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ಮನಮುಟ್ಟುತ್ತವೆ ಎಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಅಲಂಕಾರಗಳಿಂದ ಸೊಬಗನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ಪುಷ್ಟಿಯುಳ್ಳವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನವಿರಾದ ಕಪ್ಪು ಬಣ್ಣದಿಂದೊಡಗೂಡಿ, ಅಗಾಗ ಹರಿದು ಬೀಳುವ ಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 1 0 ಬೇರೆ ತರಿಸಬೇಕು 3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಆಣೆಯ ಟಿಕೇಟನ್ನು ಕಳುಹಿಸಿ

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಶಸ್ತಿ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28 7 11 ಮೈ ಬಿ ಡಿ ನಾರಾಯಣ್, ರುಕ್ಮಿಣಿವಿಲಾಸ, ಮನ್ನಾರುಗುಡಿ— ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾದ ಪೇಟೆಯಲ್ಲಿ ಸಿಕ್ಕುವ ಎಲ್ಲಾ ಎಣ್ಣೆಗಳಲ್ಲಿ ಇದು ಪ್ರಥಮ ತರಗತಿಯಲ್ಲಿ ಸಲ್ಲುವುದೆ ಮತ್ತು ಇದಕ್ಕೆ ಸರಿಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1 11 ಮಿ ಆರ್ ನಾರಾಯಣ ವ ಡಿ ಟಾಣಿ, (ಬನಾರಸ್)—ನನ್ನ ಮಿತ್ರರುಗಳಿಗೆ ನಿಮ್ಮ ಕಾಮಿನಿಯಾ ತೈಲವನ್ನು ಅತ್ಯಂತವಾಗಿ ಪ್ರಶಂಸಿಸಿ, ಮಾಡುವುದರಿಂದ ಕೂಡಲೇ ಸೀಸೆಗಳನ್ನು ತ್ವರೆಯಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದಾರೆ ಬೆಳ್ಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯುಳ್ಳದ್ದು ಕ್ರಯ ದ್ರಾಂ ಸೀಸೆಗೆ ರೂ 1 8 0

ದಿಲ್-ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅನುಪಮವಾದ ಸುಗಂಧ ದ್ರಾಂ ಸೀಸೆಗೆ ರೂ 1 8 0

* ಕಾಮಿನಿಯಾ ಸುಗಂಧಿ—ರೂ 1-4 0, * ಕಾಮಿನಿಯಾ ಟಾಯಿಲೆಟ್ ಪೌಡರ್—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲಿ ಬರೆಯಬೇಕು ನಮ್ಮ ವಿಳಾಸ —

[91 17]

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಔಷಧಿ ಸೇವಿಸಿ ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 3-47

(ಸ್ಕಾಟ್ಸ್ ಇಮಲ್ಷನ್)

ಘಟ ಪರಿಣಾಮ, ಚರ್ಮ ರೋಗ ಕ್ಷಯ ಮಹಾವ್ಯಾಧಿ ರೋಗ, ಪಾರ್ಶ್ವಶೂಲೆ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ ರೋಗವು ಒಳಹೊಕ್ಕದನ್ನು ದುರ್ಬಲರನ್ನು ಬೇಗನೆ ತಗುಲಿಬಿಡುತ್ತದೆ ಅಸ್ವಸ್ಥವನ್ನು ದೂರ ಹೋಗಲಾಡಿಸಿ ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಶಾಲಿಗಳಾಗಿ ಸಂಪೂರ್ಣ ಜೀವವನ್ನು ಉಂಟುಮಾಡುತ್ತದೆ

Always get the Emulsion with this mark the Fishman—the mark of the 'Scott' process

ಈ ಮೀನುಗಾರನ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕೈಸೋಕದ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಲಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

THE PLACE FOR HASSAN CAPS IS HASSAN.

ನಿಮ್ಮ ತಲೆಯು ಬೋಳಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರದು ತರಿಸಿಕೊಳ್ಳಿ

1-16

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರದ ಬ್ಲಾಕ ಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬರುವ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇಬಾಳಿಕೆ, ಚನ್ನಾಗಿ ಹೆಣೆದ, ಬಹಳ ಬಾಳಿಕೆಯಿರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಗಾಡಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೮ ೧ ರೂ ೬ ೮, ೧ ರೂ ೪ ೮

ಚುಕ್ಕೆಯುಳ್ಳ ಟೋಪಿಗಳು ರೂ ೧—೮ ರೂ ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೩

ಜರದ ಟೋಪಿಗಳು ೧ ರೂ ೧೨ ೮, ೧ ರೂ ೮ ೮ ೧ ರೂ ೬ ೮

ಮುಸುಕಿನ ಟೋಪಿಗಳು ೧ ರೂ ೮ ೮ ೧ ರೂ ೬ ೮

ಕೊಡಗಿನ ಟೋಪಿ, ಪುಟಾಣಿ ಮೇಜೋಡು, ಅರ್ಧ ಮೇಜೋಡು, ಕೈಚೀಲ ವಟ್ಟೆ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮೇಲಾದ ಹೊಸ ಪುಸ್ತಕಗಳು.

ಉತ್ತಮ—ಒಡು ಸ್ತ್ರೀಯರ ಕಥೆ ಈಗತಾನೆ ಅಚ್ಚಾಗಿದೆ 1 ಆ ಜಪಾನ್ ಸಾಮ್ರಾಜ್ಯ—ಅದು ತಪಾದ ಸೂರ್ಯೋದಯ ರಾಜ್ಯದ ವಿಷಯ ಸುಂದರವಾದ ಒಂದು ಪರಸ್ಪರ ಇದೆ ಚಿತ್ರಗಳಿಂದ ಹೆಚ್ಚುತ್ತಿವ 6 ಆಣೆ ಉತ್ತಮ ಮನೋಹರವಾದ ಬಂಗಾಳಿ ನಾವಲ್ 11 ಆಣೆ ಕಿಂಡರ್‌ಗಾರ್ಟನ್ ಗಳು ವಿನೋದಕರವಾದ ಕಥೆಗಳುಳ್ಳದ್ದು ಆಟಕ ವಿನೋದಗಳು ಅಡಗಿರುವ 10 ಆಣೆ ಬೋಧನಕ್ರಮಸಂಗ್ರಹ ಪ್ರೈ ಸ್ಕೂಲ್‌ಗಳಿಗಾಗಿ ಬೇಕಾದದ್ದು 12 ಆಣೆ ಲೋ ಸೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ 1 ಆಣೆ

[1612]

ವಿಳಾಸ ವಿ ಕೃಷ್ಣಸ್ವಾಮಿ ಅ ಮಾ ನಾರ್ಮಲ್ ಸ್ಕೂಲ್, ಮೈಸೂರು

HASSAN CAPS.

ಹಾಸನದ ಟೋಪಿಗಳು.

ಜರದ ತರಗತಿ ಮೇಲು ಚುಕ್ಕೆ ಉಳ್ಳದ್ದು	ರೂ	2 0 0
" " ಅಪ್ಪು ಅರ್ಧ ಕಪ್ಪು	"	1 8 0
ಬಿಳಿ " "	"	1 0 0
ಗುಲಾಬಿ " "	"	1 4 0
ಸಾಲ್ಮನ್ " "	"	1 2 0

ಇವಲ್ಲದೆ ಇತರ ವಿಧ ನಮೂನೆ ಕಳುಹುತ್ತವೆ

ನಮ್ಮ ವಿಳಾಸ [167]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ

ತುಂಕೂರು.

Address

Wesleyan Mission Cap Industry, Tumkur

BENEFIT YOURSELF AND BENEFIT OTHERS.

The National Insurance and Banking Company Ltd Amritsar

Authorised Capital	Rs	10 00,000
Subscribed Capital Exceeds	"	10 00 000
Paid up	"	1,25,000
Funds Exceed	"	15,00 000
Policy-holders	"	80,000
Claims paid about	"	1 00 000

The Company works in accordance with the Indian Life Assurance Companies' and Provident Societies Acts 1912 and has also given double the initial security to the Government as required under the Insurance Act 1912

How is it that the National, of Amritsar, has become very popular throughout India?

Because, it has got almost all the attractive schemes which any other Life Office or Provident Society in India has got and also new and novel ones besides issues policies at most favourable rates and on most liberal conditions, and distributes relief in the shape of every quarter on account of marriages and deaths

[12 17]

WANTED

Active and honest District Superintendents and Taluk Agents for every unrepresented district and taluk in the Mysore Province and Coorg on both salary and commission The post is permanent and our agents are entitled to pension None but those who can spare whole time, who reside in district or taluk head quarters and who are well versed in English need apply

For further particulars and prospectuses please apply with one anna stamp and your previous experience in this line to —

M L NAGANNAH,

Chief Agent

The Amritsar National Insurance Buildings, Mysore

Opportunity | **Best Opportunity**

JANUARY PRESENTATION WATCH

Do not throw away your money on Cheap Watches

PURCHASERS OF OUR GENTLEMEN DRESS WATCH DESCRIBED BELOW BEFORE 31st JANUARY, 1913, SHALL GET A FREE

One, Rs 5 Cycle Coupon and one Anglo-Vernacular Diary for 1913



		Rs a p
Nickel Case Watch		8 12 0
Pure Silver Case Watch		13 4 0
Pure Nickel Chain	each	0 12 0
Pure Silver Chain	per tola	1 4 0
Pure Silver Long Neck Chain	each	1 4 0

GENTLEMEN'S DRESS WATCH

This Watch has a well finished gilt movement fitted with strong patent levers fully jewelled and imitation screw balance strong winding with gold gilt button mounted and pin hands setting mechanism. The dial is made up of white enamel giving neat and beautiful appearance with bold steel hands and 2nd hands. The case made up of pure nickel silver with double dooms the outer of which has a Trade Railway Engine Mark also pure silver cases which are engraved.



Purchasers of our watch shall have the best possible value for their money and the least frequent trouble and expense for repairs. Our practical knowledge of watch trade and long experience enables us to recommend with confidence the selection of the **gentlemen dress watch** we have made in these days of unscrupulous competition requires more than usual discrimination and practical judgment.

[871]

M S SIDDAPPA & BROS,

General Merchants,

KRISHNARAJ MOHALLA MYSORE

WANTED

A permanent Hindu Clerk able to correspond both in English & Kanarese. Should furnish security in cash Rs 200 on 6 per cent interest. Salary Rs 20. Person able to correspond in Maharashtra will get Rs 5 more. Promotion depends on the ability and merit of work. Apply with character certificate before 30th November 1912 to The Proprietor

[41] S S R Vanivilasa, Mysore

ಸ್ವಿಸ್ ಅಮೆರಿಕನ್ ವಾಚ್ ಕಂಪನಿ.

೪೬ ಎಸ್ಪ್ಲನೆಡ್ ಪಾರ್ಕ್ ಟೌನ್ ಪೋಸ್ಟು ಮದರಾಸು

... ಪಟ್ಟಣವಾಸಿಗಳು ನಾಯುಡುಗಾರು ವಾಚ್ ಮೇಕರ್ ಮೆಸರ್ಸ ... ಮೋರ್ಗನ್ ಪಿ ಆರ್ ಅಂಡ್ ಸನ್ಸ್, ... ಕೆರ್ ಅಂಡ್ ಸನ್ಸ್, ಮುಂತಾದ ದೊಡ್ಡ ... ಗಳಲ್ಲಿ ವಿಶೇಷವಾಗಿ ಅನುಭವವುಳ್ಳವರು

ತಂದಿಕೆಯೇ ನಮ್ಮ ವ್ಯಾಪಾರದ ಮುಖ್ಯ ವಿಷಯ

ನಾವು ಸಂಪೂರ್ಣ ... ರವಸೆಯನ್ನು ಕೊಡುತ್ತೇವೆ

ನಿಕ್ಕ ವಿ ಪಿ ಕಂಪನಿ ವರ್ತಕರು ಪ್ರಮುಖವಾದುತ್ತಾ ಬರುವ ಈ ... ರೋಸ್ಕೋಪ್ ಲೀವರ್ ವಾಚ್—1 ವರುಷ ಗ್ಯಾರೆಂಟಿ ಪತ್ರ ಸಮೇತ ಕ್ರಯ ರೂ 1—15 0

... ರೆಗ್ಯುಲೇಟರ್ ಡಿಫೆ ಆಲ್ ಲೀವರ್ ವಾಚ್—1 ವರುಷ ಗ್ಯಾರಂಟಿ ಪತ್ರಸಮೇತ ಕ್ರಯ ರೂ 2 4—0

... ವೋಲ್ ಕ್ವಲ್ಟಿ ರೆಗ್ಯುಲೇಟರ್ ವಾಚ್—ಬಹು ಎಲಪವಾದ ಮತ್ತು ನಾಜೂಕಾದ ಸಾಮಾನುಗಳಿಂದ ತಯಾರಾದದ್ದು 2 ವರುಷಗಳ ಗ್ಯಾರೆಂಟಿ ಪತ್ರಸಮೇತ ಕ್ರಯ ರೂ 2—8 0

... ರಿಜಿಸ್ಟರು ರೆಗ್ಯುಲೇಟರ್ ವಾಚ್—15 ಕೆಂಪು ರತ್ನಗಳುಳ್ಳದ್ದು, 3 ವರುಷಗಳ ಗ್ಯಾರೆಂಟಿ ಪತ್ರಸಮೇತ ಕ್ರಯ ರೂ 2— 1—0

ಹಕ್ಕು ಒಡಾವಣೆ ಬೀಗಕೊಡುವ ಆಫೀಸ್ ಕ್ಲಾಕ್—8 ಅಂಗುಲ ಡಯಲ್ 10 ಅಂಗುಲ ಉದ್ದ ಸುಂದರವಾದ ... ಪೆಟ್ಟಿಗೆಗಳುಳ್ಳದ್ದು, ಘಟ್ಟಿಯಾದ ಧ್ವನಿಯಿಂದ ಘಂಟೆ ಹೊಡೆಯುವದು ವರುಷಗಳ ಗ್ಯಾರೆಂಟಿ ಕ್ರಯ ರೂ ... —8—0

... ಓಪನ್ ಫೇಸ್ ಅರ್ಧ ರೂಪಾಯಿ ಸೈಜು, 2 ವರುಷಗಳ ಗ್ಯಾರೆಂಟಿ ... ಚರ್ಮದ ಪಟ್ಟಿ ಸಮೇತ ಲೇಡೀಸ್ ವಾಚ್ ಕ್ರಯ ರೂ 1

... ಬೆಳ್ಳಿಯಿಂದ ತಯಾರಿಸಿದ ಅರ್ಧ ರೂಪಾಯಿ ಸೈಜು 3 ವರುಷಗಳ ಗ್ಯಾರೆಂಟಿ ಚರ್ಮದ ಪಟ್ಟಿ ಸಮೇತ, ಲೇಡೀಸ್ ವಾಚ್ ಕ್ರಯ ರೂ 6

... ಕಲಂ—ಆಫೀಸ್ ಕ್ಲಾಕ್ ಬೇಕಾದವರು ಮುಂದಾಗಿ 2 ರೂ ... ಬಾಕಿ ರೂ 1 8 0 ಗೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ನಮ್ಮ ... ಹತ್ತಿರ ಇರುವ ರೈಲ್ವೆ ಸ್ಟೇಷನ್ ತಿಳಿಸಿದಲ್ಲಿ ಭಾರ್ಜು ... ಯಿಲ್ಲ ... ಮುಖಾಂತರ ರವಾನಿಸುವದಕ್ಕೆ ಬಹಳ ಸಹಾಯಕಾರಿಯಾಗಿರುತ್ತೆ ... ವಿಷಯಗಳಿಗೆ ಕಾಗದದಲ್ಲಿ ವಿವರವಾಗಿ ಬರೆದು ತಿಳಿದುಕೊಳ್ಳಬಹುದು

ವಿಳಾಸ—ಎಸ್ ಎ ವೆಂಕಟರಾಮಾನುಜಲು,

[11-1] ಸ್ವಿಸ್ ಅಮೆರಿಕನ್ ವಾಚ್ ಕಂಪನಿ,

4೦ ಎಸ್ಪ್ಲನೇಡ್, ಮದರಾಸ್

ಗಂಧದ ಗಿಡಗಳ ಮಾರಾಟವು

ನಮ್ಮ ಮಠಾಧಿಪತಿಯಲ್ಲಿರುವ ... ಗಿಡಗಳನ್ನು ... ಕೊಡುತ್ತೇವೆ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ಅಗತ್ಯ ಸವ ಕ ಮು ಆಗಲಿ ತಿಳುಕೊಳ್ಳಬಹುದು [1 1]

ಪತ್ತೆ ... ವೆ ನರಸಪ್ಪ ಚಿತ್ರದುರ್ಗ ...

ಆರು ಹೊಸ ಕಾದಂಬರಿಗಳು!

131 a

ಶೋಭನೆ—ಕನ್ನಡದ ಬಂಗಾಳಿಯ ಚಮತ್ಕಾರವಾದ ಕಥೆ 12 ಆಣೆ **ಅನಂಗಸುಂದರಿ**—ಮೂಲ ಕಥೆಯು ಕಿರಿಯ ... ಪ್ರಸಿದ್ಧವಾದ ನಾವೆಲು 8 ಆಣೆ **ತಾರಾಸುಂದರಿ**—ಅನಂಗಸುಂದರಿಯ ಎರಡನೆಯ ಭಾಗ 8 ಆಣೆ **ಕುಮುದಿನಿ**—ಬಂಗಾಳಿಯ ವ ಕನ್ನಡದ ಪತ್ತೇದಾರಿಯ ಕಥೆ 6 ಆಣೆ **ಸತೀರೋಹಿಣಿ**—ಪಾತಿವ್ರತವನ್ನು ಬೋಧಿಸುವ ಕಾದಂಬರಿ ... ಆಣೆ **ಸಂತಾಪಕ**—ಇದೊಂದು ಅದ್ಭುತವಾದ ಕಥೆ 1 ಆಣೆ

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಗೃಹಕೃತ್ಯದ ನೋಟೀಸ್

ಹಾಸನ ತಾಲ್ಲೂಕು ಕಸಬಾ ಹೋಬಳಿ ಬುವನಳ್ಳಿ ಗ್ರಾಮದಲ್ಲಿರುವ ಲಕ್ಕೇಗೌಡನ ಮಗ ಬೊಮ್ಮೇಗೌಡನು ಈ ಮೂಲಕ ತಿಳಿಸುವುದೇನೆಂದರೆ—ನನ್ನ ಅಜ್ಜನ ಹೆಸರು ಪುಟ್ಟೇಗೌಡ ನನ್ನ ತಂದೆ ಹೆಸರು ಲಕ್ಕೇಗೌಡ ಈತನಿಗೆ ಮೂರು ಜನ ಮಕ್ಕಳು 1 ನೇ ಮಗ ಬೊಮ್ಮೇಗೌಡ ವಯಸ್ಸು 1 ವರುಷ 2 ನೆ ಮಗ ಚಿಕ್ಕೇಗೌಡ ಈತನಿಗೆ ... ವರುಷ 3 ನೇ ಮಗ ಲಕ್ಕೇಗೌಡ, ಈತನಿಗೆ 1 ವರುಷ ವಯಸ್ಸು ನಮ್ಮ ತಾಯಿ ಹೆಸರು ... ರಮ್ಮ ಈಕೆಗೆ ವಯಸ್ಸು 70 ವರುಷ ನಾವುಗಳೆಲ್ಲಾ ಏಕ ಕುಟುಂಬದಲ್ಲಿ ಇರುತ್ತೇವೆ ನಮ್ಮ ತಂದೆಗೆ 11 ವರುಷ ವಯಸ್ಸು ನಮ್ಮ ತಂದೆ ಲಕ್ಕೇಗೌಡನಿಗೆ ಬುದ್ಧಿ ಸ್ವಾಧೀನವಿಲ್ಲದೆ, ಮನೆಯಲ್ಲಿ ಯಾವಾಗಲೂ ಮಕ್ಕಳನ್ನೂ ಮತ್ತು ಹೆಂಗಸರನ್ನೂ ಬೈಯುವದೂ ಹೊಡೆಯುವದೂ ಮಾಡುತ್ತಾನೆ ಆದ್ದರಿಂದ ನಾವುಗಳು ಬುದ್ಧಿ ಹಾದವನ್ನು ಹೇಳುವುದರಿಂದ ನಮ್ಮನ್ನು ಮನಸ್ಸಿಗೆ ಬಂದ ಹಾಗೆ ಬೈಯುವದೂ ಮತ್ತು ಆಚೆ ಕೊಡಲು ಹೋಗುತ್ತಾನೆ ಆದ್ದರಿಂದ ನಮ್ಮ ಪಿತ್ರ ಸೊತ್ತನ್ನು ಮಕ್ಕಳ ಅನುಮತಿಯಿಲ್ಲದೆ ಮತ್ತು ಹೆಬ್ಬೆಟ್ಟಿನ ಗುರ್ತಿನ ರುಜುವು ಇಲ್ಲದೆ ಯಾರೇ ಆಗಲಿ ಯಾವ ವಿಧವಾಗಿಯೂ ಪಡೆಸುಕೊಳ್ಳಕೂಡದು

[171 1] × ಬೊಮ್ಮೇಗೌಡನ ಗುರ್ತಿನ ರುಜುವು

ಗೃಹಕೃತ್ಯದ ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ನನ್ನ ಪಿತ್ರಾರ್ಜಿತವಾಗಿ ನನ್ನ ಭಾಗಕ್ಕೆ ಬಂದು ನಾನು ಪರಸ್ಥಳವಾಸದಲ್ಲಿರುವ ಕಾರಣ ನನ್ನ ಅಣ್ಣಂದಿರು ನಿಶೇಷ ರಜಾಗಳ ಮ್ಯಾನೇಜ್‌ಮೆಂಟಿನಲ್ಲಿದ್ದದ್ದು ನನ್ನ ಅಳಿವಳಿಕೆಗೆ ಬಾರದೆ ಮೋಸದಿಂದ ನನ್ನ ಅಣ್ಣನವರ ಸೊಸೆ ಶ್ರೀರಂಗಪಟ್ಟಣದ ತಾಲೂಕು ಅರಕೆರೆ ಹೋಬಳಿ ಕಸಬಾ ಅರಕೆರೆ ಗ್ರಾಮದಲ್ಲಿರುವ ಸಾವಿತ್ರಮ್ಮನ ಹೆಸರಿಗೆ ಖಾತೆಯಾಗಿ ಆಕೆ ಅನುಭವದಲ್ಲಿರುವ ಈ ಕೆಳಗೆ ಕಂಡ ತರೀ ಖುಷ್ಕಿ ಜಮೀನು ಗಳು ಪರಾಧೀನ ಮಾಡುವ ವಿಚಾರದಲ್ಲಿ ಉದ್ಯುಕ್ತಳಾಗುತ್ತಿರುವವಳಾಗಿರುತ್ತಾಳೆ ಆದ್ದರಿಂದ ಹಾಲೀ ಜಮೀನು ನನ್ನ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ತಕರಾರು ನಡಿಸುತ್ತೇನಾಗಿ ಮತ್ತು ಈಕೆಗೆ ಸ್ತ್ರೀ ಪುರುಷ ಸಂತತಿಯೇ ಇಲ್ಲದೆ ಉತ್ತರ ವಾರಸುದಾರರಾಗಿ ನಾನು ಮತ್ತು ನನ್ನ ಮಕ್ಕಳು ಇರುವುದರಿಂದ ಈಕೆಯಿಂದ ಯಾರೂ ವ್ಯವಹಾರ ಚತುಷ್ಟಯದ ಮೂಲಕ ಜಮೀನು ಹೊಂದಲಾಗದು ಹಾಗೆ ಒಂದು ವೇಳೆ ಹೊಂದಿದ್ದರೂ ಯಾ ಹೊಂದಿದರೂ ಊರ್ಜಿತವಾಗಲಾರದೆಂಬುವದನ್ನು ಈ ಮೂಲಕ ತಿಳಿಸಿರುತ್ತೇನೆ ಶ್ರೀರಂಗಪಟ್ಟಣದ ತಾ| ಅರಕೆರೆ ಗ್ರಾಮದ ಸರ್ವೆ ನಂ 176 ತರಿ 1 ಎ 33 ಗು ರೂ 13 ಆಕಾರ ಡಿಟೋ ಗ್ರಾಮದ ಸರ್ವೆ ನಂ 177 ಖುಷ್ಕಿ 11 ಗು 4 ಆಣೆ ಆಕಾರ ರೂ 2-12 ಆಣೆ ನಾ... ಸದರಿ ಹೊಸಹಳ್ಳಿ ಗ್ರಾಮದ ಸರ್ವೆ ನ 113 ತರಿ 1 ಎ 20 ಗು ರೂ 7-10 ಆಣೆ ಆಕಾರ [171 1]

ತಾ| 30 10 1912 ರುಜು ಬೋಧಾಯನ ಕಾಶೀನಾಥಶಾಸ್ತ್ರಿ

ಬನಾರಸ್, ಹನುಮಾನ್ ಘಾಟ್ ಎಂದು ಬಾಳಬಂದಿನಲ್ಲಿದೆ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

2—11—1912 ರಿಂದ 8—11—1912 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	20	2?	0	0
ಮೈಸೂರು	,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		(	6	0	0
ಮೈಸೂರು	,,	10	11	0	0
ಕೋಲಾರ್	,,	4	1	4	6
ಕೋಲಾರ್ ಚಿನ್ನದ ಗಣಿಗಳು		0	0	0	0
ತುಮಕೂರು ಡಿಸ್ಟ್ರಿಕು		0	1	84	52
ಹಾಸನ	,	(	5	0	0
ಚಿತ್ರದುರ್ಗ	,,	)	0	36	24
ಕಡೂರ್	,	10	8	0	0
ಶಿವಮೊಗ್ಗಾ	,,	17	0	0	0
ಜುಮ್ಲಾ		11	60	126	82

ಶಾಲಿವಾಹನ ಶಕ ವರುಷಗಳು 1834 ನೇ ಪರಿಧಾವಿ ಸಂವತ್ಸರೇ ದಕ್ಷಿಣಾಯನೇ ಶರದೃತೌ ಕಾರ್ತೀಕ ಶುದ್ಧ ತ್ರಯೋದಶಿ ಶುಕ್ರವಾರದಿಂದ ಕಾರ್ತೀಕ ಬಹುಳ ೩ ತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ನವೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ ತೇದಿ
22	ಶುಕ್ರ	ತ್ರಯೋದಶಿ	19 16	ಅ	11 36	8
23	ಶನಿ ,,	ಚತುರ್ದಶಿ	11 37	ಭ	10 51	9
24	ಭಾನು ‡	ಪೌರ್ಣಮಿ	8 13	ಕೃ	11 7	10
25	ಸೋಮ †	ಪಾಡ್ಯಮಿ	) ...	ರೋ	10 3	11
26	ಮಂಗಳ	ಬಿದಿಗೆ	31 57	ಮೃ	8 11	12
27	ಬುಧ	ತದಿಗೆ	27 11	ಆ	15)	13
28	ಗುರು §	ಚೌತಿ	23 24	ಪು	31 37	14

ಪ್ರದೋಷ, ಮಳೆ ನಕ್ಷತ್ರ—ಅನೂ ... ನ ಪಾದ , ವೈಕುಂಠ ಚತುರ್ದಶಿ, ಜಯಲಕ್ಷ್ಮಮ್ಮಣ್ಣಿಯವರ ತಿರುನಕ್ಷತ್ರ ವರ್ಧಂತಿ ‡ ವಿಷ್ಣು ದೀಪ ದೇವದೀಪ, ಉಡುಪಿಯಲ್ಲಿ ಲಕ್ಷದೀಪ ವ್ಯಾಸಪೂಜಾ † ಕಾರ್ತೀಕ ಸೋಮವಾರ, ಮಳೆ ನಕ್ಷತ್ರ—ಅನೂ ೩ ನೇ ಪಾದ ಸಂಕಟಹರ ಚತುರ್ಥೀ, § ತ್ರಿತೀಯಾತಿಥಿ ತಿಥಿದ್ವಯಂ ಮಳೆ ನಕ್ಷತ್ರ—ಅನೂ ೪ ನೇ ಪಾದ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭ ೪ ೦	೧೭ ೬ ೦
ಕೆಂಬೂತಿ ಅಕ್ಕಿ ಅವಲ್		೧೭ ೨ ೦	೧೭ ೬ ೦
,, ದುಯಂ		೧೭ ೮ ೦	೧೭ ೦ ೦
ಜಂಪ್ರಾನೆ ಅಕ್ಕಿ		೧೬ ೧೨ ೦	೧೭ ೪ ೦
ಸಣ್ಣಕ್ಕಿ ಅವಲ್		೧೨ ೮ ೦	೧೮ ೮ ೦
,, ದುಯಂ		೧೨ ೦ ೦	೧೭ ೮ ೦
ಹೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೩ ೮ ೦	೧೩ ೬ ೦
,, ದುಯಂ ,,		೧೨ ೧೨ ೦	೧೨ ೮ ೦
ಹೈಕ್ ರಾಗಿ ಪಲ್ಲಾ ೧ಕ್ಕೆ		೬ ೧೨ ೦	೫ ೦ ೦
ಕಾರ್ರಾಗಿ ,		೭ ೦ ೦	೬ ೧೨ ೦
ಜೋಳ ,,		೭ ೪ ೦	೭ ೪ ೦
ಹಲಸಂದೆ ಪಲ್ಲಾ ೧ಕ್ಕೆ		೧೧ ೨ ೦	೧೩ ೧೨ ೦
ಬಿಳೀ ಅವರೆ ,		೧೧ ೦ ೦	೧೧ ೦ ೦
ಹೆಸರು ,		೧೪ ೨ ೦	೧೪ ೦ ೦
ಉದ್ದು ,		೧೭ ೦ ೦	೧೬ ೦ ೦
ಕಡಲೆ ,		೧೨ ೨ ೦	೧೨ ೦ ೦
ಎಳ್ಳು ಸೇರು ೧೨೭ಕ್ಕೆ		೨೨ ೪ ೦	೨೪ ೦ ೦
ಹುರುಳಿ ಪಲ್ಲಾ ೧ಕ್ಕೆ		೬-೧೨ ೦	೭ ೦ ೦
ಹರಳು ೧೨೭ ಸೇರಿಗೆ		೧೨ ೬ ೦	೧೪ ೦ ೦
ಸಿಂಗೇಕಾಯಿ ಮಣ ೧ಕ್ಕೆ		೩ ೪ ೦	೩ ೮ ೦
ಮೆಣಸಿನಕಾಯಿ ,		೩ ೦ ೦	೩ ೬ ೦
, ದುಯಂ		೨ ೨ ೦	೧ ೮ ೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫ ೨ ೦	ಮಣ ೫ ೮ ೦
ಒಳ್ಳೆಣ್ಣೆ ಮಣ ೧ಕ್ಕೆ		೬ ೨ ೦	೬-೬ ೦
ಹರಳೆಣ್ಣೆ , ,		೫ ೪ ೦	೬ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫ ೦ ೦	೫ ೪ ೦
ಉಪ್ಪು ,, ,,		೬ ೦ ೦	೬ ೦-೦
ಹುಣಸೆ ಹಣ್ಣು ಮಣ ೧ಕ್ಕೆ		೧ ೪ ೦	೧ ೪ ೦
, ಹಳೇದು ,,		೧ ೦ ೦	೦ ೧೪ ೦
ತುಪ್ಪ ಮಣ ೧ಕ್ಕೆ		೧೭ ೦ ೦	೧೯ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೦ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ		೬ ೮-೦	೬ ೦ ೦
ಅಳಲೇಕಾಯಿ ಮಣ ೧ಕ್ಕೆ		೦-೮ ೦	೧ ೦ ೦
ಅಂಟುವಳಕಾಯಿ ಮಣ ೧ಕ್ಕೆ		೦ ೧೨ ೦	೧ ೮ ೦
ಚಿನ್ನ (ಪೌನ್) ಕೆಂಪು		೧೫ ೮ ೦	೧೫-೮-೦
, ,, ಮಾಮೂ		೧೫ ೧೪-೬	೧೫ ೧೪-೬
,, , ಗಟ್ಟಿ ತೊಲ ೧ಕ್ಕೆ		೨೪-೩ ೦	೨೪ ೩ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧ ೦ ೦	೮೧ ೦-೦

ವೃತ್ತಾಂತ ಪತ್ರಿಕೆ.

ಸನ್ ೧೯೧೨ ನೇ ಇಸವಿ ನವಂಬರ್ ತಾ. ೨೧ ನೇ ಗುರುವಾರ

ಮೈಸೂರಿನಲ್ಲಿ ವಿದ್ಯಾಭಿವೃದ್ಧಿಯು.

ಮೈಸೂರು ಸಂಸ್ಥಾನದಲ್ಲಿರುವ ಬಹು ಭಾಗದ ಪ್ರಜೆಗಳು ಅನಕ್ಷರಸ್ಥರಾಗಿದಾರೆಂಬುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅನೇಕಾನೇಕರಿಗೆ ಓದುವುದಕ್ಕಾಗಲಿ, ಬರೆಯುವುದಕ್ಕಾಗಲಿ ಬರುವುದಿಲ್ಲ; ಅವಮಾತ್ರಕ್ಕೇ ಜನಗಳು ಬುದ್ಧಿಹೀನರೆಂತಲ್ಲವೆಂದು ಹೇಳಿದಹಾಗಾಗಲಿಲ್ಲ. ಅಕ್ಷರದ ತಲೆ ಪ್ಯಾಗಿ ದೆಯೋ ಕಂಡರಿಯದಂಥಾ ಅನೇಕ ಜನಗಳು ಬಹಳ ಚುರುಕುಬುದ್ಧಿಯುಳ್ಳವರಾಗಿಯೂ, ತಮ್ಮ ಕಾರ್ಯಗಳನ್ನು ಬಹಳ ಚನ್ನಾಗಿ ಮಾಡಿಕೊಳ್ಳುವುದರಲ್ಲಿ ಸಮರ್ಥರಾಗಿಯೂ ಇರುತ್ತಾರೆ. ಅದಾಗ್ಯೂ ಓದುಬರಹ ಬಾರದ್ದರಿಂದ ಅಂಥವರಿಗೆ ಒಂದು ದೊಡ್ಡ ಕೊರತೆಯುಂಟೆಂದು ಹೇಳಬಹುದು. ಇತರರ ಅಭಿಮತವಾಗಲಿ, ಅನುಭವವಾಗಲಿ ಅವರು ಓದಿ ತಿಳಿದುಕೊಳ್ಳಲಾರದವರಾಗಿರುತ್ತಾರೆ. ಅವರು ಪುಸ್ತಕಗಳನ್ನು ಓದಿ ಓದಿಕೊಳ್ಳಲಾರರು. ಅವರಿಗೆ ತಮ್ಮ ಸ್ವಂತ ಅನುಭವವನ್ನು, ತಾವು ನೋಡಿಸುವ ಜನರ ಅಭಿಮತವನ್ನೂ ಬಿಟ್ಟರೆ ಇನ್ನಾವ ಸಹಾಯವೂ ದೊರಕುವುದಿಲ್ಲ. ಓದುಗಾರಿಕೆಯನ್ನು ಕಲಿತು ಓದಿದ್ದನ್ನು ಬುದ್ಧಿ ಉಪಯೋಗಿಸಿ ತನ್ನ ಕಸುಬು ಕಾರ್ಯಗಳಿಗೆ ವಿನಿಯೋಗಿಸುವವನಾದ ಪಕ್ಷದಲ್ಲಿ ಅಂಥಾ ಮನುಷ್ಯನು ಅಭಿವೃದ್ಧಿಗೆ ಬರುತ್ತಾನೆ, ತನ್ನ ಸಂಸಾರಕ್ಕೆ ಸೇರಿದವರನ್ನೂ ತನ್ನ ಸುತ್ತುಮುತ್ತಿರುವವರನ್ನೂ ಮುಂದಕ್ಕೆ ತರಬಲ್ಲನು, ಮತ್ತು ಅವನ ಕಸುಬು ಬಹಳ ಮಟ್ಟಿಗೆ ವೃದ್ಧಿಹೊಂದುವುದು. ಅದಕಾರಣ ಪ್ರಜೆಗಳು ಸ್ವತಃ ಅಭಿವೃದ್ಧಿಯಾಗುವುದಕ್ಕೋಸ್ಕರ ಮೈಸೂರು ಗವರ್ನಮೆಂಟಿನವರು ಬೇಕಾದ ಅನುಕೂಲಗಳನ್ನು ಒದಗಿಸಿಕೊಡಬೇಕಾದದ್ದು ಅವರ ಕರ್ತವ್ಯವಾಗಿರುತ್ತದೆ.

ಮೈಸೂರು ದಿವಾನರವರಾದ ಮ॥ ವಿಶ್ವೇಶ್ವರೈಯನವರು ಕಳೆದ ವರುಷ ರಾಜಧಾನಿಯಲ್ಲಿ ನಡೆದ ಸಂಪದಭಿವೃದ್ಧಿ ಸಮಾಜದ ಒಂದಾನೊಂದು ಕೂಟದಲ್ಲಿ ವಿದ್ಯೆಯನ್ನು ಕಲಿಯುವುದೂ ಹರಡುವುದೂ ಬಹಳ ಅವಶ್ಯವೆಂದು ಒತ್ತಿಹೇಳಿರುತ್ತಾರೆ. ಅದಕಾರಣ ಇಂಥಾ ಪರಮಾವಶ್ಯವಾದ ಕಾರ್ಯವನ್ನು ಮುಂದರಿಸಿ ನಡೆಯಿಸುವ ಭಾಗದಲ್ಲಿ ಅವರು ತಮ್ಮ ಕೈಲಾಗುವ ಮಟ್ಟಿಗೂ ಮುತುವರ್ಜಿ ವಹಿಸಿ ಸಾಹಸಪಡುತ್ತಾರೆಂದು ನಾವು ನಂಬಿತವಾಗಿ ತಿಳಿದುಕೊಂಡಿದೇವೆ. ಆದರೂ ಈ ಭಾಗದಲ್ಲಿ ಗವರ್ನಮೆಂಟಿನವರು ಸ್ಪಷ್ಟವೂ ಖಂಡಿತವೂ ಆದ ಒಂದು ನಿರ್ಧಾರವನ್ನು ಮೊದಲೇ ಮಾಡಿಟ್ಟುಕೊಳ್ಳಬೇಕಾಗಿದೆ ಎಂದು ಸೂಚಿಸುವೆವು. ಈ ಕಾರ್ಯವನ್ನೆಲ್ಲಾ ಸರ್ಕಾರದವರೇ ಸಂಪೂರ್ಣವಾಗ ವಹಿಸಿಕೊಂಡು ಮಾಡುತ್ತಾರೆಯೋ, ಅಥವಾ ಈ ಕಾರ್ಯದಲ್ಲಿ ಪ್ರವರ್ತಿಸಲು ಇಷ್ಟಪಡುವಂಥಾವರಿಗೆ ಸರ್ಕಾರದವರು ಸಹಾಯ ಮಾಡಲು ಸಮ್ಮತಿಸುತ್ತಾರೆಯೋ? ಸದ್ಯದಲ್ಲಿ ಪ್ರಜೆಗಳಿಗೆ ವಿದ್ಯೆ ಕಲಿಸಬೇಕೆಂದು ಸಾಹಸಪಡುತ್ತಿರುವವರು ಈ ಸಂಸ್ಥಾನದಲ್ಲಿ ಇರುತ್ತಾರೆ. ಇದುವರೆಗೆ ಇಂಥವರಿಗೆ ಸರ್ಕಾರದಿಂದ ಧಾರಾಳವಾದ ಸಹಾಯ ದೊರಕುತ್ತಾ ಬಂದಿದೆ. ಆದರೂ ಈಗಿಂತಲೂ ಇನ್ನೂ ಅನೇಕರು ಸಹಾಯಕ್ಕೆ ಬರಬೇಕಾಗಿರುವುದೆಂದು ನಮಗೆ ತೋರುತ್ತದೆ. ಅನೇಕ ಗ್ರಾಮಗಳನ್ನೊಳಗೊಂಡಿರುವಂಥಾ ಭೂಪ್ರದೇಶವನ್ನು ಆಸ್ತಿಯಾಗಿ ನಡೆಸಿರುವವರು ಈ ಸಂಸ್ಥಾನದಲ್ಲಿ ಇರುತ್ತಾರೆ. ಅಂಥಾ ಗ್ರಾಮಗಳಲ್ಲಿ ಆಯಾ ಜಮೀನ್ದಾರರು ತಮ್ಮ ಭೂಮಿಗಳನ್ನು ವ್ಯವಸಾಯ ಮಾಡತಕ್ಕ ರೈತರ ಮಕ್ಕಳಿಗೆ ಪಾಠಶಾಲೆಗಳನ್ನು ಇಡಬಾರದೇ? ಅಂಥವರು ಹಾಗೆ ಇಟ್ಟ ಪಕ್ಷದಲ್ಲಿ ಸರ್ಕಾರದವರು ಅವರಿಗೆ ದ್ರವ್ಯ ಸಹಾಯ ಮಾಡುವುದಲ್ಲದೆ, ವಿದ್ಯಾ ಇಲಾಖೆಯ ಅಧಿಕಾರಿಗಳ ಮೂಲಕ ಬೇಕಾದ ತಿಳುವಳಿಕೆಯನ್ನು ಒದಗಿಸುತ್ತಾರೆ. ಯಾವ ಗವರ್ನಮೆಂಟಿನವರಾಗಲಿ ಮೊದಲು ಒಂದು ಖಂಡಿತವಾದ ನಿರ್ಧಾರವನ್ನು ಯೋಚಿಸಿ ನಿಷ್ಕರ್ಷೆ ಮಾಡಿ ಇಟ್ಟುಕೊಂಡು, ಅದರಂತೆ ಕಾರ್ಯಗಳನ್ನು ತಪ್ಪದೆ ನಡಿಸಿ ಉದ್ದೇಶವನ್ನು ಸಾರ್ಥಕಪಡಿಸಿಕೊಳ್ಳುತ್ತಾರೆ. ವಿದ್ಯಾಭ್ಯಾಸದ ವಿಷಯದಲ್ಲಿ ತಕ್ಕಮಟ್ಟಿಗೆ ಸರಾಗವಿರಬೇಕಲ್ಲದೆ ತುಂಬಾ ಕಟ್ಟುನಿಟ್ಟು ಇರಬಾರದು. ಮೈಸೂರು ಸಂಸ್ಥಾನದ ಪ್ರಜೆಗಳಿಗೆ ವಿದ್ಯೆ ಕಲಿಸಬೇಕಾಗಿರುವ ಪಕ್ಷದಲ್ಲಿ ಕ್ರಮಗಳು ಆಯಾ ಸ್ಥಳಾನುಗುಣ್ಯವಾಗಿ ಅನ್ವಯಿಸಿಕೊಳ್ಳಬಹುದಾದಂಥಾ ರೀತಿಯಲ್ಲಿ ಮಾಡಿರಬೇಕು. ದೇಶದಲ್ಲಿ ವಿದ್ಯೆಯನ್ನು ಹರಡುವ ಭಾಗದಲ್ಲಿ ಸ್ಥಳೀಯ ದೊಡ್ಡಮನುಷ್ಯರು ಸಹಾಯ ನೀಡುವುದನ್ನು ಮೈಸೂರು ಗವರ್ನಮೆಂಟಿನವರು ಪ್ರೀತಿಪೂರ್ವಕವಾಗಿ ವಿಚಾರಮಾಡಿ, ಸಂದರ್ಭಾನುಸಾರ ಆದಷ್ಟು ದ್ರವ್ಯವನ್ನೂ ಸನ್ಮಾರ್ಗಪ್ರವರ್ತನೆಯ ತಿಳುವಳಿಕೆಯನ್ನೂ ಒದಗಿಸಿಕೊಡುತ್ತಾ ಬರಬೇಕೆಂದೂ, ಆ ಮೂಲಕ ಸಂಸ್ಥಾನ ಶ್ರೇಯೋಭಿವೃದ್ಧಿಯು ನೆಲೆಗೊಳ್ಳುವಂತೆ ಪ್ರಜೆಗಳು ಸನ್ಮಾರ್ಗಾವಲಂಬಿಗಳಾಗಿಯೂ, ಸತ್ಕಾರ್ಯಪ್ರವರ್ತಕರಾಗಿಯೂ ಆದಾರೆಂದೂ ನಂಬಿ ನಿರೀಕ್ಷಿಸುತ್ತೇವೆ. ಈ ಸೀಮೆಗೆ ನಿಷ್ಪ್ರಯೋಜಕವಾಗಿ ಪರಿಣಮಿಸುವಂಥಾ ಶಿಕ್ಷಣಗಳನ್ನು ರೂಢಿಸುವುದರಲ್ಲಿ ಅಪಾರವಾದ ಹಣವನ್ನು ಸುಲಭವಾಗಿ ಖರ್ಚು ಮಾಡಿಬಿಡಬಹುದು. ಅದಕಾರಣ ವಿದ್ಯಾಭಿವೃದ್ಧಿಯನ್ನು ಮಾಡುವುದಕ್ಕೆ ಕ್ರಮಗಳನ್ನು ನಿರ್ಧರಿಸುವುದಕ್ಕೆ ಮೊದಲೇ ಸರ್ಕಾರದವರು ಆ ಶ್ರೇಷ್ಠವಾದ ಕಾರ್ಯದಲ್ಲಿ ಈಗ ಉದ್ಯುಕ್ತರಾಗಿರುವಂಥವರನ್ನೆಲ್ಲಾ ಸೇರಿಸಿ ಅವರ ಕೂಡ ಆಲೋಚನೆ ಮಾಡಿ ವಿವೇಕವುಳ್ಳ ಏರ್ಪಾಡುಗಳನ್ನು ನಿಶ್ಚಯಿಸಿಕೊಳ್ಳುತ್ತಾರೆಂದು ನಿರೀಕ್ಷಿಸುವೆವು. ಈ ರೀತಿ ಮಾಡಿದ ಪಕ್ಷದಲ್ಲಿ ಸರ್ಕಾರದವರು ವಿದ್ಯಾಭಿವೃದ್ಧಿಗೆ ಮಾಡಬಹುದಾದ ಖರ್ಚು ವಿವೇಕವಿಸಿಸಿ ಸಾರ್ಥಕವಾದೀತೆನ್ನುವುದಕ್ಕೆ ಸಂಶಯವಿಲ್ಲ.

ಬಾಲ್ಕನ್ ಯುದ್ಧವು.

ಕಳೆದ ವಾರ ಯುದ್ಧಭೂಮಿಯಿಂದ ಬಂದಿರುವ ಹಲವು ವರ್ತಮಾನಗಳು ಒಂದಕ್ಕೊಂದು ವಿರೋಧವಾಗಿರುತ್ತವೆ. ಆದರೂ ಒಂದು ವಿಷಯವಂತೂ ಸ್ಪಷ್ಟವಾಗಿ ಗೊತ್ತಾಗುವುದು. ತುರ್ಕಿಯವರು ತಮ್ಮ ಶತ್ರುಗಳಿಗೆ ಕಡಾಖಂಡಿತವಾಗಿ ಸೋತು ಯುದ್ಧಭೂಮಿಗಳನ್ನು ಮುಟ್ಟುವ ನಾಟಕವಾಗಿ ... ಎಂದು ತಿಳಿಸಿರುತ್ತಾರೆ. ಶತ್ರುಗಳಾದ ಬಲ್ಗೇರಿಯ, ಸರ್ವಿಯ, ಮಾಂಟಿನೆಗ್ರೋ, ಮಾಸಿಡೋನಿಯ, ಗ್ರೀಸ್ ರಾಜ್ಯಗಳವರು ... ತುರ್ಕಿಯವರಿಗೆ ಕೊಡಬೇಕೆನ್ನುವವರ ... ತುರ್ಕಿಯವರು ... ೨೧ ಗಂಟೆಯೊಳಗೆ ... ಮಾಡಿ ಜನಾಬು ಕೊಡಬೇಕೆಂದು ... ವರ್ತಮಾನ ಹೇಳುತ್ತದೆ. ಈ ರೀತಿ ಕದನವು ನಡೆಯುವ ಸ್ಥಾನಗಳು ... ಯುದ್ಧಕಾರ್ಯಗಳು ವಿಶೇಷವಾಗಿ ನಡೆಯುವ ... ಕಾಣುವುದು.

ಮಾಂಟಿನೆಗ್ರೋದವರು ಸ್ಕುಟಾರಿ ಪಟ್ಟಣವನ್ನು ... ಕೊಂಡು ಅನೇಕ ಸಲ ಪ್ರಯತ್ನ ಮಾಡಿದರೂ ತುರ್ಕಿಯವರು ಅವರನ್ನು ಅಲ್ಲಿಂದ ಹಿಮ್ಮೆಟ್ಟಿಸಿ ಓಡಿಸುತ್ತಾ ಬಂದಿದ್ದಾರೆ. ಅಂಥಾ ಒಂದು ಯುದ್ಧದಲ್ಲಿ ಮಾಂಟಿನೆಗ್ರೋದವರು 100 ಮಂದಿಯನ್ನು ಕಳೆದುಕೊಂಡು ಹಿಮ್ಮೆಟ್ಟಿದರು. ಇವರು ಸರ್ವಿಯ ಸೈನ್ಯದ ಸಹಾಯವನ್ನು ಪಡೆದು ಮತ್ತೆ ಆ ಪಟ್ಟಣದ ಮೇಲೆ ನುಗ್ಗಿ ಯುದ್ಧಮಾಡುವರೆಂದು ತಿಳಿಯುತ್ತದೆ. ಮಾಂಟಿನೆಗ್ರೋದವರು ಸ್ಕಾನ್ ಗಿಯೊವನ್ನು ... ಎಂಬ ಸ್ಥಳದ ಬಳಿ ಯುದ್ಧಮಾಡಿ 3,000 ತುರ್ಕಿಯವರನ್ನು ಸೋಲಿಸಿ ಓಡಿಸಿ, ಆ ಸ್ಥಳವನ್ನು ಸ್ವಾಧೀನಪಡಿಸಿಕೊಂಡರು.

ಸಲೋನಿಕದ ಹೊರ ಪಾರ್ಶ್ವದಲ್ಲಿ ತುರ್ಕಿಯವರ ಒಂದು ಮದ್ದಿನ ಮನೆಯು ಹತ್ತಿಕೊಂಡು ಬಹು ಭಯಂಕರವಾದ ಅನಾಹುತವನ್ನುಂಟುಮಾಡಿತು. ಅನೇಕ ಮನೆಗಳು ಹಾಳಾದವು, 80 ಜನರು ಮಡಿದರು, ಗ್ರೀಕರ ಸೈನ್ಯದಲ್ಲಿ 16 ಮಂದಿ ಮೃತಪಟ್ಟರು, 30 ಮಂದಿಗೆ ಗಾಯಗಳಾಗಿವೆ.

ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಿಂದ ಸುಮಾರು 20 ಮೈಲಿ ಆಚೆ ಇರುವ ಟ್‌ಚಟಾಲ್ಜಾ ಎಂಬ ಕೋಟೆಯ ಬಳಿ ಕೆಲವು ಕದನಗಳು ನಡೆದವು. ತುರ್ಕಿಯವರು ಒಂದೆರಡು ಸಾಲಿ ಬಲ್ಗೇರಿಯದವರನ್ನು ಸೋಲಿಸಿ ಓಡಿಸಿದರು. ಆದರೂ ಇನ್ನೊಂದು ಭಾಗದ ಬಲ್ಗೇರಿಯ ಸೈನಿಕರು ತುರ್ಕಿಯವರನ್ನು ಹಿಮ್ಮೆಟ್ಟಿಸಿ ಮುಂದಕ್ಕೆ ಹೋಗಿ ಬೋಯೂಕ್ ಟ್ಚೆಕ್‌ಮೆಜೆ ಎಂಬಲ್ಲಿ ಠಾಣ್ಯವನ್ನು ಹಾಕಿಕೊಂಡು ಶತ್ರುಗಳ ಮೇಲೆ ಫಿರಂಗಿಗಳನ್ನು ಹೊಡೆಯುತ್ತಿದ್ದಾರೆಂದು ತಿಳಿಯುತ್ತದೆ. ಕಾನ್‌ಸ್ಟಾಂಟಿನೋಪಲ್ ಪಟ್ಟಣದೊಳಗೆ ಅನೇಕ ಜನರು ತಮ್ಮ ಮನೆಗಳ ಮಾಳಿಗೆಗಳ ಮೇಲೆ ನಿಂತು ಫಿರಂಗಿಗಳ ಶಬ್ದವನ್ನೂ, ಯುದ್ಧವನ್ನೂ ಬಹು ಕಳವಳದಿಂದ ಕೇಳುತ್ತಿದ್ದಾರೆಂದೂ, ಪಟ್ಟಣದಲ್ಲೆಲ್ಲಾ ದೂರದಿಂದ ಬರುವ ಫಿರಂಗಿ ಶಬ್ದವು ಕೇಳುತ್ತಿದೆ ಎಂದೂ, ಇದರಿಂದ ಪಟ್ಟಣದಲ್ಲಿ ಜನಗಳು ಗಾಬರಿಪಟ್ಟಿದ್ದಾರೆಂದೂ ವರ್ತಮಾನ ಬಂದಿರುವುದನ್ನು ನೋಡಿದರೆ ಶತ್ರುಗಳು ರಾಜಧಾನಿಗೆ ಬಹಳ ಸಮೀಪದಲ್ಲಿ ಬಂದು ಯುದ್ಧ ಮಾಡುತ್ತಿದ್ದಾರೆಂದು ಹೇಳಬೇಕಾಗಿದೆ. ಇದಲ್ಲದೆ ಟ್ಚಟಾಲ್ಜಾ ಸಾಲು ಕೋಟೆಗಳ ಪ್ರದೇಶದಿಂದ ಸಾವಿರಾರು ಪ್ರಜೆಗಳು ರಾಜಧಾನಿಗೆ ಓಡಿಹೋಗುತ್ತಿರುವಂತೆ ಗೊತ್ತಾಗುತ್ತದೆ. ಆ ಸಾಲು ಕೋಟೆಗಳ ಬಳಿಯಲ್ಲಿ ತುರ್ಕಿಯವರು ಬಹು ಕಠಿಣವಾಗಿ ನಾಲ್ಕು ಗಂಟೆ ಹೊತ್ತು ಪರಾಕ್ರಮದಿಂದ ಯುದ್ಧ ಮಾಡಿ ಬಲ್ಗೇರಿಯಾ ಸೈನ್ಯವನ್ನು ಸೋಲಿಸಿ ಓಡಿಸಿದ್ದಲ್ಲದೆ ಅವರ ಫಿರಂಗಿಗಳನ್ನು ನಾಶಮಾಡಿದರೆಂದು ಸೈನ್ಯಾಧಿಪತಿಯಾದ ನಾಜಿಂ ಪಾಷಾಯವರು ತಂತೀ ವರ್ತಮಾನ ಕಳುಹಿಸಿದ್ದಾರೆ.

ಬಲ್ಗೇರಿಯದವರು ಸಲೋನಿಕದ ಹೊರಗಡೆ ನಾಲ್ಕು ಮೈಲಿ ದೂರದಲ್ಲಿ ಯುದ್ಧಮಾಡಿ ತುರ್ಕಿಯವರನ್ನು ಸೋಲಿಸಿ ಆ ಪಟ್ಟಣವನ್ನು ನುಗ್ಗಿ ಅದನ್ನು ತಮ್ಮ ಸ್ವಾಧೀನ ಮಾಡಿಕೊಂಡಿದ್ದಾರೆ. ಇದಲ್ಲದೆ ಲೋವೊಸ್ಕೊ, ಎರೆಗ್ಲಿ, ಸಿಲಿವ್ರಿ, ಮಿಡಾಲಿ ಎಂಬ ಸ್ಥಳಗಳೂ ಅವರಿಗೆ ಸ್ವಾಧೀನವಾದವು.

ಗ್ರೀಕರು ತುರ್ಕಿಯವರ ಮೇಲೆ ದೀರ್ಘವಾಗಿ ಕಠಿಣವಾದ ಯುದ್ಧ ನಡಿಸಿ ಜಾನಿನಕ್ಕೆ ಮುಖ್ಯ ಮಾರ್ಗವಾದ ಪೆಂಟಾಪಿಗಾಡಿಯಾ ಎಂಬ ಕೋಟೆಕೊತ್ತಲಗಳುಳ್ಳ ಕಣಿವೆಯನ್ನು ಸ್ವಾಧೀನಪಡಿಸಿಕೊಂಡರು. ಜಾನಿನಕ್ಕೆ ನೈಋತ್ಯದಲ್ಲಿರುವ ಪ್ರವೇಸಾ ಪಟ್ಟಣವನ್ನು ಗ್ರೀಕರು ಎಂಟು ಗಂಟೆ ಹೊತ್ತು ತುರ್ಕಿಯವರ ಮೇಲೆ ಬಹು ಕಠಿಣವಾಗಿ ಯುದ್ಧಮಾಡಿ ಆಕ್ರಮಿಸಿಕೊಂಡಿದ್ದಾರೆ. ಗ್ರೀಸಿನ ಯುವರಾಜರು ಗ್ರೀಕ್ ಸೈನ್ಯಗಳನ್ನು ನಡಿಸಿಕೊಂಡು ಸಲೋನೀಕದಿಂದ ಮೊನಾಸ್ಟಿರಿನ ಮುತ್ತಿಗೆಗಾಗಿ ಹೋಗುತ್ತಿದ್ದಾರೆ. ಗ್ರೀಕ್ ಹಡಗಿನ ಸೈನ್ಯವು ಮೌಂಟ್ ಅಥಾಸ್ ಎಂಬ ಪರ್ಯಾಯದ್ವೀಪವನ್ನು ಆಕ್ರಮಿಸಿಕೊಂಡವು.

ಟ್ಚಟಾಲ್ಜಾ ಸಾಲು ಕೋಟೆಗಳ ಬಳಿ ತುರ್ಕಿ ಮತ್ತು ಬಲ್ಗೇರಿಯ ಸೈನ್ಯಗಳಲ್ಲಿ ವಾಂತಿಭೇದಿ ಉಪದ್ರವು ಕಾಣಿಸಿಕೊಂಡು, ಪ್ರಬಲವಾಗುತ್ತಿದೆ. ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದೊಳಗೆ ಈ ಉಪದ್ರವದ ಹಾವಳಿಯು ಯುದ್ಧಕ್ಕಿಂತ ಕಠಿಣವಾಗಿರುವುದು. ಅನೇಕ ಕಾಯಿಲೆಯವರನ್ನು ಸ್ಟೆಫನೊ ಎಂಬ ... ಸೆಂಟ್ ಸೋಫಿಯಾ ಎಂಬ ಮಸೀದಿಯಲ್ಲಿ ಮಲಗಿಸಿರುತ್ತಾರೆ. ... ದಿನಕ್ಕೆ 1,000 ಜನರಿಗೆ ತಗಲುವುದೆಂದೂ, ಆ ವ್ಯಾಧಿ ಅತಿನಾಶಕಾರಿಯಾಗುತ್ತಾರೆಂದೂ ತಿಳಿಯುತ್ತದೆ. ಅಧಿಕಾರಿಗಳು ಅವರ ಶೈತ್ಯೋಪಚಾರಕ್ಕೆ ಸರಿಯಾದ ಏರ್ಪಾಡುಗಳನ್ನು ಮಾಡಲು ಅಸಮರ್ಥರಾಗಿದ್ದಾರೆ. 4,000 ಜನರು ರೋಗ ತಗಲಿ ರೈಲ್ ಗಾಡಿಗಳಲ್ಲಿ ಸ್ಯಾನ್ ಸ್ಟೆಫನೋಸಿಗೆ ಬಂದು ಸ್ಥಳವಿಲ್ಲದೆ ಗಾಡಿಗಳೊಳಗೇ ಒಂದು ದಿನವೆಲ್ಲಾ ಇದ್ದರು. ಅವರಿಗೆ ಆಹಾರವಾಗಲಿ ನೀರಾಗಲಿ ದೊರಕಲಿಲ್ಲ. ಅಷ್ಟು ಜನರಿಗೆ ಉಪಚಾರವಾದುವುದಕ್ಕೆ ನಾಲ್ಕೇ ಮಂದಿ ಡಾಕ್ಟರುಗಳಿದ್ದರು. ಈ ಮಧ್ಯೆ ಮಾಜಿ ಸುಲ್ತಾನ್ ಅಬ್ದುಲ್ ಹಾಮಿದ್‌ನವರ ಪಕ್ಷವನು ವಹಿಸಿ ಅವರನ್ನು ಸುಲ್ತಾನ್ ಪದವಿಗೆ ಕರೆತರಬೇಕೆಂದು ಪಿತೂರಿ ನಡೆಯುತ್ತಿದ್ದದ್ದನ್ನು ತುರ್ಕಿಯವರು ತಿಳಿದು ಕೆಲವು ಹಾಜಿಗಳನ್ನೂ ಉಲೇಮಾಗಳನ್ನೂ ಮುಖ್ಯೋದ್ದಾರರನ್ನೂ ಯುದ್ಧಭೂಮಿಯಲ್ಲಿ ವಶ್ತಗಿರಿಮಾಡಿಸಿರುತ್ತಾರೆ. ಮತ್ತು ಕಿರ್ಕ್ ಕಿಲಿಸ್ಸೆಯಲ್ಲಿ ಯುದ್ಧಭೂಮಿಯಿಂದ ಓಡಿಹೋಗಿ ಸೈನ್ಯದ ಗಲಭೆಯನ್ನುಂಟುಮಾಡಿದ ಒಬ್ಬ ಮುಖ್ಯೋದ್ದಾರನನ್ನೂ 17 ಜನ ಸೈನಿಕರನ್ನೂ ಹಿಡಿದುತಂದು ರಾಜಧಾನಿಯಲ್ಲಿ ಗುಂಡಿನಿಂದ ಹೊಡೆದು ಕೊಂದುಹಾಕಿದರು.

ಪರರಾಜ್ಯಗಳ ಸೈನ್ಯಗಳು ಕಾನ್‌ಸ್ಟಾಂಟಿನೋಪಲ್ ಸಮುದ್ರತೀರದ ತಮ್ಮ ತಮ್ಮ ಹಡಗುಗಳೊಳಗೆ ಕಾದು ಇದ್ದವು. ಈ ಸೈನಿಕರನ್ನು ಆಯಾ ಮುಖ್ಯೋದ್ದಾರರು ಹಡಗುಗಳಿಂದ ಇಳಿಸಿ ಪಟ್ಟಣದೊಳಕ್ಕೆ ಕರೆದುತಂದು ಗೋಪ್ಯವಾದ ಸ್ಥಳಗಳಲ್ಲಿ ಇಟ್ಟಿರುವರೆಂದೂ, ಅವಶ್ಯವಿದ್ದಾಗ ಅವರನ್ನು ಹೊರಗೆ ಕರೆತರುತ್ತಾರೆಂದೂ ತಂತೀ ವರ್ತಮಾನ ಬಂದಿದೆ.

ಪ್ರಪಂಚದಲ್ಲಿ ಪ್ರೀತಿಯೇ ಪ್ರಧಾನವಾದುದು

- ಮನುಷ್ಯರು ... ... ಪ್ರತಿದಿನ ... ಆ ಸತಿ, ನಾಲ್ಕು ... ಈ ಪ್ರಪಂಚವನ್ನೂ ಬಿಟ್ಟು ... ಹೋಗುವುದು ... ಸಂಕಟವಾದುದು.

- ... ... ಗುಪ್ತವಾಗಿ, ಪ್ರಸಾದ ... ... ಹೋಗುವುದು, ... ಇಲ್ಲವಾಗುವುದು.

- ಸಂಪತ್ತು, ... ಈ ಮೂರು ... ... ಇವುಗಳ ... ... ಅಥವಾ ... ೧೧ನೇ ... ...

- ಪ್ರಸಾದನೆಗಳು ... ... ಆ ಕಾಲದಲ್ಲಿ ... ... ಮಕ್ಕಳು ... ... ಆದರೆ ... ನೂರಾರು ವರ್ಷಗಳ ... ... ಗಳು ... ... ಅಧಿಕವಾಗಿ ... ಆಗಿದ್ದವು. ... ... ಬರುವನೋ ಎಂಬ ಕುತೂಹಲ ... ... ಆತನ ಮಾತ್ನಗಳನ್ನು ... ... ಆದರೂ ಇಲ್ಲಿ ... ... ಅನೇಕ ... ... ಬಿದ್ದುಹೋಗುವುದು ... ಆವುಗಳು ... ... ಮೇಲೆ ಆ ಪ್ರಸಾದನೆಗಳ ಕಾರ್ಯ ... ... ಇಲ್ಲ. ಪುರಾತನ ವಿಷಯಗಳಲ್ಲಿ ... ... ಮತ್ತೆ ... ...

- ಭಾಷೆಗಳು ಬಿದ್ದುಹೋಗುವುವು. ಆ ಕಾಲದಲ್ಲಿ ಭಾಷಾವಿದರಾಗಿ ವಿಶೇಷವಾಗಿದ್ದು ... ... ಅವು ಬಿದ್ದುಹೋದುವು. ಗ್ರೀಕ್, ಲಾಟಿನ್, ... ಮತ್ತು ... ... ಎಲ್ಲವೂ ಬಿದ್ದುಹೋದುವು. ... ... ಎಂಬ ಗ್ರಂಥವು ಪ್ರಖ್ಯಾತವಾದುದು ... ... ಜನರು ಆಡುವ ಭಾಷೆಯಲ್ಲಿ ಬರೆದಿದೆ. ಇನ್ನು ... ವರ್ಷಗಳಲ್ಲಿ ಅದು ... ... ಓದುಗರಿಗೆ ... ಹೋಗುವುದೆಂದು ಪಂಡಿತರು ಹೇಳುತ್ತಾರೆ.

- ವಿದ್ಯೆಯೋ ಇಲ್ಲದೆ ಹೋಗುವುದು. ನಮ್ಮ ಪೂರ್ವಿಕರ ... ... ಈಗ ಅದು ಇಲ್ಲದಂತಾಗಿದೆ. ಈಗ ಓದುವ ಒಬ್ಬ ಹುಡುಗನು ... ... ಅಂಶಗಳನ್ನು ತಿಳಿದಿರುವನು. ಆ ಕಾಲದ ಸಾಹಿತ್ಯವೆಲ್ಲವೂ ಇಲ್ಲದೆ ಹಾಯಿತು. ಈ ದಿನದ ವರ್ತಮಾನ ಪತ್ರಿಕೆಯನ್ನು ನಾಳೆ ಬಿಸಾಡುವಿರಿ. ಅದರಲ್ಲಿನ ವಿದ್ಯೆಯು ಇಲ್ಲದಂತಾಯಿತು. ಹಳೆಯ ... ... ಮೌಲ್ಯಕ್ಕೆ ಕೊಳ್ಳಬಹುದು. ಆವುಗಳಲ್ಲಿನ ವಿದ್ಯೆಯು ಕಳೆದುಹೋಯಿತು. ಕುದುರೆ ಗಾಡಿಯು ಹೋಗಿ ಹೊಗೆ ಗಾಡಿಯು ಬಂದಿತು. ಹೊಗೆ ಗಾಡಿಯೂ, ಇನ್ನೂ ಅನೇಕ ವಿಚಿತ್ರವಾದ ಕಲ್ಪನೆಗಳೂ ವಿದ್ಯುಚ್ಛಕ್ತಿಯಿಂದ ಮೂಲೆಗೆ ಬಿದ್ದುಹೋದುವು. ಬಹು ... ... ಸರ್ ... ... - ಹೊಗೆ ಗಾಡಿಯು ಬಿದ್ದುಹೋಗುತ್ತದೆ ಎಂದು ಹೇಳಿದನು. ಪ್ರತಿಯೊಂದು ಕಾರ್ಖಾನೆಯ ಹಿತ್ತಲಲ್ಲಿ ಮುರಿದು ಕೆಲಸಕ್ಕೆಬಾರದ ಕಬ್ಬಿಣದ ತುಂಡುಗಳೂ, ಚಕ್ರಗಳೂ, ಸಲಾಕಿಗಳೂ ಬಿದ್ದಿವೆ. ಇಪ್ಪತ್ತು ವರ್ಷಗಳ ಹಿಂದೆ ಇವೆಲ್ಲವೂ ವಿಶೇಷ ಪ್ರಯೋಜನಕರವಾಗಿದ್ದುವು. ... ... ಬಂದು ಹೊಗೆ ಗಾಡಿಯನ್ನು ನೋಡುತ್ತಿದ್ದರು. ಅದು ಈಗ ಬಿದ್ದುಹೋಗುತ್ತಿದೆ. ಈ ದಿನದಲ್ಲಿ ನಾವು ಬಹು ಪ್ರವೀಣರೆಂದು ... ... ಭೌತಿಕ ಶಾಸ್ತ್ರವೂ, ... ಶಾಸ್ತ್ರಗಳೂ ಇನ್ನು ಕೆಲವು ವರ್ಷಗಳಲ್ಲಿ ಬಿದ್ದುಹೋಗುವುವು. ಎಡಿನ್‌ಬರೋ ಸರ್ವಕಲಾಶಾಲೆಯಲ್ಲಿ ಕ್ಲೋರೋಫಾರ್ಮ್ ಅನ್ನು ಕಂಡುಹಿಡಿದ ಸರ್ ಜೇಮ್ಸ್ ಸಿಂಪ್‌ಸನ್ ಎಂಬಾತನು ಘನವಂತನಾಗಿದ್ದನು. ಆತನ ಸ್ಥಾನಕ್ಕೆ ಬಂದ ಆತನ ಸೋದರಳಿಯನಾದ ಪ್ರೊಫೆಸರ್ ಸಿಂಪ್‌ಸನ್ ಎಂಬಾತನು ಅಲ್ಲಿನ ಪುಸ್ತಕಭಂಡಾರದ ಅಧ್ಯಕ್ಷನಿಗೆ ಹೇಳಿದುದೇನೆಂದರೆ, - ಹತ್ತು ವರ್ಷಕ್ಕಿಂತಲೂ ಪುರಾತನವಾದ ಯಾವ ಪುಸ್

...ಕ್ಕೆ ಬರುವುದಿಲ್ಲ ಮೂಲೆಗೆ ಹಾಕಿಬಿಡುವ ಸರ್ ಓಲಿವರ್ ...ಲಾಜನು ಕೆಲವು ವರ್ಷಗಳ ಹಿಂದೆ ಮಾತ್ರ ಭೌತಿಕ ಶಾಸ್ತ್ರಕ್ಕೆ ...ಗಿದ್ದನು ಪ್ರಪಂಚದ ಎಲ್ಲಾ ಭಾಗಗಳಿಂದಲೂ ವಿಷಯಗಳನ್ನು ...ರಿಕ್ಕೆ ಜನರು ಆತನ ಬಳಿಗೆ ಬರುತ್ತಿದ್ದರು ಆ ಕಾಲದ ಪಾಂಡಿತ್ಯ ...ಈ ಮೂಲೆಗೆ ಬಿದ್ದುಹೋಯಿತು ಎಲ್ಲಾ ಶಾಸ್ತ್ರ ವಿಷಯವೂ ಹೀಗೆ ...ಮಿವೆ

...ಶಾಶ್ವತವಾದುದೇನು ಬಲ್ಲಿರಾ ? ಇಲ್ಲಿ ಹಣ, ದೊಡ್ಡ ಪದವಿ ...ರ್ತಿ ಮೊದಲಾದವುಗಳ ನಿಜಾರವನ್ನು ಚರ್ಚಿಸತಕ್ಕೆ ಇಲ್ಲ ಆದು ...ಮನುಷ್ಯರೂ ಕೂಡ ಇವುಗಳಲ್ಲಿ ಏನೋ ಇದೆಯೆಂದು ನಂಬುಗೆ ...ಯವನ್ನು ಉದಾಹರಿಸಿ, ಅವು ನಶ್ವರವಾದವುಗಳೆಂದು ತೋರಿಸಿದುದಾ ...ವಸ್ತುಗಳೆಲ್ಲವೂ ಕೆಟ್ಟವುಗಳೆಂದು ಹೇಳುವುದಿಲ್ಲ ಮತ್ತೇನೆಂದರೆ ...ವಲ್ಲವೆಂದು ಮಾತ್ರ ಹೇಳಿದೆ ಇವೆಲ್ಲವೂ ವಿಶೇಷವಾದ ವಸ್ತುಗಳಾ ...ಕ್ಷಣವಾದ (ಬ್ರಹ್ಮ) ವುಗಳಲ್ಲ ಇವುಗಳಿಗಿಂತಲೂ ಮೇಲಾದುದಿದೆ ...ನಮ್ಮ ಸ್ವತ್ತುಗಳಿಗಿಂತಲೂ, ನಮ್ಮ ಕೆಲಸಗಳಿಗಿಂತಲೂ ನಮ್ಮ ...ಹೇಗಿದೆ ಎಂಬುವುದು ಹೆಚ್ಚು ಮುಖ್ಯವಾದುದು, ಚಿರಕಾಲ ಸಲ ...ಬಹುದು

...ವು ನಾನೆಂದು ಹೇಳುವ ಅನೇಕ ವಸ್ತುಗಳು ಪಾಪವಲ್ಲ ಆದರೆ ...ವ್ಯಾವಹಾರಗಳು ಎಂಕೆ ವ್ಯಾಪಾರಗಳು ಪಾಪಕರಗಳಲ್ಲ, ಆದರೆ ...ಇವಲ್ಲಿ ಸು ದರವೂ ಆಸ ದಕರವೂ ಆದ ಬಹು ವಸ್ತುಗಳಿವೆ. ...ನೋಹಕರವೂ ಆದುದು ಎಷ್ಟೋ ಇದೆ ಎಲ್ಲವೂ ಸಾರವು ...ಕತ್ತಿನ ವಸ್ತುಗಳೆಲ್ಲವೂ ಕಣ್ಣನ್ನು ಮೋಹಗೊಳಿಸುವವು ಜೀವ ...ತೋಷಗೊಳಿಸುವ ಅಸ ದರವೂ ಸಹ ಕ್ಷಣಿಕಾಲವಾತ್ರ ಇರುವುವು ...ಎಷಯಗಳನ್ನು ಪ್ರೀತಿಸಬೇಕು ಅವರಲ್ಲಿನ ಆನಂದವೂ ದು ನಮ್ಮ ...ಪ್ರೀತಿಯನ್ನು ನಿಂಗೊಳಿಸುವುದಕ್ಕೆ ಉತ್ತರವಾದುದು ಜಗಾವುದರ ...ಣತ್ವಕ್ಕೂ ಧ್ವನಿವಾದುದನ್ನೇ ಅಪ್ರಯುಸಬೇಕು

...ವ್ಯಾಸ, ನಿರೀಕ್ಷೆ, ಪ್ರೀತಿ, ಈ ಮೂರು ...ಉತ್ತಮ ಇವುಗಳಲ್ಲಿ ಪ್ರೀತಿಯೇ ಕೇವಲ ನಿರೀಕ್ಷೆಯು ಪ್ರತ್ಯಕ್ಷವಾಗುವುದರಿಂದಲೂ ...ಯು ಸಫಲವಾಗುವುದರಿಂದಲೂ ಕಳೆದು ಹೋಗುವುವೆ ದು ಹೇಳು ...ಈ ಇವುಗಳಲ್ಲೆಲ್ಲಾ ಶ್ರೇಷ್ಠತಮವಾದುದು ಪ್ರೀತಿಯು ದೇವರೇ ...ಆಮರಿ ದ ಎಲ್ಲಾ ನಾಗಗಳು ಹೋದರೂ ಸದಾ ಚಲಾವಣೆ ...ವುವ ಸರ್ವಕಾಲೀನವಾದ ಪ್ರೀತಿಯನ್ನು ನ ಪಾಲಿಸಿರಿ ನೀವು ...ವಸ್ತುಗಳು ಅಸ್ತಮಾನವಿಡುವಿರಿ ಪ್ರಥಮತ ಪ್ರೀತಿಯನ್ನು ಸಂಪಾ ...ದಾವ ವಸ್ತುವೂ ಎಲ್ಲ ಮುಖದ ಎಂದೂ ಸೋಲ ಅವಮಾನದಿಂ ...ಯಲ್ಲಿ ಬರೆದಿರುವ ಸಸ್ಕೃತ ವಚನದಲ್ಲಿ "ಬ್ರಹ್ಮಪದ" ಎಂದರೆ ...ಕೋಶಾಂತವವೆ ಮ ಅರ್ಥವಲ್ಲ ಪ್ರೀತಿಯು ಎಲ್ಲಾ ವಸ್ತುಗಳಿ ...ಯುತವಾದುದು ಅದಕ್ಕಿಂತಲೂ ದೊಡ್ಡದು ಇಲ್ಲ ಪ್ರೀತಿಯೇ ...ಆನಂದ ಬ್ರಹ್ಮಪದವನ್ನು ಪ್ರವೇಶಿಸು ಅ ವರ ಪ್ರೀತಿವಂತ ...ಹರ್ಷವೂ ...ದಾವ ಹಾಪವ, ಪ್ರಸಲವನ್ನ ಹೆಚ್ಚಿ ಸದೆ ... ...ಧೂಕಗಳನ್ನೂ ...ಪ್ರೀತಿ ಭರಿತನಾಗಿರುವವನಿಗೆ ಯಾವ ಕೆಲಸ ...ಗೆ ಮಾಡಬೇಕೆ ಎಂದು ತಾನಾಗಿಯೇ ತಿಳಿಯುತ್ತದೆ ಆತನೇ ಹೋಗಿಯು

ಬೆಂಗಳೂರಿನ ವೃತ್ತಾಂತಗಳು

...ಕೋನಾಸವರ ಮ ... ಮರಾಠಿಯವರು ಚಿತ್ರದುರ್ಗದಿ ದ ಎಂದು ...ಮಮಾರ ಮೈಸೂರು ಡಿಸ್ಟ್ರಿಕ್ಟಿನ ... ವನ್ನು ವಹಿಸಿಕೊಂಡರು

...ಡಿಸ್ಟ್ರಿಕ್ಟ್ ಕೌನ್ಸಿಲ್ ಡಾಡಿನಲ್ಲಿ ... 11 ಆನೆಗ ...ನ ಭಾನುವಾರ ಆದಿವಾರಗಳು ... ಕಟ್ಟ ಹಾಕಿದರೆ ಮ ...

...ಮ ಎಂ ವೆಂಕಟರಮಣಯನವರು ಪರಿವಾರ ಸಮೇತ ಕಳೆದ ...ನ ಮಧ್ಯಾಹ್ನ ರಾಜಧಾನಿಗೆ ದಯಮಾಡಿದರು ಇವರು ಇವತ್ತೋ ...ಬೆಂಗಳೂರಿಗೆ ವಾಪಸು ಹೋಗುವರೆಂದು ಕೇಳುತ್ತೇವೆ

...ಮೊ ಚೀಫ್ ಜಡ್ಜ್ ರಾದ ಸಾರ್ ಲಿಯುನೋರ್ ಮ ವಿ ಎಸ್ ಕ ವ ...ವಡಲು ಎರಡು ತಿಂಗಳ ರಜಾ ಕೊಟ್ಟತ್ತು ಈಗಗೆ ಅವರ ಅಸ ...ಕಾರ ಸರ್ಕಾರದವರು ಆ ರಜವನ್ನು ಇನ್ನೂ ಮೂರು ತಿಂಗಳು ಜಾಸ್ತಿ ...ತ್ತಾರೆ

...ವಾಸಿಯಲ್ಲಿ ಕಳೆದ ಶುಕ್ರವಾರ ರಾತ್ರಿ ಮ ಸಟೋಜಿರಾಯರ ...ಮನೆಗೆ ಕಳ್ಳರು ಬಿದ್ದು ಸುಮಾರು ಸಾವಿರ ರೂಪಾಯಿನ ಸೀರೆ ಮುಂ ...ವನ್ನು ಎತ್ತಿಕೊಂಡು ಹೋದರು ಇದಲ್ಲದೆ ಅಲ್ಲಲ್ಲಿ ಸ್ವಲ್ಪ ಫಟ ...ಆಗಾಗ್ಗೆ ನಡೆಯುತ್ತಾ ಬಂದಿದೆ ಎಂದು ತಿಳಿಯುತ್ತದೆ

...ಸಿಟಿ ಹಲಸೂರು ಪೇಟೆ ಸೂರ್ಯನಾರಾಯಣ ಶಾಸ್ತ್ರಿಗಳು ...ವಲ್ಲಿ ಇಲಿ ಬಿದ್ದ ಕಾರಣ ನೆರೆಮನೆಯಲ್ಲಿ ವಾಸವಾಗಿರುವಾಗ್ಗೆ ...ಮವಾರ ಬೆಳಿಗ್ಗೆ 11 ಗಂಟೆಯಲ್ಲಿ ಕಳ್ಳರು ನುಗ್ಗಿ ಸುಮಾರು ...ರೂಪಾಯಿ ನಗಗಳನ್ನು ಅಪಹರಿಸಿದರೆಂದು ತಿಳಿಯುತ್ತೇವೆ

...ಹೇಳುವ ಡಿಸ್ಟ್ರಿಕ್ಟ್ ಶಿರಸ್ತೇದಾರರುಗಳ ವರ್ಗಾವರ್ಗ ಹುಕುಂ ...ಮ| ವೆಂಕಟೇಶೈಯನವರು ಹಾಸನಕ್ಕೆ, ಮ ರಾಮಸ್ವಾಮಯ್ಯ ...ಬೆಂಗಳೂರಿಗೆ, ಮ್ಯ ಕೃಷ್ಣಸ್ವಾಮಿರಾಯರು ಚಿತ್ರದುರ್ಗಕ್ಕೆ, ಮ| ಶ್ರೀನಿ ...ರಾವ್ ಶಿವಮೊಗ್ಗೆಗೆ, ಮ್ಯ ಲಕ್ಷ್ಮಣ ಅಯ್ಯರವರು ತುಮಕೂರಿಗೆ, ...ಕಾರ್ಜುನಪ್ಪನವರು ಕಡೂರಿಗೆ

...ಶ್ವೇಶ್ವರಯ್ಯನವರಿಗೆ ದಿವಾನ್ ಗಿರಿಯು ನೇಮಕವಾದದ್ದಕ್ಕಾಗಿ ...ಪ್ರಜೆಗಳು ಅವರಿಗೆ ಅಲ್ಲಿನ ಲಾಲ್‌ಬಾಗ್ ಉದ್ಯಾನವನದಲ್ಲಿ ...ಕೂಟವನ್ನು ನಡಿಸಿ ಸತ್ಕಾರ ಮಾಡಬೇಕೆಂದು ನಿಶ್ಚಯಿಸಿ ...ಇದಕ್ಕಾಗಿ ಪುರಜನರ ಒಂದು ಕಮಿಟಿಯು ನೇಮಕವಾಗಿ, ವರ್ತ ...ಕಯ್ಯನವರು ಪ್ರಸಿಡೆಂಟರಾಗಿರುತ್ತಾರೆ

ಶ್ರೀಮನ್ಮಹಾರಾಜರವರು ಯುವರಾಜರವರ ಸಮೇತ ಡಿಸೆಂಬರ್ ತಾ. ೪ ರಿಂದ ಹಾಸನ, ಕೊಡಗು, ಶಿವಮೊಗ್ಗೆ, ಮಂಜರಾಬಾದ್ ಪ್ರಾಂತ್ಯಗಳಲ್ಲಿ ಸಂಚಾರ ದಯಮಾಡಿ, ತಾ 20 ಕ್ಕೆ ಬೆಂಗಳೂರನ್ನು ತಲುಪುವರೆಂದು ತಿಳಿಯುತ್ತೇವೆ ಅವರು ದಯಮಾಡುವ ಸ್ಥಳಗಳಾವವೆಂದರೆ—ನೆಲಮಂಗಲ, ಕುಣಿಗಲು, ಸಕ್ಲೇಶಪುರ? ನಾಗಮಂಗಲ, ಶ್ರವಣಬೆಳ್ಗೊಳ, ಬೇಲೂರು, ಹಳೇಬೀಡು, ಸಾಗರ, ಅನಂತಪುರ, ಕಬಿನಿ?, ತುಮಕೂರು ಅವರು ಜೋಗಿನಲ್ಲೂ, ಮಂಜರಾಬಾದ್ ಯಲ್ಲೂ ಎರಡೆರಡು ದಿನಗಳು ಇದ್ದು ದಯಮಾಡುವರೆಂದು ಕೇಳುತ್ತೇವೆ ಹುಜೂರು ಸೆಕ್ರೆಟರಿ ಮ| ವಿ ರಾಘವೇಂದ್ರರಾಯರು ಈ ಸಂಚಾರದ ಏರ್ಪಾಡು ಮಾಡುವುದಕ್ಕಾಗಿ ರಾಜಧಾನಿಯಿಂದ ಮೊನ್ನೆ ಪ್ರಯಾಣಮಾಡಿದರು

ಕಾವೇರಿ ಪ್ರವಾಹದ ರಿಲೀಫ್ ಫಂಡು.

ಕಮಿಟಿಯ ಕಡೇ ಮೀಟಿಂಗು.

ಕಳೆದ 16 ನೇ ತಾ ಶನಿವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಮೇಲ್ಕಂಡ ಕಮಿಟಿ ಮೀಟಿಂಗು ಜರುಗಿತು ಮ| ಗಳಾದ ಫುಟ್ಟಣ್ಣಯ್ಯ?...ಯನವರು, ಅನಂತರಾಮಯ್ಯನವರು, ಜಿ ಮಾದಪ್ಪನವರು, ಸಾ|| ಬಸಪ್ಪಯ್ಯನವರು, ವೆಂಕಟಕೃಷ್ಣಯ್ಯನವರು, ಮ| ಮಹಮ್ಮದ್ ಜಾಫರ್ ಯವರು ಹಾಜರಾಗಿದ್ದರು ಸೆಕ್ರೆಟರಿ ಮ| ಎಂ ಜಿ ಕೃಷ್ಣಸ್ವಾಮಿರಾಯರವರು ಅಗ್ರಾಸನವನ್ನು ವಹಿಸಿದ್ದರು

ಈ ರಿಲೀಫ್ ಫಂಡಿಗೆ ವಸೂಲಾಗಿರುವ ಹಣಗಳ ಮತ್ತು ಅವರಲ್ಲಿ ವಿನಿಯೋಗವಾಗಲ್ಪಟ್ಟಿರುವ ಮೊಬಲಗಿನ ಲೆಕ್ಕಗಳನ್ನು ಕಮಿಟಿಯವರು ಓದಿಸಿ ಎಲ್ಲಾ ಸರಿಯಾಗಿದೆ ಎಂದು ಒಪ್ಪಿ ಬಂದಾ ವಸೂಲ್ಮಾಡುವುದನ್ನು ಬಂದುಮಾಡಬೇಕೆಂದು ತೀರ್ಮಾನಮಾಡಿದರು ಸೆಕ್ರೆಟರಿಯವರ ಶಿಫಾರಸಿನಂತೆ ಈ ಫಂಡಿನ ಜಮಾ ಖರ್ಚಿನ ಲೆಕ್ಕಗಳನ್ನಿಟ್ಟು ಕೆಲಸಮಾಡಿದ ಗುಮಾಸ್ತೆಯರಿಗೆ 50 ರೂಪಾಯಿ ಬಹುಮಾನವನ್ನು ಕೊಡಬಹುದೆಂದು ಕಮಿಟಿಯವರು ಸಂತೋಷದಿಂದ ಒಪ್ಪಿಕೊಂಡರು ಮತ್ತು ಸೆಕ್ರೆಟರಿಯವರಲ್ಲಿ ಬಾಕಿ ಉಳಿದಿರುವ ಮೊಬಲಗನ್ನು ಡೆಪ್ಯುಟಿ ಕಮಿಷನರವರ ವ್ಯವಸ್ಥೆ ಬಗ್ಗೆ ಕೊಟ್ಟುಬಿಡತಕ್ಕದ್ದೆಂದೂ, ಕಳೆದ ವರುಷ ಪ್ರವಾಹದಿಂದ ನಷ್ಟಪಟ್ಟವರಿಗೆ ಸಹಾಯಮಾಡಲು ಇದುವರೆಗೆ ಏನು ಅಮಲು ನಡಿಸಿರುತ್ತೆ, ಮುಂದೆ ಏನು ಅಮಲು ನಡಿಸಲ್ಪಡುತ್ತದೆ ಎಂಬ ಅಂಶಗಳನ್ನು ರಿಲೀಫ್ ಕಮಿಟಿಯವರ ತಿಳುವಳಿಕೆಬಗ್ಗೆ ದಯವಿಟ್ಟು ಕಳುಹಿಸಲು ಡೆಪ್ಯುಟಿ ಕಮಿಷನರವರಿಗೆ ಬರೆದು ಕೇಳಬೇಕೆಂದು ತೀರ್ಮಾನಮಾಡಿ ಮೀಟಿಂಗನ್ನು ಮುಕ್ತಾಯಮಾಡಿದರು

ಫಂಡಿನ ಜಮಾಖರ್ಚು ತಖ್ತೆಯು

ಮಳವಳ್ಳಿ ಮತ್ತು ತಿರುಮಕೂಡ್ಲು ನರಸೀಪುರ ತಾಲ್ಲೂಕುಗಳಲ್ಲಿ ಕಳೆದ ವರುಷ ಕಾವೇರಿ ಮತ್ತು ಕಪಿಲಾ ನದಿಗಳ ಪ್ರವಾಹಗಳಿಂದ ನಷ್ಟಪಟ್ಟ ಬಡಬಗ್ಗರಿಗೆ ಸಹಾಯ ಮಾಡಲು ವಸೂಲಾದ ಮೊಬಲಗು.

ಜಮಾ	ಮೊಬಲಗು
ಮೈಸೂರು ಸಂಸ್ಥಾನದ ಅರಮನೆಯಿಂದ	1,500 0 0
,, ಡಿಸ್ಟ್ರಿಕ್ಟ್ ಬೋರ್ಡು	3,000 0 0
ಕೋಲಾರ್ ಚಿನ್ನದಗಣಿ	299 1 0
,, ಡಿಸ್ಟ್ರಿಕ್ಟ್ ಬೋರ್ಡು	100 0 0
ತುಮಕೂರ್ ,, ,,	250 0 0
ಶಿವಮೊಗ್ಗ ,, ,,	100 0 0
ಹಾಸನದ ,, ,,	100 0 0
ಮೈಸೂರು ಗವರ್ನ್‌ಮೆಂಟು	2,000 0 0*
ಸಂಸ್ಥಾನದ ಸಾಮಾನ್ಯ ಪ್ರಜೆಗಳಿಂದ	12,001 8 5
ಜುಮ್ಲಾ ರೂ	19,751-12 5

* ಈ ಮೊಬಲಗನ್ನು ತರಿಸಿಕೊಂಡಿಲ್ಲ

ಫಂಡಿನಲ್ಲಿ ಖರ್ಚಾಗಿರುವುದು

ಖರ್ಚು	ಮೊಬಲಗು
ನಂಜನಗೂಡು ಸಬ್ ಡಿವಿಜನ್ ಆಫೀಸರಿಗೆ ಬಡ ಜನಗಳಿಗೆ ವಿನಿಯೋಗಿಸುವ ಬಗ್ಗೆ	8,000 0 0
ಮಳವಳ್ಳಿ ತಾಲ್ಲೂಕು ಅ ಕಮಿಷನರಿಗೆ ಡಿಟ್ಟೋ ಕಾರ್ಯಕ್ಕಾಗಿ	700-0 0
ಮಳವಳ್ಳಿ ತಾಲ್ಲೂಕು ಅ ಕಮಿಷನರಿಗೆ ಡಿಟ್ಟೋ ಕಾರ್ಯಕ್ಕಾಗಿ, 2 ನೇ ದಫಾ	926-0 0
ನಂಜನಗೂಡು ಸಬ್ ಡಿವಿಜನ್ ಆಫೀಸರಿಗೆ ಡಿಟ್ಟೋ ಕಾರ್ಯಕ್ಕಾಗಿ 2 ನೇ ದಫಾ	1,132-0-0
ಸಾದಿಲ್ವಾರ್ ಮುಂತಾದ ಖರ್ಚು	90 11 0
ಸೇವಿಂಗ್ಸ್ ಬ್ಯಾಂಕಿನಲ್ಲಿರುವುದು	3,715-11 11
ಗವರ್ನ್‌ಮೆಂಟಿನ ಮೊಬಲಗು	3,000 0 0
ಜುಮ್ಲಾ ರೂ	19,751 12 5

ಚಾಮರಾಜನಗರದ ಗಲಭೆಯು.

ಗಲಭೆಯ ವಿವರಣೆಯು, 90 ಮಂದಿ ಹಿಡಿಯಲ್ಪಟ್ಟದ್ದು.

ಕಣ್ಣೇಗಾಲವೆಂಬುದು ಚಾಮರಾಜನಗರದ ತಾಲ್ಲೂಕಿನಲ್ಲಿ ಕೆಲವು ಬ್ರಾಹ್ಮಣರಿಗೆ ಸೇರಿದ ಜೋಡಿ ಗ್ರಾಮ ಈ ಜೋಡಿ ಗ್ರಾಮದ ಜಮೀನುಗಳನ್ನು ಆ ಊರಿನಲ್ಲಿರುವ ತೊರೆಯರು ವಾರಕ್ಕೆ ಸಾಗುವಳಿ ಮಾಡುತ್ತಾ ಬಾಗಾಯತಿನಿಂದ ಇದ್ದಾರೆ ಈ ಜೋಡಿ ಗ್ರಾಮದ ಖಾತೆದಾರರ ಪೈಕಿ ಒಬ್ಬಿಬ್ಬರು ಮೂಗೂರಲ್ಲಿ ವಾಸಸ್ಥರಾಗಿದ್ದುಕೊಂಡು ತಮ್ಮ ಬಾಗದ ಜಮೀನುಗಳನ್ನು ಕಣ್ಣೇಗಾಲದಲ್ಲಿಯೇ ತೊರೆಯರ ಮೂಲಕ ವಾರಕ್ಕೆ ಮಾಡಿಸುತ್ತಿದ್ದರು ಈ ಗ್ರಾಮದಲ್ಲಿ ಹತ್ತೂ ಜನರಿಗೆ ಸೇರಿದ ಒಂದು ದೇವತೆ ಇದೆ ಈ ದೇವತೆಗೆ ತಕ್ಕ ಸಮಯಗಳಲ್ಲಿ ಕುರಿ ಮುಂತಾದವುಗಳನ್ನು ಬಲಿಕೊಡುವ ಪದ್ಧತಿಯುಂಟು ಈ ಪದ್ಧತಿಯ ಪ್ರಕಾರ ಆ ಊರು ಬ್ರಾಹ್ಮಣರು ತೊರೆಯರನ್ನು ಮಾಮೂಲ್ ಪ್ರಕಾರ ದೇವತೆಗೆ ಬರಬೇಕಾದ ಕುರಿ ಮುಂತಾದದ್ದನ್ನು ಕೊಡಿ ಎಂದು ಕೇಳಿದ್ದಕ್ಕೆ ಅವರು ಯಾವ ಕಾರಣಕ್ಕಾಗಿಯೋ ಕೊಡುವದಿಲ್ಲವೆಂದು ಧಿಕ್ಕರಿಸಿ ಬಿಟ್ಟರಂತೆ ಬ್ರಾಹ್ಮಣರು ಬೇರೆ ಒಂದು ರೀತಿಯಾಗಿ ಕಾರ್ಯವನ್ನು ಸದಕ್ಕೆ ನೆರವೇರಿಸಿಕೊಂಡು ಇನ್ನೊಂದು ದಿನ ಜೋಡಿದಾರರೆಲ್ಲಾ ಮೀಟಿಂಗ್ ಮಾಡಿ ತಮ್ಮ ಗ್ರಾಮದ ಹುಲ್ಲುಬನ್ನಿಯನ್ನು ಬೇರೆ ಗ್ರಾಮಗಳವರಿಗೆ ಗುತ್ತಿಗೆಗೆ ಕೊಟ್ಟು, ಬಂದ ಹಣದಿಂದ ದೇವತಾ ಕಾರ್ಯಗಳನ್ನು ನೆರವೇರಿಸೋಣವೆಂದು ಗೊತ್ತುಮಾಡಿ ಹಾಗೆ ಮಾಡಿದರು ಆಗ ತೊರೆಯರೆಲ್ಲಾ ಸೇರಿ ತಾವುಗಳು ಬ್ರಾಹ್ಮಣರ ಜಮೀನುಗಳನ್ನು ಮಾಡುವವರಾಗಿದ್ದರೂ ತಮ್ಮ ದನಕರುಗಳು ಮೇಯತಕ್ಕ ಹುಲ್ಲನ್ನು ಬೇರೆ ಗ್ರಾಮಗಳವರಿಗೆ ಕೊಟ್ಟರೆಂದೂ, ತಾವು ಸಹ ಅದಕ್ಕೆ ತೆರಬೇಕಾಯಿತೆಂದೂ ಅಂದುಕೊಂಡು, ಇನ್ನು ಮೇಲೆ ಈ ಬ್ರಾಹ್ಮಣರಿಗೆ ತಾವು ಯಾವ ಕೆಲಸಗಳಲ್ಲಿಯೂ ತಲೆ ಹಾಕಬಾರದೆಂದು ತಮ್ಮ ಕೋಮಿನವರಲ್ಲಿ ಕಟ್ಟುಮಾಡಿಕೊಂಡರು

ಇವರುಗಳು ಹೀಗೆ ಕಟ್ಟು ಮಾಡಿಕೊಂಡದ್ದನ್ನು ನೋಡಿ ತಾವು ಇವರ ವಿಷಯದಲ್ಲಿ ಎಚ್ಚರಿಕೆಯುಳ್ಳವರಾಗಿರಬೇಕೆಂಬ ಯೋಚನೆ ಈ ಜೋಡಿದಾರರಲ್ಲಿ ತಲೆದೋರಿತು ಹೀಗಿರುವಾಗ್ಗೆ ತಾವು ತಾವು ವಾರಕ್ಕೆ ಮಾಡಿದ್ದ ಫಸಲುಗಳನ್ನು ಕೊಯ್ದುಕೊಂಡು ತಮ್ಮ ತಮ್ಮ ಹಿಸ್ಸೆ ತೆಗೆದುಕೊಳ್ಳೋಣವೆಂದು ಈ ತೊರೆಯರು ಜೋಡಿದಾರರ ಬಳಿಗೆ ಹೋಗಿ ತಮ್ಮ ಫಸಲನ್ನು ಕೊಯ್ದು ತಮ್ಮ ಅವರ ಹಿಸ್ಸೆಗಳನ್ನು ಹಂಚಿಕೊಳ್ಳೋಣವೆಂದು ಹೇಳಲಾಗಿ, ಜೋಡಿದಾರ್ರು ಅವರನ್ನು ಕೊಯ್ಯಕೂಡದೆಂದು ತಡೆದು ತಾವು ಬೇರೆಯವರ ಮೂಲಕ ಕೊಯಿಸುತ್ತೇವೆಂದು ಅಟಕಾವ್ ಮಾಡಿದರು ಆಗ ತೊರೆಯರು ತಾವು ಕಷ್ಟಪಟ್ಟು ಮಾಡಿದ್ದ ಫಸಲನ್ನು ಯಾರು ಬಂದು ಕೊಯ್ಯುತ್ತಾರೋ ನೋಡೋಣವೆಂಬುದಾಗಿ ಹಟ ಸಾಧಿಸಿದರು ಈ ಜೋಡಿದಾರರ ಪೈಕಿ ಶಾಮಿಶಸ್ತ್ರಿಯೆಂಬವರು ಒಬ್ಬ ಹಿಸ್ಸೆದಾರರಂತೆ ಅವರು ಮೂಗೂರಿನಲ್ಲಿ ವಾಸವಾಗಿದ್ದಾರೆ ಇವರು ತಮ್ಮೂರಿನಿಂದಲೇ 10-20 ಮಂದಿ ಮಾದಿಗರನ್ನೂ ಹೊಲೆಯರನ್ನೂ ಕೊಯ್ಲಿಕ್ಕೆ ಕಣ್ಣೇಗಾಲಕ್ಕೆ ರವಾನಿಸಿದರು. ಈ ಜನರು ಬಂದು ದಿಕ್ಕಾಪಾಲಾಗಿ ಫಸಲು ಕೊಯ್ಯುವುದಕ್ಕೆ ಶುರುಮಾಡಲು, ವಾರಕ್ಕೆ ಮಾಡಿದ್ದ ಕಣ್ಣೇಗಾಲದ ತೊರೆಯರು ಕೋಪಗೊಂಡು ತಮ್ಮ ಫಸಲನ್ನು ಕೊಯ್ಯುವುದಕ್ಕೆ ಅವರ್ಯಾರೆಂದು ಹೋರಾಡಿದರು ಅವರಿಗೂ ಇವರಿಗೂ ಲಟಾಪಟಿಯಾಗಿ ಅವರನ್ನು ಓಡಿಸಿಬಿಟ್ಟರು ಇವರು ಹೋಗಿ ತಮ್ಮ ಯಜಮಾನರಿಗೆ ವರದಿ ಹೇಳಲಾಗಿ ಅವರು ಕೋಪಿಸಿಕೊಂಡು, ಹೇಡಿಗಳೆಂದೂ, ಅವರ ಕೈಲಿ ಹೊಡಿಸಿಕೊಂಡು ಬಂದು ತಮ್ಮೂರಿಗೆ ಅವಮಾನ ತಂದಿರೆಂದೂ ಹೇಳುತ್ತಾ ಅದೇ ಊರಲ್ಲಿ ವಾಸವಾಗಿರುವ ಇವರ ಸ್ನೇಹಿತರಾದ ಪುಟ್ಟಸುಬ್ಬಯ್ಯನವರ ಸಂಗಡ ಯೋಚನೆ ಮಾಡಿದರಂತೆ ಇವರಿಬ್ಬರೂ ಆ ಪ್ರಾಂತ್ಯದ ಮುಖಂಡರ ಹಾಗೆಂದು ಎಲ್ಲರೂ ಹೇಳುತ್ತಾರೆ ಈ ಸಂಗತಿ ಎಲ್ಲೆಲ್ಲಿಯೂ ಜನಜನಿತವಾಗಿದೆ ಮತ್ತು ಸ್ವಲ್ಪ ಐಶ್ವರ್ಯವಂತರಂತೆ ತಮ್ಮ ಭಯದಿಂದ ಸುತ್ತಲು ಇರುವ ಜನರನ್ನು ಹತೋಟಿಯಲ್ಲಿಟ್ಟುಕೊಂಡಿದ್ದಾರಂತೆ ಆ ಬಳಿಕ ತಮ್ಮೂರಿನ ಪರಿವಾರ ಮುಂತಾದ ಎಲ್ಲಾ ಕೋಮಿನವರೊಂದಿಗೆ ಮಾತಾಡಿ ಎಲ್ಲರೂ ಕಣ್ಣೇಗಾಲದ ಮೇಲೆ ಆಯುಧಗಳೊಂದಿಗೆ ಹೊರಡಬೇಕೆಂದೂ, ಯಾರು ಹೊರಡುವದಿಲ್ಲವೋ ಅವರಿಗೆ 5 10 ರೂಪಾಯಿ ಜುಲ್ಮಾನೆ ವಿಧಿಸಲಾಗುತ್ತೆಂದೂ ಸಾರಿಸಿದರಂತೆ ತರುವಾಯ ಹೋದ ವಾರ ವಿವರಿಸಿದ ಹಾಗೆ ಅವರೆಲ್ಲಾ ಆಯುಧಗಳ ಸಹಿತ ಹೊರಟು ಊರಿನ ಹತ್ತಿರ ಬರುತ್ತಲೇ ಕಲ್ಲುಗಳ ಮಳೆ ಮೊದಲು ಸುರಿಸಿದರು ಅನಂತರ ಕೊಲೆಗಳೂ ಕ್ರೂರ ಕೃತ್ಯಗಳೂ ನಡೆದವು

ಕೊಲೆ, ಮುಂತಾದ ಕ್ರೂರ ಕೃತ್ಯಗಳು

ಇಬ್ಬರು ಸತ್ತೇಹೋದರು ಪೂರಾ ಜಖಂ ಆಗಿರುವುದು 7 8 ಮಂದಿಗೆ ಅವರಲ್ಲಿ ಒಬ್ಬನಿಗೆ ತುಂಬಾ ವಿಶೇಷ ಜಖಂ ಆಗಿದೆ ಸಾಧಾರಣ ಜಖಂ ಅನೇಕರಿಗೆ ಆಗಿದೆ ಬೇರೆ ಅನೇಕರಿಗೂ ಹೆಂಗಸರಿಗೂ ಏಟುಗಳು ಬಿದ್ದಿವೆ. ಹೆಂಗಸರ ಮಾನಭಂಗವಾಯಿತು 10 ಮನೆ ಸುಮಾರು ಸುಟ್ಟು ಬೂದಿಯಾಗಿದೆ ಚಿನ್ನ ಬೆಳ್ಳಿ ಮುಂತಾದ ನಗನಾಣ್ಯಗಳೂ, ತಾಂಬ್ರ ಹಿತ್ತಾಳೆ ಮುಂತಾದ ಕಂಚು ಮುಟ್ಟುಗಳೂ, ಕಡಾಯಿ ಚೆಂಬು ಮುಂತಾದವುಗಳೂ, ದವಸ ಧಾನ್ಯ ಮುಂತಾದ ಸರ್ವಸ್ವವೂ, ಬಟ್ಟೆಬರೆ ಹೆಂಗಸರ ಮೈಮೇಲೆ ಇದ್ದ ಬಟ್ಟೆ ಒಡವೆಗಳೂ, ಕೋಳಿ ಕುರಿ ಮುಂತಾದವುಗಳೂ ನಿಶ್ಶೇಷವಾಗಿ ತೆಗೆದುಕೊಂಡು ಹೊರಟುಹೋದರು ಇದೆಲ್ಲಾ ಮಧ್ಯಾಹ್ನ 11 ಗಂಟೆ ಸಮಯದಲ್ಲಿ ನಡೆಯಿತು ಮುಖ್ಯವಾಗಿ ತೊರೆಯರವರನ್ನೇ ಹಾಳುಮಾಡಿದಾರೆ

ಬಂದೋಬಸ್ತು

ಸರ್ಕಾರದ ಸಿಬ್ಬಂದಿ ಪೂರಾ ಬಂದಿದೆ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು, ಪೋಲೀಸ್ ಸೂಪರಿಂಟೆಂಡರು, ಡೆಪ್ಯುಟಿ ಕಮಿಷನರ್ ಸಾಹೇಬರು, ನೂರಾರು ಜನ ರಿಜರ್ವ್ ಮತ್ತು ತಾಲ್ಲೂಕಾವಳಿಯ ಪೋಲೀಸಿನವರು, ಇವರೆಲ್ಲಾ ಕತ್ತಿ ತುಪಾಕಿ ಹಾತ್ ಬೇಡಿಗಳೊಂದಿಗೆ ತುಂಬಿದಾರೆ ಅಂತು ಅಲ್ಲಿರುವ ಸರ್ಕಾರದ ಸಿಬ್ಬಂದಿಯೆಲ್ಲಾ 600 700 ಮಂದಿ ಆಗಬಹುದು

ದಸ್ತಗಿರಿಯಾದ ಖೈದಿಗಳು

ನೆನ್ನೇ ದಿನ 11 ಜನ, ಈ ದಿನ 31 ಜನ, ಅಂತು 90 ಜನ ಖೈದಿಗಳನ್ನು ಹಾತ್‌ಬೇಡಿಗಳಿಂದಲೂ, ಬಿಚ್ಚುಕತ್ತಿ ಪೋಲೀಸ್ ಪಹರೆಯಿಂದಲೂ ತಂದು ಚಾಮರಾಜನಗರದಲ್ಲಿ ಛತ್ರದಲ್ಲಿ ಪಹರೆಯಲ್ಲಿ ಇಟ್ಟಿದಾರೆ ಇವರಲ್ಲಿ ವಕ್ಕಲಿಗರು, ಅಕ್ಕಸಾಲಿಗರು, ಲಿಂಗಾಯತರು, ಮೊಸಳಿಯರು?, ತೊರೆಯವರು, ಕುರುಬರು, ಈ ರೀತಿ ಸದ್ಯಕ್ಕೆ ಆರು ಕೋಮಿನವರು ಇದಾರ ಇನ್ನೂ ನಾಳೆ ನಾಳಿದ್ದು ಎಷ್ಟು ಬರುತ್ತಾರೋ ಮುಂದೆ ತಿಳಿಯಬಹುದು

ಮಾಲುಗಳ ಪತ್ತೆ

ಈಗ ಸುಮಾರು 600 ರೂಪಾಯಿಗಳ ಮಾಲುಗಳು ಪತ್ತೆಯಾಗಿವೆಯಂತೆ ಇನ್ನೂ ಪತ್ತೆಮಾಡುವದರಲ್ಲಿಯೇ ಇದಾರೆ

ಆಶ್ಚರ್ಯಕರಸಂಗತಿ

ಪುಟ್ಟಸುಬ್ಬಯ್ಯನವರ ತಮ್ಮ ಲಿಂಗಾಯತ ನಂಜಪ್ಪನನ್ನು ಪತ್ತೆಮಾಡಿ ಹಿಡಿದು ಇರುತ್ತಾರೆ ಈತನು ಹೂಸಹಳ್ಳಿ ಎಂಬ ಗ್ರಾಮದ ಬಳಿ ಹೊಲದಲ್ಲಿ ಒಂದು ಹುಲ್ಲು ಬಣವೆ ಕೆಳಗ ಸೊಗಸಾದ ಒಂದು ಸ್ಥಳವನ್ನು ಮಾಡಿಸಿಕೊಂಡು ಗಾಳಿಬರುವದಕ್ಕೆ ಒಂದು ಸುರಂಗ ಮಾಡಿಸಿಕೊಂಡು ಆ ಸುರಂಗಕ್ಕೆ ಹುಲ್ಲು ಮುಚ್ಚಿ ಹಗಲು ವೇಳೆ ಅದರಲ್ಲಿದ್ದು ರಾತ್ರಿಯಲ್ಲಿ ಹೊರಗೆ ಬರುವನಂತೆ. ಅಲ್ಲಿ ಆತನನ್ನು ಹಿಡಿದರು ಇನ್ನು ಕೆಲವರ ಪತ್ತೆಗೋಸ್ಕರ ದೂರದಲ್ಲಿಯೇ ಇದಾರೆ ಈ ವಿಷಯದಲ್ಲಿ ನಮ್ಮ ಚಾಮರಾಜನಗರದ ಪೋಲೀಸ್ ಮತ್ತು ಆಫೀಸರರೂ, ರಿಜರ್ವ್ ಪೋಲೀಸಿನವರೂ ತುಂಬಾ ಶ್ರಮಪಡುತ್ತಾ ಇದಾರೆ

ವೈದ್ಯರೂ ಚಿಕಿತ್ಸೆಯೂ

ಪ್ರತಿದಿನ ಕಣ್ಣೇಗಾಲಕ್ಕೆ ಹೋಗಿ ಗಾಯಪಟ್ಟಿರುವವರನ್ನು ಉಪಚರಿಸಿ ಅವರಿಗೆ ಔಷಧಗಳನ್ನು ಕೊಡುವದರಲ್ಲಿಯೂ ನಮ್ಮ ನಗರದ ಡಾಕ್ಟರವರು ತುಂಬಾ ಶ್ರಮಪಡುತ್ತಾ ಇದಾರೆ

ವಿಚಾರಣೆ.

ಈ ಖೈದಿಗಳನ್ನೆಲ್ಲಾ ಇಲ್ಲೇ ವಿಮಾಯಿಸಿ ಇವರ ವಿಚಾರಣೆಯ ಬಗ್ಗೆ ಇಲ್ಲಿಗೆ ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ಕಳುಹಿಸುತ್ತಾರೆಂದು ವದಂತಿ ಇದೆ

ಒಂದು ಕೊಲೆ.

ಮತ್ತೊಂದು ಸಂಗತಿ ಏನೆಂದರೆ, ಇದೇ ತಾಲ್ಲೂಕಿಗೆ 4 ಮೈಲಿ ದೂರದಲ್ಲಿರುವ ಹೊಂಗನೂರಿನ? ಪುರದಲ್ಲಿ 2 3 ದಿನಗಳಿಗೆ ಮುಂಚೆ ಒಬ್ಬ ಲಿಂಗಾಯತ ಮಾದೈಯನೆಂಬುವನನ್ನು ಖೂನ್ ಮಾಡಿದಾರೆ ಈ ದಿನ ಲಾಷ್ ಅಜಮಾಯಿಷಿಗಾಗಿ ನಗರದ ಆಸ್ಪತ್ರೆಗೆ ರವಾನಿಸಿದೆ ಕಾರಣವನ್ನು ಮುಂದೆ ತಿಳಿಸುತ್ತೇವೆ.

ಬಾತ್ಮಿದಾರ್

ವಿಧವಾ ಪುನರ್ವಿವಾಹವು

ಈ ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ಬೆಂಗಳೂರು ಲಾಯರ್ ಸಂಘದ ಮೆಂಬರಾಗಿ ಬಂದಿದ್ದ ಅಡ್ವೊಕೇಟ್ ಮೆ॥ ಎಚ್ ಕೃಷ್ಣಪ್ಪನವರು ದಿವಾನ್‌ರವರನ್ನು ಕುರಿತು ಇಂಡಿಯಾ ಗವರ್ನ್‌ಮೆಂಟಿನವರು ಪಾಸ್ ಮಾಡಿ ಜಾರಿಯಲ್ಲಿ ತಂದಿರುವಂಥಾ ಕಾನೂನನ್ನು ಮೈಸೂರು ಸಂಸ್ಥಾನದಲ್ಲೂ ಜಾರಿಗೆ ತಂದು, ಈಗ ಆ ಪುನರ್ವಿವಾಹಕ್ಕಿರುವ ನಿರ್ಬಂಧವನ್ನು ನಿವೃತ್ತಿ ಮಾಡಿದರೆ ಪ್ರಜೋಪಕಾರವಾದೀತೆಂದು ಕೇಳಿಕೊಂಡದ್ದರಿಂದ ಇಂಡಿಯಾ ಗವರ್ನ್‌ಮೆಂಟಿನವರು ಜಾರಿಗೆ ತಂದಿರುವ ಕಾನೂನನ್ನು ಬೆಂಗಳೂರು ಅಡ್ವೊಕೇಟ್ ಮೆ॥ ಎಸ್ ವೆಂಕಟಾಚಲೈಯಂಗಾರ್ರವರು ಭಾಷಾಂತರ ಮಾಡಿ ಕಳುಹಿಸಿರುತ್ತಾರೆ ವಾಚಕರು ಅದನ್ನು ತಿಳಿದು, ಅದರ ಗುಣದೋಷಗಳನ್ನು ಕುರಿತು ಪರ್ಯಾಲೋಚಿಸುವುದು ಒಳ್ಳೆಯದೆಂದು ಇಲ್ಲಿ ಪ್ರಕಟಮಾಡುತ್ತೇವೆ ವಿಧವೆಯರು ವಿವಾಹ ಮಾಡಿಕೊಳ್ಳಬೇಕೆಂದು ಈ ಕಾನೂನು ಬಲಾತ್ಕಾರ ಮಾಡುವುದಿಲ್ಲ ಆದರೆ ಹಾಗೆ ವಿವಾಹ ಮಾಡಿಕೊಳ್ಳಲು ಅಪೇಕ್ಷಿಸುವಂಥವರಿಗೆ ಈಗಿರುವಂಥಾ ನಿರ್ಬಂಧಗಳನ್ನು ತಪ್ಪಿಸುತ್ತದೆ ಈ ಕಾನೂನು ಹೇಳುವುದೇನೆಂದರೆ—

ಇಂಡಿಯಾ ದೇಶದ 1856 ನೇ ಇಸವಿ 15 ನೇ ನಂ ಕಾನೂನು

ಈ ಆಕ್ಟು 25 7 1856 ನೇ ತಾರೀಖಿನಲ್ಲಿ ಇಂಡಿಯಾದೇಶದ ಗೌವರ್ನರ್ ಜನರಲ್ ಸಾಹೇಬರವರ ಸಮ್ಮತಿಯಿಂದ ಮಂಜೂರಾದದ್ದು ಟ ವೆ ಈ ಆಕ್ಟು ಹಿಂದೂ ವಿಧವಾ ವಿವಾಹಗಳಿಂದ ಉಂಟಾಗುವ ಶಾಸ್ತ್ರಸಂಬಂಧವಾದ ಬಾಧಕಗಳನ್ನು ಪರಿಹರಿಸುವುದಕ್ಕೋಸ್ಕರ ಏರ್ಪಾಟಾಗಿದೆ - ಈಸ್ಟ್ ಇಂಡಿಯಾ ಕಂಪೆನಿ ಗವರ್ನಮೆಂಟಿನ ಕೈಕೆಳಗೂ, ಸ್ವಾಧೀನದಲ್ಲಿಯೂ ಇರುವ ದೇಶಗಳಲ್ಲಿನ ಸಿವಿಲ್ ಕೋರ್ಟುಗಳಲ್ಲಿ ನ್ಯಾಯಪರಿಶೀಲನೆ ಮಾಡುವುದರಲ್ಲಿ ಕೆಲವು ಜಾತಿಯ ಹಿಂದೂ ವಿಧವೆಯರು ವಿನಾ ಬಾಕಿ ಹಿಂದೂ ವಿಧವೆಯರು ಮೊದಲು ವಿವಾಹಿತರಾಗಿರುವ ಕಾರಣದಿಂದ ,ಪುನರ್ವಿವಾಹವಾಗಲು ಅನರ್ಹರೆಂದೂನ್ನೂ, ಇಂಥಾ ವಿವಾಹದಿಂದುಂಟಾದ ಮಕ್ಕಳು ಅಶಾಸ್ತ್ರೀಯಸಂಬಂಧದಿಂದುತ್ಪನ್ನರಾದ ಕಾರಣ ತಂದೆಯ ಆಸ್ತಿಗೆ ಅನರ್ಹರಾದವರೆಂದೂನ್ನೂ ತೀರ್ಪುಗಳು ಆಗುತ್ತಲಿರುವುದರ ಕಾರಣದಿಂದಲೂ, ಈ ಪ್ರಕಾರ ನ್ಯಾಯಸ್ಥಾನಗಳಲ್ಲಿ ವಿಧಿಸಲ್ಪಡುವ ತೀರ್ಪುಗಳು ಈಗಿನ ಆಚರಣೆಗೆ ಅನುಗುಣವಾಗಿದ್ದಾಗ್ಯೂ ಇವು ಹಿಂದೂಮತ ಧರ್ಮಸ್ಥಾಪಕರಾದ ಋಷಿಗಳ ವಚನಗಳಿಗೂ ಮತ್ತೂ ಅಭಿಪ್ರಾಯಕ್ಕೂ ವಿರುದ್ಧಗಳಾಗಿವೆ ಎಂತಲೂ, ಈಗಿನ ಆಚರಣೆಯು ಋಷಿವಚನಗಳ ಅಪಾರ್ಥದಿಂದ ಉಂಟಾದ್ದೆಂತಲೂ ಅನೇಕ ಹಿಂದೂಗಳು ಅಭಿಪ್ರಾಯಪಟ್ಟಿರುತ್ತಾರಾದ ದರಿಂದಲೂ, ತಮ್ಮ ಬುದ್ಧಿ ಮನಸ್ಸುಗಳಿಗೆ ಸ್ಪಷ್ಟವಾಗಿರುವ ಅಶಾಸ್ತ್ರೀಯವಾದ ಆಚರಣೆಯನ್ನು ಬಿಟ್ಟು, ಶಾಸ್ತ್ರೋಕ್ತವಾಗಿರುವ ಆಚರಣೆಯನ್ನು ಅವಲಂಬಿಸಬೇಕೆಂದಿರುವವರಿಗೆ ಕೋರ್ಟುಗಳ ತೀರ್ಮಾನವು ಪ್ರತಿಬಂಧಕಗಳಾಗದಂತೆ ಕಾನೂನು ಮಾಡಬೇಕೆಂದು ಕೇಳಿಕೊಳ್ಳುತ್ತಿರುವುದೂ, ಮತ್ತು ಈ ಪ್ರಕಾರ ಅನೇಕ ಹಿಂದೂಗಳು ಕೇಳುವುದು ಸರ್ವಸಮ್ಮತವಾದದ್ದಾಗಿಯೂ, ಇಂಥಾ ತೀರ್ಪುಗಳನ್ನು ಸರಿಪಡಿಸುವುದು ಧರ್ಮವಾದದ್ದಾಗಿಯೂ ಇರುವುದರಿಂದಲೂ, ಹಿಂದೂ ವಿಧವಾ ವಿವಾಹಗಳ ನಿರ್ಬಂಧಗಳನ್ನು ಮೂಲೋತ್ಪಾಟನ ಮಾಡುವುದು ಪ್ರಜೆಗಳ ಸುಖಕ್ಕೂ, ಲೋಕೋಪಕಾರವೂ ಆಗಿರುವುದರಿಂದಲೂ ಈ ಕೆಳಗೆ ವಿವರಿಸುವಂತೆ ವಿಧಾಯಕಮಾಡಿದೆ

(1) ಹಿಂದೂ ಹೆಂಗಸಿಗೆ ಮದುವೆಯಾದ ತರುವಾಯ ಗಂಡನು ಕಾಲಾಧೀನನಾಗಿಹೋದರೆ ಅಂಥ ಹೆಂಗಸು ಪುನರ್ವಿವಾಹ ಮಾಡಿಕೊಳ್ಳಬಹುದು ಇಂಥಾ ಮದುವೆಯು ಈಗಿನ ಆಚರಣೆಗೂ, ಹಿಂದೂ ಲಾ ಶಾಸ್ತ್ರಾರ್ಥಕ್ಕೂ ವಿರೋಧವಾಗಿದ್ದರೂ ಅಸಿದ್ಧವಾದದ್ದಲ್ಲ —(2) ಪುನರ್ವಿವಾಹ ಮಾಡಿಕೊಳ್ಳುವ ಹೆಂಗಸು ತನ್ನ ಮೊದಲು ಗಂಡನ ಅಥವಾ ಅವನ ವಾರಸುದಾರರ ಆಸ್ತಿಯ ಮೇಲೆ ಇರುವ ಜೀವನಾಂಶದ ಮತ್ತು ವಾರಸು ಹಕ್ಕನ್ನು ಕಳೆದುಕೊಳ್ಳುತ್ತಾಳೆ ಅಲ್ಲದೆ ಅವಳಿಗೆ ವಿಲ್ ಮೂಲಕವಾಗಲಿ ಅಥವಾ ಇನ್ನಾವ ದಸ್ತಾವೇಜು ಮೂಲಕವಾಗಲಿ, ಅವಳ ಜೀವಾವಧಿ ಹಕ್ಕು ಬಂದು ಅವಳು ಪರಾಧೀನ ಮಾಡುವುದಕ್ಕೆ ಹಕ್ಕು ಇಲ್ಲದೇಇರೆ, ಅವಳು ಪುನರ್ವಿವಾಹ ಮಾಡಿಕೊಳ್ಳುವುದಕ್ಕೆ ಅಧಿಕಾರವಿಲ್ಲದವಳಾಗಿಯೂ ಇರುವ ಸಂದರ್ಭದಲ್ಲಿ ಸಹ ತನ್ನ ಹಕ್ಕನ್ನು ಭೋಗಿಸಲಾಡಿಸಿಕೊಳ್ಳುತ್ತಾಳೆ ಅವಳ ಮೊದಲು ಗಂಡನ ಉತ್ತರವಾರಸುದಾರರು ಅಥವಾ ಅವಳು ಸತ್ತ ಮೇಲೆ ಉಂಟಾಗುವ ಹಕ್ಕುದಾರರು ಸದರೀ ಗಂಡನ ಆಸ್ತಿಗೆ ಹಕ್ಕುದಾರರಾಗುತ್ತಾರೆ —(3) ಹಿಂದೂ ವಿಧವೆಗೆ ಪುನರ್ವಿವಾಹವಾದ ಮೇಲೆ, ತನ್ನ ಮೊದಲು ಗಂಡನಿಂದುಂಟಾದ ಮಕ್ಕಳಿಗೆ ತಾನಾಗಲಿ ಅಥವಾ ಇನ್ನಾರಾಗಲಿ ತನ್ನ ಗಂಡನಿಂದ ಬರೆಯಲ್ಪಟ್ಟ ವಿಲ್ ಅಥವಾ ದಸ್ತಾವೇಜು ಮೂಲಕ ಗಾರ್ಡಿಯನ್ ಆಗಿರಬೇಕೆಂದು ಸ್ಪಷ್ಟವಾಗಿ ನಮೂದು ಇದ್ದ ಹೊರತು ಗಾರ್ಡಿಯನ್ ಆಗಿರಲು ಹಕ್ಕಿಲ್ಲ ಇಂಥಾ ಸಂದರ್ಭದಲ್ಲಿ ಮೃತನ ಪಿತನಾಗಲಿ, ಪಿತಾಮಹನಾಗಲಿ, ತಾಯಿಯಾಗಲಿ, ಪಿತಾಮಹಿಯಾಗಲಿ, ಅಥವಾ ಮೃತನ ಇತರ ಗಂಡು ವಾರಸುದಾರರಾಗಲಿ ಮೃತನ ಸ್ಥಳದಲ್ಲಿರುವ ಮೂಲಾಧಿಕಾರವುಳ್ಳ ಸಿವಿಲ್ ಕೋರ್ಟಿಗೆ ಮೃತನ ಮಕ್ಕಳಿಗೆ ಸರಿಯಾದ ಗಾರ್ಡಿಯನ್ ಏರ್ಪಾಡು ಮಾಡಲು ಅರ್ಜಿ ಹಾಕಬಹುದು ಆ ಮೇಲೆ ಕೋರ್ಟಿನವರು ಯುಕ್ತತೋರುವಂತೆ ತಂದೆತಾಯಿಗಳಿಲ್ಲದ ಮಕ್ಕಳಿಗೆ ಜಾರಿಯಲ್ಲಿರುವ ರೂಲ್ಸಿನಂತೆ ಸದರಿ ಮಕ್ಕಳಿಗೆ ಸರಿಯಾದ ರಕ್ಷಕನನ್ನು ನಿಯಾಮಕ ಮಾಡಬೇಕು ತರುವಾಯ ಗಾರ್ಡಿಯನ್ನಾಗಿ ನೇಮಕರಾದವರು ಮೃತನ ಮಕ್ಕಳ ಮೈನಾರಟಿಯಲ್ಲಿ ತಾಯಿಗೆ ಬದಲಾಗಿ ಗಾರ್ಡಿಯನ್ನಾಗಿರಬೇಕು —ಪರಂತು ತಂದೆಯಿಲ್ಲದ ಮಕ್ಕಳಿಗೆ ಜೀವನಕ್ಕೂ ವಿದ್ಯಾಭ್ಯಾಸಕ್ಕೂ ಸಾಕಾದಷ್ಟು ಮೃತನ ಆಸ್ತಿಯಿಲ್ಲದೇಹೋದರೆ ತಾಯಿಯ ಸಮ್ಮತಿ ಹೊರತು ಹೊಸ ಗಾರ್ಡಿಯನನ್ನು ನೇಮಿಸಕೂಡದು ಅಂಥಾ ಹೊಸದಾಗಿ ಬರುವ ಗಾರ್ಡಿಯನ್ನು ತಂದೆಯಿಲ್ಲದ ಮಕ್ಕಳನ್ನು ಸರಿಯಾಗಿ ಪೋಷಣೆ ಮಾಡುವುದಕ್ಕೂ, ವಿದ್ಯಾವಂತರನ್ನಾಗಿ ಮಾಡುವುದಕ್ಕೂ ಜಾತರು ಜಾಮೀನ್ ಕೊಟ್ಟ ಪಕ್ಷದಲ್ಲಿ ಅಂಥಾವನನ್ನು ಗಾರ್ಡಿಯನ್ನಾಗಿ ನೇಮಿಸಬಹುದು —(4) ಈ ಆಕ್ಟು ಜಾರಿಯಲ್ಲಿ ಬರುವುದಕ್ಕಿಂತ ಮುಂಚೆ, ಬಂಜೆಯಾದ ವಿಧವೆಯು ಮೃತನ ಆಸ್ತಿಗೆ ವಾರಸು ಆಗಿರುವಂಥಾವಳು ಪುನರ್ವಿವಾಹ ಮಾಡಿಕೊಂಡದ್ದರಿಂದ ಅಂಥಾ ಮೃತನ ಬಾಬತ್ತು ಪೂರಾ ಅಥವಾ ಸ್ವಲ್ಪ ಆಸ್ತಿಗೆ ಹಕ್ಕುದಾರಳನ್ನಾಗಿ ಈ ಆಕ್ಟು ಮಾಡುವುದಿಲ್ಲ —(5) ಕಳೆದ ಮೂರು ಸೆಕ್ಷನ್‌ಗಳಲ್ಲಿ ಹೇಳಿದ ವಿನಾಯಿತಿ ಹೊರತು ಇತರ ಸಂದರ್ಭಗಳಲ್ಲಿ ಹಿಂದೂ ವಿಧವೆಗೆ ಬರುವ ಹಕ್ಕು ಪುನರ್ವಿವಾಹ ಮಾಡಿಕೊಂಡದ್ದರಿಂದ ಹೋಗುವುದಿಲ್ಲ ಮೊದಲು ಮದುವೆ ಮಾಡಿಕೊಂಡಾಗ ಹ್ಯಾಗೆ ಹಕ್ಕುಬಾಧ್ಯತೆ ಇತ್ತೋ ಪುನರ್ವಿವಾಹ ಮಾಡಿಕೊಂಡದ್ದರಿಂದ ಅಷ್ಟೇ ಹಕ್ಕುಬಾಧ್ಯತೆ ಇರುತ್ತದೆ —(6) ಮೊದಲು ಮದುವೆ ನಾಂಗವಾಗಬೇಕಾದರೆ ಯಾವ ವಚನಗಳು, ಹವನ ಹೋಮಗಳು, ಸಾಂಗ್ಯಗಳು ಬೇಕೋ, ಆಯಾ ವಚನಗಳೇ ಆಯಾಯ ಹವನ ಹೋಮಗಳೇ, ಆಯಾ ಶಾಸ್ತ್ರಗಳೇ ಪುನರ್ವಿವಾಹಕ್ಕೂ ಸಾಕಾಗಿರುತ್ತೆ. ಪುನರ್ವಿವಾಹಕ್ಕೆ ಅಂಥಾ ವಚನಗಳು, ಹವನಹೋಮಗಳು, ಸಾಂಗ್ಯಗಳು ಅನ್ವಯಿಸುವುದಿಲ್ಲವೆಂದು ಪುನರ್ವಿವಾಹವನ್ನು ಅಂಗೀಕರಿಸದೆ ಇರಕೂಡದು —(7) ಪುನರ್ವಿವಾಹವಾಗಬೇಕೆಂಬುವಳು ಮೈನರುವಿಧಂತುವಾಗಿ ಇವಳಿಗೆ ಋತುಶಾಂತಿಯಾಗದ ಪಕ್ಷದಲ್ಲಿ ಪುನರ್ವಿವಾಹವಾಗುವುದಕ್ಕೆ ತನ್ನ ತಂದೆಯ ಅಪ್ಪಣೆಯನ್ನು ಪಡೆಯಬೇಕು ತಂದೆಯಿಲ್ಲದ ಪಕ್ಷದಲ್ಲಿ ಪಿತಾಮಹನ ಅಪ್ಪಣೆ ಪಡೆಯಬೇಕು ಪಿತಾಮಹನು ಇಲ್ಲದಿರುವ ಪಕ್ಷದಲ್ಲಿ ತನ್ನ ತಾಯಿಯ ಸಮ್ಮತಿ ಪಡೆಯಬೇಕು. ತಾಯಿಯೂ ಇಲ್ಲದ ಪಕ್ಷದಲ್ಲಿ ಒಡಹುಟ್ಟಿದ ಅಣ್ಣನ ಅಪ್ಪಣೆ ಪಡೆಯಬೇಕು ಸಹೋದರರೂ ಇಲ್ಲದ ಪಕ್ಷದಲ್ಲಿ ಇತರ ಸಮೀಪ ಗಂಡು ಬಂಧುಗಳ ಅಪ್ಪಣೆ ಪಡೆಯಬೇಕು —ಯಾರು ಈ ಸೆಕ್ಷನ್‌ಗೆ ವಿರೋಧವಾಗಿ ವಿವಾಹ ನಡಸುವುದಕ್ಕೆ ಸಹಕಾರಿಗಳಾಗುತ್ತಾರೆಯೋ ಅಂಥವರು ಒಂದು ವರುಷದ ಸಜಾ ಅಥವಾ ಜುಲ್ಮಾನೆ ಅಥವಾ ಇವೆರಡನ್ನೂ ಅನುಭವಿಸುವುದಕ್ಕೂ, ತೆರುತ್ತದಕ್ಕೂ ಗುರಿಯಾಗತಕ್ಕದ್ದು, ಮತ್ತು ಈ ಸೆಕ್ಷನ್‌ನಲ್ಲಿ ಹೇಳಿರುವಂತೆ ಅಲ್ಲದೆ ಬೇರೆ ವಿಧವಾಗಿ ವಿವಾಹ ನಡಿಸಿದರೆ ಅಂಥಾ ವಿವಾಹವು ಕೋರ್ಟು ತೀರ್ಪು ಮೂಲಕ ರದ್ದಾಗಲ್ಪಡಬಹುದು -ಪರಂತು ಈ ಸೆಕ್ಷನ್ ಹೇಳಿಕೆಗೆ ವಿರೋಧವಾಗಿ ನಡೆದ ವಿವಾಹವು ಸಿದ್ಧವೇ ಅಸಿದ್ಧವೇ ಎಂದು ಚರ್ಚೆಬಿದ್ದಲ್ಲಿ, ಸಮ್ಮತಿ ಕೊಡಲಿಲ್ಲವೆಂಬುದು ಸಂಪೂರ್ಣವಾಗಿ ರುಜುವಾತು ಬಂದಹೊರ್ತು ಸಮ್ಮತಿ ಕೊಟ್ಟಂತೆಯೇ ಭಾವಿಸಬೇಕು —ಅಲ್ಲದೆ ಪ್ರಸ್ತಾಪದ ಮೇಲೆ ಅಂಥಾ ವಿವಾಹವು ಅಸಿದ್ಧವೆಂದು ಹೇಳಕೂಡದು -ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ವಿಧವೆಯು ಮೇಜಾರಟಿಗೆ ಬಂದಿದ್ದ ಪಕ್ಷದಲ್ಲಿ ಅಥವಾ ಅವಳಿಗೆ ನಿಶೇಕಪ್ರಸ್ತವಾಗಿದ್ದ ಪಕ್ಷದಲ್ಲಿ ಪುನರ್ವಿವಾಹ ಮಾಡಿಕೊಳ್ಳಲು ಯಾರ ಸಮ್ಮತಿಯೂ ಪಡೆಯಬೇಕಾದ ಅವಶ್ಯಕವಿಲ್ಲ ಅವಳ ಇಚ್ಛೆಯೇ ಸಾಕಾದ್ದಾಗಿರುವುದರಿಂದ ಅಂಥ ಮದುವೆಯು ಕ್ರಮವಾದದ್ದಾಗಿಯೂ, ಆ ಪ್ರಕಾರ ಊರ್ಜಿತವಾದದ್ದಾಗಿಯೂ ಆಗುತ್ತದೆ

ಖಾತ್ರಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದ ಬರತಕ್ಕ ಖಾತ್ರಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮಗೆ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು , ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಖಾತ್ರಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಖಾತ್ರಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂದು ಎದುರುನೋಡಕೂಡದು ಖಾತ್ರಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಖಾತ್ರಿಗಳನ್ನು ಅನೇಕರು "ರೆವ್ ಇ ಡಬ್ಲಿಯು ಡಾಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಖಾತ್ರಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಖಾತ್ರಿದಾರರೆಲ್ಲಾ ಈ ವಿಷಯವನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಪಡಿಸುತ್ತೇವೆ

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಎ ಟೀಚರ್, ಮೈಸೂರು—ಮೊದಲು ಮ್ಯುನಿಸಿಪಲ್ ಕೌನ್ಸಿಲರ ಮೂಲಕ ನೀವು ಹೇಳುವ ವಿಷಯವನ್ನು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಚರ್ಚೆಗೆ ಬರುವಂತೆ ಮಾಡಿದರೆ ನಿಮ್ಮ ಉದ್ದೇಶವು ನೆರವೇರಬಹುದು

ಕೆಳ್ಳೂರುಕಟ್ಟೆಯ ಎಚ್ ಎನ್ ಕೃಷ್ಣಪ್ಪನವರು ಜೀವವಿಮೆ ಕಂಪನಿಗಳ ನಂಬಿಕೆ ಜವಾಬ್ದಾರಿಗಳನ್ನು ಕುರಿತು ಕೇಳಿರುವ ಪ್ರಶ್ನೆಗಳಿಗೆ ನಾವು ಜವಾಬು ಕೊಡಲಾರೆವು ಮುಂಬರಾಗಿ ಸೇರತಕ್ಕವರು ಆಯಾ ಕಂಪನಿಗಳ ನಿಜಸ್ಥಿತಿಯನ್ನು ಪರಿಷ್ಕಾರವಾಗಿ ವಿಚಾರಿಸಿಕೊಂಡು ಸೇರಬಹುದಾಗಿದೆ

ಕಳ್ಳೂರುಕಟ್ಟೆಯಲ್ಲಿರುವ ಗಣಪತಿಯವರು ಕೆಲವು ಮಾಲುಗಳನ್ನು ಮದರಾಸ್ ಶ್ರೀಧರೇಸರಿ ಕಂಪನಿಯಿಂದ ತರಿಸಿಕೊಂಡು ಮೋಸಹೋದರೆಂದು ತಿಳಿಸುತ್ತಾರೆ ಅವರು ಆ ಕಂಪನಿಯವರಿಗೇ ಬರೆದುಕೊಳ್ಳಬೇಕಾಗಿದೆ

ತುಮಕೂರಿನಲ್ಲಿ ನಡೆದ ಎರಡು ವಿದ್ಯಮಾನಗಳನ್ನು ಪ್ರಕಟಿಸುವಂತೆ ಒಬ್ಬ ಸಹೋದರಿಯು ಬರೆದಿದಾರೆ ಇವು ಸಂಘದಲ್ಲೇ ಚರ್ಚೆಯಾಗಿ ಪರಿಹರವಾಗುವುದು ಉತ್ತಮ ಇಂಥಾ ದುರ್ನಡತೆಯ ವಿಚಾರಗಳನ್ನು ಪ್ರಕಟಿಸಲು ನಮಗೆ ಅಭಿಮತವಿಲ್ಲ

ಯಥಾರ್ಥವಾದಿ, ಆರೂಡಿ—ನಿಮ್ಮ ಅಭಿಮತವನ್ನು ಇಲಾಖಾ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಅವರು ವಿಚಾರಿಸಿ ಕ್ರಮಪಡಿಸಿಕೊಡುತ್ತಾರೆ.

ತರೀಕೆರೆ ಬಾಲಿಕಾ ಪಾಠಶಾಲೆಯಲ್ಲೂ, ಚಿತ್ರದುರ್ಗದ ತಾಲ್ಲೂಕು ಭರಮಸಾಗರದ ಎ ವಿ ಸ್ಕೂಲಿನಲ್ಲೂ ಬಹುಮಾನ ವಿನಿಯೋಗಗಳು ನಡೆದವು ಪಾವಗಡ ತಾಲ್ಲೂಕು ನಿಡುಗಲ್ ಹೋಬಳಿ ಸೀತಾರಾಮಪುರದಲ್ಲಿ ಮ॥ ಮಮಕೂರು ವೀರಣ್ಣನವರು ಸ್ವಂತಖರ್ಚಿನಿಂದ ಒಂದು ಕನ್ನಡ ಧರ್ಮ ಪಾಠಶಾಲೆಯನ್ನು ಪ್ರಾರಂಭಿಸಿ ನಡಿಸುತ್ತಿರುವ ಸಂತೋಷವಿಷಯವನ್ನು ಪ್ರಕಟಮಾಡುತ್ತೇವೆ ತೀರ್ಥಹಳ್ಳಿ ತಾಲ್ಲೂಕು ಸೊಣಬೂರು ವಿ ಎ ಸ್ಕೂಲಿನಲ್ಲಿ ಅಮಲ್ದಾರ್ ಮೆ॥ ಧರ್ಮರಾಯರು ಬಾಲಕರಿಗೆ ಬಹುಮಾನಗಳನ್ನು ಕೊಟ್ಟು ಆಟಕ್ಕೆ ಸಹಾಯಮಾಡಿ ಪ್ರೋತ್ಸಾಹಪಡಿಸಿರುತ್ತಾರೆ.

ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಮದರಾಸ್ ಬಜ್ವಾಬಾರ್ ನಂಗುಂಬಾಕಂ ಎಂಬ ಕಂಪನಿಯ ಸೀರೆಗಳನ್ನು ನಮ್ಮ ವಾಚಕರಲ್ಲಿ ಕೆಲವರು ತರಿಸಿದರೆಂತಲೂ, ಆ ಸೀರೆಗಳು ವಿವರಣೆಗೆ ತಕ್ಕಂತೆ ಇಲ್ಲದೆ ಅವರು ಮೋಸಹೋದರೆಂತಲೂ, ಇನ್ನುಮುಂದೆ ಯಾರೂ ಅವರಿಂದ ಸೀರೆಗಳನ್ನು ತರಿಸಿಕೊಳ್ಳಬಾರದೆಂದು ಪ್ರಕಟಿಸಬೇಕೆಂತಲೂ ನಮಗೆ ಖಾತ್ರಿಗಳನ್ನು ಕಳುಹಿಸಿದಾರೆ ಸ್ಥಳಸಂಕೋಚದಿಂದ ಅವನ್ನು ಪ್ರಕಟಿಸಲಿಲ್ಲ ಆದರೂ ಆ ಕಂಪನಿಯವರು ಆ ರೀತಿ ಮೋಸ ಮಾಡಿದ್ದು ವ್ಯಸನಕರವಾಗಿದೆ ವಾಚಕರು ಪತ್ರಿಕೆಗಳಲ್ಲಿ ಪ್ರಕಟವಾಗುವಂಥಾ ಪದಾರ್ಥಗಳ ಕಂಪನಿಗಳ ಪೈಕಿ ಯೋಗ್ಯರಾದವರಲ್ಲಿ ಸಾಮಾನುಗಳನ್ನು ಕೊಳ್ಳಬೇಕು. ಕಂಪನಿಗಳಲ್ಲಿ ಅನೇಕ ಮೋಸಗಳುಂಟು. ಇಂಥಾ ಕೃತ್ಯಗಳಿಂದ ಅವು ತಮ್ಮ ಹೆಸರನ್ನು ಹಾಳುಮಾಡಿಕೊಳ್ಳುವುದಲ್ಲದೆ ಇತರ ಧರ್ಮವಾದ ಕಂಪನಿಗಳ ವಿಷಯದಲ್ಲೂ ಜನರು ಸಂಶಯಪಡುವಂತೆ ಮಾಡುತ್ತಾರೆ ನಮ್ಮ ಖಾತ್ರಿದಾರರು ನಷ್ಟಪಟ್ಟ ವಿಷಯದಲ್ಲಿ ಮೇಲ್ಕಂಡ ಕಂಪನಿಯವರಿಗೆ ನಾವು ಕಾಗದ ಬರೆದು ಎಚ್ಚರಿಸುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್

ಕಾರಣ ತಿಳಿಯಬೇಕು

ಅಯ್ಯಾ,

1881 ನೇ ಇಸವಿಯಲ್ಲಿ ಪ್ರಿಂಟಾಗಿರತಕ್ಕ ರಘುನಾಥರಾವ್ ಭೂಗೋಳದಲ್ಲಿ "ನಂದೀದುರ್ಗದ ಬೆಟ್ಟದ ಮೇಲೆ ರಾತ್ರಿಯ ಕಾಲದಲ್ಲಿ ನಿಂತುಕೊಂಡು ನೋಡಿದರೆ ಉತ್ತರ ಪಿನಾಕಿನಿಯ ಕಣಿವೆಯಲ್ಲಿ ಕೋಟ್ಯನುಕೋಟಿ ದೀಪಗಳ ಬೆಳಕು ಕಾಣುವುದು" ಎಂದೂ, "ಹೀಗೆ ಕಾಣುವುದಕ್ಕೆ ಸರಿಯಾದ ಕಾರಣ ನೋ ಚೆನ್ನಾಗಿ ಗೊತ್ತಾಗಲಿಲ್ಲ" ಎಂದೂ ಪ್ರಿಂಟಾಗಿದೆ ಹೀಗೆ ಪ್ರಿಂಟ್ ಮಾಡುವದಾಗಿ 11 ವರ್ಷಗಳಾಗಿರಬಹುದು ಈಗ ಯಾರಿಗಾದರೂ ಅರಿವಿರಬಹುದು ತಿಳಿದಂಥಾ ಮಹಾಶಯರು ಆ ಕಾರಣವನ್ನು ಪ್ರಕಟಿಸಿ ನನ್ನ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕೆಂದು ಬೇಡುತ್ತೇನೆ

ವಿದ್ಯಾರ್ಥಿ

ಪ್ರಜೆಗಳ ಆಕ್ಷೇಪ.

ಅಯ್ಯಾ,

ನೆಲಮಂಗಲದ ತಾಲ್ಲೂಕು ಸೂಲುಕುಂಟೆ ಗ್ರಾಮದಲ್ಲಿ ನಾರುಮಾಗಲು ಲಕ್ಷ್ಮೀನಾರಾಯಣಪ್ಪನೆಂಬುವನು ತಮ್ಮ ಬಂಧುಗಳ ಮನೆಯಲ್ಲಿದ್ದು ತನ್ನ ಊರಿಗೆ ಹೊರಡಬೇಕೆಂದಿರುವಾಗ್ಗೆ ಚೆಂಗಾಮಗೇಯ ಕಡೆಯಿಂದ 10-13 ಜನ ಮುಸಲ್ಮಾನರು ನೇತ್ರಚಿಕಿತ್ಸೆ ಮಾಡುತ್ತೇವೆಂದು ಬರಲು ಸದರಿ ಲಕ್ಷ್ಮೀನಾರಾಯಣಪ್ಪನು ತನ್ನ ಕಣ್ಣು ಕೊಂಚ ಮಂದವಾಗಿದ್ದುದರಿಂದ ಚಿಕಿತ್ಸೆ ಮಾಡುವಂತೆ ಮೇಲ್ಕಂಡ ಜನರಿಗೆ ತೋರಿಸಿದನು ಆ ವೈದ್ಯರು ಪ್ರತಿ ಸರಿಮಾಡುತ್ತೇವೆಂದು ಹೇಳಿ ಮುಂಗಡ 5 ರೂಪಾಯಿ ತೆಗೆದುಕೊಂಡು, 2 1 ದಿವಸ ಕಣ್ಣಿಗೆ ಏನೋ ಕಪ್ಪು ಹಾಕಿ 1 ನೇ ದಿವಸ ಆತನಿಗೆ ತಿಳಿಸದೆ ಶಸ್ತ್ರಪ್ರಯೋಗಿಸಿ ಪರೆ ತೆಗೆದು ಏನೋ ಪಟ್ಟಿ ಹಾಕಿದರು 7 8 ದಿವಸ ಬರುತ್ತಾ ಹೋಗುತ್ತಾ ಆಜುಬಾಜು ಗ್ರಾಮಗಳಲ್ಲಿ ಇದೇ ರೀತಿ ಮಾಡುತ್ತಾ ಜನಗಳನ್ನು ಮೋಸಪಡಿಸಿ ದುಡ್ಡನ್ನು ಕಸಗೊಳ್ಳುತ್ತಾ ಬಂದು, ಲಕ್ಷ್ಮೀನಾರಾಯಣಪ್ಪನಿಗೆ ಕಣ್ಣು ತಲಗಳು ಪೋಲ... ಮದುವಾಗಲು ಇವರನ್ನು ಕೇಳುವಾಗ್ಗೆ 2 1 ದಿನಗಳಲ್ಲಿ ಸರಿಹೋಗುತ್ತದೆಂತಲೂ, ಇನ್ನು 1 5 ದಿನಗಳಲ್ಲಿ ಬರುತ್ತೇವೆ ಹೋ ಹೇಳಿಹೋದವರು ಇದುವರೆಗೆ ನೋಡಿದಾಗ್ಯೂ ಅವರ ಪತ್ತೆಯೇ ಇಲ್ಲ ಅವರು ತೆರಳಿದ ಮೇಲೆ ಲಕ್ಷ್ಮೀನಾರಾಯಣಪ್ಪನಿಗೆ ಕಣ್ಣು ತಳಿಗಳು ಪ್ರೋತು ಜಾಸ್ತಿಯಾಗಿ ಬಾಧೆ ಅಧಿಕವಾಗಿ ಎಲ್ಲಾ ಕಾಲಗಳನ್ನು ತೊರೆದು ಈಗ ಇಲುಮುಬಗೆ ತುಮಕೂರು ಆಸ್ಪತ್ರೆಗೆ ಹೋಗಿರುತ್ತಾನೆ ಆದಕಾರಣ ಮೇಲ್ಕಂಡ ಚೆಂಗಾಮಗೇ ಕಡೆಯ ನೇತ್ರಚಿಕಿತ್ಸೆಯ ಮುಸಲ್ಮಾನರ ವಿಷಯದಿಂದ ಯಾರೂ ಮೋಸಹೋಗದ ರೀತಿ ಜಾಗಾ ಇಟ್ಟಿರಬೇಕೆಂದು ವಿಜ್ಞಾಪಿಸಿರುತ್ತೇನೆ ಅಲ್ಲದೆ ಸರ್ಕಾರದವರು ಇಂಥಾ ದುಷ್ಟರ ಮೋಸಗಾರಿಕೆಯನ್ನು ತಪ್ಪಿಸಿ ಪ್ರಜಾಸಮುದಾಯ ಭಂಗಪಾಟಾಗದಂತೆ ಕಾಪಾಡುತ್ತಾರೆಂದು ನಂಬುತ್ತೇನೆ

ಪ್ರಜಾಭಿಮಾನಿ

[ಸರ್ಕಾರದವರು ಧರ್ಮಾದ ಆಸ್ಪತ್ರೆಗಳನ್ನೂ ವೈದ್ಯರನ್ನೂ ಏರ್ಪಡಿಸಿದ್ದರೂ ಪ್ರಜೆಗಳು ಈ ರೀತಿ ಮೋಸಗಾರರ ಬಳಿ ಸಿಕ್ಕಿ ದುಡ್ಡು ಕಳೆದುಕೊಂಡು ಆರೋಗ್ಯ ಕೆಡಿಸಿಕೊಳ್ಳುವುದಕ್ಕಾಗಿ ವಿಷಾದಪಡಬೇಕಾಗಿದೆ —ಎಡಿ]

ಮದ್ಯಪಾನವು ನಾಮಧಾರಿಗಳೂ

ಆಯ್ಯಾ,

ಮದ್ಯಪಾನವೆಂಬ ದುರಭ್ಯಾಸವನ್ನು ಅಪಗೀಟಬೇಕೆಂಬ ಸದುದ್ದೇಶವು ... ವು ಪಾವಂಗಿ ರಾಮಣ್ಣಗೌಡರು ಕೆಲವು ಜನ ಮಹನೀಯರ ಸಹಾಯದಿ... ಒಂದೆರಡು ಸಭೆಗಳನ್ನು ಸೇರಿಸಿ ನಮ್ಮ ಜನಾಂಗದವರು ಹೆಂಡ, ಸೇಂದಿ... ಷರಾಬ್ ಮೊದಲಾದ ನಿಷಾ ಪದಾರ್ಥದ ಸೇವನೆಯನ್ನು ತ್ಯಜಿಸಿ ನಾಗರಿಕ... ಯೋಗ್ಯರಾದ ಕಾಫಿ, ಟೀ, ಇವನ್ನು ಉತ್ತರೋತ್ತರ ಅಭ್ಯಾಸಕ್ಕೆ ತರಬೇಕು... ಇವನ್ನು ಬಿಟ್ಟು ಸುರಾಪಾನವನ್ನು ಅಭ್ಯಾಸಮಾಡಿದರೆ ನಾವು ಕೆಡುವುದಲ್ಲ... ನಮ್ಮ ಸಂತತಿ ಪ್ರವರ್ಧಮಾನಕ್ಕೆ ಬರತಕ್ಕ ಹುಟ್ಟುವ ಮಕ್ಕಳನ್ನು ಭಾವಿಯಲ್ಲಿ ಳಿಸಿ ನಾವು ನಮ್ಮ ಜೀವಮಾನಕಾಲವನ್ನು ತೊರೆದು ಹೋಗುವಾಗ್ಗೆ ನಮಗೆಷ್ಟು ಸಂಕಟ, ನಮ್ಮನ್ನು ನಂಬಿಕೊಂಡಿರುವ ಹೆಂಡರು ಮಕ್ಕಳಿಗೆಷ್ಟು ವ್ಯಸನಪಡಿಸಬೇಕಾಗುತ್ತೆಂಬ ಯೋಚನೆಯನ್ನು ಸ್ವಲ್ಪವೂ ಇಟ್ಟುಕೊಳ್ಳದೆ "ಸತ್ತವ ಶರೀರವತ್ತಬಿತ್ತೆಂಬದಾಗಿ ಹೇಳುತ್ತಾ" ತಮ್ಮ ಕೆಟ್ಟ ದುರಾಚಾರವನ್ನು ಬಿಡದೆ ತಮ್ಮ ಧನಧಾನ್ಯಗಳ ಅಭಿವೃದ್ಧಿಗೆ ಇದೇ ಮೂಲವೆಂದು ಹೇಳಿಕೊಳ್ಳುತ್ತಾ ತಮ್ಮ ಅಪ್ಪ ನೆಟ್ಟ ಆಲದಮರವೆಂದು ಕಂಠಕ್ಕೆ ನೇಣನ್ನು ಹಾಕಿಕೊಳ್ಳುವ... ಬಂಡಿ ಸಹೋದರರನ್ನು ನೋಡಿ ತುಂಬಾ ವಿಷಾದಿಸಬೇಕಾಗುತ್ತೆ ಸ್ವಲ್ಪ ... ರಿಕವಂತರು ತಾವು ಕುಡಿಯುವದನ್ನು ಬಿಟ್ಟಿದ್ದೇವೆಂದು ಹೇಳಿಕೊಳ್ಳುತ್ತಾ ಗುಪ್ತವಾಗಿ ಸೇವನೆಮಾಡುತ್ತಾ ಅದು ಹೊರಬೀಳುವ ಸಂದರ್ಭ ಬಂದರೆ ಅರ್ಥಸಾಧನವಾದ ಮಾತನ್ನು ಬಿಟ್ಟು ಯುಕ್ತಿಸಾಧನವಾದ ಮಾತನ್ನು ಆಡಿ ತಾವು ಸೇರದಂತೆ ತೋರ್ಪಡಿಸಿಕೊಳ್ಳುವರು ಈ ಮದ್ಯಪಾನವೆಂಬ ಮಹಾರಾಕ್ಷಸನ ಬಲೆಯಿಂದ ತಪ್ಪಿಸಿಕೊಳ್ಳದೆ ಹೋದರೆ ರೈತರಾದ ನಾವು ಪುರುಷಾರ್ಥಿಯನ್ನು ಹೊಂದುವುದಕ್ಕೆ ಯಾವ ಮಹಾತ್ಮನಿಂದಲೂ ಆಗಲಾರದೆಂದು ತೋರುತ್ತೆ ಹೆಚ್ಚಾಗಿ ಬೆಳೆಯನ್ನು ಹೊಂದಬೇಕಾದರೆ ನಮಗೆ ಚುರುಕಾಗಿಯೂ, ಬಲ... ಗಿಯೂ ಇರುವ ಎತ್ತುಗಳು ಹೇಗೆ ಉಪಯೋಗವೋ ಹಾಗೆಯೇ ರೈತನು ... ಲನ್ನು ಹೆಚ್ಚಾಗಿ ಕೊಡಮಾಡಬೇಕಾದರೆ ಅವನು ಹೆಚ್ಚಾಗಿ ದೇಹಶ್ರಮಪಡುವವನಾಗಿರಬೇಕು ಪೂರ್ವದಲ್ಲಿ ಒಬ್ಬ ಗಂಡಾಳು ಒಂದು ಹೆಣ್ಣಾಳು ಒಂದು ಜೊತೆ ಎತ್ತು ಮಾಡುವ ಕೆಲಸವನ್ನು ಈ ಕಾಲದಲ್ಲಿ ಎರಡು ಜೊತೆ ಎತ್ತು ಇಬ್ಬರು ಹೆಣ್ಣಾಳು ಇಬ್ಬರು ಗಂಡಸರು ಇವರು ಮಾಡುವುದೇ ದುರ್ಲಭವಾಗಿದೆ ಇದಕ್ಕೆ ಕಾರಣವೇನೆಂದು ವಾಚಕರು ಪ್ರಶ್ನೆಮಾಡಬಹುದು ಇದಕ್ಕೆ ಕಾರಣ ಬಾಲ್ಯವಿವಾಹಗಳು ಪೂರ್ವದಲ್ಲಿ ನಡೆಯುತ್ತಿರಲಿಲ್ಲ ಹೆಂಗಸರು ರಜಸ್ವಲೆಯರಾಗಿ ಮೂರು ನಾಲ್ಕು ವರ್ಷಗಳು ಕಳೆದ ಹೊರತು ವಿವಾಹದಾನ ಮಾಡುತ್ತಿರಲಿಲ್ಲ ಇದರಿಂದ ಅವರಲ್ಲಿ ಜನಿಸಿದ ಮಕ್ಕಳು ಬಲಿಷ್ಠರಾಗಿಯೂ, ಶಕ್ತರಾಗಿಯೂ ಕೆಲಸಮಾಡುವವರಾಗಿಯೂ ಇದ್ದರು ಈಗ ಚಿಕ್ಕ ವಯಸ್ಸಿನಲ್ಲಿಯೇ ...

...ವಂಶ ಪುರುಷನು ಚಿಕ್ಕ ವಯಸ್ಸಿನಲ್ಲಿಯೇ ಸಂಸಾರಸುಖವನ್ನು ...ವುದರಿಂದ ಇವನ ಪೌರುಷವು ಚಿಕ್ಕತನದಲ್ಲಿಯೇ ನಷ್ಟವಾಗುವದ ...ದಿಂದ ಹುಟ್ಟುವ ಮಕ್ಕಳು ದುರ್ಬಲರಾಗಿಯೂ, ರೋಗಪೀಡಿತರಾ... ಅಲ್ಪಾಯುಗಳಾಗಿಯೂ ಆಗುವರು. ಅಲ್ಲದೆ ನಮ್ಮ ಪೂರ್ವಿಕರು ...ವೇ ಮೊದಲಾದ ಮಾದಕ ಪದಾರ್ಥಗಳನ್ನು ಸೇವಿಸುತ್ತಿರಲಿಲ್ಲ. ಅದ... ಯಾವ ಪ್ರಯೋಜನವೂ ಕಾಣುತ್ತಿರಲಿಲ್ಲ. ಈಗ ಅದನ್ನು ಬಿಟ್ಟು ...ವರ್ಷಗಳೊಳಗಾಗಿಯೇ ಕೆಮ್ಮು, ಉಬ್ಬಸ ಮೊದಲಾದ ಕಲ್ಪನೆ ...ಕಲ್ಪಿಸಿಕೊಂಡು ಷರಾಬ್ ತೆಗೆದುಕೊಂಡುಬಾರೆಂದು ತಮ್ಮ ಮನೆ ...ಗಳನ್ನು ಕರೆದು ಜಾಗ್ರತೆಯಾಗಿ ಅಂಗಡಿಗೆ ಹೋಗಿ ತೆಗೆದುಕೊಂಡು ...ಆಜ್ಞಾಪಿಸುವರು ಇದರಿಂದ ನಮಗೆ ಜಾಹೀರಿಯುವದನ್ನು ಇಟ್ಟು ...ದು ಮೊದಲನೇ ಉಪ್ಪೇಕ್ಷಣಾಗಿದಬೇಕಾಗುತ್ತೆ. ಇದರಿಂದ ನಮಗೆ ...ಎಂದು ಕೇಳಬಹುದು ಆರೋಗ್ಯ, ದ್ರವ್ಯ, ಮಾನ, ಶರೀರ, ಕುಲ, ...ಆಯುಸ್ಸು, ವಿದ್ಯೆ, ಜ್ಞಾನ, ಸಮೂಹ, ಮನೆ, ನಂಬಿಕೆ, ಗುಪ್ತ, ಯೌವ... ಮೋಕ್ಷ, ಬಲ, ಗುರು, ಇವುಗಳನ್ನೆಲ್ಲಾ ಹೋವರು ಮನುಷ್ಯನಿಗೆ ...ಕ ಭಾಗ್ಯಗಳು. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವಂತೆ ನಮ್ಮನ್ನು ...ಮದ್ಯಪಾನವೆಂಬ ಕಲಿಯುಗದ ಪಾಪಕ್ಕೆ ಕಿವಿಗೊಡುವ ಮನುಷ್ಯನಿಗೆ ವಂಚನೆಯಾಗುವದೆಂಬುವುದು ಎಲ್ಲರಿಗೂ ತಿಳಿದ ಅಂಶವಾಗಿದೆ ...ಮನುಷ್ಯನಿಗೆ ಜ್ಞಾನವೃದ್ಧಿಯಿಂದ ಪರಮತ್ತ ಹೋಗಿ ಮನುಷ್ಯತ್ವವುಂಟಾ... ಸೃಷ್ಟಿಯಲ್ಲಿ ಜಗದೀಶ್ವರನು ಕರುಣಾಳುವಾಗಿ ಮನುಷ್ಯ ಪ್ರಾಣಿಗೆ ...ವ ಜ್ಞಾನವನ್ನು ಸ್ವಪ್ರಯತ್ನದಿಂದ ಹಚ್ಚಿಸಿಕೊಳ್ಳದಿದ್ದರೆ ಪ್ರಯೋಜನ ...ಅಡವಿಯಲ್ಲಿ ಬಿದ್ದ ಬೆಳದಿಂಗಳಂತೆ ನಿರರ್ಥಕವಾಗುವುದು. ಸ್ವರೂಪ ಮನುಷ್ಯನಾಕಿರುತ, ನಡೆನುಡಿಯಲ್ಲಿ ತಿಯಕ್ಷಗ ಂತುಗಳನಿಸಿಕೊಳ್ಳುವುದಕ್ಕೆ ...ವುದಕ್ಕಾದೀತೇ. ಆದರಲ್ಲಿಯೂ ಮನುಷ್ಯನು ಯೋಚನಪರನೂ, ...ಯೂ, ಯುಕ್ತಾಯುಕ್ತಗಳನ್ನು ಅರಿತವನೂ ಆಗಿರುತ್ತಾನೆ. ಇಂತಹ ...ಪುರುಷನು ದೇವರು ತನಗೆ ಕೊಟ್ಟಿರುವ ಸದಸದ್ವಿವೇಕವನ್ನು ಸ್ವಲ್ಪ ...ಯೋಗಿಸದೆ ಕಣ್ಣುಮುಚ್ಚಿಕೊಂಡು ಅತ್ಯಂತ ಅವಮಾನಕರವಾಗಿಯೂ, ...ಕರವಾಗಿಯೂ ತೋರುವ ಮದ್ಯಪಾನವನ್ನು ಸೇವಿಸುತ್ತಿರುವುದು ಅವನಿಗೆ ...ಕೀರ್ತಿಯನ್ನು ತರತಕ್ಕದ್ದಲ್ಲವು ತಮ್ಮ ಮಕ್ಕಳ ಸುಖವನ್ನೂ, ...ತಮ್ಮ ಸಂತತಿ ಮತ್ತು ಜನಾಂಗದ ಕ್ಷೇಮವನ್ನೂ ಬಯಸಿ, ಸ್ವಾರ್ಥ ...ತ್ಯಾಗದಿಂದ ಈ ಗವಾಡಿ ವಿವೇಕಶಾಲಿಗಳೆನಿಸಿಕೊಳ್ಳುವವರಿಗೆ ಜಗ... ಆಯುರಾರೋಗ್ಯವನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವನು.

ಕೆ ರಂಗಪ್ಪನಾಯ್ಕ, ಕವಲೇದುರ್ಗ.

ತಾಲ್ಲೋಕು ವರ್ತಮಾನಗಳು.

...ಗ್ರಾಮಗೊಂಡ್ಲು.—ಇಲ್ಲಿ 4 ದಿನಗಳಿಂದ ನಡೆದಿರುವ... ...ಗೆ ಆದರಣೆಯಾಗಿದೆ ಧಾರ್ಮಿಕನಾಗಿಸಳು ಯಥಾಪ್ರಕಾರವಾಗಿ ...ಸಂವತ್ಸರಗಳನ್ನು ಸ್ಮರಿಸಿಕೊಳ್ಳುವಂತಿವೆ.—ಈ ಟವರ್‌ನಲ್ಲಿ ...ಪ್ಪ ಪಟೇಲರವರ ತಾಯಿ ಗೌರಮ್ಮನೆಂಬುವರು 103 ವರುಷದ... ಬದುಕಿದ್ದು ಒಳ್ಳೇ ಹೆಸರು ಪಡೆದು ಇದೇ ಮಾಹೆ 11 ನೇ ತಾ... ...ಬೆಗ್ಗೆ ವೈಕುಂಠವಾಸಿಗಳಾದರು ಮಧ್ಯಾಹ್ನ 12 ಘಂಟೆಯ ವರೆವಿಗೂ ...ವಾರ್ತೆಯನ್ನು ಕೇಳಿದ ನೂರಾರು ಜನರು ಇವರ ಮನೆಗೆ ಬಂದು ...ಗಳನ್ನು ಹೊಗಳುತ್ತಾ ದುಃಖಿಸುತ್ತಿದ್ದರು. ಒಂದು ಘಂಟೆಗೆ ಶವ ...ಶಾನಭೂಮಿಗೆ ಬಹಳ ವಿಜೃಂಭಣೆಯಿಂದ ಊರಲ್ಲಿ ಮೆರವಣಿಗೆಮಾಡಿ ...ಹೋಗಿ ಸಾಯಂಕಾಲ 4 ಘಂಟೆಗೆ ದಹನ ಮಾಡಿದರು.—ಈ ...ಕೋಟೆಯಲ್ಲಿ ಪೋಸ್ಟ್ ಆಫೀಸಿನ ಹಿಂಭಾಗದಲ್ಲಿರುವ ಮ ಅವಾಜ ...ಯ್ಯನವರ ಮನೆಯಲ್ಲಿ 12 ನೇ ತಾ ಮಂಗಳವಾರ ರಾತ್ರಿ 10 ...ದಲ್ಲಿ ಮನೆಯವರು ಊಟಮಾಡುತ್ತಿರುವ ವೇಳೆ ಕಳ್ಳರು ...ಲನ್ನು ಹಾಕಿ ಕಲ್ಲುಗಳ ದಾಳಿಮಾಡಿಕೊಂಡು ಕುಳಿತಿದ್ದನ್ನು ಮನೆ ...ಕೆಲವು ಕಂಡು ಕೂಗಿಕೊಳ್ಳಲು ನೆರೆಹೊರೆಯವರು ಬರುವಷ್ಟರಲ್ಲಿ ಕಳ್ಳರೆಲ್ಲಾ ...ದರು ಈ ವರ್ತಮಾನವು ಊರಲ್ಲೆಲ್ಲಾ ಹರಡಿ ನೋಡಲಾಗಿ ಜನ... ...ಈ ಕಳ್ಳತನವು ಮೊಲ್ಕಂಡವರ ಮನೆ ಬಾಗಿಲಿಗೆ ಜಂಟಿಯಾಗಿರುವ ಮ ...ಕೇಶವರಾವ ನನವರ ಮನೆಗೆ ಕನ್ನಾ ಹಾಕಲು ಬಂದಿದ್ದರೆಂದು ...ಕೊಳ್ಳುತ್ತಿದ್ದರು.—ಈ ಊರಿನ ಚಿಕ್ಕರ ಬೀದಿಯಲ್ಲಿ ದೊಡ್ಡ ಗರಡಿಯ ...10 ಗೋಲಿಯ ಪಟ್ಟಿನ ಜೂಜಾಟವು ದಿನಪ್ರತಿ 6-7 ವರುಷದ ಹುಡು... ...10 20 ರೂಪಾಯಿವರಿಗೂ ಆಡುತ್ತಿರುವರು ಇವರೇ ಇಷ್ಟರಮಟ್ಟಿಗಿರು... ...ದೊಡ್ಡವರು ಇನ್ನೆಷ್ಟರ ಆಟವಾಡಬಹುದೆಂಬುದನ್ನು ವಾಚಕರೇ ಊಹಿಸ... ...ಗಳು ಮೊಲ್ಕಂಡ ಕಳ್ಳತನಕ್ಕೂ ಈ ಜೂಜಾಟಕ್ಕೂ ಮುಖ್ಯ ಪೋಲೀ... ...ಬಂದೋಬಸ್ತು ಸರಿಯಾಗಿಲ್ಲದಿರುವುದೇ ಕಾರಣವಾಗಿರುತ್ತೆ. ಮುಂದಾದರೂ ...ಪೋಲೀಸಿನವರು ಸರಿಯಾದ ಬಂದೋಬಸ್ತಿನಿಂದ ಇಂಥಾ ಘಟನೆಗಳನ್ನು ...ವರೆಂದು ನಂಬಿರುತ್ತೇವೆ

...ತೆರೆ ತಾ|| ಅತ್ತಿಬೆಲೆ.—ಈ ಊರಲ್ಲಿ ಕಳೆದ ತಾ. 20 ರಲ್ಲಿ ಆನೇ... ...ಉಪಾಧ್ಯಾಯರ ಸಂಘದ ಮೀಟಿಂಗು ನಡೆದು ಇದೇ ಊರಿನ ಬಾಯ್ಸ್ ...ಲ್ಲಿ 140 ಮಂದಿ ಬಾಲಕ ಬಾಲಕಿಯರಿಂದಲೂ ಸುಮಾರು 200 ಮಂದಿ ...ರಿಂದಲೂ ಆಜುಬಾಜು ಗ್ರಾಮಗಳ ಜನಗಳಿಂದಲೂ ಸುಮಾರು 30 ...ಉಪಾಧ್ಯಾಯರುಗಳಿಂದಲೂ ತುಂಬಿ ಆ ಸಭೆಯ ಅಗ್ರಾಸನವನ್ನು ಬೆಂಗ... ...ಳೂರು ಡಿಸ್ಟ್ರಿಕ್ಟ್ ಅಸಿ ಇನ್ಜನಿಯರು ಮ|| ವೆಂಗಳಾಚಾರ್ಯರವರು ಮತ್ತು ...ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಅನಂತಸುಬ್ಬರಾಯರು ಅಗ್ರಾಸನ... ...ಆ ದಿವಸ ಮಧ್ಯಾಹ್ನ 2 ಗಂಟೆಗೆ ಅಲಂಕರಿಸಿದ್ದರು ಆ ದಿವಸ ಬಂದಿ... ...ದವರೆಲ್ಲಾ ಇಲ್ಲಿ ಮ್ಯಾನೇಜರವರ ಛತ್ರದಲ್ಲಿ ಊಟ ಉಪಚಾರಗ... ...ವಿಚಾರದನ್ನು ಮಾಡಿದ್ದರು. ಭೋಜನಾನಂತರ ಮೊಲ್ಕಂಡ ಅಗ್ರಾ... ...ರನ್ನು ವಾದ್ಯದೊಂದಿಗೆ ಸ್ಕೂಲಿಗೆ ಕರೆದುಕೊಂಡು ಬಂದರು ...ಮುಂಭಾಗದಲ್ಲಿ ಸ್ಟಾಂಡರ್ಡ್ ಕ್ಲಾಸಿನಲ್ಲಿ ಪಿಕ್ಚರ್ ಹೊಂದಿ ಆ ಕ್ರಮದಿಂದ ...ಧ್ಯಾಯನವರು ಮಾಡಿಸಿದ್ದ ಸಂತೋಷವನ್ನು ನೋಡಿ ಹುಡುಗರಿಗೂ ...ರಿಗೂ ಅದರ ವಿಷಯವಾದ ಉಪನ್ಯಾಸವನ್ನೇ ಇನ್ಸ್‌ಪೆಕ್ಟರವರು ಹೇಳಿ... ...ಸಿದರು. ಮೀಟಿಂಗಿಗೆ ಉಪಕ್ರಮವಾಗುತ್ತಲೇ ಇನ್ಸ್‌ಪೆಕ್ಟರು ಬಾಲಕ ...ರಿಗೆ ಭಾಷೆಸಾರದ ನಿದರ್ಶನವೂ, ಬಾಲಕ ಬಾಲಕಿಯರ ಸುಭಾಗಮ ...ಗಳೂ, ಆನೇಕಲ್ ಸ್ಕೂಲಿನಿಂದ ಬಂದಿದ್ದ ಮ|| ಶ್ರೀನಿವಾಸಾಚಾರ್ಯ ರಿಂದ ಅಂಕಗಣಿತ ಪಾಠ ನಿದರ್ಶನವೂ, ಬಾಲಕ ಬಾಲಕಿಯರಿಂದ ಚಕ್ರವರ್ತಿ ಸಾರ್ವಭೌಮರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ನಡೆದು ಮ|| ಅನಂತಸುಬ್ಬರಾಯರಿಂದ ಸ್ವದೇಶಿ ವಿದ್ಯಾಭ್ಯಾಸ ಮತ್ತು ಸ್ತ್ರೀ ವಿದ್ಯಾಭ್ಯಾಸಗಳ ಉಪನ್ಯಾಸ ನಡಿಸಲ್ಪಟ್ಟಿತು. ಬಾಲಕಿಯರ ಹಾಡಿಕೆಗಳೂ ಕಡೆಯಲ್ಲಿ ಮಂಗಳಗಳೂ ನಡೆದ ಬಳಿಕ ಅಗ್ರಾಸನಾಧಿಪತಿಗಳು ವಿದ್ಯಾಭಿವೃದ್ಧಿಗೆ ಕಾರಣವಾದ ಇಂಥಾ ಸಂಘಗಳ ವಿಚಾರವಾಗಿ ಪ್ರೋತ್ಸಾಹಪೂರ್ವಕ ಉಪನ್ಯಾಸ ಮಾಡಿದರು. ಸಭೆಯು ಬರಖಾಸ್ತಾಯಿತು. ಇದೇ ಊರು ಗರ್ಲ್ಸ್ ಸ್ಕೂಲಿನಲ್ಲಿ ಮ|| ಪಿ ಅನಂತಸುಬ್ಬರಾಯರು ಅಗ್ರಾಸನವನ್ನು ವಹಿಸಿ ತಾ. 6 ರಲ್ಲಿ ನಡಿಸಿದ ಮೀಟಿಂಗಿನಲ್ಲಿ ಗ್ರಾಮಸ್ಥರ ಮತ್ತು ಸ್ಕೂಲಿನ ಕಮಿಟಿ ಮೆಂಬರುಗಳ ಕೋರಿಕೆಯಂತೆ ಹೊಸದಾಗಿ ಕಟ್ಟಡ ಕಟ್ಟುವ ವರೆವಿಗೂ ಈ ಸ್ಕೂಲಿನ ಹಾಲಿನಲ್ಲಿಯೇ ಶ್ರೀರಾಮಕೃಷ್ಣವಿಲಾಸ್ ರೀಡಿಂಗ್ ರೂಮನ್ನು ನಡಿಸಬಹುದೆಂದು ಗೊತ್ತಾಯಿತು. ಆಗಲೇ 30 ಮಂದಿ ಮೆಂಬರುಗಳು ಸೇರಿದ್ದಾರೆ.

ಶ್ರೀರಂಗಪಟ್ಟಣ.—ಈ ಬಾರಿ ಮಳೆಯು ವಿಶೇಷವಾಗಿ ಆಗಿದ್ದರೂ ಕೇವಲ ಪಟ್ಟಪ್ರದೇಶಗಳಲ್ಲಿರತಕ್ಕ ಭಾವಿಗಳಲ್ಲಿ ಕೂಡ ನೀರಿಗೆ ಅಭಾವವಾಗಿರುತ್ತೆ. ಈ ಊರಿನ ಅಭಿವೃದ್ಧಿಯ ಕಾರ್ಯಗಳಿಗಾಗಿ ದಯಾಳುಗಳಾದ ನಮ್ಮ ಸರ್ಕಾರದವರು 4,000 ರೂಪಾಯನ್ನು ದಯಪಾಲಿಸಿರುತ್ತಾರೆ ಈ ಹಣವು ಕೂಡ ಮ್ಯುನಿಸಿಪಾಲಿಟಿಯಲ್ಲಿ ದುಬಾರಿ ಖರ್ಚಾಗುವಂತೆ ಆಗುತ್ತೋ ಏನೋ ಎಂಬ ಭಯವುಂಟಾಗಿದೆ ಬಹು ಕಾಲದಿಂದಲೂ ಊರಿಗೆ ಒಳ್ಳೆಯ ನೀರನ್ನು ಒದಗಿಸಿಕೊಡುತ್ತಿದ್ದ ಕಾರಂಜಿಗಳಲ್ಲಿ ಆಗಾಗ್ಗೆ ಬದಿ ವಗ್ಗೆರೆಯನ್ನು ತೆಗೆದು ಶುಚಿಯಾಗಿಟ್ಟುಕೊಂಡಿರಲು ನೀರುಗಂಟಿಗಳನ್ನು ಏರ್ಪಡಿಸಿದ್ದಾಗ್ಯೂ ತಾಲ್ಲೂಕು ಅಧಿಕಾರಿಗಳು ಆ ನೀರುಗಂಟಿಗಳಿಂದ ಆ ಕೆಲಸ ಮಾಡಿಸದೆ ಇರುವುದರಿಂದ ಕಾರಂಜಿಗಳೆಲ್ಲಾ ಬದಿ ವಗ್ಗೆರೆ ಕಸ್ಮಲಪದಾರ್ಥಗಳಿಂದ ಮುಚ್ಚಿಕೊಂಡು ಸಂಪೂರ್ಣವಾಗಿ ನೀರು ಬರುವುದೇ ನಿಂತುಹೋಗಿರುತ್ತದೆ ಹೀಗೆ ಮಾಡುವುದು ಯೋಗ್ಯವೆನಿಸಲಾರದು. ಆದುದರಿಂದ ನಮ್ಮ ಸಬ್ ಡಿವಿಜನ್ ಆಫೀಸರ್ ಮೆ॥ ಎನ್. ರಾಮರಾಯರವರು ಇದನ್ನು ಕ್ರಮಪಡಿಸಿ ಇಂಪ್ರೂವ್‌ಮೆಂಟಿಗಾಗಿ ಬಂದಿರುವ ಹಣದಲ್ಲಿ ಕೆಲವು ಮೊಬಲಗನ್ನು ಕಾರಂಜಿಗಳ ರಿಪೇರಿಗೂ, ಭಾವಿಗಳನ್ನು ಆಳವಾಗಿ ಇಳಿಸುವುದಕ್ಕೂ, ಸಂತ ಮೊಬಲಗನ್ನು ಸರಿಯಾಗಿ ವಿನಿಯೋಗಿಸುವುದಕ್ಕೂ ತಕ್ಕ ಏರ್ಪಾಟುಗಳನ್ನು ಮಾಡಿಸಬೇಕೆಂತ ಪ್ರಾರ್ಥನೆ.—ನಮ್ಮ ಪ್ರಭುಗಳಾದ ಜಾರ್ಜ್ ಚಕ್ರವರ್ತಿಯವರ ಕಿರೀಟ ಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಪರಸ್ಥಳದಿಂದ ಬಂದಿರುವವರಿಗೆ ಉಪಯೋಗವಾಗುವಂತೆ ಕಾರೊನೇಷನ್ ಬಿಲ್ಡಿಂಗ್ ಎಂಬ ಹೆಸರಿಟ್ಟು ಒಂದು ಛತ್ರವನ್ನು ಕಟ್ಟಲು ಏರ್ಪಡಿಸಿರುವುದು ಶ್ರೇಷ್ಠವಾದ ಕಾರ್ಯವೇ ಸರಿ. ಆದರೆ ಚಂದಾ ಮೊಬಲಗನ್ನು ಪ್ರಜೆಗಳಿಂದ ನಿರ್ಬಂಧವಿಲ್ಲದಂತೆ ವಸೂಲ್ಮಾಡುತ್ತಾರೆಂದು ನಂಬಿದೆ—ಮ್ಯುನಿಸಿಪಾಲಿಟಿಯಲ್ಲಿ ಕಸ್ಮಲವನ್ನು ಹೊರಗೆ ಸಾಗಿಸಲು ಎರಡು ಬಂಡಿಗಳಿದ್ದಾಗ್ಯೂ ಒಂದು ಬಂಡಿ ಮಾತ್ರ ಜಾಡುಮಾಲಿ ಆಗಿ ಬರುತ್ತದ ಮತ್ತೊಂದು ಬಂಡಿಯು ಎತ್ತುಗಳು ದುರ್ವಿನಿಯೋಗವಾಗಿರುವವು ಆದುದರಿಂದ ಕಸ್ಮಲವು ಊರ ಹೊರಗೆ ಸಾಗಲು ತಕ್ಕ ಅನುಕೂಲವಿಲ್ಲದೆ ಅಲ್ಲಲ್ಲಿ ದುರ್ವಾಸನೆ ಹುಟ್ಟುತ್ತಿರುತ್ತೆ ಚೆನ್ನಾಗಿದ್ದ ರಸ್ತೆಗಳನ್ನು ರಿಪೇರಿ ಮಾಡಿಸುವಂತೆ ಕಾಣುತ್ತೆ. ಇದರಿಂದ ಮ್ಯುನಿಸಿಪಾಲಿಟಿಗೆ ಲಾಭವೋ ನಷ್ಟವೋ ಮಾಡಿಸುವವರು ಹೇಳಲಿ. ಆದರೂ ಅಂದಾಜಿನ ಪ್ರಕಾರ ಕೆಲಸಗಳು ಇರುವಂತೆ ತೋರುವುದಿಲ್ಲ. ಪ್ರಜೆಗಳ ಪರವಾಗಿ ಕೌನ್ಸಿಲ್‌ನಲ್ಲಿರುವ ಮೆಂಬರುಗಳು ಗಮನಕೊಡುತ್ತಾರೋ ಇಲ್ಲವೋ ತಿಳಿಯದು—ಬಡ ತಾಲ್ಲೂಕು ನೌಕರರು ಸರಾಸರಿ ತಿಂಗಳಿಗೆ 15 ದಿವಸಗಳು ರಾತ್ರಿ 9 ಗಂಟೆಯ ತನಕ ಮಿಣುಗುಟ್ಟುವ ದೀಪಗಳ ಬೆಳಕಿನಲ್ಲಿ ಕೆಲಸಮಾಡುವುದು ತುಂಬಾ ಪರಿತಾಪಕರವಾಗಿದೆ—ಈಚೆಗೆ ಕ್ರಿಮಿನಲ್ ಕೇಸುಗಳು ಜಾಗ್ರತೆಯಿಂದ ಫೈಸಲಾಗುತ್ತಿಲ್ಲವೆಂದಲೂ, ಕೆಲವು ಖೂನಿ ಕೇಸುಗಳು ಸರಿಯಾಗಿ ಕಂಡುಹಿಡಿಯಲ್ಪಡಲಿಲ್ಲವೆಂತಲೂ ವದಂತಿ ಇರುತ್ತೆ ಹೀಗಾದರೆ ಕಕ್ಷಿಗಾರರಿಗೂ, ಸಾಕ್ಷಿಗಳಿಗೂ ತೊಂದರೆಯೂ, ದುಷ್ಟರಿಗೆ ಪ್ರೋತ್ಸಾಹವೂ ಉಂಟಾಗುತ್ತದೆ—ಶ್ರೀರಂಗನಾಥಸ್ವಾಮಿ ದೇವಸ್ಥಾನದಲ್ಲಿ ಕಕ್ಷಿಗಳುಂಟಾಗಿ ಪೂಜೆಪುನಸ್ಕಾರಗಳು ಕ್ರಮವಾಗಿ ನಡೆಯುತ್ತಿರುವಂತೆ ಕಾಣುವುದಿಲ್ಲ ಅಮಲ್ದಾರ್ರು ಮಹಮದೀಯರಾದುದರಿಂದಲೂ ಹಿಂದುಗಳ ಪದ್ಧತಿಯನ್ನು ತಿಳಿಯಲು ಅವಕಾಶವಿಲ್ಲದೆ ಇತರರ ಮಾತು ನಂಬಿ ಬಡ ನೌಕರರಿಗೆ ಜುಲ್ಮಾನೆ ವಗೈರೆ ಹಾಕುತ್ತಿರುವಂತೆ ಹೇಳುತ್ತಾರೆ—ಈ ಊರಿನಲ್ಲಿ ಕತ್ತೆಗಳ ಕಾಟವು ಹೇಳತೀರದು. ತಾ 15 ನೆ ಶುಕ್ರವಾರ ವೃದ್ಧಳಾದ ಒಬ್ಬಳು ಹಳ್ಳಿಯ ಹೆಂಗಸನ್ನು ಕತ್ತೆಯು ಓಡಿಬಂದು ಅವಳ ಮೇಲೆ ನುಗ್ಗಿ ಕೆಡವಿಬಿಟ್ಟಿತು ಆಕೆಯ ತಲೆಯ ಮೇಲಿದ್ದ ಮೊಸರಿನ ಮಡಿಕೆ ಗೂಡೆಯು ಕೆಳಕ್ಕೆ ಬಿದ್ದು ಹೋಯಿತಲ್ಲದೆ ಆಕೆಯ ಮುಖವೆಲ್ಲಾ ಕಿತ್ತುಹೋಗಿ ರಕ್ತವು ಸೋರುತ್ತಿತ್ತು. ಇಂತಹ ಅಸಂಗತಗಳು ಆಗಾಗ್ಗೆ ನಡೆಯುತ್ತಿದ್ದರೂ ಮ್ಯುನಿಸಿಪಾಲಿಟಿಯವರು ತಕ್ಕ ಏರ್ಪಾಟುಮಾಡದೆ ಇರುವುದು ತುಂಬಾ ಶೋಚನೀಯವಾಗಿದೆ—ಪ್ರಜೆಗಳ ಪ್ರಾರ್ಥನಾನುಸಾರ ಇಲ್ಲಿರತಕ್ಕ ಮುನ್ಸಿಫ್ ಕೋರ್ಟನ್ನು ಇಲ್ಲಿಂದ ಬೇರೆ ಕಡೆಗೆ ವರ್ಗಾಯಿಸದಂತೆಯೂ, ಊರಿನ ಅಭಿವೃದ್ಧಿಗೂ ಬಡ ಜನಗಳ ಜೀವನಾರ್ಥವೂ ಒಂದು ಸಕ್ಕರೆ ಕಾರ್ಖಾನೆಯನ್ನು ಇಲ್ಲಿ ಇಡಿಸುವಂತೆಯೂ ಅಪ್ಪಣೆಕೊಡಿಸಿರುವ ನಮ್ಮ ಸರ್ಕಾರದವರಿಗೆ ಪ್ರಜೆಗಳೆಲ್ಲರೂ ಕೃತಜ್ಞರಾಗಿರುತ್ತಾರೆ

ಹೊಸದುರ್ಗದ ತಾ|| ಬಾಗೂರು.—ಈ ತಾಲ್ಲೂಕು ಪೈಕಿ ಈ ಗ್ರಾಮವೇ ದೊಡ್ಡ ಗ್ರಾಮವು. ಇದು ಯೂನಿಯನ್ ಆಗಿ 5 ವರ್ಷಗಳಾಯ್ತು. ದಿನೇ ದಿನೇ ಹೀನಸ್ಥಿತಿಯಲ್ಲಿರುತ್ತದೆ ಸರ್ಕಾರದವರು ಇಲ್ಲಿನ ಮುಖಂಡರು ಇನ್ನು ಮನ್ನಿಸಿದೆದು, ಪಟೇಲರೇ ಈ ಯೂನಿಯನ್ ಕೆಲಸವನ್ನು ನೋಡುವಂತೆ ಮಾಡಿದ್ದಾರೆ. ಈ ಯೂನಿಯನ್‌ನಲ್ಲಿ ವರುಷಕ್ಕೆ 500 ರೂಪಾಯಿನಂತೆ ಹುಟ್ಟುವಳಿ ಆಗುತ್ತಿರುವ ಹಣ 5 ವರ್ಷದಿಂದ ಏನಾಯಿತೋ ತಿಳಿಯದು ಆ ಪೈಕಿ 1-2 ವರ್ಷಗಳ ಹಣವಾದರೂ ಈ ಗ್ರಾಮಾಭಿವೃದ್ಧಿಗೆ ಉಪಯೋಗಿಸಿರುವಲ್ಲಿ ಎಷ್ಟೋ ಅಭಿವೃದ್ಧಿಯಾಗುತ್ತಿತ್ತು. ಸರ್ಕಾರದವರು ಈ ದೊಡ್ಡ ಗ್ರಾಮವನ್ನು ಕಿಡಿಗಣ್ಣಿಂದಲೂ ನೋಡದಿರುವದು ತುಂಬಾ ಶೋಚನೀಯವಾಗಿದೆ ಇಲ್ಲಿನ ಪೋಲೀಸ್ ಸ್ಟೇಷನ್ ಪಾಡದ ದೇವಸ್ಥಾನದಲ್ಲಿ ಡಲ್ಪಟ್ಟಿದೆ. ಗ್ರಾಮಸ್ಥರು ಹೊಸ ಸ್ಟೇಷನ್ ಕಟ್ಟಡಕ್ಕಾಗಿ 100 ರೂಪಾಯಿ ಕೊಡಬೇಕೆಂದು ಸರ್ಕಾರದವರು ಕೇಳಿದ್ದರಿಂದ 50 ರೂಪಾಯನ್ನು ಜನರು ಪಾವತಿ ಮಾಡಿ ಬಾಕಿಯನ್ನು ಕಟ್ಟಡ ಶುರು ಆದ ಬಳಿಕ ಕೊಡುವಂತೆ ತಿಳಿಸಿರುತ್ತಾರೆ. ಆದಾಗ್ಯೂ ಇದುವರಿವಿಗೆ ಶುರು ಆಗಿಲ್ಲ.—ಇಲ್ಲಿನ ಹೋಬಳಿ ಸ್ಕೂಲಿನಲ್ಲಿ 3 ಜನ ಮಾಸ್ಟರು ಮಾತ್ರ ಇದ್ದು ವಿದ್ಯಾರ್ಥಿಗಳು ಬಹಳ ಜನವಿರುವದರಿಂದ ಇನ್ನೊಬ್ಬ ಮಾಸ್ಟರನ್ನು ಇಟ್ಟು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಅದರಂತೆ ಕಳುಹಿಸಿಲ್ಲ.—ಈ ಗ್ರಾಮಕ್ಕೆ ಪೋಸ್ಟ್ ಇನ್ಸ್‌ಪೆಕ್ಟರವರು ಬಂದಾಗ್ಗೆ ಈಗ ಇರುವ ವಾರಕ್ಕೆ 2 ದಫಾ ಟಪಾಲ್ ತಪ್ಪಿಸಿ ದಿನವಹಿ ಪೋಸ್ಟ್ ಬರುವಂತೆ ನಡಸಿಕೊಡಬೇಕೆಂದು ಗ್ರಾಮಸ್ಥರು ಕೇಳಿಕೊಂಡರು. ಪೋಸ್ಟಿನವರ ವರ 6 ತಿಂಗಳ ರನ್ನರ್ ಸಂಬಳ 30 ರೂಪಾಯಿ ಮುಂಗಡ ಕಟ್ಟಿದರೆ ನಡಸಿ ಕೊಡುತ್ತೇನೆಂದು ಇನ್ಸ್‌ಪೆಕ್ಟರು ಹೇಳಿದರು. ಇದಕ್ಕೆ ಗ್ರಾಮಸ್ಥರು ಒಪ್ಪಿ ಹಣ ಕಟ್ಟುವದಾಗಿ ಅರ್ಜಿ ಬರೆದುಕೊಂಡಿದ್ದಾರೆ. ಆದರೆ ಇನ್ನೂ ಹುಕುಂ ಬಂದಿಲ್ಲ ಮೇಲ್ಕಂಡ ವಿಷಯಗಳೆಲ್ಲಾ ಆಯಾ ಇಲಾಖೆಯವರು ದಯವಿಟ್ಟು ಗ್ರಾಮಸ್ಥರ ಕೋರಿಕೆಯನ್ನು ನಡಿಸಿ ಕೊಟ್ಟಲ್ಲಿ ತಕ್ಕ ಮಟ್ಟಿಗೆ ಗ್ರಾಮಾಭಿವೃದ್ಧಿಯಾಗುತ್ತದೆ—ಈ ವರುಷ ಈ ಪ್ರಾಂತ್ಯ ಮಳೆ ಚೆನ್ನಾಗಿ ನಡಿಸಿದ್ದರಿಂದ ಪೈರು ಬಹಳ ಚೆನ್ನಾಗಿವೆ ಇಷ್ಟು ಮಳೆ ಬಂದಾಗ್ಯೂ ಕೆರೆಗೆ ಮಾತ್ರ ನೀರು ಬರಲಿಲ್ಲ. ಇದಕ್ಕೆ ನಾಲೇ ಕೆಟ್ಟು ಹೋಗಿರುವದೇ ಕಾರಣ.—ಇದು ತೆಂಗಿನಕಾಯಿ ಸೀಮೆಯ ಮಧ್ಯಸ್ಥಾನವಾಗಿ ಇಲ್ಲಿಂದ ಅನೇಕ ಕಡೆ ವಿಶೇಷವಾಗಿ ಆಮದುರಫ್ತು ನಡೆಯುವ ಜಾಗಾ ಆಗಿರುತ್ತದೆ. ಆದರೆ ಇಲ್ಲಿಗೆ ರಸ್ತೆಯೇ ಇಲ್ಲ. ಸುತ್ತಲೂ ರಸ್ತೆಗೆ ಹೋಗಿ ಸೇರಲು 10-15 ಮೈಲಿ ದೂರ ಕಾಡುರಸ್ತೇಲಿ ಹೋಗಬೇಕು. ಈ ಪ್ರಾಂತ್ಯ ಜನರು ಸರ್ಕಾರದವರಿಗೆ ಈ ವಿಷಯದಲ್ಲಿ ತಕ್ಕ ಅರ್ಜಿಗಳನ್ನು ಗುದರಾಯಿಸಿಕೊಂಡು ಸರಿಯಾದ ರಸ್ತೆಮಾಡಿಸಿಕೊಂಡಲ್ಲಿ ಎಷ್ಟೋ ಅನುಕೂಲ ಉಂಟು. ಮುಂಚೆ ಈ ಗ್ರಾಮದಲ್ಲಿ ಒಬ್ಬರೂ ಪತ್ರಿಕೆಗಳನ್ನು ತರಿಸುತ್ತಿರಲಿಲ್ಲ. ಗ್ರಾಮಪುರೋಹಿತ ಮ|| ಸೀತಾರಾಂಭಟ್ಟರವರ ಪ್ರೋತ್ಸಾಹದಿಂದ ಹಾಲಿ 30-35 ಪತ್ರಿಕೆಗಳ ವರಿವಿಗೂ ಎಲ್ಲಾ ತರದ ಪತ್ರಿಕೆಗಳೂ ತರಿಸುತ್ತಿದ್ದಾರೆ—ಇಲ್ಲಿ ಪುರಾತನ ಕಾಲದಿಂದಲೂ ಇದ್ದು ಹಾಳೇ ಬಿದ್ದಿರುವ ಆಂಜನೇಯ ದೇವಸ್ಥಾನವನ್ನು ಸರಿಯಾಗಿ ಕಟ್ಟಿಸಲು ಗ್ರಾಮಸ್ಥರು 300 ರೂಪಾಯಿ ಗಾಳಿಪೂಜೇ ತಿಮ್ಮಣ್ಣನವರ ವಶಕ್ಕೆ ಕೊಟ್ಟಿರುತ್ತಾರೆ ಆದರೂ ಕಟ್ಟಿದ ಇನ್ನೂ ಪೂರೈಸಿಲ್ಲ. ಈ ಗ್ರಾಮದಲ್ಲಿ ವರುಷೇ ವರ್ಷ ನಡೆಯುತ್ತಿದ್ದ ಶ್ರೀ ಪ್ರಸನ್ನ ರಾಮೇಶ್ವರಸ್ವಾಮಿ ರಥೋತ್ಸವವು ಅಲ್ಪಕಾರಣದಿಂದ ಈ ವರ್ಷ ನಡೆಯದೆ ನಿಂತುಹೋಯಿತು. ಒಂದು ಹುಚ್ಚೀ ವಿಷಯದ ಕ್ರಿಮಿನಲ್ ಕೇಸಿಗಾಗಿ ಕೆಲವರು ವಿಪರೀತ ಹಣ ವೆಚ್ಚಮಾಡಿದ್ದು ತುಂಬಾ ಶೋಚನೀಯವಾಗಿರುತ್ತದೆ. ಗ್ರಾಮದ ಮುಖಂಡರು ಗ್ರಾಮದ ಸಣ್ಣ ವ್ಯವಹಾರಗಳು ಕೋರ್ಟಿಗೆ ಹೋಗುವ ತನಕ ಬಿಡದೆ ಪಂಚಾಯತಿ ಫೈಸಲು ಮೂಲಕ ವ್ಯವಹರಿಸುತ್ತಾ ಬಂದರೆ ವೃಥಾ ವೆಚ್ಚವಾಗಿ ಹೋಗುವ ಹಣ ಉಳಿದು, ಗ್ರಾಮಕ್ಕೂ ಒಳ್ಳೇ ಹೆಸರು ಬರುವ ವಿಷಯದಲ್ಲಿ ಅಭ್ಯಂತರವಿಲ್ಲ.

ಚಿಕ್ಕಮಗಳೂರು.—ಇಲ್ಲಿ ಮಳೆ ಸಂಪೂರ್ಣ ನಿಂತು ಚಳಿ ಪ್ರಾರಂಭವಾಗಿದೆ ಚಳಿ ತಡೆಯುವುದು ಬಹು ಕಷ್ಟ ಪ್ಲೇಗ್ ರೋಗ ಇನ್ನೂ ನಿಂತಿಲ್ಲ. ಇಲಿ ಅಲ್ಲಲ್ಲಿ ಸಾಯುತ್ತಲೇ ಇದೆ. ಜನಗಳು ಊರು ಬಿಡುತ್ತಾ ಇದ್ದಾರೆ. ಈ ಟವನ್ನಿನ ಆರೋಗ್ಯ ವಿಚಾರವು ಸಮರ್ಪಕವಾಗಿಲ್ಲವೆಂದು ಹೇಳಬೇಕಾಗಿದೆ. ಕೆಲವು ಗಲ್ಲಿಗಳಲ್ಲಿ ಮುಖವಿಡಲು ತುಂಬಾ ಅಸಹ್ಯವಾಗುತ್ತದೆ. ಕೆಲವು ಕಡೆ ಚರಂಡಿಗಳಲ್ಲಿ ಕೊಳಕು ನೀರು ನಿಂತು ದುರ್ವಾಸನೆಯಾಗಿದೆ. ಇನ್ನು ಕೆಲವೆಡೆಗಳಲ್ಲಿ ದೂರದಿಂದ ಕೆರೆಯ ನೀರು ಚರಂಡಿಯಲ್ಲಿ ಹರಿದುಬರುವಂತೆ ಮಾಡಿದ್ದಾರೆ. ಆ ನೀರನ್ನೇ ಕೆಲವರು ಪಾತ್ರೆಪರಟೆಗಳನ್ನು ತೊಳೆಯುವುದಕ್ಕೂ, ಬಟ್ಟೆಗಳನ್ನು ಒಗೆಯುವುದಕ್ಕೂ ಉಪಯೋಗಿಸುವರು. ಮತ್ತೆ ಕೆಲವೆಡೆಗಳಲ್ಲಿ ಬಚ್ಚಲನೀರು ಹೋಗುವುದಕ್ಕೆ ಚರಂಡಿಗಳೇ ಇಲ್ಲ. ಟವನ್ನಿನ ಸ್ಥಿತಿಯು ಹೀಗಿದ್ದರೆ ಪ್ರಜೆಗಳ ಆರೋಗ್ಯಭಾಗ್ಯ ಕೆಡುವುದು ಆಶ್ಚರ್ಯವಲ್ಲ. ಮ್ಯುನಿಸಿಪಾಲಿಟಿಯವರು ತಕ್ಕ ಮಟ್ಟಿಗೂ ತಮ್ಮ ಕರ್ತವ್ಯಗಳಲ್ಲಿ ಆಸಕ್ತರಾಗಿದ್ದಾರೆಂತಲೇ ಹೇಳಬೇಕಾಗಿದೆ. ಆದರೆ ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದ ಹಾಗೆ ತೋರುತ್ತದೆ. ಅಂತೂ ಇವೆಲ್ಲಾ ಕ್ರಮಪಟ್ಟ ಹೊರತು ಚಿಕ್ಕಮಗಳೂರು ಉತ್ತಮ ಸ್ಥಿತಿಗೆ ಬರಲಾರದು.—ಈಗ್ಗೆ ಒಂದೆರಡು ವಾರಗಳ ಹಿಂದೆ ಇಲ್ಲಿಗೆ ಸುಮಾರು 4-5 ಮೈಲಿ ದೂರದಲ್ಲಿರುವ ಹೊಸಕೋಟೆ ಗ್ರಾಮದ ಅರಸುಗಳ ಜಾತಿಗೆ ಸೇರಿದ ದೊಡ್ಡ ಎಂಬವನು ಬಾಜು ಗ್ರಾಮವಾಗಿರುವ ಕುರುಬಹಳ್ಳಿಗೆ ಹೋಗಿ ಅಲ್ಲಿ ಮಾಸ್ತಿ ಎಂಬವನನ್ನು 100 ರೂಪಾಯಿಗೆ ಒಳ್ಳೇ ಎತ್ತುಗಳನ್ನು ಕೊಡಿಸುತ್ತೇನೆಂದು ಪ್ರೇರಿಸಿ ಮತ್ತೊಂದು ಹಳ್ಳಿಗೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ದೊಡ್ಡ ಎಂಬವನು ಯಾವುದೋ ಒಂದು ನೆವದಿಂದ ಸ್ವಲ್ಪ ಹಿಂದುಳಿದು ನಿಬ್ಬಣವಾಗಿ ಮತ್ತೊಬ್ಬನ ಹಿಂಭಾಗದೆ ಬಂದು ಕೈಕುಡಲಿನಿಂದ ಅವನ ಕತ್ತಿನ ಮೇಲೆ ಹೊಡೆದು ಜುಟ್ಟನ್ನು ಹಿಡಿದು ಜಗ್ಗಿಸಿ ಅವನ ಮುಖದ ಮೇಲೆಲ್ಲಾ ಹೊಡೆದು ಗಾಯಮಾಡಿದನು. ಅಷ್ಟರಲ್ಲಿ ಮಾಸ್ತಿ ಎಂಬವನಿಗೆ ಪ್ರಜ್ಞೆತಪ್ಪಿ ಕೆಳಕ್ಕೆ ಬೀಳಲು ದೊಡ್ಡನು ಒಂದು ಕಲ್ಲಿನಿಂದ ಅವನ ಹಲ್ಲುಗಳನ್ನೆಲ್ಲಾ ಚಚ್ಚಿದನು. ಈ ರೀತಿ ಹಿಂಸೆಮಾಡಿ ಅವನ ಪ್ರಾಣ ಹೋಗಿರಬಹುದೆಂದು ಯೋಚಿಸಿ ದೊಡ್ಡನು ಅವನಲ್ಲಿದ್ದ 100 ರೂಪಾಯಿ ಗಂಟನ್ನು ಕಸುಕೊಂಡು ಅವನನ್ನು ಒಂದು ಹಳ್ಳಕ್ಕೆ ಎಳೆದು ಎಲೆಗಳಿಂದ ಮುಚ್ಚಿ ಓಡಿಹೋದನು ಸ್ವಲ್ಪ ಹೊತ್ತಾದ ಮೇಲೆ ಮಾಸ್ತಿ ಎಂಬವನಿಗೆ ಪ್ರಜ್ಞೆ ಒಂದು ನರಳುತ್ತಾ ಇರುವಲ್ಲಿ ದಾರಿಗರು ಯಾರೋ ಕಂಡು ಅವರ ನೆಂಟರಿಗೆ ತಿಳಿಸಿ ಅವನನ್ನು ಇಲ್ಲಿನ ಆಸ್ಪತ್ರೆಗೆ ಸಾಗಿಸಿಕೊಂಡು ಬಂದರು. ಈಗ ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಾ ಇದ್ದಾನೆ ಪ್ರಾಣಭಯವಿಲ್ಲ. ಕೆಲವು ದಿನಗಳಲ್ಲಿ ಗುಣವಾಗಬಹುದು. ಒಂದು ಕಣ್ಣು ಮಾತ್ರ ಹೋಗಿದೆ ಇವನನ್ನು ಹೊಡೆದ ಆಸಾಮಿಯನ್ನು ಹಿಡಿದು ಲಾಕಪ್ಪಿನಲ್ಲಿಟ್ಟಿದ್ದಾರೆ. ಮುಂದ ಇದರ ಪ್ರವಹೆಯು ಗೊತ್ತಾಗುತ್ತದೆ—ಆಚೇ ಸೋಮವಾರ ರಾತ್ರಿ ಚಿಕ್ಕಮಗಳೂರಿನಿಂದ ಕಡೂರಿಗೆ ಮೈಲ್ ಟಾಂಗಾ ಅಲ್ಲದೆ ಬೇರೆ ಎರಡು ಸ್ಪೆಷಲ್ ಟಾಂಗಾಗಳನ್ನು ಸಹ ಬಿಟ್ಟಿದ್ದರು ಎರಡನೇ ಟಾಂಗಾ ಕೆಂಕೆರೆಹಳ್ಳಿ ಸ್ಟೇಜ್‌ವರೆಗೂ ಸಲೀಸಾಗಿಹೋಯಿತು ಅಲ್ಲಿ ಕುದುರೆಗಳನ್ನೂ ಕೋಚ್‌ಮಾನನ್ನೂ ಬದಲಾಯಿಸಿದರು ಕುದುರೆಗಳು ಬಹು ಜೋರಾಗಿದ್ದವು. ಗಾಡಿ ಹೊಡೆಯುವವನು ನಿಶಾಮೇಲೆ ಇದ್ದನೆಂದು ತೋರುತ್ತದೆ. ಕುದುರೆಗಳು ಗಾಡಿಗೆ ಕಟ್ಟಿದ ಕೂಡಲೇ ಓಗಲಾರಂಭಿಸಿದವು. ಅದರಲ್ಲಿ ಒಂದು ಕುದುರೆ ಎಡವಿತು. ಗಾಡಿಯವನು ಅವುಗಳನ್ನು ನಿಧಾನವಾಗಿ ನಡಿಸುವುದಕ್ಕೆ ಬದಲಾಗಿ ಬೆದರಿಸಲು ಅವು ಗಾಬರಿ ಬಿದ್ದು ಮನಸ್ಸು ಬಂದ ಹಾಗೆ ಓಡಲುಪಕ್ರಮಿಸಿದವು. ಗಾಡಿಯವನು ಅವುಗಳನ್ನು ಹತೋಟಿಗೆ ತಂದುಕೊಳ್ಳದೆ ಲಗಾಮನ್ನು ಬಿಟ್ಟು ಕೆಳಗೆ ಧುಮುಕಿದನು. ಕುದುರೆಗಳು ಗಾಡಿಯನ್ನು ಹಳ್ಳಕೊಳ್ಳ ಎನ್ನದೆ ಸಿಕ್ಕಿದ ಹಾಗೆ ಎಳೆದುಕೊಂಡು ಹೋಗಿ ಗಾಡಿಯ ಮುಂಭಾಗವನ್ನು ಒಡೆದು ಸುತ್ತು ಸುತ್ತುಮಾಡಿ ಕೆಳಕ್ಕೆ ಕೆಡವಿಬಿಟ್ಟವು. ಮುಂಭಾಗದಲ್ಲಿ ಕೂತಿದ್ದ ಇಬ್ಬರು ಪ್ರಯಾಣಿಕರಿಗೆ ಪೆಟ್ಟಾಗಿ ಕೆಲವು ಗಾಯಗಳಾದವು ಹಿಂದೆ ಕುಳಿತಿದ್ದವರು ಗಾಡಿಯಿಂದ ಧುಮುಕಿ ತಪ್ಪಿಸಿಕೊಂಡರು. ದೈವಾನುಗ್ರಹದಿಂದ ಪ್ರಾಣನಷ್ಟವೇನೂ ಆಗಲಿಲ್ಲ. ಅಂತೂ ಗಾಡಿಯವನ ಅಜಾ...

ಗರೂಕತೆಯಿಂದ ಇಷ್ಟೆಲ್ಲಾ ಸಂಭವಿಸಿತು ಮುನ್ಸಿ ಟೀಂಗಾ ಕೆಂಪನಿಯವರು ಇಂಥಾ ಅಜಾಗರೂಕರಾದ ಗಾಡಿಯವರನ್ನು ಇಟ್ಟುಕೊಳ್ಳುವುದು ಬಹಳ ಅಪಾಯಕರವಾದದ್ದು —ಕಳೆದ ವಾರ ರೆವ್ ಸ್ಕೋಟರ್ ಧೊರೆಯವರು ಪತ್ನಿ ಸಮೇತರಾಗಿ ಸಕಲರಾಯಪಟ್ಟಣದ ಕಡೆ ಹೋಗಿರುವಾಗ್ಗೆ ದೊರೆಸಾನಿಯವರು ಅವರೊಂದಿಗೆ ಹಳ್ಳಿಹಳ್ಳಿಗಳಿಗೆ ಹೋಗಿ ಎರಡು ದಿನಗಳಲ್ಲಿ ಸುಮಾರು 150 ಮಂದಿ ರೋಗಿಗಳನ್ನು ಬಹು ಪ್ರೀತಿಯಿಂದ ಉಪಚರಿಸಿ ಔಷಧ ಚಿಕಿತ್ಸೆಯನ್ನು ಮಾಡಿ ಬಂದರು ಎಲ್ಲಾ ಕಡೆಗಳಲ್ಲೂ ಜನರು ಅವರನ್ನು ಬಹು ಗೌರವದಿಂದ ಕಾಣುತ್ತಾ ಪ್ರೇಮದೊಡನೆ ಅವರ ಬಳಿಗೆ ತಂಡತಂಡವಾಗಿ ಬರುತ್ತಿದ್ದರು

ಯಡತೊರೆ ತಾ|| ಮಿರ್ಲೆ —ಮಳೆ ಇಲ್ಲ ಹಿಂ ಫಸಲು ಕುಯಿಲಿಗೆ ಬಂದಿದೆ —ಈ ಊರು ಗೌ ಕನ್ನಡ ಸ್ಕೂಲಿನಲ್ಲಿ ಮೂರು ಜನ ಮಾಸ್ಟರುಗಳಿಗೆ ವರ್ಗವಾಯಿತು ಇದು ಮೇಲಾದರೂ ಸ್ಕೂಲ್ ಕೆಲಸಗಳು ತೃಪ್ತಿಕರವಾಗಿ ನಡಿಸಿಕೊಂಡು ಬಾಲಕರನ್ನು ಉತ್ತಮ ಸ್ಥಿತಿಗೆ ತರುವರೆಂದು ನಂಬಿ ಇದ್ದೇವೆ —ನಮ್ಮ ರೇಂಜಿಗೆ ಬಂದಿರತಕ್ಕ ಜಮಾದಾರ್ರು ತೃಪ್ತಿಕರವಾಗಿ ಕೆಲಸ ಮಾಡುತ್ತಾ ಇರುವರು ಈ ವಾರ ಈ ರೇಂಜಿಗೆ ಸಂಬಂಧಪಟ್ಟ ಭೇರ್ಯ ಗ್ರಾಮದಲ್ಲಿ ಏಳ್ಳಿಬೆಳೆಯನ್ನು ಕದ್ದ ತಿಮ್ಮ ಎಂಬವನಿಗೆ 15 ದಿವಸಗಳ ಕಠಿಣ ಸಜಾ ಆಯಿತು —ಈ ಗ್ರಾಮದ ಮತ್ತು ಈ ಹೋಬಳಿಯ ತಾಲ್ಲೂಕ್ ಜಮಾಬಂದಿ ಪೂರೈಸಿದೆ ಜಮಾಬಂದಿ ವೇಳೆಯಲ್ಲಿ ಇಲ್ಲಿ ಸ್ಥಾಪಿತವಾಗಿರುವ ಶ್ರೀಕೃಷ್ಣರಾಜೇಂದ್ರ ಪರಸ್ಪರಸಹಾಯ ಸಂಘದ ಸೆಕ್ರೆಟರಿ ಮ್ಮ ಎಂ ಸುಬ್ರಹ್ಮಣ್ಯಯ್ಯನವರು ಕೋಆಪರೇಟಿವ್ ಸೊಸೈಟಿಯಿಂದ ಉಂಟಾಗುವ ಪ್ರಯೋಜನವನ್ನೂ, ಸರ್ಕಾರದವರು ಅದಕ್ಕಾಗಿ ವಹಿಸಿರುವ ಮುತುವರ್ಜಿಯನ್ನೂ ಸಹಾ ಅಲ್ಲಿ ನೆರೆದಿದ್ದ ರೈತ ಪ್ರಜೆಗಳಿಗೆ ಬೋಧಿತವಾಗುವಂತೆ ಸ್ವಾರಸ್ಯವಾಗಿ ಉಪನ್ಯಾಸವನ್ನು ಹೇಳಿದರು ಅಮಲ್ದಾರ್ ಮ್ಮ|| ಕೆ ಶ್ರೀನಿವಾಸರಾಯರವರು ಪುನರುಕ್ತಿ ಅದೇ ವಿಷಯವನ್ನು ಚನ್ನಾಗಿ ವಿವರಿಸಿ ತಿಳಿಸಿದರು —ಧಾರಣೆವಾಸಿಗಳು ದಿನೇ ದಿನೇ ಹೆಚ್ಚುತ್ತಾ ಇವೆ ಬಡವರು ಹೊಸ ಫಲವನ್ನು ನಿರೀಕ್ಷಿಸಿಕೊಂಡು ಇದ್ದಾರೆ —ಮಿರ್ಲೆ ಸುಬ್ಬರಾಯರೆಂಬವರ ಪರೀಕ್ಷೆಯು ನಡೆಯಿತು ಇದು ಬಹಳ ಸ್ವಾರಸ್ಯವಾಗಿತ್ತು

ಚಿತ್ರದುರ್ಗ —ಮಳೆ ನಿಂತು ಹೋಯಿತು ದಿನೇ ದಿನೇ ಛಳಿ ಜಾಸ್ತಿಯಾಗುತ್ತಾ ಇದೆ ಶೀತಸಂಬಂಧವಾದ ಛಳಿ ಜ್ವರಗಳು ಊರಲ್ಲೆಲ್ಲಾ ತುಂಬಿ ಇವೆ ಮುಸುಕು ಫಸಲುಗಳು ಈ ವರುಷ ಬಹಳ ಚನ್ನಾಗಿವೆ ಆದರೂ ಜನಸಿ ಧಾರಣೆ ಇಳಿಯಲಿಲ್ಲ ದನಗಳಿಗೆ ಕಾಲುಜ್ವರ ಮುಂತಾದ ಕಾಯಿಲೆಗಳು ವ್ಯಾಪಿಸುತ್ತಾ ಇವೆ —ಸೆಷನ್ಸ್ ಜಡ್ಜರು ಇಲ್ಲಿಗೆ ಬಂದು 10 ದಿವಸದಿಂದ ಕೋರ್ಟು ಮಾಡುತ್ತಾ ಇದ್ದಾರೆ —ಈ ಡಿಸ್ಟ್ರಿಕ್ಟಿನಲ್ಲಿ ಎರಡು ವರುಷದಿಂದ ಡೆಪ್ಯುಟಿ ಕಮಿಷನರಾಗಿದ್ದ ಮ್ಮ ಕೆ ಚಾಂಡಿಯವರಿಗೆ ಇಲ್ಲಿಂದ ಮೈಸೂರಿಗೆ ವರ್ಗವಾಯಿತು ಈ ಎರಡು ವರುಷ ಕಾಲದಲ್ಲಿ ಈ ಡಿಸ್ಟ್ರಿಕ್ಟಿಗೆ ಪ್ಲೇಗ್, ಕಾಲರ, ಕ್ಷಾಮ ಇವೆಲ್ಲಾ ಸಂಭವಿಸಿತ್ತು ಮ್ಮ|| ಚಾಂಡಿಯವರು ಪ್ರಜೆಗಳಿಗೆ ವಿಶೇಷ ಸಹಾಯ ಮಾಡಿದರು ಅವರು ವಿಶೇಷವಾಗಿ ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿ ಕಷ್ಟದಲ್ಲಿರತಕ್ಕವರನ್ನು ಖುದ್ದು ನೋಡಿ ಉಪಚರಿಸುತ್ತಿದ್ದರು ಇವರಿಗೆ ಜಾತಿಭೇದವಿರಲಿಲ್ಲ ಇಂಥಾ ನಿಷ್ಪಕ್ಷಪಾತಿಯಾದ ಅಧಿಕಾರಿಯನ್ನು ಅಗಲುವದಕ್ಕಾಗಿ ಪ್ರಜೆಗಳು ಬಹಳ ಸಂಕಟಪಡುತ್ತಿದ್ದಾರೆ ಈಗ 20 ದಿವಸದಿಂದ ಎಲ್ಲಾ ಪ್ರಜೆಗಳೂ ಸೇರಿ ಇವರನ್ನು ಸತ್ಕರಿಸುತ್ತಿರುವರು —ಇಲ್ಲಿನ ಒಂದು ಸ್ಕೂಲಿನಲ್ಲಿ ಎರಡು ತಿಂಗಳ ಹಿಂದೆ ಹುಡುಗರಿಂದ ಪುಸ್ತಕಗಳನ್ನು ತರಿಸಿ ಕೊಡುವದಾಗಿ ಹೇಳಿ ಒಬ ಮಾಸ್ಟರು ದುಡ್ಡು ತೆಗೆದುಕೊಂಡು ಮೋಸಮಾಡಿದರೆಂದು ಊರೆಲ್ಲಾ ಪುಕಾರಾಗಿ ಡೆಪ್ಯುಟಿ ಇನ್ಸ್ಪೆಕ್ಟರವರು ಸ್ಕೂಲು ಪರೀಕ್ಷೆಗೆ ಬರುತ್ತಾರೆಂದು ಕೇಳಿ ಹುಡುಗರಿಂದ ದುಡ್ಡು ತೆಗೆದುಕೊಂಡಿದ್ದರೋ ಅವರವರಿಗೆ ವಾಪತಿ ಮಾಡಿ ಕ್ಷಮಾಪಣೆ ಕೇಳಿಕೊಂಡರು ಇದರಿಂದ ಪುಕಾರು ಸಮಾಧಾನಕ್ಕೆ ಬಂದಿದೆ

ನಾಗಮಂಗಲ —ಈ ಊರಿನಲ್ಲಿ ಈಗ್ಗೆ 31 ವರುಷಗಳಿಂದ ಹೊಸದಾಗಿ ಕೃಷ್ಣರಾಜಪೇಟೆ ರೋಡ್ ಎಳೆ ಇರುವ ಬಸವಣ್ಣ ದೇವರ ಗುಡಿ ಬಳಿ ಮಹಾದೇವರ ದೇವರ ಜಾತ್ರೆಯು ನಡೆಯುತ್ತಲಿದೆ ಅಲ್ಲಿಗೆ ಸಾವಿರಾರು ರಾಸುಗಳು ಸೇರುತ್ತಲಿವೆ ದಾಖ ಈ ವರುಷ ಸದರಿ ದೇವಸ್ಥಾನದ ಬಳಿ ಮಾದೇವರ ದೇವರಿಗಾಗಿ ಒಂದು ದೇವಸ್ಥಾನವು ಸಾಧಾರಣವಾಗಿ ಕಟ್ಟಿಸಿ ಇದೇ ಮಾಹೆ 7 ನೇ ತಾ ಗುರುವಾರದ ಲಾಗಾಯಿತು 14 ನೇ ತಾ ಮಂಗಳವಾರದ ವರಿಸಿಗೆ ಸದರಿ ಜಾತ್ರೆಯು ನಡೆಯಿತು ಪ್ರತಿ ವರುಷಕ್ಕಿಂತಲೂ ಈ ವರುಷ ಬಹಳ ವಿಜೃಂಭಣೆಯಿಂದ ವಿಸ್ತಾರವಾಗಿಯೂ ಜರುಗಿತು ಸುಮಾರು ಎರಡು ಮೂರು ಸಾವಿರ ರಾಸುಗಳೂ, ಎರಡು ಸಾವಿರ ಜನಗಳೂ ಸೇರಿತ್ತು ತಕ್ಕಮಟ್ಟಿಗೆ ವ್ಯಾಪಾರವು ನಡೆಯಿತು ಇದಕ್ಕಾಗಿ ಈ ಊರು ಚಿಕ್ಕ ಲಿಂಗಪ್ಪನವರು, ಚಿಕ್ಕ ರಂಗಯನವರು, ರಾಮಣ್ಣನವರು, ಜವರೇಗೌಡರು, ಪಟೇಲ್ ಮಲ್ಲೇಗೌಡರು, ಪುಟ್ಟೇಗೌಡರು, ಅವಲಕ್ಕಿ ... ಗ್ರಾಮಸ್ಥರುಗಳು ಸೇರಿ ದಕ್ಷ

ಪ್ರೋತ್ಸಾಹದಿಂದ ಬಹಳ ವಿಜೃಂಭಣೆಯಿಂದ ನಡೆಯತಕ್ಕ ಏರ್ಪಾಡು ಮಾಡಿದರು ಇನ್ನು ಮುಂದೆಯೂ ಇದು ಮುತುವರ್ಜಿಯಾಗಿ ಈ ಕಾರ್ಯವನ್ನು ಶಾಶ್ವತವಾಗಿ ನಡೆಯತಕ್ಕ ಏರ್ಪಾಡು ಇಡಿಸಬೇಕೆಂದು ಅಪೇಕ್ಷಿಸುತ್ತೇವೆ —ಮಳೆ ಬೆಳೆ ಚನ್ನಾಗಿದೆ ಧಾರಣೆವಾಸಿ ಇಳಿವಿಲ್ಲ —ಇಲ್ಲಿ ಸಂತೆಗೆ ರಾಗಿ ನಾಟಿಗಳು ಹೇರಳವಾಗಿ ಬರುತ್ತೆ ಮುನಿಸಿಪಾಲಿಟಿಯವರು ಇತರ ಕಡೆ ಗಾಡಿಗಳಿಗೆ ಒಂದೆರಡು ಆಣೆಯಂತೆ ತೆರಿಗೆ ವಸೂಲ್ಮಾಡುತ್ತಾರೆ ಇಲ್ಲೂ ಆ ರೀತಿ ಮಾಡಿದರೆ ಮುನಿಸಿಪಾಲಿಟಿಗೆ ಉತ್ಪತ್ತಿಯಾಗುತ್ತೆ ಇದರಿಂದ ಟೌನ್ ಅಭಿವೃದ್ಧಿ ಮಾಡಿಕೊಳ್ಳಲು ಅನುಕೂಲಿಸುತ್ತೆ

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರ ಚುಂನಡಿ ಅಂಚಿನ ಸೀರೆಗಳು.

ಅವಲ್ ರಕಂ ಕ್ರಯ ರೂ 260 ದುಯಂ ರಕಂ ಕ್ರಯ ರೂ 230

ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚುಂನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ಸೆರಗುಗಳು ಬಹು ಘನವಾಗಿವೆ ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ ಪರೀಕ್ಷಾರ್ಥ ಒಂದನ್ನು ತರಿಸಿದಲ್ಲಿ ನಮ್ಮ ನೆರಸೂರತೆಯವರು ಅನೇಕ ಸೀರೆಗಳಿಗೆ ಬರೆಯುವರು [156-5]

ನಮ್ಮ ವಿಳಾಸ—ಎಂ ಎಸ್ ಭಟ್ಟಾಚಾರ್,
ನುಂಗಂಬಾಕಂ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ನಡಿಸಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸಿಯಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು ಗಾಬರಿ ಕಣ್ಣುಮೊಬ್ಬು ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮತ್ತು ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ ವಾಯು ಮಹಾವ್ಯಾಧಿ ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [1211]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೬—೦ ದೊಡ್ಡ ಗಳನ್ನು ನಾನಾ ವರ್ತಕರಲ್ಲಿಯೂ ಕೊಂಡುಕೊಳ್ಳುವುದು ಅಥವಾ ಫೋಸ್ಟರ್ ಮ್ಯಾಕ್ ೨೦ ಬೊಂಬಾಯಿ ಇವರಿಗೆ ಬರೆಯುವುದು

READY FOR SALE

A Manual of GENERAL ENGLISH, Third Edition, Thoroughly Revised by C. CHINNA KESAVAIYA, B.A. Price Re. 1, Postage 3 as.

[177-1] H. N. ROW & BROTHERS, Bangalore City.

ಪ್ರಸಿದ್ಧಪತ್ರಿಕೆ

ಶ್ರೀ ಶಾರದಾ ಹಾರ್ಮೋನಿಯಂ ಫ್ಯಾಕ್ಟರಿ, ಯಲಹಂಕಾ ಗೇಟ್, ಬೆಂಗಳೂರು ಸಿಟಿ ಈ ಸ್ಥಳದಲ್ಲಿ ಮನೋಹರವಾದ ಹಿಂದುಸ್ತಾನಿ, ಪಾರ್ಸಿ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಫ್ರೀಯಾಗಿ ತಮ್ಮ ಮನೆಯಲಿ ಪಾಠ ಹೇಳಿಕೊಳ್ಳತಕ್ಕವರಿಗೆ ಅವರ ರೇಟಿಂ ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೇಲ್ಕಂಡ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಹ್ಯಾಂಡ್ ಹಾರ್ಮೋನಿಯಂಗಳು ಮಾರುವುದಕ್ಕೆ ಸಿದ್ಧವಾಗಿರುತ್ತವೆ ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗಗಳಂಥಾ ಯಾವ ತರಹಾ ಹಾರ್ಮೋನಿಯಂ ಬೇಕಾಗಿದ್ದರೂ ಖಾತ್ರಿಯಾದ ಮತ್ತು ಗ್ಯಾರಂಟಿಯುಳ್ಳ ಮಾಲನ್ನು ಸುಲಭವಾದ ಕಮೀಷನ್ ದರದ ಮೇರೆ ಮಾಡಿ ತಯಾರಾಗುವ ಸ್ಥಳದಿಂದ ಆರ್ಡರ್ ಪ್ರಕಾರ ತರಿಸಿಕೊಡಲ್ಪಡುತ್ತೆ ಮತ್ತು ಎಲ್ಲಾ ತರದ ಹಾರ್ಮೋನಿಯಂಗಳನ್ನು ಸುಲಭ ಛಾರ್ಜಿಗೆ ಖಾತ್ರಿಯಾಗಿ ರಿಪೇರಿ ಮಾಡಿ ಕೊಡಲ್ಪಡುತ್ತೆ ಹೆಚ್ಚು ಸಂಗತಿ ತಿಳಿಯಬೇಕೆಂಬುಳ್ಳವರು ಮೇಲ್ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು [170 1]

ನಮ್ಮ ವಿಳಾಸ—ಆರ್ ಕೇಶವರಾವ್ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮಾಸ್ಟರ್ಸ್, ಬೆಂಗಳೂರು ಸಿಟಿ

1913 ನೇ ಇಸವಿಯ ಇಂಗ್ಲೀಷ್ ಕನ್ನಡ ಪಾಕೆಟ್ ಡೈರಿ

ನಂ 1 1 8 ಆ ನಂ 2, 1 8 ಆ ನಂ 3 1 8 ಆ ನಂ 4, 8 ಆ

ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲಿ ಮುದ್ರಿಸಿ ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ... (ಕ್ಲಾತ್ ಬೌಂಡ್) ಎಟ್ ... ವಿಲಾಯಿತಿ ಯಂತ್ರಗಳಲಿ ಹಿಂದು ಮಾಡಿ ಮೇಲುಗಡೆಯಲ್ಲಿ ಪ್ರತ್ಯೇಕವಾಗಿ ತೋಳೆಯುವಹಾಗೆ ಪ್ರಿಂಟು ಮಾಡಲ್ಪಟ್ಟಿವೆ

ಇವುಗಳಲ್ಲಿ ಪರೀಕ್ಷಾಪ್ರಮಾಣಿತ ಸಂವತ್ಸರಗಳ ಪಂಚಾಂಗ ಗ್ರಹಣಗಳು, ... ಮತ್ತು ರಜಾ ದಿವಸಗಳು ತೋರಿಸುವ ಪಟ್ಟಿ, ... ಕೋರ್ಟ್ ಫೀಜು, ಸ್ಟಾಂಪು ಫೀಜು, ರಿಜಿಸ್ಟರ್ ಫೀಜು ಪ್ರೋಸೆಸ್ ರುಸುಂ ... ವಿಷಯಗಳು ... ಚರಿತ್ರೆ, ಗೌರಿ ಪಂಚಾಂಗ, ದಿನಗಳ್ಳಿ ಸಂಬಳ ತೋರಿಸುವ ಪಟ್ಟಿ, ಅಗಸನಿಗೆ ಬಟ್ಟೆ ಹಾಕುವ ಪಟ್ಟಿ, ಪ್ರತಿ ತಿಂಗಳಲ್ಲಿಯೂ ಜಮಾ ಖರ್ಚು ತೋರಿಸುವ ಪಟ್ಟಿ ಮೊದಲಾದ ಅನೇಕ ವಿಷಯಗಳು ಇವುಗಳಲ್ಲಿ ಅಡಗಿವೆ

ಈ ಮೇಲ್ಕಂಡ ನಾಲ್ಕು ನಮೂನೆ ಡೈರಿಗಳಿಗೂ ಪೋಸ್ಟು ಖರ್ಚು ಬೇರೆ ಬೀಳುತ್ತೆ ಒಂದೇ ನಮೂನೆಯಲ್ಲಿ 6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ ಎಷ್ಟು ಹೆಚ್ಚು ಪ್ರತಿಗಳು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಛಾರ್ಜು ಕಡಿಮೆಬೀಳುತ್ತೆ [167 1]

ನಮ್ಮ ವಿಳಾಸ —ಯಂ ಎಸ್ ಶಿದ್ದಪ್ಪ ಅಂಡ್ ಬ್ರದರ್ಸ್
ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮಾರ್ಕೆಟ್, ಮೈಸೂರು

ರೋಗಶಾಮಕವಾದ ಕಸ್ತೂರೀ ಮಾತ್ರೆಗಳನ್ನು ಮರೆಯಬೇಡಿ.

ಈ ಮಾತ್ರೆಗಳು ಬಹಳ ಉಪಯುಕ್ತವಾಗಿ ಬಂದಿರುವದಾಗಿ ಸಾವಿರಾರು ಯೋಗ್ಯತಾ ಪತ್ರಗಳಲ್ಲಿ ಕಳುಹಿಸಿರುವ ಮಾತ್ರ ತಮ್ಮ ನೆಂಬುಗಗಾಗಿ ಇಲ್ಲಿ ನಿವರಿಸುತ್ತೇವೆ (1) ಮ ಸರವೇಲಿನ ವೆಂಕಟಕೃಷ್ಣಶೆಟ್ಟರು ... ಇವರು—ತಮ್ಮ ಕಸ್ತೂರಿ ಮಾತ್ರೆಗಳು ಯಾವಾಗಲೂ ಕೊಡಿಸೋ ಅವರೆಲ್ಲರಿಗೂ ಬಹು ಗುಣಮಾಡುತ್ತವೆ ... ಇನ್ನು 6 ಸೀಸೆಗಳನ್ನು ಕಳುಹಿಸಿಕೊಡಿ (2) ಟಿ ... ಇವರು ಎಲ್ಲಾ ಕಾಯಿಲೆಗಳಿಗೂ ತಮ್ಮ ಕಸ್ತೂರಿ ಮಾತ್ರೆಗಳು ಗುಣಪಡಿಸಿವೆ ... ಇನ್ನು 12 ಸೀಸೆಗಳನ್ನು ಕಳುಹಿಸಿ (3) ... ಇವರು ... ವರ್ಷದ ... ನಮ್ಮ ಕಸ್ತೂರಿ ಮಾತ್ರೆಗಳು ... (4) ಮ ... ಇವರು ... (5) ಮ ... ಅಂಡ್ ಕೊ ... ಇವರು ತಮ್ಮ ಕಸ್ತೂರಿ ಮಾತ್ರೆಗಳಲ್ಲಿ ... ಅನೇಕ ... ಗುಣವು ಅತ್ಯುತ್ತಮವಾಗಿದೆ (6) ಮ ಆರ್ ... ಇವರು ತಮ್ಮ ಕಸ್ತೂರಿ ಮಾತ್ರೆಗಳು ... ಉಪಯೋಗಿಸುವವರೆಲ್ಲರೂ ... ಇನ್ನು 12 ಸೀಸೆಗಳನ್ನು ಕಳುಹಿಸಿಕೊಡಿ [17-1]

ಕ್ರಯ 30 ಮಾತ್ರೆಯುಳ್ಳ 1 ಸೀ 1 ಆಣೆ ... 1 ಡಸಾಂ 1 ರೂ 12 ರ ಮೇಲೆ ಟಪಾಲ್ ಖರ್ಚು 1 ಆಣೆ ... ನಮ್ಮ ಹೆಸರನ್ನು ಸ್ಪಷ್ಟವಾಗಿ ಬರೆಯಿರಿ

ವಿಳಾಸ ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು

ಶೈಸೋಕದ ತಯಾರಾದದ್ದು; ಬರೀ ಸಸ್ಯಾಹಾರ.

ಮೆಲಿನ್ಸ್ ಆಹಾರವು ಪುಷ್ಟಿಯನ್ನೂ ಉತ್ತೇಜನವನ್ನೂ ಕೊಡುತ್ತದೆ, ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಪೋಷಿಸುವುದು ಕೆಳಗಿನ ವಿಳಾಸಕ್ಕೆ ಬರೆದರೆ ಮಾದರಿ ಕಳುಹಿಸುತ್ತಾರೆ

[66-10] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. E. W. Thompson, M.A., Proprietor and Manager, Wesleyan Mission Press, Mysore. 21/11/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

...೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸೆ ೧೯೧೩ ನೇ ಇಸವಿ ನವೆಂಬರ್ ತಾರೀಖು ೨೭ ನೇ ಗುರುವಾರ. ಸಂಚಿಕೆ ೨೬

...ಕಥೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

...ಪ್ರತಾಪಕಂಠೀರವಚರಿತ್ರೆ

...ಟ್ಟ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ...ದುಷ್ಟರಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ; ...ಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ...ಸ್ವಭಾವಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು; ...ಮತ್ತು, ಅಣಾವರಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ಮೀರಿದ ...ಘಟಕ್ಕೆ ತರ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳ ...ಸುಲಭವಾದ ಶೈಲಿ; (7) ಸೇರಿದೆಯಂತೆ ಒಂದಕ್ಕೊಂದು ಜೋಡಿಸ ...ವನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ. ...ಮಾಡುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ...ಮನಸ್ಸಾಗುವದಿಲ್ಲ. ಹೆಚ್ಚಾಗಿ ಹೇಳುವದೇನು? ಓದಿ ...ಇದರ ಸ್ವಾರಸ್ಯ ತಾನಾಗಿ ಗೊತ್ತಾಗುವದು

...—೧ ನೇ ಭಾಗ ೬ ಆಣೆ, ೨ ನೇ ಭಾಗ ೧೦ ಆಣೆ, ಒಟ್ಟು ...ರೂಪಾಯಿ ಟಪಾಲು ಹಾಸಲು ಬೇರೆ [5-17]

ವಿಳಾಸ—ವಿಜಯಕೇಸರಿ ಕಂಪೆನಿ. ಬೆಂಗಳೂರು ಸಿಟಿ.

ಜವಳಿ ಕ್ರಯಕ್ಕೆ ಬೇಕಾಗಿದೆ.

3 1 ಧರ್ಮವಾರದ ಸೀರೆಗಳು, 3 ಕಂಚಿ ಸೀರೆಗಳು, 6-6 ಕಲಾಪತ್ತಿನ ಹೊದಿಯುವ 6-8 ಮೊಳದ ಪಂಚೆಗಳು ದಲ್ಲಾಳಿ ಮೂಲಕ ಯಾ ಖುದ್ದು ಮನೆ ವಾರಿಕೆ ಮಾಡಿ ಬಂದಲ್ಲಿ ನನ್ನ ಸ್ವಂತ ಉಪಯೋಗಕ್ಕೆ ಬೇಕಾಗಿರುತ್ತೆ. ಅಪ್ಪಗಳು ಇದ್ದಲ್ಲಿ ತಂದು ತೋರಿಸಿ ಮುನಾಸಬ್ ಕ್ರಯದ ಮೊಬಲಗು ಪಡೆಯಬಹುದು ವಿಳಾಸ— ಟಿ. ಎಸ್. ರಾಮಚಂದ್ರರಾವ್, 919, ನಂಜರಾಜಬಹದ್ದೂರ್ ಅಗ್ರಹಾರ, ಚಾಮರಾಜ ಮೊಹಲ್ಲಾ, ಮೈಸೂರು. [105-2]

"ಮಹಿಳಾಸಖೀ."

ಮುಂದಿನ ಡಿಸೆಂಬರ್ ತಿಂಗಳಲ್ಲಿ ಹೊರಡುವ "ಮಹಿಳಾಸಖೀ" ಮಾಸಪತ್ರಿಕೆಯ ಕೂಡ ಅದರ ಚಂದಾದಾರರಿಗೆಲ್ಲಾ ಮದರಾಸ್ ಗವರ್ನರವರಾದ ಲಾರ್ಡ್ ಪೆಂಟ್ಲೆಂಡ್ ಅವರ ಮತ್ತು ಅವರ ಪತ್ನಿ ಮಕ್ಕಳುಗಳ ದಿವ್ಯವಾದ ಚಿತ್ರಪಟವನ್ನು ಉಚಿತವಾಗಿ ಕಳುಹಿಸಿಕೊಡುತ್ತೇವೆ. "ಮಹಿಳಾಸಖೀ" ವರುಷದ ಚಂದಾ 6 ಆಣೆ, ಅಥವಾ ಅಂಚೆ ಸ್ಟಾಂಪು ಸೇರಿ 9 ಆಣೆ.

ವಿಳಾಸ—ಮ್ಯಾನೇಜರ್, ಮಹಿಳಾಸಖೀ, ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 27

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ಹಲ್ಲುನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತಸೆಗಡಿ, ಶ್ವಾಸರೋಗ, ಜಜ್ಜು, ಉಳಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜೆ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಡೋಂಗರೆ ಇವರ ಬಾಲಾಮೃತ.

[115-20]

...ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ...ಹುಡುಗರು ಬಹಳ ಸಂತೋಷದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ... ಎಲುಬುಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲ...ತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ; ಟಪಾಲ್ ಖರ್ಚು ೩ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

WILLIAM & Co, FORT, BOMBAY.

ಅಮೃತಾಂಜನ್. (Regd.)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-8-0.

ಗಜಕರ್ಣದ ಮುಲಾಮು.

ಯಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ಹಾಗಿಸುವದರೊಳಗಾಗಿ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ; ಬಟ್ಟೆ ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 0-6-0.

ದಂತಮಂಜನ 2 ಆಣೆ ನೇತ್ರಾಂಜನ 1 ಆಣೆ. ಸುಂದರತೈಲ 8 ಆಣೆ. [35-10]

ದಯವಿಟ್ಟು ನಮ್ಮ ಕ್ಯಾಟಲಾಗು ತರಿಸಿಕೊಳ್ಳಿರಿ.

ಅಮೃತಾಂಜನ ಡಿಪೋ, ಪೋಸ್ಟು ಮುಂಬಯಿ

ಪಾಕೆಟ್ ಡೈರಿ

ಶ್ರೀ ಸೀತಾರಾಘವ

ಸೆ 1913 ನೇ ಇಸವಿಯದು

ಮೊದಮೊದಲೇ ಬರೆದು ತರಿಸಿಕೊಳ್ಳಿ ನಂ. 1. ಸಣ್ಣ ಸೈಜು ಸಾದಾ ಡೈರಿ 0 1 0 ನಂ. 2 ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ...ಕ್ಲಾಪ್ ಡೈರಿಗೆ 0-6-0, ನಂ. 3 ದೊಡ್ಡ ಸೈಜು ಸಾದಾ ಡೈರಿ 0 6 0 ನಂ. 4. ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ...ಡೈರಿ 0-8-0. ಟಪಾಲು ಖರ್ಚು ಬೇರೆ ಒಂದೇ ಸಲ 10 ಡೈರಿ ತರಿಸಿಕೊ ಡವರಿಗೆ ಒಂದು ಡೈರಿ ಇನಾಮು, 25 ರೂಪಾಯಿಗಿಂತ ಹೆಚ್ಚು ಡೈರಿ ...ವವರಿಗೆ ರೂಪಾಯಿಗೆ 2½ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. [136-13]

ವಿವರಣೆ—(1) ಈ ವರೆಗೆ ನಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿಯೂ ಬಲವಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ...ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ದೇಹಸ್ಥಿತಿ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ...ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು ಷೋಡಶಕರ್ಮಕ್ಕೆ ಬೇಕಾದ ...ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ (3 ಕೋಯಮತ್ತೂರು ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ...ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ದೊರೆಯದಿರುವನ್ನು ಹೊಸ ವಿಷಯಗಳನ್ನೂ ಸೇರಿಸಿದೆ (4) ಮದರಾಸ್ ಮತ್ತು ಸದರ್ನ್ ಮರಾಠಾ ...ರೈಲು ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರ ತಲಬು, ಗೌರ್ನಮೆಂಟ್ ರಜಾ ...ದಿನಗಳು ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಶೇಕಡಾ ಬಡ್ಡಿ, ತಲಬುಪಟ್ಟಿ ಸಹಾ ಇರುತ್ತದೆ. ದೋಬಿ ಲೆಕ್ಕ, ಹಾಲಿನ ...ನಾವ ವಿಷಯ, ಒಟ್ಟು ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯ. ...ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಹತ್ತಿಯ ತುಪ್ಪ.

ಶ್ರೇಷ್ಠವಾದ ಹತ್ತಿಯ ಬೀಜದಿಂದ ತೆಗೆದು ರಸಾಯನ ಶಾಸ್ತ್ರಜ್ಞರಿಂದ ಶುದ್ಧಿ ಮಾಡಲ್ಪಟ್ಟು, ಘನ ಡಾಕ್ಟರುಗಳು ನಿರ್ದೋಷವಾದ ಮತ್ತು ಆರೋಗ್ಯಕರವಾದ ಆಹಾರವಸ್ತುವೆಂದು ಹೇಳಿರುವ, ಅಡಿಗೆಗೆ ತುಪ್ಪಕ್ಕೆ ಬದಲಾಗಿ ಅನೇಕರು ಉಪಯೋಗಿಸುತ್ತಿರುವ

ಹತ್ತಿಯ ತುಪ್ಪವು ಮಾರಾಟಕ್ಕೆ ಸಿದ್ಧವಾಗಿದೆ.

ಗುಣ ಹೆಚ್ಚು. ಬೆಲೆ ಕಡಮೆ. ಡಬ್ಬಾ 1 ಕ್ಕೆ 12 ರೂಪಾಯಿ. ಪೌಂಡಿಗೆ 1-2-0. ಇದು ಅಭ್ಯಂಗನಕ್ಕೂ ಕೂದಲಿಗೆ ತೊಡೆದುಕೊಳ್ಳುವದಕ್ಕೂ ಉತ್ಕೃಷ್ಟವಾಗಿದೆ [164-4]

ಹತ್ತಿಬೀಜದ ಹಿಂಡಿ ಮತ್ತು ಹೊಟ್ಟು ಹಸು, ಎಮ್ಮೆ, ಎತ್ತು, ಕುದುರೆಗಳಿಗೆ ಆರೋಗ್ಯವಾದ ಮತ್ತು ಪುಷ್ಟಿಕರವಾದ ಆಹಾರ ಎಣ್ಣೆ ಹೆಚ್ಚಾಗಿರುವ ಬರೀ ಬೀಜವನ್ನೇ ಕೊಡುವುದರಿಂದುಂಟಾಗುವ ಕೇಡು ಹಿಂಡಿ ಹೊಟ್ಟುಗಳನ್ನು ಕೊಡುವುದರಿಂದ ಬೀಳವು ಅಗದು ಇವುಗಳನ್ನು ತಿಂದ ಪಶುಗಳ ಗೊಬ್ಬರವು ಭೂಮಿಯನ್ನು ತಂಪಾಗಿಯೂ ಫಲಕಾರಿಯಾಗಿಯೂ ಮಾಡುವುದು. ಈ ವಸ್ತುಗಳೆಲ್ಲ ಮಿಶ್ರವಿಲ್ಲದೆ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 159, ಕಿಲಾರಿ ರೋಡ್, ಬೆಂಗಳೂರು ಸಿಟಿ.

ಜೆ ಎಸ್ ಶ್ರೀಕಂಠಯ್ಯ, ಎ 6, ದೊಡ್ಡಪೇಟೆ, ಮೈಸೂರು. ಇವರಲ್ಲೂ ಮತ್ತು ಕಂಪೆನಿಯ ಏಜಂಟರಿರುವ ಶಿವಮೊಗ್ಗ, ಹಾಸನ, ಚನ್ನಪಟ್ಟಣ, ಮದ್ದೂರು ಈ ಸ್ಥಳಗಳಲ್ಲೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ಕ್ರಯಕ್ಕೆ ದೊರೆಯುವವು.

ತಿರುಪತಿ ಗಂಧ. ಡಬ್ಬಿ 1 ಕ್ಕೆ 12 ಆಣೆ.

ಸುವಾಸನೆ ಸೂಕ್ಷ್ಮವಾದ್ದು ಜಗಗಳಿಗೆ ಶ್ರೀಯಸ್ಕರವು.

ಕಪಿಲಾ ಕಂಪನಿ ಇವರಲ್ಲಿ ತಿರುಪತಿ ಚಂದನವು ತಯಾರಾಗಿ ಮಾರುವದಕ್ಕೆ ಇಟ್ಟಿರುವೆವು. ಕಲ್ಯಾಣ ಮಹೋತ್ಸವಗಳಲ್ಲಿಯೂ, ಶುಭಪ್ರಯೋಜನ ಕಾಲಗಳಲ್ಲಿಯೂ, ಯಾಗ ಯಜ್ಞ ಸಂತರ್ಪಣೆಗಳಲ್ಲಿಯೂ ಮುಖ್ಯವಾಗಿ ಬೇಕಾಗುವ ಈ ತಿರುಪತಿ ಗಂಧ ಸಮಯಕ್ಕೆ ದೊರೆಯದೆ ದ್ರವ್ಯ ಖರ್ಚು ಮಾಡಿ ಪರಿಮಳವಿಲ್ಲದ ಕಟ್ಟಿಗೆ ಗಂಧವನ್ನು ಉಪಯೋಗಿಸುವರು ಈ ತಿರುಪತಿ ಚಂದನವನ್ನು ಒಂದಾವರ್ತಿ ಸೇವಿಸಿದವರು ಇತರ ವಿಧ ಗಂಧವನ್ನ ಅವಲಂಬಿಸರು ಈ ಗಂಧವು ಭಂಗಾರಛಾಯವುಳ್ಳದ್ದು, ದಿವ್ಯ ಪರಿಮಳವುಳ್ಳದ್ದು. ಅನೇಕ ದೇಶಗಳಿಗೆ ವಿಶೇಷವಾಗಿ ಈ ಗಂಧದ ಡಬ್ಬಿಗಳು ರವಾನಿಸುತ್ತ ಬಂದಿರುವೆವು. ಇತರ ವಿಧವಾದ ಗಂಧಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ. ಕಪಿಲಾ ಕಂಪನಿ ರಿಜಿಸ್ಟರ್ಡ್ ಟ್ರೇಡು ಮಾರ್ಕು ಗಮನಿಸಿ ಗಂಧವನ್ನು ನೋಡಿ ತರಿಸಿಕೊಳ್ಳಿರಿ ವಿ. ಪಿ. ಖರ್ಚು ಬೇರೆ.

ಕೇಳುವವರಿಗೆ ಕ್ಯಾಟಲಾಗು ಕಳಿಸುವೆವು ಮತ್ತು ಈ ಕಂಪನಿಯಲ್ಲಿ ಇಂಗ್ಲೀಷು ವಾಸನೆಗಳು, ಇತರ ಗಂಧಗಳು, ಗಡಿಯಾರಗಳು, ವಸ್ತ್ರಗ್ರಂಥಗಳು, ಕೂದಲು ಬೆಳೆಯುವ ತೈಲ, ಮಾರಿಕೆಗೆ ತಯಾರಾಗಿವೆ ಕ್ಯಾಟಲಾಗು ಬೇಕಾದವರಿಗೆ ಸುಮ್ಮನೆ ಕಳಿಸುವೆವು [174-2]

ವಿಳಾಸ—ಕಪಿಲಾ ಕಂಪನಿ, ಚಿತ್ತೂರು.

HASSAN CAPS.

ಹಾಸನದ ಟೋಪಿಗಳು.

ಮೊದಲನೇ ತರಗತಿಯ ದಾರ ರೇಷ್ಮೆ ಚುಕ್ಕೆಗಳುಳ್ಳದ್ದು			ರೂ	2 0 0
,,	,,	,, ಕೆಂಪು ಅಥವ ಕಪ್ಪು	,,	1 8 0
ಎರಡನೇ	,,	,,	,,	1 6 0
ಮೂರನೇ	,,	,,	,,	1 4 0
ನಾಲ್ಕನೇ	,,	,,	,,	1 2 0

ಇನ್ನು ಬೇರೆ ತರಹ ಬೇಕಾದರೆ ಮಾಡಿಸಿ ಕಳುಹಿಸುತ್ತೇವೆ

ನಮ್ಮ ವಿಳಾಸ — [157-7]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,

ತುಮಕೂರು.

Address—
Wesleyan Mission Cap Industry,
Tumkur.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲ ಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 2 18

(ಸ್ಕಾಟ್ಸ್ ಇಮಲ್ಷನ್)

ಎಂದೇ ಸೇವನಾ ಔಷಧವು ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳುಳ್ಳದ್ದು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣವು ಕಂಡುಬರುತ್ತದೆ

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಮೀನನ್ನು ಹೊತ್ತಿರುವ ಈ ಚಿಹ್ನೆಯ ಗುರುತು

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-48

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ವಾಪಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರದ ಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುಖ್ಯಾಗಿ ನಾವೇ ಸಿಂಕು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಜರಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಜಾದರ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೊಸುಗಳ ಟೋಪಿ, ಸ್ವೆಟರ್ ಮೇಜೋಡು, ಆಳ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು



ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಹಲ್ಲಿನ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ನಿಲೆಯುವ ಬಾಧೆ, ಜ್ವರ ಇರುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇದೇ ವಿಧವಾಗಿ ಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಎಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಸುಖಕರವಾದ ಒಂದು ಶಮನ ಭಾವವು ಮೈಯೊಳಕ್ಕೆ ವ್ಯಾಪಿಸುವುದು ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅಪ್ಪನೇ ಅಗಿಂದಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುರೋಗ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ನೋಡಿ! ವಿಶೇಷವಾಗಿ ಆರ್ಡರುಗಳು ಬಂದು ಸುರಿಯುತ್ತಿವೆ



ಬೇಗನೋಡಿ

ನಾಜೂಕಾದ ವಾಚು — ಜರ್ಮನಿಯುಳ್ಳ ...

ವೈಟ್ ರೆಗ್ಯುಲೇಟರ್ ಲೀವರ್ ಒಳ್ಳೆ ವಾಚು

ಇದರ ಕ್ರಯ ಸಂತೋಷಕರವಾದ ಹನ್ನೆರಡು ಬಹುಮಾನಗಳ ಸಮೇತ ಮೂರು ರೂಪಾಯಿ ಮಾತ್ರ

ಐದು ವರುಷಗಳ ಗ್ಯಾರಂಟಿ

ಇದು ಎಲ್ಲಾ ದೇಶಗಳಲ್ಲೂ ... ಸುಪ್ರಸಿದ್ಧವಾದ ವಾಚು ... ಗಾರ ಮತ್ತು ಬಲವಾದ ಯಂತ್ರಗಳಿಂದ ತಯಾರಾದದ್ದು ... ತಕ್ಕಂಥ ಮೇಲೆ ಕಂಪೆನಿ ತಯಾರಾದದ್ದು ... ಬಹು ಪ್ರಸಿದ್ಧವಾದ ವಾಚು ... ಸರ್ವರಿಗೂ ತಿಳಿದ ವಿಷಯ ... ಪ್ರವಾದ ನಿಕ್ಕಲ್ ... ತಯಾರಾದದ್ದು ... ಗ್ಲಾಸ್ ... ಗ್ಲಾಸ್ ... ಎಲ್ಲಾ ... ಸಿಂಗಾರ ಮತ್ತು ... ಲೋಹ ಪ್ರಸಿದ್ಧವಾದ ಲೀವರ್ ಕೆಲಸದಿಂದ ತಯಾರಾದದ್ದು ... ಸುಂದರವಾದದ್ದು ... ವಾಚು ... ಆರ್ಡರುಗಳು ಬಂದು ಸುರಿಯುತ್ತಿವೆ ... ವಾಚುಗಳು ... ಮುಗಿದುಹೋದನಂತರ ಒಂದಿತ ಈ ನಮೂನೆಯ ... ಇದರ ... ಮುಗಿದುಹೋದನಂತರ ಆಕ್ಷೇಪಣೆ ... ಪ್ರಾರ್ಥನೆ [181 1]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ —

ಮಿಸಸ್—ಎಲ್ ಕೆ ಮೂರ್ತಿ ಅಂಡ್ ಕಂಪೆನಿ

ನಂಬರು ೧೦, ಬ್ರಾಹ್ಮಣಗಾರಲು ನಾಯುಡು ಬೀದಿ, ಮದ್ರಾಸು

ಪುಗಸಟ್ಟೆ ಕೊಡಲಾಗುತ್ತೆ.

10 ವರುಷ ಬಾಳಿಕೆ ಬರುವ ... ಲೀವರ್ ವಾಚನ್ನು, ಒಂದು ಸುಂದರವಾದ ಸರದೊಡನೆ, ೨೦ ಫೋನ್ ಕಂಪನಿಯವರು ... ಬಹುಮಾನವಾಗಿ ಕೊಡುತ್ತೇವೆ ... ನಮಗೆ ಬರೆಯಿರಿ ವಿಳಾಸ ಮನ್ನೇಜರ್ ಎಂ ಎ ಫೋಟೋ ಕಂಪನಿ [179 1] ಚಿತ್ತೂರು, ಉತ್ತರ ಆರ್ಕಾಟು

1913 ನೇ ಇಸವಿಯ ಇಂಗ್ಲೀಷ್ ಕನ್ನಡ

ಪಾಕೆಟ್ ಡೈರಿ

ನಂ 1, ೬ ಆ ನಂ 2, ೭ ಆ ನಂ 3,೧೦ ಆ ನಂ 4, ೮ ಆ

ಈ ಡೈರಿಗಳನ್ನು ಬಹು ಸುಂದರವಾಗಿರುವ ಕಡೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ, ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ಬಟ್ಟೆ (ಕ್ಯಾಲಿಕೋ) ಬೈಂಡು ಬೈಂಡು ಮಾಡಿ ... ಎಲ್ಲಾ ಯಂತ್ರಗಳಲ್ಲಿ ... ಮಾಡಿ ... ಹೋಲುವಂತೆ ... ಪ್ರಿಂಟು ಮಾಡಲ್ಪಟ್ಟವೆ

ಇವುಗಳಲ್ಲಿ ಶಾಲಿವಾಹನ ಶಕವಾದಿಯ ಸಂವತ್ಸರಗಳ ಪಂಚಾಂಗ ಪ್ರಕರಣದ ದಿನಗಳ ಸಹಿತ ಹಿಂದೂ ಹಬ್ಬಗಳು ಮತ್ತು ರಜಾ ದಿನಗಳು, ತೋರಿಸುವ ಪಟ್ಟಿ, ರೈಲ್ವೆ ಛಾರ್ಜು, ಕೋರ್ಟು ಫೀಜು, ಸ್ಟಾಂಪು ಫೀಜು, ರಿಜಿಸ್ಟರ್ ಫೀಜು, ಪೋಸ್ಟ್ ರುಸುಂ ಟಪಾಲಾಫೀಸಿನ ವಿಷಯಗಳು, ಭೂಮಿ ಚದರಗಳ, ಗೋಲಿ ಸಂಖ್ಯಾಂಗ, ದಿನಗಳನ್ನು ಸಂಬಳ ತೋರಿಸುವ ಪಟ್ಟಿ, ಆಗಸನಿಗೆ ಬಟ್ಟೆ ಹಾಕುವ ಪಟ್ಟಿ, ಪ್ರತಿ ತಿಂಗಳಲ್ಲಿಯೂ ಜಮಾ ಖರ್ಚು ತೋರಿಸುವ ತಖ್ತೆ ನೋಡಬಹುದಾದ ಅನೇಕ ವಿಷಯಗಳು ಇವುಗಳಲ್ಲಿ ಅಡಗಿವೆ

ಈ ಮೇಲ್ಕಂಡ ನಾಲ್ಕು ನಮೂನೆ ಡೈರಿಗಳಿಗೂ ಪೋಸ್ಟು ಛಾರ್ಜು ಬೇರೆ ಬೀಳುತ್ತೆ ಒಂದೇ ನಮೂನೆಯಲ್ಲಿ ೬ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ ಎಷ್ಟು ಜಾಸ್ತಿ ಪ್ರತಿಗಳು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಚಾರ್ಜು ಕಡಿಮೆಬೀಳುತ್ತೆ [167 2]

ನಮ್ಮ ವಿಳಾಸ —ಯಂ ಎನ್ ಸಿದ್ದಪ್ಪ ಅಂಡ್ ಬ್ರದರ್ಸ್, ಒನರವ ಮರ್ಚೆಂಟ್ಸ್, ಕೃಷ್ಣರಾಜಪೇಟೆ, ಮೈಸೂರು

READY FOR SALE

A Manual of GENERAL ENGLISH, T... Edition, Thoroughly Revised by C CHEN... KESAVAIYA, B A Price Re 1, Postage 3 as.
177-2 H N ROW & BROTHERS, Bangalore

ರೋಗನಾಮಯಹರ ಕಸ್ತೂರೀ ಮಾತ್ರೆ

ಳನ್ನು ಮರೆಯಬೇಡಿ.



ಈ ಮಾತ್ರೆಗಳು ಎಷ್ಟೆಯವಾಗಿ ... ಪ್ರಸಿದ್ಧರಾದ ದೊಡ್ಡ ... ಪತ್ರಿಕೆಗಳಲ್ಲಿ ... ಮಾತ್ರ ನಮ್ಮ ಸಂಬಂಧಿಗಳಿಗಾಗಿ ಒಳ್ಳೆ ... (1) ಮ ಸರವಣ್ಣನ ಚೆಂಕಟಪ್ಪಶೆಟ್ಟರು ... ಇವರು—ತಮ್ಮ ಕಸ್ತೂರಿ ಮಾತ್ರೆ ... ಯಾರಿಗೆ ಕಾಣದೆ ... ಎಂದು ಹೇಳುತ್ತಾರೆ ... ಇನ್ನು 6 ಸೀಸೆಗಳನ್ನು ಕೊಡಿ (2) ... ಇವರು ... ಮಾತ್ರೆಗಳು ಗುಣಪಡಿಸಿದ ... ಯಿತು ... ಇನ್ನೂ 12 ಸೀಸೆಗಳನ್ನು ಕಳಿಸಿ (3) ... ಗವಿ ರಾಜಾಮಾನ್ಯರ್, ಭಕ್ತಮನಹಳ್ಳಿ ... ಇವರು—ಜನ ... ಗಳಿಗಾ ಗುಣವಾಗಿದೆ 1 ... ವರ್ಷದ ಪ್ರಥಮ ತಮ ಕಸ್ತೂರಿ ಮಾತ್ರೆ ... ಗುಣವಾಗಿರುತ್ತದೆ (4) ... ವರು ... ವರು ... ಧಾರವಾಡ, ಇವರು ತಮ್ಮ ಕಸ್ತೂರಿ ಮಾತ್ರೆಗಳು ... ಗುಣಕೊಂಡು ... 2 ಸೀಸೆಗಳನ್ನು ಕಳಿಸಿಕೊಡಿ (5) ... ಪಿ ಎಸ್ ಎ ಸ್ವಾಮಿ, ಕೇಷಾಫ್ ... ಎನ್ ಎಂ ಅಂಡ್ ಕೋ ... ರಾಮಕೃಷ್ಣಗ್, ಬಳ್ಳಾರಿ, ಇವರು ತಮ್ಮ ಕಸ್ತೂರಿ ಮಾತ್ರೆಗಳನ್ನು ... ವಾದವಾದ ಅನೇಕ ವಿಷಯಗಳನ್ನು ಜೋಗಿಲಾಗಿ ... ಗುಣ ... ನಾಗಿವೆ (1) ಮ] ... ಬಾಲತ ... ಹೊಸ ... ನಾರಾಯಣ, ಬೆಂಗಾಲ್, ಇವರು—ತಮ್ಮ ಕಸ್ತೂರಿ ಮಾತ್ರೆಗಳು ... ಮಾಡ ಅನೇಕ ... ಉಪಯೋಗವಾಗು ... ಹೊಂಗುತ್ತಾರೆ ಇನ್ನು 12 ಸೀಸೆಗಳನ್ನು ಕಳಿಸಿಕೊಡಿ ...

ಕ್ರಯ 30 ಮಾತ್ರೆಯುಳ್ಳ ... 1 ಆಣೆ ... 1 ಆಣೆ ... 12 ... ಆಣೆ ...

ವಿಳಾಸ—ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು

ಕುಂತಲಾನಂದ ತೈಲವು.

147 30

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿರುವ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರು ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯುವ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ಸದ್ಗುಣಗಳನ್ನು ಪರಿಗಣಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎನ್. ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಪ್ರಸಿದ್ಧಪತ್ರಿಕೆ.

ಶ್ರೀ ಶಾರದಾ ಹಾರ್ಮೋನಿಯಂ ಕಾರಖಾನೆ, ಬುಳಾಪೇಟೆ, ಬೆಂಗಳೂರು ಸಿಟಿ. ಈ ಸ್ಥಳದಲ್ಲಿ ಮನೋಹರವಾದ ಹಿಂದುಸ್ಥಾನಿ, ಮರಾಠಿ, ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ. ಮತ್ತು ಪ್ರೈವೇಟಾಗಿ ತಮ್ಮ ಮನೆಗಳಲ್ಲಿ ಪಾಠ ಹೇಳಿಸಿಕೊಳ್ಳತಕ್ಕವರಿಗೆ ಅವರವರ ಇಷ್ಟ ಪ್ರಕಾರ ಹೇಳಿಕೊಡಲ್ಪಡುತ್ತೆ. ಮತ್ತು ಮೇಲ್ಕಂಡ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಹ್ಯಾಂಡ್ ಹಾರ್ಮೋನಿಯಂಗಳು ಕ್ರಯಕ್ಕೆ ಸಿದ್ಧವಾಗಿರುತ್ತವೆ. ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗವುಳ್ಳಂಥಾ ಯಾವ ತರಹಾ ಹಾರ್ಮೋನಿಯಂ ಬೇಕಾಗಿದ್ದರೂ ಖಾತ್ರಿಯಾದ ಮತ್ತು ಗ್ಯಾರಂಟಿಯುಳ್ಳ ಮಾಲನ್ನು ಸುಲಭವಾದ ಕಮಿಷನ್ ದರದ ಮೇಲೆ ಮಾಲ್ ತಯಾರಾಗುವ ಸ್ಥಳದಿಂದಲೇ ಟೈಂ ಪ್ರಕಾರ ತರಿಸಿಕೊಡಲ್ಪಡುತ್ತೆ. ಮತ್ತು ಎಲ್ಲಾ ತರಹ ಹಾರ್ಮೋನಿಯಂಗಳನ್ನು ಸುಲಭ ಚಾರ್ಜಿಗೆ ಖಾತ್ರಿಯಾಗಿ ರಿಪೇರಿ ಮಾಡಿಕೊಡಲ್ಪಡುತ್ತೆ. ಹೆಚ್ಚು ಸಂಗತಿ ತಿಳಿಯಲಪೇಕ್ಷೆಯುಳ್ಳವರು ಮೇಲ್ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು. [176-2]



ನಮ್ಮ ವಿಳಾಸ—ಆರ್. ಕೇಶವರಾವ್ ಅಂಡ್ ಬ್ರದರ್ಸ್, ಹಾರ್ಮೋನಿಯಂ ಮಾಸ್ಟರ್ಸ್, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

8—11—1912 ರಿಂದ 15—11—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	26	16	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	13	13	0	0
ಮೈಸೂರು ,,	112	82	0	0
ಕೋಲಾರ್ ,,	37	21	13	7
ಕೋಲಾರ್ ಚಿನ್ನದ ಗಣಿಗಳು	42	33	0	0
ತುಮಕೂರು ಡಿಸ್ಟ್ರಿಕ್ಟ್	0	0	63	37
ಹಾಸನ ,,	2	2	0	0
ಚಿತ್ರದುರ್ಗ ,,	0	0	6	3
ಕಡೂರ್ ,,	3	1	3	3
ಶಿವಮೊಗ್ಗ ,,	26	16	0	0
ಜುಮ್ಲಾ	261	184	85	50

ಶಾಲಿವಾಹನ ಶಕ ವರುಷಂಗಳು 1834 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೇ ಶರದೃತೌ ಕಾರ್ತೀಕ ಬಹುಳ ಪಂಚಮಿ ಶುಕ್ರವಾರದಿಂದ ಕಾರ್ತೀಕ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ನವಂಬರ್ ಮತ್ತು ಡಿಸೆಂಬರ್

ತಾ	ವಾರ.	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ವೃಶ್ಚಿಕ ಮಾಸ ತೇದಿ
29	ಶುಕ್ರ ::	ಪಂಚಮಿ	16-52	ಪುಷ್ಯ	27-39	15
30	ಶನಿ	ಷಷ್ಠಿ	10-57	ಆಶ್ಲೇಷ	21-30	16
1	ಭಾನು ‡	ಸಪ್ತಮಿ	5-1	ಮಖ	54-6	17
2	ಸೋಮ †	ನವಮಿ	53-42	ಪುಬ್ಬ	15-13	18
3	ಮಂಗಳ	ದಶಮಿ	49-0	ಉತ್ತರ	12-0	19
4	ಬುಧ ,,	ಏಕಾದಶಿ	44-10	ಹಸ್ತ	8-32	20
5	ಗುರು §	ದ್ವಾದಶಿ	40-57	ಚಿತ್ತ	6-14	21

: ಷಷ್ಠಿ ಕ್ಷಯ.

‡ ಮಳೆ ನಕ್ಷತ್ರ—ಜ್ಯೇಷ್ಠ 1 ನೇ ಪಾದ

† ಕಾರ್ತೀಕ ಸೋಮವಾರ

;; ಸರ್ವತ್ರ ಏಕಾದಶಿ

§ ಮಳೆ ನಕ್ಷತ್ರ—ಜ್ಯೇಷ್ಠ 2 ನೇ ಪಾದ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೆಳಗಿನ ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನು ಮೊದಲನ್ನೂ ಕಾಳುವಾದಿಕೊಳ್ಳಿರಿ

ಸ್ಯಾಂಪಲು ಫ್ರೀ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದು ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅದು ಬೇಕಾದಷ್ಟು ಚೆನ್ನಾಗಿ ಬೆಳೆಯಿಸುತ್ತಿರಬೇಕು, ಅಲ್ಲದೆ ತುರುಬನ್ನು ಯಾವ ಆಕೃತಿಯಿಂದ ಕಟ್ಟುವಂತೆ, ಅದು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕದಾದ ರೀತಿಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶಪಾಶಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಆ ಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ — ಇದು, ಕೂದಲುಗಳನ್ನು ಚಂದಗೊಳಿಸುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ತಮವು, ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು. ಇದರಿಂದ ಕೂದಲುಗಳು ಎಷ್ಟು ಮೃದುವಾಗುತ್ತವೆ ಅಂದರೆ, ಈಗ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಂತೆ ತುರುಬನ್ನು ಕಟ್ಟಬಹುದು.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾಗಿ ಬೆಳೆಯುವದಲ್ಲದೆ ತಲೆಯಲ್ಲಿ ಹೊಟ್ಟು ಬೀಳುವದಿಲ್ಲ. ಕೂದಲು ಉದುರಿ ಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಪ್ರತಿ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಿಮಗೆ ಬೇಕಾದರೆ ... ಬಾಟಲನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಶಸ್ತಿ ಪತ್ರಗಳನ್ನು ಇಲ್ಲಿ ಕೊಡುತ್ತೇವೆ.

ತಾ 7-11 ಮ ಎ ಡಿ ... ರುಕ್ಮಿಣೀವಿಲಾಸ, ಮನ್ನಾರಗುಡಿ—ನೀವು ಕಳುಹಿಸಿಕೊಟ್ಟ "ಕಾಮಿನಿಯಾ" ತೈಲವು ಅತ್ಯಂತ ಉತ್ಕೃಷ್ಟವಾಗಿದೆ. ನಮ್ಮಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ದರ್ಜೆಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇರ್ ಆಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

17-11 ಮಿ| ಸಿ ಆರ್. ನಾಯುಡು ... (ಬರೋಡಾ)—ನನ್ನ ... ಕಾಮಿನಿಯಾ ತೈಲವನ್ನು ... ಉಪಯೋಗಿಸುವುದನ್ನು ಮಾಡುವದಕ್ಕೋಸ್ಕರ 6 ಸೀಸೆಗಳನ್ನು ... ವಿ. ಪಿ. ಮೂಲಕ ರವಾನಿಸತಕ್ಕದ್ದು.

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರು ಗಳಲ್ಲೆಲ್ಲಾ ಇದು ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುಗಂಧಶಾಸ್ತ್ರಜ್ಞ ಪಂಡಿತರು ಹೇಳಿದಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮವಾದ ಸುವಾಸನೆಯುಳ್ಳದ್ದು. ಕ್ರಯ ದ್ರಾಂ ಸೀಸೆಗೆ ರೂ. 1-8-0.

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಜಾಜಿ ಹೂಗಳಿಂದ ತಯಾರಿಸಿದ ಅನೋನ್ಯವಾದ ಸುಗಂಧ. ದ್ರಾಂ ಸೀಸೆಗೆ ರೂ. 1-8-0

"ಕಾಮಿನಿಯಾ ಸುಗಂಧಿ"—ರೂ. 1-1-0; "ಕಾಮಿನಿಯಾ ವಾಲಿ"—ರೂ. 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲೇ ಬರೆಯಬೇಕು

ವಿಳಾಸ:— [94-18]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸೀಜಿಡ್, ಬೊಂಬಾಯಿ.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	**10,00,000**
Subscribed Capital Exceeds	,,	**10,00,000**
Paid up ,, ,,	,,	**1,25,000**
Funds Exceed	,,	**15,00,000**
Policy-holders ,,	,,	**80,000**
Claims paid about ,,	,,	**4,00,000**

This Company works in accordance with **the Indian Life Assurance Companies' and Provident Societies' Acts 1912** and has also given **double the initial security** to the **Government** as required under the **Insurance Act 1912**

How is it that the **National, of Amritsar,** has become very popular throughout India?

Because, it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions, and distributes relief in thousands every quarter on account of **marriages and deaths.**

122-18

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole time, who reside in district or taluk head quarters and who are well versed in English need apply.

For further particulars and prospectuses, please apply with one **anna stamp** and your previous experience in the line to —

M. L. NAGANNAH,

Chief Agent,

The Amritsar National Insurance Buildings, Mysore.

ಪಿಟೀಲು

162-2

ಪೂರ್ವದ ಕ್ರಯ ರೂ. 15—0—0

ಈಗಿನ ಅರ್ಧ ಕ್ರಯ ರೂ. 8-8-0

ಒಂದು ತಿಂಗಳವರೆಗೆ ಮಾತ್ರ!



ಇದು ನಮ್ಮ ಸ್ವಂತ ಆರ್ಡರಿನ ಮೇರೆಗೆ ಸೀಮೆಯಲ್ಲಿ ತಯಾರಿಸಿ ನಮ್ಮ ಹೆಸರಿಗೆ ಕಳುಹಿಸಿ ಇರುತ್ತಾರೆ. ಇದು ಸಾಧಾರಣ ಪಿಟೀಲುಗಳಂಥಾದ್ದಲ್ಲ. ಇದರ ನಾದವು ಬಹಳ ಮನೋಹರವಾಗಿದೆ. ಪಿಟೀಲು ಕಲಿಯುವವರಿಗೂ, ಪಂಡಿತರುಗಳಿಗೂ, ಸ್ತ್ರೀಯರಿಗೂ ಬಹಳ ಉಪಯೋಗವಾದದ್ದು. ಈ ತರಹದ ಮೇಕರ್ ಪಿಟೀಲನ್ನು ಉಪಯೋಗಿಸುವವರು ಬೇರೆ ಪಿಟೀಲನ್ನು ಉಪಯೋಗಿಸರು.

ವಿಳಾಸ:—

ರಾಮಸ್ವಾಮಿಮತ್ತುಕಂಪನಿ, ನಂ|| 2, ಬೊಮ್ಮಾಲ್ವಯ್ಯನ ಬೀದಿ, ಜನರಲ್ ಪೋಸ್ಟಾಫೀಸ್, ಮದರಾಸು.

ಪೇಟೆ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು.
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭-೦-೦	೧೭-೮-೦
ಕೆಂಬೂತ ಅಕ್ಕಿ ಅವಲ್		೧೭-೦-೦	೧೭-೮-೦
,, ಮಧ್ಯಂ		೧೬-೮-೦	೧೭-೦-೦
ಜವಾರಿ ಅಕ್ಕಿ		೧೬-೮-೦	೧೭-೪-೦
ಸಣ್ಣಕ್ಕಿ ಅವಲ್		೧೮-೦-೦	೧೮-೮-೦
,, ಮಧ್ಯಂ		೧೭-೧೨-೦	೧೭-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೪-೮-೦	೧೪-೮-೦
,, ಮಧ್ಯಂ ,,		೧೩-೧೨-೦	೧೩-೮-೦
ಹೈಕ ರಾಗಿ ಪಲ್ಲಾ ೧ಕ್ಕೆ		೭-೮-೦	೫-೦-೦
ಕಾರ್ರಾಗಿ ,,		೬-೦-೦	೪-೧೨-೦
ಜೋಳ ,,		೬-೮-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ		೧೧-೮-೦	೧೪-೧೨-೦
ಬಿಳೀ ಅವರೆ ,,		೧೧-೦-೦	೧೧-೦-೦
ಹೆಸರು ,,		೧೩-೦-೦	೧೪-೦-೦
ಉದ್ದು ,,		೧೬-೦-೦	೧೬-೦-೦
ಕಡಲೆ ,,		೧೩-೦-೦	೧೩-೦-೦
ಎಳ್ಳು ಸೇರು ೧೨೦ಕ್ಕೆ		೩೪-೦-೦	೩೨-೦-೦
ಹುರುಳೀ ಪಲ್ಲಾ ೧ಕ್ಕೆ		೬-೧೨-೦	೭-೦-೦
ಹರಳು ೧೨೭ ಸೇರಿಗೆ		೧೪-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೪-೪-೦	೪-೮-೦
ಮೆಣಸಿನಕಾಯಿ ,,		೨-೦-೦	೪-೫-೦
,, ಮಧ್ಯಂ		೨-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೭-೮-೦	ಮಾ. ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೪-೦	೬-೬-೦
ಹರಳೆಣ್ಣೆ ,, ,,		೫-೦-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೦-೦	೫-೪-೦
ಉಪ್ಪು ,, ,,		೬-೦-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧-೪-೦	೧-೪-೦
,, ಹಳೇದು ,,		೧-೦-೦	೦-೧೪-೦
ತುಪ್ಪ ಮಣ ೧ಕ್ಕೆ		೧೬-೦-೦	೧೯-೦-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ		೫-೦-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬-೮-೦	೬-೦-೦
ಅಡಿಕೆಕಾಯಿ ಮಣ ೧ಕ್ಕೆ		೦-೮-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೦-೧೨-೦	೧-೮-೦
ಚಿನ್ನ (ಪೌನ್) ಕೆಂಪು		೧೫-೮-೦	೧೫-೮-೦
,, ,, ಹಸಿವು		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೦-೦

ವೃತ್ತಾಂತ ಪತ್ರಿಕೆ

— o —

ಸನ್ ೧೯೧೨ ನೇ ಇಸವಿ ನವಂಬರ್ ತಾ ೨೮ ನೇ ಗುರುವಾರ

ಮೈಸೂರು ಗವರ್ನಮೆಂಟ್ ಜೀವವಿಮೆ ಕಂಪನಿ

ಮೈಸೂರು ಸರ್ಕಾರದವರು ತಮ್ಮ ತಾಬೆಯಲ್ಲಿರುವ ನೌಕರಮನೇರುಗಳಿಗಾಗಿ ಇಟ್ಟು ನಡಿಸುತ್ತಿರುವ ಸ್ಟೇಟ್ ಲೈಫ್ ಇನ್ಷೂರೆನ್ಸ್ ಏರ್ಪಾಡಿನ 1910-11 ನೇ ಸಾಲಿನ ರಿಪೋರ್ಟೂ ಅದರ ಮೇಲೆ ಗವರ್ನಮೆಂಟಿನವರು ಬರದಿರುವ ಹುಕುಮೂ ನಮಗೆ ತಲಪಿರುತ್ತವೆ ಇಷ್ಟು ಹಳೇದಾದ ರಿಪೋರ್ಟನ್ನು ಸರ್ಕಾರದವರು ಇನ್ನೂ ಬೇಗನೆ ಪ್ರಕಟಮಾಡಬೇಕಾಗಿತ್ತೆಂದು ಸೂಚಿಸುತ್ತೇವೆ ಅಲ್ಲಿಂದೀಚೆಗೆ 1911-12 ನೇ ವರುಷವು ಮುಕ್ತಾಯವಾಗಿ ಇನ್ನೊಂದು ಸಾಲಿನ ರಿಪೋರ್ಟು ಬರುವ ಕಾಲ ಸನ್ನಿಹಿತವಾಗಿದೆ

ಆ ರಿಪೋರ್ಟು ಹೇಳುವ 1910-11 ನೇ ಸಾಲಿನಲ್ಲಿ 14 ಮೆಂಬರುಗಳು ಕಾಲವಾದರು, ಇವರು ಒಟ್ಟು 66,155 ರೂಪಾಯಿಗೆ ಜೀವವಿಮೆ (ಇನ್ಷೂರ್) ಮಾಡಿದ್ದರು ಇದಲ್ಲದೆ 55 ವಯಸ್ಸು ಕಳೆದು 16 ಮಂದಿ ಕೆಲಸ ಬಿಟ್ಟರು, ಇವರು 71,161 ರೂಪಾಯಿಗೆ ಇನ್ಷೂರ್ ಮಾಡಿದ್ದರು ಈ ಹಣಗಳು ದೊರಕುವುದರಿಂದ ತೀರಿಹೋದವರ ರಕ್ತಸಂಬಂಧಿಗಳಿಗೂ, ಪೆನ್ಷನ್ ಪಡೆದು ಕೆಲಸದಿಂದ ನಿವೃತ್ತರಾದವರಿಗೂ ತುಂಬಾ ಸಹಾಯವಾದೀತೆನ್ನುವುದಕ್ಕೆ ಸಂಶಯವಿಲ್ಲ. ಕಾಲವಾದವರ ಪೈಕಿ ಶೇಕಡಾ 11 ರಂತೆ ಪ್ಲೇಗ್ ಉಪದ್ರದಿಂದ ತೀರಿಹೋದರೆಂದು ತಿಳಿಯುತ್ತದೆ

ಈ ಇನ್ಷೂರೆನ್ಸಿನ ಸಂಬಂಧದಂತೆ ಸರ್ಕಾರದವರು ಇನ್ನೊಂದು ಅನುಕೂಲವಾದ ಏರ್ಪಾಡನ್ನು ಮಾಡಿದಾರೆಂದು ಸಂತೋಷಪಡುವೆವು ಈ ಏರ್ಪಾಡಿನಂತೆ ನೌಕರನಾದವನು ಒಂದು ಫಂಡಿಗೆ ತನ್ನ ಸಂಬಳದಿಂದ ಇಷ್ಟಿಷ್ಟು ಚಂದಾ ಕೊಡುತ್ತಾ ಬಂದರೆ ತನ್ನ ಮರಣಾನಂತರ ತನ್ನಿಷ್ಟ ಬಂಧುಗಳಿಗೆ ಜೀವನಾಂಶವನ್ನು ಸರ್ಕಾರದ ಈ ಫಂಡಿನಿಂದ ಸಲ್ಲಿಸುತ್ತಾ ಇರುವರು ನೌಕರನಾದವನು ಫಂಡಿಗೆ ಸೇರಿ ತನ್ನ ಹೆಂಡತಿ ಮಕ್ಕಳಿಗೆ ಜೀವನಾಧಾರವನ್ನು ಕಲ್ಪಿಸಿಕೊಡಬಹುದಾಗಿದೆ ಸರ್ಕಾರದವರು ಪ್ರಾರಂಭಮಾಡಿರುವ ಈ ಹಿತಕರವಾದ ಏರ್ಪಾಡಿಗೆ ಅನೇಕ ನೌಕರರು ಸೇರಿಕೊಂಡು ಪ್ರಯೋಜನ ಹೊಂದುವರೆಂದು ನಿರೀಕ್ಷಿಸುತ್ತೇವೆ

ಸಂಸ್ಥಾನದ ಸಾಮಾನ್ಯ ಪ್ರಜೆಗಳಲ್ಲಿ ಅನೇಕರು ಇನ್ನೂ ಕಾಯಪುಷ್ಟರಾಗಿರುವ ಕಾಲದಲ್ಲೇ ತೀರಿಹೋಗುವರು. ಅವರ ಸಂಪಾದನೆಯು ನಿಂತುಹೋಗುತ್ತದೆ ಅವರ ಹೆಂಡತಿ ಮಕ್ಕಳು ಜೀವನಕ್ಕೆ ಮಾರ್ಗವಿಲ್ಲದೆ ತಮ್ಮ ಸಂಬಂಧಿಗಳ ಕೈಕೆಳಗೆ ಬಿದ್ದು ಕಷ್ಟನಷ್ಟಗಳನ್ನು ಅನುಭವಿಸುವರು ಗವರ್ನಮೆಂಟಿನವರು ಅನಾಧರಾಗುವ ಪ್ರಜೆಗಳಿಗೆ ಅಂಥಾ ದುರ್ಗತಿಯು ಪ್ರಾಪ್ತವಾಗದಂತೆ ಈ ಇನ್ಷೂರೆನ್ಸ್ ಏರ್ಪಾಡನ್ನು ಸರ್ಕಾರಿ ನೌಕರರಲ್ಲದ ಸಾಮಾನ್ಯ ಪ್ರಜೆಗಳಿಗೂ ಅನ್ವಯಿಸುವಂತೆ ಮಾಡಿಕೊಟ್ಟರೆ ಎಷ್ಟೋ ಉಪಕಾರವಾದೀತು ಇಂಥಾ ಸಂಸ್ಥೆಯೂ ಶ್ರೇಯಸ್ಕರವೂ ಆದ ಏರ್ಪಾಡಿಗೆ ಅನೇಕ ಪ್ರಜೆಗಳು ಸೇರಿಕೊಂಡಾರೆನ್ನುವುದಕ್ಕೆ ಸಂಶಯವಿಲ್ಲ ಸಾಹುಕಾರಿಯಾದ ಹಲವು ಜೀವವಿಮೆ ಕಂಪನಿಗಳಿರುವುದೂ, ಕೆಲವು ಪ್ರಜೆಗಳು ಅವುಗಳಿಗೆ ಸೇರಿ ಚಂದಾ ಕೊಡುತ್ತಿರುವುದೂ ನಿಜ, ಆದರೆ ಅನೇಕಾನೇಕರು ತಮ್ಮ ವಿಷಯದಲ್ಲಾಗಲಿ, ತಮ್ಮ ಸಂಸಾರದವರ ವಿಷಯದಲ್ಲಾಗಲಿ ಮುಂದಿನ ಯೋಚನೆ ಮಾಡಿರುವುದಿಲ್ಲ ಇದಲ್ಲದೆ ಕೆಲವು ವರುಷಗಳಿಂದ ಪ್ರತಿನಿಧಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದವರನ್ನು ಪ್ರಜೆಗಳಿಗೂ ಗವರ್ನಮೆಂಟ್ ಇನ್ಷೂರೆನ್ಸ್ ಏರ್ಪಾಡು ಅನ್ವಯಿಸುವಂತೆ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾ ಬಂದಿರುವುದನ್ನೂ, ಸರ್ಕಾರದವರು 'ಇದು ಯೋಚನೆಯಲ್ಲಿದೆ ಇನ್ನೂ ಇತ್ಯರ್ಥವಾಗಲಿಲ್ಲ' ಎಂದು ಅಪ್ಪಣೆ ಕೊಡುತ್ತಿರುವುದನ್ನೂ ಬಲ್ಲೆವು ಸಂಸ್ಥಾನದ ಕಂಟ್ರೋಲರವರು ಈ ವಿಷಯವನ್ನು ಶೀಘ್ರವಾಗಿ ಮುಗಿಸಿ ಪ್ರಜೆಗಳು ಕೂಡ ಸೇರುವಂತೆ ಮಾಡಿಕೊಟ್ಟರೆ ಪ್ರಜೆಗಳಿಗೆ ಮಹದುಪಕಾರವಾದೀತೆನ್ನುವುದಕ್ಕೆ ಸಂಶಯವಿಲ್ಲ

ಬಾಲ್ಕನ್ ಯುದ್ಧವು

ಈ ವಾರ ಬಂದಿರುವ ಯುದ್ಧಸಮಾಚಾರಗಳಲ್ಲೆಲ್ಲಾ ಬಲ್ಗೇರಿಯ ಮತ್ತು ಗ್ರೀಸ್ ಪ್ರತಿನಿಧಿಗಳು ತುರ್ಕಿಯವರ ಪ್ರತಿನಿಧಿಗಳ ಕೂಡ ಕೆಲವು ಕರಾರಿನ ಕಲಮುಗಳನ್ನು ಕುರಿತು ಚರ್ಚೆಮಾಡುತ್ತಿರುವ ವಿಚಾರವೇ ಪ್ರಾಮುಖ್ಯವಾಗಿರುತ್ತವೆ ಅವರ ಚರ್ಚೆಗಳ ವಾಯಿದೆ ಶತ್ರುಗಳಿಗೆ ಒಪ್ಪಂದ ನಡೆದು ಬೇಗನೆ ಯುದ್ಧಕಾರ್ಯಗಳು ಮುಕ್ತಾಯ ಹೊಂದುವಂತಾಗಲೆಂದು ಹಾರೈಸುತ್ತೇವೆ ಈಗ ನಡೆದಿರುವ ಕೊಲೆಗಳೇ ಸಾಕಾಗಿರುವವು ಅನೇಕ ಜನರು ಈ ಯುದ್ಧದಲ್ಲಿ ಮಡಿದುಹೋದರು, ಎಷ್ಟೋ ಮಂದಿ ಗಾಯಗಳಾಗಿವೆ ಈ ವಿರೋಧಿ ಸೈನ್ಯಗಳ ದೆಸೆಯಿಂದ ಅಪಾರವೂ ವಿಸ್ತಾರವೂ ಆದ ಕಷ್ಟನಷ್ಟ ದುಃಖಾದಿಗಳು ಸಂಭವಿಸಿರುವವು ಜನರಲ್ಲಿ ಉಂಟಾಗಿರುವ ವಿಕಾರವಾದ ಈ ವೈಮನಸ್ಸನ್ನು ಬೇಗನೆ ತೊಡೆದು ಬಿಟ್ಟು ಸಹನಯೂ ಸಮಾಧಾನವೂ ನೆಲೆಗೊಳ್ಳುವಂತೆ ಮಾಡಲೆಂದು ಜಗತ್ಪರಿಪಾಲಕನನ್ನು ನಾವುಗಳೆಲ್ಲಾ ಪ್ರಾರ್ಥಿಸಬೇಕು

ಶತ್ರುಗಳ ಪ್ರತಿನಿಧಿಗಳು ಕರಾರಿನ ವಿಚಾರಗಳನ್ನು ಕುರಿತು ಚರ್ಚೆಮಾಡುವ ಭಾಗದಲ್ಲಿ ಸನ್ನಾಹಗಳು ನಡೆಯುತ್ತಿರುವ ಕಾರಣ ಕಾನ್ಸ್ಟಾಂಟಿನೋಪಲ್ ಬಳಿ ಇರುವ ಛಟಾಲ್ಜಾ ಸಾಲು ಕೋಟೆಗಳ ಸಮೀಪದಲ್ಲಿ ಯುದ್ಧಕಾರ್ಯವು ವಿಶೇಷವಾಗಿ ನಡೆಯಲಿಲ್ಲ ಅಲ್ಲಿ ತುರ್ಕಿ ಸೈನಿಕರು ಶತ್ರುಗಳಾದ ಬಲ್ಗೇರಿಯಾ ಸೈನಿಕರಿಗೆ ಮುಂದರಿಸಿ ಬರಲು ಅವಕಾಶವಾಗದಂತೆ ಬಹು ಪರಾಕ್ರಮದಿಂದ ಆ ಪ್ರಾಂತ್ಯವನ್ನು ಕಾಪಾಡಿಕೊಳ್ಳುತ್ತಿದ್ದಾರೆಂದು ಕಾಣುತ್ತದೆ ಬಲ್ಗೇರಿಯದವರು ಇದರಿಂದ ಅಲ್ಲಿ ವಿಶೇಷವಾದ ಜಯಪ್ರದವನ್ನು ಹೊಂದಲಿಲ್ಲ ತುರ್ಕಿಯವರು ಅವರನ್ನು ಅಲ್ಲಿಂದ ಹಿಂದಕ್ಕೆ ಸ್ವಲ್ಪ ದೂರ ಹಿಮ್ಮೆಟ್ಟಿಸಿರುವಂತೆ ತೋರುವದು

ಬಾಲ್ಕನ್ ಪರ್ಯಾಯ ದ್ವೀಪದ ಮಧ್ಯಪ್ರದೇಶದಲ್ಲಿ ಶತ್ರುಗಳ ವಶವಾಗದೆ ಉಳಿದಿದ್ದ ಮೊನಾಸ್ಟಿರ್ ಎಂಬ ಪ್ರಾಮುಖ್ಯವಾದ ಒಂದೇ ಒಂದು ಪಟ್ಟಣವನ್ನೂ ತುರ್ಕಿಯವರು ಕಳೆದುಕೊಂಡರು ಸರ್ವಿಯಾ ಮತ್ತು ಗ್ರೀಕ್ ಸೈನಿಕರು ತುರ್ಕಿ ಸೈನ್ಯವನ್ನು ಸೋಲಿಸಿ ಆ ಪಟ್ಟಣವನ್ನು ಗೆದ್ದುಕೊಂಡಿದಾರೆ ಅದರ ಸಮೀಪದಲ್ಲಿ ಶತ್ರುಗಳ ಸೈನಿಕರು ಬಹಳ ಕಠಿಣವಾಗಿ ಕಾದಾಡಿದರು ತುರ್ಕಿ ಸೈನ್ಯಗಳು ಸಂಪೂರ್ಣವಾಗಿ ಸೋತು ಚದರಿಹೋದಂತೆ ಕಾಣುತ್ತದೆ 40,000 ತುರ್ಕಿ ಸೈನಿಕರು ಶತ್ರುಗಳಿಗೆ ಕೈಸೆರೆ ಸಿಕ್ಕಿದರೆಂದು ಮೊದಲು ಬಂದಿದ್ದ ತಂತಿ ವರ್ತಮಾನವು ನಿಜವಲ್ಲವೆಂದು ಈಚೆಗೆ ತಿಳಿದುಬಂದಿದೆ

ಆಡ್ರಿಯನೋಪಲ್ ಪಟ್ಟಣವು ಇನ್ನೂ ಶತ್ರುಗಳ ವಶವಾಗಲಿಲ್ಲ ತುರ್ಕಿ ಸೈನಿಕರು ಅದನ್ನು ಬಹು ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಾ ಬಂದಿದಾರೆ ಅವರು ಪಟ್ಟಣದೊಳಗೆ ಇಟ್ಟುಕೊಂಡಿದ್ದ ಆಹಾರ ಸಾಮಗ್ರಿಗಳು ಮುಗಿಯುತ್ತಾ ಬಂದಿರುವುದೆಂದೂ, ತುರ್ಕಿ ಸೈನಿಕರು ಹೊಟ್ಟೆಗಿಲ್ಲದೆ ನರಳುವ ಕಾಲ ಒದಗಿ ಮುತ್ತಿಗೆಹಾಕಿಕೊಂಡಿರುವ ಪಟ್ಟಣವನ್ನು ಶತ್ರುಗಳಿಗೆ ಒಪ್ಪಿಸಬೇಕಾಗುವುದೆಂದೂ ವರ್ತಮಾನವಿದೆ

ಮಾಂಟಿನೀಗ್ರೋದವರು ಸ್ಕುಟಾರಿ ನಗರವನ್ನು ಇನ್ನೂ ಮುತ್ತಿಗೆ ಹಾಕಿಕೊಂಡಿದಾರೆ ತುರ್ಕಿ ಸೈನಿಕರು ಅದನ್ನು ಬಿಟ್ಟುಕೊಡದೆ ಬಹಳ ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಾ ಬಂದಿರುವರು ಈಚೆಗೆ ಸರ್ವಿಯ ಸೈನ್ಯಗಳು ಸುತ್ತುಮುತ್ತಿನಲ್ಲಿರುವ ಪ್ರದೇಶಗಳನ್ನೆಲ್ಲಾ ಗೆದ್ದು ಸ್ವಾಧೀನಪಡಿಸಿಕೊಂಡು, ಸ್ಕುಟಾರಿ ಪಟ್ಟಣದ ಬಳಿಗೆ ಮಾಂಟಿನೀಗ್ರೋದವರ ಸಹಾಯಕ್ಕಾಗಿ ಹೋಗಿ ಸೇರುತ್ತಿದಾರೆ

ಮುಂದಿನ ವಾರದೊಳಗಾಗಿ ಈ ಯುದ್ಧವೆಲ್ಲಾ ಕೊನೆಮುಟ್ಟಿ ಕರಾರು ನಡೆದೀತೆಂದು ನಂಬಿ ನಿರೀಕ್ಷಿಸುವೆವು

ಜಾತಿಭೇದಾಸುರ

ಇದೇ ತಿಂಗಳು 9 ನೆಯ ತಾರೀಖಿನಲ್ಲಿ ಬೊಂಬಾಯಿ ಪಟ್ಟಣದಲ್ಲಿ ಆರ್ಯ ಭ್ರಾತೃ ಸಮಾಜವು ನಡೆಯಿತು ಆ ಮಹಾ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ಸರ್ ಎನ್ ಚಂದಾವರ್ಕರ್ ರವರ ಭಾಷಣದ ಮುಖ್ಯಾಂಶವನ್ನು ನಮ್ಮ ವಾಚಕ ಮಹಾಶಯರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸುತ್ತೇವೆ ಸರ್ ಚಂದಾವರ್ಕರ್ ರವರು ಹೇಳಿರುವುದೇನೆಂದರೆ —ವೇದಗಳಲ್ಲಿ ನಾಲ್ಕು ವರ್ಣಗಳು ಮಾತ್ರ ಇವೆಯೆಂದು ಹೇಳಿರುವುದು ಆದರೆ ಒಬ್ಬ ಮನುಷ್ಯನು ತನ್ನ ಜನ್ಮದಿಂದ ಯಾವುದಾದರೂ ಒಂದು ವರ್ಣಕ್ಕೆ ಸೇರಿದವನಾಗುತ್ತಾನೆಂಬುವುದಕ್ಕೆ ವೇದಗಳಲ್ಲಿ ಯಾವ ಆಧಾರವಾದರೂ ಎಳ್ಳಷ್ಟೂ ಇಲ್ಲ ಒಬ್ಬನ ಜನ್ಮವು ಅವನು ಇಂಥ ವರ್ಣಕ್ಕೆ ಸೇರಿದವನೆಂದು ನಿರ್ದೇಶಿಸುವುದಿಲ್ಲ ಅವನ ವರ್ಣವನ್ನು ನಿರ್ದೇಶಿಸುವಂಥಾದ್ದು ಅವನ ವೃತ್ತಿಯೇ ಆಗಿರುತ್ತದೆ ಲೌಕಿಕ ವ್ಯವಹಾರದಲ್ಲಿ ಇಂಥ ವರ್ಣಭೇದಗಳು ಇರಬೇಕಾದುದು ಅತ್ಯವಶ್ಯಕವಾಗಿದ್ದಿತು ಈ ಕಾಲದಲ್ಲಿ ವಿವಿಧ ವೃತ್ತಿಗಳ ಭೇದವು ಇದೆಯಷ್ಟೆ ವರ್ಣಭೇದವು ಇಂಥ ಭೇದವೇ ಆಗಿರುತ್ತವೆ ಆದರೆ ಪುರಾತನ ಕಾಲದಿಂದಲೂ ಜನಗಳು ಇದನ್ನು ವೃತ್ತಿಯ ಭೇದವೆಂದು ತಿಳಿದುಕೊಳ್ಳದೆ ಇದರಿಂದ ಸಾವಿರಾರು ವರ್ಣಭೇದಗಳನ್ನು ಕಲ್ಪಿಸುತ್ತಾ ಬಂದಿರುತ್ತಾರೆ ಈಗಿರುವ ಜಾತಿ ಭೇದಗಳು ಲೌಕಿಕ ವ್ಯವಹಾರಕ್ಕೆ ಉಪಯುಕ್ತವಾದ ವೃತ್ತಿಭೇದಗಳಲ್ಲ ಯುರೋಪಿನವರಿಗೆ ಮೋಶೆಯ ಧರ್ಮಶಾಸ್ತ್ರವು ಹೇಗೋ ಹಾಗೆಯೇ ಹಿಂದೂಗಳಿಗೆ ಮನುಧರ್ಮ ಶಾಸ್ತ್ರವು ಪ್ರಧಾನವಾದುದು ಈ ಎರಡು ಧರ್ಮಶಾಸ್ತ್ರಗಳೂ ಖಂಡಿತವಾದವುಗಳೇ ಆಗಿದ್ದುವು ಆದರೆ ಮನುಷ್ಯನು ಧರ್ಮಶಾಸ್ತ್ರಕ್ಕಿಂತಲೂ ಹಚ್ಚಿನವನು ಧರ್ಮಶಾಸ್ತ್ರವು ಅವನ ಬಾಹ್ಯಾಚಾರಗಳನ್ನು ಮಾತ್ರ ಬದಲಿಸಬಲ್ಲುದು ಆದರೆ ಅವನ ಅಂತರಾತ್ಮದಲ್ಲಿರುವ ಪ್ರಮಾಣವು ಬಾಹ್ಯಾಚಾರಗಳಿಗಿಂತಲೂ ಉತ್ತಮವಾದುದನ್ನು ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ತೋರುವಂಥಾದ್ದಾಗಿದೆ ಈ ಕಾಲದಲ್ಲಿ ನಮಗೆ ಸ್ವಾತಂತ್ರ್ಯವು ಹೆಚ್ಚಾಗಿರುತ್ತದೆ ನಾವು ಸ್ವತಂತ್ರರಾಗಿ ನಡೆದುಕೊಳ್ಳುವುದಕ್ಕೆ ಇಷ್ಟಪಡುತ್ತೇವೆ ಉತ್ತಮವಾದ ಸನ್ಮಾರ್ಗದಲ್ಲಿ ನಡೆಯುವುದಕ್ಕೆ ಜಾತಿಯು ಉಪಯುಕ್ತವಾದುದಲ್ಲ ಏಕೆಂದರೆ ಜಾತಿ ಬಂಧನಕ್ಕೆ ತಲೆಬಿದ್ದಿರುವ ನಾವು ನಮ್ಮ ತಿಳುವಳಿಕೆಗೆ ಅತಿ ಕೆಟ್ಟ ನಡತೆಗೆ ವಿರುದ್ಧವಾಗಿ ನಡೆಕೊಳ್ಳುತ್ತಿರುವುದುಂಟು ಇದರಿಂದ ನಾವು ಕಪಟ ಹೇಡಿಗಳಾಗಿರುತ್ತೇವೆ ನಮ್ಮಲ್ಲಿ ಪೌರುಷವಿಲ್ಲ ನಮ್ಮ ಗುಣನಡತೆಗಳು ಏಳಿಗೆಯಾಗುವುದಕ್ಕೆ ಮಾರ್ಗವಿಲ್ಲ ನಮ್ಮಲ್ಲಿ ಭೇದಗಳು ಹೆಚ್ಚುತ್ತಲೇ ಇರುತ್ತವೆ ನಾವು ಲೋಕೋಪಕಾರಿಗಳಾಗಿ ಬದುಕುವುದಕ್ಕೆ ನಿಶ್ಶಕ್ತರಾಗಿರುತ್ತೇವೆ ನಮ್ಮ ಜನಾಂಗವೆ ಈ ಜಾತಿಭೇದಾಸುರನಿಗೆ ಹವಿಸ್ಸನ್ನರ್ಪಿಸುತ್ತಾ ಇದೆ ಬುದ್ಧನು, ಗುರುನಾನಕ್ ರಾಮಾನುಜ ಮುಂತಾದ ಧೀರಾಧಿಧೀರರೂ ಕೂಡ ಈ ರಾಕ್ಷಸನಿಗೆ ಪರಾಜಿತರಾಗಿರುವಾಗ ನಮ್ಮಂಥ ಹುಲ್ಲು ಮಾನವರು ಮಾಡತಕ್ಕುದೇನು ಎಂದು ನೀವು ಕೇಳಿರಿ ಇದಕ್ಕೆ ನನ್ನ ಉತ್ತರವೇನೆಂದರೆ—ಇದು ನಮಗೆ ಅನುಕೂಲವಾದ ಕಾಲವು ನಮ್ಮನ್ನು ನಿರ್ಬಂಧಪಡಿಸುವವರು ಇರುವುದಿಲ್ಲ ಹೊರಗಿನಲ್ಲಿರುವ ಮಾನವರುಗಳು ಎಲ್ಲರನ್ನು ಒಂದೇ ಅಂತಸ್ತಿಗೆ ತಂದಿರುತ್ತವೆ ಜನರು ಉತ್ತಮ ಸ್ಥಿತಿಗೆ ಬರುವುದಕ್ಕೆ ವಿವಿಧ ಮಾರ್ಗಗಳನ್ನು ಕಂಡುಕೊಂಡಿರುತ್ತಾರೆ ಶೂದ್ರರು ಮೆತ್ತಗೆ ಎಚ್ಚರವಾಗುತ್ತಲಿದ್ದಾರೆ ಕುಲಸ್ಥರು ಬಹಿಷ್ಕಾರ ಹಾಕಿದಂಥ ಭಯವು ಕ್ರಮೇಣ ಕಡಮೆಯಾಗುತ್ತಿದೆ ಪರಸ್ಪರ ಸಹಭೋಜನಗಳು ಅಲ್ಲಲ್ಲಿ ತಲೆದೋರುತ್ತಿವೆ ಈ ರಾಕ್ಷಸನಿಗೆ ವಿರೋಧವಾಗಿ ಪ್ರತಿಭಟಿಸುವುದು ಸುಲಭವಲ್ಲವೆಂದು ನನಗೂ ತಿಳಿದಿದೆ ಇದು ಎಷ್ಟು ಕಷ್ಟವಾಗಿದ್ದರೂ ಅಷ್ಟೂ ಒಳ್ಳೆಯದೇ ಆಗಿದೆ ಯುದ್ಧವಿಲ್ಲದೆ ಜಯಪ್ರದನಾದೆನೆಂಬ ಸಂತೋಷವು ಯಾರಿಗೂ ಲಭ್ಯವಾಗದು ಯುದ್ಧಮಾಡುವವನು ಸೋತರೂ ಸ್ತೋತ್ರಕ್ಕೆ ಪಾತ್ರನಾಗುತ್ತಾನೆ ನಮಗೆ ಜಯವಾದರೂ ಸರಿ ಅಪಜಯವಾದರೂ ಸರಿ ಈ ಜಾತಿಭೇದಾಸುರನೊಂದಿಗೆ ಯುದ್ಧಮಾಡುವ ಈ ಕಾಲದಲ್ಲಿ ನಮ್ಮ ಪಕ್ಷದವರು ಹೆಚ್ಚಾಗಿರುತ್ತಾರೆ ನಾವು ಜಾತಿ ಎಂಬ ರಾಕ್ಷಸನಿಗೆ ವಿರೋಧವಾಗಿ ಯುದ್ಧ ಮಾಡುತ್ತಿರುವಾಗಲೇ ಮತ್ಸರ, ಹೇಡಿತನ, ದುರ್ನಡತೆ, ಮೌಢ್ಯ, ಇವುಗಳನ್ನು ತುಳಿದುಬಿಡುವುದಕ್ಕೆ ಪ್ರಯತ್ನಮಾಡುವ ನಾವು ಕೈಕೊಂಡಿರುವುದು ಒಂದು ನ್ಯಾಯವುಳ್ಳ ಯುದ್ಧವಾಗಿದೆ ಎಲ್ಲಾ ವಿಘ್ನಗಳಿಗೂ ಅಂಜದೆ ಸ್ಥಿರವಾಗಿ ನಿಂತರೆ ಜಯಶೀಲರಾಗುವೆವು

ಬಳದೇಶದ ವೃತ್ತಾಂತಗಳು

ಈ ಸಲ ರಾಜಧಾನಿಯಲ್ಲಿ ಮುಸಲ್ಮಾನ್ ಪ್ರಜೆಗಳು ಬಕ್ರೀದ್ ಹಬ್ಬದ ಸುಮಾರು 2,000 ರೂಪಾಯಿ ಹಣಕಾಸು ಚಂದಾಯೆತ್ತಿ ತುರ್ಕಿ ಯುದ್ಧದಲ್ಲಿ ನಷ್ಟಪಟ್ಟವರ ಸಹಾಯಾರ್ಥವಾಗಿ ಕಳುಹಿಸಿದರು ಈ ಫಂಡಿಗೆ ಇನ್ನೂ ಹಣ ವಸೂಲಾಗುತ್ತಿದೆ

* * *

ರಾಜಧಾನಿಯ ಪ್ರಜೆಗಳು ದಿವಾನ್ ಮಿ॥ ಎಂ ವಿಶ್ವೇಶ್ವರೈಯನವರಿಗೆ ಒಂದು ಅಡ್ರೆಸ್ಸನ್ನು ಕೊಡತಕ್ಕ ವಿಷಯದಲ್ಲಿ ಪರ್ಯಾಲೋಚನೆಮಾಡುವುದಕ್ಕೋಸ್ಕರ ಈ ದಿನ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರುವವರಾಗಿದಾರೆ

* * *

ಇಲ್ಲಿನ ಇಟ್ಟಿಗೆಗೂಡಿನಲ್ಲಿದ್ದ ಸುಮಾರು 13 ವಯಸ್ಸಿನ ಒಬ್ಬಳ ಒಂದು ಹುಡುಗಿಯು ಸುಮಾರು ಮೂರು ದಿನಗಳಿಂದ ಮನೆಬಿಟ್ಟು ಹೋಗಿದ್ದಳು ಅವಳ ಶವವು ದೊಡ್ಡಕೆರೆಯ ಕೊಳದಲ್ಲಿ ನೀರಿನ ಮೇಲೆ ತೇಲುತ್ತಿದ್ದುದು ಗೊತ್ತಾಗಿ ಮಹಜರಿನಿಂದ ಅದನ್ನು ದಫನ್ ಮಾಡಿಸಿದರು

* * *

ಡಿಸೆಂಬರ್ ತಾ 16 ಮತ್ತು 17 ಸೋಮವಾರ ಮಂಗಳವಾರಗಳಲ್ಲಿ ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲೂ, ಮುಂದಿನ ಜನವರಿ 3 ಮತ್ತು 4 ನೇ ಶುಕ್ರವಾರ ಶನಿವಾರಗಳಲ್ಲಿ ಹಾಸನದ ಟವನ್ನಿನಲ್ಲೂ ಪ್ರದರ್ಶನಗಳನ್ನು ನಡಿಸತಕ್ಕದ್ದೆಂದು ತೀರ್ಮಾನವಾಗಿರುತ್ತದೆ

* * *

ಸಂಸ್ಥಾನದ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮೀಷನರರಾದ ಮಿ ಪಿ ಎಸ್ ಅಚ್ಯುತರಾಯರವರಿಗೆ ವಿಷಮಶೀತ ಜ್ವರವು ಪ್ರಾಪ್ತವಾಗಿ ಕಳೆದ ವಾರವೆಲ್ಲಾ ಕಷ್ಟಪಟ್ಟರೆಂದೂ, ಈಗ ಸ್ವಲ್ಪ ಸ್ವಲ್ಪ ವಾಸಿಯಾಗುತ್ತಿದೆ ಎಂದೂ ತಿಳಿಯುತ್ತಿದೆ ಅವರಿಗೆ ಬೇಗನೆ ಆರೋಗ್ಯವಾಗಲೆಂದು ಹಾರೈಸುತ್ತೇವೆ

* * *

ಮುಂದಿನ ಭಾನುವಾರ ಬೆಂಗಳೂರು ಡೆಪ್ಯುಟಿ ಕಮೀಷನರಾದ ಮಿ॥ ಬಿ ಕುಮಾರಸ್ವಾಮಿ ವಿನಾಯಕರವರು ಸಾಳೀಗಾರ್ ವಿದ್ಯಾವರ್ಧಕ ಸಂಘವನ್ನು ಪ್ರಾರಂಭಮಾಡಿದರು ಈ ಸಂಘದ ಕಮಿಟಿಯವರು ಹಣವನ್ನು ಚಂದಾ ಮೂಲಕ ಕೂಡಿಸಿ ಬೆಂಗಳೂರಿನಲ್ಲಿ ಸಾಳೀಗಾರ್ ವಿದ್ಯಾರ್ಥಿಗಳಿಗಾಗಿ ಮೊದಲು ಒಂದು ನಿಲಯವನ್ನು ಪ್ರಾರಂಭಿಸಬೇಕೆಂದು ತೀರ್ಮಾನ ಮಾಡಿಕೊಂಡಿದಾರೆ

* * *

ಎಡೆಯೂರು ಚನ್ನಪಟ್ಟಣದ ತಾಲ್ಲೂಕು ಸಾದಲಿ ಹೋಬಳಿ ದೇವಗಾನಹಳ್ಳಿ ಮತ್ತು ಹೊಸೂರು ಗ್ರಾಮಕ್ಕೆ 9 ವಯಸ್ಸಿನ ಒಬ್ಬ ಮುಸಲ್ಮಾನರ ಹುಡುಗನನ್ನು ಸುಮಾರು ನಾಲ್ಕಾರು ವಾರಗಳ ಹಿಂದೆ ಎಂದಿದಾನೆಂದೂ, ಕೇಳಿದರೆ ತಂದೆತಾಯಿಗಳ ಹೆಸರು ತಿಳಿಯದೆಂದು ಹೇಳುತ್ತಾನೆಂದೂ, ವಾರಸುದಾರರಿದ್ದರೆ ಬಂದು ಕರೆದುಕೊಂಡು ಹೋಗಬಹುದೆಂದೂ ಒಬ್ಬ ವಾತ್ಸ್ಯದಾರರು ತಿಳಿಸುತ್ತಾರೆ

* * *

ಈ ಸಂಸ್ಥಾನದ ಎಲ್ಲಾ ರೆಜಿಸ್ಟ್ರೇಷನ್ ಆಫೀಸುಗಳಲ್ಲೂ ಪತ್ರಗಳನ್ನು ರೆಜಿಸ್ಟರ್ ಮಾಡುವಾಗ್ಗೆ ಬರಹ ಬಂದವರೂ ಬಾರದಿದ್ದವರೂ ಸಬ್ ರಿಜಿಸ್ಟ್ರಾರ್ ಎದುರಿಗೆ ಹೆಬ್ಬೆರಳಿನ ಗುರುತನ್ನು ಒತ್ತಬೇಕೆಂದೂ, ಬರಹ ಬಲ್ಲವರು ಹಾಗೆ ಹೆಬ್ಬೆರಳಿನ ಗುರುತು ಹಾಕಲು ಇಷ್ಟಪಡದಿದ್ದಲ್ಲಿ ಸಬ್ ರಿಜಿಸ್ಟ್ರಾರುಗಳು ಬಲಾತ್ಕಾರಮಾಡದೆ ಅಂಥವರಿಂದ ರುಜುವನ್ನು ಮಾತ್ರ ಹಾಕಿಸಿಕೊಂಡು ಪತ್ರಗಳನ್ನು ರೆಜಿಸ್ಟರ್ ಮಾಡಿಕೊಳಬೇಕೆಂದೂ ಸರ್ಕಾರದವರು ಆಜ್ಞೆ ಕೊಡಿಸಿದಾರೆ

ಮೈಸೂರು ಗೆಜೆಟ್ ಸಂಗ್ರಹ

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ಡಿಸೆಂಬರ್ ತಾ 1 ರಿಂದ 20 ರ ವರೆಗೆ ನಡೆಯುವ ರಥೋತ್ಸವ ಮತ್ತು ಜಾತ್ರೆಗಳಿಗೆ ಪ್ಲೇಗ್ ಇರುವ ಕಡಮೆ ಪ ಹೋಗತಕ್ಕ ಯಾತ್ರಿಕರೇ ಮೊದಲಾದವರನ್ನು ಬಿಡುವುದಿಲ್ಲವೆಂದು ತಿಳಿಸುತಕ್ಕದ್ದು

ಚಿಕ್ಕಮಗಳೂರು ತಾಲ್ಲೂಕು ಕಬ್ಬಕಟ್ಟೆಯ ಬ, ಚನ್ನರಾಯಪಟ್ಟಣದ ತಾಲ್ಲೂಕು ಹಳೆಬೀಗರದಲ್ಲೂ, ಮೈಸೂರು ತಾಲ್ಲೂಕು ಆಗಸರಹಳ್ಳಿಯಲ್ಲೂ ತುಮಕೂರು ತಾಲ್ಲೂಕು ಊರಡಿಗೆರೆಯಲ್ಲೂ ಪ್ಲೇಗಿನ ಬಾಧೆ ಇರುವುದಾಗಿ ತಿಳಿಯತಕ್ಕದ್ದು

ಪ್ಲೇಗು ರೋಗ ಬರುವಾಗಿರುವ ಹೊಸ ಸ್ಥಳಗಳು ಯಾವುವೆಂದರೆ—ಸಾಗರದ ತಾ ಚಿಟ್ಟನಹಳ್ಳಿ ಕಾವಲಕೆರೆ ಮತ್ತು ಬಿಟ್ಟಿನ್ನೂರು ಕಡೂರು ಟವನ್, ತು ಕಡೂರು ತಾ ಮೊಮ್ಮನಹಳ್ಳಿ ಮತ್ತು ಸೋಗನಹಳ್ಳಿ, ಮಧುಗಿರಿ ತಾ ಮುಳೂರು ಗುಬ್ಬಿ ತಾ ಕಚೇನಹಳ್ಳಿ ಮತ್ತು ಗುಬ್ಬಿ ಟವನ್ ತಿಪ್ಟೂರು ತಾ ಸಾಸಲಿಪುರದಹಳ್ಳಿ ಮತ್ತು ಜಬಗಟ್ಟೆ

ಈ ಸಂಸ್ಥಾನದ ಹೊರಪ್ರಾಂತ್ಯದಲ್ಲಿ ಅಂದರೆ ಬ್ರಿಟಿಷ್ ಇಂಡಿಯದ ಅಥವಾ ದೇಶೀಯ ಕೋರ್ಟುಗಳ ಸಮನುಗಳನ್ನು ಮೈಸೂರಿನಲ್ಲಿರುವ ಪ್ರತಿವಾದಿಗಳಿಗೆ ಇಲ್ಲಿನ ಕೋರ್ಟುಗಳ ಮೂಲಕ ಜಾರಿಮಾಡತಕ್ಕದ್ದಿದೆ

ಕೆಳಗೆ ನಮೂದಾಗಿರತಕ್ಕವರನ್ನು ಮೈಸೂರು ಸಿಟಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ —ಮ ಗಳಾದ ನಾಯಕ್ ನಾರಾಯಣಸ್ವಾಮಿ ಚಿಕ್ಕ ಅರಸಿನವರು, ಎಂ ಎಲ್ ವಾಸುದೇವರಾಯನವರು ಎಚ್ ಸೀತಾರಾಮಯ್ಯನವರು, ದೊಡ್ಡಮುದ್ದಯ್ಯನವರು, ಎ ದಾಮಿ ಕೃಷ್ಣರಾಯರು ಖಾನ್ ನಿಜಾಮುದ್ದೀನ್ ಅಲ್ಲೀ ಖಾನರವರು, ರೆವ್ ಜ ವಲ್ಲಿಯು ಸಾಹೇಬ್ ಜಹಗೀರ್‌ದಾರ್ ಮಾದಪ್ಪನವರು, ಅ ಬಳಿ ಅಣ್ಣಯ್ಯ ಪಂಡಿತರು ಬಸಪ್ಪನವರು, ಪುಟ್ಟ ಯಾಜಿ ಅರಸಿನವರು

ಸರ್ ಆ ಸರ್ಜನ್ ಎನ್ ಟಿಸೆಂಟಿಯವರ ಹೆಸರನ್ನು ಅವರ ಪ್ರಕಾರ ಪಿ ಟಿ ನರಸಪ್ಪನವರೆಂದು ಬದಲಾಯಿಸಲಾಗಿದೆ

ರೆವ್ ಫಾದರ್ ಎಫ್ ಕೌಲ್ಸೆಯಿನ್‌ರವರನ್ನು ಶಿವಮೊಗ್ಗ ಟವನ್ ಮ್ಯುನಿಸಿಪಲ್ ಕೌನ್ಸಿಲರಾಗಿಯೂ, ಮ॥ ರಾ॥ ಆನವಟ್ಟಿ ರಂಗರಾಯರು ಆದಿಶೇಷಯ್ಯಶೆಟ್ಟರು, ಮಲ್ಲಯ್ಯಶೆಟ್ಟರು, ರಾಮಣ್ಣ ಮುದಲಿಯಾರ್ ಕಡೂರು ಟವನ್ ಮುನಿಸಿಪಲ್ ಬೋರ್ಡ್ ಮೆಂಬರಾಗಿಯೂ ನೇಮಿಸಿದ್ದಾರೆ

ಮ|| ಕಟ್ಟೆಮನೆ ನರಸಿಂಹಶಾಸ್ತ್ರಿಗಳನ್ನೂ, ಹರಿಹರಪುರದ ನಗ್ಗಿಮಕ್ಕಿ ವೆಂಕಟಕೃಷ್ಣಪ್ಪನವರನ್ನೂ ಕೊಪ್ಪ ತಾಲ್ಲೂಕ್ ಬೋರ್ಡಿನ ಮೆಂಬರುಗಳಾಗಿ ನೇಮಿಸಿದೆ

ಶಿರಸ್ತೆದಾರ್ ಮೆ|| ಕೆ ಕೃಷ್ಣಸ್ವಾಮಿ ಅಯ್ಯರವರನ್ನು ಹಿರಿಯೂರು ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಿರುವುದನ್ನು ಮಂಜೂರು ಮಾಡಲಾಗಿದೆ

ಮೆ|| ಎಂ ವಿಶ್ವೇಶ್ವರಯ್ಯನವರಿಗೆ ಬದಲಾಗಿ ಎಕ್ಸೈಸ್ ಕಮೀಷನರ್ ಮೆ|| ಎ ಕಾಂತರಾಜೇ ಅರಸಿನವರು ಮೈಸೂರು ಸಂಪದಭಿವೃದ್ಧಿ ಸಮಾಜದ ಕೈಗಾರಿಕೆಗಳ ಮತ್ತು ವಾಣಿಜ್ಯ ಶಾಖೆಯ ಕಮಿಟಿ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿದ್ದಾರೆ

ಕಡೂರು ಡಿಸ್ಟ್ರಿಕ್ಟ್ ರೆಜಿಸ್ಟ್ರಾರ್ ಆಫೀಸ್ ಹೆಡ್ ಕ್ಲಾರ್ಕ್ ಬಿ ನರಸಿಂಹಯ್ಯಂಗಾರ್ಯರನ್ನು 4 ನೇ ಗ್ರೇಡ್ ಸಬ್ ರೆಜಿಸ್ಟ್ರಾರಾಗಿ ನೇಮಿಸಿ ಮಂಜರಾಬಾದಿಗೆ ವರ್ಗಮಾಡಿದೆ

ಮಂಜರಾಬಾದ್ ತಾಲ್ಲೂಕಿನ ಅಮಲ್ದಾರ್ ಮೆ|| ಎಸ್ ಗೋಪಾಲಕೃಷ್ಣಯ್ಯಂಗಾರ್ಯರಿಗೆ ಬ್ರೀಚ್ ಆಫ್ ಕಂಟ್ರ್ಯಾಕ್ಟ್ ಆಕ್ಟಿನಲ್ಲಿ ವಿವರಿಸುವ ತಕ್ಸೀರುಗಳನ್ನು ದರ್ಯಾಪ್ತಿಮಾಡುವ ಅಧಿಕಾರ ವಹಿಸಿದೆ

ಆನರರಿ ಅ|| ಸರ್ಜನ್ ಮೆ|| ಸಿ ಎಸ್ ರಾಮಚಂದ್ರ ಅಯ್ಯರವರನ್ನು ತಾತ್ಕಾಲಿಕ ಕೆಲಸಕ್ಕಾಗಿ ಕಡೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

ಮೆ|| ಎಲ್ ಎ ಎಚ್ ಪಿಂಕ್ನೀಡ್ ಯವರನ್ನು ಹಂಗಾಮಿಯಾಗಿ 3 ನೇ ಕ್ಲಾಸ್ ಅ|| ಇಂಜನಿಯರಾಗಿ ನೇಮಿಸಿ ಕಾವೇರಿ ತಲಾವಿನ ಕಾಮಗಾರಿ ಡಿವಿಷನ್ನಿಗೆ ವರ್ಗಮಾಡಿದೆ

ಗುಡಿಬಂಡೆ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ|| ಟಿ ಟಿ ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರ ಗೈರ್ಹಾಜರಿಯಲ್ಲಿ ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ರು ಗುಡಿಬಂಡೆ ಸಬ್ ತಾಲ್ಲೂಕಿನ ಚಾರ್ಜನ್ನೂ ವಹಿಸತಕ್ಕದ್ದು

ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮೆ|| ಕೆ ಲಿಂಗೋಪಂತ್ ಬಾದಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೆದಾರ್ ಕೆ ಎನ್ ರಾಮಚಂದ್ರಯ್ಯನವರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು

ಶ್ರೀಮನ್ಮಹಾರಾಜರವರ ದೇಶಸಂಚಾರವು.

ನಮ್ಮ ಶ್ರೀಮನ್ಮಹಾರಾಜರವರೂ ಯುವರಾಜರವರೂ ಪರಿವಾರ ಸಮೇತ ಡಿಸೆಂಬರ್ ತಿಂಗಳು 9 ನೇ ತಾರೀಖಿಗೆ ಬೆಂಗಳೂರಿನಿಂದ ಹೊರಟು ಮಲ್ನಾಡುಸೀಮೆಯಲ್ಲಿ ಸಂಚಾರಮಾಡಿಕೊಂಡು ಬರುವವರಾಗಿದ್ದಾರೆಂದು ತಿಳಿದುಬರುತ್ತದೆ ಬೆಂಗಳೂರಿನಿಂದ ನೆಲಮಂಗಲ, ಕುಣಿಗಲು, ಯೆಡ್ಯೂರು, ನಾಗಮಂಗಲ ಮಾರ್ಗವಾಗಿ ಮೋಟಾರು ಗಾಡಿಯಲ್ಲಿ ಪ್ರಯಾಣಮಾಡಿ ಶ್ರವಣಬೆಳಗೊಳದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಅಲ್ಲಿ ಫಲಾಹಾರವನ್ನು ತೀರಿಸಿಕೊಂಡು ಸಾಯಂಕಾಲಕ್ಕೆ ಹಾಸನವನ್ನು ಸೇರುವರು ಹಾಸನದಲ್ಲಿ ಮಾರನೆಯ ದಿವಸವೆಲ್ಲಾ ಇದ್ದು 11 ನೇ ತಾರೀಖಿಗೆ ಬೇಲೂರು, ಹಳೇಬೀಡು ಮೊದಲಾದವುಗಳನ್ನು ನೋಡಿಕೊಂಡು ಹಳೇಬೀಡಿನಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಫಲಾಹಾರವನ್ನು ಪೂರೈಸಿ ಕಡೂರಿಗೆ ಸಾಯಂಕಾಲಕ್ಕೆ ತಲಪುವರು ಮಾರನೆಯ ದಿನ ಹೊರಟು ಮುಂದಕ್ಕೆ ಪ್ರಯಾಣಮಾಡಿ ಸಾಗರದಲ್ಲಿ ಫಲಾಹಾರವನ್ನು ತೀರಿಸಿಕೊಂಡು ಜೋಗ್ ಫಾಲ್ಸ್ ಎಂಬಲ್ಲಿಗೆ ಸಾಯಂಕಾಲಕ್ಕೆ ಸೇರಿ ಅಲ್ಲಿ ಎರಡು ದಿವಸಗಳಿದ್ದು ನೋಟ ವಿಶೇಷಗಳನ್ನೆಲ್ಲಾ ನೋಡಿಕೊಂಡು 15 ನೇ ತಾರೀಖಿನ ದಿವಸ ಶಿವಮೊಗ್ಗೆಗೆ ಪ್ರಯಾಣಮಾಡುವರು ದಾರಿಯಲ್ಲಿ ಆನಂದಪುರದಲ್ಲಿ ವಿಶ್ರಮಿಸಿ ಫಲಾಹಾರವನ್ನು ತೀರಿಸಿಕೊಳ್ಳುವರು ಶಿವಮೊಗ್ಗೆಯಲ್ಲಿ ಒಂದು ದಿವಸ ಇದ್ದು ಮಾರನೆಯದಿನ 17 ನೇ ತಾರೀಖಿನಲ್ಲಿ ಪ್ರಯಾಣಮಾಡಿ ದಾರಿಯಲ್ಲಿ ತರೀಕೆರೆ ಎಂಬಲ್ಲಿ ವಿಶ್ರಮಿಸಿಕೊಂಡು ಮಾರೀಕಣಿವೆಯನ್ನು ಸಾಯಂಕಾಲಕ್ಕೆ ತಲಪುವರು ಮಾರೀಕಣಿವೆಯಲ್ಲಿ ಎರಡು ದಿವಸಗಳಿದ್ದು ನೋಡತಕ್ಕ ವಿಶೇಷಗಳನ್ನೆಲ್ಲಾ ನೋಡಿಕೊಂಡು ಮಾರೀಕಣಿವೆಯ ಸಮೀಪದಲ್ಲಿಟ್ಟಿರುವ ಮೋಟಾರು ದೋಣಿಗಳಲ್ಲಿ ಸಂಚರಿಸಿ ಮಾರೀಕಣಿವೆಯನ್ನು 20 ನೇ ತಾರೀಖಿಗೆ ಬಿಟ್ಟು ತುಮಕೂರಿಗೆ ಬಂದು ಅಲ್ಲಿ ವಿಶ್ರಮಿಸಿಕೊಂಡು ಫಲಾಹಾರ ವಗೈರೆಗಳನ್ನು ತೀರಿಸಿಕೊಂಡು ಸಾಯಂಕಾಲಕ್ಕೆ ಬೆಂಗಳೂರಿಗೆ ಬಂದು ತಲಪುವವರಾಗಿದ್ದಾರೆ ಶ್ರೀಮನ್ಮಹಾರಾಜರವರ ಸವಾರಿಯು ಮೋಟಾರು ಬಂಡಿಯಲ್ಲಿ ಹೆಚ್ಚು ಸುಖದಿಂದ ಸಂಚರಿಸಬಹುದಾದ ಸ್ಥಳಗಳ ರಸ್ತೆಗಳೆಲ್ಲಾ ಕ್ರಮಪಡಿಸಲ್ಪಡುತ್ತವೆ ಹುಜೂರು ಸೆಕ್ರೆಟರಿಗಳಾದ ಮ ಪಿ ರಾಘವೇಂದ್ರರಾಯರು ಈಗಾಗಲೆ ಆ ಸ್ಥಳಗಳಿಗೆಲ್ಲಾ ಹೋಗಿ ಮುಂದಾಗಿ ಮಾಡಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡುತ್ತಲಿರುವರು ನಮ್ಮ ಶ್ರೀಮನ್ಮಹಾರಾಜರವರು ಸಂಚರಿಸಬೇಕೆಂದು ನಿಶ್ಚಯಿಸಿಕೊಂಡಿರುವ ಸ್ಥಳಗಳನ್ನು ನೋಡಿದರೆ ಶ್ರೀರಂಗಪಟ್ಟಣದಿಂದ ಕೃಷ್ಣರಾಜಪೇಟೆ ಮಾರ್ಗವಾಗಿ ಕೋಲಾರಕ್ಕೆ ರೈಲು ಹಾಕಬೇಕೆಂದಿರುವುದನ್ನೂ, ಪುರಾತನವಾಗಿಯೂ ಪ್ರಸಿದ್ಧ ಯಾತ್ರಾಸ್ಥಳಗಳಾಗಿಯೂ ಇರತಕ್ಕ ಶ್ರವಣಬೆಳಗೊಳ, ಬೇಲೂರು, ಹಳೇಬೀಡು ಮೊದಲಾದವುಗಳನ್ನೂ, ಶಿವಮೊಗ್ಗೆಯಲ್ಲಿ ನಡೆಯುತ್ತಿರುವ ಕೆಲವು ಏರ್ಪಾಡುಗಳನ್ನೂ, ಮಾರೀಕಣಿವೆ ತಲಾವಿನ ಕೆಳಗೆ ನಡಿಸಬೇಕೆಂದಿರುವ ನೀರಾವರಿ ವ್ಯವಸಾಯದ ಏರ್ಪಾಡುಗಳನ್ನೂ ಸಹಾ ಮುದ್ದಾಂ ಪರಿಶೀಲಿಸಬೇಕೆಂಬ ಉದ್ದೇಶವಿಟ್ಟುಕೊಂಡಿರುವಂತೆ ತೋರುತ್ತೆ ಇದರಿಂದ ನಾಡಿನ ಕ್ಷೇಮವು ಹೆಚ್ಚುವುದಕ್ಕೂ, ಮೇಲ್ಕಂಡ ಕೆಲಸಗಳು ಹೆಚ್ಚು ಶ್ರದ್ಧೆಯಿಂದ ನಡೆಸಲ್ಪಡುವುದಕ್ಕೂ ಅವಕಾಶವಾಗುತ್ತದೆ

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದ ಕಿದ್ದರ್‌ಪೂರ್ ಎಂಬ ಬಂದರಿನಲ್ಲಿ ಬೆಂಕಿಬಿದ್ದು 350 ಬೇಲ್‌ಗಳ ನಾರು ಸುಟ್ಟುಹೋಗಿ ಮಾಲೀಕರಿಗೆ 20,000 ರೂಪಾಯಿ ನಷ್ಟವಾಯಿತು.

* * *

ಲಂಡನ್ ಪಟ್ಟಣದಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೌನ್ಸಿಲ್ ಮೆಂಬರಾದ ಸರ್ ಕೆ ಜಿ ಗುಪ್ತರವರು ಕಳೆದ ಭಾನುವಾರ ಕಲ್ಕತ್ತೆಗೆ ಬಂದರು.

ಬೊಂಬಾಯಿ ಪಟ್ಟಣದಲ್ಲಿ ಐದು ಮೈಲಿ ಸುತ್ತಳತೆಯೊಳಗಾಗಿ ಯಾರೂ ವಿಮಾನಗಳಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರಮಾಡಕೂಡದೆಂದು ಕಾನೂನು ಮಾಡಿ ಜಾರಿಗೆ ತಂದಿರುತ್ತಾರೆ

* * *

ಮಲಯಾ ರಾಜ್ಯದ ಸರ್ಕಾರದವರು 3½ ಕೋಟಿ ದ್ರವ್ಯವನ್ನು ಖರ್ಚು ಮಾಡಿ ಒಂದು ಭಾರಿ ಯುದ್ಧದ ಜಹಜನ್ನು ಮಾಡಿಸಿ ಇಂಗ್ಲಿಷ್ ಗವರ್ನ್ಮೆಂಟಿಗೆ ಒಪ್ಪಿಸುವಂತೆ ಗೊತ್ತುಮಾಡಿರುತ್ತಾರೆ

* * *

ಕಳೆದ ವಾರ ರಂಗೂನ್ ಪಟ್ಟಣದಲ್ಲಿ ಹಡಗುಗಳ ಮೇಲೆ ಬರುವ ವ್ಯಾಪಾರ ಸರಕನ್ನು ಇಳಿಸಿ ತುಂಬಿಸುವಂಥಾ ಭಾರೀ ಉಗ್ರಾಣದ ಮನೆಗಳಿಗೆ ಬೆಂಕಿ ಬಿದ್ದು ಸುಮಾರು 10 ಲಕ್ಷ ರೂಪಾಯಿನ ಸರಕೂ ಕಟ್ಟಡಗಳೂ ಹಾಳಾದವು

* * *

ಅಸ್ಸಾಂ ಆಧಿಪತ್ಯಕ್ಕೆ ಸೇರಿದ ಧುಬ್ರಿ ಎಂಬ ಊರಿನಲ್ಲಿ ಕಳೆದ ಮೇ ತಿಂಗಳಲ್ಲಿ ವಾಂತಿಭೇದಿ ಉಪದ್ರದಿಂದ ನೂರಾರು ಪ್ರಜೆಗಳು ಲಯವಾದರು. ಈಗ ಮತ್ತೆ ಆ ಉಪದ್ರವು ಕಾಣಿಸಿಕೊಂಡು ವಾರ ಒಂದಕ್ಕೆ 10 ಜನರಂತೆ ಕಾಲವಾಗುತ್ತಿದ್ದಾರೆ

* * *

ಕಳೆದ ವಾರ ಕಲ್ಕತ್ತೆಯಲ್ಲಿ ಸುಮಾರು 30 ಜನರು ಒಂದು ದೋಣಿಯಲ್ಲಿ ಕುಳಿತು ಗಂಗಾ ನದಿಯನ್ನು ದಾಟುತ್ತಿರುವಲ್ಲಿ ಅಲೆ ಬಡಿದು ಆ ದೋಣಿಯು ಮುಳುಗಿಹೋಯಿತು ಹದಿಮೂರು ಜನರು ನದಿಯಪಾಲಾದರು ಇನ್ನೂ ಕೆಲವರು ಸಿಕ್ಕಿಲ್ಲ

* * *

ಹಿಂದುಸ್ಥಾನದ ಟಂಕಸಾಲೆಗಳಲ್ಲಿ ಇನ್ನು ಮುಂದೆ 10 ರೂಪಾಯಿನ ಬಾಬತು ಚಿನ್ನದ ನಾಣ್ಯಗಳನ್ನು ಛಾಪಾ ಮಾಡಿಸಿ ಚಲಾವಣೆಗೆ ತರಬಹುದೇ ಎಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಇಂಡಿಯಾ ಗವರ್ನ್ಮೆಂಟಿನವರನ್ನು ಕೇಳಿರುತ್ತಾರೆ

* * *

ಅಫ್ಘಾನಿಸ್ಥಾನದ ಅಮೀರರ ಅಪ್ಪಣೆಯ ಪ್ರಕಾರ ಕಾಬೂಲ್ ಪಟ್ಟಣದಲ್ಲಿ ಸಾಬೂನು ಮತ್ತು ಮೋಂಬತ್ತಿಗಳನ್ನು ತಯಾರುಮಾಡುವುದಕ್ಕೆ ಕಾರ್ಖಾನೆಗಳನ್ನು ಇಡಬೇಕೆಂದು ಪೆಷಾವರಿನಿಂದ ಇಬ್ಬರು ಇಂಗ್ಲಿಷ್ ಕಾರೇಗಾರರು ಅಲ್ಲಿಗೆ ಪ್ರಯಾಣ ಮಾಡಿದರು

* * *

ಬೊಂಬಾಯಿ ಟವನ್ ಮ್ಯುನಿಸಿಪಾಲಿಟಿಯು 1913-14 ನೇ ಸಾಲಿನ ಹುಟ್ಟುವಳಿ ಖರ್ಚಿನ ಅಂದಾಜಾ ಪಟ್ಟಿಯನ್ನು ತಯಾರುಮಾಡಿದ್ದಾರೆ ಆ ಮ್ಯುನಿಸಿಪಾಲಿಟಿಗೆ 1,25,22,000 ರೂ. ಉತ್ಪತ್ತಿಯಾಗುವುದೆಂದೂ, 1,25,20,000 ರೂಪಾಯಿ ಖರ್ಚಾಗುವುದೆಂದೂ ತಿಳಿಯುತ್ತದೆ

* * *

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ಮೋರವಾಡಿಯಲ್ಲಿ ಕಳೆದ ವರುಷ ಮಹಮದೀಯ ಪ್ರಜೆಗಳಿಗೆ ಒಂದು ತರಹಾ ಕೆಟ್ಟ ಜ್ವರವು ಪ್ರಾಪ್ತವಾಗಿ ಅನೇಕ ಗ್ರಾಮಗಳು ಪಾಳು ಬಿದ್ದವು ಈ ಜ್ವರವು ಇನ್ನೂ ಶಮನವಾಗಲಿಲ್ಲ ಮತ್ತು ಈಗ ಅದು ಸುತ್ತುಮುತ್ತು ಇರುವ ಹಿಂದೂ ಗ್ರಾಮಗಳಿಗೂ ವ್ಯಾಪಿಸುತ್ತಿದೆ

* * *

ಪೋಸ್ಟ್ ಆಫೀಸಿನ ಮೂಲಕ ಭಾಂಗಿಗಳನ್ನು ರೆಜಿಸ್ಟರ್ ಮಾಡಿ ಕಳುಹಿಸುವವರಿಗೆ ಈಗ ಕೊಡುವ ರಸೀತಿಯಲ್ಲಿ ಭಾಂಗಿ ಛಾರ್ಜನ್ನು ಕಾಣಿಸುವುದಿಲ್ಲ. ಇನ್ನು ಮುಂದೆ ಪೋಸ್ಟ್ ನೌಕರರು ಅಂಥಾ ರಸೀತಿಯಲ್ಲಿ ಭಾಂಗಿ ಛಾರ್ಜನ್ನು ಕೂಡ ನಮೂದು ಮಾಡಬೇಕೆಂದು ಇಂಡಿಯಾ ಗವರ್ನ್ಮೆಂಟಿನವರು ಹುಕುಂ ಕೊಟ್ಟಿರುತ್ತಾರೆ

* * *

ಕ್ಲೀವ್‌ಲೆಂಡ್ ಎಂಬ ಜಹಜಿನಲ್ಲಿ 300 ಮಂದಿ ಅಮೇರಿಕದ ದೊಡ್ಡ ಮನುಷ್ಯರು ಕಳೆದ ಭಾನುವಾರ ಬೊಂಬಾಯಿಗೆ ಬಂದಿಳಿದರು ಆ ಪೈಕಿ 200 ಮಂದಿ ಆಗ್ರಾ ಪಟ್ಟಣಕ್ಕೂ ಉಳಿದವರು ಕಲ್ಕತ್ತಾವಿಗೂ ಪ್ರಯಾಣ ಮಾಡಿರುತ್ತಾರೆ ಹಿಂದುಸ್ಥಾನದ ಮುಖ್ಯ ಸ್ಥಳಗಳಲ್ಲೆಲ್ಲಾ ಸಂಚಾರ ಮಾಡಿಕೊಂಡು ಬರಬೇಕೆಂಬುವುದೇ ಅವರ ಉದ್ದೇಶ

* * *

ಗುಂಟೂರು ಪೋಲೀಸಿನಲ್ಲಿ ನೌಕರನಾಗಿದ್ದ ಎಚ್ ಜಿ ಬ್ರೌನ್ ಎಂಬ ಯೂರೋಪ್ಯನು ಠಾಣೆಯ 700 ರೂಪಾಯಿ ತಿಂದುಹಾಕಿ ತಲೆತಪ್ಪಿಸಿಕೊಂಡು ಹೋಗಿದ್ದನು ಕಲ್ಕತ್ತಾ ಪಟ್ಟಣದೊಳಗೆ ಅಲ್ಲಿನ ಗೂಢ ಪೋಲೀಸಿನವರು ಅವನನ್ನು ಕಳೆದ ವಾರ ಹಿಡಿದು ವಿಚಾರಣೆಯ ಒಗ್ಗೆ ಬಂದೋಬಸ್ತಿನಿಂದ ಗುಂಟೂರಿಗೆ ರವಾನೆ ಮಾಡಿರುತ್ತಾರೆ

* * *

ಕಲ್ಕತ್ತೆಯಿಂದ ಗಯಾ ಪಟ್ಟಣಕ್ಕೆ 292 ಮೈಲಿ ದೂರ ಮೋಟಾರ್ ಬೈಸಿಕಲ್ ಜೂಜು ಬಿಡಬೇಕೆಂದೂ, ಅದರಲ್ಲಿ ಮೊದಲನೆಯದಾಗಿ ಹೋಗುವ ಗಾಡಿಯ ಸವಾರನಿಗೆ 1,500 ರೂಪಾಯಿ ಬಹುಮಾನ ಕೊಡುತ್ತೇವೆಂದೂ ಟಿಕಾರಿ ಮಹಾರಾಜರವರು ಮಾತು ಕೊಟ್ಟಿದ್ದಾರೆ ಅಂಥಾ ಬೈಸಿಕಲ್ ಇಟ್ಟಿರುವವರು ಈ ಜೂಜಿಗೆ ಸೇರಲು ಪ್ರಯತ್ನಪಡುತ್ತಿದ್ದಾರೆ

* * *

ಆಗ್ರಾ ಪಟ್ಟಣದ ದಂಡಿನ ಆಸ್ಪತ್ರೆಯ ಅ|| ಸರ್ಜನ್ ಎಚ್ ಎಲ್ ಕ್ಲಾರ್ಕ್ ಸಾಹೇಬರ ಮನೆಗೆ ಸೋಮವಾರ ರಾತ್ರಿ ಯಾರೋ ನುಗ್ಗಿ ಅವರ ಪತ್ನಿಯ ತಲೆಯನ್ನು ಒಡೆದುಹಾಕಿದರು ಪದಾರ್ಥಗಳೇನೂ ಕಳುವಾಗಲಿಲ್ಲ ಆಕೆ ಮರುದಿನ ಆಸ್ಪತ್ರೆಯಲ್ಲಿ ಕಾಲವಾದಳು ಗಂಡನೇ ಆಕೆಯನ್ನು ಗಾಯ ಮಾಡಿದಂತೆ ಈಗ ಆತನನ್ನು ಹಿಡಿದಿರುತ್ತಾರೆ

* * *

ಕಲ್ಕತ್ತಾ ಪಟ್ಟಣದಲ್ಲಿ ಕಾಬೂಲಿನ ಜನರ ಕ್ರೂರಕೃತ್ಯಗಳು ದಿನೇ ದಿನೇ ಹೆಚ್ಚಾಗುತ್ತಿರುವವು ಅವರು ಕಳೆದ ವಾರ ಒಬ್ಬ ಚಟ್ಟೀಗಾರನನ್ನೂ, ಇಬ್ಬರು ಬಂಗಾಳಿಗಳನ್ನೂ ಸಾಲದ ಹಣಕ್ಕಾಗಿ ತಗಾದೆ ಮಾಡಿ ಅವರನ್ನು ಹೊಡೆದು ಗಾಯಮಾಡಿದ್ದರಿಂದ ಅವರು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ ಪೋಲೀಸಿನವರು ಆ ಕಾಬೂಲಿ ಜನರನ್ನು ದಸ್ತಗಿರಿ ಮಾಡಿರುವರು

* * *

ಕಳೆದ ವರುಷ ಕಲ್ಕತ್ತಾ ಮತ್ತು ಬೊಂಬಾಯಿ ಟಂಕಸಾಲೆಗಳಲ್ಲಿ 731 ಲಕ್ಷ ರೂಪಾಯಿಗಳನ್ನು ಛಾಪಾ ಹಾಕಿದರು 36,10,000 ರೂಪಾಯಿನ ಒಂದಾಣೆಯ ನಿಕ್ಕಲ್ ನಾಣ್ಯಗಳನ್ನು ತಯಾರುಮಾಡಿದ್ದರಿಂದ ಸರ್ಕಾರಕ್ಕೆ ಈ ಬಾಬಿನಲ್ಲಿ 24,36,338 ರೂಪಾಯಿ ಫಾಯಿದೆ ಕಂಡು ಬಂದಿದೆ ಮತ್ತು ಕಂಚಿನ ಕಾಲಾಣೆ ಮೊದಲಾದ ಸಣ್ಣ ನಾಣ್ಯಗಳನ್ನು 9,26,625 ರೂಪಾಯಿಗೆ ಛಾಪಾ ಮಾಡಿಸಿದ್ದರಲ್ಲಿ ಸರ್ಕಾರಕ್ಕೆ 9,02,671 ರೂಪಾಯಿ ಲಾಭವಾಗಿರುತ್ತದೆ

* * *

ಸಿಂಧುದೇಶಕ್ಕೆ ಸೇರಿದ ಲಾರ್ಕಾನಾ ಡಿಸ್ಟ್ರಿಕ್ಟಿನಲ್ಲಿ ನವಾದೇರೂ ಎಂಬ ಸ್ಟೇಷನ್ ಬಳಿ ಕುದುರೆ ಗಾಡಿಯ ಮೇಲೆ ಕಳೆದ ವಾರ ಅಂಚೆ ಬಸ್ತುಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದಾಗ ಕಳ್ಳರು ಆ ಟಪ್ಪಾಲ್ ಗಾಡಿಯನ್ನು ತಡೆದು ನಿಲ್ಲಿಸಿ ಗಾಡಿಯಲ್ಲಿ ಕುಳಿತಿದ್ದ ಪ್ರಯಾಣಿಕರನ್ನು ಪ್ರಾಣ ತೆಗೆಯುತ್ತೇವೆಂದು ಹೆದರಿಸಿ ಗಾಡಿಯಲ್ಲಿದ್ದ ಅಂಚೆ ಬಸ್ತುಗಳನ್ನೆಲ್ಲಾ ಲೂಟಿಮಾಡಿ ಹೊತ್ತುಕೊಂಡು ಹೋದದ್ದಲ್ಲದೆ ಆ ಪ್ರಯಾಣಿಕರ ಬಳಿ ಇದ್ದ ಆಸ್ತಿ ಗಂಟು ಮೂಟೆಗಳನ್ನು ಕೂಡ ಅಪಹರಿಸಿದರು.

* * *

ಗಂಗನಮಲ್ ಸಾಧುಮಲ್ ಎಂಬವನು ಕರಾಚಿ ಪಟ್ಟಣದಲ್ಲಿ ವರ್ತಕರ ಬಳಿಗೆ ಹೋಗಿ ತಾನು ಒಂದು ದೊಡ್ಡ ಕಂಪನಿಯ ಮ್ಯಾನೇಜರೆಂದು ಹೇಳುತ್ತಾ ಅವರನ್ನು ಮೋಸಪಡಿಸಿ ತಲೆತಪ್ಪಿಸಿಕೊಂಡು ಹೋಗಿದ್ದನು ಪೋಲೀಸಿನವರು ಅವನನ್ನು ಅಮೃತಸಾರ ನಗರದಲ್ಲಿ ಹಿಡಿದು ತಂದು ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ಅವನಿಗೆ ಮೂರು ತಿಂಗಳ ಕಠಿಣ ಸಜಾ, 30 ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು ಅವನ ಮೇಲೆ ಇನ್ನೊಂದು ಮೊಕದ್ದಮೆ ಬಂದು ಈಗ ವಿಚಾರಣೆಯಾಗುತ್ತಿದೆ

* * *

ಹಿಂದುಸ್ಥಾನದಲ್ಲಿ ಸುಮಾರು ಏಳು ವರುಷ ವೈಸರಾಯರಾಗಿದ್ದು ಆಳ್ವಿಕೆಯನ್ನು ನಡಿಸಿ ಹೋದ ಲಾರ್ಡ್ ಕರ್ಜನ್ ಪ್ರಭುಗಳ ಹೆಸರನ್ನು ಶಾಶ್ವತಪಡಿಸುವುದಕ್ಕೆ ಒಂದು ಮೆಮೋರಿಯಲ್ ಫಂಡು ಕೂಡಿಸಲ್ಪಟ್ಟು, ಆ ಹಣದಲ್ಲಿ ಅವರ ಒಂದು ಲೋಹ ಪ್ರತಿಮೆಯನ್ನು ಮಾಡಿಸಿರುತ್ತಾರೆ ಈಗ ಆ ಪ್ರತಿಮೆಯನ್ನು ಹಂಗಾಮಿಯಾಗಿ ಕಲ್ಕತ್ತಾ ಪಟ್ಟಣದ ರೆಡ್ ರೋಡ್ ಎಂಬ ರಸ್ತೆಯ ಮೇಲ್ಗಡೆ ನಿಲ್ಲಿಸಬೇಕೆಂದು ಗವರ್ನರವರು ಸ್ಥಳವನ್ನು ಗೊತ್ತುಮಾಡಿದರು ಇನ್ನುಮುಂದೆ ಸರಿಯಾದ ಸ್ಥಳವನ್ನು ಗೊತ್ತುಮಾಡಿ ಆ ಪ್ರತಿಮೆಯನ್ನು ಶಾಶ್ವತವಾಗಿ ಅಲ್ಲಿಗೆ ಸಾಗಿಸುತ್ತಾರೆ

* * *

ರಂಗೂನ್ ಪಟ್ಟಣದ ಎಕ್ಸೈಸ್ ಇನ್‌ಸ್ಪೆಕ್ಟರ್ ಡಬ್ಲ್ಯು ಜಿ ಹೆಂಡ್ರಸನ್ ಎಂಬವನು 1,000 ರೂಪಾಯಿನ ಮೂರು ಕರೆನ್ಸಿ ನೋಟುಗಳನ್ನು ಅವು ಖೋಟಾ ನೋಟುಗಳೆಂದು ತಿಳಿದೂ ಸಾಚಾ ನೋಟುಗಳೆಂದು ಹೇಳಿ ಬ್ಯಾಂಕಿಗೂ ವರ್ತಕರಿಗೂ ಕೊಟ್ಟು ಹಣ ಪಡೆದು ಮೋಸಮಾಡಿದನು ಇದು ಸರಿಯಾಗಿ ರುಜುವಾತಾದದ್ದಲ್ಲದೆ ಅವನೂ ಕೂಡ ತನ್ನ ಅಪರಾಧವನ್ನು ಒಪ್ಪಿಕೊಂಡದ್ದರಿಂದ ಜಡ್ಜಿಯವರು ಅವನಿಗೆ ಏಳು ವರುಷ ಕಠಿಣ ಸಜವನ್ನೂ 1,000 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಈ ಜುಲ್ಮಾನೆ ಹಣವನ್ನು ಮೂರು ಮಂದಿಗೆ ಹಂಚಿಕೊಡುವಂತೆ ತೀರ್ಮಾನ ಮಾಡಿದರು

* * *

ಬೊಂಬಾಯಿ ಪಟ್ಟಣದಲ್ಲಿರುವ ಕಚ್ಚಿಮೇಮನ್ ಮುಸಲ್ಮಾನ್ ಪ್ರಜೆಗಳ ಮುಖಂಡರು ತಮ್ಮ ಜನರ ರೋಗಚಿಕಿತ್ಸೆಗಾಗಿ ಪ್ರತ್ಯೇಕವಾದ ಒಂದು ಆಸ್ಪತ್ರೆಯನ್ನು ಕಳೆದ ವಾರ ಪ್ರಾರಂಭಿಸಿದರು ಅಬ್ದುಲ್ ಖಾದರ್ ಎಂಬ ಸಾಹುಕಾರನು ಆ ಆಸ್ಪತ್ರೆಗೆ ಒಂದು ಲಕ್ಷ ರೂಪಾಯಿ ಮೂಲಧನವನ್ನು ಕೊಟ್ಟದ್ದಲ್ಲದೆ, ಪ್ರಾರಂಭದ ಕಾರ್ಯಗಳಿಗಾಗಿ 20,000 ರೂಪಾಯನ್ನೂ, ಆದರ ಅಂಗಳು ಕಟ್ಟ ಖರ್ಚಿಗೆ 1,200 ರೂಪಾಯಿನಂತೆ ಚಂದಾವನ್ನೂ ಕೊಡುವುದಾಗಿ ಮಾತು ಕೊಟ್ಟಿರುತ್ತಾನೆ ಈ ಆಸ್ಪತ್ರೆಯನ್ನು ಆತನ ತಂದೆಯಾದ ಹಾಜಿ ಇಸ್ಮೈಲ್ ಗುಲ್‌ಮಹಮದ್ ಎಂಬಾತನ ಹೆಸರಿನ ಮೇಲೆ ಕಟ್ಟಿ ನಡಿಸುತ್ತಾರೆ

* * *

ಬರ್ಮಾ ಆಧಿಪತ್ಯಕ್ಕೆ ಸೇರಿದ ಮಿಯೋಜಾ ಎಂಬ ಗ್ರಾಮಕ್ಕೆ 80 ಮಂದಿ ಪುಂಡರು ನುಗ್ಗಿ ದಾಂದಲೆ ಮಾಡಿ ಕ್ರೂರಕೃತ್ಯಗಳನ್ನು ನಡಿಸಿದರು. ಮಿಲಿಟರಿ ಪೋಲೀಸಿನವರು ಅವರ ಮೇಲೆ ಹೊರಟು ಅವರನ್ನು ಹಿಡಿಯಬೇಕೆಂದು ಪ್ರಯತ್ನಪಟ್ಟಾಗ ಕಡಿದಾಟವಾಯಿತು ಆ ದಂಗೆಕೋರರಲ್ಲಿ 4 ಮಂದಿ ಕೊಲ್ಲಲ್ಪಟ್ಟರು, 4 ಜನರಿಗೆ ಗಾಯಗಳಾದವು, ಪೋಲೀಸಿನವರು 12 ಮಂದಿಯನ್ನು ಕೈಸೆರೆ ಹಿಡಿದರು ಆ ಗುಂಪಿಗೆಲ್ಲಾ ಮುಖಂಡನಾದ ಗಾಮೋರ್‌ಸಾ ಎಂಬವನೂ ಸಿಕ್ಕಿಬಿದ್ದನು ಈಗ ಥಾಹುಪುಂಗಿ ಎಂಬ ಇನ್ನೊಬ್ಬ ಮುಖಂಡನನ್ನು ಹಿಡಿಯುತ್ತಿರುತ್ತಾರೆ ಸರ್ಕಾರದವರು ಇಸ್ತಿಹಾರು ಪ್ರಕಾರ 1,000 ರೂಪಾಯಿ ಬಹುಮಾನವನ್ನು ಕಾವಾನನ ಪೋಲೀಸಿನವರಿಗೆ ಹಂಚಿಕೊಡಬೇಕೆಂದು ಹುಕುಂಕೊಟ್ಟರು

* * *

ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ಯವರು ಜಯಪುರದ ಸಂಸ್ಥಾನಕ್ಕೆ ಕಳೆದ ವಾರ ದಯಮಾಡಿದರು ರಾಜಧಾನಿಯಾದ ಜಯಪುರದಲ್ಲಿ ಪ್ಲೇಗ್ ಉಪದ್ರದ ಹಾವಳಿ ಈಗ ವಿಶೇಷವಾಗಿದೆ ಪ್ರಜೆಗಳು ಅದರ ದೆಸೆಯಿಂದ ತುಂಬಾ ಕಳವಳಪಡುತ್ತಿದ್ದಾರೆ ಸುಮಾರು ಎರಡು ಲಕ್ಷ ಪ್ರಜೆಯಿರುವ ಆ ಪಟ್ಟಣದಲ್ಲಿ ದಿನಕ್ಕೆ 30 ಜನರಂತೆ ಆ ಉಪದ್ರದಲ್ಲಿ ಸಾಯುವರು ವೈಸ್‌ರಾಯಿ ಪ್ರಭುಗಳು ಪರಿವಾರ ಸಮೇತ ಪಟ್ಟಣದ ಹೊರಪಾರ್ಶ್ವದಲ್ಲಿರುವ ಪ್ಲೇಗ್ ಆಸ್ಪತ್ರೆಗೆ ದಯಮಾಡಿ, ಅಲ್ಲಿ ರೋಗಿಗಳ ಉಪಚಾರಕ್ಕೂ ಅವರ ರೋಗಚಿಕಿತ್ಸೆಗೂ ಮಾಡಿರುವ ಏರ್ಪಾಡುಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು, ರೋಗಿಗಳ ಬಳಿ ನಿಂತು ಅವರನ್ನು ಬಹು ಆದರಣೆಯಿಂದ ಮಾತನಾಡಿಸಿದರು ಬಳಿಕ ಮೋಟಾರ್ ಗಾಡಿಯಲ್ಲಿ ಕುಳಿತು ಪ್ರಜೆಗಳಾರೂ ಇಲ್ಲದ ಆ ಪಟ್ಟಣದ ಬೀದಿಗಳಲ್ಲಿ ಸಂಚಾರಮಾಡಿ ನೋಡಿಕೊಂಡು ತೆರಳಿದರು

* * *

ನಮ್ಮ ಚಕ್ರವರ್ತಿ ಸಾರ್ವಭೌಮರಾದ 5 ನೇ ಜಾರ್ಜ್ ಪ್ರಭುಗಳ ತಲೆಯುಳ್ಳ 5½ × 3½ ಪ್ರಮಾಣದ ದೊಡ್ಡ ಸೈಜಿನ ಒಂಟಿ, ಜೋಡಿ ಪೋಸ್ಟ್ ಕಾರ್ಡುಗಳು ಇಷ್ಟರಲ್ಲೇ ಎಲ್ಲಾ ಪೋಸ್ಟ್ ಆಫೀಸುಗಳಲ್ಲೂ ವಿಕರಿಗೆ ಕಳುಹಿಸಲ್ಪಡುವವು ಈಗಿನ ಸಣ್ಣ ಸೈಜಿನ ಪೋಸ್ಟ್ ಕಾರ್ಡುಗಳು ಮುಗಿದುಹೋದಹಾಗೆಲ್ಲಾ ಹೊಸದನ್ನು ಜಾರಿಗೆ ತರುತ್ತಾರೆ ಇದರ ಬೆಲೆಯು ಈಗಿನಂತೆ ಕಾಲಾಣೆ ಅರ್ಧಾಣೆಯಂತೆಯೇ ಇರುತ್ತದೆ ವಿಳಾಸ ಬರೆಯುವ ಹೊರಭಾಗದಲ್ಲಿ ಅರ್ಧಭಾಗಕ್ಕೆ ಮೇಲಿನಿಂದ ಕೆಳಗಿನ ತನಕ ಗೀಟು ಹಾಕಿ ವಿಭಾಗಮಾಡಿ ಎಡಭಾಗದಲ್ಲೂ ವಿಷಯಗಳನ್ನು ಬರೆಯುವುದಕ್ಕೂ, ಬಲಭಾಗದಲ್ಲಿ ವಿಳಾಸವನ್ನು ಮಾತ್ರ ಬರೆಯುವುದಕ್ಕೂ ಅವಕಾಶವನ್ನು ಒದಗಿಸಿರುತ್ತಾರೆ ಇಂಥಾ ದೊಡ್ಡ ಕಾರ್ಡುಗಳು ಪೋಸ್ಟ್ ಆಫೀಸಿನಲ್ಲೇ ದೊರಕುವಂತೆ ಏರ್ಪಾಡಾಗುವವರಿಂದ ಅಂಗಡಿಗಳಲ್ಲಿ ಬಿಳಿಯ ಕಾರ್ಡುಗಳು ವಿಕರಿಯಾಗುವುದು ಇನ್ನುಮುಂದೆ ಕಡಮೆಯಾಗುವುದೆಂದು ಹೇಳಬೇಕಾಗಿಲ್ಲ

ದಿವಾನರವರ ಭೇಟಿ ಸಮಯ.

ದಿವಾನ್ ಸಾಹೇಬರವರ ಭೇಟಿ ತೆಗೆದುಕೊಳ್ಳಬೇಕಾದರೆ ಅವರು ಬೆಂಗಳೂರಿನಲ್ಲಿದ್ದು ಆಫೀಸು ಕಾರ್ಯಗಳಲ್ಲಿ ನಿರತರಾಗಿಲ್ಲದೆ ಇರುವಾಗ ಪ್ರತಿ ಮಂಗಳವಾರವೂ ಗುರುವಾರವೂ ಸಹ ಮಧ್ಯಾಹ್ನ ಮೂರೂವರೆ ಗಂಟೆಯಿಂದ ಐದು ಗಂಟೆಯೊಳಗಾಗಿ ಅಠಾರಾಕಚೇರಿಯಲ್ಲಿ ಕೌನ್ಸಿಲ್ ಚೇಂಬರಿನಲ್ಲಿಯೂ, ಪ್ರತಿ ಶುಕ್ರವಾರವೂ ಬೆಳಿಗ್ಗೆ ಎಂಟು ಗಂಟೆಯಿಂದ ಹತ್ತು ಗಂಟೆಯೊಳಗಾಗಿ ಅವರ ವಾಸದ ಬಂಗಲೆಯಲ್ಲಿಯೂ ಭೇಟಿ ತೆಗೆದುಕೊಳ್ಳಬಹುದು, ಆದರೆ ಈ ನಿಯಮವು ಸರ್ಕಾರೀ ರಜಾ ದಿವಸಗಳಿಗೆ ಅನ್ವಯಿಸುವುದಿಲ್ಲವು —ಖಾಸಗೀ ಕೆಲಸದ ಮೇಲೆ ದಿವಾನ್ ಸಾಹೇಬರವರ ಭೇಟಿ ತೆಗೆದುಕೊಳ್ಳಬೇಕಾದರೆ ಅವರ ವಾಸದ ಬಂಗಲೆಯಲ್ಲಿ ಪ್ರತಿ ಶುಕ್ರವಾರವೂ ಬೆಳಿಗ್ಗೆ ಎಂಟು ಗಂಟೆಯಿಂದ ಹತ್ತು ಗಂಟೆಯೊಳಗಾಗಿ ಭೇಟಿ ತೆಗೆದುಕೊಳ್ಳಬಹುದು —ದಿವಾನ್ ಸಾಹೇಬರವರು ಸರ್ಕ್ಯೂಟಿನಲ್ಲಿರುವಾಗ ಫಲಾನೆಯ ಕಾಲದಲ್ಲಿಯೇ ಭೇಟಿ ತೆಗೆದುಕೊಳ್ಳಬಹುದೆಂದು ಪ್ರಕಟಿಸಿದರ ಹೊರತು ಸಾಮಾನ್ಯವಾಗಿ ಮಧ್ಯಾಹ್ನ ಮೂರೂವರೆ ಗಂಟೆಯಿಂದ ಐದು ಗಂಟೆಯೊಳಗಾಗಿ ಭೇಟಿ ತೆಗೆದುಕೊಳ್ಳಬಹುದು

ದಿವಾನ್ ಮೆ॥ ಎಂ. ವಿಶ್ವೇಶ್ವರೈಯನವರು.

ಇವರ ಹಿರಿಯರ ಸಂಕ್ಷೇಪ ಚರಿತ್ರೆ.

ಈಗ್ಗೆ ಸುಮಾರು ೨೫೦ ವರುಷಗಳ ಹಿಂದೆ ಮಹಮ್ಮದೀಯರು ಆಂಧ್ರದೇಶಕ್ಕೆ ಬಂದು ಅದನ್ನು ಧ್ವಂಸಪಡಿಸುವ ಕಾಲದಲ್ಲಿ ಅಲ್ಲಿನ ರಾಜರೂ ವಿದ್ವಾಂಸರೂ ಅನೇಕರು ಪರಿವಾರ ಸಮೇತ ದಕ್ಷಿಣ ದೇಶಕ್ಕೆ ಬಂದು ಅಲ್ಲಲ್ಲಿ ಸಂಸ್ಥಾನಗಳನ್ನಾಗಿ ಸ್ಥಾಪಿಸಿದ ಕಾಲದಲ್ಲಿ ಆ ಆಂಧ್ರದೇಶದ ಮೋಕ್ಷಗುಂಡವೆಂಬ ಗ್ರಾಮದಿಂದ ಬ್ರಹ್ಮಶ್ರೀ ರಾಮಕೃಷ್ಣಾರ್ಯರೆಂಬ ಘನವಿದ್ವಾಂಸರು ಬಂದು ಮೈಸೂರು ದೇಶದ ಶ್ರೀರಂಗಪಟ್ಟಣದಲ್ಲಿ ನಿಂತರು.

ಇವರ ಕುಮಾರರಾದ ವೆಂಕಟಪತ್ಯೆಯನವರು ಸಕಲ ವಿದ್ಯಾ ಸಂಪನ್ನರಿಂದ ಅನೇಕ ಜನ ಶಿಷ್ಯರನ್ನು ವಿದ್ಯಾವಂತರನ್ನಾಗಿ ಮಾಡಿ ತಪೋನಿಷ್ಠರಾಗಿದ್ದುಕೊಂಡು ಸದ್ಗತಿಯನ್ನು ಹೊಂದಿದರು ಇವರ ಮಕ್ಕಳಾದ ಬ್ರಹ್ಮಶ್ರೀ ಲಕ್ಷ್ಮೀಪತ್ಯೆಯನವರು ಸಕಲ ದಿವ್ಯದೇಶ ಸಂಚಾರ ಮಾಡಿ ಬಾಲ್ಯದಿಂದಲೂ ವಿಶೇಷ ಮತಿವಂತರಾಗಿದ್ದು ತಪಸ್ಸಿಗೆ ಯೋಗ್ಯವಾಗಿದ್ದ ಶ್ರೀಶೈಲಕ್ಕೆ ಹೋಗಿ ಅಲ್ಲಿ ಭ್ರಮರಾಂಬಿಕಾ ಸೇವೆಯಲ್ಲಿ ನಿರತರಾಗಿ ಆ ದೇವತಾನುಗ್ರಹದಿಂದಲೂ ಪಂಡಿತ ಕುಶಾಗ್ರಬುದ್ಧಿಯಿಂದಲೂ ಸಂಸ್ಕೃತ ವಿದ್ಯಾಪಾರಂಗತರಾಗಿ ಬಂದು ನಂದೀಶ್ವರ ಕ್ಷೇತ್ರಾಂತರ್ಗತವಾದ ಚಿಕ್ಕಬಳ್ಳಾಪುರವನ್ನು ಸಂಸ್ಥಾನವನ್ನಾಗಿ ಮಾಡಿಕೊಂಡು ಆಗ್ಗೆ ಆಳುತ್ತಿದ್ದ ಶ್ರೀಮಾನ್ ನಾರಾಯಣಸ್ವಾಮಿ ಎಂಬ ದೊರೆಗಳಲ್ಲಿ ಪ್ರಧಾನ ಪದವಿಯನ್ನು ಅಲಂಕರಿಸಿ ವಿಶೇಷ ಪ್ರಖ್ಯಾತರಾಗಿದ್ದರು ಆ ಕಾಲದಲ್ಲಿ ಇವರಿಗೆ ಅನೇಕ ಗ್ರಾಮಗಳು ಜಹಗೀರುಗಳಾಗಿ ಬಂದಿದ್ದವು. ಇವರ ಐದು ಜನ ಮಕ್ಕಳು ದೊಡ್ಡಬಳ್ಳಾಪುರ, ದೇವನಹಳ್ಳಿ, ಗುಡಿಬಂಡೆ ಮುಂತಾದ ಸಂಸ್ಥಾನಗಳನ್ನಾಗಿ ಮಾಡಿಕೊಂಡು ಆಗ ಆಳುತ್ತಿದ್ದವರಲ್ಲಿ ದೊಡ್ಡ ದೊಡ್ಡ ಅಧಿಕಾರಗಳಿಗೆ ಸೇರಿ ಪ್ರವೀಣರಾಗಿದ್ದುಕೊಂಡರು ಇವರ ಪೈಕಿ ಮೂರು ಜನರು ಚಿಕ್ಕಬಳ್ಳಾಪುರ ಮತ್ತು ನೀಲ್ಯಾರ ಸಂಸ್ಥಾನದವರಿಗೆ ನಡೆದ ಯುದ್ಧದಲ್ಲಿ ಸೇನಾಧಿಪತ್ಯವನ್ನು ಅಲಂಕರಿಸಿ ಪರಾಕ್ರಮವನ್ನು ತೋರಿಸಿ ವೀರಸ್ವರ್ಗವನ್ನು ಹೊಂದಿದರು ಉಳಿದ ಇಬ್ಬರು ಮದ್ರಾಸು ಇಲಾಖೆಯಲ್ಲಿಯೂ ಮತ್ತು ಮೈಸೂರು ದೇಶದಲ್ಲಿಯೂ ಸರ್ಕಾರಿ ಕೆಲಸಕ್ಕೆ ಸೇರಿದ್ದರು ಇವರ ಜಹಗೀರು ಗ್ರಾಮಗಳಲ್ಲಿ ಕೆಲವು, ನವಾಬ್ ಮತ್ತು ಟಿಪ್ಪು ಸುಲ್ತಾನ್ ರವರ ಕಾಲದಲ್ಲಿ ಆಕ್ರಮಿಸಲ್ಪಟ್ಟವು. ಆ ಕಾಲದಲ್ಲಿ ಇವರ ವಂಶೀಯರು ಕೇವಲ ವೇದಾಂತ ಶಾಸ್ತ್ರಗಳನ್ನೇ ಪ್ರಸಂಗಮಾಡುತ್ತಾ ಬ್ರಹ್ಮಜ್ಞಾನ ನಿರತರಾಗಿದ್ದ ಕಾರಣ ಸದರಿ ಗ್ರಾಮಗಳನ್ನು ಬಿಡಿಸಿಕೊಳ್ಳುವದರಲ್ಲಿ ಯಾವ ಪ್ರಯತ್ನವೂ ಮಾಡಲಿಲ್ಲ ಆದರೂ ಆ ಪೈಕಿ ಈಗ ಚಿಕ್ಕಬಳ್ಳಾಪುರದ ತಾಲ್ಲೂಕಿನಲ್ಲಿ ಮುದ್ದೇನಹಳ್ಳಿ, ಬಂಡಹಳ್ಳಿ, ಗೊಲ್ಲನಾಗಹಳ್ಳಿ, ಪ್ರಿಯದರ್ಶನಹಳ್ಳಿ ಎಂಬ ನಾಲ್ಕು ಜಹಗೀರು ಗ್ರಾಮಗಳು ಇವರ ಸಂತಾನಾಂತರ್ಯವಾಗಿ ನಡೆಸುಬರುತ್ತಿವೆ

ಪ್ರಧಾನ ಶಿರೋಮಣಿ ಲಕ್ಷ್ಮೀಪತ್ಯೆಯನವರ ಜ್ಯೇಷ್ಠಪುತ್ರರಾದ ಬ್ರಹ್ಮಶ್ರೀ ತಿಮ್ಮಾಶಾಸ್ತ್ರಿಗಳವರು ವೇದವೇದಾಂಗ ವಿದ್ಯಾಪಾರಂಗತರಾಗಿ ಈ ಭರತಖಂಡದಲ್ಲಿರುವ ಸಮಸ್ತ ದಿವ್ಯಕ್ಷೇತ್ರ ನದೀಗಳ ಯಾತ್ರೆಗಳನ್ನು ಮಾಡಿಕೊಂಡು ಬಂದು ನಂದೀ ಮಹಾಕ್ಷೇತ್ರದಲ್ಲಿ ತಪಶ್ಚರ್ಯವನ್ನು ಮಾಡುತ್ತಾ ಇದ್ದು ಸದ್ಗತಿಯನ್ನು ಹೊಂದಿದರು ಈ ತಿಮ್ಮಾಶಾಸ್ತ್ರಿಗಳ ವಂಶದಲ್ಲಿ ಈಗ್ಗೆ ಸುಮಾರು ಒಂದು ನೂರು ವರ್ಷಗಳಲ್ಲಿ ಸುಪ್ರಸಿದ್ಧರಾದ ವೇದಾಂತಿ ಶ್ರೀನಿವಾಸಾಸ್ತ್ರಿಗಳವರು ಜನಿಸಿ ಸಕಲ ಶಾಸ್ತ್ರಗಳಲ್ಲಿಯೂ ಪಂಡಿತರಾಗಿ ಗಂಗಾಕ್ಷೇತ್ರ, ಮಧುರ, ಬದರಿ, ಕಾಶಿ, ಸೇತು ಮುಂತಾದ ಕ್ಷೇತ್ರಗಳಲ್ಲಿ ಬಹಳ ಕಾಲ ಇದ್ದುಕೊಂಡಿದ್ದು ಯೋಗ ಸಮಾಧಿ ಮೊದಲಾದ ಬ್ರಹ್ಮವಿದ್ಯಾ ನಿರತರಾಗಿದ್ದ ವಲ್ಲದೆ ಸಾಹಿತ್ಯ ವಿನಾಟಕ ವೇದಾಂತ ವಿಚಾರಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿ ಮಹಾತಪಸ್ವಿಗಳಾಗಿ ಅಂತರ್ಮುಖಿಗಳಾಗಿದ್ದರು (ಬ್ರಹ್ಮಸಾಯುಜ್ಯರಾಗಿದ್ದರು) ಈ ವಂಶಜರಾದ ಶ್ರೀನಿವಾಸಶಾಸ್ತ್ರಿಗಳವರು ಕಾಶಿ ವಿಶ್ವನಾಥನ ಸೇವೆ ಮಾಡಿದ ಸಂವತ್ಸರದಲ್ಲಿಯೇ ಇವರ ತಪಃಪ್ರಭಾವದಿಂದ ಇವರ ಐವರು ಮಕ್ಕಳಲ್ಲಿ ಮೂರನೇ ಪುತ್ರರಾದ ಈಗ ಮೈಸೂರು ಸೀಮೆಯ ದಿವಾನ್ ಪದವಿಯನ್ನು ಅಲಂಕರಿಸಿರುವ ಮ॥ ಎಂ. ವಿಶ್ವೇಶ್ವರೈಯ, ಸಿ.ಐ.ಇ ಯವರು ಜನಿಸಿದರು ಇವರ ವಿದ್ಯಾಬುದ್ಧಿ ಪರಾಕ್ರಮವೂ ಮತ್ತು ಈ ಭರತಖಂಡದ ಅನೇಕ ಪ್ರದೇಶಗಳಲ್ಲಿ ಅತ್ಯದ್ಭುತವಾದ ಕಾಲುವೆಗಳನ್ನೂ, ಕಟ್ಟೆದಗಳನ್ನೂ ಮಾಡಿಸಿರುವದೂ ಈ ಭೂಗೋಳದ ಅನೇಕ ಪ್ರದೇಶಗಳಲ್ಲಿ ಸಂಚಾರಮಾಡಿ ಅಸದೃಶವಾದ ಕೌಶಲ್ಯವನ್ನು ಪಡೆದಿರುವದು ಸಹಾ ಸರ್ವರಿಗೂ ವಿದಿತವಾಗಿಯೇ ಇರುತ್ತೆ ಈ ರೀತಿ ಪ್ರಧಾನಪಂಡಿತ ವಂಶದವರಾಗಿಯೂ, ಆಶೀರ್ವಾದದಿಂದಲೂ ಮೈಸೂರು ದೇಶೀಯರಾಗಿಯೂ, ಸರ್ವಜನ ಸಮ್ಮತರಾಗಿಯೂ, ನಿಷ್ಕಳಂಕ ಪಾತ್ರಗಳಾಗಿಯೂ, ಲೋಕಾನುಭವದಕ್ಷರಾಗಿಯೂ, ಅಸದೃಶವಾದ ಪಾಂಡಿತ್ಯವುಳ್ಳವರಾಗಿಯೂ ಇರುವ ದಿವಾನ್ ವಿಶ್ವೇಶ್ವರೈಯ, ಸಿ.ಐ.ಇ. ಯವರು ಈ ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಥಾನಕ್ಕೆ ದಿವಾನ್ ರವರಾಗಿ ಬಂದಿರುವದು ಈ ದೇಶೀಯರ ಭಾಗ್ಯೋದಯವೆನ್ನುವದರಲ್ಲಿ ಯಾವ ಸಂಶಯವೂ ಇರುವದಿಲ್ಲ ಇಂಥಾ ಸಮರ್ಥರಾದ ಸ್ವದೇಶೀಯರಿಗೆ ಮುಖ್ಯಾಧಿಕಾರವನ್ನು ಕೊಟ್ಟಿರುವ ನಮ್ಮ ಶ್ರೀಮನ್ ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದೂರ್ ಜಿ.ಸಿ.ಎಸ್.ಐ. ಯವರನ್ನೂ, ಇವರ ಸಚಿವ ಶಿಖಾಮಣಿಗಳಾದ ಶ್ರೀಮಾನ್ ಎಂ. ವಿಶ್ವೇಶ್ವರೈಯನವರನ್ನೂ ಸರ್ವಶಕ್ತನಾದ ಭಗವಂತನು ಆಯುರಾರೋಗ್ಯಗಳನ್ನು ಕೊಟ್ಟು ಚಿರಕಾಲ ರಕ್ಷಿಸಬೇಕೆಂಬುದು ಚಿಕ್ಕಬಳ್ಳಾಪುರದ ನಿವಾಸಿಗಳ ಪ್ರಾರ್ಥನೆಯಾಗಿರುತ್ತೆ.

ಚಿಕ್ಕಬಳ್ಳಾಪುರದ ರಾಮಶೇಷ್ಯ

ವಾರ್ತಾದಾರರಿಗೆ ನೋಟೀಸು.

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ವಾರ್ತೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ವಾರ್ತೆಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ವಾರ್ತೆಗಳನ್ನು ಅನೇಕರು "ರೆವ್ ಇ ದಬ್ಲಿಯು. ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ. ಹೀಗೆ ಹೆಸರನ್ನು ಕಾಣಿಸದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ವಾರ್ತೆಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ವಾರ್ತಾದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಪ್ರಾರ್ಥಿಸುತ್ತೇವೆ

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕೆಂಪಾಭಿಮಾನಿ, ಮೈಸೂರು—ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಪೆನ್ಷನ್ ಆಫೀಸರ್, ಚಿತ್ರದುರ್ಗ—ಇದನ್ನು ಪ್ರಕಟಿಸುವುದರಿಂದ ವೃಥಾ ಚರ್ಚೆಗೂ ವೈಮನಸ್ಯದ ಬೆಳವಣಿಗೂ ಆಕರವಾಗುವುದೆಂದೂ, ಅನ್ಯೋನ್ಯ ಸಹಕಾರಿಯಾಗಲಾರದೆಂದೂ ಅಭಿಪ್ರಾಯಪಡುತ್ತೇವೆ.—ಎಡಿ.]

ಕರೆಸ್‌ಪಾಂಡೆನ್ಸ್.

ಪತ್ರ ಬರೆಯುವವರು.

ಅಯ್ಯಾ,

ಛಾಪಾ ಕಾಗದಗಳನ್ನು ಸಾಮಾನ್ಯವಾಗಿ ಬರೆಯುವವರು ವ್ಯಾಸುಭೋಗರು ಮತ್ತು ಸ್ಕೂಲ್ ಮಾಸ್ಟರುಗಳು. ಇವರಲ್ಲಿ ಶೇಕಡ ೫ ಮಂದಿಗೆ ರೆಜಿಸ್ಟ್ರೇಷನ್ ಕೋಡು, ರೂಲ್ಸು ಮೊದಲಾದವು ಗೊತ್ತಿಲ್ಲ ಕೆಲವು ವೇಳೆ ಇವರು ಬರೆಯುವಾಗ ಯಾವ ಉದ್ದೇಶದಿಂದ ಬರೆಯುತ್ತಾರೋ ಅದು ಬೇರೆ ವಿಧವಾಗಿ ಪರಿಣಮಿಸುವದೂ ಉಂಟು; ಮತ್ತು ಹೆಚ್ಚು ಕಡಮೆ ಪತ್ರ ಪತ್ರಗಳಲ್ಲಿ ಬರೆಯುವದರಿಂದ ಇಂಥಾದ್ದು ಸಹಾ ಆಗುತ್ತಾ ಇವೆ ಇವೇ ಮೊದಲಾದ ನ್ಯೂನತೆಗಳು ಸರ್ಕಾರದವರ ನಿಗಾಕ್ಕೆ ಅನೇಕಾವರ್ತಿ ಬಂದು ಇವೆ, ಮತ್ತು ಬರುತ್ತಲೂ ಇವೆ ಹೀಗಿದ್ದಾಗ್ಯೂ ಈ ವಿಚಾರದಲ್ಲಿ ಇನ್ನೂ ಯಾವ ವಿಧವಾದ ಸರಿಯಾದ ಏರ್ಪಾಡಾಗಿಲ್ಲ ಇಲ್ಲಿ ನಾನು ಹೇಳುವ ಸಲಹೆಯು ಯುಕ್ತವಾಗಿದ್ದಲ್ಲಿ ಸರ್ಕಾರದವರು ಈ ವಿಚಾರಕ್ಕೆ ಗಮನಕೊಡುವರೆಂದು ನಂಬುತ್ತೇನೆ ಪತ್ರಗಳನ್ನು ಬರೆಯುವವರು ಸರ್ಕಾರದಿಂದ ಲೈಸೆನ್ಸ್ ಹೊಂದಿರಬೇಕು. ರೆಜಿಸ್ಟ್ರೇಷನ್ ಪಾಸ್ ಮಾಡಿರಬೇಕು ಅಥವಾ ರೆಜಿಸ್ಟ್ರೇಷನ್ ಇಲಾಖೆಯಲ್ಲಿ ಕೆಲಸಮಾಡಿ ರಿಟೈರಾಗಿರಬೇಕು. ಇಂಥಾವರು ಹೋಬಳಿ ಹೋಬಳಿಗೂ ಅಥವಾ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲಾದರೂ ಇದ್ದಲ್ಲಿ ಮೇಲ್ಕಂಡ ನ್ಯೂನತೆಗಳಿಗೆ ಅವಕಾಶವಾಗುವದಿಲ್ಲ

ಒಬ್ಬ ವಾಚಕ

ಮಂಡ್ಯದ ತಾ. ದುದ್ದದ ಹೋ. ಹೊಳಲು ಗ್ರಾಮದ ಒಕ್ಕಲಿಗರ ಕಷ್ಟನಷ್ಟಗಳು.

ಅಯ್ಯಾ,

ಕಳೆದ ತಿಂಗಳು ತಾ ೧೫ ರಲ್ಲು ನಮ್ಮ ಮಂಡ್ಯದ ತಾಲ್ಲೂಕು ಸರ್ಕಾರದವರು ಈ ಗ್ರಾಮಕ್ಕೆ ದಯಮಾಡಿಸಿ ಆಯಾಗಳ ಸುಮಾರಿನ ಒಡೆತನರಾದ ನಮ್ಮನ್ನು ಭಯಪಡಿಸಿ ಮೇಲಿನಿಂದ ಬಂದ ಹುಕುಂ ಎಂದು ಕೆರೆಯ ತೂಬನ್ನು ಎತ್ತಿಸಿ ಬತ್ತಲೆಗೋಸ್ಕರ ಅನುಕೂಲಕ್ಕಾಗಿ ಮಾಡಿದ ಕಾರ್ಯವನ್ನು ಕುರಿತು ಕಳೆದ ತಿಂಗಳ ತಾ. ೧೯ ರಲ್ಲಿ ನಾವು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಅರಿಕೆಮಾಡಿಕೊಂಡಿದ್ದ ವರ್ತೆ ತಾ. ೩೧ ರಲ್ಲು ಪ್ರಕಟವಾದ ಸಂಗತಿಯನ್ನು ನೋಡಿ ಸಂತೋಷವಾಯಿತು ಆದರೆ ಈ ವರೆಗೂ ಸರ್ಕಾರದವರ ಗಮನವು ಬಡ ರೈತರಾದ ನಮ್ಮ ಮೇಲೆ ಬಾರದೆ ಇರುವುದು ತುಂಬಾ ವ್ಯಸನಕರವಾಗಿದೆ ಡೆಪ್ಯುಟಿ ಕಮಿಷನರವರಿಗೂ ಸಬ್ ಡಿವಿಜನ್ ಸಾಹೇಬರವರಿಗೂ ತಾಲ್ಲೂಕು ಮಾಮಲೆದಾರರಿಗೂ ಹಿಂದಾ ಪಡ ಪತ್ರಗಳನ್ನು ಬರೆದುಕೊಂಡದ್ದಲ್ಲದೆ ಸಬ್ ಡಿವಿಜನ್ ಸಾಹೇಬರು ಕಳೆದ ತಿಂಗಳಲ್ಲಿ ಚಿನುಕುರಳಿ ಎಂಬ ಗ್ರಾಮದಲ್ಲಿ ಮೊಕ್ಕಾಂ ಮಾಡಿರುವಾಗ್ಗೆ ಈ ಗ್ರಾಮದಿಂದ ಇಪ್ಪತ್ತು ಮೂವತ್ತು ಜನದ ವರೆಗೂ ರೂಬರೂಬಾಗಿ ಅವರಲ್ಲಿ ಹೇಳಿಕೊಂಡಾಗ ಅವರು—ತಾಲ್ಲೂಕು ಅಮಲ್ದಾರರಿಗೆ ಹುಕುಂ ಕಳುಹಿಸುತ್ತೇನೆಂತಲೂ, ಮುಂದಾಗಿ ತಾವೇ ಬಂದು ವಿಚಾರ ಮಾಡುತ್ತೇನೆಂತಲೂ ಹೇಳಿದ ಸೋಕ್ಷಿ ಉತ್ತಮವಾದ ಮಾತುಗಳು ಈ ವರೆಗೂ ಯಾವತ್ತೂ ಸಾರ್ಥಕವಾಗದ ರೀತಿ ನಾವೆಲ್ಲರೂ ವ್ಯರ್ಥ ಕಷ್ಟಕ್ಕೆ ಸಿಕ್ಕಿಕೊಳ್ಳಬೇಕಾಯಿತು. ಮೂರು ನಾಲ್ಕು ವರ್ಷಗಳಿಂದ ಮಳೆ ಬೆಳೆಗಳು ಇಲ್ಲದೆ ತುಂಬಾ ವ್ಯಥೆಪಡುತ್ತಿರುವ ನಮ್ಮ ಗ್ರಾಮದಿಂದ ಅನೇಕ ಜಾನುವಾರುಗಳೂ ಜನರೂ ಉಗ್ರದ ಜೀವನಕ್ಕೋಸ್ಕರ ಕಡೆಗೆ ಹೋಗಿ ಕಷ್ಟಪಟ್ಟ ಸಂಗತಿಯು ಸರ್ಕಾರದವರಿಗೂ ತಿಳಿದಿರಬಹುದು ನಮ್ಮ ಗ್ರಾಮದ ಕೆರೆಯ ಕೆಳಗಿರುವಂಥಾ ಜಮೀನುಗಳಲ್ಲಿ ತರಿ ಫಸಲನ್ನು ಮಾಡದೆ ನೀರಿಗೋಸ್ಕರವಾಗಿ ತರಿ ಕಂದಾಯವನ್ನೇ ಕೊಡಲು ಒಪ್ಪಿ ನಮ್ಮ ಅರ್ಜಿಗಳಲ್ಲಿ ಕಾಣಿಸಿದ್ದರೂ ಈ ಗ್ರಾಮದವನಲ್ಲದ ಮತ್ತು ಖಾಯಂವಾರನಲ್ಲದ ಎರಡು ಮೈಲು ಫಾಸಲೆ ದೂರದಲ್ಲಿರುವ ಆ ಜಮೀನುದಾರನಿಗೋಸ್ಕರ ಹೀಗೆ ನೀರನ್ನು ಒದಗಿಸಿ ನಮಗೆ ನಷ್ಟವನ್ನು ಮಾಡಿರುವುದು ಯಾವ ನ್ಯಾಯ ? ಆತನು ಕೊಡುವ ಕಂದಾಯವನ್ನು ನಾವೇ ಕೊಡುತ್ತೇವೆಂದೂ, ನಮ್ಮಂತೆಯೇ ಆತನು ಖುಷ್ಕಿ ಫಸಲನ್ನು ಮಾಡಿಕೊಳ್ಳುವಂತೆ ತಕ್ಕ ಯೋಚನೆಯನ್ನು ಕೊಟ್ಟರೂ ಆತನಿಗೊಬ್ಬನಿಗೇ ನೀರು ಬಿಡಿಸಿರುವ ಯೋಚನೆಯು ಹಟಸಾಧನೆಯಲ್ಲವೇ ? ಆದ್ದರಿಂದ ಬಡರೈತರಾದ ನಮ್ಮ ಅವಸ್ಥೆಗಳನ್ನು ಶ್ರೀಮನ್ ಮಹಾರಾಜಾ ಸರ್ಕಾರದವರು ಇನ್ನಾದರೂ ತಮ್ಮ ಗಮನಕ್ಕೆ ತಂದುಕೊಂಡು ನಮ್ಮನ್ನು ಕಾಪಾಡಬೇಕೆಂದು ಅರಿಕೆಮಾಡಿಕೊಳ್ಳುವ ಸಂಗತಿಯನ್ನು ಮತ್ತೊಂದು ಸಾರಿ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇವೆ ನಮ್ಮ ಅಹವಾಲುಗಳನ್ನು ಸರ್ಕಾರದವರು ಲಾಲಿಸದೆಹೋದರೆ ನಾವು ಕ್ರಮೇಣ ಹೀನಸ್ಥಿತಿಗೆ ಬರುವುದಲ್ಲದೆ ಇಷ್ಟರಲ್ಲೇ ನಾವು ದೇಶಾಂತರಕ್ಕೆ ಹೊರಡುವ ಕಾಲವು ಸಮೀಪಿಸುವದೆಂದು ತಿಳಿದು ಭಯಪಡುತ್ತಲಿದ್ದೇವೆ

ಹೊಳಲು ರೈತರು

[ಈ ವಾರ್ತೆಗೆ ರೈತರು, ಚೆಟ್ಟರು, ಆಗಸರು, ಹಜಾಮರು, ಬಲಗೈಯವರು ಸುಮಾರು ಐವತ್ತು ಮಂದಿ ರುಜು ಮಾಡಿ ಕಳುಹಿಸಿದ್ದಾರೆ ಗವರ್ನ್‌ಮೆಂಟಿನವರು ಕೂಡಲೇ ಈ ವಿಚಾರಕ್ಕೆ ಗಮನಕೊಟ್ಟು ವಿಚಾರಣೆಯಿಂದ ಕ್ರಮಪಡಿಸುತ್ತಾರೆಂದು ನಿರೀಕ್ಷಿಸುವೆವು —ಎಡಿ.]

ತಾಲ್ಲೂಕು ವರ್ತಮಾನಗಳು.

ಮಾಲೂರು ತಾ॥ ಚಿಕ್ಕತಿರುಪತಿ —ಈ ಊರಿನಲ್ಲಿ ಹವಾ ಚೆನ್ನಾಗಿದೆ. ಖುಷ್ಕಿ ಬೆಳೆಗಳು ಕಟಾವಾಗಿವೆ. ಭತ್ತದ ಬೆಳೆಯು ಸುಮಾರಾಗಿರುತ್ತೆ. ಆದರೂ ಧಾರಣೆ ಮಾತ್ರ ಇನ್ನೂ ಇಳಿದಿಲ್ಲ. ರಾಗಿ ರೂಪಾಯಿಗೆ ೧೫-೧೬ ಸೇರು, ಅಕ್ಕಿ ೫½ ೬ ಸೇರು ಇವೆ. —ಈಗ ೩-೪ ದಿವಸಗಳಿಂದ ಸೋನೆ ಮಳೆ ಹಿಡಿದು ಹವಾ ಬದಲಾಯಿಸಿರುತ್ತೆ ಅಳತೆ ಮತ್ತು ತೂಕದ ಸೇರುಗಳು ಬಹಳ ಕಮ್ಮಿಯಾಗಿರುತ್ತೆ. ಇಂಥಾ ಮೋಸವಾದ ಸೇರುಗಳನ್ನು ಮೈಸೂರು ಸರ್ಕಾರದವರು ವಜಾಮಾಡಿಸಿ, ಈಗಿನ ರೂಲಿನ ಪ್ರಕಾರ ಹೊಸ ಸೇರುಗಳನ್ನು ಜಾಗ್ರತೆಯಲ್ಲಿಯೇ ಜಾರಿಗೆ ತರುವರೆಂದು ನಂಬಿದೇವೆ.— ಕಳೆದ ಗುರುವಾರ ರಾತ್ರಿ ಈ ಊರಿಗೆ ಅರ್ಧ ಮೈಲಿಯಲ್ಲಿರುವ ಪುರವೆಂಬ ಗ್ರಾಮದಲ್ಲಿ ಸೀತಾ ಸಂದರ್ಶನವಾದ ಉತ್ಸವವು ನಡೆಯಿತು ಇಲ್ಲಿಂದ ಅನೇಕ ಜನಗಳು ಹೋಗಿ ಸಂತೋಷ ಹೊಂದಿ ಬಂದರು ಬಾಣ ಬಿರುಸುಗಳು ಬಹಳ ನೇತ್ರೋತ್ಸವವಾಗಿತ್ತು. ಬ್ಯಾಂಡು ವಾದ್ಯವೂ ಪಾಟಿಂಗ್ ಲೈಟುಗಳೂ ಬೆಂಗಳೂರಿಂದ ತರಿಸಿದ್ದರು. ಇಂಥಾ ಉತ್ಸವವು ಜರಗಿದ್ದು ಇದೇ ಮೊದಲು

ಹುಂಚ್ಯ.—ಮಳೆ ಮೋಡಗಳು ಆಡುತ್ತಲೇ ಇವೆ ಧಾರಣೆಗಳು ಬರಗಾಲವನ್ನೇ ಸೂಚನೆಕೊಡುವವು ಮುನಿಸಿಪಾಲಿಟಿ ವಿಷಯವಾದ ಕೋರಿಕೆಗಳು ನೀಗುವ ಕಾಲವು ಯಾವಾಗ ಬರುತ್ತದೋ ಗೊತ್ತಿಲ್ಲ. ಲಾಂದ್ರಗಳು ಸರಿಯಾಗಿ ಹಚ್ಚುತ್ತಾ ಇಲ್ಲವೆಂಬುದು ಆಫೀಸರ ಗಮನಕ್ಕೆ ಬಂದಿರಬಹುದು —ಮಂಚಿಷ್ಟಿಬುವನು ಅಲಕ್ಷ್ಯಯಲ್ಲೂ, ಜೋಡಿಸಬೇಕು ಮುಂದ್ರದಲ್ಲೂ, ಮುದ ನೇಮವನ್ನು ಚನ್ನಪ್ಪನ ದೊಡ್ಡಿಯಲ್ಲೂ ಕಳುವು ನಡೆಸಿದರೆಂದು ಚಿಕ್ಕಚಿತ್ತೆಯಲ್ಲಿ ದೂರಿ ಕಳೆದ ವಾರ ಇಲ್ಲಿಗೆ ೩ ಮೈಲಿ ದೂರದಲ್ಲಿರುವ ಉಮ್ಮತೂರಹಳ್ಳಿ ಗ್ರಾಮದಲ್ಲಿ ೧೬ ವರ್ಷದ ಚೌಡಿ ಎಂಬ ಹೆಂಗಸು ನೀರಿಗಾಗಿ ಹೋಗಿದ್ದು ಕೋಳದಲ್ಲಿ ಬಿದ್ದು ಅಕಾಲಮರಣ ಹೊಂದಿದಳು —ಕಳೆದ ತಾ ೧೯ ರಲ್ಲಿ ಮಿಷನ್ ಸೂಪರಿಂಟೆಂಡೆಂಟರಾದ ರೆವ್ ಸಾಡೆ ಬೋಧಕರು ಮೈಸೂರಿನಿಂದ ದಯಮಾಡಿ ಹೆಣ್ಣುಮಕ್ಕಳ ಪಾಠಶಾಲೆಯಲ್ಲಿ ಬಹುಮಾನಗಳನ್ನು ನಮ್ಮೂರಿನ ಡಾಕ್ಟರ್ ಗುಂಡಪ್ಪನವರ ಮೂಲಕ ಹಂಚಿಸಿ, ನಂತರ ಪಂಚಮರ ಸ್ಕೂಲನ್ನೂ, ಕ್ರೈಸ್ತನಿಗೆ ಸ್ಕೂಲನ್ನೂ ಪರಾಮರ್ಶಿಸಿ ಪ್ರೋತ್ಸಾಹಕೊಟ್ಟು ಮಾರನೇ ದಿನ ವಾಪಸು ತೆರಳಿದರು ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು ಈ ಊರಿಗೆ ದಯಮಾಡಿ ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸಿದರಲ್ಲಿ ಇಂಗ್ಲಿಷ್ ಸ್ಕೂಲು, ಗರ್ಲ್ಸ್ ಸ್ಕೂಲ್, ಪಂಚಮರ ಸ್ಕೂಲುಗಳ ಸ್ಥಿತಿಯು ಈಗ ತುಂಬಾ ಅಭಿವೃದ್ಧಿ ಹೊಂದಿದೆ ಎಂದು ತಿಳಿದುಬರುತ್ತದೆ ಚಾಮರಾಜನಗರದ ಗಲಭೆಯ ಕಾಲದಲ್ಲಿ ಮೂಗೂರಿನಿಂದ ತಪ್ಪಿಸಿಕೊಂಡುಹೋದವನೆಂದು ಗುಮಾನಿಯ ಮೇಲೆ ಇಲ್ಲಿ ಸಿಕ್ಕಿಬಿದ್ದ ಹಜಾಮರಿಬ್ಬರು ವಿಚಾರಣೆ ಬಗ್ಗೆ ಆ ಸ್ಥಳಕ್ಕೆ ಕಳುಹಲ್ಪಟ್ಟರು.

ಬೆಂಗಳೂರು ತಾ॥ ಯಲಹಂಕ —ಇಲ್ಲಿನ ಹವಾ ಬಹಳ ಚೆನ್ನಾಗಿದೆ. ಸಕಾಲದಲ್ಲಿ ಮಳೆ ಆದದ್ದರಿಂದ ಭತ್ತದ ಮತ್ತು ರಾಗಿಯ ಪೈರು ಬಹಳ ಚೆನ್ನಾಗಿವೆ. ರೈತರು ಬಹಳ ಹರುಷದಿಂದ ಹೊಲದ ಕೆಲಸವನ್ನು ಮಾಡುತ್ತಲಿದ್ದಾರೆ —ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಈ ಸಲದ ಲೋವರ್ ಸೆಕೆಂಡರಿ ಪರೀಕ್ಷೆಗೆ ಸುಮಾರು ೧೦ ಜನ ಹುಡುಗರು ಹೋಗುವಹಾಗೆ ಇದೆ ಈ ಸ್ಕೂಲಿನ ಹೆಡ್ ಮಾಸ್ಟರು ಮ॥ ಶ್ರೀನಿವಾಸಾಚಾರ್ಯರು ಬಹಳ ಮುತುವರ್ಜಿ ವಹಿಸಿ ಹುಡುಗರ ವಿಷಯದಲ್ಲಿ ಶ್ರಮಪಡುತ್ತಿದ್ದಾರೆ —ಇಲ್ಲಿನ ರೈಲ್ವೆ ಸ್ಟೇಷನ್ ಮಾಸ್ಟರಾದ ಮ॥ ವಾಸುದೇವರಾವ್ ಬಂದಾರಭ್ಯ ಜನಗಳಲ್ಲಿ ತುಂಬಾ ವಿಶ್ವಾಸವುಳ್ಳವರಾಗಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುತ್ತಾ ಹೆಸರು ಪಡೆದಿರುವುದನ್ನು ಕೇಳಿ ಸಂತೋಷಿಸುತ್ತೇವೆ —ಇಲ್ಲಿನ ಆಸ್ಪತ್ರೆಗೆ ಹೊಸದಾಗಿ ಬಂದಿರುವ ಸಬ್ ಅಸಿಸ್ಟೆಂಟ್ ಸರ್ಜನ್ ವೈದ್ಯನಾಥ ಮೊದಲಿಯಾರ್ರು ಬಹಳ ಒಳ್ಳೆಯವರಾಗಿ ರೋಗಿಗಳಿಗೆ ಒಳ್ಳೆ ಔಷಧಿಗಳನ್ನು ಕೊಟ್ಟು ವಾಸಿಮಾಡುತ್ತಾರೆ ಮತ್ತು ಬಡವರಿಗೆ ತಾವೇ ಅವರ ಬಳಿಗೆ ಹೋಗಿ ಚಿಕಿತ್ಸೆ ಮಾಡಿ ಏನೂ ಫೀಸು ಕೊಡುವುದಲ್ಲದೆ ತಿಂಡಿ ಮುಂತಾದ್ದಕ್ಕೆ ತಮ್ಮ ಸ್ವಂತ ಹಣ ಕೊಟ್ಟು ಬಹಳ ಆದರದಿಂದ ನೋಡುತ್ತಾರೆ.—ಇಲ್ಲಿನ ಪೋಲೀಸ್ ಆಫೀಸರು ಅಲಿಬೇಗ್ ಸಾಹೇಬರು ಈ ಸ್ಥಳಕ್ಕೆ ಬಂದ ಮೊದಲು ಕಳುವುಗಳಿಂದ ಕೇಳುವವರ ಭಯವೇನೂ ಇಲ್ಲದೆ ಊರು ಬಹಳ ಸುರಕ್ಷಿತವಾಗಿರುವುದನ್ನು ತಿಳಿಸಲು ಸಂತೋಷಪಡುತ್ತೇವೆ —ಇಲ್ಲಿ ಮುನಿಸಿಪಲ್ ಏರ್ಪಾಡು ಬಹಳ ಚೆನ್ನಾಗಿದೆ. ಝಾಡಮಾಲಿಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ. ಅಲ್ಲದೆ ಮುನಿಸಿಪಲ್ ಲಾಂದ್ರಗಳು ಸಾಯಂಕಾಲ ೬ ಘಂಟೆಯಿಂದ ಬೆಳಿಗ್ಗೆ ೬ ಘಂಟೆ ವರೆಗೆ ಚನ್ನಾಗಿ ಉರಿಯುತ್ತವೆ

ದೇವನಹಳ್ಳಿ.—೧೦ ೧೨ ದಿವಸಗಳಿಂದ ಹಿಡಿದ ಮಳೆ ಬಿಡದು ಶೀತಗಾಳಿ ಬೀಸುತ್ತಾ ಪ್ರಜೆಗಳ ಆರೋಗ್ಯಕ್ಕೆ ಕುಂದುತರುವಂತಿರುವುದರಿಂದ ಈ ವರ್ಷ ರಾಗಿ ಫಸಲು ಬಹಳ ಉತ್ತಮವಾಗಿ ಆಗಿದ್ದು ಮಳೆಯು ಹೆಚ್ಚಾಗಿ ಕೆಡಿಸಿಬಿಟ್ಟಿದ್ದಾಗ ಮಾತ್ರ ಸುಮಾರು ೧೫ ದಿನ ಹಿಂದು ಕೊಟ್ಟಿತು ಆಗ ಕೆಲವು ರೈತರು ಮಾತ್ರ ತಮ್ಮ ಪೈರನ್ನು ಮುತುವರ್ಜಿಯಿಂದ ಕಟಾವು ಮಾಡಿಕೊಂಡರು ಇನ್ನು ಕೆಲವರು ದಾರಿಯ ಬದಿ ಕೊಯ್ದಿದ್ದರಿಂದ ಮಳೆ ಬಂದು ಕೊಳೆತು ಹಾಳಾಗಿ ಉಳಿದ ಬೆಳೆಗಳಲ್ಲಿ ಅನೇಕವಾಗಿ ನಷ್ಟಪಟ್ಟು ರೈತರು ಗೋಳಾಡುತ್ತಿದ್ದಾರೆ ಇದಕ್ಕೆ ತಕ್ಕ ಪರಿಹಾರವಾಗಿ ಸರ್ಕಾರದವರು ರೈತರ ಮೇಲೆ ಕನಿಕರದಿಂದ ರಿಯಾಯಿತಿ ತೋರಿಸುವರೆಂದು ನಂಬುತ್ತೇವೆ ಇಲ್ಲಿನ ಎ. ವಿ. ಸ್ಕೂಲು ಇದ್ದಾಗ್ಯೂ ಕೆಳತರಗತಿಗಳಿಗೆ ಬೇಕಾದ ಪುಸ್ತಕಗಳು ಸಿಕ್ಕುವುದಿಲ್ಲ ೨-೩ ಸಲ ಬರೆದಾಗ್ಯೂ ಪುಸ್ತಕಗಳು ಬರಲಿಲ್ಲವೆಂದು ಹೆಡ್ ಮಾಸ್ಟರು ಹೇಳುತ್ತಾರೆ ಹುಡುಗರ ವಿದ್ಯಾಭ್ಯಾಸಕ್ಕೆ ತೊಂದರೆಯುಂಟಾಗುತ್ತಿದೆ. ವಿದ್ಯಾ ಇಲಾಖೆಯವರು ಇದನ್ನು ಬೇಗನೆ ಒದಗಿಸಬೇಕೆಂದು ಕೋರುತ್ತೇವೆ —ಒಕರೀದ್ ಹಬ್ಬದ ದಿನ ಇಲ್ಲಿನ ಮುಸಲ್ಮಾನರು, ಹಿತಗಾಳಿ ಬೀಸುತ್ತಿದ್ದರೂ ಮಹಮ್ಮದೀಯರೆಲ್ಲಾ ತಪ್ಪದೆ ಪಟ್ಟಣದ ನಮಾಜಿಗೆ ಹೊರಟರು ಇದರಲ್ಲಿ ಎರಡು ಸಂಗತಿಗಳು ಇವೆ ನಮ್ಮ ಅಮಲ್ದಾರರು ತಿಳಿದು ಗಾಳಿ ಮಳೆಯನ್ನೂ ಸುಮಾರು ಎರಡು ಮೈಲಿ ದೂರದಲ್ಲಿರುವ ಇದ್ಗಾಕ್ಕೆ ಪೋಲೀಸ್ ಸಿಬ್ಬಂದಿಯೊಡನೆ ಮುದ್ದಾಗಿ ಹೋಗಿ ಅವರಲ್ಲಿ ನಮಾಜು ಸಾಬ ವಗೈರೆ ೬ ಜನಗಳು ಮಿಕ್ಕ ಸುಮಾರು ೧೫೦ ಜನಗಳೊಡಗೆ ನಮಾಜು ಮಾಡಲು ಒಪ್ಪದೆ ಇದ್ದದ್ದರಿಂದ ಆ ೬ ಮಂದಿಯನ್ನು ಈದ್ಗಾದಿಂದ ದೂರಪ್ರದೇಶದಲ್ಲಿ ನಮಾಜುಮಾಡುವಂತೆ ಏರ್ಪಾಡುಮಾಡಿದರು

ಮುಳಬಾಗಲು ತಾ॥ ಐನೂರ.—ಈ ಊರಿನಲ್ಲಿ ಹವ ಬಹಳ ಚೆನ್ನಾಗಿದೆ ಭತ್ತದ ಪೈರು ಕಟಾವಿಗೆ ಬಂದಿರುತ್ತೆ. ಜನರೆಲ್ಲರೂ ಹರುಷದಲ್ಲಿರುತ್ತಾರೆ ಆದರೆ ಧಾರಣೆಗಳು ಮಾತ್ರ ಏನೇನೂ ಕಮ್ಮಿಯಾಗಲಿಲ್ಲ.—ಈ ಊರಿನ ವರ್ತಕರು ಪಿಟ್ಟೆ ಸೇರುಗಳಲ್ಲಿ ಅಳೆಯುತ್ತಾರೆ ಇನ್ನೂ ಸರ್ಕಾರದವರ ದೃಷ್ಟಿಗೆ ಬೀಳಲಿಲ್ಲ. ಇದರಿಂದ ಜನಗಳು ಬಹಳ ಮೋಸಹೋಗುತ್ತಾರೆ.—ಈ ಊರಿನ ಗಿಡಿಬಾವಿ ಸುತ್ತಲೂ ಕಟವಾ ಗಿಡಗಳು ವಿಶೇಷವಾಗಿ ಬೆಳೆದು, ನೀರು ಕೆಡುವುದಕ್ಕೂ ಹಾವು ಮುಂತಾದ ದುಷ್ಟ ಜಂತುಗಳಿಗೂ ಆಕರವಾಗಿವೆ ಗ್ರಾಮಾಧಿಕಾರಿಗಳು ಇದನ್ನು ದಯವಿಟ್ಟು ತೆಗೆಸಿದರೆ ತುಂಬಾ ಅನುಕೂಲ —ಈ ಊರಿನ ಗ್ರಾಮ ಪೋಲೀಸ್ ಏರ್ಪಾಟು ಸರಿಯಾಗಿದ್ದಂತೆ ತೋರುತ್ತಿಲ್ಲ. ಪಟೇಲರು ಇದಕ್ಕೆ ನಿಗಾಕೊಡುವುದು ಉತ್ತಮ —ಕೆಲವು ದೊಡ್ಡ ದೊಡ್ಡ ಮನುಷ್ಯರೇ ಜೂಜಾಡುತ್ತಾರೆ. ಇದರಿಂದ ಅನೇಕ ಸಂಸಾರಗಳು ಕೆಡುವುದಕ್ಕೆ ಕಾರಣವಾಗಿದೆ —ಸ್ಕೂಲ್ ತುಂಬಾ ಅಭಿವೃದ್ಧಿಸ್ಥಿತಿಯಲ್ಲಿದೆ ಹುಡುಗರು ಹೆಚ್ಚಾಗಿರುವುದರಿಂದ ಸರ್ಕಾರದವರು ದಯವಿಟ್ಟು ಮತ್ತೊಬ್ಬ ಮಾಸ್ಟರನ್ನು ಕೊಟ್ಟಲ್ಲಿ ಸ್ಕೂಲು ಇನ್ನೂ ಅಭಿವೃದ್ಧಿಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ —ಈ ಊರಿನಲ್ಲಿ ಸ್ಥಾಪಿತವಾಗಿರುವ ಆರ್ಯಮಹಿಳೆಯರ ಸಂಘವು ತುಂಬಾ ಸ್ತೋತ್ರಾರ್ಹವಾಗಿದೆ ಸುಮಾರು ೨-೩ ದಿನಗಳ ಕೆಳಗೆ ಎಂದಿನಂತೆ ಸಂಘದ ವಿಶಾಲಂಗ ಶಾರದಾ ಮಂದಿರದಲ್ಲಿ ಸೇರಿತ್ತು. ಸುಮಾರು ೩೦ ೪೦ ಜನ ಮಹಿಳೆಯರು ಹಾಜರಾಗಿದ್ದರು ಈ ಸಭೆಯಲ್ಲಿ ಮ॥ ವೆಂಕಟರತ್ನಂಯವರ ಕುಟುಂಬ ಸೌ॥ ಜಾನಕಮ್ಮನವರಿಂದ ಪತಿವ್ರತಾ ಧರ್ಮದ ವಿಷಯದಲ್ಲಿ ಒಂದು ಉಪನ್ಯಾಸವು ಕೊಡಲ್ಪಟ್ಟಿತು ಅನಂತರ ದೇವರಿಗೆ ಆರತಿಯೂ, ಮಹಾರಾಜರಿಗೆ ಶ್ರೇಯಃಪ್ರಾರ್ಥನೆಯೂ ನಡಿಸಲ್ಪಟ್ಟಿತು ಹೀಗೆ ಇವರು ನಿಸ್ವಾರ್ಥತೆಯುಳ್ಳವರಾಗಿರುವದರಿಂದ ಆಗಾಗ್ಗೆ ಸಹೋದರಿಯರಾದ ಆರ್ಯಮಹಿಳೆಯರನ್ನು ಸೇರಿಸಿ ಸ್ತ್ರೀ ವಿದ್ಯಾಭ್ಯಾಸದ ವಿಷಯವಾಗಿಯೂ ಉಪನ್ಯಾಸಗಳನ್ನು ನಡಿಸಿ ಸ್ತ್ರೀಯರನ್ನು ಉತ್ತಮಸ್ಥಿತಿಗೆ ತರುತ್ತಿರುವುದರಲ್ಲಿ ಮುಂದಾಳಾಗಿರುವ ವಿಷಯದಲ್ಲಿ ತುಂಬಾ ಸಂತೋಷಪಡಬೇಕಾಗಿದೆ

ಗೌರೀಬಿದನೂರು ತಾ|| ಮಂಚೇನಹಳ್ಳಿ.—ಈ ಊರಲ್ಲಿ ಮಳೆ ವಿಶೇಷವಾಗಿ ಹೊಯ್ದು ಕೆರೆ ಕಟ್ಟೆಗಳೆಲ್ಲಾ ತುಂಬಿ ಪೈರುಗಳೆಲ್ಲಾ ನೋಡುವುದಕ್ಕೆ ಬಹು ಸಂತೋಷಕರವಾಗಿರುತ್ತೆ. ರೈತರೇ ಆದಿಯಾಗಿ ಸರ್ವರೂ ಸಂತೋಷಪಡುತ್ತಿದ್ದಾರೆ. ಇಷ್ಟಾದರೂ ಧಾರಣೆವಾಸಿಗಳು ತಗ್ಗಲಿಲ್ಲ. ಎಲ್ಲರೂ ಸುಗ್ಗಿಯನ್ನೇ ಎದುರು ನೋಡುತ್ತಾ ಇದ್ದಾರೆ.—ಇದೇ ಗ್ರಾಮದಲ್ಲಿರುವ ಲಂಡನ್ ಮಿಷನ್‌ಗೆ ಸೇರಿದ ಯೋಗ್ಯರಾದ ಮತ್ತು ಪ್ರಜಾಹಿತಚಿಂತಕರಾದ ಮಿ|| ಜೆ. ಆರ್. ಎಲ್ಲೀಸಯ್ಯನವರ 18 ವರ್ಷದ ಕ್ರಿಸ್ತಕುಮಾರ ಚಾರ್ಲ್ಸ್ ಔಗಸ್ಟಸ್ ಕಲರಾಬೇನೆಯಿಂದ ಮಲಗಿಕೊಂಡು ಮಧ್ಯಾಹ್ನ 3 ಘಂಟೆಗೆ ಕಾಲವಾದದ್ದಕ್ಕಾಗಿ ವಿಷಾದಿಸುವೆವು.—ಈ ಗ್ರಾಮಕ್ಕೆ ಯೂನಿಯನ್ ಆಗಿ 5-6 ಸಂವತ್ಸರಗಳಾಗಿದ್ದರೂ ಹೊಸ ರಸ್ತೆಗಳಿಲ್ಲದೆಯೂ ಹಳೆ ರಸ್ತೆಗಳು ಹಾಳಾಗದೆಯೂ ಲಾಂದ್ರ ಕಂಬಗಳು ಸಹ ಹಾಗೆಯೇ ಇವೆ. ಆದರೆ ವರ್ಷಕೊಮ್ಮೆ ತಳವಾರರು ಮನೆಮನೆಗೂ ಬಂದು ಮನೆಯ ಯಜಮಾನರನ್ನು ಚಾವಡಿಗೆ ಕರೆದುಕೊಂಡು ಹೋಗಿ ಯೂನಿಯನ್ ಕಂದಾಯ ಕೊಡಿರೆಂದು ಕೇಳುವುದರಿಂದ ಮಾತ್ರ ಈ ಊರಲ್ಲಿ ಯೂನಿಯನ್ ಏರ್ಪಾಡಾಗಿದೆ ಎಂದು ತಿಳಿಯಬಹುದು. ಪೇಟೆಯಲ್ಲಿ ಒಂದೊಂದು ಲಾಂದ್ರ ಕಂಭಗಳಾದರೂ ಒಂದೊಂದು ರಸ್ತೆಯಾದರೂ ಹೆಸರಿಗಾದರೂ ಇರುತ್ತೆ. ಬ್ರಾಹ್ಮಣರ ಶ್ರೇಣಿಯಾದ ಕೋಟೆಯಲ್ಲಿ ಮೇಲೆ ಹೇಳಿದವುಗಳು ಇಲ್ಲ. ಇದು ಪಕ್ಷಪಾತವಲ್ಲವೇ? —ಹೊಸಪೇಟೆಯಿಂದ ಟ್ರಾವಲರ್ಸ್ ಬಂಗಲೆಗೂ, ಗೌ. ಕನ್ನಡ ಮತ್ತು ಇಂಗ್ಲಿಷ್ ಮತ್ತು ಸಂಸ್ಕೃತ ಸ್ಕೂಲುಗಳಿಗೆ ಹೋಗುವ ದಾರಿಯಲ್ಲಿ ಒಂದು ಕಾಲುವೆ ಸಿಕ್ಕುವುದು. ಅದರ ಮೇಲೆಯೇ ಜನಗಳೂ ಗಾಡಿಗಳೂ ತಿರುಗುವುದಕ್ಕೆ ಇದ್ದ ದಾರಿಯು ಹೋದ ಮಳೆಗಾಲದಲ್ಲಿ ಕುಸಿದಿದ್ದು ಜನಗಳೂ ಬಂಡಿಗಳೂ ತಿರುಗಾಡಲು ಬಹು ತೊಂದರೆಯಾಗಿರುತ್ತೆ. ಸರ್ಕಾರದವರು ಮೇಲ್ಕಂಡ ಅಂಶಗಳಿಗೆ ಗಮನಕೊಟ್ಟು ಶೀಘ್ರದಲ್ಲಿಯೇ ಸರಿಪಡಿಸುತ್ತಾರೆಂದು ನಂಬಿರುತ್ತೇವೆ. ಈ ಸಂಗತಿಗಳನ್ನೆಲ್ಲಾ ನಮೂದು ಮಾಡಿ ಸಬ್ ಡಿವಿಜನ್ ಸಾಹೇಬರವರಿಗೂ, ಅಮಲ್ದಾರರಿಗೂ ಅರ್ಜಿ ಮೂಲಕ ತಿಳಿಯಪಡಿಸಿದರೂ ಗಮನ ಕೊಟ್ಟ ಹಾಗೆ ಕಾಣಿಸಲಿಲ್ಲ. ಈಗಲಾದರೂ ಜಾಗ್ರತೆಯಾಗಿ ಸರ್ಕಾರದವರು ಗಮನ ಕೊಡುತ್ತಾರೆಂದು ನಂಬಿರುತ್ತೇವೆ.

ಹುಣಸೂರು.—ಈ ಊರು ಸೆಂಟ್ರಲ್ ಕೋಠಿಯಲ್ಲಿ ಚೆನ್ನಾಗಿ ಒಣಗಿಸಿ ಕಡಿದುಮಾಡಿದ 150 ಟನ್ ಚಂದನದ ಗಂಧವನ್ನು ತಾ 16 ನೇ ಸೋಮವಾರ ಡಿ. ಕನ್ಸರ್ವೇಟರ್ ಮಿ|| ಬಿ. ಹಿರಣ್ಣಯ್ಯನವರು ಹರಾಜು ಮಾಡಿಸಿದರು. ನಾನಾ ಕಡೆಯಿಂದ ಅದನ್ನು ಕೊಂಡುಕೊಳ್ಳಲಿಕ್ಕಾಗಿ ವರ್ತಕರು ಹಾಜರಾಗಿದ್ದರು. ಈ ಹರಾಜಿನಲ್ಲಿ 3,13,019 ರೂಪಾಯಿ ಉತ್ಪತ್ತಿಯಾಯಿತು. ಕಳೆದ ಸಾಲಿನಲ್ಲಿ 200 ಟನ್ ಗಳಿದ್ದರೂ ಎರಡು ಲಕ್ಷವೂ ಚಿಲ್ಲರೆ ರೂಪಾಯಿ ಮಾತ್ರ ಆಯಿತು. ಅದೇ [illegible] ಹಾಕಿಸಿದವರು ತಿಳಿದರು. ಆದರೆ ಈ ವರುಷ ಕಳೆದ ವರುಷಕ್ಕಿಂತ 50 ಟನ್ ಗಂಧ ಕಡಿಮೆಯಾಗಿದ್ದರೂ ಇಷ್ಟು ಹೆಚ್ಚು ಉತ್ಪತ್ತಿ ಆದದ್ದು ಸಂತೋಷಕರವಾಗಿದೆ. ಇಲ್ಲಿನ [illegible] ಮುನಿಸಿಪಲ್ ಮೆಂಬರು ಗಳ ಚುನಾವಣೆ ಆಯಿತು. ಊರಿನ ಪ್ರಜೆಗಳು ಮಿ|| ಅಬ್ದುಲ್ ಸಾಹೇಬ [illegible] ಹನುಮಂತಶೆಟ್ಟರನ್ನು ಸಮ್ಮತಿ [illegible] ಚುನಾಯಿಸಿದರು.—ಈ ಊರಿನಲ್ಲಿ ಮಾಂಸ ಮಾರುವ ಕಟುಕರು ಅನೇಕ ಕಾರಣಗಳನ್ನು ಕಲ್ಪಿಸಿಕೊಂಡು ಕೆಟ್ಟ ಮಾಂಸವನ್ನು ಮಾರುತ್ತಾರೆ ಮತ್ತು ತೂಕದಲ್ಲಿ ಕಡಿಮೆ ಕೊಡುತ್ತಾರೆಂಬುದೂ, ಇಂಥಾ ಮಾಂಸವು ನ್ಯಾಗರೀಕರಿಗೆ ತಕ್ಕುದಲ್ಲ. ಹೊರತು ಪ್ರಜೆಗಳ ಆರೋಗ್ಯಕ್ಕೆ ತಕ್ಕುದಾಗಿಲ್ಲವೆಂದೂ, ಅದರ ಪರೀಕ್ಷೆಗೆ ದೊಡ್ಡ ಪಟ್ಟಣಗಳಂತೆ ಇಂಥಾ ಸಣ್ಣ ಸ್ಥಳಗಳಲ್ಲಿ ಯಾವ ಏರ್ಪಾಡೂ ಸರ್ಕಾರದವರು ಮಾಡುವದಿಲ್ಲವೆಂದೂ ಗುಣಗುಟ್ಟುತ್ತಾರೆ. ಇದಕ್ಕಾಗಿ ಈಗಿಂದಾಗ್ಗೆ ಮೈಸೂರಿನಿಂದ ಸ್ಪೆಷಲ್ಲಾಗಿ ಒಬ್ಬ ಸಾನಿಟರಿ ಇನ್ಸ್‌ಪೆಕ್ಟರನ್ನು ಕಳುಹಿಸುವ ಏರ್ಪಾಡನ್ನು ಸರ್ಕಾರದವರು ಮಾಡುವುದು ಉತ್ತಮ.—ಕೋಆಪರೇಟಿವ್ ಸೊಸೈಟಿಯ ಕೆಲಸವು ತೃಪ್ತಿಕರವಾಗಿ ನಡೆಯುತ್ತಾ ಇದೆ. ಅದಕ್ಕಾಗಿ ಪ್ರೆಸಿಡೆಂಟರೂ, ಸೆಕ್ರೆಟರಿಯವರೂ ತುಂಬಾ ಸಹಾಯ ಮಾಡುತ್ತಾರೆ. ಈ ಸೊಸೈಟಿಯಲ್ಲಿ ಷೇರ್ ಪ್ರತಿಗಳು ಹೆಚ್ಚಾಗಿರುವರು. ಅಮಲ್ದಾರರು ಇದಕ್ಕೆ ಗ್ರಾಮವಾಸಿಗಳೂ ಮೆಂಬರುಗಳಾಗಿ ಇದರ ಪ್ರಯೋಜನಗಳನ್ನು ಪಡೆಕೊಳ್ಳುವಂತೆ ಮಾಡಬೇಕೆಂದಿರುವುದು ಸಂತೋಷಕರವಾಗಿದೆ.—ಕಳೆದ 8-10 ದಿವಸಗಳಿಂದ ಶೀತಗಾಳಿಯೂ, ಮೋಡವೂ ಉಂಟಾಗಿ ವೃಷ್ಟಿಯಾದ ಮತ್ತು ಸೋನೆ ಮಳೆ ಬರುತ್ತಾ ಇತ್ತು. ಧಾರಣೆವಾಸಿಗಳು ಇನ್ನೂ ತೃಪ್ತಿಕರವಾಗಿಲ್ಲ. 6 ಸೇರು ಅಕ್ಕಿ, 13-14 ಸೇರು ರಾಗಿ ಮಾರಾಟವಾಗುವದು.

ಮದ್ದೂರು.—14 ನೇ ತಾ ಸುಗ್ಗಿ ಹಬ್ಬದ ಜನರಿಗೆ ದೀಪಾವಳಿಯು ವೈಭವವಾಯಿತು. ಬೆಳ್ಳಿ ಕೋಲ ಕೊತ್ತಲಗಳಿಂದ ಬಹಳ ಅಲಂಕಾರವಾಗಿದೆ. ಇದಕ್ಕೆ ಅನುಕೂಲವಾಗಿ ಪಟಗಳನ್ನು ಕಟ್ಟಿದರೆ ಶೋಭಿಸುತ್ತಿತ್ತು. ದಾಕಂಪನಿ ಅಸಿಸ್ಟೆಂಟರ ಕೋರ್ಟು, ಮುನ್ಸಿಫ್ ಕೋರ್ಟು, ಅಮಲ್ದಾರ್ರ ಕಚೇರಿಗಳಿಂದ ಪಟ್ಟಣವು ಶೋಭಿತವಾಗಿದೆ. ಇಂಥಾ ದೊಡ್ಡ ತಾಲ್ಲೂಕಿಗೆ ಹೊಸದಾಗಿ ಟೆಲಿಗ್ರಾಫ್ ಹಾಕಿ [illegible] ಕೆಲಸ ಮಾಡುತ್ತಿರುವದೂ ಪ್ರಜೆಗಳಿಗೆ ಪ್ರಯೋಜನವಾಗಿದೆ.—ಗರಳೆ ಎಂಬ ಗ್ರಾಮದಲ್ಲಿ [illegible] ಪರಂಪರಾಗತವಾಗಿ ಬಂದ ಜಮೀನನ್ನು ತಮ್ಮ ಮಗನಿಗೆ ಕೊಟ್ಟದ್ದರಲ್ಲಿ ಒಬ್ಬ ಹುಡುಗನು ಸತ್ತು ಹೋದನು. [illegible] ಜನರು [illegible] ಬಿದ್ದ ವಿಷಯ ತಿಳಿದು ಕೂಡಲೆ ಅಮಲ್ದಾರ್ ಮಿ|| [illegible] ಸಬ್ ಅಸಿಸ್ಟೆಂಟ್ ಸರ್ಜನ್ ಮಿ|| ರಾಜರತ್ನಂ ಪಿಳ್ಳೆಯವರೂ, ಪೊಲೀಸ್ ಇನ್ಸ್‌ಪೆಕ್ಟರವರೂ ಬಂದು ಆ ಗ್ರಾಮಕ್ಕೆ ಹೋಗಿ [illegible] ಚಿಕಿತ್ಸೆ ಮಾಡಿದರು. [illegible] —ಜಯಮಂಗಲ ಮೊದಲಾದ ಅನೇಕ ಗ್ರಾಮಗಳಲ್ಲಿ [illegible] ಜನರಿಗೆ [illegible] ಅಮಲ್ದಾರರ ಸರ್ಜನ್‌ರವರು ಪ್ರತಿ ಗ್ರಾಮಕ್ಕೆ ಹೋಗಿ [illegible] ಔಷಧಿಗಳಿಂದ ಉಪಚರಿಸಿ [illegible] ಅನುಕೂಲವಾಗಿರುವದು ಸಂತೋಷ. ಆಸ್ಪತ್ರೆಯಲ್ಲಿರುವ ಅನೇಕ ರೋಗಿಗಳನ್ನೂ [illegible] ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಾರೆ. [illegible] ಬುದ್ಧಿವಂತಿಕೆ ಎಚ್ಚರಿಕೆ ಚಟುವಟಿಕೆಗಳಿಂದ ಕೆಲಸ ಮಾಡುತ್ತಿರುವದು ಮತ್ತೂ ಸಂತೋಷ.—ಬಿದುವನಹಳ್ಳಿ ಸ್ಟೇಷನ್‌ಗೆ ಸೇರಿದ ಬಸವನಗುಡಿ ಊಕ್ಕಡದ ಸಮೀಪದಲ್ಲಿ ಕುರಿ ಮರಿಗಳನ್ನು ಕಾಯುತ್ತಿದ್ದವನ ಮೇಲೆ ಕಳ್ಳರು ಬಿದ್ದು ಸಹಾಯಕ್ಕೆ ಕೂಗಿಕೊಂಡಂತೆ ತಕ್ಷಣವೇ ಉತ್ತಮ ಮತ್ತು ಸ್ಟೇಷನ್ ಪೊಲೀಸರು ಗ್ರಾಮದ ಜನಗಳನ್ನು ಕುಮ್ಮಕ್ ತೆಗೆದುಕೊಂಡು ಪಹರಾಯಿತಿ ಸ್ಥಳಕ್ಕೆ ಹೋಗಿ ಒಂಬತ್ತು ಜನ ಕಳ್ಳರನ್ನು ಹಿಡಿದರಂತೆ. ಹುಮ್ಮಸ್ಸಿನಿಂದ ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರು ಸಹ ಸ್ಟೇಷನ್‌ಗೆ ಹೋಗಿ ಎಲ್ಲವನ್ನೂ ವಿಚಾರಿಸಿ, ಕಳ್ಳರನ್ನು ತಾಲ್ಲೂಕಿಗೆ ಕಳುಹಿಸಿಕೊಟ್ಟಿರುತ್ತಾರೆ.—ಕೆಲವು ದಿವಸದ ಕೆಳಗೆ ಅಕ್ಕಿಹಳ್ಳಿ [illegible] ನಡೆದ ಒಬ್ಬ ಬ್ರಾಹ್ಮಣ ಹುಡುಗನ ಕೊಲೆ ಕೇಸಿನ ಮೇಲು ಸೆಷನ್ಸ್ ವಿಚಾರಣೆಗೆ ಕಮಿಟ್ಟಾಗಿದೆ ಎಂದು ತಿಳಿಯಿತು.

ಕೋಲಾರದಗೆರೆ.—ಇಲ್ಲಿ 7-8 ದಿವಸಗಳಿಂದ ಸೋಯಸರ್ ಇಯೂ ಇಲ್ಲವೆ ಸೋನೆಮಳೆ ಸುರಿಯುತ್ತಿದೆ. ಕಾಲರಾ ಗಲಾಟೆ ಸಂಪೂರ್ಣವಾಗಿ ನಿಂತುಹೋಯಿತು. ಈ ರೋಗದಿಂದ ಇದುವರೆಗೆ 30-40 ಜನಗಳು ತೀರಿಹೋದರು. ಈ ಕಾಲದಲ್ಲಿ ಇಲ್ಲಿನ ಸೊಸೈಟಿ ಸೆಕ್ರೆಟರಿಗಳಾದ ಮಿ|| ವೀರಣ್ಣದೇವರವರು ಮೈಸೂರಿನಿಂದ ತಾವೇ ಔಷಧಿಗಳನ್ನು ತರಿಸಿ ಕಾಲರಾ ತಗಲಿದ ಪ್ರತಿ ಒಂದು ಮನೆಗೂ ಹೋಗಿ ಔಷಧಿಯನ್ನು ಕೊಟ್ಟು ಉಪಚರಿಸುತ್ತಿದ್ದಾರೆ. ಇವರ ಗೈರ್‌ಹಾಜರಿಯಲ್ಲಿ ಸಾಹುಕಾರ್ ಮಿ|| ಬಡಾಮುನ್ಷಿ ಸಾಹೇಬರವರು ಹೋಗಿ ವಿಚಾರಣೆ ಮಾಡುತ್ತಿರುವರು. ಈ ಮಹನೀಯರುಗಳು ಜಾತಿಭೇದವಿಲ್ಲದೆ ಪ್ರತಿ ಒಂದು ಜನಾಂಗದವರಿಗೂ ಧೈರ್ಯ ಹೇಳಿ ಉಪಚರಿಸುತ್ತಿರುವುದಕ್ಕಾಗಿ ಕೋಲಾರದಗೆರೆ ಟೌನ್ ಪ್ರಜೆಗಳೆಲ್ಲಾ ಅವರನ್ನು ಕೊಂಡಾಡುತ್ತಿದ್ದಾರೆ. ಈ ಕಾಲದಲ್ಲಿ ಆಸ್ಪತ್ರೆ ಅ|| ಸರ್ಜನ್‌ರವರೂ ಬಹು ಮುತುವರ್ಜಿಯಿಂದ ರೋಗಿಗಳನ್ನು ವಿಚಾರಿಸಿ ತಕ್ಕ ಉಪಚಾರಗಳನ್ನು ಮಾಡುತ್ತಿರುವರು.—ರಾಂಪುರದ ಖೂನಿ ಮೊಕದ್ದಮೆಯು ಅಸಿಸ್ಟೆಂಟರ ಕೋರ್ಟಿನಲ್ಲಿ ವಿಚಾರಣೆಯಾಗಿ ಸೆಷನ್‌ಗೆ ಕಮಿಟ್ಟಾಗಿರುತ್ತೆ.—ಈಗ್ಗೆ 3-4 ದಿನಗಳ ಮುಂಚೆ ಇಲ್ಲಿನ ವೈಶ್ಯರ ನಂಜುಂಡಯ್ಯನ ಅಂಗಡಿಗೆ ಕಳ್ಳರು ನುಗ್ಗಿ ದೋಚುತ್ತಿದ್ದ ಕಾಲದಲ್ಲಿ ಇಲ್ಲಿನ ಡ್ರಿಲ್ ಇನ್ಸ್‌ಪೆಕ್ಟರ್ ಹಾಫಿಸ್ ಖಾನ್ ಎಂಬಾತನು ಕಂಡುಹಿಡಿದು ಹತ್ತಿರಕ್ಕೆ ಹೋಗಲು ಆ ಕಳ್ಳರು ಅವನನ್ನು ಹೊಡೆದು ಭಾವಿಯಲ್ಲಿ ಹಾಕಬೇಕೆಂದು ಇನ್ಸ್‌ಪೆಕ್ಟರ ಮನೆಯ ಮುಂಭಾಗದಲ್ಲಿ ಹೊತ್ತುಕೊಂಡು ಹೋಗುತ್ತಿದ್ದಾಗ ಆ ಸಾರ್ಜಂಟು ಘಟ್ಟಿಯಾಗಿ ಕೂಗಿಕೊಂಡನು. ಆಗ ಇನ್ಸ್‌ಪೆಕ್ಟರವರು ಓಡಿಬರಲು ಕಳ್ಳರು ಅಲ್ಲಿ ಅವನನ್ನು ಎತ್ತಿಹಾಕಿ ಓಡಿಹೋಗುತ್ತಿರಲು ಇನ್ಸ್‌ಪೆಕ್ಟರ್ ಮಿ|| ಎಸ್. ನರಸಿಂಹಯ್ಯನವರೂ ಸಾರ್ಜಂಟ್ ಸಹ ಬೆನ್ನಟ್ಟಿ ಹೋಗಿ ಬಹಳ ಸಾಹಸದಿಂದ ಒಬ್ಬನನ್ನು ಹಿಡಿದರು. ಬಾಕಿಯವರು ಓಡಿಹೋದರು. ಮಾರನೇ ದಿನ ಇನ್ನೊಬ್ಬನನ್ನು ಹಿಡಿದರು. ಆ ಕಳ್ಳರು ಬಹಳ ಗಟ್ಟಿಗರೂ ಧೈರ್ಯಶಾಲಿಗಳೂ ಆಗಿರುತ್ತಾರೆ. ಅಂಗಡಿಯಲ್ಲಿ ಸುಮಾರು 10-11 ರೂಪಾಯಿ ಮಾಲು ಮಾತ್ರ ಹೋಗಿತ್ತು. ಅದನ್ನೂ ಪತ್ತೆ ಮಾಡಿರುತ್ತಾರೆ. ಇನ್ನೊಬ್ಬ ಕಳ್ಳನಲ್ಲಿ 80 ರೂಪಾಯಿ ಬೆಲೆ ಬಾಳುವ ಮಾಲು ಇತ್ತು. ಅದು ಇಂಥವರದೆಂಬುವುದು ಗೊತ್ತಿಲ್ಲ. ಅರ್ಧರಾತ್ರಿಯಲ್ಲಿ ಸರಸ್ಥಳದಿಂದ ಬಂದು ಈ ರೀತಿ ಚೋರಿ ಮಾಡುತ್ತಿದ್ದದ್ದನ್ನು ಆ ಕೂಡಲೆ ಕಂಡುಹಿಡಿದು ಅವರಿಂದ ಏಟು ತಿಂದೂ ಬಿಡದೆ ಹಿಡಿದಂಥ ಸಾರ್ಜಂಟನ ಸಾಮರ್ಥ್ಯವು ಸ್ತೋತ್ರಾರ್ಹವೇ ಸರಿ. ಇದಕ್ಕೆಲ್ಲಾ ನಮ್ಮ ಇನ್ಸ್‌ಪೆಕ್ಟರವರ ಮುತುವರ್ಜಿಯೇ ಕಾರಣವಾಗಿರುತ್ತೆ. ಇವರು ಪೊಲೀಸ್ ಸಿಬ್ಬಂದಿಯನ್ನು ಹತೋಟಿಯಲ್ಲಿಟ್ಟುಕೊಂಡು ಅವರವರಿಗೆ ಸರಿಯಾದ ಗಸ್ತುಗಳನ್ನು ಏರ್ಪಡಿಸಿ, ಊರಿನ ಮತ್ತು ಗ್ರಾಮಗಳ ಪ್ರಜೆಗಳಿಗೆ ಕಳ್ಳಕಾಕರ ಭಯವಿಲ್ಲದಂತೆ ಮಾಡಿರುತ್ತಾರೆ. ಅಲ್ಲದೆ ಜೂಜಾಟಗಳನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಿರುತ್ತಾರೆ. ಕಾನ್‌ಸ್ಟೇಬಲ್‌ಗಳೆಲ್ಲಾ ಮುತುವರ್ಜಿಯಿಂದ ಕೆಲಸಮಾಡುವರು.

ಅರಕಲಗೂಡು.—ಕಳೆದ ವಾರದಿಂದಲೂ ಹಿಡಿದಿರತಕ್ಕ ಸೋನೆ ಮಳೆಯು ಬೀಳುವುದರಿಂದ ಈ ಪ್ರಾಂತ್ಯ ಭತ್ತದ ಪೈರಿಗೂ, ಜಾನುವಾರಗಳಿಗೂ, ಮನುಷ್ಯರಿಗೂ ಅತಿ ಜುಗುಪ್ಸೆಯನ್ನುಂಟುಮಾಡುವುದಲ್ಲದೆ ವರ್ಷಕಾಲದ ಜಡಿಮಳೆಯನ್ನು ತಿರಸ್ಕರಿಸುವಂತಿದೆ. ಹವಾ ಹಿತಕರವಾಗಿದೆ.—ಗ್ರಾಮ ಶಾನುಭೋಗ ತಾಲ್ಲೂಕಿನಲ್ಲಿ ಬೆನ್ನಾಗಿದ್ದರೂ ಹಳ್ಳಿಗಳಲ್ಲಿಯೂ ಹೋಬಳಿಗಳಲ್ಲಿಯೂ ಅಷ್ಟು ಚೆನ್ನಾಗಿಲ್ಲ. ಒಂದು ವೇಳೆ ಅಮಲ್ದಾರರು ಇಂಥಿಂಥಾ ಗ್ರಾಮಗಳಿಗೆ ಜಮಾಬಂದಿಗೋಸ್ಕರ ಬರುತ್ತಾರೆಂಬ ವರ್ತಮಾನವು ಬಂದ ಕಾಲದಲ್ಲಿ ಮಾತ್ರ ಅಲ್ಲಿನ ಪಟೇಲರು ಸಹಾಕಟ್ಟಿಕೊಂಡು ಆ ಕಡೆ ಈ ಕಡೆ ಬಲು ತರಾತುರಿಯಿಂದ ಓಡಾಡುವರೇ ಹೊರತು ಇತರ ವೇಳೆ ನಿಶ್ಚಿಂತರಾಗಿರೋಣವರಿಂದ ಪ್ರಜಾ ಆರೋಗ್ಯವು ಎಂದಿಗೂ ವೃದ್ಧಿಯಾಗಲಾರದು.—ಕಳೆದ ವರ್ಷ ಬಿದ್ದುಹೋದ ಇಲ್ಲಿನ ಕೆರೆಕೋಡಿಯು ಸೇತುವೆಯು ಈಗೀಗ ಕಟ್ಟಿ ಮುಕ್ತಾಯವಾಗುತ್ತಿದೆ. ಆದರೂ ಕೋಡಿಯು ಮೊದಲಿಗಿಂತ ಸುಮಾರು ಅರ್ಧ ಅಡಿ ಕಡಿಮೆಯಾಗಿದೆ ಎಂದೂ, ಇದರಿಂದ ಅಕಾಲದಲ್ಲಿ ಕೆಕ್ಕೆಷ್ಟು ನೀರು ನಿಲ್ಲಲು ಅವಕಾಶವಾಗುವುದಿಲ್ಲವೆಂದೂ ಪೂರ್ವದಂತೆಯೇ ಇರಬೇಕೆಂಬ ಅಂಶವನ್ನು ಸೂಚಿಸಿ ಅನೇಕ ಅರ್ಜಿಗಳು ಕೊಟ್ಟ ಹಾಗೂ, ಅವೆಲ್ಲವೂ ಯಾವ ಕಾರಣದಿಂದಲೋ ತಿರಸ್ಕರಿಸಲ್ಪಟ್ಟ ಹಾಗೂ ಕೇಳುತ್ತೇವೆ. ಈ ಕೆರೆಯ ನೀರನ್ನು ಗಲೀಜು ಮಾಡದಂತೆ ಒಂದು ಬೋರ್ಡು, ಒಬ್ಬ ಜವಾನನೂ ಇದ್ದರೂ ಅನೇಕ ಸಾರಿ ಅನೇಕರು ನಾನಾ ರೀತಿ ಕೆಡಿಸುವುದು ಆಶ್ಚರ್ಯವಾಗಿದೆ. ಪ್ರಾಯಶಃ ಬಡವರಿಗೆ ಮಾತ್ರ ಈ ನಿರ್ಬಂಧ ಅನ್ವಯಿಸಿ, ಬಲಿಷ್ಠರಿಗೆ ಇಲ್ಲವೇನೋ. ಈ ಊರಿನಲ್ಲಿ ಸುಮಾರು ಮೂರು ಸ್ಥಳಗಳಲ್ಲಿ ಹಗಲಿನಲ್ಲಿಯೇ ಇಸ್ಪೀಟು ಆಡುವುದು ಪ್ರತ್ಯಕ್ಷವಾಗಿದೆ. ಇದು ಪೊಲೀಸಿನವರಿಗೆ ತಿಳಿಯದೆ ಇರುವುದು ಆಶ್ಚರ್ಯ.—ಮ|| ಸಾಹುಕಾರ್ ದಾಸಶೆಟ್ಟರ ಮಕ್ಕಳು ಉಚಿತವಾಗಿ ಕಟ್ಟಿಸಿರತಕ್ಕ ನಾಟಕಶಾಲೆಯು ಮುಕ್ತಾಯಕ್ಕೆ ಬಂದಿರುವುದನ್ನು ನೋಡಿ ಸಂತೋಷಿಸಬೇಕಾಗಿದೆ.—ಕೆಲವು ವಾರಗಳ ಹಿಂದೆ ಮಲಿಕಲ್ಲಿನಲ್ಲಿ ನಡೆದ ಖೂನಿ ವಿಷಯದಲ್ಲಿ ಸರಿಯಾದ ಕಾರಣವು ಸಿಕ್ಕದೆ ಹೋಯಿತಂತೆ, ಮೊಕದ್ದಮೆ ವಜಾ ಆಯಿತೆಂದೂ ಕೇಳುತ್ತೇವೆ. ಕಳೆದ ವಾರ ಕೊಣನೂರಿನ ಬಳಿ ಒಬ್ಬ ಸಾರಾಯಿ ಮಾರುವ ಚೆಟ್ಟಿಯನ್ನು ಆ ಕಡೆಯ 4 ಜನರು ಸೇರಿ ಕೊಂದರೆಂದೂ, ಈಗ ಅವರೆಲ್ಲರೂ ಸಿಕ್ಕಿ ಒಪ್ಪಿಕೊಂಡರೆಂದೂ ಕೇಳುತ್ತೇವೆ. ಈಗ ಇದರ ವಿಷಯ ವಿಚಾರಣೆಯಾಗುತ್ತಲಿದೆ.—ಹೋದ ವರ್ಷ ರಾಮನಾಥಪುರದ ಜಾತ್ರೆಯಲ್ಲಿ ಎಲ್ಲಾ ವಿಷಯದಲ್ಲಿ ಮಾಡಿದ್ದ ಏರ್ಪಾಡು ತೃಪ್ತಿಕರವಾಗಿದ್ದರೂ ಪಬ್ಲಿಕ್ ಶಕ್ಕಡಗಳು ಅಷ್ಟು ತೃಪ್ತಿಕರವಾಗಿರಲಿಲ್ಲ. ಹೊಳೆಯ ದಡದಲ್ಲಿ ಎಲ್ಲಿ ನೋಡಿದರೂ ಹೇಸಿಗೆ ಮತ್ತು ಎಂಜಲು ಹಾಳೆಗಳ ದುರ್ವಾಸನೆಯಿಂದ ಕೂಡಿ ಅನೇಕರಿಗೆ ಅತಿ ಹೇಯವಾಗಿತ್ತು. ಆಗ ಪೊಲೀಸು ಉಸ್ತುವಾರಿ ಚೆನ್ನಾಗಿದ್ದರೂ ಅವರು ಕೆಲವರೇ ಇದ್ದುದರಿಂದ ಅಷ್ಟು ಜನರನ್ನೂ ತಡೆಯಲು ಶಕ್ತರಾಗಲಿಲ್ಲ. ಈ ಸಾರಿ ಹಾಗಾಗದಂತೆ ಹೆಚ್ಚು ಜಾಗ್ರತೆ ವಹಿಸಿದರೆ ಜಾವಾರ್ಕ್ ಇಲ್ಲದಿದ್ದರೆ ಹೇಸಿಗೆಯಿಂದ ಅಂಟುಜಾಡ್ಯಗಳು ಹುಟ್ಟಿ ಯಾತ್ರೆ ಜನಗಳಿಗೆ ಸಂಕಟವನ್ನು ಉಂಟುಮಾಡುವುದರಲ್ಲಿ ಸಂದೇಹವಿಲ್ಲ.

ಚಿತ್ರದುರ್ಗ.—ಈಗ್ಗೆ 9 ದಿವಸಗಳಿಂದ ಮೋಡ ಮುಚ್ಚಿಕೊಂಡು ತುಂತುರು ಮಳೆ ಬರುತ್ತಿದ್ದು 22 ನೇ ತಾ ಶುಕ್ರವಾರ ರಾತ್ರಿ ಚೆನ್ನಾಗಿ ಮಳೆ ಬಂತು. ಊರಲ್ಲೆಲ್ಲಾ ಶೀತಸಂಬಂಧವಾದ ಕಾಯಿಲೆಗಳುಂಟಾಗಿವೆ. ಈ ವರುಷ ಮುಂಗಾರು ಪಸಲು ಬಹಳ ಚೆನ್ನಾಗಿ ಆಗಿರುತ್ತಲ್ಲದೆ ಈಗಾಗಲೇ ಜೋಳ ವಗೈರೆ ಫಸಲುಗಳು ಕಟಾವಾಗುತ್ತಾ ಇವೆ. ಆದರೂ ದಿನೇದಿನೇ ಪದಾರ್ಥಗಳ ಧಾರಣೆ ಜಾಸ್ತಿಯಾಗುತ್ತಾ ಇದೆ. ಈ ವರೆಗೆ ಅಕ್ಕಿ ರೂಪಾಯಿಗೆ 7-7½ ಸೇರು ಇದ್ದದ್ದು ಈಗ 5½ ಸೇರಾಗಿ ಇದೆ. ಇದಕ್ಕೆ ಕಾರಣ ಗೊತ್ತಾಗುವದಿಲ್ಲ. 14 ವರುಷದ ಹಿಂದೆ ಕ್ಷಾಮ ಬಂದಿದ್ದಾಗ ಮಿ|| ರಂಗಸ್ವಾಮಿ ಅಯ್ಯಂಗಾರ್ರು ಡಿಪ್ಯೂಟಿ ಕಮಿಷನರ್ ಆಗಿಯೂ, ಮಿ|| ಬೆಂಗ್ಲಿಯು ಟ್ರಾ. ಡೆಪ್ಯೂಟಿ ಕಮಿಷನರ್ ಆಗಿಯೂ ಇದ್ದಾಗ ಈಗ್ಗಿನ ತಲೂ ಆಹಾರ ದಿನಸಿಗಳು ಅಗ್ಗವಾಗಿ ಸಿಕ್ಕುತ್ತಿತ್ತು. ಅವರ ಪ್ರಯತ್ನವೇ ಅಗ್ಗ ಬಡಜನರನ್ನು ಕಾಪಾಡಿತು. ಈಗ ಸುಭಿಕ್ಷಕಾಲವಾದರೂ ಬಡವರಿಗೆ ಹಿಂದಲ ಕ್ಷಾಮಕಾಲಕ್ಕಿಂತ ಕಷ್ಟವಾಗಿದೆ.—ಕೆಲವು ದಿವಸಗಳಿಂದ ಮುನಿಸಿಪಲ್ ನ್ಯಾ. ರುಗಳು ಚೆನ್ನಾಗಿ ಕೆಲಸಮಾಡುತ್ತಿದ್ದಾರೆ.—ಸೆಷನ್ಸ್ ಜಡ್ಜ್‌ರವರು ಇಲ್ಲಿನ ಮೊಕದ್ದಮೆಗಳ ವಿಚಾರಣೆ ಪೂರೈಸಿಕೊಂಡು ಶಿವಮೊಗ್ಗೆಗೆ ದಯಮಾಡಿದರು. ಈ ದಫಾ ಸೆಷನ್ಸ್‌ನಲ್ಲಿ ನಾಲ್ಕು ಖೂನಿ ಕೇಸುಗಳಿತ್ತು. ಆ ಪೈಕಿ 3 ಕೇಸುಗಳಲ್ಲಿ ಅಪರಾಧಿಗಳಿಗೆ ಖುಲಾಸೆ ಆಯಿತು. ಬಾಕಿ ಒಂದು ಕೇಸು ಅಂದರೆ ಜಂಪೃಹಳ್ಳಿಯಲ್ಲಿ ಒಂದು ಕುಟುಂಬದವರನ್ನೆಲ್ಲಾ ಕೊಂದಿದ್ದ ಮೂರು ಜನ ಅಪರಾಧಿಗಳಿಗೂ ಫಾಸಿ ಸಜಾ ಆಯಿತು. ಇಂಥಾ ಸಂದರ್ಭಗಳಲ್ಲಿ ಸಾಹಸಪಟ್ಟ ಪೊಲೀಸ್ ಜನರಿಗೆ ಪ್ರೋತ್ಸಾಹಕೊಡತಕ್ಕದ್ದು ಅವಶ್ಯಕವೆಂದು ಕಾಣುತ್ತೆ. ಕಳೆದ 10 ನೇ ತಾ ಡೆಪ್ಯೂಟಿ ಕಮಿಷನರ್ ಮಿ|| ಚಾಂಡಿಯವರು ವರ್ಗಾಯಿಸಲ್ಪಟ್ಟದ್ದರಿಂದ ಜನಗಳೆಲ್ಲಾ ಸೇರಿ ಟೌನ್ ಹಾಲಿನಲ್ಲಿ ಒಂದು ಸಮಾರಂಭವನ್ನು ನಡಿಸಿದರು. ಸಾಯಂಕಾಲ 5 ಘಂಟೆಗೆ ಮಿ|| ಕೆ. ಚಾಂಡಿಯವರು ಟೌನ್ ಹಾಲಿಗೆ ದಯಮಾಡಿದರು. ಟೌನ್ ಹಾಲ್ ಹಸಿರು ತೋರಣಗಳಿಂದ ಅಲಂಕೃತವಾಗಿತ್ತು. ಪಾವಗಡ ಪೆನ್ಷನ್ ಅಮಲ್ದಾರ್ ಮಿ|| ಭೀಮಸೇನರಾಯರು ಅಗ್ರಾಸನವನ್ನು ವಹಿಸಿದ್ದರು. ಸಂಸ್ಕೃತ ವಿದ್ವಾನ್ ವೆಂಕಟೇಶಶಾಸ್ತ್ರಿಗಳು ವೀಣಾಚಾತುರ್ಯವನ್ನು ತೋರಿಸಿದರು. ಅಡ್ವೊಕೇಟ್ ಮಿ|| ವೆಂಕಟರಾಮಣ್ಣನವರು ಮಿ|| ಚಾಂಡಿಯವರ ಅಧಿಕಾರಕಾಲದಲ್ಲಿ ಜನಗಳಿಗೆ ಆದ ಸೌಕರ್ಯವನ್ನು ಇಂಗ್ಲೀಷಿನಲ್ಲೂ, ಹೈಸ್ಕೂಲ್ ಸಂ. ಪಂ. ವೇ|| ಭೀಮಸೇನಾಚಾರ್ಯರು ಕನ್ನಡದಲ್ಲೂ ಉಪನ್ಯಾಸ ಮಾಡಿದರು. ವೇ|| ಕಾಶೀನಾಥಶಾಸ್ತ್ರಿಗಳು ಮಿ|| ಚಾಂಡಿಯವರಿಗೆ ಜನಗಳಲ್ಲಿ ಇರತಕ್ಕ ಪ್ರೀತಿಯನ್ನೂ, ಚಿತ್ರದುರ್ಗ ನಗರವು ಇವರ ಕಾಲದಲ್ಲಿ ಸರ್ವವನ್ನು ಪ್ರದರ್ಶನೋತ್ಸವ ಸುಖವನ್ನು ಅನುಭವಿಸಿದ್ದನ್ನೂ, ಈ ವಿಷಯದಲ್ಲಿ ಸರ್ಕಾರದವರು ಬಹು ಸಂತೋಷಪಟ್ಟು ಇವರ ಕಾರ್ಯನಿರ್ವಾಹಶಕ್ತಿಯನ್ನು ಶ್ಲಾಘಿಸಿರುವದನ್ನೂ, ಅಲ್ಲದೆ ಅವರು ದೂರದೃಷ್ಟಿಯುಳ್ಳವರಾಗಿಯೂ ಸತ್ಸಂಪ್ರದಾಯಕರಾದ ಶ್ರೇಷ್ಠ ಮುಂತಾದ ಕಾರ್ಯಗಳಲ್ಲಿ ಉದ್ಯುಕ್ತರಾಗಿರುವದರಿಂದ ಪ್ರಜೆಗಳು ಇವರ ಶ್ರೇಯಃಪ್ರಾರ್ಥನೆ ಮಾಡುತ್ತಿರುವರೆಂಬ ಅಭಿಪ್ರಾಯವುಳ್ಳ ಸಂಸ್ಕೃತದಲ್ಲಿ ಸರಸವಾದ ಕವಿತಾ ಶ್ಲೋಕಗಳನ್ನು ಮಾಡಿ ಸಭೆಯಲ್ಲಿ ತಿಳಿಸಿದರು. ಅನಂತರ ಡೆಪ್ಯೂಟಿ ಕಮಿಷನರ್ ಮಿ|| ಕೆ. ಚಾಂಡಿಯವರು ಸಭಿಕರನ್ನು ಕುರಿತು—ಈ ದಿನ ನನಗೋಸ್ಕರ ಪ್ರಜೆಗಳು ಮಾಡಿರತಕ್ಕ ಸನ್ಮಾನವನ್ನು ನೋಡಿ ಸಂತೋಷಪಟ್ಟದ್ದಲ್ಲದೆ ಬಹಳ ಕೃತಜ್ಞನಾಗಿದ್ದೇನೆ. ನಾನು ಮೈಸೂರಿಗೆ ಪ್ರಯಾಣಮಾಡಿದಾಗೂ, ರೈಲ್ ಬಂದನಂತರ ರೈಲಿನಲ್ಲಿ ಈ ಊರಿಗೆ ಬಂದು ಶೋಧಿಸಿದ ನೀರನ್ನು ಕುಡಿಯಬೇಕೆಂದು ಬಹಳವಾಗಿ ಅಪೇಕ್ಷಿಸುತ್ತೇನೆ ಎಂದು ಕೃತಜ್ಞತೆ ಸೂಚಿಸಿದರು. ಬಳಿಕ ಸಭೆಯು ಸಂತೋಷದೊಡನೆ ಮುಕ್ತಾಯವಾಯಿತು.

ಚನ್ನರಾಯಪಟ್ಟಣ.—ಈ ಊರಿನಲ್ಲಿ ಒಂದು ವಾರದ ಲಾಗಾಯಿತು ಸೋನೆಮಳೆಯೂ, ಒಂದೆರಡು ಹದ ದೊಡ್ಡ ಮಳೆಯೂ ಆಗಿ ಕೈಗೆ ಬಂದ ರಾಗಿ ವಗೈರೆ ಪಸಲು ನಷ್ಟವಾಗುತ್ತಿರುವುದನ್ನು ಕಂಡು ರೈತರೆಲ್ಲರೂ ತುಂಬಾ ವ್ಯಾಕುಲಪಡುತ್ತಾ ಇದ್ದಾರೆ. ಕೆರೆ ಕೋಡಿಯಲ್ಲಿ ಒಂದು ತಿಂಗಳಿಂದಲೂ ನೀರು ಹರಿಯುತ್ತಲೇ ಇದೆ. ಸಂತೆಯಲ್ಲಿ ಧಾರಣೆವಾಸಿ ಇಳಿದಿಲ್ಲ. ಅಕ್ಕಿ 6 ಸೇರು, ರಾಗಿ 16 ಸೇರು ಇರುತ್ತೆ. ಬಡಜನರಿಗೆ ತುಂಬಾ ಕಷ್ಟವಾಗಿದೆ.—ಕಳೆದ 18 ನೇ ತಾ. ಸೋಮವಾರ ಹುಜೂರು ಸೆಕ್ರೆಟರಿ ಮಿ|| ಪಿ. ರಾಘವೇಂದ್ರರಾಯರು ನಮ್ಮ ಶ್ರೀಮನ್ ಮಹಾರಾಜರವರ ಸಂಕೀರ್ತನ ಏರ್ಪಾಡು ಉದ್ದೇಶ್ಯ ಈ ಊರಿಗೆ ಬಂದು ಹಾಸನದ ವಿಶ್ರಾಂತ್ಯ ತೆರಳಿದರು. ಅದೇ ದಿವಸ ಸಾಯಂಕಾಲ ಮಿ|| ಸಾಂಬಶಿವ ಅಯ್ಯರವರು ಬಂದು ದೊಡ್ಡ ಮನುಷ್ಯರನ್ನೆಲ್ಲಾ ಟ್ರಾವಲರ್ಸ್ ಬಂಗ್ಲೆಗೆ ಕರಸಿಕೊಂಡು ಕಬ್ಬಿನ ವ್ಯವಸಾಯ ಮತ್ತು ಕೈಗಾರಿಕೆ ವಿಷಯವಾಗಿ ಉಪನ್ಯಾಸ ಮಾಡಿ, ಜನಗಳಿಗೆ ತುಂಬಾ ಸಂತೋಷಪಡಿಸಿ ಮಾರನೇ ದಿನ ಇಲ್ಲಿನ ಎರಡು ಕಣೇ ಕಂಪನಿಗಳಿಗೂ ಹೋಗಿ ನೋಡಿ ಬಂದು ಊರೊಳಗೆಲ್ಲಾ ಸಂಚಾರ ಮಾಡಿ ಮುಂದಕ್ಕೆ ಪ್ರಯಾಣ ಬೆಳಸಿದರು.—ಶ್ರೀರಂಗಪಟ್ಟಣದಿಂದ ಈ ಊರಿನ ಮೇಲೆ ಕೊಣನೂರು ಹಳ್ಳಿಗೆ ಸೇರುವಂತೆ ರೈಲು ಮಾರ್ಗವನ್ನು ಕಲ್ಪಿಸುವ ಅಭಿಪ್ರಾಯದ ಮೇಲೆ ಎರಡು ತಿಂಗಳಲ್ಲಿ ಸರ್ಕಾರದವರು ಸರ್ವೆ ಮಾಡಿಸಿದರು. ಅದರ ಫಲಿತಾಂಶ ಇದುವರೆಗೂ ತಿಳಿಯಲಿಲ್ಲ. ಚನ್ನರಾಯಪಟ್ಟಣವು ಬೆಂಗಳೂರು, ಮಂಗಳೂರು, ಮೈಸೂರು, ಶಿವಮೊಗ್ಗೆ, ತಿಪಟೂರು, ಹೊಳೆನರಸೀಪುರ ವಗೈರೆ ಸ್ಥಳಗಳಿಗೆ ಹೋಗಿ ಬರುವುದಕ್ಕೆ ಮಧ್ಯಪ್ರದೇಶವಾಗಿಯೂ, ಸೋಮವಾರ ತೆಂಡೆಕೆರೆ, ಮಂಗಳವಾರ ಶ್ರವಣಬೆಳ್ಗೊಳ, ಬುಧವಾರ ಕೃಷ್ಣರಾಜಪೇಟೆ, ಗುರುವಾರ ಹಿರೀಸಾವೆ, ಶುಕ್ರವಾರ ಕಿಕ್ಕೇರಿ, ಬಾಗೂರು, ಶನಿವಾರ ಈ ಚನ್ನರಾಯಪಟ್ಟಣ ಈ ಮೇಲೆ ಸಂತೆಗಳು ಆಗುವುದರಲ್ಲಿ ಚನ್ನರಾಯಪಟ್ಟಣ ಮತ್ತು ತೆಂಡೆಕೆರೆ ಸಂತೆಗಳಲ್ಲಿ ವಾರಕ್ಕೆ 300-400 ಖಂಡಿ ಅಕ್ಕಿ ರಾಗಿ ಬಿಕರಿ ಆಗುವುದಲ್ಲದೆ ಇತರ ಸಂತೆಗಳಲ್ಲಿ ನೂರಾರು ಖಂಡಿ ಅಕ್ಕಿ ರಾಗಿ ವ್ಯಾಪಾರವೂ ನಡೆಯುತ್ತೆ. ಅಲ್ಲದೆ ಕಿಕ್ಕೇರಿ, ಶ್ರವಣಬೆಳ್ಗೊಳ, ಅದರ ಆಜೂಬಾಜೂ 30 40 ಗ್ರಾಮಗಳಲ್ಲಿ ಹಿತ್ತಾಳೆ ತಾಂಬ್ರ ಸಾಮಾನುಗಳೂ, ಜವಳಿಯೂ ವಿಶೇಷ ತಯಾರಾಗಿ ಆಮದುರಫ್ತು ಆಗುತ್ತಾ ಇವೆ. ಅಲ್ಲದೆ ಬೊಂಬಾಯಿ ವಗೈರೆ ಪ್ರಾಂತ್ಯದಿಂದ ಹಿತ್ತಾಳೆ, ತಾಂಬ್ರ, ಸೀಸ ಮುಂತಾದವುಗಳು ಈ ಸ್ಥಳಕ್ಕೂ, ಇಲ್ಲಿ ತಯಾರಾದ ಸಾಮಾನುಗಳು ಬಹಳವಾಗಿ ಮೈಸೂರು, ಬೆಂಗಳೂರು, ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಮಳವಳ್ಳಿ, ಹೆಗ್ಗಡದೇವನಕೋಟೆ ಮುಂತಾದ ಸ್ಥಳಗಳಿಗೂ ರಫ್ತಾಗುವವು. ಮತ್ತು ಈಗ ಚಿನಕುರುಳಿ ಲಾಗಾಯಿತು ಪ್ರತಿ ವರುಷವೂ 300-400 ಗಾಡಿವರೆಗೂ ಬೆಲ್ಲ, ತೆಂಗಿನಕಾಯಿ ತಿಪಟೂರು ಸಂತೆಗೆ ರಫ್ತಾಗುತ್ತವೆ. ಸಿಂದುಘಟ್ಟ, ಈ ಚನ್ನರಾಯಪಟ್ಟಣದಿಂದ ದೇಶ್ಯ ಸಂಬಂಧವಾಗಿ ಇತರ ಸ್ಥಳಗಳಿಗೆ ಹೋಗುತ್ತಾ ಇವೆ. ಈ ಊರು, ಹೊಳೆನರಸೀಪುರ, ಅರಕಲಗೂಡು, ಮಂಜರಾಬಾದು, ಬೇಲೂರು, ಹಾಸನ, ಈ ಸ್ಥಳಗಳಿಗೆ ಆಸಾಮಿ, ಕುಂದಕೋಣ, ಮದುರೆ, ಕಂಚಿ, ಉರುಪುಕೋಂಡೆ, ಮದರಾಸು, ಬೆಂಗಳೂರು ಮುಂತಾದ ಸ್ಥಳಗಳಿಂದ ರೇಷ್ಮೆ, ನಾಗು, ಮತ್ತು ಚೀನಾ ಜವಳಿಗಳೂ, ಸೋಲಾಪುರ, ಕಲ್ಲೀಕೋಟೆ ಮುಂತಾದ ಕಡೆಗಳಿಂದ ಚಕ್ಕೆಗಳೂ ನಿರಂತರವಾಗಿ ಬರುತ್ತಾ ಇವೆ. ಹೀಗೆಲ್ಲಾ ಇರುವುದರಿಂದಲೂ, ಹೆಚ್ಚು ಲಾಗೋಡು ಆಗದೇ ಸುಲಭವಾಗಿ ರೈಲುಮಾರ್ಗವು ಆಗುವುದರಿಂದಲೂ ಸರ್ಕಾರಕ್ಕೆ ವಿಶೇಷ ಲಾಭವುಂಟಾಗಿ ಪ್ರಜೆಗಳಿಗೂ ತುಂಬಾ ಅನುಕೂಲವಾಗುವಂಥ ಶ್ರೀರಂಗಪಟ್ಟಣ ಕೊಣನೂರು ಮಾರ್ಗವಾಗಿ ರೈಲನ್ನು ಎಂದಿಗೆ ಹಾಕಿಸಿ ಕೊಡುತ್ತಾರೋ ಎಂದು ಸಕಲ ಪ್ರಜೆಗಳೂ ನಿರೀಕ್ಷಿಸಿಕೊಂಡಿದ್ದಾರೆ.

ಚಾಮರಾಜನಗರ.—ಹೋದ ವಾರ ದೊಂಬಿಕಲಹದ 44 ಜನಗಳನ್ನು ಹಿಡಿದು ಬಂಧಿಸಿದ್ದರಷ್ಟೆ. ಈ ವಾರ 33 ರಿ 63 ಜನ ದಸ್ತಗಿರಿ ಮಾಡಲ್ಪಟ್ಟರು. ಎಲ್ಲಾ ಒಟ್ಟು 117 ಮಂದಿ ಆದರು. ಮೊನ್ನೆ ದಿನ ಹೊಸ ದಿವಾನ್ ಸಾಹೇಬರವರೂ, ಡೆಪ್ಯೂಟಿ ಕಮಿಷನರ್ ಮಿ|| ಚಾಂಡಿಯವರೂ ದಯಮಾಡಿಸಿ ಎಲ್ಲಾ ಸ್ಥಳಗಳನ್ನೂ ನೋಡಿಕೊಂಡು ವಾಪಸು ಮೈಸೂರಿಗೆ ತೆರಳಿದರು. ಈ ದಂಗೆಯು ಮುಗಿಯದಿದ್ದು ಇನ್ನೂ ಹೊರಕಲಿಲ್ಲ. ಪತ್ತೆಮಾಡುತ್ತಲೇ ಇದ್ದಾರೆ. ಊರೊಳಗಿನವನ್ನು ನೋಡಿದರೆ ಪ್ಲೇಗ್ ಕಾಲದಲ್ಲಿ ಜನರು ಊರು ಬಿಟ್ಟರೆ ಹ್ಯಾಗಿರುತ್ತೋ ಹಾಗೆ ಸ್ಥಿರವಾಗಿದೆ. ಆದರೆ ಸದ್ಯಕ್ಕೆ ಸರ್ಕಾರದವರ ಮತ್ತು ಅಲ್ಲಿರುವ ಹೆಂಗಸರು ಮಕ್ಕಳ ಪಾಯಿಂದ ಸ್ವಲ್ಪ ಗಲಾಟೆಯಾಗಿದೆ ಅಷ್ಟೆ. ಬೆಳೆಯಾಗಿರುವ ರಾಗಿ ಪೈರುಗಳೂ, ಹಲಸಂದ ಮೊದಲಾದ ಪೈರುಗಳೂ ಒಣಗುತ್ತಾ ಕೊಯ್ಯುವವರಿಲ್ಲದೆ ಹಾಳಾಗುತ್ತಿವೆ. ದನಕರುಗಳನ್ನು ಕಾಡಿಗೆ ಮೇಯಿಸುತ್ತಿದ್ದವರು ಸಹ ಬರುವದಿಲ್ಲ. ಇನ್ನೂ ಪೊಲೀಸ್ ಸೂಪರಿಂಟೆಂಡರವರೂ, ಅಮಲ್ದಾರರುಗಳೂ, ಇನ್ಸ್‌ಪೆಕ್ಟರುಗಳೂ, ಪೊಲೀಸಿನವರೂ ಅಲ್ಲಿದ್ದುಕೊಂಡು ಪತ್ತೆಹಚ್ಚುವದು ನಡಿಸುತ್ತಾ ಸಿಕ್ಕಿದವರನ್ನು ದಸ್ತಗಿರಿಮಾಡುತ್ತಾ ಇದ್ದಾರೆ. ನಾಡುಹೊಳ್ಳು ದವಸಧಾನ್ಯ ಯಾವ ಪದಾರ್ಥಗಳನ್ನೂ ಅಲ್ಲಿಗೆ ತರಲು ಜನರು ಭಯಪಟ್ಟು ಬರುವದಿಲ್ಲವಾದಕಾರಣ ಅಲ್ಲಿರುವವರಿಗೆ ಜೀವನ ನಡೆಯುವುದು ತುಂಬಾ ಪ್ರಯಾಸವಾಗಿದೆ. ಅಲ್ಲಿಗೆ ಹೋದವರನ್ನೆಲ್ಲಾ ಪೊಲೀಸಿನವರು ಹಿಡಿಯುತ್ತಾರೆಂಬುವ ಭಯ ಬಂದಿಕೊಂಡಿದೆ. ಅಲ್ಲಿರುವ ಆಫೀಸರಿಗೂ ಪೊಲೀಸಿನವರಿಗೂ ದೂರದಿಂದ ಆಹಾರಸಾಮಗ್ರಿಗಳನ್ನು ತರಿಸಬೇಕಾಗಿದೆ. ಜೋಡಿಗೌಡನಪುರದಲ್ಲಿ ಒಂದು ಕೊಲೆ ನಡೆಯಿತೆಂದು ಬಿದ್ದಿದ್ದಷ್ಟೆ. ಒಂದು ಹೊಲದ ಮಾತಿಗೆ ಇಬ್ಬರು ಜಗಳವಾಡುತ್ತಿರುವಾಗ ಒಬ್ಬಗೆ ಆಪಾಯಸ್ಥಳಕ್ಕೆ ಏಟುಬಿದ್ದು ಪ್ರಾಣಹೋಯಿತಂತೆ.—ಯಳಂದೂರಿನಲ್ಲಿ ಒಂದು ಖೂನಿ ನಡೆಯಿತು. ನಗರದ ಡಾಕ್ಟರವರೇ ಅಲ್ಲಿಗೆ ಲಾಷ್ ಅಜಮಾಯಿಷಿಗೆ ಹೋಗಿದ್ದರು. ಇದೇ ತಿಂಗಳು 7 ನೇ ತಾ ಯಳಂದೂರಿಗೆ ಸೇರಿದ ಕೆಂಪನಪುರದ ಕಟ್ಟೆ ಬೋರೆಯಲ್ಲಿ ಸುಮಾರು 15 ವರುಷದ ಲಿಂಗಾಯತ ಹುಡುಗನನ್ನು ಬಲಗೈ ಲಿಂಗ ಉರುಳ್ [illegible] ಕೊಲೆಮಾಡಿದ ರೀತಿ ತಿಳಿಯಬರುತ್ತೆ. ಈ ಹುಡುಗನನ್ನು [illegible] ಹೊಲಕ್ಕೆ ಹೋಗಿ ಬರುತ್ತಿದ್ದ ಕಾಲದಲ್ಲಿ ಪಾಳುಗಳು ಸ್ವಲ್ಪ ಮಟ್ಟಿಗೆ ಕೆಟ್ಟು ಹೋಗಿದ್ದ ಕಾರಣ ಅವನ್ನು ಇದ್ದ ಸ್ಥಳದಲ್ಲೇ ಆಟವಾಡುತ್ತಾ ನಿಂತಿತು. ಆದರೂ ಫಸಲು ಎಂದು ಅವನ ಹೆಂಡತಿ

ಮಗ ಮುಂತಾದವರಿಂದಲೂ, ಅಲ್ಲೇ ಇದ್ದ ಅವನ ಬಟ್ಟೆಗಳ ಗುರುತಿನಿಂದಲೂ ಚನ್ನಾಗಿ ಗೊತ್ತಾಯಿತು ಇದಕ್ಕೆ ಈಗ ಹೊರಪಟ್ಟಿರುವ ಕಾರಣವೇನೆಂದರೆ ಒಬ್ಬರ ತೋಟವನ್ನು ಬಲಗೈ ಲಿಂಗನೆಂಬವನು ವಾರಕ್ಕೆ ಮಾಡುತ್ತಿದ್ದನು ಕೆಲವು ತಿಂಗಳ ತರುವಾಯ ಯಾವ ಕಾರಣದ ದೆಸೆಯಿಂದಲೋ ಯಜಮಾನನು ಅವನನ್ನು ತೆಗೆದು ಹಾಕಿ ಮೃತನಿಗೆ ತನ್ನ ತೋಟವನ್ನು ಮಾಡುವ ಹಾಗೆ ಒಪ್ಪಿಸಿದನು ಹೀಗೆಯೇ ಇವನು ಮಾಡುತ್ತಿರುವಾಗ ಮೊದಲು ಮಾಡುತ್ತಿದ್ದವನಿಗೆ ಹೊಟ್ಟೆಕಿಚ್ಚು ಪ್ರಾರಂಭವಾಗಿ ಇವನನ್ನು ಹ್ಯಾಗಾದರೂ ಮಾಡಿ ತೀರಿಸಿ ಬಿಟ್ಟರೆ ಆ ಜಮೀನು ತಾನು ಮಾಡುವ ಹಾಗೆ ಸಿಕ್ಕುತ್ತೆಂಬ ಭಾವನೆಯಿಂದಲೋ ಏನೋ ಯೋಚಿಸಿ ಈ ಮನೋಗತವನ್ನು ಹೇಳದೆ ತನ್ನ ಸ್ನೇಹಿತನ ಕೂಡ—ನೀನು ಅವನನ್ನು ನನ್ನ ಬಳಿಗೆ ಕರೆ, ನಾನು ಬೇರೆ ಸ್ವಲ್ಪ ಮಾತನಾಡಬೇಕಾಗಿದೆ ಎಂದು ಹೇಳಿದನು ಅವನು ತನ್ನ ಕುರಿಗಳನ್ನು ಗುಡ್ಡದ ಮೇಲೆ ಸ್ವಲ್ಪ ಎತ್ತರದಲ್ಲಿ ಬಿಟ್ಟುಕೊಂಡು ಅಲ್ಲಿಂದ ಕೆಳಗೆ ತೋಟದಲ್ಲಿದ್ದವನನ್ನು ಕರೆದಾಗ ಅವನು ತನ್ನ ಚಿಕ್ಕ ಮಗನನ್ನು ತೋಟದಲ್ಲಿ ಬಿಟ್ಟು, ಅವನ ಬಳಿಗೆ ಹೋಗಿ ಅವನ ಕೂಡ ಮಾತನಾಡುತ್ತಿರುವಾಗ ಅಡಗಿಕೊಂಡಿದ್ದ ಲಿಂಗನೆಂಬವನು ಓಡಿಬಂದು ಇವನನ್ನು ಅದುವು ಕೈಯಲ್ಲಿದ್ದ ಆಯುಧದಿಂದ ಹೊಡೆಯಲು ಪ್ರಾರಂಭಿಸಿದ ಕಾರಣ ಕರೆದವನು ಭಯಪಟ್ಟು ಓಡಿ ಹೋದನಂತೆ —ಚಾಮರಾಜನಗರಕ್ಕೆ 1 ಮೈಲಿ ದೂರದಲ್ಲಿರುವ ರಾಮಸಮುದ್ರದಲ್ಲಿ ಪ್ಲೇಗ್ ಬೇನೆಯಿಂದ ೭ ಕ್ಕೆ ಮೇಲೆ ಜನರು ತೀರಿ ಹೋದಕಾರಣ ಎಲ್ಲರೂ ಊರು ಬಿಟ್ಟು ಬಿಡ್ಡುಗಳಲ್ಲಿದಾರೆ ಸ್ಕೂಲುಗಳು ಮುಚ್ಚಲ್ಪಟ್ಟಿವೆ ಮಿಷನ್ ಗರಲ್ ಸ್ಕೂಲ್ ಮಾತ್ರ ಒಂದು ಪೇಟೆಯಲ್ಲಿ ಸುಮಾರಾಗಿ ನಡೆಯುತ್ತಾ ಇದೆ —ದವಸಧಾನ್ಯಗಳು ತುಂಬಾ ಪ್ರಿಯವಾಗಿ ಅಕ್ಕಿ, ೨ ಸೇರು ರಾಗಿ 11 13 ಸೇರು ಮಾರುತ್ತೆ

ಕನ್ನಡ ಕಿಂಡರ್‌ಗಾರ್ಟನ್ ಬಾಲಬೋಧೆ

ಒತ್ತು ಕಾಗುಣಿತ ಮತ್ತು ಸಾದಾ ಅಕ್ಷರಗಳನ್ನು ಕಲಿಸುವುದಕ್ಕೆ ೬೧ ಚಿತ್ರಗಳು, ಮಾದರಿ ಶಬ್ದಗಳು, ಅಕ್ಷರಗಳ ವ್ಯಾಯಾಂಗು, ಅಕ್ಷರಾಭ್ಯಾಸಗಳು ೪ ಮತ್ತು ಪಾಠಗಳು ಇರುತ್ತವೆ ೩೦ ದಿವಸಗಳಲ್ಲಿ ಇದರಿಂದ ಅಕ್ಷರಜ್ಞಾನವನ್ನುಂಟುಮಾಡಬಹುದು ಇದು ಡಿಸೆಂಬರ್ 10 ಕ್ಕೆ ಬೆಳಕಿಗೆ ಸಿದ್ಧವಾಗುವದು ಕ್ರಯ ೩ ಆಣೆ ವಿಳಾಸ—ಎಚ್ ಸಿದ್ಧಲಿಂಗಪ್ಪ, ಅರಕಲಗೂಡು [180-1]

ಆರು ಹೊಸ ಕಾದಂಬರಿಗಳು!!

139-52

ಶೋಭನೆ—ಕನ್ನಡಿಸಿದ ಬಂಗಾಳಿಯ ಚಮತ್ಕಾರವಾದ ಕಥೆ 12 ಆಣೆ **ಅನಂಗಸುಂದರಿ**—ಮೂಲದ ಕಥೆಯಂತೆಯೇ ಸ್ವಾರಸ್ಯವು ನೀತಿಪ್ರದವೂ ಆದ ನಾವೆಲು 8 ಆಣೆ **ತಾರಾಸುಂದರಿ**—ಅನಂಗಸುಂದರಿಯ ಎರಡನೆಯ ಭಾಗ 8 ಆಣೆ **ಕುಮುದಿನಿ**—ಬಂಗಾಳಿಯಿಂದ ಕನ್ನಡಿಸಿದ ಪತ್ತೇದಾರಿಯ ಕಥೆ 6 ಆಣೆ **ಸತೀರೋಹಿಣಿ**—ಪಾತಿವ್ರತ್ಯವನ್ನು ಬೋಧಿಸುವ ಕಾದಂಬರಿ 2 ಆಣೆ **ಸಂತಾಪಕ**—ಇದೊಂದು ಅದ್ಭುತವಾದ ಕಥೆ 1 ಆಣೆ

ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಇವು ಒಳ್ಳೆಯವೂ ಅಗ್ಗವೂ ಆಗಿವೆ

178 1

ನಮ್ಮಲ್ಲಿ ತಯಾರಾಗುವ ನಶ್ಯ ಅಂದರೆ ಮನಸ್ಸಿಗೆ ಹರುಷವನ್ನು ಉಂಟುಮಾಡುವದಲ್ಲದೆ ಯಾವ ವಿಧವಾದ ನಾಶಿಕಾ ರೋಗವನ್ನೂ ಹೋಗುವಂತೆ ಮಾಡುವದು

ಶೀತದಿಂದ ನಗಡಿ, ತಲೆನೋವು ಮುಂತಾದವನ್ನು ಶೀಘ್ರದಲ್ಲಿಯೇ ಪರಿಹಾರ ಮಾಡುವುದು ಇದರ ಗುಣ ಒಂದು ಸಾರಿ ಪ್ರಯೋಗ ಮಾಡಿದ ಬಳಿಕ ತಿಳಿಯುವುದು ಇದು ಪರಿಮಳವಾಗಿಯೂ ಇರುತ್ತದೆ ಕ್ರಯ 1ಕ್ಕೆ 1 ಆಣೆ ಅಂಚೆ ಹಾಸಲು 1 ಆಣೆ (೨) ರೋಮಸಂಹಾರಿ ಎಂಬ ದರ್ಬಾರ್ ಸೋಪು ಈ ಸಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ರೋಮವು ಮಾಯವಾಗುವದು ಉರಿ ಮುಂತಾದವುಗಳು ಇಲ್ಲ ಇದರ ಕ್ರಯ 3 ಸಾಬೂನು ಇರುವ ಪೆಟ್ಟಿಗೆ ಒಂದಕ್ಕೆ 0-15 0 ಅಂಚೆ ಹಾಸಲು 4 ಆಣೆ ಒಂದು ಸಾಬೂನು 5 ಆಣೆ ಅಂಚೆ ಹಾಸಲು 3 ಆಣೆ (೩) ಹುಳಕಡಿ ಔಷಧ ಇದನ್ನು ಯಾವ ಭಾಗದಲ್ಲಿ ಹುಳಕಡಿ ಇರುತ್ತೆಯೋ ಆಭಾಗವನ್ನು ಶುಭ್ರವಾಗಿ ಸಾಬೂನಿನಿಂದ ತೊಳೆದು ಉಪಯೋಗಿಸಬೇಕು ಎರಡು ಸಲ ಉಪಯೋಗಿಸುವುದರಲ್ಲಿಯೇ ಮಾಯವಾಗುವದು ಕ್ರಯ 1 ಆಣೆ, ಅಂಚೆ ಹಾಸಲು 1 ಆಣೆ (೪) ಟೈಂಪೀಸುಗಳು, ರಾಸ್‌ಕೋಪ್ ಕೈ ಗಡಿಯಾರಗಳು ನಮ್ಮಲ್ಲಿ ದೊರೆಯುತ್ತವೆ ಯಾವ ಕ್ರಯದಲ್ಲಿ ಬೇಕಾಗುತ್ತೆಯೋ ತಿಳಿಸಿದರೆ ಕಳುಹಿಸಿಕೊಡುತ್ತೇವೆ ನಮ್ಮಲ್ಲಿ ಇರುವಂಥಾ ರಾಸ್‌ಕೋಪ್ ಕೈ ಗಡಿಯಾರದ ಕ್ರಯ ೨ 1 0 ಮೊದಲ್ಗೊಂಡು 10 ರೂಪಾಯಿನ ವರಿವಿಗೂ, ಟೈಂಪೀಸುಗಳು 2 ರೂಪಾಯಿ ಮೊದಲು 7 8 0 ವರಿವಿಗೆ ದೊರೆಯುತ್ತವೆ ಮೇಲೆ ಕಂಡ ನಂಬರು 1 2 ಸಾಂಪಲ್‌ಗಾಗಿ ಅರ್ಧ ಆಣೆ ಕಳುಹಿಸಿಕೊಟ್ಟರೆ ಕಳುಹಿಸುತ್ತೇವೆ ನಮ್ಮ ವಿಳಾಸ

ಏ ಎ ಎಸ್ ಖಾನ್, ನಂ . ತಿರುವೆಂಕಟ ಬೀದಿ, ಮದರಾಸು

ಮೇಲಾದ ಹೊಸ ಪುಸ್ತಕಗಳು.

ಉತ್ತಮ—ಬಹು ಸ್ವಾರಸ್ಯವಾದ ಕಥೆ ಈಗತಾನೆ ಅಚ್ಚಾಗಿದೆ 4 ಆಣೆ **ಜಪಾನ್ ಸಾಮ್ರಾಜ್ಯ**—ಅದ್ಭುತವಾದ ಸೂರ್ಯೋದಯ ರಾಜ್ಯದ ವಿಷಯ, ಸುಂದರವಾದ ಒಂದು ಪಟವೂ ಇದೆ, ತಿಳುವಳಿಕೆ ಹೆಚ್ಚುತ್ತದೆ 6 ಆಣೆ **ಉನ್ಮತ್ತೆ** ಮನೋಹರವಾದ ಬಂಗಾಳಿ ನಾವಲ್ 3½ ಆಣೆ **ಕಿಂಡರ್‌ಗಾರ್ಟನ್ ಕಥೆಗಳು**, ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು 10 ಆಣೆ **ಬೋಧನಕ್ರಮಸಂಗ್ರಹ**—ಪ್ರತಿ ಸ್ಕೂಲ್‌ಮಾಸ್ಟರಿಗೂ ಬೇಕಾದದ್ದು 1½ ಆಣೆ **ಲೋ. ಸೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ** 1 ಆಣೆ [105-3]

ವಿಳಾಸ—ಜಿ ಕೃಷ್ಣಶಾಸ್ತ್ರಿ, ಅ॥ ಮಾ ನಾರ್ಮಲ್ ಸ್ಕೂಲ್, ಮೈಸೂರು

ಹರಾಜು ಇಸ್ತಿಹಾರ್

ಉದಾಸೀನ ಮಾಡಬೇಡಿ! ಮಧ್ಯರಾತ್ರದ ಮನೆ!

ಬೆಂಗಳೂರು ಸಿಟಿ ತಿಗಳರ ಪೇಟೆ ರಾಮಯ್ಯನವರ ಬೀದಿ ಪಕ್ಕ ಜಾಲಿ ಮಸೀದಿ ರಸ್ತೆಯಲ್ಲಿರುವ 117 ನೇ ನಂಬರ್ ಮನೆಯನ್ನು ಮೂಲಕರ್ತರಾದ ತಮ್ಮಯ್ಯನವರ ಮಕ್ಕಳು ಮ॥ ಬಿ ವೆಂಕಣ್ಣ, ಬಿ ಎ ಯವರ ಇಷ್ಟಾವೆಯಂತೆ ಬೆಂಗಳೂರು ಸಿಟಿ ಜನರಲ್ ಆಕ್ಷನಿಯರ್ ಮೆಸರ್ಸ್ ಯಂ ಕಾರ್ನಿಕ್ ಅಂಡ್ ಕೋಯವರು ಈ 1912 ನೇ ಇಸವಿ ಡಿಸೆಂಬರ್ 1 ನೇ ತಾರೀಖು ಬೆಳಗ್ಗೆ 8 ಘಂಟೆಗೆ ಸರಿಯಾಗಿ ಸ್ವತ್ತಿನ ಬಳಿ ಹರಾಜು ಹಾಕುತ್ತಾರೆ ಬೇಕಾದವರು ಛಡಸವಾಲ್ ಮಾಡಿ ಪಡೆಯಬಹುದು ಹರಾಜು ಆ ದಿನ ಮಧ್ಯಾಹ್ನದೊಳಗಾಗಿ ಖೈದು ಮಾಡಲ್ಪಡುತ್ತೆ ಹರಾಜು ಷರತ್ತು, ಇತರ ತಪಸೀಲ್ ವಗೈರೆ ಹ್ಯಾಂಡ್ ಬಿಲ್ ನೋಡಿ [182-1]

ಬೆಂಗಳೂರು ಸಿಟಿ, ಎಂ ಕಾರ್ನಿಕ್ ಕಂಪೆನಿ,

ತಾ 23 11-1912 ಆಕ್ಷನಿಯರ್

ಗೃಹಕೃತ್ಯದ ನೋಟೀಸು

ದೊಡ್ಡಬಳ್ಳಾಪುರದ ಕಸಬಾ ಚಿಕ್ಕಪೇಟೆಯಲ್ಲಿರುವ ಕೊನ್ನಾಯಕರ ರಾಮಣ್ಣನವರ ಮಗಳು ಚಿಕ್ಕತಿಮ್ಮಕ್ಕನೆಂಬ ನಾನು ಸರ್ವರಿಗೂ ತಿಳಿಯಪಡಿಸುವದೇನೆಂದರೆ—ನನ್ನನ್ನು ಕೊಟ್ಟು ಲಗ್ನ ಮಾಡಿದ ಸ್ಥಳದಲ್ಲಿ ಎಲ್ಲಾ ಬಾಗದಲ್ಲಿಯೂ ಹಿಂಸೆಪಡಿಸಿಯಾದ್ದರಿಂದ ಅದನ್ನು ನೋಡಿ ನನ್ನನ್ನು ನಮ್ಮ ತಂದೆಯವರು ಅಜ್ಜಾ ಇವರು ತಮ್ಮ ಪೋಷಣೆಯಲ್ಲಿಯೇ ಬಾಗಾಯ್ತು ಇಟ್ಟುಕೊಂಡಿದ್ದರು ಈಗ ಇವರೆಲ್ಲಾ ಸ್ವರ್ಗಸ್ಥರಾಗಿ ಆರು ತಿಂಗಳಾಯ್ತು ನನ್ನ ತಂದೆಗೂ ನನ್ನ ದೊಡ್ಡಪ್ಪ ವಗೈರೆಯವರಿಗೂ ಪಿತರಾರ್ಜಿತ ಸ್ಥಿರಚರಾಸ್ತಿಗಳಾಗಿ ಸುಮಾರು 30 ವರುಷವಾಗಿದೆ ಈಗ ನನಗೆ ಅನ್ಯಾಯ ಮಾಡಬೇಕೆಂಬ ದುರಾಲೋಚನೆಯಿಂದ ನನ್ನ ಅಕ್ಕ ಅಕ್ಕಯ್ಯಮ್ಮ, ಈಕೆ ಗಂಡ ನರಸಪ್ಪ, ದೊಡ್ಡಪ್ಪ ಕೋನಪ್ಪ ವಗೈರೆಯವರು ಸೇರಿ, ನಮ್ಮ ಅಂಗಡಿ ತೋಟ ಮನೆ ಹೊಲಗಳು ಮುಂತಾದ ಸ್ವತ್ತುಗಳು ವಗೈರೆ ಕಾಗದಪತ್ರಗಳು ಪರಾರಿ ಮಾಡಿರುತ್ತಾರೆ ಆದ್ದರಿಂದ ಯಾರೇ ಆಗಲಿ ನನ್ನ ಕಬೂಲಿ ನನ್ನ ರುಜುವು ಇಲ್ಲದೆ ದಾಖಲೆ ಇಲ್ಲದೆ ಮೇಲ್ಕಂಡ ಅಂಗಡಿ ತೋಟ ಮನೆ ಹೊಲಗಳು ಆಧಾರ ಭೋಗ್ಯ ಕ್ರಯ ಮುಂತಾದವು ಮಾಡಿಕೊಂಡರೆ ಅವು ಊರ್ಜಿತವಾಗಲಾರವು ಮತ್ತು ನಷ್ಟಕ್ಕೆ ಗುರಿಯಾಗಬೇಕಾಗುತ್ತೆ ಎಂದು ಈ ಮೂಲಕ ಎಚ್ಚರಿಕೆಕೊಟ್ಟಿರುತ್ತೇನೆ

[181 1] ರುಜು ಕೊ ಚಿಕ್ಕತಿಮ್ಮಕ್ಕ

ಗೃಹಕೃತ್ಯದ ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ನನ್ನ ಪಿತ್ರಾರ್ಜಿತವಾಗಿ ನನ್ನ ಹಿಸ್ಸೆಗೆ ಬಂದು ನಾನು ಪರಸ್ಥಳವಾಸದಲ್ಲಿರುವ ಕಾರಣ ನನ್ನ ಅಣ್ಣಂದಿರು ಪಿತ್ರಾರ್ಜಿತ ಸ್ವತ್ತುಗಳ ಮ್ಯಾನೇಜ್‌ಮೆಂಟಿನಲ್ಲಿದ್ದು ನನ್ನ ತಿಳುವಳಿಕೆಗೆ ಬಾರದೆ ಮೋಸದಿಂದ ನನ್ನ ಅಣ್ಣನವರ ಸೊಸೆ ಶ್ರೀರಂಗಪಟ್ಟಣದ ತಾಲ್ಲೂಕು ಅರಕೆರೆ ಹೋಬಳಿ ಕಸಬು ಅರಕೆರೆ ಗ್ರಾಮದಲ್ಲಿರುವ ಸಾವಿತ್ರಮ್ಮನ ಹೆಸರಿಗೆ ಖಾತೆಯಾಗಿ ಆಕೆ ಅನುಭವದಲ್ಲಿರುವ ಈ ಕೆಳಗೆ ಕಂಡ ತರಿ ಖುಷ್ಕಿ ಜಮೀನುಗಳು ಪರಾಧೀನ ಮಾಡುವ ವಿಚಾರದಲ್ಲಿ ಉದ್ಯುಕ್ತಳಾಗುತ್ತಿರುವವಳಾಗಿರುತ್ತಾಳಾದ್ದರಿಂದ ಹಾಲಿ ಜಮೀನು ನನ್ನ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ದರಖಾಸ್ತು ನಡೆಸುತ್ತೇನಾಗಿ ಮತ್ತು ಈಕೆಗೆ ಸ್ತ್ರೀ ಪುರುಷ ಸಂತತಿಯೇ ಇಲ್ಲದೆ ಉತ್ತರಾಧಿಕಾರಿಗಳಾಗಿ ನಾನು ಮತ್ತು ನನ್ನ ಮಕ್ಕಳು ಇರುವುದರಿಂದ ಈಕೆಯಿಂದ ಯಾರೂ ವ್ಯವಹಾರ ಚಿತುಸಯಿದ ಮೂಲಕ ಜಮೀನು ಹೊಂದಲಾಗದು ಹಾಗೆ ಒಂದು ವೇಳೆ ಹೊಂದಿದ್ದರೂ ಯಾರು ಹೊಂದಿದರೂ ಊರ್ಜಿತವಾಗಲಾರದೆಂಬುವದನ್ನು ಈ ಮೂಲಕ ತಿಳಿಸಿರುತ್ತೇನೆ ಶ್ರೀರಂಗಪಟ್ಟಣದ ತಾ ಅರಕೆರೆ ಗ್ರಾಮದ ಸರ್ವೆ ನಂ 176 ತರಿ 1 ಎ 23 ಗು ರೂ 12 ಆಕಾರ ಬಿಟ್ಟೂ ಗ್ರಾಮದ ಸರ್ವೆ ನಂ 177, ಖುಷ್ಕಿ 11 ಗು 1 ಆಣೆ ಆಕಾರ ರೂ 2 12 ಆಣೆ ನೀರು ಸರದಿ ಹೊಸಹಳ್ಳಿ ಗ್ರಾಮದ ಸರ್ವೆ ನಂ 193 ತರಿ 1 ಎ 30 ಗು ರೂ 7-10 ಆಣೆ ಆಕಾರ [371 2]

ತಾ 10-10 1912 ರುಜು ಬೋಧಾಯನ ಕಾಶೀನಾಥಶಾಸ್ತ್ರಿ

ಬನಾರಸ್, ಹನುಮಾನ್ ಘಾಟ್ ಎಂದು ಬಾಳಬಂದಿನಲ್ಲಿದೆ

WANTED

A permanent Hindu Clerk able to correspond both in English & Kannese Should furnish security in cash Rs 200 on 6 per cent interest Salary Rs 20 Person knowing to correspond in Maharashtra also, will get Rs 5 more Promotion depends on the ability and merit of work Apply with character certificate before 30th November 1912, to— The Proprietor,

[174 2] S S R. VAIDYASALA, MYSORE

ಗೃಹಕೃತ್ಯದ ನೋಟೀಸ್

ಶ್ರೀರಂಗಪಟ್ಟಣದ ತಾಲ್ಲೂಕು ಅರಕೆರೆ ಹೋಬಳಿ ಮುತ್ತಲಮ್ಮನಹಳ್ಳಿ ಗ್ರಾಮದಲ್ಲಿರುವ ದೇವಾಂಗದ ತಿರುಮಲಶೆಟ್ಟಿ ಮಗ ಚಿಲ್ಲರೆ ಅಂಗಡಿ ದಾಸಪ್ಪನು ಸಕಲರಿಗೂ ತಿಳಿಸುವುದೇನೆಂದರೆ —ಯಡತೊರೆ ತಾಲ್ಲೂಕು ಮಿರ್ಲೆ ಹೋಬಳಿ ಮಿರ್ಲೆ ಗ್ರಾಮದ ಸರ್ವೆ ನಂಬರು 11 ನೇ ಖುಷ್ಕಿ 5 ಎಕರೆ 12 ಗುಂಟೆ ಮತ್ತು ಅದೇ ನಂಬರಿಗೆ ಸೇರಿದ ತರಿ 38 ಗುಂಟೆ, ಆಕಾರ 10 ರೂ 10 ಆಣೆ ಉಳ್ಳ ಜಮೀನಿನ ಪಟ್ಟಿ ನನ್ನ ಅಣ್ಣ ಪುಟ್ಟತಿಮ್ಮಶೆಟ್ಟಿ ಹೆಸರಿನಲ್ಲಿದ್ದು ನಾವಿಬ್ಬರೂ ಸಮುಸ್ಥ ವಲ್ಲಿ ಅನುಭವಿಸುತ್ತಿದ್ದೇವೆ ಹಾಲಿ ನನ್ನ ಸದರಿ ಅಣ್ಣನ ಹೆಂಡತಿಯಾದ ಹುಣಸೂರು ತಾ॥ ಪಿರಿಯಾಪಟ್ಟಣದ ಹೋ ಕಂಪಲಾಪುರ ಗ್ರಾಮದಲ್ಲಿರುವ ಚೌಡಮ್ಮನು ಗಂಡನು ಮೃತನಾದ್ದರಿಂದ ಆ ಪಟ್ಟಿಯನ್ನು ತನ್ನ ಹೆಸರಿಗೆ ಮಾಡಿಕೊಳ್ಳಬೇಕೆಂದೂ ಆ ಜಮೀನನ್ನು ಪರಭಾರೆ ಮಾಡಬೇಕೆಂದೂ ಪ್ರಯತ್ನಪಡುತ್ತಿರುವಂತೆ ಕೇಳುತ್ತೇನೆ ಆ ಚೌಡಮ್ಮನಿಗೆ ಜೀವನಾಂಶದ ಹಕ್ಕಲ್ಲದೆ ಆ ಜಮೀನಿನ ಮೇಲೆ ಇನ್ನಾವ ಹಕ್ಕು ಬಾಧ್ಯತೆಯೂ ಇರುವದಿಲ್ಲವಾದ ಕಾರಣ ಯಾರೇ ಆಗಲಿ ನನ್ನ ಅನುಮತಿ ಇಲ್ಲದೆ ಡಿಟ್ಟೋ ಸ್ವತ್ತನ್ನು ಆಕೆಯಿಂದ ಯಾವ ರೀತಿಯಾಗಿಯೂ ಪರಭಾರೆ ಮಾಡಿಕೊಳ್ಳಕೂಡದೆಂದೂ, ಹಾಗೆ ಮಾಡಿಕೊಂಡರೆ ಅದು ಊರ್ಜಿತವಾಗದೆ ನನ್ನ ಎಲ್ಲಾ ನಷ್ಟಕ್ಕೂ ಗುರಿಯಾದಾರೆಂದೂ ಈ ಮೂಲಕ ಎಚ್ಚರಿಸಿರುತ್ತೇನೆ.

[184-1] ಚಿಲ್ಲರೆ ಅಂಗಡಿ ದಾಸಪ್ಪನ ರುಜು

ಒಳ್ಳೆ ಸಮಯ ತಿಂಗಳ ಆಖೈರ್ ವರೆಗೆ ಮಾತ್ರ! ಕೂಡಲೆ ಬರೆಯಿರಿ

(1) ಪಕ್ಕದಲ್ಲಿ ಕಾಣಿಸಿರುವ ಚಿತ್ರದಂತಿರುವ ರೋಲ್ಡ್ ಗೋಲ್ಡ್ ಲಿವರ್ ಗಡಿಯಾರವನ್ನು ತಿಂಗಳ ಆಖೈರಿನೊಳಗಾಗಿ ತರಿಸುವವರಿಗೆ ಸಾಬೀತ ಪೆಟ್ಟಿಗೆ ಸಹ ರೂ 3 ಕ್ಕೆ

ಕಳುಹಿಸುತ್ತೇವೆ ರೈಲ್ವೆ ರಿಜಿಸ್ಟರ್ ಮಾರ್ಕಿನ ಜೇಬು ಗಡಿಯಾರವನ್ನು ಪೆಟ್ಟಿಗೆ, ಉತ್ತರ ಮುಖಿ ಸರಪಣಿ ಮತ್ತು ಟೇಬಲ್ ಟೈಂಪೀಸ್ ಸಹ ಆಗಸ್ಟ್ ವರಿಗೆ ಕ್ರಯ ರೂ 1-8 0, ಅಂಚೆ ಹಾಸಲು 8 ಆಣೆ (2) ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡುವ ನಿಕ್ಕಲ್ ಜೇಬು ಗಡಿಯಾರ ರೂ 8 (3) ಕೈಗೆ ಕಟ್ಟಿಕೊಳ್ಳುವ ಶೀಡಿ ವಾಚಿಂಬ ಅಚ್ಚ ಬೆಳ್ಳಿಯ ಗಡಿಯಾರ ರೂ 7 8 0 ನಿಕ್ಕಲಿನದು ರೂ 4 0 0 (4) ಜೋಕರ್ ಸಂಗೀತ ಹಾಡುವ ಟೇಬಲ್ ಗಡಿಯಾರ ರೂ 5 1 0 ಗಂಟೆ ಹೊಡೆಯುವುದು ರೂ 18 0 ಅಲಾರಾಂ ಟೈಂಪೀಸ್ ರೂ 2 8 0 ನಾಮ ಬಿ ಟೈಂಪೀಸ್ ರೂ 2 ಬನಾರ್ ಟೈಂಪೀಸ್ ರೂ 1-1 0 (5) ಎಂಟು ದಿವಸಗಳಿಗೆ ಕೀ ಕೊಡುವ ಗಂಟೆ ಹೊಡೆಯುವ ವಾಲ್ ಕ್ಲಾಕೆಂಬ ಗೋಡೆಗೆ ತಗಲಿಸುವ ಗಡಿಯಾರ ರೂ 7 0 0 (6) ಮಮರಕರದ ಕರಿಎ ಚುಚ್ಚದಿ ಮುದ್ರಾಸ್ ಸಿ ರೆ ರೂ 2 6 0, ಅಸಲ್ ಮಧುರೆಯದು ರೂ 1 1 0 (7) ಕುಸುಮಕಾಂತ ತೈಲವು ಉತ್ತಮ ವನಸ್ಪತಿಗಳಿಂದಲೂ ಸುಗಂಧ ಕುಸುಮಗಳಿಂದಲೂ ತಯಾರಿಸಿದ ರಿಂದ ಕೂದಲುಗಳ ಬೇರನ್ನು ಭದ್ರಪಡಿಸಿ ದಟ್ಟವಾಗಿಯೂ, ಕುರುಳಾಗಿಯೂ, ಕಪ್ಪಾಗಿಯೂ ಬೆಳೆದು ಮಿದುಳಿಗೆ ತಂಪನ್ನುಂಟುಮಾಡುತ್ತೆ ಕ್ರಯ ಸೀಸೆ 1 ಕ್ಕೆ 8 ಆಣೆ ಡಿಸೆಂಬರ್ ಆಖೈರಿನಲ್ಲಿ 1, 2, 3 ನೆಯ ನಂಬರಿ ಗಡಿಯಾರವನ್ನು ಗ್ರಾಹಕರಲ್ಲಿ ಯಾರಿಗೆ ಬರುತ್ತೋ ಅವರಿಗೆ ಕೊಡಲಪಡುತ್ತೆ [120 1]

ನಮ್ಮ ವಿಳಾಸ —ವೆಂಕಟೇಶ್ವರ ಎಂ ಕಂಪನಿ,

ಪ್ಯ ನೋದಿ, ಹೇಸಲಿ, ಮದರಾಸು

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೂ ಉಂಟಾಗದೆ ನಿನಗೆ ದಿನಕ್ಕೆ ಒಂದು ಆಹಾರವೂ ಶಾಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೋ,

(೧೨ ಆಣೆ ಬುಡ್ಡಿ ಪರಿಮಾಣ)

ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಶಾಲಪ್ರವೃತ್ತಿಯಾಗಿ ನಿನಗೆ ಮೈ [illegible]

[illegible]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿ ಇರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುತ್ತವೆ ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುತ್ತವೆ, ಅಥವಾ ಡೋನ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವವು

MELLIN'S FOOD

ಮೆಲ್ಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದೆ ಮಾಡಿದೆ. ಬರೀ ಸಸ್ಯಾಹಾರ.

ಮೆಲ್ಲಿನ್ಸ್ ಆಹಾರವು ಉತ್ತೇಜನ ಕೊಡುವದು, ಪುಷ್ಟಿಕರವಾದದ್ದು. ಇದು ಮಕ್ಕಳಿಗೆ ಆರೋಗ್ಯವನ್ನೂ ಧಾತುವೃದ್ಧಿಯನ್ನೂ ಕೊಟ್ಟು ಕಾಪಾಡುತ್ತದೆ. ಕೆಳಗಿನ ವಿಳಾಸಕ್ಕೆ ಬರೆದರೆ ಮಾದ್ರಿ ಪ್ರಗಸಟ್ಟ ಕಳುಹಿಸುತ್ತಾರೆ.

[69-11] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev J W THOMPSON, M A, Proprietor and Manager, Wesleyan Mission Press, Mysore 28/11/1912

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೬ — ಮೈಸೂರು—ಸರ್ ೧೯೧೨ ನೇ ಇಸವಿ ಡಿಸೆಂಬರ್ ತಾರೀಖು ೫ ನೇ ಗುರುವಾರ. — ಸಂಚಿಕೆ ೨೨

ಪುಗಸಟ್ಟೆ ಕೊಡಲಾಗುತ್ತೆ.

[illegible] ವರುಷ ಗ್ಯಾರಂಟಿ [illegible] ನಡೆಯುವ ಉತ್ಕೃಷ್ಟವಾದ [illegible] ಲೀವರ್ ವಾಚನ್ನೂ, ಒಂದು ಸೊಗಸಾದ ಸರಪಣಿಯನ್ನೂ, 100 [illegible] ಕಾಗದವನ್ನೂ ಬಿಟ್ಟಿ ಕೊಡುತ್ತೇವೆ. ಅರ್ಧಾಣೆ ಸ್ಟಾಂಪಿಟು ಇಂಗ್ಲಿಷಿ [illegible] ಬರೆಯಿರಿ. [illegible] ಮೆಸ್ಸರ್ಸ್ ಎಂ ಎ ಘಟಾಲಾ ಕಂಪನಿ,
[170-2] ಚಿತ್ತೂರು, ಉತ್ತರ ಆರ್ಕಾಟು

ಕನ್ನಡ ಪುಸ್ತಕಗಳು.

[illegible] ಅನಂಗಸುಂದರಿ [illegible] ತಾರಾಸುಂದರಿ [illegible] ಕುಮುದಿನಿ [illegible] ಭಾನುಮತಿ [illegible] ಕಲ್ಯಾಣ [illegible] ನಾಲತೀಮಧುಕರ [illegible] ವಸುಮತಿ [illegible] ಪ್ರಮತಿ [illegible] ನಕಲಿಗಳು—ಪ್ರಹಸನ ಚತುಷ್ಟಯ [illegible] ಮಹಾರಣ್ಯ ಪುರಾಧಿಪತಿ [illegible] ಮಹಾಬಧಿರಪ್ರಹಸನ [illegible] ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವವು
[17-1] ನಮ್ಮ ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ರಾಮಾಯಣ ಸಂಗ್ರಹ—ಬಾಲಕಾಂಡ.

[185-1]

[illegible] ಕುಮಾರ ವ್ಯಾಸ [illegible] ಬಹು ಸರಳವಾಗಿಯೂ, ಮಧುರ [illegible] ಕನ್ನಡ [illegible] ಅನಮನೆ ಮಹಾ [illegible] ಲಿಂಗರಾಜ್ ಅರಸಿನವರಿಂದ ರಚಿಸ [illegible] ಮಹಾರಾಜರವರ [illegible] ಪ್ರೋತ್ಸಾಹವನ್ನು ಹೊಂದಿರುತ್ತೆ. [illegible] ಮಹಾರಾಜಾ ಕಾಲೇಜ್ ಪಂಡಿತರು [illegible] ಇದರ ಬೆಲೆ 3 ಆಣೆ ಮಾತ್ರ. ಅಂಚೆ ವೆಚ್ಚ ಬೇರೆ. ಈ ಪುಸ್ತಕವು [illegible] ಜನರಲ್ ಏಜನ್ಸಿಯಲ್ಲೂ, ಗ್ರಂಥಕರ್ತರಲ್ಲೂ ದೊರೆಯುತ್ತೆ

ನೋಟೀಸ್.

[186-1]

[illegible] ಮ್ಯುನಿಸಿಪಲ್ ಕೌನ್ಸಿಲ್ ವೈಸ್ ಪ್ರಸಿಡೆಂಟರವರ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇ [illegible] ಪಾರ್ಕಿನ ಪೂರ್ವದ ಬಾಗಿಲು ಬಳಿ [illegible] ವಗೈರೆ ಕಾಮಗಾರಿಯಾಗಬೇಕಾಗಿರುವದ [illegible] ನವರ ತೋಟದ ಸಮೀಪ ಇರುವ [illegible] ಹೌಸ್ ರೋಡು [illegible] ಭಾಗವನ್ನು ಸದರಿ [illegible] ಮುಗಿಯುವ ವರಿವಿಗೂ ಸಂಚಾರಕ್ಕೆ ಬಂದ್ [illegible]ತ್ತದೆ.

ಎಂ. ಜಿ ಕೃಷ್ಣಸ್ವಾಮಿರಾವ್,
[illegible] 29-11 1912 — ವೈಸ್ ಪ್ರಸಿಡೆಂಟ್.

ಹತ್ತಿಯ ತುಪ್ಪ.

[illegible] ಹತ್ತಿಯ ಬೀಜದಿಂದ ತೆಗೆದು ರಾಸಾಯನ ಶಾಸ್ತ್ರದಿಂದ [illegible] ಪೋಷಕವಾದ ಮತ್ತು ಆರೋಗ್ಯ [illegible] ಆಹಾರವನ್ನು [illegible]
ಹತ್ತಿಯ ತುಪ್ಪವು ಮಾರಾಟಕ್ಕೆ ಸಿದ್ಧವಾಗಿದೆ.
[illegible] ಡಬ್ಬಿ 1 ಕ್ಕೆ 12 ರೂಪಾಯಿ [illegible] ಕೊಳ್ಳುವವರಿಗೆ ಉತ್ಕೃಷ್ಟ [illegible]
[103-3]
[illegible] ಹಿಂಡಿ ಮತ್ತು [illegible] ದನ, ಎಮ್ಮೆ, ಎತ್ತು, [illegible] ಆರೋಗ್ಯಕರವಾದ ಮತ್ತು ಪುಷ್ಟಿಕರವಾದ ಆಹಾರ [illegible] ಕೊಡುವುದರಿಂದುಂಟಾಗುವ [illegible] ಹಿಂಡಿ [illegible] ಕೊಡುವುದರಿಂದ [illegible] ತಂದ ದನಗಳ [illegible] ಮಾಡುವವು [illegible] ಸುಲಭ ಕ್ರಯಕ್ಕೆ ದೊರೆಯುತ್ತವೆ.
[illegible] ಕೋಆಪರೇಟಿವ್ [illegible] ಕಂಪನಿ, ಲಿಮಿಟೆಡ್,
179, ಕಿಲಾರಿ ರೋಡ್, ಬೆಂಗಳೂರು ಸಿಟಿ
[illegible] ಎ 6, ದೊಡ್ಡಪೇಟೆ, ಮೈಸೂರು, ಇವರಲ್ಲೂ [illegible] ಏಜಂಟರುಗಳ ಶಿವಮೊಗ್ಗ, ಹಾಸನ, ಚನ್ನಪಟ್ಟಣ, ಮದ್ದೂರು [illegible] ಬಿಲ್ಲರೆಯಾಗಿಯೂ ಕ್ರಯಕ್ಕೆ ದೊರೆಯುವವು

ಡೋಂಗರೆ ಇವರ ಬಾಲಾಮೃತ.

[115-21]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತೆಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಪಾಕೆಟ್ ಡೈರಿ

ಶ್ರೀ ಸೀತಾರಾಘವ — ಸರ್ 1913 ನೇ ಇಸವಿಯದು

ಮೊದಮೊದಲೇ ಬರೆದು ತರಿಸಿಕೊಳ್ಳಿ. ನಂ 1 ಸಣ್ಣ ಸೈಜು ಸಾದಾ ಡೈರಿಗೆ 0-4-0 ನಂ 2 ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 0-6-0 ನಂ. 3 ದೊಡ್ಡ ಸೈಜು ಸಾದಾ ಡೈರಿಗೆ 0-6-0 ನಂ. 4 ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 0-8-0 ಟಪಾಲು ಖರ್ಚು ಬೇರೆ. ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು, 25 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ ರೂಪಾಯಿಗೆ 2½ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. [146-14]

ವಿವರ—(1) ಈ ವರೆಗೆ ಕಾಣ ಸಿಕ್ಕಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹೊಸದಾದ [illegible] ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ [illegible] ಬೈಂಡು ಮಾಡಿಸಿದೆ. (2) ದೇಹಸೌಖ್ಯ ನಿಬಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿದೆ. ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕವು ಮೊದಲುಗೊಂಡು ನೋಡಿಸುವದಕ್ಕೆ ಬೇಕಾದ ಲಗ್ನಾದಿಗಳು, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ. (3) ಕೋರ್ಟುಫೀಜ್ ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಸಂಗತಿಗಳ [illegible] ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ. (4) ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆಗಳ ಛಾರ್ಜು, ರೈಲು ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರ ತಲಬು, ಗೌರ್ನಮೆಂಟ್ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಲೇಕಡಾ ಹಣಪಟ್ಟಿ, ತಳಬುಜಂತ್ರಪಟ್ಟಿ ಸಹಾ ಇರುತ್ತದೆ. [illegible] ಲೆಕ್ಕ, ದಾಲಿನ ಲೆಕ್ಕ, ಮುಖ್ಯವಾದ ವಿಷಯ, ಒಟು [illegible], ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ — ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಒಳ್ಳೇ ಸಮಯ. — ವಿಶೇಷ ಬಹುಮಾನ. — ಇಂಥಾ ಕಾಲವನ್ನು ಕಳೆದುಕೊಳ್ಳಬೇಡಿ — ಮುಂದೆ ಸಿಕ್ಕಲಾರದು.

ಜನವರಿ ಪ್ರೆಜಂಟೇಷನ್ ವಾಚ್.

ಹಣವನ್ನು ಅಲ್ಪಕ್ರಯದ ವಾಚುಗಳಿಗೆ ಹಾಕಿ ಕಳಕೊಳ್ಳಬೇಡಿರಿ.

ಕೆಳಗೆ ವಿವರಿಸಿರುವ ಜಂಟಲ್‌ಮೆನ್ ಲಿವರ್ ಡ್ರೆಸ್ ವಾಚನ್ನು 1913 ನೇ ಜನವರಿ ತಾ 31 ರ ಒಳಗಾಗಿ ಕೊಂಡುಕೊಳ್ಳುವವರಿಗೆ 5 ರೂಪಾಯಿ ಬಾಬತು ಒಂದು ಬೆ ನಿಕಲ್ ಕೇಸಿನ್ ಮತ್ತು 1913 ನೇ ಇಸವಿ ಪಾಕೆಟ್ ಡೈರಿ ಒಂದು ಸಹಾ ಸೊಗಸಾದ ವೆಲ್‌ವೆಟ್ ಪೆಟ್ಟಿಗೆಯಲ್ಲಿಟ್ಟು ಬಹುಮಾನವಾಗಿ ಕೊಡಲಾಗುತ್ತೆ.



ಮುಂಭಾಗ

ನಿಕ್ಕಲ್ ಬೆಳ್ಳಿ ಜಂಟಲ್‌ಮೆನ್ ಡ್ರೆಸ್ ವಾಚ್ 1ಕ್ಕೆ ಕ್ರಯ	8-12-0
ಅಚ್ಚ ಬೆಳ್ಳಿ ಕೇಸಿನ ಡಿಟೋ ವಾಚಿಗೆ	13-4-0
ಎಂದಿಗೂ ಬಣ್ಣಕೆಡದ ನಿಕ್ಕಲ್ ಬೆಳ್ಳಿ ಸರಪಣಿ 1ಕ್ಕೆ	0-12-0
ಅಚ್ಚಬೆಳ್ಳಿ ಕೊರಳ ದೊಡ್ಡ ಸರಪಣಿ 1ಕ್ಕೆ	1-4-0
ಅಚ್ಚಬೆಳ್ಳಿ ಜೇಬಿಗೆ ಹಾಕುವ ಸರಪಣಿ ಕೊಲಾ 1ಕ್ಕೆ	1-4-0

ಜಂಟಲ್ ಮೆನ್ ಡ್ರೆಸ್ ವಾಚಿನ ಸಾಮಾನಿನ ವಿವರಣೆ.

ಇದರ ಎಲ್ಲಾ ಸಾಮಾನುಗಳೂ ಗಟ್ಟಿಯಾದ ಗಿಲ್ಟುಮಾಡಿದ್ದಿಟ್ಟಿವೆ. ಬಲವಾದ ಲಿವರುಗಳುಂಟು. ಆರು ಕೆಂಪುಗಳು [illegible] ಇಟ್ಟು, ಪ್ಯಾಲೆನ್ಸ್ ಇಟ್ಟು ಎಂದಿಗೂ ಸಮಯದಂತೆ ಒದಗುವಹಾಗೆ ರಚಿಸಲ್ಪಟ್ಟಿದೆ. ಇದರ [illegible] ಕೆಲಸ [illegible] ಗ್ಯಾರಂಟಿ ಮಾಡಿ ಹೇಳಬಲ್ಲೆವು. ಇದರ ಮುಖದ ಡೈಲು [illegible] ದಿಂದ ಮಾಡಿ, ಮುದ್ರಿತದ ಅಂಕೆಗಳಿಂದ [illegible] ಕಾಣುವಂತೆ ಮಾಡಲ್ಪಟ್ಟಿದೆ. ನಿಕ್ಕಲ್ ಬೆಳ್ಳಿ ವಾಚಿನ ಹಿಂಭಾಗದ ಮುಚ್ಚಳದ ಮೇಲೆ [illegible] ಮಾರ್ಕು ಇದೆ. ಬೆಳ್ಳಿ ವಾಚಿನ ಹಿಂಭಾಗದ ಮುಚ್ಚಳದ ಮೇಲೆ ಅಂದವಾದ ಕೆತ್ತನೆ ಕೆಲಸ ಮಾಡಲ್ಪಟ್ಟಿದೆ. ನೋಡುವವರ ಮನಸ್ಸಿಗೆ ಆನಂದವನ್ನುಂಟುಮಾಡುವುದಾಗಿರುತ್ತೆ. [167-2]

ಒಳಗಣ ಸಾಮಾನು.

ಸೂಚನೆ—ನಾವು ಬಹುಕಾಲದಿಂದ ವಾಚುಗಳ ವ್ಯಾಪಾರದಲ್ಲಿ ವಿಶೇಷ ಅನುಭವವನ್ನು ಹೊಂದಿರುವುದರಿಂದ ಬೆಲೆಗೆ ತಕ್ಕ ಶ್ರೇಷ್ಠವಾದ ವಾಚುಗಳನ್ನು ಬಿಕರಿಮಾಡಿ ಅನೇಕರಿಂದ ಸಂತೋಷಪೂರ್ವಕವಾದ ಯೋಗ್ಯತಾ ಪತ್ರಗಳನ್ನು ಪಡೆಯುತ್ತಾ ಬಂದಿದ್ದೇವೆ. ಈ ವಾಚನ್ನು ಕೊಂಡುಕೊಳ್ಳುವುದರಿಂದ [illegible] ನಮ್ಮ ಸಾಮಾನುಗಳನ್ನು ನಾವೇ ವರ್ಣಿಸಿಕೊಳ್ಳುವದಕ್ಕಿಂತ ವಾಚಕರು ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಸ್ವತಃ ವೇದ್ಯವಾಗುವದಲ್ಲದೆ ಅವರೇ ತಮ್ಮ ಸ್ನೇಹಿತರಿಗೂ ನಮ್ಮ ವಿಷಯದಲ್ಲಿ ಶಿಫಾರಸು ಮಾಡುತ್ತಾರೆಂದು ಸಂಶಯವಿಲ್ಲದೆ ಹೇಳಬಲ್ಲೆವು. [illegible] ಆಸೆ ತೋರಿಸಿ ಅಲ್ಪಕ್ರಯದ [illegible] ತಿಳಿಯಬೇಡಿರಿ. ವ್ಯಾಪಾರದ ವಿಷಯದಲ್ಲಿ ನಂಬಿಕೆಯನ್ನು ಸಂಪಾದಿಸಿಕೊಳ್ಳಬೇಕೆಂಬುದೇ ನಮ್ಮ ಮುಖ್ಯ ಉದ್ದೇಶವಾಗಿದೆ.

ಎಂ.ಎಸ್. ಸಿದ್ದಪ್ಪ ಆಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

HASSAN CAPS.

ಹಾಸನದ ಟೋಪಿಗಳು.

ಮೊದಲನೇ ತರಗತಿಯ ಪಾರ ರೇಷ್ಮೆ ಚುಕ್ಕೆಗಳುಳ್ಳದ್ದು				ರೂ 2 0 0
,,	,,	,,	ಕೆಂಪು ಅಥವ ಕಪ್ಪು	,, 1 8 0
ಎರಡನೇ	,,	,,	,,	,, 1 6 0
ಮೂರನೇ	,,	,,	,,	,, 1 4 0
ನಾಲ್ಕನೇ	,,	,,	,,	,, 1 2 0

ಇನ್ನು ಬೇರೆ ತರಹ ಬೇಕಾದರೆ ಮಾಡಿಸಿ ಕಳುಹಿಸುತ್ತೇವೆ

ನಮ್ಮ ವಿಳಾಸ — [107-8]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,

ತುಂಕೂರು.

Address

Wesleyan Mission Cap Industry,

Tumkur.

CHAMBERLAIN'S COUGH REMEDY.

ಚೇಂಬರ್ಲೇನರವರು ಕಂಡುಹಿಡಿದ ಕೆಮ್ಮಿನ ಔಷಧವು.



149

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಟಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯ ಹುಟ್ಟುವ ಸಮಸ್ತ ವ್ಯಾಧಿಗಳು —ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದ

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವದು ಡಾಕ್ಟರ್ ಕ್ಷಯರೋಗ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟು ಹುಪನ್ನೂ ಶ್ಲೇಷ್ಮ ಬೀಳುವುದನ್ನೂ ಬೇಗ ತನಾಗಿ ನಿವಾರಣೆಮಾಡುತ್ತವೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಆನಾಯಸ ಕೆಮ್ಮಿನ ಶಬ್ದವನ್ನು ನಿಲ್ಲಿಸುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಿವಾರಣೆಮಾಡಬಲ್ಲದು ಕೆಮ್ಮು ಶಮನಮಾಡಿ ನಿದ್ರೆ ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪವಾದ್ದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ಮಕ್ಕಳಿಗೂ ಶ್ರೇಷ್ಠ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ಒಂದೇ ಕದೆ! ಅಪೂರ್ವಗ್ರಂಥ!! ೨೧೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು ಇವು ಕೂಡಿವೆ

ಹೀಗಿರುವದರಿಂದ ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯ ಸ್ವಾರಸ್ಯವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ ೨ನೇ ಭಾಗ ೧೦ ಆಣೆ ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ [5 6]

ನಮ್ಮ ವಿಳಾಸ—ವಿಜಯಕೇಸರಿ ಕಂಪೆನಿ ಬೆಂಗಳೂರು ಸಿಟಿ

ಒಳ್ಳೆ ಸಮಯ! ... ಅಗ್ಗದ ಬೆಲೆಗೆ ಮಾತ್ರ ಕೊಡತಕ್ಕ ಬರಿಯಾ!

(1) ನಕ್ಷೆಯಲ್ಲಿ ಕಾಣಿಸುವ ಪ್ರಕೃತಿ ವಾಚು ಲಿವರ್ ಎವರ್ ಗಡಿಯಾರವನ್ನು ತಿಂಗಳ ಅಖೈರಿನೊಳಗಾಗಿ ತರಿಸುವವರಿಗೆ ಸ್ಪೆಷಲ್ ಬೆಲೆಗೆ ರೂ 2 ಕ್ಕೆ

ಕಳುಹಿಸುತ್ತೇವೆ ಪ್ರತಿ ವಿಜಯರ್ ಮಾರ್ಕಿನ ಜೇಬು ಗಡಿಯಾರವನ್ನು ಸಟಿಗೆ, ಉತ್ತರ ಮುಖ, ಸರಪಣಿ ಮತ್ತು ಟೀವಿಲ್ ಟ್ರೆಂಪೀಸನೊಡನೆ ರಿಜಿಸ್ಟರ್ ಮಾಡಿ ಕ್ರಯ ರೂ 3 6 0, ಅಂಚೆ ಹಾಸಲು 4 ಆಣೆ (2) ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡುವ ಕ್ಲಾಕ್ ಪೀಸು ಗಡಿಯಾರ ರೂ 8 (3) ಕೈಗೆ ಕಟ್ಟಿಕೊಳ್ಳುವ ವಾಚು ನಾಜೂಕು ಲೆದರ್ ಬೆಲ್ಟಿಯ ಗಡಿಯಾರ ರೂ 4-8-0 ನಿಕ್ಕಲಿನದು ರೂ 1-8-0 (4) ಮೋಹರ್ ಸ್ಟ್ರೈಕ್ ಸಂಗೀತ ಹಾಡುವ ಟೇಬಲ್ ಗಡಿಯಾರ ರೂ 7-1-0 ಗಂಟೆ ಹೊಡೆಯುವುದು ರೂ 1-8-0 ಆರ್ಮೋನಿಯಾ ಟೈಂಪೀಸ್ ರೂ 2 8 0 ಸಂಗೀತ ಟೈಂಪೀಸ್ ರೂ 2 ಬನಾರ್ ಟೈಂಪೀಸ್ ರೂ 1 1 0 (5) ಎಂಟು ದಿವಸಗಳಿಗೆ ಕೀ ಕೊಡುವ ಗಂಟೆ ಹೊಡೆಯುವ ನಾಲ್ಕು ಕ್ಲಾಕೆಂಬ ಗೋಡೆಗೆ ತಗಲಿಸುವ ಗಡಿಯಾರ ರೂ. 7-0 0 (6) ಮಧುರೆತರದ ಕರೀಲು ಮುನ್ನಡಿ ಮದ್ರಾಸ್ ನೀರೆ ರೂ 3 6 0 ಅಸಲ್ ಮದುರೆಯದು ರೂ 3 1 0 (7) ಕುಸುಮಕಾಂತಿ ತೈಲವು ಉತ್ತಮ ವನಸ್ಪತಿಗಳಿಂದಲೂ ಸುಗಂಧ ಕುಸುಮಗಳಿಂದಲೂ ತಯಾರಿಸಿದ್ದರಿಂದ ಕೂದಲುಗಳ ಬೇರನ್ನು ಭದ್ರಪಡಿಸಿ ದಟ್ಟವಾಗಿಯೂ, ಕರುಳಾಗಿಯೂ, ಕಪ್ಪಾಗಿಯೂ ಬೆಳಸಿ, ಮಿದುಳಿಗೆ ತಂಪನ್ನುಂಟುಮಾಡುತ್ತೆ ಕ್ರಯ ಸೀಸೆ 1 ಕ್ಕೆ 8 ಆಣೆ ಡಿಸೆಂಬರ್ ಅಖೈರಿನಲ್ಲಿ 1, 2, 3 ನೆಯ ನಂಬರ್ ಗಡಿಯಾರಗಳನ್ನು ಗ್ರಾಹಕರಲ್ಲಿ ಯಾರಿಗೆ ಬರುತ್ತೋ ಅವರಿಗೆ ಕೊಡಲ್ಪಡುತ್ತೆ [120-16]

ನಮ್ಮ ವಿಳಾಸ—ವೆಂಕಟಾಚಲಂ ಕಂಪನಿ,

ಪ್ಯರೋನ್, ಪೇಟೆ, ಮದ್ರಾಸು.

ಇವು ಒಳ್ಳೆಯವೂ ಅಗ್ಗವೂ ಆಗಿವೆ.

178-2

ನಮ್ಮಲ್ಲಿ ತಯಾರಾಗುವ ನಸ್ಯ ಔಷಧಿ ಮನಸ್ಸಿಗೆ ಹರುಷವನ್ನು ಉಂಟುಮಾಡುವದಲ್ಲದೆ ಯಾವ ವಿಧವಾದ ನಾಸಿಕಾ ರೋಗವನ್ನೂ ಹೋಗುವಂತೆ ಮಾಡುವದು ಶೀತದಿಂದ ನೆಗಡಿ, ತಲೆನೋವು ಮುಂತಾದ್ದನ್ನು ನಿಮಿಷದಲ್ಲಿಯೇ ಪರಿಹಾರ ಮಾಡುವುದು ಇದರ ಗುಣ ಒಂದು ಸಲ ಪ್ರಯೋಗ ಮಾಡಿದ ಬಳಿಕ ತಿಳಿಯುವುದು ಇದು ಪರಿಮಳವಾಗಿಯೂ ಇರುತ್ತದೆ ಕ್ರಯ 1ಕ್ಕೆ 1 ಆಣೆ, ಅಂಚೆ ಹಾಸಲು 1 ಆಣೆ (2) ರೋಮಸಂಹಾರಿಣಿ ಎಂಬ ದರ್ಬಾರ್ ಸೋಪು ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ರೋಮವು ಮಾಯವಾಗುವದು ಉರಿ ಮುಂತಾದವುಗಳು ಇಲ್ಲ

ಇದರ ಕ್ರಯ 1 ಸಾಬೂನು ಇರುವ ಪೆಟ್ಟಿಗೆ ಒಂದಕ್ಕೆ 0-13 0 ಅಂಚೆ ಹಾಸಲು 1 ಆಣೆ ಒಂದು ಸಾಬೂನು 5 ಆಣೆ ಅಂಚೆ ಹಾಸಲು 1 ಆಣೆ (3) ಮುಲಾಮು ಔಷಧ ಇದನ್ನು ಯಾವ ಭಾಗದಲ್ಲಿ ತುಳಕಡಿ ಇರುತ್ತೆಯೋ ಆಭಾಗವನ್ನು ಶುಭ್ರವಾಗಿ ಸಾಬೂನಿನಿಂದ ತೊಳೆದು ಉಪಯೋಗಿಸಬೇಕು ಎರಡು ಸಲ ಉಪಯೋಗಿಸುವುದರಲ್ಲಿಯೇ ವಾಸಿಯಾಗುವುದು ಕ್ರಯ 1 ಆಣೆ, ಅಂಚೆ ಹಾಸಲು 4 ಆಣೆ (4) ಟೈಂಪೀಸುಗಳು, ರಾಸ್‌ಕೋಪ್ ಕೈ ಗಡಿಯಾರಗಳು ನಮ್ಮಲ್ಲಿ ದೊರೆಯುತ್ತವೆ ಯಾವ ಕ್ರಯದಲ್ಲಿ ಬೇಕಾಗುತ್ತದೆಯೋ ತಿಳಿಸಿದರೆ ಕಳುಹಿಸಿಕೊಡುತ್ತೇವೆ ನಮ್ಮಲ್ಲಿ ಇರುವಂಥಾ ರಾಸ್‌ಕೋಪ್ ಕೈ ಗಡಿಯಾರದ ಕ್ರಯ 2 4 0 ಮೊದಲ್ಗೊಂಡು 10 ರೂಪಾಯಿನ ವರೆವಿಗೂ, ಟೈಂಪೀಸುಗಳು 2 ರೂಪಾಯಿ ಮೊದಲು 7 8 0 ವರವಿಗೆ ದೊರೆಯುತ್ತವೆ ಮೇಲೆ ಕಂಡ ನಂಬರು 1 2 ಸ್ಯಾಂಪಲ್ ಗಾಗಿ ಅರ್ಧ ಆಣೆ ಕಳುಹಿಸಿಕೊಟ್ಟರೆ ಕಳುಹಿಸುತ್ತೇವೆ ನಮ್ಮ ವಿಳಾಸ -

ವಿ. ಎ ಎಸ್. ವಾಣಿ, ನಂ. 1 ಅರುಳಪ್ಪನ ಬೀದಿ, ಮದರಾಸು.

READY FOR SALE

A Manual of **GENERAL ENGLISH**, third Edition, Thoroughly Revised by C CHENNA KESAVAIYA, B A Price Re 1, Postage 3 as

[177-3] H N ROW & BROTHERS, Bangalore City.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ನಿಮ್ಮ ಮಕ್ಕಳು ಹೇಳಿದಂತೆ ಕೇಳದ ಬಗೆ ಗೆ ಒಳಪಡುವಂಥವರಾಗಿದ್ದು

ಆಹಾರರುಚಿ ಕಡಮೆಯುಳ್ಳವರಾಗಿದ್ದಾರಾ ಮ ಕೆಂಡ ಕೊಡಬೇ

SCOTT'S EMULSION 219

(ಸ್ಕಾಟ್ಸ್ ಎಮಲ್‌ಷನ್)

ಎಂಬೀ ಶ್ರೇಷ್ಠ ಔಷಧವನ್ನು ಕೊಡಬೇಕು

Always get the Emulsion with this mark—the Fishman—the mark of the "Scott" process!

ಮಾಸದಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ಪ್ರಯೋಜನ ತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಆರೋಗ್ಯ ಚಿಹ್ನೆ ತೋರಿಸುವದು

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲಿ

ಎಲ್ಲಾ ಔಷಧವಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ ಬೌನ್ ಲಿಮಿಟೆಡ್,

ಔಷದಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡು

ಈ ಮೀನುಮನುಷ್ಯ ಇರುವ ಔಷದವನ್ನೇ ಕೊಂಡುಕೊಳ್ಳಿ

ಲೋಕೋಪಯೋಗ ಕಸ್ತೂರೀ ಮಾತ್ರೆಗಳನ್ನು ಮರೆಯಬೇಡಿ.

ಈ ಮಾತ್ರೆಗಳ ವಿಷಯವಾಗಿ ಬಂದಿರುವ ನಾನಾದಾರು ಯೋಗ್ಯತಾ ಪತ್ರಗಳಲ್ಲಿ ಕೆಲವನ್ನು ಮಾತ್ರ ತಮ್ಮ ಸಂಭವಗಾಗಿ ಇಲ್ಲಿ ವಿವರಿಸಿದ

(1) ಮ ಸರವೆಯುನ ವೆಂಕಟಪ್ಪಶೆಟ್ಟರು, ಅರಕಲಗೂಡು, ಇವರು— ತಮ್ಮ ಕಸ್ತೂರೀ ಮಾತ್ರೆಗಳನ್ನು ಯಾರ್ಯಾರಿಗೆ ಕೊಟ್ಟೆನೋ ಅವರೆಲ್ಲರೂ ಬಹಳ ಗುಣಕಾರಿ ಎಂದು ಹೇಳುವುದರಿಂದ ಇನ್ನು 6 ಸೀಸೆಗಳನ್ನು ಕಳುಹಿಸಿಕೊಡಿ (2) ಟಿ ನಂಜುಂಡೆಯ್ಯನವರು ಹೊಳೆನರಸೀಪುರ, ಇವರು ಎಲಾ ವ್ಯಾಧಿಗಳನ್ನೂ ತಮ್ಮ ಕಸ್ತೂರೀ ಮಾತ್ರೆಗಳು ಗುಣಪಡಿಸಿವೆ ನಾಲ್ಕು ಜನರ ಪ್ಲೇಗು ರೋಗಕ್ಕೆ ಸಂಜೀವನವಾಯಿತು ಇನ್ನೂ 12 ಸೀಸೆಗಳನ್ನು ಕಳಿಸಿ (3) ಮ ವೆಂಕಣ್ಣಯ್ಯ ಬಸಪ್ಪಗವುಡ ಶಾನುಭಾಗರ್, ಪುಕ್ಕಮದಹಳ್ಳಿ, ವಿಂಟಪುರ, ಇವರು ಯಾವ ಔಷದಗಳಿಗೂ ಗುಣವಾಗದಿದ್ದ 11 ವರ್ಷದ ಜ್ವರವು ತಮ್ಮ ಕಸ್ತೂರಿ ಮಾತ್ರೆಗಳಿಂದ ಸಂಪೂರ್ಣ ಗುಣವಾಗಿರುತ್ತದೆ (4) ಮ|| ಹಿರೇಮಠದ ಪರಮೇಶ್ವರಯ್ಯ, ಮಾಸ್ತರು ಧಾರವಾಡ, ಇವರು ತಮ್ಮ ಕಸ್ತೂರಿ ಮಾತ್ರೆಗಳು ನಮ್ಮಲ್ಲಿ ರೋಗಗಳಿಗೆ ಗುಣಕಂಡು ಬಂದಿರುವುದರಿಂದ ಪುನಃ 25 ಸೀಸೆಗಳನ್ನು ಕಳುಹಿಸಿಕೊಡಿ (5) ಮ ಪಿ ಎಸ್ ಎಂ ರಾಮ, ಕೇರಾಫ್ ಜಿ ಎಸ್ ಎಂ ಅಂಡ್ ಕೊ ಲಿಮಿಟೆಡ್, ರಾಬರ್ಟ್‌ಸ್ವಾಗ್, ಎಲ್ಲಾರಿ, ಇವರು ತಮ್ಮ ಕಸ್ತೂರಿ ಮಾತ್ರೆಗಳಲ್ಲಿ ಛಳಿಜ್ವರ ಮೊದಲಾದ ಅನೇಕ ವ್ಯಾಧಿಗಳನ್ನು ಹೋಗಲಾಡಿಸುವ ಗುಣವು ಅತ್ಯುತ್ತಮವಾಗಿದೆ (6) ಮ ಆರ್ ಎಕ್ ಟಾಲಕ್‌ದಾರ್, ಸ್ಕೂಲ್ ಹೆಡ್ ಮಾಸ್ಟರ್, ಪಾಟಿಲ್, ಬೆಂಗಾಲ್, ಇವರು ತಮ್ಮ ಕಸ್ತೂರೀ ಮಾತ್ರೆಗಳು ತಾವು ಹೇಳಿರುವ ಮೇರೆ ಅನೇಕ ವ್ಯಾಧಿಗಳನ್ನು ಗುಣಪಡಿಸಿವೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ ಇನ್ನು 12 ಸೀಸೆಗಳನ್ನು ಕಳುಹಿಸಿಕೊಡಿ [177-1]

ಕ್ರಯ 30 ಮಾತ್ರೆಯುಳ್ಳ ಸೀಸೆಗೆ 1 ಆಣೆ 6 ಕ್ಕೆ 1 ರೂ ಪಾಯಿ 1 ರಿಂದ 12 ರ ವರಿಗೆ ಟಪಾಲ್ ಛಾರ್ಜು 1 ಆಣೆ ನಮ್ಮ ಹೆಸರನ್ನು ಸ್ಪಷ್ಟವಾಗಿ ಬರೆಸಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಜವಳಿ ಕ್ರಯಕ್ಕೆ ಬೇಕಾಗಿದೆ.

1 1 ಧರ್ಮಾವಾರದ ಸೀರೆಗಳು, 1 ಕೇಜಿ ಸೀರೆಗಳು 5 6 ಕೆಲಸ ಹೊದಿಯುವ 6-8 ಮೊಳದ ಪ ಚೆಗಳು ಸಲ್ಲಾ ಮಂಗಳ ಯಾ ಮುಖ ನವಾಂಕ ಮೇಲೆ ಬಂದಲ್ಲಿ ನಮ್ಮ ಸಂತ ಉಪಯೋಗಕ್ಕೆ ಬೇಕಾಗಿರುತ್ತೆ ... ಗಳು ಇದ್ದಲ್ಲಿ ತಂದು ತೋರಿಸಿ ಮುನಾಫ್ ಕ್ರಯದ ಹೊಂದಿಗೆ ಬರುವುದು ವಿಳಾಸ ಟಿ ಎಸ್ ರಾಮ ಪ್ರ ರೇನ್ 914, ಗೌಡಾರ

[198 1] ಎಮಸ್ಸೂರ್ ಅಗ್ರಹಾರ, ಚಾಮರಾಜ ಮೊಹಲ್ಲಾ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

94

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆ ಮ ಹೇಳು ಕಾಲು ಕೀಲು, ಅರಕಲ, ತಲೆನೋವುಗಳು ಯಾವ ಕಾರಣದಿ ದ ಹುಟ್ಟುವ ನೋವುಗಳು, ಉಳುಕು, ಹಲ್ಲು ನೋವು ಗಂಟಲು ಗಾರೆನ್ನುವುದು, ಕೆಮ್ಮು ಶೀತಬೇಗಡಿ, ವಾ ಸರೋಗ, ಮೂಲ, ಉಳುಕು ಛಳುಕು, ಬೇಳು ಕಡಿದ ಗಾಯ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಬ ಗದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ಅಂದುಕೊ ಸಮೀಪದ ಔಷಧಿ ವೈದ್ಯನ ಅಂಗಡಿಗೆ ಹೋಗು ಕ್ಲೈಮೆಂಟರ ಪಾ ಔಷಧ ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೊ ಈ ಯುಕ್ತಿಯಿಂದ ವಾಸಿಮಾಡುವ ಔಷದವು 12 ರಿಗೆಗೆ ಸಿಕ್ಕುತ್ತದೆ ಸಮಸ್ತ ವಿಧದ ಮೈ ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಅತ್ಯಂತರ ಅ ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೈಮೆಂಟರ ಪಾ ಔಷಧ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 4 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ವಾಸಿ ವ್ಯಾಪಾರಸ್ಥರಿಗೆ ಘಾ ನಾದ ಡಿಸ್ಕೌಂಟು ಸಿಗುತ್ತೆ ಏಜಂಟರುಗಳು (1) ಎಸ್ ಸೀಟ್ಸರ್, ವಡಮುಕೆಸಿಳ್ಳಿ ಬೀದಿ, ಪುರುಷವಾಕಂ, ವೇಪೇರಿ, ಮದರಾಸ್, (2) ಕೆ ಕೆ ಕನ್ನಯ್ಯ ಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

THE PLACE FOR HASSAN CAPS

HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರ ಬೇಗ ಬರೆದು ತರಿಸಿಕೊಳ್ಳಿ

34

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇ?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಕಡೆಗಳಿಗೆಲ್ಲಾ ಹರಡಿಕೊಂಡವು ಖಂಡಿತವಾಗಿಯೂ ಹಾಸನದಿಂದಲೇ ಎಂ ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಲ್ಲಾ ಬೇಕಾದದ್ದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿ ದಿನದವೆಲ್ಲಾ ಪೆಟಿಗೆ ಮಿಲಾಯಿತಿಯಿಂದಲೇ ಎನುವದು (೨) ಟೋಪಿಗಳ ಮುಖ್ಯವಾಗಿ ನಾವು ಎಂತು ಚನ್ನಾಗಿ ಮಾಡಿಸುತ್ತೇವೆ ಅಪೇಕ್ಷಿಸುವವರಿಗೆ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆದಾದ, ಚನ್ನಾಗಿ ಹಾಕಿದ, ಬಹು ಬಾಳಿಕೆಬರುವ ಟೋಪಿ ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಬೇಕಾದದ್ದು ಬೇಕಾದರೆ ನಮ್ಮಲ್ಲಿ ದೊರೆಯುವುದಿಲ್ಲ

ಸಾದಾ ಕಂಪು, ಕಪ್ಪು, ಬೇರೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೪ ಆ ೧ ರೂ ೬ ಆ ; ೧ ರೂ. ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬

ಮುಸುಕಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ

ಕೂಸುಗಳ ಟೋಪಿ, ಪ್ರತಿ ಮೇಜೋಡು, ಅರ್ಧ ಮೇಜೋಡು, ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಅಮೃತಾಂಜನ. (Regd.)

ಇಲ್ಲಿ ಪರೀಕ್ಷೆ ಲಕ್ಷ ಕೂಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲು ನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-8-0

ಅರ್ಧ ಕ್ರಯಕ್ಕಿಂತಲೂ ಕಡಮೆ

ಪತ್ತು ಲಕ್ಷ ದೊಡ್ಡ ಸೈಜು ಪೋಸ್ಟು ಕಾರ್ಡುಗಳು. ಇವುಗಳು ಚಿಳ್ಳಗಾಗಿಯೂ ನಯವಾಗಿಯೂ ಇವೆ. 1,000 ಕ್ಕೆ ನಮ್ಮ ಂಚಿನ ಕ್ರಯ ರೂ 1-8-0, ಈಗ 15 ಆಣೆ, ವಿ. ಪಿ. ಖರ್ಚು 12 ಆಣೆ 500 ಕ್ಕೆ 8 ಆಣೆ ವಿ. ಪಿ. ಖರ್ಚು 8 ಆಣೆ

1913 ನೆಯ ವರ್ಷದ ಕ್ಯಾಲೆಂಡರ್ ೪ ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಆಣೆ ವಿ. ಪಿ. ಸಹಿತ [46-41]

ಅಮೃತಾಂಜನ ಡಿಪೋ, ಫೋರ್ಟ್ ಮುಂಬಯಿ.

ಗರ್ಭಿಣೀಶಿಶುಸಂರಕ್ಷಣ.

MIDWIFERY ಕನ್ನಡ ಭಾಷೆಯಲ್ಲಿ ಸ್ತ್ರೀಯರಿಗೂ, ಮಿಡ್‌ವೈಫ್ ಗಳಿಗೆ ಉಪಯೋಗಕರವಾದದ್ದು ಕ್ರಯ ೧೨ ಆಣೆ [11-17]
ವಿಳಾಸ [illegible] ಮೈಸೂರು

ವಾರಾಟಕ್ಕೆ ಸಿದ್ಧವಾಗಿದೆ.

ಒಂದು ಒಳ್ಳೇ ರಿಕ್ಷಾ ಎಂಬ ಕೈಗಾಡಿ, ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ವಿಚಾರಿಸಿದರೆ ಗೊತ್ತಾಗುತ್ತದೆ [188-1]

ತಿರುಪತಿ ಗಂಧ. ಡಬ್ಬಿ 1 ಕ್ಕೆ 12 ಅಣೆ.

ಸುವಾಸನೆ ನೋಡಿ ಮತ್ತು ಜನಗಳಿಗೆ ಸೇವಿಸುವುದು

ಕಪಿಲಾ ಕಂಪನಿ ಇವರಲ್ಲಿ ಅನೇಕ ದಿನಗಳಿಂದ ತಯಾರಾಗಿ ಮಾರುವದಕ್ಕೆ ಇರುವ ಕಲಾ—ಮಹೋತ್ಸವದಲ್ಲಿಯೂ, ಶುಭಪ್ರಯೋಜನ ಕಾಲಗಳಲ್ಲಿ



ಯೂ, ಸಂತರ್ಪಣೆಗಳಲ್ಲಿಯೂ ಉಪಯೋಗಿಸುವ ಈ ತಿರುಪತಿ ಗಂಧವು ಬೇರೆ ದೊರೆಯದ ದ್ರವ್ಯ. ಬೆಲೆ ಹೆಚ್ಚಿನ ಕಲ್ಪಿತ ಗಂಧವನ್ನು ಉಪಯೋಗಿಸುವವರು ಈ ತಿರುಪತಿ ಗಂಧವನ್ನು ಒಂದಾವರ್ತಿ ಸೇವಿಸಿದವರು ಇತರ ಗಂಧವನ್ನು ಅವಲಂಬಿಸರು. ಈ ಗಂಧವು ಸುವಾಸನೆಯುಳ್ಳದ್ದು, ದಿವ್ಯ ಪರಿಮಳವು ಅನೇಕ ದಿನಗಳಿಗೆ ವಿಶೇಷವಾಗಿ ಇರುವದು. [illegible] ಗಂಧಗಳನ್ನು ತೆಗೆದುಕೊಂಡು ನೋಡಿ [illegible] ವಿ. ಪಿ. ಖರ್ಚು ಬೇರೆ

ಕೇಳುವವರಿಗೆ ನಮ್ಮ ಪಟ್ಟಿಗಳು ಕಳಿಸುವೆವು. ಮತ್ತು ಈ ಕಂಪನಿಯಲ್ಲಿ ಇಂಗ್ಲೀಷ್ ವಾಸನೆಗಳು, ಇತರ ಗಂಧಗಳು, ಗಡಿಯಾರಗಳು, ಪುಷ್ಪಸ್ಪ್ರೇಗಳು ಕೊಡವ ಬೇಕಾದವರಿಗೆ [illegible] ತಯಾರಾಗಿವೆ ಕ್ಯಾಟಲಾಗು ಬೇಕಾದವರಿಗೆ ಉಚಿತ ಕಳುಹುವರು [173-1]

ವಿಳಾಸ—ಕಪಿಲಾ ಕಂಪನಿ, ಚಿತ್ತೂರು

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮುಖವನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು'

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ ಆದರೆ ಎಲ್ಲ ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ಸಮೃದ್ಧವಾದ ಕೇಶರಾಶಿ ಇದೆ. ಕೇಶರಾಶಿಯು ಸುಂದರವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಚಕಚಕಿಸುತ್ತಿರಬೇಕು ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಯಾವರೂ ಕಟ್ಟಿದರೂ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಇದನ್ನು ತಕ್ಕ ದಾಮ ಮೊದಲಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಶೀಘ್ರವಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ— ಇದು, ಕೂದಲುಗಳನ್ನು ಚಂದಗೈಯುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ಮೃದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ತುರುಬನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ಸಬಲವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-5-0 ಬೇರೆ ತೆರಬೇಕು
3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರೆದ ಪ್ರಶಸ್ತಿ ಪತ್ರಗಳೊಳಗಿನ ಕೆಲವನ್ನು ಇಲ್ಲಿ ಕೊಡುವೆವು -

28-7-11 ಮಿ ಬಿ ಡಿ ಪಾಂಡುರಂಗ್, ದುರ್ಗಾವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7-11 ಮಿ ಎ ಆರ್ ನಾರಾಯಣ ಪ ಡಿ ಬಾಶಿದ, (ಬಿದನೂರ) ನನ್ನ ಮಿತ್ರರು "ಕಾಮಿನಿಯಾ" ತೈಲ ಸಮಾಧಾನವಾಗಿ ಪರಿಪೂರ್ಣ ಪ್ರಶಂಸೆಯನ್ನು ಮಾಡುವದರಿಂದ ಕೂಡಲೇ ೬ ಸೀಸೆಗಳನ್ನು ತ್ವರೆಯಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪಂಡಿತರು ಹೇಳಿದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಬಂಗಾರ ಪುಷ್ಪಗಳಿಂದ ತಯಾರಿಸಿದ ಅಪೂರ್ವವಾದ ಸುಗಂಧ ಡ್ರಾಂ ಸೀಸೆಗೆ ರೂ 1-4-0
"ಕಾಮಿನಿಯಾ ಸುಗಂಧಿ" ರೂ 1-4-0 "ಕಾಮಿನಿಯಾ ಮಾಲತಿ" ರೂ 1.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು

ನಮ್ಮ ವಿಳಾಸ — [91-19]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಪ್ರಸಿದ್ಧಪತ್ರಿಕೆ.

ಶ್ರೀ ರಾಮ ಹಾರ್ಮೋನಿಯಂ ಶಾಲಾ, ಯಲಹಂಕಾ ಗೇಟ್, ಬೆಂಗಳೂರು ಸಿಟಿ ಇಲ್ಲಿ ಮನೋಹರವಾದ ಹಿಂದೂಸ್ಥಾನಿ, ಪಾರ್ಸಿ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಸ್ತ್ರೀಯರಿಗಾಗಿ ಅವರ ಮನೆಗಳಿಗೆ ಪಾಠ ಹೇಳಿಕೊಳ್ಳ ತಕ್ಕವರಿಗೆ ಅವರವರ ಇಷ್ಟ ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೂರ್ನಾಡ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಹ್ಯಾಂಡ್ ಹಾರ್ಮೋನಿಯಂಗಳು ಸಿದ್ಧವಾಗಿರುತ್ತವೆ. ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗವಾಗುವ ಯಾವ ತರಹಾ ಹಾರ್ಮೋನಿಯಂ ಬೇಕಾಗಿದ್ದರೂ ಖಾತ್ರಿಯಾದ ಗ್ಯಾರಂಟಿಯುಳ್ಳ ಹಾರ್ಮೋನಿಯಂಗಳನ್ನು ಸುಲಭವಾದ ಕ್ರಯಕ್ಕೆ ಅವರವರು ಹೇಳುವ ಸ್ಥಳದಲ್ಲಿ ಅವರ ಇಷ್ಟ ಪ್ರಕಾರ ತರಿಸಿಕೊಡಲ್ಪಡುತ್ತೆ ಮತ್ತು ಎಲ್ಲಾ ಹಾರ್ಮೋನಿಯಂಗಳನ್ನು ಸುಲಭ ಚಾರ್ಜಿಗೆ ಖಾತ್ರಿಯಾಗಿ ರಿಪೇರಿ ಮಾಡಲ್ಪಡುತ್ತೆ ಹೆಚ್ಚು ಸಂಗತಿ ತಿಳಿಯಬೇಕೆಂದಿರುವವರು ಮೇಲ್ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು [170-3]

ನಮ್ಮ ವಿಳಾಸ ಎಂ. ಕೇಶವರಾವ್ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮಾಸ್ಟರ್, ಬೆಂಗಳೂರು ಸಿಟಿ

ಕುಂತಳಾನಂದ ತೈಲವು

147-11

ಹಿಂದುಸ್ಥಾನದ ಎಲ್ಲಾ ಪ್ರದರ್ಶನಗಳಲ್ಲಿ ಮೂರು ಚಿನ್ನದ ಬಿಲ್ಲೆಗಳು ಸರ್ಟಿಫಿಕೇಟುಗಳನ್ನೂ ಪಡೆದ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ಕೃಷ್ಟತ್ವದ ಗುಣಗಳನ್ನು ಶ್ಲಾಘಿಸುವರು ಈ ತೈಲವು ಕೂದಲನ್ನು ದಪ್ಪನಾಗಿಯೂ ತರೆಯಾಗಿಯೂ ಬೆಳೆಯುವಂತೆ ಮಾಡಿ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಸಮಸ್ತಾಂಗಗಳನ್ನು ಪರಿಪುಷ್ಟಿಗೊಳಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ತಲೆ ಶೀತಲವೂ ಸುವಾಸಿತವೂ ಆಗಿ ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗನ್ನು ತರಿಸಿ ನೋಡಿರಿ

ನಮ್ಮ ವಿಳಾಸ:—ಪಿ. ಎಮ್. ನಾಥ ಮತ್ತು ಕಂಪನಿ,
ಪೀಟೋರಿ, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

15—11—1912 ರಿಂದ 22—11—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	17	10	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	19	11	0	0
ಮೈಸೂರು ,,	61	17	0	7
ಕೋಲಾರ್ ,,	2	5	8	4
ಕೋಲಾರ್ ಚಿನ್ನದ ಗಣಿಗಳು	15	19	0	0
ತುಮಕೂರು ಡಿಸ್ಟ್ರಿಕ್ಟ್	0	0	42	21
ಹಾಸನ ,,	21	18	0	0
ಚಿತ್ರದುರ್ಗ ,,	0	0	1	1
ಕಡೂರ್ ,,	26	19	0	0
ಶಿವಮೊಗ್ಗ ,,	11	9	0	0
ಜುಮ್ಲಾ	175	147	51	26

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಬಹುಳ ತ್ರಯೋದಶಿ ಶುಕ್ರವಾರದಿಂದ ಹೈಮಂತ ಋತೌ ಮಾರ್ಗಶಿರ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ ತೇದಿ
6	ಶುಕ್ರ	ತ್ರಯೋದಶಿ	18-31	ಸ್ವಾತಿ	1-54	22
7	ಶನಿ	ಚತುರ್ದಶಿ	17-12	ವಿಶಾಖ	4-10	23
8	ಭಾನು †	ಅಮಾವಾಸ್ಯೆ	17-20	ಅನುರಾಧ	5-24	24
9	ಸೋಮ	ಪಾಡ್ಯಮಿ	18-28	ಜ್ಯೇಷ್ಠ	7-20	25
10	ಮಂಗಳ §	ಬಿದಿಗೆ	11-18	ಮೂಲ	10-18	26
11	ಬುಧ †	ತದಿಗೆ	15-5	ಪೂರ್ವಾ	15-18	27
12	ಗುರು	ಚೌತಿ	19-11	ಉತ್ತರಾ	20-11	28

ಪ್ರದೋಷ, ಮಾಸಶಿವರಾತ್ರಿ † ಸರ್ವತ್ರ ಅಮಾವಾಸ್ಯೆ, ವೃಶ್ಚಿಕೆ ‡ ಗ್ರಹ—ರ, ಚಂ, ಕೇ, ಬು, ಮಳೆ ನಕ್ಷತ್ರ ಜ್ಯೇಷ್ಠ 1 ನೇ ಪಾದ § ಶ್ರೀರಂಗದಲ್ಲಿ ಅಧ್ಯಯನೋತ್ಸವಾರಂಭ, ಮಾರ್ಗಶಿರ ಮಾಸಾರಂಭ ¦ ಮಳೆ ನಕ್ಷತ್ರ— ಜ್ಯೇಷ್ಠ 1 ನೇ ಪಾದ

ಗ್ರೋಸರಿ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	೧೭-೭-೦	೧೩-೮-೦
ಕೆಂಬೂತಿ ಅಕ್ಕಿ ಅವಲ್	೧೭-೪-೦	೧೨-೬-೦
,, ದುಯಂ	೧೬-೨-೦	೧೭-೦-೦
ಜಂಪ್ಪಾಣೆ ಅಕ್ಕಿ	೧೬-೨-೦	೧೭-೪-೦
ಸಣ್ಣಕ್ಕಿ ಅವಲ್	೧೮-೭-೦	೧೮-೮-೦
,, ದುಯಂ	೧೭-೧೨-೦	೧೭-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೪-೭-೦	೧೩-೮-೦
,, ದುಯಂ ,,	೧೨-೧೨-೦	೧೨-೮-೦
ಪ್ಲೈನ್ ರಾಗಿ ಪಲ್ಲಾ ೧ಕ್ಕೆ	೭-೨-೦	೫-೦-೦
ಕಾರ್ರಾಗಿ ,,	೭-೦-೦	೪-೧೨-೦
ಜೋಳ ,,	೬-೬-೦	೭-೪-೦
ಹಳಸಂದೆ ಪಲ್ಲಾ ೧ಕ್ಕೆ	೧೧-೮-೦	೧೩-೧೨-೦
ಬಿಳೇ ಅವರೆ ,,	೧೧-೨-೦	೧೧-೦-೦
ಹೆಸರು ,,	೧೧-೮-೦	೧೪-೦-೦
ಉದ್ದು ,,	೧೬-೨-೦	೧೬-೦-೦
ಕಡಲೆ ,,	೧೨-೮-೦	೧೨-೮-೦
ಎಳ್ಳು ಸೇರು ೧೨೭ಕ್ಕೆ	೨೩-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೧೨-೦	೭-೦-೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೩-೪-೦	೪-೮-೦
ಮೆಣಸಿನಕಾಯಿ ,,	೩-೦-೦	೩-೪-೦
,, ದುಯಂ	೨-೮-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬-೬-೦
ಹರಳೆಣ್ಣೆ ,, ,,	೫-೦-೦	೬-೦-೦
ಕೊಬ್ಬರಿ ಪಲ್ಲಾ ೧ಕ್ಕೆ	೫-೦-೦	೫-೪-೦
ಉಪ್ಪು ,, ,,	೬-೦-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೪-೦	೧-೪-೦
,, ಹಳೇದು ,,	೧-೦-೦	೦-೧೪-೦
ತುಪ್ಪ ಮಣ ೧ಕ್ಕೆ	೧೬-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೦-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೮-೦	೬-೦-೦
ಆಲೂಗೆಡ್ಡೆ ಮಣ ೧ಕ್ಕೆ	೦-೮-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪವನ್) ತೊಲ	೧೫-೮-೦	೧೫-೮-೦
,, ,, ಪವನು	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೦-೦

ವೃತ್ತಾಂತ ಪತ್ರಿಕೆ.

—.o:—

ಸರ್ ೧೯೧೨ ನೇ ಇಸವಿ ಡಿಸೆಂಬರ್ ತಾ. ೫ ನೇ ಗುರುವಾರ.

ವಿಸ್ತಾರವಾದ ವ್ಯವಸಾಯದ ತಾಕುಗಳು.

ಮೈಸೂರು ಸಂಸ್ಥಾನದಲ್ಲಿ ವ್ಯವಸಾಯವಾಗದೆ ಇರುವಂಥಾ ಜಮೀನುಗಳು ಇನ್ನೂ ಬಹಳವಾಗಿರುತ್ತವೆ. ಮೈಸೂರು ಗವರ್ನಮೆಂಟಿನವರು ಅಂಥಾ ಜಮೀನುಗಳ ಪೈಕಿ ೫೦೦ ರಿಂದ ಹಿಡಿದು ೧೫೦೦ ಎಕರೆಗಳ ವರೆಗೆ ದೊಡ್ಡದಾಗಿರುವಂಥಾ ತಾಕುಗಳನ್ನು ವಿಂಗಡಿಸಿ, ಅವುಗಳನ್ನು ಸರಿಯಾಗಿ ವ್ಯವಸಾಯಕ್ಕೆ ತರಬೇಕೆಂದು ಅಪೇಕ್ಷೆಪಡತಕ್ಕವರಿಗೆ ಕೊಡಬೇಕೆಂಬ ಕುತೂಹಲವುಳ್ಳವರಾಗಿದ್ದಾರೆ. ಈ ಉದ್ದೇಶದಿಂದ ಸರ್ಕಾರದವರು ಕಳೆದ ವಾರದ ಗೆಜೆಟ್ಟಿನಲ್ಲಿ ಕೆಲವು ಸಲಹೆಗಳನ್ನು ಪ್ರಕಟಮಾಡಿರುತ್ತಾರೆ.

ವ್ಯವಸಾಯ ಮಾಡಬಹುದಾದ ಅಂಥಾ ವಿಸ್ತಾರವಾದ ತಾಕುಗಳು ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಎಷ್ಟೆಷ್ಟು ದೊರಕುವವೋ ಗೊತ್ತುಮಾಡಿ ಪ್ರಕಟಿಸಿರುವರು. ಅಂದರೆ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಒಟ್ಟು ೯,೮೩೦ ಎಕರೆಗಳುಳ್ಳ ೧೧೭ ತಾಕುಗಳಿರುವವು; ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಒಟ್ಟು ೨೫,೦೦೦ ಎಕರೆಗಳಷ್ಟಾಗುವ ೩೩೮ ತಾಕುಗಳಿವೆ; ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ೭೭ ತಾಕುಗಳು ೧೭,೩೯೦ ಎಕರೆಗಳಾಗಬಹುದು; ಸುಮಾರು ೧,೧೦,೩೩೧ ಎಕರೆಗಳಾಗುವ ೯೬೪ ತಾಕುಗಳು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಸಿಕ್ಕುತ್ತವೆ. ಈ ಜಮೀನುಗಳು ಎಂಥವುಗಳೆಂದರೆ—(೧) ಆಕಾರ ಕಟ್ಟಿದ ಖರಾಬ್ ಜಮೀನುಗಳು, ಅಥವಾ ಗ್ರಾಮಾಂತರ ಪ್ರಜೆಗಳಿಗೆ ಬಿಟ್ಟುಕೊಡದೇನೂ ಆಕಾರ ರದಾವಾಗದೇನೂ ಇರುವ ಜಮೀನುಗಳು; (೨) ಬೇಚರಾಕಾದ ಗ್ರಾಮಗಳು; (೩) ಅಲ್ಲಲ್ಲಿ ಗ್ರಾಮಸ್ಥರ ಗೋಕಾಯಿಗಳ ಮೇವಿಗೆ ಕೊರತೆಯಿಲ್ಲದಂತೆ ದೊರಕುವ ಗೋಮಾಳದ ಜಮೀನುಗಳು; (೪) ಸೇಂದಿ ವನಗಳು; (೫) ಉಪಯೋಗದಲ್ಲಿ ಇಲ್ಲದೆ ಇರುವಂಥಾ ಅಮೃತಮಹಲ್ ಕಾವಲುಗಳು ಮುಂತಾದ ಜಮೀನುಗಳು.

ಈ ಜಮೀನ್ ತಾಕುಗಳನ್ನು ಗವರ್ನಮೆಂಟಿನವರು ಯಾವ ಕರಾರಿನ ಮೇಲೆ ಕೊಡಬೇಕೆಂದು ಅಭಿಪ್ರಾಯಪಡುತ್ತಾರೆಂದರೆ, ದರಖಾಸ್ತುದಾರರು ಆ ತಾಕುಗಳನ್ನು ಯಾವ ಕಾರಣದಿಂದಲೂ ವಿಭಾಗಿಸಿಕೊಳ್ಳಕೂಡದು; ಆದರೆ ಜಮೀನನ್ನು ತಾಕುವಾರಾಗಿಯೇ ಪರಾಧೀನ ಮಾಡಿಕೊಳ್ಳಬಹುದಾಗಿದೆ. ಡೆಪ್ಯುಟಿ ಕಮೀಷನರವರು ಗವರ್ನಮೆಂಟಿನ ಸ್ಯಾಂಕ್ಷನ್ ಪಡೆದು ಆ ಜಮೀನುಗಳನ್ನು ದರಖಾಸ್ತುದಾರರಿಗೆ ಪ್ರಾಯ ವ್ಯವಸಾಯಕ್ಕೆ ಅಂದರೆ ಕೆಲವು ಕಾಲ ಕಂದಾಯವಿಲ್ಲದೆಯೋ ಅಥವಾ ಕಡಮೆ ದರದ ಕಂದಾಯಕ್ಕೋ ಅವರಿಗೆ ಸೂಕ್ತತೋರುವ ಪ್ರಕಾರ ಕೊಡಬಹುದು. ಇಂಥಾ ರಿಯಾಯತಿಯನ್ನು ತೋರಿಸುವುದು ಅವಶ್ಯವೆಂದು ನಮಗೆ ತೋರುತ್ತದೆ. ಯಾಕೆಂದರೆ ಅಂಥಾ ವಿಸ್ತಾರವುಳ್ಳ ತಾಕುಗಳನ್ನು ವ್ಯವಸಾಯಕ್ಕೆ ಪಡೆದುಕೊಳ್ಳುವವರು ಉತ್ತಮತರದ ವ್ಯವಸಾಯದ ಮುಟ್ಟುಗಳನ್ನು ಉಪಯೋಗಿಸಿ, ಹೊಸ ಮಾರ್ಗದ ಕ್ರಮಗಳನ್ನು ರೂಢಿಸಿ, ಒಳ್ಳೆಯ ಬಿತ್ತನೆಯನ್ನು ತಂದು ಹಾಕಿ ಸಾಹಸವನ್ನೂ ಬುದ್ಧಿಯನ್ನೂ ಧನವನ್ನೂ ವಿನಿಯೋಗಿಸಬೇಕಾಗುತ್ತದೆ ಇಲ್ಲವಾದರೆ ಅವರಿಗೆ ನಾನಾತರದ ಕಷ್ಟನಷ್ಟಗಳು ಪ್ರಾಪ್ತವಾಗುವವು; ನವೀನ ವ್ಯವಸಾಯ ಮಾರ್ಗಗಳು ನೆಲೆಗೊಂಡು ವೃದ್ಧಿಹೊಂದದಂತಾಗುತ್ತದೆ.

ಹೇಗಾದರಾಗಿದ್ದು ಭಾವಿಗಳನ್ನು ತೋಡಿ, ಹೊಸ ಮುಟ್ಟುಗಳನ್ನು ತರಿಸಿ, ಕೆಲಸಗಾರರನ್ನು ತಂದಿರಿಸಿಕೊಳ್ಳಲು ಸಮರ್ಥರಾಗಿರುವವರಿಗಲ್ಲದೆ ಇತರ ಸಾಮಾನ್ಯ ಜನರಿಗೆ ಈ ತಾಕುವಾರು ವ್ಯವಸಾಯವು ಸಾಧ್ಯವಾದದ್ದಾಗಿಲ್ಲ. ಅಂಥಾ ತಾಕುಗಳಲ್ಲಿ ಅನುಕೂಲವಾದಷ್ಟು ನೀರು ದೊರಕುವುದಾದರೆ ಹಣವನ್ನು ಖರ್ಚುಮಾಡುವುದು ಸಾರ್ಥಕಹೊಂದಿ, ಹುಲುಸಾದ ಬೆಳೆಯ ರೂಪದಲ್ಲಿ ತುಂಬಾ ಲಾಭಬಂದೀತೆನ್ನುವುದಕ್ಕೆ ಸಂಶಯವಿಲ್ಲ. ದರಖಾಸ್ತಿನಲ್ಲಿ ಹಿಡಿದ ಬಂದೆರಡು ಸಂವತ್ಸರಗಳಲ್ಲೇ ಮಹದೈಶ್ವರ್ಯವನ್ನು ಸಂಪಾದಿಸಿಬಿಡುತ್ತೇವೆಂದು ಊಹಿಸಿ ಪ್ರಯತ್ನಪಡತಕ್ಕವರು ಆಶಾಭಗ್ನರಾಗಿ ಕೆಟ್ಟುಹೋದಾರು. ವ್ಯವಸಾಯದಲ್ಲಿ ನವೀನ ಮಾರ್ಗಗಳನ್ನು ರೂಢಿಸುತ್ತಾ ಬಂದಪಕ್ಷದಲ್ಲಿ ಒಳ್ಳೆಯ ಪ್ರತಿಫಲ ದೊರಕುವುದಲ್ಲದೆ ಆಹಾರ ಧಾನ್ಯಾದಿಗಳು ವಿಶೇಷವಾಗಿ ಬೆಳೆದು ಪ್ರಜೆಗಳಿಗೆ ಎಷ್ಟೋ ಅನುಕೂಲವಾಗುವುದು.

ಮೈಸೂರು ಗವರ್ನಮೆಂಟಿನವರು ಮೇಲ್ಕಂಡಂಥಾ ಷರತ್ತುಗಳ ಮೇರೆ ಎಷ್ಟು ಜನರು ಅಂಥಾ ದೊಡ್ಡ ತಾಕುಗಳನ್ನು ಪಡೆಯಲು ಇಷ್ಟಪಡುತ್ತಾರೆಂಬುವುದನ್ನು ತಿಳಿಯಲಪೇಕ್ಷಿಸುವರು. ತಕ್ಕಮಟ್ಟಿಗೆ ವಿದ್ಯೆಯನ್ನೂ ದ್ರವ್ಯವನ್ನೂ ಉತ್ಸಾಹವನ್ನೂ ಪಡೆದಿರುವಂಥಾ ಜನಗಳಿಗೆ ಇದು ಒಳ್ಳೇ ಸಮಯವಾಗಿದೆ ಈ ರೀತಿ ಮುಂದೆ ಬಂದು ಜಮೀನುಗಳನ್ನು ಪಡೆದು ವ್ಯವಸಾಯಮಾಡತಕ್ಕವರಿಗೆ ಮೈಸೂರು ಸರ್ಕಾರದವರು ಸಾಧ್ಯವಾಗುವ ಮಟ್ಟಿಗೂ ಸುಲಭ ಬಡ್ಡಿಗೆ ಹಣವನ್ನು ಅಡ್ವಾನ್ಸಾಗಿ ಕೊಡಬೇಕೆಂದೂ, ವ್ಯವಸಾಯ ಕ್ರಮಗಳನ್ನು ರೂಢಿಸುವಲ್ಲಿ ಅವರಿಗೆ ಅವಶ್ಯವಾದ ತಿಳುವಳಿಕೆಯನ್ನು ಆಗಾಗ್ಗೆ ಒದಗಿಸಿಕೊಡುತ್ತಾ ಬರಬೇಕೆಂದೂ ಅಭಿಪ್ರಾಯಪಡುವೆವು ಅಂಥಾ ಒಂದು ತಾಕಿನ ವ್ಯವಸಾಯಕ್ಕೆ ದರಖಾಸ್ತುದಾರನು ೧,೦೦೦ ರೂಪಾಯಿ ಖರ್ಚುಮಾಡಿದ ಪಕ್ಷದಲ್ಲಿ ಒಂದೆರಡು ವರುಷಗಳೊಳಗಾಗಿ ಆತನಿಗೆ ಸರ್ಕಾರದವರು ೫೦೦ ರೂಪಾಯಿನ ತನಕ ಸಾಲಕೊಟ್ಟು ಸಹಾಯಮಾಡುವಂತಾದರೆ ಆತನ ಸಾಹಸವೂ ಸರ್ಕಾರದವರ ಉದ್ದೇಶವೂ ಸಾರ್ಥಕವಾಗಬಹುದು.

ಈ ಜಮೀನುಗಳನ್ನು ಪಡೆಯಲಪೇಕ್ಷಿಸುವವರು ಆಯಾ ತಾಕುಗಳಿರುವ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಿಗಾಗಲಿ, ಬೆಂಗಳೂರು ಅವೆನ್ಯೂ ರೋಡ್ ರಿಂಗ್‌ವುಡ್ ಬಂಗಲೆಯಲ್ಲಿರುವ ವ್ಯವಸಾಯ ಕಮಿಟಿ ಸೆಕ್ರೆಟರಿಯವರಾದ ಮೆ॥ ಕೆ. ಸುಬ್ಬರಾಯರಿಗಾಗಲಿ ಬರೆದುಕೊಂಡ ಪಕ್ಷದಲ್ಲಿ ಸರಿಯಾದ ಜವಾಬು ಸಿಕ್ಕುತ್ತದೆ. ನಿಜವಾಗಿಯೂ ಈ ಸಂಸ್ಥಾನವನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಡತಕ್ಕವರು ಈಗ ಮೈಸೂರು ಗವರ್ನಮೆಂಟಿನವರು ಮಾಡಿರುವ ಏರ್ಪಾಡನ್ನು ಕೈಗೊಂಡು ಸಾರ್ಥಕಪಡಿಸಲು ಮುಂದಾಳುಗಳಾಗಿ ಬಂದಾರೆಂದು ಹಾರೈಸುತ್ತೇವೆ.

ಬಾಲ್ಕನ್ ಯುದ್ಧವು.

ಕಳೆದ ವಾರ ಯುದ್ಧಭೂಮಿಯಿಂದ ಬಂದಿರುವ ವರ್ತಮಾನಗಳಲ್ಲಿ ವಿಶೇಷಭಾಗವೆಲ್ಲಾ ಯುದ್ಧವನ್ನು ನಿಲ್ಲಿಸುವುದಕ್ಕಾಗಿ ನಡೆಯುತ್ತಿರುವ ಬರೀ ಚರ್ಚೆಗಳೇ ಆಗಿವೆ. ಯುದ್ಧಮಾಡುತ್ತಿರುವ ಶಕ್ತಿಗಳವರು ತಮ್ಮ ತಮ್ಮ ಪ್ರತಿನಿಧಿಗಳನ್ನು ನೇಮಿಸಿ ಕಳುಹಿಸಿರುತ್ತಾರೆ ಈ ರಾಯಭಾರಿಗಳು ಚಟಾಲ್ಜಾ ಸಾಲು ಕೋಟೆಗಳ ಬಳಿ ಸಭೆ ಸೇರಿ, ಮೊದಲು ಯುದ್ಧವನ್ನು ನಿಲ್ಲಿಸುವುದಕ್ಕೆ ಒಂದು ಕರಾರುನಾಮೆಯನ್ನು ಸಿದ್ಧಮಾಡುತ್ತಿರುವರು. ಈ ಕರಾರುನಾಮೆಗೆ ಶಕ್ತಿಗಳ ಪ್ರತಿನಿಧಿಗಳು ಒಪ್ಪಿ ರುಜುಮಾಡುವ ದಿನ ಯೂರೋಪಿಯನ್ ತುರ್ಕೀ ರಾಜ್ಯದಲ್ಲಿ ಯಾವ ಯಾವ ಭಾಗವು ಯಾವ ಯಾವ ಶಕ್ತಿಯವರ ವಶದಲ್ಲಿರುತ್ತದೋ ಅದನ್ನು ಪಲ್ಲಟಮಾಡಕೂಡದೆಂದು ಗೊತ್ತಾಗಿರುವಂತೆಯೂ, ಇದನ್ನು ತುರ್ಕಿಯ ಮಂತ್ರಿ ಸಭೆ (ಕ್ಯಾಬಿನೆಟ್) ಯವರು ಒಪ್ಪಿಕೊಂಡಿರಾರೆಂದೂ ಕಳೆದ ಭಾನುವಾರ ಬಂದ ತಂತೀ ವರ್ತಮಾನದಿಂದ ಗೊತ್ತಾಗುತ್ತದೆ. ಯುದ್ಧವನ್ನು ಈ ಕರಾರುನಾಮೆಯ ಪ್ರಕಾರ ಮುಕ್ತಾಯಕ್ಕೆ ತಂದ ಬಳಿಕ ಸಂಧಾನದ ಕರಾರು ನಡೆಯುವುದಕ್ಕೆ ರಾಯಭಾರಿಗಳು ಸೇರಿ ಆಲೋಚನೆಮಾಡುತ್ತಾರೆಂದು ತಿಳಿಯುವುದು. ಹ್ಯಾಗೂ ಈ ಯುದ್ಧವು ನಿಂತು ಜನಗಳ ಕೊಲೆಯು ಮುಕ್ತಾಯವಾಗುತ್ತಾ ಬಂದಿರುವುದನ್ನು ನೋಡಿ ಆನಂದಪಡುತ್ತೇವೆ

ಕಳೆದ ವಾರ ನಡೆದಿರುವ ಯುದ್ಧಕಾರ್ಯಗಳೇನೆಂದರೆ—ಸರ್ವಿಯ ಸೈನಿಕರು ಮೊನಾಸ್ಟಿರ್ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡ ಕೂಡಲೆ 10,000 ತುರ್ಕಿ ಸೈನ್ಯಗಳು ಅವರಿಗೆ ಕೈಸೆರೆ ಸಿಕ್ಕಿದರು. ಗ್ರೀಕ್ ಸೈನಿಕರು ಚಿಯೋಸ್ ಎಂಬ ದ್ವೀಪವನ್ನು ಗೆದ್ದು ಸ್ವಾಧೀನಪಡಿಸಿಕೊಂಡಿದ್ದಾರೆ. ಆಡ್ರಿಯನೋಪಲ್ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡಿರುವ ಬಲ್ಗೇರಿಯ ಸೈನಿಕರನ್ನು ಓಡಿಸಬೇಕೆಂದು ತುರ್ಕಿ ಸೈನ್ಯಗಳು ಆ ಪಟ್ಟಣದೊಳಗಿಂದ ಬಂದು ಯುದ್ಧಮಾಡಿದ ಹಾಗೂ, ಸೋತು ಹಿಮ್ಮೆಟ್ಟಿ ಪಟ್ಟಣವನ್ನು ಪುನಃ ಸೇರಿಕೊಂಡ ಹಾಗೂ ತಿಳಿಯುವುದು ಇದುವರೆಗೆ ಬಲ್ಗೇರಿಯದ ಸೈನ್ಯದಲ್ಲಿ 1,00,000 ಜನರು ಬಲಿಯಾಗಿರುವಂತೆ ತಂತೀ ವರ್ತಮಾನ ಬಂದಿದೆ. ಸರ್ವಿಯ ಸೈನಿಕರು ಡುರಾಜೊ ಪಟ್ಟಣದ ಕಡೆ ನುಗ್ಗಿಹೋಗುತ್ತಿದ್ದಾರೆಂದು ತಿಳಿಯುತ್ತದೆ ಆಡ್ರಿಯನೋಪಲ್ ಪಟ್ಟಣದೊಳಕ್ಕೆ ಶತ್ರುಗಳು ಸಿಡಿಮದ್ದಿನ ಗುಂಡುಗಳನ್ನು ವಿಮಾನಯಂತ್ರಗಳಿಂದ ಸುರಿಸಿದ್ದರಿಂದ ಪಟ್ಟಣದ ಕೆಲವು ದೊಡ್ಡ ಚರಿತ್ರಾರ್ಹವಾದ ಕಟ್ಟಡಗಳು ಹತ್ತಿಕೊಂಡು ಉರಿಯುತ್ತಿರುವುದಾಗಿಯೂ, ಪಟ್ಟಣದೊಳಗೆ ಅನಾಯಕತದಿಂದಲೂ ದುರ್ಭಿಕ್ಷದಿಂದಲೂ ಜನರು ಕಷ್ಟಪಡುತ್ತಿದ್ದಾರೆಂದೂ ಹೇಳುವರು. ಚಟಾಲ್ಜಾ ಸಾಲು ಕೋಟೆಗಳ ಬಳಿ 1,30,000 ದ ತನಕ ತುರ್ಕಿ ಸೈನಿಕರು ಬಂದು ಸೇರಿರುವರು. ಬಲ್ಗೇರಿಯದವರು ಈಜಿಯನ್ ಸಮುದ್ರತೀರದಲ್ಲಿ ಸಾಲೊನಿಕ ಕ್ಕೂ ಕಾನ್‌ಸ್ಟಾಂಟಿನೋಪಲ್‌ಗೂ ನಡುವೆ ಇರುವ ಡೆಡೀಗಾಟ್ ಎಂಬ ಪಟ್ಟಣಕ್ಕೆ ಹದಿನೇಳು ಜಹಜುಗಳಲ್ಲಿ 12,000 ಸೈನ್ಯವನ್ನು ಕಳುಹಿಸಿದಾರೆ

ಡೆಮೋಟಿಕ ಪಟ್ಟಣದ ಬಳಿ ತುರ್ಕಿಯವರಿಗೂ ಬಲ್ಗೇರಿಯದವರಿಗೂ ಬಹು ಕಠಿಣವಾದ ಯುದ್ಧನಡೆಯಿತು ತುರ್ಕಿಯವರು ಸೋತು ಹೋಗಿ ಶತ್ರುಗಳ ವಶವಾದರು. ಇಬ್ಬರು ಪಾಷಾಗಳೂ, 272 ಮಂದಿ ಹುದ್ದೇದಾರರೂ, 8,870 ಮಂದಿ ಸೈನಿಕರೂ ಬಲ್ಗೇರಿಯದವರಿಗೆ ಶರಣಾಗತರಾಗಿ ಅವರ ಕೈಸೆರೆಯಾಗಿರುತ್ತಾರೆ. ಇದಲ್ಲದೆ ಬಲ್ಗೇರಿಯದವರಿಗೆ ಅಲ್ಲಿ ತುರ್ಕಿಯವರ ಅನೇಕ ಫಿರಂಗಿಗಳೂ, 1,000 ಕುದುರೆಗಳೂ ಸಿಕ್ಕಿದವು

ಸರ್ವಿಯದವರು ಡಿಬ್ರಾವನ್ನು ಸ್ವಾಧೀನಪಡಿಸಿಕೊಂಡರು. ಮತ್ತು ಅವರು ಕಳೆದ ಶನಿವಾರ ಮಧ್ಯಾಹ್ನ ಡುರಾಜೋ ಪಟ್ಟಣವನ್ನು ಆಕ್ರಮಿಸಿಕೊಂಡರು. ಈ ಸ್ಥಳದಲ್ಲಿ ಯುದ್ಧವೇನೂ ನಡೆಯಲಿಲ್ಲ. ಮಾಂಟಿನೀಗ್ರೋದವರು ಸ್ಕುಟಾರಿ ಪಟ್ಟಣಕ್ಕೆ ಫಿರಂಗಿ ಎತ್ತಿಕಟ್ಟಿ ಹೊಡೆಯಲು ಮತ್ತೆ ಪ್ರಾರಂಭವಾಗಿದೆ.

ಲೋಕದಲ್ಲಿ ಅತ್ಯಂತ ಪ್ರಖ್ಯಾತವಾದ ಗ್ರಂಥ

ಪ್ರತಿ ದಿನದಲ್ಲಿಯೂ ಅಗಣಿತವಾದ ನೂತನ ಗ್ರಂಥಗಳೂ ಉತ್ತಮವಾದವುಗಳೆಂದು ಜನರು ಭಾವಿಸುವ ಪುರಾತನ ಗ್ರಂಥಗಳೂ ಪ್ರಕಟವಾಗುತ್ತವೆ. ಜನರು ಬೇರೆ ಬೇರೆ ಉದ್ದೇಶಗಳಿಂದ ಬೇರೆ ಬೇರೆ ಗ್ರಂಥಗಳನ್ನು ಕೊಂಡುಕೊಂಡು ಓದುತ್ತಾರೆ. ಒಬ್ಬನಿಗೆ ಪ್ರಿಯವಾಗಿರುವಂಥಾದ್ದು ಮತ್ತೊಬ್ಬನಿಗೆ ಪ್ರಿಯವಾಗಿರುವುದಿಲ್ಲ. ಹೀಗಿದ್ದರೂ ಒಂದು ಗ್ರಂಥವು ಬೇರೆ ಎಲ್ಲಾ ಗ್ರಂಥಗಳನ್ನು ಬಹಳ ದೂರ ಹಿಂದಕ್ಕೆ ಹಾಕಿ ಅತ್ಯಂತ ಪ್ರಖ್ಯಾತಿಯನ್ನು ಪಡೆದಿರುವುದು ಆಶ್ಚರ್ಯವಲ್ಲವೇ? ಕ್ರೈಸ್ತರ ಸತ್ಯವೇದವೇ ಈ ಆಶ್ಚರ್ಯವಾದ ಗ್ರಂಥವಾಗಿರುತ್ತದೆ.

ಇದು ಸುಮಾರು ಎರಡು ಸಾವಿರ ವರುಷಗಳಿಂದಲೂ ಅನೇಕ ವಿಧವಾದ ಕೇಡುಗಳಿಗೆ ಸಿಕ್ಕಿದ್ದಾಗ್ಯೂ ಈ ವರೆಗೂ ಉಳಿದಿರುತ್ತದೆ ಕೆಲವರು ಇದನ್ನು ನಿರ್ನಾಮಮಾಡುವುದಕ್ಕೆ ಪ್ರಯತ್ನಪಟ್ಟರು ಇದನ್ನು ಓದುತ್ತಿದ್ದವರು ಅಥವಾ ಇದನ್ನು ಇಟ್ಟುಕೊಂಡಿದ್ದವರು ಮಹಾ ಅಪರಾಧಿಗಳೆಂದು ತೀರ್ಮಾನಿಸಲ್ಪಟ್ಟು ಕ್ರೂರವಾದ ಹಿಂಸೆಗೂ ಮರಣಕ್ಕೂ ಗುರಿಯಾದರು. ಇದನ್ನು ಹಲವರು ಇದನ್ನು ಓದಿದರೂ ಸರಿಯಾಗಿ ಗ್ರಹಿಸಿಕೊಳ್ಳಲಿಲ್ಲ. ಇದನ್ನು ಸ್ವಲ್ಪ ಇದ್ದವರು ತಪ್ಪಭಿಪ್ರಾಯಗಳನ್ನು ಮಾಡಿಕೊಂಡು ಅದನ್ನು ಹಾಳುಮಾಡುವುದಕ್ಕೆ ಉದ್ಯುಕ್ತರಾದರು. ಕಾಲ, ಅಜ್ಞಾನ, ವಿರೋಧ, ಅಲಕ್ಷ್ಯ ಇವುಗಳು ಅದರ ಮೇಲೆ ತಮ್ಮ ಮತ್ಸರವನ್ನು ತೋರಿಸಿದಾಗ್ಯೂ ಅದು ಕಮ್ಮಾರನ ಅಡಿಗಲ್ಲಿನಂತೆ ಲೆಕ್ಕವಿಲ್ಲದ ಪೆಟ್ಟುಗಳನ್ನು ತಿಂದು ಈ ವರೆಗೂ ಸ್ಥಿರವಾಗಿ ನಿಂತಿರುವುದು ಆಶ್ಚರ್ಯವಲ್ಲವೇ?

ಬ್ರಿಟಿಷ್ ಅಂಡ್ ಫಾರಿನ್ ಬೈಬಲ್ ಸೊಸೈಟಿಯವರು ಮಾತ್ರ ಪ್ರತಿ ವರುಷದಲ್ಲಿಯೂ 60,00,000 ಹೊಸ ಪ್ರತಿಗಳನ್ನು ಛಾಪಿಸಿ ಬೇರೆ ಬೇರೆ ಕಡೆಗಳಿಗೆ ರವಾನಿಸುತ್ತಾರೆ ಇವುಗಳ ಸಂಖ್ಯೆಯು ಪ್ರತಿ ವರುಷವೂ ಲಕ್ಷ ... ಯಾಗಿ ಹೆಚ್ಚುತ್ತಲಿದೆ. ಇದು ಮಾತ್ರವಲ್ಲದೆ ಸತ್ಯವೇದವನ್ನು ಬಹಳ ... ಕೊಂಡುಕೊಳ್ಳುವವರು ಇಂಗ್ಲಾಂಡ್, ಅಮೇರಿಕ, ಜರ್ಮನಿ ಮೊದಲಾದ ಕ್ರೈಸ್ತ ದೇಶಗಳಲ್ಲಿ ಮಾತ್ರವಲ್ಲದೆ ಬೇರೆ ಕಡೆಗಳಲ್ಲಿಯೂ ಇರುತ್ತಾರೆ ... ದೇಶದಲ್ಲಿ ಸತ್ಯವೇದಕ್ಕೆ ಇರುವಷ್ಟು ಗಿರಾಕಿಗಳು ಬೇರೆ ಯಾವ ಪುಸ್ತಕಕ್ಕೂ ಇರುವುದಿಲ್ಲ. ಅಲ್ಲಿ ಮಾತ್ರ ಪ್ರತಿ ವರುಷ 10,000 ಪ್ರತಿಗಳು ಮಾರಾಗುತ್ತವೆ ... ಲೋಕದ ಎಲ್ಲಾ ಕಡೆಗಳಲ್ಲಿ ಇಷ್ಟು ಹೆಚ್ಚಾಗಿ ವಿಕ್ರಯಕ್ಕೆ ಹೋಗುವ ಬೇರೆ ಗ್ರಂಥವಾದರೂ ಇರುವುದೇ ಇಲ್ಲ.

ಭಾಷಾಂತರಪರಿವರ್ತನೆಯನ್ನು ಹೊಂದಿರುವ ವಿಷಯದಲ್ಲಿಯೂ ಸತ್ಯವೇದವು ಅಸಮಾನವಾದುದು ವಿವಿಧವಾದ ಹತ್ತು ಭಾಷೆಗಳಿಗೆ ಭಾಷಾಂತರಮಾಡಲ್ಪಟ್ಟಿರುವ ಗ್ರಂಥಗಳು ಕೇವಲ ವಿರಳ ಹೋಮರ್ 20, ಷೇಕ್ಸ್‌ಪಿಯರ್ 34, ಟಾಲ್‌ಸ್ಟಾಯಿ 41, ಬನ್ಯನ್ 111, ಬೈಬಲ್ ಎಂಬ ಸತ್ಯವೇದವು ... ಭಾಷೆಗಳಿಗೆ ತರ್ಜುಮೆಮಾಡಲ್ಪಟ್ಟಿದೆ. ಸತ್ಯವೇದವು ಈಗಲೂ ಸರಾಸರಿ ಪ್ರತಿ ವರುಷವೂ ಐದಾರು ಹೊಸ ಭಾಷೆಗಳಿಗೆ ತರ್ಜುಮೆಮಾಡಲ್ಪಡುತ್ತಾ ಇದೆ

ಈ ನವನಾಗರೀಕತೆಯ ಕಾಲದಲ್ಲಿ ಪ್ರತಿ ದಿನವೂ ಅಗಣಿತವಾದ ಗ್ರಂಥಗಳು ರಚಿಸಲ್ಪಡುತ್ತಾ ಇದ್ದಾಗ್ಯೂ ಅವೆಲ್ಲವುಗಳಲ್ಲಿ ಸತ್ಯವೇದಕ್ಕೆ ಸಂಬಂಧಪಟ್ಟ ಗ್ರಂಥಗಳೇ ಹೆಚ್ಚಾಗಿರುತ್ತವೆ. ಸತ್ಯವೇದವೇ ಇಲ್ಲದಿದ್ದರೆ ಇವುಗಳಲ್ಲಿ ಒಂದರೂ ಇರುತ್ತಿರಲಿಲ್ಲ. ಸತ್ಯವೇದವು ಬಹು ಪುರಾತನ ಕಾಲದ್ದಾದರೂ ಈ ... ಪಂಡಿತೋತ್ತಮರು ಅದನ್ನು ಅಮೌಲ್ಯವಾದುದೆಂದು ಭಾವಿಸಿ ಅದನ್ನು ವಿವರಿಸುವುದಕ್ಕಾಗಿ ಅಥವಾ ಅದರ ಪಕ್ಷವನ್ನು ಹಿಡಿದು ಹೋರಾಡುವುದಕ್ಕಾಗಿ ತಮ್ಮ ಬುದ್ಧಿ ಸಾಮರ್ಥ್ಯಗಳನ್ನೆಲ್ಲಾ ವಿನಿಯೋಗಿಸುತ್ತಿರುವುದಕ್ಕೆ ಕಾರಣವೇನು ನೀವು ಹೇಳಬಲ್ಲಿರಾ? ಯಾವ ವಿಧದಲ್ಲಿ ನೋಡಿದಾಗ್ಯೂ ಇದು ಅತ್ಯಂತ ಪ್ರಖ್ಯಾತವಾದ ಗ್ರಂಥವಾಗಿಯೇ ಇರುತ್ತದೆ.

ಲೋಕದ ಚತುರಶಿಕ್ಷಾಮಣಿಗಳೂ ಬಹು ಸತ್ಕ್ಕಂಥ, ಬರ ಬರ ಗಿರಾಕಿಗಳನ್ನು ಹೆಚ್ಚಾಗಿ ಸಂಪಾದಿಸಿಕೊಳ್ಳುತ್ತಿರುವಂಥ, ಎಲ್ಲಾ ಭಾಷೆಗಳನ್ನು ಐಕ್ಯವಮಾಡಿಕೊಂಡು ಆ ಮೂಲಕವಾಗಿ ತನ್ನನ್ನು ಪ್ರಕಟಿಸಿಕೊಳ್ಳುತ್ತಿರುವ, ವಿದ್ಯಾಪಾರಂಗತನನ್ನೂ ನಿರಕ್ಷರಕುಕ್ಷಿಯನ್ನೂ ಬಲ್ಲಿದನನ್ನೂ ಬಡವನನ್ನೂ ಉತ್ತಮನನ್ನೂ ಪಾಮರನನ್ನೂ ತನ್ನ ಕಡೆಗೆ ಆಕರ್ಷಿಸಿಕೊಳ್ಳುತ್ತಿರುವ, ಆಗಣಿತವಾದ ಗ್ರಂಥರಚನೆಗೆ ಮೂಲ ಕಾರಣವಾಗಿರುವಂಥ ಲೋಕದಲ್ಲಿ ಅಸಮಾನವಾದುದೆಂದು ಎಣಿಸಲ್ಪಡುವಷ್ಟರಮಟ್ಟಿಗೆ ಪ್ರಖ್ಯಾತಿಯನ್ನು ಪಡೆದಿರುವ ಈ ಅಪರೂಪವಾದ ಗ್ರಂಥದ ಶಕ್ತಿಯು ಏನಾಗಿರಬಹುದು?

ಇದಕ್ಕೆ ಒಂದೇ ಒಂದು ಕಾರಣವುಂಟು ಅದೇನೆಂದರೆ—ಅದು ದೇವರ ಜೀವವಾಕ್ಯವೆಂದು ಪ್ರಕಾಶಪಡಿಸುತ್ತದೆ. ಆದುದರಿಂದ ಅದು ಪುರಾತನ ಕಾಲದ್ದಾದರೂ ಸದಾ ಹೊಸದಾಗಿಯೇ ಇರುತ್ತದೆ ಅದು ಎಲ್ಲಾ ದೇಶಗಳ ಎಲ್ಲಾ ಕಾಲಗಳ ಜನರಿಗೂ ಜ್ಞಾನೋದಯವನ್ನುಂಟುಮಾಡಿ ಎಂದೆಂದಿಗೂ ಬಿದ್ದುಹೋಗದ ಸತ್ಯಾಂಶವನ್ನು ಪ್ರಕಟಮಾಡುತ್ತದೆ. ಇದನ್ನು ನೀವು ಪರೀಕ್ಷೆಮಾಡಿ ನೋಡಿ.

ಒಳದೇಶದ ವೃತ್ತಾಂತಗಳು.

ಕಳೆದ ವಾರ ಬೆಂಗಳೂರಿನಲ್ಲಿ ಸುಮಾರು 40 ವಯಸ್ಸಿನ ವೆಂಕಟೇಶ್ ನಂಜಮ್ಮ ಎಂಬ ಬ್ರಾಹ್ಮಣಿಗೆ ಹಾವು ಕಚ್ಚಿ ತೀರಿಹೋದರು.

ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೆ॥ ಪಿ. ವಿ. ಅಚ್ಯುತರಾಯರಿಗೆ ಖಾಯಿಲೆ ವಾಸಿಯಾಗಿ ಸೌಖ್ಯದಿಂದಿರುತ್ತಾರೆಂದು ತಿಳಿದು ಸಂತೋಷಪಡುತ್ತೇವೆ

ಏಳನೆಯ ವಿಶ್ವೇಶ್ವರ ಮಹಾಸಭೆಯೂ, ಮಹಿಳಾ ಪರಿಷತ್ತೂ ಸಿದ್ಧಯಲ್ಲಿ ಇದೇ ಡಿಸೆಂಬರು ತಾ. 26 ನೇ ಗುರುವಾರದಿಂದ ಪ್ರಾರಂಭವಾಗಿ ... ವಾರ ನಡೆಯುವಂತೆ ನಿಷ್ಕರ್ಷೆಯಾಗಿದೆ.

ನಮ್ಮ ಚಕ್ರವರ್ತಿಯವರ ಮಾತೃಶ್ರೀಯವರಾದ ಅಲೆಕ್ಸಾಂಡ್ರಾ ರಾಣಿಯವರ ಹುಟ್ಟಿದ ಹಬ್ಬದ ನಿಮಿತ್ತವಾಗಿ ಕಳೆದ ಸೋಮವಾರ ಬೆಳಿಗ್ಗೆ ದಂಡಿನಲ್ಲಿ ಗೌರವಾರ್ಥವಾದ 31 ತೋಪುಗಳನ್ನು ಹಾರಿಸಿದರು.

ಇಲ್ಲಿನ ಮಂಡಿ ಮೊಹಲ್ಲೆಯಲ್ಲಿ ಮಹಮದೀಯರಿಗೆ ಮಾರಾಮಾರಿ ನಡೆದು ಒಬ್ಬ ಮಹಮದೀಯನು ಪೂರಾ ಗಾಯಪಟ್ಟು ಬಿದ್ದನು. ಅವನನ್ನು ಪೋಲೀಸಿನವರು ಆಸ್ಪತ್ರೆಗೆ ಸಾಗಿಸಿದರು ಅವನು ಸ್ವಲ್ಪ ಹೊತ್ತಿನಲ್ಲೇ ಆಸ್ಪತ್ರೆಯಲ್ಲಿ ಮೃತಪಟ್ಟದ್ದರಿಂದ ಸಿಟಿ ಮ್ಯಾಜಿಸ್ಟ್ರೇಟರು ಛಾಪ್ ಮಹಜರು ನಡೆಸಿದರು. ಈ ಕೊಲೆಕೃತ್ಯ ನಡೆಸಿದವರನ್ನು ಪೋಲೀಸಿನವರು ಪತ್ತೆಮಾಡುತ್ತಿದ್ದಾರೆ

ಬೆಂಗಳೂರಿನಲ್ಲಿದ್ದು ಗತಿಸಿದ ಮೆ|| ಚೌಬಿನ ಸುಬ್ಬರಾಯರು ತಮ್ಮ ಆಸ್ತಿಯಿಂದ 10,000 ರೂಪಾಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

⁂

ರಾಜಧಾನಿಯ ಪ್ರಜೆಗಳು ಕಳೆದ ಸೋಮವಾರ ಸಾಯಂಕಾಲ ಪಿ. ಪಲನಿ ಮೂರ್ತಿ ಎಂಬಾತನ ಸಾಹಸ ಕಾರ್ಯಗಳನ್ನು ನೋಡಿ ಸಂತೋಷಪಟ್ಟು, ಆತನಿಗೆ ಒಂದು ಬಂಗಾರದ ಮೆಡಲನ್ನು ಕೊಟ್ಟರು.

⁂

ಕಲ್ಲಿಕೋಟೆಯ ಜಾಮೊರಿನ್ ರಾಜರ ದಾಯಾದ್ಯರಾದ ಶ್ರೀ ಮಾನವೇದ ರಾಜರವರು ಬೆಂಗಳೂರಿನಲ್ಲಿ ಬಂದು ಇಳುಕೊಂಡಿದಾರೆ. ಈ ವಾರದೊಳಗೆ ನಮ್ಮ ಮಹಾರಾಜರವರು ಭೇಟಿಕೊಡುತ್ತಾರೆಂದು ತಿಳಿಯುವುದು.

⁂

ಹಿಂದಿನ ವಾರ ಕೋಲಾರ್ ಚಿನ್ನದ ಗಣಿಗಳ ಪೈಕಿ ಮೈಸೂರು ಮೈನ್ ಎಂಬ ಗಣಿಯೊಳಗೆ ವಾಯುಸಂಚಲನದಿಂದ ಅನಾಯುತ ಸಂಭವಿಸಿ ೨ ಜನ ಕೂಲಿಯವರು ಕಾಲವಾದರೆಂದೂ, 12 ಮಂದಿಗೆ ಗಾಯಗಳಾದವೆಂದೂ ಪ್ರಕಟವಾಗಿದೆ.

⁂

ಈ ಸಲ ಶಿವಮೊಗ್ಗಾ ಫಾರೆಸ್ಟ್ ಇಲಾಖೆಯವರು ಇಂಡುವಳ್ಳಿ ಮತ್ತು ಕ್ಯಾಂಪ್ ಖೆಡ್ಡಾಗಳಲ್ಲಿ ಹಿಡಿದಿರುವ ಇಪ್ಪತ್ತು ಆನೆಗಳನ್ನು (7 ದೊಡ್ಡ ಗಂಡಾನೆಗಳು, 10 ಸಣ್ಣ ಹೆಣ್ಣು ಮತ್ತು 3 ಗಂಡು ಮರಿ ಆನೆಗಳು) ಶಿವಮೊಗ್ಗಾ ರೈಲ್ವೆ ಸ್ಟೇಷನ್‌ನಿಂದ 7 ಮೈಲಿ ದೂರದಲ್ಲಿರುವ ಸಕ್ರೆಬೈಲಿನಲ್ಲಿ ಈ ತಿಂಗಳು ತಾ. 23 ನೇ ಸೋಮವಾರ ಡೆಪ್ಯುಟಿ ಕಮಿಷನರ್‌ರವರು ಹರಾಜು ಮೂಲಕ ವಿಕ್ರಯಿಸುತ್ತಾರೆಂದು ತಿಳಿಯುವುದು.

⁂

ದಿವಾನ್ ಮ. ಎಂ. ವಿಶ್ವೇಶ್ವರಯ್ಯನವರಿಗೆ ಮೊನ್ನೆ ಶನಿವಾರ ಸಾಯಂಕಾಲ ಈ ಸಂಸ್ಥಾನದ ಇಂಜನಿಯರ್ ಇಲಾಖೆಯ ಅಧಿಕಾರಿಗಳೆಲ್ಲಾ ಸೇರಿ ಬೆಂಗಳೂರಿನಲ್ಲಿ ಔತನವನ್ನು ಮಾಡಿ ಅಡ್ರೆಸ್ಸನ್ನು ಒಪ್ಪಿಸಿದರು. ಈ ಸಂತೋಷಕ್ಕೆ ಬ್ರಿಟಿಷ್ ರೆಸಿಡೆಂಟರೂ, ಮಾಜಿ ದಿವಾನ್ ಮೆ|| ಮಾಧವರಾಯರೇ ಮುಂತಾದವರೂ ದಯಮಾಡಿಸಿದ್ದರು. ಮುಂದಿನ ಗುರುವಾರ ಬೆಂಗಳೂರು ಪ್ರಜೆಗಳು ಅಲ್ಲಿನ ಲಾಲ್ ಬಾಗ್ ಉದ್ಯಾನವನದಲ್ಲಿ ದಿವಾನ್‌ರವರಿಗೆ ಅಡ್ರೆಸ್ಸನ್ನು ಒಪ್ಪಿಸಿ ತಮ್ಮ ಭಕ್ತಿಪ್ರೀತಿಗಳನ್ನು ಪ್ರಕಾಶಪಡಿಸುವವರಾಗಿದಾರೆ.

⁂

ಮ|| ಪವರ್ಷೈಯನವರು ಬರೆಯುವುದು:— ಶ್ರೀರಂಗಪಟ್ಟಣದಲ್ಲಿ ಏರ್ಪಡಿಸುವ ಕಾರೊನೇಷನ್ ಬಿಲ್ಡಿಂಗ್ ಫಂಡಿಗೆ ಪ್ರಜೆಗಳು ಇದುವರಿವಿಗೆ ಚಂದಾವಾಗಿ ಕೊಟ್ಟಿರುವ ಸುಮಾರು 3,500 ರೂಪಾಯಿ ಜತೆಗೆ ಡಿಸ್ಟ್ರಿಕ್ಟ್ ಬೋರ್ಡಿನವರು 3,000 ರೂಪಾಯನ್ನು ಸಬ್-ಡಿವಿಜನ್ ಆಫೀಸರ ಮತ್ತು ಅಮಲ್ದಾರರ ಪ್ರಾರ್ಥನಾನುಸಾರ ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಕಟ್ಟಡದ ಅಸ್ತಿಭಾರ ಶಿಲೆಯನ್ನು ನಮ್ಮ ಡೆಪ್ಯುಟಿ ಕಮಿಷನರ್ ಮೆ|| ಕೆ. ಚಾಂಡಿಯವರಿಂದ ಇಡಿಸುವ ಏರ್ಪಾಡು ನಡೆಯುತ್ತಿದೆ. ಈಚೆಗೆ ಈ ಕಾರ್ಯವು 12 ನೇ ಗುರುವಾರ ಸಾಯಂಕಾಲ ನಡೆಯುವುದೆಂದು ತಿಳಿಯುತ್ತೇವೆ.

⁂

ಶ್ರೀಮನ್ಮಹಾರಾಜರವರೂ, ಯುವರಾಜರವರೂ ಅರಮನೆಯ ರಾಣಿಯವರ ಸಮೇತ ನೆನ್ನೆ ಮಧ್ಯಾಹ್ನ 12 ಗಂಟೆಗೆ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿದರು. ಇವರ ಕೂಡ ಪ್ರೈವೇಟ್ ಸೆಕ್ರೆಟರಿಯವರೂ, ಅ. ಸೆಕ್ರೆಟರಿಯವರೂ ಪ್ರಯಾಣಮಾಡಿದರು. ಅರಮನೆಯ ಪರಿವಾರದವರು ಬೆಂಗಳೂರಿನಲ್ಲೇ ಕೆಲವು ಕಾಲ ಇರುತ್ತಾರೆ. ಮಹಾರಾಜರವರೂ ಯುವರಾಜರವರೂ ತಾ 9 ನೇ ಸೋಮವಾರ ತಮ್ಮ ಸೆಕ್ರೆಟರಿಗಳ ಸಹಿತ ಬೆಂಗಳೂರಿನಿಂದ ಸಕಲೇಶಪುರಕ್ಕೆ ದಯಮಾಡುವರು. ಬ್ರಿಟಿಷ್ ರೆಸಿಡೆಂಟರೂ ಅವರ ಕೂಡ ತೆರಳುವರೆಂದು ತಿಳಿದುಬರುತ್ತದೆ. ಕಡೂರಿನಲ್ಲಿ ಪ್ಲೇಗ್ ಉಪದ್ರವದಿಂದ ಅವರೆಲ್ಲಾ ಅಲ್ಲಿ ತಂಗುವುದನ್ನು ನಿಲ್ಲಿಸಿಬಿಟ್ಟರು.

ಕನ್ನೇಗಾಲದ ದಂಗೆ ಮೊಕದ್ದಮೆಯು.

ಈಚೆಗೆ ನಡೆದ ವಿದ್ಯಮಾನಗಳು.

ಮೂಗೂರು, ಕನ್ನೇಗಾಲದ ದಂಗೆಯನ್ನು ಮುಂದು ನಿಂತು ಪ್ರೋತ್ಸಾಹಿಸಿದಂಥಾ ಮುಖಂಡರುಗಳ ಪೈಕಿ 7 ೮ ಜನರು ಸಿಕ್ಕಿದರು. ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿದ್ದಾಯಿತು. ಆ ಮುಖ್ಯಸ್ಥರೆಂದು ಹೇಳುವವರು ಯಾರೆಂದರೆ:—(1) ಭಾಸ್ಕರಯ್ಯ—ಈತನು ಮೂಗೂರಿನವನು, ಚಿಕ್ಕಬಳ್ಳಾಪುರಕ್ಕೆ ರೈಲ್ವೆ ಗಾಡಿಯಲ್ಲಿ ಹೋಗುತ್ತಿರುವಾಗ ಚಾಮರಾಜನಗರದ ಮತ್ತು ಯಳಂದೂರಿನ ಪೋಲೀಸಿನವರು ತಾ 14 ರಲ್ಲಿ ಹಿಡಿದುತಂದರು. (2) ವೆಂಕಟಸುಬ್ಬಯ್ಯ—ಈತನು ಕಾಶೀಪತ್ಯಯನ ಭಾವಮೈದನು. (3) ಚಿಕ್ಕಬಸವಯ್ಯನ ಮಗನು ಸಂಟ್ರಾಕ್—ಇವನು ಗಾಣಿಗರವನು. ಜನರನ್ನು ಕಾಳಗಕ್ಕೆ ಹೊರಡುವಾಗ ಜನರನ್ನು ಪ್ರೋತ್ಸಾಹಪಡಿಸಿದನಾಗೂ, ಕತ್ತಿಯನ್ನು ಅವರ ಕೈಯಲ್ಲಿಟ್ಟು ಹೊರಡಿಸಿದನಾಗೂ ಹೇಳುವರು. ಇವನನ್ನು ಆ ಕತ್ತಿಯೊಂದಿಗೆ ಮೂಗೂರಲ್ಲಿಯೇ ದಸ್ತಗಿರಿ ಮಾಡಿದರು. ಪುಟ್ಟರಂಗ— ಇವನು ಗಾಣಿಗರವನು. ಇವನು ಕೂಡ ಕತ್ತಿ ಹಿಡಿದು ಹೊರಟವನಂತೆ. ಕಿರುಮನೆ ಮಾದೈಯ—ಇವನು ಗಾಣಿಗರವನು. ಇವರಲ್ಲದೆ ಈಗ ದಸ್ತಗಿರಿ ಆಗಿರುವವರಲ್ಲಿ ಇನ್ನೂ 7–8 ಜನ ಮುಖಂಡರು ಇರುತ್ತಾರೆಂದು ಹೇಳಬಾಗಿದೆ.

ಜೋಚದ ಮಾಲುಗಳ ಪತ್ತೆ.

ಇದುವರಿವಿಗೂ ಸಾವಿರ ಚಿಲ್ಲರೆ ರೂಪಾಯಿಗಳ ಮಾಲುಗಳು ದೊರಕಿವೆ. ಬಂದೂಕು, ಭರ್ಜಿ ಮುಂತಾದ ಆಯುಧಗಳೆಲ್ಲಾ ಸಿಕ್ಕಿರುವವು.

ಇದುವರೆಗೆ ದಸ್ತಗಿರಿ ಆಗಿರುವವರು.

ಇದುವರೆಗೂ 308 ಜನರನ್ನು ಹಿಡಿದಿದಾರೆ. ವಿಚಾರಿಸಲಾಗಿ ಈ ಪೈಕಿ ಕೆಲವರು 1 ನೇ, 2 ನೇ ಕೃತ್ಯಕ್ಕೆ ಸಂಬಂಧಪಟ್ಟವರಲ್ಲವೆಂದು ಸದ್ಯಕ್ಕೆ ಕಂಡುಬಂದಿರುವ ಕಾರಣ ಅವರನ್ನು ಜಾಮೀನ್ ಮೇಲೆ ಬಿಟ್ಟಿದಾರೆ. 1 ನೇ ಕೃತ್ಯವೆಂದರೆ ಪ್ರಥಮದಲ್ಲಿ ಕನ್ನೇಗಾಲಕ್ಕೆ ಹೊಲದ ಕುಯಿಲಿಗೆ ಬಂದವರು, 2 ನೇ ಸಾರಿ ಹೊರಟವರಲ್ಲ. ಆದರೆ ಇನ್ನು ಮುಂದಕ್ಕೆ ಬೇರೆ ಬೇರೆ ಸಾಕ್ಷಿಗಳಲ್ಲಿ ಇವರ ಪೈಕಿ ಯಾರಮೇಲಾದರೂ ಈ ಕೃತ್ಯಗಳು ಸಾಬೀತಾದರೆ ಅವರನ್ನು ಹಿಡಿಯುತ್ತಾರೆಂದು ತಿಳಿಯುವದು.

ಕನ್ನೇಗಾಲದಲ್ಲಿ ಈ ಭಯಕ್ಕೆ ಹೆದರಿ ಓಡಿ ಹೋಗಿರುವವರ ಪೈಕಿ ಅವರ ಮನೆ ಮಾಲುಗಳು ಪರಾರಿ ಆದಾವೆಂದು ಸರ್ಕಾರದವರು ಆ ಮನೆಗಳಿಗೆ ಬೀಗಮುದ್ರೆ ಮೊಹರ್ ಮಾಡಿ ಕಾವಲಿಟ್ಟಿದಾರೆ.

ಕನ್ನೇಗಾಲದ ಕೆಲವು ಬ್ರಾಹ್ಮಣರನ್ನು ದಸ್ತಗಿರಿ ಮಾಡಿದಾರೆ. ಇವರು ಮೂಗೂರವರು ಮನೆಗಳಿಗೆ ಬೆಂಕಿ ಹಾಕುತ್ತಿರುವಾಗ ಅವರಿಗೆ ಮನೆಗಳನ್ನು ತೋರಿಸಿ ಕೊಟ್ಟರಂತೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು, ಡೆಪ್ಯುಟಿ ಕಮಿಷನರ್‌ರವರು ಮತ್ತು ಪೋಲೀಸ್ ಸೂಪರಿಂಟೆಂಡೆಂಟರು ಮುಂತಾದವರೆಲ್ಲಾ ಈ ಮೊಕದ್ದಮೆಯಲ್ಲಿ ಇದುವರೆಗೆ ಸಾಹಸಪಟ್ಟು 164 ಜನರನ್ನು ದಸ್ತಗಿರಿ ಮಾಡಿ, ಅವರ ಮೇಲೆ 3-4 ಮೊಕದ್ದಮೆಗಳನ್ನು ಆರೋಪಿಸಿ, ಅವುಗಳ ವಿಚಾರಣೆಯನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮೆ|| ಎನ್. ಮಾಧವರಾಯರವರಿಗೆ ಒಪ್ಪಿಸಿ, ಅವರೆಲ್ಲಾ ಹೊರಟು ಹೋದರು. ಇದೇ ಡಿಸೆಂಬರ್ ತಾ. 9 ಕ್ಕೆ ವಿಚಾರಣೆ ಇಲ್ಲಿಯೇ ಪ್ರಾರಂಭವಾಗುತ್ತದೆ.

ಮುಖ್ಯಸ್ಥರೆಂದು ಹೇಳುವ ಕಾಶೀಪತ್ಯಯ, ಪುಟ್ಟಸುಬ್ಬಯ್ಯ ಮುಂತಾದವರು ಇನ್ನೂ ದೊರೆಯಲಿಲ್ಲ. ಪತ್ತೆ ಹರಡೂಡು ನಡೆಯುತ್ತಿದೆ.

ಈ ಖೈದಿಗಳ ಲಾಕಪ್ ಛಾರ್ಜನ್ನೆಲ್ಲಾ ಇಲ್ಲಿನ ಸಬ್ ರಿಜಿಸ್ಟ್ರಾರವರಿಗೆ ಒಪ್ಪಿಸಿದಾರೆ. ಈ ವಿಷಯದಲ್ಲಿ ಇವರೂ, ಇವರ ಆಫೀಸಿನಲ್ಲಿರುವ ರೈಟರುಗಳೂ ಈ ಖೈದಿಗಳ ನಿಗಾವಣೆ, ಲೆಕ್ಕಪತ್ರಗಳ ಮತ್ತು ಇವರಿಗೆ ಆಹಾರ ಮುಂತಾದ್ದನ್ನೆಲ್ಲಾ ನೋಡಿಕೊಂಡು ತಮ್ಮ ಆಫೀಸಿನ ಕೆಲಸಗಳನ್ನೂ ನೆರವೇರಿಸುವ ವಿಷಯದಲ್ಲಿ ಬಹಳ ಶ್ರಮಪಡುತ್ತಿದಾರೆ.

ಬಾತ್ಮಿದಾರ್.

ಮೈಸೂರು ಟ್ರಸ್ಟ್ ಬೋರ್ಡ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ಪುರಾಭಿವೃದ್ಧಿ ಸಂಘದ ತಿಂಗಳು ಕಟ್ಟಳೆಯ ಮೀಟಿಂಗು ನಡೆಯಿತು. ಡೆಪ್ಯುಟಿ ಕಮಿಷನರ್ ಮೆ|| ಕೆ. ಚಾಂಡಿಯವರು ಪ್ರೆಸಿಡೆಂಟರಾಗಿದ್ದರು. ಈ ಮೀಟಿಂಗಿನಲ್ಲಿ ತೀರ್ಮಾನವಾದ ಮುಖ್ಯ ವಿಚಾರಗಳೇನೆಂದರೆ—

ಡಾಕ್ಟರ್ ಎಂ. ಶ್ರೀನಿವಾಸರಾಯರನ್ನು ಡೆಪ್ಯುಟಿ ಸ್ಯಾನಿಟರಿ ಸೂಪರಿಂಟೆಂಡೆಂಟರಾಗಿ ನೇಮಕಮಾಡಿದೆ ಎಂಬ ಸರ್ಕಾರದ ಹುಕುಮು ರಿಕಾರ್ಡುಮಾಡಲಾಯಿತು. ಡಾ|| ಶ್ರೀನಿವಾಸರಾಯರು ಮೀಟಿಂಗಿನಲ್ಲಿ ಹಾಜರಾಗಿದ್ದರು.—ಮೈಸೂರು ಗ್ರಾಮದಲ್ಲಿ ಮೆ|| ಚಾಮರಾಜ ಅರಸಿನವರಿಗೆ ಸೇರಿದ ಸರ್ವೆ ನಂಬರು 51, 52 ನೇ ಜಮೀನುಗಳನ್ನು ಟ್ರಸ್ಟ್ ಬೋರ್ಡಿಗೆ ಕೊಂಡುಕೊಳ್ಳುವುದಾಗಿ ತೀರ್ಮಾನವಾಗಿದೆ. ಆ ಸ್ಥಳದಲ್ಲಿ ಯಾವ ಜನಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಡುತ್ತೀರೆಂದು ಸರ್ಕಾರದವರು ಪ್ರಶ್ನೆಮಾಡಿದರು. ಅಲ್ಲಿ ಮನೆಗಳನ್ನು ಕಟ್ಟುವುದು ಆರೋಗ್ಯಕರವಾಗಿದೆ ಎಂದು ಸೆಂಟ್ರಲ್ ಸ್ಯಾನಿಟರಿ ಬೋರ್ಡಿನವರು ಒಪ್ಪಿಕೊಂಡಿದಾರೆ. ರಾಜಧಾನಿಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಹೊಸ ಮನೆ ಕಟ್ಟಿಕೊಳ್ಳುವುದಕ್ಕೆ ವಿಶೇಷವಾಗಿ ಸುಮಾರು ಮೂರು ಬ್ಲಾಕುಗಳು ನಿರ್ಮೂಲನಾಗುವ ಸುಣ್ಣದ ಕೇರಿಯ ನಿವಾಸಿಗಳಿಗೆ ಕೊಡತಕ್ಕದ್ದೆಂದು ಮೆಂಬರುಗಳು ಗೊತ್ತುಮಾಡಿದಾರೆ. ಅಲ್ಲಿ ಪ್ರತಿ ಒಂದು ಮನೆಯ ನಿವೇಶನವನ್ನೂ 40 ಅಡಿ ಅಗಲ, 60 ಅಡಿ ಉದ್ದ ಉಳ್ಳದ್ದಾಗಿ ವಿಂಗಡಿಸಲಾಗಿದೆ. ಅಲ್ಲಿ ಆ ಪ್ರಮಾಣದ 128 ಮನೆಗಳಾಗುವವು.

ಸಾಹುಕಾರ್ ಡಿ. ಬಸಮಯ್ಯನವರು ತಮ್ಮ ಮನೆಯ ಉತ್ತರಪಾರ್ಶ್ವದಲ್ಲಿರುವ ಮುನಿಸಿಪಲ್ ನಂಬರು 2188, 2193 ಉಳ್ಳ ಎರಡು ಮನೆಗಳನ್ನು ಕೊಂಡು ಆರೋಗ್ಯಾಭಿವೃದ್ಧಿಗಾಗಿ ಒಡೆದುಹಾಕಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಈ ಅರ್ಜಿ ವಿಷಯವನ್ನು ಚರ್ಚಿಸಿ, ಈ ಕಾರ್ಯವು ಟ್ರಸ್ಟ್ ಬೋರ್ಡಿನ ಕಾರ್ಯಗಳಿಗೆ ಸಂಬಂಧಪಡುವುದಿಲ್ಲವೆಂದು ತೀರ್ಮಾನ ಮಾಡಿದರು.—ಕೋಟೆ ಅಂಗಡಿ ಬೀದಿಯಲ್ಲಿದ್ದ ಭಾರಿ ಮನೆಯ ತಳಹದಿಯನ್ನು ಕಿತ್ತು ನೆಲಸಮ ಮಾಡಿದ ಕಂಟ್ರಾಕ್ಟರು ಅಪ್ಪಾಜೊರೆ ಮೊದಲಿಯಾರ್ರಿಗೆ ಘನ ಅಡಿಗೆ ಇನ್ನೂ 6 ಪೈನಂತೆ ಜಾಸ್ತಿ ಪ್ರತಿಫಲವನ್ನು ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ರಾಜಧಾನಿಯ ಗ್ರಾಮಹಾರವನ್ನು ಭೂಮಿಯೊಳಗೆ ಭಾರಿ ನಲ್ಲಿಗಳನ್ನು ಹಾಕಿ ಅದರ ಮೂಲಕ ಸಾಗಿಸಬೇಕೆಂದು ತೀರ್ಮಾನವಾಗಿದೆ. ಅದಕ್ಕೆ ಬೇಕಾಗುವ ನಲ್ಲಿಗಳನ್ನು ಕಳುಹಿಸಿಕೊಡುವುದಾಗಿ ಉತ್ತರದೇಶದ ಕೆಲವು ಕಾರ್ಖಾನೆಗಳವರು ಟೆಂಡರ್ ಕಳುಹಿಸಿದ್ದನ್ನು ಮೆಂಬರುಗಳು ಪರಿಶೋಧನೆ ಮಾಡಿ ಸ್ಯಾಂಕ್ಷನ್ ಬಗ್ಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದೆಂದು ತೀರ್ಮಾನ ಮಾಡಿದರು.—ಹಳೇ ಅಗ್ರಹಾರದಲ್ಲಿ ಲಕ್ಷ್ಮೀಪುರದ ಬಡಾವಣೆಯ ಬಳಿ ಮಾರ್ಕೆಟ್ಟಿಗಾಗಿ ಬಿಟ್ಟಿರುವ ನಿವೇಶನವನ್ನು ಡಾಕ್ಟರುಗಳಾದ ಟಿ. ಎಸ್. ಸಿದ್ದಪ್ಪನವರಿಗೂ, ಅನಂತರಾಮಯ್ಯಂಗಾರ್ರಿಗೂ ವಿಂಗಡಿಸಿ ಮನೆ ಕಟ್ಟಿಕೊಳ್ಳುವುದಕ್ಕೆ ಕ್ರಯಕ್ಕೆ ಕೊಡಬಹುದೆಂದೂ, ಅದರಲ್ಲಿ ಸ್ವಲ್ಪ ಭಾಗವನ್ನು ಮಾರ್ಕೆಟ್ಟಿಗೆ ಉಳಿಸಿಕೊಳ್ಳಬೇಕೆಂದೂ ಮೆಂಬರುಗಳು ತೀರ್ಮಾನ ಮಾಡಿದರು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಮೆಂಬರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಡೆಪ್ಯುಟಿ ಕಮಿಷನರ್ ಮೆ|| ಕೆ. ಚಾಂಡಿಯವರು ಅಗ್ರಾಸನವನ್ನು ವಹಿಸಿದ್ದರು. ಮೊದಲು ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಓದಿ ಪಾಸ್ ಮಾಡಿದರು. ಕಳೆದ ಅಕ್ಟೋಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ. 13,016-7-9ಷ್ಟು ಜಮಾ ಆಯಿತು; ಆ ತಿಂಗಳಲ್ಲಿ ರೂ 11,076-10-0 ಖರ್ಚಾಗಿರುತ್ತದೆ. ಆ ತಿಂಗಳಲ್ಲಿ ಜನನ 169; ಮರಣ—ಪ್ಲೇಗ್ 1, ಜ್ವರ 9, ಇತರ ಕಾರಣಗಳು 114, ಒಟ್ಟು 154 ಎಂದೂ, 6¼ ಇಂಚು ಮಳೆ ಆಯಿತೆಂದೂ ಗೊತ್ತಾಯಿತು.

ಇಂಜನಿಯರ್ ಮೆ|| ಅಪ್ಪಾಚಾರ್ರನ್ನು ಮ್ಯುನಿಸಿಪಲ್ ಇಂಜನಿಯರಾಗಿ ನೇಮಿಸಿಕೊಳ್ಳುವ ವಿಷಯದಲ್ಲಿ ಮತ್ತೆ ಗವರ್ನ್‌ಮೆಂಟಿಗೆ ಒಂದು ಕಾಗದವನ್ನು ಬರೆಯುವುದಕ್ಕಾಗಿ ಒಂದು ಕಮಿಟಿ ನೇಮಕವಾಯಿತು.—ಖಾಸ್ ರಾವ್ತರ್ ಸುಬ್ಬಣ್ಣನು ಹಳ್ಳದಕೇರಿಯಲ್ಲಿ ಲೈಸೆನ್ಸ್ ಇಲ್ಲದೆ ಗೋಡೆ ಹಾಕಿಕೊಂಡಿರುವ ವಿಚಾರವನ್ನು ಹೆಲ್ತ್ ಕಮಿಟಿಯವರು ಚರ್ಚಿಸಿ ತೀರ್ಮಾನವನ್ನು ಬೋರ್ಡಿಗೆ ತಿಳಿಸಬೇಕೆಂದು ಇತ್ಯರ್ಥವಾಯಿತು.—ಬಳಗುಳದಲ್ಲಿ ನೀರು ಎತ್ತುವ ಯಂತ್ರವನ್ನು ಇಟ್ಟದ್ದಕ್ಕೆ ಇನ್ನೂ 31,000 ರೂಪಾಯಿ ಕೊಡಬೇಕೆಂದೂ, ಇದನ್ನು ಯಾವ ಬಾಬಿನಿಂದ ಕೊಡುತ್ತೀರೆಂದೂ ಸರ್ಕಾರದವರು ಪ್ರಶ್ನೆ ಮಾಡಿದ್ದರು. ಸರಾಬ್ ದುಕಾನುಗಳ ಕಂದಾಯದ ಉತ್ಪತ್ತಿಯಿಂದ ಈ ಹಣವನ್ನು ಕೊಡಬಹುದೆಂದು ಮ್ಯಾನೇಜಿಂಗ್ ಕಮಿಟಿಯವರು ಮಾಡಿದ ಶಿಫಾರಸನ್ನು ಮೆಂಬರುಗಳು ಒಪ್ಪಿಕೊಂಡಿದಾರೆ.—ಲಷ್ಕರ್ ಮೊಹಲ್ಲೆಯಲ್ಲಿ ರಾಜಗೋಪಾಲಾಚಾರ್ರ ಬಂಗಲೆ ಪಶ್ಚಿಮಕ್ಕಿರುವ ಗಲ್ಲಿಯನ್ನು ಕೊಟ್ಟರೆ ಅಲ್ಲಿ ಪ್ರಯಾಣಿಕರ ಚತ್ರಕ್ಕೆ ಅಡಿಗೆ ಮನೆಗಳನ್ನು ಕಟ್ಟಿಸುವುದಾಗಿ ಮ|| ಕಾವೇರಿಪಟ್ಟಂ ಸುಬ್ರಾಯಶೆಟ್ಟರು ಕೇಳಿದ್ದರು. ಈ ವಿಚಾರವನ್ನು ಹೆಲ್ತ್ ಆಫೀಸರ ಅಭಿಪ್ರಾಯಕ್ಕಾಗಿ ತಿಳಿಸಬೇಕೆಂದೂ, ಆ ಗಲ್ಲಿಯ ನೆರೆಹೊರೆಯಲ್ಲಿರುವ ಪ್ರಜೆಗಳ ಅಭಿಮತವನ್ನೂ ವಿಚಾರಿಸಬೇಕೆಂದೂ ಮೆಂಬರುಗಳು ತೀರ್ಮಾನಮಾಡಿದರು.

ಖಾಲಿ ನಿವೇಶನಗಳಿಗೆ ದೀಪದ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕಾದದ್ದಿಲ್ಲವೆಂದು ಮೆಂಬರುಗಳು ಒಪ್ಪಿಕೊಂಡರು.—ಪಟ್ಟಣದಲ್ಲಿ ಕೇರಿ ನಾಯಿಗಳ ಕಾಟವನ್ನು ತಪ್ಪಿಸುವುದಕ್ಕೂ, ಸಾಕುವ ನಾಯಿಗಳಿಗೆ ಒಂದು ತೆರಿಗೆಯನ್ನು ಹಾಕಿ ವಸೂಲ್ಮಾಡುವುದಕ್ಕೂ ಕೋಲಾರ್ ಚಿನ್ನದ ಗಣಿಯವರು ಮಾಡಿಕೊಂಡಿರುವ ರೂಲನ್ನು ಇಲ್ಲೂ ಜಾರಿಗೆ ತರಬೇಕೆಂದು ಪ್ಲಮರ್ ಸಾಹೇಬರು ಸೂಚಿಸಿದರು. ಈ ವಿಚಾರವನ್ನು ಮೊದಲು ಹೆಲ್ತ್ ಕಮಿಟಿಯ ಮೆಂಬರುಗಳು ಚರ್ಚಿಸಬೇಕೆಂದು ಇತ್ಯರ್ಥ ಮಾಡಲಾಯಿತು.—ಮೆ|| ಎಂ. ವೆಂಕಟಕೃಷ್ಣಯ್ಯನವರನ್ನು ಹೆಲ್ತ್ ಕಮಿಟಿ ಮೆಂಬರಾಗಿ ಸೇರಿಸಿದರು.—ಮೊಹಕಛಾ ವಸೂಲಾತಿಗೆ ನೇಮಿಸಿಕೊಂಡಿರುವ ಹಂಗಾಮಿ ಶಿಬ್ಬಂದಿಯನ್ನು 1913 ನೇ ಜೂನ್ ಆಖೈರು ತನಕ ಇಟ್ಟುಕೊಳ್ಳಬಹುದೆಂದು ಮೆಂಬರುಗಳು ಒಪ್ಪಿಕೊಂಡರು.—ಹೆಲ್ತ್ ಆಫೀಸರು ಕಚರಾ ಸಾಗಿಸುವುದಕ್ಕೆ ಹೊಸದಾಗಿ ತರಿಸಿಕೊಂಡಿರುವ ಹತ್ತು ಕೈಗಾಡಿಗಳ ಕ್ರಯ 450 ರೂಪಾಯನ್ನು ಪಾವತಿ ಮಾಡಬಹುದೆಂದು ಮೆಂಬರುಗಳು ಸ್ಯಾಂಕ್ಷನ್ ಮಾಡಿರುತ್ತಾರೆ.

ಕನ್ನಂಬಾಡಿ ತಲಾವಿನ ಕಾಮಗಾರಿಯು.

ಸರ್ಕಾರಿ ಬಂಜರು ಜಮೀನುಗಳ ವಿಲೇವಾರಿ ಹುಕುಮು.

ಕಾವೇರಿ ರಿಜರ್ವಾಯರ್ ಜಲಾಶಯದ ಏರ್ಪಾಡಿನ ವಿಷಯವಾಗಿರುವ ಸರ್ಕಾರೀ ಬಂಜರು ಜಮೀನುಗಳ ವಿಲೇವಾರಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ವಿಧಿಸಿರುವ ಸರ್ಕಾರೀ ಹುಕುಮನ್ನು ಪುನಃ ಓದಿ ಗವರ್ನ್‌ಮೆಂಟಿನವರು ತಾ. ೨೨ ನೇ ಅಕ್ಟೋಬರ್‌ನಲ್ಲಿ ಕೊಟ್ಟಿರುವ ಹೊಸ ಹುಕುಂ ಏನೆಂದರೆ,—

ಈಗ ಕಟ್ಟುತ್ತಾ ಇರುವ ಕಾವೇರೀ ರಿಜರ್ವಾಯರ್ ಜಲಾಶಯದ ಕೆಳಗೂ ಅದರ ನಾಲೆಗಳ ಕೆಳಗೂ ಅಡಕವಾಗುವ (ಗೋಮಾಳ ಮತ್ತು ಖರಾಬ್ ಇವಿನ್ ಡೇಖೀಲು) ಸರ್ಕಾರಿ ಬಂಜರು ಜಮೀನುಗಳನ್ನೂ, ಸದರಿ ಜಲಾಶಯದಲ್ಲಿ ಮುಂದೆ ಮುಳುಗಿಹೋಗಬಹುದಾದ ಜಮೀನುಗಳನ್ನೂ ತೆಗೆದುಕೊಳ್ಳುವವರಿಗೆ ಸದರಿ ಜಮೀನುಗಳ ವಿಲೇವಾರಿಗೆ ಸಂಬಂಧಪಟ್ಟ ಷರತ್ತುಗಳು ಚೆನ್ನಾಗಿ ತಿಳಿಯುವಂತೆ ಮಾಡುವುದಕ್ಕಾಗಿ, ಸರ್ಕಾರದವರು ಈ ಸಂಬಂಧವಾದ ನಿಬಂಧನೆಗಳನ್ನೆಲ್ಲಾ ಈ ಕೆಳಗೆ ಒಟ್ಟು ಕೂಡಿಸಿ ಛಾಯಿಸ್ ಮಾಡಿರುತ್ತಾರೆ.

ಈ ಜಮೀನುಗಳನ್ನು ಮೂರು ತರಗತಿಗಳಾಗಿ ವಿಂಗಡಿಸಬಹುದು:— (1) ಜಲಾಶಯದ ಮೊದಲನೆಯ ಪರ್ಯಾಯದ ಕಾಮಗಾರಿಯು ಪೂರೈಸಿ, ನಾಲೆಗಳನ್ನು ತೆಗೆದ ತರುವಾಯ ನೀರು ಹಾಯಿಸಬಹುದಾದ ಜಮೀನುಗಳು, (2) ಜಲಾಶಯದ ಎರಡನೆಯ ಪರ್ಯಾಯದ ಕಾಮಗಾರಿಯು ಪೂರೈಸಿದ ತರುವಾಯ ನೀರು ಹಾಯಿಸಬಹುದಾದ ಜಮೀನುಗಳು; ಮತ್ತು (3) ಜಲಾಶಯದ ನೀರು ಮುಳುಗಡೆಗೆ ಒಳಗಾಗಬಹುದಾದ ಜಮೀನುಗಳು.

ಮೊದಲನೆಯ ತರಗತಿಗೆ ಸೇರತಕ್ಕ ಜಮೀನುಗಳನ್ನು ಈ ಕೆಳಗೆ ನಮೂದಿಸುವ ರೀತಿಯಲ್ಲಿ ವಿಲೇವಾರಿ ಮಾಡತಕ್ಕದ್ದೆಂದು ಸರ್ಕಾರದವರು ವಿಧಿಸಿರುತ್ತಾರೆ.—(1) ಮೊದಲನೆಯ ಪರ್ಯಾಯದ ಕಾಮಗಾರಿಯು ಪೂರೈಸಿ ಜಮೀನ್ ಸರಬರಾಯಿಗೆ ನೀರು ಒದಗುವ ಪರ್ಯಂತರ ಪೂರಾ ಸರ್ವೆ ನಂಬರುಗಳನ್ನು ವರ್ಷೇವರ್ಷೇ ಏಕಸಾಲ್ ಸಾಗುವಳಿಗೆ ಕೊಡತಕ್ಕದ್ದು. (2) ಅವುಗಳನ್ನು ಸಾಮಾನ್ಯವಾಗಿ ಹರಾಜುಹಾಕದೆ, ನಿಷ್ಕೃಷ್ಟವಾದ ಖರೀದಿ ಶಿವಾಯಿ ಮೊದಲು ದರಖಾಸ್ತುದಾರನಿಗೆ ಕೊಡತಕ್ಕದ್ದು, ಅವನು ಅದರಲ್ಲಿ ತನ್ನ ಇಷ್ಟಾನುಸಾರವಾಗಿ ಭೂಗುಣಕ್ಕೆ ತಕ್ಕಂತೆ ಯಾವ ಪೈರನ್ನಾದರೂ ಇಟ್ಟುಕೊಳ್ಳಬಹುದು; ಒಂದೇ ಜಮೀನಿಗೆ ಅನೇಕ ದರಖಾಸ್ತುಗಳು ಬಂದಿದ್ದು, ಅವುಗಳ ಪೈಕಿ ಯಾವುದು ಮೊದಲು ಬಂತೆಂಬ ವಿಷಯದಲ್ಲಿ ಸಂದೇಹವುಂಟಾದಪಕ್ಷಕ್ಕೆ ಅಂಥಾ ಜಮೀನನ್ನು ಪೂರಾಗಿ ಹರಾಜು ಹಾಕತಕ್ಕದ್ದು. (3) ದರಖಾಸ್ತುದಾರನು ಜಮೀನಿಗೆ ಕೊಡಬೇಕಾದ ತಮಾಂ ಕಂದಾಯವನ್ನೂ ತಾನು ಜಮೀನನ್ನು ಸ್ವಾಧೀನಕ್ಕೆ ತಗೆದುಕೊಳ್ಳುವುದಕ್ಕೆ ಮೊದಲೇ ಕೊಟ್ಟುಬಿಡಬೇಕು. (4) ಜಮೀನಿನಲ್ಲಿರುವ ಯಾವ ಮರಗಳನ್ನೂ ಕಡಿಯುವುದಕ್ಕಾಗಲಿ, ಅಲ್ಲಿರುವ ಮಣ್ಣು ಕಲ್ಲು ಕಟ್ಟಡ ವಗೈರೆಗಳನ್ನು ತೆಗೆದು ಸಾಗಿಸುವುದಕ್ಕಾಗಲಿ, ಅಲ್ಲಿ ಗುಂಡಿಗಳನ್ನು ತೆಗೆಯುವುದಕ್ಕಾಗಲಿ, ಅಥವಾ ಜಮೀನನ್ನು ಯಾವ ವಿಧದಲ್ಲಿಯಾದರೂ ಸಾಗುವಳಿಗೆ ನಾಲಾಯಖಾಗುವಂತೆ ಮಾಡುವ ಇತರ ಯಾವ ಕೆಲಸವನ್ನಾದರೂ ಮಾಡುವುದಕ್ಕಾಗಲಿ ಹಿಡುವಳಿದಾರನಿಗೆ ಹಕ್ಕು ಇರುವುದಿಲ್ಲ. ಆ ಪ್ರಕಾರ ನಡೆದುಕೊಳ್ಳುವೆನೆಂದು ಅವನು ಒಂದು ಮುಚ್ಚಳಿಕೆಯನ್ನು ಬರೆದುಕೊಡಬೇಕು. ಅವನು ಸದರಿ ಮುಚ್ಚಳಿಕೆಯ ಷರತ್ತಿಗೆ ವಿರುದ್ಧವಾಗಿ ನಡೆಯುವ ಪಕ್ಷಕ್ಕೆ, ಡೆಪ್ಯುಟಿ ಕಮಿಷನರು ತಮಗೆ ಯುಕ್ತವೆಂದು ತೋರುವಂತೆ ವಿಧಿಸುವ ಜುಲ್ಮಾನೆಗೆ ಗುರಿಯಾಗುತ್ತಾನೆ. ಅಂಥಾ ಜುಲ್ಮಾನೆಯನ್ನು ಕಂದಾಯದ ಬಾಕಿಯಂತೆ ವಸೂಲ್ಮಾಡಲಾಗುವುದು. (5) ಹಿಡುವಳಿಯು ಯಾವ ರೆವಿನ್ಯೂ ಸಾಲಿಗಾಗಿ ಕೊಡಲ್ಪಟ್ಟಿದೆಯೋ ಆ ಸಾಲಿನ ಆಖೈರಿಗೆ ಅದು ಮುಗಿದುಹೋಗುವುದು, ಆದರೆ ಮೊದಲನೆಯ ಪರ್ಯಾಯದ ಕಾಮಗಾರಿಯು ಮುಗಿಯುವ ವರೆಗೆ ವರ್ಷೇ ವರ್ಷೇ ಅದೇ ಷರತ್ತಿನ ಮೇಲೆ ಆ ಮುಂದೂ ಸದರಿ ಜಮೀನನ್ನು ಕೊಡುತ್ತಾ ಬರಬಹುದು. (6) ಹಿಡುವಳಿದಾರನು ಜಮೀನಿಗೆ ಮಾಡಿದ ಆಬಾದಿಗಾಗಿ ಯಾವ ಪ್ರತಿಫಲವನ್ನೂ ಕೇಳುವುದಕ್ಕೆ ಅವನಿಗೆ ಹಕ್ಕು ಇರುವುದಿಲ್ಲ. (7) ಜನಸಾಮಾನ್ಯವಾದ ಅಥವಾ ಇತರ ಉದ್ದೇಶಗಳಿಗಾಗಿ ಉಳಿಸಿಕೊಂಡ ಜಮೀನುಗಳನ್ನು ಸಾಗುವಳಿಗೆ ಕೊಡಕೂಡದು (8) ಮೇಲ್ಕಂಡ ನಿಬಂಧನೆಗಳ ಮೇರೆಗೆ ಹಂಗಾಮಿ ಸಾಗುವಳಿಗೆ ಕೊಟ್ಟ ಜಮೀನುಗಳನ್ನೆಲ್ಲಾ ಆಯಾ ಸಾಲಿನ ಆಖೈರಿನಲ್ಲಿ ಶೇಕದಾರರು ಅಜಮಾಯಿಷಿ ಮಾಡಿ, ಅವುಗಳನ್ನು ಕೊಟ್ಟ ಷರತ್ತುಗಳು ಎಷ್ಟರಮಟ್ಟಿಗೆ ನೆರವೇರಿಸಲ್ಪಟ್ಟಿವೆಯೆಂಬ ವಿಚಾರವಾಗಿ ಅಮಲ್ದಾರರಿಗೆ ರಿಪೋರ್ಟು ಮಾಡಬೇಕು. ಸದರಿ ಶೇಕದಾರರ ಅಜಮಾಯಿಷಿಯ ಫಲಿತಾಂಶಗಳನ್ನು ಪಹಣಿ ತಖ್ತೆಯಲ್ಲಿಯೂ ನಮೂದಿಸಬೇಕು. (9) ಈ ಜಮೀನುಗಳನ್ನು ಖಾಯಂ ಸಾಗುವಳಿಗೆ ಯಾವ ರೀತಿಯಲ್ಲಿ ವಿಲೇವಾರೀ ಮಾಡಬೇಕೆಂಬುದನ್ನು ಈ ಜಲಾಶಯದ ಮೊದಲನೆಯ ಪರ್ಯಾಯದ ಕಾಮಗಾರಿಯು ಪೂರೈಸಿ ಸರಬರಾಯಿಗೆ ನೀರು ಸಿದ್ಧವಾದ ತರುವಾಯ ತೀರ್ಮಾನಿಸಲಾಗುವುದು.

ಎರಡನೇ ತರಗತಿಗೆ ಸೇರುವ ಜಮೀನುಗಳನ್ನು ಎಂದರೆ ಜಲಾಶಯದ ಎರಡನೆಯ ಪರ್ಯಾಯದ ಕಾಮಗಾರಿಯು ಮುಗಿದನಂತರ ನೀರು ಹಾಯಿಸಲ್ಪಡತಕ್ಕ ಜಮೀನುಗಳನ್ನು ಈ ಕೆಳಗೆ ನಮೂದಿಸುವಂತೆ ವಿಲೇವಾರೀ ಮಾಡತಕ್ಕದ್ದು. ಈ ಜಮೀನುಗಳಿಗೆ ದರಖಾಸ್ತುಗಳು ಬಂದಹಾಗೆಲ್ಲಾ ಅವುಗಳನ್ನು ದರಖಾಸ್ತು ನಿಬಂಧನೆಗಳ ಮೇರೆಗೆ ವಿಲೇವಾರೀ ಮಾಡತಕ್ಕದ್ದು. ಈ ಜಲಾಶಯದ ಕಾಮಗಾರಿಯನ್ನು ಖಂಡಿತವಾಗಿ ಕೈಕೊಂಡಕಾಲದಲ್ಲಿ ಹಿಡುವಳಿಯಲ್ಲಿದ್ದ ಜಮೀನುಗಳಂತೆಯೇ ಈ ಜಮೀನುಗಳು ಏಕರೇಜು ಕಾಂಟ್ರಿಬ್ಯೂಷನನ್ನು ಕೊಡುವುದಕ್ಕೆ ಗುರಿಯಾಗುವವು. ಅದೂ ಅಲ್ಲದೆ ಈ ಜಮೀನುಗಳ ಹಿಡುವಳಿದಾರನು ಯಾವ ಪರಿಹಾರದ್ರವ್ಯವನ್ನೂ ಅಪೇಕ್ಷಿಸದೆ ನಾಲೆಗಳಿಗೆ ಬೇಕಾಗಬಹುದಾದಷ್ಟು ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕೆಂಬ ಷರತ್ತಿಗೂ ಒಳಪಡುವನು.

ಜಲಾಶಯದ ಮುಳುಗಡೆಗೆ ಒಳಗಾಗಬಹುದಾದ ಮೂರನೆಯ ತರಗತಿಯ ಜಮೀನುಗಳನ್ನು ಈ ಕೆಳಗೆ ನಮೂದಿಸುವ ನಿಬಂಧನೆಗಳ ಮೇರೆಗೆ ವಿಲೇವಾರೀ ಮಾಡತಕ್ಕದ್ದು:—(1) ಜಲಾಶಯದ ಮೊದಲನೇ ಪರ್ಯಾಯದ ಕಾಮಗಾರಿಗಳು ಮುಗಿದ ತರುವಾಯ ನೀರು ಸರಬರಾಯಿ ಮಾಡಲ್ಪಡತಕ್ಕ ಜಮೀನುಗಳ ವಿಷಯದಲ್ಲಿ ಏರ್ಪಡಿಸಲ್ಪಟ್ಟ ಒಳಕ 1 ನೇ ಪರ್ಯಾಯದಲ್ಲಿ ನಮೂದಿಸಲ್ಪಟ್ಟಿರುವ ಷರತ್ತುಗಳ ಮೇಲೆಯೇ ಈ ಜಮೀನುಗಳನ್ನೂ ಏಕಸಾಲ್ ಸಾಗುವಳಿಗೆ ಕೊಡತಕ್ಕದ್ದು. (2) ಆ ಪ್ರಕಾರ ಹಂಗಾಮಿ ಸಾಗುವಳಿಗೆ ಜಮೀನುಗಳನ್ನು ತೆಗೆದುಕೊಳ್ಳುವವರು ಸದರಿ ಜಮೀನುಗಳು ನೀರು ಮುಳುಗಡೆಗೆ ಒಳಗಾದವೆಂಬ ಕಾರಣದಿಂದ ಯಾವ ಪರಿಹಾರವನ್ನೂ ಹೊಂದಲು ಅರ್ಹರಾಗುವುದಿಲ್ಲ.

ದಿವಾನರವರಿಗೆ ಅಡ್ರೆಸ್ ಕೊಡುವ ಏರ್ಪಾಡು.

ಕಳೆದ ಗುರುವಾರ ಸಾಯಂಕಾಲ ರಾಜಧಾನಿಯ ಪ್ರಜೆಗಳ ಮುಖಂಡರು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸೇರಿ, ದಿವಾನ್ ಮ|| ಎಂ ವಿಶ್ವೇಶ್ವರೈಯನವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಬೇಕೆಂಬ ವಿಚಾರವನ್ನು ಕುರಿತು ಚರ್ಚಿಸಿದರು ಮ|| ಕಾವೇರಿಪಟ್ಟಣಂ ಸುಬ್ರಾಯಶೆಟ್ಟರು ಸಭಿಕರ ಇಷ್ಟಪ್ರಕಾರ ಅಗ್ರಾಸನವನ್ನು ವಹಿಸಿದರು. ಸಾಹುಕಾರ್ ಮ|| ವರ್ಧಮಾನೈಯನವರು ಸಭಿಕರನ್ನು ಕುರಿತು ಶ್ರೀಮನ್ಮಹಾರಾಜರವರು ಪ್ರಜಾರಂಜಕವಾಗಿ ರಾಜ್ಯಭಾರ ಮಾಡುತ್ತಿರುವುದನ್ನು ವಿವರಿಸಿ ಕೊಂಡಾಡಿ, ದೇಶೀಯರೂ ಪ್ರಖ್ಯಾತರೂ ಆದ ಮ ವಿಶ್ವೇಶ್ವರೈಯನವರಿಗೆ ದಿವಾನಗಿರಿ ವಹಿಸಿರುವುದಕ್ಕಾಗಿ ಸಂತೋಷಪಟ್ಟು, ಅವರಿಗೆ ಪುರಜನರು ಅಭಿನಂದನವನ್ನು ಮಾಡಬೇಕಾದದ್ದು ಪರಮಾವಶ್ಯಕವೆಂದು ಮುಂತಾಗಿ ಭಾಷಣಮಾಡಿದರು ಸಾಹುಕಾರ್ ಮ|| ದೊಡ್ಡಮಲ್ಲಯ್ಯನವರು ಈ ಸಲಹೆಯನ್ನು ಪುಷ್ಟೀಕರಿಸಿ ಮಾತನಾಡಿದರು ಅದರಂತೆ ಸಭಿಕರೆಲ್ಲಾ ಸಂತೋಷದಿಂದ ಒಪ್ಪಿಕೊಂಡರು

ಮ|| ವಿಶ್ವೇಶ್ವರೈಯನವರಿಗೆ ಕಾಗದ ಬರೆದು ಅವರ ಅಭಿಮತವನ್ನು ತಿಳಿಸಿಕೊಂಡು ಅಡ್ರೆಸ್ಸನ್ನು ತಯಾರುಮಾಡುವುದಕ್ಕೆ ಒಂದು ಸಣ್ಣ ಕಮಿಟಿಯು ನೇಮಕವಾಯಿತು ಮ| ಗಳಾದ ವರ್ಧಮಾನೈಯನವರು (ಸೆಕ್ರೆಟರಿ), ಸುಬ್ರಾಯಶೆಟ್ಟರು ಬನುಮಯ್ಯನವರು, ಅಂಬಳೆ ಅಣ್ಣಯ್ಯ ಪಂಡಿತರು, ವೆಂಕಟಕೃಷ್ಣಯ್ಯನವರು ಮೆಂಬರುಗಳಾಗಿ ಚುನಾಯಿಸಲ್ಪಟ್ಟರು

ಮೇಲ್ಕಂಡ ಅಡ್ರೆಸ್ಸನ್ನು ಒಪ್ಪಿಸುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಯೋಚಿಸಿ ನಡೆಸುವುದಕ್ಕಾಗಿ ಒಂದು ದೊಡ್ಡ ಕಮಿಟಿಯು ನೇಮಕವಾಗಿದೆ ಈ ಕಮಿಟಿಯಲ್ಲಿ ಎಲ್ಲಾ ಕೋಮುಗಳಿಂದಲೂ ಮುಖ್ಯ ದೊಡ್ಡ ಮನುಷ್ಯರನ್ನು ಮೆಂಬರುಗಳಾಗಿ ಚುನಾಯಿಸಿರುತ್ತಾರೆ

ಮೈಸೂರು ಕೃಷಿಶಿಲ್ಪಾಭಿವರ್ಧಕ ಸಮಾಜವು

ದನಗಳ ಗೊಬ್ಬರವನ್ನು ಕೂಡಿಡುವ ಕ್ರಮ

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಹೊಲ ಗದ್ದೆಗಳಿಗೆ ಹಾಕುತ್ತಿರುವ ಗೊಬ್ಬರವು ದನಕರುಗಳ ಗೊಬ್ಬರವಷ್ಟೆ ಈ ಗೊಬ್ಬರವನ್ನು ರೈತರು ಉತ್ತಮ ರೀತಿಯಲ್ಲಿ ಕೂಡಿಡುತ್ತಾ ಬಂದರೆ ಹೆಚ್ಚು ಲಾಭ ದೊರೆಯುವುದರಲ್ಲಿ ಯಾವ ಸಂಶಯವೂ ಕಂಡು ಬರಲಾರದು ಸದ್ಯ ನಾಡಿಕೆಯಲ್ಲಿರುವ ಈ ಗೊಬ್ಬರವನ್ನು ಕೂಡಿಡುವ ಪದ್ಧತಿಯು ಅಷ್ಟು ಲಾಭಕರವಾಗಿ ಕಂಡು ಬರುವುದಿಲ್ಲ ಈ ವಿಚಾರದಲ್ಲಿ ರೈತರೂ, ಕೃಷಿಯಲ್ಲಿ ಆಸಕ್ತರಾದ ಇತರರೂ ಹೆಚ್ಚು ಮುತುವರ್ಜಿ ವಹಿಸಿ ಹೆಚ್ಚು ಲಾಭ ಪಡೆಯಲು ಪ್ರಯತ್ನಿಸುತ್ತಾರೆಂದು ನಂಬಿರುತ್ತೇವೆ ದನಗಳ ಗೊಬ್ಬರವನ್ನು ಹಸಿಯಾಗಿರುವಾಗಲೇ ಉಪಯೋಗಿಸುವುದರಿಂದ ನಷ್ಟವೇನೂ ಇಲ್ಲ, ಆದರೆ ಗೊತ್ತಾದ ಕಾಲಗಳಲ್ಲಿಯೇ ಗೊಬ್ಬರವನ್ನು ಭೂಮಿಗೆ ಹಾಕಬೇಕಾದ ಕಾರಣ ಈ ಗೊಬ್ಬರವನ್ನು ಎಚ್ಚರಿಕೆಯಿಂದ ಕೂಡಿಡಬೇಕು. ಉತ್ತಮ ತರದಲ್ಲಿ ಕೂಡಿಟ್ಟ ಗೊಬ್ಬರವು ಹೆಚ್ಚು ಸಾರವನ್ನುಳ್ಳದ್ದಾಗಿದ್ದು, ಸಸಿಗಳಿಗೆ ತನ್ನಲ್ಲಿರುವ ಪುಷ್ಟಿ ಪದಾರ್ಥಗಳನ್ನು ಜಾಗ್ರತೆಯಾಗಿ ಕೊಡುತ್ತದೆ ಗೊಬ್ಬರವನ್ನು ಕೂಡಿಡುವಾಗ ಅದರಲ್ಲಿರುವ ಪುಷ್ಟಿ ಪದಾರ್ಥಗಳು ಸ್ವಭಾವವಾಗಿ ನಷ್ಟವಾಗುವುದೇನೋ ಸಹಜ, ಆದರೆ ಕೈಲಾದ ಮಟ್ಟಿಗೂ ಆ ರೀತಿಯಾದ ನಷ್ಟವನ್ನು ಕಡಮೆ ಮಾಡಬೇಕೆನ್ನುವುದೇ ನಮ್ಮ ಮುಖ್ಯ ಕರ್ತವ್ಯವಾಗಿದೆ

ಗೊಬ್ಬರವು ಸಾಧಾರಣವಾಗಿ ಎರಡು ಕಾರಣಗಳಿಂದ ನಿಷ್ಪ್ರಯೋಜಕವಾಗುತ್ತದೆ (1) ಗೊಬ್ಬರದಲ್ಲಿರುವ ಸಸಿಗಳಿಗೆ ಅತ್ಯವಶ್ಯಕವಾದ ಕೆಲವು ಪುಷ್ಟಿ ಪದಾರ್ಥಗಳು ಅತಿ ಸುಲಭವಾಗಿ ನೀರಿನಲ್ಲಿ ಕರಗಿಹೋಗುವ ಸ್ವಭಾವವುಳ್ಳವುಗಳಾಗಿವೆ, ಆದುದರಿಂದ ಗೊಬ್ಬರದಲ್ಲಿರುವ ದ್ರವಭಾಗವು ಹರಿದು ಹೋಗುವಾಗ ಈ ಪುಷ್ಟಿ ಪದಾರ್ಥಗಳು ಅದರಲ್ಲಿ ಕರಗಿ, ಹೊರಗೆ ಹೋಗಿಬಿಡುತ್ತವೆ (2) ಸಸಿಗಳ ಬೆಳವಣಿಗೆಗೆ ಸಹಾಯಕಾರಿಯಾದ ಸಾರಜನಕ (ನೈಟ್ರೋಜನ್) ವಾಯುವು ಗೊಬ್ಬರದಿಂದ ಹಬೆಯ ಮೂಲಕ ಹೋಗಿಬಿಡುವುದರಿಂದ ಗೊಬ್ಬರದ ಪ್ರಯೋಜನವು ಕಡಮೆಯಾಗುತ್ತದೆ. ಆದಕಾರಣ ಈ ನಷ್ಟಗಳಿಗೆ ಹೆಚ್ಚಾಗಿ ಅವಕಾಶ ಕೊಡದೆಯೂ, ಗೊಬ್ಬರವು ಚೆನ್ನಾಗಿ ಕೊಳೆತು ಉಪಯೋಗಕ್ಕೆ ಬರಲು ಅನುಕೂಲವಾಗುವಂತೆಯೂ ಅದನ್ನು ಕೂಡಿಡುವ ಕ್ರಮವನ್ನು ಅನುಸರಿಸಬೇಕು

ದನಗಳ ಗಂಜಲದಲ್ಲಿರುವ ಕೆಲವು ಪದಾರ್ಥಗಳು ನೀರಿನಲ್ಲಿ ಸುಲಭವಾಗಿ ಕರಗುವುದರಿಂದ ಇವು ಸಸಿಗಳಿಗೆ ಜಾಗ್ರತೆಯಾಗಿ ಆಹಾರವನ್ನು ಒದಗಿಸಿಕೊಡಬಲ್ಲವು ಗಂಜಲವು ಮಿಶ್ರವಾಗದಿರುವ ಗೊಬ್ಬರದಲ್ಲಿ ಈ ರೀತಿಯಾದ ಪುಷ್ಟಿ ಪದಾರ್ಥಗಳಿಲ್ಲದಿರುವುದರಿಂದ ಅಂಥಾ ಗೊಬ್ಬರವು ಉತ್ತಮವೆನಿಸಲಾರದು ಮುಖ್ಯವಾಗಿ ದನಗಳ ಮೂತ್ರದ ನಷ್ಟಕ್ಕೆ ಅವಕಾಶಕೊಡದೆ, ಕೊಟ್ಟಿಗೆಯಲ್ಲಿ ಗಂಜಲವನ್ನು ಹೀರಬಲ್ಲ ಸೊಪ್ಪು, ಸದೆ, ಮಣ್ಣು ಮೊದಲಾದವುಗಳನ್ನು ನಾಲ್ಕಾರು ದಪ್ಪ ಹರಡಬೇಕು ಗೊಬ್ಬರವನ್ನು ಕೂಡಿಡುವುದರಲ್ಲಿ ಮೂರು ಪದ್ಧತಿಗಳುಂಟು - (1) ಬಾಕ್ಸ್ ಸಿಸ್ಟಂ ಅಥವಾ ಪೆಟ್ಟಿಗೆಯ ಕ್ರಮ, (2) ಪಿಟ್ ಸಿಸ್ಟಂ ಅಥವಾ ಕುಳಿಯ ಕ್ರಮ, ಮತ್ತು (3) ಹೀಪ್ ಸಿಸ್ಟಂ ಅಥವಾ ಕುಪ್ಪೆಯ ಕ್ರಮ ಈ ಮೂರು ಕ್ರಮಗಳಲ್ಲಿ, ಉತ್ತಮ, ಮಧ್ಯಮ, ಅಧಮಗಳಾವುವೆಂಬುದನ್ನು ವಿಚಾರದಿಂದ ತಿಳಿಯೋಣ

(1) ಪೆಟ್ಟಿಗೆಯ ಕ್ರಮ—ಪಟ್ಟಿಯಲ್ಲಿ ಸೊಪ್ಪು ಸದೆಯನ್ನು ದಪ್ಪನಾಗಿ ಹಾಸಿ ಅದರ ಮೇಲೆ ದನಗಳನ್ನು ಬಿಡುತ್ತಾರೆ ಪಶುಗಳು ಸಹಜವಾಗಿ ತಿಂದು ಮಿಕ್ಕ ಮೇವನ್ನು ಗೊಬ್ಬರಕ್ಕೆ ಸೇರಿಸುತ್ತಾರೆ ದನಕರುಗಳ ತುಳಿತದಿಂದ ಸಗಣಿಯು ಸೊಪ್ಪಿನೊಂದಿಗೆ ಚೆನ್ನಾಗಿ ಮಿಶ್ರವಾಗುವುದಲ್ಲದೆ, ಸೊಪ್ಪು ಗಂಜಲವನ್ನು ಚೆನ್ನಾಗಿ ಹೀರುತ್ತದೆ ಕೆಲವು ದಿನಗಳಲ್ಲಿ ಸೊಪ್ಪು ಸದೆಯೂ, ಸಗಣಿ ಮತ್ತು ಗಂಜಲವೂ ಕೊಳೆತು ಅತ್ಯುತ್ತಮವಾದ ಗೊಬ್ಬರವಾಗುತ್ತದೆ (2) ಕುಳಿಯ ಕ್ರಮ—ಘಟ್ಟಿಯಾದ ನೆಲ ಅಂದರೆ ಗಂಜಲವನ್ನು ಹೀರದಿರುವಂಥಾ ನೆಲದ ಮೇಲೆ ದನಗಳನ್ನು ಕಟ್ಟಿ, ನೆಲದ ಮೇಲೆ ಬೀಳುವ ಸಗಣಿ ಮತ್ತು ಗಂಜಲವನ್ನು ಪ್ರತಿ ನಿತ್ಯವೂ ತೆಗೆದು ಒಂದು ಕುಣಿಯಲ್ಲಿ ಹಾಕುತ್ತಾರೆ. ಕುಣಿಯ ತಳಭಾಗವು ನೀರು ಸೋರದಂತೆ ಘಟ್ಟಿಯಾಗಿರಬೇಕು ಮತ್ತು ಕುಣಿಯಲ್ಲಿ ಸೊಪ್ಪನ್ನೂ, ಗಂಜಲ ನಷ್ಟವಾಗದಂತೆ ಒಣಮಣ್ಣನ್ನೂ ಸೇರಿಸುವುದರಿಂದ ಗೊಬ್ಬರವು ಅಷ್ಟು ಕೆಡುವುದಿಲ್ಲ. (3) ಕುಪ್ಪೆ ಕ್ರಮ—ಇದು ಎರಡನೆಯ ಕ್ರಮದಂತೆಯೇ, ಆದಗೂ ಸುಮ್ಮನೆ ನೆಲದ ಮೇಲೆ ಗೊಬ್ಬರವನ್ನು ರಾಸಿ ಹಾಕಿ ಅದರ ಮೇಲೆ ದೊರೆತ ಗಂಜಲವನ್ನು ಚೆಲ್ಲುವರು ಇದರ ಕೂಡ ಹುಡಿಮಣ್ಣನ್ನೂ ಸೇರಿಸುವ ಪದ್ಧತಿಯುಂಟು

ಮೊದಲನೇ ಎರಡು ಕ್ರಮಗಳಲ್ಲಿ ಗೊಬ್ಬರದ ಬಲಾಂಶವು ಸೋರಿಹೋಗದಂತೆ ಘಟ್ಟಿಯಾದ ನೆಲದ ಮೇಲೆ ಸಾಕಾದಷ್ಟು ಹೊಪ್ಪು ಸದೆಯನ್ನು ಹಾಕಬೇಕು ಇಲ್ಲದಿದ್ದರೆ ವಿಶೇಷ ನಷ್ಟವಾಗುವುದು ಕುಪ್ಪೆ ಕ್ರಮದಲ್ಲಿ ಈ ತರಹ ನಷ್ಟವು ಸಾಧಾರಣವಾಗಿ ಸಂಭವಿಸುತ್ತದೆ. ಈ ನಷ್ಟದ ಹೆಚ್ಚು ಕಡಮೆಯು ಸ್ಥಳದ ವಾಯುಗುಣದ ಮೇಲೂ, ಗೊಬ್ಬರವನ್ನು ಕಾಪಾಡುವುದಕ್ಕಾಗಿ ರೈತನು ಮಾಡುವ ಉಪಾಯದ ಮೇಲೂ ಹೋಗುತ್ತದೆ ಮಳೆ ಕಡಮೆಯಾದ ಕಡೆ ಕುಪ್ಪೆ ಗೊಬ್ಬರವು ಜಾಗ್ರತೆ ಅರಿ ಒಣಗಿಹೋಗುವುದರಿಂದ ಗೊಬ್ಬರದಲ್ಲಿ ಉಷ್ಣಾಧಿಕವಾಗಿ ಅದರಲ್ಲಿರತಕ್ಕ ಪದಾರ್ಥಗಳು ಆವಿಯಾಗಿ ಹೋಗುವುದಲ್ಲದೆ ಗೊಬ್ಬರವೂ ಸಾರವಾಗುತ್ತದೆ ಇದರ ಪರಿಹಾರಾರ್ಥವಾಗಿ ಕುಪ್ಪೆಯ ಮೇಲೆ ತಣ್ಣೀರು ಸುರಿದು ಉಷ್ಣವನ್ನು ಕಡಮೆ ಮಾಡಬೇಕು. ಗೊಬ್ಬರಾಂಶದ ನಷ್ಟಕ್ಕೆ ಬಿರುಗಾಳಿ ಕೂಡ ಕಾರಣವಾಗಿದೆ ಹೆಚ್ಚು ಮಳೆಯಾದರೆ ಕುಪ್ಪೆಯ ಗೊಬ್ಬರದ ಸಾರವು ಕರಗಿ ಹರಿದು ಹೋದೀತು ಆದುದರಿಂದ ಕುಪ್ಪೆಯ ಕ್ರಮ ಅನೇಕ ರೀತಿಯಲ್ಲಿ ನಷ್ಟಕಾರಿಯಾಗಿದೆ

ಮೇಲ್ಕಂಡ ಮೂರು ಕ್ರಮಗಳನ್ನೂ ಬಳ್ಳಾರಿ ಮತ್ತು ಚಂಗಲ್ಪಟ್ ಕೃಷಿಶಾಲೆಗಳಲ್ಲಿ ಬಹು ದಿನಗಳಿಂದಲೂ ಶೋಧಿಸಿ ಪೆಟ್ಟಿಗೆ ಪದ್ಧತಿಯೇ ಉತ್ತಮವಾದದ್ದೆಂದು ತಿಳಿಸಿರುತ್ತಾರೆ ಸಮತೂಕ ಗೊಬ್ಬರವನ್ನು ಮೂರು ಕ್ರಮದಲ್ಲಿಯೂ ಕೂಡಿಟ್ಟು, ಉಪಯೋಗಿಸಿ ನೋಡಿದ್ದರಲ್ಲಿ ಅವುಗಳ ಬೆಲೆಯು 20, 15, 17 ರೂಪಾಯಿಗಳಾದಂತೆ ತಿಳಿಯುವುದು ಈ ಕಾರಣಗಳಿಂದ ಪೆಟ್ಟಿಗೆಯ ಕ್ರಮವು ಉತ್ತಮವೆಂದೂ, ಕುಳಿಯ ಕ್ರಮವು ಮಧ್ಯಮವೆಂದೂ, ಕುಪ್ಪೆಯ ಕ್ರಮವು ಪ್ರಯೋಜನವಿಲ್ಲದ್ದೆಂದೂ ಹೇಳಬಹುದು ನಮ್ಮ ರೈತರು ಕೊಂಚ ಮುತುವರ್ಜಿ ವಹಿಸಿ ಗೊಬ್ಬರವನ್ನು ಕಾಪಾಡಿಕೊಳ್ಳುತ್ತಾ ಬಂದರೆ ಅವರಿಗೆ ಎಷ್ಟೋ ಲಾಭವಾಗುವುದು.

ಎಸ್ ವಿ ನಾರಾಯಣರಾವ್, ಗಾತನೂರು

ಖಾತ್ರಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ವರ್ತಮಾನಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಈ ಥರಗಳಿಗೆ ನಾವು ಸಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ವರ್ತಮಾನಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಖಾತ್ರಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಖಾತ್ರಿಗಳು ತುಸಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಸಾಮಾನ್ಯವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ಖಾತ್ರಿಗಳನ್ನು ಅನೇಕರು "ರೆವ್. ಇ ಡಬ್ಲ್ಯು ಥಾಂಪ್ಸನ್ ಸಾಹೇಬರಿಗೆ, ಮೈಸೂರು" ಎಂದು ವಿಳಾಸ ಬರೆದು ಕಳುಹಿಸುತ್ತಾರೆ ಹೀಗೆ ಹೆಸರನ್ನು ಹಾಕದೆ "ವೃತ್ತಾಂತ ಪತ್ರಿಕೆ ಎಡಿಟರ್, ಮೈಸೂರು" ಎಂಬದಾಗಿ ಮಾತ್ರ ವಿಳಾಸ ಬರೆಯಬೇಕು ಇಲ್ಲವಾದರೆ ಖಾತ್ರಿಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು ಖಾತ್ರಿದಾರರೆಲ್ಲಾ ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೃತಜ್ಞತೆಯಿಂದ ಕೇಳಿಕೊಳ್ಳುತ್ತೇವೆ

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಪ್ರತ್ಯಕ್ಷದರ್ಶಿ, ಕಳಸೆ ನೀವು ಬರೆಯುವ ವಿಚಾರವನ್ನು ಮೊದಲು ಆ ಇಲಾಖೆಯ ಮೇಲಿನ ಅಧಿಕಾರಿಗಳಿಗೆ ತಿಳಿಸಬೇಕು

ವೈ ಆಯ್ ನಾರಾಯಣಸ್ವಾಮಿ, ಹಿಂದೂಪುರ ನೀವು ಬರೆಯುವ ವಿಷಯವನ್ನು ನೋಡಿ ಸಂತೋಷಪಡುತ್ತೇವೆ ಆದರೆ ಅದು ಚರ್ಚೆಗೆ ಪ್ರಾರಂಭವಾದಲ್ಲಿ ಬೇಗನೆ ಹರಿಯುವಂಥದಲ್ಲ ಹಾಗೆ ದೀರ್ಘವಾದ ವ್ಯಾಖ್ಯಾನವನ್ನು ಹುಟ್ಟಿಸುವ ವಿಚಾರವನ್ನು ಪ್ರಕಟಿಸುತ್ತಾ ಬರುವುದರಲ್ಲಿ ಒಳ್ಳೆಯದೇನೂ ಕಾಣಲಾರೆವು

—ಎಡಿ.]

ಕರೆಸ್ಪಾಂಡೆನ್ಸ್

ನಾವು ಒರಟು ಜನರಂತೆ, ನೋಡಿ.

ಅಯ್ಯಾ,

ಗೌರ್ನಮೆಂಟ್ ನಾರ್ಮಲ್ ಸ್ಕೂಲಿನಲ್ಲಿ ಮಾಷ್ಟರಾದ ಮ ಕೃಷ್ಣಮಾಚಾರ್ರಿಂದ 1901 ರಲ್ಲಿ ರಚಿಸಲ್ಪಟ್ಟ ಎರಡನೆಯ ಭಾಗ ಟ್ರಾನ್ಸ್‌ಲೇಷನ್ ಪುಸ್ತಕ ತೆಗೆದುಕೊಂಡು ಅದರ 11 ನೇ ಪುಟವನ್ನು ಓದಿದಾಗ ಅದರಲ್ಲಿ "ಮಹಮ್ಮದೀಯರು ಒರಟು ಜನರು" ಎಂದು ಬರೆದಿದೆ ಈ ವಾಕ್ಯ ಮಹಮ್ಮದೀಯರಿಗೆ ಮುಖಭಂಗಪಡಿಸದೇ ಇರುವುದಿಲ್ಲ ಆದ್ದರಿಂದ ಮುಂದೆ ಪ್ರಕಟಿಸಲ್ಪಡುವ ಮುದ್ರಣದಲ್ಲಿ ಅವರು ಈ ವಾಕ್ಯವನ್ನು ತೆಗೆದುಬಿಡುವರೆಂದು ನಂಬಿರುತ್ತೇನೆ

ಸಿ ಕೆ ಎಸ್ ಹಮೀದ್

ಉತ್ತರ

ಅಯ್ಯಾ,

1912 ನೇ ಇಸವಿಯಲ್ಲಿ ಪ್ರಿಂಟಾಗಿರತಕ್ಕ ರಘುನಾಥರಾವ್ ಭೂಗೋಳದಲ್ಲಿ "ನಂದಿದುರ್ಗದ ಬೆಟ್ಟದ ಮೇಲೆ ರಾತ್ರಿಯಲ್ಲಿ ನಿಂತು ನೋಡಿದರೆ ಉತ್ತರಪಿನಾಕಿನಿಯ ಕಣಿವೆಯಲ್ಲಿ ಕಣ್ಣುಮುಚ್ಚಿ ಕೊಂಡು ದೀಪಗಳಂತೆ ಬೆಳಕು ಕಾಣುವುದು" ಎಂದೂ, ಹೀಗೆ ಕಾಣುವುದು ಏನೋ ಸರಿಯಾಗಿ ಗೊತ್ತಾಗಲಿಲ್ಲವೆಂದೂ, ಅದಕ್ಕೆ ಕಾರಣ ತಿಳಿದವರು ಹೇಳಬೇಕೆಂದೂ ಬರೆದಿರುತ್ತಾರೆ ಇದಕ್ಕೆ ಕಾರಣವೇನೆಂದರೆ—ಸಣ್ಣ ಎಂಬುವ ಹುಳುಗಳು ಬಿಸಿಲುಕಾಲದಲ್ಲೆಲ್ಲಾ ಭೂಮಿಯಲ್ಲಿ ಸೇರಿಕೊಂಡಿದ್ದು ಬೇಗೆ ಕಳೆದ ಕೂಡಲೆ ಮೊದಲನೆಯ ದೊಡ್ಡದಾಗಿ ಮಳೆ ಬಿದ್ದ ಒಡನೆಯೇ ಭೂಮಿಯಿಂದ ರಂಧ್ರಗಳ ಮೂಲಕ ಹೊರಕ್ಕೆ ಬರುತ್ತವೆ. ಇವನ್ನು ಹಿಡಿಯುವುದಕ್ಕಾಗಿ ಆ ಪ್ರಾಂತ್ಯದ ಒಕ್ಕಲಿಗರು ಆ ಕಣಿವೆಯಲ್ಲಿ ಅಲ್ಲಲ್ಲಿ ಅಕ್ಷಾಂತರವಾಗಿ ಉರಿಗಳನ್ನು ಹಾಕುತ್ತಾರೆ. ಆಗ ಆ ಹುಳುಗಳು ಎದ್ದು ಉರಿಯ ಸುತ್ತಲೂ ಬರುತ್ತವೆ ಅವನ್ನು ಹಿಡಿದು ಒಕ್ಕಲಿಗರು ತಿನ್ನುತ್ತಾರೆ ಆ ಉರಿಗಳು ದೀಪದ ಬೆಳಕಿನಂತೆ ಕಾಣುತ್ತದೆ.

ಮಜರಾ ಹೊಸೂರು ಪ್ರೈವೇಟ್ ವಿದ್ಯಾರ್ಥಿ

ವಿದ್ಯೆಯಿಲ್ಲದ ದುಸ್ಥಿತಿಯು

ಅಯ್ಯಾ,

ಈ ಕೆಳಗೆ ಹೇಳತಕ್ಕ ವಿಷಯ ಬೊಂಬಾಯಿನಲ್ಲಿ ಪ್ರಕಟವಾಗುತ್ತಿರುವ 27-11-1912 ನೇ ತಾರೀಖಿನ ಆಂಧ್ರ ಪತ್ರಿಕೆಯಲ್ಲಿ ನಮೂದು ಇದೆ

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ವಾರಂಗಲ್ ಜಿಲ್ಲಾ ಮಹಬೂಬಾಬಾದ್ ಉರುಸ್ ನೇರಡೆ ಎಂಬ ಗ್ರಾಮದಲ್ಲಿ ಕಾಲರಾ ಸಂಭವಿಸಿ ಆ ಗ್ರಾಮದ ಕರಣೀಕನ ಹೆಂಡತಿ ಮುಂತಾದ ಬಹಳ ಜನ ಸತ್ತರು ಅದರಿಂದ ಗ್ರಾಮಸ್ಥರೆಲ್ಲಾ ಒಟ್ಟು ಸೇರಿ ಈ ಕರಣೀಕನೇ ಏನೋ ಪ್ರಯೋಗಮಾಡಿ ಈ ಮಾರಿಯನ್ನು ಈ ಊರಿಗೆ ತಂದಿರಾಸೆಂತಲೂ, ಇದಕ್ಕಾಗಿ ಅವನನ್ನು ಆ ಗ್ರಾಮದೇವತೆಗೆ ಬಲಿ ಕೊಡಬೇಕೆಂತಲೂ ನಿರ್ಧರಿಸಿಕೊಂಡು ಕಳೆದ ಅಕ್ಟೋಬರ್ ತಿಂಗಳ ಮಧ್ಯಕಾಲದಲ್ಲಿ ಒಂದು ದಿನ ಊರೆಲ್ಲರೂ ಕರಣೀಕನ ಮನೆಗೆ ನುಗ್ಗಿದರು ಕರಣೀಕನು ತಾನು ನಿಷ್ಕಪಟನು, ನಿರಪರಾಧಿ, ತನ್ನನ್ನು ಕೊಲ್ಲಬೇಡಿ ಎಂದು ಕರಣೀಕನೂ, ತಮ್ಮ ಸರ್ವಸ್ವವೂ ತೆಗೆದುಕೊಂಡು ತನ್ನ ತಂದೆಯ ಪ್ರಾಣ ಉಳಿಸಿ ಕೊಡಬೇಕೆಂತ ಆತನ ಮಗಳೂ ಎಷ್ಟು ವಿಧವಾಗಿ ಬೇಡಿಕೊಂಡರೂ ಗ್ರಾಮಸ್ಥರು ಮನ್ನಿಸದೆ, ಆ ಕರಣೀಕನನ್ನು ಆ ಗ್ರಾಮದ ಮುಂದೆ ಇರತಕ್ಕ ಮುತ್ಯಾಲಮ್ಮನ ದೇವಸ್ಥಾನಕ್ಕೆ ಹಿಡಿದುಕೊಂಡು ಹೋಗಿ ಸ್ನಾನಮಾಡಿಸಿ ಅವನ ಮುಖಕ್ಕೆ ಕುಂಕುಮ ಬಳಿದು ಕುತ್ತಿಗೆಗೆ ಬೇವಿನಸೊಪ್ಪು ಕಟ್ಟಿ ದೇವತೆಗೆ ಅರ್ಧರಾತ್ರಿ ಆ ಕಾಲದಲ್ಲಿ ಅವನನ್ನು ಎಲ್ಲರೂ ಸೇರಿ ಕೊಡಲಿಗಳಿಂದ ಕಡಿದು ಕೊಂದರು.

ಈ ಕಥೆಯನ್ನು ಕೇಳಿದರೆ ಈ ಘೋರವಾದ ಕ್ರೂರಕೃತ್ಯವು ಹಿಂದುಗಳು ನಡೆಸಿದರೆಂತ ತಿಳಿಯಬರುತ್ತೆ ಈ ಮೌಢ್ಯಕ್ಕೆ ಕಾರಣ ಇಂಥಾ ನಂಬಿಕೆಯನ್ನು ಪ್ರಜೆಗಳಿಗೆ ಹುಟ್ಟಿಸಿ ಅದರಿಂದ ಜೀವನಮಾಡತಕ್ಕ ಮನುಷ್ಯರ ಬೋಧನೆಯೋ, ಅಥವಾ ಗೌರ್ನಮೆಂಟಿನ ದರ್ಪ ಕಡಮೆಯಾಗಿ ಪ್ರಜೆಗಳಲ್ಲಿ ದುರ್ಮಾರ್ಗಪ್ರವರ್ತನೆ ಜಾಸ್ತಿಯಾದದ್ದರಿಂದಲೋ ಅಥವಾ ಆ ಜನಗಳಿಗೆ ವಿದ್ಯೆಯಿಲ್ಲದೆ ಇರುವುದರಿಂದಲೋ, ಈ ಜನಗಳ ಮೌಢ್ಯವನ್ನು ಕಳೆಯ ಸಂಸ್ಥಾನದಲ್ಲಿ ಇರತಕ್ಕ ಲೋಕಲ್ ಅಧಿಕಾರಿಗಳು ಪ್ರಯತ್ನಪಡದೆ ಸ್ವಕಾರ್ಯದಲ್ಲಿ ನಿರತರಾದರೋ ತಿಳಿಯಲು ಗೊತ್ತಾಗುವುದಿಲ್ಲ

ಮುಖ್ಯವಾಗಿ ಇಲ್ಲಿ ಯೋಚಿಸಬೇಕಾದದ್ದು ಇಂಥಾ ಮೌಢ್ಯವು ದೇಶೀಯ ಸಂಸ್ಥಾನಗಳಲ್ಲೇ ವಿಶೇಷವಾಗಿ ಇರತಕ್ಕದ್ದು ಆಯಾಯ ದೇಶದಲ್ಲಿ ವಾಸ ಮಾಡತಕ್ಕ ಜನರ ಮನಸ್ಸಿನ ಚಿತ್ರಹಾರವನ್ನೆ, ಸಾವಿಲ್ಲದ ಆಚಾರಗಳನ್ನು ಬಿಟ್ಟು, ನಿರ್ಮಲವಾದ ಮನಸ್ಸಿನಿಂದ ಏಕೋದೇವನನ್ನು ಆರಾಧಿಸತಕ್ಕ ಅಭ್ಯಾಸವನ್ನೂ ತನ್ನ ಹೊರೆಯಲ್ಲಿ ವಾಸವಾದತಕ್ಕ ತನ್ನ ಸಹೋದರರಂತೆ ಇರುವ ಇತರ ಮತಸ್ಥರಲ್ಲಿ ಜಾತಿಸಂಬಂಧವಾದ ಅಸೂಯೆಗಳನ್ನು ಬಿಟ್ಟು ಅವರನ್ನು ಅಭೇದವಾಗಿ ಎಣಿಸಿ ಅವರ ಸುಖದುಃಖಗಳಲ್ಲಿ ತಾನು ಸಹಾಯಕನಾಗಿ ಏಕಮತದಿಂದ ಬಾಳತಕ್ಕದ್ದು, ಈ ನಡವಳಿಕೆಗಳು ಪ್ರಜೆಗಳಲ್ಲಿ ನೆಲೆಗೊಳಿಸದ ಹೊರತು ಯಾವ ದೇಶವೂ ಚೆನ್ನಾಗಿ ಬಾಳುವದಿಲ್ಲ ಆ ಸ್ಥಿತಿ ದೇಶಕ್ಕೆ ಬಾರದ ಹೊರತು ಯಾವುದೊಳಗಾದ ನಾವು ಪ್ರಜಾಕ್ಕೆ ಸಂಬಂಧವುಳ್ಳ ದೊಡ್ಡ ದೊಡ್ಡ ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಅರ್ಹರಾಗುವುದಿಲ್ಲ

ಕಾಲರಾ, ಪ್ಲೇಗು, ಇನ್ನೂ ಅನಾರೋಗದ ಜಾಡ್ಯಗಳು ಬರತಕ್ಕದ್ದು ಹೊರತು ಇವು ದೇವತೆಗಳಲ್ಲ ಇವುಗಳಿಗೆ ಪರಿಹಾರ ಆರೋಗ್ಯವನ್ನು ವೃದ್ಧಿಗೊಳಿಸತಕ್ಕದ್ದೇ ಮುಖ್ಯ ಉಪಾಯವಾಗಿದೆ

ಒಬ್ಬ ಪೆನ್ಷನ್ ಆಫೀಸರ್.

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ ರಾಜಘಟ್ಟದಲ್ಲಿ ಒಬ್ಬ ಮುದುಕನಿಗೆ ಒಬ್ಬ ಹುಡುಗಿಯನ್ನು ಕೊಟ್ಟು ಮದುವೆ ಮಾಡಿದರೆಂದು ಕೇಳುತ್ತೇವೆ ಈ ವಧುವಿನ ವಯಸ್ಸು ಎಂಟು, ಈ ಮದುವೆಯು ಕಾನೂನಿಗೆ ಅನುಸಾರವಾದದ್ದೇ ಎಂಬುವದನ್ನು ಸ್ಥಳದ ಅಧಿಕಾರಿಗಳು ವಿಚಾರಿಸುವರೆಂದು ನಿರೀಕ್ಷಿಸುತ್ತೇವೆ ಧಾರಣೆಗಳು ಕ್ಷಾಮವನ್ನೇ ಸೂಚಿಸುವಂತಿವೆ ಅಕ್ಕಿ ಸೇರು, ರಾಗಿ 16 ಸೇರು ಮಾರುತ್ತಿದೆ ಸಬ್ ಅಸಿಸ್ಟೆಂಟ್ ಸರ್ಜನ್ ರಾಮಸ್ವಾಮಯ್ಯನವರು ಮೈಸೂರು ಅರಮನೆಗೆ ವರ್ಗವಾದರು, ಮ ರಾಮಸ್ವಾಮಿ ಮೊದಲಿಯಾರ್ರು ಬಂದಿದ್ದಾರೆ ಕೆರೆಗಳೆಲ್ಲಾ ತುಂಬಿ ಕೋಡಿಬಿದ್ದು ಗದ್ದೆಗಳೆಲ್ಲಾ ಸಫಲವಾಗಿ ನಿಂತಿರುವಲ್ಲಿ ಪಶುಗಳಿಗೆ ಎತ್ತಿನ ದುರ್ಗತಿಕೆ ಈ ವರೆಗೂ ತಪ್ಪಿರುವದಿಲ್ಲ. ಈ ಜನಗಳು ಮದ್ಯಪಾನದ ಚಟವನ್ನು ಬಿಡದೆ ಜೀವನಕ್ಕೆ ತುಂಬಾ ಕಷ್ಟಪಡುತ್ತಾರೆ ಇಲ್ಲಿನ ಪಂಚಮಶಾಲೆಗಳಿಂದ ಕೆಲವು ಹುಡುಗರನ್ನು ಮೈಸೂರಿನ ಪಂಚಮ ಬೋರ್ಡಿಂಗ್ ಶಾಲೆಗೆ ಕಳುಹಿಸಿ ಅವರನ್ನು ಪಂಕ್ತಿಗೆ ಓದಿಸುತ್ತಾರೆ ಇದು ಒಳ್ಳೇ ಪ್ರೋತ್ಸಾಹನವಾಯಿತು

ತರೀಕೆರೆ — ಇದೇ 3 ಗಳು 11 ನೇ ತಾ ಸಾಯಂಕಾಲ ಶ್ರೀಮನ್ಮಹಾರಾಜರವರ, ಯುವರಾಜರವರ ಮತ್ತು ರೆಸಿಡೆಂಟರವರ ಸವಾರಿಯು ಈ ಕಡೆಗೆ ಚಿತ್ತೈಸುತ್ತಾರೆಂದು, ಆ ರಾತ್ರಿ ಇಲ್ಲೇ ಮೊಕ್ಕಾಂ ಮಾಡುತ್ತಾರೆಂದೂ ನಮ್ಮ ಅಮಲ್ದಾರರಾದ ಮ|| ಸುಬ್ಬರಾಯರು ಮತ್ತು ಸರ್ಕಾರಿ ನೌಕರಮಾನ್ಯರುಗಳೆಲ್ಲಾ ಚಪ್ಪರಗಳನ್ನು ಹಾಕಿಸುವದರಲ್ಲಿಯೂ, ತಾಲ್ಲೂಕು ಕಛೇರಿಯನ್ನೂ, ಟ್ರಾವಲರ್ಸ್ ಬಂಗ್ಲೆಯನ್ನೂ ಅಲಂಕರಿಸುವದರಲ್ಲಿಯೂ ಇತರ ಚಿಲ್ಲರೆ ಕೆಲಸಗಳನ್ನು ಬಹು ತರಾತುರಿಯಾಗಿ ಮಾಡಿಸುತ್ತಲೂ ಇದ್ದಾರೆ ಶ್ರೀಮನ್ಮಹಾರಾಜರವರ ಮತ್ತು ಯುವರಾಜರವರ ದರ್ಶನಕ್ಕೆ ಈ ಪ್ರಾಂತ್ಯ ನಾಲ್ಕಾರು ಪ್ರಜೆಗಳು ಕಾದಿರುವರು —ಈ ವರ್ಷ ಈ ಪ್ರಾಂತ್ಯದಲ್ಲಿ ಒಳ್ಳೇ ಮಳೆಯಾಗಿ ಭತ್ತ, ರಾಗಿ ಫಸಲುಗಳು ಉತ್ತಮಸ್ಥಿತಿಯಲ್ಲಿವೆ ಬೆಳೆಗಳೇ ಅರ್ಧಭಾಗ ಕಡಿಮೆ ಆಗಿರಬೇಕಾಗಿತ್ತು ಆದರೆ ಮಳೆಯ ದಯೆಯಿಂದ ಸ್ವಲ್ಪ ತಡವಾಯಿತು. ಈಗ ಕೆಲವು ದಿನಗಳಿಂದ ಕಟಾವ್ ಕೆಲಸ ಶುರುವಾಗಿದೆ ಆದರೂ ಧಾರಣೆಗಳು ಇಳಿತರವಾಗಲಿಲ್ಲ ರೂಪಾಯಿಗೆ 6 ಸೇರು ಅಕ್ಕಿ, 12 ಸೇರು ರಾಗಿ ಮಾರಾಟವಾಗುತ್ತಿದೆ. ಬೇರೆ ಬೇರೆ ಕಡೆಯಿಂದ ವರ್ತಕರು ಬಂದು ರೈತರಿಗೆ ಅಡ್ವಾನ್ಸ್ ಹಣ ಕೊಟ್ಟು ಹೋಗುತ್ತಿದಾರೆ ನಮ್ಮ ಸರಕಾರದವರು ಹೀಗೆ ಧಾನ್ಯ ರಫ್ತಾಗದಂತೆ ಏನಾದರೂ ಏರ್ಪಾಡು ಮಾಡಿದರೆ ಜನರಿಗೆ ಅನುಕೂಲವಾದೀತು ಇಲ್ಲದಿದ್ದರೆ ಮುಂದೆ ತುಂಬಾ ಕಷ್ಟಕ್ಕೆ ಗುರಿಯಾಗುತ್ತಾರೆಂಬುವದರಲ್ಲಿ ಸಂದೇಹವಿಲ್ಲ.

ನಂಜನಗೂಡು. ಇಲ್ಲಿ ೬-೭ ದಿವಸಗಳಿಂದ ಸೀತಗಾಳಿ ಬೀಸುತ್ತಲೂ, ಜಿನಿ ಮಳೆ ಬೀಳುತ್ತಲೂ ಇರುವುದು —ಕೊಳ್ಳೇಗಾಲದ ಬೊಂಬೆ ಮೊಕದ್ದಮಾ ಪ್ರಕರಣದಿಗಾಗಿ ಡೆಪ್ಯುಟಿ ಕಮಿಷನರ್ ರವರು ಮೊದಲಾದ ಅನೇಕ ದೊಡ್ಡ ಅಧಿಕಾರಿಗಳು ಈ ಮಾರ್ಗವಾಗಿ ಹೋಗಿಬರುತ್ತಿರುವರು — ಇಲ್ಲಿನ ಮ್ಯುನಿಸಿಪಾಲಿಟಿ ದೀಪಗಳು ೮ ಗಂಟೆಗೆ ಮುಂಚೆಯಾಗಿಯೇ ಆರಿಹೋಗುತ್ತವೆ. ದೊಡ್ಡ ರಸ್ತೆಯಲ್ಲೇ ಕೆಲವು ಲಾಂದ್ರಗಳನ್ನು ನಾಲ್ಕಾರು ವಾರಗಳಿಂದ ಹಚ್ಚುವುದಿಲ್ಲ. ಏತಕ್ಕೋ ತಿಳಿಯದು. ಅಧಿಕಾರಿಗಳು ಗಮನಕೊಡುವುದು ಅವಶ್ಯವಾಗಿದೆ. ಕೆಲ್ಲ ನಲ್ಲಿಗಳಿಗೆ ಹೊಸ ತಿರುಪುಗಳನ್ನು ಹಾಕಿಸುವುದರಿಂದ ನೀರು ಪೋಲಾಗುವುದು ಬಹಳ ಮಟ್ಟಿಗೆ ಕಡಮೆಯಾಗಿದೆ. ಅನೇಕ ಬೀದಿಗಳಲ್ಲಿ ಬಚ್ಚಲ ದುರ್ಗಂಧ ಹೆಚ್ಚಾಗಿದೆ. ಇಲ್ಲಿನ ಮ್ಯುನಿಸಿಪಾಲಿಟಿಗೋಸ್ಕರ ತರಿಸಲ್ಪಟ್ಟಿರುವ ಹೊಸ ಲಾಂದ್ರ ಕಂಭಗಳನ್ನು ಇನ್ನೂ ನೆಟ್ಟಿಲ್ಲ. ಮ್ಯುನಿಸಿಪಲ್ ಮೆಂಬರುಗಳ ಬದಲಾವಣೆಯ ಗಲಾಟೆಯಲ್ಲಿ ಇದು ಮರೆತುಹೋಯಿತೋ ಏನೋ. — ಇಲ್ಲಿನ ಶ್ರೀ ನರಸಿಂಹೇಂದ್ರಸ್ವಾಮಿಗಳವರ ಮಠದಲ್ಲಿ ಸ್ವಾಮಿಗಳವರು ಪ್ರಾರಂಭಿಸಿರುವ ವಿದ್ವತ್ಸಭೆಯನ್ನು ಈ ವರ್ಷ ಇಲ್ಲಿಯೇ ನಡಸುವರೆಂಬ ವರ್ತಮಾನವಿದೆ. ಆ ಕಾಲದಲ್ಲಿ ನಡೆಯತಕ್ಕ ಅನ್ನದಾನಕ್ಕೆ ತಕ್ಕ ಸಾಮಗ್ರಿಗಳೆಲ್ಲಾ ಸಿದ್ಧವಾಗುತ್ತಿರುವವು. ಇಲ್ಲಿನ ಶ್ರೀಮಂತರಾದ ಮ॥ ಸಿ. ಗುರುರಾಯರೂ ಧನವಂತರೂ ಸೇರಿ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ಜಾರ್ಜ್ ಸಾರ್ವಭೌಮರ ಕಿರೀಟಧಾರಣಾ ಮಹೋತ್ಸವದ ಜ್ಞಾಪಕಾರ್ಥವಾಗಿ ಇಲ್ಲಿ ಒಂದು ಕಾರೊನೇಷನ್ ಹಾಲ್ ಎಂಬ ಮಂದಿರವನ್ನು ಜನರ ಉಪಯೋಗಾರ್ಥವಾಗಿ ಕಟ್ಟಿಸಿ ಸ್ಥಾಪಿಸಲು ಪ್ರಯತ್ನ ಮಾಡಿರುವಂತೆ ತಿಳಿಯುತ್ತದೆ.

ತಿಪ್ಟೂರು. ಈ ಊರಿನಲ್ಲಿ ಈಗ ಸುಮಾರು ೨ ತಿಂಗಳಿಂದ ಮದ್ರಾಸ್ ಮನೋರಂಜನಿ ನಾಟಕ ಸಭೆಯವರು ಅನೇಕ ನಾಟಕಗಳನ್ನು ಆಡುತ್ತಾ ಇದ್ದಾರೆ. ಈ ಸಭೆಯ ಪ್ರೊಪ್ರೈಟರಾದ ಆರ್. ಜನಾರ್ದನ ಗೋವಿಂದಸ್ವಾಮಿನಾಯಕರವರು ಬಹಳ ಉದಾರ ಸ್ವಭಾವವುಳ್ಳವರಾಗಿಯೂ, ದೈವಭಕ್ತಿಯುಳ್ಳವರಾಗಿಯೂ ಇದ್ದಾರೆ. ಈ ಊರಿನಲ್ಲಿ ಪಂಚಮರಿಗೆ ಸ್ಕೂಲ್ ಕಟ್ಟಡವನ್ನು ಕಟ್ಟಿಸಲು ಸಹಾಯ ಮಾಡಬೇಕೆಂದು ಇಲ್ಲಿನ ಮುನಿಸಿಪಲ್ ಚೇರ್ಮನ್ ವರ್ತಕರು ಮತ್ತು ಸರ್ಕಾರಿ ಉದ್ಯೋಗಸ್ಥರುಗಳ ಕೋರಿಕೆ ಪ್ರಕಾರವೂ ಮತ್ತು ಇಲ್ಲಿಯ ಬ್ರಾಹ್ಮಣ ಮಂಡಳಿಯವರು ರಾಮಮಂದಿರದ ಭಜನಾ ಮಂದಿರವನ್ನು ಜಹಾಯಿಸಲು ಸಹಾಯ ಮಾಡಬೇಕೆಂದು ಬ್ರಾಹ್ಮಣ ಮಂಡಲಿಯವರ ಅಪೇಕ್ಷೆ ಪ್ರಕಾರವೂ ಸದರಿ ಸಭೆಯ ಗೋವಿಂದಸ್ವಾಮಿ ನಾಯಕರವರು ಉದಾರಸ್ವಭಾವದಿಂದ ಒಪ್ಪಿ ಕಳೆದ ೧೯ ನೇ ತಾ. ಸೋಮವಾರ ಅರಿಚಂದ್ರನೆಂಬ ಆಟವನ್ನು ಆಡಿ ಬಂದ ಐನೂರು ರೂಪಾಯಿಯಲ್ಲಿ ಆ ದಿವಸದ ಖರ್ಚನ್ನು ಕಳೆದು ಅಪೇಕ್ಷೆಪಟ್ಟ ಒಂದು ನೂರು ರೂಪಾಯಿ ಶ್ರೀರಾಮ ಮಂದಿರಕ್ಕೂ, ಉಳಿದುದನ್ನು ಪಂಚಮರಿಗೆ ಕಟ್ಟುವ ಕಟ್ಟಡದ ಉಪಯೋಗಕ್ಕೂ ವಿನಿಯೋಗಿಸಬೇಕೆಂದು ಸಭೆಯಲ್ಲಿ ಬಹಿರಂಗವಾಗಿ ಪ್ರೊಪ್ರೈಟರ ಪರವಾಗಿ ಮ॥ ಗೋಪಾಲಾಚಾರ್ಯರು ತಿಳಿಯಪಡಿಸಿದರು. ಆ ದಿನ ಆಟವನ್ನು ನೋಡಲು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ॥ ಸ್ಟೀವರ್ಟ್ ಸಾಹೇಬರವರೂ, ತುಂಕೂರು ಡಿಸ್ಟ್ರಿಕ್ಟ್ ಸರ್ಜನ್ ರಾದ ಮ॥ ಟಿ. ಸುಂದರಪ್ಪನವರೂ, ಸ್ಥಳೀಯ ಆಫೀಸರುಗಳೂ, ಸಮಸ್ತ ವರ್ತಕರೂ, ಇತರರೂ ದಯಮಾಡಿಸಿದ್ದರು. ಆ ದಿನ ಇಲ್ಲಿನ ಪ್ರಜೆಗಳ ಪರವಾಗಿ ಶಾನುಭೋಗ ಕಿಂಗ್ರಿ ಸುಬ್ಬಪ್ಪನವರು ಪ್ರೊಪ್ರೈಟರ್ ಮ॥ ಜನಾರ್ದನ ಗೋವಿಂದಸ್ವಾಮಿಯವರಿಗೆ ಪದಕವನ್ನು ಕೊಡಬೇಕೆಂದು ಮ॥ ಸುಂದರಪ್ಪನವರನ್ನು ಪ್ರಾರ್ಥಿಸಿ ಅವರ ಮೂಲಕ ಪದಕ ಹಾಕಲು ಅವರಿಗೆ ಕೊಡಲ್ಪಟ್ಟಿತು.

ಮದ್ದಗಿರಿ ತಾ॥ ಬಿಡಿಗೌಡನಹಳ್ಳಿ. ಇಲ್ಲಿ ಕಾರ್ತೀಕದ ಬೆಳೆ ಪೈರು ಕಟಾವಾಯ್ತು. ಈ ಸಾರಿ ಒಳ್ಳೇ ಮಳೆಯಾಗಿ ಬೆಳೆಯು ಕೈಸೇರಿದ್ದರಿಂದ ರೈತರು ಬಹು ಸಂತೋಷಪಡುತ್ತಾರೆ. ಮತ್ತು ವ್ಯವಸಾಯದ ಗದ್ದೆ ಬೆಳೆಗೆ ಸಂಬಂಧಿಸಿದ ಮೊದಲಾದವುಗಳನ್ನು ಒದಗಿಸಿಕೊಳ್ಳುತ್ತಿದ್ದಾರೆ. ಎಟ್ರಹಳ್ಳಿ, ಬೇಡನಹಳ್ಳಿ, ತಿಮ್ಮನಹಳ್ಳಿ ಈ ಗ್ರಾಮಗಳ ರೈತರಿಗೂ ಇದೇ ಸಮ್ಮತವಾದುದಾಗಿ ಸ್ಥಳದ ರೈತರಿಗೂ ಇರುವ ಕಾಲುವೆ ನ್ಯಾಯವು ೯ ೧ ವರುಷಗಳಾದಾಗ್ಯೂ ಫೈಸಲ್ ಆಗಲಿಲ್ಲ. ೩-೪ ನೂ ವಿ. ಆ. ಕಮಿಷನರುಗಳು ಬಂದು ನೋಡಿಕೊಂಡುಹೋದರು. ಆದರೆ ಯಾವುದೊಂದನ್ನೂ ಇನ್ನೂ ತೀರ್ಮಾನಿಸಲಿಲ್ಲ. ಈ ವ್ಯಾಜ್ಯಕ್ಕೆ ಮುಖಂಡರಾಗಿ ನಿಂತಿದ್ದವರೆಲ್ಲರೂ ಈ ಗ್ರಾಮಗಳಲ್ಲಿಯೂ ಕಾಲವಾಗಿಹೋದರು. ಇನ್ನು ಎಂದಿಗೆ ತೀರ್ಮಾನವಾಗುವುದೋ ತಿಳಿಯದು. ಈ ಊರುಗಳ ಸುತ್ತುಮುತ್ತಲೂ ಕೆಲವು ಗ್ರಾಮಗಳಲ್ಲಿ ಕಾಲರಾ ಉಪದ್ರವು ಹರಡಿಕೊಂಡಿರುತ್ತದೆ. ಬಿಡಿಗೌಡನಹಳ್ಳಿಯಲ್ಲಿ ಈ ವ್ಯಾಧಿಯಿಂದ ೭ ೮ ಮರಣಗಳಾದವು. ಇವರೊಳಗೆ ಚಿಕ್ಕದಾಸೇಗೌಡರ ಮಗನಾದ ಮುನಿಯಪ್ಪ ಎಂಬುವನು ಅನೇಕ ಜನರಿಗೆ ಉಪಕಾರಿಯಾಗಿಯೂ, ಯೋಗ್ಯನಾಗಿಯೂ ಇದ್ದನು. ಈತನೇ ಮೊದಲು ಈ ರೋಗದಿಂದ ಮೃತನಾದ. ಎಲ್ಲರೂ ಈತನ ಗುಣವರ್ಣನೆ ಮಾಡುತ್ತಾರೆ. ಈ ಗ್ರಾಮದ ಗ್ರಾಮದೇವತೆಯ ಬಳಿ ಎಟ್ರಹಳ್ಳಿಯಲ್ಲಿರುವ ಮಾರಿ, ಮುಸಕಿ ದೇವತೆಗಳು ಸ್ವಲ್ಪ ದುಂಬಿಯಾಡಿದವು. ಇನ್ನು ಭಯಪಡಬೇಡಿ ಎಂದು ಅಭಯವಿತ್ತು ಹೋದರು. ಆದರೆ ಈ ಜಾಗದಲ್ಲಿ ಒಂದು ಮರಣವಾಯಿತು. ೨೧ ನೇ ತಾ. ಪುನಹ ಆ ದೇವತೆಗಳು ವಾರಕ್ಕೆ ೧ ೨ ಸಾರಿ ಬಂದುಹೋಗುತ್ತವೆ. ಡಾಕ್ಟರು ಬಂದು ಭಾವಿಗಳಿಗೆ ಔಷಧವನ್ನು ಹಾಕಿ ಹೋದರು. ಗ್ರಾಮದವರೆಲ್ಲಾ ಏನೋ ವಿಷವನ್ನು ಹಾಕಿ ಹೋದರೆಂದು ದಿಗಿಲುಬಿದ್ದು ಭಾವಿಯ ನೀರೆಲ್ಲವನ್ನೂ ಸೇದಿಹಾಕಿದರು. ಡಾಕ್ಟರು ಮತ್ತು ಅಮಲ್ದಾರರು ಆಗಿಂದಾಗ್ಗೆ ಬಂದು ಜನರ ಆರೋಗ್ಯವನ್ನು ವಿಚಾರಿಸಿಕೊಂಡು ಹೋಗುತ್ತಾರೆ. ಇಂಥಾ ನವನಾಗರಿಕ ಕಾಲದಲ್ಲೂ ಜನರು ಮೌಢ್ಯದಿಂದ ದೇವತೆಗಳ ಭ್ರಮೆಯಲ್ಲಿ ಸಿಕ್ಕಿಕೊಂಡು ತಲ್ಲಣಪಡುತ್ತಿರುವ ಈ ಗ್ರಾಮಗಳ ಜನರ ಸ್ಥಿತಿ ಯಾವಾಗ ಹೋಗಿ ವಿವೇಕೋದಯವಾಗುವದೋ ತಿಳಿಯದು.

ಮುಳಬಾಗಿಲು. —ಈ ಟವುನ್ ಬಹಳ ದಿನಗಳಿಂದ ಕಾಲರಾ ರೋಗದಿಂದ ಪೀಡಿತವಾಗಿದ್ದು ಪ್ಲೇಗಿನ ಆಧೀನದಿಂದ ೧೫ ದಿನಗಳಿಂದ ಶಮನವಾಗಿರುತ್ತೆ. ಆದರೂ ಜನರು ತಮ್ಮ ಬೀದಿಗಳಲ್ಲಿ ಗಲೀಜು ಮಾಡುವುದು, ಕೆರೆ ಅಂಗಳದಲ್ಲಿ ದೇಹಬಾಧೆಯನ್ನು ತೀರಿಸಿಕೊಂಡು ಕುಡಿಯುವ ನೀರನ್ನು ಅಶುದ್ಧಮಾಡುವುದು, ಹೊಲಸು ಬಟ್ಟೆಗಳನ್ನು ಒಗೆಯುವುದು, ಈ ಕಾರಣಗಳಿಂದ ಪುನಹಾ ರೋಗಕ್ಕೆ ಆಸ್ಪದ ಕೊಡುವಂತೆ ಕಾಣುತ್ತೆ. ಬ್ರಾಹ್ಮಣರ ಬೀದಿಯಲ್ಲಿ ನರಕಮಯವಾದ ಇಂಥಾ ಗಲೀಜಾದ ಕೇರಿಯು ಮತ್ತೆಲ್ಲಿಯೂ ಇಲ್ಲ. ಅಶುದ್ಧವನ್ನು ಹೊತ್ತುಕೊಂಡು "ಮಡಿ, ಮಡಿ" ಎಂದು ಹಾರಾಡುವುದು ಹಾಸ್ಯಕ್ಕೆ ಕಾರಣವಾಗಿರುತ್ತೆ. ಸ್ಯಾನಿಟರಿ ಇನ್‌ಸ್ಪೆಕ್ಟರವರು ದಯಾಪರರಾದಾಗ್ಯೂ ಜನಗಳ ಆರೋಗ್ಯಕ್ಕೋಸ್ಕರ ಖಂಡಿತವಾದಿಗಳಾದರೆ ಕ್ಷೇಮವಾದೀತು. ನಮ್ಮ ಅಮಲ್ದಾರರವರು ಜಮಾಬಂದಿ ಕೆಲಸವನ್ನು ತ್ವರಿತವಾಗಿ ನೆರವೇರಿಸುತ್ತಿರುವುದರಿಂದ ಟವುನ್ ಗಸ್ತುಮಾಡಿ ಲೋಪಗಳನ್ನು ಕ್ರಮಪಡಿಸಲು ಸಾಧ್ಯವಿಲ್ಲವಾಗಿರುತ್ತದೆ.—ಕಳೆದ ತಿಂಗಳಲ್ಲಿ ಗ್ರಾಮದ ಅನೇಕ ಮುಖಂಡರು ಸೇರಿ ಗ್ರಾಮಮಧ್ಯದಲ್ಲಿ ೩-೪ ಪಲ್ಲಾ ಅಕ್ಕಿಯ ಅನ್ನವನ್ನು ರಾಸಿಹಾಕಿ ಅದಕ್ಕೆ ಮೊಸರು ಮುಂತಾದದ್ದನ್ನು ಮಿಶ್ರಮಾಡಿ ಬಲಿಹಾಕಿ ಅನೇಕ ಮೂಗುಪ್ರಾಣಿಗಳನ್ನು ಬಲಿಕೊಟ್ಟು ವಿಕಾರವಾದ ತಾಳಮೇಳಗಳಿಂದ ಕುಣಿದಾಡುತ್ತಿರುವಲ್ಲಿ ನಾಲ್ಕಾರು ಜನಗಳು ತಮಗೆ ಶಕ್ತಿ ಆವಾಹನೆಯಾದಂತೆ ನಟಿಸಿ ನಾನಾ ವಿಧವಾಗಿ ಮೂಢಜನಗಳಿಗೆ ಭಯವನ್ನು ಹುಟ್ಟಿಸುತ್ತಾ, ರಕ್ತ ಮದ್ಯಪಾನಾಸಕ್ತರಾಗಿ ವೀರಾವೇಶದಿಂದ ತಾಳಕುಣಿದಾಡುತ್ತಿದ್ದರು. ನಾಗರಿಕರಾದವರು ಅನಾಗರಿಕರಾದವರಿಗೆ ಪ್ರತ್ಯುತ್ತರೋಚಿತ ಮಾತುಗಳಿಂದ ಸಲಹೆ ಕೊಡುತ್ತಿದ್ದದ್ದು ಆಶ್ಚರ್ಯವಾಗಿತ್ತು —ಈ ಊರು ಎ. ವಿ. ಸ್ಕೂಲ್ ಮಾಸ್ಟರಾಗಿ ೩ ವರ್ಷಗಳಿಂದ ಇದ್ದು ಬಾಲಕರಿಗೂ ಸಹಾಯೋಪಾಧ್ಯಾಯರುಗಳಿಗೂ ಗ್ರಾಮಸ್ಥರಿಗೂ ಸುಮನಸ್ಕರಾಗಿದ್ದ ವೆಂಕಟರಾಯರನ್ನು ದೇವನಹಳ್ಳಿ ಗರ್ಲ್ಸ್‌ಸ್ಕೂಲ್ ಹೆಡ್ ಮಾಸ್ಟರ್ ಕೆಲಸಕ್ಕೆ ಪ್ರಮೋಷನ್ ಮೂಲಕ ವರ್ಗಾಯಿಸಿದ್ದರಿಂದ ಅವರಿಗೆ ಎ. ವಿ. ಸ್ಕೂಲ್ ಹಾಲಿನಲ್ಲಿ ಅಮಲ್ದಾರರೇ ಆದಿಯಾಗಿ ಎಲ್ಲಾ ಅಧಿಕಾರಿಗಳೂ ಗ್ರಾಮದ ದೊಡ್ಡಮನುಷ್ಯರುಗಳೂ ವಿದ್ಯಾರ್ಥಿಗಳೂ ಉಪಾಧ್ಯಾಯರುಗಳೂ ಸಹ ಸೇರಿ ಪ್ರತ್ಯುತ್ತರೋಚಿತವಾಗಿ ಮ॥ ವೆಂಕಟರಾಯರ ಗುಣಕಥನವಂ ಮಾಡಿ ಸಂಗೀತ ಕಚೇರಿ ಮೂಲಕ ದೇವರ ಪ್ರಾರ್ಥನೆ, ಶ್ರೀಮನ್ಮಹಾರಾಜರವರ ಕ್ಷೇಮಾಭಿವೃದ್ಧಿ ಪ್ರಾರ್ಥನೆ ಮಾಡಿದ ಬಳಿಕ ಮ॥ ವೆಂಕಟರಾಯರ ಪ್ರೀಯಸ್ಸನ್ನು ಬಯಸಿದರು. ಇವರ ಬದಲಿ ಬರುವವರು ಸಹಾ ಇವರ ಮೇಲ್ಪಂಕ್ತಿಯನ್ನನುಸರಿಸುವರೆಂದೂ ಉಪಾಧ್ಯಾಯರೆಲ್ಲರೂ ವೆಂಕಟರಾಯರಂತೆ ಗುಣಾಢ್ಯರಾಗಿದ್ದು ಅಭಿವೃದ್ಧಿಗೆ ಬರುವರೆಂದೂ ನಂಬಿದೇನೆ.

ಬೆಂಗಳೂರು ಸಿಟಿ. —ಹೋದ ವಾರ ಬೆಂಗಳೂರಿನಲ್ಲಿ ವೈ. ಯಂ. ಸಿ. ಯೆ. ಸೆಕ್ರೆಟರಿಯವರಾದ ಮ॥ ಯೆಡ್ಡಿಯವರು ಬಂದು ಎರಡು ದಿವಸ ಹಿಡ್ಸನ್ ಮಮೋರಿಯಲ್ ದೇವಾಲಯದಲ್ಲಿ ಕ್ರೈಸ್ತ ಮತ್ತು ಹಿಂದೂ ಯೌವನಸ್ಥರಿಗೆ ಬಹು ಪ್ರಯೋಜನವುಳ್ಳ ಉಪನ್ಯಾಸಗಳನ್ನು ಮಾಡಿದರು. ಅವುಗಳಿಂದ ಬಹು ಜನರು ತಮ್ಮ ಜೀವಮಾನವನ್ನು ತಿದ್ದಿಕೊಳ್ಳುವದಕ್ಕೆ ಮಾರ್ಗವಾಯಿತು. ಡಾಕ್ಟರ್ ಮಾರ್ಟಿಯವರೂ ಡಾಕ್ಟರ್ ಹಾರ್ಟ್ಲೆಯವರೂ, ಮಿಲ್ಲರ್ ರೋಡಿನಲ್ಲಿ ಕಟ್ಟಲ್ಪಡುತ್ತಿರುವ ಕ್ರೈಸ್ತ ಥಿಯೊಲಾಜಿಕಲ್ ಕಾಲೇಜಿಗೆ ಅಸ್ತಿಭಾರದ ಕಲ್ಲನ್ನು ಬಹಳ ಸಂಭ್ರಮದಿಂದ ಹಾಕಿದರು. ಆಗ ಡಾಕ್ಟರ್ ವೈಕಾಫ್‌ಯವರು ಅಗ್ರಾಸನವನ್ನು ವಹಿಸಿದ್ದರು. ಬಹು ಜನ ಯೂರೋಪಿಯನರೂ ಬಹಳ ದೂರದಿಂದ ಬಂದು ಸಭೆಯಲ್ಲಿ ಹಾಜರಾಗಿದ್ದರು. ಬಹು ಜನ ಸ್ವದೇಶಿ ಕ್ರೈಸ್ತರೂ ಸಹಾ ಕೂಡಿಬಂದಿದ್ದರು. ಆಗ ಡಾಕ್ಟರ್ ಮಾರ್ಟಿಯವರೂ ಡಾಕ್ಟರ್ ಹಾರ್ಟ್ಲೆಯವರೂ ಎಲ್ಲಾ ಕ್ರೈಸ್ತ ಉಪಸಂಘದವರೂ ಕ್ರಿಸ್ತನ ಪರಮ ಉದ್ದೇಶವನ್ನು ನೆರವೇರಿಸುವ ಹಾಗೆ ಒಂದೇ ಅನ್ಯೋನ್ಯದಿಂದ ಸೇರಿರುವುದು ಎಷ್ಟು ಅವಶ್ಯವೆಂಬುವದನ್ನು ಸೂಚಿಸಿದರು. ಮರುದಿನ ಸಾಯಂಕಾಲ ಬೆಂಗಳೂರು ಯಲಹಂಕ ಗೇಟಿನಲ್ಲಿ ಕೆಡವಲ್ಪಟ್ಟಿದ್ದ ಲಂಡನ್ ಮಿಷನ್ ಕನ್ನಡ ದೇವಾಲಯವನ್ನು ರೈಸ್ ಮಮೋರಿಯಲ್ ಚರ್ಚ್ ಎಂಬ ಹೆಸರಿನಿಂದ ಕಟ್ಟಲ್ಪಡುವಹಾಗೆ ತೋರಣಗಳಿಂದಲೂ ಬಾವುಟಗಳಿಂದಲೂ ಅಲಂಕರಿಸಲ್ಪಟ್ಟಿತು. ಬಹುಜನ ಸ್ವದೇಶಿ ಕ್ರೈಸ್ತರೂ, ಯೂರೋಪಿಯನ್ನರೂ ನೆರೆದುಬಂದಿದ್ದರು. ವೆಸ್ಲಿಯನ್ ಮಿಷನ್ ನಿಂದ ಆರು ಮಂದಿ ದೊಡ್ಡ ಮನುಷ್ಯರನ್ನು ತಮ್ಮ ಪ್ರೀತಿ ಸೂಚಿಸುವದಕ್ಕೆ ಡೆಪ್ಯುಟೇಷನ್ ಕಳುಹಿಸಲ್ಪಟ್ಟಿದ್ದರು. ವೇದವನ್ನು ಓದಿ ದೇವರ ಪ್ರಾರ್ಥನೆ ಆದ ತರುವಾಯ ಅಗ್ರಾಸನಾಧಿಪತಿಯಾದ ಘನ ವಿಲ್ಕಿನ್ಸ್ ಬೋಧಕರು ದೇವಾಲಯದ ಸಂಬಂಧವಾದ ಸಂದರ್ಭಗಳನ್ನು ಸಂಕ್ಷೇಪವಾಗಿ ವಿವರಿಸಿದರು. ಬಳಿಕ ಡಾಕ್ಟರ್ ಹಾರ್ಟ್ಲೆಯವರು ಅಸ್ತಿಭಾರದ ಕಲ್ಲನ್ನಿಟ್ಟು ಸಂದರ್ಭಾನುಸಾರ ಸಂಕ್ಷೇಪವಾಗಿ ಮಾತನಾಡಿದರು. ತರುವಾಯ ಮ॥ ಅಮ್ಮಯ್ಯನವರು ಘನ ಬೆಂಜಮಿನ್ ರೈಸ್ ಬೋಧಕರ ಗುಣಕಥನವನ್ನು ಮಾಡಿದ ಮೇಲೆ ಮಿಸೆಸ್ ರೈಸ್‌ಯವರು ಅಸ್ತಿಭಾರದ ಎರಡನೇ ಕಲ್ಲನ್ನು ಇಟ್ಟರು. ಅವರ ಪರವಾಗಿ ಘನ ಈ. ಪಿ. ರೈಸ್ ಬೋಧಕರು ಮಾತನಾಡಿದರು. ಸಭಿಕರೆಲ್ಲರೂ ತಮ್ಮ ತಮ್ಮ ಕೃತಜ್ಞತೆಯ ಕಾಣಿಕೆಗಳನ್ನು ಬಹು ಸಂತೃಪ್ತಿಯಿಂದ ಅಸ್ತಿಭಾರದ ಕಲ್ಲುಗಳ ಮೇಲಿಟ್ಟರು. ಸಂಗೀತ, ಆಶೀರ್ವಾದಗಳಿಂದ ರೈಸ್ ಮೆಮೋರಿಯಲ್ ಚರ್ಚಿನ ಪ್ರಾರಂಭಕಾರ್ಯವು ಪೂರ್ತಿಯಾಯಿತು.

ಹೊಳೆನರಸೀಪುರ. ಇತ್ತಕಡೆ ದೊಡ್ಡ ರಾಗೀ ಪೈರೂ ಭತ್ತದ ಪೈರೂ ಕೊಯ್ಲಿಗೆ ಬಂದು ಮಳೆ ಹೊಯ್ದಿದ್ದ ಬಹಳ ಅಡಚಣೆಯಾಗಿದೆ. ಮ್ಯುನಿಸಿಪಲ್ ಏರ್ಪಾಡುಗಳು ತೃಪ್ತಿಕರವಾಗಿ ಕಾಣಲಿಲ್ಲ. ದೊಡ್ಡ ರಸ್ತೆ ಸಂದು ಗಲ್ಲಿಗಳ ಚರಂಡಿಗಳ ಮೇಲೆ ಕಸ ಕಲೀಜಾಗಿ ಹೊರಗೆ ಸಾಗುವದಿಲ್ಲ. ಅಲ್ಲಲ್ಲಿ ಜಾಡಮಾಲಿಗಳು ಗುಪ್ಪೆ ಮಾಡಿದ ಚರಂಡಿ ಮಣ್ಣು ಮಳೆಯಿಂದ ಪುನಹ ಚರಂಡಿಗೆ ಸೇರುತ್ತವೆ. ಗುಪ್ಪೆಮಾಡಿದ ಕಚರಾ ಕಸಗಿ ದುರ್ವಾಸನೆ ಬೀರುವುದು. ಇದರ ಜೊತೆಗೆ ಮಲಮೂತ್ರಗಳ ವಾಸನೆ ಸಹಿಸಕೂಡದು. ಇದೆಲ್ಲಾ ಸೇರಿ ಸಾಂಕ್ರಾಮಿಕ ರೋಗಗಳನ್ನು ಬೇಗನೆ ಕರೆಯುವಂತಿದೆ. ಮ್ಯುನಿಸಿಪಲ್ ಅಧಿಕಾರಿಗಳು ಗಮನಕ್ಕೆ ತರಬೇಕು. — ಈ ಊರಿನಲ್ಲಿ ಜೂಜಾಟವು ದೊಡ್ಡವರಲ್ಲಿಯೂ ಚಿಕ್ಕವರಲ್ಲಿಯೂ ಬಹಳ ಪ್ರಬಲಕ್ಕೆ ಬಂದಿದೆ. ಜೂಜುಕೋರರನ್ನು ಹಿಡಿದು ಶಿಕ್ಷಿಸಬೇಕೆಂದು ಸರ್ಕಾರದ ಅಪ್ಪಣೆಯಾಗಿದ್ದರೂ ಪೋಲೀಸಿನವರು ಇಂಥಾ ಜೂಜನ್ನು ಕಂಡರೂ, ಆಡುವ ಸ್ಥಳಗಳನ್ನು ತಿಳಿದಿದ್ದರೂ ಯಾರನ್ನೂ ಶಿಕ್ಷೆಗೆ ಗುರಿಮಾಡಲಿಲ್ಲ. ಈ ಜೂಜು ದೊಡ್ಡ ಹೊಲಗೇರಿಯಲ್ಲಿ ಸೇರಿ ಅನೇಕರನ್ನು ಮೋಸಮಾಡಿದೆ. ಇದಕ್ಕಾಗಿ ಕಾಸು ಸಿಕ್ಕದೆ ಇರುವಾಗ ಕಳ್ಳತನವೂ, ರಾತ್ರಿಕಾಲದಲ್ಲಿ ಮನೆಗಳಿಗೆ ನುಗ್ಗಿ ಕಟ್ಟಿರುವ ಹಸು ಎತ್ತು ಎಮ್ಮೆ ಮುಂತಾದವುಗಳನ್ನು ಕದ್ದುಕೊಂಡು ಹೋಗಿ ಕೊಲ್ಲುವವರಾಗಿರುತ್ತಾರೆ. ದೀಪಾವಳಿ ಹಬ್ಬದ ದಿವಸ ನೂರು ಎಮ್ಮೆಗಳನ್ನು ಒಂದು ಹೊಲದಲ್ಲಿ ಕೊಂದು ಅವುಗಳ ಚರ್ಮವನ್ನು ೧೭ ರೂಪಾಯಿಗೆ ಮಾರಿಕೊಂಡರೆಂದು ಜನರು ಹೇಳುತ್ತಾರೆ. ಪೋಲೀಸ್ ಇನ್‌ಸ್ಪೆಕ್ಟರೇ ಆದಿಯಾಗಿ ಎಲ್ಲಾ ಕಾನ್ಸ್ಟೇಬಲ್‌ಗಳ ತನಕ ಮುತುವರ್ಜಿ ವಹಿಸಿದರೆ ಇಂಥಾ ಅನ್ಯಾಯಗಳೆಲ್ಲಾ ನಿಂತುಹೋಗಿ ಜನಗಳು ಸುಖವಾಗಿ ಬಾಳುವರು. ಇಲ್ಲಿಗೆ ಹೊಸದಾಗಿ ಬಂದಿರುವ ಪೋಲೀಸ್ ಇನ್‌ಸ್ಪೆಕ್ಟರು ಬಹಳ ಒಳ್ಳೆಯವರು, ನಿಷ್ಠಾಸಗಳು, ಮೇಲಾಗಿ ಪಕ್ಷಪಾತವಿಲ್ಲದವರು. ಇಷ್ಟು ಬೇಗ ಇವರಿಗೆ ವರ್ಗವೆಂಬ ಸಮಾಚಾರವನ್ನು ಕೇಳಿ ವಿಷಾದಿಸಬೇಕಾಗಿದೆ —ನಮ್ಮ ಅಮಲ್ದಾರ್ ಮ॥ ತಿರುನಾರಣಯ್ಯಂಗಾರ್ಯರವರು ಇಲ್ಲಿಗೆ ದಯಮಾಡಿಸಿದ ಮೇಲೆ ಇಲ್ಲಿನ ಪ್ರಜೆಗಳ ಕ್ಷೇಮಚಿಂತನೆಯನ್ನೇ ಬಯಸಿ ಅನೇಕ ಶಾಶ್ವತವಾದ ಕಾರ್ಯಗಳನ್ನು ಮಾಡತೊಡಗಿರುತ್ತಾರೆ. ಅವುಗಳಲ್ಲಿ ಕೋಆಪರೇಟಿವ್ ಸೊಸೈಟಿ ಎಂಬುವದು ಒಂದು. ಈ ಸೊಸೈಟಿಯ ಪ್ರಯೋಜನವು ಜನರಿಗೆ ಈಗೀಗ ತಿಳಿದಿದೆ. ಈ ಸೊಸೈಟಿಯು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಇದೆ. ಮತ್ತು ಕಾರೊನೇಷನ್ ಎಂಬ ಶಾಶ್ವತವಾದ ಮತ್ತು ಬಹು ಸುಂದರವಾದ ಕಟ್ಟಡವು ೫ ಸಾವಿರ ರೂಪಾಯಿಗೆ ಮಾಣಿಕ್ಯಂ ಮೊದಲಿಯಾರ್ ಎಂಬ ಕಂಟ್ರಾಕ್ಟರಿಗೆ ಒಪ್ಪಿಸಿರುತ್ತಾರೆ. ಈ ಕಟ್ಟಡದ ಕೆಲಸವು ಬೇಗನೆ ಜರುಗುತ್ತಿದೆ. ಇದೂ ಅಲ್ಲದೆ ಜನಗಳು ಆರೋಗ್ಯಸ್ಥಿತಿಯಲ್ಲಿರಬೇಕೆಂದು ಊರು ವಿಸ್ತಾರವಾಗತಕ್ಕ ಏರ್ಪಾಡು ಮಾಡಿರುತ್ತಾರೆ. ಇದರ ಜೊತೆಗೆ ಅಮಲ್ದಾರರು ರಾತ್ರಿಕಾಲದಲ್ಲಿ ಸಂದುಗಳಲ್ಲಿ ಲಾಂದ್ರಗಳನ್ನು ಹಚ್ಚುವಂತೆ ಮಾಡಿಸಿದರೆ ಪ್ರಜೆಗಳು ಕೊಂಡಾಡುವರು.

ಬೇಲೂರು. —ಈ ಸಾರಿ ೮ ೧೦ ವರುಷದ ೧೦ ತಿಂಗಳೂ, ಒಬ್ಬ ಯೌವನಸ್ಥನೂ ಪ್ಲೇಗಿನಲ್ಲಿ ಕಾಲವಾದರು. ಕೆಲವು ಸರ್ಕಾರಿ ನೌಕರರು ಮಾತ್ರ ಷೆಡ್ಡಿಗೆ ಹೋಗಿ, ಮಿಕ್ಕವರು ಊರಿನಲ್ಲೇ ಇರುವರು. ಧಾರಣೆವಾಸಿ ಮಾತ್ರ ಬಹು ತುಟ್ಟಿಯಾಗಿದ್ದು ಬಡವರು ಜೀವಿಸುವುದು ಕಷ್ಟವಾಗಿದೆ. ಈ ಸಾರಿ ಪೈರು ಬಹಳ ಚೆನ್ನಾಗಿದ್ದು ಮೋಡಮುಸುಕಿ ಆಗಾಗ್ಗೆ ಜೋರಾಗಿ ಮಳೆ ಬರುತ್ತಿರುವುದರಿಂದ ಅಕ್ಕಿ ರೂಪಾಯಿಗೆ ೮ ಸೇರು, ರಾಗಿ ೧೫ ಸೇರು ಆಗಿದೆ.—ನಮ್ಮ ಅಮಲ್ದಾರ್ ಮ॥ ಯಂ. ಕೇಶವಯ್ಯನವರು ಉದಾರಿಗಳೂ, ಕೇವಲ ಜನಾನುರಾಗಿಗಳೂ ಆಗಿದ್ದು ಈ ತಾಲ್ಲೂಕಿನ ಪ್ರಜೆಗಳನ್ನು ಪ್ರೋತ್ಸಾಹಿಸಿ ಅವರಿಂದ ಲಭ್ಯವಾದ ಮೊಬಲಗಿನಿಂದ ೫,೦೦೦ ರೂಪಾಯಿಗೆ ನಮ್ಮ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆ ಮಹೋತ್ಸವ ಜ್ಞಾಪಕ ಭವನವನ್ನೂ, ಅದಕ್ಕೆ ಸೇರಿದಂತೆ ಒಂದು ಟೆನ್ನಿಸ್ ಕೋರ್ಟನ್ನೂ ನಿರ್ಮಿಸಿ, ಸರ್ವರಿಗೂ ಸೌಲಭ್ಯವಾಗುವಂತೆ ಒಂದು ವಾಚಕ ಶಾಲೆಯನ್ನು ಸ್ಥಾಪಿಸಿ ನೇತ್ರಾನಂದಕರವಾದ ಭವನವನ್ನು ೫ ತಿಂಗಳಲ್ಲಿ ಕಟ್ಟಿ ಪೂರೈಸಿ, ಈ ತಾಲ್ಲೂಕು ಪ್ರಜಾಮುಖಂಡರನ್ನೂ ಡಿಸ್ಟ್ರಿಕ್ಟಿನ ಎಲ್ಲಾ ಬಾಬಿನ ಆಫೀಸರುಗಳನ್ನೂ ಬರಮಾಡಿಕೊಂಡು ನಮ್ಮ ಡೆಪ್ಯುಟಿ ಕಮಿಷನರ್ ರವರ ಪತ್ನಿಯವರ ಮೂಲಕ ಸದರಿ ಭವನ ಪ್ರವೇಶೋತ್ಸವವನ್ನು ನೆರವೇರಿಸಿದರು. ಹಾಜರಾಗಿದ್ದ ಮಹನೀಯರುಗಳ ವಿನೋದಕ್ಕಾಗಿ ಅನೇಕ ಆಟಪಾಟಗಳನ್ನು ಕಲ್ಪಿಸಿ, ಅದರಲ್ಲಿ ಗೆದ್ದವರಿಗೆ ಬಹುಮಾನ ಕೊಡಿಸಿ, ಅತಿಥಿವರ್ಗಕ್ಕೆಲ್ಲಾ ರಾಜಯೋಗ್ಯವಾದ ತಿಂಡಿತೀರ್ಥಗಳನ್ನು ಕೊಟ್ಟು ಆನಂದಗೊಳಿಸಿದರು. ಮಾರನೇ ದಿನ ಸದರಿ ಭವನದಲ್ಲಿ ಇಂಗ್ಲಿಷ ಮಿಷನ್ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯರಿಗೆ ಡೆಪ್ಯುಟಿ ಕಮಿಷನರ್ ರವರ ಅಧ್ಯಕ್ಷತೆಯಿಂದ ಬಹುಮಾನ ವಿನಿಯೋಗ ಸಮಾರಂಭವು ನೆರವೇರಿತು. ಡೆಪ್ಯುಟಿ ಕಮಿಷನರ್ ರವರ ಪತ್ನಿಯವರು ಬಾಲಕೀಯರಿಗೆ ಅಂದವಾದ ಬೊಂಬೆಗಳನ್ನು ವಿನಿಯೋಗಿಸಿದರು. ಅನಂತರ ಈ ಊರು ನ್ಯಾಷನಲ್ ಸ್ಕೂಲ್ ಸೆಕ್ರೆಟರಿಯವರೂ ಉಪಾಧ್ಯಾಯರುಗಳೂ ಸದರಿ ಭವನದಲ್ಲೇ ಮಿಸೆಸ್ ವೆದರಾಲ್‌ಯವರ ಅಧ್ಯಕ್ಷತೆಯಿಂದ ಈ ಊರು ಕೋಟೆಯಲ್ಲಿರುವ ಹೆಣ್ಣುಮಕ್ಕಳನ್ನೆಲ್ಲಾ ಸೇರಿಸಿ, ಸದರಿ ಬಾಲಕೀಯರಿಂದ ಕೆಲವು ಹಾಡುಗಳನ್ನು ಹೇಳಿಸಿ, ಬೊಂಬೆ ತಟ್ಟೆ ವಗೈರೆಯನ್ನು ಬಾಲಕಿಯರಿಗೆ ಕೊಡಿಸಿದರು. ನಮ್ಮ ಶ್ರೀಮನ್ಮಹಾರಾಜರವರು ಈ ಡಿಸೆಂಬರ್ ತಾ ೧೧ ನೇ ಮಧ್ಯಾಹ್ನ ಚರಿತ್ರಾರ್ಹವಾದ ಈ ಬೇಲೂರನ್ನು ದರ್ಶಿಸಲೂ, ರಾಜಭಕ್ತಿ ಪ್ರದರ್ಶಕರಾದ ಪ್ರಜೆಗಳಿಗೆ ಸಂದರುಶನವನ್ನೀಯಲೂ ದಯಮಾಡುವ ವದಂತಿಯಿಂದ ಈ ಊರಿನ ಛಾಟಾವರ್ಗಗಳು ಮಾತ್ರ ಅಲಂಕಾರವಾಗುತ್ತಿರುವವು. ಹಾಗೆಂದು ಈ ಊರು ಪೇಟೆ ಕೋಟೆಗಳಲ್ಲಿರುವ ಎಲ್ಲಾ ರಸ್ತೆಗಳೂ ಗಲ್ಲಿಗಳೂ ಶುಚಿಯಾದವು. ಪ್ರತಿ ವರುಷವೂ ಬರುವ ಪ್ಲೇಗು ನಿಂತುಹೋಗುವುದರಲ್ಲಿ ಸಂಶಯವಿಲ್ಲ. ಸರ್ಕಾರದವರು ಈ ಸಾರಿ ನಡೆದ ಪ್ರತಿನಿಧಿ ಸಮಾಜದಲ್ಲಿ ಬೇಲೂರು ದೇವಸ್ಥಾನದ ರಿಪೇರಿಯನ್ನು ಇಂಜನಿಯರ್ ಇಲಾಖೆಗೆ ವಹಿಸಿರುವುದಾಗಿಯೂ, ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಒಂದು ಗೋಪುರವನ್ನು ಕಟ್ಟಿಸುವುದಾಗಿಯೂ ಅಪ್ಪಣೆಕೊಟ್ಟಿರುವದು ಸಂತೋಷಪ್ರದವಾಗಿದೆ.

ತುಮಕೂರು. — ಈ ಊರಿನಲ್ಲಿ ೮ ೧೦ ದಿವಸಗಳಿಂದಲೂ ತುಂತುರುಮಳೆ ಪ್ರಾರಂಭವಾಗಿ ಈಗ ೩ ೪ ದಿನಗಳಿಂದ ಬಿಸಲುಮುಖವಾಗಿದೆ. ಈ ವರ್ಷ ಕೆರೆಯು ತುಂಬಿದೆ ಅರ್ಧ ಕೆರೆಯಾಗಿದೆ. ಈ ನೀರಿನಿಂದ ತರೀ ಫಸಲು ಆಗುವ ಹಾಗೆ ಕಾಣುವುದಿಲ್ಲ. ಸರ್ಕಾರದವರು ಕೆರೆಯ ನೀರನ್ನು ತೋಟಗಳಿಗೆ ಬಿಡದಂತೆ ಅಡ್ಡಿ ನಡಸಿದಲ್ಲಿ ಪ್ರಜೆಗಳಿಗೂ ಗೋಕಾಯಿಗಳಿಗೂ ತುಂಬಾ ಉಪಕಾರವಾದೀತು. ಇಲ್ಲಿನ ಜವಳಿ ಅಂಗಡಿ ಮ॥ ವೆಂಕಟರಮಣಶೆಟ್ಟಿಯವರು ಕೆರೆ ಬಳಿ ಒಂದು ಭಾವಿಯನ್ನು ಕಟ್ಟಿಸಿದ್ದರಿಂದ ಈ ಊರಿನ ಅರ್ಧ ಭಾಗದ ಪ್ರಜೆಗಳಿಗೆ ಸಮೀಪವಾಗಿರುವುದರಿಂದಲೂ ನೀರಿನ ತೊಂದರೆಯನ್ನು ತಪ್ಪಿಸಿದ್ದರಿಂದಲೂ ಪ್ರಜೆಗಳೆಲ್ಲರೂ ಇವರನ್ನು ಬಹಳವಾಗಿ ಕೊಂಡಾಡುತ್ತಿದ್ದಾರೆ —ಈಗ್ಗೆ ೧ ೨ ತಿಂಗಳ ಕೆಳಗೆ ಡೆಪ್ಯುಟಿ ಕಮಿಷನರ್ ಮ॥ ಸಿ. ಎಸ್. ಬಾಲಸುಂದರಂ ಅಯ್ಯರವರು ತಿಕ್ಕೇರಿ ಕಡೆ ದಯಮಾಡಿದಾಗ ಪ್ರಜೆಗಳೆಲ್ಲರೂ ರಸ್ತೆಯ ವಿಷಯವಾಗಿಯೂ, ರಸ್ತೆಗಳಿಲ್ಲದೆ ಸಣ್ಣ ಗಲ್ಲಿಗಳಲ್ಲಿ ಬಚ್ಚಲ ನೀರು ತುಳಿದುಕೊಂಡು ತಿರುಗಾಡಬೇಕೆಂತಲೂ, ಕತ್ತಲು ಕಾಲದಲ್ಲಿ ತಿರುಗಾಡುವುದಕ್ಕೆ ಕಷ್ಟಕರವಾಗಿದೆ ಎಂತಲೂ, ಕಚರಾ ಗಾಡಿ ಈ ಸಂದುಗಳಲ್ಲಿ ಬರಲು ತೊಂದರೆಯಾಗಿದೆ ಎಂತಲೂ, ರೂಬರೂ ತೋರಿಸಿದ್ದಲ್ಲದೆ ಕೊಂಚ ಜನಗಳು ಸೇರಿಕೊಂಡು ಸರ್ಕಾರದಿಂದ ರಸ್ತೆ ಮಾಡಿಸುವ ಉದ್ದಿಶ್ಯ ಅರ್ಜಿ ಕೊಟ್ಟಿದ್ದಕ್ಕೆ ತಿಕ್ಕೇರಿಯಲ್ಲಿ ಜಾಗ್ರತೆಯಾಗಿ ರಸ್ತೆಗಳನ್ನು ಮಾಡಿಸುತ್ತೇವೆಂಬದಾಗಿ ಅಪ್ಪಣೆಯಾಯಿತು. ಈಗ ೧೫ ೨೦ ದಿನಗಳಿಂದಲೂ ಅಲ್ಲಲ್ಲಿ ರಸ್ತೆ ಆಗುವ ಗಲ್ಲಿಗಳನ್ನು ಅಳತೆ ಮಾಡಿಸುವಂತೆ ಹುಕುಂ ಮಾಡಿದಾರೆ. ಈ ಜೀನಿಗೆಯು ಪೂರೈಸುವುದರೊಳಗಾಗಿ ಹೊಸ ರಸ್ತೆಗಳ ಕಾಮಗಾರಿಗಳನ್ನು ಪೂರೈಸಿದರೆ ಪ್ರಜೆಗಳಿಗೆ ಎಷ್ಟೋ ಕ್ಷೇಮವಾದೀತು. ಆದರೆ ಎಲ್ಲಾ ಕಡೆಯ ಗಲೀಜಿಗಿಂತ ತಿಕ್ಕೇರಿಯ ಸಣ್ಣ ಸಂದುಗಳಲ್ಲಿ ಎಲ್ಲಿ ನೋಡಿದರೂ ಬಹಳ ಅಸಹ್ಯವಾಗುವಂತಿದೆ. ಮೊದಲಿದ್ದ ಡೆಪ್ಯುಟಿ ಕಮಿಷನರ್ ಮ॥ ನಾಣಾರಾಯರ ಕಾಲದಲ್ಲಿ ತಿಕ್ಕೇರಿಯಲ್ಲಿ ಬಹಳ ಗಲೀಜಾಗುವುದನ್ನು ನೋಡಿ ಎರಡು ದೊಡ್ಡ ರಸ್ತೆಗಳನ್ನು ಮಾಡಿಸಿ ಇನ್ನು ಕೆಲವು ರಸ್ತೆಗಳನ್ನು ಮಾಡಿಸುವ ಉದ್ದಿಶ್ಯ ಅಳತೆ ಸಹ ಮಾಡಿಸಿದ್ದರು. ಈಗಿನವರೂ ಅದೇ ರೀತಿ ತಿಕ್ಕೇರಿಯಲ್ಲಿ ೧ ೨ ರಸ್ತೆಗಳನ್ನು ಮಾಡಿಸಿ ಕೀರ್ತಿ ಪಡೆಯಬೇಕಾಗಿದೆ —ಕಳೆದ ಜೂನ್ ತಿಂಗಳಿಂದ ಲಾಂದ್ರಾ ದೀಪ ಹಚ್ಚುವ ಕಂಟ್ರಾಕ್ಟನ್ನು ತಪ್ಪಿಸಿ ಸರ್ಕಾರದಿಂದಲೇ ಹಚ್ಚಿಸುತ್ತಿದಾರೆ. ಕತ್ತಲು ಕಾಲದಲ್ಲಿ ಮಾತ್ರ ಎಲ್ಲಾ ಲಾಂದ್ರಗಳನ್ನೂ ಸರಿಯಾಗಿ ಹಚ್ಚಿ, ಬೆಳದಿಂಗಳ ಕಾಲದಲ್ಲಿ ಸಂದುಗಳಲ್ಲಿರುವ ಲಾಂದ್ರಗಳನ್ನು ಮಾತ್ರ ಹಚ್ಚುವುದಿಲ್ಲ — ಅಕ್ಕಿ ರೂಪಾಯಿಗೆ ೫½ ರಿಂದ ೬, ರಾಗಿ ೧೫ ೧೬ ಸೇರು ಮಾರುವರು. ಈ ಊರಿನಲ್ಲಿ ೧ ೨ ಮನೆಗಳಲ್ಲಿ ಕಳುವಾಗಿತ್ತು. ವಾಲು

ಕಳೆದುಕೊಂಡವರು ಪೊಲೀಸಿಗೆ ರಿಪೋರ್ಟು ಮಾಡಿದ್ದರು ಈಗ ಆ ಮಾಲುಗಳಿಲ್ಲಾ ಉಪ್ಪಾರ ಜಾತಿ ಗಾಪೇ ಕೆಲಸ ಮಾಡುವ ಸಿದ್ದನಲ್ಲಿ ಸಿಕ್ಕಿ, ಅವನನ್ನು ಲಾಕಪ್ಪಿನಲ್ಲಿಟ್ಟು ವಿಚಾರಣೆ ಮಾಡುತ್ತಿದಾರೆ—ಮೊದಲಿದ್ದ ಡೆಪ್ಟಿ ಕಮಿಷನರ್ ಮೆ|| ಎಂ ರಾಮರಾಯರ ಕಾಲದಲ್ಲಿ ಡಾಕ್ಟರ್ ಟಿ ಎಸ್ ನಂಜಪ್ಪನವರನ್ನು ಮತ್ತು ಅಮಲ್ದಾರರನ್ನು ಸೇಯಿಗೆ ಕಳಿಸಿ ಎಸ್ ಗೋವಿಂದಾಚಾರ್ಯರು ನೇಯಿಗೆ ಜನಗಳಿಗೆ ತುಮಕೂರಿನಲ್ಲಿ ಒಂದು ಸೊಸೈಟಿ ಏರ್ಪಡಿಸಿ ನೇಯಿಗೆ ಜನಗಳಿಂದ ತಿಂಗಳುತಿಂಗಳಿಗೂ ಷೇರುಧನ ಮತ್ತು ಪ್ರವೇಶಧನವನ್ನು ವಸೂಲು ಮಾಡಿ ಸರ್ಕಾರದಿಂದ ಕೊಂಚ ಮೊಬಲಗು ಕೊಡಿಸುವ ಹಾಗೆ ಏರ್ಪಡಿಸಿ ಸೊಸೈಟಿಯನ್ನು ಏರ್ಪಡಿಸಬೇಕೆಂಬದಾಗಿ ಮೇಲ್ಕಂಡ ಅಧಿಕಾರಿಗಳನ್ನು ಕೇಳಿಕೊಂಡ ಮೇರೆಗೆ ಡಾಕ್ಟರ್ ನಂಜಪ್ಪನವರು ಮತ್ತು ಅಮಲ್ದಾರರು ಸಹ ನೇಯಿಗೆ ಜನಗಳನ್ನು ಕರಸಿಕೊಂಡು ಪ್ರವೇಶಧನಕ್ಕೆ ೬ ಆಣೆಯಂತೆಯೂ ಷೇರು ಧನಕ್ಕೆ ೪ ಆಣೆಯಂತೆಯೂ ಪ್ರತಿ ತಿಂಗಳಲ್ಲಿಯೂ ಕೊಡುತ್ತಾ ಬರುವುದಲ್ಲದೆ ಒಬ್ಬೊಬ್ಬ ಮನುಷ್ಯನು ಎಷ್ಟು ಷೇರುಗಳನ್ನಾದರೂ ತಗೆದುಕೊಳ್ಳಬಹುದೆಂತಲೂ, ಸರ್ಕಾರದಿಂದ ಕೊಂಚ ಮೊಬಲಗನ್ನು ಕೊಡುತ್ತೇವೆಂತಲೂ, ಹಾಗೆ ಕೊಡಿದ ಹಣದಿಂದ ಅವರಿಗೆ ಬೇಕಾದ ಸರಕುಗಳನ್ನು ಒದಗಿಸುತ್ತೇವೆಂತಲೂ, ಸರಕುಗಳನ್ನು ಸೊಸೈಟಿಯಿಂದಲೇ ತಗೆದುಕೊಂಡುಹೋಗಿ ಸರಕುಗಳನ್ನು ಸೊಸೈಟಿಗೇ ಕೊಡಬೇಕೆಂತಲೂ ತೋರಿದ ರ ಮೇರೆ ಜನಗಳು ಅವರವರ ಶಕ್ತಿಗೆ ತಕ್ಕಂತೆ ೯–೧೦ ರ ತನಕ ಷೇರುಗಳನ್ನು ಹಾಕುತ್ತೇವೆಂತ ಒಪ್ಪಿಕೊಂಡರು ಈ ಸೊಸೈಟಿಗೆ ಮ ರಾಘವೈಯನವರು ಖಜಾಂಚಿಯಾಗಿ ನೇಮಕವಾದರು ಎಸ್ ಗೋವಿಂದಾಚಾರ್ಯರು ಸೆಕ್ರೆಟರಿ ಕೆಲಸಕ್ಕೂ, ನೇಯಿಗೆ ಜನಗಳಲ್ಲಿ ನಾರಾಯಣಪ್ಪ, ದೊಡ್ಡಗಿರಿಯಪ್ಪ, ಚಿಕ್ಕತಿಮ್ಮಯ್ಯ, ಚಿಕ್ಕಲಿಂಗಪ್ಪ ಈ ನಾಲ್ಕು ಮಂದಿ ಮೆಂಬರಾಗಿ ನೇಮಿಸಿದರು ಪೈಕಿ ಪುಸ್ತಕಗಳು ಅಚ್ಚಾಗಿ ಹಂಚಲ್ಪಟ್ಟು ಜನಗಳು ಷೇರು ಮತ್ತು ಪ್ರವೇಶಧನ ಕೊಡುತ್ತಾ ಬಂದರು ಹೀಗೆ ಇರುವಲ್ಲಿ ಎಸ್ ಗೋವಿಂದಾಚಾರ್ಯರು ಎಲ್ಲಾ ಮೊಬಲಗನ್ನು ತೆಗೆದುಕೊಂಡು ಪರಾರಿಯಾಗಿರುತ್ತಾರೆ ಈ ವಿಷಯಕ್ಕೆ ಜನಗಳೆಲ್ಲರೂ ಮೆ|| ಟಿ ಎಸ್ ನಂಜಪ್ಪನವರನ್ನು ಕೇಳುವಲ್ಲಿ ಎಸ್ ಗೋವಿಂದಾಚಾರ್ಯರು ಇರುವ ಸ್ಥಳ ಗೊತ್ತಿಲ್ಲವೆಂದೂ, ತಲಾಷ್ ಮಾಡಿ ಕರಸುತ್ತೇವೆಂದೂ ಹೇಳುತ್ತಾರೆ

ಮಾಗಡಿ.—೭ ೮ ದಿವಸಗಳಿಂದ ಮಳೆಯು ನಿಂತು ಹೊಲಗಳ ಕಟಾವು ಪ್ರಾರಂಭಿಸುತ್ತಲಿದೆ ಧಾರಣೆ ಗಾಸಿಗಳು ಇನ್ನೂ ಕಮ್ಮಿಯಾಗಿಲ್ಲ ಹೊಸ ಅಕ್ಕಿ ಸೇರುಗಳೂ, ತಡಕದ ಬಟ್ಟೆಗಳೂ ಯಾವಾಗ ಪೇಟೆಗೆ ಬರುತ್ತವೋ ಎಂದು ಜನಗಳು ಕಾದಿದಾರೆ—ಮೊನ್ನೆ ಕೆರೆ ತುಂಬಿದಾಗ ಇದರ ತೂಬು ಯಾವ ಕಾರಣದಿಂದಲೋ ಒಡೆದು ಹೋಗಿ ನೀರು ಆಚೆಗೆ ಹೋಗುತ್ತಲಿತ್ತು ಒಂದೆರಡು ಸಾರಿ ಸರಿಪಡಿಸಿದರು ಪುನಃ ಪೂರ್ವದಂತೆಯೇ ಒಡೆದು ಹೋಗಿ ಒಂದೆಲ್ಲಾ ಆಚೆಗೆ ಹೊರಟು ಹೋಗುತ್ತಲಿದೆ ಈಗ ಸುಮಾರು ಒಂದು ಅಡಿಯಷ್ಟು ನೀರು ಹೊರಟುಹೋಗಿದೆ ಇರುವ ಒಂದು ಚಿಕ್ಕ ಕೆರೆಯ ನೀರನ್ನೂ ಹೀಗೆ ಹಾಳು ಮಾಡಿದರೆ ಊರಿನಲ್ಲಿ ಮುಂದೆ ನೀರಿಗೆ ಅಭಾವವಾಗುತ್ತದೆ ನೀರಗಂಟಿಯನ್ನು ಪಟೇಲ್ ಶ್ಯಾನುಭೋಗರು ಇತರ ಕೆಲಸಗಳಿಗೆ ನೇಮಕಮಾಡಿಕೊಂಡು ವಿರಾಮಗಳನ್ನು ಮಾತ್ರ ಬರದೆ ತಿಂದು ವಸೂಲ್ಮಾಡಿ ಕೊಡಿಸುತ್ತಿರುವರು ಗ್ರಾಮದವರಿಂದ ಯಾಕೆ ಸರಿಮಾಡಿಸಬಾರದು? ಇನ್ನಾದರೂ ಜಾಗ್ರತೆ ಸರಿಪಡಿಸುವರೆಂದು ನಂಬಿದೇನೆ—ಇಲ್ಲಿ ಮುನಿಸಿಪಾಲಿಟಿಯು ಈಗ ಸರಿಯಾಗಿ ನಡೆಯುತ್ತಿಲ್ಲ ಈಗ ೧೫ ದಿನಗಳಿಂದ ಲಾಂದ್ರ ಕಂಬಗಳ ದೀಪಗಳೇ ಹಾಕುವುದಿಲ್ಲ ಊರಿನಲ್ಲಿ ರಾತ್ರಿ ಕಗ್ಗತ್ತಲೆಯಾಗಿ ಕಳ್ಳಕಾಕರಿಗೆ ಅನುಕೂಲವಾಗಿದೆ ಮತ್ತು ತಿರುಗಾಡತಕ್ಕವರು ಕತ್ತಲಲ್ಲಿ ಕಂಭಕ್ಕೆ ಡಿಕ್ಕಿ ಹೊಡಕೊಳ್ಳುವರು ಅದರಿಂದ ಮೆಂಬರುಗಳು ಈ ವಿಚಾರದಲ್ಲಿ ಗಮನಕೊಟ್ಟು ತಕ್ಷಣ ಲಾಂದ್ರಗಳನ್ನು ಹಚ್ಚುವಂತೆ ಮಾಡುತ್ತಾರೆಂದು ನಂಬಿದೇನೆ—ಇಲ್ಲಿ ತಾ ೨೭ ರಲ್ಲಿ ಮುಸಲ್ಮಾನರಲ್ಲೊಬ್ಬ ನಮಾಜಿಗೆ ಊರಿನ ಆಚೆಗೆ ಹೋಗಿದ್ದಾಗ ಸನ್ನುಗ್ಗಾರಿನಿಂದ ಒಬ್ಬರು ಮನೆಯಲ್ಲಿ ೧,೫೦೦ ರೂಪಾಯಿ ವರೆಗೆ ನಗನಾಣ್ಯಗಳೂ, ಪತ್ರಗಳೂ ಕಳುವಾಗಿ ಹೋಗಿರುತ್ತ ಮಾಲೀಕನು ಹೋಗಿ ಪೊಲೀಸಿಗೆ ತಿಳಿಸಲು ತಿಮ್ಮರಾಯಪ್ಪ, ಸುಜುಂದಯ್ಯ ಪಸ್ಸೆರ ಇಬ್ಬರು ಪೊಲೀಸಿನವರನ್ನು ಮುಡುಕಲು ಕಳುಹಿಸಿದರು ಸದರಿ ತಿಮ್ಮರಾಯಪ್ಪನು ಬಹಳ ಪ್ರಯಾಸಪಟ್ಟು ಕಳ್ಳನನ್ನು ಕೆಂಪ ಮಾಲು ಸಮೇತ ಹಿಡಿದುಕೊಂಡು ಲಾಕಪ್ಪಿನಲ್ಲಿ ಇಟ್ಟಿದಾರೆ ಸದರಿ ತಿಮ್ಮರಾಯಪ್ಪನು ಒಂದೆ ೨೦ ಕೇಸುಗಳನ್ನು ಹಿಡಿದು ಇದಾನೆ

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್

ವೃತ್ತಾಂತ ಪತ್ರಿಕೆಯ ೧೯೧೨-೧೩ನೇ ವರುಷದ ಎರಡನೇ ಕ್ವಾರ್ಟರು ಕಳದ ನವಂಬರು ತಿಂಗಳಿಗೆ ಪೂರೈಸಿದ ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಪೈಸಲುಮಾಡಿ, ''...'' ಫಾರಂಗಳಿಗೆ ... ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟುಗಳಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕೆಂದು ಕೃತವಿಸುತ್ತೇವೆ

ಮಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸು, ಮೈಸೂರು

BENEFIT YOURSELF AND BENEFIT OTHERS.

The National Insurance and Banking Company Ltd, Amritsar.

Authorised Capital	Rs	10,00,000
Subscribed Capital Exceeds	,,	10,00,000
Paid up ,, ,,	,,	1,25,000
Funds Exceed	,,	15,00,000
Policy-holders ,,	,,	80,000
Claims paid about ,,	,,	4,00,000

This Company works in accordance with **the Indian Life Assurance Companies'** and **Provident Societies' Acts 1912** and has also given **double the initial security** to the **Government** as required under the **Insurance Act 1912**

How is it that the **National, of Amritsar,** has become very popular throughout India?

Because, it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions, and distributes relief in thousands every quarter on account of **marriages and deaths**

[122 19]

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission** The post is permanent and our agents are entitled to **pension**. None but those who can spare whole time who reside in district or taluk head quarters and who are well versed in English need apply

For further particulars and prospectuses please apply with **one anna stamp** and your previous experience in the line to —

M. L. NAGANNAH,

Chief Agent,

The Amritsar National Insurance Buildings, Mysore

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದುರ್ಬಲ್ಲಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಯುಕ ಶರೀರಕ್ಕೆ ರೋಗಗಳು ಬಾಗುವುವು

ಮೂತ್ರಕೋಶದ ದೌರ್ಬಲ್ಯಕ್ಕೆ ಅಧವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇರುವುದು ಬದನ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು ಗಾಬರಿ ಕಣ್ಮಬ್ಬು ತಲೆ ತಿರುಗುವಿಕೆ ಮೈನೋವು, ಕೀಲುನೋವು ಮುಂತಾದ ಲಕ್ಷಣಗಳು ಇವೇ ನೋಡಲಾಮುವು ಅಲಕ್ಷ್ಯ ಮಾಡಿದರೆ ಮೂತ್ರಾಶ್ಮರಿ ವಾಯು ಮೆಹ ಜ್ವರ, ಉರಿಮೂತ್ರ, ಮೂತ್ರಕೋಶದ ಕ್ಷಯನವೇ ಆಗುವುದು ಸ್ತ್ರೀಯರಲ್ಲಿ ಸ್ತ್ರೀ ಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇದರಲ್ಲಿ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ದೇಹಕ್ಕೆ ಆರೋಗ್ಯವನ್ನುಂಟುಮಾಡುವುವು [12 19]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರುವುವು



ರೂ ೨–೦–೦, ಅಧವಾ ೬ ಬುಡ್ಡಿಗಳಿಗೆ ರೂ ೧೧–೦–೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಧವಾ ಪೋಸ್ಟರ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚುಂನಡಿ ಅಂಚಿನ ಸೀರೆಗಳು.

ಅವಲ್ ರಮಾ ಕ್ರಯ ರೂ ೩ ೧೦ ೦ ಮಧ್ಯಮ ರಮಾ ಕ್ರಯ ರೂ 2-3-0



ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚುಂನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಕ್ಕಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟುಮಾಡಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇವರ ಸೆರಗಿನ ಬಹು ಘನದಾಗಿನ ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ ಈ ಜಾಹೀರು ಒಂದನ್ನು ತರಿಸಿದಲ್ಲಿ ನಮ್ಮ ನಿರೆಹೊರೆಯವರು ಅನೇಕ ಸೀರೆಗಳು ಬರೆಯುವರು [156-6]

ನಮ್ಮ ವಿಳಾಸ—ಎ ಎಸ್ ಭಟ್ಟಾಚಾರ್, ಸುಂಗೂಬಾಕಂ, ಮದರಾಸು

ಇದೇ ಸಿಜವಾದ ರೈಲ್ವೇ ರೆಗ್ಯುಲೇಟರೆಂಬ ಜೇಬುಗಡಿಯಾರ

ಕ್ರಯ ರೂಪಾಯಿ ೩ ೧೫ ೦

ನಮ್ಮ ಕೇಸಿನ ಪ್ರಸಿದ್ಧಿಯಾಗುವದಕ್ಕಾಗಿ ೬ ರೂಪಾಯಿನ ಈ ಗಡಿಯಾರವನ್ನು ೧೦೦ ಗಡಿಯಾರಗಳು ಮುಗಿಯುವವರಿಗೆ ಮಾತ್ರವೇ 1-1-0 ಆಣೆಗೆ ಕೊಡಲ್ಪಡುತ್ತೆ ಅದೃಷ್ಟವಂತರುಗಳಲ್ಲದೆ ಒಬ್ಬರಿಗೂ ದೊರೆಯಲಾರದು ಜೇಬಿನಲ್ಲಿಯೇ ಮೆ ... ಮಡ ಆಲಸ್ಯಮಾಡುವವರಿಗೆ ಇದು ಸಿಜವಾಗಿಯೇ ಲಭಿಸಲಾರದು ಮ|| ರಾ ಪಾಲ್ ಕಂಪನಿಯವರ ... ಯನ್ನು ಈ ಗಡಿಯಾರದಿಂದಲೇ ತಿಳಿದುಕೊಳ್ಳಬಹುದು ಜಾಗ್ರತೆ ವರಾಯಿಸ್ಸು ಕಳುಹಿ...



ಇದನ್ನು ರೈಲ್ವೆ ಸ್ಟೇಷನ್ ಗಳಲ್ಲಿ ಉಪಯೋಗಿಸುವರು ... ಈ ಗಡಿಯಾರವು ರೈಲ್ವೇ ... ಗಳಿಂದ ಹೆಸರುವಾಸಿಯನ್ನು ಪಡೆದಿರುತ್ತೆ ಇದು ಇತರ ಅಲ್ಪಕ್ರಯದ ಗಡಿಯಾರಗಳ ಹಾಗಲ್ಲ ಇದಕ್ಕೆ ೫ ವರುಷಗಳ ವರೆಗೆ ಶಾಪ್ಪು ಜಾಮೀನುದಾರರು ರೈಲ್ವೆ ಪೊತ್ತಿಗೆ 1 ಸಹ ವೃತ್ತಾಂತಪತ್ರಿಕೆ ನಡೆಯುವವರ ವಹಾಸ್ಟರ್ ಕಂಪನಿಯವರುಗಳು ಎಲ್ಲರೂ ಉಪಯೋಗಿಸುತ್ತಿರುವರು

ಪುಷ್ಪಕಾಂತಿ ತೈಲ

ನೀಸಿ ೩ ಕ್ಕೆ ೧ ಆಣೆ ೬ ಸೀಸೆಗಳನ್ನು ಒಂದೇ ಸಲ ತರಿಸಿಕೊಂಡರೆ 1 ಸೀಸೆ ಇನಾಂ ಇದು ಅನೇಕ ಸುವಾಸನೆ ಉಳ್ಳದ್ದು ಇದನ್ನು ತಲೆಗೆ ಸವರಿಕೊಳ್ಳುವುದರಿಂದ ಮನಸ್ಸಿಗೆ ಆನಂದವನ್ನೂ ಉಲ್ಲಾಸವನ್ನೂ ಉಂಟುಮಾಡುತ್ತೆ ನರೆತ ಕೂದಲು ಕಪ್ಪಾಗುತ್ತೆ ಕೂದಲು ಹೇರಳವಾಗಿ ಬೆಳೆಯುತ್ತೆ ಇದನ್ನು ಪ್ರತಿನಿತ್ಯವೂ ತಲೆಗೆ ಸವರಿಕೊಳ್ಳುತ್ತಾ ಬಂದರೆ ತಲೆ ತುರಿಗಾಟವನ್ನೂ ಚಾಳೀಂದ್ರವನ್ನೂ ಹೋಗಲಾಡಿಸುತ್ತೆ

ಬಹುಮಾನ ಬಹುಮಾನ ಬಹುಮಾನ



ಮೇಲೆ ... ದ ಪುಷ್ಪಕಾಂತಿ ತೈಲವನ್ನು ತರಿಸಿಕೊಳ್ಳುವವರಿಗೆ ತಿಂಗಳಲ್ಲಿ ... ರೂಪ ಮೌಲ್ಯದ ಗಡಿಯಾರಗಳನ್ನು ಬಹುಮಾನವಾಗಿ ಕೊಡುತ್ತೆ ಬಹುಮಾನವು ... ಅದೃಷ್ಟವನ್ನು ಪಡೆದ ಪುಣ್ಯಶಾಲಿಗಳು ತೈಲವನ್ನು ತರಿಸಿಕೊಳ್ಳುವವರ ಹೆಸರುಗಳನ್ನು ಪ್ರತಿ ತಿಂಗಳ ಆಖೈರಿನಲ್ಲಿ ಬರೆದುಕೊಳ್ಳಲಾಗುವುದು ಆ ಪೊತ್ತ ಹೆಸರುಗಳಲ್ಲಿ ಮೊದಲನೇ ೩ ಗಡಿಯಾರಗಳು ಯಾರ ಯಾರ ಹೆಸರು ಬರುತ್ತವೆಯೋ ಅವರವರ ಹೆಸರುಗಳಿಗೆ ಹೊಂದಿದ ಗಡಿಯಾರವನ್ನು ಬಹುಮಾನವಾಗಿ ಬಾಗಿ ಮೂಲಕ ಕಳುಹಿಸುತ್ತೇವೆ ಅದನ್ನು ಈ ಗಡಿಯಾರ ... ಹೆಸರುಗಳನ್ನು ... ದರಖಾಸ್ತು ಕಳುಹಿಸಬೇಕು [113-4] ನಮ್ಮ ವಿಳಾಸ—

ಜೆ ಎ ಪಾಲ್ ಅಂಡ್ ಕಂಪೆನಿ

ನುಂಗುಂಬಾಕಂ, ಮದರಾಸು

ಸ್ಕೂಲಿನ ಬಹುಮಾನ ವಿನಿಯೋಗ

ಕಳೆದ ಸೆಪ್ಟಂಬರ್ ತಾ ೬ ಆಫ್ತ ೧೦ನೇ ಸೋಮವಾರ ದಿನ ಈ ಕೆಳಗಿನ ವಿಳಾಸದವರಿಗೆ ಗಡಿಯಾರ ಬಹುಮಾನವನ್ನು ಪಡೆದಿರುತ್ತಾರೆ

1 ಮ|| ಪುಟ್ಟಣ್ಣಯ್ಯನವರು, ಗ್ರಾಟಿನ್ ಇನ್ಸ್ಪೆಕ್ಟರ್, ಚಾಮರಾಜನಗರ ಮೈಸೂರು ಡಿ|

2 ಮ ... ರಾಜಪ್ಪನವರ, ಸಿ ಎಂ ನಾರಾಯಣಸ್ವಾಮಿನಾಯುಡು, ಸ್ಟೇಷನ್ ಇನ್ಸ್ಪೆಕ್ಟರ್, ಅರಸೀಕೆರೆ, ಹಾಸನ ಡಿ|

3 ನರಸಿಂಹಯ್ಯ, ಪೋಸ್ಟ್ ಮಾಸ್ಟರ್, ಅಟ್ಟೂರಿನಲ್ಲಿ, ... ಕುಳ್ಳ ಮೈಸೂರು ಡಿ

ಬೇಕಾದವರು ನಿಜ್ಕ್ಷತಿಯನ್ನು ಈ ವಿಳಾಸದಾರಗೆ ಬರೆದು ತಿಳಿದುಕೊಳ್ಳಬಹುದು

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು

ಕೈಸೇರುಗಿಡದೆ ತಯಾರಾದದ್ದು, ಬಹು ಸಸ್ವಾದಕರ

ಈಗ ಸಿದ್ಧವಾಗಿದೆ

1913ನೇ ವರುಷದ ಮೆಲ್ಲಿನ್ಸ್ ಕ್ಯಾಲೆಂಡರು

ಎರಡು ಆಣೆ ಸ್ಟಾಂಪುಗಳಾದರೆ ಅಧವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಧವಾ ಪೋಸ್ಟಿನಲ್ಲಿ ಕಳುಹಿಸುವೆವು

ವಿಳಾಸ— ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ವ ಕ್ತವ್ಯತಾಯಿಗೆ— ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ —ಎಂಬ ವಿಷಯಕ್ಕೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

[66-12] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸು.

Printed and Published by the Rev H Gulliford, Proprietor and Manager, Wesleyan Mission Press, Mysore 5/12/1912

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೨ ನೇ ಇಸವಿ ಡಿಸೆಂಬರ್ ತಾರೀಖು ೧೨ ನೇ ಗುರುವಾರ. ಸಂಚಿಕೆ ೨೮

ಹತ್ತಿಯ ತುಪ್ಪ.

ಕ್ರಿಸ್ತ[illegible] ಹತ್ತಿಯ [illegible] ರಸಾಯನ ಶಾಸ್ತ್ರದಿಂದ [illegible] ಪಾಕ [illegible] ಆರೋಗ್ಯ [illegible] ತುಪ್ಪಕ್ಕೆ ಬದಲಾಗಿ [illegible] ಉಪಯೋಗಿಸುತ್ತಿರುವ

ಹತ್ತಿಯ ತುಪ್ಪವೆ [illegible] ಸಿದ್ಧವಾಗಿದೆ

[illegible] ಡಬ್ಬಿ 1 ಕ್ಕೆ 12 ರೂಪಾಯಿ [illegible] ತೆಗೆದುಕೊಳ್ಳುವದಕ್ಕೂ ಉತ್ಸಾಹ[illegible] [163-6]

ಹತ್ತಿಬೀಜ [illegible] ಮತ್ತು ಹೂವು [illegible] ಮತ್ತು ಪುಷ್ಟಿಕರವಾದ ಆಹಾರ [illegible] ಕೊಡುವುದರಿಂದ [illegible] ತಿಂದ ಪಶುಗಳ [illegible] ಸಂತಾನವಾಗಿಯೂ ಮಾಡುವುದು [illegible] ಕ್ರಯಕ್ಕೆ ದೊರೆಯುತ್ತವೆ

[illegible] ಕೋಆಪರೇಟಿವ್ ಸ್ಟೋರ್ಸ್ ಕಂಪನಿ, [illegible]
159, ಕಿಲಾರಿ ರೋಡ್, ಬೆಂಗಳೂರು ಸಿಟಿ

[illegible] ದೊಡ್ಡಪೇಟೆ, ಮೈಸೂರು, ಇವರಲ್ಲೂ [illegible] ಹಾಸನ, ಚನ್ನಪಟ್ಟಣ, ಮದ್ದೂರು [illegible] ಕ್ರಯಕ್ಕೆ ದೊರೆಯುವವು

ತಿರುಪತಿ ಗಂಧ. ಡಬ್ಬಿ 1 ಕ್ಕೆ 12 ಅಣೆ.

ಸುಮಾರು ನೂರೈವತ್ತು ಜನಗಳಿಗೆ ಸೇವಿಸಬಹುದು.

ಕಪಿಲಾ ಕಂಪನಿ ಇವರಲ್ಲಿ ತಿರುಪತಿ ಚಂದನವು ತಯಾರಾಗಿ ಮಾರುವದಕ್ಕೆ ಇಟ್ಟಿರುವವು ಕಲ್ಯಾಣ ಮಹೋತ್ಸವದಲ್ಲಿಯೂ, ಶುಭಪ್ರಯೋಜನ ಕಾಲಗಳಲ್ಲಿಯೂ, ಯಾಗ ಯಜ್ಞ ಸಂತರ್ಪಣೆಗಳಲ್ಲಿಯೂ ಮುಖ್ಯವಾಗಿ ಬೇಕಾಗುವ ಈ ತಿರುಪತಿ ಗಂಧ ಸಮಯಕ್ಕೆ ದೊರೆಯದೆ ದ್ರವ್ಯ ಖರ್ಚು ಮಾಡಿ ಪರಿಮಳವಿಲ್ಲದ ಕಟ್ಟಿಗೆ ಗಂಧವನ್ನು ಉಪಯೋಗಿಸುವರು ಈ ತಿರುಪತಿ ಚಂದನವನ್ನು ಒಂದಾವರ್ತಿ ಸೇವಿಸಿದವರು ಇತರ ವಿಧ ಗಂಧವನ್ನ ಅವಲಂಬಿಸರು ಈ ಗಂಧವು ಬಂಗಾರದಛಾಯವುಳ್ಳದ್ದು, ದಿವ್ಯ ಪರಿಮಳ [illegible] ಅನೇಕ ದೇಶಗಳಿಗೆ ವಿಶೇಷವಾಗಿ ಈ ಗಂಧದ ಡಬ್ಬಿಗಳು ರವಾನಿ[illegible] ಇತರ ವಿಧವಾದ ಗಂಧಗಳನ್ನು ತೆಗೆದುಕೊಂಡು ಮೋಸ [illegible] ಕಪಿಲಾ ಕಂಪನಿ ರಿಜಿಸ್ಟರು ಟ್ರೇಡು ಮಾರ್ಕು ಗಮನಿಸಿ ಗಂಧವನ್ನು ನೋಡಿ ತರಿಸಿಕೊಳ್ಳಿರಿ ವಿ ಪಿ ಛಾರ್ಜು ಬೇರೆ

ಕೇಳುವವರಿಗೆ ಕ್ಯಾಟಲಾಗು ಕಳುಸುವೆವು ಮತ್ತು ಈ ಕಂಪನಿಯಲ್ಲಿ ಇಂಗ್ಲೀಷು ವಾಸನೆಗಳು, ಇತರ ಗಂಧಗಳು, ಗಡಿಯಾರಗಳು, ಮಧ್ವಗ್ರಂಥಗಳು, ಕೂದಲು ಬೆಳೆಯುವ ತೈಲ, ಮಾರಿಕೆಗೆ ತಯಾರಾಗಿದೆ. ಕ್ಯಾಟಲಾಗು ಬೇಕಾದವರಿಗೆ ಸುಮ್ಮನೆ ಕಳುಸುವೆವು [172 1]

ವಿಳಾಸ—ಕಪಿಲಾ ಕಂಪನಿ, ಚಿತ್ತೂರು

ಪ್ರಸಿದ್ಧಪತ್ರಿಕೆ

ಶ್ರೀ ಶಾರದಾ ಹಾರ್ಮೋನಿಯಂ ಶಾಲಾ, [illegible] ಗೇಟ್, ಬೆಂಗಳೂರು ಸಿಟಿ ಈ ಸ್ಥಳದಲ್ಲಿ ಮನೋಹರವಾದ ಹಿಂದೂಸ್ಥಾನಿ, ಪಾರ್ಸಿ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಪ್ರೈವೇಟಾಗಿ ತಮ್ಮ ಮನೆಗಳಲ್ಲಿ ಪಾಠ ಹೇಳಿಸಿಕೊಳ್ಳತಕ್ಕವರಿಗೆ ಅವರವರ [illegible] ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೇಲ್ಕಂಡ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಫ್ಯಾಂಸಿ ಹಾರ್ಮೋನಿಯಂಗಳು ಕ್ರಯಕ್ಕೆ ಸಿದ್ಧವಾಗಿರುತ್ತವೆ ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗವುಳ್ಳಂಥಾ ಯಾವ ತರಹಾ ಹಾರ್ಮೋನಿಯಂ ಬೇಕಾಗಿದ್ದರೂ ಖಾತ್ರಿಯಾದ ಮತ್ತು ಗ್ಯಾರಂಟಿಯುಳ್ಳ ಮಾಲನ್ನು ಸುಲಭವಾದ ಕಮಿಷನ್ ದರದ ಮೇಲೆ ಮಾಲ್ ತಯಾರಾಗುವ [illegible] ಪ್ರಕಾರ ತರಿಸಿಕೊಡಲ್ಪಡುತ್ತೆ ಮತ್ತು ಎಲ್ಲಾ ತರಹ ಹಾರ್ಮೋನಿಯಂಗಳನ್ನು ಸುಲಭ ಛಾರ್ಜಿಗೆ ಖಾತ್ರಿಯಾಗಿ ರಿಪೇರಿ ಮಾಡಿಕೊಡಲ್ಪಡುತ್ತೆ ಹೆಚ್ಚು ಸಂಗತಿ ತಿಳಿಯಬೇಕೆಂಬ ಇಚ್ಛೆಯುಳ್ಳವರು ಮೇಲ್ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು [176-4]

ನಮ್ಮ ವಿಳಾಸ—ಆರ್ ಕೇಶವರಾವ್ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮಾಸ್ಟರ್ಸ್, ಬೆಂಗಳೂರು ಸಿಟಿ.

1913ನೇ ಇಸವಿಯ ಇಂಗ್ಲೀಷು ಕನ್ನಡ ಪಾಕೆಟ್ ಡೈರಿ

[illegible] ನಂ 1 [illegible] ಆಣೆ

[illegible] ಆಣೆ

[illegible] ಆಣೆ

[illegible] ನಂ 8 ಆಣೆ.

ಜನಿವಾ ನಂ 1 [illegible] ಆಣೆ



ಜನಿವಾ ನಂ [illegible] ಆಣೆ

1913ನೇ ಇಸವಿಯ [illegible] ಆಜ್ಞರ್ವರೆಗೆ [illegible] ಮತ್ತು ಪರಿಧಾವಿ ಸಂವತ್ಸರ ಪುಷ್ಯಮಾಸ ಮೊದಲುಗೊಂಡು ಪ್ರಮಾದೀಚ ಸಂವತ್ಸರ ಪುಷ್ಯಮಾಸದವರೆಗೆ ಒಂದು ವರ್ಷದ 12 ಮಾಸ [illegible] ಕನ್ನಡ ಪಾಕೆಟ್ ಡೈರಿಗಳು [illegible] ವಿಕರಿಗೆ ಸಿದ್ಧವಾಗಿವೆ ಈ ಡೈರಿಗಳನ್ನು ಬಹು ಸುಂದರವಾಗಿರುವ [illegible] ವಸ್ತ್ರ[illegible] ಪ್ರತಿ ಪುಟಕ್ಕೂ ರೂಲುಹಾಕಿಸಿ [illegible] ಹೊಳೆಯುವ ಹಾಗೆ ಆರ್ನಮೆಂಟಲ್ ಅಕ್ಷರಗಳಿಂದ ಪ್ರಿಂಟುಮಾಡಲ್ಪಟ್ಟಿವೆ ಇದು [illegible], [illegible], [illegible] ಸರ್ಕಾರಿ [illegible], ಸ್ಕೂಲ್ ಹುಡುಗರು [illegible], ಪೊಲೀಸು ಇಲಾಖೆ ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿರುತ್ತವೆ

ಇದರಲ್ಲಿ [illegible] ಗ್ರಹಕುಂಡಲಿಗಳ ಸಹಿತ [illegible] ಹಬ್ಬಗಳು, ಮತ್ತು [illegible] ದಿವಸಗಳು ತೋರಿಸುವ ಪಟ್ಟಿ, ರೈಲು [illegible], ಕೋರ್ಟು [illegible] ಫೀಜು, [illegible] ಫೀಜು, [illegible], ಗೌರಿ ಪಂಚಾಂಗ [illegible] ಗುಳಿಕಕಾಲ, ಪಾಡ್ಯಮಿ ದಿವಸಗಳು, ದಿವಸಕ್ಕೆ ಸಂಬಳ ತೋರಿಸುವ ಪಟ್ಟಿ, [illegible] ಬಡ್ಡಿ ಹಾಕುವ ಪಟ್ಟಿ, ಪ್ರತಿ ತಿಂಗಳಲ್ಲಿಯೂ [illegible] ಅನೇಕ ವಿಷಯಗಳು ಇದ್ದಾಗಲಲ್ಲಿ [illegible] ಇದ್ದದಕ್ಕಿಂತಲೂ ಈ ವರ್ಷ ಬಹು ಸುಂದರವಾಗಿ ತಯಾರು ಮಾಡಿದೆ [illegible] ನಂಬರ್ [illegible] ಪೆನ್ಸಲು ಇಡತಕ್ಕ [illegible] ಪ್ರತಿ 1 ಕ್ಕೆ [illegible] ಆಣೆ [illegible] ಮಾಡಿರುವದು ಮುಚ್ಚಳ ಹಾಕಿದೆ, ಒಂದಾಣೆ ಬಾಳುವ ಪೆನ್ಸಲು ಒಂದು ಇಟ್ಟಿರುತ್ತೆ ಕ್ರಯ ಪ್ರತಿ 1 ಕ್ಕೆ 7 ಆಣೆ [illegible] ನಂಬರ್ [illegible] ಪೆನ್ಸಲ್ ಇವರ[illegible] ಕ್ರಯ [illegible] 1 ಕ್ಕೆ 6 ಆಣೆ [illegible] ನಂಬರು [illegible] ಮೇಲ್ಗಡ ರೋಲ್ಡ್ ಸೆಮು ಡೈರಿ ಪ್ಲಾನ್ [illegible] ಮಾಡಿರುವದು ಮುಚ್ಚಳ ಹಾಕಿರುತ್ತೆ, ಒಂದಾಣೆ ಬಾಳುವ ಪೆನ್ಸಲು 1 ಇಟ್ಟಿರುತ್ತೆ ಕ್ರಯ ಪ್ರತಿ 1 ಕ್ಕೆ 9 ಆಣೆ

ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಯಾದ ಜಿನಿವಾ ಡೈರಿ

ಇದೋ ನೋಡಿ, ಈ ಕೆಳಗೆ ಕಾಣುವ ಎರಡು ನಮೂನೆ ಡೈರಿಗಳನ್ನು ಹೊಸದಾಗಿ ತಯಾರು ಮಾಡಿದೇವೆ ಇವುಗಳು ಮೇಲೆ ವಿವರಿಸಿರುವ ನಾಲ್ಕು ನಮೂನೆ ಡೈರಿಗಳಿಗಿಂತಲೂ ಖರೀದಿ [illegible] ಹೆಚ್ಚಾದ್ದರಿಂದ ಡೈರಿಗಳಲ್ಲಿ ವಿಷಯಗಳು [illegible] ಕಾಗದ ವಸ್ತ್ರ[illegible] ನೂತನವಾಗಿದೆ ಗಾತ್ರದಲ್ಲಿ [illegible] ಡೈರಿಗಳಿಗಿಂತಲೂ ಒಂದೂವರೆ ಇದೆ ಪ್ರಿಂಟುಮಾಡಿರುವ ಸಮಾಚಾರಗಳು [illegible] ಇದಕ್ಕೆ ಉಪಯೋಗಿಸಿರುವ ಪದಾರ್ಥಗಳು ಬಹಳ ಹಸನು [illegible] ಖರೀದಿಯುಳ್ಳವುಗಳು ಈ ಜಿನಿವಾ ಡೈರಿ [illegible] ಮಾಡಿದೇವೆ ಈ ಡೈರಿಗಳನ್ನು ನೋಡಿದರೆ ಈ ಡೈರಿಗಳಿಗೆ ಸಮಾನವಾದ ಡೈರಿಗಳನ್ನು ಇದುವರಿಗೂ ಯಾರೂ ತಯಾರು [illegible] ತಿಳಿಯುವದು

ಜಿನಿವಾ ಡೈರಿ ನಂಬರ್ 1 [illegible] ಉದ್ದ ಉಳ್ಳದ್ದು, ಕ್ರಯ 1 ಕ್ಕೆ 6 ಆಣೆ ಜಿನಿವಾ ಡೈರಿ ನಂಬರು 2 [illegible] ಮುಚ್ಚಳ [illegible] 1 ಆಣೆ ಖರೀದಿ ಬಾಳುವ ಪೆನ್ಸಲ್ ಇಟ್ಟಿರುವದು ಕ್ರಯ 1 ಕ್ಕೆ 6 ಆಣೆ ಈ ಮೇಲ್ಕಂಡ ಆರು ನಮೂನೆ ಡೈರಿಗಳಿಗೆ ಪೋಸ್ಟು ಛಾರ್ಜು ಬೇರೆ ಬೀಳುತ್ತೆ ಒಂದೇ ನಮೂನೆಯಲ್ಲಿ 12 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ. [illegible] ಪ್ರತಿಗಳು ತರಿಸಿಕೊಳ್ಳುವರೋ ಅವರು [illegible] ಛಾರ್ಜು ಕಡಮೆ ಬೀಳುತ್ತೆ ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು ಸಚಿತ್ರ ಶುಕಸಪ್ತತಿ ಕಥೆಗಳು.—513 ಪುಟಗಳು ಈ ಪುಸ್ತಕವನ್ನು [illegible] ಜನಗಳು ತರಿಸಿಕೊಂಡು [illegible] ಅನೇಕ ಪುಸ್ತಕಗಳು ಖರ್ಚಾಗಿರುತ್ತವೆ ಇನ್ನು ಕೆಲವೆ ಮಾತ್ರ ಇರುತ್ತವೆ ಬೇಗನೆ ಬರೆದು ತರಿಸಿಕೊಳ್ಳಿರಿ [illegible] ಕ್ರಯ ರೂ 1 [illegible] 0, ಟಪಾಲು ಛಾರ್ಜು 4 ಆಣೆ

ನಮ್ಮಲ್ಲಿ ಕಾವ್ಯಗಳು ಕಥೆಗಳು ಪುರಾಣಗಳು ಮುಂತಾದ ಅನೇಕ ನಮೂನೆ ಪುಸ್ತಕಗಳು ಸುಲಭ ಖರೀದಿಗೆ ವಿಕರಿಯಾಗುವವು ಬೇಕಾದವರು ಕೆಳಗೆ ಕಂಡಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ನಮ್ಮಲ್ಲಿ ಇನ್ನೂ [illegible] ಸಾಮಾನುಗಳು ವಿಕರಿಯಾಗುತ್ತವೆ ಅವುಗಳ ಕ್ಯಾಟಲಾಗ್ ಕ್ರಯಪಟ್ಟಿಯನ್ನು ಅಪೇಕ್ಷಿಸುವವರಿಗೆ ಟಪಾಲ್ ಹಾಸಲ್ ಇಲ್ಲದೇ ಕಳುಹಿಸುವೆವು [190 1]

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಕುಂತಳಾನಂದ ತೈಲವು

147 12

ಹಿಂದುಸ್ಥಾನದ ಬೇರೆ ಬೇರೆ ಪ್ರದೇಶ [illegible] ವಿರುವ [illegible] ಎಂಟು [illegible] ಪಡೆದಿವೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ [illegible] ಈ ತೈಲವು ಕೂದಲನ್ನು ಚನ್ನಾಗಿಯೂ ತರೆಯಾಗಿಯೂ [illegible] ಸರ್ವ ವ್ಯಾಧಿಗಳನ್ನು [illegible] ಇದಕ್ಕೆ ಸಮಾನವಾದದ್ದು [illegible]

[illegible] ಮಾನಸಿಕ ಶ್ರಮವನ್ನು [illegible] ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. [illegible] ಬಾಟ್ಲಿಗೆ 1 ರೂಪಾಯಿ 1 ಬಾಟ್ಲಿಗೆ ೩ ರೂಪಾಯಿ 10 ಆಣೆ [illegible] ಕನ್ನಡ ಕ್ಯಾಟಲಾಗು [illegible]

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ, ಪೇಠೆ, ಮದರಾಸ್

ಡೋಂಗರೆ
ಇವರ ಬಾಲಾಮೃತ.

[115-??]

[illegible] ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಮಕ್ಕಳು [illegible] ಇದರಿಂದ ಕೈಕಾಲುಗಳು [illegible] ಹೊಟ್ಟೆಯು [illegible] ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು [illegible]

ಕೆ. ಟಿ. ಡೋಂಗರೆ ಮತ್ತು ಕಂಪನಿ. ಗಿರಗಾಂವ, ಮುಂಬಯಿ

ಅಮೃತಾಂಜನ. (1??)



[illegible] ಸೊಂಟನೋವು, ಶೀತ, ಕಫ, ಗಂಟುನೋವು, [illegible] ಮುಂತಾದವುಗಳು ಅಮೃತಾಂಜನ [illegible] ಮಾತ್ರದಿಂದಲೇ ಗುಣವಾಗುವದು [illegible] ನಮ್ಮ ಅಮೃತಾಂಜನದ [illegible]

ಅರ್ಧ ಕ್ರಯಕ್ಕೊಂತಲೂ ಕಡಮೆ

[illegible]

ಅಮೃತಾಂಜನ ಡಿಪೋ, ಪೋಸ್ಟ್ ಮುಂಬಯಿ

1913 ನೇ ಪಾಕೆಟ್ ಡೈರಿ

[illegible]

ಪಾಕೆಟ್ ಡೈರಿ — [illegible]

[6 ?]

ನಮ್ಮ ವಿಳಾಸ ವಿಜಯ [illegible] ಕಂಪನಿ ಬೆಂಗಳೂರು ಸಿಟಿ

ಮಕ್ಕಳ ಹಿತಕಾರ

SCOTT'S EMULSION 2-?0

(ಸ್ಕಾಟ್ಸ್ ಇಮಲ್ಶನ್)

[illegible]

ಕೈಸೋಕಡೆ ತಯಾರಾದದ್ದು

[illegible]

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಪಾಕೆಟ್ ಡೈರಿ

ಶ್ರೀ ಸೀತಾರಾಘವ

ಸನ್ 1913 ನೇ ಇಸವಿಯದು

[illegible]

[136 ?]

[illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ   ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರದು ತರಿಸಿಕೊಳ್ಳಿ

1-?

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

[illegible]

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ಕೇಪ್ಪು ಚುಕ್ಕೆಯುಳ್ಳ ಟೋಪಿಗಳು ರೂ ೨

ಜಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ४ ಆ, ೧ ರೂ ೬ ಆ

[illegible]

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಬೇಧಿಗಳಿಗೆ ಕಂಡುಹಿಡಿದಿರುವ ಔಷಧವು

1 50



[illegible]

ಇದು ಎಲ್ಲೆಲ್ಲೂ ಚಿಕ್ಕದಾಗಿದೆ   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

HASSAN CAPS.

ಹಾಸನದ ಟೋಪಿಗಳು.

ಮೊದಲನೇ ತರಗತಿಯ ದಾರ ರೇಷ್ಮೆ ಬುಟ್ಟಿಗಳುಳ್ಳದ್ದು			ರೂ	2 0 0
,,	,,	,, ಕೆಂಪು ಅಥವ ಕಪ್ಪು	,,	1 8 0
ಎರಡನೇ	,,	,,	,,	1 6 0
ಮೂರನೇ	,,	,,	,,	1 4 0
ನಾಲ್ಕನೇ	,,	,,	,,	1 2 0

ಇನ್ನು ಬೇರೆ ತರಹ ಬೇಕಾದರೆ ಮಾಡಿಸಿ ಕಳುಹಿಸುತ್ತೇವೆ

ನಮ್ಮ ವಿಳಾಸ — [157-9]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,

ತುಂಕೂರು.

Address
Wesleyan Mission Cap Industry,
Tumkur

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ
ಚಿನ್ನದ ಪದಕವು ದೊರಕಿಯದೆ

[illegible]

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

[illegible] ಸುಂದರವಾದ [illegible] ಕೇಶರಾಶಿ [illegible] ಅದ್ದರಿಂದ [illegible] ಅದನ್ನು ಯೋಗ್ಯ ರೀತಿಯಿಂದ [illegible] ಆರೋಗ್ಯವಾಗಿಯೂ, ಸ್ವಚ್ಛವಾಗಿಯೂ ಇಡಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕದಾದ ರೀತಿಯಿಂದ ಉಪಯೋಗಿಸಿದರೆ ಪುರಾತನ ಕಾಲದ ಸುಂದರವಾದ [illegible] ಎಂತಹ ಮಹತ್ವ ಕೊಡಲ್ಪಟ್ಟದೆಯೋ ಅ ಮಹತ್ವಕ್ಕೆ ಉಚಿತವಾದ [illegible] ಕೂದಲುಗಳು [illegible]

ಕಾಮಿನಿಯಾ ತೈಲ

ಇದು, ಕೂದಲುಗಳು [illegible] ಮತ್ತು ಅತ್ಯುತ್ತಮ, [illegible] ಪ್ರತಿಯೊಬ್ಬ ಸ್ತ್ರೀಯು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು [illegible] ಕೂದಲುಗಳು [illegible] ಈಗ [illegible] ಕಾಲದಲ್ಲಿ [illegible] ವಿವಿಧ ಆಕೃತಿಗಳಿಂದ [illegible]

ಕಾಮಿನಿಯಾ ತೈಲದಿಂದ ಕೂದಲುಗಳು [illegible] ಮತ್ತು [illegible]

[illegible]

[illegible] 1 ಬಾಟಲಿಗೆ ರೂ 1 0 0 ಅಂಚೆಯ ವೆಚ್ಚ 0 4 0 ಜೊತೆ ತೆರಬೇಕು
1 ಬಾಟಲಿಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

[illegible]

[illegible]

[illegible] ಅತ್ಯಂತ ಉತ್ತಮವಾಗಿ [illegible] ಮತ್ತು [illegible] ಓಯಲ್ [illegible] ಎಂದು [illegible]

[illegible]

ಸುಗಂಧದ್ರವ್ಯಗಳು

ಗುಲ್ ಪಾನ್ (ರಿಜಿಡ್)— ಗುಲಾಬಿ ಅತ್ತರುಗಳೆಲ್ಲದ್ದಾ [illegible] ಶ್ರೇಷ್ಠವಾದದು, [illegible] ಎಂದು [illegible] ಬೀಲು ಮತ್ತು [illegible] ಉತ್ತಮವಾದ [illegible] ರೂ 1 4 0

ದಿಲ್-ಬಹಾರ್ (ರಿಜಿಡ್)— ಅತ್ಯಂತ [illegible] ರೂ 1-4-0

"ಕಾಮಿನಿಯಾ [illegible]" ರೂ. 1-1 0, "[illegible]" ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನು ಇಂಗ್ಲೀಷಿನಲ್ಲಿ ಬರೆಯಬೇಕು

ವಿಳಾಸ — [44-30]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್.

ವೃತ್ತಾಂತ ಪತ್ರಿಕೆಯ 1912-13ನೇ ವರುಷದ ಎರಡನೇ ಕ್ವಾರ್ಟರು ಕಳೆದ ನವಂಬರ್ ತಿಂಗಳಿಗೆ ಪೂರೈಸಿದ [illegible] ಏಜಂಟರುಗಳು ಈ ಕ್ವಾರ್ಟರಿನ ಲೆಕ್ಕಗಳನ್ನು ತೈಯಾರುಮಾಡಿ, "ಬಿ" ಫಾರಂಗಳಿಗೆ [illegible] ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಪ್ರಕಟಪಡಿಸಿದ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

ನೋಟೀಸ್.

ಹಾಸನದಲ್ಲಿ ದನಗಳ ಪ್ರದರ್ಶನವು.

1913 ನೇ ಇಸವಿ ಜನವರಿ ತಾರೀಖು 3 ನೇ ಶುಕ್ರವಾರ ಮತ್ತು 4 ನೇ ಶನಿವಾರ ಸಹಾ ಹಾಸನ ಟೌನಿನಲ್ಲಿ ಡಿಸ್ಟ್ರಿಕ್ಟ್ ಪೊಲೀಸ್ ಆಫೀಸು ಬಳಿಯ ಮೈದಾನದಲ್ಲಿ ದನಗಳ ಪ್ರದರ್ಶನವು ನಡೆಯುತ್ತೆ ಈ ಪ್ರದರ್ಶನದಲ್ಲಿ ದನ, ಎಮ್ಮೆ, ಕೋಳಿ ಕುರಿ, ಕುರಿ ಮತ್ತು ಕುದುರೆ ಮುಂತಾದ ಉತ್ಕೃಷ್ಟವಾದ ಎಲ್ಲಾ ತರಹ ಜಾನವಾರುಗಳಿಗೂ ಇನಾಂ ಕೊಡಲ್ಪಡುತ್ತೆ ಬರುವ ಜನವರಿ 2 ನೇ ತಾರೀಖಿಗೆ ಮುಂಚೆಯೇ ಪ್ರದರ್ಶನಕ್ಕೆ ಜಾನವಾರುಗಳು ಪ್ರದರ್ಶನದ ಮೈದಾನದಲ್ಲಿ ಬಂದಿರಬೇಕು.

ಮತ್ತು ಸಂಗತಿಯನ್ನು ಹಾಸನದಲ್ಲಿ ದನಗಳ ಪ್ರದರ್ಶನದ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು

ತಾ 3 12 1912 ವಿ ಎಸ್ ರಾಜಗೋಪಾಲಾಚಾರ್,

ಜಾಯಿಂಟ್ ಆನರರಿ ಸೆಕ್ರೆಟರಿ,

[151 1] ದನಗಳ ಪ್ರದರ್ಶನದ ಕಮಿಟಿ, ಹಾಸನ

ಒಳ್ಳೆ ಸಮಯ ತಿಂಗಳ ಆಫರ್ ಹಾಗೆ ಮಾತ್ರ ಕೊಡತಿ ಬರೆಯಿರಿ

(1) ನಾವು [illegible] ಲೀವರ್ ಗಡಿಯಾರವನ್ನು ತಿಂಗಳ [illegible] ರೂ 3 ಕ್ಕೆ ಕಳುಹಿಸುತ್ತೇವೆ [illegible] ಜೇಬು ಗಡಿಯಾರವನ್ನು, ಪೆಟಗೆ, ಉತ್ತರ ಮುಖ, [illegible] ಮತ್ತು [illegible] ವರೆಗೆ ಕ್ರಯ ರೂ 16-0 ಅಂಚೆ ಹಾಸಲು 8 ಆಣೆ (2) ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡು [illegible] ಜೇಬು ಗಡಿಯಾರ ರೂ 8 (3) ಕೈಗೆ ಕಟ್ಟಿಕೊಳ್ಳುವ [illegible] ಬೆಳ್ಳಿಯ ಗಡಿಯಾರ ರೂ 7 10 [illegible] ರೂ 10 0 (4) ಪಾಕೆಟ್ ಸಂಗೀತ ಹಾಡುವ [illegible] ಗಡಿಯಾರ ರೂ 3-1-0 ಗಂಟೆ ಹೊಡೆಯುವುದು ರೂ 1 8 0 [illegible] ರೂ 2-8 0 [illegible] ರೂ 3 [illegible] ರೂ 1-4 0 (5) ಎಂಟು ದಿವಸಗಳಿಗೆ ಕೀ ಕೊಡುವ ಗಂಟೆ ಹೊಡೆಯುವ ವಾಲ್ ಕ್ಲಾಕು [illegible] ಗಡಿಯಾರ ರೂ 7 0 0 (6) [illegible] ರೂ 2 6 0, [illegible] ರೂ 3 1 0 (7) ಕುಸುಮಕಾಂತ ತೈಲವು ಉತ್ತಮ [illegible] ಸುಗಂಧ ಕುಸುಮಗಳಿಂದಲೂ ತಯಾರಿಸಿದ್ದರಿಂದ ಕೂದಲು [illegible] ಕ್ರಯ [illegible] 1 ಕ್ಕೆ 8 ಆಣೆ [illegible] 1, 2, 3 ನೆಯ ನಂಬರ್ ಗಡಿಯಾರಗಳನ್ನು ಗ್ರಾಹಕ [illegible] ಅವರಿಗೆ ಕೊಡಲ್ಪಡುತ್ತ [120 17]

ನಮ್ಮ ವಿಳಾಸ — ವೆಂಕಟಾಚಲಂ ಕಂಪನಿ,

ಮ್ಯನೇಜರ್, ವೇಪೇರಿ, ಮದ್ರಾಸು.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs.	10,00,000
Subscribed Capital Exceeds	,,	10,00,000
Paid up ,, ,,	,,	1,25,000
Funds Exceed	,,	15,00,000
Policy-holders ,,	,,	80,000
Claims paid about ,,	,,	4,00,000

This Company works in accordance with **the Indian Life Assurance Companies' and Provident Societies' Acts 1912** and has also given **double the initial security** to the **Government** as required under the **Insurance Act 1912**

How is it that the **National, of Amritsar,** has become very popular throughout India?

Because, it has got almost all the attractive schemes which any other Life Office or Provident Society in India has got and also new and novel ones besides, issues policies at most favourable rates and on most liberal conditions, and distributes relief in thousands every quarter on account of **marriages and deaths**

[122 20]

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission** The post is permanent, and our agents are entitled to **pension.** None but those who can spare whole time, who reside in district or taluk head quarters and who are well versed in English need apply.

For further particulars and prospectuses, please apply with **one anna stamp** and your previous experience in the line to —

M L NAGANNAH,

Chief Agent,

The Amritsar National Insurance Buildings, Mysore.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

22—11—1912 ರಿಂದ 29—11—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	27	28	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟ್	11	6	0	0
ಮೈಸೂರು ,,	41	20	0	0
ಕೋಲಾರ್ ,,	0	0	1	0
ಕೋಲಾರ್ ಚಿನ್ನದ ಗಣಿಗಳು	14	14	0	0
ತುಂಕೂರು ಡಿಸ್ಟ್ರಿಕ್ಟ್	5	3	24	15
ಹಾಸನ ,,	9	5	0	0
ಚಿತ್ರದುರ್ಗ ,,	0	0	11	13
ಕಡೂರ್ ,,	22	15	11	5
ಶಿವಮೊಗ್ಗ ,,	31	24	21	16
ಜುಮ್ಲಾ	154	118	70	49

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಮಾರ್ಗಶಿರ ಶುದ್ಧ ಪಂಚಮಿ ಶುಕ್ರವಾರದಿಂದ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷ್ಟಿ ಧನು ತೇದಿ
13	ಶುಕ್ರ	ಪಂಚಮಿ	51-7	ಶ್ರವಣ	30-65	29
14	ಶನಿ §	ಷಷ್ಠಿ	60 0	ಧನಿಷ್ಠ	24-28	30
15	ಭಾನು ‡	ಷಷ್ಠಿ	0 50	ಶತಭಿಷ	10-1	1
16	ಸೋಮ	ಸಪ್ತಮಿ	6-1	ಪೂಭಾ	46 7	2
17	ಮಂಗಳ	ಅಷ್ಟಮಿ	10-44	ಉತ್ತಭಾ	61-23	3
18	ಬುಧ †	ನವಮಿ	14-7	ರೇವತಿ	55 14	4
19	ಗುರು *	ದಶಮಿ	16 30	ಅಶ್ವಿನಿ	58 31	5

ನಾಗರಪಂಚಮಿ § ಸುಬ್ರಹ್ಮಣ್ಯಾನುಷ್ಠಾನ ಮಹಾರಥ ‡ ಚಂಪಾಷಷ್ಠೀ, ಸ್ಕಂದಷಷ್ಠೀ, ಷಡಶೀತಿಪುಣ್ಯಕಾಲ, ಸಮಾರ್ತ, ಮಳೆ ನಕ್ಷತ್ರ—ಮೂಲ 1ನೇ ಪಾದ † ಮಳೆ ನಕ್ಷತ್ರ- ಮೂಲ 2ನೇ ಪಾದ * ಏಕಾದಶೀ ತಿಥಿ, ಮಾರ್ಗಶಿರ ಲಕ್ಷ್ಮೀವ್ರತ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭-೮-೦	೧೭-೮-೦
ಕೆಂಪುಭತ್ತ ಅಕ್ಕಿ ಅವಲ್		೧೭-೪ ೦	೧೭-೮-೦
,, ದುಯಂ		೧೬ ೮-೦	೧೭-೦-೦
ಜಂಪಾಕ್ಷಿಣಿ ಅಕ್ಕಿ		೧೬ ೮-೦	೧೭-೪-೦
ಸಣ್ಣಕ್ಕಿ ಅವಲ್		೧೮-೦-೦	೧೮ ೮-೦
,, ದುಯಂ		೧೭ ೧೨-೦	೧೭ ೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೪-೮-೦	೧೩-೮-೦
,, ದುಯಂ ,,		೧೨-೧೨-೦	೧೨ ೮-೦
ಜೈನ್ ರಾಗಿ ಪಲ್ಲಾ ೧ಕ್ಕೆ		೭-೦-೦	೫-೦-೦
ಕಾರ್ರಾಗಿ ,,		೭ ೦-೦	೪-೧೨-೦
ಜೋಳ ,,		೭-೨-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ		೧೦-೪-೦	೧೩-೧೨-೦
ಬಿಳಿ ಅವರೆ ,,		೧೧-೦-೦	೧೮ ೦ ೦
ಹೆಸರು ,,		೧೧ ೮ ೦	೧೪-೦ ೦
ಉದ್ದು ,,		೧೬-೮-೦	೧೬-೦-೦
ಕಡಲೆ ,,		೧೨-೮ ೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೦-೮ ೦	೨೪ ೦ ೦
ಹುರುಳಿ ಪಲ್ಲಾ ೧ಕ್ಕೆ		೭-೨-೦	೭-೦-೦
ಹರಳು ೧೨೭ ಸೇರಿಗೆ		೧೩-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೩-೮-೦	೩-೮-೦
ಮೆಣಸಿನಕಾಯಿ ,,		೩ ೦-೦	೩-೪-೦
,, ದುಯಂ		೨-೮-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫-೮-೦	ಮಾ ೫-೮-೦
ಬಿಳ್ಳೆ [illegible] ಮಣ ೧ಕ್ಕೆ		—-೨-೦	೬ ೬ ೦
ಹರಳೆ ,, ,,		೫-—-೦	೬ ೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫ ೮-೦	೫-೪-೦
ಉಪ್ಪು ,, ,,		೨-೮-೦	೬-೨-೦
ಹುಣಿಸೇ ಹಣ್ಣು ಮಣ ೧ಕ್ಕೆ		೧ ೪-೦	೧-೪-೦
,, ಹಳೇದು ,,		೧ ೦-೦	೦ ೧೪-೦
ತುಪ್ಪ ಮಣ ೧ಕ್ಕೆ		೧೬ ೦-೦	೧೯-೦-೦
ನೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೨-೦	೫ ೦-೦
ತೆಂಗಿನಕಾಯಿ ೧೦೦ಕ್ಕೆ		೬ ೮-೦	೬-೦-೦
ಆಲೂಗಡ್ಡೆ ಮಣ ೧ಕ್ಕೆ		೧-೪ ೦	೧ ೦-೦
ಅಂಟ್ವಾಳಕಾಯಿ ಮಣ ೧ಕ್ಕೆ		೦-೧೨ ೦	೧-೮-೦
ಚಿನ್ನ (ಪ್ಯೂರ್) ಕೆಂಪು		೧೫-೮-೦	೧೫ ೮-೦
,, ,, ಪಸಿಮೆ		೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧ ೧ ೦	೮೧-೦-೦

ವೃತ್ತಾಂತ ಪತ್ರಿಕೆ.

ಸನ್ ೧೯೧೨ ನೇ ಇಸವಿ ಡಿಸೆಂಬರ್ ತಾ. ೧೨ ನೇ ಗುರುವಾರ

ಮೈಸೂರು ಸಂಸ್ಥಾನದ ಕೋಆಪರೇಟಿವ್ ಸೊಸೈಟಿಗಳು.

ಮೈಸೂರು ಸಂಸ್ಥಾನದ ಕೋಆಪರೇಟಿವ್ ಸೊಸೈಟಿಗಳ ೧೯೧೦—೧೧ ನೇ ಸಾಲಿನ ವಾರ್ಷಿಕ ರಿಪೋರ್ಟು ತಯಾರಾಗಿ ೧೯೧೧ ನೇ ನವಂಬರ್ ತಾ. ೬ ರಲ್ಲಿ ಗವರ್ನಮೆಂಟಿಗೆ ಒಪ್ಪಿಸಲಾಯಿತು. ಆದರೆ ಗವರ್ನಮೆಂಟಿನವರು ಅದನ್ನು ಓದಿ ಅದರ ಮೇಲೆ ತಮ್ಮ ಹುಕುಮನ್ನು ಬರೆಯುವುದಕ್ಕೆ ಒಂದು ವರುಷ ಬೇಕಾಯಿತು, ಅಂದರೆ ಈ ಹುಕುಮು ೧೯೧೨ ನೇ ಸೆಪ್ಟೆಂಬರ್ ತಾ. ೯ ರಲ್ಲಿ ಬರೆಯಲ್ಪಟ್ಟಿದ್ದಾಗಿದೆ. ಹೀಗೆ ರಿಪೋರ್ಟುಗಳನ್ನು ನೋಡದೆ ದೀರ್ಘಕಾಲ ಇಟ್ಟುಕೊಳ್ಳುವುದರಿಂದ ಚಟುವಟಿಕೆಯಾಗಿ ಕೆಲಸಮಾಡತಕ್ಕಂಥಾ ಅಧಿಕಾರಿಯ ಉತ್ಸಾಹಕ್ಕೆ ಅಷ್ಟೇನೂ ಪ್ರೋತ್ಸಾಹವಾಗುವುದಿಲ್ಲ.

ಈ ರಿಪೋರ್ಟು ಓದುವುದಕ್ಕೆ ಬಹಳ ಸ್ವಾರಸ್ಯವಾಗಿದೆ. ಪರಸ್ಪರಸಹಾಯದ ತತ್ವವು ಈ ಸೀಮೆಯ ಪ್ರಜೆಗಳಲ್ಲಿ ಹರಡಿಕೊಳ್ಳುತ್ತಿರುವಂತೆ ಕಾಣುವುದು. ಆದರೂ ಈ ನವೀನವಾದ ವಿಷಯವನ್ನು ಇನ್ನೂ ಅನೇಕ ವರುಷಗಳ ತನಕ ಗವರ್ನಮೆಂಟಿನವರು ಜಾಗರೂಕತೆಯಿಂದ ಪೋಷಣೆಮಾಡುತ್ತಾ, ಮುತುವರ್ಜಿ ವಹಿಸಿ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಬರಬೇಕನ್ನುವುದು ಅವಶ್ಯವಾಗಿದೆ. ಉತ್ಸಾಹಶಾಲಿಯಾದವನು ಒಂದು ಕೋಆಪರೇಟಿವ್ ಸೊಸೈಟಿಯನ್ನು ಪ್ರಾರಂಭಿಸುವಂತೆ ಮಾಡಿ, ಸಾಹಸಪಟ್ಟು ಅನೇಕರನ್ನು ಅದಕ್ಕೆ ಮೆಂಬರುಗಳಾಗಿ ಸೇರಿಸಿದಲ್ಲಿ ಆ ಸೊಸೈಟಿಯಲ್ಲಿ ಕೆಲವು ಕಾಲ ಚನ್ನಾಗಿ ಕೆಲಸ ಜರುಗಬಹುದು; ಆದರೆ ಪ್ರಾರಂಭಮಾಡಿದ ಪುರುಷನು ಆ ಊರನ್ನೋ ಗ್ರಾಮವನ್ನೋ ಬಿಟ್ಟು ಹೋದ ಪಕ್ಷದಲ್ಲಿ ಮೆಂಬರುಗಳ ಉತ್ಸಾಹವು ಕುಂದಿಹೋಗಿ, ಸೊಸೈಟಿಯ ಕೆಲಸಕಾರ್ಯಗಳು ತಟಸ್ಥಭಾವವನ್ನು ಹೊಂದುವುವು. ಇನ್ಸ್‌ಪೆಕ್ಟರ ಕಾರ್ಯದಕ್ಷತೆಯೂ, ಮುತುವರ್ಜಿಯೂ ಹೆಚ್ಚಾಗಿದ್ದ ಪಕ್ಷದಲ್ಲಿ ಅವರು ಸಾಹಸಪಟ್ಟು ಆಯಾ ಸ್ಥಳೀಯ ಸೊಸೈಟಿಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಈ ಕೋಆಪರೇಟಿವ್ ಸೊಸೈಟಿಗಳ ಸಂಖ್ಯೆಯೂ ಅವುಗಳಲ್ಲಿ ಮೆಂಬರುಗಳಾಗಿ ಸೇರಿರತಕ್ಕವರ ಸಂಖ್ಯೆಯೂ ಕ್ರಮವಾಗಿ ವೃದ್ಧಿಹೊಂದುತ್ತಿವೆ ಎಂದು ಈ ರಿಪೋರ್ಟಿನಲ್ಲಿ ಓದಿ ಸಂತೋಷಪಡುತ್ತೇವೆ. ಈ ರಿಪೋರ್ಟು ಬರೆಯುವಾಗ್ಗೆ ಸಂಸ್ಥಾನದೊಳಗೆ ಒಟ್ಟು ೧೧೧ ಸೊಸೈಟಿಗಳು ಇದ್ದವು; ೯,೦೬೬ ಮಂದಿ ಮೆಂಬರುಗಳು ಸೇರಿದ್ದರು; ಸೊಸೈಟಿಗಳಲ್ಲಿ ೩,೭೧,೯೫೭ ರೂಪಾಯಿ ಷೇರು ವಸೂಲಾಗಿ ಚಲಾವಣೆಯಲ್ಲಿತ್ತು. ಮತ್ತು ಈ ಸೊಸೈಟಿಗಳಲ್ಲಿ ಒಟ್ಟು ೧೦,೩೧,೭೮೭ ರೂಪಾಯಿನ ಲೇವಾದೇವಿ ನಡೆದು, ೯,೩೩೫ ರೂಪಾಯಿ ನಫೆ ಉತ್ಪತ್ತಿಯಾಗಿ, ೯,೪೪೯ ರೂಪಾಯಿ ರಿಜರ್ವ್ ಫಂಡಿಗೆ ಕೂಡಿಸಲಾಯಿತೆಂದು ತಿಳಿಯಬರುತ್ತದೆ. ಈ ಲೆಕ್ಕಗಳು ಉತ್ಸಾಹಕರವಾಗಿರುತ್ತವೆ. ಅನೇಕ ಸೊಸೈಟಿಗಳು ಲಾಭ ಸಂಪಾದನೆಮಾಡಿದವೆಂದೂ, ಕೆಲವು ಮಾತ್ರ ಸ್ವಲ್ಪ ಮಟ್ಟಿಗೆ ನಷ್ಟಪಟ್ಟವೆಂದೂ ಗೊತ್ತಾಗುತ್ತದೆ.

ಮೇಲ್ಕಂಡ ಹಣದಲ್ಲಿ ವಿಶೇಷ ಭಾಗವೆಲ್ಲಾ ಅಂದರೆ ೬,೦೭,೫೪೪ ರೂಪಾಯಿ ಮೆಂಬರುಗಳಿಗೆ ಸಾಲವಾಗಿ ಕೊಡಲ್ಪಟ್ಟಿತು. ಇದರಲ್ಲಿ ಅರೆವಾಸಿಗಿಂತಲೂ ಸ್ವಲ್ಪ ಹೆಚ್ಚಾಗಿ ಭಾವಿ ತೋಡಿಕೊಳ್ಳುವುದೇ ಮೊದಲಾದ ಜಮೀನ್ ಅಭಿವೃದ್ಧಿನ ಕಾರ್ಯಗಳಿಗೂ, ಮುಟ್ಟುಗಳನ್ನೂ ದನಗಳನ್ನೂ ಗೊಬ್ಬರ ಗೋಡನ್ನೂ ಕೊಂಡುಕೊಳ್ಳುವುದಕ್ಕೂ, ಹೊಸ ಮನೆ ಕಟ್ಟುವುದಕ್ಕೂ, ಹಳೇ ಮನೆಯನ್ನು ದುರುಸ್ತುಮಾಡಿಕೊಳ್ಳುವುದಕ್ಕೂ ವಿನಿಯೋಗಿಸಿಕೊಂಡಂತೆ ತಿಳಿಯುತ್ತದೆ. ಆದರೂ ಮೆಂಬರುಗಳು ಮದುವೆ ಮೊದಲಾದ ಗೃಹಕೃತ್ಯದ ಕಾರ್ಯಗಳಿಗೂ, ಕೋರ್ಟು ವ್ಯವಹಾರಗಳಿಗೂ, ಹಳೇ ಸಾಲಗಳನ್ನು ತೀರಿಸುವುದೇ ಮುಂತಾದ ಬಾಬುಗಳಿಗೂ ಸೊಸೈಟಿಗಳಿಂದ ಬಹಳ ಹಣವನ್ನು ಸಾಲ ಪಡೆದುಕೊಂಡರು. ಈ ಸೊಸೈಟಿಗಳು ಯಥಾರ್ಥವಾಗಿಯೂ ಅಭಿವೃದ್ಧಿಹೊಂದಿ, ಅವುಗಳಿಂದ ಪ್ರಜೆಗಳಿಗೆ ಉಪಕಾರವಾಗಬೇಕಾಗಿದ್ದ ಪಕ್ಷದಲ್ಲಿ ಸೊಸೈಟಿಗಳ ಹಣಗಳನ್ನು ಜಮೀನುಗಳಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೂ ವ್ಯಾಪಾರಕ್ಕೂ ಕಸಬುಗಳಿಗೂ ಹೇರಳವಾಗಿ ವಿನಿಯೋಗವಾಗಬೇಕಾದದ್ದು ಪರಮಾವಶ್ಯವೆಂದು ನಂಬುತ್ತೇವೆ. ಈ ರೀತಿ ವಿನಿಯೋಗವಾದ ಹಣವು ಸಾಲ ತೆಗೆದುಕೊಂಡವನಿಗೂ ಸಾಲ ಕೊಟ್ಟ ಸೊಸೈಟಿಗಳಿಗೂ ತುಂಬಾ ಫಲಕಾರಿಯಾಗೀತೆನ್ನುವುದಕ್ಕೆ ಸಂಶಯವಿಲ್ಲ.

ಮೈಸೂರು ಗವರ್ನಮೆಂಟಿನವರು ವಿಶೇಷ ಧಾರಾಳವನ್ನು ತೋರಿಸಿ ಈ ಪರಸ್ಪರಸಹಾಯ ಸಂಘಗಳ ಮೇಲ್ವಿಚಾರಣೆಗೋಸ್ಕರ ಒಂದು ಸಿಬ್ಬಂದಿಯನ್ನು ಪ್ರತ್ಯೇಕವಾಗಿ ನೇಮಕಮಾಡಿಕೊಟ್ಟಿದ್ದಾರೆ. ಈ ಇಲಾಖೆಯವರು ಸೊಸೈಟಿಗಳ ಜಮಾಖರ್ಚು ಲೆಕ್ಕಗಳನ್ನು ಪರಿಷ್ಕಾರವಾಗಿ ತನಿಖೆ ಮಾಡುತ್ತಾ ಬಂದಿರುವರು. ಮತ್ತು ಸರ್ಕಾರದವರು ಈ ಸೊಸೈಟಿಗಳ ಲೇವಾದೇವಿಗಳ ಮೇಲೆ ಸ್ಟಾಂಪು ರಿಜಿಸ್ಟ್ರೇಷನ್ ಫೀಜು ಮಾಫಿಮಾಡಿರುವುದಲ್ಲದೆ ಇತರ ರಿಯಾಯತಿಗಳನ್ನೂ ತೋರಿಸಿರುತ್ತಾರೆ. ಇಷ್ಟೇ ಅಲ್ಲದೆ ಈ ಸೊಸೈಟಿಗಳ ಶ್ರೇಯೋಭಿವೃದ್ಧಿಯಲ್ಲಿ ನೈಜವಾದ ಉತ್ಸಾಹವನ್ನು ಪಡೆದಿರುವಂಥಾ ಶ್ರೀಮನ್ಮಹಾರಾಜರವರು ತಮ್ಮ ಸ್ವಂತ ದ್ರವ್ಯದಿಂದ ೧೦,೦೦೦ ರೂಪಾಯನ್ನು ಬೆಂಗಳೂರು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನಲ್ಲಿ ಲೇವಾದೇವಿಗೆ ಉಪಯೋಗಿಸಿಕೊಳ್ಳುವಂತೆ ಡಿಪಾಜಿಟ್ಟು ದಯಪಾಲಿಸಿರುವರು.

ಗವರ್ನಮೆಂಟಿನವರು ಪರಸ್ಪರಸಹಾಯದ ತತ್ವವನ್ನು ಸಂಸ್ಥಾನದಲ್ಲಿ ಬಿತ್ತಿ ಹರಡುವುದಕ್ಕೆ ಬಹಳ ಶ್ರಮಪಟ್ಟಂಥಾ ಮ|| ಎಂ. ಶಾಮರಾಯರನ್ನೂ, ಈಗಿನ ರಿಜಿಸ್ಟ್ರಾರಾಗಿರುವ ಮ|| ಎಂ. ಎ. ನಾರಾಯಣ ಅಯ್ಯಂಗಾರ್ರವರನ್ನೂ, ಈ ಭಾಗದಲ್ಲಿ ವಿಶೇಷ ಉತ್ಸಾಹವನ್ನು ತೋರಿಸಿದ ಮ|| ಎಂ. ಕಾಂತರಾಜೆ ಅರಸಿನವರನ್ನೂ ಬಹು ಸಂತೋಷದಿಂದ ಶ್ಲಾಘಿಸಿರುತ್ತಾರೆ.

ಇಂಥಾ ಸೊಸೈಟಿಗಳು ಇನ್ನೂ ಹೇರಳವಾಗಿ ಸ್ಥಾಪನೆಯಾಗಿ, ರೈತನು ತನ್ನ ಹೊಲ ಭೂಮಿ ಮನೆಮಠಾದಿಗಳನ್ನೂ ವ್ಯವಸಾಯದ ಮುಟ್ಟುಗಳನ್ನೂ, ಕಸಬುದಾರನು ತನ್ನ ಕಸಬಿನ ಅಭಿವೃದ್ಧಿಗೆ ಅವಶ್ಯವಾದ ಸಾಧನಗಳನ್ನೂ ಸಂಪಾದಿಸಿಕೊಳ್ಳುವುದಕ್ಕೆ ಸಹಾಯವಾಗುವಂತೆ ಸಾಲಗಳು ಧಾರಾಳವಾಗಿ ದೊರಕುವವೆಂದೂ, ಈ ಪ್ರಕಾರ ಈ ಸಂಸ್ಥಾನವು ಶ್ರೇಯಸ್ಸಿಗೆ ಬಂದೀತೆಂದೂ ಹಾರೈಸುತ್ತೇವೆ.

ಬಾಲ್ಕನ್ ಯುದ್ಧವು

ಈ ವಾರದ ಮುಖ್ಯ ವರ್ತಮಾನವೇನೆಂದರೆ ಟರ್ಕಿ, ಬಲ್ಗೇರಿಯಾ ಮತ್ತು ಸರ್ವಿಯಾ ರಾಜ್ಯಗಳವರು ಯುದ್ಧವನ್ನು ನಿಲ್ಲಿಸಿ ಕರಾರು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಒಂದು ಪಂಚಾಯತಿಗೆ ಸಮ್ಮತಿ ರುಜುವನ್ನು ಹಾಕಿದರು. ಗ್ರೀಸ್ ರಾಜ್ಯದವರು ಮಾತ್ರ ಈ ಪಂಚಾಯತಿಗೆ ರುಜು ಹಾಕಿದಂತೆ ಕಾಣುವುದಿಲ್ಲ, ಇದಕ್ಕೆ ಅವರ ಉದ್ದೇಶವೇನೋ ಸ್ಪಷ್ಟವಾಗಿ ತಿಳಿಯುವುದಿಲ್ಲ. ತುರ್ಕಿಯವರಿಗೂ ಗ್ರೀಕರಿಗೂ ಮಾತ್ರ ಯುದ್ಧಕಾರ್ಯಗಳು ನಡೆಯುತ್ತಲೇ ಇವೆ; ಇತರ ಕಡೆಗಳಲ್ಲಿ ಕಾದಾಟಗಳು ನಿಂತುಹೋಗಿರುವವು. ತುರ್ಕಿ ಗ್ರೀಕರ ಯುದ್ಧಕಾರ್ಯಗಳೂ ಅಷ್ಟೇನೂ ವಿಶೇಷವಾದವುಗಳಾಗಿಲ್ಲ. ಸ್ಕುಟಾರಿಯೊಳಗಿರುವ ತುರ್ಕಿ ಸೈನಿಕರು ಪಂಚಾಯತಿ ನಡೆವ ಪತ್ರಗಳಿಗೆ ರುಜು ಹಾಕಿ ಯುದ್ಧವನ್ನು ನಿಲ್ಲಿಸಿದಾರೆಂಬುವುದನ್ನು ನಂಬದೆ ಮಾಂಟಿನೆಗ್ರೋದವರ ಮೇಲೆ ಯುದ್ಧ ಮಾಡುತ್ತಲೇ ಬಂದಿರುವರು. ಈಗ ನಡೆದಿರುವ ಒಪ್ಪಂದದ ಪ್ರಕಾರ ತುರ್ಕಿಯವರು ಕೋಟೆಯೊಳಗೆ ಸಿಕ್ಕಿಕೊಂಡಿರುವ ತಮ್ಮ ಕಡೆಯ ಸೈನ್ಯಗಳಿಗೆ ಆಹಾರಪದಾರ್ಥಗಳನ್ನು ಕಳುಹಿಸಕೂಡದು. ಇದರಿಂದ ಆಡ್ರಿಯನೋಪಲ್ ಕೋಟೆಯೊಳಗಿದ್ದು ಅದನ್ನು ಬಹು ಪರಾಕ್ರಮದಿಂದ ಇದುವರೆಗೆ ಕಾಪಾಡಿಕೊಳ್ಳುತ್ತಾ ಬಂದಿರುವ ತುರ್ಕಿ ಸೈನ್ಯಗಳು ಆಹಾರಪದಾರ್ಥಗಳ ಅಭಾವದಿಂದ ಕೋಟೆಯನ್ನು ಬೇಗನೆ ಬಲ್ಗೇರಿಯಾ ಸೈನಿಕರಿಗೆ ಒಪ್ಪಿಸುವ ಸಂಭವ ಕಾಣುತ್ತದೆ.

ಈಗ ಯುದ್ಧ ನಿಂತಿರುವ ಕಾಲದಲ್ಲಿ ಆ ರಾಜ್ಯಗಳ ರಾಯಭಾರಿಗಳು ಲಂಡನ್ ಪಟ್ಟಣದಲ್ಲಿ ಸೇರಿ ಕರಾರಿನ ವಿಷಯವನ್ನು ಕುರಿತು ಚರ್ಚೆ ಮಾಡುವಂತೆ ಏರ್ಪಾಡಾಗುತ್ತಿದೆ. ಇನ್ನು ಮುಂದೆ ಬಾಲ್ಕನ್ ಸೀಮೆಯ ಭವಿಷ್ಯತ್ತಿನ ರಾಜ್ಯಭಾರ ಕ್ರಮಗಳು ಹ್ಯಾಗಿರಬೇಕು, ಯೂರೋಪಿನಲ್ಲಿ ತುರ್ಕಿಯವರಿಗೆ ಎಷ್ಟುಮಟ್ಟಿನ ರಾಜ್ಯವಿರಬೇಕು, ಈ ವಿಚಾರಗಳನ್ನು ಸಂಪೂರ್ಣವಾಗಿ ಚರ್ಚೆಯಿಂದ ನಿರ್ಧರಿಸುವುದಕ್ಕೆ ಬಾಲ್ಕನ್ ರಾಜ್ಯಗಳು, ಗ್ರೀಸ್, ತುರ್ಕಿ, ಜರ್ಮನಿ, ಆಸ್ಟ್ರಿಯ, ಇಟಲಿ, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ರಾಯಭಾರಿಗಳು ಸಭೆ ಸೇರುವವರಾಗಿದ್ದಾರೆ. ಈ ವಿಷಯಗಳು ಇತ್ಯರ್ಥವಾಗಲು ಅನೇಕ ಕಷ್ಟವಾದ ಸಂದರ್ಭಗಳುಂಟು; ಆದರೂ ಆ ರಾಯಭಾರಿಗಳು ಯಾವುದಾದರೊಂದು ಮಾರ್ಗವನ್ನು ಕಂಡುಹಿಡಿದು ಇನ್ನು ಎಂದಿಗೂ ಯೂರೋಪಿನ ನೆಮ್ಮದಿಗೂ ಸಮಾಧಾನಕ್ಕೂ ಕೊರತೆಯುಂಟಾಗದಂತೆ ಮಾಡುವರೆಂದು ಹಾರೈಸುತ್ತೇವೆ.

ಮಾನವನು ಸೂತ್ರದ ಬೊಂಬೆಯ ಹಾಗಿದ್ದಾನೋ? ಅವನಿಗೆ ಸ್ವಾತಂತ್ರ್ಯವಿದೆಯೋ?

ಒಂದಾನೊಂದು ಊರಲ್ಲಿ ಸುಳ್ಳನ್ನು ಆಡುವ ಒಬ್ಬ ಯೌವನಸ್ಥನನ್ನು ಕುರಿತು ಸದ್ಭಕ್ತನೂ ವಿದ್ಯಾವಂತನೂ ಆದ ಒಬ್ಬ ಯಜಮಾನನು—ಎಲಾ ಹುಡುಗಾ! ನೀನು ಸುಳ್ಳಾಡತಕ್ಕದ್ದು ಧರ್ಮವಲ್ಲ. ಈ ಊರಲ್ಲಿ ನಿನಗಿಂತ ಚಿಕ್ಕವರು ಎಷ್ಟೋ ಜನರಿದ್ದಾರೆ. ನೀನು ಸುಳ್ಳಾಡುವುದನ್ನು ಕೇಳಿದರೆ, ನಿನ್ನ ಮಾದರಿಯಿಂದ ಅವರೂ ಸುಳ್ಳಾಡುವುದನ್ನು ಕಲಿತುಕೊಂಡು ಕೆಟ್ಟುಹೋಗುವರೆಂದು ಆ ಯೌವನಸ್ಥನನ್ನು ಗದರಿಸಿದನು. ಅವನು ಯಜಮಾನನ ಮಾತುಗಳನ್ನು ಕೇಳಿ, ಅವನನ್ನು ಲಕ್ಷ್ಯಕ್ಕೆ ತಾರದೆ, ನಕ್ಕು ಆ ಸುಳ್ಳನ್ನು ಆಡಿದವನು ನಾನಲ್ಲ, ದೇವರೇ ಆಡಿಸಿದನೆಂದು ಹೇಳಿದನು. ನಾವು ಮಾಡಿದ ಪಾಪದ ವಿಷಯದಲ್ಲಿ ನಾವು ಜವಾಬ್ದಾರರಲ್ಲವೆಂತಲೂ ದೇವರೇ ನಮ್ಮನ್ನು ಸೂತ್ರದ ಬೊಂಬೆಗಳನ್ನು ಆಡಿಸುವ ಹಾಗೆ ಆಡಿಸುತ್ತಾನೆಯೇ ಹೊರತು ನಮಗೆ ಸ್ವಾತಂತ್ರ್ಯವೇನೂ ಇಲ್ಲವೆಂತಲೂ ಈ ದೇಶದಲ್ಲಿ ಅನೇಕರು ಅಭಿಪ್ರಾಯಪಡುವುದರಿಂದ, ಈ ವಿಷಯದಲ್ಲಿ ನಾವು ದೀರ್ಘವಾಗಿ ಯೋಚಿಸತಕ್ಕದ್ದು ಯುಕ್ತವಾಗಿ ತೋರುತ್ತದೆ.

ಮನುಷ್ಯನಿಗೆ ಸ್ವಾತಂತ್ರ್ಯವು ಅಥವಾ ಸರಂಕುಶವರ್ತನವು ಇಲ್ಲವೆಂಬ ಮಾತು ನಿಜವಾಗಿದ್ದರೆ ಧರ್ಮಾಧರ್ಮ, ಪಾಪಪುಣ್ಯ ಎಂಬವುಗಳೇ ಇಲ್ಲದಾಗುವೆಂಬುದನ್ನು ಮರೆಯಬಾರದು. ಗೊಂಬೆಗಳನ್ನು ಕುಣಿಸುವಾಗ ಅವು ತಮ್ಮ ಸ್ವಶಕ್ತಿ ಯಿಂದ ಕುಣಿಯುತ್ತವೆಯೋ ಎಂಬಂತೆ ಕಾಣಿಸುವವು. ಆದರೆ ಆ ಬೊಂಬೆಗಳಲ್ಲಿ ಯಾವ ಶಕ್ತಿಯೂ ಇರುವುದೇ ಇಲ್ಲ. ಸೂತ್ರಧಾರಿಯು ಒಂದಿಂದೆಳೆದರೆ ಅವು ಮೇಲಕ್ಕೂ ಕೆಳಕ್ಕೂ ಈ ಕಡೆಗೂ ಆ ಕಡೆಗೂ ಅವನು ಕುಣಿಸಿದ ಹಾಗೆಲ್ಲಾ ಕುಣಿಯುತ್ತವೆಂದು ನಾವು ಬಲ್ಲೆವಷ್ಟೆ. ಇದರಂತೆ ದೇವರು ಒಬ್ಬ ಸೂತ್ರಧಾರಿಯು ಹಾಗೂ ಮನುಷ್ಯರಾದ ನಾವು ಆತನ ಕೈಯಲ್ಲಿರುವ ಸೂತ್ರದ ಬೊಂಬೆಗಳ ಹಾಗೂ ಇರುವುದಿಲ್ಲ. ಮನುಷ್ಯರು ತಮ್ಮಿಷ್ಟಬಂದ ಕಾರ್ಯಗಳನ್ನು ಮಾಡುವುದಕ್ಕೆ ಸ್ವಾತಂತ್ರ್ಯವಿಲ್ಲದೆಯೂ, ದೈವ ಅಪಾರವಾದ ಶಕ್ತಿಯಿಂದ ಬಂಧಿಸಲ್ಪಟ್ಟವರಾಗಿ ಬಿಡಿಸಿಕೊಳ್ಳುವುದಕ್ಕೆ ಯತ್ನವಿಲ್ಲದೆಯೂ, ಆತನಿಂದ ಸೂತ್ರದ ಬೊಂಬೆಗಳಂತೆ ಕುಣಿಸಲ್ಪಡುವವರಾಗಿದ್ದರೆ ಅವರು ಮಾಡುವ ಧರ್ಮಕಾರ್ಯಗಳಿಗೆ ದಕ್ಷಿಣೆಯಾಗಲಿ, ಪಾಪಕೃತ್ಯಗಳಿಗೆ ಶಿಕ್ಷೆಯಾಗಲಿ ಅವರಿಗೆ ಪ್ರಾಪ್ತವಾಗಕೂಡದು. ಮತ್ತು ಪಾಪದ ಫಲವನ್ನು ಕುರಿತು ಮನುಷ್ಯರು ಯೋಚಿಸಬೇಕಾದ ಅಗತ್ಯವೂ ಇರುತ್ತಿರಲಿಲ್ಲ. ಏಕೆಂದರೆ ಪಾಪವೆಂಬುವುದೇ ಇರುತ್ತಿರಲಿಲ್ಲ. "ಬಂಜೆಯವಳ ಒಳ್ಳೆಯ ತನ" ಎಂಬ ಮಾತಿಗೆ ಅರ್ಥವೇ ಇಲ್ಲ. "ಮೊಲದ ಕೊಂಬು," "ಬಂಜೆಯಾದ ವಿಧವೆಯ ಮಗ" ಎಂಬೀ ಹೀಗೆ ಅಸಂಭವಗಳೂ ಇದರ ಹಾಗೆಯೇ ಅರ್ಥರಹಿತವಾದವು. ಕೇವಲ ನಿರ್ಬಂಧದಿಂದಲೇ ಮಾಡಿದ ಕಾರ್ಯವು ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಇ ರದ ಕೆಲಸವನ್ನು ಒಳ್ಳೆಯದೆಂದು ಶ್ಲಾಘಿಸುವುದಾಗಲಿ, ಕೆಟ್ಟದೆಂದು ಆಕ್ಷೇಪಿಸುವುದಾಗಲಿ ದರ್ಮವಲ್ಲ. ಗಡಿಯಾರಗಳನ್ನು ಮಾಡುವವನು ಒಂದು ಗಡಿಯಾರವು ಸರಿಯಾದ ಕಾಲವನ್ನು ತೋರಿಸುವುದಾದರೆ ಅದನ್ನು ಶ್ಲಾಘಿಸುವನಲ್ಲ, ಮತ್ತೊಂದು ಸರಿಯಾದ ಕಾಲವನ್ನು ತೋರದೆ ಅಥವಾ ನಿಂತುಹೋಗಿದ್ದರೆ ಅದರ ಮೇಲೆ ದೋಷ ಹೊರಿಸುವುದಿಲ್ಲ. ಏಕೆಂದರೆ ಗಡಿಯಾರಕ್ಕೆ ಸ್ವಾತಂತ್ರ್ಯವು ಇರುವುದೇ ಇಲ್ಲ. ಅದನ್ನು ಮಾಡಿದವನು ಹೇಗೆ ಕ್ರಮಪಡಿಸಿ ಇಟ್ಟಿರುತ್ತಾನೋ ಅದು ಆ ರೀತಿ ನಡೆಯುತ್ತದೆ.

ಒಳದೇಶದ ವೃತ್ತಾಂತಗಳು.

ಈ ದಿನ ರಾಜಧಾನಿಯ ಚಮುಕ್ ಪಟ್ಟಿ ತೋಟದಲ್ಲಿ ತ್ರಿಮತಸ್ಥರ ಅರಮನೆ ಕಟ್ಟಡದ ವಿನಿಯೋಜನವು ಜರುಗುವುದರಿಂದ ಎಲ್ಲಾ ಕೋರ್ಟು ಕಚೇರಿ ಸ್ಕೂಲುಗಳಿಗೂ ರಜಾ ಕೊಡಲಾಗಿದೆ.

* * *

ಶ್ರೀಮನ್ ಮಹಾರಾಜರವರೂ ಯುವರಾಜರವರೂ ಬ್ರಿಟಿಷ್ ರೆಸಿಡೆಂಟರವರ ಸಮೇತ ಮೊನ್ನೆ ಸೋಮವಾರ ಬೆಳಗ್ಗೆ ಬೆಂಗಳೂರಿನಿಂದ ಸಕ್ರೇಬೈಲು ದಯಮಾಡಿದರು. ಮಹಾರಾಜರವರು ರಾತ್ರಿವಾಸವರೊಡನೆ ಕೆಲವುಕಾಲದ ಮಟ್ಟಿಗೆ ಮದರಾಸಿಗೆ ದಯಮಾಡುವರೆಂದು ಕೇಳುತ್ತೇವೆ.

* * *

ಮೊನ್ನೆ ಸೋಮವಾರದಿಂದ ಚಾಮರಾಜನಗರದಲ್ಲಿ ಕೆಸ್ತಗಾಲದ ಮೊಕದ್ದಮೆಯ ಪ್ರಥಮ ವಿಚಾರಣೆಯು ಪ್ರಾರಂಭವಾಗಿ ನಡೆಯುತ್ತಿದೆ. ಸರ್ಕಾರದವರು ಅ|| ಕಮಿಷನರ್ ಮ|| ಎನ್. ಮಾಧವರಾಯರನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿ ಅವರಿಂದ ವಿಚಾರಣೆ ಮಾಡಿಸುತ್ತಾರೆ.

* * *

ಮೈಸೂರು ದೇವೀರಾಂಬಾ ಅಗ್ರಹಾರದಲ್ಲಿರುವ ಅರಮನೆ ಜೋಯಿಸರವರೇ ಯಜ್ಞ ಸಂಸ್ಕೃತ ಪಾಠಶಾಲೆಯವರು ಗುಣಿಸಿ ಮಾಡಿದ ಪುಸ್ತಕಂ ತಮ್ಮ ಮಲಾಚಾರ್ಯರಿಂದ ಪರಿಶೋಧಿಸಲ್ಪಟ್ಟ ಪ್ರಮಾದಿ ಸಂವತ್ಸರದ ಪಂಚಾಂಗವು ನಮ್ಮಲ್ಲಿಗೆ ಬಂದಿರುತ್ತದೆ. ಇದು ಇಲ್ಲಿನ ಶ್ರೀನಿವಾಸ ಪ್ರೆಸ್ಸಿನಲ್ಲಿ ಸ್ಫುಟವಾಗಿಯೂ, ಅಂದವಾಗಿಯೂ ಅಚ್ಚಾಗಿರುವುದು.

* * *

ರಾಜಧಾನಿಯ ಸಂತೇಪೇಟೆಯಲ್ಲಿ ಕೋಲಗಿರಿ ಮುದ್ದಣ್ಣನವರ ಮನೆ ಬಾಗಿಲಿನ ಒಂದು ಸೌದೆಯ ಗೋಡೆಯ ಒಂದು ಮೂಲೆಯಲ್ಲಿ ಒಂದು ಹೆಣ್ಣು ಶಿಶುವನ್ನು ಗೋಣಿಯಲ್ಲಿ ಸುತ್ತಿ ಹಾಕಿದ್ದದ್ದು ಕೊಳೆತು ನಾತಬರುತ್ತಿದ್ದಾಗ ಗೊತ್ತಾಗಿ ಪೊಲೀಸಿನವರಿಗೆ ವರದಿ ಆಗಿ ಅಲ್ಲಿಂದ ಸಾಗಿಸಲ್ಪಟ್ಟಿತು. ಇದು ವಿಧವಾ ವಿವಾಹ ನಿರ್ಬಂಧದ ಫಲವಾಗಿರಬೇಕೆಂದು ತೋರುತ್ತದೆ.

* * *

ಕಳೆದ ಭಾನುವಾರ ಬೆಂಗಳೂರಿನ ಸೆರೋಡ್ ಮೈದಾನದಲ್ಲಿ ನಡೆದ ನಾಲ್ಕಾರು ಕುಸ್ತಿಗಳನ್ನು ನೋಡುವುದಕ್ಕೆ ಸುಮಾರು 10,000 ಪ್ರಜೆಗಳು ನೆರೆದ್ದಿದ್ದರೆಂದೂ, ಕುಸ್ತಿಗಾರರ ಶಕ್ತಿಗಳಿಗೆ ಪ್ರಜೆಗಳು ಗಲ್ಲಾಟೆಯಾಗಿ ಹೊಡೆದಾಟ ನಡೆಯಿತೆಂದೂ, ಈ ಹೊಡೆದಾಟವನ್ನು ಪೊಲೀಸಿನವರು ಬಹಳ ಸಾಹಸಪಟ್ಟು ಸದರಿಸಿ, ಏಟು ಬಿದ್ದವರನ್ನು ಆಸ್ಪತ್ರೆಗೆ ಸಾಗಿಸಿದರೆಂದೂ ತಿಳಿಯುತ್ತದೆ.

* * *

ಬೆಂಗಳೂರು ಒಕ್ಕಲಿಗರ ಪತ್ರಿಕೆಯು ಕಳೆದ ಆಗಸ್ಟ್ ತಾ 7 ನೇ ಸಂಚಿಕೆಯಲ್ಲಿ ಕುರುಬರಿಗೆ ಅವಮಾನಕರವಾದ ಸಂಗತಿಯನ್ನು ಪ್ರಕಟಿಸಿದರೆಂದು ಕುರುಬರ ಕುಲಪ್ರತಿನಿಧಿಗಳಾದ ಮ|| ಬೆಂಗಳೂರು ಬೋಜಪ್ಪನವರೂ, ಮ|| ಮೈಸೂರು ಯಜಮಾನ್ ಲಕ್ಷ್ಮಯ್ಯನವರೂ ಆ ಪತ್ರಿಕೆಯ ಸಂಪಾದಕರ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟಕ್ಕೆ ಫಿರ್ಯಾದು ತಂದಿದ್ದಾರೆ. ಈ ಮೊಕದ್ದಮೆಯು ಜನವರಿ ತಾ. 15 ಕ್ಕೆ ಹಿಯರಿಂಗ್ ಇದೆ.

* * *

ರಾಜಧಾನಿಯಲ್ಲಿ ಚಾರಿ ವರ್ತಕರಾಗಿದ್ದ ಬಾಬುಮಿಯಾ ಸಾಹೇಬರು ಬದುಕಿದ್ದಾಗ್ಗೆ ಒಂದು ವ್ಯವಸ್ಥಾಪತ್ರವನ್ನು ಬರೆದಿದ್ದರೆಂಬುವುದು ಕೋರ್ಟಿನಲ್ಲಿ ಚರ್ಚೆ ನಡೆದು ಆ ಪತ್ರವು ಫೋರ್ಜರಿಮಾಡಿದ್ದಾಗಿರಬೇಕೆಂದು ಕಂಡುಬಂದದ್ದರಿಂದ ಸಿಟಿ ಮ್ಯಾಜಿಸ್ಟ್ರೇಟರು ಅದಕ್ಕೆ ಸಂಬಂಧಪಟ್ಟ ಏಳು ಜನರನ್ನು ಅಂದರೆ ಲೇಟ್ ಬಾಬೂಮಿಯಾ ಸಾಹೇಬರ ಇಬ್ಬರು ಮಕ್ಕಳು, ಪತ್ರ ಬರೆದವರು, ಸಾಕ್ಷಿ ಹಾಕಿದವರು, ಇವರನ್ನೆಲ್ಲಾ ಸೆಷನ್ಸ್ ವಿಚಾರಣೆಗೆ ಗುಮಾಯಿಸಿರುತ್ತಾರೆ.

* * *

ರಾಜಧಾನಿಯ ಅಡ್ವೊಕೇಟ್ ಮ|| ಎಸ್. ರಂಗಸ್ವಾಮಿ ಅಯ್ಯಂಗಾರ್ರವರು ಇಲ್ಲಿನ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಮೊಕದ್ದಮೆ ನಡೆಸುವ ಉದ್ದೇಶ್ಯ ಹೋಗಿದ್ದ ವೇಳೆಯಲ್ಲಿ ಅಲ್ಲಿ ಜೇನು ಹುಳಗಳು ಕಚ್ಚಿ ಅವರನ್ನು ತುಂಬಾ ಗಾಯಮಾಡಿದ್ದು

[illegible]ಸ್ವಪ್ನರು ಏನು ಚಿಕಿತ್ಸೆ ಮಾಡಿದರೂ ಗುಣವಾಗದೆ ಅವರು ಕಳೆದ ಶುಕ್ರವಾರ [illegible]ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಇನ್ನೂ ಚಿಕ್ಕ ವಯಸ್ಸಿನವರು. ಸಭ್ಯರಾಗಿಯೂ, ಸಚ್ಚರಿತ್ರರಾಗಿಯೂ ಇದ್ದುಕೊಂಡು, ತಮ್ಮ [illegible]ಗಳಲ್ಲಿ ಶಕ್ತಿಗಾರರಲ್ಲಿ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರು

* * *

[illegible]ದಿಂದ ಬಂದಿರುವ ಮ॥ ನಾರಾಯಣ ಶಾಸ್ತ್ರಿಗಳು ರಾಜಧಾನಿ[illegible] ಕಥೆಗಳನ್ನು ಮಾಡುತ್ತಿದ್ದಾರೆ ಇಲ್ಲಿನ ಸಂಗೀತ ಸಮಾಜದವರು [illegible] ಭಾನುವಾರ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಅವರಿಂದ [illegible] ಸಂಹಿನಿ ಎಂಬ ಕಥೆ ಮಾಡಿಸಿದರು ರಾಜಬಂಧುಗಳವರೂ, ಅಧಿ[illegible]ಗಳೂ, ದೊಡ್ಡ ಮನುಷ್ಯರೂ ವಿಶೇಷವಾಗಿ ಸೇರಿ ಕಥೆಯನ್ನು ಕೇಳಿ [illegible] ಸಂತೋಷಪಟ್ಟುಕೊಂಡರು ಇಲ್ಲಿನ ಪ್ರಜೆಗಳ ಮುಖಂಡರು ಅವರಿಂದ [illegible] ಕಥೆಗಳನ್ನು ಮಾಡಿಸಿ ಅವರಿಗೆ ಒಂದು ಮೊದಲನ್ನು ಕೊಡಬೇಕೆಂದು [illegible]ಚಿಸುತ್ತಿದ್ದಾರೆ

* * *

ಕಳೆದ ವಾರ ರಾಜಧಾನಿಯ ವಿಸಗೆರೆಯ ಆಚೆ ಮಧ್ಯ ರಸ್ತೆಯಲ್ಲಿ ಮಹ[illegible]ಯರಿಗೆ ವಾಪಸ್ಸು ಕಡಿದಾಟವು ನಡೆದು ಅಬ್ದುಲ್ ರಹಮಾನ್ ಎಂಬ [illegible] ಮಹಮದೀಯನಿಗೆ ಪೂರಾ ಏಟು ಬಿದ್ದದ್ದರಿಂದ ಅವನು ಮರುದಿನ [illegible]ತ್ರೆಯಲ್ಲಿ ಕಾಲವಾದನು ಈ ಮೊಕದ್ದಮೆಯಲ್ಲಿ ಡಿವಿಜನ್ ಇನ್‌ಸ್ಪೆ[illegible] ಕೊಲೆಯಾದವನು ಪತ್ತೆ ಹಚ್ಚಿ ನಡಿಸಿ ಸ್ವದೇಶೀಯರ್, ಸ್ವದೇ[illegible]ಸ್, ಸ್ವದೇಶೀವರ್, ಅಲ್ಲೀಟಾನ್ ಎಂಬೀ ನಾಲ್ವರೂ ಆ ಘೋರ [illegible] ಕಾರಣರೆಂದು ಹಿಡಿದು ಮೊಕದ್ದಮೆ ಮಾಡಿರುತ್ತಾರೆಂದೂ, ಸುಮಾರು [illegible]ನು ಇದಕ್ಕೆ ರುಜುವಾತು ಕೊಡುವವರಾಗಿದ್ದಾರೆಂದೂ ಕೇಳುತ್ತೇವೆ

* * *

ಮೈಸೂರು ವೆಸ್ಲಿಯನ್ ಮಿಷನ್ ಸ್ಕೂಲ್ ಹೆಡ್ ಮಾಸ್ಟರ್ ಮ॥ [illegible] ಕೃಷ್ಣರಾಯರು ಏರ್ಪಡಿಸಿದ್ದಂತೆ ತಮ್ಮ ಸ್ಕೂಲ್ ಕಟ್ಟಡಕ್ಕೆ ಸಹಾಯ [illegible]ಕ್ಕಾಗಿ ವಾರದ ಪಂಕ್ತಿಯಲ್ಲಿ ಈ ಊರಿಗೆ ಬಂದಿರತಕ್ಕ ಮದ್ರಾಸಿನ ಆಲಂ[illegible] ಡ್ರಮ್ಯಾಟಿಕ್ ಕಂಪನಿಯವರು ಕಳೆದ ತಾ 1 ನೆ ಮಂಗಳವಾರ ರಾತ್ರಿ [illegible] ಎಂಬ ನಾಟಕವನ್ನು ಅಭಿನಯಿಸಿ ಉತ್ಪತ್ತಿಯಾದ [illegible] ಖರ್ಚು ಕಳೆದು ಉಳಿದ 50 ರೂಪಾಯಿಗಳನ್ನು ಸ್ಕೂಲಿಗೆ [illegible]ವಾಗಿ ಕೊಟ್ಟಿದ್ದಾರೆ ಇವರು ಇಷ್ಟು ಮಟ್ಟಿಗೆ ಸಹಾಯಮಾಡಿದ್ದ[illegible] ಈ ಕಂಪನಿಯವರ ವಿಷಯದಲ್ಲಿ ತುಂಬಾ ಕೃತಜ್ಞನಾಗಿರುತ್ತೇನೆ ಧರ್ಮ[illegible]ಗಳಾದ ಮಹನೀಯರು ತಮ್ಮಗಳಿಂದ ಆಗಬಹುದಾದ ಸಹಾಯವನ್ನು [illegible] ಜಾಗ್ರತೆಯಾಗಿ ಒದಗಿಸಿಕೊಟ್ಟು ಕಟ್ಟಡದ ಕೆಲಸವು ಶೀಘ್ರವಾಗಿ [illegible]ಯುವಂತೆ ಮಾಡಬೇಕಾಗಿ ಪ್ರಾರ್ಥಿಸುವೆನು

* * *

ಈ ಸಲ ನವರಾತ್ರಿ ಹಬ್ಬದ ಉತ್ಸವ ಕಾಲದಲ್ಲಿ ರಾಜಧಾನಿಯ ಶಿವ[illegible] ಬೀದಿಯೊಳಗೆ ರಾಮಸ್ವಾಮಿ ವಟರೆಂಬೊಬ್ಬ ವೈಶ್ಯಪುರೋಹಿತರನ್ನು [illegible] ಹೊಡೆದು ಕೊಂದುಹಾಕಿದರೆಂದು ತಿಳಿದಿದ್ದೆವಷ್ಟೆ ಅದೇ ವಟಾರ[illegible]ವಾಸವಾಗಿದ್ದ ಒಬ್ಬ ಬ್ರಾಹ್ಮಣ ಸೇವಕನನ್ನು, ಪೋಲೀಸಿನವರು ದಸ್ತಗಿರಿ [illegible] ಪತ್ತೆ ಹಚ್ಚದೆ ಇರುವ ಸಮಯದಲ್ಲಿ ಆ ಬ್ರಾಹ್ಮಣನ ಮುದಿ [illegible] ಸ್ಟೇಷನ್ ಬಾಕಿನಿಂದ ಹೊರಕ್ಕೆ ಬಿದ್ದು ಸತ್ತುಹೋದಳು [illegible] ಬ್ರಾಹ್ಮಣನು ಮೊದಲು ಯಾರೋ ಮೂರು ಜನಗಳು ಬಂದು ಆ ಪುರೋ[illegible]ವನ್ನು ಕೊಂದರೆಂದು ಹೇಳಿದನು ಬಳಿಕ ಆ ಕೃತ್ಯವನ್ನು ತಾನೇ ಮಾಡಿ[illegible]ಗಿ ಒಪ್ಪಿಕೊಂಡಂತೆ ಹೇಳಿದನು ಸಿಟಿ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆ[illegible] ಫಿರ್ಯಾದಿ (ಸರ್ಕಾರ) ತರಫಿನ ಸಾಕ್ಷಿಗಳನ್ನು ಸುಮಾರು ಎರಡು ಮಾಸ [illegible] ವಿಚಾರಿಸಿ ಆ ಬ್ರಾಹ್ಮಣನ ಮೇಲೆ ಅಪರಾಧ ರುಜುವಾತಾಗು[illegible]ವೆಂದು ಅಭಿಪ್ರಾಯಪಟ್ಟು ಮೊನ್ನೆ ಸೋಮವಾರ ಆತನನ್ನು ಬಿಡುಗಡೆ [illegible] ರಾಜಧಾನಿಯಲ್ಲಿ ನಡೆದ ಈ ಭಯಂಕರವಾದ ಕೊಲೆಯು [illegible]ಗಳು ಪತ್ತೆ ಆಗದೆ ಈ ರೀತಿ ಪರಿಣಾಮಹೊಂದಿತಲ್ಲಾ ಎಂದು ಪ್ರತಿ[illegible] ಆಶ್ಚರ್ಯವೂ ವ್ಯಸನವೂ ಉಂಟಾಗಿರುತ್ತದೆ

ಮೈಸೂರು ಗೆಜೆಟು ಸಂಗ್ರಹ

ಮೈ ನಾಮಕರ್ಣ ಬಸವಣ್ಣಪ್ಪನವರನ್ನು ಹೊನ್ನಾಳಿ ಮ್ಯುನಿಸಿಪಲ್ [illegible]ಗೂ, ಮೈ ಸುಬೇಗೌಡರು ಮತ್ತು ಲಕ್ಷ್ಮೀಗೌಡನ್ನು ಶ್ರೀರಂಗಪಟ್ಟಣದ [illegible] ಬೆಸಗರಹದ ಯೂನಿಯನ್ ಪಂಚಾಯಿತಿಗೂ ಮೆಂಬರುಗಳಾಗಿ [illegible]ಮಾಡಿದೆ

[illegible] ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೈ ಬಿ ಭೀಮರಾಯರಿಗೆ [illegible]ರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಹದಿನೈದು ದಿವಸಗಳಿಗೆ [illegible]ಮಾಡಿದೆ ಈಗಿನ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು

[illegible] ಸರ್ಜನ್ ಮ॥ ಎನ್ ಎಸ್ ನಂಜುಂಡಯ್ಯನವರಿಗೆ ಕೊಟ್ಟಿದ್ದ [illegible] ತಿಂಗಳ ಪ್ರಿವಿಲೇಜ್ ರಜವನ್ನು ಅವರ ಇಷ್ಟಪ್ರಕಾರ ರದ್ದುಮಾಡಿದೆ

ಸರ್ಜನ್ ಮಿಸ್ ಆರ್ ಗೋವಿಂದರಾಜುಲು ಯವರಿಗೆ ಅಕ್ಟೋಬರ್ [illegible] ರಿಂದ ಒಂದು ತಿಂಗಳು ಇಪ್ಪತ್ತು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ [illegible] ಶಿರಸ್ತೇದಾರ್ ಮ ಕೆ ಎನ್ ರಾಮಚಂದ್ರಯ್ಯನವರು [illegible]ರಾಗಿ ಬದಲಿ ನೋಡುವಾಗ್ಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿ[illegible]ವನ್ನು ವಹಿಸತಕ್ಕದ್ದು

ಮೈ ಮಹಮದ್ ಉಸ್ಮಾನ್ ಯವರನ್ನು ಶಿವಮೊಗ್ಗೆಯಿಂದ ಮೈಸೂರು [illegible] ಮೆಡಿಕಲ್ ಆಫೀಸರ್ ಮತ್ತು ಜೈಲ್ ಸೂಪರಿಂಟೆಂಡೆಂಟರಾಗಿಯೂ, [illegible] ಜಗನ್ನಾಥಂ ಪಿಳ್ಳೆಯವರನ್ನು ಮೈಸೂರಿನಿಂದ ಶಿವಮೊಗ್ಗ ಡಿಸ್ಟ್ರಿಕ್ಟ್ [illegible] ಆಫೀಸರಾಗಿಯೂ ವರ್ಗಮಾಡಿದೆ

[illegible] ಕಮಿಷನರ್ ಮ॥ ಬಿ ಟಿ ಕೇಶವ ಅಯ್ಯಂಗಾರ್ರನ್ನು ಬೆಂಗಳೂರು [illegible]ಯಿಂದ ತುಮಕೂರು ಡಿಸ್ಟ್ರಿಕ್ಟ್ ಖಜಾನೆ ಭಾರಕ್ಕೂ, ಅ॥ ಕಮಿಷನರ್ ಮೈ ಬಿ ಭೀಮರಾಯರನ್ನು ಮೈಸೂರು ಡಿಸ್ಟ್ರಿಕ್ಟಿಗೂ ವರ್ಗಮಾಡಿದೆ

ಮೈ॥ ಕಪ್ಪೂರ್ ಶ್ರೀನಿವಾಸರಾಯರನ್ನು ಸಂಸ್ಥಾನದ ಚೀಫ್ ಇಂಜನಿಯರ್ರೂ, ಮೈ॥ ಕೆ ಕೃಷ್ಣಯ್ಯಂಗಾರ್ರನ್ನು ಡೆಪ್ಯುಟಿ ಚೀಫ್ ಇಂಜನಿಯರರಾಗಿ, ಮೈ॥ ಇ ಎ ಎಸ್ ಬೆಲ್ ಯವರನ್ನು ರೈಲ್ವೆ ಚೀಫ್ ಇಂಜನಿಯರರಾಗಿ ನೇಮಕಮಾಡಿದೆ

ಮೈಸೂರು ಟ್ರೆಯ್ನ್ಡ್ ಬೋರ್ಡಿನಲ್ಲಿ ಕೆಲಸಮಾಡುವ ಮೈ॥ ಎಚ್ ಎಫ್ [illegible] ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮೈ ಎಂ ಎ ನಾರಾಯಣ ಅಯ್ಯಂಗಾರ್ರನ್ನು ಈ ನಮ್ಮ ಕೋಆಪ[illegible] ಸೊಸೈಟಿಗಳ ರಿಜಿಸ್ಟ್ರಾರಾಗಿಯೂ, ಮೈ ಜಿ ಆರಮಾಮುದು ಅಯ್ಯಂ[illegible] ಸೀನಿಯರ್ ಅ॥ ಕಮಿಷನರಾಗಿಯೂ ಖಾಯಂ ಮಾಡಿದೆ

[illegible] ಕಮಿಷನರ್ ಮೈ॥ ಎಸ್ ನಾರಾಯಣರಾಯರನ್ನು ಜೂಲೈ ತಾ [illegible] 3 ನೇ ಕ್ಲಾಸಿಗೆ ಬಡ್ತಿಮಾಡಿದೆ

[illegible] ಸರ್ಜನ್ ಮೈ॥ ಟಿ ಬಾಲಕೃಷ್ಣಮುದಲಿಯಾರ್ರನ್ನು ಆಗಸ್ಟ್ ತಾ 11 [illegible] ಕ್ಲಾಸಿಗೆ ಬಡ್ತಿಮಾಡಿದೆ

ಮಿಸ್ ಎ ಜಿ ಆಲ್ಲನ್ ಯವರನ್ನು ನವಂಬರ್ ತಾ 1 ರಿಂದ 6 ನೇ ಕ್ಲಾಸ್ ಅ॥ ಸರ್ಜನ್‌ರಾಗಿ ನೇಮಿಸಿಕೊಂಡು, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಮಾಡಿದೆ

ಮೈ॥ ಎಂ ಜಿ ಸ್ಯಾಮ್ಯುಯಲ್‌ಯವರನ್ನು ಜೂಲೈ ತಾ 16 ರಿಂದ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರಾಗಿ ಖಾಯಂ ಮಾಡಿದೆ

ಮುಂದೆ ಹೇಳುವ ಅ॥ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ —ಮೈ॥ ಕೆ ಮೈಲಾರ್‌ರಾಯರನ್ನು ಮೈಸೂರು ಸಬ್ ಡಿವಿಜನ್‌ಗೂ, ಮೈ॥ ಎಸ್ ವೆಂಕಟರಂಗಂ ಯವರನ್ನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿಯೂ, ಮೈ॥ ಟಿ ಜಿ ರಾಮ ಅಯ್ಯರವರನ್ನು ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಭಾರಕ್ಕೂ ವರ್ಗಮಾಡಿದೆ

ಬೆಂಗಳೂರು ಸಿವಿಲ್ ಆಫೀಸರ್ ಮೈ॥ ಎಂ ಹಸನ್ ಆಲಿಯವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಕೊಟ್ಟಿದೆ

ಕಾವೇರಿ ಕಲಾವಿನ ಡಿವಿಜನ್ ಅ॥ ಇಂಜನಿಯರ್ ಮೈ॥ ಎನ್ ರಾಮರಾಯರಿಗೆ ಸೆಪ್ಟಂಬರ್ ತಾ 4 ರಿಂದ ಐದು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ತಾಲ್ಲೋಕು ವರ್ತಮಾನಗಳು

ಮಂಜರಾಬಾದು ತಾ॥ ದೋಣಿಗಾಲ್ —ಕಳೆದ ವಾರ ಎಕ್ಸೈಸ್ ಕಮಿಷನರ್ ಮೈ॥ ಎಂ ಕಾಂತರಾಜೆ ಅರಸಿನವರು ಶುಕ್ರವಾರಸಂತೆ ಮಾರ್ಗವಾಗಿ ಸಕಲೇಶಪುರಕ್ಕೆ ದಯಮಾಡಿದರು. ಅವರ ಕೂಡ ಹಾಸನ್ ಡಿಸ್ಟ್ರಿಕ್ಟಿನ ಅ॥ ಕಮಿಷನರ್ ಮ॥ ಜಹಿರುದ್ದೀನ್ ಮೆಕ್ಕೆಯವರೂ, ಸಕಲೇಶಪುರದ ಅಮಲ್ದಾರ್ ಮೈ॥ ಎನ್ ಗೋಪಾಲಕೃಷ್ಣಯ್ಯಂಗಾರ್ರೂ, ಎಕ್ಸೈಸ್ ಇನ್‌ಸ್ಪೆಕ್ಟರ್ ಮೊದಲಾದವರೆಲ್ಲಾ ಬಂದಿದ್ದರು ಮಂಜರಾಬಾದು ಕೋಟೆ ಬಳಿ ದೋಣಿಗಲ್ ಕಾಫಿ ಪ್ಲಾಂಟರ್ ಮೈ॥ ಡಿ ಶಾಂತಮಲ್ಲಗೌಡರೂ, ಇವರ ಸಹೋದರರಾದ ಮೈ॥ ಡಿ ನಂಜೇಗೌಡರೂ ಬಾಪ್ಪನಂದನೆಯಿಂದ ತಾ 2 ರಲ್ಲಿ ಅವರನ್ನು ಎದುರುಗೊಂಡು ಮರ್ಯಾದೆ ಮಾಡಿದರು ಮೈ॥ ಕಾಂತರಾಜೆ ಅರಸಿನವರು ಫಲಪುಷ್ಪಾದಿಗಳನ್ನು ಸಂತೋಷದಿಂದ ಸ್ವೀಕರಿಸಿ ಆದರವಾಗಿ ಅವರ ಕೂಡ ಕುಶಲಪ್ರಶ್ನೆ ಮಾಡಿ ಸಕಲೇಶಪುರಕ್ಕೆ ದಯಮಾಡಿದರು ಪುನಃ ತಾ 4 ನೇ ಬುಧವಾರ ಅವರು ಕೋಟೆಗೆ ದಯಮಾಡಿದಾಗ ಮೇಲ್ಕಂಡ ಕಾಫಿ ಪ್ಲಾಂಟರುಗಳು ಪುರವಾಸಿಗಳ ಕೂಡ ಕರಿತು ವಾದ್ಯಸಮೇತ ಅವರನ್ನು ಎದುರುಗೊಂಡು, ಕೋಟೆಯಲ್ಲಿ ಎಲ್ಲಾ ಸ್ಥಳಗಳನ್ನೂ ತೋರಿಸಿ ಅದರ ಚರಿತ್ರೆಯನ್ನು ಅರಿಕೆಮಾಡಿದರು ಮೈ॥ ಕಾಂತರಾಜೆ ಅರಸಿನವರು ಅಲ್ಲಿ ಅಲ್ಪಾಹಾರವನ್ನು ಸ್ವೀಕರಿಸಿ, ಆದೇ ಪ್ಲಾಂಟರುಗಳ ಮನೆಗೆ ದಯಮಾಡಿ ಅಲ್ಲಿ ಅವರು ಏರ್ಪಡಿಸಿದ್ದ ಸುಗ್ಗಿ ಕುಣಿತ, ಕೋಲಾಟವೇ ಮುಂತಾದ ವಿನೋದಗಳನ್ನು ಪರಾಂಬರಿಸಿ ಸಂತೋಷಪಟ್ಟರು ಹಾರಾ ತುರಾಯಿ ಒಪ್ಪಿಸಿದ ಮೇಲೆ ಅವರು ಆ ಸಹೋದರರ ಆದರಪೂರ್ವಕವಾದ ಸತ್ಕಾರಕ್ಕಾಗಿ ಅವರನ್ನು ಸಂತೋಷದಿಂದ ವಂದಿಸಿ ಅಲ್ಲಿಂದ ಹೊರಟು ತೋಟಕ್ಕೆ ದಯಮಾಡಿ ಯಾಲಕ್ಕಿ, ಕಾಫಿ, ಮೆಣಸು ಮುಂತಾದ ಬೆಳೆಗಳನ್ನು ನೋಡಿಕೊಂಡು ಪರಿವಾರ ಸಮೇತ ಸಕಲೇಶಪುರಕ್ಕೆ ಪ್ರಯಾಣಮಾಡಿದರು

ಚನ್ನರಾಯಪಟ್ಟಣ —ಈಗ 15 ದಿನಗಳಿಂದ ಡಿಸೆಂಬರ್ ತಾ 9ರಲ್ಲಿ ನಮ್ಮ ಶ್ರೀಮನ್ ಮಹಾರಾಜರವರು ಮೋಟಾರಿನಲ್ಲಿ ಬೆಂಗಳೂರಿನಿಂದ ಹಿರಿಸಾವೆ ಮಾರ್ಗವಾಗಿ ನೆಟ್ಟಗೆ ಶ್ರವಣಬೆಳಗೊಳಕ್ಕೆ ದಯಮಾಡಿಸುತ್ತಾರೆಂದು ತಿಳಿದು ಹಿರೀಸಾವೆಯಿಂದ ಬೆಳಗೊಳಕ್ಕೆ ಒಂದು ಹೊಸ ಮಾರ್ಗವನ್ನು ಮಾಡುವದಕ್ಕಾಗಿ —ಇಲ್ಲಿನ ನಮ್ಮ ಅಮಲ್ದಾರ್ರವರು, ಜನರಲ್ ಅ॥ ಕಮಿಷನರಾದ ಮೈ॥ ಅಪ್ಪಾಜಿಯ್ಯಂಗಾರ್ರವರು, ಇಂಜನಿಯರ್ ಇಲಾಖೆಯವರು ಬೆಳಗೊಳದ ತನಕ ಒಂದು ಮೈಲಿ ದೂರದಲ್ಲಿ ಒಂದು ರೋಡ ಹಾಕಿಕೊಂಡು ಕೆಲಸವನ್ನು ಬಹಳ ಪ್ರಯಾಸದಿಂದ ನಡಿಸುತ್ತಾ ಬಂದಿದ್ದಾರೆ ಅಲ್ಲದೆ ಬೆಳಗೊಳದ ಹತ್ತಿರ ಹೊಸದಾಗಿ ಸ್ಥಾಪಿಸಿರುವ ವೈದ್ಯಶಾಲೆಯಲ್ಲಿ ಶ್ರೀಮನ್‌ಮಹಾರಾಜರವರಿಗೆ ಬಿಡಾರವನ್ನು ಮಾಡಿಸಿ ಮುಂದುಗಡೆ ಒಂದು ಒಳ್ಳೇ ಚಪ್ಪರವನ್ನೂ, ಬೆಟ್ಟಕ್ಕೆ ಹೋಗುವ ಹಾದಿಯಲ್ಲಿ ಒಂದು ಚಪ್ಪರವನ್ನೂ, ಊರಿನಲ್ಲಿ ಒಂದು ಚಪ್ಪರವನ್ನೂ, ಹಿರಿಸಾವೆಯಲ್ಲಿ ಒಂದು ಚಪ್ಪರವನ್ನೂ ಹಾಕಿಸಿರುತ್ತಾರೆ ಅಲ್ಲದೆ ಚನ್ನರಾಯಪಟ್ಟಣದ ಮಾರ್ಗವಾಗಿ ಶ್ರೀಮನ್‌ಮಹಾರಾಜರವರ ಸವಾರಿಯು ಹಾಸನಕ್ಕೆ ದಯಮಾಡಿಸುತ್ತಾದ್ದರಿಂದ ಇಲ್ಲಿನ ಆಸ್ಪತ್ರೆ ಹತ್ತಿರ ಒಂದು ಒಳ್ಳೇ ಚಪ್ಪರ ಹಾಕಿಸಿ ಒಂದು ಕಡೆಯಲ್ಲಿ ಸ್ಕೂಲ್ ಬಾಲಕ ಬಾಲಕಿಯರು ನಿಂತು ನಮ್ಮ ಶ್ರೀಮನ್‌ಮಹಾರಾಜರವರಿಗೆ ಸುಸ್ವಾಗತವನ್ನು ಬಯಸುವ ಹಾಡನ್ನು ನುಡಿಯಬೇಕೆಂತಲೂ, ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳು ನಜರು ಒಪ್ಪಿಸಬೇಕೆಂತಲೂ, ಇಲ್ಲಿನ ವರ್ತಕ ಮಂಡಲಿಯವರು ಮೈ ಮೂಡಿಗೆರೆ ವೆಂಕಟರಾಮಯ್ಯನವರು, ಆಫೀಸ್ ನೌಕರರು, ಡಾಕ್ಟರು ಎಲ್ಲಾ ಸೇರಿ ಏರ್ಪಾಡುಮಾಡಿರುತ್ತಾರೆ ಇದಲ್ಲದೆ ಹಿರಿಸಾವೆ ಮತ್ತು ಶ್ರವಣಬೆಳಗೊಳದಲ್ಲಿಯೂ ಶ್ರೀಮನ್‌ಮಹಾರಾಜರವರಿಗೆ ನಜರುಗಳನ್ನು ಒಪ್ಪಿಸಿ ತಮ್ಮಗಳ ರಾಜಭಕ್ತಿಯನ್ನು ಪ್ರಕಾಶಪಡಿಸಬೇಕೆಂದು ಬಹಳ ಆಸಕ್ತಿಯುಳ್ಳವರಾಗಿರುತ್ತಾರೆ

ದೇವನಹಳ್ಳಿ —ಧಾರಣೆವಾಸಿಗಳು ಇನ್ನೂ ಕ್ಷಾಮಕಾಲವನ್ನೇ ಸೂಚಿಸುತ್ತಲಿವೆ ಈಗಿರತಕ್ಕ ತೂಕದ ಬಟ್ಟು ಮತ್ತು ಅಳತೆ ಸೇರುಗಳಿಂದ ಪ್ರಜೆಗಳಿಗೆ ತುಂಬಾ ನಷ್ಟವಾಗುತ್ತಿರುವ ಸಂಗತಿಯನ್ನು ವಿವರಿಸಲಾರದು ಆದ ರಿಂದ ನಮ್ಮ ಸರ್ಕಾರದವರು ಹೊಸದಾಗಿ ಜಾರಿಗೆ ತರಬೇಕೆಂದಿರುವ ತೂಕದ ಬಟ್ಟು ಮತ್ತು ಅಳತೆ ಸೇರುಗಳನ್ನು ಜಾಗ್ರತೆ ಪ್ರಚಾರಕ್ಕೆ ತರಬೇಕಾಗಿದೆ —ಮೊನ್ನೆ ಹುಣ್ಣಿಮೆಯ ದಿನ ಮೈ॥ ಎಚ್ ಕೃಷ್ಣಪ್ಪನವರು ಕೃತ್ತಿಕೋತ್ಸವವನ್ನು ಬಹಳ ವೈಭವದಿಂದ ನೆರವೇರಿಸಿದರು ಅದನ್ನು ನೋಡುವುದಕ್ಕೆ ಸಾವಿರಾರು ಜನಗಳು ಸೇರಿದ್ದರು —ದಿಡ್ಡಿ ಬಾಗಿಲಿನಲ್ಲಿರತಕ್ಕ ಜಾಲಾಪತಿಯವರ ಸೇನೀರು ಬಾವಿಗೆ ಸುಮಾರು ರಾತ್ರಿ 10 ಗಂಟೆ ವರಿಗೂ ಜನಗಳು ನೀರಿಗೆ ಬಂದು ಹೋಗುತ್ತಾರೆ ಇಂತಾ ಕಡೆಯಲ್ಲಿ ಒಂದು ಮ್ಯುನಿಸಿಪಲ್ ಲಾಂದ್ರಾ ಇಲ್ಲದಿರುವುದು ತುಂಬಾ ಶೋಚನೀಯವಾಗಿದೆ ಈ ವಿಷಯದಲ್ಲಿ ನಮ್ಮ ಅಮಲ್ದಾರ್ರವರು ಶೀಘ್ರದಲ್ಲಿಯೇ ತಕ್ಕ ಏರ್ಪಾಡು ಮಾಡುವರೆಂದು ನಿರೀಕ್ಷಿಸುತ್ತೇವೆ —ಗರ್ಲ್ಸ್ ಸ್ಕೂಲು ಹೆಡ್ ಮಾಸ್ಟರಿಗೆ ವರ್ಗವಾಗಿ, ಮುಳಬಾಗಿಲಿನಿಂದ ಮೈ॥ ವೆಂಕಟರಾಯರೆಂಬುವರು ಬಂದಿರುತ್ತಾರೆ ಇದರೊಬ್ಬ ಹೆಡ್ ಮಿಸ್ಟ್ರೆಸ್ಸನ್ನು ಇಲ್ಲಿಗೆ ಕಳುಹಿಸಿದ್ದರೆ ಸ್ಕೂಲು ತುಂಬಾ ಉತ್ತಮಸ್ಥಿತಿಗೆ ಬರುತ್ತಿತ್ತು —ಈ ಊರಿನಲ್ಲಿ ಪೋಲೀಸ್ ಗಸ್ತೇ ಇರುವುದೇ ಕಂಡುಬರುವುದಿಲ್ಲ. ದಫೇದಾರ್ರು ಒಬ್ಬರು ಎಷ್ಟು ಮುತುವರ್ಜಿ ವಹಿಸಬಹುದು ಇನ್‌ಸ್ಪೆಕ್ಟರವರು ಗ್ರಾಮದಲ್ಲಿ ಗಸ್ತು ಬಂದುದೇ ಕಂಡರಿಯೆವೆಂದು ಪ್ರಜೆಗಳು ಹೇಳುತ್ತಿದ್ದಾರೆ ಇವರಿಗೆ ವರ್ಗವೆಂದು ಕೇಳುತ್ತೇವೆ ಮುಂದೆ ಎಂತಹವರಾದರೂ ಮುತುವರ್ಜಿಯಿಂದ ಕೆಲಸ ಮಾಡುತ್ತಾ, ಪ್ರಜೆಗಳಿಗೆ ನೆಮ್ಮದಿಯನ್ನುಂಟುಮಾಡುವರೆಂದು ನಂಬುತ್ತೇವೆ —ತಾಲ್ಲೂಕು ಶಿರಸ್ತೇದಾರ್ ಮೈ ನರಸಿಂಹನಾಯಕರವರು ತುಂಬಾ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಾ, ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿರುತ್ತಾರೆಂದು ತಿಳಿಸಲು ತುಂಬಾ ಸಂತೋಷವಾಗುವುದು.'

ಹುಣಸೂರು —ನಮ್ಮ ಅಮಲ್ದಾರ್ ಮೈ॥ ಆರ್ ಎ ನರಸಿಂಹೈಯಂಗಾರ್ರು ಹೆಡ್ ಕ್ವಾರ್ಟರ್‌ನಲ್ಲಿದ್ದಾಗ್ಗೆ ಪ್ರತಿ ಸಿಕ್ಸ್ಡ್‌ಮೂ ಟವುನ್ ಗಸ್ತು ಮಾಡೋಣದರಿಂದ ಮ್ಯುನಿಸಿಪಾಲಿಟಿಯ ಕೆಲಸಗಳು ಚಟುವಟಿಕೆಯಿಂದಲೂ, ತೃಪ್ತಿಕರವಾಗಿಯೂ ನಡೆಯುವವು —ಇಲ್ಲಿನ ನಮ್ಮ ಮುಸಲ್ಮಾನ್ ಸಹೋದರರಲ್ಲಿ ಮೂರು ಪಾರ್ಟಿಗಳು ಇದ್ದದ್ದು ಸಕಲರಿಗೂ ತಿಳಿದೇ ಇರುತ್ತದೆ ನಮ್ಮ ಅಮಲ್ದಾರರವರು ಇವರನ್ನು ಒಟ್ಟುಗೂಡಿಸಬೇಕೆಂದು ಕೆಲವು ದಿವಸಗಳಿಂದ ಸಾಹಸಪಡುತ್ತಾ ಇದ್ದು ಈ ಮಾಹೆ ತಾ 2 ರಲ್ಲಿ ಒಂದು ಸಭೆ ಸೇರಿಸಿದರು ಇದಕ್ಕೆ ಮುಸಲ್ಮಾನ್ ಪ್ರಜೆಗಳು ಮತ್ತು ಅವರ ಮುಖ್ಯಸ್ಥರು ಬಂದಿದ್ದರು ನಮ್ಮ ಸಬ್ ರಿಜಿಸ್ಟ್ರಾರ್ ಮೈ॥ ಲಕ್ಷ್ಮೀಕಾಂತೈಯಂಗಾರ್ರೂ ಮತ್ತು ಸಂಡಲ್ ಕೋಠಿ ದರೋಗ್ ಮೈ॥ ಚಿದಂಬರರಾಯರೂ ದಯಮಾಡಿಸಿದ್ದರು ಏಕಮತ್ಯದ ವಿಷಯದಲ್ಲಿ ಒಂದು ಸಣ್ಣ ಉಪನ್ಯಾಸವನ್ನು ಸಭೆಯಲ್ಲಿ ಹಿಂದುಸ್ಥಾನಿ ಭಾಷೆಯಲ್ಲಿ ಮೈ॥ ಚಿದಂಬರರಾಯರು ಮಾಡಿದರು ಅನೇಕ ವಿಷಯಗಳಲ್ಲಿ ಬಹಳ ಹೊತ್ತು ಚರ್ಚೆಗಳು ನಡೆದ ಬಳಿಕ ಅಮಲ್ದಾರ್ರವರ ಇಷ್ಟದಂತೆ ಎಲ್ಲಾ ಮುಸಲ್ಮಾನ್ ಪ್ರಜೆಗಳೂ ಏಕಮನಸ್ಕರಾಗಿದ್ದರು ಮತ್ತು ಒಟ್ಟುಗೂಡಿ ಇತಃಪರ ಎಲ್ಲರೂ ಸಹೋದರಭಾವದಿಂದಲೂ, ಸ್ನೇಹಭಾವದಿಂದಲೂ, ಏಕಮತ್ಯದಿಂದಲೂ ಮುಂದೆ ನಡೆದುಕೊಳ್ಳುವುದಾಗಿ ಒಪ್ಪಿ ಈ ಅರ್ಥಕ್ಕೆ ಒಂದು ಪ್ರೊಸೀಡಿಂಗ್ಸ್ ಬರೆಯಲಾಗಲು ಎಲ್ಲರೂ ಇದಕ್ಕೆ ರುಜು ಮಾಡಿದರು ನಾಳೆ ಶುಕ್ರವಾರ ಇಲ್ಲಿನ ಸಮಸ್ತ ಮುಸಲ್ಮಾನ್ ಮಹಾ ಜನಗಳೂ ಮಸೀದಿಯಲ್ಲಿ ಸೇರಿ ನಮಾಜ್ ಮಾಡುವಂತೆ ನಿಷ್ಕರ್ಷೆಯಾಯಿತು 15-20 ವರುಷಗಳಿಂದಲೂ ಇಲ್ಲಿನ ಮುಸಲ್ಮಾನ್ ಪ್ರಜೆಗಳಲ್ಲಿ ಮೂರು ಪಾರ್ಟಿಗಳಿದ್ದು ಒಬ್ಬೊಬ್ಬರಲ್ಲಿ ವೈಷಮ್ಯವುಂಟಾಗಿ ಕೆಲವು ವೇಳೆ ಅನಾಹುತಗಳು ಸಹ ನಡೆದಿರುತ್ತೆಂದು ತಿಳಿಯಬರುತ್ತೆ ಜನಾನುರಾಗಿಗಳಾದ ಅಮಲ್ದಾರ್ರವರು ತುಂಬಾ ಮೆಹನತ್ತು ಮಾಡಿ ಈ ಜನಗಳನ್ನು ಸೇರಿಸಿ ಸಮಾಧಾನಗೊಳಿಸಿದ್ದೂ, ಮುಸಲ್ಮಾನ್ ಪ್ರಜೆಗಳು ಇವರ ಬುದ್ಧಿವಾದಗಳನ್ನು ಅನುಮೋದಿಸಿ ಏಕೀಭವಿಸಿದ್ದೂ ತುಂಬಾ ಸ್ತೋತ್ರಾರ್ಹವಾಗಿದೆ

ಅರಕಲಗೂಡು —ಈ ಕಡೆ ಹೊಳೆಯಾದುದರಿಂದ ರೈತರೆಲ್ಲರೂ ಗದ್ದೆಗಳನ್ನು ಕಟಾವುಮಾಡುವುದರಲ್ಲಿಯೂ, ಕಬ್ಬನ್ನು ಅರೆಯಾಡಿಸುವುದರಲ್ಲಿಯೂ ಮಗ್ನರಾಗಿರುತ್ತಾರೆ ಸಕೀಟು ದಯಮಾಡಿಸಿದ್ದ ಮೈ॥ ಯಂ ಕಾಂತರಾಜ ಅರಸಿನವರ ಸವಾರಿಯು ಕಳೆದ ತಿಂಗಳು 28 ನೇ ಸಾಯಂಕಾಲ ಸುಮಾರು 7 ಘಂಟೆ ಸಮಯದಲ್ಲಿ ರಾಮನಾಥಪುರದಿಂದ ಇಲ್ಲಿಗೆ ದಯಮಾಡಿಸುತ್ತಾ ಊರಿಗೆ ಸಮೀಪದಲ್ಲಿರುವ ಮ॥ ಸಾಹುಕಾರ್ ಸೂರ್ಯನಾರಾಯಣಶೆಟ್ಟರ ಉದ್ಯಾನವನದಲ್ಲಿ ಸುಮಾರು ಅರ್ಧ ಘಂಟೆ ಕಾಲ ಇದ್ದು ಅವರ ಆತಿಥ್ಯವನ್ನು ಸ್ವೀಕರಿಸಿ ಸಂತೋಷದಿಂದ ಪೇಟೆಯಲ್ಲಿ ಬರುತ್ತಾ ಒಂದು ಕಡೆ ಪಾಠ ಹೆಣ್ಣು ಮಕ್ಕಳು ಕಾದಿದ್ದು ಅವರಿಗೆ ಸಂಸ್ಕೃತದಲ್ಲಿ ರಚಿಸಿದ್ದ ಶ್ಲೋಕಗಳನ್ನೂ ಇವರ ಮೇಲೆ ಮಂಗಳಗಳನ್ನೂ ಹೇಳಿ ಅವರನ್ನು ಸಂತೋಷಪಡಿಸಿದರು ಅಲ್ಲಿಂದ ಮುಂದೆ ಮಹಮ್ಮದೀಯರು ಸೇರಿ ಜುಮ್ಮಾ ಮಸೀದಿಯ ಹತ್ತಿರ ತಕ್ಕ ಮರ್ಯಾದೆಯನ್ನು ಮಾಡಿ ಮುಂದಕ್ಕೆ ಟ್ರಾವಲರ್ಸ್ ಬಂಗಲೆಗೆ ಸಾಗಕಳುಹಿಸಿದರು ಹೀಗೆ ಅವರು ಇದ್ದ ಎರಡು ದಿವಸಗಳಲ್ಲಿಯೂ ಪೇಟೆ ಕೋಟೆಗಳಲ್ಲಿದ್ದ ಬಾಲಕ, ಬಾಲಿಕಾ ಪಾಠಶಾಲೆಗಳಿಗೆ ಅವರನ್ನು ಬರಮಾಡಿಕೊಂಡು ತಕ್ಕ ಮರ್ಯಾದೆಯಿಂದ ಕಳುಹಿಸಿದರು ಕಚೇರಿ, ಎಕ್ಸೈಸ್, ದೇವಸ್ಥಾನ, ಈ ಬಾಬುಗಳಿಗೆ ಸಂಬಂಧಪಟ್ಟ ಸ್ಥಳಗಳನ್ನೆಲ್ಲಾ ಖುದ್ದಾಗಿ ಪರೀಕ್ಷಿಸಿ ನಂತರ ತಾ 30 ನೇ ಶನಿವಾರ ರಾತ್ರಿಯಲ್ಲಿ ಇಲ್ಲಿನ ವೈದಿಕ ಬ್ರಾಹ್ಮಣರಲ್ಲಿ ಕೆಲವರು ಬಂದು ಇಲ್ಲಿನ ಕೆರೆಯಲ್ಲಿ ಸ್ನಾನಕ್ಕೆ ಅಪ್ಪಣೆಕೊಡಬೇಕೆಂಬದಾಗಿ ಬಹುವಿಧದಿಂದ ಪ್ರಾರ್ಥಿಸಿಕೊಂಡು ಅವರಿಗೆ ಸಂಸ್ಕೃತದಲ್ಲಿ ಶ್ಲೋಕಗಳನ್ನು ಹೇಳಿ ಅದಕ್ಕೆ ಪ್ರತ್ಯುಪಕಾರವನ್ನು ಹೊಂದಿ ಹೋದರು ಅನಂತರ ಭಾನುವಾರ ಬೆಳಿಗ್ಗೆ ಮುಂದಕ್ಕೆ ಶುಕ್ರವಾರಸಂತೆ ಕಡೆಗೆ ಪ್ರಯಾಣೋನ್ಮುಖರಾದರು ಈ ಸಮಯದಲ್ಲಿ ನಮ್ಮ ಅಮಲ್ದಾರ್, ಶಿರಸ್ತೇದಾರ್, ಪೋಲೀಸ್ ಇನ್‌ಸ್ಪೆಕ್ಟರ್, ಜಮೇದಾರ್, ಇವರ ಉಸ್ತುವಾರಿಯೂ ಏರ್ಪಾಡೂ ತೃಪ್ತಿಕರವಾಗಿತ್ತು ಈ ಅರಸಿನವರ ದರ್ಶನವನ್ನು ಮಾಡಲು ದೂರದಿಂದ ಅನೇಕರು ಬಂದಿದ್ದರು ಇವರಲ್ಲಿ ವಿಶೇಷವಾಗಿ ವಿನಯವೂ, ಮರ್ಯಾದೆಯೂ, ಗಾಂಭೀರ್ಯವೂ ಶೋಭಿಸುತ್ತಿರುವುದರಿಂದ ಪ್ರಜೆಗಳು ಅವರನ್ನು ಕೊಂಡಾಡುತ್ತಿದ್ದಾರೆ —ಈಗ ಇಲ್ಲಿಗೆ ಬಂದಿರತಕ್ಕ ಅಮಲ್ದಾರರು ಆಕಸ್ಮಿಕವಾಗಿ ಆಗಾಗ್ಗೆ ಕೆಲವು ಹೋಬಳಿಗಳಿಗೂ ಗ್ರಾಮಗಳಿಗೂ ಹೋಗುತ್ತಿರುವುದರಿಂದ ಅಲ್ಲಿನ ಪಟೇಲರ ಮತ್ತು ಶಾನುಭೋಗರ ಅಲಕ್ಷ್ಯವು ಹೊರಪಟ್ಟು ತಕ್ಕ ಪ್ರತೀಕಾರವನ್ನು ಮಾಡುತ್ತಿರುವುದು ದೇಶದ ಏಳಿಗೆಗೆ ಒಂದು ಉತ್ತಮ ಮಾರ್ಗವಾಗಿದೆ

ದಾವಣಗೆರೆ —ಕೆಲವು ವಾರಗಳಿಂದ ಹವಾ ಥಂಡಿಯಾಗಿರೋದರಿಂದ ಜ್ವರ ಛಳಿ ನೆಗಡಿ ಕೆಮ್ಮು ಜಾಸ್ತಿಯಾಗಿದೆ ಇವರ ಜೊತೆಗೆ ಪ್ಲೇಗು ಉಪದ್ರವೆಲ್ಲಿ ಬಾಧಿಸುವುದೋ ಎಂಬ ಶಂಕೆಯು ದಿನೇ ದಿನೇ ಬಾಧಿಸುತ್ತಿರುವುದು ಪಿಂಜಾರಕೇರಿ ಮುಂತಾದ ಕಡೆ ಇಲಿಗಳು ಬೀಳುತ್ತವೆಂಬ ವರ್ತಮಾನವುಂಟು ಇನ್ನೂ ಉಪದ್ರ ಕಾಣಿಸಿಕೊಳ್ಳಲಿಲ್ಲ ಸರ್ಕಾರದವರು ಮುತುವರ್ಜಿ ವಹಿಸಿ ಕೂಡ್ಲೆ ಅಂಥಾ ಮನೆಗಳನ್ನು ಡಿಸ್‌ಇನ್‌ಫೆಕ್ಟ್ ಮಾಡಿಸಿ ವಾಸಸ್ಥರನ್ನು ಎತ್ತಿಸಿ ರೋಗ ಹರಡದಂತೆ ಮಾಡಿದರೆ ಕ್ಷೇಮ ಮ್ಯುನಿಸಿಪಾಲಿಟಿಯವರು ಮುಖ್ಯವಾದ ಸ್ಥಳಗಳನ್ನು ಮಾತ್ರ ಸಾಫ್‌ಮಾಡಿ ಸಣ್ಣ ಗಲ್ಲಿಗಳ ವಿಷಯ ಅಷ್ಟಾಗಿ ಲಕ್ಷಿಸುವ ಹಾಗೆ ತೋರುವುದಿಲ್ಲ ಗ್ರಾಮವನ್ನೆಲ್ಲಾ ಚೊಕ್ಕಟವಾಗಿಟ್ಟು, ಬಳಕೆ ಕೆಡದಂತೆ ನೋಡಿಕೊಳ್ಳುವ ಭಾಗದಲ್ಲಿ ಮನೆಯವರಿಗೆ ಕಟ್ಟುಮಾಡಬೇಕು ರಾತ್ರಿ ಹೊತ್ತು ಹಚ್ಚುವ ದೀಪಗಳಂತೂ ಉರಿಯುತ್ತಿದ್ದರೂ ದಾರಿ ಕಾಣಿಸುವದಿಲ್ಲ ಮ್ಯುನಿಸಿಪಾಲಿಟಿಯಲ್ಲಿ ಬಹಳ ಹಣವಿದ್ದಂತೆ ಯಾತಕ್ಕೋಸ್ಕರ ಇಟ್ಟುಕೊಂಡಿದ್ದಾರೋ ತಿಳಿಯದು ವ್ಯಾಪಾರ ನಡೆಯುವ ರಸ್ತೆಗಳಲ್ಲಂತೂ ಜನಸಂಚಾರಕ್ಕೆ ಅವಕಾಶವಿಲ್ಲದಂತೆ ಗಾಡಿಗಳನ್ನು ಬಿಟ್ಟುಕೊಂಡು ತೊಂದರೆಪಡಿಸುತ್ತಿರುವವರನ್ನು ಕೇಳುವವರೇ ದಿಕ್ಕಿಲ್ಲ ಮತ್ತು ಕೆಲವು ಬಂಡಿಯವರು ದಾರಿಯಲ್ಲಿ ತಿರುಗಾಡುವ ಮಕ್ಕಳು ಮುದುಕರ ಮೇಲೆ ಲಕ್ಷ್ಯವಿಲ್ಲದೆ ಓಡಿಸಿಕೊಂಡು ಹೋಗುತ್ತಾರೆ ಇವನ್ನೂ ನೋಡುವವರಿಲ್ಲ —ಈ ಗ್ರಾಮದಲ್ಲಿ ಜೂಜಾಟದ ಪುಂಡು ಬಹು ಕಾಲದಿಂದಲೂ ಹೆಚ್ಚುತ್ತಾ ಬಂದಿದ್ದರೂ ಇದುವರಿಗೆ ಅದನ್ನು ಅಡಗಿಸುವ ಯಾವ ಪ್ರಯತ್ನವನ್ನೂ ಮಾಡಿರಲಿಲ್ಲ ಈಗ ಬಂದಿರುವ ಅಮಲ್ದಾರ್ ಮೈ॥ ಕೆ ವೇದಾಂತೆ ಯಂಗಾರ್ರು ಇದರ ವಿಷಯ ಗಮನಕೊಟ್ಟು ಕೆಲವು ಪುಂಡರನ್ನು ಹಿಡಿದು ಶಿಕ್ಷೆ ಕೊಟ್ಟಿರುವುದನ್ನು ನೋಡಿ ಎಲ್ಲರೂ ಸಂತೋಷಪಡುತ್ತಿದ್ದಾರೆ ಆಲೂರು ಗುರುಬಸಪ್ಪನು ಇಸ್ಪೀಟ್ ಆಟದವರಿಗೆ ತನ್ನ ಮನೆಯಲ್ಲಿ ಜಾಗಾಕೊಟ್ಟು ಆಡಿಸದ್ದರಿಂದ ಅವನಿಗೆ 15 ರೂಪಾಯಿ ಜುಲ್ಮಾನೆಯೂ ಬಾಕಿ ಬೀತೂರು ಗುರುಶಾಂತಪ್ಪ, ಅಂಚನೂರು ನಂಜುಂಡಪ್ಪ, ಕಂಬಿನೋಲು ಬಸಪ್ಪ, ಅಕ್ಕಸಾಲಿ ಚನ್ನವೀರಪ್ಪ, ಬೆಳಗನೂರು ನಿಂಗಣ್ಣ, ಹರಡಿಭೀಮ ಎಂಬೀ ದಾವಣಗೆರೆ ವಾಸಿಗಳಿಗೆ ತಲಾ 10 ರೂ ಜುಲ್ಮಾನೆಯೂ, ಇವರಲ್ಲದೆ ಪರಗ್ರಾಮದವರು 5 ಮಂದಿಗೆ ತಲಾ 10 ರೂ ಜುಲ್ಮಾನೆಯೂ ಆಯಿತು —ವಾವಲ್‌ಫೆಂಟಿ ಮೋಹಿನಿರಾಜ ಮಸೀದಿಯಲ್ಲಿ ಈ ವರ್ಷ ಅಪ್ಪ ಫೆಲಾ ಮಾಡಿತನ್ನು ಮೋಜಿನಲ್ಲಿ ಮರಳು ಸೇರಿಸಿ ಎಳ್ಳುಗಳನ್ನೂ ಅನೇಕ ತರಹಾ ನಕಾಸೆ ಕೆಲಸಗಳನ್ನೂ ನಗದಿ ಹಗಡಿನಲ್ಲಿ ಕುಂದಣ ಕೆಲಸವನ್ನೂ ತುಂಬಾ ಆಶ್ಚರ್ಯಕರವಾಗಿಯೂ, ನವೀನವಾಗಿಯೂ ತಯಾರಿಸಿ, ನೋಟಕರ ಮನಸ್ಸಿಗೆ ಸಂತೋಷವನ್ನೂ, ಭಕ್ತಿಯನ್ನೂ ಹುಟ್ಟಿಸುವ ರೀತಿಯಲ್ಲಿ ರಚಿಸುತ್ತಾ ಇದ್ದಾರೆ.

ಶ್ರೀರಂಗಪಟ್ಟಣದ ಕಾರೊನೇಷನ್ ಕಟ್ಟಡದ ಫಂಡು

ಮೊದಲನೆಯ ಚಂದಾ ಪಟ್ಟಿ

ಚೌಬೀನೆ ಸಿದ್ದಪ್ಪನವರು ರೂ 200-0-0
ಹಂಗರಹಳ್ಳಿ ಪಟೇಲ್ ಕಾಮೇಗೌಡರು, ಶಾನುಭೋಗ್ ಚಿಕ್ಕದಾಸಪ್ಪನವರು, ಕೊಡಿಯಾಲದ ಸಾಹುಕಾರ್ ಸಿದ್ದೇಗೌಡರು, ಹಂಗರಹಳ್ಳಿ ಕಾಮೇಗೌಡರು ತಲಾ, ರೂ 100 ,, 400-0-0
ಸಾಹುಕಾರ್ ನಿದಗಟ್ಟದ ಅಣ್ಣೇಗೌಡರು, ಗಂಜಾಂ ಬಾಳೆಯನವರು, ಹಂಗರಹಳ್ಳಿ ಕಾಮೇಗೌಡ್ರ ಪುಟ್ಟೇಗೌಡರು, ಪಾಳ್ಯದ ಪಿಳ್ಳಾರಿಗೌಡ್ರ ಜವರೇಗೌಡರು, ಪ್ಲೀಡರ್ ಬಿ ನರಸಿಂಗರಾಯರು ತಲಾ ರೂ 50 ,, 250-0-0
ಪಾಳ್ಯದ ಜೋಡಿದಾರ್ ಈರೇಗೌಡರು ,, 10-0-0
ಮೈಸೂರು ಸಾಹುಕಾರ್ ತಿಮ್ಮಯ್ಯನವರು, ಅರಕೆರೆ ಶ್ಯಾನುಭೋಗ [illegible] ಯನವರು, ಕೆಂಚಪ್ಪ ಪುಟ ಸಂಜಪ್ಪನವರು, [illegible] ರಂಗಸ್ವಾಮಿ ಅಯ್ಯಂಗಾರ್ರು, ತಲಾ, ರೂ 25 ,, 100-0-0
ಕುಣಿಗಲ್ ಕೃಷ್ಣಾಚಾರ್ಯರು, ಕುಂಟನಾರಣಪ್ಪನವರ ಸುಬ್ಬಯ್ಯನವರು ತಲಾ, ರೂ 15 ,, 30-0-0
ಕರಿತಿಮ್ಮೇಗೌಡರ ಈರೈಯನವರು, ಕಾಮೇಗೌಡರ ವೆಂಕಟೇಗೌಡರು, ಮುಂದಕಟ್ಟೆ ರಂಗಶೆಟ್ಟರು, ಮೈಸೂರು ಕೆಂ ಅ. ಚನ್ನಪ್ಪನವರು, ತಿನಲಿಂಗೇಗೌಡರು, ಮಾರಟಹಳ್ಳಿ ಪಟೇಲ್ ಪರುವತೈಯನವರು, ಮಹಮದ್ ಮುಸೂರು ಸಾಬರು, ನಾಯಸಿಂಗನಹಳ್ಳಿ ವೇದಾಂತೈಯಂಗಾರ್ರು, ಗಂಜಾಂ ಪೀರ್ಯೆಯನವರ ನರಸಿಂಗೈಯನವರು ತಲಾ, ರೂ 10 ,, 90-0-0
ವಂಡರ್ ಕೃಷ್ಣಪ್ಪನವರು, ಪ್ಲೀಡರ್ ನರಸಿಂಹೈಯಂಗಾರ್ರು, ರಂಗಶೆಟ್ಟರು, ತಮ್ಮಯ್ಯನವರು ತಲಾ, ರೂ 5 ,, 20-0-0

ಜುಮ್ಲಾ ರೂಪಾಯಿ 1,120-0-0

ಶ್ರೀರಂಗಪಟ್ಟಣ ಜಿ. ದೇವಾಜಿರಾವ್,
3-12-1912 ಆನರರಿ ಸೆಕ್ರೆಟರಿ

ತುಮಕೂರು ಕಾರೊನೇಷನ್ ಹಾಲ್ ಫಂಡು

ಮೊದಲನೆಯ ಚಂದಾ ಪಟ್ಟಿ.

ತುಮಕೂರು ಟೌನ್‌ನಲ್ಲಿ ಈ ದಿವಸ ಪ್ರಜೆಗಳು ಶ್ರೀಮನ್ ಚಕ್ರವರ್ತಿ ಪ್ರಭುಗಳವರ ಡೆಲ್ಲಿಯಲ್ಲಿ ನಡೆದ ಕಾರೊನೇಷನ್ ಮಹೋತ್ಸವದ ಜ್ಞಾಪಕಾರ್ಥವಾಗಿ ಕಟ್ಟಬೇಕೆಂದು ಉದ್ದೇಶಿಸಿರುವ ಕಾರೊನೇಷನ್ ಹಾಲಿಗೆ ಪ್ರಜೆಗಳಿಂದ ವಸೂಲಾಗಿರುವ ಚಂದಾ ಹಣದ ತಪಸೀಲು ಪಟ್ಟಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂತ ಉದ್ದೇಶಿಸಿ ಈ ಪಟ್ಟಿಯನ್ನು ಕಳುಹಿಸಿರುತ್ತೆ. ಮುಂದೆ ವಸೂಲಾದ ಹಾಗೆಲ್ಲಾ ಅದನ್ನೂ ಸಹ ಪ್ರಕಟನೆ ಬಗ್ಗೆ ಕಳುಹಿಸುತ್ತೇವೆ. ತಾವು ದಯವಿಟ್ಟು ಪ್ರಕಟಿಸಬೇಕೆಂತ ಕೋರುತ್ತೇವೆ.

ತುಮಕೂರು ಕೆಂಪಮ್ಮ [illegible] ಪ್ಪನವರು ಮತ್ತು [illegible] ಚನ್ನಬಸವಯ್ಯನವರು ಸಹಾ, ತಿಪಟೂರು ತಿಪ್ಪೇಸಂಜಪ್ಪನವರು, [illegible] ಕೊಟ್ಟೂರಪ್ಪನವರು, [illegible] ಚನ್ನಬಸಪ್ಪನವರು, ಪಲ್ಲಗಟ್ಟದ ಚನ್ನವೀರಪ್ಪನವರು, [illegible] ರಾಮಯ್ಯಶೆಟ್ಟರು ತಲಾ ರೂ 100 ರೂ 600-0-0
ತಿಪಟೂರು ವಸ್ತ್ರಗಿರಿನಾಯಕರು ,, 75-0-0
ತುಮಕೂರು ಮಂಡಿ ಅಪ್ಪಣ್ಣಶೆಟ್ಟರು, ತಿಪಟೂರು ಪುಟ [illegible] ಶೆಟ್ಟರು, ಮುಸ್ಕೂರು [illegible] ಯನವರು, [illegible] ಪ್ಪನವರ [illegible] ಪ್ಪನವರು, ಗುಂಡೂರು [illegible] ನವರು, ಕಾರಿಸಿ [illegible] ಯನವರು, ಬಗಲುಚುಕ್ಕೆ ಮುನಿಯಪ್ಪನವರು ತಲಾ ರೂ 50 ,, 300-0-0
ತುಮಕೂರು [illegible] ಗುಬ್ಬಿ [illegible] ಯನವರು, ಕೋಡಿ [illegible] ರಾಮಶೆಟ್ಟರು ತಲಾ ರೂ 40 ,, 80-0-0
ತುಮಕೂರು [illegible] ಸುಬ್ಬೈಯನವರು, ತಿಪಟೂರು ಮರಳ ಶೆಟ್ಟರು ತಲಾ ರೂ 35 ,, 70-0-0
ತುಮಕೂರು [illegible] ಲಿಂಗಪ್ಪನವರು, ಟಿ ಎನ್ ರುದ್ರಪ್ಪನವರು, ಜವಳಿ ಅಂಗಡಿ [illegible] ನವರು, ಎ ವೆಂಕಟನರಸೈಯನವರು, ತುರುವೆಕೆರೆ ನಾರಣಪ್ಪನವರು, ತಿಪಟೂರು [illegible] ಸಾಹೇಬರು, ಉಮ್ಮರ್ ಅಂಡ್ ಸನ್ಸ್, [illegible] ತಿಮ್ಮಪ್ಪನವರು, [illegible] ರಾಮೈಯನವರು ತಲಾ ರೂ 25 ,, 225-0-0
ತುಮಕೂರು ಅರುಣಗಿರಿಶೆಟ್ಟರು, ಹಾಜಿ ಮಹಮ್ಮದ್ ಇಸಾಕ್ ಸೇಟರವರು, [illegible] ಯನವರು, ಎಂ ಆರ್ ಎ [illegible] ಮತ್ತು [illegible] ಜವಳಿ ಅಂಗಡಿ [illegible] ಸಾಹೇಬರು, ಮಂಡಿ [illegible] ಸೇಟರವರು [illegible] ಯನವರು [illegible] ಶೆಟ್ಟರು [illegible] ನವರು, ಮಂಡಿ ರಾಮರಾಜನವರು ಮತ್ತು ಸುಬ್ಬ [illegible] ನವರು, ಗಂಗನಘಟ್ಟದ ದೊಡ್ಡ ಮುಗಿಯಪ್ಪಗೌಡರು ತಲಾ ರೂ 20 ,, 220-0-0
ತುಮಕೂರು ಬಸಾಪುರದ ಸಿದ್ದಪ್ಪನವರು, ಕೆಂಚ [illegible] ಗಂಗಪ್ಪನವರು, ಕರೆಮಣ್ಣೆ ಸಿದ್ದಲಿಂಗಪ್ಪನವರು [illegible] ವೀರಭದ್ರಪ್ಪನವರು ತಲಾ ರೂ 15 ,, 60-0-0
ತುಮಕೂರು [illegible] ಆದಿಮೂರ್ತಪ್ಪನವರು ,, 12-0-0
ತುಮಕೂರು ಸಿ ಡಿ ರಾಮಸ್ವಾಮಯ್ಯನವರು [illegible] ನವರು, [illegible] ಯನವರು, ತಿಪಟೂರು ಮಹಮ್ಮದ್ [illegible] ಸಾಹೇಬರು, [illegible] ಶೆಟ್ಟರು ತಲಾ ರೂ 10 ,, 50-0-0
ತುಮಕೂರು ಗುರುಸಿದ್ದಪ್ಪನವರ ನಂಜುಂಡಪ್ಪನವರು ,, 5-0-0

ಜುಮ್ಲಾ ರೂಪಾಯಿ 1,717-0-0

ತುಮಕೂರು, [illegible] ಡಿ ರಾಮಸ್ವಾಮಯ್ಯ,
6-12-1912 ಆನರರಿ ಜಾಯಿಂಟ್ ಸೆಕ್ರೆಟರಿ.

ಹಿಂದೂ ವಿಧವಾ ವಿವಾಹವು.

ಹಿಂದೂ ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಲು ಅವಕಾಶವಿಲ್ಲದಿರೋಣದರಿಂದ ಹಿಂದೂ ಸಮಾಜದಲ್ಲಿ ಹಲವು ಅನೀತಿ ಕಾರ್ಯಗಳು, ಘೋರ ಕೃತ್ಯಗಳೂ ನಡೆಯುತ್ತಿರುವವು. ಈ ದುರವಸ್ಥೆಯನ್ನೂ ಅನರ್ಥಗಳನ್ನೂ ತೊಲಗಿಸಬೇಕೆಂದು ಅನೇಕ ವಿದ್ಯಾವಂತರಾದ ಹಿಂದುಗಳು ಸಾಹಸಪಡುತ್ತಿದ್ದಾರೆ. ಹಿಂದುಸ್ಥಾನದಲ್ಲಿ ಜಾರಿಗೆ ತಂದಿರುವಂಥಾ ಕಾನೂನನ್ನು ಮೈಸೂರು ಸಂಸ್ಥಾನದಲ್ಲೂ ಜಾರಿಗೆ ತಂದರೆ ಆ ನಿರ್ಭಾಗ್ಯ ಹೆಂಗಸರಿಗೆ ನಿವಾರಣೆಯಾದೀತೆಂದು ವಿದ್ಯಾವಂತರು ಅಭಿಪ್ರಾಯಪಡುವರು. ಅಂಥವರಲ್ಲಿ ಒಬ್ಬರಾದ ಬೆಂಗಳೂರು ಅಡ್ವೊಕೇಟ್ ಮಿ| ಎಸ್. ವೆಂಕಟಾಚಲೈಯಂಗಾರ್, ಬಿ ಎ, ಬಿ ಎಲ್ ಯವರು ಒಂದು ವಿಜ್ಞಾಪನಾ ಪತ್ರಿಕೆಯನ್ನು ರಚಿಸಿ ಅದಕ್ಕೆ ಸಂಸ್ಥಾನದ ಪ್ರಜೆಗಳ ಸಮ್ಮತಿ ರುಜುವನ್ನು ಹಾಕಿ, ಮಹಾರಾಜರವರಿಗೆ ಒಪ್ಪಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ. ಇಂಥಾ ಕಾನೂನು ಈಗ ಜಾರಿಗೆ ಬರಬೇಕಾದದ್ದು ದೇಶೋನ್ನತಿಗೂ ಸತ್ಶೀಲಸ್ವಭಾವಗಳ ಬೆಳವಣಿಗೆಗೂ ಸಹಕಾರಿಯಾಗಿರೋಣದರಿಂದ ನಮ್ಮ ದೇಶದ ಪ್ರಜೆಗಳು ಈ ಪ್ರಯತ್ನವನ್ನು ಸಫಲಗೊಳಿಸುವರೆಂದು ನಿರೀಕ್ಷಿಸುತ್ತೇವೆ. ಆ ಕಾನೂನಿನ ನಕಲನ್ನು ಎರಡು ವಾರಗಳ ಕೆಳಗೆ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ವಾಚಕರು ನೋಡಿಕೊಂಡಿರಬಹುದು. ಈಗ ಆ ವಿಜ್ಞಾಪನಾ ಪತ್ರಿಕೆಯ ಮುಖ್ಯ ಭಾಗಗಳನ್ನು ಇಲ್ಲಿ ಉದಾಹರಿಸುತ್ತೇವೆ.

ಮಹಾಸ್ವಾಮಿ, ಹಿಂದೂ ಜನರಲ್ಲಿ ವಿಧವಾವಿವಾಹನಿಷೇಧವು ಬಹುಕಾಲದಿಂದ ಆಚರಣೆಯಲ್ಲಿ ಬಂದಿದೆ. ಈ ಆಚರಣೆಯು ಅನೇಕ ಹಿಂದೂ ದೊಡ್ಡ ಮನುಷ್ಯರ ದೃಢವಾದ ಅಭಿಪ್ರಾಯದಲ್ಲಿಯೂ, ಪ್ರತ್ಯಕ್ಷಾನುಭವದಲ್ಲಿಯೂ ಬಹಳ ಕಠಿಣವಾಗಿಯೂ, ಬಹಳ ಕ್ರೂರಸ್ವಭಾವದಿಂದ ಕೂಡಿದ್ದಾಗಿಯೂ ಇರುವುದಲ್ಲದೆ ಒಳ್ಳೆ ಶೀಲಸ್ವಭಾವಗಳ ಪ್ರಚಾರಕ್ಕೆ ಬಹಳ ಕುಂದಕವಾಗಿಯೂ, ಹೇಳಲು ಬರೆಯಲು ಅಸಾಧ್ಯವಾದ ದುರ್ನಡತೆಗಳಿಗೆ ಕಾರಣಭೂತವಾಗಿಯೂ ಇರುವುದು ಪ್ರತ್ಯಕ್ಷವಾಗಿಯೇ ಇದೆ. ಹಿಂದೂಗಳಲ್ಲಿ ಬಾಲ್ಯವಿವಾಹವೂ ಸಹ ಆಚರಣೆಯಲ್ಲಿರುವುದರಿಂದ ಸಾಮಾನ್ಯವಾಗಿ ಹುಡುಗಿಯರು ನಡೆನುಡಿಯನ್ನು ಕಲಿಯುವುದಕ್ಕೆ ಮುಂಚೆಯೇ ವೈಧವ್ಯವನ್ನು ಹೊಂದುವವರಾಗಿದ್ದಾರೆ. ಇದು ಎಷ್ಟು ಶೋಚನೀಯವಾದುದೋ ಸನ್ನಿಧಾನಕ್ಕೆ ವೇದ್ಯವೇ ಆಗಿರುತ್ತದೆ.—ಈ ಅರ್ಜಿದಾರರ ಮತ್ತು ಅನೇಕರ ಅಭಿಪ್ರಾಯದಲ್ಲಿಯೂ, ದೃಢವಾದ ನಂಬಿಕೆಯಲ್ಲಿಯೂ ಈ ಆಚರಣೆಯು ಪುರಾತನ ಹಿಂದೂ ಸದ್ಧರ್ಮಗಳಿಗೂ ಧರ್ಮಶಾಸ್ತ್ರಗಳ ಸರಿಯಾದ ವಾಕ್ಯಾರ್ಥಕ್ಕೂ ಸಮಂಜಸವಾದದ್ದಾಗಿಲ್ಲ. ಅನೇಕ ಹಿಂದೂಗಳು ವಿಧವಾವಿವಾಹವನ್ನು ತಿಳುವಳಿಕೆಯಿಂದ [illegible]. ಆದರೆ ಬಹುಕಾಲದ ಆಚಾರದಿಂದಲೋ, ಅಥವಾ ಧರ್ಮಶಾಸ್ತ್ರಗಳಲ್ಲಿ [illegible] ಜ್ಞಾನವಿಲ್ಲದೆ ಅಪಾರ್ಥಮಾಡಿಕೊಂಡು ವಿಧವಾವಿವಾಹ ಕೂಡದೆಂದು ಹೇಳುವವರ ಮಾತನ್ನು ನಂಬಿಯೋ ಈ ದುಃಖವನ್ನನುಭವಿಸುತ್ತಿರುವರು. ಈಗ ಶಾಸ್ತ್ರಾರ್ಥಗಳು ವ್ಯಕ್ತವಾಗುತ್ತಿರುವುದರಿಂದ ಅಂಥವರ ಮಾತನ್ನು ಸಹ [illegible] ಅನೇಕ ಹಿಂದೂಗಳು ಸಿದ್ಧರಾಗಿರುತ್ತಾರೆ—ಬ್ರಿಟಿಷ್ ಇಂಡಿಯಾ ಸಂಸ್ಥಾನದ ಕೋರ್ಟುಗಳಲ್ಲಿಯೂ [illegible] ಪ್ರಕಾರ [illegible] ಸಂಸ್ಥಾನಗಳಲ್ಲಿ ವಿವಾಹವು ಸಿದ್ಧವೆಂದಲೂ, [illegible] ಜನಿಸಿದ ಸಂತಾನವು [illegible] ಆದ್ದರಿಂದ ಅನ್ಯಗೆ ಅನರ್ಹವಾದ [illegible] ಹಿಂದೂ ವಿಧವಾವಿವಾಹವು [illegible] ಕಾನೂನು (ಇಂಡಿಯಾ ಗವರ್ನ್‌ಮೆಂಟ್ 1856 ನೇ ಇಸವಿ 15 ನೇ ನಂಬರ ಆಕ್ಟ್ ಪ್ರಕಾರ 25-7-1856 ರಲ್ಲಿ) ಜಾರಿಗೆ [illegible] ವಿವಾಹ ವಿಷಯದಲ್ಲಿ [illegible] ಮಾತುಗಳನ್ನೂ, [illegible] ಆಚರಣೆಗಳನ್ನೂ [illegible] ಮೈಸೂರು ದೇಶದಲ್ಲಿ ವಿವಾಹಮಾಡಲು ಸಿದ್ಧನಾಗಿರುವವರಿಗೆ [illegible] ಜಾರಿಯಲ್ಲಿ ಇಲ್ಲದೇ ಇರುವುದು ಪ್ರತಿಬಂಧಕವಾಗಿರುತ್ತದೆ — ಹಿಂದೂ ವಿಧವಾವಿವಾಹಕ್ಕೆ ಪ್ರಾಪ್ತವಾಗಿರುವ ಪ್ರತಿಬಂಧಕಗಳನ್ನು ತಪ್ಪಿಸುವುದು [illegible] ಮಹೋಪಕಾರವೆಂದು ಹಿಂದೂ ಜನರು ಅಭಿಪ್ರಾಯಪಡುತ್ತಾರೆ. [illegible] ಬಂಧಕವನ್ನು ತಪ್ಪಿಸುವುದು ಆಚಾರ-ಸಂಪ್ರದಾಯ ಬಿಡುವವರಿಗೆ [illegible] ಅಸಮಾಧಾನವಾಗಿದ್ದರೂ ಇವರಿಗೆ ಇದರಿಂದ ಯಾವ ಕಷ್ಟನಷ್ಟಗಳೂ [illegible] ಆಗುವುದಿಲ್ಲವೆಂಬುದು ಸ್ಪಷ್ಟವಾಗಿದೆ — [illegible] ಮತ್ತು [illegible] ದೇಶದ ಜನಾಂಗಗಳಲ್ಲಿಯೂ, ಈ ದೇಶದ ಇತರ ಜನಾಂಗಗಳಲ್ಲಿಯೂ [illegible] ಹಿಂದೂ ಜನರಲ್ಲಿಯೂ ನಡೆಯದೆ ಇರುವುದೂ ಇಲ್ಲ — ಹಿಂದೂ ಬಾಲವಿಧವೆಯರ ಸಂಖ್ಯೆಯು ಬಹಳ ಜಾಸ್ತಿಯಾಗಿರುವುದು 1911 ನೇ ಇಸವಿಯ ಸೆನ್ಸಸ್ ಲೆಕ್ಕದಿಂದ ವ್ಯಕ್ತವಾಗುತ್ತೆ. ಈ ಆಕ್ಟ್ ಇಲ್ಲಿ ಜಾರಿಯಲ್ಲಿ ಇಲ್ಲದಿರುವುದರಿಂದ ವಿಧವೆಗಳು ಮದುವೆಮಾಡಿಕೊಳ್ಳಬೇಕೆಂದರೆ [illegible] ಬೇಕಾದವರು ವಿವಾಹಮಾಡಿಕೊಂಡರೆ ಆ [illegible] ಪ್ರಕಾರ [illegible]. ಆದುದರಿಂದ [illegible] ಇಂಡಿಯಾ ಗವರ್ನ್‌ಮೆಂಟಿನ 1856 ನೇ ಇಸವಿ 15 ನೇ ನಂಬರ ಆಕ್ಟನ್ನು ಮೈಸೂರು ಸಂಸ್ಥಾನದಲ್ಲಿಯೂ ಜಾರಿಗೆ ತರುವುದರ ಮೂಲಕ ಹಿಂದೂ ವಿಧವಾವಿವಾಹವು ಸಿದ್ಧವೆಂದೂ, ಆ [illegible] ಯರಲ್ಲಿ ಹುಟ್ಟುವವರು ಪಿತ್ರಾರ್ಜಿತಕ್ಕೂ ಹಕ್ಕುದಾರರಾಗುವಂತೆ ದೃಢಪಡಿಸಿಕೊಡುವಂತೆ [illegible] ದಯಪಾಲಿಸಬೇಕೆಂದು ಬಹಳ ವಿನಯದಿಂದ ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಒಂದು ಪಂಚಮರ ಕೋಆಪರೇಟಿವ್ ಸೊಸೈಟಿ

ಮ. ದ. ತಾಲ್ಲೂಕು ಕೊಮೇನಹಳ್ಳಿ ಗ್ರಾಮದಲ್ಲಿ 70 ಮನೆಗಳ ಪಂಚಮರಿರುತ್ತಾರೆ. ಇವರು ನೇಯ್ಗೆ ಕಸಬನ್ನೂ, ವ್ಯವಸಾಯ ಕಸಬನ್ನೂ ಮಾಡುತ್ತಾರೆ. ಇವರಿಗಾಗಿ ಈ ಗ್ರಾಮದಲ್ಲಿ ಒಂದು ಗೌರ್ನಮೆಂಟ್ ಸ್ಕೂಲು ಸ್ಥಾಪಿತವಾಗಿರುತ್ತದೆ. [illegible] ಪಂಚಮರುಗಳು [illegible] ಕಸಬಿನಲ್ಲಿಯೂ ಕೇವಲ ಹಿಂದುಳಿದವರಾಗಿರುತ್ತಾರೆ. ಸರಿ [illegible] ಕೊಂಚವನ್ನು ಗಾಣಿಗರು [illegible] ಸಲು ಆಗುತ್ತದೆ [illegible] ನಿರೀಕ್ಷಿಸುತ್ತಿದ್ದ [illegible] ದಯಾಳುಗಳಾದ ಸರ್ಕಾರದವರು ನೇಯ್ಗೆ ಕಸಬಿನಲ್ಲಿಯೂ ವ್ಯವಸಾಯ ಕಸಬಿನಲ್ಲಿಯೂ ಪರಿಶ್ರಮವುಳ್ಳ ಇಲ್ಲಿನ ಸ್ಕೂಲ್ ಮಾಸ್ಟರು ಮಿ| ಪುಟ್ಟಸ್ವಾಮಿಯನ್ನು ಈ ವರ್ಷದ ಮೇ ತಿಂಗಳಲ್ಲಿ ಇಲ್ಲಿಗೆ ವರ್ಗಾಯಿಸಿದರು. ಸರಿಯಿಲ್ಲದ [illegible] ಇಲ್ಲಿನ ಜನಗಳೆಲ್ಲರೂ ಬಹು ಸಂತೋಷದಲ್ಲಿ ಮುಳುಗಿದರು. ಐವತ್ತು ಸರಿ ಮಾಸ್ತರು ಪೂರ್ವದಲ್ಲಿ ಈ ಏನ [illegible] ಹಳ್ಳಿ ಮಠವನ್ನು ಇಟ್ಟು ಅದನ್ನು ಗ್ರಾಂಟ್ ಸ್ಕೂಲಾಗಿ ಮಾಡಿ ಅಭಿವೃದ್ಧಿ ಪಡಿಸಿ, ಈ ಗ್ರಾಮಕ್ಕೆ ಗೌರ್ನಮೆಂಟ್ ಪಾಠಶಾಲೆಯು ಬರಲು ಕಾರಣರಾಗಿ ಪ್ರಮುಖರಾದವರು. ಈ ಮಾಸ್ತರು ಬಂದು ಇಲ್ಲಿನ ಜನರಿಗೆಲ್ಲಾ ಪ್ರೋತ್ಸಾಹಿಸಿ ಕಸಬಿಗೆ ಅನುಕೂಲಿಸುವ ಒಂದು ಕೋಆಪರೇಟಿವ್ ಸೊಸೈಟಿಯನ್ನು ಏರ್ಪಡಿಸಿಕೊಳ್ಳುವಂತೆ ಕೋಆಪರೇಟಿವ್ ಸೊಸೈಟಿಗಳ ಇನ್ಸ್‌ಪೆಕ್ಟರಾದ ಮಿ| ಪುಟ್ಟಸ್ವಾಮಯ್ಯನವರಿಗೆ ಬರೆದು ಅವರನ್ನು ಬರಮಾಡಿಕೊಂಡರು. ಮಿ| ಪುಟ್ಟಸ್ವಾಮಯ್ಯನವರು ಇಲ್ಲಿನ ಪಂಚಮರಿಗೆ ಕೋಆಪರೇಟಿವ್ ಸೊಸೈಟಿಗಳನ್ನು ಏರ್ಪಡಿಸಿಕೊಳ್ಳುವುದರಲ್ಲಿ ಉಂಟಾಗುವ ಪ್ರಯೋಜನವನ್ನು ತಿಳಿಯಲು ಮುದ್ದುಮುಗುವಿನ [illegible] ಮಾತನಾಡುವಂತೆ ಸರಳ ಭಾಷೆಯಲ್ಲಿ ಅವರಿಗೆ ಅರ್ಥವಾಗುವ ರೀತಿ ಬೋಧಿಸಿದರು. ಆ ವೇಳೆ ಅಲ್ಲಿಗೆ ದಯಮಾಡಿಸಿದ್ದ ಒಬ್ಬರು ದೂರದ ದೊಡ್ಡ ಮನುಷ್ಯರು ಪಂಚಮರ ವಿಚಾರದಲ್ಲಿ ದಯಾಪೂರ್ಣವಾದ ಕೆಲವು ಮಾತುಗಳನ್ನು ಆಡಿದರು. ಅನಂತರ ನೆರೆದಿದ್ದ ಜನರು ಮುಂದೆ ಬರಬೇಕಿಸ್ಸುವರು [illegible] ಉತ್ತಮನು ಎಂಬುವನು [illegible] ಜನರ [illegible] ಅಸಲಿ ಉತ್ತಮ ಗುಣಗಳಲ್ಲಿ ಅವನೇ ಉತ್ತಮನು. ಜೋಬಿದಾರ್ ಕಬೀರ್‌ದಾಸ್ [illegible] ದಾಸ ಮುಂತಾದವರು ಯಾವ ಜಾತಿಯವರು? ಅವರು ಈಗಲೂ ಜನಗಳಿಂದ ಮರ್ಯಾದೆಯನ್ನು ಹೊಂದುತ್ತಿಲ್ಲವೇ? ಎಂಬ ಇದೇ ಅರ್ಥದಲ್ಲಿ ಪ್ರತಿಪಾದಿಸಿ ಅವರಲ್ಲಿದ್ದ ಆಚಾರವನ್ನು ಮೊದಲು ಬಿಡಬೇಕು. ಬಹುಕಾಲ ನೊಂದುಕೊಂಡು ಮೂಲಕ್ಕೆ [illegible] ಸೊಸೈಟಿಯನ್ನು ಏರ್ಪಡಿಸಿಕೊಂಡರು.

ಈ ಪಂಚಮರ ಸೊಸೈಟಿಯಲ್ಲಿ ಪ್ರಕೃತ 30 ಜನ ಮೆಂಬರುಗಳಾಗಿದ್ದಾರೆ. ಇವರೆಲ್ಲಾ ಇಬ್ಬರು ಶೇರುಗಳನ್ನು ತೆಗೆದುಕೊಂಡಿದ್ದಾರೆ. 10 ರೂಪಾಯಿನ 30 ಶೇರುಗಳು ಏರ್ಪಟ್ಟಿರುತ್ತವೆ. ಆಗಲೇ 100 ರೂ ವಸೂಲಾಗಿರುತ್ತೆ. ಇತರ ಕಡೆಗಳಿಂದಲೂ ಪಂಚಮ ಜನಗಳು ಬಂದು ಸೇರಿಕೊಳ್ಳುತ್ತಿದ್ದಾರೆ. ಈ ಸೊಸೈಟಿಯಲ್ಲಿ ಸಾಲವನ್ನು ತರಿಸಿ ಮೆಂಬರುಗಳಿಗೆ ಹಂಚುವುದು, ಮೆಂಬರುಗಳಿಂದ ಬಟ್ಟೆಯನ್ನು ಕೊಂಡು ಹೊರಗಿನ ಗಿರಾಕಿಗಳಿಗೆ ಕಳುಹಿಸುವುದು, ಇಷ್ಟೇ ಮಾಡುತ್ತಿರುವುದಲ್ಲದೆ ತಮ್ಮ ಸೊಸೈಟಿಯ ಮೆಂಬರುಗಳಿಗೂ ಮತ್ತು ಈ ತಾಲ್ಲೂಕಿನ ನೇಕಾರರಿಗೂ ಅನುಕೂಲಿಸುವಂತೆ ಒಂದು ನೇಯ್ಗೆ ಸ್ಕೂಲನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಸರ್ಕಾರದವರನ್ನು ಮುಖ್ಯವಾಗಿ [illegible] (ಬಿಲ್ಡಿಂಗ್ ಕಟ್ಟಿಸುವ ಸಲುವಾಗಿ) ಕೊಡಬೇಕೆಂದು ಪ್ರಾರ್ಥಿಸುತ್ತಾರೆ. ಸೊಸೈಟಿಯ ಮೆಂಬರುಗಳೆಲ್ಲರೂ ಬಿಲ್ಡಿಂಗ್ ಕಟ್ಟಿಸಲು ಅನುಕೂಲವಾದ ಒಂದು ನಿವೇಶನವನ್ನು ಮಾತ್ರ ಸರ್ಕಾರದವರ ಸಹಾಯವನ್ನು ಕೋರುತ್ತಾರೆ. ಈ ವೇಳೆ ನಮ್ಮ ಧನ ಸರ್ಕಾರದವರು ಈ ಜನಗಳ ಮುಂತೆ ಕಷ್ಟ ಕಾಲಕ್ಕೆ ಬೇಕಾದ ಸಹಾಯವನ್ನು ಕೊಡುತ್ತಾರೆಂದು ನಂಬಿರುತ್ತೇವೆ.

ಇದೇ ಡಿಸೆಂಬರ್ ತಾ 1 ನೇ ಮಂಗಳವಾರ ಕೋಆಪರೇಟಿವ್ ಸೊಸೈಟಿಗಳ [illegible] ಗಳವರು ದಯಮಾಡಿಸಿದ್ದರು. ಆ ವೇಳೆ ಇನ್ಸ್‌ಪೆಕ್ಟರ್ ಮಿ| ಪುಟ್ಟಸ್ವಾಮಯ್ಯನವರು ಹಾಜರಿದ್ದು ಜನಗಳಿಗೆ ವಿಶೇಷವಾಗಿ ಬೋಧಿಸಿದರು. ಸೊಸೈಟಿಯ ಸೆಕ್ರೆಟರಿಯವರಾದ ಮಿ| [illegible] ಪುಟ್ಟಸ್ವಾಮಿಯವರು ಸ್ವಾಗತವಾದ ಬೋಧನೆಯನ್ನು ಜನಗಳಿಗೆಲ್ಲಾ ತಿಳಿಸಿ ಸೊಸೈಟಿಯ ಅಭಿವೃದ್ಧಿಗೆ ಬಹಳ ಉತ್ಸಾಹಪಡುವುದಕ್ಕಾಗಿ ಮೆಂಬರುಗಳ ಪರವಾಗಿ ವಂದನೆ ಅರ್ಪಿಸಿದರು. ನಡೆಯುವ ಕಾರ್ಯಗಳನ್ನು ಅವಲೋಕಿಸಿದರು. [illegible] ರವರು ಸೊಸೈಟಿಯ ಆಗಸ್ಟ್ ತಾ 1 ರಿಂದ ಕಾರ್ಯಾರಂಭಿಸಿ ಬಂದು ನಾಲ್ಕು ಕೆಲವು ತಿಂಗಳು ಕಳೆಯುವುದರೊಳಗಾಗಿ ಇಷ್ಟು ಕೆಲಸಗಳನ್ನು ಮಾಡಿರುವುದು ಸಂತೋಷವೆಂದು ಒಪ್ಪಿಕೊಂಡರು. ಎಂದರೆ ಇನ್ನು ಕೆಲವು ದಿವಸಗಳಲ್ಲಿಯೇ ಮಿ| ಒಬ್ಬರು [illegible] ಇಲ್ಲಿಗೆ ದಯಮಾಡಿಸಿ ಫ್ಲೈ-ಷಟಲ್ (ಹಾರುವ ಲಾಳಿ) ಮಗ್ಗಗಳನ್ನು ಉಪಯೋಗಿಸುವ ಮಾರ್ಗಗಳನ್ನು ತೋರಿಸುತ್ತಾರೆಂದು ಆಶ್ವಾಸನೆ ಕೊಟ್ಟರು. ಇದು ಸೈಕಲ್ ಸರ್ಕಾರದ ಹಿಂದುಳಿದಿರುವ ಈ ಜನಗಳಿಗೆ ಧನ ಬಹುವಾಗಿ ಬುದ್ಧಿವಾದಗಳನ್ನು ಹೇಳಿ ಮಾಸ್ಟರ್ ಕೊಟ್ಟು ಮೆಂಬರುಗಳ [illegible] ಬೊಂಬೆಯು, ಮೊಸಳೆಯು, ನಾಗೇನಹಳ್ಳಿ ಜನರಾಯು, ನೇಕಾರ ಜನ ಎಲ್ಲಾ ಪುಟ್ಟಮಲ್ಲಪ್ಪನವರಿಗೆ ಅವರವರ ಕರ್ತವ್ಯಗಳನ್ನು ತಿಳಿಸಿದರು.

ಒಬ್ಬ ಪ್ರಜೆ

ಬೆಂಗಳೂರು ಹಿಂದೂ ಅನಾಥಾಲಯವು.

ಪ್ರವೇಶಪ್ರಾರಂಭೋತ್ಸವವು

ಕಳೆದ ತಾ 25 ನೇ ಸೋಮವಾರ ಈ ಸಂತೋಷಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಇದರ ನೂತನ ಕಟ್ಟಡವು ಸಿಂಗಾರಗಳಿಂದ ಅಲಂಕರಿಸಲ್ಪಟ್ಟು, ನೇತ್ರಾನಂದಕರವಾಗಿದ್ದಿತು. ಸ್ವಾಗತಕಾರರಾದ ಮ| ಬಂದವರೆಲ್ಲರನ್ನೂ ಆದರದಿಂದ ಸ್ವಾಗತಿಸಿದರು. ಉಪಾಸನಾ ಸಮಾಜದವರೂ, ಕಾರ್ಯದರ್ಶಿ [illegible] ಮೆಂಬರು ಮ| ರಾಮಭದ್ರ ಶ್ರೀನಿವಾಸೈಯಂಗಾರ್ರು, ಪಿತ್ರಾರ್ಜಿತಪ್ಪನವರು, ಸರ್ವಜ್ಞಪ್ಪನವರು, ಮಿ| [illegible] ಪ್ಪನವರೇ ಮೊದಲಾದ ಪುರಪ್ರಮುಖರೂ, ಆಲಯದ ಸ್ವಾಮಿಗೆ ಕಾರಣಭೂತರಾಗಿ ಬಂದ ಶಕ್ತಿ ವರ್ಗಾಯಿಸಲ್ಪಟ್ಟಿರುವ ಮ| [illegible] ಪ್ಪನವರು, ಮ| [illegible] ವಲ್ಲಭಾಚಾರ್ಯರು, ತಮ್ಮ ಸುಬ್ಬಣ್ಣನವರೂ, ಸ್ಕೂಲುಗಳ ಉಪಾಧ್ಯಾಯರುಗಳೂ ಬಂದಿದ್ದರು. ಎಲ್ಲರೂ ಸ್ಥಾಪಕರ ಮನೆಯಿಂದ ಅವರೊಂದಿಗೆ ವಾದ್ಯಘೋಷದಿಂದ ಪುರಪ್ರದಕ್ಷಿಣೆಯಾಗಿ ಬಂದು, ಶ್ರೀ ರಾಮಚಂದ್ರ ದೇವಾಲಯಕ್ಕೆ ಹೋಗಿ ದರ್ಶನವನ್ನು ಮಾಡಿ ಅಲ್ಲಿದ್ದ ಅನಾಥಬಾಲಕರನ್ನು ಕರೆದುಕೊಂಡು ಒಳ್ಳೆ ಗಳಿಗೆಯಲ್ಲಿ ಆಲಯವನ್ನು ಪ್ರವೇಶಮಾಡಿ ಪವಿತ್ರವಾಗಿ ನೂತನಗೃಹಪ್ರವೇಶವನ್ನು ನೆರವೇರಿಸಿದರು. ಅವರಿಗಾಗಿ ಬಂದಿದ್ದ ಪ್ರಾಂಗಣದಲ್ಲಿ ಇಲ್ಲಿಗೆ ದಯಮಾಡಿಸಿದ್ದ ಡೆಪ್ಯುಟಿ ಕಮಿಷನರ್ ಮ| ಸುಬ್ರಹ್ಮಣ್ಯ ಅಯ್ಯರವರೂ, ಡಿ| ಫಾರೆಸ್ಟ್ ಆಫೀಸರ್ ಮ| ಎ ರಾಮೈಯ್ಯ ಗಾರ್ರು, ಡಿ| [illegible] ಆಫೀಸರ್ ಮಿ| [illegible] ಮೊದಲಾದವರು ಬಂದು [illegible] 10 ಘಂಟೆಗೆ ಆಲಯದ ಪ್ರವೇಶ ದಯಮಾಡಿಸಿದರು. ಸಭಾಪತಿ ಉಪನ್ಯಾಸಕರಾದ ಮ| ತಕೆರೆ ವೆಂಕಟಕೃಷ್ಣಯ್ಯನವರು ಆಲಯದ ಪ್ರಥಮ ಸ್ಥಾಪನೆ, ಆದರ [illegible] ಗಳನ್ನು ಸಂಕ್ಷೇಪವಾಗಿ ವಿವರಿಸಿ, ಇದನ್ನು [illegible] ಮಾಡಬೇಕೆಂದು ಪ್ರಾರ್ಥಿಸಿಕೊಂಡ ಮೇಲೆ ಡೆಪ್ಯುಟಿ ಕಮಿಷನರವರು — ಈ ಊರಿನ ಬಾರಿ [illegible] ಒಬ್ಬರಾದ ಮ| [illegible] ವರು ದಾನಿಕರು. ಇಂಥ ಪರೋಪಕಾರಿಯನ್ನು ತಿಳಿದುಕೊಂಡು ಈ ಕಟ್ಟಡವನ್ನು ಬ್ರಾಹ್ಮಣ ಮತ್ತು ಇತರ ಜಾತಿಯ ಅನಾಥ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟು ಸ್ಮರಣೀಯರೂ, ಯಶಸ್ವಿಗಳೂ ಪಾತ್ರರಾಗಿರುತ್ತಾರೆ. ಈ ಊರಿನಲ್ಲಿ ಕೆರೆ, ಛತ್ರ, ದೇವಾಲಯಗಳನ್ನು ಕಟ್ಟಿಸಿ ನಡೆಯಿಸುವ ಧರ್ಮವು ಶಾಶ್ವತವಾಗಿ ನಡೆಯುತ್ತಿಲ್ಲವಾದ್ದರಿಂದ ವಿದ್ಯಾಭ್ಯಾಸ, ವೈದ್ಯ, ಔಷಧಗಳಿಗೆ ಸಹಾಯದ ಧರ್ಮವು ಶಾಶ್ವತವಾಗಿ ನಡೆಯುವಂತೆ ತೋರುತ್ತದೆ. ಆದ್ದರಿಂದ ಈ ಮಹನೀಯರು ಶ್ಲಾಘ್ಯವಾದ ಕೆಲಸವನ್ನು ಮಾಡಿರುತ್ತಾರೆ. ಹಿಂದೆ ಡೆಪ್ಯುಟಿ ಕಮಿಷನರಾಗಿದ್ದ ಮ| ಶ್ರೀನಿವಾಸೈಯಂಗಾರ್ರು ಇವರ ಗುಣವನ್ನು ಗ್ರಹಿಸಿ, ಇವರು ಸನ್ಮಾನಕ್ಕೆ ಅರ್ಹರೆಂದು ಬರೆಯಲಾಗಿ, ಇವರಿಗೆ ಕಾರೊನೇಷನ್ ಮೆಡಲು ಬಂದಿರುತ್ತೆ. ಇಲ್ಲಿ ಬಂದು ಸೇರುವ ಅನಾಥರೆಲ್ಲರೂ ಒಳ್ಳೆ ವಿದ್ಯಾವಂತರಾಗಿಯೂ, ಈ ಆಲಯಕ್ಕೂ, ಪ್ರತಿಷ್ಠಾಪಕರಿಗೂ ಗೌರವವನ್ನುಂಟುಮಾಡುವವರಾಗಿಯೂ ಆಗಬೇಕೆಂದು ಈಶ್ವರನನ್ನು ಪ್ರಾರ್ಥಿಸುವೆನು ಎಂದರು.

[illegible] ಪ್ರಾರ್ಥನೆ ಎಂಬುದಾಗಿ ಶ್ಲಾಘ್ಯವಾದ ಮತ್ತು ಗಂಭೀರವಾದ [illegible] ವನ್ನು ಒದಿ, [illegible] ಒಪ್ಪಿಸಲ್ಪಟ್ಟ ಬೀಗದ ಕೈಯಿಂದ [illegible] ವನ್ನು ತೆರೆದು ಆಲಯವನ್ನು ಪ್ರಾರಂಭಿಸಿದರು. [illegible] ಸ್ಥಾನಗಳಲ್ಲಿ ಕುಳಿತಿದ್ದವರು ಉಪಾಸನಾ ಸಮಾಜದ ಅಧ್ಯಕ್ಷರಾದ [illegible] ಕಮಿಷನರ್ ರವರ ಅನುಮತಿಯನ್ನು [illegible] ನಾಟಕ ಮಂದಿರದಿಂದ [illegible] ಸಮಾಜವೂ, ಸಮಾಜದಿಂದ ಈ ಆಲಯವೂ ಸ್ಥಾಪನೆಯಾದ ಮತ್ತು [illegible] ಮೊದಲಾದುವನ್ನು [illegible] ಪರಿಣಾಮವು [illegible]

ಆ ದಿನ [illegible] ನವರ ಛತ್ರದಲ್ಲಿಯೂ, ಇತರರಿಗೆ [illegible] ಪಂಕ್ತಿಯಿಂದ ಭೋಜನ, ದಕ್ಷಿಣೆ [illegible] ಮೊದಲಾದ ಆ ಕಾರಿಗಳ [illegible] ಸಂಗೀತ ಕಚೇರಿಯೂ [illegible] ಸುಶ್ರಾವ್ಯವಾದ [illegible] ವ್ಯಾಖ್ಯಾನವನ್ನು [illegible] ಅವರು [illegible] ಹೇಳಿದರು [illegible] ಉಪದೇಶವನ್ನು [illegible] ಉಪಾಸನಾ ಸಮಾಜದ [illegible] ಕಮಿಷನರ್ ರವರು ಮೊದಲಾದ ಅಧಿಕಾರಿಗಳಿಗೆ [illegible] ಸ್ವಾಮಿಗಳಿಗೆ ಗಂಧ, ಪುಷ್ಪ, ಫಲ, [illegible] ಕೊಡಲ್ಪಟ್ಟವು.

ನಮ್ಮ [illegible] ಕುಟುಂಬ [illegible] ಉಪದೇಶವನ್ನು [illegible] ಸುಸ್ಥಾಪನೆ [illegible] ಈ ಕಾರ್ಯಕ್ಕೆ [illegible] ಉಪಾಸನಾ ಸಮಾಜದ ಅಧ್ಯಕ್ಷರು [illegible] ಅವರ [illegible] ಸಮಯೋಚಿತವಾಗಿಯೂ [illegible] ಪ್ರಾರ್ಥಿಸುವ.

ಆನ ಭಕ್ತನು.

ವಾರ್ತಾದಾರರಿಗೆ ನೋಟೀಸ್

ಹೆಸರು ಬಿಳಾಸವಿಲ್ಲದ ಬರತಕ್ಕ ವಾರ್ತೆಗಳಿಗೆ ನಾವು ಜಾಗ ಕೊಡಲಾರೆವು. [illegible] ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು [illegible] ಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ವಾರ್ತೆಯನ್ನು ಕಾಗದದ ಎರಡು [illegible] ಗಳಲ್ಲೂ ಬರೆದುಕೊಡುವ [illegible] ಗಳಿಗೆ ನಾವು ಜಾಗ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋಮ [illegible] ಳೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧ [illegible] ಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ [illegible] ಕದನು [illegible] ವಾರ್ತೆಗಳು ಬಹಳ ಸಂಕ್ಷೇಪವಾಗಿರಬೇಕೆಂದು [illegible]

[illegible] ವಾಗಿ ಈ ಪತ್ರಿಕೆಯಲ್ಲಿ ಪ್ರಕಟವಾಗಬೇಕೆಂಬ ವಾರ್ತೆಗಳನ್ನು [illegible] ಈ ದಿನ [illegible] ವಿಳಾಸ ಬರೆದು ಕಳುಹಿಸುತ್ತಾರೆ. ಅಂಗ ಹೆಸರನ್ನು [illegible] - ವೃತ್ತಾಂತ [illegible] ಎಡಿಟರ್, ಮೈಸೂರು" ಎಂಬುದಾಗಿ ಮಾತ್ರ ವಿಳಾಸ ಬರೆಯಬೇಕು. [illegible] ವಾರ್ತೆಗಳು ಸಕಾಲದಲ್ಲಿ ಪ್ರಕಟವಾಗದೆ ಹೋಗುವವು. ವಾರ್ತಾದಾರ [illegible] ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಪ್ರಕಟಪಡಿಸುತ್ತೇವೆ.

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ. [illegible] ವನ್ನು ಸಕಲರೂ ತಿಳಿಯತಕ್ಕದ್ದು.

ಮದ್ದೂರು ತಾಲ್ಲೂಕು ಕಳೆದೆರಡು ವರ್ಷದಲ್ಲಿ ಪ್ರಜೆಗಳು ಸೇರಿ ತಾ [illegible] ರಲ್ಲಿ [illegible] ವಾರಿ ದೇವರ ಭಜನೆ ಸಂಗೀತಗಳನ್ನು ನಡೆಸಿದರೆಂದೂ, [illegible] ಒಂದು ಸರಕಾರಿ ಪಾಠಶಾಲೆ ಇಟ್ಟುಕೊಡಬೇಕಾಗಿದೆ ಎಂದೂ ಒಬ್ಬ [illegible] ಬರೆಯುತ್ತಾರೆ. ಪ್ರಜೆಗಳ ಮುಖಂಡರು ವಿದ್ಯಾ [illegible] ಕೊಂಡಲ್ಲಿ ಅವರ ಕೋರಿಕೆಯು ನೆರವೇರುತ್ತೆನ್ನುವುದಕ್ಕೆ ಸಂದೇಹವಿಲ್ಲ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಸಮ್ಮತು ಯಳನಾಡು [illegible] ಡೆಪ್ಯುಟಿ ಕಮಿಷನರ್ ರವರು ಕಳೆದ ನವಂಬರ್ ತಾ 2? ರಲ್ಲಿ ಹೋಗಿ [illegible] ಅಲ್ಲಿರುವ ಎ. ವಿ. ಸ್ಕೂಲ್ ಕಟ್ಟಡವನ್ನು ನೋಡಿ ಅದು ಯೋಗ್ಯವಾಗಿ [illegible] ಪ್ರೋತ್ಸಾಹಪಡಿಸಿದರ ಮೇಲೆ ಕೆಲವು ಮಂದಿ [illegible] ಸ್ವಂತ ಖರ್ಚಿನಿಂದ ಲಾಯಕ್ಕಾದ ಸ್ಕೂಲು ಮನೆ [illegible] ಕಟ್ಟಿಸುವುದಾಗಿ ವಾಗ್ದಾನಮಾಡಿದಾರೆಂತಲೂ, ಅದಕ್ಕೆ ತಕ್ಕ ಬಹುಮಾನ [illegible] ಸರ್ಕಾರದಿಂದ ಕೊಡಿಸಬೇಕೆಂದು ಸ್ಕೂಲ್ ಇನ್ಸ್‌ಪೆಕ್ಟರಿಗೆ [illegible] ಯನ್ನು ಬರೆದುಕೊಟ್ಟಿರುತ್ತಾರೆಂತಲೂ ಒಬ್ಬ ವಾರ್ತಾದಾರರು ಬರೆದಿ [illegible] ಸರ್ಕಾರದವರು ಸರ್ವೇಕ್ಷಣ ತೋರಿಸಿ ಮುಖ್ಯವಾದ [illegible] ಕೆಲಸವನ್ನು ನೆರವೇರುವಂತೆ ಮಾಡುತ್ತಾರೆಂದು ನಂಬಿಕೊಳ್ಳಲ್ಪಟ್ಟಿದೆ.

[illegible] ವಿಷ್ಣುಭಟ್ಟರು. ತಲಕಾವೇರಿ.—ನೀವು ಕಳುಹಿಸಿರುವ ಸುಪ್ರಭಾ[illegible] ಸಂಸ್ಕೃತ ಶ್ಲೋಕಗಳನ್ನು ಪ್ರಕಟಿಸಿದಲ್ಲಿ ವಾಚಕರಲ್ಲಿ ಅನೇಕರಿಗೆ [illegible] ವಾದಕಾರಣ ಬಿಡಬೇಕಾಯಿತು.

ಕೋಳೆಯ ಕಾಫಿ ಪ್ಲಾಂಟರ್ ಹಾಜಿ [illegible] ಸಾಹೇಬರವರೂ, [illegible] ಪ್ಲಾಂಟರ್ [illegible] ಸಾಹೇಬರವರೂ ಮಸೀದಿ [illegible] ಧರ್ಮಗಳಿಗಾಗಿ ಬಿಟ್ಟುಕೊಟ್ಟಿರುವ ಸ್ಥಿರ ಚರ ಸ್ವತ್ತುಗಳು ತೃಪ್ತಿಕರವಾಗಿ [illegible] ನಡೆಯುತ್ತಿಲ್ಲವೆಂದೂ, ಕೆಲವು ಸ್ಥಿರ ಸ್ವತ್ತುಗಳು ಹೀನಸ್ಥಿತಿಯಲ್ಲಿವೆ [illegible] ಇನ್ನು ಕೆಲವು ಅನಾಕ್ರಾಂತವಾಗಿವೆ ಎಂದೂ ನಮ್ಮಲ್ಲಿಗೆ ಒಂದು ವಾರ್ತೆ ಬಂದಿದೆ. ಅಲ್ಲಿನ ಮಹಮ್ಮದೀಯ ಮುಖಂಡರು ಸೇರಿ ಆ ಸ್ವತ್ತುಗಳನ್ನು ಸರಿಯಾದ ರೀತಿಯಲ್ಲಿ ರೂಢಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳುವುದು ಒಳ್ಳೆಯದು.

—ಎಡಿ.]

ಕರೆಸ್‌ಪಾಂಡೆನ್ಸ್

ಮೈಸೂರು ಸರ್ಕಾರಿ ಜೀವವಿಮಾ ಏರ್ಪಾಡು.

ಅಯ್ಯಾ,

ತಮ್ಮ ನವಂಬರ್ ೨೮ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಿರುವ ಮೈಸೂರ್ ಸರ್ಕಾರಿ ಜೀವವಿಮಾ ಬಾಬತು ಸಂಗತಿ ಓದಿ ನೋಡಿದೆವು. ತುಂಬಾ ಸಂತೋಷವಾಯಿತು. ಸರ್ಕಾರಿ ನೌಕರರಂತೆ ಇತರರಿಗೂ ಜೀವವಿಮೆ ಮಾಡತಕ್ಕದ್ದಕ್ಕೆ ಅವಕಾಶ ಕೊಡಬೇಕೆಂದು ತಾವು ಅಭಿಪ್ರಾಯಪಟ್ಟಿರುವುದು ತುಂಬಾ ಸಂತೋಷಕರವಾಗಿರುತ್ತೆ. ಇದರಂತೆ ಪದೇ ಪದೇ ಈ ಸಂಗತಿಯನ್ನು ಪ್ರಕಟಪಡಿಸುತ್ತಾ ಬರಬೇಕಲ್ಲದೆ, ಲೆಜಿಸ್ಲೇಟಿವ್ ಮೀಟಿಂಗ್ ಆಗುವ ವೇಳೆ ಒಂದು ಬಿಲ್ ತಯಾರುಮಾಡಿ ಕೌನ್ಸಿಲ್ ಮೆಂಬರುಗಳ ಮೂಲಕ ಅದನ್ನು ಚರ್ಚಿಸಿ ರೂಲ್ಸ್ ಜಾಗ್ರತೆ ಜಾರಿಗೆ ಬರುವಂತೆ ಮಾಡಿದರೆ ನಮ್ಮ ಮೈಸೂರು ಸೀಮೆ ಪ್ರಜೆಗಳೆಲ್ಲಾ ತುಂಬಾ ಸಂತೋಷಪಡುತ್ತಾರೆ.

ವೈ. ರಾಮಾಚಾರ್.

ಒಂದು ಸ್ಕೂಲನ್ನು ಇಡಿಸಲಿಲ್ಲ.

ಅಯ್ಯಾ,

ಚಿತ್ರದುರ್ಗ ಡಿಸ್ಟ್ರಿಕ್ಟ್ ಜಗಲೂರು ತಾಲ್ಲೂಕು [illegible] ಗ್ರಾಮವು ಬಹಳ ಜನಭರಿತವಾಗಿರುತ್ತದೆ. ಈ ಊರಿನಲ್ಲಿ ಸ್ಕೂಲು ಇಲ್ಲದೆ ಹುಡುಗರು ಬಹಳ ಅಜ್ಞಾನಿಗಳಾಗಿದ್ದಾರೆ. ಇದಕ್ಕೋಸ್ಕರ ಗ್ರಾಮಸ್ಥರು ಒಂದು ವರುಷದಿಂದ ಸ್ಕೂಲು ಮಂಜೂರಾಗುವುದಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಇನ್ಸ್‌ಪೆಕ್ಟರವರಿಗೆ ಅರ್ಜಿಗಳನ್ನು ಬರೆಯುತ್ತಾ ಇದ್ದಾರೆ. ಸುಮಾರು ೪-೫ ತಿಂಗಳ ಹಿಂದೆ ಅರ್ಜಿ ಬರೆದದ್ದಕ್ಕೆ ಗ್ರಾಮಸ್ಥರು ಸೇರಿ ಸ್ಕೂಲನ್ನು ತಯಾರು ಮಾಡಬೇಕೆಂದು ಬರೆದುಕೊಂಡರೆ ಸ್ಕೂಲು ಮಂಜೂರುಮಾಡಿ, ಮಾಸ್ಟರನ್ನು ಕಳುಹಿಸುತ್ತೇವೆ ಎಂದು ಹೇಳಿದ್ದರು. ಅದಕ್ಕೆ ಗ್ರಾಮಸ್ಥರು ಸ್ಕೂಲು ತಯಾರು ಮಾಡಿ ಇದಕ್ಕೆ ಅರ್ಜಿಯನ್ನು ೧೨ ಸಲ ಕಳುಹಿಸಿದ್ದರೂ ಸ್ಕೂಲು ಮಂಜೂರಾಗಿದೆ ಮಾಸ್ಟರನ್ನು ಕಳುಹಿಸಲಿಲ್ಲ. ಸರ್ಕಾರದವರು ಪ್ರಜೆಗಳ ವಿದ್ಯಾಭಿವೃದ್ಧಿಗೆ ತಕ್ಕ ಏರ್ಪಾಡುಮಾಡಿರುವಲ್ಲಿ ಜನಭರಿತವಾದ ಈ ಗ್ರಾಮಕ್ಕೆ ಸ್ಕೂಲನ್ನು ಯಾಕೆ ಇನ್ನೂ ಮಂಜೂರುಮಾಡದೆ ಇದು ತಪ್ಪೇನೋ ತಿಳಿಯದು. ಈಗಲಾದರೂ ಇಡಿಸುತ್ತಾರೆಂದು ನಂಬಿರುತ್ತೇವೆ.

ಗ್ರಾಮಸ್ಥ.

ಅನುಮಾನಾಸ್ಪದ

ಅಯ್ಯಾ,

೧೯೧೧ ನೇ ಇಸವಿಯಲ್ಲಿ ಸ್ಪ್ರಿಂಗ್ ರವರಿಗೆ [illegible] ಭೂಗೋಳದಲ್ಲಿ ಚಿತ್ರದುರ್ಗದ ಚಿಟ್ಟದ ಮೇಲೆ ರಾತ್ರಿಯಲ್ಲಿ ನಿಂತು ನೋಡಿದರೆ ಉತ್ತರ ದಿಕ್ಕಿನ [illegible] ಕೋಟಿ ಮಿಣುಕು ದೀಪಗಳಂತೆ ಬೆಳಕು ಕಾಣುತ್ತದೆ, ಇದಕ್ಕೆ ಕಾರಣವನ್ನು ತಿಳಿಸಿ" ಎಂದು ಬರೆದಿರುವುದಕ್ಕೆ—ಸಿಕ್ಕ ಹುಳುಗಳು ಬಿಸಿಲು ಕಾಲದಲ್ಲಿ ಭೂಮಿಯಲ್ಲಿ ಸೇರಿಕೊಂಡಿದ್ದು, ಬೇಸಿಗೆ ಕಳೆದ ಮೇಲೆ ಮೊದಲು ಮಳೆ ದೊಡ್ಡ ಮಳೆ ಬಿದ್ದ ಮೇಲೆ ಭೂಮಿಯಿಂದ ರಂಧ್ರಗಳ ಮೂಲಕ ಹೊರಕ್ಕೆ ಬರುವವಂತೆ, ಹಾಗೆ ಬಂದ ಹುಳುಗಳನ್ನು ಹಿಡಿಯುವ ಪಕ್ಷಿ ಹಿಕ್ಕೆಗಳು ರಾತ್ರಿವೇಳೆ ಪ್ರಕಾಶಿತ ಹುಳುಗಳು ಕೋಟಿ ಮಿಣುಕು ದೀಪಗಳಂತೆ ಕಾಣುವ [illegible] ಉತ್ತರ ಬರೆದಿರುತ್ತಾರೆ. ಮೊದಲು ಬರೆದಿರುವವರು ಅದು ಮಳೆಗಾಲದಲ್ಲಿ ಕಾಣುತ್ತದೆ ಬೇಸಿಗೆಯಲ್ಲಿ ಕಾಣುವುದಿಲ್ಲವೆಂದು ಬರೆದಿರುವುದಿಲ್ಲ. ಆದ್ದರಿಂದ ಚಿತ್ರದುರ್ಗದ ಚಿಟ್ಟದ ಮೇಲೆ ರಾತ್ರಿಯ ಕಾಲದಲ್ಲಿ ಯಾವ ಋತುವಿನಲ್ಲಿ ನೋಡಿದರೂ ಕೋಟಿ ಮಿಣುಕು ದೀಪಗಳಂತೆ ಬೆಳಕು ಕಾಣುವದೇ ಬರುವದೋ, ಮಳೆಗಾಲದಲ್ಲಿ ಮಾತ್ರ ಕಾಣಿಸುವದೆಂಬುದಕ್ಕೂ, ಹಾಗೆ ಬೇಸಿಗೆ ಕಾಲದಲ್ಲಿಯೂ ಕಾಣುವದಾದರೆ ಅದಕ್ಕೂ ತಕ್ಕ ಕಾರಣವನ್ನು ತಿಳಿಸಿ, ಈ ಅನುಮಾನವನ್ನು ನಿವೃತ್ತಿ ಮಾಡುವರೆಂದು ನಂಬಿರುವ

ಎಂ. ಚನ್ನಗೌಡ, ದಾವಣಗೆರೆ.

ಪಾವಗಡದ ದುಃಸ್ಥಿತಿಯು.

ಅಯ್ಯಾ,

ಈ ತಾಲ್ಲೂಕಿನಲ್ಲಿ 10 15 ದಿವಸಗಳಿಂದ ಮಳೆಯಿಲ್ಲ [illegible] ಪೈರು ಕೆಟ್ಟುಹೋಗುತ್ತಾ ಇದೆ. ನೆಲಗಡಲೆಕಾಯಿ [illegible] ಮಾತ್ರ [illegible] ಇಷ್ಟು ಮಳೆಗಳು ಬಿಂದುಕೊಂಡ ಕೆರೆಗಳಿಗೆ ನೀರೇ ಇಲ್ಲ. ಧಾರಣೆಗಳು ಬಹಳ ಏರಿರುವುದು. ಬಡ ಜನಗಳು ಜೀವನಮಾಡುವುದು ಬಹಳ ಕಷ್ಟಕರವಾಗಿರುತ್ತೆ. ಈ ಸಲ ಇಲ್ಲಿನ ಜನಗಳು ಎಮಕುಮಕಾಗೇನೂ ಇಲ್ಲ. ಧಾನ್ಯವು ದಿನೇ ದಿನೇ ಹೆಚ್ಚುತ್ತಾ ಇದೆ. ಅಕ್ಕಿ ರೂಪಾಯಿಗೆ ೫ ಸೇರು, ರಾಗಿ ೧೫ ಸೇರು, ಹೀಗೆ ಮಾರತಕ್ಕ ಅಕ್ಕಿಯೂ ಸಿಕ್ಕುವುದು ಬಹಳ ದುರ್ಲಭವಾಗಿದೆ. ಇಲ್ಲಿನ ಬಹಳ ಜನರೂ, ಸರ್ಕಾರದ ನೌಕರರೂ, ಬ್ರಾಹ್ಮಣಾದಿಗಳೂ ದುಷ್ಕಾಲದಿಂದ ರಾಗಿಯ ಸಂಗಟಿ ಮಾಡಿಕೊಂಡು ಭೋಜನಮಾಡುತ್ತಾ [illegible] ರದವರು ಯಾವುದಾದರೊಂದು ಉದ್ಯೋಗವನ್ನು ಕಲ್ಪಿಸಿ (ರಿಲೀಫ್ ಕೆಲಸ) ಬಡ ಜನರ ಜೀವನವನ್ನು ನಡಿಸಬೇಕು. ಸರ್ಕಾರದವರು ಇದಕ್ಕೆ ಗಮನಕೊಡದಿದ್ದ ಪಕ್ಷದಲ್ಲಿ ನಾವುಗಳು ಹೋಗಿ ಹಾಳಾಗಬೇಕಾಗುತ್ತೆ. ಇದೂ ಅಲ್ಲದೆ ಇಲ್ಲಿನ ವರ್ತಕರು ಅಳತೆ ತೂಕಗಳಲ್ಲಿ ಬಹಳ ಮೋಸಮಾಡುತ್ತಾರೆ. ಇಷ್ಟೇ ಅಲ್ಲದೆ ದವಸಗಳು ಒದೆಗಲು ಕಲ್ಲು ಮಣ್ಣು ಸೇರಿಸಿ ಮಾರುತ್ತಾರೆ. ಈ ವಿಷಯಗಳಿಗೆಲ್ಲಾ ಈಗಿನ ಅಮಲ್ದಾರ್ ಮಿ। ಎಚ್ ಶ್ರೀನಿವಾಸಯ್ಯಂಗಾರ್ರವರು ಗಮನ ಕೊಟ್ಟು ಜನಗಳಿಗೆ ಸಹಾಯಮಾಡಿ ಪುಣ್ಯವನ್ನು ಕಟ್ಟಿಕೊಳ್ಳುವರೆಂದು ಪ್ರಾರ್ಥಿಸುತ್ತೇನೆ. ಅಲ್ಲಲ್ಲಿ ನಾಗಲ್ಮಡಿಕೆ ಮೊದಲಾದ ಗ್ರಾಮಗಳಲ್ಲಿ ಕಾಲರಾ ಪ್ರಾರಂಭವಾಗಿದೆ. ಹೊಟ್ಟೆಗಿಲ್ಲದೆ ಸೊಪ್ಪುಸದೆಯನ್ನೂ ಜವಾರ್ ಕಳ್ಳೆಯ ಹಣ್ಣುಗಳನ್ನೂ ತಿನ್ನುವುದರಿಂದ ವಾಂತಿಭೇದಿ ರೋಗವು ಹೆಚ್ಚಾಗಿ ಹಬ್ಬಿದೆಯಲ್ಲಿದೆ. ಈ ತಾಲ್ಲೂಕಿಗೆ ಮಾತ್ರ ಕಷ್ಟವು ಬಂದಂತೆ ತೋರುತ್ತೆ. ಇದನ್ನು ಪರಿಹರಿಸುವ ಉಪಾಯವನು ಕಲ್ಪಿಸಿ ಕ್ಷಾಮನಿವಾರಣೆಯನ್ನು ಮಾಡುವರೆಂದು ನಂಬಿರುತ್ತೇನೆ.

ಪಾವಗಡ.

[ಸ್ಥಳಾಧಿಕಾರಿಗಳೂ, ಮೇಲ್ಪಟ್ಟ ಅಧಿಕಾರಸ್ಥರೂ ಈ ವಾರ್ತಾದಾರರು ಹೇಳುವ ವಿಚಾರಗಳ ನಿಜಸ್ಥಿತಿಯನ್ನು ತಿಳಿದು ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ —ಎಡಿ.]

ಹಿಂದೂ ದೇಶಕ್ಕೆ ಶುಭೋದಯ.

ಅಯ್ಯಾ,

ನಮ್ಮ ಚಕ್ರವರ್ತಿ ಸಾರ್ವಭೌಮರ ಪ್ರತಿನಿಧಿಯಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳವರು ದೇಶೀಯ ಸಂಸ್ಥಾನಗಳಲ್ಲಿ ಸಂಚರಿಸಿ ಅಲ್ಲಲ್ಲಿ ಕಾಣತಕ್ಕ ಲೋಪಗಳನ್ನು ಆಯಾ ಸ್ಥಳೀಯ ಪ್ರಭುಗಳಿಗೆ ತಿಳಿಸಿ ಸರಿಪಡಿಸುತ್ತಾ ಬರತಕ್ಕದ್ದು, ಪ್ರಜಾ ಸೌಖ್ಯಕ್ಕಾಗಿ ಅವರು ಮಾಡುತ್ತಿರತಕ್ಕ ಪ್ರಯತ್ನ, ಇವು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರತಕ್ಕದ್ದನ್ನು ಓದಿ ಎಲ್ಲಾ ಪ್ರಜೆಗಳೂ ಸಂತೋಷವುಳ್ಳವರಾಗಿದಾರೆ. ಈ ಶುಭ ಸಮಯ ಜಗತ್ತು ಸೃಷ್ಟಿಯಾದ ಲಾಗಾಯಿತು ನಮಗೆ ಒದಗಿರಲಿಲ್ಲ. ಈಗಿನಷ್ಟು ಸೌಖ್ಯ ಭರತಖಂಡದ ಪ್ರಜೆಗಳು ಹಿಂದೆ ಯಾವಾಗಲೂ ಹೊಂದಿರಲಿಲ್ಲವೆಂತ ಖಂಡಿತವಾಗಿ ಹೇಳಬೇಕಾಗಿದೆ. ಕಾರಣವೇನೆಂದರೆ, ನಮ್ಮ ಹಿಂದೂಸ್ತಾನ್ ಇಂಗ್ಲೀಷ್ ಛತ್ರಚ್ಛಾಯೆಗೆ ಒಳಪಡುವುದಕ್ಕೆ ಮೊದಲು ನಮ್ಮವರು ಪಡುತ್ತಿದ್ದ ಕಷ್ಟ, ಆಗಿನ ಅನ್ಯಾಯಕೃತ್ಯ, ದುಷ್ಟರ ಹಾವಳಿ, ಪರಸ್ಪರ ಯುದ್ಧಗಳು, ಇವುಗಳೆಲ್ಲಾ ಹಿಂದೂ ದೇಶದ ಚರಿತ್ರೆಗಳಲ್ಲಿ ನಮೂದು ಇದೆ. ಅವುಗಳನ್ನು ಓದಿದರೆ ಪ್ರಕೃತದ ನಮ್ಮ ಸ್ಥಿತಿ ಸ್ವರ್ಗಸುಖಕ್ಕೆ ಸಮಾನವಾದದ್ದೆಂತ ಪ್ರತಿ ಒಬ್ಬರಿಗೂ ಗೊತ್ತಾಗದೆ ಇರಲಾರದು. ಇಂಥಾ ಸುಖಸಮಯದಲ್ಲಿ ನಾವು ಅವಿಚ್ಛಿನ್ನವಾದ ರಾಜಭಕ್ತಿಪೂರ್ಣರಾಗಿ ನಮ್ಮ ನಡವಳಿಕೆ ಪ್ರಜೆಗಳಿಗೂ ಪ್ರಭುಗಳಿಗೂ ಹಿತವಾಗಿರುವಂತೆ ಇಟ್ಟುಕೊಂಡರೆ ಮತ್ತು ಮೇಲೆ ಹೇಳಿರತಕ್ಕ ಪ್ರಜೆಗಳ ನಡವಳಿಕೆಯಲ್ಲಿ ಲೋಪ ಕಂಡು, ಅದರಿಂದ ಪ್ರಜಾದ ಸುಖಕ್ಕೆ ಕುಂದಕ ಉಂಟಾಗತಕ್ಕ ಸಂಭವ ಕಂಡುಬಂದರೆ ಕೂಡಲೆ ಗೌರ್ನಮೆಂಟಿನವರು ಆ ಪ್ರಕಾರ ಅದನ್ನು ತಡೆಯುತ್ತಾ ಬಾದ ಪರ್ಷ ಹಾಕದಲ್ಲಿ ಸ್ಥಾಪಿಸಿದರೆ ನಮಗೆ ಇನ್ನಾವ ಬಾಧಕವೂ ತಟಸ್ಥವಿಲ್ಲ. ಇಂಗ್ಲೀಷ್ ಛತ್ರಚ್ಛಾಯೆಯಾದ ಆಶ್ರಯವಿಲ್ಲದೆ ಇರತಕ್ಕ ಟರ್ಕಿ ಬಾಲ್ಕನ್ ರಾಜ್ಯಗಳಲ್ಲಿ ಈಗ ನಡೆಯುತ್ತಿರತಕ್ಕ ಅನಾಹುತಗಳು, ಪ್ರಜಾಲಯ, ಅವರ ಕೋಟಲೆ, ಇವು ಪ್ರತಿ ಪತ್ರಿಕೆಯಲ್ಲಿಯೂ ನಮೂದಾಗುತ್ತಿವೆ. ಅವುಗಳನ್ನು ಈ ದಾರಿಗೆ ಪ್ರತಿ ಒಬ್ಬರೂ ಓದಿರಬಹುದು.

ಮೇಲೆ ಹೇಳಿರತಕ್ಕಷ್ಟು ಅನುಕೂಲಗಳು ನಮಗೆ ಇದ್ದಾಗ್ಯೂ ದೇಶೀಯ ಸಂಸ್ಥಾನಗಳ ಪ್ರಜೆಗಳ ಮಧ್ಯೆ ಗಲಾಟೆಗಳು ಇದ್ದೇ ಇರುತ್ತವೆ. ಅದಕ್ಕೆ ಕಾರಣ ಚೆನ್ನಾಗಿ ಯೋಚಿಸಿದರೆ ಜಾತಿಭೇದ, ಮತಭೇದ, ಇವು ಪ್ರಜೆಗಳಲ್ಲಿಯೂ, ಅಧಿಕಾರಿಗಳಲ್ಲಿಯೂ ತುಂಬಿ ಇರುವದರಿಂದ ಆ ಅಭಿಮಾನ ಸತ್ಯವಾದ ಮತ್ತು ಜಾತಿಭೇದವಿಲ್ಲದ ಸಮಸ್ತರಿಗೂ ಹಿಂದೆ ನಿಧಾನದ ಫಲಾ ಪಡೆದುಕೊಡತಕ್ಕ ರಾಜಸೂತ್ರಗಳ ನಡವಳಿಕೆ ಅವರ ಅರ್ಥದಂತೆ ನಡೆಯದೇ ಇರತಕ್ಕದ್ದೇ ಕಾರಣವಾಗುತ್ತೆ. ಈ ಅನಾನುಕೂಲ ಸರಿಪಡಿಸಬೇಕಾದರೆ ಗೌರ್ನಮೆಂಟ್ ಅಧಿಕಾರಿಗಳೂ ತಮ್ಮ ನಡವಳಿಕೆಯನ್ನು ಈಗಿನ ಲಾಗಳ ಅರ್ಥಕ್ಕೆ ಒಳಪಡಿಸಿಕೊಂಡು ತನ್ನ ಮತ ಜಾತಿ ಸಂಬಂಧವಾದ ಆಚಾರಗಳು ತನ್ನ ಮನೆ ಒಳಗೆ ಮಾತ್ರ ಉಪಯೋಗಿಸುತ್ತಾ, ಪಬ್ಲಿಕ್ ಕಾರ್ಯಗಳಿಗೂ ಅದಕ್ಕೂ ಸಂಬಂಧವಿಲ್ಲದೆ ಸತ್ಯವಾಗಿ ನಡೆಯುತ್ತಾ ಬಂದರೆ ಈಗಿನ ಲೋಪಗಳು ಪರಿಹಾರವಾಗಬಹುದು. ಅವರ ಜಾತಿಭೇದಾಂಧಕಾರದಲ್ಲಿ ಮುಳುಗಿರತಕ್ಕವರಿಗೆ ಮೇಲಿನ ಸತ್ಯಮಾರ್ಗಬೋಧಾ ಆಗಿ ಅದರಂತೆ ಅವರು ನಡೆಯಬೇಕಾದರೆ ಗೌರ್ನಮೆಂಟಿನ ಆಡಳಿತದಲ್ಲಿ ಎಲ್ಲಾ ಜಾತಿ ಜನಗಳೂ ಸೇರಿ ಕೆಲಸಮಾಡತಕ್ಕದ್ದು ಅವರನ್ನು ಚೆಕ್ಕುಮಾಡಲಿಕ್ಕೆ ಎಲ್ಲಾ ಬಾಬಿನ ಕೆಲಸಗಳಲ್ಲಿಯೂ ಶಕ್ತನಾಗಿಯೂ, ನಿಸ್ಪೃಹನಾಗಿಯೂ, ಜಾತಿಭೇದವನ್ನು ಎಣಿಸದೆ ಇರತಕ್ಕವನಾಗಿಯೂ ಇರುವವರನ್ನು ನೇಮಿಸುತ್ತಾ ಬಂದರೆ ದೇಶದಲ್ಲಿ ಅನಾನುಕೂಲಗಳು ನಡೆಯಲಿಕ್ಕೆ ಕಾರಣವಾಗುವದಿಲ್ಲ. ಗೌರ್ನಮೆಂಟ್ ಎಂಬ ಮಿಷನ್ನಿಗೆ ಎಲ್ಲಾ ಜಾತಿಯವರೂ ಸ್ಕ್ರೂಗಳಾಗಿಯೂ ಪೋಷಕರಾಗಿಯೂ ಇದ್ದಾರೆ. ಈ ವಿಷಯವನ್ನು ಪ್ರಜೆಗಳು ಯೋಚಿಸಿ ಗೌರ್ನಮೆಂಟಿಗೆ ಹಿತವಾಗಿ ನಡೆಯಬೇಕೆಂಬುವದೇ ನನ್ನ ಪ್ರಾರ್ಥನೆಯಾಗಿದೆ.

ಒಬ್ಬ ಪೆನ್ಷನ್ ಆಫೀಸರ್.

ತಾಲ್ಲೂಕು ವರ್ತಮಾನಗಳು.

ಬೀರೂರು.—ಈ ಸಲ ಬೆಳೆ ಚೆನ್ನಾಗಿ ಆಗಿದ್ದರೂ ಕಾಳಿನ ವರೆಗೂ ಧಾರಣೆಗಳು ತುಟ್ಟಿಯಾಗಿದೆ. ಅಕ್ಕಿ ೫-೬ ಸೇರು, ರಾಗಿ 15-16 ಸೇರು ಮಾರುವುದರಿಂದ ಬಡವರ ಜೀವನಕ್ಕೆ ಬಹಳ ತೊಂದರೆಯಾಗಿದೆ.—ಕಳೆದ ತಾ 25ನೇ ಸೋಮವಾರ ಮ. ಪಿರಿಗಿ ಗೋವಿಂದಪ್ಪನವರಿಂದ ಅನಾಥಾಲಯದ ಧ್ವಜ ಪ್ರಾರಂಭೋತ್ಸವವು ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಡೆಪ್ಯುಟಿ ಕಮಿಷನರ್ ರವರೇ ಮೊದಲಾದ ಅಧಿಕಾರಿಗಳೂ ದಯಮಾಡಿಸಿದ್ದರು. ನಮ್ಮ ಶ್ರೀಮನ್ಮಹಾರಾಜರವರು ಈ ಮಾರ್ಗವಾಗಿ ಶಿವಮೊಗ್ಗೆಗೆ ದಯಮಾಡಿಸುವುದರ ನಿಮಿತ್ತ ಇಲ್ಲಿಯವರೆಲ್ಲರೂ ಬಹಳ ಮಟ್ಟಿಗೆ ಚಂದಾ ಕೂಡಿಸಿ ಒಂದು ಸೊಗಸಾದ ಚಪ್ಪರವನ್ನು ಹಾಕಿಸುತ್ತಿರುವರು. ಇಲ್ಲಿಯೇ ಮಹಾಸ್ವಾಮಿಯವರು ತಮ್ಮ ದರ್ಶನವನ್ನಿತ್ತು ಮುಂದೆ ತೆರಳುವರೆಂದು ತಿಳಿಯುತ್ತೇನೆ.—ಕಡೂರಿನಲ್ಲಿ ಪ್ಲೇಗ್ ಆಗಿರುವುದರಿಂದ ಅಲ್ಲಿಯ ರಂಗಾರೆಯವರೂ, ಸರ್ಕಾರಿ ನೌಕರರಲ್ಲಿ ಕೆಲವರೂ ಇಲ್ಲಿಗೆ ಬಂದು ವಾಸವಾಗಿರುವರು. ಇಲ್ಲಿಯೂ ಅಲ್ಲಲ್ಲಿ ಇಲಿಗಳು ಬೀಳುವ ವರ್ತಮಾನವಿದೆ. ಪ್ರಜೆಗಳಿಗೆ ಕಷ್ಟನಷ್ಟಗಳುಂಟಾಗದಂತೆ ಸರ್ಕಾರದವರು ಸರಿಯಾದ ಏರ್ಪಾಡು ಮಾಡುವುದು ಮೇಲು.—ಈಚೆಗೆ ಮುನಿಸಿಪಾಲಿಟಿಯ ಕಲ್ವರ್ಟ್ ಬೀದಿಗಳು ಸರಿಪಡಿಸಲ್ಪಟ್ಟು, ದೀಪ ಚೆನ್ನಾಗಿ ಹಚ್ಚುತ್ತಿರುವುದು ಸಂತೋಷಕರವಾಗಿದೆ.—ಸಂಪದಭಿವೃದ್ಧಿ ಸಮಾಜದ ವ್ಯವಸಾಯ ಮತ್ತು ಕೈಗಾರಿಕಾ ಸಂಘದ ಸೆಕ್ರೆಟರಿಗಳಾದ ಮೈ. ಸಾಂಬಶಿವ ಅಯ್ಯರವರು ಇಲ್ಲಿಗೆ ಬಂದು ಕಳೆದ ತಾ ೨೯ನೇ ಶುಕ್ರವಾರ ಎ. ವಿ. ಸ್ಕೂಲಿನಲ್ಲಿ ವರ್ತಕರನ್ನೆಲ್ಲಾ ಬರಮಾಡಿಕೊಂಡು, ವ್ಯಾಪಾರವಿಷಯಕವಾದ ಸಂಗತಿಗಳನ್ನು ಸಂಗ್ರಹಮಾಡಿ, ಅವರಿಗೆ ಸರಿಯಾದ ಸಲಹೆಗಳನ್ನು ಕೊಟ್ಟು ತೆರಳಿದರು.

ಫ್ರೇಜರ್‌ಪೇಟೆ.—ಈಗ ಮಳೆ ನಿಂತು ಬಿಸಿಲಿನ ತಾಪ ಹೆಚ್ಚಾಗಿದೆ. ರಾತ್ರಿ ಛಳಿಯೂ, ಬೆಳಿಗ್ಗೆ ಹಿಮವೂ ಪ್ರಾರಂಭವಾಗಿ, ನೆಗಡಿ ಕೆಮ್ಮು ಜ್ವರಗಳು ಹುಟ್ಟುತ್ತಿವೆ. ರೈತರು ಹರುಷದಿಂದ ರಾಗಿ ಪೈರನ್ನು ಕೊಯಿದು ಬಣವೆ ಒಟ್ಟುವುದರಲ್ಲಿದಾರೆ.—ಫ್ರೇಜರ್‌ಪೇಟೆ ಬೆಟ್ಟದಲ್ಲಿ ಸನ್ಯಾಸಾಶ್ರಮದಲ್ಲಿರುವ ತಂಕರಾನಂದ ಭಾರತಿಯವರ ವಿದ್ಯಾಗುರುಗಳು ಕೆಲವು ದಿನಗಳಿಂದಲೂ ಪಾರ್ಶ್ವವಾಯು ಪೀಡಿತರಾಗಿ ೪ ದಿವಸಗಳ ಹಿಂದೆ ಕಾಲಗತಿಯನ್ನು ಹೊಂದಿದರು. ಅವರ ಶಿಷ್ಯರಾದ ಭಾರತಿಯವರೇ ಮೊದಲಾದವರು ತಾ 11ನೇ ಮಂಗಳವಾರ ಅವರ ಹೆಸರಿನಲ್ಲಿ ಸುಮಾರು ನೂರಾರು ಜನರಿಗೆ ಸಮಾರಾಧನೆ ನಡಿಸುವರು.—ಕಳೆದ ವರುಷ ಇಲ್ಲಿ ಬೆಟ್ಟದ ಜಾತ್ರೆಯಲ್ಲಿ ಕಲಹಗಳುಂಟಾಗಿ ಈ ಬಾರಿ ಜಾತ್ರೆಯೇ ನಿಂತುಹೋದೀತೆಂಬ ಅನುಮಾನ ಜನರಲ್ಲಿ ಉಂಟಾಗಿತ್ತು. ನೆನ್ನೆ ಶನಿವಾರ ಈ ಪ್ರಾಂತ್ಯದ ನಾಡಗೌಡ ಪ್ರಮುಖರೆಲ್ಲಾ ಸಭೆ ಸೇರಿ ಜಾತ್ರೆಯು ನಿಲ್ಲಕೂಡದೆಂದೂ, ಈ ಸಾರಿಯೂ (ಅಂದರೆ ಸುಮಾರು ಫೆಬ್ರವರಿ ತಿಂಗಳಲ್ಲಿ) ಅದು ಕ್ರಮ ಪ್ರಕಾರ ನಡೆಯತಕ್ಕದ್ದೆಂದೂ ಗೊತ್ತುಮಾಡಿದರು. ಅಲ್ಲದೆ ಸರ್ಕಾರದವರ ಪ್ರೋತ್ಸಾಹವೂ ಸಹಾಯವೂ ದೊರೆತಿರುವದಾಗಿ ತಿಳಿಯಲಾಯಿತು.—ಇಲ್ಲಿನ ಮ್ಯುನಿಸಿಪಲ್ ಲಾಂದ್ರಗಳು ಇನ್ನೂ ಸ್ವಲ್ಪ ಮಟ್ಟಿಗೆ ಹೆಚ್ಚಿಸುವದಲ್ಲದೆ ಈಗ ಉರಿಯುತ್ತಿರುವ ಸಣ್ಣ ದೀಪಗಳಿಗೆ ಬದಲು ದೊಡ್ಡವುಗಳನ್ನು ಇಡಿಸಿ, ಬೆಳಕು ಹೆಚ್ಚುವಂತೆ ಮಾಡುವದು ಅವಶ್ಯ. ಮೆಂಬರುಗಳೂ, ವೈಸ್ ಪ್ರೆಸಿಡೆಂಟರೂ ಈ ವಿಚಾರಕ್ಕೆ ಗಮನಕೊಡುವರೆಂದು ನಿರೀಕ್ಷಿಸುತ್ತೇವೆ.—ಕೆರೆಯ ಮೈದಾನದಲ್ಲಿರುವ ಭಾವಿಯನ್ನು ರಿಪೇರಿಮಾಡಿಸಿ ನೀರನ್ನು ಎಲ್ಲರೂ ಉಪಯೋಗಿಸುವಂತೆ ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆಂಬ ವರ್ತಮಾನವು ತುಂಬಾ ಸಂತೋಷವೂ ಫಲದಾಯಕವೂ ಆಗಿದೆ. ಮುಂದೆ ಎಲ್ಲಾ ಜನರೂ ಕೆರೆಯ ನೀರನ್ನು ತ್ಯಜಿಸಿ, ನವರಿ ಭಾವಿಯ ನೀರನ್ನೇ ಬಳಸಿ ಸುಖಿಸುವರೆಂದು ನಂಬುತ್ತೇನೆ.

ಪುಗಸಟ್ಟೆ ಕೊಡಲಾಗುತ್ತೆ.

10 ವರುಷ ಜಾಮೀನ್ ಉಳ್ಳ 30 ಗಂಟೆ ನಡೆಯುವ ಉತ್ಕೃಷ್ಟವಾದ ಜೇಬಿನ ಲೀವರ್ ವಾಚನ್ನೂ, ಒಂದು ಸೊಗಸಾದ ಸರಪಣಿಯನ್ನೂ, 100 ಫೋಸ್ಟ್ ಕಾರ್ಡನ್ನೂ ಬಿಟ್ಟಿ ಕೊಡುತ್ತೇವೆ ಅರ್ಧಾಣೆ ಸ್ಟಾಂಪಿಟ್ಟು ಇಂಗ್ಲಿಷಿನಲ್ಲಿ ನಮಗೆ ಬರೆಯಿರಿ ವಿಳಾಸ —ಮೆಸ್ಸರ್ಸ್ ಎಂ ಎ ಫರೂಖಾ ಕಂಪನಿ,

[179 3] ಚಿತ್ತೂರು, ಉತ್ತರ ಆರ್ಕಾಟು

ಕನ್ನಡ ಪುಸ್ತಕಗಳು.

ಕಥೆಗಳು—ನಿಭಾಗ್ಯ ಚಾಣಕ್ಯ 6ಆ ಅನಂಗಸುಂದರಿ 4ಆ ತಾರಾಸುಂದರಿ 8ಆ ಶೋಭನೆ 12ಆ ಕುಮುದಿನಿ 6ಆ ಸತೀಮೋಹಿನಿ 2ಆ ಭಾನುಮತಿ 2ಆ ಸಂತಾಪಕ 1ಆ ಕಳಾವತಿ 2ಆ ಮಾಲತೀಮಧುಕರ 2ಆ ವಸುಮತಿ 2ಆ ಪದ್ಮಿನಿ 2ಆ ಚಂದ್ರಮತಿ 6ಆ ನಕಲಿಗಳು—ಪ್ರಹಸನ ಚತುಷ್ಟಯ 1ಆ ಪ್ರಹಸನತರಂಗ 1ಆ ಮಹಾರಾಷ್ಟ್ರಾಧಿಪತ್ಯ 1ಆ ಮಹಾಬಧಿರಪ್ರಹಸನ 1ಆ ಇವೇ ಅಲ್ಲದೆ ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವುವು

[187-2] ನಮ್ಮ ವಿಳಾಸ—ಚಂದ್ರಿಕಾ ಬುಕ್ ಹಾಲ್ ಮೈಸೂರು

ಪ್ರಸನ್ನ ವೆಂಕಟಾಚಲಪತಿ ಪರಿಮಳ ಗಂಧದಬಿಲ್ಲೆಗಳು

ದೊಡ್ಡ ಡಬ್ಬಿ 1 ಕ್ಕೆ 10 ಆಣೆ

ಇದರಿಂದ ಸಕಲರಿಗೂ ತಿಳಿಸುವದೇನಂದರೆ—ಲೋಕಪ್ರಸಿದ್ಧಿಯನ್ನು ಪಡೆದ ಈ ಪರಿಮಳ ಗಂಧದಬಿಲ್ಲೆಯನ್ನು ಅತ್ತರು, ಪುನುಗು, ಜವಾಜಿ ಮೊದಲಾದ ಸುಗಂಧದ್ರವ್ಯಗಳಿಗಿಂತಲೂ ಅಧಿಕ ಸುವಾಸನೆಯುಳ್ಳದ್ದಾಗಿ ಶ್ರೀವೆಂಕಟಾಚಲಪತಿ ಸನ್ನಿಧಿಯಲ್ಲಿ ತಯಾರಿಸಲ್ಪಟ್ಟು, ಬೆಂಗಳೂರು, ಮದರಾಸು, ಉತ್ತರ ಮತ್ತು ದಕ್ಷಿಣ ದೇಶಗಳಿಗೆ ಪ್ರತಿನಿತ್ಯವೂ ನೂರಾರು ಡಬ್ಬಿಗಳು ಕಳುಹಿಸುತ್ತಿದ್ದೇವೆ ಪ್ರಸ್ತಪ್ರಯೋಜನಗಳಿಗೂ ಹಬ್ಬದ ದಿವಸಗಳಿಗೂ, ಪೂಜಾಪುನಸ್ಕಾರಗಳಿಗೂ, ಶಿಸ್ತಿನ ಉಪಚಾರಗಳಿಗೂ ಈ ಸುಗಂಧದ್ರವ್ಯವು ಬಹು ಪ್ರಶಸ್ತವಾದದ್ದು. ಇದನ್ನು ಲೇಹಕ್ಕ ಸವರಿಕೊಂಡಲ್ಲಿ ಅಧಿಕ ಸುವಾಸನೆಯನ್ನು ಕೊಡುವುದಲ್ಲದೆ ಚರ್ಮ, ತುರಿಕೆಗಳು, ಹೊಟ್ಟೆಯುಬ್ಬರ, ಅಧಿಕ ಬೆವರಿನಿಂದ ಉಂಟಾಗುವ ಆಯಾಸ ಮೊದಲಾದವುಗಳನ್ನು ಪರಿಹರಿಸಿ, ತಪ್ಪದ ಆಯುರಾರೋಗ್ಯ ಸಂಪತ್ತನ್ನುಂಟುಮಾಡುತ್ತ ಮಾದರಿಗೆ ಒಂದು ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ [191-1]

ವಿಳಾಸ —ಪ್ರಸನ್ನ ವೆಂಕಟಾಚಲಪತಿ ಸನ್ನಿಧಿ ಅರ್ಚಕರ್, ನುಂಗಂಬಾಕಂ ಮದರಾಸು

ಜರ್ಮನ್ ಜೇಬು ದೀಪ.

ಕ್ರಯ 1 15-0

ಈ ನಕ್ಷೆಯಲ್ಲಿ ಕಾಣಿಸುವ ಜರ್ಮನ್ ಜೇಬು ದೀಪಗಳು ಜರ್ಮನ್ ದೇಶದ ಪ್ರಸಿದ್ಧ ...ದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೆ ನಮ್ಮ



ಎಂದರೆ ಎರಡನೆ ಕಳುಹಿಸಿರುತ್ತಾರೆ ಇದು ವಿದ್ಯುಚ್ಛಕ್ತಿಯ ದೀಪದ ಪ್ರಕಾರವಾಗಿದ್ದು ಇದನ್ನು ಉಪಯುಕ್ತ ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ ಬೇಕಾಗುವುದಿಲ್ಲ ದೀಪದ ಮೇಲ್ಗಡೆ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಹತ್ತಿ ಬೆಳಗುತ್ತದೆ ಬೆರಳು ತೆಗೆದುಕೊಂಡ ಕೂಡಲೆ ಆರಿಹೋಗುವುದು ನಾನಾಗಿ ಹತ್ತಿ ಉರಿಯುತ್ತೆ [191 1] ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ ದೀಪದ ಕಡ್ಡಿ ಆವಶ್ಯಕವಿಲ್ಲ ಜನರಿಗೆ ಇದು ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ ಪ್ರಯಾಣ ಮಾಡುವಾಗ ... ಇದನ್ನು ಉಪಯೋಗಿಸುವದಕ್ಕೆ ಎಣ್ಣೆ ಬತ್ತಿ ... ಇದನ್ನು ಸುಲಭವಾಗಿ ಉಪಯೋಗಿಸಬಹುದು ಇದರಿಂದ ಯಾವ ಕೆಡಕೂ ಉಂಟಾಗುವದಿಲ್ಲ

ವಿಳಾಸ —ಜೆ ಆರ್. ರಾವ್, ನುಂಗಂಬಾಕಂ, ಮದರಾಸು

ಮಾರಾಟಕ್ಕೆ ಸಿದ್ಧವಾಗಿದೆ.

ಒಂದು ಒಳ್ಳೇ ರಿಕ್ಷಾ ಎಂಬ ಕೈಗಾಡಿ, ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ವಿಚಾರಿಸಿದರೆ ಗೊತ್ತಾಗುತ್ತದೆ [193 2]

ತುರ್ತಾಗಿ ಬೇಕಾಗಿದೆ.

ಒಂದು ಹಳೆ ಅಗ್ಗದ ಒಳ್ಳೇ ಸ್ಥಿತಿಯಲ್ಲಿರುವ ಬೈಸಿಕಲ್ ಬೇಕು ಬಿಕರಿ ಮಾಡತಕ್ಕವರು ಬೈಕ್ ಕೇರಾಫ್ ವೃತ್ತಾಂತ ಪತ್ರಿಕೆ ಮ್ಯಾನೇಜರ್, ಮೈಸೂರು, ಈ ವಿಳಾಸದಾರರಲ್ಲಿ ವಿಚಾರಿಸತಕ್ಕದ್ದು [191-1]

ಇವು ಒಳ್ಳೆಯವೂ ಅಗ್ಗವೂ ಆಗಿವೆ

178 3

ನಮ್ಮಲ್ಲಿ ತಯಾರಾಗುವ ನಶ್ಯ ಅಂದರೆ ಮನಸ್ಸಿಗೆ ಹರುಷವನ್ನು ಉಂಟು ಮಾಡುವದಲ್ಲದೆ ಯಾವ ವಿಧವಾದ ನಾಸಿಕಾ ರೋಗವನ್ನೂ ಹೋಗುವಂತೆ ಮಾಡು

ವದು ಶೀತದಿಂದ ನಗಡಿ, ತಲೆನೋವು ಮುಂತಾದ್ದನ್ನು ಶೀಘ್ರದಲ್ಲಿಯೇ ಪರಿಹಾರ ಮಾಡುತ್ತದೆ ಇದರ ಗುಣ ಒಂದು ಸಲ ಪ್ರಯೋಗ ಮಾಡಿದ ಬಳಿಕ ತಿಳಿಯುವುದು ಇದು ಪರಿಮಳವಾಗಿಯೂ ಇರುತ್ತದೆ ಕ್ರಯ 1ಕ್ಕೆ 1 ಆಣೆ ಅಂಚೆ ಹಾಸಲು 1 ಆಣೆ (2) ರೋಮಸಂಹಾರಿಣಿ ಎಂಬ ಪಬಾಲ್ ಸೋಪು ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ರೋಮವು ಮಾಯವಾಗುವದು ಉರಿ ಮುಂತಾದವುಗಳು ಇಲ್ಲ ಇದರ ಕ್ರಯ 1 ಸಾಬೂನು ಇರುವ ಪೆಟ್ಟಿಗೆ ಒಂದಕ್ಕೆ 0-1-0 ಅಂಚೆ ಹಾಸಲು 1 ಆಣೆ ಒಂದು ಸಾಬೂನು 5 ಆಣೆ ಅಂಚೆ ಹಾಸಲು 1 ಆಣೆ (3) ಹುಳಕಡ್ಡಿ ದೇಹದ ಇದನ್ನು ಯಾವ ಭಾಗದಲ್ಲಿ ಹುಳಕಡ್ಡಿ ಇರುತ್ತೆಯೋ ಆ ಭಾಗವನ್ನು ಸ್ವಚ್ಛವಾಗಿ ಸಾಬೂನಿನಿಂದ ತೊಳೆದು ಉಪಯೋಗಿಸಬೇಕು ಎರಡು ಸಲ ಉಪಯೋಗಿಸುವುದರಲ್ಲಿಯೇ ಮಾಯವಾಗುವುದು ಕ್ರಯ 1 ಅಂಚೆ ಹಾಸಲು 1 ಆಣೆ (4) ಟೀಸಿಸುಗಳು ಡಾಕ್ಟರ್ ... ಗಳು ನಮ್ಮಲ್ಲಿ ದೊರೆಯುತ್ತವೆ ಯಾವ ಕ್ರಯದಲ್ಲಿ ಬೇಕಾಗುತ್ತೆಯೋ ತಿಳಿಸಿದರೆ ಕಳುಹಿಸಿಕೊಡುತ್ತೇವೆ ನಮ್ಮಲ್ಲಿ ಇರುವಂಥಾ ರಾಸ್‌ಕೋಪ್ ಕ್ಯಾಮರಾಗಳು ... ಕ್ರಯ 2-1-0 ಮೊದಲ್ಗೊಂಡು 10 ರೂಪಾಯಿನ ವರೆಗೂ, ಟೀಸಿಸುಗಳು 2 ರೂಪಾಯಿ ಮೊದಲು 7 ರೂಪಾಯಿವರೆಗೆ ದೊರೆಯುತ್ತವೆ ಮೇಲೆ ಕಂಡ ಸಾಮಾನುಗಳು 1 ರ ಕ್ಯಾಟಲಾಗ್ ಗಾಗಿ ಅರ್ಧ ಆಣೆ ಕಳುಹಿಸಿಕೊಟ್ಟರೆ ಕಳುಹಿಸುತ್ತೇವೆ ನಮ್ಮ ವಿಳಾಸ

ಪಿ ಎಂ ಎಸ್ ಶಾಸ್ತ್ರಿ, ನಂ 1 ಇರುಳಪ್ಪನ ಬೀದಿ, ಮದರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗ ಳನ್ನು ಮರೆಯಬೇಡಿ.



ಈ ಮಾತ್ರೆಗಳ ವಿಷಯವಾಗಿ ಬಂದಿರುವ ಸಾವಿರಾರು ಯೋಗ್ಯತಾ ಪತ್ರಗಳಲ್ಲಿ ಕೆಲವನ್ನು ಮಾತ್ರ ನಮ್ಮ ನಂಬುಗೆಗಾಗಿ ಇಲ್ಲಿ ಬರೆದಿರು

(1) ಮೈ ಸರ್ಕಾರದ ವೆಂಕಟಪ್ಪಶೆಟ್ಟರು, ಅರಕೆರೆಗೂಡು, ಇವರು—ತಮ್ಮ ಕಸ್ತೂರೀ ಮಾತ್ರೆಗಳನ್ನು ಯಾರಾದರೆ ಕೊಟ್ಟೆನೋ ಅವರೆಲ್ಲರೂ ಬಹು ಗುಣಕಾರಿ ಎಂದು ಹೇಳುವುದರಿಂದ ಇನ್ನೂ 6 ಸೀಸೆಗಳನ್ನು ಕಳುಹಿಸಿಕೊಡಿ (2) ಟಿ ನ ಮುದ್ದಯ್ಯನವರು, ಹೊಳೆನರಸೀಪುರ, ಇವರು—ಹಲ್ಲಾ ಬಾಯಿಗಳಿಗೂ ತಮ್ಮ ಕಸ್ತೂರೀ ಮಾತ್ರೆಗಳು ಗುಣಪಡಿಸಿ ನಾಲ್ಕು ಜನ ಪ್ಲೇಗು ರೋಗಕ್ಕೂ ಗುಣವಾಯಿತು ಇನ್ನೂ 12 ಸೀಸೆಗಳನ್ನು ಕಳುಹಿ (3) ಮ ... ಗಣಪತಿ ಶಾಸ್ತ್ರಿಗಳು ... ಈ ನಿಮ್ಮ ಮಾತ್ರೆಗಳು ... 11 ವರ್ಷದ ಜನರು ನಮ್ಮ ಕಸ್ತೂರೀ ಮಾತ್ರೆಗಳಿಂದ ಸ್ವಸ್ಥ ... (4) ಮ ... ವರು ... ಕಸ್ತೂರೀ ಮಾತ್ರೆಗಳು ... (5) ಮ ... (6) ಮ ಆರ್ ಎನ್ ... ಬೆಂಗಳೂರು, ಇವರು— ತಮ್ಮ ಕಸ್ತೂರೀ ಮಾತ್ರೆಗಳು ಬಹಳ ಹೇಳುವ ಮೇರೆ ಅನೇಕ ವ್ಯಾಧಿಗಳನ್ನು ಗುಣಪಡಿಸಿ ... ದೇವರಿಂದ ಹೇಗಾಗುತ್ತದೆ ಇನ್ನು 12 ಸೀಸೆಗಳನ್ನು ಕಳುಹಿಸಿಕೊಡಿ [171 1]

ಕ್ರಯ 320 ಮಾತ್ರೆಯುಳ್ಳ ಸೀಸೆ 1 ಕ್ಕೆ 1 ರೂ. 1 ಸೀಸೆ 12 ರ ವರೆಗೆ ಟಪಾಲ್ ಖರ್ಚು 4 ಆಣೆ ... ಹೆಸರನ್ನು ಸ್ಪಷ್ಟವಾಗಿ ಬರೆ.

ವಿಳಾಸ ಶ್ರೀ ಸೀತಾರಾಘುವ ವೈದ್ಯಶಾಲಾ, ಮೈಸೂರು

READY FOR SALE

A Manual of GENERAL ENGLISH, Third Edition, Thoroughly Revised by C CHENNAKESAVAIYA, B A Price Re 1, Postage 3 as.

[177-4] H N ROW & BROTHERS Bangalore City

ಉತ್ಕೃಷ್ಟವಾದ ಮ ಲಾರಂ, ಟೂತ್ ಪೌಡರ್

2 3 ಬಳಿತಗಳಿಂದ ... ಮಾಡುವ ನಮ್ಮ ಲ್ಲಿ ... ದವಡೆ ಹಲ್ಲು ನೋವು, ಶುಭ್ರ ವಿಷಬು ಮತ್ತು ವೈಭವ ಲಿನ ಕೆರತದ ಮುಖ್ಯ ... ತಿನಿಂದ ... ಗುಣಹೊಂದಿರಿ ಉತ್ತಮವಾದ ಟೂತ್ ಪೌಡರ್ ಡಬ್ಬಿಗೆ ... ಪ್ರತಿ ಮುಲಾಮ ಡಬ್ಬಿಗೆ 5 ಆ 10 ಕ್ಕೆ 1 ರೂ 6 ಆ 20 ಕ್ಕೆ ... ಡಬ್ಬಿಗೆ 6 ಆಣೆಯಂತೆ ವಿಳಾಸ ... ಕೆ ನರಸಿಂಹಯ್ಯ,

[192 1] ... , ಹೊಳೆನರಸೀಪುರ

ರಾಮಾಯಣ ಸಂಗ್ರಹ—ಬಾಲಕಾಂಡ

185 2

ಈ ಗ್ರಂಥವು ... ಕನ್ನಡ ಭಾರತ ... ಸರಳವಾಗಿಯೂ, ... ವಾಗಿಯೂ ಕನ್ನಡ ಪಾಠಗಳ ... ಪಟ್ಟಿಯಲ್ಲಿ ... ಮಿಸ್ಟರ್ ... ಲಟ್ಟು ... ಇದನ್ನು ಮಹಾರಾಜ ಕಾಲೇಜು ಪಂಡಿತರು ... ಇದರ ಬೆಲೆ 1 ಆಣೆ ಮಾತ್ರ ... ಈ ಪುಸ್ತಕ ಮೈಸೂರು ಜನರಲ್ ... ಗ್ರಂಥಕರ್ತರಲ್ಲಿ ದೊರೆಯುತ್ತ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84-20

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆ ... ಬಾಧೆಗಳು, ಉರಿತ, ತಲೆನೋವು ಯಾವ ಕಾರಣದಿಂದ ಹುಟ್ಟಿದ ... ಯಾಗಲಿ, ಉಬ್ಬು, ಹೊಟ್ಟೆನೋವು ... ತೀವ್ರವಾದ ... ನೋವು ... ಮೈ ಕೈ ನೋವು ... ಗಂಟಲು ರೋಗ ... ಈ ತೊಂದರೆಗಳಲ್ಲಿ ... ಸ್ಲೋನ್‌ನ ಲಿನಿಮೆಂಟ್ ... ಕಾಸು ಕೊಟ್ಟು ಕೊಂಡರೆ ... ಈ ಉಪ್ಪನ್ನು ... 12 ಆಣೆ ... ಗುಣಹೊಂದುವಿರಿ ...

ಸ್ಲೋಮೆಂಟ್ ... ಇದರ ಕ್ರಯ ಒಂದು ಬಾಟ್ಲಿಗೆ 12 ಆಣೆ ಅಂಚೆ ... 1 ಆಣೆ ... ಬಾಟ್ಲಿ ... ಮಾರುವ ದಾರರು—(1) ... ನಮಶಿವಾಯ ... ಮದರಾಸು (2) ... ಕನ್ನಯ್ಯ ಶೆಟ್ಟರು, ಜನರಲ್ ... ತುಮಕೂರು

ಸ್ವಸ್ಥವಾಗುವದಕ್ಕೆ ಉಪಾಯವು

ಮೂತ್ರಕೋಶದ ಮುಖ್ಯ ... ಮೂತ್ರಕೋಶದ ... ರೋಗಗಳು ... ಮೂತ್ರ ಪಿಂಡಗಳ ... ಉಪಾಯವು ...

ಮೂತ್ರಕೋಶದ ... ಮೂತ್ರದ್ವಾರದ ... ಬೆನ್ನು ನೋವು ... ಮೂತ್ರಕೋಶ ... ಡೋನ್ಸ್ ಬ್ಯಾಕೇಕ್ ಕಿಡ್ನಿ ಪಿಲ್ಸ್ ...

ಮೂತ್ರಪಿಂಡಗಳ ಮೂತ್ರಕೋಶದ ಗುಣಗಳನ್ನು ... ಕ್ರಿಯೆಗಳನ್ನು ... ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು [12 34]

ಆರೋಗ್ಯಕರವಾದ ಮೂತ್ರಕೋಶದ ... ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶದ ಆರೋಗ್ಯವಾಗಿರುವವು



ರೂ ... ಅಥವಾ 6 ಬುಡ್ಡಿಗಳಿಗೆ ರೂ ... ಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ಪಿ ಓ ಬಾಕ್ಸ್ ... ಬೊಂಬಾಯಿ—ಇವರಲ್ಲಿ ದೊರೆಯುವುದು

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಠರಿಗೂ

ಕೈಸೋಕದ ಮಾಡಿದೆ. ಬರೀ ಸುಸ್ವಾಹಾರ.

1913ನೇ ವರುಷದ ಮೆಲಿನ್ಸ್ ಕ್ಯಾಲೆಂಡರು ಈಗ ಸಿದ್ಧವಾಗಿದೆ

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್ ಎರಡು ಆಣೆ ಸ್ಟಾಂಪುಗಳಿಂದ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟನಲ್ಲಿ ಕಳುಹಿಸುವೆವು

ಮಕ್ಕಳ ಕಾಯಿಗೆ—ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ—ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ.

[66-13] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

Printed and Published by the Rev H Gulliford, Proprietor and Manager, Wesleyan Mission Press, Mysore 12/12/1912

REGISTERED
M. 20

ವೃತ್ತಾಂತ ಪತ್ರಿಕೆ

ಸುಂ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸೆ ೧೯೧೨ ನೇ ಇಸವಿ ಡಿಸೆಂಬರ್ ತಾರೀಖು ೧೯ ನೇ ಗುರುವಾರ. ಸಂಚಿಕೆ ೨೯

ತಿರುಪತಿ ಗಂಧ. ಡಬ್ಬಿ 1 ಕ್ಕೆ 12 ಅಣೆ.

ಸುಮಾರು ನೂರೈವತ್ತು ಜನಗಳಿಗೆ ಸೇವಿಸಬಹುದು.

ಕಪಿಲಾ ಕಂಪನಿ ಇವರಲ್ಲಿ ತಿರುಪತಿ ಚಂದನವು ತಯಾರಾಗಿ ಮಾರುವದಕ್ಕೆ ... ಕಲ್ಯಾಣ ಮಹೋತ್ಸವದಲ್ಲಿಯೂ, ಶುಭಪ್ರಯೋಜನ ಕಾಲಗಳಲ್ಲಿಯೂ, ಯಾಗ ಯಜ್ಞ ಸಂತರ್ಪಣೆಗಳಲ್ಲಿಯೂ ಮುಖ್ಯವಾಗಿ ಬೇಕಾಗುವ ಈ ತಿರುಪತಿ ಗಂಧ ಸಮುಚಿತ ದೊರೆಯುತ್ತದೆ ದ್ರವ್ಯ ಮಿಶ್ರಣ ವಾದಿ ಸಂಶಯವಿಲ್ಲದ ಕಟ್ಟಿಗೆ ಗಂಧವನ್ನು ಉಪಯೋಗಿಸುವರು. ಈ ತಿರುಪತಿ ಗಂಧವನ್ನು ಒಂದಾವರ್ತಿ ಸೇವಿಸಿದವರು ಇತರ ವಿಧ ಗಂಧವನ್ನ ಅವಲಂಬಿಸರು. ಈ ಗಂಧವು ಭಂಗಾರಛಾಯವುಳ್ಳದ್ದು, ದಿವ್ಯ ಪರಿಮಳವು. ಅನೇಕ ದೇಶಗಳಿಗೆ ವಿಶೇಷವಾಗಿ ಈ ಗಂಧದ ಡಬ್ಬಿಗಳು ರವಾನೆ ಆಗುತ್ತಿವೆ. ಇತರ ವಿಧವಾದ ಗಂಧಗಳನ್ನು ತೆಗೆದುಕೊಂಡು ಮೋಸ ಹೋಗದೆ ಕಪಿಲಾ ಕಂಪನಿ ರಿಜಸ್ಟರು ಟ್ರೇಡು ಮಾರ್ಕು ಗಮನಿಸಿ ಗಂಧ ... ತರಿಸಿಕೊಳ್ಳಿರಿ. ವಿ. ಪಿ. ಛಾರ್ಜು ಬೇರೆ. ... ಬೇಕಾದವರಿಗೆ ಕ್ಯಾಟಲಾಗು ಕಳಿಸುವೆವು. ಮತ್ತು ಈ ಕಂಪನಿಯಲ್ಲಿ ಇಂಗ್ಲೀಷು ಔಷಧಗಳು, ಇತರ ಗಂಧಗಳು, ಗಡಿಯಾರಗಳು, ಪುಸ್ತಕಗಳು, ಕೂದಲು ಬೆಳೆಯುವ ತೈಲ, ಮಾರಿಕೆಗೆ ತಯಾರಾಗಿವೆ ಕ್ಯಾಟಲಾಗು ಬೇಕಾದವರಿಗೆ ಕಳಿಸುವೆವು. [172-5]

ಕಪಿಲಾ ಕಂಪನಿ, ಚಿತ್ತೂರು, ಡಿಸ್ಟ್ರಿಕ್ಟ್.

ನಾಣ್ಯವಾದ ಗಡಿಯಾರ ಬಹು ಸುಲಭ ಕ್ರಯ !!

ಪಾಕೆಟ್ ಲಿವರ್ ವಾಚು.

ಇದರ ಕ್ರಯ 6 ಬಹುಮಾನಗಳ ಸಮೇತ 3 ರೂ ಮಾತ್ರ.

3 ವರ್ಷಗಳ ಗ್ಯಾರಂಟಿ



ಇದು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಲಿವರ್ ಕೆಲಸದಿಂದಲೂ ನಾಜೂಕಾದ ಮತ್ತು ಬಲವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ತರಿಸಿರುತ್ತೇವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಭರವಸೆಯಾದ ಮಾಲು. ಸುಂದರವಾದದ್ದು. ಅನೇಕ ವರ್ಷ ಪರಂಪರೆ ಬಾಳಿಕೆ ಬರುವಂಥಾ ಗಡಿಯಾರ. [146-5]

ಇವರ ಆರು ಬಹುಮಾನಗಳ ತಪಸೀಲು.

1 ಸುಂದರವಾದ ಗಡಿಯಾರದ ಸರಪಣಿ. 4 ಲವಂಡರ್ ಎಂಬ ಪರಿಮಳ ದ್ರವ್ಯ.
2. ವಿಕ್ಟೋರಿಯಾ ರಾಣಿಯವರ ಉತ್ತಮ ಮುಖ. 5 ಸರ್ಪಾಕಾರದ ಉಂಗುರ
3 ನಾಜೂಕಾದ ಕರವಸ್ತ್ರ. 6 ವಿವಿಧವಾದ 6 ಸ್ಟೀಲ್ ಮುಳ್ಳು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ. ನಮ್ಮ ವಿಳಾಸ —

ಜಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ 7. ಕೋಪ್ ವೆಂಕಟಾಚಲ್ಲೈಯರ್ ಬೀದಿ, ಮದ್ರಾಸು.

ಹತ್ತಿಯ ತುಪ್ಪ.

ಶ್ರೇಷ್ಠವಾದ ಹತ್ತಿಯ ಬೀಜದಿಂದ ತೆಗೆದು ರಸಾಯನ ಶಾಸ್ತ್ರಜ್ಞರಿಂದ ಶುದ್ಧಿಮಾಡಲ್ಪಟ್ಟು, ಘನ ಡಾಕ್ಟರುಗಳು ನಿರ್ದೋಷವಾದ ಮತ್ತು ಆರೋಗ್ಯಕರವಾದ ಆಹಾರವಸ್ತುವೆಂದು ಹೇಳಿರುವ, ಅಡಿಗೆಗೆ ತುಪ್ಪಕ್ಕೆ ಬದಲಾಗಿ ಅನೇಕರು ಉಪಯೋಗಿಸುತ್ತಿರುವ

ಹತ್ತಿಯ ತುಪ್ಪವು ಮಾರಾಟಕ್ಕೆ ಸಿದ್ಧವಾಗಿದೆ.

ಗುಣ ಹೆಚ್ಚು. ಬೆಲೆ ಕಡಮೆ. ಡಬ್ಬಾ 1 ಕ್ಕೆ 12 ರೂಪಾಯಿ. ಪಂಥೇರಿಗೆ 1-2-0 ಇದು ಅಭ್ಯಂಗನಕ್ಕೂ ಕೂದಲಿಗೆ ತೊಡೆದುಕೊಳ್ಳುವದಕ್ಕೂ ಉತ್ಕೃಷ್ಟವಾಗಿದೆ. [163-7]

ಹತ್ತಿಬೀಜದ ಹಿಂಡಿ ಮತ್ತು ಹೊಟ್ಟು ಹಸು, ಎಮ್ಮೆ, ಎತ್ತು, ಕುದುರೆಗಳಿಗೆ ಆರೋಗ್ಯವಾದ ಮತ್ತು ಪುಷ್ಟಿಕರವಾದ ಆಹಾರ. ಎಣ್ಣೆ ಹೆಚ್ಚಾಗಿರುವ ಬರೀ ಬೀಜವನ್ನೇ ಕೊಡುವುದರಿಂದುಂಟಾಗುವ ಕೇಡು ಹಿಂಡಿ ಹೊಟ್ಟುಗಳನ್ನು ಕೊಡುವುದರಿಂದ ಲೇಶವೂ ಆಗದು. ಇವುಗಳನ್ನು ತಿಂದ ಪಶುಗಳ ಗೊಬ್ಬರವು ಭೂಮಿಯನ್ನು ತಂಪಾಗಿಯೂ ಫಲಕಾರಿಯಾಗಿಯೂ ಮಾಡುವುದು. ಈ ವಸ್ತುಗಳೆಲ್ಲ ಮಿಶ್ರವಿಲ್ಲದೆ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
150, ಕಿಲಾರಿ ರೋಡ್, ಬೆಂಗಳೂರು ಸಿಟಿ.

ಜಿ. ಎಸ್. ಶ್ರೀಕಂಠಯ್ಯ, ಎ 6, ದೊಡ್ಡಪೇಟೆ, ಮೈಸೂರು, ಇವರಲ್ಲೂ ಮತ್ತು ಕಂಪೆನಿಯ ಏಜಂಟರಿರುವ ಶಿವಮೊಗ್ಗ, ಹಾಸನ, ಚನ್ನಪಟ್ಟಣ, ಮದ್ದೂರು ಈ ಸ್ಥಳಗಳಲ್ಲೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ಕ್ರಯಕ್ಕೆ ದೊರೆಯುವವು.

913ನೇ ಇಸವಿಯ ಇಂಗ್ಲೀಷು ಕನ್ನಡ ಪಾಕೆಟ್ ಡೈರಿ

ಎ. ನಂ. 3 ಆಣೆ.

ಬಿ. ನಂ. 4 ಆಣೆ.

ಸಿ. ನಂ. 6 ಆಣೆ.



ಡಿ. ನಂ. 8 ಆಣೆ.

ಜಿನಿವಾ ನಂ. 1. 4 ಆಣೆ.

ಜಿನಿವಾ ನಂ. 2. 6 ಆಣೆ.

1913 ನೇ ಇಸವಿಯ ಜನವರಿ ಮೊದಲುಗೊಂಡು ಡಿಸೆಂಬರು ಆಖೈರ್‌ವರೆಗೆ ಇರುವ ಪಂಚಾಂಗವೂ ಮತ್ತು ಪರಿಧಾವಿ ಸಂವತ್ಸರ ಪುಷ್ಯಮಾಸ ಮೊದಲುಗೊಂಡು ಪ್ರಮಾದೀಚ ಸಂವತ್ಸರ ಪುಷ್ಯಮಾಸದ ವರೆಗೆ ಒಂದು ವರ್ಷದ 12 ಮಾಸ ... ವಾದ ಆರು ನಮೂನೆಗಳ ಇಂಗ್ಲೀಷು ಕನ್ನಡ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ ಪ್ರತಿ ಪುಟಕ್ಕೂ ರೂಲು ಹಾಕಿಸಿ ಸೊಗಸಾದ ... ಯಂತ್ರಗಳಲ್ಲಿ ... ಪ್ರಕಾಶವಾಗಿ ಹೊಳೆಯುವ ಹಾಗೆ ಆರ್ನಮೆಂಟಲ್ ಅಕ್ಷರಗಳಿಂದ ಪ್ರಿಂಟುಮಾಡಲ್ಪಟ್ಟಿವೆ. ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟುದಾರರು, ಉದ್ಯೋಗಸ್ಥರು, ಕುಳುವಾರರು, ಜಮೀನ್ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸು ಇಲಾಖೆ ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಇವುಗಳಲ್ಲಿ ಪರಿಧಾವಿ ಪ್ರಮಾದೀಚ ಸಂವತ್ಸರಗಳ ಪಂಚಾಂಗ, ಗ್ರಹಕುಂಡಲಿಗಳ ಸಹಿತ ಹಿಂದೂ ಹಬ್ಬಗಳು, ಮತ್ತು ರಜಾ ದಿವಸಗಳು ತೋರಿಸುವ ಪಟ್ಟಿ, ರೈಲ್ವೆ ಛಾರ್ಜು, ಕೋರ್ಟು ಫೀಜು, ಸ್ಟಾಂಪು ಫೀಜು, ರಿಜಿಸ್ಟರ್ ಫೀಜು, ... ಟಪಾಲಾಫೀಸಿನ ವಿಷಯಗಳು, ಬಡ್ಡಿ ಬಾಬತ್ತು, ಗೌರೀಪಂಚಾಂಗ, ರಾಹುಕಾಲ ಗುಳಿಕಕಾಲ, ವಾರಶೂಲೆಯ ದಿವಸಗಳು, ದಿವಸಗಟ್ಲೆ ಸಂಬಳ ತೋರಿಸುವ ಪಟ್ಟಿ, ಅಗಸನಿಗೆ ಬಟ್ಟೆ ಹಾಕುವ ಪಟ್ಟಿ, ಪ್ರತಿ ತಿಂಗಳಲ್ಲಿಯೂ ಜಮಾ ... ತೋರಿಸುವ ತಖ್ತೆ, ಮೊದಲಾದ ಅನೇಕ ವಿಷಯಗಳು ಇವುಗಳಲ್ಲಿ ಅಡಗಿವೆ. ಡೈರಿಗಳು ಇದುವರೆಗೂ ಇದ್ದುದಕ್ಕಿಂತಲೂ ಈ ವರ್ಷ ಬಹು ಸುಂದರವಾಗಿ ತಯಾರು ಮಾಡಿದೇವೆ. ಎ ನಂಬರ್ ಪಂಚಾಂಗ ಸಹಿತವಾದ ಪೆನ್ಸಲು ಇಡತಕ್ಕ ... ಡೈರಿ ಕ್ರಯ ಪ್ರತಿ 1 ಕ್ಕೆ 3 ಆಣೆ. ಬಿ ನಂಬರ್ ಮೇಲ್ಗಡೆ ಚಿಕ್ಕ ಸೈಜು ಪ್ಲಾಪ್ ಬಿಂದು ಮಾಡಿರುವದು ಮುಚ್ಚಳ ಹಾಕಿದೆ, ಒಂದಾಣೆ ಬಾಳುವ ಪೆನ್ಸಲು ಒಂದು ಇಟ್ಟಿರುತ್ತೆ. ಕ್ರಯ ಪ್ರತಿ 1 ಕ್ಕೆ 4 ಆಣೆ. ಸಿ ನಂಬರ್ ಪಂಚಾಂಗ ... ಪೆನ್ಸಲ್ ಇಡತಕ್ಕ ದೊಡ್ಡ ಸೈಜು ಡೈರಿ ಕ್ರಯ ಪ್ರತಿ 1 ಕ್ಕೆ 6 ಆಣೆ. ಡಿ ನಂಬರ್ ಮೇಲ್ಗಡೆ ದೊಡ್ಡ ಸೈಜು ಡೈರಿ ಪ್ಲಾಪ್ ಬಿಂದು ಮಾಡಿರುವದು ಮುಚ್ಚಳ ಹಾಕಿರುತ್ತೆ, ಒಂದಾಣೆ ಬಾಳುವ ಪೆನ್ಸಲು 1 ಇಟ್ಟಿರುತ್ತೆ. ಕ್ರಯ ಪ್ರತಿ 1 ಕ್ಕೆ 8 ಆಣೆ.

ಗವರ್ನಮೆಂಟಿನಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಯಾದ ಜಿನಿವಾ ಡೈರಿ

ಇಗೋ ನೋಡಿ, ಈ ಕೆಳಗೆ ಕಾಣುವ ಎರಡು ನಮೂನೆ ಡೈರಿಗಳನ್ನು ಹೊಸದಾಗಿ ತಯಾರು ಮಾಡಿದೇವೆ. ಇವುಗಳು ಮೇಲೆ ವಿವರಿಸಿರುವ ನಾಲ್ಕು ನಮೂನೆ ಡೈರಿಗಳಿಗಿಂತಲೂ ಸ್ವಲ್ಪ ಹೆಚ್ಚಾದ್ದರಿಂದ ಡೈರಿಗಳಲ್ಲೂ ವಿಷಯಗಳು ... ಕಾಗದ ದಪ್ಪ ... ಬಹಳ ನೂತನವಾಗಿದೆ. ಗಾತ್ರದಲ್ಲಿ ಮೇಲ್ಕಂಡ ಡೈರಿಗಳಿಗಿಂತಲೂ ಒಂದೊಂದು ... ಪ್ರಿಂಟುಮಾಡಿರುವ ಸಮಾಚಾರಗಳು ಬಹಳ ಹೆಚ್ಚಾಗಿವೆ. ಇದಕ್ಕೆ ಉಪಯೋಗಿಸಿರುವ ಪದಾರ್ಥಗಳು ಬಹಳ ಪಸನು ... ಈ ಜಿನಿವಾ ಡೈರಿ ಸರ್ಕಾರದಲ್ಲಿ ರಿಜಸ್ಟರು ಮಾಡಿದೇವೆ. ಈ ಡೈರಿಗಳನ್ನು ನೋಡಿದರೆ ಈ ಡೈರಿಗಳಿಗೆ ಸಮಾನವಾದ ಡೈರಿಗಳನ್ನು ಇದುವರೆಗೂ ಯಾರೂ ತಯಾರು ಮಾಡಲಿಲ್ಲವೆಂದು ನೋಡುವವರಿಗೆ ತಿಳಿಯುವದು.

ಜಿನಿವಾ ಡೈರಿ ನಂಬರ್ 1 ಚಿಕ್ಕ ಸೈಜು 3½ ಅಂಗುಲ ಅಗಲ, 1½ ಅಂಗುಲ ಉದ್ದ ಉಳ್ಳದ್ದು. ಕ್ರಯ 1 ಕ್ಕೆ 4 ಆಣೆ. ಜಿನಿವಾ ಡೈರಿ ನಂಬರು 2 ಡಿಟೋ ಚಿಕ್ಕ ಸೈಜು ಪ್ಲಾಪು ಡೈರಿ ಮುಚ್ಚಳ ಹಾಕಿರುವದು 1 ಆಣೆ ಖರೀದಿ ಬಾಳುವ ... ಇಟ್ಟಿರುವದು ಕ್ರಯ 1 ಕ್ಕೆ 6 ಆಣೆ. ಈ ಮೇಲ್ಕಂಡ ಆರು ನಮೂನೆ ಡೈರಿಗಳಿಗೂ ಪೋಸ್ಟು ಛಾರ್ಜು ಬೇರೆ ಬೀಳುತ್ತೆ. ಒಂದೇ ನಮೂನೆಯಲ್ಲಿ 12 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ. ... ಪ್ರತಿಗಳು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಛಾರ್ಜು ಕಡಮೆ ಬೀಳುತ್ತೆ. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. ಸಚಿತ್ರ ಶುಕಸಪ್ತತಿ ಕಥೆಗಳು.—512 ಪುಟಗಳು ಈ ಪುಸ್ತಕವನ್ನು ... ತರಿಸಿಕೊಂಡು ಓದಿ ಆನಂದವನ್ನು ಹೊಂದಿರುತ್ತಾರೆ. ಅನೇಕ ಪುಸ್ತಕಗಳು ಖರ್ಚಾಗಿರುತ್ತವೆ. ಇನ್ನು ಕೆಲವು ಮಾತ್ರ ಇರುತ್ತವೆ. ಬೇಗನೆ ಬರೆದು ತರಿಸಿಕೊಳ್ಳಿರಿ. ಸೊಗಸಾದ ಬೈಂಡು ಕ್ರಯ ರೂ. 1–8–0, ಟಪಾಲು ಛಾರ್ಜು 4 ಆಣೆ.

ನಮ್ಮಲ್ಲಿ ಕಾವ್ಯಗಳು ಕಥೆಗಳು ನಾಟಕಗಳು ಮುಂತಾದ ಅನೇಕ ನಮೂನೆ ಪುಸ್ತಕಗಳು ಸುಲಭ ಕ್ರಯಕ್ಕೆ ಬಿಕರಿಯಾಗುವವು. ಬೇಕಾದವರು ಕೆಳಗೆ ಕಂಡಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ನಮ್ಮಲ್ಲಿ ಇನ್ನೂ ... ನಮೂನೆಗಳು ಬಿಕರಿಯಾಗುತ್ತವೆ. ಅವುಗಳ ಕ್ಯಾಟಲಾಗ್ ಕ್ರಯಪಟ್ಟಿಯನ್ನು ಅಪೇಕ್ಷಿಸುವವರಿಗೆ ಟಪಾಲ್ ಖಾಸಲ್ ಇಲ್ಲದೇ ಕಳುಹಿಸುವೆವು. [190-2]

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್

ವೃತ್ತಾಂತ ಪತ್ರಿಕೆಯ 1912 11ನೇ ವರುಷದ ಎರಡನೇ ಕ್ವಾರ್ಟರು ಕಳೆದ ನವಂಬರ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಸ್ಪಷ್ಟಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಟ್ಟಿದೆ.

ಮಾನೇಜರ್, 'ವೃತ್ತಾಂತ ಪತ್ರಿಕೆ' ಆಫೀಸ್, ಮೈಸೂರು

ನೋಟೀಸ್.

ಹಾಸನದಲ್ಲಿ ದನಗಳ ಪ್ರದರ್ಶನವು

1913ನೇ ಇಸವಿ ಜನವರಿ ತಾರೀಖು 3ನೇ ಶುಕ್ರವಾರ ಮತ್ತು 4ನೇ ಶನಿವಾರ ಸಹಾ ಹಾಸನ ಟೌನಿನಲ್ಲಿ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸು ಬಾಜೂ ಮೈದಾನದಲ್ಲಿ ದನಗಳ ಪ್ರದರ್ಶನವು ನಡೆಯುತ್ತೆ. ಈ ಪ್ರದರ್ಶನದಲ್ಲಿ ದನ ಎಮ್ಮೆ ಕೋಣ ಆಡು ಕುರಿ ಮತ್ತು ಕುದುರೆ ಮುಂತಾದ ಉತ್ಕೃಷ್ಟವಾದ ಎಲ್ಲಾ ತರಹ ಜಾನವಾರುಗಳಿಗೂ ಇನಾಂ ಕೊಡಲ್ಪಡುತ್ತೆ. ಬರುವ ಜನವರಿ 2ನೇ ತಾರೀಖಿಗೆ ಮುಂಚೆಯೇ ಪ್ರದರ್ಶಿಸತಕ್ಕ ಜಾನವಾರುಗಳು ಪ್ರದರ್ಶನದ ಮೈದಾನದಲ್ಲಿ ಬಂದಿರಬೇಕು.

ಹೆಚ್ಚು ಸಂಗತಿಯನ್ನು ಹಾಸನದಲ್ಲಿ ದನಗಳ ಪ್ರದರ್ಶನದ ಅನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

ತಾ 3 12 1912 ವಿ ಎಸ್ ರಾಜಗೋಪಾಲಾಚಾರ್

ಆನರರಿ ಸೆಕ್ರೆಟರಿ

|1871| ದನಗಳ ಪ್ರದರ್ಶನದ ಕಮಿಟಿ ಹಾಸನ

ಒಳ್ಳೆ ಸಮಯ ... ತಿಳಿಸುವ ಗಡಿಯಾರ ...

(1) ... ಗಡಿಯಾರವನು ... ಪೆಟ್ಟಿಗೆ ಸಹ ... ಪೂರ್ಣ ಗ್ಯಾರಂಟಿ ... ರೂ 1 ... ರೂ 1 8 ... ರೂ 7 0 0 ... ಗ್ರಾಹಕರಿಗೆ ಕೊಡಲ್ಪಡುತ್ತೆ |1014|

ನಮ್ಮ ... ವೆಂಕಟ್ರಾಮಂ ಕಂಪೆನಿ, ಪ್ಯಾರೋಡ್ ಪೇಟೆ, ಮದ್ರಾಸು

ಪಿಟೀಲ್

10 3

ಪೂರ್ವದ ಕ್ರಯ ರೂ 16-0 0

ಈಗಿನ ಅರ್ಧ ಕ್ರಯ ರೂ 8 8 0



ಒಂದು ತಿಂಗಳವರೆಗೆ ಮಾತ್ರ

ಇದು ಸ್ವಂತ ಆರ್ಡರ್ ಮೇರೆಗೆ ... ತಯಾರಿಸಿ ನಮ್ಮ ... ಕಳುಹಿಸಿ ಇರುತ್ತಾರೆ. ಇದು ಸಾಧಾರಣ ಪಿಟೀಲುಗಳಂಥಾದ್ದಲ್ಲ. ಇದರ ನಾದವು ಬಹಳ ಮನೋಹರವಾಗಿದೆ. ಪಿಟೀಲು ಕಲಿಯುವವರಿಗೂ ಪಂಡಿತರುಗಳಿಗೂ ... ಗೂ ಬಹಳ ಉಪಯೋಗವಾದದ್ದು. ಈ ತರಹದ ... ಪಿಟೀಲನ್ನು ಉಪಯೋಗಿಸುವವರು ಬೇರೆ ಪಿಟೀಲನ್ನು ಉಪಯೋಗಿಸರು.

ವಿಳಾಸ

... ಸ್ವಾಮಿ ಮತ್ತು ಕಂಪೆನಿ

ನಂ|| ... ಜೋಸ್ಯುಲ್ಯಯನ ... ಸಮೀಪ

ಮದರಾಸು

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು



15

... ನೋವು, ... ಕೀಲುನೋವು ... ವಾಯುನೋವು ...

... ಚೇಂಬರ್ಲೈನ್ ಯವರು ಮಾಡಿದ ನೋವುಹರ ... ಉಪಯೋಗಿ ...

... ಇದು ... ತಯಾರಾದ ...

ಇದು ಎಲ್ಲಾ ... ಸಿಗುವುದು ...

ಸ್ಕಾಟ್ಸ್ ಎಮಲ್ಷನ್

ಸನ್ ೧೮೯೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ

ಮೂವತ್ತು ... ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 351

(ಸ್ಕಾಟ್ಸ್ ಇಮಲ್ಷನ್)

ಎಂಬ ... ಔಷಧವು ...

... ಕೈಸೋಕದೆ ತುಮಾರಾದದ್ದು

... ಸ್ಕಾಟ್ ... ಲಿಮಿಟೆಡ್ ... ಲಂಡನ್ ... ಇಂಗ್ಲೆಂಡ್

ಈ ವಿಜಾನುವಾರ್ಕ್ ಇರುವ ... ಮಾತ್ರ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ... ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಳಕೆಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

... (೧) ನಮ್ಮಲ್ಲಿ ... ಟೋಪಿಗಳ ದಾರವೆಲ್ಲಾ ... (೨) ಟೋಪಿಗಳನ್ನು ... ಬಹಳ ಚೆನ್ನಾಗಿ ...

ಒಳ್ಳೇ ... ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ. ... ಚೆನ್ನಾಗಿಲ್ಲದ್ದು ... ದೊರೆಯುವದಿಲ್ಲ.

ಸಾದಾ ... ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಮಕ್ಕಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ವಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮುಗುಟದ ಟೋಪಿಗಳು ೧ ರೂ ೬ ಆ ೧ ರೂ ೬ ಆ

ಕೊಳ್ಳುವವರು ಟೋಪಿ ... ಅಳತೆಯನ್ನೂ, ... ನಮ್ಮ ವಿಳಾಸ —

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ

ಕುಂತಳಾನಂದ ತೈಲವು

1471

... ನಮ್ಮ ... ನಾಥ ಮತ್ತು ಕಂಪೆನಿ ... ಮದ್ರಾಸು

"ವಾಸಿಮಾಡಿಕೊಳ್ಳಬೇಕೆಂದು ಹೇಳು"

...

ಇದು ... ಅಗತ್ಯ ...

184

...

ತುರ್ತು ಬೇಕಾಗಿದೆ.

ಒಂದು ಹಳೆ ಅಗ್ಗದ ಒಳ್ಳೇ ಸ್ಥಿತಿಯಲ್ಲಿರುವ ಬೈಸಿಕಲ್ ಬೇಕು. ಬೆಲೆ [illegible] ವರು ಬೈಕ್ ಕೇರಾಫ್ ವೃತ್ತಾಂತ ಪತ್ರಿಕೆ ಮ್ಯಾನೇಜರ್, ಮೈಸೂರು, [illegible] ದಾರರಲ್ಲಿ ವಿಚಾರಿಸತಕ್ಕದ್ದು. [199-3]

ಪ್ರಗಸಟ್ಟೆ ಕೊಡಲಾಗುತ್ತೆ.

10 ವರುಷ ವಾರಂಟಿ ಉಳ್ಳ 30 ಗಂಟೆ ನಡೆಯುವ ಉತ್ಕೃಷ್ಟವಾದ [illegible] ಲೀವರ್ ವಾಚನ್ನೂ, ಒಂದು ಸೊಗಸಾದ ಸರಪಣಿಯನ್ನೂ, 100 [illegible] ಕಾರ್ಡನ್ನೂ ಬಿಟ್ಟಿ ಕೊಡುತ್ತೇವೆ. ಅರ್ಧಾಣೆ ಸ್ಟಾಂಪಿಟ್ಟು ಇಂಗ್ಲಿಷ [illegible] ನಮಗೆ ಬರೆಯಿರಿ. ವಿಳಾಸ —ಮೆಸ್ಸರ್ಸ್ ಎಂ. ಎ. ಘಟಾಲಾ ಕಂಪನಿ, [170-1] ಚಿತ್ತೂರು, ಉತ್ತರ ಆರ್ಕಾಟು.

ಕನ್ನಡ ಪುಸ್ತಕಗಳು.

[illegible] 1-8 [illegible] 1-8 ಅನಂಗಸುಂದರಿ 4-8 ತಾರಾಸುಂದರಿ [illegible] 1-8 [illegible] 1-8 ಸತ್ಯಶೋಧಿನಿ 2-8 [illegible] 2-8 [illegible] 1-8 [illegible] 2-8 ನಾಲಂಕ ಮಧುಕರ 2-8 ವಸುಮತಿ 2-8 [illegible] 2-8 [illegible] 1-8 ನಕಲುಗಳು —ಪ್ರಹಸನ ಚತುಷ್ಟಯ 1-8 [illegible] 1-8 ಮುಯಾರ್ಗ ಪುರಾಧಿಪತ್ತ 1-8 ಮಹಾಬಿಪರಪ್ರಹಸನ 1-8 ಅಲ್ಲದೆ ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವುವು.

[187-1] ನಮ್ಮ ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ನೋಟ್ ನಂಬರ್ ಬದಲಾವಣೆ ನೋಟೀಸ್

1962 W A 72 ನೇ ನಂಬರ್ 1910 ನೇ ಏಪ್ರಿಲ್ 2 ರಲ್ಲಿ ತಯಾರಾದ ಮದ್ರಾಸ್ 10 ರೂಪಾಯಿನ ಅರ್ಧ ಬಲಭಾಗದ ನೋಟ್ ಒಂದು 17951 W A 72 ನೇ ನಂಬರ್ 1910 ನೇ ಏಪ್ರಿಲ್ 2 ರಲ್ಲಿ ತಯಾರಾದ ಮದ್ರಾಸ್ 10 ರೂಪಾಯಿನ ಎಡಭಾಗದ ಅರ್ಧ ನೋಟ್ ಒಂದು ಇವೆರಡು ಬದಲಾವಣೆಯಾಗಿ ನಮ್ಮಲ್ಲಿರುತ್ತೆ. ಈ ನಂಬರ್ ನೋಟುಗಳು ಯಾರಲ್ಲಾದರೂ ಬದಲಾವಣೆಯಾಗಿದ್ದ ಪಕ್ಷದಲ್ಲಿ ಅಂಥವರು ಖುದ್ದಾಗಿಯಾದರೂ ಜವಾಬ್ ಮೂಲಕವಾಗಿಯಾದರೂ ಬದಲಾವಣೆ ಮಾಡಿಸಿಕೊಳ್ಳಬಹುದು. [186-1]

ಹುಣಸೂರು ಟೌನ್ ಕಾರ್ಖಾನೆ ಕೆ. ಶಿವಯ್ಯ

ರಾಮಾಯಣ ಸಂಗ್ರಹ—ಬಾಲಕಾಂಡ

185-3

ಈ ಗ್ರಂಥವು ಸಾಮಾನ್ಯಜನರಿಗೂ ಗ್ರಾಹ್ಯವಾಗುವಂತೆ ಕುಮಾರ ವ್ಯಾಸ ರಚಿತ ಕನ್ನಡ ಭಾರತ ಸರಣಿಯನ್ನನುಸರಿಸಿ ಬಹು ಸರಳವಾಗಿಯೂ, ಮಧುರವಾಗಿಯೂ ಕನ್ನಡ ಮಾತುಗಳಿಂದ ಷಟ್ಪದಿಯಲ್ಲಿ ಅರಮನೆ ಮರಾ[illegible] ಲಿಂಗರಾಜ ಅರಸಿನವರಿಂದ ರಚಿಸಲ್ಪಟ್ಟು ಶ್ರೀಮನ್ಮಹಾರಾಜರವರ [illegible] ಪ್ರೋತ್ಸಾಹವನ್ನು ಹೊಂದಿರುತ್ತೆ. ಇದನ್ನು ಮಹಾರಾಜಾ ಕಾಲೇಜು ಪಂಡಿತರು ಮತ್ತು ಕೆಂಬಸವಶಾಸ್ತ್ರಿಗಳು ಪರಿಶೋಧಿಸಿದಾರೆ. ಇದರ ಬೆಲೆ 3 ಆಣೆ ಮಾತ್ರ. ಅಂಚೆ ವೆಚ್ಚ ಬೇರೆ. ಈ ಪುಸ್ತಕವು ಮೈಸೂರು ಜನರಲ್ [illegible] ಸಿಯಲ್ಲೂ, ಗ್ರಂಥಕರ್ತರಲ್ಲೂ ದೊರೆಯುತ್ತೆ.

ಡೋಂಗರೆ ಇವರ ಬಾಲಾಮೃತ.

[145-23]

[illegible] ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಇದು ಮಧುರ (ಸಿಹಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಿರೋಣ, ಅಸ್ತಿಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು [illegible] ಆಣೆ, ಟಪಾಲ್ ಖರ್ಚು 3 ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd.)

ಇಲ್ಲಿ [illegible] ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಫ, ಗಂಟ್ಲುನೋವು, [illegible], ಉಳುಕು ಮುಂತಾದವುಗಳು ಅಮೃತಾಂಜನದ ಉಪಯೋಗದಿಂದ ಮಾತ್ರವಾಗಿ ಗುಣವಾದವು. [illegible] ನಮ್ಮ ಅಮೃತಾಂಜನದ ಬಾಟ್ಲಿ 1ಕ್ಕೆ 0-9-0

ಅರ್ಧ ಕ್ರಯಕ್ಕಿಂತಲೂ ಕಡಮೆ

[illegible] ಇವುಗಳು ಬಹಳ ಗಾಢವೂ ನಯವಾಗಿಯೂ ಇವೆ. 1000 ಕ್ಕೆ [illegible] ಕ್ರಯ [illegible] 12 ಆಣೆ [illegible]

1913 ನೇ ವರ್ಷದ ಕ್ಯಾಲೆಂಡರ್ [illegible] ಬಾಟ್ಲಿ ಅಮೃತಾಂಜನ ತೆಗೆದುಕೊಂಡವರಿಗೆ ಪ್ರಗಸಟ್ಟೆಯಾಗಿ [illegible] [16-13]

ಅಮೃತಾಂಜನ ಡಿಪೋ, ಪೋಸ್ಟ್ ಮುಂಬಯಿ.

1913 ನೇ ಪಾಕೆಟ್ ಡೈರಿ



[illegible] ಇದರಲ್ಲಿ ಪಂಚಾಂಗ, ಹಬ್ಬದ ದಿನಗಳು, ಸರ್ಕಾರಿ ರಜಾ ದಿನಗಳು, [illegible], ಟಪಾಲು ಇವಕ್ಕೆ [illegible] ವಿಷಯಗಳು [illegible] ಪ್ರತಿ ದಿನವೂ ನೋಡಿಕೊಳ್ಳ[illegible] ಅವಶ್ಯ.

[illegible]

ಜೇಬಿನಾ ಡೈರಿ.— [illegible], ಒಂದು ನೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು, ಉತ್ತಮವಾದ [illegible] ನಂ. 1—ಸಾದಾ [illegible] ಟಪಾಲು ಹಾಸಲು ಬೇರೆ. ಒಂದೇ ನಮೂನೆಯಲ್ಲಿ 12 ಪ್ರತಿ [illegible] ತರಿಸಿದರೆ ಒಂದು [illegible]

ನಮ್ಮ ಪುಸ್ತಕಗಳ ಪಟ್ಟಿ [illegible] ಉಚಿತವಾಗಿ ಕಳುಹಿಸುತ್ತೇವೆ. [5-50]

ನಮ್ಮ ವಿಳಾಸ ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಸನ್ 1913 ನೇ ಇಸವಿಯ ಸೀತಾರಾಘವ ಪಾಕೆಟ್ ಡೈರಿ

ಬೇಗ ನೋಡಿ ಬಹಳ ಇಳಿಸಿದೆ ಕವಿರಾಜರ್ ಮೆಚ್ಚಿಸಿದ

[illegible] ನಂ. 1 [illegible] ನಂ. 2 [illegible] ಇಟ್ಟು ಮುಚ್ಚಳ [illegible] ನಂ. 3 ದೊಡ್ಡ ಸೈಜು ಸಾದಾ ಡೈರಿಗೆ 0-6-0 ನಂ. 4 ದೊಡ್ಡ ಸೈಜು [illegible] ಇಟ್ಟು ಮುಚ್ಚಳ ಹಾಕಿರುವ ಡೈರಿಗೆ 0-9-0. ಟಪಾಲು [illegible] 7 ಕ್ಕಿಂತ ಹೆಚ್ಚು ಡೈರಿಗೆ ಬರೆಯುವವರು ಅಡ್ವಾನ್ಸಾಗಿ ಒಂದು ರೂಪಾಯಿ ಕಳುಹಿಸಿದರೇನೇ ಡೈರಿಗಳನ್ನು [illegible] ವಿ. ಪಿ. ಮಾಡಲಾದೀತು. [136-11]

ವಿಶೇಷ—(1) ಈ ವರೆಗೆ [illegible] ಡೈರಿಗಳಿಗಿಂತಲೂ ಅಂದವಾಗಿರುವಂತೆ ಹಸನಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ [illegible] (2) [illegible] ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು [illegible] ಸಂವತ್ಸರಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು [illegible] ವಿಷಯಗಳು [illegible] ಬರೆದಿದೆ. (3) [illegible], ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಅಕ್ಟು, [illegible] ಡೈರಿಯಲ್ಲೂ ಇಲ್ಲದಿರುವಷ್ಟು ಹೊಸ ವಿಷಯಗಳನ್ನು ಸೇರಿಸಿದೆ. (4) ಮದರಾಸ್ ಮತ್ತು ಸವರ್ನ್ ಮರಾಟಾ [illegible], ರೈಲು ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರ ತಲಬು, [illegible] ಸಂವತ್ಸರಗಳಿಗೆ ಸರಿಯಾದ [illegible] ಸಂವತ್ಸರಗಳು, [illegible] ಸಹಾ ಇರುತ್ತದೆ. [illegible] ಮುಖ್ಯವಾದ ವಿಷಯ, ಒಟ್ಟು [illegible] ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ [illegible] ಪ್ರೋತ್ಸಾಹ ಅತ್ಯವಶ್ಯ.

[illegible] ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

30—11—1912 ರಿಂದ 6—12—1912 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು.	ತಗಲಿದ್ದು	ಸತ್ತದ್ದು.
ಬೆಂಗಳೂರು ಪಟ್ಟಣ	20	18	0	0
ಮೈಸೂರು ,,	3	0	0	0
ಬೆಂಗಳೂರು ಡಿಸ್ಟ್ರಿಕ್ಟ್	19	16	0	0
ಮೈಸೂರು ,,	20	10	0	0
ಕೋಲಾರ್ ,,	0	0	6	5
ಕೋಲಾರ್ ಚಿನ್ನದ ಗಣಿಗಳು	24	16	0	0
ತುಂಕೂರು ಡಿಸ್ಟ್ರಿಕ್ಟ್	3	2	50	32
ಹಾಸನ ,,	1	5	0	0
ಚಿತ್ರದುರ್ಗ ,,	0	6	15	18
ಕಡೂರ್ ,,	5	5	0	1
ಶಿವಮೊಗ್ಗ ,,	6	7	9	7
ಜುಮ್ಲಾ	104	77	80	63

ಶಾಲಿವಾಹನ ಶಕ ವರುಷಂಗಳು 1834 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಮಾರ್ಗಶಿರ ಶುದ್ಧ ಏಕಾದಶಿ ಶುಕ್ರವಾರದಿಂದ ಮಾರ್ಗಶಿರ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನುರ್ಮಾಸ ತೇದಿ
20	ಶುಕ್ರ	ಏಕಾದಶಿ	17-47	ಭರಣಿ	60-0	6
21	ಶನಿ ,,	ದ್ವಾದಶಿ	17-25	ಕೃತ್ತಿಕೆ	60-0	7
22	ಭಾನು ‡	ತ್ರಯೋದಶಿ	16-55	ರೋಹಿಣಿ	59-56	8
23	ಸೋಮ †	ಚತುರ್ದಶಿ	13-30	ಮೃಗಶಿರ	58-2	9
24	ಮಂಗಳ §	ಪೌರ್ಣಮಿ	9-14	ಆರ್ದ್ರ	55-19	10
25	ಬುಧ ,,	ಪಾಡ್ಯಮಿ	5-26	ಪುನರ್ವಸು	51-19	11
26	ಗುರು *	ಬಿದಿಗೆ	0-13	ಪುಷ್ಯ	44-11	12

ಸರ್ವತ್ರ ಏಕಾದಶಿ, ದ್ವಾದಶಿ ತಿಥಿ, ಶ್ರೀರಂಗದಲ್ಲಿ ಕೊಡಾರೋತ್ಸವಾರಂಭ. ,, ತ್ರಯೋದಶೀ ತಿಥಿ, ಮುಕ್ಕೋಟಿ ದ್ವಾದಶಿ, ಶನಿಪ್ರದೋಷ. ಮಳೆ ನಕ್ಷತ್ರ —ಮೂಲ 4ನೇ ಪಾದ. ‡ ಹನುಮಜ್ಜಯಂತಿ. , ಅಂಧಕಾಸುರಸಂಹಾರ. § ಆರಿದ್ರೋತ್ಸವ, ಮಳೆ ನಕ್ಷತ್ರ —ಮೂಲ 1ನೇ ಪಾದ. ಪರಶುರಾಮ ಜಯಂತಿ. * ಉಪಾ

ಕೋಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಟ್ಟಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭-೬-೦	೧೭-೮-೦
ಕೆಂಬೂತಿ ಅಕ್ಕಿ ಅವಲ್		೧೭-೪-೦	೧೭-೮-೦
,, ದುಯ್ಯ		೧೬-೮-೦	೧೭-೦-೦
ಬಾಸ್ಮತಿ ಅಕ್ಕಿ		೧೬-೮-೦	೧೭-೬-೦
ಸಣ್ಣಕ್ಕಿ ಅವಲ್		೧೮-೦-೦	೧೮-೮-೦
,, ದುಯ್ಯ		೧೬-೧೨-೦	೧೬-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೨-೧-೦	೧೨-೮-೦
,, ದುಯ್ಯ ,		೧೨-೦-೦	೧೨-೮-೦
ಹೆಸರು ಬೇಳೆ ಪಲ್ಲಾ ೧ಕ್ಕೆ		೭-೬-೦	೫-೦-೦
ಕಾಳ್ಳೆಗ ,,		೭-೦-೦	೪-೧೨-೦
ಜೋಳ ,,		೬-೯-೦	೭-೬-೦
ಹಲಸಂದೆ ಪಲ್ಲಾ ೧ಕ್ಕೆ		೧೦-೪-೦	೧೨-೧೨-೦
ಬಿಳೀ ಅವರೆ ,,		೧೦-೦-೦	೧೧-೦-೦
ಹೆಸರು ,,		೧೧-೮-೦	೧೬-೦-೦
ಉದ್ದು ,,		೧೬-೦-೦	೧೬-೦-೦
ಕಡಲೆ ,,		೧೨-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೨-೮-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭-೬-೦	೭-೦-೦
ಹರಳು ೧೨೭ ಸೇರಿಗೆ		೧೨-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೩-೮-೦	೩-೮-೦
ಮೆಣಸಿನಕಾಯಿ ,,		೩-೦-೦	೩-೪-೦
,, ದುಯ್ಯ		೨-೪-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೨-೦	೬-೬-೦
ಹರಳೆಣ್ಣೆ ,, ,,		೫-೬-೦	೬-೦-೦
ಕೊತ್ತಂಬರಿ ಪಲ್ಲಾ ೧ಕ್ಕೆ		೫-೮-೦	೫-೪-೦
ಉಪ್ಪು ,, ,,		೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧-೨-೦	೧-೬-೦
,, ಹಳೇದು ,,		೧-೮-೦	೦-೧೪-೦
ತುಪ್ಪ ಮಣ ೧ಕ್ಕೆ		೧೬-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬-೮-೦	೬-೦-೦
ಆಲೂಗಡ್ಡೆ ಮಣ ೧ಕ್ಕೆ		೧-೪-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೦-೧೩-೦	೧-೮-೦
ಚಿನ್ನ (ಪವನ್) ಕೆಂಪು		೧೫-೮-೦	೧೫-೮-೦
,, ,, ಪಸಿಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೧೮-೦-೦

ನಮ್ಮ ಚಂದಾದಾರರಿಗೆ.

ತಾ. ೨೫ ನೇ ಬುಧವಾರ ಕ್ರಿಸ್ಮಸ್ ಹಬ್ಬವಾದ ಕಾರಣ ಮುಂದಿನ ವಾರದ "ವೃತ್ತಾಂತ ಪತ್ರಿಕೆ" ಯನ್ನು ಒಂದು ದಿನ ಮುಂಚೆ ಅಂದರೆ ತಾ. ೨೪ ನೇ ಮಂಗಳವಾರವೇ ಪ್ರಿಂಟುಮಾಡಿ ಕಳುಹಿಸುವೆವೆಂದು ವ್ಯಕ್ತಪಡಿಸುತ್ತೇವೆ. ಮ್ಯಾನೇಜರ್.

ವೃತ್ತಾಂತ ಪತ್ರಿಕೆ.

—:o:—

ಶಕ ೧೯೧೩ ನೇ ಇಸವಿ ಡಿಸೆಂಬರ್ ತಾ. ೧೯ ನೇ ಗುರುವಾರ.

ನಮ್ಮ ದಿವಾನರವರ ಕಾರ್ಯಕ್ರಮವು.

ಕಳೆದ ಗುರುವಾರ ಮಧ್ಯಾಹ್ನ ಮೈಸೂರು ಸಂಸ್ಥಾನದ ದಿವಾನಗಿರಿಗೆ ನೇಮಕವಾಗಿರುವ ಮೆ॥ ಎಂ. ವಿಶ್ವೇಶ್ವರೈಯನವರನ್ನು ಬೆಂಗಳೂರಿನ ಎಲ್ಲಾ ಕೋಮುಗಳ ಮತ್ತು ಕಸಬುಗಳ ಪ್ರಜೆಗಳ ಪ್ರಮುಖರು ಅಲ್ಲಿನ ದಿವ್ಯವಾದ ಲಾಲ್ ಬಾಗ್ ಉದ್ಯಾನವನಕ್ಕೆ ಬರಮಾಡಿಕೊಂಡು, ಅವರಿಗೆ ಹತ್ತು ಸಂಗಡಗಳ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು. ಈ ಅಡ್ರೆಸ್ಸುಗಳಲ್ಲಿ ಪ್ರಜೆಗಳ ನೈಜವಾದ ರಾಜಭಕ್ತಿ ವಿಶ್ವಾಸಗಳು ಮೆರೆಯುತ್ತಿದ್ದವಲ್ಲದೆ ಗವರ್ನಮೆಂಟಿನವರು ಪ್ರಜೆಗಳ ಅಭ್ಯುದಯಕ್ಕೂ, ದೇಶೋನ್ನತಿಗೂ ಮಾಡಬೇಕೆಂದು ಮೇಲ್ಕಂಡ ಪ್ರಮುಖರು ಅಭಿಪ್ರಾಯಪಡುವ ಕಾರ್ಯಗಳನ್ನು ಕಾಣಿಸಿದ್ದವು.

ದಿವಾನ್ ಮೆ॥ ವಿಶ್ವೇಶ್ವರೈಯನವರು ಆ ಅಡ್ರೆಸ್ಸುಗಳನ್ನು ಕೃತಜ್ಞತಾಪೂರ್ವಕವಾಗಿ ಅಂಗೀಕರಿಸಿ ಅವರುಗಳನ್ನೆಲ್ಲಾ ಬಹು ಸಂತೋಷದಿಂದ ವಂದನೆಮಾಡಿದ ಬಳಿಕ ಅವರುಗಳನ್ನು ಕುರಿತು ಸಾಮಾನ್ಯವಾಗಿ ಪ್ರಜೆಗಳು ಎಷ್ಟು ಮಟ್ಟಿಗೆ ಮುಂದರಿದು ಹೋಗಲು ಸಿದ್ಧರಾಗಿರುವರೋ ಅದಕ್ಕಿಂತಲೂ ಬೇಗನೆ ಗವರ್ನಮೆಂಟಿನವರು ಹೋಗಬಲ್ಲರೆಂದು ಹೇಳಲಾಗುವುದಿಲ್ಲವೆಂದೂ, ಗವರ್ನಮೆಂಟಿನವರ ಚೈತನ್ಯವು ಮಿತಿಮೀರಿದ್ದಲ್ಲವಾದಕಾರಣ ಅವರು ಪ್ರತಿ ಒಂದು ಸಂಗಡದವರ ಅಭೀಷ್ಟವನ್ನೂ ಈಡೇರಿಸಿ ತೃಪ್ತಿಪಡಿಸಲಾರರೆಂದೂ ಪ್ರತ್ಯುತ್ತರ ಕೊಟ್ಟರು. ಅವರು ಇನ್ನೂ ಹೇಳಿದ್ದೇನೆಂದರೆ, ಈ ಅಡ್ರೆಸ್ಸುಗಳಲ್ಲಿ ಪ್ರಜೆಗಳು ತಾವು ಮಾತ್ರ ಏನೇನು ಮಾಡಲು ಸಿದ್ಧರಾಗಿರುವರೋ, ಅವರು ಎಷ್ಟು ಮಟ್ಟಿಗೆ ಮುಂದರಿದು ಸರ್ಕಾರದವರಿಗೆ ಬೆಂಬಲಕೊಡುವರೋ, ಈ ಭಾಗಗಳಲ್ಲಿ ಒಂದು ಮಾತನ್ನಾದರೂ ಹೇಳಿರುವುದಿಲ್ಲ. ಪ್ರಜೆಗಳು ತಾವು ಮಾತ್ರ ಏನೂ ಮಾಡದೆ ಸರ್ಕಾರದವರನ್ನು ಇದಾಗಬೇಕು ಅದಾಗಬೇಕೆಂದು ಕೇಳೋಣದರಿಂದ ಇಂಥಾ ಸಂದರ್ಭದಲ್ಲಿ ತಾವು (ದಿವಾನರವರು) ಅವರಿಗೆ ಯಾವ ಅಭಯವನ್ನೂ ಕೊಡುವುದು ಸಾಧ್ಯವಲ್ಲ. ಯಾಕೆಂದರೆ ಪ್ರಜೆಗಳು ಇಷ್ಟಪಟ್ಟು ರೂಪಿಸಿದಂತೆ ಗವರ್ನಮೆಂಟು ಆಕೃತಿಯನ್ನು ಹೊಂದುತ್ತದೆ. ಪ್ರಜೆಗಳ ಶಕ್ತಿ ಸಾಮರ್ಥ್ಯಗಳಿಗಿಂತಲೂ ಗವರ್ನಮೆಂಟಿನ ಸಾಮರ್ಥ್ಯವೇನೂ ಮೀರಿರಲಾರದು. ಪ್ರಜೆಗಳು ಮುಂದೆ ಬಂದು ತಮ್ಮ ಯೋಗ್ಯತಾಸಿದ್ಧಿಯನ್ನು ಪ್ರಕಟಮಾಡುತ್ತಾ ಬಂದಹಾಗೆಲ್ಲಾ ಗವರ್ನಮೆಂಟಿನವರು ಅವರಿಗೆ ಬೇಕಾಗುವ ಸಹಾಯಸಂಪತ್ತುಗಳನ್ನು ಒದಗಿಸಲು ಸಂತೋಷವುಳ್ಳವರಾಗುತ್ತಾರೆ.

ದಿವಾನರವರು ಅಪ್ಪಣೆಕೊಡಿಸಿರುವ ಮಾತುಗಳು ಸಹಜವಾದವುಗಳೆಂದು ನಾವು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತೇವೆ. ಈಗಿನ ಸ್ಥಿತಿಗತಿಗಳನ್ನು ನೋಡಿ ಅತೃಪ್ತಿಯನ್ನೂ ಅಸಮಾಧಾನವನ್ನೂ ಪಡೆದಿರುವಂಥವರು ಸಮಸ್ತವನ್ನೂ ಗವರ್ನಮೆಂಟಿನವರೇ ಮಾಡಬೇಕೆಂದು ಅಪೇಕ್ಷಿಸುತ್ತಾರೆ. ಇಂಥಾ ಸ್ಥಿತಿಯಲ್ಲಿರುವ ಯಾವ ಜನಾಂಗವಾಗಲಿ ಅಭಿವೃದ್ಧಿಗೆ ಬರಲಿಲ್ಲವೆಂದು ಹೇಳುತ್ತೇವೆ. ಸಂಸ್ಥಾನದಲ್ಲಿರುವ ಕುಂದುಕೊರತೆಗಳನ್ನೂ, ಅಭಿವೃದ್ಧಿಯ ಮಾರ್ಗಗಳನ್ನೂ ಪ್ರಜೆಗಳು ಕೂಡ ಕಷ್ಟಪಟ್ಟು ಗೊತ್ತುಮಾಡಿಕೊಂಡು, ಅವರಲ್ಲಿ ತನ್ನ ಪಾಲಿನ ಕರ್ತವ್ಯವನ್ನು ವಹಿಸಿ ಮುತುವರ್ಜಿಯಿಂದ ನಡಿಸುತ್ತಾ ಗವರ್ನಮೆಂಟಿಗೆ ಸಹಾಯಮಾಡುತ್ತಾ ಬರುವವನಾಗಬೇಕು. ಪ್ರಜೆಗಳು ಎಷ್ಟು ದಿನ ಅಜಾಗರೂಕರಾಗಿಯೇ ಇರುವುದಕ್ಕಾದೀತು? ಗವರ್ನಮೆಂಟಿನವರು ತಾನೇ ಎದುವರೆಗೆ ಪ್ರಜೆಗಳ ಇಷ್ಟಾರ್ಥಗಳನ್ನೆಲ್ಲಾ ನಡಿಸಿಕೊಡುತ್ತಾ ಬಂದಾರು? ಪ್ರಜೆಗಳು ತಮ್ಮ ಜನ್ಮಭೂಮಿಯ ಮೇಲೆ ಅಚಂಚಲವಾದ ಪ್ರೀತಿಯನ್ನಿಟ್ಟು, ಅದನ್ನು ಸರ್ವವಿಧದಲ್ಲೂ ಅಭಿವೃದ್ಧಿಗೆ ತರುವ ಭಾಗದಲ್ಲಿ ಸ್ವಪ್ರಯೋಜನವನ್ನಾಗಲಿ ಸ್ವಾರ್ಥವನ್ನಾಗಲಿ ಲೆಕ್ಕಿಸದೆ ಕಷ್ಟಪ್ರಯತ್ನವನ್ನು ಮಾಡಬೇಕು. ಇಂಥಾ ಸರ್ವೋತ್ತಮವಾದ ಉದ್ದೇಶದಿಂದ ಸಕಲರೂ ಏಕೀಭವಿಸಿ ಕಾರ್ಯಸಾಧನೆಮಾಡುತ್ತಾ ಬಂದರೆ ದೇಶಾಭಿವೃದ್ಧಿಯೂ ಪ್ರಜೆಗಳ ಶ್ರೇಯಸ್ಸೂ ತಮಗೆ ತಾವೇ ಲಭ್ಯವಾಗುವವು.

ಆದರೆ ಒಂದು ವಿಷಯವನ್ನು ಮಾತ್ರ ಪ್ರಜೆಗಳು ಗವರ್ನಮೆಂಟಿನವರನ್ನು ಒತ್ತಿ ಕೇಳಬಹುದಾಗಿದೆ; ಇದನ್ನು ಮೇಲ್ಕಂಡ ಅಡ್ರೆಸ್ಸುಗಳಲ್ಲಿ ಯಾರೂ ಕಾಣಿಸದೆಹೋದರು. ಅದೇನೆಂದರೆ, ಸರ್ಕಾರದ ಸಂಬಳಗಾರರು ತಮ್ಮ ಕರ್ತವ್ಯಾಂಶವನ್ನು ಅತಿ ಜಾಗ್ರತೆಯಿಂದಲೂ ಚಟುವಟಿಕೆಯಾಗಿಯೂ ನೆರವೇರಿಸುತ್ತಾ ಬರಬೇಕು. ಕೆಲವು ದಿನಗಳಲ್ಲಿ ಮಾಡಬಹುದಾದ ಕಾರ್ಯಗಳನ್ನು ತಿಂಗಳುಗಟ್ಲೆ ಕಳೆದುಹೋದರೂ ಪೂರೈಸದೆ ಪ್ರಜೆಗಳನ್ನು ದಣಿಸುತ್ತಾರೆ. ಇದು ತಪ್ಪುವಂತಾಗಬೇಕು. ಎರಡನೆಯದಾಗಿ, ತಲಬುದಾರರು ನಿಷ್ಪಕ್ಷಪಾತಿಗಳಾಗಿಯೂ, ಅಧರ್ಮಪ್ರವೃತ್ತಿಗೆ ಅಸಹಿಷ್ಣುವರಾಗಿಯೂ ಇರಬೇಕಾದದ್ದು ಪರಮಾವಶ್ಯಕ. ಅವರು ಪ್ರಜೆಗಳ ಕೂಡ ವ್ಯವಹರಿಸುವುದರಲ್ಲಿ ಬಹಳ ಸತ್ಯಸಂಧರಾಗಿರಬೇಕು. ಇತರ ಕಡೆಗಳಿಂದ ಬಲಾತ್ಕಾರವಾಗಲಿ, ಶಿಫಾರಸಾಗಲಿ ಬರುವ ತನಕ ತಮ್ಮ ಕರ್ತವ್ಯವನ್ನು ನಡಿಸದೆ ಅಲಕ್ಷ್ಯಮಾಡುವವರಾಗಕೂಡದು. ಹಾಗೆ ಸಾವಕಾಶಮಾಡುವಂಥಾ ನೌಕರದಾರರುಗಳ ವಿಷಯದಲ್ಲಿ ಗವರ್ನಮೆಂಟಿನವರು ಬರೀ ಆಗ್ರಹವನ್ನು ಪ್ರಕಾಶಪಡಿಸುವುದರಲ್ಲಿ ಫಲವಿಲ್ಲ. ಶ್ರೀಮನ್ಮಹಾರಾಜರವರ ಅಭೀಷ್ಟವನ್ನು ನೆರವೇರದಂತೆ ಅಡ್ಡಿಮಾಡುವಂಥಾವನು ಅಧಿಕಾರಿಯಾಗಿರಲಿ, ನೌಕರನಾಗಿರಲಿ ಸರ್ಕಾರದವರು ದಾಕ್ಷಿಣ್ಯವಿಡದೆ ಪಕ್ಷಪಾತಮಾಡದೆ ಶಿಫಾರಸು ಕೇಳದೆ ಕೆಲಸದಿಂದ ವಜಾಮಾಡುವುದಕ್ಕೆ ಸಿದ್ಧರಾಗಿರಬೇಕು. ಈ ಸಂಸ್ಥಾನದಲ್ಲಿ ವಿದ್ಯೆ, ವ್ಯಾಪಾರ, ವ್ಯವಸಾಯ, ಆರೋಗ್ಯಭಾಗ್ಯ, ಕಸಬು, ಇವೇ ಮೊದಲಾದ ಭಾಗಗಳು ಅಭಿವೃದ್ಧಿಹೊಂದಬೇಕೆಂದು ಶ್ರೀಮನ್ಮಹಾರಾಜರವರು ಎಷ್ಟು ಮಟ್ಟಿಗೆ ಕುತೂಹಲವುಳ್ಳವರಾಗಿರುತ್ತಾರೋ ಅಷ್ಟು ಮಟ್ಟಿಗೂ ಈ ನೌಕರಿಯ ತನಿಖೆಯು ಸತ್ಯವಾಗಿಯೂ ನಿರ್ದುಷ್ಟವಾಗಿಯೂ ಇರಬೇಕೆಂದು ಆ ಪ್ರಭುಗಳು ಅಪೇಕ್ಷಿಸುತ್ತಾರೆಂದು ನಾವು ತಿಳಿದಿದ್ದೇವೆ. ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಅಪೇಕ್ಷಿಸದಂಥಾ ದ್ರವ್ಯವನ್ನಾಗಲಿ ದವಸವನ್ನಾಗಲಿ ಪದಾರ್ಥವನ್ನಾಗಲಿ ಬಡಪ್ರಜೆಗಳಿಂದಲೂ, ರೈತರಿಂದಲೂ ತೆಗೆದುಕೊಳ್ಳುವ ಅಧಿಕಾರಿಯನ್ನೂ ನೌಕರನನ್ನೂ ಕೂಡಲೇ ಕೆಲಸದಿಂದ ತೆಗೆದುಹಾಕಿ, ಇತರರಿಗೆ ಎಚ್ಚರಿಕೆಯನ್ನುಂಟುಮಾಡಬೇಕು. ಹೀಗೆ ಮಾಡೋಣದರಿಂದ ಪ್ರಜೆಗಳಿಗೆ ಗವರ್ನಮೆಂಟಿನವರ ಮೇಲೆ ಸಹಜವಾದ ಭಕ್ತಿಪ್ರೀತಿಗಳೂ ಭರವಸೆಯೂ ಮೊದಲಿನಂತೆ ಸ್ಥಾಪನೆಯಾಗಲು ತುಂಬಾ ಸಹಾಯವಾಗುತ್ತದೆ.

ಮಾನವನು ಸೂತ್ರದ ಬೊಂಬೆಯ ಹಾಗಿದ್ದಾನೋ? ಅವನಿಗೆ ಸ್ವಾತಂತ್ರ್ಯವಿಲ್ಲವೋ?

ಮನುಷ್ಯನಿಗೆ ಸ್ವಾತಂತ್ರ್ಯವಿದೆ ಎಂದು ನಂಬುವುದಕ್ಕೆ ಮೂರು ಪ್ರಬಲವಾದ ಆಧಾರಗಳಿರುತ್ತವೆ.

(1) ಮನುಷ್ಯನ ಅಂತರ್ಯದಲ್ಲಿರುವ ಮನಸ್ಸಾಕ್ಷಿಯು ಮಾಡುವ ತೀರ್ಮಾನ.

ಮನಸ್ಸಾಕ್ಷಿಯು ಮನುಷ್ಯನು ಮಾಡುವ ಕಾರ್ಯವು ಒಳ್ಳೆಯದು ಅಥವಾ ಕೆಟ್ಟದು ಎಂದು ಸ್ಪಷ್ಟವಾಗಿ ಅವನಿಗೆ ತಿಳಿಸುತ್ತದೆ. ಅವನು ಸತ್ಕಾರ್ಯ ಮಾಡಿದರೆ ಮನಸ್ಸಾಕ್ಷಿಯು ಸಂತೋಷಪಟ್ಟು ಅವನನ್ನು ಹೊಗಳುತ್ತದೆ, ದುಷ್ಕಾರ್ಯ ಮಾಡಿದರೆ ಅದು ಸಿಟ್ಟುಗೊಂಡು ಅವನ ಮೇಲೆ ಅಪವಾದ ಹೊರಿಸುತ್ತದೆ. ಇಂತಹ ಅನುಭವವು ಸರ್ವರಲ್ಲಿಯೂ ಸಾಮಾನ್ಯವಾದುದು.

(2) ನಾವು ಬೇರೊಬ್ಬರ ವಿಷಯ ಮಾಡುವ ತೀರ್ಮಾನ.

ನಮ್ಮ ನೆರೆಯವರು ಒಳ್ಳೆಯದನ್ನು ಮಾಡಿದರೆ ನಾವು ಅವರನ್ನು ಸ್ತೋತ್ರಮಾಡುವುದೂ ಕೆಟ್ಟದನ್ನು ಮಾಡಿದರೆ ನಿಂದಿಸುವದೂ ಏಕೆ? ಏಕೆಂದರೆ ಸರ್ವರೂ ಅಧರ್ಮವನ್ನು ತ್ಯಜಿಸಿ ಸದ್ಧರ್ಮವನ್ನೇ ಕೈಕೊಂಡು ನಡೆಯುವುದಕ್ಕೆ ಶಕ್ತರಾಗಿದ್ದಾರೆಂದು ನಾವು ನಂಬಿರುವುದರಿಂದಲೇ. ಮನುಷ್ಯನಿಗೆ ಸ್ವಾತಂತ್ರ್ಯವುಂಟು ಎಂಬ ನಂಬಿಕೆಯ ಮೇಲೆಯೇ ಗೌರ್ನಮೆಂಟುಗಳೂ ನ್ಯಾಯಸ್ಥಾನಗಳೂ ತಮ್ಮ ಕಾರ್ಯಗಳನ್ನು ನಡಿಸುತ್ತವೆ. ಮನುಷ್ಯನಿಗೆ ಸ್ವಾತಂತ್ರ್ಯವೇ ಇಲ್ಲದಿದ್ದ ಪಕ್ಷದಲ್ಲಿ ಗೌರ್ನಮೆಂಟಿನವರು ಒಳ್ಳೆಯ ಕೆಲಸಗಳನ್ನು ಮಾಡಿದವನಿಗೆ ರಕ್ಷಣೆಯನ್ನೂ ಕೆಟ್ಟ ಕೆಲಸಗಳನ್ನು ಮಾಡಿದವನಿಗೆ ಶಿಕ್ಷೆಯನ್ನೂ ವಿಧಿಸುವುದು ಪೂರ್ಣ ಅನ್ಯಾಯವಾಗಿದೆ.

(3) ವೇದೋಕ್ತಿಗಳ ಆಧಾರ.

ಧರ್ಮ ಅಧರ್ಮ, ನೀತಿ ಅನೀತಿ, ಪಾಪ ಪುಣ್ಯಗಳೆಂಬ ಮಾತುಗಳು ಸಮಸ್ತ ಮತಗಳ ಶಾಸ್ತ್ರಗಳಲ್ಲಿಯೂ ಗ್ರಂಥಗಳಲ್ಲಿಯೂ ಇರುತ್ತವೆ. ಆ ಗ್ರಂಥಗಳು ದೇವರು ದುಷ್ಟನಿಗ್ರಹ ಶಿಷ್ಟಪರಿಪಾಲಕನೆಂದು ಹೇಳುತ್ತವೆ. ಅವುಗಳಲ್ಲಿ ಭಕ್ತರಿಗೆ ಸ್ತೋತ್ರವೂ ಪಾಪಿಷ್ಠರಿಗೆ ಎಚ್ಚರಿಕೆಯೂ ದಂಡನೆಯೂ ಇರುತ್ತವೆ. ಆದುದರಿಂದ ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲವೆಂದು ವಾದಿಸುವುದು ಹೇಗೆ?

ಮೇಲೆ ಹೇಳಿದ ನ್ಯಾಯಗಳಿಂದ ದೇವರು ಮನುಷ್ಯರನ್ನು ಸ್ವತಂತ್ರವುಳ್ಳವರನ್ನಾಗಿ ಸೃಷ್ಟಿಸಿರುತ್ತಾನೆಂಬುದು ಸಿದ್ಧಾಂತವಾಗುತ್ತದೆ. ಎಂದರೆ ಅವರು ಸ್ವರ್ಗಕ್ಕೂ ನರಕಕ್ಕೂ ಕಾರಣರಾಗುವ ಶಕ್ತಿಯುಳ್ಳವರು. ದೇವರ ಆಜ್ಞೆಯನ್ನು ಕೈಕೊಳ್ಳುವದಕ್ಕಾಗಲಿ, ಮೀರುವುದಕ್ಕಾಗಲಿ, ಒಳ್ಳೆಯದನ್ನು ಆರಿಸಿಕೊಳ್ಳುವದಕ್ಕಾಗಲಿ, ಬಿಟ್ಟುಬಿಡುವುದಕ್ಕಾಗಲಿ ಸ್ವತಂತ್ರರಾಗಿರುತ್ತಾರೆ. ಕ್ರೈಸ್ತ ವೇದವು "ದೇವರು ಮನುಷ್ಯನನ್ನು ತನ್ನ ಹೋಲಿಕೆಯಲ್ಲಿ ಉಂಟುಮಾಡಿದನು" ಎಂದು ಹೇಳುವಲ್ಲಿ ಈ ಅರ್ಥವೂ ಗರ್ಭಿತವಾಗಿದೆ. ದೇವರು ಹೇಗೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೋ ಹಾಗೆಯೇ ಮನುಷ್ಯನಿಗೂ ಒಂದು ಮಟ್ಟಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ. ಮನುಷ್ಯರು ಒಳ್ಳೆಯದನ್ನೇ ಮಾಡುವುದಕ್ಕೆ ದೇವರು ಬಲಾತ್ಕಾರಮಾಡುವುದಿಲ್ಲ. ಅವರು ಕೆಟ್ಟುದನ್ನು ಮಾಡುವುದಕ್ಕೆ ಹೋದಾಗ ದೇವರು ಬಲವಂತದಿಂದ ಅವರನ್ನು ತಡೆದು ನಿಲ್ಲಿಸುವುದಿಲ್ಲ. ನಾವು ಮೇಲೆ ಸೂಚಿಸಿದಂತೆ ನಿರ್ಬಂಧದಿಂದ ಮಾಡಿದ ಒಳ್ಳೆಯ ಕಾರ್ಯಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಮಾನವಧರ್ಮಶಾಸ್ತ್ರದಲ್ಲಿ ಸ್ತ್ರೀಯರ ವಿಷಯದಲ್ಲಿ ಹೀಗೆ ಹೇಳಿರುತ್ತದೆ:—

"ಆತ್ಮಾನ ಮಾತ್ಮನಾಯಾಸ್ತು ರಕ್ಷೇಯುಸ್ತಾಸ್ಸುರಕ್ಷಿತಾಃ"

ಇದರ ಅರ್ಥವೇನೆಂದರೆ, ಯಾರು ಆತ್ಮನನ್ನು ಆತ್ಮದಿಂದ ಕಾಪಾಡಿಕೊಳ್ಳುವರೋ ಅಂಥವರು ಸುರಕ್ಷಿತರಾಗಿರುತ್ತಾರೆ ಎಂಬುವುದೇ. ಈ ಮಾತು ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ಸಲ್ಲತಕ್ಕದಾಗಿದೆ; ಅಲ್ಲದೆ ಮಾನವರು ಕುಣಿದಾಡಿಸುವ ಸೂತ್ರದ ಬೊಂಬೆಗಳ ಹಾಗಿರದೆ, ಪೂರ್ಣ ಸ್ವಾತಂತ್ರ್ಯವುಳ್ಳವರಾಗಿದ್ದಾರೆಂದು ಸಿದ್ಧಾಂತಪಡಿಸುತ್ತದೆ.

ದಳವಾಯಿ ದೇವರಾಜೆ ಅರಸಿನವರ ಮರಣವು.

ಮೈಸೂರು ಸಂಸ್ಥಾನದ ಎರಡನೇ ಕೌನ್ಸಿಲರ್ ಮೆ॥ ದಳವಾಯಿ ದೇವರಾಜೆ ಅರಸಿನವರು ಮೊನ್ನೆ (ಮಂಗಳವಾರ) ಬೆಳಗಿನ ಝಾಮದ ಸುಮಾರು 1 ಘಂಟೆ ಹೊತ್ತಿನಲ್ಲಿ ಬೆಂಗಳೂರಿನ ತಮ್ಮ ಬಂಗಲೆಯಲ್ಲಿ ಕಾಲವಾದರೆಂಬ ವಾರ್ತೆಯನ್ನು ತಿಳಿಸಲು ಬಹಳವಾಗಿ ವಿಷಾದಪಡುವೆವು. ಮಂಗಳವಾರ ಮಧ್ಯಾಹ್ನ ಅವರು ಪದ್ಧತಿಯ ಪ್ರಕಾರ ಆಫೀಸಿಗೆ ಹೋಗಿ ಕಚೇರಿಯ ಮೇಲೆ ಕೆಲಸಮಾಡುತ್ತಿರುವಲ್ಲಿ ಜಾಡ್ಯವು ಆಕಸ್ಮಾತ್ತಾಗಿ ಪ್ರಾಪ್ತವಾಯಿತು. ಕೂಡಲೇ ಅವರನ್ನು ಅಲ್ಲಿಂದ ಬಂಗಲೆಗೆ ಸಾಗಿಸಿ ವೈದ್ಯರುಗಳನ್ನು ಕರೆಸಿ ಚಿಕಿತ್ಸೆಗಳನ್ನು ಮಾಡಿಸಿದಾಗ್ಯೂ, ಸಾಧ್ಯವಾಗದೆ ಬೆಳಗಿನ ಝಾಮದಲ್ಲಿ ಅವರು ತೀರಿಹೋದರೆಂದೂ ಕೇಳುತ್ತೇವೆ. ಈ ಆಕಸ್ಮಿಕವಾದ ಮರಣವಾರ್ತೆಯು ಶ್ರೀಮನ್ಮಹಾರಾಜರವರಿಗೂ ರಾಜಮನೆತನದವರಿಗೂ ಅರಸುಗಳಿಗೂ ಸಂಸ್ಥಾನದ ಸಕಲ ಪ್ರಜೆಗಳಿಗೂ ಅಪಾರವಾದ ವ್ಯಸನವನ್ನುಂಟುಮಾಡಿರುತ್ತದೆ. ರಾಜಧಾನಿಯಿಂದ ಮುಖ್ಯರಾದ ರಾಜಬಂಧುಗಳೂ ಜನನಾಯಕರೂ ನೆನ್ನೆ ಮೋಟಾರುಗಳಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು. ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರವರೂ ಸಹ ಪ್ರಯಾಣ ... ಬೆಂಗಳೂರಿಗೆ ನೆನ್ನೆಯೇ ಹೊರಟು ಬಂದಿರಬಹುದೆಂದು ಊಹಿಸಲ್ಪಟ್ಟಿದೆ.

ಮ॥ ದೇವರಾಜೆ ಅರಸಿನವರು ಪ್ರಸಿದ್ಧವಾದ ಮೈಸೂರು ವಂಶದಲ್ಲಿ 1857 ನೇ ಇಸವಿ ಮಾರ್ಚಿ 30 ನೇ ತಾರೀಖಿನಲ್ಲಿ ಜನಿಸಿ, 1881 ಫೆಬ್ರವರಿಯಲ್ಲಿ ಮೈಸೂರು ಕಮಿಷನರ್ ದಿನಗಳಲ್ಲಿ ಅಸಿಸ್ಟೆಂಟ್ ಎಂಬ ಉದ್ಯೋಗಕ್ಕೆ ಸೇರಿ, 1896 ರಲ್ಲಿ ಅ॥ ಕಮಿಷನರ್ ರ ಹುದ್ದೆಗೂ, 1901 ರಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಗೂ ಏರಿದರು. ಅಲ್ಲಿಂದ ಮುಂದಕ್ಕೆ 1897 ... ಕಮಿಷನರ್ ಹುದ್ದೆಯು ದೊರೆತು ಐದು ವರುಷ ಅಲ್ಲಿದ್ದು ಬಳಿಕ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗವಾಗಿ ... ಒಂದು ವರುಷ ಚಿಕ್ಕಮಗಳೂರಿನಲ್ಲೂ, ಬಳಿಕ ಎರಡು ವರುಷ ಮತ್ತೆ ಬೆಂಗಳೂರಿನಲ್ಲೂ ಡೆ. ಕಮಿಷನರ್ ರಾಗಿದ್ದು 1908 ನೇ ಮಾರ್ಚಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರ ಹುದ್ದೆಗೂ, ಮಿ. ಸ್ಪಾರ್ಕ್ಸ್ ರವರು ಕೆಲಸ ಬಿಟ್ಟ ಮೇಲೆ ಅಂದರೆ ಇದೇ ವರುಷದ ಫೆಬ್ರವರಿ ತಾ. ೨೧ ರಂದು ಸಂಸ್ಥಾನದ ಎರಡನೇ ಕೌನ್ಸಿಲರ್ ಹುದ್ದೆಗೂ ಬಡ್ತಿಯಾಗಿ, ಗಾಂಭೀರ್ಯ ದಯಾಳುತ್ವ ಮೊದಲಾದ ಶೀಲಗುಣಗಳಿಂದ ಖ್ಯಾತಿಯನ್ನು ಪಡೆದಿದ್ದರು. ಇವರಿಗೆ ನಾಲ್ವರು ಸಣ್ಣ ವಯಸ್ಸಿನ ಕುಮಾರರೂ, ಐದು ಮಂದಿ ಕುಮಾರಿಯರೂ ಇರುತ್ತಾರೆ. ಹಿರಿಯ ಮಗನು ಮದರಾಸಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವರು. ಕುಮಾರಿಯರ ಪೈಕಿ ಹಿರಿಯರಿಗೂ ... ಒಬ್ಬರು ಯುವರಾಜರವರ ... ಸರ್ದಾರ್ ಗೋಪಾಲರಾಜೆ ಅರಸಿನವರ ಪತ್ನಿಯರಾಗಿಯೂ ಇರುತ್ತಾರೆ. ... ವರುಷ ತುಂಬಿದರೂ ಇನ್ನೂ ಚಿಕ್ಕ ಪ್ರಾಯದವರಂತೆ ಇದ್ದರು. ಇವರು ಆಕಸ್ಮಾತ್ತಾಗಿ ಅಸ್ತಂಗತರಾದುದು ವಿಶೇಷ ನಷ್ಟವೇ ಸರಿ. ... ಅವರ ವಿಯೋಗದಿಂದ ದುಃಖಪಡುತ್ತಿರುವ ಸಮಸ್ತ ಬಂಧುಗಳಿಗೂ ಪ್ರಜೆಗಳ ಕೂಡ ನಾವೂ ಅನುತಾಪವನ್ನು ಈ ಮೂಲಕ ಅರ್ಪಿಸುತ್ತೇವೆ.

ಬಿಡಿ ವೃತ್ತಾಂತಗಳು.

ರಾಜಧಾನಿಯ ಅರಮನೆಯಲ್ಲಿ ನಡೆಯುವ ವಿವಾಹೋತ್ಸವಕ್ಕೆ ಶ್ರೀಮನ್ಮಹಾರಾಜರವರು ಅರಮನೆಯ ಬಾರ್ ಇಲಾಖಾ ಛತ್ರಿಯಾದ ... ರಾಜೆ ಅರಸಿನವರನ್ನು ... ಗಳ ಸಮೇತ ಕಳುಹಿಸಿ...

•

ಡಾಕ್ಟರ್ ಅಬ್ದುಲ್ ... ಎರಡು ತಿಂಗಳ ರಜಾ ಪಡೆದು ವಿಶ್ರಾಂತಿಗಾಗಿ ... ಡಾಕ್ಟರ್ ಟಿ. ವಿ ... ಎಂದು ಕೇಳುತ್ತೇವೆ.

•

ರಾಜಧಾನಿಯಲ್ಲಿ ಪ್ರಜಾ ಆರೋಗ್ಯವು ತೃಪ್ತಿಕರವಾಗಿದೆ. ಮೊನ್ನೆ ... ಹಂಪಾಪುರದಲ್ಲಿ ... ಪ್ಲೇಗ್ ಕಾಯಿಲೆ ಎಂದು ... ಆಫೀಸರು ಪ್ಲೇಗ್ ಕ್ಯಾಂಪಿಗೆ ಕಳುಹಿಸಿದರು. ಈಗ ಕ್ಯಾಂಪಿನಲ್ಲಿ ... ರೋಗಿಗಳಿರುತ್ತಾರೆ.

•

ಧಾರವಾಡದ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮೆ॥ ಜೆ ... ಯವರು ಸುಮಾರು 60 ಮಂದಿ ವಿದ್ಯಾರ್ಥಿಗಳ ಸಮೇತ ಈ ದಿನ ರಾಜಧಾನಿಗೆ ಬರುವವರಾಗಿದ್ದಾರೆ. ಇವರೆಲ್ಲಾ ೩-೪ ದಿನ ಇದ್ದು ಇಲ್ಲಿನ ಅರಮನೆ ... ಕೋರ್ಟು ಕಚೇರಿ ಮೊದಲಾದವುಗಳನ್ನು ನೋಡುವರೆಂದು ತಿಳಿಯುತ್ತೆ.

•

ರಾಜಧಾನಿಯ ಪ್ರಜೆಗಳ ಮುಖಂಡರು ಕಳೆದ ಸೋಮವಾರ ಸಾಯಂಕಾಲ ಇಲ್ಲಿನ ಟೌನ್ ಹಾಲ್ ಮಂದಿರದಲ್ಲಿ ಕರ್ನಾಟಕ ಆಯುರ್ವೇದ ಶಾಸ್ತ್ರಿಗಳನ್ನೂ ವಿದ್ವಾನ್ ವೈಣಿಕ ... ಸುಬ್ಬಣ್ಣನವರನ್ನೂ, ಗಾಯಕರಾದ ಬಿ ಕೃಷ್ಣಪ್ಪನವರನ್ನೂ ಕರೆಸಿಕೊಂಡು ಇವರಿಗೆ ಬಿರುದುಗಳು ಲಭ್ಯವಾದದ್ದಕ್ಕಾಗಿ ಒಂದು ಸಂತೋಷಕೂಟವನ್ನು ನಡಿಸಿ ಅವರಲ್ಲಿ ತಮಗಿರುವ ಭಕ್ತಿವಿಶ್ವಾಸಗಳನ್ನು ಪ್ರಕಾಶಪಡಿಸಿದರು. ಅರಮನೆಯ ಕಂಟ್ರೋಲರ್ ಮ॥ ಬಿ. ರಾಮಕೃಷ್ಣರಾಯರು ಅಗ್ರಾಸನವನ್ನು ಹೊಂದಿದ್ದರು. ಮೈಸೂರು ಆರ್. ಬಿ. ಅನಂತನಯನವರು ಈ ಸಂತೋಷವನ್ನು ತೋರಿಸುವುದಕ್ಕಾಗಿ ... ಭಾಗಗಳ ... ಸಭಿಕರನ್ನು ಆನಂದಪಡಿಸಿದರು. ಮೆ॥ ಎಂ. ವೆಂಕಟಕೃಷ್ಣಯ್ಯನವರು ಆ ಪಂಡಿತರುಗಳ ಯೋಗ್ಯತಾ ಸಾಮರ್ಥ್ಯವನ್ನು ... ಶ್ರೀಮನ್ಮಹಾರಾಜರವರ ವಿದ್ಯಾಪಕ್ಷಪಾತತೆಯನ್ನೂ ... ಕೊಂಡಾಡಿದರು. ಈ ಮೂವರು ಪಂಡಿತೋತ್ತಮರೂ ಪ್ರಜೆಗಳ ಸತ್ಕಾರ ... ಗಳನ್ನು ಕೃತಜ್ಞತಾಪೂರ್ವಕವಾಗಿ ಅಂಗೀಕರಿಸಿದ ಅರ್ಥಕ್ಕೆ ಪ್ರತಿ ಒಂದು ಸಂತೋಷಕೂಟವನ್ನು ಇಷ್ಟರಲ್ಲೇ ನಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ಕಳೆದ ಗುರುವಾರ ಸಾಯಂಕಾಲ ಶ್ರೀರಂಗಪಟ್ಟಣದ ಪ್ರಜೆಗಳು ಅಲ್ಲಿ ಕಟ್ಟಬೇಕೆಂದು ಗೊತ್ತುಮಾಡಿರುವಂಥಾ ಕಾರೋನೇಷನ್ ಹಾಲ್ ಕಟ್ಟಡಕ್ಕೆ ಡೆಪ್ಟಿ ಕಮಿಷನರ್ ಮ್ಯ॥ ಕೆ. ಚಾಂಡಿಯವರು ಉತ್ಸವ ಮಂಡಲಿಯ ಮಧ್ಯೆ ಶಂಕುಸ್ಥಾಪನ ಶಿಲೆಯನ್ನು ಹಾಕಿದರು. ಈ ಕಟ್ಟಡಕ್ಕೆ ಸುಮಾರು ೪,೦೦೦ ರೂಪಾಯಿ ಖರ್ಚಾಗುವುದೆಂದೂ, ಅದನ್ನು ಪ್ರಯಾಣಿಕರಿಗಾಗಿ ವಿನಿಯೋಗಿಸುವರೆಂದೂ ತಿಳಿದುಬಂದಿದೆ.

ಕಳೆದ ಭಾನುವಾರ ಬೆಳಿಗ್ಗೆ ರಾಜಧಾನಿಯ ಕೋಟೆಯಲ್ಲಿ ಡೆಪ್ಟಿ ಕಮಿಷನರ್ ಮ್ಯ॥ ಚಾಂಡಿಯವರು ತಮ್ಮ ಮೋಟಾರಿನಲ್ಲಿ ವೈಸ್ ಪ್ರೆಸಿಡೆಂಟ್ ಮ್ಯ॥ ಕೃಷ್ಣಸ್ವಾಮಿರಾಯರನ್ನು ಕೂಡಿಸಿಕೊಂಡು ಇನ್ಸ್‌ಪೆಕ್ಷನ್‌ಗಾಗಿ ಹೋಗಿ ಬರುತ್ತಿದ್ದಾಗ ಎದುರಿಗೆ ಸರ್ದಾರ್ ಕಾಂತರಾಜೇ ಅರಸಿನವರ ಮೋಟಾರ್ ಗಾಡಿಯಲ್ಲಿ ಶ್ರೀಮತ್ ನಂಜರಾಜೇ ಅರಸಿನವರ ಕುಮಾರರು ಬರುತ್ತಿದ್ದು ಎರಡು ಮೋಟಾರುಗಳೂ ಢಿಕ್ಕಾಹೊಡೆದದ್ದರಲ್ಲಿ ಮ್ಯ॥ ಚಾಂಡಿಯವರ ಮೋಟಾರಿನ ಎರಡು ಚಕ್ರಗಳು ಮುರಿದುಹೋದವು. ಆದರೆ ಯಾರೊಬ್ಬರಿಗೂ ಅಪಾಯವೇನೂ ಆಗಲಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಂಸ್ಥಾನದಲ್ಲಿ ಜಡ್ಜ್‌ಮೆಂಟ್ ಸಾಲಗಾರರನ್ನು ಸಿವಿಲ್ ಜೈಲಿನಲ್ಲಿಡುವಂತೆ ಡಿಕ್ರಿದಾರರು ಅಂಥವರಿಗೆ ಸಲ್ಲುವ ಭತ್ಯವನ್ನು ಸರ್ಕಾರದವರು ನಿಗದಿಮಾಡಿರುತ್ತಾರೆ. ಸಾಮಾನ್ಯ ಜನರಿಗೆಲ್ಲಾ ದಿನಕ್ಕೆ ೧ ಆಣೆಯಂತೆ ಯೂ, ಯೂರೋಪಿಯನ್, ಯೂರೇಸಿಯನ್ ಮತ್ತು ಇತರ ಉತ್ತಮ ತರಗತಿಯವರಿಗೆ ಜಡ್ಜಿಯವರು ಇಷ್ಟಪಡುವ ಪ್ರಕಾರ ದಿನಕ್ಕೆ ೬ ಆಣೆ ಅಥವಾ ೮ ಆಣೆ ಲೆಕ್ಕದಲ್ಲಿ ಡಿಕ್ರಿದಾರರು ಭತ್ಯವನ್ನು ಕಟ್ಟತಕ್ಕದ್ದೆಂದು ವಿಧಿಸಲಾಗಿದೆ.

ಸರ್ಕಾರದವರು ಸಿವಿಲ್ ಕೋರ್ಟುಗಳಲ್ಲಿ ಸಾಕ್ಷಿಗಳಿಗೆ ಸಲ್ಲುವ ಭತ್ಯದ ದರಗಳನ್ನು ಗೊತ್ತುಮಾಡಿ ಪ್ರಕಟಿಸಿರುತ್ತಾರೆ. ತಿಂಗಳಿಗೆ ೨೦೦ ರೂ. ಮತ್ತು ಅದಕ್ಕಿಂತ ಹೆಚ್ಚು ವರಮಾನವಿರತಕ್ಕವರಿಗೆ ದಿನಕ್ಕೆ ೨ ರೂ. ಸಾಕ್ಷಿ ಭತ್ಯ; ೫೦ ರೂ. ಮತ್ತು ಅದಕ್ಕಿಂತ ಹೆಚ್ಚು ವರಮಾನವುಳ್ಳವರಿಗೆ ೧ ರೂ., ೫೦ ರೂ. ಮತ್ತು ಅದಕ್ಕಿಂತ ಹೆಚ್ಚಿನ ಆದಾಯವಿರತಕ್ಕವರಿಗೆ ೮ ಆಣೆ, ೫೦ ರೂಪಾಯಿಗಿಂತ ಕಡಿಮೆ ವರಮಾನವಿರತಕ್ಕವರಿಗೆ ೪ ಆಣೆ, ಈ ಪ್ರಕಾರ ಸಲ್ಲತಕ್ಕದ್ದು. ಆದರೆ ಜಡ್ಜಿಯವರು ಯಾವ ಸಂದರ್ಭದಲ್ಲಾದರೂ ಇಷ್ಟಪಟ್ಟರೆ ಸಾಕ್ಷಿಗಳಿಗೆ ಕೋರ್ಟಿಗೆ ಹಾಜರಾಗಲು ತಗಲುವ ಪೂರಾ ಖರ್ಚನ್ನು ಕೊಡಿಸಬಹುದಾಗಿದೆ.

ಇನ್ನು ಮುಂದೆ ಮೈಸೂರು ಸರ್ಕಾರಿ ರಜಾ ದಿನಗಳ ಪಟ್ಟಿಯಲ್ಲಿ ಪೊಂಗಲ್ ಹಬ್ಬದ ರಜದಿಂದ ಒಂದು ದಿನವನ್ನೂ, ಮಹಾರಾಜರವರ ಪಟ್ಟಾಭಿಷೇಕದ ದಿನದ ರಜವನ್ನೂ (ಇನ್‌ಸ್ಟಲೇಷನ್ ಡೇ), ಯಂಪೈರ್ ಡೇ ಎಂಬ ರಜವನ್ನೂ ರದ್ದುಮಾಡಿದೆ. ಹೋಳಿ, ಶ್ರೀರಾಮನವಮಿ, ಗುಡ್ ಫ್ರೈಡೇ ಎಂಬೀ ಮೂರು ರಜಗಳನ್ನು ವರ್ಜಿಸಿ, ಆಯಾ ವರ್ಗದವರಿಗೆ ಮಾತ್ರ ರಜಾ ಕೊಡತಕ್ಕದ್ದು. ಮಹಮ್ಮದನ ಜನ್ಮದಿನಕ್ಕೆ ಮುಸಲ್ಮಾನರಿಗೆ ರಜಾ ಕೊಡುತ್ತ ಮೊಹರಂ ಹಬ್ಬದ ಮಹಮ್ಮದೀಯರಿಗೆ ೭, ೮, ೯ನೇ ದಿನಗಳಲ್ಲಿ ರಜಾ ಕೊಡತಕ್ಕದ್ದು. ರಂಜಾನ್ ದಿನ ಮಧ್ಯಾಹ್ನವೇ ಕಚೇರಿಗಳು ಮಾಡಬೇಕು. ಮುಖ್ಯಾಧಿಕಾರಿಗಳ ಅಪ್ಪಣೆ ಹೊಂದಿರುವ ನೌಕರರಿಗೆ ಮಧ್ಯಾಹ್ನ ೧ ಗಂಟೆಗೆ ಕಚೇರಿ ಬಿಡುವಂತೆ ಅವಕಾಶಕೊಡಬಹುದು. ಡಿಸೆಂಬರ್ ತಾ. ೧೨ ಸಂಸ್ಥಾನದ ಎಲ್ಲಾ ಸ್ಕೂಲುಗಳಿಗೂ ದರ್ಬಾರ್ ಡೇ ನಿಮಿತ್ತ ರಜಾ ಇರತಕ್ಕದ್ದು.

ಚೀಫ್ ಕೋರ್ಟಿನ ರೆಜಿಸ್ಟ್ರಾರ್ ಮ್ಯ॥ ವಿ. ಎ. ರಾಜರತ್ನಮುದಲಿಯಾರ್ ಡಿಸೆಂಬರ್ ತಾ. ೯ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಕೆಲಸವನ್ನು ಮ್ಯ॥ ಬಿ. ಬಸವಾರಾಧ್ಯರವರು ಬದಲಿ ನೋಡತಕ್ಕದ್ದು.

ಕೋಲಾರ್ ಚಿನ್ನದ ಗಣಿಗಳ ಅ॥ ಕಮಿಷನರ್ ಮ್ಯ॥ ಕೆ. ಮುತ್ತಣ್ಣಯ್ಯನವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ॥ ಕಮಿಷನರ್ ಮ್ಯ॥ ಟಿ. ರಾ. ಜಯರಾಮ ಅಯ್ಯರವರನ್ನು ಮಾಲೂರು ಸಬ್ ಡಿವಿಜನ್ನಿಂದ ಚಿನ್ನದ ಗಣಿಗಳಿಗೆ ವರ್ಗಮಾಡಿದೆ. ಪ್ರೊಬೇಷನರಿ ಅಮಲ್ದಾರ್ ಮ್ಯ॥ ಬಿ. ಎ. ಕೃಷ್ಣಸ್ವಾಮಿಯವರನ್ನು ಅ॥ ಕಮಿಷನರ್ ಬದಲಿ ನೇಮಿಸಿ ಮಾಲೂರು ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ.

ಸರ್ಕಲ್ ಇನ್‌ಸ್ಪೆಕ್ಟರ್ ಮ್ಯ॥ ಟಿ. ಆರ್. ವೆಂಕಟಸ್ವಾಮಿನಾಯುಡುರವರಿಗೆ ಕೊಟ್ಟಿರುವ ಮೂರು ತಿಂಗಳ ಫರ್ಲೋ ರಜವನ್ನು ಇನ್ನು ಮೂರು ತಿಂಗಳು ವಿಸ್ತರಿಸಿದೆ. ಈಗಿನ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಮಿ. ಎಫ್. ಡಬ್ಲ್ಯು. ಕೆ. ಟ್ರೆವರ್-ಬೆಂಡರ್‌ಸನ್‌ಯವರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಉಪಾಧ್ಯಾಯರಾಗಿ ನೇಮಕಮಾಡಿಕೊಂಡಿದೆ.

ಅ॥ ಕಮಿಷನರ್ ಮ್ಯ॥ ಟಿ. ಲಕ್ಷ್ಮೀನರಸಿಂಹರಾಯರನ್ನು ಜೂನಿಯರ್ ತಾ. ೨ನೇ ೩ನೇ ಕ್ಲಾಸಿಗೆ ಬಡ್ತಿಮಾಡಿದೆ.

ಅ॥ ಇಂಜನಿಯರ್ ಮ್ಯ॥ ಎಂ. ಜಿ. ರಂಗ್ಯಯನವರನ್ನು ರೈಲ್ವೆ ಇಲಾಖೆಯಿಂದ ಇಂಜನಿಯರ್ ಇಲಾಖೆಗೆ ವರ್ಗಮಾಡಿದೆ.

ಕಣ್ಣಾಗಾಲದ ಮೊಕದ್ದಮೆಯು.

ಮಡಿಗೂರು ಪಂಗೆ ಮೊಕದ್ದಮೆಯನ್ನು ಚಾಮರಾಜನಗರದ ಮುನ್ಸಾಫರ ಕೋರ್ಟಿನಲ್ಲಿ ಡೇರೆಗಳನ್ನು ಹಾಕಿಕೊಂಡು ಆ ಡೇರೆಯ ಎದುರಿನಲ್ಲಿ ಮೂರು ಕಟಕಟೆಗಳನ್ನು ಗೋಳಾಕಾರವಾಗಿ ಕಟ್ಟಿ ಖೈದಿಗಳೆಲ್ಲಾ ಜಡ್ಜಿಯವರ ಮುಖಕ್ಕೆ ಕಾಣುವಂತೆ ಮಾಡಿದ್ದಾರೆ. ಜಡ್ಜಿಯವರು ಸಂಸಾರ ಸಮೇತ ಬಂದು ಡೇರೆಯಲ್ಲಿ ಇಳಿದುಕೊಂಡಿದ್ದಾರೆ. ಪ್ರಯಾಣಿಕರಿಗಾದರೋ ಒಳ್ಳೆ ಸೊಗಸಾದ ಮತ್ತು ಅನುಕೂಲವಾದ ಡೇರೆಯನ್ನು ಹಾಕಿಸಿ ಕೊಟ್ಟಿದ್ದಾರೆ. ಖೈದಿಗಳ ಸುತ್ತ ರಿಜರ್ವ್ ಪೋಲೀಸಿನವರೂ, ಸುಬೇದಾರರೂ ತುಪಾಕಿ ಕತ್ತಿಗಳನ್ನು ಹಿಡಿದು ಕಾಯುತ್ತಾರೆ. ಆಗಾಗ್ಗೆ ಪಹರೆ ಬದಲಾಯಿಸಿಕೊಳ್ಳುವರು. ಪ್ರತಿ ದಿನವೂ ಸಬ್ ಜೈಲಿನ ಬಂಗ್ಲೆಗೆ ನೂರಾರು ಖೈದಿಗಳನ್ನು ಕರೆದುಕೊಂಡು ಹೋಗಿ ಕರೆದು ತಂದಾಗ ಇಬ್ಬಿಬ್ಬರಿಗೆ ಸೇರಿಸಿ ಹಾತ್ ಬೇಡಿಗಳನ್ನು ಹಾಕಿ ಕ್ರಮವಾಗಿ ಸಾಲಿನಲ್ಲಿ ನಾಲುಸಾಲು ಸುತ್ತಲೂ ಕತ್ತಿ, ತುಪಾಕಿ, ಈಟಿಗಳನ್ನು ಹಿಡಿದು ಹೋಗುವಾಗ್ಗೆ ಮುಂದಾಗಿ ಒಬ್ಬ ಪೋಲೀಸಿನವನು ಹೊರಟು ಜನರೂ, ಗಾಡಿ ಬೀದಿಯಲ್ಲಿ ಇರದ ಹಾಗೆ ಮಾರ್ಗವನ್ನು ಬಿಡಿಸುತ್ತಾ ಹೋಗುವನು. ಈ ತಮಾಷೆಯನ್ನು ನೋಡಲು ಜನರೆಲ್ಲಾ ಪಂಕ್ತಿಯಾಗಿ ನಿಲ್ಲುತ್ತಾರೆ. ಈ ಊರಿನ ಜನಕ್ಕೆ ಇದೊಂದು ಬಹು ತಮಾಷೆಯಾಗಿದೆ. ಅಲ್ಲದೆ ಈ ಖೈದಿಗಳ ಸಂಬಂಧಿಕರಾದ ಅನೇಕ ಹೆಂಗಸರೂ, ಮುದುಕರೂ ರೊಟ್ಟಿ ಬುತ್ತಿಗಳನ್ನು ಕಟ್ಟಿಕೊಂಡು ಬಂದು ಇವರನ್ನು ನೋಡುವುದಕ್ಕಾಗಿ ಓಡ್ಯಾಡುತ್ತಾರೆ. ಇದು ಇನ್ನೊಂದು ತಮಾಷೆ ನೋಟವಾಗಿದೆ. ಈ ಊರು ಹುಟ್ಟಿದಾಗಿನಿಂದ ಇಂಥಾ ವಿನೋದ ನೋಡಿರಲಿಲ್ಲವಂತೆ. ಎರಡು ಹೊಳೆಯೂ ಬೋರಿ ನಾಲುಗಳ ಜೊತೆ ಜಾತ್ರೆಗೆ ಕಚೇರಿಗೂ ಕೋರ್ಟಿಗೂ ಹೋಗುತ್ತಾ ಬರುತ್ತಾ ಇರುವವು. ಈಗ ಸಾಕ್ಷಿಗಳ ಕೈಫಿಯತ್ತು ಮತ್ತು ಮಾಲುಗಳ ತನಿಖೆ ನಡೆಯುತ್ತಾ ಇದೆ. ಈ ಸ್ಪೆಷಲ್ ಮ್ಯಾಜಿಸ್ಟ್ರೇಟರು ಬಹು ಸೂಕ್ಷ್ಮವಾಗಿ ವಿಚಾರಣೆ ನಡಿಸುತ್ತಾ ಇದ್ದಾರೆ. ಅಪ್ರೂವರ್ ಮ್ಯ॥ ಎ. ರಾಮಣ್ಣನವರು ಖೈದಿಗಳ ಪರವಾಗಿ ಬಂದಿದ್ದಾರೆ. ನಮ್ಮ ಸಬ್ ರೆಜಿಸ್ಟ್ರಾರ್ ನಾರಾಯಣರಾಯರು ಲಾಕಪ್ ಆಫೀಸರಾಗಿದ್ದು ತುಂಬಾ ಮುತುವರ್ಜಿಯಿಂದಲೂ ಕರುಣೆಯಿಂದಲೂ ಖೈದಿಗಳನ್ನು ಆಹಾರ ಮುಂತಾದವುಗಳಲ್ಲಿ ಪರಾಂಬರಿಸುವುದಲ್ಲದೆ, ಕೋರ್ಟು ಬಳಿ ಖೈದಿಗಳಿಗೆ ಆಯಾ ಕೋಮುವಾರು ಅರವಟ್ಟಿಗೆಗಳನ್ನು ಇಡಿಸಿರುತ್ತಾರೆ. ಖೈದಿಗಳಿಗೆ ಅವನವನ ಅಪರಾಧದ ಪ್ರಕಾರ ಅವನ ಹೆಸರು, ಜಾತಿ ಮುಂತಾದದ್ದನ್ನು ಬರೆದು ಕಾಗದದ ಕಾರ್ಡುಗಳಂತೆ ಕುತ್ತಿಗೆಗೆ ಕಟ್ಟಿದ್ದಾರೆ. ಮುಖಂಡರು ಇನ್ನೂ ದೊರೆಯಲಿಲ್ಲ. ಗೌರ್ನಮೆಂಟಿನವರು ಅವರನ್ನು ಹಿಡಿದುಕೊಟ್ಟವರಿಗೆ ಏನಾದರೂ ಪ್ರೋತ್ಸಾಹ ಕೊಡುತ್ತೇವೆಂದು ಘಾಯಿಷ್ ಮಾಡಿಸಿದರೆ ಯಾರಾದರೂ ಸರಿಯೆ ಮುತುವರ್ಜಿ ವಹಿಸಿ ಬಹುಮಾನದ ಆಸೆಯಿಂದ ಹುಡುಕಿ ಹಿಡಿದುಕೊಟ್ಟಾರೆಂದು ಅನೇಕರು ಮಾತನಾಡುತ್ತಾ ಇದ್ದಾರೆ. ಅದೂ ಒಳ್ಳೇ ಉಪಾಯವೇ ಎಂದು ತೋರುತ್ತೆ.

ಬಾತ್ಮಿದಾರ್.

ಮರಾಟಾ ಕ್ಷಾತ್ರಮಂಡಳಿಯ ಸಭಾ.

ಈ ಸಿರಾಂಪುರದಲ್ಲಿರುವ ಶ್ರೀಶಿವಾನಂದಗಿರಿ ಸ್ವಾಮಿಗಳ ಮಠಾಧಿಪತಿಗಳಾದ ಶ್ರೀನಾರಾಯಣಗಿರಿ ಮಹಾಸ್ವಾಮಿಗಳವರು ಇದೇ ಪರೀಧಾವಿ ಸಂವತ್ಸರದ ಕಾರ್ತೀಕ ಬಹುಳ ದ್ವಾದಶಿ ಗುರುವಾರದದಿನ ಕ್ಷಾತ್ರಿಮಂಡಳಿ ಶಿಷ್ಯಾದಿಗಳ ಸಮೇತ ಶ್ರೀಗುರು ಕಾರ್ತಿಕ ಉತ್ಸವವನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿದರು. ಸ್ಥಳದ ಮರಾಟಾ ಮಂಡಳಿಯವರು ಸಭಾ ನೆರೆಯುವ ಮಂಟಪವನ್ನು ಹೊಸ ಬಟ್ಟೆ, ಚಿತ್ರಿತವಾದ ಕಾಗದಗಳಿಂದಲೂ, ಕದಳಿ ಮತ್ತು ಅನೇಕವಿಧವಾದ ಪುಷ್ಪಾದಿಗಳಿಂದಲೂ ಶೃಂಗರಿಸಿದ್ದರು. ಶ್ರೀಬ್ರಹ್ಮಾನಂದಗಿರಿ ನಾಗಾಜಿಯವರು, ಶ್ರೀಮಠದ ನಾರಾಯಣಗಿರಿ ಮಹಾಸ್ವಾಮಿಗಳವರು, ಚಂದ್ರಗುತ್ತಿ ಮಠದ ಲಕ್ಷ್ಮಣಗಿರಿ ಸ್ವಾಮಿಗಳು ಸಹಾ ಉಚಿತಮರ್ಯಾದೆಗಳಿಂದ ಸಿಂಹಪೀಠಗಳನ್ನು ಅಲಂಕರಿಸಿದ್ದರು. ಡಿಸೆಂಬರು ತಾರೀಖು ೬-7 ನೇ ದಿನ ಕ್ಷಾತ್ರಿಮಂಡಳಿ ಸಭೆಯು ನಡೆಯಿತು. ಈ ಸಭೆಯಲ್ಲಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟಾಗ್ಯೂ, ಈ ವರುಷ ಪ್ಲೇಗ್ ಗಲಾಟೆಯಿಂದಲೂ, ಫಸಲು ಕಟಾವುಕಾಲವಾದ್ದರಿಂದಲೂ ಈ ಸಭಾಕ್ಕೆ ಬರತಕ್ಕಂಥಾ ಅನೇಕ ಮಹನೀಯರುಗಳು ಬರಲಿಲ್ಲ. ಶ್ರೀನಾರಾಯಣಗಿರಿ ಮಹಾಸ್ವಾಮಿಗಳವರು ಭೋಜನಾದಿ ಸಾಮಗ್ರಿಗಳನ್ನು ಅಧಿಕವಾಗಿ ಕೊಡಿಸಿದ್ದರು. ಜನ ಹೆಚ್ಚಾಗಿ ಸೇರದೆಹೋದದ್ದರಿಂದ ಶ್ರೀಸ್ವಾಮಿಗಳವರು ಈ ಸಭೆಯ ಕಾಲವನ್ನು ಬದಲಾಯಿಸುವ ಯೋಚನೆಯಲ್ಲಿದ್ದಾರೆ. ತಾರೀಖು 7 ನೇ ದಿನ ರಾತ್ರಿ ವೇ॥ ಗೋಪಾಲಾಚಾರ್ಯರು ಶ್ರೀಮಠಕ್ಕೆ ತಮ್ಮ ವೀಣೆ ಸಂಗೀತದವರ ಸಮೇತ ದಯಮಾಡಿ ಈ ಜುವಾಪ್ರಮದಲ್ಲಿ ಒಂದು ಹರಿಕಥೆಯನ್ನು ಮಾಡಿ ಸಭಿಕರ ಮನಸ್ಸನ್ನು ಬಹಳವಾಗಿ ಆನಂದಗೊಳಿಸಿದರು. ಅನಂತರ ಮೂರನೇ ದಿನ ಶ್ರೀಸ್ವಾಮಿಗಳವರ ಆಜ್ಞಾನುಸಾರವಾಗಿ ಬಸವಾಪಟ್ಟಣದಿಂದ ಬಂದಿರುವ ಕರಿಸಯ್ಯನವರನ್ನು ಕರೆಸಿ ಅವರಿಗೆ ಹರಿಶ್ಚಂದ್ರಮಹಾರಾಯನ ಕಥೆಯನ್ನು ಹೇಳಬೇಕೆಂದು ಶ್ರೀಗಳವರ ಅಪ್ಪಣೆ ಆದ ಮೇರೆಗೆ ಅವರು ಆ ದಿನ ಸದರಿ ಕಥೆಯನ್ನು ಮಾಡಿ ಜನಗಳ ಮನಸ್ಸನ್ನು ಆನಂದಗೊಳಿಸಿದರು. ಈ ಸಭೆಯಲ್ಲಿ ಹೋದ ಸಾಲಿನಲ್ಲಿ ಪರ್ತಿಸಿದ ಮೇರೆಗೆ ಶ್ರೀಶಿವಾನಂದಗಿರಿ ಸ್ವಾಮಿಗಳ ಗದ್ದಿಗೆ ಮನೆಯನ್ನು ಶ್ರೀನಾರಾಯಣಗಿರಿ ಸ್ವಾಮಿಗಳು ಇಲ್ಲಿನ ಕೆಲವು ಜನ ಮರಾಟಿ ಕ್ಷತ್ರಿಯರು ಸೇರಿ ಈ ಸಾಲಿನಲ್ಲಿ ಇಟ್ಟಿಗೆಯಿಂದ ತಯಾರುಮಾಡಿಸುವದಕ್ಕೆ ಪ್ರಾರಂಭಮಾಡಿದಾರೆ. ಆಗಲೇ ಅರೆವಾಸಿ ಕೆಲಸ ನಡೆದು ಇದೆ.

ಸುಬ್ಬರಾವ್ ಗಣೇಶಕರ್.

ತಾಲ್ಲೋಕು ವರ್ತಮಾನಗಳು.

ಆನೆಕಲ್ ತಾ॥ ಬೆಗೂರು.—ಈ ಊರಿನಲ್ಲಿದ್ದ ಸ್ಕೂಲ್ ಕಟ್ಟಡವು ಶಿಥಿಲವಾಗಿ ಬಿದ್ದು ಹೋಗಿ ೫ ೬ ವರುಷಗಳಿಂದ ಊರು ಮಧ್ಯೆ ದೇವಸ್ಥಾನದಲ್ಲಿ ಸ್ಕೂಲ್ ನಡೆಯುತ್ತೆ. ಅಲ್ಲಿ ವಿದ್ಯಾರ್ಥಿಗಳು ಕೂರಲು ಸ್ಥಳ ಸಾಲದು. ಹೊಸದಾಗಿ ಸ್ಕೂಲ್ ಕಟ್ಟಲು ಬೇರೆ ಜಾಗ ಚುನಾಯಿಸಿ, ಅದಕ್ಕಾಗಿ ಗ್ರಾಮಸ್ಥರಿಂದ ಹಣ ವಸೂಲ್ಮಾಡಿ ಕಾಮಗಾರಿಗೆ ಗವರ್ನಮೆಂಟಿನಿಂದ ೧,೩೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಆ ಜಾಗವನ್ನು ನಮ್ಮ ಅಮಲ್ದಾರ್‌ರವರು ಬಂದು ಅಳತೆ ವಗೈರೆ ಮಾಡಿಕೊಂಡು ಹೋದರು. ಈ ಗ್ರಾಮವು ಯೂನಿಯನ್ ಆಗಿ ೪ ೫ ವರ್ಷಗಳಾಗುತ್ತಾ ಬಂತು. ಸಾಲೀಯಾನಾ ೫೦೦ ರೂಪಾಯಿಗಿಂತ ಹೆಚ್ಚು ಯೂನಿಯನ್ ಕಂದಾಯ ವಸೂಲಾಗುತ್ತಿದ್ದರೂ ಇದುವರೆಗೆ ರಸ್ತೆಗಳು ಒಂದೂ ಸರಿಪಡಿಸಿಲ್ಲ. ರಾತ್ರಿ ವೇಳೆ ತಿರುಗಲು ಕಷ್ಟವಾಗಿದೆ. ಗ್ರಾಮ ಪಾಕೀಜಾ ಸರಿಯಾಗಿಲ್ಲ. ಮೇಲ್ಕಂಡ ವಿಷಯಗಳನ್ನು ನಮ್ಮ ಅಮಲ್ದಾರ್‌ರವರು ಗಮನಕ್ಕೆ ತಂದು ಜಾಗ್ರತೆಯಿಂದ ಸರಿಪಡಿಸುವ ಏರ್ಪಾಟು ಮಾಡಿಸಬೇಕೆಂದು ಪ್ರಾರ್ಥಿಸುತ್ತೇವೆ.

ಬೆಂಗಳೂರು ತಾ॥ ಹೆಬ್ಬಾಳ.—ಕಳೆದ 7 ನೇ ತಾ॥ ಶನಿವಾರ ಈ ಗ್ರಾಮದ ಮ್ಯ॥ ಸಾಹುಕಾರ್ ವೆಂಕಟರಮಣಪ್ಪನವರು ಇಲ್ಲಿಗೆ ೧½ ಮೈಲಿ ದೂರದಲ್ಲಿರುವ ಗುಂಡಾಂಜನೇಯ ದೇವಸ್ಥಾನದ ಬಳಿ ದರ್ಮಾರ್ಥವಾದ ಪ್ರಯಾಣಸ್ಥರಿಗೆ ಅನುಕೂಲವಾದ ಒಂದು ಆಲಯವನ್ನೂ, ನೀರಿನ ವಸತಿಗಾಗಿ ಒಂದು ಬಾವಿಯನ್ನೂ ಕಟ್ಟಿಸಿ ಪ್ರತಿಷ್ಠೆ ಮೇಲೆ ಹೇಳಿದ ಶನಿವಾರದ ದಿನ ಆ ನಿಲಯದಲ್ಲಿ ಮತಾನುಸಾರವಾಗಿ ಸಂತರ್ಪಣೆಮಾಡಿಸಿ, ದೇವರ ಪೂಜೆಯೂ ಭೋಜನಗಳೂ ತೀರಿದ ನಂತರ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ಆಗ ನಾಗವಾರದ ಮ್ಯ॥ ಅಪ್ಪೆಯ್ಯಣ್ಣನವರು ಕರ್ಣಾನಂದವಾಗಿಯೂ, ಇಹ ಪರ ಸಾಧಕವಾಗಿಯೂ ಕೀರ್ತನೆಗಳನ್ನು ಹಾಡಿದರು. ಸಾಯಂಕಾಲದ ಮಂಗಳಾರತಿ ಬೆಳಗಿದ ತರುವಾಯ ಅಲ್ಲಿ ಸೇರಿದ್ದ ಕೋಮುಗಳ ಮುಖಂಡರಾದ ವಿದ್ವಾನ್ ವೆಂಕಟರಾಮಾಭಟ್ಟರು, ಪಟೇಲ್ ಪಾಪಣ್ಣನವರು, ಪಟೇಲ್ ಚೌಡಪ್ಪನವರು, ನಾಗಪ್ಪನವರು, ರಾಯಪ್ಪನವರು, ಪಿಳ್ಳೆಗೌಡರು, ಶ್ಯಾನುಭೋಗ ಸಂಜೀವಯ್ಯನವರು, ನಾಗವಾರದ ಅಪ್ಪಯ್ಯಣ್ಣನವರು, ಲಕ್ಷ್ಮೀನಾರಾಯಣಶೆಟ್ಟರು, ಹನುಮಂತಪ್ಪನವರು ವಗೈರೆ ಮಹನೀಯರುಗಳೆಲ್ಲಾ ಸೇರಿ ಮ್ಯ॥ ವೆಂಕಟರಮಣಪ್ಪನವರು ತಮ್ಮ ಉದಾರಬುದ್ಧಿಯಿಂದ ಮಾಡಿದ ಈ ಕಾರ್ಯಕ್ಕಾಗಿ ಅವರನ್ನು ಕೊಂಡಾಡಿ ಜಯಘೋಷಗಳಿಂದ ತೆರಳಿದರು.

ಆನೆಕಲ್ ತಾ॥ ಅತ್ತಿಬೆಲೆ.—ಕಳೆದ ತಾ॥ ೧೦ ನೇ ಮಂಗಳವಾರ ಈ ಗ್ರಾಮದ ಪ್ರಮುಖರೆಲ್ಲರೂ ಸೇರಿ ಈ ಗ್ರಾಮದ ಬಾಲಕ ಬಾಲಕಿಯರ ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹಪಡಿಸುವುದಕ್ಕೋಸ್ಕರ ಇಲ್ಲಿನ ರೀಡಿಂಗ್ ರೂಂ ಹಾಲಿನಲ್ಲಿ ಒಂದು ಸಭೆಯನ್ನು ನಡಿಸಿದರು. ಈ ಸಭೆಗೆ ತಾಲ್ಲೋಕ್ ಅಮಲ್ದಾರ್ ಮ್ಯ॥ ಪಿ. ಗೋಪಾಲರಾಜೆ ಅರಸಿನವರು ಅಗ್ರಾಸನವನ್ನು ವಹಿಸಿದ್ದರು. ಸಭೆಯಲ್ಲಿ ಬಾಲಕ ಬಾಲಕಿಯರಿಂದ ದೇವತಾ ಪ್ರಾರ್ಥನೆಯೂ, ಚಕ್ರವರ್ತಿ ಸಾರ್ವಭೌಮರವರ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಗಳೂ ಸಭಿಕರಿಗೆಲ್ಲಾ ಆಹ್ಲಾದವನ್ನುಂಟುಮಾಡುವ ರೀತಿಯಲ್ಲಿ ಗಾನಮಾಡಲ್ಪಟ್ಟವು. ತರುವಾಯ ಇಬ್ಬರು ವಿದ್ಯಾರ್ಥಿಗಳು "ವಿದ್ಯಾ ಮಹಿಮೆ," "ವಿದ್ಯಾದಾನ ಮಹಿಮೆ" ಗಳ ವಿಚಾರವಾಗಿ ಉಪನ್ಯಾಸಮಾಡಿದರು. ಬಳಿಕ ಕೃಷ್ಣಪ್ಪನವರು ಸ್ಕೂಲಿನ ಚರಿತ್ರೆಯನ್ನು ಓದಿದರು. ಅನಂತರ ಅಗ್ರಾಸನಾಧಿಪತಿಗಳು ವಿದ್ಯಾದಾನದಿಂದ ಲೋಕಕ್ಕೆ ಉಂಟಾಗತಕ್ಕ ಪ್ರಯೋಜನವೇ ಮುಂತಾದದ್ದನ್ನು ತಿಳಿಯಪಡಿಸಿ ಈ ಗ್ರಾಮದ ವಿದ್ಯಾಭಿವೃದ್ಧಿಗೆ ಆವಶ್ಯಕವಾಗಿರತಕ್ಕ ಸ್ಥಳ ಸಂಕೋಚದ ಕೊರತೆಯನ್ನು ನಿವಾರಿಸಿ ಮಾಡುವ ಉದ್ದೇಶ ಗ್ರಾಮಸ್ಥರೆಲ್ಲರೂ ಸೇರಿ ದರ್ಮಾರ್ಥವಾಗಿ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ತಿಳಿಸಿದ ಅಭಿಪ್ರಾಯವನ್ನು ಒಪ್ಪಿ, ಶ್ರೀಮುಖ್ಯಪ್ರಾಣದೇವರ ಒಡೆಯರವರ ನಾಮಾಂಕಿತದಲ್ಲಿ ಸ್ಕೂಲನ್ನು ಕಟ್ಟಲು ಕಮಿಟಿ ಏರ್ಪಡಿಸಿದರು. ಈ ಕಮಿಟಿಯವರಿಂದ ಇದಕ್ಕಾಗಿ ಈ ದಿವಸ ೨೫೦ ರೂಪಾಯಿ ಚಂದಾ ವಸೂಲಾಯಿತು. ಅನಂತರ ೧೦೦ ಮಂದಿ ಬಾಲಕರೂ, ೨೦ ಮಂದಿ ಬಾಲಕಿಯರೂ ಸೇರಿ ತಮ್ಮ ವಿದ್ಯಾಭಿವೃದ್ಧಿಗೆ ಸಹಕಾರಿಗಳಾಗಿರುವ ಮಹನೀಯರ ಶ್ರೇಯೋಭಿವೃದ್ಧಿಗಾಗಿ ಜಯಘೋಷವನ್ನು ಮಾಡಿದರು. ತರುವಾಯ ಸಭೆಯು ಗಂಧ ಪುಷ್ಪ ತಾಂಬೂಲಗಳ ವಿನಿಯೋಗದಿಂದ ಕೊನೆಮುಟ್ಟಿತು. ಈ ರೀತಿ ಈ ಗ್ರಾಮದಲ್ಲಿ ಏರ್ಪಡಿಸಿರುವ ಧರ್ಮಕಾರ್ಯಕ್ಕೆ ಸರ್ಕಾರದವರೂ, ಇತರ ವಿದ್ಯಾಭಿಮಾನಿಗಳೂ ಪ್ರೋತ್ಸಾಹ ಕೊಟ್ಟು ಈ ಕಾರ್ಯವನ್ನು ನೆರವೇರಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಮಂಡ್ಯ.—ಸಂತೆಯಲ್ಲಿ ನಡೆಯುವ ಮೋಸದ ವ್ಯಾಪಾರಗಳನ್ನೂ, ಅಳತೆ ತೂಕಗಳ ವಿಷಯವನ್ನೂ ಕೇಳುವವರೇ ಇಲ್ಲ. ದವಸಧಾನ್ಯಗಳ ಮತ್ತು ಇತರ ಪದಾರ್ಥಗಳ ಮೇಲ್ವಿಚಾರಣೆಯು ಇದ್ದರೆ ಪ್ರಜಾ ಆರೋಗ್ಯವನ್ನು ಕಾಪಾಡಿಕೊಟ್ಟಂತಾಗುವದು.—೪-೫ ತಿಂಗಳ ಕೆಳಗೆ ಸಬ್ ಡಿವಿಜನ್ ಸಾಹೇಬರು ಇಲ್ಲಿಗೆ ದಯಮಾಡಿಸಿದ್ದಾಗ ಪೇಟೆಯಲ್ಲಿ ಅನೇಕರಿಗೆ ಬಹು ಪ್ರಯೋಜನಕರವಾಗಿರುವ ಬಾವಿಯ ವಿಷಯಕ್ಕೂ, ಬ್ರಾಹ್ಮಣರ ಬೀದಿಯ ಚರಂಡಿಯ ಶುದ್ಧತೆ, ಬಚ್ಚಲ ನೀರು ದೊಡ್ಡ ಹಳ್ಳಕ್ಕೆ ಸೇರುವ ಸ್ಥಳದಲ್ಲೂ ಏರ್ಪಡಿಸಿದ ವಿಚಾರವು ಈ ತನಕ ವರಿವಿಗೂ ಇಲ್ಲದಿದ್ದರೂ ಅನೇಕರ ನಿರೀಕ್ಷಣೆಯಲ್ಲಿ ಇನ್ನೂ ಉಂಟು. ಮ್ಯುನಿಸಿಪಾಲಿಟಿ ತಕ್ಕಮಟ್ಟಿಗಿದ್ದರೂ ಜನರು ಸಂದುಗೊಂದುಗಳಲ್ಲಿಯೂ ರಸ್ತೆ ಪಕ್ಕಗಳಲ್ಲಿಯೂ ಮಾಡುವ ಹೇಸಿಕೆಯನ್ನು ತಪ್ಪಿಸುವ ಉದ್ದಿಷ್ಟ ರೂಲ್ಸು ಜಾರಿಗೆ ತಂದರೆ ಉತ್ತಮ. ಈ ಊರಿನ ಪೇಟೆ ಮಧ್ಯೆ ತೆಂಗಿನ ಮಟ್ಟೆಗಳಿಂದಲೂ, ಗರಿ ಬಿದಿರುಗಳಿಂದಲೂ ಕಟ್ಟಿರುವ ಒಂದು ದೊಡ್ಡ ಗುಡಿಸಲು ತುಂಬಾ ಅಪಾಯ ಸ್ಥಿತಿಯಲ್ಲಿರುವುದು ಎಲ್ಲರಿಗೂ ತಿಳಿದಿದ್ದರೂ, ಇಬ್ಬರು ಮೂವರು ಡೆಪ್ಟಿ ಕಮಿಷನರುಗಳೂ, ಸಬ್ ಡಿವಿಜನ್ ಸಾಹೇಬರುಗಳೂ ಈ ವಿಷಯಕ್ಕೆ ಗಮನ ಕೊಟ್ಟಿದ್ದರೂ ಯಾವದನ್ನೂ ಇತ್ಯರ್ಥಮಾಡದಿರುವುದು ತುಂಬಾ ಶೋಚನೀಯವಾಗಿದೆ. ಇದರ ವ್ಯಾಜ್ಯವನ್ನು ಬೇಗನೆ ಫೈಸಲ್‌ಮಾಡಿ ಯಾವದಾದರೊಂದು ಮನೆಯನ್ನು ಕಟ್ಟಿಕೊಳ್ಳುವಂತೆ ಏರ್ಪಡಿಸಿದರೆ ಉತ್ತಮ. ಶ್ರೀಮನ್ಮಹಾರಾಜರವರ ಮತ್ತು ಅನೇಕ ದೊಡ್ಡ ಮನುಷ್ಯರ ಸವಾರಿಯು ಈ ಮಾರ್ಗವಾಗಿ ಅವರ ಮಗ್ಗುಲಲ್ಲೇ ದಯಮಾಡಿಸುವುದರಿಂದಲೂ, ಹಿಂದೆ ಬೆಂಕಿಯ ಅಪಾಯಕ್ಕೆ ಒಳಗಾಗಿದ್ದು ಮತ್ತು ಅಪಾಯಕ್ಕೆ ಗುರಿಯಾಗಿರುವುದರಿಂದಲೂ, ಸುತ್ತುಮುತ್ತು ಇರುವ ಸಾಲುಮನೆಗಳಿಗೆ ತುಂಬಾ ಅಪಾಯ ಉಂಟಾಗಬಹುದೆಂಬ ಸಂದೇಹದಿಂದಲೂ, ಅದರ ಮುಂದೆ ಬೀಳುವ ಕಷ್ಟನಷ್ಟಗಳನ್ನು ತಪ್ಪಿಸುವ ಉದ್ದೇಶದಿಂದಲೂ ಸರ್ಕಾರದವರು ಬೇಗನೆ ಇತ್ಯರ್ಥಮಾಡಬೇಕಾಗಿದೆ.—ಕಳೆದ ಗುರುವಾರ ಜಾರ್ಜ್ ಸಾರ್ವಭೌಮರವರ ಕಿರೀಟಧಾರಣೆಯ ಉತ್ಸವವು ಮಿಷನ್, ಗೌರ್ನಮೆಂಟ್, ಹಿಂದೂಸ್ಥಾನಿ ಗಂಡುಹೆಣ್ಣು ಮಕ್ಕಳ ಪಾಠಶಾಲೆಗಳಲ್ಲಿ ಅಮಲ್ದಾರ್ ಮ್ಯ॥ ಶ್ರೀನಿವಾಸಯ್ಯಂಗಾರ್ ಮತ್ತು ಮ್ಯ॥ ಜಿ. ಟಿ. ಕಿಂಗ್ ಸಾಹೇಬರುಗಳಿಂದ ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಆಯಾ ಪಾಠಶಾಲೆಗಳ ಉಪಾಧ್ಯಾಯರುಗಳು ಮುತುವರ್ಜಿ ವಹಿಸಿ ಮಕ್ಕಳಿಂದ ಮಾಡಿಸಿದ ವಿಶೇಷ ವಿನೋದಗಳನ್ನು ಪುರಜನರು ನೋಡಿ ತುಂಬಾ ಸಂತೋಷಪಟ್ಟರು.—ಅಮಲ್ದಾರ್ ಮ್ಯ॥ ಶ್ರೀನಿವಾಸರಾಯರ ಛತ್ರ ದೇವಸ್ಥಾನಗಳು ಈಗ ಉತ್ತಮಸ್ಥಿತಿಯಲ್ಲಿವೆ. ಕಳೆದ ತಿಂಗಳ ಪ್ರಾರಂಭದಲ್ಲಿ ಮ್ಯ॥ ಮಾಧವಸ್ವಾಮಿರಾಯರು ಅಲ್ಲಿಗೆ ದಯಮಾಡಿ ಅದಕ್ಕೆ ಬೇಕಾಗುವ ಏರ್ಪಾಡಿಗೂ ತಸ್ತೀಕು ರಾಘವೇಂದ್ರದಾಸರನ್ನು ಏಜಂಟಾಗಿ ನೇಮಿಸಿರುವುದಲ್ಲದೆ ರಿಪೇರಿ ವಗೈರೆಗಳಿಗೆ ೫೦೦ ರೂಪಾಯಿ ಸ್ಯಾಂಕ್ಷನ್ ಮಾಡಿ ಅನೇಕರಿಗೆ ಉಪಕಾರಮಾಡುತ್ತಿರುವುದು ತುಂಬಾ ಶ್ಲಾಘನೀಯವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದ ಸಮುದ್ರ ತೀರದಲ್ಲಿ ವ್ಯಾಪಾರಸರಕು ಭರ್ತಿಯಾಗಿದ್ದ ಸಿಟಿ ಆಫ್ ಪೂನಾ ಎಂಬ ಹಡಗಿಗೆ ಬೆಂಕಿಬಿದ್ದು ಸುಮಾರು ಹತ್ತು ಲಕ್ಷ ರೂಪಾಯಿನ ಸಾಮಾನು ಪದಾರ್ಥಗಳು ಸುಟ್ಟುಹೋದವು.

ಮದರಾಸ್ ಪಟ್ಟಣದ ಕೆಥಿಡ್ರಲ್ ಪೋಸ್ಟ್ ಆಫೀಸಿನ ಮುಖ್ಯಾಧಿಕಾರಿಯಾದ ಇ. ವಿಲ್ಸನ್ ಎಂಬಾತನು ಆಫೀಸಿನ ಹಣದಲ್ಲಿ ೬೦೦ ರೂಪಾಯನ್ನು ತನ್ನ ಸ್ವಂತ ಸಾಲ ತೀರಿಸುವುದಕ್ಕೆ ಉಪಯೋಗಿಸಿಕೊಂಡದ್ದು ಆಡಿಟ್ ಮಾಡುವಲ್ಲಿ ಗೊತ್ತಾಗಿ ಅದನ್ನು ಅವನು ಒಪ್ಪಿಕೊಂಡದ್ದರಿಂದ ಅವನನ್ನು ಹಿಡಿದು ಅವನ ಮೇಲೆ ಕ್ರಿಮಿನಲ್ ಮೊಕದ್ದಮೆ ತಂದಿದ್ದಾರೆ.

ಮದರಾಸ್ ಪಟ್ಟಣದಲ್ಲಿ ಕಂಟ್ರಾಕ್ಟ್ ಕೆಲಸಗಳನ್ನು ಹಿಡಿದು ನಡಿಸುವ ಪ್ರಸಿದ್ಧರಾದ ರಾವ್ ಸಾಹೇಬ್ ಟಿ. ನಂಬೆರುಮಾಳ್ ಚೆಟ್ಟಿಯವರು ಆ ಪಟ್ಟಣದ ಕೆಲವು ಭಾಗಗಳಲ್ಲಿ ಚಕ್ರವರ್ತಿಯವರ ಛಾಯಪ್ರತಿಮೆಗಳನ್ನು ತರಿಸಿ ಇಡಿಸಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ. ಕಳೆದ ಗುರುವಾರ ಅವರು ತರಿಸಿದ ಮೊದಲನೇ ಪ್ರತಿಮೆಯನ್ನು ಸ್ಪೆಷಲ್ ಡಿಪೋವಿನಲ್ಲಿ ಸರ್ ಹಾರಲ್ಡ್ ಸ್ಟುವರ್ಟ್‌ಯವರು ಪ್ರತಿಷ್ಠೆ ಮಾಡಿದರು.

ಕಲ್ಕತ್ತಾ ಪಟ್ಟಣದಲ್ಲಿ ಆನಂದ ಮೋಹನರಾಯಿ, ಎಂ. ಎ. ಎಂಬೊಬ್ಬ ಜಮೀನ್ದಾರನೂ, ಜೀವನ ಕೃಷ್ಣ ಸರ್ಕಾರ್ ಎಂಬವನೂ ಸೇರಿ ಕರೆನ್ಸಿ ನೋಟುಗಳನ್ನು ಪಯೋಗಮಾಡಿದರೆಂಬ ಮೊಕದ್ದಮೆಯು ಒಂದು ವರುಷದಿಂದ ದರ್ಯಾಪ್ತಿಯಾಗುತ್ತಾ ಬಂದು ಕಳೆದ ವಾರ ಮ್ಯಾಜಿಸ್ಟ್ರೇಟರು ಮೊದಲನೆ ಅಪರಾಧಿಗೆ ಐದು ವರುಷವೂ, ಎರಡನೆಯವನಿಗೆ ನಾಲ್ಕು ವರುಷವೂ ಕಠಿಣ ಸಜಾ ವಿಧಿಸಿದರು.

ಹಿಂದು ಪತ್ರಿಕಾದಾರರು ಬರೆಯುವುದು:—ನೀಲಗಿರಿ ಡಿಸ್ಟ್ರಿಕ್ಟಿಗೆ ಸೇರಿದ ನಡುವಟ್ಟದ ಸಂತೆಬಜಾರಿನಲ್ಲಿ ಅಲ್ಲಿನ ಸಬ್ ಇನ್‌ಸ್ಪೆಕ್ಟರ ಕುದುರೆ ಕಾವಲಿನ ಚೆಲುವನೆಂಬವನು ನವಂಬರ್ ತಾ. 17 ರಲ್ಲಿ ತನ್ನ ಕಂಬಳಿಯಲ್ಲಿದ್ದ ಚಾಕುವನ್ನು ತೆಗೆದು 11 ಗಂಟೆ ಸುಮಾರಿನಲ್ಲಿ ಟೀಯರ್ ಮೊರೆ ತೋಟದಲ್ಲಿರುವ ಟಪಾಲ್‌ಗಾರ ಹನುಮನೆಂಬವನನ್ನು ಹೊಡೆದನೆಂದು ಇವನು ೫೦ ರೂಪಾಯಿ ಖರ್ಚುಮಾಡಿ ಕುಲಶುದ್ಧ ಮಾಡಿಕೊಂಡನಂತೆ. ಪೋಲೀಸ್ ಸಬ್ ಇನ್‌ಸ್ಪೆಕ್ಟರು ಈ ಕೃತ್ಯವನ್ನು ವಿಚಾರಣೆಮಾಡಲಿಲ್ಲವಂತೆ. ಇನ್ನೊಂದು ಸಂಗತಿ ಏನೆಂದರೆ—ಆಟಿಕೊನಿ ವ್ಯಾಲಿ ಕಾಫಿ ತೋಟದ ಮ್ಯ॥ ಜೆ. ಎಚ್. ವಾಸ್‌ವೋರ್ತ್‌ಯವರು ಕೂಲಿ ಜನರು ಬಹಳ ಕಷ್ಟಪಡುತ್ತಾರೆಂದು ತಮ್ಮ ತೋಟ ನವಿಲಕಾಡು ತೋಟದಲ್ಲಿ ಶ್ರೀಮನ್ ಜಾರ್ಜ್ ಚಕ್ರವರ್ತಿಯವರ ಹೆಸರಿನ ಮೇಲೆ ಸಂತೆ ಮಾರ್ಕೆಟ್ಟನ್ನು ಕಟ್ಟಿಸಿ ಡಿಸೆಂಬರ್ ತಾ. ೪ ರಲ್ಲಿ ನೀಲಗಿರಿಯಿಂದ ಕಲೆಕ್ಟರ್ ಸಾಹೇಬರನ್ನೂ ಇನ್ನೂ ಸರದಾರರನ್ನೂ ಕರೆಸಿ ಸಂತೆಯನ್ನು ಪ್ರಾರಂಭಿಸಿದರು. ಸುಮಾರು ೩,೦೦೦ ಕೂಲಿಜನಗಳು ಆ ದಿನ ಅಲ್ಲಿ ಸೇರಿದ್ದರು.

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧ ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಇಲ್ಲ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಪ್ರತ್ಯಕ್ಷದರ್ಶಿ, ಗುಬ್ಬಿ, ಎಂ ಮುನಿನಾಗಪ್ಪ, ಮಾಲೂರು —ನಿಮ್ಮ ಆಕ್ಷೇಪಣೆಯನ್ನು ಮೊದಲು ಇಲಾಖಾ ಅಧಿಕಾರಿಗಳಿಗೆ ತಿಳಿಸಬೇಕು

ಬಾಚಿನಾಡು ಕುಂಬಾರಪ್ಪ, ಬೆಳಗೆರೆ—ನಷ್ಟ ಪಟ್ಟವರು ಕೋರ್ಟಿನಲ್ಲಿ ವ್ಯವಹರಿಸಿಕೊಳ್ಳಬಹುದಾಗಿದೆ

ಸತ್ಯವಾದಿ, ದೇವನಹಳ್ಳಿ - ನಿಮ್ಮ ಬಾತ್ಮಿಯಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನವೇನೂ ಕಾಣುವುದಿಲ್ಲ

ಎಡಿ]

ಕರೆಸ್‌ಪಾಂಡೆನ್ಸ್

ಚಿತ್ರದುರ್ಗದ ವಿಷಯಗಳು

ಅಯ್ಯಾ,

ತಮ್ಮ ನವಂಬರ್ ತಾ ೨೧ ನೇ ಪತ್ರಿಕೆಯಲ್ಲಿ ಚಿತ್ರದುರ್ಗದ ಬಾತ್ಮಿಯಲ್ಲಿ ಇಲ್ಲಿನ ಸ್ಕೂಲಿನ ಒಬ್ಬ ಮಾಸ್ತರು ಪುಸ್ತಕಗಳಿಗೆ ವಿದ್ಯಾರ್ಥಿಗಳಿಂದ ದುಡ್ಡು ವಸೂಲ್ಮಾಡಿಕೊಂಡು, ಪುಸ್ತಕಗಳನ್ನು ತರಿಸಿಕೊಡದೆ ಮೋಸಮಾಡಿದನೆಂಬದಾಗಿ ಬರೆಯಲ್ಪಟ್ಟಿದೆ ಅದನ್ನು ವಿಚಾರಿಸಲಾಗಿ ಅದು ಸುಳ್ಳೆಂದೂ, ಅಸೂಯೆಯಿಂದ ಬರೆದದ್ದೆಂದೂ ಗೊತ್ತಾಯಿತು

ಹಿರಿಯೂರು ತಾಲ್ಲೂಕು ಮರಡಿಹಳ್ಳಿ ವಿ ಇ ಸ್ಕೂಲುಗಳು ಈ ಡಿಸ್ಟ್ರಿಕ್ಟಿನಲ್ಲಿರುವ ವಿ ಇ ಸ್ಕೂಲುಗಳಿಗಿಂತ ಅಭಿವೃದ್ಧಿಸ್ಥಿತಿಯಲ್ಲಿದ್ದವು ಮೊದಲು ಇದ್ದ ಒಬ್ಬ ಮಾಸ್ತರು ಈ ಊರಿನಲ್ಲಿ ಎರಡು ಪಾರ್ಟಿಗಳನ್ನು ಮಾಡಿ ಯಜಮಾನರನ್ನೆಲ್ಲಾ ಅವಿದ್ಯಾವಂತರನ್ನಾಗಿ ಮಾಡಲು ಪ್ರಯತ್ನಿಸಿದ್ದರಿಂದ ಸ್ಕೂಲನ್ನೇ ತೆಗೆದುಹಾಕುವಷ್ಟು ಸ್ಥಿತಿಗೆ ಬಂದಿತ್ತು ಮತ್ತು ಅವರ ಪೆಸೆಯಿಂದ ಊರಿಗೆ ಕೇಡುಕೊಂಬ ಎಂಬ ಹೆಸರೂ ಉಂಟಾಗಿತ್ತು ಆದ್ದರಿಂದ ಪ್ರಜೆಗಳು ಪ್ರಾರ್ಥಿಸಿಕೊಂಡ ಮೇರೆಗೆ ಇನ್ಸ್ಪೆಕ್ಟರವರು ಬ್ರಾಹ್ಮಣರಲ್ಲದ ಒಬ್ಬ ಉಪಾಧ್ಯಾಯರನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ ಇವರು ಬಂದಾಗ್ಗ್ಯೆ ಇಲ್ಲಿನ ಸ್ಕೂಲುಗಳೆಲ್ಲಾ ಅಭಿವೃದ್ಧಿಗೆ ಬಂದಿರುತ್ತವೆ ಮೊದಲಿದ್ದ ಪ್ರಕಾರವೇ ಇನ್ಸ್ಪೆಕ್ಟರವರು ಇಬ್ಬರು ಸಹಾಯೋಪಾಧ್ಯಾಯರನ್ನು ಕೊಟ್ಟು ಸ್ಕೂಲಿನ ಅಭಿವೃದ್ಧಿಯನ್ನು ಸಂಪಡಿಸುವರೆಂದು ನಂಬಿರುತ್ತೇನೆ

ಪುರವಾಸಿ

ಒಂದು ಸ್ತ್ರೀಯರ ಮೀಟಿಂಗು

ಅಯ್ಯಾ,

ಚಿಕ್ಕನಾಯಕನಹಳ್ಳಿ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನ ಹೆಡ್ ಮಿಸ್ಟ್ರೆಸ್ ಗೌರಮ್ಮನವರು ಬಂದ ಲಾಗಾಯ್ತು ಬಾಲಕಿಯರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಇದೆ ಈ ಮಧ್ಯೆ ಅವರು ಈ ಊರಲ್ಲಿರತಕ್ಕ ಅನೇಕ ಮಂದಿ ಸ್ತ್ರೀಯರಿಗೆ ಪ್ರೋತ್ಸಾಹ ಕೊಟ್ಟು ನೆನ್ನೆ ತಾ ೧೦ನೆ ಸೋಮವಾರ ಒಂದು ಮೀಟಿಂಗನ್ನು ಗರ್ಲ್ಸ್ ಸ್ಕೂಲಿನಲ್ಲೇ ಏರ್ಪಡಿಸಿದ್ದರು ಅಲ್ಲಿಗೆ ಹೆಡ್ ಮಿಸ್ಟ್ರೆಸ್ ಗೌರಮ್ಮನವರು ಕೇಳಿಕೊಂಡದ್ದರ ಮೇರೆಗೆ ಅಲ್ಲಿಯ ಎ ವಿ ಸ್ಕೂಲ್ ಸಂಸ್ಕೃತ ಮುನ್ಷಿಗಳಾದ ಶ್ರೀ ತಿರುನಾರಾಯಣಾಚಾರ್ಯ ದಯಮಾಡಿ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಸ್ವಾರಸ್ಯವಾಗಿ ಉಪನ್ಯಾಸ ಕೊಟ್ಟರು ಈ ಉಪನ್ಯಾಸವನ್ನು ಕೇಳಿದ ಸ್ತ್ರೀಯರುಗಳು ಪುನಃ ಮೀಟಿಂಗಿಗೆ ಬರದೇ ಇರಲಾರರು ಈ ಚಿಕ್ಕನಾಯಕನಹಳ್ಳಿ ಸ್ತ್ರೀಯರು ತಮಗೆ ವಿದ್ಯೆ ಬೇಕಿಲ್ಲ ಎಂದು ಅಲಕ್ಷ್ಯಮಾಡದೆ ಮೀಟಿಂಗಿಗೆ ದಯಮಾಡಿಸಿದ್ದನ್ನು ನೋಡಿ ನಾನು ಆಶ್ಚರ್ಯಪಡುತ್ತೇನೆ ಮತ್ತು ಹೆಡ್ ಮಿಸ್ಟ್ರೆಸ್ ಗೌರಮ್ಮನವರು ಸ್ತ್ರೀಯರಿಗೆ ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರೋತ್ಸಾಹ ಕೊಡುತ್ತಿರುವುದನ್ನು ನೋಡಿ ತುಂಬಾ ಸಂತೋಷಪಡುತ್ತೇನೆ ಮುಂದಿನ ಭಾನುವಾರ ಪಾತಿವ್ರತ್ಯದ ವಿಚಾರವಾಗಿ ಉಪನ್ಯಾಸ ಕೊಡುತ್ತಾರೆಂದು ವರ್ತಮಾನ ಕೇಳುತ್ತೇನೆ ಆದರೆ ಈ ಊರು ಹುಟ್ಟಿದ ಲಾಗಾಯ್ತು ಸ್ತ್ರೀಯರ ಸಮಾಜವು ನಡೆದಿರಲಿಲ್ಲ ಇದೇ ಮೊದಲನೇ ಸಮಾಜ ಇದಕ್ಕೆ ಏನೂ ಹಾನಿಯುಂಟಾಗದಂತೆ ಸಾಗೋಪಾಂಗವಾಗಿ ನಡಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ನಮ್ಮ ಹೆಡ್ ಮಿಸ್ಟ್ರೆಸ್‌ಯವರು ಮಾಡುವರೆಂದು ನಂಬುತ್ತೇನೆ.

ನಿಷ್ಪಕ್ಷಪಾತಿ

ಶ್ರೀಮನ್ಮಹಾರಾಜರವರ ಸರ್ಕೀಟು.

ಕುಣಿಗಲ್ ತಾಲ್ಲೂಕು ಯಡಿಯೂರು

ಶ್ರೀಮನ್ಮಹಾರಾಜಾ ಸಾಹೇಬ್ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಸವಾರಿಯು ಈ ಮಾಹೆ ತಾ ೯ ನೇ ಸೋಮವಾರ ಬೆಂಗಳೂರಿಂದ ಹಾಸನಕ್ಕೆ ಚಿತ್ತೈಸಲು ಈ ಮಾರ್ಗವಾಗಿ ಈ ಊರು ಮುಸಾಫರ ಬಂಗಲಾದ ಬಳಿ ಹಾಕಿದ್ದ ತಳಿರೋರಣದ ಬಳಿಗೆ ಮಧ್ಯಾಹ್ನ ೧½ ಗಂಟೆಗೆ ಸವಾರಿಯು ಚಿತ್ತೈಸುವಷ್ಟರಲ್ಲಿ ಈ ಊರು ಪ್ರಾಸುಭಾಗರು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿರುವ ಮ್ಯಾ| ವರಪ್ಪಯ್ಯಂಗಾರ್ರು ಅವರುಗಳಿಗೆ ಹಾರ, ತುರಾಯಿ, ಫಲ ಒಪ್ಪಿಸಿದರು ಅವರು ಸುಮಾರು ೫ ನಿಮಿಷ ಕುಶಲಪ್ರಶ್ನೆಯಂ ಗೈದು, ಸರ್ವರಿಗೂ ದರ್ಶನವನ್ನಿತ್ತುದ್ದು ಈ ಪ್ರಾಂತ್ಯದ ಜನಗಳಿಗೆಲ್ಲಾ ಅತ್ಯಂತ ಸಂತೋಷವಾಯಿತು

ಹಾಸನ

ನಮ್ಮನ್ನಾಳುವ ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ ಎಸ್ ಐ. ಯವರು, ಯುವರಾಜರವರು, ಬ್ರಿಟಿಷ್ ರೆಸಿಡೆಂಟರೇ ಮೊದಲಾದವರು ಮಿತಪರಿವಾರದೊಡನೆ ಕಳೆದ ತಾ ೯ ನೇ ಸೋಮವಾರ ಸಾ 7 ಗಂಟೆಗೆ ಇಲ್ಲಿಗೆ ಬಿಜಯಂಗೈದರು ಅಧಿಕಾರಿಗಳೂ, ಪುರವಾಸಿಗಳಲ್ಲಿ ಪ್ರಮುಖರೂ, ಊರಿಗೆ ಸುಮಾರು ೩-೪ ಫರ್ಲಾಂಗ್ ದೂರದಲ್ಲಿ ಕಟ್ಟಿಸಿದ್ದ ಚಿತ್ರ ಮಂಟಪದಲ್ಲಿ ಕಾದಿದ್ದು, ಮಹಾಸ್ವಾಮಿಗಳನ್ನು ರಾಜಮರ್ಯಾದೆಗಳಿಂದ ಎದುರುಗೊಂಡು, ಸತ್ಕಾರಗಳನ್ನು ಮಾಡಿ ಕರೆದು ತಂದು, ಎರಡನೇ ಅರಮನೆಯೋ ಎಂಬಂತೆ ಅಲಂಕೃತವಾಗಿದ್ದ ಇಂಜನಿಯರ್ ಆಫೀಸ್ ಭವನದಲ್ಲಿ ಬಿಡಾರ ಮಾಡಿಸಿದರು. ಮಾರನೇ ಮಂಗಳವಾರ ಬೆಳಗ್ಗೆ ಮಹಾಸ್ವಾಮಿಗಳು ಪರಿವಾರ ಸಮೇತ ಇಲ್ಲಿನ ಗಂಧದ ಕೋಠಿ, ವೆಸ್ಲಿಯನ್ ಮಿಷನ್ ಆಸ್ಪತ್ರೆಗಳನ್ನೂ ಮುಖ್ಯ ಬೀದಿಗಳನ್ನೂ ನೋಡಿಕೊಂಡು ವಾಣೀವಿಲಾಸ ಮತ್ತು ಮಿಷನ್ ಬಾಲಿಕಾ ಪಾಠಶಾಲೆಗಳ ಬಾಲಕಿಯರಿಗೆ ದರ್ಶನವನ್ನಿತ್ತು ಅವರು ಹಾಡಿದ ಶ್ರೇಯಃಪ್ರಾರ್ಥನೆಯ ಪಾಠವನ್ನು ಲಾಲಿಸಿ ಆನಂದಗೊಂಡು ಬಿಡಾರವನ್ನು ತಲಪಿದರು ಆರೋಗಣೆ ಜರಿದ ನಂತರ ಪ್ರಭುಗಳು ೨ ಘಂಟೆಗೆ ಸಕಲರೊಡನೆ ಸಕಲೇಶಪುರಕ್ಕೆ ಚಿತ್ತೈಸಿದರು ಅಲ್ಲಿಂದ ಸಾಯಂಕಾಲ ೬ ಘಂಟೆ ಹಿಂತಿರುಗಿ ಇಲ್ಲಿಗೆ ದಯಮಾಡಿ ರಾತ್ರಿ ಪುರವಾಸಿಗಳ ಮತ್ತು ಅಧಿಕಾರಿಗಳ ಪ್ರಾರ್ಥನೆಯಂತೆ ನಾಟಕದ ಪ್ರಹಸನಗಳನ್ನೂ, ಮಲೆನಾಡಿನವರ ಸುಗ್ಗಿ ಕುಣಿತವನ್ನೂ, ಚಿತ್ರ ವಿಚಿತ್ರವಾದ ಬಾಣ ಬಿರುಸುಗಳನ್ನೂ ಪರಾಂಬರಿಸಿದರು ಎಲ್ಲಾ ಮಂಟಪಗಳಿಗಿಂತಲೂ ಇಲ್ಲಿನ ಎಕ್ಸಿಕ್ಯೂಟಿವ್ ಇಂಜನಿಯರ್ ಮ| ಜಹರುದ್ದೀನ್ ಮೆಕ್ಕೆಯವರು ಕಟ್ಟಿಸಿದ್ದುದು ಬಹು ಶ್ರೇಷ್ಠವಾಗಿತ್ತು ಮಹಾಸ್ವಾಮಿಗಳು ಮಾರನೇ ಬುಧವಾರ ಬೆಳಗ್ಗೆ ೧೦ ಘಂಟೆಗೆ ಬೇಲೂರು ಮಾರ್ಗವಾಗಿ ಮುಂದಕ್ಕೆ ಪ್ರಯಾಣ ಬೆಳಸಿದರು ರಾಜ ಸಹೋದರರ ಸ ದರ್ಶನಕ್ಕಾಗಿ ಸುತ್ತುಮುತ್ತಲಿನ ಗ್ರಾಮಾಂತರಗಳಿಂದ ಸಾವಿರಾರು ಜನರು ಬಂದು ಸೇರಿದ್ದರು | ಈ ಸ ದಣಿಯವರಲ್ಲಿ ಯಾವನೋ ಒಬ್ಬನು ಯುವ ಕಾರಂಜಿ ದರ್ಶನ ಸಮೀಪದ ತೋಟದ ಭಾವಿಗೆ ಹೋಗಿ ಬಿದ್ದು ಮೃತಪಟ್ಟದ್ದು ಮಾರನೇ ದಿನ ಗೊತ್ತಾಯಿತು ಅವನ ವಾರಸದಾರರು ಯಾರೋ ಇನ್ನೂ ಗೊತ್ತಾಗಿಲ್ಲವಂತೆ ಸಂತೋಷಕಾಲದಲ್ಲಿ ಇದೊಂದು ವ್ಯಸನಕರ ಸಂಗತಿ ನಡೆದುದು ಎಲ್ಲರಿಗೂ ದುಃಖಕರವೇನೆ ಹಿಂದಿನ ನೆನ್ನೆ ಸಹ ಯಾವನೋ ಒಬ್ಬನು ಇಲ್ಲಿನ ದೇವಸ್ಥಾನದ ಕೆರೆಗೆ ನೀರು ಕುಡಿಯುವುದಕ್ಕೆ ಹೋಗಿ ಜಾರಿಬಿದ್ದು ಮೃತಪಟ್ಟನು |

ಬೇಲೂರು

ಈ ಮಾಹೆ ೧೧ ನೇ ಬುಧವಾರ ಬೆಳಗ್ಗೆ ಸುಮಾರು ೧೧ ಗಂಟೆಗೆ ನಮ್ಮ ಶ್ರೀಮನ್ಮಹಾರಾಜರವರು ಯುವರಾಜರವರು, ರೆಸಿಡೆಂಟರವರು, ಇತರ ಪತ್ನಿಯವರು ಮತ್ತು ಮಕ್ಕಳು, ಇನ್ನೂ ಕೆಲವರು ಆಫೀಸರುಗಳೊಡನೆ ೯ ಮೋಟಾರ್ ಗಾಡಿಗಳಲ್ಲಿ ದಯಮಾಡಿ, ಬಿಸಪರ್ ಪೆಂಡಾಲಿನಲ್ಲಿ ರಾಜಮರ್ಯಾದೆಯನ್ನು ಸ್ವೀಕರಿಸಿ, ಸಂದರ್ಶನಾಪೇಕ್ಷೆಯಿಂದ ಕಿಕ್ಕಿರಿಯುತ್ತಿದ್ದ ಜನಸಂದಣಿಯಲ್ಲಿ ಉತ್ಸವ ಬರುವ ರೀತಿ ನಿಧಾನವಾಗಿ ಮೋಟಾರು ನಡೆಸುತ್ತಾ ಪೇಟೆಯ ಮುಖ್ಯಸ್ಥರಿಂದ ಕಟ್ಟಲ್ಪಟ್ಟ ಮಂಟಪದಲ್ಲಿ ಪೇಟೆಯ ಸ್ಕೂಲ್ ಬಾಲಕರು ಗ್ಯಾಲರಿಯ ಮೇಲಿಂದ ಹೇಳುತ್ತಿದ್ದ ಮಹಾರಾಜರ ಶ್ರೇಯಃಪ್ರಾರ್ಥನಾ ಹಾಡುಗಳನ್ನಾಲಿಸುತ್ತಾ, ಕೋಟೆಗೆ ಬರುವಾಗ್ಗೆ ಎ ವಿ ಸ್ಕೂಲ್ ಬಾಲಕರ ಶ್ರೇಯಃಪ್ರಾರ್ಥನಾ ಪದ್ಯಗಳೂ ಸಂಗೀತಗಳೂ ಹೃದಯಂಗಮವಾಗಿರುವುದನ್ನು ನೋಡಿ ಸಂತೋಷಿಸುತ್ತಾ, ಮಧ್ಯೆ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಕಿಯರು ಮನರಂಜನೆಯಾದ ಶ್ರೇಯಃಪ್ರಾರ್ಥನಾ ಹಾಡುಗಳೂ ಪದ್ಯಗಳೂ ಮಂಗಳ ಮೇಳ ಸಮರ್ಪಿಸಿದ ಫಲಗಳು ಹಾರ ತುರಾಯಿಗಳನ್ನು ಸ್ವೀಕರಿಸಿ ದೇವಸ್ಥಾನಕ್ಕೆ ದಯಮಾಡಿ, ಅಲ್ಲಿ ನೆರೆದಿದ್ದ ನಾರ್ಮಲ್ ಸ್ಕೂಲ ಬಾಲಕಿಯರ ಹಾಡುಗಳನ್ನು ಕೇಳಿ ದೇವರ ಸೇವೆಯನ್ನು ಮಾಡಿಕೊಂಡು, ಹಳೇಬೀಡಿಗೆ ಹೊರಟು ಮಾರ್ಗದಲ್ಲಿ ವಿರಾಜಿಸುತ್ತಿದ್ದ ಚಕ್ರವರ್ತಿ ಸಾರ್ವಭೌಮರವರ ... ಪಟ್ಟಾಭಿಷೇಕ ... ಮಹೋತ್ಸವದ ಪರೀಕ್ಷಿಸಲು ದಯಮಾಡುವಾಗ್ಗೆ ... ಯಲ್ಲಿ ಮಿಷನ್ ಬಾಲಿಕಾ ಪಾಠಶಾಲೆಯ ಬಾಲಕಿಯರ ಸಲಾಮು, ಸುಸ್ವಾಗತವು, ಶ್ರೇಯಃಪ್ರಾರ್ಥನೆಯ ಪಾಠದ ಹಾಡು, ಪದ್ಯ ಮಂಗಳಗಳನ್ನು ಕೇಳಿ ಆನಂದಿಸಿ ಆ ಸ್ಕೂಲಿನ ಬಾಲಿಕೆಯರ ... ಸಮರ್ಪಿಸಲ್ಪಟ್ಟ ಫಲ, ಹಾರ ತುರಾಯಿಗಳನ್ನು ಸ್ವೀಕರಿಸಿ ಹಳೇಬೀಡಿಗೆ ದಯಮಾಡಿ ಅಲ್ಲಿ ಚರಿತ್ರಾರ್ಹವಾದ ಸ್ಥಳಗಳ ದರ್ಶನ ಸುಗ್ಗಿ ಕುಣಿತ ಪ್ರೇಕ್ಷಣಗಳನ್ನು ಪರಾಂಬರಿಸಿ, ನಮ್ಮ ಅಮಲ್ದಾರ್ ಮ| ಯ ... ಕೇಶವಯ್ಯನವರ ಏರ್ಪಾಡುಗಳನ್ನು ಶ್ಲಾಘಿಸಿ ಮೇಲ್ಕಂಡ ಕೆಳಕಂಡವರಿಗೆ ೧೦೦ ರೂಪಾಯಿ, ಈ ಊರು ದೇವಸ್ಥಾನಕ್ಕೆ ೧೦೦ ರೂಪಾಯಿ, ಬಾಲಿಕಾ ಪಾಠಶಾಲೆಗಳಿಗೆ ೨೫ ರೂಪಾಯಿ ದಯಪಾಲಿಸಿ ದಯಮಾಡಿದರು

ತರೀಕೆರೆ.

ಕಳೆದ ೧೧ ನೇ ತಾ ಸಾಯಂಕಾಲ ಶ್ರೀಮನ್ಮಹಾರಾಜರವರ, ಯುವರಾಜರವರ ಮತ್ತು ರೆಸಿಡೆಂಟರವರ ಸವಾರಿಯು ತರೀಕೆರೆಗೆ ಚಿತ್ತೈಸುತ್ತದೆಂದು ನಾಲ್ಕಾರು ಕಡೆಗಳಿಂದಲೂ ಸಾವಿರಾರು ಜನರು ಅವರ ದರ್ಶನಕ್ಕಾಗಿ ಬೆಳಗ್ಗೆಯಿಂದ ಸಾಯಂಕಾಲದವರೆಗೂ ರಸ್ತೆಯ ಎರಡು ಪಕ್ಕಗಳಲ್ಲಿಯೂ ಕಾದಿದ್ದರು ಶ್ರೀಮನ್ಮಹಾರಾಜರವರೇ ಮುಂತಾದವರ ಸವಾರಿಯು ರಾತ್ರಿ 7 ಘಂಟೆಗೆ ದಯಮಾಡಿಸಿದ್ದರಿಂದ ಪ್ರಜೆಗಳು ಮಹಾರಾಜರ ದರ್ಶನಮಾಡಲು ಅವಕಾಶವಾಗಲಿಲ್ಲ ಅವರ ಸವಾರಿ ದಯಮಾಡುವ ರಸ್ತೆಯಲ್ಲಿ ಸ್ವಲ್ಪ ದೂರದವರೆಗೆ ದೀಪಗಳನ್ನು ಹತ್ತಿಸುವ ಏರ್ಪಾಡುಮಾಡಿದ್ದರೆ ಎಷ್ಟೋ ಪ್ರಯೋಜನವಾಗುತ್ತಿತ್ತು ಮತ್ತು ಪ್ರಜೆಗಳು ಎಷ್ಟೋ ಆನಂದಪಡುತ್ತಿದ್ದರು ಕತ್ತಲೆಯಾಗಿದ್ದಾಗ್ಯೂ ಇಲ್ಲಿನ ಎ ವಿ ಸ್ಕೂಲ್ ಬಾಲಕರೂ ಮತ್ತು ವೆಸ್ಲಿಯನ್ ಮಿಷನ್ ಸ್ಕೂಲ್ ಬಾಲಕಿಯರೂ ಮೋಟಾರ್ ಗಾಡಿಗಳು ಬರುತ್ತಾ ಇರುವುದನ್ನು ಕಂಡು ಕೂಡಲೆ ಎದ್ದು ಶ್ರೀಮನ್ಮಹಾರಾಜರವರಿಗೆ ಸುಮಂಗಳವನ್ನು ಬಯಸಿ ಗಾನಮಾಡಿದರು ಮಹಾರಾಜರ ಗಾಡಿ ನಿಲ್ಲಲಿಲ್ಲ ಶ್ರೀಮನ್ಯುವರಾಜರವರ ಮೋಟಾರ್ ಗಾಡಿಯು ೨-೩ ನಿಮಿಷ ನಿಲ್ಲಿಸಿದ್ದರಿಂದ ಸ್ಕೂಲುಗಳ ಪರವಾಗಿ ಕಡೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಇನ್ಸ್ಪೆಕ್ಟರ್ ಮ| ಗೋಪಾಲರಾಯರು ನಜರ್ ಒಪ್ಪಿಸಿದರು. ಇಲ್ಲಿನ ಪೋಸ್ಟ್ ಆಫೀಸಿನ ಬಳಿ ಒಂದು ಚಪ್ಪರ ಹಾಕಲ್ಪಟ್ಟಿತ್ತು ಇದು ಮಾತ್ರವಲ್ಲದೆ ತರೀಕೆರೆಗೆ ಒಂದು ಮೈಲಿ ದೂರದಲ್ಲಿರುವ ಮ| ನಾರಣಪ್ಪನವರ ಛತ್ರದ ಬಳಿಯಲ್ಲಿಯೂ ನರಸಪ್ಪನವರ ಛತ್ರದ ಬಳಿಯಲ್ಲಿಯೂ ಒಂದೊಂದು ಚಪ್ಪರ ಹಾಕಲ್ಪಟ್ಟಿತ್ತು ಆ ರಾತ್ರಿ ಕಛೇರಿ ಮುಂಭಾಗವೆಲ್ಲಾ ಗ್ಯಾಸ್ ದೀಪಗಳು ಉರಿಯುತ್ತಾ ಇದ್ದದ್ದು ಎಷ್ಟೋ ಮನೋಹರವಾಗಿತ್ತು ಮಹಾರಾಜರವರು ದಯಮಾಡುವ ರಸ್ತೆಯಲ್ಲಿದ್ದ ಮನೆಗಳನ್ನು ಆಯಾ ಮನೆಯವರು ತಕ್ಕಮಟ್ಟಿಗೂ ಅಲಂಕರಿಸಿದ್ದರು ಶ್ರೀಮನ್ಮಹಾರಾಜರವರಿಗೆ ತುಂಬಾ ಆಯಾಸವಾದ್ದರಿಂದ ಒಂದು ದಿವಸದ ತನಕ ಸವಾರಿಯು ನಿಂತು ಹೋಯಿತು ಮಾರನೇ ದಿನ ಬೆಳಗ್ಗೆ ಸುಮಾರು ೧೦ ಗಂಟೆ ಸಮಯದಲ್ಲಿ ಶ್ರೀಮನ್ಮಹಾರಾಜರವರ, ಯುವರಾಜರವರ, ರೆಸಿಡೆಂಟರವರ ಸವಾರಿಯು ಶಿವಮೊಗ್ಗೆಯ ಕಡೆ ದಯಮಾಡಿಸುವುದಕ್ಕಿದ್ದುದರಿಂದ ದರ್ಶನಮಾಡಬೇಕೆಂದು ಕಾದಿದ್ದ ಸಾವಿರಾರು ಜನರು ರಸ್ತೆಯ ಉದ್ದಕ್ಕೂ ನಿಂತು ದರ್ಶನಮಾಡಿದರು. ನರಸಪ್ಪನವರ ಛತ್ರದ ಬಳಿ ಹಾಕಿದ್ದ ಚಪ್ಪರದ ಹತ್ತಿರ ಲಂಬಾಣಿ ಹೆಂಗಸರ ಕುಣಿತದ ತಮಾಷೆಯು ನಡೆಯಿತು ಅಂತೂ ತರೀಕೆರೆ ಮೊಕ್ಕಾಂನಲ್ಲಿ ಶ್ರೀಮನ್ಮಹಾರಾಜರವರೂ ಯುವರಾಜರವರೂ, ರೆಸಿಡೆಂಟರವರೂ ಇತರ ಮಹನೀಯರೆಲ್ಲಾ ತುಂಬಾ ಸಂತೋಷಪಟ್ಟರೆಂಬುವುದರಲಿ ಯಾವ ಸಂದೇಹವಿಲ್ಲ

ದೆಹಲಿ ದರ್ಬಾರ್ ಡೇ ಉತ್ಸವಗಳು

ತರೀಕೆರೆ

ಕಳೆದ ೧೨ ನೇ ತಾ ಗುರುವಾರ ಕಾರೊನೇಷನ್ ಡೇ ಆದ್ದರಿಂದ ಇಲ್ಲಿನ ಎ ವಿ ಸ್ಕೂಲಿನಲ್ಲಿ ಬಾಲಕರೂ ಬಾಲಕಿಯರೂ ಸೇರಿ ಚಕ್ರವರ್ತಿಗಳ ಮತ್ತು ಮೈಸೂರು ಮಹಾರಾಜರವರ ಮಂಗಳ ಗಾನ ಮಾಡಿದರು ಸಾಯಂಕಾಲ ಮಕ್ಕಳಿಗೆ ತಿಂಡಿ ಹಂಚಿದರು ರಾತ್ರಿ 7 ಗಂಟೆಗೆ ಕೆಲವು ದೊಡ್ಡ ಮನುಷ್ಯರನ್ನು ಸೇರಿಸಿ, ಇಂಗ್ಲಿಷ್ ರಾಜ್ಯಭಾರದಿಂದ ಹಿಂದೂದೇಶಕ್ಕೆ ಉಂಟಾಗಿರುವ ಪ್ರಯೋಜನಗಳ ವಿಷಯವಾಗಿ ಮ| ... ರಾಯರು ಒಂದು ಉಪನ್ಯಾಸವನ್ನು ಓದಿದರು ಬಳಿಕ ಇನ್ಸ್ಪೆಕ್ಟರ್ ಮ| ಗೋಪಾಲರಾಯರು ಕೆಲವು ಮಾತುಗಳನ್ನಾಡಿ ಮಾತಿ ಬಂದಿದ್ದ ಮಹನೀಯರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಗಳನ್ನು ಹಂಚಿದನಂತರ ಸಭೆಯು ಬರಖಾಸ್ತಾಯಿತು ಸಾಕಷ್ಟು ಬಾಣ ಬಿರುಸುಗಳನ್ನು ಆ ದಿನ ರಾತ್ರಿಯಾದರೂ ಹಾರಿಸಿದ್ದರೆ ಆಗಿದ್ದರೆ ಎಷ್ಟೋ ಗಂಭೀರವಾಗಿತ್ತು ಆದರೆ ಯಾರೂ ಈ ವಿಷಯಕ್ಕೆ ಗಮನಕೊಡದೆಹೋದರು

ಚಿಂತಾಮಣಿ ತಾಲ್ಲೂಕು ಕಾಗತಿ

ಈ ಗ್ರಾಮದ ಪಾಠಶಾಲೆಯಲ್ಲಿ ಸ್ಕೂಲ್ ಕಮಿಟಿ ಮೆಂಬರುಗಳು ಮತ್ತು ಗ್ರಾಮಸ್ಥರ ಸಹಾಯದಿಂದ ಶ್ರೀಮಚ್ಚಕ್ರವರ್ತಿ ಸಾರ್ವಭೌಮರ ದರ್ಬಾರ್ ಮಹೋತ್ಸವವು ಅಂಗ್ಲೇಯ ಪದ್ಧತಿಗಳೊಡನೆ ಬಹು ವಿಜೃಂಭಣೆಯಿಂದ ನಡೆಯಿತು ಅಲ್ಲದೆ ಸ್ಕೂಲ ಉಪಾಧ್ಯಾಯರಿಂದ ಬ್ರಿಟಿಷ್ ರಾಜ್ಯಭಾರದಿಂದುಂಟಾಗಿರುವ ಪ್ರಯೋಜನಗಳ ವಿಷಯವಾಗಿಯೂ, ಸರ್ಕಾರದವರ ವಿನಯದಲ್ಲಿ ಪ್ರಜೆಗಳು ಹೀಗೆ ನಡೆಯಬೇಕೆಂಬುವ ವಿಷಯದಲ್ಲಿಯೂ ಒಂದು ಉಪನ್ಯಾಸವು ಕೊಡಲ್ಪಟ್ಟಿತು ... ಬಾಲಕರ ಆಟಪಾಟಗಳು ನಡೆದು, ಸಭೆಯವರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳು ಹಂಚಲಾಯಿತು ಮತ್ತು ರಾಜಭಕ್ತಿ ಪುರಸ್ಸರವಾಗಿ ಶ್ರೀಮಾನ್ ... ರವರಿಂದ ... ಎಂಬ ಹೆಸರಿನಿಂದ ಒಂದು ವಾಚಕ ಮಂದಿರವು ಕೆಲವು ಮುಖಂಡರ ಸಹಾಯದಿಂದ ಸ್ಥಾಪಿಸಲ್ಪಟ್ಟಿತು ಆದರೆ ಇದು ಮುಂದೆ ಗ್ರಾಮದ ದೊಡ್ಡ ಮನುಷ್ಯರ ಮತ್ತು ಮುಖ್ಯಸ್ಥರಾದ ಮ| ಪಟೇಲ್ ಅಪ್ಪಾಜಿರೆಡ್ಡಿಯವರ ಮತ್ತು ಮ| ... ಸುಬ್ಬಾರಾಯರ ಪ್ರೋತ್ಸಾಹದಿಂದ ಅಭಿವೃದ್ಧಿಸಬೇಕಾಗಿದೆ

ಶೃಂಗೇರಿ

ಇಲ್ಲಿನ ಎ ವಿ ಸ್ಕೂಲನ್ನು ಒಳಗೂ ಹೊರಗೂ ನಾನಾ ಪ್ರಕಾರ ಅಲಂಕರಿಸಿ ಬ್ರಿಟಿಷ್ ಪತಾಕೆಯನ್ನಿಟ್ಟು, ಒಳಗಡೆ ಚಕ್ರವರ್ತಿ ದಂಪತಿಗಳ ಪಟವನ್ನಿಟ್ಟು ಬಹು ವಿಜೃಂಭಣೆಯಿಂದ ಏರ್ಪಾಡು ಮಾಡಿದ್ದರು ಬೆಳಗ್ಗೆ ಬಾಲಕ ಬಾಲಕಿಯರೂ, ಉಪಾಧ್ಯಾಯರೂ ಸೇರಿ ಪ್ರಾರ್ಥನಾದಿಗಳನ್ನು ಮಾಡಿ ವಾದ್ಯಗಳಿಂದ ಟ್ರೂಪ್ ಮಾಡಿಸಿ ಪತಾಕೆಗೆ ವಂದಿಸಿದರು ಮಧ್ಯಾಹ್ನ ಸ್ಥಳಿಕ ದೊಡ್ಡ ಮನುಷ್ಯರು, ಅಧಿಕಾರಿಗಳು ಪರ್ತಕರೆ ... ಸಮಸ್ತರೂ ಸೇರಿ ಬಾಲಕರ ನಾನಾ ವಿಧವಾದ ಆಟ, ನಾಟಕ, ಸಂವಾದ, ಪದ್ಯ ಸ್ತೋತ್ರಗಳನ್ನು ಕೇಳಿ ಸಂತೋಷಪಟ್ಟರು ... ಅಗ್ರಾಸನಾಧಿಪತಿಗಳಾದ ... ರವರು ಸಮಯೋಚಿತವಾದ ಭಾಷಣವನ್ನು ಮಾಡಿದ ಮೇಲೆ ... ಗಂಧ ಪುಷ್ಪ ತಾಂಬೂಲಗಳೂ, ಬಾಲಕ ಬಾಲಕಿಯರಿಗೆ ತಿಂಡಿಯೂ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು ಆ ದಿವಸ ದೇವಸ್ಥಾನಗಳಲ್ಲಿ ವಿಶೇಷವಾಗಿ ಬಹು ... ಯಾಗಿ ನಡೆಯಿತು ... ಸೋಮವಾರದಿಂದ ... ಮೂರು ದಿವಸ ... ಆ ದಿವಸದ ಕಾರ್ಯಗಳು ನಡೆಯುತ್ತಿವೆ ... ಲ್ಲೂ ಪ್ರತಿಷ್ಠೆಯಾಗಿದೆ

ಶೃಂಗೇರಿ ... ರಣ್ಯಪುರ

ಈ ಗ್ರಾಮದ ಸ್ಕೂಲಿನಲ್ಲಿ ಕಳೆದ ೧೨ ನೇ ತಾ ಗುರುವಾರ ಚಕ್ರವರ್ತಿ ಸಾರ್ವಭೌಮರ ದೆಹಲಿ ದರ್ಬಾರ ಮಹೋತ್ಸವದ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡೆಯಿತು ಗ್ರಾಮಸ್ಥರು ಮುಂತಾಗಿ ಸೇರಿ ಬಹು ಮುತುವರ್ಜಿಯಿಂದ ಚಂದಾ ಹಾಕಿದರು ಆ ದಿನ ಬೆಳಗ್ಗೆ ಸ್ಕೂಲ್ ಬಾಲಕ ಬಾಲಕಿಯರುಗಳಿಗೆ ಬಯಲಿನಲ್ಲಿ ಆಟಗಳು ನಡೆದವು ಯೂನಿಯನ್ ಜಾಕ್ ಬಾವುಟವು ನೆಟ್ಟಿತ್ತು ಮಧ್ಯಾಹ್ನ ಸ್ಕೂಲಿನಲ್ಲಿ ಮೆಂಬರುಗಳು ಮುಖ್ಯ ಗ್ರಾಮಸ್ಥರು, ಒಕ್ಕಲಿಗರು ಸಹ ಸೇರಿದರು ಚಕ್ರವರ್ತಿ ದಂಪತಿಗಳ ಛಾಯಾಚಿತ್ರವು ಸಿಂಹಾಸನದ ಮೇಲೆ ಇಡಲ್ಪಟ್ಟಿತ್ತು ಬಾಲ ಬಾಲಕಿಯರ ದೇವರ ಪ್ರಾರ್ಥನಾ ಗಾನವೂ, ನೀತಿ ಸಂವಾದವೂ ನಡೆದ ಬಳಿಕ ಆಂಗ್ಲೇಯರ ಆಳ್ವಿಕೆಯಿಂದ ಭರತಖಂಡಕ್ಕುಂಟಾದ ಅಮೋಘವಾದ ಪ್ರಯೋಜನವು ವಿವರಿಸಲ್ಪಟ್ಟಿತು ಶೃಂಗೇರಿ ವ್ಯಾಕರಣ ಪಂಡಿತರು ಬ್ರ| ಶ್ರೀ ಶೇಷಶಾಸ್ತ್ರಿಗಳಿಂದ ರಾಜಭಕ್ತಿ ಮತ್ತು ಪ್ರಜೆಗಳ ಕರ್ತವ್ಯ ಈ ವಿಷಯವಾಗಿ ಸ್ವಾರಸ್ಯವಾಗಿ ಸಪ್ರಮಾಣವಾದ ಉಪನ್ಯಾಸವು ಮಾಡಲ್ಪಟ್ಟಿತು, ಒಕ್ಕಲಿಗರು ಮುಂತಾಗಿ ಎಲ್ಲರೂ ಮತ್ತಧಿಂದ ಸಹ ಸೇರುವುದಕ್ಕೆ ಶ್ಲಾಘಿಸಲ್ಪಟ್ಟರು ದೇವಸ್ಥಾನದಲ್ಲಿ ... ಜನೆ, ಸಾರ್ವಭೌಮರುಗಳಿಗೆ ಜಯಘೋಷರೂಪವಾದ ಮಂಗಳ, ಶ್ರೇಯಃಪ್ರಾರ್ಥನಾ ಪದ್ಯಗಳು ಸ್ತುತಿಸಲ್ಪಟ್ಟು, ಮಹಾ ಸಾಮ್ರಾಜ್ಯವಿಭವಗಳಿಗೆ ಪ್ರಾರ್ಥಿಸಿ ಸಭಿಕರಿಗೆ ತಾಂಬೂಲಾದಿಗಳೂ, ಬಾಲಕ ಬಾಲಕಿಯರಿಗೆ ತಿಂಡಿಯೂ ಹಂಚಲ್ಪಟ್ಟು ಆನಂದದಿಂದ ಮುಕ್ತಾಯವಾಯಿತು.

ಮೈಸೂರು ನಾರ್ಮಲ್ ಸ್ಕೂಲು.

ಕಳೆದ ತಾ ೧೨ ನೇ ಗುರುವಾರ ಬೆಳಗ್ಗೆ ಮೈಸೂರು ಗವರ್ನ್‌ಮೆಂಟ್ ನಾರ್ಮಲ್ ಸ್ಕೂಲಿನಲ್ಲಿ ಈ ಮಹೋತ್ಸವವು ಬಲು ವಿಜೃಂಭಣೆಯಿಂದ ನಡೆಯಿತು ಸ್ಕೂಲ್ ಕಟ್ಟಡವು ದಿವ್ಯವಾಗಿ ಅಲಂಕರಿಸಲ್ಪಟ್ಟಿತ್ತು ... ಸ್ಕೂಲಿನ ಮತ್ತು ಪ್ರಾಕ್ಟಿಸಿಂಗ್ ಸ್ಕೂಲಿನ ವಿದ್ಯಾರ್ಥಿಗಳೆಲ್ಲಾ ಸಾ...

...ಧ್ಯಾಯರು ಮುಂಭಾಗದಲ್ಲೂ ಕುಳಿತರು ಮಧ್ಯಭಾಗದಲ್ಲಿ ಶ್ರೀಮಾನ್ ಚಕ್ರವರ್ತಿ ದಂಪತಿಗಳ ಸುಂದರವಾದ ಚಿತ್ರಪಟವೂ, ನಮ್ಮ ಮಹಾರಾಜರ ಛಾಯಾಚಿತ್ರವೂ ಶೋಭಿಸುತ್ತಿದ್ದುವು ಉತ್ಸವವು ಪ್ರಾರಂಭಿಸಲ್ಪಟ್ಟ ಕೂಡಲೆ ನಿಂತು, ಒಂದು ಹುಡುಗನು ಬ್ರಿಟಿಷ್ ಬಾವುಟವನ್ನೂ ಮತ್ತೊಂದು ಹುಡುಗಿ ಮೈಸೂರಿನ ಬಾವುಟವನ್ನೂ ಹಿಡಿದು ಹಾರ್ಮೋನಿಯಂ ವಾದ್ಯದೊಡನೆ ಸ್ಕೂಲ ಮಕ್ಕಳ ಮಂಗಳ ಗಾನದ ಮೂಲಕ ಚಕ್ರವರ್ತಿ ದಂಪತಿಗಳ ಮತ್ತು ಮಹಾರಾಜರವರ ಶ್ರೀಯುತಪ್ರಾರ್ಥನೆಗಳು ನೆರವೇರಿದವು ಮ॥ ನಾರಾಯಣಾಚಾರ್ಯರು ಬ್ರಿಟಿಷ್ ಸಾರ್ವಭೌಮರ ಮುಂದಳಾಧಿಪತ್ಯದಿಂದ ನಮಗುಂಟಾಗಿರುವ ಅಪಾರವಾದ ಪ್ರಯೋಜನಗಳನ್ನೂ, ನಾವು ಅವರಲ್ಲಿಟ್ಟಿರಬೇಕಾದ ರಾಜಭಕ್ತಿ ವಿಶ್ವಾಸಗಳನ್ನೂ ಕುರಿತು ದೀರ್ಘವಾಗಿ ಉಪನ್ಯಾಸಮಾಡಿದರು ಬಳಿಕ ಮ॥ ಮದರ್‌ವರ್ಲ್ ಚಾರ್ಲ್ಸ್‌ರವರು ಡೆಲ್ಲಿ ದರ್ಬಾರಿನ ಮಹಿಮೆಯನ್ನೂ, ಚಕ್ರವರ್ತಿಯವರ ಗುಣಕಥನವನ್ನೂ ಮಾಡಿದರು ಪುನಃ ಮಂಗಳ ಗಾನವೂ ಶ್ರೀಯುತಪ್ರಾರ್ಥನೆಯೂ ನಡೆದ ಬಳಿಕ ವಿದ್ಯಾರ್ಥಿಗಳಿಗೆ ಹಣ್ಣು ಸಕ್ಕರೆಗಳು ಹಂಚಲ್ಪಟ್ಟು ಉತ್ಸವವನ್ನು ಜಯಘೋಷದಿಂದ ಮುಕ್ತಾಯಮಾಡಿದರು

ಚಾಮರಾಜನಗರ

ಗೌರ್ನಮೆಂಟ್ ಕನ್ನಡ ಗರ್ಲ್ಸ್ ಸ್ಕೂಲಿನಲ್ಲಿ ನಡೆದ ನಮ್ಮ ಜಾರ್ಜ್ ಸಾರ್ವಭೌಮರವರ ಎರಡನೇ ವರ್ಷದ ಕಾರೊನೇಷನ್ ಮಹೋತ್ಸವವು ಕಳೆದ ೧೨ನೇ ತಾರೀಖು ಗುರುವಾರ ಅತಿ ವಿಜೃಂಭಣೆಯಿಂದ ಎ ವಿ ಸ್ಕೂಲ್ ಮಾಸ್ಟರ್ ಮು ... ದ ಪ್ರೇಕ್ಷಕರ ಸಮಂಗ ಅಲ್ಲಿನ ಹೆಡ್ ಮಾಸ್ಟರವರ ಅಪ್ಪಣೆಯಿಂದಲೇ ಮರುದಿನ ಮಧ್ಯಾಹ್ನ ಈ ಊರಿನಲ್ಲಿರುವ ಆರ್ಯವೈಶ್ಯರ ಕುಲಕ್ಕೆ ಸೇರಿದ ಅಮಲ್ದಾರರವರ ಕುಟುಂಬ ಶ್ರೀಮತಿಯವರ ಅಧ್ಯಕ್ಷತೆಯ ಮೇರೆಗೆ ಹಾಲಿ ಗರ್ಲ್ಸ್ ಸ್ಕೂಲ್ ನಡೆಯುತ್ತಿರುವ ಕಟ್ಟಡದಲ್ಲಿ ಹುಡುಗಿಯರ ಮನ ಕುಲಂಗಳಿಗೂ ಬಾಲಕಿಯರಿಗೂ ಬಹು ತುಂಬಾ ಸಂತೋಷವನ್ನೂ ಕುತೂಹಲವನ್ನೂ ಉಂಟುಮಾಡಿತು ಈ ಉತ್ಸವವು ಎರಡು ದಿನಗಳಲ್ಲಿಯೂ ಈ ಸ್ಕೂಲಿನ ಬಾಲಕಿಯರು ಹಾಡಿದ ಚಕ್ರವರ್ತಿಗಳವರ ಶ್ರೀಯುತಪ್ರಾರ್ಥನೆ, ಮಹಾರಾಜರವರ ಶ್ರೀಯುತಪ್ರಾರ್ಥನೆ, ವಿದ್ಯಾಭ್ಯಾಸದ ಆವಶ್ಯಕತೆಯು ವಿಷಯವಾದ ಉಪನ್ಯಾಸ ಕನ್ನಡ ಪದಗಳು, ಕೀರ್ತನೆಗಳು, ಜಡೆಕೋಲಾಟ, ಮಂಗಳಾರತಿಗಳು, ಅಷ್ಟಲಕ್ಷ್ಮೀ ಸರಸ್ವತಿಯರ ನಟನೆಯೊಡನೆ ವಿನಯದ ಹಸ್ತ ... ಪ್ರದರ್ಶನಗಳು, ಕಿಂಡರ್ ಗಾರ್ಡನ್ ಆಟಗಳು ಮುಂತಾಗಿ ಅಡಿಯಲ್ಲಿ ಚಕ್ರವರ್ತಿಗಳವರ ಮತ್ತು ನಮ್ಮ ಮಹಾರಾಜರವರ ಶ್ರೀಯುತಪ್ರಾರ್ಥನೆಯಿಂದ ಕೂಡಿದ ನೋಟುಗಳನ್ನು ಹಾಡುವುದರ ಮೂಲಕ ಎಂದಿದ್ದ ಸಭಿಕರೆಲ್ಲಾ ಮಹಾನಂದವನ್ನೂ ಈ ಟುವಲ್ಲು, ತುಂಬಾ ಆನಂದವನ್ನು ಉಂಟುಮಾಡಿತು ಇದಕ್ಕಾಗಿ ಈ ಸ್ಕೂಲಿನ ಹೆಡ್ ಮಿಸ್ಟ್ರೆಸ್‌ರವರೂ ಅ, ಮಾಸ್ಟರ್ ರ ತುಂಬಾ ಶ್ರಮವನ್ನು ವಹಿಸಿದ್ದಾರೆ

ದೇವನಹಳ್ಳಿ

ಡೆಲ್ಲಿ ಕಾರೊನೇಷನ್ ವಾರ್ಷಿಕೋತ್ಸವದ ಉತ್ಸವಗಳು ಇಲ್ಲಿ ಬಹಳ ವೈಭವದಿಂದ ನೆರವೇರಿದವು ಆ ದಿನ ಬೆಳಗ್ಗೆ ಅಮಲ್ದಾರರವರು, ಇರಸ್ತೇದಾರರವರು ಮುಂತಾದ ಆಫೀಸರುಗಳು ಗ್ರಾಮದ ಜನರೂ ಮತ್ತು ಮಹಮದೀಯ ಮೊದಲಾದ ಮಕ್ಕಳು ಹಿಂದೂಸ್ತಾನಿ ಸ್ಕೂಲಿಗೆ ದಯಮಾಡಿಸಿದರು ಸ್ಕೂಲು ಮನೆಯು ವಿಧವಿಧ ಪತ್ರ ಪುಷ್ಪಗಳಿಂದಲೂ ಇನ್ನೂ ಅನೇಕ ವಿಧವಾದ ಅಲಂಕಾರಗಳಿಂದಲೂ ಶೋಭಿಸುತ್ತಿತ್ತು ಸ್ಕೂಲಿನ ಹೊರಗಡೆ ಹುಡುಗರ ಡ್ರಿಲ್ ಮತ್ತು ಯೂನಿಯನ್ ಜಾಕ್ ವಂದನೆಗಳು ನಡೆದನಂತರ ಎಲ್ಲರೂ ಒಳಗಡೆ ಸೇರಿದರು ಅಮಲ್ದಾರರವರು ಸ್ವಾಗತ ಪ್ರದಾನಗಳ ಕೇಳಿದರು ದೇವರ ಪ್ರಾರ್ಥನೆಯೂ ಒಂದು ಕನ್ನಡ ಉಪನ್ಯಾಸಗಳೂ, ಜಾರ್ಜ್ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೀಯುತಪ್ರಾರ್ಥನೆಯೂ ನೆರವೇರಿದವು ನಂತರ ಹುಡುಗರಿಗೆ ಪುಸ್ತಕಗಳೂ, ವಿದ್ಯಾರ್ಥಿಗಳಿಗೆ ಬಹುಮಾನಗಳೂ ಹಂಚಿದರು ಸ್ವಲ್ಪ ಕಾಲದ ಮೇಲೆ ... ಮೂಲಕ ಮಹಮದೀಯರಿಗೂ, ಹುಡುಗರಿಗೆ ತಿಂಡಿಯೂ ಹಂಚಲ್ಪಟ್ಟು ಮುಕ್ತಾಯವಾಯಿತು ಇಲ್ಲಿಂದ ಅಮಲ್ದಾರ್ ಮುಂತಾದವರು ಗರ್ಲ್ಸ್ ಸ್ಕೂಲಿಗೆ ಹೋಗಿ ಅಲ್ಲಿ ನಡೆಯತಕ್ಕ ಕೆಲಸಗಳನ್ನೆಲ್ಲಾ ನೆರವೇರಿಸಿ, ಏ ವಿ ಸ್ಕೂಲಿಗೆ ದಯಮಾಡಿಸಿದರು ಇಲ್ಲಿ ಸ್ಕೂಲು ಮೈದಾನದಲ್ಲಿ ಹುಡುಗರ ಡ್ರಿಲ್ ಆದನಂತರ ಒಳಗೆ ಎಲ್ಲರೂ ಸೇರಿದರು ಉಪನ್ಯಾಸಗಳೂ, ಜಾರ್ಜ್ ಚಕ್ರವರ್ತಿಯವರ ಮತ್ತು ಮಹಾರಾಜರ ಬಹುದೀರ್ಘ ಶ್ರೀಯುತಪ್ರಾರ್ಥನೆಯೂ ಬೆಳೆದನಂತರ ಸಭೆಯವರಿಗೆ ಗಂಧ ಪುಷ್ಪ ತಾಂಬೂಲಗಳೂ, ಹುಡುಗರಿಗೆ ತಿಂಡಿಯೂ ಹಂಚಿ ಸಭೆಯು ಮುಕ್ತಾಯವಾಯಿತು

ಬೇಲೂರು.

ಈ ಮಾಸ 12ನೇ ತಾರೀಖು ಸಾಯಂಕಾಲ ಚಕ್ರವರ್ತಿ ಸಾರ್ವಭೌಮರವರ ಪಟ್ಟಾಭಿಷೇಕ ಮಹೋತ್ಸವದ ವರ್ಷಾಂತ್ಯೋತ್ಸವದ ದಿನವಾದುದರಿಂದ ಪೇಟೆ ಕನ್ನಡ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರವರ ಕೋರಿಕೆಯಂತೆ ಪೇಟೆಯ ಮುಖಂಡರು ಮ॥ ಗಳಾದ ಮಂಚಯ್ಯ, ವೆಂಕಟಾಚಲಶೆಟ್ಟಿ ಚನ್ನಕೇಶವಶೆಟ್ಟಿ, ವೆಂಕಟ ನಾಯ್ಡು ಎಂಬೀ ಮೊದಲಾದ ದೊಡ್ಡ ಮನುಷ್ಯರು ಸದರಿ ಬಾಯ್ಸ್ ಸ್ಕೂಲ್ ಕಟ್ಟಡದಲ್ಲಿ ಸಭಾಲಂಕೃತರಾಗಿರುವಾಗ್ಗೆ ಹೆಡ್ ಮಾಸ್ಟರವರು ಸಭೆಯ ಉದ್ದೇಶವಾದ ಸಂಕ್ಷೇಪವಾಗಿ ಉಪನ್ಯಾಸ, ಶಾಲೆಯ ಮುಂಭಾಗದಲ್ಲಿ ನಿಲ್ಲಿಸಿದ್ದ ಯೂನಿಯನ್ ಜಾಕ್ ಎಂಬ ಬ್ರಿಟಿಷ್ ಬಾವುಟವಾದ ಎದುರಿಗೆ ನಿಲ್ಲಿಸಿ ಬಾಲಕರಿಂದ ಬ್ರಿಟಿಷ್ ರಾಜಭಕ್ತಿ ನಿರ್ಧಾರದ ಹಾಡನ್ನು ಹಾಡಿಸಿ ಧ್ವಜಕ್ಕೆ ವಂದನೆಮಾಡಿ ಎಲ್ಲರೂ ಅಲಂಕೃತವಾಗಿದ್ದ ಶಾಲೆಯಲ್ಲಿ ಸಬಾಲಕೃತರಾಗಿ ಹೆಡ್ ಮಾಸ್ಟರವರು ಭೂಪಟದ ಸಹಾಯದಿಂದ ನಮ್ಮ ಬ್ರಿಟಿಷ್ ಸಾಮ್ರಾಜ್ಯದ ವಿಸ್ತೀರ್ಣವನ್ನೂ, ಅದರಿಂದ ಭಾರತೀಯರಾದ ನಮಗೆ ಉಂಟಾಗಿರುವ ಸಮಾಧಾನಗಳನ್ನೂ ಉದಾಹರಣೆಗಳಿಂದ ವಿವರಿಸಿ, ನಾವು ಆ ಚಕ್ರಾಧಿಪತ್ಯಕ್ಕೆ ನಿರಂತರವೂ ಕೃತಜ್ಞತೆಯನ್ನು ಸಲ್ಲಿಸಬೇಕೆಂದು ಉಪನ್ಯಾಸಮಾಡಿ ಚಕ್ರವರ್ತಿ ಸಾರ್ವಭೌಮರವರ, ನಮ್ಮ ಶ್ರೀಮನ್ ಮಹಾರಾಜರವರ ಯುವರಾಜರವರ ಶ್ರೀಯುತಪ್ರಾರ್ಥನಾ ಮಂಗಳಗಳನ್ನು ಮಕ್ಕಳಿಂದ ಹಾಡಿಸಿ, ಸಭಿಕರಿಗೆ ಗಂಧ, ಹೂವು, ಅಡಕೆಲೆ ವಿನಿಯೋಗಿಸಿ, ಮೇಲ್ಕಂಡ ಮುಖಂಡರು ಅಭಿಮಾನದ ದ್ರವ್ಯದಿಂದ ಬಾಲಕರಿಗೆ ತಿಂಡಿ ವಗೈರೆ ಕೊಡಿಸಿ ಕಳುಹಿಸಿದರು ಹಾಗೆಯೇ ನಮ್ಮ ಎ ವಿ ಸ್ಕೂಲಿನಲ್ಲಿಯೂ, ಮಿಷನ್ ಸ್ಕೂಲ್ ಪಾಠಶಾಲೆಯಲ್ಲೂ ಈ ಉತ್ಸವವನ್ನು ಅತ್ಯಂತ ವಿಜೃಂಭಣೆಯಾಗಿ ನಡೆಸಿ ಚಕ್ರವರ್ತಿ ಸಾರ್ವಭೌಮರವರ ಮತ್ತು ಮಹಾರಾಜರವರ ಪರವಾಗಿ ಮಂಗಳ ಹಾಡಿಸಿ ಮಕ್ಕಳಿಗೆಲ್ಲಾ ಮಿಠಾಯಿ ಕೊಡಿಸಿ ಆ ದಿನವನ್ನು ಸಂತೋಷದಿಂದ ಮುಗಿಸಿದರು

ಹಾಸನ

ಕಿರೀಟಧಾರಣೋತ್ಸವ ವರ್ಷಾಂತಿಯ ಉದ್ದಿಷ್ಟ ಕಳೆದ ತಾ 12ನೇ ಗುರುವಾರ ಬೆಳಗ್ಗೆ ಈ ಟವರ್ನಲ್ಲಿರುವ ಎಲ್ಲಾ ಶಾಲೆಗಳ ಉಪಾಧ್ಯಾಯರುಗಳೂ ತಮ್ಮ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನೆಲ್ಲಾ ಇಲ್ಲಿನ ಪ್ರಖ್ಯಾತವಾದ ಜೂಬಿಲೀ ಹಾಲ್ ಮೈದಾನಕ್ಕೆ ಕರೆತಂದರು ಹಾಲಿನಲ್ಲಿ ಶ್ರೀ ಜಾರ್ಜ್ ಚಕ್ರವರ್ತಿಯವರ, ಮೇರಿ ಮಹಾರಾಜ್ಞಿಯವರ, ಮತ್ತು ನಮ್ಮ ಶ್ರೀಮನ್ ಮಹಾರಾಜರವರ ತಸ್ವೀರುಗಳು ಸುಂದರವಾಗಿ ಇಡಲ್ಪಟ್ಟಿವೆ ಹಾಲಿನ ಮುಂಭಾಗದಲ್ಲಿ ಯೂನಿಯನ್ ಜಾಕ್ ಎಂಬ ಬ್ರಿಟಿಷ್ ಬಾವುಟವನ್ನು ನೆಟ್ಟು ಅದಕ್ಕೆದುರಾಗಿ ಎಡಭಾಗದಲ್ಲಿ ಬಾಲಕಿಯರನ್ನೂ ಬಲಭಾಗದಲ್ಲಿ ಬಾಲಕರನ್ನೂ ನಿಲ್ಲಿಸಿದರು ಈ ಸ್ಥಳದ ಎಲ್ಲಾ ಶಾಲೆಗಳವರೂ ಸೇರಿ 1,100 ಮಂದಿ ಬಾಲಬಾಲಿಕೆಯರು ಕೂಡಿದ್ದರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರೂ, ರೆವರೆಂಡ್ ಸ್ಪೆನ್ಸರ್ ಬೋಧಕರೂ, ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರೂ, ಹೈಸ್ಕೂಲ್ ಮುಂತಾದ ಎಲ್ಲಾ ಮಾಸ್ಟರುಗಳೂ, ಸ್ಥಳನಿವಾಸಿಗಳಲ್ಲಿ ಕೆಲವರೂ ಹಾಜರಾಗಿದ್ದರು ಆಗ ಮಿಷನ್ ಶಾಲೆಗಳ ಬಾಲಕಿಯರಿಂದ ಇಂಗ್ಲಿಷ್ ಶ್ರೀಯುತಪ್ರಾರ್ಥನೆ ವೆಸ್ಲಿಯನ್ ಶಾಲೆಗಳ ಬಾಲಕಿಯರಿಂದ ಕನ್ನಡ ಶ್ರೀಯುತಪ್ರಾರ್ಥನೆ, ಕೀರ್ತನೆಗಳನ್ನು ಹಾಡಿ ಇಂಗ್ಲಿಷ್ ಬಾವುಟಕ್ಕೆ ವಂದನೆ ಮಾಡಿದರು ಅನಂತರ ಬಾಲಕರೂ ಎಲ್ಲರೂ ಚಕ್ರವರ್ತಿಗಳ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೀಯುತಪ್ರಾರ್ಥನೆಯುಳ್ಳ ಜಯವನ್ನು ಮಾಡಿದರು ವಿದ್ಯಾರ್ಥಿಗಳೆಲ್ಲರೂ ತಂತಮ್ಮ ಶಾಲೆಗಳಿಗೆ ಕರೆದೊಯ್ಯಲ್ಪಟ್ಟು ಅಲ್ಲಿ ಬ್ರಿಟಿಷ್ ಸಾಮ್ರಾಜ್ಯದಿಂದ ಈ ದೇಶದ ನಿವಾಸಿಗಳಿಗೆ ಉಂಟಾಗಿರುವ ಬಹುವಿಧ ಲಾಭಗಳನ್ನು ವಿವರಿಸಿ, ಈ ರಾಜ್ಯಭಾರವನ್ನು ನಿರಂತರವಾಗಿ ನೆಲೆಗೊಳಿಸಿ, ಕ್ಷೇಮಾಭ್ಯುದಯಗಳನ್ನು ದಯಪಾಲಿಸುವಂತೆ ಉಪನ್ಯಾಸ, ಶ್ರೀಯುತಪ್ರಾರ್ಥನೆಗಳು ಆಯಾ ಶಾಲೆಯ ಮುಖ್ಯೋಪಾಧ್ಯಾಯರಿಂದ ನಡೆಸಲ್ಪಟ್ಟವು ಸಾಯಂಕಾಲ ಆಯಾ ಸ್ಕೂಲುಗಳಲ್ಲಿ ಆಟಪಾಟಗಳು ನಡೆದು ವಿದ್ಯಾರ್ಥಿಗಳಿಗೆ ತಿಂಡಿ ವಿನಿಯೋಗಿಸಲಾಯಿತು

ಚನ್ನಗಿರಿ

ಇಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿಗಳವರ ಕಾರೊನೇಷನ್ ದರ್ಬಾರ್ ಡೇ ಮಹೋತ್ಸವವು ಕಳೆದ ತಾ 12ನೇ ಗುರುವಾರ ಸ್ಥಳೀಯಾಧಿಕಾರಿಗಳು, ವರ್ತಕರುಗಳು, ವರ್ತಕರೇ ಮೊದಲಾದ ಮಹಾಜನರ ಉದಾರಾಶ್ರಯದಿಂದ ಎ ವಿ ಸ್ಕೂಲಿನಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಬೆಳಗ್ಗೆ ಸ್ಕೂಲಿನ ಮುಂದೆ ನಾನಾ ಪ್ರಕಾರ ಅಲಂಕರಿಸಲ್ಪಟ್ಟಿದ್ದ ಮಂಟಪದಲ್ಲಿ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ ಮಹಾರಾಜರವರ ಫೋಟೋಗಳು ಉಭಯ ಪಾರ್ಶ್ವಗಳಲ್ಲಿಯೂ ಯೂನಿಯನ್ ಜಾಕು ಇಟ್ಟು ಶೃಂಗರಿಸಿದ್ದರು ಮಂಟಪದ ಮಧ್ಯೆ ಅಮಲ್ದಾರರೇ ಮೊದಲಾದ ಅಧಿಕಾರಿಗಳೂ, ಪುರನಿವಾಸಿಗಳೂ, ಸ್ಕೂಲುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳೂ ತಂಡತಂಡವಾಗಿ ಸೇರಿದ್ದರು ವಾದ್ಯಗಳು ಮೊಳಗುತ್ತಿರುವಲ್ಲಿ ಮ॥ ನ ... ನಾಗೇಶರಾಯರವರಿಂದ ಚಕ್ರವರ್ತಿ ಸಾರ್ವಭೌಮರವರ ಸುಗುಣಾವಳಿಯೂ ಮತ್ತು ಪಾಶ್ಚಾತ್ಯರ ಆಳಿಕೆಯಿಂದ ನಮಗೆ ಉಂಟಾಗಿರುವ ಬಗೆ ಬಗೆಯ ಪ್ರಯೋಜನಗಳೂ ಸಭಿಕರ ಮನಸ್ಸನ್ನಾಕರ್ಷಿಸುವಂತೆ ಉಪನ್ಯಾಸಗಳೂ, ಸಾರ್ವಭೌಮರ ಮತ್ತು ಶ್ರೀಮನ್ ಮಹಾರಾಜರ ಶ್ರೀಯುತಪ್ರಾರ್ಥನೆಗಳೂ, ವಿದ್ಯಾರ್ಥಿಗಳ ಮತ್ತು ಬಾಯ್ ಸಿಪಾಯಿಗಳ ಸೆಲ್ಯೂಟ್ ವಗೈರೆಗಳೂ ನಡೆದು ಸಭೆಯು ಮುಕ್ತಾಯವಾಯಿತು ಮಧ್ಯಾಹ್ನದ ಸಂ ... ಸೇರಿ ವಿದ್ಯಾರ್ಥಿಗಳ ಆಟಪಾಟಗಳೂ, ರಾಜಭಕ್ತಿ ದೇಶಭಕ್ತಿ ಪ್ರಧಾನಗಳಾದ ಕನ್ನಡ ಇಂಗ್ಲಿಷ್ ನಾಟಕಗಳೂ, ಸಲಾಂ ಬಾಜೆ ಎಂಬ ಕರ್ಣಾನಂದಕರವಾದ ಗಾನಯುತವಾದ ಶ್ರೀಯುತಪ್ರಾರ್ಥನೆಗಳೂ ನಡೆದ ಬಳಿಕ ದೇವಸ್ಥಾನಗಳಲ್ಲಿ ಪೂಜಾದಿಗಳು ಬೆಳೆದವು ಎಲ್ಲರಿಗೂ ಮಹಾರಾಜರೂ ... ಮಕ್ಕಳಿಗೆ ತಿಂಡಿಯೂ, ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನವೂ ಹಂಚಲ್ಪಟ್ಟವು ಈ ಉತ್ಸವಕ್ಕೆ ಮಹಾಜನರಾದ ಸಾಹುಕಾರ್ ನಂಜಪ್ಪನವರು, ವೀರಪ್ಪನವರು, ನಾಡಿಗರ ಬಾಲಪ್ಪನವರು ಕೆಂಚಪ್ಪನವರೇ ಮೊದಲಾದ ದೊಡ್ಡ ಮನುಷ್ಯರ ಸಹಾಯವೂ, ಉತ್ಸಾಹವೂ ರಾಜಭಕ್ತಿಯೂ ಸ್ತೋತ್ರಾರ್ಹವಾಗಿದೆ

ಹೊಳಲ್ಕೆರೆ?

ಚಕ್ರವರ್ತಿಗಳವರ ಕಿರೀಟಧಾರಣೆಯಾದ ಉತ್ಸವದ ಜ್ಞಾಪಕಾರ್ಥವಾಗಿ 12ನೇ ತಾ ಗುರುವಾರ ಪ್ರಾತಃಕಾಲ ಎ ವಿ ಸ್ಕೂಲ್ ಹಾಲನ್ನು ಕದಳಿಸ್ತಂಭ, ತೋರಣ, ಬಾವುಟಗಳಿಂದಲೂ, ಮತ್ತು ಫೋಟೋಗಳಿಂದಲೂ ಅಲಂಕರಿಸಿ ಸ್ಕೂಲ್ ಕಾಂಪೌಂಡಿನಲ್ಲಿ ಶ್ರೀಮನ್ ಚಕ್ರವರ್ತಿಗಳವರ ಬಾವುಟವನ್ನಿರಿಸಿ ನಾನಾ ತರಹ ಬಾವುಟಗಳಿಂದ ಅಲಂಕಾರ ಮಾಡಿದ್ದರು ಮುನ್ಸಿಫರವರೂ ಸಬ್ ರಿಜಿಸ್ಟ್ರಾರವರೂ ಎಕ್ಸೈಸ್ ಇನ್ಸ್‌ಪೆಕ್ಟರವರೂ ಪೋಲೀಸ್ ಇನ್ಸ್‌ಪೆಕ್ಟರವರೂ, ಡಾಕ್ಟರವರೂ ಎಲ್ಲಾ ಪ್ಲೀಡರುಗಳೂ, ಮಹಾಜನಗಳೂ ಇತರ ದೊಡ್ಡಮನುಷ್ಯರೂ ಸಭೆಯನ್ನು ಅಲಂಕರಿಸಿದ್ದರು ಶ್ರೀಮನ್ ಚಕ್ರವರ್ತಿಗಳ ಬಾವುಟದ ಮುಂಭಾಗದಲ್ಲಿ ಸ್ಕೂಲ್ ಬಾಲಕರನ್ನೂ ಬಾಲಕಿಯರನ್ನೂ ಸಾಲಾಗಿ ನಿಲ್ಲಿಸಿ ಶ್ರೀಮನ್ ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರವರ ಶ್ರೀಯುತಪ್ರಾರ್ಥನಾ ಹಾಡುಗಳನ್ನು ಸಭಾಸದರೆಲ್ಲರಿಗೂ ಕರ್ಣಾನಂದವಾಗುವಂತೆ ಹಾಡಿದರು ಬಾಲಕ ಬಾಲಕಿಯರು ಜಾರ್ಜ್ ಚಕ್ರವರ್ತಿಗಳವರಿಗೆ ಸೆಲ್ಯೂಟ್ ಮಾಡಿದರು ಸಭಾಸದರೆಲ್ಲರೂ ಎ ವಿ ಸ್ಕೂಲ್ ಹಾಲಿನಲ್ಲಿ ಸಭೆ ಸೇರಿದರು ಮಂಗಳ ವಾದ್ಯಗಳು ಮೊಳಗುತ್ತಿರಲು ಮುನ್ಸಿಫ್ ಮ॥ ನರಸಿಂಹಯ್ಯಂಗಾರ್ಯರವರು ಅಗ್ರಾಸನವನ್ನು ವಹಿಸಿದರು ಮ॥ ರಾಮರಾಯರೂ, ಸಬ್ ರಿಜಿಸ್ಟ್ರಾರವರೂ, ಪೋಸ್ಟ್ ಮಾಸ್ಟರವರೂ ಬ್ರಿಟಿಷ್ ಗೌರ್ನಮೆಂಟಿನವರು ಪ್ರಜಾಸೌಖ್ಯಕ್ಕೆ ಮಾಡಿರತಕ್ಕ ಸೌಕರ್ಯಗಳನ್ನು ಕುರಿತು ಉಪನ್ಯಾಸ ಮಾಡಿದರು ನಂತರ ಬಾಲಕಿಯರಿಂದ ಚಕ್ರವರ್ತಿ ಸಾರ್ವಭೌಮರ ಶ್ರೀಮನ್ ಮಹಾರಾಜರವರ ಶ್ರೀಯುತಪ್ರಾರ್ಥನಾ ಮಂಗಳವನ್ನು ಹಾಡಿಸಿ, ಬ್ರಿಟಿಷ್ ಗೌರ್ನಮೆಂಟಿನವರಿಗೆ ದೇವರು ಆಯುರಾರೋಗ್ಯವನ್ನು ... ಕೋರಿ ಸಭೆಯನ್ನು ಬರಖಾಸ್ತು ಮಾಡಿದರು ಮಧ್ಯಾಹ್ನ 1 ಘಂಟೆಗೆ ಮೇಲ್ಕಂಡವರೆಲ್ಲರೂ ಸ್ಕೂಲ್ ಹಾಲ್‌ನಲ್ಲಿ ಸಭೆ ಸೇರಿ ಕಾಂಪೌಂಡಿನಲ್ಲಿ ಎಲ್ಲಾ ಬಾಲಕ ಬಾಲಕಿಯರಿಂದ ಪಂದ್ಯಗಳನ್ನು ಆಡಿಸಿ, ಗೆದ್ದವರಿಗೆ ಅಗ್ರಾಸನಾಧಿಪತಿಗಳಿಂದ ಬಹುಮಾನಗಳನ್ನು ಕೊಡಿಸಿದ ತರುವಾಯ ಎಲ್ಲಾ ಬಾಲಕ ಬಾಲಕಿಯರಿಗೂ ಮಿಠಾಯಿ ಹಂಚಲ್ಪಟ್ಟಿತು ಮುನ್ಸಿಫರವರೂ ಎ ವಿ ಸ್ಕೂಲ್ ಹೆಡ್ ಮಾಸ್ಟರವರೂ ಬ್ರಿಟಿಷ್ ಗೌರ್ನಮೆಂಟಿನವರ ಧೈರ್ಯ ಶೌರ್ಯ ಸಾಹಸಾದಿ ಸದ್ಗುಣಗಳನ್ನು ಕುರಿತು ಉಪನ್ಯಾಸ ಮಾಡಿದರು ಸಭಾಸದರಿಗೆ ಗಂಧ ಪುಷ್ಪ ತಾಂಬೂಲಗಳಿಂದ ಸಂತೋಷಗೊಳಿಸಿ ಬಾಲಕಿಯರಿಂದ ಮಂಗಳಾರತಿಯನ್ನು ಮಾಡಿಸಿ ಚಕ್ರವರ್ತಿ ಸಾರ್ವಭೌಮರವರಿಗೆ ಶ್ರೀಯುತ್ಸ್ವಸ್ತಿಯಾಗಲೆಂಬ ಜಯಘೋಷದಿಂದ ಸಭೆಯನ್ನು ಮುಕ್ತಾಯ ಮಾಡಿದರು ಪೋಲೀಸಿನವರು ಮಾಡಿದ ಡ್ರಿಲ್ ಮತ್ತು ಸೆಲ್ಯೂಟು ಬಹಳ ಗಾಂಭೀರ್ಯವಾಗಿತ್ತು

ದೊಡ್ಡಬಳ್ಳಾಪುರ

ಈ ದರ್ಬಾರ್ ಡೇ ಎಂಬುವ ವಿಶೇಷ ದಿನವು ನಮ್ಮ ವಿದ್ಯಾಶಾಲೆಗಳಲ್ಲಿಯೂ ನಡಿಸಲ್ಪಡಬೇಕೆಂಬ ರಾಜಾಜ್ಞೆಯನ್ನನುಸರಿಸಿ ದೊಡ್ಡಬಳ್ಳಾಪುರದ ಗವರ್ನಮೆಂಟ್ ಎ ವಿ ಸ್ಕೂಲಿನ ಹೆಡ್ ಮಾಸ್ಟರ್ ಮ॥ ಕೊಂಗಾಡಿಯಪ್ಪನವರು ನಗರವಾಸಿಗಳಾದ ಸಮಸ್ತ ಪ್ರಜೆಗಳನ್ನೂ ಕರೆಯಿಸಿ ಇಲ್ಲಿನ ಇತರ ಎಲ್ಲಾ ಪಾಠಶಾಲೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ದೊಡ್ಡ ಮೈದಾನದಲ್ಲಿ ಸೇರಿಸಿ ಅವರಿಂದ ಆಟಪಾಟಗಳನ್ನಾಡಿಸಿ, ಅಲ್ಲಿಗೆ ದಯಮಾಡಿಸಿದ ಅಮಲ್ದಾರ್ ಮ॥ ಕೃಷ್ಣ ಅರಸಿನವರು, ಸಬ್ ರಿಜಿಸ್ಟ್ರಾರ್ ಮ॥ ರಾಮಸ್ವಾಮಯ್ಯಂಗಾರ್ಯರವರು, ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಹೊವೆಲ್‌ಯವರು, ಸಬ್ ಅ॥ ಸರ್ಜನ್ ಮ॥ ರಾಮಸ್ವಾಮಿಶೆಟ್ಟಿಯವರು ಮತ್ತು ಇತರ ಸಾಹುಕಾರ್ ಮೊದಲಾದವರಿಂದ ಪ್ರೋತ್ಸಾಹಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನೂ, ಉಪಹಾರಾದಿಗಳನ್ನೂ ಕೊಟ್ಟು ಘನವನ್ನು ಹೊಂದಿದ ಚಕ್ರವರ್ತಿಗಳಾದ ಜಾರ್ಜ್ ಸಾರ್ವಭೌಮರು ಮತ್ತು ಚಕ್ರವರ್ತಿನಿಯವರಿಗೂ ಆಯುರಾರೋಗ್ಯ ಸಂತತಿಸಂಪತ್ಸಮೃದ್ಧಿಯನ್ನು ಆಶಿಸುವ ಗಾಯನಪದಗಳನ್ನು ಬಾಲಕ ಬಾಲಕಿಯರಿಂದ ಗಾಯನಮಾಡಿಸಿ, ನಮ್ಮ ಮಹಾರಾಜರವರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್‌ಯವರಿಗೂ ಇವರ ಸೋದರಮಾತೃ ಬಂಧುವರ್ಗಕ್ಕೂ ಇತೋಪ್ಯತಿಶಯಂಗಳಾದ ಬಹು ಸಂಪತ್ಸೌಭಾಗ್ಯಸಮೃದ್ಧಿ ಪರಂಪರೆಗಳನ್ನೂ ಹಾರೈಸುವ ಗೀತಗಳನ್ನು ಹೇಳಿಸಿ ದರ್ಬಾರ್‌ಡೇ ದಿವಸವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು ಅಗ್ರಾಸನಾಧಿಪತಿಗಳಾದ ಮ॥ ಕೃಷ್ಣ ಅರಸಿನವರು ಆಂಗ್ಲೇಯ ಪ್ರಭುತ್ವದಿಂದುಂಟಾಗಿರುವ ಸೌಖ್ಯ ಪರಂಪರೆಗಳನ್ನು ಕುರಿತು ಉಪನ್ಯಸಿಸಿದರು ಚಕ್ರವರ್ತಿಗಳ ವಿಷಯವಾಗಿ ಇವರು ಸಮಯೋಚಿತವಾಗಿ ರಚಿಸಿ ಹೇಳಿದ ಪದ್ಯವನ್ನೂ ಈ ಪದ್ಯಾರ್ಥವನ್ನೂ ವಿಶದೀಕರಿಸಿದ ನಂತರ ಪ್ರಜೆಗಳೂ ಮತ್ತು ವಿದ್ಯಾರ್ಥಿಗಳೂ ನಮ್ಮ ಚಕ್ರವರ್ತಿಗಳಿಗೂ, ಮಹಾರಾಜರವರಿಗೂ ಎಷ್ಟುಮಾತ್ರ ಕೃತಜ್ಞರಾಗಿ ಭಕ್ತಿವಿಶ್ವಾಸಭರಿತರಾಗಿರಬೇಕೆಂಬುದನ್ನು ವಿದ್ವಾನ್ ವೆಂಕಟಾಚಾರ್ಯರು ಸಭಾಧ್ಯಕ್ಷರ ಮತ್ತು ಹೆಡ್ ಮಾಸ್ಟರವರ ಅಪೇಕ್ಷಾನುಸಾರವಾಗಿ ಬಹು ವಿವರವಾಗಿ ಬೋಧಿಸಿದರು ಈ ಉತ್ಸವವು ಚಕ್ರವರ್ತಿ ಮತ್ತು ಮಹಾರಾಜರವರ ಪದವಿಗೂ, ಔನ್ನತ್ಯಕ್ಕೂ, ಸೌಲಭ್ಯಕ್ಕೂ, ಔದಾರ್ಯ, ಗಾಂಭೀರ್ಯಾದಿ ಗುಣಗಳಿಗೆ ಸಮರಸವಾಗಿ ಸಂಬಂಧಿಸಿ ಸಮಂಜಸವಾಗಿ ನೆರವೇರಿದ ವೈಭವವನ್ನು ಕಂಡವರೆಲ್ಲರೂ—ಶ್ಲೋ॥ ರಾಜಾ ಮಾತಾ ಪಿತಾಶ್ಚೈವ॥ ರಾಜಾ ಪ್ರತ್ಯಕ್ಷ ದೈವತಾ॥ ನಾವಿಷ್ಣುಃ ಪೃಥಿವೀಪತಿಃ॥ ಎಂಬವುಗಳನ್ನು ಸಾರ್ಥಕವಾದ ವಚನಗಳೆಂದು ಅತ್ಯಂತಾತಿಶಯ ರಾಜಭಕ್ತಿಯಿಂದ ಕೂಡಿದವರಾಗಿ ಆನಂದಭರಿತರಾಗಿ ಗಂಧ ಪುಷ್ಪ ತಾಂಬೂಲಾದಿಗಳನ್ನು ಸ್ವೀಕರಿಸಿ ಆ ದಿನವನ್ನು ಸುದಿನವನ್ನಾಗಿ ಭಾವಿಸಿ ಮಹದುತ್ಸವವನ್ನು ನೆರವೇರಿಸಿದರು

ಮೈಸೂರು

ಡೆಲ್ಲಿ ದರ್ಬಾರ್ ಜ್ಞಾಪಕದ ವಿನೋದಗಳನ್ನು ಇಲ್ಲಿನ ಪ್ರಜೆಗಳು ಡಿಸೆಂಬರ್ 12ನೇ ತಾರೀಖಿನಲ್ಲಿ ಬಹು ಉತ್ಸಾಹದಿಂದ ಆಚರಿಸಿದರು ಅದರ ನಿಮಿತ್ತವಾಗಿ 11ನೇ ತಾ ಒಂದು ಸಭೆಯನ್ನು ಇಲ್ಲಿನ ಹಲವು ದೊಡ್ಡ ಮನುಷ್ಯರು ಗೌ॥ ಎ ವಿ ಸ್ಕೂಲಿನಲ್ಲಿ ಮುಂಚಿತವಾಗಿ ನಡೆಯಿಸಿ ಅದಕ್ಕಾಗಿ ಒಂದು ಪ್ರೋಗ್ರಾಂ ಮಾಡಿದ್ದರು ಅದಕ್ಕನುಗುಣವಾಗಿ ಇಲ್ಲಿನ ಅಮಲ್ದಾರ್ ಮ॥ ನರಸಿಂಹಯ್ಯಂಗಾರ್ಯರವರು ಅಗ್ರಾಸನಾಧಿಪತಿಗಳಾಗಿದ್ದರು ಎ ವಿ ಸ್ಕೂಲನ್ನು ಬಾಳೆಕಂಬ ತೋರಣ, ಬಾವುಟಗಳಿಂದ ಅಲಂಕರಿಸಿದ್ದರು ಎಲ್ಲಾ ಸ್ಕೂಲ್ ಬಾಲಕ ಬಾಲಕಿಯರನ್ನೂ ಸ್ಕೂಲ್ ಕಾಂಪೌಂಡಿನಲ್ಲಿ ಸೇರಿಸಿ ಬ್ಯಾಂಡಿನವರಿಂದ ವಾದ್ಯಮಾಡಿಸಿದರು ಪರೇಡ್ ಸಿಪಾಯಿಗಳೂ, ಪೋಲೀಸಿನವರೂ ಮೂರು ಸಾರಿ ಸೆಲ್ಯೂಟ್ ಮಾಡಿದರು ತರುವಾಯ ಯೂನಿಯನ್ ಜಾಕ್ ಧ್ವಜವನ್ನೆತ್ತುತ್ತಲೂ ಎಲ್ಲರೂ ಬಹು ಗಂಭೀರವಾಗಿಯೂ ಆನಂದದಿಂದಲೂ ನಿಂತು ಮಿಷನ್ ಸ್ಕೂಲ್ ಬಾಲಕಿಯರು ಪಿಟೀಲಿನೊಂದಿಗೆ ಬ್ರಿಟಿಷ್ ಮತ್ತು ಮೈಸೂರು ಸಲಾಂಬಾಜಾ ಹಾಡನ್ನು ಇಂಪಾಗಿ ಹಾಡಿದ್ದನ್ನು ಕೇಳಿ ಸಂತೋಷಗೊಂಡರು ಪುನಃ ಎಲ್ಲರನ್ನೂ ಸ್ಕೂಲ್ ಒಳಭಾಗದಲ್ಲಿ ಕೂಡಿಸಿ, ಎ ವಿ ಸ್ಕೂಲ್ ಸೆಕೆಂಡ್ ಮಾಸ್ಟರ್ ಮ॥ ರಾಮಯ್ಯಂಗಾರ್ಯರವರು—ಇಂಡಿಯಾ ರಾಷ್ಟ್ರವು ಬ್ರಿಟಿಷ್ ಸರ್ಕಾರಕ್ಕೆ ಒಳಪಟ್ಟ ತರುವಾಯ ಉಂಟಾಗಿರುವ ಅಭಿವೃದ್ಧಿ, ಅಸಂಖ್ಯಾತವಾದ ಮೇಲುಗಳನ್ನು ಕುರಿತು ಚಕ್ರವರ್ತಿ ಮಹಾಶಯರು ಡೆಹಲಿ (ಹಸ್ತಿನಾವತಿ) ಪಟ್ಟಣದಲ್ಲಿ ಮಾಡಿದ ದರ್ಬಾರ್ ಮೂಲಕ ಒಂದೂ ಮತದ ಜನಗಳ ಮೇಲೆ ಚಕ್ರವರ್ತಿ ಚಕ್ರವರ್ತಿನಿಯರಿಗಿರುವ ಎಷ್ಟು ಪ್ರೇಮವಿದೆ ಎಂಬುದನ್ನು ಸಾಕ್ಷಾತ್ತಾಗಿ ಪ್ರಕಟಗೊಳಿಸಿ ಬ್ರಿಟಿಷ್ ಜನಾಂಗವೂ ಹಿಂದೂಸ್ಥಾನದವರೂ ಪರಸ್ಪರ ಸ್ನೇಹಭಾವದಿಂದಿರಬೇಕೆಂಬುದನ್ನು ಇದರಿಂದ ಪ್ರಕಾಶಪಡಿಸಿರುತ್ತಾರೆಂದು ಹೃದಯಂಗಮವಾಗಿಯೂ, ಸ್ವಾರಸ್ಯವಾಗಿಯೂ ಸಂಗ್ರಹಿಸಿ ಒಂದು ಅಡ್ರೆಸ್ಸು ಓದಿದರು ಅದನ್ನು ಪುಷ್ಟೀಕರಿಸಿ ಮ॥ ನರಸಿಂಹಯ್ಯಂಗಾರ್ಯರೂ—ಬ್ರಿಟಿಷ್ ಚಕ್ರಾಧಿಪತ್ಯದವರಿಂದ ನಾವು ಎಷ್ಟೋ ಭಾಗ್ಯಶಾಲಿಗಳಾಗಿರುತ್ತೇವೆ ಎಷ್ಟೋ ನಾಗರೀಕತೆಯೂ, ಕುಶಲವಿದ್ಯೆಗಳೂ, ವಿದ್ಯಾಭ್ಯಾಸದ ವಿವಿಧ ಏರ್ಪಾಡುಗಳೂ ಅಸಂಖ್ಯಾತವಾಗಿ ಲಭಿಸಿದವು ವಾಯುವೇಗ ಮನೋವೇಗವೆಂಬುದು ಪುರಾಣದಲ್ಲಿ ಹೇಳಿದೆಯೇ ಹೊರತು ಯಾರೂ ನೋಡಿಲ್ಲ ಇಂಗ್ಲಿಷರು ಅಂಥಾ ಅಸದೃಶವಾದ ಕಾರ್ಯಗಳನ್ನೆಲ್ಲಾ ಪ್ರತ್ಯಕ್ಷವಾಗಿ ನಿದರ್ಶನಪಡಿಸಿ ಪ್ರಖ್ಯಾತರಾಗಿರುತ್ತಾರೆ ಅದು ಮಾತ್ರವಲ್ಲದೆ ನಮ್ಮ ಮೈಸೂರು ರಾಜಮನೆತನವನ್ನು ಪುನರುದ್ಧಾರಮಾಡಿ, ಹೀಗೆ ಪರಿ ಪರಿ ಉಪಯೋಗವಾದ ನಡವಳಿಕೆಗಳನ್ನು ದರ್ಶನದಿಂದ ಅನುಗ್ರಹಿಸಿಟ್ಟು ನಮ್ಮಗಳಿಗೆ ಎಷ್ಟೋ ಸಮೃದ್ಧಿಯನ್ನುಂಟುಮಾಡಿರುವವರಿಂದ ಮೈಸೂರು ಸಂಸ್ಥಾನದವರಾದ ನಾವುಗಳು ಜಗದ್ವಿಖ್ಯಾತರಾದ ಬ್ರಿಟಿಷ್ ಸರ್ಕಾರದವರಿಗೆ ಅಂತರಂಗದಲ್ಲೂ ವಿಶೇಷವಾದ ಸ್ವಾಮಿಭಕ್ತಿಯನ್ನೂ, ಕೃತಜ್ಞತೆಯನ್ನೂ ತೋರಿಸುವವರಾಗಿರಬೇಕೆಂದು ಸಂಕ್ಷೇಪವಾಗಿಯೂ, ಸ್ವಾರಸ್ಯವಾಗಿಯೂ ಭಾಷಣಮಾಡಿದರು ತಿರಿಗಿ ಬ್ರಿಟಿಷ್ ಮತ್ತು ಮೈಸೂರು ನ್ಯಾಷನಲ್ ಸಲಾಂಬಾಜಾ ಹಾಡನ್ನೂ, ಇನ್ನೂ ಚಕ್ರವರ್ತಿ ದಂಪತಿಗಳ ಶ್ರೀಮನ್ ಮಹಾರಾಜರ ಮೇಲಣ ಹಾಡುಗಳನ್ನೂ ವೆಸ್ಲಿಯನ್ ಸ್ಕೂಲ್ ಬಾಲೆಯರು ಪಿಟೀಲಿನೊಂದಿಗೆ ಇಂಪಾಗಿ ಹಾಡಿದರು ಸ್ಕೂಲ್ ಮಕ್ಕಳೆಲ್ಲರಿಗೂ ಸಭೆಯವರಿಗೂ ಸಕ್ಕರೆ, ಹಣ್ಣು, ಪಾನ್‌ಸುಪಾರಿ, ಹೂವು ಗಂಧ ಕೊಟ್ಟು ತರುವಾಯ ಜಯಘೋಷದೊಂದಿಗೆ ಬೆಳಗ್ಗಿನ ವಿನೋದಗಳಾದವು ಸಾಯಂಕಾಲ ಗ್ರಾಸ್ ಫಾರಮ್ಸಿನಲ್ಲಿ ಹಲವು ದೊಡ್ಡ ಮನುಷ್ಯರು ಹಿಂದು ಎಂದು ನೂರಾರು ತರದ ಆಟಗಳನ್ನಾಡಿಸಿ ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟು ಜಯಘೋಷದಿಂದ ವಿನೋದಗಳನ್ನು ಮುಕ್ತಾಯಮಾಡಿದರು

ಇತರ ಸ್ಥಳಗಳು

ಮೇಲ್ಕಂಡವುಗಳಲ್ಲದೆ ರಾಜ್ಯದ ನಾನಾ ಸ್ಥಳಗಳಲ್ಲಿ ನಡೆದ ಈ ಉತ್ಸವದ ವೃತ್ತಾಂತಗಳು ನಮಗೆ ಅನೇಕವಾಗಿ ಬಂದಿರುತ್ತವೆ ಅವುಗಳನ್ನು ಕಳುಹಿಸಿಕೊಟ್ಟದ್ದಕ್ಕಾಗಿ ಆ ವಾರ್ತಾದಾರರಿಗೆಲ್ಲಾ ಬಹಳವಾಗಿ ವಂದಿಸುತ್ತೇವೆ ಈ ಉತ್ಸವದ ವಿವರಣೆಯನ್ನು ಕುರಿತು ಈ ವಾರ ನಮ್ಮಲ್ಲಿಗೆ ಬಂದಿರುವ ವಾರ್ತೆಗಳನ್ನೆಲ್ಲಾ ಪ್ರಕಟಪಡಿಸಲು ಈ ಪತ್ರಿಕೆಯಲ್ಲಿ ಇತರ ವಿಷಯಗಳಿಗೆ ಸ್ಥಳವೇ ದೊರಕುವುದಿಲ್ಲ ತದನಂತರ ಸ್ಥಳಸಂಕೋಚದಿಂದ ಅವುಗಳನ್ನು ಪ್ರಕಟಮಾಡದೆ, ಆಯಾ ವಾರ್ತಾದಾರರ ಕ್ಷಮೆಯನ್ನು ಕೋರುವೆವು ಈ ಉತ್ಸವದ ವಾರ್ತೆಗಳು ನಮಗೆ ಬಂದಿರುವವು ಯಾವವೆಂದರೆ—ಬೆಂಗಳೂರು ತಾ॥ ಯಶವಂತಪುರ, ಆನೇಕಲ್ ತಾ ಜಿಗಣಿ, ಕೊಳ್ಳೇಗಾಲ ತಾ॥ ಸತ್ತೇಗಾಲ, ಕೊಪ್ಪ ತಾ॥ ಹರಿಹರಪುರ, ಗೌರಿಬಿದನೂರು ತಾ॥ ಮಂಚೇನಹಳ್ಳಿ, ಬೆಂಗಳೂರು ತಾ॥ ದೊಡ್ಡಜಾಲ, ಮಂಡ್ಯ ತಾ ಕೆಸ್ತೂರು, ಶ್ರೀರಂಗಪಟ್ಟಣ ತಾ ಮೇಲುಕೋಟೆ, ಮಾಗಡಿ ತಾ॥ ಬಿಡದಿ ಪೇಟೆ, ಚಳ್ಳಕೆರೆ ತಾ ತಳಕು, ಆನೇಕಲ್ ತಾ ನೆರಿಗ, ಅರಸೀಕೆರೆ ತಾ॥ ಬಾಣಾವರ, ಚಿಕ್ಕನಾಯಕನಹಳ್ಳಿ ತಾ ಹುಳಿಯಾರು, ಚನ್ನರಾಯಪಟ್ಟಣ ತಾ॥ ಅಗ್ರಹಾರಕೊಪ್ಪಲು, ಮಾಗಡಿ ತಾ ಕುದೂರು, ಕೋಲಾರ ತಾ ನರಸಾಪುರ, ಗುಬ್ಬಿ ತಾ ಹಾಗಲವಾಡಿ, ಹೆಗ್ಗಡದೇವನಕೋಟೆ ತಾ ಸರಗೂರು, ಗುಬ್ಬಿ ತಾ, ಹೊಸಕೆರೆ, ಪಾಲೂರುಕೋಟೆ, ಇತ್ಯಾದಿ

ಮಾರಾಟಕ್ಕೆ ಸಿದ್ಧವಾಗಿದೆ.

ಒಂದು ಒಳ್ಳೇ ರಿಕ್‌ಷಾ ಎಂಬ ಕೈಗಾಡಿ, ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ವಿಚಾರಿಸಿದರೆ ಗೊತ್ತಾಗುತ್ತದೆ [198 1]

ಲೋಕಾಮೃಹರ ಕಸ್ತೂರೀ ಮಾತ್ರೆಗಳನ್ನು ಮರೆಯಬೇಡಿ.

ಈ ಮಾತ್ರೆಗಳ ವಿಷಯವಾಗಿ ಬಂದಿರುವ ಸಾವಿರಾರು ಯೋಗ್ಯತಾ ಪತ್ರಗಳಲ್ಲಿ ಕೆಲವನ್ನು ಮಾತ್ರ ತಮ್ಮ ನಂಬುಗೆಗಾಗಿ ಇಲ್ಲಿ ಬರೆದಿದೆ (1) ಮ|| ಸರವ್ಯಯ್ಯನ ವೆಂಕಟಪ್ಪಶೆಟ್ಟರು, ಅರಕಲ್‌ಗೂಡು, ಇವರು—ತಮ್ಮ ಕಸ್ತೂರೀ ಮಾತ್ರೆಗಳನ್ನು ಯಾರ‍್ಯಾರಿಗೆ ಕೊಟ್ಟೆನೋ ಅವರೆಲ್ಲರೂ ಬಹಳ ಗುಣಕಾರಿ ಎಂದು ಹೇಳುವುದರಿಂದ ಇನ್ನು 6 ಸೀಸೆಗಳನ್ನು ಕಳುಹಿಸಿಕೊಡಿ (2) ಟಿ ನಂಜುಂಡಯ್ಯನವರು, ಹೊಳೇನರಸಿಪುರ, ಇವರು—ಜಲ್ಲಾ ಖಾಯಿಲೆಗಳನ್ನೂ ತಮ್ಮ ಕಸ್ತೂರೀ ಮಾತ್ರೆಗಳು ಗುಣಪಡಿಸಿವೆ ನಾಲ್ಕು ಜನರ ಪ್ಲೇಗು ರೋಗಕ್ಕೂ ಸಂಜೀವನವಾಯಿತು ಇನ್ನು 12 ಸೀಸೆಗಳನ್ನು ಕಳಿಸಿ (3) ಮ|| ಬಸಲಿಂಗಯ್ಯ ಬಸಯ್ಯಗವಟ ಸ್ಕೂಲ್‌ಮಾಸ್ಟರ್, ಪುಣ್ಯಮನಹಳ್ಳಿ, ಬಿಜಾಪುರ, ಇವರು—ಯಾವ ಔಷಧಗಳಿಗೂ ಗುಣವಾಗದಿದ್ದ 11 ವರ್ಷದ ಜ್ವರವು ತಮ್ಮ ಕಸ್ತೂರಿ ಮಾತ್ರೆಗಳಿಂದ ಸಂಪೂರ್ಣ ಗುಣವಾಗಿರುತ್ತದೆ (4) ಮ|| ಹಿರೇಮಠದ ಪರಮೇಶ್ವರಯ್ಯ, ಮಾಸೂರು, ಧಾರವಾಡ, ಇವರು—ತಮ್ಮ ಕಸ್ತೂರಿ ಮಾತ್ರೆಗಳು ನಮ್ಮೆಲ್ಲರಿಗೂ ಗುಣಕೊಡುತ್ತಿರುವುದರಿಂದ ಪುನಃ 25 ಸೀಸೆಗಳನ್ನು ಕಳಿಸಿಕೊಡಿ (5) ಮ|| ಪಿ ಎಸ್ ಎಂ ಸ್ವಾಮಿ, ಕೇರಾಫ್ ಜಿ ಎಸ್ ಎಂ ಅಂಡ್ ಕೊ ಲಿಮಿಟೆಡ್, ರಾಮರ್ ಡ್ರಗ್, ಬಳ್ಳಾರಿ, ಇವರು—ತಮ್ಮ ಕಸ್ತೂರಿ ಮಾತ್ರೆಗಳಲ್ಲಿ ಛಳಿಜ್ವರ ಮೊದಲಾದ ಅನೇಕ ಖಾಯಿಲೆಗಳನ್ನು ಹೋಗಲಾಡಿಸುವ ಗುಣವು ಅತ್ಯುತ್ತಮವಾಗಿದೆ (6) ಮ|| ಆರ್ ಎನ್ ಟಿಲಕ್‌ದರ್, ಸ್ಕೂಲ್ ಹೆಡ್ ಮಾಸ್ಟರ್, ಶಾರಿಲ್, ಬೆಂಗಾಲ್, ಇವರು—ತಮ್ಮ ಕಸ್ತೂರೀ ಮಾತ್ರೆಗಳು ತಾವು ಹೇಳಿರುವ ಮೇರೆ ಅನೇಕ ಖಾಯಿಲೆಗಳನ್ನು ಗುಣಪಡಿಸಿವೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ ಇನ್ನು 12 ಸೀಸೆಗಳನ್ನು ಕಳಿಸಿಕೊಡಿ [175 6]

ಕ್ರಯ 320 ಮಾತ್ರೆಯುಳ್ಳ ಸೀಸೆಗೆ 1 ಆಣೆ 3 ಕ್ಕೆ 1 ಇನಾಂ 1 ರಿಂದ 12 ರ ವರೆಗೆ ಟಪಾಲ್ ಚಾರ್ಜು 1 ಆಣೆ ನಿಮ್ಮ ಹೆಸರನ್ನು ಸ್ಪಷ್ಟವಾಗಿ ಬರೆಸಿ

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

BENEFIT YOURSELF AND BENEFIT OTHERS.

The National Insurance and Banking Company Ltd., Amritsar

Authorised Capital	Rs	10,00,000
Subscribed Capital Exceeds	,,	10,00,000
Paid up ,, ,,	,,	1,25,000
Funds Exceed	,,	15,00,000
Policy-holders ,,	,,	80,000
Claims paid about ,,	,,	4,00,000

This Company works in accordance with **the Indian Life Assurance Companies' and Provident Societies' Acts 1912** and has also given **double the initial security to the Government** is required under the **Insurance Act 1912**

How is it that the **National, of Amritsar**, has become very popular throughout India ?

Because, it has got almost all the attractive schemes which any other Life Office or Provident Society in India has got and also new and novel ones besides issues policies at most favourable rates and on most liberal conditions and distributes relief in thousands every quarter on account of **marriages and deaths**

[22 1]

WANTED

Active and honest **District Superintendents** and Taluk Agents for every unrepresented district and taluk of the Mysore Province and Coorg on both **salary** and **commission** The post is permanent and our Agents are entitled to **pension** None but those who can spare whole time, who reside in district or taluk head quarters and who are well versed in English need apply

For further particulars and prospectuses please apply **with one anna stamp** and your previous experience in the line to —

M. L. NAGANNAH,
Chief Agent,
The Amritsar National Insurance Buildings,
Mysore.

ಪ್ರಸಿದ್ಧಪತ್ರಿಕೆ.

[190-1]

ಬೆಂಗಳೂರಿನಲ್ಲಿ ಎಡ್ವರ್ಡ್ ಸಾಮ್ಯುಯೆಲ್‌ರವರ ಆಫೀಸು ಕಾಂಪೌಂಡಿನಲ್ಲಿ ಕ್ರಿಸ್ತಮಸ್ ಕಮಿಟಿಯವರು ಡಿಸೆಂಬರ್ ತಾ 26-27 28 30 31 ಮತ್ತು ಜನವರಿ 1ನೇ ತಾರೀಖುಗಳಲ್ಲಿ ಬಹಳ ವಿನೋದಗಳನ್ನು ಮಾಡುವುದರ ಜೊತೆಯಲ್ಲಿ ರಾಸುಗಳ ಪ್ರದರ್ಶನ ಸಭಾ ನಡೆಸುತ್ತಾರೆ ಉತ್ತಮವಾದ ರಾಸುಗಳನ್ನು ತಂದವರಿಗೆ ಬೆಳ್ಳಿ ಬಂಗಾರದ ಪದಕಗಳು ಮತ್ತು ನಗದು ಬಹುಮಾನಗಳು ಸಹಾ ಕೊಡಲ್ಪಡುತ್ತ ದನಗಳ ವ್ಯಾಪಾರಕ್ಕೂ ಒಳ್ಳೇ ಅವಕಾಶವಿರುತ್ತ

ವೈ ನರಸಿಂಗರಾವ್,
ವೈಸ್ ಪ್ರೆಸಿಡೆಂಟ್, ಕ್ಯಾಟಲ್ ಷೋ.

HASSAN CAPS.

ಹಾಸನದ ಟೋಪಿಗಳು.

ಮೊದಲನೇ	ತರಗತಿಯ	ಜಾರ ರೇಷ್ಮೆ	ಟಿಕ್ಕೆಗಳುಳ್ಳದ್ದು	ರೂ	2 0 0
,,	,,	,,	ಕೆಂಪು ಅಥವ ಕಪ್ಪು	,,	1 8 0
ಎರಡನೇ	,,	,,	,,	,,	1 6 0
ಮೂರನೇ	,,	,,	,,	,,	1 4 0
ನಾಲ್ಕನೇ	,,	,,	,,	,,	1 2 0

ಇನ್ನು ಬೇರೆ ತರಹ ಬೇಕಾದರೆ ಮಾಡಿಸಿ ಕಳುಹಿಸುತ್ತೇವೆ

ನಮ್ಮ ವಿಳಾಸ — [157 10]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ,
ತುಂಕೂರು.

Address
Wesleyan Mission Cap Industry,
Tumkur

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಅಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶದ ರೋಗ, ಪಿತ್ತ, ಪಿತ್ತಜ್ವರ ಅಜೀರ್ಣ, ಅಗ್ನಿಮಾಂದ್ಯ ಗಾಯ, ಅರುಚಿ, ಎದೆಯುರಿ ತಲ್ಲಣಿಸುವುದು, ತಲೆತಿರುಗುವುದು ತಲೆನೋವು ಹೊಟ್ಟೆಯುಬ್ಬರ, ಮುಳೆರೋಗದ ಹೊಟ್ಟೆನೋವು ಹೆಂಗಸರ ಖಾಯಿಲೆಗಳು ಇವೇ ಮೊದಲಾದವು ರೋಗಿಯು ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಹೊಟ್ಟೆಯಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಸುಲಭವಾಗಿ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನಾಳ ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುತ್ತವೆ [12 1]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು, ಅಥವಾ ಡೋನ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಬೊಟಿಕ್ಕಿನ ಸ್ಪ್ರಿಂಗ್ ಫಾಂಡಿ ಕ್ರಯಕ್ಕೆ

ದೊರೆಯುತ್ತೆ ಮಜಬೂತಾದ ಬಲವಾದ ಎರಡು ಕಡೆ ಪಟ್ಟಿಗೆಗಳುಳ್ಳಂಥಾದ್ದು 70 ರೂಪಾಯಿಗೆ ಮಾಡಿಸಿದ್ದು 35 ರೂಪಾಯಿಗೆ ಸಿಕ್ಕುತ್ತೆ ನಂಬರು ಹಾಕಿದೆ ಮೈಸೂರು ಆರ್ಚ್ ಗೇಟ್ ರಸ್ತೆ 3101ನೇ ನಂಬರ್ ಮನೆಯಲ್ಲಿ ನೋಡಬಹುದು

ಉತ್ಕೃಷ್ಟವಾದ ಮಲಾಂ, ಟೂತ್ ಪೌಡರ್.

2—3 ಬಳಕೆಗಳಿಂದಲೇ ಗುಣವಾಗುವ ನಮ್ಮಲ್ಲೇ ತಯಾರಾಗಿ ಸಿದ್ಧವಾಗಿರುವ ಕಜ್ಜಿ, ಕುರು, ವಿಷಬು ಮತ್ತು ಮೈಮೇಲಿನ ಕೆರತದ ಮುಲಾಮು ಬೇಕಾದವರು ತರಿಸಿಕೊಳ್ಳಿರಿ ಗುಣಹೊಂದಿರಿ ಉತ್ತಮವಾದ ಟೂತ್ ಪೌಡರ್ ದಬ್ಬಿಗೆ 3 ಆ ಪ್ರತಿ ಮುಲಾಂ ದಬ್ಬಿಗೆ 9 ಆ 10 ಕ್ಕೆ 1 ರೂ 6 ಆ 10 ಕ್ಕೆ ಮೇಲ್ಪಟ್ಟ ದಬ್ಬಿಗೆ 6 ಆಣೆಯಂತೆ ವಿಳಾಸ —ಯಂ ಕೆ ನರಸಿಂಹಯ್ಯ,

[192—2] ಮುನ್‌ಸಿಫ್ ಕೋರ್ಟು ಡೆಪ್ಯುಟಿ ಮುನ್‌ಷಿ, ಹೊಳೆನರಸಿಪುರ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೆಳಗಿನ ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು ! ಅಂದವಾದ ಕೂದಲುಗಳು !!

ಇವು ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿ ಆದರ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ಸಾಬೀಸಾದ ಕೇಶಗಳು ಇವೆ ? ಕೇಶಪಾಶವು ಸುಂದರವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ರೀತಿಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂಥದು ಮಹತ್ತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಪ್ರವೃದ್ಧಿಯ ಬೆಳೆಯುವವು

ಕಾಮಿನಿಯಾ ತೈಲ— ಇದು, ಕೂದಲುಗಳನ್ನು ಬಂದಿಸುವ ಸರ್ವ ರೋಗಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ತಮವು, ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಹೆಚ್ಚು ಮೃದುವಾಗುತ್ತವೆ ಅಂದರೆ ಈ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ತಕ್ಕುದಾದ ರೀತಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ನಿಬಿಡವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ಸುವಾಸನೆಯುಳ್ಳವುಗಳಾಗಿ ಬಹಳ ದಿವಸ ಹೋಗದ ಹಾಗೆ ತಲೆ ತಂಪಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 5 0 ಜೊತೆ ತರಬೇಕು

3 ಸೀಸೆಗಳಿಗೆ ರೂ 2-10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಟಿಕೀಟನ್ನು ಕಳುಹಿಸಿ

ಕಾಮಿನಿಯಾ ತೈಲದ ಕುರಿತು ಕಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28-7-11 ಮ|| ಬಿ ಡಿ ಮಾಧವರಾವ್, ರುಕ್ಮಿಣೀವಿಲಾಸ, ಮನ್ನಾರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾದ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7-11 ಮ|| ಸಿ ಆರ್ ನಾಯುಡು ಪ ವ ಡಿ ಟಾಮಿ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಸೀಸೆಗಳನ್ನು ಕ್ರಯದಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾಶ್ರೇಷ್ಠ ಪರಿಶೋಧಕ ಪಂಡಿತರು ಹೇಳಿದಂತ ಬಿಳಿಯ ಮತ್ತು ಕೆಂಪು ಗುಲಾಬಿಯ ಅತ್ಯುತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0.

ದಿಲ್-ಬಹಾರ್ (ರೆಜೆಡ್)—ಅತ್ಯಂತ ಅಪೂರ್ವವಾದ ಜಾತಿ ಪುಷ್ಪಗಳಿಂದ ತಯಾರಿಸಿದ ದೀರ್ಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

"ಕಾಮಿನಿಯಾ ಸುಗಂಧಿ"—ರೂ 1-4 0, "ಕಾಮಿನಿಯಾಮಾಲತಿ"—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲೇ ಬರೆಯಬೇಕು

ನಮ್ಮ ವಿಳಾಸ — [94-51]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

ಮೆಲಿನ್ಸ್ ಆಹಾರವು
ಕೈಸೋಂಕದೆ ತಯಾರಾದದ್ದು, ಬರೀ ಸಸ್ಯಾಹಾರ

ಈಗ ಸಿದ್ಧವಾಗಿದೆ

1913ನೇ ವರುಷದ ಮೆಲ್ಲಿನ್ಸ್ ಕ್ಯಾಲೆಂಡರು

ಎರಡು ಆಣೆ ಪಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಮಕ್ಕಳ ತಾಯಿಗೆ—ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ —ಎಂಬ ಪುಸ್ತಕ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

[66—11] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager, Wesleyan Mission Press, Mysore 19/12/1912

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು.

ಸಂಪುಟ ೨೬ | ಮೈಸೂರು—ಸನ್ ೧೯೧೨ ನೇ ಇಸವಿ ಡಿಸೆಂಬರ್ ತಾರೀಖು ೨೬ ನೇ ಗುರುವಾರ. | ಸಂಚಿಕೆ ೩೦

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ
ಚಿನ್ನದ ಪದಕವು ದೊರಕಿಯದೆ

ನಮೂನೆಯು ಪ್ರತ್ಯೇಕವಾಗಿ ಕೊಡಲ್ಪಡುವದು

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

"ಕಾಮಿನಿಯಾ ತೈಲವು."

(ರಜಿಸ್ಟರ್ಡ್)

ಕಾಮಿನಿಯಾ ತೈಲ

ಸುಗಂಧದ್ರವ್ಯಗಳು

ಗುಲ್‌-ಹಾನ್ (ರಜಿಡ)

ದಿಲ್‌-ಬಹಾರ್ (ರಜಿಡ)

[೧೧-೨೨]

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಡೋಂಗರೆ ಇವರ ಬಾಲಾಮೃತ.

[115-24]

ನಮ್ಮ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದ್ದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ... ಹಳೇ ಕೆಮ್ಮು ಮುಂತಾದವುಗಳ ಆಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೩ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd)

ಅರ್ಧ ಕ್ರಯಕ್ಕಿಂತಲೂ ಕಡಮೆ

[1-14]

ಅಮೃತಾಂಜನ ಡಿಪೊ, ಪೋಸ್ಟ್ ಬಾಕ್ಸ್ ಮುಂಬಯಿ.

1913 ನೇ ಪಾಕೆಟ್ ಡೈರಿ

ಜನಿವಾರಿ ಡೈರಿ

6 ಪ್ರತಿ ಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ

[1-1]

ನಮ್ಮ ವಿಳಾಸ—ವಿಜಯಾ ... ಬೆಂಗಳೂರು ಸಿಟಿ

ಸನ್ 1913 ನೇ ಇಸವಿಯ ಶ್ರೀ ... ಪಾಕೆಟ್ ಡೈರಿ

ಬೇಗ ನೋಡಿ

[1-17]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ

ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

29—11—1912 ರಿಂದ 6—12—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	20	18	0	0
ಮೈಸೂರು ,,	3	9	0	0
ಬೆಂಗಳೂರು ಡಿಸ್ಟ್ರಿಕ್ಟು	10	15	0	0
ಮೈಸೂರು ,,	20	10	0	0
ಕೋಲಾರ್ ,,	0	0	6	5
ಕೋಲಾರ್ ಚಿನ್ನದ ಗಣಿಗಳು	21	15	0	0
ತುಮಕೂರು ಡಿಸ್ಟ್ರಿಕ್ಟು	[illegible]	2	30	12
ಹಾಸನ ,,	1		0	0
ಚಿತ್ರದುರ್ಗ ,,	0	0	15	18
ಕಡೂರ್ ,,	[illegible]	[illegible]	0	1
ಶಿವಮೊಗ್ಗ ,,	6	7	9	7
ಜುಮ್ಲಾ	101	77	80	[illegible]

ಶಾಲಿವಾಹನ ಶಕ ... ರುಷಂಗಳು 18[illegible] ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೇ ಹೇಮಂತ ಋತೌ ಮಾರ್ಗಶಿರ ಬಹುಳ ... ಶುಕ್ರವಾರದಿ ವ ದಸು ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1912 ನೇ ಡಿಸೆಂಬರ್ ಮತ್ತು 1913 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷ್ ಮಾಸದ ತೇದಿ
27	ಶುಕ್ರ	[illegible]	18 [illegible]	[illegible]	1 [illegible]	11
28	ಶನಿ	ಪಂಚಮಿ	11 10	ಮಖಾ	30-26	13
29	ಭಾನು	[illegible]	[illegible]	ಪುಬ್ಬ	1 2[illegible]	1[illegible]
30	ಸೋಮ	[illegible]	11 12	ಉತ್ತರ	11 3	16
31	ಮಂಗಳ	ಅಷ್ಟಮಿ	21 1[illegible]	ಹಸ್ತ	[illegible]	17
1	ಬುಧ	ನವಮಿ	[illegible]	ಚಿತ್ತ	2[illegible]	18
2	ಗುರು	ದಶಮಿ	1[illegible]	ಸ್ವಾತಿ	21 17	1[illegible]

[illegible]

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಟ್ಟಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೪ ೨-೦	೧೭ ೮ ೦
ಕೆಂಬೂತಿ ಅಕ್ಕಿ ಅವಲ್ ,,	೧೪ [illegible] ೦	೧[illegible] ೦
,, ದುಯಂ ,,	೧೪ ೨ ೦	೧೭-೦ ೦
ಚಂಪಕ್ಕಿಣಿ ಅಕ್ಕಿ ,,	೧೯ ೮ ೦	೧೭ ೪ ೦
ಸಣ್ಣಕ್ಕಿ ಅವಲ್ ,,	೧೬ [illegible] ೦	[illegible] ೦
,, ದುಯಂ ,,	೧೫ [illegible] ೦	೧೭ ೮ ೦
ಕೊಡಗೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೨ ೦ ೦	೧೨ ೮ ೦
,, ದುಯಂ ,,	೧೩ ೮ ೦	೧೩ ೮ ೦
ಹೆಚ್ ರಾಗಿ ಪಲ್ಲಾ ೧ಕ್ಕೆ	೭ [illegible] ೦	೫ ೦ ೦
ಆರಿದ್ರಾ ಗಿ ,,	[illegible] ೦	[illegible] ೦
ಜೋಳ ,,	೭ ೦ ೦	೭ ೪-೦
ಹುರುಳಿ ಪಲ್ಲಾ ೧ಕ್ಕೆ	೧೦-೪ ೦	೧೨ ೧೩ ೦
ಬಿಳಿ ಅವರೆ ,,	೧೩ ೨-೦	೧೧ ೦ ೦
ಹೆಸರು ,,	೧೦ [illegible]-೦	೧೪ ೦ ೦
ಉದ್ದು ,,	೧೬ ೩ ೦	೧೭ ೦ ೦
ಕಡಲೆ ,,	೧೩ [illegible]-೦	೧೩ ೦ ೦
ಎಳ್ಳು ಸೇರು ೧೨೭ಕ್ಕೆ	೩೩ ೮ ೦	೩೪ ೦ ೦
ಹುರುಳಿ ಪಲ್ಲಾ ೧ಕ್ಕೆ	[illegible] ೪ ೦	೭-೦ [illegible]
ಹಲಸು ೧೨೭ ಸೇರಿಗೆ	೧೨ ೦ ೦	೧೪ ೦ ೦
ಸೀಗೇಕಾಯಿ ಮಣ ೧ಕ್ಕೆ	೨ ೮ ೦	೨-೮ ೦
ಮೆಣಸಿನಕಾಯಿ ,,	೨ ೦ ೦	೨ ೪ ೦
,, ದುಯಂ	೨ ೮ ೦	೧ ೮ ೦
ಬೆಲ್ಲ ಕೊಪ್ಪ ಅಚ್ಚು ೧೦೦ಕ್ಕೆ	೫ ೮ ೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬ ೨ [illegible]	೬ ೭ ೦
ಹರಳೆಣ್ಣೆ ,, ,,	೫ ೪ ೦	೬ ೦ ೦
ಕೊತ್ತಂಬರಿ ಪಲ್ಲಾ ೧ಕ್ಕೆ	೫ ೦ ೦	೫ ೪ ೦
ಉಪ್ಪು ,, ,,	೫ ೮ ೦	೬-೨-೦
ಹುಣಸೇ ಹಣ್ಣು ಮಣ ೧ಕ್ಕೆ	೧ ೨ ೦	೧ ೪ ೦
,, ಹಳೇದು ,,	೧ ೨-೦	೦ ೧೫ ೦
ತುಪ್ಪ ಮಣ ೧ಕ್ಕೆ	೧[illegible] ೦	೧೯ ೨-೦
ಸೀಮೆಯೆಣ್ಣೆ ಡಬ್ಬ ೧ಕ್ಕೆ	೫ ೩ ೦	೫ ೨-೦
ತೆಂಗಿನಕಾಯಿ ೧೦೦ಕ್ಕೆ	೬ ೮ ೦	೬ ೦ ೦
ಅಳಲೇಕಾಯಿ ಮಣ ೧ಕ್ಕೆ	೧ ೪-೦	೧ ೦ ೦
ಅಂಟ್ವಾಳಕಾಯಿ ಮಣ ೧ಕ್ಕೆ	೦ ೧೩ ೦	೧-೮ ೦
ಚಿನ್ನ (ಪಾರ್) ತೊಲ	೧೫ ೨ ೦	೧೫ ೨ ೦
,, ,, ಪವನು	೧೫ ೧೪-೬	೧೫-೧೪ ೬
,, ,, ಗಟ್ಟಿ ಕೋಲಾ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ಕೋಲ ೧೦೦ಕ್ಕೆ	೮೧ ೨-೦	೮೧-೨-೦

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು



1 52

ಶೀತದ ಕೆಮ್ಮು, ಗಂಟಲು ಗೂರಲು, ... ಎಲ್ಲಾ ತರದ ಶೀತ, ... ಈ ಔಷಧವು ...

ಈ ಕೆಮ್ಮನ್ನು ... ಆದರ ಮೇಲೆ ... ಹಾಗೆಯೇ ...

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧ ... ಸಂಪೂರ್ಣವಾಗಿ ... ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ... ಇಲ್ಲ

ಈ ಔಷಧವು ... ತಯಾರಿ

ಕ್ರಯದ ಮಟ್ಟ ...

ಎಲ್ಲೆಲ್ಲೂ ವಿಕರಿಯಾಗುವುದು | ... ೧ ರೂಪಾಯಿ | ... ೨ ರೂಪಾಯಿ

ಮಾರಾಟಕ್ಕೆ ಸಿದ್ಧವಾಗಿದೆ.

... ಪ್ರೆಸ್ಸಿನಲ್ಲಿ ... ಗೊತ್ತಾಗುತ್ತದೆ [188 1]

"ವೃತ್ತಾಂತ ಪತ್ರಿಕೆ" ವಿಜಂಟರುಗ ನೋಟಿಸ್

ವೃತ್ತಾಂತ ಪತ್ರಿಕೆಯ 1912 11 ನೇ ವರುಷದ ಎರಡನೇ ... ಈ ವಾರದಲ್ಲೇ ... ಮ್ಯಾನೇಜರ್ "ವೃತ್ತಾಂತ ಪತ್ರಿಕೆ" ಆಫೀಸ್ ಮೈಸೂರು

ಕುಂತಳಕೇಶತೈಲವು

18 11

... ಅನೇಕ ವಿಧ ... ತಲೆಯ ... ಬಹಳ ಶೀತವೂ ಸುವಾಸನೆಯೂ ... ಬೆಲೆ ... 2 ರೂಪಾಯಿ 10 ಆಣೆ ...

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ, ... ಮದರಾಸ್

ಲೋಕಾಮಯಿಹರ ಕಸ್ತೂರೀ ಮಾತ್ರೆಗ ಳನ್ನು ಮರೆಯಬೇಡಿ.

ಈ ಮಾತ್ರೆಗಳು ... ಸಾವಿರಾರು ... ಪತ್ರಗಳಲ್ಲಿ ಕೆಲವನ್ನು ಮಾತ್ರ ತಮ್ಮ ಸಂತೋಷಕ್ಕಾಗಿ ಇಲ್ಲಿ ... (1) ... ಕಸ್ತೂರೀ ಮಾತ್ರೆಗಳನ್ನು ... 12 ಸೀಸೆಗಳನ್ನು ಕಳುಹಿಸಿ ಕೊಡಿ (2) ... ಕಸ್ತೂರೀ ಮಾತ್ರೆಗಳು ಗುಣಪಡಿಸಿವೆ ... ಇನ್ನೂ 12 ಸೀಸೆಗಳನ್ನು ಕಳಿಸಿ (3) ... ಕಸ್ತೂರಿ ಮಾತ್ರೆಗಳಿಂದ ಸಂಪೂರ್ಣ ಗುಣವಾಗಿರುತ್ತದೆ (4) ... ಕಸ್ತೂರಿ ಮಾತ್ರೆಗಳು ... 12 ಸೀಸೆಗಳನ್ನು ಕಳುಹಿಸಿಕೊಡಿ (5) ... ಕೆಮಿಸ್ಟ್ಸ್ ಲಿಮಿಟೆಡ್, ... ಕಸ್ತೂರಿ ಮಾತ್ರೆಗಳಲ್ಲಿ ... ಗುಣವು ಅತ್ಯುತ್ತಮವಾಗಿದೆ (6) ... ಕಸ್ತೂರಿ ಮಾತ್ರೆಗಳು ... ಇನ್ನು 12 ಸೀಸೆಗಳನ್ನು ಕಳುಹಿಸಿ [170 6]

ಕ್ರಯ ೨೦ ಮಾತ್ರೆಯುಳ್ಳ ಸೀಸೆಗೆ 1 ಆಣೆ ... 1 ರಿಂದ 12 ರ ವರೆಗೆ ಟಪಾಲ್ ಛಾರ್ಜು 1 ಆಣೆ ... ಸ್ಪಷ್ಟವಾಗಿ ಬರೆಸಿ

ವಿಳಾಸ— ಶ್ರೀ ಸೀತಾರಾಮವೈದ್ಯಶಾಲಾ, ಮೈಸೂರು.

ಅಪಾಯದ ಕುರುಹುಗಳು

... ಅಪಾಯದ ಕುರುಹುಗಳನ್ನು ...

... ಅಪಾಯದ ಗುರುತು

...

SCOTT'S EMULSION 25

(ಸ್ಕಾಟ್ಸ್ ಇಮಲ್ಷನ್)

...

ಈ ಮಾನುಷನುಳ್ಳ ... ವನ್ನೇ ಕೇಳಿಕೊಳ್ಳಿ

ಕೈಯಿಂದ ಮುಟ್ಟಿ ತಯಾರಿ ಸಿದ್ದಿಲ್ಲ

... ಔಷದ ಮಾರಾಟಗಾರರು ...

ಸ್ಕಾಟ್ ಅಂಡ್ ಬೌನ್, ಲಿಮಿಟೆ ಔಷಧಿಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ವಾಗಾದರೆ ಬೇಗ ಒದರು ತರಿಸಿಕೊಳ್ಳಿ

3 52

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ... ಕಡೆಗಳಿಗೆಲ್ಲಾ ಹರಡಿಕೊಂಡವು? ಮುಖ್ಯವಾಗಿಯೂ ಹಾಸನದಿಂದಲೇ ... ತಿಳಿಯಿರಿ

ಈಗ ಇತರ ಕಡೆಗಳಲ್ಲಿ ನಾನಾ ವಿಕರಿಯಾಗುತ್ತಿರುವ ಟೋಪಿಗಳ ... ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡು ... ಮೋಸಹೋಗುತ್ತಾರೆ

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿ ... ಬರುವದು (೨) ಟೋಪಿಗಳ ... ಅಪೇಕ್ಷಿಸುವವರಿಗೆ ... ಕಳುಹಿಸುತ್ತೇವೆ

ಒಳ್ಳೇದಾದ, ... ಹೆಚ್ಚಾದ, ಬಹಳ ಬಾಳಿಕೆಬರುವ ಟೋಪಿ ... ಬೇಗ ಬರೆದು ತರಿಸಿಕೊಳ್ಳಿ ... ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ ೧ ರೂ ೬ ಆ ೧ ರೂ ೪ ಆ

... ಟೋಪಿಗಳು ರೂ ೧—೮, ರೂ ೧—೧೨

... ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ಆ ೧ ರೂ ... ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೊಡಗಿನ ಟೋಪಿ, ಫೂತೀ ಮೋಜಾಗಳು, ಅರ್ಧ ಮೋಜಾಗಳು ... ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ... ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ...

ರಾಮಾಯಣ ಸಂಗ್ರಹ—ಬಾಲಕಾಂಡ.

185–1

ಈ ಗ್ರಂಥವು ರಾಮಾಯಣ ಕಥೆಗಳು ಸ್ಪಷ್ಟವಾಗುವಂತೆ ಕುಮಾರ ವ್ಯಾಸ ಕನ್ನಡ ಭಾರತ ಶೈಲಿಯಲ್ಲಿ ಬಹು ಸರಳವಾಗಿಯೂ, ಮಧುರವಾಗಿಯೂ ಕನ್ನಡ ನಾಟಕಗಳಂತೆ ರಚಿಸಲ್ಪಟ್ಟಿರುವುದರಿಂದ ಅರಮನೆ ಮಹಾರಾಜಾ ಪಾಠಶಾಲೆಯ ಪಂಡಿತರಾದ ಬಿ. ವೆಂಕಟಾಚಾರ್ಯ ಅವರಿಂದ ರಚಿತವಾಗಿ ಶ್ರೀಮನ್ಮಹಾರಾಜರವರ ಘನವಾದ ಪ್ರೋತ್ಸಾಹವನ್ನು ಹೊಂದಿರುತ್ತೆ. ಮಹಾರಾಜಾ ಕಾಲೇಜ್ ಪಂಡಿತರು ಮು॥ ಕರಿಬಸವಶಾಸ್ತ್ರಿಗಳು ಪರಿಶೋಧಿಸಿದ್ದಾರೆ. ಇದರ ಬೆಲೆ 3 ಆಣೆ ಮಾತ್ರ ಅಂಚೆ ವೆಚ್ಚ ಬೇರೆ. ಈ ಪುಸ್ತಕವು ಗ್ರಂಥಕರ್ತರಲ್ಲಿ ದೊರೆಯುತ್ತೆ.

BENEFIT YOURSELF AND BENEFIT OTHERS.

The National Insurance and Banking Company Ltd., Amritsar.

Authorised Capital	Rs. 10,00,000
Subscribed Capital Exceeds	,, 10,00,000
Paid up ,, ,,	,, 1,25,000
Funds Exceed	,, 15,00,000
Policy-holders ,,	,, 80,000
Claims paid about ,,	,, 4,00,000

This Company works in accordance with **the Indian Assurance Companies'** and **Provident Societies' Act 1912** and has also given **double the initial security** to the **Government** as required under the **Insurance Act 1912.**

How is it that the **National, of Amritsar,** has become very popular throughout India?

Because, it has got almost all the attractive schemes that any other Life Office or Provident Society in India has got and also new and novel ones besides, issues policies at most favourable rates and on most liberal conditions, and distributes relief in thousands every quarter on account of **marriages and deaths.**

[122-22]

WANTED

Active and honest **District Superintendents** and Sub Agents for every unrepresented district and taluk of the Mysore Province and Coorg on both **salary** and **commission.** The post is permanent, and our agents are entitled to **pension.** None but those who can spare whole-time, who reside in district or taluk head quarters and who are well versed in English need apply.

For further particulars and prospectuses, please apply with **one anna stamp** and your previous experience to the undersigned:—

M. L. NAGANNAH,
Chief Agent,
The Amritsar National Insurance Buildings, Mysore.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

41-31

ಎಲಾ ರೋಗಿಷ್ಠನೇ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ತಲೆನೋವು, ಕಶೇರುಕಗಳು ಮುಂತಾದ ಕಾರಣದಿಂದ ಹುಟ್ಟುವ ಬಾಧೆಗಳು, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತಸಿಗಳು, ಕ್ಷಯರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿತ ಬಾಧೆ, ಈ ವಿಧವಾದ ಎಲ್ಲಾ ತರಹ ರೋಗವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವ್ಯಾಪಾರಿಯ ಅಂಗಡಿಗೆ ಹೋಗಿ ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಇದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು.—(1) ಎಸ್. ಪೀಟರ್ಸ್, 37 ವರಮುಸಿಲ್ಲಿ ಬೀದಿ, ಪುರಸವಾಕಂ, ಪೇಪೇರಿ, ಮದರಾಸ್, (2) ಟಿ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಹತ್ತಿಯ ತುಪ್ಪ.

ಶ್ರೇಷ್ಠವಾದ ಹತ್ತಿಯ ಬೀಜದಿಂದ ತೆಗೆದು ರಸಾಯನ ಶಾಸ್ತ್ರಜ್ಞರಿಂದ ಶುದ್ಧಿ ಮಾಡಲ್ಪಟ್ಟು, ಘನ ವಾಕ್ಟರುಗಳು ನಿರ್ದೋಷವಾದ ಮತ್ತು ಆರೋಗ್ಯಕರವಾದ ಆಹಾರವಸ್ತುವೆಂದು ಹೇಳಿರುವ, ಆಡಿಗೆಗೆ ತುಪ್ಪಕ್ಕೆ ಬದಲಾಗಿ ಅನೇಕರು ಉಪಯೋಗಿಸುತ್ತಿರುವ

ಹತ್ತಿಯ ತುಪ್ಪವು ಮಾರಾಟಕ್ಕೆ ಸಿದ್ಧವಾಗಿದೆ.

ಗುಣ ಹೆಚ್ಚು. ಬೆಲೆ ಕಡಮೆ. ಡಬ್ಬಿ 1 ಕ್ಕೆ 12 ರೂಪಾಯಿ. ಪಂಥೇರಿಗೆ 1-2-0 ಇದು ಅಭ್ಯಂಗನಕ್ಕೂ ಕೂದಲಿಗೆ ತೊಡೆದುಕೊಳ್ಳುವದಕ್ಕೂ ಉತ್ಕೃಷ್ಟವಾಗಿದೆ. [163-8]

ಹತ್ತಿಬೀಜದ ಹಿಂಡಿ ಮತ್ತು ಹೊಟ್ಟು ಹಸು, ಎಮ್ಮೆ, ಎತ್ತು, ಕುದುರೆಗಳಿಗೆ ಆರೋಗ್ಯವಾದ ಮತ್ತು ಪುಷ್ಟಿಕರವಾದ ಆಹಾರ. ಎಣ್ಣೆ ಹೆಚ್ಚಾಗಿರುವ ಬರೀ ಬೀಜವನ್ನೇ ಕೊಡುವುದರಿಂದುಂಟಾಗುವ ಕೇಡು ಹಿಂಡಿ ಹೊಟ್ಟುಗಳನ್ನು ಕೊಡುವುದರಿಂದ ಆಗದು ಇವುಗಳನ್ನು ತಿಂದ ಪಶುಗಳ ಗೊಬ್ಬರವು ಭೂಮಿಯನ್ನು ತಂಪಾಗಿಯೂ ಫಲಕಾರಿಯಾಗಿಯೂ ಮಾಡುವುದು. ಈ ವಸ್ತುಗಳೆಲ್ಲ ಮಿತ್ರವಿಲ್ಲದೆ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
15º, ಕಿಲಾರಿ ರೋಡ್, ಬೆಂಗಳೂರು ಸಿಟಿ.

ಬಿ. ಎಸ್ ಶ್ರೀಕಂಠಯ್ಯ, ಎ 6, ದೊಡ್ಡಪೇಟೆ, ಮೈಸೂರು, ಇವರಲ್ಲೂ ಮತ್ತು ಕಂಪೆನಿಯ ಏಜಂಟರಿರುವ ಶಿವಮೊಗ್ಗ, ಹಾಸನ, ಚನ್ನಪಟ್ಟಣ, ಮದ್ದೂರು ಈ ಸ್ಥಳಗಳಲ್ಲೂ ಬಿಡಿಯಾಗಿಯೂ ಚಿಲ್ಲರೆಯಾಗಿಯೂ ಕ್ರಯಕ್ಕೆ ದೊರೆಯುವವು.

ಉತ್ಕೃಷ್ಟವಾದ ಮುಲಾಂ, ಟೂತ್ ಪೌಡರ್.

2–3 ಬಳಿತಗಳಿಂದಲೇ ಗುಣಮಾಡುವ ನಮ್ಮಲ್ಲೇ ತಯಾರಾಗಿ ಸಿದ್ಧವಾಗಿರುವ ಕಜ್ಜಿ, ಕುರು, ಸಿಸುಬು ಮತ್ತು ಮೈಮೇಲಿನ ಕರತದ ಮುಲಾವು ಬೇಕಾದ ತರಿಸಿಕೊಳ್ಳಿರಿ. ಗುಣಹೊಂದಿರಿ. ಉತ್ತಮವಾದ ಟೂತ್ ಪೌಡರ್ ಡಬ್ಬಿಗೆ 2 ಆ. ಪ್ರತಿ ಮುಲಾಂ ಡಬ್ಬಿಗೆ 8 ಆ. 10 ಕ್ಕೆ 4 ರೂ 6 ಆ. 10 ಕ್ಕೆ ಮೀರಿದರೆ ಡಬ್ಬಿಗೆ 6 ಆಣೆಯಂತೆ. ವಿಳಾಸ.—ಯು. ಕೆ. ನರಸಿಂಹಯ್ಯ,

[192–1] ಮುನ್ಸಿಫ್ ಕೋರ್ಟು ಡೆಪ್ಯುಟಿ ಮುನ್ಷಿ, ಹೊಳೆನರಸೀಪುರ.

ಕನ್ನಡ ಪುಸ್ತಕಗಳು.

ಕಥೆಗಳು—ಸಭೋಗಗ್ಯ ಚಾಣಕ್ಯ 6ಆ. ಅನಂಗಸುಂದರಿ 8ಆ. ಶಾಗಾಸುಂದರಿ 8ಆ. ಶೋಭನೆ 12ಆ. ಕುಮುದಿನಿ 6ಆ. ಸತೀರೋಹಿಣಿ 2ಆ. ಭಾನುಮತಿ 2ಆ. ಸಂತಾಪಕ 4ಆ. ಕಳಾವತಿ 2ಆ. ಮಾಲತೀಮಧುಕರ 2ಆ. ವಸುಮತಿ 2ಆ. ಪದ್ಮಿನಿ 2ಆ. ಚಂದ್ರಮುಖಿ 6ಆ. ನಕಲಿಗಳು—ಪ್ರಹಸನ ಚತುಷ್ಟಯ 4ಆ. ಪ್ರಹಸನತರಂಗ 4ಆ. ಮಹಾರಣ್ಯಪುರಾಧಿಪತ್ಯ 4ಆ. ಮಹಾಬಧಿರಪ್ರಹಸನ 4ಆ. ಇವೇ ಅಲ್ಲದೆ ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವುವು.

[187-1] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ತಿರುಪತಿ ಗಂಧ. ಡಬ್ಬಿ 1 ಕ್ಕೆ 12 ಆಣೆ.

ಸುಮಾರು ನೂರೈವತ್ತು ಜನಗಳಿಗೆ ಸೇವಿಸಬಹುದು.

ಕಪಿಲಾ ಕಂಪನಿ ಇವರಲ್ಲಿ ತಿರುಪತಿ ಚಂದನವು ತಯಾರಾಗಿ ಮಾರುವದಕ್ಕೆ ಇಟ್ಟಿರುವೆವು. ಕಲ್ಯಾಣ ಮಹೋತ್ಸವದಲ್ಲಿಯೂ, ಶುಭಪ್ರಯೋಜನ ಕಾಲಗಳಲ್ಲಿಯೂ, ಯಾಗ ಯಜ್ಞ ಸಂತರ್ಪಣೆಗಳಲ್ಲಿಯೂ ಮುಖ್ಯತವಾಗಿ ಬೇಕಾಗುವ ಈ ತಿರುಪತಿ ಗಂಧ ಸಮಯಕ್ಕೆ ದೊರೆಯದೆ ದ್ರವ್ಯ ಖರ್ಚು ಮಾಡಿ ಪರಿಮಳವಿಲ್ಲದ ಕಟ್ಟಿಗೆ ಗಂಧವನ್ನು ಉಪಯೋಗಿಸುವರು. ಈ ತಿರುಪತಿ ಚಂದನವನ್ನು ಒಂದಾವರ್ತಿ ಸೇವಿಸಿದವರು ಇತರ ವಿಧ ಗಂಧವನ್ನ ಅವಲಂಬಿಸರು ಈ ಗಂಧವು ಭಂಗಾರಛಾಯವುಳ್ಳದ್ದು, ದಿವ್ಯ ಪರಿಮಳವುಳ್ಳದ್ದು. ಅನೇಕ ದೇಶಗಳಿಗೆ ವಿಶೇಷವಾಗಿ ಈ ಗಂಧದ ಡಬ್ಬಿಗಳು ರವಾನಿಸುತ್ತ ಬಂದಿರುವೆವು. ಇತರ ವಿಧವಾದ ಗಂಧಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ ಕಪಿಲಾ ಕಂಪನಿ ರಿಜಿಸ್ಟರು ಟ್ರೇಡು ಮಾರ್ಕು ಗಮನಿಸಿ ಗಂಧವನ್ನು ನೋಡಿ ತರಿಸಿಕೊಳ್ಳಿರಿ ವಿ. ಪಿ. ಛಾರ್ಜು ಬೇರೆ

ಕೇಳುವವರಿಗೆ ಕ್ಯಾಟಲಾಗು ಕಳಿಸುವೆವು. ಮತ್ತು ಈ ಕಂಪನಿಯಲ್ಲಿ ಇಂಗ್ಲೀಷು ವಾಸನೆಗಳು, ಇತರ ಗಂಧಗಳು, ಗಡಿಯಾರಗಳು, ಮಧ್ವಗ್ರಂಥಗಳು, ಕೂದಲು ಬೆಳೆಯುವ ತೈಲ, ಮಾಂತ್ರಿಕ ತಯಾರಾಗಿದೆ ಕ್ಯಾಟಲಾಗು ಬೇಕಾದವರಿಗೆ ಸುಮ್ಮನೆ ಕಳಿಸುವೆವು. [172.6]

ಕಪಿಲಾ ಕಂಪನಿ, ಚಿತ್ತೂರು, ಚಿತ್ತೂರು ಡಿಸ್ಟ್ರಿಕ್ಟ್.

1913ನೇ ಇಸವಿಯ ಇಂಗ್ಲೀಷು ಕನ್ನಡ ಪಾಕೆಟ್ ಡೈರಿ

ಎ ನಂ. 4 ಆಣೆ



ಬಿ. ನಂ. 5 ಆಣೆ

[illegible]

ಡಿ ನಂ. 8 ಆಣೆ



ಜಿನಿವಾ ನಂ. 1. 4 ಆಣೆ

ಜಿನಿವಾ ನಂ. 2. 6 ಆಣೆ.

1913ನೇ ಇಸವಿಯ ಜನವರಿ ಮೊದಲುಗೊಂಡು ಡಿಸೆಂಬರು ಆಖೈರುವರೆಗೆ ಪಂಚಾಂಗ ಮತ್ತು ಪರಿಧಾವಿ ಸಂವತ್ಸರ ಪುಷ್ಯಮಾಸ ಮೊದಲುಗೊಂಡು ಪ್ರಮಾದೀಚ ಸಂವತ್ಸರ ಪುಷ್ಯಮಾಸದ ವರೆಗೆ ಒಂದು ವರ್ಷದ 12 ನಮೂನೆ ಸೊಗಸಾದ ಆರು ನಮೂನೆಗಳ ಇಂಗ್ಲೀಷ್ ಕನ್ನಡ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ ಪ್ರತಿ ಪುಟಕ್ಕೂ ರೂಲುಹಾಕಿಸಿ ನೋಟ ಶೀಟು (ಕ್ಯಾಲಿಕೋ) ಬೈಂಡು ಮಾಡಿಸಿ ವಿಲಾಯಿತಿ ಯಂತ್ರಗಳಲ್ಲಿ ಪ್ಲೇಟು ಮಾಡಿ ಮೇಲುಗಡೆಯಲ್ಲಿ ಪ್ರಕಾಶವಾಗಿ ಹೊಳೆಯುವ ಹಾಗೆ ಆರ್ನಮೆಂಟಲ್ ಅಕ್ಷರಗಳಿಂದ ಪ್ರಿಂಟು ಮಾಡಲ್ಪಟ್ಟಿವೆ. ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟುದಾರರು ಸರ್ಕಾರಿ ಉದ್ಯೋಗಸ್ಥರು, ಹುಂಡಿದಾರರು, ಜಮೀನ್ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸು ಇಲಾಖೆ ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಇವುಗಳಲ್ಲಿ ಪರಿಧಾವಿ ಪ್ರಮಾದೀಚ ಸಂವತ್ಸರಗಳ ಪಂಚಾಂಗ, ಗ್ರಹಕುಂಡಲಿಗಳ ಸಹಿತ ಹಿಂದೂ ಹಬ್ಬಗಳು, ಮತ್ತು ರಜಾ ದಿವಸಗಳು ತೋರಿಸುವ ಪಟ್ಟಿ, ರೈಲ್ವೆ ಛಾರ್ಜು, ಕೋರ್ಟು ಫೀಜು, ಸ್ಟಾಂಪು ಫೀಜು, ರಿಜಿಸ್ಟರ್ ಫೀಜು, ಸ್ಟ ಮುಂತಾದ ಟಪಾಲಾಫೀಸಿನ ವಿಷಯಗಳು, ಭೂಮಿ ಚದರಳತೆ, ಗೌರೀಪಂಚಾಂಗ, ರಾಹುಕಾಲ ಗುಳಿಕಕಾಲ, ವಾರಶೂಲೆಯ ದಿವಸಗಳು, ದಿವಸಗಟ್ಟಲೆ ಸಂಬಳ ತೋರಿಸುವ ಪಟ್ಟಿ, ಆಸಾಮಿಗೆ ಬಡ್ಡಿ ಹಾಕುವ ಪಟ್ಟಿ, ಪ್ರತಿ ತಿಂಗಳಲ್ಲಿಯೂ ಜಮಾ ಖರ್ಚು ತೋರಿಸುವ ಪಟ್ಟಿ, ಇಂಥಾ ಅನೇಕ ವಿಷಯಗಳು ಇವುಗಳಲ್ಲಿ ಅಡಗಿವೆ. ಡೈರಿಗಳು ಇದುವರೆಗೂ ಇದ್ದದ್ದಕ್ಕಿಂತಲೂ ಈ ವರ್ಷ ಬಹು ಸುಂದರವಾಗಿ ತಯಾರು ಮಾಡಿದೇವೆ. ಎ ನಂಬರ್ ಪಂಚಾಂಗ ಸಹಿತವಾದ ಪೆನ್ಸಲು ಇಡತಕ್ಕ ಚಿಕ್ಕ ಡೈರಿ ಕ್ರಯ ಪ್ರತಿ 1 ಕ್ಕೆ 4 ಆಣೆ. ಬಿ ನಂಬರ್ ಮೇಲ್ಕಂಡ ಚಿಕ್ಕಸೈಜು ಫ್ಲಾಪ್ ಬೈಂಡು ಮಾಡಿರುವದು ಮುಚ್ಚಳ ಹಾಕಿದೆ, ಒಂದಾಣೆ ಬಾಳುವ ಪೆನ್ಸಲು ಒಂದು ಇಟ್ಟಿರುತ್ತೆ. ಕ್ರಯ ಪ್ರತಿ 1ಕ್ಕೆ 5 ಆಣೆ. ಸಿ. ನಂಬರ್ ಪಂಚಾಂಗ ಸಹಿತ ಪೆನ್ಸಲ್ ಇಡತಕ್ಕ ದೊಡ್ಡ ಸೈಜು ಡೈರಿ ಕ್ರಯ ಪ್ರತಿ 1ಕ್ಕೆ 6 ಆಣೆ. ಡಿ ನಂಬರ್ ಮೇಲ್ಕಂಡ ದೊಡ್ಡ ಸೈಜು ಡೈರಿ ಫ್ಲಾಪ್ ಬೈಂಡು ಮಾಡಿರುವದು ಮುಚ್ಚಳ ಹಾಕಿರುತ್ತೆ, ಒಂದಾಣೆ ಬಾಳುವ ಪೆನ್ಸಲು 1 ಇಟ್ಟಿರುತ್ತೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ಗವರ್ನ್ಮೆಂಟಿನಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಯಾದ ಜಿನಿವಾ ಡೈರಿ

ಇಗೋ ನೋಡಿ, ಈ ಕೆಳಗೆ ಕಾಣುವ ಎರಡು ನಮೂನೆ ಡೈರಿಗಳನ್ನು ಹೊಸದಾಗಿ ತಯಾರು ಮಾಡಿದೇವೆ ಇವುಗಳು ಮೇಲೆ ವಿವರಿಸಿರುವ ನಾಲ್ಕು ನಮೂನೆ ಡೈರಿಗಳಿಗಿಂತಲೂ ಖರೀದಿ ಸ್ವಲ್ಪ ಹೆಚ್ಚಾದ್ದರಿಂದ ಡೈರಿಗಳಲ್ಲೂ ವಿಷಯಗಳು ಹೆಚ್ಚು ಕಾಗದ ದಪ್ಪವಾಗಿದೆ. ಬೈಂಡು ಬಹಳ ನೂತನವಾಗಿದೆ. ಗಾತ್ರದಲ್ಲಿ ಮೇಲ್ಕಂಡ ಡೈರಿಗಳಿಗಿಂತಲೂ ಒಂದೂವರೆ ಇದೆ ಪ್ರಿಂಟು ಮಾಡಿರುವ ಆಕಾರಗಳು ಬಹಳ ಚೆನ್ನಾಗಿವೆ. ಇದಕ್ಕೆ ಉಪಯೋಗಿಸಿರುವ ಪದಾರ್ಥಗಳು ಬಹಳ ಹಸನು ಹೆಚ್ಚು ಖರೀದಿಯವುಗಳು ಈ ಜಿನಿವಾ ಡೈರಿ ಸರ್ಕಾರದಲ್ಲಿ ರಿಜಿಸ್ಟರು ಮಾಡಿದೇವೆ ಈ ಡೈರಿಗಳನ್ನು ನೋಡಿದರೆ ಈ ಡೈರಿಗಳಿಗೆ ಸಮಾನವಾದ ಡೈರಿಗಳನ್ನು ಇದುವರೆಗೂ ಯಾರೂ ತಯಾರು ಮಾಡಲಿಲ್ಲವೆಂದು ನೋಡುವವರಿಗೆ ತಿಳಿಯುವದು.

ಜಿನಿವಾ ಡೈರಿ ನಂಬರ್ 1 ಚಿಕ್ಕಸೈಜು 3½ ಅಂಗುಲ ಅಗಲ, 4½ ಅಂಗುಲ ಉದ್ದ ಉಳ್ಳದ್ದು, ಕ್ರಯ 1 ಕ್ಕೆ 4 ಆಣೆ. ಜಿನಿವಾ ಡೈರಿ ನಂಬರು 2 ಡಿಟೋ ಚಿಕ್ಕಸೈಜು ಫ್ಲಾಪು ಡೈರಿ ಮುಚ್ಚಳ ಹಾಕಿರುವದು 1 ಆಣೆ ಖರೀದಿ ಬಾಳುವ ಪೆನ್ಸಲ್ ಇಟ್ಟಿರುವದು ಕ್ರಯ 1 ಕ್ಕೆ 6 ಆಣೆ ಈ ಮೇಲ್ಕಂಡ ಆರು ನಮೂನೆ ಡೈರಿಗಳಿಗೂ ಪೋಸ್ಟು ಛಾರ್ಜು ಬೇರೆ ಬೀಳುತ್ತೆ. **ಒಂದೇ ನಮೂನೆಯಲ್ಲಿ 6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ.** ಎಷ್ಟು ಜಾಸ್ತಿ ಪ್ರತಿಗಳು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಛಾರ್ಜು ಕಡಮೆ ಬೀಳುತ್ತೆ. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು. **ಸಚಿತ್ರ ಶುಕಸಪ್ತತಿ ಕಥೆಗಳು.**—ಹೆಚ್ಚಿನವರು ಈ ಪುಸ್ತಕವನ್ನು ಅನೇಕ ಜನಗಳು ತರಿಸಿಕೊಂಡು ಓದಿ ಆನಂದವನ್ನು ಹೊಂದಿರುತ್ತಾರೆ. ಅನೇಕ ಪುಸ್ತಕಗಳು ಬಿಕರಿಯಾಗಿರುತ್ತವೆ. ಇನ್ನು ಕೆಲವು ಮಾತ್ರ ಇರುತ್ತವೆ. ಬೇಗನೆ ಬರೆದು ತರಿಸಿಕೊಳ್ಳಿರಿ. ಸೊಗಸಾದ ಬೈಂಡು ಕ್ರಯ ರೂ 1-8-0, ಟಪಾಲು ಛಾರ್ಜು 4 ಆಣೆ

ನಮ್ಮಲ್ಲಿ ಕಾವ್ಯಗಳು ಕಥೆಗಳು ಪುರಾಣಗಳು ಮುಂತಾದ ಅನೇಕ ನಮೂನೆ ಪುಸ್ತಕಗಳು ಸುಲಭ ಕ್ರಯದಿಂದ ಬಿಕರಿಯಾಗುವವು ಬೇಕಾದವರು ಕೆಳಗೆ ಕಂಡಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ನಮ್ಮಲ್ಲಿ ಇನ್ನೂ ಅನೇಕ ಸಾಮಾನುಗಳು ಬಿಕರಿಯಾಗುತ್ತವೆ ಅವುಗಳ ಕ್ಯಾಟಲಾಗ್ ಕ್ರಯಪಟ್ಟಿಯನ್ನು ಅಪೇಕ್ಷಿಸುವವರಿಗೆ ಟಪಾಲ್ ಹಾಸಲ್ ಇಲ್ಲದೇ ಕಳುಹಿಸುವೆವು. [190-3]

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ
—:೦:—
ಸನ್ ೧೯೧೨ ನೇ ಇಸವಿ ಡಿಸೆಂಬರ್ ತಾ. ೨೬ ನೇ ಗುರುವಾರ

ಮೈಸೂರು ಸಂಸ್ಥಾನದ ಆಳ್ವಿಕೆಯ ರಿಪೋರ್ಟು.

ಮೈಸೂರು ಗವರ್ನಮೆಂಟಿನ 1911-12 ನೇ ಸಾಲಿನ ಆಳ್ವಿಕೆಯ ರಿಪೋರ್ಟು ಕಳೆದ ವಾರ ನಮ್ಮಲ್ಲಿಗೆ ಬಂದಿರುತ್ತದೆ. ಇತರ ಸರ್ಕಾರಿ ರಿಪೋರ್ಟುಗಳಿಗಿಂತಲೂ ಈ ಆಳ್ವಿಕೆಯ ವರದಿಯು ಬೇಗನೆ ಪ್ರಕಟವಾಯಿತು. ಇವರಲ್ಲಿ ಅಡಕವಾಗಿರುವ ಮೈಸೂರು ಸಂಸ್ಥಾನದ ಆಳ್ವಿಕೆಯ ಚರಿತ್ರೆಯು ತಕ್ಕಮಟ್ಟಿಗೆ ಸಂತೋಷಪ್ರದವಾಗಿರುತ್ತದೆ.

ಕಳೆದ ವರುಷ ಸಂಸ್ಥಾನದ ಕಾಲಸ್ಥಿತಿಯು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಬೆಳೆಗಳು ಹೊತ್ತಾಗಿ ಫಲಿಸಲಿಲ್ಲವಾದ್ದರಿಂದ ದಿನಸಿ ಧಾರಣೆಗಳು ಬಹಳವಾಗಿ ಹೆಚ್ಚಿ ಹೋದವು. ಸಾಮಾನ್ಯ ಪ್ರಜೆಗಳು ತಮ್ಮ ಪರಿಮಾಣದ ಜೀವನ ಮಾಡುವುದು ಕಷ್ಟವಾಯಿತು. ಈಗಲೂ ಅಂಥಾ ಕಷ್ಟವು ಇನ್ನೂ ನಿವಾರಣೆಯಾಗಿಲ್ಲ. ಅದರೂ ಸಂಸ್ಥಾನದಲ್ಲಿ ದಿನಸಿಯು ದಾಸ್ತಾನು ಇದ್ದಕಾರಣ ದವಸಗಳು ದೊರಕದೆ ಕ್ಷಾಮವು ಪ್ರಾಪ್ತವಾಗಲಿಲ್ಲ. ಪ್ಲೇಗು ಉಪದ್ರವು ಎಂದಿಗಿಂತಲೂ ಸ್ವಲ್ಪ ಹೆಚ್ಚಾಗಿಯೇ ಹರಡಿಕೊಂಡು, ಮರಣ ಸಂಖ್ಯೆಯನ್ನು ಬಹಳಮಟ್ಟಿಗೆ ಹೆಚ್ಚಿಸಿತು. ಕೆಲವು ಡಿಸ್ಟ್ರಿಕ್ಟುಗಳಲ್ಲಿ ವಾಂತಿಭೇದಿ ಉಪದ್ರವೂ ಸಿಡುಬಿನ ಪ್ರಬಲವಾಗಿದ್ದವು. ಕೆಲಸಗಳೂ ಕಾಲುವೆಗಳೂ ಹೆಚ್ಚಳವಾಗಿ ನಡೆಯುತ್ತಿದ್ದ ಕಾರಣ ಜನರಿಗೆ ಕೂಲಿಯೂ ದೊರಕುತ್ತಿತ್ತು. ಆದರೂ ದವಸಗಳ ಧಾರಣೆ ಏರಿದಂತೆ ಕೂಲಿಯ ದರಗಳು ಹೆಚ್ಚಲಿಲ್ಲವಾಗಿ, ಕೂಲಿನಾಲಿನವರ ಜೀವನವು ಬಹಳ ಕಷ್ಟವಾಯಿತು.

ಗವರ್ನಮೆಂಟಿನವರು ಸಂಸ್ಥಾನದಲ್ಲಿ ವ್ಯವಸಾಯವನ್ನು ಉತ್ತಮ ಸ್ಥಿತಿಗೆ ತರಬೇಕೆಂದೂ, ಕಸಬುಗಳನ್ನು ಹೆಚ್ಚು ಮಾಡಬೇಕೆಂದೂ ಕಾತರಪಡುತ್ತಿದ್ದಾರೆ. ಅವರ ತೀವ್ರ ಮಾಡುವುದರಲ್ಲೇ ಅವರ ಸಾಹಸವೂ ಸಮಯವೂ ವಿನಿಯೋಗವಾಗುತ್ತಿದ್ದರೂ ಇನ್ನೂ ಕಾರ್ಯತಃ ಯಾವುದೂ ಪ್ರಾರಂಭವಾಗಿಲ್ಲ. ಸಂಸ್ಥಾನದಲ್ಲಿ ಕಸಬುಗಳು ಸರಿಯಾಗಿ ಅಭಿವೃದ್ಧಿ ಹೊಂದಬೇಕಾದಲ್ಲಿ ಅದು ಆತುರಪಟ್ಟರೆ ಸಾಧ್ಯವಾಗಲಾರದು. ಕಸಬುಗಳು ಕ್ರಮವಾಗಿಯೂ ನಿಧಾನವಾಗಿಯೂ ಮೇಲಿಗೆ ಬರುವುದೇ ಕ್ಷೇಮಕರವಾಗಿದೆ.

ಕಾಲಸ್ಥಿತಿಯು ಚೆನ್ನಾಗಿದ್ದ ಕಾರಣ ಸಂಸ್ಥಾನದ ಉತ್ಪತ್ತಿಯು ತೃಪ್ತಿಕರವಾಗಿರುತ್ತದೆ. ಗವರ್ನಮೆಂಟಿನ ಆಸ್ತಿಯು ಹೆಚ್ಚಾಗಿ ಉಳಿದ ದ್ರವ್ಯದಿಂದ ಈ ಸೀಮೆಯ ಪುರೋಭಿವೃದ್ಧಿಗೆ ಸಹಕಾರಿಗಳಾದ ಕಾರ್ಯಗಳನ್ನು ನಡೆಸಬಹುದಾಗಿದೆ.

ಗವರ್ನಮೆಂಟಿನವರು ಸಂಸ್ಥಾನದಲ್ಲಿ ರೈಲ್ವೆ ಬಹಳವಾಗಿ ಮಾಡಬೇಕೆಂದು ತೀರ್ಮಾನಮಾಡಿಕೊಂಡು ಸರ್ವೆ ಮುಂತಾದ ಕಾರ್ಯಗಳನ್ನು ನಡೆಸುತ್ತಿರುವುದು ಸಂತೋಷಪ್ರದವಾಗಿದೆ. ಯಾವ ಯಾವ ರೈಲು ರಸ್ತೆಗಳ ಕಾಮಗಾರಿಯನ್ನು ಪ್ರಾರಂಭ ಮಾಡುವರೋ ಕೂಡಿದಮಟ್ಟಿಗೂ ಬೇಗನೆ ಪ್ರಕಟಮಾಡುತ್ತಾರೆಂದು ಹಾರೈಸುತ್ತೇವೆ.

ಈ ಆಳ್ವಿಕೆಯ ರಿಪೋರ್ಟಿನ ಕೆಲವು ಭಾಗಗಳನ್ನು ಕುರಿತು ಇನ್ನೊಂದು ವೇಳೆ ಪ್ರಸ್ತಾಪಮಾಡಬೇಕೆಂದಿದ್ದೇವೆ. ಸಾಮಾನ್ಯವಾಗಿ ಓದಿನೋಡುವಲ್ಲಿ ಈ ಸಂಸ್ಥಾನವು ಅಭಿವೃದ್ಧಿ ಸ್ಥಿತಿಗೆ ಬರುತ್ತಿದೆ ಎಂದು ಕಾಣುವುದು. ಈ ಭಾಗದಲ್ಲಿ ನಾವು ಗವರ್ನಮೆಂಟಿನವರ ಕೂಡ ಸಂತೋಷಪಡುವೆವು

ವೈಸ್‌ರಾಯರ ಮೇಲೆ ಗುಂಡು ಹಾಕಿದ್ದು.

ತಾ. ೨೩ ನೇ ಸೋಮವಾರ ಹೊದಲೇ ಪ್ರಸಾರವಾಗಿದ್ದಂತೆ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಯವರು ಪತ್ನೀಸಹಿತ ಹೊಸ ರಾಜಧಾನಿಯಾದ ಡೆಹಲಿ ನಗರವನ್ನು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಬಹುಮ ವೈಭವ ಸಹಿತ ಮೆರವಣಿಗೆಯಲ್ಲಿ ಪ್ರವೇಶ ಮಾಡಿದರು. ಅವರ ಆನೆಯ ಹಿಂದೆ ಸುಮಾರು ೫೦ ಆನೆಗಳು ಮೆರವಣಿಗೆಯಲ್ಲಿದ್ದವು. ಮೆರವಣಿಗೆಯು ಚಾಂದನಿ ಚೌಕದ ನಡುವೆ ಹೋದಕೂಡಲೆ ಒಂದು ಸಿಡಿಮದ್ದಿನ ಗುಂಡು ಭಯಂಕರವಾದ ಶಬ್ದದೊಡನೆ ಹಾರಿತು. ವೈಸ್‌ರಾಯರ ಹಿಂಭಾಗದಲ್ಲಿದ್ದ ಒಬ್ಬ ಜಮೇದಾರನು ತಕ್ಷಣ ಸತ್ತುಹೋದನು; ಇನ್ನೊಬ್ಬನಿಗೆ ಎಂಟು ಕಡೆಗಳಲ್ಲಿ ಗಾಯವಾಗಿದೆ. ವೈಸ್‌ರಾಯರವರ ಭುಜದ ಮೇಲೂ ಸ್ವಲ್ಪ ಗಾಯವಾಯಿತು. ಕೂಡಲೇ ಆನೆಯನ್ನು ನಿಲ್ಲಿಸಿ ಒಂದು ಪಾಲಕಿಯನ್ನು ತರಿಸಿ ವೈಸ್‌ರಾಯರನ್ನು ಅದರಲ್ಲಿ ಆಸ್ಪತ್ರೆಗೆ ಸಾಗಿಸಿದರು. ಅವರ ಪತ್ನಿಯವರು ಇಳಿದು ಮೋಟಾರಿನಲ್ಲಿ ಕುಳಿತು ಬಿಡಾರಕ್ಕೆ ತೆರಳಿದರು. ಆ ಗುಂಡು ಎಸೆದುಬಿಟ್ಟ ಮನುಷ್ಯನನ್ನು ಪೋಲೀಸಿನವರು ಗೇರಾಯಿಸಿಕೊಂಡು ಕೆಲವರನ್ನು ವಶಗಿಸಿ ಮಾಡಿದಾರೆಂದು ತಿಳಿಯುತ್ತದೆ. ಒಳಿಕ ಮೆರವಣಿಗೆಯು ನಿಲ್ಲಿಸಲ್ಪಟ್ಟಿತು ಎಂಬ ವರ್ತಮಾನವನ್ನು ತಿಳಿಸಿತು. ಅಲ್ಲಿ ವೈಸ್‌ರಾಯರವರ ಸ್ಥಾನದಲ್ಲಿ ಸರ್ ಗೈ ಫ್ಲೀಟ್‌ವುಡ್ ವಿಲ್‌ಸನ್ ರವರು ನಿಂತು ದರ್ಬಾರನ್ನು ನಡಿಸಿದರು

ಬಾಲ್ಕನ್ ಯುದ್ಧವು.

ತುರ್ಕಿ ಬಾಲ್ಕನ್ ಯುದ್ಧವು ನಿಲ್ಲುತ್ತ ನಿಂತು ಕದನವು ನಡೆಯುವ ಭಾಗದಲ್ಲಿ ಚರ್ಚೆಯಾಗುತ್ತಿರುವುದು. ಆ ರಾಜ್ಯಗಳ ಪ್ರತಿನಿಧಿಗಳು ಈಗ ಲಂಡನ್ ಪಟ್ಟಣದಲ್ಲಿ ಸಭೆ ಸೇರಿ ಒಂದು ವಾರದಿಂದ ಆಲೋಚನೆ ಮಾಡುತ್ತಿದ್ದಾರೆ. ಈ ಚರ್ಚೆಗಳಲ್ಲಿ ನಿಂತಿತವಾಗಿ ಕಂಡುಬರುವ ವಿಷಯಗಳಾವವೂ ಇನ್ನೂ ಹೊರಪಟ್ಟಿಲ್ಲವಾದಕಾರಣ ಹೆಚ್ಚು ಸಂಗತಿಗಳನ್ನು ತಿಳಿಸು ವ ಅವಕಾಶವಿಲ್ಲ.

ತುರ್ಕಿ ಸೈನಿಕರಲ್ಲಿ ಗಾಯಪಟ್ಟವರಿಗೆ ಚಿಕಿತ್ಸೆ ಮಾಡಿ ಶೈತ್ಯೋಪಚಾರ ನಡಸುವುದಕ್ಕೆ ಹಿಂದುಸ್ಥಾನದಿಂದ ಕೆಲವು ಮಹಮ್ಮದೀಯ ಡಾಕ್ಟರುಗಳು ಕಾನ್‌ಸ್ಟಾಂಟಿನೋಪಲ್ಲಿಗೆ ಪ್ರಯಾಣ ಮಾಡಿದರು. ಅಲ್ಲಿ ಯುದ್ಧದ ಕಷ್ಟನಷ್ಟಗಳಿಗೆ ಸಿಕ್ಕಿ ಸಂಕಟಪಡುತ್ತಿರುವವರನ್ನು ಸಂರಕ್ಷಣೆ ಮಾಡುವುದಕ್ಕೆ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಮುಸಲ್ಮಾನರೂ ಹಿಂದೂಗಳೂ ಸಭೆಗಳನ್ನು ನಡಿಸಿ ಚಂದಾ ಧನವನ್ನು ಕೂಡಿಸಿ ಕಳುಹಿಸಿಕೊಡುತ್ತಿದ್ದಾರೆ. ವೈಸ್‌ರಾಯರೇ ಮೊದಲಾದ ಅಧಿಕಾರಿಗಳೂ ಕೂಡ ಈ ಫಂಡಿಗೆ ದ್ರವ್ಯವನ್ನು ಚಂದಾ ಹಾಕಿದರು

ಈಚೆಗೆ ತುರ್ಕಿಯವರಿಗೂ ಗ್ರೀಕರಿಗೂ ಒಂದೆರಡು ಸಮುದ್ರಯುದ್ಧಗಳು ನಡೆದ ಹಾಗೂ, ತುರ್ಕಿಯವರ 3-4 ಹಡಗುಗಳು ನಷ್ಟಪಟ್ಟವೆಂದೂ, ಎರಡು ಕಡೆಗಳಲ್ಲೂ ಕೆಲವು ಸೈನಿಕರು ಮೃತರಾದರೆಂದೂ ವರ್ತಮಾನ ಬಂದಿದೆ

ಕ್ರಿಸ್‌ಮಸ್ ಹಬ್ಬವು.

ನಿನ್ನೆ ದಿನ ಕ್ರಿಸ್‌ಮಸ್ ಹಬ್ಬವೆಂಬುದು ಎಲ್ಲಾ ಪಾಠಕ ಮಹಾಶಯರಿಗೆಲ್ಲಾ ಪ್ರಾಯಶಃ ತಿಳಿದಿರುವುದು. ಆ ದಿವಸ ಕ್ರೈಸ್ತರ ಕಛೇರಿಗಳಲ್ಲಿ ಎಲ್ಲಾ ಆಫೀಸುಗಳಿಗೆ ರಜಾ ಇರುವುದು. ... ಯೇಸು ಕ್ರಿಸ್ತನು ಜನಿಸಿದ ದಿನವಾಗಿ ... ಕ್ರಿಸ್‌ಮಸ್ ಹಬ್ಬವು ಅತನ ಜನನವನ್ನು ಜ್ಞಾಪಕಮಾಡುವ ದಿನವಾಗಿರುತ್ತದೆ. ಆತನು ದೇವರ ಏಕಪುತ್ರನಾಗಿ ... ಆತನು ಅವತರಿಸಿದ ಕಾಲದಿಂದೀಚೆಗೆ ಲೋಕವು ಒಂದು ನೂತನ ಸುಧಾರಣೆಯನ್ನು ಹೊಂದುತ್ತಾ ಬಂದಿರುತ್ತದೆ. ಆತನು ಜನಿಸಿದ ದಿನದಲ್ಲಿ ಆಕಾಶದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ ಎಂದು ತಿಳಿಸಲ್ಪಟ್ಟಿತು

ಆತನು ಜನಿಸಿದ ಆ ಕಾಲದಲ್ಲಿ ಲೋಕದ ಸ್ಥಿತಿಯನ್ನು ಚರಿತ್ರೆಯಲ್ಲಿ ಓದಿನೋಡಿದರೆ ಮನುಷ್ಯರು ಎಷ್ಟು ನೀಚರಾಗಿದ್ದರು ಎಂಬುದು ಮೃಗಗಳಂತೆ ಕ್ರೂರತನ, ಯುದ್ಧ, ದ್ವೇಷ, ದುಷ್ಕೃತ್ಯ, ಅನ್ಯಾಯ ಇವೇ ಮೊದಲಾದವುಗಳಲ್ಲಿ ಆಸಕ್ತರಾಗಿದ್ದರು. ರೋಗಿ, ಬಡವ, ಅನಾಥರು, ಪರೋಪಕಾರ ಇವುಗಳ ಕರುಣೆಯಾದರೂ ಕಾಣುತ್ತಿರಲಿಲ್ಲ. ಆ ಕಾಲದಲ್ಲಿ ಪ್ರೀತಿ ಎಂಬುದು ಇದ್ದಿತು. ತಾಯಿತಂದೆಗಳು ತಮ್ಮ ಮಕ್ಕಳನ್ನು ಪ್ರೀತಿಸಿದರು, ಸ್ನೇಹಿತರು ಸ್ನೇಹಿತರನ್ನು ಪ್ರೀತಿಸಿದರು. ದೇಶಾಭಿಮಾನವು ಇದ್ದಿತು. ಆದರೆ ಅವು ಕೂಡ ಕೇವಲ ಸ್ವಾರ್ಥತೆಯಿಂದಲೇ ತುಂಬಿದ್ದಿತು. ಸ್ವಾರ್ಥತೆ ಇಲ್ಲದ ಸ್ವಾರ್ಥತ್ಯಾಗವಾದ ದೇವರ ಪ್ರೀತಿಯು ಏನೆಂಬುದು ಲೋಕಕ್ಕೆ ತಿಳಿದಿರಲಿಲ್ಲ. ಇಂಥ ಕಾಲದಲ್ಲಿ ಯೇಸು ಕ್ರಿಸ್ತನು ಈ ಲೋಕದಲ್ಲಿ ಅವತರಿಸಿ ದೇವರ ಪ್ರೀತಿಯನ್ನು ಮಾನವರಿಗೆ ಪ್ರಕಾಶಪಡಿಸುವುದಕ್ಕೆ ಪ್ರಾರಂಭಿಸಿದನು. ಆತನು ಜನಿಸಿದ ಆ ದಿನದಲ್ಲಿ ದೇವರ ಪ್ರೀತಿಯೋ ನವಾವತಾರವೆತ್ತಿ ಈ ಲೋಕದಲ್ಲಿ ಉದ್ಭವಿಸಿದಂತಾಯಿತು. ಉತ್ತರದೇಶದ ಸಮಶೀತೋಷ್ಣವಾದ ಭೂಭಾಗದಲ್ಲಿ ಒಂದು ಸಣ್ಣ ಬೆಂಕಿಯ ಕಿಡಿಯು ಅಲ್ಲಿದ್ದರೆ ಹೇಗಿದ್ದೀತೋ ಹಾಗೆಯೇ ಕ್ರೂರತನವು ಎಲ್ಲಾ ಕಡೆಗಳಲ್ಲಿ ವ್ಯಾಪಿಸಿದ್ದ ಆ ಕಾಲದಲ್ಲಿ ಹೊಸದಾಗಿ ಜನಿಸಿದ ಈ ಪ್ರೀತಿಯು ಅತ್ಯಲ್ಪವಾಗಿ ಕಂಡುಬಂದಿತು. ಕ್ರೂರತನವೆಂಬ ಕತ್ತಲು ದೇವರ ಪ್ರೀತಿಯೆಂಬ ಆ ಬೆಂಕಿಯ ಕಿಡಿಯನ್ನು ನಂದಿಸುವುದಕ್ಕೆ ಪ್ರಯತ್ನಪಡುತ್ತಾ ಬಂದಾಗ್ಯೂ ಅವರ ಉಷ್ಣವು ಕ್ರಮೇಣ ವೃದ್ಧಿಯಾಗುತ್ತಲೇ ಬಂದಿದೆ. ಆ ಕಿಡಿಯಿಂದ ಹೊರಟುಬರುವ ಕಾಂತಿಯು ಅಜ್ಞಾನಾಂಧಕಾರವನ್ನು ಚದರಬಡಿಯುತ್ತಾ ಇರುತ್ತದೆ. ಈಗಲೂ ಅದು ಯಾರಿಗೂ ತಿಳಿಯದ ರೀತಿಯಲ್ಲಿ ಎಲ್ಲಾ ಕಡೆಗಳಿಗೂ ವ್ಯಾಪಿಸಿಕೊಳ್ಳುತ್ತಾ ಬರುತ್ತದೆ. ಕ್ರೈಸ್ತಮತವು ಯಾವ ಯಾವ ದೇಶಗಳಿಗೆ ಹೋಗುತ್ತದೆಯೋ ಅಲ್ಲಾ ದೇಶಗಳಲ್ಲೆಲ್ಲಾ ಯುದ್ಧವೂ, ಕಲಹವೂ, ಕ್ರೂರತನವೂ, ಕಡಮೆಯಾಗುತ್ತಾ ಬರುತ್ತವೆ. ದರಿದ್ರಾಲಯಗಳೂ ಅನಾಥಾಶ್ರಮಗಳೂ ಹೆಚ್ಚುತ್ತವೆ. ಜನಗಳಲ್ಲಿ ಪರಸ್ಪರ ವಿರೋಧವು ಕಡಮೆಯಾಗಿ ಸೋದರಭಾವವು ಹುಟ್ಟುತ್ತದೆ. ಬಲಿಷ್ಠರು ಬಲಹೀನರನ್ನು ಮೇಲಕ್ಕೆ ಎತ್ತುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಂಥ ಮಾರ್ಪಾಡುಗಳೆಲ್ಲಾ ಉಂಟಾಗುವುದಕ್ಕೆ ಕಾರಣವು ಕ್ರಿಸ್ತನು ಅವತರಿಸಿದುದೇ ಆಗಿರುತ್ತದೆ. ದೇವರು ಪ್ರೀತಿಸ್ವರೂಪನು. ಯೇಸು ಕ್ರಿಸ್ತನು ದೇವರ ಪ್ರತಿರೂಪನಾಗಿರುತ್ತಾನೆ. ಕ್ರಿಸ್‌ಮಸ್ ಹಬ್ಬವನ್ನು ಆಚರಿಸುವವರು ದೇವರು ಮಾನವರಿಗೆ ಪ್ರಕಟಮಾಡಿರುವ ಆತನ ಅಮೋಘವಾದ ಪ್ರೀತಿಯನ್ನು ಸ್ಮರಿಸಿ, ಕೃತಜ್ಞತೆಯಿಂದಲೂ ಪರಮಾನಂದದಿಂದಲೂ ಆತನನ್ನು ಆರಾಧಿಸುವರು. ಮತ್ತು ಬಡವರಿಗೂ ಅನಾಥರಿಗೂ, ರೋಗ ಕಷ್ಟಗಳಲ್ಲಿ ಬಿದ್ದವರಿಗೂ ಸಹಾಯಮಾಡುತ್ತಾ ಬರುವಂತೆ ಈ ಪ್ರೀತಿಯು ಅವರನ್ನು ಪ್ರೇರಿಸುತ್ತಾ ಬರುವುದು

ಬಳಬೀಕರ ವೃತ್ತಾಂತಗಳು.

ರಾಜಧಾನಿಯ ಆಸ್ಥಾನ ವಿದ್ವಾನ್ ವೈಣಿಕ ವಾಸುದೇವಾಚಾರ್ಯ ಕೆಂಪಣ್ಣನವರು ದಕ್ಷಿಣ ದೇಶದಲ್ಲಿ ಸಂಚಾರ ಮಾಡಿಕೊಂಡು ಬರುವುದಕ್ಕಾಗಿ ಈ ವಾರ ಹೊರಡುವವರಾಗಿದ್ದಾರೆ

ಕಳೆದ ತಾ. 12ನೇ ಗುರುವಾರ ಸಾಯಂಕಾಲ ಪ್ರಿನ್ಸ್ ಯುವರಾಜರವರು ಮಹಾರಾಣಿ ಕಾಲೇಜಿನಲ್ಲಿ ನಡೆದ ಅಗ್ರಾಸನವನ್ನು ವಹಿಸಿ, ಅಲ್ಲಿ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ದಯಪಾಲಿಸಿದರು.

ಮ. ಎ. ವಿ ನಂಜುಂಡಯ್ಯನವರಿಗೆ ಚೀಫ್ ಜಡ್ಜಿ ಕೆಲಸವು ಸಿಕ್ಕುವಾಗುವುದೆಂದೂ, ಮ|| ದೊರಸ್ವಾಮಿ ಅಯ್ಯರವರೂ ಸರ್ಕಾರ್ ಕಾಂಟ್ರಾಕ್ಟ್ ಅರಸರಿಗೆ ಕೌನ್ಸಿಲರುಗಳಾಗುತ್ತಾರೆಂದೂ ಪ್ರವಾದವಿದೆ.

ಶ್ರೀಮತ್ ಮಹಾರಾಜರವರೂ, ಯುವರಾಜರವರೂ, ಬ್ರಿಟಿಷ್ ರೆಸಿಡೆಂಟ್ ಮೊದಲಾದ ಯೂರೋಪ್ಯಿಯನ್ ಅತಿಥಿಗಳ ಸಹಿತ ಹೊರಟು ತಿರುಗಿಕೊಂಡು ಈ ಶುಕ್ರವಾರ ಸಾಯಂಕಾಲ 6 ಗಂಟೆಗೆ ಬೆಂಗಳೂರಿಗೆ ದಯಮಾಡಿದರು

ಇನ್ನು ಮುಂದೆ ಮೈಸೂರು ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳ ಉಪಾಧ್ಯಾಯ ಪರೀಕ್ಷೆಗಳು ಮಾರ್ಚ್ ತಿಂಗಳ ಮೊದಲನೇ ಸೋಮವಾರ ಪ್ರಾರಂಭವಾಗಬೇಕೆಂದು ಇನ್ಸ್‌ಪೆಕ್ಟರ್ ಜನರಲ್ ರವರು ವಿಧಾಯಕ ಮಾಡಿದ್ದಾರೆ.

ಈ ವಾರ ಶ್ರೀಮನ್ಮಹಾರಾಜರವರು ಮಹಾನವಮಿ ಮಂಟಪವನ್ನು ಮನೆಯ ರಾಜಾಸನವನ್ನೂ ನೋಡಲು ಡಿಸ್ಟ್ರಿಕ್ಟ್ ಸರ್ಕ್ಯೂಟ್ಹೌಸಿನ ಕಡೆ ಹೋಗಿ ಹೊಸದಾಗಿ ಹಿಡಿದು ಕಟ್ಟಮಾಡಿರುವ ಆನೆಗಳನ್ನು ನೋಡುವವರಾಗಿದ್ದಾರೆಂದು ಕೇಳುತ್ತೇವೆ

* *

ಬೆಂಗಳೂರು ಸಿಟಿ ನಾರ್ಟನ್ ಪ್ರೊಪ್ರೈಟರ್ ಮ|| ಬಿ. ಕೆ. ಗರುಡಾಚಾರ್ಯರು ಬೇರೆ ಬೇರೆ ಬಣ್ಣಗಳಲ್ಲಿ ಸುಂದರವಾಗಿ ಅಚ್ಚುಹಾಕಿಸಿರುವ 1913 ನೇ ವರುಷದ ಕ್ಯಾಲೆಂಡರು ಒಂದನ್ನು ನಮ್ಮಲ್ಲಿಗೆ ಕಳುಹಿಸಿರುವುದಕ್ಕಾಗಿ ಅವರನ್ನು ವಂದಿಸುತ್ತೇವೆ.

* *

ಕಳೆದ ಶುಕ್ರವಾರಕ್ಕೆ ಈ ವರುಷದ ಮೊಹರಂ ಹಬ್ಬವು ಮುಕ್ತಾಯವಾಯಿತು. ರಾಜಧಾನಿಯಲ್ಲಿ ಈ ಸಲ ಹೇಳತಕ್ಕ ಅಷ್ಟು ವಿಶೇಷವಾಗಿರಲಿಲ್ಲ. ಡಾಬೂತಗಳೂ ಕೆಲವು ಮಾತ್ರ ಮೆರವಣಿಗೆಯಲ್ಲಿ ಬಂದವು. ಹುಲಿಯ ವೇಷಗಳೇ ವಿರಳ. ಪೋಲೀಸಿನವರು ಗಲಭೆಗಳಿಗೆ ಅವಕಾಶಕೊಡದೆ ಚೆನ್ನಾಗಿ ಬಂದೋಬಸ್ತು ಮಾಡಿ ಇಟ್ಟಿದ್ದರು

ಕನ್ನಂಬಾಡಿ ತಲಾವಿನ ಕಾಮಗಾರಿಯಲ್ಲಿ ಉದ್ಯುಕ್ತರಾಗಿರುವ ಕೆಲ ಜನಗಳಲ್ಲಿ ವಾಂತಿಭೇದಿ ಉಪದ್ರ ಪ್ರಾರಂಭವಾಗಿ ಒತ್ತಡ ಮುಂತಾದ ಕೆಲ ಜನಗಳು ಹೆದರಿಕೊಂಡು ಅಲ್ಲಿಂದ ರಾಜಧಾನಿಗೆ ಬರುತ್ತಿದ್ದಾರೆಂದೂ, ಹೆಲ್ತ್ ಆಫೀಸರವರು ಅಂಥಾ ಜನಗಳ ಮೇಲೆ ಸೂಕ್ಷ್ಮವಾದ ಇಡುವಂತೆ ಏರ್ಪಾಟು ಮಾಡಿರುತ್ತಾರೆಂದೂ ಕೇಳುತ್ತೇವೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನೊಳಗೆ ಯಾರೂ ಕತ್ತೆಗಳನ್ನು ಇಟ್ಟುಕೊಳ್ಳಕೂಡದೆಂದೂ, ಸಾಕತಕ್ಕವರು ಅವಶ್ಯ ಸಾಕಿದರೆ ಲೈಸೆನ್ಸು ಮ್ಯುನಿಸಿಪಾಲಿಟಿಯಿಂದ ಪ್ರತಿ ವರುಷವೂ ಪಡೆದುಕೊಳ್ಳಬೇಕೆಂದೂ ಒಂದು ಕಾನೂನು ಮಾಡಿ ಜಾರಿಗೆ ತರುವುದರಲ್ಲಿದ್ದಾರೆ

ಅರಮನೆ ಎಂಜಿನಿಯರನ್ನು ನೋಡಿಕೊಂಡು ನಡೆಸುತ್ತಾ ಬಂದಿಯು ಎಗ್ಜಿಕ್ಯೂಟಿವ್ ಇಂಜಿನಿಯರ್ ಮ. ಸಿ. ಮಾದವರಾಯರಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆಲಸಕ್ಕೆ ಬಡ್ತಿಯಾಯಿತು. ಈ| ಇಂಜಿನಿಯರ್ ಮ. ಎಸ್. ಶ್ರೀನಿವಾಸ ಅಯ್ಯರವರನ್ನು ಕನ್ನಂಬಾಡಿ ತಲಾವಿನ ಹೆಚ್ಚಿನ ಅರಮನೆ ಕಾಮಗಾರಿ ಡಿವಿಷನ್ ಎಂಬುದಕ್ಕೆ ವರ್ಗಮಾಡಿರುತ್ತಾರೆ

* *

ಮೈಸೂರು ಶ್ರೀ ಪಂಚಾಂಗದ ಪ್ರಕಾಶಕರು 1913 ವರುಷದ ಡೈರಿ ನಮ್ಮಲ್ಲಿಗೆ ಬಂದಿರುತ್ತದೆ. ಇದರಲ್ಲಿ ಪ್ರಜೆಗಳು ತಿಳಿಯಬೇಕಾದ ನಾನಾ ವಿಷಯಗಳೆಲ್ಲಾ ಸಂಕ್ಷೇಪವಾಗಿಯೂ ಸುಲಭವಾಗಿಯೂ ಸೇರಿಸಲ್ಪಟ್ಟಿರುತ್ತವೆ. ಅಚ್ಚು, ಮುದ್ರಣ, ಕಾಗದ, ಬೈಂಡು ಮೊದಲಾದ ಭಾಗಗಳೆಲ್ಲಾ ತೃಪ್ತಿಕರವಾಗಿರುವುವು

* *

ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ಹಾಕುವ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆಯಲ್ಲಿ ಓಡುತ್ತಿರುವಂತೆ 1 ನೇ ಮತ್ತು 3 ನೇ ತರಗತಿಗಳು ಮಾತ್ರ ಪ್ರತಿ ಗಾಡಿಯಲ್ಲೂ ಇರತಕ್ಕದ್ದೆಂದೂ, 2 ನೇ ತರಗತಿ ಗಾಡಿಯೇ ಅವಶ್ಯವೆಂದೂ ಬೋರ್ಡಿನ ಮೀಟಿಂಗಿನಲ್ಲಿ ತೀರ್ಮಾನಮಾಡಿ, ರೈಲ್ವೆ ಚೀಫ್ ಇಂಜಿನಿಯರವರಿಗೆ ತಿಳಿಸುತ್ತಾರೆ.

* *

ದಿವಾನ್ ಸರ್ ವಿಶ್ವೇಶ್ವರಯ್ಯನವರು ಕಳೆದ ಗುರುವಾರ ಬೆಳಗ್ಗೆ ಬೆಂಗಳೂರಿನಿಂದ ಬೌರಿಂಗ್‌ಪೇಟೆಗೆ ದಯಮಾಡಿ, ಅಲ್ಲಿಯಿಂದ ಬಂದಿರುವ ಚಿನ್ನದಗಣಿ ಕಂಪನಿಗಳ ಅಧ್ಯಕ್ಷರನ್ನು ಕಂಡು ಅವರ ಕೂಡ ಕೆಲವು ರಾಜ್ಯದ ವಿಚಾರಗಳನ್ನು ಕುರಿತು ಚರ್ಚಿಸಿಕೊಂಡು ಮರುದಿನ ಸಾಯಂಕಾಲ ವಾಪಸು ದಯಮಾಡಿದರು.

* *

ಹೊಸದಾಗಿ ಪ್ರಾರಂಭವಾಗುವ ಕೋಆಪರೇಟಿವ್ ಸೊಸೈಟಿಗಳ ಮೆಂಬರುಗಳು ಸೊಸೈಟಿಯ ರೂಲ್ಸು (ನಿಬಂಧನೆ) ಗಳನ್ನು ಹೊಸ ಹೊಸದಾಗಿ ಮಾಡಿಕೊಳ್ಳುವುದು ಕಷ್ಟವಾಗೋಣವಿಂದ ರಿಜಿಸ್ಟ್ರಾರವರು ಅಂಥಾ ರೂಲ್ಸ್ ಮಸೂದೆಯನ್ನು ಅಪೇಕ್ಷಿಸಿದವರಿಗೆ ಕಳುಹಿಸುವುದಾಗಿ ತಿಳಿಸಿದಾರೆ. ಇದರಿಂದ ಸಂಘಗಳ ಏರ್ಪಾಡಿಗೆ ತುಂಬಾ ಸಹಾಯವಾಯಿತು.

ಕಳೆದ ವಾರ ಬೆಂಗಳೂರು ಸಿಟಿಯಲ್ಲಿ ಮೈಸೂರು ಗವರ್ನಮೆಂಟಿನ ಒಂದು ಮೋಟಾರ್ ಗಾಡಿಗೆ ಸಿಕ್ಕಿ ೬ ವರುಷದ ಒಬ್ಬ ಬಾಲಕನೂ, ಕಿಂಗ್ ಇಸ್ಮಾಯಿಲ್ ಸೇಟುರವರ ಮೋಟಾರ್ ಗಾಡಿಗೆ ಸಿಕ್ಕಿ ೫೦ ವರುಷದ ಒಬ್ಬ ವೃದ್ಧಳೂ ಕಾಲವಾದರು. ಅತ್ತಲಾಗಿ ತುಂಬಾ ವೇಗವಾಗಿ ಹೋಗುತ್ತಿದ್ದ ಒಬ್ಬ ಅಧಿಕಾರಿಯ ಮೋಟಾರ್ ಗಾಡಿಗೆ ೭ ವರುಷದ ಒಬ್ಬ ಹುಡುಗನು ಸಿಕ್ಕಿ ಮೃತಪಟ್ಟನು.

ನಂಜನಗೂಡಿನಲ್ಲಿ ಜಿ ಟಿ ಕೆಲಿಯೂರು ವೆಂಕಟಸುಬ್ಬಯ್ಯನವರ ಎರಡನೇ ಕುಮಾರರಾದ ಮ|| ಕೆ ಶ್ರೀನಿವಾಸಯ್ಯನವರು ನಾಲ್ಕಾರು ದಿನ ಜ್ವರಪೀಡಿತರಾಗಿ ಕಳೆದ ಶುಕ್ರವಾರ ಸಾಯಂಕಾಲ ತೀರಿಹೋದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ ಇನ್ನೂ 25 ವರುಷವಾಗಿತ್ತು ಎಂ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಿ ಎಲ್ ಪರೀಕ್ಷೆಗೆ ವ್ಯಾಸಂಗಮಾಡುತ್ತಿದ್ದರು ಸ್ವಲ್ಪ ವಯಸ್ಸಿನ ಇಂಥಾ ವಿದ್ಯಾವಂತರು ಅಕಾಲಮರಣ ಹೊಂದಿದ್ದು ಬಹು ದುಃಖಕರವಾಗುತ್ತದೆ

ಈ ಸಂಸ್ಥಾನದ ಸಂಪದಭಿವೃದ್ಧಿ ಕಾರ್ಯಗಳನ್ನು ತೋರಿಸಿಕೊಡುವುದಕ್ಕಾಗಿ ಸರ್ಕಾರದವರು ಆರು ತಿಂಗಳ ಮಟ್ಟಿಗೆ ಮೆ|| ಎ ಚಾಟರ್ಟನ್, ಸಿ ಐ ಇ ಅವರನ್ನು ಮಾಹೆಯಾನಾ 1,500 ರೂಪಾಯಿ ತಲಬಿನ ಮೇಲೆ ನೇಮಕ ಮಾಡಿದ್ದಾರಷ್ಟೆ ಇವರನ್ನು ಇನ್ನೂ ಮೂರುವರೆ ವರುಷ ಈ ಸಂಸ್ಥಾನದಲ್ಲಿ ಇರಿಸಿಕೊಂಡಿರಬೇಕೆಂದು ನಮ್ಮ ಗವರ್ನ್‌ಮೆಂಟಿನವರು ಆಲೋಚಿಸುತ್ತಿದ್ದಾರೆ ದೂ, ಇದಕ್ಕೆ ಇನ್ನೂ ಮದರಾಸ್ ಸರ್ಕಾರದವರ ಸಮ್ಮತಿ ದೊರೆತಿಲ್ಲವೆಂದು ಕೇಳುತ್ತೇವೆ

ಪ್ರಸಕ್ತ ಟರ್ಮ್‌ನಲ್ಲಿ ಜನವರಿ ತಾ 4 ಮತ್ತು 5 ರಲ್ಲಿ ಆ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಯು ನಡೆಯುತ್ತದೆ ಆ ಡಿಸ್ಟ್ರಿಕ್ಟಿನಲ್ಲಿರುವ ಪ್ರತಿ ತಾಲ್ಲೂಕ್ ಬೋರ್ಡ್ ಮೆಂಬರುಗಳು ಮೂರು ಮಂದಿ ಪ್ರತಿನಿಧಿಗಳನ್ನು ಸಭೆಗೆ ಕಳುಹಿಸಬಹುದು, ಡಿ ಕಮೀಷನರ್ ಮು ವೆಂಕಟರಾಯರವರು ಪ್ರೆಸಿಡೆಂಟರಾಗಿದ್ದು ಸಭೆಯ ಕಾರ್ಯಗಳನ್ನು ನಡೆಸಲು ಒಪ್ಪಿರುತ್ತಾರೆಂದೂ, ಆ ಕಮೀಷನರ್ ರವರ ಅಪ್ಪಣೆಯಂತೆ ಆಸಿಸ್ಟೆಂಟ್ ಕಮಿಷನರ್ ಮ|| ಎಚ್ ಬಿ ನಾರಾಯಣಪ್ಪನವರು ಸಭೆಯ ಸೆಕ್ರೆಟರಿಗಳಾಗಿರುತ್ತಾರೆಂದೂ ತಿಳಿದು ಬಂದಿದೆ

ಮೈಸೂರು ಮತ್ತು ಬೆಂಗಳೂರ ಗಳಲ್ಲಿ ಮನೆಗಳೊಳಗೆ ಇಟ್ಟುಕೊಂಡಿರುವ ದೀಪ ಬತ್ತಿಗಳಿಗೆ ಅಪಾಯ ಉಂಟಾದರೆ ನಿಂದಿಸ ಇಲಾಖೆಯವರಿಂದ ದರಸ್ತು ಮಾಡಲಾಗಿದ್ದು ಅಂಥಾ ರಿಪೇರಿ ಮಾಡಲು ಅಗತ್ಯತೆಯುಳ್ಳ ವಾಸಿಗಳು ಯಾರಾದರೂ ಇದು ಬರೆದುಕೊಂಡಲ್ಲಿ ಸರ್ಕಾರದವರು ಅವರಿಗೆ ತಿಳಿಸುತ್ತೇವೆ ಎಂದು ಪ್ರಕಟಿಸಿದ್ದಾರೆ ಇದರಿಂದ ಪ್ರತಿಯೊಬ್ಬರಿಗೂ ಉಪಕಾರವಾಗುವುದು ಕೆಲಸಗಾರರು ವಾಟರ ಸಪ್ಲೈ ಇಲಾಖೆಯವರಿಗೆ ಎರಡು ಬಗೆಯ ಕೆಲಸ ತರಬೇತಿ ಪಡೆಯಬೇಕಾಗಿದೆ

ಲಾಹೋರಿನ ಜಗನ್ಮೋಹನ ಬಂಗಲೆಯ ವಿವಾಹಮಂಟಪದಲ್ಲಿ ಸಾಯಂಕಾಲ ಮಹಾರಾಜರವರ ಕೈಸಂಪೋಷಕೆಯಿಂದ ನಡೆದ ಒಂದು ವರುಷದ ಕುಶಲ ಸಭೆಗಳು ಜಾರಿದ ಪುರುಷಾರ್ಥಕ್ಕೆ ಸಹಾಯವಾದದ್ದು ಕೆಲವು ದಿನ ಎರಡು ಉತ್ಸಾಹಕರವಾಗಿ ನಡೆದ ಕುಸ್ತಿ ಗಳಿಗೆ ವಾದ ವಿವರಗಳನ್ನು ನಡೆಸುವ ಆಟಗಳು ತೊಡಗಿ ದರು ಸಮಾರಂಭ ರಾತ್ರಿ ಮಹಾರಾಜರವರು ಮುಖ್ಯ ಅತಿಥಿ ಗಳಾಗಿ ಈ ಜನರನ್ನು ಬಹು ತೃಪ್ತಿಕರವಾಗಿಯೂ ತಾಳ್ಮೆಯಿಂದ ವಿನಯದಿಂದ ಬಹುಮಾನಗಳನ್ನು ಹಂಚಿಕೊಟ್ಟರು

ಕೀರ್ತಿಶೇಷರಾದ ಮಹಾರಾಜ ಚಾಮರಾಜ ಒಡೆಯರವರಲ್ಲೂ, ಅವರ ಬಳಿಕ ಮಹಾರಾಜ ಶ್ರೀ ಮಹಾರಾಣಿ ರೀಜೆಂಟರವರಲ್ಲೂ ಪ್ರೈವೆಟ್ ಸೆಕ್ರೆಟರಿಯವರಾಗಿದ್ದು ವಿಶ್ರಾಂತಿಯನ್ನು ಪಡೆದಿದ್ದ ಕರ್ನಲ್ ಜೆ ಎ ಗ್ರ್ಯಾಂಟ್ ರವರು ಕಳೆದ ನೊವೆಂಬರ್ ತಾ 21 ರಲ್ಲಿ ಇಂಗ್ಲಾಂಡಿಗೆ ಸೇರಿದ ಮೋನ್ ಎಂಬ ಊರಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ 80 ವರುಷ ವಯಸ್ಸಾಗಿತ್ತು ಇವರು ದಕ್ಷಿಣ ದೇಶದಲ್ಲಿ ಸಾಮಾನ್ಯವಾಗಿಯೂ, ಮೈಸೂರು ಸಂಸ್ಥಾನದಲ್ಲಿ ವಿಶೇಷವಾಗಿಯೂ ಬಹು ಅನೇಕಾನೇಕ ಜನರಲ್ಲಿ ಅತಿ ಬಗೆಯಲ್ಲೂ ಬಹು ವಿಶೇಷವಾದ ಪ್ರೀತಿಗೌರವಗಳನ್ನು ಪಡೆದುಕೊಂಡಿದ್ದರು

ಮೈಸೂರು ಗಜೆಟ್ ಸಂಗ್ರಹ

ಕ್ರಿಸ್ಮಸ್ ಹಬ್ಬದ ನಿಮಿತ್ತ ಮುಂದಿನ ವಾರದ ಸರ್ಕಾರಿ ಗೆಜೆಟ್ಟು ಪ್ರಕಟಿಸಮಾಡುವುದಿಲ್ಲ

ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾದ ರಾವ್ ಬಹದೂರ್ ಹೆಚ್ ಎನ್ ಕೃಷ್ಣರಾಯರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜೆ ಜೊತೆಗೆ ಅರ್ಧ ಸಂಬಳದ ಮೂರು ತಿಂಗಳ ರಜವನ್ನು ಸ್ಯಾಂಕ್ಷನ್ ಮಾಡಿದೆ.

ಮೈಸೂರು ಸಬ್ ಜಡ್ಜ್ ಮ|| ಡಿ ಎಂ ನರಸಿಂಗರಾಯರಿಗೆ ಡಿಸೆಂಬರ್ 19 ರಿಂದ ಪೂರಾ ತಲಬಿನ ಮೇಲೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸೀನಿಯರ್ ಸರ್ಜನ್, ಸ್ಯಾನಿಟರಿ ಕಮಿಷನರ್ ಮತ್ತು ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ ರವರಿಗೆ ಡಿಸೆಂಬರ್ ತಾ 18 ರಿಂದ ಅಥವಾ ಅವರು ಹೊಣೆ ಒಪ್ಪಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ರಜೆಯಿಂದ ವಾಪಸು ಬರುವ ತನಕ ಅಥವಾ ಇನ್ನೊಂದು ಹುಕುಂ ಆಗುವವರೆಗೂ ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಮೆ|| ಡಿ ಆರುಮುಗಂ ಮುದಲಿಯಾರ್ರವರು ಬದಲಿ ನೇಮಿಸಲ್ಪಟ್ಟಿದ್ದಾರೆ

ಎಕ್ಸಿಕ್ಯೂಟಿವ್ ಇಂಜಿನಿಯರ್ ಮೆ ಎಫ್ ಎ ಸ್ಕೈಲ್ ರವರಿಗೆ ಡಿಸೆಂಬರ್ ತಾ 1 ರಿಂದ ಎರಡು ತಿಂಗಳು ಇಪ್ಪತ್ತೇಳು ದಿನಗಳ ಪ್ರಿವಿಲೆಜ್ ರಜಾ ಅದರ ಜೊತೆಗೆ ಮೂರು ತಿಂಗಳು ಮೂರು ದಿನಗಳ ಫರ್ಲೋ ರಜಾ ಕೊಟ್ಟಿದೆ

ಮೈ ಬಿ ಸೀತಾರಾಮಾಚಾರ್ಯರು ಸಂಪದಭಿವೃದ್ಧಿ ಸಮಾಜದ ಕಾರ್ಯ ನಡೆಸುವಾಗ 200 ರೂಪಾಯಿ ತಲಬಿನ ಮೇಲೆ 1 ನೇ ಕ್ಲಾಸ್ ಅ|| ಕಮಿಷನರ್ ರಾಗಿದ್ದರು, ಮತ್ತು ಅವರು ಆ ಇಲಾಖೆಗೆ ವರ್ಗವಾದಾಗ ಅವರಿಗೆ 50 ರೂಪಾಯಿನಂತೆ ಅಲೋಯನ್ಸು ಪ್ರತಿ ತಿಂಗಳಿಗೂ ಸಾವಿರ ಕೊಡಲ್ಪಡುತ್ತದೆ

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಕೆಲಸಮಾಡುವ ಡಿ ಕಸ್ತೂರಿ ಎಂಜಿನಿಯರ್ ಮೆ|| ಕೆ ಎ ವೆಂಕಟಾಚಾರ್ಯರವರನ್ನು ಅಲ್ಲಿಂದ ಕಾವೇರಿ ಕೆಲಸದ ಕಾಮಗಾರಿ ಡಿವಿಜನ್ ಗೆ ವರ್ಗಮಾಡಿದೆ

ಕುಣಿಗಲು ತಾಲ್ಲೂಕು ಅಮಲ್ದಾರ್ ಮೈ|| ಎಂ ಎಸ್ ರಾಮಚಂದ್ರರಾಯರಿಗೆ ಡಿಸೆಂಬರ್ ತಾ 10 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಡೆಪ್ಯುಟಿ ಪ್ರೊಬೇಷನರ್ ಮೆ|| ಬಿ ನೊಸದೀನ್ ಷರೀಫ್ ರವರು ಆ ತಾಲ್ಲೂಕಿನ ಭಾರವನ್ನು ವಹಿಸಿರತಕ್ಕದ್ದು

ಸಂಸ್ಥಾನದಲ್ಲಿ ನಡೆಯುವ ಪ್ರದರ್ಶನಗಳು

ಯಡತೊರೆ ತಾಲ್ಲೂಕು ಚುಂಚನಕಟ್ಟೆ ಬಂಗಲೆ ಕಾಂಪೌಂಡಿನಲ್ಲಿ ಜನವರಿ ತಾ 14 ರಿಂದ ಮೂರು ದಿನಗಳ ವರೆಗೆ ದನಗಳ ಪ್ರದರ್ಶನ ನಡೆದು, ಉತ್ತಮ ಜಾತಿಯ ರಾಸುಗಳಿಗೆ 300 ರೂಪಾಯಿ ಬಹುಮಾನಗಳು ಕೊಡಲ್ಪಡುವವು.

ಪಾವಗಡ ತಾಲ್ಲೂಕು ನಾಗಲಮಡಿಕೆ ಗ್ರಾಮದಲ್ಲಿ ಪೆನ್ನಾರ್ ನದಿಯ ದಡದಲ್ಲಿ ಜನವರಿ ತಾ 15 ರಿಂದ ತಾ 17 ರ ವರೆಗೆ ಮೂರು ದಿನ ಗೋಕಾಯಿಗಳ ಪ್ರದರ್ಶನವು ಜರುಗುವುದು ಉತ್ತಮವಾದ ರಾಸುಗಳಿಗೆ 80 ರೂಪಾಯಿ ಬಹುಮಾನಗಳು ಕೊಡಲ್ಪಡುತ್ತವೆ

ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಬಳಿ ಜನವರಿ ತಾ 17ನೇ ಶುಕ್ರವಾರ ದನಗಳ ಪ್ರದರ್ಶನ ನಡೆಯುವುದೆಂದೂ, ಉತ್ತಮ ಜಾತಿಯ ರಾಸುಗಳಿಗೆ 385 ರೂಪಾಯಿ ಬಹುಮಾನವಾಗಿ ಕೊಡಲ್ಪಡುವುದೆಂದೂ ಬೆಂಗಳೂರು ಡೆಪ್ಯುಟಿ ಕಮೀಷನರವರು ಪ್ರಕಟಿಸಿರುತ್ತಾರೆ

ಮಧ್ಯಗಿರಿಯಲ್ಲಿ ಮುಂದಿನ ವಾರ ತಾ 18 ರಿಂದ ಹತ್ತು ದಿನಗಳ ವರೆಗೆ ಗೋಕಾಯಿಗಳ ಪ್ರದರ್ಶನವೂ, ವ್ಯವಸಾಯ ಮುಟ್ಟುಗಳ, ಧಾನ್ಯಾದಿಗಳ ಮತ್ತು ಬಟ್ಟೆ ಮೊದಲಾದ ಕೈಸಮಯದಾರಿ ಪದಾರ್ಥಗಳ ಪ್ರದರ್ಶನವೂ ನಡೆಯುವವು ಸುಮಾರು 200 ರೂಪಾಯಿ ವರಕೆ ಬಹುಮಾನಗಳಿಗೆ ವಿನಿಯೋಗವಾಗುತ್ತವೆ

ತಿರುವಾಡಿಯ ಹಿಂದೂ ಪರಿಷತ್ತು

ಈ ವಾರ ದಕ್ಷಿಣ ದೇಶಕ್ಕೆ ಸೇರಿದ ತಿರುವಾಡಿಯಲ್ಲಿ ಹಿಂದೂ ಪರಿಷತ್ತು ನಡೆಯುವುದು ದಕ್ಷಿಣ ದೇಶದ ವೇದಶಿರೋಮಣಿಗಳೂ ಶಾಸ್ತ್ರಕೋವಿದರೂ ಲೌಕಿಕ ವಿದ್ವಾಂಸರೂ ಈ ಪರಿಷತ್ತಿಗೆ ಹೋಗಿ ಹಿಂದೂ ಸಮಯಾಚಾರ ತತ್ವಗಳನ್ನು ಕುರಿತು ಪರ್ಯಾಲೋಚಿಸುವರು ಮೈಸೂರು ಗವರ್ನ್‌ಮೆಂಟಿನವರು ಈ ಪರಿಷತ್ತಿನ ಸಂಭಾವನೆಯ ಸಂಡಿಗೆ 500 ರೂಪಾಯಿ ಸ್ಯಾಂಕ್ಷನ್ ಮಾಡಿರುವುದಲ್ಲದೆ ಮೈಸೂರು ಸೀಮೆಯಲ್ಲಿರುವ ಪ್ರಸಿದ್ಧರಾದ ಇಪ್ಪತ್ತು ಮಂದಿ ಪಂಡಿತರಿಗೆ 2 ನೇ ಕ್ಲಾಸ್ ರೈಲ್ ಛಾರ್ಜನ್ನು ಕೊಟ್ಟು ಅಲ್ಲಿಗೆ ಕಳುಹಿಸುವಂತೆ ಹುಕುಂ ಕೊಟ್ಟಿದ್ದಾರೆ ಈ ಪಂಡಿತರು ಯಾರೆಂದರೆ,

ಮೈಸೂರಿನಿಂದ—ಪಂಡಿತ್ ರಾಘವೇಂದ್ರಾಚಾರ್ಯ, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ನರಹರಿ ಜೋಯಿಸರು, ಮುಂಡಿಗೆಲ್ ರಾಮಶಾಸ್ತ್ರಿಗಳು, ಕಾಶಿ ವೆಂಕಟಾಚಲಶಾಸ್ತ್ರಿಗಳು ರಾಮಚಂದ್ರಾಚಾರ್ಯ, ಗುಂಡಶಾಸ್ತ್ರಿಗಳು, ಶೇಷಗಿರ್ಯಾಚಾರ್ಯ, ಅಮ್ಮಾಶಾಸ್ತ್ರಿಗಳು, ಅರುಣಾಚಲ ಐಯಂಗಾರ್ಯ, ತಿರುಮಲೆ ರಾಮಚಂದ್ರಶಾಸ್ತ್ರಿಗಳು ಮೇಲುಕೋಟೆಯಿಂದ—ಕುಪ್ಪಸ್ವಾಮಿ ಐಯಂಗಾರ್ಯ, ಶಿವಮೊಗ್ಗೆಯಿಂದ—ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ಬೆಂಗಳೂರಿನಿಂದ—ಕಾರ್ಕಾನಹಳ್ಳಿ ನರಸಿಂಹಶಾಸ್ತ್ರಿಗಳು, ನುಗ್ಗೆಹಳ್ಳಿ ಅರುಮಲಾಚಾರ್ಯ, ಉಡುಪಿ ರಾಜಾಚಾರ್ಯ, ಕುಸ್ಸಲ್ ವೆಂಕಟಾಚಾರ್ಯ, ಗರಣಿ ಕೃಷ್ಣಾಚಾರ್ಯ, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ಹೊಳವನಹಳ್ಳಿ ಶೇಷಾಚಾರ್ಯ

ಲೇಟ್ ದಳವಾಯಿ ದೇವರಾಜ ಅರಸಿನವರು

ಕಳೆದ ಸೋಮವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ತಿಂಗಳುಕಟ್ಟಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡೆಸುವುದಕ್ಕಿಂತ ಮುಂಚೆ ಕೌನ್ಸಿಲರ್ ದಳವಾಯಿ ದೇವರಾಜ ಅರಸಿನವರ ಅಕಾಲವೂ ಅನಿರೀಕ್ಷ್ಯವೂ ಆದ ಮರಣವಾರ್ತೆಯನ್ನು ಕೇಳಿ ಬಹಳವಾಗಿ ವಿಷಾದಪಟ್ಟು, ಅವರ ಪ್ರಜಾಹಿತ ಚಿಂತನೆಯುಳ್ಳ ಅಧಿಕಾರ ಕಾರ್ಯಗಳನ್ನು ಕುರಿತು ಪ್ರಶಂಸೆ ಮಾಡಿ, ಅವರ ಕುಮಾರರಿಗೆ ಮ್ಯುನಿಸಿಪಲ್ ಕೌನ್ಸಿಲರುಗಳ ಸಂತಾಪವನ್ನು ತಿಳಿಯಪಡಿಸಬೇಕೆಂದು ತೀರ್ಮಾನ ಮಾಡಿದರು ಈ ಸಂತಾಪಸೂಚಕವಾದ ತೀರ್ಮಾನವು ಕೂಡಲೇ ತಂತಿಯ ಮೂಲಕ ಬೆಂಗಳೂರಿಗೆ ಕಳುಹಿಸಲಾಯಿತು

ಕಳೆದ ತಾ 23 ನೇ ಸೋಮವಾರ ಬೆಳಗ್ಗೆ ರಾಜಧಾನಿಯ ಪುರಜನರು ಟೌನ್ ಹಾಲ್ ಕಟ್ಟಡದಲ್ಲಿ ಒಂದು ಮಹಾಸಭೆಯನ್ನು ನಡಿಸಿ, ದಳವಾಯಿ ದೇವರಾಜ ಅರಸಿನವರ ಅಕಾಲಮರಣದಿಂದ ಉಂಟಾದ ವ್ಯಸನವನ್ನು ಅವರ ಕುಟುಂಬಕ್ಕೆ ತಿಳಿಯಪಡಿಸಿದರು ಈ ಮಹಾಸಭೆಗೆ ರಾಯಬಹದ್ದೂರ್ ಮೈ|| ಎ ನರಸಿಂಹಯ್ಯಂಗಾರ್ಯ ಪ್ರೆಸಿಡೆಂಟರಾಗಿ ಬಂತು, ಲೇಟ್ ದಳವಾಯಿಯವರ ಮತ್ತು ಅವರ ಹಿರಿಯರ ಔದಾರ್ಯ ವಿದ್ಯಾದಾನಾದಿಗಳನ್ನು ವಿವರಿಸಿದರು ಅಡ್ವೊಕೇಟ್ ಮೈ|| ಎಂ ಸಿ ರಂಗೈಯ ಗಾರ್ಯ ಗತಿಸಿದ ಮೆ|| ದೇವರಾಜ ಅರಸಿನವರ ಪ್ರಜಾಹಿತಚಿಂತನೆಯನ್ನೂ ಕಾರ್ಯದಕ್ಷತೆಯನ್ನೂ ಕುರಿತು ಮಾತನಾಡಿದರು ಪೆನ್ಷನ್ ಅ|| ಕಮೀಷನರ್ ಮೆ|| ಎಚ್ ಸೀತಾರಾಮಯ್ಯನವರೂ, ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ಪೆನ್ಷನ್ ಪೊಲೀಸ್ ಸೂಪರಿಂಟೆಂಡೆಂಟ್ ಮೈ|| ಮಹಮದ್ ಜಾಫರಾ ಯವರೂ, ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ ಮಾಸ್ಟರ್ ಮ|| ಎಂ ವೆಂಕಟಕೃಷ್ಣಯ್ಯನವರೂ ಲೇಟ್ ದಳವಾಯಿಯವರ ಶ್ರೇಷ್ಠವಾದ ಸದ್ಗುಣಗಳನ್ನೂ ಅವರ ಗೋಪ್ಯಧರ್ಮಕಾರ್ಯಗಳನ್ನೂ ವಿವರಿಸಿದರು ಮಹಾಸಭೆಯವರೆಲ್ಲಾ ಎದ್ದು ನಿಂತು ಮೌನವಾಗಿ ವಿಷಾದಪಟ್ಟು ತಮ್ಮ ಸಂತಾಪವನ್ನು ಲೇಟ್ ದೇವರಾಜ ಅರಸಿನವರ ಕುಟುಂಬಕ್ಕೆ ತಂತಿಯ ಮೂಲಕ ತಿಳಿಸಬೇಕೆಂದು ಒಪ್ಪಿಕೊಂಡರು ಅದೇ ರೀತಿ ಒಂದು ತಂತೀ ವರ್ತಮಾನವು ಆ ಕೂಡಲೇ ಬೆಂಗಳೂರಿಗೆ ಕಳುಹಿಸಲಾಯಿತು

ಶ್ರೀಮತ್ತತ್ವವಿಚಾರಸಮಯಸಂವರ್ಧಿನೀ ಸಭಾ

ನಂಜನಗೂಡಿನಲ್ಲಿ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಸ್ಥರಾದ ಶ್ರೀಮತ್ಸುಶೀಲೇಂದ್ರ ತೀರ್ಥ ಶ್ರೀಪಾದಂಗಳವರು ಇದೇ ಮಾರ್ಗಶಿರ ಶುದ್ಧ ೬ ಭಾನುವಾರದಿಂದ ನಾಲ್ಕು ದಿನ ಪ್ರಥಮ ದ್ವೈತ ಸಭೆಯನ್ನು ನಡಿಸಿದರು ಸಭಾಧ್ಯಕ್ಷರಾದ ಶ್ರೀನಿವಾಸಮೂರ್ತಾಚಾರ್ಯರು ಸಭಾ ವ್ಯವಹಾರಗಳನ್ನು ನಡೆಸುತ್ತಾರೆ ಸ್ವಾಮಿಗಳವರು ತಾ 15 ನೇ ಭಾನುವಾರ ಪ್ರಾತಃಕಾಲ ಸ್ನಾನಾಹ್ನಿಕಗಳನ್ನು ತೀರಿಕೊಂಡು ಸಮಸ್ತ ಧರ್ಮಾಧಿಕಾರಿಗಳು, ಅನೇಕ ವಿದ್ವಾಂಸರು ವೈದಿಕರುಗಳು, ಅಮಲ್ದಾರ್ರಾದಿಯಾಗಿ ಸಮಸ್ತ ಲೌಕಿಕರುಗಳ ಸಮ್ಮೇಳನದಿಂದ ಬೆಳ್ಳಿ ಪಾಲಕಿಯಲ್ಲಿ ದೇವತಾಸಮೂರ್ತಿಯನ್ನೂ, ಶ್ರೀಗುರುಪಾದರವರನ್ನೂ ಇಟ್ಟುಕೊಂಡು ಸಮಸ್ತ ಬಿರುದಾವಳಿ ಸಮೇತ ಉತ್ಸವದಲ್ಲಿ ತಾವು ಸಾವಕಾರರಿಗಳಾಗಿ ಹೊರಟು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ಬಂದು ದರ್ಶನಮಾಡಿ ೮ ಗಂಟೆಗೆ ಸಭಾಮಂದಿರದಲ್ಲಿ ಪೀಠವನ್ನಲಂಕರಿಸಿದರು ಮಠದ ಪಂಡಿತರಾದ ಹೊ ಶೇಷಾಚಾರ್ಯರು ಸ್ವಾಮಿಗಳವರ ಗುಣಕಥನವನ್ನೂ, ಸಭಾ ನಿರ್ವಿಘ್ನವಾಗಿ ನಡೆಯಬೇಕೆಂಬ ಉದ್ದೇಶವನ್ನೂ ಕುರಿತು ಒಂದು ಗಂಟೇ ಕಾಲ ಉಪನ್ಯಾಸ ಮಾಡಿದರು ತರುವಾಯ ಶ್ರೀಗಳವರು ೨೫—೨೫ ಈ ಎರಡು ತರಗತಿಗಳಿಗೆ ಪರೀಕ್ಷೆ ಪ್ರಾರಂಭ ಮಾಡಿದರು ಮಧ್ಯಾಹ್ನದ ೧ ಘಂಟೆಗೆ ಈ ಮೇಲೆ ಇರತಕ್ಕ ೨೫ ವಿಷಮ ತರಗತಿಗಳಿಗೂ ರಾತ್ರಿ ಪರೀಕ್ಷೆಯೂ, ಸಮ ತರಗತಿಗಳಿಗೆ ನಾನಾ ಪರೀಕ್ಷೆಯೂ ರಾತ್ರಿ 7 ಗಂಟೇ ತನಕ ನಡೆದವು ಈ ರೀತಿ ಮೂರು ದಿವಸವೂ ಕ್ರಮವಾಗಿ ಪರೀಕ್ಷೆಗಳು ನಡಿಸಲ್ಪಟ್ಟವು ಈ ಪರೀಕ್ಷೆಗಳನ್ನು ಕ್ರಮವಾಗಿ ನಡಿಸುವದಕ್ಕೂ ಲಿಖ್ಯಪತ್ರಗಳನ್ನು ಸರಿಯಾಗಿ ನೋಡುವದಕ್ಕೂ ಶ್ರೀನಿವಾಸಾಚಾರ್ಯರೂ, ಹೊ ಕೃಷ್ಣಾಚಾರ್ಯರೂ ನೇಮಕವಾಗಿ, ಬಹು ಶ್ರದ್ಧೆಯಿಂದ ನಿರ್ವಹಿಸಿದರು ನಾಲ್ಕು ದಿನಗಳ ಸಂತರ್ಪಣೆಯ ವಿಶಿಷ್ಟ ಖರ್ಚುಗಳನ್ನೂ ಮಠದ ಶಿಷ್ಯರಾದ ದೇಶಮುಖ ರಾಮರಾಯರೂ, ಮೊಗಲಾಯಿ ದೇಶದ ಪುರಾಣಿಕ ಕೃಷ್ಣಾಚಾರ್ಯ, ಇಲ್ಲಿನ ಶ್ರೀ ಸುಗುಣೇಂದ್ರಸ್ವಾಮಿಗಳವರ ಮಗಳಾದ ಕೃಷ್ಣಮ್ಮನವರೂ, ಬೆಂಗಳೂರು ಅಪ್ಪಾರಾಯರೂ ಇತರರೂ ಸೇರಿಯೂ ಮಹಿಸಿಕೊಂಡು ಭಕ್ತಿಯಿಂದಲೂ ವಿತರಣೆಯಾಗಿಯೂ ನಡೆಸಿದರು ಸಂತರ್ಪಣೆ ವಿಚಾರದಲ್ಲಿಯೂ ಇತರ ಕಾರ್ಯಗಳಲ್ಲಿಯೂ ಪ್ರವರ್ತಕರಾಗಿದ್ದು ಶ್ರದ್ಧಾಭಕ್ತಿಯನ್ನೂ ಸಾಹಸವನ್ನೂ ಪ್ರಕಾಶಪಡಿಸಿದವರು ವಂದನೀಯರಾಗಿದ್ದಾರೆ ಅವರಾರೆಂದರೆ—ರಿತ್ತಿಗಣೇಶಾಚಾರ್ಯ, ಹಾ ಗುರುರಾಯಾಚಾರ್ಯ, ನಾ ವೆಂಕಟಾಚಾರ್ಯ, ಪು ಶ್ರೀನಿವಾಸಾಚಾರ್ಯ, ಹರಿಯಾಚಾರ್ಯ, ತಾ ರಾಮರಾಯರು, ಭೀಮರಾಯರು, ವೆಂಕೋಬರಾಯರು, ಎಂ ಸುಬ್ಬಾರಾಯರು, ರಾಮಾಚಾರ್ಯ, ವಾಮಾಚಾರ್ಯ, ಗುರುರಾಯಾಚಾರ್ಯ, ದು ಕೃಷ್ಣಾಚಾರ್ಯ, ಭೀಮಾಚಾರ್ಯ, ಭೀಮರಾಯರು, ಸುಜ್ಞಾನೇಂದ್ರಾಚಾರ್ಯ, ಮುಂತಾದವರು ಅರಮನೆ ಕಂಟ್ರೋಲರ್ ಮೆ|| ರಾಮಕೃಷ್ಣರಾಯರು ಇಲ್ಲಿನ ಅರಮನೆ, ಬಸದಿ ಪನ್ನೈರಿ ಕಟ್ಟಡಗಳನ್ನೂ ಅಡಿಗೆ ಪಾತ್ರೆಗಳನ್ನೂ ಬಿಡಿಸಿಕೊಟ್ಟು ಸಹಾಯಮಾಡಿದರು. ಅಲ್ಲದೆ ಗಾನ ವಿಶಾರದ ಮ|| ಬಿ ಕೃಷ್ಣಪ್ಪನವರು ಶ್ರಮಪಟ್ಟು ಮೈಸೂರಿನಿಂದ ಅನೇಕ ಪದಾರ್ಥಗಳನ್ನು ಒದಗಿಸಿದರು

ಶ್ರೀಗಳವರು ತಾ 18 ನೇ ಬುಧವಾರ ಭೋಜನಾನಂತರ ಮೊದಲನೇ ದಿನ ದಂತೆ ಉತ್ಸವ ಹೊರಟು ಸಾಯಂಕಾಲ 6 ಘಂಟೆಗೆ ಅರಮನೆಗೆ ಬಂದು ಪೀಠವನ್ನಲಂಕರಿಸಿದರು ಆನೆಯ ಮೇಲೆ ಮೆರವಣಿಗೆಯಾಗಿ ಬಂದಂಥಾ ದಕ್ಷಿಣಾ ದ್ರವ್ಯದ ಕೊಪ್ಪರಿಗೆಯನ್ನು ಬೆಳ್ಳಿ ಮಂಟಪದಲ್ಲಿಟ್ಟು ಮಂಗಳಾರತಿ ಮಾಡಿದ ಮೇಲೆ ಚೀಫ್ ಇಂಜನಿಯರ್ ಆಫೀಸ್ ಶ್ರೀನಿವಾಸರಾಯರು ಸಂಸ್ಕೃತದಲ್ಲಿ ಗಂಭೀರವಾದ ಉಪನ್ಯಾಸಮಾಡಿದರು ಬಳಿಕ ಅಡ್ವೊಕೇಟ್ ಎ ರಾಮಣ್ಣನವರೂ, ಚಂದ್ರಶೇಖರಶಾಸ್ತ್ರಿಗಳೂ, ಶೇಷಾಚಾರ್ಯರೂ ಸಮಯೋಚಿತ ವಿಷಯಗಳನ್ನು ಕುರಿತು ಶ್ಲಾಘ್ಯವಾಗಿ ಉಪನ್ಯಾಸಮಾಡಿದರು ಕಡೆಯಲ್ಲಿ 63 ಜನ ಧರ್ಮಾಧಿಕಾರಿಗಳಿಗೂ, 420 ಜನ ವಿದ್ಯಾರ್ಥಿಗಳಿಗೂ ಯೋಗ್ಯವಾಗಿ ವಿತರಣೆಯಾದ ಸಂಭಾವನೆಗಳು ಕೊಡಲ್ಪಟ್ಟವು

ಮೈಸೂರು ಸಂಸ್ಥಾನದಲ್ಲಿ ಇಂಥಾ ಪರೀಕ್ಷಾ ಸಭೆಯು ಇದುವರೆಗೂ ನಡೆದಿರುವದಿಲ್ಲ ಶ್ರೀಗಳವರು ಇತೋಪ್ಯಧಿಕವಾಗಿ ಪ್ರತಿ ವರ್ಷವೂ ಈ ಸಭೆಯನ್ನು ನಡಿಸಿ ವೇದಾಂತವಿದ್ಯಾಪಾಲನಮಾಡುತ್ತಾ ಬರುವವರಾಗಲೆಂದು ಹಾರೈಸುತ್ತೇವೆ

ಮತಾಭಿಮಾನಿ.

ಇಂಡಿಯಾ ದೇಶದ ವೃತ್ತಾಂತಗಳು

ಮ್ಯಾಸಿಡೋನಿಯಾ ಎಂಬ ಹಡಗು ಕಳೆದ ವಾರ 10 ಲಕ್ಷ ರೂಪಾಯಿನ ಚಿನ್ನವನ್ನು ಬೊಂಬಾಯಿಗೆ ತಂದಿತು

ಸುಂದರದಾಸನೆಂಬವನು ಕಲ್ಕತ್ತೆಯ ಒಂದು ಬ್ಯಾಂಕಿಗೆ ಒಂದು ಫೋರ್ಜರಿ ಹುಂಡಿಯನ್ನು ಕೊಟ್ಟು, 10,000 ರೂಪಾಯಿ ತೆಗೆದುಕೊಂಡು ಪರಾರಿಯಾದನು

ಕಲ್ಕತ್ತಾ ಪಟ್ಟಣದಲ್ಲಿ ಹಡಗುಗಳ ಕಂಪನಿಯ ಕ್ಯಾಷಿಯರಾಗಿದ್ದ ಬಿಪಿನ್ ಬಿಹಾರಿ ಚಕ್ರವರ್ತಿ ಎಂಬವನು ಕಂಪನಿಯ 20,000 ರೂಪಾಯನ್ನು ತಿಂದು ಹಾಕಿ ಪರಾರಿಯಾಗಿರುತ್ತಾನೆ

ಹುಗ್ಲಿ ಪಟ್ಟಣದ ಸಮುದ್ರ ತೀರದಲ್ಲಿ ನಾರಿನ ಗಟ್ಟುಗಳು ಭರ್ತಿಯಾಗಿದ್ದ ಎರಡು ಹಡಗುಗಳಿಗೆ ಕಳೆದ ವಾರ ಬೆಂಕಿಬಿದ್ದು ಸಾಹುಕಾರರಿಗೆ ಎರಡು ಲಕ್ಷ ರೂಪಾಯಿನ ಸರಕು ನಷ್ಟವಾಗಿದೆ

ಬೊಂಬಾಯಿ ಅಧಿಪತ್ಯದ ಕೆಲವು ಭಾಗಗಳಲ್ಲಿ ಬರಗಾಲವು ಇನ್ನೂ ನಿವಾರಣೆಯಾಗಲಿಲ್ಲ ಅಹಮದ್‌ನಗರದಲ್ಲಿ 146 ಜನರೂ, ದಕ್ಷಿಣದಲ್ಲಿ 8,797 ಜನರೂ, ಜಾಟ್ ಸಂಸ್ಥಾನದಲ್ಲಿ 1,771 ಜನರೂ ಕ್ಷಾಮಪೀಡಿತರಾಗಿ ಸರ್ಕಾರದವರ ಅನ್ನಛತ್ರಗಳಲ್ಲಿದ್ದು ಹೊಟ್ಟೆ ಹೊರೆಯುತ್ತಿದ್ದಾರೆ

ಬೆಳ್ಗಾಮದಲ್ಲಿ ವಕಾಲತ್ತು ನಡಿಸುವುದರಲ್ಲಿ ಕಕ್ಷಿಗಾರರಿಗೆ ಮೋಸಕರವಾದ ಕೃತ್ಯಗಳನ್ನು ನಡಿಸಿದ್ದಕ್ಕಾಗಿ ಮ|| ಶ್ರೀಪಾದರಾಮಚಂದ್ರಮೂರ್ತಿ, ಮೆ|| ಅಣ್ಣಾಜಿ ನಾರಾಯಣದೇಶಪಾಂಡೆ ಎಂಬೀ ಇಬ್ಬರು ವಕೀಲರುಗಳನ್ನೂ ಗವರ್ನ್‌ಮೆಂಟಿನವರು 1, 2 ವರುಷಕಾಲ ವಕಾಲತ್ತು ನಡಿಸಕೂಡದೆಂದು ಆಜ್ಞೆ ಮಾಡಿದ್ದಾರೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮುರ್ಷಿದಾಬಾದ್ ಡಿಸ್ಟ್ರಿಕ್ಟ್ ಮೋರ ಗ್ರಾಮದಲ್ಲಿ ಡಕಾಯಿತ ಕಳ್ಳರು ಒಬ್ಬ ಬಂಗಾಳಿಯ ಮನೆಗೆ ನುಗ್ಗಿ ಇಬ್ಬರು ಸೇವಕರನ್ನು ಕೊಂದುಹಾಕಿ, ಮನೆ ಯಜಮಾನಿಯನ್ನು ಪ್ರಾಣಹೋಗುವಂತೆ ಹೊಡೆದು ಸುಮಾರು 5,000 ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು ಅಪರಾಧಿಯೆಂಬುವುದು ಇನ್ನೂ ಪತ್ತೆ ಆಗಿಲ್ಲ

ಕಳೆದ ವಾರ ಹಿಂದುಸ್ಥಾನದಲ್ಲಿ ಒಟ್ಟು 3,875 ಜನರಿಗೆ ಪ್ಲೇಗ್ ತಗಲಿತು 2,825 ಜನರು ಆ ಉಪದ್ರದಲ್ಲಿ ಕಾಲವಾದರು ಈ ಸಂಖ್ಯೆಯ ವಿವರಣೆ ಹ್ಯಾಗೆಂದರೆ—ಬೊಂಬಾಯಿ ಅಧಿಪತ್ಯ 500 ಮರಣಗಳು, ಮದರಾಸ್ ಅಧಿಪತ್ಯ 242, ಬಂಗಾಳಾ 8, ಬೆಹಾರ್ 181, ಸಂಯುಕ್ತ ಅಧಿಪತ್ಯಗಳು 1,049, ಪಂಜಾಬ್ 77, ಬರ್ಮಾ 17, ಮಧ್ಯಪ್ರಾಂತ್ಯಗಳು 11, ಮೈಸೂರು 100, ಹೈದರಾಬಾದ್ 419, ಮಧ್ಯ ಇಂಡಿಯಾ ಮತ್ತು ರಾಜಪುಟಾನಾ 216

ಸಂಯುಕ್ತ ಅಧಿಪತ್ಯದಲ್ಲಿ ದೆಹಲಿ ನಗರದ ಬಳಿ ಇರುವ ಯಮುನಾಪೂರ ಎಂಬ ಊರಿನಲ್ಲಿ ಕಳೆದ ಆಕ್ಟೋಬರ್ ತಾ 19 ರಲ್ಲಿ ದುರ್ಗಾಪೂಜೆಯ ದಿನ ದುಷ್ಟರ್ಯಾರೋ 6 ವರುಷದ ಹುಡುಗನನ್ನು ಬಲಿಕೊಟ್ಟು ಸೀತಾದೇವಿ ಎಂಬ ಗುಡಿಯ ಬಳಿ ಹೂಳಿದ್ದನ್ನು ಈಗ ಗೊತ್ತುಮಾಡಿದ್ದಾರೆ ಈ ಕ್ರೂರಕೃತ್ಯವನ್ನು ನಡಿಸಿದವರ್ಯಾರೋ ಇನ್ನೂ ಪತ್ತೆ ಆಗಿಲ್ಲ ಪೊಲೀಸ್ ಇಲಾಖೆಯವರು ಅಪರಾಧಿಗಳನ್ನು ಹಿಡಿದುಕೊಡುವವರಿಗೆ 1,000 ರೂಪಾಯಿ ಬಹುಮಾನಕೊಡುವುದಾಗಿ ಪ್ರಕಟಿಸಿರುತ್ತಾರೆ

ಮದರಾಸ್ ಅಧಿಪತ್ಯದಲ್ಲಿ 1912 ನೇ ಜುಲೈ ತಾ 1 ರಿಂದ ಸರ್ಕಾರದವರು ತಾಲ್ಲೂಕ್ ಆಫೀಸ್ ನೌಕರಮಾನೇರುಗಳ ಸಂಬಳಗಳನ್ನು ಬತ್ತಿಮಾಡಿಸಿರುತ್ತಾರೆ ಹೆಡ್ ಕ್ಲಾರ್ಕ್, ಹೆಡ್ ಅಕೌಂಟೆಂಟ್, ಶಿರಸ್ತೇದಾರ್, ಈ ನೌಕರರ ಸಂಬಳವನ್ನು 15, 30, 60 ರೂಪಾಯಿಯಿಂದ 45, 70, 80 ಕ್ಕೆ ಬತ್ತಿಮಾಡಿದ್ದಾರೆ ಯಾವ ಆಫೀಸಿನ ಕಡೇ ದರ್ಜೆಯ ಗುಮಾಸ್ತರಿಗೂ 20 ರೂಪಾಯಿಗಿಂತ ಕಮ್ಮಿ ಸಂಬಳ ಇರಕೂಡದೆಂದೂ, ದಫ್ತರ್ ಬಂದಿಗಳ ಸಂಬಳ 8 ರೂಪಾಯಿ ಇರಬೇಕೆಂದೂ, ಜವಾನರಿಗೆಲ್ಲಾ 7 ರೂಪಾಯಿ ಕಲಬು ಸಲ್ಲಬೇಕೆಂದೂ ವಿಧಿಸಿದ್ದಾರೆ ಹೀಗೆ ತಾಲ್ಲೂಕು ಸಿಬ್ಬಂದಿ ಸಂಬಳವನ್ನು ಜಾಸ್ತಿಮಾಡಿದ್ದರಿಂದ ಗವರ್ನ್‌ಮೆಂಟಿಗೆ ವರುಷಕ್ಕೆ 4,31,036 ರೂಪಾಯಿ ಖರ್ಚು ಜಾಸ್ತಿಯಾಗುವುದು

ಶ್ರೀರಂಗಪಟ್ಟಣದ ಕಾರೊನೇಷನ್ ಕಟ್ಟಡದ ಫಂಡು

ಎರಡನೆಯ ಚಂದಾ ಪಟ್ಟಿ.

ಹಂಗರಹಳ್ಳಿ ಪಟೇಲ್ ಚನ್ನೇಗೌಡರು	ರೂ 100-0-0
ಗಂಜಾಂ ಕಲ್ಲಯ್ಯನವರು, ಚೌಬೀಸೆ ಮರಿಯಣ್ಣನವರು, ಗಂಜಾಂ ಸೈದ್ ಅಹಮದ್ ಸಾಹೇಬರು, ಮೈಸೂರು ಕಾನೇರಿಪಟ್ಟಣದ ಸುಬ್ಬಾಯಶೆಟ್ಟರು ತಲಾ ರೂ 50	,, 200-0-0
ಚಲುವನ ಅರಸಿನ ಕೊಪ್ಪಲ್ ತಿಮ್ಮೇಗೌಡರು	,, 15-0-0
ಬಿಂಡೇಗೌಡನ ಕೊಪ್ಪಲ್ ಬ್ಯಾಟೇಗೌಡರು	,, 30-0-0
ಕಂಟ್ರಾಕ್ಟ್‌ದಾರ್ ಚಿಕ್ಕಣ್ಣನವರು, ಕಾಸಿಂಸಾಬರು, ಗಂಜಾಂ ಮುಸ್ತಫಾ ಷರೀಫ್‌ಸಾಬರು, ಪುರುಷೋತ್ತಮಾನಂದಗಿರಿ ಗೋಸಾಯಿ ಬಾವಾಜಿಯವರು, ಶ್ಯಾನುಭೋಗ್ ಶ್ರೀನಿವಾಸಯ್ಯಂಗಾರ್ರು, ತುಲಸಿ ಕೃಷ್ಣಶೆಟ್ಟರು, ಕ್ಯಾತನಹಳ್ಳಿ ಶ್ರೀಕಂಠಯ್ಯನವರು, ಸಿದ್ದಲಿಂಗಯ್ಯನವರು, ನಂಜುಂಡೇಗೌಡರು, ಶ್ಯಾನುಭೋಗ ಗುಂಡಪ್ಪನವರು, ಯಜಮಾನ್ ಮರಿಗೌಡರು, ಜಾಗನಕೆರೆ ಮುದ್ದೇಗೌಡರು, ಚಿಕ್ಕದ್ಯಾವೇಗೌಡರು, ಪಾಲಹಳ್ಳಿ ಮಾಸೇಗೌಡರು, ತಲಾ ರೂ 25	,, 350-0-0
ಶ್ಯಾನುಭೋಗ್ ತಿಮ್ಮಣ್ಣಯ್ಯನವರು, ಪಟೇಲ್ ಚಿಟ್ಟೇಗೌಡರು, ಕೆನ್ನಾಳು ರಾಜೇಗೌಡರು, ದೊಡ್ಡದ್ಯಾವೇಗೌಡರು, ಚಿಕ್ಕಪುಟ್ಟೇಗೌಡರು, ತಲಾ ರೂ 20	,, 100-0-0
ಚಲುವೇಅರಸಿನಕೊಪ್ಪಲ್ ಚಿಟ್ಟೇಗೌಡರು	,, 16-0-0
ದೊಡ್ಡಹಾರಹಳ್ಳಿ ಪಟೇಲ್ ದ್ಯಾವೇಗೌಡರು, ಬೊಮ್ಮನಹಳ್ಳಿ ಮಾದಲ ಗಿರಿಗೌಡರು, ಮಂಡಿ ಅಬ್ದುಲ್‌ಖಾದರ್ ಸಾಹೇಬರು, ಸರಾಫ್ ಗೋವಿಂದರಾಜಶೆಟ್ಟರು, ಚೌಪ್ರಿ ಅಪ್ಪಾಜಿಶೆಟ್ಟರು, ಮೊಳ್ಳೇಗೌಡನ ಚಿಕ್ಕದ್ಯಾವೇಗೌಡರು, ಚಿಕ್ಕಬೋರೇಗೌಡರು, ತಲಾ ರೂ 15	,, 105-0-0
ಚಲುವೇಅರಸಿನಕೊಪ್ಪಲ್ ಮುಳ್ಳೇಗೌಡರು	,, 12-0-0
1 ನೇ ಚಂದಾಪಟ್ಟಿಯಂತೆ	,, 1,120-2-0
ಜುಮ್ಲಾ ರೂಪಾಯಿ	2,068-2-0

ಶ್ರೀರಂಗಪಟ್ಟಣ, 18-12-1912. ಜಿ ದೇವರಾಜರಾವ್, ಆನರರಿ ಸೆಕ್ರೆಟರಿ.

ಶ್ರೀಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜ, ಮೈಸೂರು.

ಭತ್ತದ ಪೈರಿಗೆ ಬೇಕಾಗುವ ಗೊಬ್ಬರ

ಭತ್ತದ ಪೈರಿಗೆ ಅವಶ್ಯವಾಗಿ ಬೇಕಾಗುವ ಗೊಬ್ಬರಾಂಶಗಳಲ್ಲಿ ಫಾಸ್‌ಫಾರಿಕ್ ಆಸಿಡ್ ಎಂಬ ಪದಾರ್ಥವು ಒಂದಾಗಿದೆ ನಮ್ಮಲ್ಲಿ ರೂಢಿಯಾಗಿ ಉಪಯೋಗಿಸುತ್ತಿರುವ ದನಕರುಗಳ ಗೊಬ್ಬರದಲ್ಲಿ ಈ ಪದಾರ್ಥವು ಅಷ್ಟು ವಿಶೇಷ ಇರುವುದಿಲ್ಲ ಎಷ್ಟು ಮುತುವರ್ಜಿಯನ್ನು ವಹಿಸಿ ಕೂಡಿಟ್ಟಾಗ್ಯೂ ದನಕರುಗಳ ಗೊಬ್ಬರದಲ್ಲಿ ಕೊಂಚ ಸಾರಜನಕ (ನೈಟ್ರೋಜನ್) ವಾಯುವು ಹೆಚ್ಚುತ್ತದೆಯೇ ಹೊರತು ಫಾಸ್‌ಫಾರಿಕ್ ಆಸಿಡ್ ಹೆಚ್ಚುವುದಿಲ್ಲ ಆದಕಾರಣ ಈ ಉತ್ತಮವಾದ ಪದಾರ್ಥವನ್ನೊಳಗೊಂಡಿರುವ ಗೊಬ್ಬರಗಳಾವುವು ಮತ್ತು ಅವುಗಳ ಉಪಯೋಗವೇನು ? ನೋಡೋಣ

ಭತ್ತದ ಪೈರು ಇತರ ಪೈರುಗಳಂತೆಯೇ ಪ್ರಕಾಶಧಾತುವಿನ ಗೊಬ್ಬರಗಳ ಆಧಾರದಿಂದ ಸಾಧಾರಣವಾಗಿ ಅಭಿವೃದ್ಧಿ ಹೊಂದುತ್ತದೆ ವ್ಯವಸಾಯದ ಇಲಾಖೆಯವರು ಅನೇಕ ಕಡೆಗಳಲ್ಲಿ ನಡಸಿದ ಶೋಧನೆಗಳಿಂದ ಈ ಅನುಭವವು ವ್ಯಕ್ತಪಟ್ಟಿದೆ ಅವರು ಪ್ರಯತ್ನಪೂರ್ವಕವಾಗಿ ಮಾಡಿದ ಪ್ರತಿಯೊಂದು ಶೋಧನೆಯಲ್ಲೂ ಪ್ರಕಾಶಧಾತುವಿನ ಗೊಬ್ಬರದಿಂದ ಬೆಳೆದ ಭತ್ತದ ಪೈರು ಹೆಚ್ಚು ಲಾಭ ಕೊಟ್ಟಿದೆ ಪ್ರಕಾಶಧಾತುವಿನ ಗೊಬ್ಬರಗಳು ಬೇರೆ ಬೇರೆ ಆಕಾರಗಳಲ್ಲಿ ದೊರೆಯುತ್ತವೆ ಅವುಗಳ ಉಪಯೋಗವನ್ನೂ ಬಗೆ ತೆಯನ್ನೂ ಇಲ್ಲಿ ಕೊಂಚಮಟ್ಟಿಗೆ ತಿಳಿಸುವೆವು — ನಮ್ಮ ರೈತರ ಉಪಯೋಗಕ್ಕೆ ಸಾಧ್ಯವಾಗಿ ಎಲುಬುಪುಡಿ, ಮೀನುಗೊಬ್ಬರ ಮತ್ತು ಸೂಪರ್ ಫಾಸ್ಫೇಟ್ ಎಂಬ ಮೂರು ತರಹ ಗೊಬ್ಬರಗಳಿರುವವು ಎಲುಬುಪುಡಿ ಮತ್ತು ಮೀನುಗೊಬ್ಬರ ಸಾಧಾರಣವಾಗಿ ಎಲ್ಲಾ ಕಡೆಯಲ್ಲೂ ಸಿಕ್ಕಬಹುದು ಸೂಪರ್ ಫಾಸ್ಫೇಟ್ ಎಂಬುದು ಮೂಳೆಗಳಿಂದ ತಯಾರಿಸಿದ ಗೊಬ್ಬರ ಗೊಬ್ಬರಕ್ಕೆ ಅತಿ ಮುಖ್ಯವಾದ ಫಾಸ್‌ಫಾರಿಕ್ ಆಸಿಡ್ ಎಂಬ ಆಮ್ಲವು ಈ ಮೂರು ತರಹ ಗೊಬ್ಬರಗಳಲ್ಲಿಯೂ ಅಧಿಕವಾಗಿ ದೊರೆಯುತ್ತದೆ ಹೇಗೆಂದರೆ,

(1) ಮೀನುಗೊಬ್ಬರ ಇದರಲ್ಲಿ ಶೇಕಡ 6 ರಿಂದ 8 ರ ವರೆಗೆ ಸಾರಜನಕ (ನೈಟ್ರೋಜನ್) ವಾಯುವೂ, 1 ರಿಂದ 8 ರ ವರೆಗೆ ಫಾಸ್‌ಫಾರಿಕ್ ಆಸಿಡ್ ಎಂಬ ಆಮ್ಲವೂ ಇರುವವು ಈ ಗೊಬ್ಬರದ ಸ್ಥೂಲ ಪದಾರ್ಥಗಳು ನೆಲಬಿದ್ದ ಗುಣದ ಮೇಲೆಯೂ, ತಯಾರಿಸಲ್ಪಟ್ಟ ಕ್ರಮದ ಮೇಲೆಯೂ ಹೆಚ್ಚು ಕಡಮೆಯಾಗುತ್ತವೆ ಭತ್ತದ ಪೈರಿಗೆ ಇದು ದಿವ್ಯವಾದ ಗೊಬ್ಬರವೆಂದು ಕ್ಯಾಪ್ಟನ್ ಸ್ಮಿತ್‌ರ ಅಭಿಪ್ರಾಯ ಪಟ್ಟಿದ್ದಾರೆ ಕೊಯಮುತ್ತೂರು ವ್ಯವಸಾಯದ ಫಾರಂನಲ್ಲಿ ಮಾಡಿದ ಶೋಧನೆಗಳಲ್ಲಿ 500 ರಾತಲು ಮೀನುಗೊಬ್ಬರವನ್ನು ಉಪಯೋಗಿಸಿದ್ದರಿಂದ ಎಕರೆಗೆ 11 ರೂಪಾಯಿ ನಫೆ ದೊರೆತಿರುವುದಾಗಿ ತಿಳಿಯಬರುತ್ತದೆ

(2) ಎಲುಬುಪುಡಿಯಲ್ಲಿ ಶೇಕಡ 3 ರಿಂದ 5 ರ ವರೆಗೆ ಸಾರಜನಕ (ನೈಟ್ರೋಜನ್) ವಾಯುವೂ, 20 ರಿಂದ 30 ರ ವರೆಗೆ ಪ್ರಕಾಶಧಾತುವಿನ ದ್ರವ್ಯವೂ ಇರುತ್ತವೆ 500 ರಾತಲು ತೂಕದ ಈ ಗೊಬ್ಬರವನ್ನು ಉಪಯೋಗಿಸುವುದರಿಂದ ಎಕರೆಗೆ 13 ರೂಪಾಯಿ ನಫೆ ದೊರೆತಂತೆ ತಿಳಿಯಬಂದಿದೆ

ಮೇಲೆ ಹೇಳಿದ ಎರಡು ಗೊಬ್ಬರಗಳೂ ಸ್ವಭಾವದಲ್ಲಿ ಬಹುತರ ಒಂದೇ ಆಗಿ ತೋರುತ್ತಿರುವುದರಿಂದ ಇವೆರಡನ್ನೂ ಒಂದೇ ತರಗತಿಗೆ ಸೇರಿಸಬಹುದು ಈ ಎರಡು ಗೊಬ್ಬರಗಳಲ್ಲಿರುವ ಫಾಸ್‌ಫಾರಿಕ್ ಆಸಿಡ್ ಎಂಬ ಆಮ್ಲವು ನೀರಿನಲ್ಲಿ ಕರಗುವ ಸ್ವರೂಪದಲ್ಲಿಲ್ಲವಾದಕಾರಣ, ಗಿಡಗಳ ಉಪಯೋಗಕ್ಕೆ ಅನುಕೂಲಿಸುವಂತೆ ಅದನ್ನು ನೀರಿನಲ್ಲಿ ಕರಗುವ ರೀತಿಗೆ ತರಬೇಕು ಅವುಗಳನ್ನು ಕೆಲವು ಕಾಲ ತೊಳೆಯಿಸಬೇಕು. ಈ ಗೊಬ್ಬರಗಳು ನಿಧಾನ ಗೊಬ್ಬರಗಳೆಂದು ಕರೆಯಲು ಯುಕ್ತವಿದೆ ಇವುಗಳ ಪುಷ್ಟಿ ಪದಾರ್ಥಗಳು ಮೊದಲನೇ ಪೈರಿಗೆ ಮಾತ್ರವಲ್ಲದೆ ಮುಂದೆ ಹಾಕುವ ಅನೇಕ ಪೈರುಗಳಿಗೂ ಒದಗುವವು ತರಿ ಜಮೀನುಗಳಲ್ಲಿ ಈ ಗೊಬ್ಬರ ಕೊಳೆಯುವುದಕ್ಕೆ ಅವಕಾಶವು ಹೆಚ್ಚಾಗಿದ್ದಾಗ್ಯೂ ಖುಷ್ಕಿ ಜಮೀನುಗಳಲ್ಲಿ ಇವುಗಳ ಫಲವು ಬಹು ದಿನಗಳ ವರೆಗೆ ಒದಗುತ್ತದೆ ಗದ್ದೆಗಳಲ್ಲಿ ಇವು ಮೂರು ವರುಷಗಳ ಫಲ ಕೊಟ್ಟವೆಂದು ತಿಳಿಯ ಬಂದಿದೆ — ಈ ಗೊಬ್ಬರಗಳನ್ನು ಒಂದು ವರ್ಷಕ್ಕೆ ಬೇಕಾಗುವುದಕ್ಕಿಂತಲೂ ಅಧಿಕವಾಗಿ ಉಪಯೋಗಿಸುವುದರಿಂದ ಭೂಮಿಯು ಸಾರಹೊಂದಿ ಮುಟ್ಟುವಳಿಯಲ್ಲಿ ಕ್ರಮೇಣ ಹುಲುಸು ತೋರಿಸುವುದು ಕೊಯಮುತ್ತೂರಿನಲ್ಲಿ ವರುಷಂ ಪ್ರತಿಯೂ 500 ರಾತಲು ತೂಕ ಎಲುಬುಪುಡಿ ಹಾಕಿದ ಭೂಮಿಯಲ್ಲಿ 1909ರಲ್ಲಿ 2,561 ರಾತಲು ತೂಕ ಭತ್ತ ಬೆಳೆದು, 1910ರಲ್ಲಿ 1,100 ರಾತಲು ತನಕ ಜಾಸ್ತಿಯಾಯಿತು ಮೀನುಗೊಬ್ಬರವೂ ಇದೇ ರೀತಿ ಫಲಕೊಟ್ಟಿರುತ್ತದೆ

(3) ಸೂಪರ್ ಫಾಸ್ಫೇಟ್ ಎಂಬ ಎಲುಬಿನಿಂದ ತಯಾರಿಸಲ್ಪಟ್ಟ ಗೊಬ್ಬರದಲ್ಲಿ ಶೇಕಡ 15 ಅಂಶ ಫಾಸ್‌ಫಾರಿಕ್ ಆಸಿಡ್ ಎಂಬ ಆಮ್ಲವೂ, ಸ್ವಲ್ಪ ನೈಟ್ರೋಜನ್ ವಾಯುವೂ ಇರುತ್ತೆ. ಆದರೆ ಇದರಲ್ಲಿರುವ ಪ್ರಕಾಶಧಾತುವಿನ ಆಮ್ಲವು ಜಾಗ್ರತೆಯಾಗಿ ನೀರಿನಲ್ಲಿ ಕರಗುವುದರಿಂದ ಕಾರಣ ಈ ಗೊಬ್ಬರದ ಫಲವು ಮೊದಲನೇ ಪೈರಿಗೆ ಮಾತ್ರ ಜಾಸ್ತಿಯಾಗಿರುವುದು ಇದನ್ನು ಬೇಗನೆ ಫಲಿಸುವ ಗೊಬ್ಬರವೆನ್ನುವರಲ್ಲದೆ ಒಂದು ವರುಷಕ್ಕಿಂತ ಜಾಸ್ತಿ ಗೊಬ್ಬರವನ್ನು ಒಂದೇ ಸಾರಿ ಹಾಕುವುದಿಲ್ಲ, ಒಂದು ಎಕರೆಗೆ 112 ರಾತಲು ಅಂದರೆ ಮೂರು ರೂಪಾಯಿಗೆ ಕೊಳ್ಳಬಹುದಾದಷ್ಟು, ಈ ಗೊಬ್ಬರವನ್ನು ಹಾಕಿದ್ದರಿಂದ 1,419 ರಾತಲು ಭತ್ತ ಹೆಚ್ಚಾಗಿ ದೊರೆತಿದೆ ಈ ಗೊಬ್ಬರವು ಸುಣ್ಣವಿಲ್ಲದ ಭೂಮಿಯಲ್ಲಿ ಉಪಯೋಗಕ್ಕೆ ಯೋಗ್ಯವಲ್ಲ ನಮ್ಮ ರೈತರು ಈ ತರಹ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಹೆಚ್ಚು ಲಾಭ ಪಡೆಯಬಹುದು

ಸಾತನೂರು, ಮಂಡ್ಯ ಎಸ್ ವಿ ನಾರಾಯಣರಾವ್

ಶ್ರೀಮನ್ಮಹಾರಾಜರವರ ಸರ್ಕೀಟು

ಸಕಲೇಶಪುರ.

ಕಳೆದ ತಾ 10ನೇ ಮಂಗಳವಾರ ಶ್ರೀಮನ್ಮಹಾರಾಜರವರೂ, ಯುವರಾಜರವರೂ, ರೆಸಿಡೆಂಟ್ ಸಾಹೇಬರವರೂ ಮತ್ತು ಅವರ ಮಿತ್ರವರ್ಗದವರೂ ಇಲ್ಲಿಗೆ ದಯಮಾಡಿದರು ಸಬ್ ಡಿವಿಷನ್ ಆಫೀಸರವರೂ, ಅಮಲ್ದಾರರವರೂ, ಡಾಕ್ಟರವರೂ ಇಲ್ಲಿನ ಮುಖ್ಯ ಪ್ರಜೆಗಳ ಕೂಡ ಯೋಚಿಸಿ ಗೊತ್ತಾದ ಕ್ರಮದಲ್ಲಿ ಪುರಾಲಂಕಾರಗಳು ನಡಿಸಲ್ಪಟ್ಟು ಪಟ್ಟಣವು ಬಹಳ ರಮ್ಯವಾಗಿ ಮಾಡಲ್ಪಟ್ಟಿತ್ತು ಇಲ್ಲಿನ ತಾಲ್ಲೂಕ್ ಕಚೇರಿಯ ಮುಂದೆ ಅನೇಕ ವಿಧ ಪತ್ರ ಪುಷ್ಪ ಫಲಾದಿಗಳಿಂದ ರಚಿಸಲ್ಪಟ್ಟಿದ್ದ ಮ್ಯುನಿಸಿಪಲ್ ಚಪ್ಪರವು ನೇತ್ರಾನಂದಕರವಾಗಿತ್ತು ರಾಜಬೀದಿಯ ಎರಡು ಕಡೆಗಳಲ್ಲೂ ಇದ್ದ ಮನೆಗಳೆಲ್ಲಾ ಅಲಂಕರಿಸಲ್ಪಟ್ಟದ್ದು, ಬೀದಿಯ ಎರಡು ಕಡೆಗಳಲ್ಲೂ ಹಸುರಾದ ಮರದ ಕೊಂಬೆಗಳು ನೆಡಲ್ಪಟ್ಟದ್ದರಿಂದಲೂ, ಗೊತ್ತಾದ ಸ್ಥಳಗಳಲ್ಲಿ ಚಪ್ಪರ, ತೋರಣಗಳು ಹಾಕಲ್ಪಟ್ಟದ್ದರಿಂದಲೂ ನಗರದ ಅಲಂಕಾರ ಕ್ರಮವು ಅತಿ ಶ್ರೇಯವಾಗಿತ್ತೆಂದು ಹೇಳಬಹುದು ಇದಲ್ಲದೆ ರಾಜಸಂದರ್ಶನೋತ್ಸಾಹಿಗಳಾದ ಸಾವಿರಾರು ಪ್ರಜೆಗಳು ಬೀದಿಯ ಎರಡು ಕಡೆಗಳಲ್ಲೂ ಕಿಕ್ಕಿರಿಯುವ ಹಾಗೆ ನಿಂತಿದ್ದರು ಸ್ಕೂಲ್ ಮುಂಭಾಗದಲ್ಲಿ ಹಾಕಿಸಲ್ಪಟ್ಟಿದ್ದ ಚಪ್ಪರದಲ್ಲಿ ಇಲ್ಲಿನ ಎ ವಿ ಸ್ಕೂಲ್ ಹೆಡ್ ಮಾಸ್ಟರವರು ತಮ್ಮ ವಿದ್ಯಾರ್ಥಿಗಳೊಡನೆಯೂ ಸಹಾಯೋಪಾಧ್ಯಾಯರುಗಳೊಡನೆಯೂ ಕಾದಿದ್ದರು ಮಧ್ಯಾಹ್ನ 1-15 ಗಂಟೆಗೆ ಮಹಾರಾಜರವರ ಸವಾರಿಯು ದಯಮಾಡಿತೆಂದು ಊರ ಹೊರಗೆ ನಿಯಮಿಸಲ್ಪಟ್ಟಿದ್ದ ಕೊಂಬಿನ ದನಿಯಿಂದ ತಿಳಿದ ಕೂಡಲೆ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು ವಾದ್ಯಗಳು ಮೊಳಗಿದವು ಪ್ರಜೆಗಳೆಲ್ಲರೂ ಅತಾತುರದಿಂದಿದ್ದರು ಈ ತರಹ ಸಮಯದಲ್ಲಿ ಸ್ಥಳ ಹಾದರೂ ಗಲಾಟೆಯಾಗದಂತೆ ನೋಡಿಕೊಳ್ಳುತ್ತಿದ್ದ ಪೋಲೀಸಿನವರ ಉಸ್ತುವಾರಿಯು ತುಂಬ ಸಮರ್ಪಕವಾಗಿತ್ತು ಆ ಸಂದರ್ಭ ಕಾಲದಲ್ಲಿ ಮಹಾರಾಜ ಸಾಹೇಬರವರು ತಮ್ಮ ಮಿತ್ರವರ್ಗದವರೊಡನೆ ಊರ ಹೊರಭಾಗದಲ್ಲಿ ಮಳಲಿಗ್ರಾಮದವರಿಂದ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ಬಂದು ನಿಂತು, ಅಲ್ಲಿ ಕಾದು ಇದ್ದ ಆ ಗ್ರಾಮಸ್ಥರಿಂದ ಒಪ್ಪಿಸಲ್ಪಟ್ಟ ಮರ್ಯಾದೆಗಳನ್ನು ಸ್ವೀಕರಿಸಿ, ಅತ್ಯಾದರದಿಂದ ಅವರನ್ನೆಲ್ಲಾ ವಿಚಾರಿಸಿ, ಅಲ್ಲಿಂದ ಪುರಪ್ರವೇಶವನ್ನು ಮಾಡಿ, ಪಟ್ಟಣದೊಳಗೆ ರಾಜಭಕ್ತಿಯನ್ನು ಪ್ರದರ್ಶಿಸಲು ಉದ್ದಕ್ಕೂ ಕಾದು ಇದ್ದ ಸರ್ವರಿಂದಲೂ ಮರ್ಯಾದೆಗಳನ್ನು ಸ್ವೀಕರಿಸಿ, ಅವರ ಕೂಡ ಕುಶಲಪ್ರಶ್ನೆಗಳನ್ನು ಬೆಳೆಸುತ್ತಾ ಸ್ಕೂಲ್ ಚಪ್ಪರಕ್ಕೆ ದಯಮಾಡಿಸುವ ಕಾಲದಲ್ಲಿ ಸ್ಕೂಲ್ ಬಾಲಕರಿಂದ ಹೇಳಲ್ಪಡುತ್ತಿದ್ದ ಶ್ರೇಯಸ್ಪ್ರಾರ್ಥನೆಯನ್ನು ಆಲಿಸಿ ಚಪ್ಪರಕ್ಕೆ ದಯಮಾಡಿಸಿದರು ಕೂಡಲೆ ಹೆಡ್ ಮಾಸ್ಟರೇ ಮೊದಲಾದವರಿಂದಲೂ ಇಬ್ಬರು ಸ್ಕೂಲ್ ಬಾಲಕರಿಂದಲೂ ಒಪ್ಪಿಸಲ್ಪಟ್ಟ ಹಾರ ತುರಾಯಿಗಳನ್ನು ಪ್ರಭುಗಳು ಸ್ವೀಕರಿಸಿ ಹೆಡ್ ಮಾಸ್ಟರವರಿಂದ ಸ್ಕೂಲಿನ ಬಾಲಕರ ಸಂಖ್ಯೆಯನ್ನು ಕೇಳಿ ತಿಳಿದುಕೊಳ್ಳುವ ವೇಳೆಗೆ ಶ್ರೀಮದ್ಯುವರಾಜರವರೂ ರೆಸಿಡೆಂಟ್ ಸಾಹೇಬರೇ ಮೊದಲಾದವರುಗಳೂ ಪುರಸಿವಾಸಿಗಳಿಂದ ಮರ್ಯಾದೆ ಹೊಂದಿ ಸಾಲಾಗಿ ಮೋಟಾರು ಗಾಡಿಗಳಲ್ಲಿ ಸ್ಕೂಲ್ ಚಪ್ಪರಕ್ಕೆ ಬಂದು ಸೇರಿದರು ಆಗ ಸ್ಕೂಲ್ ಬಾಲಕರೆಲ್ಲರೂ ಯುವರಾಜರವರಿಗೂ, ರೆಸಿಡೆಂಟ್ ಸಾಹೇಬರೇ ಆದಿಯಾಗಿ ಗಾಡಿಗಳಲ್ಲಿದ್ದ ಸರ್ವರಿಗೂ ಹಾರ ತುರಾಯಿಗಳನ್ನು ಒಪ್ಪಿಸಿದರು ಇಂತಹ ಗಲಾಟೆಯ ಸಮಯದಲ್ಲೂ ಎಲ್ಲರಿಂದಲೂ ಕೊಡಲ್ಪಟ್ಟ ಹಾರ ತುರಾಯಿಗಳನ್ನು ತೆಗೆದುಕೊಂಡು ಸಂತೋಷದಿಂದ ಎಲ್ಲರನ್ನೂ ವಿಚಾರಿಸುತ್ತಿದ್ದ ನಮ್ಮ ಮಹಾರಾಜರವರ, ಯುವರಾಜರವರ ಮತ್ತು ರೆಸಿಡೆಂಟ್ ಸಾಹೇಬರೇ ಮೊದಲಾದವರ ಆದರಾತಿಶಯವನ್ನು ನೋಡಿ ಬಾಲಕರಿಗೂ ಅಲ್ಲಿ ನೆರೆದಿದ್ದ ಸರ್ವರಿಗೂ ಸಂತೋಷವೂ, ರಾಜಭಕ್ತಿಯೂ ಇಮ್ಮಡಿಸಿತು ಕೂಡಲೆ ಬಾಲಕರೆಲ್ಲರೂ ಏಕಕಾಲದಲ್ಲಿ ಜಯಘೋಷವಮಾಡುತ್ತಿದ್ದ ಅತಿ ಪ್ರೀತರಾಗಿ ಅಲ್ಲಿಂದ ಮುಂದೆ ಇದ್ದ ಮುನಿಸಿಪಲ್ ಚಪ್ಪರಕ್ಕೆ ದಯಮಾಡಿದರು ಅಲ್ಲಿ ಸಬ್ ಡಿವಿಷನ್ ಆಫೀಸರವರೂ, ಡಾಕ್ಟರವರೂ, ಅಮಲ್ದಾರರೂ, ಮತ್ತು ತಾಲ್ಲೂಕಿನ ದೊಡ್ಡ ದೊಡ್ಡ ಗ್ರಾಮಸ್ಥರೂ ಸೇರಿ ಬಹಳವಾಗಿ ಬಂದು ಜಮಾವಣೆಯಾಗಿದ್ದರು ಮಹಾರಾಜರವರೂ, ಯುವರಾಜರವರೂ ರೆಸಿಡೆಂಟರವರೂ, ಅವರ ಮಿತ್ರವರ್ಗದವರೂ ಅಲ್ಲಿನ ಸರ್ವರಿಂದ ಒಪ್ಪಿಸಲ್ಪಟ್ಟ ಮರ್ಯಾದೆಗಳನ್ನು ಸ್ವೀಕರಿಸಿ ಇಲ್ಲಿನ ಯೂರೋಪಿಯನ್ ಕ್ಲಬಿನಲ್ಲಿ ಪ್ರಭುಗಳವರ ದರ್ಶನಾರ್ಥವಾಗಿ ಕಾದುಕೊಂಡಿದ್ದ ಯೂರೋಪಿಯನ್ ಪ್ಲಾಂಟರುಗಳಿಗೆ ದರ್ಶನವನ್ನೀಯಲು ಅಲ್ಲಿಗೆ ತೆರಳಿದರು ಮಹಾವೈಭವಯುಕ್ತವಾಗಿ ಅಲಂಕರಿಸಲ್ಪಟ್ಟಿದ್ದ ಆ ಬಂಗಲೆಯು ಸರ್ವರಿಂದಲೂ ಸನ್ಮಾನಿತರಾಗಿ ಅವರೊಡನೆ ಕೊಂಚಕಾಲ ಸಂಭಾಷಿಸುತ್ತಿದ್ದರು ಅಲ್ಲಿ ಮಾಡಲ್ಪಟ್ಟಿದ್ದ ಅಲಂಕಾರಾದಿಗಳನ್ನು ಪರಾಂಬರಿಸಿ ಸಂತೋಷಚಿತ್ತರಾಗಿ, ಫಲಾಹಾರಾದಿಗಳಿಗೆ ಏರ್ಪಾಡು ಮಾಡಿದ್ದ ಟ್ರಾವಲರ್ಸ್ ಬಂಗ್ಲೆಗೆ ಶ್ರೀಮನ್ಮಹಾರಾಜರವರೂ, ಯುವರಾಜರವರೂ ದಯಮಾಡಿ ಫಲಾಹಾರಾದಿಗಳನ್ನು ಸ್ವೀಕರಿಸಿದರು ರೆಸಿಡೆಂಟ್ ಸಾಹೇಬರವರೂ ಇತರ ಯೂರೋಪಿಯನ್ ದೊಡ್ಡ ಮನುಷ್ಯರೂ ಕ್ಲಬಿನಲ್ಲಿ ಫಲಾಹಾರಾದಿಗಳನ್ನು ಸ್ವೀಕರಿಸಿ ಸಲ್ಪ ಹೊತ್ತು ವಿಶ್ರಮಿಸಿಕೊಂಡರು ಅನಂತರ 3-15 ಗಂಟೆಗೆ ಅವರೆಲ್ಲಾ ವಾಪಸು ಹಾಸನಕ್ಕೆ ದಯಮಾಡುತ್ತಾ ದಾರಿಯಲ್ಲಿ ಸರ್ವರಿಂದಲೂ ಮರ್ಯಾದಿತರಾಗಿ ಸ್ಕೂಲ್ ಬಾಲಕರಿಂದ ಹೇಳಲ್ಪಡುತ್ತಿದ್ದ ಶ್ರೇಯಸ್ಪ್ರಾರ್ಥನೆಯನ್ನೂ, ಜಯಘೋಷವನ್ನೂ ಆಲಿಸುತ್ತಾ ಮುಂದುಗಡೆ ಮಹಾರಾಜರವರ ಗಾಡಿಯೂ, ಹಿಂದಾಗಿ ಮಿಕ್ಕ ಗಾಡಿಗಳೂ ಹೊರಟವು ಗಾಡಿಗಳಲ್ಲಿದ್ದ ಯೂರೋಪಿಯನ್ ದೊಡ್ಡ ಮನುಷ್ಯರೂ, ಮಹಾಸ್ವಾಮಿಯವರೂ, ಡೆಪ್ಯುಟಿ ಕಮಿಷನರ್ ಸಾಹೇಬರೂ ಸ್ಕೂಲ್ ಬಾಲಕರಿಗೆ ತಮ್ಮ ಸಂತೋಷವನ್ನು ಪ್ರಕಾಶಪಡಿಸಿದರು ಮಹಾರಾಜರವರು ಹಾಸನದಿಂದ ದಯಮಾಡಿಸುವ ದಾರಿಯಲ್ಲಿ ಕಾದುಕೊಂಡಿದ್ದ ಸರ್ವ ಗ್ರಾಮಸ್ಥರುಗಳಿಂದಲೂ ಮರ್ಯಾದೆಗಳನ್ನು ಸ್ವೀಕರಿಸಿ ಅವರಿಗೆ ತಮ್ಮ ಸಂತೋಷಸೂಚಕಾರ್ಥವಾದ ಅಭಿಪ್ರಾಯವನ್ನು ಅಪ್ಪಣೆಕೊಡಿಸಿದರೆಂದು ತಿಳಿಯಬರುತ್ತದೆ ಇದೇ ರೀತಿ ಮರ್ಯಾದೆ ಯಸಳೂರು ಕಾಫಿ ಪ್ಲಾಂಟರ್ ಮಿ॥ ಬಸವೇಗೌಡರು ದಾರಿಯಲ್ಲಿ ಕಾದು ಇದ್ದ ಸ್ಥಳಕ್ಕೆ ಪ್ರಭುಗಳು ದಯಮಾಡಿ, ಅವರಿಂದ ಸನ್ಮಾನಿತರಾಗಿ ಅವರ ಯೋಗಕ್ಷೇಮವನ್ನೂ ಮಳೆಬೆಳೆಗಳ ವಿಚಾರವನ್ನೂ ತನಿಖೆಮಾಡಿ ತಿಳಿದುಕೊಂಡು ಬಹು ಸಂತೋಷಪಟ್ಟರು

ಬೇಲೂರು.

ನಮ್ಮ ಶ್ರೀಮನ್ಮಹಾರಾಜರವರ ಸವಾರಿ ದಯಮಾಡುವ ನಿಮಿತ್ತ ಇಲ್ಲಿ ಮುಖ್ಯವಾದ ವಿಧಿವಿಲಾಸ ಆಂದನಾಗಿ ಶೃಂಗರಿಸಲ್ಪಟ್ಟಿತ್ತು ಅಲ್ಲಲ್ಲಿ ಬಾವುಟಗಳು ನಡಿಸಲ್ಪಟ್ಟು, ಮಹಾಸ್ವಾಮಿಯವರಿಗೆ ಶ್ರೇಯಸ್ಸನ್ನು ಬಯಸುವ ವಾಕ್ಯಗಳು ಅಲ್ಲಲ್ಲಿ ಅಲಂಕೃತವಾಗಿದ್ದವು ಆಯಾ ಕಟ್ಟಡಗಳನ್ನು ಸೂಚಿಸುವಂತೆ ಅವುಗಳ ಹೆಸರುಗಳು ಅಲಂಕೃತವಾಗಿ ಚಿತ್ರಿಸಲ್ಪಟ್ಟಿದ್ದವು ಊರಿನ ಮುಂಭಾಗದಲ್ಲಿ ಅಂದವಾದ ಚಪ್ಪರವನ್ನು ಹಾಕಿಸಿ ಅದನ್ನು ವಿವಿಧವಾಗಿ ಅಲಂಕರಿಸಿದ್ದರು ಬೆಂಗಳೂರಿನಿಂದ ಹಾರ, ತುರಾಯಿ ಹಣ್ಣು ಹಂಪಲುಗಳನ್ನು ತರಿಸಿ ರಾಜಭಕ್ತಿಯನ್ನು ಪ್ರದರ್ಶಿಸುತ್ತಿರುವಲ್ಲಿ ತಾ. 11ನೇ ಬುಧವಾರ ಸಾಯಂಕಾಲ 6 ಘಂಟೆಗೆ ಸವಾರಿಯು ಚಿತ್ತೈಸಿ, ಇಲ್ಲಿನ ಅಮೃತಮಹಲ್ ಕಾವಲು ಬಳಿ ಹಾಕಿದ್ದ ಚಪ್ಪರದ ಬಳಿ ನಿಂತು, ಅಲ್ಲಿ ನಮ್ಮ ಪ್ರಭುಗಳವರೂ ಯುವರಾಜರೂ ಅಲ್ಲಿಯ ವಿಚಾರವನ್ನು ವಿಚಾರಿಸಿ, ಅಲ್ಲಿ ನಿಲ್ಲಿಸಿದ್ದ ದನಕರುಗಳನ್ನು ಪರಾಂಬರಿಸಿ, ಊರಬಳಿ ಹಾಕಿಸಿದ್ದ ಚಪ್ಪರದ ಬಳಿಗೆ ದಯಮಾಡಿಸಿದರು. ಮೊದಲು ಶ್ರೀಮನ್ಮಹಾರಾಜರವರ ಮೋಟಾರ್ ಬಂಡಿಯೂ, ಅವರ ಹಿಂದೆ ಯುವರಾಜರವರೂ, ಬ್ರಿಟಿಷ್ ರೆಸಿಡೆಂಟವರೂ ಕುಳಿತಿದ್ದ ಗಾಡಿಯೂ, ನಂತರ ಪ್ರೈವೇಟ್ ಸೆಕ್ರೆಟರಿ ಮೊದಲಾದವರಿದ್ದ ಮೋಟಾರ್ ಬಂಡಿಗಳೂ ಬಂದವು. ಮಹಾಸ್ವಾಮಿಗಳವರ ಗಾಡಿಯು ಎ ವಿ ಸ್ಕೂಲ್ ಹತ್ತಿರ ಬರುತ್ತಲೇ ಸಾಲಾಗಿ ನಿಂತಿದ್ದ ಬಾಲಕರೂ, ಬಾಲಕಿಯರೂ ಪ್ರಭುಗಳಿಗೆ ಸುಸ್ವಾಗತವನ್ನು ಬಯಸಿದರು ಪ್ರಭುಗಳು ಚಪ್ಪರದಲ್ಲಿ ಸುಮಾರು 5 ನಿಮಿಷ ನಿಂತಿದ್ದು ಮುಜರಾಯಿ ದೇವಸ್ಥಾನದ ಕೂಡಿದ ಪುರಪ್ರಮುಖರೊಪ್ಪಿಸಿದ ಹಾರ ತುರಾಯಿಗಳನ್ನು ಅಂಗೀಕರಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಿ, ತಮ್ಮ ಆಗಮನ ವಿಷಯದಲ್ಲಿ ಪ್ರಜೆಗಳಿಗಿರುವ ಸಂತೋಷವನ್ನೂ ರಾಜಭಕ್ತಿಯನ್ನೂ ಅರಿದು ಹರುಷಿತರಾಗಿ ಶಿಬಿರಕ್ಕೆ ತೆರಳಿದರು ಅನಂತರ ಯುವರಾಜರವರ ಸವಾರಿ ಚಿತ್ತೈಸಿತು ಅವರಿಗೂ ಹಾರ ತುರಾಯಿಗಳು ಅರ್ಪಿಸಲ್ಪಟ್ಟವು ಆ ಪ್ರಭುಗಳೂ ಅಲ್ಲಿಯವರ ಯೋಗಕ್ಷೇಮವನ್ನು ವಿಚಾರಿಸಿ, ಬಹಳ ಸಂತೋಷಪಟ್ಟು ತೆರಳಿದರು ಮಿಕ್ಕವರಿಗೂ ಮರ್ಯಾದೆ ನಡೆಯಿಸಲ್ಪಟ್ಟಿತು ಪ್ರಭುಗಳು ಹಸನ್ಮುಖಿಗಳಾಗಿ ಪ್ರಜೆಗಳ ವಂದನೆಗಳನ್ನು ಅಂಗೀಕರಿಸಿ ಸಂತೋಷದಿಂದ ತೆರಳಿದರು ಈ ಸಮಾರಂಭದಲ್ಲಿ ನಮ್ಮ ಮುನಿಸಿಪಾಲಿಟಿಯವರ ಮತ್ತು ಸಾರ್ವಜನರ ಶ್ರದ್ಧೆಯು ಶ್ಲಾಘ್ಯವಾಗಿ ಪ್ರಕಾಶವಾಯಿತು

ಸೋಂಪುರ

ಶ್ರೀಮನ್ಮಹಾರಾಜರು, ಯುವರಾಜರು ಮತ್ತು ಬ್ರಿಟಿಷ್ ರೆಸಿಡೆಂಟರೇ ಮೊದಲಾಗಿ ನಾಲಕಣಿವೆಯ ಮಾರ್ಗವಾಗಿ ಇಲ್ಲಿಗೆ 20 ನೇ ತಾ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೋಟಾರಿನಲ್ಲಿ ದಯಮಾಡಿದರು ಅಸಿಸ್ಟೆಂಟ್ ಮ್ಯಾನೇಜರ್ ಮುಂತಾದವರುಗಳು, ವರ್ತಕರು ಸಹ ಮುಸಾಫರಖಾನೆ ಬಳಿ ಹಾಕಿದ್ದ ಚಪ್ಪರದಲ್ಲಿ ಕಾದಿದ್ದು ಅವರಿಗೆ ಹಾರ ತುರಾಯಿ ಹಣ್ಣು ಹಂಪಲುಗಳನ್ನು ಒಪ್ಪಿಸಿದರು 5 ನಿಮಿಷ ಮಾತ್ರ ಮೋಟಾರನ್ನು ನಿಲ್ಲಿಸಿದ್ದು ನಂತರ ಮುಂದಕ್ಕೆ ಪ್ರಯಾಣ ಬೆಳೆಸಿದರು ನೋಡುವುದಕ್ಕೆ ವಿಶೇಷ ಜನಗಳು ಬಂದಿದ್ದರು

ವರ್ತಮಾನದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ವರ್ತಮಾನಗಳಿಗೆ ಸ್ಥಳ ಕೊಡಲಾರೆವು. ಆದಕಾರಣ ವರ್ತಮಾನದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ವರ್ತಮಾನವನ್ನು ಕಾಗದದ ಒಂದೇ ಪಕ್ಕಗಳಲ್ಲಿ ಬರೆಯತಕ್ಕದ್ದು ದೂಷಣೆಗಳಿಗೆ ಸ್ಥಳ ಕೊಡಲಾರೆವು.

ಪ್ರಕಟಿಸುವುದಕ್ಕೆ ಬರತಕ್ಕ ವರ್ತಮಾನಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವರ್ತಮಾನಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ವರ್ತಮಾನಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬಿನ್ನಹಿಸುತ್ತೇವೆ

ವರ್ತಮಾನದಾರರು ಪರರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

— ಅಂಚೆ ಪುಸ್ತಕಗಳ ವಿಷಯ ಪ್ರಶ್ನೆ ಅಲ್ಲಲ್ಲಿ ಪ್ರಸ್ತಾಪವಾಗುತ್ತಿದೆ ಎಂದು ಹಿಂದು ತಾಲ್ಲೂಕಿನಿಂದ ನಮ್ಮ ವರ್ತಮಾನದಾರರು ಬರೆಯುತ್ತಾರೆ ಈ ಪೇಳುವುದಕ್ಕಾಗಲೂ ಬರೆಯುವರು ಅದನ್ನು ಜಾರಿಗೆ ತರುವ ಧೈರ್ಯಶಾಲಿಗಳಾಗಿ ಮುಂದೆ ಬರುವ ಸಾರ್ಥಕವಾದೀತು ಈ ವಿಷಯ ಅಧಿಕಾರಿಗಳಿಗೂ ಪ್ರಜೆಗಳಿಗೂ ಅನುಕೂಲ ಅಂಚೆಕಚೇರಿ ನೌಕರರು ಪ್ರಜೆಗಳು ಮುಂದೆಬಂದು ಹೊರಪಡಿಸಿದ ತಕ್ಕ ರೀತಿಯ ಪತ್ರ ಈ ರೀತಿ ಎಂದು ಕೇಳಲಾರದು ಜನರು ಕಷ್ಟ ಪಟ್ಟು ಸರಿ ಸುಮಾರು ಹೇಳುತ್ತಿದ್ದರೂ ಅಧಿಕಾರಿಗಳು ಕಂಡುಹಿಡಿದು ಏನಾದರೂ ಮಾಡಬೇಕು ಎಂದು ಹೇಳಿದ

ಫಾರೆಸ್ಟ್ ಗಳು ಅನುಕೂಲವಾಗುವ ತನಕ ಸರ್ಕಾರದವರು ಈ ಕಷ್ಟವನ್ನು ಪರಿಹರಿಸಬೇಕೆಂದು ಅರ್ಜಿ ಕೊಡಲು ಹಲವು ಜನಗಳು ಸಮಾಲೋಚಿಸುತ್ತಿರುವರು ಆಮೇಲೆ ಈ ವಿಷಯದ ಕೆಲಸ ಪ್ರಜೆಗಳಿಗೆ ಹಾಗೆಯೇ ಹಾಗೆ ಪ್ರಜಾ ಪಾಲಕರಿಗೂ ತಿಳಿಯದಿಲ್ಲ ಮೈಸೂರು ಸಂಸ್ಥಾನದ ಸರಹದ್ದಿನಲ್ಲಿರುವ ಮದರಾಸ್ ಜಿಲ್ಲೆಗಳಲ್ಲಿ ಬೆಂಗಳೂರು ವಗೈರೆಯಲ್ಲೂ ಆಯಾ ಸರ್ಕಾರದವರು ದಾನದ ಅಪ್ಲಿಕೇಷನ್ ಗಳನ್ನು ಮಾಡಿಸುತ್ತಿದ್ದರೂ ಮೈಸೂರು ಸರ್ಕಾರದವರು ಆ ಅಪ್ಲಿಕೇಷನ್ನು ಯಾಕೆ ಕೊಡಲೊಲ್ಲರೋ ಗೊತ್ತಾಗುವುದಿಲ್ಲ ಬಹಳ ಹಿಂದೆ ಇನ್ನು ಒಂದೆರಡು ತಿಂಗಳು ತಡವಾದರೆ ಜನಗಳು ಅಗ್ನಿಯ ಬಾಧೆ ಸಹಿಸಿಕೊಂಡಿದ್ದರು

ನಾಗಮಂಗಲ, ಶಿಕಾರಿಪುರ ತಾಲ್ಲೂಕುಗಳಲ್ಲಿ ನಮ್ಮ ಪತ್ರಿಕೆಯ ಪ್ರಕಟಣೆಯಿಂದ ಪರಸ್ಪರ ವ್ಯಸನವು ಹೆಚ್ಚುವುದೆಂದು ನಂಬುತ್ತೇವೆ

ವೆಂಕಟಸುಬ್ಬಯ್ಯ ಹೊಸಕೆರೆ ವೆಂಕಟೇಶಯ್ಯ ಧರ್ಮಾರ್ಥದ ಮೊದಲ ಸಹಾಯ ಮಾಡಲಿ

ಹನುಮಂತೇಗೌಡ ಬೇಲೂರು ನೀವು ಬರೆದಿರುವುದನ್ನು ಓದಿ ಅರ್ಥಮಾಡಿಕೊಳ್ಳುವುದು ಸಾಧ್ಯವಲ್ಲ

ಎಡಿ]

ಕರೆಸ್ಪಾಂಡೆನ್ಸ್.

ವಿಧವಾವಿವಾಹವೋ, ಸ್ವಯಂವರವೋ?

ಆರ್ಯ,

ಕಳೆದ ನವಂಬರ್ 21 ನೇ ತಾ ತಮ್ಮ ಪತ್ರಿಕೆಯಲ್ಲಿ ವಿಧವಾ ವಿವಾಹವನ್ನು ಕುರಿತು ಬೆಂಗಳೂರು ಆರ್ಯ ಸಮಾಜ ಕಾರ್ಯದರ್ಶಿಯವರು ವಾಚಕರ ತಿಳುವಳಿಕೆಗಾಗಿ ಪ್ರಕಟಿಸಿರುವ ಇಂಡಿಯಾ ದೇಶ 1856 ನೇ ಇಸವಿಯ 15 ನೆ ನಂ ಕಾನೂನನ್ನು ಓದಿ ನೋಡಿದೆನು ಇದಕ್ಕೆ ನನ್ನ ಅಲ್ಪಮತಿಗೆ ತೋರಬಂದ ಆಲೋಚನೆಯನ್ನು ಈ ಕೆಳಗೆ ಬರೆಯುತ್ತೇನೆ ತಮ್ಮ ಘನವಾದ ಮತ್ತು ಲೋಕಪ್ರಸಿದ್ಧಿಯಾದ ಈ ಪತ್ರಿಕೆಯಲ್ಲಿ ಇದನ್ನು ತಮ್ಮ ವಾಚಕರ ಅಭಿಪ್ರಾಯ ತಿಳಿಯುವುದಕ್ಕೋಸ್ಕರ ದಯಮಾಡಿ ಪ್ರಕಟಿಸಬೇಕೆಂದು ನಂಬುತ್ತೇನೆ

“ವಿಧವಾ ಪುನರ್ವಿವಾಹ” ಎಂದರೆ ಅರ್ಥವೇನು?

ಬ್ರಾಹ್ಮಣರ ವಿವಾಹಕ್ಕೆ ಕನ್ಯಾದಾನವೆನ್ನುತ್ತಾರೆ ಅದಕ್ಕೆ ತಕ್ಕ ಕರ್ಮಗಳು ಶಾಸ್ತ್ರಗಳಲ್ಲಿ ಉಕ್ತವಾಗಿವೆ ಹಿಂದೂ ಶಾಸ್ತ್ರಾನುಸಾರವಾಗಿ ಸ್ತ್ರೀಯರಿಗೆ ಎಂದೂ ಸ್ವಾತಂತ್ರ್ಯವೇ ಇರುವುದಿಲ್ಲ ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಪತಿಯೂ, ವಾರ್ಧಕದಲ್ಲಿ ಪುತ್ರನೂ ಸ್ತ್ರೀಯರಿಗೆ ರಕ್ಷಕರಾಗಿರುತ್ತಾರೆ ತಂದೆಯು ಕನ್ಯಾದಾನಮಾಡುವುದರಿಂದ ತನ್ನ ಬಾಧ್ಯತೆಯನ್ನು ಆ ಕನ್ಯಾದಾನ ತೆಗೆದುಕೊಂಡವನಿಗೆ ವಹಿಸುತ್ತಾನೆ ಆಗ ಅವಳಿಗೆ ಪತಿಯೇ ಅಧಿಕಾರಿಯಾಗು

[illegible] ಮೃತನಾದರೆ ಆ ಬಾಧ್ಯತೆ ಮತ್ತಾರಿಗೂ ಉಂಟಾಗುವದಿಲ್ಲ. [illegible] ಪಕ್ಷದಲ್ಲಿ ಅವನು ಅವಳನ್ನು ರಕ್ಷಿಸುವದಕ್ಕೆ ಮಾತ್ರ ಬಾಧ್ಯನೇ [illegible] ಅವಳನ್ನು ದಾಸಿಕೆಯಮಾಡ ಹಕ್ಕು ಅವನಿಗಿರುವದಿಲ್ಲ. ಅಂಥಾ ವಿಧ [illegible] ಪುನರ್ವಿವಾಹ [illegible] ಅಪೇಕ್ಷಿಸಿದರೆ ಯಾರ ಸಮ್ಮತಿಯನ್ನೂ [illegible] ಹೊಸ ಗಂಡನನ್ನು ವರಿಸಬಹುದು. ಆದ್ದರಿಂದ [illegible] ಪ್ರತಿಯಾಗಿ ವಿಧವಾ ಪುನಸ್ಸಂಯೋಗ [illegible] ಯುಕ್ತವಾಗಿದೆ. ಈ ನಿಯಮದಕ್ಕೆ ಸಂಬಂಧಪಟ್ಟ ವಿಧ [illegible] ಮತ್ತು ಅವನ್ನು ಪರಿಗ್ರಹಿಸಬೇಕಾಗುವ ಗಂಡನ ಪರಸ್ಪರ ಸ್ನೇಹಭಾವದ [illegible] ಉಭಯತ್ರರ ಲಿಖಿತಮೂಲಕವಾದ ಒಪ್ಪಂದವೇ ಸಾಕಾಗಿರುತ್ತ [illegible] ಶಾಸ್ತ್ರ ಕರ್ಮಗಳನ್ನೂ ಅನುಸರಿಸಬೇಕಾದ [illegible] ಯಾವ ಶಾಸ್ತ್ರದಲ್ಲಿಯೂ ಇದಕ್ಕೆ ಅನ ಯಿಸುವ ಕರ್ಮ [illegible] ಪುನಸ್ಸಂಯೋಗವನ್ನು ಪರಿಗ್ರಹಿಸಿದ ದಂಪತಿ [illegible] ತಮ್ಮ ಕುಟುಂಬದಲ್ಲಿ ಇರುವ ಅಥವಾ ಇರಬಹುದಾದ [illegible] ಅನರ್ಹರಾಗುವದಿಲ್ಲ. ಮತ್ತು ಅದೇ ಪ್ರಕಾರ [illegible] ಪಿತೃಸ್ವತ್ತುಗಳ ಆದಾಯವನ್ನು ಯಾರಿಗೆ ಅವರ [illegible] ಯಾರನ್ನೂ ವಾರಸು [illegible]

ಆಗಲೂ ಕೆಲ [illegible] ಅಂತರ್ಗತವಾದ [illegible] ವರವನ್ನು ಸ್ವೀಕರಿಸಿ [illegible] ಪಾತ್ರ [illegible] ಈ ಕಾನೂನು [illegible] ಲೋಕೋಪಕಾರವಾಗಿದೆ.

[illegible] ಮೃತನಾದರೆ ಅವನ ಸಂಪತ್ತಿ [illegible] ಪಟ್ಟು ಬಿಡುತ್ತಿದ್ದರು. [illegible] ಆ ಪದ್ಧತಿಯನ್ನು [illegible] ಕ್ರಿಯೆ ಮತ್ತು [illegible] ಮಾತ್ರ [illegible], ಅವರು [illegible] ಕೊಟ್ಟು [illegible] ಅನೇಕ ವ್ರತ [illegible] ಕಟ್ಟಳೆ [illegible] ಮಾಡಿ, ಇದರಿಂದ [illegible] ಪುರುಷಾರ್ಥ [illegible]

[illegible]

ಇಂಗ್ಲೀಷು ವರ್ತಮಾನಗಳು

[illegible] ತಾ|| [illegible] ಕಳೆದ ತಾ [illegible] ನೇ [illegible] ಸಾಹೇಬ [illegible]

[illegible] ಭಾರಿ [illegible] ಇನ್ನೂ [illegible] ಹೆಚ್ಚಾಗಿದೆ. [illegible] ಅಮಲ್ದಾರ್ ಮ [illegible] ಭಿಕ್ಷೆ [illegible] ಗ್ರಾಮಸ್ಥರಾ [illegible] ಒಂದು [illegible] ಆಸಾಮಿ [illegible] ಪೋಲೀಸಿಗೆ [illegible] ತಮ್ಮ [illegible] ೧೯೦೭ ನೇ [illegible] ಈ ಊರು [illegible] ಸರ್ಕಾರದವರು [illegible] ಒಂದು ಸರ್ಟಿಫಿಕೇಟು ಕೊಟ್ಟು ಇರುತ್ತಾರೆ.

[illegible] ಹೊಸ [illegible] ಜೀವನವಾಗುವದು ಬಹು ದುಸ್ತರ [illegible] ಕಷ್ಟ [illegible] ಪ್ರವಾಹ [illegible] ಆಗುತ್ತಲೇ ಇರುವವು.

[illegible] ೧೨ ರಲ್ಲಿ ಬ್ರಿಟಿಷ್ ಸಾರ್ವಭೌಮರ ಡಿಲ್ಲಿ ದರ್ಬಾರ್ ಡೇ ಉತ್ಸವ [illegible] ಸ್ಕೂಲ್ ಕಟ್ಟಡದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಆ ದಿನ [illegible] ಎಲ್ಲಾ ಬಾಲಕರಿಂದಲೂ ಸೆಲ್ಯೂಟ್ ಮುಂತಾದದ್ದು ನಡೆಯಿತು. [illegible] ಮತ್ತು ಕನ್ನಡ ಭಾಷೆಗಳಲ್ಲಿ ನ್ಯಾಷನಲ್ ಆಂಥಂ ಗೀತವನ್ನು ಹಾಡಿ [illegible] ಅನಂತರ ಶಾಲೆಯ ಒಳಗಡೆ ಬ್ರಿಟಿಷ್ ಸಾರ್ವಭೌಮರ ಶ್ರೇಯಃಪ್ರಾರ್ಥನೆ [illegible] ಮತ್ತು ಶ್ರೀಮನ್ಮಹಾರಾಜರವರ ಸ್ತೋತ್ರದ ಹಾಡುಗಳನ್ನು ಮಿಡ್ಲ್ [illegible] ಸ್ಕೂಲ್ ಬಾಲಕಿಯರು ಮನೋಹರವಾಗಿ ಹಾಡಿದರು. [illegible] ಮುಚೀನ ಚತುರ್ವಾರ್ಷಗಳಲ್ಲಿ ಹೇಳಲ್ಪಟ್ಟ ಸಂಗೀತ ಮುಂತಾದ ಭಾಗ [illegible] ಹೆಡ್ ಮಾಸ್ಟರೂ, ಸಂಸ್ಕೃತ [illegible]

ಗಳೂ ಚಕ್ರವರ್ತಿಗಳ ಗುಣಕಥನ ಮತ್ತು ಆಶೀರ್ವಾದಗಳನ್ನು ಹೇಳಿದರು. ಕಡೆಯಲ್ಲಿ ಗಂಧ ಪುಷ್ಪ ತಾಂಬೂಲ, ಮಿಠಾಯಿ ಮುಂತಾದವು ಸರ್ವರಿಗೂ ಹಂಚಲ್ಪಟ್ಟು ಸಭೆ ಬರಖಾಸ್ತಾಯಿತು.

ಚಿತ್ರದುರ್ಗ.—ಈ ಸಂವತ್ಸರದಷ್ಟು ಉತ್ಕೃಷ್ಟವಾದ ಬೆಳೆ ಈಗ್ಗೆ 15 ವರುಷದಿಂದ ಆಗಿರಲಿಲ್ಲವೆಂತ ರೈತರು ಸಂತೋಷಪಡುತ್ತಿದ್ದಾರಾದಾಗ್ಯೂ ಜನರ ಧಾರಣೆ ಮಾತ್ರ ಕ್ಷಾಮಕಾಲಕ್ಕಿಂತಲೂ ತುಟ್ಟಿಯಾಗಿದೆ. ಈ ವಿಷಯದಲ್ಲಿ ಗವರ್ನಮೆಂಟಿನವರು ತಕ್ಕ ಏರ್ಪಾಡು ಮಾಡದಿದ್ದರೆ ಮುಂದೆ ಬಡವರ ಜೀವನ ನಡೆಯತಕ್ಕದ್ದು ಬಹಳ ಕಷ್ಟವಾಗಬಹುದು.—ಈಚೆಗೆ ಈ ಡಿಸ್ಟ್ರಿಕ್ಟಿನಲ್ಲಿ ಕಳ್ಳರುಗಳೂ ಬಹಳ ಜಾಸ್ತಿಯಾಗುತ್ತಾ ಬಂದವು. ಆ ಅಕೃತ್ಯ ನಡಿಸಿದವರೆಂದು ಹಿಡಿಯಲ್ಪಟ್ಟವರಿಗೆ ಶಿಕ್ಷೆಯಾಗದೆ ಅವರೆಲ್ಲಾ ಖುಲಾಸೆಯಾಗುತ್ತಿರುವದರಿಂದ ಆ ಭೀತಿ ಪ್ರಜೆಗಳಿಗೆ ಹೆಚ್ಚಾಗಿದೆ.—ದರ್ಬಾರ್ ಡೇ ಉತ್ಸವವು ಈ ಸ್ಥಳದಲ್ಲಿರತಕ್ಕ ಎ. ವಿ. ಸ್ಕೂಲ್, ಹೈಸ್ಕೂಲ್, ಪಂಚಮಾ ಸ್ಕೂಲುಗಳಲ್ಲಿ ನಡೆಯಿತು. [illegible] ಆರ್ ನಾನಾಸಾಹೇಬರವರು ಉತ್ಸವ ನಡಿಸಿದರು. ಪಂಚಮಾ ಸ್ಕೂಲಿನಲ್ಲಿ ಕಮಿಟಿ ಮೆಂಬರುಗಳು ಪಬ್ಲಿಕ್ ಸಹಾಯದಿಂದ ವಸೂಲ್ಮಾಡಿಸಿದ್ದ ಪ್ರೈಸುಗಳನ್ನು ಬೇಗಾರ್ ಬಾಲಕರಿಗೂ ಬಾಲಕಿಯರಿಗೂ ಹಂಚಿದ್ದಲ್ಲದೆ ಆರ್ಯನ್ ಸ್ಟೂಡೆಂಟ್ಸ್ ಹೋಂ ಬಾಲಕರಿಗೆ ಶ್ರೀಮಜ್ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರಿಂದ ದಯಪಾಲಿಸಲ್ಪಟ್ಟ ಪ್ರೈಸುಗಳನ್ನು ಬಾಲಕರಿಗೆ ಕೊಡಿಸಿದರು ಮತ್ತು ಎಲ್ಲಾ ಹುಡುಗರಿಗೂ ಮಿಠಾಯಿ ಹಂಚಿ, ಬಾಲಕರಿಂದ ಡ್ರಿಲ್ ಮಾಡಿಸಿ ಚಕ್ರವರ್ತಿ ಸಾರ್ವಭೌಮರ ಸದ್ಗುಣಗಳನ್ನೂ, ಅವರ ಆಧಿಪತ್ಯದಿಂದ ಇಂಡಿಯಾ ದೇಶಕ್ಕೆ ಉಂಟಾಗಿರತಕ್ಕ ಸೌಖ್ಯವನ್ನೂ ಕೊಂಡಾಡಿದರು.

[illegible] ಪುರ.—ಎರಡು ವಾರಗಳ ಹಿಂದೆ ಸುಲಸಂದ್ರದಲ್ಲಿ [illegible] ನೆಂಬುವನು ಒಬ್ಬ ಒಕ್ಕಲಿಗ ಹೆಂಗಸನ್ನು ದಬಾವ್ ಮಾಡಿಕೊಂಡಿದ್ದು ಬಿಟ್ಟ ಹಾಗೂ, ಅವಳನ್ನು ಮುತ್ತನೆಂಬ ಒಕ್ಕಲಿಗನು ವ್ಯಭಿಚರಿಸುವದನ್ನು [illegible] ಅವನನ್ನು ಕೊಂದು ಪರಾರಿ ಆಗಿರುವಂತೆಯೂ ವರ್ತಮಾನವಿದೆ.—ಈ ವರ್ಷ [illegible] ಯಲ್ಲಿ ಯಾವ ಗಲಾಟೆಗಳೇನೂ ಜರುಗಲಿಲ್ಲ.—ಇಲ್ಲಿಗೆ [illegible] ದೂರದಲ್ಲಿರುವ [illegible] ಕಳೆದ 18ನೇ ತಾ ಎಲ್ಲಾ ಪ್ರಮುಖರೂ ಪಾಠಶಾಲೆಯ ಉಪಾಧ್ಯಾಯರೂ ಸೇರಿ ಡಿಲ್ಲಿ ದರ್ಬಾರ್ ಡೇ ಉತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಿದರು. ಈ ಪಾಠಶಾಲೆಗೆ [illegible] ಮನೆಯನ್ನು ಸರ್ಕಾರದವರು [illegible] ಕಟ್ಟುವಂತೆ ಆ [illegible] ದಾರೆ. ಇದೇ ಮೇರೆ ಈ ತಾಲ್ಲೂಕಿನಲ್ಲಿ ಭಾರಿ ಗ್ರಾಮಗಳಾಗಿರುವ [illegible], [illegible] ಗಳಲ್ಲಿ ಯಾವ ಸ್ಕೂಲ್ ಮನೆಗಳನ್ನು ಕಟ್ಟುವಂತೆ ತಿಳಿದುಬಂದಿದೆ. [illegible] ಸ್ಕೂಲ್ ಮನೆಗೆ [illegible] 300 ರೂಪಾಯಿನ [illegible] ಕೊಡುತ್ತಾರಂತೆ.—[illegible] ಮತ್ತು [illegible] ಗಳಲ್ಲಿ [illegible] ಮುಂತಾದವರು ಅಂಗಡಿಯವರಿಂದ [illegible] ಮಯಗಳಲ್ಲಿ [illegible] ಕಾಣಬರುವದು. ಈ ಊರಲ್ಲಿ [illegible] ಕಷ್ಟವಾಗಿದೆ. ಕಳೆದ [illegible] ಪೊಲಿಟಿಕಲ್ ಹಾಲಿನಲ್ಲಿ [illegible] ಅಸ್ವಾಭಾವಿಕವಾದ ಅರ್ಥ [illegible] ಉಪನ್ಯಾಸ [illegible] ವಾಗಿದೆ. ಊರಿನ [illegible] ಪೋಲೀಸ್ [illegible] ಅವಕಾಶ ಕಡಮೆಯಾಗಿದೆ.

ತಿ|| ನರಸೀಪುರ.—ಮೂಗೂರು ಹೋಬಳಿಯಲ್ಲಿ ಪ್ರಸಿದ್ಧವಾಗಿತ್ತು. ಈಗ [illegible] ಗೌರ್ನಮೆಂಟಿನವರ ಕೋರಿಕೆಗೆ ಪಾತ್ರವಾಗಿದೆ. ಅಂದರೆ ಈ ಊರಿನಲ್ಲಿ [illegible] ಮುಖಂಡರು [illegible] ತಮ್ಮ [illegible] ಇಲ್ಲಿರುವ ಬುದ್ಧಿಹೀನರಾದ ಜನರನ್ನು [illegible] ತಾಲ್ಲೂಕು ಕಚೇರಿ [illegible] ನೂರಾರು [illegible] ಜನರನ್ನು [illegible] ಮನೆಗಳಿಗೆ [illegible] ಸುಟ್ಟು [illegible] ಕೆಲವನ್ನು ಕೊಂದು ಕೆಲವರಿಗೆ [illegible] ಮನೆಯಲ್ಲಿ [illegible] ಪಾತ್ರೆ [illegible] ಮುಖಂಡರೂ, [illegible] ಇನ್ನೂ [illegible] ಆ [illegible] ರಾಗಿ [illegible] ಸೂಪ್ರಿಂಟ್ [illegible] ಇನ್ಸ್ಪೆಕ್ಟರು [illegible] ಸರ್ಕಾರದವರು ಮುಂದೆ ಇಂಥಾ [illegible] ಮಾಡಬೇಕಾಗಿದೆ.—ಈ [illegible] ಪಂಚಮರ [illegible] ಒಂದು ಸ್ಕೂಲನ್ನು ಮಾಡಿರುವದು ಸಂತೋಷಕರವಾಗಿದೆ. [illegible] ದರ್ಬಾರ್ ಡೇ ಉತ್ಸವವನ್ನು ಪ್ರೀತಿಪೂರ್ವಕವಾಗಿ [illegible]. ಅವರು ಸ್ಕೂಲನ್ನು ಅಲಂಕರಿಸಿ [illegible] ಅನೇಕ ಹಾಡು, ಕವಾತ್ ಮುಂತಾದವನ್ನು [illegible], ಕಡೆಯಲ್ಲಿ ಚಕ್ರವರ್ತಿ ದಂಪತಿಗಳ ಮೇಲೆ [illegible] ಕೀರ್ತನೆಗಳನ್ನು ಹಾಡಿದರು. ಮಕ್ಕಳಿಗೆ [illegible] ಕೊಡಲಾಯಿತು. ಸ್ತೋತ್ರಗಳಿಂದ ಸಭೆಯು ಮುಕ್ತಾಯವಾಯಿತು.

[illegible].—ಕೆಲವು [illegible] ಗಳಿಂದ ಈ ಊರಿನಲ್ಲಿ ಪ್ಲೇಗ್ ರೋಗವು ಕಾಣಿಕೊಂಡು ಇನ್ನೂ [illegible] ದಿನ ದಿನಕ್ಕೆ ಜಾಸ್ತಿಯಾಗುತ್ತಾ ಇದೆ. ಅನೇಕ ದಿವಸಗಳ ಪರಿಯಂತರ ಇಲ್ಲಿಗೆ [illegible] ಇದ್ದು ಈಗ [illegible] ರೋಗವು ವ್ಯಾಪಿಸಿದೆ. ಇಲ್ಲಿನ [illegible] ಪ್ಲೇಗಿನಿಂದ ಮೃತಪಟ್ಟರು. 8-10 ದಿವಸಗಳೊಳಗಾಗಿ ಅವರ ಪತ್ನಿಯವರಿಗೂ [illegible], ಕಳೆದ [illegible] ತಂದೆ [illegible] ರಾಯರಿಗೆ [illegible] ಈ ನಿರ್ಭಾಗ್ಯ [illegible] ಎಲ್ಲರಲ್ಲೂ ಸಂತಾಪವನ್ನುಂಟುಮಾಡಿದೆ. ಇಲ್ಲಿನ [illegible] ಬೀದಿಯಲ್ಲಿ ಕೆಲವು ಮುಸಲ್ಮಾನ್ ವ್ಯಾಪಾರಸ್ಥರು ಈ ರೋಗದಿಂದ ಮೃತಪಟ್ಟಿದ್ದರು. ಅಲ್ಲಲ್ಲಿ [illegible] ಇದೆ. [illegible] ಊರನ್ನು ಸೇರುತ್ತಲೂ, ಇನ್ನು ಕೆಲವರು ಊರುಬಿಡುತ್ತಲೂ ಇದ್ದಾರೆ. ನಮ್ಮ ಅಧಿಕಾರಿಗಳು ಈ ವಿಷಯದಲ್ಲಿ ಮುಂದೆ [illegible] ರೋಗ ಹರಡದಂತೆ ಮಾಡಿದರೆ ಕೇಮ. ಮನೆಗಳನ್ನು ಶುದ್ಧಿ ಮಾಡಿಸಿ, [illegible] ಸತ್ತ [illegible] ಹೋಗಲಾಡಿಸಿದರೆ ಬಹಳ ಅನುಕೂಲ. ಮುನಿಸಿಪಾಲಿಟಿ [illegible] ಕಡಮೆ ಎಂದು ತೋರುತ್ತೆ. ದೊಡ್ಡ [illegible] ರಸ್ತೆಗಳನ್ನು ಮಾತ್ರ [illegible] ಆದರೆ [illegible], ನಾರ್ಥಂಬಲ್ [illegible] ಗಲ್ಲಿಗಳ ಕಡೆ ಗಮನ ಕೊಡುವದು ಅಪರೂಪ. ಈ ಪ್ಲೇಗ್ ಕಾಲದಲ್ಲಿ [illegible] ವಿಷಯಕ್ಕೆ [illegible] ರಾತ್ರಿ [illegible] ಮುನಿಸಿಪಲ್ ಲಾಂದ್ರಗಳನ್ನು ಹಚ್ಚುವದೇ ಇಲ್ಲ. ರಾತ್ರಿ ಬೆಳಕಿಲ್ಲದೆ [illegible] ಕಷ್ಟಪಡುತ್ತಾರೆ. ಇಲ್ಲಿ [illegible] ಲಾಂದ್ರಗಳನ್ನು ಅಲಂಕಾರಕ್ಕಾಗಿ ಇಟ್ಟಿರುವಂತೆ ಕಾಣುತ್ತೆ. ಮುನಿಸಿಪಾಲಿಟಿಯಲ್ಲಿ ಹಣವಿಲ್ಲದ್ದರಿಂದ ಈ ದೀಪ ಹಚ್ಚುವದಿಲ್ಲವೆಂದು ಹೇಳುತ್ತಾರೆ.—ಇದುವರೆಗೂ ಧಾರಣೆಗಳು ತುಟ್ಟಿಯಾಗಿದ್ದು ಅಕ್ಕಿ 6 ಸೇರು, ರಾಗಿ 16-17 ಸೇರು ಮಾರುವದರಿಂದ ಬಡಬಗ್ಗರ ಜೀವನಕ್ಕೆ ತೊಂದರೆಯಾಗಿದೆ.—ಪ್ಲೇಗ್ ಉಪದ್ರದಿಂದ ಇಲ್ಲಿ ಮೊದಲಿನ ಹಾಗೆ ಅಷ್ಟು ಚನ್ನಾಗಿ ನಡೆಯಲಿಲ್ಲ.

ಕಲಸಕಲಿನಹಳ್ಳಿ, ತಾ|| ಕೋಡೀಹಳ್ಳಿ.—ಇಲ್ಲಿ ಮಳೆ ಸಕಾಲಕ್ಕೆ ಬಿದ್ದು ರಾಗಿ ಬೆಳೆ ಚನ್ನಾಗಿ ಆಗಿ ಮೆದೆಗಳು ಬಿದ್ದು ಇರುತ್ತೆ. ಹುರುಳಿ, ತೊಗರಿ, ಅವರೆ ಫಸಲುಗಳು ಬಹಳ ಚನ್ನಾಗಿವೆ.—ಇದು ಯೂನಿಯನ್ ಗ್ರಾಮ. [illegible] ಗಳು ಇಬ್ಬರು ಮಾತ್ರ ಇದ್ದು, ಗ್ರಾಮದ ಸುಮಾರು 16 ಬೀದಿ [illegible] ಕೆಲಸ ತೃಪ್ತಿಕರವಾಗಿ ನಡೆಯುವದಿಲ್ಲ. ಕಟರಾ ತೊಟ್ಟಿ ಆಗಬೇಕೆಂದು ಅನೇಕ ಸಲ ಮೀಟಿಂಗಿನಲ್ಲಿ ಚರ್ಚೆ ನಡೆದಿದ್ದಾಗ್ಯೂ ಇನ್ನೂ ಕೂಡಿಲ್ಲ.—ಸುಮಾರು 1,000 ಪ್ರಜೆಗಳು ಬಳಸುವ ಇಲ್ಲಿನ ಕೆರೆಯಲ್ಲಿ ಸೊಪ್ಪು, ಸೊಪ್ಪೆ ಬೆಳೆದು ನೀರು ಕಾಣಿಸದಂತಿದೆ. ಅದರಲ್ಲೇ ಜನಗಳು ಎಲ್ಲಾ ಪ್ರಕ್ಷಾಳನೆಗಳೂ, ಬಟ್ಟೆ ಒಗೆಯುವದೂ, ಮುಸರೆ ತೊಳೆಯುವದೂ, ವಗೈರೆ ಮಾಡುತ್ತಾರೆ. ಈ ನೀರನ್ನು ಪಾನಕ್ಕೂ ಉಪಯೋಗಿಸುವದರಿಂದ ಕಾಯಿಲೆಗಳಿಗೆ ಆಸ್ಪದವಾಗಿದೆ. ಮತ್ತು ಕೆರೆಕಟ್ಟೆಯ ಉಭಯಪಾರ್ಶ್ವಗಳೇ ಜನಗಳಿಗೆ ಬಹಿರ್ದೇಶವಾಗಿ, ಕಟ್ಟೆ ಮೇಲೆ ತಿರುಗಾಡಲು ತುಂಬಾ ಅಸಹ್ಯವಾಗಿರುತ್ತೆ. ಸರ್ಕಾರದವರು ಈ ಕೆರೇ ನೀರು ಪಾನಕ್ಕೆ ಮಾತ್ರ ಉಪಯೋಗಿಸುವಂತೆ ಕಟ್ಟುಮಾಡಿದರೆ ತುಂಬಾ ಕ್ಷೇಮವಾದೀತು.—ಇಲ್ಲಿ ಕಳೆದ ದರ್ಬಾರ್ ಡೇ ಉತ್ಸವಗಳು ಬಹಳ ಉತ್ಸಾಹದೊಡನೆ ನೆರವೇರಿದವು. ಬೆಳಿಗ್ಗೆ ಕಿರೀಟ ಮತ್ತು ಚಕ್ರವರ್ತಿ ಸಾರ್ವಭೌಮರ ಚಿತ್ರಪಟ ಸಹಾ ಅಟ್ಟಹಾಸದಿಂದ ವಾದ್ಯಘೋಷದೊಡನೆ ಮೆರವಣಿಗೆ ಮಾಡಲಾಯಿತು. ಟ್ರಾವಲರ್ಸ್ ಬಂಗ್ಲೆಯಲ್ಲಿ ಎಲ್ಲರೂ ಸೇರಿದಾಗ ಬಾಲಕ ಬಾಲಕಿಯರಿಂದ ಶ್ರೇಯಃಪ್ರಾರ್ಥನಾ ಕೀರ್ತನೆಗಳು ಹೇಳಲ್ಪಟ್ಟವು. ಮ|| ಶ್ರೀನಿವಾಸಾಚಾರ್ಯರೂ, ಛಾತೆಸ್ಟರ್ ಮ|| ಅನಂತಸ್ವಾಮಿರಾಯರೂ ಬಹು ಸಾರಸ್ಯವಾಗಿ ಉಪನ್ಯಾಸಮಾಡಿದರು. ವೇ|| ಕೃಷ್ಣಾಚಾರ್ಯರು ಮಂಗಳ ಹಾಡಿ ಸಭೆ ಮುಕ್ತಾಯಮಾಡಿದರು. ಮಧ್ಯಾಹ್ನ ಬಾಲಕರ ಪಂದ್ಯಗಳು ಬಹಳ ವಿನೋದವಾಗಿ ನಡೆದು ಗೆದ್ದವರಿಗೆ ಪುಸ್ತಕಗಳು ಹಂಚಿ ಎಲ್ಲಾ ಜನಗಳೂ ಭಗವಂತನು ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡುತ್ತಾ ಈ ಉತ್ಸವವನ್ನು ಮುಕ್ತಾಯಮಾಡಿದರು.

ಕೂರಟಗೆರ.—ಧಾರಣೆಗಳು ಇನ್ನೂ ಕ್ಷಾಮಕಾಲದ ಹದನ್ನೇ ಸೂಚಿಸುತ್ತವೆ.—3-4 ದಿನಗಳ ಹಿಂದೆ ನಾಗಲಿಂಗಪ್ಪನವರ ತೋಟದಲ್ಲಿ ಬೆಳಿಗ್ಗೆ [illegible] ಸಮಯದಲ್ಲಿ ಒಂದು ಸಾಧಾರಣವಾದ ಹುಲಿಯು ಬಂದು ಸೇರಿತ್ತು. ನದೀ ಕಡೆ ಹೋಗಿದ್ದ ಜನಗಳು ಕಂಡು ಗಾಬರಿಯಾಗಿ ವರ್ತಮಾನ ಕೊಡಲು ಪೋಲೀಸಿನವರೇ ಆದಿಯಾಗಿ ಸಮಸ್ತರೂ ಬಂದು ಸೇರಿದರು. ಆಗ ಪ್ರೈಲ್ [illegible] ಎಂಬುವರು ಆ ಹುಲಿಯನ್ನು ಬಂದೂಕಿನಿಂದ ಹೊಡೆದು ಕೊಂದುಹಾಕಿದರು.—ಇದುವರೆಗೂ ಇದ್ದಂಥ ಮುನಿಸಿಪಲ್ ಮೆಂಬರುಗಳನ್ನು ವಜಾಮಾಡಿ, ಹೊಸ ನಿಯಮಿಸುತ್ತಾರೆಂದು ವರ್ತಮಾನವಿದೆ. ಇವರು ವಿದ್ಯಾವಂತರಾಗಿಯೂ, ಭಾರಿ ಸಂಸಾರಿಗಳಾಗಿಯೂ, ಪ್ರಜಾಹಿತಚಿಂತಕರಾಗಿ [illegible] ಆಫೀಸರುಗಳಲ್ಲಿ ಗೌರವವನ್ನು ಸಂಪಾದನೆ ಮಾಡಿಕೊಂಡಿದ್ದರು. ಈಗ ಹೊಸದಾಗಿ [illegible] ಸಬ್ ಡಿವಿಜನ್ ಆಫೀಸರು ದಯಮಾಡಿ ಅವರ ಯೋಗ್ಯತೆಗಳನ್ನೂ ಗುಣಗಳನ್ನೂ ಅವರಲ್ಲಿರುವ ವಿದ್ಯೆಯನ್ನೂ ವಿಚಾರಿಸಿ ನೇಮಕ ಮಾಡಿದರೆ ಪ್ರಜೆಗಳಿಗೆ ಬಹುಮಟ್ಟಿಗೆ ಅನುಕೂಲವಾಗಿರುತ್ತೆ.—[illegible], ಜಾತಿಯೂ ಮುಖ್ಯವಲ್ಲ. ವಿದ್ಯೆಯೇ ಹೆಚ್ಚಾದದ್ದು.—ಇಲ್ಲಿನ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮ|| ಶ್ರೀನಿವಾಸಾಚಾರ್ಯರು ಮತ್ತು ಅಸಿಸ್ಟೆಂಟ್ ಮಾಸ್ಟರ್ ಮ|| ವೆಂಕಟಪ್ಪ [illegible] ರವರು ಸಹ ಸ್ಕೂಲನ್ನು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿಟ್ಟಿರುತ್ತಾರೆ. ಈ ಸಲ ಇಂಗ್ಲೀಷಿನಲ್ಲಿ 7, ಕನ್ನಡದಲ್ಲಿ 8 ಹುಡುಗರು ಪರೀಕ್ಷೆಗೆ ಕಟ್ಟುತ್ತಾರೆ.—ಮುನಿಸಿಪಲ್ ನೌಕರರುಗಳು ಇಲ್ಲಿಗೆ ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ. ಲಾಂದ್ರ ಕಂಭಗಳನ್ನೆಲ್ಲಾ ಕಿತ್ತೇ ಹಾಕುತ್ತಾರೆ. ಮೇಲ್ಪಟ್ಟ ಆಫೀಸರುಗಳು ಗಮನಕ್ಕೆ ತಂದು ಪುನಃ ಹಚ್ಚುವಂತೆ ಮಾಡ್ತಾರೆಂದು ನಂಬುತ್ತೇವೆ.—ಇಲ್ಲಿ ತಾಲ್ಲೂಕು ಬೋರ್ಡ್ [illegible] ಆಗುತ್ತೆಂಬ ವದಂತಿಯು ಪ್ರಬಲವಾಗಿದೆ. ಯಾವಾಗ ನೆರವೇರುತ್ತೋ ತಿಳಿಯಲಿಲ್ಲ.—ಇಲ್ಲಿನ ಪೋಲೀಸ್ ಇನ್ಸ್ಪೆಕ್ಟರವರು [illegible] ನರಸಿಂಹಯ್ಯನವರಿಗೆ ಪ್ರಮೋಷನ್ ಹೊಂದಿ ವರ್ಗವಾಗಿರುತ್ತೆ. ಇವರು ಇಲ್ಲಿಗೆ ಬಂದ 3-4 ವರ್ಷಗಳಿಂದ ಇಲ್ಲಿನ ಜನಗಳಲ್ಲಿ ವಿಶ್ವಾಸವನ್ನು ಬೆಳಸಿಕೊಂಡು ದುಷ್ಟನಿಗ್ರಹ, ಶಿಷ್ಟಪರಿಪಾಲನೆಯನ್ನು ಮಾಡುತ್ತಿದ್ದರು. ಇಂಥವರಿಗೆ ವರ್ಗವಾದದ್ದಕ್ಕಾಗಿ ತಾಲ್ಲೂಕು ನಿವಾಸಿಗಳೂ ಪೋಲೀಸ್ ನೌಕರರೂ ಪರಿತಾಪ ಪಡುತ್ತಾರೆ.—ಇಲ್ಲಿ ನಡೆದಿದ್ದ ಪೋಲೀಸ್ ಆಸಿಸ್ಟೆಂಟ್ [illegible] ಮೊಕದ್ದಮೆಯು ಅಸಿಸ್ಟೆಂಟರ ಕೋರ್ಟಿನಲ್ಲಿ ವಿಚಾರಣೆ ನಡೆದು [illegible] ಆಗಿರುತ್ತೆ. ಇಲ್ಲಿ ಕಾಲರಾ ಗಲಾಟೆಯು ಸಂಪೂರ್ಣವಾಗಿ [illegible] ಹೋಗಿರುವದರಿಂದ [illegible] ಜನಗಳು ನಿರ್ಭಯವಾಗಿ ಇರುತ್ತಿರುವರು. [illegible] ನಡೆಯುತ್ತಿದ್ದ ಸೀಮೆ ಕಡ್ಲೆಕಾಯಿ ಎಂಬುವದು ಈ ಪ್ರಾಂತ್ಯ [illegible] ಇರಲಿಲ್ಲ. ಈಗ 4-5 ವರುಷಗಳಿಂದ ಇಲ್ಲಿ ಬಹಳ ಪ್ರಬಲವಾಗಿದೆ. ಜನಗಳು ಇದನ್ನು ತಿಂದು ರೋಗ ಅನುಭವಿಸುತ್ತಿದ್ದಾರೆ. ಸರ್ಕಾರದವರು ಇದನ್ನು ತಿನ್ನದ ಹಾಗೆ ಮಾಡಿದರೆ ಉಪಕಾರವಾದೀತು.

ದೆಹಲಿ ದರ್ಬಾರ್ ಡೇ ಉತ್ಸವಗಳು.

ಸಕಲೇಶಪುರ.

ಕಳೆದ 12 ನೇ ತಾ ಗುರುವಾರ ಇಲ್ಲಿನ ಎಲ್ಲಾ ಸ್ಕೂಲುಗಳ ಬಾಲಕ ಬಾಲಕಿಯರಿಂದ ಎ. ವಿ. ಸ್ಕೂಲಿನಲ್ಲಿ ಬೆಳಿಗ್ಗೆ ಚಕ್ರವರ್ತಿಯವರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆ ನಡಿಸಲ್ಪಟ್ಟಿತು. ಇಲ್ಲಿನ ಆಫೀಸರುಗಳ ಮತ್ತು ಗ್ರಾಮಸ್ಥರ ಸಹಾಯದಿಂದ ಮಧ್ಯಾಹ್ನ ಆಟಪಾಟಗಳು ನಡೆದವು. ಸಾಯಂಕಾಲ 6 ಘಂಟೆಗೆ ಸಬ್ ಡಿವಿಜನ್ ಆಫೀಸರವರೂ, ಡಾಕ್ಟರವರೂ, ಹಿಂದೂಮನೆ ಎಸ್ಟೇಟ್ ಮ|| ಜೆ. ಎಸ್. ಮೆಕ್ಕಾಲ ಸಾಹೇಬರೂ, ಗ್ರಾಮಸ್ಥರೂ, ನೌಕರರೂ ಸೇರುಗಳೂ ಆದಿಯಾಗಿ ಅನೇಕರು ಸ್ಕೂಲ್ ಹಾಲಿನಲ್ಲಿ ಸೇರಿದರು. ಸಬ್ ಡಿವಿಜನ್ ಆಫೀಸರು ಅಗ್ರಾಸನವನ್ನು ವಹಿಸಿದ ಕೂಡಲೆ ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನೆಯು ನಡಿಸಲ್ಪಟ್ಟಿತು. [illegible] ಮಾಸ್ಟರವರ ಸ್ಕೂಲ್ ರಿಪೋರ್ಟನ್ನು ಓದಿದರು. ಒಳಿಕ ಅಗ್ರಾಸನಾಧಿಪತಿಗಳು ಒಂದು [illegible] ಮತ್ತು ಬುದ್ಧಿವಾದ ಸೂಚಕವಾದ ಉಪನ್ಯಾಸಮಾಡಿ ಬಾಲಕರಿಗೆ ಪುಸ್ತಕಗಳನ್ನೂ, ಆಟಗಳಲ್ಲಿ ಗೆದ್ದವರಿಗೆ ದ್ರವ್ಯವನ್ನೂ, ಬಾಲಕಿಯರಿಗೆ ಬೊಂಬೆಗಳನ್ನೂ ಬಹುಮಾನ ಕೊಟ್ಟರು. ಬಾಲಕ ಬಾಲಕಿಯರಿಂದ ಶ್ರೇಯಃಪ್ರಾರ್ಥನೆ ನಡಿಸಲ್ಪಟ್ಟ ಬಳಿಕ ಸಭೆಯು ಬರಖಾಸ್ತಾಯಿತು.

ಕೊಪ್ಪ.

ಇದೇ ತಿಂಗಳು ತಾ 12 ನೇ ಗುರುವಾರ ದರ್ಬಾರ್ ಡೇ ಉತ್ಸವವು ನಡೆಯಿತು. ಸ್ಕೂಲಿನಲ್ಲಿ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಛಾಯಾಚಿತ್ರಗಳು ಸುಂದರವಾದ ಮಂಟಪದಲ್ಲಿಡಲ್ಪಟ್ಟು ಕಟ್ಟಿದ್ದ ಗಿಡವಾದ ಅಲಂಕಾರಗಳಿಂದ ಶೋಭಿಸುತ್ತಿತ್ತು. ಗ್ರಾಮದ ದೊಡ್ಡ ಮನುಷ್ಯರೂ, ಸರ್ಕಾರಿ ಉದ್ಯೋಗಸ್ಥರೂ, ವರ್ತಕರೂ ದಯಮಾಡಿ ಸಭೆಯನ್ನಲಂಕರಿಸಿದ್ದರು. [illegible] ಶಾಲಾ ಬಾಲಕರು ಸ್ಕೂಲ್ ಮುಂಭಾಗದಲ್ಲಿ ಸೇರಿ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃಪ್ರಾರ್ಥನೆ ಮಾಡಿ ಯೂನಿಯನ್ ಜಾಕ್ ಎಂಬ ಬಾವುಟಕ್ಕೆ ವಂದಿಸಿದರು. ಸಾಯಂಕಾಲ ಬಾಲಕರಿಂದ [illegible] ಗಳು ನಡಿಸಲ್ಪಟ್ಟವು. 6 ಘಂಟೆಗೆ ಸಮಸ್ತರೂ ಸಭೆ ಸೇರಿದರು. [illegible] ಸ್ತೋತ್ರಗಳನ್ನು ಹಾಡಿದ ಮೇಲೆ ಒಬ್ಬ ಬಾಲಕನು ರಾಜಭಕ್ತಿ ಮತ್ತು ಇಂಗ್ಲೀಷರ ಪ್ರಭುತ್ವದ ವಿಚಕ್ಷಣೆ ವಿಷಯದಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದನು. ಒಳಿಕ ಬಾಲಕರೆಲ್ಲರೂ ಶ್ರೀಮನ್ಮಹಾರಾಜರವರ, [illegible]

ಮಹಾಪ್ರಭುಗಳ ಶ್ರೇಯಃಪ್ರಾರ್ಥನೆ ಮಾಡಿದರು ಆಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡಿಸಿದರು ಮಿಠಾಯಿ ಗಂಧಪುಷ್ಪಾದಿಗಳನ್ನು ಹಂಚಿ ಆದ ಮೇಲೆ ಸಭೆಯು ಜಯಧ್ವನಿಯೊಡನೆ ಮುಕ್ತಾಯವಾಯಿತು.

ದೇವನಹಳ್ಳಿ.

ಇಲ್ಲಿನ ಎ. ವಿ. ಸ್ಕೂಲು, ಹಿಂದೂ ಗರ್ಲ್ಸ್ ಸ್ಕೂಲು, ಹಿಂದುಸ್ಥಾನಿ ಸ್ಕೂಲುಗಳಲ್ಲಿ ಬಹು ವಿಜೃಂಭಣೆಯಿಂದ ಉತ್ಸವವು ಜರುಗಿತು. ಅಮಲ್ದಾರ್ ಮ|| ನಾರಸಿಂಹಯ್ಯನವರೂ, ತಾಲ್ಲೂಕು ನೌಕರರೂ, ಸ್ಕೂಲ್ ಮಾಸ್ಟರುಗಳೂ, ಮ್ಯುನಿಸಿಪಲ್ ಮೆಂಬರುಗಳೂ, ಮುಖಂಡರಾದ ವರ್ತಕರೂ, ಊರಿನ ಅನೇಕ ಬ್ರಾಹ್ಮಣ ವೈದಿಕ ಲೌಕಿಕರೂ, ಮಹಮ್ಮದೀಯ ಪ್ರಜೆಗಳೂ, ಸ್ಕೂಲ್ ಕಾಂಪೌಂಡಿನಲ್ಲಿ ಬೆಳಿಗ್ಗೆ ಸೇರಿದರು ಯೂನಿಯನ್ ಜಾಕ್ ಎಂಬ ಬಾವುಟದ ಬಳಿ ವಿದ್ಯಾರ್ಥಿಗಳು ಡ್ರಿಲ್ ಆರ್ಡರ್ ಪ್ರಕಾರ ಕವಾತುಮಾಡಿ ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನಾರೂಪವಾದ ಇಂಗ್ಲಿಷ್ ಪಾದವನ್ನು ಕೆಳಾನಂದವಾಗಿ ಹಾಡಿ, ಬಾವುಟಕ್ಕೆ ಸೆಲ್ಯೂಟ್ ಮಾಡಿದ ಮೇಲೆ ಎಲ್ಲರೂ ಸ್ಕೂಲಿನಲ್ಲಿ ಸೇರಿದರು. ಅಮಲ್ದಾರರು ಆಗ್ರಾಸನವನ್ನು ವಹಿಸಿದರು ಚಕ್ರವರ್ತಿಗಳ ಮತ್ತು ಶ್ರೀಮನ್ಮಹಾರಾಜರವರ ಫೋಟೋಗಳನ್ನು ಇಟ್ಟು ಅಲಂಕರಿಸಿದ್ದರು ಬಾಲಕರು ಸ್ತೋತ್ರಗಾನವನ್ನು ಹಾಡಿದ ಮೇಲೆ ರಾಮಸ್ವಾಮಯ್ಯನವರೂ, ರಾಮಕೃಷ್ಣಯ್ಯನವರೂ, ಉಗ್ರಶಾಸ್ತ್ರಿಗಳವರೂ ಬ್ರಿಟಿಷ್ ಸಾಮ್ರಾಜ್ಯದಿಂದ ಇಂಡಿಯಾ ದೇಶೀಯರಿಗೆ ಉಂಟಾಗಿರತಕ್ಕ ಅನುಕೂಲಗಳನ್ನು ಕುರಿತು ಸಾರಸ್ಯವಾಗಿಯೂ ಸಂತೋಷಪ್ರದವಾಗಿಯೂ ಉಪನ್ಯಾಸಮಾಡಿದರು ಕೊನೆಗೆ ಅಮಲ್ದಾರರವರು ಆ ಸ್ಕೂಲು ಅಭಿವೃದ್ಧಿಯಾಗುತ್ತಿರುವುದನ್ನು ಕುರಿತು ಕೆಲವು ಸಂತೋಷವಾಕ್ಯಗಳನ್ನು ಹೇಳಿ, ಪಟ್ಟಾಭಿಷೇಕದ ವಿಚಾರವಾಗಿ ಬಹು ಸ್ವಾರಸ್ಯವಾದ ಉಪನ್ಯಾಸಮಾಡಿದರು. ಅನಂತರ ವಿದ್ಯಾರ್ಥಿಗಳು ಇಂಗ್ಲೀಷಿನಲ್ಲೂ, ಕನ್ನಡದಲ್ಲೂ ಚಕ್ರವರ್ತಿಗಳ ಮೇಲೂ, ಮಹಾರಾಜರವರ ಮೇಲೂ ಹಾಡುಗಳನ್ನೂ ಮಂಗಳವನ್ನೂ ಹಾಡಿದರು ಮಧ್ಯಾಹ್ನ ದೊಡ್ಡ ಮನುಷ್ಯರುಗಳೆಲ್ಲಾ ಸೇರಿ ಬಾಲಕರಿಂದ ಆಟಗಳನ್ನು ಆಡಿಸಿ ಗೆದ್ದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಬಹುಮಾನವಾಗಿ ಕೊಡಿಸಿ ಜಯಘೋಷಗಳಿಂದ ಉತ್ಸವವನ್ನು ಮುಕ್ತಾಯಮಾಡಿದರು

ತುಮಕೂರು.

ದರ್ಬಾರ್ ಡೇ ಉತ್ಸವವು ಇಲ್ಲಿನ ಎ. ವಿ. ಸ್ಕೂಲಿನಲ್ಲಿ ನಡೆಯಿತು. ಸ್ಕೂಲ್ ಕಟ್ಟಡವು ತೋರಣಾದಿಗಳಿಂದಲೂ, ಸಾರ್ವಭೌಮರವರುಗಳ ಮತ್ತು ಶ್ರೀಮನ್ಮಹಾರಾಜರವರ ಛಾಯಾಚಿತ್ರಗಳಿಂದಲೂ ಅಲಂಕೃತವಾಗಿತ್ತು ನಮ್ಮ ಅಮಲ್ದಾರರವರು, ಮ|| ಮಹದೇವರಾಯರು, ಡಾಕ್ಟರವರು, ಸರ್ಕಾರಿ ನೌಕರಮಾನ್ಯರು, ಊರಿನ ದೊಡ್ಡ ಮನುಷ್ಯರು ಎಲ್ಲಾ ತಾ 12 ನೇ ದಿವಸ ಬೆಳಿಗ್ಗೆ ದಯಮಾಡಿದರು ಸ್ಕೂಲ್ ಮೈದಾನದಲ್ಲಿ ಇಂಗ್ಲೀಷ್ ಬಾವುಟದ ಮುಂದೆ ಬಾಲಕರಿಂದ ಡ್ರಿಲ್ ಮತ್ತು ಸೆಲ್ಯೂಟ್ ಮಾಡಿಸಿ, ಎಲ್ಲರೂ ಕಟ್ಟಡದೊಳಕ್ಕೆ ಬಂದರು ಅಲ್ಲಿ ಹುಡುಗರು ದೇವರ ಪ್ರಾರ್ಥನೆ ನಡಿಸಿದ ಮೇಲೆ ಮಿಷನ್ ಸ್ಕೂಲ್ ಬಾಲಕಿಯರು ನಾಲ್ಕರು ಸುರಸವಾದ ಸಂಭಾಷಣಾರೂಪವಾದ ಒಂದು ಸಂತೋಷಗಾನವನ್ನು ವ್ಯಕ್ತಪಡಿಸಿದರು ಒಂದು ಸಂಭಾಷಣೆಯನ್ನು ಎ. ವಿ. ಸ್ಕೂಲ್ ಬಾಲಕರು ನಡಿಸಿ ಸಭಿಕರನ್ನು ವಿನೋದಪಡಿಸಿದರು ವರದಾಚಾರಿ ಮ|| ವೆಂಕಟ್ಟಾಚಾರ್ಯ ಹಿಂದಿನ ಅರಸರ ಕಾಲದಲ್ಲಿ ಹಿಂದೂಸ್ಥಾನಕ್ಕೆ ಇದ್ದ ಪ್ರತಿಬಂಧಕಗಳು ಇಂಗ್ಲೀಷರ ಆಳಿಕೆ ಬಂದಮೇಲೆ ಅಡಗಿ ಈಗ ಒದಗಿರತಕ್ಕ ನಾನಾ ಪ್ರಯೋಜನಗಳನ್ನು ಕುರಿತು ಸೊಗಸಾಗಿ ಉಪನ್ಯಾಸಮಾಡಿದರು ಹಿಂದೂಸ್ಥಾನಿ ಸ್ಕೂಲ್ ಬಾಲಕರು ಸಾರ್ವಭೌಮರ ಶ್ರೇಯೋಭಿವೃದ್ಧಿಯ ಸ್ತುತಿಯನ್ನು ಹಿಂದೂಸ್ಥಾನಿಯಿಂದ ಹಾಡಿದರು ಮ|| ಮಹದೇವರಾಯರು ಸಂಭಾಷಣೆ ನಡಿಸಿದ ನಂತರ ಬಾಲಕರಿಗೂ, ಮಿಷನ್ ಸ್ಕೂಲ್ ಬಾಲಕಿಯರಿಗೂ ಬಹುಮಾನದ ಪುಸ್ತಕಗಳನ್ನು ಹಂಚಿಕೊಟ್ಟರು ಆ ಮೇಲೆ ಮ|| ಮುನಿಗೌಡನವರು ಮಾಡಿದ ಉಪನ್ಯಾಸವು ಬಹಳ ರಸಭರಿತವಾಗಿತ್ತು ಎಲ್ಲರೂ ಎದ್ದು ನಮ್ಮ ಸಾರ್ವಭೌಮರವರಿಗೆ ಶ್ರೇಯಸ್ಸುಂಟಾಗಲೆಂದು ಪ್ರಾರ್ಥಿಸಿದ ನಂತರ ತಾಂಬೂಲವು, ಬಾಲಕರಿಗೆ ತಿಂಡಿಯೂ ಹಂಚಿ, ನಮ್ಮ ಸಾರ್ವಭೌಮರಿಗೂ ಶ್ರೀಮನ್ಮಹಾರಾಜರಿಗೂ ಜಯಕಾರ ಕೊಟ್ಟು ಸಭೆಯನ್ನು ಮುಕ್ತಾಯಮಾಡಿದರು

ಕೃಂಗೇರಿ.

ಕೇಸತ 12ನೇ ಬೆಳಿಗ್ಗೆ ಎ ವಿ ಸ್ಕೂಲ್ ಕಟ್ಟಡದಲ್ಲಿ ಸೇರಿದ್ದ ಬಾಲಕ ಬಾಲಕಿಯರು, ಉಪಾಧ್ಯಾಯರು, ಸ್ಥಳೀಯ ಅಧಿಕಾರಿಗಳು ಮತ್ತು ಇಲ್ಲಿನ ಅನೇಕ ಮಹನೀಯರು ರಾಜಭಕ್ತಿಪುರಸ್ಸರವಾಗಿ ಇಂಗ್ಲೀಷ್ ಬಾವುಟಕ್ಕೆ ಸೆಲ್ಯೂಟ್ ಮಾಡಿ, ಚಕ್ರವರ್ತಿ ಮತ್ತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ನಡಿಸಿದರು ಮಧ್ಯಾಹ್ನಾನಂತರ ಬಹು ರಮಣೀಯವಾಗಿ ಅಲಂಕರಿಸಲ್ಪಟ್ಟಿದ್ದ ಎ ವಿ ಸ್ಕೂಲಿನಲ್ಲಿ ಜರುಗಿದ ಮೀಟಿಂಗ್ ಗೆ ಬ್ರ|| ಶ್ರೀ|| ಶ್ರೀಕಂಠಶಾಸ್ತ್ರಿಗಳವರು ಮೊದಲಾದ ಶ್ರೀಮಠದ ಅಧಿಕಾರಿಗಳೂ, ಮ್ಯುನಿಸಿಪಲ್ ಮೆಂಬರುಗಳೂ, ವರ್ತಕರೂ, ಇಲ್ಲಿನ ವೈದಿಕ ಲೌಕಿಕ ಬ್ರಾಹ್ಮಣರುಗಳೂ ರಾಜಭಕ್ತಿಯನ್ನು ಪ್ರಕಟಿಸಲು ಸೇರಿದ್ದರು. ಏಜೆಂಟರಿಗೆ ಆಗ್ರಾಸನವನ್ನು ವಹಿಸಿದರು ಬಾಲಕಿಯರು ಸ್ತೋತ್ರಗಾನವನ್ನೂ, ರಾಜಭಕ್ತಿಪ್ರದರ್ಶಕ ಸಂಭಾಷಣೆಯನ್ನೂ ಬಹು ಸ್ವಾರಸ್ಯವಾಗಿ ಮಾಡಿದ ಬಳಿಕ ಬಾಲಕರಿಂದ ಇಂಗ್ಲೀಷ್ ಮತ್ತು ಸಂಸ್ಕೃತದಲ್ಲಿ ಚಕ್ರವರ್ತಿ ಮತ್ತು ಮಹಾರಾಜರ ಶ್ರೇಯಃಪ್ರಾರ್ಥನಾ ಶ್ಲೋಕಗಳೂ, ನಾಟಕಗಳೂ, ಭಜನೆ ಮತ್ತು ಇತರ ವಿಷಯಗಳಾದ ಅನುಕರಣ ಗೀತಗಳೂ ಸಭಿಕರ ಮನಸ್ಸನ್ನು ಸೆಳೆಯುವಂತೆ ಹೇಳಲ್ಪಟ್ಟವು ಬ್ರಿಟಿಷ್ ಸರ್ಕಾರದಿಂದ ಆದ ಪ್ರಯೋಜನದ ವಿಷಯವಾಗಿ ಉಪನ್ಯಾಸ ನಡೆದ ತರುವಾಯ ಏಜೆಂಟರವರು ರಾಜರ ದೀರ್ಘಾಯುಸ್ಸು ಕೋರುತ್ತಾ ತಮ್ಮ ತಮ್ಮ ಹಿತವನ್ನು ಬಯಸುವಂತೆ ಇತರರಲ್ಲಿಯೂ ಮತ್ತು ಯಜಮಾನನಿಂದ ಕುಟುಂಬಕ್ಕೆ ಉಂಟಾಗುವ ಹಿತಗಳಂತೆ ರಾಜಕುಟುಂಬಕ್ಕೆ ಯಜಮಾನರಾಗಿರುವ ಸಮ್ರಾಜ ರಿಂದುಂಟಾಗುವ ಹಿತಗಳನ್ನೂ ಮತ್ತು ಅನೇಕ ಪ್ರಯೋಜನಗಳನ್ನೂ ಪ್ರತಿಯೊಬ್ಬರಲ್ಲೂ ನಾಟುವಂತೆ, ವಿಶೇಷ ರಾಜಭಕ್ತಿ ಹೆಚ್ಚುವಂತೆಯೂ ಫಲಪ್ರದ ದೃಷ್ಟಾಂತಗಳಿಂದ ವಿವರಿಸಿ ಉಪನ್ಯಾಸಮಾಡಿದರು ಮತ್ತು ಏಜೆಂಟರವರು ಈ ಮಹೋತ್ಸವಕ್ಕಾಗಿ ಪ್ರತಿ ಸಂವತ್ಸರವೂ ದ್ರವ್ಯಸಹಾಯವನ್ನಿತ್ತು, ಹುಡುಗರ ಆಟಪಾಟಗಳಿಗೆ ತಕ್ಕ ಪಾರಿತೋಷಕವನ್ನೂ ಕೊಡುವುದಾಗಿ ಹೀಗೆ ನವಾಬರ ನ್ನು ಕೇಳಿ ಸರ್ವರೂ ಸಂತೋಷಪಟ್ಟರು ಸರ್ವರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿ ಮರ್ಯಾದೆಗಳೂ, ಬಾಲಕಬಾಲಕಿಯರಿಗೆ ಮಿಠಾಯಿಯೂ ಹಂಚಲ್ಪಟ್ಟ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಇತರ ಸ್ಥಳಗಳು.

ಈ ಉತ್ಸವದ ವೃತ್ತಾಂತಗಳು ಈ ವಾರವೂ ನಮ್ಮಲ್ಲಿಗೆ ಬಂದಿರುವವು ಅವನ್ನು ಬರೆದು ಕಳುಹಿಸಿದ್ದಕ್ಕಾಗಿ ಆಯಾ ಬಾತಿದಾರರನ್ನು ತುಂಬಾ ವಂದಿಸಿ, ಸ್ಥಳಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ಈ ಮೂಲಕ ವ್ಯಸನಪಡುತ್ತೇವೆ ನಮಗೆ ಬಂದಿರುವ ಬಾತ್ಮಿಗಳ್ಯಾವುವೆಂದರೆ—ಕಡೂರ್ ತಾ ಬೀರೂರು, ಆನೆಕಲ್ ತಾ ಕೊರನಹಳ್ಳಿ, ಕೊಪ್ಪಾ ತಾ ನಾರ್ವೆ, ಮಾಗಡಿ ತಾ ಹುಲಿಕಲ್ಲು, ಮಂಡ್ಯ ತಾ ಬಸರಾಳು, ಅರಸೀಕೆರೆ ತಾ ದೊಡ್ಡಮೇಟಿಕುರಿಕೆ, ಚಾಮರಾಜನಗರ ತಾ|| ಚಂದ್ರವಾಡಿ, ಆನೆಕಲ್ ತಾ ಸರ್ಜಾಪುರ, ಹಾಸನ ತಾ ಗೊರೂರು, ಚನ್ನರಾಯಪಟ್ಟಣ, ಸೊರಬ, ಯಡತೊರೆ ತಾ ಹನಸೋಗೆ, ಹೊಸಕೋಟೆ, ಗುಬ್ಬಿ ತಾ|| ಚಟ್ಟನಹಳ್ಳಿ, ಸಾಗರ, ಇತ್ಯಾದಿ

ಬಂಟೆತ್ತಿನ ಸ್ಪ್ರಿಂಗ್ ಛಂಡಿ ಕ್ರಯಕ್ಕೆ

ದೊರೆಯುತ್ತೆ ಮಜಬೂತಾದ ಬಲವಾದ ಎರಡು ಕಡೆ ಪಟಿಗೆಗಳುಳ್ಳ ಛಾಪು 70 ರೂಪಾಯಿಗೆ ಮಾಡಿಸಿದ್ದು 45 ರೂಪಾಯಿಗೆ ಸಿಕ್ಕುತ್ತೆ. ನಂಬರು ಹಾಕಿದ ಮೈಸೂರು ಆರ್ಚ್ ಗೇಟ್ ಹತ್ತಿರ 3||5|1ನೇ ನಂಬರ್ ಮನೆಯಲ್ಲಿ ನೋಡಬಹುದು

ಮೇಲಾದ ಹೊಸ ಪುಸ್ತಕಗಳು.

ಉತ್ತಮ—ಬಹು ಸ್ವಾರಸ್ಯವಾದ ಕಥೆ ಈಗತಾನೆ ಅಚ್ಚಾಗಿದೆ 1 ಆಣೆ **ಜಪಾನ್ ಸಾಮ್ರಾಜ್ಯ**—ಅದು ಪಡೆದ ಸರ್ವೋದಯ ರಾಜ್ಯದ ವಿಷಯ. ಸುಂದರವಾದ ಒಂದು ಪಟವೂ ಇದೆ, ತಿಳಿವಳಿಕೆ ಹೆಚ್ಚುತ್ತದೆ. 6 ಆಣೆ **ಉನ್ನತಿ** ಮನೋಹರವಾದ ಬಂಗಾಳಿ ನಾವಲ್ 3|| ಆಣೆ **ಕಿಂಡರ್ ಗಾರ್ಟನ್ ಕಥೆಗಳು**, ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು 10 ಆಣೆ **ಬೋಧನಕ್ರಮಸಂಗ್ರಹ** ಪ್ರತಿ ಸ್ಕೂಲ್ ಮಾಸ್ಟರೂ ನೋಡಬೇಕಾದದ್ದು 1|| ಆಣೆ **ಲೋ. ಸಿ. ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ** 1 ಆಣೆ [165-4]

ವಿಳಾಸ. ವಿ ಕೃಷ್ಣಶಾಸ್ತ್ರಿ ಬಿ ಎ ನಾರ್ಮಲ್ ಸ್ಕೂಲ್, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವನ್ನು ಹಿಡಿದು ರಕ್ತದಿಂದ ವಿಷವನ್ನು ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದುರ್ಬಲದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದಿದ್ದರೆ ಹೊಡನೆ ಪ್ರಾಯಶಃ ರೋಗಕ್ಕೆ ರೋಗವು ಹುಟ್ಟುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ [illegible] ಲಕ್ಷಣಗಳೆಂದರೆ ಬೆನ್ನಿನಲ್ಲಿ ಛಳುಕು ಎದ್ದುಬರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬರುವುದು, ಬಿದದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಂಟಲು, ಕಣ್ಣುಮಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮೂಲವ್ಯಾಧಿ ಇವು ಮೊದಲಾದವು. ಅಲಕ್ಷ್ಯಮಾಡಿದರೆ ಮೂತ್ರೋತ್ಪನ್ನವ, ವಾಯು ಮಧುಮೇಹ, ಉರುಮೂತ್ರ, ಮೂತ್ರಕೋಶದ ಕ್ಷಯರೋಗ [illegible] ರೋಗಗಳು [illegible]

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರನಾಡಿಗಳನ್ನೂ ಸರಿಪಡಿಸಿ, ರಕ್ತದಿಂದ ವಿಷವನ್ನು ತೆಗೆದು ಹೊರಕ್ಕೆ [illegible] ಆರೋಗ್ಯವನ್ನು ಉಂಟುಮಾಡುವುವು [42-10]

ಆರೋಗ್ಯಪ್ರತಿಪಾದಕ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವವು



ರೂ [illegible] ಅಥವಾ [illegible] ಬುಡ್ಡಿಗಳಿಗೆ ರೂ [illegible] ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ ಒ. ಬಾಕ್ಸ್ [illegible] ಬೊಂಬಾಯಿ [illegible] ದೊರೆಯುತ್ತವೆ

ಪ್ರುಗನಟ್ಟೆ ಕೊಡಲಾಗುತ್ತೆ.

10 [illegible] ನಡೆಯುವ ಉತ್ಸವದ [illegible] ಸಲ್ಲಿಸುವ [illegible] [179-3] ಜನಪ್ರಿಯ, ಉತ್ತರ ಆರ್ಕಾಟು.

ಸುಸಮಯ ' [illegible] ' ತ್ವರೆಮಾಡಿರಿ!

ಇದೇ ಮಾರ್ಗಶಿರ ಬ 10 ಗೆ (ಜನವರಿ ತಾ 6) ತೀರ್ಥಹಳ್ಳಿಯಲ್ಲಿ ಬಹಳ ದೊಡ್ಡ ಜಾತ್ರೆ ನಡೆಯುವದು ಎಲ್ಲರಿಗೂ ತಿಳಿದಿದೆ ಈ ವರುಷದ ಜಾತ್ರೆಯಲ್ಲಿ [illegible] (ವಸ್ತುಪ್ರದರ್ಶನವೂ), ದನಕರುಗಳ ಪ್ರದರ್ಶನವೂ, [illegible] ಜರುಗುವ ಕಾರಣ ಬಹಳ ಜನಗಳು ಸೇರಿ ಈ ವರುಷದ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತದೆ ಪ್ರತಿ ವರುಷವೂ ಇಲ್ಲಿಗೆ ಬೆಂಗಳೂರು ಮುಂತಾದ ದೊಡ್ಡ ಪಟ್ಟಣಗಳಿಂದ ನಾಟಕದವರು [illegible] ಬರತಕ್ಕವರಿಗೆ ತಕ್ಕ ಕಟಿ ದವಿಲ್ಲದೆ ಬೇರೆ ಚಪ್ಪರ, [illegible] ತೊಂದರೆಪಡುತ್ತಿದ್ದರು. ಈ ವರುಷ ಅಂಥಾ ಅನಾನುಕೂಲ [illegible] ಹಾಲ್ ಒಂದನ್ನು ಕಟ್ಟಿ [illegible] ಸುಮಾರು ಒಂದು ಸಾವಿರ ಜನಗಳು ಕುಳಿತುಕೊಳ್ಳುವಷ್ಟು ಅವಕಾಶವಿದೆ ಈ ಕಟಿದವನ್ನು ನಾಟಕಕ್ಕಾಗಿ ಬಾಡಿಗೆ ಅಪೇಕ್ಷಿಸುವವರು ಡಿಸೆಂಬರ್ ತಾ 30 ರೊಳಗೆ ಬರೆದುಕೊಳ್ಳಬಹುದು

[198-1] ದಿ ಯೂನಿವರ್ಸಲ್ ಏಜನ್ಸಿ, ತೀರ್ಥಹಳ್ಳಿ.

HASSAN CAPS.

ಹಾಸನದ ಟೋಪಿಗಳು.

ಮೊದಲನೇ ತರಗತಿಯ ದಾರ ತೆಗ್ಗು ಚುಕ್ಕೆಗಳುಳ್ಳದ್ದು			ರೂ. 2 0 0
,,	,,	ಕೆಂಪು ಅದರ ಕಪ್ಪು	,, 1 8 0
ಎರಡನೇ	,,		,, 1 6 0
ಮೂರನೇ	,,		,, 1 4 0
ನಾಲ್ಕನೇ	,,		,, 1 2 0

[illegible] ಕಳುಹಿಸುತ್ತೇವೆ.

ನಮ್ಮ ವಿಳಾಸ [157-11]

ವೆಸ್ಲಿಯನ್ ಮಿಷನ್ ಹಾಸನದ ಟೋಪಿ ಕಾರ್ಖಾನೆ

ತುಂಕೂರು.

Address
Wesleyan Mission Cap Industry,
Tumkur.

[illegible] ಬಹು ಸುಲಭ ಕ್ರಯ

[illegible] ಲಿವರ್ ವಾಚು.

ಇದರ ಕ್ರಯ 6 ಬಹುಮಾನಗಳ ಸಮೇತ 3 ರೂ. ಮಾತ್ರ



[illegible] [184]

ಇದರ ಏರು ಬಹುಮಾನಗಳ ತಪಸೀಲು.

[illegible]

ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,

ನಂ. 7 [illegible] ವೆಂಕಟಾಚಲ್ಲಪ್ಪ [illegible], ಮದ್ರಾಸ್.

[illegible]

[illegible] ಉತ್ತರ ಮುಖಿ, [illegible] (3) ಕೈಗೆ ಕಟ್ಟುವ [illegible] ರೂ 5-1-0 [illegible] (4) [illegible] ರೂ 5-1-0 [illegible] ರೂ 4-8-0 [illegible] ರೂ 1-4-0 (5) [illegible] ರೂ 7-0-0 (6) [illegible] ರೂ 2-8-0 [illegible] ರೂ 1-4-0. (7) [illegible] ಕ್ರಯ ಸಿಕ್ಕ 1 ಕ್ಕೆ 8 ಆ [illegible] ಡಿಸೆಂಬರ್ [illegible] 1, 2, 3 ನೇ [illegible] ಬರುತ್ತಿದ್ದ ಅವರಿಗೆ ಕೊಡಲ್ಪಡುತ್ತೆ [130-1]

ನಮ್ಮ ವಿಳಾಸ—ವೆಂಕಟಾಚಲಂ ಕಂಪನಿ,

[illegible], ಮದ್ರಾಸು

MELLIN'S FOOD

ಮೆಲಿನ್ಸ್ ಆಹಾರವು

ಶಿಶುಗಳಿಗೂ ರೋಗಿಷ್ಟರಿಗೂ

ಕ್ಷಿಪ್ರ ಸಡ್ಡಿಕರವಾದ. ಬಲ ಸಮ್ಮೋಹಕ.

1913ನೇ ವರುಷದ [illegible] ಕ್ಯಾಲೆಂಡರು ಈಗ ಸಿದ್ಧವಾಗಿದೆ

[illegible] ಮೌಂಟ್ ರೋಡ್, ಮದರಾಸ್ ಎರಡು ಆಣೆ [illegible] ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು

ಮಕ್ಕಳತಾಯಿಗೆ—ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ—ಎಂಬ ಪುಸ್ತಕಗೆ ಎರಡು ಆಣೆ ಕಳುಹುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

[66-35] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H. Gulliford Proprietor and Manager Wesleyan Mission Press, Mysore. 26/12/1912.